Reg. No. M 1550.
If not delivered please return to
KODAGU OFFICE MERCARA

ಕೊಡಗು.

ಐಕ್ಯಮತ್ಯೇನ ದೇಶಾನಾಂ ಸುಸ್ಥಿರಾ ರಾಜ್ಯ ಸಂಪದಾ ||

ಸಂಪಾದಕ—ಕಂಬ್ಯಂಡ ಬಿ. ಚಿಕ್ಕಪ್ಪ.

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವದು.

ಸಂಪುಟ ೫] ಕೊಡಗು, ಸಕ ೧೮೪೭ನೇ ಇಸವಿ ಜನವರಿ ತಾರೀಖು ೧ನೇ ಶುಕ್ರವಾರ [ಸಂಚಿಕೆ ೩೦

ಒಂದೇ ಮೂರು ರೂಪಾಯಿಗಳಲ್ಲಿ!

ಟಿಕ್=ಟಿಕ್ (ರಿಜಿಸ್ಟರ್ಡ)



ಎಂಬ ಗಡಿಯಾರವನ್ನು ನಿಮಗೆ ಪೂರೈಸುತ್ತೇವೆ ಇದು ಕರಾರು ಗಂಟೆಯನ್ನು ತೋರಿಸುವದು ಇದಕ್ಕೆ ಬೇಗ ಕೀಲಿಕೊಡಬೇಕಾಗಿಲ್ಲ ಇದರಲ್ಲಿ ತಾಣುತ್ತಿರುವ ಗುಂಡನ್ನು ನೋಡುತ್ತಿದ್ದರೆ ಸಾಕು ತನ್ನಷ್ಟಕ್ಕೆ ತಾನೇ ಸರಿಯಾದ ಕಾಲವನ್ನು ತೋರಿಸುವದು ಇವತ್ತೇ ತರಿಸಿಕೊಳ್ಳಿರಿ

ಪೀಟರ ವಾಚ ಕಂಪೆನಿ,
ಪೋಸ್ಟ ಬಾಕ್ಸ ನಂಬರ 27
ಮದ್ರಾಸ್.

18 ಕಾರೆಟ್ಸ್ ರೋಲ್ಡ್‌ಗೋಲ್ಡ ಭಂಗಾರದ ಕೈಗಡಿಯಾರವನ್ನು ಕೊಳ್ಳುವವರಿಗೆ

ಮೋಡರ್ನ್ ರೆಗ್ಯುಲೇಟರ್

ಎಂಬ ಗೋಡೆಗೆ ತಗಲಿರುವ ಗಡಿಯಾರವು ಮುಫತ್ತಾಗಿ ಸಿಕ್ಕುವದು



ಈ ಕೈಗಡಿಯಾರವು ಭಂಗಾರಕ್ಕೆ ಸಮಸಮಾನವಾಗಿದೆ ಬಿರಾರು ಗಂಟೆಯನ್ನು ತೋರಿಸ ... ತ್ರಿತ್ತ ... ಗಟ್ಟಿ ... ದ ತಯಾರ ... ವಕ್ಕೆ ... ಗ್ಯಾರಂಟಿ ಕೊಡುವೆವು.



ರೆಗ್ಯುಲೇಟರ್ ಮತ್ತು ಕೈಗಡಿಯಾರ	ರೂ.	10—0—0
ಕೈಗಡಿಯಾರ ಮಾತ್ರ	ರೂ	7—0—0
ರೆಗ್ಯುಲೇಟರ್ ಗಡಿಯಾರ	ರೂ.	5—0—0

ಕ್ಯಾಪಿಟಲ್ ವಾಚ್ ಕಂಪೆನಿ,
12—9 ನಂ 265 ಮದ್ರಾಸು.

GREETING.

Messrs Spencer & Co. Ltd.,
wish their numerous constituents
A HAPPY AND PROSPEROUS
NEW YEAR.

Spencer & Co. Ltd,
9 MERCARA. & POLLIBETTA.

ಮಹನೀಯರೇ,

1923ನೆ ಇಸವಿಯಲ್ಲಿ ವೀರರಾಜೇಂದ್ರಪೇಟೆಯಲ್ಲಿ ತೆರೆದ ನಮ್ಮ ವೈದ್ಯಶಾಲೆಯ ಶಾಖೆಯಲ್ಲಿ ಅನೇಕ ದುಸ್ಸಾಧ್ಯವಾದ ಕಾಯಿಲೆಗಳನ್ನು ಗುಣಪಡಿಸಿ ಹೆಸರುವಾಸಿ ಹೊಂದಿದ ನಮ್ಮ ಕಂಪೆನಿಯ ಮತ್ತೊಂದು ಶಾಖೆಯು ಈಗಾಗಲೇ **ಸೋಮವಾರಪೇಟೆಯಲ್ಲಿ** ತೆರೆಯಲ್ಪಟ್ಟಿದೆ

ಕೃಷ್ಣ ಸಂಬೇರ್ಕ ಮತ್ತು ನಾರಾಯಣ ಸಂಬೇರ್ಕ ಎಂಬ ಹೆಸರುಗಳುಳ್ಳ ನಮ್ಮ ಪ್ರಧಾನ ವೈದ್ಯರುಗಳು ಒಬ್ಬೊಬ್ಬರು ಒಂದೊಂದು ಶಾಖೆಯಲ್ಲಿ ಯಾವಾಗಲೂ ಇರುತ್ತಾರೆ

ಈ ವೈದ್ಯರುಗಳು ಇಂಡಿಯಾ ಚಕ್ರವರ್ತಿಯವರಿಂದ ಶ್ರೇಷ್ಠ ... ಸಂಸ್ಥಾನದ ... ಸ್ಥಿರ ವೈದ್ಯರಾಗಿ ... ಸುಪ್ರಸಿದ್ಧ ... ಇರುವ ... ಮಹಾನುಭಾವರ ... ವರ್ಷಗಳವು ಪಾಂಡಿತ್ಯವನ್ನು ಪರಿಚಯವನ್ನು ಪಡೆದವರಾಗಿಯೂ ಇದ್ದಾರೆ

ಇವರಲ್ಲಿನ ಎಲ್ಲಾ ಔಷಧಗಳಿಗೆ ಮಲಬಾರಿನ ಎಲ್ಲಾ ವೈದ್ಯಶಾಲೆಗಳ ಔಷಧಗಳ ಚಾರ್ಜಿಗಿಂತಲೂ ಕಡಿಮೆಯಾಗಿದೆ.

ಸಂಬೇರ್ಕ ಮತ್ತು ಕಂಪೆನಿ,
ಆಯುರ್ವೇದಿಕ್ ಪ್ರೈವೇಟ್ ಡಿಸ್ಪೆನ್ಸರಿ.
ಕಲ್ಲೂರು, ವೀರಾಜಪೇಟೆ ಮತ್ತು
52 40 **ಸೋಮವಾರಪೇಟೆ.**

ಬೇಟೆಗೆ ಅವಶ್ಯವಾದ

ಕೋವಿಮದ್ದು ಪೌಂಡಿಗೆ ರೂ. ೨—೪—೦
ಕೇಪು ಕೋವಿನ ಕೇಪುಗಳು, ೨೫೦ಉಳ್ಳ ಪೆಟ್ಟಿಗೆಗೆ ೧—೪—೦
ಚಿಲ್ಲ ಪೌಂಡು ೧ಕ್ಕೆ ೦—೬—೦.
ತುಂಬಿದ ೧೦೦ ತೋಟೆಕ್ಕೆ (Eleyes) ೧೨—೦—೦.

ಆರ್ಡರು ಕಳುಹಿಸುವಾಗ್ಯೆ ಯಾವಾಗಲೂ ರೂ. 5 ಅಡ್ವಾನ್ಸು ಕಳುಹಿಸತಕ್ಕದ್ದು. ನಮ್ಮ ಹಿಡುವಳಿದಾರರು ಆರ್ಡರು ಕಳುಹಿಸುವಾಗ ಮೊದಲನೇ ನಾರಿಮಾತ್ರ ಡಿಸ್ಟ್ರಿಕ್ಟ ಮೇಜಿಸ್ಟ್ರೇಟರವರಿಂದ ವಿನಾಯಿತಿ (ಎಕ್ಸೆಂಪ್ಶನ್) ಸರ್ಟಿಫಿಕೇಟನ್ನು ಕಳುಹಿಸಬೇಕು. ತಪ್ಪಿದ್ದಲ್ಲಿ ನಿಮಗಾಗಿ ನಾವೇ ಆ ಸರ್ಟಿಫಿಕೇಟನ್ನು ಒದಗಿಸಿಕೊಳ್ಳಲು ತಯಾರಾಗಿದ್ದೇವೆ

ಈ ಕಳಗಿನ ವಿಳಾಸಕ್ಕೆ ಆರ್ಡರುಗಳನ್ನು ಪತ್ರವ್ಯವಹಾರಗಳನ್ನೂ ಇಂಗ್ಲಿಷಿನಲ್ಲಿ ನಡಿಸತಕ್ಕದ್ದು.

S Venkatarangam Chetty,
Ammunition & Sulphur Merchant
No 9, China Bazar,
12—8 Madras.

ARMS & AMMUNITION MART.

Mahomedally-Noorbhoy

321, Abdul Rehman Street, near
Crawford Market, BOMBAY. 3
Telegraphic Address—"SHOOTER"
Bombay.

[52—18] Please write for Reduced nett prices list for 1926

ಪ್ರಕಟಣೆ.

ಒಂದು ಕಡೆ ಇಂಗ್ಲೀಷಿನಲ್ಲಿಯೂ, ಇನ್ನೊಂದು ಕಡೆ **ಕನ್ನಡದಲ್ಲಿಯೂ** ಪ್ರಿಂಟಾಗಿರುವ ಕಾಫಿ ತೋಟದ ಆಳುಗಳ **ಪ್ರಿಚಾಪು** ಕಂಟ್ರಾಕ್ಟು ಎಗ್ರಿಮೆಂಟ್ ಫಾರಮುಗಳೂ ಮತ್ತು **ಅಪ್ಲಿಕೇಶನ್** (complaint) ಫಾರಂಗಳೂ ಸಹ ಮಾರಾಟಕ್ಕೆ **ತಯಾರಿವೆ.** ಬೇಕಾದವರು 'ಕೊಡಗು' ಆಫೀಸಿನಿಂದ ಪಡಕೊಳ್ಳಬಹುದು.

ಮಡಿಕೇರಿ ಮೇನೇಜರ್,
17.9.24. 'ಕೊಡಗು' ಆಫೀಸ್,

ಪ್ರಕಟಣೆ.

ನಮ್ಮ ಅಂದವಾದ ಹೊಸ ಅಕ್ಷರಗಳು ಬಂದು ತಲುಪಿರುವದರಿಂದ, 'ಲೆಟರ ಹೆಡ್ಸ್,' 'ವಿಸಿಟಿಂಗ್ ಕಾರ್ಡ್ಸ್' ಆಮಂತ್ರಣಗಳು (ಇನ್ವಿಟೇಶನ್) ಮೊದಲಾದ ಪ್ರಿಂಟಿಂಗ್ ಕೆಲಸಗಳನ್ನು ಇಂಗ್ಲಿಷ್ ಮತ್ತು ಕನ್ನಡದಲ್ಲಿ ಚಂದವಾಗಿಯೂ ಕಡಿಮೆ ಚಾರ್ಜಿನಲ್ಲಿಯೂ ನಿಯಮಿತ ಕಾಲದಲ್ಲಿಯೂ ಮಾಡಿಕೊಡಲು ತಯಾರಾಗಿದ್ದೇವೆ

ಮಡಿಕೇರಿ ಮೇನೇಜರ್,
'ಕೊಡಗು' ಲಿಮಿಟೆಡ್

"ಕೊಡಗು"

ಸ ೧೯೩೭ನೇ ಇಸವಿ ಜನವರಿ ತಾ. ೧ನೇ ಶುಕ್ರವಾರ.

ಹಿಂದೂ ರಾಷ್ಟ್ರೀಯ ಮಹಾಸಭೆ.

ಡಿಸಂಬರು ತಿಂಗಳ ಕಡೇವಾರವು ಹಿಂದೂ ರಾಷ್ಟ್ರೀಯ ವಾರವೆಂದರೆ ತಪ್ಪಾಗಲಾರದು. ವರ್ಷದ ಈ ಆಖೈರುವಾರದಲ್ಲಿ ಕ್ರೈಸ್ತರು ತಮ್ಮ ದೇವರಾದ ಯೇಸು ಕ್ರಿಸ್ತನ ಜನನದ ಹಬ್ಬವನ್ನು ಸಂತೋಷದಿಂದ ಆಚರಿಸುತ್ತಿರುವಾಗ ಭಾರತೀಯರು ತಮ್ಮ ಹಲವು ರಾಷ್ಟ್ರೀಯ ಸಭಾ ಕೂಟಗಳನ್ನು ನಡಿಸುವುದರಲ್ಲಿ ಉತ್ಸಾಹಯುಕ್ತರಾಗಿರುವರು. ಈ ವರ್ಷ ಫೈಜ್‌ಪುರವು ರಾಷ್ಟ್ರಕೂಟಗಳ ನೇರವಿಕೆಯ ಭಾಗ್ಯವನ್ನು ಪಡೆದಿತು. ಈ ಸಭೆಗಳೆಲ್ಲಾ ಅಖಿಲ ಭಾರತ ಕಾಂಗ್ರೆಸ್ ಸಭೆಯೇ ಮುಖ್ಯವಾದದ್ದರಿಂದ ಇದಕ್ಕೆ ಕಾಂಗ್ರೆಸ್ ವಾರವೆಂದು ಹೇಳುವುದೂ ಉಂಟು. ಈ ವಾರ ಫೈಜ್‌ಪುರದಲ್ಲಿ ಮೂವತ್ತರಿಂದ ನಲುವತ್ತು ಸಭೆಗಳು ಸೇರಿದವು. ಹೀಗೆ ಸಭೆಗಳ ಅಧ್ಯಕ್ಷಸ್ಥಾನವನ್ನು ವಹಿಸಿಕೊಳ್ಳಲು ಮುಂದಾಳುಗಳನ್ನು ಹುಡುಕುವ ಕೆಲಸವು ಪ್ರಯಾಸವಾದುದಾಗಿತ್ತಂತೆ!

ನಲುವತ್ತನೇಯ ಇಂಡಿಯನ್ ನೇಶನಲ್ ಕಾಂಗ್ರೆಸ್ ಸಭೆಯು ಫೈಜ್‌ಪುರದ "ತಿಲಕನಗರ"ದಲ್ಲಿ ಡಿಸಂಬರು ತಾ. ೨೭ರಲ್ಲಿ ಪ್ರಾರಂಭವಾಯಿತು. ಶ್ರೀಮತಿ ಸರೋಜಿನಿದೇವಿಯವರು ಅಧ್ಯಕ್ಷರಾಗಿದ್ದರು. ಹಿಂದೀಯರ ತಮ್ಮ ಅಧಿಕಾರದಲ್ಲಿರುವ ಈ ಮಹಾ ಸಭೆಯನ್ನು ಭಾರತ ಪುತ್ರಿಯರ್ಬ್ಬಳಿಗೆ ವಹಿಸಿಕೊಟ್ಟದ್ದು ಇದೇ ಮೊದಲು. ... ಕಳೆದ ವರ್ಷ ... ಪುತ್ರಿ ಸರೋಜಿನಿ ಉತ್ತಮರು ... ಹೀಗೆ ಅರ್ಹರಾಗಿದ್ದರೋ ಹಾಗೆಯೇ ಈಗ ... ಈ ವರ್ಷದ ಕಾಂಗ್ರೆಸ್ಸಿನ ಅಧ್ಯಕ್ಷಪದವಿಯಿಂದ ವಿಷವಾಗುತ್ತದೆ. ಕಾಂಗ್ರೆಸ್ಸಿನ ಅಧ್ಯಕ್ಷಪದವಿಗೆ ಶ್ರೀಮತಿ ಸರೋಜಿನಿನಾಯುಡುರವರು ಯೋಗ್ಯರೆಂಬುದನ್ನು ಯಾರೂ ಸಂಶಯಪಡಬೇಕಾಗಿಲ್ಲ. ಇವರು ತಮ್ಮ ಜೀವನದ ಪೂರ್ವಭಾಗವನ್ನು ಹೆಚ್ಚಾಗಿ ರಾಜಕೀಯ ಸೇವೆಯ ಸಂಬಂಧವಾಗಿ ವ್ಯಯ ಮಾಡದೆ ಕವಿತ್ವದಲ್ಲಿಯೇ ಮಗ್ನರಾಗಿ ಇದ್ದರೂ, ಇತ್ತೀಚೆಗೆ ಕಲವು ವರ್ಷಗಳಿಂದ, ದಾಸತ್ವದಲ್ಲಿರುವ ಭಾರತ ಭೂಮಿಯನ್ನು ಎಚ್ಚರಗೊಳಿಸಿ ಸ್ವಾತಂತ್ರ್ಯವನ್ನು ಹೊಂದಲು ನಡಿಯುತ್ತಿರುವ ಹಲವರಲ್ಲಿ ತುಂಬಾ ಉತ್ಸಾಹವನ್ನು ತೋರಿಸಿರುವರು. ಹಿಂದೂ ಮುಸಲ್ಮಾನರ ಒಗ್ಗಟ್ಟಿಗಾಗಿ ಹೆಚ್ಚು ಶ್ರಮ ತೆಗದುಕೊಂಡವರಲ್ಲಿ ಇವರೊಬ್ಬರು. ದಕ್ಷಿಣ ಆಫ್ರಿಕದಲ್ಲಿರುವ ಹಿಂದೀಯರು ಅಲ್ಲಿಯ ಬಿಳಿ ಜನ ಸರಕಾರದಿಂದ ಪಡುತ್ತಿರುವ ಕಷ್ಟಗಳನ್ನು ತಾನು ಖುದ್ದಾಗಿ ಹೋಗಿ ... ಆ ಸರಕಾರಕ್ಕೆ ... ಉತ್ತರ ... ಕೊಟ್ಟಿರುವರು. ದೇಶಿಯರಾದ ಕಾಂಗ್ರೆಸ್ಸಿಗೆ ... ಅದರೊಳಗೆ ... ಯಾವ ಪಂಗಡಕ್ಕೂ ಸೇರಿದವರಂತೆ ಕಾಣುವುದಿಲ್ಲ. ಎಲ್ಲಾ ಪಕ್ಷಗಳ ... ಅವರ ಅಭಿಪ್ರಾಯಗಳನ್ನು ... ನಿಷ್ಪಕ್ಷಪಾತದಿಂದ ನಡೆಸುವುದರಿಂದಲೂ, ಅವರ ಅದ್ವಿತೀಯ ದೇಶಭಕ್ತಿಯಿಂದಲೂ ಅವರು ಎಲ್ಲಾ ಪಂಗಡದವರಿಗೂ ಬೇಕಾದವರಾಗಿರುವರು. ... ಪಂಗಡಗಳಿಂದಲೂ ಪಾರ್ಟಿಗಳಿಂದಲೂ ... ಈ ಸಮಯದಲ್ಲಿ ಹಿಂದೂದೇಶಕ್ಕೆ ಒಗ್ಗಟ್ಟಿನ ... ತೋರಿಸಲು ಕಾಂಗ್ರೆಸ್ಸಿನ ಪ್ರೆಸಿಡೆಂಟ್ ... ಯಾದವರೆಂದು ಹೇಳಬಹುದು.

ಈ ಸಲದ ಕಾಂಗ್ರೆಸ್ಸಿನ ಅಧ್ಯಕ್ಷರ ಭಾಷಣವು ಪತ್ರಿಕೆಯಂತೆ ದೀರ್ಘವಾಗಿರದೆ ಬಹು ಸಂಕ್ಷಿಪ್ತವಾಗಿ ... ತವಾಗಿತ್ತು. ಭಾಷಣದ ಭಾಷೆಯು ... ಕವಿತ್ವದಿಂದ ಕೂಡಿದೆಯೆಂದು ... ದರೆ ಅಭಿಪ್ರಾಯಗಳು ಉಚ್ಚವಾಗಿದ್ದರೂ ... ಸಾಧ್ಯವಿಲ್ಲದವೆಂದೂ, ಇಂಡಿಯಾದ ಈಗಿನ ಹೀನ ಸ್ಥಿತಿಗೆ ಕಾರಣಗಳನ್ನು ಮಾತ್ರ ಸೂಚಿಸಿರುವುದಲ್ಲದೆ ಅವುಗಳನ್ನು ಹೋಗಲಾಡಿಸಲು ಕಾರ್ಯಕಾರಿಯಾದ ಯಾವದೊಂದು ದಾರಿಯನ್ನು ತೋರಿಸುವುದಿಲ್ಲವೆಂದೂ ಕೆಲವು ಪತ್ರಿಕೆಗಳು ಅಭಿಪ್ರಾಯಪಟ್ಟಿವೆ. ಭಾಷಣವು ಚಿಕ್ಕದಾದರೂ ಹಿಂದೂದೇಶದ ನಿಜ ಸ್ಥಿತಿಯನ್ನು ವರ್ಣಿಸಿ ಸ್ವರಾಜ್ಯ ಸಂಪಾದನೆಗೆ ಆವಶ್ಯವಿರುವ ಮುಂದಿನ ಕಾರ್ಯವನ್ನು ಕೆಲವು ಮಾತುಗಳಲ್ಲೇ ವಿವರಿಸಿರುವದಲ್ಲದೆ ಒಗ್ಗಟ್ಟಿನ ಬೆಲೆಯನ್ನು ಒತ್ತಿ ಹೇಳಿದ ಅಧ್ಯಕ್ಷರ ಉಪನ್ಯಾಸವು ಕಾಲೋಚಿತವಾದದ್ದೆಂದು ಹೇಳುವ ಇನ್ನು ಕೆಲವು ಪತ್ರಿಕೆಗಳ ಅಭಿಪ್ರಾಯಕ್ಕೆ ನಾವು ಒಪ್ಪುವವರಾಗಿದ್ದೇವೆ.

ಶ್ರೀಮತಿ ಸರೋಜಿನಿಯವರು ತನಗೆ ಕೊಟ್ಟ ದೊಡ್ಡ ಒಹ ವರ್ಗಕ್ಕೆ ಮಹಾ ಜನರನ್ನು ವಂದಿಸಿದನಂತರ ಈ ವರ್ಷ ಹಿಂದೂದೇಶವು ಕಳಕೊಂಡ ಅರ್ ದಾಸ್, ಸುರೇಂದ್ರನಾಥ್ ಬೆನಾರ್ಜಿ ಮೊದಲಾದ ಮುಂದಾಳುಗಳ ನಷ್ಟಕ್ಕೆ ವ್ಯಸನವನ್ನು ಸೂಚಿಸಿ ಭರತಖಂಡವು ಅನುಭವಿಸುತ್ತಿರುವ ಕಷ್ಟಗಳನ್ನು ವಿವರಿಸಿದರು. ಇದಕ್ಕೆಲ್ಲಾ ಪರಿಹಾರವು ಮಹಾತ್ಮ ಗಾಂಧಿಯವರು ಬೋಧಿಸಿದ ತ್ಯಾಗದಲ್ಲಿದೆಯೆಂದೂ, ಅಸಹಕಾರ ಚಳವಳಿಯು ಈಗ ಕಡಿಮೆಯಾಗುತ್ತಿದ್ದರೂ ಅದರ ತತ್ವವು ನಮ್ಮ ರಾಷ್ಟ್ರೀಯ ಜೀವನದ ತಳಹದಿಯಲ್ಲೇ ಒದಗಿರುವುದೆಂದೂ ಅದರ ಪ್ರತಿ ಫಲವೇ ಸ್ವರಾಜ್ಯ ... ಈಗಿನ ರಾಜಕೀಯ ಪರಿಸ್ಥಿತಿಯೆಂದೂ ಹೇಳಿದರು. ಕಾಂಗ್ರೆಸ್ ಸಂಸ್ಥೆಯ ಪ್ರತೀಕ ... ನೂಲು ಮತ್ತು ಚರಕಾ ಇವೆರಡು ಚಿನ್ಹೆಯ ಸಾಧನಗಳು ... ನಾಲಕ ದಾಸರವರು ಯೋಜಿಸಿದ ... ಮಾಡಲು ಸ್ವಾರ್ಥತ್ಯಾಗಿಗಳಾದ ಹಲವರನ್ನು ... ಯಿಸಬೇಕೆಂತಲೂ, ಹಳ್ಳಿ ವಾಸಿಗಳ ಕಷ್ಟ ನಿವಾರಣೆ ಒಗ್ಗಟ್ಟು ... ಗಳನ್ನು ಏರ್ಪಡಿಸಬೇಕೆಂತಲೂ ಸೂಚಿಸಿದರು. ಗ್ರಾಮೋದ್ಧಾರವೇ ಸ್ವರಾಜ್ಯದ ತಳಹದಿಯಾಗಿರುವುದು. ಸ್ವರಾಜ್ಯಕ್ಕಾಗಿ ಹೋರಾಡುತ್ತಿರುವ ಕಾಂಗ್ರೆಸ್ಸಿನವರು ... ಗ ತುಂಬಾ ... ಕೊಡಬೇಕೆಂತಲೂ ... ಹೇಳಿದರು.

ಈಗಿನ ವಿದ್ಯಾಭ್ಯಾಸ ಕ್ರಮವು ಹಿಂದೀ ಜನರ ... ನನ್ನು ... ತಕ್ಕದ್ದಲ್ಲ ... ತರಬೇತು ಹೊಂದುತ್ತಿರುವುದು ... ದೂ, ಭಾರತೀಯರ ಪೂರ್ವದ ಸ್ವಾತಂತ್ರ್ಯದ ... ನ್ನು ಬಾಲಿಗೆ ತರುವ ಯತ್ನ ನಡೆಯಬೇಕೆಂದೂ ಹೇಳಿದರು ... ರರ ಮತಾಭಿಮಾನದಿಂದ ನಾವು ಈಗ ನಮ್ಮ ದೇಶಕ್ಕೆ ಕಾವಾ ... ಪರಕೀಯರ ಸಹಾಯವನ್ನು ನಂಬಿರುವರೂ, ನಾಚಿಕೆಕರವೆಂದೂ, ಪ್ರತಿಯೊಬ್ಬ ಹಿಂದೀಯನೂ ಶಾಸನಗಳಿಗೆ ಮುಂದ ... ಬಂದು ... ತರಬೇತು ಹೊಂದುನಂತೆ ಸ್ವಯಂ ಸೇವಕರ ದಳವನ್ನು ಭದ್ರಪಡಿಸಬೇಕೆಂದೂ ಅಭಿಪ್ರಾಯ ಕೊಟ್ಟರು. ಪರದೇಶಗಳಲ್ಲಿರುವ ನಮ್ಮ ಸಹೋದರರ ಕಷ್ಟ ಸುಖಗಳನ್ನು ಅರಿತುಕೊಂಡು ಅವುಗಳ ನಿವಾರಣೆ ಬಗ್ಗೆ ಶಕ್ತಿ ವಿನಾ ... ಮಾಡಲು ಮತ್ತು ಹಿಂದೂ ದೇಶದಲ್ಲಿ ನಡಿಯುತ್ತಿರುವ ನಿಜ ಸಂಗತಿಗಳನ್ನು ಪರದೇಶಗಳಲ್ಲಿ ಪ್ರಚಾರ ಪಡಿಸಲು ಒಂದು ಇಲಾಖೆಯನ್ನು ಏರ್ಪಡಿಸುವುದು ಉತ್ತಮವೆಂದರು. ಈ ಅಭಿಪ್ರಾಯಗಳಿಗೆ ಯಾರೂ ವಿರೋಧಿಸಲಾರರು.

ಹಿಂದೂ ಮುಸಲ್ಮಾನರ ಒಗ್ಗಟ್ಟಿನ ವಿಷಯ ಮಾತನಾಡಿದಾಗ ಇವೆರಡು ಮುಖ್ಯ ಮತಸ್ಥರೊಳಗೆ ಆಗಾಗ್ಯೆ ನಡೆಯುತ್ತಿರುವ ತುಚ್ಛ ಜಗಳಗಳಿಗೆ ಕಾರಣಗಳು ಅಲ್ಪವಾದವುಗಳೆಂದೂ, ಅವುಗಳನ್ನು ಬಿಟ್ಟು ಮಾತೃಭೂಮಿಯ ಏಳಿಗೆಗಾಗಿ ಎಲ್ಲಾ ಪಂಗಡದವರೂ ಒಗ್ಗಟ್ಟಾಗಬೇಕೆಂದೂ ಎಲ್ಲರ ಮನಸ್ಸಿಗೆ ತಗಲುವಂತೆ ವಿಜ್ಞಾಪಿಸಿಕೊಂಡರು. ಆಶ್ರಿತ ಸಂಸ್ಥಾನಗಳ ಪ್ರಜೆಗಳ ಹಿತವನ್ನು ಬ್ರಿಟಿಶ್ ಇಂಡಿಯಾದಲ್ಲಿರುವ ನಾವು ಮರೆಯಬಾರದೆಂದೂ ಹೇಳಿದರು. ಒಗ್ಗಟ್ಟಿಲ್ಲದೆ ಸ್ವರಾಜ್ಯ ಪಡೆಯುವುದು ಸಾಧ್ಯವಿಲ್ಲವಾದ ಕಾರಣ ಹಿಂದೂ ದೇಶದಲ್ಲಿರುವ ಎಲ್ಲಾ ರಾಜಕೀಯ ಪಂಗಡಗಳು ಕಾಂಗ್ರೆಸ್ಸಿಗೆ ಸೇರಿ, ಕಳೆದುಕೊಂಡಿರುವ ತಮ್ಮ ಸ್ವಾತಂತ್ರ್ಯವನ್ನು ಒಗ್ಗಟ್ಟಿನ ಬಲದಿಂದ ಪಡೆಯಲು ಯತ್ನಿಸಬೇಕಾಗಿದೆಯೆಂದು ವ್ಯವಸ್ಥಿತವಾಗಿ ಹೇಳಿದರಂತೆ.

ಕಾಮನ್‌ವೆಲ್ತ್ ಆಫ್ ಇಂಡಿಯಾ ಬಿಲ್ಲಿನಲ್ಲಿಯೂ ಚಳಿ... ಶ್ರೀಮತಿ ಬೆಸೆಂಟರೂ ರಾಷ್ಟ್ರೀಯ ಪಕ್ಷದವರು ನಾಸನ ... ಮಾಡಿದ ರಾಜಕೀಯ ಸಿದ್ಧಾಂತವು ಆಚರಣೆಯಲ್ಲಿಯೂ ಅದರ ... ರಾಷ್ಟ್ರೀಯ ಕ್ಷೇಮಾರ್ಥಿಕ (ನ್ಯಾಷನಲ್ ಡಿಮಾಂಡ್) ... ಗೆ ತೃಪ್ತಿಕರವಾದ ಜವಾಬನ್ನು ಸರಕಾರದವರು ಬೇಗನೆ ಕೊಡಬೇಕೆಂದರೂ ... ಮತ್ತು ಪ್ರಾಂತೀಕ ಕೌನ್ಸಿಲು ಗಳ್ಳಿಗೆ ... ದ ಕಾಂಗ್ರೆಸ್ ಪಕ್ಷದ ಮೆಂಬರುಗಳಲ್ಲಿ ... ಸ್ವರಾಜ್ಯ ಪಡೆಯಲು ಒಳಗಾಗಬೇಕಾಗುವ ಎಲ್ಲಾ ಕಷ್ಟ ನಿಷ್ಟುರಗಳಿಗೆ ಜನರನ್ನು ತಯಾರು ಮಾಡಲಿಕ್ಕಾಗಿ ಇಡೀ ಹಿಂದೂ ದೇಶದಲ್ಲಿ ಪ್ರಬಲವಾದ ಚಳವಳಿವನ್ನೆಬ್ಬಿಸಲು ತಕ್ಕ ಏರ್ಪಾಡುಮಾಡಬೇಕಾದದ್ದು ಕಾಂಗ್ರೆಸ್ಸಿನ ಕರ್ತವ್ಯವಾಗಿದೆಯೆಂದು ಹೇಳಿ ಭಾಷಣವನ್ನು ಅಂತ್ಯಗೊಳಿಸಿದರು.

ಅಧ್ಯಕ್ಷರ ಕರ್ಮ ಸೂಚನೆಯನ್ನು ಹೋಲುವಂತ ಒಂದು ಮುಖ್ಯ ಠರಾವು ಕಾಂಗ್ರೆಸ್ ಮಹಾಸಭೆಯಲ್ಲಿ ಮಂಜೂರಾಗಿದೆ. ಈ ತೀರ್ಮಾನದ ಫಲಿತಾಂಶವು ಹೇಗಾಗುವುದೆಂದು ಈಗ ಭವಿಷ್ಯ ಹೇಳಲು ಸಾಧ್ಯವಿಲ್ಲದಿದ್ದರೂ, ಇದು ಇಂಡಿಯಾದಲ್ಲಿ ಪುನಹ ಒಂದು ನವಚೈತನ್ಯವನ್ನುಂಟುಮಾಡುವದೆಂದು ತೋರುತ್ತದೆ. ಹಿಂದೂ ಮುಸಲ್ಮಾನರೂ, ಸ್ವರಾಜ್ಯಪಕ್ಷದವರೂ ಸ್ವಾತಂತ್ರ್ಯ ಪಂಗಡದವರೂ, ಲಿಬರಲ್ ಪಾರ್ಟಿಯವರೂ, ಅಸಹಕಾರಿಗಳೂ ಎಲ್ಲರೂ ತಮ್ಮ ತಮ್ಮ ಭಿನ್ನ ಭೇದಗಳನ್ನು ಬಿಟ್ಟು, ಒಗ್ಗಟ್ಟಾಗಿ ಹಿಂದೂ ಮಾತೆಯ ಸ್ವತಂತ್ರವನ್ನು ಪಡೆಯಿರಿ ಎಂಬ ದೇ ಪ್ರೆಸಿಡೆಂಟರ ಭಾಷಣದ ಸಾರಾಂಶವಾಗಿದೆ. ಕಷ್ಟಸಾಧ್ಯವಾದ ಈ ಬುದ್ಧಿವಾದವನ್ನು ಜಾರಿಗೆ ತಂದರೆ ಸುಲಭದಲ್ಲಿಯೇ ಸ್ವರಾಜ್ಯಪ್ರಾಪ್ತಿಯಾಗುವುದೆಂದು ಹೇಳಬಹುದಲ್ಲವೇ?

ಮಿತ ಸಂತತಿ.

(ಮಹಾತ್ಮ ಗಾಂಧಿಯವರಿಂದ)

ಪಶ್ಚಿಮ ಅನುಭೋಗದಿಂದಲೂ ಅನಿಷ್ಟದಿಂದಲೂ ಈ ವಿಚಾರವನ್ನೆತ್ತುತ್ತಲಿದ್ದೇನೆ. ನಾನು ಹಿಂದೂ ದೇಶಕ್ಕೆ ಬಂದಂದಿನಿಂದ ಸಂತತಿಯನ್ನು ನಿಗ್ರಹಿಸಲು ಕೃತ್ರಿಮ ಸಾಧನಗಳ ಉಪಯೋಗಿಸುವ ವಿಚಾರದಲ್ಲಿ ನನಗೆ ಅನೇಕ ಪತ್ರಗಳು ಬಂದಿರುವವು ... ಪ್ರಶ್ನೆಯನ್ನು ... ಆರಂಭ ... ದಿಂದ ನಾನು ಉತ್ತರಕೊಟ್ಟಿರ ... ಬಹಿರಂಗವಾಗಿ ಇದರ ಚರ್ಚೆಯನ್ನು ನಾನು ಇದುವರೆಗೆ ಮಾಡಿಲ್ಲ. ನಾನು ಇಂಗ್ಲಾಂಡಿನಲ್ಲಿ ವಿದ್ಯಾರ್ಥಿಯಾಗಿದ್ದಾಗ ಅಗವಶ್ಯಕ ... ಈಗ ಈ ವಿಷಯವು ನನ್ನ ಲಕ್ಷ್ಯಕ್ಕೆ ಬಂದಿತ್ತು. ಆಗ ಸಹಜ ಉಪಾಯಗಳನ್ನು ಮಾತ್ರ ಸಾಧಿಸಬೇಕೆನ್ನುವ ಒಬ್ಬ ... ಗೃಹಸ್ಥರು ... ಕೃತ್ರಿಮಸಾಧನಗಳನ್ನು ಸಾರುತ್ತಿದ್ದ ಒಬ್ಬ ಡಾಕ್ಟರರು ... ಚರ್ಚೆ ... ವಿವಾದವು ನಡೆಯುತ್ತಿತ್ತು. ಸ್ವಲ್ಪ ಸಮಯ ಕೃತ್ರಿಮ ಸಾಧನಗಳ ಕಡೆಗೆ ನನ್ನ ಮನಸ್ಸು ಆಕರ್ಷಿಸಲ್ಪಟ್ಟರೂ ಬೇಗನೆ ನಾನು ಅದಕ್ಕೆ ಸಂಪೂರ್ಣ ವಿರುದ್ಧವಾದವನಾದೆನು. ಇತ್ತೀಚೆಗೆ ಕಲವು ಹಿಂದೀ ಪತ್ರಿಕೆಗಳು ... ಬಹಿರಂಗವಾಗಿ ... ಈ ಕೃತ್ರಿಮಸಾಧನಗಳನ್ನು ... ವರ್ಣಿಸುವುದನ್ನು ನೋಡಿದ್ದೇನೆ. ... ಮಾತ್ರವಲ್ಲ, ಇಂಥ ಸಾಧನಗಳನ್ನು ಉಪಯೋಗಿಸಬಹುದೆಂದು ... ದಲ್ಲಿ ನಾನು ಒಪ್ಪಿದೆನೆಂದು ಒಬ್ಬರು ಹೇಳಿದ ... ನೋಡಿದೇನೆ. ಇಂಥ ಉಪಾಯಗಳನ್ನು ಸಮರ್ಥಿಸಿ ... ನಾನು ಒಂದೇ ಒಂದು ಮಾತನ್ನು ಹೇಳಿದ್ದು ನನಗೆ ನೆನಪಿಲ್ಲ ... ಹಲವರ ಹೆಸರುಗಳನ್ನು ಹೇಳಿದ್ದನ್ನು ನೋಡಿದ್ದೇನೆ. ... ಅವರ ಹೆಸರನ್ನು ಪ್ರಕಟಿಸುವುದು ಸರಿಯಲ್ಲ.

ಮಿತ ಸಂತತಿಯ ಅವಶ್ಯಕತೆಯ ವಿಷಯ ಅಭಿಪ್ರಾಯ ಭೇದವಿರಲವಕಾಶವಿಲ್ಲ. ಆದರೆ ಅನೇಕ ಯುಗಗಳಿಂದ ನಮಗೆ ದೊರೆತ ಆತ್ಮಸಂಯಮ ಅಥವಾ ಬ್ರಹ್ಮಚರ್ಯವೇ ಇದಕ್ಕೆ ನಿಕಟವಾದ ಉಪಾಯವು. ಇದೇ ರಾಮಬಾಣ ಮತ್ತು ಸರ್ವೋಪರಿ ಉಪಾಯವಾಗಿರುತ್ತದೆ. ಮತ್ತು ಇದರ ಅಭ್ಯಾಸವೇ ಲಾಭದಾಯಕವಾದದು. ಒಮ್ಮೆ ವೈದ್ಯರಾದಿ (ಮಿತ ಸಂತತಿ) ಗಾಗಿ ಕೃತ್ರಿಮ ಸಾಧನಗಳನ್ನು ಹುಡುಕಿ ತೆಗೆಯುವುದರ ಬದಲಿಗೆ ಆತ್ಮಸಂಯಮದ ಸಾಧನಗಳನ್ನು ಕಂಡುಹಿಡಿದರೆ ಡಾಕ್ಟರರು ಮಾನವ ಜಾತಿಗೆ ಮಹೋಪಕಾರವನ್ನುಂಟುಮಾಡಿದಂತಾಗುವುದು. ಸ್ತ್ರೀ ಪುರುಷರ ಸಂಯೋಗವು ಸಂತಾನೋತ್ಪತ್ತಿಗಲ್ಲದೆ ಆನಂದಭೋಗಕ್ಕಾಗಿರುವುದಿಲ್ಲ. ಮತ್ತು ಯಾವಾಗ ಸಂತಾನೋತ್ಪತ್ತಿಯ ಇಚ್ಛೆ ಇರುವುದಿಲ್ಲವೋ ಆಗ ಸಂಭೋಗವು ಅಪರಾಧವಲ್ಲದೆ ಮತ್ತೇನು?

ಕೃತ್ರಿಮ ಸಾಧನಗಳ ಪ್ರಸಾರದಿಂದ ಅನೀತಿಗೆ ಉತ್ತೇಜನ ಕೊಟ್ಟಂತಾಗುವುದು. ಅವುಗಳಿಂದ ಸ್ತ್ರೀ ಪುರುಷರು ಉಚ್ಛೃಂಖಲರಾಗುವರು. ಇಂತಹ ಸಾಧನಗಳಿಗೆ ಸ್ವಸ್ಥತೆಯ ರೂಪವನ್ನು ಕೊಡುವುದರಿಂದ ಲೋಕಮತವು ವಿಧಿಸುವ ಸಂಯಮವು ಶೀಘ್ರವಾಗಿಯೇ ನಷ್ಟವಾಗದಿರಲಾರದು. ಕೃತ್ರಿಮ ಸಾಧನಗಳ ಪರಿಣಾಮವಾಗಿ ಗ್ಲಾನಿಕತೆ ಮತ್ತು ಕ್ಷೀಣತೆಯುಂಟಾಗುವುದು. ಔಷಧವು ರೋಗಕ್ಕಿಂತ ಹಾನಿಕಾರಕವಾಗುವುದು. ಮನುಷ್ಯನು ತನ್ನ ಕರ್ಮಫಲದ ಭೋಗದಿಂದ ತಪ್ಪಿಸಿಕೊಳ್ಳುವುದು, ದೋಷಯುಕ್ತವೂ, ಅನೀತಿಯೂ ಆಗಿರುವುದು. ಮಿತಿಮೀರಿ ತಿನ್ನುವ ಮನುಷ್ಯನು ಹೊಟ್ಟೆನೋವನ್ನನುಭವಿಸಿ ಉಪವಾಸಮಾಡುವುದೇ ಅವನಿಗೆ ಹಿತಕರವು. ನಾಲಿಗೆಯನ್ನು ವಶದಲ್ಲಿಡದೆ ಸ್ವೇಚ್ಛಾಪೂರ್ವಕವಾಗಿ ತಿಂದು ಅದರ ಕೆಟ್ಟ ಪರಿಣಾಮದಿಂದ ತಪ್ಪಿಸಿಕೊಳ್ಳಲಿಕ್ಕೆ ಔಷಧಿ ಯನ್ನು ಇತರ ಔಷಧಗಳನ್ನು ಸೇವಿಸುವುದು. ಕೆಟ್ಟದು. ಪಶುಗಳಂತೆ ವಿಷಯಭೋಗದಲ್ಲಿ ನಿರತರಾಗಿ ... ರ ಕರ್ಮಫಲದಿಂದ ತಪ್ಪಿಸಿಕೊಳ್ಳಬೇಕೆನ್ನುವುದು ಮತ್ತಷ್ಟು ಕೆಟ್ಟದು. ಪ್ರಕೃತಿಯು ಬಹಳ ಕಠೋರವಾಗಿ ... ಮು

(ಇನ್ನು ಮುಂದಿನ ಪುಟದಲ್ಲಿ ಮುಂದುವರಿಯುವದು.)

ನಮಗೆ ಸ್ವರಾಜ್ಯ ಯೊಕೆ ಬೇಕು?

(ಗ[illegible]ವುನಿಂದ)

ಆತ್ಮಾವಲಂಬಿಗಳಾಗಿಯು, ಆರ್ಥಿಕ ಸ್ವಾತಂತ್ರ್ಯವನ್ನು ಪಡೆಯಲು ದೇಶದಿಂದ ಬಡತನವನ್ನು ಓಡಿಸಲು, ನಮ್ಮ ತರುಣರು 'ಹಿಂದೂ' ನಾಮದ ಅನ್ವರ್ಥವನ್ನು ಪಡೆಯಲು, ನಮ್ಮ ದೇಶವು ತನ್ನ ಪ್ರಾಚೀನ ಉಚ್ಛ್ರಾಯ ಸ್ಥಿತಿಯನ್ನು ಪುನಃ ಹೊಂದಬೇಕಷ್ಟೆ. ಹಿಂದೂದೇಶವು ಸರ್ವ ವಿಧದಲ್ಲೂ ಹೀನಸ್ಥಿತಿಗಿಳಿದಿದೆ. ನಿವಾಸಿಗಳು ಕಡು ಬಡತನದ ಹೊಡೆತಕ್ಕೆ ಸಿಕ್ಕಿ ಪತಂಗಗಳಂತೆ ಸತ್ತು ಬೀಳುತ್ತಿರುವರು. ನಮ್ಮ ದೇಶದ ಆಡಳಿತೆಯು ನಮ್ಮವರ ಪ್ರಯೋಜನಾರ್ಥವಾಗಿ ನಮ್ಮವರಿಂದ ನಡೆಸಲ್ಪಡುವದೇ ಸ್ವರಾಜ್ಯ. ನಾವು ಸ್ವತಂತ್ರಗಳಾಗಬೇಕು. ಎಲ್ಲರಂತೆ ನಾವೂ ಮಾನವರು, ಅದರಲ್ಲೂ ಶ್ರೇಷ್ಠ ಭಾರತ ಮಾತೆಯ ಪುತ್ರರು ಎಂಬ ದೃಢವಾದ ನಂಬಿಗೆಯೂ ನಮ್ಮೆಲ್ಲರಿಗೂ ನಮ್ಮ ಕಾರ್ಯಗಳನ್ನು ನಾವೇ ಸ್ವತಃ ಮಾಡಿಕೊಳ್ಳಲು ಶಕ್ತಿಯೂ [illegible] ಬೇಕು. ಈ ಧ್ಯೇಯವು ಯಾವ ಹಿಂದೀಯನಿಗಿಲ್ಲ? ಪಂಜರದಲ್ಲಿ ಬಿದ್ದ ಒಂದು ಪ್ರಾಣಿಯೂ ಸಹ ಬೇರೆ [illegible] ಕಾಲವನ್ನು ಬಯಸುತ್ತದೆ. ಹಾಗಾದರೆ ಅಪಾರವಾದ ಅಜ್ಞಾನಕೂಪದಲ್ಲಿ, ಬಡತನದ ಮಡುವಿನಲ್ಲಿ ಮುಳುಗಿರುವ ನಾವು ಮಾನವರಾಗಿ ಉತ್ತಮ ಸ್ಥಿತಿಯನ್ನು ಪಡೆಯಲು ಪ್ರಯತ್ನಿಸದಿರುವುದು ಯೋಗ್ಯವೇ?

ನಾವು ನವನಾಗರೀಕತೆಯ ಸೆಳತಕ್ಕೆ ಸಿಲುಕಿ ಹಿಂದೀಯತ್ವವನ್ನು ಕಳಕೊಂಡು ನಿಸ್ಸಾರರಾಗಿದ್ದೇವೆ. ಈಗಲೂ ಆಗುತ್ತಿರುವೆವು. ನಾವು ಹಿಂದಕ್ಕೆ ಅಡಿಯಿಡದಿದ್ದರೆ ಮುಂದಾಲೋಚನೆಯುಳ್ಳವರಾಗದಿದ್ದರೆ ನೈಸರ್ಗಿಕ ದುರ್ದಶೆಗಳಿಗಾಗಿ ನಾವು ಮುಂದೆ ಮುಂದೆ ಹೋಗಿ ನಾಗರೀಕತೆಯ ಅತಿ [illegible]ದ ಮಡುವಿನಲ್ಲಿ ಧುಮುಕಿ ನಾಶವಾಗುವುದರಲ್ಲಿ ಸಂಶಯವಿಲ್ಲ. ಆದ್ದರಿಂದ ಸಮಯವಿರುವಾಗಲೇ ನಾವು ಎಚ್ಚತ್ತುಕೊಳ್ಳಬೇಕು. ನಮ್ಮ ವಿದ್ಯಾಕ್ರಮವು ಪಾಶ್ಚಾತ್ಯ ರೀತಿ ಹೋಗಿ ಹಿಂದೀಯವಾಗಬೇಕು. ನಮ್ಮ ಶರೀರದಲ್ಲಿ ಅಜ್ಞಾನ ದೆಸೆಯಿಂದ ಹೊಕ್ಕಿರುವ ಪಶುತ್ವವನ್ನು ಸದ್ವಿದ್ಯೆಯೆಂಬ ಮಹಾ ಮಂತ್ರದಿಂದ ಹೊರಡಿಸಲು ಪ್ರಯತ್ನಿಸಬೇಕು. ಮತ್ತು ಜ್ಞಾನ ಸಂಪಾದನೆಯಿಂದ ನಮಗೆ ಬರುವ ಉತ್ತಮ ಗುಣಗಳಿಗಾಗಿ ಸಾಹಸಪಡಬೇಕು. ಹಾಗೆ ಮಾಡಿದಲ್ಲಿ ಸ್ವಲ್ಪ ದಿವಸದಲ್ಲೇ ನಮ್ಮ ಈ ದುರ್ದಶೆ ಹೋಗಬಹುದು. ಈ ಹೀನ ಸ್ಥಿತಿಯಿಂದ ಪಾರಾಗಿ ಶ್ರೇಷ್ಠ ಹಿಂದೀಯರಾಗಲು ನಿಮಗೆ ಇಷ್ಟವಿಲ್ಲವೇ? ಆದ್ದರಿಂದ ಎಲ್ಲರೂ ಈಗಲೇ, ಸಮಯವಿರುವಾಗಲೇ ಉದ್ಯೋಗ ಮಾಡಬೇಕು. ನಮ್ಮ ಭಾರತ ಖಂಡದ ಪೂರ್ವದ ಉತ್ತಮ ಸ್ಥಿತಿಯನ್ನು ಪುನರುಜ್ಜೀವನಗೊಳಿಸಬೇಕು. ಪಾಶ್ಚಾತ್ಯ ಸಂಸ್ಕೃತಿಯಲ್ಲಿಯ ಒಳ್ಳೆಯದನ್ನು ಗ್ರಹಿಸಿ ಕೆಟ್ಟದ್ದನ್ನು ತ್ಯಜಿಸಿ ನಮ್ಮ ಸಂಸ್ಕೃತಿಯನ್ನು ಬೆಳೆಸಬೇಕು. ಇದಕ್ಕೆ ಯುದ್ಧಾಂಗಣಕ್ಕೆ ಹೋಗಿ ಯುದ್ಧ ಮಾಡಬೇಕಿಲ್ಲ. ಮಹಾತ್ಮರ ಅಹಿಂಸಾತತ್ವವನ್ನನುಸರಿಸಿ ಕಾರ್ಯವನ್ನು ಕೈಕೊಂಡರೆ ಸ್ವರಾಜ್ಯ ಸಂಪಾದನೆಯು ಸುಲಭವೇ ಆಗಿದೆ.

ದೇಶದ ವಿದ್ಯಾಕ್ರಮ, ಆರೋಗ್ಯ ರಕ್ಷಣೆ, ಪೊಲೀಸು ಖಾತೆ ಮತ್ತು ಸೈನ್ಯ ದೇಶೀಯರ ಕೈಯಲ್ಲಿರಬೇಕು. ದೇಶದ ಆದಾಯ ವ್ಯಯದ ಮೇಲ್ವಿಚಾರಣ ದೇಶದ ಪ್ರತಿನಿಧಿಗಳ ಕೈಯಲ್ಲಿರಬೇಕು. ನಮ್ಮ ದೇಶದಿಂದ ಹಣ ಹೊರಗೆ ಹೋಗುವುದು ನಿಲ್ಲಬೇಕು. ಪರದೇಶಿಯರು ದೇಶೀಯರಂತೆಯೇ ಸಮಹಕ್ಕು ಬಾಧ್ಯತೆಗಳುಳ್ಳವರಾಗಬೇಕೇ ಹೊರತು ಹಣದ ಮೇಲಿನ ವ್ಯಾಮೋಹದಿಂದ ತೆರಿಗೆಗಳನ್ನು ನಮ್ಮ ಮೇಲೆ ಹೊರಿಸಬಾರದು. ಇಂಗ್ಲೀಯರು ಹಿಂದೂದೇಶದ ಸ್ನೇಹಿತರಾಗಿ ನಮ್ಮೊಂದಿಗೆ ವಾಸಿಸುವರು. ಮ್ಯಾಂಚೆಸ್ಟರ ಮತ್ತು ಲಂಕಾಶಯರಿನಲ್ಲಿ ದೊಡ್ಡದೊಡ್ಡ ಕಾರ್ಖಾನೆಗಳನ್ನು ತೆರೆದು ಕುಳಿತಿರುವ ಲಕ್ಷಾಧಿಪತಿಗಳಂತೆ ನಾವು ಆಗಬೇಕು. ಇದು ಭಾವೀ ಸ್ವರಾಜ್ಯದ ಒಂದು ಚಿತ್ರ.

ಇಂತಹ ಸ್ವರಾಜ್ಯವು ಅರ್ಜಿಗಳನ್ನು ಬರೆದುಕೊಂಡರೆ ಸಿಕ್ಕಲಾರದು. ಈಗ ಹಿಂದೂದೇಶವನ್ನು ಆಳುವ ಇಂಗ್ಲಿಷ ಪಾರ್ಲಿಮೆಂಟು ಸಭೆಯೂ ಕೊಡಲಾರದು. ಅದು ದೇಶೀಯರ ಸ್ವಪ್ರಯತ್ನದಿಂದಲೇ ಬರತಕ್ಕದ್ದು. ಪ್ರತಿಯೊಬ್ಬನೂ ತನ್ನ ಸ್ಥಿತಿಯನ್ನರಿತು ತನ್ನ ಮತ್ತು ದೇಶದ ಏಳಿಗೆಗೆ ಕಿಂಚಿತ ಸಹಾಯವನ್ನಾದರೂ ಮಾಡಬೇಕು. ಗಾಂಧಿಯವರ ರಚನಾತ್ಮಕ ಕಾರ್ಯಕ್ರಮವನ್ನು ಕೈಲಾದ ಮಟ್ಟಿಗಾದರೂ ಆಚರಿಸಬೇಕು. ಖಾದಿಯೆಂದರೆ ಒರಟು ಅರಿವೆ, ಖಾದಿಯುಡುವವರು ಮೋಸಗಾರರು, ಸ್ವದೇಶಕಾರ್ಯದಲ್ಲಿ ತೊಡಗುವುದು ಏನೂ ಅರಿಯದ ಹಳ್ಳಿ ಜನರನ್ನು ಮೋಸಪಡಿಸುವದಕ್ಕೆ ಎಂದು ಮುಂತಾಗಿ ಈಗಲೂ ಸಹ ಅನೇಕ ದೊಡ್ಡ ಮನುಷ್ಯರು ರಾತ್ರಿ ಹಗಲು ಅರಚುವುದುಂಟು. ಇಂತಹ ಅಜ್ಞಾನದ ಸ್ವಾರ್ಥಪರತೆಯ ಮಾತಿನಲ್ಲಿ ಸಮಯ ಮತ್ತು ಶಕ್ತಿಯನ್ನು ಹಾಳುಮಾಡುವುದರ ಬದಲು, ತಮಗೆ ಅದರಲ್ಲಿ ನಂಬಿಗೆ ಇಲ್ಲದಿದ್ದರೂ ಅದರಲ್ಲಿ ನಂಬಿಗೆಯಿದ್ದು ದೇಶಹಿತವನ್ನು ಮಾಡಬೇಕೆಂದು ಆಶಿಸುವವರ ಕಾರ್ಯಕ್ಕೆ ವಿಘ್ನವನ್ನು ತಾರದೆ ಸುಮ್ಮನಿರುವುದು ಮೇಲಲ್ಲವೇ?

ಪಾಶ್ಚಾತ್ಯರು ನಮ್ಮನ್ನಾಳುವುದಕ್ಕಾರಂಭಿಸುವದರಿಂದ ನಮ್ಮ ದೇಶವು ಅಂತಃ ಕಲಹಗಳಿಂದ ಪಾರಾಗಿ ಶಾಂತಿ ಸ್ಥಾಪನೆಯಾಗಿ ಉನ್ನತ ಸ್ಥಿತಿಗೆ ಬಂದಿವೆಯೆಂದು ನಮ್ಮನ್ನಾಳುವವರ ಅಭಿಪ್ರಾಯ. ಅದೇ ಅಭಿಪ್ರಾಯ ನಮ್ಮ ಶಾಲೆಗಳಲ್ಲೂ ಚರಿತ್ರೆ ಮತ್ತು ಪಠ್ಯ ಪುಸ್ತಕಗಳ ಮುಖಾಂತರ ವಿದ್ಯಾರ್ಥಿಗಳ ಮನಸ್ಸಿಗೆ ಬರುವಂತೆ ಮಾಡುತ್ತಿರುವರು. ಆಂಗ್ಲ ಆಳಿಕೆಯಲ್ಲಿ ರೈಲುಬಂಡಿ, ತಂತಿಸಮಾಚಾರ, ಪೋಸ್ಟು ಮುಖಾಂತರ ಕಾಗದ ಬಟವಾಡೆ ಇತ್ಯಾದಿ ಅನೇಕ ಸಹಾಯಕ ಕಾರ್ಯಗಳು ನಡೆದು ಜನರಿಗೆ ವಿಶೇಷ ಪ್ರಯೋಜನವುಂಟಾದುದು ನಿಜ. ಆದರೆ ಜನರು ಕುಳಿತ ಗಾಡಿಯಲ್ಲಿ ಎಷ್ಟೇ ಪ್ರಖ್ಯಾತ ಹಿಂದೂ ಕರಿಕೂದಲು ಹೊಯ್ಸಳರ [illegible], ಅದರಿಂದ ಹಿಂದೀಯರಿಗಾಗುವ ಅವಮಾನ, ಹಿಂದೂದೇಶದಲ್ಲಿ ಉದ್ಯೋಗಕ್ಕೆ ಬರುವ ಪಾಶ್ಚಾತ್ಯರ ಸಂಬಳ ಮತ್ತು ಅನಾವಶ್ಯಕ ಸ್ವಸ್ವಾರ್ಥವನ್ನು [illegible] ಇದಕ್ಕಾಗಿ ಟ್ಯಾಕ್ಸುಗಳು ಮತ್ತು ಬಡಹಿಂದೀಯರ ಆಹಾರವಾದ ಉಪ್ಪಿನ ಕರವನ್ನು ದೇಶದ ಜನರ ಅಭಿಪ್ರಾಯಕ್ಕೆ ವಿರೋಧವಾಗಿ ಹೆಚ್ಚಿಸುವುದು ಇತ್ಯಾದಿಗಳಿಂದ ದೇಶಕ್ಕೆ ಎಷ್ಟು ಅಪಕಾರವಾಗಿದೆ!

ಇವುಗಳನ್ನೆಲ್ಲಾ ನಿಲ್ಲಿಸಬೇಕಾದರೆ, ನಾವು ನಿಜವಾಗಿ ಅಭಿವೃದ್ಧಿಯಾಗಬೇಕಾದರೆ, ಮತ್ತು ನಮ್ಮ ರೈತಾಪಿ ಜನಗಳು ನೆಮ್ಮದಿಯಿಂದಿರಬೇಕಾದರೆ ನಮಗೆ ಸ್ವರಾಜ್ಯ ಪ್ರಾಪ್ತಿಯಾಗಬೇಕು.

ಕೊಡಗರ ಬಡತನ.

(ಬರೆದು ಬಂದದ್ದು)

ಕೊಡಗರನ್ನು ಒಟ್ಟಾರೆ ತೆಗೆದುಕೊಂಡು ನೋಡಿದರೆ [illegible] ಅನೇಕ ಕಾರಣಗಳಿದ್ದರೂ [illegible] ಮಾಡು ಹೇಳಬಹುದು. ಅದು ಹಾಗಿರುವ —

ದೇಶದಲ್ಲಿರುವ ಜನರ [illegible] [illegible] ಒಂದು ವೇಳೆ ಅಕಾಲದಲ್ಲಿ ಮಳೆ ಸಿಕ್ಕಿದರೂ ಅತಿ ವೃಷ್ಟಿ ಮುಂತಾದವುಗಳಿಂದ ರೈತರು [illegible] ಕಾರಣ ನ್ಯಾಯವಾದ ಬೆಳೆ ಸಿಕ್ಕದೆ ಇರುವುದು ಒಂದು ಕಾರಣವಾಗಿರಬಹುದು. ಆದರೆ ಕೊಡಗರು ತಾವಾಗಿಯೇ ತಂದುಕೊಂಡಿರುವ ಬಡತನವನ್ನು ತಪ್ಪಿಸಲು ಅನೇಕ ಸಮಯವೂ ಸ್ವಲ್ಪವೂ ಬೇಕಾಗುವ ಕಾರಣ ನಾನು ಕೆಲವು ಸಂಗತಿಗಳನ್ನು ಇಲ್ಲಿ ಸೂಕ್ಷ್ಮವಾಗಿ ಬರೆದಿರುವೆನು.

1. ಕೃಷಿಯ ವ್ಯವಸಾಯಕ್ಕೆ ಬೇಕಾದ ಆವಶ್ಯಕ ವಸ್ತುಗಳನ್ನು ಜೊತೆಯಲ್ಲೇ ಇರುವುದು. ಕೊಡಗರ ಒಕ್ಕಲಿಗ ಆಳುಗಳ ನಷ್ಟವು. ಆದರೆ ನಾಟಿ ಕೆಲಸದ ಸಮಯದಲ್ಲಿ ಕೆಲವು ದಿನವೂ ಮಳೆ ಕಟ್ಟಿದ್ದ ಸಮಯದಲ್ಲಿ ಕೆಲವು ದಿನವೂ ಮಾತ್ರ ಗದ್ದೆಯಲ್ಲಿ ಕೆಲಸಮಾಡಿ ಈ ಎರಡು ಕೆಲಸಗಳು ಮುಗಿಯುತ್ತಲೇ ಗದ್ದೆಯ ಕಡೆ ನೋಡದೆ ಹಾಳುಗದ್ದೆಗಳನ್ನು ಸರಿಯಾಗಿ ರಿಪೇರಿ ಮಾಡದೆಯೂ ಮತ್ತು ಅವುಗಳಿಗೆ ಬೇಕಾದ ಗೊಬ್ಬರ ವಗೈರೆಗಳನ್ನು ಒದಗಿಸಿಕೊಡದೆಯೂ ಇರುವುದು.

2. ಅದರ ಕೊಡುವಕ್ಕೆ ಬೇಕಾದ ಸಾಮಗ್ರಿಗಳು: ಆದರೆ ಸೌತೆ, ಸೊಪ್ಪು, ಉಪ್ಪು ಮತ್ತು ಹಗ್ಗ ವಗೈರೆಗಳನ್ನು ತಾವಾಗಿಯೇ ತಯಾರಿಸಿಕೊಳ್ಳದೆ, ಬಾಣೆ ವಗೈರ ಸ್ಥಳಗಳಲ್ಲಿರುವ ಮರಗಳಿಂದಲೂ, ಅಂಥಾ ಮರಗಳ ನಾರಿನಿಂದಲೂ ತಮಗೆ ಬೇಕಾದುದನ್ನು ಸಮಯದಲ್ಲಿ ಮಾಡಿಕೊಳ್ಳಬಹುದಾದರೂ ಈ ಎಲ್ಲದಕ್ಕೂ ಪೇಟೆಗೆ ಹೋಗಿ ಕೊಂಡುಕೊಳ್ಳುವುದು. [illegible] ಕತ್ತಿ ವಗೈರೆಗಳನ್ನು ಗ್ರಾಮದ ಬಡಗಿಯ ಸಹಾಯದಲ್ಲಿ ಮಾಡಿಕೊಳ್ಳಬಹುದಾದರೂ ಅವುಗಳನ್ನೆಲ್ಲ ಹೊರಗಿನಿಂದ ತರಿಸುವುದು. ಇವುಗಳನ್ನು ಸಹ ಕೊಂಡುಕೊಳ್ಳುವುದು.

3. ಅದರೊಂದಿಗೆ ಮುಖ್ಯವಾಗಿ ಬೇಕಾಗಿರುವ ದನಗಳ ಪೋಷಣೆಗೆ ಸ್ವಲ್ಪವೂ ಗಮನಕೊಡದೆಯೂ, ಅವುಗಳಿಗಾಗಿ ಹುಲ್ಲುಗಾವಲುಗಳನ್ನು ಬಿಟ್ಟು ಸಾಕುವ ಪದ್ಧತಿಯನ್ನು ಮರೆತು ಬಿಟ್ಟು ತಮ್ಮ ಜಾಗಗಳಲ್ಲಿ ಬೇಕಾದಷ್ಟು ಉತ್ತಮ ಬೆಳೆ ಕೊಂಡಿರುವುದು.

4. ಕೆಲಸವಿಲ್ಲದಾಗ ನಮಗೆ ಆವಶ್ಯಕವಿರುವ ತರಕಾರಿ ಮೆಣಸು, ಅರಿಶಿನ, ತೆಂಗುಗಳನ್ನು ನೆಟ್ಟುಕೊಳ್ಳದೆಯೂ, ಜತೆಗೆ ವಗೈರೆಗಳಲ್ಲಿ ಸ್ವಲ್ಪವಾದರೂ ಕಾಫಿ ಕಿತ್ತಳೆ ವಗೈರೆ ಬೆಳೆಗಳನ್ನು ಬೆಳೆಸದೆಯೂ ಇರುವುದು.

ಈ ಮೇಲಿನ ಉದಾಸೀನಗಳಿಂದ ರೈತರ ಉತ್ಪತ್ತಿಯು ಬಹು ಕಡಿಮೆಯಾಗಿರುವುದು. ಆದರೆ ಖರ್ಚನ್ನು ಅನೇಕ ಕಾರಣಗಳಿಂದ ತಾವಾಗಿಯೇ ಹೆಚ್ಚಿಸಿಕೊಂಡಿರುವರು. ಇದು ಹ್ಯಾಗೆಂದರೆ:—

(1) ಕುಟುಂಬಸ್ಥರು ಪಾಲಾಗುವ ಪದ್ಧತಿ. ಇದರಿಂದ ಪೂರ್ವದಲ್ಲಿ ಒಂದೇ ಐನ್‌ಮನೆಯಲ್ಲಿ ಇರುತ್ತಿದ್ದ ಕುಟುಂಬವು ಈಗ 10, 20 ಜನ ವರೆಗೆ ಬೇರೆ ಬೇರೆ ಪಾಲು ಮಾಡಿಕೊಂಡು ಪೂರ್ವದಲ್ಲಿದ್ದ ಒಂದು ಖರ್ಚನ್ನು ಈಗ ಪಾಲುಗೊಂಡವರ ಬೇರೆ ಹೆಚ್ಚಿಸಿಕೊಂಡಿರುವುದು. ಇದರ ತಪ್ಪನ್ನು ಎಲ್ಲರೂ ತಾವಾಗಿಯೇ ಸಾವಧಾನದಿಂದ ಆಲೋಚಿಸಿ ನೋಡಿದರೆ ತಿಳಿದು ಬರಬಹುದು.

(2) ಮನೆಯಲ್ಲಿ ಬಳಸಲಿಕ್ಕೆ ಎಷ್ಟೋ ಪಾತ್ರೆ ಸಾಮಾನುಗಳು [illegible] ಬಂದಿರುವ ಸಾಮಾನುಗಳಿಗಿಂತ ಕಾಜಿನ ಬಟ್ಟಲು ಗ್ಲಾಸುಗಳನ್ನು ಮಾಡಿಕೊಳ್ಳುತ್ತ ಆಗಾಗ ನವನಾಗರೀಕತೆಯನ್ನು ತೋರಿ ಬರುತ್ತಲಿರುವ ಶೋಕಿ, ದಿನಕ್ಕೊಂದು ಒಡೆದುಹೋಗುವಂತ ಗಾಜಿನ ಸಾಮಾನುಗಳನ್ನು ಉಪಯೋಗಿಸುವುದು. ಇದೇ ವಿಷಯವನ್ನು ಈಗಿನವರ ಬಟ್ಟೆ ವಗೈರೆಗಳಿಗೂ ಹೋಲಿಸಬಹುದು.

(3) ಪೂರ್ವಿಕರು ತಮ್ಮ ಮನೆಗಳಲ್ಲಿ ಉಪಯೋಗಿಸುವಂತೆ ಮಣ್ಣಿನ ದೀಪಗಳನ್ನು ಬೇಕಾದಷ್ಟು ತಾವೇ ಮಾಡಿಕೊಳ್ಳುವುದನ್ನು ಬಿಟ್ಟು ಈಗಿನವರು ನೋಡಲಿಕ್ಕೆ ಅಂದವಾದ (Lamp) ದೀಪ, ಮೇಣ ಬತ್ತಿ ವಗೈರೆಗಳನ್ನು ಹೆಚ್ಚಿನ ಕ್ರಯಕೊಟ್ಟು ಕೊಂಡುಕೊಳ್ಳುವುದು.

(4) ಅವಶ್ಯಕ್ಕಿಂತಲೂ ಹೆಚ್ಚಾಗಿ ಕ್ರಯದ ಸಾಮಾನುಗಳನ್ನು ಕೊಂಡುಕೊಂಡು ಮನೆಯನ್ನು ಅಲಂಕರಿಸುವುದು (Decoration).

(5) ಬಾಣೆಗಳಲ್ಲಿ ಸಿಕ್ಕುವ ಎಷ್ಟೋ ತರದ ಕಾಡುಗಳಿಂದ ವಿಧವಿಧದ ಎಲೆಯನ್ನು ತಗೆದು ಮನೆಯಲ್ಲಿ ಔಷಧ ವಗೈರೆ ಎಲ್ಲಾ ಕೆಲಸಗಳಿಗೂ ಉಪಯೋಗಿಸುವ ಬದಲು ಈಗ ಎಲ್ಲವನ್ನೂ ಕೊಂಡುಕೊಳ್ಳುವುದು.

(6) ತಮ್ಮ ಪೂರ್ವಿಕರ ಉಡಿಗೆ ತೊಡಿಗೆಗಳನ್ನು ಬಿಟ್ಟು ಪರದೇಶದ ಉಡಿಗೆಗಳನ್ನೇ ಧರಿಸಿ ಎಲ್ಲಾ ಬಾಬತ್ತಿನಲ್ಲಿಯೂ ಅವರಂತೆ ಇರಬೇಕೆಂದು ತಮಗೆ ಉತ್ಪತ್ತಿ ಕಡಿಮೆಯಾದರೂ ಅದಕ್ಕಿಂತ ಹೆಚ್ಚು ಖರ್ಚುಮಾಡಿ ಅನುಕೂಲಸ್ಥರೆನ್ನಿಸಿಕೊಳ್ಳಬೇಕೆಂದು ಪ್ರಯತ್ನಿಸುವುದು. ಇದರಲ್ಲಿ ಅನೇಕ ವಿಷಯಗಳು ಅಡಗಿವೆ.

(7) ತಮ್ಮ ಕೆಲಸಗಳನ್ನು ತಾವೇ ಮಾಡಿಕೊಳ್ಳುವುದಕ್ಕೆ ನಾಚಿಕೆಯಿಂದ ಎಲ್ಲಾ ಕೆಲಸಗಳನ್ನು ಸಹ ಸಂಬಳದ ಆಳುಗಳಿಂದ ಮಾಡಿಸುವುದು.

(8) ಪರ ಊರಿಗೆ ಹೋದಾಗ ಸ್ವಲ್ಪ ಮಾತ್ರ ಉಪಯೋಗಿಸುವಂತ ಬಟ್ಟೆಗಳಿಗೆ ಅಥವಾ ಆಳುಗಳಿಗೂ ಹೆಚ್ಚಾಗಿ ಖರ್ಚುಮಾಡಿ ಹಣವನ್ನು ಪ್ರಯೋಜನವಿಲ್ಲದಂತೆಯೂ ಅದಕ್ಕೆ ಬದಲು ಸಹ ಇಲ್ಲದಂತೆಯೂ ಮಾಡುವುದು.

(9) ಪೇಟೆ ಪಟ್ಟಣಗಳಿಗೆ ಹೋಗುವ ಸಮಯದಲ್ಲಿ ನಡೆದು ಅಥವಾ ಅಗತ್ಯವಿಲ್ಲದ ಸಮಯದಲ್ಲಿ ಕುದುರೆ ವಗೈರೆ ಮಾಡಿಕೊಂಡು ಹೋಗದೆ, ಅಥವಾ ಕೆಲಸಗಳನ್ನು ತೀರಿಸಿಕೊಂಡು ಹಿಂತಿರುಗಿ ಮನೆಗೆ ಹೋಗಿ ಊಟ ಮಾಡಿ ಉಳಿಸಬಹುದಾದ ಹಣವನ್ನು ಹಾಳುಮಾಡುವಂತೆ ನಾನಾ ಗಳಿಗೆ ಕಡಿದು ಹೋಟೆಲಿನಲ್ಲಿ ಊಟ ಕಾಫಿ ವಗೈರೆ ತೆಗೆದುಕೊಳ್ಳುವುದು.

(10) ಚಿಲ್ಲರೆ ಸಂಗತಿಗಳಿಗಾಗಿ ಅತಿವಿಪರೀತ ಖರ್ಚುಮಾಡಿಕೊಂಡು ವ್ಯಾಜ್ಯವಾಡುವುದು.

(11) ಮನೆಗೆ ಸ್ನೇಹಿತರು, ನೆಂಟರು ವಗೈರೆ ಬಂದರೆಂದರೆ ಸಮಯವಲ್ಲದ ಸಮಯದಲ್ಲಿ ಅವರಿಗೆ ಅಂಥಾ ಉಪಚಾರ ಇಲ್ಲದಿದ್ದರೂ ಅವರ ಹೆಸರಿನಲ್ಲಿ ಪ್ರತಿ ಭಾಗದಲ್ಲಿಯೂ ಬೇಕಾದಷ್ಟು ಖರ್ಚುಮಾಡುವುದು.

(12) ಸಣ್ಣ ಹುಡುಗರುಗಳಿಗೆ ತಮ್ಮ ಉತ್ಪತ್ತಿಯ ಹೆಚ್ಚಿನ ಭಾಗವನ್ನು ಖರ್ಚುಮಾಡುವುದು. ಇದಲ್ಲದೆ ತನಗೆ ಬೇಡವಾಗಿದ್ದರೂ ತನ್ನ ಸ್ನೇಹಿತರ ಜೊತೆಗೆ ಸೇರುವಾಗ ಅವರಂತಿರಬೇಕೆಂದು (To keep up Society) ಚುಟ್ಟಾ, ಬೀಡಿ ಸಿಗರೇಟು ವಗೈರೆಗಳನ್ನು ಸೇದಲು ವೆಚ್ಚಮಾಡುವುದು.

ಆದದರಿಂದ ನಮ್ಮ ದೇಶದ ಜನರು ಈ ಅನಾವಶ್ಯಕವಾದ ಖರ್ಚುಗಳನ್ನು ಪೂರ್ತಿ ನಿಲ್ಲಿಸಿ ತಮ್ಮ ಉತ್ಪತ್ತಿಯನ್ನು ಹೆಚ್ಚಿಸುವ ವಿಧಾನವನ್ನು ಕಂಡುಹಿಡಿದು, ಖರ್ಚು ಉತ್ಪತ್ತಿಯನ್ನು ಮೀರದಂತೆ ನೋಡಿಕೊಳ್ಳತಕ್ಕದ್ದು. ಇದ್ದರೆ ನಮ್ಮ ದೇಶದಲ್ಲಿ ಎಂದೂ ಬಡತನವಿರಲಿಕ್ಕಿಲ್ಲವೆಂದು ಖಂಡಿತವಾಗಿ ಹೇಳಬಹುದು.

ಮೂರ್ನಾಡು ಪನಗಳ [illegible] ಸಂಘ.

ಡಿಸೆಂಬರ್ ತಿಂಗಳು 10ನೇ ತಾರೀಖಿನಲ್ಲಿ ಕಾಂತೂರುಮೂರ್ನಾಡು ಪನಗಳ [illegible] ಸಂಘದ ಲಿಕ್ವಿಡೇಶನ್ ಬಗ್ಗೆ ಮಾಡಿದ ಜನರಲ್ ಮೀಟಿಂಗಿನಲ್ಲಿ ತೀರ್ಮಾನಿಸಿದ ಮೇರೆ ಸಂಘದಲ್ಲಿ ಸಿಲ್ಕು ಬಾಕಿಯಿರುವ ರೂ 240ನ್ನು ದಾಮುಶಾಯಿ ಪ್ರಕಾರ ಪಕ್ಕಾದಾರರಿಗೆ ಲಿಕ್ವಿಡೇಟರು ಬಿಜನ್ಸ್ಪ್ರರವರು ಮಂಜೂರ್ಮಾಡಿದ ಮೇರೆ ನಗದು ಹಣವನ್ನು ಕೆಳಗ ಕಂಡವರಿಗೆ ಬಟವಾಡೆ ಮಾಡಲಾಗುತ್ತೆ. ಈ ಹಣವನ್ನು ಕೆಳಗೆ ಸೂಚಿಸಿದ ಅರ್ಹರಾದ ಮೆಂಬರುಗಳು ಕೋಡಂಬೂರು ಸಂಘದ ಪ್ರೆಸಿಡೆಂಟರಿಂದ ತಮ್ಮ ಇನ್‌ಶೂರೆನ್ಸು ಸರ್ಟಿಫಿಕೇಟುಗಳೊಂದಿಗೆ ನ್ಯಾಯವಾದ ರಶೀತಿ ಕೊಟ್ಟು ಕೊಂಡುಕೊಳ್ಳುವದು.

1.	ಮಾ ॥ ಶ್ರಿ	ಕೆಂಬೆಕಟ್ಟಂಡ ಚೆಂಗಪ್ಪನವರು		30—6—6
2	„	ಕೂಡೆಕ್ಕಡ ಬೆಳ್ಯಪ್ಪ	„	4—14—9
3	„	ಕೆಂಬೆಕ್ಕಡ ದೇವಯ್ಯ	„	8—3—3
4	„	ಒಡುವಂಡ ನಂಜಪ್ಪ	„	8—3—3
5	„	ಒಡುವಂಡ ಗಣಪತಿ	„	8—12—0
6	„	ಅಕ್ಕಮಾಲೆ ಅಣ್ಣಪ್ಪ	„	5—1—0
7	„	ಮಚ್ಚಮಾಡ ಚಂಗಪ್ಪ	„	8—3—3
8	„	ಮಚ್ಚಮಂಡ ಪೊನ್ನಪ್ಪ	„	11—5—0
9	„	ಅಲಮೆಂಗಡ ಕರುಂಬಯ್ಯ	„	8—12—0
10	„	ಕೋಟೆರ ಪೊನ್ನಪ್ಪ	„	32—13—0

11	,, ಕಂಬೀರಂಡ ಕುಟ್ಟಪ್ಪನವರು	8—	12—	0
12	,, ಬಾಚೆಟ್ಟಿರ ನಂಜುಂಡ ,,	6	9	0
13	,, ತುಳುವಂಡ ಬೆಳ್ಳಪ್ಪ ,,	6	9	0
14	,, ಕುಂತೋಡಿ ತಿಮ್ಮಯ್ಯ ,,	7	0	0
15	, ಪಳಂಗಂಡ ಚಂಗಪ್ಪ ,,	27	11	3
16	,, ಕೇಲಪಟ್ಟಿ ಬೋಪ್ಪಯ್ಯ ,,	7	11	0
17	,, ,, ಪೊನ್ನಪ್ಪ ,	5	4	0
18	,, ಕಲ್ಲುಮುಟ್ಲು ಚೆಟ್ಟಪ್ಪ ,,	13	2	0
19	,, ಬಲ್ಲಚಂಡ ಕುಟ್ಟಪ್ಪ ,,	6	9	0
20	,, ಬೈಲಳ್ಳಿ ಕರುಂಬಯ್ಯ ,,	8	3	3
21	,, ಅಪಾರಂಡ ಚೆಟ್ಟಪ್ಪ ,,	8	12	0
	ಜುಮ್ಲ	243	6	6
	ಇಸ್ತಿಹಾರ ವಗೈರೆ ಖರ್ಚು	6	9	6
	ಒಟ್ಟು ಜುಮ್ಲ	240	0	0

ಮೇಲ್ಕಂಡ ಮೆಂಬರುಗಳಲ್ಲಿ ಯಾರಾದರೂ ಮೃತರಾಗಿದ್ದರೆ ಸಂತತಿದಾರರ ಬಾಬ್ತು ಹಣಕ್ಕೆ ನ್ಯಾಯವಾದ ವಾರೀಸುದಾರರೆಂದು ಗ್ರಾಮದ ಪಟೇಲರ ಮತ್ತು ಗ್ರಾಮ ಸಂಘದ ಪ್ರೆಸಿಡೆಂಟರಿಂದ ಸರ್ಟಿಫಿಕೇಟು ತಂದು ಹಣ ಪಡೆದುಕೊಳ್ಳುವದು. ತಕರಾರು ಇದ್ದಲ್ಲಿ ಆ ಕಾಲಗಳ ವಿಚಾರಕ್ಕೆ ತೀರ್ಮಾನ ಬಗ್ಗೆ ಅರ್ಜಿ ಬರಕೊಳ್ಳುವದು.

ಮಡಿಕೇರಿ,
ತಾ 28 12 25

P. C. Changappa,
Liquidator, &
Hon. Organiser, C. C. S. N. Coorg

(ಎರಡನೇ ಪುಟದ ಕಡೆಯಿಂದ ಮುಂದುವರಿದುದು)

ತ್ತು ತನ್ನ ನಿಯಮಗಳನ್ನು ಉಲ್ಲಂಘಿಸುವವರನ್ನು ಶಿಕ್ಷಿಸದೆ ಎಂದಿಗೂ ಬಿಡಲಾರಳು. ಸ್ವಾಭಾವಿಕ ನಿಯಮದ ಹೊರತು ಸ್ವಾಭಾವಿಕ ಫಲವು ದೊರೆಯಲಾರದು. ಬೇರೆ ಎಲ್ಲಾ ತರದ ಸಾಧನಗಳು ತಮ್ಮ ಉದ್ದೇಶವನ್ನೇ ವಿಫಲಗೊಳಿಸದಿರಲಾರವು. ಕೃತ್ರಿಮ ಸಾಧನಗಳನ್ನುಪಯೋಗಿಸುವ ಕಾಲದಲ್ಲಿ ಭೋಗವಿಲಾಸವು ಜೀವನಕ್ಕೆ ಅವಶ್ಯಕವೆಂಬ ಯುಕ್ತಿ ಅಥವಾ ಧಾರಣೆಯು ಗರ್ಭಿತವಾಗಿದೆ. ಇದಕ್ಕಿಂತ ದೊಡ್ಡ ಕುಯುಕ್ತಿ ಅಥವಾ ಕುತರ್ಕವು ಎಂದಿಗೂ ಇರಲಾರದು. ಸಂತತಿಯ ನಿಯಮನಕ್ಕಾಗಿ ಉತ್ಸುಕರಾಗಿರುವರು, ಪ್ರಾಚೀನ ಜನರು ಶೋಧಿಸಿಕೊಟ್ಟ ನ್ಯಾಯವಾದ ಉಪಾಯಗಳನ್ನೇ ವಿಶದಪಡಿಸಿ ಅವುಗಳ ಜೀರ್ಣೋದ್ಧಾರಕ್ಕಾಗಿ ಪ್ರಯತ್ನಿಸಲಿ. ಅವರ ಮುಂದೆ ಅಗತ್ಯವಾದ ಕೆಲಸದ ರಾಶಿಯೇ ಬಿದ್ದಿರುವುದು. ಬಾಲವಿವಾಹವು ಲೋಕಸಂಖ್ಯೆಯ ವೃದ್ಧಿಯ ಒಂದು ಪ್ರಬಲಕಾರಣವಾಗಿರುವುದು. ನಮ್ಮ ವರ್ತಮಾನ ಜೀವನವಿಧಿಯೂ ಅಪರಿಮಿತ ಪ್ರಜೋತ್ಪತ್ತಿಯ ದೊಡ್ಡ ದೊಂದು ಕಾರಣವಾಗಿರುವುದು. ಇಂತಹ ಕಾರಣಗಳ ಸಂಶೋಧನೆಯಾಗಿ ಇವುಗಳ ನಿವಾರಣೋಪಾಯವನ್ನು ಕೈಕೊಂಡರೆ ನೈತಿಕ ದೃಷ್ಟಿಯಿಂದ ಸಮಾಜಕ್ಕೆ ಹೆಚ್ಚಿನ ಉನ್ನತಿಯಾಗುವುದು. ಆದರೆ ನಮ್ಮ ಈ ಅತ್ಯುತ್ಸಾಹೀ ಜನರು ಇದಕ್ಕೆ ಗಮನವನ್ನು ಕೊಡದೆ ಕೃತ್ರಿಮ ಸಾಧನಗಳ ಸರ್ವತ್ರ ಪ್ರಚಾರವಾದರೆ ನೈತಿಕ ಅಧಃಪಾತದ ಹೊರತು ಬೇರೆ ಯಾವ ಪರಿಣಾಮವೂ ಆಗಲಾರದು. ಅನೇಕ ಕಾರಣಗಳಿಂದ ಮೊದಲೇ ನಿಃಸತ್ವವಾಗಿರುವ ಸಮಾಜವು ಈ ಕೃತ್ರಿಮ ಸಾಧನಗಳಿಂದ ಮತ್ತಷ್ಟು ನಿಃಸತ್ವವಾಗುವುದು. ಆದ ಕಾರಣ ವಿಚಾರವಿಲ್ಲದೆ ಕೃತ್ರಿಮ ಸಾಧನಗಳ ಪ್ರಚಾರ ಮಾಡುತ್ತಿರುವ ಜನರು ಈ ವಿಷಯವನ್ನು ಪುನಃ ಅಭ್ಯಾಸ ಮಾಡಲಿ, ತಮ್ಮ ಹಾನಿಕಾರಕ ಪ್ರವೃತ್ತಿಯಿಂದ ವಿರಮಿಸಲಿ, ವಿವಾಹಿತ ಮತ್ತು ಅವಿವಾಹಿತ ಜನರೊಳಗೆ ಬ್ರಹ್ಮಚರ್ಯದ ಸಿದ್ಧಿಯನ್ನು ಜಾಗ್ರತಗೊಳಿಸಲಿ. ಪ್ರಜಾಸಂತತಿ ನಿರೋಧಕ್ಕೆ ಇದೊಂದೇ ನಿಜವಾದ ಮತ್ತು ಸರಳವಾದ ಉಪಾಯವಾಗಿರುವುದು.

ಕುಯ್ಯಂಗೇರಿನಾಡು ಮೀಟಿಂಗು.

(ವಾರ್ತಿಕನಿಂದ)

ಕುಯ್ಯಂಗೇರಿನಾಡಿನವರ ಮೀಟಿಂಗು ತಾ. 29-12-25ರಲ್ಲಿ ಪಾಲೂರು ದೇವಸ್ಥಾನದ ಒಳ ಕೊಳಕೋಟೆ ಬಾಣೆಯಲ್ಲಿ ನಾಡು ತಕ್ಕಮುಖ್ಯಸ್ಥರಾದ ಮ. ಚಾಳೀರ ಅಯ್ಯಯ್ಯನವರ ಅಧ್ಯಕ್ಷತೆಯಲ್ಲಿ ನಡೆಯಿತು. ಎಪ್ಪತ್ತು ಜನರು ಹಾಜರಿದ್ದರು. ಹಲವರು ಭಾಷಣಮಾಡಿದರು. ಮ. ರಾ. ಶ್ರೀ. ಗಳಾದ ಬಿದ್ದಂಡ ಕರುಂಬಯ್ಯನವರು, ರಾಜಿ ಅಪೇಕ್ಷೆ, ಅಪ್ಪನೆರವಂಡ ಅಪ್ಪಚ್ಚನವರು ಮತ್ತು ಚೆಪ್ಪುಡಿರ ದೇವಯ್ಯನವರು ರುಜುಮಾಡಿ 'ಕೊಡಗು' ಪತ್ರಿಕೆಯಲ್ಲಿ ಬರೆದ ಜಾತ್ರೆಗಳಲ್ಲಿ ಮ. ನೆರವಂಡ ಅಚ್ಚಯ್ಯನವರು ಓದಿ ಹೇಳಿದರು. ತದನಂತರ ಮ. ಪಟ್ಟಮಾಡ ಕುಂಞಪ್ಪನವರು, ಮ. ಕೆಂಬರಂಡ ಮಂದಣ್ಣನವರು, ಮ. ಮಂಡೇಪಂಡ ದೇವಯ್ಯನವರು, ಮ. ನೆರವಂಡ ಪೂವಯ್ಯನವರು ಮತ್ತು ಮ. ಚಂಡೀರ ಪೂವಯ್ಯನವರು ಸಭೆಗೆ ಬಿನ್ನವಿಸಿಯಾಗಿರುವ. ಮ. ರಾ. ಶ್ರೀ. ಗಳಾದ ಪಾಲಂದಿರ ಬೋಪ್ಪಯ್ಯನವರು, ಚಂಗಪ್ಪನವರು, ಕುಟ್ಟಪ್ಪನವರು, ಚಾಳೀರ ಪೊನ್ನಪ್ಪನವರು ಮತ್ತು ಸೋಮಯ್ಯನವರು ಮತ್ತು ಮುಕ್ಕಾಟ್ಟೀರ ಚಂಗಪ್ಪನವರು ಕೊಡವ ಸಭೆ ಅವಶ್ಯವಿಲ್ಲವಾಗಿಯೂ ಮಾತಾಡಿದರು. ನಂತರ ಈ ಕೆಳಗಿನ ನಿರ್ಣಯಗಳು ಬಹುಮತದಿಂದ ಪಾಸಾದವು. ಕೊಡಗು ದೇಶದಲ್ಲಿ ಕೊಡವರ ಆಚಾರ, ವಿಚಾರ ಪದ್ಧತಿಯು ಪರ

ಪೂರ್ವದಲುಮೇರೆ ಸರಿಯಾಗಿ ಆಯಾಯ ನಾಡು ಮತ್ತು ಗ್ರಾಮಗಳಲ್ಲಿ ನಡೆದು ಬರುತ್ತಲಿವೆ. (2) ಹೊಸದಾಗಿ ಏರ್ಪಡುವ ನವೀನ ಸಭೆಯಿಂದ ನಮಗೆ ಅವಶ್ಯ ಇರುವದಿಲ್ಲ. (3) ಕೊಡಗು ದೇಶದವರ ಯಾ ಇಡೀ ಕೊಡವರ ಅಭಿಪ್ರಾಯವೆಂದು ಕೆಲವರು ನೇರ ಸಭೆ ಮೂಲಕ ಯಾವದಾದರೊಂದು ಅಭಿಪ್ರಾಯವನ್ನು ಸರಕಾರದವರ ತಿಳುವಳಿಕೆಗೆ ಕಳುಹಿಸಿದ ಪಕ್ಷ ಅಂಥಾದ್ದನ್ನು ಸರಕಾರದವರು ಮಂಜೂರು ಮಾಡಕೂಡದೆಂದು ಈ ಸಭೆ ಕೇಳಿಕೊಳ್ಳುತ್ತದೆ. ಈ ಠರಾವುಗಳಿಗೆ 70 ಜನರ ಪೈಕಿ 5 ಜನರು ಸಭೆ ಬೇಕೆಂತಲೂ 59 ಜನ ಸಭೆ ಬೇಡವೆಂತಲೂ ಓಟು ಮಾಡಿದರು. ಉಳಿದ ಮೆಂಬರುಗಳ್ ಹೊರಗಿನ ಜನರಾದ್ದರಿಂದ ಓಟು ಮಾಡುವ ಹಕ್ಕಿರಲಿಲ್ಲ. ಕಡೆಗೆ ಅಧ್ಯಕ್ಷರು 20 ವರುಷ ಪಟ್ಟ ಮಸೆತನಗಳನ್ನು ಪಟ್ಟಿಗ ಸೇರಿಸಿ ಸರಕಾರದಲ್ಲಿ ದಾಖಲಾಗಿ ಇಟ್ಟುಕೊಂಡದ್ದು ಸರಿಯಲ್ಲವಾಗಿ ಖಂಡಿಸಿ ಮಾತಾಡಿದಲ್ಲದೆ ಅನೇಕ ಕಾರಣಗಳಿಂದ ಸಭೆ ಆದರೆ ಅದರಿಂದ ಒದಗುವ ಕೆಡಕನ್ನು ವಿವರಿಸಿ ಸಭೆಯಿಂದ ಯಾವ ಪ್ರಯೋಜನವೂ ಇರುವದಿಲ್ಲವಾಗಿ ಸಾರಸ್ಯವಾದ ಭಾಷಣದಿಂದ ಮೀಟಿಂಗು ಬರಕಾಸ್ತು ಮಾಡಲಾಯಿತು.

ಇದು ಒಳ್ಳೆ ಸಮಯ!

ಹಂಚುಗಳು.

ಈಗಾಗಲೇ ವಿರಾಜಪೇಟೆಯಲ್ಲಿ ನಾಜೂಕಾದ ಎಲ್ಲಾ ತರದ ಹಂಚುಗಳು ಅಂದರೆ, ಹಂಚ, ಮೂಲೆ ಹಂಚ, ನಾತಿಹಂಚು, ಹೊಗೆಹಂಚ, ನಲಿಹಂಚ ವಗೈರೆ ಎಲ್ಲಾ ಹಂಚುಗಳನ್ನು ಸ್ಟೋರ್ ಮಾಡಲಾಗಿದೆ. ಕೂಡಲೇ ಹಂಚು ಬೇಕಾದವರು ವಿರಾಜಪೇಟೆಯಲ್ಲಿ ಈ ಕೆಳಗೆ ರುಜು ಮಾಡಿದವರ ಆಫೀಸಿಗೆ ಬರಬಹುದು. ಅಲ್ಲದೆ ಹಂಚುಗಳ ನಮೂನೆಯನ್ನು ನೋಡಬಹುದು. ಎಲ್ಲಾ ವಿವರಕ್ಕೂ, ಕ್ರಯಕ್ಕೂ, ಮತ್ತು ಷರತ್ತಿಗೂ ಈ ಕೆಳಗಿನವರಿಗೆ ದಯವಿಟ್ಟು ಬರೆದ ಕೊಳ್ಳಿ.

ವಿರಾಜಪೇಟೆ

ಕೆ. ಬಿ. ಚಿಣ್ಣಪ್ಪ
ಖಾದಿ ಭಂಡಾರ

ಸ್ವೀಕಾರ.

ಮಹಾತ್ಮ ಗಾಂಧಿಯವರ ಲೇಖನಗಳು: ಸತ್ಯಾಗ್ರಹ ಕಾರ್ಯಾಲಯ, ಉಡುಪಿ, ಇಲ್ಲಿ ದೊರೆಯುವುದು. ಬೆಲೆ 12 ಆಣೆ.

ಇವು ಮಹಾತ್ಮಾ ಗಾಂಧಿಯವರಿಂದ ಆವರ ಯಂಗ್ ಇಂಡಿಯ ಎಂಬ ಆಂಗ್ಲ ಪತ್ರದಲ್ಲಿ ಆಗಾಗ್ಗೆ ಪ್ರಕಟವಾದ ಲೇಖನಗಳ ಕನ್ನಡ ಅನುವಾದಗಳು. ಇವುಗಳನ್ನೆಲ್ಲಾ ಸತ್ಯಾಗ್ರಹಿಯ ಸಂಪಾದಕರು ಜೊತೆಗೂಡಿಸಿ ಒಂದು ಪುಟ್ಟ ಪುಸ್ತಕವನ್ನು ಮಾಡಿ ಪ್ರಕಟಿಸಿರುವುದು ಅವರಿಗೆ ಧನ್ಯವೆನಿಸುತ್ತದೆ. ಮಹಾತ್ಮರ ಲೇಖನಗಳ ವಿಷಯವಾಗಿ ನಾವೆಷ್ಟು ಹೊಗಳಿ ಬರೆದರೂ ಸಾಲದು. ಪ್ರತಿಯೊಬ್ಬ ಕನ್ನಡಿಗನು ಈ ಪುಸ್ತಕವನ್ನು ಇಟ್ಟುಕೊಂಡು ಸಮಯ ಸಿಕ್ಕಿದಾಗಲೆಲ್ಲಾ ಓದುವುದರಿಂದ ಅಮಿತ ಬುದ್ಧಿಲಾಭವನ್ನು ಪಡೆಯಬಹುದು. ಮುದ್ರಣ ಅಂದವಾಗಿದೆ.

ನಂದಿನಿ: ಮಾಸಪತ್ರಿಕೆ ಸಂಪಾದಕ—ನಾರಾಯಣ ಶಾಸ್ತ್ರೀ ಭಡತಿ, ವಾರ್ಷಿಕ ವರ್ಗಣಿ 2 ರು. ಮಾತ್ರ. ದೊರೆಯುವ ಸ್ಥಳ—ಮ್ಯಾನೇಜರ್ ನಂದಿನಿ, ಗೋಕರ್ಣ.

ಇದೊಂದು ಉತ್ತಮ ತರಗತಿಯ ಪತ್ರ. ಇದರಲ್ಲಿ ಧಾರ್ಮಿಕ ವಿಚಾರಗಳೇ ಹೆಚ್ಚು. ಹಬ್ಬ ಹುಣ್ಣಿಮೆಗಳ ಕುರಿತ ಲೇಖನಗಳು ತಪ್ಪದೆ ಬರುತ್ತಿವೆ. ಕಥೆಗಳೂ ಇರುತ್ತವೆ. ನಮಗೆ ದೊರಕಿದ ಸಂಚಿಕೆಯಲ್ಲಿ ಶ್ರೀಮತ್ ಶಂಕರಾಚಾರ್ಯರ ಚರಿತ್ರೆ ಇದೆ. ಸುಭಾಷಿತ ವಿಚಾರವು ನಮಗೆ ಆನಂದವನ್ನುಂಟುಮಾಡಿತು. ಗೃಹವೈದ್ಯ ಸಂಬಂಧವಾದ ಲೇಖನಗಳೂ ವಿಚಾರ ಪರಿಪ್ಲುತವಾಗಿರುತ್ತವೆ. ಧರ್ಮನಿಷ್ಠರು ಇದನ್ನು ಓದುವುದಗತ್ಯ. ಚಂದಾದಾರರು ಕಮ್ಮಿ ಎಂತಲೇ ಹೇಳುವೆವು. ಮುದ್ರಣ ಚಂದ್ರಿಕಾ.

FOR SALE.

ESSEX LIGHT SIX, Latest Model, new last may, driven 5000 miles only Perfect condition many extras Price Rs 3000

Also Old Model 7-9, Harley Davidson and Side Car

No reasonable offer refused

Apply —The Hunsur Works, ' Hunsur'

3—1

A Lot for SELECTION of Single Barrel Breach Loading Guns at LOWEST PRICE EVER OFFERED.

Original Browning S B B L 12 bore Take-Down Hammerless Automatic Ejector Gun, with safety catch .. .. Price, Rs. 140 -

Do do' but by **Winchester** or **Remington** ... . Price, Rs 160 .

Winchester or **Remigton S B. B L** 12 bore Six Shots Hammerless Repeating gun, 32 inches barrel with Safety catch ... . Price, Rs. 150 -

German S B B L. 12 bore Hammerless Ejector Gun, 32 inches German Steel Barrel with safety catch .. · Price, Rs. 65 -

Continental Make Do Price, Rs 55 -

Webley & Scott's S. B B L 12 bore Semi Hammerless Ejector Gun, 32 inches Webley's Steel Barrel, ... Price, Rs. 75 -

The above Guns can be had in 16, 20, & 410 bore. Same as above in 12 bore **Special "Duck Gun"** 36 inches barrel .. .. Price, Rs 81 -

W W Greener's "Gaffer" S. B B L 12 bore Martini Action Ejector Gun, 26 inches Greener's Steel Barrel. .... Price, Rs 75/-

W W. Greener's as above but **Long Range Duck Gun"** with 32 inches barrel, and chamber for 2½ inches to 3 inches case. .. Price, Rs 91/-

Midland's "Knock-About" S. B B L Ejector Hammer Gun 32 inches barrel .. Price, Rs. 55/-

Continental Make S. B B. L folding Pattern Hammer Gun, 32 inches barrel beautifully engraved and carved . . . Price, Rs. 45/-

J Steven's 12 bore Ejector Hammer Gun, 32 inches steel barrel , ... Price, Rs 45/-

Do do. "Dread Naught" with heavy Breech.... .. ....Price, Rs. 50/-



Any of the above of J. Steven's **Special Duck Gun** with 36 inches barrel. Price, Rs. 5/- Extra.

ENQUIRIES SOLICITED.

THE BOMBAY ARMOURY,
331, ABDUL REHMAN STREET,
BOMBAY. 3.

ದಂತ ವೈದ್ಯರು

ಈ ಊರಿನಲ್ಲಿ ಕೆಲವು ದಿನಗಳಮಟ್ಟಿಗೆ ವಾಸವಿದ್ದು ದಂತರೋಗಿಗಳನ್ನು ಪರೀಕ್ಷಿಸಿ ಯಾವ ನೋವನ್ನೂ ಕೊಡದೆ ಹಲ್ಲುಗಳನ್ನು ಕಿತ್ತು ಹೊಸ ಕೃತ್ರಿಮ ಹಲ್ಲುಗಳನ್ನು ಕೂಡುವರು.

ಸುಲಭ ದರಗಳಲ್ಲಿ ಹುಳುಕು ಹಲ್ಲುಗಳನ್ನು ತುಂಬಿ ಮೊದಲಿದ್ದಂತೆಯೇ ಆಗುವಂತೆ ಮಾಡುವರು. ಹಲ್ಲುಗಳನ್ನು ಶುದ್ಧಪಡಿಸುವರು.

ದರಗಳು ಸುಲಭವಾಗಿವೆ.

5 ಈ ಸಮಯವನ್ನು ಕಳಕೊಳ್ಳಬೇಡಿರಿ. ಈಗ ಪೊಳ್ಳೆಬೆಟ್ಟದಲ್ಲಿರುವರು.

Chief Forest Office, Coorg,
Mercara, the 16th December 1925.

NOTICE.

From and after 1st January 1926 Anekad firewood will be delivered at Mercara at the reduced price of Rs 20 per lorry load and Rs 10 per trailer (half lorry load,) delivered at or near purchaser's house.

Firewood will also be available for purchase in retail from 1st January 1926 at the Mercara Timber Depot (near Municipal cattle pound and the Roman Catholic Church) at the following rates:—

1000 lbs. (one cartload) Rs —-—
75 lbs. (a head load) Rs 0—6—0

Purchasers at the depot must make their own arrangements for removal.

Sd. G. C. ROBINSON
Chief Forest Officer.

ವರ್ತಮಾನ ಸಂಗ್ರಹ

ಒಳದೇಶ.

ಕಳೆದ ತಾ 30ರ ಸಾಯಂಕಾಲ ಮಡಿಕೇರಿ ಪೋಸ್ಟಾಫೀಸು ಸಮೀಪ ಕಾಯಿಲೆಯವನಾದ ಒಬ್ಬ ಮನುಷ್ಯನು ರಸ್ತೆಯಲ್ಲಿ ಬಿದ್ದು ಮೃತನಾದನು.

ತಾ 29—12—25ರಲ್ಲು ಪಾಲೂರು ದೇವಸ್ಥಾನದ ಒಳ ಕೊಳಕೋಟು ಬಾಣೆಯಲ್ಲು ಕ ಯ್ಯಂಗೇರಿ ನಾಡಿನವರು ಮೀಟಿಂಗು ನಡೆಸಿ ಹೊಸ ಕೂಡದ ಸಭೆಯು ಅವಶ್ಯವಿಲ್ಲವೆಂದು ತೀರ್ಮಾನಿಸಿರುವರು. ಇದರ ವಿವರ ಇನ್ನೂ ದುಕಡ ಪ್ರಕಟವಾಗಿದೆ.

ಕಳೆದ ಸೆಪ್ಟಂಬರ್ ತಿಂಗಳಲ್ಲಿ ನಡೆದ ವೀರಾಜಪೇಟೆ ಮುನ್ಸಿಪಾಲಿಟಿ ಕಮಿಟಿಯ ಚುನಾವಣೆಯು ನ್ಯಾಯವಾಗಿ ಆಗಲಿಲ್ಲವೆಂದೂ, ಅದನ್ನು ವಿಚಾರಿಸಿ ಪುನಃ ಚುನಾವಣೆ ನಡೆಸಬೇಕೆಂದೂ ಮೆ ಪುಟ್ಟಮಾದ ನಾಣ್ಯಯ್ಯನವರು ಕಮಿಷನರವರಿಗೆ ಬರೆದ ಅರ್ಜಿಯು ತಿರಸ್ಕರಿಸಲ್ಪಟ್ಟು ಕಳೆದ ಚುನಾವಣೆಯೇ ಮುಂದುವರು ಮಾಡಲ್ಪಟ್ಟಿದೆಯೆಂದು ಸೆನ್ನಿ.

ಕಾಕೋಟು ಪರಂಬು ಪಟ್ಟದಲ್ಲಿ ಒಬ್ಬನು ತಿಂಡಿ ಗುಂಡನ್ನು ತೆಗದು ಜೇಬಿಗೆ ಹಾಕಿಕೊಂಡಿದ್ದದನ್ನು ಸ್ವಲ್ಪ ಹೊತ್ತಿನನಂತರ ಅವನ ಸಮ್ಮಂದಿಕಳಾದ ಸ್ತ್ರೀಯೊಬ್ಬಳು ತಿಂಡಿಯೆಂದು ಯೋಚಿಸಿ ಅವನ ಜೇಬಿನಿಂದ ಗುಂಡನ್ನು ತೆಗದು ಎಳ್ಳುಂಡೆಯೆಂದು ಭಾವಿಸಿ ಬಾಯಿಗೆಹಾಕಲು ಅದು ಥಕ್ಕನೆ ಗುಂಡು ಹಾರಿ ಅವಳಬಾಯಿಯು ಬೆಂದುಹೋಗಿ ಚಿಕಿತ್ಸೆಹೊಂದುತ್ತಿರುವಳಂತೆ.

ತಾ 26—12—1925ರಲ್ಲು ಮಡಿಕೇರಿ ಸೈಯರ್ ಎಲಿಮೆಂಟರಿ ಸ್ಕೂಲಿನ ವಾರ್ಷಿಕೋತ್ಸವ ಮ. ಸಿ. ಎಸ್. ವೆಂಕಪ್ಪಯ್ಯ ಬಿ. ಎ. ಬಿ. ಎಲ್ ಮತ್ತು ಯಂ ಎಲ್ ಸಿ ಯವರ ಅಧ್ಯಕ್ಷತೆಯಲ್ಲಿ ನಡೆಯಿತು. ಸುಮಾರು 300 ಜನರು ನೆರೆದಿದ್ದರು. ಸ್ಪೋರ್ಟ್ಸ್ ನಡೆದ್ದಿಲ್ಲ. ಅಧ್ಯಕ್ಷರು ಇನಾಮುಗಳನ್ನು ಹಂಚಿದ್ದಲ್ಲದೆ ಬಾಲಕರಿಗೂ, ಬಾಲಕರ ತಂದೆಯವರಿಗೂ ವಿದ್ಯಾಭಿವೃದ್ಧಿ ವಿಷಯ ಬೋಧನೆಗಳನ್ನು ಕೊಟ್ಟರು.

ತಾ. 11—12—25ನೇ ದಿವಸ ಮಧ್ಯರಾತ್ರಿಯಲ್ಲು ಮೂರ್ನಾಡು ಹೊದ್ದೂರು ಊರಿನವರ ಈರವಂಡ ಐಮ್ಮನವರ ಮನೆಗೆ ಯಾರೊ ಹೊರಬಾಗಿಲುಗಳಿಗೆ ಚಿಲ್ಲಹಾಕಿ ಹೊರಗೆ ದಾಟದಹಾಗೆ ಭದ್ರಪಡಿಸಿ ಮನೆಗೆ ಬೆಂಕಿಕಟ್ಟು ಮನೆಪೂರ ಎಂದು ಸುಮಾರ 200ರೂಪಾಯಿವರೆಗೆ ಸಾಮಾನು ನಷ್ಟವಾಗಿದೆಂದೂ ಒಳಗಿದ್ದ ಜನರು ಬಾಗಿಲು ಮುರಿದು ಸುರಕ್ಷಿತವಾಗಿ ಹೊರಗೆ ಬಂದರೆಂದೂ ಒಂದು ವಾರ್ತೆ.

ಕಲ್ಲಿಕೋಟೆಯಲ್ಲಿ ಎರಡು ವರ್ಷ ಮೆಡಿಕಲ್ ಕಾಲೇಜು ಕಲಿತು ಹೊಂದಿ ಮಡಿಕೇರಿಯಲ್ಲಿರುವ ಭಾರತೀಯ ಔಷಧಾಲಯ ಕಲಸದಲ್ಲಿದ್ದ ಮೆ. ಮಂಡೆಯಡ (ಪೊಣ್ಣಪ್ಪನವರ ಮಗ) ಉತ್ತಯ್ಯನವರು ಕಳೆದ ತಾ 26ರಲ್ಲು ಆಸ್ಪತ್ರೆಯಲ್ಲಿಯೂ, ಮದ್ರಾಸಾಸ್ಪತ್ರೆಯಲ್ಲಿ ರೋಗಾತುರಾಗಿರುವ ಮೆ ಕೋಣೇರಿರ ತಿಮ್ಮಯ್ಯನವರ ಸನ್ನಿಧಿಯವರು ಮತ್ತು 1 ವಾರ ಕಳೆದನಂತರ ಮಡಿಕೇರಿಯಲ್ಲಿ ತಾ. 10-12-25ರಲ್ಲೂ ಶಿವಾಧೀನರಾದರೆಂದು ತಿಳಿಸಲು ವ್ಯಸನಪಡುತ್ತೇವೆ.

ತಾ. 30—12—25ರಲ್ಲು ಮೆ ಪೂಗನ್ ನವರ ಕಾರಿಗೆ ಗಾಡು ಕೋಟೆಯ ಕಾಯಿಲೆಯವರಾದ ಒಬ್ಬ ಒಂಟೆಯವನು ಮತ್ತೊಬ್ಬ ಹಿಂದಿನವನನ್ನು ಮಡಿಕೇರಿ ಆಸ್ಪತ್ರೆಗೆ ಗಾಡಿಯಲ್ಲಿ ತರುತ್ತಿದ್ದಾಗ ಸಿದ್ದಾಪುರದಲ್ಲಿ ಒಳ 15ಗಂಟೆ ವೇಳೆಯಲ್ಲಿ ಗಾಡಿ ಎತ್ತುಗಳು ಹಾವಿಗೆ ಹೆದರಿ ಓಡಲು ಗಾಡಿಯವನ ಗಾಡಿಯಿಂದ ಹಾರಿಬಿಟ್ಟಾಗ, ಗಾಡಿಚಕ್ರವು ರಸ್ತೆಯಬದಿಯಲ್ಲಿದ್ದ ಒಂದು ಮರಕ್ಕೆ ಹೋಗಲು ರೋಗವು ಎತ್ತುಗಳ ಕುತ್ತಿಗೆ ಎರಡ ತಪ್ಪಿಹೋಗಿ ಎತ್ತುಗಳು ಓಡಿಹೋದವು ಗಾಡಿಯು ರಸ್ತೆ ಕರೆಯ ಪಕ್ಕಕ್ಕೆ ಬಿದ್ದು ಅದರೊಳಗಿದ್ದ ಕಾಯಿಲೆಯವರಿಬ್ಬರ ಸುಮಾರು ಪಕ್ಕದ ಇಪ್ಪತ್ತೈದು ಅಡಿ ಆಳಕ್ಕೆ ಬಿದ್ದು ಮೃತರಾದರು. ಗಾಡಿಯು ಇನ್ನೂ ಕೆಳಗ ಉರುಳಿಹೋಗಿತ್ತೆಂದು ತಿಳಿಯುತ್ತೇವೆ.

ಹಿಂದೂದೇಶ.

ಮುಣಾರಿನ ತೋಟದಲ್ಲಿ ಕೆಲಸಮಾಡುತ್ತಿದ್ದ ತಂಜಾವೂರಿಯ 6000ಮಂದಿ ಕೂಲಿಯವರು ಹೆಚ್ಚು ಕೂಲಿ ಸಿಕ್ಕದ್ದರಿಂದ ಕೆಲಸ ಬಿಟ್ಟು ಹೋಗಿದೆ ಮುಷ್ಕರ ಹಿಡಿದಿರುತ್ತಾರೆ.

ಅಖಿಲ ಭಾರತ ವ್ಯಾಪಾರಿಗಳ ಎರಡನೇ ವಾರ್ಷಿಕ ಸಭೆಯು ಮದ್ರಾಸಿನ ಪನಗಲ್ ರಾಜರವರ ಅಧ್ಯಕ್ಷತೆಯಲ್ಲಿ ಡಿಸಂಬರು ತಾ 27ರಲ್ಲಿ ಅವಿಚ್ಛಿನ್ನವಾಗಿ ನಡೆಯಿತು.

ಅಖಿಲಭಾರತ ಹಿಂದೂ ಮಹಾಸಭೆಯು ತಾ 29 12 25ರಲ್ಲಿ ಕಾನ್‌ಪುರದಲ್ಲಿ ನಡೆಯಿತು. ಮಿ. ಎನ್. ಸಿ. ಕೇಳ್ಕರವರು ಅಧ್ಯಕ್ಷಸ್ಥಾನವನ್ನು ವಹಿಸಿದರು.

ರಾಷ್ಟ್ರೀಯರಿಗಾಗಿ ಕಮಕುಚ್ಚಿಯ ಜಿಲ್ಲೆಯ ಮಹಾರಾಜ ವೆಂಕಟರಮಣಾಯುಡು ರವರು 2ಲಕ್ಷ ರೂಪಾಯಿಗಳ ತಮ್ಮ ಆಸ್ತಿಯನ್ನು ದಾನಮಾಡಿರುತ್ತಾರೆ. (ಕೂರ್ಗಿನ ತಾಲೂಕುಗಳ ಜಮೀನು ಲಕ್ಷ್ಯ ಕೊಡುವರೋ?)

ಮ. ಜಯಕರ್, ಮಿ ಕೇಳ್ಕರ್ ಮತ್ತು ಡಾಕ್ಟರ್ ಮೂಂಜೆಯವರು ಲೆಜಿಸ್ಲೆಟಿವ್ ಕೌನ್ಸಿಲ್ ಚುನಾವಣೆಗೋಸ್ಕರ ರಾಜೀನಾಮೆಕೊಟ್ಟಿರುವರು. ಇವರು ರೆಸ್ಪಾನ್ಸಿವ್ ಕೋ-ಆಪರೇಶನ್ ತತ್ವದ ಪ್ರಚಾರಕ್ಕಾಗಿ ದೇಶದಲ್ಲೆಲ್ಲಾ ಸಂಚರಿಸುವರಂತೆ.

ನೀತಿಸಾಲ ಲಿಬರಲ್ ಫೆಡರೇಶನ್ ಸಭೆ ವಹಾ ಸಭೆಯು ಕಲ್ಕತ್ತಾದಲ್ಲಿ ಸರ್ ಮೋರೋಪಂತ ಜೋಶಿಯವರ ಅಧ್ಯಕ್ಷತೆಯಲ್ಲಿ ನಡೆಯಿತು. ಅಧ್ಯಕ್ಷರು ತಮ್ಮ ಭಾಷಣವನ್ನು ಇಂಗ್ಲೀಷು ಭಾಷೆಯಲ್ಲಿ ಮಾಡಿದ್ದರಿಂದ ಅಲ್ಲಿಗೆ ಬಂದ ಸಂಖ್ಯೆಗಳಿಂದ ಬಂದಿದ್ದ ಹಲವು ಪ್ರತಿನಿಧಿಗಳು ಆ ಭಾಷೆ ತಿಳಿಯದ ಕಾರಣ ಎಬ್ಬರಿಸಿಂದ ಎದ್ದು ಹೋದರು.

ತಾ 26 12 25ರಲ್ಲಿ 1ನೇ ಆಲ್ ಇಂಡಿಯಾ ವಾಣಿಜ್ಯ ಕಾನ್‌ಫರನ್ಸು ಕಾನ್‌ಪುರದಲ್ಲಿ ನಡೆಯಿತು. ಅಧ್ಯಕ್ಷರಾಗಿದ್ದ ವ. ಟಿ. ಸಿ. ಗೋಸ್ವಾಮಿ ಯಂ. ಎಲ್. ಎ ಯವರು ಸ್ವದೇಶಿಯನ್ನು ಬೆಂಬಲಿಸಬೇಕೆಂದು ಹೇಳಿದರು. ಯಾರ್ಕ್ಷೈರದ ಒಂದು ಪಕ್ಷವಾದೀ ಎಂದು ಮುಂತಾಗಿ ಬಹು ಸ್ವಾರಸ್ಯವಾದ ಭಾಷಣಮಾಡಿದರು.

ಕಳೆದ ತಾ 27ರಲ್ಲು ಕಾನ್‌ಪುರದಲ್ಲಿ ಮುಸಲ್ಮಾನ ಅಬ್ದುಲ್ ಕಲಾಂ ಆಜಾದರವರ ಪ್ರೆಸಿಡೆಂಟ್‌ಶಿಪ್‌ನಲ್ಲಿ ನಡದ ಆಲ್ ಇಂಡಿಯಾ ಖಿಲಾಫತ್ ಕಾನ್‌ಫರನ್ಸಿನಲ್ಲಿ ಸರ್ವ ಸಭೆಯು ಸ್ವಾಗತ ಮಂಡಳಿಯ ಚೇರ್ಮನ್ನಾಗಿದ್ದ ಹಸರತ್ ಮೋಹಾನಿಯವರ ಭಾಷಣದಲ್ಲಿರುವ ಅಭಿಪ್ರಾಯಗಳು ಸಂಪೂರ್ಣ ಸ್ವರಾಜ್ಯ ಪಕ್ಷದವರು ಒಪ್ಪದೆ ಇದ್ದುದರಿಂದ ಆ ಭಾಷಣವನ್ನು ಆ ಕಾನ್‌ಫರನ್ಸಿನ ಪ್ರೊಸೀಡಿಂಗ್ಸಿನಲ್ಲಿ ಸೇರಿಸಬಾರದೆಂದು ಬಹುಮತವಾಗಿ ತೀರ್ಮಾನವಾಯಿತು.

ಅಖಿಲಭಾರತ ಮುಸಲ್ಮಾನರ ವಿದ್ಯಾ ಕಾನ್‌ಫರನ್ಸು ಅಲಿಗಡದಲ್ಲಿ ಡಿಸಂಬರು ತಾ 27ರಲ್ಲಿ ನಡೆಯಿತು. ಸರ್ ಅಬ್ದುಲ್ ಕ್ವಾಯಂ ಖಾನ್ ಯಂ ಎಲ್ ಎ ರವರು ಅಧ್ಯಕ್ಷರಾಗಿದ್ದರು. ಮಹಮ್ಮದೀಯ ಸ್ತ್ರೀಯರು ವಿದ್ಯಾಭ್ಯಾಸದಲ್ಲಿ ಹಿಂದುಳಿಯಬಾರದೆಂದು ಸೆಕ್ರಟರಿಯವರು ನೋಟೀಸು ಕೊಟ್ಟಿದ್ದರು, ಹಲವು ಮುಸಲ್ಮಾನ ಸ್ತ್ರೀಯರು ವಿದ್ಯಾಭ್ಯಾಸಕ್ಕಾಗಿ ಬಂದು ಅವರ ಏಳಿಗೆಗೆ ಏನೊಂದು ಕೆಲಸ ಮಾಡದೆ ಇರುವ ಪುರುಷರನ್ನು ಖಂಡಿಸಿ ಭಾಷಣ ಮಾಡಿದರು.

ಕಾನ್‌ಪುರ ನೇಶನಲ್ ಕಾಂಗ್ರೆಸ್ಸಿನಲ್ಲಿ 15ಸಾವಿರ ಜನರು ನೆರೆಯಬಹುದಾದಂತೆ ಚಪ್ಪರವು ಕಟ್ಟಲ್ಪಟ್ಟಿತ್ತು. ಹಿಂದೂದೇಶದ ಎಲ್ಲಾಭಾಗಗಳಿಂದ ಬಂದ ಪ್ರತಿನಿಧಿಗಳ ಸಂಖ್ಯೆಯು 3162 ಆಗಿತ್ತು. ಕಾಂಗ್ರೆಸ್ ಮಹಾಸಭೆಯಲ್ಲಿ ಹಲವು ನಿರ್ಣಯಗಳು ಪಾಸಾದವು. ಅವುಗಳಲ್ಲಿ ಪಂಡಿತ ಮೋತಿಲಾಲ್ ನೆಹರೂರವರು ಸೂಚಿಸಿದ ಕಾಂಗ್ರೆಸ್ಸಿನ ಮುಂದಿನ ರಾಜಕೀಯ ಕಾರ್ಯಕ್ರಮದ ನಿರ್ಣಯವೇ ಮುಖ್ಯವಾದುದು. ಇದಕ್ಕೆ ಪಂಡಿತ ಮದನಮೋಹನ ಮಾಳವೀಯ ಜಯಕರ್ ಕೇಳ್ಕರ್, ಡಾ ಮೂಂಜೆ ಮೊದಲಾದವರು ವಿರೋಧಿಸಿದರೂ ಬಹುಮತದಿಂದ ಪಾಸಾಯಿತು. ದಕ್ಷಿಣ ಆಫ್ರಿಕದ ಹಿಂದೂ ಜನರಿಗೆ ಸಹಾನುಭೂತಿಯನ್ನು ತೋರಿಸಿಯೂ, ಬಂಗಾಳ ಆರ್ಡಿನೆನ್ಸನ್ನು ಖಂಡಿಸಿಯೂ, ನಿರ್ಣಯಗಳನ್ನು ಮತ್ತು ಇತರ ಮಾಮೂಲು ನಿರ್ಣಯಗಳೂ ಪಾಸಾದವು.

ವಿದೇಶ.

ಸ್ಪೇನಿನ ಆಧಿಪತ್ಯದಲ್ಲಿ 150 ಮಂದಿ ಪಾಸ್ಪರ್ಟ್ ದೇಶದಲ್ಲಿ ಪರೀಕ್ಷೆ ಕೆಲಸವನ್ನು ನಡೆಸುತ್ತಿರುವರು.

ರಿಫ್ ಜನರ ಸರದಾರ ರಾಜಿ ಸಂಧಾನಕ್ಕಾಗಿ ಫ್ರೆಂಚರಿಗೆ ಹೋಗಿದ್ದ ಮ. ಗಾರ್ಡನ್ ಕ್ಯಾನಿಂಗರವರ ಪ್ರಯತ್ನವು ಜಯವಾಗಿರುವುದಿಲ್ಲ.

ದಾ|| ಅನ್ನಿಬೆಸೆಂಟಮ್ಮನವರ ಕಾಮನ್ ವೆಲ್ತ್ ಆಫ್ ಇಂಡಿಯಾ ಬಿಲ್ಲು ಹೌಸ್ ಆಫ್ ಕಾಮನ್ಸ್ ಸಭೆಯಲ್ಲಿ ಸೂಚಿತವಾದ ನಂತರ ಪಾಸಾಗಿರುತ್ತದೆ.

ಇಂಗ್ಲೆಂಡ್ ಮತ್ತು ಸ್ಕಾಟ್ಲೆಂಡ್ ಪ್ರಾಂತ್ಯದಲ್ಲಿ ಚಳಿ ಜಾಸ್ತಿಯಾಗಿ ಹಿಮ ಬೀಳುತ್ತಲಿದ್ದು, ಅಲ್ಲಿಯ ಅನೇಕ ನದಿಗಳು ಹೆಪ್ಪುಗಟ್ಟಿ ಇಂಫ್ಲುಯೆಂಜಾ ಜ್ವರವು ಹರಡಿದ್ದು ಮತ್ತು ವಿಪರೀತ ಚಳಿಯು ಪ್ರಾರಂಭವಾಗಿದೆ.

ಸಿರ್ಯಾದಲ್ಲಿ ಫ್ರೆಂಚರಿಗೂ ಡ್ರೂಜರಿಗೂ ಕಾಳಗ ಉಂಟಾಗಿದೆಯೆಂದು ಪ್ರಕಟವಾದ ವರ್ತಮಾನ ಸುಳ್ಳೆಂದು ತಿಳಿಯಬರುತ್ತದೆ. ಈ ಎರಡು ಸಂಗಡದವರಿಗೆ ಇನ್ನೂ ಯುದ್ಧ ನಡೆಯುತ್ತದೆ.

ನರೌಲಿ ಕೊಡುವುದರಲ್ಲಿ ಪ್ರಖ್ಯಾತನಾಗಿರುವ ಜರ್ಮನಿ ದೇಶದ ಹಿಂಡನ್‌ಬರ್ಗ್ ಜನರಲ್ ಯವರನ್ನು ಅಲ್ಲಿನ ಸೈನ್ಯ ಸಭೆ ಜಿ ಟಿ ಎ. ಅನರ್ಹರನ್ನು ಕಳುಹಿಸಲ್ಪಟ್ಟಿರುವರು.

ಚೀನಿಸರ್ಕಾರದ ಪ್ರಾಣಿಗಳಲ್ಲೆಲ್ಲಾ ನೀಲಿ ತಿಮಿಂಗಿಲವು ಅತಿ ದೊಡ್ಡದು. ಅದು 90 ಅಡಿ ಉದ್ದವೂ 30 ಟನ್ ತೂಕವೂ ಬೆಳೆಯುತ್ತದೆ. ಸಮುದ್ರದಲ್ಲಿರುವ ಎಲ್ಲಾ ಪ್ರಾಣಿಗಳನ್ನು ತಿಂದು ಜೀವಿಸುತ್ತದೆ. ಈ ಪ್ರಾಣಿಯು ಸಮುದ್ರದಲ್ಲಿ ಒಂದು ಗಂಟೆಗೆ 30 ಮೈಲಿ ವೇಗದಲ್ಲಿ ಈಜಬಲ್ಲುದಂತೆ.

ಕಪುರ್ಥಲಾ ತನ್ನ ಮೇಲೆ ಒದಗಿದ ಬ್ರಿಟಿಷರ ಒಂದು ದಂಡಯಾತ್ರೆಯ ಹಿಂದುಗಳಿದ್ದ ಪರಗಣದಲ್ಲಿ ಪ್ರಯಾಣ ಒಂದು ತೀರ್ಪು ಕೊಡಿಸಿಕೊಂಡು ಹೊರಟು ತನ್ನ ಹಿರಿಯರ ಸ್ವರೂಪವ ತೋರಿಸಿ ಇವನ್ನು ಗುಂಡು ಹಾರಿಸಿ ಪಾರಾಯಿತು. ಹರಡಿದ ಚಿನ್ನ ಬೆಳ್ಳಿಗಳನ್ನು ಸುಲಿದು ತಮ್ಮ ದೋಣಿಗಳಲ್ಲಿ ಸಿರಿ ಅಧ್ಯಕ್ಷರಾದರು.

ಫ್ರಾನ್ಸಿನವರಲ್ಲಿ ಒಳದೇಶ ಯುದ್ಧವು ಘೋರವಾಗಿ ನಡೆಯುತ್ತಿದೆ. ಪ್ರಾಮುಖ್ಯ ಸೇನಾಪತಿಗಳಾದ ವಾಂಗ್ ಯು ಸಾಂಗ್ ಮತ್ತು ಚಾಂಗ್ ಟ್ಸೊಲಿನ್‌ರವರು ಒಬ್ಬರ ಮೇಲೊಬ್ಬರು ದಂಡೆತ್ತಿ ಕಾದಾಟ ಪ್ರಾರಂಭಿಸಿದ್ದು ಟೀಂಟ್ಸಿನ್ ಪಟ್ಟಣವು ಪೆಂಗ್ ಯು ಸ್ಯಾಂಗರ ಸ್ವಾಧೀನವಾಗಿದೆ. ಈ ಯುದ್ಧದ ಸಂಬಂಧ ಅನೇಕರಿಗೆ ಅಪಾಯ. ಆದ್ದರಿಂದ ಯುದ್ಧ ಪರದೇಶಿಗಳನ್ನು ದೇಶಾಂತರ ಕಳುಹಿಸಿರುವರಂತೆ.

ಬಂಗಾಳ ಆರ್ಡಿನೆನ್ಸನ್ನು ಬಹು ದಿನ ರಾಜಕೀಯ ಕೈದಿಗಳನ್ನು ಬಿಡುಗಡೆ ಮಾಡಬೇಕೆಂದು ರಾಜಕೀಯ ಪಾಠಶಾಲೆ ಇತ್ಯರ್ಥಕ್ಕಾಗಿ ಪ್ರಬಲ ಸಾಧ ವಿಷಯ ನಿಶ್ಚಯಗಳ ಮತ್ತು ಹಿಂದೂದೇಶದ ಮುಂದಾಳುಗಳು ಒಂದು ರೌಂಡ್ ಟೇಬಲ್ ಕಾನ್‌ಫರನ್ಸನ್ನು ಕೂಡಿಸಿಕೊಂಡು ಪ್ರಚಲಿತ ಹಲವು ಲೇಬರ್ ಮೆಂಬರುಗಳು ಕುರಿತು ಹೀಗೆ ಪತ್ರವನ್ನು ಇಂಗ್ಲೆಂಡಿನ ಪತ್ರಿಕೆಗಳಲ್ಲಿ ಪ್ರಕಟಿಸಿರುತ್ತಾರೆ.

ಪತ್ರವ್ಯವಹಾರ.

ಜವಾಬ್ದಾರರು ಪತ್ರದ ಅಭಿಪ್ರಾಯಗಳಿಗೆ ಪತ್ರಿಕಾ ಕರ್ತರು ಉತ್ತರವಾದಿಗಳಲ್ಲ. ಸಂ

ಕೊಡವ ಮೇಲೆ ಅಮ್ಮಕೊಡವನಲ್ಲಿ ವಿನಂತಿ

ಈ ದೇಶದ ಅಭಿವೃದ್ಧಿಯ ಹಲವು ಪ್ರಜಾವರ್ಗದಲ್ಲಿರುವ ಕೊಡವನು ಮತ್ತು ಅಮ್ಮಕೊಡವರು ಈ ಎರಡು. ಪತ್ರಿಕೆಗಳಿಂದ ದೇಶದ ಅಗಿನ ಚಳುವಳಿ ವಿಷಯ ತಿಳಿಯುತ್ತಿರುವರು. ಸಂಯುಕ್ತ ಈ ದೇಶದ ಮೂಲನಿವಾಸಿಗಳಿಗಾಗಿ ಒಂದು ಸಭೆಯು ಏರ್ಪಡಿಸಬೇಕೆಂದು ಹಲಕಲವರು ಸಾರಿದ ತ್ರಿರ ವರು ಮತ್ತು ಹಲವರು. ವಿರೋಧಿಸುತ್ತಿದ್ದರೂ ಸಭೆ ತಿಳಿದು ಬರುತ್ತಿದೆ. ಈ ಸಂದರ್ಭದಲ್ಲಿ ಈ ದೇಶದ ಮೂಲನಿವಾಸಿಗಳಾದ ನಾವುಗಳು ಸಹ ಇದರ ಗುಣದೋಷಗಳನ್ನು ಕುರಿತು ಚರ್ಚಿಸಿ ಸರ್ವಸಮ್ಮತವಾದ ಒಂದು ಅಭಿಪ್ರಾಯಕ್ಕೆ ಬರಬೇಕಾದದ್ದು ಅವಶ್ಯವೆಂದು ತೋರುವುದರ ನಿಮಿತ್ತ ಈ ವಿಷಯವನ್ನು ಚರ್ಚಿಸಲು 1926ನೇ ಇಸವಿ ಜನವರಿ ತಿಂಗಳು 10ನೇ ಆದಿತ್ಯವಾರ 10ಗಂಟೆಗೆ ಬೆಟ್ಟತ್ಕನಾಡು ಹಳ್ಳಿಗಟ್ಟು ಗ್ರಾಮದಲ್ಲಿ ಎಮ್ಮೆದೇವಾಲಯದಲ್ಲಿ ಸಭೆ ಸೇರಬೇಕಾಗಿಯೂ, ಆ ದಿನ ಕಿಗ್ಗಟ್ಟುನಾಡು ಮತ್ತು ಪೊನ್ನಂಪೇಟೆಯ ಎಲ್ಲಾ ಅಮ್ಮಕೊಡವರು ಅಧಿಕಮಾನ ಹಿಟ್ಟಿಕಡವೆ ಸಭೆಗೆ ಹಾಜರಾಗಬೇಕೆಂದು ಈ ಮೂಲಕ ಪ್ರಾರ್ಥಿಸುತ್ತೇನೆ. ಊಟ ಉಪಚಾರಕ್ಕೂ ತಕ್ಕ ಏರ್ಪಾಡು ಮಾಡಲಾಗುತ್ತೆ.

ಮ. . . . ಸೋಮಣ್ಣಯ್ಯ
(ಹ್ಯ . . . ಅಮ್ಮಕೊಡವರ ಅಧ್ಯಕ್ಷ)

ಒಳ ಕೋಟೆಯ ಕಂದಾಯ

ಅಯ್ಯಾ,

ಶ್ರೀಮಂಗಲ ನಾಡಿನಲ್ಲಿ ಮತ್ತು ಕೊಡಗು ದೇಶದ ಎಲ್ಲಾ ನಾಡು ಸಿಮೆಗಳಲ್ಲಿ ಜಮ್ಮ ಕಂದಾಯ ಶಾಸ್ತಿ ಕಂದಾಯ ಶಿಕ್ಷೆ ಕಂದಾಯ, ಅರೆ ಕಂದಾಯ, ಇನಾಮು ಸೇರಿ ನಾಲ್ಕು ಬೇರೆ ಬೇರೆ ಕಂದಾಯಗಳನ್ನು ವಿಧಿಸಿ ವಸೂಲು ಮಾಡುತ್ತಾ ಬರುವುದು. ರೈತಯಲ್ಲರು ತಿಳಿದುದನ್ನೂ ಆ ಧ ರೆ

ಕೊಡಗು ದೇಶದಲ್ಲಿ ವಾಸಮಾಡುವ ಪ್ರತಿಯೊಬ್ಬನಿಗೂ ಯಾವುದಾದರೊಂದು ಒಳ್ಳೇದು ಯಾ ಕೆಟ್ಟ ಕೆಲಸಕ್ಕೆ ಅಂದರೆ ಮದುವೆ, ತಿತಿಗೆ, ಹುತ್ತರಿ, ಸತ್ತರೆ, ದೇವಸ್ಥಾನಕ್ಕೆ ಪೂಜೆಗೆ ಮತ್ತು ಇತರ ಎಲ್ಲಾ ಕೆಲಸಕ್ಕೆ ಬಾಳೆ ಎಲೆ ಇಲ್ಲದೆ ಆಗುವುದೇ ಇಲ್ಲ. ಕೆಲವರ ಮನೆಯಲ್ಲಿ ಬಾಳೆ ತೋಟವಿದೆ. ಕೆಲವರ ಹಿತ್ತಲಿನಲ್ಲಿ ಒಂದೆರಡು ಬುಡ ಮಾತ್ರ ಇರುತ್ತೆ. ಅಂಥವರು ಮದುವೆ ಮುಂಬೆ, ಹಬ್ಬ ಹುಣ್ಣಿಮೆಗಳಿಗೆ ಬಾಳೆ ತೋಟ ಇರುವವನಿಗೆ ಸಲಾಂ ಹೇಳಿ ಅದೇ ಭಕ್ತಿಯಿಂದ ಕೆಲವು ಎಲೆ ಕೇಳಬೇಕಾಗಿರುತ್ತೆ. ಆಗ್ಯೆ ಮನೆಯ ಯಜಮಾನು ಮಗನನ್ನು ಕೇಳಬೇಕೆಂತಲೂ ಮೊದಲಾಗಿ ಹೇಳಿ ಕಡೇ ಕಾಲಕ್ಕೆ ಸಣ್ಣ ಗಿಡದಿಂದ ಕತ್ತರಿಸಿ ಬೇಡ ಎಂತ ಮೊದಲಾಗಿ ಹೇಳಿ ಕೈಯ್ಯಲು ಅಪ್ಪಗೆ ಕೂಡ ವನ. ಹಾಗೆ ತಂದು ಆವನ ಮನೆ ಕೆಲಸ ನಡಿಸಬೇಕು. ಮುಂದಿನ ಕಾಲದಲ್ಲಿ ಈಗಿನ ಅಪ್ಪು ಹೇಟ್ ಫ್ಯಾಶನ್ ಸುರು ಆಗುವುದಕ್ಕೆ ಮುಂಚೆ ಎಲ್ಲರೂ ಊಟಕ್ಕೆ ಬಾಳೆ ಎಲೆಯನ್ನೇ ಒಟ್ಲದ ಬದಲಿಗೆ ಉಪಯೋಗಿಸುತ್ತಿದ್ದರು. ಅದುದರಿಂದ ತೋಟವನ್ನು ಸಹ ಜೀವ ವಸ್ಯೆರೆ ಕಟ್ಟಿಕೊಂಡು ಭದ್ರಪಡಿಸಿಕೊಂಡು ಬಾಳೆ ಸಸಿಗಳನ್ನು ಬೆಳೆಸುತ್ತಿದ್ದರು. ಈಗಿನಾದರೋ ಕಪ್, ಸಾಸರ್, ಪ್ಲೇಟು ಮೊದಲಾದ ಸಾಮಾನುಗಳು ಒರಬಾಗಿ ತೋಟವೇ ಹಾಳಾಗಿ ಹೋಯಿತು. ತೋಟದ ವ್ಯವಸಾಯವೇ ನಿಂತು ಹೋಯಿತು. ಅಷ್ಟರೊಳಗೆ ಬಾಳೆ ತೋಟಕ್ಕೆ ಕಂದಾಯ ಹಾಕುವ ಏರ್ಪಾಡಾಯಿತು. ಅಷ್ಟರಲ್ಲಿ ಎಲ್ಲರೂ ಅಂದರೆ ಕಂದಾಯ ಕೇಳುವ ಆಕಾರರು ಬಾಳೆಯನ್ನೇ ನಡುವದನ್ನು ಬಿಟ್ಟರು. ½ ಎಕರೆ ಮೇಲ್ಪಟ್ಟ ತೋಟಕ್ಕೆಲ್ಲಾ ಕಂದಾಯ ಹಾಕಿ ಆಯಿತು. ಈಗ 20 ಯಾ 25 ಸೆಂಟು ಬಾಗದ ತೋಟಕ್ಕೂ ಪೂರ್ವದಲ್ಲಿ ನೆಟ್ಟ ದೂರ ದೂರ ಒಂದೊಂದ ಗಿಡ ಇದ್ದರೆ ಇಡೀ ನಂಬರಿನ ಜಾಗಕ್ಕೂ ಕಂದಾಯ ಹಾಕಿ ನೋಟೀಸು, ಅನಂತರ ವಾರಾಂಟು, ಅನಂತರ ಒಪ್ಪಿಗೆ ಪಟೇಲರು ಬಂದು ತಗಾದೆ ಮಾಡಿ ಚೆಂಬೋ, ಕೊಡಪಾನವೋ ಎತ್ತಿಕೊಂಡು ಹೋಗುವರು. ಇವರಿಂದಲೂ ಆಗದಿದ್ದರೆ ಶಾನುಭೋಗರು, ಜವಾನ, ಪಟೇಲರು ಮನೆಗೆ ಬರುವರು. ಏನು ಕಷ್ಟ ನಷ್ಟ ಹೇಳಿದರೂ ಕೇಳಲಾರರು. ಹೀಗೆಲ್ಲಾಗಿ ಬಡ ರೈತನ ಚೆಂಬು, ಗಂಗಳ, ಕೊಡಪಾನ ಮೊದಲಾದುದನ್ನು ಜಪ್ತಿ ಮಾಡಿ ಜವಾನನಿಂದ ಹೊರಿಸಿಕೊಂಡು ಹೋಗಿ ಹರಾಜು ಮಾಡಿ ಕಂದಾಯ ವಸೂಲ್ ಮಾಡಿಕೊಳ್ಳುವರು. ಆದುದರಿಂದ ಬಡ ರೈತರು ಕಷ್ಟಕ್ಕೆಲ್ಲಾ ಸಿಕ್ಕಿ ನರಳುತ್ತಿರಬೇಕಾಗುತ್ತೆ. ಅದೂ ಅಲ್ಲದೆ ನದರಿ ಕಂದಾಯವನ್ನು ಎಲ್ಲರೂ ಬಡವ್ಯಾಪಾರದ ಕಾಲದಲ್ಲಿಯೇ ವಸೂಲ್ ಮಾಡಲು ಉಪಕ್ರಮಿಸಿಕೊಳ್ಳುತ್ತಾರೆ.

ರೈತರ ಶೋಕವೂ, ಶಾಪವೂ, ಒಡೆ ಹೆಚ್ಚಾಗಿ ನಾಡನ್ನೇ ತುಂಬಿಕೊಂಡು, ಕಂಡ ಕಂಡವರ ಸಂಗಡ ಈ ಕಂದಾಯದ ವಿಷಯವನ್ನೇ ಪರ್ಯಾಲೋಚನೆ ಮಾಡುತ್ತಾ, ಮನಸ್ಸಿಗೆ ಸಮಾಧಾನವಿಲ್ಲದೆ ಶ್ಯಾನುಭೋಗರನ್ನೇ ಹೋಗಿ ಕೇಳುವರು. ಅವರು ನಿಮ್ಮ ಹಿತ್ತಲಿನ ವಿಸಿದ ಕಂದಾಯ ಕಟ್ಟಬೇಕು, ಇಲ್ಲವಾದರೆ ಒಪ್ಪಿಗೆ ವಾರಾಂಟು ಕೊಡಲಾಗುತ್ತೆಂಬುದಾಗಿ ಹೇಳುವರು. ಆದುದರಿಂದ ದಯವುಳ್ಳ ಸರಕಾರದವರೂ, ಕೌನ್ಸಿಲ್ ಮೆಂಬರುಗಳೂ, ಜನಾನ್ಯಾದರ ಸಂಪಾದಕರೂ ಇದೊಂದು ಎಲ್ಲಾ ವಿಷಯಗಳಲ್ಲಿ ಮೊದಲನೇದೆಂದು ಯೋಚಿಸಿ ಮನಸ್ಸಿಗೆ ತಂದು, ಇನ್ನಾದರೂ ಹಿತ್ತಲು ಕಂದಾಯ ಬಾಳೆ ತೋಟದ ಕಂದಾಯವನ್ನು ಬಿಡಿಸಿ ಹಿತ್ತಲುಗಳನ್ನು ಉದ್ಧಾರ ಮಾಡಲು ತಕ್ಕ ಏರ್ಪಾಡು ಮಾಡಬೇಕಾಗಿ ಪ್ರಾರ್ಥನೆ.

ಬಾಳೆ ಹಣ್ಣು ಸಿಗುತ್ತಾ ಎಂಬ ಪ್ರಶ್ನೆ ಒದಬಹುದು. ಎಲ್ಲರೂ ಮಾಡುವುದಿಲ್ಲ. ಮೇಣಸು, ಕಾಫಿ ತೆಗೆಯಲು ಕಾಸಿಲ್ಲದವರು ಬಾಳೆ ಹಣ್ಣನ್ನು ಸಿಕ್ಕಿದ ಬೆಲೆಗೆ ಕೊಟ್ಟು ಅದರಿಂದ ಸಿಕ್ಕಿದ ದುಡ್ಡಿಗೆ ಸಾಮಾನು ತೆಗೆದುಕೊಂಡು ಹೋಗಿ ತಮ್ಮ ಸಂಸಾರ ಪೋಷಣೆ ಮಾಡುತ್ತಾರೆ. ಅನುಕೂಲಸ್ಥರು ಎಂದೂ ಮಾರುವುದಿಲ್ಲ. ಎಲ್ಲವೂ ಮನೆಯ ಉಪಯೋಗಕ್ಕೇನೆ ಸಾಕಾಗುವದಿಲ್ಲ. ಆದುದರಿಂದ ಈಗ ಬಂದಿರುವ ಕಷ್ಟವನ್ನು ತಪ್ಪಿಸಿ ಕೊಡಬೇಕಾಗಿ ದಯವುಳ್ಳ ಸರಕಾರದವರನ್ನೂ, ಕೌನ್ಸಿಲ್ ಮೆಂಬರುಗಳನ್ನೂ ಅತಿವಿನಯದಿಂದ ಕೇಳಿಕೊಳ್ಳುವದಾಗಿರುತ್ತೆ.

ತಿರಬಾರದವ.

ಮಧ್ಯಸ್ಥಿಕೆ ಬೇಕಲ್ಲವೆ?

ಹಿಂದುಸ್ಥಾನದ ದೇಶ ಭಕ್ತರು ದೇವರ ಭಯವೇ ಜ್ಞಾನದ ಆರಂಭವೆಂದು ನಂಬಿ ಕಾಂಚಾಣಂ ಕಾರ್ಯ ಸಿದ್ಧಿ ಎಂಬ ಉದರ ನಿಮಿತ್ತದ ಮಂತ್ರವನ್ನು ಜಪಿಸದೆ ಅತಿಯಾಸೆಯನ್ನು ತೊರೆದು, ತಾಬೆದಾರಿಕೆಯ ಐಶ್ವರ್ಯಕ್ಕಿಂತ ಸ್ವತಂತ್ರದ ಬಡತನವೇ ಲೇಸೆಂಬ ಸ್ವರಾಜ್ಯದ ತತ್ವವನ್ನು ಅನುಸರಿಸುವದು ಎಲ್ಲರು ಕಂಡು, ಕೇಳಿ, ನೋಡಿದರೂ ಸಹ ವಂಚಕನಿವಾ ಎಂದು ಬರೆದರೆ ಸಾಲದು. ಲೋಕಪಾವನವನ್ನು ಲೋಕ ಅಸಮಾನವಾಗಿ ಬರೆ ನುಡಿಯಿಂದ ಕಾಂಚಾಣಾಂತರದ ದಕ್ಷಿಣೆ ಕಾಣದಕ್ಕೆ ಒವಾಬು ಒಂದನಂತರ ಮಾನನಷ್ಟಕ್ಕೆ ಗುರಿಪಡಿಸುತ್ತೇನೆ ಎಂಬುದಾಗಿ ನಮೂದಿಸಿದ ಬಾತ್ಮಿಗ ಸ್ವಾಮಿ ವೈದ್ಯನಾಥ ಭಟ್ಟರೆ, ತಾವೂ ಬ್ರಹ್ಮ ಕುಲದವರು. ಅದರ ಮೇಲೆಯೂ ತಮ್ಮ ನಾಮಕರಣದ ಅರ್ಥವಾದರೂ ಲೋಕವನ್ನು ಪವರಿಸು ವಂತಾದ್ದು. ಮೇಲಾದವರು ಕೀಳಾದವರನ್ನು ಉಪಚರಿಸದೆ ಬಿಡುವನುಂಟೆ? ಧರ್ಮವು ಕರ್ಮವನ್ನು ಮನ್ನಿಸದೆ ಅದರಂತೆ ಕುಣಿದರೆ ಕರ್ಮವು ಅಡಗುವದೆ? ಧರ್ಮರಾಯನು ದುರ್ಯೋಧನನನ್ನು ನಿಂದಿಸಿದುಂಟೆ ಮತ್ತು ಮಹಾತ್ಮ ಗಾಂಧಿಯವರು ತನಗೆ ತಾನೇ ಸ್ವರಾಜ್ಯವನ್ನು ಮಾಡಿಕೊಂಡು ಜನರಿಗೆ ಉಪದೇಶಿಸುತ್ತಾ ಸತ್ಯದಿಂದ ತುಂಬಿದ ಸ್ವರ್ಗದ ತಿಳುವಳಿಕೆಯನ್ನು ನಾಟಿ ಹುಟ್ಟು ಸಾವು ಇಲ್ಲದ ಪರಮಾತ್ಮನನ್ನು ತೋರಿಸಿ ಸವೆಂದರೆ ನಮ್ಮ ಕರ್ಮಕ್ಕೆ ಸ್ವಲ್ಪವಾದರೂ ನಾಚಿಕೆ ಬೇಡವೆ? ತಂದೆಯು ಮಕ್ಕಳ ಮೇಲೆ ಕೋಪಿಸಿದರೆ ಮಕ್ಕಳು ಪಾಪಿಗಳೇ? ಅನ್ನದಿಂದ ಬ್ರಾಹ್ಮಣ್ಯದ ಬಿಡುವಿಯುತಿಯನ್ನು ತಿಳಿಯದೆ ಒರೆದ ಭಾಷೆಯ ಮಂದತ್ವಕ್ಕೆ ಉಪದೇಶಿಸದೆ, ಪರದೇಶದವರಂತೆ ಕಮ್ಮಿಯಾದ ತಿಳುವಳಿಕೆಯ ಮಾತಿಗೆ ಬೆಲೆ ಕಟ್ಟಿ ನಷ್ಟವನ್ನು ವಸೂಲು ಮಾಡುತ್ತೇನೆಂದರೆ, ಹಿಂದ ಳಿಕೆಯನ್ನು ಸುಧಾರಿಸುವವರ್ಯಾರು? ಸ್ವಾಮಿ, ಬ್ರಹ್ಮಜ್ಞಾನವೆಂತು ಬ್ರಾಹ್ಮಣ್ಯವೆನ್ನುವವಾದರೆ ತಮ್ಮ ಕುಲ ಧರ್ಮವನ್ನಾದರೂ ಒರೆದು ಭೋದಿಸಿ ಲೋಕಪಾವನದ ಜೀವನಾಸವನ್ನು ಉಳಿಸದೆ ದಡ್ಡಿಗೆ ದುಡ್ಡು ಸೇರಿಸಿದರೆ ದೊಡ್ಡವನಾಗುವೆನೆಂದು ಗ್ರಹಿಸಿ ಪೂಜೆ ಪುರಸ್ಕಾರದಿಂದ ಸಿಕ್ಕಿದ ದುಡ್ಡು ಸಾಲದೆ ಮಾತು ತಪ್ಪಿ ಕೊಂಡವನಿಂದಲೂ ದುಡ್ಡು ವಸೂಲು ಮಾಡುವದಾದರೆ ನಿಮ್ಮ ಈ ತರದ ಕಾರ್ಯಾರ್ಥಕ್ಕೆ ಮರ್ಯಾದೆ ಇಲ್ಲದೆ ದುಡ್ಡು ವಸೂಲಿಯವರೆಂದು ನಾನು ಗುಟ್ಟಾಗಿ ಹೇಳಿಕೊಂಡರೆ, ಅದಕ್ಕೂ ನಿಮ್ಮಿಂದ ಹೀನ ನಷ್ಟವಿರಬಹುದೆಂದು ಹೆದರುತ್ತೇನೆ. ಅದ್ದರಿಂದ ಮೇಲಾದ ದೇವತಾ ಕುಲ ಧರ್ಮವಂತರಾದ ನೀವುಗಳೆಲ್ಲಾ ಆಲೋಚನೆ ಇಲ್ಲದೆ ನುಡಿಯುವ ಭಾಷೆಯ ನಿಂದನೆಗೆ ಗುರಿ ಸದೆ, ಬ್ರಹ್ಮ ಸೂತ್ರಗಳಿಂದಲೂ, ನ್ಯಾಯ ನೀತಿಗಳಿಂದಲೂ ಮಿಗಿಲಾದ ತಿಳುವಳಿಕೆಯನ್ನು ಪತ್ರಿಕೆಯ ಮೂಲಕ ಬೋಧಿಸಿ ಸರಕಾರದವರು ಕೂಡಲೇ ಕೊಡಬೇಕೆಂದಿರುವ ಸ್ವರಾಜ್ಯದ ಏಕ[illegible]ಯತಿಯನ್ನ ಸುಗಳಿಸುವ ಸಮಿನುಡಿಗಳಿಂದ ಜಗದ ಸೇವಕನ ಹಿಂದುಳಿಕೆಯು ಅಮಲುದಾರರನ್ನ ಸೇರಿತೆಂದರೆ, ಮಹಾತ್ಮ ಗಾಂಧಿಯಂತೆ ದೇಶ ಕಾರ್ಯವನ್ನು ನಡೆಸಿದಂತಾಗುವದು. ಇನ್ನೂ ಎಲ್ಲಾ ಜನರಿಗೂ ತಮ್ಮಿಂದ ಬಂದು ಉಪಕಾರವಾಗಿದೆಯೇ ಆಗುವದು ಎಂದು ತಮಗೆ ಬರೆದು ತಿಳಿಸಿದರೆ ತಮ್ಮ ಮೋಷವು ಕಮ್ಮಿಯಾಗುವದು ಮತ್ತು ಬರೆದು ತಿಳಿಸುವ ಮಧ್ಯಸ್ಥನಾದ ನನ್ನ ಕುಲ ಧರ್ಮದ [illegible].

ಅಮ್ಮಣಿಚಂಡ ಸುಬ್ಬಯ್ಯ.

"ಮಡಿಕೇರಿ ಮುನಿಸಿಪಾಲಿಟಿ ಔದಾರ್ಯ."

ಅಯ್ಯಾ,

ಮುನಿಸಿಪಾಲಿಟಿ ಪ್ರಜೆಗಳ ಔದಾರ್ಯವೇ ಔದಾರ್ಯ. ಮೆಂಬರರು ಅನೇಕರ ವಾರ್ಡು ಅಥವಾ ಕಮಿಟಿಗೆ ಜವಾಬ್ದಾರಿಕೆ, ಕೆಲಸಕಾರ್ಯಗಳ ಮೇಲೆ ಅಗೋಚರವಾಗಿ ಇರುವದೊಂದೇ ಅಲ್ಲ; ವರುಷದಲ್ಲಿ ಆರು ಮೀಟಿಂಗಿಗೆ ಹಾಜರಾದರೂ ಆಯಿತು, ಇಲ್ಲ ಮೂರಕ್ಕಾದರೂ ಹಾಜರು. ಅದರೂ ಸಮುದಾಯವು ಪ್ರತಿ ಚುನಾವಣೆಗೆ ಪುನಃ ಪುನಃ ಪ್ರತಿಷ್ಠಿಸುವದೊಂದು ಔದಾರ್ಯ. ಇಂಥಾ ಅಲಂಕಾರ ಪ್ರತಿನಿಧಿಗಳ ಮೇಲೊಬ್ಬರು * * ಇವರೇನೋ ಕರ್ತವ್ಯದಕ್ಷರೇ ಸರಿ. ಆದರೆ ಇವರ ಕಾರ್ಯಕ್ಷೇತ್ರ ಕ್ರಮ. ಇವರ ಸುಂದರ ಭವನದ ಅಜುಬಾಜು. ಅಲ್ಲದೆ ಹಿಂದಂಗುಲ ಮುಂದೆ ತೋರಿಬರುವುದಿಲ್ಲ. ಹ್ಯಾಗಂದರೆ, ಮೊದಲನೆ ಬಾಣೆಮೊಟ್ಟೆ ಹಾಲಿ ದೇಚೂರು, ರಾಜಸೀಟಿನ ಅಜುಬಾಜು, ಮಿಸ್ಸನ್ ಲೈನಿನ ಪ್ರಾಂತ್ಯಗಳಲ್ಲಿನ ಮುನಿಸಿಪಲ್ ರಸ್ತೆಗಳು ಅಗಿಂದಾಗ್ಯೆ ರಿಪೇರಿ ಮಾಡಲ್ಪಟ್ಟು ಬಹು ನಾಜೂಕಾಗಿ ಇಡಲ್ಪಟ್ಟ ವಿಷಯ ಸರ್ವ ವೇದ್ಯವೂ ಸಂತೋಷಕರವಾದ ಕಾರುಬಾರು. ಹಾಗೆಯೇ ಇತರ ಕಡೆಗಳ ರಸ್ತೆಗಳಮೇಲೆ ಪ್ರೆಸಿಡೆಂಟರ ಯಾ ಕಮಿಟಿಯವರ ಅಥವಾ ಯಾವನೇ ಒಬ್ಬ ಮೆಂಬರನ ನೆಗವೂ ಸಹ ಹೋಗಲಿಕ್ಕಿಲ್ಲದು. ಓಟರುಗಳ ಮೊರೆಯು ಕೇಳಿತೆಂದರೆ ಪ್ರೆಸಿಡೆಂಟರ ಕಡೆಯಿಂದ "ಈಗ ಮುನಿಸಿಪಾಲಿಟಿಯಲ್ಲಿ ಖರ್ಚಿಗೆ ಹಣವಿಲ್ಲ" ಎಂಬ ಪ್ರತಿಧ್ವನಿ. ಹೀಗಾದರೆ ಬಡ ಓಟರುಗಳ ಗೋಳುಹವಾಲನ್ನು ಕೇಳುವವರೇ ಇಲ್ಲವೇ?

ಮುನಿಸಿಪಾಲಿಟಿಯ ಉತ್ತರ ಭಾಗವೆಲ್ಲಾ, ಪೇಟೆ ದೊಡ್ಡಿಯಿಂದ ಪಶ್ಚಿಮಕ್ಕೆ ಕಾನ್ವೆಂಟಿಗೆ ಹೋಗುವ ರಸ್ತೆ, ಅಧಿಕವಾಗಿ ಜೀವಜಂತುಗಳು ಮತ್ತು ಮನುಷ್ಯರ ಅನ್ನಾಡುವಿಕೆಗ ಅರ್ಹವಾಗಿ (ಹಾಲಿ ಅನರ್ಹವಾಗಿ) ಒಳಗಾಗಿರುವ ಮಾರ್ಕೆಟ್ ಹಿಂದಿನಿಂದ ಚಪ್ಪೆಕಾಡು ತೋಟದ ಪ್ರಾಂತ್ಯಹೋಗುವ ಮಾರ್ಗ; ಮತ್ತು ರಾಣಿಪೇಟೆ ರೋಡುಗಳೆಲ್ಲಾ ತುಂಬಾ ಹಳ್ಳಕೊಳ್ಳಬಿದ್ದು ಕಾಡು ಪಾಲಾಗುತ್ತಾ ಬಂದು, ಚೌಕಿನಿಂದ ಮೇಲಿನ ದಕ್ಷಿಣ ಭಾಗ ಮಾತ್ರ * * * ಉದ್ಯಾನ ವನವಾದರೆ ಸಾಕೆಂದಂತಾಯಿತು.

'City Fathers' ಎಂಬ ಬಿರುದನ್ನು ಹೊಂದಿರುವ ಮೆಂಬರುಗಳು ಈಗಲಾದರೂ ಕಣ್ಣುತೆರೆದು ಪ್ರಜೆಗಳ ಹಿತ ಚಿಂತನೆಯ ಜವಾಬ್ದಾರಿಕೆಯನ್ನು ನೆರವೇರಿಸುವ ಉದ್ದೇಶ್ಯವಿಟ್ಟುಕೊಂಡು ಒಂದೆರಡು ಕೆಲಸಗಳನ್ನು ಪ್ರತಿಸಾಲಿಯೂ ಕೈಕೊಂಡು ಜನರ ಮನಸ್ಸಿಗೆ ಬೇಸರ ಹುಟ್ಟುವಂತೆ ಮಾಡಿಕೊಳ್ಳದೆ ಪ್ರತಿ ಕೆಲಸಗಳನ್ನೂ ಗತಿಯನುಸರಿಸಿ ನೆರವೇರಿಸುತ್ತಾ ಓಟರುಗಳ ಮನಸ್ಸಿನ ಪ್ರೀತಿಯನ್ನು ಸಂಪಾದಿಸಿಕೊಳ್ಳುವ ವಿಷಯ ಮುಂದಾಲೋಚನೆ ಇಟ್ಟುಕೊಳ್ಳುವರಾಗಿ ನಂಬುವ,

'ಓಟರು.'

ಗೋವುಗಳ ಪ್ರಾಣ ಹಾನಿ.

ಅಯ್ಯಾ,

ದನಗಳ ಕ್ಷುದ್ರ ರೋಗಗಳೆಲ್ಲಾ ಬೇಸಿಗೆ ಕಾಲ ಬಂದ ಹಾಗೆ ವಿಶೇಷವಾಗಿ ಹಬ್ಬಿ ಬರುತ್ತವೆ. ಮಳೆಗಾಲ, ಚಳಿಗಾಲದಲ್ಲಿ ವಿಷಮವಾಗಿ ಬರುವದಿಲ್ಲ. ಅದ್ದರಿಂದ ಆ ಕಾಲದಲ್ಲಿ ಮೈಸೂರು ಪ್ರದೇಶದ ಗ್ರಾಮಗಳಲ್ಲಿ ಬಂದು ಇಳಿಯುವ ದೇಶಾಂತರದ ಗಾಡಿ ಎತ್ತುಗಳಿಂದ ಬರುತ್ತವೆಯಾಗಿ ನಂಬಬಹುದು. ಈ ರೋಗವು ಶರೀರಕ್ಕೆ ಅಂಟಿದ 28 ದಿವಸಗಳಲ್ಲಿ ಹೊರಗೆ ಕಾಣಿಸುವದರಿಂದ ಔಷಧಿಗೂ, ವೆಟರಿನೆರಿ ಡಾಕ್ಟರವರ ಹಾಕಿಗೂ ಬಗ್ಗುವದಿಲ್ಲ. ಬೇಸಿಗೆ ಕಾಲದಲ್ಲಿಯಾಗಲಿ, ಅಥವಾ ಎಲ್ಲಿಯಾದರು ರೋಗವಿದೆಯೆಂದು ಹುಟ್ಟಿರತಕ್ಕ ಕಾಲದಲ್ಲಿಯಾಗಲಿ ದನಗಳನ್ನು ಕೊಂಡುಕೊಳ್ಳುವರು. ಅವುಗಳನ್ನು ಗ್ರಾಮಕ್ಕೆ ತಂದ ಒಡನೆ ಮನೆ ದನದ ಸಂಗಡ ಸೇರಿಸಕೂಡದು. ಅಂಥಾ ದನಗಳನ್ನು ಅಂಟು ರೋಗದ ಅವಧಿ ಮುಗಿಯುವ 28 ದಿನದ ಪರ್ಯಂತರ ಪ್ರತ್ಯೇಕಿಸಬೇಕು; ನೀರು ಹುಲ್ಲುಗಳನ್ನು ಪ್ರತ್ಯೇಕಿಸಿ ಕೊಡಬೇಕು. ಅಲ್ಲದೆ ದೊಡ್ಡಿ ಇರತಕ್ಕ ಗ್ರಾಮದಲ್ಲಿ ನಾನಾ ಕಡೆಯಿಂದ ದನಗಳು ಬಂದು ಸೇರುತ್ತವೆ. ದೊಡ್ಡಿಯಲ್ಲಿ ಬೀಳತಕ್ಕ ಹುಲ್ಲು, ಗೊಬ್ಬರವನ್ನು ನೋಡಿದ ದನಗಳು ವಾಸನೆ ತೆಗೆದೂ, ತಿಂದೂ, ಆ ಮೂಲಕವೂ ರೋಗವು ಹುಟ್ಟುತ್ತದೆ. ಮತ್ತು ದನಗಳ ಮಾಂಸದಲ್ಲಿಯೂ, ಚಕ್ಕಳ ಕೂಡಿ ಹಾಕಿ ಮಾರುವದರಲ್ಲಿಯೂ ಆಸಕ್ತರಾದ ಹೊಲೆಯರು ಇಂಥಾ ರೋಗಗಳನ್ನು ಬೇಕೆಂತ ಅಂಟುವ ಹಾಗೆಯೂ ಮಾಡುತ್ತಾರೆ. ಈ ಅಂಶವು ಅನೇಕ ಊರುಗಳಲ್ಲಿಯೂ, ದೇಶದಲ್ಲಿಯೂ ದೃಷ್ಟಾಂತಕ್ಕೆ ಬಂದಿದೆ. ಈ ದುಷ್ಟ ಕೆಲಸ ಮಾಡುವದರಿಂದ ರೋಗವು ಬಹಳ ಜಾಗ್ರತೆಯಲ್ಲಿ ವ್ಯಾಪಿಸುತ್ತದೆ. ಹೊಲೆಯರು ಅಂಟು ರೋಗದಿಂದ ಸತ್ತ ದನಗಳನ್ನು ಕತ್ತರಿಸಿ ತಿಂದು, ಸಿಕ್ಕಿದ್ದನ್ನು ನಾಯಿಗಳಿಗೆ ಹಾಕುತ್ತಾರೆ. ಅವನ್ನು ತಿಂದ ನಾಯಿಗಳು ಮನಗೆ ಕಂಡ ಹಾಗೆ ದನಗಳಿರತಕ್ಕ ಸ್ಥಳಕ್ಕೆ ಹೋಗುವದರಿಂದ ರೋಗವು ದನಗಳಿಗೆ ಅಂಟುವದಕ್ಕೆ ಕಾರಣವಾಗುತ್ತದೆ. ಇದಲ್ಲದೆ ಅದರ ತೊಗಲನ್ನು ದನಗಳು ನೀರು ಕುಡಿಯುತಕ್ಕ ಹಳ್ಳ, ಕೆರೆ, ಸಣ್ಣ ನದಿಗಳಲ್ಲಿ ತೊಳೆಯುತ್ತಾರೆ. ಇದರಿಂದ ನೀರಿಗೆ ರೋಗ ಸ್ಪರ್ಶವಾಗಿ ಆ ಮೂಲಕ ವ್ಯಾಪಿಸುತ್ತದೆ. ಇಷ್ಟು ಮಾತ್ರವಲ್ಲದೆ ಈ ದುಷ್ಟ ಮನುಷ್ಯರು ಮಾಂಸವನ್ನು ಕಟ್ಟಿದ ಹುಲ್ಲನ್ನು ಉಳಿದ ದನಗಳು ತಿನ್ನುವ ಮತ್ತೆ ದನ ತಿರುಗಾಡುವ ದಾರಿಯಲ್ಲಿ ಬೇಕೆಂದು ಹಾಕುತ್ತಾರೆ. ಸತ್ತ ದನಗಳ ಮೂಳೆಯನ್ನು ಬಿಸಾಡುತ್ತಾರೆ. ಗಾಳಿ ಮುಖಾಂತರ ಹಾಗೆಯೂ ಅಂಟುತ್ತದೆ. ಇಂಥಾ ವಿಷಯಗಳಲ್ಲಿ ಗ್ರಾಮ ರೈತರು ಏನು ಮಾಡಬೇಕೆಂದರೆ ಈ ಕಾಯಿಲೆಯಿಂದ ಸತ್ತ ದನಗಳನ್ನು ಹೊಲೆಯರಿಗೆ ಕೊಡದೆ ಗಾಳಿಗೆ ಹಾಕದೆ ಗುಂಡಿ ತೆಗೆಸಿ ಅದರಲ್ಲಿ ಅವುಗಳನ್ನು ಹಾಕಬೇಕು. ಹೀಗೆ ಮಾಡುತ್ತಾ ಬಂದರೆ ಹೊಲೆಯರಿಗೆ ಇಂಥಾ ಅಕೃತ್ಯವನ್ನು ಮಾಡಲು ಎಡೆಸಿಕ್ಕುವದಿಲ್ಲ. ಈ ಸಂದರ್ಭದಲ್ಲಿ ಯೋಚಿಸಬೇಕಾದ್ದು ಇನ್ನೊಂದು ಅಂಶವಿದೆ. ಅದು ಏನೆಂದರೆ, ಚಕ್ಕಳದ ವ್ಯಾಪಾರಮಾಡತಕ್ಕವರು ಹೊಲೆಯರಿಗೆ ಹಣ ಬಹಳವಾಗಿ ಮುಂಗಡ ಕೊಟ್ಟು ನಂತರ ತಗಾದೆಯಿಂದ ದನಗಳನ್ನು ಕೊಂದು, ಚಕ್ಕಳ ಭರ್ತಿಮಾಡಿ ಕೊಡುವದಕ್ಕೆ ಏರ್ಪಾಡು ಮಾಡಬೇಕಾಗುತ್ತೆ. ಪ್ರಾಯಶಃ ಮಳೆಗಾಲದಲ್ಲಿ ಸಹ ವಿಷದ ಮೂಲಕ ಪ್ರಾಣವನ್ನು ತೆಗೆದು ವ್ಯಾಪಾರ ಮಾಡಲ್ಪಡುವದೆಂದೂ ಯೋಚಿಸಬೇಕಾಗಿದೆ. ಇದೆಲ್ಲ ಸತ್ಯವೊ? ಅಸತ್ಯವೊ? ಪ್ರತಿ ಗ್ರಾಮಸ್ಥರು ಆಲೋಚಿಸಬೇಕಾಗಿದೆ. ರೈತರು ಬುದ್ಧಿವಂತರಾದರೆ ಸತ್ತ ದನವನ್ನು ಹೊಲೆಯರಿಗೆ ಕೊಡದೆ ಗಾಳಿಗೆ ಬಿಡದೆ ಗುಂಡಿಗೆ ಹಾಕುವದು ಒಳ್ಳೇದು. ಹಾಗೆ ಸತ್ತ ದನಗಳನ್ನು ಮಾತ್ರ ತಾವೇ ಚರ್ಮ ತೆಗಿಸಿ ಉಪಯೋಗಿಸಿಕೊಳ್ಳಬಹುದು. ಅಂಟು ರೋಗದಿಂದ ಸತ್ತ ದನಗಳನ್ನು ದಹನ ಮಾಡಿ ತಕ್ಕ ಏರ್ಪಾಡಿನಿಂದ ದನಗಳ ಕ್ಷೇಮಕ್ಕೆ ಒಳ್ಳೇದಾಗಬಹುದೆಂದು ಖಂಡಿತ ನಂಬಬೇಕಾಗಿದೆ. ಈಗ ಚಪ್ಪಳದ ಮಂಡಿ ಆಫೀಸು ಹೆಚ್ಚುತ್ತಾ ಬಂದ ಹಾಗೆ ಕಾಯಿಲೆ ಜೋರಾಗುತ್ತಾ ಬರುತ್ತೆ. ಈಗ ಮೂಡಿನಾಡಿನಲ್ಲು ಒಂದು ಮಂಡಿ ಆಫೀಸು ಆಗಿದೆಯಂತೆ. ಸತ್ತ ದನ ತಿನ್ನುವವರಿಗೆಲ್ಲ ಅಂದರೆ ಹೊಲೆಯರು ಮಾದಿಗರಿಗೆಲ್ಲಾ ಓಡಾಟವಾಗಿದೆ. ಇವರು ಇದ್ದ ಗ್ರಾಮದಲ್ಲೆಲ್ಲಾ ಕಾಯಿಲೆ ಕಮ್ಮಿ ಇಲ್ಲದೆ ಹೆಚ್ಚಾಗುತ್ತಾ ಬಂದಿದೆ. ಮೇಲೆ ಕಂಡ ಕಾರಣಗಳಿಗೆಲ್ಲ ಅವಕಾಶ ಕೊಡದೆ ದನ ಸಾಕುವ ಕೃಷಿಗಾರರು! ರೈತರು ಎಚ್ಚರಿಕರಾಗಬೇಕಾಗಿಯೂ; ನಮ್ಮ ದೇಶದಲ್ಲಿ ಎಷ್ಟೋ ಸಾವಿರ ರೂಪಾಯಿ ದನಗಳಿಗಾಗಿ ವ್ಯಯವಾಗುವದರಿಂದ ಗವರ್ನಮೆಂಟಿನವರು ಸ್ವಲ್ಪ ಮಟ್ಟಿಗೆ ನಿಗ ಕೊಡಬೇಕಾಗಿ ಕೇಳಿಕೊಳ್ಳಬೇಕಾಗಿದೆ. ಈ ರೋಗಕ್ಕೆ ಉಪಶಾಂತಿಗೆ ತಕ್ಕ ಮಟ್ಟಿಗೆ ಕೆಲವರು ಕಳಿಬಾಳೆ ಹಣ್ಣು ತಿನ್ನಿಸಿದರೆ ರೋಗ ಅಂಟುವದಿಲ್ಲವೆಂದೂ, ತಗಲಿದ ಕೂಡಲೆ ಧಮುರಿ ಹಣ್ಣಿನಲ್ಲಿ ಅಫೀಮು ಹಾಕಿ ಕೊಟ್ಟು ಕೆಲವು ಮಟ್ಟಿಗೆ ದೃಷ್ಟಾಂತಕ್ಕೆ ಬಂದಿದೆಂದೂ ಹೇಳುತ್ತಾರೆ. ಆದರೆ ಈ ದೊಡ್ಡ ರೋಗದ ಕಾಯಿಲಕ್ಕೆ ಯಾವದೊಂದು ಒಳ್ಳೆ ಔಷಧಿಯು ತಿಳಿದಿರುವದಿಲ್ಲ. ತಿಳಿದಂತ ದೊಡ್ಡ ಡಾಕ್ಟರುಗಳು ದನ ಸಾಕಿದ ರೈತನಿಗೆ ಸಹಾಯವಾಗಿ ದನದ ಪ್ರಾಣ ರಕ್ಷಣೆಗಾಗಿಯೂ, ಶ್ರಮ ತೆಗೆದುಕೊಂಡಲ್ಲಿ ಅವರಿಗೆ ಪುಣ್ಯವು ದೊರೆಯುವುದೆಂದು ಖಂಡಿತ ಹೇಳುತ್ತೇನೆ.

ನಾಪಂಡ ಕುಟ್ಟಪ್ಪ.

ಆರೋಗ್ಯ ಚಂದ್ರಿಕೆ.

ಮದ್ರಾಸ್.

ಸಂಪಾದಕರು: ಡಾಕ್ಟರ್ ಯು ರಾಮರಾವ್,
ಯಮ್. ಎಲ್. ಸಿ. ಯವರು.

ಆರೋಗ್ಯ ಚಂದ್ರಿಕೆಯು ಆರೋಗ್ಯ ಮತ್ತು ಶುಚಿತ್ವದ ವಿಷಯದಲ್ಲಿ ಸಾಮಾನ್ಯ ಪ್ರಜಾವರ್ಗಕ್ಕೆ ಶಿಕ್ಷಣ ದೊರೆಯುವದಕ್ಕಾಗಿ ಏರ್ಪಡಿಸಿದ ಒಂದು ಸಚಿತ್ರ ಮಾಸಪತ್ರಿಕೆ. ಈ ಮಾಸಪತ್ರಿಕೆಯು 'ಹೆಲ್ತ್' ಎಂಬ ಇಂಗ್ಲಿಷ್ ಮಾಸಪತ್ರಿಕೆಯ ಕನ್ನಡ ಪ್ರತಿಯಾಗಿದೆ. ಆರೋಗ್ಯ ಚಂದ್ರಿಕೆಯಲ್ಲಿ ಪ್ರಸಿದ್ಧರಾದ ಡಾಕ್ಟರುಗಳ ಮತ್ತು ಆಯುರ್ವೇದ ಪಂಡಿತರ ಲೇಖನಗಳು ಆಗಿಂದಾಗ್ಯೆ ಪ್ರಕಟವಾಗುವವು.

ಆರೋಗ್ಯ ಚಂದ್ರಿಕೆಯಲ್ಲಿರುವ ಲೇಖನಗಳು ಹಳೆಯದಾಗದೆ ಪುನಃ ಪುನಃ ಓದಲು ಅರ್ಹವಾದವುಗಳಾಗಿರುವುವು. ಆರೋಗ್ಯ ಚಂದ್ರಿಕೆಯನ್ನು ತರಿಸಿ ಬೈಂಡ್ ಮಾಡಿಸಿ ಇಟ್ಟುಕೊಂಡರೆ ಎಲ್ಲರಿಗೂ ಉಪಯುಕ್ತವಾಗುವ ಅಮೂಲ್ಯವಾದ ಗ್ರಂಥವಾಗುವುದು. ಅಂಚೆಯ ವೆಚ್ಚ ಸೇರಿ ಈ ಪತ್ರಿಕೆಯ ಚಂದಾ ಮೊಬಲಗು ವರ್ಷಕ್ಕೆ 1-8-0. ಬಿಡಿ ಪತ್ರಿಕೆ 1ಕ್ಕೆ 0-2-0. ಹಿಂದಿನ ಸಂಚಿಕೆಗಳು ಕೂಡಾ ದೊರೆಯುವವು.

ಪತ್ರವ್ಯವಹಾರಕ್ಕೆ: 'ಆರೋಗ್ಯ ಚಂದ್ರಿಕೆ' 323,

ಮನೋಲ್ಲಾಸಿನಿ ತೈಲ

ತಲೆನೋವು, ತಲೆ ತಿರುಗುವುದು, ತಲೆಸುತ್ತು, ಕಣ್ಣುರಿ, ಕಿವಿಯಿಂದ ಕೀವು ಸೋರುವುದು, ಕಿವುಡುತನ, ಕಣ್ಣುನೋವು, ಅಪಸ್ಮಾರ, ನಿದ್ರೆ ಬಾರದಿರುವುದು, ನೆನಪು ಶಕ್ತಿ ಕುಂದಿಹೋಗುವುದು ಇವುಗಳಿಗೆ ಖಂಡಿತ ಗುಣವಾಗುತ್ತದೆ. ಉದುರುವ ಕೂದಲನ್ನು ನಿಲ್ಲಿಸಿ ... ವ ಕೂದಲನ್ನು ಬೆಳೆಯಿಸಿ ಕೂದಲಿಗೆ ಸೌಂದರ್ಯವನ್ನು ... ಕೊಟ್ಟು ಅಕಾಲಕ್ಕೆ ಹಣ್ಣಾಗುವ ಕೂದಲನ್ನು ತಡೆದು ಕೂದಲು ಇಲ್ಲದ ಸ್ಥಳದಲ್ಲಿ ಹೊಸ ಕೂದಲನ್ನು ಹುಟ್ಟಿಸುತ್ತದೆ. ಬೆಲೆ ಬಾಟ್ಲಿಗೆ ರೂ 1, 3 ಸೀಸೆಗೆ 2-10-0, ಒಂದು ದೊಡ್ಡ ಸೀಸೆಗೆ ರೂ 2, 3 ಸೀಸೆಗೆ 5-9-0

ಚಂದನಾಸವ.— ಇದು ಪ್ರಮೇಹ, ಮೂತ್ರಕೃಚ್ಛ್ರ, ಮೂತ್ರ ಹನಿಹನಿಯಾಗಿ ಹೋಗುವುದು, ಮೂತ್ರಕೋಶದ ಉರಿ, ಮೂತ್ರಸಂಧಿಗಳ ಉರಿ, ಮೂತ್ರನಾಳದಲ್ಲಿ ಹುಣ್ಣು, ಮೂತ್ರ ಹೊಯ್ಯುವಾಗ ಉರಿಯುವದು, ಮೂತ್ರನಾಳದಿಂದ ಕೀವು ಬರುವುದು, ಮೂತ್ರದಲ್ಲಿ ಧಾತು, ಹುಡಿ ಹೋಗುವುದು ಆಗಾಗ್ಯೆ ಮೂತ್ರ ಬರುವದು, ಮೂತ್ರ ಪರೀಕ್ಷೆಗೆ ಸಾಮರ್ಥ್ಯವಿಲ್ಲದಿರುವುದು, ದೇಹದಲ್ಲಿ ಉರಿ, ಬಾಯಾರಿಕೆ, ಸ್ವಪ್ನಾವಸ್ಥೆ, ಮೂತ್ರನಾಳದಲ್ಲಿ ಚುಚ್ಚುವ ನೋವು ಇವುಗಳಿಗೆ ಪರಮ ಔಷಧಿ. ಗಂಡಸರಿಗೂ ಹೆಂಗಸರಿಗೂ ಇದು ಅತ್ಯುತ್ತಮ. ಬಾಟ್ಲಿಗೆ ರೂ 1-8-0, 3ಕ್ಕೆ ರೂ 4, ಡಜನಿಗೆ ರೂ 15,

ರೋಮನಾಶಿನಿ— ಈ ಹುಡಿಯನ್ನು ... ಕಲಸಿ ... ಯಲ್ಲಿ ರೋಮವಿರುವ ಭಾಗಕ್ಕೆ ಹಚ್ಚಲು ರೋಮವು ಉದುರಿ ಬೀಳುವುದು. ಡಬ್ಬಿ 1ಕ್ಕೆ 6 ಆಣೆ, 3 ಡಬ್ಬಿಗಳಿಗೆ ರೂ. 1, 1 ಡಜನಿಗೆ 3-8-0

ದದ್ರು ಕುಷ್ಠಲೇಪ.— ಇದನ್ನು ಗಜಕರ್ಣದ ಮೇಲೆ 2-3 ಸಾರಿ ಹಾಗಿಸುವಷ್ಟರಲ್ಲಿ ಗುಣ ಬರುತ್ತದೆ. ಡಬ್ಬಿಗೆ ಆ 6, 3 ಡಬ್ಬಿಗಳಿಗೆ ರೂ 1, ಡಜನಿಗೆ ರೂ 3-8-0

ನಾರೀಸಖಿ.— ಇದು ಸ್ತ್ರೀಯರ ಹೊಟ್ಟೆನೋವು, ಅತಿವಿಶಾ ರಕ್ತಸ್ರಾವ, ಬಿಳಿಸ್ರಾವ, ಮುಟ್ಟು ದೋಷಗಳು ಮತ್ತು ಗರ್ಭಕೋಶದ ವ್ಯಾಧಿಗಳನ್ನು ಗುಣಪಡಿಸುತ್ತದೆ. ಸೀಸೆ 1ಕ್ಕೆ ರೂ. 2

ಲಂಗ್ಸ್‌ಟೋನು.— ಉಬ್ಬಸ, ಕ್ಷಯದ ಕೆಮ್ಮು, ಅನೇಕ ದಿನಸಗಳಿಂದ ಬರುವ ಕೆಮ್ಮನ್ನೂ ಕಫವನ್ನೂ ಗುಣಪಡಿಸುತ್ತದೆ. ಡಬ್ಬಿ 1ಕ್ಕೆ 2-6-0, 3 ಡಬ್ಬಿಗಳಿಗೆ ರೂ 7

ಅಮೃತಾರಿಷ್ಟ.— ಇದು ಕ್ವಿನೈನು ಸೇರದಿರುವ ಉತ್ತಮ ಮಲೇರಿಯ ಔಷಧಿ. ಎಲ್ಲಾ ತರದ ಜ್ವರಕ್ಕೆ ಉತ್ತಮ. 1 ಬಾಟ್ಲಿಗೆ ರೂ 1-8-0, 3ಕ್ಕೆ ರೂ 4, ಡಜನಿಗೆ ರೂ 15

ಲೋಹಾಸವ.— ಇದು ಜ್ವರದಿಂದಲೂ ಮತ್ತು ವಲಿಜ್ವರದಿಂದುಂಟಾದ ಅಶಕ್ತತೆಗೆ ದಿವ್ಯವಾದದ್ದು. 1 ಬಾಟ್ಲಿಗೆ ರೂ 1-8-0, 3ಕ್ಕೆ ರೂ 4

ನಮ್ಮ ಕೆಟಲಾಗು ತರಿಸಿ ನೋಡಿರಿ

ವಿಳಾಸ - ಮನೋಲ್ಲಾಸಿನಿ ಕಂಪೆನಿ,
52—3 (9) ಮಂಗಳೂರು, ಕಂಕನಾಡಿ.

ಅಲಭ್ಯ ಲಾಭ! ಅಲಭ್ಯ ಲಾಭ!

ಶಾಯಿ ಡಿಪೋ.

ಹಿಂದೂಸ್ಥಾನದ ಎಲ್ಲ ಕಡೆಗಳಲ್ಲಿ ಪ್ರಸಿದ್ಧವಾದ ನಮ್ಮ ಉತ್ಕೃಷ್ಟವಾದ ಮೂರು ಪ್ರೈದರದ ನೀಲಿ, ಕಪ್ಪು, ಕೆಂಪು, ಹಸುರು, ಜಾಂಬಳಿ ಶಾಯಿ ಪುಡಿಯು ಗ್ರಾಹಕರಿಗೆ ಕೆಳಗಿನ ಬಹುಮಾನಗಳು ಶಾಯಿ ಪುಡಿಗಳ ಸಂಗಡ ಸಿಗುವವು.

2 ರೂಪಾಯಿ ಶಾಯಿ ಗ್ರಾಹಕರಿಗೆ 1 ಧರ್ಮಾಮೀಟರು. (ಜ್ವರ ನೋಡುವ ಯಂತ್ರ) 5 ರೂಪಾಯಿ ಗ್ರಾಹಕರಿಗೆ 1 (100) ಟೈಂ ಪೀಸ್ ಗಡಿಯಾರ 6 ರೂಪಾಯಿಗೆ ತರಿಸುವವರಿಗೆ 1 ರಾಸ್ಕೋಪ್ ಸಿಸ್ಟಮ್ ಲೀವರ್ ವಾಚ್.

ಈ ಪ್ರಕಾರ ಬಹುಮಾನಗಳು ಸಿಗುವವು. ವಿ ಪಿ ಬೇರೆ

ತಾರೀಬಾಗಿಲ ಕಂಪೆನಿ,
ಪೋಸ್ಟು ಹೊನ್ನಾವರ, [ಉ. ಕಾನಡಾ.]

MY SCIENTIFIC SYSTEM OF GRADUATED PHYSICAL CULTURE

SENT FREE TO EVERY ONE

This will show you some of my remarkable achievements in Health building exercises, many pages with nice photographs of myself and a number of my pupils, Red what they say about my system. Don't take my word for it. This book will be an impetus, an inspiration to every young man. All I ask is the price of postage two annas. Remember this does not obligate you in any way, so don't delay one minute in your life Write for this big book now while it is on your mind.

Prof. M. V. Krishna Roa,
P. O. Basavangudi,
BANGALORE CITY. (S. I.)

ಬೆಲೆ ಕಡಮೆ! ಖಾತರಿ ಗುಣ! ಶುದ್ಧ ವನಸ್ಪತಿ ತಯಾರಿ

ಹಿಂದೂಸ್ಥಾನದಲ್ಲೆಲ್ಲಾ ಪ್ರಸಿದ್ಧ ಹೊಂದಿದ ಬೊಂಬಾಯಿ ಫ್ಯಾಂಡಿಕ್ ಫಾರ್ಮಾಸ್ಯೂಟಿಕಲ್ ವರ್ಕ್ಸ್ ಲಿಮಿಟೆಡ್ ಕಂಪನಿಯವರಲ್ಲಿ ಆಧುನಿಕ ನೂತನ ಯಂತ್ರದಲ್ಲಿ ತಯಾರಿಸಲ್ಪಟ್ಟ ರಸಸ್ಯವಿಲ್ಲದ

ಶಾಸ್ತ್ರೀಯ ಆಯುರ್ವೇದ ಔಷಧಗಳು

ಕೆಲವು ಮುಖ್ಯ ಔಷಧಗಳು —

ತ್ರಿಭುವನಕೀರ್ತಿ ರಸ (ಎಲ್ಲಾ ಜ್ವರಗಳಿಗೆ) 1 ಗ್ರೇನ್ ತೊಲೆ 1ರ ಸೀಸೆ 1ಕ್ಕೆ ರೂ	0—11—0	ದ್ರಾಕ್ಷಾಸವ (ಶಕ್ತಿವರ್ಧಕ) ರಾತಲು ಸೀಸೆ 1ಕ್ಕೆ	1— 9—0
		ಕುಟಜಾರಿಷ್ಟ (ಅತಿಸಾರ, ಸಂಗ್ರಹಣಿಗೆ) ,, ,,	1— 9—0
ಚಕ್ರಿರಸ (ಮಲೇರಿಯಾಕ್ಕೆ) 1 ತೊಲೆ ಮಾತ್ರೆ ಸೀಸೆ 1ಕ್ಕೆ	0—13—0	ಮಹಾಯೋಗರಾಜ ಗುಗ್ಗುಳ ಮಾತ್ರೆ (ಎಲ್ಲಾ ವಾತಕ್ಕೆ)	3— 1—0
ಜ್ವರಾಷ್ಟಕ ವಟಿ (ಜ್ವರಕ್ಕೆ) 32 ಮಾತ್ರೆ ,,	0—11—0		
ಕ್ಷೀಣಕುಮಾರರಸ ಮಾತ್ರೆ (ಕಾಮಾಲೆ, ಅತಿಸಾರಕ್ಕೆ) ತೊಲೆ 1ಕ್ಕೆ	0—13—0	ವಸಂತ ಕುಸುಮಾಕರ ಮಾತ್ರೆ (ಮೇಹ, ಮಧು ಮೂತ್ರಕ್ಕೆ) ತೊಲ 1ರ ಸೀಸೆ 1ಕ್ಕೆ	25— 0—0
...ಹಾರವಟಿ (ಜ್ವರಗೆಡ್ಡೆಗೆ) 32 ಮಾತ್ರೆ ಸೀಸೆ 1ಕ್ಕೆ	0—11—0	ಅಮ್ಲ ಪಿತ್ತಹರವಟಿ (ಪಿತ್ತಕ್ಕೆ) 25ರ ,, ,,	0—13—0
ಲವಂಗಾದಿವಟಿ (ಕಫಕ್ಕೆ) ತೊಲೆ 1ರ ,, ,,	[illegible]	ಅಕ್ರ ಕೂಡ ಕಿರಸ... (ರಸ ಮತ್ತು ಬೇಧಿಗೆ) ತೊಲೆ 1ಕ್ಕೆ	0— 9—0
ಸಿಂಕೋನಫಲಾದಿಚೂರ್ಣ (ಕೆಮ್ಮಿಗೆ) 1 ತೊಲೆ ,,	0—15—0	ಚ್ಯವನಪ್ರಾಶಾವಲೇಹ (ಪುಷ್ಟಿಗೆ) ¼ ರಾತ್ತಲ	0—13—0
ಅಭಯಾದಿ ಮೋದಕ (ಬೇಧಿಗೆ) ತೊಲೆ 1ರ ,,	0— 6— 0	,, ,, ½ ರಾತ್ತಲ ಸೀಸೆ	1— 5—0
ಅರಿಷ್ಟಕಾಂಶ (ಹೆಂಗಸರ ವ್ಯಾಧಿಗೆ) 1 ರಾತ್ತಲ ,,	— 9—0	,, ,, 1 ,,	2— 9—0

ನಮ್ಮಲ್ಲಿ ಎಲ್ಲಾ ಪ್ರಧಾನ ಮಾತ್ರೆ, ಚೂರ್ಣ, ಘೃತ ಚೂರ್ಣ, ಆಸವ, ಅರಿಷ್ಟ, ಭಸ್ಮ, ವಗೈರೆಗಳು ಸುಲಭ ಬೆಲೆಗೆ ದೊರೆಯುತ್ತವೆ. ಧನ್ವಂತರಿ ಹಾಗೂ ... ನಮ್ಮ ಕ್ಯಾಟಲಾಗು ತರಿಸಿ ನೋಡಿರಿ. ನಮ್ಮ ವಿಳಾಸ.—

ಬೆಂಗಳೂರು ಏಜಂಟರ ವಿಳಾಸ,—
ಶ್ರೀ ಭುವನೇಂದ್ರ ಆಯುರ್ವೇದವೈದ್ಯ ಶಾಲಾ
12 290, ಚಿಕ್ಕಪೇಟೆ, ಬೆಂಗಳೂರು ಸಿಟಿ.

ಪಂಡಿತ್ ಮತ್ತು ಕಂಪನಿ,
ಸೋಲ್ ಏಜಂಟ್ಸ್ ತೀರ್ಥಹಳ್ಳಿ,
ಮೈಸೂರು ಸಂಸ್ಥಾನ.

ಮುದ್ದಾದ ಪುಸ್ತಕ! ಮುದ್ದಾದ ಮುದ್ರಣ!!

ಶರೀರ ಸುಖ, ಸಂಪತ್ತು, ಐಶ್ವರ್ಯಗಳನ್ನು ಸಂಪಾದಿಸಲು ಸಲಹೆಗಳನ್ನೂ ಮತ್ತು ಶರೀರ ಮರ್ಮಶಾಸ್ತ್ರ (ಕಾಮಶಾಸ್ತ್ರ)ವನ್ನೂ ತಿಳಿಸುವ

ಮಾನವ ಶರೀರಮರ್ಮ ಶಾಸ್ತ್ರ.

ಈ ಪುಸ್ತಕವು ಮೊದಲು ಫ್ರೆಂಚ್, ಇಂಗ್ಲೀಷ್, ಹಿಂದುಸ್ತಾನಿ, ಸಂಸ್ಕೃತ ಮುಂತಾದ ಭಾಷೆಗಳಲ್ಲಿ ಬಹು ಜನಪ್ರಿಯವಾಗಿತ್ತು. ಇದನ್ನು ನಾವು ಪ್ರಯಾಸದಿಂದ ಸಂಪಾದಿಸಿ ಕನ್ನಡಕ್ಕೆ ತರ್ಜುಮೆ ಮಾಡಿ (... ಚಿತ್ರಪಟಗಳ ಸಹಿತ) ಥಳಥಳಿಸುವ ಕಾಗದದಲ್ಲಿ ಮುದ್ರಿಸಿ ತಯಾರಿಸಿದ್ದೇವೆ. ಈ ಪುಸ್ತಕದಲ್ಲಿ ಸ್ತ್ರೀ ಪುರುಷರಿಗೆ ಬೇಕಾದ ಎಲ್ಲಾ ಮರ್ಮ ರಹಸ್ಯಗಳೂ, ಸ್ತ್ರೀ ಪುರುಷರು ಅನ್ಯೋನ್ಯವಾಗಿ ನಡೆದುಕೊಳ್ಳುವ ಮಾರ್ಗ, ಸ್ತ್ರೀ ಪುರುಷರಿಗೆ ಉಂಟಾಗುವ ಎಲ್ಲಾ ತರದ ಮರ್ಮವ್ಯಾಧಿಗಳು ಮತ್ತು ಅಂಥಾ ವ್ಯಾಧಿಗಳನ್ನು ಗುಣಪಡಿಸಿಕೊಳ್ಳುವ ಚಿಕಿತ್ಸೆಗಳೂ ಇನ್ನೂ ಅನೇಕ ತರದ ಮರ್ಮರಹಸ್ಯಗಳು ಚಿತ್ರಪಟಗಳ ಸಹಿತ ತುಂಬಿರುವವು. ಈ ಪುಸ್ತಕದ ಹೆಸರನ್ನು ಕೇಳಿದ ಮಾತ್ರಕ್ಕೆ ಸಂತೋಷವಾಗುವದು. ಇದರ ಓದುವಿಕೆ ಯಾರಿಗೆ ತಾನೇ ಸಂತೋಷವಾಗಲಾರದು.

ಕ್ರಯ ಪುಸ್ತಕ ಒಂದಕ್ಕೆ ಒಂದೇ ಒಂದು ರೂಪಾಯಿ ರೂ. 1—0—0

ಟಿ. ರಾಮಚಂದ್ರರಾವ್ ಅಂಡ್ ಕೊ,
ಪೋಸ್ಟ್ ಬಾಕ್ಸ್ ನಂ. ೨೩೨.
ಮದ್ರಾಸ್.

52—2

೧೦೦೦ ರೂಪಾಯಿಗಳ ಬಹುಮಾನ.

ಲೋಕಪ್ರಸಿದ್ಧವಾದ ಸಾಲಂಮಿಸ್ರಿ ಮುರಬ್ಬಾ

ನಮ್ಮ ಟ್ರೇಡ್ ಮಾರ್ಕನ್ನು ನೋಡಿ ಈ ಔಷಧ ತೆಗೆದುಕೊಳ್ಳಿರಿ.

ಇದರ ಸೇವನೆಯಿಂದ ವೀರ್ಯವು ಸೀರಿನಂತೆ ಇದ್ದರೂ, ಸ್ವಪ್ನೇಂದ್ರಿಯವಾದರೂ, ಸ್ತ್ರೀ ಸುಖಕ್ಕೆ ಮೊದಲೇ ಸ್ಖಲನವಾದರೂ, ಮೂತ್ರದೊಂದಿಗೆ ಹೋಗುತ್ತಿದ್ದರೂ ದೋಷರಹಿತವಾಗಿ ಶರೀರಕ್ಕೆ ಆರೋಗ್ಯವನ್ನೂ ಧಾರ್ಡ್ಯತೆಯನ್ನೂ ಆಯುಸ್ಸು, ಬಲ, ತೇಜಸ್ಸು ಉಂಟು ಮಾಡುವದು. ಅಜೀರ್ಣ ಮಲಬದ್ಧತೆ, ಮಧುಮೇಹ ಬಿಸಿಹವೆ ಕೈಕಾಲು ಸೊಂಟ ನೋವುಗಳಿಗೆ ಇದು ದಿವ್ಯ ಔಷಧವು. ಈ ಸಾಲಂಮಿಸ್ರಿ ಎಂಬುವದು ಕಾಬೂಲ್ ಕಂದಹಾರ ಪ್ರಾಂತ್ಯದಲ್ಲಿ ಬೆಳೆಯುತ್ತದೆ.



ಈ ಔಷಧದಿಂದ ಗುಣಹೊಂದಿರುವ ಅನೇಕ ಮಹನೀಯರು ತಾವಾಗಿಯೇ ಅನೇಕ ದೇಶಗಳಿಂದಲೂ ಅಫ್ರೀಕ, ಬರ್ಮ, ಪಿನಾಂಗ್, ಸಿಂಗಪೂರ್, ಸಿಲೋನ್, ಬೊಂಬಾಯಿ, ಕಲ್ಕತ್ತ, ಮದ್ರಾಸ, ಮತ್ತು ಇಂಡಿಯಾದೇಶದಲ್ಲಿ ಎಲ್ಲಾ ಸ್ಥಳಗಳಿಂದಲೂ ನಮಗೆ ಯೋಗ್ಯತಾ ಪತ್ರಿಕೆಗಳನ್ನು ಕಳುಹಿಸಿರುವರು. ಇವುಗಳ ನಕಲನ್ನು ಯಾರಾದರೂ ತರಿಸಿ ನೋಡಬಹುದು. ಇವುಗಳು ಸುಳ್ಳು ಎಂದು ಸಿದ್ಧಪಡಿಸುವವರಿಗೆ ಮೇಲೆ ಕಂಡ ಬಹುಮಾನವು ಕೊಡಲ್ಪಡುತ್ತೆ. ನಾವು ಹಾಗೆ ಕೊಡದೇ ಇರಾತರುತ್ತದಲ್ಲಿ ಕೋರ್ಟಿನ ಮೂಲಕ ಅದನ್ನು ಪಡೆಯಬಹುದು. ೧ ಡಬ್ಬಿವನ್ನು ೧೫ ದಿನ ಸೇವಿಸಿದಲ್ಲಿ ಗುಣವು ಖಂಡಿತವಾಗಿ ತೋರಬರುವದು. ... ಪೂರ್ಣವಾಗಿ ಗುಣವನ್ನುಂಟು ಮಾಡುವವು. ನೆರವು ವಿಳಾಸಗಳನ್ನು ... ಎಂದಾದರೂ ಅಜಮಾಯಿಸಿ ಮಾಡಿ ನೋಡಿದಲ್ಲಿ ಖಾತ್ರಿ ಉಂಟಾಗುತ್ತೆ.

ಕ್ರಯ ಡಬ್ಬಿ ೧ಕ್ಕೆ ರೂ ೩—೦—೦ ಖಾಸಗಿ ಚಾರ್ಜು ... ೦—೮—೦ ಆಣೆ. ವಿವರಗಳು ಎಲ್ಲಾ ಸ್ಥಳ (ಅಲ್ಲಿ)ಯೂ ಅವಶ್ಯಕವಾಗಿರುತ್ತ ... ಆದ್ದರಿಂದ ಕೊಡುವಕ್ಕ ಕಾಲದಲ್ಲಿ ಈ ಪತ್ರಿಕೆಯ ಹೆಸರನ್ನು ಬರೆಯಬೇಕು.

6 ಟೆಲಿಗ್ರಾಫ್ ಅಡ್ರೆಸ್,
ಮಿಸ್ರಿ ಬೆಂಗಳೂರು ಸಿಟಿ.

ಡಿ ಮನ್ನಾಲಾಲ್, ಡಿಲ್ಲಿ ನಿವಾಸಿ ವೈದ್ಯರು,
ಸಾಲಂಮಿಸ್ರಿ ಮುರಬ್ಬಾ ಡಿಪೋ,
ಬೆಂಗಳೂರು ಸಿಟಿ.

ಕಲ್ಪತರು ತಾಯಿತ.

ಪರೀಕ್ಷೆ ಪಾಸಾಗಲೋ, ಶರೀರ ಸುಖವಾಗಲೋ, ನೌಕರಿ ಸಿಗಲೋ, ಸಂಬಳ ಹೆಚ್ಚಲೋ, ಖಟ್ಲೆಗಳಲ್ಲಿ ಜಯವಾಗಲೋ, ಸಂತತಿಯಾಗಲೋ, ಕೈಕೊಂಡ ಉದ್ಯೋಗದಲ್ಲಿ ಯಶಸ್ಸು ಸಿಗಲೋ, ವ್ಯಾಪಾರದಲ್ಲಿ ಲಾಭ ಸಿಗಲೋ, ಸಾಲಮುಕ್ತ ಆಗಲೋ, ಭೂತ ಪಿಶಾಚ ಗ್ರಹಬಾಧೆ ಆಗದಿರಲೋ, ಪ್ರತಿಕೂಲ ಜನರು ಅನುಕೂಲವಾಗಲೋ, ಇವೇ ಮತ್ತು ಬೇರೆ ಎಷ್ಟೋ ಮಾತುಗಳು ಇಚ್ಛೆಯಂತೆಯೇ ಆಗುವ ಅಪೇಕ್ಷೆ ಇದ್ದರೆ ಇಚ್ಛಿತಫಲ ಕೊಡುವ ಲೋಕಮಾನ್ಯ ಕಲ್ಪತರು ತಾಯಿತ ಯಾವಾಗಲೂ ಹತ್ತಿರ ಇಡಿರಿ, ಅಂದರೆ ಇಚ್ಛೆ ಪೂರ್ಣವಾಗುವದು. ಅನುಭವದ ಖಾತ್ರಿ ಆಗಬಹುದು. ತಾ. ನಂ. ೧ಕ್ಕೆ ರೂ ೧೨ ಗುಣ ತೀವ್ರವಾಗಿ, ತಾ. ನಂ. ೨ಕ್ಕೆ ರೂ. ೬ ಗುಣ ೧೫ದಿವಸಗಳಲ್ಲಿ, ತಾ. ನಂ. ೩ಕ್ಕೆ ರೂ. ೩, ಗುಣ ೧ ತಿಂಗಳಲ್ಲಿ ವಿ. ಪಿ. ಖರ್ಚು ಬೇರೆ. ಗುಣಬಾರದಲ್ಲಿ ತಾಯಿತದ ಖರ್ಚು ವಜಾಹೋಗಿ ಬಾಕೀ ಸಿಗುವದು.

ವಿಳಾಸ:—ಮ್ಯಾನೇಜರ, ಕಲ್ಪತರು ತಾಯಿತ, ಕೆ. ಎಮ್. ಪೋ. ಸಂಕೇಶ್ವರ ಜಿ, ಬೆಳಗಾಂವ.

15

ಆಂಧ್ರ ಆಯುರ್ವೇದಿಕ್ ಫಾರ್ಮಸಿ.
ಬ್ರಾಂಚ್ ಬೆಂಗಳೂರು ಸಿಟಿ

ಚ್ಯವನಪ್ರಾಶ ಲೇಹ.

ಇದು ಸರ್ವೋತ್ಕೃಷ್ಟವಾದ ಗಿಡಮೂಲಿಕೆಗಳಿಂದ ತಯಾರಿಸಲ್ಪಟ್ಟ ಆಯುರ್ವೇದ ರಸಾಯನೌಷಧವು. ವಿದ್ಯಾರ್ಥಿಗಳೂ ವಿಶೇಷವಾಗಿ ಬುದ್ಧಿಯನ್ನು ಪ್ರಯೋಗಿಸಿ ಕೆಲಸ ಮಾಡುವವರೂ ಈ ಲೇಹವನ್ನು ಸೇವಿಸಿದರೆ ವಿಶೇಷವಾಗಿ ಬುದ್ಧಿಶಕ್ತಿಯನ್ನೂ ಜ್ಞಾಪಕಶಕ್ತಿಯನ್ನೂ ಹೊಂದುವರು. ದೀರ್ಘಕಾಲದ ವ್ಯಾಧಿಯಿಂದಾಗಲೀ ಕೆಟ್ಟ ನಡತೆಯಿಂದಾಗಲೀ, ಸ್ವಭಾವ ಶಕ್ತಿಯ ಕೊರತೆಯಿಂದಾಗಲೀ ಶರೀರ ಕಾಂತಿಯು ಕುಂದಿ ರಕ್ತ ಕೆಟ್ಟು ಇಂದ್ರಿಯ ದೌರ್ಬಲ್ಯವೇ ಮೊದಲಾದ ವಿಕಾರಗಳಿಂದ ಪೀಡಿತರಾಗಿರುವವರು ಈ ಲೇಹವನ್ನು ಸೇವಿಸಿದರೆ ಈ ತರದ ವಿಕಾರಗಳನ್ನೆಲ್ಲಾ ಪರಿಹರಿಸಿ ದೇಹಕ್ಕೂ ಮನಸ್ಸಿಗೂ ಉತ್ಸಾಹವನ್ನುಂಟುಮಾಡಿ ಮಾಂಸ ಖಂಡಗಳಿಗೂ ನರಗಳಿಗೂ ಬಲವನ್ನು ಕೊಟ್ಟು ದೇಹಪುಷ್ಟಿಯನ್ನುಂಟುಮಾಡಿ ನವಚೈತನ್ಯವನ್ನುಂಟುಮಾಡುವುದು. ಅಲ್ಲದೆ ಆರೋಗ್ಯವುಳ್ಳವರು ಉಪಯೋಗಿಸಿದರೆ ದೀರ್ಘಕಾಲ ಬದುಕುವರು. ಕೆಮ್ಮು ಉಬ್ಬಸ ವ್ಯಾಧಿಯುಳ್ಳವರಿಗೂ ಮುಖ್ಯವಾಗಿ ಕ್ಷಯರೋಗಿಗಳಿಗೂ ಇದು ಸಂಜೀವಿನಿಯೇ ಸರಿ! ಚರಕ ಸಂಹಿತೆಯಲ್ಲಿ ಇದರ ಗುಣವು ಅದ್ಭುತವಾಗಿ ಹೇಳಲ್ಪಟ್ಟಿದೆ. ೧೦ ತೊಲೆಗೆ ೧ ರೂಪಾಯಿ. ೪೦ ತೊಲೆಗೆ ೩ ರೂಪಾಯಿ.

ಎಲ್ಲಾ ಕಡೆಯಲ್ಲಿಯೂ ಏಜಂಟರು ಬೇಕು.

ಸೂಚನೆ—ಎಲ್ಲಾ ಶಾಸ್ತ್ರೀಯವಾದ ಎಲ್ಲಾ ಔಷಧಗಳೂ ಹೆಚ್ಚಾ ಕಡಿಮೆ ಕ್ರಯಕ್ಕೆ ಸಿಗುವವು. ಆಯುರ್ವೇದ ಭೂಷಣ ಕೆ ನಾರಾಯಣರಾವ್ ಎ ಎಂ, ಎ ಸಿ ಮುಂತಾದ ರೋಗಿಗಳನ್ನು ಪರೀಕ್ಷಿಸಿ ಚಿಕಿತ್ಸೆಯನ್ನು ಪ್ರತಿದಿನವೂ ನಡಿಸುವರು. ವಿವರ ಸಂಗತಿಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಟಿ. ಸಿ. ಎಸ್. ಮುನಿಯಂ ಅಂಡ್ ಕೋ,
ಮ್ಯಾನೇಜಿಂಗ್ ಏಜಂಟ್ಸ್, ಆಂಧ್ರ ಆಯುರ್ವೇದಿಕ್ ಫಾರ್ಮಸಿ,
16—12 ಚಿಕ್ಕಪೇಟೆ, ಬೆಂಗಳೂರು ಸಿಟಿ

ಕಿರ್ಲೋಸ್ಕರ ಗಾಣಗಳು.

ಈ ಕೆಳಗಿನ ಕಬ್ಬಿನ ಗಾಣಗಳು ನಮ್ಮ ಕಾರಖಾನೆಯಲ್ಲಿ ತಯಾರಾಗುತ್ತವೆ

೧. ಕಿರ್ಲೋಸ್ಕರ ನಂ. ೫.
೨ 'ಕಿಸಾನ'
೩ "ಕಮಲ ಚರಕ"

ಇವುಗಳ ಸವಿಸ್ತಾರ ಸಂಗತಿ ಬಗ್ಗೆ ಹಾಗೂ ಬೆಲೆಯ ಬಗ್ಗೆ ಕೂಡಲೇ ತಿಳಕೊಳ್ಳಿರಿ

ಕರ್ನಾಟಕ ತರುಣರ ಉನ್ನತಿಗೋಸ್ಕರ

ಕಿರ್ಲೋಸ್ಕರ ವಾರ್ತೆ,

ಎಂಬ ತಿಳಿಗನ್ನಡ ಹೊಸ ಪತ್ರಿಕೆಯನ್ನು ಪ್ರಕಟಿಸುತ್ತೇವೆ. ವಾ ಚ. ೧| ರೂ. ಮಾದರಿ ಸಂಚಿಕೆ ಪುಕ್ಕಟೆ.

ಕಿರ್ಲೋಸ್ಕರ ಬಂಧು, ಲಿಮಿಟೆಡ್.
ಕಿರ್ಲೋಸ್ಕರವಾಡಿ,
10 **ಜಿ. ಸಾತಾರ್.**

ಲೋಕಪ್ರಸಿದ್ಧವಾದ! ಅನುಭವಸಿದ್ಧವಾದ!

ಮೂರುದಿವಸದಲ್ಲಿ ಗುಣಕೊಡತಕ್ಕ ಔಷಧಯುಕ್ತವು ನಾಶವಾದ ಜೀರ್ಣಶಕ್ತಿ, ರಕ್ತವೃದ್ಧಿ, ಧಾತುಪುಷ್ಟಿ, ಸಂತೋಷ, ಉತ್ಸಾಹ, ಹಗಲಿರುಳು ದೊರೆತ ಜೀವನಕ್ಕೆ ಬೇಕಾದ ಆರೋಗ್ಯದಾಯಕ

ಪ್ರೋಪ್ರೈಟರ್] **ಅಗಸ್ತ್ಯ** [ನೋಂದಿ ತೆಕ್ಕೊಳ್ಳಿರಿ.

ಮನ್ಮಥ ಚಿಂತಾಮಣಿ ಲೇಹ

ರಿಜಿಸ್ಟರ್ ಆದದ್ದು.

ಆಬಾಲವೃದ್ಧ ಸ್ತ್ರೀ-ಪುರುಷರ ಅನೇಕ ರೋಗಗಳ ನೋಟೆ ಗುಣ ಕಾಣಿಸಿದ್ದು ಮೋಹ ವಿಕಾರಬದ್ಧವರಿಗೂ, ಸಿದ್ಧೇ ಇಲ್ಲದವರಿಗೂ ನಷ್ಟೇಂದ್ರಿಯವಾಗುವ ಬಾಲಕರಿಗೂ, ಜ್ಞಾನಿ ಸುಜ್ಞಾನಿಗಳಿಗೂ ಉಪಯೋಗವುಳ್ಳ ಬಹುಸಾರವೂ ಸಂದ ಔಷಧಿ 1ಸೇರು 48ದಿವಸ ಸೇವಿಸಬಹುದು ನಂ (1) 1ಸೇರು ಡಬ್ಬಿ 1ಕ್ಕೆ ರುಪಾಯಿ 3—0—0. ½ಸೇರು ಡಬ್ಬಿ 1ಕ್ಕೆ ರುಪಾಯಿ 1—9—0. ನಂ. (2) 1ಸೇರು ಡಬ್ಬಿ 1ಕ್ಕೆ ರುಪಾಯಿ 2—0—0. ½ ಸೇರು ಡಬ್ಬಿ 1ಕ್ಕೆ 1—1—0. ವಿ ಪಿ ಖರ್ಚು ಪ್ರತ್ಯೇಕ. ವಿಶೇಷ ಮಾಹಿತಿಗೆ ಬರೆಕೊಳ್ಳಿರಿ.

ವಿಳಾಸ.—ದೇವಣ್ಣ ನಾರಾಯಣಶೇಟ್,
ಗೋಳಿಕಟ್ಟಾ,
ಮಂಗಳೂರು,
52—18 ದ ಕ.

ಕರ್ಣಿಕ

ಚಳಿಜ್ವರ ಮಲೇರಿಯ ಜ್ವರ ಇನ್‌ಫ್ಲುಯೆಂಝಾ ಅಪಸ್ಮಾರ, ಮೊದಲಾದವುಗಳ ಮೇಲೆ ಅಪ್ರತಿಮವಾದ ಔಷಧವು.

ಬೆಲೆ ಬಾಟ್ಲಿಯೊಂದಕ್ಕೆ ರು. ೦—೧೪—೦
ಟಪ್ಪಾಲು ಚಾರ್ಜು ಬೇರೆ
ಡಜನ್ ಬಾಟ್ಲಿಗಳಿಗೆ ಟಪ್ಪಾಲುವೆಚ್ಚ ಸಹ ರು.
೯—೨—೦

ಏಜಂಟರು ಬೇಕು, ಕೊಡಗಿನ ಸ್ಕೂಲ್ಮಾಸ್ತರುಗಳು ತಮ್ಮೂರಿನ ಮೂರು ಜನ ಔಷಧದ ವ್ಯಾಪಾರಿಗಳ ಹೆಸರನ್ನು ತಿಳಿಸಿದಲ್ಲಿ ಅಂದವಾದ ಬ್ಲಾಟಿಂಗ್ ಪೇಪರು ಪುಕ್ಕಟೆ.

12—9 ಕರ್ಣಿಕ ಬ್ರದರ್ಸ್,
ಗಿರಗಾಂವ, ಮುಂಬಾಯಿ.

ನೆಜ್ಜೆ ಕಟ್ಟಿದ ಭಂಗಾರದ ಗಿಲೀಟಿನ ಡಾಬುಗಳು.



ಇವು ಭಂಗಾರದ ಗಿಲೀಟಿನಿಂದ ಬಹು ಸೊಗಸಾಗಿ ತಯಾರಿಸಿದೆ ಹಿಂಭಾಗದಲ್ಲಿ ದೊಡ್ಡದು ಚಿಕ್ಕದು ಮಾಡಿಕೊಳ್ಳಬಹುದು ಬೆಳ್ಳಿ ಡಾಬುಗಳಂತೆ ಮುಂಭಾಗದಲ್ಲಿ ಕೊಣಿಕೆ ಇಟ್ಟು ತೆಗೆದು ನಡಕ್ಕೂ ಹಾಕುವದಕ್ಕೂ ಕಷ್ಟ ತೋರಿಸುವುದಿಲ್ಲ ಇದರಲ್ಲಿ 150 ಗೆಜೆಗಳು ಕಟ್ಟಿರುತ್ತೆ ಚಿನ್ನದ ಡಾಬಿಗೂ ಇದಕ್ಕೂ ಯಾವ ವ್ಯತ್ಯಾಸವೂ ಇಲ್ಲ ಒಂದು ಸಲ ತರಿಸಿ ನೋಡಿರಿ ಡಾಬು 1ಕ್ಕೆ ರೂ 3

ಜರ್ಮನ್ ಅಲಾರಂ ಟೈಂಪೀಸ್.

ಈ ಗಡಿಯಾರಗಳು ಅಮೇರಿಕಾ ದೇಶದಲ್ಲಿ ತಯಾರಾದವು. ಮೇಲುಗಡೆ ಬೆಳ್ಳಿಯಂತಿರುವ ಮುಚ್ಚಳವಿರುವವು ಎಂದಿಗೂ ಕೆಡಾಗದು, ಕರಾರು ಗಂಟೆಯನ್ನು ಕೊಡುವವು ಮತ್ತು ಗಂಟೆಯನ್ನು ಸಹ ಬಾರಿಸುವವು ಬಹು ಬೇಗನೆ ಗಂಟೆಯನ್ನು ಕಂಡು ಹಿಡಿಯಬಹುದು ಆಫೀಸು, ಸ್ಕೂಲ್, ಮನೆ ಗುಡಿಗಳಲ್ಲಿ ಇಡಲು ಬಹು ಚೆನ್ನಾಗಿರುವವು ಇದಕ್ಕೆ ಮುಂಚಿತವಾಗಿ ಈ ಮಾದರಿ ಗಡಿಯಾರಗಳು ಮಾರಾಟಕ್ಕೆ ಬಂದಿಲ್ಲ. ಕ್ರಯ 1ಕ್ಕೆ ರೂ 4—8—0

ವಿಳಾಸ.—ಎಸ್. ಆರ್. ಕೃಷ್ಣ ಅಂಡ್ ಕೊ,
ನಂ. 1 ತಂಬುನಾಯಕನ ಬೀದಿ,
4 ಮದ್ರಾಸು.

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್, ಕೊ ಆಪರೇಟಿವ್ ಸೊಸೈಟೀಸ್ ಆಕ್ಟ್ಸ ಪ್ರಕಾರ ರಿಜಿಸ್ಟರಾಗಿದೆ.

		ರೂ.
ಶೇರ್ ಬಂಡವಾಳ	—	50,000
ವಸೂಲಾದ ಶೇರ್ ಮೊಬಲಗು	—	7890
ಜಮೂಬಂದ ಠೇವಣಾತಿ	—	90,600

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲಕೊಡತಕ್ಕದ್ದು.

ಒಂದು ವರ್ಷ ಗಡುವಿನ ಅಥವ ಹೆಚ್ಚಿನ ಗಡುವಿನ ಠೇವಣಾತಿಗಳಿಗೆ ಶೇಕಡ ಸಾಲಿಯಾನ ರೂ. 6-4-0ರ ದರದಲ್ಲಿ ಬಡ್ಡಿ ದೊರೆಯುತ್ತೆ. ಕಡಿಮೆ ಗಡುವಿನ ಠೇವಣಾತಿಗಳಿಗೆ ಶೇಕಡ ಸಾಲಿಯಾನ ೫ರ ಬಡ್ಡಿ ದೊರೆಯುತ್ತೆ.

ವಿವರಕ್ಕೋಸ್ಕರ ಕೋ ಆಪರೇಟಿವ್ ರಜಿಸ್ಟ್ರಾರವರು ... ಆದೇಶಿಸಿದ್ದಾರೆ.

ಪ್ರಸಿಡೆಂಟರು,	ಟ್ರಜರರ್.
ಕೋದಂಡ ಅಪ್ಪಯ್ಯನವರ,	ಮು. ಭುಜಂಗರಾಯರು
ರಾಯ ಬಹದ್ದೂರ್.	ಬಿ.ಎ., ಬಿ.ಎಲ್.

ಸಕ್ರೆಟರಿ.
ಸಿ. ಯನ್. ವೆಂಕಪ್ಪಯ್ಯನವರು, ಬಿ.ಎ., ಬಿ.ಎಲ್.
ತಾರೀಖು 29—8—1925.



No License Required! No License Required!!

Webley and Scott's Air Pistol, cal. 177 or 22, Powerful and Accurate complete with a sample box of slugs, two spare washers, a bruser for cleaning, and a booklet of instructions Rs. 30/- Free delivery.

Powerful German "Diana" Air gun. Handsome and Accurate, takes "S A. Pattern No. 1 Slugs and Darts recommendable for Target Practice Rs 15/ Free delivery.

No Libense required to purchase or to possess above items.

Brilliant Search Light Lamp for Night Sports Rs 30/- Free delivery.
12, 16 or 20 bore ld. Smokeless Powder cartridges no's 1 to 8 Rs. 11/- per 100.
Do. do. do. buck shots „ 12/- „
Do. do. do Ball „ 14/- „

We stock Arms, Ammunition and Shooting Requisites of all kinds and Quality Ranging from Re. 1/- to Rs. 1800/-

Apply for our Shooting Season's Clearance Sale Catalogue of Brand New Goods.

GOOLAMHUSSIAIN ALLIBHOY & SONS.
Largest Importers of Fire Arms and Ammunition,
Cheapest priced firm in India,
24-1 **210 Abdul RehmanStreet, BOMBAY.**

ಮಾರಾಟಕ್ಕೆ.

(1) ಪೊನ್ನಂಪೇಟೆ ಸರ್ಕಾರ ಬಳಿ ಬಟ್ಟೆ ವಗೈರೆ ಸಾಮಾನು ಮಾರಾಟಕ್ಕೆ ಇಟ್ಟಿರುವ ಮಹಡಿ ಮನೆ, ಅದರಲ್ಲಿರುವ ಫೂರ್ನಿಚರುಗಳು ಮತ್ತು ಜಾಗ ಸಮೇತ

(2) ಪೊನ್ನಂಪೇಟೆ ದೊಡ್ಡಬೀದಿ ಜಲಪಾರ್ಶ್ವದಲ್ಲಿ ವಾಸಕ್ಕೂ ಮತ್ತು ವ್ಯಾಪಾರಕ್ಕೂ ಯೋಗ್ಯವಾದ ಮಹಡಿ ಮನೆ ಮತ್ತು ಹೊರಮನೆಗಳು ಸಹ.

ಖಾಯಿಷ್‌ದಾರರು ಕ್ರಯ ಮೊಬಲಗು ಮತ್ತು ಹೆಚ್ಚಿನ ಸಂಗತಿಗೆ ಈ ಕೆಳಗಿನ ವಿಳಾಸಕ್ಕೆ ಬರೆಕೊಳ್ಳಬಹುದು.

U. E. Ahamed.
General Merchant &
Commission agent,
8 Ponnampett.

Printed & published by Kodanda Appayya, R.B., Chairman, Board of Directors, at "Kodagu" Press, Mercara for "Kodagu" Ltd.

Regd. No. M. 1000.
If not delivered please return to
"KODAGU" OFFICE MERCARA.

ಕೊಡಗು.

ವಾರ್ಷಿಕ ಚಂದಾ ೮ ... ೦—೦

ಸತ್ಯೇನ ಧರ್ಮದಯಾಭ್ಯಾಂ ವಿದ್ಯಾ ನೀತಿ ಪ್ರಯುಕ್ತಿತಃ || ಐಕ್ಯಮತ್ಯೇನ ದೇಶಾನಾಂ ಸುಸ್ಥಿರಾ ರಾಜ್ಯ ಸಂಪದಾ ||

ಸಂಪಾದಕ—ಪಂದ್ಯಂಡ ಐ. ಬೆಳ್ಯಪ್ಪ.

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವದು.

ಸಂಪುಟ ೫] ಕೊಡಗು, ಸ ೧೯೨೬ನೇ ಇಸವಿ ಜನವರಿ ತಾರೀಕು ೮ನೇ ಶುಕ್ರವಾರ [ಸಂಚಿಕೆ ೩೦

ಒಂದೇ ಮೂರು ರೂಪಾಯಿಗಳಲ್ಲಿ!

ಟಿಕ್=ಟಾಕ್ (ರಿಜಿಸ್ಟರ್ಡ).



ಎಂಬ ಗಡಿಯಾರವನ್ನು ನಿಮಗೆ ಪೂರೈಸುತ್ತೇವೆ ಇದು ಕರಾರು ಗಂಟೆಯನ್ನು ತೋರಿಸುವದು ಇದಕ್ಕೆ ಬೀಗ ಕೊಡಬೇಕಾಗಿಲ್ಲ. ಇದರಲ್ಲಿ ಕಾಣುತ್ತಿರುವ ಗುಂಡನ್ನು ಮೇಲಕ್ಕೆಳೆದರೆ ಸಾಕು ತನ್ನಷ್ಟಕ್ಕೆ ತಾನೇ ಸರಿಯಾದ ಕಾಲವನ್ನು ತೋರಿಸುವದು ಇವತ್ತೇ ತರಿಸಿಕೊಳ್ಳಿರಿ

ಪೀಟರ ವಾಚ ಕಂಪೆನಿ,
ಪೋಸ್ಟ ಬಾಕ್ಸ ನಂಬರ 27
ಮದ್ರಾಸ್.

18 ಕಾರೆಟ್ಸ್ ರೋಲ್ಡ್‌ಗೋಲ್ಡ್ ಭಂಗಾರದ ಕೈಗಡಿಯಾರವನ್ನು ಕೊಳ್ಳುವವರಿಗೆ

ಮೋಡರ್ನ್ ರೆಗ್ಯುಲೇಟರ್

ಎಂಬ ಗೋಡೆಗೆ ತಗಲಿರುವ ಗಡಿಯಾರವು ಮುಫತ್ತಾಗಿ ಸಿಕ್ಕುವದು.





ಈ ಕೈಗಡಿಯಾರವು ಭಂಗಾರಕ್ಕೆ ಸರಿಸಮಾನವಾಗಿದೆ ಕರಾರು ಗಂಟೆಯನ್ನು ತೋರಿಸುವುದು ಅತ್ಯುತ್ತಮವಾದ ಗಟ್ಟಿ ಸಾಮಾನುಗಳಿಂದ ತಯಾರಿಸಿದ್ದು ಇದಕ್ಕೆ 3 ವರ್ಷಗಳ ಗ್ಯಾರಂಟಿ ಕೊಡುವೆವು.

ರೆಗ್ಯುಲೇಟರ್ ಮತ್ತು ಕೈಗಡಿಯಾರ	ರೂ.	10—0—0
ಕೈಗಡಿಯಾರ ಮಾತ್ರ	ರೂ.	7—0—0
ರೆಗ್ಯುಲೇಟರ್ ಗಡಿಯಾರ	ರೂ.	5—0—0

ಕ್ಯಾಪಿಟಲ್ ವಾಚ್ ಕಂಪೆನಿ,
12—10 ನಂ 265 ಮದ್ರಾಸು.

NOTICE.

ನಮ್ಮಲ್ಲಿ ಎಲ್ಲಾ ತರದ ಬ್ರೀಚ್ ಲೋಡಿಂಗ ಮತ್ತು ಕೇಪು ಕೋವಿಗಳು ಮಾರಾಟಕ್ಕೆ ಇಟ್ಟಿವೆ ಕೋವಿ

ಮಾಟವು ಬಹಳ ಒಳ್ಳೇತರದ್ದು ದಿನೇ ದಿನೇ ಅನೇಕ ಕೋವಿಗಳು ಮಾರಾಟವಾಗುತ್ತಾ ಇವೆ

ಈಗಾಗಲೇ ಕೆಲವು ಜನರು ನಮ್ಮ ಕೋವಿಯ ವಿಷಯ ಸಂತೋಷಪಟ್ಟಿದ್ದಾರೆಂದು. ನರ್ತಾಮಾನ

ನಮ್ಮಿಂದ ತೆಗೆಯುವ ಕೋವಿಗಳಲ್ಲಿ ಗುಂಡು ಹೊಡೆಯುವ ಸಂದರ್ಭದಲ್ಲಿ ಏನಾದರೂ ತೊಂದರೆ ಬಂದಲ್ಲಿ, ಕೂಡ

ಲೆ ನಮಗೆ ತಿಳಿಸಿದಲ್ಲಿ, ಆಲೋಚನೆಯಿಂದ ತಕ್ಕ ಪರಿಹಾರ ಕೊಡಲಾಗುವುದು.

(ಸ್ಪೆನ್ಸರ್ ಮತ್ತು ಕಂಪೆನಿ ಲಿಮಿಟೆಡ್)

Spencer & Co. Ltd,

MERCARA & POLLIBETTA.

10

ಮಹನೀಯರೆ,

1923ನೆ ಇಸವಿಯಲ್ಲಿ ವೀರರಾಜೇಂದ್ರಪೇಟೆಯಲ್ಲಿ ತೆರೆದ ನಮ್ಮ ವೈದ್ಯಶಾಲೆಯ ಶಾಖೆಯಲ್ಲಿ ಅನೇಕ ದುಸ್ಸಾಧ್ಯವಾದ ಕಾಯಿಲೆಗಳನ್ನು ಗುಣಪಡಿಸಿ ಜನರಿಂದ ಮನ್ನಣೆ ಹೊಂದಿದ ನಮ್ಮ ಕಂಪೆನಿಯ ಮತ್ತೊಂದು ಶಾಖೆಯು ಈಗಾಗಲೇ **ಸೋಮವಾರಪೇಟೆಯಲ್ಲಿ** ತೆರೆಯಲ್ಪಟ್ಟಿದೆ

ಕೃಷ್ಣ ಸಂಬೀಶ ಮತ್ತು ನಾರಾಯಣ ಸಂಬೀಶ ಎಂಬ ಹೆಸರುಗಳುಳ್ಳ ನಮ್ಮ ಪ್ರಧಾನ ವೈದ್ಯರುಗಳು ಒಬ್ಬೊಬ್ಬರು ಒಂದೊಂದು ಶಾಖೆಯಲ್ಲಿ ಖಾಯಮಾಗಿಯೂ ಇರುತ್ತಾರೆ.

ಈ ವೈದ್ಯರುಗಳು ಇಂಡಿಯಾ ಚಕ್ರವರ್ತಿಯವರಿಂದ ವೈದ್ಯರತ್ನವೆಂಬ ಬಿರುದನ್ನು ಹೊಂದಿದವರಾಗಿಯೂ ಕೊಚ್ಚಿ ಸಂಸ್ಥಾನದ ರಾಜವಂಶದ ಸ್ಥಿರ ವೈದ್ಯರಾಗಿಯೂ ಸುಪ್ರಸಿದ್ಧ ಹೆಸರುವಾಸಿಯನ್ನು ಪಡೆದವರಾಗಿಯೂ ಇರುವ ಇ. ಟಿ ನಾರಾಯಣನ್ ಮೂಸ್ ಎಂಬ ಮಹಾನುಭಾವರ ಕೈಕೆಳಗೆ ಹೆಚ್ಚು ವರ್ಷಗಳಿದ್ದು ಪಾಂಡಿತ್ಯವನ್ನೂ ಪರಿಚಯವನ್ನೂ ಪಡೆದವರಾಗಿಯೂ ಇದ್ದಾರೆ

ಇವರಲ್ಲಿನ ಎಲ್ಲಾ ಔಷಧಗಳಿಗೆ ಮಲಬಾರಿನ ಎಲ್ಲಾ ವೈದ್ಯಶಾಲೆಗಳ ಔಷಧಗಳ ಚಾರ್ಜಿಗಿಂತಲೂ ಕಡಿಮೆಯಾಗಿದೆ

ಸಂಬೀಶ ಮತ್ತು ಕಂಪೆನಿ,
ಆಯುರ್ವೇದಿಕ್ ಪ್ರೈವೇಟ್ ಡಿಸ್ಪೆನ್ಸರಿ.
ಕಲ್ಲೂರು, ವೀರಾಜಪೇಟೆ ಮತ್ತು
52-11 ಸೋಮವಾರಪೇಟೆ.

ಬೇಟೆಗೆ ಅವಶ್ಯವಾದ

ಕೋವಿಮದ್ದು ಪೌಂಡಿಗೆ ರೂ. ೨—೪—೦
ಕೇಪು ಕೋವಿನ ಕೇಪುಗಳು, ೫೦೦ ಉಳ್ಳ **ಪೆಟ್ಟಿಗೆ**ಗೆ ೧—೪—೦
ಚಿಲ್ಲು ಪೌಂಡು ಒಕ್ಕೆ ೦—೮—೦.
ತುಂಬಿನ ೧೦೦ ತೋಟೆಕ್ಕೆ (Eleyes) ೧೭—೦—೦.



ಆರ್ಡರು ಕಳುಹಿಸುವಾಗ್ಗೆ ಯಾವಾಗಲೂ ರೂ. 5 ಅಡ್ವಾನ್ಸು ಕಳುಹಿಸತಕ್ಕದ್ದು ಬಂದೂಕು ಹಿಡುವಳಿದಾರರು ಆರ್ಡರು ಕಳುಹಿಸುವಾಗ ಮೊದಲನೇ ಸಾರಿಮಾತ್ರ ಡಿಸ್ಟ್ರಿಕ್ಟು ಮೇಜಿಸ್ಟ್ರೇಟರವರಿಂದ ವಿನಾಯಿತಿ (ಎಕ್ಸಂಪ್ಶನ) ಸರ್ಟಿಫಿಕೇಟನ್ನು ಕಳುಹಿಸಬೇಕು ತಪ್ಪಿದಲ್ಲಿ ನಿಮಗಾಗಿ ನಾವೇ ಆ ಸರ್ಟಿಫಿಕೇಟನ್ನು ಒದಗಿಸಿಕೊಳ್ಳಲು ತಯಾರಾಗಿದ್ದೇವೆ.

ಈ ಕೆಳಗಿನ ವಿಳಾಸಕ್ಕೆ ಆರ್ಡರುಗಳನ್ನು ಪತ್ರವ್ಯವಹಾರಗಳನ್ನೂ ಇಂಗ್ಲಿಷಿನಲ್ಲಿ ನಡಿಸತಕ್ಕದ್ದು

S Venkatarangam Chetty,
Ammunition & Sulphur Merchants
No. 9, China Bazar,
12—9 Madras.

ARMS & AMMUNITION MART.

Mahomedally-Noorbhoy.

21, Abdul Rehman Street, near
Crawford Market, BOMBAY. 3
Telegraphic Address.—"SHOOTER"
Bombay.
3 [52—19] Please write for Reduced nett prices list for 1926.

ಪ್ರಕಟಣೆ.

ಒಂದು ಕಡೆ ಇಂಗ್ಲೀಷಿನಲ್ಲಿಯೂ, ಇನ್ನೊಂದು ಕಡೆ ಕನ್ನಡದಲ್ಲಿಯೂ ಪ್ರಿಂಟಾಗಿರುವ ಕಾಫಿ ತೋಟದ ಆಳುಗಳ ಪ್ರೈವೇಟು ಕಂಟ್ರಾಕ್ಟು ಎಗ್ರಿಮೆಂಟು ಫಾರಮುಗಳೂ ಮತ್ತು ಅಪ್ಲಿಕೇಶನ್ (complaint) ಫಾರಂಗಳೂ ಸಹ ಮಾರಾಟಕ್ಕೆ ತಯಾರಿವೆ. ಬೇಕಾದವರು 'ಕೊಡಗು' ಆಫೀಸಿನಿಂದ ಪಡೆದುಕೊಳ್ಳಬಹುದು.

ಮಡಿಕೇರಿ
17.9.24

ಮೇನೇಜರ್,
'ಕೊಡಗು' ಆಫೀಸ್.

ಪ್ರಕಟಣೆ.

ನಮ್ಮ ಅಂದವಾದ ಹೊಸ ಅಕ್ಷರಗಳು ಬಂದು ತಲುಪಿರುವುದರಿಂದ, 'ಲೆಟರ್ ಹೆಡ್ಸ್,' 'ವಿಸಿಟಿಂಗ್ ಕಾರ್ಡ್ಸ್' ಆಮಂತ್ರಣಗಳು (ಇನ್ವಿಟೇಶನ್) ಮೊದಲಾದ ಪ್ರಿಂಟಿಂಗ್ ಕೆಲಸಗಳನ್ನು ಇಂಗ್ಲಿಷ್ ಮತ್ತು ಕನ್ನಡದಲ್ಲಿ ಅಂದವಾಗಿಯೂ ಕಡಿಮೆ ಚಾರ್ಜಿನಲ್ಲಿಯೂ ನಿಯಮಿತ ಕಾಲದಲ್ಲಿಯೂ ಮಾಡಿಕೊಡಲು ತಯಾರಾಗಿದ್ದೇವೆ.

ಮಡಿಕೇರಿ.

ಮೇನೇಜರ್,
'ಕೊಡಗು' ಲಿಮಿಟೆಡ್

"ಕೊಡಗು"

೧೯೨೬ನೇ ಇಸವಿ ಜನವರಿ ತಾ. ೮ನೇ ಶುಕ್ರವಾರ.

ಬ್ರೀಚ್ ಆಫ್ ಕಂಟ್ರಾಕ್ಟ್ ಆಕ್ಟಿನ ಬಿಲ್ಲು.

ಈಗ ಜಾರಿಯಲ್ಲಿರುವ ಬ್ರೀಚಾಫ್ ಕಂಟ್ರಾಕ್ಟ್ ಆಕ್ಟ್ 1926ನೇ ಇಸವಿ ಏಪ್ರಿಲ್ 1ರಿಂದ ರದ್ದಾಗುವ್ರದರಿಂದ ನಮ್ಮ ದೇಶದ ಕೌನ್ಸಿಲಿನ ಮೂಲಕ ಹೊಸ ಆಕ್ಟನ್ನು ಮಾಡಿಕೊಳ್ಳುವ ಬಗ್ಗೆ ತಯಾರಾದ ಬಿಲ್ಲು ಅಂದರೆ ಆಕ್ಟಿನ ಮಸೂದೆಯು ಈಗತಾನೆ ಪ್ರಕಟವಾಗಿದೆ. ಅದನ್ನು ಈ ಪಂಚಿಕೆಯಲ್ಲಿ ಪ್ರಕಟಿಸಿದ್ದೇವೆ. ಈ ಬಿಲ್ಲಿನ ಮೇಲೆ ಮೊದಲನೇ ಸಾರಿಯ ಚರ್ಚೆಯು ತಾ. 12—1—1926ರಲ್ಲಿ ಕೂಡುವ ಕೌನ್ಸಿಲ್ ಮೀಟಿಂಗಿನಲ್ಲಿ ನಡೆಯುತ್ತದೆ.

ನಮ್ಮ ದೇಶದಲ್ಲಿ ಹೆಚ್ಚಿನ ಕೂಲಿ ಕೆಲಸದ ಜನರು ಪರದೇಶದಿಂದ ಬರಬೇಕಾದವರಾದ್ದರಿಂದಲೂ, ಕೂಲಿ ಜನರಿಗೆ ಸಾಲ ದೊರೆಯಬೇಕಾದರೆ ಬೇರೆ ಉಪಾಯವಿಲ್ಲದ್ದರಿಂದಲೂ, ಬ್ರೀಚ್ ಆಫ್ ಕಂಟ್ರಾಕ್ಟ್ ಆಕ್ಟ್ ನಮ್ಮ ದೇಶಕ್ಕೆ ಅವಶ್ಯವಿದೆಯೆಂತ ದೇಶದ ಭೂಮಾಲೀಕರೆಲ್ಲರೂ ಅಭಿಪ್ರಾಯಪಡುತ್ತಾರೆ. ಆ ಅಭಿಪ್ರಾಯಕ್ಕೆ ಅನುಗುಣವಾಗಿಯೇ ಕೌನ್ಸಿಲಿನಲ್ಲಿ ಈ ಆಕ್ಟ್ ಬೇಕೆಂತ ಒಂದು ಠರಾವು ಪಾಸಾಯಿತು. ದೇಶದವರು ಒಮ್ಮತದ ಸಂಪಾದ ಮೂಲಕವೂ, ಕೌನ್ಸಿಲ್ ಮೂಲಕವೂ ಬ್ರೀಚ್ ಆಫ್ ಕಂಟ್ರಾಕ್ಟ್ ಆಕ್ಟ್ ಬೇಕೆಂತ ಕೇಳಿದಾಗ ಈಗ ಜಾರಿಯಲ್ಲಿರುವ ಆಕ್ಟ್ ಅಥವಾ 1920ನೇ ಇಸವಿಯಲ್ಲಿ ಆದ ಬದಲಾವಣೆಗಳಿಲ್ಲದ ಆಕ್ಟ್ ಬೇಕೆಂತ ಕೇಳಿಕೊಂಡದ್ದಾಗಿದೆ. ಆದರೆ ಈಗ ಪ್ರಕಟವಾಗಿರುವ ಬಿಲ್ಲು ಕೆಲವು ಭಾಗಗಳಲ್ಲಿ ಜನರ ನಿರೀಕ್ಷಣೆಗೆ ವಿರೋಧವಾಗಿದೆ. ಇಂಥಾ ಬಿಲ್ಲಿನಿಂದ ಚಿಕ್ಕ ಭೂಮಿ ಅಥವಾ ತೋಟದ ಮಾಲೀಕರಿಗೆ ಕಷ್ಟವಾಗುವುದೇ ಹೊರತು ಪ್ರಯೋಜನ ಕಡಿಮೆ ಇರುತ್ತದೆಂತ ನಮಗೆ ತೋರುತ್ತದೆ. ಕೌನ್ಸಿಲಿನಲ್ಲಿರುವ ದೇಶದ ಪ್ರತಿನಿಧಿಗಳು ದೇಶದ ಜನರಿಗೆ ವಿರೋಧವಾಗುವ ಶರತ್ತುಗಳನ್ನು ತೆಗೆದುಹಾಕಿ ಮಾಡುವರೆಂತ ನಂಬುತ್ತೇವೆ.

ಈ ಬಿಲ್ಲು ಕೌನ್ಸಿಲಿನಲ್ಲಿ ಪಾಸಾಗಿ ಅಧಿಕಾರಿಗಳ ಮಂಜೂರಾತಿ ಪಡೆದರೆ ಇದು ಒಂದು ವರುಷ ಜಾರಿಯಲ್ಲಿರತಕ್ಕದ್ದೆಂತ 1ನೇ ಸೆಕ್ಷನಿನಲ್ಲಿ ಇದೆ. ಮಾಲೀಕರಿಗೆ ಕಷ್ಟಕರವಾಗುವ ಅನೇಕ ಸೆಕ್ಷನುಗಳಿರುವುದರಿಂದ ಅದು ರದ್ದಾಗದೆ ಇರುವದಾದರೆ ಈ ಆಕ್ಟ್ ಒಂದೇ ವರುಷ ಜಾರಿಯಲ್ಲಿದ್ದರೆ ಸಾಕಾಗಿದೆ. ಆ ಸೆಕ್ಷನುಗಳಿಂದ ಮಾಲೀಕರಿಗೆ ಕಷ್ಟಕರವೋ, ನೌಕರರಿಗೆ ಪ್ರಯೋಜನವೋ ಎಂಬುದನ್ನು ಅನುಭವಿಸಲಿಕ್ಕೆ ಒಂದು ವರುಷದ ಅವಧಿ ಸಾಕಾಗಿದೆ. ಇಂಥಾ ಆಕ್ಟೇ ಬೇಡವೆನ್ನುವ ಜನರೂ ದೇಶದಲ್ಲಿ ಅನೇಕರಿದ್ದಾರೆ. ಅವರ ಅಭಿಪ್ರಾಯವೇ ದೇಶದವರೆಲ್ಲರೂ ಅನುಸರಿಸುವ ಸಂಭವವು ಕಾಣುತ್ತದೆ. ಆ ಕಾರಣದಿಂದಲೂ ಆಕ್ಟ್ ಒಂದು ವರುಷ ಜಾರಿಯಲ್ಲಿದ್ದರೆ ಸಾಕಾಗಿದೆ. ಆಗ್ಯೆ ದೇಶದವರ ಅಭಿಪ್ರಾಯಪಟ್ಟರೆ ಹೊಸ ಶಾಸನ ಮಾಡಿಕೊಳ್ಳಬಹುದು.

ಈಗ ಜಾರಿಯಲ್ಲಿರುವ ಶಾಸನದ ಮೇರೆ ಗೃಹಕೃತ್ಯದ ನೌಕರರಲ್ಲದೆ ಇತರ ಎಲ್ಲಾ ವಿಧದ ನೌಕರರಿಗೂ ಈ ಶಾಸನವು ಅನ್ವಯವಾಗುತ್ತಿದೆ. ರಸ್ತೆ ಕಂಟ್ರಾಕ್ಟರುಗಳು ತಮ್ಮ ನೌಕರರಿಂದಲೂ, ತಾಲ್ಲೂಕಿನ ಅಂಗಡಿಯವರು ತಮ್ಮ ಕೆಲಸಗಾರರಿಂದಲೂ ನೌಕರಿ ಕರಾರು ಬರೆಸಿಕೊಳ್ಳುತ್ತಿದ್ದರು. ಈಗ ಜಾರಿಗೆ ಬರುವ ಆಕ್ಟ್ ಕಾಫಿ, ಟೀ, ರಬ್ಬರ್, ಇಲಾಚಿ, ನಾರು ಮತ್ತು ಭತ್ತದ ವ್ಯವಸಾಯದ ಕೂಲಿಯವರಿಗೆ ಮಾತ್ರ ಲಗಾವಾಗುವಂತೆ ಮಾಡಿರುತ್ತಾರೆ. ಕಿತ್ತಳೆ ವ್ಯವಸಾಯ ಸಹ ಸೇರಿರುವುದಿಲ್ಲ. ಕೊಡಗಿನ ರಸ್ತೆಗಳ ಕೆಲಸಕ್ಕೆ ಈ ವರೆಗೆ ಪರದೇಶದಿಂದ ನೌಕರರೇ ಬರುವದು ಹೆಚ್ಚಾಗಿದೆ. ಈ ಕೆಲಸವನ್ನು ಆಕ್ಟಿನಿಂದ ವಿನಾಯಿಸಿರುವುದರಿಂದ ರಸ್ತೆ ಕೆಲಸಕ್ಕೆ ಜನ ಸಿಕ್ಕುವುದಿಲ್ಲವೆಂತ ರಸ್ತೆ ಕಂಟ್ರಾಕ್ಟರುಗಳು ಆಕ್ಷೇಪಿಸಬಹುದು.

ಕರಾರು ಯಾವ ಫಾರಮಿನಲ್ಲಿ ಇರಬೇಕು ಎಂಬುದನ್ನು ಚೀಫ್ ಕಮಿಷನರು ನಿರ್ಣಯಿಸಬೇಕೆಂತ 4ನೇ ಸೆಕ್ಷನಿನಲ್ಲಿ ಇದೆ. ಇದಕ್ಕೆ ಆಕ್ಷೇಪಣೆ ಇಲ್ಲ. ಕಂಟ್ರಾಕ್ಟ್ ಕರಾರು ಮೇಜಿಸ್ಟ್ರೇಟರ ಮುಂದಾಗಲೀ, ಪಾರುಪತ್ಯಗಾರರ ದರ್ಜೆಗಿಂತ ಕಡಿಮೆ ಇಲ್ಲದ ಆಫೀಸರ ಮುಂದಾಗಲೀ, ಅಥವಾ ಚೀಫ್ ಕಮಿಷನರು ನಿರ್ಣಯಿಸುವ ಯಾರ ಮುಂದಾಗಲಿ ಕರಾರಿಗೆ ನೌಕರನು ಸೈನು ಹಾಕಬೇಕೆಂತಲೂ, ಅಂಥಾ ಆಫೀಸರು ಕರಾರಿನ ಶರತ್ತುಗಳನ್ನು ನೌಕರನಿಗೆ ಚೆನ್ನಾಗಿ ತಿಳಿಯುವಂತೆ ಓದಿಹೇಳಿ ಸೈನ್ ಹಾಕಬೇಕೆಂತಲೂ ಇದೆ. ಈ ಸೆಕ್ಷನಿನಿಂದ ನೌಕರನಿಗೆ ತುಂಬಾ ಸಹಾಯವಿದೆ. ಆದರೆ ಈ ಆಫೀಸರುಗಳ ಸಮಯ ದೊರೆತು ಕರಾರು ಆಗುವದೇ ಕಷ್ಟವಾದೀತು. ಈ ವಿಷಯದಲ್ಲಿ ಪಕ್ಷಪಾತವಿರಕೂಡದು. ಮೇಜಿಸ್ಟ್ರೇಟರವರ ಮುಂದೆ ಅಥವಾ ಪಾರುಪತ್ಯಗಾರರ ಮುಂದೆ ಆಗಬೇಕೆಂತಾದರೆ ಎಲ್ಲಾ ಕರಾರುಗಳೂ ಹಾಗೆಯೇ ಆಗಬೇಕೆಂತ ಇರಬೇಕು. ಯೂರೋಪಿಯನರ ತೋಟದ ಕರಾರುಗಳು ಮಾಲೀಕನ ಮುಂದೆ ಆದರೆ ಸಾಕೆಂತಲೂ, ಇತರರ ಕರಾರುಮಾತ್ರ ಆಫೀಸರುಗಳ ಮುಂದೆ ಆಗಬೇಕೆಂತಲೂ ಮಾಡಬಾರದು. ಚೀಫ್ ಕಮಿಷನರು ನೇಮಿಸುವ ಇತರರ ಮುಂದೆ ಎಂತ ಇರುವ ಮಾತನ್ನು ಸೆಕ್ಷನಿನಿಂದ ತೆಗೆದುಹಾಕುವದು ಉತ್ತಮ.

ಕಂಟ್ರಾಕ್ಟಿನ ಮಾಯಿದೆಯು ಒಂದೇ ವರುಷ ಇರಬೇಕೆಂತಲೂ ಅದನ್ನು 300 ರುಪಾಯಿಗೆ ಮೀರಕೂಡದೆಂತಲೂ ಇದೆ. ಇದು ಸರಿಯಾಗಿದೆ. ಒಂದು ವರುಷಕ್ಕಿಂತ ಹೆಚ್ಚಿಗೆ ಕಾಲಕ್ಕೆ ಕಂಟ್ರಾಕ್ಟ್ ಮಾಡಬಹುದಾದರೆ ಗುಲಾಮಗಿರಿಯ ರೂಪ ತಾಳುತ್ತದೆ.

8ನೇ ಸೆಕ್ಷನಿನಮೇರೆ ಮಾಲೀಕನು ತಾನು ಇಟ್ಟುಕೊಂಡ ನೌಕರರ ಮತ್ತು ಅವರ ಅಧೀನದಲ್ಲಿ ಇರುವ ಒಂದು ರಿಜಿಸ್ಟರನ್ನು ಚೀಫ್ ಕಮಿಷನರು ನಿರ್ಣಯಿಸುವ ರೀತಿಯಲ್ಲಿ ಇಡಬೇಕು ಮತ್ತು, ಅಂಥಾ ರಿಜಿಸ್ಟರನ್ನು ಕಮಿಷನರೂ, ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರೂ, ಸಿವಿಲ್ ಸರ್ಜನರೂ ಬೇಕಾದಾಗ ನೋಡಬಹುದೆಂತಲೂ ಇದೆ. ರಿಜಿಸ್ಟರುಗಳನ್ನು ಇಡಬೇಕೆಂತ ಮಾಡಿದ್ದು ಒಳ್ಳೆಯದೇ. ಆದರೆ ಫಾರಮನ್ನು ಆಕ್ಟಿನಲ್ಲೇ ನಿರ್ಣಯಿಸುವುದು ಒಳ್ಳೆಯದು. ಓದುವಿಕೆಗೆ ಇಲ್ಲದ ಭೂಮಾಲೀಕರಿಗೆ ಸಹ ಸುಲಭವಾಗಿ ಇಡಿಸಿಕೊಳ್ಳಲು ಸಾಧ್ಯವಾಗುವಂತೆ ಫಾರಮನ್ನು ಕೌನ್ಸಿಲಿನವರೇ ತೀರ್ಮಾನಿಸುವದು ಒಳ್ಳೆಯದು. ಆಫೀಸರು ನೋಡುವಂತೆ ಹಕ್ಕು ಇರುವದರಿಂದಲೂ ತೊಂದರೆ ಕಾಣುವುದಿಲ್ಲ. ಇಂಥಾ ರಿಜಿಸ್ಟರನ್ನು ಇಡುವುದಲ್ಲದೆ ಕ್ರಮವಾದ ಚೆಕ್‌ರೋಲನ್ನು ಇಟ್ಟು ಅದರ ಯಥಾಪ್ರತಿಯನ್ನು ನೌಕರನಲ್ಲಿ ಸಹ ಇಡಬೇಕೆಂತ ಮಾಡಿದರೂ ಆಗಬಹುದೆಂತ ನಮ್ಮ ಅಭಿಪ್ರಾಯ. ಕೆಲವು ಮಾಲೀಕರು ವಾರಗಾರರಿಂದಲೂ ನೌಕರಿ ಕರಾರು ಬರೆಸಿಕೊಂಡು ಕೆಲಸಮಾಡುವ ಪದ್ಧತಿವುಂಟು. ಅವನ ಹಾಜರಾತಿ ವಿಷಯದಲ್ಲಿ ಸರಿಯಾದ ಲೆಕ್ಕ ಹೇಳದೆ ಅವನ ಸಾಲ ತೀರದೆಹೋಗುವ ಸಂಭವವೂ ಉಂಟು. ಈ ದೋಷಗಳಿಗೆ ಎಡೆ ಇಲ್ಲದಂತೆ ಮಾಡುವದು ಲೇಸು.

9ನೆ ಸೆಕ್ಷನ್ ಮೇಲೆ ಆಕ್ಷೇಪಣೆ ಬಹಳ ಇದೆ. ಮಾಲೀಕರೆಲ್ಲರೂ ತಮ್ಮ ನೌಕರರಿಗೆ ಚೀಫ್ ಕಮಿಷನರು ನಿರ್ಣಯಿಸುವ ರೀತಿ ವಸತಿಗೆ ಮನೆ, ನೀರು ಸರಬರಾಯಿ, ಆರೋಗ್ಯದ ಏರ್ಪಾಡು, ಔಷಧಿ ಚಿಕಿತ್ಸೆಗೆ ಅನುಕೂಲ ಸಹ ಮಾಡಿಕೊಡಬೇಕು. 10 ಎಕರೆಗಿಂತ ಕಡಿಮೆ ವ್ಯವಸಾಯದ ಜಾಗ ಇರುವವರಿಗೂ, 10ಕ್ಕಿಂತ ಕಡಿಮೆ ಸಂಖ್ಯೆ ನೌಕರರನ್ನು ಇಟ್ಟುಕೊಳ್ಳುವವರಿಗೂ ಈ ರೂಲು ಬಾಧಿಸಬಾರದೆಂತ ಸೆಕ್ಷನಿನಲ್ಲೇ ಇದೆ. 10 ಎಕರೆ ವ್ಯವಸಾಯದ ಜಾಗದವನಿಗೂ 10 ನೌಕರರಿಗಿಂತ ಕಡಿಮೆ ನೌಕರರನ್ನು ಇಡುವವನಿಗೂ ಇದು ಲಗಾವಿಲ್ಲವೆಂತ ಮಾಡಿದ್ದು ಬಹಳ ತೃಪ್ತಿಕರ. ಆದರೂ ಈ ಸೆಕ್ಷನ್ ಮತ್ತು 11ನೆ ಸೆಕ್ಷನಿನಿಂದ ಚಿಕ್ಕ ತೋಟಗಾರರಿಗೆ ತುಂಬಾ ಕಷ್ಟವಾಗಬಹುದೆಂತ ಬೆದರಿಕೆ ಇದೆ. ಸರಕಾರದವರಿಗೆ ಬೇಕಾದ ಮಾಲೀಕನಿಗೆ ಇದರಿಂದ ಕೇಡುಗಳಾಗಬಹುದೆಂತಲೂ, ಧಾರಾಳ ಹಣ ಸಹಾಯವಿರುವ ಯೂರೋಪಿಯನ್ ಮಾಲೀಕರಿಗೆ ಮಾತ್ರ ಈ ಅನುಕೂಲಗಳನ್ನು ತೃಪ್ತಿಕರವಾಗಿ ಮಾಡಲು ಸಾಧ್ಯವಿರಬಹುದೇ ಹೊರತು ಇತರರಿಗೆ ಕಷ್ಟವಾಗಬಹುದೆಂತ ಸಹ ಅನೇಕರು ಯೋಚಿಸುತ್ತಾರೆ. ಇದರಮೇಲೆ ಕೌನ್ಸಿಲ್ ಚರ್ಚೆಯನ್ನು ಎದುರುನೋಡುತ್ತಿರುತ್ತೇವೆ.

ಸೆಕ್ಷನ್ 12ರಲ್ಲಿ ಫಿರ್ಯಾದಿಯನ್ನು ಕೊಡುವರೀತಿಯೂ, ಹಾಗೆ ಫಿರ್ಯಾದಿ ಕೊಡುವಾಗಲೇ ಮೇಜಿಸ್ಟ್ರೇಟರಿಗೆ ಅನುಮಾನತೋರಿದರೆ ಫಿರ್ಯಾದಿ ಅರ್ಜಿಯನ್ನು ತಳ್ಳಿಬಿಡಬಹುದೆಂತಲೂ ಇದೆ. ಇದರಲ್ಲಿ ಹೊಸ ವಿಷಯವೇನೂ ಇಲ್ಲ. 13ನೆ ಸೆಕ್ಷನ್‌ಮೇರೆ ಮೇಜಿಸ್ಟ್ರೇಟರ ಚಿತ್ತಕ್ಕೆ ನ್ಯಾಯತೋರಿದರೀತಿ ಹಣಕೊಡಬೇಕೆಂತಾಗಲಿ, ಕೆಲಸಮಾಡಿ ತೀರಿಸಬೇಕೆಂತಾಗಲಿ, ಹುಕುಂಮಾಡಬಹುದು. ಕೆಲಸಕ್ಕೆ ಬರಲು ತಪ್ಪಿದ 6 ತಿಂಗಳೊಳಗೆ ಫಿರ್ಯಾದಿ ತರಬಹುದೆಂತ ಇದೆ. ಇದು ಸರಿಯಾದ ಬದಲಾವಣೆಯಾಗಿದೆ. ಆದರೆ ಸೆಕ್ಷನಿನ 2ನೆ ಭಾಗದಲ್ಲಿ ಹೊಸ ವಿಷಯವನ್ನು ಸೇರಿಸಿದ್ದಾರೆ. ಮೇಜಿಸ್ಟ್ರೇಟರ ಹುಕುಮನ್ನು ಉಲ್ಲಂಘನೆಮಾಡಿದರೆ ಈಗಿನ ಆಕ್ಟಮೇರೆ ಆ ಮೇಜಿಸ್ಟ್ರೇಟರೇ ಶಿಕ್ಷೆ ವಿಧಿಸಬಹುದು. ಮಸೂದೆಯಲ್ಲಿ—ವಿಚಾರಮಾಡಿದ ಮೇಜಿಸ್ಟ್ರೇಟರು ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರಲ್ಲಿಗೆ ಕಟ್ಟಿನೊಡನೆ ನೌಕರನನ್ನು ಕಳುಹಿಸಬೇಕೆಂತಲೂ ಅವರು ಪುನಹ ವಿಚಾರಮಾಡಿ ಶಿಕ್ಷೆ ವಿಧಿಸಬಹುದೆಂತ ಇದೆ. ಈ ಬದಲಾವಣೆಯಿಂದ ಮಾಲೀಕರಿಗೆ ತೊಂದರೆ ಏನೂ ಇಲ್ಲ. ನೌಕರನಿಗೆ ಹೆಚ್ಚಿನ ಪ್ರಯೋಜನವೇನೂ ಕಾಣಲಿಲ್ಲ. ನೌಕರನಿಗೆ ಪ್ರಯೋಜನವಾಗಬೇಕೆಂತ ಈ ಬದಲಾವಣೆ ಮಾಡಿರುವದಾಗಿರಬೇಕು.

16ನೇ ಸೆಕ್ಷನಿನಲ್ಲಿ ಮಾಲೀಕನು ತಂದ ಅರ್ಜಿಯು ನಿಷ್ಕಾರಣವಾದಂಥಾದ್ದು, ಸುಳ್ಳು ಎಂತ ಮೇಜಿಸ್ಟ್ರೇಟರಿಗೆ ತೋರಿದರೆ ಮಾಲೀಕನಿಂದ ನೌಕರನಿಗೆ 100ರೂ ಗೆ ಮೀರದೆ ಪರಿಹಾರ ಕೊಡಿಸಬಹುದೆಂತ ಇದೆ. 17ನೇ ಸೆಕ್ಷನಿನಲ್ಲಿ ಕಮಿಷನರು, ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರು ಅಥವಾ ಸಿವಿಲ್ ಸರ್ಜನರು ನೋಡಬಹುದಂಥಾದ್ದನ್ನು ನೋಡಲಿಕ್ಕೆ ಬಿಡದೆ ಇದ್ದರೆ ಅಥವಾ ಅವರು ಕೇಳಿದ ಸಂಗತಿಗಳನ್ನು ತಿಳಿಸಿಕೊಡದೆ ಇದ್ದರೆ ಮಾಲೀಕನಿಗಾಗಲೀ ಅವರ ಕಡೆಯವನಿಗಾಗಲೀ, 500ರೂ.ಗೆ ಮೀರದೆ ಜುಲುಮಾನೆ ಮಾಡಬಹುದೆಂತ ಇದೆ. 18ನೇ ಸೆಕ್ಷನಿನಲ್ಲಿ ಆಳಿಗೆ ಸರಿಯಾದ ಮನೆ, ನೀರು ಸರಬರಾಯಿ ಮುಂತಾದ್ದನ್ನು ಮಾಡಿಕೊಡದೆ ಹೋದರೆ ಹಾಗೆ ಮಾಡಿಕೊಡದ ಪ್ರತಿಯೊಂದು ದಿನಕ್ಕೂ 20ರೂ ಮೀರಿ ಜುಲುಮಾನೆಗೆ ಗುರಿಯಾಗುತ್ತಾರೆ. ಈ ಸೆಕ್ಷನ್‌ಗಳಿಗಿಂತಲೂ ಕಠಿಣವಾದದ್ದು ಮತ್ತು ಕೆಡುಕಿಗೆ ಎಡೆಕೊಡುವಂಥಾದದ್ದು 19ನೇ ಸೆಕ್ಷನ್ ಆಗಿದೆ. ಒಬ್ಬ ನೌಕರನು ಒಬ್ಬ ಮಾಲೀಕನಲ್ಲಿ ಕೆಲಸಮಾಡಲು ಒಪ್ಪಿದ್ದು ತಿಳಿದೂ ಸಹ ಅವನಲ್ಲಿಂದ ಬಿಡಿಸಲು ಪ್ರಯತ್ನ ಮಾಡಿದವನಿಗೆ ಅಥವಾ ಅಂಥಾ ನೌಕರನನ್ನು ಕೆಲಸಕ್ಕೆ ಇಟ್ಟುಕೊಂಡವನಿಗೆ ಒಂದು ತಿಂಗಳು ಸಾದಾ ಸಜ ಅಥವಾ 200ರೂ. ಜುಲುಮಾನೆ ಅಥವಾ ಎರಡನ್ನೂ ವಿಧಿಸಬಹುದು. ಇದರ ಪ್ರಕಾರ ಮಾಲೀಕರೊಳಗೆ ತುಂಬಾ ವ್ಯಾಜ್ಯಗಳಾಗಬಹುದು. ನೌಕರನು ಹೇಳುವ ಮೇರೆ ಬೇರೆಯೂರಲ್ಲಿಯೂ ಅಡ್ವಾನ್ಸ್ ಹೊಂದಿದವನಲ್ಲವೆಂತ ನಂಬಿ ಅಂಥವನನ್ನು ಇಟ್ಟುಕೊಂಡರೆ ಸಹ ಮಾಲೀಕನಿಗೆ ಶಿಕ್ಷೆಯಾಗುವ ಸಂಭವವಿದೆ. ಹೇಗೂ ಈ ಸೆಕ್ಷನನ್ನು ತೆಗೆದುಹಾಕದೆ ಹೋದರೆ ಆಕ್ಟಿನಿಂದ ತುಂಬಾ ಕೆಡುಕಾಗುವದರಲ್ಲಿ ಸಂಶಯವಿಲ್ಲ. ನೌಕರನಿಗೆ ಸಹಾಯವಾಗುವ ಸೆಕ್ಷನ್‌ಗಳನ್ನು ಸ್ವಲ್ಪ ಹೆಚ್ಚುಕಡಿಮೆ ಮಾಡಿಯಾದರೂ ಇಟ್ಟುಕೊಳ್ಳಬಹುದು. ನೌಕರನ ಸ್ವತಂತ್ರಕ್ಕೆ ತುಂಬಾ ಅಡ್ಡಿತರುವ 19ನೇ ಸೆಕ್ಷನಿನಂಥ ಕೆಡುಕು ಸೆಕ್ಷನ್‌ಗಳನ್ನು ತೆಗೆದುಹಾಕುವದು ಬಹಳ ಅವಶ್ಯವಾಗಿದೆ.

ಒಟ್ಟು ಮಸೂದೆ ಆಕ್ಟ್ ಚರ್ಚಿಸಿ ಸರಿಪಡಿಸಿಕೊಳ್ಳಬಹುದಂಥಾದ್ದಾಗಿದೆ. ಪೂರ್ತಿ ತಿರಸ್ಕರಿಸಲ್ಪಡಬೇಕಾಗಿಲ್ಲ.

ಎಡನಾಲ್ಕುನಾಡು ಮಲೆ ಮಹದೇವ ಭಕ್ತ ಜನ ಸಂಘ.

ದೇವಸ್ಥಾನದ ಪೌಳಿ ಕಟ್ಟಡದ ಬಗ್ಗೆ ದ್ರವ್ಯ ಸಹಾಯ ಮಾಡಿದ ಮಹನೀಯರ ಹೆಸರುಗಳ ಮತ್ತು ಮೊಬಲಗಿನ ವಿವರದ ಪಟ್ಟಿ:—

1.	ಮಾ. ಶ್ರೀ. ಟಿ. ಆರ್. ತಿರುವಂಗಡ ಪಿಳ್ಳೆಯವರು, ವೀರಾಜಪೇಟೆ ಮುನ್ಸಿಫಲ್ ವೈಸ್ ಪ್ರೆಸಿಡೆಂಟರವರಿಂದ	10—0—0
2.	ಮಾ. ಶ್ರೀ. ಕೋಟೆರ ಚಿಣ್ಣಪ್ಪನವರಿಂದ	5—0—0
3.	„ ಕುಟ್ಟಂಡ ತಮ್ಮಯ್ಯನವರಿಂದ	4—0—0
4.	„ ಮಂಡೇಟಿರ ಚಮ್ಮಣ್ಣನವರಿಂದ	1—0—0
5.	„ ಮಾಚಿಮಂಡ ಅಪ್ಪಚ್ಚನವರಿಂದ	1—0—0
6.	„ ಹಂಗಂಡ ಕುಟ್ಟಪ್ಪನವರಿಂದ	1—0—0
	ಜುಮ್ಲ	22—0—0

ಇನ್ನು ಅನೇಕ ಮಹನೀಯರು ಸಹಾಯ ಮಾಡುವವರಿದ್ದಾರೆ.

ಕೆ. ಬೆಳ್ಯಪ್ಪ,
ಕಲೆಕ್ಟರ್.

ಕೊಡಗಿನ ಚೀಫ್ ಕಮೀಷನರವರ ನ್ಯಾಯ ವಿಧಾಯಕ ಸಭೆಯವರ ಮುಂದೆ ತರಲ್ಪಡತಕ್ಕ ಮುಸವಿದಾ ಆಕ್ಟು.

ಈ ಕೆಳಗಣ ಮುಸವಿದಾ ಆಕ್ಟು, ಅದರೊಂದಿಗಿರುವ ಉದ್ದೇಶಗಳ ಮತ್ತು ಕಾರಣಗಳ ವಿವರಣೆಯ ಸಮೇತವಾಗಿ, ಕೊಡಗಿನ ನ್ಯಾಯವಿಧಾಯಕ ಕೆಲಸವನ್ನು ನಿರ್ವಹಿಸುವ ಬಗ್ಗೆ ಏರ್ಪಟ್ಟ ಕ್ರಮಗಳ 33ನೇ ಕ್ರಮಕ್ಕನುಗುಣವಾಗಿ ಸಮಸ್ತ ಜನರ ತಿಳುವಳಿಕೆಯ ಬಗ್ಗೆ ಪ್ರಕಟಿಸಲ್ಪಟ್ಟಿದೆ.

Bill No. 2 of 1925.

1925ನೇ ಇಸವಿಯ 2ನೇ ನಂಬರು ಬಿಲ್ಲು.

A Bill to Regulate the Conditions of Labour in the Province of Coorg.

ಕೊಡಗು ಸಂಸ್ಥಾನದಲ್ಲಿ ಕೂಲೀ ಕೆಲಸದ ಶರತ್ತುಗಳನ್ನು ಕ್ರಮಪಡಿಸುವರೆ ಉಂಟಾದ ಮುಸವಿದಾ ಆಕ್ಟು.

ಪೀಠಿಕೆ

ಕೊಡಗು ಸಂಸ್ಥಾನದಲ್ಲಿಯ ಒಂದಿರ ತರಗತಿಗಳ ಕೂಲೀ ಕೆಲಸದ ಶರತ್ತುಗಳನ್ನು ಕ್ರಮಪಡಿಸುವುದು ಯುಕ್ತವಾಗಿರುವುದರಿಂದ, ಮತ್ತು ಇಂಡಿಯಾ ಗವರ್ನಮೆಂಟ್ ಆಕ್ಟಿನ 80—Aನೇ ಪ್ರಕರಣದ 3ನೆಯ ಉಪಪ್ರಕರಣದ ಮೇರೆಗೆ ಈ ಆಕ್ಟನ್ನು ಜಾರಿ ತರುವದಕ್ಕೆ ಗವರ್ನರ್ ಜನರಲ್‌ರವರ ಮುಂಚಿತವಾದ ಮಂಜೂರಾತಿಯನ್ನು ಪಡೆದು ಇರುವುದರಿಂದ ಇದರ ಮೂಲಕವಾಗಿ ಈ ಕೆಳಗಿನಂತೆ ನಿರ್ಣಯಿಸಲ್ಪಡುತ್ತಿದೆ.—

1ನೆ ಅಧ್ಯಾಯ.

ಅವತರಣಿಕೆ.

ಚಿಕ್ಕ ಹೆಸರು, ವ್ಯಾಪ್ತಿ ಮತ್ತು ಅಮಲ್‌ಮುದು

1 ಈ ಆಕ್ಟು 1926ನೇ ಇಸವಿಯ "ಕೊಡಗಿನ ಕೂಲೀ ಕೆಲಸವನ್ನು ಕುರಿತ ಆಕ್ಟು" ಎಂಬುದಾಗಿ ಕರೆಯಲ್ಪಡಬಹುದು.

ಅದು ಕೊಡಗು ಸಂಸ್ಥಾನಕ್ಕೆಲ್ಲಾ ವ್ಯಾಪಿಸುತ್ತದೆ ಮತ್ತು ಅದು 1926ನೇ ಇಸವಿಯ ಏಪ್ರಿಲ್ ಮೊದಲನೇ ತಾರೀಕಿನಲ್ಲಿ ಜಾರಿಯಲ್ಲಿ ಬರತಕ್ಕದ್ದು; ಮತ್ತು ಆ ದಿನದಿಂದ ಏದು ವರುಷಗಳ ಪರಿಯಂತ ಅದು ಜಾರಿಯಲ್ಲಿರತಕ್ಕದ್ದು.

ವಿನಾಯಿತಿ

1859ನೆಯ ಇಸವಿಯ XIIIನೆಯ ಆಕ್ಟು

2 ಯಾವನಾದರೂ ಕೂಲಿಯವನು ನ್ಯಾಯಸಮ್ಮತವಾಗಿ ಕೆಲಸಮಾಡುವುದಕ್ಕೆ ಒಪ್ಪಿಕೊಂಡ, ಈ ಆಕ್ಟು ಜಾರಿಗೆ ಬರುವುದಕ್ಕೆ ಮುಂಚೆಯೇ ಕರಾರನ್ನು ಬರೆದುಕೊಟ್ಟಿದ್ದು ಆಕ್ಟು ಜಾರಿಗೆ ಬಂದ ತರುವಾಯದಲ್ಲಿಯೂ ಆ ಕರಾರು ಜಾರಿಯಲ್ಲಿದ್ದ ಪಕ್ಷದಲ್ಲಿ ಅಂಥ ಕರಾರು, ಈ ಆಕ್ಟಿಗನುಸಾರವಾಗಿಯೇ ಉಂಟಾಯಿತೆಂದು ತಿಳಿಯತಕ್ಕದು. ಅಂಥಾ ಕರಾರಿನ ವಿಷಯವಾಗಿ 1859ನೆಯ ಕೂಲಿಕಾರರ ಕರಾರಿನ ಉಲ್ಲಂಘನೆಯ ಆಕ್ಟಿನ ಮೇರೆಗೆ ಹುಟ್ಟಿದ ನಡವಳಿಕೆಯಲ್ಲವೂ, ಈ ಆಕ್ಟಿಗೆ ಅನುಸಾರವಾಗಿಯೇ ಹುಟ್ಟಿದಂತೆ ಭಾವಿಸಲ್ಪಟ್ಟು ಅದೇ ರೀತಿಯಾಗಿಯೇ ಜಾರಿಯಲ್ಲಿರತಕ್ಕದು.

ಅರ್ಥವಿವರಣೆಗಳು

3 ಈ ಆಕ್ಟಿನಲ್ಲಿ ವಿಷಯದಲ್ಲಾಗಲಿ ಸಂದರ್ಭದಲ್ಲಾಗಲಿ ವಿರೋಧವಾಗಿ ಏನಾದರೂ ಇದ್ದರೇ ಹೊರ್ತು "ಮೇಜಿಸ್ಟ್ರೇಟ್" ಎಂದರೆ ಒಬ್ಬ 1ನೇ ಕ್ಲಾಸ್—ಯಾ 2ನೇ ಕ್ಲಾಸ್ ಮೇಜಿಸ್ಟ್ರೇಟನೆಂದು ಅರ್ಥವಾಗುತ್ತದೆ, ಮತ್ತು ಅದರಲ್ಲಿ ಈ ಆಕ್ಟಿಗನುಗುಣವಾಗಿ ಮೇಜಿಸ್ಟ್ರೇಟನ ಕೆಲಸಗಳನ್ನು ನಡೆಸಲು ಚೀಫ್ ಕಮೀಷನರವರಿಂದ ಒಬ್ಬ 3ನೇ ಕ್ಲಾಸ್ ಮೇಜಿಸ್ಟ್ರೇಟನು ವಿಶೇಷವಾಗಿ ಅಧಿಕಾರಗೊಳಿಸಲ್ಪಟ್ಟಲ್ಲಿ ಆತನು ಸೇರುತ್ತಾನೆ. ಪರಂತು 19ನೇ ಪ್ರಕರಣದ ಮೇರೆಗೆ ತೆಕ್ಕಿಸಲ್ಪಡಬಹುದಾದ ಒಂದು ತಕ್ಕೀರನ್ನು ಮೂರನೇ ಕ್ಲಾಸ್ ಮೇಜಿಸ್ಟ್ರೇಟನು ದರ್ಯಾಪ್ತು ಮಾಡಕೂಡದು.

(b) "ಕೆಲಸಗಾರ" ಎಂಬ ಶಬ್ದವು ಕಾಫಿ, ಟೀ, ರಬ್ಬರ್, ಯಾಲಕ್ಕಿ, ನಾರು ಅಥವಾ ಬತ್ತವನ್ನು ವ್ಯವಸಾಯಮಾಡುವದರಲ್ಲಿ ಮಜೂರಿಯ ಬಗ್ಗೆ ಕೆಲಸ ಮಾಡಲು ಈ ಆಕ್ಟಿನ ಮೇರೆಗೆ ಒಂದು ಕರಾರನ್ನು ಮಾಡಿಕೊಂಡ ಯಾವನಾದರೂ ಮನುಷ್ಯನೆಂದು ಅರ್ಥವಾಗುವುದಲ್ಲದೆ ಸದರಿ ಶಬ್ದವು ಆತನನ್ನು ಸೇರಿಸಿಕೊಳ್ಳುತ್ತದೆ.

1872ನೆ ಇಸವಿಯ 9ನೆ ಆಕ್ಟು

(2) 1872ನೇ ಇಸವಿಯ ಇಂಡಿಯಾದ ಕಂಟ್ರಾಕ್ಟ್ ಯೆಂಬ ಕರಾರುಗಳ ಆಕ್ಟಿನಲ್ಲಿ ಅರ್ಥ ವಿವರಿಸಲ್ಪಟ್ಟು ಈ ಆಕ್ಟಿನಲ್ಲಿ ಉಪಯೋಗಿಸಿರುವ ಎಲ್ಲಾ ಶಬ್ದಗಳಿಗೆ ಆ ಆಕ್ಟಿನಲ್ಲಿ ಅವುಗಳಿಗೆ ಕೊಟ್ಟಿರುವ ಅರ್ಥವೇ ಇರುವುದಾಗಿ ಭಾವಿಸಲ್ಪಡತಕ್ಕದ್ದು.

2ನೆ ಅಧ್ಯಾಯ.

ಸಾಮಾನ್ಯವಾಗಿ ಕರಾರುಗಳು.

ಕರಾರುಗಳನ್ನು ಮಾಡಿಕೊಳ್ಳುವ ರೀತಿ.

4. ಈ ಆಕ್ಟಿನ ಮೇರೆಗೆ ಮಾಡಿಕೊಳ್ಳುವ ಪ್ರತಿ ಕರಾರು ಬರಹ ಮೂಲವಾಗಿ ಇದ್ದು, ಚೀಫ್ ಕಮೀಷನರವರು ಕ್ರಮದ ಮೂಲಕ ಆಜ್ಞಾಪಿಸಬಹುದಾದಂಥಾ ನಮೂನೆಯಲ್ಲಿರತಕ್ಕದ್ದು ಮತ್ತು ಅದರಲ್ಲಿ ಅವರು ಆಜ್ಞಾಪಿಸಬಹುದಾದಂಥಾ ತಪಶೀಲು ಇರತಕ್ಕದ್ದು. ಮತ್ತು ಅದಕ್ಕೆ ಒಬ್ಬ ಮೇಜಿಸ್ಟ್ರೇಟನ ಅಥವಾ ಪಾರುಪತ್ಯಗಾರನ ದರ್ಜೆಗಿಂತ ಕಡಿಮೆಯಿಲ್ಲದ ದರ್ಜೆಯ ಒಬ್ಬ ರೆವಿನ್ಯೂ ಆಫೀಸರನ ಅಥವಾ ಹೆಸರು ಮೂಲಕ ಯಾ ಅಧಿಕಾರ ಪ್ರಯುಕ್ತವಾಗಿ ಚೀಫ್ ಕಮೀಷನರಿಂದ ಅಧಿಕಾರಗೊಳಿಸಲ್ಪಟ್ಟ ಇತರ ಯಾವನಾದರೂ ಮನುಷ್ಯನ ಸಮಕ್ಷದಲ್ಲಿ ದಸ್ಕತು ಹಾಕಿರತಕ್ಕದ್ದು.

(2) ಸದರೀ ಕರಾರು ಯಾರ ಸಮಕ್ಷದಲ್ಲಿ ದಸ್ಕತು ಹಾಕಲ್ಪಟ್ಟಿತೋ ಆ ಮೇಜಿಸ್ಟ್ರೇಟರು ಯಾ ಇತರ ಮನುಷ್ಯನು ಅದರ ಶರತ್ತುಗಳು ಕಕ್ಷಿಗಾರರಿಗೆ ಚೆನ್ನಾಗಿ ವಿವರಿಸಿ ಹೇಳಲ್ಪಟ್ಟು, ಅವರು ಅವನ್ನು ತಿಳಿಯುವಂತೆ ನೋಡಿಕೊಳ್ಳತಕ್ಕದ್ದು ಮತ್ತು ಆ ಬಗ್ಗೆ ತನ್ನ ಸರ್ಟಿಫಿಕೇಟನ್ನು ಅನುಬಂಧಿಸತಕ್ಕದು.

ಕೆಲಸಗಾರನೊಂದಿಗೆ ಮಾಡುವ ಕರಾರಿನ ಅತ್ಯಧಿಕವಾಯಿದೆ ಮತ್ತು ಅದರ ಮೇರೆಗೆ ಮುಂಗಡವಾಗಿ ಕೊಡಬಹುದಾದ ಅತ್ಯಧಿಕ ಮೊಬಲಗು.

5 ಯಾವ ಕರಾರಾಗಲಿ ಒಂದು ವರುಷಕ್ಕೆ ಮೀರಿದ ವಾಯಿದೆಯ ಬಗ್ಗೆ ಇರಕೂಡದು, ಮತ್ತು ಒಂದು ಕರಾರು ಮೇರೆಗೆ ಒಬ್ಬ ಕೆಲಸಗಾರನಿಗೆ ಮುಂಗಡವಾಗಿ ಕೊಟ್ಟ ಮೊಬಲಗು ಮೂವತ್ತು ರೂಪಾಯಿಗೆ ಮೀರಕೂಡದು.

ಈ ಆಕ್ಟನ್ನು ನಿರರ್ಥಕಗೊಳಿಸುವಂತೆ ಭಾವವಾಗುವ ಕರಾರುಗಳು ಅಸಾಧುವಾದದ್ದಾಗಿವೆ

6 ಒಂದು ಕರಾರಿನಲ್ಲಿಯ ಯಾವ ಶರತ್ತಾಗಲಿ ಈ ಆಕ್ಟಿನ ಯಾ ಅದಕ್ಕನುಗುಣವಾಗಿ ಏರ್ಪಟ್ಟ ಯಾವುದಾದರೂ ಕ್ರಮಗಳ ಯಾವ ನಿಬಂಧನೆಗಳಿಗಾಗಲಿ ವಿರೋಧವಾಗಿದ್ದರೆ ಅಥವಾ ಅವನ್ನು ನಿರರ್ಥಕಗೊಳಿಸುವಂತ ಭಾವವಾದರೆ ಅದು ಎಷ್ಟು ಮಾತ್ರವೂ ಫಲಕಾರಿಯಾಗತಕ್ಕದ್ದಲ್ಲ.

ಈ ಅಧ್ಯಾಯಕ್ಕನುಸಾರವಾಗಿಲ್ಲದ ಕರಾರುಗಳು ಜಾರಿಗೆ ತರತಕ್ಕವುಗಳಾಗಿರುವುದಿಲ್ಲ

7 ಈ ಅಧ್ಯಾಯದ ನಿಬಂಧನೆಗಳಿಗನುಸಾರವಾಗಿ ಇಲ್ಲದೆ ಅನ್ಯಥಾ ಮಾಡಿಕೊಳ್ಳಲ್ಪಟ್ಟ ಯಾವ ಕರಾರಾಗಲಿ ಈ ಆಕ್ಟಿನ ಮೇರೆಗೆ ಜಾರಿ ನಡೆಸಲ್ಪಡಕೂಡದು.

3ನೆ ಅಧ್ಯಾಯ

ಕೆಲಸಗಾರರ ಮತ್ತು ಆಶ್ರಿತರ ರಿಜಿಸ್ಟರುಗಳನ್ನು ಇಡುವಿಕೆ

8 (1) ಕೆಲಸಕ್ಕಿಟ್ಟುಕೊಳ್ಳುವ ಪ್ರತಿಯೊಬ್ಬ ಯಜಮಾನನು ಯಾ ಪ್ರತಿ ತರಗತಿಯ ಯಜಮಾನರು ತಾನು ಕೆಲಸಕ್ಕಿಟ್ಟುಕೊಂಡಿರುವ ಎಲ್ಲಾ ಕೆಲಸಗಾರರ ಮತ್ತು ಅವರೊಂದಿಗೆ ವಾಸಿಸುವ ಅವರ ಆಶ್ರಿತರ ಕುರಿತು ಚೀಫ್ ಕಮೀಷನರವರು ಕ್ರಮದ ಮೂಲಕವಾಗಲಿ ವಿಶೇಷ ಹುಕುಮಿನ ಮೂಲಕವಾಗಲಿ ನಿರ್ಣಯಿಸಬಹುದಾದಂಥಾ ರಿಜಿಸ್ಟರುಗಳನ್ನು ಇಡತಕ್ಕದ್ದು.

(2) ಅಂಥಾ ರಿಜಿಸ್ಟರುಗಳನ್ನು 10ನೇ ಪ್ರಕರಣದಲ್ಲಿ ಹೇಳಿರುವ ಉದ್ಯೋಗಸ್ಥರು ಸಂದರ್ಶಿಸುವ ಬಗ್ಗೆ ಯಾವಾಗಲೂ ಅವಕಾಶವಿರತಕ್ಕದ್ದು.

ಕೆಲಸಗಾರರಿಗೆ ಮನೆವಸತಿಯನ್ನು ಇತರ ಅನುಕೂಲಗಳನ್ನೂ ಒದಗಿಸಿ ಕೊಡುವಿಕೆ

9 ಕೆಲಸಕ್ಕಿಟ್ಟುಕೊಳ್ಳುವ ಪ್ರತಿ ಯಜಮಾನನು ಯಾ ಪ್ರತಿ ತರಗತಿಯ ಯಜಮಾನರು ತಾನು ಕೆಲಸಕ್ಕಿಟ್ಟುಕೊಂಡಿರುವ ಕೆಲಸಗಾರರಿಗಾಗಲಿ ಕೆಲಸಗಾರರ ಯಾವುದೊಂದು ತರಗತಿಯವರಿಗಾಗಲಿ ಚೀಫ್ ಕಮೀಷನರವರು ಕ್ರಮದ ಮೂಲಕ ಅಥವಾ ವಿಶೇಷ ಹುಕುಮಿನ ಮೂಲಕ ನಿರ್ಣಯಿಸಬಹುದಾದಂಥಾ ಮನೆವಸತಿಯನ್ನು, ನೀರು ಸರಬರಾಯಿಯನ್ನು, ಆರೋಗ್ಯರಕ್ಷಣೆಯ ಏರ್ಪಾಡುಗಳನ್ನೂ ಒದಗಿಸಿಕೊಡತಕ್ಕದು. ಮತ್ತು ಅವರ ವೈದ್ಯಕೀಯ ಚಿಕಿತ್ಸೆಯ ಬಗ್ಗೆ ಚೀಫ್ ಕಮೀಷನರವರು ಹಾಗೆಸಿರ್ದೇಶಿಸಬಹುದಾದಂಥಾ ಏರ್ಪಾಡನ್ನು ಮಾಡತಕ್ಕದು.

ಪರಂತು ಕೆಲಸಕ್ಕಿಟ್ಟುಕೊಳ್ಳುವ ಯಜಮಾನನಿಗೆ ಪತ್ತು ಏಕರೆಗಿಂತ ಕಡಿಮೆಯಾದಷ್ಟು ವಿಸ್ತೀರ್ಣದ ಸಾಗುವಳಿಯ ಭೂಮಿಸಿನ ಸ್ವಾಧೀನವಿದ್ದರೆ ಅಥವಾ ಕೆಲಸಕ್ಕಿಟ್ಟಿರುವ ಕೆಲಸಗಾರರ ಸಂಖ್ಯೆಯು ಇಪ್ಪತ್ತಕ್ಕಿಂತ ಕಡಿಮೆ ಇದ್ದರೆ ಅಂಥಾ ಯಾವ ಕ್ರಮವನ್ನಾಗಲಿ ಬಿಗಾವು ಮಾಡತಕ್ಕದ್ದಲ್ಲ.

ಎಸ್ಟೇಟುಗಳನ್ನು ಸಂದರ್ಶಿಸಲು ಬಂದರೆ ಆಫೀಸರರ ಅಧಿಕಾರ

10 ಕಮೀಷನರವರು, ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರು ಮತ್ತು ಸಿವಿಲ್ ಸರ್ಜನರು ಕೆಲಸಗಾರರಿಂದ ಯಾ—ಅವರ ಬಗ್ಗೆ ಪೂರ್ತಿಯಾಗಿ ಯಾ—ಅಂಶತಃ ಉಪಯೋಗಿಸಲ್ಪಟ್ಟ ಸಮಸ್ತ ಸ್ಥಳಗಳನ್ನು ಕಟ್ಟಡಗಳನ್ನೂ ಪ್ರವೇಶಿಸಿ ಸಂದರ್ಶಿಸಬಹುದು. ಮತ್ತು ಅಂಥಾ ಸಮಸ್ತ ಕೆಲಸಗಾರರನ್ನು ಅಥವಾ ಅವರ ಪೈಕಿ ಫಲಾನಾ ತರಗತಿಯವರನ್ನು ಯಾ— ತರಗತಿಗಳವರನ್ನು ಅಥವಾ ಅವರ ಪೈಕಿ ಫಲಾನಾ ಯಾವನೊಬ್ಬ ಮನುಷ್ಯನನ್ನು ಯಾ—ಮನುಷ್ಯರನ್ನು ತನ್ನ ಮುಂದೆ ತರಬೇಕೆಂದು, ಮತ್ತು ಯಾವನಾದರೂ ಕೆಲಸಗಾರನ ಕರಾರಿನ ನಕಲನ್ನು ಹಾಜರು ಪಡಿಸಬೇಕೆಂದು ವಿಧಿಸಬಹುದು. ಮತ್ತು ಅಂಥಾ ಕೆಲಸಗಾರರ ಯಾ—ಅವರೊಡನೆ ವಾಸಿಸುವ ಅವರ ಆಶ್ರಿತರ ಸ್ಥಿತಿಗತಿಗೆ ಯಾ—ನಡೆಸುವಿಕೆಗೆ ಸಂಬಂಧಪಟ್ಟು ತನಗೆ ಯುಕ್ತವೆಂದು ತೋರುವ ಯಾವ ವಿಚಾರಣೆಗಳನ್ನಾಗಲಿ ನಡೆಸಬಹುದು ಮತ್ತು ಕೆಲಸಕ್ಕಿಟ್ಟುಕೊಳ್ಳುವ ಯಜಮಾನನು ಆ ಮೇರೆಗೆ ಮಾಡಲ್ಪಟ್ಟ ಪ್ರತಿ ಅಪೇಕ್ಷೆಯನ್ನು ತನ್ನ ಶಕ್ತ್ಯನುಸಾರ ನೆರವೇರಿಸುವಿಕೆಗೂ ಪ್ರತಿ ವಿಚಾರಣೆಗೆ ಉಪಾಯರಣೆ ಕೊಡಲಿಕ್ಕೂ ಬದ್ಧನಾಗಿರತಕ್ಕದ್ದು.

ಕಮಿಟಿಯನ್ನು ನೇಮಿಸುವದೆ ಮತ್ತು ನ್ಯೂನತೆಗಳನ್ನು ಪರಿಹರಿಸಬೇಕಾಗಿ ಕೆಲಸಕ್ಕಿಟ್ಟುಕೊಂಡ ಯಜಮಾನನನ್ನು ಆಜ್ಞಾಪಿಸುವದೆ ಕಮೀಷನರವರ ಅಧಿಕಾರ

11. (1) ತಾವೇ ಸ್ವತಃ ಸಂದರ್ಶಿಸಿದುದರಿಂದ ಅಥವಾ 10ನೇ ಪ್ರಕರಣದಲ್ಲಿ ಹೇಳಲ್ಪಟ್ಟ ಉದ್ಯೋಗಸ್ಥರು ರಿಪೋರ್ಟು ಮಾಡಿದ್ದಾಗಿ, ಮನೆ ವಸತಿ ಮತ್ತು ನೀರು ಸರಬರಾಯಿಯಲ್ಲಿ ಅಥವಾ ಆರೋಗ್ಯರಕ್ಷಣೆಯ ಏರ್ಪಾಡುಗಳಲ್ಲಿ ಯಾವ ನ್ಯೂನತೆಯಾಗಲಿ ಇರುವ ಕಾರಣದಿಂದ, ಯಾವ ಜಮೀನಾಗಲಿ ಕಟ್ಟಡವಾಗಲಿ ಅದರ ಭಾಗವಾಗಲಿ ಕೆಲಸಗಾರರ ಯಾವುದೊಂದು ತರಗತಿಯ ಕೆಲಸಗಾರರ ಯಾ—ಅವರ ಆಶ್ರಿತರ ಉಪಯೋಗಕ್ಕೆ ಅಥವಾ ನಿವಾಸಕ್ಕೆ ಅಯೋಗ್ಯವಾಗಿದೆ ಎಂದು ಕಮೀಷನರವರಿಗೆ ಕಂಡುಬಂದ ಪಕ್ಷದಲ್ಲಿ ಅವರು ಒಂದು ಕಮಿಟಿಯನ್ನು ನೇಮಿಸಬಹುದು ಅದರಲ್ಲಿ ಕಮೀಷನರರೂ ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರೂ ಸಿವಿಲ್ ಸರ್ಜನರೂ, ಉದ್ಯೋಗಸ್ಥರಲ್ಲದಿರುವ ಮತ್ತು ಸಾಧ್ಯವಾಗುವಷ್ಟುಮಟ್ಟಿಗೆ ಕೆಲಸಕ್ಕಿಟ್ಟುಕೊಂಡ ಯಜಮಾನನ ಮತ್ತು ಕೆಲಸಗಾರರ ತರಗತಿಗಳವರಿಂದ ಅನುಕ್ರಮವಾಗಿ ಚುನಾಯಿಸಿದ ಇಬ್ಬರು ಇತರ ಮನುಷ್ಯರೂ ಇರತಕ್ಕದ್ದು. ಮತ್ತು ಆ ಕಮಿಟಿಯವರ ತೀರ್ಮಾನಗನುಗುಣವಾಗಿ ನಿರೂಪಿಸಿದ ವಾಯಿದೆಯೊಳಗಾಗಿ ಅಂಥಾ ಯಾವ ನ್ಯೂನತೆಗಳನ್ನಾಗಲಿ ಪರಿಹರಿಸಬೇಕಾಗಿ ಕಮೀಷನರರು ಕೆಲಸಕ್ಕಿಟ್ಟುಕೊಂಡ ಯಜಮಾನನನ್ನು ಆಜ್ಞಾಪಿಸಬಹುದು

ಚೀಫ್ ಕಮೀಷನರವರ ಬಳಿಗೆ ಅಪೀಲು ಮಾಡುವಿಕೆ

(2) ಹಾಗೆ ಆಜ್ಞಾಪಿಸಲ್ಪಟ್ಟ ಮೂವತ್ತು ದಿನಗಳೊಳಗಾಗಿ ಚೀಫ್ ಕಮೀಷನರವರ ಬಳಿಗೆ ಒಂದು ಅಪೀಲು ಇರತಕ್ಕದ್ದು.

ಎಸ್ಟೇಟು ಉಪಯೋಗದ ಬಗ್ಗೆ ನಿವಾಸದ ಬಗ್ಗೆಗಲಿ ಅರ್ಹತೆ ಇಲ್ಲವೆಂದು ತಿಳಿಸುವವರ ಅಧಿಕಾರ.

(3) ಹಾಗೆ ನಿರೂಪಿಸಲ್ಪಟ್ಟ ವಾಯಿದೆಯೊಳಗಾಗಿ ಅಥವಾ ಅಪೀಲು ದಾಖಲಾಗಲ್ಪಟ್ಟಿರುವಲ್ಲಿ ಅಪೀಲಿನ ಮೇಲೆ ಕೊಟ್ಟ ಹುಕುಮಿನಲ್ಲಿ ಕೊಡಬಹುದಾದ ವಾಯಿದೆಯೊಳಗಾಗಿ ಕೆಲಸಕ್ಕಿಟ್ಟುಕೊಂಡ ಯಜಮಾನನು ಅಂಥಾ ನ್ಯೂನತೆಗಳನ್ನು ಪರಿಹರಿಸದೆ ತಪ್ಪಮಾಡಿದ ಅಥವಾ ಉಪೇಕ್ಷಿಸಿದ ಪಕ್ಷದಲ್ಲಿ ಅಥವಾ ಯಾವುದಾದರೂ ಜಮೀನು ಅಥವಾ ಕಟ್ಟಡವು ಅಥವಾ ಅದರ ಭಾಗವು ಪರಿಹರಿಸಲ್ಕಾಗದ ಅಸಾಧ್ಯವಾದ ಕಾರಣಗಳಿಂದ ಉಪಯೋಗದ ಬಗ್ಗಾಗಲಿ ಅಯೋಗ್ಯವೆಂದು ಕಮಿಟಿಯವರಿಗೆ ಕಂಡುಬಂದ ಪಕ್ಷದಲ್ಲಿ ಅಂಥಾ ಜಮೀನಾಗಲಿ ಕಟ್ಟಡವಾಗಲಿ ಅದರ ಭಾಗವಾಗಲಿ ಕೆಲಸಗಾರರ ಅಥವಾ ಯಾವುದೊಂದು ತರಗತಿಯ ಕೆಲಸಗಾರರ ಉಪಯೋಗದ ಅಥವಾ ನಿವಾಸದ ಬಗ್ಗೆ ಅಯೋಗ್ಯವಾದ್ದೆಂದು ಚೀಫ್ ಕಮೀಷನರವರು ಪ್ರಕಟಿಸಿ ತಿಳಿಸಬಹುದು.

ಡಿಕ್ಲೇರೇಶನ (ವಿಧಿಸಿ ತಿಳಿಸಿದ್ದು) ಪರಿಣಾಮ

(4) ಅಂಥಾ ಡಿಕ್ಲೇರೇಶನು ಮಾಡಲ್ಪಟ್ಟ ತರುವಾಯ ಮತ್ತು ಅದು ಜಾರಿಯಲ್ಲಿರುವಷ್ಟು ಕಾಲದವರೆಗೆ ಅಂಥಾ ಡಿಕ್ಲೇರೇಷನು ಸಂಬಂಧಪಡುವ ಯಾವ ಕೆಲಸಗಾರರಾಗಲಿ ಫಲಾನಾ ತರಗತಿಯ ಯಾವ ಕೆಲಸಗಾರರಾಗಲಿ ಅಂಥಾ ಜಮೀನಿನಲ್ಲಿ ಯಾ ಕಟ್ಟಡದಲ್ಲಿ ಯಾ ಸಂಗತ್ಯನುಸಾರವಾಗಿ ಅದರ ಮೇಲೆ ಕೆಲಸಮಾಡಲು ಯಾವ ಕರಾರಿನ ಮೇರೆಗಾಗಲಿ ಬದ್ಧರಾಗತಕ್ಕವರಲ್ಲ.

4ನೇ ಅಧ್ಯಾಯ

ದಂಡನೆಗಳು ಮತ್ತು ನಡವಳಿಕೆ.

ಕೆಲಸಗಾರರಾಗಲಿ ಮುಂಗಡವನ್ನು ಪಡೆದ ಬಳಿಕ ಕರಾರನ್ನು ನೆರವೇರಿಸುವದೆ ಬುದ್ಧಿಪೂರ್ವಕವಾಗಿ ತಪ್ಪಿದ್ದಲ್ಲಿ ಅದರ ಕೆಲಸಕ್ಕಿಟ್ಟುಕೊಂಡ ಯಜಮಾನನು ಮೇಜಿಸ್ಟ್ರೇಟನ ಬಳಿಗೆ ಫಿರ್ಯಾದು ಮಾಡುವಿಕೆ

12 (1) ಈ ಆಕ್ಟಿಗನುಗುಣವಾಗಿ ಮಾಡಿಕೊಳ್ಳಲ್ಪಟ್ಟ ಒಂದು ಕರಾರಿನ ಮೇರೆಗೆ ಯಾವ ಕೆಲಸಗಾರನಾಗಲಿ ಆತನು ನಡೆಸುವಂತೆ ಕರಾರುಮಾಡಿಕೊಂಡ ಯಾವುದಾದರೂ ಕೆಲಸದ ಬಗ್ಗೆ ಕೈಯಲ್ಲಿ ವಹಿಸುವ ಅಥವಾ ವ್ಯಾಪಾರವನ್ನು ನಡೆಸುವ ಯಾವನಾದರೂ ಕೆಲಸಕ್ಕಿಟ್ಟುಕೊಳ್ಳುವ ಯಜಮಾನನಿಂದ ಅಥವಾ ಅಂಥಾ ಕೆಲಸಕ್ಕಿಟ್ಟುಕೊಳ್ಳುವ ಯಜಮಾನನ ತರಫಿನಲ್ಲಿ ಮತ್ತು ಯಾವನಾದರೂ ಮನುಷ್ಯನಿಂದ ಮುಂಗಡವಾ ಹಣವನ್ನು ಪಡೆದಿರುವಲ್ಲಿ, ಅಂಥಾ ಕೆಲಸಗಾರನು ಬುದ್ಧಿಪೂರ್ವಕವಾಗಿ ನ್ಯಾಯಸಮ್ಮತವಾದ—ಯಾ ಯುಕ್ತವಾದ ಸಬಬಿಲ್ಲದೆ ಆತನ ಕರಾರನ್ನು ನಡೆಸಲು ಅಸಡ್ಡೆಮಾಡಿದರೆ—ಯಾ ನಿರಾಕರಿಸಿದರೆ, ಮೇಲೆ ಹೇಳಲ್ಪಟ್ಟಂಥಾ ಕೆಲಸಕ್ಕಿಟ್ಟುಕೊಳ್ಳುವ ಯಜಮಾನನು ಅಥವಾ ಮೇಲೆ ಹೇಳಲ್ಪಟ್ಟಂಥಾ ಯಾವನಾದರೂ ಮನುಷ್ಯನು ಮೇಜಿಸ್ಟ್ರೇಟರ ಬಳಿ ಫಿರ್ಯಾದು ಮಾಡಬಹುದು

(2) ಮೇಜಿಸ್ಟ್ರೇಟರು ಫಿರ್ಯಾದುದಾರನನ್ನು ಪ್ರಮಾಣದ ಮೇಲೆ ಸವಾಲು ಮಾಡತಕ್ಕದ್ದು, ಆ ಬಳಿಕ ತನ್ನ ಅಭಿಪ್ರಾಯದ ಮೇರೆಗೆ ಮುಂದರಿಸುವುದಕ್ಕೆ ಸಾಕಾದಷ್ಟು ಸಬಬಿಲ್ಲದಿದ್ದ ಪಕ್ಷದಲ್ಲಿ ಅವರ ಫಿರ್ಯಾದನ್ನು ತಳ್ಳಿ ಹಾಕಬಹುದು

(3) ಮುಂದರಿಸುವುದಕ್ಕೆ ಸಾಕಾದಷ್ಟು ಸಬಬು ಇದೆ ಎಂದು ಮೇಜಿಸ್ಟ್ರೇಟರು ಅಭಿಪ್ರಾಯ ಪಡುವುದಾದರೆ, ಅಂಥಾ ಮೇಸ್ತ್ರಿಯನ್ನಾಗಲಿ ಕೆಲಸಗಾರನನ್ನಾಗಲಿ ತಮ್ಮ ಮುಂದೆ ತರುವಂತೆ ಯುಕ್ತವೆಂದು ತಮಗೆ ತೋರುವ ಮೇರೆಗೆ ಅವರು ಒಂದು ಸಮ್ಮನನ್ನಾಗಲಿ ವಾರಂಟನ್ನಾಗಲಿ ಕೊಟ್ಟು, ಮೊಕದ್ದಮೆಯನ್ನು ವಿಚಾರಿಸಿ ತೀರ್ಮಾನಿಸತಕ್ಕದ್ದು.

ಮುಂಗಡವನ್ನು ಮರುಪಾವತಿ ಮಾಡಬೇಕಾಗಿ ಅಥವಾ ಕರಾರನ್ನು ನಡೆಸಬೇಕಾಗಿ ಹುಕುಂ ಕೊಡೋಣ.

13. (1) ಅಂಥಾ ಕೆಲಸಗಾರನು ಈ ಆಕ್ಟಿನ ಮೇರೆಗೆ ಮಾಡಿಕೊಂಡ ಯಾವುದಾದರೂ ಕರಾರಿಗನುಸಾರವಾಗಿ ಫಿರ್ಯಾದುದಾರನಿಂದ ಹಣವನ್ನು ಪಡೆದಿದ್ದು, ಆತನ ಕರಾರನ್ನು ನೆರವೇರಿಸುವರೆ ಮನಃಪೂರ್ತಿಯಾಗಿ ಮತ್ತು ನ್ಯಾಯಸಮ್ಮತವಾದ ಯಾ ತಕ್ಕದಾದ ಸಬಬಿಲ್ಲದೆ ಅಸಡ್ಡೆ ಮಾಡಿರುತ್ತಾನೆಂದು ಅಥವಾ ನಿರಾಕರಿಸಿರುತ್ತಾನೆಂದು ಮೇಜಿಸ್ಟ್ರೇಟರಿಗೆ ಸಮಾಧಾನವಾಗುವಂತೆ ರುಜುಪಡಿಸೋಣಾದ ಪಕ್ಷದಲ್ಲಿ, ಮೇಜಿಸ್ಟ್ರೇಟರು ತಮ್ಮ ಮುನಾಸಬು ಮೇರೆಗೆ ತಾವು ಯೋಗ್ಯವೆಂದು ತಿಳಿಯುವಂಥಾ ವಾಯಿದೆಯೊಳಗಾಗಿ ಮತ್ತು ಅಂಥಾ ಕಂತುಗಳು ಯಾವುವೂ ಇದ್ದರೆ ಅಂಥಾ ಕಂತುಗಳಲ್ಲಿ ಅಂಥಾ ಕೆಲಸಗಾರನು ಮುಂಗಡವಾಗಿ ಕೊಡಲಾದ ಮೊಬಲಗನ್ನು ಅಥವಾ ನ್ಯಾಯವೂ ಯೋಗ್ಯವೂ ಆಗಿರಬಹುದಾದಂಥಾ ಅದರ ಯಾವುದಾದರೂ ಭಾಗವನ್ನು ಮರುಪಾವತಿ ಮಾಡಬೇಕೆಂದು ಹುಕುಂ ಕೊಡಲು ಅಥವಾ ಒಂದು ವರುಷಕ್ಕೆ ಮೀರದಿದ್ದ ಮೇಜಿಸ್ಟ್ರೇಟರು ತೀರ್ಮಾನಿಸಬಹುದಾದಂಥಾ ವಾಯಿದೆಯೊಳಗಾಗಿ ಮತ್ತು ಅನ್ಯಥಾ ಸದರಿ ಕರಾರಿನ ಶರತ್ತುಗಳಿಗನುಗುಣವಾಗಿ ಕರಾರನ್ನು ನಡೆಸಬೇಕೆಂದು ಆತನಿಗೆ ಹುಕುಂ ಕೊಡಲುಬಹುದು.

ಪರಂತು ಅಂಥಾ ಯಾವ ಹುಕುಮಾಗಲಿ,—

(a) ಹಾಗೆ ಅಸಡ್ಡೆ ಯಾ ನಿರಾಕರಣೆ ಮಾಡಿದ ಲಾಗಾಯಿತು ಆರು ತಿಂಗಳೊಳಗಾಗಿ ಫಿರ್ಯಾದು ತರಲ್ಪಟ್ಟಿದ್ದರೇನೇ ಹೊರತು, ಅಥವಾ (b) ಫಿರ್ಯಾದುದಾರನು ಅಂಥಾ ಕೆಲಸಗಾರನ ಮೇಲಾಗಲಿ ಈ ಒಳಪ್ರಕರಣದ ಮೇರೆಗೆ ಹಿಂದೆ ಯಾವುದಾದರೂ ಸಮಯದಲ್ಲಿ ಒಂದು ಹುಕುಮನ್ನು ಪಡೆದಿರುತ್ತಾನೆಂದು ರುಜುಪಡಿಸೋಣಾದಲ್ಲಿ ಕೊಡಲ್ಪಡತಕ್ಕದ್ದಲ್ಲ.

ಟಿಪ್ಪಣಿ:—ಕರಾರನ್ನು ನೆರವೇರಿಸಲು ಯಾವ ಕಾಲವಾಗಲಿ ಗೊತ್ತುಪಡಿಸೋಣಾಗದಿದ್ದರೆ, ಅದನ್ನು ನೆರವೇರಿಸುವ ಬಗ್ಗೆ ಒಂದು ನ್ಯಾಯವಾದ ಕಾಲವೆಂದಾಗಿ ಮೇಜಿಸ್ಟ್ರೇಟರು ಭಾವಿಸುವಂಥಾ ವಾಯಿದೆಯು ಮುಗಿದನಂತರ ಅಸಡ್ಡೆ ಉಂಟಾಯಿತೆಂದು ಅನುಮಾನಿಸಬಹುದು.

(2) ಅಂಥಾ ಕೆಲಸಗಾರನಾಗಲಿ (1)ನೇ ಒಳಪ್ರಕರಣದ ಮೇರೆಗೆ ಕೊಡಲ್ಪಟ್ಟ ಹುಕುಮಿಗನುಸಾರವಾಗಿ ನಡೆಕೊಳ್ಳುವದೆ ಮನಃಪೂರ್ವಕವಾಗಿ ಮತ್ತು ನ್ಯಾಯಸಮ್ಮತವಾದ ಯಾ ತಕ್ಕ ಸಬಬಿಲ್ಲದೆ ಅಸಡ್ಡೆ ಮಾಡಿರುತ್ತಾನೆಂದು ಅಥವಾ ತಿರಸ್ಕರಿಸಿರುತ್ತಾನೆಂದು ರುಜುಪಡಿಸೋಣಾದ ಪಕ್ಷದಲ್ಲಿ, ಕೈದು ಶಿಕ್ಷೆಯು ವಿಧಿಸಲ್ಪಡತಕ್ಕದ್ದೆಂದು ಮೇಜಿಸ್ಟ್ರೇಟರು ಅಭಿಪ್ರಾಯಪಡುವದಾದರೆ, ಅವರು ತಮ್ಮ ಅಭಿಪ್ರಾಯವನ್ನು ರಿಕಾರ್ಡುಮಾಡಿ ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರ ಬಳಿಗೆ ತಮ್ಮ ಪ್ರೊಸೀಡಿಂಗುಗಳನ್ನು ಕಳುಹಿಸಿ ಅಂಥಾ ಕೆಲಸಗಾರನನ್ನಾಗಲಿ ರವಾನಿಸತಕ್ಕದ್ದು. ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರು ತಮಗೆ ಯುಕ್ತವೆಂದು ತೋರಿದಪಕ್ಷದಲ್ಲಿ, ತಕ್ಕ ಗಾರನನ್ನು ವಿಚಾರಣೆ ನಡೆಸಿ, ಸದರಿ ಮೊಕದ್ದಮೆಯಲ್ಲಿ ಈ ಮೊದಲೇ ಸಾಕ್ಷ್ಯವನ್ನು ಕೊಟ್ಟಿರುವ ಯಾವ ಸಾಕ್ಷಿಗಾರನನ್ನಾಗಲಿ ಪುನಃ ಕರೆಸಿ ವಿಚಾರಣೆ ನಡಿಸಿ, ಯಾವುದಾದರೂ ಹೆಚ್ಚಿನ ಸಾಕ್ಷ್ಯವನ್ನು ಕೊಡಬೇಕಾಗಿ ಕೇಳಿ ತೆಗೆದುಕೊಂಡ ತರುವಾಯ, ಅಂಥಾ ಕೆಲಸಗಾರನಿಗೆ ಮೂರು ತಿಂಗಳಿಗೆ ಮೀರದ ವಾಯಿದೆಯ ಕೈದು ಶಿಕ್ಷೆಯನ್ನಾಗಲಿ, ಸದರಿ ಹುಕುಂ ಒಂದು ಹಣದ ಮೊಬಲಗನ್ನು ಮರುಪಾವತಿ ಮಾಡುವ ಕುರಿತು ಆಗಿದ್ದಲ್ಲಿ ಮೂರು ತಿಂಗಳಿಗೆ ವ್ಯಾಪಿಸಬಹುದಾದ ವಾಯಿದೆಯವರೆಗೆ ಅಥವಾ ಮರುಪಾವತಿಯು ಮಾಡಲ್ಪಡುವವರೆಗೆ, ಈ ಎರಡು ವಾಯಿದೆಗಳಲ್ಲಿ ಯಾವುದು ಕಡಿಮೆಯಾದುದೋ ಆ ವಾಯಿದೆಯ ಬಗ್ಗಿನ ಕೈದು ಶಿಕ್ಷೆಯನ್ನಾಗಲಿ ವಿಧಿಸಬಹುದು.

ಪರಂತು ಯಾವುದಾದರೂ ಕಂತಿನಲ್ಲಿ ಪಾವತಿಮಾಡುವ ಕುರಿತು ಹುಕುಂ ಕೊಡಲ್ಪಟ್ಟಿರುವಲ್ಲಿ, ಯಾವುದಾದರೂ ಒಂದು ಕಂತನ್ನು ತೆರುವದಕ್ಕೆ ತಪ್ಪಿದಬಗ್ಗೆ ಒಂದು ತಿಂಗಳಿಗೆ ಮೀರಿದ ಯಾವ ವಾಯಿದೆಯ ಕೈದು ಶಿಕ್ಷೆಯಾಗಲಿ ವಿಧಿಸಲ್ಪಡತಕ್ಕದ್ದಲ್ಲ ಮತ್ತು ಅಂಥಾ ಶಿಕ್ಷೆಗಳು ಎಲ್ಲವೂ ಸೇರಿ ಒಟ್ಟಿಗೆ ಮೂರು ತಿಂಗಳಿಗೆ ಮೀರಕೂಡದು.

(3) ಮೇಜಿಸ್ಟ್ರೇಟರು, ಮುಂಗಡವಾಗಿ ಕೊಡಲ್ಪಟ್ಟ ಹಣದ ಮರುಪಾವತಿಯ ಬಗ್ಗೆ ಅಥವಾ ಸಂಗತ್ಯನುಸಾರವಾಗಿ ಕರಾರನ್ನು ನೆರವೇರಿಸುವ ಬಗ್ಗೆ ಬೇಕಾದ ವಾಯಿದೆಯನ್ನು ಆಗಿಂದಾಗ ಮುಂದರಿಸಿ ಹಾಕಬಹುದು, ಮತ್ತು ಕಂತುಗಳನ್ನು ಹೆಚ್ಚು ಕಡಿಮೆ ಮಾಡಬಹುದು.

ಪರಂತು ಯಾವ ವಾಯಿದೆಯೊಳಗಾಗಿ ಕರಾರು ನಡೆಸಲ್ಪಡಬೇಕಾಗಿದೆಯೋ ಆ ವಾಯಿದೆಯನ್ನು (1)ನೇ ಒಳಪ್ರಕರಣದ ಮೇರೆಗೆ ಕೊಡಲ್ಪಟ್ಟ ಹುಕುಮಿನ ತಾರೀಖಿನಿಂದ ಒಂದು ವರುಷಕ್ಕೆ ಮೀರಿ ವ್ಯಾಪಿಸುವಂತೆ ಈ ಒಳಪ್ರಕರಣದ ಮೇರೆಗೆ ಯಾವ ಹುಕುಮಾಗಲಿ ಕೊಡಲ್ಪಡತಕ್ಕದ್ದಲ್ಲ.

(4) ಯಾವ ಹಣವನ್ನಾಗಲಿ ಮರುಪಾವತಿ ಮಾಡೋಣವು ಅಥವಾ ಆ ಕುರಿತು ಯಾವುದಾದರೂ ಹುಕುಂ ಮುಂಗಡವಾಗಿ ಕೊಡಲ್ಪಟ್ಟು, ಸಲಾಯಿಸಲ್ಪಡದೆ ಉಳಿದಿರುವ ಯಾವುದಾದರೂ ಹಣವನ್ನು ಬರಮಾಡಿಕೊಳ್ಳುವ ಕುರಿತು ಅಥವಾ ಅನ್ಯಥಾ ಆತನಿಗೆ ಈ ಆಕ್ಟಿನ ಮೇರೆಗೆ ವಿನಾ ಅನ್ಯಥಾ ಇರಬಹುದಾದ ಯಾವುದಾದರೂ ಸಿವಿಲ್ ಪರಿಹಾರವನ್ನು ಫಿರ್ಯಾದುದಾರನಿಗೆ ತಪ್ಪಿಸತಕ್ಕದ್ದಲ್ಲ.

ನೀತಿಗೆ ವಿರೋಧವಾದ ಕರಾರುಗಳು ಜಾರಿ ನಡೆಸಲ್ಪಡಕೂಡದು.

14. ಮೇಜಿಸ್ಟ್ರೇಟರು ಫಲಾನಾ ಕರಾರು ಮುಖ್ಯಾಂಶದಲ್ಲಿ ಅನ್ಯಾಯವಾದ್ದಾಗಿತ್ತೆಂದು ತಾವು ಅಭಿಪ್ರಾಯಪಡುವಲ್ಲಿ 13ನೆ ಪ್ರಕರಣದ ಮೇರೆಗೆ ಒಂದು ಹುಕುಮನ್ನು ಕೊಡಲು ತಮ್ಮ ಮುನಾಸಬು ಮೇರೆಗೆ ನಿರಾಕರಿಸಬಹುದು.

ಸುಳ್ಳು ಯಾ ಅಲ್ಪವಾದ ಯಾ ಉಪದ್ರಕರವಾದ ಫಿರ್ಯಾದುಗಳಲ್ಲಿ ಪರಿಹಾರವು.

15. (1) ಈ ಆಕ್ಟಿನ ಮೇರೆಗಿನ ಯಾವುದಾದರೂ ಪ್ರೊಸಿಡಿಂಗುಗಳಲ್ಲಿ ಫಿರ್ಯಾದು ಸುಳ್ಳಾದ್ದೆಂದು ಫಿರ್ಯಾದುದಾರನಿಗೆ ತಿಳಿದಿತ್ತೆಂಬುದಾಗಿ ಅಥವಾ ಅಲ್ಪ ಯಾ ಉಪದ್ರಕರವಾದ್ದು ಎಂಬುದಾಗಿ ಮೇಜಿಸ್ಟ್ರೇಟರು ಅಭಿಪ್ರಾಯ ಪಟ್ಟಿದ್ದೇ ಆದರೆ, ಫಿರ್ಯಾದುದಾರನು ಫಿರ್ಯಾದು ಮಾಡಲ್ಪಟ್ಟ ಮನುಷ್ಯನಿಗೆ ಪರಿಹಾರ ದ್ರವ್ಯವನ್ನು ಏತಕ್ಕೆ ಕೊಡಕೂಡದೆಂಬುವದನ್ನು ಕುರಿತು ಕೂಡಲೇ ಕಾರಣ ತೋರಿಸಬೇಕಾಗಿ ಮೇಜಿಸ್ಟ್ರೇಟರು ಫಿರ್ಯಾದುದಾರನಿಗೆ ತಮ್ಮ ಮುನಾಸಬು ಮೇರೆಗೆ ಕೇಳಬಹುದು.

(2) ಅಂಥಾ ಫಿರ್ಯಾದುದಾರನು ತೋರಿಸಬಹುದಾದ ಯಾವ ಕಾರಣವನ್ನಾಗಲಿ ಮೇಜಿಸ್ಟ್ರೇಟರು ಪರ್ಯಾಲೋಚಿಸತಕ್ಕದ್ದು, ಮತ್ತು ಹಾಗೆ ಪರ್ಯಾಲೋಚಿಸಿದ ತರುವಾಯ, ಸದರೀ ಫಿರ್ಯಾದು ಸುಳ್ಳಾದ್ದೆಂದು ಫಿರ್ಯಾದುದಾರನಿಗೆ ತಿಳಿದಿತ್ತೆಂಬುದಾಗಿ ಅಥವಾ ಅಲ್ಪ ಯಾ ಉಪದ್ರಕರವಾದ್ದು ಎಂಬುದಾಗಿ ಮೇಜಿಸ್ಟ್ರೇಟರು ಸಮಾಧಾನ ಪಟ್ಟಿದ್ದೇ ಆದರೆ, ಅವರು ರಿಕಾರ್ಡುಮಾಡತಕ್ಕ ಕಾರಣಗಳಿಗಾಗಿ, ನೂರು ರೂಪಾಯಿಗೆ ಮೀರದ ಪರಿಹಾರದ್ರವ್ಯವು ಫಿರ್ಯಾದುದಾರನಿಂದ ಫಿರ್ಯಾದು ಮಾಡಲ್ಪಟ್ಟ ಮನುಷ್ಯನಿಗೆ ಕೊಡಲ್ಪಡತಕ್ಕದ್ದೆಂದು ಆಜ್ಞಾಪಿಸಬಹುದು.

(3) ಪರಿಹಾರದ್ರವ್ಯವನ್ನು ಪಾವತಿಮಾಡುವ ಬಗ್ಗೆ (2)ನೇ ಒಳಪ್ರಕರಣದ ಮೇರೆಗೆ ಒಂದು ಹುಕುಮು ಕೊಡೋಣಾದಲ್ಲಿ ಆ ಪರಿಹಾರದ್ರವ್ಯವನ್ನು ಅದು ಒಂದು ಜುಲುಮಾನೆಯಾಗಿದ್ದರೆ ಹೇಗೋ ಹಾಗೆಯೇ ಬರಮಾಡಿಕೊಳ್ಳತಕ್ಕದ್ದು, ಮತ್ತು ಮೇಜಿಸ್ಟ್ರೇಟರು ಅದರ ಪಾವತಿಯನ್ನು ಕುರಿತು ಆಜ್ಞಾಪಿಸಿರುವ ಹುಕುಮಿನಲ್ಲಿ, ತೆರಲು ತಪ್ಪಿದಲ್ಲಿ ಫಿರ್ಯಾದುದಾರನು ಮೂವತ್ತು ದಿನಗಳಿಗೆ ವ್ಯಾಪಿಸಬಹುದಾದ ಒಂದು ವಾಯಿದೆಯವರೆಗೆ ಅಥವಾ ಪಾವತಿಯು ಮಾಡಲ್ಪಡುವವರೆಗೆ ಈ ಎರಡು ವಾಯಿದೆಗಳಲ್ಲಿ ಯಾವುದು ಕಡಿಮೆಯಾದುದೋ ಆ ವಾಯಿದೆಯ ವರೆಗೆ ಸಾದಾ ಕೈದು ಶಿಕ್ಷೆಯನ್ನು ಅನುಭವಿಸತಕ್ಕದೆಂದು ಸಹಾ ಹುಕುಂ ಕೊಡಬಹುದು.

ಕರಾರನ್ನು ನೆರವೇರಿಸುವ ಬಗ್ಗೆ ಜಾಮೀನು ಕೊಡಬೇಕಾಗಿ ಮೇಜಿಸ್ಟ್ರೇಟರು ವಿಧಿಸಬಹುದು

16. ಯಾವ ಕೆಲಸಗಾರನಾಗಲಿ ಆತನ ಕರಾರನ್ನು ನೆರವೇರಿಸಬೇಕಾಗಿ ಮೇಜಿಸ್ಟ್ರೇಟರು ಹುಕುಂ ಮಾಡಿದಲ್ಲಿ, ಅವರು, ಫಿರ್ಯಾದುದಾರನ ಅಪೇಕ್ಷೆಯ ಮೇರೆಗೆ, ಸದರೀ ಹುಕುಮನ್ನು ತಕ್ಕಂತೆ ನೆರವೇರಿಸುವ ಬಗ್ಗೆ ಬೇಕಾದ ಜಾಮೀನು ಸಹಿತವಾದ ಒಂದು ಮುಚ್ಚಳಿಕೆ ಒದಗಿಸಿಕೊಡಬೇಕಾಗಿ ಅಂಥಾ ಮೇಸ್ತ್ರಿ ಯಾ ಕೆಲಸಗಾರನಿಗೆ ವಿಧಿಸಬಹುದು, ಮತ್ತು ಮೇಜಿಸ್ಟ್ರೇಟರಿಗೆ ಸಮಾಧಾನವಾಗುವಂತೆ ಆತನು ಹಾಗೆ ಮುಚ್ಚಳಿಕೆ ಒದಗಿಸಿ ಕೊಡಲು ಅಥವಾ ಹಾಗೆ ಜಾಮೀನು ಕೊಡಲು ತಪ್ಪಿದಲ್ಲಿ, ಮೇಜಿಸ್ಟ್ರೇಟರು ಆತನಿಗೆ ಮೂರುತಿಂಗಳಿಗೆ ಮೀರದ ಒಂದು ವಾಯಿದೆಯ ಕೈದು ಶಿಕ್ಷೆಯನ್ನು ವಿಧಿಸಬಹುದು.

ಸಂದರ್ಶನೆಯನ್ನಾಗಲಿ ವಿಚಾರಣೆಯನ್ನಾಗಲಿ ನಡೆಸುವಲ್ಲಿ ಆತಂಕಿಸಿದ ಬಗ್ಗೆ ದಂಡನೆ

17. ಯಾವನೊಬ್ಬ ಕೆಲಸಕ್ಕಿಟ್ಟುಕೊಂಡ ಯಜಮಾನನು ಅಥವಾ ಆತನ ಅಪ್ಪಣೆಯ ಮೇರೆಗೆ ಯಾ ಆತನ ಬಗ್ಗೆ ವರ್ತಿಸುವ ಯಾವನೊಬ್ಬ ಮನುಷ್ಯನು ಈ ಆಕ್ಟಿನ ಮೇರೆಗೆ ಮಾಡಲ್ಪಡುವ ಯಾವ ಸಂದರ್ಶನೆಗಾಗಲಿ ವಿಚಾರಣೆಗಾಗಲಿ ಮನಃಪೂರ್ವಕವಾಗಿ ಅಡ್ಡಿ ಮಾಡಿದ್ದರೆ ಅಥವಾ 10ನೇ ಪ್ರಕರಣದ ಮೇರೆಗೆ ಮಾಡೋಣಾದ ಯಾವುದಾದರೂ ಅಪೇಕ್ಷೆಗನುಸಾರವಾಗಿ ನಡೆದುಕೊಳ್ಳುವದಕ್ಕೆ ಲೋಪಿಸಿದರೆ, ಆತನು ಐನೂರು ರೂಪಾಯಿಗಳಿಗೆ ವ್ಯಾಪಿಸಬಹುದಾದ ಜುಲುಮಾನೆಯಿಂದ ಶಿಕ್ಷಿಸಲ್ಪಡಲಿಕ್ಕೆ ಗುರಿಯಾಗತಕ್ಕದ್ದು.

ಮನೆವಸತಿ ಮುಂತಾದುದನ್ನು ಒದಗಿಸಿಕೊಡಲು ತಪ್ಪಿದ ಬಗ್ಗೆ ದಂಡನೆ

18. ಯಾವನೊಬ್ಬ ಕೆಲಸಕ್ಕಿಟ್ಟುಕೊಂಡ ಯಜಮಾನನು ಈ ಆಕ್ಟಿನ ಯಾ ಅದರ ಮೇರೆಗೆ ಮಾಡೋಣಾದ ಯಾವುದಾದರೂ ಕ್ರಮದ ನಿಬಂಧನೆಗಳಿಗನುಸಾರವಾಗಿ ಮನೆವಸತಿಯನ್ನಾಗಲಿ ನೀರು ಸರಬರಾಯಿಯನ್ನಾಗಲಿ ಆರೋಗ್ಯರಕ್ಷಣೆಯ ಏರ್ಪಾಡನ್ನಾಗಲಿ ಒದಗಿಸಿಕೊಡಲು ಅಥವಾ ವೈದ್ಯಕೀಯ ಚಿಕಿತ್ಸೆಯ ಬಗ್ಗೆ ಬೇಕಾದ ವ್ಯವಸ್ಥೆಮಾಡಲು ಮನಃಪೂರ್ವಕವಾಗಿ ಲೋಪಿಸಿದ್ದೇ ಆದರೆ, ಆತನು ಐನೂರು ರೂಪಾಯಿಗೆ ವ್ಯಾಪಿಸಬಹುದಾದ ಜುಲುಮಾನೆಯಿಂದ ಶಿಕ್ಷಿಸಲ್ಪಡಲಿಕ್ಕೆ ಗುರಿಯಾಗತಕ್ಕದ್ದು ಮತ್ತು ಹುಕುಮಿನಲ್ಲಿ ನಿರ್ಣಯಿಸಲ್ಪಡತಕ್ಕ ಒಂದು ನ್ಯಾಯವಾದ ಕಾಲದೊಳಗಾಗಿ ಆತನು ಅಂಥಾ ನಿಬಂಧನೆಗಳನ್ನಾಗಲಿ ಕ್ರಮವನ್ನಾಗಲಿ ನೆರವೇರಿಸತಕ್ಕದ್ದೆಂದು ತಕ್ಸೀರು ಸಾಬೀತುಪಡಿಸುವ ಮೇಜಿಸ್ಟ್ರೇಟರು ಹುಕುಂ ಕೊಡಬಹುದು.

ಹಾಗೆ ನಿರ್ಣಯಿಸಲ್ಪಟ್ಟ ಕಾಲದೊಳಗಾಗಿ ಸದರೀ ಹುಕುಮಿನ ಮೇರೆಗೆ ನಡೆಕೊಳ್ಳಲಿಕ್ಕೆ ಕೆಲಸಕ್ಕಿಟ್ಟುಕೊಂಡ ಯಜಮಾನನು ಮನಃಪೂರ್ವಕವಾಗಿ ಲೋಪಿಸಿದ್ದೇ ಆದರೆ, ಸದರೀ ಲೋಪವು ನಡೆಯುತ್ತಿರುವ ಪ್ರತಿದಿನದ ಬಗ್ಗೆ ಇಪ್ಪತ್ತು ರೂಪಾಯಿಗೆ ವ್ಯಾಪಿಸಬಹುದಾದ ಜುಲುಮಾನೆಯಿಂದ ಶಿಕ್ಷಿಸಲ್ಪಡಲು ಆತನು ಗುರಿಯಾಗತಕ್ಕದ್ದು.

ಕರಾರು ಮಾಡಿಕೊಂಡ ಕೆಲಸ ಮಾಡುವವನನ್ನು ಫುಸಲಾಯಿಸಿ ತೆಗೆದುಕೊಂಡುಹೋದ ಬಗ್ಗೆ ದಂಡನೆ.

19. (1) ಒಬ್ಬ ಕೆಲಸಗಾರನು ಯಾವನೊಬ್ಬ ಕೆಲಸಕ್ಕಿಟ್ಟುಕೊಂಡ ಯಜಮಾನನ ಬಗ್ಗೆ ಕೆಲಸಮಾಡುವರೆ ತನ್ನ ಕರಾರಿನ ಮೂಲಕ ಬದ್ಧನಾಗಿರುತ್ತಾನೆಂದು ತಿಳಿದಿದ್ದು, ಯಾವಾತನು ಸ್ವೇಚ್ಛೆಯಿಂದ ಅಂಥಾ ಕೆಲಸಗಾರನನ್ನು ಆತನನ್ನು ಕೆಲಸಕ್ಕಿಟ್ಟುಕೊಂಡ ಯಜಮಾನನ್ನು ಬಿಡುವಂತೆ ಫುಸಲಾಯಿಸಿ ತೆಗೆದುಕೊಂಡು ಹೋಗುತ್ತಾನೋ ಅಥವಾ ಹಾಗೆ ತೆಗೆದುಕೊಂಡು ಹೋಗಲಿಕ್ಕೆ ಪ್ರಯತ್ನಿಸುತ್ತಾನೋ ಅಥವಾ ಆತನನ್ನು ಕೆಲಸಕ್ಕಿಟ್ಟುಕೊಂಡ ಯಜಮಾನನನ್ನು ತನ್ನ ಕರಾರಿನ ಶರತ್ತುಗಳಿಗೆ ವಿರೋಧವಾಗಿ ಬಿಟ್ಟುಬಂದ ಯಾವನಾದರೂ ಕೆಲಸಗಾರನಿಗಾಗಲಿ ಆಶ್ರಯ ಕೊಡುತ್ತಾನೋ ಅಥವಾ ಆತನನ್ನು ಕೆಲಸಕ್ಕಿಟ್ಟುಕೊಳ್ಳುತ್ತಾನೋ ಆತನು ಒಂದುತಿಂಗಳುವರೆಗಿನ ಕೈದು ಶಿಕ್ಷೆಯಿಂದ ಅಥವಾ ಇನ್ನೂರು ರೂಪಾಯಿವರೆಗಿನ ಜುಲುಮಾನೆಯಿಂದ ಅಥವಾ ಇವೆರಡರಿಂದಲೂ ಶಿಕ್ಷಿಸಲ್ಪಡುವರೆ ಗುರಿಯಾಗತಕ್ಕದ್ದು.

(2) ತಕ್ಸೀರು ಸಾಬೀತುಪಡಿಸುವ ಮೇಜಿಸ್ಟ್ರೇಟರು, ಈ ಪ್ರಕರಣದ ಮೇರೆಗೆ ಹೊರಿಸಲ್ಪಟ್ಟ ಪೂರಾ ಜುಲುಮಾನೆಯನ್ನು ಅಥವಾ ಅದರ ಯಾವುದಾದರೂ ಭಾಗವನ್ನು ಸದರೀ ಕೆಲಸಗಾರನು ಯಾವ ಕೆಲಸಕ್ಕಿಟ್ಟುಕೊಂಡ ಯಜಮಾನನೊಡನೆ ಕರಾರುಮಾಡಿಕೊಂಡಿರುತ್ತಾನೋ ಆ ಕೆಲಸಕ್ಕಿಟ್ಟುಕೊಂಡ ಯಜಮಾನನಿಗೆ ಕೊಡಬಹುದು.

1898ನೇ ಇಸವಿಯ 5ನೇ ನಂ. ಆಕ್ಟು.

ತಕ್ಸೀರುಗಳನ್ನು ರಾಜಿಮಾಡಿಕೊಳ್ಳೋಣ.

(3) 1898ನೇ ಇಸವಿಯ ಕ್ರಿಮಿನಲ್ ಪ್ರೊಸಿಜ್ಯೂರ್ ಕೋಡಿನಲ್ಲಿ ಏನು ಇದ್ದರೂ ಸಹಿತ, ಈ ಪ್ರಕರಣದ ಮೇರೆಗಿನ ತಕ್ಸೀರು ಫಿರ್ಯಾದುದಾರನ ಇಷ್ಟದ ಮೇರೆಗೆ ರಾಜಿಮಾಡಿಕೊಳ್ಳಲ್ಪಡಬಹುದು.

5ನೇ ಅಧ್ಯಾಯ.

ಕ್ರಮುಗಳು.

ಕ್ರಮುಗಳನ್ನು ಏರ್ಪಡಿಸುವರೆ ಅಧಿಕಾರವು

20. (1) ಸ್ಥಳೀಕ ಗವರ್ನ್ಮೆಂಟಿನವರು,

(a) ಕರಾರುಗಳನ್ನು ಬರೆಯಬೇಕಾದ ನಮೂನೆಯನ್ನು ಯಾ ನಮೂನೆಗಳನ್ನು ನಿರ್ದೇಶಿಸಿ,

(b) ಅಂಥಾ ಕರಾರುಗಳಲ್ಲಿ ಕಾಣಿಸಬೇಕಾದ ತಪಸೀಲುಗಳನ್ನು ನಮೂದಿಸಿ,

(c) ಕೆಲಸಗಾರರನ್ನು ಮತ್ತು ಅವರ ಆಶ್ರಿತರನ್ನು ಕುರಿತು ಕೆಲಸಕ್ಕಿಟ್ಟುಕೊಳ್ಳುವ ಯಜಮಾನರು ಇಡಲು ಬದ್ಧರಾಗಿರತಕ್ಕ ರಿಜಿಸ್ಟರುಗಳನ್ನು ಮತ್ತು ಅವರು ಕಳುಹಿಸಿಕೊಡತಕ್ಕ ರಿಟರ್ನುಗಳನ್ನು ನಿರ್ದೇಶಿಸಿ,

(d) ಕೆಲಸಕ್ಕಿಟ್ಟುಕೊಳ್ಳುವ ಯಜಮಾನರು ಕೆಲಸಗಾರರಿಗೋಸ್ಕರ ಅಥವಾ ಯಾವುದೊಂದು ತರಗತಿಯ ಕೆಲಸಗಾರರಿಗೋಸ್ಕರ ಮತ್ತು ಅವರ ಆಶ್ರಿತರಿಗೋಸ್ಕರ ಒದಗಿಸಿಕೊಡಲು ಬದ್ಧರಾಗಿರತಕ್ಕ ವಸತಿಯನ್ನು, ನೀರು ಸರಬರಾಯಿಯನ್ನು ಆರೋಗ್ಯರಕ್ಷಣೆಯ ಏರ್ಪಾಡುಗಳನ್ನು ಮತ್ತು ವೈದ್ಯಕೀಯ ಚಿಕಿತ್ಸೆಯ ಬಗ್ಗೆ ಬೇಕಾದ ಏರ್ಪಾಡನ್ನು ಕ್ರಮಪಡಿಸಿ, ಮತ್ತು

(e) ಸಾಮಾನ್ಯವಾಗಿ ಈ ಆಕ್ಟಿನ ಉದ್ದೇಶಗಳನ್ನು ನೆರವೇರಿಸುವಬಗ್ಗೆ, ಕ್ರಮಗಳನ್ನು ಪ್ರಚುರಗೊಳಿಸಿದ ತರುವಾಯ ಏರ್ಪಡಿಸಬಹುದು

ಕ್ರಮವನ್ನು ಉಲ್ಲಂಘಿಸಿದಬಗ್ಗೆ ದಂಡನೆಯನ್ನು ಗೊತ್ತುಪಡಿಸುವರೆ ಅಧಿಕಾರವು.

(2) ಈ ಆಕ್ಟಿನ ಮೇರೆಗೆ ಯಾವ ಕ್ರಮವನ್ನಾಗಲಿ ಏರ್ಪಡಿಸುವಲ್ಲಿ, ಅಂಥಾ ಕ್ರಮದ ಪ್ರತಿ ಉಲ್ಲಂಘನೆಯ ಯಾವ ಸಂಗತಿಯಲ್ಲಾಗಲಿ ಐನೂರು ರೂಪಾಯಿಗೆ ಮೀರದ ಜುಲುಮಾನೆಯಿಂದ ಶಿಕ್ಷಿಸಲ್ಪಡಲಿಕ್ಕೆ ಗುರಿಯಾಗತಕ್ಕದ್ದೆಂದು ಸ್ಥಳೀಕ ಗವರ್ನ್ಮೆಂಟಿನವರು ಆಜ್ಞಾಪಿಸಬಹುದು.

6ನೇ ಅಧ್ಯಾಯ.

ವಿವಿಧ ವಿಷಯಗಳು.

ಆಕ್ಟಿಗನುಗುಣವಾಗಿ ಸಲ್ಲಬೇಕಾದ ಮೊಬಲಗುಗಳನ್ನು ಬರಮಾಡಿಕೊಳ್ಳೋಣ.

21. 13ನೆ ಪ್ರಕರಣದ ಮೇರೆಗೆ ತೆರಲ್ಪಡಬೇಕಾಗಿ ಹುಕುಂಕೊಡಲ್ಪಟ್ಟ ಯಾವ ಮೊಬಲಗಾಗಲಿ ಅದು ಯಾವನಿಂದ ಸಲ್ಲಬೇಕಾಗಿದೆಯೋ ಆ ಮನುಷ್ಯನು ತತ್ಕಾಲದಲ್ಲಿ ವಸಿಸುವ ಸ್ಥಳದಮೇಲೆ ನ್ಯಾಯಾಧಿಕಾರವಿರುವ ಒಬ್ಬ ಮೇಜಿಸ್ಟ್ರೇಟರಿಗೆ ಮನವಿ ಮಾಡಿಕೊಂಡು, ಅಂಥಾ ಮನುಷ್ಯನಿಗೆ ಸೇರಿದ್ದು ಸದರಿ ಮೇಜಿಸ್ಟ್ರೇಟರ ನ್ಯಾಯಾಧಿಕಾರದ ಎಲ್ಲೆಗಳೊಳಗಿರುವ ಯಾವುದಾದರೂ ಚರಸ್ವತ್ತನ್ನು ಜಪ್ತಿಮಾಡಿ ವಿಕ್ರಯಿಸುವ ಮೂಲಕ ಬರಮಾಡಿಕೊಳ್ಳಲ್ಪಡಬಹುದು.

ಉದ್ದೇಶಗಳ ಮತ್ತು ಕಾರಣಗಳ ವಿವರಣೆ.

1926ನೇ ಇಸವಿಯ ಮಾರ್ಚ ತಿಂಗಳ 31ನೇ ತಾರೀಖಿನಲ್ಲಿ ಅಂತ್ಯವಾಗುವ 1859ನೇ ಇಸವಿಯ 13ನೆ ನಂಬರು ಆಕ್ಟಿನ ಬದಲಾಗಿ ಕೆಲವು ರಕ್ಷಣೆಗಳನ್ನು ಸೇರಿಸಿ ಈ ಮಸೋದಾ ಆಕ್ಟನ್ನು ಏರ್ಪಡಿಸಿ, ಕೂಲಿ ಕೆಲಸದ ಶರತ್ತುಗಳಿಗೆ ಲಗಾವಾಗಿ 1903ನೇ ಇಸವಿಯ 1ನೆ ನಂಬರು ಮದ್ರಾಸ್ ಆಕ್ಟಿನಲ್ಲಿ ಕಂಡುಬರುವ ಪರಂತು 1859ನೇ ಇಸವಿಯ 13ನೆ ನಂಬರು ಆಕ್ಟಿನಲ್ಲಿಲ್ಲದ ಒಂದೆರಡು ನಿಬಂಧನೆಗಳನ್ನು ಅದೇ ಕಾಲದಲ್ಲಿ ಏರ್ಪಡಿಸುವರೆ ಇರಾದಿಸಲಾಗಿದೆ.

ಕೊಡಗಿನಸಂಸ್ಥಾನವು ಪ್ರತ್ಯೇಕವಾದ ಮತ್ತು ವಿರಳವಾದ ಜನಸಂಖ್ಯೆಯನ್ನುಳ್ಳ ಪ್ರದೇಶವಾಗಿದೆ. ಅದು ಆಯಾ ಕಾಂ

ಗ್ರಾಮುಗಳಲ್ಲಿ ಹೊರಪ್ರದೇಶಗಳಿಂದ ಬರುವ ಮೇಲೆ ವಿಶೇಷ ರೀತಿಯಲ್ಲಿ ಹೊಂದಿಕೊಂಡಿದೆ. ಕಾಫಿ, ರಬ್ಬರು, ಟೀ (ಶೇಯೆಲೆ) ಮತ್ತು ಯಾಲಕ್ಕಿಯನ್ನು ಬೆಳೆಯುವ ಎಸ್ಟೇಟುಗಳ ವಿಸ್ತೀರ್ಣವು 50,000 ಎಕರೆಯಾಗಿದೆ, ಮತ್ತು ಅದಕ್ಕೆ 30,000 ಕ್ಕಿಂತ ಕಡಿಮೆ ಇಲ್ಲದಷ್ಟು ಕೆಲಸಗಾರರು ಬೇಕಾಗಿದೆ. ಈ ವ್ಯವಸಾಯ ಕಾರ್ಯಕ್ಕಾಗಿ ಪಶ್ಚಿಮತೀರದಿಂದ 3 000 ಕೂಲಿಯವರನ್ನು ಕೆಲಸಕ್ಕೆ ನೇಮಿಸಿಕೊಂಡಿರುವದರಿಂದ ಹೊರಪ್ರದೇಶಗಳಿಂದ ಬರುವ ಕೂಲಿ ಕೆಲಸಗಾರರು ಬಹಳಮಟ್ಟಿಗೆ ದಕ್ಷಿಣಕೊಡಗಿನಲ್ಲಿ ಭತ್ತದ ವ್ಯವಸಾಯದಲ್ಲಿ ಸಹಾ ಕೆಲಸಕ್ಕೆ ಸೇರಿಕೊಳ್ಳುತ್ತಾರೆ. ಮುಂಗಡಗಳನ್ನು ಕೊಡುವ ಒಂದು ಏರ್ಪಾಡಿನ ಮೂಲವಾಗಿ ಹೊರತು ಬೇರೆ ರೀತಿಯಲ್ಲಿ ಇನ್ನೂ ಅಂಥಾ ಕೂಲಿ ಕೆಲಸಗಾರರನ್ನು ಪಡೆಯಲು ಸಾಧ್ಯವಿಲ್ಲ. ಮತ್ತು ಸಾಧಾರಣ ಕಾನೂನಿನಿಂದ ಕೆಲಸಕ್ಕಿಟ್ಟುಕೊಳ್ಳುವ ಯಜಮಾನನಿಗೆ ಕೊಡಲ್ಪಟ್ಟ ಸಂರಕ್ಷಣೆಯು ಅಸಮರ್ಪಕವಾಗಿದೆ. ಕೆಲಸಗಾರನಿಗೆ ಅದೇ ರೀತಿಯಲ್ಲಿ ಪ್ರತಿ ಸಂರಕ್ಷಣೆಯನ್ನು ಕೊಡುವ ಕಾನೂನು ಪ್ರಕೃತದಲ್ಲಿ ಕೊಡಗಿನಲ್ಲಿ ಇಲ್ಲ; 1903ನೇ ಇಸವಿಯ 1ನೆ ನಂಬರು ಮದ್ರಾಸ್ ಆಕ್ಟಿನಲ್ಲಿ ಒಳಕೊಂಡಿರುವ ಹೆಚ್ಚು ಮುಖ್ಯವಾದ ಸೂತ್ರಗಳನ್ನು ಮಸೂದಾ ಆಕ್ಟಿನಲ್ಲಿ ಸೇರಿಸಲಾಗಿದೆ.

ಸ್ಥಿತಿ ವ್ಯತ್ಯಾಸವಾದಹಾಗೆ ಈ ಆಕ್ಟನ್ನು ಪುನರ್ವಿಮರ್ಶೆ ಮಾಡುವದಕ್ಕೋಸ್ಕರ ಕೆಲವು ವರ್ಷಗಳನಂತರ ಅದನ್ನು ರದ್ದುಪಡಿಸುವದಕ್ಕೆ ಏರ್ಪಾಡು ಮಾಡಲಾಗಿದೆ.

ಈ ಮಸೂದಾ ಆಕ್ಟಿನ ಕೆಲಸಗಾರ ಎಂಬದರ ಅರ್ಥವಿವರಣೆಯು ಹೀಗೆಂದು ಗೊತ್ತುಮಾಡಲ್ಪಟ್ಟ ತರಾಜುಗಾರರಲ್ಲೇ ಸಂಕೋಚವಾಗುತ್ತ ಈಗ ಜಾರಿಯಲ್ಲಿರುವ ಆಕ್ಟಿಗೆ ಸಂಬಂಧಪಟ್ಟ ಇತರ ಭಾಗಗಳ ಕೆಲಸಗಾರರನ್ನು ವಿನಾಯಿ ಮಾಡುವದೆ

ಮಡಿಕೇರಿ.
1925ನೆ ಇಸವಿ ಡಿಸೆಂಬರ್ 21ನೆ ತಾರೀಖು } ಟಿ. ಜಿ. ಬಾಸ್ಕರ್.

ಕೆ. ಚಂಗಪ್ಪ,
ಕೊಡಗಿನ ನ್ಯಾಯವಿಧಾಯಕ ಸಭೆಯ ಸಕ್ರೆಟರಿ.

ಡಾಕ್ಟರ್ ಎಸ್ ಎನ್ ಅಯ್ಯಂಗಾರ್, ಬಿ ಎ.,
ಎಲ್ ಆರ್ ಸಿ ಪಿ. ಅಂಡ್. ಎಸ್. (ಎಡಿನ್‌ಬರ್ಗ್)
ಎಲ್. ಎಫ್ ಪಿ ಅಂಡ್ ಎಸ್., [ಗ್ಲಾಸ್‌ಗೊ.]

ದಂತ ವೈದ್ಯರು

ಮಡಿಕೇರಿ ಟ್ರಾವೆಲ್ಲರ್ಸ್ ಬಂಗ್ಲೆಯಲ್ಲಿ ಉಳಕೊಂಡಿರುವರು. ಇಚ್ಛೈಸುವವರು ಅವರನ್ನು ಅಲ್ಲಿ ಕಾಣಬಹುದು.

ಅತ್ಯಂತ ಸುಲಭ ದರದ ಮತ್ತು ಹಿಂದೀಯರಿಂದ ಉತ್ತಮ ತರದಲ್ಲಿ ನಡಿಸಲ್ಪಡುತ್ತಿರುವ **ಲೈಫ್ ಆಫ್ ಇಂಡಿಯಾ ಇನ್ಸೂರೆನ್ಸ್ ಕಂಪೆನಿ ಲಿಮಿಟೆಡ್, ಕಲ್ಕತ್ತಾ,** ಇದರಲ್ಲಿ ಜೀವವಿಮೆ ಮಾಡಿ ತುಂಬಾ ಲಾಭ ಹೊಂದಿರಿ

ಏಜೆಂಟ್—

ಎಸ್ ರಾಮಣ್ಣ,
ಟ್ರಾನ್ಸ್‌ಪೋರ್ಟ್ ಬಂಗ್ಲೆ,
ಮಡಿಕೇರಿ

FOR SALE.

ESSEX LIGHT SIX, Latest Model, new last may, driven 5000 miles only. Perfect condition, many extras Price Rs 3000.

Also Old Model 7-9 Harley Davidson and Side Car.

No reasonable offer refused

Apply:—The Hunsur Works, "Hunsur."

3-2

ವಿಜ್ಞಾಪನೆ.

ನನಗೆ 'ಕಿಂಗ್ಸ್ ಪೋಲೀಸ್ ಮೆಡಲ್' (King's Police Medal) ದೊರೆತದಕ್ಕಾಗಿ ಅನೇಕ ಮಹನೀಯರು ನನಗೆ ಅಭಿನಯ ಪತ್ರಬರೆದದಕ್ಕೆಲ್ಲಾ ಪ್ರತ್ಯೇಕ ಜವಾಬು ಕೊಡಲು ನಾನು ಕಾಯಿಲಸ್ತನಾಗಿರುವದರಿಂದ ಅಸಾಧ್ಯವಾಗಿದೆ. ಆದ್ದರಿಂದ ಅವರಿಗೆ ಈ ಮೂಲಕ ನನ್ನ ಮನಃಪೂರ್ವಕವಾದ ವಂದನೆಯನ್ನು ಅರ್ಪಿಸುತ್ತೇನೆ.

ಪಟ್ಟಮಾಡ ದೇವೈಯ್ಯ.
Dy. S. P.

ವರ್ತಮಾನ ಸಂಗ್ರಹ

ಒಳದೇಶ.

ಕದ್ದನುಪ್ಪೆ ಗ್ರಾಮದ ಮ॥ ಅಟ್ರಂಗಲ ಬೋಗೈಯ್ಯನವರು ಕಳೆದ ತಾ. 30ರಲ್ಲಿ ಶಿವಾಧೀನರಾದರು.

ದಕ್ಷಿಣ ಕೊಡಗಿನ ಕುಲವು ಗ್ರಾಮಗಳಲ್ಲಿ ಇನ್‌ಫ್ಲುಯೆನ್ಸ ಜ್ವರವು ಹರಡಿಕೊಂಡಿದೆಯೆಂದು ತಿಳಿಯುತ್ತೇವೆ. ಅಲ್ಲಲ್ಲಿ ಮರಣಗಳ ವಾರ್ತೆಯು ಕೇಳಬರುತ್ತದೆ.

ಹೊಸ ವರ್ಷದ ಬಹುಮಾನಗಳಲ್ಲಿ ರಾವ್ ಸಾಹೇಬ್ ಪಟ್ಟಮಾಡ ದೇವೈಯ್ಯನವರಿಗೆ "ಕಿಂಗ್ಸ್ ಪೋಲೀಸ್ ಮೆಡಲ್" ಎಂಬ ಪದಕವು ದೊರೆತದನ್ನು ತಿಳಿಸಲು ಸಂತೋಷಪಡುತ್ತೇವೆ.

ಫಾರೆಸ್ಟ್ ಇಂಜಿನೀಯರಾದ ಮ॥ ಜೆ ಎಲ್. ಹ್ಯಾರಿಸನ್‌ರವರಿಗೆ ಬರುವ ಫೆಬ್ರವರಿ 5ರಿಂದ ಪೂರ್ತಿ ಸಂಬಳದ 8 ತಿಂಗಳು ರಜೆಯೂ, ಅರ್ಧ ಸಂಬಳದಲ್ಲಿ 4 ತಿಂಗಳು ರಜೆಯೂ ಮಂಜೂರಾಗಿದೆ.

ಬೊಂಬಾಯಿಯಲ್ಲಿ ನಡೆಯುವ ಕೋಆಪರೇಟಿವ್ ಕಾನ್ಫರೆನ್ಸಿಗೆ ಕೊಡಗಿನಿಂದ ಸಹಕಾರಿ ಸಂಘಗಳ ರಿಜಸ್ಟ್ರಾರವರಾದ ಮ॥ ಕೆ. ಎನ್. ಸುಬ್ರಾಯರವರು ತಾ 7ರಲ್ಲಿ ಹೊರಟು ಹೋದರು.

ಸಂಪಾಜೆಯಲ್ಲಿ ಕೆಲವು ಕಾಲದಿಂದ ಮ॥ ಕೇಲಾಡಿ ರಾಮಚಂದ್ರಯ್ಯನವರ ತೋಟ ಗದ್ದೆಗಳಲ್ಲಿ ಬೆಳೆಯನ್ನು ನಷ್ಟಪಡಿಸುತ್ತಿದ್ದ ಒಂಟಿಗ ಆನೆಯನ್ನು ಅವರು ಕಳೆದ ತಾ. 26ರಲ್ಲಿ ಗುಂಡುಹೊಡೆದು ಕೊಂದಿರುವರು.

ವೀರರಾಜಪೇಟೆ ಮುನ್ಸಿಪಾಲಿಟಿಯ ಅಧ್ಯಕ್ಷರಾಗಿ ಮ॥ ಪ್ಯಾಟ್ರಿಕ್ ಜೋಸೆಫ್ ಲೋಬೊರವರ ಮತ್ತು ಉಪ ಅಧ್ಯಕ್ಷರಾಗಿ ಮ॥ ಟಿ ಆರ್. ತಿರುಮಂಗಡ ಪಿಳ್ಳೆಯವರ ಚುನಾವಣೆಯನ್ನು ಚೀಫ್‌ಕಮಿಷನರವರು ಮಂಜೂರುಮಾಡಿರುವರು.

ವೈನಾಡಿನ ಕರಡೂರ ಟೀ ತೋಟದ ಮ॥ ಪಿ. ಎಸ್ ಗಣಪತ್ತಿಯವರು ಅಲ್ಲಿ ಸುತ್ತಮುತ್ತಲಿನ ಹುಲವು ಜನರಿಗೆ ತೊಂದರೆ ಕೊಡುತ್ತಿದ್ದ ಒಂದು ವಿಶೇಷ ದೊಡ್ಡದಾದ ಕರಡಿಯನ್ನು ತಾ 26—12—25ರಲ್ಲಿ ಗುಂಡು ಹೊಡೆದು ಕೊಂದರಂತೆ

ಗೋಖಲೆಯವರ ಸ್ಮಾರಕ ಪಂಡಿತ ಸಾಹಿತ ರೀಷ್ಮಾಯಿಯ ಒಡ್ಡಿಯ ವೇತನವು ಈ ವರ್ಷ 1925ರ ಸ್ಕೂಲ್ ಫೈನಲ್ ಪರೀಕ್ಷೆಯಲ್ಲಿ ಚರಿತ್ರೆಯಲ್ಲಿ ಎಲ್ಲದಕ್ಕಿಂತಲೂ ಹೆಚ್ಚು ನಂಬರು ಪಡೆದಂಥ ಮ॥ ಕಂಬೇಯಂಡ ಬೆಳ್ಯಪ್ಪನವರಿಗೆ ಕೊಡಲ್ಪಟ್ಟಿದೆ.

ಬಲಮುರಿ ಮತ್ತು ಕೋಕೇರಿ ದವಸದ ಭಂಡಾರ ಸಂಘಗಳ ರಿಜಿಸ್ಟ್ರೇಶನನ್ನು ರದ್ದುಮಾಡಲ್ಪಟ್ಟಿರುತ್ತೆ. ಈ ಸಂಘಗಳ ಲಿಕ್ವಿಡೇಟರಾಗಿ ದಕ್ಷಿಣ ಕೊಡಗಿನ ಕೋಆಪರೇಟಿವ್ ಇನ್ಸ್‌ಪೆಕ್ಟರಾದ ಮ॥ ಪಂದಿಕುತ್ತಿರ ಚಂಗಪ್ಪನವರನ್ನು ನೇಮಿಸಲಾಗಿದೆ

ಕಳೆದ ಒಂದು ವಾರದೊಳಗೆ ದೇಶದ ಹುಲವು ಕಡೆಗಳಿಗೆ ಮಳೆಯು ಜೋರಾಗಿ ಹೊಡೆದು ಭತ್ತದ ಬೆಳೆಗೆ ತುಂಬಾ ನಷ್ಟವನ್ನುಂಟುಮಾಡಿದೆ ಅದರೆ ನಾಲ್ಕುನಾಡಿನವರು ಕೂಡಿ ಪಾಡಿ ಇಗ್ಗುತಪ್ಪ ದೇವಸ್ಥಾನದಲ್ಲಿ ಹರಿಕೆಮಾಡಿದ್ದರಿಂದ ಆ ನಾಡಿಗೆ ಮಳೆ ಬೀಳಲಿಲ್ಲವೆಂದು ಒಂದು ವಾರ್ತೆ

ಈ ತಾ. 12ರಲ್ಲಿ ಕೊಡಗು ಲೆಜಿಸ್ಲೇಟಿವ್ ಕೌನ್ಸಿಲಿನ ಮೀಟಿಂಗು ಮಡಿಕೇರಿಯಲ್ಲಿ ನಡೆಯುವುದು ಅಧ್ಯಕ್ಷರಾದ ಚೀಫ್ ಕಮಿಷನರವರು ಮೀಟಿಂಗಿಗಾಗಿ ಬೆಂಗಳೂರಿಂದ ಬರುವರು. ಹೊಸ ಪ್ರೀಚ್ ಆಫ್ ಕಂಟ್ರಾಕ್ಟ್ ಆಕ್ಟನ್ನು ಚರ್ಚಿಸುವುದೇ ಮೀಟಿಂಗಿನ ಕಾರ್ಯಕ್ರಮದ ಮುಖ್ಯಾಂಶ.

ವೀರರಾಜಪೇಟೆ ಮುನ್ಸಿಪಾಲಿಟಿ ಚುನಾವಣೆ ವಿಷಯ ಮ॥ ಪಿ. ನಾಣ್ಯೈಯ್ಯನವರು ಕೊಟ್ಟ ಅರ್ಜಿ ತಿರಸ್ಕರಿಸಲ್ಪಟ್ಟಿದೆಯೆಂದು ನಿಜವಲ್ಲದ (ಇತ್ತಲಾಗಿ ತಿಳಿಯ ಬಂದ) ವರ್ತಮಾನವನ್ನು ಕಳೆದ ವಾರ ಪ್ರಕಟಿಸಿದ್ದಕ್ಕೆ ವ್ಯಸನಪಡುತ್ತೇವೆ. ಸದರಿ ಅರ್ಜಿಯ ವಿಚಾರಣೆಯು ಈ ತಾ. 16ಕ್ಕೆ ಇಡಲ್ಪಟ್ಟಿದೆಯೆಂದು ತಿಳಿಯುತ್ತೇವೆ

ರಾವ್ ಸಾಹೇಬ್ ಪಟ್ಟಮಾಡ ದೇವೈಯ್ಯನವರು ಪೋಲೀಸು ಡಿಪ್ಯುಟಿ ಸುಪರಿಂಟೆಂಡೆಂಟು ಉದ್ಯೋಗದ ಚಾರ್ಜನ್ನು ಈ ತಾ. ೬ರಲ್ಲಿ ಮ॥ ನಡಿಕೇರಿಯಂಡ ಕಾಳಪ್ಪನವರಿಗೆ ವಹಿಸಿದರು. ಮ॥ ದೇವೈಯ್ಯನವರಿಗೆ ನಾಲ್ಕು ತಿಂಗಳು ಪೂರ್ತಿ ಸಂಬಳದ ರಜೆಯೂ, ನಂತರ ಎರಡು ತಿಂಗಳು ಅರ್ಧ ಸಂಬಳದ ರಜೆಯೂ ಮಂಜೂರಾಗಿದೆ.

ಸ್ವಾಮಿ ವಿವೇಕನಂದರವರ ವರ್ಧಂತಿಯನ್ನು ಮಡಿಕೇರಿ ವೇದಾಂತ ಸಂಘದವರು ತಾ. 10ರಲ್ಲಿ ಓಂಕಾರೇಶ್ವರ ದೇವಸ್ಥಾನದ ಹಾಲಿನಲ್ಲಿ ನಡಿಸುವರು. ಮಧ್ಯಾಹ್ನ 2 ಗಂಟೆಗೆ ಸ್ವಾಮಿಯವರ ವಿಷಯ ಭಾಷಣಗಳೂ 4½ ಗಂಟೆಗೆ ಶ್ರೀ ಕೇಶವದಾಸರ ಹರಿಕಥೆಯೂ ನಡೆಯುವವು ಎಲ್ಲರಿಗೂ ಆಮಂತ್ರಣವಿದೆಯೆಂದು ಸಂಘದ ಸೆಕ್ರೆಟರಿಯವರು ತಿಳಿಸಿರುತ್ತಾರೆ.

ಎರಡು ವಾರಗಳ ಹಿಂದೆ ಕಿರಗೂರು ಗ್ರಾಮದ ಕೋದಂಗಳ ತಿಮ್ಮಯ್ಯನವರು ಸಾಯಂಕಾಲ ಒಂದು ದೊಡ್ಡ ಹುಲಿಗೆ ಗುಂಡು ಹೊಡೆದದ್ದು ಘಾಯವಾಗಿ ಮರುದಿನ ಅದನ್ನು ಬೇಟೆಯಾಡಲು ಅದು ಅವರನ್ನು ಕಾಡಲ್ಲಿ ಎದುರುಗೊಂಡು ಅವರ ಕೈಗೆ ಕಚ್ಚಿಬಿಡಲೂ ಅವರು ಅದನ್ನು ಗುಂಡು ಹೊಡೆದು ಕೊಂದರು ಆದರೆ ಅವರು ಐದು ದಿವಸಗಳನಂತರ ಆ ಘಾಯದ ಬೇನೆಯಿಂದ ಮೃತಪಟ್ಟರಂತೆ

ಹಿಂದೂದೇಶ.

ಕೌನ್ಸಿಲ್ ಆಫ್ ಸ್ಟೇಟಿಗೆ ಬಂಗಾಳದಲ್ಲಿ ನಡೆದ ಉಪಚುನಾವಣೆಯಲ್ಲಿ ಇಬ್ಬರು ಸ್ವರಾಜ್ಯ ಪಾರ್ಟಿಯ ಮೆಂಬರುಗಳೇ ಜಯಶೀಲರಾಗಿರುವರು.

ಕಾಂಗ್ರೆಸ್ಸಿನಲ್ಲಿ ಪಾಸಾದ ಸಂಖಿತ ಮೋತಿಲಾಲ್ ನೆಹರುರವರ ಠರಾವು 'ಬರೇಗುಲ್ಲು ಮತ್ತು ಸಿಟ್ಟು' ಎಂದು ಕೆಲವು ಬ್ರಿಟಿಷ್ ಪತ್ರಿಕೆಗಳು ಟೀಕಿಸಿರುವವು.

ರಾಮಕೃಂಜ ದ್ರಾವಿಡ ಬ್ರಾಹ್ಮಣ ವಿದ್ಯಾವರ್ಧಕ ಸಭೆಯ ಆರನೇ ವಾರ್ಷಿಕ ವರ್ಧಂತಿಯು ಶ್ರೀ ರಾಮಕೃಂಜ ಸ್ವಾಮಿಯ ಸಂಸ್ಕೃತ ಪಾಠಶಾಲೆಯಲ್ಲಿ ಈ ತಾ. 1ರಲ್ಲು ಕಾರ್ಕಳ ವಕೀಲರಾದ ಮ॥ ವಾಸುದೇವೈಯ್ಯನವರ ಅಧ್ಯಕ್ಷತೆಯಲ್ಲಿ ನಡೆಯಿತು.

ಅಲಿಗಡದಲ್ಲಿ ನಡೆದ ಮುಸ್ಲಿಮ್ ಲೀಗಿನಲ್ಲಿ ಚರ್ಚಿಸುವ ಒಗ್ಗೆ ನ್ಯಾಯವಿಧಾಯಕ ಸಭೆಗಳಲೆಲ್ಲಾ ಮಹಮ್ಮದೀಯರ ಪಾರ್ಟಿಯನ್ನು ಪ್ರತ್ಯೇಕ ಸ್ಥಾಪಿಸಬೇಕೆಂದು ಸರ್ ಮಹಮ್ಮದ್ ಶಾಫಿಯವರು ಸೂಚಿಸಿದ ವಿಷಯವು ಬಹುಮತದಿಂದ ತಿರಸ್ಕರಿಸಲ್ಪಟ್ಟಿತೆಂಬದು ನಿಜವಲ್ಲವೆಂತಲೂ, ಅವರು ಅಂಥಾ ಸೂಚನೆಯನ್ನು ಮಾಡಲೇ ಇಲ್ಲವೆಂತಲೂ ಈಗಿನ ವರ್ತಮಾನ.

ಮಹಾತ್ಮ ಗಾಂಧಿಯವರು ಕಾನಪುರದಲ್ಲಿ ಕಾಂಗ್ರೆಸ್ ವಾರದಲ್ಲಿ ಮುಂದಾಳುಗಳ ಮತ್ತು ತನ್ನ ಸ್ನೇಹಿತರ ಸಂಗಡ ಆಲೋಚಿಸಿ ತನ್ನ ದೇಹಾರೋಗ್ಯದ ಮತ್ತು ತನ್ನ ಸಬರಮತಿ ಆಶ್ರಮದ ಉನ್ನತಿಗಾಗಿ ಒಂದು ವರ್ಷದ ವರೆಗೆ ಬೇರೆ ಯಾವ ಕಡೆಗೂ ರಾಜಕೀಯ ಚಳವಳಿ ಸಮ್ಮಂಧ ಸುತ್ತದೆ ಸಬರಮತಿ ಆಶ್ರಮದಲ್ಲೇ ವಿಶ್ರಾಂತಿ ತೆಗೆದುಕೊಳ್ಳುವಂತೆ ತೀರ್ಮಾನಿಸಿರುವರು.

ಬೆಂಗಳೂರಿನಲ್ಲಿ ನಡೆಯುವ ದ್ವಿತೀಯ ಕರ್ನಾಟಕ ಆಯುರ್ವೇದೀಯ ಸಮ್ಮೇಳನಕ್ಕೆ ಪೂರ್ವ ಭಾವಿಯಾಗಿ ಮೈಸೂರು ಮತ್ತು ಕೊಡಗುದೇಶದ ಆಯುರ್ವೇದೀಯ ಸಮ್ಮೇಳನವು ಶಿವಮೊಗ್ಗದಲ್ಲಿ ಈ ತಾರೀಕು 31ರಲ್ಲು ನಡೆಯಲಿಕ್ಕಿರುವದು. ಇದಕ್ಕೆ ಬಾಗಲಕೋಟೆಯ ಶ್ರೀ ಡಾ. ಶಂಕರ್ ದಿನಕರ್ ಬುರಾರ್, ಎಲ್ ಎಮ್ ಅಂಡ್ ಎಸ್ ರವರು ಅಧ್ಯಕ್ಷರಾಗಲು ಒಪ್ಪಿರುವರು. ಈ ದೇಶದ ಆಯುರ್ವೇದಾಭಿಮಾನಿಗಳೆಲ್ಲರಿಗೂ ಆಮಂತ್ರಣವಿದೆ.

ವಿದೇಶ.

ಇಟಲಿ ದೇಶದ ಅರಸರ ಮಾತೋಶ್ರೀಯಾದ ಮಾರ್ಘರಿಟಾ ರಾಣಿಯವರು ತಾ. 4ರಲ್ಲು ಶಿವಾಧೀನರಾದರು.

ಈಜಿಪ್ಟಿನ ಪೂರ್ವಕಾಲದ ಅರಸು ಮಗನಾದ ಟೂಟಾಂಕ್ ಎಮೆನ್ನಾರವರ ದೇಹವನ್ನು ಇಟ್ಟು ಹೂತಿದ್ದ ಚಿನ್ನದ ಪೆಟ್ಟಿಗೆಯನ್ನು ಲಕ್ಸರ್ ಎಂಬಲ್ಲಿಂದ ಅಗೆದು ತೆಗೆದಿರುವರು ಅದನ್ನು ಈಗ ಕೈರೋದ ಮ್ಯೂಸಿಯಮ್‌ನಲ್ಲಿ ಇಟ್ಟಿರುವರು. ಅದನ್ನು ಹೊರಲು ಎಂಟು ಜನರು ಬೇಕಾಯಿತಂತೆ ಅದು ನಲುವತ್ತು ಸಾವಿರ ಪೌನು ಬೆಲೆ ಬಾಳಬಹುದೆಂದು ಅಂದಾಜು ಮಾಡಲಾಗಿದೆ.

ಈ ತಿಂಗಳ ಪ್ರಾರಂಭದಲ್ಲಿ ಬ್ರಿಟಿಷ್ ದ್ವೀಪಗಳಲ್ಲಿಯೂ ಪಶ್ಚಿಮ ಯೂರೋಪಿನಲ್ಲಿಯೂ ಉಂಟಾದ ವಿಶೇಷ ಮಳೆಯಿಂದಲೂ ಬಿರುಗಾಳಿಯಿಂದಲೂ ಬಹಳ ನಷ್ಟ ಸಂಭವಿಸಿದೆ. ಹುಲವು ಹೊಳೆಗಳಲ್ಲಿ ನೆರೆಯು ಬಂದು ಹಳ್ಳಿಗಳು ನೀರಿನ ಅಡಿಯಲ್ಲಿವೆ ಬ್ರಿಟನ್ನಿನ ಮೇಲೆ ಬಿರುಗಾಳಿಯು ಬಹು ಜೋರಾಗಿತ್ತು ಜರ್ಮನಿಯಲ್ಲಿ ನದಿಗಳ ಒದಿಯಲ್ಲಿರುವ ಮನೆಗಳ ಮೂರನೇ ಮಹಡಿಯ ವರೆಗೆ ನೀರು ಬಂದು ಮಿಲಿಯಗಟ್ಲೆ ಮಾರ್ಕ್ (ನಾಣ್ಯಗಳು) ನಷ್ಟವಾಗಿದೆಯಂತೆ. ಫ್ರಾನ್ಸಿನಲ್ಲಿಯೂ ಇದೇ ಸ್ಥಿತಿ. ಅನೇಕ ಕಾರ್ಖಾನೆಗಳು ಮುಚ್ಚಲ್ಪಟ್ಟ ಕಾರಣ ಸಾವಿರಗಟ್ಲೆ ಜನರಿಗೆ ಕೆಲಸವಿಲ್ಲದ್ದಾಗಿದೆ. ಹಾಲೆಂಡಿನಲ್ಲಿ ಸಮುದ್ರಕ್ಕೂ ದೇಶಕ್ಕೂ ಮಧ್ಯ ಇರುವ ಕಟ್ಟೆಯು (ಡೈಕ್ಸ್) ಒಡೆದುಹೋಗಿ ದೇಶದೊಳಗೆ ನೀರು ತುಂಬಿದೆ. ಬೆಲ್ಜಿಯಮಿನಲ್ಲಿ 8000 ಗ್ರಾಮಗಳು ನೀರಿನಿಂದ ಮುಚ್ಚಲ್ಪಟ್ಟಿವೆ.

COFFEE ESTATE FOR SALE.

Kurburmotte, property of the late Mr. L. C. Pais Adjoining the Sidapur dispensary

Apply:—

S. M. PINTO,
Virarajendrapet.

4-1

ಪತ್ರವ್ಯವಹಾರ.

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲ. ಸಂ·

ಡಿಸ್ಟ್ರಿಕ್ಟ್‌ಬೋರ್ಡು ಇಲಾಖೆ.

ಅಯ್ಯಾ,

ತಾರೀಕು 18ನೇ ಕೊಡಗು ಪತ್ರಿಕೆಯಲ್ಲು ಪ್ರಕಟವಾದ ಗೋಣಿಕೊಪ್ಪಲು ಸಂತೆಮಾಳದ ರಸ್ತೆಯಿಂದಾಗುವ ತೊಂದರೆಯನ್ನು ಪ್ರಕಟಿಸಿದ್ದಾಯಿತು. ಅದೇ ಪ್ರಕಾರ ಇನ್ನೂ ಅನೇಕ ತೊಂದರೆಗಳು ಕೃಷಿಗೆ ವ್ಯಾಪಾರಗಳಿಂದ ಆಗುತ್ತಿವೆ. ಈಗಷ್ಟೆ ಒಂದೆರಡು ಸಂಗತಿಗಳನ್ನು ಮಾತ್ರ ನಾನು ವಿವರಿಸುತ್ತೇನೆ.

ಪೊನ್ನಂಪೇಟೆ ಗೋಣಿಕೊಪ್ಪಲು ಸಂತೆಯಲ್ಲು ಬೆಲ್ಲ ವ್ಯಾಪಾರವು ದೊಡ್ಡ ತರದ ಅಚ್ಚು ರೂಪದಿಂದ ರೂಪಾಯಿಗೆ ಈಗ 10, 11, ಯೂ 12ರ ವರೆಗೆ ಮಾರಾಟವಾಗುತ್ತಿವೆ. ಅಂಥಾ ಅಚ್ಚು ರೂಪದಲ್ಲೂ, ಗಾತ್ರದಲ್ಲೂ, ಒಂದೇ ತರಹವಾಗಿ ದೃಷ್ಟಿ ತೂಕಮಾಡಿ ನೋಡಿದರೆ ಒಂದೇ ತರಹದ ಅಚ್ಚಿನಲ್ಲು ಎರಡು ತರಹದ ತೂಕದ ವ್ಯತ್ಯಾಸವು ಕಂಡುಬರುತ್ತಿದೆ ಅಂದರೆ ಒಂದು ಅಚ್ಚು ರೂಪಾಯಿ 30ರ ವರೆಗೂ, ಇನ್ನೊಂದು 22 ರೂಪಾಯಿಯ ವರೆಗೂ ತೂಕವಿದ್ದು ಒಂದೇ ಸಮ

ನಾ, ಗುಡ್ಡೆಕೂಡಿಸಿ ತೂಪಾಯಿಗೆ 10ವಂತೆ ಕೇಳಿದ ಸಂತೆಯಲ್ಲು ಮಾರಿದ್ದು ಕಂಡು ಬಟ್ಟ ಪೋಲೀಸ್ ಕಾನ್‌ಸ್ಟೇಬಲನಿಗೆ ತೋರಿದೆನು ಈ ಸಂಗತಿಯನ್ನು ಬಿಟ್ಟ ದೊಡ್ಡ ಗೃಹಸ್ಥನು ಕಂಡು ಹಿಡಿದಲ್ಲು ಅವನೊಬ್ಬನಿಗೆ ಆ ವ್ಯಾಪಾರಿಯು ರೂಪಾಯಿಗೆ ಸನ್ನೆರಡಂತೆ ಮಾರಿದನು. ಅವನು ಆ ಲಾಭಕ್ಕಾಗಿ ತನಗೆ ಸಿಕ್ಕಿದ್ದನ್ನು ತೆಗೆದುಕೊಂಡ ಹೇರಟುಹೋದನು. ನಾನು ಅದನ್ನು ಕಂಡು ಪೋಲೀಸಿಗೆ ತೋರಿದೆನು. ಅವನು ಅದನ್ನು ಕಂಡು ಸುಮ್ಮನಾದನು. ಈ ಸಂಗತಿಯನ್ನು ಕೇಳುವವರ್‍ಯಾರು, ರೈತರಿಗಿರುವ ಕಷ್ಟವನ್ನು ನೀಗಿಸುವವರ್‍ಯಾರು ?

ಈಗ ಒಂದು ವರ್ಷದಿಂದ ಪತ್ತಮುತ್ತೇಳೂ ರೋಗಗಳಿಂದ ದನಕರುಗಳು ಎಷ್ಟೋ ಸಾಯುತ್ತಿವೆ ಅದು ಅಂದಾ [illegible] ದೊಡ್ಡ ರೋಗದಿಂದ ಪೀಡಿತವಾದ ಆಡುಕುರಿಗಳಿಲ್ಲವೇ ? ಇದ್ದರೂ ಕಂಡು ಹಿಡಿಯುವವರ್‍ಯಾರು ? [illegible] ಕಾಯಿಲೆಯಿಂದ [illegible] ಯಿಮ ಮಾಡುವವರಾರು. [illegible] ಎಂಥಾ ಸಾಹಸದ ಕೃತ್ಯ ! ರೈತರು [illegible] ತೆಗೆದುಕೊಂಡರಾಗುವದಿಲ್ಲವೇ ?

ಕಳೆದ ವರ್ಷಗಳ [illegible] ನ ಸಾತಪ [illegible] ಗರು [illegible] ಯುತ್ತಿದ್ದರು. ಈಗ [illegible] ಅದನ್ನು ನಿಲ್ಲಿಸಿದ [illegible] ಕ್ಕರಂ [illegible] ಸರ್ಕಾರದವರ [illegible] ಕಾರಣವ [illegible] ತರತರದ [illegible] ಬರುವ [illegible] ಈಗಲೂ [illegible] ಇದನ್ನು ಕಂಡುಹಿಡಿಯುವವರಾರು ? [illegible] ಅವರ ದೇಶದಲ್ಲಿ [illegible] ಸಮಷ್ಟಿಗೆಯ [illegible] ಈ ನಾಡ ಭೂದಲ್ಲಿ [illegible] ತೆಗೆದುಕೊಳ್ಳಬೇಕಲ್ಲವೇ ?

[illegible] ಅದರ [illegible] ಗಳಿಗೆ [illegible] ಈಗ ಒಂದು ವರ್ಷದಿಂದ [illegible] ಸರ್ಕಾರದವರು ಈ [illegible] ಕೊಡು [illegible] ಯಾದರೂ [illegible] ?

[illegible] ನಮ್ಮ [illegible] ಇದಕ್ಕಿಲ್ಲ [illegible] ಸಿಗುವ [illegible] ದೇಶದ [illegible] ಸಂಗತಿ [illegible] ಸಿದ್ಧರು [illegible] ನಮ್ಮ [illegible] ಪ್ರತ್ಯೇಕ [illegible] ಸುತ್ತಿರುವ

[illegible] ಸರ್ಕಾರದವರು [illegible] ಸರ್ಕಾರದವರು ಕಣ್ಣು ತೆರೆದು [illegible] ನೋಡುವರೆಂದು [illegible]

ಗಿರೀಶ [illegible]

ಹುತ್ತರಿ ಹಬ್ಬ.

' ಜೆನರ್ ಸರ್ವೀಸ್ ಯೂನಿಯನ್ [illegible] ' ಸಲ್ಲಿರುವ ಕೊಡಗರು ತಮ್ಮ ಹುತ್ತರಿ ಹಬ್ಬದ [illegible] ದಲ್ಲಿ ಅಗದ ದಿವಸವೇ ಆಚರಿಸಲು, ಆ [illegible] ಉದ್ಯೋಗಸ್ಥರಿಗೆ ಸಮಯವಿಲ್ಲದೆ [illegible] ಆವರಿಗೆ ಬೇರೆ, ಬೇರೆ ಬ್ರಾಂಚುಗಳಲ್ಲಿ ಕೆಲಸವಿರುವುದರಿಂದ ಅನಾನುಕೂಲವಾದುದರಿಂದ ' ಕ್ರಿಸ್‌ಮಸ್ ' ರಜದ [illegible] ನೋಡಿಕೊಂಡು ಆ ಹಬ್ಬದ ದಿನದಲ್ಲಿ ತಮ್ಮ [illegible] ನ ಪ್ರೆಸಿಡೆಂಟರಾದ ಮ ರಾ ರಾ [illegible] ರ ಪಾಲ್ಯಾಸಿನಲ್ಲಿರುವ ' ಗೌರಮಹಾಲ ' ದಲ್ಲಿ ತಾ 27-12-25 ನೇ ಆದಿತ್ಯವಾರ ದಿನ ರಾತ್ರಿ ಒಂದು ದೊಡ್ಡ ಔತಣವನ್ನು ಮಾಡಿಸಿದರು. ಈ ಔತಣಕ್ಕೆ ಅಲ್ಲಿಯ ಎಲ್ಲಾ ಉದ್ಯೋಗಸ್ಥರಿಗೂ ಸೆಕ್ರೆಟರಿಯವರಾದ ಮ ಸಿ ಬ ಮುತ್ತಣ್ಣನವರು ಆಮಂತ್ರಣ ಪತ್ರಗಳನ್ನು ಕಳುಹಿಸಿದ್ದರು. ಕೊಡಗಿನವರು ಮೆ. ಬಿ. ಎಸ್. ಮಾಚಯ್ಯನವರು ಮ ಬ [illegible] ನವರೂ ಮತ್ತು ಕೆ. ಟಿ. ಮುದ್ದಪ್ಪನವರೂ ಅತಿಥಿಗಳಾಗಿ ಬಂದಿದ್ದರು ಊಟಉಪಚಾರಗಳು ಬಹಳ ವಿಜೃಂಭಣೆಯಿಂದ ನಡೆದವು ಊಟಉಪಚಾರಗಳು ಮುಗಿದೊಡನೆ ಕೊಡಗರ ಕುಣಿತವನ್ನೂ, ಹಾಡೂ ಇದ್ದುದರಿಂದ ಅತಿಥಿಗಳು ಬಹಳ ಸಂತೋಷಪಟ್ಟರು ಮೆ ಕೃಷ್ಣನಾಯರ್ ಬಿ ಎ ಯವರು ಅತಿಥಿಗಳ ಪರವಾಗಿ ಬಾಷಣ ಮುಖಾಂತರ ಅವರ ಸಂತೋಷವನ್ನು ಸೂಚಿಸಿದರು. ಮ ಯಂ ಜಿ ನಂಜಪ್ಪನವರು ಆಮಂತ್ರಣ ಪತ್ರಗಳನ್ನು ಸ್ವೀಕರಿಸಿ ಯೂನಿಯನ್ನಿಗೆ ಉತ್ತೇಜನ ಕೊಟ್ಟದ್ದಕ್ಕಾಗಿ ಅತಿಥಿಗಳನ್ನು ಬಹಳವಾಗಿ ವಂದಿಸಿದರು. ನಂತರ ಅತಿಥಿಗಳೆಲ್ಲರೂ ಯೂನಿಯನ್ನಿನ ಪ್ರೆಸಿಡೆಂಟರಿಗೂ ಮತ್ತು ಸಕ್ರೆಟರಿಯವರಿಗೂ ವಂದಿಸಿ ತಮ್ಮ ತಮ್ಮ ಮನೆಗಳಿಗೆ ತೆರಳಿದರು

ಹಾಜರಿದ್ದವ

ಮಹಾಶಯರೇ,

ನಾವು ಈಗ ಹೊಸದಾಗಿ ಕೊಡಗು ದೇಶಕ್ಕೆ ಒಂದು ಸಲೆಗೊಂಡವರಲ್ಲ ನಾವು ಈ ದೇಶದ ಮೂಲ ಪುರುಷರಾಗಿಯೂ ಜನ್ಮ ಹಿಡುವಳಿದಾರರಾಗಿಯೂ ಸಹ ಇದ್ದೇವೆ ಅಂದಾ ಮೂಲ ಪುರುಷರ ಕಾಲದಲ್ಲಿಯೇ ದೇವಸ್ಥರು ತಕ್ಕ [illegible] ಸ್ಥರು ವಗೈರೆ ಎಲ್ಲರೂ ಸೇರಿ ಕೂಡವ ಆಚಾರ, ವಿಚಾರ [illegible] ಅಜಲಸಲ ಕಟ್ಟುಕಟ್ಟಳೆ ಮುಂತೆ ನಿಯಮಂತೆ ಕೂಡವ ನಡ ಮಾಡಿದ ರೀತಿ ಈಗಲೂ ಅವಕ್ತ ಅನುಗ [illegible] ಸಾದು, ಗ್ರಾಮ [illegible] ಸಹ ಬಾಬು ಪಕ್ಷ ಇದೆ

ಅಗತ್ಯವಾಗಿ ಕೂಡವ ನಡೆ [illegible] ಹೋ [illegible] ನಡೆ [illegible] ತ ನಡೆಸಬೇಕಾಗಿಲ್ಲ

ನಮ್ಮ [illegible] ಹಿರಿಯರು [illegible] ರದ ನಂಗಿದೆ

[illegible] ಸಮಿತಿ [illegible] ಈಗ [illegible] ಕ್ರಮದಲ್ಲಿ [illegible] ಅವರ [illegible] ಸಾತ [illegible] ಪ್ರಾಯ ನಡೆಸಿದರು [illegible] ಈ [illegible] ಆರ್ಥ [illegible] ಅವರ [illegible] ಈಗ ಬಾರಿಯಲ್ಲಿ ಇವರ [illegible] ಸಹಕರಿಸಿದೆ

ಕಲ್ಲುಮೊಟ್ಟೆ ಸ [illegible]

ಪೊನ್ನಂಪೇಟೆ ಆಸ್ಪತ್ರೆ

ಆಡ್ಡಿ

ತಾ 21—12—25ರಲ್ಲಿ ಪೊನ್ನಂಪೇಟೆಯಲ್ಲಿ ಸಿವಿಲ್ ಸರ್ಜನರು ಒಂದು ಮಲೇರಿಯ ಜ್ವರದ ವಿಷಯ ಮೀಟಿಂಗ್ ನಡಿಸಿ ಇದಕ್ಕೆ ಸಂಬಂಧ [illegible] ಮಾಡುತ್ತಾರಾ [illegible] ಕಚೇರಿಯ [illegible] ಸಹಿ ಗಳಿಗೆ [illegible] ನೋಟೀಸ್ ಕೊಟ್ಟು, ಸದರಿ [illegible] 1 ಗಂಟೆಗೆ ಈ ನೋಟೀಸಿಯ ಪ್ರಕಾರ ಮೀಟಿಂಗ ಸೇರಬೇಕೆಂದಿದ್ದ ಓದಿದ ಮೇಲೆ [illegible] ತಿಳಿಯದೆ ಹೋಯ್ತೋ ಎಂದದ್ದು ನಮ್ಮ ದುರಾದೃಷ್ಟವೇ ಸರಿ ನಮ್ಮ ಅಜಾಗ್ರತೆಯನ್ನು ಈ ಮೂಲಕ [illegible] ಸರ್ಜನರು, ಮಲೇರಿಯ ಮತ್ತು ಇತರ ಕಾಯಿಲೆಗಳಲ್ಲಿ ಸಂಕಟಪಡುತ್ತಿರುವ ನಮಗೆ [illegible] ಈ ಪತ್ರಿಕೆಯ ಮೂಲಕ ಅರಿಕೆ ಮಾಡಿಕೊಳ್ಳುತ್ತೇನೆ ಆ ಆಸ್ಪತ್ರೆಯು ನಮ್ಮ ಹಳ್ಳಿಗಳಿಗೆ 7, 8, 9, 10 ಮೈಲು ದೂರದಲ್ಲಿದೆ ಕಾಯಿಲೆ ಮನುಷ್ಯರು ಘಕ್ಕನೆ ಡಾಕ್ಟರ್ ಕರೆಯೋಣವೆಂದರೆ ನಮ್ಮ [illegible] ಯಲ್ಲಿ ಆ ಸಮಯದಲ್ಲಿ ದುಡ್ಡೇ ಇರುವುದಿಲ್ಲ ಡಾಕ್ಟರೇ ನಮ್ಮ ಮುಂಚಿತವೇ ಫೀಸಿಗೆ ಒಂದು ರೂಪಾಯಿ [illegible] ಕೊಡಬೇಕೆಂದು ಹೇಳುತ್ತಾರೆ ಆದ್ದರಿಂದ [illegible] ದಿಂದ ತೆಗೆದುಕೊಂಡು ನಮ ಇರುತ್ತಾರೆ [illegible] ಸಿಕ್ಕಿದ ಬಡ ರೈತರೇನೋ ಈ ದುಡ್ಡಿಲ್ಲದ ದೂರ [illegible] ಡಾಕ್ಟರ್ ಕರೆಯುವ ಸಂಭವ ಬೀಳ [illegible] ಒಂದಕ್ಕೆ ಓಡ ಒಂದ, ಯಾವುದೂ, ಕೋಟೆಬಡೆ [illegible] ದಾದ ತಮ್ಮ ದಂಪತಿ, ಮಕ್ಕಳು, ತಂದೆ, ತಾಯಿ [illegible] ಆದಲ್ಲದೆ ಆಸ್ಪತ್ರೆಯಿಂದ ಆಮೇಲೆ [illegible] ಡಾಕ್ಟರರನ್ನೋ ಔಷಧ ಕೇಳಿದರೆ ಕೊಟ್ಟೇ [illegible] ನಾವು ಹೇಳುವ ಕಾಯಿಲೆಯ [illegible] ಡಾಕ್ಟರ್ ಕೊಡುವ ಔಷಧದ ಪ್ರಯೋ [illegible] ಕಾಯಿಲೆಯು [illegible] ತಿಳಿಯ ತಿಳಿದು ಇಂಥಾ ಬಡ [illegible] ಸರಕಾರದವರು ಗಮನಕ್ಕೆ ತೆಗೆದು [illegible] ದ್ಯಕರಾದ ಹೆಚ್ಚು ದುಡ್ಡಿನ ಆಸೆ ಜನ [illegible] ನಮ್ಮ ಹಳ್ಳಿಗಳಿಗೆ ಬಂದು ಹಳ್ಳಿಯ [illegible] ಗುಣವನ್ನು ಪರೀಕ್ಷೆ ಮಾಡಿ [illegible] ಶಕ್ತ ಔಷಧಿ ಕೊಟ್ಟು ಬಡ ರೈತರನ್ನು [illegible] ಡಾಕ್ಟರುಗಳನ್ನು ಈ ಆಸ್ಪತ್ರೆಯಲ್ಲಿ ನಾ [illegible] ಈ ಮೂಲಕ ಅರಿಕೆ ಮಾಡಿಕೊಳ್ಳುತ್ತೇನೆ.

ಸೋಮಬಳಿಯವ

ಕೊಡಗು ವೀರಶೈವ ಬಾಂಧವರಲ್ಲಿ ನನ್ನ ವಿಜ್ಞಾಪನೆ

ಮಹಾಶಯರೇ,

ಹ ಡಿ ಮ ಸಾ ಕೀಟೋಳಿ ಚಂಗಪ್ಪ. ಬಿ ಎ ರಾ ಒ ರವರ ಉಪದೇಶ ಪ್ರಭಾವದಿಂದ ಶನಿವಾರಸಂತೆ ಹೋಬಳಿ ಮತಬಾಂಧವರು ವೀರಶೈವ ವಿದ್ಯಾನಿಧಿ ಸಂಘವೊಂದು ಕೊಡ್ಲಿಪೇಟೆ ಮೊಕ್ಕಾಂನಲ್ಲಿ ಕೊಡಗು ದೇಶದ ಎಲ್ಲಾ ಬಾಂಧವರನ್ನು ಬರಮಾಡಿಕೊಂಡು ಇನ್ನು ಮುಂದೆ ಸಂಘದ ಏಳ್ಗೆಗಾಳ ಬಲಪಡಿಸಿಕೊಂಡು ಸಮಾಜ ಸೇವೆಮಾಡಿ ಮುಂದುವರಿಯುವಂಥ ವೀರರು ಮೆಂಬರುಗಳಾಗಿಯೂ, ಪ್ರೆಸಿಡೆಂಟ್, ಸೆಕ್ರೆಟರಿ ಟ್ರೆಜರರಾಗಿ ನಿಲ್ಲಬೇಕೆಂದು ಪ್ರಾರ್ಥಿಸಿದ ಮೇರೆ, ಧಾರ್ಮಿಕ, ಸಾಮಾಜಿಕ, ನೈತಿಕಗಳಲ್ಲಿ ದಕ್ಷರಾದ ವೀರಶೈವ ಬಾಂಧವರು ಮುಂದೆ ನಿಂತು ಪ್ರಾಗ್ರಸರಮಾಡಿ ತಮ್ಮ ಹೆಸರು ನ್ಯೂಸ್‌ಪತ್ರಿಕಗಳಲ್ಲಿ ಹೊಗಳಿಸಿಕೊಂಡ. 2½ ವರ್ಷಗಳಾಯಿತು ಆ ಭಾಗವಾಯಿತ ಸಮಾಜ ಏಳಿಗೆಯ ಮಹತ್ಕಾರ್ಯಗಳು ಹೇಗೆ ನೆರವೇರಿರುವುವು, ಬಡ ವಿದ್ಯಾರ್ಥಿಗಳು ಎಷ್ಟು ಏಳಿಗೆ ಹೊಂದಿರುವುವು, ಬಂಡವಾಳ ಎಷ್ಟು ಹೆಚ್ಚಿದೆಂಬುದು ತಿಳಿಯಲು ದ್ವಿತೀಯ ಮಹಾಸಭೆಯ ಪ್ರಸಂಶಯೋ ಇಲ್ಲ ವೀರಶೈವ ಜನಾಂಗದಲ್ಲಿ ವಿದ್ಯಾಭಿಮಾನಿಗಳು ಬಹಳ ಹೆಚ್ಚು ಅನೇಕ ವಿದ್ಯಾವಂತರುವರು. ಎಂ ಜಿ ಶ್ಯಾಸದಲ್ಲಿ ಮುಂದುವರಿಯಲು ಪ್ರಯತ್ನಿಸುತ್ತಿರುವರು ಬಡ ವಿದ್ಯಾರ್ಥಿನಿಲಯಗಳಾಗಿವ ನಾನಾ ವಿದ್ಯಾಫಂಡುಗಳಿಗೆ ಈ ಮೋಕ್ಷಂಡಾಸಗಳಲ್ಲಿ ಮುಂದೆ ಬರುತ್ತಲಿರುವ ಮೈಸೂರು ವೀರಶೈವ ಸಮಾಜ ನೋಡಿದ ನೀವು ಕಟಕ್ಟರಾಗಿರುವುದು ಸಮಾಜದ ಅವಿಷ್ಕೃಗ ಕುಂದಲ್ಲವೇ ? ಕೊಡಗು ದೇಶದ ವೀರಶೈವಬಾಂಧವರಲ್ಲಿ B A ಪಾಸುಮಾಡಿದವನ್ನು ಐವತ್ತು ರೂಪಾಯಿ ಸರಕಾರಿಯ ಉದ್ಯೋಗದಲ್ಲಿಲ್ಲ ಆಯುರಾಗಿ ಭುವ ಬಿಟ್ಟ ಜಾಂದವನನ್ನು ಮತಗ್ರಂಥಗಳ ಪ್ರಿಂಟಿಂಗ್ ಕಲಸವು ಇಲ್ಲ ಜ್ಯೋತಿಶಾಸ್ತ್ರ ಪಾಠಶಾಲೆ ಈ ಪಾಠ ಸ್ಥಾಪಿತವಾಗಿದೆ ಸಂಸ್ಕೃತ ಅಂತವನ್ನು ಹತ್ತುಸಾವಿರ ಪ್ರಜಾಸಂಖ್ಯೆಯಲ್ಲಿ ಹತ್ತುಮಂದಿ ವಿದ್ಯಾವಂತರಿಲ್ಲನ ಮೇಲೆ ನಮ್ಮ ಸಮಾಜವು ಕಲಿಯ ಕಾಲದಲ್ಲಿ ಮುಂದೆ ಹೋಗುವುದಲ್ಲವೇ [illegible] ಕೊಡಗು ದೇಶೀಯರು ವಿದ್ಯೆಯಲ್ಲು ಉದ್ಯೋಗದಲ್ಲು ನಿಪುಣರೆಂದು ದೇಶವಾತ್ಸಲ್ಯವುಳ್ಳುವರೆಂದು [illegible] ಬಲಪಡಿಸುತ್ತ ಧೀರರೆಂದೆನಿಸಿಲ್ಲವೆ ? ನಮ್ಮವರು ಮ [illegible] ಧರ್ಮ ಪ್ರಸರಣ, ಇತ್ಯಾದಿಗಳಲ್ಲಿ ಆದಿಯಿಂದಲೂ [illegible] ಕೀರ್ತಿ ಪಡೆದಿರುವುದಿಲ್ಲವೆ ? ನೋಡಿ ವಾರಸಾಟ ಮಡಿಕೇರಿ ವೀರಶೈವಬಾಂಧವರು ಕನಸಿನಲ್ಲಿಯೂ ಸಮಾಜೋದ್ಧಾರಕ್ಕೆ ಧ್ಯಾನಿಸುತ್ತಿರುವುದಿಲ್ಲ ಅವರು ಪ್ರಯತ್ನಪಟ್ಟಿದ್ದರೆ ತೃಣಮಾತ್ರವಾಗಿದ್ದಿತು ಇದಕ್ಕಾಗಿ ಸಮಾಜದವರು ಶ್ರೀಮಂತರಾದ ಮೆ. ರುದ್ರಪ್ಪಶೆಟ್ಟರನ್ನು ಪ್ರೆಸಿಡೆಂಟರಾಗಿ ಮಾಡಿದರು ದೇವರು ದಯೆ ತೋರಲಿಲ್ಲ. ಇಡಿ ಕೊಡಗಿನ 1000 ಪ್ರಜೆಯಲ್ಲಿ 10 ಮಂದಿ ವೀರಶೈವ ಸಮಾಜ ಮಾಡುವ ದಕ್ಷರು ನಿಂತು ವ್ಯಾಪಾರಗಳಾಗಿ ನಿಂಗಡಿಸಿಕೊಂಡು ಮತಸುಧಾರಕರಾದಾಗ್ಯದರೆ ಪಶ್ಚಾತ್ ವರ್ಷಗಳಲ್ಲಿಯೇ ಚೈತನ್ಯಹೊಂದುವುದು ಈಗಾಗಲೇ ಕಾಲವ್ಯತ್ಯಾಸದಿಂದ ಉಡಿಗೆ, ತೊಡಿಗೆಗಳು, ಭಾಷೆ, ಆಸೆಗಳು, ಹದ್ದುಮೀರುತ್ತಿರುವುದು ನಿಂದುಗಳು ನೈಷ್ಠಿಕತೆ ಪೂರ್ಣ ಬೇರಿಯಾಗುವುವು ಕೊಡಗಿನ ವೀರಶೈವ ಸಮಾಜವೇಳಿಗೆಗೆ ಕೊಡ್ಲಿಪೇಟೆ ಶನಿವಾರಸಂತೆ ವೀರ್ಯ ಮಹಾಶಯರು ಅಸ್ತಿವಾರ ಹಾಕಿದರು ಅಂದವಾದ ಭವನಮಾಡಲು ಅರ್ಹರಾದ ಸೋಮವಾರಪೇಟೆ, ಸುಂಟಿಕೇರಿ ಮತಬಾಂಧವರು ಧನವಂತರಾಗಿದ್ದು ಒಂಗಳೆ ಕಷ್ಟಲು. ಕಾರಣವರಿತಲಾಗಿರುತ್ತಾರೆ ಕಾಲವು ಕಳೆದು ಹೋಯಿತು ಹೋದದ್ದು ಹೋಗುತ್ತಾ ಈಗಲಾದರೂ ಎಚ್ಚತ್ತು ದೇಯಶ್ರೀಮಿಸಿರಿ

ಸಮಾಜ ಸೇವೆಯಲ್ಲಿ ದಕ್ಷರಾದ ಮೈಸೂರು ಸೀಮೆಯ ರಾಜ್ಯದ ಸರ್ ಕ ಪಿ ಪುಟ್ಟಣ್ಣ ಶೆಟ್ಟರ್ ಕ ಟಿ ಸಿ ಐ ಇ ಧರ್ಮ ಕ [illegible] ಮತ್ತು ವಿದ್ಯಾವಂತರು, ಧಾರ್ಮಿಕರು, ಸೇವಕರು ಪ್ರಾರ್ಥಿಸುಬರಮಾಡಿಕೊಂಡು 1926ನೇ ಜನವರಿ ತಿಂಗಳಲ್ಲಿ ದ್ವಿತೀಯ ವೀರಶೈವ ಮಹಾಸಭಾ ಕಾರ್ಯನೆರವೇರಿಸಿ ಕೀರ್ತಿಪಡೆಯಬೇಕೆಂದು ಪ್ರಾರ್ಥನೆ ಇಲ್ಲವೇ ಐಕ್ಯಮತ್ಯವು ತಪ್ಪಿ ಇತರರು ಹಾಸ್ಯಮಾಡಲಿಕ್ಕೆ ಕಾರಣವಾಗುವುದು. ಸಮಾಜ ಸೇವೆಗಾಗಿ ನಮ್ಮ ವೀರಶೈವ ಕೆಲರು ತನು, ಮನ, ಧನಗಳನ್ನು ಸೂರೆಗೊಟ್ಟಿರುವರು ಮತದ ಗ್ರಂಥಗಳ ಪ್ರಚುರಕ್ಕಾಗಿ ಜೀವನವನ್ನೆಲ್ಲ ಪೂರೈಸಿರುವರು ನಾವುಗಳು ಅವರುಗಳ ಮೇಲ್ಪಂಕ್ತಿ ಹಿಡಿದು ಕಿರಿಯರ ಹೆಸರು ಪ್ರಸಿದ್ಧಿಗೆ ತರದೆ ತನಸ್ಮೂಲಕ ಸ್ವಾಧೀನರಾಗಿ ಬಾಳಿ ಬದುಕುವುದು ಮುಖ್ಯ ತಪ್ಪುವುದು ಡಿಸೆಂಬರ್ ತಿಂಗಳಲ್ಲಿ ಮೀಟಿಂಗು ಮಾಡಿದ ನಂತರ ಕಾರ್ಯ ಕೈಕೊಳ್ಳುವರಾಗಿ ನಂಬಿರುತ್ತೇನೆ ಈ ಮುಂದಿನ ಎರಡು ತಿಂಗಳಲ್ಲಿ ಕೊಡಗಿನಲ್ಲಿ ಲಕ್ಷ್ಮಿಗಳಾಸವಾಗಿರುವಳು ಆ ಪ್ರಭಾವದಿಂದ ಕಾರ್ಯವು ಚೆನ್ನಾಗಿ ಜರಗುವುದು. ಜನರಿಗೂ ಖರ್ಚು ಲೆಕ್ಕಕ್ಕೆ ಬರುವುದಿಲ್ಲ. ಈ ಸಮಾಜ ಕಾರ್ಯಕ್ಕೆ ಕೊಡಗಿನ ವಿದ್ಯಾವಂತರಾದ ಉದ್ಯೋಗಸ್ಥರಾದ ಪ್ರಾಂಜಲರಾದ ಕೊಡಗು ಜನಾಂಗದ ಮಹಾಶಯರು ಸಹಾಯಮಾಡುವ ಭರವಸೆ ಚೆನ್ನಾಗಿದೆ ಅವರ ಪ್ರೀತಿ ಬಲದಿಂದ ನಾವು ಹಿಂದೆ ಬೀಳಲಾರೆವು ಕರ್ತರೆ ಮನಕೊಂಡಿರಿ. ಶೀಘ್ರ ಶೀಘ್ರ ಎಂಬಂತೆ ಕಾರ್ಯ ಬೇಗ ಗಿರುವುದು.

ವೀರಶೈವ ಬಾಲಕ.

ಆರೋಗ್ಯ ಚಂದ್ರಿಕೆ.

ಮದ್ರಾಸ್.

ಸಂಪಾದಕರು. ಡಾಕ್ಟರ್ ಯು' ರಾಮರಾವ್,
ಯಮ್. ಎಲ್ ಸಿ. ಯವರು,

ಆರೋಗ್ಯ ಚಂದ್ರಿಕೆಯು ಆರೋಗ್ಯ ಮತ್ತು ಚಿಕಿತ್ಸೆಯ ವಿಷಯದಲ್ಲಿ ಸಾಮಾನ್ಯ ಪ್ರಜಾವರ್ಗಕ್ಕೆ ಶಿಕ್ಷಣ ದೊರೆಯುವದಕ್ಕಾಗಿ ಏರ್ಪಡಿಸಿದ ಒಂದು ಸಚಿತ್ರ ಮಾಸಪತ್ರಿಕೆ. ಈ ಮಾಸಪತ್ರಿಕೆಯು 'ಹೆಲ್ತ್' ಎಂಬ ಇಂಗ್ಲಿಷ್ ಮಾಸಪತ್ರಿಕೆಯ ಕನ್ನಡ ಪ್ರತಿಯಾಗಿದೆ. ಆರೋಗ್ಯ ಚಂದ್ರಿಕೆಯಲ್ಲಿ ಪ್ರಸಿದ್ಧರಾದ ಡಾಕ್ಟರುಗಳ ಮತ್ತು ಆಯುರ್ವೇದ ಪಂಡಿತರ ಲೇಖನಗಳು ಆಗಿಂದಾಗ್ಗೆ ಪ್ರಕಟವಾಗುವುದು.

ಆರೋಗ್ಯ ಚಂದ್ರಿಕೆಯಲ್ಲಿರುವ ಲೇಖನಗಳು ಹಳೆಯದಾದ ಮೇಲೆ ಪುನಃ ಪುನಃ ಓದಲು ಅರ್ಹವಾದವುಗಳಾಗಿರುವುವು. ಆರೋಗ್ಯ ಚಂದ್ರಿಕೆಯನ್ನು ತರಿಸಿ ಬೈಂಡ್ ಮಾಡಿಸಿ ಇಟ್ಟುಕೊಂಡರೆ ಎಲ್ಲರಿಗೂ ಉಪಯುಕ್ತವಾಗುವ ಅಮೂಲ್ಯವಾದ ಗ್ರಂಥವಾಗುವುದು ಅಂಚೆಯ ವೆಚ್ಚ ಸೇರಿ ಈ ಪತ್ರಿಕೆಯ ಚಂದಾ ಮೊಬಲಗು ವರ್ಷಕ್ಕೆ 1-8-0 ಬಿಡಿ ಪತ್ರಿಕೆ 1ಕ್ಕೆ 2-0 ಹಿಂದಿನ ಸಂಚಿಕೆಗಳು ಕೂಡಾ ದೊರೆಯುವವು.

ಪತ್ರವ್ಯವಹಾರಕ. 'ಆರೋಗ್ಯ ಚಂದ್ರಿಕೆ' 323,

ಮನೋಲ್ಲಾಸಿನಿ ತೈಲ

ತಲೆನೋವು, ತಲೆ ತಿರುಗುವುದು, ತಲೆಯಿಂದ ಕಣ್ಣಿನಿಂದ ಕಿವಿಯಿಂದ ಕಾವು ಸೋರುವುದು ಕಿವುಡುತನ, ಕಣ್ಣು ನೋವು, ಅಪಸ್ಮಾರ ನಿದ್ರೆ ಬಾರದಿರುವುದು, ನೆನಪು ಶಕ್ತಿ ಕುಂದಿಹೋಗುವುದು ಇವುಗಳಿಗೆ ಖಚಿತ ಗುಣಮಾಡುತ್ತದೆ ಉದುರುವ ಕೂದಲನ್ನು ನಿಲ್ಲಿಸಿ ಗಿಡ್ಡ ಗಿರುವ ಕೂದಲನ್ನು ಬೆಳಯಿಸಿ ಕೂದಲಿಗೆ ಸೌಂದರ್ಯವನ್ನೂ ಹೊಳಪನ್ನೂ ಕೊಟ್ಟು ಅಕಾಲಕ್ಕೆ ಹಣ್ಣಾಗುವ ಕೂದಲನ್ನು ತಡೆದು ಕೂದಲು ಇಲ್ಲದ ಸ್ಥಳದಲ್ಲಿ ಹೊಸ ಕೂದಲನ್ನು ಹುಟ್ಟಿಸುತ್ತದೆ ಚಿಕ್ಕ ಸೀಸೆಗೆ ರೂ 1, ದೊಡ್ಡ ಸೀಸೆಗೆ 2-10-0, ಒಂದು ದೊಡ್ಡ ಸೀಸೆಗೆ ರೂ 2, 3 ಸೀಸೆಗಳಿಗೆ ..-8-0

ಚಂದನಾಸವ.— ಇದು ಪ್ರಮೇಹ ಮೂತ್ರಕೃಚ್ಛ, ಮೂತ್ರ ನಿಂತುನಿಂತು ಹೋಗುವುದು, ಮೂತ್ರ ಕೆಂಪಗೆ ಉರಿ, ಮೂತ್ರ ಹಿಂಡ ಉರಿ, ಮೂತ್ರನಾಳದಲ್ಲಿ ಹುಣ್ಣು, ಮೂತ್ರ ಹೊಯ್ಯುವಾಗ ಉರಿಯುವುದು, ಮೂತ್ರನಾಳದಿಂದ ಕೀವು ಬರುವುದು ಮೂತ್ರದಲ್ಲಿ ಧಾತು ಹೋಗುವುದು, ಆಗಾಗ್ಗೆ ಮೂತ್ರ ಬರುವುದು, ಮೂತ್ರ ತಡೆಯಲಿಕ್ಕೆ ಸಾಮರ್ಥ್ಯವಿಲ್ಲದಿರುವುದು, ದೇಹದಲ್ಲಿ ಉರಿ ಬಾಯಾರಿಕೆ, ಸ್ವಪ್ನಾವಸ್ಥೆ, ಮೂತ್ರನಾಳದಲ್ಲಿ ಚುಚ್ಚುವ ನೋವು ಇವುಗಳಿಗೆ ಪರಮ ಔಷಧಿ ಗಂಡಸರಿಗೂ ಹೆಂಗಸರಿಗೂ ಇದು ಅತ್ಯುತ್ತಮ ಬಾಟ್ಲಿಗೆ ರೂ 1-8-0, 3ಕ್ಕೆ ರೂ 4, ಡಜನಿಗೆ ರೂ 15

ರೋಮನಾಶಿನಿ— ಈ ಹುಡಿಯನ್ನು ನೀರಲ್ಲಿ ಕಲಸಿ ಮೈಯಲ್ಲಿ ರೋಮವಿರುವ ಭಾಗಕ್ಕೆ ಹಚ್ಚಲು ರೋಮವು ಉದುರಿ ಬೀಳುವುದು ಡಬ್ಬಿಗಕ್ಕೆ 6 ಆಣೆ, 3 ಡಬ್ಬಿಗಳಿಗೆ ರೂ 1 1 ಡಜನಿಗೆ 8 0

ದದ್ರುಕುಷ್ಠಲೇಪ.— ಇದನ್ನು ಗಜಕರ್ಣದ ಮೇಲೆ 2 3 ಸಾರಿ ಲೇಪಿಸುವಷ್ಟರಲ್ಲಿ ಗುಣ ಬರುತ್ತದೆ. ಡಬ್ಬಿಗೆ ಆ 6 ಡಬ್ಬಿಗಳಿಗೆ ರೂ 1 ಡಜನಿಗೆ ರೂ 3-8-0

ನಾರೀಸಖಿ.— ಇದು ಸ್ತ್ರೀಯರ ಹೊಟ್ಟೆನೋವು, ಅತ್ಯಧಿಕ ರಕ್ತಸ್ರಾವ, ಬಿಳಿಸ್ರಾವ, ಮುಟ್ಟು ದೋಷಗಳು ಮತ್ತು ಗರ್ಭಕೋಶದ ವ್ಯಾಧಿಗಳನ್ನು ಗುಣ ಮಾಡುತ್ತದೆ ಸೀಸೆಗಕ್ಕೆ ರೂ.2

ಲಂಗ್ಸೆಟೋನು.— ಉಬ್ಬಸ ಕ್ಷಯದ ಕೆಮ್ಮು, ಅನೇಕ ದಿವಸಗಳಿಂದ ಬರುವ ಕೆಮ್ಮನ್ನೂ ಕಫವನ್ನೂ ಗುಣ ಪಡಿಸುತ್ತದೆ ಡಬ್ಬಿಗಕ್ಕೆ 2-8-0, 3 ಡಬ್ಬಿಗಳಿಗೆ ರೂ 7

ಅಮೃತಾರಿಷ್ಟ.— ಇದು ಕ್ವಿನೈನು ಬೆರಸದಿರುವ ಉತ್ತಮ ಮಲೇರಿಯ ಔಷಧಿ ಎಲ್ಲಾ ತರದ ಜ್ವರಕ್ಕೆ ಉತ್ತಮ. ಬಾಟ್ಲಿಗೆ ರು 1-8-0, 3ಕ್ಕೆ ರೂ 4, ಡಜನಿಗೆ ರೂ 15

ಲೋಹಾಸವ.— ಇದು ಜ್ವರಗಡ್ಡೆಗೆ ಮತ್ತು ಮಲೇರಿಯದಿಂದುಂಟಾದ ಅಶಕ್ತತೆಗೆ ದಿವ್ಯವಾದ್ದು 1 ಬಾಟ್ಲಿಗೆ ರೂ 1-8-0, 3ಕ್ಕೆ ರೂ 4

ನಮ್ಮ ಕೆಟಲಾಗು ತರಿಸಿ ನೋಡಿರಿ

ವಿಳಾಸ - ಮನೋಲ್ಲಾಸಿನಿ ಕಂಪೆನಿ.

52-4 9 **ಮಂಗಳೂರು, ಕಂಕನಾಡಿ.**

ಅಲಭ್ಯ ಲಾಭ! ಅಲಭ್ಯ ಲಾಭ!

ಚಾಯಿ ಡಿಪೋ.

ಹಿಂದೂಸ್ಥಾನದ ಎಲ್ಲ ಕಡೆಗಳಲ್ಲಿ ಪ್ರಸಿದ್ಧವಾದ ನಮ್ಮ ಉತ್ಕೃಷ್ಟವಾದ ಮೂರು ಪ್ರೈದರದ ನೀಲಿ ಕಪ್ಪು, ಕೆಂಪು, ಹಸುರು ಚಾಪಿನ ಚಾಯಿ ಪುಡಿಯ ಗ್ರಾಹಕರಿಗೆ ಕೆಳಗಿನ ಬಹುಮಾನಗಳು ಚಾಯಿ ಪುಡಿಗಳ ಸಂಗಡ ಸಿಗುವವು.

2 ರೂಪಾಯಿ ಚಾಯಿ ಗ್ರಾಹಕರಿಗೆ 1 ಥರ್ಮಾಮೀಟರು. (ಜ್ವರ ನೋಡುವ ಯಂತ್ರ) 5 ರೂಪಾಯಿ ಗ್ರಾಹಕರಿಗೆ 1 (Bee) ಬಿ. ಟೈಂ ಪೀಸ್ ಗಡಿಯಾರ 6 ರೂಪಾಯಿಗೆ ತರಿಸುವವರಿಗೆ 1 ರಾಸ್ಕೋಪ್ ಸಿಸ್ಟಮ್ ಲೀವರ್ ವಾಚ್.

ಈ ಪ್ರಕಾರದ ಬಹುಮಾನಗಳು ಸಿಗುವವು. ವಿ. ಪಿ. ಬೇರೆ

ತಾರೀಬಾಗಿಲ ಕಂಪೆನಿ,

2 **ಪೋಸ್ಟು ಹೊನ್ನಾವರ, [ಉ. ಕಾನರಾ.]**

ಭಲೆ ಕಡಮೆ! ಜಾತಿ ಗುಣ! ಶುದ್ಧ ವನಸ್ಪತಿ ತಯಾರಿ

ಹಿಂದೂಸ್ಥಾನದಲ್ಲೆಲ್ಲಾ ಪ್ರಸಿದ್ಧಿ ಹೊಂದಿದ ಬೊಂಬಾಯಿ ಝಂಡೂ ಫಾರ್ಮಾಸ್ಯೂಟಿಕಲ್ ವರ್ಕ್ಸ್ ಲಿಮಿಟೆಡ್ ಕಂಪನಿಯವರಲ್ಲಿ ಆಧುನಿಕ ನೂತನ ಯಂತ್ರದಲ್ಲಿ ತಯಾರಿಸಲ್ಪಟ್ಟ ರಹಸ್ಯವಿಲ್ಲದ

ಶಾಸ್ತ್ರೀಯ ಆಯುರ್ವೇದ ಔಷಧಗಳು

ಕೆಲವು ಮುಖ್ಯ ಔಷಧಗಳು —

ತ್ರಿಭುವನಕೀರ್ತಿ ರಸ (ಎಲ್ಲಾ ಜ್ವರಗಳಿಗೆ) 1 ಗ್ರೇನ್ ತೊಲೆ 1ರ ಸೀಸ 1ಕ್ಕೆ ರೂ	0-11-0	ದ್ರಾಕ್ಷಾಸವ (ಶಕ್ತಿವರ್ಧಕ) ಪಾತಲು ಸೀಸೆ 1ಕ್ಕೆ	1-9-0
ಚಕ್ರಿರಸ (ಮಲೇರಿಯಕ್ಕೆ) 1 ತೊಲೆಮಾತ್ರೆ ಸೀಸೆ 1ಕ್ಕೆ	0-13-0	ಕುಟಜಾರಿಷ್ಟ (ಅತಿಸಾರ, ಹಳೇಜ್ವರಕ್ಕೆ) ,, ,,	1-9-0
ಜ್ವರಾಂಕುಶವಟಿ (ಜ್ವರಕ್ಕೆ) 32 ಮಾತ್ರೆ ,, ,,	0-11-0	ಮಹಾಯೋಗ ರಾಜಗುಗ್ಗುಳ ಮಾತ್ರೆ (ಎಲ್ಲಾ ವಾತಕ್ಕೆ)	3-1-0
ಕೃಮಿಕುಠಾರರಸ ಮಾತ್ರೆ (ಕಾಲರಾ, ಅತಿಸಾರಕ್ಕೆ) ತೊಲೆ 1ಕ್ಕೆ	0-13-0	ವಸಂತ ಕುಸುಮಾಕರ ಮಾತ್ರೆ (ಮೇಹ, ಬಹುಮೂತ್ರಕ್ಕೆ) ತೊಲ 1ರ ಸೀಸೆ 1ಕ್ಕೆ	25-0-0
ಪ್ಲೀಹಾರಿವಟಿ (ಜ್ವರಗೆಡ್ಡೆಗೆ) 32 ಮಾತ್ರೆ ಸೀಸೆ 1ಕ್ಕೆ	0-11-0	ಆಮ್ಲಪಿತ್ತಹರಿವಟಿ (ಪಿತ್ತಕ್ಕೆ) 25ರ ,, ,,	0-13-0
ಲವಂಗಾದಿವಟಿ (ಕೆಮ್ಮಿಗೆ) ತೊಲೆ 1ರ ,, ,,	0-6-0	ಅಶ್ವಕಂಚುಕಿರಸ (ಜ್ವರ ಮತ್ತು ಬೇಧಿಗೆ) ತೊಲೆ 1ಕ್ಕೆ	0-9-0
ಸಿತೋಪಲಾದಿಚೂರ್ಣ (ಕೆಮ್ಮಿಗೆ) 10 ತೊಲೆ ,,	0-15-0	ಚ್ಯವನಪ್ರಾಶಾವಲೇಹ (ಪುಷ್ಟಿಗೆ) ½ ರಾತ್ಲ	0-13-0
ಅಭಯಾದಿ ಮೋದಕ್ (ಬೇದಿಗೆ) ತೊಲೆ 1ರ ,,	0-6-0	,, ,, ½ ರಾತ್ಲ ಸೀಸೆ	1-5-0
ಅಶೋಕಾರಿಷ್ಟ (ಹೆಂಗಸರ ವ್ಯಾಧಿಗೆ) 1 ರಾತ್ಲ ,,	1-9-0	,, ,, 1 ,,	2-9-0

ನಮ್ಮಲ್ಲಿ ಎಲ್ಲಾ ವಿಧವಾದ ಮಾತ್ರೆ, ಚಟ್ನಿ, ಘೃತ ಚೂರ್ಣ ಆಸವ ಅರಿಷ್ಟ ಭಸ್ಮ ವಗೈರೆಗಳು ಸುಲಭ ಬೆಲೆಗೆ ದೊರೆಯುತ್ತವೆ ಧರ್ಮಾರ್ಥವಾಗಿ ಹಂಚುವ ನಮ್ಮ ಕ್ಯಾಟಲಾಗು ತರಿಸಿ ನೋಡಿರಿ ನಮ್ಮ ವಿಳಾಸ —

ಬೆಂಗಳೂರು ಏಜಂಟರ ವಿಳಾಸ,— ಪಂಡಿತ್ ಮತ್ತು ಕಂಪನಿ,
ಶ್ರೀ ಭುವನೇಂದ್ರ ಆಯುರ್ವೇದವೈದ್ಯ ಶಾಲಾ ಸೋಲ್ ಏಜಂಟ್ಸ್ ತೀರ್ಥಹಳ್ಳಿ,
13 290, ಚಿಕ್ಕಪೇಟೆ, ಬೆಂಗಳೂರು ಸಿಟಿ. ಮೈಸೂರು ಸಂಸ್ಥಾನ.

ಮುದ್ದಾದ ಪುಸ್ತಕ! ಮುದ್ದಾದ ಮುದ್ರಣ!!

ಶರೀರ ಸುಖ, ಸಂಪತ್ತು, ಐಶ್ವರ್ಯಗಳನ್ನು ಸಂಪಾದಿಸಲು ಸಲಹೆಗಳನ್ನೂ ಮತ್ತು ಶರೀರ ಮರ್ಮಶಾಸ್ತ್ರ (ಕಾಮಶಾಸ್ತ್ರ) ವನ್ನೂ ತಿಳಿಸುವ



ಮರ್ಮ ಶಾಸ್ತ್ರ-ಎಂಬ ಕಾಮಶಾಸ್ತ್ರ

ಈ ಪುಸ್ತಕವು ಮೊದಲು ಫ್ರೆಂಚ್ ಇಂಗ್ಲೀಷು, ಹಿಂದುಸ್ಥಾನಿ, ಸಂಸ್ಕೃತ ಮುಂತಾದ ಭಾಷೆಗಳಲ್ಲಿ ಬಹು ಗುಪ್ತವಾಗಿತ್ತು. ಇದನ್ನು ಬಹು ಪ್ರಯಾಸದಿಂದ ಸಂಪಾದಿಸಿ ಕನ್ನಡಕ್ಕೆ ತರ್ಜುಮೆ ಮಾಡಿ (84 ಚಿತ್ರಪಟಗಳ ಸಹಿತ) ಥಳಥಳಿಸುವ ಕಾಗದದಲ್ಲಿ ಮುದ್ರಿಸಿ ತಯಾರಿಸಿದ್ದೇವೆ ಈ ಪುಸ್ತಕದಲ್ಲಿ ಸ್ತ್ರೀ ಪುರುಷರಿಗೆ ಬೇಕಾದ ಎಲ್ಲಾ ಮರ್ಮಗಳ ರಹಸ್ಯಗಳೂ, ಸ್ತ್ರೀ ಪುರುಷರು ಆರೋಗ್ಯವಾಗಿ ನಡೆದುಕೊಳ್ಳುವ ಮಾರ್ಗ ಸ್ತ್ರೀ ಪುರುಷರಿಗೆ ಉಂಟಾಗುವ ಎಲ್ಲಾ ತರದ ಮರ್ಮವ್ಯಾಧಿಗಳು ಮತ್ತು ಅಂಥಾ ವ್ಯಾಧಿಗಳನ್ನು ಗುಣಪಡಿಸಿಕೊಳ್ಳುವ ಚಿಕಿತ್ಸೆಗಳೂ ಇನ್ನು ಅನೇಕ ತರದ ಮರ್ಮರಹಸ್ಯಗಳು ಚಿತ್ರಗಳ ಸಹಿತ ತುಂಬಿರುವದು ಈ ಪುಸ್ತಕದ ಹೆಸರನ್ನು ಕೇಳಿದ ಮಾತ್ರಕ್ಕೆ ಸಂತೋಷವಾಗುವದು ಆದರೆ ಓದಲಿಕ್ಕೆ ಯಾರಿಗೆ ತಾನೇ ಸಂತೋಷವಾಗಲಾರದು

ಕ್ರಯ ಪುಸ್ತಕ ಒಂದಕ್ಕೆ ಒಂದೇ ಒಂದು ರೂಪಾಯಿ ರೂ. 1-0-0

T Ramachander Rao & Co, ಟಿ. ರಾಮಚಂದ್ರರಾವ್ ಅಂಡ್ ಕೊ,
Post Box No 232, ಪೋಸ್ಟ್ ಬಾಕ್ಸ್, ನಂ. 232.
52-3 Madras ಮದ್ರಾಸ್.

A Lot for SELECTION of Single Barrel Breach Loading Guns at LOWEST PRICE EVER OFFERED.



Original Browning S B B L 12 bore Fake-Down Hammerless Automatic Ejector Gun, with safety catch .... Price, Rs. 140

Do do but by **Winchester** or **Remington** .. .. Price Rs 160/-

Winchester or Remigton S. B. B L 12 bore Six Shots Hammerless Repeating gun, 32 inches barrel with Safety catch . . Price, Rs 150 -

German S B B L 12 bore Hammerless Ejector Gun, 32 inches German Steel Barrel with safety catch .. Price, Rs 65/-

Continental Make Do Price, Rs 55

Webley & Scott's S B B L 12 bore Semi Hammerless Ejector Gun, 32 inches Webley's Steel Barrel, ... Price, Rs. 75 -

The above Guns can be had in .16, 20, & .410 bore.

Same as above in 12 bore **Special "Duck Gun"** 36 inches barrel .... Price Rs 80/

W W. Greener's "Gaffer" S B B L 12 bore Martini Action Ejector Gun, 26 inches Greener's Steel Barrel ... . Price, Rs 75 -

W. W Greener's as above but **Long Range "Duck Gun"** with 32 inches barrel, and chamber for 2½ inches to 3 inches case. .... Price, Rs 90/-

Midland's "Knock-About" S. B B L Ejector Hammer Gun 32 inches barrel. .... Price, Rs. 55/-

Continental Make S. B B. L folding Pattern Hammer Gun, 32 inches barrel beautifully engraved and carved. .. .. Price, Rs. 45 -

J Steven's 12 bore Ejector Hammer Gun, 32 inches Steel barrel .... Price, Rs. 15 .

Do do. "Dread Naught' with heavy Breech.. ... .Price, Rs. 50/-

Any of the above of J Steven's **Special Duck Gun** with 36 inches barrel. Price, Rs. 5/ Extra.

ENQUIRIES SOLICITED.

THE BOMBAY ARMOURY,
331, ABDUL REHMAN STREET,
10 **BOMBAY. 3.**

ಕಲ್ಪತರು ತಾಯಿತ.

ಪರೀಕ್ಷೆ ಪಾಸಾಗಲೇಣ, ಶರೀರ ನಿರೋಗಿಗಳಾ, ನೌಕರಿ ಸಿಗಲೇಣ, ಸಂಬಳ ಹೆಚ್ಚಲೇಣ, ವಿವಾಹವಾಗಲೇಣ, ಸಂತತಿಯಾಗಲೇಣ ಕೈಕೊಂಡ ಉದ್ಯೋಗದಲ್ಲಿ ಯಶಸ್ಸು ಸಿಗಲೇಣ, ವ್ಯಾಪಾರದಲ್ಲಿ ಬಹಳ ಲಾಭ ಸಿಗಲೇಣ, ಸಾಲಮುಕ್ತ ಆಗಲೇಣ, ಭೂತ ಪಿಶಾಚ ಗ್ರಹಬಾಧೆ ಆಗದಿರಲೇಣ, ಪತಿಕೂಲ ದಿನರು ಅನುಕೂಲವಾಗಲೇಣ ಇವೇ ಮತ್ತು ಜೀತೆ ಎಷ್ಟೋ ಹೂಹುಗಳು ಇಷ್ಟಯಂತಯೇ ಆಗುವ ಅಪೇಕ್ಷೆ ಇದ್ದರೆ ಇಚ್ಛಿತಫಲ ಕೊಡುವ ಲೋಕಮಾನ್ಯ ಕಲ್ಪತರು ತಾಯಿತ ಯಾವಾಗಲೂ ಹತ್ತಿರ ಇಡಿರಿ, ಅಂದರೆ ಇಚ್ಛೆ ಪೂರ್ಣವಾಗುವದು. ಅನುಭವದ ಖಾತರಿ ಖಾತ್ರಿ ಆಗಲಾರದು. ತಾ ಸ ಕಿ ರೂ ೧॥ ಗುಣ ತೀವ್ರವಾಗಿ ತಾ ಸ ೨ಕಿ ರೂ ೬ ಗುಣ ೧೫ ದಿವಸಗಳಲ್ಲಿ, ತಾ ಸ ೩ಕಿ ರೂ. ೩, ಗುಣ ೧ ತಿಂಗಳಲ್ಲಿ ೨ ೬ ಬಿಹುಳ ಬೇರೆ ಗಣಬಾರದಲ್ಲಿ ತಾಯಿತದ ಬಿಹುಳ ವಟಾಯೋಗಿ ಎರಡೇ ಸಿಗುವದ

ವಿಳಾಸ:—ಮ್ಯಾನೇಜರ, ಕಲ್ಪತರು ತಾಯಿತ, ಕೆ. ಎಮ್ ಪೋ. ಸಂಕೇಶ್ವರ ಜಿ, ಬೆಳಗಾಂವ.

16

ಆಂಧ್ರ ಆಯುರ್ವೇದಿಕ್ ಫಾರ್ಮಸಿ.
ಬ್ರಾಂಚ್ ಬೆಂಗಳೂರು ಸಿಟಿ

ಚ್ಯವನಪ್ರಾಸ ಲೇಹ.

ಇದು ಸರ್ವೋತ್ಕೃಷ್ಟವಾದ ವನಮೂಲಿಕೆಗಳಿಂದ ತಯಾರಿಸಲ್ಪಟ್ಟ ಆಯುರ್ವೇದ ರಸಾಯನ ಔಷಧವು. ವಿದ್ಯಾರ್ಥಿಗಳೂ ವಿಶೇಷವಾಗಿ ಬುದ್ಧಿಯನ್ನು ಪ್ರಯೋಗಿಸಿ ಕೆಲಸ ಮಾಡುವವರೂ ಈ ಲೇಹವನ್ನು ಸೇವಿಸಿದರೆ ವಿಶೇಷವಾಗಿ ಬುದ್ಧಿಶಕ್ತಿಯನ್ನೂ ಜ್ಞಾಪಕಶಕ್ತಿಯನ್ನೂ ಹೊಂದ ಪರು. ದೀರ್ಘಕಾಲದ ವ್ಯಾಧಿಯಿಂದಾಗಲೀ ಕೆಟ್ಟ ನಡತೆಯಿಂದಾಗಲೀ ಸ್ವಭಾವ ಶಕ್ತಿಯ ಕುಂದಿಕೆಯಿಂದಾಗಲೀ ಶರೀರ ಕಾಂತಿಯು ಕುಂದಿ ರಕ್ತ ಕೆಟ್ಟು ಇಂದ್ರಿಯ ದೌರ್ಬಲ್ಯವೇ ಮೊದಲಾದ ವಿಕಾರಗಳಿಂದ ಪೀಡಿತರಾದವರು ಈ ಲೇಹವನ್ನು ಸೇವಿಸಿದರೆ ಈ ತರದ ವಿಕಾರಗಳೆಲ್ಲಾ ಪರಿಹಾರ ಹೊಂದುವದು. ಮನಸ್ಸಿಗೂ ಉಲ್ಲಾಸವನ್ನುಂಟುಮಾಡಿ ಮೂಳೆ ಬಂಧನಗಳಿಗೂ ನರಗಳಿಗೂ ಬಲವನ್ನು ಕೊಟ್ಟು ದೇಹಪುಷ್ಟಿಯನ್ನುಂಟುಮಾಡಿ ಸರ್ವವ್ಯಾಧಿನಿವಾರಣೆ ಮಾಡುವದು. ಇನ್ನೂ ಇದೇ ಆರೋಗ್ಯದ ಶರೀರವುಳ್ಳವರಾಗಿ ದೀರ್ಘಕಾಲ ಬದುಕುವರು. ಕಮ್ಮಿ ಉಬ್ಬಸ ವ್ಯಾಧಿಯುಳ್ಳವರಿಗೂ ವಿಶೇಷವಾಗಿ ಕ್ಷಯರೋಗಿಗಳಿಗೂ ಇದು ಸಂಜೀವಿನಿಯೇ ಸರಿ. ಪ್ರತಿ ಸಂಚಿಯಲ್ಲಿ ಇರುವ ಗುಣವು ಅದ್ಭುತವಾಗಿ ಹೇಳಲ್ಪಟ್ಟಿದೆ. ೧ ತೊಲೆಗೆ ೧ ರೂಪಾಯಿ. ೧೦ ತೊಲೆಗೆ ೫ ರೂಪಾಯಿ.

ಎಲ್ಲಾ ಕಡೆಯಲ್ಲಿಯೂ ಏಜಂಟರು ಬೇಕು.

ಸೂಚನೆ:—ಇದಿ ಚ್ಯವನಪ್ರಾಸ ಲೇಹ ದಿಸವಳು ಹೆಚ್ಚಾ ಕೆಸರ ಕ್ರಯದಿಂದ ಔಷಧ ಆಯುವೇದ ಇತರ ಎರಡೇ ಕ ಸಾರುಯ ಬರಾವ ವಿ ಇದೆ ... ತೆಗೆದ ಸ್ಟ ... ಕಿನ್ನೆಯನ್ನು ಪ ತರಿಸಿರಿ, ಇತರ ವರ ... ವಿವರ ಸಂಗತಿಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ

ಟಿ ಸಿ. ಎಸ್. ಮನಿಯಂ ಅಂಡ್ ಕೋ,
ಮ್ಯಾನೇಜಿಂಗ್ ಏಜಂಟ್ಸ್ ಆಂಧ್ರ ಆಯುರ್ವೇದಿಕ್ ಫಾರ್ಮಸಿ
10—13 ೬೬ ಚಿಕ್ಕಪೇಟೆ ಬೆಂಗಳೂರು ಸಿಟಿ

ಕಿರ್ಲೋಸ್ಕರ ಗಾಣಗಳು.

ಈ ಕೆಳಗಿನ ಕಬ್ಬಿನ ಗಾಣಗಳು ನಮ್ಮ ಕಾರ್ಖಾನೆಯಲ್ಲಿ ತಯಾರಾಗುತ್ತವೆ

೧ ಕಿರ್ಲೋಸ್ಕರ ನಂ ೩
೨ ' ಕಿಸಾನ '
೩ ' ಕಮೂಲ ಜಿರಕ

ಇವುಗಳ ಸವಿಸ್ತಾರ ಸಂಗತಿ ಬಗ್ಗೆ ಹಾಗೂ ಬೆಲೆಯ ಬಗ್ಗೆ ಕೂಡಲೇ ತಿಳಿದುಕೊಳ್ಳಿರಿ

ಕರ್ನಾಟಕ ತರುಣರ ಉನ್ನತಿಗೋಸ್ಕರ

ಕಿರ್ಲೋಸ್ಕರ ವಾರ್ತೆ,

ಎಂಬ ತಿಳಿಗನ್ನಡ ಹೊಸ ಪತ್ರಿಕೆಯನ್ನು ಪ್ರಕಟಿಸುತ್ತೇವೆ. ವಾ ಚ ೧ ರೂ ಮಾದರಿ ಸಂಚಿಕೆ ಪುಕ್ಕಟೆ.

ಕಿರ್ಲೋಸ್ಕರ ಬಂಧು, ಲಿಮಿಟೆಡ್.
ಕಿರ್ಲೋಸ್ಕರವಾಡಿ,
11 ಜಿ. ಸಾತಾರ್.

ಲೋಕಪ್ರಸಿದ್ಧವಾದ! ಅನುಭವಸಿದ್ಧವಾದ!

ವ ಊರುದಿವಸಗಳಲ್ಲಿ ಗುಣ ಕೊಡುವ ಔಷಧಿ. ಪಕ್ವಯ ... ಜೀರ್ಣಶಕ್ತಿ, ರಕ್ತವೃದ್ಧಿ, ಧಾತುಪುಷ್ಟಿ ಮ... ಸಂತಾನ ಪರಸ್ಪರ ಮೊದಲಾದ ಸ... ಜೀವನಕ್ಕೆ ಬೇಕಾದ ಆರೋಗ್ಯದಾಯಿನಿ

[ಟ್ರೇಡ್‌ಮಾರ್ಕ್] ## ಅಗಸ್ತ್ಯ [ನೋಡಿ ತೆಗೆಳ್ಳಿರಿ]

ಮನ್ಮಥ ಚಿಂತಾಮಣಿ ಲೇಹ

ರಿಜಿಸ್ಟರ್ ಆದದ್ದು

ಆಬಾಲವೃದ್ಧ ಸ್ತ್ರೀ ಪುರುಷರ ಅನೇಕ ರೋಗಗಳ ಮೂಲ ಕಾರಣವಾದ ವೀರ್ಯ ವಿಕಾರಯುಕ್ತರಿಗೂ, ಪಿತ್ತ, ಇಲ್ಲದವರಿಗೂ, ಸ್ವಪ್ನೇಂದ್ರಿಯವಾಗುವ ಬಾಲಕರಿಗೂ, ವ್ಯಾಸಿ ಮುಚ್ಚಾನಿಗಳಿಗೂ ಉಪಯೋಗವುಳ್ಳ ಒಹುಪರಮೂಲದ ಔಷಧಿ 1ಸೇರು 48ದಿವಸ ಸೇವಿಸಬಹುದು. ನಂ (1) 1ಸೇರು ಡಬ್ಬಿ 1ಕ್ಕೆ ರುಪಾಯಿ 3—0—0 ½ಸೇರು ಡಬ್ಬಿ 1ಕ್ಕೆ ರುಪಾಯಿ 1—9—0 ನಂ (2) 1ಸೇರು ಡಬ್ಬಿ 1ಕ್ಕೆ ರುಪಾಯಿ 2—0—0, ½ ಸೇರು ಡಬ್ಬಿ 1ಕ್ಕೆ 1—1—0, ವಿ ಪಿ ಕರ್ಚು ಪ್ರತ್ಯೇಕ. ವಿಶೇಷ ಮಾಹಿತಿಗೆ ಬರಕೊಳ್ಳಿರಿ

ವಿಳಾಸ—ದೇವಣ್ಣ ನಾರಾಯಣಸೇಟ್,
ಗೋಳಿಕಟ್ಟಾ
ಮಂಗಳೂರು,
12—19 ದ ಕ

ಕರ್ಣಾಟಕ

ಜಳಿಜ್ವರ ಮಲೇರಿಯ ಜ್ವರ ಇನ್‌ಫ್ಲುಯೆಂಜಾ ಆಡವಿ ಜ್ವರ, ಮೊದಲಾದವುಗಳ ಮೇಲೆ ಅಪ್ರತಿಮವಾದ ಔಷಧವು.

ಚಿಲ ಬಾಟ್ಲಿಯೊಂದಕ್ಕೆ ರು ೦—೧೪—೦
ಟಪ್ಪಾಲು ಚಾರ್ಜು ಬೇರೆ
ಡಜನ್ ಬಾಟ್ಲಗಳಿಗೆ ಟಪ್ಪಾಲುವೆಚ್ಚ ಸಹ ರು.
೯—೨—೦

ಏಜಂಟರು ಬೇಕು. ಕೊಡಗಿನ ಸ್ಕೂಲ್‌ಮಾಸ್ತರುಗಳು ತಮ್ಮೂರಿನ ಮೂರು ಜನ ಔಷಧದ ವ್ಯಾಪಾರಿಗಳ ಹೆಸರನ್ನು ತಿಳಿಸಿದಲ್ಲಿ ಅಂದವಾದ ಬ್ಲಾಟಿಂಗ್ ಪೇಪರು ಪುಕ್ಕಟೆ

12—10 ಕರ್ಣಾಟಕ ಬ್ರದರ್ಸ್,
ಗಿರಗಾಂವ, ಮುಂಬಾಯಿ.

ಇದು ಒಳ್ಳೆ ಸಮಯ'

ಹಂಚುಗಳು.

ಈಗಾಗಲೇ ವಿರಾಜಪೇಟೆಯಲ್ಲಿ ನಾವು ಮಾಡುವ ಎಲ್ಲಾ ತರದ ಹಂಚುಗಳು ಅಂದರೆ, ಹಂಚು, ಮೂಲೆ ಹಂಚು, ಪಾತಿಹಂಚು, ಬೆಳಗಿನ ಹಂಚು, ನೆಲಹಂಚು, ವಗೈರೆ ಎಲ್ಲಾ ಹಂಚುಗಳನ್ನು ವ್ಯಾಪಾರಕ್ಕೆ ಮಾಡಲಾಗಿದೆ. ಕೂಡಲೇ ಹಂಚು ಬೇಕಾದವರು ವಿರಾಜಪೇಟೆಯಲ್ಲಿ ಈ ಅಂಗಡಿಯ ಮಾಡಿದವರ ಆಫೀಸಿಗೆ ಬರೆದುಕೊಳ್ಳಬಹುದು. ಅಲ್ಲದೆ ಹಂಚುಗಳ ಸ್ಯಾಂಪಲನ್ನು ನೋಡಬಹುದು. ಎಲ್ಲಾ ವಿವರಕ್ಕೂ, ಕ್ರಯಕ್ಕೂ, ಮತ್ತು ಷರತ್ತಿಗೂ ಈ ಕೆಳಗಿನವರಿಗೆ ದಯವಿಟ್ಟು ಬರೆದ ಕಳ್ಳಿ

ವಿರಾಜಪೇಟೆ ಕೆ ಪಿ. ಚಿಣ್ಣಪ್ಪ,
12—2 ಖಾದಿ ಭಂಡಾರ

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್, ಕೊ ಆಪರೇಟಿವ್ ಸೊಸೈಟೀಸ್ ಆಕ್ಟಿನ ಪ್ರಕಾರ ರಿಜಿಸ್ಟರಾಗಿದೆ.

		ರೂ.
ಶೇರ್ ಬಂಡವಾಳ	—	30,000
ವಸೂಲಾದ ಶೇರ್ ಮೊಬಲಗು	—	7891
ಒಮೂಬಂದ ರೇವಣಾತಿ	—	90,600

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲಕೊಡತಕ್ಕದ್ದು

ಒಂದು ವರ್ಷ ವಾಯಿದೆ ಅಥವ ಹೆಚ್ಚಿನ ವಾಯಿದೆಯ ರೇವಣಾತಿಗಳಿಗೆ ಶೇಕಡ ವಾರ್ಷಿಕ ರೂ 6-1-0ರ ದರದಲ್ಲಿ ಬಡ್ಡಿ ದೊರೆಯುತ್ತೆ. ಕಡಿಮೆ ವಾಯಿದೆಯ ರೇವಣಾತಿಗಳಿಗೆ ಶೇಕಡ ವಾರ್ಷಿಕ 5ರ ಬಡ್ಡಿ ದೊರೆಯುತ್ತೆ

ವರ್ಷಕ್ಕೊಂದಾವರ್ತಿ ಕೊ ಆಪರೇಟಿವ್ ರಿಜಿಸ್ಟ್ರಾರವರು ಲೆಕ್ಕ ಆಡಿಟ್ ಮಾಡುತ್ತಾರೆ.

ಪ್ರಸಿಡೆಂಟರು, ಟ್ರೆಜರರ್.
ಕಳ್ಳೆಂಗಡ ಕಟ್ಟಿಯಪ್ಪನವರು ಯಂ ಭುಜಂಗರಾಯರು
ರಾಯ್ ಬಹದ್ದೂರ್ ಬಿ ಎ. ಬಿ ಎಲ್.

ಸಕ್ರೆಟರಿ

ಸಿ ಯನ್ ವೆಂಕಪ್ಪಯ್ಯನವರು, ಬಿ.ಎ, ಬಿ ಎಲ್
ತಾರೀಕು. 29—8—1925.

ಮಾರಾಟಕ್ಕೆ.

(1) ಪೊನ್ನಂಪೇಟೆ ಸ್ಕೂಲ್ ಬಳಿ ಬಜ್ಜೆ ವಗೈರೆ ಸಾಮಾನ ಮಾರಾಟಕ್ಕೆ ಇಟ್ಟಿರುವ ಮಹಡಿ ಮನೆ ಅದರಲ್ಲಿರುವ ಫರ್ನಿಚರ್‌ಸಾಮಾನು ಮತ್ತು ಹೊರಮನೆ ಹಿತ್ತಲ ಸಮೇತ

(2) ಪೊನ್ನಂಪೇಟೆ ದೊಡ್ಡ ಬೀದಿ ಬಲಭಾಗ್ದಲ್ಲಿ ವಾಸಕ್ಕೂ ಮತ್ತು ವ್ಯಾಪಾರಕ್ಕೂ ಯೋಗ್ಯವಾದ ಮಹಡಿಮನೆ ಮತ್ತು ಹೊರಮನೆಗಳು ಸಹ

ಖಾಯಿಷ್‌ದಾರರು ಕ್ರಯ ಬೊಬಲಿಗೆ ಮತ್ತು ಹೆಚ್ಚಿನ ಸಂಗತಿಗೆ ಈ ಕೆಳಗಿನ ವಿಳಾಸಕ್ಕೆ ಬರೆಕೊಳ್ಳಬಹುದು

U E Ahamed
General Merchant &
Commission agent,
Ponnampett

೧೦೦೦ ರೂಪಾಯಿಗಳ ಬಹುಮಾನ.

ಲೋಕಪ್ರಸಿದ್ಧವಾದ ಸಾಲಂಮಿಸ್ರಿ ಮುರಬ್ಬಾ

ನಮ್ಮ ಟ್ರೇಡ್ ಮಾರ್ಕನ್ನು ನೋಡಿ ಈ ಔಷಧ ತೆಗೆದುಕೊಳ್ಳಿರಿ.

ಇದು ಸೇವನದಿಂದ ದೀರ್ಘ ವ್ಯಾಧಿಗಳಿಂದ ಇದ್ದರೂ ಸ್ವಪ್ನೇಂದ್ರಿಯವಾದರೂ, ಸ್ತ್ರೀ ಸಂಪಕ್ಕೆ ಮೊದಲೇ ಸ್ಖಲಿತವಾದರೂ ನರ ಸಡಿಲವಾಗಿದ್ದರೂ ದೋಷರಹಿತವಾಗಿ ಶರೀರಕ್ಕೆ ಆರೋಗ್ಯವನ್ನೂ ಧಾರ್ಢ್ಯತೆ



ಮನಸ್ಸಿಗೆ ಉಲ್ಲಾಸ, ಬಲ, ತೇಜಸ್ಸು ಉಂಟು ಮಾಡುವದು. ಅಜೀರ್ಣ ಮಲಬದ್ಧತೆ ಮಧುಮೇಹ ಬಹುಮೂತ್ರ, ಕೈಕಾಲು ಸೊಂಟ ನೋವುಗಳಿಗೆ ಇದು ದಿವ್ಯ ಔಷಧವು. ಈ ಸಾಲಂಮಿಸ್ರಿ ಎಂಬುವದು ಕಾಬೂಲ್‌ಕಂದಾಹಾರ ಪ್ರಾಂತ್ಯದಲ್ಲಿ ಬೆಳೆಯುತ್ತದೆ

ಈ ಔಷಧದಿಂದ ಗುಣಹೊಂದಿದ ಅನೇಕ ಮಹಷೀಯರು ತಾವಾಗಿಯೇ ಅನೇಕ ದೇಶಗಳಿಂದಲೂ ಆಫ್ರಿಕ, ಬರ್ಮ ಪಿನಾಂಗ್, ಸಿಂಗಪೂರ, ಸಿಲೋನ್, ಬೊಂಬಾಯಿ, ಕಲ್ಕತ್ತ, ಮದ್ರಾಸು ಮತ್ತು ಇಂಡಿಯಾದೇಶದಲ್ಲಿ ಎಲ್ಲಾ ಸ್ಥಳಗಳಿಂದಲೂ ನಮಗೆ ಸರ್ಟಿಫಿಕೇಟು ಪತ್ರಗಳನ್ನು ಕಳುಹಿಸಿರುವರು. ಇವುಗಳ ನಕಲನ್ನು ಬೇಕಾದವರು ಕೇಳಿ ನೋಡಬಹುದು. ಇವುಗಳು ಸುಳ್ಳು ಎಂದು ನಿರ್ಧರಪಡಿಸುವವರಿಗೆ ಮೇಲೆ ಕಂಡ ಬಹುಮಾನವನ್ನು ಕೊಡಲ್ಪಡುತ್ತೆ. ನಾವು ಹಾಗೆ ಕೊಡದೇ ಇದ್ದಲ್ಲಿ ಕೋರ್ಟು ಮೂಲಕ ಅದನ್ನು ಪಡೆಯಬಹುದು. ೧ ಡಬ್ಬಿಯನ್ನು ೧೫ ದಿನ ಸೇವಿಸಿದ್ದು ಗುಣವು ನಿಶ್ಚಯವಾಗಿ ತೋರಬಹುದು. ೨ ಅಥವ ೩ ಡಬ್ಬಿಗಳು ಉಪಯೋಗಿಸಿದರೂ ಪೂರ್ಣವಾಗಿ ಗುಣವನ್ನುಂಟು ಮಾಡುವುದು. ... ವಿಳಾಸಗಳನ್ನು ವಿವರವಾಗಿ ಬರೆಯಬೇಕು. ಒಂದಾವರ್ತಿ ಉಪಯೋಗಿಸಿ ನೋಡಿ ನೋಡಿದ್ದಲ್ಲಿ ಖಾತ್ರಿ ಉಂಟಾಗುತ್ತೆ

ಕ್ರಯ ಡಬ್ಬಿ ೧ಕ್ಕೆ ರೂ ೩—೮—೦ ಭಾಂಗಿ ಚಾರ್ಜು ೧ರಿಂದ ೩ ಡಬ್ಬಿಗಳಿಗೆ ೦—೮—೦ ಆಣೆ. ಏಜಂಟರುಗಳು ಎಲ್ಲಾ ಸ್ಥಳಗಳಲ್ಲಿಯೂ ಅವಶ್ಯಕವಾಗಿರುತ್ತೆ. ... ಅವರು ಕೊಡತಕ್ಕ ಕಾಲದಲ್ಲಿ ಈ ಪತ್ರಿಕೆಯ ಹೆಸರನ್ನು ಬರೆಯಬೇಕು

7 ಟೆಲಿಗ್ರಾಫ್ ಅಡ್ರೆಸ್, ಮಿಸ್ರಿ ಬೆಂಗಳೂರು ಸಿಟಿ }
ಡಿ ಮನ್ನಾಲಾಲ್, ದಿಲ್ಲಿ ಹಕೀಮ್ ವೈದ್ಯರು,
ಸಾಲಂಮಿಸ್ರಿ ಮುರಬ್ಬ ಡಿಪೋ,
ಬೆಂಗಳೂರು ಸಿಟಿ

Printed & published by Kodanda Appayya, R B, Chairman, board of Directors, at " Kodagu " Press, Mercara for " Kodagu " Ltd

It not deliver a please return to
"KODAGU" OFFICE MERCARA

ಕೊಡಗು.

ಸ್ವಕೀಯ ಭೂತರಯಾಂ ವಿದ್ಯಾ ನೀತಿ ಪ್ರಯುಕ್ತತಾ || ಐಕ್ಯಮತ್ಯೇನ ದೇಶಾನಾಂ ಸುಸ್ಥಿರಾ ರಾಜ್ಯ ಸಂಪದಾ ||

ಸಂಪಾದಕ—ಪಂದ್ಯಂಡ ಐ. ಬೆಳ್ಯಪ್ಪ.

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವದು.

ಸಂಪುಟ ೫] ಕೊಡಗು, ಸ್ವ ೧೯೨೬ನೇ ಇಸವಿ ಜನವರಿ ತಾರೀಖು ೧೫ನೇ ಶುಕ್ರವಾರ [ಸಂಚಿಕೆ ೩೦

ಒಂದೇ ಮೂರು ರೂಪಾಯಿಗಳಲ್ಲಿ!

ಟಿಕ್=ಟಾಕ್ (ರಿಜಿಸ್ಟರ್ಡ್).



ಎಂಬ ಗಡಿಯಾರವನ್ನು ನಿಮಗೆ ಸ್ಲೈಸುತ್ತೇವೆ ಇ ಪ್ರತಿ ಕರಾರು ಗಂಟೆಯನ್ನು ತೋರಿಸುವದು ಇ ದಕ್ಕೆ ಬೀಗ ಕೊಡುವೇ ಕಾಗಿಲ್ಲ ಇದರಲ್ಲಿ ಕಾ ಣುತ್ತಿರುವ ಗುಂಡನ್ನು ಮೇಲಕ್ಕೆ ಎಳೆದರೆ ಸಾಕು ತನ್ನಷ್ಟಕ್ಕೆ ತಾನೇ ಸರಿ ಯಾದ ಕಾಲವನ್ನು ತೋ ರಿಸುವದು ಇನ್ನೆಕೇ ತಡಸಿಕೊಳ್ಳಿರಿ

ಪೀಟರ ವಾಚ ಕಂಪೆನಿ,
ಪೋಸ್ಟ ಬಾಕ್ಸ ನಂಬರ 27
ಮದ್ರಾಸ್.

18 ಕಾರೆಕ್ಟ್ ರೋಲ್ಡ್‌ಗೋಲ್ಡ ಬಂಗಾರದ ಕೈಗಡಿಯಾರವನ್ನು ಕೊಳ್ಳುವವರಿಗೆ

ಮೋಡರ್ನ್ ರೆಗ್ಯುಲೇಟರ್

ಎಂಬ ಗೋಡೆಗೆ ತಗಲಿರುವ ಗಡಿಯಾರವು ಮುಫತ್ತಾಗಿ ಸಿಕ್ಕುವದು





ಈ ಕೈಗಡಿಯಾ ರವು ಬಂಗಾರಕ್ಕೆ ಸಮ ಸಮಾನವಾಗಿದೆ ಖ ರಾರು ಗಂಟೆಯನ್ನು ತೋರಿಸುವದು ಅ ತ್ಯುತ್ತಮವಾದ ಗ ಟ್ಟಿ ಸಾಮಾನುಗಳಿಂ ದ ತಯಾರಿಸಿದ್ದು ಇ ದಕ್ಕೆ 3 ವರ್ಷಗಳ ಗ್ಯಾರಂಟಿ ಕೊಡು ವೆವು.

ರೆಗ್ಯುಲೇಟರ ಮತ್ತು ಕೈಗಡಿಯಾರ	ರೂ.	10—0—0
ಕೈಗಡಿಯಾರ ಮಾತ್ರ	ರೂ.	7—0—0
ರೆಗ್ಯುಲೇಟರ್ ಗಡಿಯಾರ	ರೂ.	5—1—0

ಕ್ಯಾಪಟಿನ್ ವಾಚ್ ಕಂಪೆನಿ,
12—11 ನಂ. 265 ಮದ್ರಾಸು.

ಪ್ರಕಟಣೆ.

ಒಂದು ಕಡೆ ಇಂಗ್ಲೀಷಿನಲ್ಲಿಯೂ, ಇನ್ನೊಂದು ಕಡೆ ಕನ್ನಡದಲ್ಲಿಯೂ ಪ್ರಿಂಟಾಗಿರುವ ಕಾಫಿ ತೋಟದ ಕೂಲಿಗಳ ಬ್ರಿಟಾಷು ಕಂಟ್ರಾಕ್ಟು ಎಗ್ರಿಮೆಂಟ್ ಫಾರಮುಗಳೂ ಮತ್ತು ಅಪ್ಲಿಕೇಶನ್ (complaint) ಫಾರಂಗಳೂ ಸಹ ಮಾರಾಟಕ್ಕೆ ತಯಾರಿದೆ. ಬೇಕಾದವರು 'ಕೊಡಗು' [illegible] ನಿಂದ ಪಡಕೊಳ್ಳಬಹುದು

ಮಡಿಕೇರಿ ಮ್ಯಾನೇಜರ್,
17.3.26 'ಕೊಡಗು' ಆಫೀಸ್,

NOTICE

ನಮ್ಮಲ್ಲಿ ಎಲ್ಲಾ ತರದ ಬ್ರಿಂಟ್ ಬೋರಿಂಗ್ ಮತ್ತು ಕೇಪು ಕಾರ್ಟ್ರಿಜ್‌ಗಳು ಮಾರಾಟಕ್ಕೆ ಇಟ್ಟಿವೆ ಕೋವಿ ಪರವಾನಿಗೆ ಒಡನೆ ಒಪ್ಪಿಸಬೇಕು [illegible] ಇವೆ.

[illegible]

(ಸ್ಪೆನ್ಸರ್ ಮತ್ತು ಕಂಪೆನಿ ಲಿಮಿಟೆಡ್)

Spencer & Co. Ltd.

52—11 MERCARA POLLIBETTA.

ಮಹಜನೀಯರೇ,

1923ನ ಇಸವಿಯಲ್ಲಿ [illegible] ಕರದ ನಮ್ಮ ವೈದ್ಯ ಶಾಲೆಯು [illegible] ಕಾರ್ಯಭಾರವಾದ ಕಾಫಿ ಬೆಳಸನ್ನು [illegible] ನಮ್ಮ ಕಂಪೆನಿಯ [illegible] ಈಗಾಗಲೇ ಸೋಮವಾರಪೇಟೆಯಲ್ಲಿ ತೆರೆಯಲ್ಪಟ್ಟಿದೆ

ಕೃಷ್ಣ ಸಂಜೀವ ಮತ್ತು ನಾರಾಯಣ [illegible]

ಎಂಬ ಹೆಸರುಗಳ [illegible] ನಮ್ಮ [illegible] ವೈದ್ಯ [illegible]

[illegible] ವೈದ್ಯರಾಗ [illegible] ರಕ್ತದಿಂದ [illegible] ಮೂ ಪುಷ್ಪದ [illegible] ಮೂ ಇರುವ ಇ [illegible] ನಾರಾಯಣರಾ [illegible] ಮಹಾಮಾರಿ [illegible] ಪಾಂಡಿತ್ಯವನ್ನು ಪಡೆದವರು [illegible] ಇದ್ದಾರೆ.

ಇವರಲ್ಲಿನ ಎಲ್ಲಾ ಔಷಧಗಳಿಗೆ ಮಲಬಾರಿನ ಎಲ್ಲಾ ವೈದ್ಯಶಾಲೆಗಳ ಔಷಧಗಳ ಚಾರ್ಜಿಗಿಂತಲೂ ಕಡಿಮೆ ಯಾಗಿದೆ

ನಂಬೀಶರ ಮತ್ತು ಕಂಪೆನಿ,
ಆಯುರ್ವೇದಿಕ್ ಪ್ರೈವೇಟ್ ಡಿಸ್ಪೆನ್ಸರಿ.
ಕಲ್ಲೂರು, ವೀರಾಜಪೇಟೆ ಮತ್ತು
[illegible] ಸೋಮವಾರಪೇಟೆ.

ಪ್ರಕಟಣೆ.

ನಮ್ಮ ಅಂದಾಜಾದ ಹೊಸ ಅಕ್ಷರಗಳು ಒಂದು ತಲುಪಿದ ವುದರಿಂದ, 'ಲೆಟರ್ ಹೆಡ್ಸ್' 'ವಿಸಿಟಿಂಗ್ ಕಾರ್ಡ್ಸ್' [illegible] ಮಂತ್ರಣಗಳು (ಇನ್ವಿಟೇಶನ್) ಮೊದಲಾದ ಪ್ರಿಂಟಿಂಗ್ [illegible] ಬಗೆಗಳನ್ನು ಇಂಗ್ಲಿಷ್ ಮತ್ತು ಕನ್ನಡದಲ್ಲಿ ಚಂದವಾಗಿಯೂ ಕಡಿಮೆ ಚಾರ್ಜಿನಲ್ಲಿಯೂ ನಿಯಮಿತ ಕಾಲದಲ್ಲಿಯೂ ಮಾ ಡಿಕೊಡಲು ತಯಾರಾಗಿದ್ದೇವೆ

ಮಡಿಕೇರಿ. ಮ್ಯಾನೇಜರ್.
'ಕೊಡಗು' ಲಿಮಿಟೆಡ್

ಬೇಟೆಗೆ ಅವಶ್ಯವಾದ

ಕೋವಿ ಮದ್ದು ಪೌಂಡಿಗೆ ರೂ. ೨—೪—೦

ಗೇಮು ಕೋವಿನ ಕೇಪುಗಳು, ೨೫೦ ಉಳ್ಳ ಪೆಟ್ಟಿಗೆಗೆ ೦—೬—೦

ಚಿಲ್ಲು ಪೌಂಡು ಒಕ್ಕೆ ೦—೮—೦.

ತುಂಬಿದ ೧೦೦ ತೋಟೆಕ್ಕೆ (E. C.) ೧೨—೦—೦.

ಇದ ರು ಕಳುಹಿಸುವಾಗ್ಯೆ ಮೂ ವಾಗಲೂ ರೂ. 5 ಅಡ್ವಾನ್ಸು ಕಳು ಹಿಸಬೇಕದ್ದು ಜನ್ಮ ಹಿಡುವಳಿದಾ ರರು ಆರ್ಡರ ಕಳುಹಿಸುವಾಗ ಮೊ ದಲನೇ ನಾರಿಸುತ್ತ ಡಿಸ್ಟ್ರಿಕ್ಟ್ ಮೇ ಜಿಸ್ಟ್ರೇಟರವರಿಂದ ವಿಕಾಯತಿ (a ಕ್ಸೆಂಪ್ಶನ್) ಸರ್ಟಿಫಿಕೇಟನ್ನು ಕಳುಹಿ ಸಬೇಕು. ಕಡ್ಡದ್ದು ನಿಮಗಾಗಿ ನಾ ವೇ ಆ ಸರ್ಟಿಫಿಕೇಟನ್ನು ಒದಗಿಸಿಕೊ ಡಲು ತಯಾರಾಗಿದ್ದೇವೆ.

ಈ ಕೆಳಗಿನ ವಿಳಾಸಕ್ಕೆ ಆರ್ಡರುಗ ಳನ್ನು ಪತ್ರವ್ಯವಹಾರಗಳನ್ನು ಇಂಗ್ಲಿಷಿನಲ್ಲಿ ನಡಿಸತಕ್ಕದ್ದು

S. Venkatarangam Chetty,
Ammunition & Sulphur Merchant.
No 9, China Bazar,
12—10 Madras.

ARMS & AMMUNITION MART.

Mahomedally-Noorbhoy



21 Abdul Rehman Street, near
Crawford Market, BOMBAY. 3
Telegraphic Address—"SHOOTER"
Bombay.

52—20, Please write for Reduced nett prices list for 1926

"ಕೊಡಗು"

ಸನ ೧೯೨೬ನೇ ಇಸವಿ ಜನವರಿ ತಾ. ೧೫ನೇ ಶುಕ್ರವಾರ.

ಸಯನ್ಸ್ ಕಾಂಗ್ರೆಸ್.

ಇಂಡಿಯನ್ ಸಯನ್ಸ್ ಕಾಂಗ್ರೆಸ್ಸಿನ ಹದಿಮೂರನೇ ವಾರ್ಷಿಕ ಮಹಾಸಭೆಯು ಈ ತಾರೀಕು 1 ಮತ್ತು ೨ರಲ್ಲಿ ಬೊಂಬಾಯಿಯಲ್ಲಿ ನಡೆಯಿತು. ಇಂದೂರು ಸಂಸ್ಥಾನದ ಸಾಲ್ಲಿಂಟ ಇಂಡಸ್ಟ್ರಿ ಸಂಸ್ಥೆಯ ಡೈರೆಕ್ಟರಾದ ಮಿ ಆಲ್ಬರ್ಟ ಹವರ್ಡವರ ಅಧ್ಯಕ್ಷ ಸ್ಥಾನದಲ್ಲಿ ಸಭೆ ಸೇರಿತು. ಬೊಂಬಾಯಿಯ ಗವರ್ನರವರು ಆ ಸಭೆಗೆ ಸಮಯೋಚಿತವಾದ ಭಾಷಣವನ್ನು ಮಾಡಿದನಂತರ ಅಧ್ಯಕ್ಷರು ಅರ್ಥಗರ್ಭಿತವಾದ ಮತ್ತು ಉಪಯುಕ್ತವಾದ ಸೂಚನೆಗಳಿಂದೊಡಗೂಡಿದ ಭಾಷಣವನ್ನು ಮಾಡಿದರು. ಈ ಸಭೆಯಲ್ಲಿ ನಿಪುಣರಾದ ಶಾಸ್ತ್ರಜ್ಞರು ವಿಜ್ಞಾನ ಶಾಸ್ತ್ರ ಸಂಬಂಧದ ಹಲವು ಉಪನ್ಯಾಸಗಳನ್ನು ಓದಿದರು. ... ಅಧ್ಯಕ್ಷರ ಭಾಷಣದಲ್ಲಿ ದೇಶದ ... ಸಾಯದ ... ವ್ಯವಸಾಯ ... ಮತ್ತು ಮಲೇರಿಯ ... ಕುರಿತು ... ಇಲ್ಲಿ ... [illegible]

ವಿಜ್ಞಾನ ಶಾಸ್ತ್ರವು ಪಶ್ಚಿಮ ದೇಶಗಳಲ್ಲಿ ... [illegible] ... ದೇಶದಲ್ಲಿ ... ತರದ ರೋಗಗಳ ... ವ್ಯವಸಾಯ ... ವಿಜ್ಞಾನ ಶಾಸ್ತ್ರವನ್ನು ಉಪಯೋಗಿಸ ... ವ್ಯವಸಾಯ ... [illegible]

... ಶಾಸ್ತ್ರವನ್ನು ... ವಿಜ್ಞಾನ ಶಾಸ್ತ್ರದ ... ದೇಶಗಳಲ್ಲಿ ... ಶಾಸ್ತ್ರದ ಸಹಾಯ ... ವ್ಯವಸಾಯದಲ್ಲಿ ... ದೇಶಗಳಲ್ಲಿ ... ಜೀವನಕ್ಕೆ ... ಅಭಿವೃದ್ಧಿ ... ಈ ತರದ ವ್ಯವಸಾಯ ... ಉತ್ಪತ್ತಿಯು ... ಪ್ರಯೋಜನ ... [illegible] ... ಈ ದೇಶದಲ್ಲಿ ... ಜೀವಿಸುವ ... ಸಿಗುವ ... ನಮ್ಮ ದೇಶದ ಸ್ಥಿತಿಯು ಶೋಚನೀಯವಾಗಿದೆ

ನಾಲೆಯಿಂದ ಒದಗಿಸುವ ನೀರು ಬೆಳೆಗೆ ವಿಶೇಷ ... ಪ್ರಯೋಜನಕಾರಿಯಲ್ಲವೆಂತಲೂ ಮಳೆಯು ಕಾಲಕ್ಕೆ ಸರಿಯಾಗಿ ಬೀಳದ ಸಂದರ್ಭದಲ್ಲಿಯೂ, ಮಳೆನೀರು ದೊರೆಯದ ಸ್ಥಳಗಳಲ್ಲಿಯೂ ಮಾತ್ರ ಕಾಲುವೆ ನೀರನ್ನು ಉಪಯೋಗಿಸಬೇಕೆಂತಲೂ ಅಭಿಪ್ರಾಯಪಟ್ಟರು. ನಮ್ಮ ಈ ದೇಶದಲ್ಲಿ ಕಾಲುವೆ ನೀರಿನ ಅನುಕೂಲವು ಬಹಳ ಕಡಿಮೆಯಾಗಿ ಹ... ಜ್ಞನ ಒಸರು ಮಳೆಯನ್ನೇ ನಂಬಿರುವದರಿಂದ ಆರಂಭದ ಸಮಯಕ್ಕೆ ಸರಿಯಾಗಿ ಮಳೆಯು ಬಂದರೆ ಮಾತ್ರ ರೈತರ ಜೀವನವು ಸರಾಗವಾಗಿ ನಡೆಯುವುದು. ಆದರೆ ಈಗ ಕೆಲವು ವರ್ಷಗಳಿಂದ ಅನಾವೃಷ್ಟಿ ಅಥವಾ ಅತಿವೃಷ್ಟಿಯಿಂದ ವ್ಯವಸಾಯಗಾರರು ತುಂಬಾ ನಷ್ಟಕ್ಕೆ ಒಳಗಾಗಿರುವರು. ಮಳೆಯು ಕಡಿಮೆಯಾಗಿರುವ ಉತ್ತರ ಕೊಡಗಿನ ಕೆಲವು ಭಾಗಗಳಿಗೆ ನಾಲೆಯ ಅವಶ್ಯಕತೆಯು ಅತಿಯಾಗಿದ್ದರೂ ಸರ್ಕಾರದವರಿಗೆ ಹಣದ ಅಭಾವವಂತೆ

ಭತ್ತ ಬೆಳೆಯುವ ಪ್ರದೇಶಗಳಲ್ಲಿ ಮಲೇರಿಯ ಜ್ವರದ ಹಾವಳಿಯು ಹೆಚ್ಚೆಂದು ಹಲವರ ಭಾವನೆಯಾಗಿದೆ. ಆದರೆ ಭತ್ತದ ವ್ಯವಸಾಯಕ್ಕೆ ಬೇಕಷ್ಟು ನೀರು ದೊರೆಯುವ ಸ್ಥಳಗಳಲ್ಲಿ ಮಲೇರಿಯವು ಬಹಳ ಕಡಿಮೆಯೆಂತಲೂ ಹಾಗೆ ಬೇಕಾದಷ್ಟು ನೀರು ಸಿಕ್ಕದೆ ... ನಾಲೆಯ ನೀರಿನಿಂದ ... ಬೆಳೆಸುವ ಪ್ರಾಂತ್ಯಗಳಲ್ಲಿ ಮಲೇರಿಯವು ಪ್ರಬಲವಾಗಿರುವುದೆಂದೂ ಸಯನ್ಸ್ ಕಾಂಗ್ರೆಸ್ಸಿನ ಅಧ್ಯಕ್ಷರು ಹೇಳಿದರು. ಇದರ ಕಾರಣಗಳು ಇನ್ನೂ ತಿಳಿಯದಿರುವುದಿಲ್ಲವೆಂತಲೂ ಇವುಗಳನ್ನು ಕಂಡು ಹಿಡಿಯುವುದು ಶಾಸ್ತ್ರಜ್ಞರ ಮುಂದಿನ ಕೆಲಸವಾಗಿದೆಯೆಂತಲೂ ಸೂಚಿಸಿದರು.

ಸಾಕಷ್ಟು ... ವ್ಯವಸಾಯ ಮಾಡದೆ ಹೋದರೆ ಬೆಳೆಗೆ ರೋಗಗಳು ತಗಲುವದು ... ಅಲ್ಲಿಗೆ ಅನುಗುಣವಾದ ... ರೋಗಗಳಿಗೆ ಈಡಾಗುವುವು ... ವ್ಯವಸಾಯದಲ್ಲಿ ... ಇವರ ... ಇದಕ್ಕೆ ... ವ್ಯವಸಾಯವನ್ನು ಉತ್ತಮಗೊಳಿಸಲು ಶಾಸ್ತ್ರಜ್ಞರ ಸಹಕಾರ ... ತರದ ಶಾಸ್ತ್ರದ ... ಶೋಧನೆಗಳನ್ನು ಮಾಡುವುದು ... ಇಂತಹ ... ಗಳಿಗೆ ಸರ್ಕಾರದವರು ದ್ರವ್ಯ ಸಹಾಯ ಮಾಡಬೇಕೆಂದಿಗೂ ... [illegible]

ಮಿ| ಬಿ. ಜಿ. ಹಾರ್ನಿಮನ್ನರ ಆಗಮನ.

... ಪಟ್ಟಣದ ... ಕಲ್ ... ಹಿಂದುಸ್ಥಾನ ... ಸ್ವಾತಂತ್ರ್ಯ ... ಬಿ. ಜಿ. ಹಾರ್ನಿಮನ್ ... 11 ... ಇಂಗ್ಲೆಂಡ ... ಸ್ಥಾನದಿಂದ ... ಬಂದ ಸ್ಥಾನದ ಸರಕಾರದವರು ... ಅವರನ್ನು ... ಬಾರಿ ... ಈ ವರ್ಷ ಎಂಟು ವರ್ಷ ... ಇವರನ್ನು ಹಿಂದುಸ್ಥಾನಕ್ಕೆ ... ಬರಲು ಬಿಟ್ಟರು ... ಅವರ ... ಪ್ರಯೋಜನವಿದ್ದರೆ ... ಇವರಿಗೆ ಒಬ್ಬ ... ಕಾರಣ ...

ಇವರು ... ಪತ್ರಿಕೆಯಲ್ಲಿ ... ವರ್ತಮಾನ ಪ್ರಕಟಿಸಿದರೆಂಬ ಕಾರಣದಿಂದ ... ವರ್ತಮಾನಗಳನ್ನು ... ಪತ್ರಿಕೆಗಳ ಮೂಲಕ ಪ್ರಕಟಿಸಿದರೆಂಬ ಕಾರಣದಿಂದಲೂ ಕಾಸಿ ... ಇವರನ್ನು ... ದಲ್ಲಿ ಪೊಲೀಸರು ... ಇಂಗ್ಲೆಂಡಿಗೆ ... ಇಂಡಿಯಾದಿಂದ ಗಡೀಪಾರು ಮಾಡಿದರು. ಈ ಪತ್ರಿಕೆಯ ಡಿಲ್ಲಿ ... ವರ್ತಮಾನವನ್ನು ... ಇವರು ಪ್ರಕಟಿಸಿದ್ದಾರೆ ... ಮಾಡಲು ... ವರ್ತಮಾನವು ... ತಂತಿ ವರ್ತಮಾನವನ್ನು ... ಟೆಲಿಗ್ರಾಮ್ ... ವರ್ತಮಾನ ... ಪ್ರಕಟ ... ಈ ವರ್ತಮಾನವನ್ನು ಇವರು ... ಜನರಲ್ ... ಮಹನೀಯರು ... ಹೇಳಿದರು. ಇವರು ತಪ್ಪು ಮಾಡಿದ್ದರೆ ... ಶಿಕ್ಷೆ ಮಾಡಬಹುದಿತ್ತು ... ಕೇಳಿಕೊಂಡರೂ ... ಆಗ ಜಾರಿಯಲ್ಲಿದ್ದ ಡಿಫೆನ್ಸ್ ಆಫ್ ಇಂಡಿಯಾ ಆಕ್ಟು ... ಇವರನ್ನು ... ಮಾಡಿದ್ದು ... ಈ ಯುದ್ಧದ ... ಕವಲುಗಳಿಗೆ ... ಆದ ... ಇವರು ... ಇಂಗ್ಲೆಂಡಿನಿಂದ ಹಿಂದುಸ್ಥಾನಕ್ಕೆ ಬರಲಿಕ್ಕೆ ಪಾಸ್ ಪೋರ್ಟು ಕೊಡದೆ ಇವರ ಸ್ವತಂತ್ರಕ್ಕೆ ಭಂಗ ಮಾಡಿದರು. ಇಂಡಿಯಾ ಸರಕಾರದವರು ಕೇಳಿದರೆ ಬ್ರಿಟಿಷ ಸರಕಾರದವರು ... ಬ್ರಿಟಿಷ ಸರಕಾರದವರನ್ನು ಕೇಳಿದರೆ ಇಂಡಿಯಾ ಸರಕಾರದವರ ಮೇಲೂ ... ಹೊರಿಸುತ್ತಾ ಬಂದರು. ಬೊಂಬಾಯಿ ಸರಕಾರಕ್ಕೆ ಇವರಿಂದಲೂ ಇವರ ಪತ್ರಿಕೆಯಿಂದಲೂ ಕಷ್ಟವಾದದ್ದರಿಂದ ಇವರನ್ನು ಹಿಂದುಸ್ಥಾನಕ್ಕೆ ಬರಗೊಡಲಿಲ್ಲವೆಂತ ಈಚೆಗೆ ಸರಕಾರಿ ಮಂತ್ರಿಗಳ ಕೊಟ್ಟ ಉತ್ತರಗಳಿಂದ ತಿಳಿದು ಬಂದಿದೆ. ಹಿಂದುಸ್ಥಾನಕ್ಕೆ ಅಪಕಾರವಾಗಿ ದೇಶಕ್ಕೆ ... ಇಂಗ್ಲಿಷ ... ಸ್ವತಂತ್ರಕ್ಕೆ ಸರಕಾರವು ... ಹಿಂದೀಯ ... ನೋವಾಗುತ್ತದೆ. ಆದರೆ ಹಿಂದುಸ್ಥಾನದ ಜನರಿಗೆ ಸ್ವತಂತ್ರವಿದ್ದದ್ದರಿಂದ ಇಂ...

... ಥಾ ಆಕ್ರಮಗಳನ್ನು ನಡೆಯದಂತೆ ಮಾಡಲು ಅವರಿಗೆ ಸಾಧ್ಯವಾಗದೇ ಹೋಯಿತು. ಈಗಲೂ ಮಿ ಹಾರ್ನಿಮನ್ನರು ಉಪಾಯದಿಂದ ಹಿಂದುಸ್ಥಾನಕ್ಕೆ ತಲಪಿದ್ದಾರಷ್ಟೆ. ಹಿಂದುಸ್ಥಾನದ ಸ್ವರಾಜ್ಯ ಸ್ಥಾಪನೆಗೆ ಎಷ್ಟರಮಟ್ಟಿಗೆ ಬ್ರಿಟಿಷ ಸರಕಾರವು ಅಡ್ಡಿ ಮಾಡುತ್ತಿದೆ ಎಂಬದನ್ನು ಈ ಮಹನೀಯರಿಗೆ ಕೊಟ್ಟ ತೊಂದರೆಗಳಿಂದ ತಿಳಿದುಕೊಳ್ಳಬಹುದು

ಇವರು ಮದ್ರಾಸ್ ಪಟ್ಟಣಕ್ಕೆ ಬಂದ ಕೂಡಲೇ ಬಂದ ವರ್ತಮಾನವನ್ನು ಜನರಲ್ಲಿ ಹರಡಿಸಲಿಕ್ಕೆ ಬೇಕಾದಷ್ಟು ಸಮಯವಿಲ್ಲದಿದ್ದರೂ ಮೊನ್ನೆ ಆದಿತ್ಯವಾರ ದಿನ ಸಾಯಂಕಾಲ ದೊಡ್ಡ ಜನ ಸ್ತೋಮವು ಸಮುದ್ರತೀರದಲ್ಲಿ ಸೇರಿ ಇವರಿಗೆ ಸ್ವಾಗತವನ್ನು ಕೊಟ್ಟರು. ಇವರ ಸ್ನೇಹಿತರಾದ ಮಿ ಸತ್ಯಮೂರ್ತಿಯವರು ಇವರ ವಿಷಯವಾಗಿ ಹೇಳುವ ಮಾತುಗಳೇನೆಂದರೆ— ಮಹಾತ್ಮ ಗಾಂಧಿಯವರನ್ನು ಜೈಲಿನಿಂದ ಬಿಡುಗಡೆ ಮಾಡಿದಾಗ ದೇಶಕ್ಕೆ ಎಷ್ಟು ಸಂತೋಷವಾಯಿತೋ ಅಷ್ಟೇ ಸಂತೋಷವು ಈಗ ಮಿ ಹಾರ್ನಿಮನ್ನರನ್ನು ಹಿಂದುಸ್ಥಾನಕ್ಕೆ ಬರಲು ಬಿಟ್ಟದರಿಂದ ಜನರಿಗೆ ಉಂಟಾಗಿದೆ. ಮಿ ಹಾರ್ನಿಮನ್ನರಷ್ಟು ... ಸಂಪೂರ್ಣವಾಗಿ ... ಸ್ವಾರ್ಥತೆ ಇಲ್ಲದೆಯೂ ಹಿಂದುಸ್ಥಾನವನ್ನು ಪ್ರೀತಿಸುವ ಇನ್ನೊಬ್ಬ ಇಂಗ್ಲಿಷ ಮನುಷ್ಯನನ್ನು ನಾನು ಕಾಣಲಿಲ್ಲ. ಹಿಂದುಸ್ಥಾನದ ಸ್ನೇಹಿತರಾದ ಇತರ ಕೆಲವು ಇಂಗ್ಲಿಷ ಜನರು ಹಿಂದೀಯರಿಗಿಂತ ತಾವು ದೊಡ್ಡವರೆಂಬ ಭಾವನೆಯಿಂದ ಹಿಂದೀಯರ ... ಹೀಗೆ ನಡೆದುಕೊಳ್ಳಬೇಕು ಹಾಗೆ ನಡೆದುಕೊಳ್ಳಬಾರದು ಎಂಬ ಬುದ್ಧಿವಾದಗಳನ್ನು ಹೇಳುತ್ತಾರೆ. ಆದರೆ ಇವರು ಬುದ್ಧಿವಾದವನ್ನು ಹೇಳಲಿಕ್ಕೆ ಕಾಯದೆ ತಾವೇ ಸ್ವತಃ ಹಿಂದುಸ್ಥಾನಕ್ಕೆ ಕೆಲಸ ಮಾಡುವವರಾಗಿದ್ದಾರೆ. ಸಮಯಕ್ಕೆ ತಕ್ಕ ಅಭಿಪ್ರಾಯಗಳನ್ನು ಇಟ್ಟುಕೊಂಡವರಲ್ಲ. ಇವರ ದಿನ ... ಹುಟ್ಟಿದ ... ವ್ಯತ್ಯಾಸ ... ಅನಾದಾರಣಾಶಕ್ತಿಯವರಾಗಿದ್ದಾರೆ ... ರೀತಿಯಲ್ಲಿ ಪತ್ರಿಕೆ ನಡೆಸುತ್ತಿದ್ದರೆ ಇವರಿಗೆ ಬ್ರಿಟಿಷ ಸರಕಾರದಿಂದ ದೊಡ್ಡ ದೊಡ್ಡ ... ಬರುತ್ತಿದ್ದವು ... ಸುಳಿಯಲ್ಲಿ ... ಹಿಂದೀಯರ ... ಕರವಾದ ಹೋರಾಟದಲ್ಲಿ ಭಾಗಿಯೂ ಆದ್ದರಿಂದ

ಇವರಿಗೆ ಹಿಂದುಸ್ಥಾನದ ಮೇಲೆ ಇರುವ ಉತ್ಕಟ ಪ್ರೀತಿಯನ್ನು ಇವರ ಮಾತುಗಳಿಂದಲೇ ಊಹಿಸಿಕೊಳ್ಳಬೇಕು ... ಸಭೆಯಲ್ಲಿ ಇವರು ಮಾಡಿದ ಭಾಷಣದಲ್ಲಿ ಹೇಳಿದ್ದೇನೆಂದರೆ— ಈಗ ಏಳು ವರ್ಷಗಳಿಂದ ... ನಾನು ಕಾಯುತ್ತಿದ್ದೆ. ಈ ... ಹಿಂದುಸ್ಥಾನಕ್ಕೆ ನಾನು ಮಾಡಿದ ... ಈ ಮಹೋದ್ದೇಶಕ್ಕಾಗಿ ನಾನು ಹೇಳುವದೇನೆಂದರೆ— ಈ ಮೊದಲು ಈ ದೇಶಕ್ಕಾಗಿ ಮಾಡಿದ ಕೆಲಸಕ್ಕಿಂತ ಹೆಚ್ಚಾಗಿಯೇ ಇನ್ನು ಮುಂದೆ ಮಾಡಲು ತಯಾರಿದ್ದೇನೆ. ನಾನು ಸಾಯುವ ಮುಂಚೆ ಹಿಂದುಸ್ಥಾನಕ್ಕೆ ಸ್ವಾತಂತ್ರ್ಯ ದೊರಕುವದನ್ನು ನೋಡಿ ಸಾಯಬೇಕೆಂಬುವದೇ ನನ್ನ ಆಶಯವಾಗಿದೆ. ಈ ಉದ್ದೇಶವನ್ನು ಸಾಧಿಸಲಿಕ್ಕೆ ನನ್ನಿಂದ ಸಾಧ್ಯವಾದಷ್ಟು ಸಹಾಯ ಮಾಡುತ್ತೇನೆ. ಹಿಂದುಸ್ಥಾನದ ಪತ್ರಿಯೊಬ್ಬ ಸಾಮಾನ್ಯ ಸ್ನೇಹಿತನೂ ಮಾಡಬೇಕಾದ ಪ್ರಯತ್ನವು ಒಂದಾಗಿರಬೇಕೆಂದರೆ—ಹಿಂದುಸ್ಥಾನವನ್ನು ಸ್ವದೇಶದವರಿಂದ ನಡೆಯುವ ಸರಕಾರದ ಅಧೀನದಿಂದ ಆದಷ್ಟು ಬೇಗ ತಪ್ಪಿಸಿ ಸ್ವದೇಶೀ ಸರಕಾರವನ್ನು ಸ್ಥಾಪಿಸಲಿಕ್ಕೆ ಸಾಧ್ಯವಾದ ಪ್ರಯತ್ನ ಮಾಡಬೇಕಾಗಿದೆ. ಈ ಏಳು ವರ್ಷದಿಂದ ನನಗೆ ಕೊಟ್ಟ ... ಹಿಂದುಸ್ಥಾನದ ಸ್ವಾತಂತ್ರ್ಯ ಸ್ಥಾಪನೆಯ ನನ್ನ ಉದ್ದೇಶವು ಎಷ್ಟಾದರೂ ಬದಲಾಗಲಿಲ್ಲ. ನನಗೆ ಆದಂಥ ಎಷ್ಟು ಕಷ್ಟವಾದೀತೆಂದರೂ ಸರಕಾರದ ಆಕ್ರಮಗಳನ್ನು ಎತ್ತಿ ತೋರಿಸದೆ ಬಿಡಲಾರೆನು. ನಾನು ಈಗ ಹಿಂದುಸ್ಥಾನಕ್ಕೆ ಸರಕಾರದ ದಯೆಯಿಂದ ಬಂದಿರುವದಲ್ಲ. ಬ್ರಿಟಿಷ ಸಾಮಾಜ್ಯದ ನಿವಾಸಿಯು ಮನುಷ್ಯ ಮಾತ್ರದವನ ಸ್ವತಃಸಿದ್ಧ ಹಕ್ಕಿನ ಮೇಲೆ ಇಲ್ಲಿಗೆ ಪುನಃ ಬಂದಿರುವವನಾಗಿದ್ದೇನೆ. ನಾನು ಮುದುಕನಾದರೂ ಹಿಂದುಸ್ಥಾನದ ಸ್ವಾತಂತ್ರ್ಯ ಯುದ್ಧದಲ್ಲಿ ಹೋರಾಡಲು ಬೇಕಾದಷ್ಟು ಯುವಕರ ಶಕ್ತಿಯುಳ್ಳವನಾಗಿದ್ದೇನೆ. ನನ್ನನ್ನು ಏಳು ವರುಷಗಳ ಗಡೀಪಾರು ಮಾಡಿದ್ದರಿಂದ ನನಗೆ ಮಾತ್ರ ಅನನುಕೂಲವಾಗಲಿಲ್ಲ. ನಿಮ್ಮ ಮನೆಯೊಳಗೆ ನಿಮಗೆ ಬೇಕಾದವನನ್ನು ಕರೆಸಿಕೊಳ್ಳಲಿಕ್ಕೆ ನಿಮಗೆ ಅರ್ಹತೆಯಿಲ್ಲವೆಂಬ ಒದರಿಂದ ನಿಮಗೂ ... ಅವಮರ್ಯಾದೆಯಾಗಿದೆ. ಹೆಚ್ಚು ಕಾಲ ಕಳೆಯದೆ ಈ ಸ್ವತಂತ್ರವನ್ನು ನೀವು ಪಡೆದುಕೊಳ್ಳಬೇಕು.'

ಈಗ ದೇಶದ ಒಳಗೆ ಇರುವ ಜಾತಿಭೇದ ಪಂಗಡಭೇದಗಳನ್ನು ನೋಡಿ ಅವರು ಹೇಳಿರುವುದೇನೆಂದರೆ—' ಪ್ರತಿಯೊಬ್ಬ ವ್ಯಕ್ತಿಯೂ, ಪ್ರತಿಯೊಂದು ಪಂಗಡವೂ ಪ್ರತಿಯೊಂದು ಜಾತಿಯೂ ತಮ್ಮ ತಮ್ಮ ಅಭಿಪ್ರಾಯಗಳನ್ನು ಕಲವು ಮಟ್ಟಿಗಾದರೂ ಬಿಟ್ಟುಕೊಟ್ಟು ಒಗ್ಗಟ್ಟು ಸ್ಥಾಪಿಸಿಕೊಂಡು ಒಂದೇ ಧ್ಯೇಯವನ್ನು ಸ್ಥಾಪಿಸಲು ಪ್ರಯತ್ನಿಸದೆ ಹೋದರೆ ಹಿಂದುಸ್ಥಾನಕ್ಕೆ ಸ್ವರಾಜ್ಯವು ಅನೇಕ ವರುಷಗಳ ವರೆಗೆ ದೊರೆಯಲಾರದು.'

ಸರಕಾರದ ಹಿಂಸೆಗೆ ಒಳಗಾಗಿ ಈಗ ತಾನೇ ಹಿಂದುಸ್ಥಾನಕ್ಕೆ ಬಂದ ಇವರು ಈ ರೀತಿ ಮಾತಾಡುತ್ತಿರುವಾಗ ಇವರಲ್ಲಿ ಹಿಂದುಸ್ಥಾನದ ಪ್ರೇಮವು ಎಷ್ಟರಮಟ್ಟಿಗೆ ತುಂಬಿ ತುಳುಕುತ್ತಿದೆ ಎಂಬುದನ್ನು ವಾಚಕರು ಊಹಿಸಿಕೊಳ್ಳಬಹುದು. ಇಂಥಾ ಅಮೂಲ್ಯ ಸ್ನೇಹಿತರಿಗೆ ಹಿಂದುಸ್ಥಾನವು ಕೂಡ ಮನಃಪೂರ್ವಕ ಸ್ವಾಗತದಲ್ಲಿ ನಾವು ಸಹ ಸೇರಿಕೊಳ್ಳುತ್ತೇವೆ

ಶ್ರೀಮತಿ ಸರೋಜಿನೀಯವರ ಭಾಷಣ.

'ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಯವೊಂದೇ ಅಕ್ಷಮ್ಯ ವಿಶ್ವಾಸಘಾತವು, ನಿರಾಶೆಯೊಂದೇ ಅಕ್ಷಮ್ಯ ಅಪರಾಧವು'

ಮಿತ್ರರೇ,

ಮಾನವ ಭಾಷೆಯ ಭಂಡಾರ ಸರ್ವಸ್ವವನ್ನೇ ಸೂರೆಮಾಡಿದರೂ ನೀವು ನನಗೆ ಮಾಡಿದ ಭವ್ಯವಾದ ಬಹುಮಾನವನ್ನು ಮನ್ನಿಸಿ ನನ್ನ ಹೃದಯದಲ್ಲಿ ಆವಿರ್ಭವಿಸುವ ಬಹುವಿಧ ಭಾವನೆಗಳನ್ನು ವ್ಯಕ್ತಪಡಿಸಲು ಸಾಕಷ್ಟು ಓಜಸ್ವಿಯಾದ, ಸುಂದರವಾದ ಶಬ್ದಗಳು ಸಾಲದಾಗಿವೆಯೆಂದೇ ನನ್ನ ಕಳವಳವು. ೫೦ ವರ್ಷಗಳಿಂದ ಪ್ರತಿಭಾಶಾಲಿಗಳಾದ ನನ್ನ ಪೂರ್ವಾಧಿಕಾರಿಗಳು ತಮ್ಮ ಚಿರಸ್ಮರಣೀಯವಾದ ಸಾಧನೆಗಳ ತೇಜಸ್ಸಿನಿಂದ ವಿರಾಜಮಾನವಾಗಿ ಮಾಡಿದ, ಹಾಗೂ ನಿಮ್ಮ ಅಧೀನದಲ್ಲಿರುವ ಪಾರಿತೋಷಕಗಳೆಲ್ಲಾ ಅತ್ಯಂತ ಶ್ರೇಷ್ಠವಾದ ಈ ಪದವಿಯ ಗೌರವವನ್ನು ಅನಭಿಜ್ಞಳಾದ ನನ್ನ ಕೈಗಳಿಗೊಪ್ಪಿಸಿದುದರ ಕಾರಣವು ಕೇವಲ ದೇಶವಿದೇಶಗಳಲ್ಲಿ ಭಾಗ್ಯವಶಾತ್ ನಾನು ನೆರವೇರಿಸಿರಬಹುದಾದ ಚಿಕ್ಕ ಪುಟ್ಟ ಸೇವೆಗಳಾಗಿರದೆ ಹಿಂದೀ ಸ್ತ್ರೀಯರ ವಿಷಯದಲ್ಲಿ ನಿಮಗಿರುವ ವಿಶಾಲವಾದ ಶ್ರದ್ಧೆಯ ದ್ಯೋತಕವಾಗಿದೆಯೆಂದು ನಾನು ಬಲ್ಲೆನು. ಸಂದಿಗ್ಧವಾದ ಇಂದಿನ ಪರಿಸ್ಥಿತಿಯಲ್ಲಿ ನೀವು ನನ್ನನ್ನು ಪ್ರಧಾನ ಸೇವಕಿಯಾಗಿ ಆರಿಸಿದುದು ನಿಮ್ಮ ಪರಂಪರೆಯಲ್ಲಿ ನೂತನವೇನೂ ಅಲ್ಲ. ನಿಮ್ಮ ಇತಿಹಾಸದ ಸೌಭಾಗ್ಯದ ಸುದಿನಗಳಲ್ಲಿ ಸತಿಗೆ ಗೃಹವೇದಿಯ, ಯಜ್ಞವೇದಿಯ, ಅಂತೆಯೇ ರಣವೇದಿಯ ಅಧಿಷ್ಠಾತ್ರಿಯಾಗಿ ಯಾವ ಪುರಾಣ ಪ್ರಸಿದ್ಧವಾದ ಪೂಜ್ಯ ಪದವಿಯಿದ್ದಿತೋ, ಅದನ್ನೇ ನೀವು ಅವಳಿಗೆ ಇಂದು ಪುನಃ ದಯಪಾಲಿಸಿರುವಿರಿ. ಜ್ಞಾನ-ಭಕ್ತಿ ವೈರಾಗ್ಯಗಳ ಆ [illegible] ಆ ಪವಿತ್ರತಮವಾದ ಆದರ್ಶವನ್ನು ಇಂದು ನಿಮ್ಮ ಮುಂದೆ ಧ್ವನಿಗೈಯಲು ನಾನು ಎಷ್ಟು ಅಯೋಗ್ಯಳೆಂದು ಚೆನ್ನಾಗಿ ಬಲ್ಲೆನಾದರೂ, ಯಾವ ಅಮರವಾದ ಶ್ರದ್ಧೆಯು ಸೀತೆಯ ಪತಿವಿಯೋಗದ ದಾರುಣವಾದ ದುಃಖವನ್ನು ಪ್ರಜ್ವಲಿಸಿತೋ ಯಾವ ಅಚಲವಾದ ಸಾಹಸವು ಸಾವಿತ್ರಿಯನ್ನು ಮೃತ್ಯುವಿನ ದುರ್ಭೇದ್ಯವಾದ ದುರ್ಗದ ವರೆಗೆ ಪದಾರ್ಪಣಮಾಡಲು ಪ್ರೇರಿಸಿತೋ, ಆ ಶ್ರದ್ಧೆ ಮತ್ತು ಆ ಸಾಹಸದ ಶುಭ್ರವಾದ ಜ್ಯೋತಿಯ ಒಂದು ಕಿರಣವನ್ನಾದರೂ ನನ್ನೀ ಮಹಾ ಕಾರ್ಯಕ್ಕೆ ನಾನೂ ತರಲಾರೆನೇ?

ಈ ಮಹಾಸಭೆಯಲ್ಲಿ ಇಂದಿನ ವರೆಗೆ ಮಾನ್ಯವಾದ ಸಾಂಪ್ರದಾಯಕ್ಕನುಸಾರವಾಗಿ ಭಾವೀ ವರ್ಷದ ಕಾರ್ಯಕಲಾಪಗಳ ಯೋಜನೆಯೊಂದನ್ನು ಕ್ರಮಪ್ರಕಾರವಾಗಿ ನಿಮ್ಮ ಮುಂದಿಡುವುದು ಸಭಾಧ್ಯಕ್ಷಳಾದ ನನ್ನ ಅನಿವಾರ್ಯವಾದ ಕರ್ತವ್ಯವಾಗಿದೆ. ಆದುದರಿಂದ ಯಾವ ಭಾವನೆಗಳು ಸ್ವಾಭಾವಿಕವಾಗಿ ನಿಮ್ಮ ಸಮ್ಮುಖದಲ್ಲಿಯೇ ಅಂತಃಕರಣದಿಂದ ಸ್ಫುರಿಸಿ, ನಿಮ್ಮ ಸನ್ನಿಧಿಯ ಸ್ಫೂರ್ತಿಯಿಂದಲೇ ಆಶಾಕಾಂತಿಯುಕ್ತಗಳಾಗಿ ಪ್ರಕಾಶವಾಗಬೇಕೋ, ಆ ಭಾವನೆಗಳ ಮಸುಕಾದ ರೂಪರೇಖೆಯನ್ನು ಮುಂದಾಗಿ ಬರೆದು ಚಿತ್ರಿಸಲು ನನ್ನ ಇಡೀ ಜೀವಮಾನದ ಆಚರಣೆಗೆ ವಿರುದ್ಧವಾಗಿಯಾದರೂ ನಾನು ಇಲ್ಲಿ ಪ್ರಯಾಸಪಟ್ಟಿರುವೆನು.

ದುಃಖ ಪ್ರದರ್ಶನ.

ಪ್ರಸ್ತುತ ಸಭಾಕಾರ್ಯವನ್ನಾರಂಭಿಸುವ ಪೂರ್ವದಲ್ಲಿ ಕೀರ್ತಿಶೇಷರಾದ ದೇಶಭಕ್ತರಿಗೆ ಶ್ರದ್ಧಾಂಜಲಿಗಳನ್ನರ್ಪಿಸುವುದು ನಮಗುಚಿತವು. ಯಾರು ನಮ್ಮ ರಾಷ್ಟ್ರೀಯ ಪುನರುಜ್ಜೀವನದ ಜನಕರಾಗಿದ್ದು ತನ್ನ ಜನಾಂಗದ ದುಃಖಗಳಿಗಾಗಿ ಅರ್ಧಶತಮಾನದ ವರೆಗೆ ತನ್ನ ತೀವ್ರ ಸಂತಾಪವನ್ನು ಅಪ್ರತಿಮವಾದ ವಾಗ್ಝರಿಯಿಂದ ಸ್ವರ್ಗದ ದ್ವಾರದ ಮುಗಿಲಿನ ವರೆಗೆ ಘೋಷಿಸಿದರೋ ಆ ಸುರೇಂದ್ರನಾಥ ಬೆನರ್ಜಿಯವರನ್ನೂ, ಯಾರು ಸಂಸ್ಕೃತ ಸಾಹಿತ್ಯಮಯ ದೀಪವನ್ನು ಪ್ರದೀಪಿಸಿ ನಿವೇದನೆಯ ಕರಗಳಿಂದ ಅದನ್ನು ರಾಜಕೀಯ ಚಳವಳಿದ ಕೋಲಾಹಲದ ಮೇಲಕ್ಕೆತ್ತಿ ಹಿಡಿದರೋ ಆ ದಕ್ಷಿಣಾತ್ಯ ಪಂಡಿತಾಗ್ರಣಿಯಾದ ರಾಮಕೃಷ್ಣ ಭಂಡಾರಕರರನ್ನೂ, ಯಾವ ರಾಜಯೋಗಿಯ ಜೀವನವು ಅನನ್ಯವಾದ ಸ್ವಾತಂತ್ರ್ಯ ಪ್ರೇಮಾತಿಶಯದ ಆವೇಶದಿಂದ ವೈಷ್ಣವದಾಸರ ಪದಗಳಂತೆ ಸಂಗೀತಮಯವಾಗಿತ್ತೋ, ಯಾರು ಪ್ರಾಣಾಂತವಾಗಿ ಕಾದಾಡಿದ ಪ್ರಬಲ ಶತ್ರುವಿನೊಡನೆಯಾದರೂ ಆಸನ್ನ ಮರಣ ಕಾಲದಲ್ಲಿ ವೀರೋಚಿತವಾದ ಸಂಧಿಪ್ರಸ್ತಾಪವನ್ನು ಮಾಡುವಷ್ಟು ವಿಶಾಲ ಹೃದಯರಾಗಿದ್ದರೋ ಆ ದೇಶಬಂಧು ಚಿತ್ತರಂಜನರನ್ನೂ ಒಮ್ಮೆ ಭಕ್ತಿಪುರಸ್ಸರವಾಗಿ ಧ್ಯಾನಿಸುವ.

ವರ್ತಮಾನ ಪರಿಸ್ಥಿತಿ.

ಇಂದಿನ ಪರಿಸ್ಥಿತಿಯ ಘೋರವಾದ ವಿಷಮತೆಯು ತೀರ ಚಿಂತಾಜನಕವಾಗಿದೆ. ನಮ್ಮ ಮುಂದೆ ಉಪಸ್ಥಿತವಾಗಿರುವ ಮಹಾಸಮಸ್ಯೆಗಳು ಕರಾಳ ರೂಪವನ್ನು ಧಾರಣೆ ಮಾಡಿವೆ. ದೇಶ ವಿದೇಶಗಳ ಘಟನಾವಳಿಗಳ ಅನಪೇಕ್ಷಿತ ಪರಿಣಾಮವಾಗಿ ನಮ್ಮ ರಾಷ್ಟ್ರೀಯ ಅಸ್ತಿತ್ವವನ್ನೇ ನಾಶಮಾಡಲು ಹೆದರಿಸುತ್ತಿರುವ ಭಯಂಕರವಾದ ವ್ಯೂಹದಲ್ಲಿ ನಾವು ಬಂಧಿಸಲ್ಪಟ್ಟಿರುವೆವು. ಗತಿಸಿದ ಮಹಾನುಭಾವರು ಇಂದು ಇಹಲೋಕದಲ್ಲಿದ್ದುದಾದರೆ ನಮ್ಮ ಎಷ್ಟೊಂದು ಸಂಕಟಗಳು ಪರಿಹಾರವಾಗುತ್ತಿದ್ದಿಲ್ಲ? ನಮ್ಮ ಕಣ್ಣುಗಳನ್ನಾವರಿಸಿರುವ ಮೋಹದ ಪರೆಯನ್ನು ಕಳಚಿ ಬಿಸಾಡಿ, ನಮ್ಮ ವಿಘಾತಕವಾದ ಭೇದ ಬುದ್ಧಿ ಮತ್ತು ಲಾಂಛನಾಸ್ಪದವಾದ ಪರಾವಲಂಬನೆಗಳ ಸ್ವಾಭಾವಿಕ ಪರಿಣಾಮವಾದ ಇಂದಿನ ಗರ್ಹಣೀಯವಾದ ದೈನ್ಯಾವಸ್ಥೆಯನ್ನು ಚೆನ್ನಾಗಿ ಲಕ್ಷಿಸಿ, ಸುತ್ತಣಿಂದಲೂ ಆಕ್ರಮಿಸುತ್ತಿರುವ ವಿಪತ್ತುಗಳಿಂದ ಮುಕ್ತರಾಗಲು, ನಮ್ಮ ಶಕ್ತಿ ಸರ್ವಸ್ವವನ್ನು ವಿನಿಯೋಗಿಸುವುದು ನಮ್ಮ ಇತಿಕರ್ತವ್ಯವಾಗಿದೆ. ನಮ್ಮ ಜನ್ಮಸಿದ್ಧವಾದ ಮಾನವೀ ಅಧಿಕಾರಗಳನ್ನು ನಿರಾಕರಿಸುತ್ತಿರುವ ಕ್ರೂರವಾದ ದಬ್ಬಾಳಿಕೆಯ ಪ್ರತೀಕಾರವನ್ನು ಮಾಡಲು ನಮ್ಮ ಆನುವಂಶಿಕವಾದ ಭೌತಿಕ ಮತ್ತು ಆಧ್ಯಾತ್ಮಿಕ ಸಂಪತ್ತಿನ ಮೇಲೆ ಹಸ್ತಕ್ಷೇಪವನ್ನು ಮಾಡುತ್ತಿರುವ ಪರಕೀಯ ಸತ್ತಾವಾದವನ್ನು ವಿರೋಧಿಸಲು, ನಮ್ಮ ಆರ್ಥಿಕ ಮತ್ತು ಮಾನಸಿಕ ಪರಾಧೀನತೆಯ ಅಸಹಾಯ ಸ್ಥಿತಿಯಲ್ಲಿ ವಿದೇಶದವರು ಮಾಡುವ ಸರ್ವಸ್ವಾಪಹರಣವನ್ನು ಪ್ರತಿಬಂಧಿಸಲು, ಉಪನಿವೇಶಗಳಲ್ಲಿರುವ ಹತಭಾಗ್ಯರಾದ ನಮ್ಮ ಬಾಂಧವರನ್ನು ನಿರ್ಮೂಲಗೊಳಿಸಲು ಹೊಂಚುಹಾಕುತ್ತಿರುವ ನಿರ್ದಯವಾದ ವಿಧಿಯನ್ನು ಜಯಿಸಲು, ನಮ್ಮನ್ನು ಅಧೋಗತಿಗಿಳಿಸಲು ಹೆಣಗುತ್ತಿರುವ ಕರ್ತವ್ಯ ಪರಾಙ್ಮುಖತೆಯನ್ನು ಪ್ರಬಲಿಸುತ್ತಿರುವ ಶಕ್ತಿಗಳನ್ನು ಕುಂದಿಸಲು, ಮತ್ತು ನಮ್ಮೊಳಗಿನ ಸ್ವನಾಶಕವಾದ ಯಾದವೀ ಕಲಹವನ್ನು ಅಂತ್ಯಪಡಿಸಲು ಇಲ್ಲಿ ಸಮ್ಮಿಳಿತರಾದ ನಾವು ಮಂತ್ರಾಲೋಚನೆಯನ್ನು ಮಾಡಬೇಕು.

ಮಹಾತ್ಮಾಜೀಯವರ ಸ್ವಾರ್ಥತ್ಯಾಗದ ಸಂದೇಶ.

ನಮ್ಮ ರಾಷ್ಟ್ರೀಯ ಪುನರುದ್ಧಾರದ, ಅರ್ಥಾತ್ ನಮ್ಮ ಮಹತ್ವ ಸಂಕಷ್ಟಗಳ ನಿವಾರಣೆಯ ಸಂಪೂರ್ಣ ರಹಸ್ಯವು ಮಹಾತ್ಮಾಜೀಯವರ ಸ್ವಾರ್ಥತ್ಯಾಗದ ಸಂದೇಶದಲ್ಲಿ ಗರ್ಭಿತವಾಗಿದೆ. ಆದರೆ ನಮ್ಮ ಪೂರ್ವದ ಉಜ್ವಲವಾದ ಕ್ರಾಂತಿಯನ್ನರಿಯದ, ನಿಸ್ತೇಜರಾದ ನಮಗೆ ಆ ಮಹಾ ನಿಯಮವನ್ನು ದೀರ್ಘಕಾಲದ ವರೆಗೆ ಅನುಸರಿಸಲಾಗದೆ ಹೋಯಿತು. ಚರಿತ್ರೆಯ ಅಂತಿಮ ತೀರ್ಮಾನವು ಏನೇ ಆಗಲಿ, ಒಂದು ಮಹಾಪೂರದಂತೆ ದೇಶದಲ್ಲೆಲ್ಲ ರಭಸದಿಂದ ಪ್ರವಹಿಸಿದ ಅಸಹಯೋಗ ಚಳವಳಿಯು ನಮ್ಮ ಜನಾಂಗ ಜೀವನದ ಅಂತರಂಗವನ್ನೇ ಆಲೋಲಕಲ್ಲೋಲವಾಗಿ ಮಾಡಿ, ಈಗ ಉಪಶಮನವಾಗಿ ಸುಷುಪ್ತಾವಸ್ಥೆಯಲ್ಲಿರುವುದಾದರೂ ನಮ್ಮ ಹೃದಯಗಳನ್ನು ಅದು ಎಂದೆಂದಿಗೂ ಪರಿವರ್ತಿಸಿರುವುದೆಂದೂ, ನಾವು ಈಗ ಕೈಕೊಳ್ಳಬಹುದಾದ ಧೋರಣವು ಮಹಾತ್ಮಾಜಿಯವರ ಮೂಲ ಸಿದ್ಧಾಂತದಿಂದ ಎಷ್ಟೇ ದೂರ ಹೋದರೂ ಕಳೆದ ೪—೫ ವರ್ಷಗಳ ಪ್ರಭಾವದಿಂದ ಸಂಪೂರ್ಣ ನಿರ್ಲಿಪ್ತವಾಗಿರುವುದು ಅಸಾಧ್ಯವೆಂದೂ, ನನ್ನ ನಿಶ್ಚಿತ ಅಭಿಪ್ರಾಯವು.

ರಾಜಕಾರಣ.

ವಿಸ್ಖಲಿತವಾದ ನಮ್ಮ ಶಕ್ತಿಗಳನ್ನು ಧ್ಯೇಯಸಾಧನೆಯಲ್ಲಿ ಕೇಂದ್ರೀಕರಿಸಿ, ನಮ್ಮ ರಾಜಕಾರಣದಲ್ಲಿ ಪರಿಣಾಮಕಾರಿಯಾದ ನೂತನ ಚೈತನ್ಯವನ್ನುಂಟುಮಾಡಿ, ಭಾರತೀಯ ಮುಕ್ತಿಸಾಧನೆಯ ಅಂತಿಮ ಯುದ್ಧವನ್ನು ಹೂಡಿ ವಿಜಯಿಯಾಗುವ ಲೋಕೋತ್ತರವಾದ ರಾಜಕೀಯ ಕೌಶಲ್ಯವೇ ನಮ್ಮ ಇಂದಿನ ಆವಶ್ಯಕತೆಯು. ರಾಜಕೀಯ ಬಂಧವಿಮೋಚನದ ಆಂದೋಲನದ ಪೂರಕವಾಗಿ ರಾಷ್ಟ್ರದ ವರ್ಚಸ್ಸನ್ನೂ ಜೀವಕಳೆಯನ್ನೂ ಏರಿಸುವ ಸಾಮಾಜಿಕ, ಸಾಂಪತ್ತಿಕ ಮತ್ತು ಬೌದ್ಧಿಕ ಚಳವಳಿಗಳಿಗೆಲ್ಲ ದೇಶಕಾಲಗಳಿಗನುಗುಣವಾಗಿ ಸಮರ್ಥನೆಯನ್ನು ಕೊಡಬೇಕು.

ಗ್ರಾಮ ಸಂಘಟನೆ ಮತ್ತು ದೇಶೀಯ ಕೈಗಾರಿಕೆಗಳು.

ಮೇಲೆ ಉಲ್ಲೇಖಿಸಿರುವ ರಾಷ್ಟ್ರಪೋಷಕ ಉದ್ದೇಶಗಳಿಗೆ ಮೂರ್ತಸ್ವರೂಪವನ್ನು ಕೊಡಲು ಮಹಾಸಭೆಯಲ್ಲಿ ಪ್ರತ್ಯೇಕವಾದ ವಿಭಾಗಗಳನ್ನು ಮಾಡಿ ಆಯಾ ಶಾಖೆಯನ್ನು ವಿಶೇಷಜ್ಞರಾದವರ ಅಧೀನಕ್ಕೆ ಕೊಡಬೇಕು. ಈ ಪ್ರಕಾರವಾದರೆ ಮಾತ್ರ ರಾಷ್ಟ್ರದ ಸರ್ವಾಂಗಸುಂದರವಾದ ಪ್ರಗತಿಯು ಶೀಘ್ರದಲ್ಲಿ ಸಾಧ್ಯವಾಗುವದು. ಇದಕ್ಕಾಗಿ ನಾವು ದೇಶಬಂಧುಗಳಿಗಿಷ್ಟವಾಗಿದ್ದ ಗ್ರಾಮಸಂಘಟನೆಯ ಆದರ್ಶವನ್ನನುಸರಿಸುವುದೇ ಉತ್ತಮವು. ದೇಶದಲ್ಲೆಲ್ಲ ಸ್ವಾಭಿಮಾನದ ಮತ್ತು ಸ್ವಾವಲಂಬನದ ಸಂದೇಶವನ್ನು ನಿನಾದಕಾಲದಿಂದ ಅವುಗಳ ದ್ಯೋತಕಗಳಾದ ನೇಗಿಲು ಮತ್ತು ರಾಟೆಗಳ ಮೂಲಕ ಪ್ರಸಾರಮಾಡಿ ದೇಶದ ಆಧಾರಸ್ತಂಭವಾದ ಕೃಷಕವರ್ಗದ ಅಜ್ಞಾನ-ದಾರಿದ್ರ್ಯ-ದೀನತೆಗಳನ್ನು ದೂರಮಾಡುವ ಪವಿತ್ರ ಕಾರ್ಯದಲ್ಲಿ ಬದ್ಧಕಂಕಣರಾದ ನಿಷ್ಪೃಹ ಕಾರ್ಯಕರ್ತರ ದಳವನ್ನು ನಿರ್ಮಾಣಮಾಡಬೇಕು. ಗ್ರಾಮಸಂಘಟನೆಯೊಡನೆ ನಗರನಿವಾಸಿಗಳಾದ ಮಜೂರರ ಆ ಶೋಚನೀಯವಾದ ದುರವಸ್ಥೆಯನ್ನು ಸುಧಾರಿಸಿ ಅವರ ಆರ್ಥಿಕ ಮತ್ತು ನೈತಿಕ ಶ್ರೇಯಸ್ಸನ್ನು ಸಾಧಿಸಬೇಕು. ಧನಿಕ ಮತ್ತು ಬಡವರೊಳಗೆ ಸೌಹಾರ್ದವನ್ನು ಸ್ಥಾಪಿಸಿ ದೇಶಹಿತವನ್ನು ವರ್ಧಿಸಬೇಕು.

ಸಾಹಿತ್ಯಕ ಮತ್ತು ಸೈನಿಕ ಶಿಕ್ಷಣ.

ಪರಕೀಯ ಸತ್ತೆಯ ಅತ್ಯಂತ ಹಾನಿಕಾರಕ ಪರಿಣಾಮವಾದ ಮಾನಸಿಕ ವಿಚಾರ ಮತ್ತು ಭಾವನೆಗಳ ಪರಾಧೀನತೆಯ ವಿಷಯ ನಮ್ಮ ಜನಾಂಗಕ್ಕಿರುವ ಉದಾಸೀನತೆಯು ಅಕ್ಷಮ್ಯವಾಗಿದೆ. ರಾಷ್ಟ್ರದ ಸ್ವಭಾವಕ್ಕೂ ಸಂಸ್ಕೃತಿಗೂ ಸಂಪೂರ್ಣ ಅಸಮಂಜಸವಾಗಿದ್ದು, ರಾಷ್ಟ್ರದ ಅನಿರ್ಬಾಧಿತ ಆತ್ಮವಿಕಾಸಕ್ಕೆ ಪ್ರತಿಬಂಧಕವಾದ ಇಂದಿನ ಶಿಕ್ಷಣ ಪ್ರಣಾಲಿಯನ್ನು ಅಂತ್ಯಪಡಿಸಿ ಸರ್ವವಿಧದಿಂದಲೂ ಜಾತೀಯವಾದ ನೂತನ ವಿದ್ಯಾಪರಂಪರೆಯನ್ನಾರಂಭಿಸಿ, ಅದರಲ್ಲಿ ಪೌರ್ವಾತ್ಯ ಪ್ರಾಚೀನ ಸಂಸ್ಕೃತಿಯ ಜ್ಞಾನ ಮತ್ತು ಪಾಶ್ಚಿಮಾತ್ಯರ ಶಾಸ್ತ್ರೀಯ ಕೌಶಲಗಳ ಸುಂದರವಾದ ಸಮಾವೇಶವನ್ನು ಮಾಡಬೇಕು. ಇದರೊಡನೆ ಸ್ವರಾಜ್ಯ-ಸ್ವದೇಶ-ಸ್ವಜನರ ರಕ್ಷಣೆಗೂ ನಾವು ಪರಾವಲಂಬಿಗಳಾಗಿರದೆ ಸಮರ್ಥರಾಗಿ ಪುರುಷಾರ್ಥವನ್ನು ಕಾಯ್ದುಕೊಳ್ಳಲು ಯೋಗ್ಯರಾಗುವಂತೆ ನಮ್ಮ ಯುವಕರಿಗೆ ಸೈನಿಕ ಶಿಕ್ಷಣವನ್ನು ಅನಿವಾರ್ಯವಾಗಿ ಕೊಡಬೇಕು. ಈ ರೀತಿ ರಾಷ್ಟ್ರಸೇನೆಯನ್ನು ಸಿದ್ಧಮಾಡುವ ಅತ್ಯಾವಶ್ಯಕವಾದೀ ಕಾರ್ಯಕ್ಕೆ ಈಗಿರುವ ಸ್ವಯಂಸೇವಕ ಸಂಘಟನೆಯನ್ನೇ ಮಧ್ಯಬಿಂದುವಾಗಿ ತೆಗೆದುಕೊಂಡು ಕ್ರಮೇಣ ಜಲ ಮತ್ತು ವಾಯು ನೌಕಾಚಲನ ಶಾಸ್ತ್ರಗಳನ್ನು ಕರಗತ ಮಾಡಿಕೊಳ್ಳಬೇಕು.

ಉಪನಿವೇಶಗಳ ಮತ್ತು ಪ್ರಕಟಣಾ ಶಾಖೆಗಳು.

ಸ್ವಗೃಹ ಸ್ವಾತಂತ್ರ್ಯದ ಸ್ವಾರ್ಥಪರವಾದ ಚಳವಳದಲ್ಲಿ ನಿಮಗ್ನರಾಗಿರುವ ನಾವು ಉಪನಿವೇಶಗಳಲ್ಲಿ ಚಿತ್ರವಿಚಿತ್ರವಾದ ಹಿಂಸೆಗಳಿಗೆ ಗುರಿಯಾಗುತ್ತಿರುವ ನಮ್ಮ ನಿರ್ಭಾಗ್ಯ ಭ್ರಾತೃಗಳನ್ನು ಮರೆಯುತಿರುವ. ಕೆನ್ಯಾ ಮತ್ತು ದಕ್ಷಿಣಾಫ್ರಿಕದ ವರ್ಣವಿದ್ವೇಷದ ನಿಬಂಧನೆಗಳು ಹಿಂದೀಯರ ಪೌರುಷಕ್ಕೆ ಕಳಂಕಪ್ರಾಯವಾಗಿವೆ. ಹಿಂದುಸ್ಥಾನದ ಮಾನರಕ್ಷಣೆಯ ಚಳವಳದಲ್ಲಿ ನಮ್ಮ ಬಂಧುಗಳಿಗೆ ಬೆಂಬಲವಾಗಿ ನಿಂತು ಶಕ್ತಿಮೀರಿ ಕಾದಾಡುವುದೇ ನಮಗೆ ಶೋಭಾಸ್ಪದವಲ್ಲವೇ? ಈ ವಿಷಯ ನಮ್ಮ ಪ್ರಯತ್ನಗಳು ಯಶಸ್ವಿಯಾಗಬೇಕಾದರೆ ರಾಷ್ಟ್ರಸಭೆಯಲ್ಲಿ ಉಪನಿವೇಶಗಳ ಶಾಖೆಯೊಂದಿರಬೇಕು.

ಅಂತೆಯೇ ಪ್ರಕಟಣಾ ಶಾಖೆಯು. ಈ ಸಂಸ್ಥೆಯ ಅಭಾವದಿಂದ ನಮ್ಮ ಚಳವಳಕ್ಕೆ ನಿಷ್ಕಾರಣವಾಗಿ ಆಗುತ್ತಿರುವ ಹಾನಿಯ ಪರಿಮಾಣವನ್ನು ನಾವರಿಯೆವು. ಸ್ವದೇಶದಲ್ಲಿ ಚಳವಳವನ್ನು ಲೋಕಪ್ರಿಯವಾಗಿ ಮಾಡುವುದಕ್ಕೂ, ಪರದೇಶಗಳ ನೈತಿಕ ಸಹಾನುಭೂತಿಯನ್ನು ಸಂಪಾದಿಸಲಿಕ್ಕೂ ಇದಕ್ಕಿಂತ ಉಪಯುಕ್ತವಾದ ಸಾಧನವು ಮತ್ತೊಂದಿಲ್ಲ.

ಹಿಂದು-ಮುಸ್ಲಿಮ ಸಮಸ್ಯೆ.

ಹಿಂದು-ಮುಸ್ಲಿಮ ಐಕ್ಯಕ್ಕಾಗಿ ಜೀವನ ಸರ್ವಸ್ವವನ್ನೇ ಅರ್ಪಿಸಿರುವ ನಾನು ಅತ್ಯಂತ ದುಃಖದಿಂದ ಮಾತ್ರ ಈ ಪ್ರಶ್ನೆಯನ್ನು ಚರ್ಚಿಸಬಲ್ಲೆನು. ಇವರೀರ್ವರ ಪರಸ್ಪರ ವೈಮನಸ್ಯದ ಕಾರಣಗಳನ್ನು ಎಲ್ಲಾ ದೃಷ್ಟಿಗಳಿಂದ ಅನವರತವಾಗಿ ಅಧ್ಯಯನಮಾಡಿದಮೇಲೆ ನನ್ನ ದೃಢವಾದ ಅಭಿಪ್ರಾಯವೇನೆಂದರೆ, ಜಾತಿವಿಶಿಷ್ಟ ಪ್ರತಿನಿಧಿತ್ವವು ರಾಷ್ಟ್ರದ ಅಖಂಡವಾದ ಶ್ರೇಯಸ್ಸಿಗೆ ವಿಘಾತಕವಾದರೂ, ದ್ವೇಷ ಮತ್ತು ಅವಿಶ್ವಾಸಗಳಿಂದ ತುಂಬಿರುವ ಈಗಿನ ವಿಷಮಯವಾದ ವಾತಾವರಣದಲ್ಲಿ, ಅನನ್ಯವಾದ ದೇಶವಾತ್ಸಲ್ಯವುಳ್ಳ ಹಿಂದು-ಮುಸ್ಲಿಮ ನೇತಾಜನರ ಹಾರ್ದಿಕ ಸಹಕಾರವಿಲ್ಲದೆ ಈ ಮಹಾವ್ಯಾಧಿಗೆ ರಾಮಬಾಣ ಉಪಾಯವಾಗುವಂತಿಲ್ಲ. ಆದುದರಿಂದ ನನ್ನ ಹಿಂದೂ ಭ್ರಾತೃಗಳಿಗೆ ನನ್ನ ನಮ್ರ ನಿವೇದನವೇನೆಂದರೆ—ನಿಮ್ಮ ಧಾರ್ಮಿಕ ಸಹನಶೀಲತೆಯ ಪರಂಪರೆಯ ಶಿಖರವನ್ನೇರಿ ೭ ಕೋಟಿ ಹಿಂದೀ ಮುಸಲ್ಮಾನರ ಪ್ರಾಮಾಣಿಕವಾದ ಧಾರ್ಮಿಕ ಶ್ರದ್ಧೆಗಳನ್ನು ಲಕ್ಷ್ಯಕ್ಕೆ ತೆಗೆದುಕೊಳ್ಳಿರಿ. ಮತ್ತು ನನ್ನ ಮುಸ್ಲಿಮ ಬಂಧುಗಳಿಗೆ ಹೇಳುವುದೇನೆಂದರೆ—ಸೀರಿಯ, ಈಜಿಪ್ಟ್, ಇರಾಕ್ ಮತ್ತು ಅರೇಬಿಯದಲ್ಲಿರುವ ಜಾತಿಬಾಂಧವರ ದುಃಖಶ್ರವಣದಿಂದ ಸಂತಪ್ತರಾಗುವ ನೀವು ನಿಮ್ಮ ಮಾತೃಸ್ಥಾನದಲ್ಲಿರುವ ಹಿಂದು ದೇಶವನ್ನು ಅಷ್ಟೇ ಶ್ರದ್ಧೆಯಿಂದ ಪೂಜಿಸಿರಿ. ಈ ರೀತಿ ಮಾತ್ರ ಎರಡೂ ಜಾತಿಗಳ ಹಾಗೂ ದೇಶದ ಆತ್ಯಂತಿಕ ಶ್ರೇಯವು ಸಾಧ್ಯವಾಗುವುದು.

ದೇಶೀಯ ರಾಜ್ಯಗಳೂ ಗಡಿನಾಡುಗಳೂ

ದೇಶೀಯ ರಾಜ್ಯಗಳ ಹಾಗೂ ಪ್ರಜೆಗಳ ಮತ್ತು ನಮ್ಮೊಳಗಿರುವ ನಿಕಟವಾದ ಮೈತ್ರಿಯನ್ನು ಘೋಷಿಸಿ, ಅವರ ಅಂತರಂಗ ಪ್ರಶ್ನೆಗಳಲ್ಲಿ ಪ್ರವೇಶಿಸದೆ, ಸಾಮಾನ್ಯವಾಗಿ ಅವರ ಹಿತಸಾಧನೆಯನ್ನು ಮಾಡುವುದು ನಮ್ಮ ಕರ್ತವ್ಯಗಳಲ್ಲೊಂದಾಗಿದೆ. ಹಾಗೆಯೇ ಸರಹದ್ದಿನ ಪ್ರಾಂತಗಳಲ್ಲಿ ಒಂದು ತರದ ಶಾಶ್ವತವಾದ 'ಫೌಜೀ ಕಾನೂನಿ'ನಿಂದ ದಳಿತರಾದ ನಮ್ಮ ಬಾಂಧವರಿಗೆ ಸಮಾನಾಧಿಕಾರಗಳನ್ನು ದೊರಕಿಸಲು ನಾವು ಅಂತಃಕರಣಪೂರ್ವಕವಾಗಿ ಪ್ರಯತ್ನಪಡಬೇಕು. ಇವೆರಡನ್ನೂ ಮಾಡದಿದ್ದರೆ ನಾವು ಭ್ರಾತೃಧರ್ಮವನ್ನುಲ್ಲಂಘಿಸಿದಂತಾಗುವುದು.

ಸ್ವರಾಜ್ಯಪ್ರಾಪ್ತಿ.

ಆದರೆ ಒಂದು ಪ್ರಕಾರವಾಗಿ ನೋಡಿದರೆ ಇವೆಲ್ಲ ಗೌಣ ವಿಷಯಗಳೆಂದು ಭಾಸವಾಗುತ್ತದೆ. ರಾಷ್ಟ್ರಸಭೆಯ ಪ್ರಧಾನ ಧ್ಯೇಯವು ಶೀಘ್ರ ಸ್ವರಾಜ್ಯಪ್ರಾಪ್ತಿ. ಅದಕ್ಕಾಗಿ ಅಸಹಯೋಗದ ಅಸಮ್ಮಿಶ್ರಿತವಾದ ಸಿದ್ಧಾಂತದಲ್ಲಿ ಅಚಲವಾದ ಶ್ರದ್ಧೆಯುಳ್ಳ ದೇಶಸೇವಕರ ಒಂದು ಯೋಗ್ಯ ಸಂಸ್ಥೆಯಿದೆ. ಕೌನ್ಸಿಲು ಇತ್ಯಾದಿಗಳ ವಿಷಯ ಸಂಪೂರ್ಣ ಉಪೇಕ್ಷೆ ಉದಾಸೀನತೆಗಳಿಂದ ಪ್ರೇರಿತರಾಗಿ [illegible] ಗಾಂಧೀಜೀಯವರ [illegible] ಕಾರ್ಯಕ್ರಮದಲ್ಲಿ ಇವರು ನಿರತರಾಗಿರುವರು.

ಸ್ವರಾಜ್ಯಪಕ್ಷ ಮತ್ತು ರಾಷ್ಟ್ರದ ಆಹ್ವಾನ.

ಆದುದರಿಂದ ಇಂದು ರಣಾಂಗಣದಲ್ಲಿ ಏಕಾಕಿಯಾಗಿ ನಿಂತು ಆಳರಸರನ್ನು ಪ್ರತಿಭಟಿಸುತ್ತಿರುವ ಏಕಮಾತ್ರ ಸುವ್ಯವಸ್ಥಿತ ರಾಜಕೀಯ ದಳವೆಂದರೆ ಸ್ವರಾಜ್ಯಪಕ್ಷವೇ. ಇಂಥ ನಮ್ಮ ದೇಶದಲ್ಲಿ ಸಕ್ಕ ವಿಶಿಷ್ಟವಾದ ಭೇದಭಾವನೆಗಳನ್ನು ತ್ಯಜಿಸಿ

ಮಹಾಸಭೆಯಲ್ಲಿ ಸೇರಿ ತಮ್ಮ ಅವಿಚ್ಛಿನ್ನವಾದ ಶಕ್ತಿಯಿಂದ ಸಮೀಪಸ್ಥವಾದ ಸ್ವರಾಜ್ಯ ಪ್ರಾಪ್ತಿಯಲ್ಲಿ ಸ್ವರಾಜ್ಯವಾದಿಗಳೊಡನೆ ಐಕ್ಯವಾಗುವುದು ಇತರ ರಾಜಕೀಯ ಪಕ್ಷಗಳ ನಿಶ್ಚಿತ ಕರ್ತವ್ಯವಾಗಿಲ್ಲವೇ? ೧೯೧೯ರಲ್ಲಿ ಯುಗಪ್ರವರ್ತಕವೆಂದೆಣಿಸಲ್ಪಟ್ಟ ಸುಧಾರಣೆಗಳು ಮಾಯಾಮೃಗದಂತೆ ಕೃತ್ರಿಮವಾಗಿರುತ್ತವೆಂಬುದು ಸರ್ವಸಮ್ಮತವಾಗಿದ್ದು, ಎಲ್ಲ ದಳದವರ ಧ್ಯೇಯವಾದ 'ವಸಾಹತುಗಳ ಸ್ವರಾಜ್ಯ'ವು ಒಂದೇಯಾಗಿರುತ್ತ ಅದು ಕಾಮನ್‌ವೆಲ್ತ್ ಆಫ್ ಇಂಡಿಯಾ ಬಿಲ್ಲಿನಲ್ಲಿಯೂ ಎಸೆಂಬ್ಲಿಯ ಎರಡು ಠರಾವುಗಳಲ್ಲಿಯೂ ಪ್ರಕಟವಾಗಿರುವಾಗ, ರಾಷ್ಟ್ರವು ಸ್ವಾಭಿಮಾನವನ್ನು ಕಳಕೊಳ್ಳದೆ ಅದಕ್ಕಿಂತಲೂ ಅಲ್ಪವಾದ ಬೇಡಿಕೆಯನ್ನು ಒಪ್ಪುವುದಾದರೂ ಹೇಗೆ? ನಮ್ಮ ಭಾವೀ ಧೋರಣದ ಸ್ವರೂಪವು ಸರಕಾರದ ವರ್ತನೆಯ ಮೇಲೆಯೇ ಹೊಂದಿಕೊಂಡಿದೆ. ಎಸೆಂಬ್ಲಿಯ ಬರುವ ಅಧಿವೇಶನದ ಅಂತ್ಯದೊಳಗೆ ಅದು ಯೋಗ್ಯವಾದ ಪ್ರತ್ಯುತ್ತರವನ್ನು ಕೊಡದಿದ್ದರೆ ಮಹಾಸಭಾವಾದಿಗಳು ಕೌನ್ಸಿಲಿನ ಎಲ್ಲ ಸ್ಥಾನಗಳನ್ನು ತ್ಯಜಿಸಿ ಹೊರಗೆ ಬರಲು ರಾಷ್ಟ್ರಸಭೆಯು ಆದೇಶವನ್ನು ಕೊಡಬೇಕು ಮತ್ತು ಕೈಲಾಸದಿಂದ ಕನ್ಯಾಕುಮಾರಿಯ ವರೆಗೆ ಅದಮ್ಯವಾದ ಪ್ರಜಾ ಜಾಗ್ರತಿಯನ್ನುಂಟುಮಾಡಿ ಸ್ವಾತಂತ್ರ್ಯ ಸಂಗ್ರಾಮದ ಅಂತಿಮ ಯುದ್ಧಕ್ಕೆ ಟೊಂಕ ಕಟ್ಟಬೇಕು.

ಉಪಸಂಹಾರ.

ಮಾತೆಯ ಬಂಧನದ ಅನಿರ್ವಚನೀಯವಾದ ಅಪಕೀರ್ತಿಯ ಕಲಂಕವನ್ನು ತೊಳೆದು, ನಮ್ಮ ಉತ್ತರಾಧಿಕಾರಿಗಳಿಗೆ ಅಕ್ಷಯವಾದ ಸುಖಶಾಂತಿಗಳನ್ನು ಪ್ರದಾನಮಾಡಲು, ಎಂತಹ ಅಪಾರವಾದ ಸ್ವಾರ್ಥತ್ಯಾಗ, ಕಷ್ಟಸಹನ ಅವಶ್ಯವಿದ್ದರೂ ಅದನ್ನು ಸಂತೋಷದಿಂದ ಮಾಡಬೇಕು. ಸ್ವಾತಂತ್ರ್ಯ ಸಂಗ್ರಾಮದಲ್ಲಿ ರಣವೀರರಾಗಬೇಕಾದವರು ಏಕಮಾತ್ರ ಅಕ್ಷಯ ಆಸರವಾದ ನನ್ನ ಅಂತರಂಗದ ಕೊನೆಯ ಪ್ರಾರ್ಥನೆಯೇನೆಂದರೆ—ನನ್ನ ಹಿರಿಯರಾಗಿರುವ ಆ ಗ್ರಿಪರೀಕ್ಷೆಯ ಸಮಯದಲ್ಲಿ ಪರಮಾತ್ಮನು ನಮಗೆ ಅನುಕೂಲವಾದ ಶ್ರದ್ಧೆಯನ್ನೂ ಅಜೇಯವಾದ ಸಾಹಸವನ್ನೂ ದಯಪಾಲಿಸಲಿ. ಆತನ ಪಾದದಲ್ಲಿಯೇ ಇಂದಿನ ಸಂಗ್ರಾಮದ ಸ್ವಾರಂಭಿಸಿದೆವು. ವಿಜಯದ ದಿನದಲ್ಲಿ ಆತನೇ ನಮಗೆ ಜಯವನ್ನು ಕೊಡಲಿ.

[illegible]
[illegible]
[illegible]

[illegible]

ಇದು ಒಳ್ಳೇ ಸಮಯ!

ಇಂಥಾ ಸುಸಮಯವನ್ನು ಕಳಕೊಳ್ಳಬೇಡಿರಿ.

ಇಂದಿನ ದಿನ ನಾಳೆ ಎಂದಿಗೂ ದೊರೆಯಲಾರದು.

ನನ್ನಲ್ಲಿ ಈಗ ಹೊಸತಾಗಿ ಬಂದಿರುವ [illegible] [illegible] ಮಾಲೆ [illegible] [illegible] ಮತ್ತು [illegible] [illegible] [illegible] [illegible] [illegible] [illegible] [illegible] [illegible] [illegible] [illegible] [illegible] ಕಡಿಮೆ ಕ್ರಯಕ್ಕೆ ಮಾರಲಾಗುವುದು. [illegible] ಈ ಕೆಳಗಿನ ವಿಳಾಸಕ್ಕೆ ಬರೆದು ತಿಳಿದುಕೊಳ್ಳಬಹುದು.

ಕಸಬಾ ಗ್ರಾಮ ಅಮ್ಮಣಿಚಂಡ ದೇವಯ್ಯ,
ವೀರಾಜಪೇಟೆ ಜನರಲ್ ಮರ್ಚೆಂಟ್.

ಕೊಡಗು ಕೌನ್ಸಿಲ್ ಮೀಟಿಂಗು

ಕೊಡಗು ನ್ಯಾಯ ವಿಧಾಯಕ ಸಭೆಯ ಮೀಟಿಂಗು ಜನವರಿ ತಾರೀಕು 12ರಲ್ಲು ಬೆಳಗ್ಗೆ 11 ಗಂಟೆಯಿಂದ ಸಾಯಂಕಾಲ 4½ ಗಂಟೆವರೆಗೆ ಮಡಿಕೇರಿಯಲ್ಲಿರುವ ಕೌನ್ಸಿಲ್ ಹಾಲಿನಲ್ಲಿ ನಡೆಯಿತು. ಪ್ರೆಸಿಡೆಂಟರಾದ ಚೀಫ್‌ಕಮಿಷನರವರು ಅಗ್ರಸ್ಥಾನವನ್ನು ವಹಿಸಿದ್ದರು. ಮಧ್ಯಾಹ್ನದ ಮೇಲೆ ಮಿ. ಎಸ್. ಯಂ. ಪಿಂಟೋರವರ ಹೊರತು ಬಾಕಿ ಮೆಂಬರುಗಳೆಲ್ಲರೂ ಹಾಜರಿದ್ದರು. ಪ್ರಾರಂಭದಲ್ಲಿ ಮೊದಲೇ ಕಳುಹಿಸಲ್ಪಟ್ಟಿದ್ದ 15 ಪ್ರಶ್ನೆಗಳಿಗೆ ಜವಾಬು ಕೊಡಲಾಯಿತು. ಕೂಡಲೆ ಕಳೆದ ಮಾರ್ಚಿ ತಿಂಗಳಲ್ಲಿ ಕೌನ್ಸಿಲಿನಲ್ಲಿ ಪಾಸಾದ ಠರಾವುಗಳಲ್ಲಿ, ಕೌನ್ಸಿಲಿನಲ್ಲಿ ಸಪ್ಲಿಮೆಂಟರಿ ಪ್ರಶ್ನೆ ಕೇಳುವ ಹಕ್ಕು ಎಲ್ಲಾ ಮೆಂಬರುಗಳಿಗೆ ಇರಬೇಕು, ಮತ್ತು 'ಬ್ರೀಚ್ ಆಫ್ ಕಂಟ್ರಾಕ್ಟು ಆಕ್ಟಿನ ಸುಧಾರಿಸಿದ ಬಿಲ್ಲೊಂದನ್ನು ಕೌನ್ಸಿಲಿನಲ್ಲಿ ಚರ್ಚೆಗೆ ತರಬೇಕು" ಎಂಬ 2 ಠರಾವುಗಳು ಚೀಫ್‌ಕಮಿಷನರಿಂದ ಮಂಜೂರಾಗಿವೆ ಎಂಬ ಸೂಚಕ ಪತ್ರವು ಕೌನ್ಸಿಲಿನ ಮುಂದೆ ಇಡಲಾಯಿತು

ನಂತರ ಫೈನಾನ್ಸ್ ಮೆಂಬರಾದ ಮಿ ಟಾಸ್ಕರ್‌ರವರು ಬ್ರೀಚ್ ಆಫ್ ಕಂಟ್ರಾಕ್ಟ್ ಆಕ್ಟಿನ ಮಸೂದೆಯನ್ನು ಕೌನ್ಸಿಲಿನ ಮುಂದೆ ಇಡಲು ಅಪ್ಪಣೆ ಕೇಳಿದರು. ಅಧ್ಯಕ್ಷರು ಬಿಲ್ಲಿನ ಚರಿತ್ರೆ ವಿಷಯ ಕೆಲವು ಮಾತುಗಳನ್ನಾಡಿದರು. ಮಿ. ಪಿ. ಬಿ ಮೇದಪ್ಪ ಮತ್ತು ಮಿ ಕೆ ಪಿ. ಚಿನ್ನಪ್ಪನವರು ವಿನಹ ಬಾಕಿಯವರೆಲ್ಲರೂ ಒಪ್ಪಿಗೆ ಕೊಟ್ಟರು. ಕೂಡಲೆ ಫೈನಾನ್ಸ್ ಮೆಂಬರರು ಬಿಲ್ಲಿನ ಆವಶ್ಯಕತೆಯ ಕಾರಣಗಳನ್ನು ಉದ್ಧರಿಸಿದ ಭಾಷಣದಲ್ಲಿ ಸೂಚಿಸಿ ಬಿಲ್ಲನ್ನು ಕೌನ್ಸಿಲಿನ ಮುಂದಿಟ್ಟು, ಅದನ್ನು ಮಿ. ಟಿ ಜೆ ಟಾಸ್ಕರ್ (ಕನ್‌ವೀನರ್) ಮತ್ತು ರಾವ್‌ಸಾಹೇಬ ಪಿ ಟಿ ಕುಶಾಲಪ್ಪ, ಎನ್. ಆರ್. ಸುಬ್ಬಯ್ಯ, ಯಂ. ಯಂ. ಚಿನ್ನಪ್ಪ, ಸಿ ಪಿ ಚಂಗಪ್ಪ, ಎಸ್. ಯಂ. ಪಿಂಟೋ ಮತ್ತು ಮಿ ಸ್ಟೋಕರು ಇವರೊಂದೊಡಗೂಡಿದ ಸೆಲೆಕ್ಟ್ ಕಮಿಟಿಯ ಚರ್ಚೆಗೆ ಒಪ್ಪಿಸಬೇಕೆಂದೂ, ಆ ಕಮಿಟಿಯವರು ಈ ತಾ. 25 ರೊಳಗೆ ತನ್ನ ರಿಪೋರ್ಟನ್ನು ಕೊಡತಕ್ಕದ್ದೆಂದೂ ಠರಾವನ್ನು ತಂದರು. ಮಿ. ಕೆ ಪಿ ಚಿನ್ನಪ್ಪನವರು ಈಗ ಚರ್ಚೆಗೆ ಇಟ್ಟಿರುವ ಬಿಲ್ಲಿನ ಕೆಲವು ಶರತ್ತುಗಳನ್ನು ನೋಡಿರುವುದರಿಂದ ಬಿಲ್ಲಿಗೆ ವಿರೋಧಿಸಬೇಕೆಂದು ಹೇಳಿ ಕೆಲವು ಸೂಚನೆಗಳನ್ನು ಕೊಡಬೇಕೆಂದು ಮಾತಾಡಿದರು. ಮಿ. ಪಿ. ಬಿ. ಮೇದಪ್ಪನವರೂ ಬಿಲ್ಲನ್ನು ಪ್ರತಿಭಟಿಸಿ ಕೆಲವು ಸೂಚನೆಗಳನ್ನು ಆಕ್ಷೇಪಿಸಿ ಮಾತನಾಡಿದರು. ಮಿ ರಾ. ಗೌಡರ ಬಿ. ಶ್ರೀಪತಿ ರಾಯರು, ರಸೂಲ್ ಖಾನ್ ಸಾಹೇಬರವರು, ಎನ್. ಆರ್. ಸುಬ್ಬಯ್ಯನವರು ಸಿ ಎನ್. ವೆಂಕಪ್ಪಯ್ಯನವರು ಮತ್ತು ಸಿ ಪಿ ಚಂಗಪ್ಪನವರು ಬಿಲ್ಲಿನ ಕೆಲವು ಸೆಕ್ಷನ್‌ಗಳನ್ನು ತಿದ್ದುಪಡಿ ಮಾಡಬೇಕಾಗಿದೆಯೆಂದು ಹೇಳಿ ಬಿಲ್ಲಿಗೆ ಒತ್ತಾಸೆಯನ್ನು ಮಾತಾಡಿದರು. ಮಿ ಸ್ಟೋಕರ್‌ರವರು ಬಿಲ್ಲಿಗೆ ಪೂರ್ತಿ ಸಮ್ಮತಿಯಿಂದ ಮಾತಾಡಿದರು. ಠರಾವು ಬಹುಮತದಿಂದ ಸ್ವೀಕರಿಸಲಾಯಿತು

ಮಧ್ಯಾಹ್ನದ ನಂತರ ಕೆಲವು ಠರಾವುಗಳು ಚರ್ಚಿಸಲ್ಪಟ್ಟವು. ಹಳೇ ಯಡವನಾಡಿನ ಜಮ್ಮ ರೈತರಿಗೆ ಬಾಣೆಗಳನ್ನು ಕೊಡಬೇಕೆಂದು, ಮಿ ಸಿ ಕಾಳಪ್ಪನವರು ಸೂಚಿಸಿದ್ದನ್ನು ಮಿ ಕೆ ಚಿನ್ನಪ್ಪನವರು ಅನುಮೋದಿಸಿದರು. ಯಡವನಾಡಿನ ರೈತರ ಪ್ರಯೋಜನಕ್ಕಾಗಿ ಉಪಯೋಗಗಳನ್ನು ಮಾಡುವ ಏರ್ಪಾಡಿನಲ್ಲಿದ್ದೇವೆಂದು ಮುಂತಾಗಿ ಫೈನಾನ್ಸ್ ಮೆಂಬರರು ಸಮಾಧಾನಕರ ಉತ್ತರಕೊಟ್ಟದ್ದರಿಂದ ಠರಾವು ವಾಪಾಸು ತೆಗೆದುಕೊಳ್ಳಲಾಯಿತು. 'ಕೊಡಗಿನಲ್ಲಿರುವ ಪಂಚ ಆಸ್ತಿಗಳನ್ನು ಸಮರ್ಪಕವಾಗಿ ನಡಿಸುವುದಕ್ಕೆ ಟೆಂಪಲ್ ಕಮಿಟಿಯವರ ವಶಕ್ಕೆ ಒಪ್ಪಿಸಬೇಕು' ಎಂಬ ಠರಾವನ್ನು ಮಿ ಸಿ ಕಾಳಪ್ಪನವರು ಮುಂದಿಟ್ಟರು. ಮಿ. ಪಿ. ಗಣಪಯ್ಯನವರು ಅನುಮೋದಿಸಿದರು. ಮಿ ಬಿ ಶ್ರೀಪತಿರಾಯರು ವಿರೋಧಿಸಿದರು. ಇದೊಂದು ಮುಖ್ಯವಾದ ಪ್ರಶ್ನೆಯಾದುದರಿಂದ ಆತುರ ಮಾಡ ಬಾರದೆಂತಲೂ ಸರಕಾರದವರು ಇದರಲ್ಲಿ ಯಾವ ಕೈ ಸೇರುವುದಿಲ್ಲವೆಂತಲೂ ಸರಕಾರಿ ಮೆಂಬರು ಉತ್ತರ ಕೊಟ್ಟ ನಂತರ ಸೂಚಕರು ಠರಾವನ್ನು ವಾಪಸು ತೆಗೆದುಕೊಂಡರು. ಕೌನ್ಸಿಲ್ ಚುನಾವಣೆಯ ರೂಲ್ಸುಗಳನ್ನು ತಿದ್ದುಪಡಿ ಮಾಡಲು ಒಂದು ಕಮಿಟಿ ಮಾಡಬೇಕೆಂದು ಮಿ. ಪಿ ಬಿ. ಮೇದಪ್ಪನವರ ಠರಾವಾಗಿತ್ತು. ಇದು ಮಿ ಸಿ ಪಿ. ಚಂಗಪ್ಪನವರಿಂದ ಅನುಮೋದಿಸಲ್ಪಟ್ಟಿತು. ಇಂಥಾ ಕಮಿಟಿಯನ್ನು ಒಂದು ಚುನಾವಣೆಯ ಅನುಭವದಿಂದಲೇ ನೇಮಿಸುವುದು ಸರಿಯಲ್ಲವೆಂದು ಮುಂತಾಗಿ ಸರಕಾರಿ ಮೆಂಬರು ವಿರೋಧಿಸಿದರು. ಕಮಿಟಿಯು ಅನಾವಶ್ಯಕವೆಂದು ಮಿ. ವೆಂಕಪ್ಪಯ್ಯನವರು ಹೇಳಿದರು. ಮಿ. ಬಿ. ಶ್ರೀಪತಿರಾಯರು ಠರಾವಿಗೆ ಒತ್ತಾಸೆಯಾಗಿಯೂ, ಮಿ ರಸೂಲ್‌ಖಾನ್ ಸಾಹೇಬರವರು ಕೌನ್ಸಿಲಿನಲ್ಲಿ ಮುಸ್ಲಿಮರಿಗೆ ಎರಡು ಮೆಂಬರುಗಳ ಸ್ಥಾನ ಪ್ರತ್ಯೇಕ ಕೊಡಬೇಕೆಂತಲೂ ಮಾತಾಡಿದರು. ಠರಾವು ಬಹುಮತದಿಂದ ನಿರಾಕರಿಸಲ್ಪಟ್ಟಿತು. ಕಾಫಿ ಸೆಸ್ಸನ್ನು ಕುರಿತ ಠರಾವನ್ನು ಮಿ. ಬಿ ಶಿವಪ್ಪನವರು ವಾಪಸು ತೆಗೆದುಕೊಂಡರು. ಕೊಡಗಿನಲ್ಲಿರುವ ಇನ್‌ಸ್ಪೆಕ್ಷನ್ ಬಂಗ್ಲೆಗಳನ್ನು ಟ್ರಾವೆಲರ್ಸ್ ಬಂಗ್ಲೆಗಳಾಗಿ ಮಾಡಿ ಅವುಗಳನ್ನು ಡಿಸ್ಟ್ರಿಕ್ಟ್ ಬೋರ್ಡಿನ ಸ್ವಾಧೀನಕ್ಕೆ ಕೊಡಬೇಕೆಂದು ಮಿ. ಪಿ ಟಿ ಕುಶಾಲಪ್ಪನವರು ಸೂಚಿಸಿದರು. ಮಿ. ಯಂ ಯಂ ಚಿನ್ನಪ್ಪನವರು ಅನುಮೋದಿಸಿದರು. ಫೈನಾನ್ಸ್ ಮೆಂಬರು ವಿರೋಧಿಸಿದರು. ಠರಾವು ಬಿದ್ದುಹೋಯಿತು. ಪಿ. ಡಬ್ಲ್ಯು. ಡಿ. ಇಲಾಖೆಯ ಸಬ್ ಡಿವಿಜನಲ್ ಆಫೀಸರು ದಕ್ಷಿಣ ಕೊಡಗಿನ ಚಾರ್ಜಿನಲ್ಲಿರಬೇಕೆಂತಲೂ, ಅವರ ಹೆಡ್‌ಕ್ವಾರ್ಟರ್ಸು ವೀರರಾಜಪೇಟೆಯಲ್ಲಿರಬೇಕೆಂತಲೂ ಮಿ. ಸಿ ಬಿ. ಚಂಗಪ್ಪನವರು ಸೂಚಿಸಿದ್ದನ್ನು ಮಿ ಪಿ ಬಿ. ಚೆಂಗಪ್ಪನವರು ಅನುಮೋದಿಸಿದರು. ಸರಕಾರಿ ಮೆಂಬರು ವಿರೋಧಿಸಿದರು. ಆದರೆ ಠರಾವು ಬಹುಮತದಿಂದ ಮಂಜೂರಾಯಿತು. 'ಡಿಪುಟಿ ಫಾರೆಸ್ಟ್ ಆಫೀಸರ ಹೆಡ್ ಕ್ವಾರ್ಟರ್ಸನ್ನು ವೀರರಾಜಪೇಟೆಗೆ ವರ್ಗಾಯಿಸಬೇಕೆ'ಂಬ ಠರಾವನ್ನು ಮಿ ಸಿ ಬಿ. ಚಂಗಪ್ಪನವರು ವಾಪಸು ತೆಗೆದುಕೊಂಡರು.

ಸಾಯಂಕಾಲ 4½ ಗಂಟೆಯಾದುದರಿಂದ ಕಾರ್ಯಕ್ರಮ ಪಟ್ಟಿಯಲ್ಲಿದ್ದ ಬಾಕಿ ಎಂಟು ಠರಾವುಗಳು ಮುಂದಿನ ಮೀಟಿಂಗಿಗೆ ಇಡಲಾದವು ಬ್ರೀಚ್ ಆಫ್ ಕಂಟ್ರಾಕ್ಟು ಆಕ್ಟಿನ ಬಿಲ್ಲನ್ನು (ಮೂರನೇ ಸಾರಿ) ಅಚ್ಚೆರಾಗಿ ಕೌನ್ಸಿಲಿನಲ್ಲಿ ಚರ್ಚಿಸಲು ಬರುವ ಫೆಬ್ರವರಿ ತಾ ೧ರಲ್ಲು ಕೌನ್ಸಿಲಿನ ಮೀಟಿಂಗು ನಡೆಯುವದೆಂದು ಅಧ್ಯಕ್ಷರು ಸೂಚಿಸಿ ಮೀಟಿಂಗನ್ನು ಬರಕಾಸ್ತು ಮಾಡಿದರು.

FOR SALE.

ESSEX LIGHT SIX, Latest Model, new last may, driven 5000 miles only. Perfect condition, many extras. Price Rs. 3000.

Also Old Model 7–9 Harley-Davidson and Side Car.

No reasonable offer refused

Apply –The Hunsur Works, "Hunsur"

3--3

ವರ್ತಮಾನ ಸಂಗ್ರಹ

ಒಳದೇಶ.

ಈ ತಾ. 16ರಲ್ಲು ಸೆಂಟ್ರಲ್ ಬ್ಯಾಂಕಿನ ಡೈರೆಕ್ಟರುಗಳ ಮೀಟಿಂಗು ಮಡಿಕೇರಿ ಮುನ್ಸಿಪಲ್ ಹಾಲಿನಲ್ಲಿ ನಡೆಯುವುದು.

ಕಳೆದವಾರ ವೀರರಾಜಪೇಟೆ, ಬಿಟ್ಟಂಗಾಲದ ಕಡೆ ಹೊಸ ಭತ್ತ ಗಾಡಿಗೆ 80ರಿಂದ 85 ರೂಪಾಯಿ ವರೆಗೆ ಕ್ರಯವಿತ್ತೆಂದು ತಿಳಿಯುತ್ತೇವೆ

ಈ ವಾರ ಮಳೆ ಇಲ್ಲದಿದ್ದರೂ ಮೋಡಗಳು ಆಗಾಗ್ಯೆ ಬರುತ್ತಿರುವುದರಿಂದ ಜನರಿಗೆ ಮಳೆಯ ಹೆದರಿಕೆಯು ಇನ್ನೂ ತಪ್ಪಿರುವುದಿಲ್ಲ.

ಈಗ ಕೆಲವು ದಿವಸಗಳಿಂದ ಫ್ರೇಜರ್‌ಪೇಟೆಯ ಪುತ್ಥಳಿ ಗೊಂಬೆ ನಾಟಕದವರು ಮಡಿಕೇರಿಯಲ್ಲಿ ನಾಟಕಗಳನ್ನು ಅಭಿನಯಿಸುತ್ತಿದ್ದಾರೆ.

ಚೀಫ್ ಕಮಿಷನರವರು ಕೌನ್ಸಿಲ್ ಮೀಟಿಂಗಿಗಾಗಿ ತಾ 11ರಲ್ಲಿ ಬೆಂಗಳೂರಿಂದ ಮಡಿಕೇರಿಗೆ ಬಂದು ತಾ. 13ರಲ್ಲಿ ವಾಪಸು ಹೋದರು.

ಪ್ಯಾಂಗಬ್ ಕಂಪೆನಿಯವರ ಕಾಫಿ ತೋಟಗಳ ಸುಪರಿಂಟೆಂಡೆಂಟರಾಗಿದ್ದ ಮಿ. ಪರ್ಸ್‌ರವರು ತಾ 9ರಲ್ಲಿ ಮಡಿಕೇರಿಯಲ್ಲಿ ಮೃತರಾದರು.

ಕೊಡಗಿನಲ್ಲಿರುವ 25 ಸಾರಾಯಿ ಅಂಗಡಿಗಳ ಬರುವ ವರುಷದ ಗುತ್ತಿಗೆ ಹರಾಜು ಫೆಬ್ರವರಿ ತಾ 19ರಲ್ಲಿ ಅಸಿಸ್ಟೆಂಟ್ ಕಮಿಷನರವರಿಂದ ಮಡಿಕೇರಿಯಲ್ಲಿ ನಡಿಸಲ್ಪಡುವುದು.

ಮಡಿಕೇರಿ, ವೀರರಾಜಪೇಟೆ ಮತ್ತು ಗೋಣಿಕೊಪ್ಪಲಲ್ಲಿರುವ ಬೀರು ಅಂಗಡಿಗಳ ಬರುವ ವರ್ಷದ ಗುತ್ತಿಗೆ ಹರಾಜು ಫೆಬ್ರವರಿ 19ರಲ್ಲಿ ಮಡಿಕೇರಿಯಲ್ಲಿ ಮಾಡಲ್ಪಡುವುದು.

ಈ ವಾರ ಮಡಿಕೇರಿಯಲ್ಲಿ ಪಾರ್ಚ್‌ಮೆಂಟ್ ಕಾಫಿಯು ಖಂಡಿಗೆ ರೂ 105ರಿಂದ 410ರ ವರೆಗಿನ ಕ್ರಯದಲ್ಲಿ ಮಾರಾಟವಾಗಿದೆ. ಕಳೆದವಾರ ಮಂಗಳೂರಿನಲ್ಲಿ ನೇಟಿವ್ ಕಾಫಿ ಖಂಡಿಗೆ 370 ರೂಪಾಯಿಯಲ್ಲಿ ಮಾರಾಟವಾಯಿತಂತೆ.

ಬರುವ ವರುಷದ ಗಾಂಜ ಮಾರಾಟದ ಲೈಸೆನ್ಸು ಹರಾಜು, ಅಸಿಸ್ಟೆಂಟ್ ಕಮಿಷನರವರ ಮುಂದೆ ವೀರರಾಜಪೇಟೆಯಲ್ಲಿ ಫೆಬ್ರವರಿ 17ರಲ್ಲೂ, ಮಡಿಕೇರಿಯಲ್ಲು ಫೆಬ್ರವರಿ 19ರಲ್ಲೂ ನಡೆಯುತ್ತದೆ

ಕೊಡಗು ಲೆಜಿಸ್ಲೇಟಿವ್ ಕೌನ್ಸಿಲಿನ ಫೈನಾನ್ಸ್ ಕಮಿಟಿ ಮೀಟಿಂಗು ಈ ತಾ 18ರಲ್ಲಿಯೂ, ಬ್ರೀಚ್ ಆಫ್ ಕಂಟ್ರಾಕ್ಟ್ ಆಕ್ಟ್ ಬಿಲ್ಲಿನ ಸೆಲೆಕ್ಟ್ ಕಮಿಟಿ ಮೀಟಿಂಗು ತಾ. 20ರಲ್ಲೂ ಕೌನ್ಸಿಲ್ ಹಾಲಿನಲ್ಲಿ ಪ್ರಾರಂಭವಾಗುವುದು.

ಜಮೀನ್ದಾರರ ಸಂಘದ ಕಾರ್ಯನಿರ್ವಾಹಕ ಕಮಿಟಿ ಮೀಟಿಂಗು ಈ ತಾ. 19ರಲ್ಲಿ ಮಧ್ಯಾಹ್ನ 1 ಘಂಟೆಗೆ ಸಂಘದ ಆಫೀಸಿನಲ್ಲಿ ನಡಿಯುವುದು. ಬ್ರೀಚ್ ಆಫ್ ಕಂಟ್ರಾಕ್ಟು ಆಕ್ಟಿನ ಬಿಲ್ಲನ್ನು ಚರ್ಚಿಸುವುದೇ ಈ ಮೀಟಿಂಗಿನ ಉದ್ದೇಶ.

ಬ್ರೀಚ್ ಆಫ್ ಕಂಟ್ರಾಕ್ಟು ಆಕ್ಟಿನ ಮಸೂದೆಯ ಮೇಲೆ ತಮ್ಮ ಅಭಿಪ್ರಾಯವನ್ನು ಸೂಚಿಸಲಿಕ್ಕಾಗಿ ಮಡಿಕೇರಿಯ ಇಂಡಿಯನ್ ಪ್ಲಾಂಟರುಗಳ ಮೀಟಿಂಗೊಂದು ತಾ. 17ರಲ್ಲು ಬೆಳಿಗ್ಗೆ ದೇವಸ್ಥಾನದ ಹಾಲಿನಲ್ಲಿ ನಡೆಯುವುದೆಂದು ತಿಳಿಯಬರುತ್ತದೆ.

ಜನವರಿ ತಾ. 12ರಲ್ಲು ಕೊಡಗು ಲೆಜಿಸ್ಲೇಟಿವ್ ಕೌನ್ಸಿಲಿನ ಮೀಟಿಂಗು ಮಡಿಕೇರಿಯಲ್ಲಿರುವ ಕೌನ್ಸಿಲ್ ಹಾಲಿನಲ್ಲಿ ನಡೆಯಿತು. ಚರ್ಚಿಸಲ್ಪಟ್ಟ ವಿಷಯಗಳಲ್ಲಿ ಬ್ರೀಚ್ ಆಫ್ ಕಂಟ್ರಾಕ್ಟ್ ಆಕ್ಟಿನ ಮಸೂದೆಯೇ ಮುಖ್ಯವಾದುದು. ಮೀಟಿಂಗಿನ ವಿವರವು ಇನ್ನೊಂದು ಕಡೆ ಪ್ರಕಟವಾಗಿದೆ

ಐದುವರ್ಷಗಳ ಹಿಂದೆ ಮಡಿಕೇರಿಗೆ ಬಂದಿದ್ದ ಶ್ರೀಯುತ ಕೇಶವದಾಸರು ಕಳೆದವಾರ ಇಲ್ಲಿಗೆ ಬಂದು ಈಗಾಗಲೇ ಮೂರುನಾಲ್ಕು ಹರಿಕೀರ್ತನೆಗಳನ್ನು ಮಾಡಿ ಮಡಿಕೇರಿ ನಿವಾಸಿಗಳಿಗೆ ಮನೋಲ್ಲಾಸವನ್ನುಂಟುಮಾಡಿರುವರು. ಇವರು ಬೇಗನೆ ವೀರರಾಜಪೇಟೆಗೆ ಹೋಗಲಿಕ್ಕಿರುವರಂತೆ.

ಮಡಿಕೇರಿ ಮತ್ತು ವೀರರಾಜಪೇಟೆಯಲ್ಲಿ ಬರುವ ಏಪ್ರಿಲ್ 1ರಿಂದ ಒಂದು ವರುಷದವರೆಗೆ ತಿಂಗಳು ಸಂಬಳದಲ್ಲಿ ಅಫೀಮು ಮಾರಲು ಅರ್ಜಿದಾರರು ಬೇಕಾಗಿರುವರೆಂತಲೂ, ಅಂಥಾ ಅರ್ಜಿಗಳು ಬರುವ ಫೆಬ್ರವರಿ ತಾ. 15ರೊಳಗೆ 25 ರೂಪಾಯಿ [illegible]

ಜೆಟ್ ಸಮೇತ ಆಸಿಸ್ಟೆಂಟ್ ಕಮಿಷನರವರಿಗೆ ತಿಳಿಸಬೇಕಾಗಿದೆ ಎಂತಲೂ ಪ್ರಕಟಿಸಲ್ಪಟ್ಟಿದೆ

ಮಡಿಕೇರಿ ವೇದಾಂತ ಸಂಘದವರು, ಸ್ವಾಮಿ ವಿವೇಕನಂದರವರ ವರ್ಧಂತಿಯನ್ನು ತಾ. 10ರಲ್ಲಿ ಓಂಕಾರೇಶ್ವರ ದೇವಸ್ಥಾನದ ಪಾಳಿಯಲ್ಲಿ ನಡಿಸಿದರು. ಮಿ. ಎನ್ ಮುದ್ದಪ್ಪ ಬಿ. ಎ., ಬಿ. ಎಲ್.ರವರು ಅಧ್ಯಕ್ಷರಾಗಿದ್ದರು. ಸುಮಾರು 250 ಜನರು ಸೇರಿದ್ದರು. ಮಿ. ಟಿ ರಾಮ ಶಾಸ್ತ್ರಿಯವರು ಕನ್ನಡದಲ್ಲಿಯೂ ಮಿ. ನೆರವಂಡ ಕುಟ್ಟಪ್ಪಬಿ ಎ ಯವರು ಇಂಗ್ಲೀಷಿನಲ್ಲಿಯೂ ಸ್ವಾಮಿ ವಿವೇಕನಂದರವರ ಜೀವ ಚರಿತ್ರೆ ಮತ್ತು ಬೋಧನೆಗಳ ವಿಷಯ ಬಹು ಸ್ವಾರಸ್ಯವಾದ ಭಾಷಣಗಳನ್ನು ಮಾಡಿದರು ನಂತರ ಬೇಲೂರಿನ ಶ್ರೀಯುತ ಕೇಶವ ದಾಸರವರು ಧ್ರುವ ಚರಿತ್ರೆಯನ್ನು ಕುರಿತು ಹರಿಕೀರ್ತನೆಯನ್ನು ಮಾಡಿ ನೆರೆದಿದ್ದ ಜನರ ಮನಸಂತೋಷಪಡಿಸಿದರು.

ಸೇಂದಿ ಅಂಗಡಿಗಳ ಒರುವ ವರ್ಷದ ಗುತ್ತಿಗೆ ಹರಾಜು - ಕೊಡ್ಲಿ ಹೋಬಳಿ, ಶನಿವಾರಸಂತೆ ಹೋಬಳಿ, ಸೋಮವಾರಪೇಟೆನಾಡು ಮತ್ತು ಫ್ರೇಜರ್‌ಪೇಟೆ ಹೋಬಳಿಗಳ 11ಅಂಗಡಿಗಳ ಹರಾಜು ಫೆಬ್ರವರಿ 15ರಲ್ಲು ಸೋಮವಾರಪೇಟೆ ತಾಲೋಕು ಆಫೀಸಿನಲ್ಲಿಯೂ, ಮಡಿಕೇರಿನಾಡು, ಸಂಪಾಜೆ ನಾಡು ಮತ್ತು ಭಾಗಮಂಡಲನಾಡುಗಳ 15ಅಂಗಡಿಗಳ ಹರಾಜು ಫೆಬ್ರವರಿ ತಾ 19ರಲ್ಲಿ ಮಡಿಕೇರಿನಾಡು ಕಚ್ಚೇರಿಯಲ್ಲಿಯೂ, ನಾಪೋಕ್ಲುನಾಡು, ವಿರಾಜಪೇಟೆನಾಡು, ಅಮ್ಮತ್ತಿನಾಡು, ಪೊನ್ನಂಪೇಟೆನಾಡು ಮತ್ತು ತಾವರೆಕೆರೆ ನಾಡುಗಳ 22 ಅಂಗಡಿಗಳ ಹರಾಜು ಫೆಬ್ರವರಿ ತಾ 17ರಲ್ಲಿ ವಿರಾಜಪೇಟೆ ತಾಲೋಕು ಕಚ್ಚೇರಿಯಲ್ಲಿಯೂ ಅಸಿಸ್ಟೆಂಟ್ ಕಮಿಷನರವರಿಂದ ನಡಿಸಲ್ಪಡುವದೆಂದು ಪ್ರಕಟವಾಗಿದೆ

ಹಿಂದೂದೇಶ.

ಈಗ ಸಿಲೋನಿನಲ್ಲಿರುವ ಇಂಗ್ಲಂಡಿನ ಮಾಜಿ ಪ್ರಧಾನ ಮಂತ್ರಿಯವರಾದ ಮಿ॥ ರಾಮ್ಸೆ ಮೆಕ್ಡೊನಾಲ್ಡರವರು ಬ್ರಿಟನ್ ಈಗಿನ ಸರಕಾರದಿಂದ ಬೇಸತ್ತು ಹೋಗಿದೆ ಎಂದು ಸೂಚಿಸಿರುವರು

ಕೋಮುವಾರು ಪ್ರಶ್ನೆಯನ್ನು ಕುರಿತು ಮೌಲಾನ ಶೌಕತ್ ಆಲಿಯವರು ತಾ 9ರಲ್ಲು ನಾಗಪುರದಲ್ಲಿ ಭಾಷಣ ಮಾಡಿದಾಗ ಸಂತಯಮೆ ರಾಕ್ಷಸನನ್ನು ದೂರಮಾಡಿರಿ ಎಂದು ಮುಸಲ್ಮಾನರಿಗೆ ಅಪ್ಪೀಲು ಮಾಡಿದರು.

ಬರೋಡದ ಗೈಕವಾರ ಮಹಾರಾಜರವರು ಪಟ್ಟಕ್ಕೆ ಬಂದು 50 ವರ್ಷಗಳಾದುದರಿಂದ ಅವರ "ಗೋಲ್ಡನ್ ಜುಬಿಲಿ" ಯನ್ನು ತಾ 11ರಲ್ಲಿ ಆ ಸಂಸ್ಥಾನದವರು ಬರೋಡ ಪಟ್ಟಣದಲ್ಲಿ ಬಹು ಸಂಭ್ರಮದಿಂದ ನಡಿಸಿದರು.

ಬೀರಾರಿನ ಪರವಾಗಿ ಮಧ್ಯಪ್ರಾಂತ್ಯದ ಕೌನ್ಸಿಲಿನಲ್ಲಿ ಮೆಂಬರುಗಳಾಗಿರುವ ನಾಲ್ಕು ಜನರು ಸ್ವರಾಜ್ಯಪಾರ್ಟಿಗೆ ರಾಜಿನಾಮೆ ಕೊಟ್ಟಿರುವರು. ಇವರಲ್ಲಿ ಮೂವರು ಕೌನ್ಸಿಲ್ ಮೆಂಬರುಕನಕ್ಕೂ ರಾಜಿನಾಮೆ ಕೊಡಲಿಕ್ಕಿರುವರಂತೆ

ಬನಾರಸ್ ಪ್ರಥಮ ಪ್ರಾಂತೀಕ ಹಿಂದೂಸಭಾ ಕಾನ್ಫರೆನ್ಸು ರಂಗೂನಿನಲ್ಲಿ ತಾ. 10ರಲ್ಲಿ ನಡಿಯಿತು. ಅಧ್ಯಕ್ಷರಾಗಿದ್ದ ಲಾಲಾ ಲಜಪತರಾಯರು ತಮ್ಮ ಭಾಷಣದಲ್ಲಿ ಅಸ್ಪೃಶ್ಯತೆಯನ್ನು ಬೇಗನೆ ಹೋಗಲಾಡಿಸಬೇಕೆಂದು ಒತ್ತಿ ಹೇಳಿದರು.

ಮೈಸೂರಾಯರ ಪತ್ನಿಯವರ ಕಾಯಿಲೆಯು ಸಂಪೂರ್ಣ ಗುಣವಾಗಿರುವುದರಿಂದ ಲಾರ್ಡ್ ರೀಡಿಂಗ್‌ರವರು ಪತ್ನಿ ಸಮೇತ ಕಲ್ಕತ್ತಾದಿಂದ ಡೆಲ್ಲಿಗೆ ವಾಪಸು ಬಂದಿರುವರು.

ಹಿಂದೂ ಮುಸಲ್ಮಾನರ ಒಗ್ಗಟ್ಟಿಗೆ ಅಡಚಣೆಯಾಗುವಂಥ ವಿಶೇಷ ಕಾರಣಗಳು ಯಾವನ್ನೂ ಇಲ್ಲವೆಂತಲೂ, ಅವರು ಅತ್ಯಕ್ಷ ಸಮರಿಸದೆ ಜಗಳವಾಡಿಕೊಳ್ಳಬೇಕಾದ ಸಂಗತಿಗಳು ಯಾವನ್ನೂ ಕಾಣುವುದಿಲ್ಲವೆಂತಲೂ ಆಗಾಖಾನರವರು ಸೂಚಿಸಿರುವರು.

ತಾ. 8ರ ಬೆಳಿಗ್ಗೆ ಮದರಾಸಿನ ಶ್ರೀ ಮೀನಾಕ್ಷಿ ಸುಂದರೇಶ್ವರ ದೇವಸ್ಥಾನದ ಅಮೂಲ್ಯ ಚಂದ್ರಶೇಖರ ವಿಗ್ರಹದ ಶಿರಸ್ಸು ಭಂಗವಾಗಿ ಮುರಿಯಲ್ಪಟ್ಟು ವಿಕಾರಗೊಳಿಸಲ್ಪಟ್ಟಿರುವುದು ಕಂಡುಬಂದಿದೆ. ಈ ವಿಗ್ರಹ ಪ್ರಾಚೀನಕಾಲದ ವಿಶೇಷ ಶಿಲ್ಪ ಉದಾಹರಣೆಯಾಗಿತ್ತು ಇದು ಇಲ್ಲಿ ಕಳೆದ ಹತ್ತು ಶತಮಾನಗಳಿಂದ ಬಹು ಜಾಗ್ರತೆಯಿಂದ ಕಾಪಾಡಲ್ಪಟ್ಟಿತ್ತು. ಅನೇಕ ಪಾಶ್ಚಾತ್ಯರೂ ಕೂಡ ಇದನ್ನು ಬಹುವಾಗಿ ಮೆಚ್ಚಿರುವರು.

ಹತ್ತಿ ಸುಂಕವನ್ನು ಸರ್ಕಾರದವರು ವಜಾಮಾಡಿದರೂ ಕೂಡ ಬೊಂಬಾಯಿ ಮಿಲ್ಲಿನ ಕೆಲಸಗಾರರಿಗೆ ಕಡಿಮೆಮಾಡಿದ ಸಂಬಳವನ್ನು ಕೊಡುವುದಿಲ್ಲ ಮಿಲ್ಲಿನವರು ಹೇಳಿದರಂತೆ. ಅವರು ಈಗಾಗಲೇ ವ್ಯಾಪಾರಕ್ಕೆ ಬೇಕಾಗುವ ವಸ್ತುಗಳನ್ನು ಕಳುಹಿಸುವಂತೆ ತೆರಿಗೆ ಕೊಟ್ಟಿರುವರಂತೆ.

ಜೋಸೆಫ್ ಕ್ಯಾಸ್ಸಿಡಿ ಎಂಬವನು ಸುಮಾರು 7 ವರ್ಷಗಳ ಹಿಂದೆ ಇಂಡಿಯಾದಿಂದ ಗಡೀಪಾರು ಮಾಡಲ್ಪಟ್ಟಿದ್ದ ಪ ಪುನಃ ರಹಸ್ಯವಾಗಿ ಇಂಡಿಯಾಕ್ಕೆ ಬಂದರು. ತಾ 10ರಲ್ಲು ಅವರನ್ನು ಮದ್ರಾಸಿನವರು ಪತ್ತೆ ಹಚ್ಚಿ ಬಹು ಸಂತೋಷದಿಂದ ಅದರುಂಟು. ಅಲ್ಲಿಂದ ಅವರ ಬೊಂಬಾಯಿಗೆ ಕಳುಹಿಸಿ ಇಂಡಿಯಾದೇಶ ಅವರಿಗೆ ಸ್ವಾಗತವನ್ನಿತ್ತಿದೆ

ವಿದೇಶ.

ಇಟಲಿಯ ಸರಕಾರದವರ ಹರಾಜು ಮತ್ತು ಬಂಡಾಯದ ಸಂಗತಿ ನಡೆಯಿತು. ಪ್ರಕಟವಾಗಿದೆ

ಇಟಲಿಯ ಸರಕಾರವು ತನ್ನ ದೇಶದ ಸೈನಿಕರನ್ನು ಸಜ್ಜುಗೊಳಿಸಿ ಯುದ್ಧಕ್ಕೆ ಸಿದ್ಧವಾಗಬೇಕೆಂದು ಆಜ್ಞೆ ಹೊರಡಿಸಿದೆ. ಈ ಬಗ್ಗೆ ಸರಕಾರವು ತನ್ನ ಸೈನ್ಯದ ವಿಷಯವಾಗಿ ಹೇಳಿದ್ದು, ಇದರಿಂದ ಮಹಾ ಗೊಂದಲ ಉಂಟಾಗಿದೆ.

ಪ್ಯಾರಿಸ್ ನಗರದಲ್ಲಿ ಮೆ ಮಾಡಿ ಒಬ್ಬ ಹುಡುಗನು ಇರುವಾಗ ಬಹುಕಾಲ ಮಲಗಿದ್ದು ಎಚ್ಚರವಾಗಲಿಲ್ಲ. ಹತ್ತು ದಿವಸಗಳಲ್ಲಿ ಅವನನ್ನು ಎಚ್ಚರಗೊಳಿಸಲು ವೈದ್ಯರು ಬಹಳ ಪ್ರಯತ್ನಪಟ್ಟರು. ಕಡೆಗೆ ಅವನು ಎಚ್ಚರಗೊಂಡು ಅವನಿಗೆ ಆಹಾರವನ್ನು ಕೊಟ್ಟರಂತೆ

ಪ್ಯಾಲೆಸ್ಟೈನದಲ್ಲಿ ತತ್ಕಾಲ ಶಾಂತಿಯುಗಿದ್ದರೂ ಬಾಂಗ್ ಟಿಸ್ಸಿ ಅರಬರವರ ಸೋಲಿಸಲ್ಪಟ್ಟಿರುವ ಹಿಂಬಾಲಕರೊಬ್ಬರು ಸ್ವದೇಶವನ್ನು ಕೇಳುತ್ತಿದ್ದರು. ಇದರಿಂದ ಪುನಃ ಜಗಳ ಉಂಟಾಗುವದೆಂದು ಊಹಿಸಲಾಗಿದೆ

ಇಂಗ್ಲೆಂಡಿನಲ್ಲಿ ಲೇಬರ್ ಪಾರ್ಟಿಯವರಿಗೂ ಲಿಬರಲ್ ಸಂಗಡದವರಿಗೂ ಒಳ ಒಪ್ಪಂದ ನಡೆಯುತ್ತಿದೆ ಎಂಬ ವರ್ತಮಾನವು ಪೂರ್ತಿ ಸುಳ್ಳೆಂದು ಲೇಬರ್ ಪಾರ್ಟಿಯ ಮಿ॥ ಫಿಲಿಪ್ ಸ್ನೋಡನ್‌ರವರು ಬಹಿರಂಗವಾಗಿ ಹೇಳಿರುವರು.

ತಾ. 10ರಲ್ಲಿ ಮೆಕ್ಸಿಕೋ ಪಟ್ಟಣದಿಂದ ಗ್ವಾಡಲಜಾರಕ್ಕೆ ಹೋಗುತ್ತಿದ್ದ ಒಂದು ಟ್ರೈನನ್ನು ಆಯುಧಪಾಣಿಗಳಾದ 20 ಕಳ್ಳರು ಪ್ರಯಾಣಿಕರಂತೆ ನಟಿಸಿಕೊಂಡು ಟ್ರೈನನ್ನು ಮಧ್ಯದಲ್ಲಿ ನಿಲ್ಲಿಸಿ ಅನೇಕ ಪ್ರಯಾಣಿಕರನ್ನು ಕತ್ತಿಯಿಂದ ಕಡಿದು ಕೊಂದು, ಬಳಿಕ ಉಳಿದವರನ್ನು ಟ್ರೈನಿಗೆ ಬೆಂಕಿಕೊಟ್ಟು ಸುಟ್ಟು ಅಂಬಿನಲ್ಲಿ ಬಹುದೂರ ಹೋಗಿ ಪಲಾಯನ ಮಾಡಿರುವರಂತೆ

COFFEE ESTATE FOR SALE.

Karbarmotte, property of the late Mr L (Pais. Adjoining the Sidapur dispensary

App[illegible]

S M PINTO,
Virarajendrapet

4—2

ಪತ್ರವ್ಯವಹಾರ.

ವಾತ್ಪಿದಾರರ ಪಡುವ ಅಭಿಪ್ರಾಯಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲ. ಸಂ

ಅವರೆ

ಲೋಕಪಾವನದ ಕೆಲವು ದಿನಗಳ ಹಿಂದಿನ ಸಂಚಿಕೆಯಲ್ಲಿ ಕಾಳೆಂಬವರು ಪ್ರಕಟಪಡಿಸಿದ ನನ್ನ ವಾತ್ಪಿಯ ಮೇಲೆ ಸಂಪಾದಕರು ಬರೆದ ಟಿಪ್ಪಣಿಯನ್ನು ನೋಡಿದೆನು. ಅದರಲ್ಲಿ ನಾನು ಕೊಡಗ ದೇಶದವನಲ್ಲವೆಂದೂ, ಹೊಟ್ಟೆಪಾಡಿಗಾಗಿ ಇಲ್ಲಿಗೆ ಬಂದಿರುವವನೆಂದೂ, ನನಗೆ ಗೌಡ ಜನಾಂಗದ ಪರವಾಗಿ ಮಾತಾಡಲು ಹಕ್ಕಿರುವುದಿಲ್ಲವೆಂದೂ ಲೋಕಪಾವನವು ನನ್ನನ್ನು ದ್ವೇಷಿಸುವಷ್ಟು ಮಹತ್ವವು ನನ್ನಲ್ಲಿರುವುದಿಲ್ಲವೆಂದೂ ಮತ್ತು ನಾನು ಪಕ್ಷಪಾತವನ್ನು ಹೇಳಲು ಸಮರ್ಥನಲ್ಲವೆಂದೂ ಬರೆದಿರುವರು. ಈ ಟಿಪ್ಪಣಿಯು ಬಹು ಅಲ್ಪತರವಾದ ಮನಸ್ಸನ್ನು ಬಹಿರಂಗಪಡಿಸುತ್ತದೆ. ಹೀಗೆ ಬರೆಯಲು ಕಾರಣವೇನೆಂದು ನಾನು ಈ ಕೆಳಗೆ ವಿವರಿಸುವೆ

ನಾನು ದಕ್ಷಿಣ ಕನ್ನಡ ಜಿಲ್ಲೆಯ ಹುಟ್ಟಿದವನು ಅಂದರೆ ನಾನು ಕೊಡಗು ದೇಶದ ನಿವಾಸಿಯಲ್ಲವೆಂದು ಬರೆಯುವ ಕಾರಣವಿರಬಹುದು ಹಾಗಾದರೆ, ಲೋಕಪಾವನದ ಸಂಪಾದಕರು "ನೇಟಿವ್ ಕಾರ್ನರ್" ನಲ್ಲಿ ವಾಸಿಸುವ ಅನ್ಯದೇಶದವರು. ಇವರಿಗೆ ಕೊಡಗಿನ ವಿವರಣೆ ತಿಳಿದಿಲ್ಲ ಅದರಿಂದಲೇ ನನ್ನ ನ್ಯಾಯವಾದ ಸಂವಾದವು ಇವರಿಗೆ ಸೇರದು. ಇವರಿಗೆ ತಿಳಿದಿಲ್ಲವೆಂದು ತಿಳಿಸುತ್ತೇನೆ. ದೇಶದ ವಿಷಯದಲ್ಲಿ ಇವರಿಗಿರುವ ಅಜ್ಞಾನವಾದ ಮೂಢತ್ವವನ್ನು ಹೋಗಲಾಡಿಸುವದಕ್ಕಾಗಿ ಇವರ ಆಫೀಸಿನಲ್ಲಿ ಒಂದು ಕೊಡಗು ದೇಶದ ನಕ್ಷೆಯನ್ನಾದರೂ ಇಟ್ಟುಕೊಂಡಿದ್ದರೆ ಇವರ ಈ ತರದ ಅವಿವೇಕವು ಹೊರಬೀಳುತ್ತಿದ್ದಿಲ್ಲ ಇವರು ಕೊಡಗು ದೇಶವೆಲ್ಲಾ ಲೋಕಪಾವನದ ಆಫೀಸಿನೊಳಗೆ ಅಡಗಿಕೊಂಡಿದೆಯೆಂದು ಅಭಿಪ್ರಾಯಪಟ್ಟಂತೆ ತೋರುತ್ತದೆ.

ಹೊಟ್ಟೆಪಾಡಿನ ಸುದ್ದಿ ಲೋಕಪಾವನದ ಸಂಪಾದಕರಿಗೇನು ಬೇಕು? ಇವರು ಈ ಮೊದಲು ಹೊಟ್ಟೆಪಾಡಿಗಾಗಿ ಸರಕಾರಿ ಸ್ಕೂಲಿನಲ್ಲಿ ಉಪಾಧ್ಯಾಯರಾಗಿದ್ದು ಅಲ್ಲಿ ಹೊಟ್ಟೆಪಾಡಿನ ಹುದ್ದೆ ದೊರೆಯಲಿಲ್ಲವೆಂದು ನೋಟೀಸು ಕೊಟ್ಟು ಇವರಿಗೆ ಎಷ್ಟು ಬೇಗನೆ ಮರೆತು ಹೋಯಿತೋ?

ನಾನು ಗೌಡ ಜನಾಂಗದ ಪರವಾಗಿ ಮಾತಾಡಲು ನನಗೆ ಹಕ್ಕಿರುವುದಿಲ್ಲವೆಂಬ ಸಂಗತಿ ನನಗೂ ನನ್ನ ಜನಾಂಗದವರಿಗೂ ಮಹತ್ವಕ್ಕೆ ಸಮ್ಮಂಧಪಟ್ಟದ್ದಲ್ಲವೆಂದು ಲೋಕಪಾವನಕ್ಕೆ ಹೇಳಲು ಏನೂ ಹಕ್ಕಿರುವುದಿಲ್ಲ ಇಂತಹ ಕುಯುಕ್ತಿಯಿಂದ ಗೌಡ ಜನಾಂಗದಲ್ಲಿ ಒಡಕು ತಂದು ಅವರ ಬಲವನ್ನು ಕಡಿಮೆಗೊಳಿಸಲು ಮಾಡುವ ಲೋಕಪಾವನದ ವಿಫಲ ಪ್ರಯತ್ನವು ನಮಗೆ ತಿಳಿಯದ್ದಲ್ಲ ಈ ಒಡಕು ತರುವ ಪ್ರಯತ್ನವನ್ನು ಗೌಡರುಗಳು ಈ ಮೊದಲೇ ತಿಳಿದಿರುವದರಿಂದ ಇನ್ನು ಗೌಡ ಜನಾಂಗವು ಲೋಕಪಾವನದ ಬಲೆಗೆ ಬೀಳುವಂತಿಲ್ಲ.

ಲೋಕಪಾವನವು ನನ್ನನ್ನು ದ್ವೇಷಿಸುವಷ್ಟು ಮಹತ್ವವು ನನ್ನಲ್ಲಿ ಇಲ್ಲವಂತೆ. ಇದು ನಿಜವಾಗಿರಬಹುದು. ಯಾಕಂದರೆ ಲೋಕಪಾವನದ "ಸ್ತುತಿ ಮಹತ್ವವೆಂದರೆ ಬೇರೆಯವರನ್ನು ಹೀಯಾಳಿಸುವುದೇ". ಇಂತಹ ಗುಣವು ನನ್ನಲ್ಲಿ ಇಲ್ಲದಿರುವ ಲೋಕಪಾವನಕ್ಕೆ ನನ್ನಲ್ಲಿ ಏನೂ ಮಹತ್ವವು ಕಂಡುಬರದಿಲ್ಲ.

ಪತ್ರಿಕಾ ಧರ್ಮವನ್ನು ನಾನು ಹೇಳುವ ಅವಶ್ಯವಿಲ್ಲ. ಯಾಕಂದರೆ ಬಂಡೆ ಕಲ್ಲಿನ ಮೇಲೆ ಮಳೆ ಸುರಿದರೆ ಅದು ಹೇಗೆ ಆ ನೀರನ್ನು ಎಳೆದುಕೊಳ್ಳಲಾರದೋ ಅದರಂತೆಯೇ ಲೋಕಪಾವನಕ್ಕೆ ಪತ್ರಿಕಾ ಧರ್ಮವನ್ನು ಬೋಧಿಸಿದರೆ ಅದು ವ್ಯರ್ಥವೆಂದು ನಾನು ಈ ಮೊದಲೇ ತಿಳಿಯಬೇಕಿತ್ತು.

ಎನ್. ಮುದ್ದಪ್ಪ.



No License Required! **No License Required !!**

Webley and Scott's Air Pistol, cal 177 or 22 Powerful and Accurate complete with a sample box of slugs, two spare washers, a brush for cleaning, and a booklet of instructions Rs. 30/– Free delivery.

Powerful German "Diana" Air gun. Handsome and Accurate, takes B S A Pattern No 1 Slugs and Darts. recommendable for Target Practice Rs 15 Free delivery.

No License required to purchase or to possess above items.

Brilliant Search Light Lamp for Night Sports Rs 30 – Free delivery

12, 16 or 20 bore Id. Smokeless Powder cartridges no's 1 to 8 Rs 11/– per 100

Do. do. do buck shots „ 12/– „

Do. do. do. Ball „ 14/– „

We stock Arms. Ammunition and shooting Requisites of all kinds and Quality Ranging from Re 1/– to Rs. 1800/–

Apply for our Shooting Season's Clearance Sale Catalogue of Brand New Goods.

GOOLAMHUSSIAIN ALLIBHOY & SONS

Largest Importers of Fire Arms and Ammunition,

Cheapest priced firm in India,

210 Abdul Rehman Street, BOMBAY.

ಈಚೂರು ಮತ್ತು ಮುಗುಟಗೇರಿ ರಸ್ತೆ

ಅಯ್ಯ,

ಹಾತೂರಿಂದ ಪೊನ್ನಂಪೇಟೆಗೆ ಹೋಗುವ ಗ್ರಾಮಾಂತರ ರಸ್ತೆಯನ್ನು ಈಗ ಎರಡು ಮೂರು ವರುಷದಿಂದ 100, 150 ರುಪಾಯಿಗೆ ರಸ್ತೆಯನ್ನು ಕಂಟ್ರಾಕ್ಟು ಹಿಡಕೊಂಡು ಕಲ್ಲುಕೋಟಿನವರೆಗೆ ನ್ಯಾಯವಾಗಿ ಮೋಟಾರು ಓಡುವಂತೆ ಮಾಡಿಕೊಂಡು ಅಲ್ಲಿಂದ ಕುಂದ ಸ್ಕೂಲಿನವರೆಗೆ ಮಾರಿಗೊಂಡು ಗುದ್ದಲಿ ಹಾಕುತ್ತಾ ಸೇತುವೆ ವಗೈರೆ ನ್ಯಾಯವಾಗಿ ಬಂದೋಬಸ್ತಿಲ್ಲದೆ ಮುಗುಟಗೇರಿ ಮತ್ತು ಈಚೂರು ಗ್ರಾಮಸ್ಥರಿಗೆ ಗಾಡಿ ಹೋಗುವ ರೀತಿ ಮಾಡಿ ಕಂಟ್ರಾಕ್ಟು ಹಣವನ್ನು ಹೊಂದಿಕೊಂಡು ಮೇಲ್ಕಾಣಿಸಿ ಎರಡು ಗ್ರಾಮಸ್ಥರಿಗೆ ನಷ್ಟವಾಗುವದು. ಹಣ ಹೊಂದಿದ ಸರಕಾರದ ನೌಕರರು ಇಲ್ಲಿವರೆಗೂ ಘನಚಿತ್ತಕ್ಕೆ ತಾರದೆ ಇದ್ದನ್ನು ಗರೀಬ ರೈತರಿಗೆ ಎಷ್ಟು ನಷ್ಟ ಮತ್ತು ಕಷ್ಟ ಎಂಬದು ಹೇಳಲು ಪೂರಾ ವ್ಯಸನಕರವಾಗಿದೆ. ಕುಂದ ಸ್ಕೂಲಿನ [illegible] ಗದ್ದೆಯ ಮಧ್ಯದಲ್ಲಿರುವ ರಸ್ತೆಗಾತು ಗುದ್ದಿ ತೋರಿಸದೆ ಎಷ್ಟು ನಷ್ಟವಾಗಿರು[illegible]ವುದೆಂಬದನ್ನು ಸರಕಾರದವರು ನೋಡಿರಬೇಕು. ಕಂಟ್ರಾಕ್ಟುದಾರರು ಕೆಲಸ[illegible]ದೆಯೂ ಮಾಡಿ [illegible] ಹೊಂದಿಕೊಂಡು [illegible] ಗ್ರಾಮಸ್ಥರು ಸರಕಾರಕ್ಕೆ ನೆಲ ಕಟ್ಟು[illegible] ಸರಕಾರದ ಯಾವ ಕೆಲಸಕ್ಕೆ ಬಾಗಿ[illegible]ಗದೆ ಇರ[illegible]ದನ್ನು ಯೋಚಿಸಿ ಅಧಿಕಾರಿಗಳಾದ ತಾವುಗಳು ಈ ವಿಷಯವನ್ನು ತಮ್ಮ ಚಿತ್ತಕ್ಕೆ ತಂದು ಗಡಿಗಡಿ ಕೆಲಸವನ್ನು ನೋಡಿಕೊಂಡು ಮೇಲ್ಕಂಡ ರಸ್ತೆಗಾಗಿ ಮೇಲ್ಕಂಡ ಗ್ರಾಮಗಳಿಗೆ ಗಾಡಿ ಒಂದು ಒತ್ತ ಹೋಗುವಂತೆ ಅನುಕೂಲಪಡಿಸಿ ಕೊಡಬೇಕಾಗಿ ಕೋರುವ

ಗ್ರಾಮಸ್ಥ

ಕೊಡಗು ಪ್ರತಿನಿಧಿ ಸಭೆ

ದೇಶೀಯರಲ್ಲಿ ನನ್ನದೊಂದು ವಿನಂತಿ

ಭೂಲೋಕದ ಎಲ್ಲಾ [illegible] ಸಂಸ್ಥಾನಗಳಲ್ಲಿ ರಾಜ್ಯಾಡಳಿತವು ಜನರು ಚುನಾಯಿಸಿದ ಪ್ರತಿನಿಧಿಗಳಿಂದ ನಡೆಸಲ್ಪಡುತ್ತೆ. ರಾಜರಿಂದ ಆಳಲ್ಪಡುವ ದೇಶಗಳಲ್ಲಿಯೂ ಸಹ ಬೇರೆಬೇರೆ ನಾನಾವಿಧ ರಾಜ್ಯಾಡಳಿತ ಪ್ರತಿನಿಧಿ ಸಭೆಗಳು ಇದ್ದೇ ಇವೆ. ನಮ್ಮ ಹಿಂದ ದೇಶದಲ್ಲಿ ಸ್ವರಾಜ್ಯಕ್ಕೆ ಹೋರಾಡುವ ಕಾಂಗ್ರೆಸ್ ಸಹ ಪ್ರತಿನಿಧಿ ಸಭೆಯೇ ಆಗಿದೆ. ಮುಂದಕ್ಕೆ ಸ್ವರಾಜ್ಯ ಸಿಕ್ಕಿದಾಗ್ಯೂ ಇಂಡಿಯನ್ ಪಾರ್ಲಿಮೆಂಟ್ ಎಂಬ ಪ್ರತಿನಿಧಿ ಸಭೆಯಿಂದ ರಾಜ್ಯಾಡಳಿತವಾಗಲೇಬೇಕು. ಎಲ್ಲಾ ಪ್ರತಿನಿಧಿ ಸಭೆಗೂ ಆಯಾಯ ದೇಶದ ಜನಾಂಗಕ್ಕೂ ಅನುಕೂಲತೆಗೂ ಹಾಗೂ ಬಾಧ್ಯತೆಗೂ ಅನುಸಾರವಾಗಿ ಚುನಾಯಿತ ಮೆಂಬರುಗಳು ಮತ್ತು ನೇಮಕ ಮೆಂಬರುಗಳು ಇರುವರು. ತದ್ದೋರೀತಿ ನಮ್ಮ ಈ ಚಿಕ್ಕ ರಾಜ್ಯಕ್ಕೆ ಸ್ವರಾಜ್ಯ ಸಿಕ್ಕಿದಾಗ ಪ್ರತಿನಿಧಿ ಸಭೆಯೊಂದರಿಂದ ರಾಜ್ಯಾಡಳಿತವಾಗಬೇಕು. ಸದ್ಯ [illegible] ಮಟ್ಟಿಗೆ ಸ್ವರಾಜ್ಯ ಈಗಲೇ ಸಿಕ್ಕಿದೆ ಎಂಬದಕ್ಕೆ ಕಾರಣಗಳನ್ನು ಕೊಟ್ಟು ಈ ಮೊದಲೇ ತೋರ್ಪಡಿಸಿರು[illegible]. ಆದ್ದರಿಂದ ಪ್ರತಿನಿಧಿಸಭೆಯಾಗಬೇಕೆಂದು. ಮಡಿಕೇರಿ ಬಿಡಿನ್ಯಾಶನಲ ಸಂಘದ ಸಮ್ಮೇಳನದಲ್ಲಿ ಮಂಜೂರಾಗಿದೆ. ನಮ್ಮ [illegible] ಕೂತರೆ ಯಾವದೊಂದು ಕೆಲಸವು ಆಗದು. ಯಾವ ರೀತಿಯಲ್ಲಿ ಇಂಥಾ ಸಭೆಯು ಆಗಬೇಕೆಂತಲೂ ಮತ್ತು ಇಂಥಾ ಸಭೆಯನ್ನು ಯಾರು [illegible]ಸಬೇಕೆಂತಲೂ ನಾನು [illegible] ಪ್ರಾಲೋಚಿಸಿದಲ್ಲಿ ಅಂಥಾ ಸಭೆಯನ್ನು ಈ ದೇಶದ ಮೂಲನಿವಾಸಿಗಳಾದ [illegible] ಕೈಗೆ ಅಧಿಕಾರ[illegible]ಯಕ್ಕೆ [illegible] ಬಂದು. ಪ್ರತಿ[illegible] [illegible] ದೇಶದ ಪ್ರತಿನಿಧಿಗಳು [illegible] [illegible] [illegible] ಎಲ್ಲಾ ಪ್ರತಿನಿಧಿಗಳು [illegible]ಗಳು [illegible] ಆದ್ದರಿಂದ ಎಲ್ಲಾ ಗ್ರಾಮದ [illegible], [illegible], [illegible] [illegible], ವಿದ್ಯಾವಂತರನ್ನು [illegible] ಪ್ರತಿಯೊಂದು ಗ್ರಾಮಸ್ಥರು [illegible] ಗ್ರಾಮದ ಒಬ್ಬ [illegible] [illegible] [illegible]ಸಬೇಕಾಗಿ ಈ ಮೂಲಕ ಕೇಳಿಕೊಳ್ಳುತ್ತೇನೆ. [illegible] ಯಾವ ಮಹನೀಯರಿಗಾಗಲೀ ಸ್ವಂತವಾಗಿ ಚರ್ಚಿಸಬೇಕಾದ[illegible] ಇರಾದೆ ಇದ್ದ ಪಕ್ಷ ನಾನು [illegible] ಅವರ [illegible] ಬರೆಯಲ್ಲದೆ ಅವರಿಗೆ ವಂದಿಸುವೆನು. ಹಾ! ಈ ನಮ್ಮ ದೇಶದ ಒಡಕನವನ್ನು [illegible] ಪ್ರಯತ್ನ ಎಲ್ಲಾ ದೇಶಾಭಿಮಾನಿಗಳು ಮಾಡಲೇ ಬೇಕು. ತಾವೇ ಬುದ್ಧಿವಂತರೆಂತಲೂ [illegible] ನ್ಯಾಯಗಳಿಗೆ [illegible] ಮನಸ್ಸೀ [illegible] ಕೆಲವರ [illegible]ದೆಂಬುದೂ ನನ್ನ ವಿನಯಪೂರ್ವಕವಾದ ಅರಿಕೆ

ಕೋದಂಡ ಉತ್ತಯ್ಯ

ಪರಸ್ಪರ ಸಹಾಯ ಸಂಘ.

ಗ್ರಾಮ. ಹುಂಚಗಲ ಪ್ರೆಸಿಡೆಂಟ್ ಮತ್ತು ಕಮಿಟಿಯವರಲ್ಲಿ ವಿನಂತಿ [illegible].

[illegible] ಅನೇಕ ಗ್ರಾಮಗಳಲ್ಲಿ ಬಾಕಿದಾರರ ಮೇಲೆ ಅಮಲ್ದಾರಿ ತೆಗೆದು ಬತ್ತ ಜಪ್ತುಮಾಡಿ ವಸೂಲಾತಿ ಬಗ್ಗೆ ತೊಂದರೆ ತೆಗೆದುಕೊಂಡದಕ್ಕೆ ವಂದಿಸುತ್ತೇನೆ. ಆದರೆ ಈಗ ಜಪ್ತುಮಾಡಿರುವ ಬತ್ತ ಹರಾಜುಮಾಡಿಸಿ ಅವರ ಲೆಕ್ಕಕ್ಕೆ ಜಮ ತೆಗೆದುಕೊಳ್ಳುವದು ಕೇವಲ ಈಗಿನ ದಾರಣೆಯಲ್ಲಿ ಅವರಿಗೆ ನಷ್ಟವಾಗುವದರಿಂದ ಸದ್ರಿ ಜಪ್ತಾದ ಬತ್ತವನ್ನು ಪಂಚಾಯತರೇ ಜವಾಬು ಈಗಿನ ದಾರಣೆಯಲ್ಲೇ ಜಮ ತೆಗೆದುಕೊಂಡು ಅದನ್ನು ನವಂಬರ್ ಯಾ ಡಿಸೆಂಬರ್ ತಿಂಗಳಲ್ಲಿ ಮೊದಲಂತೆ ಏರ್ಪಡಿಸಿ ಆಗಿನ ಧಾರಣೆಯಲ್ಲಿ ಹೆಚ್ಚು ಸಿಕ್ಕುವ ಮೊಬಲಗನ್ನು ಅವರ ಲೆಕ್ಕಕ್ಕೆ ಜಮಾ ತೆಗೆದುಕೊಂಡರೆ ಪರಸ್ಪರ ಸಹಾಯದ ನಿಜ ತತ್ವವನ್ನು ಅನುಸರಿಸಿದಂತಾಗಿ ಗರೀಬರಿಗೆ ಸಹಾಯ ಮಾಡಿದಂತಾಗುವದು. ಈ ವರ್ಷದ ಬತ್ತದ ಬೆಳೆಯು [illegible] ನೋಡಿದರೂ ಮತ್ತು ಈ ದೇಶದಿಂದ ಈಗಾಗಲೆ ಪರಸ್ಥಳಗಳಿಗೆ ೬೫—ರುಪಾಯಿ ಪ್ರಕಾರ ನೂರಾರು ಗಾಡಿ ಬತ್ತವನ್ನು ಕಳುಹಿಸುತ್ತಿದ್ದಾರೆಂದು ಏಜಂಟರುಗಳು ವರ್ತಮಾನ ಕೊಟ್ಟದನ್ನು ಯೋಚಿಸಿದರೆ ಈ ವರ್ಷ ಭತ್ತದ ದಾರಣೆಯು ಖಂಡಿತವಾಗಿಯೂ ಜಾಸ್ತಿಯಾಗುವದರಲ್ಲಿ ಯಾವ ಸಂಶಯವೂ ಇಲ್ಲ. ಆದ್ದರಿಂದ ಈಗಾಗಲೆ ಭತ್ತವನ್ನು ಕಡಿಮೆ ದರದಲ್ಲಿ ಮಾರುವದಕ್ಕಿಂತ ಅದನ್ನೆಲ್ಲಾ ಒಟ್ಟು ಒಮ್ಮಾಯಿಸಿ ಕಡೆಗೆ ಈ ದೇಶದವರಿಗೇನೇ ಆಗಿನ ಧಾರಣೆಯಲ್ಲಿ ಮಾರಿ ಅದರ ಸಹಾಯವನ್ನು ನಮ್ಮವರಿಗೇನೇ ಮಾಡಿದರೆ ಪರಸ್ಪರ ಸಹಾಯದ ನಿಜ ತತ್ವವನ್ನು ಅವಲಂಬಿಸಿ ನಾವು ಮುಂದುವರಿದಂತಾಗುವದರಿಂದ ದಯವಿಟ್ಟು ಮಹನೀಯರು ಗಮನಕೊಡಬೇಕಾಗಿ ನನ್ನ ಪ್ರಾರ್ಥನೆ

ಪಿ. ಸಿ. ಚಂಗಪ್ಪ
ಬಿ. ಕೆ. ಗೌರವ ಅಗ್ರಸ್ಯಬರ್.

ಮಹಾಶಯರೇ,

ತಾರೀಕು 31—12—1925ರಲ್ಲಿ ಬೆಳ್ಳಿಯಮಾಡು ಗ್ರಾಮದ ಪುಟ್ಟಿಚಂಡ ನಮ್ಮ ಮನೆಯವರೂ ಮತ್ತು ಊರಿನವರೂ ಸಹ ನನ್ನ ಪಠ್ಯಾತಾಪವನ್ನು ತಿಳಕೊಂಡು ತಮ್ಮ ಕಲಸ ಕಾರ್ಯಗಳನ್ನು ಬಿಟ್ಟುಕೊಂಡು ಒಟ್ಟಾಗಿ ಸೇರಿ ಶಾಸ್ತ್ರರೀತಿ ಪುನಿತನನ್ನಾಗಿ ಮಾಡಿಕೊಂಡು ಬರುವಂತೆ ಒನ್ನು[illegible]ಸಿಂದ ಆಶೀರ್ವದಿಸಿದಕ್ಕೆ ಬಹಳಾ ವಂದಿಸುತ್ತೇನೆ.

ಅದರಂತೆಯೇ ನಾಡಿನವರೂ ನಾಡುತಕ್ಕರೂ ದೇಶದವರೂ ಮತ್ತು ದೇಶತಕ್ಕರೂ ಸಹ ನನ್ನ ತಪ್ಪನ್ನು ಹೋಗಲಾಡಿಸಿಕೊಳ್ಳುವಂತೆ ಆಶೀರ್ವದಿಸಬೇಕಾಗಿ ಬೇಡುತ್ತೇನೆ

ತಮ್ಮ ವಿಧೇಯ
ಪುಟ್ಟಿಚಂಡ ಕಾಳಪ್ಪ

ಮಡಿಕೇರಿ ಹೈಸ್ಕೂಲ್

ಈ ಹೈಸ್ಕೂಲಿನ ಆಡಳಿತವು ಈಗ 2, 3 ವರುಷಗಳಿಂದ ಒಬ್ಬ ಇಂಡಿಯನ್ ಹೆಡ್‌ಮಾಸ್ಟರರ ಕೈಯಲ್ಲಿರುವದು ಎಲ್ಲರಿಗೂ ತಿಳಿದ ಸಂಗತಿಯಾಗಿದೆ. ಇಂಡಿಯನ್ ಹೆಡ್‌ಮಾಸ್ಟರು ಬಂದಮೇಲೆ ಪಾಠಕ್ರಮವು ಎಂದಿನಂತೆ ನಡೆಯುತ್ತಾ ಇದೆ. ಆದರೆ ವಿದ್ಯಾರ್ಥಿಗಳಲ್ಲಿ ಸ್ಟೇಂಡಾರ್ಡ್ ಅಫ್ ನಾಲೆಡ್ಜ್ ಮತ್ತು ಗುಣಕರ್ಮ ಸ್ವಭಾವವು ಬಹಳ ಕಮ್ಮಿ ದರ್ಜೆಯಲ್ಲಿ ಇದೆ ಎಂಬದಾಗಿ ಹಲ ಕಲವು ಉಪಾಧ್ಯಾಯರುಗಳ ಮತ್ತು ವಿದ್ಯಾರ್ಥಿಗಳ ತಂದೆತಾಯಿಗಳ ದೂರು. ಇದಕ್ಕೆ ಕಾರಣವೇನೆಂದು ಕೇಳಿದರೆ ನಮ್ಮ ಈಗಿನ ವೃದ್ಧ ಹೆಡ್ ಮಾಸ್ಟರು ಮೃದು ಹೃದಯವಂತರು. ಇವರಿಗೆ ಸಣ್ಣ ವಿದ್ಯಾರ್ಥಿಗಳ ಮೇಲೆ ಬಹು ಪ್ರೇಮ. ದೊಡ್ಡ ವಿದ್ಯಾರ್ಥಿಗಳ ಭಯ. ಅವರು ಯಾವ ತಪ್ಪು ಮಾಡಿದರೂ ಅವರಿಗೆ ಶಿಕ್ಷಣ ಕೊಡುವದರ ಬದಲು ಅವರನ್ನು ಮುದ್ದಾಡುತ್ತಾರಂತೆ. ಒಂದೊಂದು ಸಮಯ ಅಸಿಸ್ಟಂಟ್ ಮಾಸ್ಟರುಗಳು ತಪ್ಪಿತ ಮಾಡಿದ ವಿದ್ಯಾರ್ಥಿಗಳ ಮೇಲೆ ಹೆಡ್ ಮಾಸ್ಟರಿಗೆ ಫಿರ್ಯಾದು ಹೇಳಿದರೆ ಅವರಿಗೆ ನ್ಯಾಯವಾದ ಶಿಕ್ಷೆ ವಿಧಿಸುವ ಬದಲು ಅವರ ಬೆನ್ನು ಸವರಿ[illegible] ಬಿಡುತ್ತಾರಂತೆ. ಹೀಗೆ ಮಾಡುವದರಿಂದ ವಿದ್ಯಾರ್ಥಿಗಳಿಗೆ ಆ [illegible] ಮೇಲೆ ಉದಾಸೀನವಂತೆ. ವಿದ್ಯಾರ್ಥಿಗಳಿಂದ ಅವರಿಗೆ ಸಲ್ಲಬೇಕಾದ ಮರ್ಯಾದೆ ದೊರೆಯುವದಿಲ್ಲವಂತೆ. ವಿದ್ಯಾರ್ಥಿಗಳು ಸ್ವತಂತ್ರ ಪ್ರಿಯರಾಗಿ ಆಟಪಾಠಗಳಲ್ಲಿ ತಮಗಿಷ್ಟ ಬಂದಂತೆ [illegible] ಇಚ್ಛೆ ವರ್ತಿಸುತ್ತಾರಂತೆ. ಈ ಮೇಲ್ಕಂಡ ದೂರುಗಳನ್ನು ನಾನು ಪರೀಕ್ಷಿಸಿದಲ್ಲಿ ಅದೆಲ್ಲ ನಿಜವಾದುದಾಗಿ ಕಂಡುಬರುತ್ತೆ. ಕಲವು ವಿದ್ಯಾರ್ಥಿಗಳು [illegible] ವ್ಯಾಯಾಮ ಮಾಡುವದನ್ನು ಬಿಟ್ಟು [illegible]ಕರಿಗಾಗಿ ವಾಕಿಂಗ್ ಹೋಗುವದನ್ನೂ ಮತ್ತು [illegible] ಬೆಟ್ಟಗಳಲ್ಲಿ ಸ್ಮೋಕಿಂಗ್ (Smoking) ಪಾರ್ಟಿ ನಡೆಸುವದನ್ನೂ [illegible] ಮಾಡುವದನ್ನು ಸಹ ನಾನು ನೋಡಿರುತ್ತೇನೆ. ಓದುಗಾರಿಕೆಯಲ್ಲಂ ವಿಶೇಷವಾದ ಚಟುವಟಿಕೆ ಕಾಣುವದಿಲ್ಲ. ಅನೇಕರು ಉಪಾಧ್ಯಾಯರುಗಳಿಗೆ ಅಡ್ಡ ಹೆಸರುಗಳನ್ನು ಕೊಟ್ಟು ಹಾಸ್ಯ ಮಾಡುವದನ್ನು ಸಹ ಕೇಳಿರುತ್ತೇನೆ. ಇದಕ್ಕೆಲ್ಲಾ ವಿದ್ಯಾರ್ಥಿಗಳಿಗೆ ನ್ಯಾಯವಾದ ಶಿಕ್ಷಣವು ಇಲ್ಲದೆ ಇರುವದೇ ಕಾರಣವು. ವಿದ್ಯಾರ್ಥಿಗಳಿಗೆ ವಿಶೇಷವಾದ ಸ್ವತಂತ್ರವು ಕೊಟ್ಟದ್ದೇ ಅದರೆ ಅವರ ಮುಂದಿನ ಜೀವಮಾನವನ್ನೇ ಕಡಿಸಿದಂತಾಯಿತು. ವಿದ್ಯೆಯ ಜೊತೆಗೆ ಅವರ ಗುಣಕರ್ಮ ಸ್ವಭಾವವನ್ನು ತಿದ್ದುವದು ಉಪಾಧ್ಯಾಯರುಗಳ ಮತ್ತು ತಂದೆತಾಯಿಗಳ ಕರ್ತವ್ಯವಾಗಿದೆ. ಈಗಿನ ನಮ್ಮ ಹೆಡ್‌ಮಾಸ್ಟರು ಅತೀ ಮೃದು ಹೃದಯ ಮತ್ತು ವೃದ್ಧಾಪ್ಯ ಸಂಪನ್ನರಾಗಿದ್ದಾರೆ. ಈ ಸಂಸಾರದಲ್ಲಿ ಯಾವದೊಂದು ಸಮಾಜದ ವ್ಯವಸ್ಥೆಯು ಚನ್ನಾಗಿ ನಡೆಯಬೇಕಾದರೆ ಅದರ ಮುಖಂಡನು ಆ ಸಮಾಜದ ವ್ಯಕ್ತಿಗಳನ್ನು ತನ್ನ ಹೃದಯದಿಂದ ಪ್ರೀತಿಮಾಡುತ್ತಿದ್ದರೂ ಬಹಿರಂಗದಲ್ಲಿ ಅವರ ಉನ್ನತಿಗೋಸ್ಕರ ಭಯಭೀತಿಯನ್ನುಂಟುಮಾಡುವವನ ಹಾಗೆ ಗಂಭೀರ ಪುರುಷನಾಗಿ ಆಚರಿಸದಿದ್ದರೆ ಆ ಸಮಾಜದ ಕಾರುಬಾರು ಸರಿಯಾಗಿ ನಡೆಯುವದೇ ಅಸಾಧ್ಯ. ಈ ಮೇಲ್ಕಂಡ ಸ್ವಭಾವಗಳು ನಮ್ಮ ಹೆ. ಮಾಸ್ಟರಲ್ಲಿ ಸರಿಯಾಗಿರುವ ಕಾರಣ ಹೈಸ್ಕೂಲಿನಲ್ಲಿ ಡಿಸಿಪ್ಲಿನ್ ಬಹಳ ಹೀನ ಸ್ಥಿತಿಯಲ್ಲಿ ಇರಲು ಕಾರಣವೆಂದು ಹೇಳಬೇಕಾಗಿದೆ. ಇದು ನೋಡುವಾಗ್ಯೆ ನ್ಯಾಯವಾದ ಡಿಸಿಪ್ಲಿನ್ ಇರಬೇಕಾದರೆ ಒಬ್ಬ ಯೂರೋಪಿಯನ್ ಹೆ ಮಾಸ್ಟರು ಅಥವಾ ಅವರ ಸ್ಪೋರ್ಟಿವ್ ಚೈತನ್ಯ (Spirit) ಇರುವ ಇಂಡಿಯನಾದರೂ ನಮ್ಮ ಹೈಸ್ಕೂಲಿನ ಹೆ ಮಾಸ್ಟರಾಗಬೇಕು. ಮೊದಲಿನ ಯೂರೋಪಿಯನ್ ಹೆ ಮಾಸ್ಟರ ಕಾಲದಲ್ಲಿ ವಿದ್ಯಾರ್ಥಿಗಳನ್ನು ಸೋಮಾರಿಗಳಾಗಿ ಅಲೆದಾಡಲಿಕ್ಕೆ ಬಿಡುತ್ತಿರಲಿಲ್ಲ. ಯಾತಕಂದರೆ ಸ್ಕೂಲಿನಲ್ಲಿಯೂ ಮತ್ತು ಆಟದ ಮೈದಾನಗಳಲ್ಲಿಯೂ ಅವರಿಗೆ ತಕ್ಕಷ್ಟು ಕೆಲಸ ಕೊಡುತ್ತಿದ್ದರು. ಕ್ರಿಕೆಟ್, ಹಾಕಿ, ಫುಟ್‌ಬಾಲ್, ಸ್ಕೌಟ್, ರಜದಿವಸಗಳಲ್ಲಿ ಆಗಿಂದಾಗ್ಯೆ ವಿದ್ಯಾರ್ಥಿಗಳನ್ನು ಸುಂದರವಾದ ಬೆಟ್ಟಗುಡ್ಡಗಳಿಗೂ ಮತ್ತು ಇತರ ಪ್ರದೇಶಗಳನ್ನೂ ಸಂದರ್ಶಿಸಿ ಪ್ರಕೃತಿಯ ಮಹಿಮೆಯನ್ನು ವರ್ಣಿಸಿ ಅವರ ಶರೀರಕ್ಕೂ ಬುದ್ಧಿಗೂ ಮತ್ತು ಹೃದಯಕ್ಕೂ ಸಹ ಅಭಿವೃದ್ಧಿಯನ್ನುಂಟುಮಾಡುವ ವಿದ್ಯೆಗಳನ್ನು ತಾವು ಅಭ್ಯಸಿ ತೋರಿಸುತ್ತಿದ್ದರು. ಈಗ ವಿದ್ಯಾರ್ಥಿಗಳಿಗೆ ಮೇಲ್ಕಂಡ ರೀತಿ ಕೆಲಸ ಸಿಕ್ಕದ್ದರಿಂದ ಕಲವರು ಸಾಯಂಕಾಲದ ವೇಳೆಯಲ್ಲಿ ಸೋಮಾರಿಗಳ ಹಾಗೆ ಅಲೆದಾಡುವದರಲ್ಲಿಯೂ ಸ್ಮೋಕಿಂಗ್ (Smoking) ಪಾರ್ಟಿಗಳಲ್ಲಿಯೂ ಉಪಾಧ್ಯಾಯರುಗಳನ್ನು ಹಾಸ್ಯಮಾಡುವದರಲ್ಲಿಯೂ ಸಮಯವನ್ನು ಹಾಳುಮಾಡುತ್ತಾರೆ. ನಮ್ಮ ಹೆ ಮಾಸ್ಟರು ವೃದ್ಧಾಪ್ಯ ಅವಸ್ಥೆಯಲ್ಲಿರುವದರಿಂದ ನಾವು ಅವರಿಂದ ಸ್ಪೋರ್ಟಿವ್ ಸ್ಪಿರಿಟ್ (Sportive Spirit) ನಿರೀಕ್ಷಿಸಲಿಕ್ಕಾಗುವದಿಲ್ಲ. ಅವರು ತಮ್ಮ ಸಾಯಂಕಾಲ ಸಮಯವನ್ನು ಇನ್ಡೋರ್ (Indoor) ಗೇಮಿನಲ್ಲಿ ಕಳೆಯುತ್ತಾರೆ. ಅವರು ಶೀಘ್ರದಲ್ಲಿ [illegible] 3 ತಿಂಗಳು ರಜದಲ್ಲಿ ಹೋಗುವ ವದಂತಿ ಇದೆ. ಇದು ನಿಜವಾದರೆ ಇವರ ಬದಲಿಗೆ ಅಧಿಕಾರಿಗಳಿಗೆ ಯೂರೋಪಿಯನ್ ಹೆ ಮಾಸ್ಟರನ್ನು ನೇಮಕಮಾಡುವದು. ಅಸಾಧ್ಯವಾದರೆ ಯೂರೋಪಿಯನ್ ಚೈತನ್ಯವು ಕಂಡುಬರುವ ಈಗ ತಾನೆ ಇಂಗ್ಲಂಡಿನಿಂದ ಉಪಾಧ್ಯಾಯರು. ಕೆಲಸಕ್ಕೆ ತರಬೇತಾಗಿ ಬಂದಿರುವ ಮ. ಬಿದ್ದಂಡ ಕುಶಾಲಪ್ಪನವರನ್ನು ನೇಮಕಮಾಡಿ ಅವರಲ್ಲಿ ಹೈಸ್ಕೂಲಿನ ಎಲ್ಲಾ ಬಾಬಿನ ಆಡಳಿತಗಳನ್ನು ನಡೆಸಿಕೊಂಡು ಬರುವ ಚೈತನ್ಯವು ಇದೆಯೋ ಎಂಬದನ್ನು ಪರೀಕ್ಷಿಸಬೇಕಾಗಿಯೂ ಹಾಗೆ ಪರೀಕ್ಷಿಸಿದಲ್ಲಿ ಅವರು ಹೆ ಮಾಸ್ಟರ್ ಪದವಿಗೆ ಯೋಗ್ಯರಲ್ಲವೆಂದು ಕಂಡು ಬಂದಲ್ಲಿ ನಮ್ಮ ಹೈಸ್ಕೂಲಿಗೆ ಒಬ್ಬ ಯೂರೋಪಿಯನ್ ಹೆ ಮಾಸ್ಟರನ್ನೇ ನೇಮಕಮಾಡಬೇಕಾಗಿಯೂ ಸಹ ನನ್ನ ಪ್ರಾರ್ಥನೆ. ಅದಲ್ಲದೆ ಈಗಿನ ಹೆ ಮಾಸ್ಟರೇ ಕೆಲವುಕಾಲ ಇದ್ದಲ್ಲಿ 'ಅಜ್ಜಿ ಸಾಕಿದ ಮಗು ಬೊಜ್ಜಿಗೆಂದು' ಹೇಳುವ ಗಾದೆಗೆ ಸರಿಯಾಗುವಲ್ಲಿ ಯಾವ ಸಂದೇಹವೂ ಇಲ್ಲ

ವಿದ್ಯೆ.

ಸತ್ಯಮೇವಜಯತೇ.

(ಪಥ್ಯ ಗುಣವಾಗದಿದ್ದರೆ ಹಣ ಪರತ ಇದ್ದಾ)

ಧಾತುಪೌಷ್ಟಿಕ ಕಾಮೋತ್ತೇಜಕ, ಇಂದ್ರಿಯಸ್ತಂಭಕವಾದ

ಮದನೋದ್ಭವ ಗುಳಿಗೆ.

ಜನನೇಂದ್ರಿಯದ ಶಿಥಿಲತೆ ನಿರ್ಬಲತೆ ನಪುಂಸಕತ್ವ ಕ್ಷೀಣತೆ, ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣವಾಗಿ ಧಾತು ಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ ಇಂದ್ರಿಯ ಸ್ತಂಭಕ, ಗರ್ಮೀ, (ಟಾಕಿ) ಗುಪ್ತಪ್ರದೇಶದ ಮೇಲೆ ಹುಟ್ಟುವ ಎಲ್ಲ ತರಹದ ಬಕ್ಕೆಗಳು, ಗುಳ್ಳೆಗಳು ಪಿತ್ತದ ಬಾಧೆಗಳು, ಕಟಿಶೂಲೆ ವಾತರೋಗವು ಮುಂತಾದವು ಅತಿಶೀಘ್ರ ಗುಣವಾಗಿ ಶರೀರಕ್ಕೆ ನಿರೋಗತ್ವವೂ ಕಾಂತಿಯೂ ರತಿಸುಖಕ್ಕೆ ಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗುತ್ತವೆ. ಕಿಮ್ಮತ್ತು ೬೦ ಗುಳಿಗೆಗಳಿಗೆ ೪ ರೂಪಾಯಿ. ಇದನ್ನು ಸೇವಿಸುವಾಗ್ಯೆ **ನಪುಂಸಕತ್ವಾರಿತೈಲವನ್ನು** ಉಪಯೋಗಿಸಿದರೆ ಉತ್ತಮ. ಕಿಮ್ಮತ್ತು ಬಾಟ್ಲಿ ೧ಕ್ಕೆ ರೂ ೩—೧೨—೦.

ಪ್ರಮೇಹನಿವಾರಿಣಿ—ಇದರ ಸೇವನೆಯಿಂದ ಮೂತ್ರನಾಳದಿಂದ ಕೀವು ಹರಿಯುತ್ತ ಸೋಜಾಕ್ಕ ಕೀವು ಉರಿ, ವಗೈರೆ ಅಗಾಧವಾತ್ರಿಯಿಂದ ಗುಣವಾಗುವದು. ಕಿಮ್ಮತ್ತು ಬಾಟ್ಲಿ ೧ಕ್ಕೆ ರೂ ೩—೮—೦. ಟಪಾಲ ಖರ್ಚ ಬೇರೆ. ಅನುಪಾನಪತ್ರಿಕೆ ಔಷಧದ ಸಂಗಡ

ವಿಳಾಸ—

ವೈದ್ಯ ಜಿ. ಎಲ್ ಜೋಶಿ ಮತ್ತು ಕಂಪನಿ,
ನಂ 6. ಪೋಷ್ಟ ಬನವಾಸಿ, ಉತ್ತರ ಕಾನಡಾ.

1

ಆರೋಗ್ಯ ಚಂದ್ರಿಕೆ.

ಮದ್ರಾಸ್.

ಸಂಪಾದಕರು · ಡಾಕ್ಟರ್ ಯು· ರಾಮರಾವ್,
ಯಮ್ ಎಲ್· ಸಿ. ಯವರು

ಆರೋಗ್ಯ ಚಂದ್ರಿಕೆಯು ಆರೋಗ್ಯ ಮತ್ತು ಚಿಕಿತ್ಸದ ವಿಷಯದಲ್ಲಿ ಸಾಮಾನ್ಯ ಪ್ರಜಾವರ್ಗಕ್ಕೆ ಶಿಕ್ಷಣ ದೊರೆಯುವದಕ್ಕಾಗಿ ಏರ್ಪಡಿಸಿದ ಒಂದು ಸಚಿತ್ರ ಮಾಸಪತ್ರಿಕೆ. ಈ ಮಾಸಪತ್ರಿಕೆಯು 'ಹೆಲ್ತ್' ಎಂಬ ಇಂಗ್ಲಿಷ್ ಮಾಸಪತ್ರಿಕೆಯ ಕನ್ನಡ ಪ್ರತಿಯಾಗಿದೆ. ಆರೋಗ್ಯ ಚಂದ್ರಿಕೆಯಲ್ಲಿ ಪ್ರಸಿದ್ಧರಾದ ಡಾಕ್ಟರುಗಳ ಮತ್ತು ಆಯುರ್ವೇದ ಪಂಡಿತರ ಲೇಖನಗಳು ಆಗಿಂದಾಗ್ಯೆ ಪ್ರಕಟವಾಗುವುದು.

ಆರೋಗ್ಯ ಚಂದ್ರಿಕೆಯಲ್ಲಿರುವ ಲೇಖನಗಳು ಹಳೆಯದಾಗದೆ ಪುನಃ ಪುನಃ ಓದಲು ಅರ್ಹವಾದವುಗಳಾಗಿರುವುವು. ಆರೋಗ್ಯ ಚಂದ್ರಿಕೆಯನ್ನು ತರಿಸಿ ಬೈಂಡು ಮಾಡಿಸಿ ಇಟ್ಟುಕೊಂಡರೆ ಎಲ್ಲರಿಗೂ ಉಪಯುಕ್ತವಾಗುವ ಅಮೂಲ್ಯವಾದ ಗ್ರಂಥವಾಗುವುದು. ಅಂಚೆಯ ವೆಚ್ಚ ಸೇರಿ ಈ ಪತ್ರಿಕೆಯ ಚಂದಾ ಮೊಬಲಗು ವರ್ಷಕ್ಕೆ 1-8-0. ಬಿಡಿ ಪತ್ರಿಕೆ 1ಕ್ಕೆ 0-2-0. ಹಿಂದಿನ ಸಂಚಿಕೆಗಳು ಕೂಡಾ ದೊರೆಯುವವು.

ಪತ್ರವ್ಯವಹಾರಕ್ಕೆ 'ಆರೋಗ್ಯ ಚಂದ್ರಿಕೆ' 323,

ಮನೋಲ್ಲಾಸಿನಿ ತೈಲ

ತಲೆನೋವು ತಲೆ ತಿರುಗುವುದು, ತಲೆಭಾರ ಕಣ್ಣುರಿ, ಕಿವಿಯಿಂದ ಕೀವು ಸೋರುವುದು ಕಿವುಡುತನ, ಕಣ್ಣುನೋವು, ಅಪಸ್ಮಾರ ... ಬಾಧವಿರುವುದು, ನೆನಪು ಶಕ್ತಿ ಕುಂದಿಹೋಗುವುದು ... ಮಿಂಡಿತ ಗುಣವಾಗುತ್ತವೆ. ಉದುರುವ ಕೂದಲನ್ನು ... ವ ಕೂದಲನ್ನು ಬೆಳೆಯಿಸಿ ಕೂದಲಿಗೆ ಸೌಂದರ್ಯವನ್ನೂ ಹೊಳಪನ್ನೂ ಕೊಟ್ಟು ಅಕಾಲಕ್ಕೆ ಹಣ್ಣಾಗುವ ಕೂದಲನ್ನು ತಡೆದು ಕೂದಲು ಇಲ್ಲದ ಸ್ಥಳದಲ್ಲಿ ಹೊಸ ಕೂದಲನ್ನು ಹುಟ್ಟಿಸುತ್ತದೆ. ... ಸೀಸೆಗೆ ರೂ 1, ... ಸೀಸೆಗೆ 2-10-0, ಒಂದು ದೊಡ್ಡ ಸೀಸೆಗೆ ರೂ 2, 3 ... ಸೀಸೆಗೆ 5-8-0

ಚಂದನಾಸವ.— ಇದು ಪ್ರಮೇಹ ಮೂತ್ರಕೃಚ್ಛ್ರ, ಮೂತ್ರ ಹನಿಹನಿಯಾಗಿ ಹೋಗುವುದು, ಮೂತ್ರಕೋಶದ ಉರಿ, ಮೂತ್ರಸಿಂಡಿಗಳ ಉರಿ, ಮೂತ್ರನಾಳದಲ್ಲಿ ಹುಣ್ಣು, ಮೂತ್ರ ಹೊಯ್ಯುವಾಗ ಉರಿಯುವದು, ಮೂತ್ರನಾಳದಿಂದ ಕೀವು ಬರುವುದು, ಮೂತ್ರದಲ್ಲಿ ಧಾತು, ಹುಡಿ ಹೋಗುವುದು, ಆಗಾಗ್ಯೆ ಮೂತ್ರ ಬರುವದು, ಮೂತ್ರ ಹಿಡೆಯಲಿಕ್ಕೆ ಸಾಮರ್ಥ್ಯವಿಲ್ಲದಿರುವುದು, ದೇಹದಲ್ಲಿ ಉರಿ, ಬಾಯಾರಿಕೆ, ಸ್ವಪ್ನಾವಸ್ಥೆ, ಮೂತ್ರನಾಳದಲ್ಲಿ ಚುಚ್ಚುವ ನೋವು ಇವುಗಳಿಗೆ ಪರಮ ಔಷಧಿ. ಗಂಡಸರಿಗೂ ಹೆಂಗಸರಿಗೂ ಇದು ಅತ್ಯುತ್ತಮ. ಬಾಟ್ಲಿಗೆ ರೂ 1-8-0, 3ಕ್ಕೆ ರೂ 4, ಡಜನಿಗೆ ರೂ 15.

ರೋಮನಾಶಿನಿ— ಈ ಹುಡಿಯನ್ನು ನೀರಲ್ಲಿ ಕಲಸಿ ಮೈಯಲ್ಲಿ ರೋಮವಿರುವ ಭಾಗಕ್ಕೆ ಹಚ್ಚಲು ರೋಮವು ಉದುರಿ ಬೀಳುವುದು. ಡಬ್ಬಿ ಒಂದಕ್ಕೆ 6 ಆಣೆ, 3 ಡಬ್ಬಿಗಳಿಗೆ ರೂ 1, 1 ಡಜನಿಗೆ 3-8-0

ದದ್ರುಘ್ನಲೇಪ.— ಇದನ್ನು ಗಜಕರ್ಣದ ಮೇಲೆ 2-3 ಸಾರಿ ಹಾಕಿಸುವಷ್ಟರಲ್ಲಿ ಗುಣ ಬರುತ್ತದೆ. ಡಬ್ಬಿಗೆ ೮ ೦, ೩ ಡಬ್ಬಿಗಳಿಗೆ ರೂ 1 ಡಜನಿಗೆ ರೂ 3-8-0

ನಾರೀಸಖಿ — ಇದು ಸ್ತ್ರೀಯರ ಹೊಟ್ಟೆನೋವು, ಅತ್ಯಧಿಕ ರಕ್ತಸ್ರಾವ, ಬಿಳಿಸ್ರಾವ, ಮುಟ್ಟು ದೋಷಗಳು ಮತ್ತು ಗರ್ಭಕೋಶದ ವ್ಯಾಧಿಗಳನ್ನು ಗುಣ ಮಾಡುತ್ತದೆ. ಸೀಸೆ ಒಂದಕ್ಕೆ ರೂ 2

ಲಂಗ್ಸೆಟೋನು.— ಉಬ್ಬಸ ವಕ್ಷಯದ ಕೆಮ್ಮು, ಅನೇಕ ದಿವಸಗಳಿಂದ ಬರುವ ಕೆಮ್ಮನ್ನೂ ಕಫವನ್ನೂ ಗುಣ ಮಾಡುತ್ತದೆ. ಡಬ್ಬಿ ಒಂದಕ್ಕೆ 2-8-0, 3 ಡಬ್ಬಿಗಳಿಗೆ ರೂ 7

ಅಮೃತಾರಿಷ್ಟ.— ಇದು ಕ್ವಿನೈನು ಬೆರಸದಿರುವ ಉತ್ತಮ ಮಲೇರಿಯಾ ಔಷಧಿ. ಎಲ್ಲಾ ತರದ ಜ್ವರಕ್ಕೆ ಉತ್ತಮ. ಬಾಟ್ಲಿಗೆ ರೂ 1-8-0, 3ಕ್ಕೆ ರೂ 4, ಡಜನಿಗೆ ರೂ 15

ಲೋಹಾಸವ.— ಇದು ಜ್ವರದಿಂದಲೂ ಮತ್ತು ಮಲೇರಿಯದಿಂದುಂಟಾದ ಅಶಕ್ತತೆಗೆ ದಿವ್ಯ ಔಷಧ. 1 ಬಾಟ್ಲಿಗೆ ರೂ. 1-8-0, 3ಕ್ಕೆ ರೂ 4.

ನಮ್ಮ ಕೆಟಲಾಗು ತರಿಸಿ ನೋಡಿರಿ.

ವಿಳಾಸ -ಮನೋಲ್ಲಾಸಿನಿ ಕಂಪೆನಿ,

52-4 9 ಮಂಗಳೂರು, ಕಂಕನಾಡಿ.

ಡಾಕ್ಟರ್ ಎಸ್ ಎನ್ ಅಯ್ಯಂಗಾರ್, ಬಿ ಎ,
ಎಲ್ ಆರ್ ಸಿ. ಪಿ. ಲಂಡ. ಎಸ್. (ಎಡಿನ್‌ಬರ್ಗ್)
ಎಲ್. ಎಫ್ ಪಿ ಅಂಡ್ ಎಸ್., [ಗ್ಲಾಸ್‌ಗೊ]

ದಂತ ವೈದ್ಯರು

ಮಡಿಕೇರಿ ಮಹದೇವ ಪೇಟೆಯಲ್ಲಿ ಕೆ· ಯು· ಯಂ ಸಿದ್ದೀಶ್ವರರ ಅಂಗಡಿಯ ಎದುರಿನ ಮನೆಯಲ್ಲಿ ಇಳಿದುಕೊಂಡಿರುತ್ತಾರೆ. ಇಚ್ಛೈಸುವವರು ಅವರನ್ನು ಇಲ್ಲಿ ಭೇಟಿಮಾಡಬಹುದು.

ಅತ್ಯಂತ ಸುಲಭ ದರದ ಮತ್ತು ಹಿಂದೀಯರಿಂದ ಉತ್ತಮ ತರದಲ್ಲಿ ನಡಿಸಲ್ಪಡುತ್ತಿರುವ **ಲೈಫ್ ಆಫ್ ಇಷ್ಟ್ ಇನ್ಷೂರೆನ್ಸ್ ಕಂಪೆನಿ ಲಿಮಿಟೆಡ್, ಕಲ್ಕತ್ತಾ,** ಇದರಲ್ಲಿ ಜೀವವಿಮೆ ಮಾಡಿ ತುಂಬಾ ಲಾಭ ಹೊಂದಿರಿ.

ಏಜೆಂಟ್—

ಎಸ್. ರಾಮಣ್ಣ,
ಮಹದೇವಪೇಟೆ

"ಲೋಕರಹಸ್ಯ."

ಕೃಷಿಯ ಅತ್ಯುತ್ತಮ ರೀತಿಗಳು, ವ್ಯಾಪಾರದ ವಿಷಯಗಳು, ಹೆಂಗಸರಿಗೆ ಬೇಕಾದ ಗೃಹಕೃತ್ಯದ ವಿಷಯಗಳು, ಹೊಲಿಗೆ, ಮಕ್ಕಳನ್ನು ಸಾಕುವ ವಿಷಯಗಳು, ಬಡವರಿಗೆ ಬೇಕಾದ ಹಣ ಸಂಪಾದನೆಯ ವಿಷಯಗಳು, ರಸಿಕರಿಗೆ ವಿನೋದ ವಿಚಾರ, ರಾಜಕೀಯ ವಿಷಯಗಳು, ಆಯುರ್ವೇದಮುನಾನಿ ವೈದ್ಯ ಸಂಗ್ರಹ, ಪ್ರತಿಯೊಬ್ಬನೂ ತಿಳಿಯಬೇಕಾದ 'ಆ... ವಿಚಾರ, ವಿದ್ಯಾ ವಿಷಯ, ವೇದಾಂತ ವಿಚಾರಗಳಿಂದಲೂ, ತುಂಬಿ ತುಳುಕುತ್ತಿರುವ ಈ ಮಾಸ ಪತ್ರಿಕೆಗೆ ವರ್ಷಕ್ಕೆ ಚಂದಾ ರೂ 3-8-0 ಮಾದರಿ ಸಂಚಿಕೆಗೆ 0-5-0

ಪ್ರತಿ ತಿಂಗಳಲ್ಲೂ 60 ಪುಟಗಳಿಗೆ ಕಡಿಮೆಯಿಲ್ಲದೆ ವಿಷಯಗಳಿರುತ್ತವೆ.

"ಲೋಕರಹಸ್ಯ ಆಫೀಸ,
ವೀರಜೇಂದ್ರಪೇಟೆ.
(ಕೊಡಗ.)

20

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್.
ಲಿಮಿಟೆಡ್ ಕೋ ಆಪರೇಟಿವ್ ಸೊಸೈಟೀಸ್
ಆಕ್ಟಿನ ಪ್ರಕಾರ ರಿಜಿಸ್ಟರಾಗಿದೆ.

		ರೂ.
ಶೇರ್ ಬಂಡವಾಳ	—	50,000
ವಸೂಲಾದ ಶೇರ್ ಬಂಡವಾಳ	—	9890
ಒಪ್ಪೊಂಡ ಠೇವಣಾತಿ	—	90,000

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೆ ಮಾತ್ರ ಸಾಲ ಕೊಡಲ್ಪಡುವದು.

ಒಂದು ವರ್ಷ ಗಡುವಿನ ಠೇವಣಿಗೆ ವಾಯಿದೆಯ ಠೇವಣಾತಿಗಳಿಗೆ ಶೇಕಡ ವಾರ್ಷಿಕ ರೂ 6-4-0ರ ದರದಲ್ಲಿ ಬಡ್ಡಿ ದೊರೆಯುತ್ತೆ. ಕಡಿಮೆ ವಾಯಿದೆಯ ಠೇವಣಾತಿಗಳಿಗೆ ಶೇಕಡ ... ಬಡ್ಡಿ ದೊರೆಯುತ್ತೆ.

ವರ್ಷಕ್ಕೊಂದಾವರ್ತಿ ಕೋ ಆಪರೇಟಿವ್ ರಿಜಿಸ್ಟ್ರಾರವರು ಲೆಕ್ಕ ಆಜಮಾಯಿಸಿ ಮಾಡುತ್ತಾರೆ.

ಪ್ರೆಸಿಡೆಂಟರು, ಟ್ರೆಜರರ್,
ಕೊಂಡಂಪೇರ ಕುಶ್ಯಪ್ಪನವರು, ಯಂ ಭುಜಂಗರಾಯರು
ರಾವ್ ಬಹದ್ದೂರ ಬಿ ಎ., ಬಿ ಎಲ್.,

ಸೆಕ್ರೆಟರಿ.

ಸಿ ಎಚ್ ವೆಂಕಪ್ಪಯ್ಯನವರು, ಬಿ ಎ., ಬಿ. ಎಲ್.,

ತಾರೀಕು 29-8-1925.

ಮುದ್ದಾದ ಪುಸ್ತಕ! ಮುದ್ದಾದ ಮುದ್ರಣ!!

ಶರೀರ ಸುಖ, ಸಂಪತ್ತು, ಐಶ್ವರ್ಯಗಳನ್ನು ಸಂಪಾದಿಸಲು ಕಲೆಗಳನ್ನೂ
ಮತ್ತು ಶರೀರ ಮರ್ಮಶಾಸ್ತ್ರ (ಕಾಮಶಾಸ್ತ್ರ) ವನ್ನೂ ತಿಳಿಸುವ

ಮರ್ಮ ಶಾಸ್ತ್ರ-ಎಂಬ ಕಾಮಶಾಸ್ತ್ರ

ಈ ಪುಸ್ತಕವು ಮೊದಲು ಫ್ರೆಂಚ್, ಇಂಗ್ಲೀಷ್, ಹಿಂದುಸ್ಥಾನಿ, ಸಂಸ್ಕೃತ ಮುಂತಾದ ಭಾಷೆಗಳಲ್ಲಿ ಬಹು ಗುಪ್ತವಾಗಿತ್ತು. ಇದನ್ನು ನಾವು ಪ್ರಯಾಸದಿಂದ ಸಂಪಾದಿಸಿ ಕನ್ನಡಕ್ಕೆ ಭಾಷಾಂತರಿಸಿ (84 ಚಿತ್ರಪಟಗಳ ಸಹಿತ) ಪ್ರಕಟಿಸುವ ಕಾಗದದಲ್ಲಿ ಮುದ್ರಿಸಿ ತಯಾರಿಸಿದ್ದೇವೆ. ಈ ಪುಸ್ತಕದಲ್ಲಿ ಸ್ತ್ರೀ ಪುರುಷರಿಗೆ ಬೇಕಾದ ಎಲ್ಲಾ ಮರ್ಮ ರಹಸ್ಯಗಳೂ, ಸ್ತ್ರೀ ಪುರುಷರು ಅನ್ಯೋನ್ಯವಾಗಿ ನಡೆದುಕೊಳ್ಳುವ ಮಾರ್ಗ, ಸ್ತ್ರೀ ಪುರುಷರಿಗೆ ಉಂಟಾಗುವ ಎಲ್ಲಾ ತರದ ಮರ್ಮಸ್ಥಾನ ರೋಗಗಳು ಮತ್ತು ಅಂಥಾ ವ್ಯಾಧಿಗಳನ್ನು ಗುಣಪಡಿಸಿಕೊಳ್ಳುವ ಚಿಕಿತ್ಸೆಗಳೂ ಇನ್ನು ಅನೇಕ ತರದ ಮರ್ಮರಹಸ್ಯಗಳು ಚಿತ್ರಪಟಗಳ ಸಹಿತ ತುಂಬಿರುವದು. ಈ ಪುಸ್ತಕದ ಹೆಸರನ್ನು ಕೇಳಿದ ಮಾತ್ರಕ್ಕೆ ಸಂತೋಷವಾಗುವದು. ಆದರೆ ಓದಲಿಕ್ಕೆ ಯಾರಿಗೆ ತಾನೇ ಸಂತೋಷವಾಗಲಾರದು.

ಕ್ರಯ ಪುಸ್ತಕ ಒಂದಕ್ಕೆ ಒಂದೇ ಒಂದು ರೂಪಾಯಿ ರೂ. 1-0-0

T Ramachander Rao & Co, ಟಿ. ರಾಮಚಂದ್ರರಾವ್ ಅಂಡ್ ಕೊ,
Post Box No 232, ಪೋಸ್ಟ್ ಬಾಕ್ಸ್ ನಂ· 232·
Madras ಮದ್ರಾಸ್.

52-4

A Lot for SELECTION of Single Barrel Breach Loading Guns at LOWEST PRICE EVER OFFERED.



Original Browning S B B L 12 bore Take-Down Hammerless Automatic Ejector Gun, with safety catch .. ..Price Rs. 140 -

Do do but by Winchester or Remington. · .... Price, Rs 100 -

Westinghouse or Remington S B. B L 12 bore Six Shots Hammerless Repeating gun, 30 inches barrel with Safety catch ... Price Rs 150/

German S. B B L 12 bore Hammerless Ejector Gun, 32 inches German Steel Barrel with safety catch .. . Price, Rs 65

Continental Make Do Price, Rs 55 -

Webley & Scott's S. B. B. L. 12 bore Semi Hammerless Ejector Gun, 32 inches Webley's Steel Barrel, ... Price, Rs. 75 -

The above Guns can be had in 16, 20, & 410 bore Same as above in 12 bore **Special "Duck Gun"** 36 inches barrel .... . . Price, Rs 80

W. W Greener's "Gaffer" S B B L 12 bore Martini Action Ejector Gun, 26 inches Greener's Steel Barrel .... .. Price, Rs 75

W. W. Greener's as above but **Long Range "Duck Gun"** with 32 inches barrel, and chamber for 2½ inches to 3 inches case .... Price, Rs 90 -

Midland's "Knock-About" S. B B L Ejector Hammer Gun 32 inches barrel. . ... Price, Rs. 55 -

Continental Make S. B B. L. folding Pattern Hammer Gun, 32 inches barrel beautifully engraved and carved..... . . .... Price, Rs. 45

J. Steven's 12 bore Ejector Hammer Gun, 32 inches Steel barrel..... .... Price, Rs. 45 -

Do do. "Dread Naught" with heavy Breech..... ....Price, Rs. 50/-

Any of the above of J Steven's **Special Duck Gun** with 36 inches barrel. Price, Rs. 5/- Extra·

ENQUIRIES SOLICITED.

THE BOMBAY ARMOURY,

331, ABDUL REHMAN STREET,

11

MY SCIENTIFIC SYSTEM OF GRADUATED PHYSICAL CULTURE

SENT FREE TO EVERY ONE

This will show you some of my remarkable achievements in Health building exercises many pages with nice photographs of myself and a number of my pupils. Read what they say about my system. Don't take my word for it. This book will be an impetus an inspiration to every young man. All I ask is the price of postage two annas. Remember this does not obligate you in any way, so don't delay one minute in your life. Write for this big book now while it is on your mind.

Prof. M. V. Krishna Rao,
P O Basavangudi, G I P
(BANGALORE CITY)

ಆಂಧ್ರ ಆಯುರ್ವೇದಿಕ್ ಫಾರ್ಮಸಿ
ಬ್ರಾಂಚ್ ಬೆಂಗಳೂರು ಸಿಟಿ

ಚ್ಯವನಪ್ರಾಸ ಲೇಹ.

ಇದು ಸರ್ವೋತ್ಕೃಷ್ಟವಾದ [illegible] ತಯಾರಿಸಲ್ಪಟ್ಟ ಆಯುರ್ವೇದ [illegible] ಔಷಧವು [illegible] ವಿಶೇಷವಾಗಿ [illegible] ಪ್ರಯೋಗಿಸಿ [illegible] ಮಾಡುವವರೂ ಈ ಲೇಹವನ್ನು ಸೇವಿಸಿದರೆ ವಿಶೇಷವಾಗಿ ಬುದ್ಧಿಶಕ್ತಿಯನ್ನೂ [illegible] ದೀರ್ಘಕಾಲದ ವ್ಯಾಧಿಯಿಂದಾಗಲೀ [illegible] ಸ್ವಭಾವ ಶಕ್ತಿಯ [illegible] ಕಾಂತಿಯು [illegible] ವಿಕಾರಗಳಿಂದ [illegible] ಈ ಲೇಹವನ್ನು ಸೇವಿಸಿದರೆ ಈ ತರದ [illegible] ದೇಹಕ್ಕೂ ಮನಸ್ಸಿಗೂ [illegible] ನವಚೈತನ್ಯವನ್ನು [illegible] ಆರೋಗ್ಯದೃಢಶರೀರವುಳ್ಳವರಾಗಿ [illegible] ಉಬ್ಬಸ [illegible] ಕ್ಷಯರೋಗ [illegible] ರೂಪಾಯಿ [illegible]

ಎಲ್ಲಾ ಕಡೆಯಲ್ಲಿಯೂ ಏಜಂಟರು ಬೇಕು.

[illegible]

ಟಿ. ಸಿ. ಎಸ್. ಮುನಿಯಂ ಅಂಡ್ ಕೋ,
[illegible]
16—14

ಕಿರ್ಲೋಸ್ಕರ ಗಾಣಗಳು.

ಈ ತರಗಿನ ಕಬ್ಬಿನ ಗಾಣಗಳು ನಮ್ಮ ಕಾರ್ಖಾನೆಯಲ್ಲಿ ತಯಾರಾಗುತ್ತವೆ

೧ ಕಿರ್ಲೋಸ್ಕರ ನಂ ೫
೨ ' ಕಿಸಾನ '
೩ ' ಕಮಲ ಚರಕ "

ಇವುಗಳ ಸವಿಸ್ತಾರ ಸಂಗತಿ ಒಗ್ಗೆ ಹಾಗೂ ಬೆಲೆಯ ಬಗ್ಗೆ ಕೂಡಲೇ ತಿಳಿದುಕೊಳ್ಳಿರಿ

ಕರ್ನಾಟಕ ಶೇತ್ಕಾರರ ಉನ್ನತಿಗೋಸ್ಕರ

ಕಿರ್ಲೋಸ್ಕರ ವಾರ್ತೆ,

ಎಂಬ ತಿಳಿಗನ್ನಡ ಮಾಸ ಪತ್ರಿಕೆಯನ್ನು ಪ್ರಕಟಿಸುತ್ತೇವೆ ವಾ ಚ ೧ ರೂ. ಮಾದರಿ ಸಂಚಿಕ ಪುಕ್ಕಟೆ

ಕಿರ್ಲೋಸ್ಕರ ಬಂಧು, ಲಿಮಿಟೆಡ್.
ಕಿರ್ಲೋಸ್ಕರವಾಡಿ,
16—12 ಜಿ. ಸಾತಾರ್.

ಲೋಕಪ್ರಸಿದ್ಧವಾದ! ಅನುಭವಸಿದ್ಧವಾದ!

[illegible] ರಕ್ತವೃದ್ಧಿ ವಾತ [illegible] ಜೀವನಕ್ಕೆ [illegible] ಆರೋಗ್ಯದಾಯಿ [illegible]

[illegible]] ಅಗಸ್ತ್ಯ [[illegible]

ಮನ್ಮಥ ಚಿಂತಾಮಣಿ ಲೇಹ

ರಿಜಿಸ್ಟರ್ ಆದದ್ದು

ಅಬಾಲವೃದ್ಧ ಸ್ತ್ರೀ ಪುರುಷರ ಅನೇಕ ರೋಗಗಳ [illegible] ವಿಕಾರ [illegible] ಸ್ವಪ್ನೇಂದ್ರಿಯವಾಗುವ ಬಾಲಕರಿಗೂ [illegible] ಉಪಯೋಗವುಳ್ಳ [illegible] ಔಷಧಿ 1ಸೇರು 48ದಿವಸ ಸೇವಿಸಬಹುದು. ನಂ (1) 1ಸೇರು ಡಬ್ಬಿ 1ಕ್ಕೆ ರೂಪಾಯಿ 3—0—0 ½ಸೇರು ಡಬ್ಬಿ 1ಕ್ಕೆ ರೂಪಾಯಿ 1—9— ನಂ (2) 1ಸೇರು ಡಬ್ಬಿ 1ಕ್ಕೆ ರೂಪಾಯಿ 2—0—0 ½ ಸೇರು ಡಬ್ಬಿ 1ಕ್ಕೆ 1—1—0 ವಿ ಪಿ ಖರ್ಚ ಪ್ರತ್ಯೇಕ. ವಿಶೇಷ ಮಾಹಿತಿಗೆ ಬರೆಕೊಳ್ಳಿರಿ

ವಿಳಾಸ—ದೇವಣ್ಣ ನಾರಾಯಣಸೆಟ್,
ಗೋರಿಕಟ್ಟಾ,
ಮಂಗಳೂರು,
5—20 ದ ಕ

೧೦೦೦ ರೂಪಾಯಿಗಳ ಬಹುಮಾನ.

ಲೋಕಪ್ರಸಿದ್ಧವಾದ ಸಾಲಂಮಿಸ್ರಿ ಮುರಬ್ಬಾ

ನಮ್ಮ ಟ್ರೇಡ್ ಮಾರ್ಕನ್ನು ನೋಡಿ ಈ ಔಷಧ ತೆಗೆದುಕೊಳ್ಳಿರಿ.



[illegible] ಇದ್ದರೆ ಸ್ವಪ್ನೇಂದ್ರಿಯವಾದರೂ, ಸ್ತ್ರೀ ಸಂಪರ್ಕ ಮೊದಲೇ [illegible] ಶರೀರಕ್ಕೆ ಆರೋಗ್ಯವನ್ನು ದಾರ್ಢ್ಯ ತೇಜಸ್ಸು ಆಯಸ್ಸು [illegible] ಇದು ದಿವ್ಯ ಔಷಧವು [illegible] ಪ್ರಾಂತ್ಯದಲ್ಲಿ [illegible]

ಈ ಔಷಧದಿಂದ [illegible] ಸಿಂಗಪೂರ, ಸಿಲೋನ್, [illegible] ಮತ್ತು ಇಂಡಿಯಾದೇಶದಲ್ಲಿ ಎಲ್ಲಾ ಸ್ಥಳಗಳಿಂದ [illegible] ಪತ್ರಿಕೆಗಳನ್ನು [illegible] ಇವುಗಳ ಸರಿಯನ್ನು [illegible] ನಾವು ಹೀಗೆ ಕೊಡುವ [illegible]

೧೫ ದಿನ ಸೇವಿಸಿದಲ್ಲಿ [illegible] ದಿನಗಳು [illegible] ಪೂರ್ಣವಾಗಿ ಗುಣವನ್ನುಂಟು ಮಾಡುವವು [illegible] ಒಂದಾವರ್ತಿ [illegible] ಮಾಡಿ ನೋಡಿದಲ್ಲಿ ಖಾತ್ರಿ ಉಂಟಾಗುತ್ತೆ.

ಕ್ರಯ ಡಬ್ಬಿ ೧ಕ್ಕೆ ರೂ ೩—೦—೦ ಥೋಕ ಖರೀದಿ ೧೦೦ರ ೩ ಡಬ್ಬಿಗಳಿಗೆ ೦—೮—೦ ಆಣೆ. ಏಜಂಟರುಗಳು ಎಲ್ಲಾ ಸ್ಥಳಗಳಲ್ಲಿಯೂ ಆವಶ್ಯಕವಾಗಿರುತ್ತೆ [illegible] ಪತ್ರ ಕಳುಹಿಸಬಹುದು. [illegible] ಕೂಡಲೇ ಈ ಪತ್ರಿಕೆಯ ಹೆಸರನ್ನು ಬರೆಯಬೇಕು.

ಟೆಲಿಗ್ರಾಫ್ ಅಡ್ರೆಸ್. ಮಿಸ್ರಿ ಬೆಂಗಳೂರು ಸಿಟಿ } ಡಿ ಮುನ್ನಾಲಾಲ್, ಡಿಲ್ಲಿ ನೇಟಿವ್ ವೈದ್ಯರು,
ಸಾಲಂಮಿಸ್ರಿ ಮುರಬ್ಬ ಡಿಪ್ಪೋ,
12—8 ಬೆಂಗಳೂರು ಸಿಟಿ

ಕರ್ಣಾಟಕ

ಜಿಗ್ಯುಲಾ [illegible]

ಚಳಿಜ್ವರ, ಮಲೇರಿಯ ಜ್ವರ ಇನ್‌ಫ್ಲುಯೆಂಝಾ ಆಹು ಜ್ವರ, ಬೊಡನಾದವುಗಳ ಮೇಲೆ ಅಪ್ರತಿಮವಾದ ಔಷಧವು

ಬೆಲೆ ಬಾಟ್ಲಿಯೊಂದಕ್ಕೆ ರು. ೦—೫—೦
ಟಪ್ಪಾಲು ಖರ್ಚು ಬೇರೆ
ಡಜನ್ ಬಾಟ್ಲಿಗಳಿಗೆ ಟಪ್ಪಾಲುವೆಚ್ಚ ಸಹ ರು. ೯—೩—೦

ಏಜಂಟರು ಬೇಕು, ಕೊಡಗಿನ ಸ್ಕೂಲ್ಮಾಸ್ತರರುಗಳು ತಮ್ಮೂರಿನ ಮೂರು ಜನ ಔಷಧದ ವ್ಯಾಪಾರಿಗಳ ಹೆಸರನ್ನು ತಿಳಿಸಿದಲ್ಲಿ ಅಂದವಾದ ಬ್ಲಾಟಿಂಗ್ ಪೇಪರು ಪುಕ್ಕಟೆ

12—11 ಕರ್ಣಾಟಕ ಬ್ರದರ್ಸ್,
ಗಿರಗಾಂವ, ಮುಂಬಾಯಿ.

ಇದು ಒಳ್ಳೆ ಸಮಯ!

ಹಂಚುಗಳು.

ಈಗಾಗಲೇ ವಿರಾಜಪೇಟೆಯಲ್ಲಿ ಸಾಜೂಕಾದ ಎಲ್ಲಾ ತರದ ಹಂಚುಗಳು, ಅಂದರೆ, ಹಂಚು, ಮೂಲೆ ಹಂಚು, ಪಾತಿಹಂಚು, ಕೋಗಿಸ ಕು, ನುಹಂಚು, ಸಗ್ಗರೆ ಓಲ್ಲಾ ಹಂಚುಗ [illegible] ಕೂಡಲೇ ಹಂಚು ಬೇಕಾದವರು ವಿರಾಜಪೇಟೆಯಲ್ಲಿ ಈ ಕಳಗ [illegible] ಬರೆದ ಕೊಳ್ಳಬಹುದು [illegible] ಹಂಚುಗಳ ಸ್ಯಾಂಪಲನ್ನು ಸಹ [illegible] ಕ್ರಯಕ್ಕೂ ವಿವರಕ್ಕೂ ಪತ್ರಿಕೆಗೂ ಈ ಕೆಳಗಿನ [illegible] ಬರೆದು ಕೊಳ್ಳಿ

ವಿರಾಜಪೇಟೆ ಕೆ. ಪಿ ಚಿನ್ನಪ್ಪ,
12—3 ಸಾದಿ ಭಂಡಾರ

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್, ಕೊ ಆಪರೇಟಿವ್ ಸೊಸೈಟೀಸ್ ಆಕ್ಟಿನ ಪ್ರಕಾರ ರಿಜಿಸ್ಟರಾಗಿದೆ.

		ರೂ
ಶೇರ್ ಬಂಡವಾಳ	—	50,000
ವಸೂಲಾದ ಶೇರ್ ಮೊಬಲಗು	—	3890
ಜಮಾ ಬಂದ ಠೇವಣಾತಿ	—	90,600

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲಕೊಡತಕ್ಕದ್ದು.

ಒಂದು ವರ್ಷ ವಾಯಿದೆ ಅಥವ ಹೆಚ್ಚಿನ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ ರೂ ೬-೪-೦ರ ದರವಲ್ಲಿ ಬಡ್ಡಿ ದೊರೆಯುತ್ತೆ. ಕಡಿಮೆ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ ೪ರ ಬಡ್ಡಿ ದೊರೆಯುತ್ತೆ.

ವರ್ಷಕ್ಕೊಂದಾವರ್ತಿ ಕೊ ಆಪರೇಟಿವ್ ರಿಜಿಸ್ಟ್ರಾರವರು ಲೆಕ್ಕ ಆಡಿಟು ಮಾಡುತ್ತಾರೆ.

ಪ್ರಸಿಡೆಂಟರು, ಟ್ರಿಜರರ್.
ಕೂಡಂಡರ ಕುಟ್ಟಯ್ಯನವರು, ಯಂ ಭುಜಂಗರಾಯರು
ರಾಯ್ ಬಹದ್ದೂರ್. ಬಿ.ಎ, ಬಿ ಎಲ್

ಸಕ್ರೆಟರಿ
ಸಿ ಯನ್. ವೆಂಕಪ್ಪಯ್ಯನವರು, ಬಿ ಎ , ಬಿ ಎಲ್.
ತಾರೀಕು 29—8—1925.

ಮಾರಾಟಕ್ಕೆ.

ಪೊನ್ನಂಪೇಟೆ ಸ್ಕೂಲ್ ಬಳಿ ಒಟ್ಟೆ ವಗ್ಯರೆ ಸಾಮಾನು ಮಾರಾಟಕ್ಕ ಇಟ್ಟಿರುವ ಮಹಡಿ ಮನೆ, ಅದರಲ್ಲಿರುವ ಪೂರಾ ಸಾಮಾನು ಮತ್ತು ಹೊರಮನ ಹಿತ್ತಲು ಸಮೇತ

(2) ಪೊನ್ನಂಪೇಟೆ ದೊಡ್ಡ ಬೀದಿ ಬಲವಾತ್ಯದಲ್ಲೂ ವಾಸಕ್ಕೂ ಮತ್ತು ವ್ಯಾಪಾರಕ್ಕೂ ಯೋಗ್ಯವಾದ ಮಹಡಿ ಮನೆ ಮತ್ತು ಹೊರಮನೆಗಳು ಸಹ.

ಖಾಯಿಷ್‌ದಾರರು ಕ್ರಯ ಮೊಬಲಿಗೆ ಮತ್ತು ಹೆಚ್ಚಿನ ಸಂಗತಿಗೆ ಈ ಕೆಳಗಿನ ವಿಳಾಸಕ್ಕೆ ಬರೆಕೊಳ್ಳಬಹುದು.

U E Ahamed,
General Merchant &
Commission agent,
12-10 Ponnampett

Printed & published by Kodanda Appayya, R B., Chairman, Board of Directors, at ' Kodagu Press Mercara for " Kodagu Ltd

Reg. No. M. 1550.
If not delivered please return to
KODAGU" OFFICE. MERCARA

ಕೊಡಗು.

ಶಕ್ತ್ಯಾನ ಭೂತದಯಾಚ ವಿದ್ಯಾ ನೀತಿ ಪ್ರಯುಕ್ತಿತಾ || ಐಕ್ಯಮತ್ಯೇನ ದೇಶಾನಾಂ ಸುಸ್ಥಿರಾ ರಾಜ್ಯ ಸಂಪದಾ |

ಸಂಪಾದಕ—ಕಂದ್ಯಂಡ ಐ. ಬೆಳ್ಯಪ್ಪ

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವದು.

ಸಂಪುಟ ೫] ಕೊಡಗು, ಸ್ ೧೯೨೬ನೇ ಇಸವಿ ಜನವರಿ ತಾರೀಖು ೨೨ನೇ ಶುಕ್ರವಾರ [ಸಂಚಿಕೆ ೩೨

ಒಂದೇ ಮೂರು ರೂಪಾಯಿಗಳಲ್ಲಿ!

ಟಿಕ್=ಟಾಕ್ (ರಿಜಿಸ್ಟರ್ಡ್).



ಎಂಬ ಗಡಿಯಾರವನ್ನು ನಿಮಗೆ [illegible]ತ್ತೇವೆ ಇ[illegible] ಆರಾರು ಗಂಟೆಯನ್ನು ತೋರಿಸುವದು ಇದಕ್ಕೆ ಬೀಗ ಕೊಡಬೇಕಾಗಿಲ್ಲ ಇದರಲ್ಲಿ ಕಾಣುತ್ತಿರುವ ಗುಂಡನ್ನು ಮೇಲಕ್ಕೆಳೆದರೆ ಸಾಕು ತನ್ನಷ್ಟಕ್ಕೆ ತಾನೇ ಸರಿಯಾದ ಕಾಲವನ್ನು ತೋರಿಸುವದು. ಇವತ್ತೇ ತರಿಸಿಕೊಳ್ಳಿರಿ

ಹೀಟರ ವಾಚ ಕಂಪೆನಿ,
ಪೋಸ್ಟು ಬಾಕ್ಸ ನಂಬರ 27
ಮದ್ರಾಸ್.

18 ಕಾರೆಟ್ಸ್ ರೋಲ್ಡ್‌ಗೋಲ್ಡ್ ಭಂಗಾರದ ಕೈಗಡಿಯಾರವನ್ನು ಕೊಳ್ಳುವವರಿಗೆ

ಮೋಡರ್ನ್ ರೆಗ್ಯುಲೇಟರ್

ಎಂಬ ಗೋಡೆಗೆ ತಗಲಿರುವ ಗಡಿಯಾರವು ಮ[illegible]ತ್ಯಾಗಿ ಸಿಕ್ಕುವದು



ಈ ಕೈಗಡಿಯಾರವು ಭಂಗಾರಕ್ಕೆ ಸರಿಸಮಾನವಾಗಿದೆ ಬಿರಾರು ಗಂಟೆಯನ್ನು ತೋರಿಸುವದು ಅತ್ಯುತ್ತಮವಾದ ಗಟ್ಟಿ ಸಾಮಾನುಗಳಿಂದ ತಯಾರಿಸಿದ್ದು ಇವಕ್ಕೆ 3 ವರ್ಷಗಳ ಗ್ಯಾರಂಟಿ ಕೂಡ ಇವೆ.

ರೆಗ್ಯುಲೇಟರ್ ಮತ್ತು ಕೈಗಡಿಯಾರ	ರೂ.	10—0—0
ಕೈಗಡಿಯಾರ ಮಾತ್ರ	ರೂ.	7—0—0
ರೆಗ್ಯುಲೇಟರ್ ಗಡಿಯಾರ	ರೂ.	5—0—0

ಕ್ಯಾಪ್‌ಟನ್ ವಾಚ್ ಕಂಪೆನಿ,
12—12 ನಂ. 265 ಮದ್ರಾಸು.

ಪ್ರಕಟಣೆ.

ಒಂದು ಕಡೆ ಇಂಗ್ಲೀಷಿನಲ್ಲಿಯೂ, ಇನ್ನೊಂದು ಕಡೆ ಕನ್ನಡದಲ್ಲಿಯೂ ಪ್ರಿಂಟಾಗಿರುವ ಕಾಫಿ ತೋಟದ ಆಳುಗಳ ದ್ವಿಭಾಷಾ ಕಂಟ್ರಾಕ್ಟು ಎಗ್ರಿಮೆಂಟು ಫಾರಮುಗಳೂ ಮತ್ತು ಅಪ್ಲಿಕೇಶನ್ (complaint) ಫಾರಂಗಳೂ ಸಹ ಮಾರಾಟಕ್ಕೆ ತಯಾರಿವೆ ಬೇಕಾದವರು 'ಕೊಡಗು [illegible]' ನಿಂದ ಪಡಕೊಳ್ಳಬಹುದು.

ಮಡಿಕೇರಿ ಮ್ಯಾನೇಜರ್,
17-9-24. 'ಕೊಡಗು' ಆಫೀಸ್.

NOTICE.

ನಮ್ಮಲ್ಲಿ ಎಲ್ಲಾ ತರದ ಪ್ರಿಂಟ್ ಬೋಯಿಂಗ [illegible] ಮತ್ತು ಕಾಫಿ ಕೋವಿಗಳು ಮಾರಾಟಕ್ಕೆ ಇಟ್ಟಿವೆ. ಕೋವಿ ಮೂವಿವ್ವು ಬಹಳ ಒಳ್ಳೇ ತರದ [illegible] ವಿಸ್ ವಿಸ್ ಅನೇಕ ಕೋವಿಗಳು ಮಾರಾಟವಾಗುತ್ತಾ ಇವೆ.

ಈಗಾಗಲೇ ಕೆಲವು ಬಗೆ [illegible] ರಿಪೇರಿಯಾಗಿ [illegible] ಪ್ರಿಂಟ್ [illegible]ದ ತೆಗೆಯುವ ಕೋವಿಗಳಲ್ಲಿ ಗುಂಡು [illegible] ಯಾವುದಾದರೂ ಕುಂದಿರ ಬಂದಲ್ಲಿ, ಕೂಡ ಲೇ ತಿಳಿಸಿದಲ್ಲಿ ಅತೀ ಜಾಗ್ರತೆಯಿಂದ ತಕ್ಕ ಏರ್ಪಾಡ ಮಾಡಲಾಗ ವುದು.

ಸ್ಪೆನ ಸರ್ ಮತ್ತು ಕಂಪನಿ ಲಿಮಿಟೆಡ್)

Spencer & Co. Ltd,
2-12 MERCARA POLLIBETTA.

ಮಹನೀಯರೇ,

1923ನ ಇಸವಿಯಲ್ಲಿ ವೀರರಾಜೇಂದ್ರಪೇಟೆಯಲ್ಲಿ ತೆರೆದ ನಮ್ಮ ವೈದ್ಯಶಾಲೆಯ ಶಾಖೆಯಲ್ಲಿ ಅನೇಕ ದುಸ್ಸಾಧ್ಯವಾದ ಕಾಯಿಲೆಗಳನ್ನು ಗುಣಪಡಿಸಿ ಹೆಸರ ಪಾ ಡೆದಿರುವ ನಮ್ಮ ಕಂಪೆನಿಯ ಮತ್ತೊಂದು ಶಾಖೆಯು ಈಗಾಗಲೇ ಸೋಮವಾರಪೇಟೆಯಲ್ಲಿ ತೆರೆಯಲ್ಪಟ್ಟಿದೆ

ಕೃಷ್ಣ ನಂಬೀಶನ್ ಮತ್ತು ನಾರಾಯಣ ನಂಬೀಶ ಎಂಬ ಹೆಸರುಗಳುಳ್ಳ ನಮ್ಮ ಪ್ರಧಾನ ವೈದ್ಯರುಗ ಳು ಇಬ್ಬರೂ ಸಹ ಒಂದೊಂದು ಶಾಖೆಯಲ್ಲಿ ಯಾವಾಗ ಲೂ ಇರುತ್ತಾರೆ.

ಈ ವೈದ್ಯರುಗಳು ಇಂಗ್ಲಿಷ ವ್ಯುತ್ಪತ್ತಿಯನ್ನು ಕೊಚ್ಚಿನ್ ರತ್ನಶಿಂಬ ಬಿರುದನ್ನು ಹೊಂದಿದವರಾಗಿಯೂ ಕ[illegible] ಸಂಸ್ಥಾನದ ರಾಜವಂಶದ [illegible] ವೈದ್ಯರಾ ಗಿಯೂ ಸುಪ್ರಸಿದ್ಧ ಹೆಸರುವಾಸಿಯನ್ನು ಪಡೆದವರಾ [illegible] ಇರುವ ಇ ಟಿ ನಾರಾಯಣ ಮೂಸ್ ಎಂ ಬ ಮಹಾನುಭಾವರ ಕೈಕೆಳಗೆ ಹೆಚ್ಚು ವರ್ಷಗಳಿದ್ದು ಪಾಂಡಿತ್ಯವನ್ನೂ ಪರಿಚಯವನ್ನೂ ಪಡೆದವರಾಗಿಯೂ ಇದ್ದಾರೆ.

ಇವರಲ್ಲಿನ ಎಲ್ಲಾ ಔಷಧಗಳಿಗೆ ಮಲಬಾರಿನ ಎಲ್ಲಾ ವೈದ್ಯಶಾಲೆಗಳ ಔಷಧಗಳ ಚಾರ್ಜಿಗಿಂತಲೂ ಕಡಿಮೆ ಯಾಗಿದೆ.

ನಂಬೀಶನ್ ಮತ್ತು ಕಂಪೆನಿ,
ಆಯುರ್ವೇದಿಕ್ ಪ್ರೈವೇಟ್ ಡಿಸ್ಪೆನ್ಸರಿ.
ಕಲ್ಲೂರು, ವೀರಾಜಪೇಟೆ ಮತ್ತು
52 43 ಸೋಮವಾರಪೇಟೆ.

ಪ್ರಕಟಣೆ.

ನಮ್ಮ ಅಂದವಾದ ಹೊಸ ಅಕ್ಷರಗಳು ಬಂದು ತಲಪಿರು ವುದರಿಂದ, ಲೆಟರ್ ಹೆಡ್ಸ್,' 'ವಿಸಿಟಿಂಗ್ ಕಾರ್ಡ್ಸ್' ಆ ಮಂತ್ರಣಗಳು (ಇನ್ವಿಟೇಶನ್) ಮೊದಲಾದ ಪ್ರಿಂಟಿಂಗ್ ಕೆ ಲಸಗಳನ್ನು ಇಂಗ್ಲಿಷ್ ಮತ್ತು ಕನ್ನಡದಲ್ಲಿ ಚಂದವಾಗಿಯೂ ಕಡಿಮೆ ಚಾರ್ಜಿನಲ್ಲಿಯೂ ನಿಯಮಿತ ಕಾಲದಲ್ಲಿಯೂ ಮಾ ಡಿಕೊಡಲು ತಯಾರಾಗಿದ್ದೇವೆ

ಮಡಿಕೇರಿ. ಮ್ಯಾನೇಜರ್,
'ಕೊಡಗು' ಲಿಮಿಟೆಡ್

ಬೇಟೆಗೆ ಅವಶ್ಯವಾದ

ಕೋವಿಮದ್ದು ಪೌಂಡಿಗೆ ರೂ. ೨-೪-೦

ಕೇಪು ಕೋವಿನ ಕೇಪುಗಳು, ೨೫೦ರುಳ ಪೆಟ್ಟಿಗೆಗೆ ೧-೪-೦

ಚಿಲ್ಲು ಪೌಂಡು ೧ಕ್ಕೆ ೦-೬-೦.

ತುಂಬಿದ ೧೦೦ ತೋಟೆಕ್ಕೆ (Eleyes) ೧೨-೦-೦.



ಆರ್ಡರು ಕಳುಹಿಸುವಾಗ್ಯೂ ಯಾವಾಗಲೂ ರೂ. 5 ಅಡ್ವಾನ್ಸು ಕಳುಹಿಸತಕ್ಕದ್ದು. ಒಮ್ಮ ಹಿಡುವಳಿದಾರರು ಆರ್ಡರು ಕಳುಹಿಸುವಾಗ ಮೊದಲೇ ನಾರಿವಪತ್ರ ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರವರಿಂದ ವಿನಾಯತಿ (ಎಕ್ಸೆಂಪ್ಶನ) ಸರ್ಟಿಫಿಕೇಟನ್ನು ಕಳುಹಿಸಬೇಕು ತಪ್ಪಿದಲ್ಲಿ ನಿಮಗಾಗಿ ನಾವೇ ಆ ಸರ್ಟಿಫಿಕೇಟನ್ನು ಒದಗಿಸಿಕೊಳ್ಳಲು ತಯಾರಾಗಿದ್ದೇವೆ.

ಈ ಕೆಳಗಿನ ವಿಳಾಸಕ್ಕೆ ಆರ್ಡರುಗಳನ್ನೂ, ಪತ್ರವ್ಯವಹಾರಗಳನ್ನೂ ಇಂಗ್ಲಿಷಿನಲ್ಲಿ ನಡಿಸತಕ್ಕದ್ದು.

S Venkatarangam Chetty,
Ammunition & Sulphur Merchants
No 9, China Bazar,
12—11 Madras.

ARMS & AMMUNITION MART.

Mahomedally-Noorbhoy.

21 Abdul Rehman Street, near
Crawford Market, BOMBAY. 3
Telegraphic Address—"SHOOTER"
Bombay.
(52-21) Please write for Reduced nett prices list for 1926

"ಕೊಡಗು"

ಸ೯ ೧೯೩೬ನೇ ಇಸವಿ ಜನವರಿ ತಾ. ೨೨ನೇ ಶುಕ್ರವಾರ.

ಕೌನ್ಸಿಲ್ ಮೀಟಿಂಗು.

ಕಳೆದವಾರ ನಡೆದ ಕೊಡಗು ಕೌನ್ಸಿಲ್ ಮೀಟಿಂಗಿನಲ್ಲಿ ವಿವಾದಕ್ಕೆ ಎಡೆಗೊಡುವ ಎರಡು ಸಂಗತಿಗಳು ನಡೆದವು. ಒಬ್ಬ ಮೆಂಬರು ಮಾತನಾಡುವಾಗ ಇತರ ಮೆಂಬರುಗಳು ತಮ್ಮ ಆಕ್ಷೇಪವನ್ನಾಗಲಿ ತೃಪ್ತಿಯನ್ನಾಗಲಿ ತೋರಿಸುವ ಯಾವ ಮಾತನ್ನಾಗಲಿ ಶಬ್ದವನ್ನಾಗಲಿ ಮಾಡಕೂಡದೆಂಬಂತೆ ಕಮಿಷನರು ಅಭಿಪ್ರಾಯಪಟ್ಟರು. ಅಧ್ಯಕ್ಷರಾದ ಚೀಪ್ ಕಮಿಷನರು ಈ ಅಭಿಪ್ರಾಯವನ್ನು ಪ್ರತಿಪಾದಿಸಿದರೆಂಬಂತೆ ನಮಗೆ ತಿಳಿಯಿತು. ಕೌನ್ಸಿಲ್ ಮೆಂಬರುಗಳನ್ನು ಸ್ಕೂಲ್ ಮಕ್ಕಳಂತೆ ಹಿಡಿತದಲ್ಲಿಟ್ಟುಕೊಳ್ಳಬೇಕೆಂತ ಸರಕಾರಿ ಮೆಂಬರಾಗಲಿ ಅಧ್ಯಕ್ಷರಾಗಲಿ ಅಭಿಪ್ರಾಯ ಪಡುವದು ಈ ಕೌನ್ಸಿಲ್ ಸಭೆಯ ಗೌರವಕ್ಕೇನೇ ಕೇಡೆಂತ ನಮ್ಮ ಅಭಿಪ್ರಾಯ. ಕೌನ್ಸಿಲಿನಲ್ಲಿ ಮೆಂಬರುಗಳು ಗಲಭೆಯಾಗುವಂತೆ ಅತಿರೇಕ ತಮ್ಮೊಳಗೆ ವಾದ ಮಾಡಿಕೊಳ್ಳಬಾರದೆಂಬ ಕಮಿಷನರ ಅಭಿಪ್ರಾಯಕ್ಕೆ ನಾವು ಒಪ್ಪುತ್ತೇವೆ. ಆದರೆ ಒಬ್ಬ ಮೆಂಬರನ ಮಾತು ಕೇಳುವಾಗ ತೃಪ್ತಿಯನ್ನು ಆಕ್ಷೇಪವನ್ನು ಸೂಚಿಸುವ ಶಬ್ದಗಳನ್ನೇ ಮಾಡಬಾರದೆನ್ನುವ ಅಭಿಪ್ರಾಯವು ಬೇರೆ ನ್ಯಾಯವಿಧಾಯಕ ಸಭೆಗಳಲ್ಲಿ ನಡೆಯುವ ನಡವಳಿಕೆಗೆ ವಿರೋಧವಾಗಿದೆ. ಇಂಡಿಯಾದ ಇತರ ಎಲ್ಲಾ ಕೌನ್ಸಿಲುಗಳಲ್ಲಿಯೂ ಒಂದು ಭಾಷಣವಾಗುತ್ತಿರುವಾಗ ಇತರರು ತಮ್ಮ ಮನೋಭಾವವನ್ನು ಸೂಚಿಸುವ ಮಾತುಗಳನ್ನು ಹೇಳುವದನ್ನು ಪತ್ರಿಕೆಗಳಲ್ಲಿ ಯಾವಾಗಲೂ ನೋಡುತ್ತಿದ್ದೇವೆ. ನ್ಯಾಯವಿಧಾಯಕ ಸಭೆಗಳಿಗೆಲ್ಲಾ ಮಾದರಿಯಾಗಿ ಇಟ್ಟುಕೊಂಡಿರುವ ಪಾರ್ಲಿಮೆಂಟಿನಲ್ಲೇ ಮೆಂಬರುಗಳಿಗೆ ಈ ಸ್ವತಂತ್ರವಿರುವಾಗ ನಮ್ಮ ದೇಶದ ಕೌನ್ಸಿಲಿನ ಮೆಂಬರುಗಳು ಮಾತ್ರ ಒಬ್ಬರು ಮಾತಾಡುವಾಗ ಇತರರು ಸಂಪೂರ್ಣ ಮೌನವಾಗಿರಬೇಕೆಂಬ ಕಮಿಷನರ ಅಭಿಪ್ರಾಯಕ್ಕೆ ನಾವು ವಿರೋಧಿಸುತ್ತೇವೆ. ಮೆಂಬರುಗಳಲ್ಲಿರುವ ಕೆಲವರಿಗೆ ಗಲಭೆ ಮಾಡಬೇಕೆಂತ ಬುದ್ಧಿಶಕ್ತಿಯಾಗಿಯೂ ನಮ್ಮ ಅಭಿಪ್ರಾಯವಲ್ಲ. ತಮ್ಮ ಮನೋಭಾವವನ್ನು ಯೋಗ್ಯ ಮಾತಿನಿಂದ ಸೂಚಿಸುವ ಸ್ವತಂತ್ರವಿರಬೇಕು.

ಕಾನೂನು ಮಾಡುವ ಸಭೆಯಲ್ಲಿ ಕನ್ನಡ ಭಾಷಣ ಮಾಡುವ ಹಕ್ಕು ಮೆಂಬರುಗಳಿಗೆ ಇಲ್ಲವೆಂತ ಕಮಿಷನರು ಆಕ್ಷೇಪಿಸಿದರು. ಒಡೆಟ್ಟಿನ ಚರ್ಚೆಯಲ್ಲಿಯೂ ಠರಾವುಗಳ ಚರ್ಚೆಯಲ್ಲಿಯೂ ಇಂಗ್ಲೀಷ್ ತಿಳಿಯದವರು ತಮಗೆ ತಿಳಿದ ಭಾಷೆಯಲ್ಲಿ ಮಾತನಾಡಬಹುದೆಂಬ ರೂಲ್ ಇದೆ. ಕಾನೂನು ಮಾಡುವ ಸಭೆಯ ಚರ್ಚೆಯಲ್ಲಿ ಒಬ್ಬ ಮೆಂಬರನಿಗಾಗಿ ಇನ್ನೊಬ್ಬನು ಮಾತನಾಡುವ ರೀತಿ ಇದೆ. ದೇಶೀಯ ಭಾಷೆಯಲ್ಲಿ ಮಾತನಾಡುವ ಬಗ್ಗೆ ರೂಲ್ ಬಿಟ್ಟುಹೋಗಿದೆ. ಕಾನೂನಿನ ಚರ್ಚೆಯಲ್ಲಿಂದ ಮೆಂಬರುಗಳ ಅಭಿಪ್ರಾಯವು ಇತರ ಎಲ್ಲರಿಗೂ ಆಗಿಂದಾಗ್ಗೆ ತಿಳಿಯಬೇಕಾದ್ದರಿಂದ ದೇಶೀಯ ಭಾಷೆಯಲ್ಲಿ ಮಾತನಾಡಬಹುದೆಂಬ ರೂಲ್ ಇಲ್ಲವೆಂತ ಕಮಿಷನರು ಅಭಿಪ್ರಾಯಪಟ್ಟರು. ಕಮಿಷನರು ಕೊಡುವ ಕಾರಣಗಳು ತೃಪ್ತಿಕರವಾಗಿಲ್ಲ. ದೇಶೀಯ ಭಾಷೆಯ ಭಾಷಣವನ್ನು ಇತರರಿಗೆ ತಿಳಿಯುವಂತೆ ಕೌನ್ಸಿಲ್ ಸೆಕ್ರೆಟರಿಯಾಗಲೀ ಇತರ ಯಾರೇ ಆಗಲಿ ಕೂಡಲೇ ತರ್ಜುಮೆ ಮಾಡಿ ತಿಳಿಸಬಹುದು. ಇತರ ಚರ್ಚೆಗಳಲ್ಲಿ ದೇಶೀಯಭಾಷೆಯ ಭಾಷಣವಾಗಬಹುದಾದರೆ ಕಾನೂನು ಚರ್ಚೆಯಲ್ಲಿ ದೇಶೀಯ ಭಾಷೆಯಾಗಬಾರದೆಂತ ಹೇಳುವದರಲ್ಲಿ ನ್ಯಾಯವಿಲ್ಲ. ನಮ್ಮ ದೇಶದ ಕೌನ್ಸಿಲಿನಲ್ಲಿ ಗವರ್ನಮೆಂಟ್ ಉದ್ಯೋಗಸ್ಥರು ವಿನಹ ಇತರ ಎಲ್ಲರಿಗೂ ಕನ್ನಡ ತಿಳಿದೇ ಇದೆ. ಎಲ್ಲಾ ಸರಕಾರಿ ಆಫೀಸರುಗಳಿಗೆ ದೇಶೀಯ ಭಾಷೆ ತಿಳಿದಿರಬೇಕೆಂಬ ರೂಲ್ ಇದೆ. ಆಫೀಸರುಗಳು ದೇಶೀಯ ಭಾಷೆ ಕಲಿತುಕೊಳ್ಳದೆ ಇದ್ದರೆ ಅವರ ತಪ್ಪಾಗಿದೆ. ಆದ್ದರಿಂದ ದೇಶೀಯ ಭಾಷೆಯಲ್ಲಿ ಚರ್ಚೆಯ ಸ್ವಾತಂತ್ರ್ಯವು ಮೆಂಬರುಗಳಿಗೆ ಇರಲೇಬೇಕು. ಚೀಫ್ ಕಮಿಷನರು ಅಧ್ಯಕ್ಷರಾಗಿ ಹೇಳಿದಮೇಲೆ ಈ ಬಗ್ಗೆ ಒಂದು ರೂಲನ್ನು ಆದಷ್ಟುಬೇಗನೆ ಸೇರಿಸಲೇಬೇಕು. ಅಂಥಾ ರೂಲ್ ಆಗುವವರೆಗೆ ಕನ್ನಡ ಭಾಷಣಗಳನ್ನು ಮಾಡಲು ಚೀಪ್ ಕಮಿಷನರು ಸ್ವತಂತ್ರ ಕೊಡಬೇಕು.

ಕಾನೂನು ಮೇರೆ ಕಮಿಷನರು ವಿರೋಧಿಸಿದರೂ ಕನ್ನಡ ಭಾಷೆಯಲ್ಲಿ ಭಾಷಣ ಮಾಡಬೇಕೆಂದಿದ್ದ ಮೆ॥ ಸುಬ್ಬಯ್ಯನವರ ಸಮಾಧಾನಕ್ಕೆ ಕಮಿಷನರು ಒಂದು ತಮ್ಮ ಅಭಿಪ್ರಾಯಗಳನ್ನು ಬೇರೆ ಮೆಂಬರ ಮೂಲಕ ತಿಳಿಸಿಕೊಡಬೇಕೆಂತ ಕೇಳಿಕೊಂಡರು. ಅವರ ಅಭಿಪ್ರಾಯಗಳನ್ನು ಕನ್ನಡದಲ್ಲೇ ಹೇಳುತ್ತಾ ಬಂದಂತೆ ಸಮೀಪ ಇದ್ದ ಇನ್ನೊಬ್ಬ ಮೆಂಬರು ತರ್ಜುಮೆ ಮಾಡಿ ಹೇಳುವದೆಂತ ಚೀಫ್ ಕಮಿಷನರು ನಿರ್ಧರಿಸಿದರು. ರೂಲನ್ನು ಅನುಸರಿಸಿ ಮಾತ್ಸರ ಹಿಡಿಯದೆ ಈ ರೀತಿ ಅನ್ಯೋನ್ಯತೆಯನ್ನು ತೋರಿ ಸಹಕರಿಸಿದ್ದು ಬಹಳ ತೃಪ್ತಿಕರ.

ಕಮಿಷನರು ಒಬ್ಬ ಮೆಂಬರ ಕಿವಿಯಲ್ಲಿ ಬಂದು ಮಾತಾಡಿದ್ದರಮೇಲೆ ನಮ್ಮ ಊರಿನ ಇನ್ನೊಂದು ಪತ್ರಿಕೆಯು ಆಕ್ಷೇಪಿಸಿ ಟೀಕಿಸಿಯದೆ. ಈ ನಡತೆಯು ಬೇರೆ ಎಲ್ಲಾ ಕೌನ್ಸಿಲ್‌ಗಳಲ್ಲಿ ಯಾವಾಗಲೂ ನಡೆಯುತ್ತಿದೆ. ಮೆಂಬರುಗಳು ತಮ್ಮೊಳಗೆ ಅತ್ತಿತ್ತ ಹೋಗಿ ಕಿವಿಯಲ್ಲಿ ಮಾತನಾಡಿಕೊಳ್ಳುವ ಸ್ವತಂತ್ರವಿದೆಯೆಂತ ತಿಳಿಯುತ್ತೇವೆ. ಹೀಗಿರಲಾಗಿ ಕಮಿಷನರ ನಡತೆಯಿಂದ ನಮ್ಮ ಕೌನ್ಸಿಲಿನ ಗೌರವವು ಬಿಂದುಮಾತ್ರವಾಗಿಯೂ ಕಡಿಮೆಯಾಗಲಿಲ್ಲ.

ನೌಕರಿ ಕಾನೂನಿನ ಚರ್ಚೆಯು ಸ್ವಾರಸ್ಯವಾಗಿ ನಡೆಯಿತು. ಈ ಕಾನೂನನ್ನು ಇನ್ನು ಐದು ವರ್ಷದ ವರೆಗ ಮಾತ್ರ ಜಾರಿಯಲ್ಲಿ ಇಡುವಂತೆ ಮಂಜೂರು ಮಾಡಬಹುದೆಂತ ಇಂಡಿಯಾ ಸರಕಾರದವರು ಅಭಿಪ್ರಾಯಪಟ್ಟಿದ್ದಾರೆಂತ ಸರಕಾರಿ ಮೆಂಬರರಿಂದ ತಿಳಿಯಿತು. ಐದು ವರ್ಷದ ಅನಂತರ ಇಂಥಾ ಕಾನೂನೇ ಇರಕೂಡದೆಂಬುದೊಂದು ಎಂದೆನಿಸಿತು. ಈ ಕಾನೂನಿನ ವ್ಯಾಪ್ತಿಯು ಎಲ್ಲಾ ಕೃಷಿ ಕೆಲಸಗಳಿಗೆ ಇರಬೇಕೆಂತ ಕೆಲವು ಮೆಂಬರುಗಳು ಸೂಚಿಸಿದರು. ಪಿಲ್ಲಿಗೆ ಸೇರದ ಬೇರೆ ಕೃಷಿ ಕೆಲಸಗಳಿಗೆ ಈ ಆಕ್ಟನ್ನು ಉಪಯೋಗಿಸಿದ್ದು ಸರಕಾರಕ್ಕೆ ತಿಳಿದು ಬಾರದೆ ಇರುವದರಿಂದ ಅದನ್ನು ತೋರಿಸಲಿಲ್ಲವೆಂತ ಕಮಿಷನರು ಜವಾಬು ಕೊಟ್ಟರು. ಕಿತ್ತಳೆ, ರಾಗಿ ಕಬ್ಬು ಮುಂತಾದ ಕೃಷಿಗಳಿಗೆ ಉಪಯೋಗಿಸಿದ್ದು ನಮಗೆ ತಿಳಿಯದೆ ಇದ್ದರೂ ಸೋಮವಾರಪೇಟೆ ನಾಡಿನವರು ಅದಿರ ವ್ಯವಸಾಯದ ಕೆಲಸ ನೌಕ್ರಿ ಕರಾರುಗಳನ್ನು ನಡಿಸಿಕೊಂಡು ಕೋರ್ಟುಗಳಲ್ಲಿ ಅವನ್ನು ಉಪಯೋಗಿಸಿದ್ದು ನಮಗೆ ತಿಳಿದು ಬಂದಿದೆ. ಒಂದೇ ಇರುವ ನಾರಿನ ತೋಟಕ್ಕೆ ಈ ಕಾನೂನಿನ ಸಹಾಯ ಕೊಡಬೇಕೆಂದಿರುವಾಗ ಹತ್ತೆಂಟು ಸಲ ಆಯೂದರೂ ಉಪಯೋಗಿಸಿರುವ ಆದಿಕೆ ತೆಗೆಯದವರಿಗೆ ಈ ಕಾನೂನು ವ್ಯಾಪಕವಾಗುವಂತೆ ಮಾಡಲೇಬೇಕು.

ಮೇಜಿಸ್ಟ್ರೇಟರು ಅಥವಾ ಪಾರುಪತ್ಯೆಗಾರರ ದರ್ಜೆಗೆ ಕಡಿಮೆ ಇಲ್ಲದ ಆಫೀಸರ ಮುಂದೆ ಕರಾರಿಗೆ ಸೈನ್ ಹಾಕಿಸಬೇಕೆಂತ ಇರುವದು ನೋಡಿದರೆ ಕರಾರುಗಳೆಲ್ಲಾ ಕೊಡಗಿನಲ್ಲೇ ಆಗಬೇಕೆಂತ ಸರಕಾರದ ಅಭಿಪ್ರಾಯವಾಗಿರುವಂತೆ ಕಾಣುತ್ತದೆ. ಕೊಡಗಿನಲ್ಲಿ ಜಾರಿಯಾಗುವ ಅನೇಕ ಕರಾರುಗಳು ಕೊಡಗಿನ ಹೊರಗೆ ಆಗುತ್ತವೆ. ಕೊಡಗಿನ ಹೊರಗೆ ಕರಾರು ಬರೆಸಬಾರದೆಂತಾದರೆ ಈ ಕಾನೂನಿನ ಉಪಯೋಗವು ಬಹಳ ಕಡಿಮೆಯಾಗುತ್ತದೆ. ಅಡ್ವಾನ್ಸು ಪಡೆಯಲು ಕೊಡಗಿಗೆ ಬರಬೇಕಾದರೆ ಅಡ್ವಾನ್ಸಿನ ಉಪಯೋಗ ಕಡಿಮೆಯಾಗುತ್ತದೆ. ಮೊದಲೇ ಎಸ್ಟೇಟಿಗೆ ಬರುತ್ತಿದ್ದ ನೌಕರನಾದರೆ ಊರಿಗೆ ಹೋಗುವ ಮುಂಚೆ ಕರಾರು ಬರೆದುಕೊಟ್ಟು ಹೋಗಬಹುದು, ಹೊಸತಾಗಿ ಬರುವ ನೌಕರನಾದರೆ ಅಡ್ವಾನ್ಸು ಹಣದಿಂದ ನೌಕರನ ಊರಿನ ಸಾಲತೀರಿಸ ಬೇಕೇ ಮುಂತಾದ ತೊಂದರೆಗಳನ್ನು ಊರಿನಲ್ಲೇ ನಿವಾರಿಸಿಕೊಳ್ಳಬೇಕಾದದ್ದು ಸ್ವಾಭ್ಯಾರ. ದಿವಸಗಳ ಪ್ರಯಾಣಮಾಡಿ ಕೊಡಗಿಗೆ ಬಂದು ಕರಾರು ಬರೆದು ಕೊಟ್ಟು ವಾಪಸು ಊರಿಗೆ ಹೋಗಿ ತೊಂದರೆ ನಿವಾರಿಸಿಕೊಂಡು ಬರಬೇಕಾಗುತ್ತದೆ. ಈ ತೊಡಕೆಯನ್ನು ಕೌನ್ಸಿಲಿನವರು ಹೋಗಲಾಡಿಸಲೇ ಬೇಕಾಗುತ್ತದೆ. ಕೊಡಗಿನ ಹೊರಗೆ ಮೇಜಿಸ್ಟ್ರೇಟ್ ಪವರ್ ಇರುವ ಯಾವನೇ ಒಬ್ಬ ಮನುಷ್ಯನ ಮುಂಗೆ ಕರಾರು ಆದರೆ ಸಾಕೆಂತ ತಿದ್ದಿಕೊಳ್ಳಬೇಕು. ಪೋಲೀಸರಿಗೆ ಈ ಸ್ವತಂತ್ರ ಕೊಟ್ಟರೆ ಕೆಡಕುಗಳಾಗುವ ಸಂಭವವಿದೆಯೆಂತ ನಾವು ಒಪ್ಪುತ್ತೇವೆ. ಅಂಥಾ ಕೆಡಕುಗಳಾಗದಂತೆ ಬೇರೆ ಉಪಾಯಗಳನ್ನು ಯೋಚಿಸಿಕೊಳ್ಳಬೇಕು. ಅಂಥಾ ಕರಾರನ್ನು ಬರೆಸಿಕೊಂಡ ಒಂದು ತಿಂಗಳೊಳಗೆ ಕೊಡಗಿನ ಮೇಜಿಸ್ಟ್ರೇಟರ ಮುಂದೆ, ಮಾಲಿಕ್ ಸಹಿ ಸೈನ್ ತೆಗೆದುಕೊಳ್ಳಬೇಕೆಂತ ಶರತ್ತು ಇಟ್ಟರೆ ಸಾಕೆಂತ ನಮಗೆ ತೋರುತ್ತದೆ. ಆಫೀಸರುಗಳಿಗೆ ತೋಟದಲ್ಲಿ ಇಡುವ ಆಳುಗಳ ರಿಜಿಸ್ಟರನ್ನು ನೋಡುವ ಹಕ್ಕು ಇರಕೂಡದೆಂತ ಅನೇಕರ ಆಪೇಕ್ಷೆಯಾಗಿದೆ. ಈ ಬಿಲ್ಲಿನ ಸಂಬಂಧದ ನಮ್ಮ ಹೆಚ್ಚಿನ ಟೀಕೆಯನ್ನು ಆಮೇಲೆ ಮಾಡುತ್ತೇವೆ.

ಕೌನ್ಸಿಲಿನಲ್ಲಿ ಪಾಸಾದ ಎರಡು ಠರಾವುಗಳು ಹೆಚ್ಚಿನ ಮಹತ್ವದ್ದೆಂತ ಹೇಳಲಿಕ್ಕಾಗುವುದಿಲ್ಲ. ಪಿ. ಡಬ್ಲ್ಯು. ಡಿ. ಸಬ್ ಡಿವಿಜನಲ್ ಆಫೀಸರು ವೀರರಾಜಪೇಟೆಯಲ್ಲಿ ವಾಸವಿರಬೇಕೆಂಬ ಠರಾವು ಪಾಸಾಯಿತು. ಇದರಿಂದ ದಕ್ಷಿಣ ಕೊಡಗಿನ ರಸ್ತೆಗಳ ಕಟ್ಟಡಗಳ ಕೆಲಸ ಮೇಲ್ವಿಚಾರ ಇನ್ನು ಚೆನ್ನಾಗಿ ಆದೀತೆಂಬುದು ಮತ್ತು ಪ್ರಯಾಣದ ಭತ್ಯ ಕೆಲವು ಮಟ್ಟಿಗೆ ಉಳಿದೀತೆಂಬುದು ಈ ಠರಾವಿಗೆ ಕಾರಣಗಳಾಗಿವೆ. ಮೂವತ್ತು ನಲವತ್ತು ಸಾವಿರ ರೂಪಾಯಿ ಬೆಲೆಯ ಸ್ಟೋರ್ಸ್ ಮಡಿಕೇರಿಯಲ್ಲಿ ಇದೆ. ಇದರ ಚಾರ್ಜ ಸಬ್ ಡಿವಿಜನಲ್ ಆಫೀಸರಲ್ಲಿ ಇರಬೇಕಾಗುತ್ತದೆ. ಇವರು ವೀರರಾಜಪೇಟೆಗೆ ಹೋದರೆ ಇದು ಸಾಧ್ಯವಿಲ್ಲವೆಂತ ಸರಕಾರಿ ಮೆಂಬರ ವಾದವಿತ್ತು. ಈ ಚಾರ್ಜನ್ನು ಎಗ್ಸಿಕ್ಯೂಟಿವ್ ಎಂಜಿನೀಯರೇ ಇಟ್ಟುಕೊಳ್ಳಬಹುದು.

ಇನ್ಸ್‌ಪೆಕ್ಷನ್ ಬಂಗ್ಲೆಯು ಪ್ರಯಾಣಿಕರ ಉಪಯೋಗಕ್ಕೆ ದೊರಕುವಂತೆ ಟ್ರಾವೆಲರ್ಸ್ ಬಂಗ್ಲೆಯಾಗಿ ಮಾಡಿ ಇಡಬೇಕೆಂಬ ಠರಾವು ಮಂಜೂರಾಯಿತು. ಅಕಾರಿಗಳ ಅನುಮತಿ ಪಡೆವ ಅಧಿಕಾರಿಗಳಿಗೆ ಅವಶ್ಯವಿಲ್ಲದಾಗ ಪ್ರಯಾಣಿಕರು ಇನ್ಸ್‌ಪೆಕ್ಷನ್ ಬಂಗ್ಲೆಯನ್ನು ಉಪಯೋಗಿಸಬಹುದೆಂಬ ರೂಲ್ ಇರುವದರಿಂದ ಇಷ್ಟರವರೆಗೆ ಅವನ್ನು ಹೀಗೆ ಉಪಯೋಗಕ್ಕೆ ಕೊಡುವಾಗ ಆಗುವುದಿಲ್ಲವೆಂತ ಸರಕಾರಿ ಉತ್ತರ ಬಂದಿದೆಯೆಂತ ನಮಗೆ ತಿಳಿದು ಬಂದಿದೆ. ಆ ರೂಲನ್ನು ಸರಿಯಾಗಿ ಉಪಯೋಗಿಸಿಕೊಂಡರೆ ಇಲ್ಲದೆ ಪ್ರಯಾಣಿಕರು ಉಪಯೋಗಿಸಲು ಅನುಕೂಲ ಇಡುವದು ಒಳ್ಳೇದು.

ಕೌನ್ಸಿಲಿಗೆ ಚುನಾವಣೆ ಮಾಡುವ ರೂಲ್ಸನ್ನು ತಿದ್ದಲು ಒಂದು ಕಮಿಟಿಯಾಗಬೇಕೆಂಬ ಠರಾವು ಮಂಜೂರಾಗಲಿಲ್ಲ. ಎರಡು ಮೂರು ಸೆಕ್ಷನ್‌ಗಳಲ್ಲೇ ಕೊರತೆಗಳು ಇರುವವಾದರೆ ಅವನ್ನು ಸರಿಪಡಿಸಲು ಠರಾವು ತಂದರೆ ಸಾಕಾಗಿದೆ. ಮಹಮ್ಮದೀಯರಿಗೆ ಪ್ರತ್ಯೇಕ ಪ್ರತಿನಿಧಿತ್ವ ಬೇಕೆಂಬುದಾದರೆ ಆ ಠರಾವನ್ನೇ ಚರ್ಚಿಸುವದು ಉತ್ತಮ. ಎಲ್ಲಾ ರೂಲ್‌ಗಳನ್ನು ಬದಲಿಸುವ ಅವಶ್ಯ ಬೀಳದೆ ಇರುವದರಿಂದ ಕಮಿಟಿಯು ಅವಶ್ಯಕತೆಯು ತೋರಿಬರಲಿಲ್ಲ.

ಸ್ವಾಮಿಭಕ್ತಿಯ ಅತಿರೇಕ.

ಸಜ್ಜನನೊಬ್ಬನು ಈ ರೀತಿ ಪ್ರಶ್ನೆ ಮಾಡುವನು —

ಒಬ್ಬ ಸರಕಾರಿ ನೌಕರನು ದೇಶಹಿತದ ಕಾರ್ಯದಲ್ಲಿ ಸಹಾನುಭೂತಿಯನ್ನು ಪ್ರಕಟಿಸಿದರೆ, ಅಥವಾ ತದನುಕೂಲವಾದ ಕೆಲಸವನ್ನು ಮಾಡಲು ಪ್ರಾರಂಭಿಸಿದರೆ ಉದ್ಯೋಗಕ್ಕಾಗಿ ಖಾದಿಯನ್ನು ಧರಿಸಲು ಹೊರಟಿದರೆ ಅವನು ಯಾವ ಸರಕಾರದ ಉಪ್ಪನ್ನವನ್ನು ತಿಂದಿರುವನೋ ಅದರ ವಿರುದ್ಧವಾಗಿ ಯಾವ ಕೆಲಸವನ್ನೂ ಮಾಡಲಾಗದು. ಅದರ ವಿರುದ್ಧವಿರುವ ಯಾವುದೇ ಕಾರ್ಯದಲ್ಲಿ ಸಹಾಯ ಮಾಡಬಾರದು, ಹಾಗೆ ಮಾಡುವುದು ಸೇವಕನ ಧರ್ಮವಾದ ಸ್ವಾಮಿನಿಷ್ಠೆಗೆ ವಿರೋಧವೆಂದು ಜನರು ಹೇಳುವರು. ಇದರ ಸಮರ್ಥನೆಗಾಗಿ ಮಹಾಭಾರತದಿಂದ ದೃಷ್ಟಾಂತಗಳನ್ನು ಕೊಡುವುದೂ ಉಂಟು. ಭೀಷ್ಮ ದ್ರೋಣಾದಿಗಳು ದುರ್ಯೋಧನನ ಪಕ್ಷದಲ್ಲಿ ನ್ಯಾಯವಿರಲಿಲ್ಲವೆಂದು ತಿಳಿದಿದ್ದರೂ ಅವನ ಕಡೆಯಿಂದಲೇ ಕಾದಾಡಿದರು. ಭೀಷ್ಮನಂತಹ ಧರ್ಮಾತ್ಮರು ದುರ್ಯೋಧನನ ತ್ಯಾಗವನ್ನೇಕೆ ಮಾಡಲಿಲ್ಲ?

ಈ ತರದ ಪ್ರಶ್ನೆಯನ್ನು ಹಿಂದೂದೇಶದಲ್ಲಿ ಮಾತ್ರ ಕೇಳಬಹುದು. ಭಾರತದ ಇತಿಹಾಸದಲ್ಲಿ ಸ್ವಾಮಿಭಕ್ತಿಯು ಅತ್ಯಂತ ಉನ್ನತಸ್ಥಾನಕ್ಕೆ ಏರಿಸಲ್ಪಟ್ಟಿದೆ. ಇದರಿಂದ ದೇಶಕ್ಕೆ ಲಾಭವೂ ಆಗಿದೆ. ಆದರೆ ಈ ದಿನ ನಾವು ಈ ಅತ್ಯುತ್ಕೃಷ್ಟವಾದ ಸದ್ಗುಣದ ವಿಷಯದಲ್ಲಿ ಕೂಡ ಅತಿರೇಕ ಮತ್ತು ವಕ್ರತೆಯನ್ನೇ ಅನುಭವಮಾಡುತ್ತಿದ್ದೇವೆ?

ಮೊದಲು ಮಹಾಭಾರತದ ಉದಾಹರಣೆಗಳ ಪ್ರಶ್ನೆಗೆ ಉತ್ತರವನ್ನು ಕೊಟ್ಟು ತೀರಿಸುವ. ಭೀಷ್ಮನ ಹತ್ತಿರ ಧರ್ಮರಾಜನು ಹೋದಾಗ ಅವನು ಸ್ವಾಮಿಭಕ್ತಿಯ ಕಾರಣವನ್ನು ಕೊಡದೆ ತನ್ನ ಉದರವನ್ನು ತೋರಿಸಿ "ಪಾಪೀ ಹೊಟ್ಟೆಗಾಗಿ" ಇದನ್ನೆಲ್ಲ ಮಾಡುತ್ತಿರುವುದಾಗಿ ಹೇಳಿದನು. ವಿದುರನು ಯಾವ ಪಕ್ಷವನ್ನೂ ವಹಿಸಲಿಲ್ಲ. ದ್ರೋಣನ ಮಾರ್ಗವನ್ನು ನೋಡಿದರೆ,

೬ನೇ ಪುಟದಲ್ಲಿ ಮುಂದುವರಿದಿದೆ

ಕಾಂಗ್ರೆಸ್ ನಿರ್ಣಯಗಳು.

೧ ದೇಶಬಂಧು ದಾಸ ಸುರೇಂದ್ರನಾಥ [illegible] ವಾಣಾರಕರ [illegible] ಈ ವರ್ಷದಲ್ಲಿ [illegible] ಸ್ವರ್ಗಸ್ಥ [illegible] ಕಾಂಗ್ರೆಸ್ಸು [illegible] ತ್ತದೆ

[illegible]

ಸಿಯೂಟಿಕ್ ಬಿಲ್ಲು ೧೯೨೪ರಲ್ಲಾದ ಗಾಂಧಿ [illegible] ದಕ್ಕೆ ಪೂರ್ಣ ವಿರುದ್ಧವಿದೆಯೆಂದೂ [illegible] ಸ್ಥಿತಿಯು ೧೯೧೪ರಲ್ಲಿದ್ದುದಕ್ಕಿಂತ ಹೆಚ್ಚು ಹಾನಿಗೂ ದೂ ಸ್ವಾಭಿಮಾನವುಳ್ಳ ಹಿಂದೀಯರು ಯಾರೂ ಆ ದೇಶದಲ್ಲಿ ನಿಲ್ಲದಂತಾಗುವುದೆಂದೂ ಈ ಕಾಂಗ್ರೆಸ್ ಅಭಿಪ್ರಾಯಪಡುತ್ತದೆ ಆ ಒಪ್ಪಂದಕ್ಕೆ ಭಾರತೀಯ ನಿವಾಸಿಗಳು ಕೊಡುವ [illegible] ರ್ಥವನ್ನು ಯೂನಿಯನ್ ಸರಕಾರವು ಒಪ್ಪದಿರುವ ಸಂದರ್ಭದಲ್ಲಿ ೧೮೮೫ರಲ್ಲಿ ಟ್ರಾನ್ಸವಾಲ ಹಿಂದೀಯರ ಪ್ರಶ್ನೆಯ [illegible] ತಾದ ಕಾನೂನಿನ ಅರ್ಥವನ್ನು ಪಂಚಾಯತಿಯಿಂದ ನಿರ್ಣಯ ಮಾಡಿದಂತೆಯೇ ಈಗಲೂ ಮಾಡುವುದು ಯೋಗ್ಯವಾದದ್ದೆಂದು ಈ ಕಾಂಗ್ರೆಸ್ಸು ಅಭಿಪ್ರಾಯಪಡುತ್ತದೆ ಹಿಂದೂಸ್ಥಾನ ಪ್ರತಿನಿಧಿಗಳಿಂದಲೂ ಕೂಡಿರುವ ಪಂಚಾಯತಿ [illegible] ಕರಯಬೇಕೆಂಬ [illegible] ಪೂರ್ಣ ಸಮ್ಮತಿಯ [illegible] ಲ್ಲದೆ ಯೂನಿಯನ್ ಸರಕಾರವು ಈ [illegible] ಯನ್ನು [illegible] ಕಾಂಗ್ರೆಸ್ಸಿನ [illegible] ಪಂಚಾಯತ [illegible] ಮತ್ತು ಪಂಚಾಯತಿಯಿಂದ [illegible] ತೀರ್ಮಾನದ ಸೂಚನೆಗಳು ಅಂಗೀಕರಿಸಲ್ಪಟ್ಟ [illegible] ಪಾರ್ಲಿಮೆಂಟಿನಲ್ಲಿ ಬಿಲ್ಲು ಮಂಜೂರಾದರೆ [illegible] ಸರಕಾರವು ಇದಕ್ಕೆ ರಾಜಸಮ್ಮತಿಯನ್ನು ಕೊಡತಕ್ಕದೆಂದು ಕಾಂಗ್ರೆಸ್ಸು ಅಭಿಪ್ರಾಯಪಡುತ್ತದೆ

೩ ೧೯೧೮ನೇ ರೆಗ್ಯುಲೇಶನ್ ೩ರ ಕಾನೂನಿನ ದುರುಪಯೋಗವನ್ನೂ ಬಂಗಾಲ ಆರ್ಡಿನಾನ್ಸ್ ಆಕ್ಟನ್ನು ಬಲಾತ್ಕಾರದಿಂದ ಜಾರಿಗೆ ತಂದುದನ್ನು ಜನತೆಯ ಅಭಿಪ್ರಾಯವು ನ್ಯಾಯವಿಧಾಯಕ ಸಭೆಗಳಲ್ಲಿಯೂ ದೇಶದಲ್ಲಿಯೂ ಸ್ಪಷ್ಟವಾಗಿ ವ್ಯಕ್ತವಾಗಿದ್ದರೂ ಅದಕ್ಕೆ ವಿರುದ್ಧವಾಗಿ ಈ ಕಾನೂನುಗಳ ಮೂಲಕ ಅನೇಕ ಮಂದಿ ದೇಶಸೇವಕರನ್ನು ಯಾವ ತಪ್ಪನ್ನೂ ಹೊರಿಸದೆ [illegible] ಲಿನಲ್ಲಿಟ್ಟು ಅವರಿಗೆ ನಾನಾ ತೊಂದರೆ [illegible] ಗಾಲದಿಂದ ಅನೇಕರಿಗೆ ಗಡಿಪಾರು ಮಾಡುವುದನ್ನೂ ಈ ಕಾಂಗ್ರೆಸ್ಸು ತೀವ್ರವಾಗಿ ಖಂಡಿಸುತ್ತದೆ

೪ [illegible] ಆಕ್ಟಿನಿಂದ ಪ್ರಕ್ಷುಬ್ಧ [illegible] ಪಂಜಾಬ ಸರಕಾರವು ಗುರುದ್ವಾರ [illegible] ಸ್ವಾಧೀನದ ವಿಷಯದಿಂದ [illegible] ಹೊರತು [illegible] ಕಾರಣದಿಂದ ಮಾತ್ರ [illegible] ಜೈಲಿನಲ್ಲಿಟ್ಟಿದ್ದಾರೆ [illegible] ಅವರನ್ನು [illegible] ಬಿಡದೆ [illegible] ಅಭಿಪ್ರಾಯಪಡುತ್ತದೆ

[illegible]

೬ ೧೯೨೪ನೇ ಸಪ್ಟಂಬರ [illegible] ಸೇರಿದ ಆ ಇ ಕಾ ಕಮಿಟಿಯ ಒಂದನೇ ನಿರ್ಣಯ [illegible] ಗವನ್ನು ಈ ಕಾಂಗ್ರೆಸ್ಸು ಮಂಜೂರು ಮಾಡುತ್ತದೆ

೭ ಪಾಟ್ನಾ ಸಭೆಯ ಒಂದನೇ ನಿರ್ಣಯ [illegible] ಮಂಜೂರು ಮಾಡಿ ಮುಂದೆ ಕಾಂಗ್ರೆಸ್ಸು ರಾಜಕೀಯ ಕಾರ್ಯವನ್ನು ಕೈಕೊಂಡು ಇದಕ್ಕಾಗಿ [illegible] ಹಣವನ್ನೂ ಪ್ರತ್ಯೇಕಿಸಿಟ್ಟ ಹಣವನ್ನು ಬಿಟ್ಟು ಉಳಿದ [illegible] ಇವನ್ನೂ ಕಾಂಗ್ರೆಸ್ ಸಂಸ್ಥೆಗಳನ್ನೂ ಉಪಯೋಗಿಸಬೇಕೆಂದು ನಿರ್ಣಯಿಸುತ್ತದೆ ಖನಾಂಗದ [illegible] ಗೌರವವನ್ನು ಕಾಪಾಡಲಿಕ್ಕೂ ಸಮಯ [illegible] ಕೊನೆಯ ಆಯುಧವೆಂದು [illegible] ಈ ಕಾಂಗ್ರೆಸ್ಸು ಪುನರ್ವ್ಯಕ್ತಪಡಿಸುತ್ತದೆ ಆದ್ದರಿಂದ ಎಲ್ಲ ರಾಜಕೀಯ ಕೆಲಸಗಳ ಮುಖ್ಯೋದ್ದೇಶವು ಸ್ವಾವಲಂಬನೆ [illegible] ಸ್ವರಾಜ್ಯದ ಕಡೆಗೆ [illegible] ಪ್ರಗತಿಯನ್ನು [illegible] ಸರಕಾರದ ಕಾರ್ಯಗಳನ್ನು ನಿರೋಧಿಸುವಂತಿರಬೇಕೆಂದೂ ನಿರ್ಣಯಿಸಿ ಕಾಂಗ್ರೆಸ್ಸಿನ ರಾಜಕೀಯ ಕಲಸದ ಕೆಳಗಿನ ಕಾರ್ಯಕ್ರಮವನ್ನು ಮಂಜೂರು ಮಾಡುತ್ತದೆ.

(1) ಪ್ರಜಾವರ್ಗಕ್ಕೆ ರಾಜಕೀಯ ಅಧಿಕಾರಗಳ [illegible] ಯೋಗ್ಯ ಶಿಕ್ಷಣ ಕೊಟ್ಟು ಆ ಅಧಿಕಾರಗಳನ್ನು [illegible] ಮಾಡಿಕೊಳ್ಳಲು ಸಮರ್ಥರಾಗುವಂತೆ ಅವರ ಶಕ್ತಿಯನ್ನು [illegible] ಕಾರ್ಯಕ್ರಮದ ಮೂಲಕ [illegible] ಇದರಲ್ಲಿ [illegible] ಮತ್ತು ಬಾದಿಯ ಪ್ರಚಾರ [illegible] ಅಸ್ಪೃಶ್ಯತಾನಿವಾರಣೆ ದಳಿತ ಜಾತಿಗಳ ಉದ್ಧಾರ [illegible] ಅಫೀಮು ಇತ್ಯಾದಿಗಳ ನಿವಾರಣೆ ಮೊದಲಾದವುಗಳ [illegible] ಸ್ಥಳೀಯ ಬೋರ್ಡುಗಳ [illegible] ಸ್ವಾಧೀನ [illegible] ರಾಷ್ಟ್ರೀಯ [illegible] ವಾಣಿಜ್ಯ [illegible] ಅಭಿವೃದ್ಧಿ [illegible] ಯೋಗ [illegible] ಹಿಂದೀಯ [illegible] ವ್ಯಾಪಾರಗಳ ಅಭಿವೃದ್ಧಿ ಇವೆಲ್ಲ ವಿಷಯಗಳು [illegible] ಸೇರಿರಬೇಕು

(2) ದೇಶದ ಹೊರಗೆ ಸರಿಯಾದ ವರ್ತಮಾನವನ್ನು [illegible] ಮಾಡುವುದೇ [illegible] ಕೆಲಸ

(3) ೧೯೨೪ನೇ ಸೆಪ್ಟಂಬರ ೧ನೇ ದಿವಸ [illegible] ಇಂಡಿಪೆಂಡಂಟ್ ಮತ್ತು ಸ್ವರಾಜ್ಯ ಪಕ್ಷದ ಸದಸ್ಯರು [illegible] ಸರಕಾರಕ್ಕೆ ಕೊಟ್ಟ ರಾಷ್ಟ್ರೀಯ ಶರ್ತುಗಳನ್ನು [illegible] ಈ ಕಾಂಗ್ರೆಸ್ಸು ಒಪ್ಪಿ [illegible] ಇರುವವರೆಗೆ ಅದಕ್ಕೆ [illegible] ಕೆಳಗಿನ ಕಾರ್ಯಕ್ರಮವನ್ನು ನಿರ್ಣಯಿಸುತ್ತದೆ

i [illegible] ಸಭೆಗಳಲ್ಲಿ [illegible] ಅತ್ಯಧಿಕ [illegible]

[illegible] ದೇಶದಲ್ಲಿ ಕಲಸವನ್ನು ಮಾಡುವಂತೆ [illegible] ಕೌನ್ಸಿಲು [illegible] ಬರಬೇಕು [illegible]

ii ಆ ವೇಳೆ [illegible] ಕೌನ್ಸಿಲು [illegible] ಪ್ರಾಂತಿಕ ಕೌನ್ಸಿಲ ಇವುಗಳ [illegible]

iii ಎರಡನೇ [illegible] 1 [illegible]

[illegible] ಮುತ್ತದಾರರಿಗೆ [illegible] ಕ್ಕಬೇಕು

ಪ್ರಾಂತಿಕ ಕಾಂಗ್ರೆಸ್ ಕಮಿಟಿ [illegible] ಕೌನ್ಸಿಲುಗಳಿಗೆ [illegible] ಕಾಂಗ್ರೆಸ್ಸು ಅಧಿಕಾರ ಕೊಡುತ್ತದೆ [illegible] ಉತ್ತರ ಕೊಡುವ [illegible] ನ್ನು [illegible] ಮುಂದರಿಯಬೇಕು

v ಸರಕಾರದ ಉತ್ತರವು ತೃಪ್ತಿಕರವಾದರೆ [illegible] ಕಮಿಟಿಯು ಆ ಇ ಕಾ ಕಮಿಟಿಯನ್ನು ಕರೆದು ಮುಂದಿನ [illegible] ಸಿದ್ಧಗೊಳಿಸಬೇಕು

vi ಸ್ವರಾಜ್ಯಪಕ್ಷದವರು ಕೌನ್ಸಿಲುಗಳನ್ನು ಬಿಡುವ [illegible] ಸಕ್ಕದ್ದು ಇದ್ದುದರಿಂದ ಕಾಂಗ್ರೆಸ್ಸಿನ [illegible] ಆ ಇ ಕಾ ಕಮಿಟಿಯ ಅಧಿಕಾರಕ್ಕೊಳಪಟ್ಟು [illegible] ಬೇಕು

vii iii ಮತ್ತು iv ರಲ್ಲಿ [illegible] ಕಲಸ [illegible] ಮಾಡಲು ಆ ಇ ಕಾ ಕಮಿಟಿಯು ಬೇಕಾದ ಹಣವನ್ನು [illegible] ಮುಂದೆ [illegible] ಕಮಿಟಿಯು [illegible] ಸೂಚನೆಯಿಂದ [illegible]

೮ ಮುಂದೆ ಕಾಂಗ್ರೆಸ್ಸು ಆ ಇ ಕಾ ಕಮಿಟಿ [illegible] ಕಾಂಗ್ರೆಸ್ ಕಮಿಟಿ ಇವುಗಳ ಕಾರ್ಯಕ್ರಮಗಳು ಹಿಂದೀಯ[illegible]ಲ್ಲಿ ಒರಗೆ [illegible] ಕಾಂಗ್ರೆಸ್ [illegible] ಪ್ರಾಂತಿಕ ಬೋರ್ಡುಗಳಲ್ಲಿ [illegible] ಪ್ರಾಂತಿಕ ಕಮಿಟಿಗಳು ಪ್ರಾಂತ್ಯದ ಬೋರ್ಡುಗಳ [illegible] ಯೋಜಿಸುವುದು

೯ ಕಾಂಗ್ರೆಸ್ಸಿನ [illegible] ಪರದೇಶದಲ್ಲಿರುವ ಹಿಂದೀಯರ ಸ್ಥಿತಿಯನ್ನು ವಿಚಾರ [illegible] ದೇಶದಲ್ಲಿ ಪ್ರಚಾರ ಕಾರ್ಯವನ್ನು ಮಾಡಲು ಒಂದು [illegible] ಕಾಂಗ್ರೆಸ್ಸು [illegible]

೧೦ ಕಳೆದ ವರ್ಷದ ಕಾಂಗ್ರೆಸ್ಸಿನ [illegible] ವರಿಗೆ ಕೃತಜ್ಞತೆಯನ್ನು ಸೂಚಿಸುವುದಲ್ಲದೆ ಮುಂದಿನ ವರ್ಷಕ್ಕೆ ಶ್ರೀ [illegible] ಅಯ್ಯಂಗಾರ [illegible] ಮತ್ತು ಪಂಡಿತ [illegible] ಕಾರ್ಯದರ್ಶಿಯರಾಗಿ ನೇಮಿಸುತ್ತದೆ

೧೧ ಮುಂದಿನ ವರ್ಷದ ಕಾಂಗ್ರೆಸ್ಸನ್ನು [illegible] ಜರುಗಿಸಲು [illegible] ಆಮಂತ್ರಣವನ್ನು ಕಾಂಗ್ರೆಸ್ಸು ಸ್ವೀಕರಿಸುತ್ತದೆ

ಜಮೀನ್ದಾರರ ಸಂಘದ ಗ್ರಾಮ ಕಮಿಟಿಗಳು

([illegible])

ಬಿಳ್ಳತಿ ನಾಡು

[illegible]

ಗ್ರಾಮ	ಕಮಿಟಿಯವರು
1 ಕಾರ್ಮಾಡು	ಪ [illegible]
	ಮೆ [illegible]
	ಮೆ [illegible]
2 [illegible]	ಪ [illegible]
	ಮೆ [illegible]
	ಮೆ [illegible]
3 [illegible]	ಪ [illegible]
	ಮೆ [illegible]
	ಮೆ [illegible]
4 [illegible]	ಪ [illegible]
	ಮೆ [illegible]
	ಮೆ [illegible]
5 [illegible]	ಪ [illegible]
	ಮೆ [illegible]
6 [illegible]	ಪ [illegible]
	ಮೆ [illegible]
	ಮೆ [illegible]
7 [illegible]	ಪ [illegible]
	ಮೆ [illegible]
8 [illegible]	ಮೆ [illegible]
	ಮೆ [illegible]

ಎಡನಾಲ್ಕುನಾಡು

[illegible] ಅಧ್ಯಕ್ಷತೆಯಲ್ಲಿ [illegible] ಮಾಡಿದ ಕಮಿಟಿಗಳ ವಿವರ

ಗ್ರಾಮ	ಕಮಿಟಿಗಳು
1 [illegible]	ಪ [illegible]
	ಮೆ [illegible]
2 [illegible]	ಪ [illegible]
	ಮೆ [illegible]
3 ಕುಕ್ಲೂರು	ಪ [illegible]
	ಮೆ [illegible]
4 [illegible]	ಪ [illegible]
	ಮೆ [illegible]
5 [illegible]	ಪ [illegible]
	ಮೆ [illegible]
6 [illegible]	ಪ [illegible]
	ಮೆ [illegible]
7 [illegible]	ಪ [illegible]
	ಮೆ [illegible]
8 [illegible]	ಪ [illegible]
	ಮೆ [illegible]

ಕಡಿಯತ್ತುನಾಡು.

ಮೆ. ಅಪ್ಪನೆರವಂಡ ಉತ್ತಯ್ಯನವರ ಅಧ್ಯಕ್ಷತೆಯಲ್ಲಿ ಕಡಿಯತ್ತುನಾಡಿನವರ ಮೀಟಿಂಗು ನಡಿಸಿ ಏರ್ಪಡಿಸಿದ ಕಮಿಟಿಗಳ ವಿವರ.

1. ಕೊಣಂಜಗೇರಿ. ಮೆ. ಮಂದತಂಡ ಮೊದಪ್ಪನವರು.
ಮೆ. ಬೆಲ್ಲತಂಡ ಸುಬ್ಬಯ್ಯನವರು.
2. ಬಾವಲಿ. ಮೆ. ಕನ್ನಂಡ ದೇವಯ್ಯನವರು.
ಮೆ. ಕೋಟಮಂಡ ಪೊನ್ನಪ್ಪನವರು.
3. ಕೈಕಾಡು. ಮೆ. ಬೊಳ್ಳಂಡ ಕುಂಞಪ್ಪನವರು.
ಮೆ. ನಾಯಕಂಡ ಮುದ್ದಯ್ಯನವರು.
4. ಕೋಕೇರಿ. ಮೆ. ಮೂಡೆರ ನಾಣಯ್ಯನವರು.
ಮೆ. ಚೇನಂಡ ಕರುಂಬಯ್ಯನವರು.
5. ಕಿರುಂದಾಡು. ಮೆ. ಕುಮ್ಮಣಂಡ ಮೇದಪ್ಪನವರು.
ಮೆ. ಅಪ್ಪನೆರವಂಡ ಉತ್ತಯ್ಯನವರು.
6. ಅರಪಟ್ಟು } ಮೆ. ಕೋಡಿರ ತಮ್ಮಯ್ಯನವರು.
ಪೇರೂರು } ಮೆ. ಕುಲ್ಲಚಂಡ ಮುತ್ತಣ್ಣನವರು.
7. ಚೇಲಾವರ ಮೆ. ಪಟ್ಟಚರವಂಡ ಪೊನ್ನಪ್ಪನವರು.
ಮೆ. ಪರಂಜ್ಯೋತಿಂಡ ಕುಟ್ಟಪ್ಪನವರು
8. ಕಗಡ ಮೆ. ಪಟ್ಟಡನಂಡ ಬಿಯ್ಯಣ್ಣನವರು.
ಮೆ. ಸಡಕೇರಿಯಂಡ ಸಂಜಪ್ಪನವರು
9. ಪಾಲಂಗಾಲ. ಮೆ. ಕರನೆರವಂಡ ಪೂವಯ್ಯನವರು
ಮೆ. ಒಪ್ಪಂಡ ಸೋಮಯ್ಯನವರು.

ನಾಲ್ಕುನಾಡು.

ಮೆ. ಉದಿಯಂಡ ಪೂಣಚ್ಚಯ್ಯನವರ ಅಧ್ಯಕ್ಷತೆಯಲ್ಲಿ ನಡೆದ ನಾಲ್ಕುನಾಡಿನವರ ಮೀಟಿಂಗಿನಲ್ಲಿ ಏರ್ಪಾಡಾದ ಕಮಿಟಿಗಳು.

1. ನೆಲಜಿ ಮೆ. ನಾಪನೆರವಂಡ ಪೊಣ್ಣಪ್ಪನವರು.
ಮೆ. ಮುಂಡಂಡ ಕುಂಞಪ್ಪನವರು.
ಮೆ. ಮಂಡಿರ ಮುತ್ತಣ್ಣನವರು.

ಸತ್ಯಮೇವಜಯತೇ.
(ಸಫ್ಪ ಗುಣವಾಗದಿದ್ದರೆ ಹಣ ಪರತ ಇದೆ)
ಧಾತುಪೌಷ್ಟಿಕ ಕಾಮೋತ್ತೇಜಕ, ಇಂದ್ರಿಯಸ್ತಂಭಕವಾದ
ಮದನೋತ್ಸವ ಗುಳಿಗೆ.
ಜನನೇಂದ್ರಿಯದ ಶಿಥಿಲತೆ ನಿರ್ಬಲತೆ ನಪುಂಸಕತ್ವ ಶೀಘ್ರಪತನ, ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಗಳ ಸೇವನೆಯಿಂದ ಗುಣಮುಖವಾಗಿ ಧಾತು ಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ, ಇಂದ್ರಿಯಸ್ತಂಭಕ, ಗರ್ಮಿ, (ಶಾಕ) ಮುಪ್ಪಿನ ಮೊದಲಾದ ಎಲ್ಲಾ ತರಹದ ಬಕ್ಕೆಗಳು ಹುಣ್ಣುಗಳು ಪಿತ್ಥದ ಬಾಧೆಗಳು, ಕಟಕೂಲೆ ವಾತರೋಗವು ಮುಂತಾದವು ಅತಿ ಸ್ವಲ್ಪದಿನಗಳಲ್ಲಿ ಗುಣವಾಗಿ ಶರೀರಕ್ಕೆ ನಿರೋಗತ್ವವೂ ಕಾಂತಿಯೂ ಹೆಚ್ಚಿನ ಶಕ್ತಿಯೂ ಉಂಟಾಗುತ್ತದೆ. ಒಂದು ಡಬ್ಬಿಗೆ ೬೦ ಗುಳಿಗೆಗಳು ಇರುತ್ತವೆ. ಕಿಮ್ಮತ್ತು ೬೦ ಗುಳಿಗೆಗಳಿಗೆ ೪ ರೂಪಾಯಿ. ಇದನ್ನು ಸೇವಿಸುವಾಗ್ಗೆ **ನಪುಂಸಕತ್ವಾರಿತೈಲವನ್ನು** ಉಪಯೋಗಿಸಿದರೆ ಉತ್ತಮ. ಕಿಮ್ಮತ್ತು ಬಾಟ್ಲಿ ಒಂದಕ್ಕೆ ರೂ ೨—೦—೦
ಪ್ರಮೇಹನಿವಾರಿಣಿ—ಇದರ ಸೇವನೆಯಿಂದ ಮೂತ್ರ...
[illegible]
ವಿಳಾಸ:—
ವೈದ್ಯ ಟಿ. ಎಚ್. ಜೋಶಿ ಮತ್ತು ಕಂಪೆನಿ
ನಂ 6. ಪ್ರೋಪ್ಟ್ ಬಿಲ್ಡಿಂಗ್, ಉತ್ತರ ಕಾನಡಾ.
2

(ಹಿಂದಿನ ಪುಟದಿಂದ ಮುಂದುವರಿದಿದ್ದು).

ವಿಭೀಷಣನು ಧರ್ಮ ಒಂದನ್ನೇ ಲಕ್ಷಿಸಿ ಸ್ವಾಮಿಭಕ್ತಿಯನ್ನೂ ಭ್ರಾತೃಪ್ರೇಮವನ್ನೂ ಒದಿಗೊತ್ತಿ ಶ್ರೀ ರಾಮಚಂದ್ರನಿಗೆ ಸಂಪೂರ್ಣ ಸಹಾಯವನ್ನು ಮಾಡಿ ಲಂಕೆಯ ಸೇನೆಯ ಭೇದಗಳ ರಹಸ್ಯವನ್ನು ರಾಮನಿಗೆ ತಿಳಿಸಿದ ದೃಷ್ಟಾಂತವಿದೆ. ಆತನು ಸ್ವಹಿತ್ಯಾದನೇ ಮೊದಲಾದ ಭಕ್ತರ ಪಂಕ್ತಿಯಲ್ಲಿ ಎಣಿಸಲ್ಪಡುವ ಯೋಗ್ಯತೆಯನ್ನು ಹೊಂದಿದನು.

ಆದರೆ ಒಂದು ವೇಳೆ ನಮಗೆ ಇದಕ್ಕೆ ವಿರುದ್ಧವಾದ ದೃಷ್ಟಾಂತಗಳು ದೊರೆತರೂ, ನಮಗೆ ನೀತಿವಿರುದ್ಧವಾದ ಉದಾಹರಣೆಗಳು ಕಂಡುಬಂದರೆ ಅವುಗಳನ್ನು ತ್ಯಜಿಸುವುದೇ ಯುಕ್ತವಾಗಿದೆ. ರಾಮಾಯಣದಲ್ಲಿ ಗೋಮಾಂಸದ ಉಲ್ಲೇಖವಾಗಲೀ, ವೇದಗಳಲ್ಲಿ ಪಶುವಧದ ವರ್ಣನೆಯಾಗಲೀ ಇದ್ದರೆ ನಾವು ಈಗ ಗೋಮಾಂಸವನ್ನು ಸೇವಿಸಬೇಕೆಂದೂ ಪಶುವಧವನ್ನಾಚರಿಸಬೇಕೆಂದೂ ಇಲ್ಲ. ಸಿದ್ಧಾಂತಗಳು ಮೂರೂ ಕಾಲಗಳಿಗೆ ಅಚಲವಾಗಿರುತ್ತವೆ. ಅವುಗಳ ಆಧಾರದ ಮೇಲೆ ರಚಿಸಿದ ಆಚಾರ ನಿಯಮಗಳಲ್ಲಿ ಸಮಯಾಂತರ ಮತ್ತು ಸ್ಥಳಾಂತರಗಳೊಡನೆ ಪರಿವರ್ತನವಾಗುತ್ತಲೇ ಇರುವುದು.

ಇನ್ನು ಸ್ವಾಮಿನಿಷ್ಠೆಯ ವಿಚಾರ. ಸರಕಾರಿ ನೌಕರರು ಖಾದಿಯನ್ನು ಧರಿಸಬಾರದೆಂಬ ಒಂದಾದರೂ ನಿಯಮವು ಪ್ರಸಿದ್ಧ ಅಥವಾ ಗರ್ಭಿತವಾಗಿರುವುದಿಲ್ಲ. ಕೆಲವು ಕರ್ಮಚಾರಿಗಳು ವಿಶೇಷ ರೀತಿಯ ಪೋಷಾಕನ್ನೇ ಧರಿಸಬೇಕಾಗುತ್ತದೆ. ಆದರೆ ಇದು ಬೇರೆ ಮಾತು. ಇಂಥ ಪೋಷಾಕವನ್ನು ಧರಿಸುವವರಾದರೂ, ಇತರ ಸಮಯದಲ್ಲಿ ಬಹಿರಂಗವಾಗಿ ಖಾದಿಯನ್ನು ಧರಿಸಬಹುದು. ಖಾದಿಯು ಸರಕಾರಕ್ಕೆ ವಿರುದ್ಧವೆಂದು ಎಣಿಸಲ್ಪಡುವ ವಸ್ತುವಲ್ಲ. ಸರಕಾರೀ ನೌಕರರು ಯಾವುದಾದರೂ ಸಾರ್ವಜನಿಕ ಆಂದೋಲನದ ವಿಷಯದಲ್ಲಿ ಸಹಾನುಭೂತಿಯನ್ನು ತೋರಿಸಬಾರದೆಂಬ ನಿಯಮವೂ ಇಲ್ಲ. ಯಾರು ಸ್ವಾಮಿನಿಷ್ಠನಿರುವನೋ, ಅಂಥ ನೌಕರನು ಸರಕಾರವು ದೇಶದ್ರೋಹಿಯೆಂದು ಎಣಿಸುವ ಚಳವಳದಲ್ಲಿ ಭಾಗವಹಿಸಿಕೊಳ್ಳಲಾರನು. ಆದರೆ ಅವನು ಸರಕಾರದ ಇಚ್ಛೆಯನ್ನು ಅನುಚಿತವೆಂದು ಭಾವಿಸುವುದಾದರೆ ಅವನಲ್ಲಿ ಸಮಸಿದ್ಧರೆ ನೌಕರಿಯನ್ನು ಬಿಟ್ಟು ಸರಕಾರವನ್ನು ವಿರೋಧಿಸಬಹುದು. ಒಮ್ಮೆ ನೌಕರನಾದವನು ಯಾವಾಗಲೂ ನೌಕರನಾಗಿಯೇ ಇರಬೇಕೆಂದೂ, ಸೇವಕನು ಸ್ವಾಮಿಕಾರ್ಯವನ್ನು ಮಾಡುವಾಗ ನೀತಿ ಅನೀತಿಗಳ ವಿಚಾರವನ್ನೇ ಮಾಡಬಾರದೆಂದೂ ನೀತಿಯ ಅಥವಾ ಬೇರೆ ಯಾವ ನಿಯಮವೂ ಇಲ್ಲ. ಸ್ವಾಮಿನಿಷ್ಠೆಗಾದರೂ ಒಂದು ಮಿತಿಯಿದೆ. ಉದಾಹರಣೆಗಾಗಿ, ಆಫೀಸಿನಲ್ಲಿ ಕೆಲಸವಿರುವ ನೌಕರನು ನಿಶ್ಚಿತವಾದಷ್ಟು ಗಂಟೆ ಕೆಲಸ ಮಾಡಬೇಕು, ಹಣ ಅಥವಾ ಪತ್ರಗಳ ಕಳವನ್ನು ಮಾಡಬಾರದು, ಮತ್ತು ನೌಕರಿಯ ಸಮಯದಲ್ಲಿ ತಿಳಿಯಬರುವಂಥಾದ ಗುಪ್ತ ವಿಷಯಗಳನ್ನು ಪ್ರಕಟಿಸಬಾರದು. ಆದರೆ ಅವನೇನೂ 24 ಗಂಟೆಯೂ ನೌಕರನಲ್ಲ, ಅವನು ತನ್ನ ಆತ್ಮವನ್ನು ಮಾರಿಕೊಂಡಿಲ್ಲ. ಯಾವುದನ್ನು ರಾಷ್ಟ್ರೀಯ ಚಳವಳಿಯೆಂದು ಅವನು ತಿಳಿಯುತ್ತಾನೋ, ಅದರ ಬಗ್ಗೆ ಅವನು ವಿಚಾರದಲ್ಲಿ ಅವಶ್ಯವಾಗಿ ಸಹಾನುಭೂತಿಯನ್ನಿಟ್ಟುಕೊಳ್ಳಬಹುದು, ಮತ್ತು ಪ್ರಸಿದ್ಧವಾದ ನಿಯಮಗಳಿಗೆ ವಿರುದ್ಧವಾಗದಿದ್ದಲ್ಲಿ ಕಾರ್ಯರೂಪವಾಗಿಯೂ ಸಹಾನುಭೂತಿಯನ್ನು ತೋರಿಸಬಹುದು.

(ನವಜೀವನ) ಮೋ. ಕ. ಗಾಂಧೀ.

COFFEE ESTATE FOR SALE.
Kurburmotte, property of the late Mr. L. C Pais. Adjoining the Sidapur dispensary
Apply.—
S. M. PINTO
Virarajendrapet
4—3

ನೋಟೀಸು.

ಜಮೀನ್ದಾರರ ಸಂಘದ ಉತ್ತರ ಕೊಡಗಿನ ಅಸಿಸ್ಟೆಂಟ್ ಸೆಕ್ರೆಟರಿಯವರು ತಮ್ಮ ಉದ್ಯೋಗಕ್ಕೆ ರಾಜಿನಾಮೆ ಕೊಟ್ಟಿದ್ದುದರಿಂದ ಆ ಕೆಲಸಕ್ಕೆ ಬೇರೆಯೊಬ್ಬರನ್ನು ಒಡನೇ ನೇಮಿಸಬೇಕಾಗಿದೆ. ಆ ಕೆಲಸವನ್ನು ಮಾಡಲು ಇಚ್ಛೈಸುವವರು ಫೆಬ್ರವರಿ ತಾರೀಕು 1ರೊಳಗೆ ತಮ್ಮ ಅರ್ಜಿಯನ್ನು ಈ ಕೆಳಗಿನ ವಿಳಾಸಕ್ಕೆ ಕಳುಹಿಸತಕ್ಕದ್ದು.

ಮಡಿಕೇರಿ, ಸಿ. ಎನ್. ವೆಂಕಪ್ಪಯ್ಯ,
20—1—1926. ಜ. ಸೆಕ್ರೆಟರಿ.

ಚಂದಾದಾರರಲ್ಲಿ ವಿಜ್ಞಾಪನೆ.

ನಮ್ಮ ಚಂದಾದಾರರಲ್ಲಿ ಕೆಲವರು ತಮ್ಮ ಚಂದಾ ಹಣವನ್ನು ಬೇಗನೆ ಕಳುಹಿಸಿಕೊಡುತ್ತೇವೆಂಬದಾಗಿಯೂ ಪತ್ರಿಕೆಯನ್ನು ಸರಿಯಾಗಿ ಕಳುಹಿಸುತ್ತಾ ಇರಬೇಕಾಗಿಯೂ ಕೇಳಿಕೊಂಡ ಮೇರೆ ಇದುವರೆಗೂ ಹಾಗೆ ನಡಿಸುತ್ತಾ ಬಂದಿದ್ದೇವೆ. ಉತ್ಪತ್ತಿಯ ಕಾಲವಾದ ಈಗ ಎಲ್ಲರ ಕೈಯಲ್ಲೂ ಹಣ ಇರುವದರಿಂದ ಅಂಥ ಚಂದಾದಾರರು ತಮ್ಮ ಬಾಕಿಯಾದ ಚಂದಾ ಹಣವನ್ನು ಮನಿಯಾರ್ಡರ್ ಮೂಲಕವಾಗಿಯಾಗಲೀ ಇಲ್ಲವೆ ವಿ.ಪಿ.ಯ ಮೂಲಕವಾಗಿಯಾಗಲೀ ಒಡನೆ ಪಾವತಿ ಮಾಡಿ ನಮ್ಮ ಕಂಪೆನಿಯ ಕೆಲಸಕ್ಕೆ ಉತ್ತೇಜನ ಕೊಡಬೇಕಾಗಿ ಕೋರುತ್ತೇವೆ

ಮೇನೇಜರ್.

ವರ್ತಮಾನ ಸಂಗ್ರಹ

ಒಳದೇಶ.

ಸೆಂಟ್ರಲ್ ಬ್ಯಾಂಕಿನ ಸ್ಟೇಕ್ಹೋಲ್ಡರುಗಳ ಮೀಟಿಂಗ ತಾ. 23ರಲ್ಲು ಮುನ್ಸಿಪಲ್ ಹಾಲಿನಲ್ಲಿ ನಡೆಯುವುದು.

ಜಿಲ್ಲಾ ವಿದ್ಯಾಭಿವೃದ್ಧಿ ಸಂಘದ ಕಮಿಟಿ ಮೀಟಿಂಗು ತಾ. 5—2—1926ರಲ್ಲು ಶನಿವಾರ ಸಂಜೆಯಲ್ಲಿ ನಡೆಯಲಿಕ್ಕಿದೆ.

ಮಡಿಕೇರಿಯಲ್ಲಿರುವ ಕೊಡವರ ಊರೊಕ್ಕೂಟವೊಂದು ಈ ತಾರೀಕು 24ರಲ್ಲು ನಡೆಯುವದೆಂದು ತಿಳಿಯಬಂದಿರುತ್ತದೆ.

ರೇಂಜರಾಗಿದ್ದ ಮೆ. ಮುರುವಂಡ ಸುಬ್ಬಯ್ಯನವರು ತಮ್ಮ ಉದ್ಯೋಗಕ್ಕೆ ರಾಜಿನಾಮೆ ಕೊಟ್ಟಿರುವರೆಂದು ವರ್ತಮಾನ.

ಬೇತಲಕಡುವಿನ ತತ್ಕಾಲಿಕ ಸೇತುವೆಯು ತಯಾರಾಗಿ ಈ ವಾರದಿಂದ ಮೋಟಾರುಗಳೂ ಗಾಡಿಗಳೂ ಅತ್ಯಂತ ಸರಾಗವಾಗಿ ದಾಟುತ್ತಿವೆ.

ಬ್ರೀಚ್ ಆಫ್ ಕಂಟ್ರಾಕ್ಟ್ ಆಕ್ಟು ಬಿಲ್ಲನ್ನು ಚರ್ಚಿಸುವ ಸೆಲೆಕ್ಟ್ ಕಮಿಟಿ ಮೀಟಿಂಗು ತಾ. 20ರಲ್ಲು ನಡೆಯಿತು. ಈ ಕಮಿಟಿಯು ಪುನಹ ತಾ. 23ರಲ್ಲಿ ಸೇರುವುದು.

ತಾ. 18 ಮತ್ತು 19ರಲ್ಲಿ ಕೊಡಗು ಕೌನ್ಸಿಲಿನ ಫೈನಾನ್ಸ್ ಕಮಿಟಿ ಮೀಟಿಂಗು ಮಡಿಕೇರಿಯಲ್ಲಿ ನಡೆಯಿತು. ಇದರ ಆಫೀಸರು ಮೀಟಿಂಗು ತಾ. 26ರಲ್ಲಿ ನಡೆಯಲಿಕ್ಕಿದೆ.

ಜನವರಿ ತಾ. 30ರಲ್ಲಿ ಮಧ್ಯಾಹ್ನ 2 ಗಂಟೆಗೆ ಕೋ ಅಪರೇಟಿವ್ ಸೆಂಟ್ರಲ್ ಬ್ಯಾಂಕಿನ ಜನರಲ್ ಮೀಟಿಂಗು ವೀರಾಜಪೇಟೆ ಬೋರ್ಡ್ ಸ್ಕೂಲ್ ಹಾಲಿನಲ್ಲಿ ನಡೆಯುವುದು.

ತಾ. 19ರಲ್ಲಿ ಜಮೀನ್ದಾರರ ಸಂಘದ ಕಮಿಟಿಯವರು ಮಡಿಕೇರಿಯಲ್ಲಿ ಮೀಟಿಂಗು ನಡೆಸಿ ಬ್ರೀಚಾಫ್ ಕಂಟ್ರಾಕ್ಟ್ ಆಕ್ಟಿನ ಬಿಲ್ಲನ್ನು ಚರ್ಚಿಸಿ ಕೆಲವು ತಿದ್ದುಪಡಿಗಳನ್ನು ಸೂಚಿಸಿರುವರು.

ಗೋಣಿಕೊಪ್ಪಲಲ್ಲಿ ಸ್ಥಾಪಿಸಬೇಕೆಂದಿರುವ ಕೋಆಪರೇಟಿವ್ ಸ್ಟೋರ್ಸಿನ ಸಂಬಂಧ ಒಂದು ಜನರಲ್ ಮೀಟಿಂಗು ಈ ತಾ. 25ರಲ್ಲು ಪೊನ್ನಂಪೇಟೆಯಲ್ಲು ನಡೆಯುವದೆಂದು ತಿಳಿಯುತ್ತೇವೆ.

ವೀರಾಜಪೇಟೆ ಶ್ರೀರಾಮಕೃಷ್ಣ ವೇದಾಂತ ಸಂಘದ ವಾರ್ಷಿಕೋತ್ಸವವು ತಾ. 23ರಲ್ಲು ನಡೆಯುವದೆಂದೂ ಆ ಸಮಯದಲ್ಲಿ ವೆ॥ ಕೇಶವದಾಸರು ಹರಿಕೀರ್ತನೆ ಮಾಡುವರೆಂದೂ ತಿಳಿಯಬರುತ್ತದೆ.

ವೀರಾಜಪೇಟೆ ಮುನಿಸಿಪಾಲಿಟಿ ಚುನಾವಣೆಯ ತಕರಾರಿನ ಅರ್ಜಿಯ ವಿಚಾರಣೆಯನ್ನು ಕಮೀಷನರವರು ತಾ. 16ರಲ್ಲು ವೀರಾಜಪೇಟೆಯಲ್ಲಿ ನಡೆಸಿದರು. ವಾದವು ತಾ. 23ರಲ್ಲು ಮಡಿಕೇರಿಯಲ್ಲಿ ನಡೆಯುವುದೆಂದು ವರ್ತಮಾನ.

ಕೊಡಗಿನಿಂದ ಹೊರಗೆ ಪುಸ್ತಕಗಳಲ್ಲಿ ಇರುವ ಕೊಡಗಿನ ಇವಾಪವಣೆಯನ್ನು ಹಿಂಬಾಲಿಸಿ ನೈನಾಡಿನಲ್ಲಿರುವ ಕೊಡಗರು ಒಂದು ಯೋಜನೆಯನ್ನು ಏರ್ಪಡಿಸಿ ಒಂದು ಫಂಡನ್ನು ಇಟ್ಟಿರುವರಾಗಿ ಅಲ್ಲಿಂದ ಒಬ್ಬರು ತಿಳಿಸುತ್ತಾರೆ.

ಶ್ರೀ ಕೇಶವದಾಸರು ಮಡಿಕೇರಿಯಲ್ಲಿ ಹರಿಕಥೆಗಳನ್ನು ಮುಗಿಸಿ ತಾ. 21ರಲ್ಲು ವೀರಾಜಪೇಟೆಗೆ ಹೋಗಿರುವರು. ಅಲ್ಲಿ ಎರಡು ದಿವಸ ಕಥೆಗಳನ್ನು ಮಾಡುವರೆಂದೂ ಫೆಬ್ರವರಿ ಪ್ರಾರಂಭದಲ್ಲಿ ಸೋಮವಾರಪೇಟೆ ಕಡೆ ಬರುವರೆಂದೂ ವರ್ತಮಾನ.

ಕುಟ್ಟಪೇಟೆಯಲ್ಲಿ ಕಳೆದ ಒಂದು ತಿಂಗಳಿಂದ ದನಗಳ ಕಾಯಿಲೆಯು ಜೋರಾಗಿ ಹಲವು ದನಗಳು ಸತ್ತು ಹೋದರೂ ಅಲ್ಲಿಯವರು ಎಚ್ಚರಿತರಾಗಿರುವದಿಲ್ಲವೆಂತಲೂ ಅದರಿಂದ ಈಗಾಗಲೇ ಸಾವಿರಾರು ರುಪಾಯಿವರೆಗೆ ನಷ್ಟ ಉಂಟಾಗಿದೆಯೆಂತಲೂ ಒಂದು ಜಾಸ್ತಿ.

ಗಣಪತಿ ವಾಚನಾಲಯ ಮತ್ತು ಪುಸ್ತಕ ಭಂಡಾರವನ್ನು ತೆರೆಯುವ ಸಮಾರಂಭವು ಈ ತಾ. 30ರಲ್ಲಿ ಬೆಳಿಗ್ಗೆ 11 ಗಂಟೆಗೆ ವೀರಾಜಪೇಟೆಯಲ್ಲಿ ನಡೆಯುವುದು. ಮೆ. ಲಯನಲ್ ಸ್ಯಾಕವ್ ಯಂ. ಎಲ್. ಸಿ. ಯವರು ಲೈಬ್ರರಿಯನ್ನು ತೆರೆಯಲು ಒಪ್ಪಿರುವರಂತೆ.

ಬ್ರೀಚ್ ಆಫ್ ಕಂಟ್ರಾಕ್ಟ್ ಆಕ್ಟಿನ ಹೊಸ ಬಿಲ್ಲನ್ನು ಚರ್ಚಿಸಲಿಕ್ಕಾಗಿ ಜಮೀನ್ದಾರರ ಸಂಘದ ವಿಶೇಷ ಜನರಲ್ ಮೀಟಿಂಗು ಇದೇ ತಾ. 30ನೇ ಶನಿವಾರ ಪಗಲು 11 ಗಂಟೆಗೆ ವೀರಾಜಪೇಟೆಯಲ್ಲಿ ನಡೆಯುವುದು. ಈ ಸಮ್ಬಂಧ ನೋಟೀಸು ಇನ್ನೊಂದು ಕಡೆ ಪ್ರಕಟವಾಗಿದೆ.

ಮಡಿಕೇರಿಯ ಇಂಡಿಯನ್ ಪ್ಲಾಂಟರುಗಳು ರಾ. ಬಾ. ಕೋದಂಡ ಅಪ್ಪಯ್ಯನವರ ಕೋರಿಕೆ ಮೇರೆ ತಾ 19ರಲ್ಲು ಸೇರಿ ರಾ. ಬಾ. ಅಪ್ಪಾರಂಡ ಮಂದಣ್ಣನವರ ಅಧ್ಯಕ್ಷತೆಯಲ್ಲಿ ಬ್ರೀಚ್ ಆಫ್ ಕಂಟ್ರಾಕ್ಟು ಆಕ್ಟಿನ ಮಸೂದೆಯನ್ನು ಚರ್ಚಿಸಿ ಕೆಲವು ಒದಲಾವಣೆಗಳನ್ನು ಸೂಚಿಸಿರುವರು.

ವೇದಾಂತ ಸಂಘದ ಆಶ್ರಯದಲ್ಲಿ ಮೆ॥ ಪಿ. ಎಸ್. ಕುಶಾಲಪ್ಪ, ಬಿ. ಎ., ಬಿ. ಇ. ಯವರ ಅಧ್ಯಕ್ಷತೆಯಲ್ಲಿ ಮೆ॥ ಯನ್. ಯನ್. ಕುಟ್ಟಪ್ಪನವರು ಮತದ ಆವಶ್ಯಕತೆಯನ್ನು ಕುರಿತು ಸೆಂಟ್ರಲ್ ಹೈಸ್ಕೂಲು ಹಾಲಿನಲ್ಲಿ ತಾ. 23ನೇ ಶನಿವಾರ ಸಾಯಂಕಾಲ 5½ ಗಂಟೆಗೆ ಒಂದು ಭಾಷಣವನ್ನು ಮಾಡುವರಾದ್ದರಿಂದ ಅಲ್ಲಿಗೆ ಎಲ್ಲರೂ ದಯಮಾಡಿಸಬೇಕೆಂದು ಸಂಘದ ಸೆಕ್ರೆಟರಿಯವರ ಕೋರಿಕೆ.

ಹಿಂದೂದೇಶ.

ಬೆಂಗಳೂರು ರೆಸಿಡೆಂಟರ (ಕೊಡಗಿನ ಚೀಫ್ ಕಮಿಷನರವರ) ಬಂಗ್ಲೆಯಲ್ಲಿ 200 ರುಪಾಯಿ ಬೆಲೆಯ ಬೆಳ್ಳಿ ಸಾಮಾನುಗಳೂ ಇತರ ಪದಾರ್ಥಗಳೂ ಕಳುವಾಗಿದ್ದುವು. ಪತ್ತೇ ಆಗಿ ಇಬ್ಬರು ಸೆರೆಯಲ್ಲಿಡಲ್ಪಟ್ಟಿರುವರಂತೆ.

ಮೈಸೂರು ಮಹಾರಾಜರವರು ತಮ್ಮ ಮಾತೋಶ್ರೀಯವರೊಂದಿಗೆ ಬೊಂಬಾಯಿಯಿಂದ ಕಾಶೀ ಪಟ್ಟಣಕ್ಕೆ ಹೋಗಿರುವರು. ಅವರು ಅಲ್ಲಿ ಕೆಲವು ದಿವಸಗಳಿದ್ದು ಅಲ್ಲಿಂದ ಕಲ್ಕತ್ತಕ್ಕೆ ಹೋಗಿ ಹರಿದ್ವಾರ ದಾರಿಗಾಗಿ ವಾಪಸು ಬರಲಿಕ್ಕಿರುವರು.

ಎಸೆಂಬ್ಲಿಯ ಮೆಂಬರುತನಕ್ಕೆ ರಾಜಿನಾಮೆ ಕೊಟ್ಟಿರುವ ಮೆ. ಕೆಲ್ಕಾರ್ ರವರ ಬದಲಾಗಿ ಆ ಮೆಂಬರುತನದ ಚುನಾವಣೆಗೆ ಬೊಂಬಾಯಿ ಮುನಿಸಿಪಾಲಿಟಿಯ ಅಧ್ಯಕ್ಷರಾಗಿರುವ ಮೆ. ಜೋಸೆಫ್ ಬ್ಯಾಪ್ಟಿಸ್ಟರವರು ಉಮೇದುವಾರರಾಗಿ ನಿಲ್ಲುವರೆಂದು ಸುದ್ದಿ.

ಕಳೆದ ವಾರ ಮದ್ರಾಸಿನಲ್ಲಿ ನಡೆದ ಪ್ರೆಸಿಡೆನ್ಸಿ ಕ್ರಿಕೆಟ್ ಪಂಥದಾಟದಲ್ಲಿ ಯೂರೋಪಿಯನರು ಹಿಂದೀಯನರನ್ನು ಸೋಲಿಸಿದರು.

ಅಲಿಗಾರದ ಮುಸ್ಲಿಮ್ ಯುನಿವರ್ಸಿಟಿಗೆ ಮೈಸೂರು ಮಹಾರಾಜರವರು 10,000 ರೂಪಾಯಿ ಕೊಡುವುದಾಗಿ ವಾಗ್ದಾನ ಮಾಡಿರುವರು.

ಕೌನ್ಸಿಲ್ ಚುನಾವಣೆಯಲ್ಲಿ ಹೆಂಗಸರಿಗೂ ಓಟುಕೊಡುವ ಹಕ್ಕಿರಬೇಕೆಂದು ಪಂಜಾಬು ಕೌನ್ಸಿಲಿನಲ್ಲಿ ಪಾಸಾದ ನಿರ್ಣಯವನ್ನು ಅಲ್ಲಿಯ ಸರ್ಕಾರದವರು ಮಂಜೂರು ಮಾಡಿರುವರು.

ಸರ್ಕಾರಿ ಉದ್ಯೋಗಗಳನ್ನು ವಹಿಸಿಕೊಳ್ಳಲು ತಮಗೆ ... ದ್ದೇಶವಿಲ್ಲದೆ ಸರ್ಕಾರದೊಂದಿಗೆ ಸಾಧ್ಯವಾದಲ್ಲಿ ಸಹಕ... ವೆಂದೂ, ಮಿ. ಜಯಕರ್ ಮತ್ತು ಕೇಳ್ಕಾರರವರ ಮೇಲೆ ... ಗೆ ವಿಶ್ವಾಸವಿದೆಯೆಂದೂ ಬೊಂಬಾಯಿಯ ಕೌನ್ಸಿ... ಸ್ವರಾಜ್ಯಪಾರ್ಟಿ ಮೆಂಬರುಗಳು ಪ್ರಕಟನಾ ಪತ್ರ... ರುವರು.

ಮಿ. ಬಿ. ಜಿ ಹಾರ್ನಿಮನ್‌ರವರು "ಬೊಂ... ನಿಕಲ್" ಪತ್ರಿಕೆಯ ಸಂಪಾದಕತ್ವವನ್ನು ವಹಿಸ... ಡಿರುವರು ಸರಕಾರದವರ ತಪ್ಪು ಕಂಡಲ್ಲಿ ಹಿಂಜ... ರುವದಿಲ್ಲವೆಂತಲೂ, ನ್ಯಾಯವಿದ್ದಲ್ಲಿ ಹೊಗಳಲು ... ವುದಿಲ್ಲವೆಂತಲೂ, ಒಟ್ಟಾರೆ ಹಿಂದೂ ದೇಶದ ಸ್ವಾತಂ... ಹೋರಾಡುವುದೇ ಆ ಪತ್ರಿಕೆಯ ಧ್ಯೇಯವಾಗಿರುವದು... ಮುಂತಾಗಿ ಅವರು ಮೊದಲನೇ ಸಂಪಾದಕೀಯ ಲೇಖ...ನ್ನು ಬರೆದಿರುವರು.

ವಿಶೇಷ.

ತಾ. 18ರಲ್ಲಿ ಬೆಳಿಗ್ಗೆ ಬರ್ಲಿನ್ ಪಟ್ಟಣದಲ್ಲಿ ಒಂದು ... ಗ್ಯಾಸ್ ಪೆಟ್ರೋಲಿಗೆ ಬೆಂಕಿ ಹಿಡಿದು ನಾಲ್ಕು ಮಹಡಿಗಳ ಮನೆಯೊಂದು ನೆಲಸಮವಾಯಿತು. ಅದರಲ್ಲಿ 25 ಸಂಸಾರಗಳು ವಾಸವಾಗಿದ್ದವು. ಇಷ್ಟರವರೆಗೆ ಅದರಿಂದ ಹೊರಗೆ ಎಳೆಯಲ್ಪಟ್ಟಿರುವ 40 ಜನರಲ್ಲಿ ಏಳು ಜನರು ಮೃತಪಟ್ಟಿದ್ದರು. 20 ಜನರಿಗೆ ಘಾಯಗಳುಂಟಾಗಿದ್ದವು.

ಲಾರ್ಡ್ ಕಾರ್ಮೈಕಲ್‌ರವರು ತಾ. 16ರಲ್ಲಿ ಲಂಡನಿನಲ್ಲಿ ಮೃತರಾದರು. ಇವರು ಮದ್ರಾಸಿನ ನಂತರ ಬಂಗಾಳದ ಗವರ್ನರಾಗಿದ್ದಾಗ ಬಹು ಸಹಾನುಭೂತಿಯಿಂದ ಆಳಿದಕಾರಣ ಜನರ ಪ್ರೀತಿಗೆ ತುಂಬಾ ಪಾತ್ರರಾಗಿದ್ದರು. ಇವರಂತೆ ಜನಪ್ರೀತರಾದ ಗವರ್ನರುಗಳು ಬಹು ಕಡಿಮೆ. ಇವರ ನಿಧನದಿಂದ ಇಂಡಿಯಾವು ಒಬ್ಬ ಒಳ್ಳೇ ಸ್ನೇಹಿತನನ್ನು ಕಳೆದುಕೊಂಡಂತಾಗಿದೆ.

ನೋಟೀಸು.

ಕೊಡಗು ಲೆಜಿಸ್ಲೇಟಿವ್ ಕೌನ್ಸಿಲಿನಲ್ಲಿ ಫೆಬ್ರುವರಿ ತಾ 9ಕ್ಕೆ ತೀರ್ಮಾನಕ್ಕೆ ಇಟ್ಟಿರುವ ಬ್ರೀಚ್ ಆಫ್ ಕಂಟ್ರಾಕ್ಟು ಆಕ್ಟಿನ ಬಿಲ್ಲನ್ನು ಚರ್ಚಿಸಲಿಕ್ಕಾಗಿ ಜಮೀನ್ದಾರರ ಸಂಘದ ವಿಶೇಷ ಜನರಲ್ ಮೀಟಿಂಗು ಈ ತಾ. 30ನೇ ಶನಿವಾರ ಬೆಳಿಗ್ಗೆ 11 ಗಂಟೆಗೆ ವೀರಾಜಪೇಟೆ ಬೋರ್ಡ್ ಸ್ಕೂಲ್ ಬಳಿ ನಡೆಯುವುದು. ಮೀಟಿಂಗಿಗೆ ಸಂಘದ ಮೆಂಬರುಗಳೆಲ್ಲಾ ಹಾಜರಾಗಬೇಕಾಗಿ ಕೋರುತ್ತೇನೆ.

ಮಡಿಕೇರಿ, ಸಿ ಎನ್. ವೆಂಕಪ್ಪಯ್ಯ,
13—1—26. ಜನರಲ್ ಸೆಕ್ರೆಟರಿ.

ಇದು ಒಳ್ಳೇ ಸಮಯ!
ಇಂಥಾ ಸುಸಮಯವನ್ನು ಕಳಕೊಳ್ಳಬೇಡಿರಿ.

ಇಂದಿನ ದಿನ ನಾಳೆ ಎಂದಿಗೂ ದೊರೆಯಲಾರದು.

ನಮ್ಮಲ್ಲಿ ಈಗತಾನೇ ತಯಾರಾಗಿ ಬಂದಿರುವ ನ... ...ರುಗಳ ಪಂಚುಗಳು ಅಲ್ಲದೆ ಮೂರು ನಂಬರುಗಳ ... ಟೆ ಪಂಚು, ಪಾತಿಪಾಜು ಮತ್ತು ಹೂಗೆಪಂಚು, ... ತರಹದ ಎಲೆಕ್ಟ್ರಿಕ್ ದೀಪಗಳೂ, ಸೈಕಲ್ ... ರಬ್ಬರ್ ಸ್ಟಾಂಪು ಸೀಲುಗಳೂ, ಪಟ್ಟಣದ ... ಮತ್ತು ಗುಂಡಿಗಳೂ ಸಹ ಮಾರಾಟಕ್ಕೆ ... ವುಗಳಲ್ಲದೆ ಎಲ್ಲಾ ತರಹದ ಪ್ರಿಂಟಿಂಗ್ ... ಆರ್ಡರ್ ವಗೈರೆ ... ಲ್ಲಿ ಆರ್ಡರು ಕೊಟ್ಟ ಕೂಡಲೇ ... ಎಂದ ನಿಮ್ಮ ... ಗಿದ್ ಹಣಕ್ಕೆ ... ದರದಲ್ಲಿ ... ಸಹ ಕೊಂಡುಕೊಳ್ಳಬಹುದು ... ಈ ಕಳಗಿನ ಅಡ್ರೆಸ್ಸಿಗೆ ಬರೆದು ತಿಳಿದುಕೊಳ್ಳಿ.

ನಾ ವು ಅಮ್ಮಣಿಚಂಡ ದೇವಯ್ಯ,
... ಪೇಟೆ ಜನರಲ್ ಮರ್ಚೆಂಟ್

ಪತ್ರವ್ಯವಹಾರ.

(ಬರೆಯುವವರು ಪಡುವ ಅಭಿಪ್ರಾಯಗಳಿಗೆ ಪತ್ರಿಕಾ ಕರ್ತರು ಉತ್ತರವಾದಿಗಳಲ್ಲ. ಸಂ)

ಕುದುರೆಯ ಶಕ್ತಿ.

ಮಹಾಶಯರೆ,

ಮಿ. ಕೋದಂಡ ಉತ್ತಯ್ಯನವರು ಅವರ ಪ್ರತಿನಿಧಿ ಸಭೆ ವಿಷಯ ಏನೇನೋ ಗಲಿಬಿಲಿ ಅಭಿಪ್ರಾಯವಿಟ್ಟುಕೊಂಡಂತೆ ಕಾಣುತ್ತದೆ. ಈ ಸಭೆಯನ್ನು ಸ್ವತಂತ್ರ ರಾಜ್ಯಗಳಲ್ಲಿ ಅಂದರೆ ಇಂಗ್ಲೆಂಡ್, ಜಪಾನ್ ಮುಂತಾದ ದೇಶಗಳಲ್ಲಿ ಇರುವ ಈ ಹೆಸರಿನ ಸಭೆಗಳಿಗೆ ಹೋಲಿಸಿರುತ್ತಾರೆ. ಇದು ಸರಿಯಲ್ಲ. ಇಂಥಾ ಸುಳ್ಳು ಅಭಿಪ್ರಾಯಗಳನ್ನು ಪ್ರಕಟಿಸಿ ಮೂಢ ತಿಳುವಳಿಕೆ ಇಲ್ಲದವರನ್ನು ಮೋಸಗೊಳಿಸಬಾರದು.

'ನಮಗೆ ಹೆಚ್ಚಿನ ಮಟ್ಟಿಗೆ ಸ್ವರಾಜ್ಯ ಈಗಲೇ ಸಿಕ್ಕಿದೆ' ಎಂತ ಬರೆದಿರುವದರಿಂದ ನಾವು ಸ್ವತಂತ್ರರು, ಸ್ವರಾಜ್ಯ ಇರುವವರು ಎಂತ ಮಿ. ಉತ್ತಯ್ಯನವರು ನಂಬಿರುತ್ತಾರೆಂತ ಕಂಡುಬರುತ್ತದೆ. ಇದು ನಿಜವೋ? ಸ್ವತಂತ್ರರಾಜ್ಯಗಳ ಸಭೆಗಳ ಮೆಂಬರುಗಳನ್ನು ಚುನಾವಣೆ ಪ್ರಕಾರ ಜನರು ಚುನಾಯಿಸುವದಾಗಿದೆ. ಅವುಗಳಿಗೆ ಸರಕಾರದವರೇ ರಾಜ್ಯಭಾರದ ಹಕ್ಕುಗಳನ್ನು ಕೊಟ್ಟಿರುತ್ತಾರೆ. ಮಿ. ಉತ್ತಯ್ಯನವರ ಸಭೆಗ ಅಂಥಾ ಹಕ್ಕುಗಳೇನೂ ಇಲ್ಲ. ನ್ಯಾಶನಲ್ ಕಾಂಗ್ರೆಸ್ ಸಭೆಯೂ ನಮ್ಮ ಜಮೀನ್ದಾರರ ಸಂಘದಂತೆಯೇ ಜನರಿಂದ ಕಟ್ಟಿಕೊಂಡ ಸಭೆಯಾಗಿದೆ. ಕಾಂಗ್ರೆಸ್ಸಿಗೆ ಇರುವಷ್ಟೇ ಅನುಕೂಲಗಳು ಜಮೀನ್ದಾರರ ಸಂಘಕ್ಕೂ ಇದೆ. ದೇಶಸೇವೆಮಾಡಿ ದೇಶದ ಜನರಿಗೆ ಒಳ್ಳೇದು ಮಾಡಬೇಕೆಂಬ ಅಭಿಲಾಷೆ ಮಿ. ಉತ್ತಯ್ಯನವರಿಗೆ ಇದ್ದರೆ ಅವರ ಬುದ್ಧಿ ಕುಶಲತೆಯು ಉಪಯೋಗಕ್ಕೆಲ್ಲಾ ಜಮೀನ್ದಾರರ ಸಂಘದಲ್ಲಿ ಅವಕಾಶವಿದೆಯಲ್ಲವೇ? ಇವರಿಗೆ ಅದು ಆಗದು. ಯಾಕೆಂದರೆ ಇವರ ದೇಶದ ಪ್ರತಿನಿಧಿ ಸಭೆಗೆ ಕೊಡಗೇತರರು ಸೇರ ಕೂಡದು. ಇಂಥಾ ಸಭೆಯನ್ನು ಪಾರ್ಲಿಮೆಂಟಿಗೆ ಹೋಲಿಸುವದು ಹೇಗೆ? ಇದು ಸ್ವತಃ ತನ್ನ ಪ್ರಯೋಜನಕ್ಕೆ ಬೈಬಲಿನ ಆಧಾರ ಕೊಟ್ಟಂತಾಗುತ್ತದೆಯಲ್ಲವೇ?

ತನ್ನ ಕುದುರೆ ಶಕ್ತಿಯು ಚೆನ್ನಾಗಿ ಇಲ್ಲವೆಂತಲೂ ಅದಕ್ಕೆ ಬೇಕಾದಷ್ಟು ಕಾಳನ್ನು ಕೊಡಲಿಕ್ಕೆ ತನಗೆ ಶಕ್ತಿ ಇಲ್ಲವೆಂತಲೂ ಮಿ. ಉತ್ತಯ್ಯನವರಿಗೆ ಈಚೆಗೆ ತಿಳಿದಿದೆ. ಆದ್ದರಿಂದ ತನ್ನ ಮುಪ್ಪಿನವರ ಸಹಾಯ ಕೇಳಲು ಪ್ರಾರಂಭಿಸಿದ್ದಾರೆ. ಮೊಟ್ಟೆಯನ್ನು ಒಡೆದು ಮರಿಮಾಡಲು ಆಗದಿದ್ದರೆ ಅಥವಾ ಅದನ್ನು ಬೇಯಿಸಲಿಕ್ಕೆ ಆಗದಿದ್ದರೆ ಅದನ್ನು ಸುಂಗಿಟ್ಟು ಎಲ್ಲವನ್ನು ಯಾಕೆ ಮರೆತು ಬಿಡಬಾರದು? ಈ ಅಸಹ್ಯವಾದ ಪ್ರಯತ್ನವೆಲ್ಲಾ ಮರೆತು ಬಿಡಲು ಇವರಿಗೆಲ್ಲರೂ ಸಹಾಯ ಮಾಡಬೇಕಾಗಿ ಅಪೇಕ್ಷಿಸುತ್ತೇನೆ.

ಬಿದ್ದಂಡ ಕರುಂಬಯ್ಯ.

ವೀರರಾಜೇಂದ್ರಪೇಟೆ ಬಳ್ಳಿಯಮಾಡು ಗ್ರಾಮದ ಪುಟ್ಟಿಚಂಡ ಕುಟುಂಬಸ್ಥರವರ ವಿಜ್ಞಾಪನೆ

ಕ್ರಿಸ್ತಮತಕ್ಕೆ ಸೇರಿದ ನಮ್ಮ ಮನೆ ಕಾಳಪ್ಪ ಯಾನೆ ಪೀಟರ್ ಕ್ಲಿಫರ್ಡ್ ತಾ. 7—1—1926ರ ಲೋಕಪಾವನ ಮತ್ತು 15—1—26ರ ಕೊಡಗು ಪತ್ರಿಕೆಗಳಲ್ಲೂ ಸಹ ನಮ್ಮ ಮನೆಯವರು ಮತ್ತು ಊರವರು ಸಹ ಸೇರಿ ತನ್ನನ್ನು ಕ್ರಿಸ್ತಮತದಿಂದ ಪುನಃ ನಮ್ಮ ಮತಕ್ಕೆ ಸೇರಿಸಿಕೊಂಡಿರುವುದಾಗಿ ಪ್ರಕಟನ ಮಾಡಿರುವುದು ಪೂರಾ ಸುಳ್ಳಾಗಿದೆ. ಅಲ್ಲದೆ ಇನ್ನು ಮುಂದಕ್ಕಾದರೂ ಪದ್ದಿರ ಕಾಳಪ್ಪನು ಯಾನೆ ಪೀಟರ್ ಕ್ಲಿಫರ್ಡ್ ಈ ವಿಷಯವಾಗಿ ಪ್ರಕಟನ ಮಾಡಿಸುವಂಥ ಸಂಗತಿಗೆ ದೇಶದ ಮಹಾನುಭಾವರು ಗಮನಕೊಡಬಾರದಾಗಿ ಈ ಮೂಲಕ ವಿಜ್ಞಾಪಿಸುತ್ತೇವೆ.

ಪಟ್ಟೇದಾರ.

ಕೊರನಂಡ ಅಪ್ಪಯ್ಯ ಪೊನ್ನಮ್ಮನ ವಂದನೆ.

ಮಹಾಶಯರೆ,

ನನ್ನ ಪತಿಯವರು ಜೀವಂತರಾಗಿರುವಾಗ ನಮಗೆ ತಕ್ಕ ಕಾಲದಲ್ಲಿ ಒತ್ತಾಸೆಮಾಡುತ್ತಿದ್ದ ಬಂಧು ಮಿತ್ರರಿಗೂ ನಂತರ ಅವರು ಶಿವಾಧೀನರಾದಮೇಲೆ ಮಾಡತಕ್ಕ ಕ್ರಿಯೆಗಳನ್ನು ಮತ್ತು ಇತರ ಒತ್ತಾಸೆಗಳನ್ನು ಕ್ಷಣಮಾತ್ರವೂ ತೊಂದರೆಯಿಂದು ನಿರೀಕ್ಷಿಸದೆ ತಮ್ಮ ಕೆಲಸವೆಂದು ಸರ್ವ ಭಾರವನ್ನು ತೆಗೆದುಕೊಂಡು ನಡೆಸಿಕೊಟ್ಟದ್ದಕ್ಕೆ ನಾನು ಎಷ್ಟು ವಂದಿಸಿದರೂ ಸಾಲದೆಂದು ನನಗೆ ತೋರುತ್ತದೆ.

ನನ್ನ ಪತಿಯವರು ಶಿವಾಧೀನರಾದನಂತರ ನನ್ನ ಮಿತ್ರ ಬಾಂಧವರುಗಳು ತಮ್ಮ ತಮ್ಮ ದುಃಖ ಸಂತಾಪಗಳನ್ನು ಸೂಚಿಸಿ ನನಗೆ ಮುಂದೆ ನಡೆಯಲು ಧೈರ್ಯವನ್ನೂ ಸಮಾಧಾನವನ್ನೂ ವಿಧಿಸಿ ಬರೆದ ತಿಳಿಸಿದ ಪತ್ರಗಳಿಗೆ ಪ್ರತ್ಯೇಕ ಪ್ರತ್ಯೇಕವಾಗಿ ನಾನು ಪ್ರತ್ಯುತ್ತರವನ್ನು ಬರೆಯಲು ನನಗೆ ವೃದ್ಧಾಪ್ಯ ಕಾಲವಾದ್ದರಿಂದ ಇದು ನನಗೆ ಸಾಧ್ಯವಾಗಲಿಲ್ಲವು. ಮತ್ತು ಉತ್ತರಕ್ರಿಯೆ ದಿನ ರಾತ್ರಿ ಭಕ್ತಿಪೂರ್ವಕವಾದ ಹರಿಕಥೆಯನ್ನು ಮಾಡಿದ ಮಾ॥ ಶ್ರೀ॥ ಬಿಟ್ಟಿಯಂಡ ಮುತ್ತಣ್ಣನವರಿಗೂ ಮತ್ತು ನನ್ನ ಪತಿಯವರು ಶಿವಾಧೀನರಾದ ದುಃಖ ಸೂಚನೆಯನ್ನು ತಿಳಿಸಲಿಕ್ಕೆ ಆಗದಿದ್ದರೂ ಆ ಭಾರವನ್ನು ತಲೆವಾಗಿ ವಹಿಸಿಕೊಂಡು ಈ ಸಂಗತಿಯನ್ನು ಪ್ರಕಟಿಸಿದಂತ 'ಕೊಡಗು ಲೋಕಪಾವನ' 'ಮತ್ತು ವೃತ್ತಾಂತ ಪತ್ರಿಕ' ಮುಂತಾದ ಪತ್ರಿಕೆಯವರಿಗೂ ನನ್ನ ಕೃತಜ್ಞತೆಯನ್ನು ನಾನು ಈ ಮೂಲಕ ಅರ್ಪಿಸುತ್ತೇನೆ.

ತಮ್ಮ ವಿಧೇಯಳಾದ
ಕೆ. ಪೊನ್ನಮ್ಮ.

ಅಯ್ಯಾ,

ನಾನು ಜನ್ಮ ಹಿಡುವಳಿದಾರನಾದರೂ ಕೆಲವು ವರ್ಷಗಳಿಂದ ವ್ಯಾಪಾರ ಮಾಡಬೇಕೆಂಬ ಅಭಿಲಾಷೆಯು ನನ್ನಲ್ಲಿ ಹುಟ್ಟಿ ಏನಾದ ವ್ಯಾಪಾರ ಮಾಡಬೇಕೆಂಬದಾಗಿ ಕೆಲವು ದಿವಸ ಅಲೆದಾಡಿ ನೋಡಿ ಆಖೈರಿನಲ್ಲಿ ಕೇವಲ ಪರದೇಶಿಯರ ಕೈವಶವಾಗಿರುವ ಮರದ ವ್ಯಾಪಾರವನ್ನು ಕೈಕೊಂಡೆನು. ಕೈಕೊಂಡಂದಿನಿಂದ ಕೆಲವು ವರ್ಷಗಳ ವರೆಗೆ ಪರದೇಶಿಯರ ಒಕ್ಕೆ ಅನ್ಯಪಕ್ಷದಿಂದಲೋ, ಈ ದೇಶದ ಸ್ವಭಾವಗಳಿಂದಲೋ, ಆಗಿನ ಕಾಲಾವಸ್ಥೆಯಿಂದಲೋ ನಾ ಸರ್ವಥಾ ಏನೊಂದೂ ಮತ್ತು ಯಾರಿಂದಲೂ ಯಾವ ಬಾಧೆ ಅನುಭವಿಸಲಿಲ್ಲ. ಇಲ್ಲದೆ ನಡೆಯುತ್ತಾ ಬರುತ್ತಿತ್ತು. ಕಾಲಕಾಲಕ್ಕೆ ಸರಿಯಾಗಿ ಕೇಳಿದ ಹಾಗೆಲ್ಲಾ ಏಲಂಗಳು ಸಿಕ್ಕುತ್ತಿತ್ತು. ಟೆಂಬರು ಬಿಲ್ಲು ಆಗದೆ ಇದ್ದ ಕಾಲಿಗೆ ಅರ್ಜಿಗಳನ್ನು ಕೊಟ್ಟ ಟೆಂಬರು ಬಿಲ್ಲು ಮಾಡಿ ನಾನು ಕೊಡಬೇಕೆಂಬದಾಗಿ ಸರಕಾರಕ್ಕೆ ಬರಕೊಂಡಲ್ಲಿ ತಕ್ಷಣವೇ ಕಾರ್ಯವು ನೆರವೇರುತ್ತಿತ್ತು. ಆ ಒಳ್ಳೆಯ ಕಾಲದಲ್ಲಿ ನೂರು ಮರ ವ್ಯಾಪಾರಿಗಳ ಪೈಕಿ ಒಬ್ಬನೇನಾದರೂ ದೇಶಿಯವನಾಗಿ ಇದ್ದರೂ ಇದ್ದಿರಬಹುದು. ಪರದೇಶಿಯರು ವ್ಯಾಪಾರದ ಗುಟ್ಟುಗಳನ್ನು ಕೇವಲ ಅಂಧಕಾರ



No License Required! **No License Required!**

Webley and Scott's Air Pistol, cal ·177 ... 22, Powerful and Accurate complete with a sample box of slugs, two spare ... h ... user for cleaning, and a booklet of instructions Rs. 30/– Free delivery.

Powerful German "Diana" Air gu... ...orm and Accurate, takes ... S A Pattern No· 1 Slugs and Darts· recommended f... Target Practice Rs 15 Free delivery·

No License required to purch... possess above items.

Brilliant Search Light Lamp for Nigh... ...30 – Free delivery·
12, 16 or 20 bore ld· Smokeless Powde... cart... ...s 1 to 8 Rs· 11 – per 100
Do· do do ...k shots „ 12,– „
Do. do. do Ba l „ 14,– „

We stock Arms· Ammunition and shooting requisites of all kinds and Quality Ranging from Re· 1/– to Rs· 1800/–

Apply for our Shooting Season's Clearance Sale Catalogue of Brand New **Goods.**

GOOLAMHUSSIAIN ALLIBHOY & SONS
Largest Importers of Fire Arms and Ammunition,
Cheapest priced firm in India,
24-3 **210 Abdul Rehman Street, BOMBAY·**

ದಲ್ಲು ಇದ್ದ ದೇಶೀಯ ಭೂಮಾಲಿಕರಿಗೆ ಕೊಂಚವೆ ಲಾಭ ಮಾತ್ರವಲ್ಲದೆ ಅಸಲನ್ನು ಸಹ ಗೋಚಿಕೊಂಡು ಪರದೇಶಕ್ಕೆ ತೆರಳುತ್ತಿದ್ದರು. ಹೀಗೆ ಹೋಗುತ್ತಿದ್ದ ದ್ರವ್ಯವನ್ನು ಸರಕಾರದವರೇ ಆಗಲಿ ದೇಶಾಭಿಮಾನಿಗಳೇ ಆಗಲಿ ಈ ವರೆಗೂ ಕಂಡುಹಿಡಿದಿದ್ದಾರೆಂಬುವುದನ್ನು ನಾನು ನಂಬುವುದಿಲ್ಲ. ಆದರೆ ಕೆಲವು ಯುವಕರು ಮಾತ್ರ ಇದನ್ನು ಕಂಡುಹಿಡಿದು ಪರದೇಶಕ್ಕೆ ಹೋಗುವ ಹೆಚ್ಚಿನ ಲಾಭವನ್ನು ಇಲ್ಲಿಯೇ ಉಳಿಸಬೇಕೆಂಬ ಹಟವನ್ನು ಹಿಡಿದು ಈ ವ್ಯಾಪಾರದ ಗ[illegible] ಭೂಮಾಲಿಕರಿಗೆ ಬೋಧಿಸಿ ಮೊದಲಿಗೆ ಈ ವ್ಯಾಪಾರ[illegible]ರು. ಅದುವರೆಗೆ ಮರಗಳನ್ನು ಏನೋ [illegible] ತಿಳಿದುಕೊಂಡು ನೋಡಿದ ಕ್ರಯದಲ್ಲಿಯೇ [illegible]ರು. ಈಗಲೀಗ ದೇಶೀಯ ವ್ಯಾಪಾರಿಗಳಿಂದ ಗುಟ್ಟು [illegible]ಯಿತಾಗಿ ಮರಗಳನ್ನು ಇವರಿಗೇನೇ ಕೊಟ್ಟದ್ದರಿಂದ ಅನೇಕರು ತಾವು ಕೊಂಡುಕೊಂಡ ಸೊತ್ತುಗಳ ಪ್ರೋರ್ಟ್, ಬೆಜ್ಜ, ಆ[illegible] ಮುಕ್ತಾಲು ಪಾಲು ಕ್ರಯವನ್ನು ಸಂಪಾದಿಸಿಕೊಂಡರು. ಇನ್ನು ಕೆಲವರು ಗಿರ್ವಿಯಾಗಿದ್ದ ತಮ್ಮ ಸೊತ್ತುಗಳನ್ನು ಬಿಡಿಸಿಕೊಂಡರು. ಕೆಲವರು ಈ ಕಳೆದ ಎರಡು ಮಳೆಗಾಲಗಳಿಂದ ಗದ್ದೆಗಳಲ್ಲಿ ಉಂಟಾದ ನಷ್ಟಗಳನ್ನು ಸರಕಾರದವರಿಂದಲೇ ಆಗಲಿ ಬೇರೆ ಹಣಗಾರರಿಂದಲೇ ಆಗಲಿ ಸಾಲ ತೆಗೆಯದೆ ರಿಪೇರಿ ಮಾಡಿಸಿಕೊಂಡರು. ಬಹಳ ಜನರು, ಲಂತಾನ ವಗೈರೆ ಕಾಡುಗಳನ್ನು ಕಡಿಸಿ ಕಿತ್ತಳೆ ಇತ್ಯಾದಿ ಫಸಲುಗಳನ್ನು ಸಾಲಮಾಡದೆಯೇ ಮಾಡಿಸಿಕೊಂಡರು. ಹೀಗೆ ಹಲವು ಬಾಬುಗಳಿಂದ ಜನರು ಈ ಮರಗಳ ದೆಸೆಯಿಂದ ಸುಖವನ್ನು ಪಡೆದರು. ಒಬ್ಬನಿಗೂ ಕೈಕಟ್ಟದೆ ಸಿಕ್ಕುವ ಈ ಸುಖಜೀವನವನ್ನು ಇನ್ನೂ ಅನೇಕ ಭೂಮಾಲಿಕರು ನೋಡಿ ತಮ್ಮ ಕಾಡುಗಳಲ್ಲು ಇರುವ ಮರಗಳನ್ನು ದೇಶೀಯ ವ್ಯಾಪಾರಗಳಿಗೆ ಹುಗ್ಗ ಕ್ರಯಕ್ಕೆ ಮಾರಿ ಆದಾಯ ಹೊಂದಿಕೊಂಡಿರುತ್ತಾರೆ. ಅವರ ಪೈಕಿ ಕೆಲವರ ಮರಗಳು ಟಿಂಬರು ಆಗಿರುವವೂ ಇರುತ್ತೆ. ಕೆಲವರದು ಆಗದೆ ಇರುವವೂ ಇರುತ್ತೆ. ಆಗದಿದ್ದರೂ ಮಾಮೂಲಿನಂತೆಯೇ ಸರಕಾರಕ್ಕೆ ಬರೆದು ಟಿಂಬರು ಬಿಲ್ಲು ಮಾಡಿಸಿಕೊಡುತ್ತೇವೆಯೆಂಬ ಒಪ್ಪಂದವನ್ನು ಕೊಟ್ಟಿರುತ್ತಾರೆ. ಆದರೆ ಏನು ಪ್ರಯೋಜನ. ಸರಕಾರಕ್ಕೆ ಬರೆದರೆ ಯಾವದೊಂದು ಹುಕುಂ ಇಲ್ಲ. ಇತ್ತ ವ್ಯಾಪಾರಿಗಳಿಗೆ ಕೊಟ್ಟ ವಾಯಿದೆಯೂ ಕಳೆದುಹೋಯಿತು. ಮರಗಳನ್ನು ಕಡಿಯಲಿಕ್ಕೆ ಬಿಟ್ಟರೆ ಸರಕಾರದವರಿಂದ ಪ್ರಾಸಿಕ್ಯೂಷನ್, ಬಿಡದಿದ್ದರೆ ವ್ಯಾಪಾರಿಯಿಂದ ಕರಾರು ಮುರಿತದ ನಷ್ಟಕ್ಕೆ ದಾವೆ. ಭೂಮಿಯಂತೂ ಮೊದಲೇ ಪರಾಧೀನವೆಂಬುವುದಾಗಿ ಭೂಮಾಲಿಕನು ದುಃಖಿಸುತ್ತಿರುವಾಗ್ಯೆ ವ್ಯಾಪಾರಿಯು ಬಂದು ಏನಪ್ಪಾ ನಿಮ್ಮ ಒಪ್ಪಂದವೇನಾಯಿತು ಎಂಬುವುದಾಗಿ ಕೇಳುವಾಗ್ಯೆ ಭೂಮಾಲಿಕನು ಆತನಿಗೂ ಉತ್ತರವೂ ಇಲ್ಲದೆ ಸ್ತಬ್ಧನಾಗಿ ನಿಂತುಕೊಂಡನು. ನೀವು ನಿಮ್ಮ ಅರ್ಜಿಗೆ ಸ್ಟಾಂಪು ಹತ್ತಿಸಲಿಲ್ಲವೋ ಎಂಬುದಾಗಿ ಕೇಳುವಾಗ್ಯೆ ಹೌದು ಸ್ವಾಮಿ ಸರಕಾರದವರು ತಮಗೆ ಸಲ್ಲತಕ್ಕದ್ದನ್ನೆಲ್ಲಾ ಮೊದಲೇ ನನ್ನಿಂದ ವಸೂಲು ಮಾಡಿರುತ್ತಾರೆ. ಸರಕಾರದವರು ಯಾವ ಕಾರಣಗಳಿಂದ ಹೀಗೆ ಮೌನದಲ್ಲಿದ್ದಾರೋ ಗೊತ್ತಾಗುವುದಿಲ್ಲವೆಂಬುವುದಾಗಿ ಹೇಳುವಾಗ್ಯೆ ವ್ಯಾಪಾರಿಯು ಒಳ್ಳೇದು, ಇದರ ಕಾರಣಗಳು ಏನು ಎಂದು ನೀವು ಹೇಳಬೇಕೆಂಬುದಾಗಿ ವಿಸ್ತರಿಸಿ ತಿಳಿದು ನೋಡುವಾಗ್ಯೆ ಮರಗಳನ್ನೆಲ್ಲಾ ಕಡಿದು ರಾಜ ಒಂದೆ ಮಾಡಿ ಬೇರೆಯನ್ನು ಹಾಳುಮಾಡುತ್ತಾರೆಂಬ ಕಾರಣದಿಂದ ಕೊಡದೆ ಇರುತ್ತಾರೆಂಬ ಪರ್ತಮಾನವು ವ್ಯಾಪಾರಿಗೆ ತಿಳಿಯಬಂತು. ಇದು ಕೇವಲ ಸುಳ್ಳು ಅನ್ಯಾಯದ ಯೋಚನೆಯಾಗಿರತ್ತೆ. [illegible]

[illegible]

ಇದ್ದರು? ಲಕ್ಷಾಂತರ ಮರಗಳನ್ನು ಬೀಳಿಸಿ ಬಗ್ಗೆ [illegible] ಸತ್ವವೂ ಶೈತ್ಯವೂ ಹೋಗಿ ದೇಶವು ಬಂಜೆಯಾಗುತ್ತದೆಂಬುವುದು ಎಲ್ಲಾ ತಿಳಿದ ದೇಶಾಭಿಮಾನಿಗಳಿಗೆ ತಿಳಿದಿಲ್ಲವೋ? ರಬ್ಬರ್ ತೋಟದ ಮರಗಳನ್ನು ಕಡಿದು [illegible] ವಾಗ್ಯೆ ಈ ದೇಶಾಭಿಮಾನಿಗಳು ಹಾಜರು [illegible] ಜೆಗೆ ಭೂಮಿಯೆಲ್ಲ ಬಂಜೆಯಾಗಿ ಕಂದಾಯ ಕಮ್ಮಿ [illegible]ಸಿಕೊಂಡಾಗ್ಯೆ ಹಾಜರಿರಲಿಲ್ಲವೋ? ಕಾಫೀತೋಟಗಳಲ್ಲು ಮರಗಳನ್ನೆಲ್ಲಾ ಕಡಿವ ಸುದ್ದಿಯು ಇವರು ಕೇಳಿದುದ್ದಿಲ್ಲವೋ? ಕಡಿಸಿದ ಮೇಲೆ ಕಂದಾಯ ಕಡಮೆ ಮಾಡಬೇಕೆಂಬುದಾಗಿ ಬರಕೊಂಡಲ್ಲು ಕಡಮೆ ಮಾಡುವುದಿಲ್ಲವೋ? ಈ ಕಾರ್ಯವು ರಾಜ ದ್ರೋಹವೋ ರಾಜ ಭಕ್ತಿಯೋ ಎಂಬುವುದನ್ನು ತಿಳಿದವರು ಹೇಳಲಿ. ಇವೆರಡರಲ್ಲು ಯಾವದಾದರೊಂದಾದರೆ ಪ್ರಜೆಗಳಿಗೂ ಸಹ ಹಾಗೆಯೇ ಸರಿ. ಇದೆಲ್ಲಾ ಬದಲಾಗಿ ಈಗತಾನೆ ಕುಟ್ಟದಲ್ಲು ಮೆ. ಟಪ್ಸೆಟು ಸಾಹೇಬರು ಕಾಫಿ ಸಾಗುವಳಿಗಾಗಿ ಬರೆದ 500 ಚಿಲ್ಲರೆ ಏಕರೆ ಕಾಡಿಗೆ ಹೇಗೆ ಟಿಂಬರ್ ಮಾಡಿದರು? ಇದೇ ರೀತಿ ಇನ್ನೂ ಒಂದೆರಡು ಸಿಂಡಿಕೇಟುಗಳನ್ನು ಫಾರಂ ಮಾಡಿ ಕಾಡುಗಳಿಗೆ ದರಖಾಸ್ತು ಮಾಡಿ ಟಿಂಬರು ಬಿಲ್ಲಿಗೆ ಬರೆದುಕೊಂಡಲ್ಲು ಮಾಡಿಕೊಡುತ್ತಾರೋ ಇಲ್ಲವೋ ಎಂಬುವುದನ್ನು ನಾವು ನೋಡೋಣ. ಅಯ್ಯೋ, ಇದೇ ನೋಡಿ, ಕೊ[illegible] ತಾನೇ ಕೊಚ್ಚಿಕೊಂಡ ಕೊಡಗರು ಮುಂದೆ [illegible] ಹಿಂದೆ ಎಂಬ ದುಬ್ಬಾಳಿಕೆಯು. ಈಗ ಯಾರು [illegible] ಹಿಂದೆ ಎಂಬುವುದನ್ನು ಕೊಡಗರು ಚೆನ್ನಾಗಿ [illegible] ಜಲಿ. ಅಯ್ಯೋ, ಈ ಬಡಾಯಿ ಪತ್ರಗ[illegible] ದು ಕೊಡಗರು ಪ್ರೈಮರಿ[illegible] [illegible] ಇದ್ದಾನೆ. ಕೊಡಗರ [illegible] ನದರಲ್ಲಿಯೇ ಇದ್ದಾರೆ. [illegible] ಂತೆ ಒಬ್ಬ ಮಂದೆ ಇದ್ದಾನೆ. [illegible] ಈಗ ಅವರವರ [illegible] ಸಿಕ್ಕಿರ[illegible] ಯೋ ಅವರಿಗೆ ಸಿಕ್ಕಿದಂತ ಬಂದು ಒ[illegible] ವು. ಉದಾಹರಣೆಗೆ [illegible] ಗಳ ಎಲ್ಲಾ ಹಕ್ಕು ಬಿಟ್ಟದೇ ಆಗಿರುತ್ತೆ. [illegible] ರವರ ಕಡಂಗದ ಎರಡು ತೆವರಿಗಳನ್ನು ಭ[illegible] ವ ಕಾರಣದಿಂದ (Land slip) ಭೂಮಾಲಿಕರಿಗೆ ಬಿಟ್ಟು [illegible]ಯನ್ನು ಮಾತ್ರ ಉಭಯ ಪಕ್ಷದವರ ಖರ್ಚನ್ನು ಕಾಪಾಡ ಲಿಕ್ಕೋಸ್ಕರ ಸರಕಾರದವರು ಇಟ್ಟುಕೊಂಡಿರುತ್ತಾರೆ. ಇಷ್ಟೆಲ್ಲಾ ಸುಧಾರಣೆಯು ಆದಾಗಿರುವಾಗ್ಯೆ ಅವರು ಏಕೆ ಕೊಡಗರ ಹಿಂದೆ ಬಂದಾರು. ಅವರು ನೀವು ಹೀಗೆ ಇರುತ್ತೀರೇ ಸಿರಿ, ಇಲ್ಲ ನಮ್ಮ ಜೊತೆಗೆ ಬರುತ್ತೀರೋ ಸಿರಿ? ಎಂದು ಹೇಳುವುದವಲ್ಲ ಸತ್ಯವೂ ನ್ಯಾಯವೂ ಉಂಟು. ಯಾತಕಂದರೆ ಕೊಡಗರು ದಿನ ದಿನಕ್ಕೆ ಹಿಂದಕ್ಕೇ ಹೋಗುತ್ತ ಮುಂದುವರಿಯುವುದಿಲ್ಲ. ಬಂದರೂ ಸರಕಾರದವರು ಬರಗೊಡಿಸುವುದಿಲ್ಲ. ಒಂದನೇ ಸಟ್ಲುಮೆಂಟು ತಂದು ಹಾಕಿದರು. ಎರಡನೆ ಸಾರಿಗ ಕೊಟ್ಟಿರುವ ಒಂದು ಕಣ್ಣಾನ ಕೌನ್ಸಿಲಿನಲ್ಲು ಗಂಧದ ಮರದ ಅರ್ಧ ಹಣವನ್ನೂ ಬಾಕಿ ಮರವನ್ನು ಟಿಂಬರು ಬಿಲ್ಲು ಮಾಡದೆಯೇ ಭೂಮಾಲಿಕರಿಗೆ ಮಾರಿಕೊಳ್ಳಲು ಬಿಡಬೇಕೆಂಬುದಾಗಿ ಕೇಳುತ್ತಿರುವಾಗ್ಯೆ ಟಿಂಬರು ಬಿಲ್ಲು ಮಾಡುವುದೂ ಇಲ್ಲ ಮರಗಳನ್ನು ಮಾರಲು ಬಿಡುವುದೂ ಇಲ್ಲವೆಂಬ ಕಾನೂನನ್ನು ಮಾಡಬೇಕೆಂಬುವುದು ಯಾವ ನ್ಯಾಯ. ಅಯ್ಯೋ, ಭೂಮಾಲಿಕರಿರಾ! ಎಲ್ಲರೂ ಎಚ್ಚರಗೊಂಡು ಇದರ ವಿಷಯದಲ್ಲು ಚಳವಳ ನಡಿಸದಿದ್ದರೆ ಇದರಿಂದ ಏನಾದರೊಂದು ಕೇಡು ಸಂಭವಿಸುವುದರಲ್ಲಿ ಸಂಶಯವಿಲ್ಲ. ಸರಕಾರವು ಏನೂ ಆರ್ಡರ್ ಕೊಡದೆ ಮೌನದಲ್ಲು ಇರುವುದೇ ಸಂಶಯ ಅದಕ್ಕೋಸ್ಕರ ವ್ಯಸನಪಟ್ಟು ಸುಖವಿಲ್ಲ. ಕೊಡಗಿನ ಮರಗಳ ಅರ್ಧ ಹಣವು ಸರಕಾರಕ್ಕೂ ಅರ್ಧ ಹಣವು ಭೂಮಾಲಿಕನಿಗೂ ಸೇರುವುದರಿಂದ ಉಭಯ ಪಕ್ಷದವರಿಗೂ ನಷ್ಟ ಉಂಟಾಗುತ್ತೆ. ದೇಶೀಯ ವ್ಯಾಪಾರಿಯರು ಫಾರೆಸ್ಟಿನಲ್ಲಿ ಮಾಡುವ ರೀತಿ ಕಾಡಲ್ಲಿರುವ ಮರಗಳನ್ನೆಲ್ಲಾ ಕಡಿಯದೆ ಕೆತ್ತಿ ಅರು ಅದಿ ಸುತ್ತು ಬರುವ ಮರಗಳನ್ನು ಮಾತ್ರ ಬೀಳಿಸಿ ಬಾಕಿ ಮರಗಳನ್ನೆಲ್ಲಾ ಅಲ್ಲಿಯೇ ಬಿಟ್ಟು ಬಿಡುವುದರಿಂದ ಕಾಡು ಬಂಜೆಯಾಗುವ ಸಂದರ್ಭ ಇಲ್ಲವೇ ಇಲ್ಲ. ಅದುದರಿಂದ ರಾಜ ಪ್ರತಿನಿಧಿಗಳು ಕಾಡು ಬಂಜೆಯಾಗುತ್ತೆಯೆಂಬ ಸುಳ್ಳು ವರ್ತಮಾನವೇನಾದರೂ ಸಿಕ್ಕಿದರೆ ಅದಕ್ಕೆ ಗಮನಕೊಡದೆ ಚೆನ್ನಾಗಿ ಅಜಮಾಯಿಸಿ ನೋಡಿ [illegible]ರವನ್ನು ರೀತಿಯ ವ್ಯಾಪಾರಗಳನ್ನು ಕಾಪಾಡಬೇಕೆಂಬ[illegible] ಬೇಡುತ್ತೇನೆ.

ಮನ ಒಂದ ರೀತಿ ರಾಜಕಾರ್ಯ[illegible] ಜಕಾರ್ಯ ಪ್ರಸಕ್ತನು ಆಗುವುದೂ [illegible] ದ ಸುಖವೂ ಸಿಕ್ಕುವುದಿಲ್ಲ. [illegible] ರಾಜಕಾರ್ಯ ಕ ಮನನ್ನು ತಪ್ಪಿಸಿ [illegible]

[illegible]

ರಾಜ ಪ್ರತಿನಿಧಿಗಳನ್ನು [illegible] ಅನುಕೂಲವು ದೊರಯುತ್ತೆ. [illegible] ದಾಗಿರುವುದು. ಯಾರು ತಾನೆ [illegible] ಒಂದು ಪ್ರಜಾಪ್ರತಿನಿಧಿಗಳು ಬಹುಪಾಲು [illegible] ಳನ್ನು ಕೊಟ್ಟಿರುವ ವ್ಯಾಪಾರಿಗಳ [illegible] ಅದಕ್ಕೆ [illegible] ಹೊಂದಿಕೊಂಡಿರುವ ಭೂಮಾಲಿಕರ ಕಷ್ಟಗಳನ್ನು ಮನಗಂಡು ಈ ಗಲಾಟೆಗಳ ಮೂಲ ಕಾರಣಗಳನ್ನು ವಿಚಾರಿಸಿ ಟಿಂಬರು ಬಿಲ್ಲು ಇಲ್ಲದೆಯೇ ಮರಗಳನ್ನು ಮಾರಾಟ ಮಾಡುವ ರೀತಿ ಮಾಡಿಸಿಕೊಡಬೇಕೆಂಬುದಾಗಿ ನನ್ನದೊಂದು ಕೋರಿಕೆ. ಮಹಾಸಭೆಯನ್ನು ಬದ್ಧಪಡಿಸುವ ಜವಾಬ್ದಾರಿಕೆಯು ಸ್ಥಳೀಯ ಸರಕಾರದವರಿಗೇನೇ ಇರುವಾಗ್ಯೆ ಅದು ಒಳ್ಳೆ ಸುಧಾರಣೆ ಯೇ ಆಗಬೇಕೆಂಬುದಾಗಿ ಯಾಕೆ ಕೇಳಬಾರದು. ಒಳ್ಳೆಯದು ಮಾಡಬೇಕೆಂಬುವುದಲ್ಲವೇ ಎಲ್ಲರ ಪ್ರಯತ್ನ.

ವ್ಯಾಪಾರಿ.

ಪರೆಯ ವಿಷಯ.

ಅಯ್ಯೋ,

ನಮ್ಮ ದೇಶದಲ್ಲಿ ವರ್ಷಾವರ್ಷಕ್ಕೂ ಯಾಸುಬಿಳಿ ಬಂದಾಗ್ಯೂ ನಮ್ಮ ದೇಶವೂ ಹೀನ ಸ್ಥಿತಿಗೆ ಬರುತ್ತದಲ್ಲ. ಇದಕ್ಕೆ ಕಾರಣವೇನು? ನಮ್ಮ ದೇಶಕ್ಕೆ ಒಂದು ಮಾರಿಯು ಬಂದಿದೆ. ಆ ಮಾರಿಯ ದೆಸೆಯಿಂದಲೇ ನಮ್ಮ ದೇಶವುಹೀನಸ್ಥಿತಿಗೆ ಬಂದದಾಯಿತು. ಮಾರಿಯೆಂದರೆ ಪರ. ಈ ಮಾರಿಯನ್ನು ಹೋಗಲಾಡಿಸಲು ನಮ್ಮ ದೇಶದವರೆಲ್ಲರೂ ಅಪೇಕ್ಷಿಸುವುದು ಅವಶ್ಯವಾಗಿದೆ.

ಅಹಾ ಇದೇನಾಶ್ಚರ್ಯ! ವರ್ಷಾವರ್ಷಕ್ಕೂ ನನಗೆ ಸಹ ಬಿಟ್ಟೆ ಭತ್ತ ಕಮ್ಮಿ, ನನಗೆ ಐದುಬಟ್ಟೆ ಕಮ್ಮಿ, ಎನ್ನುವದೇ [illegible]. ನನಗ ಜಾಸ್ತಿ ಎಂದು ನಾಲಿಗೆ ಎತ್ತುವವರೇ ಇಲ್ಲ. [illegible] ಕಾವೇರಿಯಮ್ಮನ ದಯದಿಂದ ಯಾ[illegible] ಕಮ್ಮಿ ಇಲ್ಲ. ವರ್ಷಾವರ್ಷಕ್ಕೂ ಪರೆಯನ್ನು ತೋ[illegible]. ನಾವು ಅರ್ಧಸೇರು ಜಾಸ್ತಿ ಮಾಡಿ ನಮಗೆ ಅಂ[illegible] ಕಮ್ಮಿ ಹೇಳುವುದಲ್ಲದೆ ನಮಗೆ ಯಾವಾಗಲೂ [illegible] ಇಲ್ಲ.

ಭತ್ತ ಕೊಡುವುದಿಲ್ಲವೆಂದರೆ ಕೈಯಲ್ಲಿ ಇಲ್ಲದವರು ಹದಿನೈದು ಸೇರಿನ ಪರೆಯಲ್ಲಾದರೂ ಕೊಡಲೇ ಬೇಕು.

ಅದಂತಿರಲಿ, ಕೊಡಗಿನಲ್ಲಿ ಸಾಧಾರಣ ಭತ್ತಕ್ಕೆ ಕ್ರಯ ಸಿಕ್ಕುವದು ಬಿಟ್ಟಂಗಾಲದಲ್ಲಿಯೇ ಸರಿ. ಆದರೇನು ಒಂದಕ್ಕೊಂದು ಮೀರುವ ಪರೆಯಲ್ಲದೆ ಹನ್ನೆರಡು ಹದಿನೈದು ಸೇರಿಗೆ ಕಮ್ಮಿಯಿರುವ ಪರೆಯೇ ಇಲ್ಲ. ಒಬ್ಬನೆ ಮಾಡೋಣ ಎಂದರೆ ನನ್ನ ಪರೆ ದೊಡ್ಡದು, ನಿನಗೆ ಇಷ್ಟವಿದ್ದರೆ ಕೊಡುವೆಂಬದಾಗಿ ಹೇಳುವರು.

ನಾವು ಬೆಳೆಸಿದ ಭತ್ತಕ್ಕೆ ನಾವುಗಳು ಕ್ರಯ ಹೇಳುವದಲ್ಲದೆ ಮಾಪಿಳ್ಳೆಯವರನ್ನು ನೆಲ್ಲ್‌ಕ್ ಜೆಲೆ ಎಂಬನೆ ಕಾಕ ಎಂದು ಕೇಳುವರು. ಆಗ ನಮ್ಮ ಅನರ್ಥವೇ ನಮಗ ಪರೆಯು ನಗದಾಗಿ ಐವತ್ತು ರೂಪಾಯಿ ಸಿಕ್ಕಿದರೂ ಸಾಕು. ನಮ್ಮ ದೇಶವು ಇನ್ನು ಮುಂದರಿಸುದು. ಅಲ್ಲದೆ ನಮ್ಮ ದೇಶವನ್ನು ನಾವೇ ಸುಲಿಗೆ ಮಾಡಲು ಬಿಡುವದು. ಬೆಳೆ ಒಂದ ಸಮಯದಲ್ಲು ದೊಡ್ಡ ಪರೆಯಲ್ಲಿ ಐತ್ತಮೂರಿ ಇಲ್ಲದ ಸಮಯದಲ್ಲು ರೂಪಾಯಿಗೆ ಹನ್ನೆರಡು ಹದಿಮೂರು ಸೇರಿನಂತೆ ಭತ್ತತಂದು ಜೀವನ ಮಾಡುವುದು. ಪರದೇಶದವರಿಗೆ ಪರೆಯಲ್ಲಿ ಭತ್ತಕೊಟ್ಟು ನಮ್ಮ ದೇಶದವರಿಗೆ ಸಾಲನಲ್ಲಿ ಕೊಡುವುದು ಯಾವಧರ್ಮ.

ಇಂತಿಷ್ಟು ಕಷ್ಟಗಳನ್ನು ಪರಿಹಾರ ಮಾಡಲಿಕ್ಕೆ ನಮ್ಮ ಹುಜರತ್ ಕೊಡಗು ಕಮಿಷನರವರನ್ನೂ ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರವರನ್ನೂ ದೇಶದ ಮುಂದಾಳುಗಳನ್ನೂ ಬೇಡಿಕೊಳ್ಳುತ್ತೇನೆ. ಇನ್ನು ಮುಂದಕ್ಕೆ ಹೀಗ ಮಾಡಬೇಕಂದರೆ ಸರಕಾರದವರ ಮೂಲಕ ಪರೆಗೆ ಕೋವಿಗೆ ನಂಬರು ಹಾಕಿದ ಹಾಗೆ ನಂಬರು ಹಾಕಿಸಿ ಪೊಲೀಸ್ ಇಲಾಖೆಯವರು ಎಚ್ಚರಿಕೆ ತೆಗೆದುಕೊಳ್ಳುವ ಹಾಗ ಮಾಡಿ ನಮ್ಮ ದೇಶದ ಬಡತನವನ್ನು ಹೋಗಲಾಡಿಸಬೇಕಾಗಿ ಬೇಡಿಕೊಳ್ಳುತ್ತೇನೆ.

ಕಾಳೇಂಗಳ ಚಿಣ್ಣಪ್ಪ.

ಕುತ್ತುನಾಡು ಮತ್ತು ಬೇರಳಿನಾಡು ರಸ್ತೆ ಮತ್ತು ಜನರ ಕಷ್ಟದ ವಿಷಯ.

ಅಯ್ಯೋ,

ದೇಶಬಾಂಧವರೆ, ನನ ಸರಕಾರದವರೇ, ನಮ್ಮನ್ನು ನಿಮ್ಮ ಜೊತೆಗೆ ಕರದುಕೊಳ್ಳುವರಾ, ನಮ್ಮ ಕಷ್ಟವನ್ನು ಪರಿಹರಿಸುವನು ಯಾರೂ ಇಲ್ಲವಲ್ಲಾ, ನಮ್ಮ ದುರಾದುಷ್ಟವೇ ಸರಿ, ನಮ್ಮ ನಾಡು ಅಹಾ! ಒಂದೆಯಾಗಿ ಯಾವ ಕಾರ್ಯಕ್ಕೂ ಮುಂದಕ್ಕ ಬರುವದಿಲ್ಲ. ಇದು ಯಾವದರ ಕಾರಣವೆಂದರೆ, ನಮ್ಮ ನಾಡನ್ನು ಮೂಳೆಯು ಸುತ್ತಿಕೊಂಡು ನಮ್ಮನ್ನು ಒಳ್ಳೆ [illegible] ವಿದ್ಯೆ ಕಲಿಯುವದನ್ನು ಮತ್ತು ವ್ಯಾಪಾರ ವಗೈರೆಗೂ ಸಹ [illegible] ವದಿಸ್ವಿಲ್ಲ. ನಮಗೆ ಸಿಕ್ಕಿಗ ಭೂಮಿಯು ನೂರಕ್ಕೆ [illegible] ಸತ್ಬ ಗೊಬ್ಬರ ಹಾಕಿದರೂ ಮೂವತ್ತು ಒಟ್ಟೆ ಬಿ[illegible]ಮನದು ಕಷ್ಟ. ಅಷ್ಟು ಬೆಳೆದರೆ ಕರ್ಜಾ ಕಟೆದು ಹತ್ತು [illegible] ಮನೆದದ ಅದಕ್ಕೆ ಆರ ರೂಪಾಯಿ ಬಾಡಿಗೆ ಕೊಡಬೇ[illegible] ಅದರಲ್ಲಿ ಹತ್ತು ಪರೆದ ಕಡೆಗೆ ಒಂದು ಉಪಕಾರ [illegible] ಗಂಜಾಂವಿನವರು ಕತ್ತಿಗಳ ಮೂಲಕ ತೆಗೆದುಕೊಂಡು [illegible]ಗುತ್ತಿದ್ದ ಸಾವಿರಾರು ರೂಪಾಯಿಗಳು ಉಳಿಯುತ್ತಿದೆ. [illegible]ರು ಹೇರಾಟ ಎತ್ತುಗಳನ್ನು ಮಡಗಿಕೊಂಡು ವ್ಯಾಪಾರ ಮಾಡುತ್ತಿದ್ದಾರೆ. ಆದರೇನು ಚೀಲ ಒಳ್ಳೆಯದಲ್ಲದೆ ದಾರಿಉದ್ದಕ್ಕೂ ಭತ್ತ ಚೆಲ್ಲುತ್ತಾ ಎಚ್ಚರಿಕೆ ತೆಗೆದುಕೊಳ್ಳದೆ ನಷ್ಟಬಂದದ್ದಕ್ಕೆ ಪರೆ ಬೆನ್ನಾಗಿ ನೋಡಿಯದೆ ತೆಗೆದುಕೊಂಡು ಹೋಗುತ್ತಿದ್ದಾರೆ. ಇಂತಿಷ್ಟು ಕಷ್ಟನಷ್ಟಗಳನ್ನು ಪರಿಹರಿಸಲಿಕ್ಕೆ ಬಿಟ್ಟಂಗಾಲದಿಂದ ಮರನಾಡಿಗೆ ಹೋಗುವ ರಸ್ತೆಯನ್ನು ದುರಸ್ತುಮಾಡಿ ಹೊಳೆಗೆ ಸಾಧಾರಣ ಗಾಡಿಹೋಗುವ ಸೇತುವೆ ಮಾಡಿಸಿ ಕೊಡಬೇಕಾಗಿ ನಮ್ಮ ಹುಜರತ್ ಕೊಡಗು ಕಮಿಷನರವರನ್ನು ಬೇಡಿ ಕೊಳ್ಳುವದಲ್ಲದೆ ನಮ್ಮ ದೇಶದ ಕೌನ್ಸಿಲ್ ಮೆಂಬರುಗಳನ್ನು ಸಹ ಬೇಡಿಕೊಳ್ಳುತ್ತೇನೆ. ರಸ್ತೆಯ ವಿಷಯ ಯಾವ ಕನಿಕರವೂ ಈ ವರೆಗೆ ತೋರಿಲ್ಲ.

ಈ ವರ್ಷ ಇದೇ ರೋಡಿಗೆ ಮೈಲಿಗೆ ಇಪ್ಪತ್ತು ರೂಪಾಯಿಗಳನ್ನು ಕೊಟ್ಟು ಕೆಲಸ ಮಾಡಿಸಿದ್ದು ಚೆನ್ನಾಗಿ ಇಲ್ಲವಲ್ಲ. ಒಂದೊಂದು ಒಡವು ಬಿದ್ದದ್ದನ್ನು ಸಹ ರೂಪಿತ ಪಡಿಸಲಿಲ್ಲ, ಈ ವಿಷಯವಾಗಿ ಪೊನ್ನಂಪೇಟೆ ನಾಡು ಪಾರುಪತ್ಯಗಾರರೂ ಸಹ ಸ್ವಲ್ಪ ಎಚ್ಚರಿಕೆ ತೆಗೆದುಕೊಳ್ಳಬೇಕಾಗಿ ಕೇಳಿಕೊಳ್ಳುತ್ತೇನೆ.

ಕೆ ಚಿಣ್ಣಪ್ಪ.

ಆರೋಗ್ಯ ಚಂದ್ರಿಕೆ.

ಮದ್ರಾಸ್.

ಸಂಪಾದಕರು: ಡಾಕ್ಟರ್ ಯು. ರಾಮರಾವ್, ಯಮ್. ಎಲ್. ಸಿ. ಯವರು.

ಆರೋಗ್ಯ ಚಂದ್ರಿಕೆಯು ಆರೋಗ್ಯ ಮತ್ತು ಶುಚಿತ್ವದ ವಿಷಯದಲ್ಲಿ ಸಾಮಾನ್ಯ ಪ್ರಜಾವರ್ಗಕ್ಕೆ ಶಿಕ್ಷಣ ದೊರೆಯುವದಕ್ಕಾಗಿ ಏರ್ಪಡಿಸಿದ ಒಂದು ಸಚಿತ್ರ ಮಾಸಪತ್ರಿಕೆ. ಈ ಮಾಸಪತ್ರಿಕೆಯು 'ಹೆಲ್ತ್' ಎಂಬ ಇಂಗ್ಲಿಷ್ ಮಾಸಪತ್ರಿಕೆಯ ಕನ್ನಡ ಪ್ರತಿಯಾಗಿದೆ. ಆರೋಗ್ಯ ಚಂದ್ರಿಕೆಯಲ್ಲಿ ಪ್ರಸಿದ್ಧರಾದ ಡಾಕ್ಟರುಗಳ ಮತ್ತು ಆಯುರ್ವೇದ ಪಂಡಿತರ ಲೇಖನಗಳು ಆಗಿಂದಾಗ್ಯೆ ಪ್ರಕಟವಾಗುವದು.

ಆರೋಗ್ಯ ಚಂದ್ರಿಕೆಯಲ್ಲಿರುವ ಲೇಖನಗಳು ಪಳಯದಾಗದೆ ಪುನಃ ಪುನಃ ಓದಲು ಅರ್ಹವಾದವುಗಳಾಗಿರುವವು. ಆರೋಗ್ಯ ಚಂದ್ರಿಕೆಯನ್ನು ತರಿಸಿ ಬೈಂಡ್ ಮಾಡಿಸಿ ಇಟ್ಟುಕೊಂಡರೆ ಎಲ್ಲರಿಗೂ ಉಪಯುಕ್ತವಾಗುವ ಅಮೂಲ್ಯವಾದ ಗ್ರಂಥವಾಗುವದು. ಅಂಚೆಯ ವೆಚ್ಚ ಸೇರಿ ಈ ಪತ್ರಿಕೆಯ ಚಂದಾ ಮೊಬಲಗು ವರ್ಷಕ್ಕೆ 1-8-0. ಬಿಡಿ ಪತ್ರಿಕೆ 1ಕ್ಕೆ 0-2-0. ಹಿಂದಿನ ಸಂಚಿಕೆಗಳು ಕೂಡಾ ದೊರೆಯುವವು.

ಪತ್ರವ್ಯವಹಾರಕ್ಕೆ: 'ಆರೋಗ್ಯ ಚಂದ್ರಿಕೆ' 321,

ಮನೋಲ್ಲಾಸಿನಿ ತೈಲ

ತಲೆನೋವು, ತಲೆ ತಿರುಗುವದು, ತಲೆಯಲ್ಲಿ ಕಜ್ಜಿ, ಕಿವಿ... ಕಣ್ಣು ನೋಯುವದು, ಕಿವುಡುತನ, ಕಣ್ಣು ನೋವು ... ಬಾರದಿರುವದು, ನೆನಪು ಶಕ್ತಿ ಕುಂದಿಹೋಗುವದು ... ಖಂಡಿತ ಗುಣಮಾಡುತ್ತದೆ. ಉದುರುವ ಕೂದಲನ್ನು ... ವ ಕೂದಲನ್ನು ಬೆಳೆಯಿಸಿ ಕೂದಲಿಗೆ ... ಕೊಟ್ಟು ಅಕಾಲಕ್ಕೆ ಹಣ್ಣಾಗುವ ಕೂದಲನ್ನು ತಡೆದು ... ಸ್ಥಳದಲ್ಲಿ ಹೊಸ ಕೂದಲನ್ನು ಹುಟ್ಟಿಸುತ್ತದೆ. ... 3 ಸೀಸೆಗೆ 2-10-0, ಒಂದು ದೊಡ್ಡ ಸೀಸೆಗೆ ರೂ 2. 3 ಸೀಸೆ 5-8-0

ಚಂದನಾಸವ.— ಇದು ಪ್ರಮೇಹ ಮೂತ್ರ... ಮಿತಿಮೀರಿ ಹೋಗುವದು, ಮೂತ್ರಕೋಶದಲ್ಲಿ ಉರಿ, ಮೂತ್ರನಾಳದಲ್ಲಿ ಹುಣ್ಣು, ಮೂತ್ರ ... ಮೂತ್ರನಾಳದಿಂದ ಕೀವು ಬರುವದು, ... ಹೋಗುವದು, ಆಗಾಗ್ಗೆ ಮೂತ್ರ ಬರುವದು, ... ಪುರುಷತ್ವ ಇಲ್ಲದಿರುವದು, ದೇಹದಲ್ಲಿ ಉರಿ, ಬಾಯಾರಿಕೆ, ... ಮೂತ್ರನಾಳದಲ್ಲಿ ಚುಚ್ಚುವ ನೋವು ಇವುಗಳ ... ಸರಿಗೂ ಹೆಂಗಸರಿಗೂ ಇದು ಅತ್ಯುತ್ತಮ. ಬಾಟ್ಲಿಗೆ ರೂ 1— 3ಕ್ಕೆ ರೂ 4, ಡಜನಿಗೆ ರೂ 15

ರೋಮನಾಶಿನಿ.— ಈ ಹುಡಿಯನ್ನು ... ಯಲ್ಲಿ ರೋಮವಿರುವ ಭಾಗಕ್ಕೆ ಹಚ್ಚಲು ರೋಮವು ಉದುರಿ ... ವದು. ಡಬ್ಬಿ ಒಂದಕ್ಕೆ 6 ಆಣೆ, 3 ಡಬ್ಬಿಗಳಿಗೆ ರೂ 1 1 ಡ 3-8 0

ದದ್ರುಘ್ನಲೇಪ.— ಇದನ್ನು ಗಜಕರ್ಣದ ಮೇಲೆ 2 3 ... ಹಾಕುವಷ್ಟರಲ್ಲಿ ಗುಣ ಬರುತ್ತದೆ. ಡಬ್ಬಿಗೆ ಆ 6, ... ರೂ 1. ಡಜನಿಗೆ ರೂ 3-8-0

ನಾರೀಸಖಿ.— ಇದು ಸ್ತ್ರೀಯರ ಹೊಟ್ಟೆನೋವು, ಅಧಿಕ ... ಶ್ವೇತಸ್ರಾವ, ಬಿಳಿಪ್ರದರ, ಮುಟ್ಟು ದೋಷಗಳು ಮತ್ತು ಗರ್ಭಕೋಶದ ವ್ಯಾಧಿಗಳನ್ನು ಗುಣ ಮಾಡುತ್ತದೆ. ಸೀಸೆ ಒಂದಕ್ಕೆ ರೂ. 2

ಅಂಗ್ರೈಟೋಸು.— ಉಬ್ಬಸ ವ ಕ್ಷಯದ ಕೆಮ್ಮು, ಅನೇಕ ದಿವಸಗಳಿಂದ ಬರುವ ಕೆಮ್ಮನ್ನೂ ಕಫವನ್ನೂ ಗುಣ ಮಾಡುತ್ತದೆ. ಡಬ್ಬಿ ಒಂದಕ್ಕೆ 2-8-0. 3 ಡಬ್ಬಿಗಳಿಗೆ ರೂ 7

ಅಮೃತಾರಿಷ್ಟ.— ಇದು ಕ್ವಿನೈನು ಬೆರಸದಿರುವ ಉತ್ತಮ ಮಲೇರಿಯಾ ಔಷಧಿ. ಎಲ್ಲಾ ತರದ ಜ್ವರಕ್ಕೆ ಉತ್ತಮ. ಬಾಟ್ಲಿಗೆ ರೂ 1-8-0, 3ಕ್ಕೆ ರೂ 4, ಡಜನಿಗೆ ರೂ 15

ಲೋಹಾಸವ.— ಇದು ಜ್ವರಗಳಿಗೆ ಮತ್ತು ಮಲೇರಿಯದಿಂದುಂಟಾದ ಅಶಕ್ತತೆಗೆ ದಿವ್ಯವಾದ್ದು. 1 ಬಾಟ್ಲಿಗೆ ರೂ. 1-8-0, 3ಕ್ಕೆ ರೂ 4

ನಮ್ಮ ಕೆಟಲಾಗು ತರಿಸಿ ನೋಡಿರಿ.

ವಿಲಾಸಿ-ಮನೋಲ್ಲಾಸಿನಿ ಕಂಪೆನಿ,

52—5 9 **ಮಂಗಳೂರು, ಕಂಕನಾಡಿ.**

ಡಾಕ್ಟರ್ ಎಸ್ ಎನ್ ಅಯ್ಯಂಗಾರ್, ಬಿ. ಎ.,

ಎಲ್. ಆರ್. ಸಿ. ಪಿ. ಅಂಡ್. ಎಸ್. (ಎಡಿನ್‌ಬರ್ಗ್)

ಎಲ್. ಎಫ್. ಪಿ. ಅಂಡ್ ಎಸ್., [ಗ್ಲಾಸ್ಗೋ]

ದಂತ ವೈದ್ಯರು

ಮಡಿಕೇರಿ ಮಹದೇವಪೇಟೆಯಲ್ಲಿ ... ಸಿದ್ದೇಶ್ವರವರ ಅಂಗಡಿಯ ಎದುರಿನ ಮನೆಯಲ್ಲಿ ಇಳಿದುಕೊಂಡಿರುತ್ತಾರೆ. ಇಚ್ಛೈಸುವವರು ಅವರನ್ನು ಇಲ್ಲಿ ಭೇಟಿಮಾಡಬಹುದು.

ಅತ್ಯಂತ ಸುಲಭ ದರದ ಮತ್ತು ಹಿಂದಿನಿಂದ ಉತ್ತಮ ತರದಲ್ಲಿ ನಡಿಸಲ್ಪಡುತ್ತಿರುವ ಲೈಫ್ ಆಫ್ ಇಂಡಿಯಾ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್, ಕಲ್ಕತ್ತಾ, ... ಜೀವವಿಮೆ ಮಾಡಿ ತುಂಬಾ ಲಾಭ ಹೊಂದಿರಿ.

ಏಜೆಂಟ್—

ಎನ್. ರಾಮಣ್ಣ,

ಮಹದೇವಪೇಟೆ,

ಮಡಿಕೇರಿ

"ಲೋಕರಹಸ್ಯ."

ಕೃಷಿಯ ಅತ್ಯುತ್ತಮ ರೀತಿಗಳು, ವ್ಯಾಪಾರದ ವಿಷಯಗಳು, ಹೆಂಗಸರಿಗೆ ಬೇಕಾದ ಗೃಹಕೃತ್ಯದ ವಿಷಯಗಳು, ಹುಡುಗಿ, ಮಕ್ಕಳನ್ನು ಸಾಕುವ ವಿಷಯಗಳು, ಬಡವರಿಗೆ ಬೇಕಾದ ಹಣ ಸಂಪಾದನೆಯ ವಿಷಯಗಳು, ರಸಿಕರಿಗೆ ವಿನೋದ ವಿಚಾರ, ರಾಜಕೀಯ ವಿಷಯಗಳು, ಆಯುರ್ವೇದ ಮುಂತಾದ ವೈದ್ಯ ಸಂಗ್ರಹ ಪ್ರತಿಯೊಬ್ಬನೂ ತಿಳಿಯಬೇಕಾದ 'ಲೋಕ' ವಿಚಾರ, ವಿದ್ಯಾ ವಿಷಯ, ವೇದಾಂತ ವಿಚಾರಗಳಿಂದ ... ತುಂಬಿ ತುಳುಕುತ್ತಿರುವ ಈ ಮಾಸ ಪತ್ರಿಕೆಗೆ ವರ್ಷಕ್ಕೆ ಚಂದಾ ರೂ 3-8-0. ಮಾದರಿ ಸಂಚಿಕೆಗೆ 0-5-0

ಪ್ರತಿ ತಿಂಗಳಲ್ಲೂ 60 ಪುಟಗಳಿಗೆ ಕಡಿಮೆಯಿಲ್ಲದೆ ವಿಷಯಗಳಿರುತ್ತವೆ.

"ಲೋಕರಹಸ್ಯ" ಆಫೀಸ,

ವೀರರಾಜೇಂದ್ರಪೇಟೆ.

(ಕೊಡಗ.)

21

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್ ಕೋ ಆಪರೇಟಿವ್ ಸೊಸೈಟೀಸ್ ಆಕ್ಟಿನ ಪ್ರಕಾರ ರಿಜಿಸ್ಟರಾಗಿದೆ.

		ರೂ
ಶೇರ್ ಬಂಡವಾಳ	—	50 00
ಪಡೆದಿರುವ ಶೇರ್ ಮೊಬಲಗು	—	989
ಒಟ್ಟು ಬಂದ ಠೇವಣಾತಿ	—	90,603

ಈ ಬ್ಯಾಂಕಿನಿಂದ ಕೊಡಗು ಜಿಲ್ಲೆಯ ಸಹಕಾರಿ ಸಂಘಗಳಿಗೇನೇ ಹೊರತಾಗಿ ಸಾಲ ಕೊಡಕೂಡದು.

ಒಂದು ವರ್ಷ ಮಾಯಿದೆ ಆದವ ಹಣಕ್ಕೆ ಬಡ್ಡಿ ... ಠೇವಣಾತಿಗಳಿಗೆ ಶೇಕಡ ... ರೂ 6—4—0ರ ದರದಲ್ಲಿ ಬಡ್ಡಿ ದೊರೆಯುತ್ತೆ. ಕಡಿಮೆ ಮಾಯಿದೆಯ ಠೇವಣಾತಿಗಳಿಗೆ ಶೇಕಡ ... ಬಡ್ಡಿ ದೊರೆಯುತ್ತೆ.

ವರ್ಷಕ್ಕೊಂದಾವರ್ತಿ ಕೋ ಆಪರೇಟಿವ್ ರಿಜಿಸ್ಟ್ರಾರವರು ಲೆಕ್ಕ ಆಡಿಟ್ ಮಾಡುತ್ತಾರೆ.

ಪ್ರೆಸಿಡೆಂಟರು	ಟ್ರೆಜರರ್,
ಕೊಡಂದೇರ ಕುಟ್ಟಯ್ಯನವರು,	ಯಂ ಭುಜಂಗರಾಯರು
ರಾಯ್ ಬಹದ್ದೂರ್	ಬಿ. ಎ. ಬಿ. ಎಲ್.,

ಸೆಕ್ರೆಟರಿ

ಸಿ. ಎಂ. ವೆಂಕಪ್ಪಯ್ಯನವರು, ಬಿ. ಎ., ಬಿ. ಎಲ್.

ತಾರೀಕು 29—8—1925

ಮುದ್ದಾದ ಪುಸ್ತಕ! **ಮುದ್ದಾದ ಮುದ್ರಣ!!**

ಶರೀರ ಸುಖ, ಸಂಪತ್ತು, ... ಗಳನ್ನು ಸಂಪಾದಿಸಲು ಸಂಧಾನಗಳನ್ನೂ ಮತ್ತು ಶರೀರ ಮರ್ಮ ಶಾಸ್ತ್ರ (ಕಾಮಶಾಸ್ತ್ರ) ವನ್ನೂ ತಿಳಿಸುವ

ಮರ್ಮ ಶಾಸ್ತ್ರವೆಂಬ ಕಾಮಶಾಸ್ತ್ರ

ಈ ಪುಸ್ತಕವು ... ಇಂಗ್ಲೀಷ್, ಹಿಂದುಸ್ಥಾನಿ, ಸಂಸ್ಕೃತ ಮುಂತಾದ ಭಾಷೆಗಳಲ್ಲಿ ... ಕನ್ನಡಕ್ಕೆ ತರ್ಜುಮೆ ಮಾಡಿ (84 ಚಿತ್ರಪಟಗಳ ಸಹಿತ) ... ಪುಸ್ತಕದಲ್ಲಿ ಸ್ತ್ರೀ ಪುರುಷರಿಗೆ ಬೇಕಾದ ಎಲ್ಲಾ ಮರ್ಮ ... ಸ್ತ್ರೀ ಪುರುಷರಿಗೆ ಉಂಟಾಗುವ ಎಲ್ಲಾ ತರದ ... ವ್ಯಾಧಿಗಳು ಮತ್ತು ... ಚಿಕಿತ್ಸೆಗಳೂ ಇನ್ನೂ ಅನೇಕ ತರದ ಮರ್ಮಗಳೂ ... ಸಹಿತ ತುಂಬಿದ ... ಕೇಳಿದ ಮಾತ್ರಕ್ಕೆ ಸಂತೋಷವಾಗುವದು. ಆದರೆ ... ಯಾರಿಗೆ ತಾನೇ ಸುಶೋಭಿಸಲಾರದು.

ಕ್ರಯ ಪುಸ್ತಕ ಒಂದಕ್ಕೆ ಬರೇ ಒಂದು ರೂಪಾಯಿ ರೂ. 1-0-0

Ramachander Rao & Co,
Post BoxNo 232,
Madras

ಟಿ. ರಾಮಚಂದ್ರರಾವ್ ಅಂಡ್ ಕೊ,
ಪೋಸ್ಟ್ ಬಾಕ್ಸ್ ನಂ. 232.
ಮದ್ರಾಸ್.

5

A Lot for SELECTION of Single Barrel Breach Loading Guns at LOWEST PRICE EVER OFFERED.



Original Browning S B B L 12 bore Take down hammerless Automatic Ejector Gun, with safety catch .... .Price, Rs 140/

Do do but by **Winchester** or **Remington.** .. Price, Rs 160/-

Weshoisten or **Remington S B. B L** 12 bore Six Shots Hammerless Repeating gun, 32 inches barrel with Safety catch .. Price, Rs 150/-

German S B B L 12 bore Hammerless Ejector Gun, 32 inches German Steel Barrel with safety catch . Price Rs 65/

Continental Make Do Price, Rs. 55/-

Webley & Scott's S B. B L 12 bore Semi Hammerless Ejector Gun, 32 inches Webley's Steel Barrel, ... Price, Rs 75/

The above Guns can be had in 16, 20, & 410 bore same as above in 12 bore **Special "Duck Gun"** inches barrel .. ... Price, Rs 80/

W W Greener's "Gaffer" S B B L 12 bore ... Action Ejector Gun, 26 inches Greener's Steel Barrel .... Price, Rs 75/

W. W. Greener's as above but **Long Range "Duck Gun"** with 32 inches barrel, and chamber for 2¾ inches to 3 inches case . ... Price, Rs 90/-

Midland's "Knock-About" S. B B L Ejector Hammer Gun 32 inches barrel. .. Price, Rs 55/-

Continental Make S. B B L folding Pattern Hammer Gun, 32 inches barrel beautifully engraved and carved . .. Price. Rs. 45 .

J Steven's 12 bore Ejector Hammer Gun, 32 inches Steel barrel .... Price, Rs 45

Do do 'Dread Nought' with Long Breech . . . Price, Rs. 50/-

Any of the above of J Stevens Special Duck Gun with 36 inches barrel. Price, Rs. 5/- Extra.

ENQUIRIES SOLICITED.

THE BOMBAY ARMOURY,
331, ABDUL REHMAN STREET,
BOMBAY 2.

21—12

MY SCIENTIFIC SYSTEM OF GRADUATED PHYSICAL CULTURE

SENT FREE TO EVERY ONE

This will show you some of my remarkable achievements in Health building exercises, many pages with nice photographs of myself and a number of my pupils. Read what they say about my system. Don't take my word for it. This book will be an impetus, an inspiration to every young man. All I ask is the price of postage two annas. Remember this does not obligate you in any way, so don't delay one minute in your life. Write for this big book now while it is on your mind.

Prof. M. V. Krishna Rao,

P O Basuvangudi, G I P
(BANGALORE CITY)

ಆಂಧ್ರ ಆಯುರ್ವೇದಿಕ್ ಫಾರ್ಮಸಿ
ಬ್ರಾಂಚ್ ಬೆಂಗಳೂರು ಸಿಟಿ

ಚ್ಯವನಪ್ರಾಶ ಲೇಹ.

ಇದು ಸರ್ವೋತ್ಕೃಷ್ಟವಾದ ಗಿಡಮೂಲಿಕೆಗಳಿಂದ ತಯಾರಿಸಲ್ಪಟ್ಟ ಆಯುರ್ವೇದ ರಸಾಯನೌಷಧವು. ವಿದ್ಯಾರ್ಥಿಗಳೂ ವಿಶೇಷವಾಗಿ ಬುದ್ಧಿಯನ್ನು ಪ್ರಯೋಗಿಸಿ ಕೆಲಸ ಮಾಡುವವರೂ ಈ ಲೇಹವನ್ನು ಸೇವಿಸಿದರೆ ವಿಶೇಷವಾಗಿ ಬುದ್ಧಿಶಕ್ತಿಯನ್ನೂ ಜ್ಞಾಪಕಶಕ್ತಿಯನ್ನೂ ಹೊಂದುವರು. ದೀರ್ಘಕಾಲದ ವ್ಯಾಧಿಯಿಂದಾಗಲೀ ಕಷ್ಟ ನಡತೆಯಿಂದಾಗಲೀ, ಸ್ವಭಾವ ಶಕ್ತಿಯ ಕೊರತೆಯಿಂದಾಗಲೀ ಶರೀರ ಕಾಂತಿಯು ಕುಂದಿ ರಕ್ತ ಕೆಟ್ಟು ಇಂದ್ರಿಯ ದೌರ್ಬಲ್ಯ ಮೊದಲಾದ ವಿಕಾರಗಳಿಂದ ಪೀಡಿತರಾಗಿರುವವರು ಈ ಲೇಹವನ್ನು ಸೇವಿಸಿದರೆ ಈ ತರದ ವಿಕಾರಗಳನ್ನೆಲ್ಲಾ ಪರಿಹರಿಸಿ ದೇಹಕ್ಕೂ ಮನಸ್ಸಿಗೂ ಉಲ್ಲಾಸವನ್ನುಂಟುಮಾಡಿ ಮಾಂಸ ಖಂಡಗಳಿಗೂ ನರಗಳಿಗೂ ಬಲವನ್ನು ಕೊಟ್ಟು ದೇಹಪುಷ್ಟಿಯನ್ನುಂಟುಮಾಡಿ ನವಚೈತನ್ಯವನ್ನುಂಟುಮಾಡುವುದು. ಅಲ್ಲದೆ ಆರೋಗ್ಯದೃಢಶರೀರವುಳ್ಳವರಾಗಿ ದೀರ್ಘಕಾಲ ಬದುಕುವರು. ಕೆಮ್ಮು ಉಬ್ಬಸ ವ್ಯಾಧಿಯುಳ್ಳವರಿಗೂ ವಿಶೇಷವಾಗಿ ಕ್ಷಯರೋಗಿಗಳಿಗೂ ಇದು ಸಂಜೀವಿನಿಯೇ ಸರಿ. ಚರಕ ಸಂಹಿತೆಯಲ್ಲಿ ಇದರ ಗುಣವು ಅದ್ಭುತವಾಗಿ ಹೇಳಲ್ಪಟ್ಟಿದೆ. ೧೦ ತೊಲೆಗೆ ೧ ರೂಪಾಯಿ. ೪೦ ತೊಲೆಗೆ ೩ ರೂಪಾಯಿ.

ಎಲ್ಲಾ ಕಡೆಯಲ್ಲಿಯೂ ಏಜಂಟರು ಬೇಕು.

ಸೂಚನೆ.- ಇಲ್ಲಿ ಶಾಸ್ತ್ರೀಯವಾದ ಎಲ್ಲಾ ಔಷಧಗಳೂ ಹೋಲ್ಸೇಲ್ ಕ್ರಯಕ್ಕೆ ಸಿಗುವುವು. ಆಯುರ್ವೇದ ಭೂಷಣ ಕೆ. ನಾರಾಯಣರಾವ್ ಎ ಎಂ ಎ ಸ ಯವರು ರೋಗಿಗಳನ್ನು ಪರೀಕ್ಷಿಸಿ ಚಿಕಿತ್ಸೆಯನ್ನು ಪ್ರತಿದಿನವೂ ನಡಿಸುವರು. ವಿಶೇಷ ಸಂಗತಿಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಟಿ. ಸಿ. ಎಸ್. ಮುನಿಯಂ ಅಂಡ್ ಕೋ,
ಮ್ಯಾನೇಜಿಂಗ್ ಏಜಂಟ್ಸ್, ಆಂಧ್ರ ಆಯುರ್ವೇದಿಕ್ ಫಾರ್ಮಸಿ,
16—15 ೬೬ ಚಿಕ್ಕಪೇಟೆ, ಬೆಂಗಳೂರು ಸಿಟಿ

ಕಿರ್ಲೋಸ್ಕರ ಗಾಣಗಳು.

ಈ ಕೆಳಗಿನ ಕಬ್ಬಿನ ಗಾಣಗಳು ನಮ್ಮ ಕಾರ್ಖಾನೆಯಲ್ಲಿ ತಯಾರಾಗುತ್ತವೆ

೧. ಕಿರ್ಲೋಸ್ಕರ ನಂ ೫.
೨ "ಕಿಸಾನ"
೩ "ಕಮಲ ಚರಕ"

ಇವುಗಳ ಸವಿಸ್ತಾರ ಸಂಗತಿ ಬಗ್ಗೆ ಹಾಗೂ ಬೆಲೆಯ ಬಗ್ಗೆ ಕೂಡಲೇ ತಿಳಿದುಕೊಳ್ಳಿರಿ

ಕರ್ನಾಟಕ ತರುಣರ ಉನ್ನತಿಗೋಸ್ಕರ
ಕಿರ್ಲೋಸ್ಕರ ವಾರ್ತೆ,
ಎಂಬ ತಿಳಿಗನ್ನಡ ಮಾಸ ಪತ್ರಿಕೆಯನ್ನು ಪ್ರಕಟಿಸುತ್ತೇವೆ. ವಾ ಚ. ೧॥ ರೂ. ಮಾದರಿ ಸಂಚಿಕೆ ಪುಕ್ಕಟೆ

ಕಿರ್ಲೋಸ್ಕರ ಬಂಧು, ಲಿಮಿಟೆಡ್.
ಕಿರ್ಲೋಸ್ಕರವಾಡಿ,
16—13 ಜಿ. ಸಾತಾರ್.

ಲೋಕಪ್ರಸಿದ್ಧವಾದ! ಅನುಭವಸಿದ್ಧವಾದ!

ಮುಪ್ಪುದಿವಸಗಳಲ್ಲಿ ಗುಣಸಿಕ್ಕದಿದ್ದರೆ ಔಷಧಿಯ ಕ್ರಯ ವಾಪಾಸ. ಜೀರ್ಣಶಕ್ತಿ, ರಕ್ತವೃದ್ಧಿ, ಧಾತುಪುಷ್ಟಿ, ಮನೋಲ್ಲಾಸ ಸವನಾನಂದ ಮೊದಲಾದ ಸುಖ ಜೀವನಕ್ಕೆ ಬೇಕಾದ ಆರೋಗ್ಯದಾಯಿನಿ

ಟ್ರೇಡ್ ಮಾರ್ಕ್] **ಅಗಸ್ತ್ಯ** [ನೋಡಿ ಎಚ್ಚರಿಕೆ

ಮನ್ಮಥ ಚಿಂತಾಮಣಿ ಲೇಹ

ರಿಜಿಸ್ಟರಾ ಆದದ್ದು.

ಆಬಾಲವೃದ್ಧ ಸ್ತ್ರೀ-ಪುರುಷರ ಅನೇಕ ರೋಗಗಳಿಗೆ ವಿಶೇಷ ಗುಣಕಾರಿಯೂ ದ್ದು, ಮೇಹ ವಿಕಾರವುಳ್ಳವರಿಗೂ, ನಿದ್ರೆ ಇಲ್ಲದವರಿಗೂ, ನಷ್ಟೇಂದ್ರಿಯವಾಗುವ ಬಾಲಕರಿಗೂ, ಬ್ರಾಹ್ಮಿ ಸುಜ್ಞಾನಿಗಳಿಗೂ ಉಪಯೋಗವುಳ್ಳ ಬಹುಪರವಾಸದ ಔಷದಿ 1ಸೇರು 48ದಿವಸ ಸೇವಿಸಬಹುದು. ನಂ (1) 1ಸೇರು ಡಬ್ಬಿ 1ಕ್ಕೆ ರುಪಾಯಿ 3—0—0 ½ಸೇರು ಡಬ್ಬಿ 1ಕ್ಕೆ ರುಪಾಯಿ 1—9—0 ನಂ (2) 1ಸೇರು ಡಬ್ಬಿ 1ಕ್ಕೆ ರುಪಾಯಿ 2—0—0, ½ ಸೇರು ಡಬ್ಬಿ 1ಕ್ಕೆ 1—1—0 ವಿ ಪಿ ಖರ್ಚು ಪ್ರತ್ಯೇಕ. ವಿಶೇಷ ಮಾಹಿತಿಗೆ ಬರೆಕೊಳ್ಳಿರಿ

ವಿಳಾಸ—ದೇವಣ್ಣ ನಾರಾಯಣಸೇಟ್,
ಗೋಳಿಕಟ್ಟಾ
ಮಂಗಳೂರು,
52—21 ದ ಕ.

ಕರ್ಣಾಟಕ
ಎಗ್ಯೂ ಮಿಕ್‌ಶ್ಚರ್

ಚಳಿಜ್ವರ ಮಲೇರಿಯ ಜ್ವರ, ಇನ್‌ಫ್ಲುಯೆಂಝಾ ಅಡವಿ ಜ್ವರ, ಮೊದಲಾದವುಗಳ ಮೇಲೆ ಅಪ್ರತಿಮವಾದ ಔಷದವು

ಬೆಲೆ ಬಾಟ್ಲಿಯೊಂದಕ್ಕೆ ರು. ೦—೧೪—೦
ಟಪ್ಪಾಲು ಖರ್ಚು ಬೇರೆ
ಡಜನ್ ಬಾಟ್ಲಿಗಳಿಗೆ ಟಪ್ಪಾಲು ವೆಚ್ಚ ಸಹ ರು. ೯—೨—೦

ಏಜಂಟರು ಬೇಕು, ಕೊಡಗಿನ ಸ್ಕೂಲ್ ಮಾಸ್ತರುಗಳು ತಮ್ಮೂರಿನ ಮೂರು ಜನ ಔಷಧದ ವ್ಯಾಪಾರಿಗಳ ಹೆಸರನ್ನು ತಿಳಿಸಿದಲ್ಲಿ ಅಂದವಾದ ಬ್ಲಾಟಿಂಗ್ ಪೇಪರು ಪುಕ್ಕಟೆ

12—12 ಕರ್ಣಾಟಕ ಬ್ರದರ್ಸ್,
ಗಿರಗಾಂವ್, ಮುಂಬಾಯಿ.

ಇದು ಒಳ್ಳೆ ಸಮಯ!

ಹಂಚುಗಳು.

ಈಗಾಗಲೇ ವಿರಾಜಪೇಟೆಯಲ್ಲಿ ನಾಜೂಕಾದ ಎಲ್ಲಾ ತರದ ಹಂಚುಗಳು. ಅಂದರೆ ಹಂಚು, ಮೂಲೆ ಹಂಚು, ಜಾತಿಹಂಚು, ಹೂಗೆಹಂಚು, ನೆಲಹಂಚು, ವಗೈರೆ ಎಲ್ಲಾ ಹಂಚುಗಳನ್ನು ಸ್ಟೋರ್ ಮಾಡಲಾಗಿದೆ. ಕೂಡಲೇ ಹಂಚು ಬೇಕಾದವರು ವಿರಾಜಪೇಟೆಯಲ್ಲಿ ಈ ಕೆಳಗೆ ರುಜು ಮಾಡಿದವರ ಬಳಿಗೆ ಬರೆದುಕೊಳ್ಳಬಹುದು. ಅಲ್ಲದೆ ಹಂಚುಗಳ ಸ್ಯಾಂಪಲ್ಸನ್ನು ಸಹ ನೋಡಬಹುದು. ಎಲ್ಲಾ ವಿವರಕ್ಕೂ, ಕ್ರಯಕ್ಕೂ, ಮತ್ತು ಷರತ್ತಿಗೂ ಈ ಕೆಳಗಿನವರಿಗೆ ದಯವಿಟ್ಟು ಬರೆದುಕೊಳ್ಳಿ

ವಿರಾಜಪೇಟೆ ಕೆ. ಪಿ. ಚಿನ್ನಪ್ಪ,
12—4 ಎರಾದಿ ಭಂಡಾರ

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್, ಕೊ ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ.

		ರೂ.
ಶೇರ್ ಬಂಡವಾಳ	—	50,000
ವಸೂಲಾದ ಶೇರ್ ಮೊಬಲಗು	—	9890
ಜಮಾಖಂದ ಠೇವಣಾತಿ	—	90,600

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲಕೊಡತಕ್ಕದ್ದು

ಒಂದು ವರ್ಷ ವಾಯಿದೆ ಅಥವ ಹೆಚ್ಚಿನ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ ರೂ. 6—4—0ರ ದರದಲ್ಲಿ ಬಡ್ಡಿ ದೊರೆಯುತ್ತೆ. ಕಡಿಮೆ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ 5ರ ಬಡ್ಡಿ ದೊರೆಯುತ್ತೆ.

ವರ್ಷಕ್ಕೊಂದಾವರ್ತಿ ಕೊಆಪರೇಟಿವ್ ರಜಿಸ್ಟ್ರಾರವರು ಲೆಕ್ಕ ಆಡಿಟು ಮಾಡುತ್ತಾರೆ

ಪ್ರೆಸಿಡೆಂಟರು, ಟ್ರೆಜರರ್.
ಕೊಡಂದೆರ ಕುಟ್ಟಯ್ಯನವರು, ಯು ಭುಜಂಗರಾಯರು
ರಾಯ್ ಬಹದ್ದೂರ್. ಬಿ.ಎ, ಬಿ.ಎಲ್.
ಸೆಕ್ರೆಟರಿ,
ಸಿ. ಯನ್. ವೆಂಕಪ್ಪಯ್ಯನವರು, ಬಿ.ಎ, ಬಿ ಎಲ್.
ತಾರೀಖು 29—8—1925.

ಮಾರಾಟಕ್ಕೆ.

ಪೊನ್ನಂಪೇಟೆ ಸ್ಕೂಲ್ ಬಳಿ ಒಟ್ಟಿ ವಗೈರೆ ಸಾಮಾನು ಮಾರಾಟಕ್ಕೆ ಇಟ್ಟಿರುವ ಮಹಡಿ ಮನೆ, ಅದರಲ್ಲಿರುವ ಪೂರ್ತಿ ಸಾಮಾನು ಮತ್ತು ಹೊರಮನೆ ಹಿತ್ಲು ಸಮೇತ.

(೨) ಪೊನ್ನಂಪೇಟೆ ದೊಡ್ಡ ಬೀದಿ ಬಲಪಾರ್ಶ್ವದಲ್ಲು ವಾಸಕ್ಕೂ ಮತ್ತು ವ್ಯಾಪಾರಕ್ಕೂ ಯೋಗ್ಯವಾದ ಮಹಡಿ ಮನೆ ಮತ್ತು ಹೊರಮನೆಗಳು ಸಹ.

ಖಾಯಿಷ್‌ದಾರರು ಕ್ರಯ ವೆಗೈರೆಗೆ ಮತ್ತು ಹೆಚ್ಚಿನ ಸಂಗತಿಗೆ ಈ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಬಹುದು.

U. E. Ahamed.
General Merchant &
Commission agent,
12—11 Ponnampett

೧೦೦೦ ರೂಪಾಯಿಗಳ ಬಹುಮಾನ.

ಲೋಕಪ್ರಸಿದ್ಧವಾದ ಸಾಲಂಮಿಸ್ರಿ ಮುರಬ್ಬಾ

ನಮ್ಮ ಟ್ರೇಡ್ ಮಾರ್ಕನ್ನು ನೋಡಿ ಈ ಔಷಧ ತೆಗೆದುಕೊಳ್ಳಿರಿ.

ಇದರ ಸೇವನೆಯಿಂದ ವೀರ್ಯವು ಸೀಸದಂತೆ ಇದ್ದರೂ, ನಷ್ಟೇಂದ್ರಿಯವಾದರೂ, ಸ್ತ್ರೀ ಸಂಘಕ್ಕೆ ಮೊದಲೇ ಸ್ಖಲನವಾದರೂ, ಮೂತ್ರದೊಂದಿಗೆ ಹೋಗುತ್ತಿದ್ದರೂ ದೋಷರಹಿತವಾಗಿ, ಶರೀರಕ್ಕೆ ಆರೋಗ್ಯವನ್ನೂ ಧಾರ್ಢ್ಯ-ತೇಜಸ್ಸು ಆಯುಸ್ಸು, ಬಲ, ಶೋಭಸ್ಸು ಉಂಟು ಮಾಡುವದು. ಅಜೀರ್ಣ ಮಲಬದ್ಧತೆ, ಸೆ ದುಳಿನ ಬಲಹೀನತೆ, ಕೈಕಾಲು ಸೊಂಟ ನೋವುಗಳಿಗೆ ಇದು ದಿವ್ಯ ಔಷಧವು. ಈ ಸಾಲಂಮಿಸ್ರಿ ಎಂಬುವದು ಕಾಬೂಲ್‌ಕಂದಾಹಾರ ಪ್ರಾಂತ್ಯದಲ್ಲಿ ಬೆಳೆಯುತ್ತೆ.



ಈ ಔಷಧದಿಂದ ಗುಣಹೊಂದಿರುವ ಅನೇಕ ಮಹಾಶಯರು ತಾವಾಗಿಯೇ ಅನೇಕ ದೇಶಗಳಿಂದಲೂ ಆಫ್ರಿಕ, ಬರ್ಮ, ಪಿನಾಂಗ್, ಸಿಂಗಪೂರ್, ಸಿಲೋನ್, ಬೊಂಬಾಯಿ, ಕಲ್ಕತ್ತ, ಮದರಾಸು ಮತ್ತು ಇಂಡಿಯಾದೇಶದಲ್ಲಿ ಎಲ್ಲಾ ಸ್ಥಳಗಳಿಂದಲೂ ನಮಗೆ ಯೋಗ್ಯತಾ ಪತ್ರಿಕೆಗಳನ್ನು ಕಳುಹಿಸಿರುವರು. ಇವುಗಳ ನಕಲನ್ನು ಯಾರಾದರೂ ಕೇಳಿ ನೋಡಬಹುದು. ಇವುಗಳು ಸುಳ್ಳು ಎಂದು ಸಿದ್ಧಪಡಿಸುವವರಿಗೆ ಮೇಲ್ಕಂಡ ಬಹುಮಾನವು ಕೊಡಲ್ಪಡುತ್ತೆ. ನಾವು ಹಾಗೆ ಕೊಡದೇ ನಿರಾಕರಿಸಿದಲ್ಲಿ ಕೋರ್ಟು ಮೂಲಕ ಅದನ್ನು ಪಡೆಯಬಹುದು. ೧ ಡಬ್ಬವನ್ನು ೧೫ ದಿನ ಸೇವಿಸಿದಲ್ಲಿ ಗುಣವು ಖಂಡಿತವಾಗಿ ತೋರಬರುವುದು. ೨ ಯಾ ೩ ಡಬ್ಬಗಳು ಎಂತಹ ರೋಗಿಗಾದರೂ ಪೂರ್ಣವಾಗಿ ಗುಣವನ್ನುಂಟು ಮಾಡುವವು. ಹೆಸರು ವಿಳಾಸಗಳನ್ನು ಸ್ಪಷ್ಟವಾಗಿ ಬರೆಯಬೇಕು. ಒಂದಾವರ್ತಿ ಅಜಮಾಯಿಸಿ ಮಾಡಿ ನೋಡಿದಲ್ಲಿ ಖಾತ್ರಿ ಉಂಟಾಗುತ್ತೆ.

ಕ್ರಯ ಡಬ್ಬಿ ೧ಕ್ಕೆ ರೂ ೨—೦—೦ ಪೋಸ್ಟೇಜ್ ಖರ್ಚು ೧೧ಂಪ ೩ ಡಬ್ಬಿಗಳಿಗೆ ೦—೮—೦ ಆಣೆ, ಏಜಂಟರುಗಳು ಎಲ್ಲಾ ಸ್ಥಳಗಳಲ್ಲಿಯೂ ಅವಶ್ಯಕವಾಗಿರುತ್ತಾರೆ. ಕಾಗದ ಬರೆಯುವಾಗ ಈ ಪತ್ರಿಕೆಯ ಹೆಸರನ್ನು ಬರೆಯಬೇಕು,

ಟೆಲಿಗ್ರಾಫ್ ಅಡ್ರೆಸ್, ಮಿಸ್ರಿ ಬೆಂಗಳೂರು ಸಿಟಿ, }

ಬಿ ಮನ್ನಾಲಾಲ್, ದಿಲ್ಲಿ ಹೀಟಿವ್ ವೈದ್ಯರು,
ಸಾಲಂಮಿಸ್ರಿ ಮುರಬ್ಬ ಡಿಪೋ,
ಬೆಂಗಳೂರು ಸಿಟಿ

12—0

Printed & published by Kodanda Appayya, R.B., Chairman, Board of Directors, at "Kodagu" Press, Mercara for "Kodagu" Ltd

If not delivered please return to
"KODAGU" OFFICE MERCARA.

ಕೊಡಗು.

ಸತ್ಯೇನ ಧರ್ಮದಯಾ ವಿದ್ಯಾ ಶೀಲ ಪ್ರಯತ್ನತಾ || ಐಕ್ಯಮತ್ಯೇನ ದೇಶಾನಾಂ ಸುಸ್ಥಿರಾ ರಾಜ್ಯ ಸಂಪದಾ || ಸಂಪಾದಕ—ಪಂದ್ಯಂಡ ಐ. ಬೆಳ್ಯಪ್ಪ.

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವದು.

[ಸಂಚಿಕೆ ೩೩

ಕೊಡಗು, ೧೯೨೬ನೇ ಇಸವಿ ಜನವರಿ ತಾರೀಖು ೨೯ನೇ ಶುಕ್ರವಾರ

ಪುಟ ೫]

ಒಂದೇ ಮೂರು ರೂಪಾಯಿಗಳಲ್ಲಿ!

ಟಿಕ್ — ಟಾಕ್ (ರಿಜಿಸ್ಟರ್ಡ್).



ಎಂಬ ...ಯಾರವನ್ನು ನಿಮಗೆ ...ರೈಸುತ್ತೇವೆ. ಇ... ಕರಾರು ಗಂಟೆಯ... ತೋರಿಸುವದು. ಇ... ಬೇಗ ಕೊಡುವೇ... ...ಗಿಲ್ಲ. ಇದರಲ್ಲಿ ಕಾ... ...ತ್ತಿರುವ ಗೂಡನ್ನು ...ಲಕ್ಕೆಳೆದರೆ ಸಾಕು ...ನ್ನಪಕ್ಷಕ್ಕೆ ತಾನೇ ಸರಿ... ...ಯಾದ ಕಾಲವನ್ನು ತೋ...ರಿಸುವದು. ಇವತ್ತೇ ...ತರಿಸಿಕೊಳ್ಳಿರಿ.

ನಮ್ಮ ಸ್ಪೆಷಲ್ "ಕ್ರಿಸ್ಮಸ್" ಹಬ್ಬದ ಮಾರಾಟ

ಪ್ರಾರಂಭ ತಾ. 1ನೇ ಜನವರಿ 1926

ಕಡೆ ತಾ. 5ನೇ ಮಾರ್ಚಿ 1926.

"ಕೊಡಗು" ಚಂದಾದಾರರಿಗೆ ಮಾತ್ರ



No. 515. Rs. 10. No. 511. Rs. 11.

No. 507. Rs. 12. No. 518. Rs. 10.

No. 519. Rs. 9. No. 516, Rs. 10.

ಎಲ್ಲಾ ವಾಚುಗಳಿಗೂ ಚಾಮಿನು ಐದು ವರುಷಗಳು

22 ಕ್ಯಾರೆಟ್ ರೋಲ್ಡ್ ಗೋಲ್ಡ್ ಕೈಗೆ ಕಟ್ಟಿಕೊಳ್ಳುವ ಗಡಿಯಾರುಗಳು

ಸರ್ವೋತ್ತಮ, ಬಹಳ ಅಗ್ಗ, ಅಚ್ಚು ಕಟ್ಟಾದ ಕೈ ಗಡಿಯಾರುಗಳು

ಪ್ರತಿ ಒಂದು ವಾಚಿನ ಕೂಡ ಒಂದು ಫೌಂಟನ್‌ಪೆನ್ ಮತ್ತು ಮೇಲಾದ ರೇಷ್ಮೆ ಪಟ್ಟಿ ಬಿಟ್ಟಿ ಕಳುಹಿಸುವೆವು.

ಪೀಟರ ವಾಚ ಕಂಪೆನಿ,
ಪೋಸ್ಟ ಬಾಕ್ಸ ನಂಬರ 27
ಮದ್ರಾಸ್.

12—1

ಪ್ರಕಟಣೆ.

ಒಂದು ಕಡೆ ಇಂಗ್ಲೀಷಿನಲ್ಲಿಯೂ, ಇನ್ನೊಂದು ಕಡೆ ಕನ್ನಡದಲ್ಲಿಯೂ ಪ್ರಿಂಟಾಗಿರುವ ಕಾಫಿ ತೋಟದ ಆಳುಗಳ ಪ್ರಿಂಟು ಕಂಟ್ರಾಕ್ಟು ಎಗ್ರಿಮೆಂಟ್ ಫಾರಮುಗಳೂ ಮತ್ತು ...ಕಂಪ್ಲೇಂಟ್ (complaint) ಫಾರಂಗಳೂ ಸಹ ಮಾರಾಟಕ್ಕೆ ತಯಾರಿವೆ. ಬೇಕಾದವರು 'ಕೊಡಗು' ಆಫೀಸಿನಿಂದ ಪಡೆದುಕೊಳ್ಳುವುದು.

ಮಡಿಕೇರಿ,
17.9.24,

ಮೇನೇಜರ್,
'ಕೊಡಗು' ಆಫೀಸ್.

MOTOR DEPARTMENT.

Spare parts for Motor cars supplied at a short notice.

TYRES—

Dunlop-cord	30 x 3½	Rs.	61-0-0.
Mirchelin	" "	"	61-0-0.
Tubes	" "	"	12-0-0.

OILS—

Gargoyle Mobil oil	A.	per gallon	Rs.	5-0-0.
" "	B.	"	"	5-12-0.
" "	BB.	"	"	5-12-0
" "	C	"	"	4-4-0.
" "	E.	"	"	5-0-0
" Lubricant	4 os tin		"	2-8-0.
" Mobil oil in 4 gallon tins			"	4-8-0. per gallon.

GET IT AT SPENCERS.

Spencer & Co. Ltd.
MERCARA, & POLLIBETTA.

52—13

ಮಹನೀಯರೇ,

1923ನೆ ಇಸವಿಯಲ್ಲಿ ವೀರರಾಜೇಂದ್ರಪೇಟೆಯಲ್ಲಿ ತೆರೆದ ನಮ್ಮ ವೈದ್ಯಶಾಲೆಯ ಶಾಖೆಯಲ್ಲಿ ಅನೇಕ ಮಹಾರೋಗಗಳನ್ನು ಗುಣಪಡಿಸಿ ಹೆಸರುವಾಸಿ ಹೊಂದಿದ ನಮ್ಮ ಕಂಪೆನಿಯ ಮತ್ತೊಂದು ಶಾಖೆಯು ಈಗಾಗಲೇ **ಸೋಮವಾರಪೇಟೆಯಲ್ಲಿ** ತೆರೆಯಲ್ಪಟ್ಟಿದೆ.

ಕೃಷ್ಣ ಸಂಬೀಶ್ವ ಮತ್ತು ನಾರಾಯಣ ಸಂಬೀಶ ಎಂಬ ಹೆಸರುಗಳುಳ್ಳ ನಮ್ಮ ಪ್ರಧಾನ ವೈದ್ಯರುಗಳು ಒಬ್ಬೊಬ್ಬರು ಒಂದೊಂದು ಶಾಖೆಯಲ್ಲಿ ಯಾವಾಗಲೂ ಇರುತ್ತಾರೆ.

ಈ ವೈದ್ಯರುಗಳು ಇಂಡಿಯಾ ಚಕ್ರವರ್ತಿಯವರಿಂದ ವೈದ್ಯರತ್ನವೆಂಬ ಬಿರುದನ್ನು ಹೊಂದಿದವರಾಗಿಯೂ ಕೊಚ್ಚಿ ಸಂಸ್ಥಾನದ ರಾಜವಂಶದ ಸ್ಥಿರ ವೈದ್ಯರಾಗಿಯೂ ಸುಪ್ರಸಿದ್ಧ ಹೆಸರುವಾಸಿಯನ್ನು ಪಡೆದವರಾಗಿಯೂ ಇರುವ ಇ. ಟಿ. ನಾರಾಯಣನ್ ಮೂಸ್ ಎಂಬ ಮಹಾನುಭಾವರ ಕೈಕೆಳಗೆ ಹತ್ತು ವರ್ಷಗಳಿದ್ದು ಪಾಂಡಿತ್ಯವನ್ನೂ ಪರಿಚಯವನ್ನೂ ಪಡೆದವರಾಗಿಯೂ ಇದ್ದಾರೆ.

ಇವರಲ್ಲಿನ ಎಲ್ಲಾ ಔಷಧಗಳಿಗೆ ಮಲಬಾರಿನ ಎಲ್ಲಾ ವೈದ್ಯಶಾಲೆಗಳ ಔಷಧಗಳ ಚಾರ್ಜಿಗಿಂತಲೂ ಕಡಿಮೆಯಾಗಿದೆ.

ನಂಬೀಶ ಮತ್ತು ಕಂಪೆನಿ,
ಆಯುರ್ವೇದಿಕ್ ಪ್ರೈವೇಟ್ ಡಿಸ್ಪೆನ್ಸರಿ.
ಕಲ್ಲೂರು, ವೀರಾಜಪೇಟೆ ಮತ್ತು
ಸೋಮವಾರಪೇಟೆ.

52-44

ಪ್ರಕಟಣೆ.

ನಮ್ಮ ಅಂದವಾದ ಹೊಸ ಅಕ್ಷರಗಳು ಬಂದು ತಲಪಿರುವುದರಿಂದ, 'ಲೆಟರ್ ಹೆಡ್ಸ್', 'ವಿಸಿಟಿಂಗ್ ಕಾರ್ಡ್ಸ್' ಆಮಂತ್ರಣಗಳು (ಇನ್ವಿಟೇಶನ್) ಮೊದಲಾದ ಪ್ರಿಂಟಿಂಗ್ ಕೆಲಸಗಳನ್ನು ಇಂಗ್ಲಿಷ್ ಮತ್ತು ಕನ್ನಡದಲ್ಲಿ ಚಂದವಾಗಿಯೂ ಕಡಿಮೆ ಚಾರ್ಜಿನಲ್ಲಿಯೂ ನಿಯಮಿತ ಕಾಲದಲ್ಲಿಯೂ ಮಾಡಿಕೊಡಲು ತಯಾರಾಗಿದ್ದೇವೆ.

ಮಡಿಕೇರಿ

ಮೇನೇಜರ್,
'ಕೊಡಗು' ಲಿಮಿಟೆಡ್

ಬೇಟೆಗೆ ಅವಶ್ಯವಾದ

ಕೋವಿಮದ್ದು ಪೌಂಡಿಗೆ ರೂ. ೨—೪—೦

ಕೇಪು ಕೋವಿನ ಕೇಪುಗಳು, ೨೫೦ ಉಳ್ಳ ಪೆಟ್ಟಿಗೆಗೆ ೧—೪—೦

ಚಿಲ್ಲು ಪೌಂಡು ಒಕ್ಕೆ ೦—೬—೦.

ತುಂಬಿದ ೧೦೦ ತೋಟೆಕ್ಕೆ (Eleyes) ೧೨—೦—೦.

ಆರ್ಡರು ಕಳುಹಿಸುವಾಗ್ಯೆ ಯಾವಾಗಲೂ ರೂ. 5 ಅಡ್ವಾನ್ಸು ಕಳುಹಿಸತಕ್ಕದ್ದು. ನಮ್ಮ ಹಿಡುವಳಿದಾರರು ಆರ್ಡರು ಕಳುಹಿಸುವಾಗ ಮೊದಲನೇ ಸಾರಿವರಿತ್ರ ಡಿಸ್ಟ್ರಿಕ್ಟ ಮೇಜಿಸ್ಟ್ರೇಟರವರಿಂದ ವಿನಾಯಿತಿ (ಎಕ್ಸೆಂಪ್ಷನ್) ಸರ್ಟಿಫಿಕೇಟನ್ನು ಕಳುಹಿಸಬೇಕು. ತಪ್ಪಿದ್ದಲ್ಲಿ ನಿಮಗಾಗಿ ನಾನೇ ಆ ಸರ್ಟಿಫಿಕೇಟನ್ನು ಒದಗಿಸಿಕೊಳ್ಳಲು ತಯಾರಾಗಿದ್ದೇನೆ.

ಈ ಕೆಳಗಿನ ವಿಳಾಸಕ್ಕೆ ಆರ್ಡರುಗಳನ್ನೂ ಪತ್ರವ್ಯವಹಾರಗಳನ್ನೂ ಇಂಗ್ಲಿಷಿನಲ್ಲಿ ನಡಿಸತಕ್ಕದ್ದು.

S. Venkatarangam Chetty.
Ammunition & Sulphur Merchant
No. 9, China Bazar,
Madras.

12—12

ARMS & AMMUNITION MART.

Mahomedally-Noorbhoy

321 Abdul Rehman Street, near
Crawford Market, BOMBAY. 3
Telegraphic Address.—"SHOOTER"
Bombay.

[52—22]. Please write for Reduced nett prices list for 1926.

"ಕೊಡಗು"

ಸೆ ೧೯೨೬ನೇ ಇಸವಿ ಜನವರಿ ತಾ. ೨೯ನೇ ಶುಕ್ರವಾರ.

ವೈಸರಾಯರ ಭಾಷಣ.

ಈಗ ಡೆಲ್ಲಿಯಲ್ಲಿ ನಡೆಯುತ್ತಿರುವ ಲೆಜಿಸ್ಲೇಟಿವ್ ಎಸೆಂಬ್ಲಿಯ ಮೀಟಿಂಗು ಜನವರಿ ತಾರೀಕು 20ರಲ್ಲಿ ಪ್ರಾರಂಭವಾಯಿತು. ಮೀಟಿಂಗಿನ ಪ್ರಾರಂಭವು ಬಹು ವಿಜೃಂಭಣೆಯಿಂದ ಕೂಡಿತ್ತು. ಎಸೆಂಬ್ಲಿಯ ಹಾಲು ತುಂಬಿದ್ದಲ್ಲದೆ, ಪ್ರೇಕ್ಷಕರ ಗ್ಯಾಲರಿಯಲ್ಲಿ ಸ್ವಲ್ಪವೇ ಖಾಲಿ ಇರಲಿಲ್ಲವಂತೆ. ಈಗಿನ ವೈಸರಾಯರು ಬರುವ ಏಪ್ರಿಲ್ ತಿಂಗಳಲ್ಲಿ ಈ ಉದ್ಯೋಗದಿಂದ ನಿವೃತ್ತರಾಗಿ ಇಂಗ್ಲೆಂಡಿಗೆ ವಾಪಸು ಹೋಗುವದರಿಂದ ಅವರ ಕಡೇ ವಂದನೆಯ ಭಾಷಣವು ಈ ಸಂದರ್ಭದಲ್ಲಿ ನಡೆಯುವದೆಂಬ ಭರವಸೆಯಿಂದ ಈ ಮೀಟಿಂಗಿಗೆ ತುಂಬಾ ಜನರು ಸೇರಿದ್ದಾಗಿದೆ. ಆದರೆ ವೈಸರಾಯರು ತಮ್ಮ ಸ್ವಸ್ತಿವಚನಗಳನ್ನು ಮೀಟಿಂಗಿನ ಆಖೈರಿಗೆ ಇಟ್ಟು ಪ್ರಥಮದಲ್ಲಿ ಹಿಂದೂದೇಶದ ಆಡಳಿತಕ್ಕೆ ಸಮ್ಮಂಧಪಟ್ಟ ಒಂದು ಭಾಷಣವನ್ನು ಮಾಡಿದರು. ಈ ಪ್ರಸಂಗದಲ್ಲಿ ಸೂಚಿಸಿರುವ ಕೆಲವು ಮುಖ್ಯಾಂಶಗಳನ್ನು ಮಾತ್ರ ಎತ್ತಿ ಬರೆಯುತ್ತೇವೆ.

ಎಸೆಂಬ್ಲಿಯ ಹೊಸ ಅಧ್ಯಕ್ಷರನ್ನೂ, ಅಲೆಕ್ಸಾಂಡರ್ ಮಡಿಮಾನ್‌ರವರ ಮರಣವನ್ನೂ, ಹಿಂದೂದೇಶಕ್ಕೂ ಪರದೇಶಗಳಿಗೂ ಇರುವ ಸಮ್ಮಂಧವನ್ನೂ ಮತ್ತು ಹಿಂದೂದೇಶದ ವ್ಯಾಪಾರದ ಈಗಿನ ಸ್ಥಿತಿಯನ್ನೂ ಕುರಿತು ಕೆಲವು ಮಾತುಗಳನ್ನಾಡಿದನಂತರ ವೈಸರಾಯರು ಹಿಂದೂದೇಶದ ವ್ಯವಸಾಯ ಕ್ರಮಗಳನ್ನು ವೃದ್ಧಿಪಡಿಸಲು ಮತ್ತು ಕೃಷಿಗಾರರ ಸಾಮಾನ್ಯ ಸ್ಥಿತಿಯನ್ನು ವಿಚಾರಿಸಲಿಕ್ಕಾಗಿ ಒಂದು ರಾಯಲ್ ಕಮಿಷನನ್ನು ನೇಮಿಸಲು ಚಕ್ರವರ್ತಿಯವರು ಮಂಜೂರುಮಾಡಿರುವರೆಂದು ಹೇಳಿ ಅದರ ಉದ್ದೇಶಗಳನ್ನೂ ಅವಶ್ಯಕತೆಯ ಕಾರಣಗಳನ್ನೂ ವಿಷದವಾಗಿ ವಿವರಿಸಿದರು. 'ಹಿಂದೂದೇಶದ ರೈತರ ಸ್ಥಿತಿಯೂ, ಉತ್ಪತ್ತಿಯೂ ಪರದೇಶಗಳ ಕೃಷಿಗಾರರದ್ದಕ್ಕಿಂತ ಕಡಿಮೆ ಇರದ್ದಾಗಿದೆ. ಇದಕ್ಕೆ ಇಲ್ಲಿಯ ರೈತರು ಸುಧಾರಿಸಿದ ವ್ಯವಸಾಯ ಕ್ರಮಗಳನ್ನನುಸರಿಸದೆ ಇರುವುದೇ ಮುಖ್ಯ ಕಾರಣ. ಪ್ರಾಂತೀಕ ಸರಕಾರದವರು ಅಂದರೆ ಈ ಇಲಾಖೆಯ ಮುಖ್ಯ ಅಧಿಕಾರಿಗಳಾದ ಮಂತ್ರಿಗಳು ದೇಶದ ಮುಖ್ಯ ಆಧಾರವಾಗಿರುವ ಕೃಷಿ ಉತ್ಪತ್ತಿಯ ಅಭಿವೃದ್ಧಿಗೆ ತಕ್ಕಷ್ಟು ಪ್ರಯತ್ನಪಟ್ಟಿರುವುದಾದರೂ ಅದು ಸಾಕಾಗದ ಕಾರಣ [illegible] ಈ ವಿಷಯಕ್ಕೆ ಹೆಚ್ಚಿನ [illegible] ಮಾಡಬೇಕಾಗಿದೆ. ಪರದೇಶಗಳಲ್ಲಿ ವ್ಯವಸಾಯ ಕ್ರಮ [illegible] ಉತ್ತಮ [illegible] ಈ ದೇಶದ ಕೃಷಿ [illegible] ಈ [illegible] ಸಾಧ್ಯವಾಗಲಿಕ್ಕಿಲ್ಲ. [illegible] ಪರದೇಶಗಳ [illegible] ಈ ದೇಶದ ಸ್ಥಿತಿಗತಿಗಳನ್ನು [illegible] ಕಮಿಷನನ್ನು ನೇಮಿಸಬೇಕಾಗಿದೆ. ಹಿಂದೂದೇಶದ ವ್ಯವಸಾಯದಲ್ಲಿ ಒಳ್ಳೇ ಕ್ರಮಗಳನ್ನು ಜಾರಿಗೆ ತರುವುದು, ಉತ್ತಮವಾದ [illegible] ಪಶುವೈದ್ಯ [illegible] ವುಗಳನ್ನು [illegible] ಕೊಟ್ಟು ಅದರಂತೆ ನಡೆಸಲು [illegible] ದುಗಳನ್ನು [illegible] ಈಗ ವ್ಯವಸಾಯದ ಉತ್ಪತ್ತಿಯ ವ್ಯಾಪಾರದ ಅನುಕೂಲತೆ, ಕೃಷಿಗಾರರಿಗೆ ಸಾಲ ದೊರೆಯುವ ರೀತಿಗಳು, ಗ್ರಾಮವಾಸಿಗಳಾದ ಕೃಷಿಗಾರರ ಉನ್ನತಿಯ ಕಾರಣಗಳು ಇವೇ ಮೊದಲಾದವುಗಳನ್ನು [illegible] ಮಾಡಿಸಿ ಅವುಗಳನ್ನು ಉತ್ತಮಗೊಳಿಸಲು ಯೋಗ್ಯವಾದ ಸೂಚನೆಗಳನ್ನು ಕೊಡುವುದೇ ಈ ಕಮಿಷನಿನ ಉದ್ದೇಶವಾಗಿದೆ' ಎಂದು ಮುಂತಾಗಿ ಲಾರ್ಡ್ ರೀಡಿಂಗ್‌ರವರು ಹೇಳಿರುವರು.

ವ್ಯವಸಾಯದಿಂದಲೇ ಹೊಟ್ಟೆ ಹೊರೆಯುವ ಜನರು ಬಹಳವಾಗಿರುವ ಹಿಂದೂದೇಶದಲ್ಲಿ ಈ ವೃತ್ತಿಯ ಉತ್ತೇಜನಕ್ಕೆ ಎಷ್ಟು ತೊಂದರೆ ತೆಗೆದುಕೊಂಡರೂ, ಎಷ್ಟು ಹಣ ಖರ್ಚು ಮಾಡಿದರೂ ಸ್ವಲ್ಪವೆಂದೇ ಹೇಳಬೇಕಾಗಿದೆ. ವೈಸರಾಯರು ಹೇಳುವಂತೆ ಪ್ರಾಂತೀಕ ಸರಕಾರಗಳು ಈ ವಿಷಯದಲ್ಲಿ ತಕ್ಕಷ್ಟು ಪ್ರಯತ್ನ ತೆಗೆದುಕೊಂಡಿದ್ದರೆ ಈ ದೇಶದ ರೈತರ ಸ್ಥಿತಿಯು ಮತ್ತು ವ್ಯವಸಾಯದ ಉತ್ಪತ್ತಿಯು ಪರದೇಶದವರದಕ್ಕಿಂತ ಕಡಿಮೆ ಎಂದಿಗೂ ಆಗುತ್ತಿರಲಿಲ್ಲ. ಕೃಷಿವೃತ್ತಿಗೆ ಸರಕಾರದಿಂದ ಸಾಕಷ್ಟು ಸಹಾಯವೂ ಉತ್ತೇಜನವೂ ದೊರೆತಿದ್ದರೆ ಹಿಂದೂದೇಶವು ಈಗಿನ ಒಡಸ್ಥಿತಿಗೆ ಇಳಿಯುತ್ತಿರಲಿಲ್ಲ ಮಾತ್ರವಲ್ಲ, ಅದರ ಜನರು ಸಾವಿರಗಟ್ಟಳೆಯಲ್ಲಿ ಹೊಟ್ಟೆಗಿಲ್ಲದೆ ಸಾಯುತ್ತಲೂ ಇರಲಿಲ್ಲವೆಂಬುದರಲ್ಲಿ ಸಂಶಯವಿಲ್ಲ. ಭರತಖಂಡದ ಸರಕಾರದ ಅಸ್ತಿಭಾರವಾಗಿರುವ ಗ್ರಾಮ ನಿವಾಸಿಗಳ ಸ್ಥಿತಿಯು ಹೀನವಾಗಿದ್ದರೆ ಸರಕಾರವು ಭದ್ರವಾಗಿರುವ ಬಗೆ ಹೇಗೆ? ಕಂದಾಯವಿಲ್ಲದ ಮೇಲೆ ಸರಕಾರವೆಲ್ಲಿಂದ? ಆದುದರಿಂದ ಇಂಡಿಯಾ ಸರಕಾರದವರು ಈ ವಿಷಯಕ್ಕೆ ಮೊದಲೇ ತುಂಬಾ ನಿಗಕೊಡಬೇಕಾಗಿತ್ತು. ತಡವಾದಾಗ್ಯೂ ಇನ್ನಾದರೂ ವ್ಯವಸಾಯಗಾರರ ಏಳಿಗೆಗೆ ಹೆಚ್ಚು ಗಮನಕೊಡಬೇಕಾದದ್ದು ಅವರ ಕರ್ತವ್ಯ. ಆದಕಾರಣ ಈ ರಾಯಲ್ ಕಮಿಷನಿನ ನೇಮಿತಕ್ಕೆ ಯಾರೂ ವಿರೋಧಿಸಲಾರರು. ಆದರೆ ಈ ಕಮಿಷನಿಗಾಗಿ ಮಾಡುವ ಖರ್ಚಿನಷ್ಟು ಪ್ರಯೋಜನವು ಅದರಿಂದ ಉಂಟಾಗಲಿಕ್ಕಿಲ್ಲವೆಂತಲೂ, ವಿಪರೀತ ಖರ್ಚಿನ ಈ ಕಮಿಷನಿನ ಕೆಲಸವನ್ನು ನಿಪುಣರ ಒಂದು ಸಣ್ಣ ಕಮಿಟಿಯೇ ಮಾಡಬಹುದೆಂತಲೂ ರೈತರನ್ನು ಸ್ವರಾಜ್ಯಕ್ಕಾಗಿ ಹೋರಾಡುತ್ತಿರುವ ರಾಜಕೀಯ ಪಂಗಡದವರ ಕೈಯಿಂದ ತಪ್ಪಿಸಿ ಸರ್ಕಾರದವರು ಹೇಳಿದಂತೆ ಇಡುವುದಕ್ಕಾಗಿ ಮಾಡುವ ಇದೊಂದು ಉಪಾಯವೆಂತಲೂ ಮುಂತಾಗಿ ಕೆಲವು ಮುಂದಾಳುಗಳು ಈಗಾಗಲೇ ತಮ್ಮ ಅಭಿಪ್ರಾಯಗಳನ್ನು ಸೂಚಿಸಿರುವರು. ರೈತರ ಆರ್ಥಿಕ ಸ್ಥಿತಿಗೆ ಸಮ್ಮಂಧಿಸುವ,ಭೂಮಿಯ ಹಕ್ಕುದಾರಿಕೆ, ಕಂದಾಯ ಮೊದಲಾದ ವಿಷಯಗಳನ್ನು ವಿಚಾರಿಸುವ ಅಧಿಕಾರ ಈ ಕಮಿಷನಿಗೆ ಇಲ್ಲದೆ ಇರುವ ಕಾರಣ ಯಥೇಚ್ಚ ವ್ಯಯದ ಈ ಏರ್ಪಾಡಿನಿಂದ ಇದಕ್ಕೆ ಒತ್ತಾಸೆಯುಳ್ಳವರು ಯೋಚಿಸುವಷ್ಟು ಪ್ರಯೋಜನವಾಗಬಹುದೋ ಎಂಬ ಸಂಶಯವು ತೋರುತ್ತದೆ. ಈ ಇಲಾಖೆಯಲ್ಲಿ ಹೆಚ್ಚಿನ ಸಂಬಳದ ಇಂಪೀರಿಯಲ್ ಮತ್ತು ಪ್ರೊವಿನ್ಸಿಯಲ್ ಉದ್ಯೋಗಸ್ಥರ ಸಂಖ್ಯೆಯನ್ನು ಹೆಚ್ಚಿಸುವುದೇ ಈ ಕಮಿಷನಿನ ಪ್ರತಿಫಲವಾಗುವದಾದರೆ ಇದಕ್ಕೆ ಪ್ರಜೆಗಳ ಕಂದಾಯದ ಒಳ್ಳೇ ಉತ್ಪತ್ತಿಯನ್ನು ವೆಚ್ಚಮಾಡದೆ ಇರುವುದೇ ಉಚಿತವಲ್ಲವೇ? ವ್ಯವಸಾಯ ವೃತ್ತಿಯಲ್ಲಿ ಒಹಳ ಅಭಿರುಚಿಯೂ ಜ್ಞಾನವೂ ಇರುವವರೇ ಮುಂದಿನ ವೈಸರಾಯರಾಗಿ ಬರುವದರಿಂದ ಈ ಕಮಿಷನಿನಿಂದ ರೈತ ವರ್ಗಕ್ಕೆ ಸ್ವಲ್ಪ ಮಟ್ಟಿಗಾದರೂ ಸಹಾಯವಾದೀತೆಂತ ಹಾರೈಸುವ. ಎಷ್ಟೇ ಆದರೂ ಜನಸಮುದಾಯವು ದೇಶದ ಹಿತಕ್ಕಾಗಿ ಹೋರಾಡುತ್ತಿರುವವರಲ್ಲಿ ವಿಶ್ವಾಸ ಕಡಿಮೆ ಮಾಡಲಿಕ್ಕಿಲ್ಲವಾಗಿ ನಂಬುತ್ತೇವೆ.

ರೀಡಿಂಗ್ ಪ್ರಭುಗಳು ದಕ್ಷಿಣ ಆಫ್ರಿಕದಲ್ಲಿರುವ ಹಿಂದೀಯರ ಕಷ್ಟಗಳನ್ನು ಕುರಿತು ಸಹಾನುಭೂತಿಯಿಂದ ಮಾತಾಡಿ ಅವರ ಸ್ಥಿತಿಯನ್ನು ಉತ್ತಮಗೊಳಿಸಲಿಕ್ಕಾಗಿ ಇಂಡಿಯಾ ಸರ್ಕಾರವು ಪ್ರಯತ್ನಿಸುತ್ತಿದೆಯೆಂದು ಹೇಳಿದರು. ಇದೊಂದು ಬಹು ಮುಖ್ಯ ಸಂಗತಿಯಾಗಿರುವುದರಿಂದ ಇದನ್ನು ಕುರಿತು ಇನ್ನೊಂದು ಸಾರಿ ಪ್ರತ್ಯೇಕವಾಗಿ ಬರೆಯಲಿಚ್ಛಿಸುತ್ತೇವೆ.

ಸರಕಾರದ ಆರ್ಥಿಕಸ್ಥಿತಿಯು ಉತ್ತಮವಾದಾಗ ಪ್ರತ್ಯಕ್ಷ (ಎಕ್ಸೈಸ್) ಸುಂಕವು ತೆಗೆದು ಹಾಕಲ್ಪಡುವುದೆಂದು ಹಾರ್ಡಿಂಜ್ ಪ್ರಭುಗಳ ಕಾಲದಲ್ಲೇ ಭರವಸೆಕೊಟ್ಟಂತೆ ಈ ವರುಷ ಈ ಸುಂಕವು ತತ್ಕಾಲ ತೆಗೆದುಹಾಕಲ್ಪಟ್ಟಿತ್ತೆಂತಲೂ ಈ ತತ್ವಕ್ಕೆ ಇಂಡಿಯಾದ ಎಲ್ಲಾ ಪಂಗಡದವರು ಒಪ್ಪುತ್ತಾರಾಗಿ ಈ ವರುಷದ ಆದಾಯ ಒಡ್ಜೆಟ್ಟಿನಲ್ಲಿ ಹೆಚ್ಚಿನ ವ್ಯತ್ಯಾಸಗಳುಂಟಾಗದೆ ಹೋದರೆ ಈ ಸುಂಕವನ್ನು ಪೂರ್ತಿ ತೆಗೆದುಹಾಕುವ ಸೂಚನೆಯು ಎಸೆಂಬ್ಲಿಯ ಮುಂದೆ ತರಲ್ಪಡುವುದೆಂದೂ ಹೇಳಿದರು. ಬೊಂಬಾಯಿಯ ಗಿರಣಿಗಳ ಸಂಕಷ್ಟದಿಂದ ಜಾಜವಾಗಿರುವ ಈ ಸುಂಕವನ್ನು ಎಸೆಂಬ್ಲಿಯವರು ಖಂಡಿತವಾಗಿಯೂ ಖಾಯಂ ಆಗಿ ತೆಗೆದುಹಾಕುವರೆಂಬುದರಲ್ಲಿ ಸಂದೇಹವಿಲ್ಲ.

ಬ್ರಿಟನ್ನಿನಲ್ಲಿರುವ ಪ್ರಿವಿ ಕೌನ್ಸಿಲಿನ ಜಡ್ಜಿಗಳಿಂದ ಹಿಂದೂ ದೇಶದ ನ್ಯಾಯ ತೀರ್ಪಿಗೆ ಬಹಳ ಸಹಾಯವಾಗಿ ಯೊದೂ, ಈ ಕೌನ್ಸಿಲಿನಲ್ಲಿ ಯಾವಾಗಲೂ ಇಂಡಿಯಾದ ಇಬ್ಬರು ಜಡ್ಜಿಗಳು ಇರುವಂತೆ ಮಾಡುವುದಕ್ಕಾಗಿ ಅವರ ಸಂಬಳದ ಅರ್ಧ ಭಾಗವನ್ನು (ವರುಷಕ್ಕೆ ನಾಲ್ಕುಸಾವಿರ ಪವುನುಗಳನ್ನು) ಹಿಂದೂ ದೇಶದ ಆದಾಯದಿಂದ ಕೊಡುವುದು ಉತ್ತಮವೆಂದು ಯೋಚಿಸಲಾಗಿದೆ ಯೆಂತಲೂ ಈ ವಿಷಯವು ಎಸೆಂಬ್ಲಿಯ ಚರ್ಚೆಗೆ ತರಲ್ಪಡುವುದೆಂತಲೂ ಸೂಚಿಸಿದರು. ಇಂಡಿಯಾ ಸ್ಟೇಟ್ ಸೆಕ್ರೆಟರಿಯವರ ಸಂಬಳವ ಬ್ರಿಟನ್ನಿನ ಸರಕಾರದವರು ಕೊಡಬೇಕೆಂದು ತೀರ್ಮಾನಿಸ [illegible] ಪ್ರಿವಿ ಕೌನ್ಸಿಲಿನವರ ಸಂಬಳದ ಭಾರವನ್ನು ಇಂಡಿಯನ್ ಸರಕಾರದವರ ಮೇಲೆ ಹೊರಿಸುವುದರಲ್ಲಿ ಸ್ವಲ್ಪವೂ ನ್ಯಾಯವಿಲ್ಲ. ಇದಕ್ಕೆ ದೇಶದ ಪ್ರತಿನಿಧಿಗಳು ಎಂದಿಗೂ ಒಪ್ಪಲಿಕ್ಕಿಲ್ಲವೆಂದು ಹೇಳಬೇಕಾಗಿಲ್ಲ.

ಹಿಂದೂ ದೇಶದ ರಾಜಕೀಯ ಪರಿಸ್ಥಿತಿಯನ್ನು ಕುರಿತು ವೈಸರಾಯರು ಆಡಿದರ ಸಾರಾಂಶವೇನೆಂದರೆ— 'ಲಾರ್ಡ್ ಬರ್ಕನ್‌ಹೆಡ್ಡ್‌ರವರು ಬ್ರಿಟಿಷ್ ಚಕ್ರವರ್ತಿಯವರ ಸರಕಾರದ ಪರವಾಗಿ ಹಿಂದೂ ದೇಶಕ್ಕೆ ಸಹಾನುಭೂತಿಯಿಂದ ಕೈ ಚಾಚಿದರು. ಆದರೆ ಈ ದೇಶದ ರಾಜಕೀಯ ಧುರೀಣರು ಸರಕಾರದೊಂದಿಗೆ ಸಹಕರಿಸಲು ಒಪ್ಪದೆ ಆ ಸುಸಂಧಿಯನ್ನು ಕಳೆದುಕೊಂಡರು. ರಾಜಕೀಯ ಸುಧಾರಣೆಯ ವಿಷಯದ ರಾಯಲ್ ಕಮಿಷನು 1929ನೇ ಇಸವಿಯಲ್ಲೇ ಆಗಬೇಕೆಂದಿದೆ. ಭಾರತೀಯರು ಈಗಿನ ಸುಧಾರಣೆಯ ಸರಕಾರವನ್ನು ನಡೆಸಲು ಸಹಕರಿಸಿದರೆ ಆ ಕಮಿಷನನ್ನು 1923ಕ್ಕೆ ಮುಂಚಿತವಾಗಿಯೇ ನೇಮಿಸಬಹುದೆಂದು ತಾನು ಕಳೆದ ಆಗೋಸ್ಟನಲ್ಲಿ ಸೂಚಿಸಿದ್ದೆನು. ಆದರೆ ಮುಂದಾಳುಗಳ ಅಭಿಪ್ರಾಯಗಳು ವ್ಯತ್ಯಾಸವಾಗಲಿಲ್ಲ. ಕಳೆದ ಸಪ್ಟಂಬರಿನಲ್ಲಿ ಈ ಎಸೆಂಬ್ಲಿಯು ಚರ್ಚಿಸಲ್ಪಟ್ಟ ಮಡ್ಡಿಮನ್ ರಿಪೋರ್ಟನ್ನು ಕುರಿತ ಠರಾವಿನ ಮೇಲೆ ವಾಸಾದ ಉಪ ಠರಾವುಗಳನ್ನು ಪರಿಶೀಲಿಸಿದಲ್ಲಿ ಸಹಕಾರದ ಚಿಹ್ನೆಯೊಂದೂ ಕಂಡುಬರಲಿಲ್ಲ. ಆದರೂ ಸ್ವಲ್ಪವೂ ಬದಲಾಗಲಿಲ್ಲವೆಂದು ಹೇಳಕೂಡದು. ಎಸೆಂಬ್ಲಿಯ ಈಚಿನ ತರದ ಚರ್ಚೆಗಳನ್ನು ನೋಡಿದರೆ ಸರಕಾರದ ಕೆಲಸಕ್ಕೆ ಅಡ್ಡಿ ಬರುವ ಭಾವನೆಯು ಸ್ವಲ್ಪ ಕಡಿಮೆಯಾಗುತ್ತಿರುವಂತೆ ತೋರುತ್ತದೆ. ಆದರೆ ಇದು ಸಾಕಷ್ಟು ತೋರಿಬಾರದ್ದರಿಂದ ಹೆಚ್ಚಿನ ಸಹಕಾರವನ್ನು ಬಯಸಿದ್ದ ನನ್ನಂತವರಿಗೆ ಆಶ್ಚರ್ಯವನ್ನುಂಟುಮಾಡಿದೆ. ಹೆಚ್ಚು ತೃಪ್ತಿಕರವಾದ ಸಹಕಾರವನ್ನು ತೋರಿಸಲಿಕ್ಕೆ ಕಾಲವು ಮೀರಿರುವುದಿಲ್ಲ. ಎಸೆಂಬ್ಲಿಯು ಈಗ ನಡೆಯುತ್ತಿರುವ ಮೀಟಿಂಗಿನಲ್ಲಾದರೂ ಮುಂದಾಳುಗಳು ಸರಕಾರದವರ ಸಹಾನುಭೂತಿಯನ್ನು ತಿರಸ್ಕರಿಸದೆ ಸಹಕರಿಸಲು ಯತ್ನಿಸಿ ಸರಕಾರಕ್ಕೂ ಪ್ರಜೆಗಳಿಗೂ ಒಳ್ಳೇ ಸಮ್ಮಂಧವನ್ನು ಬೆಳೆಸಲು ಪ್ರಯತ್ನಿಸುವರಾಗಿ ಆಶಿಸುತ್ತೇನೆ.

ವೈಸರಾಯರ ಈ ಮಾತುಗಳಲ್ಲಿ ಹೊಸ ವಿಷಯಗಳೇನೂ ಕಾಣುವುದಿಲ್ಲ. ಬರ್ಕನ್‌ಹೆಡ್ಡು ಮತ್ತು ರೀಡಿಂಗ್ ಪ್ರಭುಗಳ 'ಸಹಾನುಭೂತಿಯ' ಭಾಷಣಗಳಾದನಂತರವೇ ಎಸೆಂಬ್ಲಿಯಲ್ಲಿರುವ ಸ್ವರಾಜ್ಯ, ಇಂಡಿಪೆಂಡೆಂಟ್ ಮತ್ತು ಲಿಬರಲ್ ಪಾರ್ಟಿಗಳ ಮೆಂಬರುಗಳು ಸರಕಾರದೊಂದಿಗೆ ಸಹಕರಿಸುವ ಉದ್ದೇಶದಿಂದ ತಮ್ಮ ಕನಿಷ್ಟಪಕ್ಷದ ಕೋರಿಕೆಗಳನ್ನೊಳಗೊಂಡ ಠರಾವನ್ನು ಕಳೆದ ಸೆಪ್ಟಂಬರಿನಲ್ಲಿ ಬಹುಮತದಿಂದ ಪಾಸುಮಾಡಿದ್ದಾಗಿದೆ. ಇದೇ ಹಿಂದೂದೇಶದ ಪ್ರತಿನಿಧಿಗಳ ಈ ಕೋರಿಕೆಗೆ ಯೋಗ್ಯವಾದ ಉತ್ತರವನ್ನೀಯದೆ, ವೈಸರಾಯರು ಪೂರ್ತಿ ಶರಣಾಗತರಾಗಿ ಸರಕಾರದೊಂದಿಗೆ ಸಹಕರಿಸಿ ಎಂದು ರಾಜಕೀಯ ಪಂಗಡಗಳನ್ನು ಕೇಳುತ್ತಿರುವುದರಲ್ಲಿ ಎಷ್ಟರಮಟ್ಟಿಗೆ ನ್ಯಾಯವಿದೆಯೆಂದು ವಾಚಕರೇ ಊಹಿಸಿಕೊಳ್ಳಬೇಕಾಗಿದೆ. ಸರಕಾರದವರ ಇಂಥಾ ನಿರಾಶೆಯ ಜವಾಬಿನ ನಂತರ ಸ್ವರಾಜ್ಯ ಪಾರ್ಟಿಯವರು ಏನು ಮಾಡಬೇಕೆಂಬುದು ಕಾನ್ಪುರ ಕಾಂಗ್ರೆಸ್ಸಿನಲ್ಲಿ ತೀರ್ಮಾನಿಸಲ್ಪಟ್ಟಿದೆ. ಅವರು ಅದರಂತೆ ನಡೆಸದೆ ಇರಲಾರರು. ಆದರೆ ಬೇರೆ ರಾಜಕೀಯ ಪಾರ್ಟಿಗಳು ಹೇಗೆ ವರ್ತಿಸುವರೆಂದು ನೋಡಬೇಕಾಗಿದೆ.

COFFEE ESTATE FOR SALE.

Kurbumotte, property of the late M L. C. Pais. Adjoining the Sidapur dispensary
Apply —

S. M. PINTO
Virarajendrapet

4—4

ವಿದ್ಯಾರ್ಥಿ ಧರ್ಮ.

(ಗಾಂಧೀಜೀಯವರು ಭಾವನಗರದ ಸಾಮಲದಾಸ ಕಾಲೇಜಿನ ವಿದ್ಯಾರ್ಥಿಗಳಿಗೆ ಕೊಟ್ಟ ಉಪದೇಶದ ಮುಖ್ಯಾಂಶವನ್ನು 'ಹಿಂದೀ ನವಜೀವನ'ದಿಂದ ಭಾಷಾಂತರಿಸಿದ್ದು)

ವಿದ್ಯಾರ್ಥಿ ದಶೆಯನ್ನು ಹಿಂದೂ ಧರ್ಮದಲ್ಲಿ ಬ್ರಹ್ಮಚರ್ಯದ ಸ್ಥಿತಿಯೆಂದು ಎಣಿಸುತ್ತಾರೆ. ಪ್ರತಿಯೊಂದು ಇಂದ್ರಿಯದ ಸಂಯಮವೇ ಬ್ರಹ್ಮಚರ್ಯವು. ಆದರೆ ಇದರ ಮೂಲಕ ವಿದ್ಯೆಯನ್ನು ಪ್ರಾಪ್ತಮಾಡುವ ಎಲ್ಲ ಕಾಲವನ್ನೇ ಬ್ರಹ್ಮಚರ್ಯವೆಂದು ಕರೆಯುವರು. ಬ್ರಹ್ಮಚರ್ಯದ ಈ ನಿರ್ದೋಷ ಜೀವನದಲ್ಲಿ ಕೊಡುವ ವಿಷಯಗಳು ಕಡಿಮೆ ತೆಗೆದುಕೊಳ್ಳುವ ವಿಷಯಗಳು ಹೆಚ್ಚಿರುತ್ತವೆ. ಈ ದೆಸೆಯಲ್ಲಿ ತಂದೆತಾಯಿಗಳಿಂದ, ಶಿಕ್ಷಕರಿಂದ, ಸಂಸಾರದಿಂದ ವಿದ್ಯಾರ್ಥಿಯು ಗ್ರಹಣಮಾಡುತ್ತಲೇ ಇರುವನು. ಆದರೆ ಯಾವುದಕ್ಕಾಗಿ? ಸಂದರ್ಭ ಬಂದಾಗ ಅವನ್ನು ಚಕ್ರಬಡ್ಡಿ ಸಮೇತ ಹಿಂದೆ ಕೊಡುವುದಕ್ಕಾಗಿಯೇ ಆಗಿರುತ್ತದೆ.

ಬ್ರಹ್ಮಚರ್ಯಾಶ್ರಮ ಮತ್ತು ಸನ್ಯಾಸಾಶ್ರಮ - ಇವೆರಡರ ಕಾರ್ಯವೂ ಹಿಂದೂಧರ್ಮದಲ್ಲಿ ಒಂದೇಯೆಂದು ಸೂಚಿಸಿರುತ್ತದೆ. ವಿದ್ಯಾರ್ಥಿಯು ಇಚ್ಛೆಯಿಂದಲ್ಲ, ಸ್ವಭಾವತಃ ಸನ್ಯಾಸಿಯಾಗಿರುವನು. ಆದರೆ ಈ ದಿನ ವಿದ್ಯಾರ್ಥಿಗಳ ಮನಸ್ಸು ಕೂಡ ಕೆಟ್ಟುಹೋಗಿರುತ್ತದೆ. ೧೨ ವರುಷ ಪ್ರಾಯದಲ್ಲೇ ನನ್ನಲ್ಲಿ ದುರಾಲೋಚನೆಗಳಾರಂಭವಾಯಿತು. ವಿಕಾರಗಳ ಅನುಭವವಾಗಲಾರಂಭವಾಯಿತು. ವಿದ್ಯಾರ್ಥಿ ಜೀವನವು ಸ್ವಭಾವತಃ ನಿರ್ವಿಕಾರವಾಗಿರತಕ್ಕದ್ದು. ಆದರೆ ಇಷ್ಟು ಸಣ್ಣ ಪ್ರಾಯದಲ್ಲೇ ನನ್ನ ಪತನಕ್ಕೆ ಆರಂಭವಾಯಿತು. ಇಂತಹ ನಾವಿರಾರು ಉದಾಹರಣೆಗಳು ದೊರೆಯುತ್ತವೆ. ನಾನು ನನ್ನ ಸ್ವಂತ ಉದಾಹರಣೆಯನ್ನು ಕೊಟ್ಟು ಇದರ ದಿಗ್ದರ್ಶನವನ್ನು ಮಾಡುತ್ತಿದ್ದೇನೆ. ವಿದ್ಯಾರ್ಥಿ ಜೀವನವು ಸ್ವಭಾವತಃ ಸನ್ಯಾಸದ ಜೀವನವಿರುತ್ತದೆ. ಸನ್ಯಾಸಿಯು ಸ್ವೇಚ್ಛೆಯಿಂದ ಈ ದಶೆಯನ್ನು ಪ್ರಾಪ್ತಮಾಡಿಕೊಳ್ಳುವನು. ಈಗ ಎಲ್ಲ ಆಶ್ರಮಗಳು ಛಿನ್ನಭಿನ್ನವಾಗಿವೆ. ಬರೇ ಹೆಸರುಗಳು ಮಾತ್ರ ಉಳಿದಿವೆ.

ವಿದ್ಯಾರ್ಥಿ ಧರ್ಮದ ಪಾಲನವು ಇಂದು ಹೇಗೆ ಶಕ್ಯವಾಗಬೇಕು? ತಂದೆತಾಯಿಗಳೇ ಇದಕ್ಕೆ ವಿರೋಧವಾದ ಪಾಠವನ್ನು ಕಲಿಸುತ್ತಿದ್ದಾರೆ. ಹುಡುಗರು ಓದುಬರಹವನ್ನು ಕಲಿತು ಧನವನ್ನು ಸಂಪಾದಿಸಬೇಕು, ಪ್ರತಿಷ್ಠೆಯನ್ನು ಪಡೆಯಬೇಕು - ಎಂಬುದಕ್ಕಾಗಿ ಅವರಿಗೆ ವಿದ್ಯೆಯನ್ನು ಕಲಿಸುವರಲ್ಲದೆ ಉದ್ದೇಶಪೂರ್ವಕವಾಗಿಯಲ್ಲ. ಇದರಿಂದ ನಮ್ಮ ವಾಸ್ತವಿಕ ಸ್ಥಿತಿಯು ವಿಪರೀತವಾಗಿ ಪರಿಣಮಿಸಿದೆ. ಯಾವುದು ನಮ್ಮ ಧರ್ಮವಾಗಿರಬೇಕೋ ಅದನ್ನು ಬಿಟ್ಟು ನಾವು ವಿದ್ಯೆಯ ವ್ಯಭಿಚಾರವನ್ನು ಮಾಡುತ್ತಿರುವೆವು. ಇದರ ಫಲವಾಗಿ ವಿದ್ಯಾರ್ಥಿ ಜೀವನದಲ್ಲಿರಬೇಕಾದ ಪರಮ ಶಾಂತಿ, ಸುಖ ಮತ್ತು ನಿರ್ದೋಷಭಾವವು ಈ ದಿನ ಎಲ್ಲಿಯೂ ಕಂಡುಬರುವುದಿಲ್ಲ. ಕೇವಲ ಗ್ರಹಣಮಾಡುವುದು, ಸ್ವೀಕರಿಸುತ್ತಿರುವುದು, ಸ್ವೀಕರಿಸುವುದರಲ್ಲಿ ವಿವೇಕ ಬುದ್ಧಿಯನ್ನು ಪ್ರಯೋಗಿಸುವುದು - ಇಷ್ಟೇ ವಿದ್ಯಾರ್ಥಿಯ ಕೆಲಸ. ಅನೇಕ ರೀತಿಯಿಂದ ಶಿಕ್ಷಕನು ನಮಗೆ ಗ್ರಹಣಮಾಡುವುದರಲ್ಲಿ ವಿವೇಕವನ್ನು ಪ್ರಯೋಗಿಸಲು ಕಲಿಸುವನು. ಯಾವ ವಸ್ತುವು ಗ್ರಾಹ್ಯ, ಯಾವುದು ತ್ಯಾಜ್ಯವೆಂದು ಅವನು ತೋರಿಸಿಕೊಡುವನು. ಈ ವಿದ್ಯೆಯು ನಮ್ಮಲ್ಲಿರದಿದ್ದರೆ ನಾವು ಯಂತ್ರದಂತೆ ಆಗುವೆವು. ನಾವು ಸಜೀವಮೂರ್ತಿಗಳೂ ಚೇತನಸ್ವರೂಪರೂ ಆಗಿದ್ದೇವೆ. ಯಾವುದು ಗ್ರಾಹ್ಯ, ಯಾವುದು ತ್ಯಾಜ್ಯವೆಂದು ತಿಳಿದುಕೊಳ್ಳುವುದೇ ಚೇತನದ ಲಕ್ಷಣವು. ಆದುದರಿಂದ ಈ ವಿದ್ಯಾರ್ಥಿಯ ಅವಸ್ಥೆಯಲ್ಲಿ ನಾವು ಸತ್ಯದ ಗ್ರಹಣ, ಅಸತ್ಯದ ತ್ಯಾಗ, ಮಧುರವಾಣಿಯ ಗ್ರಹಣ, ಕಠೋರ ಮತ್ತು ದುಃಖಕರ ವಾಣಿಯ ತ್ಯಾಗ-ಇವೇ ಮೊದಲಾದ ಸಂಗತಿಗಳನ್ನು ಕಲಿಯುತ್ತೇವೆ. ಇವುಗಳನ್ನು ಕಲಿಯುವುದರಿಂದಲೇ ಜೀವನವು ಸರಳವಾಗುತ್ತದೆ.

ಆದರೆ ಈ ದಿನ ನಾವು ಧರ್ಮಸಂಕರವನ್ನು ಮಾಡಿದ್ದೇವೆ. ನಾವು ಈ ಸಂಕರಕ್ಕೆ ವಿರುದ್ಧವಾಗಿ ಕಾದಾಡಬೇಕಾಗಿದೆ. ಹೆತ್ತವರು ಬೇರೆ ರೀತಿಯ ವಿದ್ಯಾಭ್ಯಾಸವನ್ನು ಕೊಟ್ಟದ್ದರೆ, ವಾಯುಮಂಡಲವು ಕೆಟ್ಟುಹೋಗದಿದ್ದರೆ, ವಿದ್ಯಾರ್ಥಿಗಳು ಈ ವಾಯುಮಂಡಲವನ್ನು ಎದುರಿಸುವ ಆಗತ್ಯವಿರಲಿಲ್ಲ. ಪ್ರಾಚೀನಕಾಲದಲ್ಲಿ ವಿದ್ಯಾರ್ಥಿ ಜೀವನವು ಋಷಿಗಳ ಆಶ್ರಮಗಳಲ್ಲಿ ಕಳೆಯುತ್ತಿತ್ತು. ಇಂದಿನ ಸ್ಥಿತಿಯು ಬಹಳಮಟ್ಟಿಗೆ ಬದಲಾಗಿದೆ. ಎಲ್ಲಿ ಸಮುದ್ರದ ಸ್ವಚ್ಛ ಹವೆಯು ಬೀಸುತ್ತಿದೆಯೋ ಅಲ್ಲಿ ಗಾಳಿಯನ್ನು ನಿರಾತಂಕವಾಗಿ ಉಸಿರಾಡಬಹುದು; ಆದರೆ ದುರ್ಗಂಧವು ಒಳನುಗ್ಗಿ ಬಾಯಿಯನ್ನು ಮುಚ್ಚಿಕೊಂಡಿರುವ ಆಗತ್ಯಬೀಳುವುದು. ಇಲ್ಲಿ ವಾಯುಮಂಡಲವು ದುರ್ಗಂಧದಿಂದ ತುಂಬಿಕೊಂಡಿರುವುದರಿಂದ ನಾನು ಅದರ ವಿರುದ್ಧವಾಗಿ ಮಾತಾಡದೆ ಇರಲಾರೆನು. ಈ ದಿನ ನೀವು ಅನೇಕ ವಸ್ತುಗಳ ತ್ಯಾಗವನ್ನು ಮಾಡಬೇಕಾಗಿದೆಯೆಂದೂ ಅನೇಕ ವಸ್ತುಗಳು ಕೇವಲ ಹಾನಿದಾಯಕವೆಂದೂ ನೀವೇ ತಿಳಿದುಕೊಳ್ಳಬಹುದು.

ಪ್ರಾಚೀನಕಾಲದಲ್ಲಿ ವಾಚಿಕವಾಗಿ ಶಿಕ್ಷೆಯು ಕೊಡಲ್ಪಡುತ್ತಿತ್ತು. ಗುರುವು ಶಿಷ್ಯರಿಗೆ ಮಂತ್ರಗಳನ್ನು ಹೇಳಿಕೊಡುತ್ತಿದ್ದನು. ಮಂತ್ರವೆಂದರೇನು? ಸಂಕ್ಷಿಪ್ತ ಭಾಷೆಯಲ್ಲಿ ಕಠಿಣ ತತ್ವ. ಇದರನಂತರ ಅವುಗಳ ಮೇಲೆ ಟೀಕೆಮಾಡಲ್ಪಡುತ್ತಿತ್ತು. ಈಗ ಪುಸ್ತಕಗಳೇ ಪ್ರಾಧಾನ್ಯವನ್ನು ಪಡೆದಿವೆ. ನಾನು ನನ್ನ ವಿದ್ಯಾರ್ಥಿ ಜೀವನದ ಕುರಿತೇ ಹೇಳುವುದಾದರೆ ನನಗೆ ತ್ಯಜಿಸಬೇಕಾದ ವಿಷಯಗಳು ಎಷ್ಟೋ ತೋರುತ್ತವೆ. ಆರನೇ ಏಳನೇ ಶ್ರೇಣಿಯ ವಿದ್ಯಾರ್ಥಿಗಳಲ್ಲಿ ರೇನಾಲ್ಡ್ಸರ ಉಪನ್ಯಾಸಗಳನ್ನು ಓದದೆ ಇರುವವರು ಯಾರೆಂದು ಹೇಳುವುದು ಕಠಿಣ. ನಾನು ಮಾತ್ರ ಮಂದಬುದ್ಧಿಯಾಗಿದ್ದೆನು. ಕೇವಲ ಪಾಸಾಗುವುದಕ್ಕೆ ಬೇಕಾದ ಪುಸ್ತಕಗಳನ್ನೋದುವುದು ಮತ್ತು ತಂದೆಯ ಸೇವೆಯನ್ನು ಮಾಡುವುದು - ಇಷ್ಟರಲ್ಲಿಯೇ ಮಗ್ನನಾಗಿರುತ್ತಿದ್ದೆನು. ಇದರಿಂದ ನಾನು ಉಪನ್ಯಾಸಗಳಿಂದ ದೂರವುಳಿದೆನು. ಬೇರೆಯವರ ಮೇಲೆ ಅವುಗಳ ಪರಿಣಾಮ ಏನಾಗುತ್ತದೆಂದು ನನಗೆ ಗೊತ್ತಿಲ್ಲ. ಆದರೆ ವಿಲಾಯತಿಯಲ್ಲಿ ಯೋಗ್ಯ ಸಮಯದಲ್ಲಿ ಅವುಗಳನ್ನು ಓದುವುದಿಲ್ಲವೆಂದೂ ಅವುಗಳ ವಾಚನವು ಒಳ್ಳೆಯದಲ್ಲವೆಂದು ತಿಳಿಯುತ್ತಾರೆಂದೂ ನಾನು ನೋಡಿದೆನು. ಅವುಗಳನ್ನು ಓದದೆ ಇದ್ದುದರಿಂದ ನನಗೆ ಯಾವ ನಷ್ಟವೂ ಆಗಲಿಲ್ಲವೆಂದು ನನಗೆ ತೋರಿತು.

ಇದರಂತೆಯೇ ಅನೇಕ ವಸ್ತುಗಳ ಕಡೆಗೆ ದುರ್ಲಕ್ಷ್ಯವನ್ನು ತಾಳಬೇಕಾಗಿದೆ. ನಾವು ಬಹಳ ವಿಷಮ ಸ್ಥಿತಿಗೆ ಬಂದು ಮುಟ್ಟಿರುವೆವು. ಈಗ ೧೨ ವರುಷ ಪ್ರಾಯದಿಂದಲೇ ಜೀವಸೋಪಾಯದ ವಿಚಾರ ಮಾಡಲಾರಂಭಿಸುವರು. ಇದು ವಿದ್ಯಾರ್ಥಿ ಆಶ್ರಮದೊಡನೆ ಗೃಹಸ್ಥಾಶ್ರಮದ ಸಂಕರವಾಯಿತು. ಗಂಗಾ ಯಮುನಾ ನದಿಗಳ ಸಂಗಮವು ಅತ್ಯಂತ ಸುಂದರವಾದುದು. ಆದರೆ ಇದು ಮಾತ್ರ ಸಂಗಮವಲ್ಲ, ಸಂಕರವು.

ದೇಶದಲ್ಲಿ ಏನು ನಡೆಯುತ್ತಿದೆ ಎಂದು ಎಲ್ಲ ವಿದ್ಯಾರ್ಥಿಗಳು ತಿಳಿದಿರಬೇಕು. ಈಗಿನ ವಿದ್ಯಾರ್ಥಿಗಳಲ್ಲಿ ವರ್ತಮಾನ ಪತ್ರಗಳನ್ನೋದದೆ ಇರುವ ವಿದ್ಯಾರ್ಥಿಗಳು ಕಡಿಮೆ. ವರ್ತಮಾನ ಪತ್ರಗಳನ್ನೋದಬೇಡಿರೆಂದು ನಾನು ನಿಮಗೆ ಹೇಳುವುದಿಲ್ಲ. ಆದರೆ ಅವುಗಳ ಕ್ಷಣಿಕ ಸಾಹಿತ್ಯದಿಂದ ತೃಪ್ತರಾಗಬೇಡಿರೆಂದು ನಾನು ಖಂಡಿತ ಹೇಳುವೆನು. ಅದರಲ್ಲಿ ನಿಜವಾದ ಸಾಹಿತ್ಯವೂ, ಯೋಗ್ಯ ಭಾಷೆಯೂ ದೊರೆಯುವುದಿಲ್ಲ. ಅವುಗಳಿಂದ ಸಿಕ್ಕುವ ವಿಷಯಗಳು ಕ್ಷಣಿಕವಾಗಿರುತ್ತವೆ. ನಾವು ಸ್ಥಾಯಿ ಭಾಷೆಯನ್ನು ಗ್ರಹಣಮಾಡಬೇಕಾಗಿದೆ. ವಿದ್ಯಾರ್ಥಿ ಜೀವನವು ಜೀವನದ ಅಸ್ತಿವಾರವಾಗಿದೆ. ಈ ಕಾಲದಲ್ಲಿ ನಾವು ವರ್ತಮಾನ ಪತ್ರಗಳಿಂದ ವಿಚಾರ ಸಾಮಗ್ರಿಗಳನ್ನು ಹೇಗೆ ಸ್ವೀಕರಿಸಬಹುದು? ನೀವು ವರ್ತಮಾನ ಪತ್ರಗಳನ್ನು ಓದುವುದಿಲ್ಲವೆಂದು ಹೇಳುವುದಾದರೆ ಸ್ವೇಚ್ಛೆಯಿಂದ ನೀವು ಆ ನಿರ್ಧಾರವನ್ನು ಮಾಡಬೇಕು. ಏಕೆಂದರೆ ದಾಸರ ಅಥವಾ ಗಾಂಧಿಯವರ ಭಾಷಣವನ್ನು ಓದಿ 'ಎಷ್ಟು ಚಲೋ ಭಾಷಣ, ಎಂತಹ ವ್ಯಾಖ್ಯಾನ' ನೀವು ಹೇಳುತ್ತಿರುವುದು ನನಗೆ ದುಃಖಜನಕ ಸ್ಥಿತಿಯೆಂದು ತೋರುತ್ತದೆ. ಈ ಸ್ಥಿತಿಯಿಂದ ನಾವು ಹೊರಗೆ ಬರಲೇ ಬೇಕು.

ನಾನು ಈ ಎಲ್ಲ ಮಾತುಗಳನ್ನು ಹೇಳಲು ಕಾರಣವೇನೆಂದರೆ ನಾನು ಶಿಕ್ಷಣದ ವಿಷಯವಾಗಿ ಅನೇಕ ಪ್ರಯೋಗಗಳನ್ನು ಮಾಡಿರುವೆನು. ನನ್ನ ಹುಡುಗರನ್ನೂ ಇತರ ಹುಡುಗ ಹುಡುಗಿಯರನ್ನೂ ಒಟ್ಟಿಗೆ ಕಲಿಸುವ ಭಯಂಕರ ಪ್ರಯೋಗವನ್ನು ಮಾಡಿರುವೆನು. ಆದರೆ ನಾನು ಪಾಠಕೊಂಡಿದೆನು. ನಾನು ಕಣ್ಣುಗಳನ್ನು ತೆರೆದಿದ್ದು ಎಲ್ಲವನ್ನೂ ವಿಚಾರಿಸುತ್ತಿದ್ದೆನು. ತಂದೆತಾಯಿಗಳು ಯೌವನವನ್ನು ತಾಳಿದ ತಮ್ಮ ಹುಡುಗಿಯ ವಿಚಾರವಾಗಿ ಜಾಗರೂಕರಾಗಿರುವಂತೆ ನಾನು ಜಾಗರೂಕನಾಗಿದ್ದೆನು. ನಾನು ರಾಜನೂ, ಗುಲಾಮನೂ ಆಗಿದ್ದೆನು. ಇದರಿಂದ ಶಿಕ್ಷಣವೆಂದರೇನು? ಅದು ಹೇಗಿರಬೇಕು? ಎಂಬ ವಿಷಯದ ಅನುಭವವು ನನಗೆ ದೊರೆಯಿತು. ಈ ವಿಚಾರವನ್ನು ಮಾಡುತ್ತಿರುವಾಗ ನನಗೆ ಸತ್ಯಾಗ್ರಹದ ಪರಿಚಯವಾಯಿತು, ಅಸಹಯೋಗದ ದರ್ಶನವಾಯಿತು. ಈ ಪ್ರಯೋಗಗಳನ್ನು ಮಾಡಲು ನಾನು ಸಾಹಸಪಟ್ಟುದಾದರೂ ಇದರಿಂದಲೇ. ಅವುಗಳಿಂದ ನನಗೆ ಪಶ್ಚಾತ್ತಾಪವಾಗಿದೆಯೆಂದು ನೀವು ತಿಳಿಯಬೇಡಿರಿ. ನಾನು ನಿಮ್ಮ ಮುಂದೆ ಒಂದು ಚಿರಂತನ ಸನಾತನ ಧಾರ್ಮಿಕ ವಸ್ತುವನ್ನಿಟ್ಟಿರುತ್ತೇನೆ. ಅದರ ಬೇರುಗಳು ಆಳವಾಗಿವೆ. ಅದನ್ನು ಹುಡುಗರ ಮುಂದೆಯಾದರೂ ಇಡಲು ಸಂಕೋಚವಾಗುವುದಿಲ್ಲ. ಇದರ ನಿರ್ದೋಷತೆಯನ್ನು ನಾನು ಯಾವ ಪ್ರಕಾರವಾಗಿ ಪ್ರಕಟಮಾಡಲಿ?

ಶಾಂತತೆಯ ಪ್ರಯೋಗದಿಂದ ಅಶಾಂತಿಯು ಹುಟ್ಟಿತೆಂದು ನಾನು ಯಾವಾಗ ಕಂಡೆನೋ ಆಗ ನನ್ನ ಅಸ್ತ್ರಗಳನ್ನು ಬದಿಗಿಟ್ಟು ಕೇವಲ ಶಾಂತಿಯ ಅಸ್ತ್ರವನ್ನು - ರಾಟೆಯನ್ನು - ದೇಶದ ಮುಂದಿಟ್ಟೆನು. ಮೊದಮೊದಲು ಜನರು ನಕ್ಕರು. ಅವರೇ ತಿರಸ್ಕಾರವನ್ನು ಪ್ರಕಟಗೊಳಿಸಿದರು. ಈಗ ಅದಕ್ಕೆ ಸ್ವಾಗತವೀಯುವ ಕಾಲವು ಬಂದೊದಗಿದೆ. ಈಗ ನಾನು ವಿದ್ಯಾರ್ಥಿಗಳೊಡನೆ ಅದನ್ನು ಸ್ವೀಕರಿಸಿರೆಂದು ಕೇಳಿಕೊಳ್ಳುತ್ತಿದ್ದೇನೆ. ಮಹಾಸಭೆಯಲ್ಲಿ ಚರಕದ ನಿರ್ಣಯವು ಮಂಜೂರಾಗಿದೆ. ಸಂದರ್ಭವು ಒದಗಿದರೆ ಲಾರ್ಡ್ ರೀಡಿಂಗರ ಹತ್ತಿರವೂ 'ಸಾಹೇಬರೇ, ಚರಕದಲ್ಲಿ ನೂಲು ತೆಗೆಯಿರಿ' ಎಂದು ನಾನು ಹೇಳುವೆನು. ಈ ಮಾತನ್ನು ಕೇಳಿ ನೀವು ನಗಾಡುತ್ತೀರಿ, ಆದರೆ ನಾನು ಗಂಭೀರತೆಯಿಂದ ಅದನ್ನು ಹೇಳಿರುವೆನು. ನಾನು ಅವರೊಡನೆ ಈ ಮಾತನ್ನು ಹೇಳಲು ಸ್ವಲ್ಪವಾದರೂ ಸಂಕೋಚಪಡುವುದಿಲ್ಲ. ಅವರು ಒಂದುವೇಳೆ ಒಪ್ಪದಿದ್ದರೆ ಅವರಿಗೆ ನಷ್ಟವಾಗುವುದಲ್ಲದೆ ನನಗಲ್ಲ. ಯಾರು ಭಿಕ್ಷೆ ಬೇಡುವರೋ ಅವರಿಗೆ ಹಾನಿಯಾಗುವುದಾದರೂ ಏನು? ಎಲ್ಲರ ಮುಂದೆ ಕೈನೀಡಿ ಪುಣ್ಯಕಾರ್ಯವನ್ನು ಮಾಡಲು ಅವಕಾಶವನ್ನು ಕೊಡುವುದು ನನ್ನ ಧರ್ಮವು. ಕಲ್ಕತ್ತೆಯ ದೇಶಬಂಧು ದಾಸರನ್ನು ನನ್ನೊಡನೆ ಭಜನೆಯನ್ನು ಹಾಡಲು ಕೇಳಿಕೊಂಡೆನು. ಅವರು ಕುಳಿತುಕೊಂಡು ನಮ್ಮ ಭಜನೆಯಲ್ಲಿ ಸಹಭಾಗಿಯಾದರು. ಆದರೆ ಇಷ್ಟರಿಂದ ನಾನು ತೃಪ್ತನಾಗದೆ ಅವರೊಡನೆ ಚರಕದ ಕುರಿತು ಮಾತನಾಡಿದೆನು. ಕರ್ನಲ್ ಮೆಡ್ಡಕರು ಶಸ್ತ್ರ ಚಿಕಿತ್ಸೆಯನ್ನು ಮಾಡಿ ನನ್ನ ಪ್ರಾಣ ಉಳಿಸಿದರು. ಅವರ ಹತ್ತಿರವೂ ನಾನು ಚರಕದ ಬಗ್ಗೆ ಮಾತನಾಡಿದೆನು. ಶ್ರೀಮತಿ ಮೆಡ್ಡಕರು ವಿಲಾಯತಿಗೆ ಹೋಗುವಾಗ ಅವರ ಹತ್ತಿರ ಖಾದಿಯ ವಸ್ತ್ರಗಳನ್ನು ಚರಕದ ಸಂದೇಶವನ್ನು ಅಲ್ಲಿಗೆ ಕಳುಹಿಸಿದೆನು. ಅವರು ಅವುಗಳನ್ನು ಪ್ರೇಮಪೂರ್ವಕವಾಗಿ ಸ್ವೀಕರಿಸಿ ಮನೆಮನೆಗೂ ಆ ಕರವಸ್ತ್ರಗಳ ಸಂದೇಶವನ್ನು ಮುಟ್ಟಿಸುವೆನೆಂದು ಹೇಳಿರುವರು.

ಈ ವಸ್ತುವು ಸಂಪೂರ್ಣ ನಿರ್ದೋಷವಾಗಿದೆ. ಇದರಲ್ಲಿ ಸ್ವಾದವಿಲ್ಲದಿರಬಹುದು. ಆರೋಗ್ಯಪ್ರದ ಭೋಜನವು ಯಾವಾಗಲೂ ಬಹಳ ರುಚಿಕರವಿರುವುದಿಲ್ಲ. ಮೊದಲು ನೀರಸವಾಗಿರುವ ಎಷ್ಟೋ ವಸ್ತುಗಳ ಪರಿಣಾಮವು ಸರಸವಾಗಿರುತ್ತದೆ. ಈ ಕಾರಣದಿಂದಲೇ ಪ್ರಥಮದಲ್ಲಿ ಕಹಿಯಾಗಿದ್ದು ಪರಿಣಾಮದಲ್ಲಿ ಅಮೃತಮಯವಾಗಿರುವುದನ್ನೇ ಗ್ರಹಣಮಾಡಿರೆಂದು ಗೀತೆಯ ಮಹಾ ವಚನವಿದೆ. ರಾಟೆಯ ನೂಲು ಇಂತಹ ಅಮೃತಮಯವಾದ ವಸ್ತುವು. ಅಶಕ್ತಿಗೆ ಶಾಂತಿಯನ್ನೀಯಲು, ವಿದ್ಯಾರ್ಥಿ ದಶೆಯಲ್ಲಿ ಜೀವನಕ್ಕೆ ಶಾಂತಿಯನ್ನು ಕೊಡಲು, ಜೀವನದಲ್ಲಿ ಧರ್ಮಕ್ಕೆ ಸ್ಥಾನವನ್ನು ಕೊಡಲು ಇದರಷ್ಟು ಸಾಮರ್ಥ್ಯಶಾಲಿಯಾದ ಬೇರೊಂದು ವಸ್ತುವಿಲ್ಲ. ಹಿಂದೂಸ್ಥಾನಕ್ಕೆ ನಾನು ಈ ದಿನ ಬೇರೆ ಯಾವ ವಸ್ತುವನ್ನೂ ಸೂಚಿಸಲಾರೆನು. ಗಾಯತ್ರಿಯನ್ನು ಕೂಡ ದೇಶದ ಮುಂದಿಡಲು ಸಾಧ್ಯವಿಲ್ಲ. ಈ ವ್ಯಾವಹಾರಿಕ ಯುಗದಲ್ಲಿ ಜನರು ತಾತ್ಕಾಲಿಕ ಪರಿಣಾಮವನ್ನು ಕಾಣಲು ಅಪೇಕ್ಷಿಸುತ್ತಾರೆ. ಗಾಯತ್ರಿಯನ್ನು ದೇಶದ ಮುಂದಿಟ್ಟು ಅದರ ತಾತ್ಕಾಲಿಕ ಪರಿಣಾಮವನ್ನು ನಾನು ಹೇಗೆ ತೋರಿಸಲಿ? ಆದರೆ ನೀವು ಚರಕದ ಕೆಲಸವನ್ನು ಮಾಡುತ್ತಿದ್ದು ರಾಮನಾಮವನ್ನು ಸ್ಮರಿಸಿರಿ - ಎಲ್ಲವೂ ಕೈಗೂಡುವುದು. ಟ್ಯೂಡರ್ ಓವನ್ ಸಾಹೇಬರು ಇಲ್ಲಿ ಆಫೀಸರರಾಗಿದ್ದರು. ಈಗ ಅವರು ಪಂಚಮಹಾಲ ಜಿಲ್ಲೆಯಲ್ಲಿದ್ದಾರೆ. ಅವರು ರಾಟೆಯ ಕೆಲಸವನ್ನಾರಂಭಿಸಿ 'ನನಗೆ ಚರಕವು ಬಹಳ ಪ್ರಿಯವಾಗಿದೆ. ಅದು ನನಗೆ ಅತ್ಯುತ್ತಮವಾದ 'ಹಾಬ್ಬಿ' (Hobby-ವಿರಾಮ ಕಾಲದಲ್ಲಿ ಮನೋರಂಜನೆಗಾಗಿ ಮಾಡುವ ಕೆಲಸ) ಯಾಗಿ ಪರಿಣಮಿಸಿದೆ' ಎಂದು ಬರೆಯುತ್ತಾರೆ. 'ನಿಮಗೆ ಅದು 'ಹಾಬ್ಬಿ'ಯಾಗಿರಬಹುದು. ನಮಗೆ ಅದು ಕಲ್ಪದ್ರುಮವು' ಎಂದು ನಾನು ಅವರಿಗೆ ಹೇಳಿರುವೆನು. ಇಂಗ್ಲೀಷರ ಜೀವನಕ್ರಮವು ನಿರ್ದೋಷವೆಂದು ನಾನು ಖಂಡಿತವಾಗಿಯೂ ಹೇಳುವುದಿಲ್ಲವೆಂದು ನಿಮಗೆ ಗೊತ್ತೇ ಇದೆ. ಆದರೆ ಅವರಲ್ಲಿಯ ಸದ್ಗುಣಗಳ ರಸಾಸ್ವಾದವನ್ನು ನಾನು ಮಾಡುವೆನು. ಏಕೆಂದರೆ ದುಂಬಿಗಳಂತೆ ನಾನು ಯಾವಾಗಲೂ ಮಧುರತೆಯನ್ನು ಹುಡುಕುತ್ತಲೇ ಇದ್ದೇನೆ. ಇಂಗ್ಲೀಷ ಜನರ 'ಹಾಬ್ಬಿ' ಎಂಬ ಮಾತಿನಲ್ಲಿ ತುಂಬ ರಹಸ್ಯವಿದೆ. ಕರ್ನಲ್ ಮೆಡ್ಡಕರ ಒಂದು ಕಣ್ಣು ಕುರುಡಾಗಿದೆ. ಶಸ್ತ್ರ ಚಿಕಿತ್ಸೆಯನ್ನು ಮಾಡುತ್ತಿರುವಾಗಲೇ ಅವರು ಅದರ ದೃಷ್ಟಿಯನ್ನು ಕಳೆದುಕೊಂಡರು. ಅವರ ಪ್ರಾಯವು ಸುಮಾರು ೬೦ ವರುಷ ಆಗಿರಬಹುದು. ಆದರೂ ಅವರು ಶಸ್ತ್ರಕ್ರಿಯೆಯಲ್ಲಿ ಬಹಳ ನಿಪುಣರು. ಚತುರತೆಯಿಂದ ಸರಿಯಾಗಿ ಒಪರೇಶನ್ ಮಾಡುವರು, ರೋಗಿಗೆ ತಿಳಿಯುವುದು ಕೂಡ ಇಲ್ಲ! ಇವರು ೨೪ ಗಂಟೆಗಳಲ್ಲಿಯೂ ಒಪರೇಶನುಗಳನ್ನು ಮಾಡುತ್ತಿರುವುದಿಲ್ಲ. ಪ್ರತಿದಿನ ಎರಡು ಗಂಟೆ ತೋಟದಲ್ಲಿ ಕೆಲಸಮಾಡುವರು. ಈ 'ಹಾಬ್ಬಿ'ಯನ್ನು ಅನುಸರಿಸುತ್ತಿರುವುದರಿಂದ ಅವರ ಜೀವನವು ರಸಮಯವಾಗಿತ್ತು.

ನಿಮ್ಮ ಜೀವನವು ರಸಮಯವಾಗಬೇಕು, ನಿಮಗೆ ಧರ್ಮವು ದೊರೆಯಬೇಕು, ಕರ್ಮವು ದೊರೆಯಬೇಕು, ಶಾಂತಿ ವಿವೇಕಗಳು ದೊರೆಯಬೇಕು - ಎಂಬುದರಿಂದಲೇ ನಾನು ನಿಮ್ಮ ಮುಂದೆ ಚರಕವನ್ನಿಡುವೆನು. ವಿದ್ಯಾರ್ಥಿ ಜೀವನದಲ್ಲಿ ಶ್ರದ್ಧೆಯು ಅತಿ ಅಗತ್ಯ. ಭೂಮಿತಿಯಲ್ಲಿ ಎಷ್ಟೋ ವಿಷಯಗಳನ್ನು ತರ್ಕವಿಲ್ಲದೆ ಸ್ವೀಕರಿಸಬೇಕಾಗುತ್ತದೆಂದು ನೀವು ಬಲ್ಲಿರಿ. ನಾನು ವಿದ್ಯಾರ್ಥಿಯಾಗಿರುವಾಗ ಭೂಮಿತಿಯ ೨ನೇ ಸಾಧ್ಯವು ನನ್ನ ಬುದ್ಧಿಗೆ ತಿಳಿಯುತ್ತಿರಲಿಲ್ಲ. ಆದರೆ ನಾನು ಹೇಗಾದರೂ ಮುಂದುವರಿಯುತ್ತಿದ್ದೆನು. ನನ್ನ ಚಿತ್ತವು ಶ್ರದ್ಧಾಮಯವಾಗಿದ್ದುದರಿಂದ ಎಂದಾದರೊಂದು ದಿನ ಅದರ ಮರ್ಮವನ್ನು ತಿಳಿಯುವೆನೆಂದು ನಾನು ಭಾವಿಸಿದೆನು. ಈಗ ಈ ವಿಷಯವು ನನಗೆ ಅತ್ಯಂತ ಆನಂದಮಯವಾಗಿ ತೋರುವುದು. ನನ್ನ ಕೈಯಲ್ಲಿ ಈಗ ಭೂಮಿತಿಯ ಪುಸ್ತಕವು ದೊರೆತರೆ ನಾನು ಅದನ್ನು ಸುಲಭವಾಗಿ ತಿಳಿದುಕೊಳ್ಳುವೆನು. ನಿಮ್ಮಲ್ಲಿಯೂ ಶ್ರದ್ಧೆಯಿದ್ದರೆ, ಈ ವೃದ್ಧನು ನಿಮ್ಮ ಮುಂದೆ ಮಾತನಾಡಿದ ಒಬ್ಬ ವ್ಯಕ್ತಿಯ ಮಾತುಗಳಲ್ಲಿ ಸತ್ಯಾಂಶವಿತ್ತೆಂದು ನೀವು ಮುಂದೆ ತಿಳಿಯುವಿರಿ.

ನೇಹಾಭಿಕ್ರಮನಾಶೋಽಸ್ತಿ ಪ್ರತ್ಯವಾಯೋ ನ ವಿದ್ಯತೇ ।
ಸ್ವಲ್ಪಮಪ್ಯಸ್ಯ ಧರ್ಮಸ್ಯ ತ್ರಾಯತೇ ಮಹತೋ ಭಯಾತ್ ॥

ಚರಕದ ವಿಷಯವಾಗಿ ಈ ಮಾತು ಅಕ್ಷರಶಃ ಸತ್ಯವಾಗಿದೆ.

"ಸತ್ಯಾಗ್ರಹೀ."

ಜಮೀನ್ದಾರರ ಸಂಘ.

ತಾ. 19—1—೨೬ರಲ್ಲಿ ಮಡಿಕೇರಿಯಲ್ಲಿ ನಡೆದ ಜಮೀನ್ದಾರರ ಸಂಘದ ಕಮಿಟಿ ಮೀಟಿಂಗಿನ ವಿವರ

ರಾ ಬಾ ಕೆ ಅಪ್ಪಯ್ಯನವರು ಅಧ್ಯಕ್ಷರಾಗಿದ್ದರು 6 ಮೆಂಬರುಗಳು ಹಾಜರಿದ್ದರು

ಸ್ಟೇಟ್ ಆಫ್ ಕಂಟ್ರಾಕ್ಟು ಆಕ್ಟಿನ ಬಿಲ್ಲಿನಲ್ಲಿ ಈ ಕೆಳಗಿನ ಬದಲಾವಣೆಗಳನ್ನು ಮಾಡಬೇಕೆಂದು ಸೂಚಿಸಲಾಯಿತು

1. ಸೆಕ್ಷನ್ 1 (ಬಿ) ಯಲ್ಲಿ "ಕೆಲಸಗಾರ' ಎಂಬ ಶಬ್ದದ ಅರ್ಥವಿವರಣೆಯಲ್ಲಿ ಕಿತ್ತಳೆ, ಕಬ್ಬು, ಅಡಿಕೆ, ಒಳ್ಳೆಮೆಣಸು, ರಾಗಿ ಮತ್ತು ಬೇರೆ ಎಲ್ಲಾ ಮಿಶ್ರ ಬೆಳೆಯ ವ್ಯವಸಾಯ ಮಾಡುವ ಕೂಲಿಗಳನ್ನೂ ಸೇರಿಸಬೇಕು

೭ ಕರಾರುಗಳಿಗೆ ಪಾರುಪತ್ಯಗಾರರ ಮುಂದೆ ಮಾತ್ರವಲ್ಲ, ಬಂದು ಮೇಜಿಸ್ಟ್ರೇಟರುಗಳ, ಸಹಕಾರಿ ಸಂಘಗಳ ಪ್ರೆಸಿಡೆಂಟರುಗಳ ಮತ್ತು ಕೊಡಗಿನ ಜಾತಿಗೆ ಮೇಜಿಸ್ಟ್ರೇಟರ ಅಧಿಕಾರವಿರುವ ಪಟೇಲರುಗಳ ಸಮಕ್ಷಮದಲ್ಲಿ ರುಜು ಹಾಕಿಸಬಹುದೆಂದು 1ನೇ ಸೆಕ್ಷನನ್ನು ತಿದ್ದಬೇಕು

ಓದುಬರಹ ತಿಳಿಯದಂಥ ಕೂಲಿಯು ರುಜು ಹಾಕಲಿಕ್ಕೆ ಅಂಥಾ ಅಧಿಕಾರಿಗಳ ಮುಂದೆ ಹಾಜರಾಗಬೇಕಾದಿರಬಾರದು

3 ಸೆಕ್ಷನ್ 8 (1) ರಲಿ ಮಾಲಿಕರು ರಿಜಿಸ್ಟರುಗಳನ್ನು ಇಡಬೇಕೆಂದು ಆಕ್ಟಿನಲ್ಲೇ ಸೇರಿಸಬೇಕು

4 ಸೆಕ್ಷನ್ 8 (2) ಆದರೆ ಇದ್ದಾಗ ಮೇಜಿಸ್ಟ್ರೇಟರು ಪುಸ್ತಕಗಳನ್ನು ಅಪಮಾಡಿಸ ಬಹುದಾದುದರಿಂದ ಈ ಸೆಕ್ಷನ್ನು ತೆಗೆದು ಹಾಕಬೇಕು.

5 ಸೆ 9ರಲ್ಲಿ ಯಜಮಾನನ ಯೋಗ್ಯತಾನುಸಾರ ಎ ವಾ... ವಾಪತಕ್ಕದ್ದು, ಎಂದು ಸೇರಿಸಬೇಕು.

6 ಸೆ 10 ಇಂಥಾ ವಿಚಾರಗಳು ಮತ್ತು ಇನ್ಸ್ಪೆಕ್ಷನುಗಳು ಯಜಮಾನನಿಗೂ ಆಳುಗಳಿಗೂ ಕಷ್ಟ ಬಾಧೆಗಳನ್ನುಂಟು ಮಾಡಬಹುದಾದದರಿಂದ ಈ ಸೆಕ್ಷನನ್ನು ರದ್ದು ಮಾಡಬೇಕು

7 ಸ 11 ಜಮೀನುದಾರರ ಸಂಘದಿಂದ ಏನ ಸಮುದಾಯದ ಸಂಘಗಳಿಂದ ನೇಮಿಸಲ್ಪಡುವಂಥ ಉದ್ಯೋಗಸ್ಥರಲ್ಲದ ಇಂಡಿಯನ್ ಮೆಂಬರುಗಳ ಬಹುಮತವು ಈ ಕಮಿಟಿಯಲ್ಲಿರಬೇಕು ನ್ಯಾಯಗಳನ್ನು ಪರಿಶೀಲಿಸಲು ಕಮ್ಮಿ ಪಕ್ಷ 6 ತಿಂಗಳ ವಾಯಿದೆಯಾದರೂ ಇರಬೇಕು.

8 ಸೆ 13 (1) (ಎ). ಸ 13 (1)ರ ಮೇರೆಯ ಹುಕುಮಿನ ನಂತರ ೩೦ ದಿವಸಗಳೊಳಗೆ ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರಿಗೆ ಅಪೀಲು ಮಾಡುವ ಹಕ್ಕಿರಬೇಕೆಂದು ಸೇರಿಸಬೇಕು

9 ಸ 14 ಕರಾರುಗಳಿಗೆ ಜವಾಬ್ದಾರಿಯುಳ್ಳ ಅಧಿಕಾರಿಗಳ ಮುಂದೆ ರುಜು ಹಾಕಿಸ ಬೇಕಾದುದರಿಂದ ಈ ಸೆಕ್ಷನಿನ ಅವಶ್ಯಕತೆಯಿಲ್ಲ

10. ಸ 15 (1)ರ ಮೇರೆಯ ಹುಕುಮಿನ ಮೇಲೆ ಅಪೀಲು ಮಾಡುವ ಹಕ್ಕು ಯಜಮಾನನಿಗೆ ಇರಬೇಕೆಂದು ಸ 15 (3)ರ ನಂತರ ಒಂದು ಹೊಸ ಸೆಕ್ಷನ್ ಸೇರಿಸಬೇಕು

11 ಸೆ 16 ಈ ಸೆಕ್ಷನಿನಲ್ಲಿ ಸಲ ಮಾಡುವ ಅಧಿಕಾರ ಡಿ ಮೇಜಿಸ್ಟ್ರೇಟರಿಗೆ ಕೊಟ್ಟು ಈ ಸೆಕ್ಷನನ್ನು 13 (2)ನೇ ಸೆಕ್ಷನಿಗೆ ಸರಿ ಹೊಂದುವಂತೆ ಮಾಡಬೇಕು

12 ಸೆ 17, 18 ಮತ್ತು 19 ತೆಗೆದುಹಾಕಬೇಕು

ಕೆ ಅಪ್ಪಯ್ಯ,
ಅಧ್ಯಕ್ಷರು.

ಧರ್ಮದ ಅವಶ್ಯಕತೆ

(ಬಾತ್ಮೀದಾರರೊಬ್ಬರಿಂದ)

ಮಡಿಕೇರಿ ವೇದಾಂತ ಸಂಘದ ಆಶ್ರಯದಲ್ಲಿ ತಾ 23—1—26ನೇ ಸಾಯಂಕಾಲ ಮಡಿಕೇರಿ ಹೈಸ್ಕೂಲ್ ಹಾಲಿನಲ್ಲಿ ಶ್ರೀಯುತ ಯನ್ ಕುಟ್ಟಪ್ಪ ಬಿ ಎ ಇವರು "ಧರ್ಮದ ಅವಶ್ಯಕತೆ' ಯನ್ನು ಕುರಿತು ಒಂದು ಉಪನ್ಯಾಸ ಕೊಟ್ಟರು ಶ್ರೀ|| ಬಿ ಯಸ್ ಕುಶಾಲಪ್ಪ ಬಿ ಎ ಡಿ ಇ ಯವರು ಅಧ್ಯಕ್ಷರಾಗಿದ್ದರು

ಉಪನ್ಯಾಸಕರು ಪ್ರಪಂಚದ ಆದಿಯಲ್ಲಿ ನಡೆದ ಧರ್ಮದ ಪ್ರಚಾರವನ್ನು ಕುರಿತು ಮಾತಾಡುತ್ತಾ, ನಮ್ಮ ಸನಾತನ ಧರ್ಮದ ಬೆಳವಣಿಗೆಯನ್ನು ವಿಸ್ತಾರವಾಗಿ ವಿವರಿಸಿದರು ಮನುಸ್ಮೃತಿ, ಉಪನಿಷತ್ತು ಮತ್ತು ಭಗವದ್ಗೀತೆಯ ಆಧಾರಗಳೊಡನೆ, ಟೆನಿಸನ್, ಷೇಕ್ಸ್‌ಪೀಯರ್ ಮುಂತಾದವರ ತುಲನಾತ್ಮಕ ಅಭಿಪ್ರಾಯಗಳನ್ನು ಕೊಟ್ಟರು ನಮಗೆ ಮುಖ್ಯವಾಗಿ ಸಾವಿನ ಭಯವುಂಟಿದೆ ಎಂತಲೂ, ಈ ಭಯದಿಂದ ಬಿಡುಗಡೆಯಾಗಲಿಕ್ಕಾಗಿ ಧರ್ಮವು ಅವಶ್ಯವೆಂದೂ, ಇಂಥ ಧರ್ಮವು ಯೋಗಾಭ್ಯಾಸದಿಂದ ಮಾತ್ರ ನಮಗೆ ಲಭಿಸುವುದೆಂದೂ, ಈ ಮರಣವೆಂಬ ದುಃಖದಿಂದ ತಪ್ಪಿಸಿಕೊಳ್ಳುವ ನಿಮಿತ್ತ ತನ್ನನ್ನು ತಾನೇ ಅರಿತುಕೊಳ್ಳುವದು ಅವಶ್ಯವೆಂತಲೂ, ಹೀಗೆ ಆತ್ಮಜ್ಞಾನ ಪಡೆಯಲಿಕ್ಕಾಗಿಯೇ ಹಲವು ಜನಾಂಗಗಳಿಗೆ ಪ್ರತ್ಯೇಕ ಗ್ರಂಥಗಳಿವೆ ಎಂದೂ, ಆ ಗ್ರಂಥಗಳಲ್ಲಿ ಪ್ರಾಮುಖ್ಯವಾದುವುಗಳು ಭಾರತೀಯರ ವೇದಗಳು, ಕ್ರೈಸ್ತರ ಬೈಬಲ್ ಮುಸಲ್ಮಾನರ ಕುರಾನ್ ಇತ್ಯಾದಿಗಳೆಂದೂ ಹೇಳಿ ಸನಾತನ ಧರ್ಮದ ನಾಲ್ಕು ಮಾರ್ಗಗಳಾದ ಕರ್ಮ, ಭಕ್ತಿ, ಜ್ಞಾನ ಮತ್ತು ರಾಜ ಯೋಗಗಳನ್ನು ಸಂಕ್ಷೇಪವಾಗಿ ವಿವರಿಸಿ ಸ್ವಾರಸ್ಯವಾಗಿ ಮಾತಾಡಿದರು ಕರ್ಮ ಮಾರ್ಗವನ್ನು ಕುರಿತ ಇವರ ಮಾತು ಬೋಧಪ್ರದವಾಗಿತ್ತು ಜ್ಞಾನ ಯೋಗ ನಿರೂಪಣ ಮಾಡುವಾಗ ಆತ್ಮನ ವಿವರಣೆಯನ್ನು ಬಹು ಸೊಗಸಾಗಿ ಮಾಡಿದರು ಅಂತ್ಯದಲ್ಲಿ ಆತ್ಮನ ಸ್ವರೂಪವನ್ನು ಯಾವ ಯಾವ ಜನಾಂಗಗಳು—ಚಾಲ್ಡಿಯನ್ನರು, ಗ್ರೀಸಿಯರು ಈಜಿಪ್ಟರು, ಹಿಂದೀಯರು, ಕ್ರೈಸ್ತರು ಹೇಗೆ ಹೇಗೆ ತಿಳಿದುಕೊಂಡಿದ್ದರೆಂಬುದನ್ನು ವಿವರಿಸಿ ಹೇಳಿದರು ಡಾರ್ವಿನ್ ದೊರೆಯ ವಿಕಾಸವಾದದ (Evolution) ಪ್ರಸಕ್ತಿಯನ್ನು ಅಲ್ಪ ಸ್ವಲ್ಪ ವಿವರಿಸಿದರು.

ನಂತರ ಸಂಘದ ಕಾರ್ಯದರ್ಶಿಯವರಾದ ಮೆ|| ಬಿ ಗಣಪತಿಯವರು ಜೀವನದಲ್ಲಿ ಧರ್ಮವಿದೆಯೆಂದು ಮುಂತಾಗಿ ಬಹು ಉತ್ಸಾಹದಿಂದ ಮಾತಾಡಿದರು ಉಪನ್ಯಾಸವು ಪ್ರಾರಂಭವಾಗಿ ಸಮಯವು ಬಹಳವಾಗಿದ್ದುದರಿಂದ ನೆರೆದಿದ್ದ ಜನರು ಹೊರಗೆ ಬರಲು ಕುತೂಹಲವನ್ನು ತೋರಿಸಿದ ಕಾರಣ ಸಭಾಧ್ಯಕ್ಷರು ಉಪನ್ಯಾಸಕರನ್ನು ಪ್ರೋತ್ಸಾಹಿಸಿ ಮಾಡಿದ ಭಾಷಣವನ್ನು ಮುಗಿಸಿ ಸಭೆಯ ಪರವಾಗಿ ಉಪನ್ಯಾಸಕರಿಗೆ ಧನ್ಯವಾದಗಳನ್ನಿತ್ತರು

FOR SALE·

A J S Motor Cycle & Side Car, Spare Wheel, Hood & Wind Screen All wheels interchangeable Running daily in Mercara Price Rs 1000, or offer, Apply A J C c/o Manager, "Kodagu" Ltd

ಖಾಸಗಿ ನೋಟೀಸ್.

ನನ್ನ ಮೋಟಾರ್ ಸೈಕಲ್ ಸೋಡತಿಯ ಟಿಕೇಟುಗಳನ್ನು ಪಡಕೊಂಡಿರುವ ಮಹನೀಯರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ —

ಸದರಿ ಟಿಕೇಟುಗಳಲ್ಲಿ ಸೂಚಿಸಿರುವ ಪ್ರಕಾರ ಕಳೆದ ತಿಂಗಳಲ್ಲಿ ಟಿಕೇಟುಗಳನ್ನು ಎತ್ತಲು, ನಾನು ಯಾರ್ಯಾರಿಗೆ ಟಿಕೇಟು ಪುಸ್ತಕಗಳನ್ನು ಕಳುಹಿಸಿ ಕೊಟ್ಟಿದ್ದೇನೋ, ಆ ಮಹನೀಯರ ಪೈಕಿ ಕೆಲವರು ಟಿಕೇಟುಗಳ ಬಗ್ಗೆ ಇನ್ನೂ ಹಣವನ್ನು ಕಳುಹಿಸದೆ ಇರುವುದರಿಂದಲೂ, ಇನ್ನು ಕೆಲವರು ಅವರಿಗೆ ಎಷ್ಟು ಪತ್ರಗಳನ್ನು ಬರೆದಾಗ್ಯೂ ಮೌನವನ್ನೇ ತಾಳಿರುವುದರಿಂದಲೂ, ಸಾಧ್ಯವಾಗಲಿಲ್ಲ ಹೇಗೂ ತಪ್ಪದೆ ಬರುವ ಫೆಬ್ರವರಿ ತಿಂಗಳು 28ನೇ ಆದಿತ್ಯವಾರ 2 ಘಂಟೆ ಸಮಯದಲ್ಲಿ ಆ ವ್ಯಕ್ತಿ ಮೂಲದಲ್ಲಿ ಸದರಿ ಸೋಡತಿಯ ಟಿಕೇಟುಗಳು ಎತ್ತಲ್ಪಡುವವು ಈ ತಾರೀಕಿನ ಒಳಗೆ ಯಾವ ಮಹನೀಯರು ಪುಸ್ತಕವನ್ನಾಗಲೀ ಹಣವನ್ನಾಗಲೀ ನನಗೆ ಕಳುಹಿಸದೆ ಇರುತ್ತಾರೋ ಅಂಥವರ ಹೆಸರನ್ನು ಅದೇ ವಾರದ ಪತ್ರಿಕೆಯಲ್ಲಿ ಪ್ರಕಟಿಸುವೆನು ಅಂಥ ಮಹನೀಯರಿಂದ ಯಾರು ಟಿಕೇಟುಗಳನ್ನು ಪಡಕೊಂಡಿರುವರೋ ಅವರು ದಯವಿಟ್ಟು ತಮ್ಮ ಹಣವನ್ನು ಅವರಿಂದಲೇ ವಾಪಸು ಪಡಕೊಳ್ಳಬೇಕಾಗಿ ನನ್ನ ಪ್ರಾರ್ಥನೆ

ಒಂದುವೇಳೆ ಯಾರಿಗಾದರೂ ತಮ್ಮ ಟಿಕೇಟುಗಳ ವಿಷಯ ಸಂಶಯವಿದ್ದರೆ, ರಿಪ್ಲೈ ಪೋಸ್ಟ್ ಕಾರ್ಡು ಕಳುಹಿಸಿದಲ್ಲಿ ನಿಜ ಸಂಗತಿ ತಿಳುಹಿಸಲು ಸಿದ್ಧನಾಗಿರುವೆನು.

ಯನ್. ಬಿ. ಕರುಂಬಯ್ಯ,
"ನಿಂಬಾ ಕಾಟೇಜ್"
ಅಮ್ಮತ್ತಿ.

ವಿಮರ್ಶೆ.

ನಾಗರೀಕತೆಯ ಪರಿಣಾಮ

ಗ್ರಂಥಕರ್ತರು,—ಪೆ ಪಾಂಡಂಡ ಮುತ್ತಣ್ಣನವರು ಬೆಲೆ 6 ಆಣೆ

ದೊರೆಯುವ ಸ್ಥಳಗಳು:—'ಕೊಡಗು' ಆಫೀಸು ಮಡಿಕೇರಿ, ಲೋಕಪಾವನ ಆಫೀಸು, ಮಡಿಕೇರಿ, ಕಮರ್ಶ್ಯಲ್ ಸ್ಟೋರ್ಸ್ ಪೊನ್ನಂಪೇಟೆ.

ಈ ಪುಸ್ತಕವು, ನೊಡಲೇ ಕುಲೋನ್ನತಿ—ಸ್ವರ್ಗದ ಗಮನ ಎಂಬ ಸಣ್ಣ ಗ್ರಂಥವನ್ನು ಬರೆದು ನಮಗೆಲ್ಲರಿಗೂ ಪರಿಚಿತರಾಗಿರುವ ಪೆ ಪಾಂಡಂಡ ಮುತ್ತಣ್ಣನವರಿಂದ ರಚಿತವಾದದ್ದಾಗಿದೆ, ಇದರಲ್ಲಿ 4 ಅಧ್ಯಾಯಗಳಿವೆ. ಪತಿಧರ್ಮ, ಧರ್ಮಪುತ್ರಿಯರ ಕೂಟ, ಪಿತೃಭಕ್ತಿ ಮತ್ತು ವಿನೋದ

ಪತಿಧರ್ಮ ಎಂಬ ಭಾಗದಲ್ಲಿ ಈಗಿನ (ಕಾನ್‌ವೆಂಟ್) ಸ್ತ್ರೀ ವಿದ್ಯೆಯ ಪರಿಣಾಮದ ವರ್ಣನೆಯು ಚೆನ್ನಾಗಿದೆ ಈ ಅಧ್ಯಾಯವು ಹೃದಯಂಗಮವಾಗಿದೆ ಎಂ. ಎ ಎಲ್ ಎಲ್ ಬಿ ಪರೀಕ್ಷೆಯಲ್ಲಿ ಉತ್ತೀರ್ಣನಾದ ಓರ್ವನು ಅಸಿಸ್ಟೆಂಟ್ ಕಮೀಷನರಾಗಬೇಕೆಂಬ ಆಶೆಯಿಂದ, ವಕೀಲಿಕೆಯನ್ನು ತಿರಸ್ಕರಿಸಿ ಒರ್ವ ಒಬ್ಬ ಕ್ಲಾರ್ಕನಾಗಿ ತನ್ನ ಹೆಂಡತಿಯ ಕೈಗೆ ಸಿಕ್ಕಿ ಅಪರಿಮಿತವಾಗಿ ಹಣ ಖರ್ಚುಮಾಡಿ ದೊಡ್ಡ ಸಾಲಗಾರನಾಗಿ ಅಕಾಲಮೃತ್ಯುವಿಗೆ ತುತ್ತಾದದ್ದೂ, ಆ ನಂತರ ಇವನ ಪತ್ನಿಯ ಶೋಚನೀಯ ದೆಸೆಯೂ ಎಲ್ಲರ ಮನಕರಗುವಂತೆ ಬಗೆಯಲಾಗಿದೆ ನಮ್ಮ ನಡವಳಿಕೆಯನ್ನು ಬಿಟ್ಟು ಅನ್ಯರ (ಕ್ರೈಸ್ತರ) ನಡವಳಿಯನ್ನು ಅನುಸರಿಸಬಾರದೆಂಬುದು ಎಲ್ಲರಿಗೂ ಬೋಧೆಯಾಗುವುದು ಸ್ತ್ರೀಯರಿಗೆ ವಿದ್ಯೆಯನ್ನು ಕೊಡುವುದಾದರೂ ಅವರಿಗೆ ಹಿಂದಿನ ವಿದ್ಯೆಯನ್ನೇ ಕೊಡಬೇಕಲ್ಲದೆ ಗೃಹಕೃತ್ಯದಿಂದ ಬಾಹಿರವಾದ ವಿದ್ಯೆಯನ್ನು ಕೊಡಬಾರದೆಂದು ಗ್ರಂಥಕರ್ತರ ಮತವಾಗಿದೆ

ಧರ್ಮಪುತ್ರಿಯರ ಕೂಟದ ಪರಿಚ್ಛೇದದಲ್ಲಿ ಈಗಿನ ಸಂಘಾತದ ಅನವಸ್ಥೆಯು ವಿಕೃತವಾಗಿದೆ. ಹಾಸ್ಯರೂಪದಲ್ಲಿರುವ ಮಾತುಗಳು ನಮ್ಮನ್ನು ಸ್ಥೀತಿವಂತರನ್ನಾಗಿ ಮಾಡುವವು ಹೆಂಡತಿಯು ತನ್ನ ಗಂಡನನ್ನು ಕಸಬರಿಕೆಯಿಂದ ಹೊಡೆದ ಸಂಗತಿಯು ಕುಟುಂಬಾತಿಗೆ ಮನೆಯ ಅತ್ತೆ (ಪತ್ನಿಗೆ) ಕೋರ್ಟಿಗೆ ಸಾಕ್ಷಿ ನುಡಿಯ ಲಿಕ್ಕೆ ಬರುವ ವರ್ಣನೆಯು ಉತ್ತಮವಾಗಿದೆ. ತೀರ್ಪು ಈಗಿನ ಕೋರ್ಟುಗಳ ಕಣ್ಣುಗಳ ತೀರ್ಪು ಆಗಿದೆ. ಅಂತ್ಯದಲ್ಲಿ ಪತಿಪತ್ನಿಯರಿಬ್ಬರಿಗೂ ಶಿಕ್ಷೆ!

ಪಿತೃಭಕ್ತಿಯ ಭಾಗವು ಸಾಮಾನ್ಯವಾಗಿ ಎಲ್ಲರ ಮನೆಯಲ್ಲಿ ನಡೆಯುವಂತೆ ವರ್ಣನೆಯಾಗಿದೆ ಬಿ. ಎ. ಇದ್ದ ಗೂಪತಿಗೆ ತನ್ನನ್ನು ಸಾಕಿ ಸಲಹಿದ ಅಪ್ಪನನ್ನು ಕಡೆಗೆ ತಿರಸ್ಕಾರದ ನೋಟ ' ಇನ್ನೊಬ್ಬನು ಆ ಮುದುಕನು ಯಾರೆಂದು ಕೇಳಿದರೆ ಆ ಪಣ್ಣಾರೆಯೇ ಒಬ್ಬ ನಾಡಿಗನು. ಎಂದು ಹೇಳುವ ಈ ಗ್ರಾಜುಯೇಟು ಎಂತ ಮೂರ್ಖನು! ಇವನಂತ ಮೂರ್ಖರು ನಮ್ಮಲ್ಲಿಯೂ ಇರುವರಲ್ಲವೇ? ಅವರು ಈ ಭಾಗವನ್ನೋದಿದರೆ ಬುದ್ಧಿವಂತರಾಗುವರು.

ಪುಸ್ತಕದ ಉದ್ದೇಶವನ್ನು ಕುರಿತ ಮುನ್ನುಡಿಯಲ್ಲಿ ರಾವ್ ಸಾಹೇಬ್ ಕೋಡಿಮಣಿಯಂಡ ಸಬ್ಬಯ್ಯನವರು ಹೀಗೆನ್ನುವರು—ಮನುಷ್ಯನಿಗೆ ಧರ್ಮವೇ ಮನುಷ್ಯತ್ವ. ಭೌತಿಕ ವಿದ್ಯೆಯಿಂದ ಲೌಕಿಕ ಪ್ರಯೋಜನವನ್ನು ಮುಗಿಸಿಕೊಂಡು ಧರ್ಮಜ್ಞಾನದಿಂದ ಶಾಂತಿಯ ಬಾಯಾರಿಕೆಯನ್ನು ಕಳೆದುಕೊಳ್ಳಬೇಕು. ಹಿಂದುಗಳಾದರೋ ಪರಧರ್ಮ, ಪರಾಕ್ರಮ ಇತ್ಯಾದಿಗಳಲ್ಲಿ ನಿಮಗ್ನರಾಗಿರುವರು ಹೀಗಿರಲಿ, ಸ್ವದೇಶ ಪ್ರೇ



No License Required! No License Required!!

Webley and Scott's Air Pistol, cal 177 or 22, Powerful and Accurate complete with a sample box of slugs two spare washers, a bruser for cleaning, and a booklet of instructions Rs 30/– Free delivery.

Powerful German "Diana" Air gun Handsome and Accurate, takes B S A Pattern No 1 Slugs and Darts recommendable for Target Practice Rs 15/ Free delivery

No License required to purchase or to possess above Items.

Brilliant Search Light Lamp for Night Sports Rs 30/– Free delivery
12, 16 or 20 bore ld Smokeless Powder cartridges no's 1 to 3 Rs 11/– per 100
Do do do buck shots „ 12/– „
Do do. do Ball „ 14/– „

We stock Arms, Ammunition and shooting Requisites of all kinds and Quality Ranging from Re 1/– to Rs 1800/–

Apply for our Shooting Season's Clearance Sale Catalogue of Brand New Goods.

GOOLAMHUSSIAIN ALLIBHOY & SONS

Largest Importers of Fire Arms and Ammunition,

Cheapest priced firm in India,

24-4 **210 Abdul Rehman Street, BOMBAY·**

ತ್ರಿ, ಸ್ವಭಾಷಾಭಿಮಾನ, ಸ್ವಾರ್ಥತ್ಯಾಗ ಇತ್ಯಾದಿ ಗುಣಗಳನ್ನು ನಮ್ಮಲ್ಲಿ ಉದ್ದೀಪಿಸುವುದೇ ಗ್ರಂಥಕರ್ತರ ಸದುದ್ದೇಶವಾಗಿದೆ."

ಗ್ರಂಥಕರ್ತರು ಇದಕ್ಕಿಂತಲೂ ಉತ್ತಮವಾದ ಪುಸ್ತಕಗಳನ್ನು ಬರೆಯುವಂತೆ ಇವರ ಸಾಹಸಕ್ಕೆ ಶ್ರೀ ಕಾವೇರಿ ಮಾತೆಯು ಅನುಗ್ರಹಿಸಲೆಂದು ನಮ್ಮ ಪ್ರಾರ್ಥನೆ.

ವರ್ತಮಾನ ಸಂಗ್ರಹ

ಒಳದೇಶ.

"ಕೊಡಗು" ಕಂಪೆನಿಯ ಡೈರೆಕ್ಟರುಗಳ ಮೀಟಿಂಗು ತಾ 3—2—1926ನೇ ದಿನ ಸಾಯಂಕಾಲ 5 ಗಂಟೆಗೆ ಕೊಡಗು ಆಫೀಸಿನಲ್ಲಿ ನಡಿಯಲಿಕ್ಕಿದೆ.

ಹೊಸ ರೂಲ್ಸ್ ಪ್ರಕಾರ ಮ. ಪಟ್ಟದ ಪೊನ್ನಪ್ಪನವರು ಎಸ್. ಎಸ್. ಎಲ್. ಸಿ. ಪರೀಕ್ಷೆಯಲ್ಲಿ ಪಾಸಾಗಿರುವರೆಂದು ತಿಳಿಯುತ್ತೇವೆ.

ಕೊಡಗು ಜಮೀನ್ದಾರರ ಸಂಘದ ಎಗ್ಸಿಕ್ಯೂಟಿವ್ ಕಮಿಟಿ ಮೀಟಿಂಗು ತಾ. 8—2—1926ನೇ ದಿನ ಸಾಯಂಕಾಲ 5 ಗಂಟೆಗೆ ಸಂಘದ ಆಫೀಸಿನಲ್ಲಿ ನಡಿಯುತ್ತೆ.

ಮಡಿಕೇರಿ ವೇದಾಂತ ಸಂಘದಲ್ಲಿ ತಾ. 31—1—26ರಲ್ಲಿ ಸಾಯಂಕಾಲ 5 ಗಂಟೆಗೆ ಮೆ॥ ರಾಮಶಾಸ್ತ್ರಿಯವರು ಬಸವೇಶ್ವರ ದೇವನ ಚರಿತ್ರೆಯ ವಿಷಯ ಕನ್ನಡದಲ್ಲಿ ಭಾಷಣ ಮಾಡಲಿಕ್ಕಿರುವರು.

ಈ ವಾರ ಮಡಿಕೇರಿಯಲ್ಲಿ ಲೋಕಲ್ ಟೆಸ್ಟ್ ಎಂಬ ರೆವಿನ್ಯೂ ರೂಲ್ಸ್ ಮತ್ತು ರೆಗ್ಯುಲೇಶನುಗಳು ಮತ್ತು ಎಕೌಂಟ್ಸ್ ರೂಲ್ಸುಗಳನ್ನು ಕುರಿತ ಪರೀಕ್ಷೆಯು ನಡೆಸಿತು. 23 ಉದ್ಯೋಗಸ್ಥರು ಪರೀಕ್ಷೆಗೆ ಕೂತಿದ್ದರು.

ಪೊನ್ನಂಪೇಟೆಯ ಶ್ರೀರಾಮಕೃಷ್ಣ ವೇದಾಂತ ಸಂಘದವರು ಸ್ವಾಮಿ ವಿವೇಕಾನಂದರವರ ಜನ್ಮೋತ್ಸವವನ್ನು ಮಿ॥ ಯು. ರಾಮರಾವು ಬಿ ಎ ಎಲ್. ಟಿ ಯವರ ಅಧ್ಯಕ್ಷತೆಯಲ್ಲಿ ಫೆಬ್ರವರಿ ತಾ. 6ರಲ್ಲು ನಡಿಸಲು ಏರ್ಪಡಿಸಿರುವರು.

ಈಗ ಗೋಣಿಕೊಪ್ಪಲು ಸಂತೆಯಲ್ಲಿ ಮಾರಾಟಕ್ಕೆ ಕಂಬಾ ದನಕರಗಳು ಬರುತ್ತಿವೆಯಂತೆ. ಆದರೆ ಗ್ರಾಮಗಳಲ್ಲಿ ದನಗಳ ಕಾಯಿಲೆಯು ಇನ್ನೂ ಹರಡಿಕೊಂಡಿದೆ. ಈಗ ನಾಕ್ಕೇರಿ ಗ್ರಾಮದಲ್ಲಿ ತಲೆದೋರಿದೆಯೆಂದು ವರ್ತಮಾನ.

ಕಾಫಿ ವ್ಯಾಪಾರಿಗಳಾದ ಪಾಲ್‌ಕಾರ್ಟರ್ ಸಹೋದರರ ಏಜೆಂಟರವರು ಸದರಿ ಕಂಪೆನಿಯ 75ನೇ ವಾರ್ಷಿಕೋತ್ಸವದ ದಿನವಾದ ಫೆಬ್ರವರಿ ತಾ 1ರಲ್ಲು ತಮ್ಮ ಗಿರಾಕಿಗಳಿಗೂ ಇಷ್ಟ ಮಿತ್ರರಿಗೂ ರಾಜಸೀಟಿನಲ್ಲಿ ಒಂದು ಟೀ ಪಾರ್ಟಿಯನ್ನು ಕೊಡುವರಂತೆ.

ಈಗ ನಾಲ್ಕು ದಿವಸಗಳಿಂದ ದೇಶದಲ್ಲೆಲ್ಲಾ ಬಲವಾಗಿ ಮೋಡ ಕವಿದುಕೊಂಡಿರುವುದಲ್ಲದೆ ಹಲವು ಕಡೆಗಳಲ್ಲಿ ಮಳೆಯು ಹನಿಸಿದೆ. ಈಗಿನ ಮಳೆಯು ಭತ್ತದ ಒಕ್ಕಲು ಕೆಲಸ ಮಾಡುತ್ತಿರುವವರಿಗೂ ಕಾಫಿತೋಟದವರಿಗೂ ಯಾಲಕ್ಕಿ ಮಲೆಯವರಿಗೂ ನಷ್ಟಕರವೆ.

ಕರ್ಣನಾಡ, ನೆಟ್ಟಕೋಡಿನ, ಕತ್ತಿನ ಕೆಳಗೆ ಬಿಳಿಪಟ್ಟಿ ಇರುವ ಸಾಧಾರಣ ನಾಲ್ಕು ಅಡಿ ಎತ್ತರದ ಹಸೆ ಒಂದು ಪರಾರಿಯಾಗಿ ಒಂದು ಚಿರಂಡಾಡು ಗ್ರಾಮದಲ್ಲಿ ಸೇರಿಕೊಂಡಿದೆಯೆಂದೂ ವಾಲೀಕರು ಹಿಡಿದುಕೊಂಡುಹೋಗಬಹುದೆಂದೂ ಆ ಗ್ರಾಮದ ಮ. ಪಿ ಕೆ. ಸೋಮಯ್ಯನವರು ತಿಳಿಸಿರುತ್ತಾರೆ.

ತಾ. 23—1—1926ರಲ್ಲು ಸೆಂಟ್ರಲ್ ಬ್ಯಾಂಕಿನ ಡೈರೆಕ್ಟರುಗಳ ಮೀಟಿಂಗು ನಡೆದು ಕೊಡಗು ವಿದ್ಯಾ ಇಲಾಖೆಯವರ ಸಂಘಕ್ಕೆ 100 ರೂ ಕುಯ್ಯಮುಡಿ ಕುಟುಂಬದ ಗ್ರೈನ್ ಬ್ಯಾಂಕ್ ಫಂಡಿಗೆ 100 ರೂ. ಮಡಿಕೇರಿ ಬೌನ್ ಸೊಸೈಟಿಗೆ 800 ರೂ. ನಾಪೋಕ್ಲು ಸೊಸೈಟಿಗೆ 1000 ರೂ ಮತ್ತು ದಿಗೇರಿ ಸೊಸೈಟಿಗೆ 750 ರೂ. ಸಾಲ ಮಂಜೂರಾಗಿದೆ.

ಕ್ರೆಸೆಂಟ್ ಫುಟ್‌ಬಾಲ್ ಟೂರ್ನಮೆಂಟು ವಿರಾಜಪೇಟೆಯಲ್ಲಿ ಫೆಬ್ರವರಿ ಕಡೇ ವಾರದಲ್ಲಿ ನಡೆಯುವದೆಂದೂ ಈ ಟೂರ್ನಮೆಂಟಿನಲ್ಲಿ ಸೇರಲು ಇಚ್ಛೈಸುವ ಟೀಮುಗಳು ರೂ 2 ಜಾಮೀನು ಫೀಸು ಮತ್ತು ರೂ 5 ಟೂರ್ನಮೆಂಟು ಫೀಸು ಕೊಡತಕ್ಕದೆಂದೂ ಹೆಚ್ಚಿನ ವಿಷಯಗಳನ್ನು ಆ ಸಂಘದ ಸೆಕ್ರೆಟರಿಯಾದ ಮ. ಎ. ಮಜೀದ್‌ಖಾನ್‌ರವರಿಂದ ತಿಳಕೊಳ್ಳಬಹುದೆಂತಲೂ ಅವರು ಬರೆದಿರುತ್ತಾರೆ.

ಮ. ಕಾತಂಡ ಸಂಜಪ್ಪನವರಲ್ಲಿ ಒಂದು ಕೋಳಿ ಮರಿಯು ಮೊಟ್ಟೆಯೊಡೆದು ಹೊರಗೆ ಬಂದಾಗ ದಪ್ಪತಲೆ, ಎರಡು ಕೊಕ್ಕುಗಳು ಮತ್ತು ಮೂರು ಕಣ್ಣುಗಳುಳ್ಳದ್ದಾಗಿತ್ತು. ಒಂದು ಕಣ್ಣು ಹಣೆಯಲ್ಲಿಯೂ ಎರಡು ಕಣ್ಣುಗಳು ಕೊಕ್ಕುಗಳ ಎಡಿಯಲ್ಲಿಯೂ ಇದ್ದವು. ಆ ಮರಿಯು ಎರಡು ಕೊಕ್ಕುಗಳಿಂದಲೂ ಆಹಾರ ತಿನ್ನುತಿತ್ತು. ಇದು ಹತ್ತು ದಿವಸಗಳ ನಂತರ ಸತ್ತುಹೋಯಿತೆಂದು ವರ್ತಮಾನ. ಕಲಿಯುಗದ ಮಹಿಮೆಯಲ್ಲವೇ!

ತಾ. 25-1-26ರಲ್ಲಿ ಪೊನ್ನಂಪೇಟೆಯಲ್ಲಿ ಮ. ಪಿ. ಗಣಪಯ್ಯನವರ ಅಧ್ಯಕ್ಷತೆಯಲ್ಲಿ ನಡೆದ ಮೀಟಿಂಗಿನಲ್ಲಿ ಕೋಆಪರೇಟಿವ್ ಸ್ಟೋರ್ಸನ್ನು ಹೇಗೆ ನಡಸಬೇಕೆಂಬುದನ್ನು ನಿಶ್ಚಯಿಸಲಿಕ್ಕೆ ಮೂ. ರಾ. ಗಳಾದ ಪಿ. ಟಿ ಕುಶಾಲಪ್ಪ, ಪಿ. ಪಿ. ಮಾದಯ್ಯ. ಸಿ. ಗಣಪತಿಯ್ಯ, ಪಿ. ಕೆ ಪೊನ್ನಯ್ಯ ಮತ್ತು ಸಿ. ಎ. ಪೊನ್ನಪ್ಪನವರುಗಳ ಒಂದು ಕಮಿಟಿಯು ನೇಮಿಸಲಾಯಿತು. ಕಮಿಟಿಯ ವರದಿಯನಂತರ ಇನ್ನೊಂದು ಜನರಲ್ ಮೀಟಿಂಗು ಮಾಡುವಂತೆ ತೀರ್ಮಾನವಾಯಿತು.

ಮಡಿಕೇರಿ ಕೊಡವರ ಊರೊರ್ಮೆಯು ತಾ. 24ರಲ್ಲು ಹಳೇ ಬ್ಯಾರೆಕ್ಸಿನ ಒಳಿ ನಡೆಯಿತು. ಮಧ್ಯಾಹ್ನ ಊಟವಾದನಂತರ ಹಲವರು ಭಾಷಣ ಮಾಡಿದರು. ಮೆ॥ ಎ ಬಿ ಕಾರ್ಯಪ್ಪನವರು, ಮೆ॥ ರಾ, ಬಾ. ಕ ಕುಟ್ಟಯ್ಯನವರು, ರಾ. ಬಾ ಕೆ. ಅಪ್ಪಯ್ಯನವರು, ರಾ. ಸಾ ಕೆ ಸುಬ್ಬಯ್ಯನವರು, ಕೊಡವರ ಒಗ್ಗಟ್ಟಿನ ವಿಷಯವೂ, ರಾ ಬಾ ಕ. ಬಂಗಪ್ಪನವರು, ಮೆ॥ ಐ.ಎಂ. ಐ.ಎಂ ಚಿಣ್ಣಪ್ಪನವರು ಕೊಡಗು ವಿದ್ಯಾಭಿವೃದ್ಧಿ ಫಂಡನ್ನು ಕುರಿತೂ, ಮೆ॥ ಬಿ. ಯಸ್. ಕುಶಾಲಪ್ಪನವರು, ಮತ್ತು ಮ. ಪಿ. ಬಿ ಸೋಮಪ್ಪನವರು ಕೊಡವರ ಗುಣಗಳನ್ನೂ ಕುರಿತೂ ಮಾತಾಡಿದರು. ಮಡಿಕೇರಿ ಕೊಡವರ ಇಂಥಾ ಸಾರ್ವಜನಿಕ ಕೆಲಸಗಳಿಗೆ ರಾ ಬಾ. ಕೆ. ಕುಟ್ಟಯ್ಯನವರು ಖಾಯಂ ಅಧ್ಯಕ್ಷರಾಗಿಯೂ, ಮೆ॥ ಸಿ ಐ.ಎಂ ದೇವಯ್ಯನವರು ಖಾಯಂ ಸೆಕ್ರೆಟರಿಯಾಗಿಯೂ ಇರಬೇಕೆಂದು ಮೆ॥ ನೆರವಂಡ ನಂಜಪ್ಪನವರು ಸೂಚಿಸಿದಕ್ಕೆ ಸಭೆಯು ಸಮ್ಮತಿ ಕೊಟ್ಟಿತು. ಕಡೆಗೆ ಮೆ॥ ಪಿ. ಬಿ. ಮುತ್ತಣ್ಣನವರು ಸ್ವರಸ್ಯವಾದ ಪಂಕಥೆಯನ್ನು ಮಾಡಿ ನೆರೆದವರ ಮನಸಂತೋಷಪಡಿಸಿದರು.

ಹಿಂದೂದೇಶ.

ಹತ್ತಿಯ ಧಾರಣೆ ವಿಷಯದಲ್ಲಿ ಬೊಂಬಾಯಿ ಸರಕಾರವು ಬಿಟ್ಟ ಬೊಂಬಾಯಿಯ ಮಹಾಜನ ಸಂಘದ ಅರ್ಜಿಯನ್ನು ಪೋಲೀಸಿನವರು ತಾ 21ರಲ್ಲಿ ವಶಕ್ಕೆ ತೆಗೆದುಕೊಂಡರು.

ಅವರ ಸಂಸ್ಥಾನದಿಂದ ಗಡೀಪಾರು ಮಾಡಲ್ಪಟ್ಟಿರುವ ನಾಭಾದ ಮಹಾರಾಜರು ತನ್ನ ಉಪಯೋಗಕ್ಕೆ ಕೆಲವು ಪುಸ್ತಕಗಳನ್ನು ಕೊಡಬೇಕೆಂದು ಪತ್ರಿಕೆಗಳಲ್ಲಿ ಮನಸ್ಸು ಕರಗುವಂಥ ಪತ್ರವನ್ನು ಬರೆದಿರುವರು.

ದಕ್ಷಿಣ ಆಫ್ರಿಕದಲ್ಲಿ ಹಿಂದೀಯರ ಸ್ಥಿತಿಯನ್ನು ಕುರಿತ ಠರಾವು ಅಸೆಂಬ್ಲಿಯಲ್ಲಿ ತಾ. 26ಕ್ಕೆ ಚರ್ಚೆಗೆ ಇಡಲ್ಪಟ್ಟಿತ್ತು. ಇ ಠರಾವಿಗೆ ದಕ್ಷಿಣ ಆಫ್ರಿಕದ ಪತ್ರಿಕೆಗಳ ಮುಂದಾಳಾದ ಡಾಕ್ಟರ್ ಅಬ್ದುರ್ ರಹಮಾನರವರು ಒಪ್ಪಿರುವರು.

ಬ್ರಿಟಿಷ್ ಇಂಡಿಯಾದಲ್ಲಿ ಆಯಾ ಪ್ರಾಂತಗಳ ಸರಕಾರಗಳಿಂದ ಕಾನೂನಿಗೆ ಒಪ್ಪಬೇಕಾದ ಹೊಣೆಗಾರಿಕೆಯೂ, ಸರಕಾರದ ಅಧಿಕಾರಿಗಳಿಂದ ತನಗುಂಟಾಗುವ ನಷ್ಟ ಪರಿಹಾರಕ್ಕೆ ದಾವೆಮಾಡುವ ಅವಕಾಶವುಂಟಾಗುವಂಥ ಬಿಲ್ಲನ್ನು ಮಂಡಿಸುವುದು ಅಸೆಂಬ್ಲಿಯಲ್ಲಿ ಚರ್ಚೆಗೆ ತಪ್ಪಿಹೋಯಿತು.

ಅವಶ್ಯ ಬಿದ್ದರೆ ಸವಿನಯ ಕಾಯಿದೆ ಭಂಗವನ್ನು ಕೈಕೊಳ್ಳಲು ತಾನು ಹಿಂಜರಿಯುವುದಿಲ್ಲವೆಂತಲೂ, ಕಾಂಗ್ರೆಸ್ಸಿನ ಉತ್ಸಾಹಯುಕ್ತ ಒಗ್ಗಟ್ಟೇ ಈಗ ಆಗತ್ಯವಾಗಿರುವದೆಂತಲೂ 'ಬೊಂಬಾಯಿ ಕ್ರಾನಿಕಲ್' ಪತ್ರಿಕೆಯ ಸಂಪಾದಕರಾದ ಸೆ. ಬಿ. ಜಿ. ಹಾರ್ನಿಮನ್‌ರವರು ತಮ್ಮದೊಂದು ಭಾಷಣದಲ್ಲಿ ಹೇಳಿರುವರು.

ಮಹಾತ್ಮ ಗಾಂಧಿಯವರು ತಾ 24ರಿಂದ ಮಲೇರಿಯ ಜ್ವರದಿಂದ ಪೀಡಿತರಾಗಿರುತ್ತಾರೆ. ಅವರು ಈಗ ಸಬರಮತಿ ಆಶ್ರಮದಲ್ಲಿದ್ದಾರೆ. ತಾ. 26ರಲ್ಲಿ ಬೆಳಿಗ್ಗೆ 104 ಡಿಗ್ರಿ ಜ್ವರವಿದ್ದರೂ ಕ್ವಯಿನೈನಿಂದ ಜ್ವರವು ಕಡಿಮೆಯಾಗಬಹುದಾದದರಿಂದ ಚಿಂತೆಗೆ ಕಾರಣವಿಲ್ಲವೆಂತ ಅವರಿಗೆ ಚಿಕಿತ್ಸೆ ಮಾಡುತ್ತಿರುವ ಡಾಕ್ಟರ್ ಜಮ್ಷೆಡ್‌ಜಿಯವರು ಹೇಳಿರುವರು.

ರಾಜಕೀಯ ಸುಧಾರಣೆ ಸಮ್ಮಂಧ ಇಂಡಿಯನ್ ಸಂಸ್ಥಾನಗಳ ಹಳೇ ಹಕ್ಕುಗಳನ್ನು ಅದರಲ್ಲು ಮುಖ್ಯವಾಗಿ ಬರೋಡ ಸಂಸ್ಥಾನದ ಪ್ರಾಚೀನ ಹಕ್ಕುಗಳನ್ನು ಬಿಟ್ಟುಕೊಡಬೇಕೆಂದು, ಬರೋಡದ ಗೈಕವಾರ್‌ರವರು ಮಾಡಿದ ಭಾಷಣಕ್ಕೆ, ಇಂಡಿಯನ್ ರಾಜರುಗಳ ಹಕ್ಕುಗಳು ಕಾಪಾಡಲ್ಪಡುವವೆಂದೂ, ಬರೋಡದ ಪ್ರತ್ಯೇಕ ಪ್ರಶ್ನೆಯು ಆಲೋಚನೆಯಲ್ಲಿದೆಯೆಂತಲೂ ವೈಸರಾಯರು ಉತ್ತರವಿತ್ತಿರುವರು.

ವಿದೇಶ.

ಲಾರ್ಡ್ ವೆಲ್ಲಿಂಗ್ಡನ್‌ರವರು ಕೆನಡದ ಮುಂದಿನ ಗವರ್ನರ್ ಜನರಲ್ ಆಗುವರೆಂಬ ವದಂತಿ ಇದೆ.

ಲೊಕಾರ್ನೊ ಒಪ್ಪಂದವನ್ನು ಪ್ರತಿ ವಿರೋಧಿಸುವ ಠರಾವೊಂದನ್ನು ರೀಚ್‌ಸ್ಟಾಗ್ (ಪಾರ್ಲಿಮೆಂಟ್) ಮುಂದೆ ಜರ್ಮನಿಯ ರಾಷ್ಟ್ರೀಯ ಪಕ್ಷದವರು ತಂದಿರುವರು.

ಕೆಲವು ರಷ್ಯನ್ ರೈಲ್ವೆ ಆಫೀಸರುಗಳನ್ನು ಚೈನಾದಲ್ಲಿ ಸರ್ಕಾರದವರು ಸೆರೆ ಹಿಡಿದ ಕಾರಣದಿಂದ ರಷ್ಯದ ಸೋವೈಟ್ ಸರಕಾರಕ್ಕೂ ಚೈನಾ ಸರ್ಕಾರಕ್ಕೂ ಮನಸ್ತಾಪ ಹುಟ್ಟಿತ್ತು. ಆದರೆ ಆ ಆಫೀಸರುಗಳನ್ನು ಚಾಂಗ್ ಟ್ಸೊ ಲಿನ್‌ರವರು ಬಿಡುಗಡೆ ಮಾಡಿದ ಕಾರಣ ತೊಂದರೆಯು ಕಡಿಮೆಯಾಗಿದೆ.

ಅಕೇಸಿಯ ಕೆಸ್‌ಲವಾಸ್ ಜರ್ಮನಲ್ಲಿ 800 ವರ್ಷಗಳ ಹಿಂದೆ ಮಾಡಲ್ಪಟ್ಟವರ ತಲೆಬುರುಡೆಯು ಸಿಕ್ಕಿ, ಅದು ಆ ದೇವಸ್ಥಾನವನ್ನು ಕಟ್ಟಿಸಿದ ಸೆಯಿಂಟ್ ಮಾಗ್ನ ಸ್‌ರವರದೆಂದೂ, ಅವರನ್ನು ಕತ್ತಿಯಿಂದ ತಿವಿದುಕೊಂದ ಚರಿತ್ರೆಗನುಸಾರವಾಗಿ ಆ ಬುರುಡೆಯ ಹಿಂಭಾಗದ ಉದ್ದವಾದ ತೂತುವಿದೆಯೆಂದೂ ಈಗ ಕಂಡುಹಿಡಿಯಲ್ಪಟ್ಟಿದೆಯಂತೆ.

ನೋಟೀಸು.

ಜಮೀನ್ದಾರರ ಸಂಘದ ಉತ್ತರ ಕೊಡಗಿನ ಆರ್ಗನೈಜರವರು ತನ್ನ ಉದ್ಯೋಗಕ್ಕೆ ರಾಜಿನಾಮೆ ಕೊಟ್ಟಿರುವುದರಿಂದ ಆ ಕೆಲಸಕ್ಕೆ ಬೇರೆಯೊಬ್ಬರನ್ನು ಒಡನೇ ನೇಮಿಸಬೇಕಾಗಿದೆ. ಆ ಕೆಲಸವನ್ನು ಮಾಡಲು ಇಚ್ಛೈಸುವವರು ಫೆಬ್ರವರಿ ತಾರೀಕು 7ರೊಳಗೆ ತಮ್ಮ ಅರ್ಜಿಯನ್ನು ಈ ಕೆಳಗಿನ ವಿಳಾಸಕ್ಕೆ ಕಳುಹಿಸತಕ್ಕದ್ದು.

ಮಡಿಕೇರಿ, ಸಿ ಎಸ್. ವಂಕಪ್ಪಯ್ಯ,
20—1—1926 ಜ. ಸೆಕ್ರೆಟರಿ.

ವಿನಂತಿ:

ಈ ತಾ. 2/ರ ಸಾಯಂಕಾಲ ಮಡಿಕೇರಿ ಮೂರ್ನಾಡು ರಸ್ತೆಯಲ್ಲಿ 5ನೇ ಕಲ್ಲು 4ನೇ ಫರ್ಲಾಂಗು, ಒಳಿ ಮಲ್ಲುಹಟ್ಟಿಯವರ ಕೈತೋಟದ ಮುಂದೆ ಮೂರ್ನಾಡಿನ ಮೋರಿಯು ಕಟ್ಟೆಯ ಮೇಲೆ ನನ್ನ ಎರಡು ಗೊಂಚಲು ಬೀಗದ ಕೈಗಳು ಮರೆತು ಒಂದು ಕಾಣದೆ ಹೋಗಿದೆ. ಕಂಡು ಸಿಕ್ಕಿದವರು ದಯವಿಟ್ಟು ನನಗೆ ಕಳುಹಿಸಿಕೊಡಬೇಕಾಗಿ ಕೋರುತ್ತೇನೆ.

ಬಿ. ಎಂ ಕಾರ್ಯಪ್ಪ
ಚಾಮುಂಡಿ,
ಮೂರ್ನಾಡು.

ನೋಟೀಸ್.

ಪಾಡಿನಾಲ್ಕುನಾಡು ಪೇರೂರು ಗ್ರಾಮದ ಬೆಳ್ಳಿಯಪ್ಪ ರವರ ಪೂವಯ್ಯನು ಈ ಮೂಲಕ ತಿಳಿಯಪಡಿಸುವುದೇನಂದರೆ.—

ಉತ್ತರ ಕೊಡಗು ತಾಲೂಕು ಕ್ಯಾಜಬ್ ಪೇಟೆ ನಾಡು ನೆಲ್ಲಮಕ್ಕಡ ಗ್ರಾಮದ ಕಂಬೀರಂಡ ಪೊನ್ನಮ್ಮ ಅವ್ವಾಯಿಯವರ ಪೊನ್ನಪ್ಪನ ಮಗ ಅಚ್ಚಯ್ಯನ ಹೆಸರಿನಲ್ಲು ಒಡಗೂಡಿ ಸದರು ಬರುವ ಆಸ್ತಿಗಳ ಪೈಕಿ ಮಂಡೇಪಂಡ ದೇವಯ್ಯನವರಿಂದ ಪಡಕೊಂಡ ಸೊತ್ತುಗಳಿಗೆ ನಾನು ಒಟ್ಟುವಾರಸಾಗಿ ರುತ್ತೇನೆ. ವಿನಾಯಿಯಾಗಿ ಬಯಾಬಂದಿ ಸಂಚಾಯಿಯವರ ಹೆಸರಿನಲ್ಲಿ ಮಾಡಿದಾಗಿರುತ್ತೆ. ಈ ಸೊತ್ತುಗಳನ್ನು ಯಾರುಗಳಿಗೆ ದುಭೋಗ್ಯ ಕ್ರಯಕ್ಕೆ ಪಡೆಯಬಾರದು. ಕೊಡತಕ್ಕ ಹಕ್ಕು ಯಾರಿಗೂ ಇಲ್ಲವೆಂದು ತಿಳಿಯುತ್ತೆ. ಇದನ್ನು ಮೀರಿ ಕ್ರಯಕ್ಕೆ ಪಡೆಯುವವರ ಹಾನಿಗೆ ಪಡೆದವರೇ ಹೊಣೆಯಾಗುವರು. ಆದಾಗ್ಯೂ ಅವರಿಗೆ ಆಗತಕ್ಕದೆಂದು ಈ ಮೂಲಕ ತಿಳಿಯಪಡಿಸಿದೆ.

ಬಿ ಯಂ ಪೂವಯ್ಯ.

ಪತ್ರವ್ಯವಹಾರ.

ಬಾತ್ಮಿದಾರರು ಮಾಡುವ ಅಭಿಪ್ರಾಯಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲ. ಸಂ

ಬಿಳುಗುಂದ ಸಹಕಾರಿ ಸಂಘ.

ತಾ 17—12—25ರ ಲೋಕಪಾವನ ಪತ್ರಿಕೆಯಲ್ಲು ಬಿಳುಗುಂದ ಗ್ರಾಮದ ಸಹಕಾರಿ ಸಂಘದ ಮೇಲೆ ಗ್ರಾಮದವರೊಬ್ಬರು ಬರೆದ ಲೇಖನದ ಮೇಲೆ ಪ್ರೀತಿ. ಇಟ್ಟು ಕೂರುಡನಿಗೆ ಕಣ್ಣು ಕಾಣಿಸಲಿಕ್ಕಿಲ್ಲವಾಗಿ ಕೈಗೆ ದೀಪ ಕೊಟ್ಟಂತೆ ಬಿಳುಗುಂದ ಸಭೆಯ ದೊಡ್ಡ ಅಕ್ಷರದ ಟ್ಯಾಂಗ್ ಕೊಟ್ಟು ಪ್ರಕಟಿಸಿ ಮಾಡಿದ್ದು ನೋಡುವಾಗ್ಯ, ಪಾಪಪಕ್ಕೆ ನಮ್ಮೂರಿನ ಮೇಲೆ ಎಷ್ಟರಮಟ್ಟಿಗೆ ದಯೆ ಇದೆ ಎಂಬುದು ವ್ಯಕ್ತವಾಗುತ್ತದೆ. ಹೊರಗೆ ನೋಡಿದರೆ ಸ್ವರ್ಗ, ಒಳಗೆ ನೋಡಿದರೆ ನರಕವೆಂಬವಾಗಿ ನಡೆಸಿರುತ್ತಾರೆ. ಸಂಘದ ರೂಲ್ಸ್ ಮೀರಿ ನಡೆಯುವ ಇತರ ಮೆಂಬರುಗಳನ್ನು ರವುರವ ನರಕಕ್ಕೆ ಈಡು ಮಾಡುವದು ಸಹಜವಾಗಿದೆ.

ಕಷ್ಟ ಹುಟ್ಟಿ ಬಡವ ಕೆಟ್ಟ ಎಂಬದಾಗಿ ಹೇಳುವದು ನಿಜ. ಯಾಕಂದರೆ 1914ನೇ ಇಸವಿಯಲ್ಲಿ ಸಂಘ ಸ್ಥಾಪಿತವಾದಾಗ್ಯೆ ಬಂ ಒಂದುನೂರು ಬಟ್ಟಿ ವರೆಗೆ ಭತ್ತ ಮೊತ್ತ ಇದ್ದದ್ದಾಗಿದೆ. ಆ ಕಾಲದಲ್ಲಿ ಆದರಿಂದ ಗ್ರಾಮದವರು ತೃಪ್ತಿಪಡುತ್ತಿದ್ದರು. ಈಚೆಗೆ ಬಂದವರು ಏನುತಾನು ನಾಡಿನ ಮಂದಿಗೆ ಒಟ್ಟಿಯ ವರೆಗೆ ಆದರೂ ಏನ ಸ್ವಾಯವಿಲ್ಲದೆ ಕರ್ಜು ಏರುತ್ತಾ ಕಷ್ಟ ಹುಟ್ಟಿ ಬಡವ ಕೆಟ್ಟ ಎಂಬದಕ್ಕೆ ಅನುಸಾರವಾಗಿ ಬಂದದ್ದರಿಂದ ಸಂಘವನ್ನು ಒಡೆದು ಹೊಸ ಸಂಘ ಸ್ಥಾಪನೆಯಿಂದ ಏಕರೀತಿಯಾಗಿ ಶೇರು ಇಟ್ಟು ರಿಜರ್ವ ಮತ್ತು ಶೇರು ಸಹ ಸೇರಿ ನ ಸಂ. ಏದುನೂರು ಬಟ್ಟಿ ಭತ್ತದ ವರೆಗೆ ಸಂಘ ಸ್ಥಾಪನೆ ಬಿ ... ದಿನುಮಂತೆ ಗ್ರಾಮಸ್ಥರ ಒಪ್ಪಿ ಮಾಡಿ. ಜನರಲ್ ಮೀಟಿಂಗ್ ಮಾಡಿದ ಪ್ರೊಸೀಡಿಂಗ್ಸನ್ನು ರಿಜಿಸ್ಟ್ರಾರವರಿಗೆ ಅರಿಕೆ ಮಾಡಿಕೊಂಡ ಮೇಲೆ ನಮ್ಮ ವಿದ್ಯಮಾನವನ್ನು ಅರಿತು ಸಂಘವನ್ನು ಒಡೆಯಲಿಕ್ಕೆ ಅಪ್ಪಣೆಕೊಡಿದ್ದು ನ್ಯಾಯವಾದ್ದಾಗಿದೆ.

ಅಲ್ಲದೆ ನಮ್ಮೂರಿನಲ್ಲಿ ಲಂತಾನ ಹೇರಳ ತುಂಬಿಕೊಂಡು ಜನರಿಗೂ ಮತ್ತು ದನಕರುಗಳಿಗೂ ಅನೇಕ ಮುಷ್ಕಿಲ್ ಇರುವದರಿಂದ ಲಂತಾನ ಸಂಘ ಸ್ಥಾಪನೆ ಮಾಡಬೇಕಾಗಿ ಗ್ರಾಮಸ್ಥರೆಲ್ಲರೂ ಸೇರಿ ಒಪ್ಪಿ ಅರ್ಜಿ ಮಾಡಿಕೊಂಡ ರೀತಿ ಲಂತಾನ

ಸಂಘವನ್ನು ಸ್ಥಾಪನೆಯಿಂದ ರಿಜಿಸ್ಟರ್ ಮಾಡಲಾಗಿದೆ. ಈ ಸ್ಕೀಮಿನ ಎಷ್ಟರ ಜನರು ಲಂಚಾನ ನಾಶವಾಗಿದೆ. ಇದು ಸಂಘ ಸ್ಥಾಪನೆ ಆಗದಿದ್ದಪಕ್ಷ ಎಂದೂ ಆಗುತ್ತಿತ್ತಿಲ್ಲ.

ದವಸ ಭಂಡಾರ ಒಡೆದುಹಾಕಿದರೆ ಲಂಚಾನ ಸಂಘವು ಇರುವದಿಲ್ಲವಾಗಿ ಬರೆಯುತ್ತಾರೆ. ಲಂಚಾನಕ್ಕೂ ಮತ್ತು ದವಸಕ್ಕೂ ಸಮ್ಮಂಧವೇ ಇಲ್ಲ. ಮತ್ತು ಇವೆರಡು ರೈತರಿಗೆ ಅವಶ್ಯವಾದ್ದಾಗಿವೆ ಅಲ್ಲದೆ ಇಂಥಾದ್ದಕ್ಕೆ ಸರಕಾರದವರು ಒತ್ತಾಸೆಯಲ್ಲಿದ್ದರೆ ಸೋಮಾರಿತನದಿಂದ ಕೂಡಿದ ಮೋಸಗಾರರಾದ ಅನಾಚಾರದವರಿಗೆ ಈ ಸಂಘವು ಎಡೆಕೊಡುವುದಿಲ್ಲ.

ಮುಂದಾಳುಗಳು ಮೋಸಗಾರಿಕೆಯಿಂದ ಸಂಘವನ್ನೊಡೆಯಲಿಕ್ಕೆ ಮಾಡಿದ ಮೋಸವೆಂಬದಾಗಿ ಬರೆಯುತ್ತಾರೆ. ಇದು ನಿಜವಲ್ಲ, ಸಮ್ಮಾರಿನಲ್ಲಿ ಪ್ರತಿ ಒಬ್ಬರು ಸರಿಸಮಾನತ್ವದ ಮುಂದಾಳುಗಳೇ. ಹೀಗಿರುವಲ್ಲು ಮುಂದಾಳು ಮುಂದಾಳೆಂದು ಬರೆಯುವದು ನೋಡಿದರೆ ಬರೆದ ಆಸಾಮಿ ಹಿಂದಾಳೆಂದೇ ಊಹಿಸಬೇಕಾಗಿದೆ.

ಕಮಿಟಿ ಪ್ರಸಿಡೆಂಟರ ಚುನಾವಣೆಯಲ್ಲಿ ಭಿನ್ನಭೇದ ನಡೆಯದೆ ಜನರಲ್ ಬಾಡಿಯವರ ಓಟ ಮೂಲಕ ಚುನಾಯಿಸಿದ್ದಾಗಿದೆ. ಇಂಥಾ ಚುನಾವಣೆಯಿಂದ ನಡೆದ ಕಮಿಟಿ ಪ್ರೆಸಿಡೆಂಟರಲ್ಲಿ ಯಾವ ನ್ಯೂನತೆಗಳು ನಡೆಯದೆ ಸಂಘದ ಅಭಿವೃದ್ಧಿಯಲ್ಲಿ ತಮ್ಮ ಮನೆ ಕೆಲಸದಂತೆ ಹಗಲಿರುಳು ಪ್ರಯತ್ನಪಟ್ಟು ಕೆಲಸಮಾಡುವದಕ್ಕೆ ನಾವು ವಂದಿಸುವದರ ಬದಲು ಮೋಸಗಾರರು ವಗೈರೆಯಾಗಿ ಬರೆಯುವದು ಸರಿಯಲ್ಲ. ಮೋಸಗಾರಿಕೆ ವಗೈರೆ ಸಂಗತಿಗಳಿಗೆ ಎಡೆಕೊಡದಕ್ಕೋಸ್ಕರ ಕಮಿಟಿಯವರ ಮೇಲೆ ಆರೋಪಿಸಿ ಬರೆದದ್ದಲ್ಲದೆ ಅನ್ಯಥಾ ಅಲ್ಲ.

ಅನ್ಯಾಯದ ಸಂಗತಿಯನ್ನು ಇನ್ನು ಮುಂದಕ್ಕೆ ದೇಶದ ಎರಡು ಪತ್ರಿಕೆಗೆ ಬರೆಯುತ್ತೇನೆಂಬದಾಗಿ ಹೆಸರು ಕೊಡದ ಹೇಡಿಯೂ ಬರೆಯುತ್ತಾರೆ. ಇವಕ್ಕೆ ಹೆದರುವಂತಿಲ್ಲ.

ಪಕ್ಷಪಾತವಿಲ್ಲದೆ ಸಂಘದ ಕಮಿಟಿ ಪ್ರೆಸಿಡೆಂಟರು ಮೇಲಾಧಿಕಾರಿಯಾದ ಸುಪರ್‌ವೈಜರು, ಆರ್ಗನೈಜರು, ಇನ್‌ಸ್ಪೆಕ್ಟರು, ರಿಜಿಸ್ಟ್ರಾರರವರು ಆಗಿಂದಾಗ್ಯೆ ಕ್ರಮವಾಗಿ ಕೆಲಸ ಸರಿಯಾಗಿ ನಡಿಸಿಕೊಂಡು ಬರುವಲ್ಲಿ ಸಮಂಜಸವಲ್ಲದ ಆರೋಪಣೆ ಹೊರಿಸಿ ಬರೆದ ಬಾತ್ಮಿದಾರರ ವಿಷಯ ಗ್ರಾಮ ಸೊಸೈಟಿ ಮೆಂಬರುಗಳು ಕೂಡ್ಲೆ ಇದಕ್ಕಾಗಿ ಸ್ಪೆಶ್ಯಲು ಜನರಲ್ ಮೀಟಿಂಗ್ ಒಂದು ಮಾಡಿ ತಕ್ಕ ಏರ್ಪಾಡು ಮಾಡಬೇಕಾಗಿ ಕೇಳಿಕೊಳ್ಳುತ್ತೇನೆ.

ಎನ್. ಕುಟ್ಟಪ್ಪ.

ಕೊಡಗು ಸಭೆಯ ಪ್ರೋತ್ಸಾಹಕರಲ್ಲಿ ವಿನಂತಿ.

ಕೊಡಗು ಸಭೆ ಮೀಟಿಂಗು, ಕೊಡವ ಸಭೆ ಮೀಟಿಂಗು ಎಂಬ ಕೂಗು ಇಷ್ಟು ದಿವಸಗಳು ಕೇಳಿತಷ್ಟೆ. ಈಗ್ಗೆ ಕೆಲವು ದಿವಸಗಳಿಂದ ಕೆಲವು ನೋಟೀಸುಗಳನ್ನೂ ಮತ್ತು ಮೆಂಬರುಗಳನ್ನು ಜಮಾಯಿಸಲಿಕ್ಕೆಂದು ಹೊರಟಿರುವ ಪಟ್ಟಿಗಳನ್ನೂ, ನನ್ನ ಹೆಸರನ್ನು ಇಟ್ಟುಕೊಂಡು ಗ್ರಾಮದಲ್ಲಿ ಸುತ್ತುತ್ತಾ ಈ ಮೂಲಕ ಬೇರೆಯವರಿಂದ ಕೆಲಸವನ್ನು ಜರಗಿಸುತ್ತಾ ಬರುವದು ಕಂಡು, ಇದು ಏನು ಕಾರಣ ಎಂಬದಾಗಿ ವಿಚಾರಿಸಿದ್ದು, ನನ್ನನ್ನು ಒಬ್ಬ ಹುಗಾಮಿ ಕಮಿಟಿ ಮೆಂಬರಾಗಿ ಮಾಡಿರುವ ವರ್ತಮಾನವು ತಿಳಿಯಿತು. ಅವರವರ ಅಭಿಪ್ರಾಯಗಳನ್ನು ಚೆನ್ನಾಗಿ ತಿಳಿದುಕೊಳ್ಳದೆ ಹೊರಲಾರದ ಹೊರೆಯನ್ನು ಬಲತ್ಕಾರದಿಂದ ಹೊರಿಸುವ ಈ ಸಭೆಗೆ ಎಷ್ಟು ವಂದಿಸಿದರೂ ಸ್ವಲ್ಪವೆ. ಮಹನೀಯರೆ, ಇನ್ನು ಮುಂದಕ್ಕಾದರೂ ಇಂಥಾ ಕಾರ್ಯಗಳಲ್ಲಿ ಸ್ವಲ್ಪ ಸಾವಧಾನದಿಂದ ವರ್ತಿಸುವದು ಯೋಗ್ಯವಲ್ಲವೇ? ಒಬ್ಬೊಬ್ಬರ ಅಭಿಪ್ರಾಯಕ್ಕೆ ವಿರೋಧವಾಗಿ ಅವರನ್ನು ಕಮಿಟಿಯಲ್ಲಿ ಹಾಕುವದು ಎಂದೂ ಸರಿಯಲ್ಲವು.

ಮುಕ್ಕಾಟಿರ ಕರುಂಬಯ್ಯ.

ಅಯ್ಯಾ, ಕೋದಂಡ ಉತ್ತಯ್ಯನವರೆ,

ನೀವು ಪತ್ರಿಕೆಗಳಲ್ಲಿ ಆಗಾಗ್ಗೆ ಪ್ರಕಟಿಸುತ್ತಿರುವ ಒಂದೊಂದು ಬಾತ್ಮಿಯನ್ನು ನೋಡಿದರೆ ದೇಶವು ಅಲ್ಲೋಲಕಲ್ಲೋಲವಾಗದೆ ಇರದು. ಕೊಡಗು ಸಭೆ ಆಯಿತು. ಕೊಡವ ಸಭೆ ತೀರಿತು. ಈಗ ಪ್ರತಿನಿಧಿ ಸಭೆಯೊಂದನ್ನು ಹೊರಡಿಸುವಿರಾ? ಇಂಡ್ಯನ್ ಪಾರ್ಲಿಮೆಂಟಿನಂತೆ, ಕೊಡಗು ಪಾರ್ಲಿಮೆಂಟ್ ಒಂದನ್ನು ತಯಾರಿಸಲು ಹೊರಟಿರುವಿರಾ? ಪ್ರತಿನಿಧಿ ಸಭೆಯೆಂದರೇನು? ಕೊಡಗು ದೇಶದವರದೇ? ಅಲ್ಲ ಕೊಡವರದು ಮಾತ್ರವೇ? ತಿಳಿಸಿ. ನಿಮ್ಮ ಮಾತಿನ ಅರ್ಥವನ್ನು ನೋಡಿದರೆ ಗಾಳಿ ಬೀಸಿದ ಕಡೆಗೆ ಹಾರುವಂತೆ ತೋರುತ್ತ. ಇದು ನಿಮಗೆ ಉಚಿತವೇ. "ರವುಂಡ್ ಟೇಬಲ್ ಕಾನ್‌ಫರೆನ್ಸ್" ಯಾತಕ್ಕೆ? ಕೊಡಗ ಕೊಡಗೇತರರ ಒಗ್ಗಟ್ಟಿಗೋ? ಹಿಂದು ಮುಸಲ್ಮಾನರ ಒಗ್ಗಟ್ಟಿಗೋ? ಹಿಂದುಳಿದ ಕೂಗಿನವರ ಏಳಿಗೆಗೋ? ಗ್ರಾಮದ ಸಂಪತ್ತಿಗೋ? ಕೋಮುವಾರು ಒಡಕು ತರುವ ಪ್ರತ್ಯೇಕ ಸಭೆಗಳನ್ನು ಏರ್ಪಡಿಸಲು ಉದ್ಯುಕ್ತರಾದ ತಮಗೆ ಸ್ವರಾಜ್ಯಕ್ಕೆ ಹೋರಾಡುವ ಕಾಂಗ್ರೆಸ್ಸಿನ ಸುದ್ದಿ ಏಕೆ? "ನಮಗೆ ಹುಟ್ಟಿನ ಮಟ್ಟಿಗೆ ಸ್ವರಾಜ್ಯವು ಈಗಲೇ ಸಿಕ್ಕಿದೆ" ಎಂದು ಅನ್ನುವಿರಿ. ನನಗೆ ನಾಚಿಕೆಯಾಗುತ್ತಿದೆ. ಈ ಕೌನ್ಸಿಲ್ ನೆವ ಮಾತ್ರದ್ದು, ಇದು ಒಂದು ನಕಲಿ ಎಂದು ತಾವೇ ಕಳೆದ ಕೌನ್ಸಿಲ್ ಚುನಾವಣೆಯಲ್ಲಿ ಹಿಂದಕ್ಕೆ ನಿಂತಿರಿ. ಜಮಾನುದಾರರ ಸಂಘದಲ್ಲಿ ತಾವು ಮಾಡಿದ ಭಾಷಣವನ್ನು ಪುನಹ ಓದಿ ನೋಡಿ ಯಾರನ್ನು ಮರಳುಗೊಳಿಸಲು ಹೊರಟಿರುವಿರಿ? ಹೊಸ ಪ್ರತಿನಿಧಿ ಸಭೆಯೊಂದನ್ನು ಹೊರಡಿಸುವಿರಾ? ಹಾಗಾದರೆ ನಿಮ್ಮ ಹಳೇ ಪುಸ್ತಕಕ್ಕೆ ತಮ್ಮ ಆಫೀಸಿಗೆ ಬಂದವರಿಂದ ಹಾಕಿಸಿಕೊಂಡ ದಸ್ಕತುಗಳ ಪಾಡೇನು? ಅವರ ದಸ್ಕತುಗಳನ್ನು ಯಾವ ಸಭೆಗೆ ವರ್ಗಾಯಿಸುವಿರಿ? ನಿಮ್ಮ ಸಂಗಡಕ್ಕೆ ಸೇರಿದ ಕೊಡವ ಸಭೆಯ ಪ್ರೋತ್ಸಾಹಕರ ಪಾಡೇನು? ಅವರು ನಿಮ್ಮನ್ನು ಬಿಟ್ಟರೋ? ಅವರ ಸಭೆಯನ್ನು ರದ್ದು ಮಾಡಿದರೋ? ಅಲ್ಲ ತಾವೇ ಅವರನ್ನು ತೊಲಗಿದಿರೋ? ಇನ್ನು ಇದಲ್ಲ, ಆಳಿಗೊಂದು ಸಭೆಯಾಗಲಿ, ಇನ್ನೂ ಚಂದ. ಬಡಪಾಯಿ ದೇಶಕ್ಕೆ ದಿಕ್ಕಿಲ್ಲದಂತಾಯಿತು. ನಿಮ್ಮ ನಡತೆಗಳಿಂದ ಸ್ವರಾಜ್ಯವು ಎಷ್ಟು ಗಾವುದ ದೂರಕ್ಕೆ ಹೋಗಿದೆ ಎಂಬದು ಸ್ವಾರ್ಥಪರರಿಗೆ ತೋರದು. ಈಗಲೇ ಸ್ವರಾಜ್ಯ ಪಾರ್ಲಿಮೆಂಟು ಒಂದನ್ನು ಕೊಡಗಿನಲ್ಲಿ ಸ್ಥಾಪಿಸುವಿರಾ? ನೂಗನಾಯಿತು ಯಾವದನ್ನ ಚರ್ಚಿಸಲು ತಮ್ಮ ಪಾರ್ಲಿಮೆಂಟನ್ನು ಇಡಲು ಹೊರಟಿರಿ. ಪಾರ್ಲಿಮೆಂಟ್ ಆಗುವ ಮೊದಲೇ ಮೆಂಬರುಗಳನ್ನು ಚುನಾಯಿಸುವ ಮಹನೀಯರು ಇಡೀ ಭೂಲೋಕದಲ್ಲ ಇರರು. ಕೊಡಗು ಮಹನೀಯರೆಲ್ಲರೂ ಹೆಡ್ಡರೆಂದು ಭಾವಿಸುವಿರಾ? ಇದು ನಿಮ್ಮ ಭ್ರಮೆ. ಈ ಕುಯುಕ್ತಿಗಳನ್ನು ಹಳ್ಳಿಮನೆಯವರು ಸಹ ಬಲ್ಲರು. ಗ್ರಾಮಕ್ಕೆ ಒಬ್ಬಿಬ್ಬರನ್ನು ಸೇರಿಸಿಕೊಂಡು ಕೊಡವ ಸಭೆಯನ್ನು ಸಂಪೂರ್ಣ ಮಾಡಬೇಕೆಂದು ಇರುವಿರಾ? ಗ್ರಾಮಸ್ಥರ ಮನಸ್ಸನ್ನು ತಾವು ತಿಳಿಯಲಿಲ್ಲ. ತಾವು ನೆನಸುವಷ್ಟು ಹೆಡ್ಡರಲ್ಲ ಕೊಡಗು ಮಹನೀಯರೇ, ಎಚ್ಚರ, ಎಚ್ಚರವಾಗಿರಿ. ನಿಮ್ಮ ಮಾತುಗಳಿಗೆ ಮರುಳಾಗಬೇಡಿ. ಇಂಥಾ ವಿನಂತಿಗಳಿಗೆ ಒಳಗಾಗಿ ನೆವಮಾತ್ರದ ಸಭೆಗೆ ಪ್ರೋತ್ಸಾಹಿಸಲಿಕ್ಕಿಲ್ಲವೆಂದು ನನಗೆ ಚೆನ್ನಾಗಿ ಗೊತ್ತಿದೆ. ಉತ್ತಯ್ಯನವರು ಹೇಳುವ ಸ್ವಪ್ನದ ಪ್ರತಿನಿಧಿ ಸಭೆಯು ಜಮಾನುದಾರರ ಸಂಘವೆಂಬ ಹೆಸರಿನಿಂದ ನೆಲೆಗೊಂಡಿರುವದು ದೇಶಿಯರಿಗೆ ತಿಳಿದಿದೆ. ಆದೇ ನಮ್ಮ ಉತ್ತಯ್ಯನವರಿಗೆ ಬೇಕಾದ ಕೊಡಗು ಪಾರ್ಲಿಮೆಂಟ್ ಇನ್ನು ಈ ಪಾರ್ಲಿಮೆಂಟಿಗೆ ಸರಿಯಾದ ಸ್ವರಾಜ್ಯವನ್ನು ಉತ್ತಯ್ಯನವರು ನಮ್ಮ ದೇಶದಲ್ಲಿ ಸ್ಥಾಪಿಸಲಿ. ಅಂದು ನೋಡೋಣ

"ಕೊಡವ."

ಟೌನಬೋರ್ಡ್ ಕಮಿಟಿ ಚುನಾವಣೆ.

ಅಯ್ಯಾ,

ಅಧಿಕಾರಿಗಳ ಕಣ್ಣು ತೆರೆಯಲು ಪ್ರಯತ್ನಪಡುವ "ಗೊತ್ತಿರುವವ"ನಿಗೆ ಗೊತ್ತಾದ ಒಂದು ಸಂಗತಿ ತಾಲೂಕ ಸಬ್ ಇನ್ಸ್‌ಪೆಕ್ಟರ ವಿಷಯ. ಲೋಕಪಾವನಕ್ಕೆ ಅದು ಬಲುಹಿತದ ಸಂಗತಿ! ಇದ್ದದ್ದನ್ನು ಇದ್ದ ಹಾಗೆ ಬರೆಯುವ ಪತ್ರಿಕೆ! ಈ ಲೋಕಪಾವನಕ್ಕೆ ಆದಿಯಿಂದಲೇ ತಾಲೂಕ ಸಬ್ ಇ. ಇನ್ಸ್‌ಪೆಕ್ಟರೆಂದರೆ ಬಲುಹಿತ. ಇಂಥಾದ್ದರಲ್ಲಿ 'ಗೊತ್ತಿರುವವ'ನನ್ನು ಸಿಕ್ಕಿದರೆ ಬಯಸಿದ್ದನ್ನೇ ಕೊಟ್ಟ ವೈದ್ಯನಾತಾಯಿತು. ತಾಲೂಕ ಸ. ಇ. ಇನ್‌ಸ್ಪೆಕ್ಟರು ಆ ಚುನಾವಣೆಯಲ್ಲಿ ಮೋಹನತ್ತು ತೆಗೆದುಕೊಂಡರೆಂಬುದು ಪೂರಾ ಸುಳ್ಳು. ಒಂದು ವೇಳೆ ಹಾಗೆ ಮಾಡಿದ್ದರೂ ಕೂಡ ಗೊತ್ತಿರುವವನಿಗೆ ಟೌನಬೋರ್ಡ್ ಕಮಿಟಿ ಒಬ್ಬ ದೇಶದ ಹಿಂದು ಜನಾಂಗಕ್ಕಲ್ಲಾ ಸಂಬಂಧಪಟ್ಟದೆಂದು ಗೊತ್ತಿಲ್ಲವೋ? ಉದ್ಯೋಗಸ್ಥರು ಚುನಾವಣೆಗೆ ನಿಂತು ಈ ಕಮಿಟಿಗೆ ಮೆಂಬರುಗಳಾಗಿ ಚುನಾಯಿಸಲ್ಪಟ್ಟಿರುವಲ್ಲಿ ಉದ್ಯೋಗಸ್ಥರು ಚುನಾವಣೆಯಲ್ಲಿ ಭಾಗಗಳಾಗಿದ್ದದರಲ್ಲಿ ಮಾಡಿದ ದೊಡ್ಡ ಪಾಪವೇನದು? ಅದರಲ್ಲಿ ಪಾರುಪತ್ಯಗಾರರು, ಪಟೇಲರುಗಳು ಮೊದಲಾದ ಬೇರೆ ಉದ್ಯೋಗಸ್ಥರು ಚುನಾವಣೆಯಲ್ಲಿ ಮೋಹನತ್ತು ತೆಗೆದುಕೊಂಡದ್ದಿಲ್ಲವೋ? ಮುಖ್ಯವಾಗಿ ಇಲಾಖೆಯ ಕಮಿಟಿಗೆ ಉದ್ಯೋಗಸ್ಥರಲ್ಲದವರೇ ಮೆಂಬರುಗಳಾಗಿ ಚುನಾಯಿಸಲ್ಪಡಬೇಕೆಂಬ ಉತ್ತಮವಾದ ರಿವಾಜು ಬಾರಿಗೆ ಬಂದಾಗ ಉದ್ಯೋಗಸ್ಥರು ಈ ಚುನಾವಣೆಯಲ್ಲಿ ಮೋಹನತ್ತು ವಹಿಸಬಾರದೆಂದು ಹೇಳಬಹುದು. ನದರಿ ಚುನಾವಣೆಯ ವಿಷಯ ಒಡೆದ ಮಹನೀಯರು ಅಲ್ಲಿ ನಡೆದ ಸಂಗತಿಗಳನ್ನು ಇದ್ದಕ್ಕಿದ್ದ ಹಾಗೆ ಬರೆಯದೆ ಮರೆಮಾಚಿ ಬರೆದದ್ದಕ್ಕೆ ತುಂಬಾ ವ್ಯಸನ ಪಡಬೇಕಾಗಿದೆ. ಇನ್ನಾದರೂ ನಿಜಸಂಗತಿಯೇ ಪ್ರಕಟವಾಗಲೆಂದು ಹಾರೈಸುವ.

"ಓಟರು."

ಯಾರ ಮತಕ್ಕೆ ಸೇರುವ?

ಅಯ್ಯಾ,

ಮಹನೀಯರೇ ಕಲಿಕಾಲದ ಮಹಿಮೆಯೋ ಏನೋ, ಏಕಕಾಲದಲ್ಲಿ ಇಬ್ಬರು ಮತವ್ಯವಸ್ಥಾಪಕರು ನಮ್ಮ ಪುಟ್ಟ ದೇಶದಲ್ಲಿ ಜನ್ಮವೆತ್ತಿದಂತೆ ಕಾಣುತ್ತದೆ. ಎಷ್ಟಾದರೂ ಪುಣ್ಯಭೂಮಿಯಲ್ಲವೇ. ಸಮುದಾಯಕ್ಕೆ ದಿಕ್ಕುತೋರುವದೂ ಇಲ್ಲ, ಸ್ಥಾಪಕರು ತೋರಿಸುವದೂ ಇಲ್ಲ. ಮುದ್ದು ಮುದ್ದಾದ ಅಕ್ಷರಗಳಿಂದ ಕೂಡಿದ ಹಸ್ತಪತ್ರಿಕೆಗಳಲ್ಲಿ ಹಾಗೆ ಮಾಡುತ್ತೇವೆ, ಹೀಗೆ ಮಾಡುತ್ತೇವೆಂದು, ಯಾರಿಂದಲೂ ಹೀಗೆ ಬರುಯುವದು ಅಸಾಧ್ಯವೆಂಬ ಭಾವನೆಯಿಂದಲೋ ಏನೋ ಜನರಲ್ಲಿ ಸಾರುತ್ತಿರುವರು. ಕಾರ್ಯತಃ ಆಚರಿಸುವ ಯೋಚನೆ ಇನ್ನೂ ಹುಟ್ಟಿರುವಂತಿಲ್ಲ. ಒಬ್ಬರು "ಪ್ರತಿನಿಧಿ ಸಭೆ" ಎಂದು ಘೋರ್ಗರೆಯುತ್ತಿರುವರು. ಒಗ್ಗಟ್ಟಿನ ಮೂಲ ಮಂತ್ರವೇ ಇದೆನ್ನುವರು. ಜಮಾನ್ದಾರರ ಸಂಘ ಕೋಳಿ ಮರಿ ಹೊರಟ ಅನಂತರ ಸಲ್ಲುವ ಬರೀ ಸಿಪ್ಪೆ ಎನ್ನುವರು. ಇದು ಯಾವಾಗಲೆಂದವೆಂದು ಮಾತ್ರ ಎನ್ನರು. ಅದರ ಮರಿಯಾದ ಪ್ರತಿನಿಧಿ ಸಭೆಯನ್ನು ಪೋಷಿಸಿ ಎನ್ನುವರು. ಆ ಮರಿ ಮೊಟ್ಟೆ ಇಡಲಾರದೆಂದು ಮಾತ್ರ ಹೇಳರು. ಮೊಟ್ಟೆಯೊಳಗೆ ಸೇರಿದ್ದವರೆಲ್ಲಾ ಮರಿಯೊಡನೆ ಸೇರದಂತ ಕಾನೂನು. ಸೇರಿದೆಂದರೂ ಸೇರರೆಂಬ ಸಂಪೂರ್ಣ ಭರವಸೆ. ಹಾಗಾದರೆ ಒಗ್ಗಟ್ಟೋ ಇಗ್ಗಟ್ಟೋ? ನಿಷ್ಪಕ್ಷಪಾತಿಯೆಂದೂ ನಿರ್ಭಯಿಯೆಂದೂ ಒಗ್ಗಟ್ಟಿಗಾಗಿಯೇ ತಾನು ಜನ್ಮವೆತ್ತಿರುವದಾಗಿ ಒದರುತ್ತಿರುವ ನಮ್ಮ 'ಲೋಕಪಾವನ'ದ ದೃಷ್ಟಿಯು ಆ ಕಡೆ ಬೀಳದದು ಏಕೆ? ಭಯವೋ ಅಲ್ಲ................ಈಗ ಶಕ್ತಿ ನಿಷ್ಠೆ ಎನ್ನುವವರು ಆ ಸಂಘದ ಮಾಜಿ ಪ್ರೆಸಿಡೆಂಟರು: ಮೊನ್ನೆ ಮೊನ್ನೆ ವರೆಗೆ ತಾನು ಸಂಘಕ್ಕೆ ಅಪಾಯ ತಟ್ಟುವಂತಿದ್ದರೆ ಸೊಂಟ ಕಟ್ಟಿ ಅದರ ಕೀರ್ತಿಯನ್ನು ಉಳಿಸುವೆನೆಂದೂ ತಾನು ಈಗ ಮೌನದಿಂದ ರೀಗೇಗೆ ಕೆಲಸವು ನಡಿಯುತ್ತಿದೆಯಾಗಿ ನೋಡುತ್ತಿರುವೆನಾದ್ದರಿಂದ ತಾನು ದೇಶಹಿತಕ್ಕೆ ಯಾವ ಕಾರ್ಯವನ್ನೂ ಮಾಡುವದಿಲ್ಲವೆಂದು ನೆನಸುವಾತನಾಗಿಯೂ ಹೇಳುತ್ತಿದ್ದ ಇವರು ಇಷ್ಟೊಂದು ದಿವಸದಲ್ಲಿ ಸಂಘವನ್ನು ನಿರ್ನಾಮ ಮಾಡಲು ಸೊಂಟ ಕಟ್ಟಿದರ ಕಾರಣವಾದರೂ ಏನು ಊಹಿಸುವವರು ಇಲ್ಲವೇನು?

ಇನ್ನೊಬ್ಬರು ಹಸ್ತ ಪತ್ರಗಳ ಮೂಲಕವಲ್ಲ, ಉಪನ್ಯಾಸಗಳ ಮೂಲಕವಲ್ಲ, ಆದರೆ ಪತ್ರಿಕೆಗಳ ಮೂಲಕ ಅವುಗಳ ಸಂಪಾದಕರಿಗೆ ಬಹು ಸುಲಭದಲ್ಲಿ ಪತ್ರಿಕೆ ತುಂಬುವ ಅನುಕೂಲತೆ ಕೊಡುತ್ತಿರುವರು. ಒಂದಾವರ್ತಿ ಕೊಡಗು ಸಭೆಯೆಂದೂ, ಇನ್ನೊಂದಾವರ್ತಿ ಕೊಡವ ಸಭೆಯೆಂದೂ ಬೋಧಿಸುವರು. ಇವರ ಹಿಂಬಾಲಕರಲ್ಲಿ ಕೆಲವರಂತೂ "ಕೊಡಗು" ಪತ್ರಿಕೆಯ ಮೇಲೆ ದೇಶದ ಹಲವರ ಮೇಲೆ ತಮಗಿರುವ ಮಾತ್ಸರ್ಯದಿಂದಲೋ ಏನೋ ರೋಷಾವೇಶದಿಂದ ಕಿಡಿಗಳನ್ನು ಉದುರಿಸುತ್ತಾ ಕಾಲುಕೆರೆದು ಜಗಳಕ್ಕೇಳುತ್ತಿರುವರು. ಒಮ್ಮೆ ಪತ್ರಿಕೆಯು ಸರ್ಪರದೆನ್ನುವರು. ಒಮ್ಮೆ ತನ್ನ ವಿರೋಧಿಗಳ ಪ್ರಶಂಸನವನ್ನು ಎತ್ತಕೂಡದೆಂದೂ ತನ್ನ ಎದಪ್ಪದ್ದವುದ ಲೇಖನಗಳನ್ನು ಬರಿಯಬೇಕು, ಇಲ್ಲವಾದರೆ ಕುಚ್ಛಕಳೆಯುತ್ತಾ ತನ್ನ ಲೇಖನಿಯ ಹಿಡಿತವನ್ನು ಸಡಲಿಸುತ್ತಿರುವರು. ಇದು ಅವರಿಗೂ ಅವರ ಹಿಂಬಾಲಕರಿಗೂ ಬಹು ಆನಂದವನ್ನುಂಟು ಮಾಡಬಹುದೇ ವಿನಹ ಅನ್ಯರಿಗೆ ರುಚಿಸದೆಂಬದ್ದನ್ನು ಇನ್ನೂ ತಿಳಿಯದಕ್ಕೆ ವ್ಯಸನಪಡಬೇಕಾಗಿದೆ. ಅಸಭ್ಯ ಶಬ್ದಗಳನ್ನು ಉಪಯೋಗಿಸುವವರು ಅಂಥ ಅಸಭ್ಯ ಶಬ್ದಗಳನ್ನು ಕೇಳಲು ವ್ಯಸನಪಡುವವರಾದ್ದರಿಂದ ಅಂಥಾ ಶಬ್ದಗಳನ್ನೇ ಉಪಯೋಗಿಸಿ ಅವರ ಕಿಳಿಗೇಡಿತನಕ್ಕೆ ಮದ್ದು ಅರಿಯಬೇಕಿಲ್ಲ. ಕಂಡು ಕಾಣದೆ ಸುಮ್ಮನಿರುವದೇ ದಿವ್ಯ ಔಷಧ. ಅದಕ್ಕಿಂತ ಅಸಭ್ಯ ಶಬ್ದ ಬೇರೊಂದಿಲ್ಲ.

ಆದರೆ ಈಗಿನ ಹೋರಾಟದ ಗುಟ್ಟೇನೆಂಬದು ಜನ ಸಮುದಾಯಕ್ಕೆ ಈಗಲೀಗ ತಿಳಿಯ ಹತ್ತಿದೆ. 1ನೇದು ಜಮಾನ್ದಾರರ ಸಂಘವನ್ನು ನಿರ್ನಾಮ ಮಾಡುವದು. ಇದರಿಂದ ದೇಶದಲ್ಲಿ ಒಡಕು ತನ್ನಷ್ಟಕ್ಕೆ ತಾನೇ ಹುಟ್ಟುವದರಿಂದ ಇದರ ಮಧ್ಯೆ ತಾನು ನುಗ್ಗಿ ತನ್ನ ಇಷ್ಟಾರ್ಥವನ್ನು ನೆರವೇರಿಸಿಕೊಳ್ಳಬಹುದೆಂಬದು ಕೆಲವರ ಭಾವನೆ. 2ನೇ ಕೊಡಗು ಪತ್ರಿಕೆಯನ್ನು ಮೂಲೆಗೊತ್ತುವದು. 3ನೇದು ಬರುವ ಕೌನ್ಸಿಲು ಚುನಾವಣೆಯಲ್ಲಿ ಮೇಲುಕೈ. ಇಷ್ಟೊಂದು ಅವ ಬಳಿಕ ಈ ಕೊಡವಸಭೆ, ಕೊಡಗುಸಭೆ, ಪ್ರತಿನಿಧಿಸಭೆ ಯಾರ ಕೈಸೇರುತ್ತೆಂಬದೂ ಸೇರಿದರೂ ಚಿಂತೆಯೇನೂ ಇಲ್ಲವೆಂಬದೂ ಎಲ್ಲರಿಗೂ ಮತ್ತು ಸಭೆ ಸ್ಥಾಪಕರಿಗೂ ಗೊತ್ತು ಎಂದು ಹೇಳಬಹುದಲ್ಲವೇ?

ನಾವು ನೀವು ಎಂಬ ಭೇದವು ಕಳದ ಕೊಡವನನ್ನೆ ಚಳವಳಿ ಎದ್ದಂದಿನಿಂದ ಉಂಟಾದದ್ದು ಮೆಲ್ಲ ಮೆಲ್ಲನೆ ಮಾಯವಾಗುತ್ತಾ ನಾವು ಎಂಬಲ್ಲಿಗೆ ಬಂದು ಐಕ್ಯವಾಗುತ್ತಿತ್ತು, ಆದರೆ ದೈವ ಪ್ರೇರಣೆಯಿಂದ ದೇಶದ ಶುಭಕ್ಕೋ ಅಶುಭಕ್ಕೋ ಪುನಃ ನಾವು ನೀವು ಎಂಬದ್ದು ತಲೆದೋರುತ್ತಿರುವದು ಯಾತಃ ನಿಮಿತ್ತದಿಂದೇನು, ತಾನು ತನ್ನನ್ನೂ ತನ್ನ ಹಿಂಬಾಲಕರೆನ್ನಿಂಬದ್ದನ್ನೂ ತಿಳಿಯದವರ ಕೂಗುಬರೀ ಅರಣ್ಯ ರೋಧನವೇ ಸರಿ. ಸಮುದಾಯವು ಮಾತ್ರ ಅನ್ಯರ ಹೊಗಳಿಕೆಗೆ ಹಿಗ್ಗದೆ ಹೀಯಾಳಿಕೆಗೆ ಕುಗ್ಗದೆ ಶಮುಗಾಗಿ ಶ್ರದ್ಧೆಯಿಂದ ತಮ್ಮ ಕೈಲಾದ ಮಟ್ಟಿಗೆ ಕೆಲಸ ಮಾಡುವವರನ್ನು ಚೆನ್ನಾಗಿ ಬಲ್ಲರು. ಸಮುದಾಯದ ಹೇಳಿಕೆಯಂತೆ ನಡಿಯುವದೇ ದೇಶಕ್ಕೆ ಮೇಲು.

ಇತ್ತೀಗ ವೃತ್ತಪತ್ರಿಕೆಗಳಿಂದ ಹೆಕ್ಕಿ ತೆಗೆದ ಗಂಭೀರವಾಗಿ ಬಾಯಿತುಂಬ ಹೊರಡುವ ರೌಂಡ್‌ಟೇಬಲ್ ಕಾನ್ಫರೆನ್ಸ್ ಎಂಬದೊಂದನ್ನು ಸೇರಿಸಬೇಕಂತೆ. ಇದು ಕೇಳುವಾಗ ನಗುಬರುತ್ತದೆ. ಆದರೆ ಆ ಮಹಾನೀಯರು ಯಾರ್ಯಾರಿಗೆ ಯಾವ ಕಾರ್ಯಕ್ಕೆಂಬದ್ದನ್ನು ಚೆನ್ನಾಗಿ ತಿಳಿಸಲಿಲ್ಲ. ಹೇಗೂ ಸದ್ಯ ಸರಕಾರಕ್ಕೂ ಪ್ರಜೆಗಳಿಗೂ ಇರುವ ಭಿನ್ನಾಭಿಪ್ರಾಯಗಳಿಗಲ್ಲವಲ್ಲ. ಸ್ವರಾಜ್ಯ ಸಂಪಾದನೆಗೆ ಅಲ್ಲವಲ್ಲ, ಅಷ್ಟೇ ಸಾಕು, ಅದಕ್ಕೆ ಮಾತ್ರ ಎಲ್ಲಿಯೂ ಇಳಿಯಬೇಡಿ.

ಪಿ. ಪಿ ಮಾದಪ್ಪ.

ಆರೋಗ್ಯ ಚಂದ್ರಿಕೆ.

ಮದ್ರಾಸ್.

ಸಂಪಾದಕರು ಡಾಕ್ಟರ್ ಯು ರಾಮರಾವ್, ಯಮ್. ಎಲ್ ಸಿ ಯವರು.

ಆರೋಗ್ಯ ಚಂದ್ರಿಕೆಯು ಆರೋಗ್ಯ ಮತ್ತು ಶುಚಿತ್ವದ ವಿಷಯದಲ್ಲಿ ಸಾಮಾನ್ಯ ಪ್ರಜಾವರ್ಗಕ್ಕೆ ಶಿಕ್ಷಣ ದೊರೆಯುವ ದಕ್ಕಾಗಿ ಏರ್ಪಡಿಸಿದ ಒಂದು ಸಚಿತ್ರ ಮಾಸಪತ್ರಿಕೆ ಈ ಮಾಸಪತ್ರಿಕೆಯು 'ಹೆಲ್ತ್' ಎಂಬ ಇಂಗ್ಲಿಷ್ ಮಾಸಪತ್ರಿಕೆಯ ಕನ್ನಡ ಪ್ರತಿಯಾಗಿದೆ ಆರೋಗ್ಯ ಚಂದ್ರಿಕೆಯಲ್ಲಿ ಪ್ರಸಿದ್ಧರಾದ ಡಾಕ್ಟರುಗಳ ಮತ್ತು ಆಯುರ್ವೇದ ಪಂಡಿತರ ಲೇಖನಗಳು ಆಗಿಂದಾಗ್ಯೆ ಪ್ರಕಟವಾಗುವುವು

ಆರೋಗ್ಯ ಚಂದ್ರಿಕೆಯಲ್ಲಿರುವ ಲೇಖನಗಳು ಹಳೆಯದಾಗದೆ ಪುನಃ ಪುನಃ ಓದಲು ಅರ್ಹವಾದವುಗಳಾಗಿರುವುವು ಆರೋಗ್ಯ ಚಂದ್ರಿಕೆಯನ್ನು ತರಿಸಿ ಬೈಂಡ್ ಮಾಡಿಸಿ ಇಟ್ಟು ಕೊಂಡರೆ ಎಲ್ಲರಿಗೂ ಉಪಯುಕ್ತವಾಗುವ ಅಮೂಲ್ಯವಾದ ಗ್ರಂಥವಾಗುವುದು ಅಂಚೆಯ ವೆಚ್ಚ ಸೇರಿ ಈ ಪತ್ರಿಕೆಯ ಚಂದಾ ಮೊಬಲಗು ವರ್ಷಕ್ಕೆ 1-8-0 ಬಿಡಿ ಪತ್ರಿಕೆ 1ಕ್ಕೆ 0-2-0 ಹಿಂದಿನ ಸಂಚಿಕೆಗಳು ಕೂಡಾ ದೊರೆಯುವವು.

ಪತ್ರವ್ಯವಹಾರಕ. 'ಆರೋಗ್ಯ ಚಂದ್ರಿಕೆ' 323,

ಮನೋಲ್ಲಾಸಿನಿ ತೈಲ

ತಲೆನೋವು, ತಲೆ ತಿರುಗುವುದು, ತಲೆಬುರುಡೆ ಕಣ್ಣುರಿ, ಕಿವಿಯಿಂದ ಸೋರುವುದು ಕಿವುಡುತನ ಕಣ್ಣು ನೋವು, ಅಪಸ್ಮಾರ, ನಿದ್ದೆ ಬಾರದಿರುವುದು, ನೆನಪು ಶಕ್ತಿ ಕುಂದಿಹೋಗುವುದು ಇವುಗಳಿಗೆ ಗುಣಪಡಿಸುತ್ತದೆ ಉದುರುವ ಕೂದಲನ್ನು ಎಲ್ಲಾ ನಿಲ್ಲಿಸುವುದಲ್ಲದೆ ತಲೆ ಕೂದಲು ಬೆಳೆಯುವಂತೆ ಮಾಡಿ ದೇಹಕ್ಕೆ ಸೌಂದರ್ಯವನ್ನೂ ... ಹುಟ್ಟುವ ಕೂದಲನ್ನು ... ಸೀಸೆಗೆ ರೂ 1, ... ದೊಡ್ಡ ಸೀಸೆಗೆ ರೂ 2, 3 ಸೀಸೆಗಳಿಗೆ 2-10-0, ...

ಚಂದನಾಸವ.— ... ಮೂತ್ರಕೃಚ್ಛ, ಮೂತ್ರ ... ಮೂತ್ರದಲ್ಲಿ ... ಮೂತ್ರದಲ್ಲಿ ಧಾತು ಹೋಗುವುದು, ... ಮೂತ್ರ ... ರೂ 1-8-0, ... ರೂ 4, ಡಜನಿಗೆ ರೂ 15.

ರೋಮನಾಶಿನಿ.— ಈ ಹುಡಿಯನ್ನು ನೀರಲ್ಲಿ ಕಲಸಿ ಮೈ ... ರೋಮವಿರುವ ಭಾಗಕ್ಕೆ ಹಚ್ಚಲು ರೋಮವು ಉದುರಿ ... ಡಬ್ಬಿ ಒಂದಕ್ಕೆ 6 ಆಣೆ, 3 ಡಬ್ಬಿಗಳಿಗೆ ರೂ 1 1 ಡಜನಿಗೆ ...

ದದ್ರುಘ್ನಲೇಪ.— ಇದನ್ನು ಗಜಕರ್ಣದ ಮೇಲೆ 2 3 ಸಾರಿ ... ಗುಣ ಬರುತ್ತದೆ. ಡಬ್ಬಿಗೆ ಆ 6, ... ಡಬ್ಬಿಗಳಿಗೆ ... ಡಜನಿಗೆ ರೂ 3-8-0

ನಾರೀಸಖಿ.— ಇದು ಸ್ತ್ರೀಯರ ಹೊಟ್ಟೆನೋವು ಅತ್ಯಧಿಕ ... ಸ್ರಾವ, ಬಿಳಿ ಪ್ರದರ, ಮುಟ್ಟು ದೋಷಗಳು ಮತ್ತು ಗರ್ಭಕೋಶದ ... ರೋಗಗಳನ್ನು ಗುಣ ಮಾಡುತ್ತದೆ. ಸೀಸೆ ಒಂದಕ್ಕೆ ರೂ 2

ಅಂಗ್ಲರೋಗನು.— ... ಅನೇಕ ... ಕೆಮ್ಮನ್ನೂ ಕಫವನ್ನೂ ... ಸೀಸೆ ಒಂದಕ್ಕೆ 2-8-0, 3 ಡಬ್ಬಿಗಳಿಗೆ ರೂ 7

ಅಮೃತರಿಷ್ಟ.— ಇದು ಕ್ಷೀಣವು ... ಉತ್ತಮ ... ಎಲ್ಲಾ ತರದ ಜ್ವರಕ್ಕೆ ಉತ್ತಮ ... ಬಾಟ್ಲಿಗೆ ರೂ 1-8-0, 3ಕ್ಕೆ ರೂ 4, ಡಜನಿಗೆ ರೂ 15

ಲೋಹಾಸವ.— ಇದು ಜ್ವರದ ... ಮತ್ತು ... ಬಾಟ್ಲಿಗೆ ರೂ 1-8-0, 3ಕ್ಕೆ ರೂ 4

ನಮ್ಮ ಕೆಟಲಾಗು ತರಿಸಿ ನೋಡಿರಿ

ವಿಲಾಸ - ಮನೋಲ್ಲಾಸಿನಿ ಕಂಪೆನಿ.

52-6 9 ಮಂಗಳೂರು, ಕಂಕನಾಡಿ.

ಡಾಕ್ಟರ್ ಎಸ್ ಎನ್. ಅಯ್ಯಂಗಾರ್, ಬಿ ಎ,

ಎಲ್ ಆರ್ ಸಿ ಪಿ ಅಂಡ್ ಎಸ್ (ಎಡಿನಬರ್ಗ್)

ಎಲ್. ಎಫ್ ಪಿ. ಅಂಡ್ ಎಸ್, [ಗ್ಲಾಸ್ಗೊ]

ದಂತ ವೈದ್ಯರು

ಮಡಿಕೇರಿ ಮಹದೇವ ಪೇಟೆಯಲ್ಲಿ ಶ್ರೀ ಯಂ ಯಂ ಸಿದ್ದೀಕ್‌ರವರ ಅಂಗಡಿಯ ಎದುರಿನ ಮನೆಯಲ್ಲಿ ಇಳಿದುಕೊಂಡಿರುತ್ತಾರೆ. ಇಷ್ಟೈಸಿದವರು ಅವರನ್ನು ಇಲ್ಲಿ ಭೇಟಿಯಾಗಬಹುದು.

ಅತ್ಯಂತ ಸುಲಭ ದರದ ಮತ್ತು, ಹಿಂದೀಯರಿಂದ ಉತ್ತಮ ತರದಲ್ಲಿ ನಡಿಸಲ್ಪಡುತ್ತಿರುವ ಲೈಫ್ ಅಫ್ ಏಷ್ಯಾ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್, ಕಲ್ಕತ್ತಾ, ಇದರಲ್ಲಿ ಜೀವವಿಮೆ ಮಾಡಿ ಕುಟುಂಬ ಲಾಭ ಹೊಂದಿರಿ.

ಏಜೆಂಟ್—

ಎಸ್. ರಾಮಣ್ಣ,

ಮಹದೇವಪೇಟೆ,

...

EMPIRE OF INDIA

Life Assurance Company Ltd

(Established 1897)

Head Office Bombay.

STRIKING PROGRESS

Twenty eight years of Economical and Careful management result in Assets Exceeding Rs 2 50,00,000. Today

THE COMPANY TO INSURE YOUR LIFE WITH

For Prospectus and other particulars, please apply to the Local Agent or to P K Sankaranarayana Iyer. Branch Secretary for Mysore State & Coorg

152/3 Commercial Street, Bangalore

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್ ಕೋ ಆಪರೇಟಿವ್ ಸೊಸೈಟೀಸ್ ಆಕ್ಟಿನ ಪ್ರಕಾರ ಜಸ್ತರಾಗಿದೆ.

	ರೂ.
ಶೇರ್ ಬಂಡವಾಳ —	50,000
ವಸೂಲಾದ ಶೇರ್ ಮೊಬಲಗು —	9890
ಒಟ್ಟು ಮೂಲಧನ —	70,600

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲ ಕೊಡತಕ್ಕದ್ದು.

ಒಂದು ವರ್ಷ ಗಡುವಿನ ಡಿಪಾಸಿಟ್ ಬಡ್ಡಿಯ ವಾಯಿದೆಯ ಠೇವಣಾತಿಗಳಿಗೆ ಶೇಕಡಾ ನೂರಕ್ಕೆ ರೂ 6—4—0ರ ದರದಲ್ಲಿ ಬಡ್ಡಿ ದೊರೆಯುತ್ತೆ. ಕಡಿಮೆ ವಾಯಿದೆಯ ಠೇವಣಾತಿಗಳಿಗೆ ಶೇಕಡ ಕಾಲಿಯಾಗಿರ ಬಡ್ಡಿ ದೊರೆಯುತ್ತೆ.

ವರ್ತಕಪ್ಪಿಂದಲಾರ್ಥಿ ಕೋ ಆಪರೇಟಿವ್ ರಿಜಿಸ್ತ್ರಾರವರು ಲೆಕ್ಕ ಪರಿಶೋಧಿಸಿ ನೋಡುತ್ತಾರೆ.

ಪ್ರೆಸಿಡೆಂಟರು,	ಟ್ರೆಜರರ್,
ಕೊಡಂದೇರ ಕುಟ್ಟಯ್ಯನವರು,	ಯಂ ಭುಜಂಗರಾಯರು
ರಾಯ್ ಬಹದ್ದೂರ್	ಬಿ ಎ ಬಿ ಎಲ್.,

ಸಕ್ರೆಟರಿ

ಸಿ ... ವೆಂಕಪ್ಪಯ್ಯನವರು, ಬಿ ಎ., ಬಿ ಎಲ್,

ತಾರೀಕು 29—8—1925.

ಮುದ್ದಾದ ಮುದ್ರಣ!!

ಮುದ್ದಾದ ಪುಸ್ತಕ!

ಶರೀರ ಸುಖ, ಸಂಪತ್ತು, ಐಶ್ವರ್ಯಗಳನ್ನು ಸಂಪಾದಿಸಲು ಸಾಧನಗಳನ್ನೂ ಮತ್ತು ಶರೀರ ಮರ್ಮಶಾಸ್ತ್ರ (ಕಾಮಶಾಸ್ತ್ರ)ವನ್ನೂ ತಿಳಿಸುವ

ಮರ್ಮ ಶಾಸ್ತ್ರ-ಎಂಬ ಕಾಮಶಾಸ್ತ್ರ

ಈ ಪುಸ್ತಕವು ಮೊದಲು ಫ್ರೆಂಚ್ ಇಂಗ್ಲಿಷ್, ಹಿಂದುಸ್ತಾನಿ, ಸಂಸ್ಕೃತ ಮುಂತಾದ ಭಾಷೆಗಳಲ್ಲಿ ಬಹು ಗುಪ್ತವಾಗಿತ್ತು ಇದನ್ನು ಬಹು ಪ್ರಯಾಸದಿಂದ ಸಂಪಾದಿಸಿ ಕನ್ನಡಕ್ಕೆ ಭಾಷಾಂತರಿಸಿ (84 ಚಿತ್ರಪಟಗಳ ಸಹಿತ) ಥಳಥಳಿಸುವ ಕಾಗದದಲ್ಲಿ ಮುದ್ರಿಸಿ ತಯಾರಾಗಿದೆ ಈ ಪುಸ್ತಕದಲ್ಲಿ ಸ್ತ್ರೀ ಪುರುಷರ ಜೀವನದ ಎಲ್ಲಾ ಮರ್ಮಗಳನ್ನು ... ವಿಷಯಗಳು, ಸ್ತ್ರೀ ಪುರುಷರು ಅನ್ಯೋನ್ಯವಾಗಿ ... ಸ್ತ್ರೀ ಪುರುಷರಿಗೆ ಉಂಟಾಗುವ ಎಲ್ಲಾ ತರದ ... ಮತ್ತು ಅಂಥಾ ವ್ಯಾಧಿಗಳನ್ನು ಗುಣಪಡಿಸತಕ್ಕ ಚಿಕಿತ್ಸೆಗಳೂ ಇನ್ನ ಅನೇಕ ತರದ ಮರ್ಮರಹಸ್ಯಗಳು ಚಿತ್ರಪಟಗಳ ಸಹಿತ ತೋರಿಸಿರುವುದು ಈ ಪುಸ್ತಕದ ಹೆಸರನ್ನು ಕೇಳಿದ ಮಾತ್ರಕ್ಕೆ ಸಂತೋಷವಾಗುವುದು ಅವರೆ ಓದಲಿಕ್ಕೆ ಯಾರಿಗೆ ತಾನೇ ಸಂತೋಷವಾಗಲಾರದು

ಕ್ರಯ ಪುಸ್ತಕ ಒಂದಕ್ಕೆ ಒಂದೇ ಒಂದು ರೂಪಾಯಿ ರೂ. 1—0—0

ಟಿ. ರಾಮಚಂದ್ರರಾವ್ ಅಂಡ್ ಕೊ.,

ಪೋಸ್ಟ್ ಬಾಕ್ಸ್ ನಂ. 232.

ಮದ್ರಾಸ್.

T Ramachander Rao & Co.,
Post Box No 232,
Madras

52-6

A Lot for SELECTION of Single Barrel Breach Loading Guns at LOWEST PRICE EVER OFFERED.



Original Browning S B B L 12 bore Take Down Hammerless Automatic Ejector Gun, with safety catch .. .. , Price, Rs 140/-

Do do but by **Winchester** or **Remington** ... Price, Rs 160/-

Weshojsten or **Remington S. B B L** 12 bore Six Shots Hammerless Repeating gun, 32 inches barrel with Safety catch .. Price, Rs 150/-

German S. B B L. 12 bore Hammerless Ejector Gun 32 inches German Steel Barrel with safety catch Price, Rs 65/

Continental Make Do Price, Rs 55/-

Webley & Scott's S B B L 12 bore Semi Hammerless Ejector Gun, 32 inches Webley's Steel Barrel ... .. Price, Rs 75

The above Guns can be had in 16 20, & 410 bore Same as above in 12 bore **Special "Duck Gun"** 36 inches barrel . Price Rs 80/

W W Greener's "Gaffer" S B B L 12 bore Martini Action Ejector Gun, 26 inches Greener's Steel Barrel . . Price, Rs 75/-

W. W. Greener's as above but **Long Range "Duck Gun"** with 32 inches barrel, and chamber for 2½ inches to 3 inches case . Price, Rs 90/-

Midland's "Knock-About" S B B L. Ejector Hammer Gun 32 inches barrel . Price, Rs. 55/-

Continental Make S B B L folding Pattern Hammer Gun, 32 inches barrel beautifully engraved and carved .. . Price, Rs. 45/-

J Steven's 12 bore Ejector Hammer Gun, 32 inches Steel barrel. . Price, Rs 45/

Do do 'Dread Naught' with heavy Breech . . . Price, Rs 50/-

Any of the above of J. Steven's Special **Duck Gun** with 36 inches barrel Price, Rs 5/- Extra.

ENQUIRIES SOLICITED.

THE BOMBAY ARMOURY,

331, ABDUL REHMAN STREET,

BOMBAY. 3

24-13

MY SCIENTIFIC SYSTEM OF GRADUATED PHYSICAL CULTURE

SENT FREE TO EVERY ONE

This will show you some of my remarkable achievements in Health building exercises, in my pages with nice photographs of myself and a number of my pupils, Read what they say about my system. Don't take my word for it. This book will be an impetus, an inspiration to every young man. All I ask is the price of postage two annas. Remember this does not obligate you in any way so don't delay one minute in your life. Write for this big book now while it is on your mind.

Prof. M. V. Krishna Rao,

P O Basuvangudi, G I P

(BANGALORE CITY)

ಆಂಧ್ರ ಆಯುರ್ವೇದಿಕ್ ಫಾರ್ಮಸಿ.

ಬ್ರಾಂಚ್ ಬೆಂಗಳೂರು ಸಿಟಿ

ಚ್ಯವನಪ್ರಾಸ ಲೇಹ.

ಇದು ಸರ್ವೋತ್ಕೃಷ್ಟವಾದ ಗಿಡಮೂಲಿಕೆಗಳಿಂದ ತಯಾರಿಸಲ್ಪಟ್ಟ ಆಯುರ್ವೇದ ರಸಾಯನೌಷಧವು. ವಿದ್ಯಾರ್ಥಿಗಳೂ ವಿಶೇಷವಾಗಿ ಬುದ್ಧಿಯನ್ನು ಪ್ರಯೋಗಿಸಿ ಕೆಲಸ ಮಾಡುವವರೂ ಈ ಲೇಹವನ್ನು ಸೇವಿಸಿದರೆ ವಿಶೇಷವಾಗಿ ಬುದ್ಧಿಶಕ್ತಿಯನ್ನೂ ಜ್ಞಾಪಕಶಕ್ತಿಯನ್ನೂ ಹೊಂದುವರು. ದೀರ್ಘಕಾಲದ ವ್ಯಾಧಿಯಿಂದಾಗಲೀ ಕೆಟ್ಟ ನಡತೆಯಿಂದಾಗಲೀ, ಸ್ವಭಾವ ಶಕ್ತಿಯ ಕೊರತೆಯಿಂದಾಗಲೀ ಶರೀರ ಕಾಂತಿಯು ಕುಂದಿ ರಕ್ತ ಕೆಟ್ಟು ಇಂದ್ರಿಯ ದೌರ್ಬಲ್ಯವೇ ಮೊದಲಾದ ವಿಕಾರಗಳಿಂದ ಪೀಡಿತರಾಗಿರುವವರು ಈ ಲೇಹವನ್ನು ಸೇವಿಸಿದರೆ ಈ ತರದ ವಿಕಾರಗಳನ್ನೆಲ್ಲಾ ಪರಿಹರಿಸಿ ದೇಹಕ್ಕೂ ಮನಸ್ಸಿಗೂ ಉಲ್ಲಾಸವನ್ನುಂಟುಮಾಡಿ ಮಾಂಸ ಖಂಡಗಳಿಗೂ ನರಗಳಿಗೂ ಬಲವನ್ನು ಕೊಟ್ಟು ದೇಹಪುಷ್ಟಿಯನ್ನುಂಟುಮಾಡಿ ನವಚೈತನ್ಯವನ್ನುಂಟುಮಾಡುವುದು. ಅಲ್ಲದೆ ಆರೋಗ್ಯದೃಢಶರೀರವುಳ್ಳವರಾಗಿ ದೀರ್ಘಕಾಲ ಬದುಕುವರು. ಕೆಮ್ಮು ಉಬ್ಬಸ ವ್ಯಾಧಿಯುಳ್ಳವರಿಗೂ ಮುಖ್ಯವಾಗಿ ಕ್ಷಯರೋಗಿಗಳಿಗೂ ಇದು ಸಂಜೀವಿನಿಯೇ ಸರಿ! ಚರಕ ಸಂಹಿತೆಯಲ್ಲಿ ಇದರ ಗುಣವು ಅದ್ಭುತವಾಗಿ ಹೇಳಲ್ಪಟ್ಟಿದೆ. ೧೦ ತೊಲೆಗೆ ೧ ರೂಪಾಯಿ ೪೦ ತೊಲೆಗೆ ೩ ರೂಪಾಯಿ

ಎಲ್ಲಾ ಕಡೆಯಲ್ಲಿಯೂ ಏಜಂಟರು ಬೇಕು.

ಸೂಚನೆ— ಇಲ್ಲಿ ಶಾಸ್ತ್ರೀಯವಾದ ಎಲ್ಲಾ ಔಷಧಗಳೂ ಕಡಿಮೆ ಕ್ರಯಕ್ಕೆ ಸಿಗುವುವು. ಆಯುರ್ವೇದ ಭೂಷಣ ಕೆ ನಾರಾಯಣರಾವ್ ಎ ಎಂ ಎ ಸಿ ಇವರು ರೋಗಿಗಳನ್ನು ಪರೀಕ್ಷಿಸಿ ಚಿಕಿತ್ಸೆಯನ್ನು ಪ್ರತಿದಿನವೂ ಮಾಡುವರು. ವಿಶೇಷ ಸಂಗತಿಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಟಿ. ಸಿ. ಎಸ್. ಸುಬ್ರಮಣ್ಯಂ ಅಂಡ್ ಕೋ,

ಮ್ಯಾನೇಜಿಂಗ್ ಏಜಂಟ್ಸ್, ಆಂಧ್ರ ಆಯುರ್ವೇದಿಕ್ ಫಾರ್ಮಸಿ

16—16 ಚಿಕ್ಕಪೇಟೆ, ಬೆಂಗಳೂರು ಸಿಟಿ

ಕಿರ್ಲೋಸ್ಕರ ನೇಗಿಲುಗಳು.

ಈ ಕೆಳಗಿನ ಕಬ್ಬಿಣದ ನೇಗಿಲುಗಳು ನಮ್ಮ ಕಾರ್ಖಾನೆಯಲ್ಲಿ ತಯಾರಾಗುತ್ತವೆ

೧ ಕಿರ್ಲೋಸ್ಕರ ನಂ ೫.

೨ " ಕಿಸಾನ

೩ " ಕಮೂಲ ಚರಕ

ಇವುಗಳ ಸವಿಸ್ತಾರ ಸಂಗತಿ ಬಗ್ಗೆ ಹಾಗೂ ಬೆಲೆಯ ಬಗ್ಗೆ ಕೂಡಲೇ ತಿಳಿದುಕೊಳ್ಳಿರಿ.

ಕರ್ನಾಟಕ ತರುಣರ ಉನ್ನತಿಗೋಸ್ಕರ

ಕಿರ್ಲೋಸ್ಕರ ವಾರ್ತೆ,

ಎಂಬ ತಿಳಿಗನ್ನಡ ಮಾಸ ಪತ್ರಿಕೆಯನ್ನು ಪ್ರಕಟಿಸುತ್ತೇವೆ. ವಾ ಚ. ೧॥ ರೂ ಮಾದರಿ ಸಂಚಿಕೆ ಧುಕ್ಕಟೆ.

ಕಿರ್ಲೋಸ್ಕರ ಬಂಧು, ಲಿಮಿಟೆಡ್.

ಕಿರ್ಲೋಸ್ಕರವಾಡಿ,

16—14 ಜಿ. ಸಾತಾರ್.

ಲೋಕಪ್ರಸಿದ್ಧವಾದ! ಅನುಭವಸಿದ್ಧವಾದ!

ಮೂರುದಿವಸಗಳಲ್ಲಿ ಗುಣಸಿಕ್ಕದಿದ್ದರೆ ಔಷಧಿಯ ಕ್ರಯ ವಾಪಾಸು. ಜೀರ್ಣಶಕ್ತಿ, ರಕ್ತವೃದ್ಧಿ, ಧಾತುಪುಷ್ಟಿ, ಮನೋಲ್ಲಾಸ ಪರಮಾನಂದ ಮೊದಲಾದ ಸುಖ ಜೀವನಕ್ಕೆ ಬೇಕಾದ ಆರೋಗ್ಯದಾಯಿನಿ

ಟ್ರೇಡ್‌ಮಾರ್ಕ] **ಅಗಸ್ತ್ಯ** [ನೋಡಿ ತೆಕ್ಕೊಳ್ಳಿರಿ

ಮನ್ಮಥ ಚಿಂತಾಮಣಿ ಲೇಹ

ರಿಜಿಷ್ಟರ್ ಆದದ್ದು

ಆಬಾಲವೃದ್ಧ ಸ್ತ್ರೀ ಪುರುಷರ ಅನೇಕ ರೋಗಗಳ ಮೇಲೆ ಗುಣ ಕಾರಿಯೂ ವೃದ್ಧ ಮೇಹ ವಿಕಾರಯುಕ್ತವರಿಗೂ, ನಿದ್ರೆ ಇಲ್ಲದವರಿಗೂ, ಸ್ವಪ್ನೇಂದ್ರಿಯವಾಗುವ ಬಾಲಕರಿಗೂ, ಜ್ಞಾನಿ ಮುಮುಕ್ಷುಗಳಿಗೂ ಉಪಯೋಗವುಳ್ಳ ಬಹು ಪರಮಾನಂದ ಔಷಧಿ 1ಸೇರು 48ದಿವಸ ಸೇವಿಸಬಹುದು. ನಂ (1) 1ಸೇರು ಡಬ್ಬಿ 1ಕ್ಕೆ ರುಪಾಯಿ 3—0—0. ½ಸೇರು ಡಬ್ಬಿ 1ಕ್ಕೆ ರುಪಾಯಿ 1—9—0. ನಂ. (2) 1ಸೇರು ಡಬ್ಬಿ 1ಕ್ಕೆ ರುಪಾಯಿ 2—0—0, ½ ಸೇರು ಡಬ್ಬಿ 1ಕ್ಕೆ 1—1—0. ವಿ ಪಿ ಖರ್ಚು ಪ್ರತ್ಯೇಕ. ವಿಶೇಷ ಮಾಹಿತಿಗೆ ಬರೆಕೊಳ್ಳಿರಿ

ವಿಳಾಸ—ದೇವಣ್ಣ ನಾರಾಯಣಸೇಟ್,

ಗೋರಕಟ್ಟಾ,

ಮಂಗಳೂರು,

52—22 ದ. ಕ

ಕರ್ಣಾಟಕ

ಚಳಿಜ್ವರ, ಮಲೇರಿಯ ಜ್ವರ, ಇನ್‌ಫ್ಲುಯೆಂಝಾ ಅಥವಾ ಜ್ವರ, ಮೊದಲಾದವುಗಳ ಮೇಲೆ ಅಪ್ರತಿಮವಾದ ಔಷಧವು

ಚಿಕ್ಕ ಬಾಟ್ಲಿಯೊಂದಕ್ಕೆ ರು. ೦—೧೪—೦

ಟಪ್ಪಾಲು ಖರ್ಚು ಬೇರೆ

ಡಜನ್ ಬಾಟ್ಲಿಗಳಿಗೆ ಟಪ್ಪಾಲುವೆಚ್ಚ ಸಹ ರು. ೯—೨—೦

ಏಜಂಟರು ಬೇಕು. ಕೊಡಗಿನ ಸಬ್ಇನ್ಸ್‌ಪೆಕ್ಟರುಗಳು ತಮ್ಮೂರಿನ ಮೂರು ಜನ ಔಷಧದ ವ್ಯಾಪಾರಿಗಳ ಹೆಸರನ್ನು ತಿಳಿಸಿದಲ್ಲಿ ಅಂದವಾದ ಬ್ಲಾಟಿಂಗ್ ಪೇಪರು ಧುಕ್ಕಟೆ.

12—1 ಕರ್ಣಾಟಕ ಬ್ರದರ್ಸ್,

ಗಿರಗಾಂವ, ಮುಂಬಾಯಿ.

ಇದು ಒಳ್ಳೆ ಸಮಯ!

ಹಂಚುಗಳು.

ಈಗಾಗಲೇ ವಿರಾಜಪೇಟೆಯಲ್ಲಿ ಸಾಚಾಕಾದ ಎಲ್ಲಾ ತರದ ಹಂಚುಗಳು ಅಂದರೆ, ಹಂಚು, ಮಾಳಿಗೆ ಹಂಚು, ಸಾಲಿಹಂಚು, ಹೊಗೆಹಂಚು, ನೆಲಹಂಚು, ವಗೈರೆ ಎಲ್ಲಾ ಹಂಚುಗಳನ್ನು ಸ್ಟೋರ್‌ಮಾಡಲಾಗಿದೆ. ಕೂಡಲೇ ಹಂಚು ಬೇಕಾದವರು ವಿರಾಜಪೇಟೆಯಲ್ಲಿ ಈ ಕೆಳಗೆ ರುಜು ಮಾಡಿದವರ ಆಫೀಸಿಗೆ ಬರೆದುಕೊಳ್ಳಬಹುದು. ಅಲ್ಲದೆ ಹಂಚುಗಳ ಸ್ಯಾಂಪಲನ್ನು ಸಹ ನೋಡಬಹುದು. ಎಲ್ಲಾ ವಿವರಕ್ಕೂ, ಕ್ರಯಕ್ಕೂ, ಮತ್ತು ಷರತ್ತಿಗೂ ಈ ಕೆಳಗಿನವರಿಗೆ ದಯವಿಟ್ಟು ಬರೆದುಕೊಳ್ಳಿ.

ವಿರಾಜಪೇಟೆ ಕೆ. ಸಿ. ಚೆನ್ನಪ್ಪ,

12—5 ಖಾದಿ ಭಂಡಾರ.

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್, ಕೋ ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ.

		ರೂ.
ಶೇರ್ ಬಂಡವಾಳ	—	50,000
ವಸೂಲಾದ ಶೇರ್ ಮೊಬಲಗು	—	9890
ಜಮೂಬಂದ ಠೇವಣಾತಿ	—	90,600

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲಕೊಡತಕ್ಕದ್ದು.

ಒಂದು ವರ್ಷ ವಾಯಿದೆ ಅಥವ ಹೆಚ್ಚಿನ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ ರೂ. 6—4—0ರ ದರದಲ್ಲಿ ಬಡ್ಡಿ ದೊರೆಯುತ್ತೆ. ಕಡಿಮೆ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ 5ರ ಬಡ್ಡಿ ದೊರೆಯುತ್ತೆ.

ವರ್ಷಕ್ಕೊಂದಾವರ್ತಿ ಕೋ ಆಪರೇಟಿವ್ ರಿಜಿಸ್ಟ್ರಾರವರು ಲೆಕ್ಕ ಆಡಿಟು ಮಾಡುತ್ತಾರೆ.

ಪ್ರೆಸಿಡೆಂಟರು, ಟ್ರೆಜರರ್

ಕೊಡಂದೆರ ಕುಟ್ಟಯ್ಯನವರು, ಯಂ. ಭುಜಂಗರಾಯರು

ರಾಯ್ ಬಹದ್ದೂರ್ ಬಿ.ಎ., ಬಿ.ಎಲ್.

ಸೆಕ್ರಿಟರಿ

ಸಿ ಯನ್ ವೆಂಕಪ್ಪಯ್ಯನವರು, ಬಿ ಎ, ಬಿ ಎಲ್.

ತಾರೀಕು. 29—8—1925.

ಮಾರಾಟಕ್ಕೆ.

ಪೊನ್ನಂಪೇಟೆ ಪೋಲೀಸ್ ಔಟ್ ಪೋಸ್ಟ ವಗೈರೆ ಸಾಮಾನು ಮಾರಾಟಕ್ಕೆ ಇಟ್ಟಿರುವ ಮಹಡಿ ಮನೆ, ಅದರಲ್ಲಿರುವ ಪೂರ್ತಿ ಸಾಮಾನು ಮತ್ತು ಹೊರಮನೆ ಹಿತ್ತಲು ಸಮೇತ.

(2) ಪೊನ್ನಂಪೇಟೆ ದೊಡ್ಡ ಬೀದಿ ಬಜಾರಿನ ಪಕ್ಕದಲ್ಲಿ ವಾಸಕ್ಕೂ ಮತ್ತು ವ್ಯಾಪಾರಕ್ಕೂ ಯೋಗ್ಯವಾದ ಮಹಡಿ ಮನೆ ಮತ್ತು ಹೊರಮನೆಗಳು ಸಹ.

ಖಾಯಿಷ್‌ದಾರರು ಕ್ರಯ ಮೊಬಲಗೆ ಮತ್ತು ಹೆಚ್ಚಿನ ಸಂಗತಿಗೆ ಈ ಕೆಳಗಿನ ವಿಳಾಸಕ್ಕೆ ಬರೆಕೊಳ್ಳಬಹುದು.

U E Ahamed.
General Merchant &
Commission agent,

12—12 Ponnampett

೧೦೦೦ ರೂಪಾಯಿಗಳ ಬಹುಮಾನ.

ಲೋಕಪ್ರಸಿದ್ಧವಾದ ಸಾಲಂಮಿಸ್ರಿ ಮುರಬ್ಬಾ

ನಮ್ಮ ಟ್ರೇಡ್ ಮಾರ್ಕನ್ನು ನೋಡಿ ಈ ಔಷಧ ತೆಗೆದುಕೊಳ್ಳಿರಿ.

ಇದರ ಸೇವನೆಯಿಂದ ವೀರ್ಯವು ನೀರಿನಂತೆ ಇದ್ದರೂ, ಸ್ವಪ್ನೇಂದ್ರಿಯವಾದರೂ, ಸ್ತ್ರೀ ಸಂಘಕ್ಕೆ ಮೊದಲೇ ಸ್ಖಲನವಾದರೂ ಮೂತ್ರದೊಂದಿಗೆ ಹೋಗುತ್ತಿದ್ದರೂ ದೋಷರಹಿತವಾಗಿ ಶರೀರಕ್ಕೆ ಆರೋಗ್ಯವನ್ನೂ ಧಾರ್ಢ್ಯತೆಯನ್ನೂ ಆಯುಸ್ಸು, ಬಲ ತೇಜಸ್ಸು ಉಂಟು ಮಾಡುವದು. ಅಜೀರ್ಣ ಮಲಬದ್ಧತೆ, ಮೆದುಳಿನ ಬಲಹೀನತೆ, ಕೈಕಾಲು ಸೊಂಟ ನೋವುಗಳಿಗೆ ಇದು ದಿವ್ಯ ಔಷಧವು. ಈ ಸಾಲಂಮಿಸ್ರಿ ಎಂಬುವದು ಕಾಬೂಲ ಕಂದಾಹಾರ ಪ್ರಾಂತ್ಯದಲ್ಲಿ ಬೆಳೆಯುತ್ತದೆ.



ಈ ಔಷಧದಿಂದ ಗುಣಹೊಂದಿರುವ ಅನೇಕ ಮಹನೀಯರು ತಾವಾಗಿಯೇ ಅನೇಕ ದೇಶಗಳಿಂದಲೂ ಆಫ್ರಿಕ, ಬರ್ಮ, ಪಿನಾಂಗ್, ಸಿಂಗಪೂರ್, ಸಿಲೋನ್, ಬೊಂಬಾಯಿ, ಕಲ್ಕತ್ತ, ಮದ್ರಾಸು ಮತ್ತು ಇಂಡಿಯಾದೇಶದಲ್ಲಿ ಎಲ್ಲಾ ಸ್ಥಳಗಳಿಂದಲೂ ನಮಗೆ ಯೋಗ್ಯತಾ ಪತ್ರಿಕೆಗಳನ್ನು ಕಳುಹಿಸಿರುವರು. ಇವುಗಳ ನಕಲನ್ನು ಯಾರಾದರೂ ತರಿಸಿ ನೋಡಬಹುದು. ಇವುಗಳು ಸುಳ್ಳು ಎಂದು ನಿರ್ಧರಿಸಿದವರಿಗೆ ಮೇಲೆ ಕಂಡ ಬಹುಮಾನವು ಕೊಡಲ್ಪಡುತ್ತೆ. ನಾವು ಹಾಗೆ ಕೊಡದೇ ನಿರಾಕರಿಸಿದಲ್ಲಿ ಕೋರ್ಟು ಮೂಲಕ ಅದನ್ನು ಪಡೆಯಬಹುದು. ೧ ಡಬ್ಬವನ್ನು ೧೫ ದಿನ ಸೇವಿಸಿದಲ್ಲಿ ಗುಣವು ಖಂಡಿತವಾಗಿ ತೋರಬಹುದು. ೨ ಯಾ ೩ ಡಬ್ಬಿಗಳು ಜನ್ಮಾಂತ್ಯದವರೆಗೂ ಪೂರ್ಣವಾಗಿ ಗುಣವನ್ನುಂಟು ಮಾಡುವವು. ಹೆಸರು ವಿಳಾಸಗಳನ್ನು ವಿವರವಾಗಿ ಬರೆಯಬೇಕು. ಒಂದಾವರ್ತಿ ಅಜಮಾಯಿಸಿ ಮಾಡಿ ನೋಡಿದಲ್ಲಿ ಖಾತ್ರಿ ಉಂಟಾಗುತ್ತೆ.

ಕ್ರಯ ಡಬ್ಬಿ ೧ಕ್ಕೆ ರೂ ೨—೦—೦ ಅಂಚೆ ಖರ್ಚು ೧ರಿಂದ ೪ ಡಬ್ಬಿಗಳಿಗೆ ೦—೮—೦ ಆಣೆ. ಏಜಂಟರುಗಳು ಎಲ್ಲಾ ಸ್ಥಳಗಳಲ್ಲಿಯೂ ಅವಶ್ಯಕವಾಗಿರುತ್ತೆ. ರಿಜಿಸ್ಟರ್ ತರಿಸಿಕೊಳ್ಳಬಹುದು. ಆರ್ಡರು ಕೊಡತಕ್ಕ ಕಾಲದಲ್ಲಿ ಈ ಪತ್ರಿಕೆಯ ಹೆಸರನ್ನು ಬರೆಯಬೇಕು.

ಬೆಂಗಾಳೂರ್ ಆಫೀಸ್. }
ಮಿಸ್ರಿ ಬೆಂಗಳೂರು ಸಿಟಿ. }

ಡಿ. ಮುನ್ನಾಲಾಲ್, ದಿಲ್ಲಿ ನೇಟಿವ್ ವೈದ್ಯರು,
ಸಾಲಂಮಿಸ್ರಿ ಮುರಬ್ಬ ಡಿಪೋ,
ಬೆಂಗಳೂರು ಸಿಟಿ

12—10

Printed & published by Kodanda Appayya, R B, Chairman, Board of Directors, at "Kodagu" Press, Mercara for "Kodagu" Ltd

Reg. No. M. 1550.

If not delivered please return to

KODAGU OFFICE, MERCARA.

ಕೊಡಗು.

ವಾರ್ಷಿಕ ಚಂದಾ ರೂ. ೪

ಶಕ್ಯೇನ ಧೂಕರಯೋ ನ್ಯಾ ಸೀತಿ ಪ್ರಯುಕ್ತಿತಾ || ಐಕ್ಯಮತ್ಯೇನ ದೇಶಾನಾಂ ಸುಸ್ಥಿರಾ ರಾಜ್ಯ ಸಂಪದಾ ||

ಸಂಪಾದಕ—ಪಂದ್ಯಂಡ ಐ. ಬೆಳ್ಯಪ್ಪ.

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವದು.

ಸಂಪುಟ ೫] ಕೊಡಗು, ಸ್ವ ೧೯೨೬ನೇ ಇಸವಿ ಫೆಬ್ರುವರಿ ತಾರೀಖು ೫ನೇ ಶುಕ್ರವಾರ [ಸಂಚಿಕೆ ೩೪

ಒಂದೇ ಮೂರು ರೂಪಾಯಿಗಳಲ್ಲಿ!

ಟಿಕ್=ಟಾಕ್ (ರಿಜಿಸ್ಟರ್ಡ್).

ಎಂಬ ಗಡಿಯಾರವನ್ನು ನಿಮಗೆ ಪ್ರಾರ್ಥಿಸುತ್ತೇವೆ. ಇದು ಕರಾರು ಗಂಟೆಯನ್ನು ತೋರಿಸುವದು ಇದಕ್ಕೆ ಬೀಗ ಕೊಡಬೇಕಾಗಿಲ್ಲ. ಇದರಲ್ಲಿ ತಾಗುತ್ತಿರುವ ಗುಂಡನ್ನು ಮೇಲಕ್ಕೇರಿದರೆ ಸಾಕು ತನ್ನಷ್ಟಕ್ಕೆ ತಾನೇ ಸರಿಯಾದ ಕಾಲವನ್ನು ತೋರಿಸುವದು ಇವತ್ತೇ ತರಿಸಿಕೊಳ್ಳಿರಿ.



ನಮ್ಮ ಸ್ಪೆಷಲ್ "ಕ್ರಿಸ್ಮಸ್" ಹಬ್ಬದ ಮಾರಾಟ

ಪ್ರಾರಂಭ ತಾ. 1ನೇ ಜನವರಿ 1926.

ಕಡೆ ತಾ. 5ನೇ ಮಾರ್ಚ್ 1926.

"ಕೊಡಗು" ಚಂದಾದಾರರಿಗೆ ಮಾತ್ರ

ಎಲ್ಲಾ ವಾಚುಗಳಿಗೂ ಜಾಮೀನು ಐದು ವರುಷಗಳು

22 ಕ್ಯಾರೆಟ್ ರೋಲ್ಡ್ ಗೋಲ್ಡ್ ಕೈಗೆ ಕಟ್ಟಿಕೊಳ್ಳುವ ಗಡಿಯಾರಗಳು



No. 515. Rs. 10. No. 511. Rs. 11.

No. 507. Rs. 12. No. 518. Rs. 10.

No. 519. Rs. 9. No. 56, Rs. 10.

ಸರ್ವೋತ್ತಮ, ಬಹಳ ಅಗ್ಗ, ಅಚ್ಚುಕಟ್ಟಾದ ಕೈ ಗಡಿಯಾರುಗಳು

ಧೃಗಪಟ್ಟಿ ಕೊಡುವದು ಪ್ರತಿ ಒಂದು ವಾಚಿನ ಕೂಡ ಒಂದು ಫೌಂಟನ್ ಪೆನ್ ಮತ್ತು ಮೇಲಾದ ರೇಷ್ಮೆ ಪಟ್ಟಿ ಬಿಟ್ಟಿ ಕಳುಹಿಸುವೆವು. ಈಗಲೇ ಬರೆಯಿರಿ.

ಪೀಟರ ವಾಚ್ ಕಂಪೆನಿ,

ಪೋಸ್ಟ್ ಬಾಕ್ಸ ನಂಬರ 27

12-2 ಮದ್ರಾಸ್.

ಪ್ರಕಟಣೆ.

ಒಂದು ಕಡೆ ಇಂಗ್ಲೀಷಿನಲ್ಲಿಯೂ, ಇನ್ನೊಂದು ಕಡೆ ಕನ್ನಡದಲ್ಲಿಯೂ ಪ್ರಿಂಟಾಗಿರುವ ಕಾಫಿ ತೋಟದ ಆಳುಗಳ ದ್ವಿಭಾಷಾ ಕಂಟ್ರಾಕ್ಟು ಎಗ್ರಿಮೆಂಟ್ ಫಾರಮುಗಳೂ ಮತ್ತು ಕಂಪ್ಲೇಂಟ್ (complaint) ಫಾರಂಗಳೂ ಹೊಸ ಮಾರಾಟಕ್ಕೆ ತಯಾರಿವೆ. ಬೇಕಾದವರು 'ಕೊಡಗು' ಆಫೀಸಿನಿಂದ ಪಡೆಯಬಹುದು.

ಮಡಿಕೇರಿ ಮೇನೇಜರ್,

MOTOR DEPARTMENT.

Spare parts for Motor cars supplied at a short notice.

TYRES:—

Dunlop cord 30 X 3½	Rs	61–0–0.	
Michelin „ „	„	61–0–0	
Tubes „ „	„	12–0–0.	

OILS:—

Gargoyle Mobil oil	A	per gallon	Rs	5– 0–0	
„ „	B	„	„	5–12–0.	
„ „	BB	„	„	5–12–0	
„ „	C	„	„	4– 4–0.	
„ „	E	„	„	5– 0–0	
„ Lubricant 4 oz tin			„	2– 8–0.	
„ Mobil oil in 4 gallon tins			„	4– 8–0.	per gallon

GET IT AT SPENCERS.

Spencer & Co. Ltd,

MERCARA,& POLLIBETTA.

??-14

ಮಹನೀಯರೇ,

1923ನೆ ಇಸವಿಯಲ್ಲಿ ವೀರರಾಜೇಂದ್ರಪೇಟೆಯಲ್ಲಿ ತೆರೆದ ನಮ್ಮ ವೈದ್ಯಶಾಲೆಯು ಶಾಖೆಯಲ್ಲಿ ಅನೇಕ ದುಸ್ಸಾಧ್ಯವಾದ ಕಾಯಿಲೆಗಳನ್ನು ಗುಣಪಡಿಸಿ ಹೆಸರುವಾಸಿ ಹೊಂದಿದ ನಮ್ಮ ಕಂಪನಿಯ ಮತ್ತೊಂದು ಶಾಖೆಯು ಈಗಾಗಲೇ **ಸೋಮವಾರಪೇಟೆಯಲ್ಲಿ** ತೆರೆಯಲ್ಪಟ್ಟಿದೆ.

ಕೃಷ್ಣ ಸಂಬೀಶನ್ ಮತ್ತು ನಾರಾಯಣ ಸಂಬೀಶನ್ ಎಂಬ ಹೆಸರುಗಳುಳ್ಳ ನಮ್ಮ ಪ್ರಧಾನ ವೈದ್ಯರುಗಳು ಒಬ್ಬೊಬ್ಬರು ಒಂದೊಂದು ಶಾಖೆಯಲ್ಲಿ ಯಾವಾಗಲೂ ಇರುತ್ತಾರೆ.

ಆ ವೈದ್ಯರುಗಳು ಇಂಡಿಯಾ ಚಕ್ರವರ್ತಿಯವರಿಂದ ಸ್ವರ್ಣಪದಕವನ್ನು ಪಡೆದವರಾಗಿಯು ಕೊಚ್ಚಿ ಸಂಸ್ಥಾನದ ರಾಜವಂಶದ ಸ್ಥಿರ ವೈದ್ಯರಾಗಿಯೂ ಸುಪ್ರಸಿದ್ಧ ಹೆಸರುವಾಸಿಯನ್ನು ಪಡೆದವರಾಗಿರುವ ಇ. ಟಿ ನಾರಾಯಣ ಮೂಸ್ ಎಂಬ ಮಹಾನುಭಾವರ ಕೈಕೆಳಗೆ ಹತ್ತು ವರ್ಷಗಳದ್ದು ಪಾಂಡಿತ್ಯವನ್ನು ಪರಿಚಯವನ್ನು ಪಡೆದವರಾಗಿಯೂ ಇದ್ದಾರೆ.

ಇವರಲ್ಲಿನ ಎಲ್ಲಾ ಔಷಧಿಗಳಿಗೆ ಮಲಬಾರಿನ ಎಲ್ಲಾ ವೈದ್ಯಶಾಲೆಗಳ ಔಷಧಗಳ ಚಾರ್ಜಿಗಿಂತಲೂ ಕಡಿಮೆಯಾಗಿದೆ.

ನಂಬೀಶನ್ ಮತ್ತು ಕಂಪೆನಿ,

ಆಯುರ್ವೇದಿಕ್ ಪ್ರೈವೇಟ್ ಡಿಸ್ಪೆನ್ಸರಿ.

ಕಲ್ಲುಗುಡು, ವೀರರಾಜಪೇಟೆ ಮತ್ತು

52 45 ಸೋಮವಾರಪೇಟೆ.

ಪ್ರಕಟಣೆ.

ನಮ್ಮ ಅಂದವಾದ ಹೊಸ ಅಕ್ಷರಗಳು ಬಂದು ತಲುಪಿದ್ದುದರಿಂದ, 'ಲೆಟರ ಹೆಡ್ಸ್' 'ವಿಸಿಟಿಂಗ ಕಾರ್ಡ್ಸ್' ಆಮಂತ್ರಣಗಳು (ಇನ್ವಿಟೇಶನ್) ಮೊದಲಾದ ಪ್ರಿಂಟಿಂಗ್ ಕೆಲಸಗಳನ್ನು ಇಂಗ್ಲೀಷ್ ಮತ್ತು ಕನ್ನಡದಲ್ಲಿ ಅಂದವಾಗಿಯೂ ಕಡಿಮೆ ಚಾರ್ಜಿನಲ್ಲಿಯೂ ನಿಯಮಿತ ಕಾಲದಲ್ಲಿಯೂ ಮಾಡಿಕೊಡಲು ತಯಾರಾಗಿದ್ದೇವೆ.

ಮಡಿಕೇರಿ. ಮೇನೇಜರ್,

'ಕೊಡಗು' ಲಿಮಿಟೆಡ್

ಆಂಧ್ರ ಆಯುರ್ವೇದಿಕ್ ಫಾರ್ಮಸಿ.

ಬ್ರಾಂಚ್, ಬೆಂಗಳೂರು ಸಿಟಿ.

ಚ್ಯವನಪ್ರಾಶ ಲೇಹ.

ಇದು ಸರ್ವೋತ್ಕೃಷ್ಟವಾದ ಗಿಡಮೂಲಿಕೆಗಳಿಂದ ತಯಾರಿಸಲ್ಪಟ್ಟ ಆಯುರ್ವೇದ ರಸಾಯನೌಷಧವು ವಿದ್ಯಾರ್ಥಿಗಳೂ ವಿಶೇಷವಾಗಿ ಬುದ್ಧಿಯನ್ನು ಪ್ರಯೋಗಿಸಿ ಕೆಲಸ ಮಾಡುವವರೂ ಈ ಲೇಹವನ್ನು, ಸೇವಿಸಿದರೆ ವಿಶೇಷವಾಗಿ ಬುದ್ಧಿಶಕ್ತಿಯನ್ನೂ ಜ್ಞಾಪಕಶಕ್ತಿಯನ್ನೂ ಹೊಂದುವರು

ದೀರ್ಘಕಾಲದ ವ್ಯಾಧಿಯಿಂದಾಗಲೀ, ಕೆಟ್ಟ ನಡತೆಯಿಂದಾಗಲೀ, ಸ್ವಾಭಾವಿಕ ಶಕ್ತಿಯು ಕುಂದಿದ್ದರಿಂದಾಗಲೀ ಶರೀರ ಕಾಂತಿಯು ಕುಂದಿ ರಕ್ತ ಕೆಟ್ಟು ಇಂದ್ರಿಯ ದೌರ್ಬಲ್ಯವೇ ಮೊದಲಾದ ವಿಕಾರಗಳಿಂದ ಪೀಡಿತರಾಗಿರುವವರು ಈ ಲೇಹವನ್ನು ಸೇವಿಸಿದರೆ ಈ ತರದ ವಿಕಾರಗಳನ್ನೆಲ್ಲಾ ಪರಿಹರಿಸಿ ದೇಹಕ್ಕೂ ಮನಸ್ಸಿಗೂ ಉಲ್ಲಾಸವನ್ನುಂಟುಮಾಡಿ ಮಾಂಸ ಖಂಡಗಳಿಗೂ ನರಗಳಿಗೂ ಬಲವನ್ನು ಕೊಟ್ಟು ದೇಹಪುಷ್ಟಿಯನ್ನುಂಟುಮಾಡಿ ನವಚೈತನ್ಯವನ್ನುಂಟುಮಾಡುವುದು. ಅಲ್ಲದೆ ಆರೋಗ್ಯವುಳ್ಳವರು ಯೌವನಸ್ಥರಾಗಿ ದೀರ್ಘಕಾಲ ಬದುಕುವರು. ಕೆಮ್ಮು ಉಬ್ಬಸ ವ್ಯಾಧಿಯುಳ್ಳವರಿಗೂ ಮುಖ್ಯವಾಗಿ ಕ್ಷಯರೋಗಿಗಳಿಗೂ ಇದು ಸಂಜೀವಿನಿಯೇ ಸರಿ. ಚರಕ ಸಂಹಿತೆಯಲ್ಲಿ ಇದರ ಗುಣವು ಅದ್ಭುತವಾಗಿ ಹೇಳಲ್ಪಟ್ಟಿದೆ. ೧೦ ತೊಲೆಗೆ ೧ ರೂಪಾಯಿ. ೪೦ ತೊಲೆಗೆ ೩ ರೂಪಾಯಿ.

ಎಲ್ಲಾ ಕಡೆಯಲ್ಲಿಯೂ ಏಜಂಟರು ಬೇಕು.

ಸಾಧಾರಣವಾಗಿ ಶಾಸ್ತ್ರೀಯವಾದ ಎಲ್ಲಾ ಔಷಧಗಳೂ ಹೇರಳವಾಗಿ ಮಾರಲ್ಪಡುತ್ತವೆ. ಆಯುರ್ವೇದ ಧುರೀಣ ಕೆ. ನಾರಾಯಣ ರಾವ್ ಎಲ್. ಎಂ. ಎಸ್. ಇವರು ರೋಗಿಗಳನ್ನು ಪರೀಕ್ಷಿಸಿ ತಕ್ಕ ಚಿಕಿತ್ಸೆಯನ್ನು ಉಚಿತವಾಗಿ ನಡಿಸುವರು. ವಿಶೇಷ ಸಂಗತಿ ತಿಳಿಯುವುದಕ್ಕೆ ಬರೆಯಿರಿ.

ಟಿ. ಸಿ. ಎಸ್. ಮುನಿಯಂ ಅಂಡ್ ಕೋ,

ಮ್ಯಾನೇಜಿಂಗ್ ಏಜಂಟ್ಸ್, ಆಂಧ್ರ ಆಯುರ್ವೇದಿಕ್ ಫಾರ್ಮಸಿ,

10—1 ೬೬. ಚಿಕ್ಕಪೇಟೆ, ಬೆಂಗಳೂರು ಸಿಟಿ.

"ಕೊಡಗು"

ಸನ್ ೧೯೨೬ನೇ ಇಸವಿ ಫೆಬ್ರುವರಿ ತಾ. ೫ನೇ ಶುಕ್ರವಾರ.

ಬ್ರೀಚ್ ಆಫ್ ಕಂಟ್ರಾಕ್ಟ್ ಆಕ್ಟು.

ಈ ಆಕ್ಟನ್ನು ಕುರಿತ ಬಿಲ್ಲಿನ ವಿಷಯ ನಾವು ಬರೆದಂದಿನಿಂದಿಚೆಗೆ ಇದಕ್ಕೆ ದೇಶದವರು ತುಂಬಾ ಗಮನ ಕೊಟ್ಟಿರುವರು. ಮಡಿಕೇರಿಯ ಕೆಲವು ಪ್ಲಾಂಟರುಗಳೂ, ಜಮೀನ್ದಾರರ ಸಂಘದ ಕಾರ್ಯ ನಿರ್ವಾಹಕ ಕಮಿಟಿಯೂ, ಕೌನ್ಸಿಲಿನ ಸಿಲೆಕ್ಟ್ ಕಮಿಟಿಯೂ ಈ ಬಿಲ್ಲನ್ನು ಸಕ್ಷನ್ವಾರು ಚರ್ಚಿಸಿ ಬದಲಾವಣೆಗಳನ್ನು ಸೂಚಿಸಿದ್ದಲ್ಲದೆ ಜಮೀನ್ದಾರರ ಸಂಘದ ವಿಶೇಷ ಜನರಲ್ ಮೀಟಿಂಗೊಂದು ಜನವರಿ ತಾರೀಕು 30ರಲ್ಲಿ ವೀರರಾಜಪೇಟೆಯಲ್ಲಿ ಸೇರಿ ಈ ಆಕ್ಟು ಅವಶ್ಯವಿಲ್ಲವಾಗಿ ಅದನ್ನು ರದ್ದು ಮಾಡಬೇಕೆಂದು ನಿರ್ಣಯ ಮಾಡಲಾಯಿತು. ಈ ಆಕ್ಟಿನ ಮಸೂದೆಯನ್ನು ಕುರಿತು ನಾವು ತಾ 8—1—26ರಲ್ಲಿ ಬರೆದಾಗ ಇದರಲ್ಲಿ 'ಮಾಲೀಕರಿಗೆ ಕೇಡಾಗುವ ಅನೇಕ ಸಕ್ಷನ್‌ಗಳಿರುವುದರಿಂದ ಸಾಕಾಗಿದೆ. ಇಂದಾ ಆಕ್ಟೇ ಬೇಡವೆನ್ನುವ ಜನರೂ ದೇಶದಲ್ಲಿ ಅನೇಕರಿದ್ದಾರೆ. ಅವರ ಅಭಿಪ್ರಾಯವನ್ನೇ ದೇಶದವರೆಲ್ಲರೂ ಅನುಸರಿಸುವ ಸಂಭವವು ಕಾಣುತ್ತದೆ' ಎಂದು ಸೂಚಿಸಿದ್ದೆವು. ನಮ್ಮ ಊಹನೆಯು ಈಗ ನಿಜವಾಗಿ ಪರಿಣಮಿಸಿದೆ. ವೀರರಾಜಪೇಟೆಯಲ್ಲಿ ನಡೆದಿದ್ದ ಜಮೀನ್ದಾರರಲ್ಲಿ ಬಹುಮತದವರು ಸಂಘದ ಸಭೆಯಲ್ಲಿ ಆಕ್ಟು ಬೇಡವೆಂದು ವಾದಿಸಿದ್ದ ಮ್ಯಾನೇಜರಿಯವರ ಅಭಿಪ್ರಾಯಕ್ಕೆ ಒಪ್ಪಿಗೆ ಕೊಟ್ಟರು.

ಹೀಗೆ ಜಮೀನ್ದಾರರ ಸಂಘದ ಅಭಿಪ್ರಾಯವು ಬದಲಾದದ್ದು ಆಶ್ಚರ್ಯಕರವೆಂದು ಕೆಲವರು ಹೇಳಬಹುದು. ಆದರೆ ಕಾಲವು ಮುಂದುವರಿಯುತ್ತಾ ಬಂದಹಾಗೆ ಅಭಿಪ್ರಾಯಗಳು ಸುಧಾರಿಸುವುದನ್ನು ಹೊಂದುವುದು ಸ್ವಾಭಾವಿಕವೂ ನ್ಯಾಯಸಮ್ಮತವೂ ಆಗಿದೆ. ಆದುದರಿಂದ ಇದರಲ್ಲಿ ವಿಶೇಷವೇನೂ ಇಲ್ಲ. ಆದರೆ ಕೂಲಿಗಾರರ ಸ್ವಾತಂತ್ರ್ಯಕ್ಕಾಗಿ ಈ ಆಕ್ಟನ್ನು ರದ್ದು ಮಾಡಬೇಕೆಂಬ ಉತ್ತಮ ಉದ್ದೇಶದಿಂದಲೇ ಬಹುಮತದವರು ಈ ಬಿಲ್ಲಿಗೆ ವಿರೋಧಿಸಿದರೆಂದು ಹೇಳಲಾಗುವುದಿಲ್ಲ. ಹಾಗೆ ವಿರೋಧಿಸಿ ಮಾತಾಡಿದವರಲ್ಲಿ ಹಲವರು ಈಗಿನ ಬಿಲ್ಲಿನ ಸಕ್ಷನುಗಳು ಯಜಮಾನರಿಗೆ ಬಹು ಕಷ್ಟತರವಾಗಿವೆಯೆಂದೂ ಸರಕಾರಿ ಉದ್ಯೋಗಸ್ಥರ ಮರ್ಜಿಯಂತೆ ಇರಬೇಕಾಗುವುದೆಂತಲೂ, ಆಕ್ಟಿನ ಸಕ್ಷನುಗಳನ್ನನುಸರಿಸಿ ನಡೆಯದೆ ಹೋದರೆ ಕೂಲಿಯವನಿಗೆ ಎಂದು ಆಕ್ಷೆಯಾದರೆ ಯಜಮಾನನಿಗೆ ಮೂರು ಶಿಕ್ಷೆಯಾಗುವುದೆಂದೂ, ಹೇಗೂ ಈ ಆಕ್ಟನ್ನು ಬದಲು ಮಾಡಿದ ನಂತರ ರದ್ದು ಮಾಡಿ ಪ್ರರಿಂದ ಅದರ ರದ್ದಾತಿಯಿಂದ ಬರತಕ್ಕ ತೊಂದರೆಗಳನ್ನು ಈಗಲೇ ಅನುಭವಿಸುವುದು ಉತ್ತಮ ವೆಂತಲೂ ಮುಖ್ಯವಾಗಿ ವಾದಿಸಿದರು. ಈ ಕಾರಣಗಳೆಲ್ಲಾ ಧನಿಕರ ಹಿತವನ್ನು ಮಾತ್ರ ಗಣನೆಗೆ ತೆಗೆದುಕೊಂಡವು ಎನ್ನಬಹುದೆಂದು ತೋರಬಹುದು.

ಆಕ್ಟಿಗೆ ಪಕ್ಷಪಾತಿಯಾಗಿದ್ದವರು ಈ ಆಕ್ಟಿಗೆ ವಿರೋಧಿಸುವುದು ಸಹಜವಾಗಿದೆ. ದಿನಂಪ್ರತಿ ದುಡಿದು ತಿನ್ನುವವರ ಸ್ವತಂತ್ರಕ್ಕೆ ಭಂಗತರುವ 19ನೇ ಸಕ್ಷನುಗಳಿಂದ ಕರಡ್ಯಗಳು ಆವಶ್ಯವಾಗಿಯೂ ಹೋಗಬೇಕೆಂದು ನಾವು ಹಿಂದಲೇ ಸೂಚಿಸಿದ್ದೇವಷ್ಟೆ. ಆದರೆ ಕೌನ್ಸಿಲಿನ ಸಿಲೆಕ್ಟ್ ಕಮಿಟಿಯವರ ಚರ್ಚೆಯಾದನಂತರ ಇಂಥಾ ಆಕ್ಷೇಪಕರವಾದ ಸಕ್ಷನುಗಳನ್ನು ರದ್ದು ಮಾಡಲಾಗುವುದಿಲ್ಲವೆಂದು ತಿಳಿಯಬಂದ ಕಾರಣ ಈ ಬಿಲ್ಲಿಗೆ ವಿರೋಧಿಸಬೇಕೆಂದು ಕೆಲವರು ಮಾತಾಡಿದರು. ಇವರ ವಾದದಲ್ಲಿ ಹುರುಳು ಇದೆ ಎಂಬುದರಲ್ಲಿ ಸಂಶಯವಿಲ್ಲ. ಬಿಲ್ಲಿನಲ್ಲಿ ನೌಕರರಕ್ಷೇಮವನ್ನು ಕಾಯುವಂಥ ಕೆಲವು ಸಕ್ಷನುಗಳೇನೋ ಇರುವುದು ನಿಜ. ಆದರೆ ಈ ಸಕ್ಷನುಗಳನ್ನು ಬರಿಗೆ ತರುವುದು ದೊಡ್ಡ ಉದ್ಯೋಗಸ್ಥರ ಇಚ್ಛೆಗೆ ಬಿಡಲಾಗಿದೆ. ಆಳುಗಳ ಕ್ಷೇಮವನ್ನು ಎಣಿಸಿ ಅವರ ಪರವಾಗಿ ಆಕ್ಟನ್ನು ರದ್ದು ಪಡಿಸಲಿಕ್ಕೆ ಹೋರಾಡುತ್ತಿರುವ ಇಂಪೀರಿಯಲ್ ಕೌನ್ಸಿಲಿನ ಮೆಂಬರುಗಳನ್ನು ತೃಪ್ತಿಪಡಿಸಲಿಕ್ಕೆ ಮಾತ್ರ ಈ ಶರತ್ತು ಇಡಲ್ಪಟ್ಟಿವೆಯಲ್ಲದೆ ಇವುಗಳಿಂದ ನೌಕರರಿಗೆ ಹೆಚ್ಚಿನ ಪ್ರಯೋಜನವಾಗಲಾರದೆಂದು ಹಲವರ ಭಾವನೆ. ಸಿಂಹಳ ದ್ವೀಪದಲ್ಲಿ ಇಂಥಾ ಸಕ್ಷನುಗಳಿಂದ ಮಾಲೀಕರಿಗೂ ಕೂಲಿಯವರಿಗೂ ತುಂಬಾ ತೊಂದರೆಯುಂಟಾಗಿದೆಯೆಂತೆ. ಆಳುಗಳಿಗೆ ವಸತಿಗಿರುವ ಮನೆಗಳು, ಆರೋಗ್ಯದ ಏರ್ಪಾಡು ಮೊದಲಾದವುಗಳು ಅವರ ಇಚ್ಛಾನುಸಾರ ಮಾಡಿಕೊಟ್ಟರೇನೇ ಅವರಿಗೆ ತೃಪ್ತಿ ಮತ್ತು ಸುಖಕರವಲ್ಲದೆ ಈಗಿನ ಆರೋಗ್ಯದ ಆಫೀಸರುಗಳ ಅಭಿಪ್ರಾಯಗಳನ್ನು ಬಲತ್ಕಾರದಿಂದ ಜಾರಿಗೆ ತಂದರೆ ಅವರಿಂದ ಅವರಿಗೆ ತೊಂದರೆಯಲ್ಲದೆ ಮತ್ತೇನು? ಆದ ದರಿಂದ ನೌಕರರ ಪಕ್ಷವೆತ್ತಿ ಮಾತಾಡುವುದಾದರೆ ಈ ಸ್ಥಿತಿಯಲ್ಲಿ ಅವರ ಸಹಾಯಕ್ಕಾಗಿ ಕೆಲವು ಸಕ್ಷನುಗಳಿದ್ದರೂ ಹಿತಚಿಂತಕರು ಯೋಚಿಸುವಷ್ಟು ಪ್ರಯೋಜನವು ದೊರೆಯುವುದು ಸಂಶಯಾಸ್ಪದವಾದ ಕಾರಣ ಆಕ್ಟನ್ನೇ ರದ್ದುಮಾಡಿ ನೌಕರರಿಗೆ ಸ್ವಾತಂತ್ರ್ಯ ಕೊಡುವುದು ಯೋಗ್ಯವಾಗಿದೆ.

ಕೂಲಿಕಾರರ ಪಕ್ಷದವರೂ ಮಾಲೀಕರ ಪಕ್ಷದವರೂ ಆಯಾಯ ವರ್ಗದವರಿಗೆ ಸಮ್ಮಂಧಿಸುವ ಕಠಿಣ ಸಕ್ಷನುಗಳಿರುವುದರಿಂದ ಈ ಬಿಲ್ಲಿಗೆ ವಿರೋಧಿಸಿದರು. ವೀರರಾಜಪೇಟೆ ಮೀಟಿಂಗಿನಲ್ಲಿ ಆಕ್ಟನ್ನು ಒಮ್ಮೆಲೇ ರದ್ದುಪಡಿಸುವ ಬದಲಾಗಿ ಸಕ್ಷನುವಾರು ಚರ್ಚಿಸಿ ತಮ್ಮ ತಮಗೆ ಬೇಕಾದ ಬದಲಾವಣೆಗಳನ್ನು ಸೂಚಿಸಿ ಆ ಪ್ರಕಾರ ಬದಲಾವಣೆಗಳನ್ನು ಸರ್ಕಾರದವರು ಒಪ್ಪಿಕೊಳ್ಳದೆ ಹೋದರೆ ಬಿಲ್ಲಿಗೆ ವಿರೋಧವಾಗಿ ಓಟು ಕೊಡುವಂತೆ ದೇಶದ ಪ್ರತಿನಿಧಿ ಕೌನ್ಸಿಲು ಮೆಂಬರುಗಳನ್ನು ಕೇಳಿಕೊಳ್ಳಬಹುದಾಗಿತ್ತು. ಇದು ನ್ಯಾಯವಾದ ದಾರಿಯಾಗಿತ್ತು. ಅಲ್ಲದೆ ಸರ್ಕಾರದವರು ಈಗಿನ ಬಿಲ್ಲಿನಲ್ಲಿ ಯಾವ ಬದಲಾವಣೆಗಳನ್ನೂ ಮಾಡಲು ಒಪ್ಪಲಿಕ್ಕಿಲ್ಲವೆಂದು ಕೆಲವರ ಮಾತನ್ನು ಗಂದಿ ಬಿಲ್ಲನ್ನು ಪೂರ್ತಿ ವಿರೋಧಿಸಿದ್ದು ಸ್ವಲ್ಪ ದುಡುಕಿದಂತಾಯಿತೆಂದು ನಮಗೆ ತೋರುತ್ತದೆ.

ಜಮೀನುದಾರರು ಹೀಗೆ ಅವಸರದಿಂದ ಬಿಲ್ಲನ್ನು ವಿರೋಧಿಸಲು ಇನ್ನೊಂದು ಕಾರಣವಿತ್ತೆಂದು ಹೇಳಬಹುದು. ಈ ಬಿಲ್ಲನ್ನು ಜಮೀನ್ದಾರರು ತಿರಸ್ಕರಿಸಿದರೆ ಮದ್ರಾಸಿನಲ್ಲಿ ಜಾರಿಯಲ್ಲಿರುವ ಲೇಬರ್ ಆಕ್ಟನ್ನು ಇಲ್ಲಿಯ ಪ್ಲಾಂಟರುಗಳ ಪ್ರಯೋಜನಾರ್ಥವಾಗಿ ಸ್ವೀಕರಿಸಿ ಸರ್ಕಾರದವರು ಜಾರಿಗೆ ತರುವಂತೆ ಹುಕುಂ ಮಾಡುವರೆಂದು ಕೌನ್ಸಿಲಿನ ಮತ್ತು ಸಿಲೆಕ್ಟ್ ಕಮಿಟಿಯ ಚರ್ಚೆಗಳಾದನಂತರ ತಿಳಿಯಬಂದಿದೆಯೆಂಬುದಾಗಿಯೂ, ಆದುದರಿಂದ ಜನರು ತುಂಬಾ ಯೋಚನೆಮಾಡಿ ಆಕ್ಟಿನ ವಿಷಯ ತಮ್ಮ ಅಭಿಪ್ರಾಯ ಕೊಡಬೇಕೆಂದೂ ಒಪ್ಪಿಚ್ಛೆ ಮೆಂಬರುಗಳು ಕೇಳಿಕೊಂಡವರ ಮೇಲೆ ಮದ್ರಾಸು ಲೇಬರ್ ಆಕ್ಟನ್ನು ರದ್ದು ಮಾಡಲು ಒಂದು ಕಮಿಟಿಯು ನೇಮಕವಾಗಿದೆಯೆಂದೂ, ಮದ್ರಾಸು ಆಕ್ಟನ್ನು ಇಲ್ಲಿ ಜಾರಿಗೆ ತರುವಂತೆ ಸರ್ಕಾರದವರು ಎಂದಿಗೂ ಹುಕುಂ ಮಾಡಕೂಡದೆಂತಲೂ ಆದುದರಿಂದ ಪ್ಲಾಂಟರುಗಳಿಗೆ ಮಾತ್ರ ಲೇಬರ್ ಆಕ್ಟಿನ ಪ್ರಯೋಜನ ದೊರೆತ. ಜಮೀನುದಾರರಿಗೆ ತೊಂದರೆಯಾಗುವುದೆಂಬ ಕಾರಣವು ನಿಜವಲ್ಲವೆಂತಲೂ ಇನ್ನೊಬ್ಬ ಕೌನ್ಸಿಲು ಮೆಂಬರರು ಹೇಳಿದ್ದರ ಮೇಲೆ ಹೆಚ್ಚು ಜನರು ಇದೀ ದೇಶಕ್ಕೇನೇ ಬ್ರೀಚ್ ಆಫ್ ಕಂಟ್ರಾಕ್ಟ್ ಆಕ್ಟು ರದ್ದಾಗುವದೆಂಬ ಭರವಸೆಯಿಂದ ಬಿಲ್ಲು ಬೇಡವೆಂದು ನಮ್ಮ ತರ್ಕಕ್ಕೆ ಬಿದ್ದಾಗಿದೆಯೆಂದು ತಿಳಿಯಬರುತ್ತದೆ. ಜನರ ಈ ಭರವಸೆಯು ಎಷ್ಟರ ಮಟ್ಟಿಗೆ ನಿಜವಾಗುವುದೆಂದು ಹೇಳಲಾಗುವುದಿಲ್ಲ. ಮದ್ರಾಸು ಆಕ್ಟಿನ ಉಪಯೋಗವು ಪ್ಲಾಂಟರುಗಳಿಗೆ ಮಾತ್ರ ದೊರೆಯುವಂತೆ ಮಾಡಿದ್ದೇ ಆದರೆ ಜಮೀನ್ದಾರರು ಮೋಸ ಹೋದರೆಂದು ದವರಲ್ಲಿ ಅನುಮಾನವಿಲ್ಲ. ಯಾಕೆಂದರೆ ದೇಶದಲ್ಲಿ ಒಂದು ವರ್ಗದ ಮಾಲೀಕರು ಆಕ್ಟನ್ನು ಉಪಯೋಗಿಸಬಹುದೆಂತಲೂ, ಇನ್ನೊಂದು ವರ್ಗದವರು ಉಪಯೋಗಿಸಕೂಡದೆಂತಲೂ ಕಾನೂನು ಆದರೆ ಉಪಯೋಗಿಸಕೂಡದೆಂಬ ಬಹಿಷ್ಕಾರಕ್ಕೆ ಒಳಗಾಗಿರುವುದರಿಂದ ಗಣಿಸಲಾಗುವುದರಲ್ಲಿ ಸಂದೇಹವಿಲ್ಲ. ಆದುದರಿಂದ ಸರ್ಕಾರದವರು ಹೀಗೆಂದಿಗೂ ಮಾಡಲಿಕ್ಕಿಲ್ಲವಾಗಿ ನಂಬುತ್ತೇವೆ. ಬಿಲ್ಲನ್ನು ತಿರಸ್ಕರಿಸುವುದರ, ಜಮೀನುದಾರರು ಮಾಡಿದ್ದರೂ ಕೌನ್ಸಿಲಿನವರ ಕೃಪೆಯಿಲ್ಲದೆ ಮೆಂಬರುಗಳಾದರು ಲೇಖಕರೆಲ್ಲರಿಗಿಲ್ಲಾ ಅನ್ವಯಿಸುವುದು ತಿಂಗಳಿಗೆಲ್ಲೆಷ್ಟರ ಇದೀ ದೇಶಕ್ಕೇನೇ ಇಲ್ಲದಂತಾಗಬೇಕು. ಪ್ಲಾಂಟರುಗಳಿಗೆ ಮಾತ್ರ ಸಮ್ಮಂಧಿಸುವಂತೆ ಆಕ್ಟನ್ನ ಜಾರಿಗೆ ತರಬಾರದು. ಕೂಲಿಯವರ ಹಿತವನ್ನು ಒಯುಸುವ ಮತ್ತು ಗೇಣಿದ ಎಲ್ಲಾ ತರದ ಜನರನ್ನು ಏಕ ರೀತಿ ಕಾಣುವ ನಮ್ಮ ಸ್ಥಳೀಕ ಸರ್ಕಾರದವರೂ, ಮತ್ತು ಇಂಪೀರಿಯಲ್ ಸರ್ಕಾರದವರು ಕೌನ್ಸಿಲಿನ ತೀರ್ಮಾನವು ಎಲ್ಲರಿಗೂ ಸಮನಾಗಿ ಸಮ್ಮಂಧಿಸುವಂತೆ ಬಿಂಡಿತವಾಗಿ ಮಾಡಬೇಕಾಗಿದೆ. ಆದುದರಿಂದ ಈ ಬಿಲ್ಲನ್ನು ಕುರಿತು ಕೌನ್ಸಿಲಿನ ತೀರ್ಮಾನವು ಹೇಗಾಗುವುದೆಂದು ಬಹು ಕುತೂಹಲದಿಂದ ಎದುರು ನೋಡುತ್ತಿರುವೆವು.

ಅರಮನೆ.

ಪೂರ್ವಿಕರ ಜ್ಞಾಪಕಾರ್ಥವಾಗಿ ಪುರಾತನಕಾಲದ ವಸ್ತುಗಳೇನಾದರೂ ಇದ್ದರೆ ಅವುಗಳನ್ನು ಭದ್ರವಾಗಿ ಕಾಪಾಡಬೇಕೆಂಬುದು ಎಲ್ಲಾ ಜನಾಂಗಗಳ ಇಚ್ಛೆಯಾಗಿದೆ. ಹಿಂದೀಯರ ಸ್ವಭಾವವಾಗಿದೆ. ಆದರಲ್ಲೂ ತಮ್ಮ ದೇಶವನ್ನು ಆಳಿದ ಅರಸರ ನೆನಪನ್ನು ಇಟ್ಟುಕೊಳ್ಳಲು ಸಾಧ್ಯವಾದಷ್ಟು ಪ್ರಯತ್ನಿಸಲು ಯಾರೂ ಹಿಂಜರಿಯರು. ಆದಕಾರಣವೇ ಮಡಿಕೇರಿಯಲ್ಲಿರುವ, ರಾಜರು ಕಟ್ಟಿಸಿದ, ಹಳೇ ಅರಮನೆಯನ್ನು ಜೀರ್ಣವಾಗಲು ಬಿಡಬಾರದೆಂದು ಅಪಾಯ ಸ್ಥಿತಿಯಲ್ಲಿರುವ ಅದರ ಮುಂಭಾಗವನ್ನು ದುರಸ್ತುಮಾಡಲಿಕ್ಕಾಗಿ ಕೌನ್ಸಿಲಿನಲ್ಲಿ ಹಣ ಮಂಜೂರು ಮಾಡಿದ್ದಾಗಿದೆ. ಪ್ರಾಚೀನ ಚಿತ್ರಕಲೆಗಳನ್ನು ಕಾಪಾಡಬೇಕೆಂದು ಸಹಾನುಭೂತಿಯುಳ್ಳ ನಮ್ಮ ಕಮಿಷನರವರು ಈ ವಿಷಯ ಹೆಚ್ಚು ಕೊಂದರೆ ತೆಗೆದುಕೊಂಡರು. ಇವರ ಕಾಲಕ್ಕೆ ಮುಂಚೆಯೇ ಹಲವು ಎಗ್ಸಿಕ್ಯೂಟಿವ್ ಇಂಜಿನೀಯರುಗಳೂ ನಿಪುಣರೂ (ಎಕ್ಸ್‌ಪರ್ಟ್) ಈ ಅರಮನೆಯ ರಿಪೇರಿ ವಿಷಯ ತಮ್ಮ ಅಭಿಪ್ರಾಯಗಳನ್ನು ಕೊಟ್ಟಿದ್ದರು. ಅದರಿಂದ ತೃಪ್ತರಾಗದೆ 1924ರಲ್ಲಿ ಮದ್ರಾಸು ಪ್ರಾಂತ್ಯದಲ್ಲಿ ಸುಪರಿಂಟೆಂಡೆಂಟ್ ಇಂಜನೀಯರಾಗಿದ್ದ ಮಿ|| ಮೋಲ್ಸ್‌ವರ್ತ್‌ರವರನ್ನೂ ಕರೆಯಿಸಿ ಅವರ ಅಭಿಪ್ರಾಯವನ್ನು ತೆಗೆದುಕೊಂಡರು. ಅವರ ಅಂದಾಜಿನ ಮೇರೆ ರಿಪೇರಿ ಖರ್ಚಿಗೆ 25 ಸಾವಿರ ರೂಪಾಯಿ ಮಾತ್ರ ಸಾಕಾಗುವದೆಂದಾಯಿತು. ಅದರಂತೆ ಈ ಕೆಲಸವನ್ನು ಎರಡು ವರ್ಷಗಳಲ್ಲಿ ಮುಗಿಸುವದೆಂದು ನಿಶ್ಚೈಸಿ 1925—1926ನೇ ವರ್ಷದ ಬಜೆಟಿನಲ್ಲಿ ಅರ್ಧ ಒಪ್ಪಿಗಿರುವ ಹಣವು ಮಂಜೂರು ಮಾಡಲಾಯಿತು.

ಹಾಲಿ ವರ್ಷವು ಮುಗಿಯುತ್ತಾ ಬಂತು. ಇನ್ನು ಎರಡು ತಿಂಗಳು ಮಾತ್ರವೇ ಉಳಿದಿದೆ. ಆದರೂ ಅರಮನೆಯ ರಿಪೇರಿ ಕೆಲಸಕ್ಕೆ ಕೈಹಾಕಿರುವುದೇ ಇಲ್ಲ. ಯಾವ ಕೆಲಸಕ್ಕಾದರೂ ಹಣದ ಅಭಾವವೇ ಅಡಚಣೆಯೆಂದು ಇಲಾಖೆದಾರರ ಕೂಗು. ಆದರೆ ಈ ಕೆಲಸಕ್ಕೆ ಹಣ ಮಂಜೂರಾಗಿದ್ದರೂ ಕೂಡ ಡಿ ಪಿ ಡಬ್ಲ್ಯು ಇಲಾಖೆಯವರು ಸುಮ್ಮನಿರುವುದರ ಕಾರಣವೇನೆಂದು ತಿಳಿಯುವುದಿಲ್ಲ. ಇವರಿಗೆ ಈ ವರ್ಷ ಮಾಡತಕ್ಕದಷ್ಟು ತುಂಬಾ ಕೆಲಸಗಳಿದ್ದವೋ? ಈ ವಿಷಯ ಕಮಿಷನರವರಿಗಿದ್ದ ಉತ್ಸಾಹವು ಏನಾಯಿತು? ಕೌನ್ಸಿಲು ಮೆಂಬರುಗಳಾದರೂ ಕೇಳಬಾರದೇ? ಈ ವರ್ಷ ಇಂಜೀನೀಯರ್ ಇಲಾಖೆಯವರಿಗೆ ಈ ಕೆಲಸವನ್ನು ಕೈಕೊಳ್ಳಲು ಸಾಧ್ಯವಿಲ್ಲವೆಂದು ತಿಳಿಸಿದ್ದರೆ ಆ 12½ ಸಾವಿರ ರೂಪಾಯಿಗಳನ್ನು ಬೇರೆ ಕುರಿತು ಕೆಲಸಗಳಿಗಾದರೂ ಉಪಯೋಗಿಸಬಹುದಾಗಿತ್ತು. ಇದು 'ತಾನೂ ಉಣ್ಣಾ ಪರರಿಗೂ ಕೊಡ' ಎಂಬ ನಾಣ್ಣುಡಿಯಂತಾಯಿತು. ಅಧಿಕಾರಿಗಳು ಇದರ ಕಾರಣವನ್ನು ಇನ್ನಾದರೂ ಬಹಿರಂಗಪಡಿಸುವರಾಗಿ ನಂಬುತ್ತೇವೆ.

ಸಹಕಾರಿ ಸೆಂಟ್ರಲ್ ಬ್ಯಾಂಕಿನ ಮೀಟಿಂಗು.

ತಾ. 30—1—26ರಲ್ಲಿ ಕೊಡಗು ಸಹಕಾರಿ ಸೆಂಟ್ರಲ್ ಬ್ಯಾಂಕಿನ ಜನರಲ್ ಮೀಟಿಂಗು ವೀರರಾಜಪೇಟೆ ಮೋಡಲ್ ಸ್ಕೂಲ್ ಹಾಲಿನಲ್ಲಿ ಹಗಲು 3½ ಗಂಟೆಗೆ ನಡೆಯಿತು. ನೋಟೀಸಿನ ಮೇರೆ 2 ಗಂಟೆಗೆ ಹಾಜರಿದ್ದ ಮೆಂಬರುಗಳ ಅನುಮತಿ ಮೇರೆ ಮೀಟಿಂಗನ್ನು 3½ ಗಂಟೆಗೆ ಮುಂದರಿಸಿದ್ದಾಗಿದೆ ಎಂದು ಅಧ್ಯಕ್ಷರು ನಿವೇದಿಸಿದರು. ಬ್ಯಾಂಕಿಗೆ ಸೇರಿದ 140 ಸಂಘಗಳ ಪೈಕಿ 77 ಸಂಘಗಳ ಪ್ರತಿನಿಧಿಗಳೂ, 39 ಬಿಡಿ ಮೆಂಬರುಗಳ ಪೈಕಿ 13 ಮೆಂಬರುಗಳೂ ಹಾಜರಿದ್ದರು. ಬ್ಯಾಂಕಿನ ಅಧ್ಯಕ್ಷರಾದ ರಾಯ್ ಬಹದ್ದೂರ್ ಕೆ ಕುಟ್ಟಯ್ಯನವರು ಚೇರ್‌ಮ್ಯಾನರಾಗಿದ್ದರು. ಪಿಟಿಷನ್ಸ್ಕೃತರು ಸಹ ಹಾಜರಿದ್ದರು.

1. ಡೈರೆಕ್ಟರುಗಳ ರಿಪೋರ್ಟನ್ನೂ ಆಡಿಟ್ಟಾದವರ ಸರ್ಟಿಫಿಕೇಟನ್ನೂ ಸೆಕ್ರೆಟರಿಯವರು ಓದಿ ಮಂಜೂರಾದ್ದಾಯಿತು.

2 ಶೇರ್‌ದಾರರಿಗೆ ಶೇಕಡ 5ರಂತೆ ಲಾಭ ಹಂಚಬೇಕೆಂತ ತೀರ್ಮಾನವಾಯಿತು.

3 ಬಿಡಿ ಮೆಂಬರರ ಪರ ಡೈರೆಕ್ಟರುಗಳಾಗಿ (1) ರಾ ಬಾ ಕೆ ಕುಟ್ಟಯ್ಯನವರು, (2) ರಾ ಬಾ. ಕೆ. ಅಪ್ಪಯ್ಯನವರು, (3) ಯಂ. ಯಂ. ಚಿಣ್ಣಪ್ಪನವರು, (4) ಮಿ. ಬಿದ್ದಂಡ ಕರ ಅಪ್ಪಯ್ಯನವರು, (5) ಮಿ. ಎಸ್ ಮಂದಪ್ಪ, ಬಿ ಎ. ಎಲ್ ಟಿ ರವರು ಚುನಾಯಿತರಾದರು.

ಸಂಘಗಳ ಪರವಾಗಿ ಬೇಕಾದ 7 ಜನ ಡೈರೆಕ್ಟರರ ಪೈಕಿ ರಾಯ ಬಹದ್ದೂರ್ ಕೇಟೋಳಿ ಚಂಗಪ್ಪನವರು ಒಬ್ಬರ ವಿರೋಧ ಚುನಾಯಿತರಾದರು.

(4ನೇ ಪುಟದಲ್ಲಿ ಮುಂದುವರಿದಿದೆ.)

ಸ್ವಾಮಿ ವಿವೇಕಾನಂದರ ಮತ್ತು ಅವರ ಶಿಷ್ಯನ ಸಂವಾದ

(ಸ್ವಾಮಿ ಶಿಷ್ಯ ಸಂವಾದವೆಂಬ ಪುಸ್ತಕದಿಂದ)

ಸ್ವಾಮಿಗಳು,—ಚೇತನದ ಲಕ್ಷಣವೇನೆಂದು ಹೇಳಬಲ್ಲಿರಾ?

ಶಿಷ್ಯ:—ಏಕೆ ಮಹಾಶಯರೇ! ಯಾವುದರಲ್ಲಿ ಬುದ್ಧಿಪೂರ್ವಕವಾದ ಕಾರ್ಯವು ಕಂಡುಬರುತ್ತದೆಯೋ ಅದೇ ಚೇತನ

ಸ್ವಾಮಿಗಳು —ಯಾವುದು (nature ಗೆ against ಆಗಿ rebellion ಮಾಡುತ್ತದೆಯೋ) ಪ್ರಕೃತಿಗೆ ವಿರೋಧವಾಗಿ ನಿಂತು ಪ್ರತಿಭಟಿಸುತ್ತದೆಯೋ ಅದೇ ಚೇತನ. ಅದರಲ್ಲಿಯೇ ಚೈತನ್ಯದ ವಿಕಾಸವಿರುತ್ತದೆ. ನೋಡು, ಒಂದು ಸಾಮಾನ್ಯವಾದ ಇರುವೆಯನ್ನು ಕೊಲ್ಲುವುದಕ್ಕೆ ಹೋಗು, ಅದೂ ತನ್ನ ಜೀವವನ್ನು ಉಳಿಸಿಕೊಳ್ಳುವುದಕ್ಕೆ ಒಂದು ಸಾರಿ (rebel ಮಾಡುತ್ತದೆ) ಎದುರುಬೀಳುತ್ತದೆ. ಎಲ್ಲಿ (struggle) ಶ್ರಮ ಅಥವಾ ಪುರುಷ ಪ್ರಯತ್ನ ಇದೆಯೋ, ಎಲ್ಲಿ (rebellion) ಎದುರುಬೀಳುವಿಕೆ ಇದೆಯೋ, ಅಲ್ಲಿಯೇ ಜೀವದ ಚಿಹ್ನೆ, ಅಲ್ಲಿಯೇ ಚೈತನ್ಯದ ವಿಕಾಸ

ಶಿಷ್ಯ —ಮನುಷ್ಯನಿಗೂ ಮತ್ತು ಮನುಷ್ಯ ಜಾತಿಗಳಿಗೂ ಈ ನಿಯಮವು ಅನ್ವಯಿಸುತ್ತದೆಯೋ ಮಹಾಶಯ?

ಸ್ವಾಮಿಗಳು —ಅನ್ವಯಿಸುತ್ತದೆಯೋ ಇಲ್ಲವೋ, ಒಂದು ಸಾರಿ ಜಗತ್ತಿನ ಚರಿತ್ರೆಯನ್ನು ಓದಿ ನೋಡು, ನಿಮ್ಮನ್ನು ಬಿಟ್ಟು ಮಿಕ್ಕ ಎಲ್ಲ (ದೇಶದ) ಜನರಿಗೂ ಇದು ಅನ್ವಯಿಸಿದೆ. ನೀವು ಮಾತ್ರ ಪ್ರಪಂಚದಲ್ಲಿ ಈಗ ಜಡರ ಹಾಗೆ ಬಿದ್ದಿದ್ದೀರಿ. ನಿಮ್ಮನ್ನು (hypnotise) ಮಂತ್ರಮುಗ್ಧರನ್ನಾಗಿ ಮಾಡಿಬಿಟ್ಟಿದ್ದಾರೆ. ಬಹಳ ಹಿಂದಿನ ಕಾಲದಿಂದಲೂ ಇತರರು ನಿಮಗೆ "ನೀವು ಹೀನರು, ನಿಮಗೆ ಯಾವ ಶಕ್ತಿಯೂ ಇಲ್ಲ" ಎಂದು ಹೇಳುತ್ತಾ ಬಂದರು. ನೀವೂ ಅದನ್ನೇ ಕೇಳುತ್ತಾ ಈಗ ಒಂದು ಸಾವಿರ ವರುಷದಿಂದ "ನಾವು ಹೀನರು, ಯಾವ ಕೆಲಸಕ್ಕೂ ಕೈಲಾಗದವರು" ಎಂದು ಭಾವಿಸುತ್ತಿದ್ದೀರಿ. ಭಾವಿಸಿಕೊಂಡು ಭಾವಿಸಿಕೊಂಡು ಹಾಗೆಯೇ ಆಗಿಹೋದಿರಿ (ತಮ್ಮ ಶರೀರವನ್ನು ತೋರಿಸಿ) ಈ ದೇಹವೂ ನಿಮ್ಮ ದೇಶದ ಮಣ್ಣಿನಿಂದಲೇ ತಾನೇ ಆಗಿದೆ. ಆದರೆ ನಾನು ಮಾತ್ರ ಯಾವಾಗಲೂ ಹೀಗೆ ಭಾವಿಸಿಕೊಂಡಿಲ್ಲ. ಅದಕ್ಕೆ ನೋಡು ಅವನ (ಈಶ್ವರನ) ಇಚ್ಛೆಯಿಂದ, ಯಾರು ನನ್ನನ್ನು ಬಹು ದಿವಸದಿಂದಲೂ ಕೀಳಾಗಿ ತಿಳಿಯುತ್ತಿದ್ದರೋ ಅವರೇ ದೇವರನ್ನು ಕಂಡರೆ ಹೇಗೋ ಹಾಗೆ ನನ್ನನ್ನು ಗೌರವ ಮಾಡಿದ್ದಾರೆ ಮತ್ತು ಮಾಡುತ್ತಾರೆ. ನೀವೂ ಹೀಗೆ ನಮ್ಮೊಳಗೆ ಅನಂತ ಶಕ್ತಿಯೂ, ಅಪಾರ ಜ್ಞಾನವೂ, ಅದಮ್ಯ ಉತ್ಸಾಹವೂ ಇದೆಯೆಂದು ಭಾವಿಸಿಕೊಂಡು ಒಳಗಿರುವ ಈ ಶಕ್ತಿಯನ್ನು ಎಬ್ಬಿಸಲು ಸಮರ್ಥರಾದರೆ ಆಗ ನೀವೂ ನನ್ನ ಹಾಗೆ ಆಗಬಲ್ಲಿರಿ

ಶಿಷ್ಯ —ಹೀಗೆ ಭಾವಿಸಿಕೊಳ್ಳುವುದಕ್ಕೆ ಶಕ್ತಿಯೆಲ್ಲಿದೆ ಮಹಾಶಯರೇ? ಚಿಕ್ಕ ಕಾಲದಿಂದಲೂ ಈ ಮಾತುಗಳನ್ನು ಕೇಳಬೇಕು ಮತ್ತು ತಿಳಿಸಿಕೊಡಬೇಕು, ಅಂಥ ಶಿಕ್ಷಕ ಅಥವಾ ಉಪಾಧ್ಯಾಯ ತಾನೇ ಎಲ್ಲಿದ್ದಾನೆ? 'ಓದು ಬರಹಗಳು ಈಗಿನಕಾಲದಲ್ಲಿ ಕೇವಲ ನೌಕರಿ ಸಂಪಾದಿಸುವದಕ್ಕೋಸ್ಕರ'—ಎಂಬ ಈ ಮಾತನ್ನೇ ನಾವು ಎಲ್ಲರಿಂದಲೂ ಕೇಳಿದ್ದೇವೆ ಮತ್ತು ಕಲಿತುಕೊಂಡಿದ್ದೇವೆ

ಸ್ವಾಮಿಗಳು —ಅದಕ್ಕೆ ನಾನು ಬಂದಿರುವುದು —ಬೇರೆ ವಿಧವಾಗಿ ಹೇಳಿಕೊಡುವುದಕ್ಕೆ ಮತ್ತು ತೋರಿಸಿಕೊಡುವುದಕ್ಕೆ. ನೀವು ನನ್ನಿಂದ ಈ ತತ್ವವನ್ನು ಕಲಿತುಕೊಳ್ಳಿ, ತಿಳಿದುಕೊಳ್ಳಿ, ಅನುಭವಕ್ಕೆ ತಂದುಕೊಳ್ಳಿ—ಆ ಮೇಲೆ ಗ್ರಾಮ ಗ್ರಾಮದಲ್ಲಿಯೂ, ಊರು ಊರಿನಲ್ಲಿಯೂ, ಹಳ್ಳಿ ಹಳ್ಳಿಯಲ್ಲಿಯೂ ಈ ಅಭಿಪ್ರಾಯವನ್ನು ತೆಗೆದುಕೊಂಡುಹೋಗಿ ಸ್ಥಾಪಿಸಿ. ಎಲ್ಲರ ಹತ್ತಿರಕ್ಕೂ ಹೋಗಿ, 'ಏಳಿ, ಎಚ್ಚರಗೊಳ್ಳಿ, ಇನ್ನು ನಿದ್ರೆ ಮಾಡಬೇಡಿ, ಎಲ್ಲಾ ಅಭಾವಗಳನ್ನೂ ದುಃಖಗಳನ್ನೂ ನೀಗಿಸುವ ಶಕ್ತಿಯು ನಿಮ್ಮ ಒಳಗೇ ಇದೆ, ಈ ಮಾತನ್ನು ನಂಬಿ, ಹಾಗಾದರೆ ಈ ಶಕ್ತಿಯು ಉದ್ಬುದ್ಧವಾಗುತ್ತದೆ' ಎಂದು ಹೇಳಿ, ಈ ವಿಷಯವನ್ನು ಎಲ್ಲರಿಗೂ ಹೇಳಿ ಮತ್ತು ಅದರ ಜೊತೆಗೆ ಸುಲಭವಾದ ಮಾತಿನಲ್ಲಿ ವಿಜ್ಞಾನ, ದರ್ಶನ, ಭೂಗೋಳ ಮತ್ತು ಚರಿತ್ರೆಗಳ ಮೂಲ ಸಂಗತಿಗಳನ್ನು ಸಾಧಾರಣ ಜನರ ಮನಸ್ಸಿಗೆ ಅಂಟುವಂತೆ ತಿಳಿಸಿ. ನಾನು ಅವಿವಾಹಿತರಾದ ಯುವಕರನ್ನು ಸೇರಿಸಿ ಒಂದು ಶಿಕ್ಷಣ ಕೊಡುವ ಕೇಂದ್ರಸ್ಥಾನವನ್ನು ಮಾಡುತ್ತೇನೆ—ಮೊದಲು ಅವರಿಗೆ ಶಿಕ್ಷಣವನ್ನು ಕೊಟ್ಟು ಆ ಮೇಲೆ ಅವರ ಮೂಲಕ ಈ ಕೆಲಸವನ್ನು ಮಾಡಿಸುತ್ತೇನೆ—ಇದು ನಾನು ಮಾಡಬೇಕೆಂದಿರುವ ಏರ್ಪಾಡು.

ಶಿಷ್ಯ:—ಆದರೆ, ಮಹಾಶಯ! ಹೀಗೆ ಮಾಡುವುದಕ್ಕೆ ಬಹು ಧನವು ಬೇಕಾಗುತ್ತದೆ; ಆ ಹಣವನ್ನು ಎಲ್ಲಿಂದ ತರುವಿರಿ?

ಸ್ವಾಮಿಗಳು:—ಏನು ನೀನು ಹೇಳುವುದು! ಮನುಷ್ಯನಿಂದ ತಾನೆ ರುಪಾಯಿ ಆಗುವುದು? ರುಪಾಯಿಯಿಂದ ಮನುಷ್ಯನಾಗುತ್ತಾನೆಂಬ ಮಾತನ್ನು ಯಾವಾಗಲಾದರೂ ಯಾರಿಂದಲಾದರೂ ಕೇಳಿದ್ದೀಯೇನು? ನೀನು ಬಾಯಿಯಲ್ಲಿ ಆಡುವುದೂ, ಮನಸ್ಸಿನಲ್ಲಿ ಯೋಚಿಸುವುದೂ ಒಂದೇ ಆಗುವುದಾದರೆ, ಆಡುವ ಮಾತಿನಲ್ಲಿಯೂ ಮಾಡುವ ಕೆಲಸದಲ್ಲಿಯೂ ಒಂದೇ ಆಗುವುದಾದರೆ, ಆಗ ಹಣವು ತನ್ನಷ್ಟಕ್ಕೆ ತಾನೆ ನೀರಿನಂತೆ ನಿಮ್ಮ ಹತ್ತಿರ ಬಂದು ಸುರಿಯುವುದು

ಮ ವೇ. ಸ

ಕೊಡಗು ಕೌನ್ಸಿಲಿನಲ್ಲಿ ಕನ್ನಡ ಭಾಷೆ.

ಕೊಡಗಿನ ನ್ಯಾಯವಿಧಾಯಕ ಸಭೆಯಲ್ಲಿ ಶ್ರೀ ನಿಡಸಡ ಸುಬ್ಬಯ್ಯನವರು ಕನ್ನಡದಲ್ಲಿ ಮಾತನಾಡಲುಪಕ್ರಮಿಸಿದಾಗ್ಯೂ ಚೀಫ್ ಕಮೀಷನರರು ಅದಕ್ಕೆ ಆಕ್ಷೇಪಿಸಿದ್ದನ್ನು ಕಂಡು ಆಶ್ಚರ್ಯವಾಗುತ್ತದೆ. ಕೊಡಗು ನಾಡಿನಲ್ಲಿ ಕನ್ನಡ ಒಂದೇ ದೇಶಭಾಷೆಯಾಗಿದೆ. ಉಳಿದ ಕಾಯದೆ ಮಂಡಲಗಳಲ್ಲಿ ಈ ಬಗೆಯ ಒಂದೇ ದೇಶಭಾಷೆಯ ಸೌಕರ್ಯವಿಲ್ಲದೇ, ಅನೇಕ ದೇಶಭಾಷೆಗಳಿಗೆ ಆಸ್ಪದವಿದ್ದರೂ ಸಹ ಆ ಎಲ್ಲ ಭಾಷೆಗಳು ಕಾಯದೆ ಮಂಡಲಗಳಲ್ಲಿ ಬರಲು ನಿಯಮಗಳ ಅಡಚಣೆ ಇಲ್ಲ. ಇಷ್ಟೇ ಅಲ್ಲದೆ ದೇಶಭಾಷೆಗಳಲ್ಲಿ ಪ್ರತಿನಿಧಿಗಳು ಅವಶ್ಯವಾಗಿ ಮಾತನಾಡಬಹುದೆಂದಾಗಿ ಶಾಸನದ ಆಧಾರವಿದೆ. ಮುಂಬಯಿ ಕಾಯದೆ ಮಂಡಲದಲ್ಲಿ ಉರ್ದು, ಸಿಂಧಿ, ಗುಜರಾತಿ, ಮರಾಠಿ ಕನ್ನಡಗಳಿಗೆ ಆಸ್ಪದವಿದೆ. ಮದ್ರಾಸ ಕಾಯದೆ ಮಂಡಲದಲ್ಲಿ ತಮಿಳ, ತೆಲಗು, ಮಲೆಯಾಳ, ಕನ್ನಡಗಳಿಗೆ ಆಶ್ರಯವಿದೆ. ಆದರೆ ಕೊಡಗಿನಲ್ಲಿ ಕನ್ನಡವೊಂದೇ ಪ್ರಧಾನ ಭಾಷೆಯಾಗಿರುವದರಿಂದ ನಿಜವಾಗಿ ನೋಡಿದರೆ ಕನ್ನಡದ ಹೊರತು ಮಿಕ್ಕ ಯಾವ ನುಡಿಗೂ ಅಲ್ಲಿ ಆಸ್ಪದವಿರಕೂಡದು. ಇಂಗ್ಲೀಷಿಗೂ ಕೂಡ ಕೊಡಗು ಕಾಯದೆ ಮಂಡಲದಲ್ಲಿ ಬಹಿಷ್ಕಾರವಿರತಕ್ಕದ್ದು. ಚೀಫ್ ಕಮಿಷನರ ಮೊದಲಾದ ಅಧಿಕಾರಿಗಳು ಕನ್ನಡವನ್ನು ಅವಶ್ಯವಾಗಿ ಕಲಿಯಬೇಕು. ಪರಿಸ್ಥಿತಿಯು ಹೀಗಿದ್ದರೂ ಸಹ ಕನ್ನಡದಲ್ಲಿ ಮಾತನಾಡಕೂಡದೆಂದು ಆಕ್ಷೇಪಿಸಿದ್ದು ಒಂದು ಬಗೆಯ ದುಷ್ಕೃತ್ಯವೇ ಸರಿ. ಕಡೆಗೆ ಶ್ರೀ ಸುಬ್ಬಯ್ಯನವರ ಭಾಷಣವನ್ನು ಇಂಗ್ಲೀಷಿನಲ್ಲಿ ಭಾಷಾಂತರಿಸುವ ಏರ್ಪಾಡು ಮಾಡಿ ಚೀಫ್ ಕಮಿಷನರರು ತಮ್ಮ ಮೊಂಡತನವನ್ನು ಉಳಿಸಿಕೊಂಡದ್ದು ವಿಹಿತವಾಯಿತು. ಶ್ರೀ ಸುಬ್ಬಯ್ಯನವರು ಸತ್ಯಾಗ್ರಹ ಮಾಡಿ, ಕಳಿಗೆ ಕುಳಿತು ಮೌನವ್ರತಸ್ಥರಾದ್ದರಿಂದ ಒಂದು ಬಗೆಯ ಜಯ ಕನ್ನಡಕ್ಕೆ ದೊರೆಯಿತು. ಇದಕ್ಕಾಗಿ ಸುಬ್ಬಯ್ಯನವರನ್ನು ನಾವು ಅಭಿನಂದಿಸುತ್ತೇವೆ. ಇನ್ನು ಮೇಲೆ ಕೊಡಗಿನ ಕಾಯದೆ ಮಂಡಲದಲ್ಲಿ ಕಾರ್ಯವೆಲ್ಲ ಕನ್ನಡದಲ್ಲಿಯೇ ನಡೆಯಬೇಕೆಂಬ ಠರಾವನ್ನು ಶ್ರೀ ಸುಬ್ಬಯ್ಯನವರು ಬೇಗನೆ ತಂದು ಚೀಫ್ ಕಮಿಷನರಿಗೆ ಪಾಠ ಕಲಿಸಬೇಕಾಗಿ ಸೂಚಿಸುತ್ತೇವೆ

[ನಮ್ಮ ದೇಶದ ಕೌನ್ಸಿಲಿನಲ್ಲಿ ದೇಶಭಾಷೆಯಾದ ಕನ್ನಡದಲ್ಲಿ ಭಾಷಣ ಮಾಡಲು ಬಿಡಬೇಕೋ ಇಲ್ಲವೋ ಎಂಬ ವಿಷಯವು ಸ್ವಲ್ಪ ವಿವಾದಕ್ಕೆ ಎಡೆಕೊಟ್ಟಿದೆ. ಈ ಸಂಗತಿಯನ್ನು ಕುರಿತು ಬೇರೆ ಕನ್ನಡ ಪ್ರಾಂತಗಳವರ ಅಭಿಪ್ರಾಯವೇನೆಂಬುದನ್ನು ನಮ್ಮ ವಾಚಕರಿಗೆ ತಿಳಿಸಬೇಕೆಂಬ ಆಶೆಯಿಂದ ಬಾಗಲಕೋಟೆಯ "ಕನ್ನಡಿಗ" ಪತ್ರಿಕೆಯ ಸಂಪಾದಕರ ಈ ಮೇಲಿನ ಅಭಿಪ್ರಾಯವನ್ನು ಇಲ್ಲಿ ಕೊಟ್ಟಿದ್ದಾಗಿದೆ

ಸಂ.]

ಗಣಪತಿ ಪುಸ್ತಕ ಭಂಡಾರ.

ಬಿದ್ದಂಡ ಗಣಪತಿಯವರ ಜ್ಞಾಪಕಾರ್ಥ ಲೈಬ್ರರಿಯು ಜನವರಿ ತಾರೀಕು 30ರಲ್ಲು ವೀರರಾಜಪೇಟೆ ಖಾದಿ ಭಂಡಾರದ ಮಹಡಿಯಲ್ಲಿ ತೆರೆಯಲ್ಪಟ್ಟಿತು. ಮ. ರಾ. ರಾ. ಕೆ. ಚಂಗಪ್ಪನವರು ಅಧ್ಯಕ್ಷರಾಗಿದ್ದರು. ಸುಮಾರು 150 ಜನರು ನೆರೆದಿದ್ದರು. ಸಂಗೀತದನಂತರ ಪ್ರಮೋಟರುಗಳ ವರದಿಯನ್ನು ಮ. ಬಿದ್ದಂಡ ಐಯ್ಯಪ್ಪನವರು ಓದಿದರು. ಅದರ ಕನ್ನಡ ತರ್ಜುಮೆ —

ಅಧ್ಯಕ್ಷರೇ, ಮ. ನ್ಯೂಕಮ್ ಸಾಹೇಬರ ಮತ್ತು ಮಹನೀಯರೆ, ತಾವೆಲ್ಲರೂ ಇಲ್ಲಿಗೆ ದಯಮಾಡಿಸಿದ್ದಕ್ಕೂ, ಕೊಡಗು ಜಿಮಖಾನದಾಸರ ಸಂಘದವರು ಇಲ್ಲಿಗೆ ಸೇರಲು ಕೊಟ್ಟ ಅವಕಾಶಕ್ಕೂ ನಾವು ತಮಗೆಲ್ಲರಿಗೂ ಕೊಡಗು ಜಿಮಖಾನದಾರರ ಸಂಘಕ್ಕೂ ಸಂತೋಷದಿಂದ ವಂದಿಸುತ್ತೇವೆ. ನಾವು ಈ ದಿನ ಸೇರಿದ ಮನೆಯ ಮಹಡಿಯು ಬಹಳ ಸಣ್ಣದೆಂದೂ, ಸ್ಥಳ ಸಂಕೋಚದಿಂದ ತಮಗೆಲ್ಲರಿಗೂ ತೊಂದರೆಯು ಹೆಚ್ಚಾಗಿದೆಯೆಂದು ನಾವು ಬಲ್ಲೆವು. ಆದರೆ ತಮ್ಮೆಲ್ಲರ ಕರುಣಾ ಕಟಾಕ್ಷದಿಂದ ಶೀಘ್ರದಲ್ಲಿಯೇ ವೀರರಾಜಪೇಟೆಯಲ್ಲಿ ಒಂದು ಪಬ್ಲಿಕ್ ಹಾಲ್ ಆಗಬಹುದು. ಆಗ ಸ್ಥಳ ಸಂಕೋಚದ ತೊಂದರೆಯ ನಿವಾರಣೆ ಆಗಬಹುದು. ಅನೇಕ ಪುಣ್ಯಾತ್ಮರು ಇಂಥಾ ಪಬ್ಲಿಕ್ ಕಟ್ಟಡಕ್ಕೆ ಮರ ಮುಟ್ಟು, ಇಟ್ಟಿಗೆ, ಸ್ಥಳ ವಗೈರೆ ಸಹಾಯಮಾಡಲು ಈಗಾಗಲೇ ಮುಂದಕ್ಕೆ ಬರುವುದಾಗಿದ್ದಾರೆ

ಮಹನೀಯರೆ,

ಈ ಪುಸ್ತಕ ಭಂಡಾರವು ಮತ್ತು ವಾಚನಾಲಯವು ಕೊಡಗು ಜಿಮಖಾನ ದಾರರ ಸಂಘದ ಆಶ್ರಯದಿಂದ ಹೊರಟಿದ್ದಾಗಿದೆ. ಯಾವ ಉದ್ದೇಶಕ್ಕೆ ಈ ವಾಚನಾಲಯ ಮತ್ತು ಪುಸ್ತಕ ಭಂಡಾರವು ತೆರೆಯಲ್ಪಟ್ಟಿದೆಯೆಂದು ಈ ಮೊದಲೇ ಕಳುಹಿಸಿರುವ ವಿಜ್ಞಾಪನಾ ಪತ್ರದಿಂದ ದೇಶೀಯರೆಲ್ಲರಿಗೂ ತಿಳಿದೇ ಇದೆ. ಯಾವಾಗ ಮ. ಬಿದ್ದಂಡ ಗಣಪತಿಯವರು ಮೃತರಾದರೋ, ಆವಾಗಿನಿಂದ ದೇಶೀಯರನೇಕರ ಮನಸ್ಸಿನಲ್ಲಿ ದಿವಂಗತರು ದೇಶಕ್ಕೆ ಮಾಡಿದ ಕೆಲಸಕ್ಕಾಗಿ ತಕ್ಕ ಉಚಿತ ಜ್ಞಾಪಕಾರ್ಥವನ್ನು ಯಾವದಾದರೊಂದು ವಿಧದಲ್ಲಿ ಮಾಡಬೇಕೆಂದು ಯೋಚಿಸಿದ್ದು ಈ ದಿನ ತಮ್ಮೆಲ್ಲರ ಸಹಾಯದಿಂದ ಫಲಕ್ಕೆ ಬಂದದ್ದಕ್ಕೆ ನಾವು ಬಹಳ ಸಂತೋಷಪಡುತ್ತೇವೆ. ಕೊಡಗು ಜಿಮಖಾನದಾರರ ಸಂಘಕ್ಕೆ ಆದಿಯಿಂದ ಆತ್ಮದವರೆಗೆ ಜನರಲ್ ಸೆಕ್ರೆಟರಿಯಾಗಿಯೂ, ರಾಜಕೀಯ ಚಳವಳವನ್ನು ಕೊಡಗಿನಲ್ಲಿ ಆದಿಯಾಗಿ ಬೆಳೆಸಿದವರು ಈ ಮಹನೀಯರೆಂದು ಎಲ್ಲರಿಗೂ ತಿಳಿದ ವಿಷಯವಾಗಿರುವುದರಿಂದ ಭಿನ್ನಾಭಿಪ್ರಾಯಗಳು ಇವರ ಕೆಲಸದಲ್ಲಿ ಇರುವುದಿಲ್ಲ. ದೇಶ ಸೇವೆಯು ಈಶ ಸೇವೆಯೆಂದೂ, ಮನುಷ್ಯನು ಮಾಡತಕ್ಕ ಕೆಲಸದಲ್ಲಿ ಹೆಚ್ಚು ಜನರ ಸೇವೆಯನ್ನು ಮಾಡುವುದೂ, ಅನೇಕ ಜನರಿಗೆ ಸರಕಾರದಿಂದ ಬಾಧಕವಾದ ಕಾನೂನಿನಿಂದ ಪಾರುಮಾಡುವುದೇ ಶ್ರೇಷ್ಠವೆಂದೂ, ಮೊದಲಾಗಿ ಈ ಮಹನೀಯರೆ ಕಲಿಸಿದರೆಂಬುದನ್ನು ನಾವೇನೂ ಹೇಳಬೇಕಾಗಿಲ್ಲ. ಇದ್ದರಿಂದ ರಾಜಕೀಯ ಚಳವಳದ ಸೊಲ್ಲೇ ಇಲ್ಲದ ಸಮಯದಲ್ಲಿ ಅಂಥಾ ಕ್ರಾಂತಿಯ ಚಳವಳವನ್ನು ಆರಂಭಮಾಡಿದವರಲ್ಲಿ ಇವರೇ ನಮ್ಮ ದೇಶದ ಮೂಲ ಪುರುಷರೆಂಬುದರಲ್ಲಿ ಸಂದೇಹವಿಲ್ಲ. ಈಗ ಮಾಡಿದ ಜ್ಞಾಪಕಾರ್ಥವು ಎಷ್ಟೋ ಸಣ್ಣದಾಗಿ ಕಂಡುಬಂದರೂ, ಇದನ್ನು ಚೆನ್ನಾಗಿ ಉಪಯೋಗಿಸಿದ್ದೇ ಆದರೆ ದೇಶದ ಜನರು ಎಚ್ಚೆತ್ತು, ಬಹಳ ಮುಂದಕ್ಕೆ ಬರುವುದರಲ್ಲಿ ಸಂದೇಹವಿಲ್ಲ

ಈ ಕೆಲಸಕ್ಕೆ ನಾವು ಪ್ರಾರಂಭಮಾಡುವಾಗ ನಮಗೆ ಎಷ್ಟು ಎಡರುಗಳು ಬಂದರೂ, ಧೈರ್ಯದಿಂದ ಮುಂದೆ ಸಾಗಿದ್ದೇವೆ. ನಾವು ಅನೇಕ ಜನರಿಗೆ ವಿಜ್ಞಾಪನಾ ಪತ್ರಗಳನ್ನು ಕಳುಹಿಸಿದರೂ ಫಲಕ್ಕೆ ಬರಲಿಲ್ಲ. ಈ ಇಕ್ಕಟ್ಟಿನಲ್ಲಿ ಇಲ್ಲಿ ನಮ್ಮ ಮುಂದೆ ಕುಳಿತಿರುವ ಎಲ್ಲರಿಗೂ ಪರಿಚಿತ ನ್ಯೂಕಮ್‌ರವರು 50 ರುಪಾಯಿ ಕಳುಹಿಸಿ ತಮ್ಮ ಸಾವಿರಾರು ರುಪಾಯಿ ಕ್ರಯ ಬಾಳುವ ಪುಸ್ತಕ ಭಂಡಾರವನ್ನು ದಯಪಾಲಿಸಿದರು. ಇವರ ಜೊತೆಗೆ ಕೊಡಗಿನಲ್ಲಿ ಮೊದಲಾಗಿ ವೇತನವನ್ನು ಕೊಡಲು ಕಲ್ಪಿಸಿದ, ನೀಲಗಿರಿ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫೀಸರಾಗಿರುವ ಮ. ಕೊಡಂದೇರ ಚಂಗಪ್ಪನವರ 75 ರೂ, ಮ. ಯಂ ಪೂವಣ್ಣ, ಬಿ ಎ ಎಲ್ ಎಲ್ ಬಿ ಯವರು 10 ರೂ, ಶ್ರೀಮತಿ ಕಮಲ ಕಾಳಪ್ಪನವರು 5 ರೂ, ಶ್ರೀಮತಿ ಲಕ್ಷ್ಮಮ್ಮ ಚೆನ್ನಮ್ಮನವರು 10 ರೂ, ಕ ಉತ್ತಪ್ಪನವರು, ಕುಟ್ಟಪ್ಪನವರು, ಕೆ ಎಸ್ ಪೊನ್ನಪ್ಪನವರು 15 ರೂ ಕಳುಹಿಸಿಕೊಟ್ಟರು. ನಾಜೂಕಾದ ಕೆಲವು ಪುಸ್ತಕಗಳನ್ನು ಮ. ಬಿದ್ದಂಡ ಕುಟ್ಟಪ್ಪನವರೂ, ಚೋಂದಂಡ ಚಂಗಪ್ಪನವರೂ, ಸಬೀಹ ರಾವ ರಾವ್‌ರೂ ಕಳುಹಿಸಿಕೊಟ್ಟರು. ಇದರ ಜೊತೆಗೆ ವಿಶೇಷವಾಗಿ ಮ. ಬಿದ್ದಂಡ ಜಿ ಮುತ್ತಣ್ಣನವರು, ಕೀರ್ತಿಶೇಷರ ಪುತ್ರರು, ಅವರ ತಂದೆಯವರ ಸಾವಿರಾರು ರುಪಾಯಿ ಕ್ರಯ ಬಾಳುವ ಪುಸ್ತಕ ಭಂಡಾರವನ್ನೂ ದಾನ ಮಾಡಿದರು. ಮೇಲ್ಕಂಡ ಮಹನೀಯರು ಮಾಡಿದ ಸಹಾಯಕ್ಕಾಗಿ ಪ್ರಮೋಟರುಗಳಾದ ನಾವುಗಳು ಎಷ್ಟು ವಂದಿಸಿದರೂ ಸಾಲದು.

ನಾವು ಈ ವರೆಗೆ 160 ರುಪಾಯಿ ಮಾತ್ರ ವಸೂಲಿಮಾಡಿದ್ದೇವೆ. ಆದರೆ ಸುಮಾರು 500 ರುಪಾಯಿ ಪುಸ್ತಕ ಭಂಡಾರಕ್ಕಿರುವ ಸಾಧನಗಳನ್ನೂ ಸಾಮಾನುಗಳನ್ನೂ ಒದಗಿಸಲು ಖರ್ಚು ಮಾಡಿರುತ್ತೇವೆ. ಈ ಹಣವನ್ನು ಮಹನೀಯರು ಧಾರಾಳ ಹೃದಯದಿಂದ ಕೊಡುವರೆಂದು ನಂಬುತ್ತೇವೆ. ವಾಚನಾಲಯದ ಮುಂದಿನ ಕೆಲಸವನ್ನು ಒಂದು ಬಲವಾದ ಕಮಿಟಿಯ ಆಡಳಿತಕ್ಕೆ ಈ ದಿವಸವೇ ಬಿಟ್ಟುಕೊಡುತ್ತೇವೆ. ಆದಷ್ಟು ಬೇಗನೆ ಈ ಪುಸ್ತಕ ಭಂಡಾರವನ್ನು ರಿಜಿಸ್ಟರ್ ಮಾಡಿಸಬೇಕಾಗಿ ಕೋರುತ್ತೇವೆ. ಸದ್ಯಕ್ಕೆ ಈ ಕೆಳಗಿನವರು ಕಮಿಟಿಯವರಾಗಿ ಇರಬೇಕೆಂದು ಬಯಸುತ್ತೇವೆ.

ಪೋಷಕರು ರಾ. ರಾಯಬಹದ್ದೂರು ಕೆ. ಚಂಗಪ್ಪನವರು, ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರು, ಮ. ಲಯನಲ್ ನ್ಯೂಕಮ್‌ರವರು, ಯಂ ಎಲ್. ಸಿ., ಮ. ಕೊಡಂದೇರ ಚಂಗಪ್ಪನವರು ಪ್ರೆಸಿಡೆಂಟರು, ಮ. ಸಿ ಎಂ ರಾಮರಾಯರು, ಬಿ ಎ. ಎಲ್. ಟಿ, ಸೆಕ್ರೆಟರಿ, ಮ. ಪಿ. ಯು ಉತ್ತಪ್ಪನವರು, ಬಿ. ಎ. ಎಲ್ ಟಿ

ಕಮಿಟಿ

ಮ. ಬಿದ್ದಂಡ ಐಯ್ಯಪ್ಪನವರು.
ಮ. ಪಿ ಜೆ ಲೋಬೋರವರು
ಮ. ಟಿ ಆರ್ ತಿರುವೆಂಗಡಂ ಪಿಳ್ಳೆಯವರು.
ಮ. ಪಾರುವಂಗಡ ಕುಶಾಲಪ್ಪನವರು ಎಂ ಎಲ್. ಸಿ
ಮ. ನಡಿಕೇರಿಯಂಡ ಸೋಮಯ್ಯನವರು.
ಮ. ಮಾಲೆಕಂಡ ಮೇದಪ್ಪನವರು ಬಿ ಎ ಬಿ ಎಲ್ (ಆನರ್ಸ್) ಎಲ್ ಸಿ
ಮ. ಬಿದ್ದಂಡ ಕರುಂಬಯ್ಯನವರು.
ಮ. ಪಾಂಡಂಡ ಮುತ್ತಣ್ಣನವರು
ಮ. ಪುತ್ತರಿರ ಗಣಪಯ್ಯನವರು.
ಮ. ಕೆ ಕೃಷ್ಣ ಕರುಂಬಯ್ಯನವರು
ಮ. ಎಂ ಕಾರ್ಯಪ್ಪನವರು.
ಮ. ಕೋಟೆರ ಚಿಣ್ಣಪ್ಪನವರು.

ಕಡೆಗೆ ಮಹನೀಯರು ಸುಮಾರು ಮುನ್ನೂರು ರುಪಾಯಿಗಳ ವರೆಗೆ ಕೊಡುವದಾಗಿ ಒಪ್ಪಿ ಚಂದಾ ಪಟ್ಟಿಗೆ ರುಜು ಹಾಕಿದರು. 30 ರುಪಾಯಿ ಅಲ್ಲಿಯೇ ವಸೂಲಾಯಿತು.

ಮೇಲಿನ ವರದಿಯ ಸಾರಾಂಶವನ್ನು ಮೆ. ಪಿ ಟಿ. ಕುಶಾಲಪ್ಪನವರು ಕನ್ನಡದಲ್ಲಿ ಹೇಳಿದರು. ಮೆ. ಲಯನಲ್ ನ್ಯೂಕಮ್‌ರವರು 'ಈ ಲೈಬ್ರರಿಯನ್ನು ತೆರೆಯುವ ಬಹುಮಾನವನ್ನು ನನಗೆ ಕೊಟ್ಟದ್ದಕ್ಕಾಗಿ ಬಹಳ ವಂದಿಸುತ್ತೇನೆ. ಈ ಚೆಲೋ ಭೂಮಿಯಾದ ಕೊಡಗಿನ ಅಭಿವೃದ್ಧಿಗೆ ಎಲ್ಲರೂ ಸಹಾಯ ಮಾಡಬೇಕು. ಈ ದೇಶದಲ್ಲಿ ಜನ ಸಾಮಾನ್ಯದ ಏಳಿಗೆಗೆ ಕೆಲಸ ಮಾಡಲು ಪ್ರಾರಂಭಿಸಿದ ಮೆ. ಬಿದ್ದಂಡ ಗಣಪತ್ತಿಯವರ ಉತ್ತಮವಾದ ಉದಾಹರಣೆಯನ್ನು ಅವರ ಜ್ಞಾಪಕಾರ್ಥವಾಗಿ ಸ್ಥಾಪಿಸುವ ಈ ಲೈಬ್ರರಿಯ ಪ್ರವೋಟರುಗಳು ಹಿಂಬಾಲಿಸಿದಂತೆ ಕಾಣುತ್ತದೆ. ಜನಸಮುದಾಯದ ಜ್ಞಾನ ವಿಕಾಸಕ್ಕೆ ಲೈಬ್ರೆರಿಯು ಮುಖ್ಯ ಸಾಧನ, ಅದರ ಉಪಯೋಗವನ್ನು ಇಲ್ಲಿ ವಿವರಿಸಲು ಅವಶ್ಯವಿಲ್ಲ. ಇಲ್ಲಿ ಜನಸ್ತೋಮದ ಉತ್ಸಾಹವೇ ಲೈಬ್ರೆರಿಯ ಪ್ರಯೋಜನವನ್ನು ಸೂಚಿಸುತ್ತದೆ. ಚೆನ್ನಾಗಿ ಪ್ರಾರಂಭವಾದ ಈ ಸಂಸ್ಥೆಗೆ ಜಯವಾಗಲೆಂದು ಹಾರೈಸುತ್ತೇನೆ'ಂದು ಹೇಳಿ ಪುಸ್ತಕ ಭಂಡಾರವನ್ನು ತೆರೆದರು. ಈ ಭಾಷಣದ ಸಾರಾಂಶವು ಕನ್ನಡದಲ್ಲಿ ಹೇಳಲ್ಪಟ್ಟಿತು. ಜಮೀನ್ದಾರರ ಸಂಘದ ಅಧ್ಯಕ್ಷರಾಗಿ ರಾ॥ ಬಾ॥ ಕೆ. ಅಪ್ಪಯ್ಯನವರೂ, ಜೊತೆಯಲ್ಲಿ ಕೆಲಸ ಮಾಡಿದವರಾದ ಮೆ॥ ಯನ್. ಸುಬ್ಬಯ್ಯನವರೂ ಮೆ॥ ಬಿ. ಗಣಪತ್ತಿಯವರ ದೇಶಸೇವೆಯನ್ನು ಕುರಿತು ಮಾತನಾಡಿ ಲೈಬ್ರೆರಿಗೆ ಎಲ್ಲರೂ ಸಹಾಯ ಮಾಡಬೇಕೆಂದು ಕೇಳಿಕೊಂಡರು.

ಅಧ್ಯಕ್ಷರು ಹೇಳಿದರ ಸಾರಾಂಶವೇನೆಂದರೆ— 'ಮೆ॥ ಬಿದ್ದಂಡ ಗಣಪತ್ತಿಯವರ ಪರಿಚಿತಿಯು ನನಗೆ ಮದ್ರಾಸಿನಲ್ಲಿ ವಿದ್ಯಾರ್ಥಿದೆಶೆಯಲ್ಲಿಯೇ ಚೆನ್ನಾಗಿ ಆಗಿದೆ. ಅವರಲ್ಲಿ ಕೆಟ್ಟಗುಣಗಳೊಂದೂ ಇರಲಿಲ್ಲ. ಅವರಿಗೆ ಪುಸ್ತಕಗಳನ್ನು ಓದುವದರ ಮೇಲೆ ಬಹು ಪ್ರೇಮವಾದುದರಿಂದ ಅವರ ಜ್ಞಾಪಕಾರ್ಥವಾಗಿ ಲೈಬ್ರೆರಿ ಸ್ಥಾಪಿಸಿದಕ್ಕೆ ಯಾರೂ ವಿರೋಧಿಸಲಾರರು. ವಿದ್ಯಾರ್ಥಿಯಾಗಿರುವಾಗಲೇ ಅವರು ಕೊಡಗಿನ ಅಭಿವೃದ್ಧಿ ವಿಷಯ ಕುತೂಹಲವುಳ್ಳವರಾಗಿದ್ದರು. ಜಮೀನ್ದಾರರ ಸಂಘವನ್ನು ಹೂಡಿಸಿ ಅದಕ್ಕೆ ಜೀವ ಕೊಟ್ಟವರೇ ಇವರು. ಅಂದಿನಿಂದೀಚೆಗೆ ಕೊಡಗಿನಲ್ಲಿ ರಾಜಕೀಯ ಚಳವಳವು ಹರಡಿ ಜನರು ತಮ್ಮ ಹಕ್ಕು ಬಾಧ್ಯತೆಗಳನ್ನು ಪಡೆಯಲಿಕ್ಕಾಗಿ ಸಂಘದ ಮೂಲಕ ಹೋರಾಡಲಾರಂಭಿಸಿದರು. ಅವರು ಸಂಘದ ಮೂಲಕ ಕೆಲಸ ಮಾಡಿ ಜನರಲ್ಲಿ ತಿಳುವಳಿಕೆಯನ್ನು ಹೆಚ್ಚಿಸಿದರು. ಅಂಥವರ ಸ್ಮರಣೆಗಾಗಿ ದೇಶದಲ್ಲಿ ಜನರ ಜ್ಞಾನವನ್ನು ಹೆಚ್ಚಿಸುವಂಥ ಲೈಬ್ರೆರಿಯನ್ನು ಸ್ಥಾಪಿಸಿದ್ದು ಶ್ಲಾಘನೀಯವಾಗಿದೆ. ಇದಕ್ಕೆ ಸಹಾಯಾರ್ಥವಾಗಿ ಮೆ॥ ನ್ಯೂಕಮ್‌ರವರ ಉದಾರತ್ವವನ್ನು ಬೇರೆ ಅನೇಕ ಮಹನೀಯರು ಹಿಂಬಾಲಿಸಬೇಕಾಗಿದೆ. ಅಧ್ಯಕ್ಷ ಪದವಿಯ ಬಹುಮಾನವನ್ನು ನನಗೆ ಕೊಟ್ಟದ್ದಕ್ಕೆ ಪ್ರವೋಟರುಗಳಿಗೆ ಬಹಳ ವಂದಿಸುತ್ತೇನೆ.'' ಚಿಕ್ಕ ಬಾಲಿಕೆಯೊಬ್ಬಳು ರಾಷ್ಟ್ರೀಯ ಹಾಡನ್ನು ಹಾಡಿದನಂತರ ಮೆ॥ ಕೆ ಪಿ ಚಿಣ್ಣಪ್ಪನವರು ಅಧ್ಯಕ್ಷರಿಗೂ, ಮೆ॥ ನ್ಯೂಕಮ್‌ರವರಿಗೂ ನೆರೆದಿದ್ದ ಮಹನೀಯರಿಗೂ ವಂದಿಸಲು ಮೀಟಿಂಗು ಬರಕಾಸ್ತಾಯಿತು.

ಸೆಂಟ್ರಲ್ ಬ್ಯಾಂಕ್ ಮೀಟಿಂಗು.

(2ನೇ ಪುಟದಿಂದ ಮುಂದುವರಿದುದ್ದು.)

(1) ಮೆ. ಕೋಟೆರ ಚಿಣ್ಣಪ್ಪನವರು, (2) ಮೆ. ಪಂದ್ಯಂಡ ಬೆಳ್ಯಪ್ಪನವರು, (3) ಮೆ. ರಾವ್ ಸಾಹೇಬ್ ಪಿ. ದೇವಯ್ಯನವರು, (4) ಮೆ. ನಡಿಕೇರಿಯಂಡ ಸೋಮಯ್ಯನವರು, (5) ರಾವ್ ಸಾಹೇಬ್ ಕೋಡಿಮಣಿಯಂಡ ಸುಬ್ಬಯ್ಯನವರ (6) ಮೆ. ಪುತ್ತಮನೆ ಗಣಪಯ್ಯನವರು ಸಹ ಬ್ಯಾಲಟ್ ಮೂಲಕ ಸಂಘಗಳ ಪರ ಉಳಿದ ಆರು ಡೈರೆಕ್ಟರುಗಳಾಗಿ ಚುನಾಯಿತರಾದರು.

ಮೆ. ಕೆ ಕೆ. ಬೆಳ್ಯಯ್ಯನವರು ಅಧ್ಯಕ್ಷರಾಗಿ ಒಮ್ಮತದಿಂದ ಚುನಾಯಿತರಾದರು.

ಸೆಕ್ರೆಟರಿ ಕೆಲಸಕ್ಕೆ ಸಿ ಎನ್. ವೆಂಕಪ್ಪಯ್ಯನವರು ಬಹುಮತದಿಂದ ಚುನಾಯಿತರಾದರು.

ಮೆ. ಯಂ ಭುಜಂಗರಾಯರು ಒಮ್ಮತದಿಂದ ಟ್ರೆಜರರ್ ಆಗಿ ಆರಿಸಲ್ಪಟ್ಟರು.

ಮೆ. ಎ ಬಿ. ಚಂಗಪ್ಪನವರು ಮೀಟಿಂಗಿನ ನೋಟೀಸಿನಲ್ಲಿ ನಮೂದಿಸಿದ ವೇಳೆ 2 ಗಂಟೆಗೆ ಮೀಟಿಂಗ್ ಮಾಡದೆ ಮೂರುವರೆ ಗಂಟೆಗೆ ಮೀಟಿಂಗ್ ಮಾಡಿದ್ದಕ್ಕೆ ತಾನು ಆಕ್ಷೇಪಿಸುವದಾಗಿ ಬರೆದ ಕಾಗದವನ್ನು ಅಧ್ಯಕ್ಷರು ಓದಿ ಹೇಳಿದರು. ಮೀಟಿಂಗನ್ನು ಮೂರುಕಾಲು ಗಂಟೆಗೆ ನಡೆಸಲು ಕಾರಣವನ್ನು ತಾನು ಪ್ರಾರಂಭದಲ್ಲೇ ವಿವರಿಸಿದ್ದೇನೆಂದು ಅಧ್ಯಕ್ಷರು ಹೇಳಿದಕ್ಕೆ ಸಭಿಕರೆಲ್ಲರೂ ತಾವು ಒಪ್ಪಿಗೆ ಕೊಟ್ಟಿದ್ದು ಹಾಗೆಂತ ಸೂಚಿಸಿದ ಮೇಲೆ ಮೆ. ಚಂಗಪ್ಪನವರಿಗೆ ಇದನ್ನು ತಿಳಿಸಬೇಕೆಂತ ತೀರ್ಮಾನವಾಯಿತು.

ಹೊಸದಾಗಿ ಚುನಾಯಿಸಿದ ಡೈರೆಕ್ಟರುಗಳಿಗೂ ಅಧ್ಯಕ್ಷರಿಗೂ, ವಂದನೆಗಳನ್ನು ಸೂಚಿಸಿ ಸಭೆಯು ಬರಕಾಸ್ತಾಯಿತು.

ಗೌಡ ವಿದ್ಯಾಭಿವರ್ಧನಿ ಸಂಘ.

1926ನೇ ಜನವರಿ ತಾರೀಖು 30ರಲ್ಲು ಮಡಿಕೇರಿಯಲ್ಲಿ ನಡೆದ ಈ ಸಂಘದ ಕಮಿಟಿ ಮೀಟಿಂಗಿನ ಪ್ರೊಸೀಡಿಂಗ್ಸ್.

1. ಸಂಘದ ಕಮಿಟಿ ಮತ್ತು ಸಬ್ ಕಮಿಟಿ ಮೆಂಬರುಗಳು ಆಯಾಯ ನಾಡಿನ ನಾಲ್ಕಾರು ಯಾ ಸಾಧ್ಯವಾದಷ್ಟು ಹೆಚ್ಚು ಗ್ರಾಮಗಳನ್ನು ಸೇರಿಸಿ ಒಂದು ಸಾಧಾರಣ ಮೀಟಿಂಗ್ ನಡಿಸಬೇಕು.

2. ಅಂಥಾ ಮೀಟಿಂಗು ಆದಿತ್ಯವಾರದಲ್ಲಾಗಿದ್ದು, ಕಮಿಟಿ ಮತ್ತು ಸಬ್ ಕಮಿಟಿ ಮೆಂಬರುಗಳು ಪ್ರತಿ ಮನೆಯ ಗೌಡ ಮಹಾಜನಗಳಿಗೆ ಮೀಟಿಂಗಿಗೆ ಹಾಜರಾಗಲು ವಿಜ್ಞಾಪನಾ ನೋಟೀಸ್ ಕೊಡತಕ್ಕದ್ದು.

3. ಸದರಿ ಮೀಟಿಂಗಿಗೆ ಸಂಘದ ಪ್ರೆಸಿಡೆಂಟರನ್ನು ಅಧ್ಯಕ್ಷರನ್ನಾಗಿ ಆರಿಸಿ, ಅವರು ಸಂಘದ ಉದ್ದೇಶವನ್ನು ಕುರಿತು ದೇಶದ ಎಲ್ಲಾ ಗೌಡ ಮಹನೀಯರು ಚಂದಾ ಪಾವತಿ ಮಾಡುವ ಬಗ್ಗೆ ಉಪನ್ಯಾಸಗಳನ್ನು ಮಾಡತಕ್ಕದ್ದು.

4. ಮೇಲ್ಕಂಡ ಆಯಾಯ ಮೀಟಿಂಗಿನಲ್ಲಿ ಸಾಧ್ಯವಾದಷ್ಟು ಚಂದಾ ವಸೂಲು ಮಾಡತಕ್ಕದ್ದು. ಈ ಸಂಗತಿ ಕಮಿಟಿ ಮತ್ತು ಸಬ್ ಕಮಿಟಿ ಮೆಂಬರುಗಳು ಮೀಟಿಂಗಿಗೆ ಹಾಜರಾಗಲು ಗೌಡ ಮಹಾ ಜನಗಳಿಗೆ ಕೊಡುವ ವಿಜ್ಞಾಪನಾ ನೋಟೀಸಿನಲ್ಲು ತಮ್ಮ ತಮ್ಮ ಚಂದಾ ಸಮೇತ ಹಾಜರಾಗಬೇಕೆಂದು ನಮೂದಿಸುವದು.

ಎಂ. ಎ ಪೊನ್ನಪ್ಪ,
ಕಾರ್ಯದರ್ಶಿ.

ಜಮೀನ್ದಾರರ ಸಂಘದ ವಿಶೇಷ ಜನರಲ್ ಮೀಟಿಂಗು.

ಬ್ರೀಚ್ ಆಫ್ ಕಂಟ್ರಾಕ್ಟು ಆಕ್ಟಿನ ಬಿಲ್ಲನ್ನು ಚರ್ಚಿಸಲಿಕ್ಕಾಗಿ ಜನವರಿ ತಾ 30ರಲ್ಲು ಮಧ್ಯಾಹ್ನ 1 ಗಂಟೆಗೆ ಜಮೀನ್ದಾರರ ಸಂಘದ ವಿಶೇಷ ಜನರಲ್ ಮೀಟಿಂಗು ವೀರಾಜಪೇಟೆ ಮೋಡಲ್ ಸ್ಕೂಲು ಹಾಲಿನಲ್ಲಿ ಮ. ರಾ. ಬಾ. ಕೋದಂಡ ಅಪ್ಪಯ್ಯನವರ ಅಧ್ಯಕ್ಷತೆಯಲ್ಲಿ ನಡೆಯಿತು. ಸುಮಾರು 300 ಜನರು ನೆರೆದಿದ್ದರು. ಅಧ್ಯಕ್ಷರು ಮೀಟಿಂಗಿನ ಉದ್ದೇಶವನ್ನು ವಿವರಿಸಿದರು. ನೆರೆದ ಜನರ ಕೋರಿಕೆ ಮೇರೆ ಸೆಕ್ರೆಟರಿಯವರು ಬಿಲ್ಲನ್ನೂ, ಸಂಘದ ಕಮಿಟಿಯವರು ಬಿಲ್ಲಿನ ಮೇಲೆ ಕೊಟ್ಟಿರುವ ಅಭಿಪ್ರಾಯವನ್ನೂ ಓದಿದರು. ಸಿಲೆಕ್ಟ ಕಮಿಟಿಯವರು ಮಾಡಿದ ಬದಲಾವಣೆಗಳೂ ಸೂಚಿಸಲಾದವು. ಬಿಲ್ಲನ್ನು ಸರ್ಕಾರ್ ವಾರು ಚರ್ಚಿಸಿ ಅಭಿಪ್ರಾಯ ಕೊಡಬೇಕೆಂದೂ ಕೆಲವರೂ ಬಿಲ್ಲನ್ನು ಪೂರ್ತಿಯಾಗಿ ಕೂಡಲೇ ತಿರಸ್ಕರಿಸಬೇಕೆಂದು ಇನ್ನು ಕೆಲವರೂ ಹೇಳಿದರು. ಬಿಲ್ಲನ್ನು ಪೂರ್ತಿ ವಿರೋಧಿಸುವವರ ಚರ್ಚೆಗೆ ಅಧ್ಯಕ್ಷರು ಅವಕಾಶ ಕೊಟ್ಟರು.

ಮೆ. ಕೋಟೆರ ಚಿಣ್ಣಪ್ಪನವರು, 'ನಾವು ಬ್ರಿಟಿಷ್ ಸರ್ಕಾರದಿಂದ ಸ್ವರಾಜ್ಯ ಕೇಳುತ್ತಿರುವಲ್ಲು ಆಳುಗಳಿಗೆ ನಾವು ಸ್ವತಂತ್ರ ಕೊಡದೆ ಇರುವುದು ಸರಿಯಲ್ಲ. ದಕ್ಷಿಣ ಆಫ್ರಿಕದಲ್ಲಿ ಬಿಳೀ ಜನರು ಹಿಂದೀಯರಿಗೆ ಬಹಳ ಅವಮರ್ಯಾದೆ ಮಾಡುತ್ತಿರುವುದಕ್ಕೆ ನಾವು ವಿರೋಧಿಸುತ್ತಿದ್ದೇವೆ. ನಮ್ಮ ದೇಶದ ಎಲ್ಲರಿಗೂ ಸ್ವತಂತ್ರ ಕೊಡಲು ನಾವು ಸಿದ್ಧರಾದರೆ ಮಾತ್ರ ನಮಗೆ ಸ್ವರಾಜ್ಯ ದೊರೆಯುವುದು, ನಮ್ಮ ಸಹೋದರರಿಗೆ ದೇಶಾಂತರಗಳಲ್ಲಿ ಮರ್ಯಾದೆ ಸಿಕ್ಕುವದೆಂದು' ಮುಂತಾಗಿ ಹೇಳಿ ಬಿಲ್ಲಿಗೆ ವಿರೋಧಿಸಿದರು. ಮೆ. ಕೊಳ್ಳಿಮಾಡ ಕರುಂಬೈಯ್ಯನವರು ಮೇಲಿನ ಅಭಿಪ್ರಾಯಗಳನ್ನೇ ಸೂಚಿಸಿ ನಾವು ಋಣ ಸಾಲತೆಗೆದುಕೊಂಡು ಮೋಸಮಾಡಿದರೆ ನಮಗೆ ಸಿವಿಲ್ ಸಜಾ, ಕೂಲಿಗಾರರು ಹಾಗೆ ಮಾಡಿದರೆ ಅವರಿಗೆ ಕ್ರಿಮಿನಲ್ ಸಜಾ ಕೊಡುವುದು ಅನ್ಯಾಯವಾಗಿದೆ? ಈಬಿಲ್ಲಿನಿಂದ ಉದ್ಯೋಸ್ಥರಿಗೆ ಹೆಚ್ಚು ಅಧಿಕಾರಕೊಟ್ಟಂತಾಗುತ್ತದೆಂದು ಹೇಳಿ ಬಿಲ್ಲನ್ನು ತಿರಸ್ಕರಿಸಬೇಕೆಂದರು. ಸರ್ಕಾರ್‌ವಾರು ಚರ್ಚಿಸುವುದಕ್ಕಿಂತ ಒಟ್ಟಾರೆ ಬಿಲ್ಲನ್ನು ತಿರಸ್ಕರಿಸುವುದು ಉತ್ತಮವೆಂದೂ ಆಕ್ಟಿಲ್ಲದಿದ್ದರೆ ಯಾರಿಗೂ ತೊಂದರೆಯಾಗಲಿಕ್ಕಿಲ್ಲವೆಂದೂ ಮುಂತಾಗಿ ಮೆ. ನಾಯಡ ಬೆಳ್ಯಪ್ಪನವರು ಹೇಳಿದರು. ಮೆ. ಕೋಣೆರಿರ ಅಪ್ಪಯ್ಯನವರು ಈ ದೇಶಕ್ಕೆ ಕೂಲಿ ಕೆಲಸದವರಲ್ಲಿ ಹೆಚ್ಚಿನವರು ಪರಪ್ರಾಂತ್ಯಗಳಿಂದ ಬರುವುದರಿಂದ ಆಕ್ಟನ್ನು ಒಡನೆ ರದ್ದು ಮಾಡುವುದು ಸರಿಯಲ್ಲವೆಂತಲೂ, ಆಳುಗಳ ಮತ್ತು ಮಾಲೀಕರ ಪ್ರಯೋಜನಕ್ಕಾಗಿಯೇ ಆಕ್ಟನ್ನು ಈಗಕ್ಕೆ ಇಟ್ಟುಕೊಳ್ಳಬೇಕೆಂತಲೂ ಮೊದಲಾಗಿ ಹೇಳಿ ಬಿಲ್ಲಿಗೆ ಪರವಾಗಿ ಮಾತಾಡಿದರು. ಮೆ. ಪೊನ್ನಲತಂಡ ಚಿಣ್ಣಪ್ಪನವರು ನನ್ನಂಥ ಮುದುಕರು ಸಹಾಯಕರಿಲ್ಲದ ಹೆಂಗಸರು ಆಳುಗಳಿಲ್ಲದೆ ಆರಂಭ ಮಾಡುವುದು ಹೇಗೆ, ಆಳ್ಗಳದ್ದರೂ ತಪ್ಪಿತಸ್ಥರಿಗೆ ಶಿಕ್ಷೆಯಿಲ್ಲದೆ ಬೇರೆಯವರಿಗಲ್ಲವೆಂದು ಸೂಚಿಸಿ ಆಕ್ಟನ್ನು ಇಡಬೇಕೆಂದ ಹೇಳಿದರು. ಆಳುಗಳನ್ನು ನಂಬಿ ರೈತರು ತಮ್ಮ ಭೂಮಿವ್ಯವಸಾಯಕ್ಕೆ ಗಮನಕೊಡುವುದಿಲ್ಲ, ಐದು ವರ್ಷದಲ್ಲಿ ಹೋಗುವ ಆಕ್ಟು ಈಗಲೇ ಹೋದರೆ ದೇಶದ ದುರವಸ್ಥೆಯು ಹೋಗಿ ಸುಭಿಕ್ಷವಾಗುವದೆಂದು ಮೆ. ಬಿಮ್ಮಡ ಮಾದಪ್ಪನವರು ಹೇಳಿದರು. ಮೆ. ಕೇಳಪಂಡ ಅಚ್ಚಯ್ಯನವರು ಬಿಲ್ಲಿಗೆ ಪರವಾಗಿ ಮಾತನಾಡಿದ್ದೇನೆಂದರೆ—'' ಈ ವಿರೋಧಿಸಲು ಮಾತಾಡಿದ ಕೆಲವರು ಮಹಾತ್ಮ ಗಾಂಧಿಯವರ ಉದಾಹರಣೆಯನ್ನು ಕೊಟ್ಟರು. ಅವರು ನಡಿಯುವಂತೆ ನಡೆಯುವುದು ಅವರ ಹೆಸರೆತ್ತುವದು ಯುಕ್ತವಲ್ಲ. ಈ ಬಿಲ್ಲಿನಲ್ಲಿ ಆಳುಗಳಿಗೆ ಕೆಲ ಅನುಕೂಲ ದೊರೆತಿದೆ. ನಾವು ಆಳುಗಳನ್ನು ಚೆನ್ನಾಗಿ ನೋಡುವುದಿಲ್ಲವೆಂಬುದು ನಿಜವಲ್ಲ. ಆಕ್ಟಿಲ್ಲದಿದ್ದರೆ ಹಣವಂತರಲ್ಲಿಯೇ ಆಳುಗಳು ಸೇರುವರು. ಬಡವರಿಗೆ ಕಷ್ಟವಾಗುವದು.'' ಯಜಮಾನರಿಗೂ ಆಳುಗಳಿಗೂ ಕಷ್ಟವಾಗುವದರಿಂದ ಬಿಲ್ಲನ್ನು ಒಡನೆ ರದ್ದುಮಾಡಬಾರದೆಂದು ಮೆ॥ ಪೊಡನೋಲಂಡ ಭೀಮಯ್ಯನವರು ಮಾತಾಡಿದರು. ಮೆ॥ ಕೊಡಂದೇರ ಕುಟ್ಟಯ್ಯನವರು, ಈಗಿನ ಬಿಲ್ಲಿನಂಥ ಆಕ್ಟು ನಮಗೆ ಬೇಡ, ಇದರಂತೆ ಆಳಿಗೆ ಒಂದು ಸಜವಾದರೆ ಯಜಮಾನನಿಗೆ ಮೂರು ಸಜ, ಮಾಲೀಕರಿಗೆ ಲಾಯರುಗಳ ಸಹಾಯ ಹೆಚ್ಚು ಬೇಕಾಗುತ್ತೆ, 5 ವರ್ಷದ ನಂತರ ಈ ಕಾನೂನು ಇರುವುದಿಲ್ಲವಾದರೆ ಈಗಲೇ ಹೋಗಲಿ, ಎಂದು ಮುಂತಾಗಿ ಮಾತಾಡಿದರು. ಮೆ॥ ಬಿದ್ದಂಡ ಬೋಪ್ಪಯ್ಯನವರು ಆಕ್ಟಿಗೆ ವಿರೋಧಿಸಿ ಮಾತಾಡಿದಾಗ ಆಕ್ಟು ಇಲ್ಲದಿದ್ದರೆ ಆಳುಗಳ ಸಂಬಳ ಹೆಚ್ಚುತ್ತದೆ. ಎಲ್ಲರೂ ಹೆಚ್ಚಿನ ಸಂಬಳ ಸಿಕ್ಕುವ ಕಡೆ ಕೆಲಸ ಮಾಡಿ ಸಂಪಾದಿಸ ಬಹುದು ಎಂದು ಹೇಳಿದರು. ಮೆ॥ ಪಿ. ಟಿ. ಕುಶಾಲಪ್ಪನವರು ಆಕ್ಟಿಗೆ ಬೆಂಬಲವಾಗಿ ಹೇಳಿದ್ದೇನೆಂದರೆ—' ಈ ಬಿಲ್ಲಿನಲ್ಲಿರುವಂಥ ಕೆಲವು ಮುಳ್ಳುಗಳ ಮೊನೆ ಮುರಿದಿದ್ದೇವೆ, ಈ ಆಕ್ಟನ್ನು ಒಪ್ಪಿಕೊಳ್ಳದಿದ್ದರೆ ಮದ್ರಾಸು ಆಕ್ಟನ್ನು ಪ್ಲಾಂಟರುಗಳ ಪ್ರಯೋಜನಕ್ಕಾಗಿ ಸರಕಾರದವರು ಜಾರಿಗೆ ತರಬಹುದು, ಆಗ ರೈತರು ತೋಟಗಾರರ ಆಳುಗಳಾಗಬೇಕಾಗುವುದು. ನನ್ನ ತಾಲೋಕಿನವರು ಆಕ್ಟು ಬೇಕೆಂದು ಹೇಳುತ್ತಿದ್ದಾರೆ. ಆತುರದಲ್ಲಿ ಬಿಲ್ಲಿಗೆ ವಿರೋಧಿಸಬೇಡಿ'. ಮೆ. ಪಾಲೇಕಂಡ ಮೇದಪ್ಪನವರು ಅಂದದ್ದೇನೆಂದರೆ—ನಾವು ಸ್ವತಂತ್ರಕ್ಕೆ ಹೋರಾಡುತ್ತಿರುವಾಗ ಆಳುಗಳನ್ನು ನಿರ್ಬಂಧದಲ್ಲಿ ಇಡುವದು ಸರಿಯಲ್ಲ. ಈ ಆಕ್ಟನ್ನು ತಿರಸ್ಕರಿಸಿದರೆ ಮದ್ರಾಸು ಲೇಬರ್ ಆಕ್ಟನ್ನು ಪ್ಲಾಂಟರುಗಳಿಗಾಗಿ ಇಲ್ಲಿ ಜಾರಿಗೆ ತರುವದು ಅಸಾಧ್ಯ. ಅಲ್ಲಿಯ ಆಕ್ಟನ್ನು ರದ್ದುಮಾಡಲಿಕ್ಕೆ ಒಂದು ಕಮಿಟಿಯಾಗಿದೆ. ಹಾಗೆ ಬೇರೆ ಆಕ್ಟನ್ನು ತಂದರೂ ಕೌನ್ಸಿಲಿನವರು ನಾರದಂತೆ ಮಾಡಬಹುದು, ಮೊದಲಾಗಿ ಮಾತಾಡಿದರು. ಮೆ. ಸಿ. ಎಸ್. ಉತ್ತಯ್ಯನವರು ಬಿಲ್ಲಿಗೆ ವಿರೋಧವಾಗಿ ಮಾತಾಡಿದರು. ಇನ್ನು ಹಲವರು ಮಾತಾಡಬೇಕೆಂದಿದ್ದರೂ ಸಮಯವಿಲ್ಲದ್ದರಿಂದ ಬ್ರೀಚ್ ಆಫ್ ಕಂಟ್ರಾಕ್ಟ್ ಆಕ್ಟು ಬೇಡವೆಂಬ ಠರಾವು ಓಟಿಗೆ ಹಾಕಲ್ಪಟ್ಟಲ್ಲು 48 ಜನರು ಠರಾವಿಗೆ ವಿರೋಧವಾಗಿಯೂ ಅನೇಕರು ಪರವಾಗಿಯೂ ಓಟು ಕೊಟ್ಟದ್ದರಿಂದ ಆ ಠರಾವು ಬಹುಮತದಿಂದ ಮಂಜೂರಾಯಿತು.

ಓರಿಯಂಟಲ್ ಗವರ್ನ್‌ಮೆಂಟ್ ಸೆಕ್ಯೂರಿಟಿ ಲೈಫ್ ಅಷ್ಯೂರೆನ್ಸ್ ಕಂಪೆನಿ ಲಿಮಿಟೆಡ್.

ಬೆಂಗಳೂರಿನಲ್ಲಿ ನೂತನವಾಗಿ ನಿರ್ಮಿಸಿರುವ ಓರಿಯಂಟಲ್ ಕಟ್ಟಡಗಳು.

ಮೇಲ್ಕಂಡ ಕಟ್ಟಡಗಳ ಗೃಹಪ್ರವೇಶ ಮಹೋತ್ಸವು ಇದೇ ಸಂವತ್ಸರ ಜನವರಿ 28ನೇ ತಾರೀಖಿನಲ್ಲಿ ಬಹಳ ವಿಜೃಂಭಣೆಯಿಂದ ನಡೆಯಿತು. ಮಳೆಯನ್ನು ಸೂಚಿಸಿ ಭಯಪಡಿಸುತ್ತಿದ್ದ ಮೇಘಗಳು ಚದರಿ ಹೋಗಿ ಹವ ಬಹಳ ರಮ್ಯವಾಗಿದ್ದಿತು. ಅಭ್ಯಾಗತರನ್ನು ಸ್ವೀಕರಿಸಿ ಆದರಿಸಲು ಮಾಡಿದ್ದ ಏರ್ಪಾಟುಗಳು ಸಮರ್ಪಕವಾಗಿದ್ದವು. ಸಭೆಯು ಕನಿಷ್ಟಪಕ್ಷ ಎರಡು ಸಾವಿರ ಜನಗಳಿಗೆ ಕಡಿಮೆ ಇಲ್ಲದಂತೆ ಸೇರಿತ್ತು. ಹೈಲ್ಯಾಂಡ್ ಯಿನ್‌ಪೆಂಟ್ರಿಯವರ ವಾದ್ಯವು ಶ್ಲಾಘ್ಯತರವಾಗಿದ್ದಿತು. ಕಟ್ಟಡಗಳು ಧ್ವಜಪತಾಕೆಗಳಿಂದಲೂ ಮತ್ತು ತೋರಣಗಳಿಂದಲೂ ಅಲಂಕರಿಸಲ್ಪಟ್ಟಿದ್ದವು. ಸಂಧ್ಯಾಕಾಲದಲ್ಲಿ ಜಾಜ್ವಲ್ಯಮಾನವಾದ ವಿದ್ಯುತ್ ಶಕ್ತಿಯ ದೀಪಗಳಿಂದ ಅಲಂಕೃತವಾದ ಕಟ್ಟಡಗಳ ನೋಟವು ಪ್ರೇಕ್ಷಕರಿಗೆ ಆತ್ಯಾನಂದವನ್ನುಂಟು ಮಾಡಿತು. ತಂಡೋಪತಂಡವಾಗಿ ಬರುತ್ತಿದ್ದ ಅಭ್ಯಾಗತರನ್ನು ಬ್ರಾಂಚ್ ಸೆಕ್ರೆಟರಿ ಮ॥ ರಾ॥ ಪಿ ವಿ ಸುಬ್ರಹ್ಮಣ್ಯ ಐಯ್ಯರ್‌ರವರು ಆತ್ಯಾದರ ಪೂರ್ವಕವಾಗಿ ಸ್ವೀಕರಿಸಿ ತಕ್ಕ ಸ್ಥಾನಗಳಲ್ಲಿ ಕುಳ್ಳಿರಿಸಿದರು.

ಸಭಾಧ್ಯಕ್ಷಕರಾದ ಮಿಸ್ಟರ್ ಟಿ. ಬಿ ರಸೆಲ್ ಎ. ಸಿ ಎಸ್. ಸಾಹೇಬರವರು ಆಗ್ರಾಸನವನ್ನು ಅಲಂಕರಿಸಿದನಂತರ ಬ್ರಾಂಚ್ ಸೆಕ್ರೆಟರಿಯವರು ಘನವಂತರಾದ ಸಂಘದ ಬೋರ್ಡಿನ ಚೇರ್‌ಮೆನ್‌ರವರಿಂದ ಕಟ್ಟಡಗಳ ವಿಷಯದಲ್ಲಿಯೂ, ಮ॥ ರಾ॥ ಸುಬ್ರಹ್ಮಣ್ಯ ಅಯ್ಯರ್‌ರವರ ಕಾರ್ಯನಿರ್ವಾಹಕ ಸಮರ್ಥತೆ ವಿಷಯದಲ್ಲಿಯೂ ಮತ್ತು ಸಂಘದ ಶ್ರೇಯೋಭಿವೃದ್ಧಿಯನ್ನು ತೋರತಕ್ಕ ಸರ್ವರಿಗೂ ಅವರ ವಂದನೆಗಳನ್ನು ಸಲ್ಲಿಸಬೇಕಾದ ವಿಷಯದಲ್ಲಿಯೂ ಬಂದ ಪತ್ರಿಕೆಯನ್ನು ಸಭಿಕರಿಗೆ ಓದಿ ಹೇಳಿದುದಲ್ಲದೆ ಬೆಂಗಳೂರು ಬ್ರಾಂಚಿನ ಅಭಿವೃದ್ಧಿ ಸ್ಥಿತಿಯ ವಿಷಯದಲ್ಲಿಯೂ ಮತ್ತು ಈ ಅಭಿವೃದ್ಧಿಗೆ ಏಜೆಂಟರುಗಳು ಹೆಚ್ಚಾದ ಭಾಗಿಗಳೆಂತಲೂ ಭಾಷಣ ಮಾಡಿದರು.

ಮ॥ ರಾ॥ ಸಂಪತ್ತೈಯ್ಯಂಗಾರ್‌ರವರು ಮಿಸ್ಟರ್ ಎಚ್ ಎಫ್ ವಿನ್ ಜೋನ್ಸ್‌ರವರು ಮ್ಯಾನೇಜರಾಗಿ ಬಂದನಂತರ ಏಜೆಂಟರುಗಳಿಗೆ ದಯಪಾಲಿಸಿದ ಅಪೇಕ್ಷಾವಾದ ಉತ್ತೇಜನಗಳಿಗಾಗಿ ಮ್ಯಾನೇಜರವರನ್ನೂ ಮತ್ತು ಬ್ರಾಂಚ್ ಸೆಕ್ರೆಟರಿಯವರನ್ನೂ ವಂದಿಸಿದುದಲ್ಲದೆ ಮುಂದಕ್ಕೂ ಇನ್ನೂ ವಿಶೇಷವಾದ ಉತ್ತೇಜನವನ್ನು ಏಜೆಂಟರುಗಳಿಗೆ ಕೊಡಬೇಕೆಂಬ ವಿಚಾರದಲ್ಲಿ ಭಾಷಣ ಮಾಡಿದರು.

ತರುವಾಯ ಮಿಸ್ಟರ್ ರಸೆಲ್ ಸಾಹೇಬರವರು ಮ॥ ರಾ॥ ಸುಬ್ರಹ್ಮಣ್ಯ ಐಯ್ಯರವರಿಗೂ ಮತ್ತು ಸಭೆಗೂ ವಂದಿಸಿ ಸಂಕ್ಷೇಪವಾಗಿ ಕಂಪನಿಯ ಚರಿತ್ರೆಯನ್ನೂ ಮತ್ತು ಸ್ವದೇಶಸ್ಥರೂ ಪರದೇಶಸ್ಥರೂ ಎಂಬ ಭಾವನೆಯಿಲ್ಲದೆ ಮತಭೇದವಿಲ್ಲದೆ ಐಕಮತ್ಯದಿಂದ ಕೂಡಿ ಕಂಪೆನಿಯ ಅಭಿವೃದ್ಧಿಯನ್ನು ನೋಡಬೇಕೆಂಬುವ ವಿಷಯದಲ್ಲಿಯೂ ಭಾಷಣ ಮಾಡಿದರು. ಮತ್ತು ಇಂಥಾ ರಮ್ಯವಾದ ಭವನವನ್ನು ಬೆಂಗಳೂರಿನಲ್ಲಿ ರಚಿಸಿ ಪಟ್ಟಣ ಶೃಂಗಾರವನ್ನು ಮತಿಮೀರಿ ಹೆಚ್ಚಿಸಿದುದಕ್ಕಾಗಿ ಮುನಿಸಿಪಲ್ ಪ್ರೆಸಿಡೆಂಟರಾದ ಅವರು ಕಂಪನಿಯ ಡೈರೆಕ್ಟರುಗಳಿಗೂ ಶಿಲ್ಪಿಯವರಿಗೂ ಮತ್ತು ರಚಿಸಿದವರಿಗೂ ವಂದಿಸಿ ಕಂಪೆನಿಯ ಶ್ರೇಯೋಭಿವೃದ್ಧಿಯನ್ನು ಕೋರಿದರು.

ತರುವಾಯ ಮಿಸ್ಟರ್ ರಸ್ಸೆಲ್ ಸಾಹೇಬರವರೂ ಅವರ ಪತ್ನಿಯವರೂ ಫಲಪುಷ್ಪಾಹಾರಗಳನ್ನು ಸ್ವೀಕರಿಸಿ ಮಂಗಳ ವಾ

ಘ್ಯಗಳು ಘೋಷಿಸುತ್ತಿರಲು ಮಂದಿರದ ಸಮೀಪಕ್ಕೆ ದಯಮಾಡಿದರು. ದೇವ ಪ್ರಾರ್ಥನೆಯಾದ ನಂತರ ಮಿಸ್ಟರ್ ರಸ್ಸೆಲ್ ಸಾಹೇಬರವರ ಪತ್ನಿಯವರು ಬಾಗಿಲಿನ ಬೀಗವನ್ನು ತೆಗೆದು ಗೃಹ ಪ್ರವೇಶಮಾಡಿದರು. ಒಡನೆಯೇ ಸಭಿಕರೆಲ್ಲರು ಹಿಂಬಾಲಿಸಿ ದಿವ್ಯ ತರವಾದ ಭವನದ ಅವಲೋಕನದಿಂದ ಸಂತೋಷಿತರಾಗಿ ಫಲಪುಷ್ಪಗಳನ್ನು ಸ್ವೀಕರಿಸಿ ಕಂಪೆನಿಗೆ ಶ್ರೇಯಸ್ಸನ್ನು ಕೋರಿ ತೆರಳಿದರು

ನೋಟೀಸು.

ಇದರಿಂದ ಸಮಸ್ತ ಜನರಿಗೂ ತಿಳಿಯಪಡಿಸುವುದೇನೆಂದರೆ.—

ನನ್ನ ಬಿಳುಪು, ಕೆಂಪು, ಕಪ್ಪು ಮಿಶ್ರವಾದ ವರ್ಣದ ನಾಲ್ಕು ಅಡಿ ಎತ್ತರವುಳ್ಳ 1½ ಗೇಣು ಉದ್ದದ ಮುಂಭಾಗಕ್ಕೆ ಬಾಗಿದಕೋಡುಗಳುಳ್ಳ ಬಾಲದತುದಿಯಲ್ಲಿ ಬಿಳಿಗೊಂಡೆಯುಳ್ಳ ಕಚ್ಚುಗಟ್ಟಿದಮೂರುವರ್ಷದ ಹೋರಿಯ ಮಧ್ಯಪ್ರಾಯದ ಒಂದು ಹಸುವು, ತಾರೀಖು 19—1—1926 ರಿಂದ ನನ್ನ ದನಗಳ ಜೊತೆಯಿಂದ ಮಡಿಕೇರಿಯಿಂದ ಪರಾರಿಯಾಗಿ ಪತ್ತೆಯಾಗಿರುವುದಿಲ್ಲ. ಆದ್ದರಿಂದ ಇದನ್ನು ಪತ್ತೆಮಾಡಿ ಈ ಕೆಳಗಿನ ಅಡ್ರೆಸಿಗೆ ತಿಳಿಸಿದವರಿಗೆ ನಾಲ್ಕು ರೂಪಾಯಿ ಇನಾಮು ಕೊಡುತ್ತೇನೆ

ತಾ 30—1—6 ಪೂತಂಡ ಕುಟ್ಟಪ್ಪ.

ಹೆಡ್ಡ್ ಸರ್ವೆಯರ್,

ಲ್ಯಾಂಡ್ ರೆಕಾರ್ಡ್ ಆಫೀಸು, ಮಡಿಕೇರಿ

ವರ್ತಮಾನ ಸಂಗ್ರಹ

ಒಳದೇಶ

ಈ ವರ್ಷ ಮಡಿಕೇರಿಯಲ್ಲಿ ಕುದುರೆ ಓಟಗಳು ಈ ತಾ 16 ಮತ್ತು 18ರಲ್ಲಿ ನಡೆಯುವವು

ಬಲಮುರಿ ರಸ್ತು ಕೋಕೇರಿ ಗ್ರೈನ್ ಬ್ಯಾಂಕುಗಳನ್ನು ಒಡೆದರೂ ಲಿಕ್ವಿಡೇಟ್ ಮಾಡದೆ ಅದೇ ಹೆಸರುಗಳಲ್ಲಿ ಪುನಹ ರಿಜಿಸ್ಟರ್ ಮಾಡಿರುವರು

ಶಾಲಾ ಇನ್‌ಸ್ಪೆಕ್ಟರಾದ ಮ ಪಿಟ್ಸ್‌ರವರು ಒರುವ ಏಪ್ರಿಲ್ ತಿಂಗಳ 12ರಿಂದ ಏಳು ತಿಂಗಳು ರಜೆಯಲ್ಲಿ ಹೋಗುವರು.

ಕಳೆದ ಶನಿವಾರ ದೇಶದ ಹಲವು ಕಡೆಗಳಲ್ಲಿ ಸಾಧಾರಣದ ಒಂದು ಮಳೆ ಬಿತ್ತು, ಈಗ ಮಳೆಯ ಭೀತಿಯು ಕಡಿಮೆಯಾಗಿದ್ದರೂ ಒಂದೊಂದು ವೇಳೆ ಮೋಡಗಳು ಸೇರುತ್ತಿವೆ,

ತಾವುನಾಡು ದನಗಳ ವಿಮೆ ಸಂಘದ ಲಿಕ್ವಿಡೇಶನ್ ಬಗ್ಗೆ ಒಂದು ಜನರಲ್ ಮೀಟಿಂಗು ಈ ತಾ 25ನೇ ಗುರುವಾರ ಮಧ್ಯಾಹ್ನ 12½ ಗಂಟೆಗೆ ಭಾಗಮಂಡಲ ಶಾಲೆ ಒಳ ನಡೆಯುವುದೆಂದು ಸಂಘದ ಲಿಕ್ವಿಡೇಟರು ತಿಳಿಸಿದ್ದಾರೆ.

ಶ್ರೀಮಂಗಲನಾಡು ಕುರ್ಚಿ ಗ್ರಾಮದಲ್ಲಿ ಬರುವ ಮಹಾಶಿವರಾತ್ರಿಯ ಸಮಯದಲ್ಲಿ ನಡೆಯುವ ಇರುಪ್ಪು ಜಾತ್ರೆಗೆ ಈ ತಾ. 11 ಮತ್ತು 12ರಲ್ಲು ಪ್ಲೇಗ್ ಯಾ ವಾಂತಿಭೇದಿ ತಗಲಿದ ಪ್ರದೇಶಗಳಿಂದ ಜನರು ಬರುವದನ್ನು ಸರ್ಕಾರದವರು ಪ್ರತಿಬಂಧಪಡಿಸಿರುವರು.

ಕಳೆದ ಕೌನ್ಸಿಲು ಮೀಟಿಂಗಿನಲ್ಲಿ ಅಧ್ಯಕ್ಷರು ಸೂಚಿಸಿದಂತೆ ಈ ತಾ. 9ರಲ್ಲಿ ಕೌನ್ಸಿಲು ಸಭೆಸೇರ ತಪ್ಪಿದ್ದುವೆಂತಲೂ ಈ ತಿಂಗಳ ಮೂರನೇ ವಾರದ ಮಧ್ಯದಲ್ಲಾಗಲೀ ಅಂತ್ಯದಲ್ಲಾಗಲೀ ಮೀಟಿಂಗು ನಡೆಯುವದೆಂದೂ ಮೀಟಿಂಗಿನ ತಾರೀಕು ಹಿಂದಳಿಂದ ತಿಳಿಯ ಪಡಿಸಲಾಗುವದೆಂದೂ ಕೌನ್ಸಿಲಿನ ಸೆಕ್ರೆಟರಿಯವರು ತಿಳಿಸಿರುತ್ತಾರೆ.

ಕಳೆದ ತಾ 30ರ ರಾತ್ರಿ ತಿತಿಮತಿ ಬಳಿ ಅಮ್ಮಕೊಡಗರ ಬಿ. ಅಪ್ಪಣ್ಣನೆಂಬವನು ಬೇರೆ ಇಬ್ಬರು ಕೊಡಗರೊಂದಿಗೆ ಉಳಿ ಬೇಟೆ ಮಾಡಿ ಮನೆಗೆ ಬರುತ್ತಿರುವಾಗ ದಾರಿಯಲ್ಲಿ ಬೇರೆ ಯಾರೋ ಒಬ್ಬರು ಹೊಡೆದ ಗುಂಡು ಮುಂದೆ ಇದ್ದ ಅಪ್ಪಣ್ಣನ ಸೊಂಟಕ್ಕೆ ತಗಲಿ ಅವನು ವೀರಾಜಪೇಟೆ ಆಸ್ಪತ್ರೆಯಲ್ಲಿ ಚಿಕಿತ್ಸೆಹೊಂದುತ್ತಿರುವನಾಗಿ ಸುದ್ದಿ.

ಫ್ರೇಜರ್‌ಪೇಟೆ ಹೋಬಳಿಯ ಶ್ರೀಮಂಗಲ ಗ್ರಾಮದಿಂದ ಸುಮಾರು ಆರು ಮೈಲು ದೂರದಲ್ಲಿರುವ ಕೊನ್ನಾನೂರು ಗ್ರಾಮದಲ್ಲಿ ಪ್ಲೇಗು ರೋಗವು ತಲೆದೋರಿರುವ ಕಾರಣ ಸುತ್ತಮುತ್ತಲಿನ ಗ್ರಾಮಸ್ಥರು ಅಲ್ಲಿಗೂ, ಅಲ್ಲಿಯವರು ಹೊರಗೂ ಅತ್ತಿತ್ತ ಹೋಗದಂತೆ ಸಮ್ಮಂಧಪಟ್ಟ ಅಧಿಕಾರಿಗಳು ಜನರಿಗೆ ಬೋಧಿಸಬೇಕೆಂದು ಡಿಸ್ಟ್ರಿಕ್ಟ್ ಬೋರ್ಡಿನ ಪ್ರೆಸಿಡೆಂಟು ಕೋರಿಕೆ.

ವೇದಾಂತ ಸಂಘದ ಆಶ್ರಯದಲ್ಲಿ ಮೆ. ಕೆ. ವೆಂಕಟಗಿರಿ ಬಿ. ಎ. ಯವರು ಸಾರ್ವತ್ರಿಕ ಧರ್ಮದ ಊಹೆಯನ್ನು ಕುರಿತು ತಾ. 7ರಲ್ಲಿ ಮಧ್ಯಾಹ್ನ 2 ಗಂಟೆಗೆ ಸೆಂಟ್ರಲ್ ಹೈ ಸ್ಕೂಲ್ ಹಾಲಿನಲ್ಲಿ ಭಾಷಣ ಮಾಡುವರು, ಮೆ. ಪಿ. ಬಿ. ನೀರಪ್ಪ ಯಂ. ಎ. ಸಿ. ಯವರು ಅಧ್ಯಕ್ಷರಾಗಿರಲು ಒಪ್ಪಿರುವರು. ಎಲ್ಲರೂ ದಯಮಾಡಿಸಬೇಕೆಂದು ಸೆಕ್ರೆಟರಿಯವರ ಕೋರಿಕೆ.

ಸೋಮವಾರಪೇಟೆ ತಾಲೋಕಿನ ಒಸುವನಕೊಪ್ಪದ ಒಕ್ಕಲಿಗರ ಬಸಪ್ಪಯ್ಯ ಗೌಡನಿಗೆ ಕಳೆದ ಶನಿವಾರ ರಾತ್ರಿ ಆರಸ ಮನೆಯಲ್ಲಿ ಯಾರೋ ಗುಂಡುಹೊಡೆದನ್ನು ಅವನ ದವಡೆಗೆ ತಗಲಿ ಘಾಯವಾಗಿ ಮಡಿಕೇರಿ ಆಸ್ಪತ್ರೆಯಲ್ಲಿ ಚಿಕಿತ್ಸೆಹೊಂದುತ್ತಿರುವನಾಗಿಯೂ, ಗೌಡಳ್ಳಿ ಗ್ರಾಮಕ್ಕೆ ಸೇರಿದ ಕೋಟೆಯೂರಿನ ಒಕ್ಕಲಿಗರ ಸುಬ್ಬಯ್ಯ ಗೌಡನು ಗುಮಾನಿ ಮೇಲೆ ರಿಮಾಂಡಿನಲ್ಲಿ ಡಲ್ಪಟ್ಟಿರುವನಾಗಿಯೂ ವರ್ತಮಾನ

ಈ ವರ್ಷದ ಪ್ರಾರಂಭದಿಂದ ಸರಕಾರಿ ಮೇಲ್ದರಗತಿಯ ಉದ್ಯೋಗಕ್ಕೆ ಕನ್ನಿಷ್ಠ ಪಕ್ಷ ಮೆಟ್ರಿಕು ಅಥವಾ ಮೈಸೂರಿನ ಸಂಪೂರ್ಣ ಸ್ಕೂಲ್ ಫೈನಲ್ ಪರೀಕ್ಷೆಯ ಸರ್ಟಿಫಿಕೇಟ್ ಪಡೆದವರಾಗಿರಬೇಕೆಂತಲೂ, ಶ್ಯಾನುಭೋಗರು ಮತ್ತು ನಾಡು ಕ್ಲಾರ್ಕ್‌ಗಳಿಗೆ ಈ ಯೋಗ್ಯತೆಯು ಇರಬೇಕೆಂಬ ಆವಶ್ಯಕತೆ ಇಲ್ಲವೆಂತಲೂ ಚೀಫ್ ಕಮಿಷನರವರು ರೂಲ್ ಮಾಡಿರುವರು

ವೀರಾಜಪೇಟೆ ನಾಡಿನ ಪಾರುಪತ್ಯಗಾರರಾದ ಮೆ|| ಕೋದಂಡ ಕಾಳಪ್ಪನವರು ಈ ತಾ 15ರಿಂದ ಎರಡು ತಿಂಗಳು ಪ್ರಿವಿಲೆಜ್ ರಜೆಯಲ್ಲಿ ಹೋಗುವುದರಿಂದ ಫ್ರೇಜರ್‌ಪೇಟೆಯಿಂದ ಮೆ|| ಕೊಹಂಪೆರ ಸುಬ್ಬಯ್ಯನವರು ವೀರಾಜಪೇಟೆ ಪಾರುಪತ್ಯಗಾರರಾಗಿಯೂ ಮಡಿಕೇರಿ ರೆವಿನ್ಯು ಆಫೀಸಿನಿಂದ ಮೆ| ಮುಕ್ಕಾಟಿರ ಮುದ್ದಪ್ಪನವರು ಫ್ರೇಜರ್‌ಪೇಟೆ ಪಾರುಪತ್ಯಗಾರರಾಗಿಯೂ ವರ್ಗಾಯಿಸಲ್ಪಟ್ಟಿರುವರು

ಎರಡು ವಾರಗಳ ಹಿಂದ ಬೆಟ್ಟತ್ತುನಾಡಿನ ಹಾತೂರು ಗ್ರಾಮದವರು ತಿತಿಮತಿ ಬಳಿ ರಸ್ತೆ ಬಾಜಿನಲ್ಲಿ ಬೇಟೆಯಾಡುತ್ತಿರುವಾಗ ಅವರಲ್ಲಿ ಒಬ್ಬನು ಕಾಡುಮೃಗಕ್ಕೆ ಹೊಡೆದ ಗುಂಡು ಅಲ್ಲಿ ರಸ್ತೆಗಾಗಿ ದಾಟುತ್ತಿದ್ದ ಅತ್ತೂರು ಗ್ರಾಮದ ತಿಮ್ಮಾಚಾರಿಯವನೊಬ್ಬನ ಕಾಲಿಗೆ ತಗಲಿತೆಂತಲೂ, ಅವನು ಆಸ್ಪತ್ರೆಯಲ್ಲಿ ಚಿಕಿತ್ಸೆಹೊಂದಿ ಗುಣವಾಗುತ್ತಿದೆಯೆಂತಲೂ ಕೇಸು ಪೊಲೀಸು ವಿಚಾರದಲ್ಲಿದೆಯೆಂತಲೂ ವರ್ತಮಾನ.

ಕೊಡಗು ಕೌನ್ಸಿಲಿನಿಂದ ನೇಮಿತವಾದ ಮಲೇರಿಯ ಕಮಿಟಿಯವರು ಕಳೆದ ತಾ. 31ರಲ್ಲಿ ಶ್ರೀಮಂಗಲ ಮತ್ತು ಸುತ್ತಮುತ್ತಲಿನ ಗ್ರಾಮಗಳಿಗೂ, ಈ ತಾ 1ರಲ್ಲಿ ಮರೆನಾಡಿನ ಕೆಲವು ಗ್ರಾಮಗಳಿಗೂ, ತಾ 2ರಲ್ಲಿ ಆರನುಡಿ ಬಾಡಗ, ಬಾಳೆಲೆ, ದೇವನೂರು ಗ್ರಾಮಗಳಿಗೂ, ತಿತಿಮತಿ ಮತ್ತು ಪೊನ್ನಂಪೇಟೆಗೂ ಹೋಗಿ ಅಲ್ಲಿಯ ಜನರ ಆರೋಗ್ಯ ಸ್ಥಿತಿಯನ್ನು ನೋಡಿ ಕೆಲವು ಮುಖ್ಯಸ್ಥರ ಅಭಿಪ್ರಾಯಗಳನ್ನು ತೆಗೆದುಕೊಂಡು ಬಂದರೆಂದು ತಿಳಿಯುತ್ತೇವೆ

ನಾಪೋಕ್ಲುನಾಡಿನ ಚಮೋಬಂದಿಯು ಇನ್ನೂ ಆಗಿರುವದಿಲ್ಲವಾಗಿಯೂ, ಆ ನಾಡಿನ ಜಮಾಬಂದಿಯು ಈ ವರುಷ ನಡಿಯುವುದಿಲ್ಲವೆಂದು ನಾಡೆಲ್ಲಾ ಪ್ರಕಾರೆಂತಲೂ ಅಲ್ಲಿಯ ಭತ್ತದ ಬೆಳೆ ಅನೇಕ ಕಡೆಗಳಲ್ಲಿ ಪೂರಾ ಜಳ್ಳಾದುದರಿಂದ ಸುಬೇದಾರರು. ಮತ್ತು ಪಾರುಪತ್ಯಗಾರರಿಗೆ ರೈತರು ಕದುರು ಕೊಂಡುಹೋಗಿ ತೋರಿಸುತ್ತಲಿದ್ದಾರೆಂತಲೂ ಈ ವಿಷಯವನ್ನು ಕಮಿಷನರರಿಗೆ ಹೇಳಬೇಕಂದಿರುವರಾಗ್ಯೂ ಜಮಾಬಂದಿಯೇ ಮಾಡದೆ ತೋದರೆ ರೈತರ ಹವಾಲನ್ನು ಕೇಳುವವರು ಯಾರೆಂತಲೂ ಒಂದು ವಾರ್ತೆ.

ಕುಷ್ಠರೋಗ ನಿವಾರಣೆ ಸಂಘದ ಕೊಡಗಿನ ಶಾಖೆಯ ಪರವಾಗಿ ಈ ಕೆಳಗಿನ ಮಹನೀಯರು 798 ರೂ ಗಳನ್ನು ವಸೂಲಿ ಮಾಡಿರುವುದರಿಂದ ಆ ಸಂಘವು ಇವರಿಗೆ ತುಂಬಾ ಕೃತಜ್ಞತೆಯುಳ್ಳವರಾಗಿರುವರೆಂದು ತಿಳಿಸಿರುತ್ತಾರೆ ಹಣ ಜಮಾಯಿಸಿದ ಮಹನೀಯರು—ಮೆ ಗಳಾದ ಎ ಎಫ್ ಪೀನೇಕ್, ಮೊಹಮ್ಮದ್ ಹುಸೇನ್ ಸಾಹೇಬ್, ಕೆ ಸಿ. ತಿಮ್ಮಯ್ಯ, ಎಸ್ ಬಸಪ್ಪ, ರಾ. ಬಾ. ಕೆ ಅಪ್ಪಯ್ಯ, ಎ ಬಿ. ಚಂಗಪ್ಪ, ಯಂ ಎಲ್. ಸಿ, ಪಿ ಮುತ್ತಣ್ಣ, ಬಿ ಶ್ರೀಪತಿರಾವ್ ಯಂ. ಎಲ್. ಸಿ, ಪಿ ಗೋಪಯ್ಯಯ್ಯ ಯಂ. ಎಲ್. ಸಿ, ಎಸ್ ಯಂ. ಪೆಂಟೊ ಯಂ. ಎಲ್. ಸಿ, ಸಿ ಎ. ತಿಮ್ಮಯ್ಯ.

ಹಿಂದೂದೇಶ.

ಕಳೆದ ತಾರೀಕು 31ರಲ್ಲಿ ರಂಗೂನಿನ ಕೆಮ್ಮಂಡೈನ್ ಎಂಬಲ್ಲಿ ಒಂದು ಎಣ್ಣೆ ಕಾರ್ಖಾನೆಗೆ ಆಕಸ್ಮಿಕ ಬೆಂಕಿ ಬಿದ್ದು ಸುಮಾರು ಐದು ಲಕ್ಷ ರೂಪಾಯಿಯಷ್ಟು ನಷ್ಟ ಉಂಟಾಗಿದೆಯಂತೆ.

ಬ್ರಿಟಿಷ್ ಚಕ್ರಾಧಿಪತ್ಯದ ಪಾರ್ಲಿಮೆಂಟರಿ ಸಂಘದ ಶಾಖೆಯೊಂದನ್ನು ಎಸೆಂಬ್ಲಿಯಲ್ಲಿ ನೇಮಿಸಬೇಕೋ ಎಂಬುದನ್ನು ಯೋಚಿಸಲು ಎಸೆಂಬ್ಲಿಯ ಮೆಂಬರುಗಳು ಒಂದು ಕಮಿಟಿಯನ್ನು ನೇಮಿಸಿರುವರು.

ಕಳೆದವಾರ ಕೂನೂರಿನಲ್ಲಿ ಮಳೆಯು ಮೂರು ದಿವಸಗಳು ಒಂದೇ ಸಮನಾಗಿ ಜೋರಾಗಿ ಸುರಿಯಿತು. ಸುಮಾರು 18 ಅಂಗುಲದ ಈ ಮಳೆಯ ನೀರಿನಿಂದ ರಸ್ತೆಗಳು ಕೊಚ್ಚಲ್ಪಟ್ಟು ಸಂಚಾರಕ್ಕೆ ತೊಂದರೆಯಾಗಿದೆಯಂತೆ

'ಚೇಂಬರ್ ಆಫ್ ಪ್ರಿನ್ಸಸ್'ನ ಚಾನ್ಸಲರ್ ಪದವಿಗೆ ಆಳ್ವಾರದ ಮತ್ತು ಪಟಿಯಾಲದ ಮಹಾರಾಜರುಗಳಿಗೆ ಸಮನಾಗಿ ಓಟು ದೊರೆತಲ್ಲಿ ಅಧ್ಯಕ್ಷರಾದ ಮೈಸೂರಿನ ಮಹಾರಾಜರ ಕಾಸ್ಟಿಂಗ್ ಓಟಿನ ಮೇಲೆ ಪಟಿಯಾಲದ ಮಹಾರಾಜರು ಆ ಪದವಿಗೆ ಆರಿಸಲ್ಪಟ್ಟರು.

ಕಳೆದವಾರ ಅಪರೂಪವಾದ ಸುಂಟರ ಗಾಳಿಯೊಂದಿಗೆ ವಿಶೇಷವಾದ ಮಳೆಯು ಕಡಲೂರು ಜಿಲ್ಲೆಗೆ ಬಿದ್ದು 32 ಮೈಲು ಭೂಮಿಯು ನೀರಿನಿಂದ ತುಂಬಿ ತುಂಬಾ ನಷ್ಟವುಂಟಾಗಿದೆ. ಬೆಳೆಯು ಬಹಳವಾಗಿ ಕೊಚ್ಚಲ್ಪಟ್ಟಿತು ಹಾಳಾಗಿರುವ ಸೇತುವೆ ರಸ್ತೆಗಳನ್ನು ದುರುಸ್ತು ಮಾಡಲು ಮೂರು ನಾಲ್ಕು ತಿಂಗಳ ಸಮಯ ಬೇಕಾಗುವುದಂತೆ.

ಮದ್ರಾಸಿನಲ್ಲಿ ಮೆ ಪಿ. ಅಯ್ಯಸಾಮಿಯವರು ಹತ್ತು ಸಾವಿರ ರೂಪಾಯಿ ಖರ್ಚುಮಾಡಿ ಒಂದು ಕೈಗಾರಿಕೆ ಶಾಲೆಯನ್ನು ಸ್ಥಾಪಿಸಿರುವರು ಇದರಲ್ಲಿ ಹುಡುಗರಿಗೆ ಮರಗೆಲಸ, ಕಬ್ಬಿಣದ ಕೆಲಸ, ನೆಯ್ಯುವುದು, ನೂಲುವುದು, ಸೀಮೆಂಟ್ ಮಾಡುವುದು ಮುಂತಾದವುಗಳನ್ನೂ, ಹುಡುಗಿಯರಿಗೆ ಸಂಗೀತ, ನೂಲುವುದು, ಸೂಜಿ ಕೆಲಸ ಮೊದಲಾದವುಗಳನ್ನೂ ಕಲಿಸುವರು.

ಬೆಳಗಾವಿಯ ಬೌವ್ಲಾ ಕೊಲೆ ಕೇಸಿನ ವಿಚಾರಣೆಗಾಗಿ ರಣವೇನೆಂದು ವಿಚಾರಿಸಲು ಇಂಪೀರಿಯಲ್ ಸರಕಾರದಿಂದ ಕಮಿಷನ್ ನೇಮಿತವಾಗಿದೆ ಇಂದೂರಿನ ಮಹಾರಾಜರು ಈ ಕೇಸಿಗೂ ತನಗೂ ಸಮ್ಮಂಧವಿಲ್ಲವೆಂದು ಹೇಳುವುದರಿಂದ ಕೇಸಿನ ನಿಜವಾದ ಕಾರಣವನ್ನು ಕಂಡು ಹಿಡಿಯಲು ವಿಚಾರಕರವರಿಗೆ ಸಹಾಯ ಕೊಡಬೇಕೆಂದು ಅವರನ್ನು ಕೇಳಿರುವರು. ಇಂದೂರಿನಲ್ಲಿ ಪೊಲೀಸಿನವರು ವಿಚಾರ ನಡಿಸುತ್ತಿರುವರು.

ವಿದೇಶ.

ದಕ್ಷಿಣ ಆಫ್ರಿಕದ ಪಾರ್ಲಿಮೆಂಟಿನಲ್ಲಿ ಹಿಂದೀಯರಿಗೆ ಕಷ್ಟಕರವಾದ ಕಲರ್ ಬಾರ್ ಬಿಲ್ಲು ಎರಡನೇಸಾರಿ ಪಾಸಾಗಿದೆ.

ಬ್ರಿಟನ್ನಿನ ಪಾರ್ಲಿಮೆಂಟಿನ ಲಿಬರಲ್ ಪಕ್ಷದ ಅಧ್ಯಕ್ಷರಾಗಿ ಮಾಜಿ ಮಂತ್ರಿಯಾದ ಮೆ ಲಾಯಿಡ್ ಜಾರ್ಜ್‌ರವರನ್ನು ಚುನಾಯಿಸಿರುವರು

ಜಪಾನಿನ ಪ್ರಧಾನ ಮಂತ್ರಿಯಾಗಿದ್ದ ವೈಕೌಂಟ್-ಕಟೋಹವರು ಕಳೆದ ತಾ 28ರಲ್ಲಿ ಮೃತರಾದರು. ಚಕ್ರವರ್ತಿಯವರು ಇವರ ಬದಲಿಗೆ ವಾಕತ್ಸುಕಿ ಎಂಬವರನ್ನು ಮಂತ್ರಿಪದವಿಗೆ ನೇಮಿಸಿರುವರು.

ಇಂಗ್ಲೆಂಡಿನಲ್ಲಿ ಸ್ಥಾಪಿತವಾಗಿರುವ ಕುಷ್ಠರೋಗ ನಿವಾರಣೆ ಫಂಡಿನ ಅಧ್ಯಕ್ಷರಾದ ಲಾರ್ಡ್ ಚೆಲ್ಮ್ಸ್‌ಫರ್ಡ್‌ರವರು ಆ ಫಂಡಿಗೆ ಸೇರಬೇಕೆಂದು ಹೇಳಿದ ಎರಡೂವರೆ ಲಕ್ಷ ಪೌನಿನ ಪೈಕಿ ಈಗಾಗಲೇ 1,45,000 ಪೌನುಗಳು ಇಂಡಿಯಾದಲ್ಲಿ ಜಮೆಯಾಗಿವೆಯಂತೆ.

ಪ್ರಿನ್ಸ್ ಆಫ್ ವೇಲ್ಸರವರು ಕಳೆದವಾರ ಬೇಟೆಯಾಡುತ್ತಿದ್ದಾಗ ಕುದುರೆಯಿಂದ ಬಿದ್ದು ಅವರ ಕುತ್ತಿಗೆ ಹೆಗಲ ಮೂಳೆ ಮುರಿದು ಹೋಯಿತು. ಅವರು ಚಿಕಿತ್ಸೆ ಹೊಂದಿ ಗುಣವಾಗುತ್ತಿದ್ದಾರೆ. ಆದರೆ ಅವರಿಗ ಅಪಾಯವೇನೂ ಸಂಭವಿಸಲಿಲ್ಲ.

ಸ್ಕಾಟ್ಲೆಂಡಿನಲ್ಲಿ ಜನರು ಮನೆಗಳಿಲ್ಲದೆ ಕಷ್ಟಪಡುತ್ತಿರುವುದನ್ನು ನೋಡಿ ಬ್ರಿಟನ್ನಿನ ಮುಖ್ಯ ಮಂತ್ರಿಯಾದ ಬಾಲ್ಡ್ವಿನ್‌ರವರು ಅವರಿಗೆ ಉಕ್ಕಿನ ತಗಡುಗಳಿಂದ ಎರಡು ಸಾವಿರ ಮನೆಗಳನ್ನು ಬೇಗನೆ ಕಟ್ಟಿಕೊಡುವಂತೆ ಒಂದು ಕಂಪೆನಿಯವರಿಗೆ ವಹಿಸಿರುವರು ಇಂಡಿಯಾದಲ್ಲಿ ಮನೆ ಮಂಗಳಿಲ್ಲದವರಿಗೆ ಸಹಾಯ ಮಾಡುವವರು ಯಾರು?

ನೋಟೀಸ್.

ಮಡಿಕೇರಿ ತಾಲೂಕು ಮೂರ್ನಾಡು ಕಿಗ್ಗಾಲು ಗ್ರಾಮದ ಬಣ್ಣಾರ ಅಂಬು ಮಗ ಕುಟ್ಟನು ಈ ಮೂಲಕ ಸಮಸ್ತ ಜನರಿಗೂ ತಿಳಿಯಪಡಿಸುವುದೇನಂದರೆ:—

ಸದರಿ ಕಿಗ್ಗಾಲು ಗ್ರಾಮದಲ್ಲು ನನ್ನ ಪಿತೃ ತಂದೆ ಅಂಬು ಸ್ವಯಾರ್ಜಿತವಾಗಿ ಸಂಪಾದನೆ ಮಾಡಿದ ಸ್ಥಿರ ಆಸ್ತಿ ಅಂದರೆ 100 ಬಟ್ಟಿ ಭೂಮಿಯು ನನ್ನ ಮತ್ತು ನನ್ನ ಇಬ್ಬರು ತಮ್ಮಂದಿಯರು ಕಾರಿ, ಮತ್ತು ಬೆಳ್ಳಿಯಾತು ಮೂವರಅನುಭವದಲ್ಲಿದೆ. ಇವರಿಬ್ಬರು ತಮ್ಮಂದಿಯರು ಕಲವು ವಸ್ತ್ಯರ ಮಾಡಿಕೊಂಡು ಅವರಿಬ್ಬರ ಅನುಭವದ ಪಿತ್ರಾರ್ಜಿತದ ಈ ಆಸ್ತಿಯನ್ನು ನನಗೆ ಮೋಸಪಡಿಸಿ ಬೇರೆಯವರ ದುರ್ಬೋಧನೆಯಿಂದ ಮಾರಾಟ ಮಾಡಿಬಿಡಬೇಕೆಂಬ ಕಾಯಿಷ್‌ನಲ್ಲಿರುತ್ತಾರೆ ಈ ಸೊತ್ತುಗಳಿಗೆ ನಾನು ಪಟ್ಟೆದಾರನಾಗಿಯೂ ಮತ್ತು ಅವರಿಗೆ ನ್ಯಾಯವಾದ ಪಾಲು ಪಾರೀಕತ್ತುಮಾಡಿಕೊಡದೆಯೂ ಇರುವುದರಿಂದ ಅಂಥಾ ಸೊತ್ತುಗಳನ್ನು ನನ್ನ ತಿಳುವಳಿಕೆಗೆ ಬಾರದೆ ಯಾರಾದರೂ ಕೊಂಡುಕೊಂಡರೆ ಸದರಿ ಆದಾಯ ಅಸಿಂಧು ಆಗಿರತಕ್ಕದೆಂದೂ ಮತ್ತು ಅದರ ವಿಶಿಷ್ಟು ಖರ್ಚಿಗೂ ಸಹ ಅವರೇ ಬಾಧ್ಯರಾಗಬೇಕೆಂದು ಈ ಮೂಲಕ ತಿಳಿಯಪಡಿಸಿದೆ.

ಬಣ್ಣಾರ ಕುಟ್ಟ,

ಕಿಗ್ಗಾಲು ಗ್ರಾಮ,

ಮೂರ್ನಾಡು.

ಕ್ಷೌರ ಕತ್ತಿ.



ಇದನ್ನು ಇಟ್ಟುಕೊಂಡು ಕ್ಷೌರಿಕನ ಕೈಯ್ಯಲ್ಲಿ ಕೊಟ್ಟು ಕೆಲಸವನ್ನು ಮಾಡಿಕೊಂಡಲ್ಲಿ ಇತರ ಶರೀರ ಸಂಬಂಧವಾದ ವ್ಯಾಧಿಗಳು ಬಾರದಂತೆ ಉರಿಯೂ ಇಲ್ಲದಂತೆ ಸುಖವಾಗಿರುವದು. ಕ್ರಯ ಕತ್ತಿ 1ಕ್ಕೆ 2—8—0

ರೋಲ್ಡ್ ಗೋಲ್ಡ್ ಬಂಗಾರದ ಕೈಗಡಿಯಾರ.



ಈ ಕೈಗಡಿಯಾರವು ಬಂಗಾರಕ್ಕೆ ಸರಿ ಸಮಾನವಾಗಿವೆ. ಸರಿಯಾದ ಗಂಟೆಯನ್ನು ತೋರಿಸುವುದು. ಅತ್ಯುತ್ತಮವಾದ ಗಟ್ಟಿ ಸಾಮಾನುಗಳಿಂದ ತಯಾರಿಸಿದ್ದು ಇವಕ್ಕೆ 3 ವರುಷಗಳ ಗ್ಯಾರಂಟಿ ಕೊಡುವೆವು. ಕ್ರಯ 1ಕ್ಕೆ 6—12—0.

ವಿಳಾಸ.— ಎಸ್. ಪಾಲ್ ಎಂಡ್ ಕೊ,

ಪೋಸ್ಟು ಬಾಕ್ಸ್ ನಂ. 542,

ಪಾರ್ಕ್ ಟೌನ್, ಮದರಾಸು.

ಪತ್ರವ್ಯವಹಾರ.

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲ. ಸಂ.

ಶನಿವಾರಸಂತೆ ಹೋಬಳಿ ವಿಲೇಜು ಇಂಪ್ರೂವ್‌ಮೆಂಟ್ ಆಫೀಸರವರ ಸನ್ನಿಧಾನಕ್ಕೆ.

ಬಡ ರೈತರ ತಂದೆಯೇ ? ಈ ಹಿಂದೆ ಹೋಬಳಿ ಪ್ರಭು ವಾಗಿದ್ದು ಗ್ರಾಮಾಂತರಗಳ ಕೊರತೆ ಬಲ್ಲಂಥ ದಕ್ಷರಾದುದರಿಂದ ಸರಕಾರದವರು ಕೆಲವು ಕಾಲದಿಂದೀಚೆಗೆ ಈ ಹೊಸತರ ಪದವಿಗೆ ತಂದಿರುತ್ತಾರೆ. ಕೈಕೆಳಗೆ ಶಕ್ತರಾದ ಶ್ಯಾನುಭೋಗರು ನೇಮಿಸಿದ್ದಾರೆ. ತಮ್ಮ ಶಿಫಾರಸ್ಸಿನಿಂದ ಸ್ಯಾಂಕ್ಷನಾಗಿ ತಯಾರಾಗಿರುವ ಕ್ವಾರ್ಟ್ರಸ್ ವಿಷಯದಲ್ಲಿ ಯಾಕೆ ನಿಗವಿಲ್ಲ? ಸದರಿ ಕೆಲಸವು ಪೂರ್ತಿ ಅಚ್ಚುಗಟ್ಟಾಗಬೇಕಲ್ಲವೇ ? ಯೋಚಿಸಿರಿ ಕೊಡ್ಲಿಪೇಟೆ, ಎಸಳೂರುಪೇಟೆಯು ನಡೆಸಳ್ಳಿ ಕೊಡ್ಲಿಪೇಟೆ ತರುವಳ್ಳಿ, ಹಿಡುವಳಿಗಳಲ್ಲಿ ಒಂದೇ ರೀತಿಯಾಗಿ ಕೋಟೆ, ಪೇಟೆಯಂತೆ ಒಡೆದಿದೆ. ಹಿಡುವಳಿ ಸ್ಥಳವು ಹೊಳೆಬಳಿ ಹೀಗಿರುವಾಗ ಹೊಳೆಯನ್ನು ದಾಟುವಂತೆ ಮಾಡಬೇಕಲ್ಲವೇ ? ಬೇಳಗಾದರೆ ಔಷಧಿಗಾಗಿ ಹುಡುಗರು ಮಕ್ಕಳಿನ್ನದೆ ನಂಬದೆ ಸೇರಬೇಕು. ವ್ಯಾಪಾರ, ಬಂಧುತ್ವಕ್ಕಾಗಿ ಓಡಾಡಬೇಕು. ಪ್ರಯಾಣದ ಸಂಪತ್ತು ಹಗಲಿರುಳು ಬೇರಳವಾಗಿದೆ. ಮೊದಲು ಕಷ್ಟ ಅನುಭವಿಸಿ ತದನಂತರ ಸುಖಪಡಬೇಕು. ಈಗ ಹಾಗಿಲ್ಲ, ಕ್ವಾರ್ಟ್ರಸ್ ಮುಂದೆ ಮುಂದೆ ಕಷ್ಟ, ಇದು ಧರ್ಮಕ್ಕೆ ವಿರೋಧವಾಗಿದೆ. ಇದರ ನಿವಾರಣೋಪಾಯ ತಮಗಳ ಕೈಯಲ್ಲಿದೆ. ಮನ ಮಾಡಬೇಕು. ಹಣವಿರುವಾಗ ದಾನ ಧರ್ಮ ಮಾಡಬೇಕೆಂಬ ಗಾದೆಯಂತೆ ಅಧಿಕಾರವಿರುವಾಗ ಅನುಕೂಲಪಡಿಸಿ ಕೊಡಬೇಕು. ತಾವು ಒಂದೆರಡು ವಿಸಿಟಿಂಗ್ ಕಾಲದಲ್ಲಿ ಶ್ರಮವಹಿಸಿ ಜನಗಳಿಗೆ ಪ್ರೋತ್ಸಾಹಿಸಿ ವಸೂಲಿ ಶ್ಯಾನುಭೋಗರಿಗೆ ಜಬ್ಬರಿ ಕೆಲಸವು ಕೈಗೂಡುವದು. (1) ಕ್ವಾರ್ಟ್ರಸ್ ಎದುರಿಗೆ ಆಯಾಯ ಮನೆಯ ಮಾಲೀಕನೇ ಮುಂಭಾಗದ ರೋಡ ಸಂಪಡಿಸಬೇಕು, (2) ಅಲ್ಲಿಂದ ಮುಂದೆ ಪಂಚಮರು ಜಮಾಯಿಸುವರೆಗೆ ಸಂಬಳವಿಲ್ಲದೆ ಬಿಟ್ಟಿಯಾಗಿ ದಿನ ಸರಿಪಡಿಸಬೇಕು, (3) ಜಮಾಯಿಸಿದ ಮೇಲೆ ರಸ್ತೆ ಹಾಕಲು ಒಪ್ಪಿಸಿದವರು 10 ಅಡಿ ಜಾಗ ಕೊಳ್ಳುವರೆಗ ಬಿಡಬೇಕು, (4) ನಗಿ ದಾಟಲು ಒಂದೇ ಸಾಲ ಹಾಕಲು ಸರಕಾರದವರ ಸಹಾಯ ಪಡಬೇಕು, (5) ಜಮಾಯಿಸಿದ ಮೇಲೆ ಹಾಕುವ ರಸ್ತೆ ಓವರ್ ಬಿರ್ಜ್ ಮೊದಲಾಗಿ ಈ ರೀತಿ ಕೇಳಬಹುದೇ ಕೊಡ್ಲಿಪೇಟೆಯ ಜನರು ಪ್ರತಿಯೊಂದು ಮನೆಯವರು ಶಕ್ತ್ಯಾನುಸಾರ ಕೆರೆಗೆ ಕೂಡಬೇಕು. ಧಾರಾಳವನ್ನು ಹೆಚ್ಚಿಗೆ ಕಟ್ಟಲಿ ಎಷ್ಟು ಬಳಿ ಅದರ ವಿಶಾಲವ ಕಲ್ಲು ಇಡಿಸಬೇಕು. ಕ್ವಾರ್ಟ್ರಸ್ ಗ್ರಾಮದಲ್ಲಿ ಕೋಟೆ ಇಟ್ಟುಕೊಂಡು ಹಾದಿ ಮಾಗಿಸುವ ಕೊಡ್ಲಿಪೇಟೆ ಸ್ಟ್ರೀಟಿನಿಂದ ನ ದೂರ ಮೇಲೆ ನಡೆಯಬೇಕು. ಕ್ವಾರ್ಟ್ರಸ್ ಗ್ರಾಮದಲ್ಲಿ ಗಾಡಿ ಇಟ್ಟಿರುವದರಿಂದ 2 ರಾ ಹಾದಿ ಮೇಲೆ ಕೆರೆಗೆ ನಡೆಯಬೇಕು. ಈ ರೀತಿ ನಡೆದರೆ ಬೇಕಾದಷ್ಟು ಮೊಬಲಗು ಆಗುವುದು. ಈ ಕಾರ್ಯ ಆಗಲು ಕೊಡ್ಲಿಪೇಟೆ ಒಬ್ಬಾರಿನಲ್ಲಿ ವಿಸಿಟಿಂಗ್‌ವಾಡಿ ಪ್ರಜೆಗಳಿಗೆ ಪ್ರೋತ್ಸಾಹಿಸಿದರೆ ಸಾಕು. ಒಂದೆರಡು ವಿಸಿಟಿಂಗ್ ಮಾಡುವುದರಲ್ಲಿ ತಮ್ಮ ಅಧಿಕಾರ ಗೌರವದಿಂದ ಜನರು ಒಪ್ಪುವರು. ಹಣ ಕೊಡುವರು. ಪ್ರಜೆಗಳಿಗೆ ಸೌಲಭ್ಯ ಉಂಟಾಗುವುದು. ಪ್ರಜೆಗಳಿಗೂ, ಸರಕಾರಕ್ಕೂ ಸಂಬಂಧ ಹೆಚ್ಚುವುದು. ತಮಗೂ ಉಚ್ಚ ಪದವಿ ದೊರೆತು ಆನಂದ ಉಂಟಾಗುವುದು. ಕೊಂಚಮಟ್ಟಿಗೆ ಪ್ರಜಾರ ವಾತ್ಸಲ್ಯವಿಟ್ಟುಕೊಂಡು ದೇಶದ ಸೇವೆ ಮಾಡಿ ಜನ್ಮ ಸಾರ್ಥಕ ಪಡೆಯಬೇಕು. ದೇಶ ಸೇವೆಯು ಈಶ ಸೇವೆಗೆ ಮುಖ್ಯ ಹಾದಿ. ಮುಕ್ತಿಗೆ ಭಕ್ತಿಯೇ ಉಪಾಯವು. ಕೂಡಲೆ ಮನಃಪೂರ್ವ ಕೆಲಸ ನಡೆಸಿ ಸರಕಾರಕ್ಕೂ ಪ್ರಜೆಗಳಿಗೂ ಮೆಚ್ಚಿಗೆಯುಳ್ಳವರಾಗಿ ಬಾಳಲೆಂದು, ಭಗವಂತನನ್ನು ಅನವರತವೂ ಪ್ರಾರ್ಥಿಸುತ್ತೇನೆ.

ನಿಮ್ಮ ಪ್ರಾಂತ್ಯದಲ್ಲಿ ದೊಡ್ಡ ನಕ್ಷತ್ರದಂತೆ ಪ್ರಕಾಶಮಾನರಾಗಿರುವ ಕೌನ್ಸಿಲ್ ಮೆಂಬರಾದ ನಿತ್ಯದ ಎಸ್ಟೇಟ್ ಕಾಫಿ ಪ್ಲಾಂಟರ್ ಮೆ. ಸುಬ್ಬಯ್ಯನವರು ಇವರ ಮೂಲಕ ಹಣಕ್ಕೆ ತಂದು ಸರಕಾರದ ಸಹಾಯ ಕೊಡಿಸಿ ಪ್ರಜಾ ಹಿತೈಷಿಗಳಾಗಿರಬೇಕೆಂದು ಪ್ರಾರ್ಥನೆ. ವಿಸಿಟಿಂಗ್ ವೇಳೆ ದಯಮಾಡಿಸಬೇಕಾಗಿ ಬೇಡುತ್ತೇನೆ.

ದೇಶಾಭಿಮಾನಿ.

"ಕೊಡಗು ಎಲಿಮೆಂಟರಿ ಶಾಲೆಗಳ ಅಭ್ಯುದಯ"

ಕೊಡಗು ಶಾಲೆಗಳ ಸ ಈ. ಇನ್‌ಸ್ಪೆಕ್ಟರವರು ತಾರೀಕು 25—1—26ರಲ್ಲು ಬೆಳಗ್ಯೆ 8 ಗಂಟೆಯಲ್ಲು ಕೊಡ್ಲಿಪೇಟೆ B H E. ಶಾಲೆಯನ್ನು ಸಂದರ್ಶಿಸಿ, ಸಾಯಂಕಾಲ ನಾಲ್ಕು ಗಂಟೆವರೆಗೆ ಪ್ರತಿಯೊಂದು ತರಗತಿಯಲ್ಲು, ಪ್ರತಿ ಪಾಠಗಳ ಬೋಧನಾಕ್ರಮಗಳನ್ನು ಬಹಳ ನವೀನ ರೀತಿಯಲ್ಲು ಪರೀಕ್ಷಿಸಿದರು. ಇವರ ಈ ಹೊಸ ಪದ್ಧತಿಯ ಪರೀಕ್ಷೆಯು ಉಪಾಧ್ಯಾಯರ ಮನಸ್ಸನ್ನು ನೋಯಿಸದೆ 'ಶಾಲಾಭಿವೃದ್ಧಿಯಲ್ಲಿ ಉಪಾಧ್ಯಾಯರನ್ನು ನಿರತರನ್ನಾಗಿ ಮಾಡುವುದರಲ್ಲಿ ಯಾವ ಸಂದೇಹವೂ ಇಲ್ಲ. ಇವರು, ಪರೀಕ್ಷೆಯಾದ ಮೇಲೆ ಉಪಾಧ್ಯಾಯರುಗಳನ್ನೆಲ್ಲಾ ಒಟ್ಟು ಗೂಡಿಸಿ, ಬೋಧನಾಕ್ರಮಗಳನ್ನು ಚರ್ಚಿಸಿ, ನ್ಯಾಯವಾದ ಕ್ರಮಗಳನ್ನು ಜಾರಿಗೆ ತಂದರು. ಉಪಾಧ್ಯಾಯರೊಂದಿಗೆ ಸಹೋದರಭಾವದಿಂದ, ಎಲ್ಲರ ಕಷ್ಟಸುಖಗಳನ್ನು ವಿಚಾರಿಸಿ, ಅವರವರಿಗೆ ತಕ್ಕವಾದ ಬುದ್ಧಿವಾದಗಳನ್ನು ಬಹಳ ಸಂತೋಷದಿಂದ ಉಪದೇಶಿಸಿ, ಉಪಾಧ್ಯಾಯರುಗಳ ಮನಸ್ಸನ್ನು ಆನಂದಗೊಳಿಸಿದರು. ಇದರಿಂದ ಉಪಾಧ್ಯಾಯರಿಗೆ ತಮ್ಮ ಕೆಲಸದಲ್ಲು ಮುಂದುವರಿಯಲು ಎಷ್ಟರ ಮಟ್ಟಿಗೆ ಉತ್ತೇಜನವಾಯಿತೆಂದು ನಾನು ಹೇಳಬೇಕಾಗಿಲ್ಲ.

ಮೊದಲು ಕೊಡಗಿನ ಶಾಲೆಗಳನ್ನು ಬಹಳ ಅಭಿವೃದ್ಧಿಗೆ ತಂದಿದ್ದ ಮೆ. ಎ. ರಾಮರಾಯರಿಗಿಂತಲೂ, ಹೆಚ್ಚಾಗಿಯೇ ಇವರು ಪ್ರೋತ್ಸಾಹಿಸುತ್ತಾರಾಗಿ, ನನಗೆ ಪ್ರತ್ಯಕ್ಷ ಕಂಡು ಬಂದುದಲ್ಲದೆ, ಇವರ ಮುಂದಿನ ದೀರ್ಘಕಾಲದ ಆಡಳಿತವು ನಮ್ಮ ಕೊಡಗಿನ ಶಾಲೆಗಳನ್ನು ಮುಂದುವರಿಸುವಲ್ಲು ಯಾವ ಸಂದೇಹವೂ ಕಾಣುವುದಿಲ್ಲ.

ಶಾಲೆಯ ಪರೀಕ್ಷೆಯಾದ ಮೇಲೆ ಉಪಾಧ್ಯಾಯರ ಜೊತೆಗೂಡಿ ತಿರುಗಾಡಲು ಹೋಗಿ, ದಾರಿಯುದ್ದಕ್ಕೂ ಹೊರಗಿನ ಸೃಷ್ಟಿಯ ಗುಣಸ್ವಭಾವಗಳನ್ನು ಪ್ರತ್ಯಕ್ಷವಾಗಿ ವಿವರಿಸುತ್ತಾ ಕಾಲಕಳೆದರು.

ಇದಲ್ಲವೇ ಮೇಲಾಧಿಕಾರಿಗಳಿಗೆ ತಮ್ಮ ಒಡ ನೌಕರರ ಮೇಲಿರತಕ್ಕ ಪ್ರೀತಿ! ಎಲ್ಲಾ ಮೇಲಾಧಿಕಾರಿಗಳಿಗೂ, ಇದೊಂದು ಮಾದರಿಯಲ್ಲವೇ?

ಉಳಿದುದೊಂದು ನನ್ನ ಹಾರೈಕೆ.—ಇವರ ಈ ಚಿಕ್ಕ ಸರ್ವೀಸಿನಲ್ಲಿ, ಉಪಾಧ್ಯಾಯರ ಮಾಸಪತ್ರಿಕೆಯನ್ನೂ, ಉಪಾಧ್ಯಾಯರ ಪರಸ್ಪರ ಲೇವಾದೇವಿ ಸಂಘವನ್ನೂ, ಇಂಡಸ್ಟ್ರಿಯಲ್ ಶಾಲೆ ಒಂದನ್ನೂ ಸ್ಥಾಪಿಸಿ, ಉಪಾಧ್ಯಾಯರುಗಳಿಗೂ, ವಿದ್ಯಾರ್ಥಿಗಳಿಗೂ, ಮತ್ತು ಅವರ ತಂದೆ ತಾಯಿಗಳಿಗೂ, ತಿಳುವಳಿಕೆ, ಜೀವನೋಪಾಯ, ಮತ್ತು ಸಹಾಯ, ಇವುಗಳನ್ನು ಯಾರು ಇದುವರೆಗ ಒದಗಿಸಿಕೊಟ್ಟಿರುವರೋ ಈ ಯುಗದಲ್ಲಿ ಯೋಗ್ಯರು ನಿಂದಿಸಲ್ಪಡುವುದೂ, ನೀಚರು ಹೊಗಳಲ್ಪಡುವುದೂ, ಕಾಲ ಮಹಿಮೆಯಾಗಿದೆ. ಇವನ್ನೆಲ್ಲಾ ಮನಸ್ಸಿಗೆ ತೆಗೆದುಕೊಳ್ಳದೆ ಮುಂದೆ ಹೆಜ್ಜೆಯನ್ನು ಸ ಈ. ಇನ್‌ಸ್ಪೆಕ್ಟರವರು ಹಿಂತೆಗೆಯಲಾರರೆಂಬುದು ಎಲ್ಲರಿಗೂ ತಿಳಿದೇ ಇದೆ.

'ಮಕ್ಕಳ ತಂದೆ'

ನೀರಂ ಇಲ್ಲ

ನೀರಂ ಇಲ್ಲ — ಎತ್ತುಗಳಿಗೆ ಕಾಯಿಲೆ ಒಂದು ವೆಟರನರಿ ಡಾಕ್ಟರ ಸಹಾಯ ಕೇಳಿದರೆ ನೀರು ಇಲ್ಲವೆಂದೂ, ಒಂದು ದಿನ ಇವರು ಇಲ್ಲವೆಂದೂ ಇನ್ನೊಂದು ... ಇವೆಲ್ಲಾ ಸರಿಯಾಗುವಾಗ ಎತ್ತುಗಳೇ ಇಲ್ಲ! ಘನ ಸರಕಾರದವರು ಇಷ್ಟವನ್ನು ಈ ಕಾಯಿಲೆಕ್ಕೆ ಅವ್ವಷಧಿ ಕಂಡು ಹಿಡಿಯಲಾರದವರ ವೆಟರನರಿ ಆಸ್ಪತ್ರೆಯನ್ನೇ ತೆಗೆದು ಬಿಡುವುದು ಉತ್ತಮವಲ್ಲವೇ? ಅಮ್ಮತ್ತಿನಾಡು ಕಾವಾಡಿ ಗ್ರಾಮದಲ್ಲಿ ಎತ್ತುಗಳಿಗೆ ಉಷ್ಣದ ಕಾಯಿಲೆಯಾಗಿ 8—10 ದನಗಳು ಸತ್ತವು. ಅಲ್ಲಿಗೆ ಸಮೀಪವಾಗಿರುವ ಮತ್ತು ಹೆಚ್ಚು ಕಮ್ಮಿ ಕೊಡಗಿನಲ್ಲಿ ಮೊದಲಾಗಿ ಸ್ಥಾಪಿಸಿದ ಅಮ್ಮತ್ತಿಯ ವೆಟರನರಿ ಆಸ್ಪತ್ರೆಯಲ್ಲಿ ಈ ಕರುಣಾದ ಸಮಾಚಾರ!

ಊರವ.

ಪೇಟೆ ಮರಗಳ ಏಳಿಗೆ ಮತ್ತು ಆ ಬಗ್ಗೆಯ ತಾಪತ್ರಯಗಳು.

ಮಹಸ್ವಾಮಿ!

ಪೇಟೆ ಮರಕ್ಕೆ ಯಾವತ್ತು ಇಲ್ಲದಿದ್ದ ಕ್ರಯವು ಈ ವರ್ಷ ಒಂದಿದೆ. ಈ ಮರಕ್ಕೆ ಬೆಲೆ ಬರಲಾಗಿ ಮರ ವ್ಯಾಪಾರಸ್ಥರ ಕೋಲಾಹಲವು ಎಲ್ಲೆಲ್ಲಿಯೂ ಕೇಳಿಸುತ್ತಿತ್ತು. ಆದರೆ ಈ ಕೋಲಾಹಲವು ತನ್ನಷ್ಟಕ್ಕೆ ತಾನೇ ಥಟ್ಟನೆ ನಿಂತು ಹೋಗಿರುವದನ್ನು ನೋಡಿ ಅದರ ಸಂಗತಿಯನ್ನು ತಿಳಿಯಲು ಕುತೂಹಲವುಳ್ಳವನಾಗಿ ಒಂದೆರಡು ಜನ ವ್ಯಾಪಾರಿಗಳನ್ನು ವಿಚಾರಿಸುವಲ್ಲು, ಈ ಮೊದಲು ಸರ್ಕಾರದವರು ಮರಗಳ ಕುತ್ತಿ ಕಾಣೆಯನ್ನು ಕಟ್ಟಿಸಿಕೊಂಡು ಮರ ಮಾರಾಟ ಹುಕುಂ ಕೊಡುತ್ತಿದ್ದ ಪದ್ಧತಿಯನ್ನು ಥಟ್ಟನೆ ನಿಲ್ಲಿಸಿರುವದರಿಂದ ಪೇಟೆ ಮರಗಳ ಬಗ್ಗೆ ವ್ಯಾಪಾರಸ್ಥರ ಓಡ್ಯಾಟವು ನಿಂತುಹೋಗಿದೆಯೆಂದು ಹೇಳಿದರು. ಸರ್ಕಾರದವರು ಹಾಗೆ ಮಾಡಲು ಕಾರಣವೇನೆಂದು ಪುನಃ ಅವರನ್ನು ಒತ್ತಿ ಕೇಳಿದಲ್ಲು, ಮರಗಳ ಮಾರಲು ಸರ್ಕಾರದವರು ಯಥೋಚಿತವಾಗಿ ಹುಕುಂ ಕೊಟ್ಟಲ್ಲು ರೈತರು ತಮ್ಮ ತಮ್ಮ ಜಾಗದಲ್ಲು ಇರುವ ಎಲ್ಲಾ ಮರಗಳನ್ನು ಕಡಿದು ಮಾರಾಟ ಮಾಡಿಬಿಟ್ಟು ಜಾಗದ ಶೇಮವನ್ನು ಹಾಳು ಮಾಡುತ್ತಾರಾಗಿಯೂ, ಹಾಗೆ ಮಾಡಿದರೆ ಜಾಗವು ಬಂಜರಾಗಿ ನಿಷ್ಪ್ರಯೋಜನವಾಗುವುದೆಂದೂ, ಆ ದುದರಿಂದ ಕುತ್ತಿ ಕಾಣೆಯನ್ನು ಕಟ್ಟಿಸಿಕೊಂಡು ಮಾರಾಟ ಮಾಡುವದ ಹುಕುಂ ಕೊಡುವದನ್ನು ನಿಲ್ಲಿಸಿರುತ್ತಾರೆಂಬುದಾಗಿಯೂ ತಿಳಿದೆನು. ಇದರ ಪೂರ್ಣ ರಹಸ್ಯವನ್ನು ವಿಚಾರಿಸಿ ತಿಳಿದಲ್ಲು ಸರ್ಕಾರದ ಮೇಲ್ಕಂಡ ಇರಾದೆಯು ಸಮಂಜಸವಲ್ಲವೆಂಬುದಾಗಿ ನನಗೆ ಬೋಧೆಯಾಯಿತು. ಯಾಕೆಂದರೆ, ವ್ಯಾಪಾರಸ್ಥರು ಅಪೇಕ್ಷಿಸುವಂತ ಮರಗಳು ಕೆತ್ತಿ ತಯಾರಿಸಿದ ಮೇಲೆ ಎಳು ಅಡಿ ಸುತ್ತಳತೆಯ ಮೇಲೆ ದಪ್ಪ ಉಳ್ಳವಾಗಿರಬೇಕು. ಸಣ್ಣ ಸೈಜಿನ ಮರಗಳನ್ನು ಯಾವ ವ್ಯಾಪಾರಸ್ಥರು ಅಪೇಕ್ಷಿಸುವದಿಲ್ಲ. ಹಾಗೆ ಕೆತ್ತಿ ತಯಾರಿಸಿ ಎಳು ಅಡಿ ಮೇಲ್ಪಟ್ಟ ದಪ್ಪ ಸಿಕ್ಕುವಂತ ಮರಗಳು ಕೊಡಗಿನ ಕಾಡುಗಳಲ್ಲಿ ನೂರಕ್ಕೆ ಹತ್ತು ಸಿಕ್ಕುವದು ದುರ್ಲಭ. ಈ ಹತ್ತು ಮರಗಳ ಪೈಕಿ ಮಾರಾಟಕ್ಕೆ ಯೋಗ್ಯವಾಗಿ ಸಿಕ್ಕುವಂತವುಗಳು ನಾಲ್ಕು ಅಥವಾ ಐದು. ಪೇಟೆ ಮರಗಳಲ್ಲಿ ಹೆಚ್ಚಿನ ಮರಗಳು ಕೇಡಾಗಿರುವದರಿಂದ ಹೀಗೆ ಹೇಳಲು ಕಾರಣ. ಹಾಗೆ ಜಮಾಯಿಸಿದ ಬೆಳೆದ ಮುದಿ ಮರಗಳನ್ನೂ, ಸತ್ತ ಮರಗಳನ್ನೂ ಕಡಿದರೆ ಜಾಗದ ಕ್ಷೇಮವನ್ನು ಕಮ್ಮಿ ಮಾಡಿದಂತಾಗುವದಿಲ್ಲ. ಒಂದು ಮರವನ್ನು ಕಡಿದರೆ ಅದೇ ಜಾಗದಲ್ಲು ಬೇರೆ ಜಾತಿಯ ಬೇರೆ ಮರಗಳು ಹುಟ್ಟುತ್ತವೆ. ಯಾವನೊಬ್ಬ ರೈತನೂ ತಮ್ಮ ತಮ್ಮ ಜಾಗವನ್ನು ನಿಸ್ಸಾರವಾಗಿ ಮಾಡಿಕೊಳ್ಳಲು ಒಪ್ಪುವದಿಲ್ಲವಾದುದರಿಂದ ಘನ ಸರ್ಕಾರದವರು ಜಾಗದ ಯೋಗ್ಯತಾನುಸಾರ ಬೆಳೆದು ವಯಸ್ಸಾದ ಮತ್ತು ಸತ್ತ ಮರಗಳ (ಮತ್ತು ಈ ಮೊದಲೇ ಕಾರಣಾಂತರಗಳಿಂದ ಬೀಳಿಸಿ ಪ್ರಯೋಜನಕ್ಕೆ ಬಾರದಿರುವ ಮರಗಳ) ಕುತ್ತಿ ಕಾಣೆಯನ್ನು ತೆಗೆದುಕೊಂಡು ಯಾತಕ್ಕಾಗಿ ಮಾರಾಟಕ್ಕೆ ಹುಕುಂ ಕೊಡುವದಿಲ್ಲವೆಂಬುದು ತಿಳಿಯುವದಿಲ್ಲ. ಈ ಮರಗಳ ಏಳಿಗೆಯಿಂದಲಾದರೂ ಬಡರೈತರು ನಾಲ್ಕು ಕಾಸು ಮಾಡಿಕೊಂಡು ತಮ್ಮ ತಾಪತ್ರಯವನ್ನು ನೀಗಿಸಿಕೊಳ್ಳುವರೆಂದು ಇರಾದೆ ಪಡುವ ಕಾಲಗಳಲ್ಲಿಯೂ, ಸರ್ಕಾರದವರು ಇಂಥಾ ಕಾರಣಗಳನ್ನು ಸೂಚಿಸಿಕೊಂಡು ರೈತರು ಬರಕೊಳ್ಳುವ ಅರ್ಜಿಗಳನ್ನು ತಿರಸ್ಕರಿಸುತ್ತಿರುವದು ಬಹು ಶೋಚನೀಯವಾದುದಾಗಿದೆ. ಬಡವರು ಯಾವಾಗಲೂ ಮೂಲೆಗೊತ್ತಲ್ಪಡುವದಲ್ಲದೆ ಕಾನೂನು ಕಾಯಿದೆ ವಗೈರೆಗಳ ಕಾರಣಗಳಿಂದ ಮುಂದೆ ಎಂದೂ ಬರಲಿಕ್ಕಾಗುವದಿಲ್ಲ. ಮರಗಳ ಕುತ್ತಿ ಕಾಣೆಯನ್ನು ಸರ್ಕಾರದವರು ಕಟ್ಟಿಸಿಕೊಳ್ಳುತ್ತಿದ್ದಂತ ಸಮಯದಲ್ಲು ಬಡವರ ಕೈಯಲ್ಲು ಕಾಸಿರಲಿಲ್ಲವಲ್ಲದೆ ಮರಕ್ಕೂ ಬೆಲೆಯೂ ಇರಲಿಲ್ಲ. ಐಶ್ವರ್ಯವಂತರಾದರೋ ಅನೇಕರು ಆ ಕಾಲಗಳಲ್ಲಿ ತಮ್ಮ ಹಣದ ಅನುಕೂಲತೆಯಿಂದ ಕಾರಣಾಂತರದಿಂದಲೂ, ಮುಂದಾಲೋಚನೆಯಿಂದಲೂ ತಮ್ಮ ತಮ್ಮ ಜಾಗದ ಮರಗಳ ಕುತ್ತಿ ಕಾಣೆಯನ್ನು ಕಟ್ಟಿಸಿಕೊಂಡು ತಮ್ಮ ಜಾಗದ ಕ್ಷೇಮ ಹೋಗುವದನ್ನು ನೋಡದೆ, ಈಗ ಯಥೇಚ್ಛವಾಗಿ ಎಲ್ಲಾ ಮರಗಳನ್ನು ಮಾರುತ್ತಾ ತಮ್ಮ ಹಣದ ಗಂಟನ್ನು ಇನ್ನೂ ದೊಡ್ಡದಾಗಿ ಮಾಡುತ್ತಲಿದ್ದಾರೆ. ಇದೆಲ್ಲವೂ ಸರ್ಕಾರದವರಿಗೆ ಕಾಣುವದಿಲ್ಲವೇ? ಈ ಜಾಗಗಳ ನಿಸ್ಸಾರತೆಗೆ ಯಾರು ಜವಾಬ್ದಾರರು ? ಹಾ ದೇವರೇ! ಗರೀಬರ ದುರಾದೃಷ್ಟವೇ ? ಬೇರೆ ದೇಶಗಳಲ್ಲಾದರೋ ಮರಗಳನ್ನು ಮಾರಟ ಮಾಡಲು ರೈತರಿಗೆ ಪೂರ್ಣ ಸ್ವತಂತ್ರವಿದೆಯಂತೆ, ನಮ್ಮ ಈ ಕೊಡಗಿನಲ್ಲಾದರೋ ಮರದ ಅರ್ಧ ಬೆಲೆಯು ಸರ್ಕಾರಕ್ಕೆ ತೆಗೆದುಕೊಂಡಾದರೂ ಮಾರಾಟಕ್ಕೆ ಹುಕುಂ ಸಿಕ್ಕುವದಿಲ್ಲ. ಇದು ಯಾರ ಪ್ರಾರಬ್ಧ? ನಮ್ಮ ಬಡತನವನ್ನು ಹೋಗಲಾಡಿಸುವದು ರಾಜನೀತಿಯಲ್ಲು ಒಂದನೆ ಅಂಶವಾಗಿರುವದರಿಂದ ಬಡರೈತರು ಕೂಗಿ ಹೇಳಿ ಹಾಹಾಕಾರವನ್ನು ಮಾಡುತ್ತಿರುವ ವೇಳೆಯಲ್ಲು ನಮ್ಮ ಘನ ಸರ್ಕಾರವು ಹಿಂದಕ್ಕೆ ನಿಲ್ಲುವದು ನ್ಯಾಯವೇ? ಅಯ್ಯೋ ನ್ಯಾಯವನ್ನು ಬಲಾತ್ಕರಿಸುವವನಿಗೆ ಬಡರೈತರಿಂದ ಕೈಲಾಗದ ಕೆಲಸವಾಗಿದೆ.

ಇನ್ನೊಂದು ತಾಪತ್ರಯವೇನೆಂದರೆ, ಘನ ಸರ್ಕಾರದವರು ಈ ಮೊದಲು ಮರಗಳ ಕ್ರಯವನ್ನು ಹೊಂದಿಕೊಂಡು ಮಾರಾಟಕ್ಕೆ ಪಾಸ ಕೊಡುತ್ತಿದ್ದಂತ ನಂಬಿಕೆಯ ಮೇರೆ ಅನೇಕ ಬಡರೈತರು ತಮ್ಮ ಜಾಗದಲ್ಲು ಜಮಾಯಿಸಿದ ಮರಗಳನ್ನು ಮಾರಿ, ಆ ಬಗ್ಗೆ ಕೆಲವರು ಮರಗಳ ಪೂರ್ತಿ ಕ್ರಯವನ್ನೂ, ಕೆಲವರು ಮರದ ಬೆಲೆಯ ಭಾಗಶ ಅಂಶವನ್ನು ಅಡ್ವಾನ್ಸಾಗಿಯೂ ಹೊಂದಿಕೊಂಡಿರುತ್ತಾರೆ. ಇಂಥಾ ಸಂದರ್ಭದಲ್ಲು ಸರ್ಕಾರದವರು ಮಾರಾಟಕ್ಕೆ ಹುಕುಂ ಕೊಡದಿದ್ದರೆ, ವ್ಯಾಪಾರಸ್ಥರಿಗೂ, ಮರದ ಮಾಲೀಕರಿಗೂ ಉಂಟಾಗುವ ಮನಸ್ತಾಪವನ್ನೂ, ವ್ಯಾಪಾರಸ್ಥರಿಗೆ ಉಂಟಾಗುವ ನಷ್ಟವನ್ನೂ ವಿವರಿಸಲಸದಳವಾಗಿದೆ. ಅಲ್ಲದೆ ಕೊಡಗಿನ ಅನೇಕ ವ್ಯಾಪಾರಸ್ಥ ಯುವಕರು ಮೇಲ್ಕಂಡ ನಂಬಿಕೆಯ ಮೇರೆ ಮಲಬಾರಿನ ವ್ಯಾಪಾರಸ್ಥರಿಗೆ ಮರಗಳನ್ನು ಕೊಡುವದಾಗಿ ಒಪ್ಪಿ, ನಾಲ್ಕು ಯಾ ಐದು ಸಾವಿರ ಅಡಿಗಳ ವರೆಗೆ ಸಾಟಿಮಾಡಿ ಅಡ್ವಾನ್ಸು ಹೊಂದಿಕೊಂಡಿರುತ್ತಾರೆ. ಇವರು ವಾಯಿದೆಗೆ ಸರಿಯಾಗಿ ಮರ ಒದಗಿಸಿ ಕೊಡದಿದ್ದ ಪಕ್ಷ ಅಡಿ ಒಂದರ ಎರಡು ಯಾ ಮೂರು ರೂಪಾಯಿವರೆಗೆ ನಷ್ಟ ಸಹ ಕೊಡಲುಳ್ಳವರಾಗಿದ್ದಾರೆ. ಇಂಥಾ ನಷ್ಟಗಳಿಗೆ ಯಾರು ಜವಾಬುದಾರರು? ಒಂದು ವೇಳೆ ಸರ್ಕಾರದವರು ಮರಗಳನ್ನು ರಿಜರ್ವ್ ಮಾಡಿಕೊಡುವುದಿಲ್ಲವಾಗಿ ಮೊದಲೇ ದೇಶದವರಿಗೆ ಪ್ರಚುರಪಡಿಸುತ್ತಿದ್ದ ಪಕ್ಷ ಇಂಥಾ ತೊಂದ್ರೆಗಳುಂಟಾಗುತ್ತಿರಲಿಲ್ಲ. ಈ ಅನಾಹುತಗಳಿಂದ ವ್ಯಾಪಾರಸ್ಥರ ತಲೆಗೆ ಏರುವ ಬಿಸಿಯು ಕೊಡಗಿನಿಂದ ಇಂಗ್ಲಂಡಿನವರೆಗೆ ಇದೆಯಂತೆ! ಇದು ಎಷ್ಟುಮಂತ ವಿಷಯವೂ ಆಗಿದೆ.

ಆದುದರಿಂದ ಅಧಿಕಾರಿಗಳು ಮೇಲ್ಕಂಡ ವಿಷಯಗಳನ್ನೆಲ್ಲಾ ಗಮನಕ್ಕೆ ತೆಗೆದುಕೊಂಡು ಗರೀಬರ ಮೇಲೆ ಕರುಣವಿಟ್ಟು, ಸಾಗಾನ ಮತ್ತು ಜಮ್ಮದ ಜಾಗಗಳಲ್ಲು ಸಹ ಬೆಳೆದು ಮುದಿಯಾದ ಮತ್ತು ಸತ್ತ ಮರಗಳ ಕುತ್ತಿ ಕಾಣೆಯನ್ನು ತೆಗೆದುಕೊಂಡು ಮಾರಾಟ ಮಾಡಲು ಒಡನೆ ಹುಕುಂ ದಯಪಾಲಿಸಬೇಕಾಗಿಯೂ, ನಮ್ಮ ಕೌನ್ಸಿಲು ಮೆಂಬರುಗಳೂ ಸಹ ಇದನ್ನು ಎಟ್ಟು ಅಧಿಕಾರಿಗಳ ಗಮನಕ್ಕೆ ತಂದು ಸುಧಾರಣೆಗೆ ಭಾಗಿಗಳಾಗಬೇಕಾಗಿಯೂ ಕೇಳಿಕೊಳ್ಳುವದಾಗಿದೆ. ವ್ಯಾಪಾರವು ನಿಮಿತವಾದುದರಿಂದ ಗಾಳಿಬರುವಾಗ ತೂರಿಕೋ ಎಂಬ ಗಾದೆಯನ್ನು ಅನುಸರಿಸಿ ಮರಕ್ಕೆ ಒಳ್ಳೆ ಬೆಲೆಯಿರುವ ಈ ಸಮಯದಲ್ಲು ಬಡರೈತರ ಹಿತವನ್ನು ಬಯಸಿ ಘನ ಸರ್ಕಾರದವರು ಪಾಡಿತವಾಗಿಯೂ ಒಡನೆ ಹುಕುಂ ದಯಪಾಲಿಸುವದು ಅವರ ಕರ್ತವ್ಯವಾಗಿದೆ.

"ಬಡರೈತ"

ಸತ್ಯಮೇವಜಯತೇ.

(ಪಥ್ಯ ಗುಣವಾಗದಿದ್ದರೆ ಹಣ ವಾಪಸ ಇಲ್ಲ.)

ಧಾತುಪೌಷ್ಟಿಕ ಕಾಮೋತ್ತೇಜಕ, ಇಂದ್ರಿಯಸ್ತಂಭಕವಾದ

ಮದನೋದ್ಭವ ಗುಳಿಗೆ.

ಜನನೇಂದ್ರಿಯದ ಶಿಥಿಲತೆ ನಿರ್ಬಲತೆ ನಪುಂಸಕತ್ವ ಸ್ತ್ರೀಜಿತ, ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ ಇಂದ್ರಿಯಸ್ತಂಭಕ, ಗರ್ಮಿ, (ಬಾತಿ) ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲ ತರಹದ ಬಕ್ಕೆಗಳು, ಹುಣ್ಣುಗಳು ಪಿತ್ತದ ಭಾಧೆಗಳು, ಕಟಿಶೂಲಿ ವಾತರೋಗವು ಮುಂತಾದವು ಆಶ್ಚರ್ಯ ಗುಣವಾಗಿ ಶರೀರಕ್ಕೆ ನಿರೋಗತ್ವವೂ ಕಾಂತಿಯೂ ಧಾತುಬಲಕ್ಕೆ ಶಕ್ತಿಯೂ ಉಂಟಾಗುತ್ತದೆ ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗುತ್ತವೆ ಕಿಮ್ಮತ್ತು ೬೦ ಗುಳಿಗೆಗಳಿಗೆ ೪ ರೂಪಾಯಿ ಇವನ್ನು ಸೇವಿಸುವಾಗ್ಗೆ ನಪುಂಸಕತ್ವ ತೈಲವನ್ನು ಉಪಯೋಗಿಸಿದರೆ ಉತ್ತಮ. ಕಿಮ್ಮತ್ತು ಬಾಟ್ಲಿಗೆ ರೂ ೨—೧೨—೦

ಶ್ವಾಸೋಪನಿವಾರಣಿ—ಇದರ ಸೇವನೆಯಿಂದ ಮೂತ್ರಸ್ಥಾನದಿಂದ ಕೆಂಪು ಹಳದಿಯಂತೆ ಹೋಗತಕ್ಕ ಕೀವು ಉರಿ, ವಗೈರೆ ಆದಿವ್ಯಾಧಿಯಿಂದ ಗುಣವಾಗುವದು ಕಿಮ್ಮತ್ತು ಬಾಟ್ಲಿಗಳಿಗೆ ರೂ ೩—೮—೦ ಟಿ ಖ ಬೇರೆ ಅನುಪಾನಪತ್ರಿಕೆ ಔಷಧದ ಸಂಗಡ ಪಥ್ಯ ಗುಣವಾಣಿ ಇದ್ದರೆ ಅನವರತ

ವಿಳಾಸ,—

ವೈದ್ಯ ಜಿ. ಎಲ್ ಜೋಶಿ ಮತು ಕಂಪೆನಿ.

3 ನಂ 6 ಪೋಸ್ಟ ಬಸವಾನ, ಉತ್ತರ ಕಾನಡಾ

ಮನೋಲ್ಲಾಸಿನಿ ತೈಲ

ತಲೆನೋವು, ತಲೆ ತಿರುಗುವದನ್ನು, ಕಳೆಪುರಿ ಕಣ್ಣುರಿ, ಕಿವಿಯಿಂದ ಕೀವು ಸೋರುವದು ಕಿವುಡುತನ, ಕಣ್ಣುನೋವು, ಅಪಸ್ಮಾರ, ನಿದ್ದೆ ಬಾರದಿರುವದು, ನೆನಪುಶಕ್ತಿ ಕುಂದಿಹೋಗುವದು ಇವುಗಳನ್ನೆಲ್ಲ ಖಂಡಿತ ಗುಣಮಾಡುತ್ತದೆ ಉದುರುವ ಕೂದಲನ್ನು ನಿಲ್ಲಿಸಿ ಗಿಡ್ಡನಿರುವ ಕೂದಲನ್ನು ಬೆಳೆಯಿಸಿ ಕೂದಲಿಗೆ ಸೌಂದರ್ಯವನ್ನು ಹೊಳಪನ್ನು ಕೊಟ್ಟು ಅಕಾಲಕ್ಕೆ ಹಣ್ಣಾಗುವ ಕೂದಲನ್ನು ತಡೆದು ಕೂದಲು ಇಲ್ಲದ ಸ್ಥಳದಲ್ಲಿ ಹೊಸ ಕೂದಲನ್ನು ಹುಟ್ಟಿಸುತ್ತದೆ ಬೆಲೆ ಸೀಸೆಗೆ ರೂ 1, 3 ಸೀಸೆಗೆ 2—10—0, ಒಂದು ದೊಡ್ಡ ಸೀಸೆಗೆ ರೂ 2, 3 ಸೀಸೆಗಳಿಗೆ 5—8—0

ಚಂದನಾಸವ.— ಇದು ಪ್ರಮೇಹ ಮೂತ್ರಕೃಚ್ಛ್ರ, ಮೂತ್ರ ಪನಿಹಸಿಯಾಗಿ ಹೋಗುವುದು, ಮೂತ್ರಕೋಶದ ಉರಿ, ಮೂತ್ರಪಿಂಡಗಳ ಉರಿ, ಮೂತ್ರನಾಳದಲ್ಲಿ ಹುಣ್ಣು ಮೂತ್ರ ಹೊಯ್ಯುವಾಗ ಉರಿಯುವದು, ಮೂತ್ರನಾಳದಿಂದ ಕೀವು ಬರುವದು, ಮೂತ್ರದಲ್ಲಿ ಧಾತು, ಹುಡಿ ಹೋಗುವುದು, ಆಗಾಗ್ಗೆ ಮೂತ್ರ ಬರುವದು, ಮೂತ್ರ ತಡೆಯಲಿಕ್ಕೆ ಸಾಮರ್ಥ್ಯವಿಲ್ಲದಿರುವುದು, ದೇಹದಲ್ಲಿ ಉರಿ, ಬಾಯಾರಿಕೆ, ಸ್ವಪ್ನಾವಸ್ಥೆ, ಮೂತ್ರನಾಳದಲ್ಲಿ ಚುಚ್ಚುವ ನೋವು ಇವುಗಳಿಗೆ ಪರಮ ಔಷಧಿ ಗಂಡಸರಿಗೂ ಹೆಂಗಸರಿಗೂ ಇದು ಅತ್ಯುತ್ತಮ ಬಾಟ್ಲಿಗೆ ರೂ 1—8—0, 3ಕ್ಕೆ ರೂ 4, ಡಜನಿಗೆ ರೂ 15,

ರೋಮನಾಶಿನಿ.— ಈ ಹುಡಿಯನ್ನು ನೀರಲ್ಲಿ ಕಲಸಿ ಮೈಯಲ್ಲಿ ರೋಮವಿರುವ ಭಾಗಕ್ಕೆ ಹಚ್ಚಲು ರೋಮವು ಉದುರಿ ಬೀಳುವದು ಡಬ್ಬಿಗಳಿಗೆ 6 ಆಣೆ, 3 ಡಬ್ಬಿಗಳಿಗೆ ರೂ. 1 1 ಡಜನಿಗೆ 3 8 0

ದದ್ರುಘ್ನಲೇಪ.— ಇದನ್ನು ಗಜಕರ್ಣದ ಮೇಲೆ 2 3 ಸಾರಿ ಹಾಗಿಸುವಷ್ಟರಲ್ಲಿ ಗುಣ ಬರುತ್ತದೆ, ಡಬ್ಬಿಗೆ ಆ 6, ೩ ಡಬ್ಬಿಗಳಿಗೆ ರೂ 1 ಡಜನಿಗೆ ರೂ 3—?—0

ನಾರೀಸವ.— ಇದು ಸ್ತ್ರೀಯರ ಹೊಟ್ಟೆನೋವು, ಅತ್ಯಧಿಕ ರಕ್ತಸ್ರಾವ, ಬಿಳಿಪ್ರದರ, ಮುಟ್ಟು ದೋಷಗಳು ಮತ್ತು ಗರ್ಭಕೋಶದ ವ್ಯಾಧಿಗಳನ್ನು ಗುಣ ಮಾಡುತ್ತದೆ ಸೀಸೆ ಗಳಿಗೆ ರೂ.2

ಲಂಗ್ಸಟೋನಿ.— ಉಬ್ಬಸ ವ ಕ್ಷಯದ ಕೆಮ್ಮು, ಅನೇಕ ದಿವಸಗಳಿಂದ ಬರುವ ಕೆಮ್ಮನ್ನೂ ಕಫವನ್ನೂ ಗುಣ ಮಾಡುತ್ತದೆ ಡಬ್ಬಿ ಗಳಿಗೆ 2—8—0 3 ಡಬ್ಬಿಗಳಿಗೆ ರೂ 7

ಅಮೃತರಿಷ್ಟ.— ಇದು ಕ್ವಿನೈನು ಬೆರಸದಿರುವ ಉತ್ತಮ ಮಲೇರಿಯ ಔಷಧಿ ಎಲ್ಲಾ ತರದ ಜ್ವರಕ್ಕೆ ಉತ್ತಮ. 1 ಬಾಟ್ಲಿಗೆ ರೂ 1—8—0, 3ಕ್ಕೆ ರೂ 4, ಡಜನಿಗೆ ರೂ 15

ಲೋಹಾಸವ.— ಇದು, ಜ್ವರಗಳ್ಳಿಗೆ ಮತ್ತು ಮಲೇರಿಯದಿಂದುಂಟಾದ ಅಶಕ್ತತೆಗೆ ದಿವ್ಯವಾದ್ದು 1 ಬಾಟ್ಲಿಗೆ ರೂ. 1—3—0, 3ಕ್ಕೆ ರೂ 1

ನಮ್ಮ ಕೆಟಲಾಗು ತರಿಸಿ ನೋಡಿರಿ

ವಿಳಾಸ-ಮನೋಲ್ಲಾಸಿನಿ ಕಂಪೆನಿ.

52—7 **9 ಮಂಗಳೂರು, ಕೆನರಾ.**

ಡಾಕ್ಟರ್ ಎಸ್ ಎನ್ ಅಯ್ಯಂಗಾರ್, ಬಿ ಎ.,

ಎಲ್ ಆರ್ ಸಿ ಪಿ ಅಂಡ್ ಎಸ್. (ಎಡಿನ್‌ಬರೋ)

ಎಲ್. ಎಫ್ ಪಿ. ಅಂಡ್ ಎಸ್., [ಗ್ಲಾಸ್‌ಗೋ]

ದಂತ ವೈದ್ಯರು

ಮಡಿಕೇರಿ ಮಹದೇವ ಪೇಟೆಯಲ್ಲಿ ಸಾ ಯಂ ಯಂ. ಸಿದ್ದೀಶ್ವರವರ ಅಂಗಡಿಯ ಎದುರಿನ ಮನೆಯಲ್ಲಿ ಇಳಿದುಕೊಂಡಿರುತ್ತಾರೆ. ಇಚ್ಛೆಯುಳ್ಳವರು ಅವರನ್ನು ಇಲ್ಲಿ ಭೇಟಿಮಾಡಬಹುದು.

ಅತ್ಯಂತ ಸುಲಭ ದರದ ಮತ್ತು ಹಿಂದೀಯರಿಂದ ಉತ್ತಮ ತರದಲ್ಲಿ ನಡೆಸಲ್ಪಡುತ್ತಿರುವ **ಲೈಫ್ ಆಫ್ ಏಷ್ಯಾ ಇನ್ಶೂರೆನ್ಸ ಕಂಪೆನಿ ಲಿಮಿಟೆಡ್, ಕಲ್ಕತ್ತಾ,** ಇದರಲ್ಲಿ ಜೀವವಿಮೆ ಮಾಡಿ ಬಹಳ ಲಾಭ ಹೊಂದಿರಿ.

ಏಜೆಂಟ್—

ಎಸ್. ರಾಮಣ್ಣ,

ಮಹದೇವಪೇಟೆ,

ಮಡಿಕೇರಿ.

48—5

2

EMPIRE OF INDIA

Life Assurance Company. Ltd

(Established 1897)

Head Office Bombay.

STRIKING PROGRESS

Twenty eight years of Economical and Careful management result in Assets Exceeding Rs 2,50,00,000. Today

THE COMPANY TO INSURE YOUR LIFE WITH

For Prospectus and other particulars, please apply to the Local Agent or to P K Sankaranarayana Iyer. Branch Secretary for Mysore State & Coorg

152,/3 Commercial Street, Bangalore

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್ ಕೋ ಆಪರೇಟಿವ್ ಸೊಸೈಟೀಸ್ ಆಕ್ಟ ಪ್ರಕಾರ ರಜಿಸ್ಟರಾಗಿದೆ.

		ರೂ.
ಶೇರ್ ಬಂಡವಾಳ	—	50,000
ವಸೂಲಾದ ಶೇರ್ ಹಣಗಳು	—	9890
ಜಮೆಯಾದ ಠೇವಣಿ	—	90,600

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲ ಕೊಡತಕ್ಕದ್ದು.

ಒಂದು ವರ್ಷ ಸಾವಧಿ ಅಥವ ಹೆಚ್ಚಿನ ವಾಯಿದೆಯ ಠೇವಣಿಗಳಿಗೆ ಶೇಕಡ ಸಾಲಿಯಾನ ರೂ 6—4—0ರ ದರದಲ್ಲಿ ಬಡ್ಡಿ ದೊರೆಯುತ್ತೆ. ಕಡಿಮೆ ವಾಯಿದೆಯ ಠೇವಣಿಗಳಿಗೆ ಶೇಕಡ ಸಾಲಿಯಾನ ನರ ಬಡ್ಡಿ ದೊರೆಯುತ್ತೆ.

ವರ್ಷಕ್ಕೊಂದಾವರ್ತಿ ಕೋ ಆಪರೇಟಿವ್ ರಜಿಸ್ಟ್ರಾರವರು ಲೆಕ್ಕ ಆಡಿಟ್ ಮಾಡುತ್ತಾರೆ.

ಪ್ರೆಸಿಡೆಂಟರು,	ಟ್ರೆಜರರ್,
ಕೊಡಂದೇರ ಕುಟ್ಟಯ್ಯನವರು,	ಯಂ ಭುಜಂಗರಾಯರು
ರಾಯ್ ಬಹದ್ದೂರ್	ಬಿ ಎ. ಬಿ ಎಲ್.,

ಸೆಕ್ರೆಟರಿ

ಸಿ ಎಸ್ ವೆಂಕಟಸುಬ್ಬಯ್ಯನವರು, ಬಿ ಎ, ಬಿ. ಎಲ್.,

ತಾರೀಕು 29—9—1925.

ಮುದ್ದಾದ ಪುಸ್ತಕ! **ಮುದ್ದಾದ ಮುದ್ರಣ!!**

ಶರೀರ ಸುಖ, ಸಂಪತ್ತು, ಐಶ್ವರ್ಯಗಳನ್ನು ಸಂಪಾದಿಸಲು ಸಲಹೆಗಳನ್ನೂ ಮತ್ತು ಶರೀರ ಮರ್ಮಶಾಸ್ತ್ರ (ಕಾಮಶಾಸ್ತ್ರ) ವನ್ನೂ ತಿಳಿಸುವ

ಮರ್ಮ ಶಾಸ್ತ್ರ-ಎಂಬ ಕಾಮಶಾಸ್ತ್ರ

ಈ ಪುಸ್ತಕವು ಮೊದಲು ಫ್ರೆಂಚ್, ಇಂಗ್ಲೀಷ್, ಹಿಂದುಸ್ಥಾನಿ, ಸಂಸ್ಕೃತ ಮುಂತಾದ ಭಾಷೆಗಳಲ್ಲಿ ಬಹು ಗುಪ್ತವಾಗಿತ್ತು. ಇದನ್ನು ನಾವು ಪ್ರಯಾಸದಿಂದ ಸಂಪಾದಿಸಿ ಕನ್ನಡಕ್ಕೆ ತರ್ಜುಮೆ ಮಾಡಿ (84 ಚಿತ್ರಪಟಗಳ ಸಹಿತ) ಥಳಥಳಿಸುವ ಕಾಗದದಲ್ಲಿ ಮುದ್ರಿಸಿ ತಯಾರಿಸಿದ್ದೇವೆ ಈ ಪುಸ್ತಕದಲ್ಲಿ ಸ್ತ್ರೀ ಪುರುಷರಿಗೆ ಬೇಕಾದ ಎಲ್ಲಾ ಮರ್ಮ ರಹಸ್ಯಗಳೂ, ಸ್ತ್ರೀ ಪುರುಷರು ಅನ್ಯೋನ್ಯವಾಗಿ ನಡೆದುಕೊಳ್ಳುವ ಮಾರ್ಗ- ಸ್ತ್ರೀ ಪುರುಷರಿಗೆ ಉಂಟಾಗುವ ಎಲ್ಲಾ ತರದ ಮರ್ಮವ್ಯಾಧಿಗಳು ಮತ್ತು ಆಧಾರ ವ್ಯಾಧಿಗಳನ್ನು ಗುಣಮಾಡಿಕೊಳ್ಳುವ ಚಿಕಿತ್ಸೆಗಳೂ ಇನ್ನು ಅನೇಕ ತರದ ಮರ್ಮರಹಸ್ಯಗಳು ಚಿತ್ರಪಟಗಳ ಸಹಿತ ತುಂಬಿರುವದು. ಈ ಪುಸ್ತಕದ ಹೆಸರನ್ನು ಕೇಳಿದ ಮಾತ್ರಕ್ಕೆ ಸಂತೋಷವಾಗುವದು ಅದರ ಓದಲಿಕ್ಕೆ ಯಾರಿಗೆ ತಾನೇ ಸಂತೋಷವಾಗಲಾರದು..

ಕ್ರಯ ಪುಸ್ತಕ ಒಂದಕ್ಕೆ ಒಂದೇ ಒಂದು ರೂಪಾಯಿ ರೂ. 1—0—0

T Ramachander Rao & Co ,	ಟಿ. ರಾಮಚಂದ್ರರಾವ್ ಅಂಡ್ ಕೊ,
Post Box No 232,	ಪೋಸ್ಟ್ ಬಾಕ್ಸ್ ನಂ. 232.
Madras	ಮದ್ರಾಸ್.

52-7

A Lot for SELECTION of Single Barrel Breach Loading Guns at LOWEST PRICE EVER OFFERED.

Original B o v i n g S 3 3 L. 12 bore Take-Down Hammerless Automatic Ejector Gun, with safety catch ....Price, Rs. 140/-

Do do but by **Winchester** or **Remington.** . ... . Price, Rs. 160/.

Weshojsten or **Remigton S. B B L** 12 bore Six Shots Hammerless Repeating gun, 32 inches barrel with Safety catch ... . Price, Rs 150/-

German S. B B L. 12 bore Hammerless Ejector Gun, 32 inches German Steel Barrel with safety catch .... Price, Rs. 65/-

Continental Make Do Price, Rs. 55/-

Webley & Scott's S B B. L. 12 bore Semi Hammerless Ejector Gun, 32 inches Webley's Steel Barrel, ... Price, Rs. 75/-

The above Guns can be had in 16, 20, & 410 bore.

Same as above in 12 bore **Speci. "Duck Gun"** 36 inches barrel ... . Price, Rs 80/

W W. Greener's "Gaffer" S B B L 12 bore Martini Action Ejector Gun, 26 inches Greener's Steel Barrel .... Price, Rs. 75/-

W W. Greener's as above but **Long Range "Duck Gun"** with 32 inches barrel, and chamber for 2½ inches to 3 inches case . ... Price, Rs 90/

Midland's "Knock-About" S. B B L. Ejector Hammer Gun 32 inches barrel. ....Price Rs. 55/-

Continental Make S. B B. L. folding Pattern Hammer Gun, 32 inches barrel beautifully engraved and carved..... . .... Price, Rs 45/-

J. Steven's 12 bore Ejector Hammer Gun, 32 inches Steel barrel .... Price, Rs 45/.

Do do ' Dread Naught " with heavy Breech.... ....Price, Rs. 50/

Any of the above of J. Steven's Special **Duck Gun** with 36 inches barrel. Price, Rs. 5/- Extra.

ENQUIRIES SOLICITED.

THE BOMBAY ARMOURY,

331, ABDUL REHMAN STREET,

BOMBAY. 3

24—14

MY SCIENTIFIC SYSTEM OF GRADUATED PHYSICAL CULTURE

SENT FREE TO EVERY ONE

This will show you some of my remarkable achievements in Health building exercises many pages with nice photographs of myself and a number of my pupils. Read what they say about my system. Don't take my word for it. This book will be an impetus, an inspiration to every young man. All I ask is the price of postage two annas. Remember this does not obligate you in any way, so don't delay one minute in your life. Write for this big book now while it is on your mind.

Prof. M. V. Krishna Rao,

P. O. Basavangudi, G I P

(BANGALORE CITY)

ಕಿರ್ಲೋಸ್ಕರ ಗಾಣಗಳು.

ಈ ಕೆಳಗಿನ ಕಬ್ಬಿನ ಗಾಣಗಳು ನಮ್ಮ ಕಾರ್ಖಾನೆಯಲ್ಲಿ ತಯಾರಾಗುತ್ತವೆ

೧ ಕಿರ್ಲೋಸ್ಕರ ನಂ ೫
೨ ' ಕಿಸಾನ
೩ ' ಕಮಲ ಚರಕ

ಇವುಗಳ ಸವಿಸ್ತಾರ ಸಂಗತಿ ಒಗ್ಗೆ ಹಾಗೂ ಬೆಲೆಯ ಬಗ್ಗೆ ಕೂಡಲೇ ತಿಳಿದುಕೊಳ್ಳಿರಿ.

ಕರ್ನಾಟಕ ತರುಣರ ಉನ್ನತಿಗೋಸ್ಕರ

ಕಿರ್ಲೋಸ್ಕರ ವಾರ್ತೆ,

ಎಂಬ ತಿಳಿಗನ್ನಡ ಹೊಸ ಪತ್ರಿಕೆಯನ್ನು ಪ್ರಕಟಿಸುತ್ತೇವೆ. ವಾ. ವ ೧|ರೂ ಮಾದರಿ ಸಂಚಿಕ ಪುಕ್ಕಟೆ

ಕಿರ್ಲೋಸ್ಕರ ಬಂಧು, ಲಿಮಿಟೆಡ್.

ಕಿರ್ಲೋಸ್ಕರವಾಡಿ,

16–15 ಜಿ. ಸಾತಾರ್.

ಕರ್ಣಾಟಕ

ಚಳಿಜ್ವರ ಮಲೇರಿಯ ಜ್ವರ ಇನ್‌ಫ್ಲ್ಯುಯೆಂಝಾ ಡೆಂ ಜ್ವರ, ಮೊದಲಾದವುಗಳ ಮೇಲೆ ಅಪ್ರತಿಮವಾದ ಔಷಧವು.

ಬೆಲೆ ಬಾಟ್ಲಿಯೊಂದಕ್ಕೆ ರು. ೦—೧೪—೦
ಟಪ್ಪಾಲು ಹಾಸಿಲ್ ಬೇರೆ
ಡಜನ್ ಬಾಟ್ಲಿಗಳಿಗೆ ಟಪ್ಪಾಲುವೆಚ್ಚ ಸಹ ರು ೯—೨—೦

ಏಜಂಟರು ಬೇಕು ಕೊಡಗಿನ ದ್ವಾಲ್ಕಸ್ವರುಗಳು - ಕಮ್ಮಾರಿನ ಮೂರು ಜನ ಔಷಧದ ವ್ಯಾಪಾರಿಗಳ ಹೆಸರನ್ನು ತಿಳಿಸಿದಲ್ಲಿ ಅಂದವಾದ ಬ್ಲಾಟಿಂಗ್ ಪೇಪರು ಪುಕ್ಕಟೆ.

12—2 ಕರ್ಣಾಟಕ ಬ್ರದರ್ಸ್,

ಗಿರಗಾಂವ, ಮುಂಬಾಯಿ.

ಇದು ಒಳ್ಳೇ ಸಮಯ!

ಇಂಥಾ ಸುಸಮಯವನ್ನು ಕಳಕೊಳ್ಳಬೇಡಿರಿ.

ಇಂದಿನ ದಿನ ನಾಳೆ ಎಂದಿಗೂ ದೊರೆಯಲಾರದು.

ನಮ್ಮಲ್ಲಿ ಈಗ ತಾನೇ ತಯಾರಾಗಿ ಬಂದಿರುವ ನಂಬರುಗಳ ಹಂಚುಗಳು ಅಲ್ಲದೆ ವಗೈರೆ ನಂಬರುಗಳು ಮೂಲೆ ಹಂಚು, ಪಾತಿಹಂಚು ಮತ್ತು ಹೂಗೆಹಂಚು, ಎಲ್ಲಾ ತರಹದ ಎಲೆಕ್ಟ್ರಿಕ್ ದೀಪಗಳು, ರಬ್ಬರ್ ಸ್ಟಾಂಪು ಸೀಲುಗಳು ಹಲವು ತರದ ನಮೂನೆಗಳು ಮತ್ತು ಗುಂಡಿಗಳು ಸಹ ಮಾರಾಟಕ್ಕೆ ತಯಾರಿವೆ. ಇವುಗಳಲ್ಲದೆ ಎಲ್ಲಾ ತರಹದ ಪ್ರಿಂಟಿಂಗ್ ಗ್ರೀಟಿಂಗ್ ಕಾರ್ಡು ವಗೈರೆ ನಿಮ್ಮ ವರ್ತನೆಗೆ ತಕ್ಕ ಕಮ್ಮಿ ದರದಲ್ಲಿ ಆರ್ಡರು ಕಳುಹಿಸಿದರೆ ನಾಜೂಕಾದ ಪ್ರಿಂಟಿನಿಂದ ನಿಮ್ಮ ಸುಪರ್ದಿಗೆ ಕೊಡಲಾಗುವುದು. ವ ತ್ತು "ಗೆದ್ದ ಹಣಕ್ಕೆ ಮಾರ್ಕೆಟ್ ದರದಲ್ಲಿ ಹೊಸನಾದ ಭಕ್ತಸಹ ಕೊಂಡುಕೊಳ್ಳಲಾಗುವುದು. ಹೆಚ್ಚಿನ ವಿವರಕ್ಕೆ ಈ ಕೆಳಗಿನ ಅಡ್ರೆಸಿಗೆ ಬರೆದು ತಿಳಿದುಕೊಳ್ಳಬಹುದು.

ಕರನಾಡು ಗ್ರಾಮ **ಅಮ್ಮಣಿಚಂದ ದೇವಯ್ಯ.**

3 ವಿರಾಜಪೇಟೆ **ಜನರಲ್ ಮರ್ಚೆಂಟ್**

ಲೋಕಪ್ರಸಿದ್ಧವಾದ! ಅನುಭವಸಿದ್ಧವಾದ!

ಮೂರು ದಿವಸಗಳಲ್ಲಿ ಗುಣಸಿಕ್ಕದಿದ್ದರೆ ಔಷದಿಯ ಕ್ರಯ ವಾಪಾಸು ಜೀರ್ಣಶಕ್ತಿ, ರಕ್ತವೃದ್ಧಿ, ಧಾತುಪುಷ್ಟಿ, ಮನೋಲ್ಲಾಸ ಪರಮಾನಂದ ಮೊದಲಾದ ಸುಖ ಜೀವನಕ್ಕೆ ಬೇಕಾದ ಆರೋಗ್ಯದಾಯಿನಿ

[ಟ್ರೇಡ್‌ಮಾರ್ಕ್] **ಅಗಸ್ತ್ಯ** [ನೋಡಿ ತಿಕ್ಕೊಳ್ಳಿರಿ

ಮನ್ಮಥ ಚಿಂತಾಮಣಿ ಲೇಹ

ರಿಜಿಸ್ಟರ್ ಆದದ್ದು

ಆಬಾಲವೃದ್ಧ ಸ್ತ್ರೀ ಪುರುಷರ ಆ ೧೦ ರೋಗಗಳಿಗೆ ಶೀಘ್ರಗುಣ ಕಾರಿಯೂ ದ್ವಾ ಮೇಹ ಎಂಬಾರ ಬ್ದುಗ್ಗಾನೂ ನಿದ್ರೆ. ಇಲ್ಲದವನಿಗೂ ಸ್ವಪ್ನೇಂದ್ರಿಯವಾಗುವ ಬಾಲಕರಿಗೂ, ಜ್ಞಾನಿ ಸುಬ್ಬಾನಿಗಳಿಗೂ ಉಪಯೋಗವುಳ್ಳ ಬಹುಪರಮಾನಂದ ಔಷಧಿ 1ಸೇರು 48ದಿವಸ ಸೇವಿಸಬಹುದು ನಂ (1) 1ಸೇರ, ಡಬ್ಬಿ 1ಕ್ಕೆ ರುಪಾಯಿ 3—0—0 ½ಸೇರು ಡಬ್ಬಿ 1ಕ್ಕೆ ರುಪಾಯಿ 1—9—0 ನಂ (2) 1ಸೇರು ಡಬ್ಬಿ 1ಕ್ಕೆ ರುಪಾಯಿ 2—0—0, ½ ಸೇರು ಡಬ್ಬಿ 1ಕ್ಕೆ 1—1—0, ವಿ. ಪಿ. ಕರ್ಚು ಪ್ರತ್ಯೇಕ ವಿಶೇಷ ಮಾಹಿತಿಗೆ ಬರೆಕೊಳ್ಳಿರಿ

ವಿಳಾಸ—ದೇವಣ್ಣ ನಾರಾಯಣಸೇಟ್,

ಗೋಳಿಕಟ್ಟಾ,

ಮಂಗಳೂರು,

52—23 ದ. ಕ.

ಇದು ಒಳ್ಳೆ ಸಮಯ!

ಹಂಚುಗಳು.

ಈಗಾಗಲೇ ವಿರಾಜಪೇಟೆಯಲ್ಲಿ ತಯಾರಾದ ಎಲ್ಲಾ ತರದ ಹಂಚುಗಳು ಅಂದರೆ, ಹಂಚು, ಮೂಲೆ ಹಂಚು, ಪಾತಿಹಂಚು, ಹೂಗೆಹಂಚು ನೆಲಹಂಚು, ವಗೈರೆ ಎಲ್ಲಾ ಹಂಚುಗಳನ್ನು ಸ್ಟೋರ್ ಮಾಡಲಾಗಿದೆ ಕೂಡಲೇ ಹಂಚು ಬೇಕಾದವರು ವಿರಾಜಪೇಟೆಯಲ್ಲಿ ಈ ಕೆಳಗೆ ರುಜು ಮಾಡಿದವರ ಆಫೀಸಿಗೆ ಬರದ ಕೊಳ್ಳಬಹುದು ಅಲ್ಲದೆ ಹಂಚುಗಳ ಸ್ಯಾಂಪಲನ್ನು ಸಹ ನೋಡಬಹುದು ಎಲ್ಲಾ ವಿವರಕ್ಕೂ, ಕ್ರಯಕ್ಕೂ, ಮತ್ತು ಪರಶ್ನೆಗೂ ಈ ಕೆಳಗಿನವರಿಗೆ ದಯವಿಟ್ಟು ಬರೆದು ಕೊಳ್ಳಿ

ವಿರಾಜಪೇಟೆ ಕೆ. ಪಿ. ಚಿಣ್ಣಪ್ಪ,

12—6 ಖಾದಿ ಭಂಡಾರ

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್, ಕೋ ಆಪರೇಟಿವ್ ಸೊಸೈಟೀಸ್ ಆಕ್ಟ್ಸ್ ಪ್ರಕಾರ ರಿಜಿಸ್ಟರಾಗಿದೆ.

		ರೂ
ಶೇರ್ ಬಂಡವಾಳ	—	50,000
ವಸೂಲಾದ ಶೇರ್ ಮೊಬಲಗು	—	9890
ಜಮೆಬಂದ ಠೇವಣಾತಿ	—	90,600

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲಕೊಡತಕ್ಕದ್ದು.

ಒಂದು ವರ್ಷ ವಾಯಿದೆ ಅಥವ ಹೆಚ್ಚಿನ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ ರೂ ೬-೪-೦ರ ದರದಲ್ಲಿ ಒಡ್ಡಿ ದೊರೆಯುತ್ತೆ ಕಡಿಮೆ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ ೫ರ ಬಡ್ಡಿ ದೊರೆಯುತ್ತೆ

ವರ್ಷಕ್ಕೊಂದಾವರ್ತಿ ಕೋ ಆಪರೇಟಿವ್ ರಿಜಿಸ್ಟ್ರಾರರವರು ಲೆಕ್ಕ ಆಡಿಟ್ ಮಾಡುತ್ತಾರೆ

ಪ್ರೆಸಿಡೆಂಟರು, ಟ್ರೆಜರರ್.

ಕೋದಂಡೇರ ಕುಟ್ಟಯ್ಯನವರು ಯಂ ಭುಜಂಗರಾಯರು

ರಾಯ್ ಬಹದ್ದೂರ್ ಬಿ. ಎ, ಬಿ. ಎಲ್

ಸೆಕ್ರೆಟರಿ

ಸಿ ಯನ್ ವೆಂಕಪ್ಪಯ್ಯನವರು, ಬಿ.ಎ., ಬಿ. ಎಲ್

ತಾರೀಕು. 29—8—1925.

೧೦೦೦ ರೂಪಾಯಿಗಳ ಬಹುಮಾನ.

ಲೋಕಪ್ರಸಿದ್ಧವಾದ ಸಾಲಂಮಿಸ್ರಿ ಮುರಬ್ಬಾ

ನಮ್ಮ ಟ್ರೇಡ್ ಮಾರ್ಕನ್ನು ನೋಡಿ ಈ ಔಷಧ ತೆಗೆದುಕೊಳ್ಳಿರಿ.

ಇದರ ಸೇವನೆಯಿಂದ ವೀರ್ಯವು ಸ್ಥಿರವಾಗಿ ಇದ್ದರೂ, ಸ್ವಪ್ನೇಂದ್ರಿಯವಾದರೂ ಸ್ತ್ರೀ ಸಂಪರ್ಕಕ್ಕೆ ಮೊದಲೇ ಸ್ಖಲನವಾದರೂ, ಮೂತ್ರದೊಂದಿಗೆ ಹೋಗುತ್ತಿದ್ದರೂ ದೋಷರಹಿತವಾಗಿ ಶರೀರಕ್ಕೆ ಆರೋಗ್ಯವನ್ನೂ ಧಾತ್ವಿಕ್ಕೆಯನ್ನೂ ಆಯುಸ್ಸು, ಬಲ, ತೇಜಸ್ಸು ಉಂಟು ಮಾಡುವದು ಆಜೀರ್ಣ ಮಲಬದ್ಧತೆ, ಮೈದುಳಿನ ಬಲಹೀನತೆ, ಕೈಕಾಲು ಸೊಂಟ ನೋವುಗಳಿಗೆ ಇದು ದಿವ್ಯ ಔಷಧವು ಈ ಸಾಲಂಮಿಸ್ರಿ ಎಂಬುವದು ಕಾಬೂಲ್ ಕಂದಾಹಾರ ಪ್ರಾಂತ್ಯದಲ್ಲಿ ಬೆಳೆಯತಕ್ಕದೆ

ಈ ಔಷಧಿಯಿಂದ ಗುಣಹೊಂದಿದ ಪ್ರಖ್ಯಾತ ಮಹನೀಯರು ತಾವಾಗಿಯೇ ಅನೇಕ ದೇಶಗಳಿಂದ ಅಂದರೆ ಆಫ್ರೀಕ, ಬರ್ಮಾ ಪಿನಾಂಗ್ ಸಿಂಗಪೂರ್ ಸಿಲೋನ್, ಬೊಂಬಾಯಿ ಕಲ್ಕತ್ತ ಮದ್ರಾಸು ಮತ್ತು ಇಂಡಿಯಾದೇಶದಲ್ಲಿ ಎಲ್ಲಾ ಸ್ಥಳಗಳಿಂದಲೂ ನಮಗೆ ಯೋಗ್ಯತಾ ಪತ್ರಿಕೆಗಳನ್ನು ಕಳುಹಿಸಿರುವರು ಇವುಗಳ ನಕಲನ್ನು ಯಾರಾದರೂ ತರಿಸಿ ನೋಡಬಹುದು ಇವುಗಳು ಸುಳ್ಳು ಎಂದು ಸಿದ್ಧಪಡಿಸಿದವರಿಗೆ ಮೇಲೆ ಕಂಡ ಬಹುಮಾನವು ಕೊಡಲ್ಪಡುತ್ತೆ ನಾವು ಹಾಗೆ ಕೊಡದೇ ನಿರಾಕರಿಸಿದಲ್ಲಿ ಕೋರ್ಟಿನ ಮೂಲಕ ಅದನ್ನು ಪಡೆಯಬಹುದು. ೧ ಡಬ್ಬವನ್ನು ೧೫ ದಿನ ಸೇವಿಸಿದಲ್ಲಿ ಗುಣವು ಖಂಡಿತವಾಗಿ ತೋರಬಹುದು ೨ ಅಥವ ೩ ಡಬ್ಬಿಗಳು ಜನ್ಮಾಂತರದವರೆಗೂ ಪೂರ್ಣವಾಗಿ ಗುಣವನ್ನುಂಟು ಮಾಡುವವು ಹುಸಿರು ವಿಳಾಸಗಳನ್ನು ವಿವರವಾಗಿ ಬರೆಯಬೇಕು ಒಂದಾವರ್ತಿ ಅಜಮಾಯಿಸಿ ನೋಡಿದಲ್ಲಿ ಖಾತ್ರಿ ಉಂಟಾಗುತ್ತೆ.

ಕ್ರಯ ಡಬ್ಬಿ ಒಂದಕ್ಕೆ ರೂ ೩—೦—೦ ಛಾಂಗಿ ಹಾಸಿಲ್ ೧೦೦ರ ೩ ಡಬ್ಬಿಗಳಿಗೆ ೦—೭—೦ ಅಣೆ ಏಜೆಂಟರುಗಳು ಎಲ್ಲಾ ಸ್ಥಳಗಳಲ್ಲಿಯೂ ಅವಶ್ಯಕವಾಗಿರುತ್ತೆ ದರಖಾಸ್ತು ಕಳುಹಿಸಿಕೊಳ್ಳಬಹುದು ಆರ್ಡರು ಕೊಡತಕ್ಕ ಕಾಲದಲ್ಲಿ ಈ ಪತ್ರಿಕೆಯ ಹೆಸರನ್ನು ಬರೆಯಬೇಕು

ಟೆಲಿಗ್ರಾಫ್ ಅಡ್ರೆಸ್ ಮಿಸ್ರಿ ಬೆಂಗಳೂರು ಸಿಟಿ. } **ಪಿ ಮುನ್ನಾಲಾಲ್, ಡಿಲ್ಲಿ ಗೇಟಿನ್ ಸ್ಟಿಡರು, ಸಾಲಂಮಿಸ್ರಿ ಮುರಬ್ಬ ಡಿಪೋ,**

12—11 ಬೆಂಗಳೂರು ಸಿಟಿ

ARMS & AMMUNITION MART.

Mahomedally-Noorbhoy.

321 Abdul Rehman Street, near Crawford Market, BOMBAY 3

Telegraphic Address "SHOOTER" Bombay.

[52—23] Please write for Reduced nett prices list for 1926

Printed & published by Kodanda Appayya, R. B. Chairman, Board of Directors, at "Kodagu" Press, Mercara for "Kodagu" Ltd.

Reg. No. M. 1550.
KODAGU' OFFICE MERCARA

ಕೊಡಗು.

ಸತ್ಯೇನ ಧಾರ್ಯತೇ ಪೃಥ್ವೀ ... || ...

ಸಂಪಾದಕ—ಪಂದ್ಯಂಡ ಐ. ಬೆಳ್ಯಪ್ಪ.

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವದು.

ಸಂಪುಟ ೫] ಕೊಡಗು, ಸ. ೧೯೨೬ನೇ ಇಸವಿ ಫೆಬ್ರುವರಿ ತಾರೀಖು ೧೨ನೇ ಶುಕ್ರವಾರ [ಸಂಚಿಕೆ ೩೩

ಒಂದೇ ನೂರು ರೂಪಾಯಿಗಳಲ್ಲಿ!

ಟಿಕ್ = ಟಾಕ್ (ರಜಿಸ್ಟರ್ಡ)

ಎಂಬ ಗಡಿಯಾರವನ್ನು ನಿಮಗೆ ಪ್ರಾರ್ಥಿಸ ಕೈವೆ ಇದು ಕರಾರು ಗಂಟೆಯನ್ನು ತೋರಿಸುವದು ಇದಕ್ಕೆ ಕೀಗ ಕೊಡಬೇಕಾಗಿಲ್ಲ ಇದರಲ್ಲಿ ತಾಗುತ್ತಿರುವ ಗುಂಡನ್ನು ಮೇಲಕ್ಕೇರಿಸಿದರೆ ಸಾಕು ತನ್ನಷ್ಟಕ್ಕೆ ತಾನೇ ಸರಿಯಾದ ಕಾಲವನ್ನು ತೋರಿಸುವದು ಇವತ್ತೇ ತರಿಸಿಕೊಳ್ಳಿರಿ



ನಮ್ಮ ಸ್ಪೆಷಲ್ "ಕ್ರಿಸ್ಮಸ್" ಹಬ್ಬದ ಮಾರಾಟ

ಪ್ರಾರಂಭ ತಾ 1ನೇ ಜನವರಿ 1926
ಕಡೆ ತಾ 5ನೇ ಮಾರ್ಚಿ 1926
'ಕೊಡಗು' ಚಂದಾದಾರರಿಗೆ ಮಾತ್ರ

ಎಲ್ಲಾ ವಾಚುಗಳಿಗೂ ಬಾಬಿನು ಐದು ವರುಷಗಳು

ಎಲ್ಲಾ ವಾಚುಗಳಿಗೂ ಬಾಬಿನು ಐದು ವರುಷಗಳು



No 515 Rs 10 No 511 Rs 11

22 ಕ್ಯಾರಟ್ ರೋಲ್ಡ ಗೋಲ್ಡ ಕೈಗೆ ಕಟ್ಟಿಕೊಳ್ಳುವ ಗಡಿಯಾರುಗಳು

No 507 Rs 12 No 518 Rs 10

22 ಕ್ಯಾರಟ್ ರೋಲ್ಡ ಗೋಲ್ಡ ಕೈಗೆ ಕಟ್ಟಿಕೊಳ್ಳುವ ಗಡಿಯಾರುಗಳು

No 519 Rs 9 No 56, Rs 10

ಸರ್ವೋತ್ತಮ, ಬಹಳ ಅಗ್ಗ, ಬಹು ಕಟ್ಟಾದ ಕೈ ಗಡಿಯಾರುಗಳು

ಪುಗಸಟ್ಟೆ ಕೊಡುವುದು — ಪ್ರತಿ ಒಂದು ವಾಚಿನ ಕೂಡ ಒಂದು ಪಾಕೆಟ್ ವಾಚ್ ಮತ್ತು ಮೇಲಾದ ರೇಷ್ಮೆ ಪಟ್ಟಿ ಬಿಟ್ಟಿ ಕಳುಹಿಸುವೆವು — ಈಗಲೇ ಬರೆಯಬೇಕು

ಪೀಟರ ವಾಚ ಕಂಪೆನಿ,
ಪೋಸ್ಟ ಬಾಕ್ಸ ನಂಬರ 27
12–3 **ಮದ್ರಾಸ್.**

ಪ್ರಕಟಣೆ.

ಒಂದು ಕಡೆ ಇಂಗ್ಲೀಷಿನಲ್ಲಿಯೂ ಇನ್ನೊಂದು ಕಡೆ ಕನ್ನಡದಲ್ಲಿಯೂ ಪ್ರಿಂಟಾಗಿರುವ ಕಾಫಿ ತೋಟದ ಕೂಲಿಗಳ ಪ್ರಿಚಾಪು ಕಂಟ್ರಾಕ್ಟು ಎಗ್ರಿಮೆಂಟ್ ಫಾರಮುಗಳೂ ಮತ್ತು ಅಪ್ಲಿಕೇಶನ್ (complaint) ಫಾರಂಗಳೂ ಸಹ ಮಾರಾಟಕ್ಕೆ ತಯಾರಿವೆ ಬೇಕಾದವರು 'ಕೊಡಗು' ಆಫೀಸಿಂದ ಪಡಕೊಳ್ಳಬಹುದು

ಮಡಿಕೇರಿ 17-9-24, — ಮೇನೇಜರ್, 'ಕೊಡಗು' ಆಫೀಸ್,

'HOP AT SPENCERS.

There is a reduction in every item in the following departments:—

Perfumery, patent medicines, and toilet requisites, stationery, boot sundries, gent's outfitting, E. P. & butlery.

Spencer & Co. Ltd,

52–15 MERCARA & POLLIBETTA.

ಮಾನ್ಯರೇ,

1923ನೆ ಇಸವಿಯಲ್ಲಿ ವೀರರಾಜೇಂದ್ರಪೇಟೆಯಲ್ಲಿ ತೆರೆದ ನಮ್ಮ ವೈದ್ಯಶಾಲೆಯು ಶಾಖೆಯಲ್ಲಿ ಅನೇಕ ದುಸ್ಸಾಧ್ಯವಾದ ರೋಗಿಗಳನ್ನು ಗುಣಪಡಿಸಿ ಹೆಸರುವಾಸಿ ಹೊಂದಿದ ನಮ್ಮ ಕಂಪೆನಿಯ ಮತ್ತೊಂದು ಶಾಖೆಯು ಈಗಾಗಲೇ **ಸೋಮವಾರಪೇಟೆಯಲ್ಲಿ** ತೆರೆಯಲ್ಪಟ್ಟಿದೆ

ಕೃಷ್ಣ ಗಂಬೀರ್ಷ ಮತ್ತು ನಾರಾಯಣ ನಂಬೀಶನ್ ಎಂಬ ಹೆಸರುಗಳುಳ್ಳ ನಮ್ಮ ಪ್ರಧಾನ ವೈದ್ಯರುಗಳು ಒಬ್ಬೊಬ್ಬರು ಒಂದೊಂದು ಶಾಖೆಯಲ್ಲಿ ಯಾವಾಗಲೂ ಇರುತ್ತಾರೆ

ಈ ವೈದ್ಯರುಗಳು ಹಿಂದೆಯೂ ಆಯುರ್ವೇದಿಯವರಿಂದ ವೈದ್ಯರತ್ನವೆಂಬ ಹೆಸರನ್ನು ಹೊಂದಿದವರಾಗಿಯೂ ಕೊಚ್ಚಿ ಸಂಸ್ಥಾನದ ರಾಜವಂಶದ ಸ್ಥಿರ ವೈದ್ಯರಾಗಿಯೂ ಸುಪ್ರಸಿದ್ಧ ಹೆಸರುವಾಸಿಯನ್ನು ಪಡೆದವರಾಗಿಯೂ ಇರುವ ಟಿ ನಾರಾಯಣನ್ ಮೂಸ್ ಎಂಬ ಮಹಾನುಭಾವರ ಕೈಕೆಳಗೆ ಹತ್ತು ವರ್ಷಗಳಿದ್ದು ಪಾಂಡಿತ್ಯವನ್ನು ಪರಿಚಯ ಕೆಲಸ ಪಡೆದವರಾಗಿಯೂ ಇದ್ದಾರೆ

ಇವರಲ್ಲಿನ ಎಲ್ಲಾ ಔಷಧಗಳಿಗೆ ಪೇಟೆಯಲ್ಲಿನ ಎಲ್ಲಾ ವೈದ್ಯಶಾಲೆಗಳ ಔಷಧಗಳ ಚಾರ್ಜಿಗಿಂತಲೂ ಕಡಿಮೆಯಾಗಿದೆ

ನಂಬೀಶನ್ ಮತ್ತು ಕಂಪೆನಿ,
ಆಯುರ್ವೇದಿಕ್ ಪ್ರೈವೇಟ್ ಡಿಸ್ಪೆನ್ಸರಿ.
ಕಲ್ಲುಬಾಣೆ, ವೀರರಾಜಪೇಟೆ ಮತ್ತು
52–46 **ಸೋಮವಾರಪೇಟೆ.**

ಪ್ರಕಟಣೆ.

ನಮ್ಮ ಚಂದಾದಾರರಿಗೂ ಇತರರಿಗೂ ಬುದ್ಧಿ ತಿಳಿಸಿರುವದೇನೆಂದರೆ ಲೆಟರ್ ಹೆಡ್ಸ್, 'ವಿಸಿಟಿಂಗ್ ಕಾರ್ಡ್ಸ್' ಆಮಂತ್ರಣಗಳು (ಇನ್ವಿಟೇಶನ್) ಮೊದಲಾದ ಪ್ರಿಂಟಿಂಗ್ ಕೆಲಸಗಳನ್ನು ಇಂಗ್ಲಿಷ್ ಮತ್ತು ಕನ್ನಡದಲ್ಲಿ ಅಂದವಾಗಿಯೂ ಕಡಿಮೆ ಚಾರ್ಜಿನಲ್ಲಿಯೂ ನಿಯಮಿತ ಕಾಲದಲ್ಲಿಯೂ ಮಾಡಿಕೊಡಲು ತಯಾರಾಗಿದ್ದೇವೆ

ಮಡಿಕೇರಿ — ಮೇನೇಜರ್ 'ಕೊಡಗು' ಲಿಮಿಟೆಡ್

ಆಂಧ್ರ ಆಯುರ್ವೇದಿಕ್ ಫಾರ್ಮಸಿ,
ಬ್ರಾಂಚ್ ಎಂ ಕೊಡು ಸಿಟಿ

ಚ್ಯವನಪ್ರಾಸ ಲೇಹ.

ಇದು ಸರ್ವೋತ್ಕೃಷ್ಟವಾದ ಗಿಡಮೂಲಿಕೆಗಳಿಂದ ತಯಾರಿಸಲ್ಪಟ್ಟ ಆಯುರ್ವೇದ ರಸಾಯನೌಷಧವು. ವಿದ್ಯಾರ್ಥಿಗಳೂ ವಿಶೇಷವಾಗಿ ಬುದ್ಧಿಯನ್ನು ಪ್ರಯೋಗಿಸಿ ಕೆಲಸ ಮಾಡುವವರೂ ಈ ಲೇಹವನ್ನು ಸೇವಿಸಿದರೆ ವಿಶೇಷವಾಗಿ ಬುದ್ಧಿಶಕ್ತಿಯನ್ನೂ ಜ್ಞಾಪಕಶಕ್ತಿಯನ್ನೂ ಹೊಂದುವರು

ದೀರ್ಘಕಾಲದ ವ್ಯಾಧಿಯಿಂದಾಗಲೀ ಕೆಟ್ಟ ನಡತೆಯಿಂದಾಗಲೀ, ಸ್ವಭಾವ ಶಕ್ತಿಯ ಕೊರತೆಯಿಂದಾಗಲೀ ಶರೀರ ಕಾಂತಿಯು ಕುಂದಿ ರಕ್ತ ಕೆಟ್ಟು ಇಂದ್ರಿಯ ದೌರ್ಬಲ್ಯವೇ ಮೊದಲಾದ ವಿಕಾರಗಳಿಂದ ಪೀಡಿತರಾಗಿರುವವರು ಈ ಲೇಹವನ್ನು ಸೇವಿಸಿದರೆ ಆ ತರದ ವಿಕಾರಗಳನ್ನೆಲ್ಲಾ ಪರಿಹರಿಸಿ ದೇಹಕ್ಕೂ ಮನಸ್ಸಿಗೂ ಉಲ್ಲಾಸವನ್ನುಂಟುಮಾಡಿ ಎಲ್ಲಾ ಅಂಗಾಂಗಗಳಿಗೂ ನರಗಳಿಗೂ ಬಲವನ್ನು ಕೊಟ್ಟು ದೇಹಪುಷ್ಟಿಯನ್ನುಂಟುಮಾಡಿ ನವಚೈತನ್ಯವನ್ನುಂಟುಮಾಡುವುದು ಅಲ್ಲದೆ ಆರೋಗ್ಯದೃಢಶರೀರವುಳ್ಳವರಾಗಿ ದೀರ್ಘಕಾಲ ಬದುಕುವರು ಕೆಮ್ಮು ಉಬ್ಬಸ ವ್ಯಾಧಿಯುಳ್ಳವರಿಗೂ ಮುಖ್ಯವಾಗಿ ಕ್ಷಯರೋಗಿಗಳಿಗೂ ಇದು ಸಂಜೀವಿನಿಯೇ ಸರಿ! ಚರಕ ಸಂಹಿತೆಯಲ್ಲಿ ಇದರ ಗುಣವು ಅದ್ಭುತವಾಗಿ ಹೇಳಲ್ಪಟ್ಟಿದೆ. ೧೦ ತೊಲೆಗೆ ೧ ರೂಪಾಯಿ. ೩೦ ತೊಲೆಗೆ ೩ ರೂಪಾಯಿ.

ಎಲ್ಲಾ ಪೇಟೆಯಲ್ಲಿಯೂ ಏಜಂಟರು ಬೇಕು.

ಸೂಚನೆ ನಮ್ಮಲ್ಲಿ ತಯಾರಾದ ಎಲ್ಲಾ ಔಷಧಗಳೂ ಬೆಂಗಳೂರಿನ ಕ್ರಯಕ್ಕೆ ಸಿಗುವವು ಆಯುರ್ವೇದ ಭೂಷಣ ಕೆ ನಾರಾಯಣರಾವ್ ಎ ಎಂ ಎ ಸಿ ಯವರು ರೋಗಿಗಳನ್ನು ಪರೀಕ್ಷಿಸಿ ಚಿಕಿತ್ಸೆಯನ್ನು ಪ್ರತಿದಿನವೂ ನಡೆಸುವರು ವಿಶೇಷ ಸಂಗತಿಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ

ಟಿ. ಸಿ. ಎಸ್. ಮನಿಯಂ ಅಂಡ್ ಕೋ.,

ಮ್ಯಾನೇಜಿಂಗ್ ಏಜೆಂಟ್ಸ್, ಆಂಧ್ರ ಆಯುರ್ವೇದಿಕ್ ಫಾರ್ಮಸಿ,
1–2 ೬೬, ಚಿಕ್ಕಪೇಟೆ ಬೆಂಗಳೂರು ಸಿಟಿ

"ಕೊಡಗು"

ಸನ್ ೧೯೩೬ನೇ ಇಸವಿ ಫೆಬ್ರವರಿ ತಾ. ೧೩ನೇ ಶುಕ್ರವಾರ.

ದೇಶದ ಆರ್ಥಿಕ ಸ್ಥಿತಿ.

ಗ್ರಾಮಾಭಿವೃದ್ಧಿಯಾಗದೆ ದೇಶವು ಏಳಿಗೆಗೆ ಬರಲಾರದು ಎಂಬುದರ ಸಿದ್ಧಾಂತವನ್ನು ಒಪ್ಪಿರುವರು. ಮುಂದಾಳುಗಳು ದಿನೇ ದಿನೇ ಹೆಚ್ಚಾಗಿ ಅರಿತುಕೊಳ್ಳುತ್ತಾ ಬರುತ್ತಿರುವುದು ಶುಭಸೂಚನೆಯಾಗಿದೆ. ದೇಶದ ಹೆಚ್ಚಿನ ಜನರು ವಾಸಿಸುವ ಮತ್ತು ದೇಶಕ್ಕೆ ಬೇಕಾದ ಆಹಾರ ಸಾಮಗ್ರಿಗಳನ್ನು ಬೆಳೆಸುವ ವ್ಯವಸಾಯಗಾರರಾದ ಗ್ರಾಮಸ್ಥರ ಸ್ಥಿತಿಯು ಹೀನವಾದರೆ ಇಡೀ ದೇಶವೇ ಹಿಂದೆ ಬೀಳುವುದರಲ್ಲಿ ಸಂಶಯವಿಲ್ಲ. ಈ ಪ್ರಾಪಂಚಿಕ ಜೀವನದಲ್ಲಿ ಮನುಷ್ಯನಿಗೆ ಅತ್ಯಗತ್ಯ ಬೇಕಾಗಿರುವ ಹೊಟ್ಟೆತುಂಬ ಅನ್ನವು ದೊರೆಯದೆ ಹೋದರೆ ಅವನಿಗೆ ತೃಪ್ತಿಯೂ ಸುಖವೂ ಹೇಗೆ ಉಂಟಾಗುವುದು? ಹಿಂದೂದೇಶಕ್ಕೆ ಸ್ವರಾಜ್ಯಕ್ಕಾಗಿ ಹೋರಾಡುತ್ತಿರುವ ಮಹಾಸಭೆಯವರಲ್ಲಿ ಮಹಾತ್ಮ ಗಾಂಧಿಯವರಂಥ ಕುತೂಹಲಿಗಳು ಮತ್ತು ನಿಸ್ಸ್ವಾರ್ಥತ್ಯಾಗಿಗಳು ಬೇರೆ ಯಾರೂ ಇಲ್ಲವೆನ್ನುವಲ್ಲಿ ಬಾಧವೇ ಹುಟ್ಟಿಗಿಲ್ಲದೆ ಸಾಯುತ್ತಿರುವ ಹಳ್ಳಿಯವರೆಲ್ಲ ಬಡಜನರನ್ನು ಬದುಕಿಸಲಿಕ್ಕಾಗಿ ಚರಕದಿಂದ ನೂಲು ಮಾಡಿ ಹೊಟ್ಟೆ ಹೊರೆದುಕೊಳ್ಳುವ ದಾರಿಯನ್ನು ಬೋಧಿಸುತ್ತಿರುವರು. ಸಾಮಾನ್ಯ ಜನಸಮುದಾಯವು ಅಭಿವೃದ್ಧಿಗೊಳ್ಳದೆ ಸ್ವರಾಜ್ಯವು ಪಡೆಯುವುದು ಕಷ್ಟಸಾಧ್ಯವೆಂಬುದನ್ನು ಅವರು ಎಷ್ಟರಮಟ್ಟಿಗೆ ನಂಬಿರುವರೆಂಬುದು ಇದರಿಂದ ಗೊತ್ತಾಗುತ್ತದೆ. ಜನರಿಗೆ ಅನ್ನ ಒದಗಿಸುವ ಉಪಾಯಗಳಲ್ಲಿ ಭಿನ್ನಾಭಿಪ್ರಾಯವಿದ್ದರೂ ಅನ್ನ ಒದಗಿಸುವ ಪ್ರಶ್ನೆಯು ಬಹು ಮುಖ್ಯವಾದದೆಂದು ಎಲ್ಲರೂ ಒಪ್ಪುವದಾಗಿದೆ. ಜನಾಂಗದ ಅಧಿಕಾಂಶವಾಗಿರುವ ಗ್ರಾಮನಿವಾಸಿಗಳ ಅಜ್ಞಾನದ ಮತ್ತು ಬಡತನದ ನಿವಾರಣೆಯನ್ನು ಕುರಿತು ಸರ್ ರಾಜೇಂದ್ರನಾಥ್ ಮುಕರ್ಜೀಯವರು ಬಂಗಾಳದ ಏಸ್ಯಾಟಿಕ್ ಸಂಘದ ಮೂರನೇ ವಾರ್ಷಿಕ ಮಹಾಸಭೆಯ ತಮ್ಮ ಅಧ್ಯಕ್ಷ ಭಾಷಣದಲ್ಲಿ ಕೆಲವು ಉಪಯುಕ್ತ ಸೂಚನೆಗಳನ್ನು ಕೊಟ್ಟಿರುವರು. ಅವರು ಹಿಂದೂದೇಶವನ್ನು ಕುರಿತು ಮಾತಾಡಿರುವದಾದರೂ ಹಿಂದೂದೇಶಕ್ಕಿಂತ ಹೆಚ್ಚಾಗಿ ವ್ಯವಸಾಯಕರ ದೇಶವಾದ ನಮ್ಮ ಈ ಚಿಕ್ಕ ಪ್ರಾಂತ್ಯಕ್ಕೆ ಅವರ ಸೂಚನೆಗಳು ಹೆಚ್ಚು ಸಮ್ಮಂಧಿಸುವ ಕಾರಣ ಅವುಗಳನ್ನು ಇಲ್ಲಿ ಬರೆದದ್ದಾಗಿದೆ.

"ಹಿಂದೂದೇಶದಲ್ಲಿ ಶೇಕಡ 72ರಷ್ಟು ಜನರು ವ್ಯವಸಾಯದಿಂದ ಜೀವಿಸುತ್ತಿರುವರು. ರೈತರ ಸ್ಥಿತಿಯು ದೇಶದ ಆರ್ಥಿಕ ಪ್ರಶ್ನೆಯ ಮುಖ್ಯಾಂಶವಾಗಿದೆ. ಬಡತನದಿಂದ ಅವರಿಗೆ ಬಿತ್ತನೆಯ ಅಭಿಪ್ರಾಯವೇ ಇರುವುದಿಲ್ಲ. ಕೆಲವು ಸಾರಿ ಅಜ್ಞಾನದಿಂದ ಹುಚ್ಚರಂತೆ ಯಥೇಚ್ಛವಾಗಿ ಖರ್ಚು ಮಾಡುವರು. ಯಾತ್ರೆಗಳಿಗೂ, ಮಕ್ಕಳ ಮದುವೆ ಮತ್ತು ತಂದೆ ತಾಯಿಗಳ ಮರಣ ಕ್ರಿಯೆಗಳು ಮುಂತಾದ ಶುಭಾಶುಭ ಕಾರ್ಯಗಳಿಗೂ ತಮ್ಮ ಶಕ್ತಿಮೀರಿ ಖರ್ಚು ಮಾಡುತ್ತಾರೆ. ಅವರಿಗೆ ಓದು ಬರಹ ತಿಳಿಯದಿದ್ದರೂ ಪೂರ್ತಿ ಅಜ್ಞಾನಿಗಳೆಂದು ಹೇಳಲಾಗುವುದಿಲ್ಲ' ವೆಂದು ಮುಕರ್ಜೀಯವರು ಹೇಳಿರುವರು. ನಮ್ಮ ದೇಶದಲ್ಲಿ ಜನರು ಶೇಕಡ 72ಕ್ಕಿಂತ ಹೆಚ್ಚಾಗಿ ಕೃಷಿ ವೃತ್ತಿಯಲ್ಲಿರುವರು. ಹಳ್ಳಿಯ ಜನರು ಮದುವೆ ಮುಂಜಿಗಳಲ್ಲಿಯೂ ಹಬ್ಬ ಹುಣ್ಣಿಮೆಗಳಲ್ಲಿಯೂ ಯಥೇಷ್ಟ ಖರ್ಚು ಮಾಡುವುದಲ್ಲದೆ ಉಡಿಗೆತೊಡಿಗೆಗಳಿಗೆ ತಮ್ಮ ಆಸ್ತಿ ಕೂಲಿ ವಿಲಿ ಹಣ ಸುರಿಯುತ್ತಿರುವರು. ಇದರೊಂದಿಗೆ ಅಮಲು ಪದಾರ್ಥದ ಸೇವನೆಯು ಮತ್ತು ಕೋರ್ಟಿನಲ್ಲಿ ವ್ಯವಹಾರಗಳು ಗ್ರಾಮನಿವಾಸಿಗಳನ್ನು ಸಾಲದಲ್ಲಿ ಮುಳುಗುಸುತ್ತಿವೆ.

"ಕೃಷಿಗಾರರ ಆರ್ಥಿಕ ಸ್ಥಿತಿಯನ್ನು ಉತ್ತಮಗೊಳಿಸಬೇಕಾದರೆ ಒಂದು ಏರ್ಪಾಡು ಮಾಡುವದಾದರೆ ಭೂಮಿಯ ಫಲವತ್ತಿಕೆ, ಬೆಳೆಗೆ ಅವಶ್ಯವಿರುವ ಮಳೆ ಮುಂತಾದ ಪ್ರಕೃತಿಯ ಕಾರಣಗಳು, ರೈತರು ಸಾಲಗಾರರ ಕೈಗೆ ಸಿಕ್ಕಿ ಬೀಳುವ ಸ್ವಭಾವ ಮೊದಲಾದುವುಗಳನ್ನು ಗಣನೆಗೆ ತೆಗೆದುಕೊಳ್ಳಬೇಕೆಂದೂ, ವಿಜ್ಞಾನ ಶಾಸ್ತ್ರದ ಪರಿಶೋಧನೆಯಿಂದ ಹೆಚ್ಚಿನ ಉತ್ಪತ್ತಿ ಪಡೆಯಬಹುದಾದಂಥ ಸುಧಾರಿಸಿದ ವ್ಯವಸಾಯದ ಕ್ರಮಗಳು ಕಂಡುಹಿಡಿಯಲ್ಪಟ್ಟಿವೆಯಾದರೂ ಅವುಗಳಿಂದ ಈಗ ಹೆಚ್ಚಿನ ಪ್ರಯೋಜನ ದೊರೆಯದ ಕಾರಣ ರೈತರು ಅವುಗಳನ್ನು ಕಟ್ಟಾಗಿ ಅನುಸರಿಸಿ ನಡೆಯುವಂತೆ ಇಂಪೀರಿಯಲ್ ಸರ್ಕಾರದವರೂ ಪ್ರಾಂತೀಕ ಸರ್ಕಾರದವರೂ ತಕ್ಕ ಏರ್ಪಾಡುಗಳನ್ನು ಮಾಡಬೇಕಾದದ್ದು ಅವಶ್ಯವೆಂತಲೂ" ಸೂಚಿಸಿದರು. ಸುಧಾರಿಸಿದ ಆರಂಭ ರೀತಿಗಳನ್ನು ಉಪಯೋಗಿಸಿ ಲಾಭ ಪಡೆಯುವಂತೆ ವ್ಯವಸಾಯಗಾರರಲ್ಲಿ ತಿಳುವಳಿಕೆ ಹುಟ್ಟಿಸುವದಲ್ಲದೆ ಅವುಗಳನ್ನು ಉಪಯೋಗಿಸಲು ತಕ್ಕ ಅನುಕೂಲತೆಗಳನ್ನು ಕಲ್ಪಿಸಿ ಕೊಡುವುದು ದೇಶವನ್ನಾಳುವ ಸರ್ಕಾರದ ಕರ್ತವ್ಯವಾಗಿದೆಯೆಂದು ಹೇಳಬೇಕಾಗಿಲ್ಲ. ಇಲ್ಲಿ ವಾದರೆ ಅಜ್ಞಾನದಲ್ಲಿಯೂ ಬಡತನದಲ್ಲಿಯೂ ಮುಳುಗಿರುವ ರೈತರು ಇದಕ್ಕೆಂದಿಗೂ ಗಮನ ಕೊಡರು. ವ್ಯವಸಾಯಕರ ಹಿತಚಿಂತಕರಾದ ಹೊಸ ವ್ಯವಸಾಯದ ಕಾಲದಲ್ಲಿ ಈ ವೃತ್ತಿಯು ಎಷ್ಟರ ಮಟ್ಟಿಗೆ ವೃದ್ಧಿ ಹೊಂದುವದೆಂದು ನೋಡಬೇಕಾಗಿದೆ.

"ಮಧ್ಯತರಗತಿಯವರ ಸ್ಥಿತಿಯು ಬಹಳ ಕೆಟ್ಟು ಹೋಗಿದೆ. ಅವರು ಸುಲಭ ಜೀವನದಲ್ಲಿ ತೃಪ್ತಿಪಟ್ಟ ಕಾಲವು ಇತ್ತು. ಆದರ ವಿದ್ಯೆಯು ಮಿತವಾಗಿ ಅವರು ಸರ್ಕಾರಿ, ವ್ಯಾಪಾರ ಮತ್ತು ವೃತ್ತಿ ಇಲಾಖೆಗಳಿಗೆ ಕ್ಲಾರ್ಕುಗಳಾಗಿ ಸಿಗ್ಗಿದರು. ಇದು ಒಂದೆರಡು ತಲೆಯ ವರೆಗೆ ಸರಿಯಾಗಿ ನಡೆಯಿತು. ನಂತರ ವಿದ್ಯೆ ಓದಿದವರಿಗೆಲ್ಲಾ ಉದ್ಯೋಗವು ಸಿಕ್ಕದೆ ಅವರ ಕಷ್ಟವು ವಿಪರೀತವಾಯಿತು. ಎರಡು ಮೂರು ತಲೆಗಳಿಂದ ಪಟ್ಟಣವಾಸ ಮಾಡಿದ ಕಾರಣ ಗ್ರಾಮ ಜೀವನದಲ್ಲಿ ಬೇಸರ ಹುಟ್ಟಿ ಶರೀರದಿಂದ ದುಡಿಯುವುದು ನಾಚಿಕೆಕರವಾದುದೆಂದು ಪರಿಗಣಿಸಿದೆ. ಈಗಿನ ವಿದ್ಯಾಭ್ಯಾಸದಿಂದ ಅನ್ನ ಗಳಿಸಬಹುದಾದ ಯಾವ ಕೈಗಾರಿಕೆಯು ತರಬೇತೂ ದೊರೆಯುವುದಿಲ್ಲ. ಮೈಶ್ರಮವಾದರೋ, ಶರೀರದಿಂದ ಮಾಡುವ ಕೆಲಸ ಮಾಡುವ ಕಾರಣ ಅವರ ದೇಹದ ಆರೋಗ್ಯವು ಚೆನ್ನಾಗಿದ್ದು ಬೇರೆ ಯಾವ ಕೈಕೆಲಸಕ್ಕೂ ತಯಾರಾಗಿರುವರು. ವಿದ್ಯಾವಂತರ ಸಂಖ್ಯೆಯು ಹೆಚ್ಚಿದ ಹಾಗೆ ಕ್ಲಾರ್ಕುಗಳ ಸಂಖ್ಯೆಯು ಹೆಚ್ಚದೆ ಇರುವ ಕಾರಣ ಬೇರೆ ಯಾವ ಕೆಲಸವನ್ನೂ ಮಾಡಲಾರದ ಮಧ್ಯತರಗತಿಯವರ ಪಾಡು ಅತಿ ಕಷ್ಟಕರದ್ದಾಗಿದೆ. ಈ ಸ್ಥಿತಿಯನ್ನು ಹೋಗಲಾಡಿಸಲು ವಿದ್ಯಾಭ್ಯಾಸದ ಕ್ರಮವನ್ನು ಬದಲಾಯಿಸಿ ಹೆಚ್ಚಾಗಿ ಕೈಗಾರಿಕೆ ವಿದ್ಯೆಯನ್ನು ಕೊಡಬೇಕಲ್ಲದೆ ಅವರಿಗೆ ಹೆಚ್ಚಿನ ಅನುಕೂಲತೆಗಳನ್ನು ಕಲ್ಪಿಸಿಕೊಡಬೇಕೆಂದು" ಹೇಳಿದರು. ಈ ಅನಾವಸ್ಥೆಯ ನಿವಾರಣೆಗೆ ಮೇಲಿನ ಸೂಚನೆಗಳಲ್ಲದೆ ಕೆಲಸವು ಯಾವ ತರದ್ದೇ ಆಗಿರಲಿ, ಅದರ ಗೌರವವನ್ನು ಎಲ್ಲರೂ ತಿಳಿಯುವಂತೆ ಮಾಡಬೇಕಾಗಿದೆ. ತನ್ನ ಕೆಲಸವನ್ನು ಸಾಧ್ಯವಾದಷ್ಟು ತಾನೇ ನೋಡಿಕೊಳ್ಳುವುದರಲ್ಲಿ ನಾಚಿಕೆಪಡಬೇಕಾದ್ದೇನಿದೆ? ಮಾತ್ರವಲ್ಲ, ಪಾಶ್ಚಿಮಾತ್ಯರ ನಡತೆಗಳ ಗುಣಗಳನ್ನು ಅರಿತುಕೊಳ್ಳದೆ ಅವುಗಳನ್ನು ಕಪಿಗಳಂತೆ ಹಿಂಬಾಲಿಸುವುದನ್ನೂ ನಿಲ್ಲಿಸಬೇಕಾಗಿದೆ.

"ಹಿಂದೂದೇಶದ ಜನಸಮುದಾಯದ ದುಸ್ಥಿತಿಯನ್ನು ಉತ್ತಮಗೊಳಿಸಲು ಮುಖ್ಯವಾದ ಸಾಧನವು ವಿದ್ಯಾಭ್ಯಾಸವಾಗಿದೆ. ಜನರ ಸ್ಥಿತಿಗನುಗುಣವಾದ ಸಾರ್ವತ್ರಿಕ ಪ್ರಾಥಮಿಕ ವಿದ್ಯೆಯು ಜನರ ಅಜ್ಞಾನವನ್ನೂ ಮೂಢಭಕ್ತಿಯನ್ನೂ ಹೋಗಲಾಡಿಸಿ ಅವರ ಉತ್ಪತ್ತಿಯನ್ನು ಹೆಚ್ಚಿಸಿಕೊಳ್ಳುವ ವಿಧಾನಕ್ಕೆ ಅವರ ಕಣ್ಣು ತೆರೆಸುವುದಲ್ಲದೆ ಸಹಕಾರತತ್ವದ ಗುಣವನ್ನು ತಿಳಿಸಿಕೊಟ್ಟು ಅವರನ್ನು ಸಾಲಗಾರರ ಬಲೆಯಿಂದ ತಪ್ಪಿಸುವುದು. ಪರಸ್ಪರ ಸಹಾಯದ ತತ್ವದ ಸ್ಪೂರ್ತಿಯು ಜನರಲ್ಲಿಯೇ ಹುಟ್ಟುವಂತೆ ಮಾಡಬೇಕು. ಅದನ್ನು ಅವರ ಮೇಲೆ ಬಲಾತ್ಕಾರದಿಂದ ಹೊರಿಸಬಾರದು. ಇದಕ್ಕಾಗಿ ಸಹಕಾರ ಸಂಘಗಳ ಬಜೆಟ್ಟಿನವರು ರೈತರ ಸ್ನೇಹಿತರೂ ದಾರಿತೋರಿಸುವರೂ ಆಗಿರಬೇಕಲ್ಲದೆ ಅಧಿಕಾರದ ಮದದಿಂದ ತುಂಬಿ ವ್ಯವಸಾಯಗಾರರ ಭಾವನೆಗಳನ್ನು ಅರಿತುಕೊಳ್ಳುವದರಲ್ಲಿ ಮಿಳಿತವಾಗದೆ ದೂರದಲ್ಲಿದ್ದು ಉನ್ನತ ಪದವಿಯುಳ್ಳವರಂತೆ ತೋರಿಸಿಕೊಳ್ಳುವವರಾಗಬಾರದು." ಎಂದು ಮುಕರ್ಜೀಯವರು ನುಡಿದ ಮಾತಿನಲ್ಲಿ ತುಂಬಾ ನಿಜವಿದೆಯೆಂದು ಎಲ್ಲರೂ ಒಪ್ಪತಕ್ಕದ್ದಾಗಿದೆ.

"ಜನಾಂಗದ ಸಾಮಾಜಿಕ ಮತ್ತು ರಾಜಕೀಯ ಏಳಿಗೆಗೆ ಪ್ರಾಥಮಿಕ ವಿದ್ಯೆಯೇ ಅವಶ್ಯವಿದೆ. ಆದರೆ ಗ್ರಾಮನಿವಾಸಿಗಳು ಅವರ ತಂದೆ ತಾಯಿಗಳ ಕಸುಬನ್ನು ಈಗ ಸುಧಾರಿಸಿದ ರೀತಿಯಲ್ಲಿ ಹಿಂಬಾಲಿಸುವಂಥ ವಿದ್ಯೆಯನ್ನೇ ಅವರಿಗೆ ಕೊಡಬೇಕಾಗಿದೆ. ಗ್ರಾಮಶಾಲೆಯು ಪಾಠಕ್ರಮದ ರಸಾಯನ ಶಾಸ್ತ್ರ, ಸಸ್ಯಶಾಸ್ತ್ರ, ಪ್ರಾಣಿಗುಣಧರ್ಮಶಾಸ್ತ್ರಗಳ ಪ್ರಾಥಮಿಕ ಪಾಠಗಳೂ, ಮರಗೆಲಸ, ಕಬ್ಬಿಣದ ಕೆಲಸ ಮತ್ತು ಗೊಬ್ಬರ ಹಾಕುವ ಕೆಲಸಗಳಲ್ಲಿ ಮುದ್ದು ತರಬೇತೂ ಇರಬೇಕು. ಭೂಮಿಯ ಸಾರವನ್ನು ಹೆಚ್ಚಿಸುವ ಕ್ರಮ, ನೀರಿನ ಕಾವುಗಾರಿ, ದನಕರುಗಳನ್ನು ಸಾಕುವಿಕೆ, ಬೀಜಗಳ ಆರಿಸುವಿಕೆ, ಮತ್ತು ಬೆಳೆ ಬದಲಾವಣೆಯ ಪ್ರಯೋಜನಗಳು ಮೊದಲಾದುವುಗಳನ್ನೂ ಹುಡುಗರಿಗೆ ಕಲಿಸಬೇಕು. ಇದರೊಂದಿಗೆ ಕೆಲವು ಶಾಲೆಗಳ ಗುಂಪಿಗೊಂದರಂತೆ ಇಡುವ ಮಾದರಿ ಫಾರ್ಮಿನಲ್ಲಿ ಕೆಲಸ ಮಾಡಿ ತೋರಿಸಬೇಕು. ಹೀಗೆ ಮಾಡಿದರೆ ರಜಾದಿನಗಳಲ್ಲಿ ವಿದ್ಯಾರ್ಥಿಗಳು ತಮ್ಮ ಮನೆಗೆ ಹೋಗುವಾಗ ವ್ಯವಸಾಯದ ಅಭಿಪ್ರಾಯಗಳಿಂದ ತುಂಬಿರುವುದರಿಂದ ಅವುಗಳನ್ನು ಜಾರಿಗೆ ತರಲು ಉತ್ಸಾಹಿತರಾಗುವರು. ಹುಡುಗರನ್ನು ಅವರ ಮುಂದಿನ ಜೀವನ ನಡಿಸಲು ತಯಾರಿಸುವಂತೆ ಮಾಡುವುದೇ ವಿದ್ಯಾಭ್ಯಾಸದ ಮುಖ್ಯೋದ್ದೇಶವಾಗಿರಬೇಕು. ಆದುದರಿಂದ ಗ್ರಾಮಾಭಿವೃದ್ಧಿಗೆ ಸ್ಥಳಕ್ಕನುಗುಣವಾದ ಸಾರ್ವತ್ರಿಕ ಮೂಕಿ ಕೃಷಿ ವಿದ್ಯಾಭ್ಯಾಸವೇ ಮುಖ್ಯ ಉಪಾಯವಾಗಿದೆ" ಎಂದು ಮೊದಲಾಗಿ ಹೇಳಿದರು. ಬಹಳ ಅನುಭವ ಹೊಂದಿರುವ ಉಪನ್ಯಾಸಕರ ಮೇಲಿನ ಸೂಚನೆಗಳನ್ನು ಜಾರಿಗೆ ತಂದಲ್ಲಿ ಅವುಗಳಿಂದ ಜನಸಮುದಾಯಕ್ಕೆ ತುಂಬಾ ಪ್ರಯೋಜನವುಂಟಾಗುವುದೆಂಬುದನ್ನು ಯಾರೂ ಅಲ್ಲಗಳೆಯರು. ಅವುಗಳನ್ನು ಜಾರಿಗೆ ತರುವುದು ಸುಲಭವಲ್ಲವೆಂದು ಕೆಲವರು ಆಕ್ಷೇಪಿಸಬಹುದು. ಆದರೆ 'ಕೈಕೆಸರಾಗದೆ ಬಾಯಿ ಮೊಸರಾಗದು' ಎಂಬಂತೆ ಕಷ್ಟ ಪಡದೆ ಯಾವ ಕೆಲಸವೂ ಕೈಗೂಡದು. ಹಣ ಖರ್ಚುಮಾಡದೆ ಯಾವ ಕಾರ್ಯವೂ ಫಲಿಸದು ಎಂದಿರುವಾಗ್ಯೆ ದೇಶದ ಆರ್ಥಿಕ ಸ್ಥಿತಿಯು ಉತ್ಕೃಷ್ಟವಾಗಬೇಕಾದರೆ ಸರ್ಕಾರದವರು ಸಾಕಷ್ಟು ದ್ರವ್ಯ ವೆಚ್ಚಮಾಡಲೂ ಕ್ರಮವಹಿಸಲೂ ಬಿಡಿತವಾಗಿಯೂ ತಯಾರಾಗಬೇಕು.

ಆಹಾರದ ಪಥ್ಯ ಮತ್ತು ರೋಗ.

(ಡಾ. ಸಿ ಮುತ್ತು ಇವರ ಲೇಖನದಿಂದ ಸಂಕಲಿಸಲಾದದ್ದು)

ಆರೋಗ್ಯಕ್ಕೆ ಒಳ್ಳೆ ಆಹಾರವೇ ಮುಖ್ಯವಾದ್ದಾದರೂ ಮನುಷ್ಯನು ಒಳ್ಳೆ ಆಹಾರವನ್ನು ತಿನ್ನುತಿದ್ದರೆ ಅವನಿಗೆ ರೋಗ ರುಜಿನೆಗಳು ಬರಲಾರವು. ಸುಮಾರು ಒಂದು ಶತಮಾನದಿಂದಲೂ ರೋಗಜಂತುವ ಶಾಸ್ತ್ರವು (Bacteriology) ಲೋಕದಲ್ಲಿ ರೂಢಿಯಲ್ಲಿದ್ದು, ಈಗ ಅದರ ಸ್ಥಳವನ್ನು ಜೀವನ ರಸಾಯನ ಶಾಸ್ತ್ರವು (bio chemistry) ಆಕ್ರಮಿಸಿಕೊಳ್ಳುತ್ತಿದೆ. ಈ ಜೀವನ ರಸಾಯನ ಶಾಸ್ತ್ರವು ರೋಗಕ್ಕೂ ಪಥ್ಯಕ್ಕೂ ಇರುವ ಸಂಬಂಧವನ್ನು ತೋರಿಸುವುದು. ವ್ಯಕ್ತಿ ಸುಖವಾಗಲಿ ಜನತೆಯ ಸುಖವಾಗಲಿ ಈ ಮುಖ್ಯ ಸಂಗತಿಗಳನ್ನು ಆಧರಿಸಿಕೊಂಡಿರುತ್ತದೆ. ಅವಾವುವೆಂದರೆ: ಶುದ್ಧವಾದ ವಾಯು ಮತ್ತು ಬಿಸಿಲು, ಒಳ್ಳೆನಡತೆ, ತಕ್ಕಷ್ಟು ವಿಶ್ರಾಂತಿ ಮತ್ತು ವ್ಯಾಯಾಮ, ಯುಕ್ತವಾದ ಆಹಾರ. ಇವುಗಳಲ್ಲಿ ಆಹಾರದ ವಿಚಾರವು ನಮಗೆ ಅವಶ್ಯವಿದೆ. ಭಾರತೀಯರು ಈ ವಿಚಾರಕ್ಕೆ ಹೆಚ್ಚು ಲಕ್ಷ್ಯವನ್ನೀಯಬೇಕು. ಇವರು ಐರೋಪ್ಯರಿಗಿಂತ ಕೀಳೆನ್ನಿಸಿಕೊಳ್ಳಲಿಕ್ಕೆ ಅವರ ಹೀನವಾದ ಆಹಾರವೇ ಕಾರಣ. 'ಇವರು ಈಗಿನ ಶಾಸ್ತ್ರಾನುಗುಣವಾಗಿ ತಮ್ಮ ಆಹಾರಪಥ್ಯವನ್ನು ನೆರವೇರಿಸಿಕೊಂಡು ಇತರ ಜನಾಂಗದವರಂತೆ ತಾವೂ ದೃಢಕಾಯರಾಗಿಯೂ ರೋಗ ನಿವೃತ್ತರಾಗಿಯೂ ಇರಬೇಕು.

ಆಹಾರವು ಯೋಗ್ಯವಾದದೆನ್ನಿಸಿಕೊಳ್ಳಬೇಕಾದರೆ ಅದರಲ್ಲಿ ಪಿಷ್ಟ, ಸಾರಜನಕ, ನೀರು ಮತ್ತು ಉಪ್ಪುಗಳು ಸಮವಾಗಿರಬೇಕು. ಭಾರತೀಯರ ಆಹಾರದಲ್ಲಿ ಹೆಚ್ಚಾಗಿ ಪಿಷ್ಟವೇ ತುಂಬಿರುತ್ತದೆ. ಭಾರತೀಯರ ಪ್ಯೆಕಿ ರಜಪೂತರಂತ ಜನರು ಮೈಕಟ್ಟು ಸೊಗಸಾಗಿರಲಿಕ್ಕೆ ಅವರು ತಿನ್ನತಕ್ಕ ಆಹಾರವೇ ಮೂಲ ಕಾರಣ. ಅವರು ಹೆಚ್ಚು ಸಾರಜನಕ (protein) ಪದಾರ್ಥದಿಂದ ಮಾಡಿದ ಆಹಾರವನ್ನೇ ಸೇವಿಸುವರು. ಸಾರ ಪದಾರ್ಥಗಳು ದೇಹವನ್ನು ಬೆಳೆಸುತ್ತವಲ್ಲದೆ ಶರೀರಕ್ಕೆ ಶಾಂತಿಯನ್ನುಂಟುಮಾಡುತ್ತವೆ. ಪಿಷ್ಟಗಳೂ ಮತ್ತು ಸೆಣವೂ ಶರೀರದಲ್ಲಿ ಉಷ್ಣವನ್ನು ಕಾಯಿಸುವ ಒಲೆಗಳು. ಇವುಗಳು ಶರೀರಕ್ಕೆ ಬಲವನ್ನು ಕೊಡುತ್ತವೆ. ಉಪ್ಪುಗಳು ಮತ್ತು ನೀರು ಮಾಡತಕ್ಕ ಕಾರ್ಯವನ್ನು ಎಷ್ಟು ವರ್ಣಿಸಿದರೂ ಸಾಲದು. ಬರೀ ಪಿಷ್ಟ, ಸಾರ ಪದಾರ್ಥ ನೀರು ಮತ್ತು ಉಪ್ಪುಗಳಿದ್ದರೆ ಜೀವವು ಇರುವುದೆಂದು ನಾವು ನೆನಸಬಾರದು. ಜೀವಸತ್ವಗಳು (vitamins) ಪ್ರಾಣವರ್ಧಕಗಳೆಂಬ ಪದಾರ್ಥ ವಿಶೇಷಗಳು ನಮಗೆ ಅವಶ್ಯವಾಗಿ ಬೇಕಾಗಿವೆ. ಇವುಗಳು ಹಸಿಹಾಲು, ಎಣ್ಣೆ, ಬೆಣ್ಣೆ, ಮೊಟ್ಟೆ, ಹಸುರೆಲೆಗಳು ಮತ್ತು ಹಣ್ಣುಗಳು, ಗೋಧಿ, ಅಕ್ಕಿತೌಡು, ತರತರದ ಅಡಿಕೆಗಳು, ತರಕಾರಿ ಮತ್ತು ಹಣ್ಣು ಹಂಪಲು ಇವುಗಳಲ್ಲಿ ಅಡಗಿರುತ್ತವೆ. ಈ ಪ್ರಾಣವರ್ಧಕಗಳಿಗಾಗಿಯೇ ನಾವು ಹಸಿಹಣ್ಣು ತರಕಾ

(4ನೇ ಪುಟದಲ್ಲಿ ಮುಂದು ವರಿದಿದೆ)

" ಕೊಡಗು ಜಮೀನ್ದಾರರ ಸಂಘ."

(ಬರೆದು ಬಂದದ್ದು.)

' ಸಂಘೇಶಕ್ತಿ ಕಲೌಯುಗೆ " ಎಂಬಂತೆ ನಮ್ಮಲ್ಲಿರತಕ್ಕ ಭಿನ್ನಭಿನ್ನ ಶಕ್ತಿಯನ್ನು ಜೊತೆಗೂಡಿಸಿ ನಮ್ಮ ಭವಿಷ್ಯ ಸುಖವನ್ನುಂಟುಮಾಡುವ ಮಹತ್ವ ಶಕ್ತಿಯೇ ಕಲಿಯುಗದಲ್ಲಿ " ಸಂಘ " ವೆಂಬುವದೊಂದು. ಅಂಥಾ ಮಹತ್ವ ಶಕ್ತಿಯಿಂದ ಕೂಡಿಕೊಂಡು ಕೊಡಗಿನವರಾದ ನಮ್ಮ ಏಳಿಗೆಗಾಗಿ ಯೋಗ್ಯಪ್ರಯತ್ನಗಳನ್ನು ಮಾಡುತ್ತಿರುವ ಸಂಸ್ಥೆಯೇ ಜಮೀನ್ದಾರರಸಂಘವೆಂಬದಾಗಿದೆ. ಪ್ರಾಚೀನಮುಂಬೇನ ಜಮೀನ್ದಾರರಸಂಘವು ಕೊಡಗಿನ ಹಿತಕ್ಕಾಗಿ ಹೋರಾಡುತ್ತಿದೆಯೆಂದ ಮಾತ್ರಕ್ಕೆ ಇದರಿಂದುಂಟಾಗುವ ಫಲಿತಾಂಶವು ಸಿಕ್ಕಲಾರದು. ಕಾರ್ಯತಃ ಆಚರಣೆಯಿಂದ ತೋರಿಸಬೇಕಾಗಿದೆ. ಕಾಪ್ಪದಲ್ಲಿ ಬೆಂಕಿ ಇದೆಯೆಂಬ ಊಹನೆ ಮಾಡುವದರಿಂದಾಗಲಿ, ಹೇಳುವದರಿಂದಾಗಲಿ ಪ್ರಯೋಜನ ಸಿಕ್ಕಲಾರದಷ್ಟೆ. ಕಾಪ್ಪದಲ್ಲಿ ಬೆಂಕಿಯಿದ್ದರೂ ಬೆಂಕಿ ತೋರಿಸತಕ್ಕ ಕ್ರಿಯೆ ಮಾಡಿದರೇನೇ ಅದು ಕಾಣ ಸಿಕ್ಕುವದು ಮತ್ತು ಪ್ರಯೋಜನ ದೊರೆಯುವದು. ಹಾಗೆಯೇ ಜಮೀನುದಾರರ ಸಂಘದಲ್ಲಿ ಅತೀವ ಪ್ರಯೋಜನವಿದೆಯೆಂದ ಮಾತ್ರಕ್ಕೆ ಅದರ ಪ್ರಯೋಜನವು ನಮಗೆ ಸಿಕ್ಕಿದಂತಾಗುವದಿಲ್ಲ. ಸಂಘದಲ್ಲಿ ಪ್ರಯೋಜನವಿರುವದೇನೋ ನಿಜವೇ. ಪ್ರಯೋಜನ ಒದಗಿಸುವ ಭಾರವು ನಮ್ಮ ಕೈಯಲ್ಲೇ ಇದೆ. ಇದಕ್ಕಾಗಿ ಯಾರನ್ನಾದರೂ ದೂಷಿಸತಕ್ಕ ಆವಶ್ಯವೂ ಇಲ್ಲ. ಹೆಚ್ಚಿನ ಶ್ರಮ ಪಡತಕ್ಕ ಕಾರಣ ಮೊದಲೇ ಇಲ್ಲ ಆದರೆ ನಮ್ಮ ನಮ್ಮನ್ನು ಸ್ವಲ್ಪ ಅರಿತುಕೊಳ್ಳಬೇಕಾಗಿದೆ. ಪ್ರಮಯವು ಕಳೆದ ಹಾಗೆಲ್ಲಾ ಹೆಚ್ಚಿನ ಏನ ಕಾಯುವ ಜ್ಞಾನವೂ ಉಂಟಾಗುತ್ತದೆ ಹಾಗೆಯೇ ನಮ್ಮ ಕಾರ್ಯಪ್ರಸಂಗಗಳನ್ನೂ ಚನ್ನಾಗಿ ಮುಂದೊತ್ತಬೇಕಾಗಿದೆ. ಈ ಸಂಘ ಬಲೇ ಹಣವನ್ನು ಅಪೇಕ್ಷಿಸುವದಿಲ್ಲ ಇದಕ್ಕೆ ಸಂಸಾರಗಳಾದಷ್ಟೂ ಇದರ ಮಹತ್ವವು ಬೆಳೆಯುತ್ತದೆ ಹುಟ್ಟಿ ಬಹಳ ವರ್ಷವಾದರೂ ಇನ್ನೂ ಇದರ ನಿರೀಕ್ಷಿತ ಬೆಳೆಯುಲ್ಲಿವೆಂದರೆ ಬಹಳ ವ್ಯಸನಕರ ಹಾಗೂ ಈ ಓಡುತ್ತಿರುವ ಪ್ರಪಂಚದಲ್ಲಿ ಬೇರೆ ಎಲ್ಲಾ ದೇಶಗಳ ಜನರು ಬಹಳ ಮುಂದ ಬಂದರೂ ಇನ್ನೂ ನಮ್ಮ ನಿದ್ರೆ ತಿಳಿಯುಲ್ಲವೆಂದರೆ ಬಹು ಶೋಚನೀಯವು ಈ ಆಧುನಿಕ ನಾಗರೀಕ ಕಾಲದಲ್ಲಿ ಈ ರೀತಿಯಿಂದ ಪರ್ತಿಸುವದು ಕೊಡಗಿನವರಾದ ನಮಗೆ ನಾಚಿಕೆಗೇಡಾಗಿದೆ. ಈ ಅತ್ಯಲ್ಪ ಚಂದವನ್ನು ಕೊಡಲಾರದೆ ಮೆಂಬರ ತನದಿಂದ ಏ[illegible]ಸಿಕೊಂಡಿರುವ ನಮ್ಮ ಈ ಅಲಕ್ಷ್ಯತನದಿಂದ ನಾವು ನವ ಯಾವ ಕಾರ್ಯ ತಾನೇ ಕೊನೆಗಂಡೀತು? ಇದೀಗ ಪ್ರತ್ಯಾರನೇ ಇಸವಿಯು ಶುರುವಾಯಿತು ಸಂಘದ ವಾರ್ಷಿಕ ಸಭೆಯ ಕಾಲವು ಸಮೀಪಿಸಿತು ದೇಶದ ಮಹನೀಯರು ಇನ್ನಾದರೂ ಚೆನ್ನಾಗಿ ಕಣ್ದೆರೆಯಿರಿ ನಮ್ಮ ನಮ್ಮ ಸ್ವಾತಂತ್ರ್ಯವನ್ನು ಕಾಪಾಡಿಕೊಳ್ಳಲುಜ್ಜಗಿಸಿರಿ ಕಾರಣಾಂತರದಿಂದುಂಟಾಗತಕ್ಕ ಅಂತಃ ಕಲಹ ಮಾತ್ಸರ್ಯಾದಿಗಳನ್ನು ದಕ್ಕಿಸಬೇಡಿರಿ ಪ್ರತಿಯೊಬ್ಬರಲ್ಲೂ ಪ್ರೀತಿ ವಿಶ್ವಾಸಗಳನ್ನು ಡಿರಿ. ದೋಷ ವಿಚಾರಮಾಡುವದನ್ನು ಮೂಲೆಗಿರಿಸಿ ಒಂದೇ ಗೃಹ ಕೃತ್ಯದವರೆಂಬ ಭಾವನೆಯನ್ನು ಮನಸ್ಸಿನಲ್ಲಿ ಕಲ್ಪಿಸಿರಿ ಎಲ್ಲರೂ ಕುಡಿಯತಕ್ಕ ಒಂದು ಕೆರೆಯ ಯಾವದೇ ಒಂದು ಜಾಗ ಒಬ್ಬನಾದರೂ ಬಿರುಕು ಬಿಟ್ಟರೆ, ಪ್ರತಿಯೊಬ್ಬರು ಅದನ್ನು ಕಾಪಾಡತಕ್ಕ ಪ್ರಯತ್ನ ಮಾಡದೆ, ಅದು ಆ ಭಾಗದವರ ಕೆಲಸ ಎಂದಾಗಲಿ, ಇಲ್ಲವೆ ಪಾಲುಮಾರಿಕೆಯಿಂದಾಗಲಿ, ಅಥವಾ ಒಳಗಿನ ಕಾರಣಾಂತರದ ಅಸೂಯೆ ಕಲಹಗಳ ತೋರ್ಪಡಿಕೆಗಳಾದದರಿಂದಾಗಲಿ ಉದಾಸೀನ ಮನೋವೃತ್ತಿ ಮುಂತಾದವುಗಳಿಂದ ಎಷ್ಟು ಬಿಡದರೆ ಕ್ರಮೇಣ ಆ ಕೆರೆಯು ಒಡೆದುಹೋಗಿ ಕುಡಿವ ನೀರೇ ಇಲ್ಲದಂತಾಗಿ ಎಲ್ಲರಿಗೂ ಹಾನಿ ಸಂಭವಿಸುವುದಾದ ಪ್ರಕಾರವೇ ದೇಶದ ಉನ್ನತಿಕೆಯ ಕಾರ್ಯದಲ್ಲಿ ತೊಡುವ ತರದ ಅಡಚಣೆಗಳನ್ನೂ ಸಮ ತಂದೊಡ್ಡದೆ ಪ್ರತಿ ಒಬ್ಬರೂ ಇದಕ್ಕೆ ಸೇರಿಕೊಳ್ಳುವ ಪ್ರಯತ್ನವನ್ನು ನಾವು ಮಾಡಬೇಕು. ಇದರ ವಾರ್ಷಿಕ ಚಂದವು ಒಬ್ಬನು ತಿಂಗಳಲ್ಲಿ ಅನಾವಶ್ಯಕವಾಗಿ ಇಲ್ಲವೆ ಯಾವದಾದರು ದುರ್ವ್ಯಸನ (ನಶ್ಯ, ಚುಟ್ಟ, ಬೀಡಿವಗೈರೆ) ಕ್ಕಾಗಿ ಮಾಡುವ ಖರ್ಚಿ[illegible] ಹತ ತುಲನವಾಗಲಿಕ್ಕಿಲ್ಲ ಆದಮೇಲೆ ಕೊಡ[illegible]ಲ್ಲ ನಮ್ಮ ಪಕ್ಷ ಹದಿನೆಂಟುವರ್ಷಕ್ಕೆ ಮೇಲ್ಪಟ್ಟ ಮೆಂಬರೆಲ್ಲರೂ ಸೇರಿ ಮೂವತ್ತುಸಾವಿರಕ್ಕಿಂತ ಹೆಚ್ಚೇ ಆಗಬಹುದು ಎ[illegible]ಸದಲ್ಲೇ ಆಗಲಿ ಆ ಸಂಘದ ಉದ್ದಿಶ್ಯ ನೆರವೇ[illegible]ಕಾದರೆ ಉದ್ದಿಶ್ಯಕ್ಕೆ ಸಮ್ಮಂಧಪಟ್ಟ ಮೆಂಬರರು ಪೂರ್ತಿ ಸೇರಿದರೇನೇ ಸಂಘದ ಕಾರ್ಯವು ಸಫಲವಾಗುವದು ಅಪೂರ್ಣ (ಸಂಘಕ್ಕೆ ಸಮ್ಮಂಧಪಟ್ಟದ್ದು ಪೂರ್ತಿ ಇಲ್ಲದ) ಉಳ್ಳ ಸಂಘದಿಂದ ಯಾವ ಕಾರ್ಯವೂ ಕೈಗೂಡಲಾರದು. ಆದ್ದರಿಂದ ಸಂಘದ ಉದ್ದಿಶ್ಯ ನೆರವೇರಬೇಕಾದರೆ ಮೊಟ್ಟಮೊದಲು ಸಂಘವನ್ನು ಪೂರ್ಣಮಾಡಬೇಕು ಪೂರ್ಣವಿಲ್ಲದ ಸಂಘದ ಕಾರ್ಯವು ನಿರ್ಗತಿಕನ ಸ್ವಪ್ನದ ಆನಂದದಂತೆಯೋ. ಈ ಜಮೀನ್ದಾರರ ಸಂಘವು ಇಡೀ ಕೊಡಗಿನ ಕ್ಷೇಮಚಿಂತನೆಯ ಉದ್ದಿಶ್ಯವನ್ನು ಇಟ್ಟುಕೊಂಡಿರುವದರಿಂದ ಈ ಮೂಲಕ ನಮಗೆ ಕ್ಷೇಮ ಸಿಕ್ಕಬೇಕಾದರೆ ಕೊಡಗಿನವರಾದ ನಾವೆಲ್ಲರೂ ಸೇರಿ ಸಂಘವನ್ನು ಪೂರ್ಣಮಾಡುವದು ಅತ್ಯಗತ್ಯವಾಗಿರುತ್ತದೆ

ಈಗಿನ ಕಾರ್ಯಕ್ರಮ (ರಾಜ್ಯಾಡಳಿತ)ವೆಲ್ಲವೂ ಬಹು ಮತವನ್ನವಲಂಭಿಸಿಕೊಂಡಿರುವದರಿಂದಲೂ, ಬಹು ಜನರ ಹಿತವೇ ಲೋಕಕಲ್ಯಾಣವಾಗಿರುವದರಿಂದಲೂ ದೇಶಾಭ್ಯುದಯಕ್ಕೆ ದೇಶೀಯರೆಲ್ಲರೂ ಸೇರತಕ್ಕ ತೂಟ ಪ್ರಧಾನವಾಗಿರುತ್ತದೆ ಹಾಗೂ ನಾವು ಪಾಶ್ಚಿಮಾತ್ಯರಾಡಳಿತದ ಸಾಕೋಲೆಯಲ್ಲಿ ಬಂಧಿಸಲ್ಪಟ್ಟವರಾಗಿ ಪ್ರಜಾಸ್ವಾತಂತ್ರ್ಯ ಹೀನರಾಗಿರುವದರಿಂದ ನಮಗೆ ಇಂಥಾ ಸಂಘವಾದರೂ ಇದ್ದೇ ತೀರಬೇಕು. ನಮ್ಮ ಹೆಚ್ಚಿನ ಕಷ್ಟಸುಖಗಳನ್ನು ನಮಗೆ ಯೋಗ್ಯವಾದ ರೀತಿಯಿಂದ ಕೇಳಿ ಪರಿಹಾರಕಲ್ಪಿಸುವವರಿಲ್ಲದಿರೋಣಾದರಿಂದಲೂ, ನಾವು ಈ ನವೀನಕಾಲದಲ್ಲಿ ಒಮ್ಮನಸ್ಸಿನಿಂದ ಕೂಡದೆ ಚಪರಣವತಾಗಿಯೂ ಇರುವದರಿಂದಲೂ ಇಂಥಾ ಸಂಸ್ಥೆಗಳ ಮೂಲಕ ನಮ್ಮ ದೌರ್ಭಾಗ್ಯವನ್ನು ಹೋಗಲಾಡಿಸಿಕೊಳ್ಳಲು ಅನುಕೂಲವಿರುವದರಿಂದ ಈ ಕಾರ್ಯದಲ್ಲಿ ಹೆಚ್ಚಿನ ಆತುರುಳ್ಳವರಾಗಿರಬೇಕಾಗಿರುವದು ನಮ್ಮ ಮುಖ್ಯ ಕರ್ತವ್ಯವು. ಈ ಸಂಘಕ್ಕೆ ಮೆಂಬರರ ಸೇರುವಿಕೆಯ ನ್ಯೂನತೆಯಿಂದಲೇ ಈ ಮೊದಲು ಸಂಘವು ಆಲೋಚಿಸಿದ ಟೌನ್ ಹಾಲ್ ಮುಂತಾದ ಹೆಚ್ಚಿನ ಕಾರ್ಯಮಾಡಲು ಅನಾನುಕೂಲವಾಯಿತು ಆಷ್ಟೇಕೆ, ಈ ಸಂಘಕ್ಕೆ ಇನ್ನೂ ನ್ಯಾಯವಾದ ಆಫೀಸು ಇಲ್ಲದೆ ಬಾಡಿಗೆ ಮನೆಯಲ್ಲೇ ಕೆಲಸ ನಡಿಸುತ್ತಿದೆ, ಅಂದಮೇಲೆ ಜನರ ಕಷ್ಟಸುಖಗಳನ್ನಾದರೂ ಹೇಗೆ ತಾನೇ ತಿಳಿಯಬಲ್ಲದು. ಇದಕ್ಕೆಲ್ಲ ಮೆಂಬರರ ಕಡಿಮೆ ಸಂಖ್ಯೆಯು ಕಾರಣವಲ್ಲವೆ? ದೇಶದವರು ಒಗ್ಗಟ್ಟಾಗಿ ಸೇರತಕ್ಕ ಸಂಘ ಒಂದಿದ್ದರೆ ದೇಶಕ್ಕೆ ಎಷ್ಟು ಪ್ರಯೋಜನವಿದೆಯೆಂಬದನ್ನು ನಮಗೆ ಹೇಳಲು ಸಾಧ್ಯವೇ ಇಲ್ಲ. ಹೆಚ್ಚೇನು, ಅಂಥಾ ಸಂಘವು ಆ ದೇಶಕ್ಕೆ ತಾಯಿ ತಂದೆಯಂತಿರುತ್ತದೆ ಈ ವಿಷಯಕ್ಕಾಗಿ ಅಲ್ಲಲ್ಲಿ ಗ್ರಾಮಕಮಿಟಿಗಳನ್ನು ಏರ್ಪಡಿಸುತ್ತೆಯಾದರೂ ಗ್ರಾಮದ ಪ್ರತಿಯೊಬ್ಬರೂ ಅದಷ್ಟು ಉತ್ತೇಜನದಿಂದ ಸಂಘವನ್ನು ಪೂರ್ಣಾವಸ್ಥೆಗೆ ತರಬೇಕಾಗಿದೆ. ಗ್ರಾಮಕಮಿಟಿಗಳಿಂದ ರೋ ರಶೀತಿ ಪುಸ್ತಕವನ್ನು ಮೂಲೆಯಲ್ಲಿಡದೆ ಸಂಘದಲ್ಲಿ ಸಹಾನುಭೂತಿಯನ್ನು ತೋರಿಸಿ ತಮ್ಮ ಕರ್ತವ್ಯವನ್ನು ಮಾಡಿ ದೇಶಾಭ್ಯುದಯಕ್ಕೆ ಕಾರಣರಾಗಬೇಕಾಗಿರುತ್ತದೆ ಈ ಗ್ರಾಮಕಮಿಟಿಗಳನ್ನು ಏರ್ಪಡಿಸಿರುವದರಿಂದ ಈ ಸಂಘದ ಪುರೋವೃದ್ಧಿಗೆ ಗ್ರಾಮಕಮಿಟಿಗಳೇ ಜವಾಬ್ದಾರರಾಗಿರುವದರಿಂದ ಸಂಘದ ತತ್ವವನ್ನು ಚನ್ನಾಗಿ ಮನವರಿಕೆ ಮಾಡಿಕೊಂಡು ಈ ವರ್ಷವಾದರೂ ಸಂಘವನ್ನು ಪೂರ್ಣಾವಸ್ಥೆಗೆ ತಂದು ಸಂಘದ ಉದ್ದಿಶ್ಯವನ್ನು ನೆರವೇರಿಸದಿರಲಾರರು.

ಮಹಾತ್ಮಗಾಂಧಿಯವರ ಜನ್ಮ

ಗಾಂಧೀ ಕುಟುಂಬದವರು ಮೊದಲು ವ್ಯಾಪಾರಸ್ಥರಾಗಿದ್ದರೆಂದು ತೋರುತ್ತದೆ. ಆದರೆ ಮೂರು ತಲೆಮಾರುಗಳಿಂದ, ನನ್ನ ಪಿತಾಮಹನಿಂದ ಮೊದಲ್ಗೊಂಡು ಅವರು ಕಾಠಿಯಾವಾಡದ ಸಂಸ್ಥಾನಗಳಲ್ಲಿ ದಿವಾನಗಿರಿಯನ್ನು ನಡಸುತ್ತಿದ್ದರು. ಉತ್ತಮಚಂದ ಗಾಂಧೀ ಅಥವಾ ಓತಾ ಗಾಂಧೀ - ಇವರು ಒಳ್ಳೇ ತತ್ವನಿಷ್ಠರಾಗಿದ್ದಿರಬೇಕು ಆಸ್ಥಾನದ ಷಡ್ಯಂತ್ರಗಳಿಂದ ಅವರು ದಿವಾನರಾಗಿದ್ದ ಪೋರಬಂದರವನ್ನು ಬಿಟ್ಟು ಜುನಾಗಢದಲ್ಲಿ ಆಶ್ರಯ ಪಡೆಯಬೇಕಾಯಿತು. ಅವರು ಅಲ್ಲಿಯ ನವಾಬರಿಗೆ ಎಡಗೈಯಿಂದ ವಂದನೆ ಮಾಡಿದರು. ಈ ತೋರಿಕೆಯ ಅವಿನಯದ ಕಾರಣವನ್ನು ಕೇಳಿದವರಿಗೆ, 'ಬಲಗೈಯನ್ನು ಪೋರಬಂದರಕ್ಕಾಗಿಯೇ ಇಟ್ಟುಕೊಂಡಿರುವೆನು' ಎಂಬ ಉತ್ತರವು ದೊರೆಯಿತು.

ಓತಾ ಗಾಂಧಿ ಇವರು ಎರಡು ಸಲ, ಒಬ್ಬಳ ಮರಣದ ನಂತರ ಇನ್ನೊಬ್ಬಳನ್ನು ಮದುವೆಯಾದರು. ಮೊದಲನೆಯ ಪತ್ನಿಯಿಂದ ನಾಲ್ಕು ಮಂದಿ ಮತ್ತು ಎರಡನೆಯವಳಿಂದ ಇಬ್ಬರು ಪುತ್ರರು ಜನಿಸಿದರು. ಇವರು ಮಲ ಅಣ್ಣತಮ್ಮಂದಿರೆಂದು ಬಾಲ್ಯದಲ್ಲೆಂದೂ ನನಗೆ ತೋರಿದ ಜ್ಞಾಪಕವಿಲ್ಲ. ಇವರಲ್ಲಿ ಕರಮಚಂದ ಗಾಂಧಿ ಅಥವಾ ಕಬಾ ಗಾಂಧಿಯವರು ಐದನೆಯವರೂ, ತುಲಸೀದಾಸ ಗಾಂಧಿಯವರು ಕಿರೇಯವರೂ ಆಗಿದ್ದರು. ಇವರಿಬ್ಬರೂ ಒಬ್ಬರ ನಂತರ ಒಬ್ಬರು ಪೋರಬಂದರದಲ್ಲಿ ಮಂತ್ರಿಗಳಾಗಿದ್ದರು ನನ್ನ ತಂದೆ ಕಬಾ ಗಾಂಧಿಯವರು. ರಾಜ ಸ್ಥಾನಿಕ ಕೋರ್ಟಿನ ಸದಸ್ಯರಾಗಿದ್ದರು. (ಈ ಕೋರ್ಟಿನ ಮೂಲಕ ಆಗ ಸಂಸ್ಥಾನಗಳಲ್ಲಿ ಆಗುವ ಮಹತ್ವದ ಕಲಹಗಳ ತೀರ್ಮಾನವಾಗುತ್ತಿತ್ತು.' ಇವರು ಕೆಲವು ಸಮಯ ರಾಜಕೋಟದಲ್ಲಿಯೂ, ಆ ಮೇಲೆ ವಾಂಕಾನೇರಿನಲ್ಲಿಯೂ ದಿವಾನರಾಗಿದ್ದರು. ಅವರು ಕಡೆಗೆ ರಾಜಕೋಟ ಸರಕಾರದಿಂದ ಪೆನ್ಶನ್ ಹೊಂದಿ ಸ್ವರ್ಗಸ್ಥರಾದರು.

ಕಬಾ ಗಾಂಧಿಯವರು ಒಬ್ಬಳ ಮರಣದ ನಂತರ ಇನ್ನೊಬ್ಬಳನ್ನು - ಹೀಗೆ ನಾಲ್ಕು ಸಲ ವಿವಾಹ ಮಾಡಿಕೊಂಡರು. ಮೊದಲನೆಯ ಇಬ್ಬರು ಪತ್ನಿಯರಿಗೆ ಇಬ್ಬರು ಹೆಣ್ಣು ಮಕ್ಕಳೂ, ಕೊನೆಯವಳಾದ ಪುತಲೀಬಾಯಿಯವರಿಗೆ ಒಬ್ಬ ಕನ್ಯೆಯೂ ಮೂರು ಮಂದಿ ಪುತ್ರರೂ ಜನಿಸಿದರು. ನಾನು ಇವರಲ್ಲಿ ಕಿರೇಯವನು.

ಕರಮಚಂದ ಗಾಂಧಿಯವರು ವಂಶಪ್ರೇಮಿಗಳೂ, ಸತ್ಯಸಂಧರೂ, ಶೂರರೂ, ಉದಾರ ಸ್ವಭಾವದವರೂ ಆಗಿದ್ದರು. ಆದರೆ ಅವರಿಗೆ ಸಿಟ್ಟು ಹೆಚ್ಚು. ಸ್ವಲ್ಪ ಮಟ್ಟಿಗೆ ಅವರು ವಿಷಯಾಸಕ್ತರೂ ಆಗಿರಬಹುದು. ನಾಲ್ವತ್ತು ವರ್ಷಪ್ರಾಯ ದಾಟಿದ ಮೇಲೆ ಅವರು ಚತುರ್ಥ ವಿವಾಹವನ್ನು ಮಾಡಿಕೊಂಡರು. ಲಂಚ ಮೊದಲಾದುವುಗಳ ಮೋಹಕ್ಕೆ ಅವರೆಂದೂ ಒಳಗಾಗುತ್ತಿರಲಿಲ್ಲವೆಂದೂ ನಿಷ್ಪಕ್ಷಪಾತ ದೃಷ್ಟಿಯಿಂದ ಅವರು ನ್ಯಾಯವನ್ನು ಮಾಡುತ್ತಿದ್ದರೆಂದೂ ನಮ್ಮ ಕುಟುಂಬದಲ್ಲಿಯೂ ಹೊರಗೂ ಅವರು ಹೆಸರು ಪಡೆದಿದ್ದರು. ಅವರು ರಾಜನಿಷ್ಠರು ಒಂದು ಸಲ ರಾಜಕೋಟದ ರಾಕಾಸಿರ ಸಾಹೇಬರ ಕುರಿತು ತಿರಸ್ಕಾರದ ಶಬ್ದಗಳನ್ನು ಪ್ರಯೋಗಿಸಿ ಮಾತನಾಡಿದ ಒಬ್ಬ ಸಾಹೇಬರಿಗೆ ಎದುರುನಿಂತು ಅವರ ಕೋ[illegible]ದರು. ಸಾಹೇಬರು ಕ್ಷಮಾಪ್ರಾರ್ಥನೆಯನ್ನು[illegible]ಡು ಕೇಳಿದರು. ಅದಕ್ಕೆ ಒಪ್ಪಿಗೆ ಕೊಡದೆ ಇದ್ದು[illegible]ವರು ಕೆಲವು ಘಂಟೆ ಕೈದಿಯಾಗಿರಬೇಕಾಯಿತು. ಕೊನೆಗೆ ಇವರನ್ನು ಬಗ್ಗಿಸಲು ಸಾಧ್ಯವಿಲ್ಲವೆಂದು ತಿಳಿದು ಸಾಹೇಬರು ಬಿಡುಗಡೆ ಮಾಡಲು ಅಪ್ಪಣೆಕೊಟ್ಟರು.

ಪಿತಾಜೀಯವರಿಗೆ ದ್ರವ್ಯಸಂಗ್ರಹವನ್ನು ಮಾಡುವ ಲೋಭವಿದಲ್ಲಿಲ್ಲವಾದುದರಿಂದ ಅವರು ನಮಗೆ ಹೆಚ್ಚು ಧನವನ್ನು ಬಿಟ್ಟುಹೋಗಲಿಲ್ಲ.

ಅನುಭವದಿಂದ ದೊರೆತ ಶಿಕ್ಷಣದ ಹೊರತು ಅವರು ಬೇರೆ ವಿದ್ಯಾಭ್ಯಾಸವನು, ಹೊಂದಿರಲಿಲ್ಲ. ಹೆಚ್ಚೆಂದರೆ ಅವರು ಗುಜರಾತೀ ಐದನೇ ವರ್ಗದ ವರೆಗೆ ಓದಿದ್ದರೆಂದು ಹೇಳಬಹುದು ಇತಿಹಾಸ ಭೂಗೋಳಗಳ ಜ್ಞಾನವು ಅವರಿಗಿರಲಿಲ್ಲ. ಆದರೆ ಅವರ ವ್ಯಾವಹಾರಿಕ ಜ್ಞಾನವು ಎಷ್ಟು ಶ್ರೇಷ್ಠವಾಗಿತ್ತೆಂದರೆ ಅತ್ಯಂತ ಸೂಕ್ಷ್ಮ ಪ್ರಶ್ನೆಗಳ ನಿರ್ಣಯವನ್ನು ಮಾಡುವುದೂ ಸಾವಿರಾರು ಜನರಿಂದ ಕೆಲಸ ಮಾಡಿಸುವುದೂ ಅವರಿಗೆ ಕಷ್ಟವೆನಿಸುತ್ತಿರಲಿಲ್ಲ. ಅವರಿಗೆ ದೊರೆತ ಧಾರ್ಮಿಕ ಶಿಕ್ಷಣವಾದರೋ ಅತ್ಯಲ್ಪ. ಆದರೆ ದೇವಾಲಯಗಳಿಗೆ ಆಗಾಗ ಹೋಗುವುದರಿಂದಲೂ, ಕೀರ್ತನ ಮೊದಲಾದುವುಗಳನ್ನು ಕೇಳುವುದರಿಂದಲೂ ಅಸಂಖ್ಯ ಹಿಂದುಗಳಿಗೆ ಸಹಜವಾಗಿ ಪ್ರಾಪ್ತವಾಗುವ ಜ್ಞಾನವು ಅವರಿಗೆ ಇತ್ತು. ಒಬ್ಬ ವಿದ್ವಾನ್ ಬ್ರಾಹ್ಮಣನ ಸೂಚನೆಯ ಮೇರೆಗೆ ಅವರು ತಮ್ಮ ಜೀವನ ಕಾಲದ ಅಂತ್ಯದಲ್ಲಿ ಗೀತಾಪಾರಾಯಣವನ್ನಾರಂಭಿಸಿ, ಪ್ರತಿ ನಿತ್ಯವೂ ಪೂಜಾಕಾಲದಲ್ಲಿ ಅದರ ಕೆಲವು ಶ್ಲೋಕಗಳನ್ನು ಗಟ್ಟಿಯಾಗಿ ಉಚ್ಚರಿಸುತ್ತಿದ್ದರು.

ನನ್ನ ತಾಯಿಯು ಸಾಧ್ವೀ ಸ್ತ್ರೀಯಾಗಿದ್ದಳು. ನನ್ನ ಮನಸ್ಸಿನಲ್ಲಿ ಅವಳ ವಿಷಯವಾಗಿ ಇದೇ ಅಭಿಪ್ರಾಯವು ಬೇರೂರಿಕೊಂಡಿದೆ. ಅವಳು ಬಹಳ ಧರ್ಮಾಭಿಮಾನಿಯಾಗಿದ್ದಳು. ಪೂಜಾಪಾಠವನ್ನು ಮುಗಿಸದೆ ಅವಳೆಂದೂ ಭೋಜನಮಾಡುತ್ತಿರಲಿಲ್ಲ. ಯಾವಾಗಲೂ ದೇವರ ದರ್ಶನಕ್ಕಾಗಿ ಮಂದಿರಕ್ಕೆ ಹೋಗುತ್ತಿದ್ದಳು ನನಗೆ ಜ್ಞಾಪಕವಿರುವ ಮಟ್ಟಿಗೆ ಅವಳು ಒಂದು ವರ್ಷವಾದರೂ ಚಾತುರ್ಮಾಸದ ವ್ರತವನ್ನು ಆಚರಿಸದೆ ಬಿಡಲಿಲ್ಲ. ಅತ್ಯಂತ ಕಠಿಣ ವ್ರತಗಳನ್ನು ಅವಳು ಆರಂಭಿಸಿ ನಿರ್ವಿಘ್ನತೆಯಿಂದ ಕೊನೆಗಾಣಿಸುತ್ತಿದ್ದಳು. ಅಸ್ವಸ್ಥಳಾದರೂ ಅವಳು ಆರಂಭಿಸಿದ ವ್ರತದ ಭಂಗವಾಗಲು ಬಿಡುತ್ತಿರಲಿಲ್ಲ. ಒಮ್ಮೆ ಚಾಂದ್ರಾಯಣ ವ್ರತವನ್ನು ಕೈಕೊಂಡಿರುವಾಗ ಅಸ್ವಸ್ಥಳಾದರೂ ಅವಳು ಅದನ್ನು ಪಾಲಿಸಿದುದು ನನಗಿನ್ನೂ ಜ್ಞಾಪಕವಿದೆ. ಚಾತುರ್ಮಾಸದಲ್ಲಿ ದಿನಕ್ಕೊಂದೇ ಸಲ ಭೋಜನ ಮಾಡುವುದು ಸಾಮಾನ್ಯ ನಿಯಮವಾಗಿತ್ತು. ಇದರಿಂದ ಸಂತುಷ್ಟಳಾಗದೆ ಅವಳು ಒಂದು ಚಾತುರ್ಮಾಸದಲ್ಲಿ ಒಂದು ದಿನ ಉಪವಾಸ, ಮತ್ತೊಂದು ದಿನ ಒಂದೇ ಊಟ - ಈ ಕ್ರಮವನ್ನಿಟ್ಟುಕೊಂಡಳು. ಎರಡು ಮೂರು ದಿನಗಳ ವರೆಗೆ ಉಪವಾಸವನ್ನಾಚರಿಸುವುದು ಅವಳಿಗೇನೂ ದೊಡ್ಡ ಮಾತಾಗಿರಲಿಲ್ಲ. ಒಂದು ಚಾತುರ್ಮಾಸದಲ್ಲಿ ಸೂರ್ಯನಾರಾಯಣನ ದರ್ಶನಮಾಡದೆ ಆಹಾರವನ್ನು ಸೇವಿಸುವುದಿಲ್ಲವೆಂಬ ವ್ರತವನ್ನು ನಿಶ್ಚಯಿಸಿಕೊಂಡಳು. ಆ ಮಳೆಗಾಲದಲ್ಲಿ ಆಕಾಶವನ್ನು ನೋಡುತ್ತ, ಯಾವಾಗ ಸೂರ್ಯನು ಕಾಣುವನೆಂದು ಕಾದಿರುವುದೇ ನಮಗೆ ಕೆಲಸವಾಗಿತ್ತು. ವರ್ಷಾಕಾಲದಲ್ಲಿ ಸೂರ್ಯನ ದರ್ಶನವಾಗುವುದೇ ಕಠಿಣವೆಂದು ಎಲ್ಲರಿಗೂ ಗೊತ್ತಿದೆಯಷ್ಟೆ. ಒಂದೊಂದು ಸಲ " ಅಮ್ಮಾ, ಅಮ್ಮಾ, ಸೂರ್ಯನು ಕಾಣುವನು ' ಎಂದು ನಾವು ಸಂತೋಷದಿಂದ ಕೂಗಿ ಕರೆಯುವುದು, ಅವಳು ಓಡಿಬಂದು ನೋಡುವಷ್ಟರಲ್ಲಿ ತಿರುಗಿ ಸೂರ್ಯನು ಮೋಡಗಳ ಹಿಂದೆ ಮರೆಯಾಗುವುದು, 'ಇರಲಿ, ಈ ದಿನ ಊಟಮಾಡುವುದು ನನ್ನ ಭಾಗ್ಯದಲ್ಲಿಲ್ಲ' ವೆಂದು ಹೇಳಿ ಪುನಃ ಅವಳು ಕೆಲಸದಲ್ಲಿ ಮಗ್ನಳಾಗುವುದು - ಹೀಗಾದದು ನನ್ನ ಸ್ಮರಣೆಯಲ್ಲಿದೆ.

ಅವಳು ವ್ಯವಹಾರಕುಶಲಳಾಗಿದ್ದಳು. ರಾಜ್ಯಭಾರಕ್ಕೆ ಸಂಬಂಧಪಟ್ಟ ಎಲ್ಲ ವಿಷಯಗಳನ್ನು ಅವಳು ತಿಳಿದಿದ್ದಳು. ರಾಣೀವಾಸದಲ್ಲಿ ಅವಳ ಬುದ್ಧಿಶಕ್ತಿಗೆ ಒಳ್ಳೆ ಮನ್ನಣೆಯಿತ್ತು. ನಾನು ಬಾಲಕನಾಗಿದ್ದುದರಿಂದ ಅವಳು ನನ್ನನ್ನು ಆಗಾಗ ಸಂಗಡ ಕರೆದುಕೊಂಡು ಹೋಗುತ್ತಿದ್ದಳು. ಠಾಕೂರ ಸಾಹೇಬರ ವಯೋವೃದ್ಧ ಮಾತೋಶ್ರೀಯವರೊಡನೆ ಅವಳು ಅನೇಕ ಸಲ ಚರ್ಚಿಸುತ್ತಿದ್ದುದು ನನಗೆ ನೆನಪಿದೆ.

ಈ ಮಾತಾಪಿತೃಗಳಲ್ಲಿ ನಾನು ಸಂವತ್ ೧೯೨೫ರ ಭಾದ್ರಪದದ ಕೃಷ್ಣ ದ್ವಾದಶಿಯ ದಿನ - ಅಂದರೆ ೧೮೬೯ನೇ ಇಸವಿಯ ಅಕ್ಟೋಬರ ತಾರೀಕು ೨ನೇ - ಪೋರಬಂದರ ಅಥವಾ ಸುದಾಮಪುರಿಯಲ್ಲಿ ಜನ್ಮವೆತ್ತಿದೆನು.

ನನ್ನ ಬಾಲ್ಯವು ಪೋರಬಂದರದಲ್ಲಿಯೇ ಕಳೆಯಿತು. ನನ್ನನ್ನು ಯಾವುದೋ ಒಂದು ಶಾಲೆಗೆ ಹಾಕಿದರು. ಪ್ರಯಾಸದಿಂದ ಮಗ್ಗಿಕೋಷ್ಟಕಗಳನ್ನು ಬಾಯಿಪಾಠ ಮಾಡಿದೆನು. ಆ ದಿನಗಳಲ್ಲಿ ಇತರ ಹುಡುಗರೊಡನೆ ಉಪಾಧ್ಯಾಯರಿಗೆ ಅಪಹಾಸ್ಯಮಾಡಲು ಕಲಿತುಕೊಂಡದ್ದೊಂದೇ ನನಗೆ ಜ್ಞಾಪಕವಿದೆಯೆಂಬುದನ್ನು ಯೋಚಿಸುವಾಗ ನನ್ನ ಬುದ್ಧಿಯು ಸ್ವಲ್ಪ ಮಂದವಾಗಿತ್ತೆಂದೂ, ಸ್ಮರಣ ಶಕ್ತಿಯು ಆ ಬಡ ಉಪಾಧ್ಯಾಯರ ಕುರಿತಾಗಿ ರಚಿಸಿ ಹಾಡುತ್ತಿದ್ದ ದ್ವಿಪದಿಯಲ್ಲಿ ವರ್ಣಿತವಾದ ಹಸಿ ಹಪ್ಪಳದಷ್ಟೇ ಹಸಿಯಾಗಿತ್ತೆಂದೂ ಅನುಮಾನ ಮಾಡಿದರೆ ತಪ್ಪಾಗಲಾರದು.

ಸತ್ಯಾಗ್ರಹೀ. ಮೋ. ಕ ಗಾಂಧೀ.

(2ನೆ ಪುಟದಿಂದ ಮುಂದುವರಿದದ್ದು.)

ರಿ, ಕಿತ್ತಳೆಹಣ್ಣು, ಸಿಂಬೆ, ಟೊಮೊಟೋ, ಗೋಸುಪೊಪ್ಪು ಇತ್ಯಾದಿಗಳನ್ನು ತಿನ್ನುವುದಾಗಿದೆ. ಆಹಾರವನ್ನು ಹೆಚ್ಚು ಬೇಯಿಸಿದರೆ ಅದರಲ್ಲಿರುವ 'ಎನಿಸೀಮೂ' ಎಂಬ ಪದಾರ್ಥ ವಿಶೇಷವು ನಾಶವಾಗಿ, ಅಜೀರ್ಣ ಉಂಟಾಗುವುದು. ಹಣ್ಣುಗಳು ಹೊಸತಾಗಿದ್ದರೆ ಈ ಪ್ರಾಣವರ್ಧಕ ಪದಾರ್ಥಗಳು ಹೆಚ್ಚಾಗಿರುತ್ತವೆ.

ನಾವು ದಿನಾಲು ತಿನ್ನತಕ್ಕ ಆಹಾರಗಳಲ್ಲಿ ಹಾಲು ಒಳ್ಳೇ ಆಹಾರ. ಅದನ್ನು ಪೂರ್ಣ ಆಹಾರವೆಂದು ನಾವು ಹೇಳುತ್ತೇವೆ. ಆದರೆ ಅದನ್ನು ಹೆಚ್ಚಾಗಿ ಕಾಯಿಸುವುದರಿಂದ ಅದರಲ್ಲಿರುವ ಪ್ರಾಣವರ್ಧಕ ಪದಾರ್ಥ ವಿಶೇಷಗಳು ನಾಶವಾಗುವುವು. ಮೊಲೆ ಹಾಲಿನಲ್ಲಿ "lactic acid" ಆಮ್ಲಿಕ ಆಮ್ಲವು ಇರುವುದರಿಂದ ದನದ ಹಾಲಿಗಿಂತ ಇದು ಉತ್ತಮ. ಕೃತಕಹಾಲಿನಿಂದ ಬೆಳೆದ ಮಕ್ಕಳ ಮರಣವು ಮೊಲೆ ಹಾಲಿನಿಂದ ಬೆಳೆದ ಮಕ್ಕಳಿಗಿಂತ ಹದಿನೈದರಷ್ಟು ಹೆಚ್ಚು. ಭಾರತೀಯರಲ್ಲಿ ಕುಪ್ಪಿಯಿಂದ ಹಾಲು ಕುಡಿಸುವ ಪದ್ಧತಿಯು ಹಿಂದಕ್ಕಿರಲಿಲ್ಲ. ಈಗ ಈ ಪದ್ಧತಿಯಿಂದ ನಮ್ಮಲ್ಲಿ ಹಲವು ಅನರ್ಥಗಳಾಗುತ್ತಿವೆ. ಈ ಪದ್ಧತಿಯನ್ನು ಆದಷ್ಟು ಬೇಗನೆ ತೊಲಗಿಸುವುದುತ್ತಮ. ಈ ಪದ್ಧತಿಯಿಂದ ಮಕ್ಕಳ ಮರಣವು ವೃದ್ಧಿಯಾಗುವುದು.

ಪ್ರಪಂಚದ ಅರ್ಧ ಜನಾಂಗವು ಅಕ್ಕಿಯನ್ನು ತಿಂದು ಜೀವಿಸುತ್ತದೆ. ಹಿಂದಕ್ಕೆ ಭಾರತೀಯರು ಭತ್ತ ಕುಟ್ಟಿ, ಅಕ್ಕಿ ಮಾಡಿ ತಿನ್ನುತ್ತಿದ್ದರು. ಈಗ ಯಂತ್ರಗಳಿಂದ ಅಕ್ಕಿಯನ್ನು ತಯಾರಿಸುವುದರಿಂದ, ಅದರಲ್ಲಿರುವ ಸತ್ವವು ಹಾಳಾಗುವುದು. ಪ್ರಾಣವರ್ಧಕ ಪದಾರ್ಥಗಳಿಲ್ಲದ ಅಕ್ಕಿಯನ್ನು ತಿನ್ನುವುದರಿಂದ "ಬೆರಿ ಬೆರಿ" ಎಂಬ ರೋಗವು ಸಂಭವಿಸುವುದು. ಮೂತ್ರದಲ್ಲಿ, ಅಜೀರ್ಣ, ಪಿತ್ತರೋಗ ಇತ್ಯಾದಿಗಳು ಒದಗುವವು. ಆದುದರಿಂದ ಅಕ್ಕಿಯನ್ನು ಹದಕ್ಕೆ ಕುಟ್ಟಿ ಹೆಚ್ಚು ತೊಳೆಯದೆ, ಇಂಗಲನ್ನ ಮಾಡಿ ತಿನ್ನುವುದು ಒಳ್ಳೇದು.

ಬಿಳಿಕೆ ಪದಾರ್ಥವಿಶೇಷಗಳನ್ನು, ತೊಳೆಸಿದ ಅಕ್ಕಿಯನ್ನು, ಉಪ್ಪಿನಲ್ಲಿಟ್ಟ ಆಹಾರಗಳನ್ನು ತಿನ್ನುವುದು ಈಗಿನ ನಾಗರೀಕತೆ. ಹೀಗೆ ಮಾಡುವುದರಿಂದ ಜನಾಂಗಕ್ಕೆ ಬಹಳ ಕೆಡುಕುಂಟು. 'ವಿಟಾಮಿನ್' ಗಳಿಂದ ಕೂಡಿದ ಸಮ ತೂಕದ ಆಹಾರವು ನಮಗೆ ಯೋಗ್ಯ ಆಹಾರವು. ಈಗಿನ ಕಾಲದಲ್ಲಿ ಕ್ಷಯ ರೋಗವು ನಮ್ಮಲ್ಲಿ ಪ್ರಬಲವಾಗಿ ಹತ್ತಿದೆ. ಇದಕ್ಕೆ ನಮ್ಮ ಆಹಾರ ನ್ಯೂನತೆಗಳೂ, ಹೀನ ವಸತಿಯೂ ಮುಖ್ಯ ಕಾರಣಗಳಾಗಿವೆ. ಬೆಳಕು ತಕ್ಕಷ್ಟು ಇಲ್ಲದಿರೋಣ, ತಕ್ಕಷ್ಟು ವ್ಯಾಯಾಮ ವಿಶ್ರಾಂತಿಗಳಿಲ್ಲದಿರೋಣ, ಒಳ್ಳೆ ಗಾಳಿ ಇಲ್ಲದಿರೋಣ ನಮಗೆ ಕ್ಷಯ ಪ್ರಾಪ್ತವಾಗುತ್ತದೆ. ಕ್ಷಯ ರೋಗವು ವೃದ್ಧಿಯಾಗಲಿಕ್ಕೆ ನಮ್ಮ ದಿಕ್ಕಿಲ್ಲದಿರುವಿಕೆಯೇ ಪ್ರಾಮುಖ್ಯ ಕಾರಣ. ದಿಕ್ಕಿಲ್ಲದಿರುವಿಕೆ ದೂರವಾದರೆ ನಾವು ಬಲಿಷ್ಠರಾಗುವೆವು.

ನಮಗೆ ಮಾಂಸಾಹಾರವು ಅಗತ್ಯವಿಲ್ಲ. ಮೊಟ್ಟೆ, ಅವರೆ, ಹಾಲು ಕಡಲೆ—ಮೊದಲಾದುವುಗಳಿಂದ ನಮಗೆ ಸಾರಜನಕವು (protein) ದೊರೆಯುವುವು. ಯಂತ್ರದಿಂದ ತಯಾರಾದ ಆಹಾರಗಳು ನಮಗೆ ಬಹಳ ಕೆಡಕನ್ನು ತರುತ್ತವೆ. ಮಕ್ಕಳು ದೃಢಕಾಯರಾಗಬೇಕಾದರೆ, ತಾಯಿಯರ ಆರೋಗ್ಯವು ಚಲೋದಿರಬೇಕು. ಟೀ, ಕಾಫಿ, ಗರಮ-ಸಾಲ ಮತ್ತು ಮಿರಾಯಿ ಇವುಗಳನ್ನು ತಿನ್ನುವುದರಿಂದ ಆರೋಗ್ಯವು ಕೆಡುತ್ತದೆ.

ಶಾಲೆಗಳಲ್ಲಿ ಮಕ್ಕಳ ಆರೋಗ್ಯದ ಕಡೆಗೆ ಜನರು ನಿಗಕೊಡುತ್ತಿಲ್ಲ. ತೊಳೆದ ಅಕ್ಕಿಯಿಂದ ಮಾಡಿದ ಅನ್ನವನ್ನು ಸ್ವಲ್ಪ ಮೆಣಸಿನ ಸಾರನ್ನು ಒಂದಿಷ್ಟು ನೀರುಮಜ್ಜಿಗೆಯನ್ನೂ ಅವರಿಗೆ ಕೊಟ್ಟರೆ ಸಾಲದು. ದೇಹ ಮತ್ತು ಮೇಂದುವರ್ಧಕವಾದ ಹಾಲು, ಬೆಣ್ಣೆ, ಮೊಸರು, ತೊಳೆಯದ ಅಕ್ಕಿ, ತರಕಾರಿ ಹಣ್ಣು, ಗೋದಿಯಿಂದ ಕೂಡಿದ ಹಿಟ್ಟಿನಿಂದ ಮಾಡಿದ ರೊಟ್ಟಿ, ಇವನ್ನು ಕೊಡಬೇಕು. ಹೀಗೆ ಮಾಡುವುದು ಕಷ್ಟವಾಗಿ ನಮಗೆ ತೋರಬಹುದು. ಆದರೆ ತಕ್ಕಷ್ಟು ಒಳ್ಳೆಯ ಆಹಾರವನ್ನಾದರೂ ಮಕ್ಕಳಿಗೆ ಕೊಡುವುದು ಅವಶ್ಯವಿದೆ.

ರೋಗಗಳನ್ನು ಬರಮಾಡಿಕೊಂಡು ಡಾಕ್ಟರುಗಳನ್ನು ಬರಮಾಡಿಕೊಳ್ಳುವುದಕ್ಕೆ ಬದಲಾಗಿ ಒಳ್ಳೆಯ ಆಹಾರವನ್ನು ಸೇವಿಸುವುದರಿಂದ ಕಾಯಿಲೆಯನ್ನು ನಿವಾರಣೆಮಾಡಿಕೊಳ್ಳುವುದು ಶಾಸ್ತ್ರೀಯರೀತಿ. ಡಾಕ್ಟರು ಔಷಧಿ ಪಟ್ಟಿಯನ್ನು ತಯಾರಿಸುವುದು ಬದಲಾಗಿ ಆಹಾರಪಟ್ಟಿಯನ್ನು ಬರೆದುಕೊಟ್ಟರೆ ಅವನು ಒಳ್ಳೆಯ ಡಾಕ್ಟರು ಎಂದು ತಿಳಿಯಬಹುದು. ಮನುಷ್ಯತ್ವ ಹಿಂದೂದೇಶದಲ್ಲಿ ಗಣಿಬತನವನ್ನು ಹೋಗಲಾಡಿಸುವುದು ಎಲ್ಲರ ಕರ್ತವ್ಯವಿದೆ. ಜನಾಂಗದ ಉದ್ಧಾರವು ಹಳ್ಳಿಗಳಿಂದ ನಡೆಯಬೇಕಾಗಿದೆ. ಹಳ್ಳಿಯ ಜನರು ವ್ಯವಸಾಯಕ್ಕೂ, ಪಶುಪಾಲನೆಗೂ ನಿಗ ಕೊಟ್ಟರೆ ದೇಶವು ಉದ್ಧಾರವಾಗುವುದು. ಕ್ಷಯರೋಗವು ದೂರವಾಗಿ ಭಾರತೀಯರು ದೃಢಕಾಯರಾಗುವರೂ ಅನಲೀಗ ಇತರ ಜನಾಂಗದಿಂದ ಅವರಿಗೆ ಮರ್ಯಾದೆಯು ಲಭಿಸುವದು.

ವಿಜ್ಞಾಪನೆಗಳು.

ಪಾಡಿನಾಲ್ಕುನಾಡು ತಾಲೋಕಿನ ಜಮಾಸುದಾರರ ಸಂಘದ ಜಾಯಿಂಟ್ ಸೆಕ್ರೆಟರಿಯಿಂದ,

ಇದೇ 1926ನೇ ಇಸವಿ ಏಪ್ರಿಲ್ 3ಂಗಳಲ್ಲಿ ಕೊಡಗು ಜಮಾಸ್ದಾರರ ಸಂಘದ ವಾರ್ಷಿಕ ಸಮ್ಮೇಳನವು ನಾಲ್ಕುನಾಡು, ಕಡಿಯತ್ತುನಾಡು, ಬೇಂಗುನಾಡು, ಕುಯ್ಯಂಗೇರಿನಾಡು ಇತ್ಯಾದಿ ನಾಡಿನವರ ಸ್ವಾಗತದಿಂದ ನಾಪೋಕ್ಲಿನಲ್ಲಿ ನಡೆಯುವುದು ನಿಶ್ಚಯಿಸಿತ್ತು. ದೇಶದವರನ್ನು ನಾಪೋಕ್ಲಿಗೆ ಆದರದಿಂದ ಬರಮಾಡಿ, ತಕ್ಕ ಸ್ವಾಗತವನ್ನು ಕೊಡಲು ಸರ್ವ ತಾಲೋಕಿನವರು ಏರ್ಪಾಡು ಮಾಡಬೇಕಾಗಿರುವುದರಿಂದ, ಮೇಲ್ಕಂಡ ಐದು ನಾಡಿನ ಎಲ್ಲಾ ಗ್ರಾಮಗಳ ಹದಿನೆಂಟು ವಯಸ್ಸಿಗೆ ಮೇಲ್ಪಟ್ಟ ಜಮಾಸ್ದಾರರು ಈ ತಾರೀಕು 27ನೇ ಶನಿವಾರ ಮಧ್ಯಾಹ್ನ 1 ಘಂಟೆಗೆ ನಾಪೋಕ್ಲು ಕಚೇರಿ ಬಳಿ ದಯಮಾಡಿಸಬೇಕಾಗಿ ಕೋರುತ್ತೇನೆ. ಸದರಿ ಮೀಟಿಂಗಿನಲ್ಲಿ ಸ್ವಾಗತದ, ಊಟೋಪಚಾರದ ಮತ್ತು ಇತರ ವಿಷಯಗಳ ಎಲ್ಲಾ ಏರ್ಪಾಡು ಮಾಡಲಾಗುತ್ತೆ. ಅಲ್ಲದೆ ಹಣ, ಅಕ್ಕಿ ವಗೈರೆ ವಸೂಲ್ಮಾಡಲು ಆಯಾಯ ನಾಡು ಮತ್ತು ಗ್ರಾಮಕ್ಕೆ ಮೆಂಬರುಗಳನ್ನು ಸಹ ಏರ್ಪಾಡು ಮಾಡಲಾಗುತ್ತೆ.

ನಾಪೋಕ್ಲು, ತಾ. 11—2—26 | ತಮಗಳ ಸೇವಕ, ಕೋಟೆರ ಪಿ ಚಿಣ್ಣಪ್ಪ, ಜಾಯಿಂಟ್ ಸೆಕ್ರೆಟರಿ

ಸ್ವಾಮಿ ವಿವೇಕಾನಂದರವರ ಜನ್ಮೋತ್ಸವ

(ಬಾತ್ಮಿದಾರರಿಂದ)

ತಾ 6-2-26ರಲ್ಲಿ ಪೊನ್ನಂಪೇಟೆಯಲ್ಲಿ ಶ್ರೀರಾಮಕೃಷ್ಣ ವೇದಾಂತ ಸಂಘದವರು ಸ್ವಾಮಿ ವಿವೇಕಾನಂದರವರ ಜನ್ಮೋತ್ಸವವನ್ನು ಮೆ. ಸಿ ಯಮ ರಾವ ರಾವ್ ಬಿ. ಎ, ಎಲ್. ಟಿ. ಯವರ ಅಧ್ಯಕ್ಷತೆಯಲ್ಲಿ ನಡೆಸಿದರು. ಸ್ವಾಮಿಯವರ ಭಾವಚಿತ್ರದೊಡನೆ ಮೆರವಣಿಗೆ ನಡೆದಾಗ ಬಡಜನರಿಗೆ ಬಿಕ್ಷೆ ಕೊಡಲ್ಪಟ್ಟಿತು. ಮಧ್ಯಾಹ್ನದನಂತರ ಸ್ವಾಮಿ ವಿವೇಕಾನಂದರವರ ಜೀವನಚರಿತ್ರೆಯನ್ನು ಮೆ. ಎಸ್. ಚಿಣ್ಣಪ್ಪನವರು ಓದಿ ವಿವರಿಸಿದರು. ಕೂಡಲೆ ಅಧ್ಯಕ್ಷರು ವೇದಾಂತವನ್ನು ಕುರಿತು ದೇಶವನ್ನು ದೇವಾಲಯಕ್ಕೆ ಹೋಲಿಸಿ ಸ್ವಾರಸ್ಯವಾದ ಭಾಷಣ ಮಾಡಿದರು. ಉತ್ಸವಕ್ಕೆ ದೂರಗಳಿಂದ ಅತಿಥಿಗಳಾಗಿ ಬಂದವರಿಗೆ ಸಹಾಯಮಾಡುವ ನಾಲ್ವರು ಸ್ವಯಂಸೇವಕರ ಸೇವೆಯನ್ನು ಎತ್ತಿ ಮೆ. ಕಾರ್ಯದರ್ಶಿಯವರು ವಂದಿಸಿ ಮಾತಾಡಿದರು. ಸಂಘದ ಪ್ರೆಸಿಡೆಂಟರಾದ ಮೆ. ಪಿ ಗಣಪಯ್ಯನವರು ವೇದಾಂತದ ವಿಷಯ ಅತಿಥಿಗಳಿಗೆ ಒಂದವರಿಗೆ ಮನ ಒಪ್ಪುವರೀತಿ ಮಾತಾಡಿದಲ್ಲದೆ ಸದರಿ ಕಾರ್ಯವು ಇನ್ನು ಮುಂದೆ ಸ್ಥಿರಸ್ಥಾಯಿಯಾಗಿ ನಡೆಯುವ ರೀತಿ ಪ್ರತಿವರ್ಷ ನಡಿಸಬೇಕೆಂದು ಮುಂತಾಗಿ ಭಾಷಣಮಾಡಿದರು. ಮೆ ಬೇಲೂರು ಕೇಶವದಾಸರು ನೆರೆದಿದ್ದ ಸುಮಾರು 300 ಜನರಿಗೆ ಧ್ರುವಚರಿತ್ರೆಯಲ್ಲಿ ಅಡಗಿರುವ ವೇದಾಂತ ರಹಸ್ಯವನ್ನು ವಿವರಿಸಿ ಹರಿಕಥೆಯನ್ನು ಮಾಡಿ ಜನರಮನಸಂತೋಷಗೊಳಿಸಿದರು. ಮಂಗಳಾರತಿಯಾದನಂತರ ಸಭೆಯು ಮುಕ್ತಾಯವಾಯಿತು. ನೆರೆದಿದ್ದ ಜನರಿಗೆ ತಿಂಡಿ ತೀರ್ಥಗಳು ಕೊಡಲ್ಪಟ್ಟವು.

ಮರಣಪೆಟ್ಟಿಗೆಯೊಳಗೆ ಮೂವತ್ತು ದಿನಗಳ ಉಪವಾಸ.

ವಿವಿಸನ್ಸ್ ಎಂಬ ಊರಿನ ಸಮೀಪದಲ್ಲಿರುವ ಹಬರ್ಡೀನ ಎಂಬ ಸ್ಥಳದಲ್ಲಿ ಜ್ಯಾಕಹೆರ್ಕ ಎಂಬವನು ಕಳೆದ ಅಕ್ಟೋಬರ 3ನೆ ತಾರೀಖಿನ ದಿನ ಒಂದು ಗಾಜಿನ ಕಾಫಿನ ಅಂದರೆ ಹೆಣದ ಪೆಟ್ಟಿಗೆಯೊಳಗೆ ಹಾಕಲ್ಪಟ್ಟನು. ತಿನ್ನಲಿಕ್ಕೆ ಇವನಿಗೆ ಕೆಲವು ಅಫೀಮು ಗುಳಿಗೆಗಳೂ ಒಂದುವರೆ ಗ್ಯಾಲನ್ ಶರಬತ್ತು ಮತ್ತು ಕೆಲವುರಸಾಯನ ವಸ್ತುಗಳೂ ಮಾತ್ರ ಇದ್ದುವು. ಇವನನ್ನು ಪೆಟ್ಟಿಗೆಗೆ ತುಂಬುವಾಗ ಬಹಳ ಜನರಿದ್ದರು. ಇವನು ಹೆಚ್ಚಾಗಿ ನಿಶ್ಚಲನಾಗಿಯೇ ಇದ್ದನು. ಬಟ್ಟೆಗಳನ್ನು ಬದಲಾಯಿಸುವಾಗ, ಪನ್ನೀರಿನಿಂದ ಅಂಗವನ್ನು ತೊಳೆಯುವಾಗ ಅಥವ ಪೆಟ್ಟಿಗೆಯೊಳಗಿದ್ದ ಔಷಧಿಯನ್ನು ಸೇವಿಸುವಾಗ ಮಾತ್ರ ಇವನು ಅಲ್ಲಾಡುತ್ತಿದ್ದನು. ಮೂವತ್ತನೇದಿನ ಹಾಕನು ಪೆಟ್ಟಿಗೆಯೊಳಗಿನಿಂದ ಹೊರಕ್ಕೆ ಬಂದನು. ಅವನಿಗೆ ಆಹಾರ ವಿಲ್ಲದೆ ಇದ್ದದರಿಂದ ಆಯಾಸವಿಂಬೇಕಿದ್ದರೂ, ನಿರಾಯಾಸನಾಗಿಯೇ ಕಂಡನು. ಆಮೇಲೆ ಅವನ ಆರೋಗ್ಯವು ಚನ್ನಾಗುತ್ತಿದ್ದು ಅವನು ಸುಖವಾಗಿರುವನು.

ನೋಟೀಸು.

ಒಡದು ಹಾಕಿದ ಹತ್ತುಗಟ್ಟು ನಾಡು, ಅಂಬೆಗೇರಿ ನಾಡು, ಶ್ರೀಮಂಗಲ ನಾಡು ಇವುಗಳ ವಿನೆಸುಂಘಗಳ ಮೀಟಿಂಗುಗಳು ಈ ಕೆಳಗೆ ಕಾಣಿಸಿರುವ ಸ್ಥಳಗಳಲ್ಲಿ ಆಯಾಯ ತಾರೀಕುಗಳಲ್ಲಿ ಈ ಕೆಳಗೆ ರುಜುಮಾಡಿರುವವರಿಂದ ನಡೆಸಲ್ಪಡುವುದು. ಆಯಾಯ ವಿನೆ ಸಂಘಗಳಿಗೆ ಸೇರಿದ್ದ ಎಲ್ಲಾ ಮೆಂಬರುಗಳು ಸಮಯಕ್ಕೆ ಸರಿಯಾಗಿ ಈ ಕೆಳಗೆ ರುಜುಮಾಡಿದವರ ರೂಬರೂಬು ಹಾಜರಾಗಿ ಅವರವರಿಗೆ ಸಲ್ಲತಕ್ಕ ವಿಮೆ ಪತ್ರಗಳ ಮೌಲ್ಯವನ್ನು ಸ್ಥಿರಪಡಿಸಿಕೊಳ್ಳತಕ್ಕದ್ದು. ಅಲ್ಲದೆ ಮೀಟಿಂಗಿನಲ್ಲಿ ಆಯಾಯ ಸಂಘಗಳಲ್ಲಿ ಹಾಲಿ ಇರುವ ಹಣದ ವಿಲೇವಾರಿ ಸಹ ಮಾಡಲಾಗುವುದು. ಮೀಟಿಂಗಿಗೆ ರೂಬರೂಬು ಹಾಜರಾಗದ ಮೆಂಬರುಗಳ ಆಕ್ಷೇಪಣೆಯನ್ನಾಗಲಿ, ಪುರಾವೆಯನ್ನಾಗಲಿ ಹಿಂದಿನಿಂದ ಗಮನಕ್ಕೆ ತೆಗೆದುಕೊಳ್ಳಲಾಗುವುದಿಲ್ಲ.

ಹತ್ತುಗಟ್ಟು ನಾಡು ಮೀಟಿಂಗ್ ತಾ. 6-3-'26ರಲ್ಲಿ ಪೊನ್ನಂಪೇಟೆಯಲ್ಲಿ ಪೂರ್ವಾಹ್ನ 10 ಗಂಟೆಗೆ

ಅಂಬೆಗೇರಿ ನಾಡು ಮೀಟಿಂಗ್ ತಾ. 8-3-'26 ರಲ್ಲಿ ಹುದಿಕೇರಿಯಲ್ಲಿ ಪೂರ್ವಾಹ್ನ 11 ಗಂಟೆಗೆ

ಶ್ರೀಮಂಗಲ ನಾಡು ಮೀಟಿಂಗ್ ತಾ. 9-3-26 ರಲ್ಲಿ ಶ್ರೀಮಂಗಲ ನಾಡು ಕಚೇರಿ ಬಳಿ ಮಧ್ಯಾಹ್ನ 1 ಗಂಟೆಗೆ

ವೀರಾಜಪೇಟೆ, 10-2-26. | ಕೆ. ಪಿ. ಚಿಣ್ಣಪ್ಪ, ಲಿಕ್ವಿಡೇಟರ್.

Apply for our Shooting Season's Clearance Sale Catalogue of Brand New Goods

10 to 25 percent Reductions in Prices

No License Required! No License Required!!



Webley and Scott Air Pistol. cal 177 or ·22 bore Powerful and Accurate complete with a sample box of slugs, two spare washers, a bruser for cleaning, and a bookletof instructions Rs. 30/— Free delivery.

Powerful German Diana Air gun Handsome and Accurate, takes B. S. A. Pattern No 1 Slugs and Darts expressly recommendable for Target Practice Rs. 15/ Free delivery.

Brilliant Search Light Lamp for Night Sports Rs. 30/— Free delivery.

No License required o purchse or to possess he bove items

Reliable D. B. B. L. 12 bore guns	Rs. 60/—	and upwards
Do. S. B. B. L. 12 do	do 40/—	do
D. B. M. L. Guns	„ 45/—	do
S. B. M. L. do.	„ 30/—	do
S. B. B. L. Rifles	„ 25/—	do
B. L. Revolvers and Pistols,	„ 30/—	do.

Arms, Ammunition and shooting requisites of almost every kind and qualitd offered at exceptionally favourable rates A Number of good quality second hany weapons also offered for sale in theNew Catalogue.

GOOLAMHUSSIAIN ALLIBHOY & SONS

Cheapest priced firm in India,

24-5 210 Abdul Rehman Street, BOMBAY.

ವರ್ತಮಾನ ಸಂಗ್ರಹ

ಸ್ವದೇಶ.

ಅಮ್ಮತ್ತಿ ನಾಡು ಹೊಸಕೇರಿ ಗ್ರಾಮದ ...ಟ್ಟಂಡ ಪೂವಯ್ಯನವರು ತಾ 8ರಲ್ಲು ಕಾವಾಡಿಯಲ್ಲಿರು ... ತಮ್ಮ ಭವನದಲ್ಲಿ ಮೃತರಾದರು.

ಈ ತಾ 6ರಲ್ಲಿ ಮಡಿಕೇರಿಯಲ್ಲಿ ಮರಣಪಟ್ಟ ಮಿ. ಓಂಡೇಪಂಡ ಮಲ್ಲಣ್ಣನವರ ಪತ್ನಿ ಸುಬ್ಬವ್ವನವರು ಅನೇ...ನ ಚೆಂಬೆಬೆಳೆಯೂರು ಗ್ರಾಮದಲ್ಲಿ ದಹನ ಮಾಡಲ್ಪಟ್ಟರು.

ಗುಬ್ಬಿ ಶ್ರೀ ಚೆನ್ನಬಸವೇಶ್ವರ ನಾಟಕ ಮಂಡಳಿಯವರು ... ಕಲೇಶಪುರದಿಂದ ಒಂದನೆ ವಾರ ಕೊಡಿಗೆ ಪೇಟೆಗೆ ಬಂದು ನಾ... ಅಭಿನಯಿಸಲಾಗಿ ವರ್ತಮಾನ.

... ವಿರಾಜಪೇಟೆ ವೇದಾಂತ ಸಂಘದವರು ಶ್ರೀರಾಮಕೃಷ್ಣ ಪರಮಹಂಸರವರ ಜಯಂತ್ಯೋತ್ಸವವನ್ನು ಈ ತಾ 14ರಲ್ಲಿ ಸ...ಸದ ಕಟ್ಟಡದಲ್ಲಿ ನಡಿಸುವರೆಂದು ತಿಳಿಯಬರುತ್ತದೆ

ಕಳೆದ ತಾ 16ರಲ್ಲಿ ವೀರಾಜಪೇಟೆಯಲ್ಲಿ ವಿಚಾರವಾದ ವೀರಾಜಪೇಟೆ ಮುನಿಸಿಪಾಲಿಟಿ ಚುನಾವಣೆ ಕೇಸಿನ ಪ್ರಥಮ ಭಾಗವು ಅರ್ಜಿದಾರರವರಿಂದ ಡಿಸ್‌ಮಿಸ್ ಮಾಡಲ್ಪಟ್ಟ ಕಾರಣ ಪೆ ಎ.ಕೆ ಕೃಷ್ಣಯ್ಯನವರ ಚುನಾವಣೆಯು ಸಿಂಧುವಾಗಿದೆ

ಫೆಬ್ರವರಿ ತಾ 6ರಲ್ಲು ಪೊನ್ನಂಪೇಟೆ ಶ್ರೀರಾಮಕೃಷ್ಣ ವೇದಾಂತ ಸಂಘದವರು ಸ್ವಾಮಿ ವಿವೇಕಾನಂದರವರ ಜಯಂತ್ಯೋತ್ಸವವನ್ನು ಮಿ ಸಿ ಯಂ ರಾಮರಾಯರ ಅಧ್ಯಕ್ಷತೆಯಲ್ಲಿ ನಡೆಸಿದರು ಇದರ ವಿವರವು ಇನ್ನೊಂದ ಕಡೆ ಪ್ರಕಟಿಸಲ್ಪಟ್ಟಿದೆ

ಬೆಂಗಳೂರಿನ ಡಾಕ್ಟರ್ ಸಿ ಬಿ ರಾಮರಾಯರ ತಾ 7ರಲ್ಲಿ ಸೆಂಟ್ರಲ್ ಹೈಸ್ಕೂಲು ಹಾಲಿನಲ್ಲಿ ಅಖಿಲ ಕರ್ನಾಟಕ ವಿಶ್ವ ವಿದ್ಯಾಲಯದ ವಿಷಯ ಭಾಷಣ ಮಾಡಿದರು. ಇದರ ವಿವರವನ್ನು ಸ್ಥಳ ಸಂಕೋಚದಿಂದ ಈ ವಾರ ಪ್ರಕಟಿಸಲಾಗಲಿಲ್ಲ ಬರುವವಾರ ಪ್ರಕಟವಾಗುವುದು

ಈ ವರ್ಷ ನಾಪೋಕ್ಲಿನಲ್ಲಿ ನಡೆಯಲಿಕ್ಕಿರುವ ಒಮ್ಮ ...ಸ್ವಾಧರ ಕಿವೆಳನಕ್ಕೆ ಸ್ವಾಗತದ ವಿಷಯದ ಮಾಡುವ ಬಗ್ಗೆ ನಾಲ್ಕುನಾಡು, ಕಡಿಯತ್ತನಾಡು, ಬೆಂಗುನಾಡು ಕು ಯ್ಯಗೇರಿನಾಡು ಮತ್ತು ತಲವ್ರನಾಡುಗಳವರ ಮೀಟಿಂಗೊಂದು ಈ ತಾ 27 ರಲ್ಲು ನಾಪೋಕ್ಲಿನಲ್ಲು ನಡೆಯುವುದು

ವ ಊರ್ನಾಡಿನ ಅಮ್ಮಟಂಡ ಕುಟ್ಟಪ್ಪನವರ ಹುಲ್ಲು ಮುಂಚಕ್ಕೆ ಬೆಂಕಿಬಿಟ್ಟಿಗೆಯಿಂದ ಆಡುತ್ತಿದ್ದ ಅವರ ಸಣ್ಣ ಮಕ್ಕಳು ಬೆಂಕಿಕೊಟ್ಟು ಸುಮಾರು 1500 ಕಂತೆ ಹುಲ್ಲು ಬೇಯುವಷ್ಟಲ್ಲಿ ... ನಂದಿಸಲ್ಪಟ್ಟದ್ದರಿಂದ ಬೆಳೆಯ ಮೆದೆಯು ಬಾಕಿಯಾಯಿತೆಂದೂ ಒಂದು ಬಾತ್ಮಿ

ಇರ್ಪುವಿರೂಪಾಕ್ಷೇಶ್ವರ ದೇವಸ್ಥಾನದಲ್ಲಿ ಬಹುಮಾಸ್ಯಯನಾಮ ಸಂವತ್ಸರದಲ್ಲಿ ಎರಡು ಸಾರಿ ರಥೋತ್ಸವವು ನಡೆಯುವುದೆಂದೂ ಜನವರಿ ತಾ. 25ರಿಂದ ಮಾರ್ಚ್ ತಾ 13 ರವರೆಗೆ 48 ದಿವಸಗಳು ಆ ದೇವಸ್ಥಾನದಲ್ಲಿ ರುದ್ರಾಭಿಷೇಕವು ನಡೆಸುವಂತೆ ಏರ್ಪಾಡು ಮಾಡಲಾಗಿದೆಯೆಂದೂ ಅದಕ್ಕೆ ಭಕ್ತ ಜನರು ಧನಸಹಾಯ ಮಾಡಬೇಕೆಂದೂ ಆ ದೇವಾಲಯದ ಪಾರುಪತ್ಯಗಾರರ ವಿಜ್ಞಾಪನೆ.

ವಿರಾಜಪೇಟೆ ಹೈಸ್ಕೂಲಿನವರ ಶಾಲೆಯ ವಾರ್ಷಿಕೋತ್ಸವವನ್ನು ಈ ತಾ 19ನೇ ಶುಕ್ರವಾರ ನಡಿಸಲಿಕ್ಕಿರುವರು ಮಂಗಳೂರಿನ ಗವರ್ನಮೆಂಟ್ ಕಾಲೇಜಿನ ಪ್ರಿನ್ಸಿಪಲರಾದ ವೆ ಜಿ ಕೆ ಚಟರ್ಜಿ ಯಂ ಎ ರವರು ಅಗ್ರಾಸನವನ್ನು ವಹಿಸಲು ಒಪ್ಪಿರುವರು ಬೆಳಿಗ್ಗೆ ತಾಲೋಕು ಕಚೇರಿ ಬಳಿ ಮೈದಾನದಲ್ಲಿ ಸ್ಪೋರ್ಟ್ಸ್, ಸಾಯಂಕಾಲ ಅಲ್ಲಿಯ ಬೋರ್ಡ್ ಸ್ಕೂಲ್ ಹಾಲಿನಲ್ಲಿ ವಂದಿಗೂ, ಭಾಷಣಗಳೂ ಅನಂತರ ಇಂಗ್ಲೀಷು ಮತ್ತು ಸ್ವಭಾಷೆಯಲ್ಲಿ ನಾಟಕಗಳು ಅಭಿನಯಿಸಲ್ಪಡುವವು

ಹಿಂದೂದೇಶ.

ದಕ್ಷಿಣ ಆಫ್ರಿಕದಲ್ಲಿ ಹಿಂದೀಯರ ಸ್ಥಿತಿಯನ್ನು ... ಪ್ರಶ್ನೆಯ ಸಮ್ಮಂಧದಲ್ಲಿ ಮೈಸೂರು ಅಸೆಂಬ್ಲಿಯ ... ಗಳ ಮುಂದಾಳುಗಳ ಸಂಗಡ ತಾ. 7ಲ್ಲಿ ರಾತ್ರಿ ಚರ್ಚೆ ನಡೆಸಿದರು

ಚಕ್ರಾಧಿಪತ್ಯದ ಪಾರ್ಲಿಮೆಂಟರಿ ಸಂಘದ ಇಂ... ಶಾಖೆಯನ್ನು ಸ್ಥಾಪಿಸಲು ಎಸೆಂಬ್ಲಿಯ ಸ್ವರಾಜ್ಯ ಪಕ್ಷದವರು ಒಪ್ಪಿರುವರು ಲಾಲಾ ಲಜಪತರಾಯರ ಬೇರೆ ಐದು ಜನರೊಡನೆ ಮಾತ್ರ ವಿರೋಧಿಸಿದರು.

ಹೈದರಾಬಾದು ಸಂಸ್ಥಾನದಲ್ಲಿ ಪ್ಲೇಗ್ ರೋಗವು ಬಹಳ ಪ್ರಬಲವಾಗಿ ಹರಡಿಕೊಂಡಿದೆ ನವಂಬರದಿಂದ ಈವರೆಗೆ 1576ಜನರಿಗೆ ಅಂಟಿ 1127ಜನರ ಮೃತಪಟ್ಟಿರುವರಂತೆ

ಕೆಲವು ದಿವಸಗಳ ಹಿಂದೆ ಕುಂಭಕೋಣದಲ್ಲು ಹುಟ್ಟಿದ ಒಂದು ಮಗುವಿಗೆ ತಲೆಯು ಬದಲು ಬರು ಮಾಂಸದ ಉಂಡೆ ಯೂ ಅದರಲ್ಲಿ ಎರಡು ಕಣ್ಣುಗಳೂ ಮಾತ್ರ ಇವೆಯಂತೆ ಇಂಥಾ ವಿಲಕ್ಷಣದ ಮಗು!

ಬೊಂಬಾಯಿಯ ಲ್ಲಿ ಬಸ್ಸಕೂಲಿ ಕೇಸಿನಲ್ಲಿ ಅಪರಾಧಿಗಳು ಬಿಡಾವಿಗಾಗಿ ಇಂದೂರಿನ ಮಹಾರಾಜರು ಯಥೇಚ್ಛವಾಗಿ ಹಣ ಖರ್ಚುಮಾಡಿದರೆಂದು ಮೊದಲಾಗಿ ಪತ್ರಿಕೆಗಳಲ್ಲಿ ಪ್ರಕಟಿಸಿದ್ದು ಪೂರಾ ತಪ್ಪು ವರ್ತಮಾನವಾಗಿದೆಯೆಂದು ಅಲ್ಲಿಯ ... ಯವರು ಪ್ರತಿಭಟಿಸಿರುವರು.

ದಾಕ್ಟರ್ ಆನಿಬೆಸಂಟರವರು ಇಂಡಿಯಾದ ಎಲ್ಲಾ ರಾಜಕೀಯ ಸಂಗಡಗಳು ಸೇರಿ ಒಂದಾಗಲು ಸಾಧ್ಯವಿದೆಯೆಂತಲೂ ಹಾಗೆ ಒಗ್ಗಟ್ಟಾಗಬೇಕೆಂತಲೂ ಕಾಮನ್‌ವೆಲ್ತ್ ಆಫ್ ಇಂಡಿಯಾ ಬಿಲ್ಲು ಇದಕ್ಕೆ ಸುಲಭದ ಉಪಾಯವೆಂತಲೂ ಬೊಂಬಾಯಿ ಯಲ್ಲಿ ಒಂದು ಭಾಷಣ ಮಾಡಿದರು

ಕೆಲವು ದಿವಸಗಳಹಿಂದೆ ಯಾರೋ ಒಬ್ಬನು ಮದ್ರಾಸಿನಲ್ಲಿರುವ ನೇಶನಲ್ ಬ್ಯಾಂಕಿಗೆ ಒಂದು ತಂತೀವರ್ತಮಾನವನ್ನು ಬೋರಿ ಅಲ್ಲಿಯ ಕ್ಯಾಷಿಯರಿಂದ ಇಪ್ಪತ್ತು ಸಾವಿರ ರೂಪಾಯಿ ಗಳನ್ನು ತೆಗೆದುಕೊಂಡು ಪರಾರಿಯಾದವನು ಇನ್ನೂ ಪತ್ತೆಯಾಗಿರುವದಿಲ್ಲ. ಕ್ಯಾಷಿಯರ ಮೇಲೆ ಆ ಹಣಕ್ಕೆ ದಾವೆ ಹಾಕಲ್ಪಟ್ಟಿದೆ

ಘಂಟರ ಪುರದಲ್ಲಿ ಕಳೆದ ಜನವರಿ ತಾ 29ರಲ್ಲಿ ವಿರಳಗಾಳಿ ಮಳೆಯಿಂದಿಗೆ ಬೀಳುವ ಕಾಯಿದಷ್ಟು ಆಲಿಕಲ್ಲುಗಳು ಬಿದ್ದು ಮನೆಯ ಹಂಚುಗಳು ಒಡೆದುಹೋದವು, ಗಿಡಗಳ ಕೊಂಬೆಗಳು ಮುರಿದುಬಿದ್ದವು ಮಳೆಗೆ ಸಿಕ್ಕಿದ ಜನರ ತಲೆಗೆ ಪೆಟ್ಟಾಗಿ ನೋವು ಉಂಟಾಯಿತು ಬೆಳೆಯ ನಷ್ಟ ವಿಪರೀತ

ಶಿವಾಜಿ ಮಹಾರಾಜರವರ 310ನೇ ಜನ್ಮೋತ್ಸವವನ್ನು ಒಳ್ಳೆ ವರ್ಷ ವಿಜೃಂಭಣೆಯಿಂದ ನಡಿಸಲು ಮಹಾರಾಷ್ಟ್ರದವರು ಏರ್ಪಾಡು ಮಾಡುತ್ತಿದ್ದಾರೆ ಅವರ ಅಶ್ವಾರೋಹಣ ಪ್ರತಿಮೆಯನ್ನು ಅಮೃತ ಶಿಲೆಯಲ್ಲಿ ಮಾಡಲು ಬೊಂಬಾಯಿಯ ಪ್ರಸಿದ್ಧ ಶಿಲ್ಪಿಗಳಾದ ಮಾತ್ರೆಯವರು ಒಪ್ಪಿರುವರು ಇದರ ಖರ್ಚು 1 ಲಕ್ಷ 80 ಸಾವಿರ ರೂಪಾಯಿಯಂತೆ

ಹೈದರಾಬಾದಿನ ನೈಜಾಮ ರು ಕಳೆದವಾರ ಮಸೀದಿಯಲ್ಲಿ ನಮಾಜಿಗೆ ಹೋಗಿದ್ದಾಗ ಅಲ್ಲಿ ಪಠಾಣ ಜಾರವನಾದ ತಾಲೂಕುದಾರನೊಬ್ಬನು ನಡು ಕಟ್ಟಿದ ಚಿಕ್ಕ ಚೂರಿಯನ್ನು ಧರಿಸಿಕೊಂಡು ನಿಜಾಮರ ಸಮೀಪದಲ್ಲಿ ನಿಂತಿದ್ದರೆಂದು ತಿಳಿದುಕೊಂಡು ಅವನಿಗೆ 200 ರೂ ಜುಲ್ಮಾನೆ ವಿಧಿಸಿದರಂತೆ!

ಮೈಸೂರು ಮಹಾರಾಜರವರ ಉದಾರ ಪ್ರೋತ್ಸಾಹದಿಂದ ಅಖಿಲ ಕರ್ನಾಟಕ ಆಯುರ್ವೇದ ದ್ವಿತೀಯ ಸಮ್ಮೇಳನವು ಮತ್ತು ವೈದ್ಯಕೀಯ ಪ್ರದರ್ಶನವು ಈ ತಾ 14ರಿಂದ 16ರವರೆಗ ಬೆಂಗಳೂರಿನಲ್ಲಿ ನಡೆಯುವುವು. ಬಂಗಾಳದ ಪ್ರಸಿದ್ಧ ವೈದ್ಯರಾದ ಮ ಹನುಮಂತ ವೆಂಕಟೇಶ ಸರಕಾರರವರು ಸಮ್ಮೇಳನದ ಅಧ್ಯಕ್ಷರಾಗಿರುವರು ವೈದ್ಯಕೀಯ ಪ್ರದರ್ಶನವನ್ನು ಮೈಸೂರಿನ ಚೀಫ್ ಜಡ್ಜರಾದ ದಿ ಬಾ. ಸೆ... ಚಂದ್ರಶೇಖರಯ್ಯರವರು ತೆರೆಯುವರು

ಕಳೆದ ತಾ 1ರಲ್ಲಿ ಬೊಂಬಾಯಿಯ ಆರ್ಯ ಸಮಾಜದ ಮಂದಿರದಲ್ಲಿ ಕಾಶ್ಮೀರದ ನವಾಬನ್ ಖಾದೆರ್ ... ಪೀಸರಾದ ಇಂಗ್ಲೆಂಡಿನಲ್ಲಿ ವಿದ್ಯಾಭ್ಯಾಸಮಾಡಿದ ಮಿ. ಪಿ ರೂಪಕೃಷ್ಣರವರಿಗೂ ಇಂಗ್ಲೆಂಡಿನಲ್ಲಿ ದೊಡ್ಡ ಪರೀಕ್ಷೆಗಳಲ್ಲಿ ತೇರ್ಗಡೆಹೊಂದಿರುವ ಮಿಸ್ ಗ್ರಾರ್‌ಮೆಸ್‌ಎಂಬ ಇಂಗ್ಲಿಷ್ ಯುವತಿಗೂ ವೈದಿಕ ಧರ್ಮ ರೀತಿ ಶುದ್ಧಿ ಸಂಸ್ಕಾರವಾದನಂತರ ದೇಶೀಯ ಉಡುಪುಗಳೊಂದಿಗೆ ವಿವಾಹವು ನಡೆಯಿತು ಮಿಸ್ ಗಾರಮೆಸ್ಸಿಗೆ ಚಂದ್ರಕಲೆಯೆಂಬ ಹೆಸರು ಇಡಲಾಯಿತು ಅವಳು ಕಷ್ಟದಿಂದ ಸಂಸ್ಕೃತ ಮಂತ್ರಗಳನ್ನು ಉಚ್ಚರಿಸಿದಳಂತೆ

ವಿದೇಶ.

ದಕ್ಷಿಣ ಆಫ್ರಿಕದ ಎಸೆಂಬ್ಲಿಯಲ್ಲಿ ಏಶ್ಯಾಟಿಕ್ ಬಿಲ್ಲು ಮೊದಲನೇ ಸಾರಿ ಪಾಸಾಗಿದೆ ಒಸರಿಯ ಸ್ವಿಟ್ಸರ ಪಾರ್ಟಿಯವರು ಯಾವ ವಿರೋಧವೂ ಒಟು ಕೊಡಲಿಲ್ಲ

ಕೆಲವು ದಿವಸಗಳ ಹಿಂದೆ ಪೋಲೆಂಡಿನಲ್ಲಿ ನಡೆದ ದಂಗೆಕೋರರ ಮುಖಂಡರನ್ನು ಅಜೋರಾ ಎಂಬ ದ್ವೀಪಕ್ಕೆ ಗಡೀಪಾರು ಮಾಡಿದರು

ಗಾಲ್ ಜನರು ಸಾಬೂನು ಮಾಡುವುದನ್ನು ಸುಮಾರು 2000 ವರ್ಷಗಳ ಹಿಂದೆ ಕಂಡುಹಿಡಿದಿದ್ದರು ನೊಟ್ಟ ಮೊದಲು ಆಡಿನ ಕೊಬ್ಬಿಗೆ ಒಂದು ತರದ ಮರದ ಬೂದಿಯನ್ನು ಸೇರಿಸಿ ಸಾಬೂನನ್ನು ಮಾಡಿದರು.

ಇಟಲಿಯು ಬ್ರಿಸ್ಟರ್ ಎಂಬಲ್ಲಿಂದ ತನ್ನ ಭಾವಟೆಯನ್ನು ತೆಗೆಯದೆ ಅವಶ್ಯವಿದ್ದರೆ ಮುಂದಕ್ಕೆ ಸಾಗುವುದೆಂದು ಜರ್ಮನಿಗೆ ನ್ನು ಹೆದರಿಸಿ ಇಟಲಿಯ ಪ್ರಧಾನ ಮಂತ್ರಿಯವರು ಪಾರ್ಲಿಮೆಂಟಿನಲ್ಲಿ ಮಾಡಿದ ಭಾಷಣಕ್ಕೆ ಫ್ರಾನ್ಸಿನವರು ಸಂತೋಷವನ್ನೂ ಜರ್ಮನಿಯವರು ಕೋಪವನ್ನೂ ತೋರಿಸುತ್ತಿರುವರು

ಜನಾಂಗ ಸಂಯೋಜನದ ಕೂಟಕ್ಕೆ ಮೆಂಬರಾಗಲು ಜರ್ಮನಿಯು ಅರ್ಜಿ ಹಾಕಿಕೊಂಡಿರುವುದರಿಂದ ಇದನ್ನು ಇತ್ಯರ್ಥ ಪಡಿಸಲು ಕೂಟದ ಮೀಟಿಂಗೊಂದು ಬೇಗನೆ ನಡೆಯಲಿಕ್ಕಿದೆ. ಈ ಕೂಟಕ್ಕೆ ಸೇರಲು ಇನ್ನು ಅಮೆರಿಕಾ ರಾಜ್ಯ ಒಂದೇ ಬಾಕಿ ಇರುವುದು

ಇಂಗ್ಲೆಂಡಿನ ಫಾರೆಸ್ಟು ಇಲಾಖೆಯವರು ಈ ವರ್ಷ 18 ಸಾವಿರ ಎಕರೆ ಸ್ಥಳದಲ್ಲಿ 3 24,00,000 ಸಸಿಗಳನ್ನು ಹೊಸದಾಗಿ ನೆಡುವರು ಇವು ಮರವಾಗಿ ಬೆಳೆದು ತೋಟಗಳಾಗಲು 50,00 ವರ್ಷಗಳು ಬೇಕಾಗುವವಂತೆ. ಇವು ಬೆಳೆದ ಮೇಲೆ ಅಲ್ಲಿಗೆ ಪರದೇಶಗಳಿಂದ ತರುತ್ತಿರುವ ಮರಗಳ ವೆಚ್ಚದಲ್ಲಿಯೂ 75, 00 00,000, ಉಳಿಕೆಯಾಗುವುದೆಂದು ಅಂದಾಜು ಹಾಕಿದ್ದಾರೆ

ಲಂಡನ್ನಿನ ಪ್ರಾಣಿ ಪ್ರದರ್ಶನಾಲಯದಲ್ಲಿ ಇಡಲ್ಪಟ್ಟಿರುವ ಒಂದು ತರದ ಉದ್ದವಾದ ಏಡಿಯು ಬಹು ವಿಶೇಷಗುಣವುಳ್ಳದ್ದಾಗಿದೆ ಅದು ನೀರಿನೊಳಗಿನ ಕೆಸರಿನಲ್ಲಿ ಜೀವಿಸುತ್ತಿದ್ದು ಮಳೆ ಬರುವುದನ್ನು ತಿಳಿದು ನೀರಿನ ಮೇಲಕ್ಕೆ ಬಂದು ಬಹಳ ವೇಗವಾಗಿ ಓಡಾಡುವದಂತೆ ಹೀಗೆ ಮಾಡಿದ 24 ಗಂಟೆಗಳಲ್ಲಿ ಮಳೆಬರುವುದರಿಂದ ಅದನ್ನು ವರ್ಷ ಸೂಚಕವೆಂದು ಕರೆಯುವರು

ಕ್ರೈಸ್ತರ ಬೈಬಲಿನಲ್ಲಿ ಹೇಳಿರುವಂತೆ ಏಸುವಿನ ಉತ್ಥಾನದಲ್ಲಿ ನರ್ಸರಿಯು ಉಳಿಸೊಂದಿಗೆ ಮಾತನಾಡಿದ್ದು ನಿಜವೋ ಎಂಬ ಸಂಗತಿಯ ಲ್ಲಿ ಆಸ್ಟ್ರೇಲಿಯ ಪಟ್ಟದ ಪಾದ್ರಿಯೊಬ್ಬರು ಸಂಶಯಪಟ್ಟ ಕಾರಣ ಆ ವಿಷಯ ವಿವಾದಗಳು ನಡೆದು ಅದನ್ನು ಇತ್ಯರ್ಥ ಪಡಿಸಲು ಒಂದು ಸಭೆ ಸೇರಿದ್ದಿತು ಆ ಸಭೆಯಲ್ಲಿ ವಾಗ್ವಾದವು ಜೋರಾಗಿ ಅಧ್ಯಕ್ಷರಾಗಿದ್ದ ಡಾಕ್ಟರ್ ಡೆಮೂರ್ ಎಂಬವರು ಮೈಕಂಪಿಸಿ ಬಿದ್ದು ಕೂಡಲೆ ಪ್ರಾಣಬಿಟ್ಟರಂತೆ

ವಿಜ್ಞಾಪನೆಗಳು.

ಮಹಾಶಯರೇ,

ನನಗೂ ನನ್ನ ಸಂಸಾರಕ್ಕೂ ಸಂಭವಿಸಿದ ದುಃಖ ಸಂಗತಿಯನ್ನು ಸಮಾಧಾನಮಾಡಲಿಕ್ಕಾಗಿ ಅನೇಕ ದೊಡ್ಡ ಮನುಷ್ಯರುಗಳೂ ಮಿತ್ರರುಗಳೂ ನನ್ನ ಮನೆಗೆ ಬಂದು ಸಮಾಧಾನಗಳು ಕೊಟ್ಟು ಹೋದರು. ಇದೂ ಅಲ್ಲದೆ ಅನೇಕರು ಕಾಗದ ಮುಖಾಂತರ ಸಮಾಧಾನ ಬರದು ಇರುತ್ತಾರೆ. ಇವರುಗಳಿಗೆಲ್ಲಾ ಪ್ರತ್ಯೇಕ ಬರೆಯುವದೆಂದರೆ ನನ್ನ ಮನಸ್ಸು ಕಲ್ಲುಹೋಗಿ ಬರುವುದರಿಂದ ಕ್ಷಮಿಸಬೇಕಾಗಿ ಈ ಮೂಲಕ ಎಲ್ಲರನ್ನೂ ಬೇಡಿಕೊಳ್ಳುತ್ತೇನೆ

ವಿಧೇಯ,

ಕೊಂಗೆಟ್ಟಿರ ಮಂದಣ್ಣ.

ಕಾಶ್ಮೀರ ಕತ್ತಿ.

ಇದನ್ನು ಇಟ್ಟುಕೊಂಡು ಕ್ಷೌರಿಕನ ಕೈಯಲ್ಲಿ ಕೊಟ್ಟು ಕೆಲಸವನ್ನು ಮಾಡಿಕೊಂಡಲ್ಲಿ ಇತರ ಶರೀರ ಸಂಬಂಧವಾದ ವ್ಯಾಧಿಗಳು ಬಾರದಂತೆ ಉಳಿಯೂ ಇಲ್ಲದಂತೆ ಸುಖವಾಗಿರುವುದು ಕ್ರಯ ಕತ್ತಿ 1ಕ್ಕೆ 2—8—0

ರೋಲ್ಡ್ ಗೋಲ್ಡ್ ಭಂಗಾರದ ಕೈಗಡಿಯಾರ.

ಈ ಕೈಗಡಿಯಾರವು ಭಂಗಾರಕ್ಕೆ ಸರಿ ಸಮಾನವಾಗಿದೆ ಬರಾಬರ ಗಂಟೆಯನ್ನು ತೋರಿಸುವುದು ಅತ್ಯುತ್ತಮವಾದ ಗಟ್ಟಿ ಸಾಮಾನುಗಳಿಂದ ತಯಾರಿಸಿದ್ದು ಇದಕ್ಕೆ 3 ವರ್ಷಗಳ ಗ್ಯಾರಂಟಿ ಕೊಡುವೆವು. ಕ್ರಯ 1ಕ್ಕೆ 6—12—0

ವಿಳಾಸ — ಎಸ್ ಪಾಲ್ ಎಂಡ್ ಕೊ,
ಪೋಸ್ಟು ಬಾಕ್ಸು ನಂ 542,
ಜಾರ್ಜ್ ಟೌನ್ ಮದರಾಸ.

2

ಪತ್ರವ್ಯವಹಾರ.

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲ. ಸಂ

ಕೊಡವಸಭೆ ಬೇಕೋ ಬೇಡವೋ.

ದೇಶಬಾಂಧವರೆ, ಈ ನಾಲ್ಕಾರು ಚರ್ಚೆಯನ್ನು ಈ ದೇಶದ ಎರಡು ವಾರಪತ್ರಿಕೆಗಳಲ್ಲು ನೋಡಿ ಕೊಡಗಿನಾದ ನಾನು ಸಹಿಸಲಾರದೆ ನನ್ನ ಕೆಳಗಣ ಇರಾದೆಯನ್ನು ದೇಶೀಯರವ ಎಂದಿಟ್ಟದ್ದಾಗಿದೆ

ಕೊಡಗುಸಭೆ ಬೇಡವೆನ್ನುವವರ ಇರಾದೆಯನ್ನು ತಿಳಿದಲ್ಲಿ ನಮಗೆ ಈಗ ಸಭೆ ಇಲ್ಲವೋ ದೇಶಕಕ್ಷ, ನಾಡುಕಕ್ಷ, ಊರುಕಕ್ಷ ಮತ್ತು ದೇವಕಕ್ಷ ಇವರೇ ಈಗಿನ ಸರ್ವಸಮ್ಮತವಾದ ಸಭೆಯಲ್ಲು ಅಗಬೇಕಾದ ಪ್ರೆಸಿಡೆಂಟರು, ವೈಸ್‌ಪ್ರೆಸಿಡೆಂಟರು, ಸೆಕ್ರೆಟರಿ, ಮತ್ತು ಕಮಿಟಿಯವರಾಗುತ್ತಾರೆ. ಅಗ್ಯೆ ಪೂರ್ವದ ತಕ್ಕಮುಖ್ಯಸ್ಥರ ಹೋಯಿತು ಗಣೇಬರನ್ನು ಕೇಳುವ ದಿಕ್ಕಿಲ್ಲ. ಮಲೆಯಾಳ ಸಂಪ್ರದಾಯದಂತೆ ಜಮ್ಮಗಳು ಯಾ ಕುಳಗಳಾಗಿಯೂ ಇರುವಂತೆ ಆಗಿ ತೋರುತ್ತೆ. ಆದ ಕಾರಣ ನವೀನ ಕೊಡಗುಸಭೆ ಅವಶ್ಯ ಇಲ್ಲ ಮಾಮೂಲ್ ಮೀರಿ ನಡೆಯುವ ಎಂಬ ಗಲಾಟೆಯ ಬೋಧನೆಯಂತೆ ಕೆಲವರೂ ನಮ್ಮ ಪೂರ್ವದ ಪದ್ಧತಿಯಂತೆ ಈಗಲೂ ನಡೆಯಬೇಕು. ಅಗನೆಕಕ್ಕ ತಪ್ಪುದಾರಿಗಳು ಆದರೆ 'ಊರ್‌ಲ್ ವಕ್ಕಳ ತಾಂಗುವವ ತಕ್ಕ ' ತಪ್ಪುದಾರಿ ಆದರೆ ' ಸ್ವಾಮಿ ಉಳ್ಳ ಮಂದ ಬೋಟಿ ಬಾಯಿ ಉಳ್ಳವಂಡ ಬಟ್ಟು' ಈಗಲಾದರೋ ಪೂರ್ವದ ತಕ್ಕ ಮುಖ್ಯಸ್ಥರಲ್ಲಿ ಕೆಲವರಿಗೆ ಮೇಲ್ಕಂಡ ಸಂಗತಿಗಳಾವವೂ ಇರುವದಿಲ್ಲ. ಕೆಲವು ದೇಶಕ್ಕರಿಗೆ ನಾಡು ತಕ್ಕರನ್ನು, ಊರುತಕ್ಕರನ್ನು, ದೇಶಕ್ಕರನ್ನೂ ಕೂಡಿಸುವ ಹೈತ ಸ್ವದೇಶಿ ಲ್ಲಿ ಕೆಲವರಿಗೆ ನಾಡುತಕ್ಕರು ಯಾರಿದ್ದಾರು, ಊರು ತಕ್ಕರ್ಯಾರು, ದೇವ ತಕ್ಕರ್ಯಾರು ಎಂಬುದೇ ಗೊತ್ತಿಲ್ಲ ಇದಕ್ಕೆ ದೃಷ್ಟಾಂತರವಾಗಿ ದೇಶತಕ್ಕರೆಂಬ ಪರವಂಡ ಗಣಪತಿಯವರು ನಾಡುತಕ್ಕ ಕರ್ಯಾಟಂಡ ಅಪ್ಪಚ್ಚನವರು. ಪಾಡಿ ನಾಲ್ಕುನಾಡಿನ ನಾಡು, ಸುಂದರಾದ ಕೆಂಬಾಣೆ ಮಂದಿನಲ್ಲು ನಾಡವರ ಮುಂದೆ ತಮಗೆ ನಾಡುತಕ್ಕರು ಯಾರ್ಯಾರೆಂಬುದು ಗೊತ್ತಿ

ಳಿದ್ದರಿಂದ ಶೀಟೋಳಿತ ತಕ್ಷಿಮೆಯನ್ನು ಅಲ್ಲಗೊಳಿಸಿ ನೆಲಜೆ ಅಂಬಲದಲ್ಲು ಕೊಡಗುಸಭೆ ಬೇಡವೆಂದು ಮಾಡಿದ ಠರಾವು ಸಿಂಧು ಅಲ್ಲವೆಂದು ಎರಡು ಪತ್ರಿಕೆಗಳಲ್ಲು ಪ್ರಕಟಿಸಿದ್ದು ನೋಡಿರುತ್ತೇನೆ.

ಇನ್ನು ಕೆಲವು ಸಂದರ್ಭಗಳಲ್ಲು ತಕ್ಕರು ಏನೆಂದರೆ, ನ್ಯಾಯದ ಸಂಗತಿ ಮಾತನಾಡಿದರೆ ನಾಚಿಕ್ಕೆ, ನಾಚಿಕ್ಕೆ, ನಿಮ್ಮ ಮನೆತನದಲ್ಲು ಕೊಲೆ, ಕೊಲೆಪಾತಕ, ನಿಮ್ಮ ಮನೆಯಲ್ಲು ಕಳವು, ದರೋಡೆ ರತಿಂಗಳ [illegible]ದವ, ತನ್ನ ಮನೆಯವರನ್ನೇ ಹ ತೋಟಿಸುಳ್ಳಿನವನ, ತಲೆಯಲ್ಲಿ ರಾಗಿಕಾಳನ್ನು ವಿನ್ನೆ ಇಲ್ಲದವ ನಮಗೆಲ್ಲಾ ಬುದ್ಧಿ ಹೇಳುವವನು [illegible] ನಡತೆಗೆ ಳು ತಗಿನ ನಪನಾಗ[illegible]ಕತೆಯಲ್ಲು ಒಂದಿರುವ ಕಲಿವ[illegible] ಯನ್ನು ನಾವೆಲ್ಲರೂ ನೋಡುತ್ತಿರುವ ಮತ್ತು ಕೇಳುತ್ತಿರುವ ಸಿಪಸುನ[illegible]ಯಾಗಿಯತ್ತೆ. ಅಲ್ಲದೆ ಕೆಲವರು 'ಕಾವಾಕ್ಕಾಯಿ ಚೊಕ್ಕತ್, ಕಾವಂಗಾ ಪೋನ್ನಾಟ್, ಕಂದಾಪೋಯಿ ವದ ನ್ನಾಟ್ ವರಾಪೋಯಿ ಕಂಡಿಬಾಟ್, ಅವ್ವ ನೇಂವತ್, ತಿಂದ ಪೆತಾಂವತ್' ಎಂದು ಕೆಲವರು, ಹೀಗಾಗಿ ಕಲ್ಲಪ್ಪ ಗುಂಡಪ್ಪ ರಾಮಪ್ಪ, ವೆಂಕಪ್ಪ, ಪ್ರತಿ ಎಂಬಂತೆ ಕೊಡಗು ಸಭೆ ಬೇಡ ಬೇಕು, ಎಂಬ ತೋರಾಟದಿಂದ ಕೊಡಗು ದೇಶದ ಕೊಡವ ಜನಾಂಗ ಒಗ್ಗಟ್ಟಿಲ್ಲದೆ ಸಂದಿ[illegible]ಯಾಪಕಾಲ ಬಾಧೆಯಾದಗಿದೆ.

ಮೇಲ್ಕಂಡ ಕಾರಣಗಳನ್ನೆಲ್ಲಾ ಚನ್ನಾಗಿ [illegible] ನ್ಯಾದರೂ ಈ ಕಾಲಕ್ಕೆ ತಕ್ಕ ಏಧಾನವನ್ನು ಎಲ್ಲರು ಒಗ್ಗಟ್ಟಿನಿಂದಲೂ, ಏಮ್ಮನಸ್ಸಿನಿಂದಲೂ 'ಕಾಲಕ್ ತಕ್ಕ ಕೋಲ್' 'ಅಂದ್ ಬಾವನ ಕಂಡ್ ಬಾವಂದು,' 'ನಾಡ್ ಓಡುವ ಕಪಾಡ್ ನನಡುವೆ ಓಡಂಡು' ಎಂಬ ನಾಣ್ಣುಡಿಯಂತೆ, ಪೂರ್ವದ ತಕ್ಕರನ್ನು ನೆನಪಿಸದೆ 'ತಕ್ಕಂಡವಕ್ಕಳ ಕೆಕ್ಕಿ ಪರಂದಂಡ' ನ ವೀನವಾಗಿ ವಿರ್ವಾಹವಾಗುವ ಸಭೆ ಯೂನೆ ಕೊಡವ ಪ್ರತಿನಿಧಿ ಸಭೆ ಯೂ ಬೇಕೊಂದು. ಏಧದಲ್ಲು ಕಾಯಬೇಕಾಗಿರೆ ಆದರಂತೆ ಮಾಡಿಕೊಂಡು, 'ತೊಡಂಗ್'ಲ್ ಕತ್ತಿ' ನಮ್ಮ ನ್ಯಾದರಿಸಿಕೊಂಡಿರುವ ಅಮ್ಮಕೊಡಗರೂ, ಸುಳ್ಳಕೊಡಗರೂ, ಬೊಟ್ಟಕೊಡವರೂ, ಜಮ್ಮಾ ಕೊಡಗರೂ, ಬಿಮ್ಮ ಗವುಡಗಳೂ, ಐರಿ, ಹೆಗ್ಗಡೆ, ಗೊಲ್ಲ, ಪಾಪಿಳ್ಳೆ, ನಾಯಿಂದ, ಮಡಿವಾಳ, ಕಾವಡಿ, ಜೈನ, ಬ್ರಾಹ್ಮಣರನ್ನೊಳಗೊಂಡ ಈ ದೇಶದ ಜಲ್ಮಭೂಮಿಯವರೆಲ್ಲಾ ಒಂದು ಪ್ರತಿನಿಧಿಸಭೆ ಮಾಡಿಕೊಂಡು 'ಬಂದ್ನೀರ್ ನಿಂದ್ನೀರ್ನ ಓಡ್ ಜವತೆನೆಕೆ' ನಮ್ಮ ಪೂರ್ವಪದ್ಧತಿಯನ್ನೂ ಈಗಿನ ನವನಾಗರೀಕತೆಯನ್ನೂ ಚರ್ಚಿಸಿ ಬೇಡದನ್ನು ಬಿಟ್ಟು ಬೇಕಾದದನ್ನು ತೆಗೆದುಕೊಂಡು ಮ.. ರಾ. ರಾ. ನಡಿಕೇರಿಯಂಡ ಚಿಣ್ಣಪ್ಪನವರು ಮಾಡಿರುವ ಪುಸ್ತಕದಲ್ಲು ಬಿಟ್ಟಿರುವದನ್ನು ಸೇರಿಸಿ ಹೆಚ್ಚಿರುವದನ್ನು ತೆಗೆದುಹಾಕಿ, 2ನೇ ಚಾಪಿಸಿ ಆದನೇ ಬೈಬಲ್‌ನಂತೆ ಮಾಡಿಕೊಂಡು ಆ ಮೂಲಕ ನಮ್ಮ ನರ್ವನಡತೆ, ನಡಾವಳಿ, ಆಚಾರವಿಚಾರಗಳನ್ನು ದೇಶದಲ್ಲೆಲ್ಲಾ ಒಂದೇ ರೀತಿ ನಡಿಯುವಂತೆ ಮಾಡಿಕೊಂಡು ನಮ್ಮ ದೇಶೀಯರ ದರಿದ್ರಾವಸ್ಥೆಯನ್ನು ಯಾವ ರೀತಿಯಲ್ಲು ಹೋಗಲಾಡಿಸಬೇಕೆಂದು ಆ ಮೂಲಕ ಯೋಚಿಸಬೇಕಾಗಿರುವದರಿಂದ ಖಂಡಿತವಾಗಿಯೂ ಹೊಸ ಸಭೆ ಬೇಕೆಂದು ಎಷ್ಟು ಸಲ ಒತ್ತಿ ಒತ್ತಿ ಹೇಳಿದರೂ ಸಾಲದು.

ಕಡ್ಡಾಯದ ಮಹಾಶಯರೇ, ಪ್ರತಿ ಒಬ್ಬರೂ ಈಗ ಹೊರಟಿರುವ ಕೊಡವನಸಭೆಗೆ ಸೇರಬೇಕೆಂಬುದು ನನ್ನ ರುಜು ತೆಗೆದುಕೊ[illegible] [illegible] ಪಟ್ಟಿಗೆ ದಯಮಾಡಿ [illegible] ಮಾಡಬೇಕಾಗಿ ಮನಃಪೂರ್ವಕವಾದ ವಿನಂತಿ

" ಉದಿಯಂಡ ಮಾಚ್ಚಯ್ಯ.

'ನಪ್ರಕರಿ ಬಿರಾಡನ ಆಕ್ಷೇಪಿತಾರ್ಥ'

ತಾ. 13—1—'26ರಲ್ಲು ಶನಿವಾರಸಂತೆಯಲ್ಲು, ಹೊಸದಾಗಿ ಕೊಡಗು ಸಂಸ್ಥಾನಕ್ಕೆ ಕೊಡಗ, ಸರಕಾರದವರು ಕೊಡಬೇಕೆಂದು, ಕೊಡಗು ಕೌನ್ಸಿಲಿನಲ್ಲಿ ಚರ್ಚೆಗೆ ಬಂದಿರುವ ಕೂಲಿ ಅಸಗಿನ ನಪ್ರಕರಿ ಬಿರಾಡನ ಸಂಗತಿಯಲ್ಲಿ ಸಭೆಸೇರಿ ನಡಿಸಿದ ಪ್ರೊಸಿಡಿಂಗ್ಸ್.

ಕಳೆದ ಜನವರಿ ತಾ. 12ರಲ್ಲಿ ಕೊಡಗು ಕೌನ್ಸಿಲಿನಲ್ಲಿ ಚರ್ಚೆಗೆ ಬಂದು ಸಿಲೆಕ್ಟ್ ಕಮಿಟಿಗೆ ಹೋಗಿರುವ 1925ನೇ ಇಸವಿ 2ನೇ ಬಿಲ್ಲು ಸಂಗತಿಯಲ್ಲಿ ನಿಡಸದ ಸುಬ್ಬಯ್ಯನವರು ಕೌನ್ಸಿಲಿನಲ್ಲಿ ನಡೆದ ಚರ್ಚೆಯನ್ನೂ ಕೊಡಗ ಒಮೊನಾನ್ನಾದರ ಸಂಘದಲ್ಲಿ 10—1—'26ರಲ್ಲು ವಿರಾಜಪೇಟೆಯಲ್ಲಿ ಪಬ್ಲಿಕ ಸಭೆ ಸೇರಿ ಮೀಟಿಂಗು ಮಾಡಿ ಅದರಲ್ಲಿ ನಡೆದ ಚರ್ಚೆಯಲ್ಲಿ ಬಾಬಿನಿಸು ಆಗುವದು ನಮಗೆ ಬೇಡವೆಂದು ಹೇಳಿದ ಚರ್ಚೆಯನ್ನೂ ತಿಳಿಸಿದ್ದನ್ನು ಈ ಸಭೆಯು ಆಲೋಚಿಸಿತು. ಈ ಸಭೆಗೆ ಮಾ. ಶ್ರೀ. ಗುಡ್ಡದಪ್ಪತದ ಬಸಲಿಂಗಯ್ಯನವರನ್ನು ಸಭಾಧ್ಯಕ್ಷರನ್ನಾಗಿ ಚುನಾಯಿಸಿಕೊಳ್ಳುವ ಬಗ್ಗೆ ಮಾ. ಶ್ರೀ. ಗುಡುಗಳಲೆ ಮಲ್ಲಣ್ಣನವರು ಸೂಚಿಸಿದ್ದನ್ನು ಸಭೆ ಸಮ್ಮತದಿಂದ ಒಪ್ಪಿದ್ದಾಯಿತು.

ಸುಮಾರು 150 ಜನರು ಹಾಜರಿದ್ದ ನಂತರ ಮುಂದೆ ನಿಡಸದ ಸುಬ್ಬಯ್ಯನವರು ತಂದ ಠರಾವು 'ಕೊಡಗು ಸಂಸ್ಥಾನದ ಕೂಲಿ ಅಸಗಿನ 25ನೇ ಇಸವಿ 2ನೇ ಬಿಲ್ಲು ಕೊಡಗು ದೇಶದಲ್ಲಿ ಸ್ಥಾಪನೆಯಾಗಬೇಕೇ, ಯಾ ಬೇಡವೆ?'

ಸದರಿ ಬಿಲ್ಲು ಅನಾವಶ್ಯಕ ಅದು ಬೇಡವೆಂದು ಪ್ರಸ್ತಾಪಿಸಿ ಮಾ ಶ್ರೀ ಗುಡುಗಳಲೆ ಮಲ್ಲಣ್ಣನವರು ಭಾಷಣಮಾಡಿದ್ದನ್ನು ಯಾರೂ ಅನುಮೋದಿಸಲಿಲ್ಲ.

ಸದರಿಯವರ ಭಾಷಣವನ್ನು ವಿರೋಧಿಸಿ ಮಾ. ಶ್ರೀ. ನೆಲ್ಲಿಹುದಿಕೇರಿ ಬಸಪ್ಪಯ್ಯನವರು ಸದರಿ ಬಿಲ್ಲು ಬೇಕೆಂದು ಪ್ರಸ್ತಾಪಿಸಿ ಭಾಷಣಮಾಡಿದ್ದನ್ನು ಈ ಸಭೆಯವರು ಅನುಮೋದಿಸಿ 'ಬಿಲ್ಲು' ಬೇಕೆಂದು ತೀರ್ಮಾನಿಸಿದರು.

ಬಸಲಿಂಗಯ್ಯ
ಸಭಾಧ್ಯಕ್ಷರು.

ವೀರರಾಜೇಂದ್ರ ಪೇಟೆಯ ಸಂತೆ ಬದಲಾವಣೆ

ಮಹನೀಯರೆ,

ಈ ಸಂಗತಿ ಕುರಿತು 'ಕೊಡಗು'' ಪತ್ರಿಕೆಯಲ್ಲಿ ಬಹಳ ಚರ್ಚೆಗಳು ಈ ಮೊದಲೆ ನಡೆದಿತ್ತು. ಇದಕ್ಕಾಗಿ ವಿರಾಜಪೇಟೆಯ ಅಕ್ಕಪಕ್ಕ ಗ್ರಾಮಸ್ಥರು ಸರಕಾರಕ್ಕೂ ಸಹ ಒಂದು ಅರ್ಜಿಯನ್ನು ಬರಕೊಂಡಿದ್ದರು. ಇದರ ವಿಚಾರಣೆಯನ್ನು ನಮ್ಮ ಹೊಸ ಮುನ್ಸಿಪಾಲಿಟಿಯವರು ಸುಲಭದಲ್ಲೇ ತೀರಿಸಿಬಿಟ್ಟರೆಂದರೆ ಬಹಳ ವಿಷಾದಕರವಾಗಿರುತ್ತದೆ. ಊರು ನಾಡುಗಳಲ್ಲಿರುವ ರೈತರುಗಳಿಗೆ ಎರಡು ದಿವಸಗಳ ಕಾರ್ಯವು ನಷ್ಟವಾಗುವದನ್ನು ಲಕ್ಷ್ಯಪಡಿಸದೆ ಒಂದೇ ವ್ಯಾಪಾರಿಗಳ ಪ್ರಯೋಜನ ಒಂದನ್ನೇ ಗ್ರಹಿಸಿದ ಮಹನೀಯರುಗಳನ್ನಲ್ಲಿ ಇವರು ಹೇಳುವದಾದರು ಏನು? ಹುದಿಕೇರಿಯವರಿಗೆ ತೊಂದರೆಯಾಗುತ್ತದೆಂಬ ನೆಪವನ್ನು ಹೇಳುವದಾದರೂ ನ್ಯಾಯವೇ? ರವಿತ್ಯವಾರ ಒಂದೇ ದಿನದಲ್ಲಿ ಸಂಟಿಕೊಪ್ಪ, ಗೋಣಿಕೊಪ್ಪ, ಸಿದ್ದಾಪುರದಲ್ಲಿ ಸಂತೆಯಾಗ ವದಿಲ್ಲವೇ? ಹಾಗಾದರೆ ಸೋಮವಾರ ಬರುವ ಕಡೆಯಲ್ಲಿ ಸಂತೆಯಾದರೇನು? ಈ ವಿಷಯವನ್ನು ಡಿ ಪಿ ಸಾಹೇಬರವರಲ್ಲಿ ಕೂಡ್ದು ಹೇಳುವಲ್ಲು ನಮ್ಮಿಂದ ಅಡ್ಡಿ ಯಾವದೂ ಇಲ್ಲವೆಂದು ಸಹ ಹೇಳಿರುವಾಗ್ಯೆ "ದೇವರು ಕೊಟ್ಟರೂ ಪೂಜಾರಿಕೊಡ ಎಂಬ ನ್ಯಾಯದಂತೆ ಪೂಡುವದು ಸರಿಯಲ್ಲ. ಬಹುಸಂಖ್ಯಾತರ ಸಂಘದ ಮಹಾ ಸಭೆಯಲ್ಲೂ ಸಹ ಸೋಮವಾರ ಸಂತೆ ಮಾಡುವದು ಒಳ್ಳೆಯದೆಂಬ ಸೂಚನೆ ಪಾಸಾಗಿರುವಾಗ ಬುಧವಾರ ಸಂತೆಯನ್ನು ಸೋಮವಾರಕ್ಕೆ ಬದಲಾಯಿಸುವದಕ್ಕೆ ಮುನ್ಸಿಪಾಲಿಟಿಯವರು ವಿರೋಧಿಸಲು ಕಾರಣವೇನು? ಮಾತ್ರವಲ್ಲ ಬುಧವಾರ ಸಂತೆಯಾಗೋದರಿಂದ ವೀರಾಜಪೇಟೆ ವ್ಯಾಪಾರಗಳಿಗೆ ಸೋಮವಾರದ ಗಿರಾಕಿ ತಪ್ಪಿಹೋಗುತ್ತದೆಂಬ ಭಯದಿಂದಲೋ ಏನೋ ಈ ಬದಲಾವಣೆಗೆ ವಿರೋಧಿಸುವದಾಗಿರಬೇಕು. ವ್ಯಾಪಾರಿಗಳ ವ್ಯಾಪಾರವು ಬಂದಿಲ್ಲದಿದ್ದರೆಂದು ದಿನ ಆಗಿಯೇ ಆಗುತ್ತದೆ. ಆದರೆ ರೈತರು ಕಳಕೊಂಡ ಸಮಯವು ಪುನಃ ಸಿಕ್ಕಲಾರದು. [illegible]

ಆದರೆ ಈ ಮುನ್ಸಿಪಾಲಿಟಿ ಮೆಂಬರರಲ್ಲಿ ವ್ಯಾಪಾರಿಗಳು ಮೆಂಬರುತನಕ್ಕೆ ಚುನಾಯಿಸಲ್ಪಟ್ಟಿರುವದರಿಂದ ತಮ್ಮ ಅನುಕೂಲವನ್ನು ಹೆಚ್ಚಿಸಿಕೊಳ್ಳುವದಕ್ಕೋ ಏನೋ ಇದಕ್ಕೆ ವಿರೋಧಿಸಿದ್ದೆಂದು ಕೆಲವರು ಹೇಳಿಕೊಳ್ಳುತ್ತಿರುವರು. ಬದಲಾವಣೆಯ ವಿಷಯದಲ್ಲಿ ರೈತರ ಅಭಿಪ್ರಾಯ ಕೇಳಬೇಕೇ ವಿನಹ ಮುನ್ಸಿಪಾಲಿಟಿಯವರ ಅಭಿಪ್ರಾಯ ಕೇಳುವದರಿಂದ ನಾಡು ಹಳ್ಳಿಗಳ ರೈತರಿಗೆ ಒತ್ತಾಸೆಯಾದ ಅಭಿಪ್ರಾಯ ಸಿಕ್ಕಲಾರದೆಂಬುದನ್ನೊಮ್ಮೆ ಆಲೋಚಿಸಬೇಕಿಲ್ಲವಷ್ಟೆ.

ಈ ಬದಲಾವಣೆಗೆ ವೀರಾಜಪೇಟೆಯ ಹೆಚ್ಚಿನ ರೈತರ ಕಷ್ಟಸುಖಗಳನ್ನು ತಿಳಿದ ವ್ಯಾಪಾರಿಗಳು ಸಹ ಒಪ್ಪಿರುತ್ತಾರಲ್ಲದೆ ಚುನಾಯಿತ ಮೆಂಬರರಲ್ಲಿ ಕೆಲವರು ಸಹ ಒಪ್ಪಿರುವಾಗ್ಯೆ ಈ ಮುನ್ಸಿಪಾಲಿಟಿಯವರು ತಮ್ಮದೊಂದು ಪಕ್ಷವನ್ನು ಸ್ವೀಕರಿಸಿದುದು ಬಹಳ ಶೋಚನೀಯವಾಗಿದೆ. ಹಾಗಾದರೂ ನಮ್ಮ ಸರಕಾರದವರು ರೈತರ ಕಷ್ಟ ಸುಖಗಳನ್ನು ತಿಳಿದು ಬುಧವಾರ ಸಂತೆ ತಪ್ಪಿಸುವದರಿಂದುಂಟಾಗುವ ಗುಣಾವಗುಣಗಳನ್ನು ಅರಿತುಕೊಂಡು ಸೋಮವಾರ ಮಾಡುವಂತೆ ಹುಕುಂ ಮಾಡಿ ರೈತರ ಸಂಕಟವನ್ನು ಪರಿಹಾರ ಮಾಡಿಕೊಡಬೇಕಾಗಿ ಪ್ರಾರ್ಥಿಸುತ್ತೇನೆ.

ನಾಡರೈತ.

ಶಾಲೆಯ ಮಕ್ಕಳ ಕೋರಿಕೆ.

ಅಯ್ಯಾ,

ತಿತಿಮತಿ ಲೊ. ಫ ಶಾಲೆಯ ವಿದ್ಯಾರ್ಥಿಗಳಾದ ನಮಗೆ ಕುಡಿಯಲಿಕ್ಕೂ ಮತ್ತು ಊಟಮಾಡುವದಕ್ಕೂ ನೀರು ಇಟ್ಟುಕೊಳ್ಳುವದಕ್ಕೆ ಪಾತ್ರೆಗಳಿಲ್ಲದೆ [illegible]ದನ್ನು ಕಂಡು ಇದೇ ಗ್ರಾಮದ ಮ|| ಮುರಾಟಿ ಸುಬ್ರಾಯನವರು ಒಂದು ತಾಂಬ್ರದ ಕೊಳಪಾತ್ರವನ್ನೂ, ಒಂದು ಕಂಚಿನ ಚೆಂಬನ್ನೂ ಸಹ ಉಚಿತವಾಗಿ ಈ ತಾರೀಕು 8ರಲ್ಲು ತೆಗೆದು ಶಾಲೆಗೆ ಕೊಟ್ಟಿರುತ್ತಾರೆ. ಆದುದರಿಂದ ನಾವು ಈ ಮೂಲಕ ನಮ್ಮ ಮನಃಪೂರ್ವಕ ವಂದನೆಗಳನ್ನು ಅವರಿಗೆ ಅರ್ಪಿಸುತ್ತೇವೆ.

ಇದಲ್ಲದೆ ಈ ಶಾಲೆಗೆ ಪರ ಊರುಗಳಿಂದ ಬಂದ ಉಪಾಧ್ಯಾಯರು, ವಾಸಕ್ಕೂ ಮತ್ತು ಊಟಕ್ಕೂ ಸ್ಥಳ ಸಿಕ್ಕದೆ ಅನೇಕ ಸಾರಿ ತೊಂದರೆಪಡುವದನ್ನು ಕಂಡು ಅದಷ್ಟು ತೊಂದರೆ ತೆಗೆದುಕೊಂಡು ಬಹಳ ವರ್ಷಗಳಿಂದಲೂ ಅಂಥಾ ಉಪಾಧ್ಯಾಯರುಗಳಿಗೆ ತಕ್ಕ ಅನುಕೂಲಗಳನ್ನು ಒದಗಿಸಿ ಕೊಟ್ಟವರಲ್ಲಿ ಇವರು ಮೊದಲನೇಯವರಾಗಿದ್ದಾರೆ. ಶಾಲೆಯ ಬಾಲಕರಾದ ನಾವು ಇವರನ್ನು ಎಷ್ಟು ವಂದಿಸಿದರೂ ಸ್ವಲ್ಪವೇ ಸರಿ.

ಇದೇ ರೀತಿ ಬೇರೆ ಶಾಲೆ ಸುತ್ತು ಮುತ್ತಲಿನ ಮಹನೀಯರು ಇವರ ಉದಾಹರಣೆಯನ್ನು ಅನುಸರಿಸಿ ವಿದ್ಯಾರ್ಥಿಗಳ ಮತ್ತು ಉಪಾಧ್ಯಾಯರ [illegible]ಬೇಕೆಂದು ಬೇಡಿಕೊಳ್ಳುತ್ತೇವೆ.

ತಿತಿಮತಿ ಶಾಲೆಯ ವಿದ್ಯಾರ್ಥಿಗಳು.

ಒಂದೂವರೆ ಘಂಟೆಯಲ್ಲಿ ದೇಶಸಂಚಾರ!

ಇದೇನು ಸ್ವಪ್ನವೇ? ಕಳೆದ ತಾರೀಖು ಹದಿನೈದನೇ ಶುಕ್ರವಾರ ಸುಮಾರು ಮೂರು ಘಂಟೆಯ ಸಮಯಕ್ಕೆ ನಾನು ದೇಶ ಸಂಚಾರಮಾಡುವುದರಲ್ಲಿ ಮಗ್ನನಾಗಿದ್ದೆನು. ಯುರೋಪ್, ಅಮೇರಿಕ ಖಂಡಗಳಿಗ್ಹೋಗಿ ಜಪಾನ್ ಪ್ರದೇಶವ ಸಂಚರಿಸಿ, ಅಲ್ಲಿಯ ಜನರ ನಡತೆ, ನೀತಿ ಕಸಬು ಮೊದಲಾದ್ದನ್ನು ತಿಳಿಯುತ್ತ ಇದ್ದೆನು. ತತ್‌ಕ್ಷಣವೇ ನನ್ನ ಈ ಸಂಚಾರವು ಮುಗಿಯಿತು. ಕಣ್ಣು ಬಿಟ್ಟು ನೋಡುವಾಗ ನಾನು ನಮ್ಮ ಶಾಲೆಯ ಹಾಲಿನಲ್ಲಿದ್ದೆನು. ನೋಡುವಾಗ ಘಂಟೆ ನಾಲ್ಕು ಮೂವರೆ ಘಂಟೆಯ ವರೆಗೂ ನಾನು ಶಾಲೆಯಲ್ಲಿದ್ದುದು ನನಗೆ ನೆನಪಿತ್ತು. ಆದರೆ ಒಂದು ಗಂಟೆಯ ವರೆಗೆ [ನಾಲ್ಕು ಘಂಟೆಯ ತನಕ] ದೇಶ ಸಂಚಾರದಲ್ಲಿ ಮಗ್ನನಾಗಿದ್ದೆನೇ? ಅಷ್ಟು ಬೇಗನ ನನ್ನ ದೇಶ ಸಂಚಾರವು ತೀರಿತೆ? ಹೌದು, ತೀರಿತು, ಹೇಗೆ? ಹೇಗನ್ನಬೇಕೇ, ಕೇಳಿ.

ಆ ದಿವಸ ಮ|| ಕೊಡಂದೇರ ಯಂ. ಕಾರ್ಯಪ್ಪ, ಲೆಫ್ಟಿನೆಂಟರವರು ನಮ್ಮ ಶಾಲೆಯ ಹಾಲಿನಲ್ಲಿ ಅಲ್ಲಿಯ ವಿದ್ಯಾರ್ಥಿಯರಿಗೂ, ಉಪಾಧ್ಯಾಯರಿಗೂ ತಮ್ಮ ಪರದೇಶ ಸಂಚಾರ ವಿಷಯ ಒಂದು ಉತ್ಸಾಹಕರವಾದ ಭಾಷಣವನ್ನು ಮಾಡಿದರು. ಮ|| ಸಿ ಯಂ ರಾಮರಾವು ಬಿ ಎ, ಎಲ್ ಟಿ ಯವರು ಅಧ್ಯಕ್ಷರಾಗಿದ್ದರು. ಮ|| ಕಾರ್ಯಪ್ಪನವರು ಯುರೋಪ್, ಅಮೇರಿಕ ಮೊದಲಾದ ಖಂಡಗಳಲ್ಲಿ ಸಂಚರಿಸಿ, ಜಪಾನ್ ಮೊದಲಾದ ಪ್ರದೇಶಗಳಲ್ಲಿ ತಿರುಗಿ ತಮ ಜ್ಞಾನವನ್ನು ಹೆಚ್ಚಿಸಿದವರು. ಆದರೆ ಅವರು ಜಪಾನ್‌ನಲ್ಲಿ ಹೆಚ್ಚು ದಿವಸವಿದ್ದುದರಿಂದ, ಅಲ್ಲಿಯ ಜನರ ವಿಷಯ ನಮಗೆ ಬಹಳ ಹೇಳಿದರೂ ಅದನ್ನು ಇಲ್ಲಿ ಸಂಕ್ಷೇಪಿಸಿ ಬರೆಯುವುದು ಅವಶ್ಯವಾಗಿದೆ "ಜಪಾನಿನ ಜನರು ನೀತಿ ಕೋವಿದರು, ಮರ್ಯಾದೆವಂತರು; ಬಹಳ ಶುಚಿಯಾಗಿರುವವರು (ಕೈ ವಸ್ತ್ರವನ್ನು ಯಾವಾಗಲೂ ಉಪಯೋಗಿಸುವುದರಿಂದ ಅದು ಶುಚಿಯಾಗಿರುವುದಿಲ್ಲವೆಂದು ಅವರು ಕೈಚಸ್ತ್ರವನ್ನೇ ಉಪಯೋಗಿಸುವುದಿಲ್ಲವಂತೆ!) ಬಹು ಕಷ್ಟಪಟ್ಟು ಕೆಲಸ ಮಾಡುವವರು, [illegible] ಬಹಳ ಸೂಕ್ಷ್ಮ[illegible] ತಮ್ಮ ಕೈಯ ದ ಬಟ್ಟೆ ಬರೆಗಳನ್ನು ಧರಿಸುವವರು, ಮತ್ತು ಭೂಲೋಕದ ಪ್ರಸಿದ್ಧಪಟ್ಟ ಜನಾಂಗದವರಲ್ಲಿ ಇವರು ಒಂದು ಜನಾಂಗದವರು.' ಇವೇ ಮೊದಲಾದ ಅವರ ಗುಣಾವಗುಣಗಳನ್ನು ಉದಹರಿಸಿ ಹೇಳಿದರು. ಅವರ ವ್ಯವಸಾಯ ಮಾಡುವುದರ ವಿಚಿತ್ರ, ಅವರ ಮನೆಗಳನ್ನು ಕಾಗದದಿಂದ ಕಟ್ಟುವುದರ ವಿಷಯ ಮತ್ತು ಕಾರಣ (ಕಾರಣವೆಲ್ಲರಿಗೂ ತಿಳಿದೇ ಇದೆಯೆಂದು ಭಾವಿಸಬೇಕಾಗಿದೆ) ಅವರ ಶುದ್ಧ (ಮನೆಯೊಳಗೆ ಪಾದರಕ್ಷಕಗಳನ್ನಿಟ್ಟುಕೊಂಡು ಹೋದರೆ ಮನೆಯ ನೆಲಕ್ಕೆ ಹಾಸಿರುವಂಥ ಪಾಲಿಷ್ ಮಾಡಿ [illegible]ಯಲ್ಲಿರುವ ಮರದ ಹಲಗೆಗಳಿಗೆ ಕಲೆಯಾಗುತ್ತವೆಂದು ಅವುಗಳನ್ನಿಟ್ಟುಕೊಂಡು ಒಳಗೆ ಹೋಗುವುದಕ್ಕೆ ಯಾರನ್ನೂ ಬಿಡುವುದಿಲ್ಲವಂತೆ) ಅವರ ಮತ (ಬೌದ್ಧ ಮತ), ಮತ್ತು ಅವರ ಊಟ ಉಪಚಾರ (ನಮ್ಮಂತೆಯೇ ಅಕ್ಕಿಯನ್ನು ಬೇಯಿಸಿ ಊಟಮಾಡುವುದಾದರೂ, ಅದರ ಗಂಜಿಯನ್ನು ನಮ್ಮವರ ಹಾಗೆ ಹಂದಿಗಳಿಗೆ ಕೊಟ್ಟು ಹಂದಿಯನ್ನು ಕೊಬ್ಬಿಸುವುದರ ಬದಲು, ಅದನ್ನು ಅವರೇ ಉಪಯೋಗಿಸಿ, ಅದರ ಫಲವನ್ನು ಅವರೇ ಪಡೆಯುವರಂತೆ! ನಮ್ಮ ಇಲ್ಲಿ ಹಾಗೆಯೇ ಮಾಡಬೇಕೆಂದು ಗಂಡನು ಹೆಂಡತಿಗೆ ಹೇಳಿದರೆ, ಹೆಂಡತಿಯು ಗಂಡನನ್ನು ತಿಂದುಬಿಡುವಳು!) ಇವೇ ಮೊದಲಾದ ಅವರ ಗುಣಗಳನ್ನು ಹೇಳಿ, ಅವರು ಸೂಕ್ಷ್ಮವಾಗಿ ಬದುಕುವವರು, ಘನವಾಗಿ ಯೋಚಿಸುವವರು, [Plain living, high thinking] ಎಂಬುದನ್ನು ಉದಹರಿಸಿದರು. ನಮ್ಮ ಇಲ್ಲಿಯೂ ಹಾಗೆಯೇ ಆಗಿದ್ದರೆ.......! ಅವರ ವಿದ್ಯಾರ್ಥಿಯರು ವಿದ್ಯವನ್ನು ಕಲಿಯಬೇಕೆಂದೂ, ಉಪಾಧ್ಯಾಯರು ವಿದ್ಯವನ್ನು ಕಲಿಸಬೇಕೆಂದೂ ಕುತೂಹಲದಿಂದಿರುವವರಂತೆ. ಇಲ್ಲಿಯಾದರೋ!———ಇವೆಲ್ಲಾ ಅವರ ಬಾಯಿಯಿಂದ ಹೊರಟು, ನಮ್ಮ ಕಿವಿಯಿಂದ ಕೇಳುವಾಗ ಯಾರು ತಾನೇ ಜಪಾನಿನಲ್ಲಿ ಇಲ್ಲದಿರರು?

ಆಮೇಲೆ ಅಮೇರಿಕವೇ ಮೊದಲಾದ ಖಂಡಗಳನ್ನೂ ಇಂಗ್ಲೆಂಡ್ ಮೊದಲಾದ ದೇಶಗಳನ್ನೂ ಕುರಿತು ನಮಗೆ ಹೇಳಿದ್ದನ್ನು ಕೇಳಿ, ನನಗೆ ಅಮೇರಿಕ ಮತ್ತು ಯುರೋಪ್ ಖಂಡಗಳನ್ನು ನೋಡಿದಂತಾಯಿತು. ಅಮೇರಿಕದವರು ಒಂದು ನಿಮಿಷವಾದರೂ ಸಮಯವನ್ನು ಹಾಳು ಮಾಡುವುದಿಲ್ಲವಂತೆ. [ಎಂಥಾ ಪರಿಚಿತರನು ಅಲ್ಲಿಯವರ ಸಂಗಡ ಮಾತಾಡಿದರೆ, ಸಮಯ ಹಾಳಾಗುತ್ತದೆಂದು ಅವರು ಮಾತಾಡುವುದಿಲ್ಲವಂತೆ!] ಫ್ರಾನ್ಸ್ ವಿಷಯ ಕೇಳಿ, ನಾನು ಆ ದೇಶವನ್ನು ನೋಡಿದಂತಾದೆನು. ಎಲ್ಲರಿಗೂ ಹಾಗೆಯೇ ಆಗಿರಬೇಕು. ಒಂದೇ ಒಂದು ಘಂಟೆಯಲ್ಲಿ ಒಂದು ಕಾಸೂ ಖರ್ಚಿಲ್ಲದೆ ನಮಗೆಲ್ಲರಿಗೂ ಈ ದೇಶವನ್ನು ತೋರಿಸಿದ್ದಕ್ಕೆ ನಾವೆಲ್ಲರೂ ಅವರಿಗೆ ಎಂದೂ ಕೃತಜ್ಞರಾಗಿದ್ದೇವೆ.

ಸೆಕ್ರೆಟರಿ

ಸತ್ಯಮೇವಜಯತೇ.

(ಗುಣವಾಗದಿದ್ದರೆ ಹಣ ವಾಪಸ್. ಇನಾಮು.)

ಉತ್ಕೃಷ್ಟ ಕಾಮೋತ್ತೇಜಕ, ಇಂದ್ರಿಯಸ್ತಂಭಕವಾದ

ಮದನೋದ್ಭವ ಗುಳಿಗೆ.

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತು ಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ ಇಂದ್ರಿಯಸ್ತಂಭಕ, ಗರ್ಮಿ (ಶಾಕಿ) ಗುಹ್ಯಪ್ರದೇಶದ ಮೇಲೆ ಹುಟ್ಟುವ ಎಲ್ಲ ತರಹದ ಬಕ್ಕೆಗಳು, ಹುಣ್ಣುಗಳು ಪಿತ್ತದ ಬಾಧೆಯು, ಕಟಿಶೂಲೆ ವಾತರೋಗವು ಮುಂತಾದವು ಅತಿತ್ವರಿತವಾಗಿ ಗುಣವಾಗಿ ಶರೀರಕ್ಕೆ ಆರೋಗ್ಯವೂ ಕಾಂತಿಯೂ ರತಿಸುಖಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗುತ್ತವೆ. ಕಿಮ್ಮತ್ತು ೬೦ ಗುಳಿಗೆಗಳಿಗೆ ೪ ರೂಪಾಯಿ. ಇವನ್ನು ಸೇವಿಸುವಾಗ್ಗೆ ಸಪ್ತಾಂಗ ಕಲ್ಪ ತೈಲವನ್ನು ಉಪಯೋಗಿಸಿದರೆ ಉತ್ತಮ. ಕಿಮ್ಮತ್ತು ಬಾಟ್ಲಿಗೆ ರೂ. ೨—೧೨—೦.

ಪ್ರಮೇಹನಿವಾರಣೆ—ಇದರ ಸೇವನೆಯಿಂದ ಮೂತ್ರಸ್ರಾವದಿಂದ ಕೆಂಪು, ಹಳದಿಯಂತೆ ಹೋಗತಕ್ಕ ಕೀವು, ಉರಿ ವಗೈರೆ ಅಗದಿಜಾತ್ರಿಯಿಂದ ಗುಣವಾಗುವದು. ಕಿಮ್ಮತ್ತು ಬಾಟ್ಲಿಗೆ ರೂ. ೩—೮—೦. ಟಪಾಲ ಖರ್ಚು ಬೇರೆ. ಅನುಪಾನಪತ್ರಿಕೆ ಔಷಧದ ಸಂಗಡ ಕಳುಹಿಸಲ್ಪಡುವದು. ಗುಣವಾಗದಿದ್ದರೆ ಅನವರತ ಹಣ ವಾಪಸ್.—

ವೈದ್ಯ ಜಿ. ಎಲ್. ಜೋಶಿ ಮತ್ತು ಕಂಪನಿ.

ನಂ 6. ಪೋಸ್ಟ್ ಒನವಾಗ, ಉತ್ತರ ಕಾನಡಾ.

ಮನೋಲ್ಲಾಸಿನಿ ತೈಲ

ತಲೆನೋವು, ತಲೆ ತಿರುಗುವುದು, ತಲೆಯ ಕಣ್ಣು, ಕಿವಿಯಿಂದ ನೀರು ಸೋರುವುದು, ಕಿವುಡುತನ, ಕಣ್ಣು ನೋವು, ಅಪಸ್ಮಾರ, ನಿದ್ದೆ ಬಾರದಿರುವದು, ನೆನಪು ಶಕ್ತಿ ಕುಂದಿಹೋಗುವುದು ಇತ್ಯಾದಿಗಳನ್ನೆಲ್ಲ ಖಚಿತ ಗುಣಮಾಡುತ್ತದೆ. ಉದುರುವ ಕೂದಲನ್ನು ನಿಲ್ಲಿಸಿ ಗಿಡ್ಡಗಿರುವ ಕೂದಲನ್ನು ಬೆಳೆಯಿಸಿ ಕೂದಲಿಗೆ ಹೊಸ ಜೀವವನ್ನೂ ಹೊಳಪನ್ನೂ ಕೊಟ್ಟು ಅಕಾಲಕ್ಕೆ ಹಣ್ಣಾಗುವ ಕೂದಲನ್ನು ತಡೆದು ಕೂದಲು ಇಲ್ಲದ ಸ್ಥಳದಲ್ಲಿ ಹೊಸ ಕೂದಲನ್ನು ಹುಟ್ಟಿಸುತ್ತದೆ. ಚಿಕ್ಕ ಸೀಸೆಗೆ ರೂ. 1, 3 ಸೀಸೆಗೆ 2—10—0, ಒಂದು ದೊಡ್ಡ ಸೀಸೆಗೆ ರೂ. 2, 3 ಸೀಸೆಗಳಿಗೆ 5—8—0

ಚಂದನಾಸವ.— ಇದು ಪ್ರಮೇಹ ಮೂತ್ರಕೃಚ್ಛ್ರ, ಮೂತ್ರ ನಿಧಾನವಾಗಿ ಹೋಗುವುದು, ಮೂತ್ರಕೋಶದ ಉರಿ, ಮೂತ್ರಪಿಂಡಗಳ ಉರಿ ಮೂತ್ರನಾಳದಲ್ಲಿ ಹುಣ್ಣು, ಮೂತ್ರ ಹೊಯ್ಯುವಾಗ ಉರಿಯುವದು, ಮೂತ್ರನಾಳದಿಂದ ಕೀವು ಬರುವದು, ಮೂತ್ರದಲ್ಲಿ ಧಾತು, ಹುಡಿ ಹೋಗುವುದು, ಆಗಾಗ್ಗೆ ಮೂತ್ರ ಬರುವದು, ಮೂತ್ರ ತಡೆಯಲಿಕ್ಕೆ ಸಾಮರ್ಥ್ಯವಿಲ್ಲದಿರುವುದು, ದೇಹದಲ್ಲಿ ಉರಿ, ಬಾಯಾರಿಕೆ, ಸ್ವಪ್ನಾವಸ್ಥೆ, ಮೂತ್ರನಾಳದಲ್ಲಿ ಚುಚ್ಚುವ ನೋವು ಇವುಗಳಿಗೆ ಪರಮ ಔಷಧಿ. ಗಂಡಸರಿಗೂ ಹೆಂಗಸರಿಗೂ ಇದು ಅತ್ಯುತ್ತಮ. ಬಾಟ್ಲಿಗೆ ರೂ. 1—8—0, 3ಕ್ಕೆ ರೂ. 4, ಡಜನಿಗೆ ರೂ. 15.

ರೋಮನಾಶಿನಿ.— ಈ ಹುಡಿಯನ್ನು ನೀರಲ್ಲಿ ಕಲಸಿ ಮೈಮೇಲ್ಲಿ ರೋಮವಿರುವ ಭಾಗಕ್ಕೆ ಹಚ್ಚಲು ರೋಮವು ಉದುರಿ ಬೀಳುವುದು. ಡಬ್ಬಿಗೆ 6 ಆಣೆ, 3 ಡಬ್ಬಿಗಳಿಗೆ ರೂ. 1, 1 ಡಜನಿಗೆ 3—8—0.

ದಧ್ರುಘ್ನಲೇಪ.— ಇದನ್ನು ಗಜಕರ್ಣದ ಮೇಲೆ 2-3 ಸಾರಿ ಹಾಗಿಸುವಷ್ಟರಲ್ಲಿ ಗುಣ ಬರುತ್ತದೆ. ಡಬ್ಬಿಗೆ ಆ 6, 4 ಡಬ್ಬಿಗಳಿಗೆ ರೂ 1 ಡಜನಿಗೆ ರೂ 3—8—0.

ನಾರೀಸಖಿ.— ಇದು ಸ್ತ್ರೀಯರ ಹೊಟ್ಟೆನೋವು, ಅತ್ಯಧಿಕ ರಕ್ತಸ್ರಾವ, ಬಿಳಿಸ್ರಾವ, ಮುಟ್ಟು ದೋಷಗಳು ಮತ್ತು ಗರ್ಭಕೋಶದ ವ್ಯಾಧಿಗಳನ್ನು ಗುಣ ಮಾಡುತ್ತದೆ. ಸೀಸೆ ಒಂದಕ್ಕೆ ರೂ. 2

ಲಂಗ್ಸೆಟೋನ್.— ಉಬ್ಬಸ ವ ಕ್ಷಯದ ಕೆಮ್ಮು, ಅನೇಕ ದಿವಸಗಳಿಂದ ಬರುವ ಕೆಮ್ಮನ್ನೂ ಕಫವನ್ನೂ ಗುಣ ಮಾಡುತ್ತದೆ. ಡಬ್ಬಿ ಒಂದಕ್ಕೆ 2—8—0, 3 ಡಬ್ಬಿಗಳಿಗೆ ರೂ. 7

ಅಮೃತಾರಿಷ್ಟ.— ಇದು ಜ್ವರನಾಶದ ಚಿರಸಿದ್ಧವಾದ ಉತ್ತಮ ಮಲೇರಿಯಾ ಔಷಧಿ. ಎಲ್ಲಾ ತರದ ಜ್ವರಕ್ಕೆ ಉತ್ತಮ. 1 ಬಾಟ್ಲಿಗೆ ರೂ 1—8—0, 3ಕ್ಕೆ ರೂ 4, ಡಜನಿಗೆ ರೂ. 15.

ಲೋಹಾಸವ.— ಇದು ಜ್ವರಗಡ್ಡೆಗೆ ಮತ್ತು ಮಲೇರಿಯದಿಂದುಂಟಾದ ಅರಕ್ತತೆಗೆ ದಿವ್ಯವಾದ್ದು. 1 ಬಾಟ್ಲಿಗೆ ರೂ. 1—8—0, 3ಕ್ಕೆ ರೂ. 4.

ನಮ್ಮ ಕೆಟಲಾಗು ತರಿಸಿ ನೋಡಿರಿ.

ವಿಳಾಸ:—ಮನೋಲ್ಲಾಸಿನಿ ಕಂಪೆನಿ.

52—8 9 ಮಂಗಳೂರು, ಕಂಕನಾಡಿ.

ಡಾಕ್ಟರ್ ಎಸ್. ಎನ್. ಅಯ್ಯಂಗಾರ್, ಬಿ. ಎ.,

ಎಲ್. ಆರ್. ಸಿ. ಪಿ. ಅಂಡ್. ಎಸ್. (ಎಡಿನ್‌ಬರ್ಗ್)

ಎಲ್. ಎಫ್. ಪಿ. ಅಂಡ್ ಎಸ್., [ಗ್ಲಾಸ್ಗೊ]

ದಂತ ವೈದ್ಯರು

ಮಡಿಕೇರಿ ಮಹದೇವ ಪೇಟೆಯಲ್ಲಿ ಸೌ ಯು. ಯಂ. ಸಿದ್ದೇಶ್ವರವರ ಅಂಗಡಿಯ ಎದುರಿನ ಮನೆಯಲ್ಲಿ ಇಳಿದುಕೊಂಡಿರುತ್ತಾರೆ. ಇಚ್ಛೈಸುವವರು ಅವರನ್ನು ಇಲ್ಲಿ ಭೇಟಿಮಾಡಬಹುದು.

ಅತ್ಯಂತ ಸುಲಭ ದರದ ಮತ್ತು ಹಿಂದೀಯರಿಂದ ಉತ್ತಮ ತರದಲ್ಲಿ ನಡಿಸಲ್ಪಡುತ್ತಿರುವ ಲೈಫ್ ಆಫ್ ಹಿಂದ್ ಇನ್ಶೂರೆನ್ಸ್ ಕಂಪನಿ ಲಿಮಿಟೆಡ್, ಕಲ್ಕತ್ತಾ. ಇದರಲ್ಲಿ ಜೀವವಿಮೆ ಮಾಡಿ ತುಂಬಾ ಲಾಭ ಹೊಂದಿರಿ.

ಏಜೆಂಟ್—

ಎಸ್. ರಾಮಣ್ಣ.

ಎಂಪೈರ್ ಆಫ್ ಇಂಡಿಯಾ ಲೈಫ್ ಎಷೂರೆನ್ಸ್ ಕಂಪೆನಿ ಲಿಮಿಟೆಡ್

(ಸ್ಥಾಪಿತ.—1897ರಲ್ಲಿ)

ಹೆಡ್ ಆಫೀಸು—ಬೊಂಬಾಯಿ.

ಕಂಪೆನಿಯು ಹೆಚ್ಚಿನ ಪ್ರವರ್ಧಮಾನ ಸ್ಥಿತಿಯಲ್ಲಿದೆ.

28 ವರ್ಷಗಳಿಂದ ಅತಿ ಎಚ್ಚರಿಕೆಯಿಂದಲೂ, ಮಿತವ್ಯಯದಿಂದಲೂ ಕಂಪೆನಿಯ ಕಾರುಬಾರು ನಡೆಯುತ್ತಿದ್ದು, ಈಗ ಅದರ ಮೂಲಧನವು ರೂ. 2,50,00,000ಕ್ಕೆ ಏರಿದೆ.

ಈ ಕಂಪೆನಿಯ ನಿಮೆದರಗಳು ಅತಿಸುಲಭ. ಹೆಚ್ಚಿನ ಮಾಹಿತಿಗಳಿಗೂ, ಪ್ರಾಸ್ಪೆಕ್ಟಸ್ಸಿಗೂ ಲೋಕಲ್ ಸೆಕ್ರೆಟರಿಗಾಗಲಿ ಅಥವಾ ಈ ಕೆಳಗಿನ ವಿಳಾಸಕ್ಕಾಗಲಿ ಬರೆಯಿರಿ:—

ಪಿ. ಕೆ. ಶಂಕರನಾರಾಯಣಯ್ಯರ್,

ಮೈಸೂರು ಮತ್ತು ಕೊಡಗು ಪ್ರಾಂತ್ಯಗಳ ಬ್ರಾಂಚ್ ಸೆಕ್ರೆಟರಿ

152, 3 ಕಮರ್ಷಿಯಲ್ ಸ್ಟ್ರೀಟ್, ಬೆಂಗಳೂರು.

24—3

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್. ಕೋ ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ.

		ರೂ.
ಶೇರ್ ಬಂಡವಾಳ	—	50,000
ವಸೂಲಾದ ಶೇರ್ ಮೊಬಲಗು	—	9390
ಜಮಾಬಂದ ಠೇವಣಾತಿ	—	90,000

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲ ಕೊಡತಕ್ಕದ್ದು.

ಒಂದು ವರ್ಷ ವಾಯಿದೆ ಅಥವ ಹೆಚ್ಚಿನ ವಾಯಿದೆಯ ಠೇವಣಾತಿಗಳಿಗೆ ಶೇಕಡ ಶಾಲಿಯಾನ ರೂ. 6—4—0ರ ದರದಲ್ಲಿ ಬಡ್ಡಿ ದೊರೆಯುತ್ತೆ. ಕಡಿಮೆ ವಾಯಿದೆಯ ಠೇವಣಾತಿಗಳಿಗೆ ಶೇಕಡ ಶಾಲಿಯಾನ 5ರ ಬಡ್ಡಿ ದೊರೆಯುತ್ತೆ.

ವರ್ಷಕ್ಕೊಂದಾವರ್ತಿ ಕೋ ಆಪರೇಟಿವ್ ರಿಜಿಸ್ಟ್ರಾರವರು ಲೆಕ್ಕ ಆಡಿಟ್ ಮಾಡುತ್ತಾರೆ.

ಪ್ರೆಸಿಡೆಂಟರು, ಟ್ರಿಜರರ್,

ಕೊಡಂದೇರ ಕುಟ್ಟಯ್ಯನವರು, ಯಂ ಭುಜಂಗರಾಯರು

ರಾಯ್ ಬಹದ್ದೂರ್. ಬಿ. ಎ. ಬಿ. ಎಲ್.,

ಸೆಕ್ರೆಟರಿ.

ಸಿ. ಎನ್. ವೆಂಕಪ್ಪಯ್ಯನವರು, ಬಿ. ಎ., ಬಿ. ಎಲ್.,

ತಾರೀಖು 29—8—1925.

ಮುದ್ದಾದ ಪುಸ್ತಕ! ಮುದ್ದಾದ ಮುದ್ರಣ!!

ಶರೀರ ಸುಖ, ಸಂಪತ್ತು, ಐಶ್ವರ್ಯಗಳನ್ನು ಸಂಪಾದಿಸಲು ಸಲಹೆಗಳನ್ನೂ ಮತ್ತು ಶರೀರ ಮರ್ಮಶಾಸ್ತ್ರ (ಕಾಮಶಾಸ್ತ್ರ)ವನ್ನೂ ತಿಳಿಸುವ

ಮರ್ಮ ಶಾಸ್ತ್ರ-ಎಂಬ ಕಾಮಶಾಸ್ತ್ರ

ಈ ಪುಸ್ತಕವು ಮೊದಲು ಫ್ರೆಂಚ್, ಇಂಗ್ಲೀಷ್, ಹಿಂದುಸ್ಥಾನಿ, ಸಂಸ್ಕೃತ ಮುಂತಾದ ಭಾಷೆಗಳಲ್ಲಿ ಬಹು ಗುಪ್ತವಾಗಿತ್ತು. ಇದನ್ನು ನಾವು ಪ್ರಯಾಸದಿಂದ ಸಂಪಾದಿಸಿ ಕನ್ನಡಕ್ಕೆ ತರ್ಜುಮೆಮಾಡಿ (84 ಚಿತ್ರಪಟಗಳ ಸಹಿತ) ಘನಧಳಿಸುವ ಕಾಗದದಲ್ಲಿ ಮುದ್ರಿಸಿ ತಯಾರಿಸಿದ್ದೇವೆ. ಈ ಪುಸ್ತಕದಲ್ಲಿ ಸ್ತ್ರೀ ಪುರುಷರಿಗೆ ಬೇಕಾದ ಎಲ್ಲಾ ಮರ್ಮರಹಸ್ಯಗಳೂ, ಸ್ತ್ರೀ ಪುರುಷರು ಅನ್ಯೋನ್ಯವಾಗಿ ನಡೆದುಕೊಳ್ಳುವ ಮಾರ್ಗ. ಸ್ತ್ರೀ ಪುರುಷರಿಗೆ ಉಂಟಾಗುವ ಎಲ್ಲಾ ತರದ ಮರ್ಮವ್ಯಾಧಿಗಳು ಮತ್ತು ಅಂಥಾ ವ್ಯಾಧಿಗಳನ್ನು ಗುಣಮಾಡಿಕೊಳ್ಳುವ ಚಿಕಿತ್ಸೆಗಳೂ ಇನ್ನು ಅನೇಕ ತರದ ಮರ್ಮರಹಸ್ಯಗಳು ಚಿತ್ರಪಟಗಳ ಸಹಿತ ತುಂಬಿರುವದು. ಈ ಪುಸ್ತಕದ ಹೆಸರನ್ನು ಕೇಳಿದ ಮಾತ್ರಕ್ಕೆ ಸಂತೋಷವಾಗುವದು ಅದರ ಓದಲಿಕ್ಕೆ ಯಾರಿಗೆ ತಾನೇ ಸಂತೋಷವಾಗಲಾರದ.

ಕ್ರಯ ಪುಸ್ತಕ ಒಂದಕ್ಕೆ ಒಂದೇ ಒಂದು ರೂಪಾಯಿ ರೂ. 1—0—0

T. Ramachander Rao & Co., ಟಿ. ರಾಮಚಂದ್ರರಾವ್ ಅಂಡ್ ಕೊ.,

Post Box No. 232, ಪೋಸ್ಟ್ ಬಾಕ್ಸ್ ನಂ. 232.

52-8 Madras. ಮದ್ರಾಸ್.

A Lot for SELECTION of Single Barrel Breach Loading Guns at LOWEST PRICE EVER OFFERED.

Original Browning S. B. B. L. ·12 bore Take-Down Hammerless Automatic Ejector Gun, with safety catch..... ... .Price, Rs. 140/-

Do do but by **Winchester** or **Remington**. .... Price, Rs. 160/-

Weshoisten or **Remigton S. B. B. L.** ·12 bore Six Shots Hammerless Repeating gun, 32 inches barrel with Safety catch .... Price, Rs. 150/-

German S. B. B. L. ·12 bore Hammerless Ejector Gun, 32 inches German Steel Barrel with safety catch .... Price, Rs. 65/-

Continental Make Do, Price, Rs. 55/-

Webley & Scott's S. B. B. L. ·12 bore Semi Hammerless Ejector Gun, 32 inches Webley's Steel Barrel,.... .... Price, Rs. 75/-

The above Guns can be had in ·16, 20, & ·410 bore. Same as above in 12 bore **Special "Duck Gun"** 36 inches barrel... .. .... Price, Rs 80/

W. W. Greener's "Gaffer" S. B. B. L. 12 bore Martini Action Ejector Gun, 26 inches Greener's Steel Barrel .... Price, Rs. 75/-

W. W. Greener's as above but **Long Range "Duck Gun"** with 32 inches barrel, and chamber for 2¾ inches to 3 inches case. ... . Price, Rs 90/-

Midland's "Knock-About" S. B. B. L. Ejector Hammer Gun 32 inches barrel. . .... Price, Rs. 55/-

Continental Make S. B. B. L. folding Pattern Hammer Gun, 32 inches barrel beautifully engraved and carved..... .. .. Price, Rs. 45/-

J. Steven's ·12 bore Ejector Hammer Gun, 32 inches. Steel barrel .... Price, Rs. 45/-



Do do "Dread Naught" with heavy Breech.... ....Price, Rs. 50/-

Any of the above of J. Steven's Special Duck Gun with 36 inches barrel. Price, Rs. 5/- Extra.

ENQUIRIES SOLICITED.

THE BOMBAY ARMOURY,

331, ABDUL REHMAN STREET,

ನೋಟೀಸ್.

ಮಡಿಕೇರಿ ತಾಲೂಕು ಮೂರ್ನಾಡು ಕಿಗ್ಗಾಲು ಗ್ರಾಮದ ಬಣ್ಣರ ಅಂಬು ಮಗ ಕುಟ್ಟನು ಈ ಮೂಲಕ ಸಮಸ್ತ ಜನರಿಗೂ ತಿಳಿಯಪಡಿಸುವುದೇನೆಂದರೆ —

ಸದರಿ ಕಿಗ್ಗಾಲು ಗ್ರಾಮದಲ್ಲು ನನ್ನ ಪಾಲಿತಿ ತಂದೆ ಅಂಬು ಸ್ವಯಾರ್ಜಿತವಾಗಿ ಸಂಪಾದನೆ ಮಾಡಿದ ಸ್ಥಿರ ಚರ ಆಂದರೆ 100 ಬಟ್ಟೆ ಭೂಮಿಯು ನನ್ನ ಮತ್ತು ನನ್ನ ಇಬ್ಬರು ತಮ್ಮಂದಿಯರು ಕಾರಿ, ಮತ್ತು ಬೆಳ್ಳಿ ಅಂತು ಮೂವರ ಅನುಭವದಲ್ಲದೆ. ಇವರಿಬ್ಬರು ತಮ್ಮಂದಿಯರು ಕಲಹ ವಗೈರೆ ಮಾಡಿಕೊಂಡು ಆವರಿಬ್ಬರ ಅನುಭವದ ಪಿತ್ರಾರ್ಜಿತದ ಈ ಆಸ್ತಿಯನ್ನು ನನಗೆ ಮೋಸಪಡಿಸಿ ಬೇರೆಯವರ ದುರ್ಬೋಧನೆಯಿಂದ ಮಾರಾಟ ಮಾಡಿ ಬಿಡಬೇಕೆಂಬ ಕಾಯಿಷ್ನಲ್ಲಿರುತ್ತಾರೆ ಈ ಸೊತ್ತುಗಳಿಗೆ ನಾನು ಪಟ್ಟೆದಾರನಾಗಿಯೂ ಮತ್ತು ಅವರಿಗೆ ನ್ಯಾಯವಾದ ಪಾಲು ಪಾಲ್ತಿ ಮಾಡಿಕೊಡದೆಯೂ ಇರುವುದರಿಂದ ಅಂಥಾ ಸೊತ್ತುಗಳನ್ನು ನನ್ನ ಒಪ್ಪಿಗೆ ಇಲ್ಲದೆ ಯಾರಾದರೂ ಕೊಂಡುಕೊಂಡರೆ ಸದರಿ ಆಧಾರ ಆಸಿಂಧು ಆಗತಕ್ಕದೆಂದೂ ಮತ್ತು ಅದರ ಪರಿಣಾಮ ಕಷ್ಟಗಳಿಗೂ ಸಹ ಅವರೇ ಬಾಧ್ಯರಾಗಬೇಕೆಂದು ಈ ಮೂಲಕ ತಿಳಿಯಪಡಿಸಿದೆ.

ಬಣ್ಣರ ಕುಟ್ಟ,
ಕಿಗ್ಗಾಲು ಗ್ರಾಮ,
2—2 ಮೂರ್ನಾಡು.

ಇದು ಒಳ್ಳೇ ಸಮಯ!

ಇಂಥಾ ಸುಸಮಯವನ್ನು ಕಳಕೊಳ್ಳಬೇಡಿರಿ.

ಇಂದಿನ ದಿನ ನಾಳೆ ಎಂದು ಗೂಡೊರೆಯಲಾರದು.

ನಮ್ಮಲ್ಲಿ ಈಗತಾನೇ ತಯಾರಾಗಿ ಬಂದಿರುವ 5 ನಂಬರುಗಳ ಹಂಚುಗಳು ಅಲ್ಲದೆ ಮೂರು ನಂಬರುಗಳ ಮೂಲೆ ಹಂಚ, ಪಾತಿಹಂಚು ಮತ್ತು ಕೋಗೆಹಂಚು, ಎಲ್ಲಾ ತರಹದ ಎಲೆಕ್ಟ್ರಿಕ್ ದೀಪಗಳೂ, ಸೈಕಲ್ ದೀಪಗಳೂ, ರಬ್ಬರ್ ಸ್ಟಾಂಪ್ ಸೀಲುಗಳೂ, ಹಲವು ತರದ ಸಾಮಾನುಗಳೂ ಮತ್ತು ಗುಂಡಿಗಳೂ ಸಹ ಮಾರಾಟಕ್ಕೆ ತಯಾರಿವೆ ಇವುಗಳಲ್ಲದೆ ಎಲ್ಲಾ ತರದ ಪ್ರಿಂಟಿಂಗ ಗ್ರೀಟಿಂಗ್ ಕಾರ್ಡು ವಗೈರೆ ನಿಮ್ಮ ಮನ ಒಪ್ಪುವಂತೆ ಕಮ್ಮಿ ದರದಲ್ಲಿ ಆರ್ಡರು ಕೊಟ್ಟ ಕೂಡಲೇ ನಾಜೂಕಾದ ಪ್ರಿಂಟಿನಿಂದ ನಿಮ್ಮ ಸುಪರ್ಧಿಗೆ ಕೊಡಲಾಗುವುದು ಮತ್ತು ನಗದ್ ಹಣಕ್ಕೆ ಮಾರ್ಕೆಟ್ ದರದಲ್ಲಿ ಹಸನಾದ ಭತ್ತ ಸಹ ಕೊಂಡುಕೊಳ್ಳಲಾಗುವುದು ಹೆಚ್ಚಿನ ವಿವರಕ್ಕೆ ಈ ಕೆಳಗಿನ ವಿಳಾಸಕ್ಕೆ ಬರೆದು ತಿಳಿದುಕೊಳ್ಳಬಹುದು.

ಕವನೂರು ಗ್ರಾಮ — ಅಮ್ಮಣಿಚಂಡ ದೇವಯ್ಯ,
4 ವಿರಾಜಪೇಟೆ — ಜನರಲ್ ಮರ್ಚೆಂಟ್.

ಕಿರ್ಲೋಸ್ಕರ ಗಾಣಗಳು.

ಈ ಕೆಳಗಿನ ಕಬ್ಬಿನ ಗಾಣಗಳು ನಮ್ಮ ಕಾರ್ಖಾನೆಯಲ್ಲಿ ತಯಾರಾಗುತ್ತವೆ

೧. ಕಿರ್ಲೋಸ್ಕರ ನಂ. ೫
೨ "ಕಿಸಾನ"
೩ "ಕಮಾಲ ಚಪಕ."

ಇವುಗಳ ಸವಿಸ್ತಾರ ಸಂಗತಿ ಬಗ್ಗೆ ಹಾಗೂ ಬೆಲೆಯ ಬಗ್ಗೆ ಕೂಡಲೇ ತಿಳಿದುಕೊಳ್ಳಿರಿ.

ಕರ್ನಾಟಕ ತರುಣರ ಉನ್ನತಿಗೋಸ್ಕರ

ಕಿರ್ಲೋಸ್ಕರ ವಾರ್ತೆ,

ಎಂಬ ತಿಳಿಗನ್ನಡ ಮಾಸ ಪತ್ರಿಕೆಯನ್ನು ಪ್ರಕಟಿಸುತ್ತೇವೆ ವಾ. ಚ. ೧| ರೂ. ಮಾದರಿ ಸಂಚಿಕ ಪುಕ್ಕಟೆ.

ಕಿರ್ಲೋಸ್ಕರ ಬಂಧು, ಲಿಮಿಟೆಡ್.
ಕಿರ್ಲೋಸ್ಕರವಾಡಿ,
16—16 ಜಿ. ಸಾತಾರ್.

ಲೋಕಪ್ರಸಿದ್ಧವಾದ! ಅನುಭವಸಿದ್ಧವಾದ!

ಮೂರು ದಿವಸಗಳಲ್ಲಿ ಗುಣಕೊಡತಕ್ಕ ದಿವ್ಯ ಔಷಧಿಯುಕ್ತವಾದ ಪಾಪಾಸು ಜೀರ್ಣಶಕ್ತಿ, ರಕ್ತವೃದ್ಧಿ, ಧಾತುಪುಷ್ಟಿ, ಮನೋಲ್ಲಾಸ, ಪರಮಾನಂದ ಮೊದಲಾದ ಸುಖ ಜೀವನಕ್ಕೆ ಬೇಕಾದ ಆರೋಗ್ಯದಾಯಿನಿ

ಟ್ರೇಡ್‌ಮಾರ್ಕ | **ಅಗಸ್ತ್ಯ** | ನೋಡಿ ತೆಕೊಳ್ಳಿರಿ.

ಮನ್ಮಥ ಚಿಂತಾಮಣಿ ಲೇಹ

ರಿಜಿಸ್ಟರ್ ಆದದ್ದು.

ಆಬಾಲವೃದ್ಧ ಸ್ತ್ರೀ-ಪುರುಷರ ಅನೇಕ ರೋಗಗಳ ಮೇಲೆ ಗುಣ ಕಾರಿಯಾದ್ದು. ಮೇಹ ವಿಕಾರವಿದ್ದವರಿಗೂ, ನಿದ್ರೆ ಇಲ್ಲದವರಿಗೂ, ಸ್ವಪ್ನೇಂದ್ರಿಯವಾಗುವ ಬಾಲಕರಿಗೂ, ಬ್ರಹ್ಮಚಾರಿ ಸುಚಾಸ್ತಿಗಳಿಗೂ ಉಪಯೋಗವುಳ್ಳ ಬಹು ಪರಮಾನಂದ ಔಷಧಿ 1ಸೇರು 48ದಿವಸ ಸೇವಿಸಬಹುದು ನಂ (1) 1ಸೇರು ಡಬ್ಬಿ 1ಕ್ಕೆ ರುಪಾಯಿ 3—0—0. ½ಸೇರು ಡಬ್ಬಿ 1ಕ್ಕೆ ರುಪಾಯಿ 1—9—0, ನಂ. (2) 1ಸೇರು ಡಬ್ಬಿ 1ಕ್ಕೆ ರುಪಾಯಿ 2—0—0, ½ ಸೇರು ಡಬ್ಬಿ 1ಕ್ಕೆ 1—1—0, ವಿ ಪಿ ಖರ್ಚು ಪ್ರತ್ಯೇಕ. ವಿಶೇಷ ಮಾಹಿತಿಗೆ ಬರಕೊಳ್ಳಿರಿ

ವಿಳಾಸ.—ದೇವಣ್ಣ ನಾರಾಯಣಸೇಟ್,
ಗೋಳಿಕಟ್ಟಾ,
ಮಂಗಳೂರು,
52—24 ದ. ಕ.

೧೦೦೦ ರೂಪಾಯಿಗಳ ಬಹುಮಾನ.

ಲೋಕಪ್ರಸಿದ್ಧವಾದ ಸಾಲಂಮಿಸ್ರಿ ಮುರಬ್ಬಾ

ನಮ್ಮ ಟ್ರೇಡ್ ಮಾರ್ಕನ್ನು ನೋಡಿ ಈ ಔಷಧ ತೆಗೆದುಕೊಳ್ಳಿರಿ.

ಇದರ ಸೇವನೆಯಿಂದ ವೀರ್ಯವು ನೀರಿನಂತೆ ಇದ್ದರೂ, ಸ್ವಪ್ನೇಂದ್ರಿಯವಾದರೂ, ಸ್ತ್ರೀ ಸಹವಾಸಕ್ಕೆ ಮೊದಲೇ ಸ್ಖಲನವಾದರೂ, ಮೂತ್ರದೊಂದಿಗೆ ಹೋಗುತ್ತಿದ್ದರೂ ದೋಷರಹಿತವಾಗಿ ಶರೀರಕ್ಕೆ ಆರೋಗ್ಯವನ್ನೂ ದಾರ್ಢ್ಯತೆಯನ್ನೂ ಆಯುಸ್ಸು, ಬಲ, ತೇಜಸ್ಸು ಉಂಟು ಮಾಡುವದು. ಅಜೀರ್ಣ ಮಲಬದ್ಧತೆ, ಮೆದುಳಿನ ಬಲಹೀನತೆ, ಕೈಕಾಲು ಸೊಂಟ ನೋವುಗಳಿಗೆ ಇದು ದಿವ್ಯ ಔಷಧವು. ಈ ಸಾಲಂಮಿಸ್ರಿ ಎಂಬುವದು ಕಾಬೂಲ್ ಕಂದಾಹಾರ ಪ್ರಾಂತ್ಯದಲ್ಲಿ ಬೆಳೆಯುತ್ತದೆ

ಈ ಔಷಧದಿಂದ ೧ ಸಾವಿರಕ್ಕಿಂತ ಅನೇಕ ಮನುಷ್ಯರು ತಾವಾಗಿಯೇ ಅನೇಕ ದೇಶಗಳಿಂದಲೂ ಆಫ್ರೀಕ, ಬರ್ಮಾ, ಪಿನಾಂಗ್, ಸಿಂಗಪೂರ್, ಸಿಲೋನ್, ಬೊಂಬಾಯಿ, ಕಲ್ಕತ್ತ, ಮದ್ರಾಸು ಮತ್ತು ಇಂಡಿಯಾದೇಶದಲ್ಲ ಎಲ್ಲಾ ಸ್ಥಳಗಳಿಂದಲೂ ನಮಗೆ ಯೋಗ್ಯತಾ ಪತ್ರಿಕೆಗಳನ್ನು ಕಳುಹಿಸಿರುವರು ಇವುಗಳ ನಕಲನ್ನು ಯಾರಾದರೂ ತರಿಸಿ ನೋಡಬಹುದು ಇವುಗಳು ಸುಳ್ಳು ಎಂದು ನಿರ್ಧರಪಡಿಸುವವರಿಗೆ ಮೇಲೆ ಕಂಡ ಬಹುಮಾನವು ಕೊಡಲ್ಪಡುತ್ತೆ ನಾವು ಹಾಗೆ ಕೊಡದೇ ನಿರಾಕರಿಸಿದಲ್ಲಿ ಕೋರ್ಟು ಮೂಲಕ ಅದನ್ನು ಪಡೆಯಬಹುದು. ೧ ಡಬ್ಬಿವನ್ನು ೧೫ ದಿನ ಸೇವಿಸಿದಲ್ಲಿ ಗುಣವು ಖಂಡಿತವಾಗಿ ತೋರಬಹುದು. ೨ ಯಾ ೩ ಡಬ್ಬಿಗಳು ಜನ್ಮಾಂತ್ರದವರಿಗೂ ಪೂರ್ಣವಾಗಿ ಗುಣವನ್ನುಂಟು ಮಾಡುವವು ಹೆಸರು ವಿಳಾಸಗಳನ್ನು ವಿವರವಾಗಿ ಬರೆಯಬೇಕು ಒಂದಾವರ್ತಿ ಉಪಯೋಗಿಸಿ ಮಾಡಿ ನೋಡಿದಲ್ಲಿ ಖಾತ್ರಿ ಉಂಟಾಗುತ್ತೆ

ಕ್ರಯ ಡಬ್ಬಿ ೧ಕ್ಕೆ ರೂ ೨—೦—೦ ಅಂಚೆ ಚಾರ್ಜು ೧ರಿಂದ ೩ ಡಬ್ಬಿಗಳಿಗೆ ೦—೮—೦ ಆಣೆ, ಏಜಂಟರುಗಳು ಎಲ್ಲಾ ಸ್ಥಳಗಳಲ್ಲಿಯೂ ಆವಶ್ಯಕವಾಗಿರುತ್ತೆ ರೂಲ್ಸ್ ತರಿಸಿಕೊಳ್ಳಬಹುದು ಆರ್ಡರು ಕೊಡತಕ್ಕ ಕಾಲದಲ್ಲಿ ಈ ಪತ್ರಿಕೆಯ ಹೆಸರನ್ನು ಬರೆಯಬೇಕು.

ಟೆಲಿಗ್ರಾಫ್ ಅಡ್ರೆಸ್: ಮಿಸ್ರಿ ಬೆಂಗಳೂರು ಸಿಟಿ.

ಡಿ ಮನ್ನಾಲಾಲ್, ದಿಲ್ಲಿ ನೇಟಿವ್ ವೈದ್ಯರು,
ಸಾಲಂಮಿಸ್ರಿ ಮುರಬ್ಬ ಡಿಪೋ,
12-12 ಬೆಂಗಳೂರು ಸಿಟಿ

ಚಳಿಜ್ವರ, ಮಲೇರಿಯ ಜ್ವರ ಇನ್‌ಫ್ಲ್ಯುಯೆಂಜಾ ಮುಂತಾದ ಜ್ವರ, ರೋಗಗಳಿಗೆ ಅಪ್ರತಿಮವಾದ ಔಷಧವು.

ಚಿಕ್ಕ ಬಾಟ್ಲಿಯೊಂದಕ್ಕೆ ರು. ೦—೧೪—೦
ಟಪ್ಪಾಲು ಚಾರ್ಜು ಬೇರೆ
ಡಜನ್ ಬಾಟ್ಲಿಗಳಿಗೆ ಟಪ್ಪಾಲುವೆಚ್ಚ ಸಹ
೯—೨—೦

ಏಜಂಟರು ಬೇಕು, ಕೊಡಗಿನ ಸ್ಟ್ರಾಂಗ್ ಸ್ಟೋರುಗಳು ಮುಂತಾದ ಊರು ಜನ ಔಷಧದ ವ್ಯಾಪಾರಿಗಳ ಹೆಸರು ತಿಳಿಸಿದಲ್ಲಿ ಅಂದವಾದ ಬ್ಲಾಟಿಂಗ್ ಪೇಪರು ಪುಕ್ಕಟೆ.

12—3 ಕರ್ನಿಕ ಬ್ರದರ್ಸ್,
ಗಿರಗಾಂವ, ಮುಂಬಾಯಿ

ಇದು ಒಳ್ಳೆ ಸಮಯ!

ಹಂಚುಗಳು.

ಈಗಾಗಲೇ ವಿರಾಜಪೇಟೆಯಲ್ಲಿ ನಾಜೂಕಾದ ಎಲ್ಲಾ ತರದ ಹಂಚುಗಳು ಅಂದರೆ, ಹಂಚು, ಮೂಲೆ ಹಂಚು, ಪಾತಿಹಂಚು, ಹೊಗೆಹಂಚು, ನೆಲಹಂಚು ವಗೈರೆ ಎಲ್ಲಾ ಹಂಚುಗಳನ್ನು ಸ್ಟೋರ್ ಮಾಡಲಾಗಿದೆ ಕೂಡಲೇ ಹಂಚು ಬೇಕಾದವರು ವಿರಾಜಪೇಟೆಯಲ್ಲಿ ಈ ಕೆಳಗೆ ರುಜು ಮಾಡಿದವರ ಆಫೀಸಿಗೆ ಬರಬಹುದು ಅಲ್ಲದೆ ಹಂಚುಗಳ ಸೇಂಪಲನ್ನು ಸಹ ನೋಡಬಹುದು.. ಎಲ್ಲಾ ವಿವರಕ್ಕೂ, ಕ್ರಯಕ್ಕೂ, ಮತ್ತು ಷರತ್ತಿಗೂ ಈ ಕೆಳಗಿನವರಿಗೆ ದಯವಿಟ್ಟು ಬರೆದುಕೊಳ್ಳಿ.

ವಿರಾಜಪೇಟೆ — ಕೆ. ಪಿ. ಚಿನ್ನಪ್ಪ,
12—7 — ಖಾದಿ ಭಂಡಾರ.

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್, ಕೋ ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ.

		ರೂ.
ಶೇರ್ ಬಂಡವಾಳ	—	50,000
ವಸೂಲಾದ ಶೇರ್ ಮೊಬಲಗು	—	೩೬೯೦
ಜಮೆಯಾದ ಠೇವಣಾತಿ	—	90,600

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇ ಹೆಚ್ಚಾಗಿ ಸಾಲಕೊಡತಕ್ಕದ್ದು.

ಒಂದು ವರ್ಷ ವಾಯಿದೆ ಅಥವ ಹೆಚ್ಚಿನ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ ರೂ. ೬—೪—೦ ದರದಲ್ಲಿ ಬಡ್ಡಿ ದೊರೆಯುತ್ತೆ ಕಡಿಮೆ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ ೫ರ ಬಡ್ಡಿ ದೊರೆಯುತ್ತೆ.

ವರ್ಷಕ್ಕೊಂದಾವರ್ತಿ ಕೋ ಆಪರೇಟಿವ್ ಆಡಿಟರವರ ಲೆಕ್ಕ ಪರೀಕ್ಷೆಯನ್ನು ಮಾಡುತ್ತಾರೆ.

ಪ್ರೆಸಿಡೆಂಟರು — ಟ್ರೆಜರರ್.
ಕೊಂಗಂಡ ಉತ್ತಯ್ಯನವರು — ಯಂ. ಭುಜಂಗರಾಯರು
ರಾಯ ಬಹದ್ದೂರ್. — ಬಿ.ಎ., ಬಿ.ಎಲ್.

ಸೆಕ್ರೆಟರಿ.

ಸಿ ಯನ್. ವೆಂಕಪ್ಪಯ್ಯನವರು, ಬಿ.ಎ., ಬಿ.ಎಲ್.

ತಾರೀಕು. 29—8—1925.

ARMS & AMMUNITION MART.

Mahomedaily-Noorbhoy.

321 Abdul Rehman Street, near Crawford Market, BOMBAY 3
Telegraphic Address:—"SHOOTER" Bombay.

[52—24] Please write for Reduced nett prices list for 1926

Printed & published by Kodanda Appayya, R.B., Chairman, Board of Directors, at "Kodagu" Press, Mercara for "Kodagu" Ltd.

Reg. No. M. ...
If not delivered please return to
"KODAGU" OFFICE MERCARA.

ಕೊಡಗು.

ಶಕ್ಯೇನ ಧೃತಿಶದಯಯಾ ವಿದ್ಯಾ ಽತಿ ಸ್ವಯಮ್ಮತಾ || ಐಕ್ಯಮತ್ಯೇನ ದೇಶಾನಾಂ ಸುಸ್ಥಿರಾ ರಾಜ್ಯ ಸಂಪದಾ ||

ಸಂಪಾದಕ ...ದ್ದಯ್ಯಂಡ ಐ. ಚಿಕ್ಕಪ್ಪ.

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವದು.

ಪುಸ್ತಕ ೫] ಕೊಡಗು, ಸ ೧೯೨೬ನೇ ಇಸವಿ ಫ... ವರಿ ತಾರೀಕು ..ನೇ ಶುಕ್ರವಾರ [ಸಂಚಿಕೆ ೩೫

ಒಂದೇ ಪ ೧ರು ರೂಪಾಯಿಗಳಲ್ಲಿ!
ಟಿಕ್=ಟಿಕ್ (ರಜಿಸ್ಟರ್ಡ್)

ಎಂಬ ಗಡಿಯಾರವು ನಿಮಗೆ ಪೂರ್ಣ ಸಂತೋಷ ಕೊಡುವದು ... ಇದರಲ್ಲಿ ಕಾಣುತ್ತಿರುವ ಗುಂಡನ್ನು ನೋಡಬೇಕು, ... ತನ್ನಷ್ಟಕ್ಕೆ ತಾನೇ ಸರಿಯಾದ ಕಾಲವನ್ನು ತೋರಿಸುವದು ಇವತ್ತೇ ತರಿಸಿಕೊಳ್ಳಿರಿ



ನಮ್ಮ ಸ್ಪೆಷಲ್ "ಕ್ರಿಸ್ಮಸ್" ಹಬ್ಬದ ಮಾರಾಟ
ಪ್ರಾರಂಭ ತಾ 1ನೇ ಒಸೆಂಬರ 1926
ಕಡೆ ತಾ ೨ನೇ ಮಾರ್ಚ 1926.
"ಕೊಡಗು" ಚಂದಾದಾರರಿಗೆ ಮಾತ್ರ



ಎಲ್ಲಾ ವಾಚುಗಳಿಗೂ ಬಾಮಾಸು ಐದು ವರುಷಗಳು — No 55 R 10 — No. 511 Rs 11 — ಎಲ್ಲಾ ವಾಚುಗಳಿಗೂ ಬಾಮಾಸು ಐದು ವರುಷಗಳು
22 ಕ್ಯಾರೆಟ್ ರೋಲ್ಡ್ ಗೋಲ್ಡ್ ಕೈಗೆ ಕಟ್ಟಿಕೊಳ್ಳುವ ಗಡಿಯಾರುಗಳು — No 507 Rs. 12 — No 58 Rs 10 — 22 ಕ್ಯಾರೆಟ್ ರೋಲ್ಡ್ ಗೋಲ್ಡ್ ಕೈಗೆ ಕಟ್ಟಿಕೊಳ್ಳುವ ಗಡಿಯಾರುಗಳು
No 5 Rs 9. No 56, Rs 10

ಸರ್ವೋತ್ತಮ, ಬಹಳ ಅಗ್ಗ, ಅಚ್ಚುಕಟ್ಟಾದ ಕೈ ಗಡಿಯಾರುಗಳು

ಪ್ರಗಸಟ್ಟಿ ಕೊಡು ಪ್ರತಿ ಒಂದು ವಾಚಿನ ಕೂಡ ಒಂದು ಫ್ಯಾನ್ಸಿ ಚೈನ್ ವಸ್ತು ಈಗಲೇ ಒಂದು ವದು ಮೇಲಾದ ರೀಸ್ಟ್ ಸಟ್ಟಿ ಪಟ್ಟಿ ಕಳುಹಿಸುವೆವು ಬೇಕು

ಪೀಟರ ವಾಚ ಕಂಪನಿ,
ಪೋಸ್ಟ ಬಾಕ್ಸ ನಂಬರ 27
12–4 ಮದ್ರಾಸ್.

ಪ್ರಕಟಣೆ.

ಒಂದು ಕಡೆ ಇಂಗ್ಲೀಷಿನಲ್ಲಿಯೂ, ಇನ್ನೊಂದು ಕಡೆ ಕನ್ನಡದಲ್ಲಿಯೂ ಪ್ರಿಂಟಾಗಿರುವ ಕಾಫಿ ತೋಟದ ಕೂಲಿಗಳ ಪ್ರಿಫರೆನ್ಸ ಕಂಟ್ರಾಕ್ಟು ಎಗ್ರಿಮೆಂಟ್ ಫಾರಮುಗಳೂ ಮತ್ತು ಕಂಪ್ಲೇಂಟ್ (Complaint) ಫಾರಂಗಳೂ ನಮ್ಮ ಮುದ್ರಾಲಯದಲ್ಲಿ ತಯಾರಿವೆ ಬೇಕಾದವರು 'ಕೊಡಗು' ಆಫೀಸಿನಿಂದ ಪಡೆಕೊಳ್ಳಬಹುದು.

SHOP AT SPENCERS.

There is a reduction in every item in the following departments:

Perfumery, patent medicines and toilet requisites, stationery, boot sundries, gent's outfitting, E. P. & cutlery.

Spencer & Co. Ltd,
52–16 MERCARA & POLLIBETTA.

ಮಹನೀಯರೇ,

1923ನೆ ಇಸವಿಯಲ್ಲಿ ವೀರರಾಜೇಂದ್ರಪೇಟೆಯಲ್ಲಿ ತೆರೆದ ನಮ್ಮ ವೈದ್ಯಶಾಲೆಯ ಶಾಖೆಯಲ್ಲಿ ಅನೇಕ ದುಸ್ಸಾಧ್ಯವಾದ ಕಾಯಿಲೆಗಳನ್ನು ಗುಣಪಡಿಸಿ ಹೆಸರುವಾಸಿ ಹೊಂದಿದ ನಮ್ಮ ಕಂಪೆನಿಯ ಮತ್ತೊಂದು ಶಾಖೆಯು ಈಗಾಗಲೇ **ಸೋಮವಾರಪೇಟೆಯಲ್ಲಿ** ತೆರೆಯಲ್ಪಟ್ಟಿದೆ

ಕೃಷ್ಣ ಸಂಬೀರ್ಕ ಮತ್ತು ನಾರಾಯಣ ಸಂಬೀರ್ಕ ಎಂಬ ಹೆಸರಗಳುಳ್ಳ ನಮ್ಮ ಪ್ರಧಾನ ವೈದ್ಯರುಗಳು ಒಬ್ಬೊಬ್ಬರು ಒಂದೊಂದು ಶಾಖೆಯಲ್ಲಿ ಯಾವಾಗಲೂ ಇರುತ್ತಾರೆ

ಈ ವೈದ್ಯರುಗಳು ಇಂಡಿಯಾ ಚಕ್ರವರ್ತಿಯವರಿಂದ ವೈದ್ಯರತ್ನವೆಂಬ ಪದವನ್ನು ಹೊಂದಿದವರಾಗಿಯೂ ಕೊಚ್ಚಿ ಸಂಸ್ಥಾನದ ರಾಜವಂಶದ ಸ್ಥಿರ ವೈದ್ಯರಾಗಿಯೂ ಸುಪ್ರಸಿದ್ಧ ಹೆಸರುವಾಸಿಯನ್ನು ಪಡೆದವರಾಗಿಯೂ ಇರುವ ಇ ಟಿ ನಾರಾಯಣನ್ ಮೂಸ್ ಎಂಬ ಮಹಾನುಭಾವರ ಕೈಕೆಳಗೆ ಹತ್ತು ವರ್ಷಗಳಿದ್ದು ಪಾಂಡಿತ್ಯವನ್ನೂ ಪರಿಚಯವನ್ನೂ ಪಡೆದವರಾಗಿಯೂ ಇದ್ದಾರೆ

ಇವರಲ್ಲಿನ ಎಲ್ಲಾ ಔಷಧಗಳಿಗೆ ಮಲಬಾರಿನ ಎಲ್ಲಾ ವೈದ್ಯಶಾಲೆಗಳ ಔಷಧದ ಚಾರ್ಜಿಗಿಂತಲೂ ಕಡಿಮೆಯಾಗಿದೆ

ಸಂಬೀರ್ಕ ಮತ್ತು ಕಂಪೆನಿ,
ಆಯುರ್ವೇದಿಕ್ ಪ್ರೈವೇಟ್ ಡಿಸ್ಪೆನ್ಸರಿ.
ಕಲ್ಲೂರು, ವೀರಾಜಪೇಟೆ ಮತ್ತು
5–47 ಸೋಮವಾರಪೇಟೆ.

ಪ್ರಕಟಣೆ.

ನಮ್ಮ ಅಂದವಾದ ಹೊಸ ಅಕ್ಷರಗಳು ಒಂದು ತಲಪಿರಾವದರಿಂದ 'ಲೆಟರ್ ಹೆಡ್ಸ್,' 'ವಿಸಿಟಿಂಗ್ ಕಾರ್ಡ್ಸ್' ಆಮಂತ್ರಣಗಳು (ಇನ್ವಿಟೇಶನ್) ಮೊದಲಾದ ಪ್ರಿಂಟಿಂಗ್ ಕೆಲಸಗಳನ್ನು ಇಂಗ್ಲೀಷ ಮತ್ತು ಕನ್ನಡದಲ್ಲಿ ಚಂದವಾಗಿಯೂ ಕಡಿಮೆ ಚಾರ್ಜಿನಲ್ಲಿಯೂ ನಿಯಮಿತ ಕಾಲದಲ್ಲಿಯೂ ಮಾಡಿಕೊಡಲು ತಯಾರಾಗಿದ್ದೇವೆ

ಮ್ಯಾನೇಜರ್,

ಆಂಧ್ರ ಆಯುರ್ವೇದಿಕ್ ಫಾರ್ಮಸಿ.
ಬ್ರಾಂಚ್ ಮಂಗಳೂರು ...

ಚ್ಯವನಪ್ರಾಸ ಲೇಹ.

ಇದು ಸರ್ವೋತ್ಕೃಷ್ಟವಾದ ಗಿಡಮೂಲಿಕೆಗಳಿಂದ ತಯಾರಿಸಲ್ಪಟ್ಟ ಆಯುರ್ವೇದ ರಸಾಯನೌಷಧವು ವಿದ್ಯಾರ್ಥಿಗಳೂ ವಿಶೇಷವಾಗಿ ಬುದ್ಧಿಯನ್ನು ಪ್ರಯೋಗಿಸಿ ಕೆಲಸ ಮಾಡುವವರೂ ಈ ಲೇಹವನ್ನು ಸೇವಿಸಿದರೆ ವಿಶೇಷವಾಗಿ ಬುದ್ಧಿಶಕ್ತಿಯನ್ನೂ ಜ್ಞಾಪಕಶಕ್ತಿಯನ್ನೂ ಹೊಂದುವರು ದೀರ್ಘಕಾಲದ ವ್ಯಾಧಿಯಿಂದಾಗಲೀ ಕೆಟ್ಟ ನಡತೆಯಿಂದಾಗಲೀ, ಸ್ವಭಾವ ಶಕ್ತಿಯ ಕೊರತೆಯಿಂದಾಗಲೀ ಶರೀರ ಕಾಂತಿಯು ಕುಂದಿ ರಕ್ತ ಕೆಟ್ಟು ಇಂದ್ರಿಯ ದೌರ್ಬಲ್ಯವೇ ಮೊದಲಾದ ವಿಕಾರಗಳಿಂದ ಪೀಡಿತರಾಗಿರುವವರು ಈ ಲೇಹವನ್ನು ಸೇವಿಸಿದರೆ ಈ ತರದ ವಿಕಾರಗಳನ್ನೆಲ್ಲಾ ಪರಿಹರಿಸಿ ದೇಹಕ್ಕೂ ಮನಸ್ಸಿಗೂ ಉಲ್ಲಾಸವನ್ನುಂಟುಮಾಡಿ ನಾನಾ ಬಗೆಯ ಅಂಗಗಳಿಗೂ ನರಗಳಿಗೂ ಬಲವನ್ನು ಕೊಟ್ಟು ದೇಹಪುಷ್ಟಿಯನ್ನುಂಟುಮಾಡಿ ನವಚೈತನ್ಯವನ್ನುಂಟುಮಾಡುವದು. ಅಲ್ಲದೆ ಆರೋಗ್ಯದೃಢಶರೀರವುಳ್ಳವರಾಗಿ ದೀರ್ಘಕಾಲ ಬದುಕುವರು ಕೆಮ್ಮು ಉಬ್ಬಸ ವ್ಯಾಧಿಯುಳ್ಳವರಿಗೂ ಮುಖ್ಯವಾಗಿ ಕ್ಷಯರೋಗಿಗಳಿಗೂ ಇದು ಸಂಜೀವಿನಿಯೇ ಸರಿ! ಚರಕ ಸಂಹಿತೆಯಲ್ಲಿ ಇದರ ಗುಣವು ಅದ್ಭುತವಾಗಿ ಹೇಳಲ್ಪಟ್ಟಿದೆ. ೧೦ ತೊಲೆಗೆ ೧ ರೂಪಾಯಿ. ೪೦ ತೊಲೆಗೆ ೩ ರೂಪಾಯಿ.

ಎಲ್ಲಾ ಕಡೆಯಲ್ಲಿಯೂ ಏಜಂಟರು ಬೇಕು.

ನಮ್ಮ ಕಡೆ ... ತಯಾರಾದ ಎಲ್ಲಾ ಔಷಧಗಳೂ ಹೆಡ್ ಆಫೀಸಿನ ಕ್ರಮದಂತೆ ... ಆಯುರ್ವೇದ ಭೂಷಣ ಕೆ ನಾರಾಯಣರಾವ್ ಎ ಎಂ ಎ ಸಿ ಯವರು ರೋಗಿಗಳನ್ನು ಪರೀಕ್ಷಿಸಿ ಚಿಕಿತ್ಸೆಯನ್ನು ಪ್ರಾಮಾಣಿಕವಾಗಿ ನಡಿಸುವರು ವಿಶೇಷ ಸಂಗತಿಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ

ಟಿ. ಸಿ. ಎಸ್. ಮುನಿಯಪ್ಪ ಅಂಡ್ ಕೋ,
ಮ್ಯಾನೇಜಿಂಗ್ ಏಜಂಟ್ಸ್ ಆಂಧ್ರ ಆಯುರ್ವೇದಿಕ್ ಫಾರ್ಮಸಿ,

"ಕೊಡಗು"

ಸನ ೧೯೨೬ನೇ ಇಸವಿ ಫೆಬ್ರುವರಿ ತಾ. ೧೯ನೇ ಶುಕ್ರವಾರ.

ಕರ್ನಾಟಕ ವಿಶ್ವ ವಿದ್ಯಾಲಯ.

ಕರ್ನಾಟಕ ಸಾಹಿತ್ಯ ಪರಿಷತ್ತಿನ ಪರವಾಗಿ ವಿಶ್ವವಿದ್ಯಾಲಯದ ವಿಷಯದಲ್ಲಿ ಕೊಡಗಿನ ಅಭಿಪ್ರಾಯ ತಿಳಿಯಲು ಬಂದಿದ್ದ ಡಾಕ್ಟರ್ ಸಿ. ಬಿ. ರಾಮರಾಯರು ಕೊಡಗಿನ ಜನರನ್ನು ಈ ವಿಷಯವಾಗಿ ಆಲೋಚಿಸುವಂತೆ ಮಾಡಿ ಹೋಗಿದ್ದಾರೆ. ಇವರು ಬರುವ ವರ್ತಮಾನವು ಮೊದಲೇ ಸಿಕ್ಕದ್ದರಿಂದ ಕೊಡಗಿನ ಎಲ್ಲಾ ಭಾಗದ ಜನರಿಗೂ ವರ್ತಮಾನಕೊಟ್ಟು ಮೀಟಿಂಗ್ ಮಾಡಲು ಆಗಲಿಲ್ಲ. ಕೊಡಗು ದೇಶದ ಪರವಾಗಿ ಮಡಿಕೇರಿಯವರಿಗೇನೇ ಯಾವ ಅಭಿಪ್ರಾಯಕೊಡಲು ಸಾಧ್ಯವಾಗಲಿಲ್ಲ. ಇನ್ನೂ ಹೆಚ್ಚು ಜನರನ್ನು ಸೇರಿಸಿಕೊಳ್ಳುವ ಶಕ್ತಿಗಳಿರುವ ಒಂದು ಕಮಿಟಿಯನ್ನು ನೇಮಿಸಿ ಹೋಗಿದ್ದಾರೆ. ದೇಶದ ಜನರ ಅಭಿಪ್ರಾಯವು ಹೊರಬೀಳುವಂತೆ ಮಾಡಬೇಕಾದದ್ದೇ ಈ ಕಮಿಟಿಯವರ ಕೆಲಸವಾಗಿದೆ.

ಕರ್ನಾಟಕಕ್ಕೆ ವಿಶ್ವವಿದ್ಯಾಲಯ ಬೇಕೋ ಎಂಬದೇ ಮೊದಲನೇ ಪ್ರಶ್ನೆ. ಈಗ ಕೊಡಗು ದೇಶವು ಮದ್ರಾಸ್ ವಿಶ್ವವಿದ್ಯಾಲಯಕ್ಕೆ ಸೇರಿ ಇದೆ. ಈಚೆಗ ಕೆಲವು ವರ್ಷಗಳಿಂದ ವಿಶ್ವವಿದ್ಯಾಲಯಗಳು ಭಾಷಾವಾರಾಗಿ ಆಗಬೇಕೆಂತ ಮುಂಗಾಳುಗಳು ಹೋರಾಡ ತೊಡಗಿ ದಕ್ಷಿಣ ಹಿಂದುಸ್ಥಾನದಲ್ಲಿ ಮುಖ್ಯವಾಗಿ ಇರುವ ನಾಲ್ಕು ಭಾಷೆಗಳ ಪೈಕಿ ತೆಲಗು ಭಾಷೆಗೆ ಪ್ರತ್ಯೇಕ ವಿಶ್ವವಿದ್ಯಾಲಯವು ಮದ್ರಾಸ್ ಕೌನ್ಸಿಲಿನಲ್ಲಿ ಮಂಜೂರಾಗಿ ಹೋಯಿತು. ಈ ವಿಶ್ವವಿದ್ಯಾಲಯದಲ್ಲಿ ತೆಲುಗು ಭಾಷೆಗೆ ಪ್ರಾಮುಖ್ಯತೆ ದೊರೆತು ತೆಲುಗು ಭಾಷೆಯ ಬೆಳವಣಿಗೆಗೆ ತುಂಬಾ ಸಹಾಯ ದೊರೆಯುತ್ತೆ. ಹಾಗೆಯೇ ತಮಿಳು ಭಾಷೆಯನ್ನಾಡುವ ಜಿಲ್ಲೆಯವರು ತಮಗೆ ಪ್ರತ್ಯೇಕ ವಿಶ್ವವಿದ್ಯಾಲಯವನ್ನು ಅತಿ ಶೀಘ್ರದಲ್ಲೇ ಪಡೆಯುವದರಲ್ಲಿ ಇದ್ದಾರೆಂತ ಡಾಕ್ಟರ್ ರಾಮರಾಯರು ತಿಳಿಸಿದರು. ಅದರಂತೆಯೇ ಮಲೆಯಾಳ ಭಾಷೆಯನ್ನಾಡುವ ಜನರು ತಮ್ಮ ವಿಶ್ವವಿದ್ಯಾಲಯವನ್ನು ಪ್ರತ್ಯೇಕಿಸಿಕೊಳ್ಳುವದರಲ್ಲಿ ಇದ್ದಾರೆ. ತಿರುವಾಂಕೂರು ಸಂಸ್ಥಾನದ ದೇಶೀಯ ಅರಸರು ತಿರುವನಂತಪುರ (ಅನಂತಶಯನ)ದಲ್ಲಿ ಒಂದು ವಿಶ್ವವಿದ್ಯಾಲಯವನ್ನು ಸ್ಥಾಪಿಸಲು ತಮ್ಮ ಅನುಮತಿ ಕೊಟ್ಟಿರುವರಾಗಿಯೂ ಡಾಕ್ಟರು ಹೇಳಿದರು. ಈ ದೇಶೀಯ ಸಂಸ್ಥಾನದಲ್ಲಿ ಸ್ಥಾಪನೆಯಾಗುವ ವಿಶ್ವವಿದ್ಯಾಲಯಕ್ಕೆ ಬ್ರಿಟಿಷ್ ಮಲಬಾರ್ ಜಿಲ್ಲೆಯವರು ಸೇರಿಕೊಳ್ಳಲು ಪ್ರಯತ್ನಿಸುತ್ತಿದ್ದಾರೆಂತಲೂ ತಿಳಿಸಿದರು. ಈ ಮೂರು ದ್ರಾವಿಡ ಭಾಷೆಯವರು ವಿದ್ಯಾಭಿವೃದ್ಧಿಯ ವಿಷಯದಲ್ಲಿ ಅತಿವೇಗದಿಂದ ಮುಂದರಿಸಿ ಹೋಗುತ್ತಿರುವಾಗ ಜನಸಂಖ್ಯೆಯಲ್ಲಾಗಲೀ ಸಾಹಿತ್ಯ (Literature) ದಲ್ಲಾಗಲೀ ಇವಕ್ಕಿಂತ ಹಿಂದೆಬೀಳದೆ ಇರುವ ಕನ್ನಡವು ನಿದ್ರಿಸುತ್ತಿರುವದು ಯುಕ್ತವಲ್ಲ. ಕನ್ನಡ ಪ್ರಾಂತ್ಯದವರಿಗೆ ಒಗ್ಗಟ್ಟಾಗಿ ಯೋಚಿಸಲು ಬೇರೆ ಮೂರು ಭಾಷೆಗಳವರಿಗಿಂತ ತುಂಬಾ ಅಡಚಣೆಗಳಿವೆ. ಕನ್ನಡ ಭಾಷೆಯನ್ನಾಡುವ ಜನರು ಐದು ಪ್ರತ್ಯೇಕ ಸರಕಾರಗಳೊಳಗೆ ಹಂಚಿ ಹೋಗಿದ್ದಾರೆ. ಬೊಂಬಾಯಿ, ಮದ್ರಾಸ್, ಮೈಸೂರು, ಹೈದರಾಬಾದು, ಕೊಡಗು ಈ ಪ್ರಾಂತ್ಯಗಳಲ್ಲಿ ಕರ್ನಾಟಕವು ಹರಿದುಹೋಗಿದೆ. ಬೊಂಬಾಯಿ ಅಧಿಪತ್ಯದಲ್ಲಿ ನಾಲ್ಕು ಜಿಲ್ಲೆಗಳು ಒಂದೇ ಗುಂಪಿನಲ್ಲಿ ಇರುವದರಿಂದ ಅಲ್ಲಿನ ಜನರು ಕರ್ನಾಟಕ ಭಾಷೆಯ ಮತ್ತು ದೇಶದ ಬೆಳವಣಿಗೆಗೆ ಕೆಲವು ಮಟ್ಟಿಗಾದರೂ ಯೋಚಿಸುತ್ತಿದ್ದಾರೆ. ಮದ್ರಾಸಿನ ಕನ್ನಡ ಜಿಲ್ಲೆಗಳು ಒಂದರಿಂದ ಒಂದು ದೂರವಾಗಿ ಚದರಿ ಹೋಗಿರುವದರಿಂದ ಒಗ್ಗಟ್ಟಾಗಲು ಬಹಳ ಕಷ್ಟವಾಗಿದೆ. ಸೇಲಂ, ಕೊಯಮತ್ತೂರು, ನೀಲಗಿರಿ ಜಿಲ್ಲೆಗಳಲ್ಲಿ ಕನ್ನಡ ಭಾಷೆಯನ್ನಾಡುವ ಜನರು ಕೆಲವು ಭಾಗಗಳಲ್ಲಿ ಇದ್ದರೂ ಈ ಜಿಲ್ಲೆಗಳ ಹೆಚ್ಚಿನ ಭಾಗಗಳು ತಮಿಳು ಜನರ ಸ್ವಾಧೀನ ಇರುವುದರಿಂದ ಆ ಜಿಲ್ಲೆಗಳಲ್ಲಿ ಕನ್ನಡಿಗರು ಇದ್ದಾರೆಂಬುದು ಸಹ ಇತರ ಭಾಗದ ಕನ್ನಡಿಗರಿಗೆ ತಿಳಿಯುವದಿಲ್ಲ. ಮಯನಾಡು ಪ್ರಾಂತ್ಯದಲ್ಲಿ ಹೆಚ್ಚಿನ ಜನರು ಕನ್ನಡಿಗರಾಗಿದ್ದಾರೆಂಬುದು ನೆರೆ ಊರಿನವರಾದ ನಮ್ಮ ದೇಶದ ಜನರಿಗೇನೇ ತಿಳಿದಿರುವದಿಲ್ಲ. ಹೀಗೆ ಕನ್ನಡವು ಬೇರೆ ಬೇರೆ ಸಂಗಡ ಬೆರತು ಹೋದ್ದರಿಂದಲೂ ಕರ್ನಾಟಕವು ಬೇರೆ ಬೇರೆ ಜಿಲ್ಲೆಗಳಾಗಿಯೂ ಸರಕಾರಗಳಾಗಿಯೂ ಹಂಚಿ ಹೋದ ಪ್ರಯುಕ್ತದಿಂದಲೂ ಕನ್ನಡದ ಒಗ್ಗಟ್ಟು ಮನಸ್ಸಿಗೆ ಸಹ ಗೋಚರವಾಗದೆ ಹೋಗಲು ಕಾರಣವಾಗಿ ಬಿಟ್ಟಿದೆ. ಈ ರೀತಿ ಇರುವಾಗ ರಾಜಕೀಯ ಆಡಳಿತದಲ್ಲಿ ಒಗ್ಗಟ್ಟಾಗಲು ಕೂಡಲೇ ಸಾಧ್ಯವಿಲ್ಲದಿದ್ದರೂ ಭಾಷಾ ಬೆಳವಣಿಗೆಯಲ್ಲಿಯೂ ವಿದ್ಯಾಭಿವೃದ್ಧಿಯಲ್ಲಿಯೂ ಒಗ್ಗಟ್ಟಾಗಿ ಕೆಲಸ ನಡೆಸುವದು ಬಹಳ ಅವಶ್ಯ. ಈ ಎರಡು ಕಾರ್ಯಕ್ಕೂ ಒಂದು ವಿಶ್ವವಿದ್ಯಾಲಯವು ತುಂಬಾ ಸಹಾಯಕಾರಿಯಾಗುತ್ತದೆ. ಬೇರೆ ಬೇರೆ ಪ್ರಾಂತ್ಯಗಳ ಭಾಷೆಯು ಒಂದೇ ರೀತಿಯದಾಗಲಿಕ್ಕೂ ಎಲ್ಲಾ ಸೈಯನ್ಸ್ ಪುಸ್ತಕಗಳನ್ನು ಕನ್ನಡ ಭಾಷೆಗೆ ತರ್ಜುಮೆ ಮಾಡಲಿಕ್ಕೂ ವಿಶ್ವವಿದ್ಯಾಲಯದಿಂದ ಸಹಾಯವಾಗುತ್ತದೆ.

ಕೊಡಗುದೇಶವು ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಸೇರಿಕೊಳ್ಳಬೇಕೋ ಎಂಬದು ಎರಡನೇ ಪ್ರಶ್ನೆಯಾಗಿದೆ. ವಿಜಯನಗರದ ಸಂಸ್ಥಾನವು ಉನ್ನತ ಸ್ಥಿತಿಯಲ್ಲಿದ್ದಾಗ ಕರ್ನಾಟಕವು ಗೋದಾವರೀ ನದಿಯಿಂದ ಕಾವೇರಿ ವರೆಗೆ ಇತ್ತೆಂತ ಗ್ರಂಥಗಳಿಂದ ತಿಳಿದು ಬರುತ್ತದೆ. ಈಗಲೂ ಕಾವೇರಿ ನದಿ ವರಗೂ ಇನ್ನೂ ಸ್ವಲ್ಪ ದಕ್ಷಿಣಕ್ಕೆ ಸಹ ಕನ್ನಡ ಭಾಷೆಯನ್ನಾಡುವ ಜನರಿದ್ದಾರೆ. ಕೊಡಗಿನಲ್ಲಿ ಶಾಲೆಗಳಲ್ಲಿ ಕಲಿಸುವ ಭಾಷೆಯೂ, ಕೋರ್ಟು ಕಚೇರಿಗಳಲ್ಲಿ ಉಪಯೋಗದಲ್ಲಿ ಇರುವ ಭಾಷೆಯೂ ಕನ್ನಡವೇನೋ ಹೌದು. ಕನ್ನಡವೇ ತಾಯ್ನುಡಿಯಾಗಿದ್ದ ರಾಜವಂಶದವರು ಕೊಡಗನ್ನು ಬಹುಕಾಲ ಆಳಿದ್ದರಿಂದ ದೇಶದಲ್ಲಿ ಕನ್ನಡ ಭಾಷೆಯು ರೂಢಿಯಲ್ಲಿರುವದರಲ್ಲಿ ಆಶ್ಚರ್ಯವೇನೂ ಇಲ್ಲ. ಈ ದೇಶದ ಮುಖ್ಯ ಜನಾಂಗದವರಿಗೆ ಮನೆಯಲ್ಲಿ ಆಡುವ ಮಾತು ಕನ್ನಡ ಭಾಷೆಯಲ್ಲದ್ದರಿಂದ ಕನ್ನಡ ಭಾಷೆಯ ವಿಷಯದಲ್ಲಿ ಕೂಡ ಬಹು ಹೆಚ್ಚು ಉತ್ಸಾಹ ತೋರಿಸುವರೆಂದು ನಂಬ ಸಾಧ್ಯವು ಬೇರೆಯವರಿಗಿದೆ. ಕನ್ನಡ ಜಿಲ್ಲೆಯಲ್ಲಿ ಕೊಂಕಣಿ ಭಾಷೆಯನ್ನಾಡುವವರೂ, ತುಳು ಮಾತನ್ನಾಡುವವರೂ ಸಹ ತಾವು ಕನ್ನಡ ಭಾಷೆಗೆ ಉತ್ತೇಜನ ಕೊಡುವದು ಕಷ್ಟವಾಗುತ್ತೆಂತ ಹೇಳಿದರೆಂತ ರಾಮರಾಯರು ತಿಳಿಸಿದರು. ನಮ್ಮ ದೇಶದಲ್ಲೂ ಸೆಂಟ್ರಲ್ ಹೈಸ್ಕೂಲ್ ಹಳೇ ವಿದ್ಯಾರ್ಥಿಗಳ ಮ್ಯಾಗಜಿನ್‌ನಲ್ಲಿ ಕೊಡಗು ಕನ್ನಡನಾಡು ಅಲ್ಲವೆಂತ ವಾದಿಸಿ ಒಂದು ಲೇಖನವು ಕೆಲವು ಕಾಲದ ಹಿಂದೆ ಬಂದಿತ್ತು. ಡಾಕ್ಟರು ರಾಮರಾಯರು ಉಪನ್ಯಾಸ ಕೊಟ್ಟ ಮೀಟಿಂಗಿನಲ್ಲಿ ಕೊಡಗಿನ ಶಾಲೆಗಳ ಸಬ್ ಅಸಿಸ್ಟೆಂಟು ಇನ್ಸ್‌ಪೆಕ್ಟರವರು ಕೊಡಗಿನವರಿಗೆ ಚಿಕ್ಕಂದಿನಲ್ಲಿ ಮಲೆಯಾಳ ಭಾಷೆಯೇ ಕನ್ನಡಕ್ಕಿಂತ ಸುಲಭವಾಗಿ ತೋರುತ್ತದೆಯಾದರೂ ಕನ್ನಡವು ಹಲವು ವರ್ಷಗಳಿಂದ ದೇಶದ ಬರವಣಿಗೆಯಾಗಿ ಉಪಯುಕ್ತ ಬಂದಿರುವ ಕಾರಣ ಅದಕ್ಕೇನೇ ಉತ್ತೇಜನಕೊಡಬೇಕಾದದ್ದು ನಮ್ಮೆಲ್ಲರ ಕರ್ತವ್ಯವೆಂದು ವಿವರಿಸಿದರು.

ಶತಮಾನಗಳಿಂದ ರೂಢಿಯಲ್ಲಿರುವ ಭಾಷೆಯು ಕನ್ನಡವಾಗಿ ಇರುವಾಗ ಅದನ್ನು ಬಿಟ್ಟು ಬೇರೆ ಯಾವ ಭಾಷೆಯನ್ನಾದರೂ ಈಗ ತೆಗೆದುಕೊಳ್ಳುವದು ಬಹಳ ಕಷ್ಟ. ಯಾವ ಜನಾಂಗಕ್ಕಾದರೂ ಬರವಣಿಗೆಯ ಒಂದು ಭಾಷೆ ಇರಬೇಕು. ಅಂಥಾ ಭಾಷೆಯಲ್ಲಿ ಪ್ರೇಮವು ಹುಟ್ಟದ ವಿನಹ ದೇಶಭಕ್ತಿಯ ಪ್ರವಾಹವು ಸರಿಯಾಗಿ ಹರಿಯುವದಿಲ್ಲ. ಆದುದರಿಂದ ಕೊಡಗರು ಕೊಡಗಿನಲ್ಲಿ ರೂಢಿಯಲ್ಲಿರುವ ಕನ್ನಡ ಭಾಷೆಗೆ ಉತ್ತೇಜನ ಕೊಡಬೇಕಾದದ್ದು ಅವಶ್ಯವಾಗಿದೆ. ಕನ್ನಡ ಭಾಷೆಗೆ ಉತ್ತೇಜನಕೊಡುವದಾದರೆ ಕರ್ನಾಟಕ ವಿಶ್ವವಿದ್ಯಾಲಯಕ್ಕೂ ಉತ್ತೇಜನಕೊಡಲೇ ಬೇಕಾಗಿದೆ.

ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಉತ್ತೇಜನಕೊಡುವದೆಂದರೆ ಕನ್ನಡ ಭಾಷೆಯಲ್ಲೇ ಉಚ್ಚ ವಿದ್ಯೆಯನ್ನೆಲ್ಲಾ ಪಡೆಯಲು ತಯಾರಾಗಿರುವರೆಂದು ಅರ್ಥ. ಕರ್ನಾಟಕ ವಿಶ್ವವಿದ್ಯಾಲಯವು ಶೀಘ್ರದಲ್ಲೇ ಸ್ಥಾಪನೆಯಾಗುವ ಸಂಭವನೀಯತೆಯಿಲ್ಲ. ಸ್ಥಾಪನೆಯಾದ ಮೇಲೆ ಸಹ ಕೂಡಲೇ ಎಲ್ಲಾ ವಿದ್ಯಾಭ್ಯಾಸವು ಕನ್ನಡದಲ್ಲೇ ಆಗುತ್ತೆಂತ ಹೇಳಲಿಕ್ಕಾಗುವದಿಲ್ಲ. ಆದರೂ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಕನ್ನಡ ಭಾಷೆಗೆ ಪ್ರಾಮುಖ್ಯತೆ ಬರುತ್ತದೆಂಬುದರಲ್ಲಿ ಸಂಶಯವಿಲ್ಲ. ಆದ್ದರಿಂದ ಈ ಎಲ್ಲಾ ಸಂಗತಿಗಳನ್ನು ಚನ್ನಾಗಿ ಯೋಚಿಸಿ ದೇಶದವರು ಅಭಿಪ್ರಾಯ ಕೊಡಬೇಕಾಗಿದೆ.

ಗಾಳಿ ಆಹಾರವಿಲ್ಲದೆ ೪೦ ದಿವಸಗಳ ಜೀವನ!

ರಾಮನಾಡು ಜಿಲ್ಲಾ ತಿನ್ನವೆಲ್ಲಿ ತಾಲೂಕಿಗೆ ಸೇರಿದ ಶ್ರೀ ಎಳ್ಳಿ ಪುತ್ತೂರಿನಲ್ಲಿ ಒಂದು ವಿಶೇಷ ಸಂಗತಿಯು ನಡೆದಿದೆ. ದೇವಾಂಗದ ಸಾಮಿಯಪ್ಪನೆಂಬ 30 ವಯಸ್ಸಿನ ಯೋಗಿಯವರು ತನ್ನನ್ನು ಗುಣಿಯೊಳಗೆ ಹಾಕಿ ಮಣ್ಣು ಮುಚ್ಚಿದಲ್ಲಿ ತಾನು ಅಲ್ಲಿ 40ದಿವಸಗಳವರೆಗೆ ಯೋಗಾಭ್ಯಾಸಮಾಡುತ್ತಾ ಬದುಕಿರುವೆನೆಂದು ಕೇಳಿಕೊಂಡ ಮೇರೆ ಅವರ ಶಿಷ್ಯರು ಅವರನ್ನು ಈ ತಾ 1 ರಲ್ಲಿ ಒಂದು ಗುಣಿಯಲ್ಲಿ ಇಟ್ಟು ಹಲಿಗೆ ಮುಚ್ಚಿ ಅದರ ಮೇಲೆ ಮಣ್ಣು ಹಾಕಿ ಅದನ್ನು 40 ದಿವಸಗಳವರೆಗೆ ಯಾರು ತೆಗೆಯಬಾರದೆಂದು ಕಟ್ಟು ಮಾಡಿಕೊಂಡಿದ್ದರು. ಈ ಸುದ್ದಿಯು ಪ್ರಕಟವಾಗಿ ಪೋಲೀಸಿನವರೂ, ಮೇಜಿಸ್ಟ್ರೇಟರೂ ಅಲ್ಲಿಗೆ 4 ನೇ ದಿನ ಬಂದು ಶಿಷ್ಯರೂ ಯೋಗಿಯ ಪತ್ನಿಯವರೂ ಮಣ್ಣು ತೆಗೆಯಬೇಡವೆಂದು ಎಷ್ಟು ಕೇಳಿಕೊಂಡರೂ ಗಮನಿಸದೆ, ಗುಣಿಯ ಮಣ್ಣನ್ನು ಬಲಾತ್ಕಾರದಿಂದ ತೆಗೆದಲ್ಲಿ ಜೀವದಲ್ಲಿದ್ದ ಯೋಗಿಯವರು ಹೊರಗೆ ಬಂದರು. ಸ್ವಲ್ಪ ಅಶಕ್ತರಾಗಿದ್ದರೂ ತಕ್ಕಷ್ಟು ಗಟ್ಟಿಯಾಗಿ ಮಾತಾಡುತ್ತಿದ್ದರು. ಸರ್ಕಾರದ ಹುಕುಂ ಇಲ್ಲದೆ ತನ್ನನ್ನು ತಾನೇ ಹೂಣಿಸಿದ್ದೇಕೆಂದು ಕೇಳಿದಾಗ ಈ ವಿಷಯ ತಾನು ಮೊದಲೇ ಹಸ್ತ ಪತ್ರಿಗಳ ಮೂಲಕವೂ ಡಂಗುರ ಹೊಡೆಯಿಯೂ ಪ್ರಕಟಿಸಿದ್ದೇನೆಂದೂ ಮಣ್ಣನ್ನು ತಗದಿದ್ದರೆ ತಾನು ಅಲ್ಲಿ 40 ದಿವಸಗಳವರೆಗ ಇರುತ್ತಿದ್ದೆನೆಂದೂ ಯೋಗಿಯವರು ಉತ್ತರವಿತ್ತರು. ಇನ್ನು ಮುಂದೆ ತಾನು ಹಾಗ ಮಾಡುವುದಿಲ್ಲವೆಂದು ಅವರಿಂದ ಪೋಲೀಸಿನವರು ವಾಗ್ದಾನ ತೆಗೆದುಕೊಂಡು ಆತನನ್ನು ಬಿಟ್ಟರೆಂದು ಪ್ರಕಟವಾಗಿದೆ.

ವಿಮರ್ಶೆ.

ಈ ಸಮ್ಮುಖದಲ್ಲಿ "ವಿದ್ಯಾರ್ಥಿ" ಎಂಬ ಹೆಸರಿನಿಂದ ಒಂದು ದ್ವೈಮಾಸಿಕ ಪತ್ರಿಕೆಯು ಮಡಿಕೇರಿಯ ಮೋಡೆಲ್ ಶಾಲೆಯ ಉಪಾಧ್ಯಾಯರಾದ ಮೆ|| ಯಂ ವಿಶ್ವನಿಂಗಯ್ಯನವರ ಸಂಪಾದಕತ್ವದಿಂದ ಈಗ ಒಂದನೇ ಸಂಚಿಕೆಯಿಂದ ಇದೇ ಫೆಬ್ರುವರಿ ತಿಂಗಳಿನಲ್ಲಿ ಒಕ್ಕವೆತ್ತಿ ಹಲವು ತಾಯಿ ತಂದೆಗಳ ಅನೇಕ ಉಪಾಧ್ಯಾಯರ ಮತ್ತು ಎಷ್ಟೋ ವಿದ್ಯಾರ್ಥಿಗಳಲ್ಲಿಯೂ ಸಹ ಪವಿತ್ರ ದರ್ಶನದಲ್ಲಿಯೇ ತನ್ನ ತೊದಲು ನುಡಿಯಿಂದ ಅತ್ಯಂತವಾದ ಆನಂದ ಭಾಷ್ಯವನ್ನ ಬೀರಿರುವುದು. "ವಿದ್ಯಾರ್ಥಿ"ಯು ಬರೀ ಎಳೇ ವಿದ್ಯಾರ್ಥಿಗಳಿಗಾಗಿಯೇ ಹೊರಟಿರುವುದೆಂದು ಯಾರೂ ಊಹಿಸಲಾಗದು. ಬಾಲರಿಂದ ವೃದ್ಧರವರೆಗೂ ಈಗಿನ ಪಾಶ್ಚಾತ್ಯ ನಾಗರೀಕತೆಯ ಸಂಸರ್ಗ ಅದೃಶ್ಯವಾದ ನಮ್ಮ ಕನ್ನಡ ವಾಙ್ಮಯವನ್ನ ಪಡೆಕೊಳ್ಳಬೇಕಾದ ವಿದ್ಯಾರ್ಥಿಗಳಿಗೂ, ತಮ್ಮ ಎಳೆ ಮಕ್ಕಳಲ್ಲು ವಿದ್ಯಾವಿನಯವನ್ನೂ, ಸದಸದ್ವಿವೇಕಗಳನ್ನೂ ಅಭಿವೃದ್ಧಿಪಡಿಸಲಿಕ್ಕೂ ಮನೆಮನೆಯಲ್ಲೂ ನಿರಂತರವೂ ಇರಬೇಕಾದ 'ವಿದ್ಯಾರ್ಥಿ'ಯಾಗಿದೆ. ಈ ಪತ್ರಿಕೆಯಲ್ಲಿ ಅನೇಕ ವಿದ್ಯಾಪಾರಂಗತರ ಅಭಿಪ್ರಾಯಗಳನ್ನು ಪ್ರಕಟಿಸುವುದರಿಂದಲೂ ಇದೇ ಕರ್ನಾಟಕ ರಾಜ್ಯಕ್ಕೆಲ್ಲಾ ಚಿತ್ರಸಿ, ಅನೇಕ ಮಹನೀಯರ ಉತ್ತಮವಾದ ಸದ್ಗುಣಗಳನ್ನು ಉಲ್ಲೇಖಿಸುವುದರಿಂದಲೂ ಇದು ಕರ್ನಾಟಕದ ಉಪಾಧ್ಯಾಯರಂತೆಯೇ ಮಕ್ಕಳನ್ನು ಪಡೆದ ತಾಯಿತಂದೆಯರಿಗೂ ಹೆಚ್ಚು ಪ್ರಯೋಜನಕಾರಿಯಾಗಿದೆ. ಇದನ್ನು ಪ್ರೋತ್ಸಾಹಿಸುವುದು ಸರ್ವ ಕರ್ನಾಟಕಸ್ಥರ ಕರ್ತವ್ಯವಾಗಿದೆ. ದೇವರು ಈ ಪತ್ರಿಕೆಯನ್ನು ಚಿರಂಜೀವಿಸಲು ಆಶೀರ್ವದಿಸಲಿ. ಇದರ ವಾರ್ಷಿಕ ಚಂದಾ ರೂ. 2—0—0

ಜಮೀನ್ದಾರರ ಸಂಘದ ಕಟ್ಟಡದ ಫಂಡು.

ಕೊಡಗು ಜಮೀನ್ದಾರರ ಸಂಘದ ಕಟ್ಟಡಕ್ಕೆ ದ್ರವ್ಯ ಸಹಾಯ ಕೊಡುವುದಾಗಿ ವಾಗ್ದಾನಮಾಡಿದವರ ವಿವರ.

	ತಾ. 6—11—19 ರಿಂದ ಮುಂದೆ ತಂದದ್ದು.	2968—0—0
79	ಮೆ ಕೋದಂಡ ಅಪ್ಪಚ್ಚು ಮತ್ತು ದೇವೈಯ್ಯನವರು	50—0—0
80	,, ಕೊಲ್ಲಿರ ಕಾರ್‍ಯಪ್ಪನವರು	15—0—0
81	,, ಬಮ್ಮಡ ಮಾದಪ್ಪನವರು	10—0—0
82	,, ನೆಲ್ಲಮಕ್ಕಳ ಬಿ ಕಾರ್‍ಯಪ್ಪನವರು	5—0—0
83	,, ಗುಡ್ಡಂಡ ತಿಮ್ಮಯ್ಯನವರು	5—0—0
84	,, ಪಲಚ್ಚಿರ ಐಯ್ಯಪ್ಪನವರು	5—0—0
85	,, ಮುಂಗುಟಗೇರಿ ಮ ಅಕ್ಕನ ಮಾಗಮ್ಮೆದಿನೆ.	5—0—0
86	,, ಶ್ರೀಯಪಿಡ ಸಂಜಪ್ಪನವರು	5—0—0
87	,, ಕಾಡ್ಯಮಾಡ ಐಯ್ಯಮ್ಮನವರು	5—0—0
88	,, ದಡ್ಡೆರ ಗಣಪತಿಯವರು	5—0—0
89	,, ಕೋಳೆರ ಪಿ. ಐಯ್ಯಮ್ಮನವರು	5—0—0
90	,, ಮಾತಂಡ ನೋಮಪ್ಪನವರು	5—0—0
	ಜುಮ್ಲ	3088—0—0

ಈ ವರೆಗೆ ರೂ 244—8—0 ವಸೂಲಾಗಿದೆ.

ಸಿ. ಎನ್. ವೆಂಕಪ್ಪಯ್ಯ,
ಗೌ. ಸೆಕ್ರಟರಿ

ಸ್ವಾಮಿ ವಿವೇಕಾನಂದರ ಮತ್ತು ಅವರ ಶಿಷ್ಯರ ಸಂವಾದ.

(5—2—26ರ ಪತ್ರಿಕೆಯಿಂದ ಮುಂದುವರಿಸಿದ್ದು)

ಶಿಷ್ಯ :— ಒಳ್ಳೆಯದು ಮಹಾಶಯ! ನಾವು ಒಂತೆಂ ಬಿಟ್ಟುಕೊಳ್ಳೋಣ, ಮತ್ತು ತಾವು ಹಾಗೆ ಸತ್ಕಾರ್ಯವ ನ್ನು ಕೈಕೊಂಡು ಮಾಡಿದರೆಂದೂ ಇಟ್ಟುಕೊಳ್ಳೋಣ, ಅದ ರಿಂದ ತಾನೆ ಆಗುವುದು ಏನು? ಇದಕ್ಕೆ ಹಿಂದೆಯೂ, ಎಷ್ಟೋ ಜನ ಮಹಾ ಪುರುಷರು ಎಷ್ಟೆಷ್ಟೋ ಒಳ್ಳೆಯದನ್ನು ಮಾಡಿ ಹೋಗಿದ್ದಾರೆ, ಈಗ ಅದೆಲ್ಲಾ ಎಲ್ಲಿ? ತಾವು ಮಾಡು ವ ಕಾರ್ಯಕ್ಕೂ ಕಾಲಾಂತರದಲ್ಲಿ ಇಂಥಾ ಅವಸ್ಥೆಯೇ ಒದಗುವುದು ಇದು ನಿಜ. ಹೀಗಿರಲು ಈ ವಿಧವಾದ ಪ್ರಯತ್ನ ದ ಆವಶ್ಯಕತೆ ಏನು?

ಸ್ವಾಮಿಗಳು :— ಮುಂದೆ ಏನಾಗುತ್ತದೆ ಎಂಬ ದನ್ನೇ ಯಾವಾಗಲೂ ಯೋಚಿಸುತ್ತಾ ಅದನ್ನು ನೋಡಿಕೊಂಡೇ ಇರುವವನು ಯಾವ ಕೆಲಸವನ್ನೂ ಮಾಡಲಿಕ್ಕಾಗುವುದಿಲ್ಲ. ಯಾವುದು ಒಳ್ಳೆಯದು, ಸರಿಯೆಂದು ತೀರ್ಮಾನಿಸಿದ್ದೀಯೋ ಅದನ್ನು ಈಗ ಮಾಡಿ ಹಾಕಿ ಬಿಡು, ಮುಂದೆ ಏನಾಗುತ್ತದೆ ಏನಾಗುವುದಿಲ್ಲ ಎಂಬುದನ್ನು ಏಕೆ ಯೋಚಿಸಬೇಕು? ಜೀವನವಿರುವುದು ಇದಿಷ್ಟು ಸ್ವಲ್ಪ—ಅದರಲ್ಲಿ ಫಲಾಫಲಗಳನ್ನು ಎಣಿಸುತ್ತಾ ಇರುವವನಾದರೂ ಏನಾದರೂ ಕೆಲಸ ಮಾಡುವುದು ಸಾಧ್ಯವೇ? ಕರ್ಮಫಲಗಳನ್ನು ಕೊಡತಕ್ಕವನು ಅವನು (ಈಶ್ವರ) ಒಬ್ಬನೇ, ಅವನು ಒರಬೇಕಾದದ್ದು ದೆಯೋ ಅದನ್ನು ಕೊಡುತ್ತಾನೆ, ಆ ಹಂ [illegible]ಗಾರವನ್ನು ಕಟ್ಟಿಕೊಂಡು ನಿನಗೆ ಆಗಬೇಕಾದದ್ದೇನು? ನೀ ನು ಆ ಕಡೆಗೆ ದೃಷ್ಟಿ ಇಡದೆ ಸುಮ್ಮನೆ ಕೆಲಸವನ್ನು ಮಾತ್ರ ಮಾಡಿಕೊಂಡು ಹೋಗು.

* * * * * *

ಸಂಜೆಯಾದ ಮೇಲೆ ಸ್ವಾಮಿಗಳು ಶಿಷ್ಯನನ್ನು ಕರೆದು, "ನೀನು ಕಠೋಪನಿಷತ್ತನ್ನು ಬಾಯಿಗೆ ಗಟ್ಟಿ ಮಾಡಿದಿಯಾ?" ಎಂದು ಕೇಳಿದರು.

ಶಿಷ್ಯ — ಇಲ್ಲ, ಮಹಾಶಯ! ಶಂಕರ ಭಾಷ್ಯದೊಡ ನೆ ಓದಿದ್ದೇನೆ ಅಷ್ಟೆ.

ಸ್ವಾಮಿಗಳು .— ಉಪನಿಷತ್ತುಗಳಲ್ಲಿ ಇಂಥಾ ಸುಂದ ರವಾದ ಗ್ರಂಥವು ಮತ್ತೊಂದು ಕಂಡುಬರುವುದಿಲ್ಲ; ಅದನ್ನು ನೀವು ಬಾಯಿಗೆ ಗಟ್ಟಿ ಮಾಡಿಕೊಂಡಿರಬೇಕೆಂದು ನನ್ನ ಅ ಪೇಕ್ಷೆ. ನಚಿಕೇತನ ಹಾಗೆ ಶ್ರದ್ಧಾ ಸಾಹಸ ವಿಚಾರ ಮ ತ್ತು ವೈರಾಗ್ಯಗಳನ್ನು ಜೀವನದಲ್ಲಿ ಸಂಪಾದಿಸುವ ಪ್ರಯತ್ನ ಮಾಡಿ ಸುಮ್ಮನೆ ಓದಿದರೆ ಏನಾಗುತ್ತದೆ?

ಶಿಷ್ಯ :— ಸೇವಕನಿಗೆ ಇವೆಲ್ಲಾ ಅನುಭವಕ್ಕೆ ಬರುವಂ ತೆ ಕೃಪೆ ಮಾಡಬೇಕು.

ಸ್ವಾಮಿಗಳು .— ಪರಮಹಂಸರ ಮಾತನ್ನು ಕೇಳಿದೀ ಯಷ್ಟೆ? ಅವರು "ಕೃಪೆಯ ಗಾಳಿಯು ಬೀಸುತ್ತಲೇ ಇರು ತ್ತದೆ. ನೀನು ಮಾತ್ರ (ನಿನ್ನ ದೋಣಿಯ) ಪಟವನ್ನು ಎತ್ತಿ ಕಟ್ಟಬೇಕು" ಎಂದು ಹೇಳುತ್ತಿದ್ದರು. ಯಾರಾದರೂ ಯಾ ರಿಗಾದರೂ ಏನಾದರೂ ಮಾಡಿಕೊಡುವುದಕ್ಕೆ ಸಾಧ್ಯವೇನ ಪ್ಪಾ? ಅವನವನ ಅದೃಷ್ಟ ಅವನವನ ಕೈಯ್ಯಲ್ಲಿ—ಗುರು ವು ಬರಿ ಇಷ್ಟನ್ನು ಮಾತ್ರ ತಿಳಿಸಿಕೊಡುತ್ತಾನೆ ಅಷ್ಟೇ. ಬೀಜದ ಶಕ್ತಿಯಿಂದಲೇ ಗಿಡವಾಗುವುದು. ನೀರು ಗಾಳಿ ಇವೆಲ್ಲಾ ಅದಕ್ಕೆ ಸಹಾಯ ಮಾತ್ರ,

ಶಿಷ್ಯ .— ಹೊರಗಿನ ಸಹಾಯದ ಆವಶ್ಯಕತೆಯೂ ಇ ದೆಯಷ್ಟೆ, ಮಹಾಶಯ.

ಸ್ವಾಮಿಗಳು :— ಅದೇನೋ ಉಂಟು, ಆದರೆ ಒಳಗೆ ಏನು ಇದೆಯೋ? ಒಳಗೆ ಪದಾರ್ಥವಿಲ್ಲದಿದ್ದರೆ ನೂರಾ ರು ಸಹಾಯಗಳಿಂದಲೂ ಏನೂ ಆಗುವುದಿಲ್ಲ. ಆದರೆ ಎಲ್ಲ ರಿಗೂ ಆತ್ಮಾನುಭವವಾಗುವ ಒಂದೊಂದು ಕಾಲವು ಒದಗುತ್ತ ದೆ. ಏಕೆಂದರೆ ಎಲ್ಲರೂ ಬ್ರಹ್ಮ, ಮೇಲು ಕೀಳು ಎಂಬ ವಿ ಭಾಗ ಮಾಡುವುದು ಕೇವಲ ಈ ಬ್ರಹ್ಮ ವಿಕಾಸದ ತಾರತಮ್ಯ ದಿಂದಲೇ, ಸಕಾಲದಲ್ಲಿ ಎಲ್ಲರಲ್ಲಿಯೂ ಪೂರ್ಣ ವಿಕಾಸವಾ ಗುತ್ತದೆ ಅದನ್ನೆ ಶಾಸ್ತ್ರವು "ಕಾಲೇನಾತ್ಮನಿ [illegible]" ಎಂ ದು ಹೇಳಿದೆ.

ಶಿಷ್ಯ .— ಹಾಗಾದರೆ ಹೀಗೆ ಆಗುವುದು ಯಾವಾಗ ಮಹಾಶಯ? ಎಷ್ಟೋ ಜನ್ಮಗಳನ್ನು ಅಜ್ಞಾನದಲ್ಲಿ ಕಳೆದು ಬಿಟ್ಟಿದ್ದೇವೆಂದು ಶಾಸ್ತ್ರಮುಖದಿಂದ ಕೇಳಿದ್ದೇನೆ.

ಸ್ವಾಮಿಗಳು — ಭಯವೇನು? ಯಾವಾಗ ಇಲ್ಲಿ ಬಂದು ಬಿದ್ದೆಯೋ ಆಗ ಆ ಕೆಲಸವೇ ಆಗುತ್ತದೆ. ಮುಕ್ತಿ ಸಮಾಧಿ ಇವೆಲ್ಲಾ ಬ್ರಹ್ಮ ಪ್ರಕಾಶದ ಮಾರ್ಗದಲ್ಲಿರುವ ಪ್ರ ತಿಬಂಧಕಗಳನ್ನು ನಿವಾರಣೆ ಮಾಡಿಕೊಡುತ್ತವೆ, ಅಷ್ಟೆ, ಆ ತ್ಮನು ಮಾತ್ರ ಸೂರ್ಯನ ಹಾಗೆ ಯಾವಾಗಲೂ ಬೆಳಗುತ್ತಾ ಇದ್ದಾನೆ, ಅಜ್ಞಾನ ಮೇಘವು ಅದನ್ನು ಮುಚ್ಚಿಕೊಂಡಿದೆ, ಆ ಮೇಘವನ್ನು ತಳ್ಳಿಬಿಟ್ಟರೆ ಸೂರ್ಯನ ಪ್ರಕಾಶ ಗೋಚರ ವಾಗುತ್ತದೆ; ಆಗ "ಭಿದ್ಯತೇ ಹೃದಯ ಗ್ರಂಥಿಃ" ಮುಂ ತಾದ ಸ್ಥಿತಿಯು ಬರುತ್ತದೆ. ಎಷ್ಟು ಮತಗಳನ್ನು ನೋಡಿದರೆ ನೋಡು, ಅವು ಈ ಮಾರ್ಗದಲ್ಲಿ ಬರುವ ಪ್ರತಿಬಂಧಕಗಳ ನ್ನು ದೂರ ಮಾಡುವಂತೆ ಉಪದೇಶಿಸುತ್ತವೆ. ಯಾರು ಯಾ ವ ಭಾವದಲ್ಲಿ ಆತ್ಮಾನುಭವ ಮಾಡಿಕೊಂಡರೋ ಅವರು ಆ ಭಾವವನ್ನೇ ಉಪದೇಶಿಸಿ ಬಿಟ್ಟಿದ್ದಾರೆ. ಆದರೆ ಎಲ್ಲರ ಉದ್ದೇ ಶವೂ ಆತ್ಮ ಜ್ಞಾನವೇ, ಆತ್ಮ ದರ್ಶನವೇ. ಇದಕ್ಕೆ ಎಲ್ಲಾ ಜಾತಿಗೂ, ಎಲ್ಲಾ ಪ್ರಾಣಿಗಳಿಗೂ ಸಮಾನವಾದ ಅಧಿಕಾರ. ಇದೇ ಸರ್ವವಾದಿ ಸಮ್ಮತವಾದ ಮತ

ಹಣ ಕೂಡಿಸುವುದು ಏಕೆ?

(ಟಿ. ಬಿ. ಎಸ್. ಕುಟ್ಟಪ್ಪ)

ಲೋಕದಲ್ಲಿ ಹೇರಳವಾಗಿ ದ್ರವ್ಯಾರ್ಜನೆಮಾಡುವ ಬಹಳ ಜನರಿಗೆ ಒಳಗೆ ಅನುಕೂಲವಾಗುತ್ತಾರೆಯೋ ಹೊರತು ಈ ಅರ್ಜನೆ ಯನ್ನು ಹೇಗೆ ಮಾಡಬೇಕು ಇದನ್ನು ಯಾವ ರೀತಿಯಿಂದ ಉಪ ಯೋಗಿಸಿಕೊಳ್ಳಬೇಕು ಎಂಬಿತ್ಯಾದಿ ಮಾರ್ಗಗಳನ್ನು ಮಾತ್ರ ತಿಳಿದವರು ಬಹು ವಿರಳವೆಂದರೂ ತಪ್ಪಾಗಲಾರದು. ಕೆಲವರು ಹಣ ಕೂಡಿಸಬೇಕೆಂಬ ಒಂದೇ ಉದ್ದೇಶವನ್ನಿಟ್ಟುಕೊಂಡು ಸಂಸಾರದ ಸುಖವನ್ನೂ, [illegible], ದೇಹದ ಆರೋಗ್ಯವನ್ನೂ ಲ ಕ್ಷಿಸದೆ ಅದರ ಉದ್ದೇಶ ನೆರವೇರಿಸುವುದರಲ್ಲೇ ಮಗ್ನರಾಗ ತ್ತಾರೆ. ಇನ್ನು ಕೆಲವರು ಅದರ ಉಪಯೋಗ ಕಾರ್ಯದಲ್ಲಿ ಏನೂ ತಿಳಿಯದವರು [illegible] ಲಕ್ಷಾಂತರ ಹಣವನ್ನು ಕೂಡಿಟ್ಟಿರುವ ಹಣವನ್ನು ಪಾಳು ಬಿಟ್ಟಿರುವರು. ಇಲ್ಲವೆ ಬ್ಯಾಂಕು ಮುಂತಾದವುಗಳಲ್ಲಿರಿಸಿ ತಮ್ಮ ಜೀವನವನ್ನು ಸುಖ ಕರವಾಗಿ ಕಳೆಯದೆ ಆಹಾರವನ್ನು ಕಾಪಾಡಿಕೊಳ್ಳುವ ದ ಕ್ಕಾಗಿಯೂ, ಸತ್ಕಾರ್ಯಗಳ ಸಲುವಾಗಿಯೂ, ಸತ್ಪಾತ್ರರ ಉಪ ಕಾರಾರ್ಥವಾಗಿ ಸಹಾಯಮಾಡುವದಕ್ಕಾಗಿಯೂ, ಹಾ ಕದೆ ಸಂಪಾದಿಸುವದಾಗಿರುವಾಗ ವ್ಯರ್ಥವಾಗಿ ಉದ್ದೇಗ ದಿಂದ ಸಂಪಾದಿಸಿದ ಹಣವು ವೃಥಾ ಹಾಳಾಗಿ ಹೋಗ್ತಾ ಹೋಗುತ್ತಿರುವಂತೆ ಸರಿಯಾದುದಲ್ಲ. ಆದಕಾರಣ ಜ ಗತ್ತಿನಲ್ಲಿ, ವಿದ್ಯಾ ದಾನವೂ ಅನ್ನದಾನವೂ ಮ ತ್ತು ನಾನಾ ವಿಧ ಧರ್ಮಕಾರ್ಯಗಳನ್ನು ಮಾಡಿ ಪ ದವಿಯ ಉನ್ನತ ಗತಿಗಳನ್ನು ಅನುಭವಿಸಬಹುದಲ್ಲವೋ, ಆತನಿಗೆ ಮೋಕ್ಷದ ಗತಿಯು ಸಂಭವಿಸುವದೆಂದು ಹೇಳುತ್ತಾನೆ ಹಾ ಗೂ ಇನ್ನೊಬ್ಬ ಕವಿಯು, ಜೇನುಹುಳ ಬಹು ಗತಿಗಳಿಂದ ಜೇ ನುತುಪ್ಪವನ್ನು ಕೂಡಿಸುವುದು ಆ ನೀ ಮಹಾ ಲೋಭ ಬಂದೂ, ಆ ಲೋಭವು ಎಲ್ಲಾ ತ್ಯಾಗಗಳಿಗಿಂತಲೂ ತ್ಯಾಗದಲ್ಲಿ ಪರಮ ಶ್ರೇಷ್ಠ ಸಂದರ್ಭ ಉತ್ಪ್ರೇಕ್ಷೆ ಮಾಡಿರುತ್ತಾನೆ. ಏ ಕೆಂದರೆ ಎಲ್ಲವನ್ನು ತಾನು ಉಣ್ಣದೆ, ತನ್ನ ಕಷ್ಟ ಸಂಸಾರ ತ್ಯಾಗ ಮಾಡಿ ಬೇರೆ ಲೋಭವು ತಾನು ಉಣ್ಣದೆ ತಿನ್ನದೆ ಜೋಪಾನದಿಂದ ಮಡಗಿ ಕಾಪಾಡಿಕೊಂಡು ಬಂ ದು ತನ್ನ ಅನಂತರ ಬೇರೆ ಬಿಟ್ಟದ್ದು ಬೇರೆಯವರು ಇನ್ನೊಬ್ಬರ ಕೈವಶ ಮಾಡುವನೆಂಬ ಭಾವನೆ ಉತ್ಪ್ರೇಕ್ಷಿಸಿದ್ದಾಗಿದೆ. ಇದು ಅನಾದಿಯಿಂದ ಬಂದ ಮಾತು. ಎಷ್ಟು ಜನ ಲೋಭಿಗಳು ಹಣವನ್ನು ಸಂಪಾದಿಸಿ ತಾವು ತಿನ್ನದೆ ಇತರರಿಗೆ ಕೈಯೆತ್ತಿ ಕೊ ಡದೆಯೂ ಕೊನೆಗೆ ಆ ದ್ರವ್ಯವನ್ನು ಅನ್ಯರ ಪಾಲಾಗಿ ಹೋಗಿರು ವದು, ಇಲ್ಲವೆ ವೃಥಾ ಹಾಳಾಗಿ ಹೋಗುವದು. ನಾವು ಈ ಗ ಹೀಗಾಗ ಎಷ್ಟು ನೋಡಿ ಕಂಡು ಬರುತ್ತಿದೆ. ನಾವು ಸಂಪಾದಿಸಿದ ದ್ರವ್ಯವನ್ನು ನಾವೂ ನಮಗೆ ಸಮ್ಮಂಧಪಟ್ಟವರೂ ಅನುಭವಿಸಿ ಸಮಯಕ್ಕೆ ಹಿತವಾದ ಸತ್ಕಾರ್ಯ ಪರರಿಗೆ ಪಯೋ ಗಿಸಿ ಒಳ್ಳೆಯದನ್ನು ಮಾಡಬೇಕಿದ್ದರೆ ನಾವು ನಮಗೆ ಬೇಕಾದ ಸುಖ ಅನುಭೋಗಗಳನ್ನು ಮತ್ತು ಬರೆ ಒಳಗಳ ಪ್ರಾ ಣಾಪಾಯಗಳನ್ನು ಅನ್ನದಿಂದ ನೋಡಿ ಹೊಡೆದಿಟ್ಟ ಹಣ ಇ ದ್ದರೇನು ಇಲ್ಲದಿದ್ದರೇನು? ಕೆಲವರು ಹಣಸಂಪಾದನೆ ಸುಖ ಕ್ಕೆಂದು ಹೇಳುವರು. ಆದರೆ ಸಂಸಾರದಲ್ಲಿ ಸುಖ ಹೊಂದು ವದು ಕೇವಲ ದ್ರವ್ಯದಿಂದಲೇ ಅಲ್ಲವು. ಎಷ್ಟು ಜನ ಹಣ ವಂತರು ಬೇಕಾದುದೆಲ್ಲ ಇದ್ದು ಮೋಟಾರು ಮುಂತಾದ ಸೌ ಕರ್ಯಗಳನ್ನಿಟ್ಟುಕೊಂಡಿದ್ದರೂ, ಭಾರಿ ಬೆಲೆಬಾಳತಕ್ಕ ಉಡು ಪುಗಳನ್ನು ಧರಿಸುತ್ತಿದ್ದರೂ, ಅಲ್ಪವ ಇನ್ನು ಎಷ್ಟೋ ಸೌ ಭಾಗ್ಯವಿದ್ದರೂ ಸಂಸಾರ ಸುಖವನ್ನನುಭವಿಸುವ ಇಲ್ಲವೆ ಸು ಖಾನಂದಪಡುವ ಅವಕಾಶವಿಲ್ಲದೆ ಮರುಗುತ್ತಿರುವರು ನಮಗೆ ಇಂ ದು ನಾಳೆಯೂ ಕಂಡುಬರುವ ಸಂಗತಿಯಾಗಿದೆ. ಬಡವರಾ ಗಿದ್ದರೂ ಅನೇಕರು ಸುಖಿಗಳಾಗಿ ಜೀವಿಸಿಕೊಂಡಿರುವ ದನ್ನು ಕಾಣುತ್ತೇವೆ. ಆದಕಾರಣ ಸುಖಕ್ಕೆ ದ್ರವ್ಯಕ್ಕಿಂತ ಲೂ ಆರೋಗ್ಯವೇ ಮುಖ್ಯವಾಗಿದೆ. ನ್ಯಾಯವಾಗಿರುವವರ ವ್ಯಾಸಂಗಯೇ ಸುಖಕ್ಕೆ ಉಪಕಾರವು. ಮಾನವ ಜೀವಿತ ದಲ್ಲಿ ದ್ರವ್ಯ ಸಂಪಾದನ ಮಾಡುವದು ಒಂದೇ ಕರ್ತವ್ಯವಾಗಿ ದ್ದರೂ ಅದರೂ, ಅದನ್ನು ತನ್ನ ಮನಸ್ಸು ಹುಚ್ಚಿಡುವ ನ್ಯಾ ಯವನ್ನನುಸರಿಸಿ ನ್ಯಾಯವಾದ ವಿನಿಯೋಗ ಮಾಡಿದರೇನೇ ತನ್ನ ಕರ್ತವ್ಯತೆಯನ್ನು ಪೂರೈಸಿದಂತಾಗುತ್ತದೆ. ಮಾ ನವ ಜನ್ಮದ ಜೀವಿತವು ಸ್ವಾರ್ಥಕ್ಕಾಗಿಯೂ ಕಳೆಯಬೇ ಕಿಲ್ಲವೆ ಪರರ ಪ್ರಯೋಜನಕ್ಕಾಗಿಯೂ, ಕಳೆಯುವದರಿಂದ ಮಾನ ವನ ಕರ್ತವ್ಯವನ್ನು ನೆರವೇರಿಸಿದಂತಾಗಿಲ್ಲ. ಕರ್ತವ್ಯಕ್ಕೆ ಧ್ಯ ಷ್ಟತೆಯಿಂದ ಸಂಪಾದಿಸಲ್ಪಟ್ಟ ಹಣದಿಂದ ಯಾವ ಪ್ರಯೋಜ ನವೂ ಇಲ್ಲ. ಪದಾರ್ಥ ಧನಗಳು ಅಪ್ಪ, ಫೋರಿ, ಕಳ್ಳ, ರಂಬ ನಾ ಲ್ಕು ಜನ ಅನ್ಯಾತಪ್ರದುಕಕೆಂದರೆ, ಇವರಲ್ಲಿ ಜೇಷ್ಠನಾದ ಧರ್ಮನಿಗೆ ಸಲ್ಲಿಸದೆ ಹೋದರೆ ಜಾತಿ ಮೂವರು ತಮ್ಮಂದಿ ರಲ್ಲೊಬ್ಬರು ಆ ಸಂಪಾದನೆಯನ್ನು ಹೊಡೆದ ಕೃಷ್ಟಿಸಿಕೊಳ್ಳುತ್ತಾರೆಂದು ನೀತಿಶಾಸ್ತ್ರದ ಉದಾಹರಣೆ ಇರುತ್ತದೆ. ನಾವು ಹೇಗೆ ದ್ರವ್ಯಸಂಪಾದನೆ ಮಾಡುತ್ತೇವೊ ಹಾಗೆಯೇ ಅದರ ವಿ ನಿಯೋಗ ಮಾಡಲ್ಪಟ್ಟರೇನೇ ನಾವು ಸಂಪಾದನೆ ಮಾಡಿದ್ದು ಯಶಸ್ವಿಯಾಗುವದು. ದುರ್ಜನರ ವಿದ್ಯೆಯನ್ನು ಅನಾವಶ್ಯ ದ ವಾದಕ್ಕೂ, ಹಣವನ್ನು ವ್ಯರ್ಥವಾದ ಕಾರ್ಯಕ್ಕೂ, ಶಕ್ತಿ ಯನ್ನು ಪರಪೀಡನೆಗೂ ದುರ್ಜನರು ಉಪಯೋಗಿಸುತ್ತಾರೆಂ ದೂ, ಸಜ್ಜನರು ಸನ್ಮಾರ್ಗಕ್ಕೆ ತರುವದಕ್ಕೆ ವಿದ್ಯೆಯನ್ನು, ದು ರ್ಬಲರನ್ನು ಕಾಪಾಡಲಿಕ್ಕೆ ಶಕ್ತಿಯನ್ನು, ಪರೋಪಕಾರಕ್ಕೆ ದ್ರ ವ್ಯವನ್ನು ಉಪಯೋಗಿಸುತ್ತಾರೆಂದು ಇನ್ನೊಬ್ಬ ಕ ವಿಯು ಹೇಳಿರುತ್ತಾನೆ ಅಂತು ದ್ರವ್ಯಾರ್ಜನೆ ಪರೋಪಕಾ ರಕ್ಕೂ, ಸೌಕರ್ಯಕ್ಕೂ ಇರುವದೇ ವಿನಹ ಒಂದನ್ನೊಂದರಿಂ ದ ಪರಹಿತ ಮಾಡಲ್ಪಟ್ಟ ಹಣವು ಭೂಮಿಯಲ್ಲಿ ಫಲವನ್ನೊಂದ ಲಾರದೆಂಬುದು ನಿರ್ವಿವಾದವೇ ಸರಿ!!

ಅಖಿಲ ಕರ್ನಾಟಕ ವಿಶ್ವ ವಿದ್ಯಾಲಯ.

ಬೆಂಗಳೂರಿನ ರಾ|| ಬಾ|| ಡಾಕ್ಟರ್ ಸಿ. ಬಿ. ರಾಮರಾ ವ್ ಯಂ. ಬಿ ಯವರು ಈ ತಾ. 6ರಲ್ಲು ಸಾಯಂಕಾಲ ಮಡಿ ಕೇರಿ ಸೆಂಟ್ರಲ್ ಹೈಸ್ಕೂಲಿನ ಹಾಲಿನಲ್ಲಿ "ಅಖಿಲ ಕರ್ನಾಟಕ ವಿಶ್ವ ವಿದ್ಯಾಲಯ"ವನ್ನು ಕುರಿತು ಒಂದು ಭಾಷಣ ಮಾಡಿದ ರು. ರಾ|| ಬಾ|| ಕೆ ಕುಟ್ಟಯ್ಯನವರು ಅಧ್ಯಕ್ಷಸ್ಥಾನವನು ವಹಿಸಿದ್ದರು. ಸುಮಾರು 100 ಜನರು ನೆರೆದಿದ್ದರು. ಭಾ ಷಣದ ಸಾರಾಂಶವೇನೆಂದರೆ:— ತಾನು ಕರ್ನಾಟಕ ಸಾಹಿತ್ಯ ಸಂಸತ್ತಿನವರಿಂದ ಕರ್ನಾಟಕಕ್ಕೆಲ್ಲಾ ಒಂದು ಯುನಿವರ್ಸಿಟಿ ಯ ವಿಷಯ ಮಾತಾಡಲು ಇಲ್ಲಿಗೆ ಕಳುಹಿಸಲ್ಪಟ್ಟಿದ್ದಾಗಿದೆ. ದಕ್ಷಿಣ ಕನ್ನಡದ ಮಂಗಳೂರು ಮತ್ತು ಉಡುಪಿಯಲ್ಲಿ ಎರ ಡು ಮೀಟಿಂಗ್ ಮಾಡಿ ಬಂದಿದ್ದೇನೆ. ಪಾರ್ಲಿಮೆಂಟರಿ ಕ ಮಿಟಿಯು ಮುಂದೆ ಹಿಂದೂದೇಶವನ್ನು ಭಾಷೆಗಳ ಪ್ರಕಾರ ಪ್ರಾಂತ್ಯಗಳಾಗಿ ವಿಂಗಡಿಸುವ ಚರ್ಚೆ ಹುಟ್ಟಿತು. ಹಿಂದೂ ದೇಶದವರಿಗೆಲ್ಲಾ ತಿಳಿಯುವಂಥ ಒಂದು ಭಾಷೆಯು ಇಲ್ಲದಿ ರುವುದು ನಮ್ಮ ದುರ್ದೆಶೆ. ಉತ್ತರ ಹಿಂದೂಸ್ಥಾನದಲ್ಲಿ ಒಂ ದೊಂದು ಪ್ರಾಂತ್ಯಕ್ಕೆ ಒಂದೊಂದು ಭಾಷೆ ಇದೆ. ಆದರೆ ದ ಕ್ಷಿಣ ಮದ್ರಾಸು ಪ್ರಾಂತ್ಯದಲ್ಲಿ ತಮಿಳು, ತೆಲುಗು, ಮಲೆಯಾ ಳ ಮತ್ತು ಕನ್ನಡವೆಂಬ ನಾಲ್ಕು ಭಾಷೆಗಳಿವೆ. ತೆಲುಗು ಭಾಷೆಗೆ ಆಂಧ್ರ ಯೂನಿವರ್ಸಿಟಿಯೂ ತಮಿಳು ಮತ್ತು ಮಲೆ ಯಾಳಕ್ಕೆ ಬೇರೆ ಬೇರೆ ಯುನಿವರ್ಸಿಟಿಗಳೂ ಸ್ಥಾಪಿತವಾಗುವುದ ರಲ್ಲಿವೆ. ಆದರೆ ಕನ್ನಡವು ಹಿಂದೆ ಬಿದ್ದಿದೆ. ಒಂದುನೂರು ಕಾ ಲದಿಂದ ಕರ್ನಾಟಕವು ಭಿನ್ನ ವಿಭಿನ್ನವಾಗಿ ಬಿಟ್ಟಿರುತ್ತದೆ. ಕ ನ್ನಡಿಗರ ಮಿಳಿತವು ತಪ್ಪಿಹೋಗಿದೆ. ಎಲ್ಲರಿಗೂ ದೇಶಾಭಿ ಮಾನವೂ ಭಾಷಾಭಿಮಾನವೂ ಇದೆ. ನಾನು ರಾಜಕೀಯ ವಿಷಯ ಮಾತಾಡುವುದಿಲ್ಲ. ಕೊಡಗಿನವರಿಗೆ ಪ್ರತ್ಯೇಕ ಸ ರ್ಕಾರವಿರಬೇಕೆಂದು ಇಲ್ಲಿಯವರ ಇಷ್ಟವಾಗಿರಬಹುದು. ಆದರೆ ನಿಮ್ಮ ಭಾಷೆಯಾದ ಕನ್ನಡಕ್ಕೆ ನೀವು ಉತ್ತೇಜನ ಕೊ ಡಬೇಕಾದದ್ದು ಯೋಗ್ಯವಲ್ಲವೇ? ಕರ್ನಾಟಕಕ್ಕೆಲ್ಲಾ ಒಂ ದು ವಿಶ್ವ ವಿದ್ಯಾಲಯವನ್ನು ಸ್ಥಾಪಿಸುವುದೇ ಕನ್ನಡ ಭಾಷೆ ಯ ಏಳಿಗೆಯ ದಾರಿ. ಕರ್ನಾಟಕದ ಎಲ್ಲಾ ಶಾಲೆಗಳಲ್ಲಿ ಯೂ ಒಂದೇ ತರದ ಕನ್ನಡ ಪುಸ್ತಕಗಳನ್ನು ಉಪಯೋಗಿಸಿದ ರೆ ನಮ್ಮಲ್ಲಿರುವ ಭಾಷೆಯ ವ್ಯತ್ಯಾಸಗಳು ಹೋಗುವವು. ಕನ್ನಡ ವಾಙ್ಮಯವು ವೃದ್ಧಿಯಾಗುವುದು.

ಬಳ್ಳಾರಿಯಲ್ಲಿ ಕನ್ನಡ ಮಾತಾಡುವವರೇ ಹೆಚ್ಚಿನವರಾದ ರೂ ಅದನ್ನು ಆಂಧ್ರ ಯುನಿವರ್ಸಿಟಿಗೆ ಸೇರಿಸುವವರ ವಿಷಯ ಧಾರವಾಡ ಮತ್ತು ಬಳ್ಳಾರಿಯವರು ಮದ್ರಾಸು ಗವರ್ನರಲ್ಲಿ ಕಳುಹಿಸಿದ ಡೆಪ್ಯುಟೇಶನಿಗೆ ಅದು ಟ್ರಾನ್ಸ್‌ಫರ್ ಇಲಾಖೆ ಯೆಂದು ಅವರು ಉತ್ತರಕೊಟ್ಟರು. ಆ ಇಲಾಖೆ ಮಂತ್ರಿಯವ ರಲ್ಲಿಗೆ ಹೋದಾಗ? ತೆಲುಗು ಡಿಸ್ಟ್ರಿಕ್ಟುಗಳಿಗೇನೇ ಒಂದು ವಿ ಶ್ವ ವಿದ್ಯಾಲಯ ನಡಿಸಲು ಕಷ್ಟವಾಗಿರುವಾಗ್ಯೆ ಒಂದೆರಡು ಕನ್ನಡ ಪ್ರಾಂತ್ಯಗಳು ಏನು ಮಾಡಬಲ್ಲವು? ದಕ್ಷಿಣ ಕನ್ನಡ ಮತ್ತು ಮಲಬಾರನ್ನು ಆಂಧ್ರ ವಿಶ್ವ ವಿದ್ಯಾಲಯಕ್ಕೆ ಸೇರಿಸು ವುದು ಉತ್ತಮವೆಂದು ಅವರು ಜವಾಬು ಕೊಟ್ಟರು. ಕನ್ನ ಡದ ಪಾಡು ಹೀಗಾಗಿದೆ. ಆದದರಿಂದ ನೀವು ಲೇಶ ಮಾತ್ರ ಕೊಡಗರೆಂಬ ಭಾವನೆ ಬಿಟ್ಟು ಪೂರ್ವದಲ್ಲಿ ಹೆಸರುವಾಸಿಗೊಂ ಡಿದ್ದ ಕರ್ನಾಟಕಕ್ಕೆ ಸೇರಿದವರೆಂಬುದನ್ನು ನೆನಪಿಗೆ ತಂದರೆ ನೀವು ಬೇರೆಯವರಿಂದ ಪ್ರತ್ಯೇಕವಾಗಿ ನಿಲ್ಲುವ ಯೋಚನೆಗಳು ಕೆಲಸಕ್ಕೆ ಬರುವುದಿಲ್ಲ. ನೀವು ದೃಷ್ಟಿಯನ್ನು ವಿಶಾಲ ಮಾಡಿರಿ.

ವಿಶ್ವ ವಿದ್ಯಾಲಯವನ್ನು ಸ್ಥಾಪಿಸಲು ಪ್ರಾರಂಭದಲ್ಲಿ 50 ಲಕ್ಷ ರೂಪಾಯಿ ಬೇಕಾಗುವುದು. ಇದು ಬಹಳ ಕಷ್ಟವಾ ಗುವದಾದರೆ ಮೈಸೂರು ವಿಶ್ವ ವಿದ್ಯಾಲಯವನ್ನೇ ಕರ್ನಾಟಕ ಯುನಿವರ್ಸಿಟಿಯಾಗಿ ಮಾಡಿಕೊಳ್ಳುವ ಯೋಚನೆ ಮಾಡಬಹು ದು. ಇದಕ್ಕೆ ಇಂಡಿಯಾ ಸರ್ಕಾರವನ್ನು ಕೇಳಬೇಕಾಗಿದೆ. ಮಧ್ಯಸರ್ಕಾರದವರು ಒಪ್ಪಿದರೆ ಬೊಂಬಾಯಿ, ಮದ್ರಾ ಸು, ಕೊಡಗು, ಹೈದರಾಬಾದು, ಮೈಸೂರು ಪ್ರಾಂತ್ಯಗಳ ಸ ರ್ಕಾರದವರನ್ನು ಕೇಳಿಕೊಂಡು ಮೈಸೂರು ಯುನಿವರ್ಸಿಟಿಗೆ ಕನ್ನಡಿಗರ ಪ್ರಾತಿನಿಧ್ಯವನ್ನೂ ಕೇಳುವಂತೆ ಮಾಡಬಹುದು. [illegible] ಭಾಷೆ [illegible] ಕೇವಲ ಇಂಗ್ಲಿಷ್‌ನಿಂದ ಆಗುವದು ಸಾಧ್ಯವಿಲ್ಲ. ಕನ್ನಡವನ್ನೇ ಉಪಯೋಗಿಸುತ್ತೇ ವೆ. ಆದ್ದರಿಂದ ಕನ್ನಡ ಭಾಷೆಯ ಅಭಿವೃದ್ಧಿಗೆ ಸಹಾಯ ಮಾಡಿ. [illegible] ಉಪಕಾರಿಯಾದ "ರಾಷ್ಟ್ರೀಯ ವಿದ್ಯಾ ಭ್ಯಾಸ" (National Education) ವೆಂಬ ಪುಸ್ತಕದಲ್ಲಿ ಸ್ವ ಭಾಷೆಯ ಉತ್ತೇಜನದ ವಿಷಯ ಚೆನ್ನಾಗಿ ಬರೆಯಲ್ಪಟ್ಟಿದೆ. ಅದನ್ನು ಎಲ್ಲರೂ ಓದಬೇಕಾಗಿದೆ. ಜೀವದುಸಿರೇ ಭಾಷೆ ಯೂ ಯಾವತ್ತೂ ಒದಗಾವಣೆ ಹೊಂದುತ್ತಿರಬೇಕೆಂದು ರಾ

ಆನಿಬೆಸಂಟರು ಹೇಳಿರುವರು. ದೇಶಾಭಿವೃದ್ಧಿಗೂ ಭಾಷಾಭಿವೃದ್ಧಿಗೂ ಒಗ್ಗಟ್ಟು ಅವಶ್ಯವಾಗಿದೆ.'

ಭಾಷಣವಾದ ಮೇಲೆ ನೆರೆದಿದ್ದ ಸಭಿಕರಿಗೆ ಸಂಶಯಗಳೇನಾದರೂ ಇದ್ದರೆ ಕೇಳಬಹುದೆಂತಲೂ ಅದಕ್ಕೆ ತಾನು ಜವಾಬು ಕೊಡಲು ಯತ್ನಿಸುವೆನೆಂತಲೂ ದಾಕ್ಷರವರು ಹೇಳಿದರು. ಮ. ಪಿ. ಮಂಗೇಶರಾಯರು ಮತ್ತು ಮ. ಆರ್ ಯಸ್. ಸಂಜೀವರಾಯರೂ ಕೆಲವು ಪ್ರಶ್ನೆಗಳನ್ನು ಕೇಳಿದರು. ಅದಕ್ಕೆ ಉಪನ್ಯಾಸಕರು ಉತ್ತರಗಳನ್ನು ಕೊಟ್ಟರು. ಸಭಿಕರಲ್ಲಿ ಕೂಡ ವಂದ್ಯಾರಾದರೂ ತಮ್ಮ ಅಭಿಪ್ರಾಯವನ್ನು ಸೂಚಿಸಬೇಕೆಂದು ಮ. ರಾಮರಾಯರು ಕೇಳಿಕೊಂಡರು. ಯಾರೂ ಮಾತಾಡಲಿಲ್ಲ. ಆಗ ಮ. ಸಿ. ಯಸ್. ವೆಂಕಪ್ಪಯ್ಯನವರು ಹೇಳಿದ್ದೇನೆಂದರೆ—'ಕೊಡಗು ದೇಶದ ಕೊಡಗು ಸಮೋದರರಿಗೆ ಕನ್ನಡವು ಮಾತೃಭಾಷೆಯಲ್ಲ. ಕನ್ನಡವನ್ನು ಕಲಿಯುವುದು ಇಂಗ್ಲಿಷ್ ಕಲಿಯುವಷ್ಟೇ ಕಷ್ಟವಾಗುತ್ತದೆಯೆಂತ ತೋರುತ್ತಾರೆ. ಅಲ್ಲದೆ ಸರ್ಕಾರಿ ರಿಕಾರ್ಡುಗಳು ವ್ಯವಹಾರಗಳು ಪೂರ್ತಿಯಾಗಿ ಇಂಗ್ಲಿಷಿನಲ್ಲಿ ಆಗುವದಾಗಿದೆ. ವಿದ್ಯೆ ಓದುವದು ಸರ್ಕಾರಿ ಉದ್ಯೋಗಕ್ಕೆ ಎಂಬ ಭಾವನೆಯು ಸಾಧಾರಣವಾಗಿ ಎಲ್ಲರಿಗೂ ಇದೆ. ಈ ಕಾರಣಗಳಿಂದ ಎಲ್ಲಾ ವಿದ್ಯಾಭ್ಯಾಸವೂ ಕನ್ನಡದಲ್ಲೇ ಆಗಲಿಕ್ಕೂ, ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಸೇರಿಕೊಳ್ಳಲು ಒಪ್ಪಿಗೆ ಕೊಡಲಿಕ್ಕೂ ತುಂಬಾ ಆಲೋಚನೆ ಮಾಡಲು ಸಮಯ ಕೊಡಬೇಕು.' ಇದಕ್ಕೆ ಪ್ರತ್ಯುತ್ತರವಾಗಿ, ನಮ್ಮ ಮನೆಗಳಲ್ಲಿ ಹೆಂಗಸರು ಮುಖ್ಯವಾಗಿ ಮುದುಕಿಯರು ರಾಮಾಯಣ ಮಹಾಭಾರತಗಳನ್ನು ಕನ್ನಡದಲ್ಲಿ ಓದಿ ಕೇಳಿ ಚೆನ್ನಾಗಿ ಅರ್ಥಮಾಡಿಕೊಳ್ಳುತ್ತಿರುವುದರಲ್ಲಿ ತುಂಬಾ ಕುತೂಹಲವುಳ್ಳವರಾಗಿರುವುದರಿಂದ ಕೊಡವರಿಗೆ ಕನ್ನಡ ಕಲಿಯುವುದು ಕಷ್ಟವೆಂದೂ ಅದರಲ್ಲಿ ಅವರಿಗೆ ಅಭಿರುಚಿ ಕಡಿಮೆಯೆಂದೂ ಹೇಳುವುದು ಸರಿಯಲ್ಲವೆಂದೂ ನಮ್ಮ ಕೋರ್ಟು ರಿಕಾರ್ಡುಗಳೆಲ್ಲಾ ಚೆನ್ನಾಗಿ ಕನ್ನಡದಲ್ಲಾಗಬೇಕೆಂದೂ ಕನ್ನಡಕ್ಕೆ ಎಲ್ಲರ ಉತ್ತೇಜನ ದೊರೆಯಬೇಕೆಂದೂ ಮುಂತಾಗಿ ಮ. ಕೊಂಗೇಟ್ಟಿರ ಅಪ್ಪಯ್ಯನವರು ಮತ್ತು ಪೆ. ಚಾಚರಣಾಯಂಡ ಗಣಪತಿಯವರು ಮಾತಾಡಿದರು.

ಅಧ್ಯಕ್ಷರು ಹೇಳಿದರ ಸಾರಾಂಶವೇನೆಂದರೆ—ಕನ್ನಡ, ತೆಲುಗು, ತಮಿಳು ಮತ್ತು ಮಲೆಯಾಳವು ಮೂಲಗ ಇದ್ದದಕ್ಕೆ ಒಸರು ಜವಾಬ್ದಾರರಲ್ಲ. ಮುಸಲ್ಮಾನರ ದರ್ಬಾರಿನಲ್ಲಿ ಹಿಂದುಸ್ಥಾನಿಗೆ ಹೆಚ್ಚು ಉತ್ತೇಜನ ದೊರೆತು ಅದು ಕೋರ್ಟು ಭಾಷೆಯಾಯಿತು. ಇತ್ತಲಾಗಿ ಯೂರೋಪಿಯನ್ ಉದ್ಯೋಗಸ್ಥರು ಹಿಂದೂಸ್ಥಾನಿ ಕಲಿತುಕೊಳ್ಳುತ್ತಿದ್ದರು. ಪ್ರೌಢ ವಿದ್ಯೆಯು ಇಂಗ್ಲೀಷಿನಲ್ಲೇ ಆಗಬೇಕೆಂದು ನನ್ನ ಅಭಿಪ್ರಾಯವಾಗಿತ್ತು. ಆದರೆ ಈಗ ಅದನ್ನು ಬದಲಾಯಿಸಿರುತ್ತೇನೆ. ದೇಶಭಾಷೆಯಲ್ಲೇ ಉಚ್ಚವಿದ್ಯೆ ಕೊಡುವುದು ಉತ್ತಮ. ಈ ವೋಟಿಂಗಿನ ವಿಷಯ ನೋಡೋಣ. ಬಹಳ ತಡವಾಗಿ ಸಿಕ್ಕಿದ್ದರಿಂದ ವಿಶ್ವವಿದ್ಯಾಲಯದ ವಿಷಯ ಯೋಚಿಸಲು ಜನರಿಗೆ ಸಮಯ ಸಾಕಾಗಲಿಲ್ಲ. ಕನ್ನಡ ಭಾಷೆಗೆ ಉತ್ತೇಜನ ಕೊಡಬೇಕಾದದ್ದು ನಮ್ಮೆಲ್ಲರ ಕರ್ತವ್ಯವಾಗಿದೆ. ಆದರೆ ಈ ವಿಷಯ ಆಲೋಚಿಸಲು ಸಮಯ ಕೊಡಬೇಕಾಗಿದೆ. ನಾವೆಲ್ಲರೂ ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಒತ್ತಾಸೆಯುಳ್ಳವರಾಗಿದ್ದೇವೆ.'

ಇಷ್ಟರಲ್ಲಿ ಈ ವಿಶ್ವವಿದ್ಯಾಲಯದ ವಿಷಯ... ಸಲು ಮತ್ತು ದೇಶದಲ್ಲಿ ಅದರ ಸಮಾಚಾರ ಹರಡಲು ಒಂದು ಕಮಿಟಿಯನ್ನು ನಿರ್ಮಾಣಿಸಬೇಕೆಂದು ಉಪನ್ಯಾಸಕರು ಸೂಚಿಸಲು ಆ ಕೆಳಗಿನ ಮೆಂಬರುಗಳುಳ್ಳ, ಮತ್ತು ಹೆಚ್ಚಿನ ಮೆಂಬರುಗಳನ್ನು ಸೇರಿಸಿಕೊಳ್ಳಲು ಅಧಿಕಾರವುಳ್ಳ ಒಂದು ಕಮಿಟಿಯು ಆರಿಸಲ್ಪಟ್ಟಿತು. ಮೆಂಬರುಗಳು.—ರಾ. ಬಾ. ಕೆ. ಕುಟ್ಟಯ್ಯನವರು ರಾ ಬಾ. ಕೆ. ಅಪ್ಪಯ್ಯನವರು, ಮ. ಪಿ. ಸಿ. ಉತ್ತಯ್ಯನವರು ಮ. ಪಿ. ಬಿ. ಬೆಳ್ಯಪ್ಪನವರು, ಮ. ಜಿ. ಎ. ಬೆಳ್ಯಪ್ಪನವರು, ಮ. ಪಾಂಡಂಡ ಮುತ್ತಣ್ಣನವರು, ಮ. ಯನ್. ಮುದ್ದಪ್ಪನವರು ಮತ್ತು ಮ. ಸಿ. ಎಸ್. ವೆಂಕಪ್ಪಯ್ಯನವರು. ಈ ಕಮಿಟಿಗೆ ವೆಂಕಪ್ಪಯ್ಯನವರು ಸೆಕ್ರೆಟರಿಯಾಗಿ ನೇಮಿಸಲ್ಪಟ್ಟರು.

ಭಾಷಣ ಕರ್ತರನ್ನು ಸಭೆಯವರ ಪರವಾಗಿ ವಂದಿಸಿದಾಗ ಮ. ಪಿ. ಸಿ. ಉತ್ತಯ್ಯನವರು ಅಂದದ್ದೇನೆಂದರೆ—'ಭಾಷೆಯ ಪುಟ್ಟಿಗೆ ಕೊಡಗುದೇಶವು ಎರಡು ಭಾಗವಾಗಿದೆಯೆಂದು ಹೇಳಬಹುದು. ದಕ್ಷಿಣ ಕೊಡಗಿನಲ್ಲಿ ಮಕ್ಕಳಿಗೆ ಚಿಕ್ಕಂದಿನಲ್ಲಿ ಮಲೆಯಾಳವು ಕನ್ನಡಕ್ಕಿಂತ ಸುಲಭವಾಗಿ ಬರುತ್ತದೆ. ಆದರೆ ದೀರ್ಘಕಾಲದಿಂದ ದೇಶದಲ್ಲಿ ಊರ್ಜಿತವಾಗಿರುವ ಕನ್ನಡಕ್ಕೆ ಉತ್ತೇಜನ ಕೊಡುವುದು ಉತ್ತಮ.' ರಾವ ರಾಯರು ಸಭಿಕರು ತಾಳ್ಮೆಯಿಂದ ಲಾಲಿಸಿದ್ದರಿಂದ ಅವರನ್ನು ವಂದಿಸಿದನಂತರ ಮೀಟಿಂಗ್ ವಿಸರ್ಜಿಸಲ್ಪಟ್ಟಿತು.

ಶ್ರೀರಾಮಕೃಷ್ಣ ಪರಮ ಹಂಸರ ಜನ್ಮೋತ್ಸವ

(ಬಾತ್ಮಿದಾರನೊಬ್ಬನಿಂದ.)

ತಾ. 14—2—26ರಲ್ಲಿ ಮಡಿಕೇರಿಯ ವೇದಾಂತ ಸಂಘದಲ್ಲಿ ರಾಮಕೃಷ್ಣ ಪರಮಹಂಸರ ಜನ್ಮೋತ್ಸವವು ವಿಜೃಂಭಣೆಯಿಂದ ನಡೆಯಿಸಲ್ಪಟ್ಟಿತು. ಉತ್ಸವಕ್ಕೆ ಅನೇಕ ಮಹನೀಯರು ದಯಮಾಡಿಸಿದ್ದರು. ಆರಂಭದಲ್ಲಿ ಭಜನೆಯು ನಡೆಯಿತು. ಅನಂತರ ಮ. ಶಂಕರನಾರಾಯಣರಾಯರು ಪರಮ ಹಂಸರ ಜೀವನ ಸಂದೇಶವನ್ನು ಕುರಿತು ಒಂದು ಸಣ್ಣ ಭಾಷಣ ಕೊಟ್ಟರು. ಆ ಮೇಲೆ ಮ. ಕೆ. ಚೆನ್ನಯ್ಯ ವಿಲಿಯ... ಸಬ್‌ಜಡ್ಜ್, ಇವರು ಪರಮ ಹಂಸರ ಜೀವನ ಚರಿತ್ರೆಯನ್ನು ಕುರಿತು ವಿಸ್ತಾರವಾಗಿ ಮಾತಾಡಿದರು.

ಶ್ರೀ ಶಂಕರ ನಾರಾಯಣರಾಯರು ಪರಮ ಹಂಸರ ಅವತಾರಕ್ಕೆ ಹಿಂದಿನ ಹಿಂದೂ ದೇಶದ ಪರಿಸ್ಥಿತಿಯನ್ನು ವಿವರಿಸಿ, ಭಾರತೀಯರ ಧಾರ್ಮಿಕ ಸ್ವಭಾವವನ್ನು ಹೊಗಳಿ ಮಾತಾಡಿದರು. ಪರಮ ಹಂಸರಿಗೂ ಇವರ ಧರ್ಮಪತ್ನಿಯರಾದ ಶಾರದಾದೇವಿಯವರಿಗೂ ಇದ್ದ ಪ್ರೀತಿಯನ್ನೂ, ದೇವಿಯವರು ತಮ್ಮ ಗಂಡನ ಕಾರ್ಯಸಫಲತೆಗೆ ಮಾಡಿದ ಸೇವೆಯನ್ನೂ ಕುರಿತು ಸಂಭಾಷಿಸುತ್ತಾ, ಈಗಿನ ದಾಂಪತ್ಯಸುಖಗಳ ಕೆಟ್ಟ... ಸ್ಥಿತಿಯನ್ನು ವಿವರಿಸಿದರು. ಎಲ್ಲಾ ಮತಗಳ ದೇವರು ಒಬ್ಬನೇ ಎಂದೂ, ಈ ಹಲವು ಮತಗಳು ಭಗವಂತನನ್ನು ಸೇರಲಿಕ್ಕೆ ಇರತಕ್ಕ ಮಾರ್ಗಗಳೆಂದೂ, ನಾವೆಲ್ಲರೂ ಸರ್ವಧರ್ಮ ಸಮನ್ವಯಿಗಳಾಗಬೇಕೆಂದೂ, ಪರಮ ಹಂಸರ ಬೋಧನೆಯಾಗಿತ್ತೆಂದು ಹೇಳಿದರು. ಸ್ವರಾಜ್ಯವೆಂದರೆ ರಾಜನೀತಿಯ ಸಂಬಂಧವಾದ ಮಾತ್ರವಲ್ಲವೆಂಬದಾಗಿಯೂ, ಅದು ಆತ್ಮ ಪರವಾಗಿರಬೇಕೆಂಬದಾಗಿಯೂ ನಾವೆಲ್ಲರೂ ಆತ್ಮಿಕ ಸ್ವರಾಜ್ಯಕ್ಕಾಗಿ ಪ್ರಯತ್ನಪಡಲಿ ಲೌಕಿಕ ಸ್ವರಾಜ್ಯವು ಅತಿ ಸುಲಭವಾಗಿ ನಮಗೆ ಸಿಗುವುದೆಂದೂ ವರ್ಣಿಸಿದರು.

ಅನಂತರ ಮ. ಚೆನ್ನಯ್ಯನವರು ಹಿಂದಿನ ಭಾಷಣದಲ್ಲಿ ಬಿಟ್ಟಿದ್ದ ಅನೇಕ ಸಂಗತಿಗಳನ್ನು ಕುರಿತು ಮಾತಾಡಿ, ಪರಮಹಂಸರು ಕುಲೀನ ಬ್ರಾಹ್ಮಣ ಕುಲದಲ್ಲಿ ಹುಟ್ಟಿದ ನನೊಂದು ವಿದ್ಯೆಯನ್ನು ಗಳಿಸದೆ, ಅತ್ಯಜನಂತೆ ತಮ್ಮ ಮನವನ್ನು ಕಳೆಯುತ್ತಿದ್ದು, ಸ್ವಾನುಭವದಿಂದ ಪರಮಾತ್ಮ ತತ್ವವನ್ನು ತಿಳಿದುಕೊಂಡು, ತಮ್ಮ ಅನುಭವವನ್ನು ತಮ್ಮ ಶಿಷ್ಯರಾದ ಸ್ವಾಮಿವಿವೇಕಾನಂದರಿಂದ ಇಡಿ ಪ್ರಪಂಚದಲ್ಲಿ ಹರಡಿಸಿ ನಮ್ಮ ಸನಾತನ ಧರ್ಮಕ್ಕೆ ಪುಟಮಾಡಿದವೆಂದು ಹೇಳುತ್ತಾ, ಈ ಸಣ್ಣ ಕೊಡಗು ದೇಶದಿಂದ ಹೋದವರು ಕೊಡಿಯುವರ, ಶ್ರೀ. ಗಳಿಗೆಯ ಅಪ್ಪಾದರಾಜ ಮುದ್ದಪ್ಪ, ಕೇಲಡ ಚಂಗಪ್ಪ ಮತ್ತು ಪಟ್ಟಡ ಪೂವಯ್ಯ ಇವರು ರಾಮಕೃಷ್ಣಾಶ್ರಮಕ್ಕೆ ಸೇರಿ ಒಳ್ಳೆ ಕೆಲಸ ಮಾಡುತ್ತಿರುವುದು ಕೊಡಗಿನವರಿಗೆಲ್ಲ ಶ್ರೇಯಸ್ಕರವಾದ ಸಂಗತಿಯೆಂದೂ, ಕೊಡಗಿನಲ್ಲಿಯೂ ರಾಮಕೃಷ್ಣ ಸಂಸ್ಥೆಗಳು ಅಲ್ಲಲ್ಲಿ ಸ್ಥಾಪಿತವಾಗಿರುವುದನ್ನು ನೋಡಿದರೆ, ಸನಾತನ ಧರ್ಮದ ಕಡೆಗೆ ಇಲ್ಲಿಂದ ಜನರು ಮನಕೊಡುತ್ತಿರುವರೆಂದೂ, ಕೊಡಗಿನ ಇನ್ನು ಅನೇಕ ಕಡೆಗಳಲ್ಲಿ ರಾಮ ಕೃಷ್ಣ ವಿವೇಕಾನಂದರ ಸಂಸ್ಥೆಗಳು ಸ್ಥಾಪಿತವಾಗಲೆಂದೂ ಹೇಳಿ ತಮ್ಮ ... ಭಾಷಣವನ್ನು ಮುಕ್ತಾಯ ಗೊಳಿಸಿದರು.

ವಿಚಿತ್ರ ಶಸ್ತ್ರಪ್ರಯೋಗ ಕೌಶಲ್ಯವು.

ಪ್ರಸಿದ್ಧರಾದ 'ಕಾಂಗ್ರಿ ಗುರುಕುಲದ ಸ್ನಾತಕರಾದ (Graduate) ಪ್ರೊಫೆಸರ್ ದೇಶಬಂಧು ಎಂಬ ತರುಣರು ಮುಂಬಾಯಿಯ ಎಕ್ಸೆಲ್ಸಿಯರ್ ಥಿಯೇಟರಿನಲ್ಲಿ ಬಿಲ್ಲು ಬಾಣಗಳಿಂದ ಅತ್ಯಂತ ವಿಚಿತ್ರಕರ ಪ್ರದರ್ಶನವನ್ನು ತೋರಿಸಿರುವರು. ಇವರು ಪೌರಾಣಿಕ ಹಿಂದೂ' ರಂತೆ ಶಸ್ತ್ರವಿದ್ಯೆಯಲ್ಲಿ ಅಸಾಧಾರಣ ಕೌಶಲ್ಯವುಳ್ಳವರಾಗಿರುವರು. ಈ ವಿದ್ಯೆಯಲ್ಲಿ ದೇಶಬಂಧುಗಳು ವಿಶೇಷ ಅಭಿರುಚಿಯುಳ್ಳವರಾಗಿದ್ದು ಚಿಕ್ಕಂದಿನಿಂದಲೂ ಅದನ್ನೇ ಅಭ್ಯಸಿಸುತ್ತಾ ಬಂದಿರುವರು. ಇವರು ಸಪೂರವಾದ ಕಡ್ಡಿ, ಹಗ್ಗ, ಅಥವಾ ಕಲೆಕೂದಲಿಗೂ, ಸ್ವಲ್ಪವೂ ಗುರಿತಪ್ಪದೆ ಹೊಡೆಯಬಲ್ಲರು. ಕಣ್ಣಿಗೆ ತೀರ ದಪ್ಪ ವಸ್ತ್ರ ಕಟ್ಟಿಕೊಂಡು ಯಾವ ದಾದರೊಂದು ವಸ್ತುವಿನ ಶಬ್ದ ಬಂದ ದಿಕ್ಕನ್ನೇ ಹಿಡಿದು ಅದಕ್ಕೆ ಗುರಿಯಿಟ್ಟು ಹೊಡೆಯಬಲ್ಲವರಾಗಿರುವರು. ಇವರು ಮಾಡುವ ಅತ್ಯಂತ ವಿಚಿತ್ರ ಸಂಗತಿಗಳೆಂದರೆ, ಬೇರೆ ಬೇರೆ ಬಣ್ಣದ ಹಾರುವ ಬೆಲೂನುಗಳಲ್ಲೊಂದಕ್ಕೆ ಮತ್ತು ಕನ್ನಡಕದ ಫ್ರೇಮುಗಳಿರ ಹಲ್ಲೂ ಎರಡು ರೂಪಾಯಿಗಳನ್ನಿಟ್ಟು ಮನುಷ್ಯನೊಬ್ಬನು ಧರಿಸಿರುವಂತೆಯೇ ಅವುಗಳಿಗೆ, ಗುರಿಯಿಟ್ಟು ಹೊಡೆಯುವಂತಹ ಚಮತ್ಕಾರವಾಗಿದೆ.

ಇವರು ಮತ್ಸ್ಯಯಂತ್ರವನ್ನು ಮುರಿದ ಅರ್ಜುನನಂತೆ ಮೀನಿನ ಪ್ರತಿ ಬಿಂಬವನ್ನು ನೀರಲ್ಲಿ ಕಂಡು ಅದಕ್ಕೆ ಗುರಿತಪ್ಪದೆ ಹೊಡೆಯಬಲ್ಲರೆಂದೂ, ವಾಲಿಯನ್ನು ವಧಿಸುವ ಮೊದಲು ರಾಮನು ಸಪ್ತತಾಳ ವೃಕ್ಷಗಳನ್ನು ಭೇದಿಸಿ ಸಾಹಸ ತೋರಿಸಿದಂತೆ, ಒಂದರ ಮೇಲೊಂದರಂತೆ ಇರಿಸಲ್ಪಟ್ಟ 7 ಮರದ ತುಂಡುಗಳನ್ನು ಒಮ್ಮೆಯೇ ಒಂದೇ ಬಾಣದಿಂದ ಹೊಡೆಯಬಲ್ಲರೆಂದೂ ತಿಳಿದು ಬರುತ್ತದೆ. ಕೋವಿಯ ಮೂಲಕ ಇಂತಹ ಚಮತ್ಕಾರ ಕಾರ್ಯಗಳನ್ನು ಮಾಡುವವರ ಪರು... ಆದರೆ ಶಸ್ತ್ರವಿದ್ಯೆಯನ್ನು ಈ ರೀತಿ ಪುನರುಜ್ಜೀವಿಸಲು ದೇಶಬಂಧುಗಳೇ ಮೊದಲಿನವರಾಗಿರುವರು. ಇದಲ್ಲದೆ ಪ್ರಾಣಾಯಾಮದ ಮೂಲಕ ಇವರು ಶ್ವಾಸವನ್ನು ನಿರೋಧಿಸಬಲ್ಲವರಾಗಿರುವರು ಎದೆ, ಪಕ್ಕೆಲುಬು ಅಥವಾ ಎರಡೂ ಕೈಗಳ ರಕ್ತ ಸಂಚಾರ ನಿಲ್ಲಿಸಬಲ್ಲರು. ಚಿತ್ತ ಶಕ್ತಿಯಿಂದಲೂ, ಶ್ವಾಸ ನಿರೋಧದಿಂದಲೂ ಬಂದ ಬಲವಾದ ಕಬ್ಬಿಣದ ಸರಪಣಿಯನ್ನು ತುಂಡರಿಸಬಲ್ಲರು. ಇವರು ಇವನ್ನು ಜಾದುಗಾರರಂತೆ ಬರೀ ಬೇಹ ಶಕ್ತಿಯಿಂದ ಮಾಡುವುದಿಲ್ಲ. ವಿದ್ಯಾರ್ಥಿಗಳ ಕಣ್ಣು, ಕಿವಿ, ಕೈ ಮೊದಲಾದ ದೇಹದ ಎಲ್ಲಾ ಅಂಗಗಳ ಶಕ್ತಿಯನ್ನು ಹೆಚ್ಚಿಸುವುದಕ್ಕಾಗಿ ಶಾಲಾ ಕಾಲೇಜುಗಳಲ್ಲಿ ಶಸ್ತ್ರವಿದ್ಯೆ ಮತ್ತು ಪ್ರಾಣಾಯಾಮವನ್ನು ಪ್ರಚಾರದಲ್ಲಿ ತರಬೇಕೆಂದೇ ಪ್ರೊಫೆಸರ್ ದೇಶಬಂಧುರವರ ಉದ್ದೇಶವಿದೆ.

(ನವಯುಗ)

SALE OF TIMBER

Following timbers depoted in places accessible to carts in the Kattepura Reserve will be sold by public auction at Kattepura at 2 P. M. on 4th, March 1926.

TIMBERS.

2814 c. ft. Honne. 1012 c. ft. Nandi and 10 c. ft. Biti

For further particulars apply to:—

The Divisional Forest Officer,
North Coorg,
Mercara.

Apply for our Shooting Season's Clearance Sale Catalogue of Brand New Goods.

10 to 25 percent Reductions in Prices.

No License Required! **No License Required!!**





Webley and Scott Air Pistol, cal. ·177 or ·22, bore Powerful and Accurate complete with a sample box of slugs, two spare washers, a bruser for cleaning, and a bookletof instructions Rs. 30/- Free delivery.

Powerful German Diana Air gun. Handsome and Accurate, takes B. S. A. Pattern No 1 Slugs and Darts. expressly recommendable for Target Practice Rs. 15/ Free delivery.

Brilliant Search Light Lamp for Night Sports Rs. 30/- Free delivery.

No License required o purchse or to possess he bove items

Reliable D. B. B. L. 12 bore guns	Rs. 60/-	and upwards.	
Do S. B. B. L. 12	do	do 40/-	do
D. B. M. L. Guns		„ 45/-	do.
S. B. M. L. do.		„ 30/-	do.
S. B. B. L. Rifles		„ 25/-	do
B. L. Revolvers and Pistols		„ 30/-	do.

Arms, Ammunition and shooting requisites of almost every kind and qualitd offered at exceptionally favourable rates A Number of good quality second hany weapons also offered for sale in theNew Catalogue.

GOOLAMHUSSIAIN ALLIBHOY & SONS

Largest Importers of Fire Arms and Ammunition,

Cheapest priced firm in India,

24-6 **210 Abdul Rehman Street, BOMBAY.**

ಚಂದಾದಾರರಲ್ಲಿ ವಿಜ್ಞಾಪನೆ.

ನಮ್ಮ ಚಂದಾದಾರರಲ್ಲಿ ಹಲವರು ತಮ್ಮ ಚಂದಾ ಹಣವನ್ನು ಬೇಗನೆ ಕಳುಹಿಸಿಕೊಡುತ್ತೇವೆಂಬುದಾಗಿಯೂ ಪತ್ರಿಕೆಯನ್ನು ಸರಿಯಾಗಿ ಕಳುಹಿಸ ತಕ್ಕದ್ದು ಇರಬೇಕಾಗಿಯೂ ಕೇಳಿಕೊಂಡ ಮೇರೆ ಇದು ವರೆಗೂ ಹಾಗೆ ನಡಿಸುತ್ತಾ ಬಂದಿದ್ದೇವೆ. ಆರ್ಥಿಕ ತೊಂದರೆಯ ಕಾಲವಾದ ಈಗ ಎಲ್ಲರ ಕೈಯಲ್ಲೂ ಹಣವಿರುವದರಿಂದ ಅಂಥ ಚಂದಾದಾರರು ತಮ್ಮ ಬಾಕಿಯಾದ ಚಂದಾ ಹಣವನ್ನು ಮನಿಯಾರ್ಡರ್ ಮೂಲಕವಾಗಿಯಾಗಲೀ ಇಲ್ಲವೆ ಏಜಂಟರ ಮೂಲಕವಾಗಿಯಾಗಲೀ ಒಡನೆ ಪಾವತಿ ಮಾಡಿ ನಮ್ಮ ಕಂಪೆನಿಯ ಕೆಲಸಕ್ಕೆ ಉತ್ತೇಜನ ಕೊಡಬೇಕಾಗಿ ಕೋರುತ್ತೇವೆ

ಮ್ಯಾನೇಜರ್

ವರ್ತಮಾನ ಸಂಗ್ರಹ.

ಒಳದೇಶ.

ಬ್ರೀಚ್ ಆಫ್ ಕಂಟ್ರ್ಯಾಕ್ಟ್ ಆಕ್ಟಿನ ಬಿಲ್ಲಿನ ಮುಂದಿನ ಚರ್ಚೆಯನ್ನು ನಡಿಸಲಿಕ್ಕಾಗಿ ಕೊಡಗು ಲೆಜಿಸ್ಲೇಟಿವ್ ಕೌನ್ಸಿಲ್ ಮೀಟಿಂಗು ಈ ತಾ. 27ನೇ ಶನಿವಾರ ನಡೆಯುವುದು

ಫೆಬ್ರವರಿ ತಾ. 16 ನೇ ಮಂಗಳವಾರ ಮತ್ತು 18ನೇ ಗುರುವಾರ ಮಧ್ಯಾಹ್ನದ ವೇಳೆ ಮಡಿಕೇರಿಯಲ್ಲಿ ಕುದುರೆ ಪಂದ್ಯಗಳು ನಡೆದವು. ನೋಡಲು ಅನೇಕ ಜನ ನೆರೆದಿದ್ದರು.

ನಾಲ್ಕುನಾಡಿನಲ್ಲಿ ಬೆಳೆಗಾರರ ಸಂಘದ ಗ್ರಾಮಕಮಿಟಿಗಳನ್ನು ಏರ್ಪಡಿಸುವ ಬಗ್ಗೆ ಆ ನಾಡಿನವರ ಮೀಟಿಂಗು ತಾ. 27—2—26ರಲ್ಲು ನಾಪೋಕ್ಲು ಕಚೇರಿ ಒಳೆ ನಡಯಲಿಕ್ಕಿದೆ

ಮ|| ಯೇಟ್ಸ್ ರವರು ರಜೆಯಲ್ಲಿ ಹೋಗುವಾಗ್ಯೂ ಅವರ ಒದಗೆ ಶಾಲೆಗಳ ಇನಸ್ಪೆಕ್ಟರಾಗಿ ಮದರಾಸಲ್ಲಿ ಡಿಸ್ಟ್ರಿಕ್ಟ್ ಎಡ್ಯುಕೇಶನ್ ಆಫೀಸರಾಗಿರುವ ಮಿ|| ಸ್ಯಾಂಡರ್ಸ್‌ರವರು ಬರುವರೆಂದು ವರ್ತಮಾನ.

ಮದ್ರಾಸು ಮಡಿಕಲ್ ಸ್ಕೂಲಿನಲ್ಲಿ ಓದುತ್ತಿದ್ದ ಮಿ|| ಚೆಪ್ಪುಡೀರ ಚಿ. ಮುತ್ತಣ್ಣನವರು ಕಾಯಿಲೆಗೆ ಚಿಕಿತ್ಸೆಯೊಂದಬೇ ಹೋಗಿದ್ದ ಮದನಪಳ್ಳಿಯ ಸ್ಯಾನಿಟೋರಿಯಮ್‌ನಲ್ಲಿ ಈ ಶನಿವಾರ ಮೃತರಾದರೆಂದು ತಿಳಿಸಲು ವ್ಯಸನ ಪಡುತ್ತೇವೆ.

ಚಿಕ್ಕ ಮಂಡೂರು ಗ್ರಾಮದ ಅಜ್ಜಿಗುಟ್ಟಿರ ಮನೆಯವರಿಗೂ ಚಿನ್ನಂಡ ಮನೆಯವರಿಗೂ ಕಳೆದ ಡಿಸೆಂಬರು ತಾ. 7ರಲ್ಲು ಉಂಟಾದ ಜಗಳದಲ್ಲಿ ಸಂಭವಿಸಿದ ಖೂನಿ ಮೊಕದ್ದಮ್ಮೆಯು ಈ ತಾ. 17ರಲ್ಲಿ ಸೆಶನ್ಸ್ ಜಡ್ಜಿಯವರ ಕೋರ್ಟಿನಲ್ಲಿ ಕೈಲಾಸವಾಯಿತ.

ಈ ತಾ. 15ನೇ ಸೋಮವಾರ ಮಡಿಕೇರಿನಾಡು ಬೆಟ್ಟಗೇರಿಯಲ್ಲಿ ಒಬ್ಬ ಒಕ್ಕಲಿಗನಿಗೂ ಬಿಲ್ಲವನಿಗೂ ಜಗಳವಾದಲ್ಲಿ ಬಿಲ್ಲವನ ಕಾಲಿನ ಹಿಂಭಾಗಕ್ಕೆ ಕತ್ತಿಯ ಪೆಟ್ಟಾಗಿ ಆತನು ಸ್ವಲ್ಪ ಹೊತ್ತಿನಲ್ಲಿಯೇ ಮೃತನಾದನೆಂದ ವರ್ತಮಾನ. ಬಂಧಿರವನನ್ನು ಸೆರೆ ಹಿಡಿದು ರಿಮಾಂಡಿನಲ್ಲಿಟ್ಟಿರುವರ. ಕೇಸು ಪೋಲೀಸು ತನಿಕೆಯಲ್ಲಿದೆ

ಫಾರೆಸ್ಟ್ ಆಫೀಸು ಮೇನೇಜರಾಗಿದ್ದ ಅಬ್ದುಲ್ ರಹಿಮಾನ್ ರವರಿಗೆ ಆಫೀಸಿನ ಹಣ ಕಳವಾದ ಕೇಸಿನ ಮೊಕದ್ದಮ್ಮೆಯಲ್ಲಿ ಸಬ್ ಜಡ್ಜಿಯವರು ಸಾವಿರ ರೂಪಾಯಿ ಜುಲ್ಮಾನೆಯೂ, ಕೋರ್ಟ್ ಏಳುವವರೆಗೆ ಸಜೆಯೂ ವಿಧಿಸಿದ್ದರಷ್ಟೆ. ಅದರ ಮೇಲೆ ಪೋಲೀಸಿನವರು ಅಪ್ಪೀಲು ಮಾಡಿದ್ದಲ್ಲು ಜಿಲ್ಲಾ ಕಮಿಷನರವರು ಹೆಚ್ಚಿಗೆ ಆರು ತಿಂಗಳು ಕಠಿಣ ಸಜೆ ವಿಧಿಸಿರುವರ

ಬರುವ ಮಾರ್ಚ ತಿಂಗಳು ಒಂದನೇ ಸಬ್ ಅಸಿಸ್ಟೆಂಟ್ ಸರ್ಜನರಾಗಿರುವ ಮಿ|| ಮಂದಕಲ್ಲಿರ ಗಣಪತಿಯವರು ಸೆಂಟಿಕೊಪ್ಪಲಿಂದ ಶ್ರೀಮಂಗಲಕ್ಕೂ, ಮಿ|| ಕೋದಂಡ ಮೊಣ್ಣಪ್ಪನವರು ಶ್ರೀಮಂಗಲದಿಂದ ವಿರಾಜಪೇಟೆಗೂ, ಮಿ|| ಪಟ್ಟಡ ಕಾರ್ಯಪ್ಪನವರು ನಾಪೋಕ್ಲಿನಿಂದ ಮಡಿಕೇರಿಗೂ ಮಿ|| ಕೋದಂಡ ಕಾರ್ಯಪ್ಪನವರ ಮಡಿಕೇರಿಯಿಂದ ನಾಪೋಕ್ಲಿಗೂ ವರ್ಗಾಯಿಸಲ್ಪಟ್ಟಿರುವರು.

ತಾ. 8ರಲ್ಲು ಮಡಿಕೇರಿಯಲ್ಲಿ ನಡದ ಬೆಳೆಗಾರರ ಸಂಘದ ಕಮಿಟಿ ಮೀಟಿಂಗಿನಲ್ಲು ಉತ್ತರ ಕೊಡಗಿನ ಆರ್ಗನೈಸರ ಕೆಲಸಕ್ಕೆ ಮಿ|| ಉದಿಯಂಡ ನಾಣಯ್ಯನವರು ಕೂಡ್ಲೆ ರಾಜಿನಾಮೆಯು ಲೆಕ್ಕಗಳನ್ನು ಒಪ್ಪಿಸುವ ಶರತ್ತಿಗೆ ಒಳಪಟ್ಟು ಮಂಜೂರು ಮಾಡಲ್ಪಟ್ಟು ಮಿ ಮನಿಯಪಂಡ ಮುತ್ತಪ್ಪನವರು ಮತ್ತು ಮಿ|| ಚೌರೀರ ಅಪ್ಪಯ್ಯನವರ, ಸುಂಟಿಕೊಪ್ಪಕ್ಕೆ ಜಾಯಿಂಟ್ ಆರ್ಗನೈಸರಾಗಿ ನೇಮಿಸಲ್ಪಟ್ಟರು.

ಮಡಿಕೇರಿ ರೆವಿನ್ಯು ಆಫೀಸಿನ ಮಿ|| ವೆಂಕಟಾದ್ರಯ್ಯನವರು 4 ತಿಂಗಳು ರಜೆಯಲ್ಲಿ ಹೋಗುವುದರಿಂದ ಭಾಗಮಂಡಲದ ಪಾರುಪತ್ಯಗಾರರಾದ ಮಿ. ಬಿ. ಕೆ. ಚಂಗಪ್ಪನವರನ್ನು ರೆವಿನ್ಯು ಆಫೀಸಿಗೂ, ಅಮ್ಮತ್ತಿಯ ಪಾರುಪತ್ಯಗಾರರಾಗಿರುವ ಮಿ. ಯಂ. ಸಿ. ಅಪ್ಪಚ್ಚಿರವರನ್ನು ಭಾಗಮಂಡಲಕ್ಕೂ, ವೈನಾಡು ಇಲಾಖೆಯಲ್ಲಿ ಸ್ಪೆಶಲ್ ಕೆಲಸದಲ್ಲಿರುವ ಮಿ. ಕೆ. ಬಿ. ಪೊನ್ನಪ್ಪನವರನ್ನು ಅಮ್ಮತ್ತಿ ನಾಡು ಪಾರುಪತ್ಯಗಾರರಾಗಿಯೂ ವರ್ಗಾಯಿಸುವರೆಂದು ತಿಳಿಯಬರುತ್ತದೆ.

ಹಿಂದೂದೇಶ.

ಮಹಾರಾಷ್ಟ್ರ ವಿಶ್ವವಿದ್ಯಾಲಯವು ಒಂದನ್ನು ಪೂನಾ ಪಟ್ಟಣದಲ್ಲಿ ಸ್ಥಾಪಿಸಲು ಬೊಂಬಾಯಿಯ ವಿಶ್ವವಿದ್ಯಾಲಯದಲ್ಲಿ ಅಂಗೀಕರಿಸಲ್ಪಟ್ಟಿದೆ.

ಬೊಂಬಾಯಿ ಸಭೆಯಲ್ಲಿ ಸುಲೇರಿಯ ಜ್ವರದ ನಿವಾರಣೆಗೋಸ್ಕರ ಅಲ್ಲಿಯ ಮುನ್ಸಿಪಾಲಿಟಿಯವರು 47000 ರೂಪಾಯಿಗಳನ್ನು ಖರ್ಚು ಮಾಡಲು ತೀರ್ಮಾನಿಸಿರುವರು.

ಬರ್ಮಾ ದೇಶದ ಸಿಟ್ಟಾಂಗ್ ನದಿಯಲ್ಲಿ ಸಮುದ್ರದಿಂದ ಭಾರಿ ನೆರೆ ಬಂದು ಒಂದು ಸ್ಟೀಮರು ಮುಳುಗಿ ಹೋಗಿ ಅದರೊಳಗಿದ್ದ ಹಲವು ಪ್ರಯಾಣಿಕರ ಪೈಕಿ 7 ಜನರು ಮಾತ್ರ ಸುರಕ್ಷಿತವಾಗಿ ದಡಕ್ಕೆ ಸೇರಿರುವರು.

ಅಮೇರಿಕ ಕೋಟ್ಯಾಧೀಶ್ವರನಾದ ಮಿ. ಜಾನ್ ರಾಕ್‌ಫೆಲ್ಲರವರು ಭೂಲೋಕದಲ್ಲೆಲ್ಲಾ ಅತ್ಯುತ್ತಮವಾದ ಮ್ಯೂಸಿಯಮ್ಮನ್ನು ಇಡಲು ಕೈರೋದಲ್ಲಿ ಒಂದು ಕಟ್ಟಡಕ್ಕಾಗಿ ಈಜಿಪ್ಟಿನ ಅರಸರಿಗೆ ಹತ್ತು ಮಿಲಿಯ ರಾಯಲ್ ನಾಣ್ಯಗಳನ್ನು ಮುಫತ್ತಾಗಿ ಕೊಟ್ಟಿರುವರು.

ಅಫ್ಘಾನಿಸ್ಥಾನದಲ್ಲಿ ಹಿಂದೂಗಳು ತಮ್ಮ ಧರ್ಮಕ್ಕೆ ಸಂಬಂಧಪಟ್ಟ ಹಬ್ಬಗಳನ್ನು ನಡೆಸಬಾರದೆಂದೂ, ಹಿಂದೂ ಮುಸಲ್ಮಾನರಿಗೆ ಬೇರೆ ಬೇರೆ ಶಾಲೆಗಳಿರಬಾರದೆಂದೂ ಅಲ್ಲಿಯ ಅಮೀರರು ಹುಕುಂ ಮಾಡಿರುವರು.

ಬೊಂಬಾಯಿಯಲ್ಲಿ ಇಂಜಿನೀಯರಾಗಿರುವ ರಾ|| ಸಾ|| ಕೆ. ರಾಮಸ್ವಾಮಿ ಅಯ್ಯನವರು ತಮ್ಮ ಜನ್ಮಸ್ಥಳವಾದ ಕುಂಭಕೋಣಪುರದಲ್ಲಿ ಧರ್ಮಾರ್ಥವಾದ ಮನೆ ಆಸ್ಪತ್ರೆಯನ್ನು ಕಟ್ಟಿಸಿಕೊಡಲು 50,000 ರೂ. ವಿನಿಯೋಗಿಸುವರೆಂದು ವರ್ತಮಾನ

ಮದ್ಯಪಾನದ ಸಂಪೂರ್ಣ ನಿಷೇಧಿಸುವಿಕೆಯೇ ಸರಕಾರದ ಉದ್ದೇಶವೆಂದೂ, ಸೇಂದಿ ಸಾರಾಯಿ ಅಂಗಡಿಗಳನ್ನು ಕಡಿಮೆ ಮಾಡುತ್ತಾ ಬಂದು, 20 ವರ್ಷಗಳಲ್ಲಿ ಉದ್ದೇಶವನ್ನು ಸಾಧಿಸಬೇಕೆಂದೂ ಮದ್ರಾಸು ಕೌನ್ಸಿಲಿನಲ್ಲಿ ಠರಾವು ಬಹು ಮತದಿಂದ ಪಾಸಾಯಿತ.

ಕರಾಚಿಯಿಂದ ಲಂಡನ್ನಿಗೆ 5 ದಿವಸಗಳಲ್ಲಿ ಆಕಾಶಯಾನದಲ್ಲಿ ಪ್ರಯಾಣಮಾಡಬೇಕೆಂಬ ಆಲೋಚನೆಯ ಏರ್ಪಾಡು ಸಂಪೂರ್ಣವಾಗುತ್ತಿದೆ. ಈ ಮಾರ್ಗ ಆ ಯಂತ್ರವು 2500 ಮೈಲು ಹೋದರೆ ಇಲ್ಲದೆ ಪ್ರಯಾಣ ಮಾಡಿ ವಾಪಾಸು ಬಾರದೆ ಅವರು ಈ ತಿಂಗಳ ಅಂತ್ಯದಲ್ಲಿ ಲಂಡನ್ನಿಗೆ ಹೊರಡುವುದು.

ಬೊಂಬಾಯಿ ಪಟ್ಟಣದಲ್ಲಿ 50000 ವೇಶ್ಯಾಸ್ತ್ರೀಯರೂ, 900 ಅವರ ಮನೆಗಳೂ ಇರುವವೆಂದು ಗೊತ್ತಾಗಿದೆ. ಈ ಮನೆಗಳನ್ನು ತೆಗೆದುಹಾಕಬೇಕು ಇಲ್ಲವೇ ಇವುಗಳೆಲ್ಲಾ ಒಂದೇ ಕಡೆ ಪ್ರತ್ಯೇಕಸ್ಥಳದಲ್ಲಿ ಕಟ್ಟಬೇಕೆಂದು ಬೊಂಬಾಯಿ ಸ್ತ್ರೀಯರ ಒಂದು ಮಹಾಸಭೆ ಸೇರಿ ಸರಕಾರಕ್ಕೂ, ಬೊಂಬಾಯಿ ಮುನ್ಸಿಪಾಲಿಟಿಗೂ ವಿನಂತಿಮಾಡಿಕೊಳ್ಳಬೇಕೆಂದು ತೀರ್ಮಾನಿಸಿರುವರು.

ಕಾಲಕ್ರಮದಲ್ಲಿ ಇಂಡಿಯಾವನ್ನು ಸ್ವರಾಷ್ಟ್ರವನ್ನಾಗಿ ಸುರಕ್ಷಿತವಾಗಿಡಲು ಸಮರ್ಥವಾಗುವಂಥ ರಾಯಲ್ ಇಂಡಿಯನ್ ನೇವಿ ಎಂಬ ಒಂದು ನೌಕಾ ಸೈನ್ಯವನ್ನು ಹುಟ್ಟಿಸುವುದೂ ಅದರಲ್ಲಿ ಪ್ರಾರಂಭದಿಂದಲೇ ಇಂಡಿಯನರಿಗೆ ಉದ್ಯೋಗಗಳನ್ನು ಕೊಡುವಂತೆಯೂ ಚಕ್ರವರ್ತಿಯವರ ಸರಕಾರವು ಅಂಗೀಕಾರ ಮಾಡಿದೆಯೆಂದು ವೈಸರಾಯರು ತಾ 9ರಲ್ಲಿ ಕೌನ್ಸಿಲ್ ಆಫ್ ಸ್ಟೇಟಿನಲ್ಲಿ ಹೇಳಿದರು.

ಮೈಸೂರು ಮುನಿಸಿಪಲ್ ವೈಸ್ ಪ್ರೆಸಿಡೆಂಟರಾದ ಮಿ. ಟಿ. ಯಸ್. ಅಲಿಖಾನ್ ಎಂಬವರು ಸಂಪದಭ್ಯುದಯ ಪತ್ರಿಕೆಯ ಮಾಲೀಕರು ಮತ್ತು ಮೇನೇಜರಾದ ಮಿ. ಕೆ.ಎಂ. ವೆಂಕಟಕೃಷ್ಣಯ್ಯನವರ ಮತ್ತು ಸಂಪಾದಕ ಮಿ. ಯಂ ಯಸ್ ಲಕ್ಷ್ಮಣರಾಯರ ಮೇಲೆ ಸಿಟಿ ಮೇಜಿಸ್ಟ್ರೇಟರ ಮುಂದೆ ನಡಿಸಿದ ಮಾನನಷ್ಟದ ಕ್ರಿಮಿನಲ ಕೇಸಿನಲ್ಲಿ ವೆಂಕಟಕೃಷ್ಣಯ್ಯನವರನ್ನು ಖುಲಾಸು ಮಾಡಿ ಸಂಪಾದಕರನ್ನು ಚಾರ್ಜ ಮಾಡಿದ್ದಾರೆ.

ಬೊಂಬಾಯಿಯ ಒಬ್ಬ ಶ್ರೀಮಂತ ಮಹಮ್ಮದೀಯ ವಿವಾಹಕ್ಕಾಗಿ ವೈಸರಾಯರು ಇಂದೂರಿನ ಮಹಾರಾಜರಿಗೆ ಬರೆದ ಕಾಗದಕ್ಕೆ ಅವರು ಇನ್ನೂ ಜವಾಬು ಕೊಟ್ಟಿರುವುದಿಲ್ಲವಂತೆ. ಬಿಲ್ಲಿನ ಸಂತರ ವಿಚಾರದ ಕಮಿಷನನ್ನು ನೇಮಿಸಬೇಕೋ ಬೇಡವೋ ಎಂಬುದನ್ನು ವೈಸರಾಯರು ನಿಶ್ಚಯಿಸುವರು. ಈ ಮಧ್ಯ ಇಂದೂರಿನಲ್ಲಿ ಪಬ್ಲಿಕ್ ಮೀಟಿಂಗು ಮಾಡಕೂಡದೆಂದು ದಿವಾನರ ಹುಕುಂ ಆಗಿದೆ. ಸ್ವಸ್ವತ್ತ ಸರಕಾರದಿಂದ ಕೊಟ್ಟಿದ್ದ ಆಯುಧಗಳನ್ನು ವಾಪಸು ತೆಗೆದುಕೊಂಡು ಸೈನ್ಯವನ್ನು ವಜಾ ಮಾಡಿರುವರು. ಅಲ್ಲಿ ಎಲ್ಲರಿಗೂ ಕಳವಳ ಹುಟ್ಟಿದೆ

ವಿದೇಶ.

ರೋಮೇನಿಯಾದಲ್ಲಿ ಕೌನ್ಸಿಲ್ ಚುನಾವಣೆಯಲ್ಲಿ ದೊಂಬಿಗಳಾಗಿ ಮೂರು ಜನರ ಮೃತಪಟ್ಟರ, 20 ಜನರಿಗೆ ಘಾಯಗಳಾದವು

ಯೂರೋಪ್ ದೇಶದ ರಾಜ್ಯಗಳ ಕೂಲಿಕಾರರ ಕ್ಷೇಮವನ್ನು ಕಾಪಾಡಿಕೊಳ್ಳುವ ಮಂತ್ರಿಗಳ ಸಭೆಯೊಂದು ಈ ವಾರ ಸೇರುತ್ತದೆ. ಕೂಲಿಕಾರರು ಮಾಡಬೇಕಾದ ಕೆಲಸದ ಕಾಲವನ್ನು ನಿರ್ಣಯಿಸುವದೇ ಮೀಟಿಂಗಿನ ಉದ್ದೇಶ

ಉಪವಾಸ ವ್ರತದಲ್ಲಿ ಜಗತ್ತಿನಲ್ಲೆಲ್ಲಾ ಪ್ರಾಮುಖ್ಯತೆಯನ್ನು ಹೊಂದಬೇಕೆಂಬ ಉದ್ದೇಶದಿಂದ ಕಿಯಾರ್ನಿಯನ್ ಎಂಬ ಜರ್ಮನಿಯವನೊಬ್ಬನು ಒಂದು ದೀರ್ಘಕಾಲ ಉಪವಾಸವನ್ನು ಕೈಕೊಂಡಿರುವನು. ಈಗಾಗಲೇ ಆಹಾರವೇನೂ ಇಲ್ಲದೆ 31 ದಿವಸಗಳನ್ನು ಕಳೆದಿರುವನು. ಆದರೆ ಯಾವಾಗಲೂ ಧೂಮಪಾನ ಮಾಡುತ್ತಿರುವನಂತೆ. ಇನ್ನೂ 12 ದಿವಸಗಳವರೆಗೆ ಆಹಾರವಿಲ್ಲದೆ ಇರಲು ಇವನಿಗೆ ಶಕ್ತಿ ಇದೆಯೆಂದು ಡಾಕ್ಟರುಗಳು ಹೇಳಿರುವರಂತೆ.

ತುರ್ಕಿಸ್ತಾನದಲ್ಲಿ ಒಬ್ಬನು ಒಬ್ಬ ಹೆಂಗಸಿಗಿಂತ ಹೆಚ್ಚು ಮದುವೆಯಾಗಕೂಡದೆಂಬ ಕಾನೂನು ಮಾಡಿರುವರ. ಇದನ್ನು ಲಕ್ಷ್ಯವಿಡದೆ ಕಾನ್‌ಸ್ಟಾಂಟಿನೋಪಲಿನಲ್ಲಿ ಒಬ್ಬ ಐಶ್ವರ್ಯವಂತನು 56 ಮಂದಿ ತರುಣವಾದ ಸ್ತ್ರೀಯರನ್ನು ಇಟ್ಟುಕೊಂಡಿದ್ದನು. ಅವರನ್ನು ಬಿಟ್ಟುಬಿಡಬೇಕೆಂದು ಸರಕಾರದವರು ಹುಕುಂ ಮಾಡಿದ ಕೂಡಲೆ ಆತನು ಅವರನ್ನೆಲ್ಲಾ ಸೇರಿಸಿಕೊಂಡು ಊಟಕ್ಕೆ ಕೂತು ವಿಷಮಿಶ್ರಿತವಾದ ತಿಂಡಿಯನ್ನು ಅವರೆಲ್ಲರಿಗೂ ಕೊಟ್ಟು ತಾನೂ ತಿಂದ. ಎಲ್ಲರೂ ಯಮಪುರವನ್ನೈದಿದರೆಂದು ವರ್ತಮಾನ.

ವಿಜ್ಞಾಪನೆಗಳು.

ನಾಡಿನಾಲ್ಕುನಾಡು ತಾಲೋಕಿನ ಬೆಳೆಗಾರರ ಸಂಘದ ಜಾಯಿಂಟ್ ಸೆಕ್ರೆಟರಿಯ ಒಡ.

ಇದೇ 1926ನೇ ಇಸವಿ ಏಪ್ರಿಲ್ ತಿಂಗಳಲ್ಲಿ ಕೊಡಗು ಬೆಳೆಗಾರರ ಸಂಘದ ವಾರ್ಷಿಕ ಸಮ್ಮೇಳನವು ನಾಲ್ಕುನಾಡು, ಕಡಿಯತ್ತುನಾಡು, ಬೇಂಗುನಾಡು, ಕುಯ್ಯಂಗೇರಿನಾಡು. ಮತ್ತು ತಾವುನಾಡಿನವರ ಸ್ವಾಗತದಿಂದ ನಾಪೋಕ್ಲಿನಲ್ಲಿ ನಡಯುವುದು ನಿಮಗಿಷ್ಟೆ. ದೇಶದವರನ್ನು ನಾಪೋಕ್ಲಿಗೆ ಆದರದಿಂದ ಬರಮಾಡಿ, ತಕ್ಕ ಸ್ವಾಗತವನ್ನು ಕೊಡಲು ನಮ್ಮ ತಾಲೋಕಿನವರು ಏರ್ಪಾಡು ಮಾಡಬೇಕಾಗಿರುವುದರಿಂದ, ಮೇಲ್ಕಂಡ ಐದು ನಾಡಿನ ಎಲ್ಲಾ ಗ್ರಾಮಗಳ ಹದಿನೆಂಟು ವಯಸ್ಸಿಗೆ ಮೇಲ್ಪಟ್ಟ ಬೆಳೆಗಾರರು ಈ ತಾರೀಕು 27ನೇ ಶನಿವಾರ ಮಧ್ಯಾಹ್ನ 3 ಘಂಟೆಗೆ ನಾಪೋಕ್ಲು ಕಚೇರಿ ಒಳೆ ದಯಮಾಡಿಸಬೇಕಾಗಿ ಕೋರುತ್ತೇನೆ. ಸದರ ಮೀಟಿಂಗಿನಲ್ಲಿ ಸ್ವಾಗತದ, ಊಟ ಉಪಚಾರದ ಮತ್ತು ಇತರ ವಿಷಯಗಳು ಎಲ್ಲಾ ಏರ್ಪಾಡು ಮಾಡಲಾಗುತ್ತೆ. ಅಲ್ಲದೆ ಹಣ, ಅಕ್ಕಿ ವಗೈರೆ ವಸೂಲ್ಮಾಡಲು ಆಯಾಯ ನಾಡು ಮತ್ತು ಗ್ರಾಮಕ್ಕೆ ಮೆಂಬರಗಳನ್ನು ನಹ ನೇಮಕ ಮಾಡಲಾಗುತ್ತೆ.

ನಾಪೋಕ್ಲು, ತಮಗಳ ಸೇವಕ,
ತಾ. 11—2—26. ಕೋಟೆರ ಪಿ ಚಿಣ್ಣಪ್ಪ
ಜಾಯಿಂಟ್ ಸೆಕ್ರೆಟರಿ.

ಪತ್ರವ್ಯವಹಾರ.

ಬಾತ್ಮೀದಾರರು ನಡುವ ಅಭಿಪ್ರಾಯಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲ. ಸಂ

ಕೋಆಪರೇಟಿವ್ ಸ್ಟೋರ್.

ಮಹಾನುಭಾವರೇ,

ಈ ಪತ್ರಿಕೆಯ ಹಿಂದಿನ ಸಂಚಿಕೆಯೊಂದರಲ್ಲಿ ಯಾರೋ ಒಬ್ಬರು ಕೋಆಪರೇಟಿವ್‌ಸ್ಟೋರ್ಸ್ ವಿಷಯವಾಗಿ ಏನು ಒಂದನ್ನು ಮಾತ್ರ ಆಸೆಕೊಂಡಿದ್ದಾರೆಂದು ಬರೆದದ್ದನ್ನು ನೋಡಿ ಕೆಲವರು ಆಕ್ಷೇಪಿಸಿದರು. ಮಹಾನೀಯರೇ, ಇದನ್ನು ಯಾರು ಬರೆದರು ಎಂಬುದು ನನಗೆ ಲೇಶಮಾತ್ರವೂ ತಿಳಿಯದು, ನನ್ನ ತಪ್ಪಿಲ್ಲ.

ಕೋಆಪರೇಟಿವ್ ಸ್ಟೋರ್ ಬೇಕೋ ಬೇಡವೋ ಎಂಬುದನ್ನು ನೋಡಲಿಕ್ಕೆ ಮೀಟಿಂಗು ಮಾಡಿದ್ದಾಗಿದೆ. ಬೇಕೆಂದು ಆದಮೇಲೆ ಸ್ಥಳಿಕ ಬೈಲಾಗಳನ್ನು ಏರ್ಪಡಿಸಿ ರಿಜಿಸ್ಟ್ರೇಶನ್ ಮಾಡಲಿಕ್ಕೆ ಕಳುಹಿಸುವುದಕ್ಕಾಗಿ ಬೇಕಾದವರನ್ನು ಆರಿಸಿಕೊಳ್ಳುವುದೊಂದು ಆಯಿತು. ಅಲ್ಲಿ ನೆರೆದಿದ್ದವರಲ್ಲಿ ಹೆಚ್ಚು ಮಂದಿ ಮುಂದಕ್ಕೆ ಬಾರದ್ದರಿಂದ ಬರೇ ನಾಲ್ಕು ಜನರ ಹೆಸರನ್ನು ತೆಗೆದುಕೊಂಡು, ಮೀಟಿಂಗಿಗೆ ಅನಾನುಕೂಲವಾದ ಬದಲಿಕ್ಕೆ ಆಗವರ ಪೈಕಿಯೂ ಕೆಲವರನ್ನು ಆರಿಸಿಕೊಳ್ಳುವ ದೆಂಬುದಾಗಿ ತೀರ್ಮಾನಿಸಿ ಮೀಟಿಂಗು ಮುಕ್ತಾಯವಾಯಿತು.

ಅದರ ಪ್ರಕಾರ "What touches all must be approvel by all" ಎಲ್ಲರಿಗೂ ಸಮ್ಮಂಧವಾದ ಕೆಲಸಕ್ಕೆ ಎಲ್ಲರ ಸಮ್ಮತವು ಬೇಕೆಂದು ಹೆಚ್ಚು ಜನರನ್ನು ಸೇರಿಸಿಕೊಳ್ಳಲಾಯಿತ, "Numbers without union are powe..... and union without knowledge is useless" 'ಜನರ ಬಹುತ್ವದ ಜೊತೆಗೆ ಐಕ್ಯಮತ್ಯವು ಸೇರದಿದ್ದರೆ ಅದು ಒಂದು ಸಾಮರ್ಥ್ಯ ಅಥವಾ ಶಕ್ತಿಯಾಗಿ ಪರಿಣಮಿಸುವುದಿಲ್ಲ ಮತ್ತು ಅಂಥಾ ಶಕ್ತಿಯೊಡನೆ ವಿವೇಕವು ಹೊಂದಿಕೊಂಡರೆ ಅದು ಪ್ರಯೋಜನಕಾರಿಯಾಗುತ್ತದೆ, ಎಂಬ ತತ್ವವನ್ನು ಅನುಸರಿಸಿ ನಡೆದುಕೊಂಡದ್ದಾಗಿದೆ. ಇದ ಬರುವ ಇನ್ನು ಮುಂದಕ್ಕೆ ಹೀಗೆ ಯಾರೂ ಆಕ್ಷೇಪಿಸದೆ, ಪ್ರತಿಯೊಬ್ಬರೂ ಅವರ ಕೈಯ್ಯಲ್ಲಾಗುವ ಸಹಾಯ ಮಾಡಿ ಈ ಸ್ಟೋರನ್ನು ಮುಂದಕ್ಕೆ ತರುವರೆಂದು ಕೇಳಿಕೊಳ್ಳುತ್ತೇನೆ

ಮೆಂಬರುಗಳು.—

1 ನೆ ಗೌಡಂಡ ಪಿ. ಟಿ ಕುಶಾಲಪ್ಪನವರು 2 ನೆ ಪಿ. ಗಣಪತಯ್ಯನವರು. 3 ನೆ ಪಿ ಕೆ. ಪೂವಯ್ಯನವರು 4. ನೆ ಸಿ. ಎ ಪೊನ್ನಪ್ಪನವರು 5 ನೆ ಪಿ ಸಿ ನಾಣಯ್ಯನವರು.. 6 ನೆ ಮನಮುಪಂಗ ನಾಣಯ್ಯನವರು 7. ನೆ ಚೆಪ್ಪುಡಿರ ಎಸ್ ಪೊನ್ನಪ್ಪನವರು 8. ನೆ ಸಿ ಎಸ್ ಪೂವಯ್ಯನವರು 9 ನೆ ಚೆಪ್ಪುಡಿರ ಎ. ಬೆಳ್ಯಪ್ಪನವರು 10. ನೆ

ಪುಚ್ಚಿಮಾಡ ಕುಟ್ಟಪ್ಪನವರು, 11 ಮೆ ಪಿ. ಪಿ. ಪೂವಯ್ಯನವರು, 12 ಮೆ ಅದೇಂಗಡ ಪೂವಯ್ಯನವರು, 13 ಮೆ ಪಾರುವಂಗಡ ಪಿ. ಕುಟ್ಟಪ್ಪನವರು, 14. ಮೆ ಚಪ್ಪುಡಿರ ಸಿ ಕಾರ್‍ಯಪ್ಪನವರು, 15 ಮೆ ಕೂಡಂಡೇರ ಸಿ. ಮಾದಪ್ಪನವರು 16 ಮೆ ಚೆಪ್ಪುಡಿರ ಎ ಸುಬ್ಬಯ್ಯನವರ, 17 ಮೆ ಕೊಡಂಡೇರ ಸಿ ಬೆಳ್ಳಿಯಪ್ಪನವರು 18 ಮೆ ಇಟ್ಟಿರ ಪೂವಪ್ಪನವರು, 19 ಮೆ ಕೋಳೆರ ಚಂಗಪ್ಪನವರು, 20 ಮೆ ಕೋಳೆರ ಐಯ್ಯಮ್ಮನವರು, 21 ಮೆ ತೀತಿರ ಬೆಳ್ಳಿಯಪ್ಪನವರು, 22 ಮೆ ಕಾಡ್ಯಮಾಡ ಮುತ್ತಣ್ಣನವರು.

ಪಿ ಪಿ ಪೂವಯ್ಯ

ಪ್ರೀಚ್‌ಅಥ ಕಂಟ್ರಾಕ್ಟು ಅಕ್ಟು.

ಸಂಪಾದಕರಿಗೆ,

ನಾನು ಹಿಂದೊಸ್ತಾನಕ್ಕೆ ವಾಪಸು ಬಂದನಂತರ ನನ್ನ ಕೌನ್ಸಿಲ್ ಮುಂದೆ ಬಂದಿರ [illegible] ಕೆಲವು ಕರಡು ಗಳಿಗೆ [illegible] ಇದೆಯೆಂತ [illegible] ಮಾನಗಳನ್ನು, ಎಲ್ಲಿನ್ನ [illegible] ಇಂಡಿಯಾ ಸರಕಾರದವರು [illegible] ತಿರಸ್ಕರಿಸುವರಾ, [illegible] ಯನ್ನು ಕೇಳಿದ್ದೇನೆ.

ಹೀಗೆ ತಿರಸ್ಕಾರವಾದರೆ ಆ ಸಂದಾಕಟ್ಟಿನಲ್ಲಿ [illegible] ಕೃಸಿ, ಕೈಗಾರಿಕಗ ಎಂದು ದೇಶ [illegible] ಪಿಯಲ್ಲಿ ಸ್ವತಃ [illegible] ನಸ್ಟಿ [illegible] ದೆ ಥಾರಾಳ [illegible].

ಅಧಿಕಾರಿಗಳು [illegible] ಮುಖ್ಯವಾದ ಆಕ್ಷೇಪಣೆಯೆಂತ ನಾನು ಕೇಳಿದ್ದೇನ [illegible] ಈ ಕರಡನ್ನು ಆಕ್ಟೇ [illegible] ಇಂಡಿಯಾ ಸರಕಾರದ [illegible] ತಿರಸ್ಕರಿಸುವುದಾದರೂ [illegible] ಕೂಲಿಕಾರ [illegible] ದ ವಸತಿ [illegible] ಕೂಲಿಕಾರರ ವಸತಿ ವಿಷಯದಲ್ಲ [illegible] ನಮ್ಮ ಅಭಿಪ್ರಾಯ [illegible] ಕರಡನ್ನ [illegible] ಕೂಲಿಕಾರರನ್ನು ಚನ್ನಾಗಿ [illegible] ನಾವು [illegible] ನವಾಗುತ್ತದೆಂತ ಆಲೋಚಿಸಿದ್ದೇವೆ [illegible] ದ

ನಿಮ್ಮ ಪತ್ರಿಕೆಯಲ್ಲಿ ಈ ಪತ್ರವನ್ನು ಆದಷ್ಟು ಬೇಗನೆ ಪ್ರಕಟಿಸಿ ಈ ಅಭಿಪ್ರಾಯಗಳಿಗೆ ನಿಮ್ಮ [illegible] ಬೇಕಾಗಿ ಅಪೇಕ್ಷಿಸುತ್ತೇನೆ.

ಪೊನ್ನಂಪೇಟೆ, [illegible] ಟಿಪ್ಪಿಂಗ್

ತಾ 15—2—26.

[ಇದು ಇಂಗ್ಲಿಷಿನಲ್ಲಿ ಬಂದ ಪತ್ರದ ತರ್ಜುಮೆಯಾಗಿದೆ. ಈ ಬಿಲ್ಲಿನ ವಿಷಯ ನಮ್ಮ ಅಭಿಪ್ರಾಯಗಳನ್ನು ಈ ಮೊದಲೇ ಮೂರು ಸಾರಿ ಬರೆದಿದ್ದೇವೆ ಸಂ]

ವಿದ್ಯಾ ಇಲಾಖೆ ಸಹಕಾರಿ ಸಂಘ.

ಅಯ್ಯಾ,

"ಸಂಘೇಶಕ್ತಿ ಕಲೌಯುಗೆ" ಎಂಬ ತತ್ವವನ್ನು ತಿಳಿದ ಈ ನಮ್ಮ ಕೊಡಗು ದೇಶದ ವಿದ್ಯಾ ಇಲಾಖೆಯ [illegible] ತಮ್ಮ ತಮ್ಮ ಸಾಹಾಯ್ಯಕ್ಕಾಗಿ [illegible] ಸಂಘವನ್ನು ಏರ್ಪಡಿಸಿಕೊಂಡು [illegible] ದುರವಸ್ಥೆಯಿಂದ ವಿದ್ಯಾ ಇಲಾಖೆ [illegible] ಕಾರಿ ಸಂಘವು ಏರ್ಪಡಾಗಿದೆ. ಈ ಇಲಾಖೆ ಉದ್ಯೋಗಸ್ಥರು [illegible] ಉಪಾಧ್ಯಾಯರುಗಳ [illegible] ನಾಡೇಯಿಯ ಸಂಬಂಧದಲ್ಲಿ ಅನಿವಾರ್‍ಯವೇ ಸರಿ [illegible] ಗಳನ್ನು [illegible] ಲದ್ದುದು ಬಹು [illegible]ವಾಗಿದೆ.

ಈ ತರದ ಕಷ್ಟನಷ್ಟಗಳನ್ನು ಸಮಗ್ರವಾಗಿ ತಿಳಿದ ಮತ್ತು ಅನುಭವಿಸಿದ ವೀರರಾಜಪೇಟೆ ಸೆಂಟ್ರಲ್ ಉಪಾಧ್ಯಾಯರುಗಳು ಕೊಡಗು ದೇಶದ ವಿದ್ಯಾ ಇಲಾಖೆ ಉದ್ಯೋಗಸ್ಥರಿಗಳಿಗೆಲ್ಲಾ ಅನುಕೂಲಕ್ಕಾಗಿ ಸಹಕಾರಿ [illegible] ಯೆಂದನ್ನು ಏರ್ಪಡಿಸುವುದರ ಮೂಲಕ ಮೇಲೆ ಕಂಡ ಕಷ್ಟನಷ್ಟಗಳನ್ನು [illegible] ಮೇಲಧಿಕಾರಿಗಳ [illegible], ಇಲಾಖೆ ಉದ್ಯೋಗಸ್ಥರೆಲ್ಲ ಕಲವು ಮಹನೀಯರ ಸಹಾಯದಿಂದ ಬೈಲಾಗಳನ್ನು ತಯಾರಿಸಿ, [illegible] ರವರ ಮಂಜೂರಾತಿಯನ್ನು ಪಡೆದು "ಕೊಡಗು ವಿದ್ಯಾ ಇಲಾಖೆ ಉದ್ಯೋಗಸ್ಥರ ಮಿತಿಯುಳ್ಳ ಸಹಕಾರ ಲೇವಾದೇವಿ ಸಂಘ" ಎಂಬ ಹೆಸರಿನಿಂದ ಒಂದು ಸಂಸ್ಥೆಯನ್ನು ಏರ್ಪಡಿಸಿ, ಸುಮಾರು ಡಿಸ್ಸಿ. 2—3 ತಿಂಗಳುಗಳಿಂದಲೂ ಅದರ ಕಾರ್ಯಕ್ರಮಗಳನ್ನು ನಡೆಯಿಸುತ್ತಲಿರುವುದು ಸರ್ವರಿಗೂ ತಿಳಿದ ವಿಷಯವೇ ಆಗಿರುತ್ತದೆ.

ಸದರಿ ಸಂಘದ ಪುರೋಭಿವೃದ್ಧಿಗಾಗಿ ಆಹರ್ನಿಶಿಯಲ್ಲೂ ದುಡಿದು [illegible] ನೋಡಿಕೊಂಡು ಇಂದ ಶ್ರಮಿಸಿದ [illegible] ಲ ಕವಿ ಟಿಯ ಗೌರವ ಕಾರ್ಯದರ್ಶಿಗಳಾದ ಶ್ರೀ ಟಿ ಎಸ್. ಕಾರ್ಯಪ್ಪನವರು ಈ ಕೂಡ್ಲಿ [illegible] ಉಪಾಧ್ಯಾಯರುಗಳ ಸಭೆಯ ಮುಂದೆ ಸದರಿ [illegible] ಕಾರ್ಯಕ್ರಮಗಳನ್ನು ವಿವರಿಸಿ ಇಲ್ಲೂ ಒಂದು ಉಪಕಮಿಟಿಯನ್ನು ಏರ್ಪಡಿಸುವ ಉದ್ದೇಶದಿಂದ ಇಲ್ಲಿಗೆ ದಯಮಾಡಿಸಿದರು.

ಕೂಡ್ಲಿಪೇಟೆ ಸೆಂಟ್ರಲ್ ಉಪಾಧ್ಯಾಯರುಗಳ ಸಂಘದ ಗೌರವ ಕಾರ್ಯದರ್ಶಿಗಳ ಸನ್ನಾಹದಿಂದ ತಾರೀಖು 8—2—26 ನೇ ಸೋಮವಾರ 10 ಗಂಟೆಗೆ ಇಲ್ಲಿರುವ ಟವನ್ ನೂಸ್ಕಲ್ ಸಕ್ರೆಟರಿ ಶ್ರೀ ಯಂ ಯಸ್ ಶಾಂತಮಲ್ಲಪ್ಪನವರ ಆಧ್ಯಕ್ಷತೆಯಲ್ಲಿ ನೆರವೇರಿ [illegible] ಹಾಡುವ [illegible] ಪ್ರಾರಂಭವಾಯಿತು ಸಭೆಯಲ್ಲಿ ಈ ಸೆಂಟ್ರಲ್ ಎಲ್ಲಾ ಉಪಾಧ್ಯಾಯರುಗಳೂ ಹಾಜರಿದ್ದರು.

ಶ್ರೀ ಟಿ ಎಸ್ ಕಾರ್ಯಪ್ಪನವರು ಸಂಘದ ಜನ್ಮಚರಿತ್ರೆ, ಉದ್ದೇಶ್ಯ, ಕಾರ್ಯಕ್ರಮಗಳನ್ನೂ ಸುಮಾರು 1 ಗಂಟೆಯ ವರೆಗೆ ಸಕಲರ ಮನಸ್ಸೋಪಂಜನವಾಗುವಂತೆ ಭಾಷಣವಾ ಡಿದನಂತರ ಕೂಡ್ಲಿಪೇಟೆ ಸ್ಕೂಲ್ ಹೆಡ್‌ಮಾಸ್ಟರ್ ಮೆ. ಕೆ ಯಸ್ ಕರಿಬಸಪ್ಪನವರು ಸದರಿ ಸಹಕಾರಿ ಸಂಘದ ಬೈಲಾಗಳನ್ನು ಸಕಲರಿಗೂ [illegible] ಆದರ ಮುಖ್ಯ ತತ್ವವನ್ನು [illegible] ಸದರಿ ಬೈಲಾಗಳಲ್ಲಿ [illegible] ಸಭಿಕರಲ್ಲಿ ಕೆಲ [illegible] ಕಾರ್ಯಪ್ಪನವರ [illegible] ಬೈಲಾಗಳನ್ನು [illegible] ಹಾಸನ [illegible] ಅವಶ್ಯವಾದುದನ್ನು ತಿದ್ದುಪಡಿ [illegible] ಬೈಲಾದಲ್ಲಿ [illegible] ಸಂಘಕ್ಕೆ ಮೆಂಬರು [illegible] ಉಪಾಧ್ಯಾಯರಗಳು ತಮ್ಮ ತಮ್ಮ [illegible] ಶ್ರೀ ಟಿ ಎಸ್ ಕಾರ್ಯಪ್ಪನವರಿಗೆ [illegible] ರೀತಿಯನ್ನು ಪಡದರು [illegible] ಸಂಘದ [illegible] ಜೇರ [illegible].

ಇಲ್ಲಿ ಏರ್ಪಡಿಸಿದ ಉಪಕಮಿಟಿಗೆ ಕೂಡ್ಲಿಪೇಟೆ ಸ್ಕೂಲ್ ಹೆಡ್ ಮಾ. ಶ್ರೀ ಕೆ ಎಸ್ ಕರಿಬಸಪ್ಪನವರು ಪ್ರೆಸಿಡೆಂಟರಾಗಿಯೂ, ಸದರಿ ಸ್ಕೂಲ್ ಅ. ಮಾ ಗಳಾದ ಶ್ರೀ ಎಮ್. ಜಿ. [illegible] ಎಫ್ ವಿ ಶಾಸ್ತ್ರಿಯವರು [illegible] ಶ್ರೀ ಎ ಎಸ್ [illegible] ಶ್ರೀ ಡಿ [illegible] ಕಮಿಟಿ ಮೆಂಬರುಗಳಾಗಿಯೂ ಚುನಾಯಿಸಲ್ಪಟ್ಟರು.

ಈ ಉಪಕಮಿಟಿಯನ್ನು ನಡೆಸುವ ಎಲ್ಲಾ ವಿಧವಾದ ಸಹಾಯಗಳನ್ನು ವೀರರಾಜಪೇಟೆಯಲ್ಲಿರುವ ಸೆಂಟ್ರಲ್ ಕಮಿಟಿಯ ಮಂಜೂರಾತಿಗೆ ಒಳಪಟ್ಟಿರಬೇಕೆಂತಲೂ, ತತ್ಸಂಬಂಧವಾದ ಪತ್ರವ್ಯವಹಾರಗಳನ್ನೆಲ್ಲಾ ಓನಾರ್ ಸ್ಟಾರ ತಮ್ಮೊಡನೆ ನಡೆಸಬೇಕೆಂದೂ ಶ್ರೀ ಟಿ ಎಸ್ ಕಾರ್ಯಪ್ಪನವರು ಪ್ರೆಸಿಡೆಂಟರಿಗೆ ಹೇಳಿದ ನಂತರ ಸಭೆಯು ಶಾಲಾಬಾಲಕರ ಮನೋಹರ ಮಂಗಳ ಗೀತೆ [illegible] ಜಯಘೋಷಗಳೊಡನೆ ಮುಕ್ತಾಯವಾಯಿತು.

ಟಿ ಎಸ್. ಕರಿಬಸಪ್ಪ.

ಸ್ವಾಮಿನಿ [illegible] ಸಂಪಾದಕರಿಗೆ,

[illegible] ಯಿಂದ ಬೇರೆ [illegible] ನಾನು ಹಿಂದುಮತದಲ್ಲಿ [illegible] ಪಶ್ಚಾತಾಪ ಪಡುವವ [illegible] ಒಂದು ಧ [illegible] ತಿಳಿಸಬೇಕಾಗಿ ಪ್ರಾರ್ಥಿಸುತ್ತೇನೆ.

ತಿಳಿಗೇಡಿ

ಒಂದು ಕೇಳಿದ ಪ್ರಶ್ನೆಗಳು

[illegible] ಕೊಡಗು ಪತ್ರಿಕೆಯಲ್ಲಿ [illegible] ಪ್ರಕಟಿ [illegible] ನೆಲ್ಲ [illegible].

ಮ. ಶ್ರೀ. [illegible] ಉಪಾಧ್ಯಾಯ [illegible] ಶ್ರೀ [illegible] ಈ ಬಾತ್ಮಿ [illegible] ನಾಗುತ್ತೆ.

ಇಷ್ಟೊಂದು [illegible] ಸಂಗೇಶರಾಯರ [illegible] ಶ್ರೀ ಮಂಗೇಶರಾಯರು [illegible] ಶ್ರೀ ಕುಶಾಲಪ್ಪನವರು [illegible]

ಕೊಡಗಿನಲ್ಲಿ ಯಾವನಾದರೂ ಒಂದು ದೊಡ್ಡ ಉದ್ಯೋಗಕ್ಕೆ ದೇಶದ ಜನಗಳು ಜೊತೆಗಾಗಿ ಅರ್ಹತೆಯನ್ನು ಹೊಂದಿ ಬಂದ ಕೂಡಲೇ, ಆ ಪದವಿಯಲ್ಲಿ ಮೊದಲಿದ್ದವರು ಮಾಡಿದ ಉಪಯುಕ್ತವಾದ ಕೆಲಸಗಳನ್ನು ಗಣನೆಗೆ ತಾರದೆ ವ್ಯಕ್ತಿ ದೂಷಣೆಯಿಂದ ಹೊಸಬರನ್ನು ಆ ಪದವಿಗೆ ತರಬಹುದೆಂದು ಆಲೋಚಿಸುವುದು ಸರಿಯಲ್ಲ. ಮೆ|| ಕುಶಾಲಪ್ಪನವರು ಈ ಬಾತ್ಮಿಯನ್ನು ತಿಳಿದಿರಲಾರರು. ಅವರ ಹೆಸರನ್ನೂ ಹಿಗೊಂಡ ಈ ಬಾತ್ಮಿಯನ್ನು ನೋಡಿ ಅವರು ತುಂಬಾ ವ್ಯಸನಪಟ್ಟಿರಲೇ ಬೇಕು.

ವೀರರಾಜೇಂದ್ರಪೇಟೆ ಹೈಸ್ಕೂಲು ಮಡಿಕೇರಿ ಹೈಸ್ಕೂಲಿಗೆ ಆಧೀನವಾಗಿರಬೇಕಾದದಾಗಿ ಪತ್ರಿಕೆಯಲ್ಲಿ ಒಂದು ಒಂದು ಬಾತ್ಮಿಗೆ ಮ|| ಶ್ರೀ|| ಸಿ ಯಂ. ರಾವ್ ರಾಯರು ತುಂಬಾ ವ್ಯಸನಪಟ್ಟು ಈ ವಿಷಯವನ್ನ ಮೇಲಾಧಿಕಾರಿಗಳೂ, ಆಗಿನ ಕೊಡಗು ಕಮಿಷನರ್ ಸಾಹೇಬರವರಿಗೂ ಹೇಳಿಕೊಂಡದ್ದು ಅನೇಕರಿಗೆ ತಿಳಿಯದ ವಿಷಯವಲ್ಲ.

ಹೀಗೆಯೇ ಸ್ನೇಹಿತರು ಮತ್ತು ಕ್ಷೇಮ ಚಿಂತಕರು ಎಂದು ಅನ್ನಿಸಿಕೊಳ್ಳುವ ಕೆಲವರು ಇಂಥಾ ಬಾತ್ಮಿಗಳಿಂದ ಜೊತೆಗಾದ ತಮ್ಮ ಸ್ನೇಹಿತರಿಗೆ ಒಳ್ಳೇದು ಮಾಡುವುದರ ಬದಲು ಹಚ್ಚಾಗಿ ಕಡೆಕೂ ತಂದಂತಿರಾಗುವುದಿಲ್ಲವೇ?

ಪ್ರಪಂಚದಲ್ಲಿ ಮನುಷ್ಯನೇ ತಪ್ಪುಮಾಡುವವನಾಗಿರುತ್ತಾನೆ. ಪ್ರಕೃತಿಯೊಬ್ಬನ ಅಭಿರುಚಿಯೂ, ಆಲೋಚನೆಯೂ, ರೂಪವೂ ಬೇರೆ ಬೇರೆ ಆಗಿರುವುದು. ಯಾರಲ್ಲಿಯಾದರೂ ಕಾಣುವ ತಪ್ಪುಗಳನ್ನ ವರ್ತಮಾನ ಪತ್ರಿಕೆಗಳಲ್ಲಿ ಪ್ರಕಟಿಸುವ, ಜನಸಮುದಾಯದಲ್ಲಿ ದೂಷಿಸುವ ಬದಲು ಆಯಾಯ ವ್ಯಕ್ತಿಗಳಲ್ಲಿ ಸ್ನೇಹಯುತವಾಗಿ ಪ್ರಸ್ತಾಪಿಸಿದರೆ ಪರಸ್ಪರ ವಿಶ್ವಾಸವು ಹೆಚ್ಚಿ ಎಲ್ಲರೂ ಹರ್ಷಚಿತ್ತರಾಗಬಹುದು.

ಈ ಬಾತ್ಮಿಯಲ್ಲಿ ಮಂಗೇಶರಾಯರಿಗೆ ಇವೆ ಎಂದು ಬಾತ್ಮಿದಾರರ ನೆನೆಸಿದ ದೋಷಗಳನ್ನು ಅರ್ಥೈಸಿದರೆ ವಿನಹ ಮಂಗೇಶರಾಯರಲ್ಲಿ ಚನ್ನಾಗಿ ಕಾಣಬರುವ ಒಳ್ಳೇ ಗುಣಗಳನ್ನು ಯಾವ ಕಾರಣಕ್ಕಾಗಿ ಹೇಳಲಿಲ್ಲವೋ ತಿಳಿಯದು. ತಿಳಿಯಲೆಂದಲ್ಲ ಗುಣಗಳನ್ನು ಹೊಗಳಿದರೆ ಅವರ ಬಾತ್ಮಿಯ ಉದ್ದೇಶವು ನೆರವೇರಲಾರದು ಎಂದು ಬಗೆದಿರಬಹುದಲ್ಲವೇ?

ಮ|| ಶ್ರೀ|| ಮಂಗೇಶರಾಯರು, ಬಾಲಕರಿಗೂ, ಉಪಾಧ್ಯಾಯರಿಗೂ ಲಿಳಿವು ಹುಟ್ಟಿಸುವ ಅನೇಕ ಚಿಕ್ಕ ಚಿಕ್ಕ ಪುಸ್ತಕಗಳನ್ನು ಪ್ರಕಟಿಸಿ ಗ್ರಂಥಕರ್ತರು. ಇವರು ರಚಿಸಿದ ಕೆಲವು ಗ್ರಂಥಗಳಿಂದ ಇವರ ಉನ್ನತ ದೇಶಾಭಿಮಾನವು ಹೊರಬೀಳುವದು. ಇವರ ಇಂಗ್ಲೀಷಿನಲ್ಲಿ ಬಿ ಎ ಎಲ್ ಟಿ ಪಾಸಾದವರಾಗ್ಯೂ ಕನ್ನಡ ಭಾಷಾಭಿಮಾನವು ಇವರಲ್ಲಿ ತುಂಬಿ ತುಳುಕಿ ಕೊಡಗಿನ ಪರೆತ್ರವಲ್ಲ ಇಡೀ ಕರ್ನಾಟಕದ ಸಾಹಿತ್ಯಕ್ಕೆ ಒಂದು ಸ್ತಂಭದಂತಿರುವರು. ವಿದ್ಯಾವಂತರು ಕಡಿಮೆ ಎಂಬ ಆ ಕಾಲದಲ್ಲಿ ಬಿ. ಎ. ಎಲ್. ಟಿ ಪರೀಕ್ಷೆಯಲ್ಲಿ ತೇರ್ಗಡೆಹೊಂದಿ, ವಿದ್ಯಾ ಇಲಾಖೆಯಲ್ಲಿ ಚಿಕ್ಕ ಉದ್ಯೋಗದಿಂದ ಮೆಲ್ಲಗೆ ತಮ್ಮ ಕೆಲಸದ ಪರಿಶ್ರಮವಿಂದ ಮೇಲು ಮೇಲಿನ ಪದವಿಗೆ ಬಂದ ಮಂಗೇಶರಾಯರ ಅನುಭವ ಮತ್ತು ನಾಗರೀಕತನವೆಲ್ಲಿ? ವ್ಯಕ್ತಿ ದೂಷಣೆಯ ವಿಶ್ವಾಮಿತ್ರರ ದೋಷಾರೋಪಣೆಯೆಲ್ಲಿ? ಈ ವಿಶ್ವಾಮಿತ್ರರು ತಮ್ಮ ನಿಜವಾದ ಹೆಸರನ್ನು ಪ್ರಕಟಿಸಿದ್ದರೆ ದೇಶಕ್ಕೆ ಇವರ ಗುರುತ್ವದ ಬೆಲೆ ತಿಳಿಯುತ್ತಿತ್ತು.

ವಿದ್ಯಾ ಇಲಾಖೆಯ ಮೇಲಧಿಕಾರಿಗಳಾದ ಸಬ್ ಅಸಿಸ್ಟಾಂಟ್ ಇನಸ್ಪಕ್ಟರು ಬಂದೊಂದು ಸಾರಿ ಬಂದೊಂದು ಹೈಸ್ಕೂಲ್ ಹೆಡ್ಮಾಸ್ಟರರು, ಇವರುಗಳ ಮೇಲೂ, ಈಚೆಗೆ ಇಬ್ಬರು ಸುಪರಿಂಟೆಂಡೆಂಟರ ಮೇಲೂ ನಮ್ಮ ದೇಶದ ಒಂದಲ್ಲದಿದ್ದರೆ ಮತ್ತೊಂದು ಪತ್ರಿಕೆಯಲ್ಲಿ ದೋಷಾರೋಪಣೆಯ ಬಾತ್ಮಿಗಳು ಪ್ರಕಟವಾಗುತ್ತಿದ್ದವು. ಪತ್ರಾದಿಪರರೂ ಇವುಗಳಿಗೆ ಎಡೆಕೊಡುತ್ತಾ ಬರುವರು. ವಿದ್ಯಾ ಇಲಾಖೆಯು ವಿದ್ಯಾ ಉದ್ಯೋಗಸ್ಥರ ಪಾಡೇ ಹೀಗಾದರೆ ದೇಶದಲ್ಲಿ ಬಡ ಉಪಾಧ್ಯಾಯರ ಪಾಡೇನು?

ವಿದ್ಯೆ ಎಂಬ ಅಭಿದಾನದ ಬಾತ್ಮಿದಾರರೇ! ನಿಮ್ಮ ಮತ್ತು ನಿಮ್ಮಂಥವರ ವ್ಯಕ್ತಿದೂಷಣೆಯ ಬಾತ್ಮಿಗಳಿಗೆ ವಿದ್ಯಾ ಇಲಾಖೆಯ ಉದ್ಯೋಗಸ್ಥರು ಯಾರೂ ಬೆದರುವಂತಿಲ್ಲ. ಅವರುಗಳ ಕರ್ತವ್ಯ ಅವರಿಗೆ ಚೆನ್ನಾಗಿ ಗೊತ್ತಿರುತ್ತೆ. ಅವರಿಗೆ ನಿಮ್ಮ ತುಚ್ಛ ಬಾತ್ಮಿಗಳಂತಹ ಬಾತ್ಮಿಗಳ ದೋಷಾರೋಪಣೆಯಿಂದ ತಪ್ಪಿಸಿಕೊಳ್ಳುವ ಶಕ್ತಿ ಇದ್ದೇ ಇದೆ.

ಮ ಶ್ರೀ ಮಂಗೇಶರಾಯರನ್ನು ವೃದ್ಧರೆಂದು ಹಾಸ್ಯಮಾಡುವಿರಾ? ನಿಮ್ಮ ಯೌವನವು ನಿಮಗೆ ಶಾಶ್ವತವೇ? ನಿಮಗೆ ನಿಸ್ಸಪಂಚಕ ಜ್ಞಾನವೇ ಕಡಿಮೆಯೆಂದರೆ ತಪ್ಪಾಗಲಾರದೆಂದು ಕೆಲವರು ಅಭಿಪ್ರಾಯ ಪಡುವರು.

ಮ ಶ್ರೀ ಮಂಗೇಶರಾಯರು ವಯೋವೃದ್ಧರು ಮಾತ್ರವೇ ಅಲ್ಲ ಜ್ಞಾನ ವೃದ್ಧರೂ ಹೌದು. ಇದರಿಂದ ಮಾನ ವೃದ್ಧರೂ ಆಗಿರುತ್ತಾರೆ. ಹೀಗಿರುವಾಗಷ್ಟರಿಂದ ನಿಮ್ಮ ಬಾತ್ಮಿಯಿಂದ ನಿಮಗೆ ಸಾಧಕವೂ ಅವರಿಗೆ ಬಾಧಕವೂ ಉಂಟಾಗಲಾರದು. ಆದ್ದರಿಂದ ಇನ್ನು ಮುಂದೆ ದಯಪಟ್ಟು ವ್ಯಕ್ತಿದೂಷಣೆಯ ತಿಳಿಗೇಡಿತನದ ಬಾತ್ಮಿಗಳನ್ನು ಬರೆಯಬ್ಯಾಡಿ. ಇದರಿಂದ ದೇಶದ ಅಭಿವೃದ್ಧಿಗೆ ಪ್ರೋತ್ಸಾಹ ಉಂಟಾಗುವುದರ ಬದಲು ಕುಂದಿಕೆ ಉಂಟಾಗಬಹುದು. ಈ ನಷ್ಟ ಒಮ್ಮೆಗೆ ನಾವು ಉತ್ತರವನ್ನು ಅಪೇಕ್ಷಿಸುವುದಿಲ್ಲ.

"ನಿಷ್ಪಕ್ಷಪಾತಿ"

ಕಸ್ತೂರಿ ಕತ್ತಿ.



ಇದನ್ನು ಇಟ್ಟುಕೊಂಡು ಕ್ಷೌರಿಕನ ಕೈಯ್ಯಲ್ಲಿ ಕೊಟ್ಟು ಕೆಲಸವನ್ನು ಮಾಡಿಕೊಂಡಲ್ಲಿ ಇತರ ಕ ಸಂಬಂಧವಾದ ವ್ಯಾಧಿಗಳು ಬಾರದಂತೆ ಉರಿಯೂ ಇ ತ್ತೆ ಸುಖವಾಗಿರುವದು. ಕ್ರಯ ಕತ್ತಿ 1ಕ್ಕೆ 2—8—0

ರೋಲ್ಡ್ ಗೋಲ್ಡ್ ಭಂಗಾರದ ಕೈಗಡಿಯಾರ.

ಈ ಕೈಗಡಿಯಾರವು ಭಂಗಾರಕ್ಕೆ ಸರಿ ಸಮಾನವಾಗಿದೆ. ಐದಾರು ಗಂಟೆಯನ್ನು ತೋರಿಸುವದು. ಅತ್ಯುತ್ತಮವಾದ ಗಟ್ಟಿ ಸಾಮಾನುಗಳಿಂದ ತಯಾರಿಸಿದ್ದು ಇವಕ್ಕೆ 3 ವರ್ಷಗಳ ಗ್ಯಾರಂಟಿ ಕೊಡುವೆವು. ಕ್ರಯ 1ಕ್ಕೆ 6—12—0.

ವಿಳಾಸ.— ಎಸ್. ಪಾಲ್ ಎಂಡ್ ಕೊ,
ಪೋಸ್ಟು ಬಾಕ್ಸ್ ನಂ. 512,
3 ಪಾರ್ಕ್ ಟೌನ್ ಮದರಾಸು.

ನೋಟೀಸ್.

ಮಡಿಕೇರಿ ಮುನಿಸಿಪಲ್ ಆಫೀಸಿನಿಂದ.

ಎಲ್ಲ ಜನರಿಗೂ ತಿಳಿಯಪಡಿಸುವದೇನೆಂದರೆ

ಸನ್ 1926-27ನೆ ಸಾ|| ರಕ್ಕೆ ಒದಬೇಕಾದ ಮುನಿಸಿಪಾಲಿಟೋಲ್ ಗೇಟ್ ಸುಂಕ, ಮಾರ್ಕೆಟು ಫೀಸು ಮತ್ತು ಒಂದಾಣೆಯ ಗೊಬ್ಬರ ಹ ಕ್ಕುಗಳನ್ನು 1926ನೆ ಇಸವಿ ಮಾ ರ್ಚ ತಾ. 12ನೆ ಶುಕ್ರವಾರ ದಿನ ಮಧ್ಯಾಹ್ನ 12ಗಂಟೆ ಸಮಯಕ್ಕೆ ಮಡಿಕೇರಿ ಮುನಿಸಿಪಲ್ ಆಫೀಸು ಮುಂದುಗಡೆ ವೈಸ್ ಪ್ರೆಸಿಡೆಂಟರ ರೂಬರೂ ಬಹಿರಂಗ ಹರಾಜು ಮಾಡಲಾಗುತ್ತೆ. ಕಾಯುವ'ದಾರರು ಷರ ದರಕಾಸ್ತುಗಳನ್ನು ಸಹ ಕೊಡಬಹುದು. ಹೆಚ್ಚಿನ ವಿವರ ಮುನಿಸಿಪಲ್ ಆಫೀಸಿನಲ್ಲಿ ಕೇಳಿ ತಿಳಿದುಕೊಳ್ಳಬಹುದು.

ಆರ್. ಎಸ್. ಸಂಜೀವರಾವ್,
ವೈಸ್ ಪ್ರೆಸಿಡೆಂಟರು.

ಮನೋಲ್ಲಾಸಿನಿ ತೈಲ

ತಲೆನೋವು, ತಲೆ ತಿರುಗುವುದು, ತಲೆಬುರಿ ಕಣ್ಣುರಿ, ಕಿವಿಯಿಂದ ಕೀವು ಸೋರುವುದು ಕಿವುಡುತನ, ಕಣ್ಣುನೋವು ಅಪಸ್ಮಾರ, ನಿದ್ದೆ ಬಾರದಿರುವುದು, ಸ್ಮರಣ ಶಕ್ತಿ ಕುಂದಿಹೋಗುವುದು ಇವುಗಳನ್ನೆಲ್ಲ ಖಂಡಿತ ಗುಣಪಡಿಸುತ್ತದೆ. ಉದುರುವ ಕೂದಲನ್ನು ನಿಲ್ಲಿಸಿ ಗಿಡ್ಡಗಿರುವ ಕೂದಲನ್ನು ಬೆಳೆಯಿಸಿ ಕೂದಲಿಗೆ ಕಾಂತಿಯನ್ನೂ ಹೊಳಪನ್ನೂ ಕೊಟ್ಟು ಅಕಾಲಕ್ಕೆ ಹಣ್ಣಾಗುವ ಕೂದಲನ್ನು ಕಪ್ಪು ಮಾಡುವುದಲ್ಲದೆ ಬೋಳು ತಲೆಯಲ್ಲಿ ಹೊಸ ಕೂದಲನ್ನು ಹುಟ್ಟಿಸುತ್ತದೆ. ಚಿಕ್ಕ ಸೀಸೆಗೆ ರೂ 1, ದೊಡ್ಡ ಸೀಸೆಗೆ 2—10—0, ಒಂದು ದೊಡ್ಡ ಸೀಸೆಗೆ ರೂ 2, 3 ಸೀಸೆಗಳಿಗೆ —3—0

ಚಂದನಾಸವ.— ಇದು ಪ್ರಮೇಹ- ಮೂತ್ರಕೃಚ್ಛ, ಮೂತ್ರ ಅನಿಯಮವಾಗಿ ಹೋಗುವುದು, ಮೂತ್ರಕೋಶದ ಉರಿ, ಮೂತ್ರಪಿಂಡಗಳ ಉರಿ ಮೂತ್ರನಾಳದಲ್ಲಿ ಹುಣ್ಣು, ಮೂತ್ರ ಹೊಯ್ಯುವಾಗ ಉರಿಯುವದು, ಮೂತ್ರನಾಳದಿಂದ ಕೀವು ಬರುವುದು, ಮೂತ್ರದಲ್ಲಿ ಧಾತು, ಹುಡಿ ಹೋಗುವುದು, ಆಗಾಗ್ಗೆ ಮೂತ್ರ ಬರುವದು, ಮೂತ್ರ ತಡೆಯುವಿಕೆ, ಸಾಮರ್ಥ್ಯವಿಲ್ಲದಿರುವುದು, ದೇಹದಲ್ಲಿ ಉರಿ, ಬಾಯಾರಿಕೆ, ಸ್ವಪ್ನಾವಸ್ಥೆ, ಮೂತ್ರನಾಳದಲ್ಲಿ ಚುಚ್ಚುವ ನೋವು ಇವುಗಳಿಗೆ ಪರಮ ಔಷಧಿ ಗಂಡಸರಿಗೂ ಹೆಂಗಸರಿಗೂ ಇದು ಅತ್ಯುತ್ತಮ ಬಾಟ್ಲಿಗೆ ರೂ. 1—8—0, 3ಕ್ಕೆ ರೂ. 4, ಡಜನಿಗೆ ರೂ. 15.

ರೋಮನಾಶಿನಿ — ಈ ಹುಡಿಯನ್ನು ನೀರಲ್ಲಿ ಕಲಸಿ ಮೈಯಲ್ಲಿ ರೋಮವಿರುವ ಭಾಗಕ್ಕೆ ಹಚ್ಚಲು ರೋಮವು ಉದುರಿ ಬೀಳುವುದು. ಡಬ್ಬಿ ೧ಕ್ಕೆ 6 ಆಣೆ, 3 ಡಬ್ಬಿಗಳಿಗೆ ರೂ. 1, 1 ಡಜನಿಗೆ 3 8-0.

ದದ್ರುಘ್ನ ಲೇಪ.— ಇದನ್ನು ಗಜಕರ್ಣದ ಮೇಲೆ 2-3 ಸಾರಿ ತಾಗಿಸುವಷ್ಟರಲ್ಲಿ ಗುಣ ಬರುತ್ತದೆ. ಡಬ್ಬಿಗೆ ಆ 6, 4 ಡಬ್ಬಿಗಳಿಗೆ ರೂ.1. ಡಜನಿಗೆ ರೂ. 3—8—0.

ನಾರೀಸಖಿ.— ಇದು ಸ್ತ್ರೀಯರ ಹೊಟ್ಟೆನೋವು, ಅತ್ಯಧಿಕ ರಕ್ತಸ್ರಾವ, ಬಿಳಿಸೆರಗು, ಮುಟ್ಟು ದೋಷಗಳು ಮತ್ತು ಗರ್ಭಕೋಶದ ವ್ಯಾಧಿಗಳನ್ನು ಗುಣಪಡಿಸುತ್ತದೆ ಸೀಸೆ ೧ಕ್ಕೆ ರೂ.2

ಅಂಗ್ಸಿಟಿ ಸೀನು.— ಉಬ್ಬಸ ಪೆ ಕ್ಕುದ ಕೆಮ್ಮು, ಅನೇಕ ದಿವಸಗಳಿಂದ ಬರುವ ಕೆಮ್ಮನ್ನೂ ಕಫವನ್ನೂ ಗುಣ ಮಾಡುತ್ತದೆ ಡಬ್ಬಿ ೧ಕ್ಕೆ 2—8—0, 3 ಡಬ್ಬಿಗಳಿಗೆ ರೂ 7.

ಅಮೃತಾರಿಷ್ಟ.— ಇದು ಜ್ವರವನ್ನು ಬಿಡಿಸುವ ಉತ್ತಮ ಮಳೆಯಾದ ಔಷಧಿ. ಎಲ್ಲಾ ತರದ ಜ್ವರಕ್ಕೆ ಉತ್ತಮ. 1 ಬಾಟ್ಲಿಗೆ ರು 1—8—0, 3ಕ್ಕೆ ರೂ. 4, ಡಜನಿಗೆ ರೂ 15

ಲೋಹಾಸವ.— ಇದು ಜ್ವರಗಳಿಗೆ ಮತ್ತು ಮಲೇರಿಯದಿಂದುಂಟಾದ ಅಶಕ್ತತೆಗೆ ದಿವ್ಯವಾದ್ದು 1 ಬಾಟ್ಲಿಗೆ ರೂ. 1—8—0, 3ಕ್ಕೆ ರೂ 4.

ನಮ್ಮ ಕೆಟಲಾಗು ತರಿಸಿ ನೋಡಿರಿ

ವಿಲಾಸ-ಮನೋಲ್ಲಾಸಿನಿ ಕಂಪೆನಿ,
52—9 **9 ಮಂಗಳೂರು, ಕಂಕನಾಡಿ.**

ಡಾಕ್ಟರ್ ಎಸ್. ಎನ್. ಅಯ್ಯಂಗಾರ್, ಬಿ. ಎ,
ಎಲ್. ಆರ್. ಸಿ. ಪಿ. ಅಂಡ್. ಎಸ್. (ಎಡಿನ್‌ಬರ್ಗ್)
ಎಲ್. ಎಫ್. ಪಿ. ಅಂಡ್ ಎಸ್., [ಗ್ಲಾಸ್‌ಗೊ]

ದಂತ ವೈದ್ಯರು

ಮಡಿಕೇರಿ ಮಹದೇವ ಪೇಟೆಯಲ್ಲಿ ಸೌ ಯಂ. ಸಿದ್ದೇಶ್ವರರ ಅಂಗಡಿಯ ಎದುರಿನ ಮನೆಯಲ್ಲಿ ಇಳಿದುಕೊಂಡಿರುತ್ತಾರೆ. ಇಚ್ಛೈಸುವವರು ಅವರನ್ನು ಇಲ್ಲಿ ಭೇಟಿಮಾಡಬಹುದು.

ಅತ್ಯಂತ ಸುಲಭ ದರದ ಮತ್ತು ಹಿಂದೀಯರಿಂದ ಉತ್ತಮ ತರದಲ್ಲಿ ನಡಿಸಲ್ಪಡುತ್ತಿರುವ **ಲೈಟ್ ಆಫ್ ಏಷ್ಯ ಇನ್ಸೂರೆನ್ಸ್ ಕಂಪೆನಿ ಲಿಮಿಟೆಡ್, ಕಲ್ಕತ್ತಾ, ಇದರಲ್ಲಿ ಜೀವವಿಮೆ ಮಾಡಿ ತುಂಬಾ ಲಾಭ ಹೊಂದಿರಿ**

ಏಜೆಂಟ್—

ಎಸ್. ರಾಮಣ್ಣ,
ಮಹದೇವಪೇಟೆ,
ಮಡಿಕೇರಿ.

ಎಂಪೈರ್ ಆಫ್ ಇಂಡಿಯಾ ಲೈಫ್ ಎಷೂರೆನ್ಸ್ ಕಂಪೆನಿ ಲಿಮಿಟೆಡ್

(ಸ್ಥಾಪಿತ —1897ರಲ್ಲಿ)

ಹೆಡ್ ಆಫೀಸು—ಬೊಂಬಾಯಿ.

ಕಂಪೆನಿಯು ಹೆಚ್ಚಿನ ಪ್ರವರ್ಧಮಾನ ಸ್ಥಿತಿಯಲ್ಲಿದೆ.

28 ವರ್ಷಗಳಿಂದ ಅತಿ ಎಚ್ಚರಿಕೆಯಿಂದಲೂ, ಮಿತವ್ಯಯದಿಂದಲೂ ಕಂಪೆನಿಯ ಕಾರುಬಾರು ನಡೆಯುತ್ತಿದ್ದು ಈಗ ಅದರ ಮೂಲಧನವು ರೂ. 2,50,00,000ಕ್ಕೆ ಏರಿದೆ.

ಈ ಕಂಪೆನಿಯ ವಿಮೆದರಗಳು ಅತಿಸುಲಭ. ಹೆಚ್ಚಿನ ವಿವರಗಳಿಗೂ, ಪ್ರಾಸ್‌ಪೆಕ್ಟಸ್ಸಿಗೂ ಲೋಕಲ್ ಏಜಂಟರುಗಳಿಗಾಗಲಿ ಅಥವಾ ಈ ಕೆಳಗಿನ ವಿಳಾಸಕ್ಕಾಗಲಿ ಬರೆಯಿರಿ:—

ಪಿ. ಕೆ. ಶಂಕರನಾರಾಯಣಾಯ್ಯರ್,
ಮೈಸೂರು ಮತ್ತು ಕೊಡಗು ಪ್ರಾಂತ್ಯಗಳ ಬ್ರಾಂಚ್ ಸೆಕ್ರೆಟರಿ,
152 3 ಕಮರ್ಷಿಯಲ್ ಸ್ಟ್ರೀಟ್, ಬೆಂಗಳೂರು.

24—4

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್. ಕೋ ಆಪರೇಟಿವ್ ಸೊಸೈಟೀಸ್ ಆಕ್ಟಿನ ಪ್ರಕಾರ ರಿಜಿಸ್ಟರಾಗಿದೆ.

	ರೂ.
ಶೇರ್ ಬಂಡವಾಳ —	50,000
ವಸೂಲಾದ ಶೇರ್ ಮೊಬಲಗು—	9890
ಜಮಾಬಂದ ಠೇವಣಾತಿ —	90,600

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲ ಕೊಡತಕ್ಕದ್ದು.

ಒಂದು ವರ್ಷ ವಾಯಿದೆ ಅಥವ ಹೆಚ್ಚಿನ ವಾಯಿದೆಯ ಠೇವಣಾತಿಗಳಿಗೆ ಶೇಕಡ ಶಾಲಿಯಾನ ರೂ. 6—4—0ರ ದರದಲ್ಲಿ ಬಡ್ಡಿ ದೊರೆಯುತ್ತೆ. ಕಡಿಮೆ ವಾಯಿದೆಯ ಠೇವಣಾತಿಗಳಿಗೆ ಶೇಕಡ ಶಾಲಿಯಾನ ದರ ಬಡ್ಡಿ ದೊರೆಯುತ್ತೆ.

ವರ್ಷಕ್ಕೊಂದಾವರ್ತಿ ಕೋ ಆಪರೇಟಿವ್ ರಿಜಿಸ್ಟ್ರಾರವರು ಲೆಕ್ಕ ಆಡಿಟ್ ಮಾಡಿಸಿ ಮಾಡುತ್ತಾರೆ

ಪ್ರೆಸಿಡೆಂಟರು, ಟ್ರೆಜರರ್,
ಕೊಡಂದೇರ ಕುಟ್ಟಯ್ಯನವರು, ಯಂ. ಭುಜಂಗರಾಯರು
ರಾಯ್ ಬಹದ್ದೂರ್. ಬಿ. ಎ. ಬಿ. ಎಲ್.,

ಸೆಕ್ರೆಟರಿ.
ಸಿ. ಎನ್. ವೆಂಕಪ್ಪಯ್ಯನವರು, ಬಿ. ಎ., ಬಿ. ಎಲ್.,
ತಾರೀಕು 29—8—1925.

ಮುದ್ದಾದ ಪುಸ್ತಕ! **ಮುದ್ದಾದ ಮುದ್ರಣ!!**

ಶರೀರ ಸುಖ, ಸಂಪತ್ತು, ಐಶ್ವರ್ಯಗಳನ್ನು ಸಂಪಾದಿಸಲು ಸಲಹೆಗಳನ್ನೂ ಮತ್ತು ಶರೀರ ಮರ್ಮಶಾಸ್ತ್ರ (ಕಾಮಶಾಸ್ತ್ರ)ವನ್ನೂ ತಿಳಿಸುವ

ಮರ್ಮ ಶಾಸ್ತ್ರ-ಎಂಬ ಕಾಮಶಾಸ್ತ್ರ

ಈ ಪುಸ್ತಕವು ಮೊದಲು ಫ್ರೆಂಚ್, ಇಂಗ್ಲೀಷ್, ಹಿಂದುಸ್ತಾನಿ, ಸಂಸ್ಕೃತ ಮುಂತಾದ ಭಾಷೆಗಳಲ್ಲಿ ಬಹು ಗುಪ್ತವಾಗಿತ್ತು. ಇದನ್ನು ನಾವು ಪ್ರಯಾಸದಿಂದ ಸಂಪಾದಿಸಿ ಕನ್ನಡಕ್ಕೆ ತರ್ಜುಮೆ ಮಾಡಿ (84 ಚಿತ್ರಪಟಗಳ ಸಹಿತ) ಥಳಥಳಿಸುವ ಕಾಗದದಲ್ಲಿ ಮುದ್ರಿಸಿ ತಯಾರಿಸಿದ್ದೇವೆ. ಈ ಪುಸ್ತಕದಲ್ಲಿ ಸ್ತ್ರೀ ಪುರುಷರಿಗೆ ಬೇಕಾದ ಎಲ್ಲಾ ಮರ್ಮ ರಹಸ್ಯಗಳೂ, ಸ್ತ್ರೀ ಪುರುಷರು ಅನ್ಯೋನ್ಯವಾಗಿ ನಡೆದುಕೊಳ್ಳುವ ಮಾರ್ಗ- ಸ್ತ್ರೀ ಪುರುಷರಿಗೆ ಉಂಟಾಗುವ ಎಲ್ಲಾ ತರದ ಮರ್ಮವ್ಯಾಧಿಗಳು ಮತ್ತು ಅಂಥಾ ವ್ಯಾಧಿಗಳನ್ನು ಗುಣಪಡಿಸಿಕೊಳ್ಳುವ ಚಿಕಿತ್ಸೆಗಳೂ ಇನ್ನು ಅನೇಕ ತರದ ಮರ್ಮರಹಸ್ಯಗಳು ಚಿತ್ರಪಟಗಳ ಸಹಿತ ತುಂಬಿರುವದು. ಈ ಪುಸ್ತಕದ ಹೆಸರನ್ನು ಕೇಳಿದ ಮಾತ್ರಕ್ಕೆ ಸಂತೋಷವಾಗುವದು. ಇದರ ಓದಲಿಕ್ಕೆ ಯಾರಿಗೆ ತಾನೇ ಸಂತೋಷವಾಗಲಾರದು.

ಕ್ರಯ ಪುಸ್ತಕ ಒಂದಕ್ಕೆ ಒಂದೇ ಒಂದು ರೂಪಾಯಿ ರೂ. 1—0—0.

T. Ramachander Rao & Co.,
Post Box No. 232,
52-9 **Madras.**

ಟಿ. ರಾಮಚಂದ್ರರಾವ್ ಅಂಡ್ ಕೊ,
ಪೋಸ್ಟ್ ಬಾಕ್ಸ್ ನಂ. 232.
ಮದ್ರಾಸ್.

A Lot for SELECTION of Single Barrel Breach Loading Guns at LOWEST PRICE EVER OFFERED.



Original Browning S. **B.B.L.** 12 bore Take Down Hammerless Automatic Ejector Gun, with safety catch ....Price, Rs. 140/-

Do do but by **Winchester** or **Remington** .... Price, Rs. 160/-

Westhojsten or **Remigton S. B. B. L.** 12 bore Six Shots Hammerless Repeating gun, 32 inches barrel with Safety catch .... Price, Rs. 150/-

German S. B. B. L. 12 bore Hammerless Ejector Gun, 32 inches German Steel Barrel with safety catch .... Price, Rs. 65/-

Continental Make Do. Price, Rs. 55/-

Webley & Scott's S. B. B. L. 12 bore Semi Hammerless Ejector Gun, 32 inches Webley's Steel Barrel,.... .... Price, Rs. 75/-

The above Guns can be had in .16, .20, & .410 bore same as above in 12 bore **Special "Duck Gun"**, 3inches barrel .... Price, Rs 80/-

W. W. Greener's "Gaffer" S. B. B. L. 12 bore Martini Action Ejector Gun, 26 inches Greener's Steel Barrel .... Price, Rs. 75/-

W. W. Greener's as above but **Long Range Duck Gun** " with 32 inches barrel, and chamber for 2½ inches to 3 inches case.... .... Price, Rs 90/-

Midland's "Knock-About" S. B. B. L. Ejector Hammer Gun 32 inches barrel. .... Price, Rs. 55/-

Continental Make S. B. B. L. folding Pattern Hammer Gun, 32 inches barrel beautifully engraved and carved.... .... Price, Rs. 45/-

J. Steven's 12 bore Ejector Hammer Gun, 32 inches Steel barrel .... Price, Rs. 45/-

Do do 'Dread Naught" with heavy Breech .... Pre/-Rs/50.

Any of the above of J. Steven's **Special Duck Gun** with 36 inches barrel. Price, Rs. 5 Extra

ENQUIRIES SOLICITED.

THE BOMBAY ARMOURY,

331, ABDUL REHMAN STREET,

24—16 **BOMBAY. 3**

"ಲೋಕರಹಸ್ಯ."

(...)

ಕಿರ್ಲೋಸ್ಕರ ಗಾ...

ಕಿರ್ಲೋಸ್ಕರ ಬಂಧು, ಲಿಮಿಟೆಡ್.
ಕಿರ್ಲೋಸ್ಕರವಾಡಿ,
ಜಿ ಸಾತಾರ್

ಕರ್ಣಾಟಕ ... ಮಿಕ್ಸ್ಚರ್

ಚಳಿಜ್ವರ ಮಲೇರಿಯ ಜ್ವರ ಇನ್‌ಫ್ಲುಯೆಂಝಾ ... ಜ್ವರ, ವೇದನೆಯಾದವುಗಳ ಮೇಲೆ ಅಪ್ರತಿಮವಾದ ಔಷಧವು

ಚಿಲಿ ಬಾಟ್ಲಿಯೊಂದಕ್ಕೆ ರು ೦—೧೪—೦
ಟಪ್ಪಾಲು ಚಾರ್ಜು ಬೇರೆ
ಡಜನ್ ಬಾಟ್ಲಿಗಳಿಗೆ ಟಪ್ಪಾಲುವೆಚ್ಚ ಸಹ ರು.
೯—೨—೦

ಏಜಂಟರು ಬೇಕು ಕೊಡಗಿನ ಸ್ಟೋರ್‌ಕೀಪರರುಗಳು ... ಮೂರು ಜನ ಔಷಧದ ವ್ಯಾಪಾರಿಗಳ ಹೆಸರನ್ನು ತಿಳಿಸಿದಲ್ಲಿ ಅಂದವಾದ ಬ್ಲಾಟಿಂಗ್ ಪೇಪರು ಪುಕ್ಕಟೆ

12—4 ಕರ್ಣಾಟಕ ಬ್ರದರ್ಸ್,
ಗಿರಗಾಂವ, ಮುಂಬಾಯಿ.

ಇದು ಒಳ್ಳೆ ಸಮಯ!

ಪಂಚೆಗಳು.

... ಪೇಟೆ ಕೆ ಪಿ ಚಿಣ್ಣಪ್ಪ,
12—8 ... ಭಂಡಾರ

ಲೋಕಪ್ರಸಿದ್ಧವಾದ! ಅನುಭವಸಿದ್ಧವಾದ!

ಇಂದಿನ ದಿನ ನಾಳೆ ಎಂದು

... ದೊರೆಯಲಾರದು.

... ಅಮ್ಮಣಿಚಂಡ ದೇವಯ್ಯ,
... ಜನರಲ್ ಮರ್ಚೆಂಟ್

ಅಗಸ್ತ್ಯ

ಮನ್ಮಥ ಚಿಂತಾಮಣಿ ಲೇಹ

ರಿಜಿಸ್ಟರ್ ಆದದ್ದು

ಅಬಾಲವೃದ್ಧ ಸ್ತ್ರೀ ಪುರುಷರ ಅನೇಕ ರೋಗಗಳ ... ಸಿದ್ದೆ, ಇಲ್ಲದವರಿಗೂ ಸ್ವಪ್ನೇಂದ್ರಿಯವಾತ ... ಜ್ಞಾನಿ ಸುಜ್ಞಾನಿಗಳಿಗೂ ಉಪಯೋಗವು ... ಔಷಧ 1ಸೇರು 16ದಿವಸ ಸೇವಿಸಬಹುದು. ನಂ (1) 1ಸೇರು ಡಬ್ಬ 1ಕ್ಕೆ ರುಪಾಯಿ 3—0—0 ... ಡಬ್ಬಿ 1ಕ್ಕೆ ರುಪಾಯಿ 1—9—0 ನಂ (2) 1ಸೇರು ಡಬ್ಬ 1ಕ್ಕೆ ರುಪಾಯಿ 2—0—0 ! ಸೇರು ಡಬ್ಬ 1ಕ್ಕೆ 1—1—0 ... ಚಾರ್ಜು ಪ್ರತ್ಯೇಕ ... ವಿಶೇಷ ಮಾಹಿತಿಗೆ ಬರೆಯಿರಿ

ವಿಳಾಸ—ದೇವಣ್ಣ ನಾರಾಯಣಸೇಟ್
ಗೋಳಿಕಟ್ಟಾ
ಮಂಗಳೂರು,
...—26 ದ ಕ

ನೋಟೀಸು.

...
ಹತ್ತುಗಟ್ಟು ನಾಡು ವಿಟಿಂಗ ತಾ 6 3 ... ಪೊನ್ನಂಪೇಟೆಯಲ್ಲಿ ಪೂರ್ವಾಹ್ನ 10 ಗಂಟೆಗೆ
ಅಂಜಿಗೇರಿ ನಾಡು ಮೀಟಿಂಗ್ ತಾ 8-3 26 ರಲ್ಲಿ ... ಮಂದಿರದಲ್ಲಿ ಪೂರ್ವಾಹ್ನ 11 ಗಂಟೆಗೆ
ಶ್ರೀಮಂಗಲ ನಾಡು ಮೀಟಿಂಗ್ ತಾ 9-3-26 ರಲ್ಲಿ
ಶ್ರೀಮಂಗಲ ನಾಡು ಕಚೇರಿ ಬಳಿ ಮಧ್ಯಾಹ್ನ 1 ಗಂಟೆಗೆ

ವೀರಾಜಪೇಟೆ, ಕೆ. ಪಿ. ಚಿಣ್ಣಪ್ಪ,
10-2-26 ಆಕ್ಟಿಂಗ್ ...

ನಾಪುಂಸಕೋದ್ಭವ ಗುಳಿಗೆ.

...
ಪ್ರಯೋಜನವಾಗದಿದ್ದರೆ—ಇದರ ...

ವೈದ್ಯ ... ಕಂಪೆನಿ.
5 ನಂ 6 ... ಉತ್ತರ ಕಾನಡಾ

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್,
ಲಿಮಿಟೆಡ್, ಕೋ ಆಪರೇಟಿವ್ ಸೊಸೈಟೀಸ್
ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ

		ರೂ
ಶೇರ್ ಬಂಡವಾಳ	—	50,000
ವಸೂಲಾದ ಶೇರ್ ಮೊಬಲಗು	—	3690
ಒಟ್ಟು ಠೇವಣಾತಿ	—	90,600

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲಕೊಡತಕ್ಕದ್ದು.
ಒಂದು ವರ್ಷ ... ಠೇವಣಾತಿಗಳಿಗೆ ... ರೂ 6 4-0ರ ದರದಲ್ಲಿ ... ಬಡ್ಡಿ ದೊರೆಯುತ್ತೆ.
... ಕೋ ಆಪರೇಟಿವ್ ರಿಜಿಸ್ಟ್ರಾರವರು ... ಮಾಡುತ್ತಾರೆ

ಪ್ರೆಸಿಡೆಂಟರು ಟ್ರೆಜರರ್
... ರಂಗರಾಯರು
ರಾಯ್ ಬಹದ್ದೂರ್ ಬಿ.ಎ., ಬಿ.ಎಲ್

ಸೆಕ್ರೆಟರಿ.
ಸಿ ಯಸ್ ವೆಂಕಪ್ಪಯ್ಯನವರು, ಬಿ.ಎ., ಬಿ.ಎಲ್
ತಾ. ಕ. 29—8—1925

ARMS & AMMUNITION MART.

Mahomedally-Noorbhoy.



321 Abdul Rehman Street, near Crawford Market, BOMBAY 3
Telegraphic Address—"SHOOTER" Bombay.
[...] Please write for Reduced nett prices list for 1926

Printed & published by Kodanda Appayya, R B Chairman, Board of Directors, at "Kodagu" Press, Mercara for "Kodagu" Ltd

Reg. No. M. 1550.
If not delivered please return to
KODAGU OFFICE MERCARA

ಕೊಡಗು.

ವಾರ್ಷಿಕ ಚಂದಾ ರೂ-೮-೦

[ಕ್ಲೇಶೇನ ಧಾರ್ಯತೇ ವಿದ್ಯಾ ಸತಿ ಸ್ವಯತ್ನತಃ || ಐಕ್ಯಮತ್ಯೇನ ದೇಶಾನಾಂ ಸುಸ್ಥಿರಾ ರಾಜ್ಯ ಸಂಪದಾ]

ಸಂಪಾದಕ— [illegible]

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವದು.

ಸಂಪುಟ ೫] ಕೊಡಗು, ಸನ್ ೧೯೨೩ನೇ ಇಸವಿ ಫೆಬ್ರವರಿ ತಾರೀಕು ೨೩ನೇ ಶುಕ್ರವಾರ [ಸಂಖ್ಯೆ ೩೭

ಸ್ಪೆನ್ಸರ್ ಕಂಪೆನಿ, ಮಡಿಕೇರಿ.

ನಮ್ಮಲ್ಲಿಗೆ ಈಗತಾನೇ ಈ ಕೆಳಗೆ ನಮೂದಿಸಿರುವ ಕೋವಿಗಳು ಮತ್ತು ಇದರ ಸಾಮಗ್ರಿಗಳು ಹೊಸದಾಗಿ ಬಂದಿವೆ. ಒಳ್ಳೇ ನಮೂನೆ.

ದರ ಸುಲಭ!		ಜಾಗ್ರತೆ!!		ನೋಡ ಹೋಗಬೇಡಿರಿ!!!	
12 ಬೋರ್ ಜೋಡಿ ಕೊಳವಿನ ತೋಟೆ ಕೋವಿ	175-0-0	12 ಬೋರ್ ಒಂಟಿಕೊಳವಿನ ತೋಟೆಕೋವಿ	60-0-0	[illegible]	1-2-0
„ „ „	100-0-0	„ „	57-8-0	12 ಬೋರ್ ಚಿಲ್ಲು ತೋಟೆಗಳು 100ಕ್ಕೆ	12-8-0
„ ಒಂಟಿ ಕೊಳವಿನ „	[illegible]-0-0	ಒಂಟಿ ಕೊಳವಿನ [illegible]	60 & 85	„ [illegible] „	15-8-0
„ „ „	97-0-0	ಜೋಡಿ „ „	70 & 85	„ ಗುಂಡು ತೋಟೆ „	19-0-0
„ „ „	80-0-0	[illegible] ಪೌಂಡು ಟಿನ್ನಿಗೆ	2-4-0	„ [illegible] „	16-0-0
„ „ „	65-0-0	„ „ „	0-9-0		

52—17

Spencer & Co. Ltd.,
MERACRA & POLLIBETTA.

ನೋಟೀಸ್.

ಈ ಕೆಳಗಿನ ಮಹಾಶಯರು 'ಕೊಡಗು' ಪತ್ರಿಕೆಯ ಚಂದಾ ಹಣವನ್ನು ವಸೂಲುಮಾಡಲು ಒಪ್ಪಿಕೊಂಡದ್ದರಿಂದ, ಅವರಿಗೆ ರಶೀತಿ ಪುಸ್ತಕಗಳನ್ನು ನಮ್ಮ ಏಜಂಟರು ಮೆ [illegible] ಕುಟ್ಟಪ್ಪನವರ ಉಸ್ತುವಾರಿಕೆಯ ಮೇಲೆ ಕೊಡಲಾಗಿದೆ. ದಯವಿಟ್ಟು ಚಂದಾದಾರರೆಲ್ಲರೂ ಅವರಿಗೆ ಅನುಕೂಲವಿರುವ ಜಾಗದಲ್ಲಿ ಹಣವನ್ನು ಕೊಡಬೇಕಾಗಿ ಕೋರಿಕೆ.

ಏಜಂಟರುಗಳು

ವೀರಾಜಪೇಟೆ—ಖಾದಿ ಭಂಡಾರದಲ್ಲಿ ಮೆ [illegible] ಮುತ್ತಣ್ಣನವರು
ಮೂರ್ನಾಡು—[illegible] ಮೆ [illegible] ದೇವಯ್ಯನವರು
ನಾಪೋಕ್ಲು—ಮೆ [illegible] ಸುಬ್ಬಯ್ಯನವರು
„ ಮೆ. ಪೂಣಚ್ಚ [illegible] ಅಪ್ಪಚ್ಚನವರು
ಗೋಣಿಕೊಪ್ಪಲು—ಮೆ [illegible] ಮಾದಪ್ಪನವರು
ಹುದಿಕೇರಿ—ಮೆ [illegible] ಮಾಚಯ್ಯನವರು
ಅಮ್ಮತ್ತಿ ಸಿದ್ದಾಪುರ—ಮೆ [illegible] ಮಾದಪ್ಪನವರು
„ ಮತ್ತು ವೀರಾಜಪೇಟೆ—ಮೆ [illegible] ಸೋಮಯ್ಯನವರು

ಅಲ್ಲದೆ ಈ ಸಮ್ಮಂಧ ಮೆ. [illegible] ಕುಟ್ಟಪ್ಪನವರ ಕೊಡಗಿನ ಎಲ್ಲಾ ಕಡೆಗಳಲ್ಲೂ ಸಂದರ್ಭಾನುಸಾರ [illegible] ವಾಗ ಅವರಿಗೂ ಹಣ [illegible] ಕೊಡಬೇಕಾಗಿ ಕೋರಿಕೆ

ಮೇನೇಜರ್
"ಕೊಡಗು" ಲಿಮಿಟೆಡ್

MY SCIENTIFIC SYSTEM OF GRADUATED PHYSICAL CULTURE.

SENT FREE TO EVERY ONE

This will show you some of my remarkable achievements in Health building exercises many pages with nice photographs of myself and a number of my pupils. Read what they say about my system. Don't take my word for it. This book will be an impetus an inspiration to every young man. All I ask is the price of postage two annas. Remember this does not obligate you in any way, so don't delay one minute in your life Write for this big book now while it is on your mind.

Prof. M. V. Krishna Rao,
P. O. Basavangudi, G.I.P.
(BANGALORE CITY)

ಮಹನೀಯರೇ,

1923ನೆ ಇಸವಿಯಲ್ಲಿ ವೀರರಾಜೇಂದ್ರಪೇಟೆಯಲ್ಲಿ ತೆರೆದ ನಮ್ಮ ವೈದ್ಯಶಾಲೆಯು ಕಾಲದಲ್ಲಿ ಅನೇಕ ದುಸ್ಸಾಧ್ಯವಾದ ಕಾಯಿಲೆಗಳನ್ನು ಗುಣಪಡಿಸಿ ಹೆಸರುವಾಸಿ ಹೊಂದಿದ ನಮ್ಮ ಕಂಪೆನಿಯ ಮತ್ತೊಂದು ಶಾಖೆಯು ಈಗಾಗಲೇ **ಸೋಮವಾರಪೇಟೆಯಲ್ಲಿ** ತೆರೆಯಲ್ಪಟ್ಟಿದೆ

ಕೃಷ್ಣ ಸಂಬೀಶನ್ ಮತ್ತು ನಾರಾಯಣ ಸಂಬೀಶನ್ ಎಂಬ ಹೆಸರುಗಳುಳ್ಳ ನಮ್ಮ ಪ್ರಧಾನ ವೈದ್ಯರುಗಳು ಒಬ್ಬೊಬ್ಬರು ಒಂದೊಂದು ಶಾಖೆಯಲ್ಲಿ ಯಾವಾಗಲೂ ಇರುತ್ತಾರೆ

ಈ ವೈದ್ಯರುಗಳು ಇಂಡಿಯಾ ಗವರ್ನ್‌ಮೆಂಟಿನ ದ [illegible] ಪದವನ್ನು ಹೊಂದಿದವರಾಗಿಯೂ ಕೊಚ್ಚಿ ಸಂಸ್ಥಾನದ [illegible] ವೈದ್ಯರಾಗಿಯೂ ಸುಪ್ರಸಿದ್ಧ ಹೆಸರುವಾಸಿಯನ್ನು ಪಡೆದವರಾಗಿಯೂ ಇರುವ ಇ. ಟಿ. ನಾರಾಯಣನ್ ಮೂಸ್ ಎಂಬ ಮಹಾನುಭಾವರ ಕೈಕೆಳಗೆ ಹೆಚ್ಚು ವರ್ಷಗಳಿನ್ನು ಪಾಂಡಿತ್ಯವನ್ನೂ ಪರಿಚಯವನ್ನೂ ಪಡೆದವರಾಗಿಯೂ ಇದ್ದಾರೆ.

ಇವರಲ್ಲಿನ ಎಲ್ಲಾ ಔಷಧಗಳಿಗೆ ಮಲಬಾರಿನ ಎಲ್ಲಾ ವೈದ್ಯಶಾಲೆಗಳ ಔಷಧಗಳ ಚಾರ್ಜಿಗಿಂತಲೂ ಕಡಿಮೆಯಾಗಿದೆ

ಸಂಬೀಶನ್ ಮತ್ತು ಕಂಪೆನಿ,
ಆಯುರ್ವೇದಿಕ್ ಪ್ರೈವೇಟ್ ಡಿಸ್ಪೆನ್ಸರಿ.
ಕಲ್ಲೂರು, ವೀರಾಜಪೇಟೆ ಮತ್ತು
ಸೋಮವಾರಪೇಟೆ.

52-46

ಪ್ರಕಟಣೆ.

ನಮ್ಮ ಅಂದವಾದ ಹೊಸ ಅಕ್ಷರಗಳು ಬಂದು ತಲುಪಿದ್ದುದರಿಂದ, 'ಲೆಟರ್ ಹೆಡ್ಸ್' 'ವಿಸಿಟಿಂಗ್ ಕಾರ್ಡ್ಸ್' ಆಮಂತ್ರಣಗಳು (ಇನ್ವಿಟೇಶನ್) ಮೊದಲಾದ ಪ್ರಿಂಟಿಂಗ್ ಕೆಲಸಗಳನ್ನು ಇಂಗ್ಲೀಷ್ ಮತ್ತು ಕನ್ನಡದಲ್ಲಿ ಚಂದವಾಗಿಯೂ ಕಡಿಮೆ ಚಾರ್ಜಿನಲ್ಲಿಯೂ ನಿಯಮಿತ ಕಾಲದಲ್ಲಿಯೂ ಮಾಡಿಕೊಡಲು ತಯಾರಾಗಿದ್ದೇವೆ

ಮಡಿಕೇರಿ. ಮೇನೇಜರ್,
'ಕೊಡಗು' ಲಿಮಿಟೆಡ್

ಆಂಧ್ರ ಆಯುರ್ವೇದಿಕ್ ಫಾರ್ಮಸಿ.

ಬ್ರಾಂಚ್ ಬೆಂಗಳೂರು ಸಿಟಿ

ಚ್ಯವನಪ್ರಾಸ ಲೇಹ.

ಇದು ಸರ್ವೋತ್ಕೃಷ್ಟವಾದ ಗಿಡಮೂಲಿಕೆಗಳಿಂದ ತಯಾರಿಸಲ್ಪಟ್ಟ ಆಯುರ್ವೇದ ರಸಾಯನೌಷಧವು. ವಿದ್ಯಾರ್ಥಿಗಳೂ ವಿಶೇಷವಾಗಿ ಬುದ್ಧಿಯನ್ನು ಪ್ರಯೋಗಿಸಿ ಕೆಲಸ ಮಾಡುವವರೂ ಈ ಲೇಹವನ್ನು ಸೇವಿಸಿದರೆ ವಿಶೇಷವಾಗಿ ಬುದ್ಧಿಶಕ್ತಿಯನ್ನೂ [illegible] ಹೊಂದುವರು [illegible] ದೀರ್ಘಕಾಲದ ವ್ಯಾಧಿಯಿಂದಾ [illegible] ನಡತೆಯಿಂದಾಗಲಿ, ಸ್ವಭಾವ ಶಕ್ತಿಯು ಕೊರತೆಯಿಂದಾಗಲೀ ಶರೀರ ಕಾಂತಿಯು ಕುಂದಿ ರಕ್ತ ಕೆಟ್ಟು ಇಂದ್ರಿಯ ದೌರ್ಬಲ್ಯವೇ ಮೊದಲಾದ ವಿಕಾರಗಳಿಂದ ಪೀಡಿತರಾಗಿರುವವರು ಈ ಲೇಹವನ್ನು ಸೇವಿಸಿದರೆ ಈ ತರದ ವಿಕಾರಗಳನ್ನೆಲ್ಲಾ ಪರಿಹರಿಸಿ ದೇಹಕ್ಕೂ ಮನಸ್ಸಿಗೂ ಉಲ್ಲಾಸವನ್ನುಂಟುಮಾಡಿ ಮಾಂಸ ಖಂಡಗಳಿಗೂ ನರಗಳಿಗೂ ಬಲವನ್ನು ಕೊಟ್ಟು ದೇಹಪುಷ್ಟಿಯನ್ನುಂಟುಮಾಡಿ ನವಚೈತನ್ಯವನ್ನುಂಟುಮಾಡುವುದು. ಅಲ್ಲದೆ ಆರೋಗ್ಯದ್ದ ಶರೀರವುಳ್ಳವರಾಗಿ ದೀರ್ಘಕಾಲ ಬದುಕುವರು ಕೆಮ್ಮು ಉಬ್ಬಸ ವ್ಯಾಧಿಯುಳ್ಳವರಿಗೂ ಮುಖ್ಯವಾಗಿ ಕ್ಷಯರೋಗಿಗಳಿಗೂ ಇದು ಸಂಜೀವಿನಿಯೇ ಸರಿ! ಚರಕ ಸಂಹಿತೆಯಲ್ಲಿ ಇದರ ಗುಣವು ಅದ್ಭುತವಾಗಿ ಹೇಳಲ್ಪಟ್ಟಿದೆ ೧೦ ತೊಲೆಗೆ ೧ ರೂಪಾಯಿ. ೪೦ ತೊಲೆಗೆ ೩ ರೂಪಾಯಿ.

ಎಲ್ಲಾ ಕಡೆಯಲ್ಲಿಯೂ ಏಜಂಟರು ಬೇಕು.

[illegible] ಆಯುರ್ವೇದ ಔಷಧಗಳ [illegible] ಕ್ರಯಪಟ್ಟಿಗೆ ಬರೆಯಿರಿ

ಬಿ. ಸಿ. ಎಸ್. ಮುನಿಯಪ್ಪ ಅಂಡ್ ಕೋ,

ಮ್ಯಾನೇಜಿಂಗ್ ಏಜಂಟ್ಸ್, ಆಂಧ್ರ ಆಯುರ್ವೇದಿಕ್ ಫಾರ್ಮಸಿ.

1—4 [illegible], ಬೆಂಗಳೂರು ಸಿಟಿ.

"ಕೊಡಗು"

ಸನ್ ೧೯೨೬ನೇ ಇಸವಿ ಫೆಬ್ರವರಿ ತಾ. ೨೬ನೇ ಶುಕ್ರವಾರ.

ಡಿಸ್ಟ್ರಿಕ್ಟ್ ಬೋರ್ಡ್.

ನಮ್ಮ ದೇಶದಲ್ಲಿ ಕಳೆದ ಒಂದು ವರ್ಷದಿಂದ ಡಿಸ್ಟ್ರಿಕ್ಟ್ ಬೋರ್ಡ್ ಇಲ್ಲದೆ ಡಿಸ್ಟ್ರಿಕ್ಟ್ ಬೋರ್ಡಿನ ಆಡಳಿತವು ನಡೆಯುತ್ತಿದೆಯೆಂಬುದು ನಾಚಿಕಗೇಡಲ್ಲವೇ? ಡಿಸ್ಟ್ರಿಕ್ಟ್ ಬೋರ್ಡನ್ನು ಪ್ರಜೆಗಳ ಅಧೀನಕ್ಕೇ ಬಿಟ್ಟುಕೊಟ್ಟು ಉದ್ಯೋಗಸ್ಥನಲ್ಲದವನನ್ನು ಅಧ್ಯಕ್ಷನನ್ನಾಗಿ ಚುನಾಯಿಸಿಕೊಳ್ಳುವ ಹಕ್ಕು ಕೊಡಬೇಕಂತ 1918 ನೇ ಇಸ್ವಿಯಿಂದಲೇ ಜನರು ಕೇಳಿಕೊಳ್ಳುತ್ತಾ ಬಂದದ್ದು ಅಲ್ಲದೆ ಕೌನ್ಸಿಲಿನಲ್ಲಿ ಸಹ ಈ ಠರಾವು ಪಾಸಾಯಿತು. ಬಿಟ್ಟು ಹಿಂದುಸ್ಥಾನದಲ್ಲೆಲ್ಲಾ 1919 ರಿಂದಲೇ ಜಾರಿಗೆ ತಂದಿರುವ ಈ ಹಕ್ಕನ್ನು ಜನರ ಅಪೇಕ್ಷೆ ಮೇರೆ ನಮ್ಮ ದೇಶದಲ್ಲೂ ಮಂಜೂರು ಮಾಡುವದರ ಬದಲು 1925 ನೇ ಇಸ್ವಿಯಿಂದ ಮೊದಲು ಕೆಲಸ ನೋಡುತ್ತಿದ್ದ ಉದ್ಯೋಗಸ್ಥರೇ ಹೆಚ್ಚಾಗಿದ್ದ ಬೋರ್ಡನ್ನೂ ಸಹ ಇಲ್ಲದೆ ಮಾಡಿರುವದು ಬಹಳ ಶೋಚನೀಯವಾಗಿದೆ.

1924 ನೇ ಇಸ್ವಿಯಲ್ಲಿ ಆಗಬೇಕಾಗಿದ್ದ ಹೊಸ ಚುನಾವಣೆಯನ್ನು ನಿಲ್ಲಿಸಿ ಹೊಸರೂಲ್ಸು ಜಾರಿಗೆ ತರುವ ಬಗ್ಗೆ ಎಂಬ ಕಾರಣದಿಂದ ಚುನಾವಣೆಯನ್ನು ಒಂದು ವರ್ಷ ಮುಂದಕ್ಕೆ ಹಾಕಿದರು. ಆ ಮೇರೆ 1925 ರಲ್ಲಿ ಹೊಸ ರೂಲ್ಸಂತೂ ಇಲ್ಲವಲ್ಲ! ಹಳೇರೂಲ್ಸು ಮೇರೆ ಸಹ ಚುನಾವಣೆಯೇ ಇಲ್ಲ! ಈ ದೇಶಕ್ಕೆ ಕೌನ್ಸಿಲ ಮಂಜೂರಾಯಿತೆಂತ ವರ್ತಮಾನ ತಿಳಿದಾಗ ಆಗ ಕಮೀಶನರಾಗಿದ್ದ ಮಿ ಸೂಟರವರು ಇನ್ನು ಡಿಸ್ಟ್ರಿಕ್ಟ್ ಬೋರ್ಡ್ ಬೇಡವೆಂತ ಹೇಳಿದ್ದರಂತ ತಿಳಿದಿದ್ದೆವು ಅಂದರೆ ಡಿಸ್ಟ್ರಿಕ್ಟ್ ಬೋರ್ಡಿನ ಕೆಲಸವನ್ನೆಲ್ಲಾ ಕೌನ್ಸಿಲೇ ಇನ್ನು ಮುಂದೆ ಮಾಡುತ್ತಾ ಬರತ್ತದೆಯೆಂತ ಅವರು ಅಭಿಪ್ರಾಯಪಟ್ಟಿದ್ದರಂತೆ. ಈ ತಪ್ಪು ಅಭಿಪ್ರಾಯವೇ ಜಾರಿಗೆ ಬಂದು ಹೋದಂತೆ ಕಾಣುತ್ತದೆ.

ನಮ್ಮ ಕೌನ್ಸಿಲಿಗೆ ದೇಶದ ಆಡಳಿತದ ಜವಾಬ್ದಾರಿಯೇ ನನ್ನೂ ಕೊಟ್ಟಿರುವದಿಲ್ಲ. ಆಡಳಿತದ ಜವಾಬ್ದಾರಿ ಇರುವ ಬೇರೆ ಪ್ರಾಂತ್ಯಗಳಲ್ಲಾದರೆ ಕೌನ್ಸಿಲಿನ ಬಹುಮತದ ನಂಬಿಕೆಗೆ ಪಾತ್ರರಾದ ಚುನಾಯಿತರಾದ ಮೆಂಬರರು ಮಂತ್ರಿಗಳಾಗಿ ನೇಮಿಸಲ್ಪಡುತ್ತಾರೆ. ಅಂಥಾ ಮಂತ್ರಿಗಳು ಬೇರೆ ಬೇರೆ ಇಲಾಖೆಗಳ ಆಡಳಿತವನ್ನು ನಡಿಸುವವರಾಗಿರುತ್ತಾರೆ. ಡಿಸ್ಟ್ರಿಕ್ಟ್ ಬೋರ್ಡ್ ಮುನ್ಸಿಪಾಲಿಟಿಗಳನ್ನು ಒಳಕೊಂಡ ಸ್ಥಳೀಯ ಸ್ವರಾಜ್ಯದ ಇಲಾಖೆಯು ಒಬ್ಬ ಮಂತ್ರಿಯ ತಾಬೆಯಲ್ಲಿ ಇರುತ್ತದೆ. ಈ ತರದ ಜವಾಬ್ದಾರಿ ಸಹ ನಮ್ಮ ಕೌನ್ಸಿಲಿಗೆ ಇರುವದಿಲ್ಲ. ಅಂಥಾ ಜವಾಬ್ದಾರಿ ಇದ್ದಿದ್ದರೆ ಡಿಸ್ಟ್ರಿಕ್ಟ್ ಬೋರ್ಡ್ ಇಲ್ಲದೆ ಆಡಳಿತವನ್ನು ನಡಿಸಲಿಕ್ಕೆ ಬಿಟ್ಟಿದ್ದಕ್ಕಾಗಿ ಅಂಥಾ ಮಂತ್ರಿಯ ಸಂಬಳವನ್ನು ಕೊಡಕೂಡದೆಂತ ಕೌನ್ಸಿಲಿನಲ್ಲಿ ಠರಾವು ಪಾಸಾಗುತ್ತಿತ್ತು. ನಮ್ಮ ದೇಶದಲ್ಲಿಯಾದರೋ ಡಿಸ್ಟ್ರಿಕ್ಟ್ ಬೋರ್ಡ್ ಇಲಾಖೆಯ ಚಾರ್ಜಿನಲ್ಲಿ ಇರುವ ಮಂತ್ರಿಯು ಕಮೀಷನರೇ ಆಗಿದ್ದಾರೆ. ಅವರೇ ಡಿಸ್ಟ್ರಿಕ್ಟ್ ಬೋರ್ಡ್ ಪ್ರೆಸಿಡೆಂಟರೂ ಆಗಿದ್ದಾರೆ. ಆದರೂ ಅವರು ನಡಿಸುವ ಆಕ್ರಮವನ್ನು ನಿಲ್ಲಿಸಲಿಕ್ಕೆ ಪ್ರಜೆಗಳಿಗೆ ಸ್ವತಂತ್ರವಿಲ್ಲ. ಕಮೀಷನರಿಗೆ ದಯೆ ಬಂದಾಗ ಚುನಾವಣೆ ಮಾಡಲು ಹುಕುಂ ಕೊಡಬಹುದು. ಸ್ಥಳೀಯ ಸ್ವರಾಜ್ಯದಲ್ಲಿ ಸಹ ಈ ರೀತಿ ಜನರಿಗೆ ತಮ್ಮ ಮನಸ್ಸನ್ನು ನಡಿಸಲು ಶಕ್ತಿ ಇಲ್ಲದೆ ಇರುವಾಗ ನಮ್ಮ ದೇಶವು ಸ್ವರಾಜ್ಯಕ್ಕೆ ಬಹಳ ತಮ್ಮ ದೂರದಲ್ಲಿ ಇದೆಯೆಂತ ತೋರುತ್ತದೆ.

ನೌಕರಿ ಮಂಡಳಿನ ಹಕ್ಕನ್ನು ಜಾರಿ ಮಾಡಿಸಲು ನಾಲ್ಕಾರು ತಿಂಗಳಿಂದ ತುಂಬಾ ಮೆಹನತ್ತು ಮಾಡುತ್ತಿದ್ದಾರೆ. ಏಪ್ರಿಲ್ 1ರಲ್ಲಿ 1859ನೇ ಇಸವಿ ಆಕ್ಟು ರದ್ದಾಗುತ್ತಾದ್ದರಿಂದ ಕಮೀಷನರು ಅವಸರ ಮಾಡಲೇಬೇಕೆಂತ ನಾವು ಒಪ್ಪುತ್ತೇವೆ. ಅದರಂತೆಯೇ ಡಿಸ್ಟ್ರಿಕ್ಟ್ ಬೋರ್ಡಿನ ಮೆಂಬರುಗಳ ಅವಧಿಯು 1925ನೇ ಮಾರ್ಚಿಗೇನೇ ತೀರಿಹೋಗಿರುವಾಗ 1926 ನೆ ಫೆಬ್ರವರಿ ಆಖೈರು ಆದರೂ ಇನ್ನೂ ಡಿಸ್ಟ್ರಿಕ್ಟ್ ಬೋರ್ಡ್ ಚುನಾವಣೆ ರೂಲ್ಸು ಮಾಡಲು ಸಮಯವಾಗಿಲ್ಲವೆಂದರೆ ಪ್ರತಿಕ್ಷೇತ್ರದಲ್ಲಿ ಪ್ರಜೆಗಳಿಗೆ ಮುಖ್ಯವಾಗಿ ಗ್ರಾಮವಾಸಿಗಳಿಗೆ ಸಂಬಂಧಪಡುವ ವಿದ್ಯೆ, ಆಸ್ಪತ್ರೆ, ಗ್ರಾಮರಸ್ತೆ, ಇವುಗಳ ಆಡಳಿತದ ವಿಷಯದಲ್ಲಿ ಕಮೀಶನರು ಅಸಡ್ಡೆಮಾಡುವುದು ಯುಕ್ತವಲ್ಲ. ಈಗಿನ ಡಿಸ್ಟ್ರಿಕ್ಟ್ ಬೋರ್ಡ್ ಆಡಳಿತೆಯು ಕೆಟ್ಟುಹೋಗಿದೆಯೆಂತ ನಾವು ಹೇಳುವದಿಲ್ಲ. ಆದರೆ ಆಡಳಿತವನ್ನು ನಡಿಸುವದರಲ್ಲಿ ಮುಂದಾಗಿಯೇ ಪ್ರಜಾಪ್ರತಿನಿಧಿಗಳ ಅಭಿಪ್ರಾಯ ತೆಗೆದುಕೊಳ್ಳುವದು ಬಹಳ ಅವಶ್ಯ. ದೇಶದ ಆಡಳಿತದಲ್ಲಿ ಭಾಗ ತೆಗೆದುಕೊಳ್ಳಬೇಕೆಂತ ಕುತೂಹಲ ಇರುವ ಜನರು ಅನೇಕರು ಇದ್ದಾರೆ. ಅಂಥವರಿಗೆ ಪ್ರಜೆಗಳ ಅಭಿಪ್ರಾಯವನ್ನು ಆಡಳಿತದಲ್ಲಿ ಉಪಯೋಗವಾಗುವಂತೆ ಮಾಡಲು ಅವಕಾಶ ಕೊಡಲು ಸ್ವಲ್ಪವೂ ತಡಮಾಡಬಾರದು.

ಕಮೀಶನರಿಗೆ ಕೆಲಸ ಹೆಚ್ಚಾದ್ದರಿಂದಲೇ ಡಿಸ್ಟ್ರಿಕ್ಟ್ ಬೋರ್ಡನ್ನು ಚುನಾಯಿತ ಮೆಂಬರುಗಳಿಗೂ ಚುನಾಯಿತ ಅಧ್ಯಕ್ಷರಿಗೂ ಬಿಟ್ಟುಕೊಡುವದು ಆವಶ್ಯಕವಾಗಿದೆ. ರೂಲಿಗೆ ಇಲಾಖೆಯ ಹೆಚ್ಚಿನ ಅಧಿಕಾರವನ್ನೆಲ್ಲಾ ಅಸಿಸ್ಟೆಂಟ್ ಕಮೀಶನರಿಗೆ ಕೊಟ್ಟಂತೆ ಡಿಸ್ಟ್ರಿಕ್ಟ್ ಬೋರ್ಡಿನ ಆಡಳಿತವನ್ನು ಪೂರ್ತಿಯಾಗಿ ಪ್ರಜಾಪ್ರತಿನಿಧಿಗಳಿಗೆ ಬಿಟ್ಟುಕೊಟ್ಟರೆ ಪ್ರಜೆಗಳಿಗೆ ಅವರ ಕೋರಿಕೆಯನ್ನು ನೆರವೇರಿಸಿದಂತೆಯೂ ಬಿಟ್ಟು ಇಂಡಿಯದಲ್ಲಿ ಜಾರಿಯಲ್ಲಿ ಇರುವತತ್ವವನ್ನ ಅನುಸರಿಸಿದಂತೆಯೂ ಆಗುತ್ತದೆ. ಕಮೀಶನರಿಗೆ ಕೌನ್ಸಿಲು ಕೆಲಸಕ್ಕೂ ಅವಶ್ಯವೆತ್ತದ ನಿಗಳನ್ನು ಬಿಟ್ಟು ಆಡಳಿತದ ಮೇಲು ಹಸ್ತನೆಲುವುದಕ್ಕೂ ಅವಕಾಶ ದೊರೆಯುತ್ತದೆ.

ಮಡಿಕೇರಿಯ ಮುನಿಸಿಪಾಲಿಟಿಯ ಅಧ್ಯಕ್ಷ ಪದವಿಯನ್ನು ಚುನಾಯಿತ ಮೆಂಬರುಗಳಿಗೆ ಬಿಟ್ಟುಕೊಡಲು ಸರಕಾರದ ಆಜ್ಞೆಯು ಕಳೆದ ವರ್ಷ ಅಕ್ಟೋಬರ್ ತಿಂಗಳಿನಲ್ಲಿ ಬಿಟ್ಟುಕೊಟ್ಟದ್ದರಿಂದ ಆಡಳಿತವೇನೂ ತಲೆಕೆಳಗಾಗಿ ಹೋಗಿರುವದಿಲ್ಲ. ಆಡಳಿತವು ತಕ್ಕಷ್ಟು ಚೆನ್ನಾಗಿಯೇ ನಡಿಯುತ್ತಲಿದೆ. ಡಿಸ್ಟ್ರಿಕ್ಟ್ ಬೋರ್ಡಿನ ಆಡಳಿತ ನಡಿಸಲು ಅರ್ಹತಾದವರೂ ಇದ್ದಾರೆ. ಆಡಳಿತವು ಈಗಿನದಕ್ಕಿಂತಲೂ ಕೀಳಾಗಲಿಕ್ಕಿಲ್ಲವೆಂತ ನಮಗೆ ನಂಬಿಕೆ ಇದೆ.

ಆದರೆ ಪ್ರಜಾಪ್ರತಿನಿಧಿಗಳ ಸಂಖ್ಯೆ ಹೆಚ್ಚು ಮಾಡಲಿಕ್ಕೆ ಸರಕಾರದ ಆಕ್ಷೇಪಣೆಯೆಂತ ತಿಳಿದುಬಂದಿದೆ. ಹೀಗಿದ್ದರೂ ಆಗ ಬರೇ ರೂಲ್ಸು ಮಾಡುವದಕ್ಕೆ ಯಾತಕ್ಕೆ ತಡವಾದ ತಡವೇ ಗೊತ್ತಾಗುವದಿಲ್ಲ. ಈ ತಡವಾದದಕ್ಕೆ ಕಾರಣವೇನೆಂಬದನ್ನು ಸರಕಾರದವರು ತಿಳಿಸಿಕೊಟ್ಟಿದ್ದರೆ ಕಾರಣಗಳನ್ನು ಊಹಿಸಬೇಕಾದ ಆವಶ್ಯವಿರುತ್ತಿರಲಿಲ್ಲ.

ರೂಲ್ಸುಗಳು ತಯಾರಾಗುತ್ತಿವೆಯೆಂತಲೂ ಚುನಾವಣೆಯು ಕಳೆದ ಡಿಸಂಬರಿಗೆ ಮೊದಲೇ ಆಗುತ್ತದೆಯೆಂತಲೂ ಕಳೆದ ಜೂನ್ ತಿಂಗಳಿನಿಂದಲೇ ವರ್ತಮಾನವಿದೆ. ಈಗಲೂ ರೂಲ್ಸು ತಯಾರಾಗುವ ವರ್ತಮಾನದಲ್ಲೇ ನಿಂತಿದೆ. ಕೌನ್ಸಿಲ್ ಚುನಾವಣೆ ರೂಲ್ಸುಗಳನ್ನು ತಯಾರಿಸಲು ಸಹ ಇಷ್ಟೆಲ್ಲಾ ಕಾಲ ವಿಳಂಬವಾಗಲಿಲ್ಲ. ಜನರು ಈ ವಿಷಯದಿಂದ ಕಾರಣಕಾದ ಬಹಳ ಅತೃಪ್ತರಾಗಿದ್ದಾರೆ. ಇನ್ನೂ ಆರುತಿಂಗಳು ಹೋದಾಗ್ಯೆ ಕೌನ್ಸಿಲ್ ಚುನಾವಣೆ ಒದಗುವುದು ಪ್ರಾರಂಭವಾಗುತ್ತದೆ. ಡಿಸ್ಟ್ರಿಕ್ಟ್ ಬೋರ್ಡಿನ ಚುನಾವಣೆಯು ಅದೇ ಸಮಯದಲ್ಲಿ ಆಗುವದಾದರೆ ಓಟರುಗಳಿಗೆ ಗಲಿಬಿಲಿಯಾದೀತು. ಡಿಸ್ಟ್ರಿಕ್ಟ್ ಬೋರ್ಡ್ ಚುನಾವಣೆಯು ಇನ್ನು ಎರಡು ತಿಂಗಳೊಳಗಾದರೂ ಆಗುವಂತೆ ಮಾಡಬೇಕಾದದ್ದು ಸರಕಾರದ ಕೆಲಸವಾಗಿದೆ. ಅಲ್ಲದೆ ಈಗಿನ ಕಮೀಶನರು ರಜದಲ್ಲಿ ಹೋಗುತ್ತಾರೆಂಬ ವರ್ತಮಾನವು ಹಬ್ಬಿದೆ. ಹೊಸಬರು ಒಂದು ದೇಶದ ಮಾಹಿತಿ ತಿಳಿಯದೆ ಡಿಸ್ಟ್ರಿಕ್ಟ್ ಬೋರ್ಡಿಗೆ ಚುನಾವಣೆಯ ಹೊಸ ರೂಲ್ಸನ್ನು ಮಾಡಲು ಬಹಳ ತಡವು. ಆದ್ದರಿಂದ ಈ ಕಮೀಶನರು ರಜದಲ್ಲಿ ಹೋಗುವ ಮೊದಲೇ ರೂಲ್ಸುಗಳನ್ನು ಮಂಜೂರು ಮಾಡಿಸಿ ಹೊಸ ಚುನಾವಣೆ ನಡೆಯುವಂತೆ ಮಾಡಬೇಕಾಗಿ ನಾವು ಅಪೇಕ್ಷಿಸುತ್ತೇವೆ.

ವೀರಾಜಪೇಟೆ ಹೈಸ್ಕೂಲಿನ ವಾರ್ಷಿಕೋತ್ಸವ.

(ಹಾಜರಿದ್ದವರಿಂದ)

ವೀರಾಜಪೇಟೆ ಹೈಸ್ಕೂಲಿನ ವಾರ್ಷಿಕೋತ್ಸವವು ಈ ತಾ 19ರಲ್ಲಿ ಮೇಡಲ್ ಸ್ಕೂಲಿನ ಹಾಲಿನಲ್ಲಿ ಮಂಗಳೂರು ಗವರ್ನಮೆಂಟ್ ಕಾಲೇಜಿನ ಪ್ರಿನ್ಸಿಪಾಲರಾದ ಮೆ॥ ಟಿ. ಕ. ಡಿಟ್ಟೂರವರ ಅಧ್ಯಕ್ಷತೆಯಲ್ಲಿ ನಡೆಯಿತು; ಶಾಲೆಯ ಅನೇಕ ಹಳೇ ವಿದ್ಯಾರ್ಥಿಗಳಲ್ಲದೆ ದೇಶದ ಹಲವು ಮಹನೀಯರೂ, ಮಹಿಳೆಯರೂ ನೆರೆದಿದ್ದರು.

ಬೆಳಿಗ್ಗೆ ತಾಲೋಕು ಕಚೇರಿಯ ಮೈದಾನದಲ್ಲಿ ಪಂಥ ಆಟೋಟಗಳು (ಸ್ಪೋರ್ಟ್ಸ್) ನಡೆದವು. ಇವುಗಳ ಪ್ರಕಲವುಗಳಲ್ಲಿ ಪಬ್ಲಿಕಿನವರೂ ಭಾಗಿಗಳಾಗಿದ್ದರು. ಹಲ್ಲದರೆಲ್ಲರೂ ಈ ನೋಟ ನೋಡಲು ಬಂದಿದ್ದರು. ತೆಂಗಿನ ಕಾಯಿಗೆ ಗರಿ (ಗುಂಡು) ಹೊಡೆಯುವದು ಎಲ್ಲಾದಕ್ಕಿಂತಲೂ ಮನೋರಂಜಕವಾಗಿತ್ತು. ಹಲವರು ಗುಂಡು ಹಾರಿಸಿದರು. ಮೆ॥ ಸಿ. ಎನ್. ಮುತ್ತಣ್ಣನವರು ಸ್ಪೋರ್ಟ್ಸನ್ನು ಪಡಿಸಿದರು. ಮೆ॥ ಚೆಟ್ಟೂರರವರು ತಮ್ಮ ಪತ್ನಿಯೊಂದಿಗೆ ಹಾಜರಿದ್ದರು.

ಸಾಯಂಕಾಲ ೨ ಗಂಟೆಗೆ ಸರಿಯಾಗಿ ಅಧ್ಯಕ್ಷರು ಸಭೆಯ ಹಾಲಿಗೆ ದಯಮಾಡಿಸಿದರು. ಹೆಡ್ ಮಾಸ್ತರರಾದ ಮೆ॥ ಸಿ. ಯಂ. ರಾಮರಾಯರು ಶಾಲೆಯ 1924—25ನೇ ವರ್ಷದ ವರದಿಯನ್ನು ಓದಿದರು. ಅದರ ಮುಖ್ಯಾಂಶವೇನಂದರೆ— 'ಶಾಲೆಯ ಕೆಲಸದ ಮತ್ತು ವಿದ್ಯಾರ್ಥಿಗಳ ಅಭಿವೃದ್ಧಿಯ ವರದಿಯನ್ನು ಜನರ ದಾಯಕ್ಕೆ ತಿಳಿಸಲು ಅವಕಾಶ ದೊರೆತದ್ದಕ್ಕೆ ಬಹಳ ಸಂತೋಷಪಡುತ್ತೇನೆ. ಈ ಶಾಲೆಯನ್ನು ಹೈಸ್ಕೂಲಾಗಿ ಮಾಡಿದ್ದು 1923ರಲ್ಲಾಗಿದೆ. ಕಳೆದ ವರ್ಷ ಸ್ಕೂಲ್ ಫೈನಲ್ ಪರೀಕ್ಷೆಗೆ ಕಳುಹಿಸಲ್ಪಟ್ಟ 31 ವಿದ್ಯಾರ್ಥಿಗಳ ಪೈಕಿ 9 ಜನರು ಕಾಲೇಜು ಕ್ಲಾಸಿಗೆ ಸೇರಿಸಿಕೊಳ್ಳಲು ಅರ್ಹರಾದರು. ಶಾಲೆಯಲ್ಲಿ 501 ವಿದ್ಯಾರ್ಥಿಗಳಿದ್ದರು. ಇದನ್ನು ಸಂಪೂರ್ಣ ಸಕೆಂಡರಿ ಶಾಲೆಯನ್ನಾಗಿ ಮಾಡಿದ್ದರಿಂದ ಇದು ಜನಪ್ರಿಯವಾಗುತ್ತಾ ಬರುತ್ತದೆ. ಒಬ್ಬ ಸಂಸ್ಕೃತ ಪಂಡಿತರನ್ನು ಹೊಸದಾಗಿ ನೇಮಿಸಲಾಯಿತು. ಹುಡುಗರ ಮನಃ ಶಕ್ತಿ ತಡೆಯ ಲಿಕ್ಕಾಗಿಯೂ ಮತ್ತು ಉತ್ತಮ ವಿದ್ಯಾರ್ಥಿಗಳನ್ನು ಆರಿಸಿಕೊಳ್ಳಲಿಕ್ಕಾಗಿಯೂ 1ನೇ ಮತ್ತು 2ನೇ ಫಾರಮುಗಳಿಗೆ ವಿದ್ಯಾರ್ಥಿಗಳನ್ನು ಸೇರಿಸಿಕೊಳ್ಳಲು ಶಾಲಾ ಪ್ರವೇಶಕ ರವರು ಒಂದು ಪರೀಕ್ಷಾ ಬೋರ್ಡನ್ನು ನೇಮಿಸಿದರು. ಶಾಲೆಯಲ್ಲಿ 34 ಮಂದಿ ಗಿಯರೂ, 11 ಮಂದಿ ದೇಶದ ವಿದ್ಯಾರ್ಥಿಗಳೂ ಮತ್ತು ಒಬ್ಬ ಪಂಚಮ ಹುಡುಗನೂ ಇದ್ದರು. ಶಾಲೆಗೆ ನ್ಯಾಯವಾದ ಕಟ್ಟಡ ಮೈದಾನವು ಇಲ್ಲದೆ ಇರುವದರಿಂದ ಕ್ರಿಕೆಟ್ ಆಟಕ್ಕೆ ಪ್ರೋತ್ಸಾಹ ದೊರೆಯಲಿಲ್ಲ. ಶಾಲೆಯಲ್ಲಿ ವಿದ್ಯಾರ್ಥಿಗಳು ತುಂಬಿ ಕಿಕ್ಕಿರಿದು ಹೋಗಿರುವುದರಿಂದ ಈ ಕಟ್ಟಡವು ಸಾಲದಾಗಿದೆ. ಈ ವಿಷಯ ಕಮೀಶನರು ನಾಯಿನಿಯರು ಕ್ಯಾಂಟನ್ಮೆಂಟ್ ಹೈಸ್ಕೂಲನ್ನು ಹಾಗೂ ಹೈಸ್ಕೂಲ್ ಮತ್ತು ಹುಡುಗಿಯರ ಶಾಲೆಗಳ ಕಟ್ಟಡಗಳಿಗೆ ವರ್ಗಾಯಿಸಿ ಕೊಡುವದೆಂದು ಅಭಿಪ್ರಾಯಪಟ್ಟಿರುತ್ತಾರೆ. ಆದರೆ ಬೋರ್ಡಿನ ಮುಂದೆ ಒಂದು ನ್ಯಾಯವಾದ ಕಟ್ಟಡ ಸಿಕ್ಕಿದ ನಂತರ ಹೀಗೆ ಮಾಡಲು ಸಾಧ್ಯವಾಗುವುದು.'

ನಂತರ ಡಿಬೇಟಿಂಗ್ ಸೊಸೈಟಿಯ ಸೆಕ್ರೆಟರಿಯವರು ಆ ವರ್ಷದ ವರದಿಯನ್ನು ಓದಿದರು. ಆ ಸೊಸೈಟಿಯಲ್ಲಿ ಚರ್ಚಿಸಿದ ಸಂಗತಿಗಳನ್ನು ಮತ್ತು ಚರ್ಚೆಯ ತೀರ್ಮಾನಗಳನ್ನು ಸೂಚಿಸಿ, ಕೆಲವು ಹುಡುಗರು ಮಾತ್ರ ಈ ಚರ್ಚೆಗಳಲ್ಲಿ ಭಾಗಿಗಳಾಗುವುದು ವ್ಯಸನಕರವೆಂದೂ, ಅವರಿಗೆ ವೃತ್ತಪತ್ರಿಕೆಗಳನ್ನು ಓದಲು ಒಂದು ಪ್ರತ್ಯೇಕ ಕೋಣೆ ಇಲ್ಲದೆ ಇರುವುದು ಬಹಳ ಅನಾನುಕೂಲವೆಂದೂ ಹೇಳಿದಲ್ಲದೆ ಹೀಗಿದ್ದರೂ ಮಡಿಕೇರಿ ಮತ್ತು ವೀರಾಜಪೇಟೆ ಶಾಲೆಗಳಿಗೆ ನಡೆದ ಡಿಬೇಟಿನಲ್ಲಿ ಇಂಗ್ಲೀಷ್ ಮತ್ತು ಕನ್ನಡದಲ್ಲಿ ತಮ್ಮ ಶಾಲೆಯವರೇ ಒಂದನೇ ಇನಾಮುಗಳನ್ನು ಪಡೆದದ್ದಕ್ಕೆ ಸಂತೋಷವನ್ನು ಸೂಚಿಸಿದರು.

ಅಧ್ಯಕ್ಷರಾಗಿದ್ದ ಮೆ॥ ಚೆಟ್ಟೂರರವರು ಸ್ಪೋರ್ಟ್ಸಿನ ಮತ್ತು ಶಾಲೆಯ ಇನಾಮುಗಳನ್ನು ಹಂಚಿದನಂತರ ತಮ್ಮ ಭಾಷಣವನ್ನು ಮಾಡಿದರು. ಅದರ ಸಾರಾಂಶವೇನಂದರೆ—'ಹೊಸ ಸ್ನೇಹಿತರನ್ನು ಸಂಪಾದಿಸಲಿಕ್ಕೂ ಮತ್ತು ರಮಣೀಯವಾದ ಈ ಚಿಕ್ಕ ದೇಶವನ್ನು ನೋಡಲಿಕ್ಕೂ ಎಡೆ ಕೊಟ್ಟಿದ್ದಕ್ಕೆ ಹಾರ್ದಿಕವಾಗಿ ಬಹುವಾಗಿ ವಂದಿಸುತ್ತೇನೆ. ಕೊಡಗಿನ ಕೆಲವು ವಿದ್ಯಾರ್ಥಿಗಳನ್ನು ಮೊದಲು ನೋಡಿದ್ದೆನು. ಅದುದರಿಂದ ಮೆಚ್ಚತಕ್ಕ ಗುಣಗಳುಳ್ಳ ಕೊಡಗರ ವಿಷಯ ಹೆಚ್ಚು ತಿಳಿಯಬೇಕೆಂಬ ಕುತೂಹಲವುಳ್ಳವನಾಗಿದ್ದೆನು. ಕೊಡಗಿನ ವಿಷಯ ಮಿ. ಹಿಲ್ಟನ್ ಬ್ರೌನ್ ರವರ 'ಬ್ಲೇಕ್ ವುಡ್' ಮ್ಯಾಗಜಿನ್‌ನಲ್ಲಿ ಬರೆದ ಲೇಖನವನ್ನು ಬಹು ಹಿತದಿಂದ ಓದಿದ್ದೇನೆ. ಅವರಲ್ಲಿ ಕೊಡಗರ ಗುಣಗಳು ಚೆನ್ನಾಗಿ ವರ್ಣಿಸಲ್ಪಟ್ಟಿವೆ. ಮೆ॥ ಬ್ರೌನ್ ರವರು ದಕ್ಷಿಣ ಹಿಂದುಸ್ಥಾನದವರನ್ನೆಲ್ಲಾ ಹಿಯಾಳಿಸಿ ಬರೆದಿದ್ದರೂ ಕೊಡಗರನ್ನು ಮೆಚ್ಚಿ ಬರೆದಿರುವರು. ಈ ದೇಶದ ಪ್ರಕೃತಿಯ ಸೌಂದರ್ಯವು ಅದ್ವಿತೀಯವಾದದು. ಎತ್ತ ನೋಡಿದರೂ ಒಂದಕ್ಕಿಂತ ಒಂದು ರಮಣೀಯವಾದ ನೋಟಗಳೇ ಕಂಡು ಬರುತ್ತವೆ.

ಶಾಲೆಯಲ್ಲಿ ವಿದ್ಯಾರ್ಥಿಗಳ ಸಂಖ್ಯೆಯು ವರ್ಷ ವರ್ಷ ಹೆಚ್ಚುತ್ತಿರುವುದು ಅದರ ಅಭಿವೃದ್ಧಿಯನ್ನು ಸೂಚಿಸುತ್ತದೆ. ಅದು ಪೂರ್ತಿ ಹೈಸ್ಕೂಲಾದಾಗ ಅದರ ಪ್ರಯೋಜನವೂ, ಅದರ ಮೇಲೆ ಜನರ ಪ್ರೀತಿಯೂ ಹೆಚ್ಚುವುದು. ಪರೀಕ್ಷೆಯ ಫಲಿತಾಂಶವು ಎಲ್ಲರೂ ಅಪೇಕ್ಷಿಸುವ ಹಾಗೆ ಇಲ್ಲದಿದ್ದರೂ, ಬರೇ ಪರೀಕ್ಷೆಯ ಫಲಿತಾಂಶದಿಂದಲೇ ಶಾಲೆಯ ಸ್ಥಿತಿಯನ್ನು ಕಂಡುಹಿಡಿಯುವುದು ತಪ್ಪಾಗಿದೆ. ಶಾಲೆಗೆ ಉತ್ತಮವಾದ ಮತ್ತು ಮುತುವರ್ಜಿಯಿಂದ ಕೆಲಸ ಮಾಡುವ ಹೆಡ್ ಮಾಸ್ಟರರೂ, ಕೆಲಸಕ್ಕೆ ಉಲ್ಲಾಸದಿಂದ ತುಂಬಿರುವ ಉಪಾಧ್ಯಾಯರುಗಳೂ ಇರುವುದರಿಂದ ಇದು ಮುಂದಕ್ಕೆ ಚೆನ್ನಾಗಿ ಅಭಿವೃದ್ಧಿ ಹೊಂದುವುದು.

(4ನೇ ಪುಟದಲ್ಲಿ ಮುಂದುವರಿದಿದೆ)

ವರ್ತಮಾನ ಸಂಗ್ರಹ.

ಒಳದೇಶ.

ಕೊಡಗು ಕಂಪೆನಿಯ ಡೈರೆಕ್ಟರುಗಳ ಮೀಟಿಂಗು ಮಾರ್ಚ್ ತಾ. 7ರಲ್ಲಿ ವೀರರಾಜಪೇಟೆಯಲ್ಲಿ ನಡೆಯುವುದು.

ಸೆಂಟ್ರಲ್ ಬ್ಯಾಂಕಿನ ಡೈರೆಕ್ಟರುಗಳ ಮೀಟಿಂಗು ಮಾರ್ಚ್ ತಾರೀಕು 3 ರಲ್ಲಿ ಮಡಿಕೇರಿ ಮುನ್ಸಿಪಲ್ ಆಫೀಸಿನಲ್ಲಿ ನಡೆಯುವುದು.

ಜಮೀನ್ದಾರರ ಸಂಘದ ಕಾರ್ಯನಿರ್ವಾಹಕ ಕಮಿಟಿಯ ಮೀಟಿಂಗು ವೀರರಾಜಪೇಟೆಯಲ್ಲಿ ತಾ. 7—3-26 ರಲ್ಲಿ ನಡೆಯಲಿಕ್ಕಿದೆ.

ಮಡಿಕೇರಿ ಹೈಸ್ಕೂಲಿನಿಂದ ಒಟ್ಟು ಸ್ಕೂಲ್ ಫೈನಲ್ ಪರೀಕ್ಷೆಗೆ 51ರಲ್ಲಿ 31 ವಿದ್ಯಾರ್ಥಿಗಳು ಚುನಾಯಿತರಾಗಿರುವರೆಂದು ತಿಳಿಯುತ್ತೇವೆ.

ಮಡಿಕೇರಿ ಸಬ್ ಮ್ಯಾಜಿಸ್ಟ್ರೇಟ್ ಕೋರ್ಟಿನ ಮೆ. ಬಲ್ಲಚಂಡ ಚಂಗಪ್ಪನವರ ಪತ್ನಿಯವರು ತಾ 22 ರಲ್ಲಿ ಅವರ ನಾಡುಮನೆಯಲ್ಲಿ ಮೃತರಾದರು.

ಕಮೀಷನರಾದ ಮೆ. ಟಿ. ಜಿ. ಟಾಸ್ಕರವರು ಈ ವಾರ ಮಂಗಳೂರಿಗೆ ಹೋಗಿ ತಮ್ಮ ಪತ್ನಿಯವರನ್ನು ಇಂಗ್ಲಾಂಡಿಗೆ ಹಡಗು ಹತ್ತಿಸಿ ಬಂದರೆಂದು ತಿಳಿಯುತ್ತೇವೆ.

ಬ್ರೀಚ್ ಆಫ್ ಕಂಟ್ರಾಕ್ಟ್ ಆಕ್ಟಿನ ಬಿಲ್ಲನ್ನು ಚರ್ಚಿಸಲಿಕ್ಕಾಗಿ ಈ ತಾ. 27 ರಲ್ಲಿ ನಡೆಯಬೇಕಾಗಿದ್ದ ಕೌನ್ಸಿಲ್ ಮೀಟಿಂಗು ಕಾರಣಾಂತರದಿಂದ ಮುಂದಕ್ಕೆ ಇಡಲ್ಪಟ್ಟಿದೆ.

ವೀರರಾಜಪೇಟೆ ಹೈಸ್ಕೂಲಿನ ವರ್ಧಂತಿಯು ತಾ. 19 ರಲ್ಲಿ ಮೆ. ಜಿ. ಕೆ. ಚೆಟ್ಟೂರರವರ ಅಧ್ಯಕ್ಷತೆಯಲ್ಲಿ ಬಹು ವಿಜೃಂಭಣೆಯಿಂದ ನಡೆಯಿತು. ಇದರ ವಿವರವು ಇನ್ನೊಂದು ಕಡೆ ಪ್ರಕಟವಾಗಿದೆ.

ಬರುವ ಮಾರ್ಚಿ ತಾರೀಕು 12ರಿಂದ 28 ದಿನಗಳವರೆಗೆ ಟೆರಿಟೋರಿಯಲ್ ಪಟಾಲಮಿನ ಉದ್ಯೋಗಸ್ಥರ ತರಬೇತು ಮಡಿಕೇರಿಯಲ್ಲಿ ನಡೆಯುವುದು. ನಂತರ ಸಿಪಾಯಿಗಳ ತರಬೇತು ಪ್ರಾರಂಭವಾಗುವುದು.

ಕರ್ಡೂರ ಟೀ ತೋಟದ ಸುತ್ತಮುತ್ತಲಿನ ಕೆಲವು ದನಗಳನ್ನು ನಾಶಮಾಡಿದ ಒಂದು ದೊಡ್ಡ ಕಿರುಬನನ್ನು ಮೆ. ಎಂ. ಪಿ. ಗಣಪತಿಯವರು ತಾ 22 ರಲ್ಲಿ ಗುಂಡುಹೊಡೆದು ಕೊಂದಿರುವರೆಂದು ತಿಳಿಯಬರುತ್ತದೆ.

ಕೊಡಗು ಲೆಜಿಸ್ಲೇಟಿವ್ ಕೌನ್ಸಿಲಿನ ಬಡ್ಜೆಟ್ ಮೀಟಿಂಗು ಮಾರ್ಚ್ ತಾ. 9ರಲ್ಲಿ ಪ್ರಾರಂಭವಾಗುವುದೆಂದೂ ಕೌನ್ಸಿಲ್ ಮೆಂಬರುಗಳು ಬಡ್ಜೆಟ್ ಠರಾವುಗಳನ್ನು ಮಾರ್ಚ್ ತಾ. 4 ರೊಳಗೆ ಕಳುಹಿಸತಕ್ಕದ್ದೆಂಬುದೂ ತಿಳಿಯಬರುತ್ತದೆ.

ಬರುವ ಮಾರ್ಚಿ ತಾ. 19 ನೇ ಶುಕ್ರವಾರ ಮಡಿಕೇರಿ ಕಾರೊನೇಶನ್ ಗಾರ್ಡನಿನಲ್ಲಿ ನಾಯಿ, ಕೋಳಿ, ಕಾಯಿಪಲ್ಯ ಹೂವು ಮತ್ತು ಹಣ್ಣುಹಂಪಲುಗಳ ಪ್ರದರ್ಶನವು ನಡೆಯುವುದೆಂದೂ ಉತ್ತಮತರದ ವಸ್ತುಗಳಿಗೆ ಇನಾಮುಗಳು ಕೊಡಲ್ಪಡುವವೆಂದೂ ಮುನ್ಸಿಪಾಲಿಟಿಯ ಅಧ್ಯಕ್ಷರು ಪ್ರಕಟಿಸಿದ್ದಾರೆ.

ಕಳೆದ ವರ್ಷ ಮಡಿಕೇರಿ ಖಜಾನೆಯಲ್ಲಿ ಪಾಳೆಯಂಡ ಸೋಮಯ್ಯನವರು ಸರಾಫರಾಗಿದ್ದಾಗ ಲೆಕ್ಕದಲ್ಲಿ ಕಾಣದೆ ಆದ ನೂರು ರೂಪಾಯಿ ಸಮ್ಮಂಧ ಕೇಸು ನಡೆದದ್ದರಲ್ಲಿ ಅವರಿಗೆ ಸಬಾರ್ಡಿನೇಟ್ ಜಡ್ಜಿಯವರ ಕೋರ್ಟಿನಲ್ಲಿ ಈ ತಾ. 24 ರಲ್ಲಿ ಒಂದು ನೂರು ರೂಪಾಯಿ ಜುಲುಮಾನೆಯೂ ಒಂದು ವರ್ಷ ಕಠಿಣ ಸಜೆಯೂ ವಿಧಿಸಲಾಗಿದೆ.

ಬೆಳ್ಳುಮಾಡು ಮತ್ತು ಕಡಂಗಮುರೂರು ಗ್ರಾಮಗಳ ಕೆಲವು ವಿದ್ಯಾರ್ಥಿಗಳು ಮೆ. ಪಟ್ಟಮಾಡ ಚಂಗಪ್ಪನವರಿಂದ ತರಬೇತುಹೊಂದಿ ಪ್ರಹ್ಲಾದಚರಿತ್ರೆಯ ನಾಟಕವನ್ನು ಜನವರಿ 30 ರಲ್ಲಿ ಬೆಳ್ಳುಮಾಡು ಶಾಲೆಯಲ್ಲಿಯೂ, ಫೆಬ್ರವರಿ 6 ರಲ್ಲಿ ಕಾಕೋಟುಪರಂಬು ಶಾಲೆಯಲ್ಲಿಯೂ ಅತಿ ಚಮತ್ಕಾರವಾದ ಅಭಿನಯಿಸಿದರೆಂದು ಒಂದು ವಾರ್ತೆ.

ಮಡಿಕೇರಿ ಪಟ್ಟಣದ ಪೋಲೀಸು ಸಬ್ ಇನ್‌ಸ್ಪೆಕ್ಟರಾಗಿದ್ದ ಮೆ. ಮೂಡರ ಉತ್ತಯ್ಯನವರು ಈ ತಾ. 26ನೇ ಶುಕ್ರವಾರ ಬೆಳಿಗ್ಗೆಯಿಂದಲೇ ಕಾಣದೆ ಇದ್ದರು. ಕಾನ್‌ಸ್ಟೇಬಲ್ ಕ್ಲಬ್ಬಿನ ಬಳಿ ಇರುವ ಭಾವಿಗೆ ಮುಚ್ಚಿದ್ದ ತಗಡುಗಳನ್ನು ತೆಗೆದುಹಾಕಿದ್ದು ಕಂಡುಬಂದು ಅದರ ಬಳಿ ನೋಡಿದಾಗ ಮೆ. ಉತ್ತಯ್ಯನವರ ನಸ್ಯದ ಡಬ್ಬಿ ಕಂಡುಬಂತು. ಭಾವಿಗೆ ಜನರನ್ನು ಇಳಿಸಿದಾಗ ಅವರ ದೇಹವು ಅದರೊಳಗೆ ಇತ್ತು. ಬೆಳಿಗ್ಗೆ 11½ಗಂಟೆಗೆ ದೇಹವು ಮೇಲಕ್ಕೆ ತೆಗೆಯಲಾಯಿತು. ಆತ್ಮಹತ್ಯ ಮಾಡಿಕೊಂಡದ್ದಾಗಿರಬೇಕೆಂತ ಊಹಿಸಲಾಗಿದೆ.

ಹಿಂದೂದೇಶ.

ಲೆಜಿಸ್ಲೇಟಿವ್ ಎಸೆಂಬ್ಲಿಯಲ್ಲಿ ಮತ್ತು ದೀಯರ ಸಂಗಡ ಒಂದನ್ನು ಏರ್ಪಡಿಸಲು ಪ್ರಯತ್ನಗಳು ನಡೆಯುತ್ತಿಯವೆಂದೂ ಅದಕ್ಕೆ ಮೆ. ಜಿನ್ನಾರವರು ಮುಂದಾಳಾಗಬಹುದೆಂದೂ ವರ್ತಮಾನ.

ಕಾಶ್ಮೀರ ಸಂಸ್ಥಾನದ ರಾಜರ ದುಂದುಗಾರಿಕೆಗೆ ಎಣೆಯೆಲ್ಲಿ! ಅಲ್ಲಿ ಹೊಸದಾಗಿ ಸಿಂಹಾಸನರೂಢರಾದ ರಾಜಾ ಹರಿಸಿಂಗರವರು ಪಟ್ಟಾಭಿಷೇಕಕಾಲದಲ್ಲಿ ಒಂದುಲಕ್ಷ ರೂಪಾಯಿ ಖರ್ಚುಮಾಡಿ ನೇಕ್ಯಾನರ್ತನ ಮಾಡಿಸಿದರಂತೆ!

1923—24ನೇ ಸಾಲಿನಲ್ಲಿ ಹಿಂದೂದೇಶದಲ್ಲಿ ಹತ್ತು ಲಕ್ಷ ದೇಶೀಯ ಹುಡುಗಿಯರು ವಿದ್ಯಾಭ್ಯಾಸಹೊಂದುತ್ತಿದ್ದರಂತೆ. ಇವರಲ್ಲಿ ಏಳು ಲಕ್ಷದಷ್ಟು ಕಡೇತರಗತಿಗಳಲ್ಲಿದ್ದರೆಂತಲೂ ಹೈಸ್ಕೂಲುಗಳಲ್ಲಿ ಓದುತ್ತಿದ್ದವರ ಸಂಖ್ಯೆಯು ಬಹು ಕಡಿಮೆಯೆಂದೂ ತಿಳಿಸಿರುತ್ತಾರೆ.

ಹಿಂದೂದೇಶದಲ್ಲಿ ಪ್ರತಿವರ್ಷವೂ ಮಾಂಸನಿಮಿತ್ತವಾಗಿ 30 ಲಕ್ಷ ದನಗಳು ಕೊಲ್ಲಲ್ಪಡುತ್ತಿರುವುದಲ್ಲದೆ 4 ಲಕ್ಷ ವ್ಯಾಪಾರವಾಗಿ ಪರದೇಶಗಳಿಗೆ ಹೋಗುತ್ತಿವೆ. ಹೀಗೆ ವರ್ಷಂಪ್ರತಿ 34 ಲಕ್ಷ ದನಗಳು ಇಂಡಿಯಾದಿಂದ ಹೋಗುತ್ತಿರುವದಾದರೆ ಜನರಿಗೆ ಹಾಲು ದೊರಕುವುದೆಲ್ಲಿಂದ ಮತ್ತು ವ್ಯವಸಾಯ ಅಭಿವೃದ್ಧಿಯಾಗುವುದು ಹೇಗೆ?

ಇಂಡಿಯನ್ ಲೆಜಿಸ್ಲೇಟಿವ್ ಎಸೆಂಬ್ಲಿಯಲ್ಲಿ ರಾಷ್ಟ್ರೀಯ ಪಕ್ಷದವರೆಲ್ಲಾ ಸೇರಿಸಿ ಒಂದೇ ಪಾರ್ಟಿಯನ್ನು ಮಾಡಬೇಕೆಂಬ ಕಾರಣದಿಂದ ಪಂಡಿತ ಮದನಮೋಹನ ಮಾಲವೀಯರು ಇಂಡಿಪೆಂಡೆಂಟ್ ಪಾರ್ಟಿ ಎಂಬುದು ತನಗೆ ರಾಜಿನಾಮೆ ಕೊಟ್ಟಿರುವರು. ಈ ಕಾರಣದಿಂದಲೇ ಮೆ. ಟಿ. ರಂಗಚಾರ್ಯರವರೂ ಆ ಪಾರ್ಟಿಯನ್ನು ಬಿಟ್ಟಿರುವರು.

ಅಸಹಕಾರ ಚಳವಳದ ಸಮಯದಲ್ಲಿ ಜೈಲಿಗೆ ಹೋಗಿ ಪ್ರಖ್ಯಾತರಾಗಿದ್ದ ಕಲ್ಕತ್ತಾದ ಜಾನ್ ಚಂದ್ರಸಿಂಹರೆಂಬ ಜಮೀನ್ದಾರರೊಬ್ಬರು ತಾ. 22ರಲ್ಲಿ ತನ್ನ ನಾಲ್ಕು ಮಂದಿ ಮಕ್ಕಳಿಗೆ ವಿಷಕೊಟ್ಟು ತಾನೂ ತಿಂದು ಮೃತನಾದನಂತೆ. ಮಕ್ಕಳು ಸತ್ತರು. ತನಗೆ ದೇವರಲ್ಲಿ ನಂಬಿಕೆ ಕೆಟ್ಟುಹೋಗಿ ಈ ಜೀವನದಲ್ಲಿ ಜೀಸರ ಹುಟ್ಟಿದ್ದೇ ತನ್ನ ಈ ಕೃತ್ಯಕ್ಕೆ ಕಾರಣವೆಂದು ಬರೆದು ಇಟ್ಟಿದ್ದನಂತೆ.

ಬಾಳೆಹೊನ್ನೂರಿನ ಪೀಠಕ್ಕೆ ಅಧಿಕಾರಿಯನ್ನು ನೇಮಕ ಮಾಡುವ ಸಂದರ್ಭದಲ್ಲಿ ತತ್ಸಂಬಂಧವಾದ ಕಮಿಟಿಯಲ್ಲಿ ಚರ್ಚೆ ನಡೆಯುವಾಗ ಹರನಹಳ್ಳಿ ಸದಾಶಿವಯ್ಯನವರನ್ನು ಕುರಿತು ದಿವಾನ್ ಬಹದ್ದೂರ್ ಮೋಹನಸಿಂಗರಾಯಿ ಯವರು ಅಪಮಾನಕರವಾದ ಭಾಷಣ ಮಾಡಿದರೆಂದು ಸದಾಶಿವಯ್ಯನವರ ವಕೀಲರು ಮಾನನಷ್ಟಕ್ಕಾಗಿ ಕೊಟ್ಟ ರಜಿಸ್ಟರ್ ನೋಟೀಸಿಗೆ ದಿವಾನರು ಕ್ಷಮಾಪಣೆ ಪತ್ರವನ್ನು ಕಳುಹಿಸಿರುತ್ತಾರೆಂದು ಚಂದ್ರಶೇಖರ ಶಾಸ್ತ್ರಿ ವಕೀಲರು ನಮಗೆ ಬರೆದಿರುತ್ತಾರೆ.

ಬವ್ಲಾ ಮೊಬಿಡಮ್ಮಯ ಸಮ್ಮಂಧ ಇಂದೂರಿನ ಮಹಾರಾಜರವರು ವೈಸರಾಯರ ಪತ್ರಕ್ಕೆ ಇನ್ನು ಜವಾಬು ಕೊಟ್ಟಿರುವುದಿಲ್ಲ. ವೈಸರಾಯರು ಈ ವಿಷಯ ಮಹಾರಾಜರನ್ನು ವಿಚಾರಿಸಲು ಕಮೀಷನನ್ನು ನೇಮಿಸುವುದು ಈ ರಾಜರಿಗೂ ಇಂಡಿಯಾ ಸರ್ಕಾರಕ್ಕೂ ಇವರ ಒಪ್ಪಂದಕ್ಕೆ ವಿರೋಧವೆಂತಲೂ, ಇದರಿಂದ ಜನರಲ್ಲಿ ತುಂಬಾ ಅತೃಪ್ತಿಯುಂಟಾಗಿದೆಯೆಂತಲೂ ಬೊಂಬಾಯಿಯಲ್ಲಿ ಒಂದು ಪಬ್ಲಿಕ್ ಮೀಟಿಂಗ್ ಮಾಡಿ ಠರಾವುಗಳನ್ನು ಪಾಸುಮಾಡಿದರು. ಹೀಗೆಯೇ ಡಾಕ್ಟರ್ ಆನಿಬೆಸೆಂಟರವರು ತಮ್ಮ ಅಭಿಪ್ರಾಯವನ್ನು ಪತ್ರಿಕೆಯಲ್ಲಿ ಪ್ರಕಟಿಸಿರುವರು.

ಈ ತಾ. 21ರಲ್ಲಿ ಮೈಸೂರು ಡಿಸ್ಟ್ರಿಕ್ಟಿನ ಗುಂಡ್ಲುಪೇಟೆಯ ಸಮೀಪ ಒಂದು ಮೋಟಾರು ಬಸ್ಸು ಮರಕ್ಕೆ ತಗಲಿ ಹಲವು ಪ್ರಯಾಣಿಕರಿಗೆ ಘಾಯಮಾಡಿದ್ದಲ್ಲದೆ ಬಹು ಉದಾರಿಗಳು ಮತ್ತು ದೊಡ್ಡ ಸಾಹುಕಾರರೂ ಆದ ಕಬ್ಬಹಳ್ಳಿ ಮೆ ಚೆನ್ನಬಸಪ್ಪನವರ ತಲೆಯು ಛಿದ್ರವಾಗಿ ಕೂಡಲೇ ಮೃತರಾದರಂತೆ. ಇವರು ಮೈಸೂರು ಪಟ್ಟಣದ ರೈಲ್ವೆ ಸ್ಟೇಶನಿನ ಬಳಿ ಒಂದು ದೊಡ್ಡ ಬಂಗ್ಲೆಯನ್ನು 60000 ರೂ. ಕೊಟ್ಟು ಕೊಂಡುಕೊಂಡು ವೀರಶೈವ ವಿದ್ಯಾರ್ಥಿಗಳ ನಿಲಯಕ್ಕೆ ಧರ್ಮಾರ್ಥವಾಗಿ ಬಿಟ್ಟುಕೊಟ್ಟಿರುವರು. ಆ ದಿನದ ಬಸ್ಸು ಡ್ರೈವರು 16ವರ್ಷ ಪ್ರಾಯದ ಹುಡುಗನಾಗಿದ್ದನಂತೆ.

ಸಿಂಧುದೇಶದ ಶಿಕಾರಪುರಿಯ ಒಬ್ಬ ಐಶ್ವರ್ಯವಂತ ವ್ಯಾಪಾರಿಯಾದ ಸತ್ ಇಶರ್‌ದಾಸ್ ಖುಶಿರಾಮ್ ಎಂಬವನು ತನ್ನ ಜೊತೆ ವ್ಯಾಪಾರಿಯಾದ ಖಾನ್‌ಚಂದ್ ಎಂಬವನ ಪ್ರಮಾಣಿಕತನವನ್ನು ಸಂಶಯಪಟ್ಟನೆಂಬ ಕಾರಣದಿಂದ ಖಾನ್‌ಚಂದನು ಅವನ ಮೂರು ಮಗಂದಿರೊಂದಿಗೆ ಕಳೆದ ವಾರ ಒಂದಿನ ಅವನ ಮೂರು ... ಖುಶಿರಾಮನನ್ನು ಅವನ ಅಂಗಡಿಯ 3ನೇ ದಿನ ಹಗಲು ... ಮಹಡಿಯಲ್ಲಿ ಗುದ್ದಿಕೊಂದು ಅವನ ದೇಹವನ್ನು ಕತ್ತರಿಸಿ ಒಂದು ಟಿನ್ನಿನ ಪೆಟ್ಟಿಗೆಯಲ್ಲಿ ಹಾಕಿ ಬೀಗಹಾಕಿ ಸುಕ್ಕೂರಿಗೆ ರೈಲಿನಲ್ಲಿ ಕಳುಹಿಸಿದರು. ಅದರ ತೂಕವು ವಿಶೇಷ ಹೆಚ್ಚಾದ್ದರಿಂದ ಹೆಚ್ಚಿನ ಚಾರ್ಜು ವಸೂಲಿ ಮಾಡುವ ಬಗ್ಗೆ ಆ ಪೆಟ್ಟಿಗೆಯನ್ನು 3ನೇ ದಿನ ಇಳಿಸಿದಲ್ಲಿ ತೂಗಲು ಅದರಿಂದ ದುರ್ವಾಸನೆಬಂದ ಕಾರಣ ಅದನ್ನು ಒಡೆದುನೋಡಿದರು. ಖಾನ್ ಚಂದನನ್ನೂ ಅವನ 3 ಮಕ್ಕಳನ್ನೂ ಕೈದು ಮಾಡಿಯವರು.

ವಿದೇಶ.

ಚೈನಾದ ಯುದ್ಧಪ್ರಭುವಾದ ಉ ಪಿ ಫುರವರು ಪಂಕ್ ನಲ್ಲಿ ಕೊಲ್ಲಲ್ಪಟ್ಟಿರುವರೆಂದು ವರ್ತಮಾನ ಹುಟ್ಟಿದೆ.

ಅಮೇರಿಕದಲ್ಲಿ ಎಲಿಂಗ್ಟನ್ ಎಂಬವನು 1911ರಲ್ಲಿ ಕೊಂಡುಕೊಂಡಿದ್ದ ಒಂದು ಬೂಜಿನ ಕುದುರೆಯನ್ನು ಈಗ 6½ ಲಕ್ಷ ರೂಪಾಯಿಗೆ ಮಾರಿದನಂತೆ!

ರಿಫ್ ಜನರ ಮುಖಂಡನಾದ ಅಬ್ದುಲ್ ಕರೀಮ್‌ರವರ ಬಲ ಕುಂದುತ್ತಿದೆಯೆಂದೂ ಅವರು ಹಾಕಿರುವ ಶರತುಗಳನ್ನು ಕೂಡವೆ ಅವರ ಹಿಂಬಾಲಕರನೇಕರು ಅವರಿಗೆ ವಿರೋಧವಾಗಿ ನಿಂತಿರುವರೆಂದೂ ಸುದ್ದಿ.

ಇಟಲಿ ದೇಶದ ಪ್ರಧಾನ ಮಂತ್ರಿಯವರಾದ ಸಿಞ್ಞೊರ್ ಮುಸ್ಸಲೋನಿಯವರು ಕಠಿಣ ತರದ ಕಾಯಿಲೆಯಿಂದ ಹಾಸಿಗೆಯನ್ನು ಹಿಡಿದಿರುವರು ಅವರ ದೇಹದ ರಕ್ತನಾಳಗಳು ಒಡೆದು ರಕ್ತ ಸೋರುವುದೆಂದೂ ಹೀಗೆ ಮತ್ತೊಮ್ಮೆಯಾದರೆ ಅವರು ಬದುಕುವುದೇ ಕಷ್ಟವೆಂದೂ ಡಾಕ್ಟರವರ ಅಭಿಪ್ರಾಯ.

ಅಮೇರಿಕದ ಸಂಯುಕ್ತ ಸಂಸ್ಥಾನಗಳಲ್ಲಿರುವ ಒಬಾರಕ್ ಎಂಬ ಪ್ರದೇಶದ ಕಾಡು ನಿವಾಸಿಗಳಿಗೆ 25 ವರ್ಷಗಳಿಂದ ಪುರುಷ ವೇಷಧಾರಿಯಾಗಿ ಒಬ್ಬ ಸ್ತ್ರೀಯು ಔಷಧಿ ಚಿಕಿತ್ಸೆಗಳನ್ನು ಮಾಡುತ್ತಿದ್ದಳು. ಅವಳಿಗೆ ಕಾಯಿಲೆಯಾದಾಗ ಅವಳ ಉಪಚಾರಕ್ಕೆ ಒಬ್ಬ ಗಂಡಸು ಇದ್ದಾಗ್ಯೂ ಅವಳು ಸ್ತ್ರೀಯೆಂದು ತಿಳಿದು ಬಂದು ಅಲ್ಲಿಯ ಜನರಿಗೆ ಆಶ್ಚರ್ಯವೂ ವಿಸ್ಮಯವೂ ಉಂಟಾಗಿದೆ. ಆಕೆಗೆ ಈಗ 70 ವರ್ಷ ಪ್ರಾಯ. ಅವಳ ಹುಟ್ಟು ದೇಶವಾದ ಇಂಗ್ಲೆಂಡಿನಲ್ಲಿ ತನ್ನ ಆಸ್ತಿಪಾಸ್ತಿಗಳನ್ನು ನಡಿಸಲು ಮತ್ತು ಅದಕ್ಕೆ ಹಕ್ಕುದಾರಳಾಗಲು ಚಿಕ್ಕಂದಿನಿಂದಲೇ ಪುರುಷವೇಷವನ್ನು ಧರಿಸಲಾರಂಭಿಸಿದಳಂತೆ.

COORG FOREST DEPARTMENT,
SOUTH DIVISION.

TIMBER SALE NOTICE.

Mercara, the 22nd February 1926.

It is notified that about 12,000 c.ft. of Teak, 1000 c. ft. of Biti, 1000 c. ft. of Honne, 3000 c. ft. of Mattı and 1000 c. ft. of Nandı lying in the Coorg Timber Depot at Hunsur will be sold by public auction in convenient lots of about 500 c. ft. at Hunsur on 19—3—1926 commencing at 10 A. M. All the timber is open to Inspection. For further particulars apply to the Divisional Forest Officer, South Coorg, Mercara.

ಪತ್ರವ್ಯವಹಾರ.

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲ. ಸಂ·

ಮಹನೀಯರೇ,

ಕಳೆದ ಸಂಚಿಕೆಯಲ್ಲಿ ಕೋಆಪರೇಟಿವ್ ಸ್ಟೋರ್ಸ್ ವಿಷಯವಾಗಿ ಸ್ಥಳೀಕ ಬೈಲಾಗಳನ್ನು ಏರ್ಪಡಿಸುವ ಸ್ಪೆಶಿಯಲ್ ಮೀಟಿಂಗಿಗೆ ಕೆಲವು ಮಹನೀಯರಿಗೆ ಪತ್ರಿಕೆ ಮೂಲಕ ತಿಳಿಸಲಾಯಿತು. ಅದರಲ್ಲಿ ಕೀತಿರ ಬೆಳ್ಯಪ್ಪನವರು ಎಂಬುದರ ಬದಲು ಅಜ್ಜಮಾಡ ಬೆಳ್ಯಪ್ಪನವರು ಎಂದು ದಯಮಾಡಿ ಮಾರ್ಪಾಟುಮಾಡಿಕೊಳ್ಳುವದು. ಅದಲ್ಲದೆ ಕಾರಣಾಂತರಗಳಿಂದಲೂ ಮತ್ತು ಅನಾನುಕೂಲಗಳಿಂದಲೂ ಎಲ್ಲರೂ ಬರಲಿಕ್ಕೆ ಆಗದ್ದರಿಂದ ಈ ಮೀಟಿಂಗನ್ನು ಮಾರ್ಚ್ ತಾರೀಕು 3ನೇ ಬುಧವಾರ ದಿನ 12ಗಂಟೆಗೆ ಇಟ್ಟಿದೆ. ಆ ದಿನ ಪತ್ರಿಕೆಗಳಲ್ಲಿ ನಮೂದಿಸಿರುವವರಲ್ಲದೆ, ಇದರಲ್ಲಿ ಹೆಚ್ಚು ನಿಗ ಮತ್ತು ಕುತೂಹಲ ಇಟ್ಟಿರುವ ಕೋಆಪರೇಟಿವ್ ಕ್ರೆಡಿಟ್ ಸೊಸೈಟಿಯ ಸಕ್ರಟರಿಗಳೂ ಸಹ ಪೊನ್ನಂಪೇಟೆಗೆ ದಯಮಾಡಿಸಿ ಅವರವರಿಗೆ ತಿಳಿದು ಬರುವ ಸ್ಥಳೀಕ ಬೈಲಾಗಳನ್ನು ಮುಂದಿಡುವರೆಂದು ಕೇಳಿಕೊಳ್ಳುತ್ತೇನೆ.

ಪಿ. ಪಿ. ಮಾದೈಯ್ಯ.

ಕೊಡಗಿನ ಬಸ್ಸು ಸರ್ವೀಸ್.

ಆಯಕ್ಸ,

ತಮ್ಮ ಅಮೂಲ್ಯವಾದ ಪತ್ರದಲ್ಲಿ ಈ ಕೆಳಗಿನ ವಿಷಯವನ್ನು ಬರೆಯಲಿಕ್ಕೆ ಸ್ವಲ್ಪ ಎಡೆಯನ್ನು ಕೊಡಬೇಕಾಗಿ ಕೇಳಿಕೊಳ್ಳುವೆನು. ಅದೇನೆಂದರೆ.—

ನಮ್ಮ ದೇಶದಲ್ಲಿ ಈಗ ಯಾವ ಕಡೆಗೆ ಹೋಗಬೇಕಾದರೂ ಬಸ್ಸು, ಮೋಟರುಗಳು ಹತ್ತಿರ ಇರುವದರಿಂದ ಎಂಥಾ ತುರಿತದ ಕೆಲಸಗಳನ್ನು ಸ್ವಲ್ಪ ಸಮಯದಲ್ಲಿಯೇ ತೀರಿಸಿಕೊಳ್ಳಲು ಅನುಕೂಲವಿದೆ. ಈಗಿನ ಚಳವಳದಲ್ಲಿ ಪ್ರತಿ ದಿವಸವೂ ಒಂದೊಂದು ಕಡೆಗಳಲ್ಲಿ ಒಂದೊಂದು ವಿಷಯ ಮೀಟಿಂಗುಗಳು ಇದ್ದೇ ಇರುವದರಿಂದ ಅಂಥಾ ಸ್ಥಳಗಳಿಗೆ ಹೋಗಲಿಚ್ಛಿಸುವವರಿಗೆ ಇವುಗಳು ಎಷ್ಟು ಸಹಾಯ ಮಾಡುತ್ತವೆಂದು ಹೇಳಲು ಅಸಾಧ್ಯವಾಗಿದೆ. ಹೀಗಿರುವಾಗ ಇಂಥಾ ಬಸ್ಸುಗಳು ಕೆಲವು ಕಡೆಗಳಲ್ಲಿ ಜನರಿಗೆ ತುಂಬಾ ಅನುಕೂಲಕರವಾಗಿಯೂ ಮತ್ತು ಕೆಲವು ಕಡೆಗಳಲ್ಲಿ ಸ್ವಲ್ಪ ಅನಾನುಕೂಲವಾಗಿಯೂ ಇರುವುದು ಸ್ವಲ್ಪ ವ್ಯಸನಕರವಾದ ಸಂಗತಿಯಾಗಿದೆ. ಇದು ಹ್ಯಾಗೆಂದರೆ:—ಮಡಿಕೇರಿಯಿಂದ ಮಂಗಳೂರಿಗೂ ಮತ್ತು ಮೈಸೂರಿಗೂ ಹೋಗಲು ಮೊದಲು ಒಂದೊಂದೇ ಬಸ್ಸುಗಳಿರುವಾಗ ಎಷ್ಟು ಚಾರ್ಜುಗಳಿದ್ದುವು? ಈಗ ಒಂದೊಂದು ರಸ್ತೆಗೆ ಎರಡೆರಡು ಬಸ್ಸುಗಳಾಗುವಾಗ ಎಷ್ಟು ಕಡಿಮೆಯಾಗಿವೆ ಎಂಬುದು ಸಾಧಾರಣ ಎಲ್ಲರಿಗೂ ತಿಳಿದ ಸಂಗತಿಯಾಗಿದೆ. ಚಾರ್ಜು ಕಡಿಮೆಯಾದದ್ದು ಮಾತ್ರವೇ ಅಲ್ಲ, ಒಬ್ಬೊಬ್ಬರ ಹಳೆಯ ಬಸ್ಸುಗಳನ್ನು ಮೂಲೆಗೊತ್ತಿ ಹೊಸ ಬಸ್ಸುಗಳನ್ನು ತರಿಸಿ ಜನರಿಗೆ ಎಷ್ಟು ಅನುಕೂಲವಾಗುವಂತೆ ಮಾಡಿರುತ್ತಾರೆಂಬುದನ್ನು ಬೇರೆ ಹೇಳಬೇಕಾಗಿಲ್ಲ. ಅದೇ ರೀತಿ ಕೊಡಗಿನ ಇತರ ಸ್ಥಳಗಳಿಗೆ ಹೋಗುವ ಬಸ್ಸುಗಳಲ್ಲಿ ಸಹ ಜನರಿಗೆ ಎಷ್ಟೋ ಅನುಕೂಲವಾಗಿದೆ. ಹೀಗಿರುವದಕ್ಕೆ ಅಂಥಾ ರಸ್ತೆಗಳಲ್ಲಿ ಒಂದಕ್ಕಿಂತ ಹೆಚ್ಚು ಬಸ್ಸುಗಳು ಓಡಿಯಾಡುವದೇ ಎಂದು ಹೇಳಿದರೆ ಅದು ತಪ್ಪಾಗಲಿಕ್ಕಿಲ್ಲ

ಆದರೆ ಈಗ ಜನರು ಹೆಚ್ಚಾಗಿ ಪ್ರಯಾಣ ಮಾಡುವ ಮಡಿಕೇರಿ ವೀರರಾಜಪೇಟೆಯ ಬಸ್ಸಿನ ವಿಷಯವನ್ನು ಆಲೋಚಿಸಿದರೆ ಇಂಥಾ ಅಭಿವೃದ್ಧಿಯು ಅದರಲ್ಲಿ ಇಲ್ಲವೇ ಇಲ್ಲ. ಹೀಗಿರಲು ಆ ರಸ್ತೆಗಳಲ್ಲಿ ಬಸ್ಸುಗಳನ್ನು ನಡಿಸಲು ಬೇರೆಯವರಿಗೆ ಲೈಸನ್ಸ್ ಕೊಡದೆ ಇರುವದೇ ಕಾರಣವೆಂದು ಹೇಳಬಹುದಾಗಿ ನನಗೆ ತೋರುತ್ತದೆ. ಯಾವ ಕಾರಣದಿಂದ ಈ ರಸ್ತೆಗಳಲ್ಲಿ ಬೇರೆಯವರಿಗೆ ಲೈಸನ್ಸ್ ಕೊಡುವದಿಲ್ಲವೋ ತಿಳಿಯಲಾಗುವದಿಲ್ಲ. ಈ ಮೊದಲು ಕೊಡಗಿನ ಕೆಲವು ಮಹನೀಯರು ಇಲ್ಲಿಗೆ ಲೈಸನ್ಸ್ ಕೊಡಬೇಕೆಂದು ಕೇಳಿಕೊಂಡರೆಂತಲೂ ಅದಕ್ಕೆ ಬಸ್ಸಿನ ವಿಷಯ ರೂಲ್ಸ್‌ಗಳು ಆಗುತ್ತಿರುವ ಕಾರಣ ಆ ರೂಲ್ಸ್‌ಗಳು ಜಾರಿಗೆ ಬಂದ ವಿನಹ ಲೈಸನ್ಸ್ ಕೊಡುವದಿಲ್ಲ ವಗೈರೆಯಾಗಿ ಹುಕುಂ ದೊರೆತಿದೆಯೆಂದು ಎಲ್ಲಿಯೋ ಓದಿದಂತೆ ಜ್ಞಾಪಕ ಇದೆ. ಹಾಗಾದರೆ ಈ ರೂಲ್ಸ್‌ಗಳು ತಯಾರಾಗುವದು ಯಾವಾಗ? ಜಾರಿಗೆ ಬರುವದು ಯಾವಾಗ? ಬೇರೆ ಎಲ್ಲಾ ರಸ್ತೆಗಳಿಗೂ ಲೈಸನ್ಸ್ ಕೊಡಲು ಇಂಥಾ ರೂಲ್ಸ್‌ಗಳು ಅವಶ್ಯವಿಲ್ಲವೇ? ಇದೊಂದು ರಸ್ತೆಗೆ ಮಾತ್ರ ಇಂಥಾ ರೂಲ್ಸ್‌ಗಳು ಅವಶ್ಯವೋ? ಈ ರಸ್ತೆಯಲ್ಲಿ ಬೇರೆಯವರಿಗೆ ಲೈಸನ್ಸ್ ಕೊಟ್ಟರೆ ಸ್ವೀಕರಾದ ಈಗಿನವರಿಗೆ ನಷ್ಟವಾಗಬಹುದೆಂದು ಯೋಚಿಸಿದ್ದಾರೋ? ತಿಳಿಯಲಾಗುವದಿಲ್ಲವೆಂದು ಕೆಲವರು ಹೇಳುವರು. ದೇಶದ ಎಲ್ಲಾ ಜನರಿಗಾಗಿ ಒಂದೆರಡು ಜನರ ಸುಖವನ್ನು ಸರಕಾರದವರು ನೋಡಬಾರದೆಂಬುದಾಗಿಯೂ, ಈಗಿನವರು ಇಷ್ಟರ ವರೆಗೆ ಬಿಜಿನೆಸ್ ಮಾಡಿದ ಹಣವನ್ನು ಲಾಭ ಸಮೇತ ಪಡೆದುಕೊಂಡಿರಬಹುದೆಂತಲೂ ಅದುದರಿಂದ ದೇಶದ ಜನರ ಸುಖವನ್ನು ಪ್ರಜೆಗಳ ಪ್ರೀತಿಗೆ ಪಾತ್ರರಾದ ಅಧಿಕಾರಿಗಳು ಯೋಚಿಸಬೇಕೆಂತಲೂ ನಾನು ಈ ಮೂಲಕ ಬೇಡಿಕೊಳ್ಳುವವನಾಗಿದೆ. ಹೀಗೆ ಬೇಡಿಕೊಳ್ಳುವಾಗ ಈಗಿನ ಬಸ್ಸಿನವರು ಅದೇನು ಅಂಥಾ ತೊಂದರೆ ಮಾಡಿದರು? [illegible] ಜನರ ಮೇಲೆ ನಿನಗೆ ಅಷ್ಟು ಹೊಟ್ಟೆಕಿಚ್ಚೇ ಎಂಬುದಾಗಿ ಕೆಲವರು ಕೇಳಬಹುದು. ಅದಕ್ಕಾಗಿ ನನ್ನ ತಿಳುವಳಿಕೆಗೆ ಬಂದ ಒಂದೆರಡು ಸಂಗತಿಗಳನ್ನು ನಾನು ಇಲ್ಲಿ ಬರೆಯುವೆನು — ಈಗಿನ ಬಸ್ಸು ಬಹು ಚಿಕ್ಕದಾಗಿರುವದರಿಂದ ಅನೇಕ ಸಮಯಗಳಲ್ಲಿ ಜನರಿಗೆ ಬೇಕಾದಂತೆ ಸ್ಥಳ ದೊರೆಯುವದಿಲ್ಲ. ಇಂಥಾ ಸಂದರ್ಭಗಳಲ್ಲಿ ಜನರು ಅನುಕೂಲವಾಗಿ ಕುಳಿತುಕೊಳ್ಳಬೇಕಾದದಕ್ಕಿಂತ ಹೆಚ್ಚು ಜನರನ್ನು ಕುಳ್ಳಿರಿಸಿಕೊಂಡು ಎಲ್ಲರಿಗೂ ಅನಾನುಕೂಲವನ್ನುಂಟು ಮಾಡುವರು.

(2) ಈಗಿನ ಬಸ್ಸುಗಳು ಬಹು ಹಳೆಯದಾಗಿ ಗಡಗಡನೆ ನಡುಗುತ್ತಾ ಕ್ಷೇಮವಿಲ್ಲದಿರುವ ಪ್ರಯಾಣಸ್ಥರು ಬಸ್ಸಿನಿಂದ ಇಳಿಯುತ್ತಲೇ ಅಸ್ವಸ್ಥರಾಗುವರು. ಇದು ಪ್ರತ್ಯಕ್ಷ. ಮಳೆ ಇರುವ ಸಮಯದಲ್ಲಿ ಈ ಬಸ್ಸಿನಲ್ಲಿ ಕೂತರೆ ಒಳಗೆ ಕೊಡೆ ಹಿಡಿದುಕೊಳ್ಳಬೇಕಾಗುವದು.

(3) ಒಂದೇ ಸರ್ವೀಸಿನವರಿಗೆ [illegible] ಮತ್ತು ಮೊನಾಪೊಲಿಯಾಗಿಯೂ ಲೈಸನ್ಸ್ ಕೊಟ್ಟಿರುವ ಕಾರಣ ಅವರ ಹತ್ತಿರ ಬೇಕಾದಷ್ಟು ಬಸ್ಸುಗಳು ಇಲ್ಲದೆ ಇರುವ ಕಾರಣ ಪ್ರಯಾಣಸ್ಥರಿಗೆ ಅನುಕೂಲವಾಗುವ ರೀತಿಯಲ್ಲಿ ಈ ಬಸ್ಸುಗಳು ದೊರೆಯುವದಿಲ್ಲ. [illegible] ರಾಜಪೇಟೆಗೆ ಎರಡು ಹೊತ್ತು ಹೋಗುವಂತೆ [illegible] ಗಾಗಿ ನಾವು ಹೋದರೆ ಎಲ್ಲಾ ಜನರಿಗೆ ಅನುಕೂಲವಿದೆ. ಇದರಿಂದ ನಮ್ಮ ದೇಶದ ಅಧಿಕಾರಿಗಳು ಇಂಥಾ ವಿಷಯವನ್ನು ಗಮನಕ್ಕೆ ತೆಗೆದುಕೊಂಡು ಕೊಡಗಿನಲ್ಲಿ ಹೆಚ್ಚಾದ ಜನರು ತಿರುಗುವಂಥ ಮಡಿಕೇರಿ, [illegible] ಮತ್ತು [illegible], ಮುಂತಾದ ರಸ್ತೆಗಾಗಿ ಅಥವಾ ಅವಶ್ಯವಿದ್ದಲ್ಲಿ ಇನ್ನೂ ಹೆಚ್ಚು [illegible] ರಾಜಪೇಟೆಗೆ ಹೋಗಲು ಒಂದೆರಡು ರಸ್ತೆಗೆ ಬೇರೆಯವರ ಪ್ರಕಾರ ಲೈಸನ್ಸ್‌ಗಳನ್ನು ಕೊಟ್ಟು ಅದರಿಂದ ಪ್ರಯಾಣಸ್ಥರಿಗೆ ಹೆಚ್ಚಿನ ಅನುಕೂಲವಾಗುವಂತೆ ಮಾಡಿ ಅವರ ಪ್ರೀತಿಗೆ ಪಾತ್ರರಾಗುವರಾಗಿ ಬೇಡಿಕೊಳ್ಳುವ

ಪ್ರಯಾಣಸ್ಥ.

ಕೊಡವರ ಉಡುಪಿನ ನೂತನ ವಿಚಾರ

ಅಯ್ಯಾ, ವಾಚಕ ಮಹಾಶಯರೇ, ಈಗ್ಗೆ ಕೆಲವು ದಿನಗಳಲ್ಲಿ ಮ. ರಾ. ಶ್ರೀ. ಕಾಡಂಡೇರ ಮಾದಪ್ಪನವರ ಪುತ್ರಿಯ ವಿವಾಹ ಮಹೋತ್ಸವವು ಅತಿ ವಿಜೃಂಭಣೆಯಿಂದ ಜರುಗಿತು. ಅಲ್ಲಿ ನೆರೆದಿದ್ದ ಮಹನೀಯರಲ್ಲಿ ಕೆಲವರು ನಮ್ಮ ಕೊಡವ ಪದ್ಧತಿಗೆ ಸರಿಯಾಗಿದ್ದರು. ಕೆಲವರಾದರೋ ತಮ್ಮ ಕಾಲಿನ ಪಾದರಕ್ಷೆಯನ್ನು ಕಾಲಿನಿಂದ ತೆಗೆಯಲು ತುಂಬಾ ಆಶ್ಚರ್ಯಪಟ್ಟಿದ್ದುದಕ್ಕೆ ಕಾರಣವೇನೋ ತಾವೇ ಆಲೋಚಿಸಬೇಕಾಗಿದೆ. ಕಾಲಿಗೆ ಭೂಮಿಯು ಮುಟ್ಟಬಾರದೆಂಬ ಕಾರಣವೋ, ಅಥವಾ ಅವರು ದೇವತೆಗಳೋ ಎಂಬುದನ್ನು ವಾಚಕ ಮಹಾಶಯರೇ ಊಹಿಸಿಕೊಳ್ಳಬೇಕಾಗಿದೆ. ವಧುವಿಗೆ ಆಶೀರ್ವದಿಸಿ ಚಂದಗಾಣಿಸುವ ಸಮಯದಲ್ಲೂ ಪುರುಷ ತಮ್ಮ ಕಾಲುಗಳ ಪಾದರಕ್ಷೆಯನ್ನು ತೆಗೆದರೋ ಇಲ್ಲವೋ ಎಂಬ ಸ್ಪಷ್ಟದ ರೀತಿ ತಿಳಿದವನಾಗಾಯಿತು. ಪುನಹ ಪಾದರಕ್ಷೆಯು ತಮ್ಮ ಕಾಲನ್ನು ಅಲಂಕರಿಸಿಕೊಂಡಿತು. ಇದೇನಾಶ್ಚರ್ಯ! ಈ ವಿಷಯವನ್ನೇ ನಾನು ಹೆಚ್ಚು ವಿವರಿಸುವೆನೆಂದರೆ ಅಲ್ಲಿ ನೆರೆದಿದ್ದ ಸ್ತ್ರೀಯರ ಉಡಿಗೆಯು ವಿಪರೀತವೆಂದು ತೋರಿತು. ಏನೆಂದು ಕೇಳುವಿರಾ, ಕೆಲವು ಸ್ತ್ರೀಯರ ಉಡುಪು ಮಲೆಯಾಳದ ತೀಯರ ಹೆಂಗಸರ ಉಡುಪಿನಂತೆ ಕಂಡೆನು. ಇನ್ನು ಕೆಲವರ ಉಡುಪು ಅರಬಸ್ಥಾನದ ಅರಬಿಯನರ ಹೆಂಗಸರ ಉಡುಪಿನಂತೆ ಕಂಡೆನು. ಮತ್ತು ಈ ಸ್ತ್ರೀಯರೆಲ್ಲಾ ನಮ್ಮವರೋ ಅನ್ಯಜಾತಿಯ ಸ್ತ್ರೀಯರೋ ಎಂಬ ಸಂಶಯವು ನನ್ನನ್ನು ಕವಲುಗೊಳಿಸಿತು. ಒಂಸ್ವರ ತಿಳಿಯುವಾಗ್ಯೆ ಎಲ್ಲವರು ನಮ್ಮ ಕೊಡವ ಸ್ತ್ರೀಯರೆಂದೇ ವೇದ್ಯವಾಯಿತು. ಇದು ತುಂಬಾ ಶೋಚನೀಯ. ಹೀಗಿರುವಾಗ್ಯೆ ನಮ್ಮ ಜನಾಂಗದ ಮುಂದಾಳುಗಳು ಆಚಾರ, ಉಡಿಗೆ ತೊಡಿಗೆಯ ವಿಷಯದ ಸಮ್ಮೇಳನವಾಗಿ ಕೂಡುವ ಸಭೆ ಏರ್ಪಡಿಸಬೇಕೆಂಬುದು ಸರಿಯೇ. ಹೀಗಿರುವವರಿಗೆ ಈ ವಿವಾದವು ನ್ಯಾಯವೆಂದು ಹಳ್ಳಿಗಳಲ್ಲಿರುವವರು ಒಪ್ಪುವುದು ನ್ಯಾಯ. ನ್ಯಾಯಕ್ಕೆ ಅಂದರೆ ಪೂರ್ವಾಚಾರದ ಉಡಿಗೆತೊಡಿಗೆಗಳ ಪದ್ಧತಿಗೆ ವಿರೋಧವಾಗಿ ನಡಿಯುವದು ನಮ್ಮ ಮುಂದಾಳುಗಳ ಭಾಗಕ್ಕೆ ಉಳಿದಿದೆ. ಈ ವಿಷಯ ಹೆಚ್ಚು ವರ್ಣಿಸಲಾರೆನು. ಯಾವ ಜನಾಂಗದಲ್ಲಾಗಲಿ ಅವರವರ ಪೂರ್ವ ಪದ್ಧತಿಯು ಅವರವರ ಜಾತಿಯ ಸ್ತ್ರೀಯರಲ್ಲಿ ಉಳಿದಿದೆ. ನಮ್ಮ ಜನಾಂಗದಲ್ಲಾದರೋ ಪುರುಷರಿಗಿಂತ ಸ್ತ್ರೀಯರೇ ವಿಪರೀತವಾಗಿದ್ದಾರೆ. ಅಲ್ಪಜ್ಞನಾದ ನನ್ನ ಈ ವಿಷಯವು ವಾಚಕ ಮಹಾಶಯರಿಗೂ ನಮ್ಮ ಜನಾಂಗದ ಮುಂದಾಳುಗಳಿಗೂ ತಪ್ಪೆಂದು ತೋರಿದರೆ ಕ್ಷಮೆ ಬೇಡಿಕೊಳ್ಳುತ್ತೇನೆ. ತಪ್ಪಿಲ್ಲದಿದ್ದರೆ ನ್ಯಾಯವೆಂದು ತೋರಿದಲ್ಲಿ ಪೂರ್ವ ಪದ್ಧತಿಯನ್ನೇ ಜಾರಿಗೆ ತರಬೇಕಾಗಿ ಕೇಳಿಕೊಳ್ಳುತ್ತೇನೆ.

'ಹಾಡುಬಿದ್ದ ನಾಡಿನವ'

ಅಯ್ಯಾ,

ನಮ್ಮ ನಾಡಿಗ ಕೊಡಂಡದೆಯಾಗಿರುವ ಪಟ್ಟಂಗಾಲದಲ್ಲಿ ಈಗ ಸುಮಾರು ಐವತ್ತು ಅರುವತ್ತು ವರ್ಷಕ್ಕೆ ಮುಂಚೆ ಭತ್ತ ಮತ್ತು ಕಾಫಿ ವ್ಯಾಪಾರ ಮಾಡುತ್ತಿದ್ದ ಪಟ್ಟಂಗಾಲದ ಅನೇಕ ದೊಡ್ಡ ಮನುಷ್ಯರು ಅಲ್ಲದೆ ಪರದೇಶದಿಂದ ಬಂದ ರಾಮಸ್ವಾಮಿ ನಾಯುಡು, ಒಕ್ಕಲಿಗರ ಸಂಬಪ್ಪ ತಿಮ್ಮಪ್ಪ ರಾಯ ಪಗ್ಗೆರು ಮತ್ತು ಮ. ರಾ. ಶ್ರೀ. ಕುಪ್ಪಂಡ ಪೂವಣ್ಣನವರು ಈ ಮೇಚ್ಚಂಡ ಮಹಾಭಾವರಲ್ಲದೆ ಸೇರಿ ಬಂದವರ ಮಾಡಿದ ಬಾಡಿಗೆ ಪಟ್ಟಿಯ ಮೇರೆ 1920--22ರವರೆಗೆ ಕಂಡಂಗಾಲಕ್ಕೆ 2ಅಣೆ, ಬಾಡಗಕ್ಕೆ 3ಅಣೆ, ಕುತ್ತುನಾಡಿಗೆ 4ಅಣೆ ದರದಲ್ಲಿಯೇ ಭತ್ತ ಹೇರಿಬರುತ್ತಾ ಬಂದಿದ್ದಾಯಿತು. ಈಗ ಸುಮಾರು ನಾಲ್ಕು ವರುಷದಿಂದ ಕಂಡಂಗಾಲ ಬಾಡಗ, ಈ ಎರಡು ಗ್ರಾಮದಲ್ಲೂ ಈಗ ಭತ್ತದ ವ್ಯಾಪಾರ ಮಾಡುವ ಬೇರೆ ಒಬ್ಬ ದೊಡ್ಡ ಮನುಷ್ಯರು ಪಟ್ಟಂಗಾಲ ಗ್ರಾಮದ ಪ್ರಾಕೃತಿಕ ಹಿರಿಯರು ನಡೆದ ಬಾಡಿಗೆ ಪಟ್ಟಿಯನ್ನು ಬಿಡಿಸಿ ಅವರುಗಳ ಇರಾದೆ ಮೇರೆ ಎರಡಾಣೆ ಬಾಡಿಗೆಯನ್ನು ಮೂರಾಣೆಗೂ ಮೂರಾಣೆಯನ್ನು ನಾಲ್ಕಾಣೆಗೂ ನಾಲ್ಕಾಣೆಯನ್ನು ಐದಾಣೆ ಆರಾಣೆಗೆ ಹೆಚ್ಚಿಸಿಕೊಂಡು ಬಾಡಿಗೆಯನ್ನು [illegible]. ಇದು ಬೇರಳನಾಡು ಕುತ್ತುನಾಡು ರೈತರಿಗೆ ನಮ್ಮ ಪೂರ ಅನ್ಯಾಯ ಕಷ್ಟ, ಅದೂ ಅಲ್ಲದೆ ರೈತರು ಸಾಹುಕಾರರ ಬಾಕಿದಾರರಾದ ಮೇಲೆ ಅವರು ಹೇಳಿದ ಮೇರೆ ಬಾಡಿಗೆ ಕೊಟ್ಟೇ ತೀರಬೇಕು. ಅದೇ ರೀತಿ ಗಾಡಿ ಹೋಗುವಲ್ಲಿಗೂ ನಮ್ಮ ಮೇಚ್ಚಂಡ ಬಾಡಿಗೆ ಮೇರೆ ಪಟ್ಟಂಗಾಲದಲ್ಲೂ ಭತ್ತ ವ್ಯಾಪಾರ ಮಾಡುವ ಮಹನೀಯರು ನಮ್ಮ ಬಾಡಿಗೆ ವಸೂಲು ಮಾಡುತ್ತಾರೆ. ಇವರು ಗರೀಬ ರೈತರ ಬಾಗಕ್ಕೆ ಪೂರ ಅನ್ಯಾಯ [illegible]. ಪೂರ್ವದಲ್ಲಿ ಪಟ್ಟಂಗಾಲದಲ್ಲಿ ಗಾಡಿ 1ಕ್ಕೆ 15ಬಟ್ಟಿ ಭತ್ತ ಯಾವ ದರ ಇತ್ತೋ, ಅದೇ ದರದಲ್ಲಿ ಗಾಡಿಗಳು ಹೋಗುವ ಮನೆಗಳಲ್ಲಿ ಭತ್ತ ತುಂಬುತ್ತಿದ್ದರು. ಪೂರ್ವದ ಕಾಲದಲ್ಲಿ, ಈಗಲೋ [illegible] ರಸ್ತೆಗಳಿಗಾಗಿ ಗವರ್ನಮೆಂಟಿನಿಂದ ಹೊಸ ಹೊಸ [illegible] ದಾರಿ [illegible] ರೈತರಿಗೆ ಸರಕಾರದವರು [illegible] ಪ್ರಯೋಜನವೂ ಒದಗಿತು. ಅದಕ್ಕಾಗಿ ನಮ್ಮ ನಾಡಿನ ಭತ್ತದ ವ್ಯಾಪಾರ ಮಾಡುವ ಮಹಾನುಭಾವರ [illegible] ನಾಡಿನ ರೈತರ ಕಷ್ಟ ಸುಖಗಳನ್ನು ಚಿತ್ತಕ್ಕೆ ತೆಗೆದುಕೊಂಡು ಈ ಕಾಲದಲ್ಲಾದರೂ ಪೂರ್ವೀಕರು ನಡೆದ ಬಾಡಿಗೆ ನಿರಖುಪಟ್ಟಿಯನ್ನು ಅನುಸರಿಸಿ ಬಾಡಿಗೆ ವಸೂಲಿಸುವರಾಗಿ ಪ್ರಾರ್ಥಿಸುವವನಾಗಿರುತ್ತೇನೆ. ಇಬ್ಬರ ಬಗ್ಗೆ ಮನಸ್ಸಿಗೆ ಲಾಭ, ರೈತರಿಗೂ ಸಾಹುಕಾರರಿಗೂ ಕಷ್ಟ. ಗಂಜಾಂನಿಂದ ಒಂದಾಣೆ ಬಾಡಿಗೆಯವರಿಗೆ ಲಾಭ

ಕಂಡಂಗಾಲ ಗ್ರಾಮದ ಒಬ್ಬ ಬಡರೈತ.

ಅಖಿಲ ಕರ್ನಾಟಕ ವಿಶ್ವವಿದ್ಯಾನಿಲಯವೂ ಕೊಡಗೂ.

ಯಾವದೊಂದು ದೇಶವೇ ಆಗಲಿ, ಯಾವದೊಂದು ಜನಾಂಗವೇ ಆಗಲಿ, ಅಭಿವೃದ್ಧಿ ಸ್ಥಿತಿಯನ್ನು ಹೊಂದಬೇಕಾದರೆ ದೇಶದ ಜನರಲ್ಲಿ ಸ್ವದೇಶಾಭಿಮಾನ ಮತ್ತು ಸ್ವಭಾಷಾಭಿಮಾನ ಇವೆರಡು ಗುಣಗಳು ಪ್ರಥಮತಃ ತಲೆದೋರಬೇಕು. ಅದರಲ್ಲಂತೂ ಭಾಷಾಭಿಮಾನವೇ ಪ್ರಾಮುಖ್ಯವಾದುದು. ಇದರ ಮರ್ಮವನ್ನು ತಿಳಿದು ನಮ್ಮ ದೇಶದ ಮುಂದಾಳುಗಳು ಇತ್ತೀಚಿಗೆ ಪ್ರಾಂತೀಕ ಭಾಷೆಗಳನ್ನು ವೃದ್ಧಿಗೊಳಿಸುವದರಲ್ಲಿ ಹೆಚ್ಚಾದ ಶ್ರದ್ಧೆಯನ್ನು ತೋರಿಸುತ್ತಿರುವರು. ನಮ್ಮ ದಕ್ಷಿಣ ಹಿಂದುಸ್ಥಾನದಲ್ಲಿ ಆಂಧ್ರದೇಶದವರು ತೆಲುಗು ಭಾಷೆಯನ್ನು ಉಚ್ಚಸ್ಥಿತಿಗೆ ತರಬೇಕೆಂದು ಒಂದು ಪ್ರತ್ಯೇಕ ವಿಶ್ವವಿದ್ಯಾನಿಲಯವನ್ನು ಸ್ಥಾಪಿಸಿಕೊಂಡರು. ತಮಿಳು ನಾಡಿನವರು ಮತ್ತು ಮಲಯಾಳಿ ಪ್ರಾಂತ್ಯದವರು ಆಂಧ್ರಬಾಂಧವರನ್ನು ಹಿಂಬಾಲಿಸಲು ಪ್ರಯತ್ನಿಸುತ್ತಿರುವರು. ನಮ್ಮ ಕರ್ನಾಟಕವೂ ಕೂಡ ಅದರ ಘೋರನಿದ್ರೆಯಿಂದ ಎಚ್ಚತ್ತುಕೊಳ್ಳುತ್ತಿದೆ. ಈಗ ಸಾಧಾರಣ ಎರಡು ತಿಂಗಳ ಹಿಂದೆ ಕರ್ನಾಟಕದ ಕೆಲವು ಮುಂದಾಳುಗಳು ಬಳ್ಳಾರಿಯಲ್ಲಿ ಒಂದು ಸಭೆಯನ್ನು ಕೂಡಿಸಿ ಅನೇಕ ವಿಷಯಗಳನ್ನು ಚರ್ಚಿಸಿ ಅವುಗಳಲ್ಲಿ ಒಂದೆರಡು ವಿಷಯಗಳನ್ನು ದೇಶದ ಮುಂದೆ ವಿಮರ್ಶೆಗಾಗಿಟ್ಟಿರುವರು. ಅವುಗಳಲ್ಲಿ ಮೊದಲನೇದು ನಮ್ಮ ಮದರಾಸು ಪ್ರಾಂತದ ವಿದ್ಯಾ ಇಲಾಖೆಯ ಮಂತ್ರಿ ಸರ್ ಎ. ಪಿ. ಪತ್ರೋರವರ ಅಭಿಪ್ರಾಯ. ಅದೇನೆಂದರೆ, ಕನ್ನಡ ಭಾಷೆಯೇ ಪ್ರಾಮುಖ್ಯವಾಗಿರುವ ಬಳ್ಳಾರಿ, ಅನಂತಪುರ ಮುಂತಾದ ಪ್ರಾಂತಗಳನ್ನು ಆಂಧ್ರವಿದ್ಯಾನಿಲಯಕ್ಕೆ ಕೂಡಿಸುವದು, ಮತ್ತು ಉಳಿದ ದಕ್ಷಿಣ ಕನ್ನಡವನ್ನು ಕೇರಳ ವಿಶ್ವವಿದ್ಯಾನಿಲಯದ ಭಾಗವನ್ನಾಗಿ ಮಾಡುವದು. ಅಂತೂ ಇಂತೂ ಕನ್ನಡ ಭಾಷೆಯನ್ನು ನಿರ್ನಾಮವಾಗಿ ಮಾಡುವದು. ಎರಡನೇದು, ಮದ್ರಾಸು ಅಧಿಪತ್ಯದಲ್ಲೇ ಒಂದು ಪ್ರತ್ಯೇಕ ಕರ್ನಾಟಕ ವಿಶ್ವವಿದ್ಯಾನಿಲಯವನ್ನು ಸ್ಥಾಪಿಸುವದು. ಮೂರನೇದು, ಕರ್ನಾಟಕ ಭಾಷೆಯು ಬಳಕೆಯಲ್ಲಿರುವ ಬೊಂಬಾಯಿ ಮದ್ರಾಸು ಅಧಿಪತ್ಯಗಳ ಮತ್ತು ಹೈದರಾಬಾದು ಸಂಸ್ಥಾನದ ಪ್ರಾಂತಗಳನ್ನು ಮೈಸೂರು ವಿದ್ಯಾನಿಲಯಕ್ಕೆ ಸೇರಿಸಿ ವಿದ್ಯಾ ಇಲಾಖೆಯ ಪಟ್ಟಿಗೆ ಸರ್ವ ಅಧಿಕಾರವನ್ನೂ ಮೈಸೂರು ಮಹಾರಾಜರ ಸನ್ನಿಧಿಯಲ್ಲಿ ಅರ್ಪಿಸುವದು.

ಕೊಡಗು ಬಾಂಧವರೇ, ಸರ್ ಎ. ಪಿ. ಪತ್ರೋರವರ ಅಭಿಪ್ರಾಯದ ವಿಷಯವಾಗಿ ದಯವಿಟ್ಟು ಸ್ವಲ್ಪ ಆಲೋಚಿಸಿ ನೋಡಿರಿ. ಯಾವ ಭಾಷೆಯು ಚಾಲುಕ್ಯರ, ಹೊಯ್ಸಳರ ಮತ್ತು ವಿಜಯನಗರದ ಅರಸರ ಪ್ರೋತ್ಸಾಹದಿಂದ ಪಂಪ, ರನ್ನ, ಪೊನ್ನ, ಕುಮಾರ, ವ್ಯಾಸ ಮೊದಲಾದ ಕವಿಗಳ ಕಂಠದಿಂದ ಆಕಾಶದಲ್ಲಿ ಧ್ವನಿಗೈಯುತ್ತಿತ್ತೋ, ಯಾವ ಭಾಷೆಯು ನೂರಾರು ವರ್ಷಗಳ ಕಾಲ ದಕ್ಷಿಣ ಹಿಂದುಸ್ಥಾನದಲ್ಲೆಲ್ಲಾ ಸುರಸವಾದ ಕವಿತೆಯಿಂದ ಮೆರೆಯುತ್ತಿತ್ತೋ, ಅಂಥ ಕರ್ನಾಟಕ ಭಾಷೆಗೆ ಇಂದು ಉಳಿದುಕೊಳ್ಳಲು ಸ್ಥಳವೇ ಇಲ್ಲದೆ ನಿರ್ಮೂಲವಾಗಿ ನಾಶವಾಗುವ ಕಾಲವು ಒದಗಿದೆ! ಇದಕ್ಕೆ ಕಾರಣವೇನಿರಬಹುದೆಂದರೆ ನಿಶ್ಚಿತವಾಗಿಯೂ ನಮ್ಮ ಜಡತೆಯೇ ಕಾರಣ. ಅವಿಂತಿರಲಿ, ಇನ್ನು ಈ ಕೊಡಗಿನ ಗತಿಯೇನು? ಅಧೋಗತಿ, ತ್ರಿಶಂಕುಸ್ವರ್ಗ ಗತಿಯೇ ಎಂಬ ಇಚ್ಛೆ ಇದ್ದರೆ ಹತ್ತಿರದಲ್ಲೇ ಇರುವ ಕೇರಳವನ್ನು ಸೇರಿ ಅನೇಕ ಕಾಲಗಳಿಂದ ಮಾತೃಭಾಷೆಯಾಗಿರುವ ಪರಿಶುದ್ಧವಾದ ಕನ್ನಡಕ್ಕೆ ತಿಲಾಂಜಲಿಯನ್ನಿತ್ತು ಮಲಯಾಳಿ ಭಾಷೆಯನ್ನು ಕಲಿಯಲು ಪ್ರಾರಂಭಿಸಬೇಕಾಗಿ ಬರುವದು.

ಆದ್ದರಿಂದ ದೇಶಬಾಂಧವರೇ, ದಯವಿಟ್ಟು ಎಚ್ಚರವಾಗಿರಿ. ಕರ್ನಾಟಕಕ್ಕೆ ಪ್ರತ್ಯೇಕ ವಿಶ್ವವಿದ್ಯಾನಿಲಯವನ್ನು ಸ್ಥಾಪಿಸುವದು ಅಸಂಭವವಾಗಿ ಕಂಡುಬರುವದು. ಯಾತಕ್ಕೆಂದರೆ, ವಿದ್ಯಾನಿಲಯವಾಗಬೇಕಾದರೆ ಹೆಚ್ಚಾದ ಧನಸಹಾಯವು ಬೇಕಾಗುವದು. ಸದ್ಯದಲ್ಲಿ ಸಾಕಷ್ಟು ಹಣವು ದೊರೆಯುವದು ದುರ್ಲಭವೇ ಸರಿ. ಈ ಕಾರಣಗಳಿಂದ ನಾವು ಮಾತ್ರ ಸುಮ್ಮನಿದ್ದರೆ ಎಲ್ಲವೂ ಪತ್ರೋರವರ ಅಭಿಪ್ರಾಯದಂತೆ ನಡೆಯುವದು ಖಂಡಿತ.

ಈ ವಿಷಯಗಳನ್ನು ಪರ್ಯಾಲೋಚಿಸಿ ಪತ್ರೋರವರ ಅಭಿಪ್ರಾಯವನ್ನು ಖಂಡಿಸುವದಕ್ಕಾಗಿಯೂ, ಕರ್ನಾಟಕ ಭಾಷೆಯು ಮುಖ್ಯಭಾಷೆಯಾಗಿರುವ ಪ್ರಾಂತಗಳನ್ನೆಲ್ಲಾ ಮೈಸೂರು ವಿಶ್ವವಿದ್ಯಾನಿಲಯಕ್ಕೆ ಸೇರಿಸುವಂತೆ ಮೈಸೂರಾಯರ ಅನುಮತಿಯನ್ನು ಪಡೆಯ ಪ್ರಯತ್ನಿಸುವುದಕ್ಕಾಗಿಯೂ, 'ಮೈಸೂರು ಮಹಾರಾಜರು ತಾವೇ ಆ ವಿಷಯದಲ್ಲಿ ಮುಂದಾಳುಗಳಾಗಲಿಕ್ಕಿಲ್ಲವೆಂಬ ಆಲೋಚನೆಯಿಂದ ಮೈಸೂರಾಯರ ಅನುಮತಿಯು ಅವಶ್ಯಕತೆ! ಮೊನ್ನೆ ದಿನ ಮಂಗಳೂರಿನಲ್ಲಿ ಎಲ್ಲಾ ಮತಸ್ಥರ ಒಂದು ಕೂಟವು (Committee) ಕೂಡಿ ಬೆಂಗಳೂರಿನ ಶ್ರೀಯುತ ಡಾಕ್ಟರ್ ಸಿ. ಬಿ. ರಾಮರಾಯರನ್ನು ತಮ್ಮ ಪ್ರತಿನಿಧಿಯನ್ನಾಗಿ ಚುನಾಯಿಸಿರುವರು. ಇದೇರೀತಿ ಬೇರೆ ಪ್ರಾಂತದವರೂ ಸಹ ಮಾಡಲಿಕ್ಕಿರುವರು. ಆದ್ದರಿಂದ ಕರ್ನಾಟಕದ ಒಂದು ಭಾಗವಾದ ಕೊಡಗು ಈ ವಿಷಯದಲ್ಲಿ ಹಿಂದುಳಿಯುವದು ಉಚಿತವಲ್ಲ. ಬೇರೆ ಪ್ರಾಂತದವರಂತೆ ಕೊಡಗಿನ ಮುಂದಾಳುಗಳು ಒಂದು ಸಭೆಯನ್ನು ಕೂಡಿಸಿ ಸಾಧ್ಯವಾದರೆ ಒಬ್ಬನೋ ಅಥವಾ ಇಬ್ಬರನ್ನೋ ಪ್ರತಿನಿಧಿಯಾಗಿ ಕಳುಹಿಸಬೇಕು. ಇದು ಅಸಾಧ್ಯವಾದರೆ ಶ್ರೀಯುತ ಡಾಕ್ಟರ್ ರಾಮರಾಯರನ್ನೇ ಪ್ರತಿನಿಧಿಯಾಗಿಟ್ಟು ಕಮಿಟಿಯಿಂದ ಒಂದು ಅನುಮತಿ ಮತ್ತು ಒತ್ತಾಸೆಯ ಪತ್ರವನ್ನು ಅವರಿಗೆ ಕಳುಹಿಸಿ ತಮ್ಮ ಭಾಷಾಭಿಮಾನವನ್ನು ಸೂಚಿಸಬೇಕೆಂಬುದೇ ನನ್ನ ವಿನಂತಿ.

ಎನ್. ಸೋಮಣ್ಣ.

ಅಯ್ಯಾ,

ಕೊಡಗು ಪರಸ್ಪರ ಸಹಾಯ ಸಂಘದ ಕಾನ್ಫರೆನ್ಸ್ ಕಳೆದ ಎರಡು ಮೂರು ವರ್ಷಗಳಿಂದ ನಡಿಸಲೇ ಇಲ್ಲ. ಸ[illegible]ಕಾರಿ ಸಂಘದ ರಿಜಿಸ್ಟ್ರಾರರಾದ ಮೇಲಧಿಕಾರಿಗಳು ಈ ವಿಷಯದಲ್ಲಿ ತಕ್ಕ ಏರ್ಪಾಡು ಮಾಡದೆ ಇರುವದರಿಂದ ಸಹಕಾರ[illegible] ಸಂಘದ ಮೆಂಬರುಗಳಿಗೆ ಅತೃಪ್ತಿಯನ್ನುಂಟು ಮಾಡಿದೆ. [illegible] ಕಡಲೇ ಈ ತಾಲೂಕು ಅಕ್ಕೈರು ಒಳಗೆ ಮಧ್ಯಸ್ಥಳವಾದ [illegible] ರಾಜಪೇಟೆಯಲ್ಲಿ ಸಹಕಾರ ಕಾನ್ಫರೆನ್ಸನ್ನು ಮಾಡ[illegible] ರಿಜಿಸ್ಟ್ರಾರವರನ್ನು ಕೇಳಿಕೊಳ್ಳುತ್ತೇನೆ.

" ಸಹಕಾರಿ

ಮನೋಲ್ಲಾಸಿನಿ ತೈಲ.

ತಲೆನೋವು ತಲೆ ತಿರುಗುವುದು, ತಲೆಯ ಕಣ್ಣುರಿ, ಕೆಮ್ಮು ಕೂದಲು ಉದುರುವುದು ... ನಿದ್ರೆ ಬಾರದಿರುವುದು, ನೆನಪು ಶಕ್ತಿ ಕುಂದಿಹೋಗುವುದು ಇವುಗಳನ್ನೆಲ್ಲ ನಿಲ್ಲಿಸಿ ... ಕೂದಲನ್ನು ಬೆಳೆಯಿಸಿ ಕೂದಲಿಗೆ ಸೌಂದರ್ಯವನ್ನು ಹೊಳಪನ್ನು ಕೊಟ್ಟು ... ಕೂದಲು ಇಲ್ಲದ ಸ್ಥಳದಲ್ಲಿ ಹೊಸ ಕೂದಲನ್ನು ಹುಟ್ಟಿಸುತ್ತದೆ. ಸೀಸೆಗೆ ರೂ 1, 3 ಸೀಸೆಗೆ 2—10—0, ಒಂದು ದೊಡ್ಡ ಸೀಸೆಗೆ ರೂ 2, 3 ಸೀಸೆಗಳಿಗೆ 5—8—0

ಚಂದನಾಸವ.— ಇದು ಪ್ರಮೇಹ, ಮೂತ್ರಕೃಚ್ಛ್ರ, ಮೂತ್ರ ... ಮೂತ್ರದಲ್ಲಿ ಧಾತು ... ಚಟಾಕು 1, 3, 6ಕ್ಕೆ ರೂ 1—1—0 3—8—0 6—12—0

ರೋಮನಾಶಿನಿ.— ಈ ಹುಡಿಯನ್ನು ... ರೋಮವಿರುವ ಭಾಗಕ್ಕೆ ಹಚ್ಚಿದರೆ ರೋಮವು ಉದುರಿ ಬೀಳುವುದು ... 6 ಆಣೆ, 3 ಡಬ್ಬಿಗಳಿಗೆ ರೂ 1 1 ಡಜನಿಗೆ 3 8 0

ಅಮೃತವಲ್ಲಿ.— ಇದು ... ಉತ್ತಮವಾದ ಔಷಧಿ ... ಉತ್ತಮ ಬಾಟ್ಲಿ 1, 3, 6ಕ್ಕೆ ರೂ 1—1—0 3—8—0 6—2—0

ಲೋಹಾಸವ.— ಇದು ಜ್ವರಗಡ್ಡೆಗೆ ಮತ್ತು ... ಬಾಟ್ಲಿ 1, 3, 6ಕ್ಕೆ ರೂ 1—4—0 3—8—0 6—2—0

ಪಟ್ಟಿ ಕೇಳಿದರೆ ಕಳುಹಿಸಲಾಗುವುದು.

ವಿಳಾಸ — ಮನೋಲ್ಲಾಸಿನಿ ಕಂಪೆನಿ,
9 ಮಂಗಳೂರು, ಕಂಕನಾಡಿ.

52—10

ಮುದ್ದಾದ ಪುಸ್ತಕ! ಮುದ್ದಾದ ಮುದ್ರಣ!!

ಶರೀರ ಸುಖ, ಸಂಪತ್ತು, ಐಶ್ವರ್ಯಗಳನ್ನು ಸಂಪಾದಿಸಲು ಸಹಿಕಗಳನ್ನೂ ಮತ್ತು ಶರೀರ ಮರ್ಮಶಾಸ್ತ್ರ (ಕಾಮಶಾಸ್ತ್ರ) ವನ್ನೂ ತಿಳಿಸುವ

ಮರ್ಮ ಶಾಸ್ತ್ರ-ಎಂಬ ಕಾಮಶಾಸ್ತ್ರ.

ಈ ಪುಸ್ತಕವು ಫ್ರೆಂಚ್, ಇಂಗ್ಲೀಷ್, ಹಿಂದುಸ್ಥಾನಿ, ಸಂಸ್ಕೃತ ಮುಂತಾದ ಭಾಷೆಗಳಲ್ಲಿ ಬಹು ಗುಪ್ತವಾಗಿದ್ದು ಇದನ್ನು ನಾವು ಪ್ರಯಾಸದಿಂದ ಸಂಪಾದಿಸಿ ಕನ್ನಡಕ್ಕೆ ತರ್ಜುಮೆ ಮಾಡಿ (84 ಚಿತ್ರಪಟಗಳ ಸಹಿತ) ಥಳಥಳಿಸುವ ಕಾಗದದಲ್ಲಿ ಮುದ್ರಿಸಿ ತಯಾರಿಸಿದ್ದೇವೆ. ಈ ಪುಸ್ತಕದಲ್ಲಿ ಸ್ತ್ರೀ ಪುರುಷರಿಗೆ ಬೇಕಾದ ಎಲ್ಲಾ ಮರ್ಮ ರಹಸ್ಯಗಳೂ, ಸ್ತ್ರೀ ಪುರುಷರು ಅನ್ಯೋನ್ಯವಾಗಿ ನಡೆದುಕೊಳ್ಳುವ ಮಾರ್ಗ, ಸ್ತ್ರೀ ಪುರುಷರಿಗೆ ಉಂಟಾಗುವ ಎಲ್ಲಾ ತರದ ಮರ್ಮವ್ಯಾಧಿಗಳು ಮತ್ತು ಅಂಥಾ ವ್ಯಾಧಿಗಳನ್ನು ಗುಣಪಡಿಸಿಕೊಳ್ಳುವ ಚಿಕಿತ್ಸೆಗಳೂ ಇನ್ನು ಅನೇಕ ತರದ ಮರ್ಮರಹಸ್ಯಗಳು ಚಿತ್ರಪಟಗಳ ಸಹಿತ ತುಂಬಿರುವುದು. ಈ ಪುಸ್ತಕದ ಹೆಸರನ್ನು ಕೇಳಿದ ಮಾತ್ರಕ್ಕೆ ಸಂತೋಷವಾಗುವುದು. ಆದರೆ ಓದಲಿಕ್ಕೆ ಯಾರಿಗೆ ತಾನೇ ಸಂತೋಷವಾಗಲಾರದು.

ಕ್ರಯ ಪುಸ್ತಕ ಒಂದಕ್ಕೆ ಒಂದೇ ಒಂದು ರೂಪಾಯಿ ರೂ. 1—0—0

T Ramachander Rao & Co,
Post Box No 232,
Madras

ಟಿ. ರಾಮಚಂದ್ರರಾವ್ ಅಂಡ್ ಕೊ,
ಪೋಸ್ಟ್ ಬಾಕ್ಸ್ ನಂ. 232.
ಮದ್ರಾಸ್.

52-10

ALot for SELECTION of Single Barrel Breach Loadig Guns at LOWEST PRICE EVER OFFERED.



Original Browning S B B L 12 bore Take Down Hammerless Automatic Ejector Gun with safety catch .. ..Price, Rs 140/-

Do do but by **Winchester** or **Remington** ... Price, Rs 160/-

Winchester or **Remigton S B B L** 12 bore Six Shots Hammerless Repeating gun, 32 inches barrel with Safety catch . . .. Price, Rs 150

German S B B L 12 bore Hammerless Ejector Gun, 32 inches German Steel Barrel with safety catch .. Price, Rs. 65/

Continental Make Do Price, Rs 55/

Webley & Scott's S B B L 12 bore Semi Hammerless Ejector Gun, 32 inches Webley's Steel Barrel, . . . Price, Rs 75/.

The above Guns can be had in .16 20, & .410 bore Same as above in 12 bore **Special "Duck Gun"** inches barrel Price, Rs 80/

W W Greener's 'Gaffer' S B B 12 bore ... Action Ejector Gun, 2 inches Greener's Steel barrel . . Price Rs 75/-

W W Greener's as above but **Long Range Duck Gun** with 32 inches barrel, ... chamber for inches to 3 inches case . .... Price, Rs 95/-

Midland's "Knock-About" S. B B L Ejector Hammer Gun 32 inches barrel . Price, Rs. 55/.

Continental Make S. B B. L. folding Pattern Hammer Gun, 32 inches barrel beautifully engraved and ca... .... Price, Rs. 45/

Steven's 12 bore Ejector Hammer Gun, 32 inches. Steel barrel .... Price, Rs 45/.

Do do 'Dread Naught' with heavy Breech Price/-Rs/50,

Any of the above of J. Steven's **Special Duck Gun** with 36 inches barrel. Price, Rs. 5 Extra.

ENQUIRIES SOLICITED.

THE BOMBAY ARMOURY,
331, ABDUL REHMAN STREET,
BOMBAY. 3

247

2 EMPIRE OF INDIA

Life Assurance Company Ltd
(Established 1897)
Head Office Bombay.

STRIKING PROGRESS

Twenty eight years of Economical and Careful management resulting Assets Exceeding Rs 2,50,00,000.

Today

THE COMPANY TO INSURE YOUR LIFE WITH

For Prospectus and other particulars, please apply to the Local Agent or to,
P K Sankaranarayana Iyer
Branch Secretary for Mysore State & Coorg.
152,/3 Commercial Street, Bangalore

245

ಆ ರೋ ಗ್ಯ ಚಂ ದ್ರಿ ಕೆ.

ಮದ್ರಾಸ್
ಸಂಪಾದಕರು ಡಾಕ್ಟರ್ ಯು ರಾಮರಾವ್,
ಯಮ್. ಎಲ್ ಸಿ ಯವರು

ಆರೋಗ್ಯ ಚಂದ್ರಿಕೆಯು ಆರೋಗ್ಯ ಮತ್ತು ಶುಚಿತ್ವದ ವಿಷಯದಲ್ಲಿ ಸಾಮಾನ್ಯ ಪ್ರಜಾವರ್ಗಕ್ಕೆ ತಿಳುವಳಿಕೆ ದೊರೆಯುವ ದಕ್ಕಾಗಿ ಏರ್ಪಡಿಸಿದ ಒಂದು ಸಚಿತ್ರ ಮಾಸಪತ್ರಿಕೆ. ಈ ಮಾಸಪತ್ರಿಕೆಯು 'ಹೆಲ್ತ್' ಎಂಬ ಇಂಗ್ಲಿಷ್ ಮಾಸಪತ್ರಿಕೆಯ ಕನ್ನಡ ಪ್ರತಿಯಾಗಿದೆ. ಆರೋಗ್ಯ ಚಂದ್ರಿಕೆಯಲ್ಲಿ ಪ್ರಸಿದ್ಧರಾದ ಡಾಕ್ಟರುಗಳ ಮತ್ತು ಆಯುರ್ವೇದ ಪಂಡಿತರ ಲೇಖನಗಳು ಆಗಿಂದಾಗ್ಗೆ ಪ್ರಕಟವಾಗುವುವು.

ಆರೋಗ್ಯ ಚಂದ್ರಿಕೆಯಲ್ಲಿರುವ ಲೇಖನಗಳು ಹಳೆಯದಾಗದೆ ಪುನಃ ಪುನಃ ಓದಲು ಅರ್ಹವಾದವುಗಳಾಗಿರುವುವು. ಆರೋಗ್ಯ ಚಂದ್ರಿಕೆಯನ್ನು ಹಸಿ ಬೈಂಡ್ ಮಾಡಿಸಿ ಇಟ್ಟು ಕೊಂಡರೆ ಎಲ್ಲರಿಗೂ ಉಪಯುಕ್ತವಾಗುವ ಅನುಕೂಲ್ಯವಾದ ಗ್ರಂಥವಾಗುವುದು. ಅಂಚೆಯ ವೆಚ್ಚ ಸೇರಿ ಈ ಪತ್ರಿಕೆಯ ಚಂದಾ ವರ್ಷಕ್ಕೆ 1-8-0 ಬಿಡಿ ಪತ್ರಿಕೆ 1ಕ್ಕೆ 1 2 0. ಹಿಂದಿನ ಸಂಚಿಕೆಗಳು ಕೂಡಾ ದೊರೆಯುವುವು.

ಪತ್ರವ್ಯವಹಾರಕ್ಕೆ 'ಆರೋಗ್ಯ ಚಂದ್ರಿಕೆ' 323

ನೋಟೀಸ್.

ಮಡಿಕೇರಿ ಮುನಿಸಿಪಾಲ್ ಆಫೀಸಿನಿಂದ.

ಎಲ್ಲಾ ಜನರಿಗೂ ತಿಳಿಯಪಡಿಸುವದೇನಂದರೆ

ಸನ್ 1926-27ನೆ ಸಾಲಿಗೆ ಸಂಬಂಧಪಟ್ಟ ಮುನಿಸಿಪಾಲಿಟಿ ಟೋಲ್‌ಗೇಟ್ ಸುಂಕ, ಮಾರ್ಕೆಟು ಫೀಸು ಮತ್ತು ಬಂಡಿಗಳ ಗುತ್ತಿಗೆ ಹಕ್ಕುಗಳನ್ನು 1926ನೆ ಇಸವಿ ಮಾರ್ಚಿ ತಾ 12ನೆ ಶುಕ್ರವಾರ ದಿನ ಮಧ್ಯಾಹ್ನ 12 ಗಂಟೆಗೆ ಸನು ಯಕ್ಕೆ ಮಡಿಕೇರಿ ಮುನಿಸಿಪಲ್ ಆಫೀಸು ಮುಂದುಗಡೆ ವೈಸ್ ಪ್ರೆಸಿಡೆಂಟರ ರವರು ಪಬ್ಲಿಕ್ ಹರಾಜು ಮಾಡಲ್ಪಡುತ್ತದೆ. ಕಾಯಿಸ್ ದಾರರು ಆ ದಿವಸ ಹಾಜರಿರಬೇಕು. ಹೆಚ್ಚಿನ ವಿವರ ಮುನಿಸಿಪಲ್ ಆಫೀಸಿನಲ್ಲಿ ಕೇಳಿ ತಿಳಿದುಕೊಳ್ಳಬಹುದು. ಆರ್. ಎಸ್ ಸಂಜೀವರಾವ್

2 ವೈಸ್ ಪ್ರೆಸಿಡೆಂಟರು.

ಇಸ್ತ್ರಿ ಕತ್ತಿ.



ಇದನ್ನು ಇಟ್ಟುಕೊಂಡರೆ ಕೈಯ್ಯಲ್ಲಿ ಕೊಟ್ಟು ಕೆಲಸವನ್ನು ಮಾಡಿಕೊಂಡಲ್ಲಿ ಇತರ ಕ... ಸಂಬಂಧವಾದ ವ್ಯಾಧಿಗಳು ಬಾರದಂತೆ ಉರಿಯೂ ಇಲ್ಲದಂತೆ ಸುಖವಾಗಿರುವುದು. ಕ್ರಯ ಕತ್ತಿ 1ಕ್ಕೆ 2—8—0

ರೋಲ್ಡ್ ಗೋಲ್ಡ್ ಭಂಗಾರದ ಕೈಗಡಿಯಾರ.



ಈ ಕೈಗಡಿಯಾರವು ಭಂಗಾರಕ್ಕೆ ಸರಿ ಸಮಾನವಾಗಿದೆ. ಸರಿಯಾದ ಗಂಟೆಯನ್ನು ತೋರಿಸುವುದು. ಅತ್ಯುತ್ತಮವಾದ ಗಟ್ಟಿ ಸಾಮಾನುಗಳಿಂದ ತಯಾರಿಸಿದ್ದು ಇದಕ್ಕೆ 3 ವರ್ಷಗಳ ಗ್ಯಾರಂಟಿ ಕೊಡುವೆವು. ಕ್ರಯ 1ಕ್ಕೆ 6—12—0.

ವಿಳಾಸ — ಎಸ್. ಬಾಲ್ ಎಂಡ್ ಕೊ,
ಪೋಸ್ಟು ಬಾಕ್ಸ್ ನಂ 542,
4 ಪಾರ್ಕ್ ಟೌನ್, ಮದರಾಸು

ಒಂದೇ ಮೂರು ರೂಪಾಯಿಗಳಲ್ಲಿ!
ಟಿಕ್=ಟಾಕ್ (ರಿಜಿಸ್ಟರ್ಡ)



ಎಂಬ ಗಡಿಯಾರವನ್ನು ನಿಮಗೆ ಪೂರೈಸುತ್ತೇವೆ ಇದು ಪ್ರತಿ ಗಂಟೆಗೂ ...ಕೋಗಿಲೆಯ ... ಕೂಗದೇ ಕಾಗಿಲ್ಲ ಇದರಲ್ಲಿ ಕಾಣುತ್ತಿರುವ ಗುಂಡನ್ನು ಮೇಲಕ್ಕೆಳೆದರೆ ಸಾಕು ತನ್ನಷ್ಟಕ್ಕೆ ತಾನೇ ಸರಿಯಾದ ಕಾಲವನ್ನು ತೋರಿಸುವದು ಇವತ್ತೇ ತರಿಸಿಕೊಳ್ಳಿರಿ

ನಮ್ಮ ಸ್ಪೆಷಲ್ "ಕ್ರಿಸ್ಮಸ್" ಹಬ್ಬದ ಸೂಚನೆ!
ಪ್ರಾರಂಭ ತಾ 1ನೇ ಜನವರಿ 1926ರು
ಕಡೆ ತಾ ...ನೇ ಮಾರ್ಚಿ 1926
"ಕೊಡಗು" ಚಂದಾದಾರರಿಗೆ ಮಾತ್ರ



ಎಲ್ಲಾ ವಾಚುಗಳಿಗೂ ಗ್ಯಾರಂಟಿ ಮೂರು ವರುಷಗಳು

No. 517. Rs. 10 — No. 511. Rs. 11

22 ಕ್ಯಾರೆಟ್ ರೋಲ್ಡ್ ಗೋಲ್ಡ್ ಕೈಗೆ ಕಟ್ಟಿಕೊಳ್ಳುವ ಗಡಿಯಾರುಗಳು

No. 507. Rs. 12 — No. 518. Rs. 10

No. 519. Rs. 9 — No. 516. Rs. 10

ಸರ್ವೋತ್ತಮ, ಬಹಳ ಅಗ್ಗ, ಅಚ್ಚುಕಟ್ಟಾದ ಕೈ ಗಡಿಯಾರುಗಳು

ಪುಗಸಟ್ಟೆ ಪ್ರತಿ ಒಂದು ವಾಚಿನ ಕೂಡ ಈಗಲೇ ಕೊಡುವ ಒಂದು ಫೌಂಟೇನ್‌ಪೆನ್ ಮತ್ತು ಒರಿಯವುದು ಮೇಲಾದ ಲೇಸ್ಟ್ ಪಟ್ಟಿ ಬಟ್ಟಿ ಕಳುಹಿಸುವೆವು ಬೇಕು

ಪೀಟರ ವಾಚ ಕಂಪೆನಿ,
ಪೋಸ್ಟ ಬಾಕ್ಸ ನಂಬರ 27
12—5 **ಮದ್ರಾಸ್.**

ಇದು ಒಳ್ಳೇ ಸಮಯ!
ಇಂಥಾ ಸುಸಮಯವನ್ನು ಕಳಕೊಳ್ಳಬೇಡಿರಿ.

ಇಂದಿನ ದಿನ ನಾಳೆ ಎಂದಿಗೂ ದೊರೆಯಲಾರದು.

ನಮ್ಮಲ್ಲಿ ಈಗತಾನೇ ತಯಾರಾಗಿ ಬಂದಿರುವ ನಂಬರುಗಳ ಹಂಡುಗಳು ಅಲ್ಲದೆ ಮೂರು ನಂಬರುಗಳ ಮೂಲೆ ಹಂಡ, ಪಾತಿಹಂಡು ಮತ್ತು ಹೊಗೆಹಂಡು, ಎಲ್ಲಾ ತರಹದ ಎಲೆಕ್ಟ್ರಿಕ್ ದೀಪಗಳೂ, ಸೈಕಲ್ ದೀಪಗಳೂ, ರಬ್ಬರ್ ಸ್ಟಾಂಪು ಸೀಲುಗಳೂ, ಹಲವುತರದ ಸೂಜಿಗಳೂ ಮತ್ತು ಗುಂಡಿಗಳೂ ಸಹ ಸಾರಾಟಕ್ಕೆ ತಯಾರಿವೆ ಇವುಗಳಲ್ಲದೆ ಎಲ್ಲಾ ತರಹದ ಪ್ರಿಂಟಿಂಗ್ ಗ್ರೀಟಿಂಗ್ ಕಾರ್ಡು ಪಸ್ಟರ ನಿಮ್ಮ ಮನ ಒಪ್ಪುವಂತೆ ಕಮ್ಮಿ ದರದಲ್ಲಿ ಆರ್ಡರು ಕೊಟ್ಟಕೂಡಲೇ ಸಾಹುಕಾರ ಪ್ರಿಂಟಿನಿಂದ ನಿಮ್ಮ ಸುಪರ್ದಿಗೆ ಕೊಡಲಾಗುವುದು ಮತ್ತು ನಗದ್ ಹಣಕ್ಕೆ ಮಾರ್ಕೆಟಾ ದರದಲ್ಲಿ ಹದಿನಾದ ಭಕ್ಷಸಹ ಕೊಂಡುಕೊಳ್ಳಲಾಗುವುದು ಹೆಚ್ಚಿನ ವಿವರಕ್ಕೆ ಈ ಕೆಳಗಿನ ಅಡ್ರೆಸಿಗೆ ಬರೆದು ತಿಳಿದುಕೊಳ್ಳಬಹುದು.

ಕಡನೂರು ಗ್ರಾಮ — **ಅಮ್ಮಣಿಚಂಡ ದೇವಯ್ಯ,**
6 ವೀರಾಜಪೇಟೆ — **ಜನರಲ್ ಮರ್ಚೆಂಟ್.**

ಕಿರ್ಲೋಸ್ಕರ ಗಾರ್ಡನ ...

ಈ ಕೆಳಗಿನ ಕಬ್ಬಿಣ ಗಾಣಗಳು ನಮ್ಮ ಕಾರ್ಖಾನೆಯಲ್ಲಿ ತಯಾರಾಗುತ್ತವೆ

೧ ಕಿರ್ಲೋಸ್ಕರ ೧ ...
— ಕರ್ನಾ...
೩ ...ತವಲ ಚರಕ ...

ಇವುಗಳ ಸವಿಸ್ತಾರ ಸಂಗತಿ ಒಗ್ಗ ಹಾಗೂ ಬೆಲೆಯ ಬಗ್ಗೆ ಕೂಡಲೇ ತಿಳಿದುಕೊಳ್ಳಿರಿ

ಕರ್ನಾಟಕ ತರುಣರ ಉನ್ನತಿಗೋಸ್ಕರ
ಕಿರ್ಲೋಸ್ಕರ ವಾರ್ತೆ,
ಎಂಬ ತಿಳಿಗನ್ನಡ ಮಾಸ ಪತ್ರಿಕೆಯನ್ನು ಪ್ರಕಟಿಸುತ್ತೇವೆ ವಾ. ವ ೧।। ರೂ. ಮಾದರಿ ಸಂಚಿಕೆ ಪುಕ್ಕಟೆ

ಕಿರ್ಲೋಸ್ಕರ ಬಂಧು, ಲಿಮಿಟೆಡ್.
ಕಿರ್ಲೋಸ್ಕರವಾಡಿ,
16— **ಜಿ. ಸಾತಾರ.**

ಲೋಕಪ್ರಸಿದ್ಧವಾದ! ಅನುಭವಸಿದ್ಧವಾದ!

ಮೂತ್ರಪಿಂಡಗಳಲ್ಲಿ ಗುಣಸಿಕ್ಕದಿದ್ದರೆ ಔಷಧಿಯಕ್ಕಿಯ ವಾಪಾಸು ಜೀರ್ಣಶಕ್ತಿ, ರಕ್ತವೃದ್ಧಿ, ಧಾತುಪುಷ್ಟಿ, ಮನೋಲ್ಲಾಸ ಸರ್ವೋಂದ ಮೊದಲಾದ ಸುಖ ಜೀವನಕ್ಕೆ ಬೇಕಾದ ಆರೋಗ್ಯವಾಯಿಸಿ

ಟ್ರೇಡಮಾರ್ಕ] **ಅಗಸ್ತ್ಯ** [ನೋಡಿ ಕೇಳ್ಕೊಳ್ಳಿರಿ

ಮನ್ಮಥ ಚಿಂತಾಮಣಿ ಲೇಹ.

ರಿಜಿಸ್ಟರ್ ಆದದ್ದು

ಆಬಾಲವೃದ್ಧ ಸ್ತ್ರೀ ಪುರುಷರ ಅನೇಕ ರೋಗಗಳ ಮೇಲೆ ಗುಣ ಕಾರಿಯಾ...ದ್ದು ಮೇಹ ಏಕಾರ...ದವರಿಗೂ, ನಿದ್ರೆ ಇಲ್ಲದವರಿಗೂ, ಸ್ವಪ್ನಇಂದ್ರಿಯವಾಗುವ ಬಾಲಕರಿಗೂ, ಜ್ಞಾನಿ ಮುಜ್ಞಾನಿಗಳಿಗೂ ಉಪಯೋಗವುಳ್ಳ ಬಹುಪರಮೊಂದ ಔಷದಿ 1ಸೇರು 48ದಿವಸ ಸೇವಿಸಬಹುದು ನಂ (1) 1ಸೇರು ಡಬ್ಬಿ 1ಕ್ಕೆ ರುಪಾಯಿ 3—0—0 ½ಸೇರು ಡಬ್ಬಿ 1ಕ್ಕೆ ರುಪಾಯಿ 1—9—0 ನಂ. (2) 1ಸೇರು ಡಬ್ಬಿ 1ಕ್ಕೆ ರುಪಾಯಿ 2—0—0, ½ ಸೇರು ಡಬ್ಬಿ 1ಕ್ಕೆ 1—1—0 ವಿ ಪಿ ಖರ್ಚು ಪ್ರತ್ಯೇಕ ವಿಶೇಷ ಮಾಹಿತಿಗೆ ಬರಕೊಳ್ಳಿರಿ

ವಿಳಾಸ:—ದೇವಣ್ಣ ನಾರಾಯಣಸೆಟ್,
ಗೂಳಿಕಟ್ಟಾ,
ಮಂಗಳೂರು,
52—26 ದ ಕ

ಸತ್ಯನಾರಾಯಣಶೇ.
(...ಗುಣವಾಗದಿದ್ದರೆ ಹಣ ವಾಪಸ ...)
ಧಾತುಪುಷ್ಟಿಕ ಕಾಮೋತ್ತೇಜಕ ಇಂದ್ರಿಯಸ್ತಂಭಕವಾದ

ಮದನೋದ್ಭವ ಗುಳಿಗೆ.

ಜನನೇಂದ್ರಿಯದ ಶಿಥಿಲತೆ ನಿರ್ಬಲತೆ ನಪುಂಸಕತ್ವ ಸ್ತ್ರೀ ... ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ ನಿರ್ಮೂಲವಾಗಿ ಧಾತು ಪುಷ್ಟಿಕ, ವೀರ್ಯವರ್ಧಕ ರಕ್ತಶೋಧಕ, ಕಾಮೋತ್ತೇಜಕ, ಮನೋಲ್ಹಾಸಕ ಇಂದ್ರಿಯಸ್ತಂಭಕ, ... (ಟಾನಿಕ) ಗುಣ...ದ ಮೇಲೆ ಹುಟ್ಟುವ ಎಲ್ಲ ತರಹದ ಬಕ್ಕಗಳು, ... ಗುಣಗಳು ... ಗುಣವಾಗಿ ... ಕ್ಕೆ ... ಒಬ್ಬರಿಗೆ ೬೦ ಗುಳಿಗೆಗ ... ಕಿಮ್ಮತ್ತು ೬೦ ಗುಳಿಗೆಗಳಿಗೆ ೧ ರೂಪಾಯಿ ... ಸೇವಿಸುವಾಗ್ಗೆ **ನಪುಂಸಕತ್ವಾ ಕೈಲವನ್ನು** ಉಪಯೋಗಿಸುವದು ಉತ್ತಮ. ಕಿಮ್ಮತ್ತು ಬಾಟ್ಲಿ ಒಕ್ಕೆ ರೂ ೨—೮—೦

ಪ್ರಮೇಹಹಿವಾರಣ—ಇದರ ಸೇವನೆಯಿಂದ ಮೂತ್ರಕೃಚ್ಛ್ರವಿಂದ ಕೀವು ಹರಿಯುವಂತೆ ಹೋಗತಕ್ಕ ಕೀವು ... ವನ್ನೆರ ಅಗದಿಯಾಕ್ಷಿಯಿಂದ ಗುಣವಾಗುವದು ಕಿಮ್ಮತ್ತು ಬಾಟ್ಲಿಗೆ ರೂ ೨—೮—೦ ಟ ಪಿ ಖರ್ಚ ಅನುಪಾನಪತ್ರಿಕೆ ಔಷದದ ಸಂಗಡ ಕಳ್ಳ. ಗುಣವಾಗದಿದ್ದರೆ ಹಣವಾಪಸ

ವಿಳಾಸ,—
ಸತ್ಯನ. ಎಲ್ ಜೋಶಿ ಮತು ಕಂಪೆನಿ.
6 ನಂ 6. **ಪೋಷ ಬನವಾಸಿ, ಉತ್ತರ ಕಾನಡಾ**

ಕರ್ಣಿಕ ನಾಗ್ಯಾವಿನ

ಚಳಿಜ್ವರ ಮಲೇರಿಯ ಜ್ವರ ಇನ್‌ಫ್ಲೂಯೆಂಝಾ ದಡಿ ಜ್ವರ, ಮೊದಲಾದವುಗಳ ಮೇಲೆ ಅಪ್ರತಿಮವಾದ ಔಷಧವು.

ಬೆಲೆ ಬಾಟ್ಲಿಯೊಂದಕ್ಕೆ ರು ೦—೧೪—೦
ಟಪ್ಪಾಲು ಖರ್ಚು ಬೇರೆ
ಡಜನ್ ಬಾಟ್ಲಿಗಳಿಗೆ ಟಪ್ಪಾಲುವೆಚ್ಚ ಸಹ ರು ೯—೦—೦

ಏಜಂಟರು ಬೇಕು, ಕೂಡಲೇ ಸ್ವಲ್ಪಮಾತ್ರ ನಿಮ್ಮ ... ಮೂರು ಜನ ಔಷಧದ ವ್ಯಾಪಾರಿಗಳ ಹೆಸರನ್ನು ತಿಳಿಸಿದಲ್ಲಿ ಆಂದವಾದ ಬ್ಲಾಟಿಂಗ್ ಪೇಪರು ಪುಕ್ಕಟೆ
12—5 ಕರ್ಣಿಕ ಬ್ರದರ್ಸ್
ಗಿರಗಾಂವ, ಮುಂಬಾಯಿ

ಇದು ಒಳ್ಳೆ ಸಮಯ!

ಹಂಚುಗಳು.

ಈ ಗಾಗಲೇ ವಿರಾಜಪೇಟೆಯಲ್ಲಿ ... ಆದ ಎಲ್ಲಾ ತರದ ಹಂಚುಗಳು ಅಂದರೆ, ಹಂಡು ಮೂಲೆ ಹಂಚು, ಪಾತಿಹಂಚು, ಹೊಗೆಹಂಚು, ನೆಲಹಂಚು, ವಗೈರೆ ಎಲ್ಲಾ ಹಂಚುಗಳನ್ನು ಸ್ಟಾಕ್ ಮಾಡಲಾಗಿದೆ ಕೂಡಲೇ ಹಂಚು ಬೇಕಾದವರು ವಿರಾಜಪೇಟೆಯಲ್ಲಿ ಈ ಕೆಳಗೆ ರುಜು ಮಾಡಿದವರ ಆಫೀಸಿನಲ್ಲಿ ಬಂದುಕೊಳ್ಳಬಹುದು ಅಲ್ಲದೆ ಹಂಚುಗಳ ಸ್ಯಾಂಪಲನ್ನು ಸಹ ನೋಡಬಹುದು ಎಲ್ಲಾ ವಿವರಕ್ಕೆ ಕ್ರಯಕ್ಕೆ, ಮತ್ತ ವರ್ತಕರಿಗೂ ಈ ಕೆಳಗಿನವರ ... ಬರೆದ ಕಲ್ಲ
ವಿರಾಜಪೇಟೆ — ಕೆ. ಪಿ. ಚಿಣ್ಣಪ್ಪ,
12—9 — ಖಾದಿ ಭಂಡಾರ.

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್, ಕೊ ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ.

		ರೂ
ಶೇರ್ ಬಂಡವಾಳ	—	50,000
ವಸೂಲಾದ ಶೇರ್ ಮೊಬಲಗು	—	7690
ಜಮಾಬಂದ ರೇವಣಾತಿ	—	90,600

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರ ಸಂಘಗಳಿಗೇನೇ ಹೆಚ್ಚಾಗಿ ಸಾಲಕೊಡತಕ್ಕದ್ದು

ಒಂದು ವರ್ಷ ಮಾಯಿಸೆ ಅಧಿಕ ಹಣ್ಣಿನ ವಾಯಿದೆಯ ಠೇವಣಾತಿಗಳಿಗೆ ಶೇಕಡ ನಾಲಿಯಾನ ರೂ. 6—4—0ರ ದರದಲ್ಲಿ ಬಡ್ಡಿ ದೊರೆಯುತ್ತೆ ಕಡಿಮೆ ವಾಯಿದೆಯ ಠೇವಣಾತಿಗಳಿಗೆ ಶೇಕಡ ನಾಲಿಯಾನ ೫ ಬಡ್ಡಿ ದೊರೆಯುತ್ತೆ

ಬರ್ಮಿಂಗ್ಹಾಮ್‌ದಾವರ್ತಿ ಕೊ ಆಪರೇಟಿವ್ ರಜಿಸ್ಟ್ರಾರವರು ಲೆಕ್ಕ ಆಡಿಟು ಮಾಡುತ್ತಾರೆ

ಪ್ರೆಸಿಡೆಂಟರು — ಟ್ರೆಜರರ್
ಕೊಡಂದೇರ ಕುಟ್ಟಯ್ಯನವರು, — ಯು ಮುಕುಂದರಾಯರು
ರಾಯ್ ಬಹದ್ದೂರ್ — ಬಿ.ಎ. ಬಿ.ಎಲ್

ಸೆಕ್ರಿಟೆರಿ
ಸಿ ಯಸ್ ವೆಂಕಯ್ಯನವರು, ಬಿ ಎ ಬಿ ಎಲ್
ತಾರೀಕು 29—8—1925

ARMS & AMMUNITION MART,
Mahomedally-Noorbhoy.



321 Abdul Rehman Street, near
Crawford Market, BOMBAY 3
Telegraphic Address - "SHOOTER"
Bombay.
[52—26] Please write for Reduced net prices list for 1926

Printed & published by Kodandera Appayya, R.B., Chairman, Board of Directors, at "Kodagu" Press Mercara for "Kodagu" Ltd

If not delivered please return to "KODAGU" OFFICE. MERCARA.

ಕೊಡಗು.

[ಐಕ್ಯೇನ ಧೂತಿವಯಾನು ವಿದ್ಯಾ ಸೀಕ ಪ್ರಯತ್ನತಾ || ಐಕ್ಯಮತ್ಯೇನ ದೇಶಾನಾಂ ಸುಸ್ಥಿರಾ ರಾಜ್ಯ ಸಂಪದಾ ||

ಸಂಪಾದಕ—ಪಂದ್ಯಂಡ ಐ. ಬೆಳ್ಳಪ್ಪ

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವದು.

ಪುಸ್ತಕ ೫] ಕೊಡಗು, ಸ್ತ ೧೯೨೩ನೇ ಇಸವಿ ಮಾರ್ಚಿ ತಾರೀಕು ೫ ನೇ ಶುಕ್ರವಾರ [ಸಂಚಿಕೆ ೩೮

ಸ್ಪೆನ್ಸರ್ ಕಂಪೆನಿ, ಮಡಿಕೇರಿ.

ನಮ್ಮಲ್ಲಿಗೆ ಈಗತಾನೇ ಈ ಕೆಳಗೆ ನಮೂದಿಸಿರುವ ಕೋವಿಗಳು ಮತ್ತು ಇದರ ಸಾಹಿತ್ಯಗಳು ಹೊಸದಾಗಿ ಬಂದಿವೆ. ಒಳ್ಳೇ ನಮೂನೆ.

ಮೋಸ ಹೋಗದಿರಿ!!!

ಜಾಗ್ರತೆ!!

ದರ ಸುಲಭ!

12 ಬೋರ್ ಜೋಡಿ ಕೊಳವಿನ ತೋಟ ಕೋವಿ	175-0-0	12 ಬೋರ್ ಒಂಟಿಕೊಳವಿನ ತೋಟಕೋವಿ	60-0-0	ಕೇಪು 250 ರ ಟಿನ್ನಿಗೆ	1-2-0
"	100-0-0	" "	57-8-0	12 ಬೋರ್ ಚಿಲ್ಲು ತೋಟಗಳು 100ಕ್ಕೆ	12-8-0
" " "	95-0-0	ಒಂಟಿ ಕೊಳವಿನ ಕೇಪು ಕೋವಿ	60 - & 85 -	" ಸ್ಪೆಸಿಯಲ್ ಲೋಡಿಂಗ್ "	15-8-0
" ಒಂಟಿ ಕೊಳವಿನ "	90-0-0	ಜೋಡಿ " "	70 - & 85 -	" ಗುಂಡು ತೋಟ "	19-0-0
" " "	80-0-0	ಮದ್ದು 1 ಪೌಂಡು ಟಿನ್ನಿಗೆ	2-4-0	" ಆನೆ ಚಿಲ್ಲು " "	16-0-0
" " "	65-0-0	" " " "	0-9-0		

Spencer & Co. Ltd.
MERACRA, & POLLIBETTA.

52—18

ನೋಟೀಸ್.

ಈ ಕೆಳಗಿನ ಮಹನೀಯರು 'ಕೊಡಗು' ಪತ್ರಿಕೆಯ ಚಂದಾ ಹಣವನ್ನು ವಸೂಲ್ಮಾಡಲು ಒಪ್ಪಿಕೊಂಡದ್ದರಿಂದ, ಅವರಿಗೆ ರಶೀತಿ ಪುಸ್ತಕಗಳನ್ನು ನಮ್ಮ ಏಜಂಟರು ಮೆ ಚಂ ಗಂಡ ಕುಟ್ಟಪ್ಪನವರ ಜವಾಬುದಾರಿಕೆಯ ಮೇಲೆ ಕೊಡಲಾಗಿದೆ. ದಯವಿಟ್ಟು ಚಂದಾದಾರರೆಲ್ಲರೂ ಅವರಿಗೆ ಅನುಕೂಲವಿರುವ ಜಾಗದಲ್ಲಿ ಪಾವತಿ ಮಾಡಬೇಕಾಗಿ ಕೋರಿಕೆ.

ಏಜಂಟರುಗಳು.

ವೀರಾಜಪೇಟೆ—ಬಾವಿ ಭಂಡಾರದಲ್ಲಿ ಮೆ.. ಚೆಂಬಾಂಡ ಮುತ್ತಣ್ಣನವರು.

ಮೂರ್ನಾಡು—ಕಮರ್ಶಿಯಲ್ ಸ್ಟೋರಿನಲ್ಲಿ ಮೆ. ಮಡೆಯಂಡ ದೇವಯ್ಯನವರು.

ನಾಪೋಕ್ಲು—ಮೆ.. ಅರೆಯಡ ಸುಬ್ಬಯ್ಯನವರು.

" ಮೆ.. ಪೊನ್ನಚಂಡ ಮುದ್ದಪ್ಪನವರು.

ಗೋಣಿಕೊಪ್ಪಲು—ಮೆ. ಜನ್ನಡ ಮಾದಪ್ಪನವರು.

ಮಡಿಕೇರಿ—ಮೆ. ಪಿ ಮಾದಯ್ಯನವರು.

ಅಮ್ಮತ್ತಿ ಸಿದ್ದಾಪುರ—ಮೆ. ಐನಂಡ ಮಾದಪ್ಪನವರು

" ಮತ್ತು ವೀರಾಜಪೇಟೆ—ಮೆ. ಕಲಿಯಂಡ ಸೋಮಯ್ಯನವರು.

ಅಲ್ಲದೆ ಈ ಸಮ್ಮಂಧ ಮೆ. ಚಂಗಂಡ ಕುಟ್ಟಪ್ಪನವರು ಕೊಡಗಿನ ಎಲ್ಲಾ ಕಡೆಗಳಲ್ಲೂ ಸಂದರ್ಭಾನುಸಾರ ಸುತ್ತುತ್ತಿರುವಾಗ ಅವರಿಗೂ ಹಣ ಕೊಡಬಹುದು ಕೊಡಬೇಕಾಗಿ ಕೋರಿಕೆ.

ಮೇನೇಜರ್,
"ಕೊಡಗು" ಲಿಮಿಟೆಡ್.

ಡಾಕ್ಟರ್ ಎಸ್. ಎನ್. ಅಯ್ಯಂಗಾರ್, ಬಿ ಎ.,
ಎಲ್. ಆರ್ ಸಿ. ಪಿ. ಅಂಡ್. ಎಸ್. (ಎಡಿನ್‌ಬರ್ಗ್)
ಎಲ್. ಎಫ್. ಪಿ. ಅಂಡ್ ಎಸ್., [ಗ್ಲಾಸ್‌ಗೊ].

ದಂತ ವೈದ್ಯರು

ಮಡಿಕೇರಿ ಮಹದೇವ ಪೇಟೆಯಲ್ಲಿ ನೆಲೆ ಯಂ. ಯಂ ಸಿದ್ದೀಕ್ ರವರ ಅಂಗಡಿಯ ಎದುರಿನ ಮನೆಯಲ್ಲಿ ಇಳಿದುಕೊಂಡಿರುತ್ತಾರೆ. ಇವರು ಶೀಘ್ರದಲ್ಲೇ ಸೋಮವಾರಪೇಟೆಗೆ ಹೋಗುವುದರಿಂದ ಇಚ್ಛೈಸುವವರು ಅವರನ್ನು ಇಲ್ಲಿ ಬೇಗನೆ ಭೇಟಿಮಾಡಿಕೊಳ್ಳುವುದು ಉತ್ತಮ.

ದಂತ ಸಂಜೀವಿನಿ.

ಯಾವ ತರದ ಹಲ್ಲುನೋವನ್ನಾದರೂ ಥಕ್ಕನೆ ಶಮನ ಮಾಡುವ ಶಕ್ತಿಯುಳ್ಳ ಈ ದಂತ ಸಂಜೀವಿನಿ ಕುಪ್ಪಿ ಒಂದಕ್ಕೆ ಕ್ರಯ ರೂ 1—0—0 ಮಾತ್ರ.

ಎಸ್. ರಾಮಣ್ಣ,
C/o. ಡಾಕ್ಟರ್ ಎಸ್. ಎನ್. ಅಯ್ಯಂಗಾರ್,
ಮಹದೇವಪೇಟೆ, ಮಡಿಕೇರಿ.
48-9

ಮಹನೀಯರೇ,

1923ನೆ ಇಸವಿಯಲ್ಲಿ ವೀರರಾಜೇಂದ್ರಪೇಟೆಯಲ್ಲಿ ತೆರೆದ ನಮ್ಮ ವೈದ್ಯಶಾಲೆಯ ಶಾಖೆಯಲ್ಲಿ ಅನೇಕ ದುಸ್ಸಾಧ್ಯವಾದ ಕಾಯಿಲೆಗಳನ್ನು ಗುಣಪಡಿಸಿ ಹೆಸರುವಾಸಿ ಹೊಂದಿದ ನಮ್ಮ ಕಂಪೆನಿಯ ಮತ್ತೊಂದು ಶಾಖೆಯು ಈಗಾಗಲೇ **ಸೋಮವಾರಪೇಟೆಯಲ್ಲಿ** ತೆರೆಯಲ್ಪಟ್ಟಿದೆ.

ಕೃಷ್ಣ ನಂಬೀಶ‌ನ್ ಮತ್ತು ನಾರಾಯಣ ನಂಬೀಶನ್ ಎಂಬ ಹೆಸರುಗಳುಳ್ಳ ನಮ್ಮ ಪ್ರಧಾನ ವೈದ್ಯರುಗಳು ಒಬ್ಬೊಬ್ಬರು ಒಂದೊಂದು ಶಾಖೆಯಲ್ಲಿ ಯಾವಾಗಲೂ ಇರುತ್ತಾರೆ.

ಈ ವೈದ್ಯರುಗಳು ಇಂಡಿಯಾ ಚಕ್ರವರ್ತಿಯವರಿಂದ ವೈದ್ಯರತ್ನ ಪಂ. ಪದವನ್ನು ಹೊಂದಿದವರಾಗಿಯೂ ಕೊಚ್ಚಿ ಸಂಸ್ಥಾನದ ರಾಜವಂಶದ ಸ್ಥಿರ ವೈದ್ಯರಾಗಿಯೂ ಸುಪ್ರಸಿದ್ಧ ಹೆಸರುವಾಸಿಯನ್ನು ಪಡೆದವರಾಗಿಯೂ ಇರುವ ಇ. ಟಿ. ನಾರಾಯಣನ್ ಮೂಸ್ ಎಂಬ ಮಹಾನುಭಾವರ ಕೈಕೆಳಗೆ ಹೆಚ್ಚು ವರ್ಷಗಳಿದ್ದು ಪಾಂಡಿತ್ಯವನ್ನೂ ಪರಿಚಯವನ್ನೂ ಪಡೆದವರಾಗಿಯೂ ಇದ್ದಾರೆ.

ಇವರಲ್ಲಿನ ಎಲ್ಲಾ ಔಷಧಗಳಿಗೆ ಮಲಬಾರಿನ ಎಲ್ಲಾ ವೈದ್ಯಶಾಲೆಗಳ ಔಷಧಗಳ ಚಾರ್ಜಿಗಿಂತಲೂ ಕಮ್ಮಿಯಾಗಿದೆ.

ನಂಬೀಶನ್ ಮತ್ತು ಕಂಪೆನಿ,
ಆಯುರ್ವೇದಿಕ್ ಪ್ರೈವೇಟ್ ಡಿಸ್ಪೆನ್ಸರಿ.
ಕಲ್ಲೂರು, ವೀರಾಜಪೇಟೆ ಮತ್ತು
ಸೋಮವಾರಪೇಟೆ.
52-49

ಪ್ರಕಟಣೆ.

ನಮ್ಮ ಅಂದವಾದ ಹೊಸ ಅಕ್ಷರಗಳು ಬಂದು ತಲುಪಿರುವದರಿಂದ, 'ಲೆಟರ ಹೆಡ್ಸ್', 'ವಿಸಿಟಿಂಗ್ ಕಾರ್ಡ್ಸ್' ಆಹ್ವಾನಪತ್ರಗಳು (ಇನ್ವಿಟೇಶನ್) ಮೊದಲಾದ ಪ್ರಿಂಟಿಂಗ್ ಕೆಲಸಗಳನ್ನು ಇಂಗ್ಲಿಷ್ ಮತ್ತು ಕನ್ನಡದಲ್ಲಿ ಚಂದವಾಗಿಯೂ ಕಡಿಮೆ ಚಾರ್ಜಿನಲ್ಲಿಯೂ ನಿಯಮಿತ ಕಾಲದಲ್ಲಿಯೂ ಮಾಡಿಕೊಡಲು ತಯಾರಾಗಿದ್ದೇವೆ.

ಮಡಿಕೇರಿ.

ಮೇನೇಜರ್,
'ಕೊಡಗು' ಲಿಮಿಟೆಡ್

ಆಂಧ್ರ ಆಯುರ್ವೇದಿಕ್ ಫಾರ್ಮಸಿ
ಬ್ರಾಂಚ್, ಬೆಂಗಳೂರು ಸಿಟಿ

ಚ್ಯವನಪ್ರಾಸ ಲೇಹ.

ಇದು ಸರ್ವೋತ್ಕೃಷ್ಟವಾದ ಗಿಡಮೂಲಿಕೆಗಳಿಂದ ತಯಾರಿಸಲ್ಪಟ್ಟ ಆಯುರ್ವೇದ ರಸಾಯನೌಷಧವು. ವಿದ್ಯಾರ್ಥಿಗಳೂ ವಿಶೇಷವಾಗಿ ಬುದ್ಧಿಯನ್ನು ಪ್ರಯೋಗಿಸಿ ಕೆಲಸ ಮಾಡುವವರೂ ಈ ಲೇಹವನ್ನು ಸೇವಿಸಿದರೆ ವಿಶೇಷವಾಗಿ ಬುದ್ಧಿಶಕ್ತಿಯನ್ನೂ ಜ್ಞಾಪಕಶಕ್ತಿಯನ್ನೂ ಹೊಂದುವರು.

ದೀರ್ಘಕಾಲದ ವ್ಯಾಧಿಯಿಂದಾಗಲೀ ಕೆಟ್ಟ ನಡತೆಯಿಂದಾಗಲೀ, ಸ್ವಭಾವ ಶಕ್ತಿಯ ಕೊರತೆಯಿಂದಾಗಲೀ ಶರೀರ ಕಾಂತಿಯು ಕುಂದಿ ರಕ್ತ ಕೆಟ್ಟು ಇಂದ್ರಿಯ ದೌರ್ಬಲ್ಯವೇ ಮೊದಲಾದ ವಿಕಾರಗಳಿಂದ ಪೀಡಿತರಾಗಿರುವವರು ಈ ಲೇಹವನ್ನು ಸೇವಿಸಿದರೆ ಆ ತರದ ವಿಕಾರಗಳನ್ನೆಲ್ಲಾ ಪರಿಹರಿಸಿ ದೇಹಕ್ಕೂ ಮನಸ್ಸಿಗೂ ಉಲ್ಲಾಸವನ್ನುಂಟುಮಾಡಿ ಮಾಂಸ ಖಂಡಗಳಿಗೂ ನರಗಳಿಗೂ ಬಲವನ್ನು ಕೊಟ್ಟು ದೇಹಪುಷ್ಟಿಯನ್ನುಂಟುಮಾಡಿ ನವಚೈತನ್ಯವನ್ನುಂಟುಮಾಡುವುದು. ಅಲ್ಲದೆ ಆರೋಗ್ಯದೃಢಶರೀರವುಳ್ಳವರಾಗಿ ದೀರ್ಘಕಾಲ ಬದುಕುವರು. ಕೆಮ್ಮು ಉಬ್ಬಸ ವ್ಯಾಧಿಯುಳ್ಳವರಿಗೂ ಮುಖ್ಯವಾಗಿ ಕ್ಷಯರೋಗಿಗಳಿಗೂ ಇದು ಸಂಜೀವಿನಿಯೇ ಸರಿ! ಚರಕ ಸಂಹಿತೆಯಲ್ಲಿ ಇದರ ಗುಣವು ಅದ್ಭುತವಾಗಿ ಹೇಳಲ್ಪಟ್ಟಿದೆ. ೧೦ ತೊಲೆಗೆ ೧ ರೂಪಾಯಿ. ೪೦ ತೊಲೆಗೆ ೩ ರೂಪಾಯಿ.

ಎಲ್ಲಾ ಕಡೆಯಲ್ಲಿಯೂ ಏಜಂಟರು ಬೇಕು.

ಸೂಚನೆ—ಇಲ್ಲಿ ಶಾಸ್ತ್ರೀಯವಾದ ಎಲ್ಲಾ ಔಷಧಗಳೂ ಹೊಸ, ಕ್ರಯಕ್ಕೆ ಸಿಗುವುವು. ಆಯುರ್ವೇದ ಭಿಷಗ್ವರ ಕೆ. ಸುಬ್ಬರಾವ್ ಎ ಎಂ ಎ. ಸಿ. ಯವರು ರೋಗಿಗಳನ್ನು ಪರೀಕ್ಷಿಸಿ ಚಿಕಿತ್ಸೆಯನ್ನು ಪ್ರತಿದಿನವೂ ನಡಿಸುವರು. ವಿಶೇಷ ಸಂಗತಿಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ,

ಟಿ. ಸಿ. ಎಸ್. ಮಣಿಯಂ ಅಂಡ್ ಕೋ,
ಮ್ಯಾನೇಜಿಂಗ್ ಏಜಂಟ್ಸ್, ಆಂಧ್ರ ಆಯುರ್ವೇದಿಕ್ ಫಾರ್ಮಸಿ,
೬೬ ಚಿಕ್ಕಪೇಟೆ, ಬೆಂಗಳೂರು ಸಿಟಿ.
16—5

"ಕೊಡಗು"

ಸನ್ ೧೯೨೬ನೇ ಇಸವಿ ಮಾರ್ಚಿ ತಾ. ೫ನೇ ಶುಕ್ರವಾರ.

೧೯೨೪-೨೫ನೇ ವರ್ಷದ ಕೊಡಗಿನ ಆಡಳಿತ ವರದಿ.

ನಮ್ಮ ಈ ದೇಶದ ಆಡಳಿತ ವರದಿಗಳನ್ನು ಕಳೆದ ನಾಲ್ಕೈದು ವರ್ಷಗಳಿಂದ ವಿಮರ್ಶೆ ಮಾಡುತ್ತಾ ಬಂದಿದ್ದೇವೆ. ಆದರೆ ಈಗ ತಾನೇ ಹೊರ ಬಿದ್ದಿರುವ ಕಳೆದ ವರ್ಷದ ಅಂದರೆ 1924-25ರ ಸರ್ಕಾರದ ವರದಿಯಲ್ಲಿ ಹೆಚ್ಚಿನ ವಿಶೇಷ ಸಂಗತಿಗಳೇನೂ ಕಂಡುಬರುವುದಿಲ್ಲ. ವಾಡಿಕೆಯಂತೆ ದೇಶದ ಆದಾಯ ವೆಚ್ಚ, ರಾಜ್ಯಭಾರ ನಡೆಸುತ್ತಿರುವ ಬೇರೆ ಬೇರೆ ಇಲಾಖೆಗಳ ಕೆಲಸಗಳು ಸಂಕ್ಷೇಪವಾಗಿ ಹೇಳಲ್ಪಟ್ಟಿರುವದಲ್ಲದೆ ಸರ್ಕಾರಕ್ಕೆ ಸಮ್ಮಂಧಪಟ್ಟ ಹಲವು ವಿಷಯಗಳ ಅಂಕೆಗಳು ವಿವರವಾಗಿ ಪಟ್ಟಿ ರೂಪದಲ್ಲಿ ಪ್ರಕಟಿಸಲ್ಪಟ್ಟಿವೆ. ಇದರಲ್ಲಿರುವ ವಿಷಯಗಳು ಸಾಧಾರಣವಾದರೂ ಅವು ದೇಶದ ಆಡಳಿತಕ್ಕೆ ಸಮ್ಮಂಧಪಟ್ಟ ಕಾರಣ ಅವುಗಳಲ್ಲಿ ಕೆಲವನ್ನಾದರೂ ದೇಶದ ಸಾಮಾನ್ಯ ಜನರು ತಿಳಿದುಕೊಳ್ಳಬೇಕಾಗಿದೆ.

1924ನೇ ಇಸವಿ ಜುಲೈ ತಿಂಗಳಲ್ಲಿ ಸಂಭವಿಸಿದ ಮಳೆಯ ಹಾವಳಿಯು 1923ರದಕ್ಕಿಂತ ಕಠಿಣತರದಾಗಿತ್ತು. ಆದರೆ ಇದು ವ್ಯವಸಾಯ ಕೆಲಸದ ಪ್ರಾರಂಭದಲ್ಲಿ ಉಂಟಾದುದರಿಂದ ರೈತರಿಗೆ ಅನುಕೂಲವಾಯಿತು. ನಷ್ಟ ಪರಿಹಾರಕ್ಕಾಗಿ ಡಿಸ್‌ಕ್ರಿಷನರಿ ಗ್ರಾಂಟಿನಿಂದಲೂ, ಕಂದಾಯ ಮಾಫಿಯಿಂದಲೂ ನಷ್ಟವಾದ ಗದ್ದೆ ಮತ್ತು ತೋಟಗಳಿಗೆ ಉಪಯೋಗಿಸಿದ್ದ ರಿಕಾವಿ ಸಾಲಗಳನ್ನು ವಜಾ ಮಾಡುವುದರಿಂದಲೂ ಸುಮಾರು ಇಪ್ಪತ್ತು ಸಾವಿರ ರೂಪಾಯಿಗೆ ಮೇಲೆಯೇ ಸಹಾಯ ಕೊಡಲಾಯಿತು. ಆದರೆ ಆ ವರ್ಷದ ಫಸಲಿನ ಬೆಳೆಯು ಚೆನ್ನಾಗಿದ್ದದರಿಂದಲೂ 1925ರಲ್ಲಿ ಏನೊಂದೂ ಸಂಕಟನೆ ಉಂಟಾಗದ್ದರಿಂದಲೂ ದೇಶವು ಆ ಪೆಟ್ಟಿನಿಂದ ಚೇತರಿಸಿಕೊಂಡಿತೆಂದು ಮೊದಲಾಗಿ ಪ್ರಾರಂಭದಲ್ಲೇ ಸೂಚಿಸಲ್ಪಟ್ಟಿದೆ. ಆ ವರ್ಷದ ಮಳೆಯ ಅನಾಹುತದ ಫಲವನ್ನು ದೇಶದ ಜನರು ಸ್ವತಃ ಅನುಭವಿಸಿರುವುದರಿಂದ ಅದರ ವಿಷಯ ಇಲ್ಲಿ ಹೆಚ್ಚು ಟೀಕಿಸುವ ಅವಶ್ಯ ಕಾಣುವುದಿಲ್ಲ. ನಷ್ಟಕ್ಕೆ ತಕ್ಕಂಥ ಪರಿಹಾರವೂ ಸಹಾಯವೂ ದೊರೆಯಲಿಲ್ಲವೆಂಬುದು ಕಷ್ಟನಷ್ಟಗಳಿಗೊಳಗಾದ ಗ್ರಾಮವಾಸಿಗಳಿಗೇನೇ ಗೊತ್ತು. ಕಳೆದ ಎರಡು ವರ್ಷಗಳ ಪ್ರವಾಹದ ಪೆಟ್ಟಿನ ನೋವಿನಿಂದ ಜನರು ಇನ್ನೂ ಬಿಡುಗಡೆಯಾಗಿರುವುದಿಲ್ಲವೆಂದು ಹೇಳಬೇಕಾಗಿಲ್ಲ. ತಮ್ಮ ಹೊಲಗದ್ದೆಗಳ ರಿಪೇರಿಗಾಗಿ ಮಾಡಿದ ಸಾಲದ ಬಾಧೆಯಿಂದ ಇನ್ನೂ ಎಷ್ಟೋ ಜನರು ನರಳುತ್ತಿರುವರು. 1923ಕ್ಕಿಂತ ಮೊದಲಿದ್ದ ಸ್ಥಿತಿಗೆ ಬರಬೇಕಾದರೆ ಕೆಲವು ವರ್ಷಗಳು ಹಿಡಿಯುವವೆಂಬುದರಲ್ಲಿ ಸಂಶಯವಿಲ್ಲ.

ಕಿತ್ತಳೆ ರೋಗದ ಮೂಲದ ವಿಷಯ ಪರೀಕ್ಷಿಸಲು ಮೈಸೂರು ಸರ್ಕಾರದವರು ಮಾಡಿದ ಸಹಾಯಕ್ಕೆ ವಂದನೆಯನ್ನು ಅರ್ಪಿಸಿರುವುದು ನ್ಯಾಯವಾಗಿದೆ. ಆದರೆ ಸಹಾಯ ಕೊಟ್ಟ ಮೈಸೂರು ಸರ್ಕಾರಕ್ಕೆ ವಂದಿಸುವುದರಲ್ಲೇ ನಮ್ಮ ಸರ್ಕಾರದ ಕೆಲಸವು ಮುಗಿಯಲಿಲ್ಲ. ಈ ಅನ್ವೇಷಣೆಯನ್ನು ನಡೆಸುತ್ತಿರುವ ಇಬ್ಬರು ಅಸಿಸ್ಟೆಂಟರು ಮಾಡಿದ ಕೆಲಸದಿಂದ ಕಿತ್ತಳೆ ತೋಟದ ಮಾಲೀಕರಿಗೆ ಪ್ರಯೋಜನವಾಗಿದೆಯೋ ಎಂಬುದನ್ನು ಅವರು ನಡೆಸಿದ ಕೆಲಸದ ವಿವರದೊಂದಿಗೆ ಆಗಿಂದಾಗ್ಗೆ ಸರ್ಕಾರದವರು ಪ್ರಕಟಿಸುತ್ತಾ ಬಂದರೆ ಪ್ರಯೋಜನವಾದೀತು.

ಉತ್ತರ ಕೊಡಗಿನಲ್ಲಿ ಕೆರೆಗಳ ದುರಸ್ತಿನ ಅನುಕೂಲತೆಯನ್ನೂ ಹಾರಂಗಿ ನಾಲೆಯ ಬಗ್ಗೆ ಸರ್ವೆಯ ಕೆಲಸವನ್ನೂ ಮಾಡಲು ಪ್ರಾರಂಭಿಸಿದರೆಂದು ಬರೆದಿರುತ್ತಾರೆ. ಆದರೆ ಈ ಕೆಲಸಗಳು 1925ನೇ ಏಪ್ರಿಲಿನಿಂದ ಈಚೆಗೆ ಶುರುವಾದದ್ದೆಂದು ನೆನಪುತ್ತದೆ. ಈ ಕೆಲಸಗಳು ಆಗಬೇಕಾದಷ್ಟು ಮುಂದುವರಿಯುವುದಿಲ್ಲವೆಂತ ತಿಳಿಸಲಾಗುತ್ತದೆ. ಇವೆರಡು ಕೆಲಸಗಳ ಮೇಲ್ವಿಚಾರಕ್ಕೆ ಎಗ್ಸಿಕ್ಯೂಟಿವ್ ಇಂಜಿನೀಯರವರು ತಿಳಿಸಿದ್ದು, ಗವರ್ನ್‌ಮೆಂಟು ಉಪಯೋಗವೆಂದು ವರ್ತಮಾನ. ನಾಲೆಯ ಸರ್ವೆಯಿಂದ ತತ್ಕಾಲ ಪ್ರಯೋಜನವನ್ನು ಯಾರೂ ನಿರೀಕ್ಷಿಸಲು ಸಾಧ್ಯವಿಲ್ಲ. ಆದರೆ ಕೆರೆಗಳ ದುರಸ್ತಿನ ಏರ್ಪಾಡಿನಿಂದ ಅಲ್ಲಿಯ ಜನರಿಗೆ ಎಷ್ಟರ ಮಟ್ಟಿಗೆ ಪ್ರಯೋಜನ ದೊರೆಯುತ್ತಿದೆ ಎಂಬುದು ಇನ್ನೂ ಪ್ರಕಟವಾಗಿರುವುದಿಲ್ಲ. ಕಕ್ಕಟ್ಟುಹೊಳೆಗೆ ಸೇತುವೆ ಕಟ್ಟಿ ಮರೆನಾಡಿಗೆ ರಸ್ತೆ ಮಾಡುವ ವಿಷಯ ಆಲೋಚಿಸುತ್ತಾ ಇದೆಯೆಂತ ರಿಪೋರ್ಟಿನಲ್ಲಿ ಬರೆದಿದೆ. 1925ನೇ ಮಾರ್ಚಿ ಅಖೈರು ವರೆಗಿನ ವರ್ಷದ ವರದಿಯಲ್ಲಿ ಹೀಗಿದ್ದರೂ ಕೂಡ 1926ನೇ ಮಾರ್ಚಿ ಬಂದರೂ ಈ ಆಲೋಚನೆಯೇ ಏನೂ ಮುಂದರಿದಿರುವಂತೆ ಕಂಡುಬರುವುದಿಲ್ಲ. 1927ನೇ ಮಾರ್ಚಿ ಅಖೈರಾಗುವ ವರ್ಷದಲ್ಲಿಯೂ ಈ ರಸ್ತೆಗಾಗಿ ಒಂದು ಕಾಸನ್ನಾದರೂ ಇಟ್ಟಿರುವಂತೆ ತೋರುವುದಿಲ್ಲ. ಮರೆನಾಡು ಪ್ರಾಂತ್ಯದ ಜನರ ತಾಳ್ಮೆಯನ್ನು ಸರ್ಕಾರದವರು ಪರೀಕ್ಷಿಸುತ್ತಿರುವರೋ ಏನೋ ಹೇಳಲಾಗುವುದಿಲ್ಲ. ಕೌನ್ಸಿಲ್ ಬಂದಾಗಾದರೂ ಸಮ್ಮೂರಿಗೆ ಗಾಡಿ ಬಂದದ್ದನ್ನು ನೋಡಿಯೇವೆಂತ ಕುತೂಹಲದಲ್ಲಿ ಕಾಯುತ್ತಿದ್ದ ಮರೆನಾಡಿನವರಿಗೆ ಪುನಃ ಆಶಾಭಂಗವಾಯಿತು.

ವರದಿವರ್ಷದಲ್ಲಿ ಬಸ್ಸು ಸರ್ವಿಸುಗಳು ತುಂಬಾ ಆಗಿವೆಯೆಂತಲೂ, ಮೋಟಾರು ಲಾರಿಗಳು ರಸ್ತೆಗಳಲ್ಲಿ ಕಾಣುತ್ತಿವೆಯೆಂತಲೂ ಅವುಗಳ ಮೂಲಕ ಪ್ರಯಾಣಕ್ಕೆ ಅನುಕೂಲವಾದುದರಿಂದ ಕೋರ್ಟುಗಳನ್ನು ಎಲ್ಲೆಲ್ಲಿ ಇಡಬೇಕೆಂಬುದನ್ನು ಪುನರಾಲೋಚನೆ ಮಾಡಬಹುದೆಂಬ ಅಭಿಪ್ರಾಯವನ್ನು ಕೊಡುವ ಮಾತುಗಳನ್ನು ರಿಪೋರ್ಟಿನಲ್ಲಿ ಸೂಚಿಸಿರುತ್ತಾರೆ. ಈಗಿನ ಮೋಟಾರು ಸರ್ವಿಸುಗಳಿಂದ ಪ್ರಯೋಜನವಿರುವಷ್ಟೇ ನಷ್ಟವೂ ಇದೆ. ಬಸ್ಸುಗಳಿಂದ ಉಂಟಾಗುವ ನಷ್ಟವು ಕಡಿಮೆಯಾಗುವಂತೆ ಪ್ರತಿ ರಸ್ತೆಯಲ್ಲಿಯೂ ಒಂದಕ್ಕಿಂತ ಹೆಚ್ಚು ಸರ್ವಿಸಗಳಿಗೆ ಅವಕಾಶಕೊಟ್ಟು ಸ್ಪರ್ಧೆಯಿಂದ ಪ್ರಯಾಣದ ದರವನ್ನು ಇಳಿಸಬೇಕಾದದ್ದು ಸರ್ಕಾರದ ಕರ್ತವ್ಯವಾಗಿದೆ. ಮೋಟಾರು ಬಸ್ಸುಗಳಿರುವ ಕಾರಣದಿಂದ ಕೋರ್ಟುಗಳ ಸಂಖ್ಯೆಯನ್ನು ಕಡಿಮೆಮಾಡಬೇಕೆಂಬ ಅಭಿಪ್ರಾಯಕ್ಕೆ ನಾವು ಒಪ್ಪುವುದಿಲ್ಲ. ಕೊಡಗಿಗೆ ರೈಲ್ವೆಯನ್ನು ತರುವ ಯೋಜನೆಯನ್ನು ಬಿಟ್ಟರೂ ತಲಚೇರಿಯಿಂದ ಪೆರಂಬಾಡಿ ಘಟ್ಟದ ಬುಡಕ್ಕೆ ರೈಲು ಬರುವ ಸಂಭವವಿದೆಯೆಂದು ಹೇಳುತ್ತಾರೆ. ನಮ್ಮ ಸರ್ಕಾರದವರು ಇದಕ್ಕಾಗಿ ಹಣ ಖರ್ಚುಮಾಡಬೇಕಾದದ್ದು ಇಲ್ಲವಾದರೆ ಈ ಏರ್ಪಾಡಿಗೆ ಆಕ್ಷೇಪಣೆ ಇಲ್ಲ. ಇದರಿಂದ ಕೊಡಗಿನಿಂದ ಹೊರಗೆಹೋಗುವ ಸರಕುಗಳಿಗೆ ಬೆಲೆ ಹೆಚ್ಚಬಹುದು, ದೇಶದ ಒಳಕ್ಕೆ ಬರುವಂಥಾವುಗಳಿಗೆ ಕ್ರಯವು ಕಡಿಮೆಯಾಗಬಹುದು.

ವೀರಾಜಪೇಟೆ ಹೈಸ್ಕೂಲು ಸ್ವತಂತ್ರ ಶಾಲೆಯಾಗಿ ಮುಂದುವರಿದದ್ದರಿಂದಲೂ, ಮಡಿಕೇರಿ ಬಾಲಿಕಾ ಹೈಸ್ಕೂಲಿನಲ್ಲಿ 6ನೇ ಫಾರಂ ತೆರೆದದ್ದರಿಂದಲೂ, ವೀರಾಜಪೇಟೆಯಲ್ಲಿ ಟ್ರೈನಿಂಗ್ ಶಾಲೆಯನ್ನು ಪ್ರಾರಂಭಿಸಿದ್ದರಿಂದಲೂ, ಯರವರಿಗೆ ಒಂದು ಪ್ರತ್ಯೇಕ ಶಾಲೆಯನ್ನು ತೆರೆದದ್ದರಿಂದಲೂ, ಲೋವರ್ ಸೆಕಂಡರಿ ಶಾಲೆಗಳನ್ನು ಹೆಚ್ಚಿಸಬೇಕೆಂದು ಕೇಳಿಕೊಂಡದ್ದರಿಂದ ಹಯರ್ ಎಲಿಮೆಂಟರಿ ಶಾಲೆಗಳನ್ನು ಸಂಪೂರ್ಣಗೊಳಿಸುವ ಯೋಚನೆ ಮಾಡುತ್ತಿರುವುದರಿಂದಲೂ ವರದಿಯ ವರ್ಷವು ವಿದ್ಯಾಭ್ಯಾಸದ ವಿಷಯದಲ್ಲಿ ಅಭಿವೃದ್ಧಿ ತೋರಿಸಿದೆಯೆಂತ ಹೇಳಿರುತ್ತಾರೆ. ಸಹಕಾರ ಇಲಾಖೆಯಲ್ಲಿ ಗೌರವ ಆರ್ಗನೈಜರುಗಳನ್ನು ಮತ್ತು ಇನ್‌ಸ್ಪೆಕ್ಟರುಗಳನ್ನು ನೇಮಿಸಿ ಸಹಕಾರ ಚಳವಳಿಗೆ ಸರ್ಕಾರದ ಸಹಾಯ ದೊರೆತಿದೆಯೆಂಬುದೂ ನಿಜವೆ. ಇವೆರಡು ಇಲಾಖೆಗಳಿಗೆ ಸರ್ಕಾರದ ಗಮನ ಆ ವರ್ಷದಲ್ಲಿ ಸಿಕ್ಕಿದ್ದು ಶ್ಲಾಘನೀಯ. ಇದೇ ರೀತಿಯಲ್ಲಿ ವರ್ಷ ವರ್ಷವೂ ಅಭಿವೃದ್ಧಿ ಹೊಂದುತ್ತಾ ಹೋಗಬೇಕಾದದ್ದು ಅವಶ್ಯ. ಆದರೆ ನಮ್ಮ ಪ್ರಾಂತೀಕ ಸರ್ಕಾರದ ಈಗಿನ ಆರ್ಥಿಕಸ್ಥಿತಿಯಲ್ಲಿ ಇನ್ನು ಹೆಚ್ಚಿಗೆ ಅಭಿವೃದ್ಧಿ ಹೊಂದುವುದು ಕಷ್ಟವೆಂದು ಸರ್ಕಾರದವರು ಹೇಳಬಹುದು. ಆದರೂ ಬೇರೆ ಇಲಾಖೆಗಳಲ್ಲಿ ಹೆಚ್ಚು ಸಂಬಳ ಹೊಂದುವ ಅನಾವಶ್ಯವಾದ ಹುದ್ದೆಗಳನ್ನು ತೆಗೆದು ಹಾಕಿ ಈ ಇಲಾಖೆಗಳಿಗೆ ಖರ್ಚುಮಾಡುವ ಏರ್ಪಾಡು ನಡೆಯಬೇಕೆಂತ ನಂಬುತ್ತೇವೆ.

ಸಂಪಾಜೆಘಾಟಿನ ರಸ್ತೆಗಳಿಗೆ ಕಳೆದ ಜುಲೈತಿಂಗಳ ಮಳೆಯ ಹಾವಳಿಯಿಂದ ನಿರೀಕ್ಷಿಸಿದ್ದಕ್ಕಿಂತ ರಿಪೋರ್ಟಿನಲ್ಲಿ ಬರೆದಿದ್ದರೂ ಕೌನ್ಸಿಲಿನ ಒತ್ತಾಯದಿಂದಲೇ ನಿಲ್ಲಿಸಲ್ಪಟ್ಟಿತೆಂತ ನಮ್ಮ ಅಭಿಪ್ರಾಯ. ಯಾವ ಕಾರಣದಿಂದಲೇ ಆಗಲಿ ನಿಂತದ್ದು ಒಳ್ಳೇಯದೆ. ಪೂರ್ವಪ್ರಾಂತ್ಯ ಭಾರಿಸ್ಟನಲ್ಲಿ ರೈಲ್ವೆಗೆ ಬೇಕಾದ ತೊಲೆಗಳನ್ನು ನಾಟಲು ಒಪ್ಪಿದ ಕಂಟ್ರಾಕ್ಟರು 1925ನೇ ಜನವರಿಯಿಂದ ಕೆಲಸ ನಿಲ್ಲಿಸಿ ಬಿಟ್ಟಿದ್ದಾರೆಂತ ತಿಳಿದಿದ್ದಾರೆ. ಆದರೆ ಅವರಿಗೆ ಕೊಟ್ಟ ಅಡ್ವಾನ್ಸು ಹಣ ಏನಾಗಿದೆಯೋ, ಅವರು ಮಾಡಿದ ಕೆಲಸವೆಷ್ಟು ಎಂಬ ವಿಷಯಗಳನ್ನು ಪ್ರಕಟಿಸಿದ್ದರೆ ಜನರ ಮನಸ್ಸಿನಲ್ಲಿರುವ ಸಂಶಯವು ಪರಿಹಾರವಾಗುತ್ತಿತ್ತು. ಈ ವಿಷಯ ಸರ್ಕಾರಿಗೂ ಕಂಟ್ರಾಕ್ಟರಿಗೂ ಉಂಟಾಗಿದ್ದ ವ್ಯತ್ಯಾಸಗಳನ್ನು ಪಡಿಸಿಕೊಳ್ಳುವ ಬಗ್ಗೆ ತನಿಖೆ ನಡೆಯುತ್ತಿರುವುದರಿಂದ ಕೌನ್ಸಿಲಿನಲ್ಲಿ ಚರ್ಚೆ ಮಾಡಕೂಡದೆಂತ ಪ್ರೆಸಿಡೆಂಟು ಹೇಳಿದ್ದರು. ಆ ಕಾರಣದಿಂದಲೇ ತನಿಖೆಯ ಫಲಿತಾಂಶವಾಯಿತೆಂಬುದನ್ನು ಬೇಗನೆ ಪ್ರಕಟಿಸಬೇಕಾಗಿತ್ತು.

ಕೌನ್ಸಿಲಿನಲ್ಲಿ ಸರ್ಕಾರದ ಎಲ್ಲಾ ಇಲಾಖೆಗಳಲ್ಲೂ ಚರ್ಚೆಗಳು ನಡೆದುದರಿಂದ ಎಲ್ಲಾ ಇಲಾಖೆಗಳ ಹೊಸ ಏರ್ಪಾಡುಗಳೂ ಬದಲಾವಣೆಗಳೂ ಆಗಲು ಕಾರಣವಾಯಿತೆಂತ ಸೂಚಿಸಿರುತ್ತಾರೆ. ಮೆಂಬರುಗಳು ತಂದ ರೆಸೊಲ್ಯೂಷನುಗಳು ಪಾಸಾಗದಿದ್ದರೂ, ಅಥವಾ ಪಾಸಾಗಿ ಸರ್ಕಾರದವರು ಅಂಗೀಕರಿಸದಿದ್ದರೂ ಪ್ರಜಾಹಿತಕ್ಕಾಗಿ ಸರ್ಕಾರದ ಕೆಲವು ಮಟ್ಟಿಗೆ ಒದಗುತ್ತಿವೆಯೆಂಬುದು ನಿಜವೆ. ಆದರೂ ಪ್ರಜಾ ಜವಾಬ್ದಾರಿ ಸರ್ಕಾರ ... ವನಸಿಗೂ ... ದೇಶದಲ್ಲೂ ಜನರವು ನಡೆಯುತ್ತಲೇ ಇರಬೇಕು.

ಸ್ವಾಮಿ ವಿವೇಕಾನಂದರ ಮತ್ತು ಅವರ ಶಿಷ್ಯರ ಸಂವಾದ

(೩ನೇ ಸಂಚಿಕೆಯಿಂದ ಮುಂದುವರಿದದ್ದು)

ಶಿಷ್ಯ:—ಮಹಾಶಯ! ಶಾಸ್ತ್ರದ ಈ ಮಾತನ್ನು ಕೇಳಿದಾಗ ಅಥವಾ ಓದಿದಾಗ, ಇನ್ನೂ ಆತ್ಮವಸ್ತುವಿನ ಪ್ರತ್ಯಕ್ಷವಾಗಿಲ್ಲವಲ್ಲಾ ಎಂದುಕೊಂಡು ಮನಸ್ಸು ವಿಲವಿಲನೆ ಒದೆಯುತ್ತದೆ.

ಸ್ವಾಮಿಗಳು.— ಇದಕ್ಕೆ ವ್ಯಾಕುಲತೆಯೆಂದು ಹೆಸರು. ಇದು ಎಷ್ಟೆಷ್ಟು ಬೆಳೆಯುತ್ತ ಹೋಗುತ್ತದೆಯೋ ಪ್ರತಿಬಂಧರೂಪವಾದ ಆ ಮೇಘವು ಸ್ವಲ್ಪ ಸ್ವಲ್ಪ ಕಳೆಯುತ್ತ ಹೋಗುತ್ತದೆ. ಆಗಲೇ ಶ್ರದ್ಧೆಯು ದೃಢವಾಗುತ್ತದೆ ಮತ್ತು ಕ್ರಮವಾಗಿ ಆತ್ಮನು ಕರತಲಾಮಲಕದ ಹಾಗೆ ಪ್ರತ್ಯಕ್ಷನಾಗುತ್ತಾನೆ. ಅನುಭವವೇ ಧರ್ಮದ ಜೀವ. ಕೆಲವು ಆಚಾರ ನಿಯಮಗಳನ್ನು ಎಲ್ಲರೂ ನಡೆಸಿಕೊಂಡು ಹೋಗಬಹುದು. ಆದರೆ ಅನುಭವಕ್ಕೋಸ್ಕರ ಎಷ್ಟು ಜನರು ವ್ಯಾಕುಲರಾಗುತ್ತಾರೆ? ವ್ಯಾಕುಲತೆ-ಈಶ್ವರಲಾಭ ಅಥವಾ ಆತ್ಮಜ್ಞಾನಕ್ಕೋಸ್ಕರ ಹುಚ್ಚು ಹಿಡಿದಂತಾಗುವುದು. ಇದೇ ಧರ್ಮದ ಯಥಾರ್ಥವಾದ ಪ್ರಾಣ.

ಶ್ರೀಕೃಷ್ಣಪರಮಾತ್ಮನಿಗೋಸ್ಕರ ಗೋಪಿಗಳಿಗೆ ಯಾವ ವಿಧವಾದ ಉದ್ದಾಮ ಉನ್ಮತ್ತತೆಯುಂಟಾಗಿತ್ತೋ ಆತ್ಮದರ್ಶನಕ್ಕಾಗಿ ಆ ವಿಧವಾದ ವ್ಯಾಕುಲತೆ ಬೇಕು. ಗೋಪಿಗಳ ಮನಸ್ಸಿನಲ್ಲಿಯೂ ಸ್ವಲ್ಪ ಸ್ವಲ್ಪ ಹೆಂಗಸು ಗಂಡಸು ಎಂಬ ಭೇದವಿತ್ತು. ನಿಜವಾದ ಆತ್ಮಜ್ಞಾನವಾದರೆ (ಸ್ತ್ರೀಪುರುಷರೆಂಬ) ಲಿಂಗಭೇದವು ಪೂರ್ತಿಯಾಗಿ ಹೋಗಿಬಿಡುತ್ತದೆ.

ಹೀಗೆಂದು ಹೇಳುತ್ತಾ ಹೇಳುತ್ತಾ (ಗೀತ ಗೋವಿಂದ ಪ್ರಸ್ತಾಪವನೆತ್ತಿಕೊಂಡು ಸ್ವಾಮಿಗಳು ಹೀಗೆಂದು ಹೇಳತೊಡಗಿದರು):—

"ಜಯದೇವನೇ ಸಂಸ್ಕೃತ ಭಾಷೆಯಲ್ಲಿ ಕೊನೆಯ ಕವಿ. ಆದರೆ ಜಯದೇವನು ಅನೇಕ ಸ್ಥಳಗಳಲ್ಲಿ ಭಾವಕ್ಕಿಂತಲೂ jingling of words (ಕಿವಿಗೆ ಇಂಪಾದ ವಾಕ್ಯವಿನ್ಯಾಸಗಳ) ಕಡೆಗೆ ಹೆಚ್ಚು ಲಕ್ಷ್ಯವನ್ನು ಕೊಟ್ಟಿದ್ದಾನೆ. ಗೀತಗೋವಿಂದದ "ಪತತಿ ಪತತ್ರೇ......" ಎಂಬ ಶ್ಲೋಕದಲ್ಲಿ ಅನುರಾಗ ಮತ್ತು ವ್ಯಾಕುಲತೆಯ ಎಂಥಾ Culmination (ಪರಕಾಷ್ಠತೆಯ)ನ್ನು ಕವಿಯು ತೋರಿಸಿದ್ದಾನೆ, ನೋಡಿದೆಯಾ? ಆತ್ಮದರ್ಶನಕ್ಕೋಸ್ಕರವಾಗಿ ಈ ವಿಧವಾದ ಅನುರಾಗ ಉಂಟಾಗಬೇಕು. ಜೀವದಲ್ಲಿ ವಿಲವಿಲನೆ ಒದೆದಾಟ ಉಂಟಾಗಬೇಕು. ಹಾಗೆ, ಬೃಂದಾವನ ಲೀಲೆಯ ಪ್ರಸ್ತಾಪವನ್ನು ಬಿಟ್ಟುಬಂದರೆ ಕುರುಕ್ಷೇತ್ರದ ಕೃಷ್ಣನು ಎಷ್ಟು ಮನೋಹರನಾಗಿದ್ದಾನೆ. ಅದನ್ನು ನೋಡು, ಅಂಥ ಭಯಂಕರವಾದ ಯುದ್ಧಕೋಲಾಹಲದಲ್ಲಿಯೂ ಕೃಷ್ಣನು ಎಷ್ಟು ಸ್ಥಿರ, ಗಂಭೀರ, ಶಾಂತ! ಯುದ್ಧರಂಗದಲ್ಲಿಯೇ ಅರ್ಜುನನಿಗೆ ಗೀತೆಯನ್ನು ಹೇಳಿದನು!—ಕ್ಷತ್ರಿಯ ಧರ್ಮವಲ್ಲಿಯೇ ಯುದ್ಧವನ್ನು ಮಾಡುವಂತೆ ಮಾಡಿಬಿಟ್ಟನು! ಇಂಥ ಭಯಂಕರವಾದ ಯುದ್ಧಕ್ಕೆ ಪ್ರವರ್ತಕನಾದರೂ ಶ್ರೀಕೃಷ್ಣನು ತಾನುಮಾತ್ರ ಹೇಗೆ ಕರ್ಮಹೀನನಾಗಿದ್ದುಬಿಟ್ಟನು! ಅಸ್ತ್ರವನ್ನು ಹಿಡಿಯಲಿಲ್ಲ. ಯಾವ ಕಡೆಯಿಂದ ನೋಡಿದರೂ ಶ್ರೀಕೃಷ್ಣನ ಚರಿತ್ರವು Perfect (ಸರ್ವಾಂಗ ಸಂಪೂರ್ಣವಾಗಿ) ಕಂಡುಬರುತ್ತದೆ. ಅವನು ಜ್ಞಾನ, ಕರ್ಮ, ಭಕ್ತಿಯೋಗ ಇವುಗಳ ಮೂರ್ತಿಮತ್ತಾದ ವಿಗ್ರಹವೋ ಎಂಬಂತಿದ್ದಾನೆ. ಶ್ರೀಕೃಷ್ಣನ ಈ ಭಾವವನ್ನೇ ಈಗಿನ ಕಾಲದಲ್ಲಿ ವಿಶೇಷವಾಗಿ

(೪ನೇ ಪುಟದಲ್ಲಿ ಮುಂದುವರಿದಿದೆ).

ಮಹಾತ್ಮ ಗಾಂಧಿಯವರ ಸ್ವಚರಿತ್ರೆ.

(37 ನೇ ಸಂಚಿಕೆಯಿಂದ ಮುಂದುವರಿದದ್ದು.)

ಮೂರನೆಯ ಪ್ರಕರಣ

ಬಾಲ್ಯವಿವಾಹವು.

ಈ ಪ್ರಕರಣವನ್ನು ಬರೆಯಲು ನನಗೆ ಇಷ್ಟವಿಲ್ಲದಿದ್ದಾಗ್ಯೂ ಬರೆಯದಿರಲಾಗದು, ಬರೆಯದಿದ್ದರೆ ನಾನು ಅಸತ್ಯವಾದಿಯಾಗುವೆನು. ನನಗೆ 13 ನೆಯ ವರ್ಷ ವಯಸ್ಸಿನಲ್ಲೇ ವಿವಾಹವಾಯಿತೆಂದು ಬರೆಯಲು ನನಗೆ ಬಹಳ ಸಂತಾಪಕರವಾಗಿದ್ದರೂ ಬರೆಯದಿದ್ದರೆ ತಪ್ಪದು. ಈಗ ನನ್ನ ಸಂರಕ್ಷಣೆಯಲ್ಲಿರುವ ಇಷ್ಟು ವಯಸ್ಸಿನ ಯುವಕರ ಸ್ಥಿತಿಯನ್ನು ನನ್ನ ಬಾಲ್ಯದಶೆಗೆ ಹೋಲಿಸಿದುದಾದರೆ ಅವರ ಅದೃಷ್ಟಕ್ಕೆ ಸಂತೋಷವೂ ನನ್ನ ಅದೃಷ್ಟಕ್ಕೆ ಸಂತಾಪವೂ ನನಗುಂಟಾಗುತ್ತದೆ. ಅಂತಹ ಅಜ್ಞಾನದಶೆಯಲ್ಲಿ ಬಾಲಕರಿಗೆ ವಿವಾಹವನ್ನು ಮಾಡಲು ನೈತಿಕಕಾರಣವೇನೂ ನನಗೆ ಕಂಡುಬರುವುದಿಲ್ಲ.

13 ನೆಯ ವರ್ಷವಯಸ್ಸಿನಲ್ಲಿ ನನಗೆ ಮದುವೆ ಆಯಿತಲ್ಲದೆ ನಿಶ್ಚಿತಾರ್ಥವಾಗಿತ್ತಲ್ಲ. ಕಥಿಯಾವಾಡದಲ್ಲಿ ನಿಶ್ಚಿತಾರ್ಥವು ಮೊದಲು ಜರುಗಿ ಕೆಲವು ಕಾಲಾನಂತರ ವಿವಾಹವು ನಡೆಯುವ ಪದ್ಧತಿಯೊಂದುಂಟು. ನಿಶ್ಚಿತಾರ್ಥವೆಂದರೆ ವಧೂವರರ ಸಂರಕ್ಷಕರು ಹೆಣ್ಣನ್ನು ಕೊಟ್ಟು ತಂದು ಕೊಳ್ಳುವವರನ್ನು ಗೊತ್ತುಮಾಡುವುದು. ಹಾಗೆ ನಿಶ್ಚಯಿಸಿದಮೇಲೆ ವಿವಾಹವು ಜರುಗದನಂತರ ಗಂಡು ಮಗನು ಸತ್ತುಹೋದಲ್ಲಿ ಹೆಣ್ಣು ಮಗಳಿಗೆ ವೈಧವ್ಯ ಬಾಧೆಯಿಲ್ಲವು. ಮತ್ತೊಬ್ಬನಿಗೆ ಕೊಟ್ಟು ವಿವಾಹಮಾಡಬಹುದು. ಹೀಗೆ ನಿಶ್ಚಿತಾರ್ಥವನ್ನು ನಿಶ್ಚಯಿಸುವಲ್ಲಿ ವಧೂವರರನ್ನು ಕೇಳದೆಯೇ ಮಾಡುವರು. ಅವರಿಗೆ ತಿಳಿಯದಂತೆಯೇ ತಂದೆತಾಯಿಗಳು ನಿಶ್ಚಯಿಸುವರು. ನನಗೆ ಮೂರಾವರ್ತಿ ನಿಶ್ಚಿತಾರ್ಥವಾಯಿತು. ಅದರ ಆ ಕನ್ಯೆಯನ್ನು ನೋಡದೇನೇ ನಡೆಯಿತು. ಮೊದಲನೆಯದರ ನಿಶ್ಚಿತಾರ್ಥವಾದನಂತರ ವಿವಾಹವಾಗುವುದಕ್ಕೆ ಮುಂಚೆ ಆ ಕನ್ಯೆಯು ಸತ್ತುಹೋಯಿತು. ಎರಡನೆಯ ಬಾರಿ ಪುನಃ ನಿಶ್ಚಿತಾರ್ಥ ಜರುಗಿತು. ಆಗಲೂ ಹಾಗೆಯೇ ನಡೆಯಿತು. ಮೂರನೆಯವೇಳೆ ನನ್ನ ಏಳನೆಯ ವಯಸ್ಸಿನಲ್ಲಿ ನಿಶ್ಚಿತಾರ್ಥವು ಜರುಗಿದಹಾಗೆ ಜ್ಞಾಪಕವು. ಅದಕ್ಕೆ ಮೊದಲು ಜರುಗಿದ ನಿಶ್ಚಿತಾರ್ಥದ ವಿಷಯವನ್ನು ದೊಡ್ಡವನು ಹೇಳಿದುದರಿಂದ ಗೊತ್ತಾದುದರ ವಿನಹ ನನಗೇನೂ ಜ್ಞಾಪಕವಿಲ್ಲವು. ನನ್ನ ವಿವಾಹದ ಸಂಗತಿಯು ಮಾತ್ರ ನನಗೆ ಚೆನ್ನಾಗಿ ಜ್ಞಾಪಕವಿದೆ.

ನಾವು ಮೂವರು ಅಣ್ಣತಮ್ಮಂದಿರು. ನನ್ನ ದೊಡ್ಡಣ್ಣನಿಗೆ ಆಗಲೇ ಮದುವೆಯಾಗಿದ್ದಿತು. ನನ್ನ ಚಿಕ್ಕಣ್ಣನು ನನಗಿಂತಲೂ 2-3 ವರ್ಷ ಮಾತ್ರ ದೊಡ್ಡವನು. ನನ್ನ ಚಿಕ್ಕಪ್ಪನ ಮಗನೋ ದೊಡ್ಡಪ್ಪನ ಮಗನೋ ನನಗಿಂತಲೂ 1 ವರ್ಷ ದೊಡ್ಡವನು. ನನಗೂ, ನನ್ನ ಚಿಕ್ಕಣ್ಣನಿಗೂ, ನನ್ನ ಚಿಕ್ಕಪ್ಪ ದೊಡ್ಡಪ್ಪನ ಮಗನಿಗೂ ಒಂದೇ ಕಾಲದಲ್ಲಿ ಮದುವೆಮಾಡಲು ದೊಡ್ಡವರು ನಿಶ್ಚಯಿಸಿದರು. ಈ ವಿವಾಹಗಳನ್ನು ಜರುಗಿಸುವಲ್ಲಿ ಹಿರಿಯರು ತಮ್ಮ ಸದುಪಾಯವನ್ನು ಮಾತ್ರ ನೋಡಿಕೊಂಡರು. ಎರಡು ಮೂರು ಮದುವೆಗಳನ್ನು ಒಂದೇ ಆವರ್ತಿ ಮಾಡಿದರೆ ವೆಚ್ಚವು ಕಡಿಮೆಯಾಗುತ್ತದೆಂದು ಯೋಚಿಸಿದರೇ ಹೊರತು ವಧೂವರರನ್ನು ಕೇಳುವುದರ ಪ್ರಯೋಜನವನ್ನು ಮಾತ್ರ ಅವರು ಆಲೋಚಿಸಲಿಲ್ಲವು.

ಹಿಂದುಗಳಲ್ಲಿ ಮದುವೆ ಮನೆಯಲ್ಲಿ ಹಣದ ವಿನಹ ಮಾತಿಲ್ಲವು. ಮದುವೆ ಹೆಣ್ಣಿನವರೂ ಗಂಡಿನವರೂ ಸ್ವಲ್ಪ ಹೊಟ್ಟೆಗೆ ಮದುವೆ ಸಮಯದಲ್ಲೇ ಹಣವನ್ನು ಅಲಂಕರಿಸಿಕೊಳ್ಳುವರು. ಕೆಲವು ತಿಂಗಳ ಮುಂಚಿತವಾಗಿ ಮದುವೆಯ ಕೆಲಸಕ್ಕಾರಂಭಿಸುವರು. ಇತರ ಕೆಲಸ [illegible] ಮಾಡುವರು. ಎಲ್ಲೀಷ್ಟವಾಗಿ ಧನವ್ಯಯ ಮಾಡುವರು. ಬಟ್ಟೆಗೂ ನಗನಾಣ್ಯಗಳಿಗೂ ಭಕ್ಷ್ಯಭೋಜ್ಯಾದಿಗಳಿಗೂ ಸಾವಿರಾರು ರೂಪಾಯಿಗಳನ್ನು ಖರ್ಚುಮಾಡುವರು, ಊಟ ಉಪಚಾರಾದಿಗಳಲ್ಲಿ ಒಬ್ಬರೊಬ್ಬರನ್ನು ಮೀರಿಸಲು ಸ್ಪರ್ಧಿಸುವರು. ಸ್ತ್ರೀಯರಿಗೆ ಕಂಠಮಾಧುರ್ಯವಿಲ್ಲದಿದ್ದರೂ ಕಾಲನಿಯಮವಿಲ್ಲದೆ ಮದುವೆಯ ಹಾಡುಗಳನ್ನು ಹೇಳುತ್ತಲೇ ಇರುವರು. ನೆರೆಯವರಿಗೆ ಬಹಳ ತೊಂದರೆಯಾದಾಗ್ಯೂ ನಾಳೆ ತಮ್ಮ ಮನೆಯಲ್ಲೂ ಶುಭಕಾರ್ಯವು ಜರುಗದೇ ಇರುವುದಿಲ್ಲವೆಂದು ಅವರು ಸಹಿಸಿಕೊಂಡು ಸುಮ್ಮನೆ ಇರುವರು.

ಮೂವರಿಗೂ ಮೂರುಸಾರಿ ಮದುವೆಮಾಡಿ ಕಷ್ಟವನ್ನನುಭವಿಸುವುದಕ್ಕೆ ಬದಲು ಒಂದೇಕಾಲದಲ್ಲಿ ಮೂರು ಮದುವೆಯನ್ನೂ ಮಾಡುವುದು ಒಳ್ಳೆಯದೆಂದು ನಮ್ಮ ಹಿರಿಯರು ನಿಶ್ಚಯಿಸಿದರು. ಹಾಗೆ ಮಾಡುವುದರಿಂದ ಖರ್ಚು ತಗ್ಗುವುದು; ವೈಭವವು ಹೆಚ್ಚುವುದು. ಮೂರು ಮದುವೆಯನ್ನು ಬೇರೆ ಬೇರೆ ಮಾಡಿದಲ್ಲಿ ಮೂರರಿಂದಲೂ ಮೂರು ಸಾವಿರದ ಪ್ರಕಾರ ಒಂಭತ್ತು ಸಾವಿರ ಖರ್ಚಾಗುವುದು. ಒಟ್ಟಿಗೆ ಮಾಡಿದಲ್ಲಿ 5—6 ಸಾವಿರ ರೂಪಾಯಿ ಖರ್ಚಿನಿಂದ ಮುಗಿದುಹೋಗುವುದು, ಮತ್ತು ಮೂರು ಸಾವಿರ ರೂಪಾಯಿ ಖರ್ಚು ಕಡಿಮೆಯಾಗುವುದು. ಮದುವೆಯು ಬಹಳ ಅಟ್ಟಹಾಸದಿಂದಾಯಿತೆಂದು ಊರಿನವರೆಲ್ಲಾ ಆಡಿಕೊಳ್ಳುವರು. ನನ್ನ ತಂದೆಯೂ, ನನ್ನ ಚಿಕ್ಕಪ್ಪನೂ ವೃದ್ಧರಾಗಿದ್ದರು. ನಮ್ಮಗಳ ಮದುವೆಯೇ ನಮ್ಮ ಮನೆಯಲ್ಲಿ ಕಡೆಯ ಶುಭಕಾರ್ಯವು. ಆದಕಾರಣ ಮೂರು ಮದುವೆಗಳನ್ನೂ ಮಹಾ ವೈಭವದಿಂದ ಏಕಕಾಲದಲ್ಲಿ ಜರುಗಿಸಲು ನಿಶ್ಚಯಿಸಿದರು. ಕೆಲಂತಕಾಲ ಮುಂದಾಗಿಯೇ ಮದುವೆ ಕೆಲಸಕ್ಕಾರಂಭವಾಯಿತು. ಈ ಕೆಲಸಗಳನ್ನು ನೋಡಿ ನಾನು ಮದುವೆಯ ಸಂಗತಿಯನ್ನು ತಿಳಿದೆನು. ಮದುವೆಯೆಂದರೆ ಹೊಸ ಜರತಾರಿ ಬಟ್ಟೆಯನ್ನುಟ್ಟುಕೊಳ್ಳುವುದು, ವಾದ್ಯವಾಗುವುದು, ಉತ್ಸವವಾಗುವುದು, ರುಚಿಯುಳ್ಳ ಪದಾರ್ಥಗಳು ಮಾಡಲ್ಪಡುವುವು, ಆಡಿಕೊಂಡಿರಲು ಹೊಸ ಹುಡುಗಿಯು ದೊರಕುವಳು ಎಂದು ಮಾತ್ರವೇ ನನಗೆ ಆಗ ತಿಳಿದಿದ್ದಿತೇ ವಿನಹಾ ಮತ್ತೇನೂ ತಿಳಿದಿರಲಿಲ್ಲವು. ಆ ವಯಸ್ಸಿನಲ್ಲಿ ಸ್ತ್ರೀಸಂಭೋಗಾಪೇಕ್ಷೆಯು ಹುಟ್ಟಿರಲಿಲ್ಲವು. ಅನಂತರ 5-6 ವರ್ಷಗಳು ಕಳೆದ ಮೇಲೆ ನನ್ನ ವಿಕಾರವು ಅಂಕುರಿಸಿತು. ನಾನು ಹೇಳಬೇಕಾದ ಮುಖ್ಯವಿಷಯವನ್ನು ಮುಂದಿಡುವೆ. ಇವೆಲ್ಲವೂ ಅನಾಂತರ ಸಂಗತಿಯೇ. ನನ್ನನ್ನೂ ನನ್ನ ಚಿಕ್ಕಣ್ಣನನ್ನೂ ರಾಜಕೋಟೆಯಿಂದ ಪೋರ್ಬಂದರಿಗೆ ಕರೆದುಕೊಂಡುಹೋದರು.

ನನ್ನ ತಂದೆಯು ದಿವಾನರಾಗಿದ್ದರು. ಅವರು ಕೂಡ ರಾಜಸೇವಕರು. ಆದಕಾರಣ ರಾಜಾನುಗ್ರಹಕ್ಕೆ ಪಾತ್ರರಾಗಿದ್ದುದರಿಂದಲೇ ರಾಜನು ನನ್ನ ತಂದೆಯನ್ನು ಕ್ಷಣಮಾತ್ರವೂ ಬಿಟ್ಟಿರುತ್ತಿರಲಿಲ್ಲ. ಆದಕಾರಣ ಮಹೋತ್ಸವದಿವಸದವರೆಗೆ ನನ್ನ ತಂದೆಯು ಬರಲಿಕ್ಕೆ ವ್ಯವಧಾನವಿಲ್ಲದಿದ್ದಿತು. ರಾಜಕೋಟೆಯಿಂದ ಪೋರ್ಬಂದರಿಗೆ ಬಂಡಿಯಮೇಲೆ ಸಾಮಾನ್ಯವಾಗಿ 5 ದಿವಸದ ಪ್ರಯಾಣವಾಗುವುದು. ಆದರೂ ಟಪ್ಪಾಲು ಕುದುರೆಗಳನ್ನಿಟ್ಟುಕೊಂಡಿದ್ದುದರಿಂದ ಮೂರುದಿವಸಗಳೊಳಗಾಗಿ ಬರಲು ಅನುಕೂಲವಾದರೂ ಮೂರನೇ [illegible] ಬಂಡಿಯು ಮಗುಚಿಕೊಂಡು ನನ್ನ ತಂದೆಗೆ ಬಲವಾದ ಪೆಟ್ಟುಬಿದ್ದಿತು. ಅಲ್ಲಿಂದ ಹೇಗೋ ಮದುವೆಯ ಮನೆಗೆ ಬಂದರು. ಇದರಿಂದ ಅವರಿಗೆ [illegible] ಉತ್ಸಾಹವು ಕೊಂಚ ಕಡಿಮೆಯಾಯಿತು. [illegible] ಮದುವೆಯು ಮಾತ್ರ ನಡೆಯೇ ತೀರಬೇಕಿದ್ದುದು ನಿಶ್ಚಯವಾಗಿದ್ದಿತು. [illegible] ನನ್ನ ತಂದೆಯವರ ದೇಹದಲ್ಲಿ ತಗುಲಿದ್ದ ಬಾಧೆಯ ವಿಷಯವನ್ನು ನಾನು ಸಂಪೂರ್ಣವಾಗಿ ಮರೆತು ವಿವಾಹ ಸಂತೋಷ ಸಾಗರದಲ್ಲಿ ಮುಳುಗಿಹೋಗಿದ್ದೆನು.

ತಾಯಿತಂದೆಗಳಲ್ಲಿ ನನಗೆ ಬಹಳ ಭಕ್ತಿ ಇದ್ದಿತಾದರೂ ಮನುಷ್ಯ ಸಹಜ ಸಂತೋಷ [illegible] ವಿಕಾರಗಳನ್ನು ಯಾರು ನಿಗ್ರಹಿಸಬಲ್ಲರು? ತಾಯಿತಂದೆಗಳ ಸೇವೆಗಾಗಿ ಎಲ್ಲ ಸಂತೋಷವನ್ನೂ ಬಿಟ್ಟುಬಿಡುವುದು ಉತ್ತಮವೆಂಬ ವಿಷಯವನ್ನು ನಾನು ಆಗ ಗ್ರಹಿಸಲಿಲ್ಲವು. ಆದಕಾರಣ ನನ್ನ ಭೋಗಲಾಲಸತ್ವಕ್ಕಾಗಿ ನನ್ನನ್ನು ಶಿಕ್ಷಿಸುವುದಕ್ಕಾಗಿಯೇ ಮತ್ತೊಂದು ವಿಷಯವು ಕೂಡ ಜರುಗಿತು. ಅದು ಆಗಲಿಂದಲೂ ನನ್ನ ಮನಸ್ಸಿನಲ್ಲಿ ಕುಟುಕುತ್ತಲೇ ಇದ್ದಿತು. ಅದನ್ನು ಮುಂದೆ ವಿವರಿಸುವೆನು. ಇಂದ್ರಿಯನಿಗ್ರಹಶಕ್ತಿಯುಳ್ಳವನ ವಸ್ತುಗಳನ್ನು ಮಾತ್ರ ಪರಿತ್ಯಜಿಸುವುದಕ್ಕಾಗಿ ಸುಸ್ಥಿರವಾದ ತ್ಯಾಗವು ಹುಟ್ಟದು. ಇಂದ್ರಿಯಗಳ ಸಾಮರ್ಥ್ಯಕ್ಕೆ ಒಳಪಡದವನು ತ್ಯಜಿಸಿದ ವಸ್ತುಗಳನ್ನೇ ಪುನಃ ಸ್ವೀಕರಿಸುವನು. ಆದಕಾರಣ ಇಂದ್ರಿಯಗಳನ್ನೂ ಮನಸ್ಸನ್ನೂ ನಿಗ್ರಹಿಸಬೇಕಲ್ಲದೆ, ತಾತ್ಕಾಲಿಕವಾದ ವಿಷಯಭೋಗಗಳನ್ನು ಪರಿತ್ಯಜಿಸುವುದರಿಂದ ಶಾಶ್ವತ ಲಾಭವುಂಟಾಗುವುದೆಂದು ನಿಷ್ಕುಳಾನಂದರು ಒಂದು ಹಾಡನ್ನು ಹೇಳಿರುವರು. ಆ ಹಾಡನ್ನು ನಾನು ಹೇಳುವಾಗಲೂ ಕೇಳುವಾಗಲೂ ಸಂತಾಪಕರವಾದ ನನ್ನ ವಿಷಯವು ನನ್ನ ಸ್ಮರಣೆಗೆ ಬಂದು ಲಜ್ಜಿತನನ್ನಾಗಿ ಮಾಡುತ್ತಲೇ ಇದ್ದಿತು.

ಪೆಟ್ಟು ಬಿದ್ದಿದ್ದರೂ ಲಕ್ಷಿಸದೆ ನನ್ನ ತಂದೆಯು ಧೈರ್ಯದಿಂದ ವಿವಾಹಮಹೋತ್ಸವದಲ್ಲಿ ಸಂಪೂರ್ಣ ಭಾಗಿಯಾಗಿದ್ದರು. ಆ ಮದುವೆ ಸಮಯದಲ್ಲಿ ಅವರು ಮಾಡಿದ ಕೆಲಸಗಳೆಲ್ಲವೂ ಈಗಲೂ ನನ್ನ ಕಣ್ಣುಗಳಲ್ಲಿ ಕಟ್ಟಿದಂತಿದೆ. ಸಣ್ಣ ವಯಸ್ಸಿನಲ್ಲಿ ನನಗೆ ಮದುವೆ ಮಾಡಿದ್ದಕ್ಕಾಗಿ ನನ್ನ ತಂದೆಯನ್ನು ನಾನು ದೊಡ್ಡವನಾದ ಮೇಲೆ ನಿಂದಿಸುತ್ತೇನೆಂಬ ಜ್ಞಾನವು ನನಗೆ ಆ ಮದುವೆಯ ದಿವಸ ಲೇಶಮಾತ್ರವೂ ಇರಲಿಲ್ಲ. ಆಗ ಎಲ್ಲವೂ ಸರಿಯಾಗಿತ್ತೆಂದೂ, ನ್ಯಾಯವಾಗಿದ್ದಿತೆಂದೂ ನನಗೆ ತೋರಿ ಬಹಳ ಸಂತೋಷದಿಂದಿದ್ದೆನು. [illegible] ಆ ದಿವಸ ನಾನು ಎಲ್ಲಿ ಕುಳಿತಿದ್ದೆನು, ಸಪ್ತಪದಿ ಹೇಗೆ ಜರುಗಿತು, ನಾನೂ ನನ್ನ ಧರ್ಮಪತ್ನಿಯೂ ಒಬ್ಬರ ಬಾಯಿಗೊಬ್ಬರು ಹೇಗೆ ಕಂಸಾರವನ್ನು ಹಾಕಿಕೊಳ್ಳುತ್ತಿದ್ದೆವು ಇತ್ಯಾದಿ ವಿಷಯಗಳು ನನಗೆ ಚೆನ್ನಾಗಿ ಜ್ಞಾಪಕವಿವೆ. ಆ ಮೊದಲಿನ ದಿವಸ ರಾತ್ರಿಯೇ ಬಾಲ್ಯವಯಸ್ಸಿನವರಾದ ನಮ್ಮಿಬ್ಬರನ್ನೂ ಸಂಸಾರಸಾಗರದಲ್ಲಿ ಹಾಕಿಬಿಟ್ಟರು. ನನ್ನ ದೊಡ್ಡ ಅತ್ತಿಗೆಯು, ಆ ರಾತ್ರಿ ನಾನು ಮಾಡಬೇಕಾದುದನ್ನು ನನಗೆ ಚೆನ್ನಾಗಿ ಬೋಧಿಸಿದಳು. ನನ್ನ ಹೆಂಡತಿಗೆ ಯಾರು ಬೋಧಿಸಿದರೋ ನನಗೆ ತಿಳಿಯದು. ನಾನು ಆ ವಿಷಯವಾಗಿ ನನ್ನ ಹೆಂಡತಿಯನ್ನು ಈವರೆಗೂ ಪ್ರಶ್ನಿಸಲಿಲ್ಲ, ಮುಂದಾದರೂ ಕೇಳುವುದಿಲ್ಲ. ಆ ರಾತ್ರಿ ನಮ್ಮಿಬ್ಬರಿಗೂ ನಾಚಿಕೆಯು ಬಹಳವಾಗಿದ್ದಿತು. ಎಷ್ಟು ಸಂಬೋಧಿಸಿದರೂ ಕೂಡ ಆ ಹೊಸ ಹುಡುಗಿಯೊಡನೆ ಚೆನ್ನಾಗಿ ಮಾತನಾಡಲು ನನಗೆ ಬಹಳ ನಾಚಿಕೆಯುಂಟಾಗಿದ್ದಿತು. ಆದರೆ ಈ ವಿಷಯದಲ್ಲಿ ಒಬ್ಬರು ಕಲಿಸಿಕೊಡಬೇಕಾದ ಕಾರ್ಯವೇನೂ ಇಲ್ಲ. ಪೂರ್ವಜನ್ಮವಾಸನೆಯಿಂದ ಎಲ್ಲವೂ ಸಹಜವಾಗುವುದು. ಕ್ರಮೇಣ ನಮ್ಮಿಬ್ಬರಿಗೂ ನಾಚಿಕೆಯು ಬಿಟ್ಟುಹೋಯಿತು. ಧಾರಾಳವಾಗಿ ಮಾತನಾಡುವವರಾದೆವು. ನಾವಿಬ್ಬರೂ ಸಮವಯಸ್ಸಿನವರೇ ಆದರೂ ನಾನು ಹೆಂಡತಿಯ ಮೇಲೆ ನನ್ನ ಅಧಿಕಾರವನ್ನು ನಡೆಸಲು ತೊಡಗಿದೆನು. ಈ ವಿಚಾರವಾಗಿ ಮುಂದೆ ಪ್ರಸ್ತಾಪಿಸುವೆನು.

ಸ್ವೈರ್. (ಯಂಗ್ ಇಂಡಿಯಾ.)

ಪಾಡಿನಾಲ್ಕುನಾಡು ತಾಲೋಕಿನ [illegible] ನಿರ್ಣಯಗಳು

ಪಾಡಿನಾಲ್ಕುನಾಡು ತಾಲೋಕಿನ [illegible] ಸ್ವಾಗತದ ವಿಚಾರದ ಬಗ್ಗೆ ತಾ. 27—2—25ರಲ್ಲಿ ದಿ. ಚಾಲೀರ ಅಯ್ಯಪ್ಪನವರ ಅಧ್ಯಕ್ಷತೆಯಲ್ಲಿ ನಾಪೋಕ್ಲಿನಲ್ಲಿ ನಡೆದ ಮೀಟಿಂಗಿನ ಪ್ರೊಸೀಡಿಂಗ್ಸ್—

1. ಈ ದಿನ ಇಗ್ಗುತಪ್ಪ ದೇವರ ಹಬ್ಬವಾದ್ದರಿಂದ ನಾಲ್ಕುನಾಡಿನ ಕೆಲವು ಜನರಿಗೆ ಈ ಮೀಟಿಂಗಿಗೆ ಬರಲು ಅನುಕೂಲವಿಲ್ಲದಕ್ಕಾಗಿ ಅಲ್ಲಿಗೆ ಪ್ರತ್ಯೇಕ ಈ ವಿಷಯ [illegible] ಮೀಟಿಂಗ್ ನಡೆಯಬೇಕೆಂದು [illegible] ತಾಲೋಕಿನವರಿಗೆ [illegible] ಮಾಡಲಾಯಿತು.

2. ಸ್ವಾಗತ ಕಮಿಟಿಯ ಅಧ್ಯಕ್ಷರಾಗಿ ದಿ. [illegible] ರ ಗಣಪತಿಯವರು [illegible].

3. ಈ ಕೆಳಗಿನ ಸಬ್ ಕಮಿಟಿಯವರನ್ನು [illegible] ನಾಡಿಗೆ ಹಣ್ಣುಗಳನ್ನು [illegible] ರಿಂದ [illegible].

(1) [illegible] —ದಿ. ರಾ. ಗಣಪತಿ [illegible] ಅಯ್ಯಪ್ಪನವರು, [illegible] ಅಯ್ಯಪ್ಪನವರು, [illegible] (ಸೆಕ್ರೆಟರಿ).

(2) ಕಡಿಯತ್ [illegible] —ದಿ. ರಾ. [illegible] ಅಯ್ಯಪ್ಪನವರು, [illegible] ಅಯ್ಯಪ್ಪನವರು, [illegible] ಅಯ್ಯಪ್ಪನವರು, [illegible] ಮುತ್ತಯ್ಯನವರು (ಸೆಕ್ರೆಟರಿ).

(3) [illegible] —ದಿ. ರಾ. [illegible] ನವರು, [illegible] ನವರು, [illegible] ಮುತ್ತಯ್ಯನವರು, [illegible] ನವರು, (ಸೆಕ್ರೆಟರಿ).

(4) [illegible] —ದಿ. ರಾ. [illegible] ಗಣಪತಿಯವರು, ಚಾಲೀರ ಅಯ್ಯಪ್ಪನವರು, [illegible] ಅಯ್ಯಪ್ಪನವರು, [illegible] ನವರು, [illegible] ದೇವಯ್ಯನವರು (ಸೆಕ್ರೆಟರಿ).

(5) [illegible] —ದಿ. ರಾ. [illegible] ನವರು, [illegible] ನವರು, [illegible] ನವರು, (ಸೆಕ್ರೆಟರಿ) [illegible] ದೇವಯ್ಯನವರು [illegible] ಸೆಕ್ರೆಟರಿ).

4. [illegible] ಸೆಕ್ರೆಟರಿಗಳು [illegible] ನನ್ನು, [illegible] ಗಳನ್ನು, [illegible] ಮಾಡತಕ್ಕದ್ದು [illegible].

5. [illegible] ಸೆಕ್ರೆಟರಿಯು [illegible] ಕಮಿಟಿಯವರನ್ನು [illegible] ವಿಷಯ [illegible] ಮೀಟಿಂಗ್ [illegible].

6. [illegible] ಮೀಟಿಂಗ್ [illegible] 1 [illegible] ಕಲ್ಲಿ [illegible] ಅಧಿಕಾರಿಗಳಿಗೆ [illegible] ಸೆಕ್ರೆಟರಿಯವರನ್ನು [illegible].

7. ಈ [illegible] ಸ್ವಾಗತಕ್ಕೆ [illegible] ತಯಾರು [illegible] ಸೆಕ್ರೆಟರಿಯವರು [illegible] ನಿರ್ಣಯವಾಯಿತು.

8. ಈ ಕೆಳಗಿನ [illegible] ನಾಡಿನಲ್ಲಿ [illegible] ಮೀಟಿಂಗ್ [illegible].

ನಾಲ್ಕುನಾಡು—[illegible]—ನೇ [illegible]

ಕಡಿಯತ್ತುನಾಡು—[illegible]—ನೇ [illegible]

[illegible]—[illegible] 14 ನೇ [illegible]

[illegible] 15 ನೇ [illegible]

ಕುಯ್ಯಂಗೇರಿನಾಡು—[illegible] 16 ನೇ [illegible]

9. ಈ ಮೀಟಿಂಗುಗಳ [illegible] ಮೀಟಿಂಗನ್ನು [illegible].

10. [illegible] ಈ ಕೆಳಗೆ [illegible] ವ [illegible] ಪಾಸಾಯಿತು. [illegible] ಪತ್ರಿಕೆಯಲ್ಲಿ ಪ್ರಕಟಿಸಬೇಕೆಂದು [illegible] ಮಾಡಿತು.

[illegible]

ಪಿ. ಕೇಟೀರ ಚಿಣ್ಣಪ್ಪನವರು. (ಸ)

ಪಿ. ಚಾಲೀರ ಅಯ್ಯಪ್ಪನವರು. (ಸ)

	ಅಕ್ಕಿ ಸೇರು.
ಮೆ. ಬಲ್ಲಂಡ ಕುಂಞಪ್ಪನವರು	50
,, ನೆರವಂಡ ಅಚ್ಚಯ್ಯನವರು	50
,, ಮಕ್ಕಿ ಸುಬ್ಬಯ್ಯನವರು	50
,, ಕಲ್ಲುಮಾಡಂಡ ಬೆಳ್ಯಪ್ಪನವರು	30
,, ಕೋಡವಂಡ ಸಂಜಪ್ಪನವರು	25
,, ಬಂಗಂಡ ಕುಟ್ಟಪ್ಪನವರು	25
,, ತೇಲಪಂಡ ಪೂಣಚ್ಚಯ್ಯನವರು	25
,, ಬೆಳಿಯಟ್ಟಿರ ಅಚ್ಚಯ್ಯನವರು	20
,, ಬಲ್ಯಾಟಂಡ ಮಾಚಯ್ಯನವರು	20
,, ಕುಟ್ಟಂಚೆಟ್ಟಿರ ಮುತ್ತಣ್ಣನವರು	20
,, ಬೇಕಿರಂಡ ಅಪ್ಪಯ್ಯನವರು	20
,, ಚಾರೀರ ಪೊನ್ನಪ್ಪನವರು	20
,, ಮಕ್ಕಿ ರಾಮಯ್ಯನವರು	20
,, ಕೋಟಿರ ಕುಂಞಪ್ಪನವರು	20
,, ಪಟ್ಟಚೆರವಂಡ ಬೆಳ್ಯಪ್ಪನವರು	20
,, ನಾಳಿಯಂಡ ಸಂಜಪ್ಪನವರು	20
,, ಬಲ್ಲಂಡ ಮುತ್ತಣ್ಣನವರು	20
,, ಕುಟ್ಟಂಚೆಟ್ಟಿರ ಪೊಣ್ಣಪ್ಪನವರು	20
,, ನಾಯಕಂಡ ಬೆಳ್ಯಪ್ಪನವರು	15
ಪೊಂಗಂಡ ಅಪ್ಪಚ್ಚನವರು	15
,, ಪಾಡೆಯಂಡ ಐಯ್ಯಪ್ಪನವರು	10
,, ಪಟ್ಟಚೆರವಂಡ ಪೊನ್ನಪ್ಪನವರು	10
,, ಚಾರೀರ ಪೂಣಚ್ಚಯ್ಯನವರು	10
,, ಚೆರಿಯಪಾಟಂಡ ಕಾರ್ಯಪ್ಪನವರು	10
,, ನೆರವಂಡ ಪಟೇಲ್ ಸಂಜಪ್ಪನವರು	10
,, ಚೆಟ್ಟಿಮಾಡ ಮುದ್ದಯ್ಯನವರು	10
,, ಮೊದರಂಡ ಮಾದಪ್ಪನವರು	10
,, ಬೇಂಡ ಬಂಗಪ್ಪನವರು	10
,, ಕಿತ್ತೀರಿಯಂಡ ಮುದ್ದಯ್ಯನವರು	10
,, ಪಾಡೆಯಂಡ ಯು. ಬೆಳ್ಯಪ್ಪನವರು	10
ಒಟ್ಟು ಐನೂರು ಸೇರು ಅಕ್ಕಿ	500

	ರೂ. ಆ. ಪೈ.
ಮೆ. ಸಿ. ಎಸ್. ವೆಂಕಪ್ಪಯ್ಯನವರು	25—0—0
,, ಪಿ. ಶ್ರೀಪತಿ ರಾಯರು	20—0—0
,, ಪಿದ್ದಾಟಂಡ ಮಾದಪ್ಪನವರು	10—0—0
,, ಕಲ್ಲೀರನ ಕಾರ್ಯಪ್ಪನವರು	10—0—0
,, ಕುಲ್ಲೆಟ್ಟಿರ ಗಣಪತಿಯವರು	5—0—0
,, ಆರಿಯಂಡ ಸುಬ್ಬಯ್ಯನವರು	5—0—0
,, ಕೋಡಿರ ತಮ್ಮಯ್ಯನವರು	5—0—0
,, ಕಂಗಣಂಡ ಬಂಗಪ್ಪನವರು	5—0—0
,, ಪಂದ್ಯಂಡ ಬೆಳ್ಯಪ್ಪನವರು	5—0—0
,, ಪಟ್ಟಚೆರವಂಡ ಪೊನ್ನಪ್ಪನವರು	5—0—0
,, ಬಲ್ಲಂಡ ಕುಂಞಪ್ಪನವರು	4—0—0
,, ಕೋಡಿರ ಗಣಪತಿಯವರು	3—0—0
,, ಪೊನ್ನಚಂಡ ಮುದ್ದಪ್ಪನವರು	3—0—0
,, ಅಜಿಮಡ ಅಚ್ಚಯ್ಯನವರು	2—0—0
,, ಚೆಪ್ಪುಡೀರಿಯಂಡ ಕಾರ್ಯಪ್ಪನವರು	2—0—0
ಬೆಳ್ಯಪಂಡ ಮಂದಪ್ಪನವರು	2—0—0
,, ಕಂಗಣಂಡ ಬೆಳ್ಯಪ್ಪನವರು	1—0—0
ಒಟ್ಟು.	112—0—0

ಸಿ. ಅಪ್ಪಯ್ಯ.
(ಅಧ್ಯಕ್ಷರು).

(2ನೇ ಪುಟದಿಂದ ಮುಂದುವರಿದುದು)

ಭಾವನೆಯೇ. ಈಗ ಬೃಂದಾವನದಲ್ಲಿ ಕೊಳಲನ್ನೂದುವ ಕೃಷ್ಣನನ್ನೇ ನೋಡಿಕೊಂಡು ಕುಳಿತರೆ ನಡೆಯುವುದಿಲ್ಲ. ಅದರಿಂದ ದೇಶದ ಉದ್ಧಾರವಾಗುವುದಿಲ್ಲ. ಈಗಿನ ಕಾಲಕ್ಕೆ ಬೇಕಾದದ್ದು, ಗೀತಾ ರೂಪದಲ್ಲಿ ಸಿಂಹನಾದ ಮಾಡುತ್ತಿರುವ ಶ್ರೀಕೃಷ್ಣನ ಪೂಜೆ! ಧನುರ್ಧಾರಿಯಾದ ರಾಮ, ಮಹಾವೀರ, ಕಾಳೀಮಾತೆ ಇವರ ಪೂಜೆ! ಹಾಗಾದರೆ ಜನರು ವಿಶೇಷವಾಗಿ ಉದ್ಯೋಗಶೀಲರೂ ಆಗಿ, ಕರ್ಮಶೀಲರೂ ಶಕ್ತಿವಂತರಾಗಿ ಎದ್ದು ನಿಲ್ಲುವರು. ನಾನು ಚನ್ನಾಗಿ ನೋಡಿಬಿಟ್ಟಿದ್ದೇನೆ. ಈ ದೇಶದಲ್ಲಿ ಈಗ ಯಾರು 'ಧರ್ಮ ಧರ್ಮ' ಎನ್ನುತ್ತಿದ್ದಾರೆಯೋ ಅವರಲ್ಲಿ ಅನೇಕರು full of morbidity cracked brains ಅಥವಾ lunatics (ದುರ್ಬಲರಾದ ರೋಗಿಗಳು, ಹುಳುಕು ಮಿದುಳಿನವರು ಅಥವಾ ವಿಚಾರ ಶೂನ್ಯರಾದ ಹುಂಬರು) ಈಗ ನಮಗೆ ರಜೋಗುಣವು ಉದ್ರೇಕವಾದ ಹೊರತು ನಿಮಗೆ ಈಹವೂ ಇಲ್ಲ, ಪರವೂ ಇಲ್ಲ. ದೇಶವು ಘೋರವಾದ ತಮೋಗುಣದಿಂದ ಮುಚ್ಚಿದೆ. ಫಲವಲ್ಲಿಯೂ ಹಾಗೆ ಆಗುತ್ತದೆ. ಇಹಜೀವನದಲ್ಲಿ ದಾಸತ್ವ, ಪರಲೋಕದಲ್ಲಿ ನರಕ!

ಟೆರಿಟೋರಿಯಲ್ ಬೆಟಾಲಿಯ.

1926ನೇ ಇಸವಿ 14/3ರ ಬೆಟಾಲಿಯನ್ ಮದ್ರಾಸು ರೆಜಿಮೆಂಟಿನ (ಐ.ಟಿ.ಎಫ್.) ತರಬೇತಿಗೆ ಜಮಾಯಿಸುವದನ್ನು ಕುರಿತು ಇಸ್ತಿಹಾರ್ ನಾಮೆ:—

(ಡಿಸ್ಟ್ರಿಕ್ಟ್ ಸಿವಿಲ್ ಉದ್ಯೋಗಸ್ಥರೊಳಗೆ ಪ್ರಚುರಪಡಿಸಲಿಕ್ಕೆ)

14/3 ರ ಬೆಟಾಲಿಯನ್ (ಇಂಡಿಯನ್ ಟೆರಿಟೋರಿಯಲ್ ಫೋರ್ಸ್) ಮದರಾಸ್ ರೆಜಿಮೆಂಟಿನ ತರಬೇತು ಮಡಿಕೇರಿಯಲ್ಲಿ ಈ ಕೆಳಗೆ ಸಮೂದಿಸಿದ ಮೇರೆ ಪ್ರಾರಂಭಿಸೋಣಾಗುವದು.

I (1) ಪ್ರತ್ಯೇಕ ಐ. ಟಿ. ಎಫ್. ಆಫೀಸರುಗಳ ಮತ್ತು ಹವಾಲ್ದಾರರ ತರಬೇತು 1926ನೇ ಇಸವಿ ಮಾರ್ಚಿ ತಾರೀಕು 12ರಿಂದ ಏಪ್ರಿಲ್ 8ರ ವರಿವಿಗೆ ನಡೆಯುವುದು. (ಆಫೀಸರುಗಳು ಮತ್ತು ನಾನ್ ಕಮಿಶನ್ಡ್ ಆಫೀಸರುಗಳು ಮಾರ್ಚ ತಾರೀಕು 12ನೇ ದಿನ ಪ್ರಾತಃಕಾಲ 8ಘಂಟೆಗೆ ಪೋಲೀಸ್ ಸ್ಕೂಲ್ ಲೈನುಗಳಲ್ಲಿ ಹಾಜರಾಗ ತಕ್ಕದ್ದು).

(2) ರಿಕ್ರೂಟುಗಳ ಪ್ರಾರಂಭದ ತರಬೇತು 1926 ನೇ ಇಸವಿ ಮಾರ್ಚಿ 12ರಿಂದ ಏಪ್ರಿಲ್ 8ರ ವರೆಗೆ ನಡೆಯುವುದು. (ರಿಕ್ರೂಟುಗಳು ತಾರೀಕು 12—3—26ರಲ್ಲಿ ಪ್ರಾತಃಕಾಲ 8ಘಂಟೆಗೆ ಪೋಲೀಸ್ ಸ್ಕೂಲ್ ಲೈನುಗಳಲ್ಲಿ ಹಾಜರಾಗತಕ್ಕದ್ದು).

(3) ಕಾಲಕಾಲಕ್ಕಾಗಬೇಕಾದ ತರಬೇತು (ಬೆಟಾಲಿಯನ್) ಕಳೆದ ವರ್ಷ ತರಬೇತು ಹೊಂದಿದ ಎಲ್ಲಾ ದರ್ಜೆಯವರ ತರಬೇತು 1926ನೇ ಇಸವಿ ಏಪ್ರಿಲ್ 9ರಿಂದ ಮೆ. 6ರ ವರೆಗೆ ನಡೆಯುವುದು. (ಎಲ್ಲಾ ದರ್ಜೆಯವರು ಏಪ್ರಿಲ್ ತಾರೀಕು 9ರಲ್ಲಿ ಪ್ರಾತಃಕಾಲ 8ಘಂಟೆಗೆ ಸೆಂಟ್ರಲ್ ಹೈಸ್ಕೂಲಿನಲ್ಲಿ ಹಾಜರಾಗ ತಕ್ಕದ್ದು).

II. ಯಾರಾದರೂ ಹಾಜರಾಗಲು ತಪ್ಪಿದಲ್ಲಿ ಅಂಥಾವರನ್ನು ದಂಡಿಸಿ ನ್ಯಾಯ ಸಭೆಯ ಅಥವಾ ಕ್ರಿಮಿನಲ್ ಕೋರ್ಟಿನ ವಿಚಾರಣೆಗೆ ಗುರಿಮಾಡಲಾದೀತು.

ಮಡಿಕೇರಿ ... ಯಫ್. ಹೇವಿಲ್ಯಾನ್.
ತಾ. 27—3—26. ಮೇಜರ್.

ನೋಟೀಸು,

ಶ್ರೀಮಂಗಲನಾಡು ಬಾಡಗಗ್ರಾಮ ವಸ್ತಿ ರೂಪ ಮಲಚೀರ ಬೆಳ್ಯಪ್ಪನವರ ಹೆಸರಿನಲ್ಲಿ ಜಮಾಬಂದಿ ನಡೆಯುತ್ತಿರುವ ಜೂರು ಕಾಡುಯೆಂಬ 48ಬಟ್ಟಿ ಭೂಮಿ, 28ಏಕರೆ ಕಾಫಿಗೆ ಲಾಯಕಾದ ಕಾಡು 1000ರೂಪಾಯಿ ಕ್ರಯ ಬರುವ ಒಂದು ಮಂಜಿನ ಮನೆ ಇವಿಷ್ಟು 4500ರೂಪಾಯಿಗಳಿಗೆ ಸಿದ್ಧ ಕ್ರಯಕ್ಕೆ ಮಾರಾಟಕ್ಕೆ ಇವೆ. ನೀರಾವರಿ ಭೂಮಿ, ರಸ್ತೆಬಾಜು, ಒಳ್ಳೆ ಮೆಣಸು, ಒಂಜರು ಕಾಫಿ, ತೆಂಗು, ಅಡಿಕೆ, ಬಾಳೆ, ಕಿತ್ತಳೆ ಹಣ್ಣಿನ ಮರಗಳು, ಹೈನಕೋವು, ಒಳ್ಳೇ ಹುಲಸಿನ ತೋಪುಗಳು ಸಹ ಇವೆ.

ಮಾರುವ ಕಾರಣ. 1. ಇದರ ಮೇಲೆ ಸ್ವಲ್ಪ ಸಾಲವಿದೆ. 2. ನಾನು ವಾಸವಿರುವ ಸ್ಥಳದಿಂದ 16ಮೈಲು ದೂರ. ಉಸ್ತುವಾರಿ ನೋಡಲು ಬಟ್ಟಿಂಟಿಗನಿಗೆ ಬಹು ಕಷ್ಟವಾಗಿ ಕಂಡುಬರುತ್ತೆ.—ಮಾರ್ಚಿ ಆಖೈರು ಒಳಗೆ ಮಾರಲ್ಪಡುವುದು. ಕಾಯಿದಾರರು ಕೆಳಗಿನ ವಿಳಾಸಕ್ಕೆ ಒಡನೆ ಬರೆದುಕೊಳ್ಳುವುದು.

ಮಲಚೀರ ಬೆಳ್ಯಪ್ಪ,
ನಿಟ್ಟೂರು ಗ್ರಾಮ,
ಪೊನ್ನಂಪೇಟೆ ಪೋಸ್ಟು,
ದಕ್ಷಿಣ ಕೊಡಗು.

COORG FOREST DEPARTMENT, SOUTH DIVISION.

NOTICE.

Mercara, the 22nd February 1926.

Tenders are invited by the 22nd March 1926 for the supply of the following quantities of rations required for the use of Government Live stock stationed in the Tithimatti and Nagerhole Ranges:—

(1) Gram 350 Pallas.
(2) Ragi 240 Pallas.
(3) Cotton seeds 1250 lbs.

For further particulars apply to the Divisional Forest Officer, South Coorg, Mercara.

ನೋಟೀಸ್.

ಮಡಿಕೇರಿ ಮುನಿಸಿಪಲ್ ಆಫೀಸಿನಿಂದ.

ಎಲ್ಲ ಜನರಿಗೂ ತಿಳಿಯಪಡಿಸುವ ದೇನೆಂದರೆ

ಸನ್ 1926-27ನೆ ಸಾಲಿಗೆ ಬರತಕ್ಕ ಒರಕೇರಿ ಮುನಿಸಿಪಾಲಿಟಿ ಟೋಲ್‌ಗೇಟ್ ಸುಂಕ, ಮಾರ್ಕೆಟು ಫೀಸು ಮತ್ತು ಬಂದಿಸಾಳದ ಗೊಬ್ಬರ ಹುಟ್ಟುವಳಿಯನ್ನು 1926ನೆ ಇಸವಿ ಮಾರ್ಚ ತಾ. 12ನೆ ಶುಕ್ರವಾರ ದಿನ ಮಧ್ಯಾಹ್ನ 12ಗಂಟೆ ಸಮಯಕ್ಕೆ ಮಡಿಕೇರಿ ಮುನಿಸಿಪಲ್ ಆಫೀಸು ಮುಂದುಗಡೆ ವೈಸ್ ಪ್ರೆಸಿಡೆಂಟರ ರವರು ರಾಜು ಪಬ್ಲಿಕ್ ಹರಾಜು ಮಾಡಲ್ಪಡುತ್ತೆ. ಕಾಯಿದಾರರು ಬಿಡ್ ವರಕಾಸ್ತುನಲ್ಲಿ ಪಡಕೊಳ್ಳಬಹುದು. ಹೆಚ್ಚಿನ ವಿವರ ಮುನಿಸೀಪಲ್ ಆಫೀಸಿನಲ್ಲಿ ಹೋಗಿ ತಿಳಿದುಕೊಳ್ಳಬಹುದು.

3 ಆರ್. ಎಸ್. ಸುಬ್ಬರಾವು
ವೈಸ್ ಪ್ರೆಸಿಡೆಂಟರು.

COORG SANDAL WOOD.

Tenders are invited for the purchase of about 60 tons of milwa chilta and about 6 tons of Basola bukni. Delivery will be made at the Fraserpet Koti by 31st May 1926.

Tenders should reach the undersigned on or before 9th April 1926. They will be opened on 10th April 1926 at 11 A. M. in the Chief Forest Office.

For further particulars apply to the Chief Forest Officer, Coorg, Mercara.

Apply for our shooting Season's Clearance Sale Catalogue of Brand New Goods.

No License Required !! 10 to 25 percent Reductions in Prices. No License Required !!



Webley and Scott Air Pistol, cal. ·177 or ·22 bore Powerful and Accurate complete with a sample box of slugs, two spare washers, a brush for cleaning, and a bookletof instructions Rs. 30/– Free delivery.

Pwerful German Diana Air gun, Handsome and Accurate, takes P. S. A. Patern No. 1 Slugs and Darts, expressly recommendable for Target Practice Rs. 15/ Free delivery.

Brilliant Search Light Lamp for Night Sports Rs. 30/–. Free delivery.

No LIcense required to purchase or to possess the above items.

Reliable D. B. B. L. 12 bore guns Rs. 60/– and upwards.
Do. S. B. B. L. 12 do. do. 40/– do.
D. B. M. L. Guns „ 45/– do.
S. B. M. L. do. „ 30/– do.
S. B. B. L. Rifles „ 30/– do.
B. L. Revolvers and Pistols „ 25/– do.
„ 30/– do.

Arms, Ammunition and shooting requisites of almost every kind and quality offered at exceptionally favourable rates. A Number of good quality second hand weapons also offered for sale in theNew Catalogue.

GOOLAMHUSIAIN ALLIBHOY & SONS
Lragest Importers of Firearms and Ammunition,
Cheapest priced firm in India,
7 **210 AbdulRehman Street, BOMBAY.**

ವರ್ತಮಾನ ಸಂಗ್ರಹ.

ಒಳದೇಶ

ಬಲಮುರಿ ಮಹಾದೇವರ ಹಬ್ಬವು ಈ ತಾ. 9 ಮತ್ತು 10 ರಲ್ಲಿ ನಡೆಯುವುದು.

ಪೊನ್ನಂಪೇಟೆಯಲ್ಲಿ ಮೆ. ಎ. ಬಿ ಸುಬ್ಬಯ್ಯನವರು ಒಂದು ಔಷಧಿಭಂಡಾರವನ್ನು ತೆರೆದಿರುತ್ತಾರೆ.

ಫೆಬ್ರುವರಿ ತಾ. 27ರಲ್ಲಿ ಇಗ್ಗುತಪ್ಪ ದೇವರ ಹಬ್ಬವು ಬಹು ವಿಜೃಂಭಣೆಯಿಂದ ನಡೆಯಿತು. ಅನೇಕ ಜನರು ನೆರೆದಿದ್ದರು.

ಈ ತಾ. 1 ಮತ್ತು 4ರಲ್ಲಿ ಮಡಿಕೇರಿಗೆ ತಕ್ಕ ಮಟ್ಟಿಗೆ ಮಳೆಯು ಬಿತ್ತು. ಬೇರೆ ಕೆಲವು ಕಡೆಗಳಿಗೂ ಮಳೆಯು ಹೊಡದ ವರ್ತಮಾನವಿದೆ.

ಕಾವಾಡಿಗ್ರಾಮದ ಮೆ. ನೆಲ್ಲಮಕ್ಕಳ ತಿಮ್ಮಯ್ಯನವರ ಪತ್ನಿಯವರು ಈ ತಾ. 2ರಲ್ಲಿ ಮಡಿಕೇರಿಯಲ್ಲಿ ಮೃತಪಟ್ಟು ಇಲ್ಲಿಯೇ ಮಣ್ಣುಮಾಡಲ್ಪಟ್ಟರು.

ಕೊಡ್ಲಿಪೇಟೆ ಪೋಸ್ಟುಮಾಸ್ತರಾಗಿದ್ದ ...ಯರು ಪೋಸ್ಟಾಫೀಸಿನ ಸುಮಾರು 300ರೂ. ಗಳನ್ನು ದುರುಪಯೋಗಪಡಿಸಿದರೆಂಬ ಕಾರಣದಿಂದ ದಸ್ತಗಿರಿ ಮಾಡಲ್ಪಟ್ಟಿರುತ್ತಾರೆ.

1926—27ನೇ ವರ್ಷದ ವೀರರಾಜಪೇಟೆ ಮುನ್ಸಿಪಾಲಿಟಿಯ ಟೋಲುಗೇಟುಗಳ ಫೀಸಾ ವಸೂಲಾತಿಯ ಹರಾಜು ಮಾರ್ಚಿ ತಾ. 10ರಲ್ಲಿ ಆ ಮುನ್ಸಿಪಲ್ ಆಫೀಸಿನಲ್ಲಿ ನಡೆಯುವದು.

ವೀರರಾಜಪೇಟೆಯಲ್ಲಿ ಬಹಳ ವರ್ಷಗಳಿಂದ ವಾಸವಾಗಿದ್ದ ಸಿ. ಯಸ್. ತಿಮ್ಮಯ್ಯನವರ ಸ್ನೇಹಿತ... ಈ ತಾ. 4ರಲ್ಲಿ ಮೈಸೂರಲ್ಲಿ ದೈವಾಧೀನರಾದರೆಂದು ತಿಳಿಸಲು ವ್ಯಸನಪಡುತ್ತೇವೆ.

ಕೊಡಗು ಪೊಲೀಸಿಯ ಸೇರ ದಾರರು ತಮ್ಮ ಕೋರ್ಟುಗಳ 2ನೇ ಮತ್ತು 3ನೇ ಕಂತಿನ ಹಣವನ್ನು ಈ ಮಾರ್ಚ ಆಖೈರೊಳಗೆ ಸಲ್ಲಮಾಡಬೇಕಾಗಿರುವದರಿಂದ ಆ ಬಾಬ್ತು ಹಣವನ್ನು ವಹನ ಖಾನತಿಮಾಡಬೇಕೆಂದು ಕೋರಲಿಕ್.

ಈ ವಾರದ ತಾವಳಗೇರಿ ನಾಡಿನ ಬಾಡಗ ಗ್ರಾಮದ ದೇವರಮಕ್ಕಳ ಅಪ್ಪಣ್ಣನೆಂಬವರು ಬೇರೆಯವರೊಂದಿಗೆ ಬೇಟೆಗೆ ಹೋದಲ್ಲಿ ಗುಂಡು ತಗಲಿ ಮೃತಪಟ್ಟಿರುವರೆಂದೂ, ಗುಮಾನಿ ಮೇಲೆ ಇಬ್ಬರನ್ನು ರಿಮಾಂಡಿನಲ್ಲಿಟ್ಟಿರುವರೆಂದೂ ವರ್ತಮಾನ.

ತಾ. 4ರಲ್ಲಿ ನಾಲ್ಕುನಾಡಿನವರ ಮೀಟಿಂಗು ನೆಲಜಿಯಲ್ಲಿ ಮೆ. ಮಾದಂಡ ಮಂದಣ್ಣನವರ ಅಧ್ಯಕ್ಷತೆಯಲ್ಲಿ ನಡೆದು ಜಮೀನ್ದಾರರ ಸಂಘದ ಒರುವ ಸಮ್ಮೇಳನದ ಸ್ವಾಗತ ಏರ್ಪಾಡಿನ ಬಗ್ಗೆ ಗ್ರಾಮಕಮಿಟಿಗಳು ನೇಮಕಮಾಡಲ್ಪಟ್ಟವು.

ಗುಬ್ಬಿ ಶ್ರೀ ಚನ್ನಬಸವೇಶ್ವರ ನಾಟಕಮಂಡಳಿಯವರು ಈಗ ಕೊಡ್ಲಿಪೇಟೆಯಲ್ಲಿ ಆಟಗಳನ್ನು ಪ್ರದರ್ಶಿಸುತ್ತಿರುವರು. ಅವರು ಸೋಮವಾರಪೇಟೆಗೆ ಬಂದು ಕೆಲವು ದಿವಸಗಳಲ್ಲೇ ಮಡಿಕೇರಿಗೆ ಬರಲಿಕ್ಕಿರುವರು.

ಮಾರ್ಚ ತಾ. 9ರಿಂದ 12ರ ವರೆಗೆ ನಡೆಯುವ ಕೊಡಗು ಕೌನ್ಸಿಲಿನ ಬಜೆಟ್ ಮೀಟಿಂಗಿನ ಮಧ್ಯೆ ಸಮಯ ದೊರತರೆ ಕೌನ್ಸಿಲಿನ ಪಂಚಾಯತಿ ಬಿಲ್ಲು ಸಿಲೆಕ್ಟ ಕಮಿಟಿಯ ಪ್ರಥಮ ಮೀಟಿಂಗು ಕೂಡುವದೆಂದು ತಿಳಿಸಿರುತ್ತಾರೆ.

ಚೆಂಬು ಗ್ರಾಮದಲ್ಲಿ ರಾಮಪ್ಪ ಗೌಡನೆಂಬವರು ತಾ. 2 ರಲ್ಲಿ ಒಂದು ಹುಲಿಗೆ ಗುಂಡು ಹೊಡೆದಲ್ಲಿ ಘಾಯವಾಗಿ ಅವರ ಮೇಲೆ ಬಿದ್ದು ಅವರ ಮುಖವನ್ನು ಪರಚಿ ಘಾಯಮಾಡುವಷ್ಟರಲ್ಲಿ ಅವರು ಕೋವಿಯಿಂದ ಅದನ್ನು ತಿವಿದು ನೂಕಲು ಅದು ಮೃತಪಟ್ಟಿತು.

ಕಳೆದವಾರ ಪೆರಾಜೆ ಗ್ರಾಮದಲ್ಲಿ ಮುದುರನೆಂಬ ಸಾಬ ಮನಿಗೂ ಮತ್ತು ನಾಯರ್ ಬಂದು, ಮಚಿಯವರ ಕಟ್ಟಿ ಬಂಜನ್ನುಗಳೂ (ಬಂದು...) ಜಗಳವಾದಾಗ ಮುದುರನಿಗೆ ಪೆಟ್ಟುಬಿದ್ದು ಹೂಬಿಟಗಳ ಮೇಲೆ ಮೃತನಾದನು. ಅಪರಾಧಿಗಳನ್ನು ರಿಮಾಂಡಿನಲ್ಲಿಟ್ಟಿದ್ದಾರೆ. ಕೇಸು ಪೊಲೀಸು ವಿಚಾರಣೆಯಲ್ಲಿದೆ.

ತಾರೀಖು 3-3-1926ರಲ್ಲು ಸಂಟ್ರಲ್‌ಬ್ಯಾಂಕು ಡೈರೆಕ್ಟರುಗಳ ಮೀಟಿಂಗು ನಡೆದು ಕೋಟೂರು ಸೊಸೈಟಿಗೆ 1000 ರೂ. ಹಳ್ಳಿಗಟ್ಟು ಸೊಸೈಟಿಗೆ 1500ರೂ. ಮ... ಸೊಸೈಟಿಗೆ 1000ರೂ. ಐವತ್ತೊಕ್ಲು ಗ್ರೇನ್ ಬ್ಯಾಂಕಿಗೆ ...ರೂ. ಮತ್ತು ಮಡಿಕೇರಿ ಟವ್ನ್ ಸೊಸೈಟಿಗೆ 1000ರೂ. ಕಡ ಸಾಲ ಮಂಜೂರಾಗಿದೆ.

• ಏಪ್ರಿಲ್ 12ರ ನಂತರ ಮೆ. ಜೆ. ಎ. ಯೇಟ್ಸ್‌ರವರು ರಜೆಯಲ್ಲಿ ಹೋಗುವುದರಿಂದ ಕೊಡಗಿನ ಮತ್ತು ಬೆಂಗಳೂರಿನ ಶಾಲೆಗಳ ಇನ್ಸ್‌ಪೆಕ್ಟರ ಕೆಲಸವನ್ನು ಬದಲಿ ನೋಡಲಿಕ್ಕಾಗಿ ಮಧುರೆಯ ಡಿಸ್ಟ್ರಿಕ್ಟ್ ಎಜ್ಯುಕೇಶನಲ್ ಆಫೀಸರಾದ ಮೆ. ಹೆಚ್. ಎಫ್. ಸಾಂಡರ್ಸ್‌ರವರನ್ನು ಮೈಸೂರಿನ ರೆಸಿಡೆಂಟರು ನೇಮಿಸಿರುತ್ತಾರೆ.

ಏಪ್ರಿಲ್ ಮತ್ತು ನವಂಬರು ತಿಂಗಳುಗಳಲ್ಲಿ ನಡೆಯುವ ಮದ್ರಾಸು ಸರ್ಕಾರದ ಟೆಕ್ನಿಕಲ್ ಅಂದರೆ ಟೈಪ್‌ರೈಟಿಂಗ್, ಶಾರ್ಟ್‌ಹ್ಯಾಂಡ್ ಮತ್ತು ಬೇರೆ ಕಮರ್ಷ್ಯಲ್ ವಿಷಯಗಳ ಪರೀಕ್ಷೆಯ ಅನುಕೂಲವು ಕೊಡಗಿನವರಿಗೂ ದೊರೆಯುವಂತೆ ಈ ಪರೀಕ್ಷೆಯನ್ನು ಇನ್ನು ಮುಂದೆ ಮಡಿಕೇರಿ ಹೈಸ್ಕೂಲಿನಲ್ಲಿಯೂ ನಡಿಸುವರು. ಈ ಪರೀಕ್ಷೆಯ ಕರತ್ತುಗಳು ಮಾರ್ಚಿ ತಿಂಗಳ ಗಜೆಟ್ಟಿನಲ್ಲಿ ಪ್ರಕಟಿಸಲ್ಪಟ್ಟವೆ.

ಕೊಡಗು ಸಂಪಾಜೆ ಗ್ರಾಮಕ್ಕೆ ಸಮೀಪವಿರುವ ಕನ್ನಡ ಜಿಲ್ಲೆಯ ರಿಸರ್ವ ಫಾರೆಸ್ಟಿನಲ್ಲಿ ಇಲಾಖೆಯವರು ತೆಗೆಬಿಟ್ಟಿದ್ದ ಕಪ್ಪದಲ್ಲಿ ಕಳೆದವಾರ ಎರಡು ಗಂಡಾನೆಗಳು ಬಿದ್ದವು. ಆದರಲ್ಲಿ ದೊಡ್ಡದಕ್ಕೆ ಮೊದಲೇ ಎರಡು ಗುಂಡು ತಗಲಿದ್ದದರಿಂದಲೂ ಕಪ್ಪಕ್ಕೆ ಬೀಳುವಾಗ ಪೆಟ್ಟಾಗಿದ್ದುದರಿಂದಲೂ ಅದು ಕೆಲಸಕ್ಕೆ ಬಾರದ್ದಾದ ಕಾರಣ ಅದನ್ನು ಗುಂಡುಹೊಡೆದು ಕೊಂದುಬಿಟ್ಟರು. ಇನ್ನೊಂದು ಎಳೇ ಪ್ರಾಯದ್ದಾದರೂ ಅದಕ್ಕೆ ಒಂದೇ ಕಣ್ಣಾದೆಯಂತೆ.

ಹೈಸ್ಕೂಲು ಕ್ಲಾಸುಗಳಿಗೆ ಇನ್ನು ಮುಂದೆ 18 ವರ್ಷ ಪ್ರಾಯ ಮೀರಿದವರನ್ನು ಸೇರಿಸಿಕೊಳ್ಳಕೂಡದೆಂಬ ಹುಕುಂ ಕೆಲವು ದಿವಸಗಳ ಹಿಂದೆ ಆಗಿದೆ. ಆದುದರಿಂದ ಈ ವರ್ಷ ಸ್ಕೂಲ್ ಫೈನಲ್ ಪರೀಕ್ಷೆಗೆ 21 ವರ್ಷ ಪ್ರಾಯವಾದವರನ್ನು ಅಪ್ಪಣೆಯಾಗದೆ ಕಳುಹಿಸಬಾರದೆಂಬ ಹುಕುಂ ಈಗ ಬಂದಿದೆ. ಈ ಹುಕುಮಿನ ಮೇರೆ ಮಡಿಕೇರಿ ಹೈಸ್ಕೂಲಿನಿಂದ ಹೆಚ್ಚು 5 ವಿದ್ಯಾರ್ಥಿಗಳಿಗೆ ಪರೀಕ್ಷೆಗೆ ಹೋಗಲು ತಡೆಇದೆ. ಇನ್ನು ಮುಂದೆ 21 ವರ್ಷ ಪ್ರಾಯ ಮೀರಿದವರನ್ನು ಈ ಪರೀಕ್ಷೆಗೆ ತೆಗೆದುಕೊಳ್ಳುವದಿಲ್ಲವೆಂದಾಯಿತು.

ಕಳೆದ ತಾ. 22ರಲ್ಲಿ ಪೊನ್ನಂಪೇಟೆಯಲ್ಲಿ ಕೆಂಬಟ್ಟಿಯವರ ಮೀಟಿಂಗು ಅಜ್ಜಮಾಡ ... ರವರ ಅಧ್ಯಕ್ಷತೆಯಲ್ಲಿ ನಡೆಯಿತು. ಸುಮಾರು 60 ಜನರು ಹಾಜರಿದ್ದರು. ಚಿಕ್ಕಮಾದ್ದೂರು ಗ್ರಾಮದ ಸುತ್ತ ಮುತ್ತಲಿನ ಅನೇಕ ಕೆಂಬಟ್ಟಿಯವರ ಇರ ನಾಡಿನಿಂದ ಚಿಕ್ಕಮಾದ್ದೂರು ಶಾಲೆಗೆ ಅವರ ಮಕ್ಕಳನ್ನು ಸೇರಲಿಕ್ಕೆ ಏನೇ ಹೋಗಬೇಕು, ತಪ್ಪಿದ್ದರೆ ಅವರಿಗಾಗಿ ಪ್ರತ್ಯೇಕ ಶಾಲೆಯೊಂದನ್ನು ಏರ್ಪಡಿಸಿಕೊಡಬೇಕೆಂತಲೂ ಸರ್ಕಾರದವರನ್ನು ಕೇಳಿಕೊಳ್ಳುವಂತೆ ತೀರ್ಮಾನವಾಯಿತು.

ಕೆಲವು ವಾರಗಳ ಹಿಂದೆ ಮಡಿಕೇರಿಯಲ್ಲಿ ನಡದ "ನ್ಯೂಡಾರಿಂಗ್ ಟನ್" ಎಂಬ ರಮ್ಯ ನಾಟ್ಯ ...ಕ್ಸ್ ... ಗಳ ವಠಿಗ್ಗಿಯಲ್ಲಿ ಮೆ. ... ಮತ್ತು ಮೆ. ... ನವರು ಐದನೇತರಗತಿಯಲ್ಲಿಯೂ ಮೆ. ಗಣಪತಿ ... ಕಾರ್ಯಪ್ಪನವರು ಮತ್ತು ಮೆ. ಯಂ. ಕೆ. ಕೃಷ್ಣಯ್ಯನವರು ಏನೇತರಗತಿಯಲ್ಲಿಯೂ ತೇರ್ಗಡೆಹೊಂದಿರುವರು. ಒಂದೇ ವಿಷಯದಲ್ಲಿ ಸೋತ ಕೆಲವರಿಗೆ ಕೆಲವು ತಿಂಗಳೊಳಗೆ ಅದರಲ್ಲಿ ಪರೀಕ್ಷೆಕೊಡುವ ಅನುಕೂಲ ಕೊಡಲಾಗಿದೆಯಂತೆ.

ಕಳೆದ ತಾ. 27ರಲ್ಲಿ ಪಾಡಿನಾಲ್ಕುನಾಡು ತಾಲೋಕಿನವರ ಮೀಟಿಂಗು ಜಮೀನ್ದಾರರ ಸಂಘದ ಬರುವ ವಾರ್ಷಿಕ ಕಾನ್‌ಫರೆನ್ಸಿನ ಸ್ವಾಗತದ ಏರ್ಪಾಡಿಗಾಗಿ ನಾಪೋಕ್ಲಿನಲ್ಲಿ ನಡೆಯಿತು. ಸೆಂಟ್ರಲ್ ಕಮಿಟಿಯು ರಚನೆಯಾಯಿತು. ಗ್ರಾಮ ಪಾರು ಕಮಿಟಿಗಳನ್ನು ಏರ್ಪಡಿಸಲು ನಾಲ್ಕುನಾಡಿನವರ ಮೀಟಿಂಗು ನೆಲಜಿಯಲ್ಲಿ ಮಾರ್ಚ ತಾ. 4ರಲ್ಲಿಯೂ, ಕಡ್ಯಂಗೇರಿ ನಾಡಿನವರದು ಪಾಲೂರು ದೇವಸ್ಥಾನದಲ್ಲಿ ಮಾರ್ಚ ತಾ. 16ರಲ್ಲಿಯೂ, ಬೇಂಗುನಾಡಿನವರದು ಕಾರುಗುಂದ ಕ ... ಬಳಿ ಮಾರ್ಚ ತಾ. 15ರಲ್ಲಿಯೂ ತಾವ್ರನಾಡಿನವರದು ಭಾಗಮಂಡಲದಲ್ಲಿ ಮಾರ್ಚ ತಾ. 11ರಲ್ಲಿಯೂ ಮಾಡುವಂತೆ ತೀರ್ಮಾನವಾಯಿತು. ಮೀಟಿಂಗಿನ ಬಾಕಿ ... ವರವು ಇನ್ನೊಂದು ವಾರ ಪ್ರಕಟವಾಗುದೆ.

ಹಿಂದೂದೇಶ

ಹಿಂದೂ ಮಹಾ ಸಭೆಯ ಬರುವ ಕಾನ್‌ಫರೆನ್ಸಿನ ಅಧ್ಯಕ್ಷಸ್ಥಾನವನ್ನು ವಹಿಸಿಕೊಳ್ಳಲು ಆಗುವುದಿಲ್ಲವೆಂದು ನೇಪಾಳ ದೇಶದ ಪ್ರಧಾನ ಮಂತ್ರಿಯವರು ಉತ್ತರ ಕೊಟ್ಟಿರುವರು.

ಬಂಗಾಳ ಲೆಜಿಸ್ಲೇಟಿವ್ ಕೌನ್ಸಿಲಿನಲ್ಲಿ ಸರ್ಕಾರದವರು ಸಾಧಾರಣ 12ರಿಂದ 18 ವಯಸ್ಸಿನೊಳಗಿರುವ ವಿದ್ಯಾರ್ಥಿಗಳಿಗೆಲ್ಲಾ ಕಸರತ್ತನ್ನು ಮಾಡಿಸಬೇಕೆಂಬ ಠರಾವು ಬಹುಮತದಿಂದ ಮಂಜೂರಾಗಿದೆ.

ಮದ್ರಾಸಿನಲ್ಲಿ ಏಳುಂಪ್ರತಿ ಹೊರಡುವ "ಹಿಂದೂ" ಪತ್ರಿಕೆಯ ಪ್ರಚಾರ ಏಳುಬಂದಕ್ಕೆ 11000, ಮದ್ರಾಸ್ ಮೈಲ್ ಪತ್ರಿಕೆ 7000, ನ್ಯೂ ಇಂಡಿಯಾ 2000, ಆಂಧ್ರ ಪತ್ರಿಕೆ 7000, ಜನದ ಘೋಷ 20,000 ಮತ್ತು ಸ್ವದೇಶ ಮಿತ್ರನ್ 7000.

ಕೆಲವು ತಿಂಗಳುಗಳ ಹಿಂದೆ ಬೆಲ್ಜಿಯಂ ದೇಶದ ರಾಜರು ಇಂಡಿಯಕ್ಕೆ ಒಂದು ಸಂಚಾರಮಾಡಿಕೊಂಡು ಹೋದಾಗ ಅವರ ಆತಿಥ್ಯಸತ್ಕಾರ ಮೊದಲಾದುವಕ್ಕೆ ಇಂಡಿಯಾಸರ್ಕಾರದಿಂದ 105000 ರೂಪಾಯಿ ಖರ್ಚಾಯಿತೆಂದು ತಿಳಿಯಬಂದಿದೆ.

ಬಂಗಾಳ ಪ್ರಾಂತ್ಯದ ಗವರ್ನರಾದ ಲಾರ್ಡ ಲಿಟ್ಟನ್‌ರವರು ಬರುವ ಜೂನ್ ತಾ. 10ರಿಂದ 4 ತಿಂಗಳು ರಜೆಯಲ್ಲಿ ಹೋಗುವರ. ಇವರ ಬದಲು ಇವರು ಬರುವವರೆಗೆ ಸರ್ ಸ್ಟೀವನ್‌ಸನ್‌ರವರು ಗವರ್ನರ್ ಕೆಲಸವನ್ನು ಆಕ್ಟಿಂಗ್ ನೋಡುವರು.

ಮದ್ರಾಸು ಪಟ್ಟಣ ಒಂದರಲ್ಲಿಯೇ 116 ವರ್ತಮಾನ ಪತ್ರಿಕೆಗಳಿರುವವು. ಆ ಪ್ರಾಂತ್ಯದ ಜಿಲ್ಲೆಗಳಲ್ಲಿ 171 ಪತ್ರಿಕೆಗಳು ಪ್ರಕಟವಾಗುತ್ತಿವೆ. ಮದ್ರಾಸು ಪ್ರಾಂತ್ಯದಲ್ಲಿ ಒಟ್ಟು 287 ಪತ್ರಿಕೆಗಳಿವೆ. ದೇಶೀಯಭಾಷೆಗಳ ಪೈಕಿ ತಮಿಳು ಭಾಷೆಯ ಪತ್ರಿಕೆಗಳೇ ಹೆಚ್ಚು.

ವೆಲ್ಲೂರಿನಲ್ಲಿ ಜನಾಬ್ ಸಿ ಅಬ್ದುಲ್ ಹಕೀಂಸಾಹೇಬ ಬಹದೂರ್‌ರವರು 15 000 ರೂಪಾಯಿ ಖರ್ಚುಮಾಡಿ ಹೆಂಗಸರಿಗೂ ಮತ್ತು ಚಿಕ್ಕಮಕ್ಕಳಿಗೂ ಒಂದು ಆಸ್ಪತ್ರೆಯನ್ನು ಕಟ್ಟಿಸಿರುವರು. ಇದನ್ನು ಕೆಲವು ದಿವಸಗಳ ಹಿಂದೆ ಮದ್ರಾಸು ಗವರ್ನರವರು ತೆರೆದರು.

ಮದ್ರಾಸು ಪಟ್ಟಣದ ಮುನ್ಸಿಪಾಲಿಟಿಯ ಪ್ರಾಥಮಿಕ ಶಾಲೆಗಳಲ್ಲಿ ವಿದ್ಯಾರ್ಥಿಗಳಿಗೆ ಕಾರ್ಪೋರೇಶನ್ನಿನವರು ತಮ್ಮ ಖರ್ಚಿನಿಂದ ಮಧ್ಯಾಹ್ನದ ಊಟಕೊಡಲು ಏರ್ಪಾಡು ಮಾಡುತ್ತಿದ್ದಾರೆ. ಇದಕ್ಕೆ ತಿಂಗಳುವಾರು 5886 ವಿದ್ಯಾರ್ಥಿಗಳಿಗೆ 11036ರೂ.ಗಳೂ, ಹೆಚ್ಚು ನಿರ್ಗತಿಕರಾದವರಿಗೆ ಒಂದೊಂದು ಉಡುಪನ್ನು ಕೊಡಲು 6829ರೂ. ಬೇಕಾಗುವುದೆಂದೂ ಅಂದಾಜುಮಾಡಲ್ಪಟ್ಟಿದೆ. ಈ ಬಾಬುಗಳಿಗೆ ಮಂಜೂರಾಗಿರುವ 4000 ರೂ. ಯನ್ನು ಹೆಚ್ಚಿಸುವ ಭರವಸೆಯನ್ನು ಪ್ರೆಸಿಡೆಂಟರು ಕೊಟ್ಟಿರುವರಂತೆ.

ಮಂಡಲೆ ಜೈಲಿನಲ್ಲಿರುವ ಬಂಗಾಳದ ಸೆನ್‌ಗುಪ್ತ ಮೊದಲಾದ ಸ್ವರಾಜ್ಯಪಕ್ಷದ ಕೈದಿಗಳನ್ನು ಜೈಲಿನವರು ಸರಿಯಾಗಿ ಉಪಚರಿಸದೆ ಹಿಂಸಿಸುತ್ತಿರುವುದರಿಂದ ಆ ಕೈದಿಗಳು ಪಕ್ಷದಿವಸ ಉಪವಾಸವ್ರತವನ್ನು ಕೈಕೊಂಡರು. ಇದರ ವಿಷಯ ಚರ್ಚಿಸಲಿಕ್ಕಾಗಿ ಲೆಜಿಸ್ಲೇಟಿವ್ ಎಸಂಬ್ಲಿಯ ಮೀಟಿಂಗು ಕಳೆದ ತಾ. 25ರಲ್ಲಿ ಮುಂದಕ್ಕಿಡಲಾಯಿತು. ಆದರೆ ಇಂಥಾ ಠರಾವು ಬಂಗಾಳ ಕೌನ್ಸಿಲಿನಲ್ಲಿ ಚರ್ಚೆಗೇನೇ ಬರಲಿಲ್ಲ. ಈ ಉಪವಾಸಕ್ಕಾಗಿ ಕಲ್ಕತ್ತಾದಲ್ಲಿ ಕಳೆದ ತಾ. 28 ರಲ್ಲಿ ಹರತಾಳವು ಆಚರಿಸಲ್ಪಟ್ಟು ದೊಡ್ಡ ಪಬ್ಲಿಕ್ ಮೀಟಿಂಗು ಮಾಡಲಾಯಿತು.

ಜೊಂಡಾಯಿಯ ಒವ್ವಾ ಬೆಳುದನ್ನಿಯ ಸಂಬಂಧ ಇಂದೂರಿನ ಮಹಾರಾಜರವರನ್ನು ವಿಚಾರಿಸಲು ವೈಸರಾಯರು ಒಂದು ಕಮಿಷನನ್ನು ಏರ್ಪಡಿಸಲು ಅವರು (ರಾಜರು) ಒಪ್ಪುವರೋ ಎಂದು ಕೇಳಿದಕ್ಕೆ ಮಹಾರಾಜರು ಆ ಅವಮಾನ ನಿಮಿತ್ತ ಸಂಸ್ಥಾನದ ಆಳ್ವಿಕೆಯನ್ನು ತಮ್ಮ ಕುಮಾರನಿಗೆ ವಹಿಸಿ ತ್ಯಾಗಂದರೂ ಇದಕ್ಕೆ ಇಂಡಿಯಾ ಸರ್ಕಾರದವರು ಒಪ್ಪಿರುತ್ತಾರೆಂದೂ ಈ ವಿಷಯ ಇನ್ನು ತನಿಖೆನಡಿಸಲ್ಪಡುವುದಿಲ್ಲವೆಂದೂ ಇಂಡಿಯಾ ಸರ್ಕಾರದವರಿಂದ ಪ್ರಕಟವಾಗಿದೆ. ಇಂದೂರು ಸಂಸ್ಥಾನವು ಮಧ್ಯ ಹಿಂದೂಸ್ಥಾನದಲ್ಲಿ 9,500 ಚದರ ಮೈಲಿ ವಿಸ್ತೀರ್ಣವುಳ್ಳದ್ದಾಗಿಯೂ, 1151000 ಜನಸಂಖ್ಯೆಯುಳ್ಳದ್ದಾಗಿಯೂ 1, 20,00,000 ರೂಪಾಯಿ ರಾಜಾದಾಯವುಳ್ಳದ್ದಾಗಿಯೂ ಇದೆ. ಇದರ ಮಹಾರಾಜರಿಗೆ 21 ತೋಪುಗಳ ಹಾರಿಸುವ ಗೌರವವಿದೆ.

ವಿದೇಶ.

ಲಂಡನ್ನಿನಲ್ಲಿರುವ ಇಂಡಿಯಾ ಕೌನ್ಸಿಲ್ ಮೆಂಬರುತನಕ್ಕೆ ಸರ್. ಪಿ ರಾಜಗೋಪಾಲಚಾರಿಯವರು ರಾಜೀನಾಮೆ ಕೊಟ್ಟಿರುವರು. ಅವರ ಸ್ಥಾನಕ್ಕೆ ನೆ. ಮಲ್ಲಿಕ್‌ರವರು ನೇಮಿಸಲ್ಪಟ್ಟಿರುವರು.

ಶಾಂಗಹಾಯಿಯಲ್ಲಿ ಜಪಾನರ ಒಂದು ಗಿರಣಿಯಲ್ಲಿ 3000 ಕೆಲಸಗಾರರು ಕೆಲಸಕ್ಕೆ ಹೋಗದೆ ಮುಷ್ಕರ ಹಿಡಿದಿರುವರು. ಅವರು ಆ ಗಿರಣಿಯ ಆಫೀಸನೊಬ್ಬನನ್ನು ಕೊಂದು, ಯಂತ್ರದ ಕೆಲವು ಭಾಗಗಳನ್ನು ಮುರಿದಿರುವರು. ಈ ಮುಷ್ಕರವು ಅಲ್ಲಿಯ ಗಿರಣಿಗಳಿಗೆ ಹಬ್ಬುವ ಸಂಭವವಿದೆಯಂತೆ.

ಅಮೇರಿಕಾದೇಶದಲ್ಲಿರುವ ಜೇಮ್ಸ್ ಒಲ್ವರ್ ಎಂಬಾತನು ಕಪುಬಾರಿ ಗಂಡನೆಂದು ಚಿಕಾಗೋ ಪಟ್ಟಣದಲ್ಲಿ ಹೆಸರುವಾಸಿಗೊಂಡಿರುವನು. ಇವನು ಈ ವರೆಗೆ 48 ಸ್ತ್ರೀಯರನ್ನು ಲಗ್ನಮಾಡಿಕೊಂಡು, ಅವರಿಂದ 30 00000 ರೂಪಾಯಿಗಳನ್ನು ಸಂಪಾದಿಸಿರುವನು. 1924ರಲ್ಲಿ ಇವನು ಒಬ್ಬ ಸ್ತ್ರೀ ನಂತರ ಮೂಗಳನ್ನು ಮದುವೆ ಮಾಡಿಕೊಂಡು, ಅವಳಿಂದಲೂ ಅವಳ ಬಂಧುಗಳಿಂದಲೂ 52,500 ರೂ. ಕಿತ್ತುಕೊಂಡು 3 ತಿಂಗಳಲ್ಲಿ ಅವಳೊಂದಿಗೆ ಕಲಹ ನಡೆದು ಕೋರ್ಟಿನಲ್ಲಿ ವಿವಾಹ ನಡೆದು ಅವಳನ್ನು ತ್ಯಜಿಸಿಬಿಟ್ಟನಂತೆ!

ಭೂಲೋಕದಲ್ಲಿರುವ ಮೋಟಾರು ಕಾರುಗಳನ್ನೆಲ್ಲಾ ವೇಗದಲ್ಲಿ ಮೀರುವಂಥ ಕಾರು ಇಂಗ್ಲೆಂಡಿನ ಉಲ್ವರ್ ಹ್ಯಾಂಪ್ಟನಿನಲ್ಲಿ ತಯಾರಾಗಿದೆಯಂತೆ. ಅದನ್ನು ಕಳೆದ 18 ತಿಂಗಳಿಂದ ಗುಟ್ಟಿನಲ್ಲೇ ತಯಾರಿಸಿರುವರ. ಅದು 35 ಕುದುರೆಯ ಬಲವುಳ್ಳದಾದರೂ ಗಂಟೆಗೆ 170 ಮೈಲು ವೇಗದಲ್ಲಿ ಓಡಬಲ್ಲದಂತೆ. ಇಷ್ಟರವರೆಗೆ ಕಾರಿನ ಹೆಚ್ಚಿನ ವೇಗವು ಗಂಟೆಗೆ 150 ಮೈಲುಗಳು ಮಾತ್ರವಾಗಿತ್ತು. ಈ ಹೊಸಕಾರು ಚಕ್ರಗಳು 6000 ಸುತ್ತುಗಳಾಗುವಷ್ಟರಲ್ಲಿ 300 ಕುದುರೆ ಬಲವುಳ್ಳದ್ದಾಗುವುದಂತೆ. ಫ್ರಾನ್ಸ್, ಇಟಲಿ ಮತ್ತು ಅಮೇರಿಕದ ಸಂಯುಕ್ತ ಪ್ರಾಂತ್ಯಗಳು ಅತಿವೇಗದ ಕಾರುಗಳನ್ನು ತಯಾರಿಸಲು ಗುಟ್ಟಿನಲ್ಲೇ ಪ್ರಯತ್ನಿಸುತ್ತಿರುವವಂತೆ.

ಬೇಕಾಗಿದೆ.

ವೀರರಾಜಪೇಟೆ ಗವರ್ನಮೆಂಟ್ ಹೈಸ್ಕೂಲು ಹಾಸ್ಟೆಲಿಗ 1926ನೇ ಇಸವಿ ಏಪ್ರಿಲ್ ಒಂದರಿಂದ 1927ನೇ ಇಸವಿ ಮಾರ್ಚ ಅಖೈರು ವರೆಗೆ ಸಾಧಾರಣ 100 ಗಾಡಿ ಸೌದೆ ಒದಗಿಸಲು ಕಾಂಟ್ರಾಕ್ಟರು ಬೇಕಾಗಿದೆ. ಸವಿಸ್ತಾರವಾಗಿ ... ದರ ... ವ್ಯಾಪಾರಿಗಳು ಸೌದೆಯ ಜಾತಿ ಮತ್ತು ದರ ನಮೂದಿಸಿ ಕೆಳಗಿನ ವಿಳಾಸಕ್ಕೆ ಬರಕೊಳ್ಳುವುದು.

ಸಿ. ಎಂ. ರಾಮರಾಯರು,
ಹೆ. ಮಾಸ್ಟರು,
ಹೈಸ್ಕೂಲು, ವಿರಾಜಪೇಟೆ.

WANTED.

Tenders are invited for the supply of good firewood to the Hostel, Govt. High school Virajpet, from first April 1926 to 31st. March 1927, the quantity required being about 100 cart loads. It need not be said that the load must be full and the quantity must be good.

C. M. Rama Rau,
Head Master,
Govt. High School Virajpet

ವಿಮರ್ಶೆ.

ಆಯುರ್ವೇದ: ಸಂಪಾದಕ—ವಿದ್ವಾನ್ ಪಿ. ಸೂರ್ಯನಾರಾಯಣ ಶಾಸ್ತ್ರಿ, ತೀರ್ಥಹಳ್ಳಿ; ವಾರ್ಷಿಕ ವರ್ಗಣಿ—ರು 3-8-0 ವಿಳಾಸ- ಮೇನೇಜರ್, ಆಯುರ್ವೇದ, ತೀರ್ಥಹಳ್ಳಿ.

ಇದೊಂದು ಹೊಸ ಪತ್ರ. ಇದರ ನಾಮದಿಂದಲೇ ಇದು ಯಾವ ಉದ್ದೇಶದಿಂದ ಹೊರಟಿತೆಂದು ವಾಚಕರು ತಿಳಿದುಕೊಳ್ಳಬಹುದು. ಆಂಗ್ಲೇಯರು ಭರತಖಂಡಕ್ಕೆ ಬಂದ ಮೇಲೆ ನಮ್ಮ ಆಯುರ್ವೇದಕ್ಕೆ ಕುಂದುಂಟಾಯಿತು. ಈ ವೈದ್ಯ ಶಾಸ್ತ್ರವನ್ನು ಉತ್ಕರ್ಷಕ್ಕೆ ತರಬೇಕೆಂದು ನಮ್ಮ ಹಲವು ನೇತೃಗಳು ಹೆಣಗಾಡುತ್ತಿರುವರು. ಸರಕಾರದವರು ಸಹ ಈ ಶಾಸ್ತ್ರಕ್ಕೆ ಕೃಪೆತೋರುತ್ತಿರುವರು. ಮದ್ರಾಸಿನ ಡಾಕ್ಟರ್. ಪಿ. ಲಕ್ಷ್ಮಿಪತಿಯವರು ಈ ಶಾಸ್ತ್ರದ ಮಹತ್ವವನ್ನು ಕಂಡುಕೊಂಡು, ಆಯುರ್ವೇದ ವಿದ್ವಾನ್ ಗೋಪಾಲಚಾರ್ಲು ಇವರ ವೈದ್ಯಾಲಯಕ್ಕೆ ಪಾಲುಗಾರರಾಗಿ ನಮ್ಮ ಪ್ರಾಚೀನ ವೈದ್ಯಶಾಸ್ತ್ರಕ್ಕೆ ಕೀರ್ತಿಯನ್ನು ತರುತ್ತಿರುವರು. ಮೈಸೂರಿನಲ್ಲಿ ಸರಕಾರದವರು ಆಯುರ್ವೇದ ಶಾಲೆಯೊಂದನ್ನು ಸ್ಥಾಪಿಸಿರುವರು. ಮತ್ತು ಆಸ್ಪತ್ರೆಗಳನ್ನಿಟ್ಟು ಗರೀಬ ಜನರಿಗೆ ಪುಕಸಟ್ಟೆ ಔಷಧಿಯನ್ನು ಕೊಡುತ್ತಿರುವರು.

ಇದನ್ನೆಲ್ಲಾ ನೋಡಿದರೆ ಆಯುರ್ವೇದವು ಮುಂದರಿಯುತಿದೆಂದೂ ಅದಕ್ಕೆ ಪ್ರೋತ್ಸಾಹವು ದೊರಕಿದರೆ ಅದು ಮೇಲ್ಬೀಳಬಹುದೆಂದೂ ನಾವು ನಂಬುತ್ತೇವೆ. ಈ ವಿಷ್ಯಯ ಪ್ರಚಾರಕ್ಕೆ ಪತ್ರಿಗಳವಶ್ಯವಿದೆ. ಆಯುರ್ವೇದ ಹೆಂಬ ಪತ್ರವು ಒಳ್ಳೆ ಕರದ ಕೆಲಸವನ್ನು ನಡೆಸುತ್ತದೆಂದು ನಮ್ಮ ಅಭಿಪ್ರಾಯ. ಹಿಂಗೂ ಕಟ್ಟುಂಬದವರೆಲ್ಲ ತಮ್ಮ ನಿತ್ಯೋಪಯೋಗಕ್ಕೆ ಅವಶ್ಯಕವಾದ ಆಯುರ್ವೇದ ತತ್ವಗಳನ್ನು ಈ ಮಾಸಿಕದಲ್ಲಿ ಓದುವದರಿಂದ ತಿಳಿದುಕೊಳ್ಳಬಹುದಾಗಿದೆ'. ಈ ಪತ್ರದಲ್ಲಿ ಜಗತ್ತಿನ ಪ್ರಸಿದ್ಧವೈದ್ಯರುಗಳ ಚಿತ್ರಗಳು ಮುಂದಿನ ಸಂಚಿಕೆಗಳಲ್ಲಿ ಬರುವುದೆಂದು ಸಂಪಾದಕರು ಸೂಚಿಸಿ ಹೇಳುವರು. ಮುದ್ರಣ ಅಂದವಾಗಿದೆ. ಮಂದಿಗಳು ಇದಕ್ಕೆ ಯೋಗ್ಯ ಸಹಾಯವನ್ನೀಯುವರೆ ಇರುವರು.

ಪತ್ರವ್ಯವಹಾರ.

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲ. ಸಂ.

ಕರ್ನಾಟಕ ವಿಶ್ವವಿದ್ಯಾಲಯ,

ಅಯ್ಯಾ,

ಮದ್ರಾಸಿನ ಕರ್ನಾಟಕ ಸಭಾನ ಆಶ್ರಯದಲ್ಲಿ ಫೆಬ್ರುವರಿ ತಾರೀಖು 24ರಲ್ಲಿ ಮದ್ರಾಸಿನಲ್ಲಿರುವ ಹಲವು ಕರ್ನಾಟಕ ಮಹನೀಯರ ಒಂದು ಕೂಟ ನಡೆಯಿತು. ಮಿ. ಯಸ್. ಪೊನ್ನುಸ್ವಾಮಿ ಅಯ್ಯರ್ ಬಿ ಎ. ಬಿ. ಎಲ್ ಹೈಕೋರ್ಟ ವಕೀಲರವರು ಅಧ್ಯಕ್ಷರಾಗಿದ್ದರು. ಅಖಿಲಕರ್ನಾಟಕಕ್ಕೆಲ್ಲಾ ಒಂದು ವಿಶ್ವವಿದ್ಯಾಲಯವನ್ನು ಸ್ಥಾಪಿಸುವುದರ ಪ್ರಯೋಜನಗಳನ್ನು ಕುರಿತು ಬೆಂಗಳೂರಿನ ಡಾಕ್ಟರ್ ಸಿ. ಬಿ. ರಾಮರಾವ್ ಯಂ. ಡಿ ಯವರು ಸ್ವಾರಸ್ಯವಾದ ಭಾಷಣ ಮಾಡಿದರು. ದೀರ್ಘಚರ್ಚೆಯು ನಡೆದು ಉಪನ್ಯಾಸಕರಿಂದ ಉತ್ತರಗಳು ದೊರೆತನಂತರ ಈ ಕೆಳಗಿನ ಠರಾವು ಒಮ್ಮತದಿಂದ ಮಂಜೂರಾಯಿತು.

"ಇಲ್ಲಿ ನೆರೆದಿರುವ ಮದ್ರಾಸಿನಲ್ಲಿರುವ ಕನ್ನಡಿಗರು ಕರ್ನಾಟಕ ವಿಶ್ವವಿದ್ಯಾಲಯವು ಅವಶ್ಯವಿದೆಯೆಂದು ತೀರ್ಮಾನಿಸಿದ್ದಲ್ಲದೆ ಈ ವಿಷಯ ಅಧಿಕಾರಿಗಳೊಂದಿಗೆ ವ್ಯವಹಾರ ನಡೆಸಲು ಡಾ. ರಾಮರಾಯರಿಗೆ ಅಧಿಕಾರಕೊಡುತ್ತಾರೆ " ಕರ್ನಾಟಕ ವಿಶ್ವವಿದ್ಯಾಲಯದ ವಿಷಯ ಹೆಚ್ಚಿನ ಆಲೋಚನೆ ನಡೆಸಲು ಮತ್ತು ಅದರ ವಿಷಯವಿಸ್ತಾರವಾಗಿ ಚರ್ಚಿಸಲು ಜಗತ್ತಿನ ಪ್ಲಾಕ್ ವಿಟೆಂಗುನಾಥು ಒಂದು ಕಮಿಟಿಯನ್ನು ನೇಮಿಸಬೇಕೆಂದು ಈ ವಿಶ್ವವಿದ್ಯಾಲಯದ ಪ್ರವರ್ತಕರುಗಳ ಇರಾದೆಯಾಗಿದೆ.

ಗೌ. ಕಾರ್ಯದರ್ಶಿ.

ಪರಸ್ಪರ ಪರಿಹಾರ ಸಂಘ ಲಿಮಿಟೆಡ್, ಮೈಸೂರು.

ಅಯ್ಯಾ,

ಲೋಕಸಾವದ ಪತ್ರಿಕೆಯಲ್ಲಿ ಈ ಮೇಲಿನ ಸಂಘದ ವಿಷಯ ಮಿ. ಬಿ. ಯಸ್ ಕಾಮತ್ ಸುಪರಿಂಟೆಂಡೆಂಟರವರು ಒಂದು ಪ್ರಕಟಣೆಯನ್ನು ಮಾಡಿದ್ದಾರೆ. ಅದರಲ್ಲಿ 300/—ರೂಪಾಯಿ ಸೆಕ್ಯೂರಿಟಿಕೊಟ್ಟರೆ 125/– ರಿಂದ250/—ರವರೆಗೆ ಸಂಬಳದ ಸ್ವೈಪಾರಂ ಮೇನೇಜರ್ ಕೆಲಸ ಸಿಕ್ಕುತದೆಯಾಗಿ ಬರೆದಿದ್ದಾರೆ. ಇಷ್ಟುಸುಲಭದಲ್ಲಿ ಈಕೆಲಸ ಸಿಕ್ಕುವದುಅಸಾಧ್ಯವಲ್ಲವೇ? ನೇರವಿಕ್ಕೆ ಇಷ್ಟವಿರುವವರು ದಯವಿಟ್ಟು ಈ ಕೆಳಗಿನ ವಿಳಾಸಕ್ಕೆ ಬರೆದಲ್ಲಿ ಹೆಚ್ಚಿನ ಸಂಗತಿ ತಿಳಿಯಬಹುದು.

ಎಸ್,
C/o ಸಂಪಾದಕ,
ಕೊಡಗು"

ಕಿರಗಂದೂರು ಯೂನಿಯನ್ ಸೊಸೈಟಿ.

ಅಯ್ಯಾ ಸಂಪಾದಕರೇ,

ಕಿರಗಂದೂರು ಗ್ರಾಮದಲ್ಲಿ ನಮ್ಮ ಚಕ್ರವರ್ತಿಯವರಾದ ಜಾರ್ಜ್ ಕಾರ್ವಭೌಮರವರ ಪಟ್ಟಾಭಿಷೇಕ ಕಾಲದಲ್ಲು ಅಂದರೆ 1912ನೇ ಇಸವಿ ಡಿಶಂಬರ್ ಮಾಹೆಯಲ್ಲು ಕಿರಗಂದೂರು ಶಾಲೆಯಲ್ಲಿ ಕಾರೋನೇಶನ್ ಯೂನಿಯನ್ ಸೊಸೈಟಿ (Coronation Union Society) ಯೆಂಬ ಒಂದು ಸಂಘವು ತೆರೆಯಲ್ಪಟ್ಟಿತ್ತು ಆ ಸಂಘವು ಕೆಲವು ವರ್ಷಗಳ ವರೆಗೆ ನಡೆದು ಅನಂತರ ಹಿಂದುಳಿದಿತ್ತು. ಬಳಿಕ ಅದನ್ನು ಕಟ್ಟುತ್ತ ಬಂದ ಗ್ರಾಮದ ಮೆಂಬರುಗಳು ಮತ್ತು ಮ. ರಾ. ಶ್ರೀ. ಗಳಾದ ಸಿಂಗೂರು ಲಿಂಗಪ್ಪನವರೂ, ಹೊ. ಮುತ್ತಣ್ಣನವರೂ, ಎಸ್. ಸುಬ್ಬಯ್ಯನವರೂ, ಗ್ರಾಮದ ಪಟೇಲರೂ ಹೆಚ್ಚು ಮುತುವರ್ಜಿಯಿಂದ ಮುಂದಕ್ಕೆ ತರಬೇಕೆಂಬ ಇರಾದೆಯಿಂದ ಎಲ್ಲಾ ಮೆಂಬರುಗಳ ಅಭಿಲಾಷೆ ಮೇರೆ ಆ ಸಂಘವನ್ನು 1925ನೇ ಇಸವಿ ಡಿಶಂಬರ್ ಆಖೈರಿನಲ್ಲು ಸ್ಕೂಲಿನಲ್ಲಿಯೇ ಸ್ಥಿರಪಡಿಸಿದಂಥ ಕಿರಗಂದೂರು ಸ್ಕೂಲು ಹೆಡ್ ಮಾಸ್ಟರಾದ ಮ. ರಾ. ಶ್ರೀ. ಕ. ಯಂ. ಸುಬ್ಬಯ್ಯನವರಿಗೂ ಈ ಸಂಘದ ಮೆಂಬರುಗಳಿಗೂ ಮುಂದಕ್ಕೆ ಇದೇ ರೀತಿ ಹೆಚ್ಚು ಶ್ರಮವಹಿಸಿ ನಡೆಸುವಂತೆ ದೇವರು ಒಳ್ಳೆ ಮನಸ್ಸುಕೊಡಬೇಕಾಗಿ ನನ್ನ ಪ್ರಾರ್ಥನೆ.

ಸಿಂಗೂರು ಮಾದಪ್ಪ

"ಕೊಡಗು ಚಂದ್ರಿಕೆ"

ಅಯ್ಯಾ ಸಂಪಾದಕರೇ,

ನೀವಾಗಲೀ ನಿಮ್ಮ ಪತ್ರವನ್ನೋದುವ ಅನೇಕ ಮಹನೀಯರುಗಳಲ್ಲಾರಾಗಲೀ ಸುಮಾರು ಮೂವತ್ತು ವರ್ಷಗಳ ಹಿಂದೆ ಬೆಂಗಳೂರಿನಿಂದ ಹೊರಡುತ್ತಿದ್ದ "ಕೊಡಗು ಚಂದ್ರಿಕೆ" ಯೆಂಬ ಮಾಸಪತ್ರಿಕೆಯ ಎರಡು ಸಂಚಿಕೆಗಳನ್ನು ಕಳುಹಿಸಿಕೊಡುವವರಾಗಲೀ ಅದರ ವಿಷಯವಾಗಲಾಗಲೀ ನನಗೆ ಈ ಪತ್ರಿಕೆಯ ಮೂಲಕ ಅಥವಾ ಕಾಗದದ ಮೂಲಕ ತಿಳಿಸಬೇಕೆಂದು, ವಿಜ್ಞಾಪಿಸಿಕೊಳ್ಳುತ್ತೇನೆ.

"ಕುತೂಹಲಿ"
C/o ಸಂಪಾದಕರು,
"ಕೊಡಗು."

ಕೊಡಗು ಕಾಯಿದೇ ಮಂಡಲಿಯ ಸದಸ್ಯರುಗಳಲ್ಲಿ ವಿನಂತಿ:—

ಮಹನೀಯರೇ

ಮೊನ್ನೆತಾನೇ ನಮ್ಮೂರಿಗೆ ಬಂದು ಜನರ ಕಣ್ಣನ್ನು ಬಿಡಿಸಿದ ಡಾ. ಸಿ. ಬಿ. ರಾಮರಾಯರಿಗೆ ಎಷ್ಟು ವಂದಿಸಿದರೂ ಸ್ವಲ್ಪವೇ. ಕರ್ನಾಟಕ ಪ್ರಾಂತ್ಯದಿಂದ ಕೌನ್ಸಿಲು ಆಫ್ ಸ್ಟೇಟ್‌ಗೆ ಹೋದ ಡಾ. ಯು. ರಾಮರಾಯರ ಕರ್ನಾಟಕಪ್ರಾಂತ ರಚನೆಯ ಠರಾವು ಪಕ್ಷಪಾತಿ ಸರಕಾರದವರಿಂದ ಅಂಗೀಕರಿಸಲ್ಪಡಲಿಲ್ಲವೆಂದು ಇಂಗ್ಲಿಷ್ ಪತ್ರಗಳನ್ನು ಓದುವವರಿಗೆ ಇಷ್ಟರೊಳಗೇ ತಿಳಿದಿರಬಹುದು. ಕರ್ನಾಟಕದೊಳಗಿನ ಮತ್ತು ಕರ್ನಾಟಕ ಸದಸ್ಯರುಗಳಿರುವ ಪ್ರಾಂತಿಕ ಸಭೆಗಳಲ್ಲಿ ಈ ಠರಾವುಗಳು ಚರ್ಚಿಸಲ್ಪಡಲಿಲ್ಲವೆಂದೂ, ಪ್ರಾಂತ್ಯದಲ್ಲಿ ತಕ್ಕಷ್ಟು ಚಳವಳಿ ನಡೆದಿಲ್ಲವೆಂದೂ ಸರಕಾರಿ ಮೆಂಬರರ ಮುಖ್ಯ ಜವಾಬಾಗಿತ್ತು.

ನಮ್ಮ ಈಗಿನ ವ್ಯವಹಾರ ಭಾಷೆಯು ಕನ್ನಡವಾಗಿರುವುದರಿಂದಲೂ ಅನೇಕ ಶತಮಾನಗಳಿಂದ ಶುದ್ಧ ಕನ್ನಡಿಗರು ರಾಜ್ಯವಾಳುತ್ತಿದ್ದುದರಿಂದಲೂ ಪ್ರತಿಯೊಬ್ಬ ಕೊಡಗು ಕನ್ನಡಿಗನೂ ಇದರ ವಿಷಯ ಚೆನ್ನಾಗಿ ಆಲೋಚಿಸಿ ಈ ಚಳವಳಿಗೆ ತಕ್ಕ ಪ್ರೋತ್ಸಾಹವನ್ನು ಕೊಡಬೇಕು. ಸರಕಾರಿ ಧೋರಣವು ಇದಕ್ಕೆ ವಿರೋಧವಲ್ಲದ್ದರಿಂದ ಕೌನ್ಸಿಲು ಮೆಂಬರರು ನಾಡಿನಲ್ಲೆಲ್ಲಾ ಇದರ ವಿಷಯ ತಕ್ಕಷ್ಟು ಚಳವಳಿಯನ್ನೆಬ್ಬಿಸಿ, ಕಾಯಿದೇ ಮಂಡಲಿಯಲ್ಲಿ ಸಹ ಏಕಕಂಠದ ವಿಷಯವಾಗಿ ಠರಾವುಗಳನ್ನು ತಂದು, ಬಹುಮತದಿಂದ ಮಂಜೂರು ಮಾಡಿಸಿಕೊಳ್ಳಬೇಕೆಂದು ನನ್ನಯ ಪ್ರಾರ್ಥನೆ ಇದೆ.

ಕನ್ನಡಿಗ.

ಒಕ್ಕಲಿಗರ ಮಹಾಶಯರಲ್ಲಿ ನನ್ನದೊಂದು ವಿನಂತಿ.

ಮಹಾಶಯರೇ,

ಕಲಿಯು ಕೆಟ್ಟ ಒಕ್ಕಲಿಗನು ದಿನೇ ದಿನೇ ಒಂದೊಂದು ವಿಧವಾಗಿ ಪರಿಣಮಿಸಿ ಬರುವ ಕಾಲದ ಸ್ಥಿತಿಯನ್ನು ಕಾಣುತ್ತಲೂ ಕೇಳುತ್ತಲೂ ಇರುವದನ್ನು ತಿಳಿದ ಯೌವನಸ್ಥರಾದ ಮತ್ತು ಬುದ್ಧಿವಂತರಾದ ತಾವುಗಳು ಗುಪ್ತದ ಗವಿಯಲ್ಲಿ ಅಡಗಿಕೊಂಡು ಎಲ್ಲಾ ಮತಸ್ಥರೂ ಓದಿನಿಂದ ಮುಂದ ಮುಂದಕ್ಕೆ ಹೆಜ್ಜೆಯನ್ನಿಡುತ್ತಿದ್ದರೆ ತಾವುಗಳು ಆದಾಗಿದಲ್ಲಿಂದ ಕದಲಿಕೆಯಿಲ್ಲದೆ ಇರುವದನ್ನು ನೋಡಿದರೆ ಮಹಾ ಉಪಕಾರಿಗಳಾದ ಕಾವೇರ್ಯಮ್ಮನ ನಿಮ್ಮ ಮತದ ಹೆಸರನ್ನೇ ಇಲ್ಲಿ ಬರೆದಿಡಬೇಕೆಂಬುದಾಗಿಯಾಗಲೀ ಅಥವಾ ಎಲ್ಲಾ ಮತದವರ ಹಿಂದೆಯೇ ಇರಬೇಕೆಂಬುದಾಗಿಯಾಗಲೀ ಯಾವ ಶಾಸನ ಬರೆದಿಟ್ಟಿರುತ್ತಾಳೋ ತಿಳಿಯುವದಿಲ್ಲವಲ್ಲ. ಅಹಾ, ಮಹಾ ಪಾರ್ವತಿಯೇ, ನಿನ್ನ ಜನ್ಮ ಭೂಮಿಯಲ್ಲಿ ನಾವುಗಳು ಜನಿಸಿದ್ದನ್ನು ಒರೆ ಕಣ್ಣಿನಿಂದಲಾದರೂ ನೋಡದೆ ಹೀಗೆ ಮೂಲೆಗೆ ಬಿಸಾಡಿದಂತೆ ಬಿಟ್ಟು ಬಿಟ್ಟು ಇಡುವೆಯಾ! ಛೀ! ಛೀ! ಲೋಕಕ್ಕೆ ಜನನಿಯಾದ ಮಹಾ ಪಾರ್ವತಿಯೂ ಎಂದಿಗೂ ಹಾಗೆ ಬಿನ್ನ ಭೇದಗಳನ್ನು ಗ್ರಹಿಸುವವಳಲ್ಲವು. ಮಹಾಶಯರೇ, ಇಲ್ಲಿ ನೋಡಿದಿರಾ, ಕೊಡಗು ದೇಶದಲ್ಲಿ ನಮ್ಮವರು ಜನ್ಮ, ಜನ್ಮೇತರೂ ಸಹ ಇದ್ದರೂ ಕೂಡ ನಮ್ಮವರ ಪ್ರಸ್ತಾಪವು ಕೊಡಗು ಪತ್ರಿಕೆಯಲ್ಲೂ ಕೂಡ ಕಾಣಬಾರದಿರುವದು ವಿಸಾಶ್ಚರ್ಯ. ಇದು ಹಾಗಲ್ಲ, ನಾವುಗಳು ವಿದ್ಯಾ ಹೀನರಾಗಿಯೂ ಮೂಢರಾಗಿಯೂ ಹೇಡಿಗಳಾಗಿಯೂ ಇರುವದೇ ಈ ಮೇಲ್ಕಂಡ ಸಂಗತಿಗೆ ಕಾರಣವೇ ಸರಿ. ವಿದ್ಯೆಯೊಂದಿದ್ದರೆ ಸಕಲರ ಮರ್ಯಾದೆಯೂ ದೊರೆಯುತ್ತೆ. ವಿದ್ಯೆಯೊಂದಿಲ್ಲದಿದ್ದರೆ ಮರ್ಯಾದೆಯು ಸಿಕ್ಕದೆ ಇರ ಬಲ್ಲದೆ ಅವನ ನಂಗಡ ಹೋಗರಾ ಸೊನ್ನ. ಅಲ್ಲದೆ ಈಗ ಬರೇ ಕನ್ನಡ ವಿದ್ಯೆಯೇ ಸಾಲದಾಗಿರುವದನ್ನು ತಾವು ಓದಿ ಕೇಳಿರಬಹುದು. ಹೀಗಿರುವಲ್ಲ ತಾವು ಕಣ್ಣು ಮುಚ್ಚಿ ಮೌನದಲ್ಲಿರುವದು ಯೋಗ್ಯವಲ್ಲವು ಎಲ್ಲಾ ಮತಸ್ಥರೂ ತಮ್ಮ ತಮ್ಮ ಮತದ ಏಳಿಗೆಗೆ ಹೋರಾಡುವಲ್ಲಿ ತಾವು ಹೀಗೆ ಮೌನದಲ್ಲಿರುವದು ನಾಚಿಕೆಯಾಗುವದಿಲ್ಲವೇ? ಇನ್ನಾದರೂ ಕಣ್ ತೆರೆದು ಈಗ ತಮ್ಮ ಕೆಲವು ಮಹನೀಯರು ವಹಿಸುವ ಕಾರ್ಯವನ್ನು ತಾವುಗಳು ವತ್ತಾಸೆ ಕೊಟ್ಟು ಒಮ್ಮನಸ್ಸಿನಿಂದ ಮಹಾವಿದ್ಯಾಧಾರಣಿಯಾದ ಸರಸ್ವತಿಯನ್ನು ಪ್ರಾರ್ಥಿಸಿ ನಮ್ಮ ಈ ಮೂಢತನವನ್ನು ಹೋಗಲಾಡಿಸಿ ನಮ್ಮನ್ನು ಗುಹೆಯೊಳಗಿನಿಂದ ಮೇಲಕ್ಕೆತ್ತಿ ಧೈರ್ಯದಿಂದ ಮುಂದೆ ನಿಲ್ಲುವಂತೆ ವಿದ್ಯೆಯನ್ನೂ ಶ್ರೇಯಸ್ಸನ್ನೂ ಕೊಟ್ಟು ನಮ್ಮನ್ನು ಮುಂದಕ್ಕೆ ತರುಬುದ್ಧ್ಯಕ್ತರಾಗಬೇಕೆಂಬದಾಗಿ ನನಗೂ ಮಹಾಪಾರ್ವತಿಗೂ ನನ್ನ ಪ್ರಾರ್ಥನೆ.

ವಿ. ಕಾಳಪ್ಪ.

ಮಡಿಕೇರಿ ಪಿ. ಸಿ. ಕ್ಲಬ್ಬು.

ಅಯ್ಯಾ,

1923ನೇ ಇಸವಿ ಸಪ್ಟಂಬರ ತಿಂಗಳಲ್ಲಿ ಮಡಿಕೇರಿಯ ಪ್ರೊಟೆಸ್ಟಾಂಟ್ ಕ್ರಿಶ್ಚಿಯನ್ ಕ್ಲಬ್ಬಿನ ಸದಸ್ಯರುಗಳು ಕೂಡಿ ಹೊಸ ಚುನಾವಣೆಯಲ್ಲಿ ಮಾಜಿ ಸೆಕ್ರೆಟರಿಯವರಾಗಿದ್ದ ಕೊನ್ಸ್ಟಂಟೀನ್ ಜಿ ಹನ್ನು ಎಂಬವರು ತನ್ನ ವಶದಲ್ಲಿದ್ದ ಕ್ಲಬ್ಬಿನ ಹಣವನ್ನು ತಮಗೆ ಕೈವರ್ತಿಸುವರೆ ನಿರಸ್ಕರಿಸಿದ್ದರಿಂದ, ಸದರಿ ಕೊನ್ಸ್ಟಂಟೀನ್ ಜಿ. ಹನ್ನರ ಮೇಲೆ ದಾವ ದಾಖಲು ಮಾಡಿದರು.

ಹೆಚ್ಚು ಕಡಿಮೆ ಎರಡು ವರ್ಷದ ವರೆಗೆ ಸಬಾರ್ಡಿನೇಟ್ ಜಡ್ಜರ ಕೋರ್ಟಿನಲ್ಲಿ ನಡೆದ ಮೊಕದ್ದಮ್ಮೆಯಲ್ಲಿ ವಾದಿಯರಿಗೆ ಸಂಪೂರ್ಣ ನ್ಯಾಯವು ಸಿಕ್ಕಲಿಲ್ಲವಾದ ಕಾರಣ ವಾದಿಯರು ಕೊಡಗು ಡಿಸ್ಟ್ರಿಕ್ಟ ಜಡ್ಜರ ಕೋರ್ಟಿಗೆ ಅಪ್ಪೀಲು ಮಾಡಿದಲ್ಲಿ ಡಿಸ್ಟ್ರಿಕ್ಟ ಜಡ್ಜರು ಕೆಳಗಿನ ಕೋರ್ಟಿನ ತೀರ್ಪನ್ನು ಬತ್ತಬ್ಬಿಗಟ್ಟು ಪ್ರತಿವಾದಿಯಾದ ಕೊನ್ಸ್ಟಂಟೀನ್ ಜಿ. ಹನ್ನರು ವಾದಿಯರಾದ ಪಿ. ಸಿ. ಕ್ಲಬ್ಬಿನ ಸದಸ್ಯರುಗಳಿಗೆ ತೀರಾ ದಾವ ಮೊಬಲಗನ್ನೂ ಅಪ್ಪೀಲು ಕೋರ್ಟಿನ ಖರ್ಚನ್ನೂ ಕೊಡತಕ್ಕದೆಂಬದಾಗಿ ಫೈಸಲ್ ಮಾಡಿರುತ್ತಾರೆ.

ಸೆಕ್ರೆಟರಿ.

"ಲೋಕರಹಸ್ಯ."

ಕೃಷಿಯ ಅತ್ಯುತ್ತಮ ರೀತಿಗಳು, ವ್ಯಾಪಾರದ ವಿಷಯಗಳು, ಹೆಂಗಸರಿಗೆ ಬೇಕಾದ ಗೃಹಕೃತ್ಯದ ವಿಷಯಗಳು, ಹೊಲಿಗೆ, ಮಕ್ಕಳನ್ನು ಸಾಕುವ ವಿಷಯಗಳು, ಬಡವರಿಗೆ ಬೇಕಾದ ಹಣ ಸಂಪಾದನೆಯ ವಿಷಯಗಳು, ರಸಿಕರಿಗೆ ವಿನೋದ ವಿಚಾರ, ರಾಜಕೀಯ ವಿಷಯಗಳು, ಆಯುರ್ವೇದಯುನಾನಿ ವೈದ್ಯ ಸಂಗ್ರಹ, ಪ್ರತಿಯೊಬ್ಬನೂ ತಿಳಿಯಬೇಕಾದ 'ಲಾ' ವಿಚಾರ, ವಿದ್ಯಾ ವಿಷಯ, ವೇದಾಂತ ವಿಚಾರಗಳಿಂದಲೂ, ತುಂಬಿ ತುಳುಕುತ್ತಿರುವ ಈ ಹೊಸ ಪತ್ರಿಕೆಗೆ ವರ್ಷಕ್ಕೆ ಚಂದಾ ರೂ. 3—8—0 ಮಾದರಿ ಸಂಚಿಕೆಗೆ 0—5—0.

ಪ್ರತಿ ತಿಂಗಳಲ್ಲೂ 60 ಪುಟಗಳಿಗೆ ಕಡಿಮೆಯಿಲ್ಲದೆ ವಿಷಯಗಳಿರುತ್ತವೆ.

"ಲೋಕರಹಸ್ಯ ಆಫೀಸು,
ವೀರರಾಜೇಂದ್ರಪೇಟೆ.
(ಕೊಡಗು.)

23

ಮನೋಲ್ಲಾಸಿನಿ ತೈಲ.

ತಲೆನೋವು, ತಲೆ ತಿರುಗುವುದು, ತಲೆಯುರಿ ಕಣ್ಣುರಿ, ಕಿವಿಯಿಂದ ಕೀವು ಸೋರುವುದು ಕಿವುಡುತನ, ಕಣ್ಣುನೋವು, ಅಪಸ್ಮಾರ ನಿದ್ರೆ ಬಾರದಿರುವುದು, ನೆನಪು ಶಕ್ತಿ ಕುಂದಿಹೋಗುವುದು. ಇವುಗಳನ್ನೆಲ್ಲ ಖಂಡಿತ ಗುಣಮಾಡುತ್ತದೆ ಉದುರುವ ಕೂದಲನ್ನು ನಿಲ್ಲಿಸಿ ಗಿಡ್ಡಗಿರುವ

ಕೂದಲನ್ನು ಬೆಳೆಯಿಸಿ ಕೂದಲಿಗೆ ಸೌಂದರ್ಯವನ್ನೂ ಹೊಳಪನ್ನೂ ಕೊಟ್ಟು ಅಕಾಲಕ್ಕೆ ಹಣ್ಣಾಗುವ ಕೂದಲನ್ನು ಕಪ್ಪು ಮಾಡಿ ಕೂದಲು ಇಲ್ಲದ ಸ್ಥಳದಲ್ಲಿ ಹೊಸ ಕೂದಲನ್ನು ಹುಟ್ಟಿಸುತ್ತದೆ ಬೆಲೆ ಸೀಸೆಗೆ ರೂ. 1, 3 ಸೀಸೆಗೆ 2—10—0, ಒಂದು ದೊಡ್ಡ ಸೀಸೆಗೆ ರೂ. 2, 3 ಸೀಸೆಗಳಿಗೆ 5—8—0.

ಚಂಪಕಾಸವ.— ಇದು ಪ್ರಮೇಹ- ಮೂತ್ರಕೃಚ್ಛ್ರ, ಮೂತ್ರ ಹನಿಹನಿಯಾಗಿ ಹೋಗುವುದು ಮೂತ್ರಕೋಶದ ಉರಿ, ಮೂತ್ರಸಿಂಧನಗಳ ಉರಿ ಮೂತ್ರನಾಳದಲ್ಲಿ ಹುಣ್ಣು, ಮೂತ್ರ ಹೊಯ್ಯುವಾಗ ಉರಿಯುವದು, ಮೂತ್ರನಾಳದಿಂದ ಕೀವು ಬರುವುದು, ಮೂತ್ರದಲ್ಲಿ ಧಾತು, ಹುಡಿ ಹೋಗುವುದು, ಆಗಾಗ್ಗೆ ಮೂತ್ರ ಬರುವದು, ಮೂತ್ರ ತಡೆಯಲಿಕ್ಕೆ ಸಾಮರ್ಥ್ಯವಿಲ್ಲದಿರುವುದು, ದೇಹದಲ್ಲಿ ಉರಿ, ಬಾಯಾರಿಕೆ, ಸ್ವಪ್ನಾವಸ್ಥೆ, ಮೂತ್ರನಾಳದಲ್ಲಿ ಬುಟ್ಟುವ ನೋವು ಇವುಗಳಿಗೆ ಪರಮ ಔಷಧಿ ಗಂಡಸರಿಗೂ ಹೆಂಗಸರಿಗೂ ಇದು ಅಮೃತವು ಬೆಲೆ—ಬಾಟ್ಲಿ 1, 3, 6ಕ್ಕೆ ರೂ. 1—4—0, 3—8—0, 6—12—0.

ರೋಮನಾಶಿನಿ.— ಈ ಹುಡಿಯನ್ನು ನೀರಲ್ಲಿ ಕಲಸಿ ಮೈಯಲ್ಲಿ ರೋಮವಿರುವ ಭಾಗಕ್ಕೆ ಹಚ್ಚಲು ರೋಮವು ಉದುರಿ ಬೀಳುವುದು ಡಬ್ಬಿ ೧ಕ್ಕೆ 6 ಆಣೆ 3 ಡಬ್ಬಿಗಳಿಗೆ ರೂ. 1, 1 ಡಜನಿಗೆ 3—8—0

ಅಮೃತರಿಷ್ಟ.— ಇದು ಕ್ವಿನೀನು ಬೆರಸದಿರುವ ಉತ್ತಮವಾದ ಔಷಧಿ. ಎಲ್ಲಾ ತರದ ಜ್ವರಕ್ಕೆ ಉತ್ತಮ. ಬೆಲೆ — ಬಾಟ್ಲಿ 1, 3, 6ಕ್ಕೆ ರೂ. 1—4—0, 3—8—0, 6—12—0.

ಲೋಹಾಸವ.— ಇದು ಜ್ವರಗಡ್ಡೆಗ ಮತ್ತು ಮಲೇರಿಯಾ ಜ್ವರದಿಂದುಂಟಾದ ಅಶಕ್ತತೆಗೆ ಉಪಯುಕ್ತವಾದ್ದು. ಬೆಲೆ—ಬಾಟ್ಲಿ 1, 3, 6ಕ್ಕೆ ರೂ. 1—4—0, 3—8—0, 6—12—0.

ನಮ್ಮ ಕೆಟಲಾಗು ತರಿಸಿ ನೋಡಿರಿ.

ವಿಳಾಸ—ಮನೋಲ್ಲಾಸಿನಿ ಕಂಪೆನಿ,
9 ಮಂಗಳೂರು, ಕಂಕನಾಡಿ.

52—11

ಮುದ್ದಾದ ಪುಸ್ತಕ! ಮುದ್ದಾದ ಮುದ್ರಣ!

ಶರೀರ ಸುಖ, ಸಂಪತ್ತು, ಐಶ್ವರ್ಯಗಳನ್ನು ಸಂಪಾದಿಸಲು ಸಲಹೆಗಳನ್ನೂ
ಮತ್ತು ಶರೀರ ಮರ್ಮಶಾಸ್ತ್ರ (ಕಾಮಶಾಸ್ತ್ರ)ವನ್ನೂ ತಿಳಿಸುವ

ಮರ್ಮ ಶಾಸ್ತ್ರ-ಎಂಬ ಕಾಮಶಾಸ್ತ್ರ.

ಈ ಪುಸ್ತಕವು ಮೊದಲು ಫ್ರೆಂಚ್, ಇಂಗ್ಲೀಷ್, ಹಿಂದುಸ್ಥಾನಿ, ಸಂಸ್ಕೃತ ಮುಂತಾದ ಭಾಷೆಗಳಲ್ಲಿ ಬಹು ಗುಪ್ತವಾಗಿತ್ತು. ಇದನ್ನು ನಾವು ಪ್ರಯಾಸದಿಂದ ಸಂಪಾದಿಸಿ ಕನ್ನಡಕ್ಕೆ ತರ್ಜುಮೆ ಮಾಡಿ (91 ಚಿತ್ರಪಟಗಳ ಸಹಿತ) ಥಳಥಳಿಸುವ ಕಾಗದದಲ್ಲಿ ಮುದ್ರಿಸಿ ತಯಾರಿಸಿದ್ದೇವೆ ಈ ಪುಸ್ತಕದಲ್ಲಿ ಸ್ತ್ರೀ ಪುರುಷರಿಗೆ ಬೇಕಾದ ಎಲ್ಲಾ ಮರ್ಮ ರಹಸ್ಯಗಳೂ, ಸ್ತ್ರೀ ಪುರುಷರು ಅನ್ಯೋನ್ಯವಾಗಿ ನಡೆದುಕೊಳ್ಳುವ ಮಾರ್ಗ. ಸ್ತ್ರೀ ಪುರುಷರಿಗೆ ಉಂಟಾಗುವ ಎಲ್ಲಾ ತರದ ಮರ್ಮವ್ಯಾಧಿಗಳು ಮತ್ತು ಅಂಥಾ ವ್ಯಾಧಿಗಳನ್ನು ಗುಣಮಾಡಿಕೊಳ್ಳುವ ಚಿಕಿತ್ಸೆಗಳೂ ಇನ್ನು ಅನೇಕ ತರದ ಮರ್ಮರಹಸ್ಯಗಳು ಚಿತ್ರಪಟಗಳ ಸಹಿತ ತುಂಬಿರುವದು. ಈ ಪುಸ್ತಕದ ಹೆಸರನ್ನು ಕೇಳಿದ ಮಾತ್ರಕ್ಕೆ ಸಂತೋಷವಾಗುವದು ಇದರ ಓದಲಿಕ್ಕೆ ಯಾರಿಗೆ ತಾನೇ ಸಂತೋಷವಾಗಲಾರದು.

ಕ್ರಯ ಪುಸ್ತಕ ಒಂದಕ್ಕೆ ಒಂದೇ ಒಂದು ರೂಪಾಯಿ. ರೂ. 1—0—0

T Ramachander Rao & Co ,
Post Box No 232,
Madras.

ಟಿ. ರಾಮಚಂದ್ರರಾವ್ ಅಂಡ್ ಕೊ,
ಪೋಸ್ಟ್ ಬಾಕ್ಸ್ ನಂ. 232.
ಮದ್ರಾಸ್.

52-11

ALot for SELECTION of Single Barrel Breach Loadig Guns at LOWEST PRICE EVER OFFERED.



Original Browning S. B.B.L. 12 bore Take Down Hammer'ess Automatic Ejector Gun, with safety catch..... .... Price, Rs. 140/-

Do do but by **Winchester** or **Remington** .... Price, Rs. 160/-

Winchester or **Remigton S. B. B. L.** 12 bore Six Shots Hammerless Repeating gun, 32 inches barrel with Safety catch.... .... Price, Rs. 150 -

German S. B. B. L. 12 bore Hammerless Ejector Gun, 32 inches German Steel Barrel with safety catch .... Price, Rs. 65/-

Continental Make Do Price, Rs. 55/-

Webley & Scott's S. B. B. L. 12 bore Semi Hammerless Ejector Gun, 32 inches Webley's Steel Barrel, ... Price, Rs. 75/-

The above Guns can be had in .1 , 20, & 410 bore Same as above in 12 bore **Special " Duck Gun "** 3inches b.... .... Price, Rs 80/-

W. W. Greener's " Gaffer " S. B. B. L. 12 bore Martini Action Ejector Gun, 26 inches Greener's Steel Barrel .... Price, Rs 75/-

W. W. Greener's as above but **Long Range Duck Gun "** with 32 inches barrel, and chamber for 2½ inches to 3 inches case..... .... Price, Rs 90/-

Midland's " Knock-About " S. B. B. L. Ejector Hammer Gun 32 inches barrel..... .... Price, Rs. 55/-

Continental Make S. B. B. L. folding Pattern Hammer Gun, 32 inches barrel beautifully engraved and carved..... .... Price, Rs. 45,

J. Steven's 12 bore Ejector Hammer Gun, 32 inches. Steel barrel..... .... Price, Rs. 45/-

Do do. ' Dread Naught " with heavy Breech Price,-Rs/50,-

Any of the above of J. Steven's **Special Duck Gun** with 36 inches barrel, Price, Rs. 5 Extra.

ENQUIRIES SOLICITED.

THE BOMBAY ARMOURY,

331, ABDUL REHMAN STREET,

BOMBAY. 3

24—18

EMPIRE OF INDIA
Life Assurance Company. Ltd.
(Established 1897)
Head Office Bombay.

STRIKING PROGRESS

Twenty-eight years of Economical and Careful management resultu!
Assets Exceeding
Rs. 2.50,00,000.
Today.

THE COMPANY TO INSURE
YOUR LIFE WITH.

For Prospectus and other particulars, please apply to the Local Agent or to
P. K Sankaranarayana Iyer
Branch Secretary for Mysore
State & Coorg
152,/3 Commercial Street; Bangalore.

24-6

ಆರೋಗ್ಯ ಚಂದ್ರಿಕೆ.

ಮದ್ರಾಸ್.
ಸಂಪಾದಕರು : ಡಾಕ್ಟರ್ ಯು. ರಾಮರಾವ್,
ಯಮ್. ಎಲ್. ಸಿ. ಯವರು.

ಆರೋಗ್ಯ ಚಂದ್ರಿಕೆಯು ಆರೋಗ್ಯ ಮತ್ತು ಶುಚಿತ್ವದ ವಿಷಯದಲ್ಲಿ ಸಾಮಾನ್ಯ ಪ್ರಜಾವರ್ಗಕ್ಕೆ ಶಿಕ್ಷಣ ದೊರೆಯುವ ದಕ್ಕಾಗಿ ಏರ್ಪಡಿಸಿದ ಒಂದು ಸಚಿತ್ರ ಮಾಸಪತ್ರಿಕೆ. ಈ ಮಾಸಪತ್ರಿಕೆಯು ' ಹೆಲ್ತ್ ' ಎಂಬ ಇಂಗ್ಲಿಷ್ ಮಾಸಪತ್ರಿಕೆಯ ಕನ್ನಡ ಪ್ರತಿಯಾಗಿದೆ ಆರೋಗ್ಯ ಚಂದ್ರಿಕೆಯಲ್ಲಿ ಪ್ರಸಿದ್ಧರಾದ ಡಾಕ್ಟರುಗಳ ಮತ್ತು ಆಯುರ್ವೇದ ಪಂಡಿತರ ಲೇಖನಗಳು ಆಗಿಂದಾಗ್ಗೆ ಪ್ರಕಟವಾಗುವದು.

ಆರೋಗ್ಯ ಚಂದ್ರಿಕೆಯಲ್ಲಿರುವ ಲೇಖನಗಳು ಹಳೆಯದಾಗದೆ ಪುನಃ ಪುನಃ ಓದಲು ಅರ್ಹವಾದವುಗಳಾಗಿರುವುವು. ಆರೋಗ್ಯ ಚಂದ್ರಿಕೆಯನ್ನು ತರಿಸಿ ಬೈಂಡ್ ಮಾಡಿಸಿ ಇಟ್ಟುಕೊಂಡರೆ ಎಲ್ಲರಿಗೂ ಉಪಯುಕ್ತವಾಗುವ ಅಮೂಲ್ಯವಾದ ಗ್ರಂಥವಾಗುವದು ಅಂಚೆಯ ವೆಚ್ಚ ಸೇರಿ ಈ ಪತ್ರಿಕೆಯ ಚಂದಾ ಮುಂಗಡ ವರ್ಷಕ್ಕೆ 1-8-0, ಬಿಡಿ ಪತ್ರಿಕೆ 1ಕ್ಕೆ 0-2-0. ಹಿಂದಿನ ಸಂಚಿಕೆಗಳು ಕೂಡಾ ದೊರೆಯುವವು.

ಪತ್ರವ್ಯವಹಾರಕ್ಕೆ. ' ಆರೋಗ್ಯ ಚಂದ್ರಿಕೆ ' 323,

ಪ್ರಕಟಣೆ.

ಒಂದು ಕಡೆ ಇಂಗ್ಲೀಷಿನಲ್ಲಿಯೂ, ಇನ್ನೊಂದು ಕಡೆ ಕನ್ನಡದಲ್ಲಿಯೂ ಪ್ರಿಂಟಾಗಿರುವ ಕಾಫಿ ತೋಟದ ಆಳುಗಳ ಬಿಡಾರ ಕಂಟ್ರಾಕ್ಟು ಎಗ್ರಿಮೆಂಟ್ ಫಾರಮುಗಳೂ ಮತ್ತು ಅಪ್ಲಿಕೇಶನ್ (complaint) ಫಾರಂಗಳೂ ಸಹ ಮಾರಾಟಕ್ಕೆ ತಯಾರಿವೆ. ಬೇಕಾದವರು ' ಕೊಡಗು ' ಆಫೀಸಿನಿಂದ ಪಡಕೊಳ್ಳಬಹುದು.

ಮಡಿಕೇರಿ ಮೇನೇಜರ್,
ತಾ. 17-9-24, ' ಕೊಡಗು ' ಆಫೀಸ್,

12 ರೋಸ್ ಸೆಂಟ್ ಬಾಟಲ್‌ಗಳು ಇನಾಂ.
ಬೆಸ್ಟ್ ಫೌಂಟನ್ ಪೇನಾ.

ಈ ಪೇನಾವು ಸೀಮೆಯಲ್ಲಿ ತಯಾರಾದದ್ದು. ಇದಕ್ಕೆ ಒಂದಾವರ್ತಿ ಇಂಕಿಯನ್ನು ಹಾಕಿದರೆ ಸಹ ಮೂರು 1000 ಮಾತುಗಳ ವರೆವಿಗೂ ಬರೆಯುವದು! 14 ಕ್ಯಾರೆಟ್ಟು ಭಂಗಾರದ ಮುಳ್ಳು ಇರುವದು ಇದನ್ನು ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ 12 ರೋಸ್ ಸೆಂಟ್ ಬಾಟಲ್ ಇನಾಮಾಗಿ ಕೊಡುವೆವು. ಕ್ರಯ ಪೇನಾ 1ಕ್ಕೆ 2—0—0

ಮೂನ್ ಲೈಟು ಸೋಪು.

ಈ ಸೋಪನ್ನು ಕೂದಲುಗಳಿಗೆ ಒಂದೇ ಒಂದು ನಿಮಿಷ ಹಾಕಿದರೆ ಕತ್ತಿಯಿಂದ ಕ್ಷೌರಮಾಡಿಸಿಕೊಂಡದ್ದಕ್ಕಿಂತಲೂ ಚೆನ್ನಾಗಿ ಚರ್ಮಕ್ಕೆ ಯಾವ ತೊಂದರೆಯೂ ಇಲ್ಲದೆ ಕೂದಲನ್ನು ತೆಗೆದುಬಿಡುವದು.

ನಮ್ಮ ಮೂನ್‌ಲೈಟ್ ಸೋಪ್. ಗಂಧ, ಮೊಡೆಮ್, ಬಿಲ್ಲಿ, ತಿರಿ, ಸವೆ, ಮುಂತಾದುವುಗಳನ್ನು ಕ್ಷಣ ಮಾತ್ರದಲ್ಲಿ ಮಾಯಮಾಡುವುದು.

3 ಸಾಬೂನುಗಳನ್ನು ಪೆಟ್ಟಿಗೆ 1ಕ್ಕೆ ರೂ. 1—4—0
ಒಂದೇ ಸಾ 2 ಪೆಟ್ಟಿಗೆ ತರಿಸಿಕೊಂಡರೆ ರೂ. 2—4—0
ವಿಳಾಸ:—
ಎಲ್ಜಿನ್ ವಾಚ್ ಕಂಪೆನಿ
ಪಿ. ಬಿ. ನಂಬರ್ 1251
ಮದರಾಸ

ಒಂದೇ ನೂರು ರೂಪಾಯಿಗಳಲ್ಲಿ!

ಟಿಕ್ = ಟಾಕ್ (ರಜಿಸ್ಟರ್ಡ).



ಎಂಬ ಗಡಿಯಾರವನ್ನು ನಿಮಗೆ ಪೂರೈಸುತ್ತೇವೆ. ಇದು ಕರಾರು ಗಂಟೆಯನ್ನು ತೋರಿಸುವುದು. ಇದಕ್ಕೆ ಬೀಗ ಕೊಡುವುದಾಗಿಲ್ಲ. ಇದನ್ನು ಕಟ್ಟುತ್ತಿರುವ ಗಂಟೆಯನ್ನು ತೋರಿಸಲಿಕ್ಕೆ ತನ್ನಷ್ಟಕ್ಕೆ ತಾನೇ ಸರಿಯಾದ ಕಾಲವನ್ನು ತೋರಿಸುವದು ಇವಕ್ಕೇ ತಿಳಿಸಿಕೊಳ್ಳಿರಿ.

ನಮ್ಮ ಸ್ಪೆಸಲ್ "ಕ್ರಿಸ್ಮಸ್" ಹಬ್ಬದ ಮಾರಾಟ

ಪ್ರಾರಂಭ ತಾ 1ನೇ ಜನವರಿ 1926.

ಕಡೆ ತಾ 5ನೇ ಮಾರ್ಚಿ 1926.

"ಕೊಡಗು" ಓದುವವರಿಗೆ ಮಾತ್ರ

ಎಲ್ಲಾ ವಾಚುಗಳಿಗೂ ಜಾಮೀನು ಐದು ವರುಷಗಳು



No. 515. Rs. 10. No. 511. Rs. 11.

No. 507 Rs. 12. No. 518. Rs. 10.

No. 519. Rs. 9. No. 516, Rs. 10.

22 ಕ್ಯಾರೆಟ್ ರೋಲ್ಡ್ ಗೋಲ್ಡ್ ಕೈಗೆ ಕಟ್ಟಿಕೊಳ್ಳುವ ಗಡಿಯಾರುಗಳು

ಸರ್ವೋತ್ತಮವು, ಬಹಳ ಅಗ್ಗ, ಅಚ್ಚು ಕಟ್ಟಾದ ಕೈ ಗಡಿಯಾರುಗಳು

ಪುಗಸಟ್ಟೆ ಕೊಡುವುದು. ಪ್ರತಿ ಒಂದು ವಾಚಿನ ಕೂಡ ಒಂದು ಫೌಂಟನ್ ಪೆನ್ ಮತ್ತು ಮೇಲಾದ ಲೇಸ್ಟ್ ಪಟ್ಟಿ ಬಿಟ್ಟಿ ಕಳುಹಿಸುವೆವು. ಈಗಲೇ ಬರೆಯಬೇಕು

ಸೀಟಿಜ ವಾಚ ಕಂಪೆನಿ,
ಪೋಸ್ಟ ಬಾಕ್ಸ ನಂಬರ 27
ಮದ್ರಾಸ್.

ಅತ್ಯಲ್ಪವಿನ! ಉಚಿತ!



ಕೇವಲ ಉಚಿತ! ಕೇವಲ ಉಚಿತ!!

"ತಾರಾ" ಲೀವರ ರಜಿಸ್ಟರ್ಡ್ ಪೋಕೆಟ್ ವಾಚ್ಚು ಗಿಲಿಕೆಟ್ ರೋಲ್ಡ ಗೋಲ್ಡಿನದು. ಮುಖಬಿಲ್ಲೆಯ ಮೇಲೆ ೫ ವರ್ಷದ ಗ್ಯಾರಂಟಿ ಇರುವದೆಂದು ಗಡಿಯಾರ ಕರ್ತರು ಅಚ್ಚು ಹೊಡೆದಿರುವರು. ಈ ಗಡಿಯಾರವನ್ನು ಕೊಂಡುಕೊಳ್ಳುವವರಿಗೆ ನಾವು ನಮ್ಮ "ಸಿ" ರಜಿಸ್ಟರ ಟ್ರ್ಯಾಂಪೀಸನ್ನು ಉಚಿತವಾಗಿ ಕೊಡುತ್ತೇವೆ. ಇದೊಂದು ಅಪೂರ್ವ ಅವಕಾಶ. ಕೆಲವೇ ಗಡಿಯಾರಗಳಿವೆ. ಒಮ್ಮೆ ಕೂಡಲೆ ನೋಡಿರಿ! ಉಚಿತವಾಗಿ ಸಿಗುವ ಹಾಗು "ತಾರಾ" ಲೀವರ ರಜಿಸ್ಟರ್ಡ್ ಗಿಲ ಕೆಟ್ ರೋಲ್ಡಗೋಲ್ಡಿನ ಪೋಕೆಟ್ವಾಚ್ ಗಡಿಯಾರಗಳಿಗೆ ಕೂಡಿ ಬರೇ ರೂಪಾಯಿ ೫.

CAPTAIN WATCH CO., P. B. 265, MADRAS

12—6

ಕಿರ್ಲೋಸ್ಕರ ಗಾಣಗಳು.

ಈ ಕೆಳಗಿನ ಕಬ್ಬಿನ ಗಾಣಗಳು ನಮ್ಮ ಶಾಖೆಯಲ್ಲಿ ತಯಾರಾಗುತ್ತವೆ

೧. ಕಿರ್ಲೋಸ್ಕರ ನಂ. ೫.

೨. "ಕಿಸಾನ"

೩. "ಕಮಲ ಚರಕ"

ಇವುಗಳ ಸವಿಸ್ತಾರ ಸಂಗತಿ ಒಗ್ಗೆ ಹಾಗೂ ಬೆಲೆಯ ಬಗ್ಗೆ ಕೂಡಲೇ ತಿಳಿದುಕೊಳ್ಳಿರಿ.

ಕರ್ನಾಟಕ ತರುಣರ ಉನ್ನತಿಗೋಸ್ಕರ

ಕಿರ್ಲೋಸ್ಕರ ವಾರ್ತೆ,

ಎಂಬ ತಿಂಗಳ ಮಾಸ ಪತ್ರಿಕೆಯನ್ನು ಪ್ರಕಟಿಸುತ್ತೇವೆ. ವಾ. ಚ. ೧, ರೂ. ಮಾದರಿ ಸಂಚಿಕೆ ಪುಕ್ಕಟೆ.

ಕಿರ್ಲೋಸ್ಕರ ಬಂಧು, ಲಿಮಿಟೆಡ್.
ಕಿರ್ಲೋಸ್ಕರವಾಡಿ,

16—3 **ಜಿ. ಸಾತಾರ್.**

ಲೋಕಪ್ರಸಿದ್ಧವಾದ! ಅನುಭವಸಿದ್ಧವಾದ!

ಮೂರುದಿವಸಗಳಲ್ಲಿ ಗುಣಸಿಕ್ಕದಿದ್ದರೆ ಔಷಧಿಯಕ್ರಯ ವಾಪಾಸು ಜೀರ್ಣಶಕ್ತಿ, ರಕ್ತವೃದ್ಧಿ, ಧಾತುಪುಷ್ಟಿ, ಮನೋಲ್ಲಾಸ, ಪರಮಾನಂದ ಮೊದಲಾದ ಸುಖ ಜೀವನಕ್ಕೆ ಬೇಕಾದ ಆರೋಗ್ಯದಾಯಿನಿ

ಟ್ರೇಡ್‌ಮಾರ್ಕ್] **ಅಗಸ್ತ್ಯ** [ನೋಡಿ ತೆಕ್ಕೊಳ್ಳಿರಿ.

ಮನ್ಮಥ ಚಿಂತಾಮಣಿ ಲೇಹ

ರಿಜಿಸ್ಟರ್ ಆದದ್ದು.

ಅಬಾಲವೃದ್ಧ ಸ್ತ್ರೀ-ಪುರುಷರ ಅನೇಕ ರೋಗಗಳ ಮೇಲೆ ಗುಣ ಕಾರಿಯಾದ್ದು. ಮೇಹ ವಿಕಾರವಿದ್ದವರಿಗೂ, ನಿದ್ರೆ ಇಲ್ಲದವರಿಗೂ, ಸ್ವಪ್ನೇಂದ್ರಿಯವಾಗುವ ಬಾಲಕರಿಗೂ, ಬ್ರಾಹ್ಮಿ ಮುಹೂರ್ತಸಿಗಳಿಗೂ ಉಪಯೋಗವಿದ್ದ ಬಹುಪರಮಾನಂದ ಔಷಧಿ 1ಸೇರು 48ದಿವಸ ಸೇವಿಸಬಹುದು. ನಂ. (1) 1ಸೇರು ಡಬ್ಬಿ 1ಕ್ಕೆ ರುಪಾಯಿ 3—0—0. ½ಸೇರು ಡಬ್ಬಿ 1ಕ್ಕೆ ರುಪಾಯಿ 1—9—0 ನಂ. (2) 1ಸೇರು ಡಬ್ಬಿ 1ಕ್ಕೆ ರುಪಾಯಿ 2—0—0, ½ ಸೇರು ಡಬ್ಬಿ 1ಕ್ಕೆ 1—1—0 ವಿ ಪಿ. ಖರ್ಚು ಪ್ರತ್ಯೇಕ. ವಿಶೇಷ ಮಾಹಿತಿಗೆ ಬರಕೊಳ್ಳಿರಿ

ವಿಳಾಸ:—ದೇವಣ್ಣ ನಾರಾಯಣಸೇಟ್,
ಗೋಳಿಕಟ್ಟಾ,
ಮಂಗಳೂರು,

52—27 ದ. ಕ.

ಸತ್ಯಮೇವಜಯತೇ.

(ಪಥ್ಯ ಗುಣವಾಗದಿದ್ದರೆ ಹಣ ಪರತ ಇಲ್ಲಾ)

ಧಾತುಪೌಷ್ಟಿಕ ಕಾಮೋತ್ತೇಜಕ, ಇಂದ್ರಿಯಸ್ತಂಭಕವಾದ

ಮದನೋದ್ಭವ ಗುಳಿಗೆ.

ಜನನೇಂದ್ರಿಯದ ಶಿಥಿಲತೆ ನಿರ್ಬಲತೆ ನಪುಂಸಕತ್ವ ಸ್ತ್ರೀ [illegible] ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣಕಾರಿಯಾಗಿ ಧಾತು ಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋಲ್ಲಾಸಕ ಇಂದ್ರಿಯ ಸ್ತಂಭಕ, ಗರ್ಭಿಣಿ, (ಟಾನಿಕ) ಗುಣವುಳ್ಳದ್ದರಿಂದ ಮೇಲೆ ಹುಟ್ಟಿರುವ ಎಲ್ಲ ತರಹದ ಎಕ್ಕೆಗಳು, ಮುಪ್ಪುಗಳು ಪಿತ್ತದ ಬಾಧೆಗಳು, ಕಟಿಶೂಲೆ ಮಂಕರೋಗವು ಮುಂತಾದವು ಅತ್ಯಲ್ಪ ಗುಣವಾಗಿ ಶರೀರಕ್ಕೆ ನಿರೋಗತ್ವವೂ ಕಾಂತಿಯೂ ರಕ್ತಿಸುವಿಕೆ ವೃದ್ಧಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆ ಯ ಬೆಲೆ ಕಾಗುತ್ತದೆ. ಕಿಮ್ಮತ್ತು ೬೦ ಗುಳಿಗೆಗಳಿಗೆ ೪ ರೂ ಪಾಯಿ. ಇದನ್ನು ಸೇವಿಸುವಾಗ್ಗೆ **ನಪುಂಸಕತ್ವಾ ತೈಲವನ್ನು** ಉಪಯೋಗಿಸಿದರೆ ಉತ್ತಮ. ಕಿಮ್ಮತ್ತು ಬಾಟ್ಲಿಗೆ ರೂ ೨—೧೨—೦.

ಪ್ರಮೇಹನಿವಾರಣಿ—ಇದರ ಸೇವನೆಯಿಂದ ಮೂತ್ರನ್ನಾಪದಿಂದ ಕೀವು ಹರಿಯುವಿಕೆ ಹೋಗುವ್ದು ತೀವ್ರ ಉರಿ, ವಗೈರೆ ಆಗದಿರುತ್ತಿಯಿಂದ ಗುಣವಾಗುವದು. ಕಿಮ್ಮತ್ತು ಬಾಟ್ಲಿಗೆ ರೂ. ೩—೮—೦. ಟ ಖ ಬೇರೆ ಆನುಪಾನ ಪತ್ರಿಕೆ ಔಷಧದ ಸಂಗಡ. ಪಥ್ಯ. ಗುಣವಾಗದ್ದರೆ ಆಣವರದ

ವಿಳಾಸ,—

ವೈದ್ಯ ಜಿ. ಎಲ್. ಜೋಶಿ ಮತು ಕಂಪೆನಿ.

7 ನಂ 6. ಪೋಶ್ಟ ಬನವಾಸಿ, ಉತ್ತರ ಕಾನಡಾ.

ಜ್ವರಗಳ ಮೇಲೆ ಅಮೂಲ್ಯ ಔಷಧವು.

ಕರ್ನೋಲ

ಟಾನಿಕ್ ಸಿರಪ್.

(ಶಕ್ತಿವರ್ಧಕ ಸರಬತ್ತು)

ಛಂಡಿಜ್ವರ, ಮಲೇರಿಯ ಮೊದಲಾದ ಜ್ವರಗಳು ಬಿಟ್ಟ ನಂತರ ಬರುವ ಅಶಕ್ತತೆ, ಸಣ್ಣಜ್ವರವು ಬರುತ್ತಿರುವುದು ಮೊದಲಾದವುಗಳ ಮೇಲೆ ಇದು ಒಂದು ಅಮೂಲ್ಯ ಔಷಧವಾಗಿರುತ್ತದೆ.

ನಮ್ಮ ಎಗ್ಯುವಿಶಾಸ್ತ್ರವನ್ನು ಸೇರಿಸಿ ಗುಣವನ್ನು ಹೊಂದಿದ ಪ್ರತಿಯೊಬ್ಬನು ಇದರ ಒಂದು ಬಾಟ್ಲಿಯನ್ನಾದರೂ ಅಗತ್ಯವಾಗಿ ಸೇವಿಸಬೇಕು. ಅಂದರೆ ಅವನಿಗೆ ಜ್ವರದನಂತರ ಬರುವ ಅಶಕ್ತತೆಯು ಬರಲಿಕ್ಕೇ ಇಲ್ಲ.

ಬೆಲೆ ೧ ರೂಪಾಯಿ ಟಪಾಲು ವೆಚ್ಚ ಬೇರೆ.

12—6 ಕರ್ನೋಕ ಬ್ರದರ್ಸ

ಗಿರಗಾಂವ, ಮುಂಬಾಯಿ.

ಇದು ಒಳ್ಳೆ ಸಮಯ!

ಹಂಚುಗಳು.

ಈಗಾಗಲೇ ವಿರಾಜಪೇಟೆಯಲ್ಲಿ ನಾವು ಕೂಡಾ ಎಲ್ಲಾ ತರದ ಹಂಚುಗಳು ಅಂದರೆ, ಹಂಚು, ಮೂಲೆ ಹಂಚು, ಪಾತಿಹಂಚು, ಹೊಗೆಹಂಚು, ನೆಲಹಂಚು, ವಗೈರೆ ಎಲ್ಲಾ ಹಂಚುಗಳನ್ನು ಸಿದ್ಧಪಡಿಸಿರುತ್ತೇವೆ. ಕೂಡಲೇ ಹಂಚು ಬೇಕಾದವರು ವಿರಾಜಪೇಟೆಯಲ್ಲಿ ಈ ಕೆಳಗೆ ರುಜು ಮಾಡಿದವರ ಆಫೀಸಿಗೆ ಬಂದು ಕೊಳ್ಳಬಹುದು. ಅಲ್ಲದೆ ಹಂಚುಗಳ ಸ್ಯಾಂಪಲನ್ನು ಸಹ ನೋಡಬಹುದು. ಎಲ್ಲಾ ವಿವರಕ್ಕೂ, ಕ್ರಯಕ್ಕೂ, ಮತ್ತು ಪರತ್ತಿಗೂ ಈ ಕೆಳಗಿನವರಿಗೆ ದಯವಿಟ್ಟು ಬರೆದುಕೊಳ್ಳಿ

ವಿರಾಜಪೇಟೆ ಕೆ. ಪಿ. ಚೆನ್ನಪ್ಪ,

12—10 ಸಾದಿ ಭಂಡಾರ.

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್, ಕೋ ಅಪರೇಟಿವ್ ಸೊಸೈಟೀಸ್ ಆಕ್ಟಿನ ಪ್ರಕಾರ ರಿಜಿಸ್ಟರಾಗಿದೆ.

		ರೂ.
ಶೇರ್ ಬಂಡವಾಳ	—	50,000
ವಸೂಲಾದ ಶೇರ್ ಮೊಬಲಗು	—	9,9[illegible]
ಜಮೂಬಂದ ಠೇವಣಾತಿ	—	90,600

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲಕೊಡತಕ್ಕದ್ದು.

ಒಂದು ವರ್ಷ ವಾಯಿದೆ ಅಥವ ಹೆಚ್ಚಿನ ವಾಯಿದೆಯ ಠೇವಣಾತಿಗಳಿಗೆ ಶೇಕಡ ನಾಲಿಯಾನ ರೂ. ೬—೪—೦ರ ದರದಲ್ಲಿ ಬಡ್ಡಿ ದೊರೆಯುತ್ತೆ. ಕಡಿಮೆ ವಾಯಿದೆಯ ಠೇವಣಾತಿಗಳಿಗೆ ಶೇಕಡ ನಾಲಿಯಾನ 5ರ ಬಡ್ಡಿ ದೊರೆಯುತ್ತೆ.

ವರ್ಷಕ್ಕೊಂದಾವರ್ತಿ ಕೋ ಅಪರೇಟಿವ್ ರಜಿಸ್ಟ್ರಾರರು ಲೆಕ್ಕ ಆಡಿಟು ಮಾಡುತ್ತಾರೆ.

ಪ್ರಸಿಡೆಂಟರು, ಟ್ರೆಜರರ್

ಕೊಡಂಡೆರ ಕುಟ್ಟಯ್ಯನವರು, ಯಂ. ಭುಜಂಗರಾಯರು

ರಾಯ್ ಬಹದ್ದೂರ್. ಬಿ.ಎ, ಬಿ.ಎಲ್.

ಸೆಕ್ರೆಟರಿ.

ಸಿ. ಯನ್. ವೆಂಕಪ್ಪಯ್ಯನವರು, ಬಿ.ಎ, ಬಿ.ಎಲ್.

ತಾರೀಕು. 29—8—1925.

ARMS & AMMUNITION MART,
Mahomedally-Noorbhoy.



321 Abdul Rehman Street, near Crawford Market, BOMBAY. 3
Telegraphic Address.—"SHOOTER" Bombay.

[52—27] Please write for Reduced nett prices list for 1926

Printed & published by Kodanda Appayya, R.B Chairman, Board of Directors, at "Kodagu" Press, Mercara

If not delivered please return to
"KODAGU" OFFICE MERCARA.

ಕೊಡಗು.

ಪುಸ್ತಕ ೩ ಸಂಚಿಕೆ ೧೦.

[ಸ್ವಕೀಯ ಭೂಷಣಮಯಂ ...] ಸಂಪಾದಕ—ಸಂಡ್ಯಂಡ ಎ. ಬೆಳ್ಯಪ್ಪ.

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವದು.

ಸಂಪುಟ ೩ ... ಕೊಡಗು, ಸನ್ ೧೯೨೬ನೇ ಇಸವಿ ಮಾರ್ಚಿ ತಾರೀಖು ೧೨ ನೇ ಶುಕ್ರವಾರ ... ಸಂಚಿಕೆ ೪೯

... ಕಂಪೆನಿ, ಮಡಿಕೇರಿ.

... ಕೆಳಗೆ ನಮೂದಿ... ದ ಕೋವಿಗಳು ಮತ್ತು ಇದರ

ಸಾಹಿತ್ಯಗಳು ಹೊಸದಾಗಿ ಬ... ಒಳ್ಳೇ ನಮೂನೆ.

ಜಾಗ್ರತೆ!! ನೋಡ ಹೋಗದಿರಿ!!!

ದರ ಸುಲಭ!

12 ಬೋರ್ ಜೋಡಿ ಕೊಳವಿನ ಹ್ಯಾಮರ್ ಲೆಸ್ ಕೋವಿ 175-0-0	12 ಬೋರ್ ಒಂಟಿಕೊಳವಿನ ಕೋವಿ 60-0-0	ಕೇಪು 250 ರ ಟಿನ್ನಿಗೆ	1-2-0
" " " 1..-0-0	" " 57-8-0	12 ಬೋರ್ ಚಿಲ್ಲು ಕೋವಿಗಳು 100ಕ್ಕೆ	12-8-0
" " " 95-0-0	ಒಂಟಿ ಕೊಳವಿನ ಕೇಪು ಕೋವಿ 60 - & 85 -	" ಸ್ಪೆಷಿಯಲ್ ಲೋಡಿಂಗ್ "	15-8-0
" ಒಂಟಿ ಕೊಳವಿನ " 90-0-0	ಜೋಡಿ " " 70 & 85 -	" ಗುಂಡು ಕೋವಿ "	19-0-0
" " " 80-0-0	ಮದ್ದು 1 ಪೌಂಡು ಟಿನ್ನಿಗೆ 2-4-0	" ಆನೆ ಚಿಲ್ಲು " "	16-0-0
" " " 65-0-0	" ½ " " 0-9-0		

Spencer & Co. Ltd.
MERACRA, & POLLIBETTA.

52—19

ನೋಟೀಸ್.

ಈ ಕೆಳಗಿನ ಮಹನೀಯರು 'ಕೊಡಗು' ಪತ್ರಿಕೆಯ ಚಂದಾ ಹಣವನ್ನು ವಸೂಲ್ಮಾಡಲು ಒಪ್ಪಿಕೊಂಡದ್ದರಿಂದ, ಅವರಿಗೆ ರಶೀತಿ ಪುಸ್ತಕಗಳನ್ನು ನಮ್ಮ ಏಜಂಟರು ಮೆ ಚಂಗುಡ ತುಟ್ಟೆಪ್ಪನವರ ಜವಾಬುದಾರಿಕೆಯ ಮೇಲೆ ಕೊಡಲಾಗಿದೆ. ದಯವಿಟ್ಟು ಚಂದಾದಾರರೆಲ್ಲರೂ ಅವರಿಗೆ ಅನುಕೂಲವಿರುವ ಜಾಗಗಳಲ್ಲಿ ಪಾವತಿ ಮಾಡಬೇಕಾಗಿ ಕೋರಿಕೆ.

ಏಜಂಟರುಗಳು.

ವೀರಾಜಪೇಟೆ—ಖಾದಿ ಭಂಡಾರದಲ್ಲಿ ಪೆ. ಚಂಬಾಂಡ ಮುತ್ತಣ್ಣನವರು.

ನಲ್ಲೂರ್ನಾಡು—ಕಮರ್ಷಿಯಲ್ ಸ್ಟೋರಿನಲ್ಲಿ ಮೆ ಮ... ಪೆಯಂಡ ದೇವಯ್ಯನವರು.

ನಾಪೋಕ್ಲು—ಮೆ.. ಅರೆಯಡ ಸುಬ್ಬಯ್ಯನವರು

" ಮೆ. ಪೊನ್ನಚಂಡ ಮುದ್ದಪ್ಪನವರು..

ಪೊನ್ನಂಪೇಟೆ—ಮ ಸಿ ಪಿ. ಮುದ್ದಯ್ಯನವರು.

ಗೋಣಿಕೊಪ್ಪಲು—ಮೆ.. ಮಾಡ ಮಾಡಪ್ಪನವರು

ಹುದಿಕೇರಿ—ಮೆ ಜಿ. ಮಂದಣ್ಣಯ್ಯನವರು.

ಅಮ್ಮತ್ತಿ, ಸಿದ್ದಾಪುರ—ಮೆ. ಪಿಸಂಡ ಮಾದಪ್ಪನವರು ಮತ್ತು ವೀರಾಜಪೇಟೆ—ಮೆ. ಕಲಿಯಂಡ

" ಸೋಮಯ್ಯನವರು.

ಶ್ರೀಮಂಗಲ—ಮೆ ಇಟ್ಟೀರ ಚಂಗಪ್ಪನವರು.

ಅಲ್ಲದೆ ಈ ಪಟ್ಟಣದ ಮೆ. ಚಂಗಂಡ ... ನವರು ಕೊಡಗಿನ ಎಲ್ಲಾ ಕಡೆಗಳಲ್ಲೂ ಸಂದರ್ಭಾನುಸಾರ ಸುತ್ತುತ್ತಿರುವಾಗ ಅವರಿಗೂ ಹಣ ನೊಟಿಲಗು ಕೊಡಬೇಕಾಗಿ ಕೋ...

ಮೇನೇಜರ್ "ಕೊಡಗು" ಲಿ...

ಡಾಕ್ಟರ್ ಎಸ್. ಎನ್. ಅಯ್ಯಂಗಾರ್, ಬಿ. ... ಎಲ್. ಆರ್. ಸಿ. ಪಿ. ... ಎಸ್. ಎಫ್. ಪಿ. ... [illegible]

[illegible]

ವರೆಗೆ ... ಸಿರಿ ತ್ಯಾರೆ ... ಹೊಸ್ಪಿಟ್ಲಿನಲ್ಲಿ ... ೨೦ರಿಂದ ... ರಾಜಪೇಟೆ ಡಿಸ್ಪೆನ್ಸರಿಯಲ್ಲಿ ... ಬಿಡುವಿನ್ಯಾಗಿ ... ಅವರನ್ನು ಅಲ್ಲಿ ಬೇಗನೆ ಭೇಟಿಯಾಗಿ ಕೊಳ್ಳುವುದು ಉತ್ತಮವು

ದಂತ ಸಂಜೀವಿನಿ.

ಯಾವ ತರದ ಹಲ್ಲುನೋವನ್ನಾದರೂ ಫಕ್ಕನೆ ಶಮನ ಮಾಡುವ ಶಕ್ತಿಯುಳ್ಳ ಈ ದಂತ ಸಂಜೀವಿನಿ ತುಪ್ಪಿ ಒಂದಕ್ಕೆ ಕ್ರಯ ರೂ 1—0—0 ಮಾತ್ರ. ಎಸ್. ರಾಮಣ್ಣ,

C/o. ಡಾಕ್ಟರ್ ಎಸ್. ಎನ್. ಅಯ್ಯಂಗಾರ್,

48-10 ಮಹದೇವಪೇಟೆ, ಮಡಿಕೇರಿ.

ಮಹನೀಯರೇ,

1923ನೇ ಇಸವಿಯಲ್ಲಿ ವೀರರಾಜೇಂದ್ರಪೇಟೆಯಲ್ಲಿ ತೆರೆದ ನಮ್ಮ ವೈದ್ಯಶಾಲೆಯ ಶಾಖೆಯಲ್ಲಿ ಅನೇಕ ದುಸ್ಸಾಧ್ಯವಾದ ಕಾಯಿಲೆಗಳನ್ನು ಗುಣಪಡಿಸಿ ಪೆಸರುವಾಸಿ ಹೊಂದಿದ ನಮ್ಮ ಕಂಪೆನಿಯ ಮತ್ತೊಂದು ಶಾಖೆಯು ಈಗಾಗಲೇ **ಸೋಮವಾರಪೇಟೆಯಲ್ಲಿ** ತೆರೆಯಲ್ಪಟ್ಟಿದೆ.

ಕೃಷ್ಣ ಸಂಬೇಕರ್ ಮತ್ತು ನಾರಾಯಣ ಸಂಬೇಕರ್ ಎಂಬ ಹೆಸರುಗಳುಳ್ಳ ನಮ್ಮ ಪ್ರಧಾನ ವೈದ್ಯರುಗಳು ಒಬ್ಬೊಬ್ಬರು ಒಂದೊಂದು ಶಾಖೆಯಲ್ಲಿ ಯಾವಾಗಲೂ ಇರುತ್ತಾರೆ.

ಈ ವೈದ್ಯರುಗಳು ಇಂಡಿಯಾ ಚಕ್ರವರ್ತಿಯವರಿಂದ ವೈದ್ಯರತ್ನವೆಂಬ ಪದವನ್ನು ಹೊಂದಿದವರಾಗಿಯೂ ಕೊಚ್ಚಿ ಸಂಸ್ಥಾನದ ರಾಜಮಂತ್ರ ... ರ ವೈದ್ಯರಾಗಿಯೂ ಸುಪ್ರಸಿದ್ಧ ಹೆಸರುವಾಸಿಯನ್ನು ಪಡೆದವರಾಗಿಯೂ ಇರುವ ಇ. ಟಿ. ನಾರಾಯಣನ್ ಮೂಸ್ ಎಂಬ ಮಹಾನುಭಾವರ ಕೈಕೆಳಗೆ ಹೆಚ್ಚು ವರ್ಷಗಳಿದ್ದು ಪಾಂಡಿತ್ಯವನ್ನೂ ಪರಿಚಯವನ್ನೂ ಪಡೆದವರಾಗಿಯೂ ಇದ್ದಾರೆ.

ಇಷ್ಟಲ್ಲದೆ ಎಲ್ಲಾ ಔಷಧಗಳಿಗೆ ಮಲೆನಾಡಿನ ಎಲ್ಲಾ ವೈದ್ಯಶಾಲೆಗಳ ಔಷಧಗಳ ಚಾರ್ಜಿಗಿಂತಲೂ ಕಡಿಮೆ ಯಾಗಿದೆ.

ಸಂಬೇಕರ್ ಮತ್ತು ಕಂಪೆನಿ,
ಆಯುರ್ವೇದಿಕ್ ಪ್ರೈವೇಟ್ ಡಿಸ್ಪೆನ್ಸರಿ.
ಕಣ್ಣೂರು, ವೀರಾಜಪೇಟೆ ಮತ್ತು
ಸೋಮವಾರಪೇಟೆ.

ಪ್ರಕಟಣೆ.

ನಮ್ಮ ಅಂದವಾದ ಹೊಸ ಅಕ್ಷರಗಳು ಬಂದು ತಲಪಿದ ವುದರಿಂದ, 'ಲೆಟರ್ ಹೆಡ್ಸ್', 'ವಿಸಿಟಿಂಗ್ ಕಾರ್ಡ್ಸ್' ದ ಮಂತ್ರಣಗಳು (ಇನ್ವಿಟೇಶನ್) ಮೊದಲಾದ ಪ್ರಿಂಟಿಂಗ್ ಕೆಲಸಗಳನ್ನು ಇಂಗ್ಲಿಷ್ ಮತ್ತು ಕನ್ನಡದಲ್ಲಿ ಅಂದವಾಗಿಯೂ ಕಡಿಮೆ ಚಾರ್ಜಿನಲ್ಲಿಯೂ ನಿಯಮಿತ ಕಾಲದಲ್ಲಿಯೂ ಮಾಡಿಕೊಡಲು ತಯಾರಾಗಿದ್ದೇವೆ.

ಮಡಿಕೇರಿ. ಮೇನೇಜರ್,
'ಕೊಡಗು' ಲಿಮಿಟೆಡ್

ಆಂಧ್ರ ಆಯುರ್ವೇದಿಕ್ ಫಾರ್ಮಸಿ

ಸ್ಟ್ರಾಂಟ್, ಬೆಂಗಳೂರು ಸಿಟಿ

ಚ್ಯವನಪ್ರಾಸ ಲೇಹ.

ಇದು ಸರ್ವೋತ್ಕೃಷ್ಟವಾದ ಗಿಡಮೂಲಿಕೆಗಳಿಂದ ತಯಾರಿಸಲ್ಪಟ್ಟ ಆಯುರ್ವೇದ ರಸಾಯನೌಷಧವು. ವಿದ್ಯಾರ್ಥಿಗಳೂ ವಿಶೇಷವಾಗಿ ಬುದ್ಧಿಯನ್ನು ಪ್ರಯೋಗಿಸಿ ಕೆಲಸ ಮಾಡುವವರೂ ಈ ಲೇಹವನ್ನು ಸೇವಿಸಿದರೆ ವಿಶೇಷವಾಗಿ ಬುದ್ಧಿಶಕ್ತಿಯನ್ನೂ ಜ್ಞಾಪಕಶಕ್ತಿಯನ್ನೂ ಹೊಂದುವರು.

ದೀರ್ಘಕಾಲದ ವ್ಯಾಧಿಯಿಂದಾಗಲಿ ಕೆಟ್ಟ ನಡತೆಯಿಂದಾಗಲಿ, ಸ್ವಭಾವ ಶಕ್ತಿಯ ಕೊರತೆಯಿಂದಾಗಲಿ ಶರೀರ ಕಾಂತಿಯು ಕುಂದಿ ರಕ್ತ ಕೆಟ್ಟ ಇಂದ್ರಿಯ ದೌರ್ಬಲ್ಯವೇ ಮೊದಲಾದ ವಿಕಾರಗಳಿಂದ ಪೀಡಿತರಾಗಿರುವವರು ಈ ಲೇಹವನ್ನು ಸೇವಿಸಿದರೆ ಈ ತರದ ವಿಕಾರಗಳನ್ನೆಲ್ಲಾ ಪರಿಹರಿಸಿ ದೇಹಕ್ಕೂ ಮನಸ್ಸಿಗೂ ಉಲ್ಲಾಸವನ್ನುಂಟುಮಾಡಿ ಮಾಂಸ ಖಂಡಗಳಿಗೂ ನರಗಳಿಗೂ ಬಲವನ್ನು ಕೊಟ್ಟು ದೇಹಪುಷ್ಟಿಯನ್ನುಂಟುಮಾಡಿ ನವಚೈತನ್ಯವನ್ನುಂಟುಮಾಡುವುದು.. ಅಲ್ಲದೆ ಆರೋಗ್ಯದೃಢಶರೀರವುಳ್ಳವರಾಗಿ ದೀರ್ಘಕಾಲ ಬದುಕುವರು. ಕೆಮ್ಮು ಉಬ್ಬಸ ವ್ಯಾಧಿಯುಳ್ಳವರಿಗೂ ಮುಖ್ಯವಾಗಿ ಕ್ಷಯರೋಗಿಗಳಿಗೂ ಇದು ಸಂಜೀವಿನಿಯೇ ಸರಿ! ಚರಕ ಸಂಹಿತೆಯಲ್ಲಿ ಇದರ ಗುಣವು ಅದ್ಭುತವಾಗಿ ಹೇಳಲ್ಪಟ್ಟಿದೆ. ೧೦ ತೊಲೆಗೆ ೧ ರೂಪಾಯಿ. ೪೦ ತೊಲೆಗೆ ೩ ರೂಪಾಯಿ

ಎಲ್ಲಾ ಕಡೆಯಲ್ಲಿಯೂ ಏಜಂಟರು ಬೇಕು.

ಸೂಚನೆ—ಇಲ್ಲಿ ಶಾಸ್ತ್ರೀಯವಾಗಿ ಎಲ್ಲಾ ಔಷಧಗಳ ತಯಾರಿಕೆ ಕ್ರಮ... ಆಯುರ್ವೇದ ... ಎಸ್. ಎ. ಸಿ ... ರೋಗಿಗಳನ್ನು ... ಪರೀಕ್ಷಿಸಿ ... ಚಿಕಿತ್ಸೆಯನ್ನು ಪ್ರತಿದಿನವೂ ನಡಿಸುವರು. ವಿಶೇಷ ಸಂಗತಿಗೆ ತಿಳಿಸಿ ... ಉತ್ತರಕ್ಕೆ ಬರೆಯಿರಿ.

ಟಿ. ಸಿ. ಎಸ್. ಮಣಿಯಂ ಅಂಡ್ ಕೋ,

ಮ್ಯಾನೇಜಿಂಗ್ ಏಜಂಟ್ಸ್, ಆಂಧ್ರ ಆಯುರ್ವೇದಿಕ್ ಫಾರ್ಮಸಿ,

16—6 ೬೬. ಚಿಕ್ಕಪೇಟೆ, ಬೆಂಗಳೂರು ಸಿಟಿ.

"ಕೊಡಗು"

ಸನ್ ೧೯೨೬ನೇ ಇಸವಿ ಮಾರ್ಚಿ ತಾ. ೧೨ನೇ ಶುಕ್ರವಾರ.

೧೯೨೬-೨೭ನೇ ವರ್ಷದ ಕೊಡಗು ಬಜೆಟ್ (ಆದಾಯವೆಚ್ಚದಪಟ್ಟಿ.)

ಕೊಡಗು ನ್ಯಾಯವಿಧಾಯಕ ಸಭೆಯ ಮುಂದೆ ಮೂರನೇ ಸಾರಿ ಕೊಡಗು ಸರಕಾರದ ಆದಾಯವೆಚ್ಚದ ಪಟ್ಟಿಯು ಫೈನಾನ್ಸ್ ಮೆಂಬರಾದ ಕಮೀಶನರಿಂದ ಇಡಲಾಯಿತು. 1926—27ನೇ ವರ್ಷದಲ್ಲಿ 12,74,000 ರೂಪಾಯಿ ಉತ್ಪತ್ತಿಯೂ 13,66000 ರೂಪಾಯಿ ಖರ್ಚೂ ಅಂದಾಜು ಮಾಡಲಾಗಿದೆ. ಈ ರೀತಿ ಉತ್ಪತ್ತಿಗಿಂತ ಖರ್ಚು ಹೆಚ್ಚಾದದ್ದಕ್ಕೆ 1924—25ನೇ ಸಂವತ್ಸರದ ಉಳಿವು 1,98,000 ರೂಪಾಯಿಗಳನ್ನು ಸೇರಿಸಿಕೊಂಡು ಆದಾಯಕ್ಕೂ ವೆಚ್ಚಕ್ಕೂ ಸರಿಮಾಡಿಕೊಂಡಿರುವದಲ್ಲದೆ ರೂಲ್ಸ್ ಮೇರೆ ಇಡಬೇಕಾದ 50000 ರೂಪಾಯಿ ಉಳಿವನ್ನು ಮಾಡಿಕೊಂಡಿರುತ್ತಾರೆ. 1924—25ರಲ್ಲಿ ನಮ್ಮ ದೇಶದ ಆದಾಯವೆಚ್ಚವನ್ನು ಇಂಡಿಯಾ ಸರಕಾರದ ಆದಾಯವೆಚ್ಚದಿಂದ ಬಿಂಗಡಿಸಿದ ಮೊದಲನೇ ವರ್ಷವಾದದ್ದರಿಂದ ಎಚ್ಚರವಾಗಿ ಖರ್ಚುಮಾಡಬೇಕೆಂತ ಮೇಲೆ ಸುಮಾರು ಎರಡು ಲಕ್ಷ ಉಳಿವನ್ನು ಮಾಡಿಕೊಂಡರು. ಇದರ ಪೈಕಿ ಗಂಧ ಹೆಚ್ಚು ಕಡಿದದ್ದರಿಂದ 1,39,000 ಉಳಿವಾಯಿತೆಂತ ಹೇಳುತ್ತಾರೆ. ಆ ವರ್ಷ ಬೇಕಾದದ್ದಕ್ಕಿಂತ ಹೆಚ್ಚಿಗೆ ಗಂಧ ಕಡಿದದ್ದೇ ತಪ್ಪಲ್ಲವೇ? ಇದು ತಪ್ಪಾಯಿತೆಂತ ಸರಕಾರದವರು ಒಪ್ಪಿಕೊಳ್ಳುವದಿಲ್ಲ. ಹೋಗಲಿ ಆ ವರ್ಷದಲ್ಲಿ ಗಂಧ ಹೆಚ್ಚು ಕಡಿದದ್ದರಿಂದ ಈಗ ಸರಕಾರದ ಖರ್ಚಿಗೆ ಕಷ್ಟಕ್ಕೆ ಹಣ ದೊರಕಿತು. ಇನ್ನು ಮುಂದೆ ಸರಕಾರದ ಉತ್ಪತ್ತಿಗಳು ಯಾವುದೂ ಏರಿಯುವ ಸಂಭವ ಇಲ್ಲವೆಂತ ಸರಕಾರದವರೇ ಒಪ್ಪುತ್ತಿರುವ ವಿಷಯವಾಗಿದೆ. ಹಾಗಾದರೆ ಸರಕಾರವು ನಡಿಯುವ ಬಗೆ ಹೇಗೆ? ಪ್ರಜೆಗಳಿಗೆ ಸಹಾಯವಾಗುವ ವಿದ್ಯೆ, ಆರೋಗ್ಯ, ರಸ್ತೆ, ಕೃಷಿ, ನಾಲೆಗಳು ಮುಂತಾದ್ದಕ್ಕೆ ಹಣ ದೊರಕುವ ಸಂಭವವಂತೂ ಇಲ್ಲವೇ ಇಲ್ಲವಲ್ಲ!

ಇನ್ನು ಮುಂದಿನ ದೇಶದ ಆರ್ಥಿಕ ಸ್ಥಿತಿಯನ್ನು ದೇಶದಲ್ಲಿ ಇರುವ ಗಂಧದ ಮರದ ಲೆಕ್ಕಯಾದ ವಿನಹ ಹೇಳಲಿಕ್ಕಾಗುವದಿಲ್ಲವೆನ್ನುತ್ತಾರೆ. ಈಗ ಲೆಕ್ಕಮಾಡಲು ಸ್ವಾರಂಭಿಸಿದ್ದಾರೆ? ಮೊದಲಿನ ಚೀಫ್ ಫಾರೆಸ್ಟ್ ಆಫೀಸರು ಗಂಧವನ್ನು ಈಗ ಕಡಿಯುವಷ್ಟೇ ಕಡಿಯುತ್ತಾ ಬಂದರೂ ಇನ್ನು 10ವರ್ಷಗಳಿಗೆ ಬೇಕಾದಷ್ಟೇ ಗಂಧವಿದೆಯೆಂತ ಸ್ವಂತ ಪೂರ್ತನಾಡುವಾಗ ಹೇಳಿದ್ದು ನಮ್ಮ ತಿಳುವಳಿಕೆಗೆ ಬಂದಿದೆ. ಫಾರೆಸ್ಟ್ ಇಲಾಖೆಯ ರಿಪೋರ್ಟಿನಿಂದ ತೋರಿಬಂದ ಸಿನ್ಸ್‌ನೋಟದ ದಿನದ ಚೀಫ್ ಫಾರೆಸ್ಟ್ ಆಫೀಸರು ಹೀಗೆಯೇ ಹೇಳಿದರು. ಈ ಧನವೆಯೆಲ್ಲಾ ಎಲ್ಲಿ ಹೋಯಿತು? ಮೂವತ್ತೊಂಬತ್ತಾಗಿ ಬಂದ 9 ಲಕ್ಷ ರೂಪಾಯಿವರೆಗಿನ ಕ್ರಯದ ಗಂಧದಮರವನ್ನು ಕಿತ್ತುಮಾಡಬೇಕಾದರೆ ಗಂಧದಮರದ ಎಣಿಕೆ ಮಾಡಿರಬಹುದೇನಂತ ಹೇಳುವದಾದರೆ ದುಂದುಗಾರಿಕೆಯಾಗಲಿಲ್ಲವೇ? ಈಗಾಗಲೇ ಎಳೆ ಗಂಧದ ಮರಗಳನ್ನು ಕಡಿಯಬೇಕಾಗಿ ಬಂದಿರುವಾಗ ಗಂಧದಮರದ ಉತ್ಪತ್ತಿ ಇನ್ನು ಬಹು ಕಾಲದವರೆಗೆ ದೊರಕುವದಿಲ್ಲವೆಂತ ನಮಗೆ ತೋರುತ್ತದೆ.

ನಮ್ಮ ಪ್ರಾಂತ್ಯವು ಪ್ರತ್ಯೇಕ ಸರಕಾರದಿಂದ ಬದುಕಬೇಕಾದರೆ ಇಂಪೀರಿಯಲ್ ಆಫೀಸರುಗಳ ಸಂಬಳ ಮತ್ತು ಸಂಖ್ಯೆ ಕಡಿಮೆಯಾಗಬೇಕು, ಮತ್ತು ಫಾರೆಸ್ಟ್ ಇಲಾಖೆಯ ಖರ್ಚು ಬಹಳ ಕಡಿಮೆಯಾಗಬೇಕು. ನಾಲ್ಕು ವರ್ಷಗಳ ಹಿಂದೆ ಇನ್ನೂ ಐದು ಇಂಪೀರಿಯಲ್ ಆಫೀಸರುಗಳು ಇದ್ದರು. ಆಗ ಕೇಳಿದ್ದರೆ ಆ ಇಂಪೀರಿಯಲ್ ಆಫೀಸರುಗಳು ಇಲ್ಲದೆ ಸರಕಾರ ನಡಿಯುವದೇ ಅಸಾಧ್ಯವೆಂತ ಆಗಿನ ದುಷ್ಟ ಅಧಿಕಾರಿಗಳು ಹೇಳುತ್ತಿದ್ದರು. ಫಾರೆಸ್ಟಿನ ಇಬ್ಬರ ಆಫೀಸರುಗಳೂ, ರೆವೆನ್ಯೂವಿನಲ್ಲಿ ಒಬ್ಬ ಆಫೀಸರೂ, ವಿದ್ಯಾಇಲಾಖೆಯಲ್ಲಿ ಒಬ್ಬರೂ, ಪೋಲೀಸಿನಲ್ಲಿ ಒಬ್ಬರೂ ಸಹ ಇಲ್ಲದೇನೇ ಕೆಲಸಗಳೆಲ್ಲಾ ಈಗ ಸರಿಯಾಗಿಯೇ ನಡಿಯುತ್ತಲಿವೆ. ಸ್ವರಾಜ್ಯ ಸಿಕ್ಕುವ ವರೆಗೂ ಕಮೀಶನರ ಕೆಲಸವು ಐ. ಸಿ. ಯಸ್‌ನವರಲ್ಲದೆ ಬೇರೆಯವರಿಗೆ ಸಿಕ್ಕುವ ಸಂಭವವಿಲ್ಲ. ಇತರ ಎಲ್ಲಾ ಉದ್ಯೋಗಗಳಿಗೂ ದೇಶೀಯರನ್ನು ಕೂಡಲೇ ನೇಮಿಸಿಕೊಳ್ಳಲು ಕೌನ್ಸಿಲಿನವರೂ ಸರಕಾರದವರೂ ಮನಸುಮಾಡದಿದ್ದರೆ ನಮ್ಮ ಸರಕಾರವು ದಿವಾಳಿಯಾಗುವದರಲ್ಲಿ ಸಂಶಯವಿಲ್ಲ. ಬಜೆಟ್ಟಿನ ಚರ್ಚೆಯಲ್ಲಿ ಒಬ್ಬ ಮೆಂಬರು ಹೇಳಿದಂತೆ ನಾಲ್ಕುನೂರು ಯಾ ಐದುನೂರುರೂಪಾಯಿಗೆ ದೇಶೀಯರನ್ನು ಸಿವಿಲ್ ಸರ್ಜನರಾಗಿಯೂ ಆಬ್ಕಾರಿದರಲ್ಲಿ ಚೀಫ್ ಫಾರೆಸ್ಟ್ ಆಫೀಸರಾಗಿಯೂ, ಇಂಜಿನೀಯರಾಗಿಯೂ ನೇಮಿಸಿಕೊಂಡರೆ ಆಯಾ ಇಲಾಖೆಗಳೂ ಈಗಿನಂತೆಯೇ ಚನ್ನಾಗಿ ನಡೆಯುತ್ತಾ ಹೋಗುವದರಲ್ಲಿ ಸಂಶಯವಿಲ್ಲ. ಕೊಡಗಿನಲ್ಲಿ ಇರುವ ನಾಲ್ಕು ಇಂಪೀರಿಯಲ್ ಆಫೀಸರುಗಳು ಸುಮಾರು 65000ರೂಪಾಯಿ ವರ್ಷ ಒಂದರ ಪಡಕೊಳ್ಳುತ್ತಾರೆಂತ ಇನ್ನೊಬ್ಬ ಮೆಂಬರು ತಮ್ಮ ಭಾಷಣದಲ್ಲಿ ಹೇಳುತ್ತಿರಲ್ಲಿ ಫೈನಾನ್ಸ್ ಮೆಂಬರು ರೂಲ್ಸ್ ತೋರಿಸಿ ಈ ಆಫೀಸರುಗಳ ಸಂಬಳದ ವಿಷಯ ಚರ್ಚೆಮಾಡಕೂಡದೆಂತ ಆಕ್ಷೇಪಿಸಿದರು. ಅಧ್ಯಕ್ಷರೂ ಇದಕ್ಕೆ ಒಪ್ಪಿಕೊಂಡರು. ಇಂಪೀರಿಯಲ್ ಆಫೀಸರುಗಳು ಹೋಗಬೇಕಾದದ್ದು ಅವಶ್ಯವೇ. ಆದರೂ ಅವರನ್ನು ಹೋಗುವಂತೆ ಮಾಡಲು ಬಹಳ ಕಷ್ಟವಿದೆಯೆಂತ ಇದರಿಂದ ಗೊತ್ತಾಗುತ್ತದೆ. ದೇಶದ ಪ್ರತ್ಯೇಕ ಸ್ವತಂತ್ರ ಜಾರಿಯನ್ನು ಉಪಾಂಗಕ್ಕೂ ಪ್ರಯೋಜನವಾಗಲಿಕ್ಕ ದೇವರು, ಕೊಟ್ಟ ಗಂಧವುಗಳನ್ನೆಲ್ಲಾ ಹತ್ತೆಂಟು ವರ್ಷದ ಒಳಗೆ ಸಿನ್‌ಖರ್ಚುಮಾಡಿ ಹೋದರೆ ಈ ದೇಶದ ಸರಕಾರ ನಡಿಯುತ್ತಾ ಹೋಗಲಿಕ್ಕೆ ಇಂಡಿಯಾಸರಕಾರದವರು ಸಾಲಕೊಡಬೇಕಾಗುತ್ತದೆ. ಆಗಲಾದರೂ ಇಲ್ಲಿ ಇಂಪೀರಿಯಲ್ ಆಫೀಸರುಗಳ ಸಂಖ್ಯೆ ಹೆಚ್ಚಾಗಿದೆಯೆಂತ ಇಂಡಿಯಾ ಸರಕಾರಕ್ಕೆ ಎಚ್ಚರವಾದೀತೋ ಎಂಬ ಆಶೆ ಇದೆ. ಆಗಲೂ ಸಹ ನಮ್ಮ ಶಾಲೆಗಳನ್ನು ಮುಚ್ಚಿ, ರಸ್ತೆಗಳನ್ನು ಮುಚ್ಚಿ, ಎಂತ ಹೇಳದೆ ಒಂದೆರಡು ಇಂಪೀರಿಯಲ್ ಆಫೀಸರುಗಳನ್ನು ತೆಗೆದು ಹಾಕಿಯಾರೆಂತ ಆಶಿಸುತ್ತೇವೆ.

ಉತ್ಪತ್ತಿಗಿಂತ ಖರ್ಚು ಹೆಚ್ಚಾಗಲು ಇನ್ನೊಂದು ಕಾರಣವನ್ನು ಫೈನಾನ್ಸ್ ಮೆಂಬರು ತಕ್ಕಷ್ಟು ಸ್ಪಷ್ಟವಾಗಿ ವರ್ಣಿಸಿದ್ದಾರೆ. ಫಾರೆಸ್ಟ್ ಇಲಾಖೆಯಲ್ಲಿ ಗಂಧದ ಉತ್ಪತ್ತಿ ಬಿಟ್ಟರೆ 95000 ಮಾತ್ರ ಉತ್ಪತ್ತಿಯಾಗಿದೆ. ಗಂಧದ ಉತ್ಪತ್ತಿಗಾಗಿ ಖರ್ಚುಮಾಡುವದು 12500ರೂಪಾಯಿ ಮಾತ್ರ ಆಗಿದೆ. ಒಟ್ಟು ಇಲಾಖೆಗೆ 3,12000 ಖರ್ಚಾಗುತ್ತದೆ. ಈ ರೀತಿ ದುಂದು ಖರ್ಚುಮಾಡಿದರೆ ಎಂಥಾ ಧನಿಕನಾದರೂ ಇನ್‌ಸಾಲ್ವೆಂಟ್ ಆಗುವದರಲ್ಲಿ ಸಂಶಯವಿಲ್ಲ. ಈ 3,12,000 ರೂಪಾಯಿ ಖರ್ಚಿನಲ್ಲಿ ಸಿಬ್ಬಂದಿಗಾಗಿ ಖರ್ಚಾಗುವದು 1,43000ರೂ ಮಾತ್ರವಾಗಿದೆ. 4,24000ರೂಪಾಯಿ ಉತ್ಪತ್ತಿ ಕೊಡುವ ಈ ಇಲಾಖೆಗೆ 1,43,000 ಸಿಬ್ಬಂದಿಗೆ ಖರ್ಚುಮಾಡುವದು ಹೆಚ್ಚಲ್ಲವೆಂತ ಹೇಳಬಹುದು. ಮೇಲೆ ಬರೆದಂತೆ ಗಂಧದ ಉತ್ಪತ್ತಿಬಿಟ್ಟರೆ 95000ರೂಪಾಯಿ ಉತ್ಪತ್ತಿ ಇರುವ ಇಲಾಖೆಯ ಸಿಬ್ಬಂದಿಗೆ ಸುಮಾರು ಒಂದುವರೆ ಲಕ್ಷ ಖರ್ಚುಮಾಡುವದು ನ್ಯಾಯವಲ್ಲ ಮತ್ತು ಈ ಇಲಾಖೆಗೆ ಮಾಡುವ ಬೇರೆ ಖರ್ಚು 169000 ರೂಪಾಯಿಯಲ್ಲಿ ಹೆಚ್ಚಿನ ಭಾಗವು ನಿಷ್ಪ್ರಯೋಜನವಾಗಿಯೇ ಖರ್ಚಾಗುತ್ತಿದೆಯೆಂತ ನಮಗೆ ತೋರುತ್ತದೆ. ಖಾಯಂ ಸಂಬಳದ ಸಿಬ್ಬಂದಿ ಇರುವದಕ್ಕೆ ಕೆಲಸ ಕೊಡಲಿಕ್ಕಾಗಿ ಹೆಚ್ಚಿನ ಖರ್ಚು ನಡಿಯುತ್ತಿರುವದಾಗಿಯೆಂತ ನಮ್ಮ ಅಭಿಪ್ರಾಯ. ಆದ್ದರಿಂದ ಈ ಇಲಾಖೆಯಲ್ಲಿ ಖರ್ಚು ಕಡಿಮೆಮಾಡಲು ಸರಕಾರವು ಪ್ರಯತ್ನ ನಡೆಸದಿದ್ದರೆ ಮುಂದೆ ಬಂದೊದಗುವ ಕಷ್ಟಗಳಿಗೆ ಸರಕಾರದವರು ಜವಾಬ್ದಾರರಾಗಬೇಕಾದರೂ ಪ್ರಜೆಗಳೇ ಅದರ ಫಲವನ್ನು ಅನುಭವಿಸಬೇಕಾಗುತ್ತದೆ.

ಹೊಸ ಉತ್ಪತ್ತಿಯ ಬಾಬುಗಳಾಗಿ ಚಿಕ್ಕಚಿಕ್ಕ ಕೆಲವು ಬಾಬುಗಳನ್ನು ಫೈನಾನ್ಸ್ ಮೆಂಬರು ತೋರಿಸಿದರು. ಇಂಡಿಯಾ ಸರಕಾರಕ್ಕಾಗಿ ಇನ್‌ಕಂಟ್ಯಾಕ್ಸ್ ವಸೂಲುಮಾಡುವ ಕೆಲಸಕ್ಕಾಗಿ 1000ರೂಪಾಯಿ, ಮತ್ತು ಪೋಸ್ಟೇಜ್ ಸ್ಟಾಂಪುಗಳನ್ನು ಆಫೀಸುಗಳಿಗೆ ಉಪಯೋಗಿಸುವದಕ್ಕಾಗಿ 3300 ರೂಪಾಯಿ, ಇಂಡಿಯಾ ಸರಕಾರದಿಂದ ಬರುತ್ತದೆ. ಇನ್‌ಕಂಟ್ಯಾಕ್ಸ್ ಕೆಲಸವಿದ್ದಕ್ಕೆ 1921ನೇ ಇಸವಿಯಿಂದಲೇ ಹಣ ಸಿಕ್ಕ ಬೇಕಾದದ್ದು ಹಣ ಸಿಕ್ಕಲಿಲ್ಲವೆಂಬದನ್ನು ಫೈನಾನ್ಸ್ ಮೆಂಬರು ತಿಳಿಸಿರುವದಿಲ್ಲ. ಸ್ಟಾಂಪಿನ ಹಣವೂ 1924ನೇ ಇಸವಿಯಿಂದಲೇ ಸಿಕ್ಕಬೇಕೆಂತ ತಿಳಿಸಿದ್ದರೂ ಅದರ ಉತ್ಪತ್ತಿಯನ್ನು ಪಟ್ಟಿಯಲ್ಲಿ ತೋರಿಸಿರುವದಿಲ್ಲ. ಈ ಮೊಬಲಗು ಎರಡು ವರ್ಷಕ್ಕೆ 6600 ರೂಪಾಯಿ ಆಗುತ್ತದೆ. ಈ ಹಣವನ್ನು ಪಟ್ಟಿಗೆ ಸೇರಿಸಿದ್ದರೆ ಪ್ರಜೆಗಳಿಗೆ ಪ್ರಯೋಜನವಾಗುವ ಯಾವುದಾದರೂ ಒಂದು ಕೆಲಸಕ್ಕೆ ಉಪಯೋಗವಾಗುವಂತೆ ಸಲಹೆ ಕೊಡಬಹುದಿತ್ತು: ಈಗಲಾದರೂ ಫೈನಾನ್ಸ್ ಮೆಂಬರು ಇದನ್ನು ಪ್ರಜೆಗಳ ಪ್ರಯೋಜನಕ್ಕೆ ಉಪಯೋಗಿಸಬೇಕೆಂತ ಕೇಳಿಕೊಳ್ಳುತ್ತೇವೆ. ಆಸ್ಪತ್ರೆಗಳಲ್ಲಿ ಐಶ್ವರ್ಯವಂತರು ಔಷಧಿಗಳನ್ನು ಉಪಯೋಗಿಸಿದಷ್ಟಕ್ಕೇ ಕ್ರಯ ಕೊಡುವದರ ಬದಲು ವರ್ಷ ಒಂದಕ್ಕೆ 25 ರೂಪಾಯಿ ಕೊಟ್ಟರೆ ಎಷ್ಟು ಔಷಧಿಯನ್ನಾದರೂ ಉಪಯೋಗಿಸಬಹುದೆಂಬ ತಜವೀಜು ಈ ವರ್ಷ ಜಾರಿಯಲ್ಲಿದೆ. ಹೀಗೆ ಮೊತ್ತವಾಗಿ ಕೊಡುವ ಮೊಬಲಗನ್ನು ಹೆಚ್ಚಿಸುವದರಿಂದ ಸ್ವಲ್ಪ ಹೆಚ್ಚು ಉತ್ಪತ್ತಿ ಬರಬಹುದೆಂತ ಅಭಿಪ್ರಾಯಪಟ್ಟಿರುತ್ತಾರೆ. ಬಸ್ಸುಗಳಿಗೆ ಫೀಸು ಹಾಕಿ 1000ರೂಪಾಯಿಯಾದರೂ ಉತ್ಪತ್ತಿಮಾಡಬಹುದೆಂತ ಅಂದಾಜು ಮಾಡಿದ್ದಾರೆ.

ಸಾರಾಯಿ ಗಡಂಗದಲ್ಲಿ ದರೋಗ ಕಲಸವನ್ನೂ ಫಾರೆಸ್ಟ್ ಆಫೀಸಿನಲ್ಲಿ ಒಬ್ಬ ಇಂಪೀರಿಯಲ್ ಆಫೀಸರನ್ನು ತೆಗೆದದ್ದರಿಂದಲೂ ಮತ್ತು ಫಾರೆಸ್ಟ್ ಇಲಾಖೆಯ ಜವಾನುವಾರುಗಳ ಸಂಖ್ಯೆ ಕಡಿಮೆ ಮಾಡಿದ್ದರಿಂದಲೂ ಖರ್ಚು ಕಡಿಮೆಯಾಗಿದೆಯೆಂತ ತೋರಿಸಿದ್ದಾರೆ. ಫಾರೆಸ್ಟ್ ಇಂಜಿನೀಯರನ್ನು ಇಟ್ಟುಕೊಳ್ಳಲು ಒಪ್ಪಿದ್ದರೂ ಸಹ ಇಲ್ಲದಿದ್ದರೂ ಅವರನ್ನು ತೆಗೆದುಹಾಕಲು ಪ್ರಜಾಪ್ರತಿನಿಧಿಗಳಿಗೆ ಹಕ್ಕಿರಲಿಲ್ಲ. ಅದರಿಂದ ಸರಕಾರದವರು ತಮ್ಮ ಕರ್ತವ್ಯವನ್ನೇ ಮಾಡಿದ್ದರೂ ನಾವು ತೋರಿಸಿದ ಈ ದಯೆಗೆ ದೇಶದವರು ಕೃತಜ್ಞರಾಗಿದ್ದಾರೆ.

ವೀರರಾಜಪೇಟೆಯಲ್ಲಿ ಬಂದ ಸರ್ಕಾರ ಕೆಲಸ ಹೊಸತಾಗಿ ಉಂಟುಮಾಡಿದ್ದಲ್ಲದೆ ಸಬ್‌ಜಡ್ಜ್‌ರವರ ಗುಮಾಸ್ತರುಗಳನ್ನು ಖಾಯಂಮಾಡಲಾಗಿದೆ. ಇದಲ್ಲದೆ ಹೊಸ ಖಾಯಂ ಖರ್ಚು ಬೇರೆ ಯಾವದನ್ನೂ ಮಂಜೂರುಮಾಡಿರುವದಿಲ್ಲ.

ಹಳೇ ಉಳಿವೆಯನ್ನು ಸಾಲ ತೀರಿಸಲಿಕ್ಕೆ ಉಪಯೋಗಿಸಬೇಕೆಂಬ ಆರ್ಥಿಕ ಶಾಸ್ತ್ರದ ತತ್ವವಿರುವದಾದರೂ ಈ ಮೊಬಲಗನ್ನು ಅರಮನೆ ರಿಪೇರಿ, ಸೀಶಪ, ಮತ್ತು ರಸ್ತೆಗಳಿಗೆ ಉಪಯೋಗಿಸಲಾಗುವದೆಂತ ಫೈನಾನ್ಸ್ ಮೆಂಬರು ಹೇಳಿದ್ದಾರೆ. ಇಂಡಿಯಾ ಸರಕಾರದವರ ತಾಪೆಯಲ್ಲಿ ದೇಶವಿರುವಾಗ ಅರಮನೆಯನ್ನು ಮುಚ್ಚುಹಾಕಿ ಆ ಹೊರೆಯನ್ನು ನಮ್ಮ ಸರಕಾರದ ಮೇಲೆ ಹಾಕಿದ್ದು ಅನ್ಯಾಯವೆಂತ ಕಳೆದ ಎರಡು ವರ್ಷಗಳಲ್ಲಿಯೂ ಕೂಗಿಕೊಂಡೆವು. ಈ ವಿಷಯದಲ್ಲಿ ನಮ್ಮ ಸ್ಥಳೀಯ ಸರಕಾರದವರು ಇಂಡಿಯಾ ಸರಕಾರದವರನ್ನು ಸಾಕಷ್ಟು ಒತ್ತಾಯಪಡಿಸಲಿಲ್ಲವೆಂತ ನಮ್ಮ ಅಭಿಪ್ರಾಯವಾಗಿದೆ.

ಸಿಮಾ ಸೇವನೆಯು ಕಡಿಮೆಯಾಗಿದೆಯೆಂತ ತಿಳಿದುಬಂದಿದೆ. ಹಿಂದಿನ ವರ್ಷದಲ್ಲಿ 40000ಗ್ಯಾಲನ್ ಸಾರಾಯಿ ಖರ್ಚು ಆದದ್ದು ಈ ವರ್ಷದಲ್ಲಿ 32000ಗ್ಯಾಲನ್ ಮಾತ್ರ ಖರ್ಚು ಆಯಿತಂತೆ. ಸಾರಾಯಿಯ ಬೆಲೆ ಕಡಿಮೆ ಮಾಡಿ ಕ್ರಯ ಹೆಚ್ಚಿಸಿದ್ದು ಇದಕ್ಕೆ ಕಾರಣವಿರಬಹುದು. ಇಷ್ಟಕ್ಕೇ ಮೆಂಬರುಗಳೂ ಸರಕಾರವೂ ತೃಪ್ತರಾಗಿರದೆ ಕುಡುಕತನವನ್ನು ಇನ್ನೂ ಇನ್ನೂ ಕಡಿಮೆಮಾಡಲು ಪ್ರಯತ್ನಿಸುತ್ತಾ ಇರಬೇಕು.

ಫೈನಾನ್ಸ್ ಮೆಂಬರು ವಿದ್ಯಾಭಿವೃದ್ಧಿಗೆ ಖರ್ಚು ಮಾಡುವ ಮೊದಲು ರಸ್ತೆಗಳಿಗೆ ಖರ್ಚುಮಾಡುವದು ಹೆಚ್ಚು ಆವಶ್ಯವೆಂತ ಹೇಳಿದರು. ರಸ್ತೆಗಳ ಪ್ರಾಮುಖ್ಯತೆಗೆ ನಾವು ಒಪ್ಪುತ್ತೇವೆ. ಆದರೆ ವಿದ್ಯಾ, ಆರೋಗ್ಯಕ್ಕಿಂತ ರಸ್ತೆಮುಖ್ಯವೆಂಬ ಮಾತಿಗೆ ನಾವು ಒಪ್ಪಲಾರೆವು. ರಸ್ತೆಗಳ ಪ್ರಯೋಜನವನ್ನು ಒಪ್ಪಿದರೂ ಸಹ ಮಲೆನಾಡು ಪ್ರಾಂತ್ಯಕ್ಕೆ ಬಂದು ತಪ್ಪಿಸುವ ವಿಷಯಕ್ಕೆ ತತ್ಕಾಲದ ಗಮನವನ್ನು ಕಮೀಶನರು ಕೊಡದೆ ಇರುವದು ವಿಷಾದಕರವಾಗಿದೆ.

ಹೊರಗಿನಿಂದ ಕೊಡಗಿನಲ್ಲಿ ಬಂದು ಕೆಲಸಮಾಡುವ ಉದ್ಯೋಗಸ್ಥರ ರಜಾ ಸಂಬಳ ಮತ್ತು ಪೆನ್ಷನ್ ಹಣವು ವರ್ಷ ವರ್ಷ ಹೆಚ್ಚಾಗುತ್ತಿದೆಯೆಂತಲೂ 1924ನೇ ಇಸವಿಗಿಂತ ಹಿಂದೆಗೆ ಕೆಲಸಮಾಡಿದವರ ಈ ಬಾಬಿನ ಖರ್ಚು ವರ್ಷವೊಂದರ 35670 ರೂಪಾಯಿ ಆಗುತ್ತದೆಯೆಂತಲೂ ಈಗ ಬಾಕಿಯಾದ ಮೊಬಲಗೇ 70000ರೂಪಾಯಿ ಆಗುತ್ತದೆಯೆಂತಲೂ ಇದಕ್ಕೆ ಹಣ ಒದಗಿಸಿಕೊಳ್ಳಬೇಕಾಗಿದೆಯೆಂತಲೂ ತಿಳಿಸಿದ್ದಾರೆ. 1924ನೇ ಇಸವಿಗೆ ಮೊದಲು ಕೆಲಸಮಾಡಿದವರ ಈ ಬಾಬಿನ ಖರ್ಚು ಇಂಡಿಯಾ ಸರಕಾರವೇ ಸಲ್ಲಿಸಿಕೊಳ್ಳಬೇಕೆಂತ ಕೌನ್ಸಿಲಿನವರು ಎರಡು ವರ್ಷದಿಂದಲೂ ಕೇಳಿಕೊಂಡದ್ದಕ್ಕೆ ಇಂಡಿಯಾ ಸರಕಾರದವರು ಆಗುವದಿಲ್ಲವೆಂತ ಹೇಳಿದ್ದರೆಂತ ತಿಳಿಸಿದ್ದರು. ಈ ಖರ್ಚನ್ನು ಇಂಡಿಯಾ ಸರಕಾರದವರು ವಹಿಸಿಕೊಳ್ಳುವ ಸಂಭವವಿದೆಯೆಂತ ಬಜೆಟ್ ಮೆಮೊರಾಂಡಮಿನಲ್ಲಿ ಬರೆದಿದ್ದರೂ ಮ. ಕಾಬ್‌ಹ್ಯಾಂನರ ಪೆನ್ಷನಿಗೆ ಹಣ ಇಟ್ಟಿದೆ. ಇದು ಯಾತಕ್ಕೆಂಬದು ಗೊತ್ತಾಗುವದಿಲ್ಲ. ಈ ಮೊದಲು ಮ. ಕರ್ನ್‌ವೆನ್ ಮುಂತಾದವರ ರಜಾ ಸಂಬಳ ಕೊಟ್ಟದ್ದು ವಾಪಸು ಬರುತ್ತದೆಯೆಂತಲೂ ತಿಳಿಸಿರುವದಿಲ್ಲ. ಈ ವಿಷಯವನ್ನು ಜನರಿಗೆ ಸರಿಯಾಗಿ ತಿಳಿಸಿಕೊಟ್ಟು ಪ್ರಾಂತೀಕ ಸರಕಾರದವರು ಇಂಡಿಯಾ ಸರಕಾರದ ಸಂಗಡ ಚನ್ನಾಗಿ ಹೋರಾಡಿ ನ್ಯಾಯಪಡಿಯ ಬೇಕೆಂತ ಅಪೇಕ್ಷಿಸುತ್ತೇವೆ.

ಮಹಾತ್ಮ ಗಾಂಧಿಯವರ ಸ್ವಚರಿತ್ರೆ.

(೨೪ ನೇ ಸಂಚಿಕೆಯಿಂದ ಮುಂದುವರಿದುದು)

ನಾಲ್ಕನೆಯ ಅಧ್ಯಾಯ.

ಗಂಡನ ಸ್ವಾಮಿತ್ವ.

ನನ್ನ ವಿವಾಹದ ಕಾಲದಲ್ಲಿ ನಿಬಂಧಗಳ ಚಿಕ್ಕ ಚಿಕ್ಕ ಪುಸ್ತಕಗಳು— ಅವುಗಳ ಬೆಲೆಯು ಒಂದು ದುಡ್ಡೋ ಪೈಯೋ ನೆನಪಿಲ್ಲ—ಹೊರಡುತ್ತಿದ್ದುವು. ಇವುಗಳಲ್ಲಿ ದಂಪತಿಪ್ರೇಮ, ಬಾಲ್ಯಲಗ್ನ ಮೊದಲಾದ ವಿಷಯಗಳ ಕುರಿತು ಚರ್ಚಿಸುತ್ತಿತ್ತು. ಇಂಥ ಯಾವುದೋ ಪುಸ್ತಕವು ನನ್ನ ಕೈಗೆ ಸಿಕ್ಕಿದಾಗ ನಾನದನ್ನು ಸಂಪೂರ್ಣವಾಗಿ ಓದುತ್ತಿದ್ದೆನು. ಓದಿದ ವಿಷಯವು ನನಗೆ ಸರಿತೋರದಿದ್ದರೆ ಅದನ್ನು ಮರೆತುಬಿಡುವುದೂ, ಸರಿತೋರಿದ ವಿಚಾರಗಳನ್ನು ಆಚರಣೆಗೆ ತರಲು ಯತ್ನಿಸುವುದೂ ನನ್ನ ಅಭ್ಯಾಸವಾಗಿತ್ತು. ಒಂದು ಸಲ ಏಕಪತ್ನೀವ್ರತವನ್ನು ಪಾಲಿಸುವುದು ಪತಿಯ ಧರ್ಮವೆಂದು ಓದಿದೆನು. ಇದು ನನ್ನ ಹೃದಯದಲ್ಲಿ ಚೆನ್ನಾಗಿ ಬೇರೂರಿಕೊಂಡಿತು. ಸತ್ಯವನ್ನು ಪಾಲಿಸಬೇಕೆಂಬ ತೀವ್ರ ಅಭಿಲಾಷೆಯಿದ್ದುದರಿಂದ ಪತ್ನಿಯೊಡನೆ ಕಪಟವನ್ನಾಚರಿಸುವುದು ನನಗೆ ಅಸಾಧ್ಯವಾಗಿತ್ತು. ಇದೇ ಕಾರಣದಿಂದ ಬೇರೆ ಸ್ತ್ರೀಯೊಡನೆ ಸಂಬಂಧವಿಟ್ಟುಕೊಳ್ಳುವುದು ಸರಿಯಲ್ಲವೆಂದು ನಾನು ತಿಳಿದುಕೊಂಡೆನು. ಸಣ್ಣ ವಯಸ್ಸಿನಲ್ಲಿ ಏಕಪತ್ನೀವ್ರತದ ಭಂಗವಾಗುವ ಸಂಭವವೂ ಕಡಿಮೆಯಿತ್ತಷ್ಟೆ.

ಆದರೆ ಈ ಸದ್ವಿಚಾರಗಳಿಂದ ಒಂದು ಕೆಟ್ಟ ಪರಿಣಾಮ ಉಂಟಾಯಿತು. ನಾನು ಏಕಪತ್ನೀವ್ರತವನ್ನು ಪಾಲಿಸುವಾಗ ಪತ್ನಿಯು ಏಕ ಪತಿವ್ರತವನ್ನು ಪಾಲಿಸಬೇಕಷ್ಟೇ? ಇದರಿಂದ ನನ್ನ ಹೃದಯದಲ್ಲಿ ಈರ್ಷ್ಯಾಭಾವವು ಹುಟ್ಟಿಕೊಂಡಿತು. 'ಪಾಲಿಸ ಮಾಡಬೇಕು' ಎಂಬುದರಿಂದ 'ಪಾಲಿಸ ಮಾಡಿಸಬೇಕು' ಎಂಬ ವಿಚಾರಕ್ಕೆ ಬಂತು. ಪತ್ನಿ ಪಾಲಿಸ ಮಾಡಿಸಬೇಕಾದರೆ ನಾನು ಅದರ ವಿಚಾರದಲ್ಲಿ ಜಾಗರೂಕನಾಗಿರಬೇಕು. ನನ್ನ ಪತ್ನಿಯ ಪಾತಿವ್ರತ್ಯದ ಸಂಬಂಧವಾಗಿ ಸಂಶಯಪಡಲು ನನಗೆ ಯಾವ ಕಾರಣವೂ ಇರಲಿಲ್ಲ. ಆದರೆ ಈರ್ಷ್ಯೆಗೆ ಕಾರಣವು ಬೇಕೇ? 'ಅವಳು ಎಲ್ಲೆಲ್ಲಿ ಹೋಗುವಳು, ನಾನು ಅಗತ್ಯವಾಗಿ ತಿಳಿದುಕೊಳ್ಳಬೇಕಾದುದರಿಂದ ಅವಳು ನನ್ನ ಅನುಮತಿಯನ್ನು ಪಡೆಯದೆ ಎಲ್ಲಿಯೂ ಹೋಗಕೂಡದೆಂದು' ನಿಯಮವನ್ನಿಟ್ಟೆನು. ಇದು ನಮ್ಮೊಳಗೆ ದುಃಖದಾಯಕ ಕಲಹವೃತ್ತಾಂತಕ್ಕೆ ಕಾರಣವಾಯಿತು. [illegible] ಎಲ್ಲಿಯೂ ಹೋಗಬಾರದೆಂಬ ಕಟ್ಟುಪಾಡೆಂದರೆ ಒಂದು ರೀತಿಯ ಬಂಧವಾಸವೇ ಸರಿ. ಕಸ್ತೂರಿಬಾಯಿಯು ಇಂತಹ ಬಂಧನವನ್ನು ಸಹಿಸುವ ಹೆಂಗಸಲ್ಲ. ನನ್ನ ಅಪ್ಪಣೆ ಕೇಳದೆ ಅವಳು ಆಗಾಗ ಹೊರಗೆ ಹೋಗುತ್ತಿದ್ದಳು. ನಾನು ಹೆಚ್ಚು ಹೆಚ್ಚು ಅಂಕುಶವನ್ನಿಡಲು ಯತ್ನಿಸಿದಂತೆ ಅವಳು ಹೆಚ್ಚು ಸ್ವತಂತ್ರತೆಯನ್ನು ತೋರಿಸುತ್ತಿದ್ದಳು. ನಮ್ಮೊಳಗೆ ಸಿಟ್ಟುಗೊಂಡು ಒಬ್ಬರ ಹತ್ತಿರ ಒಬ್ಬರು ಮಾತನಾಡದಿರುವುದು ಸಾಮಾನ್ಯ ವಿಷಯವಾಗಿ ಪರಿಣಮಿಸಿತು. ಕಸ್ತೂರಿಬಾಯಿಯು ತೋರಿಸಿದ ಸ್ವಾತಂತ್ರ್ಯವು ನಿರ್ದೋಷವಾದುದೆಂದು ನಾನು ತಿಳಿಯುತ್ತೇನೆ. ಮನಸ್ಸಿನಲ್ಲಿ ಪಾಪದ ಯೋಚನೆಯಿಲ್ಲದಿರುವ ಒಬ್ಬ ಬಾಲೆಯು ದೇವದರ್ಶನಕ್ಕಾಗಲೀ ಮಿತ್ರರೊಡನೆ ಕೂಡಿ ಮಾತನಾಡುವುದಕ್ಕಾಗಲೀ ಹೋಗುವ ವಿಷಯದಲ್ಲಿ ವೃಥಾ ಅಂಕುಶವನ್ನು ಹೇಗೆ ಸಹಿಸಬಲ್ಲಳು? ನಾನು ಅವಳನ್ನು ನಿರ್ಬಂಧಕ್ಕೊಳಪಡಿಸಲಿಚ್ಛಿಸಿದ ಪಕ್ಷದಲ್ಲಿ ಅವಳೇಕೆ ನನ್ನನ್ನು ನಿರ್ಬಂಧಿಸಬಾರದು? ಇದರ ಅರ್ಥವನ್ನು ನಾನು ಈಗ ಮಾತ್ರ ತಿಳಿದುಕೊಂಡಿರುವೆನು. ಆಗ ನಾನು ನನ್ನ ಸ್ವಾಮಿತ್ವವನ್ನು ಸಿದ್ಧಪಡಿಸಲು ಹೊರಟಿದ್ದೆನು.

ಆದರೆ ನಮ್ಮ ಗೃಹಸಂಸಾರದಲ್ಲಿ ಸ್ವಲ್ಪವಾದರೂ ಮಧುರತೆಯಿರಲಿಲ್ಲವೆಂದು ವಾಚಕರು ತಿಳಿಯಬಾರದು. ನನ್ನ ವಕ್ರತೆಯು ಮೂಲದಲ್ಲಿ ಪ್ರೇಮಯುಕ್ತವಾಗಿತ್ತು. ನನ್ನ ಪತ್ನಿಯು ಆದರ್ಶ ಸ್ತ್ರೀಯಾಗಬೇಕೆಂಬುದು ನನ್ನ ಇಚ್ಛೆಯಾಗಿತ್ತು. ಅವಳು ಪರಿಶುದ್ಧಳಾಗಬೇಕು, ಶುದ್ಧಳಾಗಿಯೇ ಇರಬೇಕು. ನಾನು ಓದಿದ ಮತ್ತು ಕಲಿತ ವಿಷಯಗಳನ್ನು ಅವಳು ತಿಳಿದುಕೊಳ್ಳಬೇಕು. ನಾವು ಒಬ್ಬರಲ್ಲೊಬ್ಬರು ಒಕ್ಕೊರಲಿನವರಾಗಬೇಕು, ಇದೇ ನನ್ನ ಭಾವನೆಯಾಗಿತ್ತು.

ಕಸ್ತೂರಿಬಾಯಿಯ ಭಾವನೆಯು ಹೀಗೆಯೇ ಇತ್ತೆಂದು ನನಗೆ ಜ್ಞಾಪಕವಿಲ್ಲ. ಅವಳು ನಿರಕ್ಷರಳಾಗಿದ್ದಳು. ಸರಳ ಸ್ವಭಾವದವಳೂ ಸ್ವತಂತ್ರವೃತ್ತಿಯವಳೂ ಆಗಿದ್ದಳು. ನನ್ನ ಹತ್ತಿರ ಬಹಳ ಕಡಿಮೆ ಮಾತನಾಡುವವಳೂ ಆಗಿದ್ದಳು. ತನ್ನ ಅಜ್ಞಾನದ ವಿಷಯದಲ್ಲಿ ಅವಳಿಗೆ ಅಸಂತೋಷವಿರಲಿಲ್ಲ. ನಾನು ಓದುತ್ತಿರುವುದನ್ನು ನೋಡಿ ತಾನೂ ಓದಲು ಶಕ್ತಳಾದರೆ ಚೆನ್ನಾಗಿತ್ತು- ಎಂದು ಅವಳಿಗೆ ಇಚ್ಛೆಯಾದುದೇ ನನಗೆ ನೆನಪಿಲ್ಲ. ಆದುದರಿಂದ ನನ್ನ ಭಾವನೆಯು ಏಕಾಂಗಿಯಾಗಿತ್ತೆಂದು ನಾನು ತಿಳಿಯುವೆನು. ನನ್ನ ಮನಸ್ಸು ಒಬ್ಬಳೇ ಸ್ತ್ರೀಯ ಮೇಲೆ ನಿಶ್ಚಿತವಾಗಿತ್ತು, ಮತ್ತು ನಾನು ಅದರ ಪ್ರತಿಧ್ವನಿಯನ್ನು ಅವಳಲ್ಲಿ ನೋಡಲು ಇಚ್ಛಿಸುತ್ತಿದ್ದೆನು. ಎಲ್ಲಿ ಒಂದೇ ಕಡೆಯಲ್ಲಿ ಪ್ರೇಮವಿರುವುದೋ ಅಲ್ಲಿ ಎಲ್ಲವೂ ದುಃಖಮಯವಾಗುವುದು ಶಕ್ಯವೇ ಇಲ್ಲ.

ನಾನು ವಿಷಯಾಸಕ್ತನಾಗಿದ್ದೆನೆಂದು ಹೇಳಬೇಕು. ಶಾಲೆಯಲ್ಲಿಯೂ ನನಗೆ ಪತ್ನಿಯ ವಿಚಾರವೇ ಮನಸ್ಸಿಗೆ ಬರುತ್ತಿತ್ತು. ಮತ್ತು ಯಾವಾಗ ರಾತ್ರಿಯಾಗುವುದು, ಯಾವಾಗ ನಾವು ಒಟ್ಟು ಸೇರುವೆವು ಎಂದು ಇದಿರುನೋಡುತ್ತಿದ್ದೆನು. ಅವಳ ವಿಯೋಗವು ಅಸಹ್ಯವೆನಿಸುತ್ತಿತ್ತು. ನಾನು ಕರ್ತವ್ಯಪರಾಯಣನೇ ಆಗಿರದಿದ್ದರೆ ಈ ಆಸಕ್ತಿಯ ದೆಸೆಯಿಂದ ನಾನು ರೋಗಪೀಡಿತನಾಗಿ ಮೃತ್ಯುವಶನಾಗುತ್ತಿದ್ದೆನು, ಅಥವಾ ಈ ಜಗತ್ತಿನಲ್ಲಿ ವ್ಯರ್ಥ ಜೀವನವನ್ನು ನಡೆಸುತ್ತಿದ್ದೆನೆಂದು ತೋರುತ್ತದೆ. ಪ್ರಾತಃಕಾಲವಾದೊಡನೆ ನಿತ್ಯಕರ್ಮಗಳನ್ನು ಮಾಡಲೇಬೇಕು, ಯಾರಿಗೂ ಮೋಸ ಮಾಡಬಾರದು ಎಂಬ ವಿಚಾರವು ನನ್ನನ್ನು ಅನೇಕ ಸಂಕಟಗಳಿಂದ ಪಾರು ಮಾಡಿತು.

ಕಸ್ತೂರಿಬಾಯಿಯು ನಿರಕ್ಷರಳಾಗಿದ್ದಳೆಂದು ಮೇಲೆ ಹೇಳಿರುವೆನು. ಅವಳಿಗೆ ಕಲಿಸಬೇಕೆಂದು ನನಗೆ ಬಹಳ ಇಚ್ಛೆಯಿತ್ತು, ಆದರೆ ನನ್ನ ವಿಷಯವಾಸನೆಯು ಅವಳಿಗೆ ಕಲಿಸುವ ಸಂದರ್ಭವನ್ನೇ ಕೊಡುತ್ತಿರಲಿಲ್ಲವೆಂದು ಹೇಳಬಹುದು. ನಾನವಳಿಗೆ ಬಲಾತ್ಕಾರದಿಂದಲೇ ಕಲಿಸಬೇಕಾಗಿತ್ತು. ಅದಕ್ಕೆ ಕೂಡ ರಾತ್ರಿಯ ಏಕಾಂತದಲ್ಲಿ ಮಾತ್ರ ಸಮಯ ದೊರೆಯುತಿತ್ತು. ಹಿರಿಯರ ಸಮ್ಮುಖದಲ್ಲಿ ಪತ್ನಿಯೊಡನೆ ಮಾತಾಡುವುದಂತಿರಲಿ, ಅವಳ ಕಡೆಗೆ ಕಣ್ಣೆತ್ತಿ ನೋಡುವುದೂ ಶಕ್ಯವಿರಲಿಲ್ಲ. ಆಗ ಕಾಠಿಯಾವಾಡದಲ್ಲಿ ಒಂದು ರೀತಿಯ ಕಠಿಣ ಪರದೆಯ ಪದ್ಧತಿಯಿತ್ತು. ಅದು ಒಂದು ಮಟ್ಟಿಗೆ ಈಗಲೂ ಇದೆ. [illegible] ಕಲಿಸುವುದಕ್ಕೆ ಪ್ರತಿಕೂಲವಾಗಿತ್ತು. [illegible] ದುಂದ ನಾನು ಅವಳಿಗೆ ಕಲಿಸಲು ಮಾಡಿದ ಪ್ರಯತ್ನಗಳು ನಿಷ್ಫಲವಾದವೆಂದು ನಾನು ಒಪ್ಪಬೇಕು. [illegible] ನಾನು [illegible] ಕಾರ್ಯಗಳಲ್ಲಿ ತೊಡಗಿದ್ದೆನು. ಆದುದರಿಂದ ಕಲಿಸುವುದರ ಕಡೆಗೆ ಹೆಚ್ಚಿನ ಲಕ್ಷ್ಯವನ್ನು ಕೊಡಲು ನನಗೆ ಸಾಧ್ಯವಾಗುತ್ತಿರಲಿಲ್ಲ. ಶಿಕ್ಷಕರ ದ್ವಾರಾ ಕಲಿಸುವ ಪ್ರಯತ್ನವೂ ನಿಷ್ಫಲವಾಯಿತು. ಇಂದು ಕಸ್ತೂರಿಬಾಯಿಯು ಸಾಧಾರಣ ಪತ್ರಗಳನ್ನು ಬರೆಯಬಲ್ಲಳು, ಸಾಧಾರಣ ಗುಜರಾತಿಯನ್ನು ತಿಳಿಯಬಲ್ಲಳು. ನನ್ನ ಪ್ರೇಮವು ವಿಷಯದಿಂದ ದೂಷಿತವಾಗದಿದ್ದರೆ ಆಕೆಯು ಈ ದಿನ ವಿದುಷೀ ಸ್ತ್ರೀಯಾಗಿರುತ್ತಿದ್ದಳೆಂದು ನನಗೆ ತೋರುತ್ತದೆ. ಅಂತಹ ಸ್ಥಿತಿಯಲ್ಲಿ ಅವಳಿಗೆ ಕಲಿಸುವ ವಿಷಯದಲ್ಲಿ ನನಗಿದ್ದ ಆಲಸ್ಯವನ್ನು ನಾನು ಜಯಿಸುತ್ತಿದ್ದೆನು. ಶುದ್ಧ ಪ್ರೇಮದ ಮುಂದೆ ಅಸಾಧ್ಯವಾದುದೇನೂ ಇಲ್ಲವೆಂದು ನಾನು ತಿಳಿಯುತ್ತೇನೆ.

ವಿಷಯಾಸಕ್ತನಾದ ಪ್ರೇಮದ ದುಷ್ಪರಿಣಾಮಗಳಿಂದ ನಾನು ರಕ್ಷಿಸಲ್ಪಟ್ಟ ಒಂದು ಕಾರಣವನ್ನು ನಾನು ಮೇಲೆ ಸೂಚಿಸಿರುವೆನು. ಇನ್ನೊಂದು ಉಲ್ಲೇಖನೀಯವಾದ ಕಾರಣ ಇದೆ. ನಿಸ್ವಾರ್ಥ ಸೇವಕನೇ ಆಗಿರಬೇಕು ಎಂಬುದನ್ನು ಈಶ್ವರನೇ ಮಾಡಿದನೆಂದು ನನಗೆ ನನ್ನ ಅನುಭವಗಳಿಂದ ವಿದಿತವಾಗಿದೆ. ಹಿಂದೂಸಂಸಾರದಲ್ಲಿ ಬಾಲ್ಯವಿವಾಹದ ಹಾನಿಕರ ಕಟ್ಟಳೆಯಿರುವುದಾದರೆ, ಅದರ ದುಷ್ಪರಿಣಾಮಗಳನ್ನು ಸ್ವಲ್ಪ ಮಟ್ಟಿಗೆ ಕಡಿಮೆ ಮಾಡುವ ಬೇರೊಂದು ಪದ್ಧತಿಯೂ ಇದೆ. ಬಾಲಕ ಪತಿಪತ್ನಿಯರನ್ನು ತಾಯಿ ತಂದೆಗಳು ಹೆಚ್ಚು ಸಮಯ ಒಟ್ಟಿಗೆ ನಿಲ್ಲಲು ಬಿಡುವುದಿಲ್ಲ. ಬಾಲಪತ್ನಿಯು ಅರ್ಧಕ್ಕಿಂತ ಹೆಚ್ಚು ಸಮಯ ತನ್ನ ತವರುಮನೆಯಲ್ಲೇ ಇರುವಳು. ನಮ್ಮ ವಿಷಯದಲ್ಲಿಯೂ ಹೀಗೆಯೇ ನಡೆಯಿತು. ವಿವಾಹವಾದ ಮೊದಲನೆಯ ೫ ವರ್ಷಗಳಲ್ಲಿ (ಅಂದರೆ ೧೩ರಿಂದ ೧೮ನೇ ವಯಸ್ಸಿನವರೆಗೆ) ನಾವು ಎಲ್ಲ ಕೂಡಿ ಮೂರು ವರ್ಷಕಾಲ ಒಟ್ಟಿಗೆ ನಿಂತಿರಬಹುದು. ಆರೇಳು ತಿಂಗಳು ಒಟ್ಟಿಗೆ ನಿಲ್ಲುವಷ್ಟರಲ್ಲಿ ಕಸ್ತೂರಿಬಾಯಿಗೆ ಅವಳ ತವರುಮನೆಯಿಂದ ಆಮಂತ್ರಣವು ಬರುತ್ತಿತ್ತು. ನನ್ನ ಹದಿನೆಂಟನೆಯ ವರ್ಷದಲ್ಲಿ ನಾನು ವಿಲಾಯಿತಿಗೆ ಹೋದೆನು. ಇದರಿಂದ ನಮಗೆ ದೀರ್ಘ ವಿಯೋಗವು ಪ್ರಾಪ್ತವಾಯಿತು. ವಿಲಾಯಿತಿಯಿಂದ ಹಿಂದೆ ಬಂದ ಮೇಲೆ ಒಟ್ಟಿಗೆ ಆರೇ ತಿಂಗಳು ಒಂದೇ ಕಡೆಯಲ್ಲಿ ಇರಲು ಅವಕಾಶ ದೊರೆಯಿತು. ಏಕೆಂದರೆ ನಾನು ರಾಜಕೋಟೆಯಿಂದ ಮುಂಬಯಿಗೂ, ಮುಂಬಯಿಯಿಂದ ರಾಜಕೋಟೆಗೂ ಅಲೆದಾಡುತ್ತಿದ್ದೆನು. ಬಳಿಕ ದಕ್ಷಿಣ ಆಫ್ರಿಕದ ಆಮಂತ್ರಣವು ಬಂದಿತು. ಇಷ್ಟರೊಳಗೆ ನಾನಾದರೂ ಬಹಳ ಮಟ್ಟಿಗೆ ಜಾಗೃತನಾಗಿದ್ದೆನು.

ಐದನೆಯ ಅಧ್ಯಾಯ

ಹೈಸ್ಕೂಲಿನಲ್ಲಿ.

ನನಗೆ ವಿವಾಹವಾಗುವಾಗ ನಾನು ಹೈಸ್ಕೂಲಿನಲ್ಲಿ ಓದುತ್ತಿದ್ದೆನೆಂದು ಮೇಲೆ ಹೇಳಿರುವೆನು. ಆಗ ನಾವು ಮೂರು ಮಂದಿ ಸಹೋದರರೂ ಒಂದೇ ಶಾಲೆಯಲ್ಲಿ ಕಲಿಯುತ್ತಿದ್ದೆವು. ಜ್ಯೇಷ್ಠಬಂಧುವು ಮೇಲಿನ ವರ್ಗದಲ್ಲಿದ್ದನು. ನನ್ನೊಡನೆಯೇ ಮದುವೆಯಾದವನು ನನಗಿಂತ ಕೇವಲ ಒಂದು ವರ್ಷ ಮೇಲಿದ್ದನು. ವಿವಾಹದ ಕಾರಣದಿಂದ ನಮ್ಮಿಬ್ಬರ ಒಂದೊಂದು ವರ್ಷವು ವ್ಯರ್ಥವಾಯಿತು. ಅಣ್ಣನ ವಿಷಯದಲ್ಲಿ ಪರಿಣಾಮವು ಇನ್ನೂ ವಿಷಮವಾಯಿತು. ಅವನು ಮದುವೆಯಾದ ಮೇಲೆ ವಿದ್ಯಾಭ್ಯಾಸವನ್ನೇ ನಿಲ್ಲಿಸಬೇಕಾಯಿತು. ಎಷ್ಟು ಮಂದಿ ಯುವಕರ ವಿಷಯದಲ್ಲಿ ಹೀಗಾಗುವುದೋ ಪರಮಾತ್ಮನೇ ಬಲ್ಲನು. ವಿದ್ಯಾಭ್ಯಾಸ ಮತ್ತು ವಿವಾಹ ಇವೆರಡೂ ಹಿಂದೂ ಸಮಾಜದಲ್ಲಿ ಮಾತ್ರ ಒಟ್ಟಿಗೆ ಇರುವುದು ಶಕ್ಯವಿದೆ.

ನನ್ನ ವಿದ್ಯಾಭ್ಯಾಸವು ಮುಂದುವರಿಯಿತು. ಹೈಸ್ಕೂಲಿನಲ್ಲಿ ನಾನೇನೂ ದಡ್ಡ ಹುಡುಗನೆಂದು ಎಣಿಸಲ್ಪಡುತ್ತಿರಲಿಲ್ಲ. ನಾನು ಯಾವಾಗಲೂ ಶಿಕ್ಷಕರ ಪ್ರೇಮವನ್ನು ಸಂಪಾದಿಸುತ್ತಿದ್ದೆನು. ಪ್ರತಿ ವರ್ಷ ವಿದ್ಯಾರ್ಥಿಗಳ ರಕ್ಷಕರಿಗೆ ಕಳುಹಿಸಲ್ಪಡುವ ಪ್ರಮಾಣ ಪತ್ರಗಳಲ್ಲಿ ನನ್ನ ಅಭ್ಯಾಸ ಮತ್ತು ನಡತೆಯು ಸಂಬಂಧಿಸಿದಂತೆ ಕೆಟ್ಟದೆಂಬ ಷರಾ ಒಮ್ಮೆಯಾದರೂ ಸೇರಿಸಲ್ಪಡಲಿಲ್ಲ. ಎರಡನೇ ವರ್ಗದಿಂದ ಉತ್ತೀರ್ಣನಾದ ಮೇಲೆ ಬಹುಮಾನವನ್ನು ಪಡೆದೆನು. ಐದನೇ ಮತ್ತು ಆರನೇ ವರ್ಗದಲ್ಲಿ ಅನುಕ್ರಮವಾಗಿ ನಾಲ್ಕು ಮತ್ತು ೧೦ ರೂಪಾಯಿ ವಿದ್ಯಾರ್ಥಿವೇತನವನ್ನು ಕೂಡ ಹೊಂದಿದೆನು. ಈ ವಿದ್ಯಾರ್ಥಿವೇತನವನ್ನು ಹೊಂದಲು ಬುದ್ಧಿಮತ್ತೆಗಿಂತ ನನ್ನ ಭಾಗ್ಯವೇ ಹೆಚ್ಚಿನ ಕಾರಣವಾಗಿತ್ತು. ಏಕೆಂದರೆ ಇದು ಎಲ್ಲ ಹುಡುಗರಿಗೆ ದೊರೆಯುವಂಥದ್ದಾಗಿರದೆ ಸೋರಟ ಪ್ರಾಂತದ ವಿದ್ಯಾರ್ಥಿಯರಲ್ಲಿ ಪ್ರಥಮ ಸ್ಥಾನವನ್ನು ಪಡೆಯುವವನಿಗೆ ಕೊಡುವಂಥದ್ದಾಗಿತ್ತು. ೪೦-೫೦ ಮಂದಿ ಹುಡುಗರಿರುವ ವರ್ಗದಲ್ಲಿ ಸೋರಟಿನ ವಿದ್ಯಾರ್ಥಿಗಳೆಷ್ಟು ಮಂದಿ ಇರುವುದು ಸಾಧ್ಯವಿದೆ?

ನಾನು ನನ್ನ ಬುದ್ಧಿವಂತಿಕೆಯ ವಿಷಯದಲ್ಲಿಂದೂ ಅಭಿಮಾನಪಟ್ಟಂತೆ ನನಗೆ ನೆನಪಿಲ್ಲ. ಆದರೆ ನನ್ನ ನಡತೆಯ ಬಗ್ಗೆ ಯಾವಾಗಲೂ ಜಾಗರೂಕನಾಗಿರುತ್ತಿದ್ದೆನು. ನಡತೆಯಲ್ಲಿ ಸ್ವಲ್ಪವಾದರೂ ತಪ್ಪಿದ್ದರೆ ನನಗೆ ಕಣ್ಣೀರು ಬರುತ್ತಿತ್ತು. ನನ್ನ ಯಾವುದೋ ಕಾರ್ಯದಿಂದ ಉಪಾಧ್ಯಾಯರು ನನ್ನ ಮೇಲೆ [illegible] ಗರ್ಜಿಸುವುದೆಂದರೆ ನನಗೆ ಅಸಹ್ಯವೆನಿಸುತ್ತಿತ್ತು. ನಾನು ಒಮ್ಮೆ ಪೆಟ್ಟು ತಿನ್ನಬೇಕಾಯಿತೆಂದು ನನಗೆ ಜ್ಞಾಪಕವಿದೆ. ಪೆಟ್ಟಿನ ದುಃಖವು ಅಷ್ಟಾಗಿರಲಿಲ್ಲವಾದರೂ ನಾನು ಶಿಕ್ಷೆಗೆ ಪಾತ್ರನಾದ ಎನಿಸಲ್ಪಟ್ಟೆನೆಂಬ ದುಃಖವೇ ನನಗೆ ಹೆಚ್ಚಿತ್ತು. ಆಗ ನಾನು ಬಹಳ ಅತ್ತುಕೊಂಡೆನು. ಇದು ಮೊದಲನೆಯ ಅಥವಾ ಎರಡನೆಯ ವರ್ಗದಲ್ಲಿ ನಡೆದ ಸಂಗತಿ.

ಏಳನೆಯ ವರ್ಗದ ಇನ್ನೊಂದು ಪ್ರಸಂಗವು ಇಲ್ಲಿ ನಮೂದಿಸಲು ಯೋಗ್ಯವಾಗಿದೆ. ಆಗ ದೋರಾಬಜೀ ಎದಲಜೀ ಗಿಮೀ ಎಂಬವರು ಮುಖ್ಯೋಪಾಧ್ಯಾಯರಾಗಿದ್ದರು. ಅವರು ನಿಯಮ ಪೂರ್ವಕವಾಗಿ ಕಲಿಸ ಮಾಡುವವರು, ನಿಯಮಗಳ ಪಾಲನೆಯನ್ನು ಮಾಡಿಸುವವರೂ ಆಗಿದ್ದರಲ್ಲದೆ ಚೆನ್ನಾಗಿ ಕಲಿಸುತ್ತಿದ್ದರು. ಇದರಿಂದ ಅವರು ವಿದ್ಯಾರ್ಥಿಪ್ರಿಯರಾಗಿದ್ದರು. ಅವರು ಮೇಲಿನ ತರಗತಿಗಳ ವಿದ್ಯಾರ್ಥಿಗಳು ಕಸರತ್ತು ಮತ್ತು ಕ್ರಿಕೆಟಿನಲ್ಲಿ ಭಾಗ ತೆಗೆದುಕೊಳ್ಳಲೇಬೇಕೆಂಬ ಕ್ರಮವನ್ನು ಜಾರಿಗೆ ತಂದರು. ನನಗದು ರುಚಿಸಲಿಲ್ಲ. ಅದು ಕಡ್ಡಾಯವಾಗುವುದಕ್ಕೆ ಮೊದಲು ನಾನೆಂದೂ ವ್ಯಾಯಾಮಶಾಲೆಗಾಗಲೀ, ಕ್ರಿಕೆಟ್, ಫುಟ್‌ಬಾಲ್ ಮೊದಲಾದ ಆಟಗಳಿಗಾಗಲೀ ಹೋಗುತ್ತಿರಲಿಲ್ಲ. ನನ್ನ ನಾಚಿಕೆ ಸ್ವಭಾವವೂ ಇದಕ್ಕೊಂದು ಕಾರಣವಾಗಿರಬಹುದು. ಇದು ತಪ್ಪೆಂದು ನಾನು ಈಗ ತಿಳಿಯುತ್ತೇನೆ. ಆ ಸಮಯದಲ್ಲಿ ವ್ಯಾಯಾಮಕ್ಕೂ ಶಿಕ್ಷಣಕ್ಕೂ ಯಾವ ಸಂಬಂಧವೂ ಇಲ್ಲವೆಂದು ನನ್ನ ಅಭಿಪ್ರಾಯವಿತ್ತು. ಈಗಲಾದರೋ ವಿದ್ಯಾಭ್ಯಾಸದ ಪದ್ಧತಿಯಲ್ಲಿ ವ್ಯಾಯಾಮ ಅಥವಾ ಶಾರೀರಿಕ ವಿಕಾಸಕ್ಕೆ ಮಾನಸಿಕ ವಿಕಾಸಕ್ಕೆ ಸಮಾನವಾದ ಸ್ಥಾನವು ದೊರೆಯಬೇಕೆಂದು ತಿಳಿದುಕೊಂಡಿರುವೆನು.

(ಸತ್ಯಾಗ್ರಹೀ) ಮೋ॥ ಕ॥ ಗಾಂಧೀ

ಸ್ವಾಮಿವಿವೇಕಾನಂದರ ಮತ್ತು ಅವರ ಶಿಷ್ಯರ ಸಂವಾದ.

[೫ನೆ ಸಂಚಿಕೆಯಿಂದ ಮುಂದುವರಿದದ್ದು]

ಶಿಷ್ಯ.—ಪಾಶ್ಚಾತ್ಯದೇಶೀಯರ ರಜೋಭಾವವನ್ನು ನೋಡಿ ತಮಗೆ ಏನು ಸ್ವತ್ತ್ವಾಕಿಯುಂಟಾಗುತ್ತದೆ? ಅವರು ಕ್ರಮವಾಗಿ ಸಾತ್ವಿಕರಾಗುತ್ತಾರೆಯೋ?

ಸ್ವಾಮಿಗಳು.—ನಿಜ, ಮಹಾರಜೋಗುಣ ಸಂಪನ್ನರಾದ ಅವರು ಈಗ ಭೋಗದ ಕೊನೆಯ ಅಂಚಿಗೆ ಹತ್ತಿಬಿಟ್ಟಿದ್ದಾರೆ. ಅವರಿಗೇನು ಯೋಗಪ್ರಾಪ್ತಿಯಾಗದೆ ಹೊಟ್ಟೆಯ ತಾಪವು ಉಂಟಾಗುತ್ತದೆಯೋ? ಅವರ ಉತ್ಕೃಷ್ಟವಾದ ಭೋಗವನ್ನು ನೋಡಿದರೆ ನನಗೆ ಮೇಘದೂತದ "ವಿದ್ಯುತ್ವಂತಂ ಲಲಿತವನಿತಾಃ ..." ಎಂಬ ಚಿತ್ರವು ಮನಸಿಗೆ ಗೋಚರವಾಗುತ್ತದೆ. ಇಲ್ಲಿ, ನಿಮ್ಮ ದೇಶದಲ್ಲಿರುವುದೇನು?—ಬಾಗು ಸೇರಿದ ಮನೆಗಳಲ್ಲಿ ಚಿಂದಿಗಳ ಮೇಲೆ ಮಲಗಿಕೊಂಡು ವರ್ಷ ವರ್ಷವೂ ಹಂದಿಗಳ ಹಾಗೆ ವಂಶವೃದ್ಧಿಮಾಡುವುದಲ್ಲ!—Be getting a band of famished beggars and slaves (ಹೊಟ್ಟೆಗಿಲ್ಲದೆ ಸಾಯುತ್ತಿರುವ ತಿರುಕರನ್ನು ಗುಲಾಮರನ್ನು ಹಡೆಯುವುದು) ಅಲ್ಲ. ಆದಕ್ಕೆ ಈಗ ಜನರಲ್ಲಿ ರಜೋಗುಣವನ್ನು ಉದ್ದೀಪನಗೊಳಿಸಿ ಅವರನ್ನು ಕರ್ಮಪ್ರಾಣರನ್ನಾಗಿ ಮಾಡಬೇಕಾಗಿದೆ ಎಂದು ಹೇಳಿದ್ದು ಕರ್ಮ, ಕರ್ಮ, ಕರ್ಮ, ಈಗ 'ನಾನ್ಯಃ ಪಂಥಾ ವಿದ್ಯತೇಽಯನಾಯ,' ಅದನ್ನು ಬಿಟ್ಟರೆ ಉದ್ಧಾರವಾಗುವುದಕ್ಕೆ ಬೇರೆ ಮಾರ್ಗವೇ ಇಲ್ಲ.

ಶಿಷ್ಯ.—ಮಹಾಶಯ, ನಮ್ಮ ಪೂರ್ವಿಕರೇನು ರಜೋಗುಣ ಸಂಪನ್ನರಾಗಿದ್ದರೇ?

ಸ್ವಾಮಿಗಳು.—ಇರಲಿಲ್ಲವೇ? ಇತಿಹಾಸ ಹೇಳುತ್ತದೆ. ಅವರು ಎಷ್ಟೋ ದೇಶಗಳನ್ನು ಜಯಿಸಿ ಅಲ್ಲಿ ಸ್ಥಾಪಿಸಿದ ವಸತಿಗಳು—ಟಿಬೆಟ್, ಚೀನಾ, ಸುಮಾತ್ರ, ಜಪಾನುವರೆಗೆ ಧರ್ಮ ಪ್ರಚಾರಕರನ್ನು ಕಳುಹಿಸಿದರು. ರಜೋಗುಣದ ಮೂಲಕವಲ್ಲದೆ ಉನ್ನತಿಯುಂಟಾಗುವ ಸಂಭವವುಂಟೇ?

ಹೀಗೆ ಮಾತನಾಡುತ್ತ, ಮಾತನಾಡುತ್ತ ರಾತ್ರಿಯಾಯಿತು. ಇಷ್ಟರೊಳಗೆ ಮಿಸ್‌ಮುಲರ್ (Miss muller) ಬಂದಳು. ಆಕೆಯು ಒಬ್ಬ ಇಂಗ್ಲಿಷ್ ಹೆಂಗಸು. ಸ್ವಾಮಿಗಳಲ್ಲಿ ತುಂಬ ಶ್ರದ್ಧಾಭಕ್ತಿಯುಳ್ಳವಳು. ಸ್ವಾಮಿಗಳು ಶಿಷ್ಯ

ಗೆ ಆಕೆಯ ಪರಿಚಯವನ್ನು ಮಾಡಿಕೊಟ್ಟರು. ಸ್ವಲ್ಪಹೊತ್ತು ಮಾತನಾಡಿದ ಬಳಿಕ ಆಕೆಯು (ಮಿಸ್ ಮುಲರ್) ಮೇಲಕ್ಕೆ ಹೊರಟುಹೋದಳು.

ಸ್ವಾಮಿಗಳು.—ನೋಡಿದೆಯೋ, ಎಂಥ ವೀರಜಾತಿಯವಳು ಇವಳು? ಮನೆ ಮಠ ಇರುವುದಿಲ್ಲ? (ಕಾಲದಲ್ಲಿ) ದೊಡ್ಡ ಮನುಷ್ಯರ ಮನೆಯ ಹೆಂಗಸು. ಆದರೂ ಧರ್ಮ[illegible] ಆಕೆಯನ್ನಿಟ್ಟುಕೊಂಡು ಬಂದಿರುವುದು ಎಲ್ಲಿಗೆ!

ಶಿಷ್ಯ:—ಹೌದು ಮಹಾರಾಜ! ಆದರೆ ತಮ್ಮ ಕಾರ್ಯ ಕಲಾಪಗಳು ಇನ್ನೂ [illegible]. ಎಷ್ಟು [illegible] ತಮ್ಮ [illegible] ದ್ದಾರೆ! ಈ ಕಾಲದಲ್ಲಿ [illegible] ಅತ್ಯಾಶ್ಚರ್ಯಕರವಾದ ವಿಷಯ.

ಸ್ವಾಮಿಗಳು.—[illegible] ದೇಹವು ಇದ್ದರೆ ಇನ್ನೂ ಎಷ್ಟೋ ನೋಡುವೆ. [illegible] ಅಭಿಮಾನ [illegible] ಕೆಲವು [illegible] ನಾಸ್ತಿಕರನ್ನು [illegible] ಪಾಶ್ಚಾತ್ಯರ [illegible] ಆದರೆ [illegible] ವ್ಯತ್ಯಾಸ [illegible] ವಿದ್ಯಾಭ್ಯಾಸ [illegible] Muscle ನಲ್ಲಿ (ಮಾಂಸಖಂಡಗಳಲ್ಲಿ) ಶಕ್ತಿಯಿಲ್ಲ. Brain (ಮಿದುಳು) ಮತ್ತು muscle [illegible] Develope (ಪ್ರಕಾಶಗೊಳಿಸು) [illegible] Iron nerves with [illegible] — and the whole work [illegible] ಸ್ವಭಾವ [illegible] ವಿಶೇಷವಾದ [illegible]—[illegible] ದು ತಮ್ಮ ಕಾಲಿಗೆ [illegible].

ಸ್ವಾಮಿಗಳು [illegible] ಮಾತನಾಡಿ [illegible]. ಸ್ವಾಮಿಗಳು ಶಿಷ್ಯನನ್ನು ಕುರಿತು 'ಹಾಲನ್ನು [illegible]' ಎಂದು ಹೇಳಿದರು. [illegible] ಪ್ರತಿದಿನವೂ [illegible]. [illegible] Fresh vegetable (ಹೊಸದಾಗಿರುವ ತರಕಾರಿಗಳನ್ನು) [illegible] ಹು' ಎಂದರು. [illegible] ತಿಂದರೆ [illegible] ಎಂದು ಹೇಳಿದರು. ಎಷ್ಟು ತಿಂದಿದ್ದರೂ ಅದು ಗೊತ್ತಿಲ್ಲ. ಇನ್ನು ಮ[illegible] ಇಷ್ಟೋ [illegible] ತಿಳಿದುಕೊಳ್ಳಬಹುದು [illegible] ಮಾತನಾಡುತ್ತ ಅವರಿಗೆ [illegible] ಹೊತ್ತು ಕಳೆದುಹೋಗಿತ್ತು.

ಇಷ್ಟರಲ್ಲಿ ಸ್ವಲ್ಪ ತಿಂದು [illegible] ಸ್ವಾಮಿಗಳು [illegible] ಮುಗಿಸಿದರು. ಶಿಷ್ಯನೂ ಅಪ್ಪಣೆಯನ್ನು ಪಡೆದು ಕಲ್ಕತ್ತೆಗೆ ಹಿಂತಿರುಗಿದನು ....

ಬೇಕಾಗಿದೆ

ಸೊಸೈಟಿ ಗ್ರಾಮದಲ್ಲಿರುವ ಕಾಫಿ ಭೂಮಿಯನ್ನು ವ್ಯವಸಾಯ ಮಾಡಿಸಲಿಕ್ಕಾಗಿ 30ರಿಂದ 35 ವರ್ಷ ಪ್ರಾಯದ ಉತ್ಸಾಹವುಳ್ಳ ಒಬ್ಬ ರೈಟರು ಬೇಕಾಗಿದ್ದಾರೆ. ಆವರು 15ರಿಂದ 20 ಆಳುಗಳ ಸಮೇತ ಬರಬೇಕು. ಕಷ್ಟಪಟ್ಟು ಕೆಲಸ ನಡೆಸುವವರಿಗೆ ಒಳ್ಳೇ ಸಂಬಳವೂ ಉಳಕೊಳ್ಳುವುದಕ್ಕೆ ಅನುಕೂಲವಾದ ಮನೆಯೂ ಕೊಡಲಾಗುವುದು. ಹೆಚ್ಚಿನ ವಿಷಯಕ್ಕೆ ಈ ಕೆಳಗಿನ ವಿಳಾಸಕ್ಕೆ ಬರೆಯಬೇಕು.

ಎಂ. ಪಿ. ಅಯ್ಯಪ್ಪ,
ಕಿಚ್ಚಿಬಿಟ್ಟೆ ಎಸ್ಟೇಟ್,
41. ಸೋಮವಾರಪೇಟೆ.

ಕೊಡಗು ಲೆಜಿಸ್ಲೇಟಿವ್ ಕೌನ್ಸಿಲ್ ಮೀಟಿಂಗು

ಲೆಜಿಸ್ಲೇಟಿವ್ ಕೌನ್ಸಿಲಿನ ಮೀಟಿಂಗು ಈ ತಾ. ೯ರಲ್ಲಿ ಬೆಳಿಗ್ಗೆ 11ಗಂಟೆಗೆ ಮಡಿಕೇರಿ ಕೌನ್ಸಿಲ್ ಹಾಲಿನಲ್ಲಿ ಪ್ರಾರಂಭವಾಯಿತು. ಚೀಫ್ ಕಮೀಷನರಾದ ಮಿ. ಸಿ. ಟಿ. ಸೀಯರ್ಸ್ರವರು ಅಧ್ಯಕ್ಷಸ್ಥಾನದಲ್ಲಿದ್ದರು. ಕೌನ್ಸಿಲ್ ಮೆಂಬರುಗಳೆಲ್ಲರೂ ಹಾಜರಾಗಿದ್ದರು. ವಾಡಿಕೆಯಂತೆ ಪ್ರತಿನಿಧಿ ಮೆಂಬರುಗಳು ಕೇಳಿದ್ದ ಅನೇಕ ಪ್ರಶ್ನೆಗಳಿಗೆ ಜವಾಬುಕೊಡಲಾಯಿತು. ಈ ಉತ್ತರಗಳ ಮೇಲೆ ಮುಂದು ಹೆಚ್ಚಿನ ಪ್ರಶ್ನೆಗಳನ್ನು ಕೇಳಿದ್ದರಲ್ಲಿ ಕೆಲವಕ್ಕೆ ಉತ್ತರಗಳು ದೊರೆತವು.

ನಂತರ ಫೈನಾನ್ಸ್ ಮೆಂಬರು (ಕಮೀಷನರು) 1926-27ನೇ ವರ್ಷದ ಆದಾಯ ವ್ಯಯದ (ಬಡ್ಜೆಟ್) ಪಟ್ಟಿಯನ್ನು ಮುಂದಿಡುವಾಗ ಮಾಡಿದ ಭಾಷಣದ ಸಾರಾಂಶವೇನೆಂದರೆ.— ನಮ್ಮ ದೇಶದ ಆದಾಯ ವೆಚ್ಚವು ಪಕ್ಕೀಕವಾದ ಮೊದಲನೇ ವರ್ಷ 1924-25ರ ನಿಜವಾದ ಆದಾಯ ವೆಚ್ಚವನ್ನು ಹೋಲಿಸಿ ಈ ಬಡ್ಜೆಟನ್ನು ತಯಾರಿಸಿದಾಗಿದೆ. ಇಂಡಿಯಾ ಸರಕಾರವು ಇನ್ಕಂಟ್ಯಾಕ್ಸ್ ಕೆಲಸ ಮಾಡುವುದಕ್ಕಾಗಿ ಸಾಲಿಯಾನ 1000 ರೂ.ಯನ್ನು ಪೋಸ್ಟೇಜ್ ಸ್ಟಾಂಪನ್ನು ಅಂಕಾವಟ್ಟುಗಳಿಗೆ ಉಪಯೋಗಿಸುವುದಕ್ಕಾಗಿ 3300 ರೂ. ನ್ನು ಕೊಡುತ್ತದೆ. ಇನ್ನೂ ಎರಡು ಮೂರು ಚಿಕ್ಕ ಚಿಕ್ಕ ಉತ್ಪತ್ತಿಯ ಬಾಬುಗಳನ್ನು ಸೂಚಿಸಿ, ಅದರಂತೆಯೇ ಒಂದೆರಡು ಸ್ವಲ್ಪ ಖಾಯಂ ಖರ್ಚಿನ ಬಾಬುಗಳನ್ನೂ ನಮೂದಿಸಿ, ಹಿಂದಿನ ವರ್ಷಗಳ ಉಳಿತಾಯವನ್ನು ಉಪಯೋಗಿಸುವ ಕ್ರಮದ ವಿಷಯವಾಗಿ ಸ್ವಲ್ಪ ಉದ್ದವಾಗಿ ವಿವರಿಸಿದರು. 1925—26ರಲ್ಲಿ ಎಷ್ಟು ಉಳಿತಾಯವಾದೀತೆಂಬುದು ಇನ್ನೂ ಗೊತ್ತಾಗಲಿಲ್ಲ. ಏನಾದರೂ ಉಳಿದರೆ ಮದ್ರಾಸು ಪ್ರಾಂತ್ಯದಿಂದ ಎರವಲಾಗಿ ಬರುವ ಉದ್ಯೋಗಸ್ಥರ ರಜಾಸಂಬಳಕ್ಕೂ ಪೆನ್ಶನಿಗೂ ಉಪಯೋಗಿಸಲಾಗುತ್ತೆ. ಸಾರಾಯಿಯ ಅಪ ಉತ್ಪತ್ತಿಯನ್ನು ಕಡಿಮೆ ಮಾಡಿದ್ದರಿಂದ ಕುಡಿತ ಕಡಿಮೆ ಯಾಗಿದೆಯೆಂತಲೂ ಫಂಡಿನ ಖರ್ಚು 188 ಸೇರಿನಿಂದ 68 ಸೇರಿಗೆ ಇಳಿದಿದೆಯೆಂತಲೂ ಹೇಳಿದರು. ಸ್ವಯಂ ಆಳ್ವಿಕೆಯ ವಿಷಯಕ್ಕೆ ಬಂದರು. [illegible], ಗ್ರಾಮಾಂತರಗಳಿಗೆ ರಸ್ತೆಗಳನ್ನು ಮಾಡುವುದರಿಂದ ಜನರ ನಾಗರೀಕತೆ ಹೆಚ್ಚುವುದರಲ್ಲಿ ಸಂಶಯವಿಲ್ಲವೆಂತಲೂ, ಈಗ 251 ಮೈಲು ಕಲ್ಲು ಹಾಕಿದ ರಸ್ತೆಗಳೂ [illegible] ಮೈಲು ಮಣ್ಣು ರಸ್ತೆಗಳೂ (ಡಿಸ್ಟ್ರಿಕ್ಟ್ ಬೋರ್ಡಿನ ರಸ್ತೆಗಳು [illegible]) ಇವೆ. ಈಗ ಮೋಟಾರು ಬಸ್ಸುಗಳ [illegible] ರಸ್ತೆ [illegible] ಹೆಚ್ಚಾಗಬೇಕಾಗಿದೆಯೆಂತಲೂ ಹೇಳಿದರು. ಗ್ರಾಮ ಪಂಚಾಯಿತಿಗಳ ಸ್ಥಾಪನೆ [illegible] ರಸ್ತೆಗಳು ಹೆಚ್ಚಾಗಬಹುದು. ಮಲಬಾರು ಪ್ರಾಂತ [illegible] ಅಭಿವೃದ್ಧಿ [illegible] ಭಾಷಣವನ್ನು ಮುಗಿಸಿದರು.

ಈ ಭಾಷಣವಾದ ಮೇಲೆ ಫೈನಾನ್ಸ್ ಮೆಂಬರ ಬಡ್ಜೆಟನ್ನು ಕೌನ್ಸಿಲ್ ಚರ್ಚೆಗೆ ಇಟ್ಟರು.

ಮಿ. ಕಾಳೇರ ಚಿಣ್ಣಪ್ಪನವರು. — ಕೌನ್ಸಿಲಿನ ಇದುವರೆಗಿನ ಕೆಲಸದಿಂದ ದೇಶಕ್ಕೆ ಹೆಚ್ಚಿನ ಉಪಯೋಗವಾಗಲಿಲ್ಲವೆಂದೂ ಇಷ್ಟು ಚಿಕ್ಕ ಉತ್ಪತ್ತಿಯಿರುವ ದೇಶಕ್ಕೆ ಕೌನ್ಸಿಲ್ ಅವಶ್ಯವಿದೆಯೇ ಎಂಬುದಾಗಿಯೂ, ಈ ವರ್ಷದ ಆದಾಯ ವೆಚ್ಚದ ಪಟ್ಟಿಯು ಬಹಳ ಅತೃಪ್ತಿಕರವಾದುದೂ ಇನ್ನು ಮುಂದಿನ ವರ್ಷಕ್ಕೂ ನಮ್ಮ ಆದಾಯವು ಸ್ವಲ್ಪ ಕೃಷಿಯ [illegible] ಕಮೀಷನರು ತಮ್ಮ ಕೌನ್ಸಿಲಿನ ಅಧಿಕಾರವಲ್ಲಿ ಅನೇಕ ಕಾರ್ಯಗಳನ್ನು [illegible] ಮಾಡುವುದರಲ್ಲಿ ಇದ್ದಾರೆಂದೂ, ಅವರ ಬದುಕುವ[illegible] ಜನರಿಗೆ [illegible] ತೋರಿಸಿದೆ ಅವರು. [illegible] ವರೆಂದೂ [illegible] ನಡೆದೆ ಇದೇ ರೀತಿಯಲ್ಲಿ ಹೋಗುವುದಾದರೆ, ಡಿಸ್ಟ್ರಿಕ್ಟ್ ಬೋರ್ಡನ್ನು ಇಲ್ಲದೆ ಮಾಡಿದ್ದು ಇವರ [illegible] ದೊಡ್ಡ [illegible], ದೊಡ್ಡ [illegible] ತಗೆದುಹಾಕಬೇಕೆಂದೂ, ಫಾರೆಸ್ಟ್ [illegible] 1910ರಲ್ಲಿ [illegible] ಸಂಬಳ [illegible] ತರಬೇಕೆಂತಲೂ ಗವರ್ನ್ಮೆಂಟ್ ಉದ್ಯೋಗಸ್ಥರಿಗೆ [illegible] ವರ್ಗ[illegible] ದೇಶಕ್ಕೆ ಬಹಳ ಕಷ್ಟಕರವೆಂದೂ ಸಣ್ಣ ಉದ್ಯೋಗಸ್ಥರೂ ನಮ್ಮ ದೇಶದಲ್ಲಿ ಜಾತಿ ಮತ ಭೇದಗಳಿಗೆ ಅವಕಾಶವನ್ನುಂಟುಮಾಡುವ ರಾಜಕೀಯಕ್ಕೆ ಸಂಬಂಧಪಟ್ಟ ಕೆಲಸಕ್ಕೆ ಸ್ವರಾಜ್ಯ ದೇಶದಲ್ಲಿ ಗಲಭೆ ಉಂಟುಮಾಡುತ್ತಾರೆಂತಲೂ, ಸರಕಾರದವರು ಇದನ್ನು ನಿಲ್ಲಿಸಬೇಕ್ಕೆ ಮಾಡದಾದ ಸರಕಾರವು ಹಿಂದೂ ಮಹಾಸಭೆಯ ವಿಷಯದಲ್ಲಿ ಮಾಡಿದಂತೆ ತಕ್ಕ ಸರ್ಕ್ಯುಲರ್ ಉದ್ಯೋಗಸ್ಥರಿಗೆ ಕೊಡಬೇಕೆಂತಲೂ ಬಗ್ಗೆಯಾಗಿ ಮಾತಾಡಿದರು.

ಮಿ. ಪಿ. ಗಣಪಯ್ಯನವರು.—ದೇಶದಲ್ಲಿ ಕಾಯಿಲೆ ಹೆಚ್ಚುತ್ತಲೂ ದನಗಳ ರೋಗ ಹೆಚ್ಚುತ್ತಲೂ ದನಗಳಿಗೆ ಬೇಕಾದ [illegible] ಸಂತಾನವು ಅಭಿವೃದ್ಧಿ ಆಗುತ್ತಲೂ ಕಷ್ಟವೆಚ್ಚಾಗುತ್ತಿದೆ. ಕೃಷಿ ಬೇಸಾಯಿಗೆ ಸರಕಾರದ ಸಹಾಯದಿಂದ ಏನೂ ಆಗುತ್ತಿಲ್ಲ. ಸಹಕಾರ ಸಂಘಗಳಿಂದ ರೈತರಿಗೆ ಬೇಕಾದಷ್ಟು ಹಣ ದೊರೆಯದ್ದರಿಂದ ಸಾಹುಕಾರರ ಬಲೆಯಲ್ಲಿ ಬಿದ್ದು ಕಷ್ಟಪಡುತ್ತಿದ್ದಾರೆ. ಕಿಗ್ಗಟ್ಟನಾಡು ತಾಲೋಕು ಕಡೆ ಸರಕಾರದ ಗಮನವು ಸರಿಯಾಗಿ ಬಿದ್ದಿರುವುದಿಲ್ಲ. ಮರಿನಾಡು [illegible] ಕೆಲಸವನ್ನು ಇನ್ನೂ ಪ್ರಾರಂಭಿಸಿರುವುದಿಲ್ಲ ಎಂತ ಭಾಷಣ ಮಾಡಿದರು.

ಮಿ. ಚೌಡ್ಲು ಕಾಳಪ್ಪನವರು.— ಸೋಮವಾರಪೇಟೆ ತಾಲೋಕಿಗೆ ವೈದ್ಯದ ಅನುಕೂಲಗಳು ಕಡಿಮೆಯಾಗಿವೆಯೆಂತಲೂ, ವಿದ್ಯಾಭ್ಯಾಸಕ್ಕೆ ತಕ್ಕಷ್ಟು ಪ್ರೋತ್ಸಾಹವಿಲ್ಲವೆಂತಲೂ ಇವುಗಳಿಗೆ ಸರಕಾರದವರು ಹಣ ಸಹಾಯ ಕೊಡಬೇಕಾದದು ಅವಶ್ಯವೆಂತಲೂ ಆ ತಾಲೋಕಿಗೆ ಲಕ್ಷ ಇಟ್ಟಿರುವ ಹಣವು ಸಾಲದ್ದರಿಂದ ಹೆಚ್ಚು ಮಾಡಬೇಕೆಂತಲೂ ಬಗ್ಗೆಯಾಗಿ ಹೇಳಿದರು.

ಮಿ. ಕುಲ್ಲಚಂಡ ಚಿಣ್ಣಪ್ಪನವರು.— ಫಾರೆಸ್ಟ್ ಇಲಾಖೆಯಲ್ಲಿ ಖರ್ಚು ಕಡಿಮೆ ಮಾಡಿ ಅದರಲ್ಲಿ ಬರುವ ಉತ್ಪತ್ತಿಯನ್ನು ದೇಶದ ಅಭಿವೃದ್ಧಿಯ ಕೆಲಸಕ್ಕೆ ಕೊಡಬೇಕು, ವ್ಯವಸಾಯದ ಇಲಾಖೆಗೆ ಪ್ರೋತ್ಸಾಹ ಕೊಡುವುದರ ಬದಲು ಅದನ್ನು [illegible] ಹಾಗೆ ಆಗಿದೆ. ದೇಶದಲ್ಲಿ ಜನರ ಮರಣ ಸಂಖ್ಯೆಯು ಹೆಚ್ಚಾಗುತ್ತಿರುವುದರಿಂದ ದೇಶವು ಕ್ಷೀಣಸ್ಥಿತಿಗಿಳಿಯುತ್ತಿದೆ. ಆದ್ದರಿಂದ ವೈದ್ಯ ಇಲಾಖೆಯನ್ನು ವೃದ್ಧಿ ಪಡಿಸಬೇಕು. ಗರೀಬರಿಗೆ ಕೊಯಿನನ್ನು ಮುಫ್ತಾಗಿ ಕೊಡಬೇಕು. ಸರಕಾರದವರು ಮರಿನಾಡು ರಸ್ತೆ ರಿಪೇರಿಗೆ ಬೇಕಾದ ದ್ರವ್ಯವನ್ನೂ ಕೊಡದೆ ಇರುವುದು ತುಂಬಾ ದುಃಖಕ್ಕೆ ಕಾರಣ ಎಂದು ಹೇಳಿದರು.

ಮಿ. ಕೆಂಬಡಕಂಡ ಮಂದಣ್ಣನವರು.—ಫಾರೆಸ್ಟ್ ಇಲಾಖೆಯ ಖರ್ಚು ಹೆಚ್ಚಾಗಿದೆಯೆಂತಲೂ ದೇಶದ ಆರೋಗ್ಯ ಕೆಟ್ಟಿದೆಯೆಂತಲೂ ಸಹಕಾರ ಇಲಾಖೆಯ ಕೆಲಸವು ಸರಿಯಾಗಿ ನಡೆಯುತ್ತಿಲ್ಲವೆಂತಲೂ ಅಬ್ಕಾರಿ ಇಲಾಖೆಯ ಉತ್ಪತ್ತಿ ತುಂಬ ಇದ್ದರೂ ಸಿಬ್ಬಂದಿ ಬಹಳ ಕಡಿಮೆ ಮಾಡಿದ್ದರಿಂದ ಕಳ್ಳತನದಿಂದ ಸಾರಾಯಿ ಮಾಡುವುದು ಹೆಚ್ಚಾಗಿದೆ ಎಂಬದಾಗಿಯೂ ಭಾಷಣಮಾಡಿದರು.

ಮಿ. ಎ. ಬಿ. ಬಂಗಪ್ಪನವರು:—ಫಾರೆಸ್ಟ್ ಇಲಾಖೆಯ ಖರ್ಚು ಹೆಚ್ಚಾಗಿದೆ. ವಿದ್ಯಾ ಇಲಾಖೆಯ ಆಫೀಸರುಗಳು ಜನಾಂದೋಲನೆಗಳಲ್ಲಿ ಭಾಗ ತೆಗೆದುಕೊಳ್ಳುವುದರಿಂದ ಕಲಿವು ಶಾಲೆಗಳ ಆಡಳಿತ ಕೆಟ್ಟಿದೆ. ವೀರರಾಜಪೇಟೆಯಲ್ಲಿ ಒಬ್ಬ ಲೇಡಿ ಡಾಕ್ಟರ್ ಬೇಕು. ಕೋಪರೇಟಿವ್ ಅಧ್ಯಕ್ಷರು ಸಹಕಾರಿ ತತ್ವಕ್ಕೆ ವಿರೋಧವಾಗಿ ಬೋಧಿಸುತ್ತಾರೆ ಎಂದು ಬಗ್ಗೆ ಭಾಷಣಮಾಡಿದರು.

ಮಿ. ಸಿ. ಯನ್. ವೆಂಕಪ್ಪಯ್ಯನವರು:—ಫಾರೆಸ್ಟ್ ಇಲಾಖೆಯಲ್ಲಿ ಗಂಧದ ಉತ್ಪತ್ತಿಯಿಂದಲೇ ಆ ಇಲಾಖೆಗೆ ತುಂಬಾ ಖರ್ಚ ಮಾಡುತ್ತಿದ್ದಾರೆ. ಗಂಧ ಬಿಟ್ಟರೆ ಉತ್ಪತ್ತಿ ಬಹಳ ಕಡಿಮೆಯಾಗಿದೆ. ಇಲಾಖೆಯ ಸಿಬ್ಬಂದಿಯನ್ನು ಕೂಡಲೇ ಕಡಿಮೆ ಮಾಡಬೇಕು. ವಿದ್ಯಾ ಇಲಾಖೆಗೆ [illegible] 14800 ರೂಪಾಯಿ ಕಡಿಮೆ ಮಾಡಿದ್ದಕ್ಕೆ ವಿದ್ಯಾಭಿವೃದ್ಧಿಯ ಇತರ ಬಾಬುಗಳಿಗೆ ಖರ್ಚ ಮಾಡಬೇಕೆಂತಲೂ ಟ್ರೈನಿಂಗ್ ಮೇಲಧಿಕಾರಿ ಸಬ್ ಮೆಜಿಸ್ಟ್ರೇಟರಾದರೆ ಗುಮಾಸ್ತರುಗಳಿಗೆ ನ್ಯಾಯ ಸಿಕ್ಕುವುದು ಕಷ್ಟವಾಗುತ್ತೆಂತಲೂ, ಡಿಸ್ಟ್ರಿಕ್ಟ್ ಬೋರ್ಡು ಇಲ್ಲದೆ ಕೆಲಸ ನಡೆಸುವುದು ಬಹಳ ಅತೃಪ್ತಿಕರವೆಂದೂ, ಈ ಕೌನ್ಸಿಲಿಗೆ ಹೆಚ್ಚಿಗೆ ಹಕ್ಕುಗಳನ್ನು ಕೊಡಬೇಕೆಂತಲೂ ಹೇಳಿದರು.

ಮಿ. ಬಿ. ಶ್ರೀಪತಿರಾಯರು:—ಫಾರೆಸ್ಟ್ ಇಲಾಖೆಯ ದುಂದು ಖರ್ಚಿನ ವಿಷಯದಲ್ಲೂ ಭಾಗಮಂಡಲ ಪ್ರಾಂತ್ಯದಿಂದ ದಕ್ಷಿಣ ಕನ್ನಡಜಿಲ್ಲೆಗೆ ಹೋಗಲಿಕ್ಕೆ ರಸ್ತೆಯ ಆವಶ್ಯಕತೆಯ ವಿಷಯದಲ್ಲೂ ಮಾತಾಡಿದರು.

ಮಿ. ಸುಬ್ಬಯ್ಯಂಡ ಬೆಳ್ಯಪ್ಪನವರು ಹೇಳಿದರ ಸಾರಾಂಶವೇನೆಂದರೆ.— ಈ ಬಡ್ಜೆಟಿನಲ್ಲಿ ಉಳಿತಾಯ ಇದ್ದರೂ ಕೂಡ ಈಗ [illegible] ವರ್ಷಗಳಿಂದ ಉಳಿತಾಯ ಕಮ್ಮಿಯಾಗುತ್ತಿರುವದು ಸ್ಪಷ್ಟವಾಗಿದೆ. ಫೈನಾನ್ಸ್ ಮೆಂಬರು ಹೇಳಿದಂತೆ ವಾರ್ಷಿಕ ಉತ್ಪತ್ತಿ ಮತ್ತು ಖರ್ಚಿನ [illegible] ಬಜೆಟಿನ ವರ್ಷದಲ್ಲಿ ಹೊಸ ಕೆಲಸಗಳಿಗೆ [illegible]. ಆದಾಯ ಹೆಚ್ಚಿಸುವ ದೇಶದ ಅಭಿವೃದ್ಧಿಗಾಗಿ ಕೆಲಸ ನಡೆಸುವುದು [illegible] ಅದರಿಂದ ಶಿಲೆ [illegible] ಸಿಬ್ಬಂದಿಯ ಖರ್ಚು ಕಡಿಮೆ ಮಾಡಬೇಕು. ವೈದ್ಯ ಮತ್ತು ಆರೋಗ್ಯ ಇಲಾಖೆಗಳಿಗೆ ಹೆಚ್ಚು ಹಣಕೊಟ್ಟು ದೇಶದ ಆರೋಗ್ಯಸ್ಥಿತಿಯನ್ನು ಉತ್ತಮಗೊಳಿಸಬೇಕು. ಕ್ವಯಿನನ್ನು ಕ್ರಯವಿಲ್ಲದೆ ಜನರಿಗೆ ಹಂಚಬೇಕು, ಮಲೇರಿಯ ಕಾಯಿಲೆಯ [illegible] ಬಾರಿಗೆ ತರಬೇಕು. ಅಮಲು ಪದಾರ್ಥ ಸೇವನೆ [illegible] ಕಡಿಮೆಯಾದರೂ ಅದು ಸಾಕಷ್ಟು ವೇಗದಲ್ಲಿ ನಡೆಯುತ್ತಿರುವುದಿಲ್ಲ. ವೀರರಾಜಪೇಟೆ ಸ್ಕೂಲಿನ ಸಂಸ್ಕೃತ ಪಂಡಿತರ [illegible] ತೆಗೆಯಬಾರದು, ವೀರರಾಜಪೇಟೆ ಸ್ಕೂಲ್ ಅಭಿವೃದ್ಧಿಗೆ ಹಣ [illegible]. ಸಹಕಾರ ಸಂಘಗಳ ರೂಲ್ಸುಗಳನ್ನು [illegible] ಹಣ ಕೊಡಬೇಕು. ಮೋಟಾರ್ [illegible] ಡಾಕ್ಟರು ಜೈಲಿನ ಸೂಪರಿಂಟೆಂಡೆಂಟರಾಗಿರುವರು. ಉತ್ತಮ [illegible] ಯನ್ನು ಮರೆತದ್ದು [illegible]. ಆರಸಿನ [illegible] ಯನ್ನು [illegible] ಪ್ರಾರಂಭಿಸಬೇಕು. ಡಿಸ್ಟ್ರಿಕ್ಟ್ ಬೋರ್ಡ್ ಇಲ್ಲದೆ ಇರುವುದು, [illegible], ಅವರ [illegible] ಯನ್ನು ಪಡೆಸಿ ಮಾಡಬೇಕು.

ಅನಂತರ ಫೈನಾನ್ಸ್ ಮೆಂಬರು ಫಾರೆಸ್ಟ್ ಇಲಾಖೆಯ ಖರ್ಚು ವಿಷಯದಲ್ಲಿ ಸರಕಾರದವರ ಯೋಚನೆಯಲ್ಲಿದೆ ಎಂಬದಾಗಿಯೂ, ಎಗ್ಜಿಕ್ಯೂಟಿವ್ ಆಫೀಸರುಗಳ ಮೇಲೆ ಆರೋಪಣೆ ಹೇರಿದ್ದು ಯುಕ್ತವಲ್ಲವೆಂತಲೂ, ವೀರರಾಜಪೇಟೆ ಹೈಸ್ಕೂಲಿನಲ್ಲಿ ಸಂಸ್ಕೃತ ಪಂಡಿತರನ್ನು ಇಟ್ಟುಕೊಳ್ಳಲಾಗುವುದೆಂತಲೂ ಚಿಕ್ಕ ಭಾಷಣ ಮಾಡಿದ ಕೂಡಲೆ ಆ ದಿನಕ್ಕೆ ಮೀಟಿಂಗು ಮುಗಿಯಿತು.

ಎರಡನೇ ದಿನ.

ತಾ. 10ರಲ್ಲಿ ಬಡ್ಜೆಟ್ಟಿನ ಮೇಲೆ ಬಂದಿದ್ದ ಠರಾವುಗಳ ಚರ್ಚೆಯು ನಡೆಯಿತು. (1) ಮಾವುಕೋಟೆಯಲ್ಲಿ ಕಡಿದಿರುವ ಮುನ್ನೂರು ಟನ್ ಮರವನ್ನು ಬಲ್ಯಹಟ್ಟಕ್ಕೆ ಸಾಗಿಸಲಿಕ್ಕೆ ಇಟ್ಟ ಒಂಭತ್ತು ಸಾವಿರ ರೂಪಾಯಿಗಳನ್ನು ವಜಾಮಾಡಬೇಕು ಎಂಬ ಠರಾವನ್ನು ಮಿ. ಸಿ. ಯನ್. ವೆಂಕಪ್ಪಯ್ಯನವರು ಸಭೆಯ ಮುಂದಿಡುವಾಗ ಈ ಒಂಭತ್ತುಸಾವಿರ ಖರ್ಚು ಮಾಡಿದಕ್ಕೆ ಹತ್ತುಸಾವಿರ ರೂಪಾಯಿ ಮಾತ್ರ ಉತ್ಪತ್ತಿ ಇದೆಯೆಂತ ಇದ್ದದ್ದು ಈಗ 12000ವೆಂತ ತಿದ್ದಿದರೂ ಈ ಠರಾವಿನ ಆವಶ್ಯಕತೆಯಿದೆ. ಒಂಭತ್ತುಸಾವಿರಕ್ಕಿಂತ ಹೆಚ್ಚಾಗಿ ಖರ್ಚಾಗುವುದು ಖಂಡಿತ. ಇಲಾಖೆಯವರು ಅಂದಾಜುಮಾಡಿದ ಕ್ರಯ ಸಿಕ್ಕುವುದು ಕಷ್ಟ, ಆದ್ದರಿಂದ ಸ್ಥಳದಲ್ಲೇ ಮಾರುವದು ಒಳ್ಳೆಯದು ಎಂತ ವಾದಿಸಿದರು.

ಫಾರೆಸ್ಟ್ ಮೆಂಬರು, ಅಂದಾಜಿಗಿಂತ ಹೆಚ್ಚು ಖರ್ಚಾಗಲಾರದೆಂತಲೂ ಸ್ಥಳದಲ್ಲಿ ಗ್ರಾಹಕರುಗಳು ಸಿಕ್ಕದ್ದರಿಂದ ಬಲ್ಯಹಟ್ಟ

ತೆಗೆದುಕೊಂಡು ಹೋಗುವದಾಗಿದೆ ಎಂತಲೂ ಗಿರಾಕಿ [illegible] ಸಿಕ್ಕಿದರೆ ಸ್ವಲ್ಪವಲ್ಲೇ ಮಾರಬಹುದೆಂತಲೂ ಹೇಳಿದ ಮೇಲೆ ಠರಾವು ವಾಪಸು ತೆಗೆದುಕೊಳ್ಳಲಾಯಿತು

(2) ಫಾರೆಸ್ಟ್ ಇಲಾಖೆಯ ಇಬ್ಬರು ಎಕ್ಸ್‌ಟ್ರಾ ಅಸಿಸ್ಟೆಂಟ್ ಕನ್ಸರ್ವೇಟರುಗಳ ಸಂಬಳ 2460 ರೂಪಾಯಿಯನ್ನು ಕಡಿಮೆ ಮಾಡಬೇಕೆಂಬ ಠರಾವಿನ ಮೇಲೆ ಮಿ ಸಿ ಎನ್ ವೆಂಕಟ[illegible]ಯ್ಯನವರು ಹೇಳಿದ್ದೇನೆಂದರೆ — ಈ ಆಫೀಸರುಗಳು ಮದ್ರಾಸಿನಿಂದ ಎರವಾಗಿ ಬಂದವರಾಗಿರುತ್ತಾರೆ ಅವರನ್ನು ಮದ್ರಾಸಿಗೆ ವಾಪಸು ತೆಗೆದುಕೊಳ್ಳುವಂತೆ ಮಾಡಬೇಕು

ಫಾರೆಸ್ಟ್ ಮೆಂಬರು ಈ ಆಫೀಸರುಗಳಿಗೆ ಮದ್ರಾಸಿನಲ್ಲಿ [illegible]ದ್ದುದರಿಂದ ಅವರು ಹಿಂತಿರುಗಿ ಹೋಗುವದಿಲ್ಲವೆಂತಲೂ ಒಬ್ಬ ಆಫೀಸರ ಅವಶ್ಯಕತೆ ಇಲ್ಲ ಎಂತಲೂ ಹೇಳಿದರು. ಮಿ ಸಿ ಎನ್ ವೆಂಕಟಸುಬ್ಬಯ್ಯನವರು ಒಬ್ಬ ಆಫೀಸರ ಅವಶ್ಯಕತೆಯನ್ನು ತಾವು ಒಪ್ಪುವುದಿಲ್ಲವಾಗಿ ಹೇಳಿ ಇಲಾಖೆಯ ಸಿಬ್ಬಂದಿ ಮಾತ್ರ[illegible] ಠರಾವು ಇನ್ನೊಂದರಲ್ಲಿರುವುದರಿಂದ ಠರಾವನ್ನು ವಾಪಸು ತೆಗೆದುಕೊಳ್ಳುತ್ತೇನೆಂತ ಹೇಳಿದರು

(3) ಇದೇ ವಿಷಯದ ಠರಾವನ್ನು ಮಿ ಕ ಪಿ ಚಿನ್ನಪ್ಪನವರು ವಾಪಸು ತೆಗೆದುಕೊಂಡರು.

(4) ಫಾರೆಸ್ಟ್ ಇಲಾಖೆಯ [illegible] ಸಂಬಳದಲ್ಲಿ [illegible] 100 ರೂ ಕಡಿಮೆ ಮಾಡಬೇಕೆಂಬ ಠರಾವು ವೆ ಶ್ರೀಪತಿರಾಯರಿಂದ [illegible] ನಡೆದು ವೆಂಬರಾಯಿತು

[illegible] ಮೇಲೆ [illegible] ಪೋಲೀಸು ಸುತ್ತ 100ರಿಂದ 110 [illegible] ಠರಾವನ್ನು ಕ ಪಿ ಚಿನ್ನಪ್ಪನವರು [illegible] ಇದರ ಮೇಲೆ [illegible] ಒಪ್ಪಿದ್ದರಿಂದ ಠರಾವು ವಾಪಸು ತೆಗೆದುಕೊಳ್ಳಲಾಯಿತು

(6) ದೇಶದ ಆಡಳಿತದ [illegible] 10 ರೂಪಾಯಿ ಕಡಿಮೆ ಮಾಡಬೇಕೆಂತ ಸೂಚನೆ ತಂದು ಚೀಫ್ [illegible] ಆಫೀಸಿನಲ್ಲಿ [illegible] ಉತ್ಪತ್ತಿಯಿಂದ 16000 ರೂ [illegible] ತೆಗೆದುಕೊಳ್ಳುವ ಸಿಬ್ಬಂದಿಗೆ ಕೊಡಗಿನ ಜನರನ್ನು ನೇಮಿಸಬೇಕು [illegible] ಕೊಡಗಿನ ವಿದ್ಯಾವಂತ ಯುವಕರಿಗೆ ಉದ್ಯೋಗವಿಲ್ಲದೆ ಇರುವಾಗ [illegible] ಉದ್ಯೋಗಗಳಿಗೆ ಇವರನ್ನು ನೇಮಿಸುವುದು ಬಹಳ ಅವಶ್ಯವೆಂತಲೂ [illegible] ಉದ್ಯೋಗದಲ್ಲಿ ಇರುವವರನ್ನು ಅಲ್ಲಿಗೆ [illegible] ಮಾಡಬೇಕಾಗಿ ಅನಕವೆಂದೂ ಮಿ ವೆಂಕಪ್ಪಯ್ಯನವರು ಹೇಳಿದರು

ಫೈನಾನ್ಸ್ ಮೆಂಬರು ಈ ಠರಾವು [illegible] ಅಲ್ಲಿ ಕೆಲಸಗಳಿಗೆ ಅರ್ಜಿಗಳು ಬರುವದಿಲ್ಲವೆಂತಲೂ ಇನ್ನು ಮುಂದೆ ಅರ್ಹರಿಂದ ಅರ್ಜಿ ಬಂದರೆ ಯೋಚಿಸಬಹುದೆಂತಲೂ ಸೂಚಿಸಿದರು. ಠರಾವು ಮಂಜೂರಾಯಿತು

7 ಇದೇ ವಿಷಯದಲ್ಲಿ ಮಿ ಕ ಪಿ ಚಿನ್ನಪ್ಪನವರು ತಂದ ಠರಾವನ್ನು ವಾಪಸು ತೆಗೆದುಕೊಂಡರು

8 ಸರಕಾರಿ ತೋಟಗಳಿಂದ ಬಂತಾನ [illegible] ಹಣಕ್ಕೆ 1600 ರೂ ಸೇರಿಸಬೇಕೆಂತಲೂ ಇಂಜಿನೀಯರಿಂಗ್ ಇಲಾಖೆಗೆ [illegible] ಈ ಹಣವನ್ನು [illegible] ಮಿ ಪಿ ಬಿ ಚಿನ್ನಪ್ಪನವರು ಠರಾವನ್ನು [illegible] ಸರಕಾರದವರು [illegible] ರೈತರಿಗೆ ಪ್ರೋತ್ಸಾಹ [illegible] ಈ [illegible] ಸಂಘಗಳಿಗೆ ಸಹಾಯ ಕೊಡಲು ಹೆಚ್ಚಿನ [illegible] ಮುಂತಾಗಿ ಹೇಳಿದರು

ಫೈನಾನ್ಸ್ ಮೆಂಬರು ಈ [illegible] ತೋಟಗಳಲ್ಲಿ ಬಂತಾನವಿಲ್ಲದೆ ಇಟ್ಟು [illegible] ಇನ್ನೂ [illegible] ತೆಗೆಯುತ್ತಾ ಹೋಗ[illegible] ಅಂಥಾ ಬಾಗಕ್ಕೆ ಇನ್ನು ಮುಂದೆ ಹೆಚ್ಚು [illegible] ಮಾಡುತ್ತಾ ಹೋಗಬೇಕಾಗುತ್ತದೆಂತಲೂ ಸರಕಾರಿ ಸಂಘಗಳಿಗೆ ಸಹಾಯ ಕೊಡಲು ತಾನು ಒಪ್ಪುತ್ತೇನೆಂತಲೂ ಇಂಜಿನೀಯರಿಂಗ್ ಇಲಾಖೆಯಲ್ಲಿ ಭತ್ಯದಲ್ಲಿ 600 ರೂ [illegible] ಕಡಿಮೆಯಾಗಬಹುದೆಂತಲೂ ವಾದಿಸಿದರು. ಮಿ [illegible] ಚಿನ್ನಪ್ಪನವರು ವಿರೋಧಿಸಿದರು.

ಠರಾವಿಗೆ [illegible] ಮಿ ಕ ಪಿ ಚಿನ್ನಪ್ಪನವರು ಮಿ ಕುಶಾಲಪ್ಪನವರು ಮಿ ಮು ಚಿನ್ನಪ್ಪನವರು ಮಿ ಸುಬ್ಬಯ್ಯನವರು ಮಿ ವೆಂಕಪ್ಪಯ್ಯನವರು ಮಿ [illegible]ಪ್ಪನವರು, ಮಿ [illegible]ಪ್ಪನವರೂ ಓಟು ಕೊಟ್ಟರು. [illegible] ಉದ್ಯೋಗಸ್ಥರು ಮಿ ಮಂಗಪ್ಪನವರೂ, ಇಬ್ಬರು ಯೂರೋಪಿಯನರು ಮಿ [illegible] ವಿರೋಧವಾಗಿ ಓಟು ಕೊಟ್ಟರು ಸಮಸಂಖ್ಯೆಯಾದ್ದರಿಂದ ಅಧ್ಯಕ್ಷರ ಕ್ಯಾಸ್ಟಿಂಗ್ ಓಟಿನಿಂದ ಠರಾವು ನಾಪಾಸಾಯಿತು.

9. ಜೈಲಿನ ಖರ್ಚಿನಿಂದ 100 ರೂ ಕಡಿಮೆ ಮಾಡಬೇಕೆಂಬ ಠರಾವನ್ನು ಮಿ ಚಿನ್ನಪ್ಪನವರ ಸೂಚಿಸಿ ಜೈಲಿಗೆ ಸಬ್ ಮೇಜಿಸ್ಟ್ರೇಟರು ಸುಪರಿಂಟೆಂಡೆಂಟರಾಗಿ ಇರಕೂಡದೆಂತಲೂ, ಸಿವಿಲ್ ಸರ್ಜನರು ಇರಬೇಕೆಂತಲೂ ಹೇಳಿದರು ಮದ್ರಾಸಿನಲ್ಲಿ ಚಿಕ್ಕ ಜೈಲುಗಳಿಗೆ ಸಬ್ ಮೇಜಿಸ್ಟ್ರೇಟರುಗಳೇ ಜೈಲ್ ಸುಪರಿಂಟೆಂಡೆಂಟರಾಗಿ ಇರುತ್ತಾರೆಂತಲೂ ಅವರೂ ತಾನು ಡಾಕ್ಟರನ್ನು ಇಡುವ ವಿಷಯ ಯೋಚಿಸುತ್ತೇನೆಂತ ಹೇಳಿದ ಮೇಲೆ ಠರಾವು ವಾಪಸು ತೆಗೆದುಕೊಳ್ಳಲಾಯಿತು

10 ಪೋಲೀಸ್ ಇಲಾಖೆಯ ಖರ್ಚಿನಿಂದ 100 ರೂ ಕಡಿಮೆ ಮಾಡಬೇಕೆಂಬ ಠರಾವನ್ನು ಮಿ ಪಿಂಟೋರವರು ತಂದ ಡಿಸ್ಟ್ರಿಕ್ಟ್ ಸುಪರಿಂಟೆಂಡೆಂಟರ ಕೆಲಸಕ್ಕೆ ಕೆಲಸ ಇಲಾಖೆಯವರನ್ನು ನೇಮಿಸಬಾರದೆಂದು ಕೇಳಿ ಪೋಲೀಸ್ ಇಲಾಖೆಯ ಹಾಗೆ ಇರುವ ಈ ದೊಡ್ಡ ಸಂಬಳದ ಉದ್ಯೋಗವನ್ನು ತಪ್ಪಿಸುವದರಿಂದ ಇಲಾಖೆಯಲ್ಲಿ ಅತೃಪ್ತಿಯಾಗುವುದೆಂತಲೂ ಸೂಚಿಸಿದರು

ಫೈನಾನ್ಸ್ ಮೆಂಬರು ಈ ಉದ್ಯೋಗಕ್ಕೆ ಕೆಲಸ ಇಲಾಖೆಯಿಂದ ನೇಮಿಸಿದ್ದಕ್ಕೆ ಅರ್ಹತೆಯೇ ಕಾರಣವೆಂತಲೂ ಪೋಲೀಸ್ ಇಲಾಖೆಯಿಂದ ಕೆಲಸ ಇಲಾಖೆಗೆ ಒಬ್ಬರನ್ನು ವರ್ಗಾಯಿಸಿ ಇರುವಾಗ ಅತೃಪ್ತಿಗೆ ಕಾರಣವಿಲ್ಲವೆಂತಲೂ ಹೇಳಿದ ಮೇಲೆ ಠರಾವು ವಾಪಸು ತೆಗೆದುಕೊಳ್ಳಲಾಯಿತು

11 ವಿದ್ಯಾ ಇಲಾಖೆಗೆ 100 ರೂ [illegible] ಕಡಿಮೆ ಮಾಡಬೇಕೆಂಬ ಠರಾವನ್ನು ಮಿ [illegible] ಮೇದಪ್ಪನವರು [illegible] ಹೇಳಿದ್ದೇನೆಂದರೆ — ಇನ್ಸ್‌ಪೆಕ್ಟರಿಗೆ ಅವರ ಸಿಬ್ಬಂದಿ [illegible] ಸಂಬಳ [illegible]ಯಿಂದ ಕೊಟ್ಟರೂ ಅವರು ಅದಕ್ಕೆ ತಕ್ಕಷ್ಟು ಕೆಲಸ ಮಾಡುತ್ತಿಲ್ಲವೆಂತಲೂ ಕೆಲವು ತಾಲೂಕುಗಳಲ್ಲಿ [illegible] ಶಾಲೆಗಳು [illegible] ಕೆಲವು [illegible] ಪುಸ್ತಕಗಳು [illegible] ಇರುವದರಿಂದ ಡಿಸ್ಟ್ರಿಕ್ಟ್ ಕಡತ್ತೆ ಬೇಕೆಂದೂ ಹೇಳಿದರು

ಇನ್ಸ್‌ಪೆಕ್ಟರು ಜವಾಬು ಹೇಳಿದ್ದೇನೆಂದರೆ—

[illegible] ಸರಕಾರದ [illegible] ತನ್ನ [illegible] ಒಪ್ಪುವದಕ್ಕೆ [illegible] ಅಕ್ಷಮರೆಗಳೂ ತನಗೆ ತಿಳಿದ [illegible] ಸ್ಕೂಲುಗಳಲ್ಲಿ ಎಂತ ಆಗಿಲ್ಲದೆ [illegible] ಎಂತಲೂ ಹೇಳಿದರು

ಠರಾವು ವಾಪಸು ತೆಗೆದುಕೊಳ್ಳಲಾಯಿತು

12 ಡಿಸ್ಟ್ರಿಕ್ಟ್ [illegible] ಗ್ರಾಂಟಿನಿಂದ 100 ರೂ ಕಡಿಮೆ ಮಾಡಬೇಕೆಂಬ ಠರಾವು [illegible] ಡಿಸ್ಟ್ರಿಕ್ಟ್ [illegible] ಮೆಂಬರುಗಳನ್ನು ಚುನಾವಣೆ ಮೂಲಕ [illegible] ದೇಶದಲ್ಲಿ [illegible] ಸರಕಾರಕ್ಕೆ ಮಿ [illegible] ಮಂದಪ್ಪಯ್ಯನವರ [illegible] 1921ರ [illegible] ಚುನಾವಣೆ ಆಗಬೇಕಾಗಿದ್ದರೂ 1925ರ ವರೆಗೆ [illegible] ಮೆಂಬರುಗಳ ಚುನಾವಣೆಯನ್ನೇ ಮುಂದರಿಸಿ [illegible] ಚುನಾವಣೆಯ [illegible] ತಿಳಿಸಿದ್ದರು. ಮತ್ತೊಂದು ವರ್ಷವಾದರೂ [illegible] ಹೊರಡಲಿಲ್ಲ. ಈ ಕೌನ್ಸಿಲಿಗೆ ಚುನಾವಣೆ ರೂಲ್ಸ್‌ಗಳು ಸ್ಟೇಟ್ ಸಕ್ರೆಟರಿಯ ವರೆಗೆ ಹೋಗಿ [illegible] ಇನ್ನೊಂದು ಕಾಲ ತೆಗೆದುಕೊಳ್ಳಲಿಲ್ಲ. ಈ ಕೌನ್ಸಿಲಿಗೆ ದೇಶದ ಆಡಳಿತದ ಮೇಲೆ ಯಾವ ಹಕ್ಕು ಇಲ್ಲದ [illegible] ಡಿಸ್ಟ್ರಿಕ್ಟ್ ಬೋರ್ಡುದಾರರಿಗೆ ರೈತರ [illegible] ಪ್ರತಿನಿಧಿಗಳಿಗೆ ಕೂಡಲೇ ಬಿಟ್ಟುಕೊಡಬೇಕು ಎಂತ [illegible] ಹೇಳಿದರು

(ಮುಂದೆ ಬರುವುದು.)

SALE OF TIMBER

Following timbers recently felled and lying in the Yedavanad reserve at the 10th mile of the Fraserpet Somwarpet road will be sold by public auction at Ramaswami Kanve at 2 P M on 17th March 1926 —

TIMBERS

Teak	200 c ft
Honne	800
Biti	[illegible]0 ,,
Nandi	600 ,,
Matti	1300 ,,
Total	2950 c ft

For further particulars apply to —
The Divisional Forest Officer
North Coorg,
Mercara

ವಿನಂತಿ

M M T ಅಕ್ಷರಗಳು ಬರೆಯಲ್ಪಟ್ಟಿರುವ ಒಂದು ಬೆಳ್ಳಿಯ ಸಿಗರೇಟ್ ಕೇಸನ್ನು ತಾ 10 ರ ಸಾಯಂಕಾಲ ರಾಜಾಸೀಟಿನಲ್ಲಿ ಕಳಕೊಂಡಿರುತ್ತೇನೆ ಅದರ ಪತ್ತೆಗೆ ಸಹಾಯ ಕೊಟ್ಟವರಿಗೆ [illegible] ರೂಪಾಯಿ ಬಹುಮಾನ ಕೊಡಲಾಗುವದು

ಯಂ ಯಂ ತಿಮ್ಮಯ್ಯ,
ಫರ್ನ್ ಬ್ಯಾಂಕ್, ಮಡಿಕೇರಿ

ವರ್ತಮಾನ ಸಂಗ್ರಹ.

ಒಳದೇಶ

ಕಳೆದ ಹಾರಿಸನ್ ಸ್ಕೂಲ್ ಫೈನಲ್ ಪರೀಕ್ಷೆಗೆ ಹೋಗಿದ್ದ ಮಿ ಜೋಂದಿರ ಸೋಮಯ್ಯನವರು ಪಾಸಾಗಿರುವರೆಂದು ಇತ್ತಲಾಗಿ ತಿಳಿಯಬಂದಿದೆ

ಈ ತಾ 2ರಲ್ಲಿ ಮೃತಪಟ್ಟ ನೆಲಜಿ ಗ್ರಾಮದ ಮಣವಟ್ಟಿರ ಸುಬ್ರಾಯನವರ ಶವವನ್ನು ದಹನ ಮಾಡಲು ಗುಂಡಿ ತೆಗೆಯುವಾಗ್ಯೆ ಅದರಲ್ಲಿ ಹಲ್ಲುಗಳು ಮತ್ತು ಕೂದಲಿಂದ ಕೂಡಿದ್ದ ಒಂದು ತಲೆಬುರುಡೆಯೂ ತಲೆಗೆ ಸುತ್ತಿದ್ದ ಕೆಂಪು ಪಟ್ಟೆ ವಸ್ತ್ರ [illegible] ದೊರೆಯಿತೆಂದು ಒಂದು ವಾರ್ತೆ

ಮಡಿಕೇರಿ ನಾಡು ಕರವಲೆ ಬಾಡಗ ಗ್ರಾಮದ ಮಹಿಷಾಮರ್ಧಿನಿ ದೇವರ ಹಬ್ಬವು ಈ ತಾ 12ರಿಂದ 14ರವರೆಗೆ ನಡೆಯುವುದು ಹಬ್ಬದ ಮುಖ್ಯ ದಿವಸ ತಾ 14ನೇ [illegible] [illegible]ವಾರವಾಗಿದೆ

ಕೊಡಗು ಲೆಜಿಸ್ಲೇಟಿವ್ ಕೌನ್ಸಿಲು ಮೀಟಿಂಗು ತಾ 9ರಲ್ಲಿ ಪ್ರಾರಂಭವಾಯಿತು. ಮೊದಲನೇ ದಿನ 1926 27ನೇ ವರ್ಷದ ಬಜೆಟ್ಟಿನ ಒಟ್ಟು ಮೇಲೆ ಚರ್ಚೆಯು ನಡೆಯಿತು ತಾ 10ರಲ್ಲಿ ಬಜೆಟ್ಟಿನ ಮೇಲೆ ರೂಪಾಯಿ ಠರಾವುಗಳು ಚರ್ಚಿಸಲ್ಪಟ್ಟವು ತಾ 11ರಲ್ಲಿ [illegible] ಸಂಗತಿಗಳನ್ನು ಕುರಿತ ಕೆಲವು ಠರಾವುಗಳ ಚರ್ಚೆಯಾಯಿತು ತಾ 12ರಲ್ಲಿ [illegible] ಮೇಲೆ ವೀವ್ ಆಫ್ ಕಂಟ್ರಾಕ್ಟು ಆಕ್ಟು ಬಿಲ್ಲಿನ [illegible] ಸಿಲೆಕ್ಟ ಕಮಿಟಿಯವರು ಒದಗಿಸಿದ್ದ [illegible] ಒಪ್ಪಿ ಕೆಲವು ಪಾಸಾಯಿತು ಮೆಂಬರುಗಳಾದ [illegible] ಪ್ಪನವರ, ಪಿ ಬಿ ಮೇದಪ್ಪನವರು ಸಿ ಎನ್ ವೆಂಕಪ್ಪಯ್ಯನವರು ಕೆ ಯಂ ಮಂದಣ್ಣನವರು ಮತ್ತು ಪಿ ಬಿ ಚಿನ್ನಪ್ಪನವರು ಬಿಲ್ಲಿಗೆ ವಿರೋಧವಾಗಿಯೂ [illegible] 1 ಮೆಂಬರು ಪರವಾಗಿಯೂ ಓಟುಕೊಟ್ಟರು ಈ ವಿಷಯ ಗಜೆಟಿನಲ್ಲಿ ಪ್ರಕಟವಾದಂದಿನಿಂದ ಜಾರಿಗೆ ಬರುವದು

ಪೊನ್ನಂಪೇಟೆ ನಾಡು ಬಾಳೆಲೆ ಗ್ರಾಮದಲ್ಲಿ ಕಳೆದ ತಿಂಗಳಿಂದ ಒಂದು ಪ್ಲೇಗ್ ಕೇಸು [illegible] ದರಿಂದ ಬಾಳೆಲೆ ದೇವನೂರ [illegible] ಮತ್ತು [illegible] ಗ್ರಾಮಗಳ ಜನರಿಗೆ ಟೀಕಾ [illegible] ಹಾಕಿಸಲಾಗಿದೆ ಎಂದು ತಿಳಿದುಬರುತ್ತದೆ

ಬರುವ ಏಪ್ರಿಲ್ ತಿಂಗಳು 17 18ರಲ್ಲಿ ಸೋಮವಾರಪೇಟೆಯಲ್ಲಿ ನಡೆಯುವ ಒಕ್ಕಲಿಗರ ಸಂಘದ ಕಾನ್‌ಫರೆನ್ಸಿನ ಅಧ್ಯಕ್ಷಸ್ಥಾನವನ್ನು ವಹಿಸಲು [illegible]ರಾದ ಮಿ [illegible] ಎಂ ಎ [illegible] ರವರು ಒಪ್ಪಿದ ವರ್ತಮಾನವನ್ನು ತಿಳಿಸಲು ಸಂತೋಷಪಡುತ್ತೇವೆ

ಈ ತಾ 8ರಲ್ಲಿ ಸೋಮವಾರಪೇಟೆ ನಾಡು [illegible] ಗ್ರಾಮದ ಕಿರ್ತಪ್ಪ ದೇವರ ಹಬ್ಬವು ಬಹು ಜನವಾಗಿ ನಡೆಯಿತು ಈ ಹಬ್ಬವು ಗೌಡರಿಂದ ಮಾತ್ರ ನಡೆಸಲ್ಪಡುವದಾಗಿದೆ ಸುಮಾರು 900 ಜನರು ನೆರೆದಿದ್ದರು ಅಲ್ಲಿ ಒಕ್ಕಲಿಗರ ಸಂಘದ ಸಾಮಾಜಿಕ ಮೀಟಿಂಗು ನಡೆಯಿತು ಸಂಘದ ಸೋಮವಾರಪೇಟೆ ಕಾನ್‌ಫರೆನ್ಸಿನ ಸ್ವಾಗತ ಕಮಿಟಿಯ [illegible] ಟೆರಿಟೋರಿಯಲ್ [illegible] ಕುರಿತು ಮಿ ಬಿದಿಯಂಡ ಪೂಣಚ್ಚಯ್ಯನವರು ಮಾತಾಡಿದರು ಇವರ ಅಭಿಪ್ರಾಯಕ್ಕೆ ಉತ್ಸಾಹವಾಗಿ ಮಿ [illegible] ಮೇದಪ್ಪನವರೂ ಮಾತಾಡಿದರೆಂದು ಒಬ್ಬರು ಬರೆದಿದ್ದಾರೆ

ಸೇಂಟ್ರಲ್ [illegible] ಕಾಲೇಜಿಗೆ ಬರುವ ಸೆಷನ್‌ನಲ್ಲಿ ಸೇರಬೇಕೆನ್ನುವ ಉಮೇದುವಾರರ ಪ್ರವೇಶ ಪರೀಕ್ಷೆಯು [illegible] ತಾ 17ರಿಂದ 28ರವರೆಗೆ ನಡೆವುದೆಂದೂ ಈ ಪರೀಕ್ಷೆಗೆ ಹೋಗಲಿಚ್ಛಿಸುವವರು ಕಮಿಷನರಿಗೆ [illegible] ತಾ 20ರೊಳಗೆ ಕಾಣಬೇಕೆಂದೂ ಹೆಚ್ಚಿನ ವಿಷಯ ಕಮಿಷನರ ಆಫೀಸಿನಿಂದ ತಿಳಕೊಳ್ಳಬಹುದೆಂತಲೂ ಕಮಿಷನರವರು ತಿಳಿಸಿರುತ್ತಾರೆ

ಮಿ ಲಯನೆಲ್ ಸ್ಮಾರ್ಕರವರು ಮತ್ತು ಮಿ [illegible] ನಿಕಲ್ಸ್‌ರವರು ಮಾರ್ಚ 21ರಿಂದ ಕೊಡಗು ಕೌನ್ಸಿಲ್ ಮೆಂಬರ ಸ್ಥಾನಕ್ಕೆ ಕೊಟ್ಟಿರುವ ರಾಜೀನಾಮೆಯನ್ನು ಚೀಫ್ ಕಮಿಷನರವರು ಒಪ್ಪಿಕೊಂಡಿರುವರು ಇವರ ಬದಲಿಗೆ ಕೌನ್ಸಿಲಿಗೆ ಇಬ್ಬರು ಯೂರೋಪಿಯನ್ ಮೆಂಬರುಗಳ ಚುನಾವಣೆಯು ಮಾರ್ಚಿ ತಾ 30ರಲ್ಲಿ ನಡೆಯುವುದು

ಹಿಂದೂದೇಶ

ಅಖಿಲಭಾರತ ಕಾಂಗ್ರೆಸ್ ಕಮಿಟಿಯ ತೀರ್ಮಾನದ ಮೇರೆ ಲೆಜಿಸ್ಲೇಟಿವ್ ಎಸೆಂಬ್ಲಿಯಲ್ಲಿ ಸ್ವರಾಜ್ಯ ಪಾರ್ಟಿ ಮೆಂಬರುಗಳ್ಯಾರು ತಾ 8ರಲ್ಲಿ ಮೀಟಿಂಗಿನಿಂದ ಎದ್ದು ಹೊರಗೆ ಬಂದುಬಿಟ್ಟರು. ದೇಶದವರ ಬೇಡಿಕೆ ನೋಡಿ ನ್ಯಾಯ ಸುಧಾರಣೆಯನ್ನು ಕೊಡದೆ ಇರುವದೇ ಇದಕ್ಕೆ ಕಾರಣ. ಅವರು ಹೊರಗೆ ಹೋಗುವದಕ್ಕೆ ಅಧ್ಯಕ್ಷರಾದ ಮಿ ಪಟೇಲರವರು [illegible] ಬಿಟ್ಟಿದ್ದನ್ನು [illegible] ಮಾಡಿದರು. ಹಿಗೆಯೇ ಅದೇ ದಿನ ಕೌನ್ಸಿಲ್ ಆಫ್ ಸ್ಟೇಟ್‌ನಲ್ಲಿಯೂ ಪಂಜಾಬು ಕೌನ್ಸಿಲಿನಲ್ಲಿಯೂ ಮತ್ತು ಬಿಹಾರ ಮತ್ತು ಒರಿಸ್ಸಾ ಕೌನ್ಸಿಲಿನಲ್ಲಿಯೂ ಸ್ವರಾಜ್ಯ ಪಾರ್ಟಿ ಮೆಂಬರುಗಳು ಎದ್ದು ಹೋಗಿಬಿಟ್ಟರು. ಇವರೆಲ್ಲರೂ ಬರುವ ಚುನಾವಣೆವರೆಗೆ ಲೆಜಿಸ್ಲೇಟಿವ್ ಸಭೆಗೆ ಹೋಗುವದಿಲ್ಲ. ಬೊಂಬಾಯಿ ಕೌನ್ಸಿಲಿನ ಸ್ವರಾಜ್ಯ ಪಾರ್ಟಿ ಮೆಂಬರುಗಳು ಆ ದಿನದ ಮಟ್ಟಿಗೆ ಮಾತ್ರ ಮೀಟಿಂಗಿನಿಂದ ಎದ್ದು ಹೋದರು.

ಪತ್ರವ್ಯವಹಾರ

ಬಾತ್ಮಿದಾರರು ಬರೆವ ಅಭಿಪ್ರಾಯಗಳಿಗೆ ಪತ್ರಿಕಾ ಕರ್ತರು ಉತ್ತರವಾದಿಗಳಲ್ಲ. ಸಂ.

ಗೌಡಸಮುದಾಯಕ್ಕೆ ಸೇರಿದ ಸಮಸ್ತ ಮಹನೀಯರುಗಳಿಗೆ ಮಾಡುವ ವಿಜ್ಞಾಪನೆಗಳು.

ನಮ್ಮ ಗೌಡಜನಗಳು ವಿದ್ಯಾವಂತರಾಗಿ ನವನಾಗರೀಕತೆಯನ್ನು ಹೊಂದಿ, ಸರ್ಕಾರಿ ಇಲಾಖೆಗಳಲ್ಲಿ ನಾಯಕರಾಗಿ ಸರ್ಕಾರದವರು ನಡೆಸುತ್ತಿರುವ ಆಡಳಿತಗಳಲ್ಲಿ ಭಾಗಿಗಳಾಗಿ ದೇಶಸೇವೆಗೂ ಜನಸೇವೆಗೂ ಅರ್ಹರಾಗಬೇಕೆಂತಲೂ, ಮತ್ತು ನಮ್ಮ ಸ್ವಂತ ಕಸಬಾದ ವ್ಯವಸಾಯವನ್ನು ಯೂರೋಪ, ಅಮೇರಿಕ ಖಂಡಗಳಿಗೆ ಸೇರಿದ ಕೃಷಿ ಜನಗಳು ಹೇಗೆ ಉತ್ತಮಸ್ಥಿತಿಗೆ ತಂದು ಅಧಿಕವಾದ ಲಾಭವನ್ನು ಹೊಂದುತ್ತ ಐಶ್ವರ್ಯವಂತರಾಗಿರುವಂತೆ ನಮ್ಮ ಜನಗಳು ಸಹ ಅಭಿವೃದ್ಧಿ ಸ್ಥಿತಿಗೆ ಬರಬೇಕೆಂಬ ಉದ್ದೇಶದಿಂದ ನಮ್ಮ ಕೆಲವು ವಿದ್ಯಾವಂತರು ಗೌಡರುಗಳ ವಿದ್ಯಾಭಿವೃದ್ಧಿ ಸಂಘವನ್ನು ಸ್ಥಾಪಿಸಿದರು. ಈ ಸಂಘಕ್ಕೆ ಅನೇಕ ಮಹನೀಯರು ದ್ರವ್ಯಸಹಾಯ ಮಾಡಿ ಪ್ರೋತ್ಸಾಹಿಸಿದರು.

ನಾವು ಕೈಕೊಂಡಿರುವ ಸಂಘವು ದ್ರವ್ಯಸಹಾಯ ಸಾಲದೆಯೂ ಸರಿಯಾದ ಪ್ರೋತ್ಸಾಹವಿಲ್ಲದೆಯೂ ದಿನೇ ದಿನೇ ಕೃಷ್ಣಪಕ್ಷದ ಚಂದ್ರನಂತೆ ಕ್ಷೀಣಿಸುತ್ತಿರುವುದನ್ನು ನೋಡಿ ... ಸ್ಥಿತಿಗೆ ಬಾರದಂತೆ ವಿಜ್ಞಾಪಿಸಬೇಕಾಗಿದೆ. ನಮ್ಮ ಜನಗಳು ಇತರ ಮತಸ್ಥರಂತೆ ... ಉದಾರ ಶಾಲೆಗಳಿಗೆ ... ನಮ್ಮವರು ಹಿಂದೆ ಬೀಳದಿರಬೇಕು. ನಮ್ಮವರ ನಮ್ಮ ಸಂಘದ ಏಳಿಗೆಗೆ ... ಉಪಕಾರ ... ಗಾದೆಗೆ ಸರಿಯಾಗಿ ನಡೆಯುತ್ತಾರೆ. ತಮ್ಮ ಜನಗಳಿಗೂ ಕುಲಗಳಿಗೂ ಬರತಕ್ಕ ಕೆಲವು ಹಣವನ್ನು ದಾನವಾಗಿ ಕೊಟ್ಟು ತೃಪ್ತಿಪಡಿಸುತ್ತಾರೆ. ಅವರ ತಮ್ಮ ಸ್ವಂತ ಮತಸ್ಥರ ಪುರೋಭಿವೃದ್ಧಿಗಾಗಿ ಸ್ಥಾಪಿಸಲ್ಪಟ್ಟ ಸಂಘಕ್ಕೆ ಸಹಾಯ ಮಾಡಿ ಶ್ರೀಮನ್ನಾರಾಯಣನ ಪ್ರೀತಿಗೆ ಪಾತ್ರರಾಗಬೇಕೆಂಬ ಇಚ್ಛೆಯು ಇವರಿಗೆ ಹುಟ್ಟದ್ದರಿಂದ ವ್ಯಸನಪಡಬೇಕಾಗಿದೆ.

ಸಂಪಾದೇಶಿಗಳಲ್ಲಿ ಪ್ರತಿಯೊಬ್ಬ ಗೌಡನೂ, ಈ ಸಂಘದ ಕಾರ್ಯವು ತಮ್ಮ ಸ್ವಂತ ಕಾರ್ಯವೆಂದು ಭಾವಿಸಿ ತಮ್ಮ ಶಕ್ತ್ಯಾನುಸಾರ ದ್ರವ್ಯಸಹಾಯ ಮಾಡದ ಹೊರತು ಸಂಘದ ಉದ್ದೇಶಗಳು ಈಡೇರುವುದಿಲ್ಲ. ಈ ಸಹಾಯವನ್ನು ನಿಮ್ಮಿಂದ ಹೊಂದಲು, ನಿಮ್ಮ ಗ್ರಾಮಗಳಲ್ಲಿಯೂ, ನಾಡುಗಳಲ್ಲಿಯೂ, ನೇಮಕಮಾಡಿರುವ ಮೆಂಬರುಗಳು ಖುದ್ದಾಗಿ ನಿಮ್ಮ ನಿಮ್ಮ ಮನೆಗೆ ಬರಲು ಏರ್ಪಾಡು ಮಾಡಲಾಗಿದೆ. ಇವರು ನಿಮ್ಮ ಮನೆಗೆ ಬಂದಾಗ ನಿಮ್ಮ ನಿಮ್ಮ ಶಕ್ತ್ಯಾನುಸಾರ ಸಂಘಕ್ಕೆ ಪ್ರೀತಿಯಾಗಿ ದ್ರವ್ಯಸಹಾಯ ಮಾಡಬೇಕೆಂದು ವಿನಯಪೂರ್ವಕವಾಗಿ ಪ್ರಾರ್ಥನೆಯಾಗಿದೆ. ತಾವು ಕೊಡತಕ್ಕ ದ್ರವ್ಯಸಹಾಯವನ್ನು ತಾಯಿದೆ ಇಡದೆ ಪಾವತಿ ಮಾಡಿದರೆ ಸಂಘದ ಕಾರ್ಯಗಳು ಶೀಘ್ರವಾಗಿ ಜಾರಿಗೆ ಬರುವುದರಲ್ಲಿ ಸಂದೇಹವಿಲ್ಲ. ಆದುದರಿಂದ ಸರ್ವರೂ ಉದಾರ ಮನಸ್ಸಿನಿಂದ ಇದಕ್ಕೆ ಗಮನ ಕೊಡಬೇಕಾಗಿದೆ. ನೀವು ಪಾವತಿ ಮಾಡಿದ ಹಣಕ್ಕೆ ಸಂಘದ ರಸೀದಿಯು ಮೆಂಬರುಗಳಿಂದ ಕೊಡಲ್ಪಡುವುದು.

ಸಹೋದರರೆ, ನಿಮ್ಮ ಕಟ್ಟೊಂಬಡಿಸುವ ... ನಿಸ್ವಾರ್ಥ ಯೋಜನವಾಗಿ ... ಸಂಘದ ಮೇಲೆ ವಾತ್ಸಲ್ಯವಿಟ್ಟು ... ಅನೇಕ ಮಹನೀಯರು ಸಂಘದ ಮೇಲೆ ಅನೇಕ ದೋಷಾರೋಪಣೆಗಳನ್ನು ಹೊರಿಸುತ್ತಿದ್ದಾರೆ. ಇಂಥ ದೋಷಾರೋಪಣೆಗಳನ್ನು ಕೇಳಿ, ಹೊಸ ಸಂಘವನ್ನು ನಾವು ಏತಕ್ಕೆ ಕಟ್ಟಿ ಕೂರಿಸಿದ್ದೇವೆ? ಆದರೆ, ಇಂಥಾ ನಾನಾಗಡಿಗಳ ... ಹುಟ್ಟಿಸಿಕೊಳ್ಳದೆ ಸಂಘವನ್ನು ವೃದ್ಧಿ ಮಾಡಲು ಪ್ರತಿಯೊಬ್ಬ ವಿದ್ಯಾವಂತನೂ ಈಗ ನಡೆಯಬೇಕಾದ ಕರ್ತವ್ಯವನ್ನು ಕ್ರಮವಾಗಿ ಯೋಚಿಸಿ, ಅಜ್ಞಾನಿಗಳನ್ನು ಮೇಲಕ್ಕೆತ್ತಿ ಮತಶ್ರೇಷ್ಠರೆಂದು ಶಾಶ್ವತವಾದ ಸಾಮಾಜಿಕ ಸ್ಥಾನವನ್ನು ಪಡೆಯಲು ಎತ್ನಿಸಬೇಕಾಗಿದೆ.

ನಮ್ಮ ದೇಶದಲ್ಲಿ ನಮ್ಮವರ ಸಂಖ್ಯೆಯು ಸುಮಾರು 14000 ಇರುತ್ತಾರೆ. ಒಬ್ಬೊಬ್ಬರು ನಾಲ್ಕಾಣೆಯಂತೆ ವರ್ಷಂಪ್ರತಿ ಕೊಡುತ್ತಬಂದರೆ ಪ್ರತಿವರ್ಷವೂ 3500 ರೂಪಾಯಿಗಳು ಸಂಘಕ್ಕೆ ದೊರೆಕಂತಾಗುತ್ತಿತ್ತು. ಸಂಘವು ಸ್ಥಾಪಿಸಿದಂದಿನಿಂದ ಈ ವರೆಗೆ ಈ ರೀತಿಯಲ್ಲಿ ನಡೆದಿದ್ದ ಪಕ್ಷದಲ್ಲಿ ಸುಮಾರು ಮುಕ್ಕಾಲು ಲಕ್ಷ ರೂಪಾಯಿಗಳು ಸಂಘದ ಭಂಡಾರದಲ್ಲಿ ಇರುತ್ತಿದ್ದಿತ್ತು. ಆದರೆ ಈಗಿನ ಸ್ಥಿತಿಯನ್ನು ವರ್ಣಿಸಿದರೆ ಯಾರಿಗೆ ತಾನೆ ಕಂಬನಿಗಳು ಸುರಿಯದಿದ್ದಾವು? ನೋಡಿದರೆ, ... ಕಾಣಿಕೆಯನ್ನು ಯೋಚಿಸಿ ... ನಿಮ್ಮ ಬಾಲಕರನ್ನು ಪಾಠಶಾಲೆಗೆ ಕಳುಹಿಸಿ ಎಲ್ಲರು ವಿದ್ಯಾರ್ಥಿ ... ಕರಾಗಿ ನಡಿಯಿರಿ.

ಮಹನೀಯರೆ, ಈ ವಿಚಾರಗಳನ್ನೆಲ್ಲಾ ತಮ್ಮೆಲ್ಲರ ವೈಚಿತ್ರ್ಯಕ್ಕೆ ತಂದು ಧನಸಹಾಯವನ್ನು ಸಂಘಕ್ಕೆ ಉಂಟುಮಾಡಿ ಇಹದಲ್ಲಿಯೂ ಪರದಲ್ಲಿಯೂ ಸಹ ಕೀರ್ತಿಯನ್ನು ಪಡೆಯಬೇಕೆಂದು ಈ ಮೂಲಕ ಅರಿಕೆಮಾಡುತ್ತೇನೆ.

ಸಿ. ಬಿ. ಮುತ್ತಣ್ಣಗೌಡ.

ಹೆಂಗಸರ ಉದ್ಯೋಗ.

ಅಯ್ಯಾ,

ಉದ್ಯೋಗಂ ಪುರುಷ ಲಕ್ಷಣಂ || ಅಂದರೆ ಉದ್ಯೋಗವೇ ಗಂಡಸಿಗೆ ಲಕ್ಷಣವೆಂಬುದು ಸಾಧಾರಣವಾಗಿ ಎಲ್ಲರಿಗೂ ವೇದ್ಯವಿರುವ ಸಂಗತಿಯಾಗಿದೆ. ಆದರೆ ಇತ್ತೀಚೆಗೆ ಕೆಲವರು ಉದ್ಯೋಗವೆಂದರೆ ಸರಕಾರಿ ನೌಕರಿಯೆಂದು ತಪ್ಪು ಅಭಿಪ್ರಾಯ ಮಾಡಿಕೊಂಡು ಇದೇ ಶ್ರೇಷ್ಠವಾದ ಉದ್ಯೋಗವೆಂದೂ, ಹ್ಯಾಗಾದರೂ ಮಾಡಿ ಒಬ್ಬ ಸರ್ಕಾರಿ ನೌಕರನಾಗಬೇಕೆಂದೂ ಪ್ರಯತ್ನಿಸುವರು. ಇದು ಪೂರಾ ತಪ್ಪು ಅಭಿಪ್ರಾಯ. ಇದರ ನಿಜವಾದ ಅರ್ಥವೇನೆಂದರೆ:—

ಪ್ರತಿಯೊಬ್ಬನೂ ಅವನವನ ಕರ್ತವ್ಯವನ್ನು ಸಮಯಕ್ಕೆ ಸುಸೂತ್ರವಾಗಿ ಮಾಡಿಕೊಂಡು ಬರಬೇಕು. ಅವನು ಯಾವ ಕೆಲಸವನ್ನು ಕೈಕೊಂಡಿರುತ್ತಾನೋ ಅದೇ ಅವನ ಉದ್ಯೋಗವು (Duty) ಅವನು ಅದರಲ್ಲಿ ದುರಂಧರನಾಗಬೇಕು, ಇದೇ ಅವನಿಗೆ ಲಕ್ಷಣವಾಗಿರುವುದು. ಈ ವಿಷಯವನ್ನು ಹೀಗೆ ತಿಳಿಯದೆ ತಪ್ಪು ಅರ್ಥ ಮಾಡಿಕೊಂಡದ್ದರಿಂದಲೇ ನಮ್ಮ ದೇಶದ ಹೆಂಗಸರು ಸಹ ತಮಗೊಂದು ಉದ್ಯೋಗವಾಗಬೇಕೆಂದು ಯೋಚಿಸಿ ಈಗೀಗ ಕೆಲವರ ಇದನ್ನು ಕೈಕೊಂಡಿರುವರು. ಹೀಗೆ ಹೆಂಗಸರು ಸಹ ಸರ್ಕಾರಿ ಉದ್ಯೋಗಕ್ಕೆ ಅಪೇಕ್ಷಿಸುವುದು ನಮ್ಮ ದೇಶದ ನಾಶಕ್ಕೆ ಎಂದು ಹೇಳಿದರೆ ಅತಿಶಯೋಕ್ತಿಯಾಗಲಾರದು. ಇದು ಹ್ಯಾಗೆಂದರೆ

ಹೆಂಗಸರಿಗೆ ತಮ್ಮ ಮನೆಯ ಕರ್ತವ್ಯವೇ ಮುಖ್ಯವಾದವು. ಇವುಗಳನ್ನು ಅವರು ನ್ಯಾಯವಾಗಿ ಮಾಡಿಕೊಂಡು ಬಂದರೆ ಅವರಿಗೆ ಬೇರೆ ಉದ್ಯೋಗವು ಅವಶ್ಯವಿಲ್ಲ, ಮಾತ್ರವಲ್ಲ ಅವರಿಗೆ ಬೇರೆ ಹೊರಗಿನ ಕೆಲಸ ಮಾಡಲು ಸಮಯ ಸಹ ಇರಲಿಕ್ಕಿಲ್ಲ. ಅಲ್ಲದೆ ಅವರ ದೇಹ ರಚನೆಯು (Physical Constitution) ಸಹ ಹೊರಗಿನ ಕೆಲಸಕ್ಕೆ ಅನುಯೋಗವಾಗಿಲ್ಲ. ಅದಕಾರಣ ಹೆಂಗಸರಿಗೆ ಮನೆಯ ಎಲ್ಲಾ ಕೆಲಸಗಳನ್ನೂ ಮಾಡಬೇಕಾಗಿರುವುದು. ಯಾಕೆಂದರೆ, ಗಂಡಸು ಯಾವಾಗಲೂ ಹೊರಗೆ ದುಡಿದು ಸಂಪಾದಿಸಿ ... ಸಾಮಾನುಗಳನ್ನು ತಂದು ಹಾಕುತ್ತಾನೆ. ಅವನು ... ತಮ್ಮ ಮಕ್ಕಳ ಅಭಿರುಚಿಯನುಸಾರವಾಗಿ ತಯಾರಿಸುವುದು ... ಇದರ ಜೊತೆಗೆ ಬೆಳಗ್ಗೆ ಸಾಯಂಕಾಲ ಸಹ ದೇವರ ಪೂಜೆ ವಗೈರೆಯನ್ನು ಅಪೇಕ್ಷಿಸುವದಲ್ಲದೆ ಗಂಡನು ಎಲ್ಲಾ ಸಮಯದಲ್ಲೂ ಹೊರಗೆ ಇರಬೇಕಾದ ಕಾರಣ ಅವನ ನ್ಯಾಯವಾದ ... ಪೂರೈಸುವುದು ಅವಳ ಕರ್ತವ್ಯ. ಇಷ್ಟೇ ಅಲ್ಲದೆ ಮನೆಯಲ್ಲಿ ಮಕ್ಕಳ ಪೋಷಣೆಯು ಒಬ್ಬ ಮುಖ್ಯವಾದ ಕೆಲಸ. ಈ ಬೆಳೆದ ಮಕ್ಕಳೇ ಮುಂದಿನ ಜನಾಂಗವಾದ ಕಾರಣ ಎಲ್ಲರೂ ಮಕ್ಕಳ ಅಭಿವೃದ್ಧಿಯನ್ನು ನೋಡಿಕೊಳ್ಳುವುದು ಅತ್ಯಾವಶ್ಯಕವಾದ ಕೆಲಸ. ಚಿಕ್ಕಮಕ್ಕಳು ತಂದೆಗಿಂತ ತಾಯಿಯ ಹತ್ತಿರವೇ ಇರುವ ಕಾರಣ ಮಕ್ಕಳನ್ನು ಯಾವ ರೀತಿಯಲ್ಲಿ ತರಬೇತು ಮಾಡಬೇಕೆಂದು ತಾಯಿಯು ಚೆನ್ನಾಗಿ ತಿಳಿದುಕೊಂಡಿರಬೇಕು. ಈಗಿನ ನಮ್ಮ ಸ್ಕೂಲಿನಲ್ಲಿ ವಿದ್ಯಾಭ್ಯಾಸವನ್ನು ಮಾಡಿದರೆ ಈ ವಿಷಯವು ತಿಳಿಯುವದಿಲ್ಲ. ಆದುದರಿಂದ ಶಾಲೆಯಲ್ಲಿ ಓದುಬರಹವನ್ನು ಕಲಿತ ಮೇಲೆ ತಮ್ಮ ತಮ್ಮ ತಂದೆ ತಾಯಿಗಳಿಂದಲೂ, ಇತರ ಅನುಭವಸ್ಥರಿಂದಲೂ ಮತ್ತು ಈ ವಿಷಯವಿರತಕ್ಕ ಪುಸ್ತಕಗಳಿಂದ ಓದಿಯೂ ಇದನ್ನು ಕಲಿತುಕೊಳ್ಳಬೇಕು. ಹೀಗೆ ಮಾಡದೆ ಅವರು ಶಾಲೆಬಿಟ್ಟ ಕೂಡಲೆ ಸರ್ಕಾರಿ ಉದ್ಯೋಗವನ್ನು ಮಾಡಿಕೊಂಡಿದ್ದರೆ ಅವರಿಗೆ ಇಂಥಾ ವಿಷಯವನ್ನು ಕಲಿಯಲು ಅವಕಾಶವು ಸಿಗದು. ಹೀಗಾದರೆ ಕೆಲವು ವರ್ಷ ಕಳೆದು ಅವಳು ತಾಯಿಯಾಗುವಾಗ ತನ್ನ ಮಕ್ಕಳನ್ನು ಹೇಗೆ ಸಾಕುವಳು? ಆದದರಿಂದಲೇ ಕೆಲವರು ತಮ್ಮ ಮಕ್ಕಳನ್ನು ಸಾಕಲು ಆಯಾ (ಆಯ)ಗಳನ್ನು ಇಟ್ಟುಕೊಳ್ಳಬೇಕಾಗುವುದು. ಆಯಾಗಳು ತನಗೆ ಸಿಕ್ಕುವ ಸಂಬಳಕ್ಕೆ ಹ್ಯಾಗಾದರೂ ಸಿಕ್ಕಲೆಂದು ಅದರ ಯೋಚನೆಯಲ್ಲಿರುವರೇ ಹೊರತು ಮಕ್ಕಳ ಬಚ್ಚಳಿಕೆಯನ್ನು ಸರಿಯಾಗಿ ತಿಳಿದುಕೊಳ್ಳುವದಿಲ್ಲ. ಇದು ಮಾತ್ರವೇ ಅಲ್ಲ, ... ಹುಟ್ಟಿದ ಮಕ್ಕಳಿಗೆ ಅನುಕೂಲ್ಯವಾಗಿ ಅವರ ಜೀವನಕ್ಕೆ ಅತ್ಯಂತ ಅವಶ್ಯವಾಗಿಯೂ ಇರುವ ತಾಯಿಯ ಹಾಲು ಕುಡಿಯಲು ಅವಕಾಶವಿಲ್ಲ. ಅದುದರಿಂದ ಮಕ್ಕಳನ್ನು ಕೈಹಾಲಿನಿಂದ ಸಾಕಬೇಕಾಗುವುದು. ಹೀಗೆ ಕೈಹಾಲಿನಿಂದ ಸಾಕಿದ ಮಕ್ಕಳ ಮರಣವು ಮೊಲೆಹಾಲಿನಿಂದ ಸಾಕಿದ ಮಕ್ಕಳ ಮರಣಕ್ಕಿಂತ ಸುಮಾರು 15ಪಾಲು ಹೆಚ್ಚೆಂದು ಕಳೆದ ... 12ನೇ ... ವರದಿಯಿಂದ ತಿಳಿಯಬರುವುದು. ಇಂಥಾ ಏನಾದರೂ ತಪ್ಪು ನಮ್ಮ ದೇಶದ ಹೆಂಗಸರು ಮಾಡಲಾರರೆಂದು ನಂಬುತ್ತೇನೆ. ಅದುದರಿಂದಲೇ ನಮ್ಮ ದೇ... ಅವರು ... ಕೊಡುವುದಾಗಿದೆ. ... ಈಗಿನ್ನು ಸಣ್ಣದೊಂದು ದೃಷ್ಟಾಂತ ... ಆದೇನೆಂದರೆ ... ಮಕ್ಕಳಿಗೆ ... ಅವರು ಕೂಡಲೆ ಅಮ್ಮಾ ಎಂದು ಕೂಗಿಕೊಂಡು ಅಳುವರು. ಅದೇ ಬೇರೆ ತಾಯಿಯು ಹೊಡೆದರೆ ಅದು ಅಪ್ಪಾ ಎಂದು ಕೂಗುವುದು ಅಪೂರ್ವ. ಆಗ ... ಅಮ್ಮಾ ಎಂದೇ ಕೂಗುತ್ತದೆ. ಇದರಿಂದ ತಾಯಿಯೇ ಮಗುವಿಗೆ ಶ್ರೇಷ್ಠವೆಂದು ದೃಢವಾಗುತ್ತದೆ. ಅದ ಕಾರಣ ನಮ್ಮ ದೇಶದ ಹೆಂಗಸರು ಪೂರ್ವಕಾಲದಲ್ಲಿ ತಮ್ಮ ಕರ್ತವ್ಯಗಳನ್ನು ಸರಿಯಾಗಿ ಮಾಡಿಕೊಂಡು ಅತಿಪ್ರಖ್ಯಾತಿಯನ್ನು ಹೊಂದಿದವರ ಉದಾಹರಣೆಗಳನ್ನು ತೆಗೆದುಕೊಂಡು ಅವರಂತೆಯೇ ತಾವು ಸಹ ಆಗಬೇಕೆಂದು ಪ್ರಯತ್ನಿಸುವರೇ ಹೊರತು ಸರ್ಕಾರಿ ಉದ್ಯೋಗಕ್ಕೆ ಗಮನ ಕೊಡಲಿಕ್ಕಿಲ್ಲವೆಂದೂ, ಅದನ್ನು ಅತಿ ಕನಿಷ್ಠತರವಾಗಿ ಎಣಿಸುವರೆಂದೂ ನಂಬುತ್ತೇನೆ. ಅದಲ್ಲದೆ ಅವರ ಸಮಾಜಗಳನ್ನು ಮಾಡಿಕೊಂಡು ಅವರು ಇಂಥಾ ಅವಶ್ಯವಿರುವ ಕರ್ತವ್ಯ ವಗೈರೆ ವಿಷಯವನ್ನು ಚರ್ಚಿಸಬೇಕೇ ಹೊರತು ರಾಜಕೀಯ ವಗೈರೆ ವಿಷಯಗಳನ್ನು ಚರ್ಚಿಸುವ ಅವಶ್ಯವು ಅವರಿಗೆ ಇರುವದಿಲ್ಲ. ಅದಕಾರಣ ನಮ್ಮ ದೇಶದಲ್ಲಿ ಅಂದರೆ ಮಡಿಕೇರಿಯಲ್ಲಿಯೂ ಮತ್ತು ವೀರರಾಜಪೇಟೆಯಲ್ಲಿಯೂ ಒಂದು ಸಲ ಹೊರಟ ಸ್ತ್ರೀಸಮಾಜವನ್ನು ಅಭಿವೃದ್ಧಿಮಾಡಿ ಇಂಥಾ ವಿಷಯಕ್ಕೆ ಉಪಯೋಗಿಸುವರೆಂದು ಭಾವಿಸುತ್ತೇನೆ.

ನಾಡಿನವ.

ಸಹಕಾರಿ ಬರಾರುಗಳ ರಿಜಿಸ್ಟ್ರಾರ್.

ನಮ್ಮ ಈ ಕೊಡಗು ದೇಶದ ಸಹಕಾರಿ ಸಂಘಗಳ ಗೋಳನ್ನು ಯಾರಲ್ಲಿ ತಾನೆ ಹೇಳಿಕೊಳ್ಳಲಿ. ಮಹಸರ್ಕಾರದವರೇ, ಈ ಸಹಕಾರಿ ಸಂಘದ ಅಸ್ಟು, ರಿಜಿಸ್ಟ್ರಾರ್ ಆಕ್ಟಿಗನುಸಾರವಾಗಿ ಸ್ಥಾಪಿಸಿದ್ದಾರೆಯೂ, ರಿಜಿಸ್ಟ್ರೇಶನ್ ಕೊಟ್ಟಿದ್ದಾರೆಯೂ, ಡಿಕ್ರಿಕೊಡುವಂತೆ ಮಾಡಿರುತ್ತಾರೆ. ಹೀಗಿರುತ್ತಾ ಸಂಘಗಳಿಂದ ಸಾಲ ತೆಗೆದುಕೊಂಡವರಿಂದ ಬರತಕ್ಕ ಬರಾರುಗಳನ್ನು ಟಕಾವು ... ಹಣ ಹೊಂದಿಕೊಂಡವರು ಬರತಕ್ಕ ಕರಾರಿನಂತೆ ಬದ್ದಿ ... ಒಂದು ಬಂದು ಪ್ರತಿಗೆ ಸಬ್ ರಿಜಿಸ್ಟ್ರಾರವರಾಗಲಿ ... ಆಫೀಸ್ ನಾವು ಹೋಗಾತ ಇಂಡಾರಸ್ ಮಾಡಿ ಕೆಲಸು ... ಒಂದು ಪ್ರತಿಯನ್ನು ಸಬ್ ರಿಜಿಸ್ಟ್ರಾರವರು ಇಂಡೆಕ್ಸು ಮಾಡಿಕೊಳ್ಳುವಂತೆ ಯಾಕೆ ಮಾಡಿಕೊಡಬಾರದೆಂಬುದು ಗೊತ್ತಾಗುವುದಿಲ್ಲ.

ಹೀಗೆ ಮಾಡುವದರಿಂದ ಸಬ್‌ರಿಜಿಸ್ಟ್ರಾರವರು ಹಾಲಿ ಇಟ್ಟಿರುವ ಬುಕ್ಕು ನಂ 1Aಯಂಬ ರಿಜಿಸ್ಟರ್ ಅವಶ್ಯವಿಲ್ಲದೆ ... ಮತ್ತು ಸಂಘದವರಿಗೂ ಸಂಘದಿಂದ ಸಾಲ ಹೊಂದುವವರಿಗೂ ಸಹ ಸಮಯವೂ ಅನಾವಶ್ಯಕ ... ಕಮ್ಮಿಯಾಗುತ್ತೆ. ಹಾಗೆ ಮಾಡದೆ ಈಗ ನಡೆಯುವಂತೆಯೇ ಯಾಕೆ ಇರಬಾರದ, ಇದರಿಂದ ಕಷ್ಟವೇನೆಂದು ಕೇಳಬಹುದು. ಈಗ ಬಂದ, ಕರಾರ, ನಾವೋಕ್ಕುನಾಡು ... ರಿಜಿಸ್ಟ್ರೇಷನ ಬಗ್ಗೆ ... ಕರಾರಿಗೆ ಇಂಡಾರಸ್ ಮಾಡಿ ದಕ್ಷಿಣಕೊಡಗು ತಾಲೋಕ ಸಬ್‌ರಿಜಿಸ್ಟ್ರಾರ ಆಫೀಸಿಗೆ ರಿಜಿಸ್ಟರಿಗೆ ದಾಖಲು ಬಗ್ಗೆ ಕಳುಹಿಸಿದರೆ ಈಗ ಕೊಡಗಿನಲ್ಲಿ ಸಂಘಗಳು ಹೆಚ್ಚು ಕಳೆದ ವರ್ಷ ಈ ಸಮಯಕ್ಕೆ 350 ಬರಾರುಗಳೂ ಈ ವರ್ಷ 700 ಬರಾರುಗಳೂ ಆಗಿರುವದಾಗಿ ತಿಳಿಯುತ್ತೆ. ಈ ದೆಸೆಯಿಂದ ನಮ್ಮ ಕರಾರು ಮರಳಿ ಬರಬೇಕಾದರೆ ತಿಂಗಳು, ತಿಂಗಳಾದರೂ, ದೊರೆಯುವದಿಲ್ಲ. ಕರಾರು ದೊರೆಯದೆ ಹಣ ಕೊಡುವುದು ಇಲ್ಲ. ಈ ಸಂಗತಿ ಸಂಘಗಳ ರಿಜಿಸ್ಟ್ರಾರವರಿಗೂ, ಸೆಂಟ್ರಲ್ ಬ್ಯಾಂಕಿನವರಿಗೂ, ಒಮ್ಮನಸ್‌ದಾರರ ಸಂಘದವರಿಗೂ ಹೇಳಿಕೊಂಡಲ್ಲಿ ನ್ಯಾಯವಾದ ಜವಾಬೇ ಇಲ್ಲದ್ದರಿಂದಲೂ ಈಗ ಕೊಡಗು ರಿಜಿಸ್ಟ್ರಾರ್ ಆಫ್ ಎಸೂರೆನ್ಸಸ್‌ರವರು ಸಬ್‌ರಿಜಿಸ್ಟ್ರಾರವರ ವಾರ್ಷಿಕ ರಿಕಾರ್ಡು ಒಪ್ಪಮಾಡುವ ಕಾಲದಲ್ಲು ಸಬ್‌ರಿಜಿಸ್ಟ್ರಾರುಗಳ ಕಷ್ಟದಿಂದ ಇನ್ನಾದರೂ ಟಕಾವು ಕರಾರ ಗನಂತೆ ಸ್ಟಾಲ್ ಮಾಡಿಕೊಳ್ಳುವ ಹಾಗೆ ವಿವಾದಿಸುಮಾಡಿ ಸಹಕಾರಿಸಂಘದವರ ಕಷ್ಟವನ್ನು ನಿವಾರಣೆ ಮಾಡುವರಾಗಿ ವಿನಂತಿ.

ಸಹಕಾರಿ ಪ್ರೆಸಿಡೆಂಟ್.

ಕೊಡಗು ಮಹಾ ಸಭೆಯಲ್ಲಿ ವಿನಂತಿ.

ಈಗಾಗಲೇ ಹಲವು ಮಹನೀಯರು, ಊರೂರು ತಿರುಗಿ ನವೀನ ಕೊಡವ ಸಭೆಗೂ, ಪ್ರಜಾಪ್ರತಿನಿಧಿ ಸಭೆಗೂ, ಯೂ, ಕೊಡಗು ಸಭೆಗೂ ಬಂದಿಂದ ರುಜುಕೆಗೆಯುವುದಾಗಿ ವರ್ತಮಾನ. ರುಜುಕೆಗೆಯುವ ಸಂದರ್ಭದಲ್ಲಿ ಮು. ಪಾರ್ಶ್ವಂಗಳ ಕುಶಾಲಪ್ಪನವರೂ, ಆಗಾಗಾಯಿತಿಂದಲೇ ವಿರೋಧವನ್ನು ಹುಟ್ಟು ಒಂದ ಕೆಲವರೂ, ಜೊತೆಗೆ ನಾನೂ ಇಂಥಾ ಸಭೆಗೆ ಒಪ್ಪಿರುತ್ತಾರೆಂದು ಸಹ ಸುಳ್ಳು ವರ್ತಮಾನ ಹುಟ್ಟಿಸಿ, ಜನರನ್ನು ಮೋಸ ಕೃತ್ಯದಿಂದ ರುಜು ಮಾಡಿಸುತ್ತಾರೆಂಬಾಗಿ ತಿಳಿದೆನು. ದೇಶದ ನೂರರಲ್ಲಿ 98 ಜನರು ದೇಶವನ್ನೇ ಈ ಸಭೆಗೆ ನಮ್ಮ ಅಭಿಪ್ರಾಯವನ್ನು ಪುನಃ ಪುನಃ ಹೇಳಬೇಕಾಗಿಲ್ಲ. ಈ ಹೊಸ ಸಭೆಯ ವಿಷಯ ಬರುವ ಜಮಾನ್ದಾರರ ಸಂಘದ ನಾಪೋಕ್ಲು ಮೀಟಿಂಗಿನಲ್ಲಿ ಚರ್ಚೆ ಮಾಡಬೇಕೆಂದು ಕೆಲವು ಜನರ ಅಭಿಪ್ರಾಯ ಇರುತ್ತಾರೆ. ಈ ನವೀನ ಕೊಡಗು ಸಭೆಯು ಉದ್ದೇಶವೇ ಜಮಾನ್ದಾರರ ಸಂಘವನ್ನು ನಾಶಮಾಡಬೇಕೆಂದಿರುವಾಗ, ಕೊಡವ ಸಭೆ ಬೇಕನ್ನುವವರೇ ಈ ಏಪ್ರಿಲ್ ತಿಂಗಳಲ್ಲಿ ನಾಪೋಕ್ಲಿನಲ್ಲಾಗುವ ಜಮಾನ್ದಾರ ಸಂಘದ ಜನರಲ್ ಮೀಟಿಂಗಿಗೆ ಹಾಜರಾಗಿ, ಸಭೆಯ ಉದ್ದೇಶಗಳನ್ನು ವಿವರಿಸಿ ಬಹುಮತಕ್ಕೆ ತಕ್ಕ ಸಮಜಾಯಿಸಿಕೆ ಕೊಟ್ಟ ಹೊರತು ಈ ಸಭೆಗೆ ಆವರೆಗೆ ಯಾರೂ ಸೇರುವ ಮನಸ್ಸು ಮಾಡಬಾರದಾಗಿ ದೇಶೀಯರಲ್ಲಿ ಅಪೀಲು ಮಾಡಿಕೊಳ್ಳುವವನಾಗಿದ್ದೇನೆ. ನಿಜವಿಲ್ಲದೆ ಹರಡುವ ಸುಳ್ಳು ವರ್ತಮಾನಕ್ಕೆ ಯಾರೂ ಗಮನ ಕೊಡಬಾರದೆಂಬುದಾಗಿ ಕೇಳಿಕೊಳ್ಳುವ.

ತಮಗಳ ಸೇವಕ,
ಕೋಟೆರ ಚಣ್ಣಪ್ಪ.

ಮನೋಲ್ಲಾಸಿನಿ ತೈಲ.

ತಲೆನೋವು ತಲೆ ತಿರುಗುವದು, ತಲೆಯ ಕಣ್ಣು ಕಿವಿಯಿಂದ ಕೀವು ಸೋರುವದು ಕಿವುಡುತನ, ಕಣ್ಣು ನೋವು, ಅಸಹ್ಯ ನಿದ್ರೆ ಬಾರದಿರುವದು, ನೆಹರು ಬೇಗ ಕುಂದಿಹೋಗುವುದು ಇವುಗಳನ್ನೆಲ್ಲ ನಿಂತಿಸಿ ಗುಣಪಡಿಸುತ್ತದೆ. ಉದುರುವ ಕೂದಲನ್ನು ನಿಲ್ಲಿಸಿ ಗಿಡ್ಡಗಿರುವ ಕೂದಲನ್ನು ಬೆಳೆಯಿಸಿ ಕೂದಲಿಗೆ ಸೌಂದರ್ಯವನ್ನೂ ಹೊಳಪನ್ನೂ ಕೊಟ್ಟು ಅಕಾಲಿಕ್ಕೆ ಹಣ್ಣಾಗುವ ಕೂದಲನ್ನು ಕೆಡಿಸು ಕೂದಲು ಇಲ್ಲದ ಸ್ಥಳದಲ್ಲಿ ಹೊಸ ಕೂದಲನ್ನು ಹುಟ್ಟಿಸುತ್ತದೆ. ಬೆಲೆ ಸೀಸೆಗೆ ರೂ 1, 3 ಸೀಸೆಗೆ 2—10—0, ಒಂದು ದೊಡ್ಡ ಸೀಸೆಗೆ ರೂ 2, 3 ಸೀಸೆಗಳಿಗೆ 5—8—0

ಚಂದನಾಸವ.— ಇದು ಪ್ರಮೇಹ ಮೂತ್ರಕೃಚ್ಛ್ರ ಮೂತ್ರ ಹಸಿಹಸಿಯಾಗಿ ಹೋಗುವದು, ಮೂತ್ರಕೋಶದ ಉರಿ, ಮೂತ್ರಪಿಂಡಗಳ ಉರಿ ಮೂತ್ರನಾಳದಲ್ಲಿ ಹುಣ್ಣು, ಮೂತ್ರ ಹೊಯ್ಯುವಾಗ ಉರಿಯುವದು, ಮೂತ್ರನಾಳದಿಂದ ಕೀವು ಬರುವದು, ಮೂತ್ರದಲ್ಲಿ ಧಾತು ಹುಡಿ ಹೋಗುವದು, ಆಗಾಗ್ಗೆ ಮೂತ್ರ ಬರುವದು, ಮೂತ್ರ ಕಡಿಮೆಯಾಗಿ ಸಾಮರ್ಥ್ಯವಿಲ್ಲದಿರುವದು, ದೇಹದಲ್ಲಿ ಉರಿ, ಬಾಯೊಣಗು, ಸ್ವಪ್ನಾವಸ್ಥೆ, ಮೂತ್ರನಾಳದಲ್ಲಿ ಚುಚ್ಚುವ ನೋವು ಇವುಗಳಿಗೆ ಪರಮ ಔಷಧಿ ಗಂಡಸರಿಗೂ ಹೆಂಗಸರಿಗೂ ಇದು ಅತ್ಯುತ್ತಮ. ಬೆಲೆ—ಬಾಟ್ಲಿ 1, 3, 6ಕ್ಕೆ ರೂ 1—4—0 3—8—0, 6—12—0.

ರೋಮನಾಶಿನಿ.— ಈ ಪುಡಿಯನ್ನು ನೀರಲ್ಲಿ ಕಲಸಿ ಮೈಯಲ್ಲಿ ರೋಮವಿರುವ ಭಾಗಕ್ಕೆ ಹಚ್ಚಲು ರೋಮವು ಉದುರಿ ಬೀಳುವದು. ಡಬ್ಬಿ ಒಂದಕ್ಕೆ 6 ಆಣೆ, 3 ಡಬ್ಬಿಗಳಿಗೆ ರೂ 1, 1 ಡಜನಿಗೆ 3 8-0

ಅಮೃತರಿಷ್ಟ.— ಇದು ಕ್ವಿನೈನು ಬಳಸದಿರುವ ಉತ್ತಮವಾದ ಔಷಧಿ ಎಲ್ಲಾ ತರದ ಜ್ವರಕ್ಕೆ ಉತ್ತಮ. ಬೆಲೆ— ಬಾಟ್ಲಿ 1, 3, 6ಕ್ಕೆ ರೂ 1—4—0, 3—8—0, 6—12—0

ಲೋಹಾಸವ.— ಇದು ಜ್ವರದಿಂದೆಗೆ ಮತ್ತು ಮಲೇರಿಯಾ ಜ್ವರದಿಂದುಂಟಾದ ಅಶಕ್ತತೆಗೆ ದಿವ್ಯವಾದ್ದು. ಬೆಲೆ—ಬಾಟ್ಲಿ 1, 3, 6ಕ್ಕೆ ರೂ 1—4—0, 3—8—0, 6—12—0

ನಮ್ಮ ಕೆಟಲಾಗು ತರಿಸಿ ನೋಡಿರಿ

ವಿಳಾಸ—ಮನೋಲ್ಲಾಸಿನಿ ಕಂಪೆನಿ,
9 ಮಂಗಳೂರು, ಕಂಕನಾಡಿ.

52—12

ಮುದ್ದಾದ ಪುಸ್ತಕ! ಮುದ್ದಾದ ಮುದ್ರಣ!

ಶರೀರ ಸುಖ, ಸಂಪತ್ತು, ಐಶ್ವರ್ಯಗಳನ್ನು ಸಂಪಾದಿಸಲು ಸಲಹೆಗಳನ್ನೂ ಮತ್ತು ಶರೀರ ಮರ್ಮಶಾಸ್ತ್ರ (ಕಾಮಶಾಸ್ತ್ರ)ವನ್ನೂ ತಿಳಿಸುವ

ಮರ್ಮ ಶಾಸ್ತ್ರ-ಎಂಬ ಕಾಮಶಾಸ್ತ್ರ

ಈ ಪುಸ್ತಕವು ಮೊದಲು ಫ್ರೆಂಚ್, ಇಂಗ್ಲೀಷ್, ಹಿಂದುಸ್ಥಾನಿ, ಸಂಸ್ಕೃತ ಮುಂತಾದ ಭಾಷೆಗಳಲ್ಲಿ ಬಹು ಗುಪ್ತವಾಗಿತ್ತು. ಇದನ್ನು ನಾವು ಪ್ರಯಾಸದಿಂದ ಸಂಪಾದಿಸಿ ಕನ್ನಡಕ್ಕೆ ಭಾಷಾಂತರಿಸಿ (84 ಚಿತ್ರಪಟಗಳ ಸಹಿತ) ಥಳಥಳಿಸುವ ಕಾಗದದಲ್ಲಿ ಮುದ್ರಿಸಿ ತಯಾರಿಸಿದ್ದೇವೆ. ಈ ಪುಸ್ತಕದಲ್ಲಿ ಸ್ತ್ರೀ ಪುರುಷರಿಗೆ ಬೇಕಾದ ಎಲ್ಲಾ ಮರ್ಮ ರಹಸ್ಯಗಳೂ, ಸ್ತ್ರೀ ಪುರುಷರು ಅನ್ಯೋನ್ಯವಾಗಿ ನಡೆದುಕೊಳ್ಳುವ ಮಾರ್ಗ- ಸ್ತ್ರೀ ಪುರುಷರಿಗೆ ಉಂಟಾಗುವ ಎಲ್ಲಾ ತರದ ಮರ್ಮವ್ಯಾಧಿಗಳು ಮತ್ತು ಅಂಥಾ ವ್ಯಾಧಿಗಳನ್ನು ಗುಣಪಡಿಸಿಕೊಳ್ಳುವ ಚಿಕಿತ್ಸೆಗಳೂ ಇನ್ನು ಅನೇಕ ತರದ ಮರ್ಮರಹಸ್ಯಗಳು ಚಿತ್ರಪಟಗಳ ಸಹಿತ ತುಂಬಿರುವದು. ಈ ಪುಸಕದ ಹೆಸರನ್ನು ಕೇಳಿದ ಮಾತ್ರಕ್ಕೆ ಸಂತೋಷವಾಗುವದು. ಅದರ ಓದಲಿಕ್ಕೆ ಯಾರಿಗೆ ತಾನೇ ಸಂತೋಷವಾಗಲಾರದು.

ಕ್ರಯ ಪುಸ್ತಕ ಒಂದಕ್ಕೆ ಒಂದೇ ಒಂದು ರೂಪಾಯಿ. ರೂ. 1—0—0

T. Ramachandar Rao & Co., ಟಿ. ರಾಮಚಂದ್ರರಾವ್ ಅಂಡ್ ಕೊ,
Post Box No. 232, ಪೋಸ್ಟ್ ಬಾಕ್ಸ್ ನಂ. 232.
Madras. ಮದ್ರಾಸ್.

57-12

ALot for SELECTION of Single Barrel Breach Loadig Guns at LOWEST PRICE EVER OFFERED.



Original Browning S. **B B L.** 12 bore Take Down Hammerless Automatic Ejector Gun, with safety catch ....Price, Rs. 140/-

Do do but by **Winchester** or **Remington** .... Price, Rs 160/-

Winchester or **Remigton S B B L** 12 bore Six Shots Hammerless Repeating gun, 32 inches barrel with Safety catch .. . Price, Rs. 150/-

German S. B B L. 12 bore Hammerless Ejector Gun, 32 inches German Steel Barrel with safety catch .. . . Price, Rs. 65/-

Continental Make Do Price, Rs 55/-

Webley & Scott's S B B L 12 bore Semi Hammerless Ejector Gun, 32 inches Webley's Steel Barrel, ... Price, Rs 75/-

The above Guns can be had in 16, 20, & 410 bore Same as above in 12 bore **Special "Duck Gun"** 36 inches barrel . . .... Price, Rs 80/-

W W Greener's "Gaffer" S. B B L 12 bore Martini Action Ejector Gun, 26 inches Greener's Steel Barrel . . .... Price, Rs 75/-

W W Greener's as above but **Long Range Duck Gun** " with 32 inches barrel, and chamber for 2½ inches to 3 inches case . . . Price, Rs 90/-

Midland's "Knock-About" S B B L Ejector Hammer Gun 32 inches barrel. .... Price, Rs. 55/-

Continental Make S. B B. L. Folding Pattern Hammer Gun, 32 inches barrel beautifully engraved and carved.. .. . . Price, Rs. 45/-

J. Steven's 12 bore Ejector Hammer Gun, 32 inches. Steel barrel..... .... Price, Rs. 45/-

Do do. ' Dread Naught " with heavy Breech .... Price, Rs/50,

Any of the above of J. Steven's **Special Duck Gun** with 36 inches barrel. Price, Rs. 5 Extra.

ENQUIRIES SOLICITED.

THE BOMBAY ARMOURY,
331, ABDUL REHMAN STREET,
BOMBAY. 3

24—19

ಇದು ಒಳ್ಳೇ ಸಮಯ!
ಇಂಥಾ ಸುಸಮಯವನ್ನು ಕಳಕೊಳ್ಳಬೇಡಿರಿ.

ಇಂದಿನ ದಿನ ನಾಳೆ ಎಂದಿಗೂ ದೊರೆಯಲಾರದು.

ನಮ್ಮಲ್ಲಿ ಗತಾಸೇ ತಯಾರಾಗಿ ಬಂದಿರುವ 5 ನಂಬರುಗಳ ಸಂಚುಗಳು ಅಲ್ಲದೆ ಮೂರು ನಂಬರುಗಳ ಮೂಲೆ ಹಿಡಿ, ಸಾಕಿಹಿಡಿ ಮತ್ತು ಹೊಗೆಹಿಡಿ, ಎಲ್ಲಾ ತರಹದ ಎಲೆಕ್ಟ್ರಿಕ್ ದೀಪಗಳೂ, ಸೈಕಲ್ ದೀಪಗಳೂ, ರಬ್ಬರ್ ಸ್ಟಾಂಪು ಸೀಲುಗಳೂ, ಹಲವು ತರದ ಸೂಜಿಗಳೂ ಮತ್ತು ಗಂಟೆಗಳೂ ಸಹ ಮಾರಾಟಕ್ಕೆ ತಯಾರಿವೆ. ಇವುಗಳಲ್ಲದೆ ಎಲ್ಲಾ ತರಹದ ಪ್ರಿಂಟಿಂಗ್ ಗ್ರೀಟಿಂಗ್ ಕಾರ್ಡು ವಗೈರೆ ನಿಮ್ಮ ಮನ ಒಪ್ಪುವಂತೆ ಕಮ್ಮಿ ದರದಲ್ಲಿ ಆರ್ಡರು ಕೊಟ್ಟ ಕೂಡಲೇ ನಾಜೂಕಾದ ಪ್ರಿಂಟಿಂಗಿಂದ ನಿಮ್ಮ ಸುಪರ್ದಿಗೆ ಕೊಡಲಾಗುವುದು. ಮತ್ತು ನಗದ್ ಹಣಕ್ಕೆ ಮಾರ್ಕೆಟ್ ದರದಲ್ಲಿ ಹೊಸದಾದ ಭತ್ಯಸಹ ಕೂಡಿಸಿಕೊಡಲಾಗುವುದು. ಹೆಚ್ಚಿನವಿವರಕ್ಕೆ ಈ ಕೆಳಗಿನ ಅಡ್ರೆಸಿಗೆ ಬರೆದು ತಿಳಿದುಕೊಳ್ಳಬಹುದು.

ಕಡಗದಾಳು ಗ್ರಾಮ ಅಮ್ಮಣಿಚಂಡ ದೇವಯ್ಯ
7 ಸಿದ್ದಾಪುರ ಜನರಲ್ ಮರ್ಚೆಂಟ್

ಆ ರೋ ಗ್ಯ ಚಂ ದ್ರಿ ಕೆ.

ಮದ್ರಾಸ್.

ಸಂಪಾದಕರು ಡಾಕ್ಟರ್ ಯು ರಾಮರಾವ್, ಯಮ್ ಎಲ್ ಸಿ ಯವರು

ಆರೋಗ್ಯ ಚಂದ್ರಿಕೆಯು ಆರೋಗ್ಯ ಮತ್ತು ಶುಚಿತ್ವದ ವಿಷಯದಲ್ಲಿ ಸಾಮಾನ್ಯ ಪ್ರಜಾವರ್ಗಕ್ಕೆ ತಿಳುವಳಿಕೆ ದೊರೆಯುವ ದಕ್ಕಾಗಿ ಏರ್ಪಡಿಸಿದ ಒಂದು ಸಚಿತ್ರ ಮಾಸಪತ್ರಿಕೆ. ಈ ಮಾಸಪತ್ರಿಕೆಯು 'ಹೆಲ್ತ್' ಎಂಬ ಇಂಗ್ಲೀಷ್ ಮಾಸಪತ್ರಿಕೆಯ ಕನ್ನಡ ಪ್ರತಿಯಾಗಿದೆ. ಆರೋಗ್ಯ ಚಂದ್ರಿಕೆಯಲ್ಲಿ ಪ್ರಸಿದ್ಧರಾದ ಡಾಕ್ಟರುಗಳ ಮತ್ತು ಆಯುರ್ವೇದ ಪಂಡಿತರ ಲೇಖನಗಳು ಆಗಿಂದಾಗ್ಗೆ ಪ್ರಕಟವಾಗುವವು.

ಆರೋಗ್ಯ ಚಂದ್ರಿಕೆಯಲ್ಲಿರುವ ಲೇಖನಗಳು ಹಳೆಯವಾಗದೆ ಪುನಃ ಪುನಃ ಓದಲು ಅರ್ಹವಾದವುಗಳಾಗಿರುವುವು. ಆರೋಗ್ಯ ಚಂದ್ರಿಕೆಯನ್ನು ಪಸಿ ಬೈಂಡ್ ಮಾಡಿಸಿ ಇಟ್ಟುಕೊಂಡರೆ ಎಲ್ಲರಿಗೂ ಉಪಯುಕ್ತವಾಗುವ ಅಮೂಲ್ಯವಾದ ಗ್ರಂಥವಾಗುವದು. ಅಂಚೆಯ ವೆಚ್ಚ ಸೇರಿ ಈ ಪತ್ರಿಕೆಯ ಚಂದಾ ಮೊಬಲಗು ವರ್ಷಕ್ಕೆ 1-8-0. ಬಿಡಿ ಪತ್ರಿಕೆ 1ಕ್ಕೆ 0-2-0 ಹಿಂದಿನ ಸಂಚಿಕೆಗಳು ಕೂಡಾ ದೊರೆಯುವವು.

ಪತ್ರವ್ಯವಹಾರಕ್ಕೆ 'ಆರೋಗ್ಯ ಚಂದ್ರಿಕೆ' 323,

ಪ್ರಕಟಣೆ.

ಒಂದು ಕಡೆ ಇಂಗ್ಲೀಷಿನಲ್ಲಿಯೂ ಇನ್ನೊಂದು ಕಡೆ ಕನ್ನಡದಲ್ಲಿಯೂ ಪ್ರಿಂಟಾಗಿರುವ ಕಾಫಿ ತೋಟದ ಆಳುಗಳ ಕೈಸಾಲ ಅಗ್ರಿಮೆಂಟ್ ಫಾರಮುಗಳೂ ಮತ್ತು ಅಪ್ಲಿಕೇಶನ್ (complaint) ಫಾರಂಗಳೂ ಸಹ ಮಾರಾಟಕ್ಕೆ ತಯಾರಿವೆ. ಬೇಕಾದವರು 'ಕೊಡಗು ಪ್ರೆಸ್' ನಿಂದ ಪಡೆಕೊಳ್ಳಬಹುದು

ಮಡಿಕೇರಿ ಮೇನೇಜರ್,
ತಾ. 17-9-24. 'ಕೊಡಗು' ಆಫೀಸ್,

12 ರೋಲ್ಡ್ ಗೋಲ್ಡ್ ಚಾಟ್ಲೀನ್‌ಗಳು ಇನಾಂ.
ಬೆಸ್ಟ್ ಫೌಂಟೆನ್ ಪೇನಾ.

ಈ ಪೇನಾವು ಸೀಮೆಯಲ್ಲಿ ತಯಾರಾದದ್ದು. ಇದಕ್ಕೆ ಒಂದಾವರ್ತಿ ಇಂಕು ತುಂಬಿ ಹಾಕಿದರೆ ಸುಮಾರು 1000 ಮಾತುಗಳ ವರೆಗೂ ಬರೆಯುವದು! 14 ಕ್ಯಾರೆಟ್ಟು ಬಂಗಾರದ ಮುಳ್ಳು ಇರುವದು. ಇದನ್ನು ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ 12 ರೋಲ್ಡ್ ಗೋಲ್ಡ್ ಚಾಟ್ಲೀನ್ ಇನಾಮಾಗಿ ಕೊಡುವೆವು. ಕ್ರಯ ಪೇನಾ 1ಕ್ಕೆ 2—0—0

ಮೂನ್‌ಲೈಯಿಟು ಸೋಪು

ಈ ಸೋಪನ್ನು ಕೂದಲುಗಳಿಗೆ ಒಂದೇ ಒಂದು ಸಾರಿ ಹಾಕಿದರೆ ಕತ್ತಿಯಿಂದ ಕ್ಷೌರಮಾಡಿಸಿ ಕೊಂಡದ್ದಕ್ಕಿಂತಲೂ ಚೆನ್ನಾಗಿ ಚರ್ಮಕ್ಕೆ ಯಾವ ತೊಂದರೆಯೂ ಇಲ್ಲದೆ ಕೂದಲನ್ನು ತೆಗೆದುಬಿಡುವುದು.

ನಮ್ಮ ಪಟ್ಟಿಯಲ್ಲಿ ವಾಚು, ಗಂಟೆ, ನೋಟೆ, ಬಿಚೆ, ಶಾಲು, ಸೀರೆ, ಮುಂತಾದವುಗಳನ್ನು ಕ್ಷಣ ಮಾತ್ರದಲ್ಲಿ ನೋಡುವಿರಿ.

3 ಸಾಬೂನುಗಳನ್ನು ಪೆಟ್ಟಿಗೆ 1ಕ್ಕೆ ರೂ 1—4—0
ಒಂದೇ ಸಲ 2 ಪೆಟ್ಟಿಗೆ ತರಿಸಿಕೊಂಡರೆ ರೂ. 2—4—0

ವಿಳಾಸ.—
ಎಲ್ಜಿನಾ ವಾಚ್ ಕಂಪೆನಿ
ಪಿ ಬಿ. ನಂಬರ್ 1215
6 ಮದರಾಸು.

ಒಂದೇ ಮೂರು ರೂಪಾಯಿಗಳಲ್ಲಿ!

ಟಿಕ್=ಟಾಕ್ (ರಿಜಿಸ್ಟರ್ಡ್).

ಎಂಬ ಗಡಿಯಾರವನ್ನು ನಿಮಗೆ ಪೂರೈಸುತ್ತೇವೆ. ಇದು ಸರಿಯಾದ ಗಂಟೆಯನ್ನು ತೋರಿಸುವದು. ಇದಕ್ಕೆ ಕೀಲಿ ಕೊಡಬೇಕಾಗಿಲ್ಲ. ಇದರಲ್ಲಿ ಕಾಣುತ್ತಿರುವ ಗುಂಡನ್ನು ಮೇಲಕ್ಕೇರಿದರೆ ಸಾಕು. ತನ್ನಷ್ಟಕ್ಕೆ ತಾನೇ ಸರಿಯಾದ ಕಾಲವನ್ನು ತೋರಿಸುವದು. ಇವತ್ತೇ ತರಿಸಿಕೊಳ್ಳಿರಿ.



ನಮ್ಮ ಸ್ಪೆಷಲ್ "ಕ್ರಿಸ್ಮಸ್" ಹಬ್ಬದ ಮಾರಾಟ

ಪ್ರಾರಂಭ ತಾ. 1ನೇ ಜನವರಿ 1926.
ಕಡೆ ತಾ. 5ನೇ ಮಾರ್ಚಿ 1926.
"ಕೊಡಗು" ಚಂದಾದಾರರಿಗೆ ಮಾತ್ರ.

ಎಲ್ಲಾ ವಾಚುಗಳಿಗೂ ಜಾಮಿನು ಐದು ವರುಷಗಳು



No. 515. Rs. 10. No. 511. Rs. 11.

22 ಕ್ಯಾರೆಟ್ ರೋಲ್ಡ್ ಗೋಲ್ಡ್ ಕೈಗೆ ಕಟ್ಟಿಕೊಳ್ಳುವ ಗಡಿಯಾರಗಳು



No 507. Rs. 12. No. 518. Rs. 10.

No. 519. Rs. 9. No. 516, Rs. 10.

ಸರ್ವೋತ್ತಮ, ಬಹಳ ಅಗ್ಗ, ಅಚ್ಚುಕಟ್ಟಾದ ಕೈ ಗಡಿಯಾರುಗಳು

ಪ್ರತಿ ಒಂದು ವಾಚಿನ ಕೂಡ ಒಂದು ಫೌಂಟನ್ ಪೆನ್ ಮತ್ತು ಮೇಲಾದ ಲೇಸ್ಟ್ ಪಟ್ಟಿ ಬಿಟ್ಟಿ ಕಳುಹಿಸುವೆವು. ಬೇಕು ಮಗನೆಲ್ಲಿ ಕೊಡು ವುದು. ಈಗಲೇ ಬರೆಯಿರಿ.

ಪೀಟರ ವಾಚ ಕಂಪೆನಿ,
ಪೋಸ್ಟ ಬಾಕ್ಸ ನಂಬರ 27
ಮದ್ರಾಸ್.

ಅತ್ಯಲ್ಪವಿವೆ! ಉಚಿತ!



ಕೇವಲ ಉಚಿತ! **ಕೇವಲ ಉಚಿತ!!**

"ತಾರಾ" ಲೀವರ ರಜಿಸ್ಟರ್ಡ ಪೋಕೆಟ್ ವಾಚ್ಗಳು ೧ಲ ಕೆರೆಟ್ ರೋಲ್ಡ ಗೋಲ್ಡಿನದು. ಮುಚ್ಚಳಿಲ್ಲಿಯು ಮೇಲೆ ೫ ವರ್ಷದ ಗ್ಯಾರಂಟಿ ಇರುವದೆಂದು ಗಡಿಯಾರ ಕರ್ತರು ಅಚ್ಚು ಹಾಕಿರುವರು. ಈ ಗಡಿಯಾರವನ್ನು ಕೊಂಡುಕೊಳ್ಳುವವರಿಗೆ ನಾವು ನಮ್ಮ "ಸಿ" ರಜಿಸ್ಟರ ಟೈಂಪೀಸನ್ನು ಉಚಿತವಾಗಿ ಕೊಡುತ್ತೇವೆ. ಇದೊಂದು ಅಪೂರ್ವ ಕಾಣಿಕೆ. ಕೆಲವೇ ಗಡಿಯಾರಗಳಿವೆ. ಒಮ್ಮೆ ಕೊಂಡು ನೋಡಿರಿ! ಉಚಿತವಾಗಿ ಸಿಗುವ ಹಾಗು "ತಾರಾ" ಲೀವರ ರಿಜಿಸ್ಟರ್ಡ ೧ಲ ಕೆರೆಟ್ ರೋಲ್ಡಗೋಲ್ಡಿನ ಪೋಕೆಟ್ ವಾಚ್ ಗಡಿಯಾರಗಳಿಗೆ ಕೂಡಿ ಒಂದೇ ರೂಪಾಯಿ ೫.

CAPTAIN WATCH CO., P. B. 265, MADRAS

12–7

ಕಿರ್ಲೋಸ್ಕರ ಗಾಣಗಳು.

ಈ ಕೆಳಗಿನ ಕಬ್ಬಿನ ಗಾಣಗಳು ನಮ್ಮ ಕಾರಖಾನೆಯಲ್ಲಿ ತಯಾರಾಗುತ್ತವೆ.

೧. ಕಿರ್ಲೋಸ್ಕರ ನಂ. ೫.
೨. "ಕಿಸಾನ"
೩. "ಕಮೂಲ ಜರಕ"

ಇವುಗಳ ಸವಿಸ್ತಾರ ಸಂಗತಿ ಬಗ್ಗೆ ಹಾಗೂ ಬೆಲೆಯ ಬಗ್ಗೆ ಕೂಡಲೇ ತಿಳಿದುಕೊಳ್ಳಿರಿ.

ಕರ್ನಾಟಕ ತರುಣರ ಉನ್ನತಿಗೋಸ್ಕರ

ಕಿರ್ಲೋಸ್ಕರ ವಾರ್ತೆ,

ಎಂಬ ತಿಳಿಗನ್ನಡ ಮಾಸ ಪತ್ರಿಕೆಯನ್ನು ಪ್ರಕಟಿಸುತ್ತೇವೆ. ವಾ. ಚ. ೧ ರೂ. ಮಾದರಿ ಸಂಚಿಕೆ ಫುಕ್ಕಟೆ.

ಕಿರ್ಲೋಸ್ಕರ ಬಂಧು, ಲಿಮಿಟೆಡ್.
ಕಿರ್ಲೋಸ್ಕರವಾಡಿ,
16–4 ಜಿ. ಸಾತಾರ್.

ಲೋಕಪ್ರಸಿದ್ಧವಾದ! ಅನುಭವಸಿದ್ಧವಾದ!

ಮೂರುದಿವಸಗಳಲ್ಲಿ ಗುಣಸಿಕ್ಕದಿದ್ದರೆ ಔಷಧಿಯಕ್ರಯ ವಾಪಾಸು. ಜೀರ್ಣಶಕ್ತಿ, ರಕ್ತವೃದ್ಧಿ, ಧಾತುಪುಷ್ಟಿ, ಮನೋಲ್ಲಾಸ, ಪರಮಾನಂದ ಮೊದಲಾದ ಸುಖ ಜೀವನಕ್ಕೆ ಬೇಕಾದ ಆರೋಗ್ಯದಾಯಿನಿ.

ಟ್ರೇಡ್‌ಮಾರ್ಕ] **ಅಗಸ್ತ್ಯ** [ನೋಡಿ ತಿಳಕೊಳ್ಳಿರಿ.

ಮನ್ಮಥ ಚಿಂತಾಮಣಿ ಲೇಹ

ರಿಜಿಸ್ಟರ್ ಆದದ್ದು.

ಆಬಾಲವೃದ್ಧ ಸ್ತ್ರೀ-ಪುರುಷರ ಅನೇಕ ರೋಗಗಳ ಮೇಲೆ ಗುಣ ಕಾರಿಯಾದ್ದು. ಮೇಹ ವಿಕಾರವಿದ್ದವರಿಗೂ, ನಿದ್ರೆ ಇಲ್ಲದವರಿಗೂ, ಸ್ಪಷ್ಟೇಂದ್ರಿಯವಾಗುವ ಬಾಲಕರಿಗೂ, ಜ್ಞಾನಿ ಸುಜ್ಞಾನಿಗಳಿಗೂ ಉಪಯೋಗವುಳ್ಳ ಬಹುಪರಮಾನಂದ ಔಷಧಿ. 1ಸೇರು 48ದಿವಸ ಸೇವಿಸಬಹುದು. ನಂ. (1) 1ಸೇರು ಡಬ್ಬಿ 1ಕ್ಕೆ ರುಪಾಯಿ 3–0–0. ½ ಸೇರು ಡಬ್ಬಿ 1ಕ್ಕೆ ರುಪಾಯಿ 1–9–0. ನಂ. (2) 1ಸೇರು ಡಬ್ಬಿ 1ಕ್ಕೆ ರುಪಾಯಿ 2–0–0, ½ ಸೇರು ಡಬ್ಬಿ 1ಕ್ಕೆ 1–1–0. ವಿ ಪಿ. ಖರ್ಚು ಪ್ರತ್ಯೇಕ. ವಿಶೇಷ ಮಾಹಿತಿಗೆ ಬರಕೊಳ್ಳಿರಿ.

ವಿಳಾಸ:—ದೇವಣ್ಣ ನಾರಾಯಣಸೇಟ್,
ಗೋಳಿಕಟ್ಟಾ,
ಮಂಗಳೂರು,

52–28 ದ. ಕ.

ಸತ್ಯಮೇವಜಯತೇ.
(ಗುಣವಾಗದಿದ್ದರೆ ಹಣ ಮರತ.)

ಧಾತುಪೌಷ್ಟಿಕ ಕಾಮೋತ್ತೇಜಕ, ಇಂದ್ರಿಯಸ್ತಂಭಕವಾದ

ಮದನೋದ್ಭವ ಗುಳಿಗೆ.

ಜನನೇಂದ್ರಿಯದ ಶಿಥಿಲತೆ ನಿಬ್ಬಳತೆ ನಪುಂಸಕತ್ವ ಕ್ಷೀಣತೆ, ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತು ಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ ಇಂದ್ರಿಯಸ್ತಂಭಕ, ಗರ್ಮಿ, (ಬಾತಿ) ಗುಪ್ತಪ್ರದೇಶದ ಮೇಲೆ ಹುಟ್ಟುವ ಎಲ್ಲಾ ತರಹದ ಬಕ್ಕೆಗಳು, ಹುಣ್ಣುಗಳು ಪಿತ್ತದ ಭಾದೆಗಳು, ಕಟಿಶೂಲೆ ವಾತರೋಗವು ಮುಂತಾದವು ಅತಿತ್ವರಿತ ಗುಣವಾಗಿ ಶರೀರಕ್ಕೆ ನಿರೋಗತ್ವವೂ ಕಾಂತಿಯೂ ರತಿಸುಖಕ್ಕೆ ಸಂಪೂರ್ಣ ಶಕ್ತಿಯೂ ಉಂಟಾಗುತ್ತದೆ. ಒಟ್ಟಿಗೆ ೬೦ ಗುಳಿಗೆಗಳು ಬೇಕಾಗುತ್ತವೆ. ಕಿಮ್ಮತ್ತು ೬೦ ಗುಳಿಗೆಗಳಿಗೆ ೪ ರೂಪಾಯಿ. ಇದನ್ನು ಸೇವಿಸುವಾಗ್ಗೆ **ನಪುಂಸಕತ್ವಾರಿ ತೈಲವನ್ನು** ಉಪಯೋಗಿಸಿದರೆ ಉತ್ತಮ. ಕಿಮ್ಮತ್ತು ಬಾಟ್ಲಿ ೧ಕ್ಕೆ ರೂ. ೩–೧೨–೦.

ಪ್ರಮೇಹನಿವಾರಿಣಿ—ಇದರ ಸೇವನೆಯಿಂದ ಮೂತ್ರಸ್ಥಾನದಿಂದ ಕೀವು, ಹಳದಿಯಂತೆ ಹೋಗತಕ್ಕ ಕೀವು ಉರಿ, ವಗೈರೆ ಆಗದಿಹಾತ್ರಿಯಿಂದ ಗುಣವಾಗುವದು. ಕಿಮ್ಮತ್ತು ಬಾಟ್ಲಿ೧ಕ್ಕೆ ರೂ. ೪–೮–೦. ಟ. ಖ. ಬೇರೆ. ಅನುಪಾನಪತ್ರಿಕೆ ಔಷಧದ ಸಂಗಡ.

ಹಂಡಾಣ ಸ್ಟ್ಯಾಂಪು ಕಳುಹಿಸಿದರೆ ಕ್ಯಾಟಲಾಗವು.

ವಿಳಾಸ,—

ವೈದ್ಯ ಜಿ. ಎಲ್. ಜೋಶಿ ಮತು ಕಂಪನಿ.
ಶಿ. ನಂ 6, ಪೋಸ್ಟ ಬನವಾಸಿ, ಉತ್ತರ ಕಾನಡಾ.

ಜ್ವರಗಳ ಮೇಲೆ ಅಮೂಲ್ಯ ಔಷಧವು.

ರೋಶನ

ಟಾನಿಕ್ ಸಿರಪ್.
(ಶಕ್ತಿವರ್ಧಕ ಸರಬತ್ತು.)

ಥಂಡಿಜ್ವರ, ಮಲೇರಿಯ ಮೊದಲಾದ ಜ್ವರಗಳು ಬಿಟ್ಟ ನಂತರ ಬರುವ ಅಶಕ್ತತೆ, ಸಣ್ಣಜ್ವರವು ಬರುತ್ತಿರುವುದು ಮೊದಲಾದವುಗಳ ಮೇಲೆ ಇದು ಒಂದು ಅಮೂಲ್ಯ ಔಷಧವಾಗಿರುತ್ತದೆ.

ನಮ್ಮ ಎಗ್ಯುಮಿಕ್ಸ್ಚರನ್ನು ಸೇರಿಸಿ ಗುಣವನ್ನು ಹೊಂದಿದ ಪ್ರತಿಯೊಬ್ಬನು ಇದರ ಜೊತೆ ಟಾನಿಕ್ ಸಿರಪನ್ನು ಅಗತ್ಯವಾಗಿ ಸೇವಿಸಬೇಕು. ಅಂದರೆ ತಿರುಗಿ ಜ್ವರದ ನಂತರ ಬರುವ ಅಶಕ್ತತೆಯು [illegible].

ಬೆಲೆ ೧ ರೂಪಾಯಿ [illegible] ಬೇರೆ.

12–7 [illegible]

ಇವು ಒಳ್ಳೆ [illegible]!

ಪಂಚೆಗಳು.

ಈಗಾಗಲೇ ವಿರಾಜಪೇಟೆಯಲ್ಲಿ ನಾಯಕರಾದ ಎಲ್ಲಾ ತರದ ಪಂಚೆಗಳು ಅಂಚಿನ, ಪಂಚೆ, ಮೂಲೆ ಪಂಚೆ, ಪಾತಿಪಂಚೆ, ಮಗ್ಗಪಾತ, ಸಣ್ಣಪಂಚೆ, ವಗೈರೆ ಎಲ್ಲಾ ಪಂಚೆಗಳನ್ನು ಸ್ಟಾಕ್ ಮಾಡಲಾಗಿದೆ. ಕೂಡಲೇ ಪಂಚೆ ಬೇಕಾದವರು ವಿರಾಜಪೇಟೆಯಲ್ಲಿ ಈ ಕೆಳಗೆ ರುಜು ಮಾಡಿದವರ ಅಫೀಸಿಗೆ ಬಂದು ಕೊಳ್ಳಬಹುದು. ಅಲ್ಲದೆ ಪಂಚೆಗಳ ನಮೂನೆಗಳನ್ನು ನೋಡಬಹುದು. ಎಲ್ಲಾ ವಿವರಕ್ಕೂ, ಕ್ರಯಕ್ಕೂ, ಮತ್ತು ಪತ್ರಿಗೂ ಈ ಕೆಳಗಿನವರಿಗೆ ದಯವಿಟ್ಟು ಬರೆದುಕೊಳ್ಳಿ.

ವಿರಾಜಪೇಟೆ. ಕೆ. ಪಿ. ಚಿಣ್ಣಪ್ಪ,
12–11 ಖಾದಿ ಭಂಡಾರ.

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್, ಕೊ ಅಪರೇಟಿವ್ ಸೊಸೈಟೀಸ್ ಆಕ್ಟಿನ ಪ್ರಕಾರ ರಿಜಿಸ್ಟರಾಗಿದೆ.

		ರೂ.
ಶೇರ್ ಬಂಡವಾಳ	—	50,000
ವಸೂಲಾದ ಶೇರ್ ಮೊಬಲಗು	—	9590
ಜಮೆಬಂದ ಠೇವಣಾತಿ	—	90,600

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲಕೊಡತಕ್ಕದ್ದು.

ಒಂದು ವರ್ಷ ವಾಯಿದೆ ಅಥವ ಹೆಚ್ಚಿನ ವಾಯಿದೆಯ ಠೇವಣಾತಿಗಳಿಗೆ ಸೇಕಡ ಸಾಲಿಯಾನ ರೂ. 6–4–0ರ ದರದಲ್ಲಿ ಬಡ್ಡಿ ದೊರೆಯುತ್ತೆ. ಕಡಿಮೆ ವಾಯಿದೆಯ ಠೇವಣಾತಿಗಳಿಗೆ ಸೇಕಡ ಸಾಲಿಯಾನ ೬ರ ಬಡ್ಡಿ ದೊರೆಯುತ್ತೆ.

ವರ್ಷಕೊಮ್ಮೆಂದಾವರ್ತಿ ಕೊ ಅಪರೇಟಿವ್ ರಜಿಸ್ಟ್ರಾರರವರು ಲೆಕ್ಕ ಆಡಿಟ್ ಮಾಡುತ್ತಾರೆ.

ಪ್ರಸಿಡೆಂಟರು, ಟ್ರೆಜರರ್.
ಕೊಡಂದೆರ ಕುಟ್ಟಯ್ಯನವರು, ಯಂ. ಭುಜಂಗರಾಯರು
ರಾವ್ ಬಹದ್ದೂರ್. ಬಿ.ಎ., ಬಿ.ಎಲ್.

ಸೆಕ್ರೆಟರಿ,
ಸಿ. ಬಿ. ವೆಂಕಪ್ಪಯ್ಯನವರು, ಬಿ.ಎ., ಬಿ.ಎಲ್.

ತಾರೀಕು 29–8–1925.

ARMS & AMMUNITION MART,
Mahomedally-Noorbhoy



321 Abdul Rehman Street, near Crawford Market, BOMBAY. 3
Telegraphic Address:—"SHOOTER" Bombay.
[52—28] Please write for Reduced nett prices list for 1926.

Printed & published by Kodanda Appayya, R.B., Chairman, Board of Directors, at "Kodagu" Press, Mercara for "Kodagu" Ltd.

"KODAGU" OFFICE, MERCARA.

ಕೊಡಗು.

ಜ್ಞಾನ ಘೋಷಣೆಯುಂ ವಿದ್ಯಾ ನೀತಿ ಪ್ರಯುಕ್ತತಾ ॥ ಐಕ್ಯಮತ್ಯೇನ ದೇಶಾನಾಂ ಸುಸ್ಥಿರಾ ರಾಜ್ಯ ಸಂಪದಾ ॥

ಸಂಪಾದಕ—ಪಂಪ್ಯಂಡ ಬಿ. ಬೆಳ್ಯಪ್ಪ.

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವದು.

[ಸಂಪುಟ ೮] ಕೊಡಗು, ಸ್ ೧೯೨೭ನೇ ಇಸವಿ ಮಾರ್ಚ ತಾರೀಖು ೧೯ ನೇ ಶುಕ್ರವಾರ [ಸಂಚಿಕೆ ೪೦

ಸ್ಪೆನ್ಸರ್ ಕಂಪೆನಿ, ಮಡಿಕೇರಿ.

ನಮ್ಮಲ್ಲಿಗೆ ಈಗತಾನೇ ಈ ಕೆಳಗೆ ನಮೂದಿಸಿರುವ ಕೋವಿಗಳು ಮತ್ತು ಇದರ ಸಾಹಿತ್ಯಗಳು ಹೊಸದಾಗಿ ಬಂದಿವೆ. ಒಳ್ಳೇ ನಮೂನೆ.

ಜಾಗ್ರತೆ!! ಮೋಸ ಹೋಗಬೇಡಿ!!!

ದರ ಸೂಚಿ!

12 ಬೋರ್ ಜೋಡಿ ಕೊಳವಿನ ಕೋವಿ	175-0-0	12 ಬೋರ್ ಒಂಟಿಕೊಳವಿನ ತೋಟೆಕೋವಿ	60-0-0	ಕೇಪು 250 ರ ಟಿನ್ನಿಗೆ	1-2-0
" " "	150-0-0	" " "	57-8-0	12 ಬೋರ್ ಚಿಲ್ಲು ತೋಟೆಗಳು 100ಕ್ಕೆ	12-6-0
" " "	95-0-0	ಒಂಟಿ ಕೊಳವಿನ ಕೇಪು ಕೋವಿ	60- & 85-	" ಸ್ಪೆಷಿಯಲ್ ಲೋಡಿಂಗ್ "	15-8-0
" ಒಂಟಿ ಕೊಳವು "	90-0-0	ಜೋಡಿ " "	70- & 85-	" ಗುಂಡು ತೋಟೆ "	19-0-0
" " "	80-0-0	ಮದ್ದು 1 ಪೌಂಡು ಟಿನ್ನಿಗೆ	2-4-0	" ಆನೆ ಚಿಲ್ಲು " "	16-0-0
" " "	65-0-0	" ½ " "	0-9-0		

Spencer & Co. Ltd,
MERACRA, & POLLIBETTA.

52—21

ನೋಟೀಸ್.

ಈ ಕೆಳಗಿನ ಮಹನೀಯರು 'ಕೊಡಗು' ಪತ್ರಿಕೆಯ ಚಂದಾ ಹಣವನ್ನು ವಸೂಲ್ಮಾಡಲು ಒಪ್ಪಿಕೊಂಡದ್ದರಿಂದ, ಅವರಿಗೆ ಪಾವತಿ ಪುಸ್ತಕಗಳನ್ನು ನಮ್ಮ ಏಜಂಟರು ಮೆ. ಚಂಗಂಡ ಕುಟ್ಟಪ್ಪನವರ ಜವಾಬುದಾರಿಕೆಯ ಮೇಲೆ ಕೊಡಲಾಗಿದೆ. ದಯವಿಟ್ಟು ಚಂದಾದಾರರೆಲ್ಲರೂ ಅವರಿಗೆ ಅನುಕೂಲವಿರುವ ಜಾಗದಲ್ಲಿ ಪಾವತಿ ಮಾಡಬೇಕಾಗಿ ಕೋರಿಕೆ.

ಏಜಂಟರುಗಳು.

ವೀರಾಜಪೇಟೆ—ಖಾದಿ ಭಂಡಾರದಲ್ಲಿ ಮೆ. ಚೆಂಬಾಂಡ ಮುತ್ತಣ್ಣನವರು.
ಮೂರ್ನಾಡು—ಕನ್ನಿಯರ್ ಸ್ಟೋರಿನಲ್ಲಿ ಮೆ. ಪೆಯಂಡ ದೇವಯ್ಯನವರು.
ನಾಪೋಕ್ಲು—ಮೆ. ಅರೆಯಡ ಸುಬ್ಬಯ್ಯನವರು.
" ಮೆ. ಪೊನ್ನಚಂಡ ಮುದ್ದಪ್ಪನವರು.
ಪೊನ್ನಂಪೇಟೆ—ಮೆ ಪಿ. ಜಿ. ಮುದ್ದಯ್ಯನವರು.
ಗೋಣಿಕೊಪ್ಪಲು—ಮೆ. ಬಲ್ಯತ ನಾಣಪ್ಪನವರು.
ಹುದಿಕೇರಿ—ಮೆ. ಜಿ. ಮಾದಪ್ಪಯ್ಯನವರು.
ಅಮ್ಮತ್ತಿ ಸಿದ್ದಾಪುರ—ಮೆ. ಐನಂಡ ಮಾದಪ್ಪನವರು ಮತ್ತು ವೀರಾಜಪೇಟೆ—ಮೆ. ಕಲಿಯಂಡ ಸೋಮಯ್ಯನವರು.
ಶ್ರೀಮಂಗಲ—ಮೆ ಇಟ್ಟಿರ ಚಂಗಪ್ಪನವರು.

ಅಲ್ಲದೆ ಈ ಸಮ್ಮಂಧ ಮೆ. ಚಂಗಂಡ ಕುಟ್ಟಪ್ಪನವರು ಕೊಡಗಿನ ಎಲ್ಲಾ ಕಡೆಗಳಲ್ಲೂ ಸಂದರ್ಭಾನುಸಾರ ಸಂಚಾರ ಮಾಡುವಾಗ ಅವರಿಗೂ ಹಣ ಕೊಡಬಹುದು ಕೊಡಬೇಕಾಗಿ ವಿನಂತಿ.

ಮೇನೇಜರ್, "ಕೊಡಗು" ಪತ್ರಿಕಾ.

ಡಾಕ್ಟರ್ ಎಸ್. ಎನ್. ಅಯ್ಯಂಗಾರ್, ಬಿ ಎ, ಎಲ್ ಆರ್ ಸಿ. ಪಿ. ಅಂಡ್ ಎಸ್. (ಎಡಿನ್‌ಬರ್ಗ್) ಎಲ್. ಎಫ್. ಪಿ. ಅಂಡ್ ಎಸ್., [ಗ್ಲಾಸ್‌ಗೊ]

ದಂತ ವೈದ್ಯರು

ಮಡಿಕೇರಿ ಮಹದೇವ ಪೇಟೆಯಲ್ಲಿ ನಂ ಯಂ. ಯಂ ಸಿದ್ದೀಕ್ ರವರ ಅಂಗಡಿಯ ಎದುರಿನ ಮನೆಯಲ್ಲಿ ಇಳಿದುಕೊಂಡಿರುತ್ತಾರೆ. ಇವರು ಶೀಘ್ರದಲ್ಲೇ ಸೋಮವಾರಪೇಟೆಗೆ ಹೋಗುವ್ವದಕ್ಕೆ ಮೊದಲು ತಾರೀಖು 20ರಿಂದ 27ರವರೆಗೆ ವೀರಾಜಪೇಟೆ ಟ್ರಾವೆರ್ಸ್ ಬಂಗ್ಲೆಯಲ್ಲಿ ಇಳಿದುಕೊಳ್ಳುವುದರಿಂದ ಅವರನ್ನು ಅಲ್ಲಿ ಬೇಗನೆ ಭೇಟಿಮಾಡಿಕೊಳ್ಳುವುದು ಉತ್ತಮ.

ದಂತ ಸಂಜೀವಿನಿ.

ಯಾವ ತರದ ಹಲ್ಲುನೋವನ್ನಾದರೂ ಥಕ್ಕನೆ ಶಮನ ಮಾಡುವ ಶಕ್ತಿಯುಳ್ಳ ಈ ದಂತ ಸಂಜೀವಿನಿ ಕುಪ್ಪಿ ಒಂದಕ್ಕೆ ಕ್ರಯ ದರ 1—0—0 ಮಾತ್ರ. ಎಸ್. ರಾಮಣ್ಣ,

---

ಮಹನೀಯರೇ,

1923ನೆ ಇಸವಿಯಲ್ಲಿ ವೀರರಾಜೇಂದ್ರಪೇಟೆಯಲ್ಲಿ ತೆರೆದ ನಮ್ಮ ವೈದ್ಯಶಾಲೆಯು ಶಾಖೆಯಲ್ಲಿ ಅನೇಕ ದುಸ್ಸಾಧ್ಯವಾದ ಕಾಯಿಲೆಗಳನ್ನು ಗುಣಪಡಿಸಿ ಹೆಸರುವಾಸಿ ಹೊಂದಿದ ನಮ್ಮ ಕಂಪೆನಿಯ ಮತ್ತೊಂದು ಶಾಖೆಯು ಈಗಾಗಲೇ **ಸೋಮವಾರಪೇಟೆಯಲ್ಲಿ** ತೆರೆಯಲ್ಪಟ್ಟಿದೆ.

ಕೃಷ್ಣ ಸಂಬೀಕರ್ ಮತ್ತು ನಾರಾಯಣ ಸಂಬೀಕರ್ ಎಂಬ ಹೆಸರುಗಳುಳ್ಳ ನಮ್ಮ ಪ್ರಧಾನ ವೈದ್ಯರುಗಳು ಒಬ್ಬೊಬ್ಬರು ಒಂದೊಂದು ಶಾಖೆಯಲ್ಲಿ ಯಾವಾಗಲೂ ಇರುತ್ತಾರೆ.

ಈ ವೈದ್ಯರುಗಳು ಇಂಡಿಯಾ ಚಕ್ರವರ್ತಿಯವರಿಂದ ಕೈಸರ ಹಿಂದ್ ಪದಕ ಹೊಂದಿದವರಾಗಿಯೂ ಕೊಚ್ಚಿ ಸಂಸ್ಥಾನದ ರಾಜವೈದ್ಯರಾಗಿಯೂ ಸುಪ್ರಸಿದ್ಧ ಕೀರ್ತಿಯನ್ನು ಪಡೆದವರಾಗಿಯೂ ಇರುವ ಇ. ಟಿ ನಾರಾಯಣನ್ ಮೂಸ್ ಎಂಬ ಮಹಾನುಭಾವರ ಕೈಕೆಳಗೆ ಹೆಚ್ಚು ವರ್ಷಗಳಿದ್ದು ಪಾಂಡಿತ್ಯವನ್ನೂ ಪರಿಚಯವನ್ನೂ ಪಡೆದವರಾಗಿಯೂ ಇದ್ದಾರೆ.

ಇವರಲ್ಲಿನ ಎಲ್ಲಾ ಔಷಧಗಳಿಗೆ ಮಲಬಾರಿನ ಎಲ್ಲಾ ವೈದ್ಯಶಾಲೆಗಳ ಔಷಧಗಳ ಚಾರ್ಜಿಗಿಂತಲೂ ಕಡಿಮೆಯಾಗಿದೆ

ಸಂಬೀಕರ್ ಮತ್ತು ಕಂಪೆನಿ,
ಆಯುರ್ವೇದಿಕ್ ಕ್ಯೆಮೇಟ್ ಡಿಸ್ಪೆನ್ಸರಿ.
ಕಲ್ಲೂರು, ವೀರಾಜಪೇಟೆ ಮತ್ತು ಸೋಮವಾರಪೇಟೆ.

52—51

ಪ್ರಕಟಣೆ.

ನಮ್ಮ ಅಂದವಾದ ಹೊಸ ಅಕ್ಷರಗಳು ಬಂದು ತಲಪಿರುವುದರಿಂದ, 'ಲೆಟರ್ ಹೆಡ್ಸ್', 'ವಿಸಿಟಿಂಗ್ ಕಾರ್ಡ್ಸ್', ಆಮಂತ್ರಣಗಳು (ಇನ್ವಿಟೇಶನ್) ಮೊದಲಾದ ಪ್ರಿಂಟಿಂಗ್ ಕೆಲಸಗಳನ್ನು ಇಂಗ್ಲಿಷ್ ಮತ್ತು ಕನ್ನಡದಲ್ಲಿ ಚಂದವಾಗಿಯೂ ಕಡಿಮೆ ಚಾರ್ಜಿನಲ್ಲಿಯೂ ನಿಯಮಿತ ಕಾಲದಲ್ಲಿಯೂ ಮಾಡಿಕೊಡಲು ತಯಾರಾಗಿದ್ದೇನೆ.

ಮಡಿಕೇರಿ. ಮೇನೇಜರ್,

ಆಂಧ್ರ ಆಯುರ್ವೇದಿಕ್ ಫಾರ್ಮಸಿ
ಬ್ರಾಂಚ್, ಬೆಂಗಳೂರು ಸಿಟಿ

ಚ್ಯವನಪ್ರಾಸ ಲೇಹ.

ಇದು ಸರ್ವೋತ್ಕೃಷ್ಟವಾದ ಗಿಡಮೂಲಿಕೆಗಳಿಂದ ತಯಾರಿಸಲ್ಪಟ್ಟ ಆಯುರ್ವೇದ ರಸಾಯನೌಷಧವು. ವಿದ್ಯಾರ್ಥಿಗಳೂ ವಿಶೇಷವಾಗಿ ಬುದ್ಧಿಯನ್ನು ಪ್ರಯೋಗಿಸಿ ಕೆಲಸ ಮಾಡುವವರೂ ಈ ಲೇಹವನ್ನು ಸೇವಿಸಿದರೆ ವಿಶೇಷವಾಗಿ ಬುದ್ಧಿಶಕ್ತಿಯನ್ನೂ ಜ್ಞಾಪಕಶಕ್ತಿಯನ್ನೂ ಹೊಂದುವರು.



ದೀರ್ಘಕಾಲದ ವ್ಯಾಧಿಯಿಂದಾಗಲೀ ಕೆಟ್ಟ ನಡತೆಯಿಂದಾಗಲೀ, ಸ್ವಭಾವ ಶಕ್ತಿಯ ಕೊರತೆಯಿಂದಾಗಲೀ ಶರೀರ ಕಾಂತಿಯು ಕುಂದಿ ರಕ್ತ ಕೆಟ್ಟು ಇಂದ್ರಿಯ ದೌರ್ಬಲ್ಯವೇ ಮೊದಲಾದ ವಿಕಾರಗಳಿಂದ ಪೀಡಿತರಾಗಿರುವವರು ಈ ಲೇಹವನ್ನು ಸೇವಿಸಿದರೆ ಈ ತರದ ವಿಕಾರಗಳನ್ನೆಲ್ಲಾ ಪರಿಹರಿಸಿ ದೇಹಕ್ಕೂ ಮನಸ್ಸಿಗೂ ಉಲ್ಲಾಸವನ್ನುಂಟುಮಾಡಿ ಮಾಂಸಖಂಡಗಳಿಗೂ ನರಗಳಿಗೂ ಬಲವನ್ನು ಕೊಟ್ಟು ದೇಹಪುಷ್ಟಿಯನ್ನುಂಟುಮಾಡಿ ನವಚೈತನ್ಯವನ್ನುಂಟುಮಾಡುವುದು. ಅಲ್ಲದೆ ಆರೋಗ್ಯದೃಢಶರೀರವುಳ್ಳವರಾಗಿ ದೀರ್ಘಕಾಲ ಬದುಕುವರು. ಕೆಮ್ಮು ಉಬ್ಬಸ ವ್ಯಾಧಿಯುಳ್ಳವರಿಗೂ ಮುಖ್ಯವಾಗಿ ಕ್ಷಯರೋಗಗಳಿಗೂ ಇದು ಸಂಜೀವಿನಿಯೇ ಸರಿ! ಚರಕ ಸಂಹಿತೆಯಲ್ಲಿ ಇದರ ಗುಣವು ಅದ್ಭುತವಾಗಿ ಹೇಳಲ್ಪಟ್ಟಿದೆ. ೧೦ ತೊಲೆಗೆ ೧ ರೂಪಾಯಿ. ೪೦ ತೊಲೆಗೆ ೩ ರೂಪಾಯಿ

ಎಲ್ಲಾ ಕಡೆಯಲ್ಲಿಯೂ ಏಜಂಟರು ಬೇಕು.

ಎ. ಪಿ. ಸಿ. — ಇಲ್ಲಿ ಶಾಸ್ತ್ರೋಕ್ತವಾದ ಎಲ್ಲಾ ಔಷಧಗಳೂ ನ್ಯಾಯ ಕ್ರಯಕ್ಕೆ ಸಿಗುತ್ತವೆ. ಆಯುರ್ವೇದ ಭೂಷಣ ಕೆ. ಶಿವರಾಮ ಶರ್ಮಾ ಎ. ಎ. ಸಿ. ಯವರು ರೋಗಿಗಳನ್ನು ಪರೀಕ್ಷಿಸಿ ಚಿಕಿತ್ಸೆಯನ್ನು ಪ್ರತಿದಿನವೂ ನಡಿಸುವರು. ವಿಶೇಷ ಸಂಗತಿಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಟಿ. ಸಿ. ಎಸ್. ಮುನಿಯಪ್ಪ ಅಂಡ್ ಕೋ.,
ಮ್ಯಾನೇಜಿಂಗ್ ಏಜಂಟ್ಸ್, ಆಂಧ್ರ ಆಯುರ್ವೇದಿಕ್ ಫಾರ್ಮಸಿ,
೬೭. ಚಿಕ್ಕಪೇಟೆ, ಬೆಂಗಳೂರು ಸಿಟಿ.

16—7

"ಕೊಡಗು"

ಸನ್ ೧೯೨೬ನೇ ಇಸವಿ ಮಾರ್ಚಿ ತಾ. ೧೯ನೇ ಶುಕ್ರವಾರ.

ಬಡತನದ ನಿವಾರಣೆ.

ಬಂಗಾಳದ ಸುಪ್ರಸಿದ್ಧ ವಿಜ್ಞಾನ ಶಾಸ್ತ್ರಜ್ಞ ಆಚಾರ್ಯ ಸರ್ ಪಿ. ಸಿ. ರೇಯವರು ಬಂಗಾಳದ ಬಡತನದ ನಿವಾರಣೆಬಗ್ಗೆ ಯುವಕರಿಗೆ ಬೋಧನೆಕೊಟ್ಟಿರುವ ಒಂದು ಲೇಖನವು ಪ್ರಕಟವಾಗಿದೆ. ಇದನ್ನು ಸರ್ವರೂ ಓದಿ ಸರ್ವ ಪ್ರಯತ್ನದಿಂದ ಅವರ ಬೋಧನೆಯನ್ನು ಜಾರಿಗೆ ತರಲು ಸಾಧಿಸುವದು ಅವಶ್ಯವಾಗಿದೆ. ಅವರು ಹೇಳುವದರಲ್ಲಿ ಹೊಸ ವಿಷಯಗಳು ವಿಶೇಷವೇನೂ ಇಲ್ಲದಿದ್ದರೂ ಜಗತ್ಪ್ರಖ್ಯಾತರಾದ ಇವರು ಹಿಂದುಸ್ಥಾನದ ಬಡತನ ನೋಡಿ ಮರುಗಿ ಖದ್ದರ್ ಬಟ್ಟೆಯ ಪ್ರಚಾರವನ್ನು ಈಗ ನಾಲ್ಕೈದು ವರ್ಷಗಳಿಂದಲೂ ಎಡೆಬಿಡದೆ ಮಾಡುತ್ತಿರುವರು. ಅತಿ ಬಡವರ ಹೊಟ್ಟೆತುಂಬಾ ಅನ್ನ ಕೊಡತಕ್ಕಂಥಾ ಖದ್ದರ್ ಬಟ್ಟೆಯ ಪ್ರಚಾರಮಾಡುತ್ತಿರುವವರಾದರೂ ತಕ್ಕಮಟ್ಟಿಗೆ ಅನುಕೂಲವಿರುವ ಜನರೂ ಐಶ್ವರ್ಯವಂತರೂ ಸಹ ಇತರ ಉದ್ಯೋಗಗಳನ್ನು ಕಲಿತು ದೇಶದ ಬಡತನವನ್ನು ಹೋಗಲಾಡಿಸಬೇಕೆಂಬದೇ ಇವರ ಬೋಧನೆಯ ತಿರುಳಾಗಿದೆ.

ಹಿಂದುಸ್ಥಾನದಲ್ಲಿ ಜಾತಿಭೇದಗಳಿಂದ ಉಂಟಾಗಿರುವ ಡಾಂಭಿಕತನದಿಂದ(?) ಕೈಗಾರಿಕೆ ಕಸಬುಗಳು ಹಾಳಾದವೆಂತ ವಿವರಿಸಿದ್ದಾರೆ. ಇಂಗ್ಲಿಷ್ ವಿದ್ಯಾಭ್ಯಾಸವು ಪ್ರಾರಂಭವಾದಂದಿನಿಂದ "ಉತ್ತಮ" ಜಾತಿಯವರೆಲ್ಲಾ ವಿದ್ಯಾಭ್ಯಾಸಮಾಡಿ ಸರಕಾರಿ ನೌಕರಿಗೆ ಹೋದರು. ಪುರಾತನ ಕಾಲದಿಂದ ನಡೆದುಬಂದ ಕೈಗಾರಿಕೆಗಳೆಲ್ಲಾ ವಿದ್ಯಾಭ್ಯಾಸಕ್ಕೆ ಹೋಗದ "ಕೀಳಿನ" ಜಾತಿಯವರಲ್ಲಿ ಇತ್ತು. ಬ್ರಿಟಿಷ್ ವ್ಯಾಪಾರಿಗಳ ಹಾವಳಿಯಿಂದ ಈ ಕಸಬುಗಳೆಲ್ಲಾ ಹಾಳಾದವು.

ಬಂಗಾಳದ ವ್ಯಾಪಾರವೆಲ್ಲಾ ಇಂಗ್ಲಿಷ್ ಮತ್ತು ಮಾರ್ವಾಡಿ ಜನರ ಕೈಯಲ್ಲಿ ಆಗಿಹೋಗಿದೆಯೆಂತ ವ್ಯಸನಪಟ್ಟು ಬೊಂಬಾಯಿ ವ್ಯಾಪಾರವು ಬೊಂಬಾಯಿಯ ಜನರ ಕೈಯಲ್ಲಿ ಕ್ರಮೇಣ ಸೇರುತ್ತಾ ಬಂದಿದೆಯೆಂಬದನ್ನು ತೋರಿಸಿ, ಇತರ ಕೈಗಾರಿಕೆಗಳು ಬೆಳೆಯುವ ಮುಂಚೆ ವ್ಯಾಪಾರವನ್ನು ದೇಶೀಯರ ಕೈವಶಮಾಡಿಕೊಳ್ಳಬೇಕೆಂತ ಇವರ ಬೋಧನೆಯಾಗಿದೆ. ನಮ್ಮ ಈ ಕೊಡಗುದೇಶದಲ್ಲಿ ದೇಶೀಯ ಯುವಕರು ವ್ಯಾಪಾರದಲ್ಲಿ ಹೆಚ್ಚು ಅಭಿರುಚಿತೆಗೆದುಕೊಳ್ಳುತ್ತಿರುವದು ಶುಭಸೂಚನೆಯಾಗಿದೆ. ನಾಲ್ಕಾರು ಜನರು ಮರದ ವ್ಯಾಪಾರಮಾಡುತ್ತಿದ್ದಾರೆ. ಅನೇಕರು ಭತ್ತದ ವ್ಯಾಪಾರಮಾಡುತ್ತಿದ್ದಾರೆ. ಒಬ್ಬಿಬ್ಬರು ಚಾಲಿವ್ಯಾಪಾರವ(?) ಮಾಡುತ್ತಿದ್ದಾರೆ. ವ್ಯಾಪಾರಕ್ಕಾಗಿ ದೇಶಾಂತರಗಳಲ್ಲಿ ತಿರುಗುತ್ತಿದ್ದು ಅಲ್ಲಿಯ ಕಾರ್ಖಾನೆಗಳನ್ನೂ ಕಸಬುಗಳನ್ನೂ ನೋಡಿದರೆ ತಮ್ಮ ಸ್ವಂತ ಊರಿನಲ್ಲಿಯೂ ಕೈಗಾರಿಕೆಗಳನ್ನೂ, ಕಾರ್ಖಾನೆಗಳನ್ನೂ ಸ್ಥಾಪಿಸಲು ಉತ್ತೇಜನವು ದೊರೆಯುವದಲ್ಲದೆ ಧೈರ್ಯ ಸಹ ಬರುತ್ತದೆ. ನಮ್ಮ ದೇಶದಲ್ಲಿ ವ್ಯಾಪಾರಕ್ಕೆ ಕೈಹಾಕುವವರು ಆಚಾರ್ಯ ರೇಯವರ ಬೋಧನೆಯನ್ನು ಅನುಸರಿಸಿದರೆ ವ್ಯಾಪಾರದಿಂದ ಹೆಚ್ಚಿನ ಪ್ರಯೋಜನವಾದೀತು. ಯಾವ ವ್ಯಾಪಾರ ಮಾಡಬೇಕೆನ್ನುತ್ತೀರೋ ಆ ವ್ಯಾಪಾರ ನಡಿಸುವವರಲ್ಲಿ ತಾಬೇದಾರಿ ಕೆಲಸಕ್ಕೆ ಸೇರಿ ಅನುಭವ ಪಡೆಯಬೇಕು. ಯೂನಿವರ್ಸಿಟಿ ವಿದ್ಯೆಗೆ ತುಂಬಾ ಜನರು ಹೋಗುವದು ಶುಭಸೂಚನೆಯೇ. ಆದರೆ ವ್ಯಾಪಾರ ಮತ್ತು ಕೈಗಾರಿಕೆಗಳಿಗೆ ಮನಸುಕೊಡದೆ ಹೋದರೆ ದೇಶದ ಬಡತನ ನಿವಾರಣೆಯಾಗುವದಿಲ್ಲವೆಂತ ಆಚಾರ್ಯರು ಹೇಳುವದಾಗಿದೆ. ಹೆಚ್ಚೆಚ್ಚು ವಿದ್ಯಾಭ್ಯಾಸಕ್ಕೆ ಧನವ್ಯಯ ಮಾಡುತ್ತಾ ಹೋಗದೆ ಅದರಲ್ಲಿ ಸ್ವಲ್ಪ ಭಾಗವನ್ನು ಉಪಯೋಗಿಸಿ ವ್ಯಾಪಾರದ ಅನುಭವ ಪಡೆಯಲು ಪ್ರಯತ್ನಿಸಬೇಕು. ನಮ್ಮ ದೇಶದ ಅನೇಕ ಯುವಕರು ಬೊಂಬಾಯಿ ಮುಂತಾದ ಸ್ಥಳಗಳಲ್ಲಿ ವ್ಯಾಪಾರಿಗಳಲ್ಲಿಯೂ, ಕಂಪೆನಿಗಳಲ್ಲಿಯೂ ನೌಕರಿ ತೆಗೆದುಕೊಂಡಿರುತ್ತಾರೆ. ಆದರೆ ಇವರು ಯಾರೂ ವ್ಯಾಪಾರದ ಅನುಭವ ಪಡೆದು ಅದರಿಂದ ತಾವು ಸ್ವಂತವಾಗಿಯೇ ವ್ಯಾಪಾರ ನಡಿಸಲು ಯತ್ನಿಸುವದೇ ಇಲ್ಲ. ಇದಕ್ಕೆ ಆ ಯುವಕರ ಕ್ಷೇಮಚಿಂತಕರ ಮತ್ತು ದೇಶದವರೂ ಧನಸಹಾಯಮಾಡುವದಿಲ್ಲ. ಯುವಕರು ಒಳ್ಳೇನಡತೆಯನ್ನೂ, ಪ್ರಾಮಾಣಿಕತನವನ್ನೂ ಸಂಪಾದಿಸಬೇಕು. ಆಚಾರ್ಯರು ಹೇಳುವಂತೆ ಧನಿಕರು ತಮ್ಮ ಹಣವನ್ನು ಬಡ್ಡಿಗೆ ಆಸ್ತಿಮಾಡುವದರಲ್ಲಿಯೂ ಸರಕಾರಿ ಸಾಲದ ಬಾಂಡ್‌ಗಳನ್ನು ಕೊಂಡುಕೊಳ್ಳುವದರಲ್ಲೂ ಲೇವಾದೇವಿಯಲ್ಲೂ ಉಪಯೋಗಿಸುತ್ತಾರಷ್ಟೆ. ಏನೂ ಪ್ರಯತ್ನವಿಲ್ಲದೆ ಜೀವನ ನಡಿಸುತ್ತಾ ಹೋಗುವದು ಉತ್ತಮ ಜೀವನವೆಂತ ನಮ್ಮ ದೇಶದ ಜನರೂ ಬಂಗಾಳದವರಂತೆಯೇ ನೆನಸುತ್ತಾರೆ. ಆಚಾರ್ಯರು ಹೇಳುವದೇನೆಂದರೆ, ಹಣವಿರುವವರು ಇನ್ನೂ ಪ್ರಯತ್ನಪಡಲು ಹಿಂಜರಿಯದೆ ತಮ್ಮ ಹಣವನ್ನು ಉಪಯೋಗಿಸಿ ದೇಶದ ವ್ಯಾಪಾರವನ್ನೂ, ಕೈಗಾರಿಕೆಯನ್ನೂ ಹೆಚ್ಚಿಸಬೇಕು. ಇದಕ್ಕೆ ತಮ್ಮ ಬಾಲಕರನ್ನೂ, ಇತರರನ್ನೂ ತಯಾರಿಸಿಕೊಳ್ಳಬೇಕು. ವರ್ಷಕ್ಕೆ ಲಕ್ಷಾಂತರ ರೂಪಾಯಿ ಉತ್ಪತ್ತಿ ಇರುವವರೂ ಸಹ ತಮ್ಮ ಮಕ್ಕಳನ್ನು ತಿಂಗಳಿಗೆ ೫೦ರೂಪಾಯಿ ಸಂಬಳವಿರುವ ಸರಕಾರಿ ನೌಕರಿಗೆ ಸೇರಿಸಲು ಪ್ರಯತ್ನಿಸುತ್ತಾರಂತೆ. ನಮ್ಮ ದೇಶದಲ್ಲಿ ಲಕ್ಷಾಂತರ ರೂಪಾಯಿ ಹುಟ್ಟುವಳಿ ಇರುವವರು ಇಲ್ಲ. ಸಾವಿರಾರು ರೂಪಾಯಿ ಉತ್ಪತ್ತಿ ಇರುವವರಾದರೂ ತಮ್ಮ ಮಕ್ಕಳನ್ನು ಸರಕಾರಿ ಉದ್ಯೋಗಕ್ಕೆ ತಯಾರಿಸುವದು ವ್ಯಸನಕರವೇ. ಸರಕಾರಿ ಉದ್ಯೋಗವೇ ಐಶ್ವರ್ಯವಂತರಾಗಲಿಕ್ಕೆ ರಾಜಮಾರ್ಗವೆಂಬ ತಪ್ಪು ಅಭಿಪ್ರಾಯವನ್ನು ಬಿಡಬೇಕೆಂತ ಆಚಾರ್ಯರು ಒತ್ತಿ ಹೇಳುತ್ತಾರೆ.

ಬಂಗಾಳದಲ್ಲಿ ಗೋಣಿಚೀಲಗಳನ್ನು ಮಾಡುವ ನಾರನ್ನು ಬೆಳೆಯಿಸುವದು ಬಂಗಾಳಿಗಳಾದರೂ ಅದರಿಂದ ಪ್ರಯೋಜನ ಹೊಂದುವವರು ಇತರರಾಗಿದ್ದಾರೆಂತ ಆಚಾರ್ಯರು ವ್ಯಸನಪಡುತ್ತಾರೆ. ನಮ್ಮ ದೇಶದಲ್ಲೂ ಮುಖ್ಯವ್ಯಾಪಾರದ ಉತ್ಪತ್ತಿಗಳಾದ ಕಾಫಿ, ಏಲಕ್ಕಿ, ಕಿತ್ತಳೆಯ ವ್ಯಾಪಾರವನ್ನು ಪರದೇಶಸ್ಥರ ಸ್ವಾಧೀನ ಬಿಟ್ಟಿರುತ್ತೇವೆ. ದೇಶಸ್ಥರು ಈ ವ್ಯಾಪಾರಗಳನ್ನು ತಮ್ಮ ಕೈವಶ ಮಾಡಿಕೊಳ್ಳಲು ಪ್ರಯತ್ನಿಸಬೇಕು. ಇದು ಬಹಳ ಸುಲಭ ಸಾಧ್ಯವಲ್ಲ. ಕ್ರಮಕ್ರಮವಾಗಿ ಈ ಕೆಲಸಗಳನ್ನು ಕಲಿತುಕೊಂಡು ಬಂದರುಗಳ ಸಾಹುಕಾರರುಗಳ ನಂಬಿಗೆಯನ್ನು ಸಂಪಾದಿಸಿಕೊಂಡು ಮುಂದರಿಸಬೇಕಾಗಿದೆ. ಬಂದರುಗಳಲ್ಲಿ ಕೊಡಗಿನ ಸರಕುಗಳನ್ನು ಕೊಂಡುಕೊಳ್ಳುವ ಕಂಪೆನಿಗಳಲ್ಲಿ ಈ ದೇಶದ ಯುವಕರು ಕೆಲಸ ಸಂಪಾದಿಸಬೇಕು. ಅಲ್ಲಿ ಯೂರೋಪಿಯನ್ ವ್ಯಾಪಾರದ ರೀತಿಗಳನ್ನು ಕಲಿತುಕೊಳ್ಳಬೇಕು. ಅನಂತರ ಹಣಗಾರರ ಸಹಾಯ ಪಡೆದು ಸ್ವಂತವ್ಯಾಪಾರವನ್ನಾಗಲೀ, ಬ್ರೋಕರ್ ಕೆಲಸವನ್ನಾಗಲೀ ಕೈಕೊಳ್ಳಬೇಕು. ಇದಕ್ಕೆ ಸಮಾಧಾನವೂ, ಎಡೆಬಿಡದ ಪ್ರಯತ್ನವೂ ಬೇಕಾಗಿದೆ.

ಚಿಕ್ಕಬಡವ್ಯಾಪಾರದ(?) ವಿಷಯದಲ್ಲೂ ಆಚಾರ್ಯ ರೇಯವರು ತುಂಬಾ ಒತ್ತಿಹೇಳುವದೇನೆಂದರೆ— ಈ ವ್ಯಾಪಾರದಲ್ಲಿ ತುಂಬಾ ಪ್ರಯೋಜನವಿದೆ. ಇದನ್ನು ವಿದ್ಯೆ ಇಲ್ಲದವರ ಸ್ವಾಧೀನ ಬಿಡದೆ ವಿದ್ಯಾವಂತರು ಸ್ವಾಧೀನಕ್ಕೆ ತೆಗೆದುಕೊಂಡು ಕೆಲಸದಲ್ಲಿ ಅಸಹ್ಯಪಡದೆ ಇದ್ದರೆ ಪ್ರಯೋಜನ ಹೊಂದಬಹುದೆಂತ ಹೇಳಿದ್ದಾರೆ. ನಮ್ಮ ದೇಶದಲ್ಲಿ ಈ ವ್ಯಾಪಾರವನ್ನು ದೇಶೀಯರೇ ಕೈಕೊಳ್ಳಬೇಕೆಂತ ಕೆಲವರು ನಾಲ್ಕಾರು ವರ್ಷಗಳಿಂದ ಹೇಳಿದರೂ ದೇಶೀಯರು ಮನಸ್ಸಿಗೆ ತೆಗೆದುಕೊಳ್ಳಲಿಲ್ಲ. ಇದನ್ನು ಪ್ರಾಮಾಣಿಕತನದಿಂದ ನಡೆಸಿದರೆ ದಿನಗಳ ಖಾವಿಲೆ(?) ಸಹ ಕಡಿಮೆಮಾಡಬಹುದೆಂತ ಕೆಲವರ ಅಭಿಪ್ರಾಯ. ಅಂದರೆ ಈಗಿನ ವ್ಯಾಪಾರಿಗಳು ಹೆಚ್ಚಿನ ಚರ್ಮಬರಿಕಕ್ಕಾಗಿ(?) ಜನಗಳ ಖಾಯಿಲೆ ಹರಡುವಂತೆ ಮಾಡುತ್ತಿದ್ದಾರೆಂಬ ಸಂಶಯವು ಅನೇಕ ಕಡೆಗಳಲ್ಲಿ ಇದೆ. ಇಂಥಾ ಅನುಮಾನಗಳಿಗೆ ಎಡೆ ಇಲ್ಲದಂತೆ ದೇಶೀಯರೇ ಈ ವ್ಯಾಪಾರ ಮಾಡಿದರೆ ತುಂಬಾ ಲಾಭವಾದೀತು.

ಯಾವ ಕಸಬಿನಲ್ಲಿ ಪ್ರಯೋಜನ ಹೊಂದಬೇಕಾದರೂ ತಾಳ್ಮೆಯೂ ಪ್ರಾಮಾಣಿಕತನವೂ ಬಹಳ ಅವಶ್ಯವೆಂತ ಹೇಳಿರುತ್ತಾರೆ. ಒಂದೇ ಸರ್ತಿ ಬಹಳ ದೊಡ್ಡ ಲಾಭಬರಬೇಕೆಂತ ಯೋಚಿಸಬಾರದು. 'ಒಬ್ಬ ಬಿ. ಎ. ಪಾಸಾದವನನ್ನು ಒಂದು ಕಸಬುದಾರಿ ಕೆಲಸಕ್ಕೆ ಕರೆದರೆ ಸಂಬಳ ಏನುಕೊಡುತ್ತೀರಿ ಎಂತ ಕೇಳುತ್ತಾನೆ. 50ರೂ ಸಂಬಳವೆಂತ ಹೇಳಿದರೆ ಬೆಳಿಗ್ಗೆ 7 ಘಂಟೆಯಿಂದ ಸಾಯಂಕಾಲ 7ಘಂಟೆವರೆಗೆ ಬೇಕಾದರೂ ಕೆಲಸಮಾಡಲು ತಯಾರಿರುತ್ತಾನೆ. ಲಾಭದಲ್ಲಿ ಪಾಲುತೆಗೆದುಕೊಳ್ಳೀರಾ, ಸಂಬಳವಿಲ್ಲವೆಂತ ಹೇಳಿದರೆ ಒಪ್ಪುವದಿಲ್ಲ' ಎಂತ ರೇಯವರ ಲೇಖನದಲ್ಲಿ ಹೇಳಿದೆ. ಇದು ನಿಜವಾದ ಸಂಗತಿ. ಅವರು ಇನ್ನೂ ಹೇಳುವಂತೆ ಸ್ವಲ್ಪ ನಷ್ಟವಾದರೆ ಕೂಗಿಕೊಳ್ಳುತ್ತಾರೆ. ಕೊಂಚ ಕಾಲದ ಮೇಲೆ ಲಾಭಬರಬಹುದೆಂತ ಕಾಯುವದಿಲ್ಲ. ಕಷ್ಟಗಳೂ ನಷ್ಟಗಳೂ ಬಂದೊದಗಿದರೆ ಅನುಭವ ಹೆಚ್ಚುತ್ತದೆ. ಧೈರ್ಯ ಕುಂದಬಾರದು. ಪೂರ್ತಿಯಾಗಿ ಪ್ರಯತ್ನ ಪಟ್ಟರೆ ಅಂತ್ಯದಲ್ಲಿ ಜಯವಿದೆ. ದುಡಿಯುವ(?) ಕೆಲಸಕ್ಕೆ ದೇಶೀಯರಲ್ಲಿ ಗೌರವ ಕಡಿಮೆಯಾಗಿಬಿಟ್ಟಿದೆ. ಪ್ರಾಮಾಣಿಕತನದಲ್ಲಿ ದೇಹಶ್ರಮದಿಂದ ಸಂಪಾದನೆಮಾಡಿ ಜೀವನ ನಡಿಸುವದಕ್ಕೆ ಮರ್ಯಾದೆಯು ಕಡಿಮೆ ಇನ್ನೊಂದಿಲ್ಲ. ಹಿಂದುಸ್ಥಾನದಲ್ಲಿ ಮೂಲಧನಕ್ಕೆ ದರಿದ್ರವಿಲ್ಲ. ಶಕ್ತಿವಂತ ಜನರೂ ಕಡಿಮೆಯಿಲ್ಲ. ಆದರೆ ಉತ್ಸಾಹವೇ ಇಲ್ಲ. ದೇಶೀಯರ ಉತ್ಸಾಹವು ಹುಲ್ಲಿನ ಬೆಂಕಿಯಂತೆ ಬೇಗನೆ ಆರಿಹೋಗುತ್ತದೆ ಎಂತ ನಿಜವಾದ ಸಂಗತಿಗಳನ್ನು ಅವರು ಹೇಳಿರುತ್ತಾರೆ.

'ಗುಂಪುಸೇರಿ ಕೆಲಸಮಾಡುವ ಸ್ವಭಾವವೇ ಹಿಂದೀಯರಲ್ಲಿ ಇಲ್ಲ. ಅನ್ಯೋನ್ಯನಂಬಿಕೆಯೇ ಇಲ್ಲ. ನಂಬಿಕೆ ಹುಟ್ಟುವಂತೆ ನಡೆದುಕೊಳ್ಳುವದೂ ಇಲ್ಲ'ವೆಂತ ಹೇಳುತ್ತಾರೆ. ನಮ್ಮ ದೇಶದಲ್ಲಿ ಸಾಲ್ಕಾರ(?) ಕಂಪೆನಿಗಳು ಪ್ರಾರಂಭವಾಗಿ ಸ್ವಲ್ಪ ಕಾಲದಲ್ಲೇ ಹಾಳಾಗಿ ಆಚಾರ್ಯರ ಮಾತನ್ನು ನಿಜವೆನ್ನಿಸಿಯದೆ. ವೀರರಾಜಪೇಟೆ ಟ್ರೇಡಿಂಗ್ ಕಂಪೆನಿಯು ದೊಡ್ಡ ಕಂಪೆನಿಯಾಗಿ ಬಹು ಬೇಗನೆ ಒಬ್ಬರ ಸ್ವಾಧೀನ ಬಿಡಬೇಕಾಯಿತು. ಇಬ್ಬರು ಮೂವರು ಸೇರಿ ಮಾಡುವ ಕಾರ್ಯಗಳೂ ಸಹ ಹೀಗೆಯೇ ಹಾಳಾದದ್ದಿದೆ. ಈಗ ದಕ್ಷಿಣಕೊಡಗಿನಲ್ಲಿ ಏರ್ಪಡಿಸಬೇಕೆಂದಿರುವ ಸಹಕಾರಿ ಸ್ಟೋರ್ಸ್ ಮಾಡುವ ಪ್ರಯತ್ನವು ಹಾಳಾಗಲಾರದೆಂತ ಆಶಿಸುತ್ತೇವೆ. ಈ ಸ್ಟೋರ್ಸ್ ಚೆನ್ನಾಗಿ ನಡೆದರೆ ಅದರ ಮೇಲ್ಪಂಕ್ತಿಯಲ್ಲಿ ದೇಶದ ಇತರ ಕಡೆಗಳಲ್ಲಿ ಸ್ಟೋರ್ಸ್‌ಗಳು ಪ್ರಾರಂಭವಾದಾವು. ಇಂಥಾ ಕೆಲಸಕ್ಕೆ ಸೇರುವವರು ಅನ್ಯೋನ್ಯ ನಂಬಿಕೆ ಹುಟ್ಟುವಂತೆ ವರ್ತಿಸಬೇಕು. ಯೂರೋಪಿಯನ್ ಜನರನ್ನು ಈ ಗುಣದಲ್ಲಿ ನಾವು ಹಿಂಬಾಲಿಸಬೇಕು.

"ದೇಶಾಂತರಗಳಲ್ಲಿ ಕೈಗಾರಿಕೆಗಳನ್ನು ಕಲಿತು ಬಂದವರಿಗೆ ಹಿಂದುಸ್ಥಾನದಲ್ಲಿ ಪ್ರೋತ್ಸಾಹವಿಲ್ಲ. ತಮ್ಮ ಸ್ವಂತ ಸರಕಾರವು ಪ್ರಯೋಜನಕ್ಕೆ ಉಪಯೋಗಿಸುತ್ತಾರೆ. ಇಲ್ಲವೇ ಉಪಯೋಗಿಸುವುದೇ ಇಲ್ಲ". ಆಚಾರ್ಯರ ಈ ಆಕ್ಷೇಪಣೆಯು ನಮ್ಮ ದೇಶಕ್ಕೆ ಚೆನ್ನಾಗಿ ತಟ್ಟುತ್ತದೆ. ಜಪಾನ್ ಮುಂತಾದ ದೇಶಗಳಿಗೆ ಹೋಗಿ ಕಲಿತುಬಂದವರು ತಮ್ಮ ತಮ್ಮ ಮನೆಗಳಲ್ಲಿ ಸುಮ್ಮನಿದ್ದು ತಮ್ಮ ವಿದ್ಯೆಯನ್ನು ಉಪಯೋಗಿಸದೆ ಇರುವ ಒಂದೆರಡು ಉದಾಹರಣೆಗಳು ನಮ್ಮ ಈ ಚಿಕ್ಕದೇಶದಲ್ಲಿ ಈಗಲೂ ಇವೆ. ಅವರ ವಿದ್ಯೆಯನ್ನು ಉಪಯೋಗಿಸುವಂತೆ ಮಾಡಬೇಕಾದದ್ದು ದೇಶದ ಕರ್ತವ್ಯವಾಗಿದೆ.

ಆಚಾರ್ಯರ ಅಪ್ಪೀಲ್ ಬುದ್ಧಿವಾದವನ್ನು ಪೂರ್ತಿಯಾಗಿ ಕೊಟ್ಟು ಲೇಖನವನ್ನು ಮುಗಿಸುತ್ತೇನೆ.

"ನಮಗೆ ಈಗ ಹೆಚ್ಚಿನ ಸ್ವಾವಲಂಬನವೂ, ಅನ್ಯೋನ್ಯ ನಂಬಿಕೆಯೂ ಬೇಕಾಗಿದೆ. ಜನರು ನಮ್ಮನ್ನು ನಂಬಲಿಕ್ಕೆ ಅರ್ಹರೆನಿಸಿಕೊಳ್ಳಬೇಕು. ನಮ್ಮ ಜನಾಂಗದ ನಡತೆಯಲ್ಲಿ ಇರುವ ಲೋಪಗಳನ್ನು ಒಂದೊಂದಾಗಿ ಹೋಗಲಾಡಿಸಿ ಅವುಗಳ ಬದಲಿಗೆ ಒಳ್ಳೇ ಗುಣಗಳನ್ನು ಅನುಸರಿಸಬೇಕು. ಹೆಚ್ಚಿಗೆ ಉದ್ಯೋಗ ಶೀಲತೆಯವರಾಗಬೇಕು. ಅಂದರೆ ಒಂದಲ್ಲ ಒಂದು ಕೆಲಸ ಮಾಡುತ್ತಲೇ ಇರಬೇಕು. ಸೋಮಾರಿಗಳಾಗಿರಬಾರದು. ಅಂತ್ಯವಿಲ್ಲದ ಶಕ್ತಿಯೂ, ಧೈರ್ಯವೂ, ಸಮಾಧಾನವೂ ಇರಬೇಕು. ನಾವು ದೃಢಮನಸ್ಸಿನ ಗಾಂಭೀರ್ಯ ಮನುಷ್ಯರಾಗಬೇಕು."

ಆಚಾರ್ಯ ಪಿ. ಸಿ. ರೇಯವರ ಬುದ್ಧಿವಾದಗಳೆಲ್ಲವೂ ನಮ್ಮ ದೇಶದವರ ಮನಸ್ಸಿಗೆ ಹೊಕ್ಕಿ ಅಲ್ಪಸ್ವಲ್ಪವಾದರೂ ಪ್ರಯೋಜನವಾಗಲಿ ಎಂತ ಆಶಿಸುತ್ತೇನೆ.

ಮಾರಾಟಕ್ಕೆ ಸಿದ್ಧವಾಗಿದೆ.

ಮೈಸೂರು ಸಿಟಿಯಲ್ಲಿ ಬಂಗ್ಲೆ ನಿವೇಶನಗಳು.

ರಾಜಧಾನಿಯ ವಾಣಿವಿಲಾಸ ಯಕ್ಸ್‌ಟೆನ್‌ಷನ್(?) ಟವ್ನಿನ 1ನೇ ಬ್ಲಾಕಿನಲ್ಲಿ 3 ಮತ್ತು 4ನೇ ನಿವೇಶನಗಳು, ಅಳತೆ 285 X 160ಅಡಿಗಳು ಮೈಸೂರು ಕನ್ನಂಬಾಡಿ ರೋಡಿನಲ್ಲಿ ಪಕ್ಕ ಇಟ್ಟಿಗೆ ಕಾಂಪೌಂಡು ಎರಡು ಗೇಟುಬಾಗಲುಗಳು, ನೀರಿನಲ್ಲಿ ಕನೆಕ್ಷನ್ ಸಹ ಇರುತ್ತೆ. ಗೋಡೆ ಮತ್ತು ಗೇಟುಬಾಗಲುಗಳು ಸೇರಿ ಖರೀದಿ 7147—6—0 ರೂ ಮೈಸೂರು ಸಿಟಿ ಇಂಪ್ರೂವ್‌ಮೆಂಟು ಟ್ರಸ್ಟಿನವರ ಶರತ್ತಿಗೆ ಅನುಸರಿಸಿ ಮಾರಾಟ ಮಾಡಲ್ಪಡುತ್ತೆ. ಅಪೇಕ್ಷೆಯುಳ್ಳವರು ಇದರಡಿ ನಮೂದಿಸಿರುವವರಿಗೆ ಬರೆದುಕೊಳ್ಳಬಹುದು.

ಸುಪರಿಂಟೆಂಡೆಂಟರು,
4—1 ಲೇಬರ್ ಡಿಪಾರ್ಟ್‌ಮೆಂಟು,
ಮೈಸೂರು.

ಕೊಡಗು ಕೌನ್ಸಿಲ್ ಮೀಟಿಂಗು.

(ಕಳೆದ ಸಂಚಿಕೆಯಿಂದ ಮುಂದುವರಿದದ್ದು)

ಫೈನಾನ್ಸ್ ಮೆಂಬರು ಹೇಳಿದ್ದೇನೆಂದರೆ— ಡಿಸ್ಟ್ರಿಕ್ಟ್ ಬೋರ್ಡ್ ಆಕ್ಟನ್ನು ತಿದ್ದುಪಡಿ ಮಾಡಬೇಕೆಂತ ಈ ಕೌನ್ಸಿಲಿನಲ್ಲಿ ಠರಾವು ಪಾಸಾಗಿರುವದು. ಬಾಸನು ಮಾಡಲು ಬಹಳ ತಡವಾಗುತ್ತದೆಂಬದು ಎಲ್ಲರಿಗೂ ತಿಳಿದ ಸಂಗತಿಯಾಗಿದೆ ರೂಲ್ಸ್ ಮಾಡಲಿಕ್ಕೆ ಅನೇಕ ಅಡಚಣೆಗಳಿದ್ದವು ಇನ್ನು ಸ್ವಲ್ಪದರಲ್ಲೇ ರೂಲ್ಸನ್ನು ಜಾರಿಮಾಡಿಸುತ್ತೇನೆಂತ ಹೇಳಿದರು.

ಡಿ. ಬೋರ್ಡನ್ನು ಮೆಂಬರುಗಳಿಲ್ಲದೇ ನಡಿಸುತ್ತಿರುವ ಆಕ್ಷೇಪದ ಜವಾಬ್ದಾರಿಯನ್ನು ಫೈನಾನ್ಸ್ ಮೆಂಬರು ಒಪ್ಪಿಕೊಳ್ಳದೆ ಏನೇನೋ ಕಾರಣಗಳನ್ನು ಹೇಳಿದರು. ಡಿ ಬೋರ್ಡನ್ನು ಪ್ರಜಾಪ್ರತಿನಿಧಿಗಳಿಗೆ ಬಿಟ್ಟುಕೊಡಲು ಒಪ್ಪುತ್ತಿರಾದದರೂ ಈ ವರೆಗೆ ನೇಮಿತ ಮೆಂಬರುಗಳನ್ನಾದರೂ ಇಟ್ಟುಕೊಂಡು ಕೆಲಸ ನಡಿಸಬೇಕಿತ್ತು ಎಂತ ವೆಂಕಪ್ಪಯ್ಯನವರು ಜವಾಬು ಹೇಳಿದನಂತರ ಠರಾವು ಓ... ... ... ಆಯಿತು.

13 ಪಬ್ಲಿಕ್ ಹೆಲ್ತ್ ಇಲಾಖೆ ... ... ರೂ. ಕಡಿಮೆಮಾಡಬೇಕೆಂಬ ಠರಾವಿನ ಮೂಲಕ ವಿದ್ಯಾ ಇಲಾಖೆಯ ಗಿಂಡಿ ಇನ್‌ಸ್ಟಿಟ್ಯೂಟಿಗೆ ಬದಲಿಕೆ ಕೊಟ್ಟರೆ ಅಲ್ಲಿಂದ ಔಷಧಿ ಮಾಡಿಸಿದರೂ ಅಲ್ಲದೆ ಅಲ್ಲಿನವರ ಅಭಿಪ್ರಾಯಗಳೂ ಸಹ ಎಚ್ಚತ್ತರದೆಯೆಂತ ಮ ಪಿಂಟೋರವರು ಹೇಳಿದರು

ಫೈನಾನ್ಸ್ ಮೆಂಬರು ಇದರ ವಿಷಯ ಕೆಲವು ವಚ್ಚಿಗ... ದನಂತರ ಠರಾವು ವಾಪಸು ತೆಗದುಕೊಳ್ಳಲಾಯಿತು.

14 ಕೃಷಿ ಇಲಾಖೆಗೆ ಇಟ್ಟ ಬಜೆಟ್‌ನ ... ಬಿಗಿನಿಂದ 100 ರೂ ಕಡಿಮೆ ಮಾಡಬೇಕೆಂಬ ಠರಾವಿನ ಮೂಲಕ ಕೃಷಿ ವೆಟರ್ನರಿ, ಮತ್ತು ಸಹಕಾರಿ ಇಲಾಖೆಗಳಾಕ್ರಮಗಳ ಕುರಿತು ಮೆ ಪಿ. ಮೇದಪ್ಪನವರು ಮಾ... ... ಕೃಷಿ ಇಲಾಖೆಯಲ್ಲಿ ನನೂ ಕೆಲಸ ನಡಿಯ ಎಷ್ಟಿರ ಪದಿಲ್ಲ ದನಗಳ ಬ... ... ಕದ ಚಿಕಿತ್ಸೆ ದೊರೆಯುತ್ತಿಲ್ಲ ಸಹಕಾರ ಇಲಾಖೆಯಲ್ಲಿ ನ... ವ್ಯಾಪಾರ ಕಡಿಮೆಯಾಗಿ ಮೆಂಬರುಗಳ ಸಂಖ್ಯೆ ಕಡಿಮೆ ... ಸೊಸೈಟಿಗಳನ್ನು ಒಡೆದದ್ದರಿಂದ ಕಡಕಾಗಿದ ಆರ್ಗನೈಜರುಗಳು ತಮ್ಮ ಸ್ವಂತ ಪ್ರಯೋಜನಕ್ಕಾಗಿ ಸಹಕಾರಿ ತತ್ವಗಳಿಗೆ ವಿರೋಧವಾಗಿ ಬೋಧಿಸುತ್ತಾರೆ ಬಡ್ಡಿದರ ಬಹಳ ಹೆಚ್ಚಾಗಿದೆ ಎಂಬದಾಗಿ ವಗೈರೆ ಮಾತನಾಡಿದರು ಮೆ ಕ ಪಿ ಚಿಣ್ಣಪ್ಪನವರು ಹೇಳಿದ್ದೇನೆಂದರೆ—ಯಾವ ಸೊಸೈಟಿ ಮೆಂಬರಾಗುವನೋ ದ... ... ದ ಮೆಂಬರಿಗೆ ಸಹಕಾರಿ ಚಳುವಳಿಯ ವಿಷಯ ಏನೂ ಗೊತ್ತಿರುವ ಕಾರಣವಿಲ್ಲ ದೊಡ್ಡ ಸಂಘಗಳನ್ನು ಒಡೆದು ಚಿಕ್ಕ ಸಂಘಗಳಾದ ಮೇಲೆ ಕೆಲಸ ಚನ್ನಾಗಿ ನಡೆಯುತ್ತಿದೆ, ವಸೂಲ ಚನ್ನಾಗಿ ನಡೆಯುತ್ತಿದೆ ಎಂದು ಮುಂತಾಗಿ ಮಾತನಾಡಿದರು ಮೆ ಬಿ ಶ್ರೀಪತಿರಾಯರು ಸಹಕಾರಿ ಸಂಘಗಳ ವರ್ಷದ ವರದಿಗಳಿಂದ ಸಂಖ್ಯೆಗಳನ್ನು ತೋರಿಸಿ ಸಹಕಾರಿ ಚಳುವಳಿಯ ಬೆಳವಣಿಗೆಯನ್ನು ನಿದರ್ಶಿಸಿದರು ಊರಿನಲ್ಲಿರುವ ಬಡ್ಡಿ ದರಕ್ಕಿಂತ ಬಹಳ ಕಡಿಮೆ ದರದಲ್ಲಿ ಸಂಘಗಳ ಬಡ್ಡಿ ಇರಬಾರದೆಂಬ ತತ್ವವಿದೆ ವ್ಯಾಪಾರದ ಕಂಪೆನಿಗಳು ಕಡಿಮೆ ಬಡ್ಡಿಯಲ್ಲಿ ದೊಡ್ಡ ಪ್ಲಾಂಟರುಗಳಿಗೆ ಮಾತ್ರ ಸಾಲ ಕೊಡುತ್ತಾರೆ ಚಿಕ್ಕ ಹಿಡುವಳಿದಾರರು ಸಾಹುಕಾರರುಗಳಿಗೆ ದಾಕ್ಷ್ಯದ ಕಾಲದಲ್ಲಿ ಬಹಳ ಹೆಚ್ಚು ಬಡ್ಡಿ ಕೊಡುತ್ತಾರೆ ಸಂಘಗಳ ಬಡ್ಡಿ ದರವು ಹೆಚ್ಚಲ್ಲ ಸಹಕಾರಿ ಚಳವಳಿಯು ಇನ್ನೂ ಬೆಳೆಯದಿದ್ದರೆ ದೇಶದ ಜನರು ಜವಾಬ್ದಾರರೇ ಹೊರತು ಇಲಾಖೆಯಲ್ಲವೆಂತ ವಾದಿಸಿದರು.

ಮೆ ಎ ಬಿ ಚಂಗಪ್ಪನವರು ಠರಾವನ್ನು ಅನುಮೋದಿಸಿ, ಈ ಚಿಕ್ಕ ಸೀಮೆಯಲ್ಲಿ ಸಂಘಗಳು ದೊಡ್ಡ ಪ್ರಾಂತ್ಯಕ್ಕೆ ಒಂದರಂತೆ ಇರುವದು ಒಳ್ಳೇದು. ಆರ್ಗನೈಜರು ಸಹಕಾರಿ ತತ್ವಗಳಿಗೆ ವಿರೋಧವಾಗಿ ಬೋಧಿಸುತ್ತಾರೆ, ಮೆಂಬರುಗಳು ಪಡಕೊಂಡ ಸಾಲದ ಮೂಲಕ ಹೆಚ್ಚು ತೆತ್ತ ಮೇಲೆ ದ್ದರಿಂದ ಒನ್ನುದ ಭೂಮಿಯೆಲ್ಲಾ ಪರಾಧೀನವಾಗುವ ಸಂಭವವಿದೆಯೆಂತ ಮುಂತಾಗಿ ಮಾತಾಡಿದರು.

ಮೆ ಕುಶಾಲಪ್ಪನವರು ಸಹಕಾರ ಚಳವಳದಿಂದ ... ಪ್ರಯೋಜನವಾಗಿದೆಯೆಂತಲೂ, ದಕ್ಷಿಣ ಕೊಡಗಿನ ಆರ್ಗನೈಜರು ಬಹಳ ಒಳ್ಳೇ ಕೆಲಸ ಮಾಡಿರುತ್ತಾರೆಂತಲೂ ಮುಂತಾಗಿ ಮಾತನಾಡಿದರು

ಮೆ. ವೆಂಕಪ್ಪಯ್ಯನವರು, ದೊಡ್ಡ ಪ್ರಾಂತ್ಯಕ್ಕೆ ಇರುವ ಒಂದು ಸಂಘದ ಪ್ರೆಸಿಡೆಂಟರಾಗಿ ಬಹುಕಾಲದಿಂದ ಇದ್ದುಕೊಂಡು ಬೇರೆಯವರಿಗೆ ಬಿಟ್ಟುಕೊಡದೆ ಇರುವ ಮೆ. ಚಂಗಪ್ಪನವರು ಸಹಕಾರಿ ತತ್ವಗಳನ್ನು ತಿಳಿದಿದ್ದಾರೆಂತ ಹೇಗ ಹೇಳುವದು? ಚಿಕ್ಕ ಸಂಘಗಳಾಗಬೇಕೆಂತ ಇಂಡಿಯಾ ಸರಕಾರದವರು ಒಪ್ಪಿಕೊಂಡಿರುವ ತತ್ವವಾಗಿದೆ. ಮೆಂಬರುಗಳು ಸಂಘದಿಂದ ಪಡಕೊಂಡ ಸಾಲದಿಂದ ಅವರ ಕಷ್ಟವೆಲ್ಲಾ ಪರಿಹಾರವಾಗಿರುವದಿಲ್ಲ. ಇನ್ನೂ ಲಕ್ಷಾಂತರ ರೂಪಾಯಿ ಸಾಹುಕಾರರುಗಳಿಗೆ ಕೊಡಲಿಕ್ಕಿದ್ದಾರೆ. ಸಾಹುಕಾರರ ಬಲೆಯಿಂದ ತಪ್ಪಿಸಿ ಸಹಾಯ ಮಾಡುವದೇ ಸಹಕಾರಿ ಚಳವಳದ ಕೆಲಸವಾಗಿದೆಯೆಂತ ಮುಂತಾಗಿ ಮಾತನಾಡಿದರು.

ಮೆ ಮೇದಪ್ಪನವರು ಜವಾಬಿನಲ್ಲಿ ಹೇಳಿದ್ದೇನೆಂದರೆ— ಕಾಲವಸೂಲಿಯಾಗುತ್ತಿದೆಯೆಂತ ಹೇಳುವದು ನಿಜವಲ್ಲ. ಬುಕ್ಕುಗಳಲ್ಲಿ ವಸೂಲಿ ಬಂದಂತೆ ಕಾಣಿಸುವದೇ ಹೊರತು ನಿಜವಾಗಿಯೂ ವಸೂಲಾಗುತ್ತಿಲ್ಲ. 50 ರೂ. ಇದ್ದ ಸಾಲವು ಈಗ 200 ರೂ ಆಗಿ ಬೆಳೆದ ಉದಾಹರಣೆಗಳಿವೆ. ದನಗಳ ವಿಮೆ ಸಂಘಗಳನ್ನು ಒಡೆದು ಬಿಟ್ಟರು. ಉತ್ಪತ್ತಿ ಸಂಘಗಳು ಯಾವವೂ ಇಲ್ಲ ಚಂಗಪ್ಪನವರನ್ನು ಆಕ್ಷೇಪಿಸಿದ ಮೆ. ವೆಂಕಪ್ಪಯ್ಯನವರು ತನ್ನ ಕೆಲಸವನ್ನು ಬೇರೆಯವರಿಗೆ ಬಿಟ್ಟುಕೊಡುವದಿಲ್ಲವೆಂತ ಮೊದಲಾಗಿ ಹೇಳಿ ಠರಾವನ್ನು ವಾಪಸು ತೆಗದುಕೊಂಡರು.

15 ಕೃಷಿ ಇಲಾಖೆಯ ಬಜೆಟ್ 5,030ನ್ನು ವಜಾಮಾಡಿ ವಟರನರಿ ಇಲಾಖೆಗೆ ಬಿಕ್ಕ ಮಾಡಬೇಕೆಂಬ ಠರಾವನ್ನು ಮೆ ಕ. ಪಿ ಚಿಣ್ಣಪ್ಪನವರು ತಂದರು ಇಲಾಖೆಯಲ್ಲಿ ಒಳ್ಳೇ ಕೆಲಸವಾಗುವ ವರೆಗೆ ಈ ಹಣವನ್ನು ಹಾಕಬಾರದು. ಎಗ್ರಿಕಲ್ಚರ್ ಅಸಿಸ್ಟಾಂಟು ವೀರಾಜಪೇಟೆ ಹೈಸ್ಕೂಲಿನಲ್ಲಿ ಕೃಷಿ ಪಾಠ ಹೇಳಬಹುದ. ಮೈಸೂರಲ್ಲಿ ಜಾರಿಯಲ್ಲಿ ಇರುವ ಹೊಸ ತ್ರ...ದ ದನಗಳ ರೋಗ ನಿವಾರಣೆ ಇಂಜಕ್ಷನ್ ರೀತಿಯನ್ನು ಇಲ್ಲಿಯೂ ಅನುಸರಿಸಬೇಕು, ಎಂತ ಮುಂತಾಗಿ ಮಾತನಾಡಿದರು.

ಫೈನಾನ್ಸ್ ಮೆಂಬರು ಹೇಳಿದ್ದೇನೆಂದರೆ—ಕೃಷಿ ಇಲಾಖೆಯಲ್ಲಿ ಮೇಲ್ವಿಚಾರಕ್ಕೆ ತಕ್ಕ ಅನುಭವಸರನ್ನು ದೊರಕಿಸ... ... ಹಚ್ಚಿಗೆ ಬಜೆಟ್ ಮಾಡಿಲ್ಲವೆಂತ ಮೆಂಬರುಗಳಿಗೆ ... ದಲೇ ತಿಳಿಸಿರುತ್ತೇನೆ ಎಗ್ರಿಕಲ್ಚರ್ ಅಸಿಸ್ಟಾಂಟರುಗಳನ್ನು ಕೆತ್ತಲ ಬೋರ್ಡ್ ವಿಷಯ ... ... ಹಾಕಿರುತ್ತೇನೆಂತ ಮುಂತಾಗಿ ಹೇಳಿ ... ... ವಿರೋಧಿಸಿದರು. ಠರಾವು ವಾಪಸು ತಗದುಕೊಳ್ಳಲಾಯಿತು

16 ಮ್ಯುನಿಸಿಪಲ್ ಪ್ಲಾಂಟ ... ಸಂಸಕ್ತ ... ದ 2500 ರೂ ಯಲ್ಲಿ 750 ರೂ ಕಡಿಮೆ ಮಾಡಬೇಕೆಂಬ ಠರಾವನ್ನು ಮೆ. ಶ್ರೀಪತಿರಾಯರು ತಂದರು ಈ ಹಣದಿಂದ ಕಟ್ಟಿರುವ ಎಕ್ಸ್‌ಪೆರಿಮೆಂಟು ಫಾರ್ಮುಗಳಿಂದ ಹೆಚ್ಚಿಗೆ ಪ್ರಯೋಜನವಾಗುತ್ತಿಲ್ಲವೆಂಬ ಮುಂತಾದ ಕಾರಣ ... ದರು

ಕುಶಾಲಪ್ಪನವರು ವಿರೋಧಿಸಿ ... ಸಭೆಯ ... ದೊಡನೆ ಪತ್ರವ್ಯವಹಾರ ನಡೆಸಿ ತಿಳಿಸುತ್ತೇನೆಂತ ಹೇಳಿದ ಮೇಲೆ ಠರಾವು ವಾಪಸು ತೆಗದುಕೊಳ್ಳಲಾಯಿತು

17 ವೀರರಾಜಪೇಟೆ ತಾಲ್ಲೂಕಿನಾಡು ... ... ಇಟ್ಟಿರುವ ಹಣದಿಂದ 10,000 ರೂ. ಕಳೆದು ... ರೋಡಿಗೆ ರಸ್ತೆ ... ಎಂಬ ಠರಾವನ್ನು ಮೆ. ... ತಿಮ್ಮಯ್ಯನವರು ತಂದರು ... ರಸ್ತೆಯ ... ಯನ್ನು ಸರಕಾರದವರು ಒಪ್ಪಿದರೆ ಆ ರಸ್ತೆಯನ್ನು ಮರೆಯದ್ದು ... ... ಈಗ ರಸ್ತೆ ಇದೆ ಮತ್ತು ಬೇಸಿಗೆಯಲ್ಲಿ ಗಾಡಿಗಳೂ ಕಾರುಗಳೂ ಸಹ ಹೋಗಬಹುದು ... ಮಳೆಗಾಲದಲ್ಲಿ ಗಾಡಿ ಸಹ ಹೋಗುವ ಅನುಕೂಲವಿಲ್ಲವೆಂತ ಮಾತಾಡಿದರು.

ಮೆ ಫೈನಾನ್ಸ್ ಮೆಂಬರ್, ಮೆ ಮೇದಪ್ಪನವರೂ ಮೆ ಎ ಬಿ ಚಂಗಪ್ಪನವರೂ, ಮೆ ಶ್ರೀಪತಿರಾಯರೂ ವಿರೋಧಿಸಿದರು. ಮಳೆಗಾಲಕ್ಕೆ ದಸ್ತಾಯಾಗಬೇಕೆಂತ ಇವರೆಲ್ಲಾ ಸಹ ಒಪ್ಪಿದರು ಮೆ ವೆಂಕಪ್ಪಯ್ಯನವರು ... ನಾಡು ರಸ್ತೆಗೆ ಸಂಪೂರ್ಣ ಒಪ್ಪುವವನಾದರೂ ... ನಾಡು ರಸ್ತೆ ಕೆಲಸ ನಿಲ್ಲಿಸಲು ಒಪ್ಪದ್ದರಿಂದ ಠರಾವಿಗೆ ವಿರೋಧಿಸುತ್ತೇನೆಂತ ಹೇಳಿದರು. ಇದೇ ರಸ್ತೆಯ ವಿಷಯ ಇನ್ನೊಂದು ಠರಾವು ಇರುವದರಿಂದ ಇದನ್ನು ವಾಪಸು ತೆಗೆದುಕೊಳ್ಳುತ್ತೇನೆಂತ ಮೆ. ಚಿಣ್ಣಪ್ಪನವರು ಹೇಳಿದರು.

18 ಅರಮನೆ ರಿಪೇರಿಗೆ ಇಟ್ಟ ಹಣದಿಂದ 15000 ರೂ ಮರೆನಾಡು ರಸ್ತೆಗೆ ಉಪಯೋಗಿಸಬೇಕೆಂತ ಮೆ. ಯಂ ಚಿಣ್ಣಪ್ಪನವರು, ತಂದ ಠರಾವಿನ ಮೇಲೆ ಉತ್ಸಾಹದಾಗಿ ಮೆ ಮೇದಪ್ಪನವರು ಮಾತಾಡಿದ ಮೇಲೆ ಫೈನಾನ್ಸ್ ಮೆಂಬರು ಆ ರಸ್ತೆಗೆ ಸೇತುವೆ ಸಹಿತ ಆಗಬೇಕಾದರೆ ಸುಮಾರು ಒಂದು ವರೆ ಲಕ್ಷ ರೂ ಬೇಕಾಗುತ್ತದೆಯೆಂತಲೂ, ಕೆಲವು ಪಬ್ಲಿಕ್ ಬಾಗನ್ನು ಮಾರಿ 10,000 ರೂ ಕೂಡಿಸಬೇಕೆಂತ ಬೇರೆ ಇದೆ ಈ ಹಣವನ್ನು ಮರೆನಾಡ ರಸ್ತೆಗೆ ಕೊಡಬಹುದು. ಈ ಬಾಗವನ್ನು ಆರು ವಾರದೊಳಗೆ ಮಾರಲು ಏರ್ಪಾಡು ಮಾಡಬೇಕಾಗುತ್ತದೆಯೆಂತ ಮುಂತಾಗಿ ಹೇಳಿದರು.

ಠರಾವನ್ನು ಓಟಿಗೆ ಹಾಕಲಾಗಿ ಮೆ. ಗೋಪಾಲಯ್ಯನವರೂ, ಮೆ. ಕೆ. ಪಿ ಚಿಣ್ಣಪ್ಪನವರೂ, ಮೆ ಕುಶಾಲಪ್ಪನವರೂ, ಮೆ ಚಿಣ್ಣಪ್ಪನವರೂ, ಮೆ ವೆಂಕಪ್ಪಯ್ಯನವರೂ ಮೆ. ಮೇದಪ್ಪನವರೂ, ಮೆ ಮೇದಪ್ಪನವರೂ ಠರಾವಿನ ಪರವಾಗಿ ಓಟು ಕೊಟ್ಟಿದರು ವಿರೋಧವಾಗಿ ನಾಲ್ಕು ಸರಕಾರಿ ಮೆಂಬರುಗಳೂ ಇಬ್ಬರು ಯುರೋಪಿಯನರೂ, ಮೆ ಚಂಗಪ್ಪನವರೂ ಮೆ. ರಸೂಲ್‌ಖಾನ್‌ಸಾಹೇಬರೂ, ಮೆ. ಶ್ರೀಪತಿರಾಯರೂ ಮೆ ಕೆ ಮಂದಣ್ಣನವರೂ ಓಟು ಮಾಡಿದ್ದರಿಂದ ಠರಾವು ಪಾಸಾಗಲಿಲ್ಲ.

ಡಿಸ್ಟ್ರಿಕ್ಟ್ ಬೋರ್ಡಿನ ವಿಷಯ ಮೆ. ಶ್ರೀಪತಿರಾಯರೂ, ಮೆ. ಪಿಂಟೋರವರೂ ತಂದ ಠರಾವುಗಳನ್ನು ವಾಪಸು ತೆಗೆದುಕೊಂಡರು.

ಮೂರನೆ ದಿನ

ತಾ 11—3—1926ರಲ್ಲಿ ನಡೆದ ಚರ್ಚೆಗಳ ಸಾರಾಂಶ—

"ಆಸ್ಪತ್ರೆಯಲ್ಲಿ ಡಾಕ್ಟರು ರೋಗಿಗಳಿಗೆ ಚಿಕಿತ್ಸೆ ಮಾಡಿದ್ದಕ್ಕೆ ಚಾರ್ಜು ತೆಗೆದುಕೊಳ್ಳಕೂಡದು." ಎಂಬ ಠರಾವನ್ನು ಮೆ. ಎ. ಬಿ ಚಂಗಪ್ಪನವರು ಸೂಚನೆ ಮಾಡಿ ಹೇಳಿದ್ದೇನೆಂದರೆ—ಆಸ್ಪತ್ರೆಯಲ್ಲಿ ಮಾಡುವ ಎಲ್ಲಾ ಆಪರೇಷನ್‌ಗಳಿಗೂ ಚಾರ್ಜು ಕೊಡಬೇಕೆಂತ ನೋಟೀಸುಗಳನ್ನು ಆಸ್ಪತ್ರೆಗಳಲ್ಲಿ ತೂಗ ಹಾಕಿದ್ದಾರೆ ಚಾರ್ಜು ಕೊಡಬೇಕೆಂಬ ರೂಲು ಇರುವದರಿಂದ ಡಾಕ್ಟರು ಒಂದಕ್ಕೆ ಎರಡು ಚಾರ್ಜು ಮಾಡುತ್ತಾರೆ ಬಡವರು ಜನರಿಗೆ ಇಂಥಾ ಚಾರ್ಜು ಕೊಡಲಿಕ್ಕೆ ಶಕ್ತಿ ಇಲ್ಲ ಆದ್ದರಿಂದ ಈ ರೂಲನ್ನು ಬದಲಾಯಿಸಿ ಆಸ್ಪತ್ರೆಯಲ್ಲಿ ಮಾಡುವ ಎಲ್ಲಾ ಚಿಕಿತ್ಸೆಗಳು ಮುಫತ್ತಾಗಿರಬೇಕು ಎಂತ ಹೇಳಿದರು.

ಇದಕ್ಕೆ ಜವಾಬಾಗಿ ಕಮಿಷನರು ಹೇಳಿದ್ದೇನೆಂದರೆ— ಆಸ್ಪತ್ರೆಯಲ್ಲಿ ಆಗುವ ಎಲ್ಲಾ ಆಪರೇಷನ್‌ಗಳಿಗೂ ಚಾರ್ಜು ಕೊಡಬೇಕೆಂತ ನೋಟೀಸು ಹಾಕಿರುತ್ತಾರೆಂಬದು ನಿಜವಲ್ಲ. ಆಸ್ಪತ್ರೆಯಲ್ಲಿ ಆಗುವ ಎಲ್ಲಾ ಆಪರೇಷನ್‌ಗಳಿಗೂ ಚಾರ್ಜು ಮಾಡುವದಿಲ್ಲ ಜನರಲ್ ವಾರ್ಡಿನಲ್ಲಿ ಮಲಗುವವರಿಗೆ ಎಂದೂ ಚಾರ್ಜು ಮಾಡುವದಿಲ್ಲ. ಸ್ಪೆಶಿಯಲ್ ವಾರ್ಡು ತೆಗೆದುಕೊಳ್ಳುವ ಅನುಕೂಲಸ್ಥರಿಗೆ ಮಾತ್ರ ಚಾರ್ಜು ಮಾಡುವದಾಗಿದೆ ಇಂಗ್ಲೆಂಡಿನಲ್ಲಿ ಸಾಧಾರಣವಾಗಿ ಸರಕಾರದವರು ಆಸ್ಪತ್ರೆಗಳನ್ನೇ ಇಡುವದಿಲ್ಲ. ಸ್ವಂತ ಆಸ್ಪತ್ರೆಗಳೇ ಹೆಚ್ಚು ಹೀಗಿರುವಾಗ ಅನುಕೂಲಸ್ಥರ ಚಾರ್ಜು ಕೊಡಬೇಕಾದದ್ದರಲ್ಲಿ ತಪ್ಪಿಲ್ಲ ಒಂದಕ್ಕೆ ಎರಡು ಚಾರ್ಜು ಮಾಡುತ್ತಾರೆಂಬದು ನಿಜವಲ್ಲ ಜಾರಿಯಲ್ಲಿರುವ ದರದಲ್ಲೇ ಚಾರ್ಜು ಮಾಡುತ್ತಾರೆ

ಮೆ ಮೇದಪ್ಪನವರು ಠರಾವಿಗೆ ಉತ್ಸಾಹಯಾಗಿ ಹೇಳಿದ್ದೇನೆಂದರೆ— ಈ ದೇಶವು ಇಂಗ್ಲೆಂಡು ಅಲ್ಲ ಇಲ್ಲಿ ಜನರ ಕಷ್ಟ ಅದ್ದರಿಂದ ಚಾರ್ಜು ತೆಗದುಕೊಳ್ಳಕೂಡದು.

ಪುನಃ ಮೆ. ಚಂಗಪ್ಪನವರೂ ಕಮಿಷನರೂ ಜವಾಬು ಕೊಟ್ಟನಂತರ ಠರಾವು ಓಟಿಗೆ ಹಾಕಲಾಯಿತು

ಪರವಾಗಿ—ಮೆ. ಗಳಾದ ಮೇದಪ್ಪನವರೂ, ಚಂಗಪ್ಪನವರ್, ನಂಜಪ್ಪಯ್ಯನವರೂ, ಕುಶಾಲಪ್ಪನವರು ಕ ... ಮಂದಣ್ಣನವರೂ,

ವಿರೋಧವಾಗಿ—ಮೆ. ಗಳಾದ ಕುಶಾಲಪ್ಪನವರು, ಕೆ. ಪಿ ಚಿಣ್ಣಪ್ಪನವರೂ ವೆಂಕಪ್ಪಯ್ಯನವರೂ, ಮೆ ಚಿಣ್ಣಪ್ಪನವರೂ ಪಿಂಟೋರವರೂ ರಸೂಲ್‌ಖಾನ್ ಸಾಹೇಬರು ಉದ್ಯೋಗಸ್ಥರ ಯೂರೋಪಿಯನ್ ಮೆಂಬರುಗಳೂ

ಓಟ್ ಕೊಟ್ಟದರಿಂದ ಠರಾವು ಪಾಸಾಗಲಿಲ್ಲ

ವಿದ್ಯಾ ಇಲಾಖೆಯಲ್ಲಿ ಸುಪರ್‌ವೈಜರಗಳನ್ನು ತೆಗೆದು ... ಇಬ್ಬರು ಸಬ್ ಅಸಿಸ್ಟಂಟ್ ಇನ್ಸ್‌ಪೆಕ್ಟರಗಳನ್ನು ನೇಮಿಸಬೇಕು ಎಂಬ ಠರಾವನ್ನು ಮೆ. ಎ ಬಿ ಚಂಗಪ್ಪನವರು ಸೂಚಿಸಿ ... ಸುಪರ್‌ವೈಜರುಗಳಿಗಿಂತ ಹೆಚ್ಚು ವಿದ್ಯಾವಂತರಾದ ಸಬ್ ಅಸಿಸ್ಟೆಂಟರುಗಳು ಚೆನ್ನಾಗಿ ಕೆಲಸ ನಡಿಸುವರು ವಿದ್ಯಾಭಿಜ್ಞರಲ್ಲದ ಸುಪರ್‌ವೈಜರುಗಳನ್ನು ತೆಗೆದು ಹಾಕಿದ್ದಾರೆ ಎಂತ ಹೇಳಿದರು ಮೆ ಮೇದಪ್ಪನವರು ಅನುಮೋದಿಸಿದರು.

ಇನ್ಸ್‌ಪೆಕ್ಟರಾದ ಮೆ. ವೇಟ್ಸ್‌ರವರು ಹೇಳಿದ್ದೇನೆಂದರೆ—ವಿದ್ಯಾ ಇಲಾಖೆಯಲ್ಲಿ ಸುಪರ್‌ವೈಜರಗಳು ಇಲ್ಲದೆ ಇರುವದು ಕಾರಣ. ಅದರ ಪೂರ್ತಿ ನೇಮಿಸುವ ಯೋಜನೆಯಲ್ಲಿ ಇರುವ ... ಈಗ ಒಬ್ಬ ಅಸಿಸ್ಟಂಟು ಮತ್ತು ಇಬ್ಬರು ಸುಪರ್‌ವೈಜರುಗಳು ಆರು ಮಂದಿ ಮಾಡುವ ಕೆಲಸವನ್ನು ಇಬ್ಬರೇ ಮಾಡಬೇಕೆನ್ನುತ್ತಾರೆ, ಇದು ಸಾಧ್ಯವಲ್ಲ. ಸುಪರ್‌ವೈಜರುಗಳು ಮಾಡುವ ಕೆಲಸವನ್ನು ವಿವರಿಸಿ ಈಗ ನಡಿಯುತ್ತಿರುವ ಕೆಲಸವು ತೃಪ್ತಿಕರವಾಗಿದೆ ದೇಶದಲ್ಲೆಲ್ಲಾ ಒಂದೇ ತರದ ವಿದ್ಯಾಭ್ಯಾಸ ಕ್ರಮ ನಡಿಯಬೇಕಾದರೆ ಒಬ್ಬ ಸಬ್ ಅಸಿಸ್ಟಂಟು ದೇಶಕ್ಕೆಲ್ಲಾ ಅಧಿಕಾರಸ್ಥನಿರಬೇಕು ಸನೆಯ ... ತಾಲೂಕಿನಿಂದ ಖರ್ಚು ಸಹ ಹೆಚ್ಚಾಗುತ್ತದೆಯೆಂದು ಹೇಳಿ ಠರಾವಿಗೆ ವಿರೋಧಿಸಿದರು

ಠರಾವು ಪಾಸಾಗಲಿಲ್ಲ

ಮೆ. ನಂಜಪ್ಪಯ್ಯನವರ —ಸೋಮವಾರಪೇಟೆ ಬಜೆಟಿನಲ್ಲಿ 0,000 ರೂ ಇಡಬೇಕೆಂಬ ಠರಾವನ್ನು ತಂದರು ಈಗಾಗಲೇ ಆ ಏರ್ಪಾಡು ಮಾಡಲಾಗಿದೆಯೆಂತ ಕಮಿಷನರು ತಿಳಿಸಿದ ಮೇಲೆ ಠರಾವು ವಾಪಸು ತೆಗೆದುಕೊಳ್ಳಲಾಯಿತು

ವಿರಾಜಪೇಟೆ ಫಾರೆಸ್ಟಿನಲ್ಲಿ ಮುಫತಾಗಿ ದನ ಮೇಯಲು ಬಿಡಬೇಕೆಂಬ ಠರಾವನ್ನು ಮೆ. ಯಂ ಚಿಣ್ಣಪ್ಪನವರು ಸೂಚಿಸಿ ಹೇಳಿದ್ದೇನೆಂದರೆ—ವಿರಾಜಪೇಟೆ ಪ್ರಾಂತ್ಯದ ಜನರಿಗೆ ತಮ್ಮ ದನ ಮೇಯಿಸಲು ಜಾಗವಿಲ್ಲದೆ ಕಷ್ಟಪಡುತ್ತಾರೆ.

ಚೀಫ್ ಫಾರೆಸ್ಟ್ ಆಫೀಸರು ಹೇಳಿದ್ದೇನೆಂದರೆ—ದನಗಳನ್ನು ಕಾಡಿನಲ್ಲಿ ಮೇಯಲಿಕ್ಕೆ ಬಿಟ್ಟರೆ ಜಾತಿ ಮರಗಳೆಲ್ಲಾ ಅಳಿದು ಹೋಗುತ್ತವೆ. ಮೊದಲಿನ ಆಫೀಸರು ಈ ಬಾಬಿನಲ್ಲಿ ಸರಿತು ಮಾಡಬಾರದಿತ್ತು ಫೀಸು ಇಲ್ಲದೆ ಬಿಟ್ಟರೆ ಬಹಳ ನಷ್ಟವಾಗುತ್ತದೆ ದನ ಮೇಯಿಸುವವರು ಕಾಡಿಗೆ ಬೆಂಕಿ ಸಹ ಹಾಕಿ ಬಿಡುತ್ತಾರೆ ವರ್ಷಕ್ಕೆ 0—4—0 ಹೆಚ್ಚಲ್ಲ ಆದ್ದರಿಂದ ಠರಾವಿಗೆ ವಿರೋಧಿಸುತ್ತೇನೆ ಅಂದರು.

ಮೆ ಪಿ ಮೇದಪ್ಪನವರು ಠರಾವಿಗೆ ಉತ್ಸಾಹಯಾಗಿ ಮಾತನಾಡಿದರು.

ಮ ಎ. ... ಚಂಗಪ್ಪನವರು ವಿರೋಧವಾಗಿ ಮಾತನಾಡಿದರು. ಸರಕಾರದಿಂದ ತುಂಬಾ ಖರ್ಚು ಆಗುವ ಸಹಾಯಗಳನ್ನು ಕೇಳುತ್ತೇವೆ ಹಾಗಿರುವಾಗ ಸರಕಾರದ ಉತ್ಪತ್ತಿ ಕಡಿಮೆ ಮಾಡಬಾರದು. ಬಹಳ ನಷ್ಟವಿದ್ದರೆ ವರ್ಷದಲ್ಲಿ ಆರು ತಿಂಗಳು ಮೇಯಲಿಕ್ಕೆ ಬಿಡಬಹುದಷ್ಟೆ ಮುಫತ್ತಾದರೆಯಲ್ಲೂ ಬಿಡಬೇಕು ಆದರೆ ಫೀಸ್ ತೆಗೆದುಕೊಂಡು ಬಿಡಬೇಕು ಎಂತ ವಾದಿಸಿದರು

ಮ ಬಿ. ಶ್ರೀಪತಿರಾಯರ. ಹೇಳಿದ್ದೇನೆಂದರೆ—ಮೆ ಚಂಗಪ್ಪನವರು ಆಸ್ಪತ್ರೆಗೆ ಫೀಸ್ ಕೊಡುವದನ್ನು ನಿಲ್ಲಿಸಬೇಕೆಂತ

ವಾದಿಸುವವರು ಸರ್ಕಾರಿ ಉತ್ಪತ್ತಿ ಕಡಿಮೆ ಮಾಡುವದನ್ನು ಹೇಗೆ ಹೇಳುವದು? ಎಂತ ಮುಂತಾಗಿ ಭಾಷಣ ಮಾಡಿದರು.

ಓಟು ಕೊಟ್ಟ ಮೆಂಬರುಗಳು—ಪರವಾಗಿ ಮೆ. ಗಳಾದ ಡಾ. ಕಾಳಪ್ಪನವರು, ಕೆ. ಪಿ. ಚಿಣ್ಣಪ್ಪನವರು, ಪಿ. ಗಣಪ ಯ್ಯನವರು, ಪಿ. ಟಿ. ಕುಶಾಲಪ್ಪನವರು, ಎಂ. ಚಿಣ್ಣಪ್ಪನವರು, ಸುಬ್ಬಯ್ಯನವರು, ವೆಂಕಪ್ಪಯ್ಯನವರು, ಬೆಳ್ಯಪ್ಪನವರು, ಶ್ರೀಪತಿರಾಯರು, ಪಿಂಟೋರವರು, ಮತ್ತು ಕೆ. ಮಂದಣ್ಣನವರು.

ವಿರೋಧಿಸಿದವರು—ಸರಕಾರಿ ಮೆಂಬರುಗಳು ಮತ್ತು ಎ. ಪಿ. ಚಂಗಪ್ಪನವರು.

ಇತರರು ಯಾವ ಕಡೆಯೂ ಓಟು ಕೊಡಲಿಲ್ಲ.

೩. ವೀರರಾಜಪೇಟೆ ಹೈಸ್ಕೂಲಿನಲ್ಲಿ ಆದಷ್ಟು ಬೇಗನೆ ಮ್ಯಾಟ್ರಿಕ್ಯುಲೇಷನ್ ಸೆಕ್ಷನ್ ತೆರೆಯಬೇಕೆಂಬ ಠರಾವು, ಮೆ. ಕೆ. ಪಿ. ಚಿಣ್ಣಪ್ಪನವರಿಂದ ಕೌನ್ಸಿಲ್ ಮುಂದೆ ತರಲಾಯಿತು.

ವಿದ್ಯಾ ಇಲಾಖೆ ಮೆಂಬರು ಮೆ. ಯೇಟ್ಸ್‌ರವರು ಠರಾವಿಗೆ ವಿರೋಧವಿಲ್ಲವೆಂತ ಹೇಳಿದರು. ಬರ್ಚ್ ಹಣವಿಲ್ಲದಿರುವದೇ ಅಡ್ಡಿಯಷ್ಟೆ. ಅನುಕೂಲವಾದಾಗ ಇದಬೇಕೆಂತ ಠರಾವು ಇರುವದರಿಂದ ಆಕ್ಷೇಪಣೆ ಇಲ್ಲ. ಹೈಸ್ಕೂಲಿನಲ್ಲಿ ಜಾಗವಿಲ್ಲ. ಹೈಸ್ಕೂಲನ್ನು ಮಿಡ್ಲ್ ಸ್ಕೂಲಿಗೆ ವರ್ಗಾಯಿಸಬೇಕಾದರೆ ಪ್ರತ್ಯೇಕ ಬಿಲ್ಡಿಂಗ್ ಮಾಡಿ ಕಟ್ಟಬೇಕು ಎಂತ ಮುಂತಾಗಿ ಮಾತಾಡಿದರು. ಠರಾವು ಪಾಸಾಯಿತು.

ನಾಲ್ಕನೇ ದಿನ.

ತಾ 12—3—36ರಲ್ಲಿ ನಡೆದ ಚರ್ಚೆ.

ನೌಕರರ ಮುಂಗಡದ ಬಿಲ್ಲಿನ ಚರ್ಚೆ ಸೆಲೆಕ್ಟ್ ಕಮಿಟಿಯಿಂದ ಬಂದ ಬಳಿಕ ಕೌನ್ಸಿಲ್ಲೇ ನಡೆದ ಸಿಲೆಕ್ಟ್ ಕಮಿಟಿಯವರು ಮಾಡಿದ ತಿದ್ದುಪಾಟುಗಳು ಮಂಜೂರಾದುವು. ಆ ಬದಲಾವಣೆಗಳ ಸೂಚನೆ ಕೊಡಲಾಯಿತು. ಪ್ರಾಯೋಜಿತ ಮೆಂಬರುಗಳು ಕಳುಹಿಸಿದ್ದ ಬದಲಾವಣೆಗಳಲ್ಲಿ ಯಾವದೂ ಮಂಜೂರಾಗಲಿಲ್ಲ. ಪ್ರಮುಖವಾದ ಬದಲಾವಣೆಗಳ ಮೇಲೆ ನಡೆದ ಚರ್ಚೆಯನ್ನು ಸಂಕ್ಷೇಪವಾಗಿ ಇಲ್ಲಿ ಕೊಡುತ್ತೇವೆ.

ಈ ಬಿಲ್ಲಿನ ಮೇಲೆ ಒಪ್ಪಂದ ಬರೆದು ಒಡಂಬಡುವವರು ಕೊಡಗು ದೇಶದಲ್ಲಿ ಭೂಸೊತ್ತು ಉಳ್ಳವರಾಗಿರಬೇಕೆಂತ ಬಿಲ್ಲಿನಲ್ಲಿ ತಿದ್ದುಪಡಿಮಾಡಬೇಕೆಂಬ ಸೂಚನೆಯು ಮೆ. ಮೇದಪ್ಪನವರಿಂದ ತರಲ್ಪಟ್ಟಿತು. ಅವರು ಹೇಳಿದ್ದೇನೆಂದರೆ, ಕೊಡಗಿನ ಕೃಷಿ ಕೆಲಸಕ್ಕೆ ಹೊರಗಿನಿಂದ ಆಳುಗಳು ಬರಬೇಕಾಗಿರುವದರಿಂದ ಈ ಬಿಲ್ಲಿನ ಅವಶ್ಯಕತೆಯೆಂತ ಕಮೀಶನರು ಹೇಳಿದ್ದಾರೆ. ಹಾಗಾದರೆ ದೇಶದವರಿಗೆ ಅದರಲ್ಲೂ ಸ್ಥಿರಸೊತ್ತು ಇರುವವರಿಗೆ ಈ ಆಕ್ಟನ್ನು ಯಾಕೆ ಉಪಯೋಗಿಸಬೇಕು. ಆಂಥವರಿಂದ ಸಿವಿಲ್ ಕೋರ್ಟು ಮೂಲಕ ಅಡ್ವಾನ್ಸು ವಸೂಲಾಗುವದಿಲ್ಲವೆಂತ ಹೇಳಲಿಕ್ಕಾಗುವದಿಲ್ಲ. ಯಾಕೆಂದರೆ, ಭೂಮಿ ಇರುವವರನ್ನು ಮಾತ್ರ ವಿನಾಯಿಸಲು ನಾನು ಕೇಳುವದಾಗಿದೆ. ಜಮ್ಮ ಸೊತ್ತು ಇರುವವರು ದೇಶಬಿಟ್ಟು ಹೋಗುವದೇ ಇಲ್ಲ. ಸಾಗಿಸವರು ಬಿಟ್ಟುಹೋಗುವ ಸಂಭವವಿದೆಯಾದರೂ ಅವರೂ ಬಿಟ್ಟುಹೋಗುವದಿಲ್ಲ. ಜಮೀನ್‌ದಾರರ ಸಂಘದಲ್ಲಿ ಈ ಬಿಲ್ಲೇ ಬೇಕೆಂತ ನಿರ್ಮಾಣವಾಗಿರುವಾಗ ಈ ಬದಲಾವಣೆಗಾದರೂ ನನ್ನ ಎಡಬಲಗಡೆ ಕೂತಿರುವ ಮತ್ತು ಸಂಘದ ಹೆಸರು ಎತ್ತಿ ಮಾತನಾಡುವವರು ಒಪ್ಪಿಯಾರೆಂತ ನಂಬುತ್ತೇನೆ. ಭೂಮಿ ಇರುವವರು ತಾವು ಬರಕೊಡುವ ಕರಾರಿನಿಂದ ಬರುವ ಕೇಡನ್ನು ತಿಳಿದೇ ಕರಾರು ಬರಕೊಟ್ಟರೆ ಕೇಡಕೇನು ಎಂತ ಕೇಳಬಹುದು. ... ... ಹಾಗೆಯೇ ಸಾಲಕ್ಕಾಗಿ ಅಂಥ ಕರಾರುಗಳನ್ನು ಬರಕೊಡುತ್ತಾರೆ.

ಕಮೀಶನರು ಈ ಸಂಗತಿಯಲ್ಲಿ ಉದ್ಯೋಗಸ್ಥರಲ್ಲದ ಮೆಂಬರುಗಳ ಅಭಿಪ್ರಾಯದ ಮೇಲೆ ನಡೆಯಲು ಆಕ್ಷೇಪಣೆ ಇಲ್ಲವೆಂತ ಹೇಳಿದರು.

ಮೆ. ಎ. ಪಿ. ಚಂಗಪ್ಪನವರು ಈ ಬದಲಾವಣೆಗೆ ವಿರೋಧಿಸಿದರು. ಸ್ವಲ್ಪ ಸ್ವಲ್ಪ ಭೂಮಿ ಇರುವವರು ತೋಟಗಳಿಗೆ ಹೋಗಿ ಸ್ವಲ್ಪವಾದರೂ ಸಂಪಾದನೆಮಾಡುತ್ತಾರೆ ಇದಕ್ಕೆ ಅಡ್ಡಿ ಇಡಬಾರದು. ಅನೇಕ ಕೂಲಿಜನರಿಗೆ ಸ್ವಲ್ಪವಾದರೂ ಭೂಸೊತ್ತು ಇರುತ್ತದೆ. ಅವರಿಗೆಲ್ಲಾ ಅಡಚಣೆ ಮಾಡಬಾರದೆಂತ ವಾದಿಸಿದರು.

ಮೆ. ಶ್ರೀಪತಿರಾಯರೂ ಸಹ ಇದೇರೀತಿ ವಾದಿಸಿದರು. ಹಬ್ಬ ಹುಣ್ಣಿಮೆಗೆ ಬೇಕಾದ ಹೆಚ್ಚಿನ ಹಣವನ್ನು ಕೆಲವು ಬಡ ಭೂಮಾಲೀಕರು ಕೂಲಿಕೆಲಸದಿಂದ ಸಂಪಾದಿಸುತ್ತಾರೆ. ಅವರನ್ನು ಈ ಆಕ್ಟಿನಿಂದ ವಿನಾಯಿಸಿದರೆ ಮೋಸಮಾಡುವದಕ್ಕೆ ಅವಕಾಶವಾಗುತ್ತದೆ ಎಂತ ಹೇಳಿದರು.

ಮೆ. ಮೇದಪ್ಪನವರು ಜವಾಬುಕೊಟ್ಟನಂತರ ಓಟು ತೆಗೆಯಲಾಗಿ— ಮೆ. ಕೋಟೆರ ಚಿಣ್ಣಪ್ಪನವರೂ, ಬೆಳ್ಯಪ್ಪನವರೂ, ಮಂದಣ್ಣನವರೂ, ಮೇದಪ್ಪನವರೂ, ಮೆ. ಎಂ. ಚಿಣ್ಣಪ್ಪನವರೂ, ಪರವಾಗಿಯೂ,

ಮೆ. ಕಾಳಪ್ಪನವರೂ, ಗಣಪಯ್ಯನವರೂ, ಸುಬ್ಬಯ್ಯನವರೂ, ಇಬ್ಬರು ಯೂರೋಪಿಯನರೂ, ಕರ್ನಲ್ ಖಾನ್ ಸಾಹೇಬರೂ, ಶ್ರೀಪತಿರಾಯರೂ, ಪಿಂಟೋರವರೂ ವಿರೋಧವಾಗಿಯೂ ಓಟುಕೊಟ್ಟರು.

ಬದಲಾವಣೆ ಮಂಜೂರಾಗಲಿಲ್ಲ.

(2) ಮೆ. ಕೆ. ಪಿ. ಚಿಣ್ಣಪ್ಪನವರು ಆಳಿಗೆ ಕೊಡಬಹುದಾದ ಅಡ್ವಾನ್ಸನ್ನು 300ರಿಂದ 50ಕ್ಕೆ ಇಳಿಸಬೇಕೆಂತ ವಾದಿಸಿದರು. ಒಬ್ಬ ಆಳು ಒಂದು ವರ್ಷದಲ್ಲಿ 50ರೂ.ಗಿಂತ ಹೆಚ್ಚು ಅಡ್ವಾನ್ಸು ತೀರಿಸಲಾರ. 300ರೂ.ಗೆ ೬ ವರ್ಷ ಕೆಲಸಮಾಡಬೇಕಾಗುತ್ತದೆ. ಆ ಮಧ್ಯೆ ಮತ್ತೆ ಅಡ್ವಾನ್ಸು ಕೊಡುತ್ತಾ ಬರಬೇಕಾಗುತ್ತೆ. ಜೀವಮಾನ ಕಾಲವೆಲ್ಲ ಒಬ್ಬ ನನ್ನ ಗುಲಾಮನಾಗಬೇಕಾಗುತ್ತದೆ. ಮೇಸ್ತ್ರಿಗಳಿಗೆ ಈ ಆಕ್ಟು ಜಾರಿಯಾಗುವದಿಲ್ಲ. 300 ರೂ. ಕೊಡಬಹುದೆಂತ ಇದ್ದರೆ ಆಳುಗಳು ಅಷ್ಟುಪೂರ್ತಿ ಹಣ ಬೇಕೆಂತ ಕೇಳತೊಡಗುತ್ತಾರೆ. ಮುಂದಿನ ಕಷ್ಟವನ್ನು ಯೋಚಿಸುವದಿಲ್ಲ ಎಂತ ಹೇಳಿದರು.

ಮೆ. ನಾಣಯ್ಯನವರು ಹೇಳಿದ್ದೇನೆಂದರೆ—ಆ ವರ್ಷದಲ್ಲಿ ಪೂರ್ತಿ ಅಡ್ವಾನ್ಸ್ ಇಲ್ಲವೆಂತ ಮಾಡಬೇಕಾದರೆ ಈಗಲೇ ಅಡ್ವಾನ್ಸನ್ನು ಕಡಿಮೆಮಾಡಬೇಕಾದದ್ದು ಅವಶ್ಯ. ಆದರೆ ನೆರೆ ಪ್ರಾಂತ್ಯಗಳಾದ ಮೈಸೂರು, ಸೀಲೋನು ಮುಂತಾದ ಕಡೆಗಳಲ್ಲಿ ಅಡ್ವಾನ್ಸ್ ಮೊಬಲಗನ್ನು ಇಳಿಸದ್ದರಿಂದ ಆಳುಗಳು ಅಲ್ಲಿಗೆ ಹೆಚ್ಚಿನ ಅಡ್ವಾನ್ಸ್ ಆಶೆಯಿಂದ ಹೋಗಿಬಿಟ್ಟಾರು. ಕೆಲವರು ಕುಟುಂಬ ಸಮೇತ ತೋಟಗಳಲ್ಲಿ ಇರುತ್ತಾರೆ. ಅವರಿಗೆ 50 ರೂ. ಸಾಕಾಗುವದಿಲ್ಲ. ಒಂದು ವರ್ಷದಲ್ಲಿ ತೀರಿಸುವದೂ ಕಷ್ಟವಾಗುವದಿಲ್ಲ. ಈಗಾಗಲೇ ತುಂಬಾ ಮಾಲೀಕರು 300 ರೂ. ವರೆಗೆ ಕೊಟ್ಟುಬಿಟ್ಟಿರುತ್ತಾರೆ. 100 ರೂ.ಗೆ ಇಳಿಸಲಿಕ್ಕಾಗಿದ್ದರೆ ನಾನು ಒಪ್ಪುತ್ತಿದ್ದೆ ಎಂತ ಹೇಳಿದರು.

ಮೆ. ಮೇದಪ್ಪನವರು ಹೇಳಿದ್ದೇನೆಂದರೆ—ಅಡ್ವಾನ್ಸ್ ಹಣವನ್ನು 300ರಿಂದ 500ಕ್ಕೆ ಹೆಚ್ಚಿಸಬೇಕು. ಆಳುಗಳಿಗೆ ಬಿಟ್ಟಿ ಇಲ್ಲದೆ ಶಿಕ್ಷೆಯ ಹಣವನ್ನು ಕಡಿಮೆಮಾಡುವದು ಯಾಕೆ? ... ... ಯಜಮಾನರು ಸಿವಿಲ್ ಕೋರ್ಟಿಗೆ ಹೋಗಿ ವಸೂಲುಮಾಡಲಿ ಎಂತ ವಾದಿಸಿದರು.

ಕಮೀಶನರು ಹೇಳಿದ್ದೇನೆಂದರೆ—ಅಡ್ವಾನ್ಸ್ 100 ರೂ.ಗೆ ... ... ಇದ್ದರೆ ನಾನು ಒಪ್ಪುತ್ತಿದ್ದೆ. ಮೇಸ್ತ್ರಿಗಳ ಮೇಲೆ ಹೊಸ ಆಕ್ಟು ಜಾರಿಯಾಗಲೇ ಕೂಡದು. ಅಡ್ವಾನ್ಸ್ 300ರೂ. ವರೆಗೆ ಕೊಡಬಹುದೆಂತ ಇಟ್ಟದ್ದು ಮೇಸ್ತ್ರಿಗಳ ಮೇಲೆ ಸಹ ಆಕ್ಟನ್ನು ಜಾರಿಮಾಡಲು ಮಾಡಿದ ಉಪಾಯವೆಂತ ಯಾರೂ ಊಹಿಸಕೂಡದು. 100ರೂ.ಗೆ ಇಳಿಸಬಹುದೆಂತ ಹೆಚ್ಚು ಮೆಂಬರುಗಳಿಗೆ ಇಷ್ಟ ಇದ್ದರೆ ಠರಾವನ್ನು ತಿದ್ದಬಹುದಿತ್ತು ಎಂತ ಹೇಳಿದರು.

ಮೆ. ಕೆ. ಪಿ. ಚಿಣ್ಣಪ್ಪನವರು 100 ರೂ.ಗೆ ಬದಲಾಯಿಸಲು ಅಧ್ಯಕ್ಷರು ಒಪ್ಪಿದರೆ ಆಗಬಹುದೆಂತ ಹೇಳಿದರು.

ಹೆಚ್ಚು ಜನರ ಅಭಿಪ್ರಾಯವು 100ರೂ.ಗೆ ಇಳಿಸಲಿಕ್ಕೆ ವಿರೋಧವಿದೆಯೆಂಬ ಕಾರಣದಿಂದ ಬದಲಾಯಿಸಲಿಕ್ಕೆ ಅಧ್ಯಕ್ಷರು ಒಪ್ಪಲಿಲ್ಲ. ಆದ್ದರಿಂದ ಸೂಚನೆಯನ್ನು ಬದಲಾಯಿಸಲು ತಾನು ಒಪ್ಪುವದಿಲ್ಲವಾಗಿ ಅಧ್ಯಕ್ಷರು ಹೇಳಿದ ಮೇಲೆ ಮೊದಲಿನ ಸೂಚನೆಯನ್ನೇ ಓಟಿಗೆ ಹಾಕಲಾಗಿ ಮೆ. ಚಿಣ್ಣಪ್ಪನವರೂ, ಬೆಳ್ಯಪ್ಪನವರೂ, ಮಾತ್ರ ಪರವಾಗಿ ಓಟು ಮಾಡಿದರು. ಮೆ. ವೆಂಕಪ್ಪಯ್ಯನವರು ಯಾವ ಕಡೆಗೂ ಓಟು ಕೊಡಲಿಲ್ಲ. ಇತರರೆಲ್ಲರೂ ವಿರೋಧವಾಗಿ ಓಟುಕೊಟ್ಟರು.

(3) ಬಿಲ್ಲಿನ 9ನೇ ಸೆಕ್ಷನ್‌ನಲ್ಲಿ ವಸತಿ, ಆರೋಗ್ಯ ಏರ್ಪಾಡುಗಳಂತೆಯೇ ವಿದ್ಯಾಭ್ಯಾಸ ಕೊಡುವ ಏರ್ಪಾಡು ಮಾಡಬೇಕೆಂತ ಮೆ. ಕೆ. ಪಿ. ಚಿಣ್ಣಪ್ಪನವರು ವಾದಿಸಿದರು. ಪ್ಲಾಂಟರುಗಳ ಮಾಲೀಕರಿಗೂ ತುಂಬಾ ಪ್ರಯೋಜನ ಪಡೆಯುತ್ತಿರುವ ಕೂಲಿಯವರಿಗೂ ಅವರ ಮಕ್ಕಳಿಗೂ ವಿದ್ಯೆಕೊಡುವ ಏರ್ಪಾಡುಮಾಡಬೇಕು. ಆಳುಗಳಿಗೆ ರಾತ್ರಿ ಪಾಠ ಹೇಳಬಹುದು. ಇದಕ್ಕಾಗಿ ಖರ್ಚೇನೂ ಹೆಚ್ಚಾಗುವದಿಲ್ಲ. ವಿದ್ಯೆಕೊಡುವ ಬದಲಿಗೆ ಕೆಲವು ತೋಟಗಾರರು ಸೇಂದಿ, ಅಂಗಡಿಗಳನ್ನು ಹತ್ತಿರ ಇಡಿಸಿಕೊಳ್ಳುತ್ತಾರೆ. ಆಳುಗಳ ಪ್ರತಿನಿಧಿಗಳು ಈ ಸಭೆಯಲ್ಲಿ ಇದ್ದಿದ್ದರೆ ಈ ವಾದವು ಖಂಡಿತವಾಗಿಯೂ ಮಂಜೂರಾಗುತಿತ್ತು. ಹಿಂದುಳಿದ ವರ್ಗದವರ ಪರವಾಗಿ ತೋಟಗಾರರನ್ನು ನೇಮಿಸಿದ್ದು ಬಹಳ ವ್ಯಸನಕರ.

ಮೆ. ಚಿಣ್ಣಪ್ಪನವರು ವಿರೋಧಿಸಿದರು. ಒಂದು ತೋಟದಲ್ಲಿ ವಿಧವಿಧದ ಭಾಷೆಯ ಆಳುಗಳು ಇರುತ್ತಾರೆ. ಇವರಿಗೆಲ್ಲಾ ಪಾಠಹೇಳಲು ಹೇಗೆ ಏರ್ಪಾಡು ಮಾಡುವದು. ಅನೇಕ ಆಳುಗಳು ಆರುತಿಂಗಳುಮಾತ್ರ ಇಲ್ಲಿ ಇರುತ್ತಾರೆ. ಉಳಿದ ಆರು ತಿಂಗಳಲ್ಲಿ ಅವರ ಊರಿಗೆ ಹೋಗುತ್ತಾರೆ. ಆದ್ದರಿಂದ ವಿದ್ಯಾಭ್ಯಾಸಕೊಡುವ ಏರ್ಪಾಡು ಮಾಡಲು ಸಾಧ್ಯವಿಲ್ಲವೆಂತ ಹೇಳಿದರು;

ಮೆ. ಶ್ರೀಪತಿರಾಯರೂ, ಕುಶಾಲಪ್ಪನವರೂ ವಿರೋಧಿಸಿದರು. ಅಭಿಪ್ರಾಯವು ಒಳ್ಳೇದಾದರೂ ನಡಿಸಲು ಸಾಧ್ಯವಿಲ್ಲವಂತ ಹೇಳಿದರು.

ಮೆ. ಮೇದಪ್ಪನವರು ಸೂಚನೆಗೆ ಅನುಕೂಲವಾಗಿ ಮಾತನಾಡಿದರು.

ಮೆ. ಚಂಗಪ್ಪನವರು ವಿರೋಧಿಸಿದರು. ಈ ದೇಶದಲ್ಲಿ ಅಸ್ಪೃಶ್ಯತೆ ಇಲ್ಲ. ಪಂಚಮರ ಮಕ್ಕಳು ಸಹ ಬೋರ್ಡ್ ಶಾಲೆಗಳಿಗೆ ಹೋಗಬಹುದು. ತೋಟದವರನ್ನು ಬಲಾತ್ಕರಿಸುವದು ಯುಕ್ತವಲ್ಲವೆಂತ ಹೇಳಿದರು.

ಕಮೀಶನರು ಹೇಳಿದ್ದೇನೆಂದರೆ—ವಿದ್ಯೆ ಕೊಡಬೇಕೋ ಬೇಡವೋ ಎಂಬುದು ಚರ್ಚೆಯಲ್ಲ. ಆಕ್ಟನ್ನು ಉಪಯೋಗಿಸುವವರು ವಿದ್ಯೆಕೊಡಲು ಏರ್ಪಾಡುಮಾಡಬೇಕೋ ಎಂಬದೇ ಚರ್ಚೆ. ಮಾಲೀಕರು ಡಿಸ್ಟ್ರಿಕ್ಟ್ ಬೋರ್ಡ್ ಸೆಸ್ ತುಂಬಾ ಕೊಡುತ್ತಾರೆ. ಆದ್ದರಿಂದ ವಿದ್ಯಾಭ್ಯಾಸದ ಏರ್ಪಾಡಿಗೆ ಪದವಿ ಕೊಟ್ಟಂತೆಯೇ ಆಯಿತು.

ಪರವಾಗಿ ಮೆ. ಕೆ. ಪಿ. ಚಿಣ್ಣಪ್ಪನವರೂ ಮೆ. ಮೇದಪ್ಪನವರೂ, ಮೆ. ಬೆಳ್ಯಪ್ಪನವರೂ ಓಟುಮಾಡಿದರು.

ಮೆ. ಕಾಳಪ್ಪನವರೂ, ಮೆ. ಕುಶಾಲಪ್ಪನವರೂ, ಮೆ. ಚಿಣ್ಣಪ್ಪನವರೂ, ಮೆ. ಸುಬ್ಬಯ್ಯನವರೂ, ಮೆ. ಶ್ರೀಪತಿರಾಯರೂ, ಮೆ. ಚಂಗಪ್ಪನವರೂ, ಮೆ. ಪಿಂಟೋರವರೂ ವಿರೋಧವಾಗಿ ಓಟುಕೊಟ್ಟರು.

4 ಆರೋಗ್ಯ, ವಸತಿ ಮುಂತಾದ ಅನುಕೂಲತೆಗಳನ್ನು ಮಾಡಿದೆಯೋ ಎಂತ ನೋಡಲು ಕಮೀಶನರೂ, ಡಿಸ್ಟ್ರಿಕ್ಟ್ ಮೆಜಿಸ್ಟ್ರೇಟರೂ ಸಿವಿಲ್‌ಸರ್ಜನರೂ ಅಲ್ಲದೆ ಅದಕ್ಕಾಗಿಯೇ ನೇಮಿಸಲ್ಪಡುವ ಇಬ್ಬರು ಲೇಬರ್ ಇನ್‌ಸ್ಪೆಕ್ಟರೂ ಸಹ ಇರಬೇಕೆಂತ ಮೆ. ಕೆ. ಪಿ. ಚಿಣ್ಣಪ್ಪನವರು ಸೂಚಿಸುವಾಗ ಹೇಳಿದ್ದೇ

Apply for our shooting Season's Clearance Sale Catalogue of Brand New Goods.

10 to 25 percent Reductions in Prices.

No License Required !!

No Licenser Required



Webley and Scott Air Pistol, cal ·177 or 22 bore Powerful and Accurate complete with a sample box of slugs, two spare washers, a brush forcleaning, and a bookletof instructions Rs. 30/— Free delivery.

Pwerful German Diana Air gun. Handsome and Accurate, takes B. S. A. Patern No. 1 Slugs and Darts. expressly recommendable for Target Practice Rs. 15/ Free delivery.

Brilliant Search Light Lamp for Night Sports Rs 30/— Free delivery.

No Libense required to purchase or to possess the above items.

Relia le D. B B. L. 12 bore guns	Rs. 60/— and upwards.	
Do S. B B. L. 12 do	do. 40/-	do
D. B. M. L. Guns	„ 45 -	do.
S. B. M. L. do.	„ 30 -	do.
S. B. B. L. Rifles	„ 25/—	do
B. L Revolvers and Pistols	„ 30/—	do.

Arms, Ammunition and shooting requisitesof almost every kind and quality offered at exceptionally favourable rates A Number of good quality second hand weapons also offered for sale in theNew Catalogue.

GOOLAMHUSIAIN ALLIBHOY & SONS

Lragest Importers of Firearms and Ammunition,

Cheapest priced firm in India,

210 Abdul Rehman Street, BOMBAY.

ಸೆಂದರೆ—ಮೇಲ್ಕಂಡ ದೊಡ್ಡ ಆಫೀಸರುಗಳಿಗೆ ಕೂಲಿಕಾರರ ಚನ್ನಕೂಲನೋಡಲು ಸಮಯವೇ ಇಲ್ಲ. ಅದ್ದರಿಂದ ಅದಕ್ಕೆ ಪ್ರತ್ಯೇಕ ಆಫೀಸರುಗಳು ಇರಬೇಕು. ಇವರ ಸಂಬಳವನ್ನು ಮಾಲೀಕರೂ ಸರಕಾರವೂ ಹಂಚಿಕೊಳ್ಳಬೇಕು.

ಮೆ. ಯಂ ಚಿಣ್ಣಪ್ಪನವರೂ ಅಪ್ಪಾರಂಡ ಚಂಗಪ್ಪನವರೂ ಇದಕ್ಕೆ ವಿರೋಧಿಸಿ ಮಾತನಾಡಿದರು.

ಕಮಿಶನರು ಹೇಳಿದ್ದೇನೆಂದರೆ— ಸೂಚನೆಯು ತತ್ವ ಒಳ್ಳೇದೇ. ಈಗ ಈ ಹೆಚ್ಚಿನ ಆಫೀಸರುಗಳು ಅವಶ್ಯವಿಲ್ಲ. ಅವಶ್ಯಕಾದರೆ ನೇಮಿಸಿಕೊಳ್ಳಬಹುದು.

ಸೂಚನೆಯು ಮಂಜೂರಾಗಲಿಲ್ಲ.

5. 19ನೇ ಸೆಕ್ಶನ್‌ನಲ್ಲಿ ಆಳುಗಳನ್ನು ಒಂದು ಕಡೆಯಿಂದ ಪಿತೂರಾಟದಿಂದ ಹಾರಿಸುವದು ತಕ್ಸೀರಾಗಿರುವೇ ಇರಲಿ, ಅವರನ್ನು ಇಟ್ಟುಕೊಂಡರೆ ತಪ್ಪೆಂತ ಇರಬಾರದು. ಈ ತಕ್ಸೀರ್ ಮಾಡಿದವರಿಗೆ ಸಜಾಶಿಕ್ಷೆ ಇರಕೂಡದು, ಎಂಬ ಬದಲಾವಣೆಗಳನ್ನು ಮಾಡಬೇಕೆಂತ ಮೆ. ಮೇದಪ್ಪನವರ ಸೂಚಿಸಿ ಈ ಸೆಕ್ಷನಿನಿಂದ ಆಳುಗಳ ಸ್ವತಂತ್ರಕ್ಕೆ ಭಂ[illegible]ತ ವಾದಿಸಿದರು.

ಮೆ. ನ್ಯೂಕಂಡರವರೂ ಸತ್ಯ[illegible] ರೋಧಿಸಿದರು.

ಕಮಿಶನರು ಹೇಳಿದ್ದೇನಂದರೆ— ಸಜಾ ತೆಗೆದುಹಾಕುವದು ಒಳ್ಳೇದು. ಆಳನ್ನು ಹಾರಿಸಿದ್ದೆಂಬ ತಕ್ಸೀರು ರ[illegible] ತಂಗುವದು ಕಷ್ಟ. ಮದ್ರಾಸ್ ಆಕ್ಟಿನಲ್ಲಿ ಈ ಸೆಕ್ಷನ್ ಇದೆ. 1924—25ರಲ್ಲಿ ಈ ಸೆಕ್ಷನ್ ಮೇರೆ ಒಂದೇ ಕೇಸ್ ನಡೆದದ್ದಾಗಿದೆ.

ಮೆ. ಚಂಗಪ್ಪನವರು ಮತ್ತು ಮೆ. ಪಿಂಟೋರವರೂ ಸಹ ವಿರೋಧಿಸಿದರು.

ಓಟಿಗೆ ಹಾಕಲಾಗಿ ಮೆ. ಮೇದಪ್ಪನವರೂ, ಚಂಗಪ್ಪನವರೂ, ರಸೂಲ್‌ಖಾನ ಸಾಹೇಬರೂ, ಶ್ರೀಪತಿರಾಯರೂ, ಮಂದಣ್ಣನವರೂ ಪರವಾಗಿ ಓಟು ಕೊಟ್ಟರು.

ಮೆ. ಕಾಳಪ್ಪನವರೂ, ಗಣಪಯ್ಯನವರೂ, ಸುಬ್ಬಯ್ಯನವರೂ ಯಂ. ಚಿಣ್ಣಪ್ಪನವರೂ, ಸುಬ್ಬಯ್ಯನವರೂ, ಪಿಂಟೋರವರೂ, ನ್ಯೂಕಂಡರವರೂ, ಸಿಕಲ್ಲಿರವರೂ ವಿರೋಧವಾಗಿ ಓಟುಕೊಟ್ಟರು.

ಬದಲಾವಣೆಯು ಪಾಸಾಗಲಿಲ್ಲ.

6. ಮೆ. ಕೆ. ಪಿ. ಚಿಣ್ಣಪ್ಪನವರು 19ನೇ ಸೆಕ್ಷನನ್ನು ತೆಗೆದುಹಾಕಬೇಕೆಂಬ ಠರಾವನ್ನು ಸೂಚಿಸಿದರು. ಚರ್ಚೆನಡೆದು ಈ ಸೂಚನೆಯೂ ಮಂಜೂರಾಗಲಿಲ್ಲ.

ಅನಂತರ ಬಿಲ್ಲು ಬಿಲ್ಲನ್ನು ಕೌನ್ಸಿಲಿನ ಓಟಿಗೆ ಹಾಕಿದಾಗ ಕಳೆದವಾರ ಬರೆದಂತೆ ಬಹುಮತದಿಂದ ಮಂಜೂರಾಯಿತು.

ಚೀಫ್ ಕಮಿಶನರು ಅವ್ಸೈರ್ ಭಾಷಣದಲ್ಲಿ, ಸಭೆಗೆ ವಂದಿಸುತ್ತೇನೆ, ವಾದಗಳೆಲ್ಲಾ ಬಹಳ ಸಾವಧಾನದಿಂದ ನಡೆಯಿತು, ವಿಷಯ ಬಿಟ್ಟು ಯಾರೂ ಮಾತಾಡಿದಿಲ್ಲ. ಈ ಕೌನ್ಸಿಲ್ ಬೇರೆ ಕೌನ್ಸಿಲ್‌ಗಳಿಂದ ಕಲಿಯಬೇಕಾದದ್ದು ಏನೂ ಇಲ್ಲವೆಂತ ಹೇಳಿ ಕೌನ್ಸಿಲ್ ಮೀಟಿಂಗನ್ನು ಬರಖಾಸ್ತು ಮಾಡಿದರು.

ಸ್ವಯಂಸೇವಕರು ಬೇಕಾಗಿದ್ದಾರೆ

ಇದೇ ಏಪ್ರಿಲ್ ತಾ. 17, 18, 19ರಲ್ಲು ನಾಪೋಕ್ಲಿನಲ್ಲಿ ಆಗುವ ಜಮೀನ್ದಾರ ಸಂಘದ ಸ್ವಾಗತದ ಕೆಲಸಕ್ಕೆ ಸ್ವಯಂ ಸೇವಕರು (ವಾಲಂಟೀಯರುಗಳು) ಬೇಕಾಗಿದ್ದಾರೆ ಕೊಡಗು ದೇಶದ ಎಲ್ಲಾ ಕಡೆಯಿಂದಲೂ ಸ್ವಯಂಸೇವಕರ ಸೇವೆಯನ್ನು ನಿರೀಕ್ಷಿಸುತ್ತಲೇ ಇದ್ದೇವೆ. ನಾಲ್ಕುನಾಡು, ಕಡಿಯತ್ತುನಾಡು, ಕುಯ್ಯಂಗೇರಿನಾಡು, ಬೇಂಗುನಾಡು, ತಾವುನಾಡು ಮತ್ತು ಸಂಪಾಜೆನಾಡಿನಿಂದ ಕಡಿಮೆ ಪಕ್ಷ ಒಂದು ನೂರು ಜನರೂ, ದೇಶದ ಇತರ ಭಾಗಗಳಿಂದ 50 ಜನರೂ ಒಟ್ಟು 150 ಜನರು ಬೇಕಾಗಿದ್ದಾರೆ. ದಯವಿಟ್ಟು ಸ್ವಯಂಸೇವಕರಾಗಿ ಕೆಲಸಮಾಡಲು ತಯಾರಾಗಿರುವವರು ಈ ಕೂಡಲೇ ಈ ಕೆಳಗೆ ರುಜು ಮಾಡಿದವರಿಗೆ ಬರೆಕೊಳ್ಳುವುದಲ್ಲದೆ ಬರುವ ಏಪ್ರಿಲ್ 3ನೇ ಶನಿವಾರ ಮಧ್ಯಾಹ್ನ ನಾಪೋಕ್ಲಿನಲ್ಲಿ ಆಗುವ ಮೀಟಿಂಗಿಗೆ ಖುದ್ದಾಗಿ ಹಾಜರಾಗಿ ಹೆಸ್ರು[illegible] ತಿಳಿಕೊಳ್ಳಬೇಕಾಗಿ ಕೋರಿಕೆ.

ಕೆ. ಪಿ. ಚಿಣ್ಣಪ್ಪ
ಸ್ವಾಗತ ಕಮಿಟಿಯ ಜನರಲ್ ಸೆಕ್ರೆಟರಿ
ನಾಪೋಕ್ಲು.

ವರ್ತಮಾನ ಸಂಗ್ರಹ.

ಒಳದೇಶ

ಕೊಡಗಿನಲ್ಲಿ ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರಾಗಿಯೂ, ಕಮಿಷನರಾಗಿಯೂ ಇದ್ದ ಮೆ. ಎ. ಜೆ. ಕರ್ಗನ್ವನರವರು ಮದ್ರಾಸು ಹೈಕೋರ್ಟು ಜಡ್ಜರಾಗಿ ನೇಮಿಸಲ್ಪಟ್ಟಿರುತ್ತಾರೆ.

ಈ ದಿನ (ತಾ. 19ರಲ್ಲಿ) ಮಡಿಕೇರಿ ಮುನ್ಸಿಪಾಲಿಟಿಯವರ ಆಶ್ರಯದಲ್ಲಿ ಕಾರೋನೇಶನ್ ಗಾರ್ಡನ್ನಿನಲ್ಲಿ ಫಲಪುಷ್ಪಗಳ, ತಾಯಿಪಲ್ಯಗಳ, ನಾಯಿ ಕೋಳಿಗಳ ಪ್ರದರ್ಶನವು ನಡೆಯಿತು.

ಹರಿದಾಸ ಅಪ್ಪನೆರವಂಡ ಅಪ್ಪಚ್ಚ ಕವಿಯವರು ಹಳಬರಾದರೂ ತಮ್ಮ ದೇಹಸುಖವನ್ನು ಎಣಿಸದೆ ತಾ. 11ರಲ್ಲು ಸೋಮವಾರಪೇಟೆಯಲ್ಲಿ ಒಂದು ಹರಿಕಥೆಯನ್ನು ಮಾಡಿದರೆಂದು ತಿಳಿಯುತ್ತೇವೆ.

ಸರ್ಕಾರದವರು 1924—25ರಲ್ಲಿ 220 ಏಕರ, ಜಾಗದಲ್ಲಿ ಹೊಸದಾಗಿ ಅಂತಾಣ ಕೇಳಿಸಿದರೆ. 1925—26ರಲ್ಲಿ ಎಷ್ಟು ಕೇಳಿಸಿದರೆಂಬದು ತಿಳಿಯಬಂದಿರುವದಿಲ್ಲ. 1925ನೇ ನವಂಬರ ಮಧ್ಯದವರೆಗೆ ಸಹಕಾರ ಸಂಘಗಳ ಮೂಲಕ 246 ಏಕರು ಅಂತಾಣ ತೆಗೆಯಲ್ಪಟ್ಟಿತು.

ಜಮೀನ್ದಾರರ ಸಂಘದ ವಾರ್ಷಿಕ ಚಂದಾ ವಸೂಲಿ ಬಗ್ಗೆ ಗ್ರಾಮಕಮಿಟಿಗಳನ್ನು ಏರ್ಪಡಿಸಲು ಬಳ್ಳತ್ಯನಾಡಿನವರ ಮೀಟಿಂಗು ಈ ತಾ. 20ರಲ್ಲು ರಾಜಿದೇವಸ್ಥಾನದಲ್ಲಿಯೂ, ಪಾಡಿ ನಾಡಿನವರದು ತಾ. 27 ರಲ್ಲಿ ಪಾಡಿಸುಬ್ರಾಯದೇವಸ್ಥಾನದ ಒಳಿಯಲ್ಲಿ ನಡಯುವದೆಂದು ಅರ್ಗಸ್ಸೈಜರು ತಿಳಿಸಿರುತ್ತಾರೆ.

ತಾ 17ರಲ್ಲಿ ಕೊಡಗು ಕಮಿಷನರವರು ವೀರರಾಜಪೇಟೆಯ ಗಣಪತಿವಾಚನಾಲಯವನ್ನೂ, ಖಾದಿ ಭಂಡಾರವನ್ನೂ ಸಂದರ್ಶಿಸಿ ಪುಸ್ತಕ ಭಂಡಾರದ ಏರ್ಪಾಡನ್ನು ನೋಡಿ ಸಂತೋಷಪಟ್ಟರೆಂದೂ, ಅನೇಕ ಪುಸ್ತಕಗಳನ್ನು ನೋಡಿದರೆಂದೂ, ಖದ್ದರ್ ಒಟ್ಟೆಯನ್ನು ಸಹ ಚೆನ್ನಾಗಿ ಪರೀಕ್ಷಿಸಿದರೆಂದೂ, ಒಂದು ವಾರ್ತೆ.

[illegible]5—26ರ ಬಜೆಟಿನಲ್ಲಿ ಮಂಜೂರು ಮಾಡಿದ 700 ರೂ ಪೈಕಿ ಸೀರು, ಮಾಸ, ಪಾವು [illegible] ಅರ್ಧ ಪಾವು ಇವುಗಳ ಒಂದ ಜೊತೆಯನ್ನು ಖಜಾನೆಯಲ್ಲಿ ಇಟ್ಟು ಕೊಡಗಿನಲ್ಲಿ ಕಂಚಿನಿಂದ ತಯಾರಿಸುವವರಿಗೆ [illegible] ಮತ್ತು ಮಾರುವವರಿಗೆ [illegible] ಇವುಗಳ ಜೊತೆ ಕೊಡುವ ಬಾಕಿ ಹಣವನ್ನು ಸರಿಯಾಗಿ ಪರಿಶುದ್ಧ ತೂಕ ಸೇರುಗಳನ್ನೂ ಮಾಡಲಿಕ್ಕೆ [illegible] ಉಪಯೋಗಿಸಲ್ಪಡುವದೆಂದೂ ಸರ್ಕಾರದವರ ತಿಳಿಸುತ್ತಾರೆ.

ಈ ತಾ. 7ರಲ್ಲಿ ಗೋಣಿಕೊಪ್ಪಲಲ್ಲಿಯೂ, ತಾ 8ರಲ್ಲಿ ಮಡಿಕೇರಿಯಲ್ಲಿಯೂ, 9ರಲ್ಲಿ ಪೊನ್ನಂಪೇಟೆಯಲ್ಲಿಯೂ, 11ರಲ್ಲಿ ವೀರರಾಜಪೇಟೆಯಲ್ಲಿಯೂ ಸಹ [illegible] ಪಿ. ಕಾರ್ಯಪ್ಪನವರೂ, ಮೆ. ಕ. ಸಿ. ತಿಮ್ಮಯ್ಯನವರೂ, ಸುಳ್ಯ ತಿಮ್ಮಯ್ಯನವರೂ ಮತ್ತು ಮೆ. ಆರ್. ಯಸ್. ಸಂಜೀವರಾಯರೂ ಸ್ಲೈಡ್ ಲಾಂಟರ್ನ್ ಮೂಲಕ ಮದ್ಯಪಾನ ಮತ್ತು ಕೂಡ ಕರ್ತವ್ಯ ವಿಷಯ ಚಿತ್ರಪಟಗಳನ್ನು ತೋರಿಸಿ ಅವುಗಳನ್ನು ವಿವರಿಸಿ [illegible] ಹೇಳಿದರೆಂದು ತಿಳಿಯಬರುತ್ತದೆ.

ಕಳೆದ ತಾ. 2ರಲ್ಲಿ ಪಾರಾಣೆಯಲ್ಲಿ ಮ. ನಾಳಿಯಂಡ ಸಾಬಣ್ಣನವರ ಅಧ್ಯಕ್ಷತೆಯಲ್ಲೂ, ಈ ತಾ. 4ರಲ್ಲಿ ನಲ್ವತೋಕ್ಲಿನಲ್ಲಿ ಮೆ. ಮಾದಂಡ ಮಂದಣ್ಣನವರ ಅಧ್ಯಕ್ಷತೆಯಲ್ಲಿಯೂ, 14ರಲ್ಲಿ ಭಾಗಮಂಡಲದಲ್ಲಿ ಮೆ. ತ್ರಿವಿಕ್ರಮರಾಯರ ಅಧ್ಯಕ್ಷತೆಯಲ್ಲಿಯೂ, 15ರಲ್ಲಿ ಚೇರಂಬಾಣೆಯಲ್ಲಿ ಮೆ. ಕಲ್ಲುಮಾಡಂಡ ಸುಬ್ಬಯ್ಯನವರ ಅಧ್ಯಕ್ಷತೆಯಲ್ಲಿಯೂ, 16ರಲ್ಲಿ ಮಾದಾಪುರದಲ್ಲಿ ಮೆ. ಕುಟ್ಟೇಟಿರ ಗಣಪತಿಯವರ ಅಧ್ಯಕ್ಷತೆಯಲ್ಲಿಯೂ ಮೀಟಿಂಗುಗಳು ನಡೆದು ನಾಪೋಕ್ಲಿನಲ್ಲಿ ಆಗುವ ಜಮೀನ್ದಾರರ ಸಂಘದ ವಾರ್ಷಿಕ ಸಮ್ಮೇಳನದ ಸ್ವಾಗತದ ಏರ್ಪಾಡಿಗೋಸ್ಕರ ಗ್ರಾಮಕಮಿಟಿಗಳ ನೇಮಕ ಮಾಡಲಾಯಿತು.

ಹಿಂದೂದೇಶ

ಪಂಡಿತ ಮೋತಿಲಾಲ ನೆಹರೂರವರ ಮಿಲಿಟರಿ ವಿಷಯ ವಿಚಾರಿಸಲು ಏರ್ಪಡಿಸಲ್ಪಟ್ಟಿರುವ ಸ್ಕೀನ್ ಕಮಿಟಿಯ ಮೆಂಬರತನಕ್ಕೆ ರಾಜೀನಾಮೆ ಕೊಟ್ಟಿರುವರು.

ಇಂಗ್ಲೆಂಡಿನಲ್ಲಿರುವ ಪ್ರಿವಿ ಕೌನ್ಸಿಲಿನ ಇಬ್ಬರು ಜಡ್ಜರಿಗೆ ಇಂಡಿಯಾದಿಂದ ಸಂಬಳ ಕೊಡಬೇಕೆಂಬ ಠರಾವು ಎಸೆಂಬ್ಲಿಯಲ್ಲಿ ಸೋಲಿಸಲ್ಪಟ್ಟಿದ್ದರೂ ಅದನ್ನು ಕೌನ್ಸಿಲ್ ಆಫ್ ಸ್ಟೇಟಿನವರು ಪಾಸು ಮಾಡಿರುವರು.

ಇಂದೂರಿನ ಪದಚ್ಯುತ ಮಹಾರಾಜರು ತಮ್ಮ ಸಿಂಹಾಸನವನ್ನು 18 ವರ್ಷ ಪ್ರಾಯದ ತಮ್ಮ ಹಿರೀ ಮಗನಿಗೆ ಬಿಟ್ಟುಕೊಟ್ಟದರಿಂದ ಯುವರಾಜರಾದ ಯಶವಂತರಾವ್ ಹೋಳ್ಕರರವರಿಗೆ ತಾ. 11ರಲ್ಲಿ ಪಟ್ಟಾಭಿಷೇಕವಾಯಿತು. ವರ್ಜಿ ಮಹಾರಾಜರವರಿಗೆ ಸಂಸ್ಥಾನದ ಸರ್ಕಾರದಿಂದ ವರ್ಷಕ್ಕೆ ಐದು ಲಕ್ಷದ ವರಮಾನವನ್ನು ಕೊಡುವಂತೆ ಬ್ರಿಟಿಷ್ ಸರಕಾರದವರು ನಿಶ್ಚೈಸಿರುವರಂತೆ.

ಈ ತಾ 15ರಲ್ಲಿ ಬಂಗಾಳ ಕೌನ್ಸಿಲಿನ ಸ್ವರಾಜ್ಯ ಪಾರ್ಟಿಯ ಮೆಂಬರುಗಳು ಅಖಿಲ ಭಾರತ ಕಾಂಗ್ರೆಸ್ಸಿನ ತೀರ್ಮಾನದ ಮೇರೆ ಕೌನ್ಸಿಲಿನಿಂದ ಹೊರಗೆ ಬಂದು ಬಿಟ್ಟರು. ಇದೇ ವೇಳೆ ಮದ್ರಾಸು ಕೌನ್ಸಿಲಿನ ಸ್ವರಾಜಿಸ್ಟ್ ಪಾರ್ಟಿಯ 26 ಮೆಂಬರುಗಳ ಪೈಕಿ 23 ಮೆಂಬರುಗಳು ತಾ 16ರಲ್ಲಿ ಕೌನ್ಸಿಲು ಮೀಟಿಂಗಿನಿಂದ ಎದ್ದು ಹೊರಗೆ ಬಂದು ಬಿಟ್ಟಿರುವರು. ಇವರೆಲ್ಲರೂ ಬರುವ ಚುನಾವಣೆಯ ವರೆಗೆ ಆತ್ಯಾವಶ್ಯಕವಾದ ಸಂದರ್ಭದಲ್ಲಿ ವಿನಹ ಕೌನ್ಸಿಲಿಗೆ ಹೋಗುವುದಿಲ್ಲ.

ಅಖಿಲ ಭಾರತ ಹಿಂದೂ ಮಹಾಸಭೆಯ 9ನೇ ಸಮ್ಮೇಳನವು ರಾಜ ನರೇಂದ್ರನಾಥರವರ ಅಧ್ಯಕ್ಷತೆಯಲ್ಲಿ ಡೆಲ್ಲಿಯಲ್ಲಿ ತಾ 13, 14ರಲ್ಲಿ ನಡೆಯಿತು. ಅಸ್ಪೃಶ್ಯರಿಗೆ ಪಬ್ಲಿಕ್ ಬಾವಿಗಳು, ಶಾಲೆಗಳು, ರಸ್ತೆಗಳು ಮತ್ತು ದೇವಸ್ಥಾನಗಳ ಉಪಯೋಗದಲ್ಲಿರುವ ಅಡಚಣೆಯನ್ನು ಹೋಗಲಾಡಿಸಬೇಕೆಂಬ ಠರಾವು ಬಹು ಮತದಿಂದ ಪಾಸಾದರೂ ಇದಕ್ಕೆ ವಿರೋಧಿಸಿದ ಸಂಗಡದವರು ಮೀಟಿಂಗಿನಿಂದ ಎದ್ದು ಹೋಗಿ ಗಲಾಟೆಯನ್ನುಂಟು ಮಾಡಿದರು. ಕಡೆಗೆ ಸಮಾಧಾನವಾಯಿತು. ಬರುವ ಕೌನ್ಸಿಲು ಚುನಾವಣೆಗಳಲ್ಲಿ ಹಿಂದೂ ಸಭೆಯ ಪರವಾಗಿ ಉಮೇದುವಾರರನ್ನು ನಿಲ್ಲಿಸುವ ಅವಶ್ಯವಿಲ್ಲವೆಂತಲೂ, ಈ ಸಭಾಕ್ಕೆ ಕೆಡಕನ್ನು ಭಾವಿಸುವ ಉಮೇದುವಾರರ ಚುನಾವಣೆಯನ್ನು ವಿರೋಧಿಸಬಹುದೆಂತಲೂ ತೀರ್ಮಾನವಾಯಿತು.

ವಿದೇಶ

ಡಿ ವೇಲೆರರವರು ಐರ್ಲೆಂಡಿನ ಸಿನ್‌ಫೀನ್ ಪಾರ್ಟಿಯ ಪ್ರೆಸಿಡೆಂಟ್‌ಪದವಿಗೆ ರಾಜಿನಾಮೆ ಕೊಟ್ಟಿರುವರು.

ಅಮೇರಿಕದ ಕೊಸ್ಟರಿಕಾ ಎಂಬಲ್ಲಿ ಒಂದು ಟ್ರೈನು ರೈಲ್ವೆ ಕಂಬಿಗಳಿಂದ ಜಾರಿಹೋಗಿ ಹೊಳೆಗೆಬಿದ್ದು ಅದರಲ್ಲಿದ್ದ 178ಜನರು ಮೃತರಾರೆಂದೂ 71ಜನರಿಗೆ ಗಾಯಗಳುಂಟಾಗಿವೆಯೆಂದೂ ವರ್ತಮಾನ.

ತಾ. 11ರಲ್ಲಿ ಜಪಾನ್ ದೇಶದ ಪಾರ್ಲಿಮೆಂಟ್ ಸಭೆಯಲ್ಲಿ ಪ್ರಜಾಪ್ರತಿನಿಧಿಗಳಿಗೆ ರಾಜಕೀಯ ವಿಷಯ ರಾತ್ರಿಬಹಳ ಹೊತ್ತಿನವರೆಗೆ ಧೀರ್ಘ ಚರ್ಚೆನಡೆದುದರಲ್ಲಿ ಇಬ್ಬರಿಗೆ ವಾಗ್ವಾದಗಳೂ ಹೋರಾಟಗಳೂ ನಡೆದವು ಒಬ್ಬರ ಮೇಲೊಬ್ಬರು ಬಿದ್ದು ಹೊಡೆದಾಡಿದರು. ಅನೇಕರಿಗೆ ತಲೆ ಮೂಗುಗಳು ಒಡೆದುಹೋದವು. ಪೊಲೀಸಿನವರು ಅವರನ್ನು ಬಿಡಿಸಿ ಜಗಳವನ್ನು ನಿಲ್ಲಿಸಿದರು.

ನೋಟೀಸು.

ಸಂಘದ ವಾರ್ಷಿಕ ಜನರಲ್ ಮೀಟಿಂಗ್ ನಾಪೋಕ್ಲಿನಲ್ಲಿ ಕಲ್ಲಿಕೋಟೆಯ ಮ॥ ರಾ। ರಾ॥ ಮಂಜೇರಿ ರಾಮಯ್ಯರ್ ಬಿ. ಎ. ಬಿ. ಎಲ್. ರವರ ಅಧ್ಯಕ್ಷತೆಯಲ್ಲಿ 1926ನೇ ಇಸವಿ ಏಪ್ರಿಲ್ ತಾರೀಕು 17, 18 ಮತ್ತು 19ರಲ್ಲು ಮಧ್ಯಾಹ್ನ 1ಘಂಟೆಗೆ ನಡೆಯುತ್ತೆ. ಊಟ ಉಪಚಾರಕ್ಕೆ ನಾಪೋಕ್ಲುನಾಡು ತಾಲೋಕಿನವರು ಏರ್ಪಾಡು ಮಾಡುತ್ತಾರೆ. ಚರ್ಚೆಸತಕ್ಕ ವಿಷಯಗಳನ್ನು ತಾರೀಕು 10—4—1926ರ ಒಳಗೆ ಜನರಲ್ ಸೆಕ್ರೆಟರಿ ಮೆ॥ ಸಿ. ಯಸ್. ವೆಂಕಪ್ಪಯ್ಯನವರಿಗೆ ತಲುಪುವಂತೆ ಕಳುಹಿಸಬೇಕೆಂತಲೂ, ಮೀಟಿಂಗಿಗೆ ಎಲ್ಲಾ ಮೆಂಬರುಗಳು ಹಾಜರಾಗಬೇಕೆಂತಲೂ ಕೋರುತ್ತೇನೆ.

ಚಂದಾ ಮೆಂಬರುಗಳು ಎರಡು ವರ್ಷಗಳಿಂದ ಪಾವತಿ ಮಾಡದೆ ಇರುವವರು ಸಂಘದ ಕಾರ್ಯಗಳಲ್ಲಿ ಭಾಗಗಾರರಾಗಕೂಡದು. ಎಲ್ಲಾ ಮೆಂಬರುಗಳು ತಮ್ಮ ಬಾಕಿ ಚಂದಾ ಹಣಗಳನ್ನು ಕೂಡಲೇ ಪಾವತಿ ಮಾಡಬೇಕಾಗಿ ಕೋರುತ್ತೇನೆ.

ಕೊಡಗ ಜಮೀನ್ದಾರರ
ಸಂಘ, ಸಿ. ಎಸ್. ವೆಂಕಪ್ಪಯ್ಯ.
ಮಡಿಕೇರಿ, ತಾ. 17—3—1926. ಜನರಲ್ ಸೆಕ್ರೆಟರಿ.

ನೋಟೀಸು.

ತಾ 20—2—1924ರ ನೋಟೀಸು ಮೇರೆ ಕೊಡಗು ಕಾಫಿ[illegible] ಗಳ 2ನೇ ಮತ್ತು 3ನೇ ಕಸ್ತಿನ ಹಣವನ್ನು ಪಾವತಿ ಮಾಡಲು 31—3—2[illegible]ರವರೆಗೆ ಮಾತ್ರ ವಾಯಿದೆ ಕೊಟ್ಟಿದ್ದರೂ ಕೂಡ ತಾ 20—7—25ರಲ್ಲಿ ನಡೆದ ಕಂಪೆನಿಯ ಕಳೆದ ಜನರಲ್ ಮೀಟಿಂಗಿನಲ್ಲಿ ಈ ವಾಯಿದೆಯನ್ನು 31—3—26ವರೆಗೆ ಮುಂದರಿಸಲಾದದ್ದು ಈ ಮೊದಲೇ ಶೇರುದಾರರ ತಿಳುವಳಿಕೆ ಬಗ್ಗೆ ಪ್ರಕಟಿಸಲಾಗಿದೆ. ಆದುದರಿಂದ ಶೇರಿನ ಬಾಕಿ ಪೂರ್ತಿ ಹಣವನ್ನು ಈ ಮಾರ್ಚ 31ರೊಳಗೆ ಸಲ್ಲಿಸಬೇಕಾಗಿ ಕೋರುತ್ತೇನೆ.

"ಕೊಡಗು" ಆಫೀಸು. ಕೆ. ಅಪ್ಪಯ್ಯ,
15-3-26 (ಕಾರ್ಯಾಧ್ಯಕ್ಷರು).

ನೋಟೀಸು.

ಮಡಿಕೇರಿ ಹೈಸ್ಕೂಲ್ ಹೆಡ್‌ಮಾಸ್ಟರ ಬಂಗ್ಲೆಗೆ ಹೋಗುವ ರಸ್ತೆಯ ಮೇಲ್ಭಾಗದಲ್ಲಿರುವ ಫಾರೆಸ್ಟಿನಲ್ಲಿ ಕಡಿದು ತಯಾರಿಸಿರುವ 71 ಸೌದೆ ರಾಶಿಗಳನ್ನು 1926ನೇ ಇಸವಿ ಮಾರ್ಚ ತಾರೀಕು 31ನೇ ಬುಧವಾರದಿನ ಬೆಳಿಗ್ಗೆ 9 ಘಂಟೆಗೆ ಸದರಿ ಸ್ಥಳದಲ್ಲಿ ಹರಾಜು ಮಾಡಲಾಗುವುದು. ಖರೀದಿಸುವವರು ಸದರಿ ದಿನ ಹರಾಜು ಸ್ಥಳಕ್ಕೆ ಬಂದು ಸೌದೆಯನ್ನು ಖರೀದಿಸಬಹುದು. ಹೆಚ್ಚಿನ ಸಂಗತಿಗಳನ್ನು ಹೆಡ್ಡಾಫೀಸಿನಿಂದ ತಿಳಿದುಕೊಳ್ಳಬಹುದು.

ಡಿಪುಟಿ ಫಾರೆಸ್ಟ್ ಆಫೀಸರು,
ಮಡಿಕೇರಿ

ಪತ್ರವ್ಯವಹಾರ

ಬಾತ್ಮಿದಾರರ ಪಡುವ ಅಭಿಪ್ರಾಯಗಳಿಗೆ ಪತ್ರಿಕಾ ಕರ್ತರು ಉತ್ತರವಾದಿಗಳಲ್ಲ. ಸಂ.

ಪೊನ್ನಂಪೇಟೆ ವೇದಾಂತ ಸಂಘ.

ದೇಶಬಂಧುವರೇ,

ಈ ಕಲಿಯುಗದಲ್ಲಿ ಒಬ್ಬರೂ ತಾನು, ತನ್ನ ಪತ್ನಿ ಪುತ್ರರು ತನ್ನ ಬಂಧು ಬಾಂಧವರು ಸ್ವಪ್ರಯೋಜನ ಕೆಲಸದಲ್ಲಿಯೇ ನಿರಂತರವೂ ಮುಳುಗಿದವನನ್ನು ದಿನವೂ ನೋಡುವದು ಆಶ್ಚರ್ಯವಲ್ಲ. ಧರ್ಮಕ್ಕೆ ನಿಲ್ಲುವ ಎಡೆ ಇಲ್ಲದೆ ಊರ ಬಿಟ್ಟು ಸ್ವತಂತ್ರವನ್ನು ಪಡೆಯಲಿಕ್ಕಾಗಿ ಏಕಾಂತದಲ್ಲಿ ತಪಸನ್ನು ಆಚರಿಸಲಿಕ್ಕೆ ಹೊರಡಲು ಸಿದ್ಧವಾಗಿದ್ದಾಗ ಅವನ್ನು ಉದ್ಧರಿಸಲಿಕ್ಕೆ ಸೊಂಟ ಕಟ್ಟಿದ ಮಹಾತ್ಮರು ಅನೇಕರಿದ್ದರು. ಇವರಲ್ಲಿ ಶ್ರೀ ರಾಮಕೃಷ್ಣಪರಮಹಂಸರು ಪ್ರಮುಖ್ಯರಲ್ಲೊಬ್ಬರೆಂಬದು ವಾಚಕ ಮಹಾಶಯರಿಗೆ ತಿಳಿಯದ್ದಲ್ಲ.

ಶ್ರೀ ಕಾವೇರಿಮಾತೆಯು ಜನ್ಮವೆತ್ತಿದ ನಮ್ಮ ಈ ಕೊಡಗು ದೇಶದ ಜನರು ಹಿಂದೂಧರ್ಮಾಚರಣೆಯಲ್ಲಿ ಮೇಲ್ಪಂಕ್ತಿ

ಯಾಗಿ ಬೇಕಾದುದನ್ನು ಕಲಿಸುವುದರಿಂದ ಮರೆತು ಪಾಶ್ಚಿಮಾತ್ಯರ ಧರ್ಮವನ್ನೇ ಅವಲಂಬಿಸಿ ಸ್ವಧರ್ಮವನ್ನು ಬಗೆಬಗೆಯಾಗಿ ಹೀಯಾಳಿಸುವುದು ವಾಡಿಕೆಯಾಗಿದೆ. ಇಂಥ ಸಂಕಷ್ಟದಲ್ಲಿ ದೇವಾಂಶ ಪುರುಷರು ನಮ್ಮ ಈ ಪವಿತ್ರ ಭೂಮಿಯಲ್ಲಿ ಜನ್ಮವೆತ್ತದಿದ್ದರೆ ನಮ್ಮ ಧರ್ಮವು ಕಾಡುಪಾಲಾಗುವದರಲ್ಲಿ ಸಂಶಯವಿಲ್ಲ.

ಆದರೂ ಶ್ರೀ ರಾಮಕೃಷ್ಣ ಪರಮಹಂಸರ ವೇದಾಂತ ಸಂಘವು ಅಲ್ಲಲ್ಲಿ ಮೊಳಕೆಯಾಗುವದನ್ನು ನೋಡಿದರೆ ಸ್ವಧರ್ಮವು ಉದ್ಧಾರವಾಗುವ ಸಂದರ್ಭವು ಒದಗಬಹುದೆಂದು ತೋರುತ್ತೆ. ಧರ್ಮದ ಮೊಳಕೆಯೆಲ್ಲವೂ ಚೆನ್ನಾಗಿ ಬೆಳೆದು ದೇಶವನ್ನು ಕಾಪಾಡಲೆಂದು ಪ್ರಾರ್ಥಿಸುತ್ತೇನೆ. ಇಂಥಾ ಮೊಳಕೆಯೊಂದು ಪೊನ್ನಂಪೇಟೆಯಲ್ಲಿಯೂ ಮೊಳೆತಿರುವದು ಈ ಮೊದಲೆ ತಮಗೆಲ್ಲರಿಗೂ ತಿಳಿದಿದೆ. ಊರುಊರುಗಳಲ್ಲಿಯೂ ಕೇರಿಕೇರಿಗಳಲ್ಲಿಯೂ ಸ್ವಧರ್ಮ ಬೇರೂರಲೆಂದು ನನ್ನ ಪ್ರತಿದಿನದ ಪ್ರಾರ್ಥನೆಯಾಗಿದೆ.

ಪೊನ್ನಂಪೇಟೆಯಲ್ಲಿರುವ ವೇದಾಂತ ಸಂಘಕ್ಕೆ ಅನೇಕ ಮೆಂಬರುಗಳಾಗಿರುತ್ತಾರೆ. ಇನ್ನೂ ಸೇರುತ್ತಲೂ ಇದ್ದಾರೆ. ಅಲ್ಲಿ ಕೆಲವು ದಿವಸಗಳ ಹಿಂದೆ ಸ್ವಾಮಿ ವಿವೇಕಾನಂದರವರ ಜನ್ಮೋತ್ಸವವನ್ನು ನಡೆಸಿದ ಸಂಗತಿ ನಮ್ಮೂರಿನ ಈ ಪತ್ರಿಕೆಯಲ್ಲಿ ಓದಿ ತಿಳಿದಿರಬಹುದು. ಆ ದಿವಸದಲ್ಲಿ ಅನ್ನದಾನಕ್ಕೆ ಸಹಾಯ ಮಾಡಿದ ಮ. ಚಪ್ಪುಡಿರ ಪೂವಯ್ಯನವರಿಗೂ, ಮ. ಗುಮ್ಮಟ್ಟಿರ ಅಪ್ಪಯ್ಯನವರಿಗೂ, ಮ. ಮಾಕಂಡ ಸೋಮಯ್ಯನವರಿಗೂ, ಅಕ್ಕಿ ದಾನ ಮಾಡಿದ ಮ. ಜೋಲು ಸಿಂಗರವರಿಗೂ, ಅತಿಥಿಗಳನ್ನು ಊರಿಂದೂರಿಗೆ ಸ್ವಾಗತಿಸಿಕೊಟ್ಟಂಥ ಮ. ನಾರಾಯಣ ಸ್ವಾಮಿಯವರಿಗೂ, ನಾಪೋಕ ದರಸಾಯಬರವರಿಗೂ ಪ್ರಸಾದ ವಗ್ಗರಣೆಯನ್ನು ಧಾರಾಳವಾಗಿ ಹಂಚಲಿಕ್ಕೆ ಸಹಾಯ ಮಾಡಿದಂಥ ಸಂಘದ ಪ್ರೆಸಿಡೆಂಟರವರಿಗೂ ಇನ್ನೂ ಅನೇಕ ವಿಧದಲ್ಲಿ ಸಹಾಯ ಮಾಡಿದ ಇತರರುಗಳಿಗೂ ವಂದಿಸ ಬೇಕಾದುದು ಸಂಘದ ಮೆಂಬರುಗಳ ಕರ್ತವ್ಯವಾದರೂ ಅವರಿಗೆ ಅಂಥಾ ಮನಸ್ಸು ಕೊಟ್ಟ ಭಗವಂತನನ್ನು ವಂದಿಸಬೇಕಾದುದು ಸಕಲರ ಕೆಲಸವಾಗಿದೆ.

ಸಮಯಕ್ಕೆ ಸರಿಯಾಗಿ ಕೆಲಸ ಮಾಡತಕ್ಕಂಥವರು ಅನೇಕರಿರಬಹುದು. ಆದರೆ ಮುಂದಿನ ಜನಾಂಗದ ಏಳಿಗೆಗೂ ಮತಾಚಾರದ ಉನ್ನತಿಗೆಗೂ ಮತ್ತು ಜ್ಞಾನಾಭಿವೃದ್ಧಿಯ ಮೇಲ್ಮೆಗೂ ಕೆಲಸ ಮಾಡತಕ್ಕಂಥವರು ಅತಿ ವಿರಳ. ಈಗ ಅಲ್ಲಿ ಒಬ್ಬಿಬ್ಬರು ಅಂಥ ಕೆಲಸಕ್ಕೆ ಕೈಹಾಕಿರುವದನ್ನು ನೋಡಿ ಚಿತ್ತ ಸಂತೋಷವಾಗುತ್ತೆ. ಅಂಥಾ ಮಹನೀಯರನ್ನು ಕೊಂಡಾಡುವದು ನನಗೆ ಸರಿ. ವೇದಾಂತ ಸಂಘದಲ್ಲಿರತಕ್ಕ ಮೆಂಬರುಗಳ ಜ್ಞಾನಾಭಿವೃದ್ಧಿಗೆ ಯೋಗ್ಯವಾದ ಪುಸ್ತಕಗಳನ್ನು ದಯಪಾಲಿಸಿದ ನೆಲ್ಲಿಕಂದ ಪ ಡುಗಿಯರ ಶಾಲೆಯ ಹೆಡ್ ಮಿಸ್ಟ್ರೆಸ್ ರಾಗಿರುವ ಶ್ರೀಮತಿ ಎ. ಕಾವೇರಿಯಮ್ಮನವರಿಗೂ, ಮ. ಕಂಜಿತಂಡ ಕುಶಾಲಪ್ಪನವರಿಗೂ, ಮ. ಕೋಡಂಗಡ ಗಣಪತಿಯವರಿಗೂ, ಮ. ಗುಮ್ಮಟ್ಟಿರ ಅಪ್ಪಯ್ಯನವರಿಗೂ, ಮ. ಅಡ್ಡೇಂಗಡ ಕಾರ್ಯಪ್ಪನವರಿಗೂ, ಮ. ಚೆಟ್ಟಿಮಾಡ ವಯ್ಯಪ್ಪನವರಿಗೂ, ಮ. ದೇಯಂಡ ಅಣ್ಣಯ್ಯನವರಿಗೂ, ಶ್ರೀ ಭಗವಂತನು ದೀರ್ಘಾಯುಷ್ಯ ಮತ್ತು ಆರೋಗ್ಯವನ್ನು ದಯಪಾಲಿಸಲೆಂದು ನಾನು ಸಂಘದ ಪರವಾಗಿ ಬೇಡುತ್ತೇನೆ.

ವೇದಾಂತ ಸಂಘದಲ್ಲಿ ಮೆಂಬರಾದ ಮಾತ್ರಕ್ಕೂ ಯಾತಕ್ಕೆ ಮಟ್ಟಿಗೆ ದ್ರವ್ಯ ಮೊದಲಾದವುಗಳನ್ನು ಸಹಾಯ ಮಾಡಿದ ಮಾತ್ರಕ್ಕೂ ಪ್ರಯೋಜನವಾಗುವದಿಲ್ಲ. ವೇದಾಂತ ರಹಸ್ಯವನ್ನು ಪರಿಶೀಲಿಸಿ ಅದರಂತೆ ಅನುಸರಿಸಿ ಲೋಕೋದ್ಧಾರ ಮಾಡುವ ಕೆಲಸದಲ್ಲಿ ನಿರತರಾದರೇನೇ ಮನುಷ್ಯನಾದವನ ಕರ್ತವ್ಯ ನೆರವೇರಿದಂತಾಗುವದು. ಭಗವಂತನೇ, ಶ್ರೀ ಕಾವೇರಿ ಮಾತೆಯೇ, ನಮ್ಮ ಪೈಕಿ ತಮ್ಮ ನಿಜವಾದ ಮತವನ್ನು ಅವಲಂಬಿಸುವಂತೆ ಮಾಡಿ ಸತ್ಯವನ್ನೂ ಧರ್ಮವನ್ನೂ ಲೋಕದಲ್ಲಿ ಮೆರೆಯುವಂತೆ ಮಾಡು. ಇದೇ ನನ್ನ ಉದ್ದೇಶ, ಇದೇ ನನ್ನ ಕೋರಿಕೆ, ಇದೇ ನನ್ನ ಸದಾ ಪ್ರಾರ್ಥನೆ.

ಸಂಘದ ಮೆಂಬರು.

ಮಡಿಕೇರಿ ಹೈಸ್ಕೂಲು

ಪತ್ರಾಧಿಪನೇ,

ಕೊಡಗು ಪತ್ರಿಕೆಯಲ್ಲಿ ಪ್ರಕಟವಾದ ವಿದ್ಯೆ ಮತ್ತು ನಿಷ್ಪಕ್ಷಪಾತ ಬಾತ್ಮಿಗಳು ಪತ್ರಿಕಾ ವಾಚಕರ ಅವಗಾಹನೆಗೆ ಬಂದು, ಅವುಗಳ ಬೆಲೆಯನ್ನು ಗ್ರಹಿಸಿರುವಲ್ಲಿ, ಯಂ. ಗಣಪತಿ ಎಂಬವರು ಈ ವಿಷಯ ತಾರೀಕು 25—2—26ರ ಅಭಿಮಾನ ಪತ್ರಿಕೆಯಲ್ಲಿ ಪ್ರಕಟಿಸಿದ ಬಾತ್ಮಿಯು ಬರೇ ಅಸಂಬಂಧ ಪ್ರಲಾಪವೆಂದು ತಿಳಿಗೇಡರು ಹೇಳುವರು.

ವಿದ್ಯೆ ಎಂಬ ಬಾತ್ಮಿಯಲ್ಲಿ ಬರೇ ವ್ಯಕ್ತಿದೂಷಣೆ. ಈ ಯಂ. ಗಣಪತಿಯವರ ಬಾತ್ಮಿಯಲ್ಲಿಯಾದರೋ, ಇಡೀ ವಿದ್ಯಾ ಇಲಾಖೆಯ ದೂಷಣೆ. ನಿಷ್ಪಕ್ಷಪಾತಿಯು ಈ ಬಾತ್ಮಿದಾರರು ತಿಳಿಕೊಂಡ ರೀತಿ, ಒಂದು ವೇಳೆ ವಿದ್ಯಾ ಇಲಾಖೆಯವರೇ ಆದರೂ, ಬಾಧಕವೇನು? ಜನರು ತಮತಮಗೆ ತೋರುವ ಅಭಿಪ್ರಾಯವನ್ನು ಹೊರಗೆಡಹಬಾರದೇ? ಈ ಯಂ. ಗಣಪತಿಯವರ ಅಭಿಪ್ರಾಯದಂತೆ ಇವರ ಬಾತ್ಮಿ ಮತ್ತು ವಿದ್ಯೆ ಎಂಬುವ ಬಾತ್ಮಿಗಳಿಂದ ಪಬ್ಲಿಕ್ ಒಪೀನಿಯನ್ ಆಗಿ ಹೋಯಿತು. ಇಷ್ಟು ದೇಶದಲ್ಲಿ ಅಭಿಪ್ರಾಯ ಕೊಡತಕ್ಕ ಜನರೇ ಇಲ್ಲವೆಂದಹಾಗೂ ಇವರ ಅಭಿಪ್ರಾಯವೆಂದೂ ಆಯಿತು. ಈ ಬಾತ್ಮಿಗಳಿಗೆ ವ್ಯತಿರಿಕ್ತವಾಗಿ ಬಂದ ಬಾತ್ಮಿಗಳೆಲ್ಲವೂ ಮಂಗೇಶರಾಯರ ಹಿಂದೆ ಸ್ವಾರ್ಥಕ್ಕಾಗಿ ತಾವು ತಾವು ಎಂದು ಕೃತಕಟ್ಟಿಕೊಂಡು ನಡೆಯುವವರದಾದರೆ ವಿಶ್ವಾಸ ಗಣಪತಿಯವರು ಕೋರಿದ ಯಾವುದೋ ಒಂದು ಕೆಲಸವು ಮಂಗೇಶರಾಯರಿಂದ ಅನುಕೂಲಿಸಲಿಲ್ಲವೆಂಬ ಮತ್ಸರದ ಮೇಲೆ, ಮಂಗೇಶರಾಯರನ್ನೂ, ವಿದ್ಯಾ ಇಲಾಖೆಯವರನ್ನೂ, ದೂಷಿಸಿ ಕುಶಾಲಪ್ಪನವರ ಬೆನ್ನು ತಟ್ಟಿ ತಮ್ಮ ಕೆಲಸವನ್ನು ಅನುಕೂಲ ಮಾಡಿಕೊಳ್ಳುವ ಸ್ವಾರ್ಥಾಭಿಲಾಷಿಗಳದೆಂಬುದಕ್ಕೆ ಅಭ್ಯಂತರವೇನು? ವಿದ್ಯೆ ಎಂಬುವ ಬಾತ್ಮಿಯನ್ನು ಅವಲೋಕಿಸಿದ ಮಾತ್ರಕ್ಕೇ ಅರ್ಥವಾಗುವುದಿಲ್ಲವೇ?

ಮಂಗೇಶರಾಯರು ಈ ದೇಶಕ್ಕೆ ಬಂದು 3—4 ವರ್ಷಗಳಾಗಿ ಇದುವರೆವಿಗೂ ಸರಿಯಾದ ವ್ಯವಸ್ಥೆಯಿಂದಿದ್ದವರು, ಕುಶಾಲಪ್ಪನವರು ಇಂಗ್ಲೆಂಡಿಗೆ ಹೋಗಿ ಬಂದ ಕೂಡ್ಲೆ, ಆ ವ್ಯವಸ್ಥೆಯು ವ್ಯತ್ಯಾಸವಾಗಲು ಕಾರಣರು ಯಾರು? ಏನು? ಈ ವಿಷಯಗಳನ್ನು ಮಂಗೇಶರಾಯರ ಯಾ ಅವರ ಮೇಲಾಧಿಕಾರಿಗಳ ತಿಳುವಳಿಕೆಗೆ ತಂದವರು ಯಾರು? ಎಷ್ಟು ಸಾರಿ? ಈ ಪುಕಾರುಗಳ ಫಲತಾಂಶವೇನು? ಎಂಬವುಗಳನ್ನೆಲ್ಲಾ ವಾಚಕರ ಅವಗಾಹನೆಗೆ ಸಕಾರಣವಾದ ಲೇಖನಗಳನ್ನು ಬರೆಯದೇ ಸ್ವಾರ್ಥಕ್ಕಾಗಿ, ತಿರುಳಿಲ್ಲದ ವ್ಯಕ್ತಿದೂಷಣೆಯ ಹೊಟ್ಟು ಬಾತ್ಮಿಗಳನ್ನು ಬರೆದರೆ, ತುಚ್ಛವೆಂದೆಣಿಸದೇ ಗುಣಗ್ರಾಹಿಗಳು ಘನವೆಂದೆಣಿಸಲಾರರು.

ಇಂಥ ಬಾತ್ಮಿಗಳನ್ನು ಬರೆದು ನಾನೇ ಸರ್ವಜ್ಞನಾಗಿ ಒದರಿದ್ದೇ ಸರಿ. ನಾನು ಹೇಳಿದ್ದೇ ಜನಗಳ ಅಭಿಪ್ರಾಯವೆಂದು ಯೋಚಿಸುವ ಬೇರೆಯವರ ಅಭಿಪ್ರಾಯಗಳಿಗೆ ನಮನ ತೋರಿಸದ ಪಟಿಂಗರನ್ನು ವ್ಯಕ್ತಿದೂಷಣೆ ಮಾಡಿ ಪತ್ರಾಂತರದಲ್ಲಿ ಒದರಿದ್ದು ತಪ್ಪಾಗಿರಬಹುದು. ಆ ಪವಿತ್ರ ನಾಮವೆಲ್ಲಿ? ವ್ಯಕ್ತಿದೂಷಣೆಯ ಬಾತ್ಮಿದಾರರೆಲ್ಲಿ? ಇವರಿಗೂ ನಾಯಿಗೂ ಏಕಾದಶಿಗೂ ಇರುವ ಸಂಬಂಧವೇ ಅಲ್ಲವೇ?

ನಿಷ್ಪಕ್ಷಪಾತಿಯು ಹೆಸರು ಕೊಡಲಿಲ್ಲ, ತೆರೆಯಲ್ಲಿ ಓಡಾಡುವರು ಎಂಬುದೊಂದು ಆಕ್ಷೇಪ. ವಿದ್ಯೆ ಎಂಬವರು ಮರೆಯಲ್ಲಿ ನಿಂತದ್ದರಿಂದ ನಿಷ್ಪಕ್ಷಪಾತಿಯು ತೆರೆಯ ಹಿಂದುಗಡೆ ಇರುವುದೇನಾಶ್ಚರ್ಯ?

ಮಡಿಕೇರಿ ಬೋರ್ಡ್ ಸ್ಕೂಲಿನಿಂದ ಹೈಸ್ಕೂಲಿನ ವರೆವಿಗೆ ಕಲಿಸಿ ನಡೆಯುವುದು ಬಾತ್ಮಿದಾರರಿಗೆ ಮಾತ್ರ ತೃಪ್ತಿಕರವಲ್ಲದಿರಬಹುದು. ಆದರೆ ಅಚ್ಚುಕೂಲಿಸಿಕ ಕೆಲಸದಲ್ಲಿಯೇ ನಿರತರಾಗಿರುವ ಶಾಲಾ ಇನ್ಸ್‌ಪೆಕ್ಟರ ಅಭಿಪ್ರಾಯವೇನು? ಮಕ್ಕಳು ಗುಣವಂತರೂ ವಿದ್ಯಾವಂತರೂ ಆಗಬೇಕಾದರೆ ಮಕ್ಕಳನ್ನು ಹೆತ್ತು ಶಾಲೆಗೆ ಕಳುಹಿಸಿ ಬಿಟ್ಟ ಮಾತ್ರಕ್ಕೇನೆ, ತಂದೆ ತಾಯಿಗಳ ಕೆಲಸ ತೀರಿತು ಉಪಾಧ್ಯಾಯರೇ ಜವಾಬ್ದಾರರೆಂದು ಈ ಬಾತ್ಮೀದಾರರ ಅಭಿಪ್ರಾಯವು "ವಿನಸಂ ಕಿಸುಬಾಯಿತು" ಎಂಬಂತೆಯೋ ಸರಿ. ದಿವಸದ 24 ಘಂಟೆಗಳಲ್ಲಿ ಮಕ್ಕಳು ಉಪಾಧ್ಯಾಯರ ಅನುವರ್ತಿಗಳಾಗಿರತಕ್ಕ ಸಮಯವು ಬರೇ 5 ಘಂಟೆಗಳು ಮಾತ್ರ, ಉಳಿದ ಸಮಯವನ್ನು ಹೆಚ್ಚಾಗಿ ತಂದೆ ತಾಯಿಗಳ ಮತ್ತು ಇತರ ಸಹಪಾಠಿಗಳೊಡನೆ ಕಳೆಯುವರು. ಮೊದಲು ಒಬ್ಬರು ಗೃಹಸ್ಥರು ಮಕ್ಕಳಿಗೆ ವಿದ್ಯೆ ಕಲಿಸಲು ಸರಿಯಾದ ವಯಸ್ಸು ಯಾವುದೆಂದು ಒಬ್ಬರು ವಿದ್ವಾಂಸರನ್ನು ಪ್ರಶ್ನಿಸಲು, ಮಕ್ಕಳು ಹುಟ್ಟುವುದಕ್ಕೆ ಇಪ್ಪತ್ತು ವರ್ಷಗಳಿಗೆ ಮುಂಚೆ ಎಂದರಂತೆ. ಆದ್ದರಿಂದ ಗುರುಕುಲವಾಸವಾದರೆ ಮಾತ್ರ, ಯಥಾಗುರು ತಥಾ ಶಿಷ್ಯ ಎಂದು ಹೇಳಬಹುದು. ಇಲ್ಲವಾದರೆ ಯಥಾ ಪಿತಃ ತಥಾ ಪುತ್ರ ಎಂಬುದರಿಂದ ನಿಮ್ಮ ಮಕ್ಕಳ ದಡ್ಡತನಕ್ಕೂ, ದುರ್ಗುಣಗಳಿಗೂ ಉಪಾಧ್ಯಾಯರು ಹೊಣೆಯಾಗುವುದು ಹೇಗೆ?

ಕಾರಣಗಳು ಹೀಗಿರೆ ವಲ್ಲಿ ಬಾತ್ಮಿದಾರರು ಹೆಡ್ ಮಾಸ್ಟರನ್ನೂ, ಇತರ ಉಪಾಧ್ಯಾಯರನ್ನೂ, ಮತ್ತು ಇಡೀ ವಿದ್ಯಾ ಇಲಾಖೆಯನ್ನೂ, ದೂಷಿಸುವುದರ ಬದಲು ಮಕ್ಕಳ ತಂದೆ ತಾಯಿಗಳೂ ಉಪಾಧ್ಯಾಯರೂ ಅವಕಾಶವನ್ನು ಕಲ್ಪಿಸಿಕೊಂಡು ಎರಡು ಅಥವಾ ಮೂರು ತಿಂಗಳಿಗೊಂದಾವರ್ತಿ, ಮಿಳಿತವಾಗಿ ಸಭೆ ಸೇರಿ ಮಕ್ಕಳಲ್ಲಿ ಕಂಡುಬರುವ ನ್ಯೂನಾತಿರಿಕ್ತಗಳನ್ನು ತಿದ್ದುವ ವಿಷಯ ತಕ್ಕ ನಿಯಮಗಳನ್ನು ಏರ್ಪಡಿಸುವ, ಇನ್ನು ಯಾವುದಾದರೂ ಒಳ್ಳೇ ಸಲಹೆಗಳನ್ನು ಕೊಟ್ಟಿದ್ದರೆ, ಇಷ್ಟು ಕಂಠಶೋಷಣೆಗೆ ಅವಕಾಶ ವಿರುತ್ತಿರಲಿಲ್ಲ. ಇಂಥ ಬಾತ್ಮಿಗಳನ್ನು ಪತ್ರಿಕೆಯಲ್ಲಿ ಪ್ರಕಟಿಸಿದ್ದರಿಂದ ಮಕ್ಕಳಿಗೆ ಉಪಾಧ್ಯಾಯರಲ್ಲಿರುವ ಗೌರವವನ್ನು ಕಮ್ಮಿ ಮಾಡಿದಂತಾಗಿ ಮಕ್ಕಳಿಗೆ ಇನ್ನೆ ಎಷ್ಟು ಬಾತ್ಮಿದಾರರು ಹೇಳುವ ದುರ್ಗುಣ ಹೆಚ್ಚಿಸಲು ಅವಕಾಶಕೊಟ್ಟು, ಉಪಾಧ್ಯಾಯರ ಕೋಪೋಪಧ ವಹಿಸಿದ ಪಾಪಕ್ಕೆ ಈ ಬಾತ್ಮಿಗಳನ್ನು ಬರೆದವರು ಗುರಿಯಾಗುವುದಿಲ್ಲವೇ? ವಾಚಕರು ಆಲೋಚಿಸಲಿ.

ವಿಮರ್ಶಕ.

ಕೊಡಗು ಸಭೆ ನಿಬಂಧನೆಗಳು.

ಅಯ್ಯಾ,

ನಮ್ಮ ದೇಶದಲ್ಲಿ ಎಲ್ಲಾ ಕೆಲೋನಿಸ್ಟರಿಗೆ ಸೇರಿದ ರಾಜಕೀಯ ಸಭೆ (ಜಮೀನ್ದಾರರ ಸಂಘ) ಇರುವಾಗ್ಯೆ 'ಕೊಡಗು ಲಾ' ಕ್ಕೆ ಸಮ್ಮಂಧಪಟ್ಟವರ ಒಂದು ರಾಜಕೀಯ ಇತ್ಯಾದಿ ಸಭೆ ಬೇಕೆಂದೆಯಂತ ಈ ಸಭೆಯ ನಿಬಂಧನೆಗಳಿಂದ ಅರ್ಥವಾಗುತ್ತೆ. ಇದಕ್ಕೆ ಮುಂಚೆ ಹುಟ್ಟಿರುವ ಜಮೀನ್ದಾರರ ಸಂಘ ಯಾರಿಗೆ? ಯಾಕೆ? ಅದರಲ್ಲಿ ಮಾತ್ರ ರಾಜಕೀಯವಿಲ್ಲವೆನ್ನಲ್ಲಾರೆ. ಆದರೆ ಜನರು ಬೆದರದಂತೆ ಅದರ ನಿಬಂಧನೆ 2. ೨. 18ಲ್ಲಿ ಅಗತ್ಯ ಬಿದ್ದಾಗ ಸರಕಾರದ ಜಾಹೀರಾತಿಗೆ ತರುವದು ಎಂಥ ನೂತನವಾಗಿ ಬರೆದಿದೆ.

ಗೌಡರುಗಳು, ಅಯಿರಿಗಳು, ಹೆಗ್ಗಡೆಗಳು ಮತ್ತು ಕೊಡಗು ಲಾ ಕ್ಕೆ ಒಳಪಟ್ಟ ಇತರರಿಗೆ ಕೊಡವರು ಈ ವರೆಗೆ ನಡೆಸಿದ ಉಪಕಾರ ಕೆಲಸಗಳೇನು? ಇಂಥವರು ವಿದ್ಯೆ, ಐಶ್ವರ್ಯ, ಜನಸಂಖ್ಯೆಯಲ್ಲಿ ಕಮ್ಮಿ ಇರುವ ಕಾರಣ ಅವರು ಸ್ವಾರ್ಥಪರರಾದ ಕೊಡವ ಸಭೆ ಮುಖಂಡರುಗಳಿಂದ ಅಭಿವೃದ್ಧಿ ಹೊಂದುವದು ನಿಜವೋ? ತಮ್ಮ ತಮ್ಮನ್ನು ಮುಂದಾಳುಗಳಾಗಿ ಮಾಡಿಕೊಳ್ಳಲಿಕ್ಕಾಗಿ ಮಾತ್ರ ಇಂಥಾ ಸಭೆ ಬೇಕಿದೆ ಶಿವಾಯಿ ಬೇರೆಯಾವದಕ್ಕೂ ಅಲ್ಲ.

ಈ ಸಭೆಗೆ ಎಲ್ಲರೂ ಮೆಂಬರುಗಳಾಗಬೇಕಂತೆ. ಚರ್ಚೆಯೂ ಓಟಿನ ಹಕ್ಕೂ ಪ್ರತಿನಿಧಿಗಳಿಗೆ ಮಾತ್ರವಂತೆ! ಜನರು ಪ್ರತಿವರ್ಷ ಇಂಥ ಮೆಂಬರುಗಳಾಗಿರಲಿಕ್ಕೂ ಪ್ರತಿವರ್ಷ ಚಂದಾ ತೆರಲಿಕ್ಕೂ ಐಶ್ವರ್ಯವಂತರಾದ ಜಮ್ಮಿಗಳ, ಜಾತಿಗುರುಗಳಾದ ತಕ್ಕರ, ವಿದ್ಯಾವಂತ ಉದ್ಯೋಗಸ್ಥರ, ಪೆನ್ಶನ್‌ದಾರರ, ಆಯುರುಗಳ ವಾಗಗಾರರೋ? ಯಾ ಗೊಬ್ಬರ ತಿಂದು ಫಲಕೊಡುವ ಮರಗಳೋ? ನಮ್ಮ ಸ್ವತಂತ್ರವನ್ನು ಯಾಕೆ ಬಿಟ್ಟುಕೊಡಬೇಕು? ತಿಯೋಲಾಜಿಗೂ ಕೌನ್ಸಿಲ್ ಮುಂತಾದವುಗಳಲ್ಲಿ ಮೆಂಬರಾಗಲಿಕ್ಕೂ ಓಟು ಕೊಡಲಿಕ್ಕೂ ಹಕ್ಕು ಬೇಕೆಂಬ ಕಾಲದಲ್ಲಿ ಈ ಸಭೆಯ ಆಡಳಿತ ಕಮಿಟಿಯ 13 ಜನರಲ್ಲಿ 5 ಜನ ಮೇಲ್ಕಂಡವರ ಪಾಲಿಗೆ ಬೀಳುವಂತಿದೆ (3. 1 ನೂ ಡಿ) ಇಂಥವರು ರಾಜಕೀಯ ಹೋರಾಟದಲ್ಲಿ ಎಷ್ಟು ಮಟ್ಟಿಗೆ ಬಡಜನರ ಪರ ನಿಂತಾರು. ಇವರೆಲ್ಲಾ ಸರಕಾರದ ಮುಲಾಜಿನಲ್ಲೇ ಬಿದ್ದಿರುವವರೆನ್ನಬಹುದು.

ಸರಕಾರ ವತ್ಯಾಸ ಇರುವ ಪರಸ್ಪರ ಸಹಾಯಕ ಸಂಘಗಳಲ್ಲಿ ಯಾವ ತರದ ಸಂಘಗಳು? ಮನೆವಾರು ಜಾತಿವಾರು ವಿವಿಧ ತರದ ಸಂಘಗಳಾಗಬಾರದೇ? ಮಡಗು ಕಟ್ಟುವ ಮಾಟ್ಟಿ ಮಾಡುವ ಮುಂತಾಗವು ಪರದೇಶದಲ್ಲಿರುವಲ್ಲಿ ಇಲ್ಲಿ ಇದಕ್ಕೆ ಬೇರೆ ಸಭೆ ಬೇಕೆ? ಜನರಿಗೆ ಮೊದಲು ಅನ್ನ, ನಂತರ ಬಟ್ಟೆ, ನಂತರ ವಿದ್ಯೆ ಇತ್ಯಾದಿ ಬೇಕಾದದ್ದು. ಹಣದೊರಕಿಸಿ ಬಡವರನ್ನು ಉದ್ಯೋಗಶೀಲರನ್ನಾಗಿ ಸಹಕಾರ ಸಂಘಗಳ ಮೂಲಕ ಮಾಡಿದರೆ ಜನಾಭಿವೃದ್ಧಿ, ವಿದ್ಯಾಭಿವೃದ್ಧಿ, ಜಡತನ ನಿವಾರಣೆಯಾಗುವುದಲ್ಲದೆ ಸ್ವರಾಜ್ಯವು ಸಹ ತಾನಾಗಿಯೇ ಬರುತ್ತೆ.

ಊಟಕ್ಕಿಲ್ಲದವನಿಗೆ ಪರೀಕ್ಷೆ ಭಾರ! ಲಾಬೊರೇಟರಿ ಎಂದರೆ ಏನು ಎಂದು ತಿಳಿಯದ ಒಂದು ನಿರಕ್ಷರ ಸಭೆ ಕೌನ್ಸಿಲ್ ಮತ್ತು ಬಿ ಜಿನ್ ದಾರರ ಸಂಘದಿಂದ ಅವರಿಗೆ ಮೂಡಿಸಲಾಗಲಿ. ಪರೀಕ್ಷಾ ಫಾರ್ಮಿಗೆ ಸರಕಾರದಲ್ಲೇ ಹಣ ಬಾಲದೆಂಬ ಒಡವಾಟ, ಕೊಡವ ಸಭೆಯದೊಂದು ಇರುವ ನೋಡಲಿಕ್ಕಿದೆ. ಸ್ವಾರ್ಥತ್ಯಾಗಿಗಳಿಂದಲೂ ದೇಶದ ಹಿತ ಚಿಂತಕರಿಂದಲೂ ಹೇಳುವವರಿಗೆ ಅಧಿಕಾರದ ಮೇಲೆಯೂ, ಕೌನ್ಸಿಲ್‌ನ ಮೇಲೆಯೂ, ತುಂಬಾ ಪ್ರೀತಿ ದೇಶದ ಅಧಿಕಾರವೆಲ್ಲಾ ತಮಗಳ ಕೈಯಲ್ಲಿರಬೇಕೆಂಬ ಆಶೆಯವರ ಸಭೆಗಳು ಯಾಕೆ? ಸಂಪೂರ್ಣ ಸ್ವಾರ್ಥತ್ಯಾಗಿಯಾದ ಒಬ್ಬನಾದರೂ ಈ ವರೆಗೆ ನಮ್ಮ ಈ ದೇಶದಲ್ಲಿ ಹುಟ್ಟಿಲ್ಲವೆಂಬುದನ್ನು ಕಂಠತಃ ಹೇಳಬಲ್ಲೆ. ಅಂಥಾ ಒಬ್ಬನಿದ್ದರೆ ನಾವೆಲ್ಲರೂ ಅವನ ಹಿಂಬಾಲಕರಾಗಬಹುದು. ಅಂಥವನು ಅಧಿಕಾರಕ್ಕಾಗಿ ಎಂದೂ ಆಶಿಸಲಾರನು. ಅಂಥವನನ್ನೊಬ್ಬನನ್ನು ಜನಿಸಲೆಂದು ಪ್ರಾರ್ಥಿಸುವ.

ನರಿ (When fox preaches, beware of your cheese) ನರಿಯ ಬೋಧನೆಯು ಕೋಳಿಗಾಗಿಯೇ ಎಂಬುದನ್ನು ಮರೆಯದಿರಿ. ಕೊಡವ ಸಭೆಯು ಲಾಯರುಗಳು, ಗ್ರಾಜ್ಯುವೇಟುಗಳು, ಐಶ್ವರ್ಯವಂತರು, ಪೆನ್ಶನ್‌ದಾರರು ಬಂದು ಮೂಲೆಗೆಬೀಳದಂತೆ ಮಾಡುವ ತಕ್ಕರನ್ನು ಗುರುಗಳಾಗಿ ಮಾಡುವ ಒಂದು ಸಭೆ. ಇಂಥಾ ಸಂಸ್ಥೆಯಲ್ಲಿ ಅವರು ಸಾಧಾರಣದ ಮೆಂಬರುಗಳಾಗಿರುವದೆಂದರೇನು? ನಿಜವಾತ್ಸಲ್ಯದಿಂದ ಕೆಲಸ ಮಾಡುವೆವೆಂಬ ಧೈರ್ಯ ಅವರಲ್ಲಿದ್ದರೆ ಇಂಥಾ ನಿಬಂಧನೆಗಳೆತ್ತಕೆ? ರಾಜಕೀಯವೇಕೆ? 'ಕೊಡಗು ಲಾ' ಕ್ಕೆ ಸಂಬಂಧಪಟ್ಟವರೆಲ್ಲ ಯಾಕೆ? ಇದು ಖಂಡಿತ ನಮ್ಮ ಸ್ವಾತಂತ್ರ್ಯ ನಾಶಮಾಡುವ ಸಭೆ. ಇದರ ಬೇರು ಬಹಳ ಆಳದಲ್ಲಿದೆ. ಇವರು ಆಕಾಶವನ್ನು ಕೆಳಗೆ ಬೀಳಿಸುವಷ್ಟು ದೊಡ್ಡ ಭವನೆಯನ್ನು ಇದರ ನಿಬಂಧನೆಯಲ್ಲಿ ಕಾಣಿಸಿರುತ್ತಾರೆ. ಮೋಸ ಹೋಗಬೇಡಿ. ಮೆಂಬರಾಗಬೇಡಿ. ಅನೇಕ ಸಾರಿ ಯೋಚಿಸಿ ಈಗಕ್ಕೆ ಬಾಕಿ ಮಾಡಿ. ಸೇರಿದವನು ಕಾರ್ಯತಃ ಮಾಡುವದನ್ನು ಬಿಡದವನು ವರ್ಷ ನೋಡಿ ನಂತರ ಸೇರುವ. ಸೊಕ್ಕಿನ ಶತ್ರುಗಳ ಕೈಯಲ್ಲಿ ಬಿದ್ದಿರುವ ಗುಲಾಮಗಿರಿಗಿಂತ ಲಾಭವಾದ ಸ್ವತಂತ್ರ ಒಳ್ಳೇದು.

ಕೆ. ಯಂ. ಮಾಚಯ್ಯ.

ಪರಸ್ಪರ ಕುಟುಂಬ ಸಹಾಯಕ ನಿಧಿ.

ಅಯ್ಯಾ,

ಮೇಲ್ಕಂಡ ನಿಧಿಯ ಸಂಘಕ್ಕೆ ನೂರಕ್ಕೆ ಮೇಲ್ಪಟ್ಟು ಜನರು ಸೇರಿರುವವರಿಂದ ರೂಲ್ಸ್ ಪುಸ್ತಕದ ತಡೆ ನೋಟಿನಲ್ಲಿ ಹೇಳಿರುವಂತೆ ಸಂಘದ ಮಹಾಸಭೆಯು ಸೇರಬೇಕಾಗಿದೆ. ಮಡಿಕೇರಿಯ ಹೊರಗಿನ ಮೆಂಬರುಗಳು ಹಾಜರಾಗಲು ಅನುಕೂಲದೊರಕಿಸಿಕೊಳ್ಳಬೇಕಾಗಿರುವದರಿಂದ ವಿಲಾಸಗಳನ್ನು ಏಪ್ರಿಲ್ 15ರವಳಗೆ ಕಳುಹಬೇಕಾಗಿ ವಿಜ್ಞಾಪಿಸಿದೆ. ಪ್ರತಿ ಮುಖರಿಗೂ ನಿಶ್ಚಿತ ದಿವಸವನ್ನು ತಿಳಿಸಲಾಗುತ್ತೆ.

ಮಡಿಕೇರಿಯಂಡ ಚಿನ್ನಪ್ಪ.

ಮನೋಲ್ಲಾಸಿನಿ ತೈಲ.

ತಲೆನೋವು, ತಲೆ ತಿರುಗುವದು, ತಲೆಯಲ್ಲಿ ಕಣ್ಣುರಿ, ಕಿವಿಯಿಂದ ಕೀವು ಸೋರುವುದು ಕಿವುಡುತನ, ಕಣ್ಣುನೋವು, ಅಸಹ್ಯಾರ ನಿದ್ದೆ ಬಾರದಿರುವುದು, ನೆನವು ಶಕ್ತಿ ಕುಂದಿಹೋಗುವುದು ಇವುಗಳನ್ನೆಲ್ಲ ಖಂಡಿತ ಗುಣಪಡಿಸುತ್ತದೆ ಉದುರುವ ಕೂದಲನ್ನು ನಿಲ್ಲಿಸಿ ನಿಸ್ತಗಿರುವ ಕೂದಲನ್ನು ಬೆಳೆಯಿಸಿ ಕೂದಲಿಗೆ ಸೌಂದರ್ಯವನ್ನೂ ಹೊಳಪನ್ನೂ ಕೊಟ್ಟು ಅಕಾಲಕ್ಕೆ ಹಣ್ಣಾಗುವ ಕೂದಲನ್ನು ತಡೆದು ಕೂದಲು ಇಲ್ಲದ ಸ್ಥಳದಲ್ಲಿ ಹೊಸ ಕೂದಲನ್ನು ಹುಟ್ಟಿಸುತ್ತದೆ ಬೆಲೆ ಸೀಸೆಗೆ ರೂ 1, 3 ಸೀಸೆಗೆ 2—10—0, ಒಂದು ದೊಡ್ಡ ಸೀಸೆಗೆ ರೂ 2, 3 ಸೀಸೆಗಳಿಗೆ 5—8—0.

ಚಂದನಾಸವ.— ಇದು ಪ್ರಮೇಹ ಮೂತ್ರಕೃಚ್ಛ್ರ, ಮೂತ್ರ ಹನಿಹನಿಯಾಗಿ ಹೋಗುವುದು, ಮೂತ್ರಕೋಶದ ಉರಿ, ಮೂತ್ರಪಿಂಡಗಳ ಉರಿ ಮೂತ್ರನಾಳದಲ್ಲಿ ಹುಣ್ಣು, ಮೂತ್ರ ಹೊಯ್ಯುವಾಗ ಉರಿಯುವುದು, ಮೂತ್ರನಾಳದಿಂದ ಕೀವು ಬರುವುದು, ಮೂತ್ರದಲ್ಲಿ ಧಾತು, ಹುಡಿ ಹೋಗುವುದು, ಆಗಾಗ್ಗೆ ಮೂತ್ರ ಬರುವದು, ಮೂತ್ರ ತಡೆಯಲಿಕ್ಕೆ ಸಾಮರ್ಥ್ಯವಿಲ್ಲದಿರುವುದು, ದೇಹದಲ್ಲಿ ಉರಿ, ಬಾಯಾರಿಕೆ, ಸ್ವಪ್ನಾವಸ್ಥೆ, ಮೂತ್ರನಾಳದಲ್ಲಿ ಚುಚ್ಚುವ ನೋವು ಇವುಗಳಿಗೆ ಸರಿಯಾದ ಔಷಧಿ ಗಂಡಸರಿಗೂ ಹೆಂಗಸರಿಗೂ ಇದು ಅತ್ಯುತ್ತಮ ಬೆಲೆ—ಬಾಟ್ಲಿ 1, 3, 6ಕ್ಕೆ ರೂ 1—4—0, 3—8—0, 6—12—0.

ರೋಮನಾಶಿನಿ — ಈ ಹುಡಿಯನ್ನು ನೀರಲ್ಲಿ ಕಲಸಿ ಮೈಯಲ್ಲಿ ರೋಮವಿರುವ ಭಾಗಕ್ಕೆ ಹಚ್ಚಲು ರೋಮವು ಉದುರಿ ಬೀಳುವುದು ಡಬ್ಬಿ ಒಕ್ಕೆ 6 ಆಣೆ, 3 ಡಬ್ಬಿಗಳಿಗೆ ರೂ. 1, 1 ಡಜನಿಗೆ 3—8—0

ಅಮೃತರಿಷ್ಟ.— ಇದು ಕ್ವಿನೀನು ಬೆರಸದಿರುವ ಉತ್ತಮವಾದ ಔಷಧಿ ಎಲ್ಲಾ ತರದ ಜ್ವರಕ್ಕೆ ಉತ್ತಮ, ಬೆಲೆ — ಬಾಟ್ಲಿ 1, 3, 6ಕ್ಕೆ ರೂ 1—4—0, 3—8—0, 6—2

ಲೋಹಾಸವ.— ಇದು ಜ್ವರದ್ದಿಗೆ ಮತ್ತು ಮಲೇರಿಯದಿಂದುಂಟಾದ ಅಶಕ್ತತೆಗೆ ದಿವ್ಯವಾದದ್ದು ಬೆಲೆ—ಬಾಟ್ಲಿ 1, 3, 6ಕ್ಕೆ ರೂ 1—4—0, 3—8—0, 6—12—0

ನಮ್ಮ ಪಟ್ಟಿಯನ್ನು ತರಿಸಿ ನೋಡಿರಿ

ವಿಳಾಸ—ಮನೋಲ್ಲಾಸಿನಿ ಕಂಪೆನಿ,
9 ಮಂಗಳೂರು, ಕಂಕನಾಡಿ.

52—13

ಮುದ್ದಾದ ಪುಸ್ತಕ!　　ಮುಚ್ಚಾದ ಮುದ್ರಣ!

ಶರೀರ ಸುಖ, ಸಂಪತ್ತು, ಐಶ್ವರ್ಯಗಳನ್ನು ಸಂಪಾದಿಸಲು ಸಲಹೆಗಳನ್ನೂ ಮತ್ತು ಶರೀರ ಮರ್ಮಶಾಸ್ತ್ರ (ಕಾಮಶಾಸ್ತ್ರ)ವನ್ನೂ ತಿಳಿಸುವ

ಮರ್ಮ ಶಾಸ್ತ್ರ-ಎಂಬ ಕಾಮಶಾಸ್ತ್ರ.

ಈ ಪುಸ್ತಕವು ಮೊದಲು ಫ್ರೆಂಚ್, ಇಂಗ್ಲೀಷ್, ಹಿಂದುಸ್ತಾನಿ, ಸಂಸ್ಕೃತ ಮುಂತಾದ ಭಾಷೆಗಳಲ್ಲಿ ಬಹು ಗುಪ್ತವಾಗಿತ್ತು, ಇದನ್ನು ನಾವು ಪ್ರಯಾಸದಿಂದ ಸಂಪಾದಿಸಿ ಕನ್ನಡಕ್ಕೆ ತರ್ಜುಮೆಮಾಡಿ (84 ಚಿತ್ರಸರಗಳ ಸಹಿತ) ಥಳಥಳಿಸುವ ಕಾಗದದಲ್ಲಿ ಮುದ್ರಿಸಿ ತಯಾರಿಸಿದ್ದೇವೆ ಈ ಪುಸ್ತಕದಲ್ಲಿ ಸ್ತ್ರೀ ಪುರುಷರಿಗೆ ಬೇಕಾದ ಎಲ್ಲಾ ಮರ್ಮ ಶಾಸ್ತ್ರಗಳೂ, ಸ್ತ್ರೀ ಪುರುಷರು ಅನುಭವಿಸುವಾಗಿ ನಡೆದುಕೊಳ್ಳುವ ಸಂಗತಿ ಸ್ತ್ರೀ ಪುರುಷರಿಗೆ ಉಂಟಾಗುವ ಎಲ್ಲಾ ತರದ ಮರ್ಮವ್ಯಾಧಿಗಳು ಮತ್ತು ಅಂಥಾ ವ್ಯಾಧಿಗಳನ್ನು ಗುಣಮಾಡಿಕೊಳ್ಳುವ ಚಿಕಿತ್ಸೆಗಳೂ ಇನ್ನು ಅನೇಕ ತರದ ಮರ್ಮಶಾಸ್ತ್ರಗಳು ಚಿತ್ರಸರಗಳ ಸಹಿತ ತುಂಬಿರುವವು, ಈ ಪುಸ್ತಕದ ಹೆಸರನ್ನು ಕೇಳಿದ ಮಾತ್ರಕ್ಕೆ ಸಂತೋಷವಾಗುವದು, ಅದರ ಓದಲಿಕ್ಕೆ ಯಾರಿಗೆ ತಾನೇ ಸಂತೋಷವಾಗಲಾರದು.

ಕ್ರಯ ಪುಸ್ತಕ ಒಂದಕ್ಕೆ ಒಂದೇ ಒಂದು ರೂಪಾಯಿ ರೂ. 1—0—0

T. Ramachandar Rao & Co.,　　ಟಿ. ರಾಮಚಂದ್ರರಾವ್ ಅಂಡ್ ಕೊ,
Post Box No. 232,　　ಪೋಸ್ಟ್ ಬಾಕ್ಸ್ ನಂ. 232.
Madras.　　ಮದ್ರಾಸ್.

52—13

ALot for SELECTION of Single Barrel Breach Loadig Guns at LOWEST PRICE EVER OFFERED.

Original Browning's B.B.L. .12 bore Take Down Hammerless Automatic Ejector Gun, with safety catch..... ....Price, Rs. 140/-

Do do but by **Winchester** or **Remington** .. .. Price, Rs. 160/-

Winchester or **Remigton S. B. B. L.** 12 bore Six Shots Hammerless Repeating gun, 32 inches barrel with Safety catch ... . Price, Rs. 150/-

German S. B. B. L. .12 bore Hammerless Ejector Gun, 32 inches German Steel Barrel with safety catch .... Price, Rs. 65/-

Continental Make Do Price, Rs 55/-

Webley & Scott's S B. B L. .12 bore Semi Hammerless Ejector Gun, 32 inches Webley's Steel Barrel, ... Price, Rs. 75/-

The above Guns can be had in .16, .20, & .410 bore Same as above in 12 bore **Special "Duck Gun"**, 3inches barrel .... Price, Rs' 80/-

W. W. Greener's "Gaffer" S. B. B. L 12 bore Martini Action Ejector Gun, 26 inches Greener's Steel Barrel..... . .. . Price, Rs. 75/-

W. W. Greener's as above but **Long Range Duck Gun"** with 32 inches barrel, and chamber for 2¾ inches to 3 inches case. . . .... Price, Rs 90/-

Midland's "Knock-About" S. B B L. Ejector Hammer Gun 32 inches barrel. .. ... Price, Rs. 55/-

Continental Make S. B B. L folding Pattern Hammer Gun, 32 inches barrel beautifully engraved and carved..... .... Price, Rs. 45/

J. Steven's 12 bore Ejector Hammer Gun, 32 inches. Steel barrel..... .... Price, Rs. 45/-



Do do. 'Dread Naught' with heavy Breech Price/-Rs/50/-

Any of the above of J. Steven's **Special Duck Gun** with 36 inches barrel. Price, Rs. 5 Extra.

ENQUIRIES SOLICITED.

THE BOMBAY ARMOURY,
331, ABDUL REHMAN STREET,
BOMBAY. 3

24-20

EMPIRE OF INDIA LIFE ASSURANCE CO., LTD.

(Established 1897.)

Assets Exceed Rs 2,50,00,000.
Lowest Premium. Liberal Bonus and Absolute Security

Example—A Civilian in his 20th year may secure a policy for Rs. 1000/- (with profits) Endowment payable at death or at the end of 20 years for an annual premium of Rs. 48/10 Policies from Rs. 500/- and above Lives upto age 55 are eligible for Assurance.

Prospectus and Proposal forms may be obtained from—

C K. Chengappa; Special Agent, Riverside Estate, Sidapur, S Coorg　　Or　　The Branch Secretary 152 3, Commercial Street. Bangalore.

MY SCIENTIFIC SYSTEM OF GRADUATED PHYSICAL CULTURE.

SENT FREE TO EVERY ONE.

This will show you some of my remarkable achievements in health building exercises, many pages with nice photographs of myself and a number of my pupils. Read what they say about my system. Don't take my word for it. This book will be an impetus and inspiration to every young man. All I ask is the price of postage, two annas. Remember this does not obligate you in any way. So don't delay one minute. This may be the turning point in your life. Write for this big book now while it is on your mind

Prof M V KRISHNA RAO,
P. O. Basavanagudi,
Bangalore City. (S. I.)

ಪ್ರಕಟಣೆ.

ಒಂದು ಕಡೆ ಇಂಗ್ಲೀಷಿನಲ್ಲಿಯೂ, ಇನ್ನೊಂದು ಕಡೆ ಕನ್ನಡದಲ್ಲಿಯೂ ಪ್ರಿಂಟಾಗಿರುವ ಕಾಫಿ ತೋಟದ ಆಳುಗಳ ಪ್ರಿಂಟಾದ ಅಗ್ರಿಮೆಂಟ್ ಫಾರಮುಗಳೂ ಮತ್ತು ಅಪ್ಲಿಕೇಶನ್ (complaint) ಫಾರಮುಗಳೂ ನಮ್ಮ ಪ್ರೆಸ್ಸಿನಲ್ಲಿ ತಯಾರಿವೆ ಬೇಕಾದವರು 'ಕೊಡಗು' ಆಫೀಸಿನಿಂದ ಪಡಕೊಳ್ಳಬಹುದು

ಮಡಿಕೇರಿ　　ಮೇನೇಜರ್,
ತಾ. 17-9-24　　'ಕೊಡಗು' ಆಫೀಸ್.

12 ರೋಸ್ ಸೆಂಟ್ ಬಾಟಲ್‌ಗಳು ಇನಾಂ.
ಬೆಸ್ಟ್ ಫೌಂಟೆನ್ ಪೇನಾ.

ಈ ಪೇನಾವು ಸೀಮೆಯಲ್ಲಿ ತಯಾರಾದದ್ದು. ಇದಕ್ಕೆ ಒಂದಾವರ್ತಿ ಇಂಕಿಯನ್ನು ಹಾಕಿದರೆ ಸುಮಾರು 1000 ಮಾತುಗಳ ವರೆಗೂ ಬರೆಯುವದು 14 ಕ್ಯಾರೆಟ್ಟು ಭಂಗಾರದ ಮುಳ್ಳು ಇರುವದು ಇದನ್ನು ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ 12 ರೋಸ್ ಸೆಂಟ್ ಬಾಟಲು ಇನಾಮಾಗಿ ಕೊಡುವೆವು ಕ್ರಯ ಪೇನಾ 1ಕ್ಕೆ 2—0—0

ಮೂನ್ ಲೈಮಿಟು ಸೋಪು

ಈ ಸೋಪನ್ನು ಕೂದಲುಗಳಿಗೆ ಒಂದೇ ಒಂದು ನಿಮಿಷ ಹಾಕಿದರೆ ಕತ್ತಿಯಿಂದ ಕ್ಷೌರಮಾಡಿಸಿ ಕೊಂಡದ್ದಕ್ಕಿಂತಲೂ ಚೆನ್ನಾಗಿ ಚರ್ಮಕ್ಕೆಯೂ ತೊಂದರೆಯೂ ಇಲ್ಲದೆ ಕೂದಲನ್ನು ತೆಗೆದುಹಾಕುವುದು.

ನಮ್ಮ ಮೂನ್ ಲೈಮಿಟ್ ಸೋಪು. ಗಂಧ, ಪೆಟ್ಟಿಗೆ, ಬಟ್ಟೆ, ತುಪ್ಪ, ನವೆ, ಮುಂತಾದವುಗಳನ್ನು ಕ್ಷಣ ಮಾತ್ರದಲ್ಲಿ ಮಾಯಮಾಡುವುದು.

3 ಸಾಬೂನುಗಳನ್ನು ಪೆಟ್ಟಿಗೆ 1ಕ್ಕೆ ರೂ 1—4—0
ಒಂದೇ ಸಲ 2 ಪೆಟ್ಟಿಗೆ ತರಿಸಿಕೊಂಡ ರೂ 2—4—0

ವಿಳಾಸ.—

ಎಲ್ಗಿನ್ ವಾಚ್ ಕಂಪೆನಿ
ಪಿ. ಬಿ ನಂಬರ್ 1251
ಮದರಾಸು

ಒಂದೇ ನೂರು ರೂಪಾಯಿಗಳಲ್ಲಿ!
ಟಿಕ್ = ಟಾಕ್ (ರಿಜಿಸ್ಟರ್ಡ್).

ಎಂಬ ಗಡಿಯಾರವನ್ನು ನಿಮಗೆ ವ್ಯಾಪ್ಯಸುತ್ತೇವೆ. ಇದು ಕರಾರು ಗಂಟೆಯನ್ನು ತೋರಿಸುವದು ಇದಕ್ಕೆ ಬೀಗ ಕೊಡಬೇಕಾಗಿಲ್ಲ. ಇದರಲ್ಲಿ ಕಾಣುತ್ತಿರುವ ಗುಂಡನ್ನು ಮೇಲಕ್ಕೆಳೆದರೆ ನಾಳು ತನ್ನಷ್ಟಕ್ಕೆ ತಾನೇ ಸರಿಯಾದ ಕಾಲವನ್ನು ತೋರಿಸುವದು. ಇವತ್ತೇ ತರಿಸಿಕೊಳ್ಳಿರಿ.



ನಮ್ಮ ಸ್ಪೆಷಲ್ "ಕ್ರಿಸ್ಮಸ್" ಹಬ್ಬದ ಮಾರಾಟ

ಪ್ರಾರಂಭ ತಾ. 1ನೇ ಜನವರಿ 1926.
ಕಡೆ ತಾ ೯ನೇ ಮಾರ್ಚ 1926.
"ಕೊಡಗು" ಚಂದಾದಾರರಿಗೆ ಮಾತ್ರ

ಎಲ್ಲಾ ವಾಚುಗಳಿಗೂ ಜಾಮೀನು ಐದು ವರುಷಗಳು



No. 515. Rs. 10 No. 511. Rs. 11.

No. 507. Rs. 12 No. 518. Rs. 10.

22 ಕ್ಯಾರೆಟ್ ರೋಲ್ಡ್ ಗೋಲ್ಡ್ ಕೈಗೆ ಕಟ್ಟಿಕೊಳ್ಳುವ ಗಡಿಯಾರುಗಳು

No. 519. Rs. 9. No. 516, Rs. 10.

ಸರ್ವೋತ್ತಮ, ಬಹಳ ಅಗ್ಗ, ಅಚ್ಚು
ಕಟ್ಟಾದ ಕೈ ಗಡಿಯಾರುಗಳು

ಪ್ರಗಸಟ್ಟಿ ಪ್ರತಿ ಒಂದು ವಾಚಿನ ಕೂಡ ಈಗಲೇ ಕೊಡು ಒಂದು ಪೆ ಟ್ ಬರೆಯ ವ್ರದ ಮೇಲಾದ ರೇಷ್ಮೆ ಪಟ್ಟಿ ಬಿಟ್ಟಿ ಕಳುಹಿಸುವೆವು. ಬೇಕು

ಪೀಟರ ವಾಚ ಕಂಪನಿ,
ಪೋಸ್ಟ ಬಾಕ್ಸ ನಂಬರ 27
ಮದ್ರಾಸ್.

ಅತ್ಯಲ್ಪವಿವೆ! ಉಚಿತ!



ಕೇವಲ ಉಚಿತ! **ಕೇವಲ ಉಚಿತ!!**

"ತಾರಾ" ಲೀವರ ರಜಿಸ್ಟರ್ಡ್ ಪೋಕೆಟ್ ವಾಚ್ಚು ೧೦ ಕೆರೆಟ್ ರೋಲ್ಡ ಗೋಲ್ಡಿನದು. ಮುಚ್ಚಳದ ಮೇಲೆ ೫ ವರ್ಷದ ಗ್ಯಾರಂಟಿ ಇರುವದೆಂದು ಗಡಿಯಾರ ಕರ್ತರು ಅಚ್ಚು ಹೊಡೆದಿರುವರು. ಈ ಗಡಿಯಾರವನ್ನು ಕೊಂಡುಕೊಳ್ಳುವವರಿಗೆ ನಾವು ನಮ್ಮ "ಸಿ" ರಜಿಸ್ಟರ ಟ್ರ್ಯಾಂಪೀಸನ್ನು ಉಚಿತವಾಗಿ ಕೊಡುತ್ತೇವೆ. ಇದೊಂದು ಅಪೂರ್ವ ಕಾಣಿಕೆ ಕೆಲವೇ ಗಡಿಯಾರಗಳಿವೆ. ಒಮ್ಮೆ ಕೊಂಡು ನೋಡಿರಿ! ಉಚಿತವಾಗಿ ಸಿಗುವ ಹಾಗು "ತಾರಾ" ಲೀವರ ರಜಿಸ್ಟರ್ಡ್ ೧೦ ಕೆರೆಟ್ ರೋಲ್ಡಗೋಲ್ಡಿನ ಪೋಕೆಟ ವಾಚ್ ಗಡಿಯಾರಗಳಿಗೆ ಕೂಡಿ ಒಂದೇ ರೂಪಾಯಿ ೫.

CAPTAIN WATCH CO., P. B. 265, MADRAS

12—8

ಕಿರ್ಲೋಸ್ಕರ ಗಾಣಗಳು.

ಈ ಕಳಗಿನ ಕಬ್ಬಿನ ಗಾಣಗಳು ನಮ್ಮ ಕಾರ್ಖಾನೆಯಲ್ಲಿ ತಯಾರಾಗುತ್ತವೆ

೧. ಕಿರ್ಲೋಸ್ಕರ ನಂ. ೫.
೨. "ಕಿಸಾನ"
೩. "ಕಮಲ ಚರಕ."

ಇವುಗಳ ಸವಿಸ್ತಾರ ಸಂಗತಿ ಬಗ್ಗೆ ಹಾಗೂ ಬೆಲೆಯ ಬಗ್ಗೆ ಕೂಡಲೇ ತಿಳಿದುಕೊಳ್ಳಿರಿ.

ಕರ್ನಾಟಕ ತರುಣರ ಉನ್ನತಿಗೋಸ್ಕರ

ಕಿರ್ಲೋಸ್ಕರ ವಾರ್ತಾ,

ಎಂಬ ತಿಳಿಗನ್ನಡ ಮಾಸ ಪತ್ರಿಕೆಯನ್ನು ಪ್ರಕಟಿಸುತ್ತೇವೆ. ವಾ. ಚ. ೧|ರೂ. ಮಾದರಿ ಸಂಚಿಕೆ ಪುಕ್ಕಟೆ.

ಕಿರ್ಲೋಸ್ಕರ ಬಂಧು, ಲಿಮಿಟೆಡ್.
ಕಿರ್ಲೋಸ್ಕರವಾಡಿ,
16—1 ಜಿ. ಸಾತಾರ್.

ಲೋಕಪ್ರಸಿದ್ಧವಾದ! ಅನುಭವಸಿದ್ಧವಾದ!

ಮೂರುದಿವಸಗಳಲ್ಲಿ ಗುಣಸಿಕ್ಕದಿದ್ದರೆ ಔಷಧಿಯಕ್ರಯ ವಾಪಾಸು ಜೀರ್ಣಶಕ್ತಿ, ರಕ್ತವೃದ್ಧಿ, ಧಾತುಪುಷ್ಟಿ, ಮನೋಲ್ಲಾಸ ಪರಮಾನಂದ ಮೊದಲಾದ ಸುಖ ಜೀವನಕ್ಕೆ ಬೇಕಾದ ಆರೋಗ್ಯದಾಯಿನಿ

ಟ್ರೇಡ್‌ಮಾರ್ಕ್] **ಅಗಸ್ತ್ಯ** [ನೋಡಿ ತೆಕ್ಕೊಳ್ಳಿರಿ.

ಮನ್ಮಥ ಚಿಂತಾಮಣಿ ಲೇಹ

ರಜಿಸ್ಟರ್ ಆದದ್ದು.

ಬಾಲವೃದ್ಧ ಸ್ತ್ರೀ-ಪುರುಷರ ಅನೇಕ ರೋಗಗಳ ಮೇಲೆ ಗುಣಕಾರಿಯಾದದ್ದು. ಮೇಹ ವಿಕಾರಬದ್ಧರಿಗೂ, ಸಿದ್ದೆ ಇಲ್ಲದವರಿಗೂ, ಸ್ವಪ್ನೇಂದ್ರಿಯವಾಗುವ ಬಾಲಕರಿಗೂ, ಜ್ಞಾನಿ ಸುಜ್ಞಾನಿಗಳಿಗೂ ಉಪಯೋಗವುಳ್ಳ ಬಹುಪರಮಾನಂದ ಔಷಧಿ. 1ಸೇರು 48ದಿವಸ ಸೇವಿಸಬಹುದು. ನಂ. (1) 1ಸೇರು ಡಬ್ಬಿ 1ಕ್ಕೆ ರುಪಾಯಿ 3—0—0. ½ಸೇರು ಡಬ್ಬಿ 1ಕ್ಕೆ ರುಪಾಯಿ 1—9—0. ನಂ. (2) 1ಸೇರು ಡಬ್ಬ 1ಕ್ಕೆ ರುಪಾಯಿ 2—0—0. ½ ಸೇರು ಡಬ್ಬಿ 1ಕ್ಕೆ 1—1—0. ವಿ. ಪಿ. ಖರ್ಚ ಪ್ರತ್ಯೇಕ. ವಿಶೇಷ ಮಾಹಿತಿಗೆ ಬರಕೊಳ್ಳಿರಿ.

ವಿಳಾಸ:—ದೇವಣ್ಣ ನಾರಾಯಣಸೇಟ್,
ಗೋಳಿಕಟ್ಟಾ,
ಮಂಗಳೂರು,

52—29 ದ. ಕ.

ಸತ್ಯಮೇವಜಯತೇ.
(ಗುಣವಾಗದಿದ್ದರೆ ಹಣ ಪರತ.)

ಧಾತುಪೌಷ್ಟಿಕ ಕಾಮೋತ್ತೇಜಕ, ಇಂದ್ರಿಯಸ್ತಂಭಕವಾದ

ಮದನೋದ್ಭವ ಗುಳಿಗೆ.

ಜನನೇಂದ್ರಿಯದ ಶಿಥಿಲತೆ ನಿರ್ಬಲತೆ ನಪುಂಸಕತ್ವ ಕ್ಷೀಣತೆ, ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣಾಂಕವಾಗಿ ಧಾತು ಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋಲ್ಲಾಸಕ ಇಂದ್ರಿಯಸ್ತಂಭಕ, ಗಮಿಸ, (ಟಾನಿಕ) ಗುಪ್ತಪ್ರದೇಶದ ಮೇಲೆ ಹುಟ್ಟುವ ಎಲ್ಲ ತರಹದ ಬಕ್ಕೆಗಳು, ಹುಣ್ಣುಗಳು ಸಿಸ್ತದ ಭಾಗಗಳು, ಕಟಿಶೂಲೆ ನಾಶರೋಗವು ಮುಂತಾದವು ಅತಿತ್ವರಗುಣವಾಗಿ ಶರೀರಕ್ಕೆ ಆರೋಗ್ಯವೂ ಕಾಂತಿಯೂ ರತಿಸುಖಕ್ಕೆ ಸಂಪೂರ್ಣ ಶಕ್ತಿಯೂ ಉಂಟಾಗುತ್ತದೆ ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗುತ್ತವೆ. ಕಿಮ್ಮತ್ತು ೬೦ ಗುಳಿಗೆಗಳಿಗೆ ೪ ರೂಪಾಯಿ ಇದನ್ನು ಸೇವಿಸುವಾಗ್ಗೆ **ನಪುಂಸಕತ್ವಾರಿ ತೈಲವನ್ನು** ಉಪಯೋಗಿಸಿದರೆ ಉತ್ತಮ. ಕಿಮ್ಮತ್ತು ಬಾಟ್ಲಿಗಳ್ಳೆ ರೂ. ೩—೧೩—೦.

ಪ್ರಮೇಹನಿವಾರಣಿ—ಇದರ ಸೇವನೆಯಿಂದ ಮೂತ್ರಕೃಚ್ಛ್ರನದಿಂದ ಶಂಡ, ಹಳದಿಯಂತ ಹೋಗಕ್ಕೆ ಕೀವು ಉ೦, ವಗೈರೆ ಆರಡಿವಾಕ್ರಿಯಿಂದ ಗುಣವಾಗುವದು. ಕಿಮ್ಮತ್ತು ಬಾಟ್ಲಿ೧ಕ್ಕೆ ರೂ. ೩—೮—೦. ಟ ಪಿ. ಬೇರೆ ಅನುಪಾನಪತ್ರಿಕೆ ಔಷಧದ ಸಂಗಡ.

ಒಂದಾಣೆ ಸ್ಟಾಂಪು ಕಳುಹಿಸಿದರೆ ಕ್ಯಾಟಲಾಗವು

ವಿಳಾಸ—

ವೈದ್ಯ ಜಿ. ಎಲ್. ಜೋಶಿ ಮತು ಕಂಪನಿ.
೯. ನಂ. ೬. ಪೋಸ್ಟು ಒನವಾಸಿ, ಉತ್ತರ ಕಾನಡಾ.

ಜ್ವರಗಳ ಮೇಲೆ ಅಮೂಲ್ಯ ಔಷಧವು.

ಕೇಸರಿ

ಟಾನಿಕ ಸಿರಪ.
(ಶಕ್ತಿವರ್ಧಕ ಸರಬತ್ತು)

ಥಂಡಿಜ್ವರ, ಮಲೇರಿಯ ಮೊದಲಾದ ಜ್ವರಗಳು ಬಿಟ್ಟನಂತರ ಬರುವ ಅಶಕ್ತತೆ, ಸಣ್ಣಜ್ವರವು ಬರುತ್ತಿರುವುದು ಮೊದಲಾದವುಗಳ ಮೇಲೆ ಇದು ಒಂದು ಅಮೂಲ್ಯ ಔಷಧವಾಗಿರುತ್ತದೆ.

ನಮ್ಮ ಎಗ್ಸ್‌ಮಿಕ್ಶ್ಚರನ್ನು ಸೇರಿಸಿ ಗುಣವನ್ನು ಹೊಂದಿದ ಪ್ರತಿಯೊಬ್ಬನು ಇದರ ಒಂದು ಬಾಟ್ಲಿಯನ್ನಾದರೂ ಅಗತ್ಯವಾಗಿ ಸೇವಿಸಬೇಕು. ಅಂದರೆ ಅವನಿಗೆ ಜ್ವರದನಂತರ ಬರುವ ಅಶಕ್ತತೆಯು ಬರಲಿಕ್ಕೇ ಇಲ್ಲ.

ಬೆಲೆ ೧ ರೂಪಾಯಿ ಟಪಾಲು ವೆಚ್ಚ ಬೇರೆ.

12—8 ಜತೇಕ ಬ್ರದರ್ಸ

ಗಿರಗಾಂವ, ಮುಂಬಾಯಿ.

ಇದು ಒಳ್ಳೆ ಸಮಯ!

ಹಂಚುಗಳು.

ಈಗಾಗಲೇ ವಿರಾಜಪೇಟೆಯಲ್ಲಿ ನಾಜೂಕಾದ ಎಲ್ಲಾ ತರದ ಹಂಚುಗಳು ಅಂದರೆ, ಹಂಚು, ಮೂಲೆ ಹಂಚು, ಶಾತಿಹಂಚು, ಹೊಗೆಹಂಚ, ನೆಲಹಂಚು, ವಗೈರೆ ಎಲ್ಲಾ ಹಂಚುಗಳನ್ನು ಸ್ಟಾಕ ಮಾಡಲಾಗಿದೆ. ಕೂಡಲೇ ಹಂಚು ಬೇಕಾದವರು ವಿರಾಜಪೇಟೆಯಲ್ಲಿ ಈ ಕೆಳಗೆ ರುಜು ಮಾಡಿದವರ ಆಫೀಸಿಗೆ ಬಂದುಕೊಳ್ಳಬಹುದು. ಅಲ್ಲದೆ ಹಂಚುಗಳ ಸೇಂಪಲನ್ನು ನೋಡಬಹುದು. ಎಲ್ಲಾ ವಿವರಕ್ಕು, ಕ್ರಯಕ್ಕೂ, ಮತ್ತು ಸರಕ್ಕಿಗೂ ಈ ಕೆಳಗಿನವರಿಗೆ ದಯವಿಟ್ಟು ಬರೆದುಕೊಳ್ಳಿ.

ವಿರಾಜಪೇಟೆ ಕೆ. ಪಿ. ಚಣ್ಣಪ್ಪ.
12—12 ಬಾರಿ ಭಂಡಾರ

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್, ಕೊ ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ.

		ರೂ.
ಶೇರ್ ಬಂಡವಾಳ	—	50,000
ವಸೂಲಾದ ಶೇರ್ ಮೊಬಲಗು	—	369.)
ಜಮೆಬಂದ ಠೇವಣಾತಿ	—	90,600

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲಕೊಡತಕ್ಕದ್ದು.

ಒಂದು ವರ್ಷ ವಾಯಿದೆ ಅಥವ ಹೆಚ್ಚಿನ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ ರೂ. 6-4-0ರ ದರದಲ್ಲಿ ಬಡ್ಡಿ ದೊರೆಯುತ್ತೆ. ಕಡಿಮೆ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ 5ರ ಬಡ್ಡಿ ದೊರೆಯುತ್ತೆ.

ವರ್ಷಕ್ಕೊಂದಾವರ್ತಿ ಕೊ ಆಪರೇಟಿವ್ ರಜಿಸ್ಟ್ರಾರವರು ಲೆಕ್ಕ ಆಡಿಟು ಮಾಡುತ್ತಾರೆ.

ಪ್ರೆಸಿಡೆಂಟರು, ಟ್ರೆಜರರ್.
ಕೊತಂಡೆರ ಕುಟ್ಟಯ್ಯನವರು, ಯಂ. ಭುಜಂಗರಾಯರು
ರಾಯ್ ಬಹದ್ದೂರ್. ಬಿ.ಎ, ಬಿ.ಎಲ್.
ಸೆಕ್ರೆಟರಿ.
ಸಿ ಯನ್. ವೆಂಕಟ್ಟಯ್ಯನವರು, ಬಿ.ಎ, ಬಿ.ಎಲ್.
ತಾರೀಕು 29—8—1925.

ARMS & AMMUNITION MART,
Mahomedally-Noorbhoy



321 Abdul Rehman Street, near Crawford Market, BOMBAY. 3
Telegraphic Address:—"SHOOTER" Bombay.
[52—20] Please write for Reduced nett prices list for 1926.

Printed & published by Kodanda Appayya, R.B Chairman, Board of Directors, at "Kodagu" Press, Mercara for "Kodagu" Ltd.

ಕೊಡಗು.

ಸಂಪಾದಕ—ಪಂದ್ಯಂಡ ಐ ಬೆಳ್ಯಪ್ಪ.

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವುದು.

ಸಂಪುಟ ೫] ಕೊಡಗು, ಸನ್ ೧೯೨೩ನೇ ಇಸವಿ ಮಾರ್ಚಿ ತಾರೀಖು ೨೩ ೧೮ ಶುಕ್ರವಾರ [ಸಂಚಿಕೆ ೪೦

ಸ್ಪೆನ್ಸರ್ ಕಂಪೆನಿ, ಮಡಿಕೇರಿ

ನಮ್ಮಲ್ಲಿಗೆ ಈಗತಾನೇ ಈ ಕೆಳಗೆ ನಮೂದಿಸಿರುವ ಕೋವಿಗಳು ಮತ್ತು ಇದರ ಸಾಮಗ್ರಿಗಳು ಹೊಸದಾಗಿ ಬಂದಿವೆ. ಬನ್ನಿ ನೋಡಿರಿ.

ನೋಡ ಹೋಗದಿರಿ!!!

ದರ ಸುಲಭ!

12 ಬೋರ್ ಜೋಡಿ ಕೋವಿ ... 12 ಬೋರ್ ... 1-2-0

... 15-8-0

... 15-8-0

ಒಂಟಿ ಕೋವಿ ... 19-0-0

... 93-0-0 ... 16-0-0

... 81-0-0

... 65-0-0

Spencer & Co. Ltd,
HUNSUR, & POLLIBETTA.

52—21

ನೋಟೀಸ್.

ಈ ಕೆಳಗಿನ ಮಹನೀಯರು 'ಕೊಡಗು' ಪತ್ರಿಕೆಯ ಚಂದಾ ಹಣವನ್ನು ವಸೂಲ್ಮಾಡಲು ಒಪ್ಪಿಕೊಂಡದ್ದರಿಂದ, ಅವರಿಗೆ ರಶೀತಿ ಪುಸ್ತಕಗಳನ್ನು ನಮ್ಮ ಏಜಂಟರು ಮೆ ಚಂಗಂಡ ಕುಟ್ಟಪ್ಪನವರ ಜವಾಬುದಾರಿಕೆಯ ಮೇಲೆ ಕೊಡಲಾಗಿದೆ. ದಯಮಾಡಿ ಚಂದಾದಾರರೆಲ್ಲರೂ ಅವರಿಗೆ ಅನುಕೂಲವಿರುವ ಜಾಗದಲ್ಲಿ ಪಾವತಿ ಮಾಡಬೇಕಾಗಿ ಕೋರಿಕೆ.

ಏಜಂಟರುಗಳು.

ವೀರಾಜಪೇಟೆ—ಬಾದಿ ಭಂಡಾರದಲ್ಲಿ ಮೆ. ಚೆಂಬಾಂತ ಮುತ್ತಣ್ಣನವರು.

ಮೂರ್ನಾಡು—ಕಮಿಶನರ್ಸ್ ಸ್ಟೋರಿನಲ್ಲಿ ಮೆ ಮಚ್ಚಿಯಂಡ ದೇವಯ್ಯನವರು.

ನಾಪೋಕ್ಲು—ಮೆ. ಅರೆಯಡ ಸುಬ್ಬಯ್ಯನವರು

" ಮೆ. ಪೊನ್ನಚಂಡ ಮಂದಪ್ಪನವರು.

ಪೊನ್ನಂಪೇಟೆ—ಮು ಸಿ. ಜಿ. ಮಂದ್ರಯ್ಯನವರು.

ಗೋಣಿಕೊಪ್ಪಲು—ಮೆ. ಬಿದ್ದಂಡ ಮಾದಪ್ಪನವರು.

ಹುದಿಕೇರಿ—ಮು ಜಿ. ಮಾದಯ್ಯನವರು.

ಅಮ್ಮತ್ತಿ ಸಿದ್ದಾಪುರ—ಮೆ. ಐನಂಡ ಮಾದಪ್ಪನವರು

" ಮತ್ತು ಪೊನ್ನಂಪೇಟೆ—ಮೆ. ಕಲಿಯಂಡ ಸೋಮಯ್ಯನವರ

ಶ್ರೀಮಂಗಲ—ಮೆ ಇಟ್ಟಿರ ನಾಗಪ್ಪನವರು.

ಅಲ್ಲದೆ ಈ ಸಮ್ಮಂಧ ಮು. ಜಂಗಂಡ ... ರು ಕೊಡಗಿನ ಎಲ್ಲಾ ಕಡೆಗಳಲ್ಲೂ ಸಂದರ್ಭಾನುಸಾರ ಸಂಚರಿಸುವಾಗ ಅವರಿಗೂ ಹಣ ಕೊಡಬಹುದು. ಕೋರಬೇಕಾಗಿ ಕೋ ...

ಮೇನೇಜರ್, "ಕೊಡಗು" ಲಿಮಿಟೆಡ್.

ಡಾಕ್ಟರ್ ಎಸ್. ಎನ್. ಅಯ್ಯಂಗಾರ್, ಬಿ ಎ,
ಎಲ್ ಆರ್ ಸಿ. ಪಿ ಅಂಡ್ ಎಸ್. (ಎಡಿನ್‌ಬರ್ಗ್)
ಎಲ್. ಎಫ್. ಪಿ ಅಂಡ್ ಎಸ್. [ಗ್ಲಾಸ್ಗೊ]

ದಂತ ವೈದ್ಯರು

ಮಡಿಕೇರಿ ಮಹದೇವ ಪೇಟೆಯಲ್ಲಿ ಎ. ಯಂ. ಯಂ ಸಿದ್ದೀಕ್‌ರವರ ಅಂಗಡಿಯ ಎದುರಿನ ಮನೆಯಲ್ಲಿ ಇಳಿದುಕೊಂಡಿರುತ್ತಾರೆ. ಇವರು ಶೀಘ್ರದಲ್ಲೇ ಸೋಮವಾರಪೇಟೆಗೆ ಹೋಗುವುದಕ್ಕೆ ಮೊದಲು ತಾರೀಖು 27ರಿಂದ 31ರವರೆಗೆ ವೀರಾಜಪೇಟೆ ಟ್ರಾವೆಲ್ಲರ್ಸ್ ಬಂಗ್ಲೆಯಲ್ಲಿ ಇಳಿದುಕೊಳ್ಳುವುದರಿಂದ ಅವರನ್ನು ಅಲ್ಲಿ ಬೇಗನೆ ಭೇಟಿಮಾಡಿಕೊಳ್ಳುವುದು ಉತ್ತಮ.

ದಂತ ಸಂಜೀವಿನಿ.

ಯಾವ ತರದ ಹಲ್ಲು ನೋವಿದ್ದರೂ ಥಕ್ಕನೆ ಶಮನ ಮಾಡುವ ಶಕ್ತಿಯುಳ್ಳ ಈ ದಂತ ಸಂಜೀವಿನಿ ಕುಪ್ಪಿ ಒಂದಕ್ಕೆ ಕ್ರಯ ರೂ 1—0—0 ಮಾತ್ರ.

ಎಸ್. ರಾಮಣ್ಣ,
C/o. ಡಾಕ್ಟರ್ ಎಸ್. ಎನ್. ಅಯ್ಯಂಗಾರ್,
ಮಹದೇವಪೇಟೆ, ಮಡಿಕೇರಿ.

49.12

ಮಹನೀಯರೇ,

1923ನೇ ಇಸವಿಯಲ್ಲಿ ವೀರರಾಜೇಂದ್ರಪೇಟೆಯಲ್ಲಿ ತೆರೆದ ನಮ್ಮ ವೈದ್ಯಶಾಲೆಯ ಶಾಖೆಯಲ್ಲಿ ಅನೇಕ ದುಸ್ಸಾಧ್ಯವಾದ ಕಾಯಿಲೆಗಳನ್ನು ಗುಣಪಡಿಸಿ ಹೆಸರು ಪಡೆದ ನಮ್ಮ ಕಂಪನಿಯ ಮತ್ತೊಂದು ಶಾಖೆಯು ಈಗಾಗಲೇ **ಸೋಮವಾರಪೇಟೆಯಲ್ಲಿ** ತೆರೆಯಲ್ಪಟ್ಟಿದೆ

ಕೃಷ್ಣ ಸಂಪಿಗೆ ... ನಾರಾಯಣ ... ಎಂಬ ಹೆಸರುಗಳುಳ್ಳ ನಮ್ಮ ಪ್ರಧಾನ ವೈದ್ಯರುಗಳು ಒಬ್ಬೊಬ್ಬರು ಒಂದೊಂದು ಶಾಖೆಯಲ್ಲಿ ಯಾವಾಗಲೂ ಇರುತ್ತಾರೆ

ಈ ವೈದ್ಯರುಗಳು ... ದ ವೈದ್ಯರತ್ನ ... ದನ್ನು ... ದವರಾಗಿಯೂ ... ರೋಗಿಗಳ ... ಮಹಾನುಭಾವರ ... ವರ್ಷಗಳಿಂದ ... ಸಾಂಪ್ರದಾಯವನ್ನು ... ಪಡೆದವರಾಗಿಯೂ ಇದ್ದಾರೆ.

... ವೈದ್ಯಶಾಲೆಗಳ ... ಯಾಗಿದೆ.

ನಂಬಿಯಾರ್ ಮತ್ತು ಕಂಪೆನಿ,
ಆಯುರ್ವೇದಿಕ್ ಪ್ರೈವೇಟ್ ಡಿಸ್ಪೆನ್ಸರಿ.
ಕಲ್ಲಿಕೋಟೆ, ವೀರರಾಜಪೇಟೆ ಮತ್ತು
ಸೋಮವಾರಪೇಟೆ.

52-2

ಪ್ರಕಟಣೆ.

ನಮ್ಮ ಕಂಪನಿಯವರು ಸ ಅಕ್ಷರಗಳನ್ನು ಬಂದು ... ದಿಂದ, 'ಲೆಟರ್ ಪ್ರೆಸ್' ... ಮುಂತಾದವುಗಳು (ಇನ್ಸ್ಟಿಟ್ಯೂಷನ್) ... ಇಂಗ್ಲಿಷ್ ಮತ್ತು ಕನ್ನಡದಲ್ಲಿ ... ಕಡಿಮೆ ಚಾರ್ಜಿನಲ್ಲಿಯೂ ನಿಯಮಿತ ಕಾಲದಲ್ಲಿಯೂ ... ಸಿದ್ಧರಾಗಿದ್ದೇವೆ

ಮಡಿಕೇರಿ.

ಮೇನೇಜರ್,
'ಕೊಡಗು' ಲಿಮಿಟೆಡ್

ಆಂಧ್ರ ಆಯುರ್ವೇದಿಕ್ ಫಾರ್ಮಸಿ.

ಬ್ರಾಂಚ್, ಬೆಂಗಳೂರು ಸಿಟಿ

ಚ್ಯವನಪ್ರಾಸ ಲೇಹ.

ಇದು ಸರ್ವೋತ್ಕೃಷ್ಟವಾದ ಗಿಡಮೂಲಿಕೆಗಳಿಂದ ತಯಾರಿಸಲ್ಪಟ್ಟ ಆಯುರ್ವೇದ ರಸಾಯನೌಷಧವು. ವಿದ್ಯಾರ್ಥಿಗಳೂ ವಿಶೇಷವಾಗಿ ಬುದ್ಧಿಯನ್ನು ಪ್ರಯೋಗಿಸಿ ಕೆಲಸ ಮಾಡುವವರೂ ಈ ಲೇಹವನ್ನು ಸೇವಿಸಿದರೆ ವಿಶೇಷವಾಗಿ ಬುದ್ಧಿಶಕ್ತಿಯನ್ನೂ ಜ್ಞಾಪಕಶಕ್ತಿಯನ್ನೂ ಹೊಂದುವರು. ದೀರ್ಘಕಾಲದ ವ್ಯಾಧಿಯಿಂದಾಗಲೀ ಕೆಟ್ಟ ನಡತೆಯಿಂದಾಗಲೀ, ಸ್ವಭಾವ ಶಕ್ತಿಯ ಕೊರತೆಯಿಂದಾಗಲೀ ಶರೀರ ಕಾಂತಿಯು ಕುಂದಿ ರಕ್ತ ಕೆಟ್ಟು ಇಂದ್ರಿಯ ದೌರ್ಬಲ್ಯವೇ ಮೊದಲಾದ ವಿಕಾರಗಳಿಂದ ಪೀಡಿತರಾಗಿರುವವರು ಈ ಲೇಹವನ್ನು ಸೇವಿಸಿದರೆ ಆ ತರದ ವಿಕಾರಗಳನ್ನೆಲ್ಲಾ ಪರಿಹರಿಸಿ ದೇಹಕ್ಕಾ ಮನಸ್ಸಿಗೂ ಉಲ್ಲಾಸವನ್ನುಂಟುಮಾಡಿ ಮಾಂಸ ಖಂಡಗಳಿಗೂ ನರಗಳಿಗೂ ಬಲವನ್ನು ಕೊಟ್ಟು ದೇಹಪುಷ್ಟಿಯನ್ನುಂಟುಮಾಡಿ ನವಚೈತನ್ಯವನ್ನುಂಟುಮಾಡುವುದು. ಅಲ್ಲದೆ ಆರೋಗ್ಯದ್ಯ ... ವರು. ದೀರ್ಘಕಾಲ ಬದುಕುವರು. ಕೆಮ್ಮು ಉಬ್ಬಸ ವ್ಯಾಧಿಯುಳ್ಳವರಿಗೂ ಮುಖ್ಯವಾಗಿ ಕ್ಷಯರೋಗಿಗಳಿಗೂ ಇದು ಸಂಜೀವಿನಿಯೇ ಸರಿ! ಚರಕ ಸಂಹಿತೆಯಲ್ಲಿ ಇದರ ಗುಣಗಳು ಅದ್ಭುತವಾಗಿ ಹೇಳಲ್ಪಟ್ಟಿದೆ. ೧೦ ತೊಲೆಗೆ ೧ ರೂಪಾಯಿ. ೪೦ ತೊಲೆಗೆ ೩ ರೂಪಾಯಿ



ಎಲ್ಲಾ ಕಡೆಯಲ್ಲಿಯೂ ಏಜಂಟರು ಬೇಕು.

... ಆಯುರ್ವೇದ ... ಚ್ಯವನಪ್ರಾಸ ... ವರು. ... ಬರೆಯಿರಿ.

ಟಿ. ಸಿ. ಎಸ್. ... ಅಂಡ್ ಕೋ,
ಮ್ಯಾನೇಜಿಂಗ್ ಏಜಂಟ್ಸ್, ಆಂಧ್ರ ಆಯುರ್ವೇದಿಕ್ ಫಾರ್ಮಸಿ,
೬೬ ಚಿಕ್ಕಪೇಟೆ, ಬೆಂಗಳೂರು ಸಿಟಿ.

16—6

"ಕೊಡಗು"

ಸನ್ ೧೯೩೭ನೇ ಇಸವಿ ಮಾರ್ಚ ತಾ. ೨೬ನೇ ಶುಕ್ರವಾರ.

ಪ್ರಜೆಗಳ ಹಕ್ಕು ಬಾಧ್ಯತೆಗಳು.

ನಾಮದಾರ ವಿ. ಯಸ್. ಶ್ರೀನಿವಾಸಶಾಸ್ತ್ರಿಯವರು ಕಲ್ಕತ್ತಾ ಮತ್ತು ಮದ್ರಾಸ್ ವಿಶ್ವವಿದ್ಯಾಲಯಗಳ ಆಶ್ರಮದಲ್ಲಿ ಪ್ರಜೆಗಳ ಹಕ್ಕು ಬಾಧ್ಯತೆಗಳ ವಿಷಯವಾಗಿ ಉಪನ್ಯಾಸಗಳನ್ನು ಕೊಟ್ಟರು. ಒಳ್ಳೇ ನಾಗರೀಕತೆ ಹೊಂದಿದ ಸಂಸ್ಥಾನದ ಪ್ರಜೆಗಳ ಹಕ್ಕುಗಳೂ, ಜವಾಬ್ದಾರಿಗಳೂ ಏನೇನಿರಬೇಕೆಂಬದನ್ನು ಸಾಧಾರಣವಾಗಿ ವರ್ಣಿಸಿ ಹಿಂದ ನ್ಯಾಸದ ಪ್ರಜೆಗಳ ಹಕ್ಕು ಬಾಧ್ಯತೆಗಳಲ್ಲಿರುವ ಲೋಪಗಳನ್ನು ವಿಶೇಷವಾಗಿ ವಿವರಿಸಿ ಹೇಳಿದರು. ಅವರ ಉಪನ್ಯಾಸಗಳು ಒಹು ಸ್ವಾರಸ್ಯವಾಗಿಯೂ ತುಂಬಾ ತಿಳುವಳಿಕೆಯನ್ನು ಕೊಡುವವಾಗಿಯೂ ಇದ್ದವು. ತುಂಬಾ ವಿದ್ವಾಂಸರ ಸಭೆಗೆ ಕೊಟ್ಟ ಉಪನ್ಯಾಸಗಳಾದರೂ ಸಾಧಾರಣ ಜನರಿಗೆ ಈ ಉಪನ್ಯಾಸಗಳ ಸಾರಾಂಶವನ್ನು ತಿಳಿಸಿಕೊಟ್ಟರೆ ತುಂಬಾ ಪ್ರಯೋಜನವಾಗಿದೆ ಯೆಂತ ನಂಬುತ್ತೇವೆ.

ನಾಗರೀಕತೆ ಹೊಂದಿದ ಪ್ರಜಾಪ್ರತಿನಿಧಿ ಸರಕಾರಗಳಿರುವ ದೇಶಗಳಲ್ಲಿ ಹಕ್ಕುಗಳಿಲ್ಲದ ಪ್ರಜೆ ಇಲ್ಲ. ಪಾಶ್ಚಾತ್ಯ ದೇಶಗಳಲ್ಲಿ ಇದ್ದೇ ಇರುತ್ತದಲ್ಲ. ಕಳೆದ ಘೋರ ಯುದ್ಧಕ್ಕೆ ಮೊದಲು ಇದ್ದ ಜರ್ಮನ್ ಸಂಸ್ಥಾನದಲ್ಲಿ ಪ್ರಜೆಗಳು ಸಂಸ್ಥಾನದ ಪ್ರಯೋಜನಕ್ಕೆ ಇರುವ ಒಂದೇ ಸಾಧನಗಳು ಎಂತಲೂ ಪ್ರಜೆಗಳಿಗೆ ಯಾವ ಹಕ್ಕುಗಳೂ ಇಲ್ಲವೆಂತಲೂ ಭಾವಿಸಲ್ಪಟ್ಟಿತ್ತು. ಸಂಸ್ಥಾನದ ಪ್ರಯೋಜನಗಳನ್ನೇನೂ ಯೋಚಿಸಬೇಕಾದುದಿಲ್ಲ, ಪ್ರಜೆಯ ಕ್ಷೇಮವನ್ನು ನೋಡಿಕೊಂಡರೆ ಸಾಕೆಂತ ವಾದಿಸುವ ಜನರ ಗುಂಪೂ ಇದೆ. ಆದರೆ ಯಾವ ಸಂಸ್ಥಾನವೇ ಆಗಲೀ ಪ್ರಜಾಹಿತಕ್ಕಾಗಿ ಇರಬೇಕಾದದ್ದಾಗಿದೆ. ಸಂಸ್ಥಾನದ ಅತ್ಯುನ್ನತ ಬೆಳವಣಿಗೆಯಾದರೆ ಪ್ರಜೆಯ ಶಕ್ತಿಯೂ ಬೆಳೆಯಲು ಅವಕಾಶ ದೊರೆಯುತ್ತದೆ. ಯಾವ ಸಂಸ್ಥಾನದ ಜನಾಂಗವು ವಿದ್ಯಾಬುದ್ಧಿಯಲ್ಲಿಯೂ, ಐಶ್ವರ್ಯದಲ್ಲಿಯೂ ಬೆಳೆಯುತ್ತಾ ಹೋಗುತ್ತದೆಯೋ ಅಂಥಾ ಸಾಮ್ರಾಜ್ಯದ ಪ್ರತಿಯೊಬ್ಬ ಪ್ರಜೆಗೂ ತನ್ನ ಶಕ್ತಿಯನ್ನೆಲ್ಲಾ ಪ್ರಕಟಗೊಳಿಸಲು ಅವಕಾಶ ದೊರೆಯುತ್ತದೆ. ಆದರೆ ಪ್ರಜೆಯ ಹಿತವೂ, ಸಂಸ್ಥಾನದ ಹಿತವೂ ಅನ್ಯೋನ್ಯ ಬೆರೆತು ಇದೆ.

ನಾಗರೀಕತೆ ಹೊಂದಿದ ಸಂಸ್ಥಾನದ ಪ್ರಜೆಗೆ ಅನೇಕ ಗುಣಗಳಿರಬೇಕಾದರೂ ಮುಖ್ಯವಾಗಿ ಮೂರು ಗುಣಗಳಿರಬೇಕಂತೆ. ಒಂದನೇದು ಪಬ್ಲಿಕ್ ಸ್ಪಿರಿಟ್ ಅಂದರೆ ಸಮುದಾಯಕ್ಕಾಗಿ ಕೆಲಸಮಾಡುವ ಅಪೇಕ್ಷೆ. ಸಮುದಾಯದ ಪ್ರಯೋಜನಕ್ಕಾಗಿ ಸ್ವಂತ ಅನುಕೂಲಗಳನ್ನು ಬಿಡುವದು, ಅವಶ್ಯವಿದ್ದಾಗಲೆಲ್ಲಾ ಸಮುದಾಯದ ಪ್ರಯೋಜನಕ್ಕಾಗಿ ತಾನು ಸ್ವಂತ ಅಭಿಪ್ರಾಯವನ್ನು ... ಈ ಸ್ವಭಾವವು ನಮ್ಮ ಈ ಕೊಡಗಿನಲ್ಲಿ ಅತೀ ಸ್ವಲ್ಪಮಟ್ಟಿಗೆ ಪ್ರಕಾಶವಾಗುತ್ತಿದೆ. ಇದರಿಂದ ತುಂಬಾ ಜನರು ತಮ್ಮ ಸ್ವಂತ ಅನುಕೂಲಗಳನ್ನು ಸ್ವಲ್ಪವಾದರೂ ಬಿಡಲು ತಯಾರಾಗುವದಿಲ್ಲ. ತಾನು ತನ್ನ ಮಕ್ಕಳು ಚೆನ್ನಾಗಿ ಬದುಕಿದರೆ ಸಾಕೆಂತ ಯೋಚಿಸುತ್ತಾರೆ. ಪ್ರಜಾಪ್ರತಿನಿಧಿ ಸರಕಾರವು ನಡೆಯಬೇಕಾದರೆ ಜನರ ಈ ಗುಣವು ದೃಢವಾಗಿ ಸಮುದಾಯಕ್ಕಾಗಿ ತಮ್ಮ ಕಾಲವನ್ನು ಬುದ್ಧಿಯನ್ನು ಹಣವನ್ನು ಸ್ವಲ್ಪ ಮಟ್ಟಿಗಾದರೂ ವಿನಿಯೋಗಿಸಬೇಕು. ಪ್ರತಿಯೊಬ್ಬ ಪ್ರಜೆಯೂ ಈ ರೀತಿ ಸಮುದಾಯದ ಕ್ಷೇಮಕ್ಕಾಗಿ ಅಲ್ಪಸ್ವಲ್ಪ ಕಾಲವನ್ನಾದರೂ ಕೊಡದೆ ಹೋದರೆ ಸಮುದಾಯದ ಹಸೆಸನ್ನಿ ಅಲ್ಪಸ್ವಲ್ಪ ಜನರು ಕೆಲಸಮಾಡಬೇಕಾಗುತ್ತದೆ. ಅಂಥವರು ಮಾಡುವ ಕೆಲಸಗಳು ಸಮಾಜಕ್ಕೆ ಪ್ರಯೋಜನವಾಗಿದೆಯೋ ಎಂತ ಅತಿ ಜಾಗರೂಕರಾಗಿ ಎಲ್ಲಾ ಪ್ರಜೆಗಳೂ ಕಾಯುತ್ತಾ ನೋಡುತ್ತಿರಬೇಕು. ತಮ್ಮ ಸ್ವಂತ ಅನುಕೂಲಗಳನ್ನೂ ಪ್ರಯೋಜನಗಳನ್ನೂ ಸ್ವಲ್ಪಮಟ್ಟಿಗಾದರೂ ಜನರು ಬಿಡಲು ತಯಾರಿದ್ದರೆ ಮಾತ್ರ ಸಮುದಾಯಕ್ಕೆ ಕೆಲಸಮಾಡುತ್ತಿರುವ ಜನರ ಕಾರ್ಯಗಳನ್ನು ಅಜಮಾಯಿಸುತ್ತಿರಲು ಸಾಧ್ಯವಾಗುತ್ತದಷ್ಟೆ.

ಪ್ರಜೆಗೆ ಇರಬೇಕಾದ ಇನ್ನೊಂದು ಗುಣವು ಯಾವದೆಂದರೆ—ಪ್ರಪಂಚ ಜ್ಞಾನ. ಪ್ರಜಾಪ್ರತಿನಿಧಿಸರಕಾರಗಳು ನಡೆಯಬೇಕಾದರೆ ಸಮುದಾಯದ ಅಭಿಪ್ರಾಯವು (ಪಬ್ಲಿಕ್ ಒಪೀನಿಯನ್) ಬಲವಾಗಿರಬೇಕು. ಈ ಸಮುದಾಯದ ಅಭಿಪ್ರಾಯವು ಒಳ್ಳೇದು, ಅಂದರೆ ಒಟ್ಟು ಸಂಸ್ಥಾನದ ಪ್ರಜೆಗಳಿಗೆ ಕ್ಷೇಮವನ್ನುಂಟುಮಾಡತಕ್ಕದ್ದಾಗಬೇಕಾದರೆ ಪ್ರಜೆಗಳಿಗೆ ಸಾಧಾರಣ ತಿಳುವಳಿಕೆಯು ಚೆನ್ನಾಗಿರಬೇಕೆಂಬದರಲ್ಲಿ ಸಂಶಯವಿಲ್ಲ. ನಮ್ಮ ಈ ದೇಶದಲ್ಲಿ ಪ್ರಜೆಗಳಿಗೆ ಪ್ರಪಂಚ ಜ್ಞಾನವು ಬಹಳ ಚೆನ್ನಾಗಿದೆ. ತಮ್ಮ ಅನುಕೂಲತೆಗಳನ್ನು ಬಿಟ್ಟ ಅಂಥಾ ಜ್ಞಾನವನ್ನು ಸ್ವಲ್ಪಮಟ್ಟಿಗಾದರೂ ಸಮುದಾಯಕ್ಕೆ ಉಪಯೋಗಿಸಬೇಕೆಂಬ ತಿಳುವಳಿಕೆಯು ಸಮುದಾಯದ ಜನರಿಗೆ ಇನ್ನೂ ಸಾಕಷ್ಟು ಒಂದಿರುವದಿಲ್ಲ. ಈಚೆಗೆ ನಡೆಯುತ್ತಿರುವ ಸಹಕಾರ ಚಳವಳಿಯಿಂದಲೂ ರಾಜಕೀಯ ಚಳವಳಿಯಿಂದಲೂ ಜನರಿಗೆ ತಮ್ಮ ಅನುಭವದ ಬುದ್ಧಿಯನ್ನು ಸಮುದಾಯಕ್ಕಾಗಿ ಉಪಯೋಗಿಸಬೇಕೆಂಬ ತಿಳುವಳಿಕೆಯು ಹೆಚ್ಚುತ್ತಲಿದೆ. ಈ ತಿಳುವಳಿಕೆಯನ್ನು ಇನ್ನೂ ಹೆಚ್ಚಾಗಿ ಕೊಡುತ್ತಾ ಬರಬೇಕಾದದ್ದು ಮುಂದಾಳುಗಳೆನಿಸಿಕೊಳ್ಳುವವರ ಕರ್ತವ್ಯವಾಗಿದೆ.

ಪ್ರಜೆಗಳಿಗೆ ಇರಬೇಕಾದ ಮೂರನೇ ಗುಣವು ಯಾವದೆಂದರೆ—ಸಮುದಾಯದ ಕ್ಷೇಮಕ್ಕೆ ಬೇಕಾದ ಮೂಲ ತತ್ವಗಳು ಯಾವ್ಯಾವವು ಎಂಬದನ್ನು ತಿಳಿದಿರಬೇಕಾದದ್ದು. ಸಮುದಾಯದ ಕ್ಷೇಮವೆಂತ ಸಾಧಾರಣವಾಗಿ ಹೇಳುವಾಗ ಆ ಕ್ಷೇಮವು ಇರಬೇಕಾದರೆ ಅವಶ್ಯವಾದ ಸಂಗತಿಗಳು ಯಾವ್ಯಾವವು ಎಂಬದನ್ನು ಯಾರೂ ಯೋಚಿಸುವದಿಲ್ಲ. ನಾಮದಾರ ಶಾಸ್ತ್ರಿಗಳು ಈ ತತ್ವಗಳನ್ನು ಹತ್ತು ಸಂಖ್ಯೆಯಾಗಿ ವಿಂಗಡಿಸಿ ಹೇಳಿದ್ದಾರೆ. ಅವು ಯಾವವೆಂದರೆ (1) ಪ್ರಜೆಯ ದೇಹ, ಆಸ್ತಿ ಮತ್ತು ಮರ್ಯಾದೆಯ ಭದ್ರತೆ, (2) ಬಾಷಣದ ಮತ್ತು ನಡವಳಿಕೆಯ ಸ್ವಾತಂತ್ರ್ಯ, (3) ಆರೋಗ್ಯದ ಜೀವನ, (4) ಒಳ್ಳೇ ಮತ್ತು ಸುಲಭ ಖರ್ಚಿನಿಂದ ದೊರಕುವ ವಿದ್ಯೆ, (5) ಮತದ ಅಭಿಪ್ರಾಯಗಳಲ್ಲಿ ಸ್ವಾತಂತ್ರ್ಯ, (6) ಭಾರವಿಲ್ಲದ ಸರಿಯಾಗಿ ಹಂಚಲ್ಪಟ್ಟ ಕಂದಾಯ, (7) ಕೈಗಾರಿಕೆ ಮತ್ತು ವ್ಯಾಪಾರದ ಬೆಳವಣಿಗೆ, (8) ಚೆನ್ನಾಗಿ ನಡಿಸಲ್ಪಡುವ ಸರಕಾರದ ಆಡಳಿತ, (9) ಎಲ್ಲಾ ಜಾತಿಸಂಗಡಿಗಳಲ್ಲೂ ಮರ್ಯಾದೆ ಜೀವನ, (10) ಸಂಸ್ಥಾನದ ಭದ್ರತೆ, ಅಂದರೆ ಸಂಸ್ಥಾನಕ್ಕೆ ಹೊರಗಿನಿಂದ ಅಪಾಯಬರದಂತ ಕಾದುಕೊಳ್ಳುವಿಕೆ. ಪ್ರಜೆಯ ದೇಹಭದ್ರತೆಗೆ ಲೋಪಬರುವ ಕೆಲಸಗಳೇನೂ ಕೊಡಗಿನ ಸರಕಾರದಿಂದ ಈಚೆಗೆ ಆದದ್ದು ಇಲ್ಲ. ಆದರೆ ಭಾಷಣ ಸ್ವತಂತ್ರಕ್ಕೆ ಈಗ ಮೂರು ನಾಲ್ಕು ವರ್ಷಗಳಿಂದ ಏಳೆಂಟು ಸಾರಿ ಅಡ್ಡಿಬಂದಿತ್ತು. ಕೊನೆಗೆ ಹೊರಗಿನಿಂದ ಒಂದ ರಾಜಕೀಯ ಚಳವಳದ ಜನರನ್ನು ಮಾತಾಡಕೂಡದೆಂತ ನಮ್ಮ ದೇಶದ ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರೂ, ಸಬಾರ್ಡಿನೇಟ್ ಜಡ್ಜಿಯರೂ ಹುಕ್ಕುಂ ಮಾಡಿದರು. ಪ್ರಜೆಯ ಹಕ್ಕುಗಳ ಮೂಲತತ್ವಗಳಲ್ಲಿ ಒಂದಾದ ಈ ಸ್ವಾತಂತ್ರ್ಯಕ್ಕೆ ಅಡ್ಡಿಮಾಡಿದನ್ನು ನೋಡಿಯೂ ಕೊಡಗಿನ ಪ್ರಜಾಜನರು ವಿಶೇಷ ಚಳವಳವನ್ನು ಎಬ್ಬಿಸದ್ದನ್ನು ನೋಡಿದರೆ ಪ್ರಜಾಹಕ್ಕುಗಳ ವಿಷಯದಲ್ಲಿ ಪ್ರಜಾಜನರು ಜಾಗರೂಕರಾಗಿಲ್ಲವೆಂಬದು ಸ್ಪಷ್ಟವಾಯಿತು. ಆದ್ದರಿಂದ ಈ ಹತ್ತುಂಡ ಹತ್ತು ಮೂಲ ತತ್ವಗಳನ್ನು ಪ್ರಜಾಜನರು ತಿಳಿದು ಕಾಪಾಡಲು ತಯಾರಾಗಿರಬೇಕಾದದ್ದು ಬಹಳ ಅವಶ್ಯ. ಇಳಿದ ಮೂಲತತ್ವಗಳು ಯಾವದೂ ನಮ್ಮ ದೇಶದಲ್ಲಿ ಸಮರ್ಪಕವಾಗಿ ಜಾರಿಯಲ್ಲಿದೆಯೆಂತ ಹೇಳಲಿಕ್ಕಾಗುವದಿಲ್ಲ.

ಪ್ರಜೆಗಳ ಹಕ್ಕುಗಳೇ ಬಾಧ್ಯತೆಗಳಾಗಿಯೂ ಇರುತ್ತವೆ ಎಂತ ಶಾಸ್ತ್ರಿಗಳು ವಿವರಿಸಿದ್ದಾರೆ. ವಿದ್ಯೆ ಕೊಡಬೇಕಾದದ್ದು ಸರಕಾರದ ಕೆಲಸವಾದರೂ ವಿದ್ಯಾಭ್ಯಾಸದ ಅನುಕೂಲಗಳನ್ನು ಉಪಯೋಗಿಸಬೇಕಾದದ್ದು ಪ್ರಜೆಯ ಕೆಲಸವಾಗಿದೆ. ನಂದಾದೀಪಟ್ಟ ತಾಲೋಕಿನ ನಿವಾಸಿಗಳು ಸರಕಾರದವರು ಒದಗಿಸಿಕೊಟ್ಟ ಅನುಕೂಲತೆಯನ್ನು ಉಪಯೋಗಿಸುತ್ತಿರುವದಿಲ್ಲ. ಇದರಿಂದ ಅವರ ಕರ್ತವ್ಯವನ್ನು ಅವರು ಮಾಡಿದಂತಾಗಲಿಲ್ಲ. ಸರಕಾರದ ಸಭೆಗಳಿಗೆ ಓಟುಕೊಡುವದು ಸರಕಾರದಿಂದ ಪ್ರಜಾಜನರು ಪಡಕೊಳ್ಳಬೇಕಾದ ಹಕ್ಕಾದರೂ ಅದನ್ನು ಸರಿಯಾಗಿ ಉಪಯೋಗಿಸಬೇಕಾದದ್ದು ಪ್ರಜೆಯ ಬಾಧ್ಯತೆಯಾಗಿದೆ. ಪಾಶ್ಚಿಮಾತ್ಯ ದೇಶಗಳಲ್ಲಿ ಕೆಲಸವಿಲ್ಲದವರಿಗೆ ಕೆಲಸವನ್ನು ಒದಗಿಸಿಕೊಡಬೇಕಾದದ್ದು ಸರಕಾರದ ಕೆಲಸವಾಗಿದೆ. ಈ ಪದ್ಧತಿ ನಮ್ಮ ದೇಶದಲ್ಲಿ ಇನ್ನೂ ಇಲ್ಲ. ಆದರೆ ಐಶ್ವರ್ಯವಂತರೂ ಬಡವರೂ ಸಹ ತಮ್ಮ ತಮ್ಮ ಕೆಲಸವನ್ನು ಮರ್ಯಾದೆಯಿಂದ ಮಾಡಲೇ ಬೇಕು. ತಮ್ಮ ಹಿರಿಯರು ಮಾಡಿದ ಸಂಪಾದನೆಯನ್ನು ಉಪಯೋಗಿಸುತ್ತಾ ಸೋಮಾರಿಗಳಾಗಿ ಕಾಲಕಳೆಯುವದು ಕೆಲವು ಐಶ್ವರ್ಯವಂತರ ಸ್ವಭಾವವಾಗಿದೆಯೆಂತ ಹೇಳಿ ಹೀಗೆ ಮಾಡುವದರಿಂದ ಐಶ್ವರ್ಯವಂತರು ತಮ್ಮ ಕರ್ತವ್ಯವನ್ನು ಮಾಡಿದಂತಾಗಲಿಲ್ಲವೆಂತ ಶಾಸ್ತ್ರಿಗಳು ಸೂಚಿಸಿದ್ದಾರೆ.

ಈಗ ಹಿಂದುಸ್ಥಾನದಲ್ಲಿ ಜನರು ಹಕ್ಕುಗಳನ್ನು ಪಡೆಯಲು ಪ್ರಯತ್ನಿಸುತ್ತಾರೆ. ಪಡೆದನಂತರ ಅಂಥಾ ಹಕ್ಕುಗಳು ಬೇರೆಯವರಿಗೆ ದೊರಕದಂತೆ ಪ್ರಯತ್ನಿಸುವದೇ ಸ್ವಭಾವವಾಗಿದೆ. ಆದರೆ ಹಕ್ಕು ಸಿಕ್ಕಿದನಂತರ ಅದನ್ನು ಒಳ್ಳೇ ರೀತಿಯಿಂದ ಉಪಯೋಗಿಸಬೇಕಾದದ್ದು ಹೇಗೆಂದರೆ. — ಅಂಥಾ ಹಕ್ಕನ್ನೇ ಬೇರೆಯವರಿಗೂ ಒದಗಿಸಿಕೊಡಲಿಕ್ಕೆ ಪ್ರಯತ್ನಿಸಿ ಆ ಹಕ್ಕುಗಳನ್ನೂ ಅವುಗಳ ಪ್ರಯೋಜನವನ್ನೂ ಬೇರೆಯವರ ಸಂಗಡ ಸೇರಿಕೊಂಡು ಅನುಭವಿಸುವದು, ಮತ್ತು ಬೇರೆಯವರಿಗಿಂತ ಹೆಚ್ಚು ಹಕ್ಕು ಇರುವವರೆಂತ ಗರ್ವಪಡದೆ ಇರುವದೇ ಹಕ್ಕನ್ನು ಸರಿಯಾಗಿ ಉಪಯೋಗಿಸುವ ರೀತಿಯಾಗಿದೆ. ಸಿಕ್ಕಿದ ಹಕ್ಕುಗಳನ್ನು ಬೇರೆಯವರಿಗೆ ಸಿಕ್ಕಗೊಡದೆ ಇರುವದೇ ಜಾತಿಹೆಮ್ಮೆಯೆಂತ ಹೇಳಬಹುದು. ಹಕ್ಕುಗಳ ಜವಾಬ್ದಾರಿಯನ್ನು ಸರಿಯಾಗಿ ತಿಳಿಯಬೇಕಾದರೆ ಜಾತಿಹೆಮ್ಮೆ ಹೋಗಬೇಕು. ನಿಮಗೆ ಬುದ್ಧಿ, ತಿಳುವಳಿಕೆ, ಐಶ್ವರ್ಯ ಮತ್ತು ಉನ್ನತಸ್ಥಿತಿ ಸಹ ಇದ್ದರೆ ಅವನ್ನು ಈ ಅನುಕೂಲಗಳು ಇಲ್ಲದವರಿಗೆ ದೊರಕಿಸಿಕೊಡಲು ಉಪಯೋಗಿಸಬೇಕು. ರಾಜಕೀಯ ಹಕ್ಕುಗಳು ಸಹ ಬೇರೆಯವರಿಗಿಂತ ಹೆಚ್ಚಿದ್ದರೆ ಕೆನ್ನಾಡ ಬಳಿಜನರಂತೆ ವರ್ತಿಸದೆ ಅಂಥಾ ಹಕ್ಕುಗಳು ಸಮುದಾಯದ ಇತರರಿಗೆ ಸಹ ಸಿಕ್ಕುವಂತೆ ಪ್ರಯತ್ನಿಸಬೇಕು ಎಂದು ಹೇಳಿದ್ದಾರೆ.

'ಹಕ್ಕುಗಳು ಎಂತಹವಾಗಿರಬೇಕೆಂದರೆ ಪ್ರತಿಯೊಬ್ಬ ಪ್ರಜೆಯ ಪೂರ್ಣಶಕ್ತಿಯು ಹೊರಬೀಳಲು ಅನುಕೂಲಕೊಡುವಂತೆ ಸಮುದಾಯದ ಬೆಳವಣಿಗೆಗೆ ಅನುಕೂಲವಾಗಿರುವಂಥಾದ್ದಾಗಿರಬೇಕು. ಬೇರೆಯವರಿಗೆ ಇಲ್ಲದಂತೆ ತಾನೊಬ್ಬನೇ ಉಪಯೋಗಿಸಿಕೊಳ್ಳುವಂಥಾದ್ದಾಗಿರಬಾರದು. ಕೂಡಲೇ ಎಲ್ಲರಿಗೂ ದೊರಕುವಂತೆ ಮಾಡಲು ಸಾಧ್ಯವಿಲ್ಲದಿದ್ದರೂ ಅಷ್ಟುರಿಸಬಾರದ್ದರೂ ಎಲ್ಲರಿಗೂ ದೊರಕುವಂಥಾದ್ದಾಗಿರಬೇಕು. ಖಾನೂನು ಮೀರಿ ಉಳಿಸಿಕೊಳ್ಳಲ್ಪಡತಕ್ಕಂಥಾದ್ದಾಗಿರಬೇಕು.'

ತತ್ಕಾಲ ನಮಗೆ ಯಾವ ಹಕ್ಕುಗಳು ದೊರಕುವಂತೆ ಇವೆಯೆಂಬದನ್ನು ಮಾತ್ರ ದೃಷ್ಟಿ ಮುಂದೆ ಇಟ್ಟುಕೊಳ್ಳದೆ, ಪ್ರತಿಯೊಬ್ಬ ಪ್ರಜೆಯೂ ಯಾವ ಸ್ಥಿತಿಯನ್ನು ಪಡೆಯಲು ಹೋರಾಡಬೇಕೆಂಬದನ್ನು ಪ್ರಜೆಯ ಮುಂದೆ ಇಡಲಿಕ್ಕಾಗಿ ಈಗ ಸ್ಥಾಪಿತವಾದ ಜರ್ಮನಿಯ ಪ್ರಜಾಸತ್ತಾತ್ಮಕವಾದ ಸರಕಾರವು ಪ್ರಜೆಯ ಹಕ್ಕುಬಾಧ್ಯತೆಗಳ ಪಟ್ಟಿಯನ್ನು ತಯಾರಿಸಿದೆಯಂತೆ. ಅವುಗಳಲ್ಲಿ ನಮಗೆ ಹದಿನಂಟು ಮುಖ್ಯವಾದವನ್ನು ಶಾಸ್ತ್ರಿಗಳು ತಿಳಿಸಿಕೊಟ್ಟರು. ದೇಹದ ಸ್ವಾತಂತ್ರ್ಯ, ಬೇಕಾದ ಕಡೆಗೆ ಹೋಗಿ ವಾಯಂ ವಾಸಮಾಡುವ ಸ್ವಾತಂತ್ರ್ಯ, ಪ್ರಜೆಯ ಮನೆಯ ಭದ್ರತೆ, ಆಸ್ತಿಯನ್ನು ಸಂಪಾದಿಸುವ ಸ್ವಾತಂತ್ರ್ಯ, ಮತ ಸಂಬಂಧವಾದ ಸ್ವಾತಂತ್ರ್ಯ, ಪತ್ರವ್ಯವಹಾರಗಳನ್ನು ಯಾರೂ ನೋಡಬಾರದೆಂಬ ಗೌರವ, ಯಾವ ಅಭಿಪ್ರಾಯವನ್ನಾದರೂ ಬಹಿರಂಗಪಡಿಸುವ ಸ್ವಾತಂತ್ರ್ಯ, ಯಾವ ಉದ್ಯೋಗಕ್ಕಾದರೂ ನೇಮಿಸಲ್ಪಡಬಹುದೆಂಬ ಹಕ್ಕು, ಖಾನೂನಿನ ಜಾರಿಯಲ್ಲಿ ಸರ್ವರ ಸರಿಸಮಾನತ್ವ, ಪಬ್ಲಿಕ್ ಮೀಟಿಂಗ್ ನಡಿಸುವ ಸ್ವತಂತ್ರ, ಸಂಘಗಳನ್ನು ಮಾಡಿಕೊಳ್ಳುವ ಸ್ವಾತಂತ್ರ್ಯ, ಯಾವ ಒಪ್ಪಂದವನ್ನಾದರೂ ಮಾಡಿಕೊಳ್ಳಬಹುದೆಂಬ ಸ್ವತಂತ್ರ, ವ್ಯಾಪಾರ ಮತ್ತು ಕಸಬುಗಳ ಸ್ವಾತಂತ್ರ್ಯ, ಮದುವೆಯ ಸ್ವಾತಂತ್ರ್ಯ—(ಈ ಸ್ವಾತಂತ್ರ್ಯವನ್ನು ಹಿಂದುಸ್ಥಾನದಲ್ಲಿ ಪಡೆಯಬೇಕಾದರೆ ಬಹಳ ದೀರ್ಘಕಾಲಬೇಕೆಂತ ಉಪನ್ಯಾಸಕರು ಹೇಳಿದರು.) ರಾಜಕೀಯ ಸಭೆಗಳಿಗೆ ಮೆಂಬರುಗಳನ್ನು ಚುನಾಯಿಸುವ ಸ್ವಾತಂತ್ರ್ಯ, ವಿದ್ಯೆ ಸಂಪಾದನೆಯ ಅನುಕೂಲತೆ, ಕಸಬುಗಳನ್ನು ದೊರಕಿಸಿಕೊಡುವದು ಪ್ರತಿಯೊಂದು ಸಂಸ್ಥಾನಕ್ಕೂ ಬಂದ ಮನೆ. ಇವಿಷ್ಟು ಹಕ್ಕುಗಳ ಪಟ್ಟಿಯನ್ನು ಕೊಟ್ಟು ಅನಂತರ ಮೂರು ಮುಖ್ಯ ಬಾಧ್ಯತೆಗಳನ್ನೂ ಸೂಚಿಸಿರುತ್ತಾರೆ. ಸರಕಾರವು ವಿಧಿಸುವ ಕಂದಾಯಗಳನ್ನು ತೆರುವದು, ಗೌರವ ಉದ್ಯೋಗಗಳನ್ನು ಅಂಗೀಕರಿಸಿಕೊಂಡು ನಡಿಸುವದು, ಮಿಲಿಟರಿಯಲ್ಲಿ ಸೇರಿಕೊಂಡು ಸರಕಾರದ ಭದ್ರತೆಯನ್ನು ಕಾಪಾಡಲು ಸಹಾಯ ಮಾಡುವಿಕೆ.

ಪ್ರಜೆಯ ಹಕ್ಕುಬಾಧ್ಯತೆಗಳನ್ನು ಸರಕಾರವು ಪ್ರಕಟಿಸಿದ ಬೇಕೋ ಎಂಬ ಪ್ರಶ್ನೆಯನ್ನು ಚರ್ಚಿಸಿ ಸರಕಾರವು ಹಕ್ಕುಬಾಧ್ಯತೆಗಳನ್ನು ದೃಢೀಕರಿಸಿ ಬಹಿರಂಗಪಡಿಸಿ ಇಡುವದು ಒಳ್ಳೇದೆಂತ ಉಪನ್ಯಾಸಕರು ವಾದಿಸಿರುತ್ತಾರೆ. ಸಮುದಾಯದ ಜೀವನದಲ್ಲಿ ಯಾವ ಹಕ್ಕುಗಳಿಗಾಗಿ ಹೋರಾಡಬಹುದೆಂತಲೂ ಯಾವ್ಯಾವ ಜವಾಬ್ದಾರಿಗಳಿಗೆ ಎದುರುನಿಲ್ಲಬಹುದೆಂಬದು ಪ್ರಜೆಗಳಿಗೆ ತಿಳಿದಿರುವದು ಕಟ್ಟಕಡೆಗೆ ಪಾಯದ ಅವಶ್ಯಕತೆಯಷ್ಟೇ ಅವಶ್ಯವೆಂತ ನಾಮದಾರ ಶಾಸ್ತ್ರಿಗಳು ಹೇಳಿದ್ದಾರೆ. ಯಾವ ಹಕ್ಕುಗಳನ್ನು ಕಾಪಾಡಬೇಕೆಂಬದು ಖಾನೂನು ಮಾಡುವವರಿಗೂ, ಜಡ್ಜಿಗಳಿಗೂ, ಆಡಳಿತ ನಡಿಸುವವರಿಗೂ ಪ್ರತಿಯೊಬ್ಬ ಪ್ರಜೆಗೂ ತಿಳಿದಿದ್ದರೆ ಈ ಹಕ್ಕುಗಳನ್ನು ಪ್ರಜೆಗಳು ಕಳಕೊಳ್ಳುವ ಸಂಭವವಿಲ್ಲ. ಖಾನೂನುಮಾಡುವ ಸಭೆಗಳ ಪ್ರಜಾಪ್ರತಿನಿಧಿಗಳು ಪ್ರಜೆಯ ಹಕ್ಕುಗಳನ್ನು ತಿಳಕೊಂಡಿದ್ದರೆ ಅವನ್ನು ಹೋಗಮಾಡಿಸುವ ಖಾನೂನಿಗೆ ವಿರೋಧಿಸಲು ಅನುಕೂಲವಾಗಿ ತುಂಬಾ ಅಧಿಕಾರಗಳಿರುವ ಉದ್ಯೋಗಸ್ಥರಿಗೆ ಈ ಪ್ರಕಟಿತ ಹಕ್ಕುಗಳಿಗೆ ವಿರೋಧವಾಗಿ ನಡೆಯಬಾರದೆಂಬದನ್ನು ನೆನಪಿನಲ್ಲಿಡುವದು ಅವಶ್ಯ.

ಮಹಾತ್ಮಗಾಂಧಿಯವರ ಸ್ವಚರಿತ್ರೆ.

(39ನೇ ಸಂಚಿಕೆಯಿಂದ ಮುಂದುವರಿದುದು.)

6 ನೆಯ ಪ್ರಕರಣವು.

ಒಂದು ವಿಪತ್ತು.

ಪ್ರೌಢಶಾಲೆಯಲ್ಲಿ ನನಗೆ ಕೆಲವು ಮುಖ್ಯ ಸ್ನೇಹಿತರಿದ್ದರು. ಇವರಲ್ಲಿ ಅತ್ಯಂತ ಪ್ರಿಯಮಿತ್ರರಾಗಿದ್ದವರಲ್ಲಿ ಒಬ್ಬನು ಸ್ವಲ್ಪ ಕಾಲಮಾತ್ರವೇ ಇದ್ದನಾದರೂ ಅವನನ್ನು ನಾನು ಯಾವಾಗಲೂ ಪರಿತ್ಯಜಿಸಿದುದಿಲ್ಲವು. ನಾನು ಎರಡನೆಯವನ ಕೂಡ ಸ್ನೇಹದಿಂದ್ದೇನೆಂದು ಮೊದಲನೆಯವನು ತಾನಾಗಿಯೇ ನನ್ನನ್ನು ಪರಿತ್ಯಜಿಸಿದನು. ಎರಡನೆಯವನ ಸ್ನೇಹವು ಬಹಳ ಕಾಲದವರೆಗಿದ್ದಿತು. ಇದು ನನ್ನ ಜೀವದಲ್ಲಿ ಒಂದು ವಿಪದ್ಘಟನೆಯೆಂದೇ ನಾನು ತಿಳಿಯಬೇಕಾಗಿ ಬಂದಿತು. ಸಂಸ್ಕರಣೋದ್ದೇಶದಿಂದ ನಾನು ಅವನ ಸ್ನೇಹವನ್ನು ಮಾಡಿದ್ದೆನಾಗಿತ್ತು. ಆತನು ಮೊದಲು ನನ್ನ ಚಿಕ್ಕಣ್ಣನ ಸಹಪಾಠಿಯಾಗಿದ್ದುದರಿಂದ ಅವರಿಬ್ಬರೂ ಸ್ನೇಹಿತರಾಗಿದ್ದರು. ಅವನ [illegible] ದೋಷವನ್ನು ತಿಳಿದೆ ಅವನು ಒಳ್ಳೇ ವಿಶ್ವಾಸಿ ಎಂದು ಭಾವಿಸಿದೆನು. [illegible] ನನ್ನ ತಾಯಿ, ದೊಡ್ಡಣ್ಣ ಮತ್ತು ನನ್ನ ಹೆಂಡತಿ ಸಹ ನನಗೆ ಬಹುವಾಗಿ ಹೇಳಿದರು. ನಾನು ಗಂಡಸೆಂಬ ಗರ್ವವು ನನಗೆ ಬಹಳವಾಗಿದ್ದುದರಿಂದ ನನ್ನ ಹೆಂಡತಿಯ ಮಾತನ್ನು ಕೂಡವೂ ಕೇಳದೆ ಹೋದೆನು. ನನ್ನ ತಾಯಿಯ ಮತ್ತು ದೊಡ್ಡಣ್ಣನ ಮಾತನ್ನು ಅವರಂತೆ [illegible] ನಾದರೂ, "ನೀವು ಹೇಳುವ ದೋಷವು ಅವನಲ್ಲಿರುವುದು ನಿಜವಾದರೂ ಅವನ ಸುಗುಣವನ್ನು ನೀವು ಗಮನಿಸಲಿಲ್ಲ. ಅವನನ್ನು ಒಳ್ಳೆಯದಾರಿಗೆ ತರುವುದಕ್ಕಾಗಿಯೇ ನಾನು ಅವನ ಕೂಡ ಸ್ನೇಹಮಾಡುತ್ತಿರುವುದಾಗಿರುವುದರಿಂದ ಅವನು ನನ್ನನ್ನು ಕೆಟ್ಟದಾರಿಗೆ ಎಳೆಯಲಾರನು. ಅವನು ಸದ್ವರ್ತನನ್ನು ಮಾಡಿದಲ್ಲಿ ಬಹಳ ಉತ್ತಮ ಮನುಷ್ಯನಾಗುವನಲ್ಲದೆ ನಾನೇನಾದರೂ ಅವನ ಸ್ನೇಹದಿಂದ ಕೆಟ್ಟುಹೋಗುತ್ತೇನೆಂದು ನೀವು ಎಷ್ಟು ಮಾತ್ರಕ್ಕೂ ಭಯಪಡಬೇಕಾದುದಿಲ್ಲವು" ಎಂದು ನಾನು ಅವರಿಗೆ ಹೇಳಿದೆನು. ಅದರಿಂದ ಮನಸ್ತೃಪ್ತಿಯಾಯಿತೆಂದು ನಾನು ಹೇಳಲಾರೆನಾದರೂ ಅವರು ನನ್ನನ್ನು ಪುನಃ ಏನೆಂದೂ ಕೇಳಲಿಲ್ಲವು. ಆಗ ನನಗುಂಟಾಗಿದ್ದ ಊಹೆಯು ತಪ್ಪೆಂದು ನಾನು ಆ ಮೇಲೆ ತಿಳಿದುಕೊಂಡೆನು. ರಾಮನು ಕೃಷ್ಣನನ್ನು ಸನ್ಮಾರ್ಗಕ್ಕೆ ತಂದನೆಂದರೂ ಕೃಷ್ಣನೊಡನೆ ರಾಮನು ಗಾಢ ಮೈತ್ರಿಯಿಂದಿರಲು ಅವಕಾಶವಿರಲಿಲ್ಲವು. ನಿಜವಾದ ಸ್ನೇಹವೆಂದರೆ ಜೀವಾತ್ಮರ ತಾದಾತ್ಮ್ಯವೇ. "ಅದು ಪ್ರಪಂಚದಲ್ಲಿ ಬಹಳ ಸಮಾನ ಸ್ವಭಾವದವರಿಗೆ ಮಾತ್ರ ಅಂತಹ ವಿಶ್ವಾಸವುಂಟಾಗುವುದು, ಮತ್ತು ಅದು ಬಹಳ ಕಾಲದವರೆಗೆ ನಿಲ್ಲುವುದು. ಆದರೆ ಅಂತಹ ಗಾಢಸ್ನೇಹವಿರುವವರಿಬ್ಬರೂ ಸುಸ್ಥಿರಿಸಿಕೊಳ್ಳಲಾರರು. ಒಬ್ಬನ ನಡವಳಿಕೆಯು ಇನ್ನೊಬ್ಬನಿಗೆ ಅನುಸರಣೀಯವು. ಅದಲ್ಲದೆ ಮನುಷ್ಯನಿಗೆ ದುರ್ಗುಣವೇ ಸುಲಭವಾಗಿ ಅಭ್ಯಾಸವಾಗುವುದೇ ಹೊರತು ಸುಗುಣವು ಅಭ್ಯಸಿಸಲ್ಪಡತಕ್ಕುದಾಗಿಲ್ಲವಾದ್ದರಿಂದ ಯಾರ ಕೂಡಲೂ ವಿಶೇಷ ಸ್ನೇಹವಿರಬಾರದೆಂದು ನನಗೆ ಈಗ ತೋರುತ್ತದೆ. ಭಗವಂತನಲ್ಲಿ ವಿಶ್ವಾಸದಿಂದಿರಲಿಚ್ಛಿಸುವವರು ಎಲ್ಲಾ ಮನುಷ್ಯರಲ್ಲಿ ರಹಸ್ಯ ತ್ಯಜಿಸಿ ಏಕಾಂಗಿಯಾಗಿರಬೇಕು, ಇಲ್ಲವೆ ಸಮಸ್ತ ಜೀವಕೋಟಿಯಲ್ಲೂ ವಿಶ್ವಾಸದಿಂದಿರಬೇಕು. ಇದೇ ನನ್ನ ನಿಜವಾದ ಅಭಿಪ್ರಾಯವು. ಇದು ತಪ್ಪಾಗಿದ್ದರೂ ಇರಬಹುದು, ಆದರೆ ನನ್ನ ಸ್ವಭಾವವು ಈ ವಿಷಯದಲ್ಲಿ ನಿಷ್ಫಲವಾಗಿದೆ.

ಆತನು ನನಗೆ ಪರಿಚಿತನಾಗುವವೇಳೆಗೆ ರಾಜಕೋಟೆಯಲ್ಲಿ ಸುಧಾರಕರ ತರಂಗವು ಪ್ರಬಲವಾಗಿದ್ದಿತು. ನಮ್ಮ ಉಪಾಧ್ಯಾಯರುಗಳಲ್ಲಿ ಬಹಳ ಮಂದಿ ರಹಸ್ಯವಾಗಿ ಮದ್ಯ ಮಾಂಸವನ್ನು ಸೇವಿಸುತ್ತಿದ್ದರೆಂದು ಆ ಸ್ನೇಹಿತನು ನನಗೆ ಹೇಳಿದನು. ರಾಜಕೋಟೆಯ ಪ್ರಜೆಗಳಲ್ಲಿ ಸುಪ್ರಸಿದ್ಧರಾದ ಬಹಳ ಜನರು ಅದೇ ವರ್ತನದವರೆಂದು ಅವನು ನನಗೆ ಹೇಳಿ ಕೆಲವರ ಹೆಸರನ್ನು ಕೂಡ ತಿಳಿಸಿದನು. ಕಾಲೇಜ್ ವಿದ್ಯಾರ್ಥಿಗಳಲ್ಲಿ ಕೂಡ ಕೆಲವರು ಸೇವನೆಮಾಡುತ್ತಾರೆಂದು ಅವನು ನನಗೆ ಹೇಳಿದನು. ಅದಕ್ಕೆ ಕಾರಣವೇನೆಂದು ನಾನು ಅವನನ್ನು ಕೇಳಿದೆ. "ನಾವು ಮಾಂಸವನ್ನು ತಿನ್ನದೆ ಹೋದಲ್ಲಿ ಬಲಹೀನರಾಗುತ್ತೇವೆ. ಆಂಗ್ಲೇಯರು ಮಾಂಸವನ್ನು ತಿನ್ನುವುದರಿಂದ, ಅವರು ನಮಗಿಂತಲೂ ಬಹಳ ಬಲಾಢ್ಯರಾಗಿರುವರು. ನಾನು ಮಾಂಸವನ್ನು ತಿನ್ನುತ್ತಿರುವುದರಿಂದಲೇ ಬಹಳ ಬಲಾಢ್ಯನಾಗಿರುವೆನು. ಬಹಳದೂರ ಓಡುವುದಕ್ಕೂ ನನಗೆ ಶಕ್ತಿಯಿದೆ. ಮಾಂಸಾಹಾರಿಗಳಿಗೆ ಬಾವೂ ಕುರುವೂ ಏಳುವುದಿಲ್ಲ. ಒಂದುವೇಳೆ ಎದ್ದರೂ ಕೂಡಲೆ ವಾಸಿಯಾಗುವುವು. ಈ ಪಟ್ಟಣದಲ್ಲಿ ಸುಪ್ರಸಿದ್ಧರಾದ ಅನೇಕಜನರು ಮಾಂಸವನ್ನು ತಿನ್ನುತ್ತಾರೆ. ಅವರೆಲ್ಲರೂ ಬುದ್ಧಿಹೀನರೆ? ಅದರ ಶಕ್ತಿಯನ್ನು ಗ್ರಹಿಸಿರುವುದರಿಂದಲೇ ತಿನ್ನುತ್ತಿರುವರು. ಆದು ಕಾರಣ ನೀನೂ ತಿನ್ನಬೇಕಾಗಿದೆ. ಪ್ರಯತ್ನಿಸಿ ನೋಡು. ಪ್ರಯತ್ನಿಸುವುದೇ ಉತ್ತಮ ಪದ್ಧತಿಯು. ಅದರಿಂದ ಎಂತಹ ಬಲವುಂಟಾಗುವುದೆಂಬುದು ಅದನ್ನು ತಿಂದವನಿಗಲ್ಲದೆ ಚೆನ್ನಾಗಿ ತಿಳಿಯುವುದಿಲ್ಲವು", ಎಂದು ಅವನು ನನಗೆ ಉಪದೇಶಮಾಡಿದನು. ಒಂದು ದಿವಸ ಮಾತ್ರ ನನ್ನ ಕೂಡ ಅವನು ಈ ವಿಷಯವನ್ನು ಹೇಳಿದುದಲ್ಲವು. ಪ್ರತಿದಿನವೂ ಆತನು ಈ ರೀತಿ ಬೋಧಿಸುತ್ತಿದ್ದನು. ನನ್ನ ಚಿಕ್ಕಣ್ಣನು ಇದಕ್ಕೆ ಮೊದಲೇ ಅವನ ಮಾತನ್ನು ಕೇಳಿ ಮಾಂಸವನ್ನು ತಿನ್ನಲಾರಂಭಿಸಿದ್ದನಲ್ಲದೆ ನನಗೂ ಬೋಧಿಸುತ್ತಿದ್ದನು. ನನ್ನ ಚಿಕ್ಕಣ್ಣನೂ, ಈ ಸ್ನೇಹಿತನೂ ಬಹಳ ಧೈರ್ಯವನ್ನೂ ದೇಹಶಕ್ತಿಯನ್ನೂ ಕಲಿತುಕೊಂಡಿದ್ದರು. ಅವರ ಮುಂದೆ ನಾನು ಬಲಹೀನನಾಗಿದ್ದೆನು. ಆ ಸ್ನೇಹಿತನು ಬಹಳ ದೂರ ಅತಿವೇಗವಾಗಿ ಓಡುವುದನ್ನು ಕಲಿತಿದ್ದನು ಮತ್ತು ಮೇಲಕ್ಕೆ ಹಾರಿ ದೂರಕ್ಕೆ ದುಮುಕುತ್ತಿದ್ದನು. ಎಷ್ಟು ಹೊಡೆದರೂ ಜಗ್ಗುತ್ತಿರಲಿಲ್ಲ. ಅವೆಲ್ಲವನ್ನು ಕೇಳಿ ನೋಡಿ ನಾನು ಅವನಿಗೆ ಸೋತುಹೋದೆನು. ಅವನಿಂದಲೇ ನಾನು ಕೂಡ ಬಲಾಢ್ಯನಾಗಬೇಕೆಂಬ ಆಶಯುಳ್ಳವನಾಗಿದ್ದೆನು.

ನಾನು ಆತನಾಗಿ [illegible] ಓಡಲೂ ನನಗೆ ಭಯವಾಗುತ್ತಿದ್ದಿತು. ಹಾವು, ದೆವ್ವ ಮೊದಲಾದವುಗಳ ವಿಷಯವನ್ನೂ, ಕಳ್ಳರ ವಿಷಯವನ್ನೂ ಕೇಳಲು ನನಗೆ ಬಹಳ ಭಯವಾಗುತ್ತಿದ್ದಿತು. ಕತ್ತಲೆಯಲ್ಲಿ ಮಲಗಿಕೊಂಡಲ್ಲಿ ನನಗೆ ಆ ವಿಷಯವೆಲ್ಲವು ಮನಸ್ಸಿಗೆ ಜ್ಞಾಪಕವಾಗುತ್ತಿದ್ದುದರಿಂದ ನಾನು ದೀಪವಿಲ್ಲದೆ ಮಾತ್ರಕ್ಕೂ ಮಲಗಿಕೊಳ್ಳುತ್ತಿರಲಿಲ್ಲ. ನನ್ನ ಪಕ್ಕದಲ್ಲಿ ಮಲಗಿರುವ ನನ್ನ ಹೆಂಡತಿಯ ಕೂಡ ನಾನು ಅಷ್ಟು ಭಯವುಳ್ಳವನೆಂದು ಹೇಳುವುದು ಹೇಗೆ? ಅದೂ ಅಲ್ಲದೆ [illegible] ನನಗೆ [illegible]. [illegible] ನನ್ನ ಹೆಂಡತಿಗೆ ನನಗಿಂತ ಅಧಿಕ ಧೈರ್ಯವಿದ್ದುದು [illegible]. ಅದು ಕಾರಣ ನನಗೆ [illegible] ನನ್ನ ಹೆಂಡತಿಯು ಕತ್ತಲೆಯಲ್ಲಿ [illegible] ಹಾವಿಗೂ, ದೆವ್ವದ ಭಯವೂ [illegible]. ನಾನು ಇಂತಹ [illegible] ಸಂಗತಿಯು [illegible] ಸ್ನೇಹಿತನಿಗೆ ತಿಳಿದಿತ್ತು. [illegible] ಮಾಂಸವನ್ನು ತಿನ್ನುವುದರಿಂದಲೇ ನನಗೆ [illegible] ಸ್ನೇಹಿತನು ನನಗೆ ಹೇಳುತ್ತಿದ್ದನು. "ಆಂಗ್ಲೇಯನು ಮಾಂಸ ತಿನ್ನುತ್ತಾನಾದುದರಿಂದ [illegible] ಇದ್ದಾನೆ. ಆದುಕಾರಣ ಬಲಿಷ್ಠನಾದ ಆಂಗ್ಲೇಯನು ದುರ್ಬಲನಾದ ಭಾರತೀಯನ ಮೇಲೆ ಪಾರುಪತ್ಯವನ್ನು ಮಾಡುತ್ತಿರುವುದು" ಎಂಬರ್ಥವನ್ನು ಕೊಡುವ ಹಾಡನ್ನು ಆಗ ವಿದ್ಯಾರ್ಥಿಗಳು ಓದುತ್ತಿದ್ದರು. ಇವೆಲ್ಲದರ ದೆಸೆಯಿಂದ ನಾನು ಕೂಡ ಕೆಟ್ಟುಹೋದೆನು. "ಮಾಂಸವನ್ನು ತಿನ್ನಲು ಪ್ರಾರಂಭಿಸಿ ಬಲಾಢ್ಯರಾಗಿ [illegible] ಮಾಂಸವನ್ನು ತಿನ್ನುವ ಆಂಗ್ಲೇಯರನ್ನು ಜಯಿಸಬಲ್ಲೆವು" ಎಂಬ ನಂಬಿಕೆಯು ನನಗೆ ಆಗ ಅಧಿಕವಾಗಿ ಉಂಟಾಗುತ್ತ ಬಂದಿತು.

ತರುವಾಯ ಮಾಂಸಭಕ್ಷಣೆಗೆ ಶುಭಮುಹೂರ್ತವು ನಿಶ್ಚಯಿಸಲ್ಪಟ್ಟಿತು. "ಮಾಂಸಾಹಾರ ಮಾಡಲು ಶುಭಮುಹೂರ್ತವೇಕೆ?" ಎಂದು ಬಹಳ ಜನರು ಕೇಳಬಹುದು. ನಮ್ಮ ಮನೆತನದವರು ವೈಷ್ಣವರು. ನನ್ನ ತಂದೆ ತಾಯಿಗಳು ಬಹಳ ಭಕ್ತಿಪರಾಯಣರಾಗಿದ್ದರು. ಅವರು ಪ್ರತಿದಿನವೂ ವೈಷ್ಣವದೇವಾಲಯಕ್ಕೆ ತಪ್ಪದೆ ಹೋಗುತ್ತಿದ್ದರು. ನಮ್ಮ ಕುಟುಂಬದವರಿಗಾಗಿಯೇ ಪ್ರತ್ಯೇಕ ದೇವಾಲಯವು ಕೂಡ ಇದ್ದಿತು. ಗೂರ್ಜರ ದೇಶದಲ್ಲಿ ಜೈನಮತ ಪ್ರಾಬಲ್ಯವು ಬಹಳ ಹೆಚ್ಚಾಗಿದ್ದಿತು. ಅದುಕಾರಣ ವೈಷ್ಣವರೂ, ಜೈನರೂ ಮಾಂಸಾಹಾರವನ್ನು ಬಹಳವಾಗಿ ತಿರಸ್ಕರಿಸುತ್ತಿದ್ದರು. ಅಂತಹ ಪರಿಸ್ಥಿತಿಯಲ್ಲಿ ನನಗೆ ದುರ್ಬುದ್ಧಿ ಹುಟ್ಟಿದ್ದಿತಾದರೂ ನನ್ನ ತಂದೆತಾಯಿಗಳಲ್ಲಿ ನನಗೆ ವಿಶೇಷ ಭಕ್ತಿಯಿದ್ದಿತು. ನಾನು ಮಾಂಸವನ್ನು ತಿನ್ನುತ್ತೇನೆಂದು ಅವರಿಗೆ ತಿಳಿದ ನಿಮಿಷದಲ್ಲೇ ಅವರು ನನ್ನ ದೆಸೆಯಿಂದ ಕೊರಗಿ ಪ್ರಾಣಬಿಡುತ್ತಿದ್ದರೆಂದು ಸಹ ನಾನು ತಿಳಿದುಕೊಂಡಿದ್ದೆನು. ನನಗೆ ಆಗಲೇ ಸತ್ಯನಿಷ್ಠೆಯು ಹೆಚ್ಚಾಗಿಯೇ ಇದ್ದಿತು. ನಾನು ಮಾಂಸವನ್ನು ತಿನ್ನಲು ಆರಂಭಿಸಿದುದರಿಂದ ನನ್ನ ತಂದೆತಾಯಿಗಳನ್ನು ಮೋಸಮಾಡಿದವನಾಗುತ್ತೇನೆಂದು ನನಗೆ ಆಗ ಗೊತ್ತಾಗಿರಲಿಲ್ಲವೆಂದು ಹೇಳಬಲ್ಲೆನು. ಆದರೆ ನಾನು ಜಿಹ್ವಾಚಾಪಲ್ಯದಿಂದ ಮಾಂಸವನ್ನು ತಿನ್ನುವುದನ್ನು ಕಲಿಯಲಿಲ್ಲ. ದೇಶಸಂಸ್ಕಾರ ನಿಮಿತ್ತದಿಂದ ಕಲಿತುಕೊಂಡೆನು. ಮಾಂಸದಲ್ಲಿ ಅಧಿಕ ರುಚಿಯುಂಟೆಂದು ಸಹ ನನಗೆ ಆಗ ತಿಳಿದಿರಲಿಲ್ಲವು. ಆದರೆ ಸಂಸ್ಕರಣಾಭಿಲಾಷೆಯಿಂದ ನನ್ನ ಸ್ನೇಹಿತನ ಮಾತಿಗೆ ನಾನು ಪೂರ್ಣವಾಗಿ ಸೋತುಹೋದೆನು.

ಏಳನೆಯ ಪ್ರಕರಣ.

[illegible]

ಮಾಂಸವನ್ನು ಭುಂಜಿಸುವ ಸುಮುಹೂರ್ತದಿನವೊದಗಿತು. ಆ ದಿವಸ ನನ್ನ ಮನಸ್ಥಿತಿಯು ಹೇಗಿದ್ದಿತೆಂಬುದನ್ನು ಸಂಪೂರ್ಣವಾಗಿ ವರ್ಣಿಸುವುದು ಬಹಳ ಕಷ್ಟ. ಒಂದು ಕಡೆ ರಾಜಕೀಯಸಂಸ್ಕರಣ (ಸ್ವರಾಜ್ಯಸಾಧನ) ಸಾಧ್ಯವಾಗಬೇಕೆಂಬ ವಿಲಕ್ಷಣವಾದ ಹೊಸಪದ್ಧತಿಯನ್ನು ಅವಲಂಬಿಸುತ್ತೇನೆಂಬ ಉತ್ಸಾಹವು ಮಿತಿಮೀರಿದ್ದಿತು. ಇನ್ನೊಂದುಕಡೆ ಕಳ್ಳನಂತೆ ಆ ಕಾರ್ಯವನ್ನು ಮುಚ್ಚುಮರೆಯಿಂದ ಮಾಡುವುದು ಅವಮಾನಕರವಾಗಿ ತೋರುತ್ತಿದ್ದಿತು. ಇವೆರಡರಲ್ಲಿ ಯಾವುದು ಪ್ರಬಲವಾಗಿದ್ದಿತೆಂಬುದನ್ನು ನಾನು ಹೇಳಲಾರೆ. ನದೀತೀರದಲ್ಲಿ ಒಂದು ಏಕಾಂತಸ್ಥಳವನ್ನು ಹುಡುಕಿಕೊಂಡು ಹೋದೆವು. ಅಲ್ಲಿ ಆ ದಿವಸ ನಾನು ಮಾಂಸವನ್ನು ನೋಡಿದೆನು. ನಾನು ಈ ಜನ್ಮದಲ್ಲಿ ಮಾಂಸವನ್ನು ನೋಡಿದುದು ಅದೇ ಮೊದಲು. ಒಂದು ನಾನ್‌ರೊಟ್ಟಿಯೂ ಇದ್ದಿತು. ಆ ಮಾಂಸವು ಚಕ್ಕಳದಂತೆ ಗಟ್ಟಿಯಾಗಿದ್ದಿತು. ಅದನ್ನು ನೋಡಿ ನನಗೆ ಅಸಹ್ಯವಾಯಿತು. ಅದನ್ನು ತಿನ್ನಲಾರದೆ ಬಿಸಾಡಿಬಿಟ್ಟೆನು.

ಆ ರಾತ್ರಿ ನನಗೆ ನಿದ್ರೆ ಬರಲಿಲ್ಲವು. ಏನೇನೋ ಕನಸು ಬಿದ್ದಿತು. ಒಂದು ಮೇಕೆಯು ನನ್ನ ಹೊಟ್ಟೆಯಲ್ಲಿದ್ದು ಬಹಳ ದೀನವಾಗಿ ಮೇ ಮೇ ಎಂದು ಅರಚಿಕೊಂಡಂತೆ ನನಗೆ ಕೇಳಿಸಿತು. ಅಷ್ಟಕ್ಕೇ ನಾನು ಪಾಪಕೃತ್ಯ ಮಾಡಿದೆನೆಂದು ತಿಳಿದುಕೊಂಡೆನು. ನಾನು ದೇಶಸೇವೆಗಾಗಿ ಮಾಂಸವನ್ನು ತಿಂದೆನಾದುದರಿಂದ ಅದು ಪಾಪವಲ್ಲವೆಂದು ಮನಸ್ಸಿನಲ್ಲಿ ಧೈರ್ಯ ಮಾಡಿಕೊಂಡೆನು. ನನ್ನ ಸ್ನೇಹಿತನು ನನ್ನ ಹಾಗೆ ಬಿಟ್ಟುಬಿಡುವವನಲ್ಲ. ಮಾಂಸದಲ್ಲಿ ಅನೇಕ ರುಚಿಕರವಾದ ಪದಾರ್ಥಗಳನ್ನು ಮಾಡಲುದ್ಯುಕ್ತನಾದನು. ನದೀ ತೀರದಲ್ಲಿ ರಹಸ್ಯವಾಗಿ ತಿನ್ನುವ ಪದ್ಧತಿ ಹೋಯಿತು. ಒಂದು ಒಳ್ಳೆ ಅಂದವಾದ ಭೋಜನ ಶಾಲೆಯಲ್ಲಿ ನನ್ನ ಸ್ನೇಹಿತನು ಏರ್ಪಡಿಸಿದನು. ಅದು ದಿವ್ಯ ಭವನವು. ಅದರೊಳಗೆ ಭೋಜನಶಾಲೆಗೆ ಬೇಕಾದ ಕುರ್ಚಿ ಮೇಜು ಮೊದಲಾದವು ಬಹಳ ಅಂದವಾಗಿ ಸಿಂಗರಿಸಲ್ಪಟ್ಟಿದ್ದುವು. ನನ್ನ ಸ್ನೇಹಿತನ ಪ್ರಯತ್ನವು ಚೆನ್ನಾಗಿ ಕೆಲಸಮಾಡಿತು. ನಾನ್‌ರೊಟ್ಟಿಯ ಮೇಲಣ ಅಸಹ್ಯತೆಯು ಹೋಯಿತು. ಮೇಕೆಯ ಮೇಲಿನ ಕನಿಕರವು ಬಿಟ್ಟಿತು. ಮಾಂಸವನ್ನು ಪ್ರತ್ಯೇಕವಾಗಿ ತಿನ್ನದಿದ್ದರೂ ಅದನ್ನು ಮಿಶ್ರಮಾಡಿ ಬೇಯಿಸಿದ ಪದಾರ್ಥವನ್ನು ಹಿತವಾಗಿ ತಿನ್ನುವವನಾದೆನು. ಈ ಪ್ರಕಾರವಾಗಿ ಒಂದು ವರ್ಷ [illegible] ಒಟ್ಟಿಗೆ ಆರಾವರ್ತಿ ಮಾಂಸ ಮಿಶ್ರವಾದ ಪದಾರ್ಥವನ್ನು ತಿಂದೆನು. ಯಾಕೆಂದರೆ ಆ ಭೋಜನ ಶಾಲೆಯು ದೊರಕುವುದು ಬಹು ಕಷ್ಟ. ಮಾಂಸದಿಂದ ಒಳ್ಳೇ ರುಚಿಕರವಾದ ಪದಾರ್ಥವನ್ನು ಮಾಡುವುದೂ ಕಷ್ಟವೇ. ಇದಕ್ಕೆ [illegible] ಇದ್ದ ಇನ್ನೆಲ್ಲಕ್ಕಾಗಿ ನನ್ನ ಸ್ನೇಹಿತನಿಗೆ ದುಡ್ಡನ್ನು ಕೊಡಲು ನನ್ನ ಬಳಿ ಹಣವಿಲ್ಲವಾಗಿ ಅವನೇ ಒದಗಿಸಿಕೊಳ್ಳಬೇಕಾಗಿತ್ತು. ಅವನಿಗೆ ಹಣವು ಹೇಗೆ ದೊರಕುತ್ತಿದ್ದಿತ್ತೆಂಬುದನ್ನು ನಾನು ಯಾವಾಗಲೂ ತಿಳಿದವನಲ್ಲ. ಹೇಗಾದರೂ ನಾನು ಮಾಂಸವನ್ನು ತಿನ್ನುವಂತೆ ಮಾಡಬೇಕೆಂದು ಅವನು ಕಂಕಣಬದ್ಧನಾಗಿದ್ದುದರಿಂದ ಹಣವನ್ನು ಒದಗಿಸಿಕೊಳ್ಳುತ್ತಿದ್ದನು. ಆದರೆ ಎಲ್ಲಿಯ ವರೆಗೆ ಮಾಡಲು ಸಾಧ್ಯ? ಕೆಲವು ದಿನವಾದ ಮೇಲೆ ಧನಾಭಾವದಿಂದ ಈ ಭೋಜನದ ಹಬ್ಬವನ್ನು ಬಿಡಬೇಕಾಯಿತು.

ಈ ಔತಣವು ನಡೆದ ದಿವಸ ಮನೆಯಲ್ಲಿ ಊಟಮಾಡುವುದು ಅಸಂಭವವು. ನಮ್ಮ ತಾಯಿಯು ಊಟಕ್ಕೆ ಬರಬೇಕೆಂದು ಕರೆದಾಗ ನಾನು ಹೋಗದಿದ್ದಲ್ಲಿ ಏತಕ್ಕೆ ಬರುವುದಿಲ್ಲವೆಂದು ಆಕೆಯು ಕೇಳುತ್ತಿದ್ದಳು. ಈಗ ಹೊಟ್ಟೆ ಹಸಿಯುವದಿಲ್ಲ, ಅನ್ನ ಅರಗಿಲ್ಲ, ಎಂದು ಯಾವುದೋ ಒಂದು ನೆವವನ್ನು ಆಕೆಗೆ ಹೇಳಿಬಿಡುತ್ತಿದ್ದೆನು. ಹೀಗೆ ಸುಳ್ಳನ್ನು ಹೇಳುತ್ತಿದ್ದುದಕ್ಕಾಗಿಯೂ, ಅದರಲ್ಲೂ ತಾಯಿಯ ಕೂಡ ನಾನು ಸುಳ್ಳು ಹೇಳಬೇಕಾಗಿ ಬಂದುದಕ್ಕಾಗಿಯೂ, ನನಗೆ ಬಹಳ ಪಶ್ಚಾತ್ತಾಪವೆನಿಸುತ್ತಿದ್ದಿತು. ನಾನು ಮಾಂಸವನ್ನು ತಿನ್ನುತ್ತಿದ್ದೆನೆಂಬುದು ನನ್ನ ತಾಯಿಗೂ ಅಣ್ಣನಿಗೂ ಗೊತ್ತಾಗಿದ್ದಲ್ಲಿ ಅವರು ಬಹಳ ವ್ಯಸನ ಪಡುವರೆಂದು ನಾನು ತಿಳಿದಿದ್ದೆನು. ಅದರಿಂದ ನನಗೆ ಮತ್ತಷ್ಟು ಚಿಂತೆಯುಂಟಾಯಿತು. "ನಾನು ಮಾಂಸವನ್ನು ತಿನ್ನುವುದೂ, ಜನರೆಲ್ಲರೂ ಭೋಜನ ವಿಚಾರದಲ್ಲಿ ಸುಧಾರಣೆಯನ್ನು ಹೊಂದಬೇಕೆಂದು ಬೋಧಿಸುವುದು ಅವಶ್ಯವಾಗಿದ್ದಿತಾದರೂ, ತಂದೆತಾಯಿಗಳನ್ನು ಮೋಸಪಡಿಸುವುದೂ ಅವರಿಗೆ ಸುಳ್ಳನ್ನು ಹೇಳುವುದೂ ಮಾಂಸ ತಿನ್ನುವುದಕ್ಕಿಂತ ಅಧಮವಾದುದು. ಅವರು ಬದುಕಿದ್ದುದರಿಂದಲೇ ನಾನು ಮಾಂಸವನ್ನು ತಿನ್ನಲು ಅವಕಾಶವಿರಲಿಲ್ಲವು. ಅವರು ಸತ್ತನಂತರ ನನಗೆ ಸ್ವಾತಂತ್ರ್ಯವು ಬರುವುದು. ಆಗ ನಾನು ಬಹಿರಂಗವಾಗಿಯೇ ಮಾಂಸವನ್ನು ತಿನ್ನಬಹುದಲ್ಲದೆ ಅದುವರೆಗೂ ತಿನ್ನಲಾಗದು" ಎಂದು ನಾನು ನಿಶ್ಚಯಿಸಿ ಆ ಸಂಗತಿಯನ್ನು ತಿಳಿಸಿದೆನು. ಆಗಿನಿಂದಲೂ ಮಾಂಸವನ್ನು ಬಿಟ್ಟುಬಿಟ್ಟೆನು. ನಾನೂ ನನ್ನ ಚಿಕ್ಕಣ್ಣನೂ ಮಾಂಸವನ್ನು ತಿಂದೆವೆಂಬ ಸಂಗತಿಯು ನನ್ನ ತಂದೆತಾಯಿಗಳಿಗೆ ಸ್ವಲ್ಪವಾದರೂ ತಿಳಿದಿರಲಿಲ್ಲವು. ಸುಳ್ಳು ಹೇಳಬಾರದೆಂಬುದರ ಮೇಲೆ ಮಾಂಸಾಹಾರವನ್ನು ಬಿಟ್ಟೆನಲ್ಲದೆ ಆ ಸ್ನೇಹಿತನ ಸಹವಾಸವನ್ನು ಮಾತ್ರ ಬಿಡಲಿಲ್ಲ. ನನಗೆ ಹುಟ್ಟಿದ ಸ್ವರಾಜ್ಯ ಸಾಧನಾಭಿಲಾಷೆಯು ನನ್ನನ್ನು ಅಧೋಗತಿಗೆ ತಂದಿತಲ್ಲದೆ ಆ ಸಂಗತಿಯು ಕೂಡ ನನಗೆ ಆಗ ತಿಳಿಯದು.

ಸೂಳೆಯ ಮನೆಗೆ ಹೋದುದು.

ಆ ಸ್ನೇಹಿತನ ಸಹವಾಸದಿಂದ ನಾನು ವ್ಯಭಿಚಾರಿಯಾಗುತ್ತಿದ್ದೆನಾದರೆ ನನ್ನ ಮನೋನಿಗ್ರಹವು ನನ್ನನ್ನು ಕಾಪಾಡಿತು. ಒಂದು ದಿವಸ ಆ ಸ್ನೇಹಿತನು ನನ್ನನ್ನು ಒಬ್ಬ ಸೂಳೆಯ ಮನೆಗೆ ಕರೆದುಕೊಂಡು ಹೋದನು. ಒಳಕ್ಕೆ ಹೋಗಿ ಅಲ್ಲಿ ಮಾಡಬೇಕಾದ ಕಾರ್ಯವನ್ನೆಲ್ಲಾ ಅವನು ನನಗೆ ಬೋಧಿಸಿ ನನ್ನನ್ನು ಒಳಕ್ಕೆ ಕಳುಹಿದನು. ಇದಕ್ಕೆ ಮೊದಲೇ ಆ ಸೂಳೆಯ ಕೂಡ ಎಲ್ಲ ಏರ್ಪಾಟನ್ನೂ ಮಾಡಿದ್ದನು. ಆಕೆಗೆ ಕೊಡಬೇಕಾದ ಹಣವನ್ನು ಸಹ ಕೊಟ್ಟುಬಿಟ್ಟಿದ್ದನು. ನಾನು ಪಾಪಕೃತ್ಯವೆಂದು ಹೇಳಿಯೂ ಕೂಡ ನಾನು ಬಿದ್ದೆನು. ಆದರೆ ದಯಾಮಯನಾದ ಈಶ್ವರನು ನಿರ್ಹೇತುಕಕೃಪಾಮಯನಾದ ಆ ಕಾರುಣ್ಯದಿಂದ ನನ್ನ ಪ್ರಯತ್ನಕ್ಕೆ ಪ್ರತಿಕೂಲನಾಗಿದ್ದು ನನ್ನನ್ನು ಕಾಪಾಡಿದನು. ನಾನು ಪಾಪಕೂಪದಲ್ಲಿ ಪ್ರವೇಶಿಸಿದ ಕೂಡಲೆ ಮಂಕುತನವೂ ಮೂಕತ್ವವೂ ಪ್ರಾಪ್ತವಾದುವು. ನಾನು ವೇಶ್ಯೆಯ ಪಕ್ಕದ ಮಂಚದ ಮೇಲೆ ಕುಳಿತ್ತು

ಕೊಂಡೆನು, ಆದರೆ ಬಾಯಿಯಲ್ಲಿ ಮಾತು ಹೊರಡಲಿಲ್ಲವು. ಅದರಿಂದ ಆಕೆಗೆ ಕೋಪಬಂದಿತು. ಆಕೆಯು ನನ್ನನ್ನು ಸೀಚವಾಗಿ ನಿಂದಿಸಿ ದುರುಗುಟ್ಟಿಗೊಂಡು ನೋಡಿದಳು. ಅದರಿಂದ ನನ್ನ ಪೌರುಷಕ್ಕೆ ಅವಮಾನವಾದಂತೆ ನನಗೆ ತೋರಿ ವಾಕ ಸಂಘಟಿಸಿದರೂ ನಂಬೋ ಪ್ರೇತಾತ್ಮನನ್ನು ಮಾಡಿ ನನ್ನ ಗಂಡಸುತನವನ್ನು ತಾಳಿಸಿಕೊಳ್ಳಬೇಕೆಂದು ನೆನೆಸಿದೆನಾದರೂ ಆ ಪ್ರಿಯ ವಿದ್ಯಾರ್ಥಿನಿಯಲ್ಲಿ ನನ್ನ ನಿಶ್ಚಯವಿರುವದರಿಂದಾಗಿ ನಾನು ಆತ್ಮವಶನಾಗಿ ಏನನ್ನೂ ಹೇಳಿಲ್ಲ. ಈಗಲೂ ಆ ವಿನಯಪೂರ್ಣ ವನಿತೆಗೆ ಬಂದಾಗಲೆಲ್ಲಾ ಬಾಗಿಲ್ಲವನ್ನು ಭಕ್ತಿಪೂರ್ವಕವಾಗಿ ಸ್ಮರಿಸುತ್ತಿರುವೆನು.

(ಮುಂದುವರಿಯುವದು.)

ಪ್ರಕಟಣೆ.

ಫೋರ್ಟ್ ಗೊಣಿಕೊಪ್ಪಲು ಗ್ರಾಮದಲ್ಲಿ ನನ್ನ ಗಂಗಾಧರಯ್ಯನ ನನ್ನ ಹೆಸರಿನಲ್ಲಿ ಏಕಮಾಲೀಕತ್ವದಲ್ಲಿ ನನ್ನ ಅನುಭವದಲ್ಲಿರುವ ಸುಮಾರು 400 ಎಕರೆ ಕೃಷಿ ಜಮೀನಿನ 15 ಪಟ್ಟೆ ಭೂಮಿಯನ್ನು ಇದಕ್ಕೆ ಸೇರಿದ ಜಾಗೆ, ಹಿತ್ತಲು, ಇದರಲ್ಲಿ ಇರುವ ಕಾಫೀ ತೋಟ, ಬಾಕಿ ಮಲ್ಲೂ ಮನೆಯ ಸಹಿತ, ಕೊಟ್ಟಿಗೆ ಇದಕ್ಕೆ ಸೇರಿದ ಅಡಿಕೆ, ತೆಂಗು, ಬಾಳೆ, ಕಾಫಿ ವಗೈರೆ ಇರುವ ಹಿತ್ತಲು ಸಹ ಮಾರಾಟಕ್ಕೆ ಸಿದ್ಧವಾಗಿದೆ. ಕ್ರಯಿಸುವವರು ಈ ಕೆಳಗಿನ ವಿಳಾಸಕ್ಕೆ ಬರೆದು ಹೆಚ್ಚಿನ ವಿಷಯ ತಿಳಿದುಕೊಳ್ಳಬಹುದು.

2—1. ಜಪ್ಪು ಗಂಗಾಧರಯ್ಯ.
ಅರ್ವತೊಕ್ಲು,
ಗೋಣಿಕೊಪ್ಪಲು.

ನೋಟೀಸು.

ಸಂಘದ ವಾರ್ಷಿಕ ಜನರಲ್ ಮೀಟಿಂಗು ಸಾಪ್ಪೋಕ್ಲಿನ ಕ್ಲಬ್ಬು ಕೋಣೆಯ ಮ॥ ರಾ॥ರಾ॥ ಮಂಜೇರಿ ರಾಮಯ್ಯನವರ ಬಿ. ಎ., ಬಿ. ಎಲ್. ರವರ ಅಧ್ಯಕ್ಷತೆಯಲ್ಲಿ 1926ನೇ ಇಸವಿ ಏಪ್ರಿಲ್ ತಾರೀಕು 17, 18 ಮತ್ತು 19ರಲ್ಲು ಮಧ್ಯಾಹ್ನ 1 ಘಂಟೆಗೆ ನಡೆಯುತ್ತೆ. ಊಟೋಪಚಾರಕ್ಕೆ ಪಾಡಿನಾಡು ನಾಡು ತಾಲೋಕಿನವರು ಏರ್ಪಾಡು ಮಾಡುತ್ತಾರೆ. ಚರ್ಚಿಸತಕ್ಕ ವಿಷಯಗಳನ್ನು ತಾರೀಕು 10—4—1926ರ ಒಳಗೆ ಜನರಲ್ ಸೆಕ್ರೆಟರಿ ಮಿ॥ ಸಿ. ಯನ್. ವೆಂಕಪ್ಪಯ್ಯನವರಿಗೆ ತಲುಪುವಂತೆ ಕಳುಹಿಸಬೇಕೆಂತಲೂ, ಮೀಟಿಂಗಿಗೆ ಎಲ್ಲಾ ಮೆಂಬರುಗಳು ಹಾಜರಾಗಬೇಕೆಂತಲೂ ಕೋರುತ್ತೇನೆ.

ಚಂದಾ ಮೊಬಲಗನ್ನು ಎರಡು ವರ್ಷಗಳಿಂದ ಪಾವತಿ ಮಾಡದೆ ಇರುವವರು ಸಂಘದ ಕಾರ್ಯಗಳಲ್ಲಿ ಭಾಗಿಗಳಾಗಕೂಡದು. ಎಲ್ಲಾ ಮೆಂಬರುಗಳು ತಮ್ಮ ಬಾಕಿ ಚಂದಾ ಮೊಬಲಗನ್ನು ಕೂಡಲೇ ಪಾವತಿ ಮಾಡಬೇಕಾಗಿ ಕೋರುತ್ತೇನೆ.

ಕೊಡಗು ಜಮೀನ್ದಾರರ ಸಂಘ, **ಸಿ. ಎನ್. ವೆಂಕಪ್ಪಯ್ಯ,**
ಮಡಿಕೇರಿ, ತಾ. 17—3—1926. ಜನರಲ್ ಸೆಕ್ರೆಟರಿ.

Indian Red Cross Society,
Coorg Local Centre,
Mercara.

ಅಖಿಲಭಾರತ ತರುಣ ಸ್ತ್ರೀ ಪರಿಷತ್ತಿನ,
ಕೊಡಗು ಶಾಖಾ, ಮಡಿಕೇರಿ.
ಪ್ರಸಿದ್ಧ ಪತ್ರಿಕೆ.

ಮೇಲ್ಕಂಡ ಸಂಘದ ವರ್ಷಾವಧಿ ನಡೆಸಬೇಕಾದ ಶಿಶು ಪ್ರದರ್ಶನವನ್ನು ಇದೇ ಏಪ್ರಿಲ್ ತಿಂಗಳ 3ನೇ ತಾರೀಕು ಮೊದಲುಗೊಂಡು 8ನೇ ತಾರೀಕಿನವರೆಗೆ ಮಡಿಕೇರಿ ಮಾರ್ಕೆಟ್ಟಿನಲ್ಲಿ ಈ ಕೆಳಗೆ ಕಂಡ ಕಾರ್ಯಕೌಶಲ್ಯದ ಪಟ್ಟಿಯ ಮೇರೆ ನಡಿಸಲಾಗುತ್ತೆ. ಶಿಶು ಪ್ರದರ್ಶನದ ಎಲ್ಲಾ ಮಹನೀಯರು ಮತ್ತು ಮಹಿಳೆಯರು ಬಂದು ಈ ಶಿಶು ಪ್ರದರ್ಶನವನ್ನು ಪ್ರೋತ್ಸಾಹಿಸಬೇಕಾಗಿ ಬೇಡಿಕೊಳ್ಳಲಾಗಿರುತ್ತದೆ.

ಕಾರ್ಯಕೌಶಲ್ಯದ ಪಟ್ಟಿ.

ತಾ. 3—4—26ರಲ್ಲು ಬೆಳಗ್ಗೆ ಮಡಿಕೇರಿ ಶಾಲಾ ಹುಡುಗರ ಮೆರವಣಿಗೆ. ಅಲ್ಲಿಂದ ತಾರೀಕು 6—4—26ರ ವರೆಗೆ ಬಿನ್ನಪತ್ರಿಕೆ ಸಾಯಂಕಾಲ ಸಿನಿಮಾ ಲೆಕ್ಚರ್, ಶೀತ ಜ್ವರ (ಮಲೇರಿಯ) ಶಿಶುಪಾಲನ, ಬಾಣಂತಿಯರ ಹಿತೋಪದೇಶ, ಪ್ರಥಮ ಚಿಕಿತ್ಸೆ ವಗೈರೆಗಳ ವಿಷಯ ಉಪನ್ಯಾಸದೊಡನೆ ಮ್ಯಾಜಿಕ್ ಲ್ಯಾಂಟರ್ನ್ ತೋರಿಸುವುದು. ತಾರೀಕು 7ನೇ ಬುಧವಾರ ದಿನ ಮಧ್ಯಾಹ್ನ ಆರೋಗ್ಯದ ಪ್ರದರ್ಶನ ತೆರೆಯಲ್ಪಡುವುದು. ತಾ 8ನೇ ಗುರುವಾರ ದಿನ ಮಧ್ಯಾಹ್ನ ಶಿಶು ಪ್ರದರ್ಶನ ತೆರೆಯುವುದು. ಆರೋಗ್ಯವಾದ ಶಿಶುಗಳಿಗೆ ಇನಾಮುಗಳನ್ನು ಕೊಡುವುದು. ಸೋಮವಾರಪೇಟೆ ಮತ್ತು ಮಡಿಕೇರಿಯಲ್ಲು ಪ್ರಥಮ ಚಿಕಿತ್ಸೆ (First aid) ಯಲ್ಲು ಈ ವರ್ಷ ತೇರ್ಗಡೆಯಾಂದಿದವರಿಗೆ ಸರ್ಟಿಫಿಕೇಟುಗಳನ್ನು ಕೊಡುವುದು.

ಎ. ಪಿ. ಕಾರ್ಯಪ್ಪ,
ಗೌರವ ಕಾರ್ಯದರ್ಶಿ.

ಸ್ವಯಂಸೇವಕರು ಬೇಕಾಗಿದ್ದಾರೆ.

ಇದೇ ಏಪ್ರಿಲ್ ತಾ. 17, 18, 19ರಲ್ಲು ಸಾಪ್ಪೋಕ್ಲಿನಲ್ಲಿ ಆಗುವ ಜಮೀನ್ದಾರ ಸಂಘದ ಸ್ವಾಗತದ ಕೆಲಸಕ್ಕೆ ಸ್ವಯಂಸೇವಕರು (ವಾಲಂಟೀಯರುಗಳು) ಬೇಕಾಗಿದ್ದಾರೆ. ಕೊಡಗು ದೇಶದ ಎಲ್ಲಾ ಕಡೆಯಿಂದಲೂ ಸ್ವಯಂಸೇವಕರ ಸೇವೆಯನ್ನು ನಿರೀಕ್ಷಿಸುತ್ತಲೇ ಇದ್ದೇವೆ. ನಾಲ್ಕುನಾಡು, ಕಡಿಯತ್ತುನಾಡು, ಕುಯ್ಯಂಗೇರಿನಾಡು, ಬೆಂಗನಾಡು, ತಾವಲನಾಡು ಮತ್ತು ಸಂಪಾಜೆನಾಡಿನಿಂದ ಕಡಿಮೆ ಪಕ್ಷ ಒಂದು ನೂರು ಜನರೂ, ದೇಶದ ಇತರ ಭಾಗಗಳಿಂದ 50 ಜನರೂ ಒಟ್ಟು 150 ಜನರ ಬೇಕಾಗಿದ್ದಾರೆ. ಇಷ್ಟಪಟ್ಟು ಸ್ವಯಂಸೇವಕರಾಗಿ ಕೆಲಸಮಾಡಲು ತಯಾರಾಗಿರುವವರು ಈ ಕೂಡಲೇ ಈ ಕೆಳಗೆ ರುಜು ಮಾಡಿದವರಿಗೆ ಬರೆದುಕೊಳ್ಳುವುದಲ್ಲದೆ ಬರುವ ಏಪ್ರಿಲ್ 3ನೇ ಶನಿವಾರ ಮಧ್ಯಾಹ್ನ ಸಾಪ್ಪೋಕ್ಲಿನಲ್ಲಿ ಆಗುವ ಮೀಟಿಂಗಿಗೆ ಮುದ್ದಾಗಿ ಹಾಜರಾಗಿ ಹೆಚ್ಚಿನ ವಿವರ ತಿಳುಕೊಳ್ಳಬೇಕಾಗಿ ಕೋರಿಕೆ.

ಕೆ. ಪಿ. ಚಿಣ್ಣಪ್ಪ.
3—2 ಸ್ವಾಗತ ಕಮಿಟಿಯ ಜನರಲ್ ಸೆಕ್ರೆಟರಿ.
ಸಾಪ್ಪೋಕ್ಲು.

ಕೊಡವ ಸಭೆ ಹಂಗಾಮಿ ಕಮಿಟಿ.

ಸನ್ 1926ನೇ ಇಸವಿ ಫೆಬ್ರುವರಿ ತಾ. 14ರಲ್ಲು ವೀರಾಜೇಂದ್ರಪೇಟೆಯಲ್ಲು ನಡದ ಹಂಗಾಮಿ ಕಮಿಟಿ ಮೀಟಿಂಗಿನಲ್ಲಿ ನಡೆದ ಸಂಗತಿಗಳ ಮಿನಿಟ್ಸುಗಳು.

ಕಳೆದ ಹಂಗಾಮಿ ಕಮಿಟಿ ಮೀಟಿಂಗಿನಲ್ಲು ಪಾಸಾದ ಠರಾವನ್ನು ಕೊಡಗು ಮತ್ತು ಲೋಕಪಾವನ ಪತ್ರಿಕೆಗಳಲ್ಲು ಪ್ರಕಟಿಸಬೇಕಾಗಿ ಕಳುಹಿಸಿದನ್ನು ಲೋಕಪಾವನದಲ್ಲು ಮಾತ್ರ ಪ್ರಕಟಿಸಿದಾಗಿಯೂ ಕೊಡಗು ಪತ್ರಿಕೆಯಲ್ಲು ಪ್ರಕಟಿಸದೆ ಇದ್ದ ಕಾರಣ ಇದೇ ಠರಾವನ್ನು ಇನ್ನೊಂದಾವರ್ತಿ ಕೊಡಗು ಪತ್ರಿಕೆಗೆ ರಿಜಿಸ್ಟರ್ ಕವರ್ ಮೂಲಕ ಕಳುಹಿಸಿಕೊಡಬೇಕೆಂದಾಗಿ ಮಂಜೂರಾಯಿತು.

ಕಳೆದ 1925ನೇ ಇಸವಿ ಆಕ್ಟೋಬರ್ ತಾರೀಕು 25ರಲ್ಲು ನಡೆದ ಮೀಟಿಂಗಿನ ಠರಾವುಗಳು.

ಮಿ. ಬಿದ್ದಂಡ ಬೋಪಯ್ಯನವರು ತಂದ ಠರಾವು—ತಾವು ಕೆಲವರು ಮುದ್ದಾಗಿ ಲೆಕ್ಕಮಾಡಿದ ಮೇರೆ ಕಳೆದ ಮೀಟಿಂಗಿಗೆ 250 ಜನರವರೆಗೆ ಸೇರಿದ್ದರು. ಇವರ ಪೈಕಿ ಸುಮಾರು 160 ಜನರವರೆಗೆ ಕೊಡವರ ಸಭೆ ಬೇಕೆಂಬುದಾಗಿ ಇರಾದೆ ಕೊಟ್ಟ ಪಟ್ಟಿಗೆ ಸೈನ್ ಮಾಡಿದರು. ಕೆಲವರು ತಮ್ಮ ತಮ್ಮ ಊರುನಾಡುಗಳಲ್ಲಿ ಜನರಲ್ಲಿ ಪ್ರಸ್ತಾಪಿಸಿ ಒಪ್ಪಿಗೆ ಕೊಡುತ್ತೇವೆಂಬುದಾಗಿ ಹೇಳಿದರು. ಸುಮಾರು 30 ಜನರವರೆಗೆ ಕೋಟೆರ ಚಿಣ್ಣಪ್ಪ ವಗೈರ ನಾಲ್ಕು ಜನರ ಪ್ರಸ್ತಾಪನೆಯಿಂದ ಆಧಾರ ಸಭೆ ಬೇಡವೆಂಬುದಾಗಿ ಬೆಂಬಲಿಸಿ ಹೋದವರು ಸುಳ್ಳು ವರ್ತಮಾನ ಹೇಳುವದೇನೆಂದರೆ—ಸುಮಾರು 400 ಜನರು ಮೀಟಿಂಗಿಗೆ ಸೇರಿದವರಾಗಿಯೂ ಇವರ ಪೈಕಿ 300 ಜನರು ಅಂಥಾ ಸಭೆ ಬೇಡವೆಂತ ಹೋದರೆಂತಲೂ ಸುಳ್ಳು ವರ್ತಮಾನಗಳನ್ನು ಅನೇಕ ನೋಟೀಸುಗಳ ಮೂಲಕವೂ ಕೊಡಗು ಪೇಪರಿನ ಮೂಲಕವೂ ಪ್ರಕಟಿಸಿದ್ದಾರೆ. ಇವರು ಪ್ರಕಟಿಸಿ ಬರುವ ಸಂಗತಿಗಳು ಸುಳ್ಳು ಮತ್ತು ಮೋಸದ ಪ್ರಚಾರವು ಎಂಬ ಸಂಗತಿಯನ್ನು ಪತ್ರಿಕೆ ಮೂಲಕ ದೇಶದಲ್ಲಿ ಪ್ರಕಟಿಸಬೇಕೆಂತಲೂ ಲೋಕಪಾವನ ಮತ್ತು ಕೊಡಗು ಪೇಪರುಗಳಲ್ಲಿ ಪಬ್ಲಿಷ್ ಮಾಡಬೇಕಾಗಿ ಹೇಳಿದ್ದನ್ನು ಕಣ್ಣಂಡ ಚೆಂಗಪ್ಪನವರು ಅನುಮೋದಿಸಿ ಕಮಿಟಿಯವರು ಏಕಾಭಿಪ್ರಾಯವಾಗಿ ಅಂಗೀಕರಿಸಲಾಗಿದೆ.

ಮಾಚಂಡ ಮುತ್ತಣ್ಣನವರು ತಂದ ಠರಾವು—ಕೊಡವರ ಸಭೆ ನಡೆಸುವದರಿಂದ ಕೆಳಗಿನ ವರ್ಗದವರಿಗೆ ಅನೇಕ ಬಾಧಕ ಉಂಟಾಗುವದೆಂತಲೂ ಕೊಡವರೆಂದರೆ ಪ್ರತ್ಯೇಕಿಸುತ್ತಾರೆಂತಲೂ ದೇಶದಲ್ಲಿ ಕೆಲವು ಜನರು ಭೀತಿಪಡುವದು ಪ್ರಾರಂಭವಾಗಿರುತ್ತೆ. ಆದರೆ ಇದುವರೆಗೆ ಮಾಡಿಕೊಂಡಿರುವ ಸಭೆಯ ರೀತಿ ಈ ಸಭೆಯ ಆಂತರಿಕ ಉದ್ದೇಶಗಳಿಗೆ ವಿರುದ್ಧವಾಗಿದೆ. ಈ ಸಭೆಯಿಂದ ಬಾಕಿ ವರ್ಗದವರಿಗೆ ಯಾವ ಬಾಧಕವೂ ಉಂಟಾಗದಿಲ್ಲವೆಂಬ ಸಂಗತಿಯನ್ನು ಕೊಡಗು ಮತ್ತು ಲೋಕಪಾವನ ಈ ಎರಡು ಪೇಪರುಗಳಲ್ಲಿ ಪ್ರಕಟಿಸುವಂತೆ ಮಾಡಬೇಕೆಂದು ತಂದ ಠರಾವನ್ನು ಬಿದ್ದಂಡ ಬೋಪಯ್ಯನವರು ಅನುಮೋದಿಸಿ ಮೀಟಿಂಗಿನಲ್ಲಿ ಮಂಜೂರ್ ಮಾಡಲ್ಪಟ್ಟಿದೆ.

ಎ. ಪಿ. ಚಂಗಪ್ಪ,
ಪ್ರಸಿಡೆಂಟ್, ಕೊಡವ ಸಭೆ.

[ಸೂಚನೆ:—ಈ ಮೀಟಿಂಗಿನ ಪ್ರೊಸೀಡಿಂಗ್ಸನ್ನು ಪ್ರಕಟಣೆ ಬಗ್ಗೆ ನಮಗೆ ಕಳುಹಿಸಿಕೊಡುವಂತೆ ಈ ಸಭೆಯ ಜಾಯಿಂಟ್ ಸೆಕ್ರೆಟರಿಯವರಿಗೆ ನಾವು ಬರೆದಿದ್ದರೂ ಕೂಡ ಅದು ನಮಗೆ ಈ ವರೆಗೆ ಸಭೆಯ ಪ್ರೆಸಿಡೆಂಟರ ಯಾ ಸೆಕ್ರೆಟರಿಗಳ ರುಜುವಿನಿಂದೊಡಗೂಡಿಯಾಗಲೀ, ಅಥವಾ ಅದರ ಭರವಸೆಯ ಪ್ರತಿಯಾಗಲೀ ತಲುಪಿರಲಿಲ್ಲವಾದುದರಿಂದ ಅದನ್ನು ಪ್ರಕಟಿಸದೆ ಇದ್ದಾಯಿತು. ಈ ವಾರ ಅಧ್ಯಕ್ಷರು ತಮ್ಮ ರುಜುವಿನೊಡನೆ ಕಳುಹಿಸಿರುವದರಿಂದ ಅವರ ಕೋರಿಕೆ ಮೇರೆ, ತಡವಾದರೂ ಅದನ್ನು ಪ್ರಕಟಿಸಿದ್ದಾಗಿದೆ. ಸಂ.]

ಮಾರಾಟಕ್ಕೆ ಸಿದ್ಧವಾಗಿದೆ.

ಮೈಸೂರು ಸಿಟಿಯಲ್ಲಿ ಬಂಗ್ಲೆ ನಿವೇಶನಗಳು.

ರಾಜಧಾನಿಯ ವಾಣಿವಿಲಾಸ ಎಕ್ಸ್‌ಟೆನ್ಷನ್ನಿನ 1ನೇ ಬ್ಲಾಕಿನಲ್ಲಿ 1 ಮತ್ತು 4ನೇ ನಿವೇಶನಗಳು, ಅಳತೆ 285 X 160 ಅಡಿಗಳು, ವೈಸರಾಯ್ ಕನ್ನಂಬಾಡಿ ರೋಡಿನಲ್ಲಿ ಪಕ್ಕ ಇಟ್ಟಿಗೆ ಕಂಪೌಂಡು ಎರಡು ಗೇಟುಬಾಗಲುಗಳು, ಸೀರಿನಲ್ಲಿ ಕನೆಕ್ಷನು ಇರುತ್ತೆ. ಗೋಡೆ ಮತ್ತು ಗೇಟುಬಾಗಲುಗಳು ಸೇರಿ ಖರೀದಿ 7117—9—0 ರೂ. ಮೈಸೂರು ಸಿಟಿ ಇಂಪ್ರೂವ್‌ಮೆಂಟು ಟ್ರಸ್ಟಿನವರ ಶರತ್ತಿಗೆ ಅನುಸರಿಸಿ ಮಾರಾಟ ಮಾಡಲ್ಪಡುತ್ತೆ. ಅಪೇಕ್ಷೆಯುಳ್ಳವರು ಇದರಡಿ ನಮೂದಿಸಿದವರಿಗೆ ಬರೆದುಕೊಳ್ಳಬಹುದು.

ಸುಪರಿಂಟೆಂಡೆಂಟರು,
4—2 ಲೇಬರ್ ಡಿಪಾರ್ಟ್‌ಮೆಂಟು,
ಮೈಸೂರು.

ಬೇಕಾಗಿವೆ.

ಬೀಟೆಮರದ ತೊಲೆಗಳು ಬೇಕಾಗಿವೆ.

ಒಳ್ಳೇ ಬೆಲೆ ಕೊಡಲಾಗುವುದು. ಹೆಚ್ಚಿನ ಸಂಗತಿಗೆ ದಯವಿಟ್ಟು ಈ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳುವುದು.

WANTED.
Rose wood logs (Beeti)
Good price offored.
For further particulars please apply to:—

R. FRAMJEE,
Mercara.

Apply for our shooting Season's Clearance Sale Catalogue of Brand New Goods.

No License Required!! **10 to 25 percent Reductions in Prices.**

No Licenser Required



Webley and Scott Air Pistol, cal ·177 or ·22 bore Powerful and Accurate complete with a sample box of slugs, two spare washers, a brush forcleaning, and a bookletof instructions Rs. 30/— Free delivery.

Pwerful German Diana Air gun. Handsome and Accurate, takes B S. A. Patern No. 1 Slugs and Darts. expressly recommendable for Target Practice Rs 15/ Free delivery.

Brilliant Search Light Lamp for Night Sports Rs 30/— Free delivery.

No License required to purchase or to possess the above items.

Reliable D. B. B. L. 12 bore guns	Rs	60/—	and upwards
Do S. B B L. 12 do	do.	40/—	do
D B M. L Guns	,,	45/-	do.
S. B M. L. do.	,,	30/—	do.
S B. B. L. Rifles	,,	25/—	do
B. L. Revolvers and Pistols	,,	30/—	do.

Arms, Ammunition and shooting requisitesof **almost every kind and quality offered at exceptionally favourable rates A Number of good quality second hand weapons also offered for sale in theNew Catalogue.**

GOOLAMHUSIAIN ALLIBHOY & SONS
Largest Importers of Firearms and Ammunition,
Cheapest priced firm in India,
210 AbdulRehman Street, BOMBAY.

ವರ್ತಮಾನ ಸಂಗ್ರಹ.

ಸ್ವದೇಶ

ಸೆಂಟ್ರಲ ಬ್ಯಾಂಕಿನ, ಡೈರೆಕ್ಟರುಗಳ ಮೀಟಿಂಗು ಈ ತಾ 27ರಲ್ಲಿ ಮಡಿಕೇರಿ ಮುನ್ಸಿಪಲ್ ಆಫೀಸಿನಲ್ಲಿ ನಡೆಯುವುದು.

ಗುಬ್ಬಿ ಶ್ರೀಚೆನ್ನಬಸವೇಶ್ವರ ನಾಟಕ ಕಂಪೆನಿಯವರು ಏಪ್ರಿಲ್ ತಿಂಗಳ ಒಂದನೇ ವಾರದಲ್ಲಿ ಮಡಿಕೇರಿಗೆ ಬರುವರೆಂದು ವರ್ತಮಾನ.

ಕೊಡವ ಸಭೆಯ ಪ್ರಾರಂಭೋತ್ಸವದ ಜನರಲ್ ಮೀಟಿಂಗು ಈ ತಾ. 28ರಲ್ಲಿ ವೀರರಾಜಪೇಟೆ ಬೋರ್ಡಹೈಸ್ಕೂಲು ಹಾಲಿನಲ್ಲಿ ನಡೆಯುವದೆಂದು ತಿಳಿಯುತ್ತೇವೆ

ಪಾಡಿನಾಲ್ಕುನಾಡು ತಾಲೂಕಿನ ಜಮಾಬಂದಿ ಸಂಘದ ಸ್ಥಾನಿಕರ ಎಲ್ಲಾ ಗ್ರಾಮ ಕಮಿಟಿ ಮೆಂಬರುಗಳ ಒಂದು ಮೀಟಿಂಗು ಬರುವ ಏಪ್ರಿಲ್ ತಾ 3ರಲ್ಲು ನಾಪೋಕ್ಲು ಶಾಲೆಯ ಒಳಗೆ ನಡೆಯಲಿಕ್ಕಿದೆ

ಕಳೆದವಾರ ಅಮ್ಮತ್ತಿಯಲ್ಲಿ ನಡೆದ ಫುಟ್‌ಬಾಲ್ ಟೂರ್ನಮೆಂಟಿನಲ್ಲಿ ಒಳಗುಂದದ 'ಕ್ರೆಸೆಂಟ್' ಟೀಮಿನವರು ಗೆದ್ದು... ಗೆದ್ದವರಿಗೆ ... ಪತ್ತ್ಯಣ್ಣನವರಿಂದ ಕೊಡಿಸಲಾಯಿತೆಂದೂ ಸುದ್ದಿ.

ಲಡ್ಡಿಕ್ರಾಸ್ ಸಂಘದವರ ಆಶ್ರಯದಲ್ಲಿ ಪರ್ಯಂಪ್ರತಿ ... ಶಿಶು ಪ್ರದರ್ಶನವು ಈ ಸಾರಿ ಏಪ್ರಿಲ್ ತಾ. 3ರಂದು ಮಡಿಕೇರಿ ಮರ್ಕಾರ ಕಾನ್ವೆಂಟಿನಲ್ಲಿಯೂ ವೀರರಾಜಪೇಟೆ ... ಸ್ಕೂಲು ಒಳಗೆ ತಾ 9 ಮತ್ತು 10ರಲ್ಲಿಯೂ ನಡೆಯುವುದು

ಕೊಡಗು ಕೌನ್ಸಿಲು ಮೆಂಬರುತನಕ್ಕೆ ರಾಜೀನಾಮೆ ಕೊಟ್ಟ ಮೇ॥ ನಿಕಲ್ ಮತ್ತು ಮೇ॥ ನ್ಯಾಕಮಾರರವರ ಸ್ಥಾನಗಳಿಗೆ ಮೇ॥ ಸಿ ಜಿ ಟಿಪ್ಪಿಂಗ್ ಮತ್ತು ಮೇ. ಯಸ್ ... ಮಂಡೀರವರು ಮೆಂಬರುಗಳಾಗಿ ಚುನಾಯಿಸಲ್ಪಟ್ಟಿರುವರು.

ಕೌನ್ಸಿಲಿನ ಮಲೇರಿಯ ಕಮಿಟಿಯವರು ಈ ತಾ 22ರಲ್ಲಿ ವೀರರಾಜಪೇಟೆಯಲ್ಲಿಯೂ ತಾ 23ರಲ್ಲಿ ಮಡಿಕೇರಿಯಲ್ಲಿಯೂ ಮೀಟಿಂಗು ಮಾಡಿ ಕೆಲವು ಮಹನೀಯರ ಅಭಿಪ್ರಾಯಗಳನ್ನು ತೆಗೆದುಕೊಂಡದ್ದಲ್ಲದೆ ಎರಡು ಮುನ್ಸಿಪಾಲಿಟಿಗಳನ್ನೂ ನೋಡಿದರು

ವೀರರಾಜಪೇಟೆ ಮುನ್ಸಿಪಾಲಿಟಿಯ ಕಳೆದ ಚುನಾವಣೆಯು ಕ್ರಮಕ್ರಮಗಳಿವೆಯೆಂತ ಅದನ್ನು ವಜಾಮಾಡಬೇಕೆಂದು ಮೇ. ಪುಟ್ಟಮಾಡ ನಾಣ್ಯಯ್ಯನವರು ದಾಖಲು ಮಾಡಿದ್ದ ಕೇಸನ್ನು ಅವರು ವಾಪಸು ತೆಗೆದುಕೊಂಡಿರುವರೆಂದು ತಿಳಿಯುತ್ತೇವೆ

ಕಮೀಷನರವರು ನರ್ಕೀಟಿನಲ್ಲಿರುವಾಗ ತಾ 30ರಲ್ಲಿ ಬೆಳಿಗ್ಗೆ 11 ಗಂಟೆಯಿಂದ 3 ಗಂಟೆವರೆಗೆ ಸಂಪಾಜೆಯಲ್ಲಿಯೂ, ಪೊನ್ನಂಪೇಟೆಯಲ್ಲಿ ಏಪ್ರಿಲ್ 1ನೇ ತಾರೀಕಿನಲ್ಲಿ ಮ... ವ್ಯಾಪ್ತದ ಮೇಲೆಯೂ ಅರ್ಜಿಗಳನ್ನು ತೆಗೆದುಕೊಳ್ಳುವ ... ದಾಗಿ ತಿಳಿಯಬರುತ್ತದೆ.

ಜಮಾಬಂದಿ ಸಂಘದ 1924 ಮತ್ತು 1925ನೇ ವರ್ಷದ ಲೆಕ್ಕಪತ್ರ ಆಡಿಟರವರಿಂದ ಪರಿಶೋಧಿಸಲ್ಪಟ್ಟು ವರದಿ ಒಪ್ಪಿಸಲಾಗಿದೆಯೆಂತಲೂ, ಈ ರಿಪ್ರೋರ್ಟನ್ನು ಬೇಗನೆ ಸಂಘದ ಕಮಿಟಿ ಮೀಟಿಂಗಿನ ಮುಂದೆ ಇಡಲಾಗುವುದೆಂತಲೂ ಸಂಘದ ಸೆಕ್ರೆಟರಿಯವರು ತಿಳಿಸಿರುತ್ತಾರೆ

ಕೊಡಗು ವಿದ್ಯಾ ಇಲಾಖೆಯ ಉದ್ಯೋಗಸ್ಥರ ಮಿತಿಯುಳ್ಳ ಸಹಕಾರ ಸಂಘಕ್ಕೆ ಒಳಪಟ್ಟ ವೀರರಾಜಪೇಟೆ ಸೆಂಟರಿನ ವಿದ್ಯಾ ಇಲಾಖೆಯ ಉದ್ಯೋಗಸ್ಥರ ಒಂದು ಉಪ ಕಮಿಟಿಯನ್ನು ನಿರ್ಮಾಣಿಸುವ ಬಗ್ಗೆ ಈ ತಾ. 27ರಲ್ಲಿ ವೀರರಾಜಪೇಟೆಯಲ್ಲಿ ಒಂದು ಮೀಟಿಂಗು ನಡೆಯುವುದು

ಪರಸ್ಪರ ಕುಟುಂಬ ಸಹಾಯಕನಿಧಿಯ ಮಹಾಸಭಾ ಮೀಟಿಂಗು ಏಪ್ರಿಲ್ ತಿಂಗಳ 11ನೇ ತಾರೀಕಿನಲ್ಲಿ ಮಧ್ಯಾಹ್ನದ ವೇಳೆ 3 ಗಂಟೆಗೆ ಮಡಿಕೇರಿ ಕೋಟೆಯಲ್ಲಿ ಆಗುವದರಿಂದ ಮೆಂಬರುಗಳೆಲ್ಲರೂ ದಯಮಾಡಿಸಬೇಕಾಗಿ ಮೇಗಡಿಕೇರಿಯಂಡ ಚಿಣ್ಣಪ್ಪನವರು ಕೇಳಿಕೊಳ್ಳುತ್ತಾರೆ

ಈ ತಾ. 21ರಲ್ಲಿ ಸಂಪಾಜೆ ಗ್ರಾಮದ ಕೀಲಾರು ದಾಮು ಚಂದ್ರಯ್ಯನವರು ತನ್ನ ಕೀಲಾರು ಭೂಮಿಯಲ್ಲಿ ಒಂದು ತುಂಟ ಗಂಡಾನೆಯನ್ನು ಗುಂಡು ಹೊಡೆದುಕೊಂದರೆಂತಲೂ, ಆದರ ಮೈಯ್ಯಲ್ಲಿ ಅವರು ಹೊಡೆದ ಎಳು ಗುಂಡುಗಳ... ದಿನಕರು ಹಳೇ ಗುಂಡಿನ ಹೇಟುಗಳಿದ್ದುವೆಂತಲೂ ... ದಿನದಿಂದ ಅಲ್ಲಿಯ ಗ್ರಾಮಸ್ಥರಿಗೆ ಒಂದು ದೊಡ್ಡ ನಷ್ಟವು ... ಗಿದಂತಾಯಿತೆಂತಲೂ ಬಂದ ... ವಾರ್ತೆ

ಈ ತಾ 22ರಲ್ಲು ಮಡಿಕೇರಿಯಲ್ಲಿ ಲಕ್ಷ್ಮಿದೇವಿ ... ಒಡೆದು ಹಾಕಿದ ಅಂಜಿಗೇರಿನಾಡು ದಸವಿಮೆ ಸಂಘದ ಮೀಟಿಂಗು ನಡಿಸಲ್ಪಟ್ಟಲ್ಲಾಯಿತ ... ಉಳಿಕೆಯಾದ ಹಣವನ್ನು ಮಡಿಕೇರಿಯಲ್ಲಿ ಬೋರ್ಡಿಂಗ್ ಕಟ್ಟಿಸಲಿಕ್ಕೂ, ತಾವಳಗೇರಿ ನಾಡು ದಸವಿಮೆ ಸಂಘದ ಮೀಟಿಂಗು ತಾ. 23ರಲ್ಲಿ ಶ್ರೀಮಂಗಲದಲ್ಲಿ ನಡೆದು ಉಳಿಕೆ ಹಣವನ್ನು ಅಲ್ಲಿಯ ಆಸ್ಪತ್ರೆಗೆ ಒತ್ತಾಗಿ ಕಾಯಿಲಸ್ಥರಿಗೆ ಉಳಕೊಳ್ಳಲು ಒಂದು ವಾರ್ಡನ್ನು ಕಟ್ಟಿಸಲಿಕ್ಕೂ ಉಪಯೋಗಿಸುವಂತೆ ತೀರ್ಮಾನಿಸಿದರೆಂದು ತಿಳಿಯಬರುತ್ತದೆ. ಇದೇ ವೇಳೆ ತಾ. 7ರಲ್ಲು ಪೊನ್ನಂಪೇಟೆಯಲ್ಲಿ ಹತ್ತುಗಟ್ಟುನಾಡು ದಸವಿಮೆ ಸಂಘದಮೀಟಿಂಗು ನಡೆದು ಉಳಿಕೆಯಾದ ಹಣದಿಂದ ಅಲ್ಲಿ ಒಂದು ಪುಸ್ತಕ ಭಂಡಾರ ಮತ್ತು ವಾಚನಾಲಯವನ್ನು ಸ್ಥಾಪಿಸಲು ತೀರ್ಮಾನಿಸಿದರಂತೆ.

ಹಿಂದೂದೇಶ.

ಮೈಸೂರು ಸಂಸ್ಥಾನದ ದಿವಾನಪದವಿಗೆ ಮಿ. ಮಿರ್ಜಾ ಎಂ. ಇಸ್ಮಾಯಿಲ್‌ರವರು ನೇಮಿಸಲ್ಪಟ್ಟಿರುವರು

ಮಹಾತ್ಮ ಗಾಂಧಿಯವರು ತಮ್ಮ ಆರೋಗ್ಯ ಅಭಿವೃದ್ಧಿಗಾಗಿ ಬರುವ ತಿಂಗಳು ಮಸೂರಿಗೆ ಹೋಗಿ ಅಲ್ಲಿರುವರು. ತಿಂಗಳು ಇರುವವರು ಕಳೆದ ... ಈಚೆಗೆ ಅವರ ತೂಕವು 3 ಪೌಂಡು ಹೆಚ್ಚಾಗಿ ... ಅವರು 102½ ಪೌಂಡು ತೂಗುತ್ತಾರೆ

ಫ್ರಾಂಟಿಯರ (ವಾಯುವ್ಯ ಸರಹದ್ದಿನ) ಪ್ರಾಂತ್ಯದ ರಾಜಕೀಯ ಸುಧಾರಣೆ ಕೊಡಬೇಕೆಂಬ ಠರಾವು ಎಸಂಬ್ಲಿಯಲ್ಲಿ ಪಾಸಾಯಿತು ... ಪಕ್ಷ ಹಿಂದೂ ಮೆಂಬರುಗಳೆಲ್ಲ ರ ವಿರೋಧವಾಗಿಯೂ ಮುಸಲ್ಮಾನ ಮೆಂಬರುಗಳು ಪರವಾಗಿಯೂ ಇದ್ದರು

ಬೊಂಬಾಯಿಯ ಗವರ್ನರಾದ ಲಾರ್ಡ್ ವಿಲ್ಸನ್‌ರವರು ಕಾಯಿಲಸ್ಥರಾದ ತನ್ನ ಪತ್ನಿಯನ್ನು ಇಂಗ್ಲೆಂಡಿಗೆ ಕರೆದುಕೊಂಡು ಹೋಗುವುದರಿಂದ ಅಲ್ಲಿಯ ಸೀನಿಯರ್ ಎಕ್ಸಿಕ್ಯೂಟಿವ್ ಕೌನ್ಸಿಲ್ ಮೆಂಬರಾದ ಸರ್ ಮನ್ಸುಬಾರ್ಟ್ರನವರು ಅವರ ಬದಲಿ ಹಂಗಾಮಿ ಗವರ್ನರಾಗಿ ನೇಮಿಸಲ್ಪಟ್ಟಿರುವರು

ಮದ್ರಾಸ ಮುನ್ಸಿಪಾಲಿಟಿ ಶಾಲೆಗಳಲ್ಲಿ ವಿದ್ಯಾರ್ಥಿಗಳಿಗೆ ... ಮಧ್ಯಾಹ್ನದ ... ಕೊಡಬೇಕೆಂದು ... ಕೊಳಕ್ಕಾದ ... ಸೂಚಿಸಿರುವರು.

... ಈ ತಾ 28ರಲ್ಲು ... ಹಂಗಾಮಿ ... ಪಟ್ಟ ತೀರದಲ್ಲಿ ಒಂದು ... ಅಲ್ಲಿಂದ ... ತಾರೀಕಿನಲ್ಲಿ ತಲುಪುವರ ... ಅವರು ಏಪ್ರಿಲ್ ತಾ ... ತಲುಪುವರೆಂದು ಇಂಡಿಯಾ ಗವರ್ಮೆಂಟ್ ಪ್ರಕಟಿಸಿದೆ

ಕಲ್ಕತ್ತಾ ಮುನ್ಸಿಪಾಲಿಟಿಯ ಕೌನ್ಸಿಲರಾದ ... ಅವರಿಂದ ... ಕಲ್ಲಿನಲ್ಲಿ ... ನಾಲ್ಕು ತಿಂಗಳು ತನ್ನ ... ರಾದ ಕಾರಣ ತನಗೆ ಮತ್ತು ... ಹಾರ ಕೊಡಬೇಕೆಂದು ಆ ಮುನ್ಸಿಪಾಲಿಟಿಯ ಮೇಲೆ ದಾವೆ ಹಾಕಿರುವರು.

ಕಲ್ಕತ್ತಾದ ... ಕಾಲೇಜಿನಲ್ಲಿ ... ದಗಳನ್ನು ಅಲ್ಲಿಯ ವಿದ್ಯಾರ್ಥಿಗಳಲ್ಲಿ ... ಪ್ರಿನ್ಸಿಪಾಲರು ಅವರನ್ನು ಕೇಳಿದರು ... ಮುಂದೆ ಕಾಲೇಜಿಗೆ ಹೋಗದೆ ... ಬಹಿಷ್ಕರಿಸಿದರ ಪರ ... ವೇದ ವಿದ್ಯಾಲಯದ ... ಶಾಲೆಗೆ ಹೋಗದೆ ... ಶಾಲೆಯಲ್ಲಿ ... ಪಾಧ್ಯಾಯರುಗಳು ಕ್ರಮಪ್ರಕಾರ ... ಗಿ ನಡೆಯುವುದಿಲ್ಲವೆಂಬುದೇ ಈ ಬಹಿಷ್ಕಾರಕ್ಕೆ ಕಾರಣವಂತೆ.

ವಿದೇಶ.

ಫ್ರೆಂಚ್ ಪಾರ್ಲಿಮೆಂಟಿನಲ್ಲಿ ಒಬ್ಬ ಮೆಂಬರು ಬಿಚ್ಚುಮಂತ್ರಿಯಾದ ... ತನ್ನನ್ನು ಬಂಡಿಸಿ ಮಾತಾಡಿದಾಗ ಮಂತ್ರಿಯವರು ಮೂರ್ಛಿತರಾಗಿ ಕೆಳಕ್ಕೆ ಬಿದ್ದರಂತೆ

ಅಮೇರಿಕದವರ ... ಹಡಗನ್ನು ವರ್ಜೀನಿಯಾ ಪ್ರಾಂತ್ಯದ ತೀರದಲ್ಲಿ ... ಬೆಂಕಿ ಹೊತ್ತಿ ಸುಟ್ಟುಹೋಗಿ 20,00,000ರೂ ನಷ್ಟವಾಯಿತು.

ದಕ್ಷಿಣ ಅಮೇರಿಕದ ಪೆರೂ ಸಂಸ್ಥಾನದಲ್ಲಿ ಪತ್ರಿಕಾಕರ್ತರಿಗೆ ಒಂದು ವಿಶೇಷವಾದ ವಿಧಿಯನ್ನು ಮಾಡಿರುವರು. ಪತ್ರಿಕೆಯಲ್ಲಿ ಅಬದ್ಧವಾದ ಅಥವಾ ಮಿಥ್ಯವಾದ ವಿಷಯಗಳನ್ನು ಪ್ರಕಟಿಸಿದರೆ ಸಂಪಾದಕನು ಪತ್ರಿಕೆಯ ... ತಗಳ ... ಸರ್ಕಾರಕ್ಕೆ ದಂಡ ಕೊಡಬೇಕು. ತಪ್ಪಿದರೆ ... ವನು ನಾಲ್ಕು ತಿಂಗಳವರೆಗೆ ಸ್ಮಶಾನದಲ್ಲಿ ಹೆಣಗಳನ್ನು ಹೂ... ಕೆಲಸವನ್ನು ಮಾಡಬೇಕು!

... ಸರಕಾರಗಳು ಒಡೆದ ಬದರಿಕೆಯ ಪತ್ರಕ್ಕೆ ... ಸರ್ಕಾರವು ನ್ಯಾಯವಾದ ಜವಾಬು ಕೊಡಲಿಲ್ಲವೆಂದು ... ಗ್ ಪಟ್ಟಣದ ಸುಮಾರು ಒಂದುಸಾವಿರ ವಿದ್ಯಾರ್ಥಿಗಳು ಮಂತ್ರಿ ... ಮುಂದೆ ... ಹೋದಲ್ಲಿ ಅವರ ಮೇಲೆ ಕಾವಲುಗಾರರು ಗುಂಡು ಹಾರಿಸಿದ್ದರಿಂದ ... ಸುಮಾರು 50ಮಂದಿ ಮೃತರಾದರು ನೂರುಮಂದಿಯವರೆಗೆ ಗಾಯಗಳುಂಟಾಗಿವೆ ಈ ಸಂಭಂದ ಮಂತ್ರಿಮಂಡಳಿಯು ... ಕೊಟ್ಟ ರಾಜಿನಾಮೆಯನ್ನು ಅಧ್ಯಕ್ಷರು ಒಪ್ಪಿಕೊಳ್ಳದೆ ಈ ವಿಷಯ ವಿಚಾರಿಸುವಂತೆ ಮಂತ್ರಿಗಳಿಗೆ ಹುಕುಂ ಮಾಡಿರುವರು.

ಕೆ. ಸಿ. ಅಪ್ಪಚ್ಚು.

ದಂತ ವೈದ್ಯರು.

ಇದೇ ತಾರೀಖು ೭೮ರಿಂದ ಏಪ್ರಿಲ್ ತಾರೀಖು ೭ರ ವರೆಗೆ ವೀರರಾಜೇಂದ್ರಪೇಟೆ ಟ್ರಾವೆಲರ್ಸ್ ಬಂಗ್ಲೆಯಲ್ಲಿ ಇಳಕೊಳ್ಳುವರು. ಖಾಯಿಷಾದಾರರು ಅವರನ್ನು ಅಲ್ಲಿ ಹೋಗಿ ನೋಡಬಹುದು. ಇಂಥಾ ಸಮಯವನ್ನು ಉಪಯೋಗಿಸಿಕೊಳ್ಳಬೇಕು. ಕನ್ಸಲ್ಟಿಂಗ್ ಚಾರ್ಜು ಇಲ್ಲದೆ ನೋಡುವರು.

ನೋಟೀಸ್.

ಬೆಳ್ಳೂರು ಹಾಕಿದ ಚೆಪ್ಪುನಾಡು, ಎಡೆನಾಲ್ಕುನಾಡು ಮತ್ತು ... ನಾಡು ದಸವಿಮೆ ಸಂಘಗಳ ಮೀಟಿಂಗುಗಳು ... ಆಯಾಯ ತಾರೀಕುಗಳಲ್ಲಿ ... ನಡೆಸಲ್ಪಡುವುವು ... ಸಂಘಗಳ ... ಎಲ್ಲಾ ಮೆಂಬರುಗಳು ... ಹಾಜರಾಗಿ ಲೆಕ್ಕಪತ್ರಗಳನ್ನು ... ಸ್ಥಿರಪಡಿಸಿಕೊಳ್ಳತಕ್ಕದ್ದು. ಅಲ್ಲದೆ ಮೀಟಿಂಗಿನಲ್ಲಿ ಆಯಾಯ ಸಂಘಗಳಲ್ಲಿ ಹಾಲಿ ಇರುವ ಹಣದ ವಿಲೆವಾರಿಯ ... ಮಾಡಲಾಗುವುದು. ಮೀಟಿಂಗಿಗೆ ... ಹಾಜರಾಗದ ಮೆಂಬರುಗಳ ಆಕ್ಷೇಪಣೆಗಳೇ, ಪುಕಾರಗಳೇ ... ತೆಗೆದುಕೊಳ್ಳಲಾಗುವುದಿಲ್ಲ

... (ಮಂಗಳವಾರ) ಮಧ್ಯಾಹ್ನ 2ಗಂಟೆಗೆ ... ಚೆಪ್ಪುನಾಡು ... ದಸವಿಮೆ ಸಂಘದ ಮೀಟಿಂಗು ... (ಗುರುವಾರ) ಮಧ್ಯಾಹ್ನ 1ಗಂಟೆಗೆ ಅಮ್ಮತ್ತಿಯಲ್ಲಿ ... ದಸವಿಮೆ ಸಂಘದ ಮೀಟಿಂಗು.

ವೀರರಾಜಪೇಟೆ, ... ಚಿಣ್ಣಪ್ಪ,
ತಾ 17/3/26 ದಸವಿಮೆ ಸಂಘಗಳ ಸೆಕ್ರೆಟೆರಿ.

ಪತ್ರವ್ಯವಹಾರ

(ಬರೆಯುವವರು ಸಹಿ ಅಥವಾ ಮುದ್ರಣಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲ ... ವು.)

ವೀರರಾಜಪೇಟೆ ಹೈಸ್ಕೂಲಿನ ಸಂಸ್ಕೃತ ಪಂಡಿತರು

ಅಯ್ಯ,

ವೀರರಾಜಪೇಟೆ ಶಾಲೆಯ ಸಂಸ್ಕೃತ ಪಂಡಿತರನ್ನು ತೆಗೆದು ... ಸರ್ಕಾರದವರು ಹೇಳಿದ ಮೇಲೂ ... ಈ ತಾ 18ರ ಸಂಚಿಕೆಯಲ್ಲಿ ... ಪತ್ರಿಕೆಯಲ್ಲಿ ... ಫೈನಾನ್ಸ್ ಕಮಿಟಿಯಲ್ಲಿ ... ಸಂಸ್ಕೃತ ಪಂಡಿತರನ್ನು ತೆಗೆಯಬಾರದೆಂದು ... ಸಂಸ್ಕೃತ ಪಂಡಿತರನ್ನು ಇಡಬೇಕೆಂದು ... ವಿರೋಧವಾಗಿ ಸದರಿ ಪಂಡಿತರನ್ನು ... ಕೂಡ ... ವಾಚಕರೇ ... ಸಂಸ್ಕೃತ ಪಂಡಿತರನ್ನು ತೆಗೆಯಕೂಡದು ... ಫೈನಾನ್ಸ್ ಕಮಿಟಿಯಲ್ಲಿ ... ಕೌನ್ಸಿಲಿನಲ್ಲಿ ... ನಾನು ... ಹೇಳಿದರೂ ಕೂಡ, ಆ ಪತ್ರಿಕೆಯ ಸಂಪಾದಕರು ... ಒಪ್ಪಿದನೆಂದು ಹೇಳಿದ ... ಸಂಗತಿಯು ... ಪ್ರಕಟಿಸಿದ ... ಬಗ್ಗೆ ... ಇನ್ನು ಮುಂದಾದರೂ ... ನಿಜವಲ್ಲದ ... ಸಂಗತಿಗಳನ್ನು ಪ್ರಕಟಿಸಲಿಕ್ಕಿಲ್ಲವಾಗಿ ನಂಬುತ್ತೇನೆ

ಪಿ ಶ್ರೀಪತಿರಾವ್.

ರೋಮನ್ ಕಥೋಲಿಕರ ಗುರುಗಳು

ಅಯ್ಯ,

ರೋಮನ್ ಕಥೋಲಿಕ್ ಕ್ರಿಸ್ತಸಭೆಗೆ ಶ್ರೇಷ್ಠ ಗುರುಗಳಾದ ಮಹಾಸ್ವಾಮಿಗಳು, ತಮ್ಮ ಸಭೆಗೆ ಸೇರಿದ ಕಥೋಲಿಕ್ ಕ್ರಿಸ್ತರನ್ನು ಭೇಟಿಮಾಡಲಿಕ್ಕೆ ಬೆಂಗಳೂರಿನಿಂದ ... ಗೈಯುತ್ತಾರೆಂಬ ಸಂತಿ ವೀರರಾಜಪೇಟೆಗೆ ಒಂದಕೂಡಲೆ ಇಲ್ಲಿಯ ವಿಚಾರಕ ಕರ್ತರಾದ ರೆವರೆಂಡ್ ಗ್ರಾಸೆಟ್ ಸ್ವಾಮಿಯವರು ಸಭೆಯ ಕ್ರಿಸ್ತರವರಿಗೆ ತಿಳಿಸಿದರು. ಕೂಡಲೆ ... ರು ಮೆ ಯಸ್ ಯಂ ಪಿಂಟೊ ಮತ್ತು ಮೇ. ಪಿ ಜಿ ಲೋಬೊರವರ ನೇತೃತ್ವದೊಳು ಮೇರ ದೇವಸ್ಥಾನಕ್ಕೆ ಹೋಗುವ ನಾಲ್ಕುದಿಕ್ಕಿಗೂ ಕಾಣಿವ ಸ್ಥಳದಲ್ಲಿ ಒಂದು ಅಲಂಕಾರವಾದ ಪಸ್ತರವನ್ನೂ ಅಲ್ಲಿಂದ ಮಾರ್ಗದ ಎರಡು ಪಾರ್ಶ್ವಗಳಲ್ಲಿ ತೋರಣಗಳನ್ನೂ ಕಟ್ಟಿಸಿ ದೇವಸ್ಥಾನದ ಕಂಪೌಂಡಿನಲ್ಲಿ ನಾನಾ ಬಣ್ಣಗಳ ಬಟ್ಟೆಯಿಂದಲೂ ಕಾಗದಗಳಿಂದಲೂ ತಯಾರಿಸಿ ಕೂತುಕೊಳ್ಳಲಿಕ್ಕೆ ಸಿಂಹಾಸನವೊಂದಿ ಇಟ್ಟಿದ್ದರು.

ಇಳಿದ ಮಹಾಸ್ವಾಮಿಗಳು ವೀರರಾಜಪೇಟೆಗೆ ತಲಪಿದಕೂಡಲೆ ... ಮಂಟಪದಲ್ಲಿ ಶ್ರೇಷ್ಠ ಗುರುಪದವಿಯ ... ಇರುವದರ ತನ್ನ ... ದೇವಸ್ಥಾನದಿಂದ ... ಸ್ವಾಮಿಯವರು ಕ್ರಿಸ್ತಸಭೆಯ ಗಂಡಸರು ಹೆಂಗಸರು ಮಕ್ಕಳು ಸಹ ... ಮೃತಗಳನ್ನು ಹಿಡಿದುಕೊಂಡು ... ಇಳಿದ ಮಹಾಸ್ವಾಮಿಯವರು ಇಳಿದ ಸ್ಥಳವೆಲ್ಲ ಇವರಿಗೆ ಭೇಟಿಕೊಟ್ಟ ... ನಲದಲ್ಲಿ ಹಾಸಿದ ಬಟ್ಟೆಯಲ್ಲಿ ನಡೆದು ದೇವಸ್ಥಾನದಲ್ಲಿ ತಯಾರಾದ ಮಂಟಪದ ಸಿಂಹಾಸನದಲ್ಲಿ ಕುಳಿತುಕೊಂಡರು ... ಮಹಾಸ್ವಾಮಿಗಳು ಕುಳಿತುಕೊಂಡ ... ಕೂಡಲೆ ಮಿ. ಯಂ. ಪಿಂಟೋರವರು ... ಇಳಿದ ಮಹಾಸ್ವಾಮಿಯವರಿಗೆ ... ವಿಶೇಷ ... ಬಾಲಿಕೆಯರು ... ಹಿಡಿದ ... ಹಾರವನ್ನು ಕುತ್ತಿಗೆಗೆ ಹಾಕಿ ... ಅಲಂಕಾರವಾದ ... ಒಪ್ಪಿಸಿದರು. ಇದೇರೀತಿ ಬೇರೆ ಗುರುಗಳಿಗೂ, ಮೇ. ಯಸ್. ಯಂ. ಪಿಂಟೋರವರಿಗೂ, ಮೇ. ಪಿ. ಜಿ. ಲೋಬೋರವರುಗೂ ... ಒಪ್ಪಿಸಲು ... ಸಂಗತಿಗಳಿಗೆ ... ಮಹಾಸ್ವಾಮಿಯವರು ಸ್ವಾತಂತ್ರ್ಯವಾದ ಸದುತ್ತರ ಹೇಳಿದರು. ಅನಂತರದ ...

ಕವಣಾಗೆಯಿಂದ ದೇವಸ್ಥಾನದೊಳಗೆ ಪ್ರವೇಶಿಸಿ, ಪ್ರಸಾದ ಆಶೀರ್ವಾದ ಕೊಟ್ಟಕೂಡಲೆ ಸಭೆಯವರು ಮೌನವಾಗಿ ಹೊರಗೆ ನಿಂತುಕೊಂಡು ಆಳದ ಮಹಾಸ್ವಾಮಿಯವರ ತಿರುವುಂಗುರಕ್ಕೆ ಮುದ್ರೆಸ್ನು ಕೊಟ್ಟು ತಮ್ಮ ಮನೆಗಳಿಗೆ ಸಂತೋಷದಿಂದ ತೆರಳಿದರು. ಮೇಲೆ ವಿವರಿಸಿದ ಶೃಂಗಾರಗಳನ್ನು ನೋಡಲಿಕ್ಕೆ ನಾಡಿನಿಂದಲೂ ಪೇಟೆಯಿಂದ ಸುಮಾರು 75ಜನರು ಸೇರಿದ್ದರು. ಇವರಿಗೆ ಎರಡು ದಿವಸಗಳಲ್ಲಿ ಮಧ್ಯಾಹ್ನದ ಔತಣಧಾರಾಳ ಮನಸಿನಿಂದ ಮೆ. ಯಸ್. ಯಂ. ಪಿಂಟೋರವರು ಕೊಟ್ಟದಕ್ಕೆ ನಾವು ಅವರಿಗೆ ಬಹಳ ಕೃತಜ್ಞರಾಗಿದ್ದೇವೆ.

ಅಬಲೋವಾಸ.

ಕಿರಗಂದೂರು ಯೂನಿಯನ್ ಸೊಸೈಟಿ.

ಮಹಾಶಯರೇ,

1925ನೇ ಇಸವಿ ಡಿಸಂಬರ್ ಆಖೈರಿನಲ್ಲಿ ಈ ಗ್ರಾಮದಲ್ಲಿ ಸ್ಥಾಪಿಸಿದ ಸಂಘದಲ್ಲಿ 60 ಮೆಂಬರುಗಳ ಸಂಖ್ಯೆ ಇದೆ. ಆ ಸಂಘದ ಎಲ್ಲಾ ಮೆಂಬರುಗಳ ಅನುಮತಿ ಮೇರೆ ಸದರಿ ಸಂಘಕ್ಕೆ ಪ್ರೆಸಿಡೆಂಟರಾಗಿ ಮಾ|| ಶ್ರೀ|| ಗಳಾದ ಕಿಂಗೂರು ಲಿಂಗಪ್ಪನವರನ್ನೂ ವೈಸ್ ಪ್ರೆಸಿಡೆಂಟರಾಗಿ ಶ್ಯಾನೆ ಮುತ್ತಣ್ಣನವರನ್ನೂ ಕಮಿಟಿ ಮೆಂಬರುಗಳಾಗಿ ಕಿಂಗೂರು ಪೂವೈಯ್ಯನವರನ್ನೂ, ಮೊನ್ನೈಯನ ಮುತ್ತಣ್ಣನವರನ್ನೂ ಶ್ಯಾನೆ ಸುಬ್ಬೈಯ್ಯನವರನ್ನೂ ಮತ್ತು ಕಿಂಗೂರು ಮಾದಪ್ಪನವರನ್ನೂ, ಟ್ರೆಜರರಾಗಿ ಎಸ್ ಕೆ. ಸುಬ್ಬೈಯ್ಯನವರನ್ನೂ ಜಾಯಿಂಟ್ ಮೆಂಬರುಗಳಾಗಿ ಕಿರಗಂದೂರು ಪಟೇಲ್ ಅಪ್ಪೈಯ್ಯನವರನ್ನೂ ಐಗೂರು ಪಟೇಲ್ ಸೋಮಯ್ಯನವರನ್ನೂ ಮತ್ತು ಅಬ್ಬಿ ಗೌಡನ ಅಪ್ಪಯ್ಯನವರನ್ನೂ ಮತ್ತು ಸೆಕ್ರೆಟರಿಯಾಗಿ ಕಿರಗಂದೂರು ಸ್ಕೂಲು ಹೆ. ಮಾ. ರಾದ ಮಾ|| ರಾ|| ಕೆ. ಯಂ ಉತ್ತೈಯ್ಯನವರನ್ನು ಚುನಾಯಿಸಲ್ಪಟ್ಟದ್ದಾಗಿರುತ್ತೆ.

ಮೇಲ್ಕಂಡವರು ಮುಂದಕ್ಕೆ ಇದೇ ರೀತಿ ಹೆಚ್ಚು ಮೇಹನತ್ತಿನಿಂದ ಈ ಸಂಘದ ಕೆಲಸವನ್ನು ನಡೆಸುವಂತೆ ಶ್ರೀ ಕಾವೇರಿಯಮ್ಮನವರು ಬುದ್ಧಿಯನ್ನು ಕೊಡಬೇಕಾಗಿ ನನ್ನ ಪ್ರಾರ್ಥನೆ.

ಎಸ್. ಯಂ.

ಹಾಲುಗುಂದದ ಭಗವತಿ ಕ್ಲಬ್ಬು.

1926ನೇ ಮಾರ್ಚಿ 7ರಲ್ಲಿ ಹಾಲುಗುಂದ ಗ್ರಾಮದ ಭಗವತಿ ಕ್ಲಬ್ಬಿನ ಜನರಲ್ ಮೀಟಿಂಗ್ ಮಾಡಿದಲ್ಲಿ ಸಾಧಾರಣ 50 ಜನರು ಸೇರಿದ್ದಲ್ಲಿ ಅಧ್ಯಕ್ಷರನ್ನಾಗಿ ಮೇಕೇರಿರ ಬೋಪ್ಪೈಯ್ಯನವರನ್ನು ಸ್ವೀಕರಿಸಿ ಮಾಡಿದ ಮೀಟಿಂಗಿನಲ್ಲಿ ತೀರ್ಮಾನಿಸಿದ ವಿವರ.

ಉದ್ಯೋಗಸ್ಥರ ಚುನಾವಣೆ.

ಪ್ರೆಸಿಡೆಂಟು— ರೈಟ್ ಸರ್ದಾರ್ ಮೇಕೇರಿರ ಸಿ. ಬೋಪ್ಪೈಯ್ಯನವರು.

ಸೆಕ್ರೆಟರಿ— ಮೆ. ಮೇಕೇರಿರ ಎ. ಕುಶಾಲಪ್ಪನವರು.

ಟ್ರೆಜರರು—ಹಾಲುಗುಂದ ಸ್ಕೂಲ್ ಹೆ ಮಾ. ಪುಗ್ಗೆರ ಮುತ್ತಣ್ಣನವರು.

ಕಮಿಟಿ ಮೆಂಬರುಗಳು.

1. ವೀರಾಜಪೇಟೆ ಬೋರ್ಡ್ ಸ್ಕೂಲ್ ಹೆ. ಮಾ. ಮೆ. ಮೇಕೇರಿರ ಮಾದಪ್ಪನವರು.
2. ದೇವಣಗೇರಿ ಸ್ಕೂಲ್ ಹೆ ಮಾ. ಮೆ. ಬ್ರಾಂ ಕೆ ಪೊಂಬೈಯ್ಯನವರು.
3. ಮೆ. ಬ್ರಾಂ ಅಕ್ಕೈಯ್ಯನವರು.
4. ಮೆ. ಮೇಕೇರಿರ ಎನ್ ಕುಶಾಲಪ್ಪನವರು.
5. ಮೆ. ಮೇಕೇರಿರ ಕುಟ್ಟಪ್ಪನವರು.
6. ಮೆ. ಮಂದಿರಂಡ ಕಾರ್ಯಪ್ಪನವರು.

ಮಿಕ್ಕ ಮೆಂಬರುಗಳೂ ಇನ್ನು ಸೇರತಕ್ಕ ಮೆಂಬರುಗಳೂ ಸಹ ಪ್ರವೇಶ ಧನವನ್ನು ಮಾತ್ರ ಕೊಡತಕ್ಕದ್ದೆಂತ ತೀರ್ಮಾನವಾಗಿರುತ್ತೆ.

ಅಲ್ಲದೆ ಸದರಿ ಕ್ಲಬ್ಬಿನ್ನು ಕೆಲಸಕ್ಕಾಗಿ ಸಹಿ. ಶ್ರೀ. ಹೊಸೂರಿರ ಬಿದ್ದೈಯ್ಯನವರು 100 ಪುಸ್ತಕಗಳನ್ನು ಕೊಟ್ಟಿದ್ದಲ್ಲದೆ ಕ್ಲಬ್ಬಿಗೆ ಉಚಿತಾರ್ಥವಾಗಿ ಅಲ್ಮೈರಕ್ಕಾಗಿ ದ್ರವ್ಯ ಸಹಾಯವನ್ನು ಮಾಡಿರುತ್ತಾರೆ.

ಕ್ಲಬ್ಬಿಗೆ ಉಚಿತಾರ್ಥವಾಗಿ ಕೊಡಗು ಪತ್ರಿಕೆಯನ್ನು ಮೆ. ಮೇಕೇರಿರ ಬೋಪ್ಪೈಯ್ಯನವರೂ, ಲೋಕಶಿಕ್ಷಣವನ್ನು ಹೆ ಮಾ. ನೆ ಮಾದಪ್ಪನವರೂ, ಲೋಕಶಾಸನವನ್ನು ಮೆ. ಮೇಕೇರಿರ ಎ. ಕುಶಾಲಪ್ಪನವರೂ, ವಿದ್ಯಾರ್ಥಿಯನ್ನು ಮೆ. ಕೇಲಪಂಡ ಕಾರ್ಯಪ್ಪನವರೂ, ಸಕಲ ವಿನೋದಿನಿಯನ್ನು ಹೆ. ಮಾ. ಮೆ. ಪುಗ್ಗೆರ ಮುತ್ತಣ್ಣನವರೂ ತರಿಸಿಕೊಟ್ಟದ್ದನ್ನು ಸಂಘದವರು ಸ್ವೀಕರಿಸಿರುತ್ತಾರೆ.

ಇನ್ನು ಹೀಗೆಯೇ ಮೇಲ್ಕಂಡ ಕ್ಲಬ್ಬಿಗೆ ಮೆಂಬರುಗಳು ಸೇರಬೇಕಾಗಿಯೂ, ಸದರಿ ಕ್ಲಬ್ಬಿಗೆ ಉಚಿತಾರ್ಥವಾಗಿ ಸಹಾಯ ಕೊಡುವ ಮೆಂಬರುಗಳನ್ನು ನಮ್ಮ ಶ್ರೀ ಕಾವೇರಿಯಮ್ಮನವರೂ ನಮ್ಮ ಗ್ರಾಮದ ದೇವರೂ ಅವರಿಗೆ ಆಯುರಾರೋಗ್ಯ ಐಶ್ವರ್ಯ ಸಂಪತ್ತು ಕೊಟ್ಟು ಸಲಹಬೇಕೆಂದು ನಾವು ಪ್ರಾರ್ಥಿಸುತ್ತೇವೆ.

ನಮ್ಮ ಬಡ ಗ್ರಾಮದ ಕ್ಲಬ್ಬಿಗೆ ಇನ್ನಷ್ಟು ಮೆಂಬರಗಳು ಚಂದಾದಾರರಾಗಬೇಕಾಗಿ ನಮ್ಮ ಕೋರಿಕೆ.

ಮೇಕೇರಿರ ಕುಶಾಲಪ್ಪ,
ಸೆಕ್ರೆಟರಿ.

ಚೋರನ ಹೊಳೆ ಸೇತುವೆ.

ಅಯ್ಯಾ,

ಕಿರಗಂದೂರು, ಬಳಿಗೇರಿ, ತಾಕೇರಿ, ಕಿರುದಲೆ, ಗರವಾಲೆ, ಕುಂಬೂರು ಮತ್ತು ಕಿರಗಳ್ಳಿ ಗ್ರಾಮಗಳ ಜನರು ವಾರಕ್ಕೊಂದಾವರ್ತಿ ಸೋಮವಾರಪೇಟೆಗೆ ಹೋಗುವ ದಾರಿಯಲ್ಲಿ ಚೋರನ ಹೊಳೆ ಎಂಬ ಒಂದು ಹೊಳೆ ಇದೆ. ಆ ಹೊಳೆಗೆ ಮೊದಲು ಒಂದು (Suspension Bridge) ತೂಗಿದ ಸೇತುವೆ ಇತ್ತು. ಆ ಸೇತುವೆಯು 3ನೇ ವರ್ಷದ ಮಳೆಯ ಹಾವಳಿಯಲ್ಲಿ ಮುರಿದುಹೋಯಿತು. ತದನಂತರ ಜನರು ದಾಟುವುದಕ್ಕಾಗಿ ಪಾಲ ಇಟ್ಟುಕೊಂಡೇ ದಾಟುತ್ತಿದ್ದರು. ಆ ಸಂಗತಿಯಲ್ಲಿ ನಮ್ಮ ಕಮಿಷನರ್ ಸಾಹೇಬರವರಿಗೆ ಅರ್ಜಿ ಒರಕೊಂಡಲ್ಲಿ ಚಂದ ವಸೂಲಾತಿಯಿಂದ ಸೇತುವೆಯನ್ನು ಕಟ್ಟಿಸುವದೆಂಬದಾಗಿ ಹುಕುಂ ಒಂದದ್ದರ ಮೇರೆ 1925ನೇ ಇಸವಿ ಮಾರ್ಚಿಯಲ್ಲಿ ಕೆಲವು ಮೆಂಬರುಗಳಿಂದ 750-0-0 ರೂಪಾಯಿ ವಸೂಲಾಯಿತು. 1925ನೇ ಇಸವಿ ಜೂನ್ ತಿಂಗಳೊಳಗೆ ಸೇತುವೆಯ ಕೆಲಸವು ಪೂರೈಸಿ ಅನ್ನುಕೂಲಪಡಿಸಿ ಕೊಡುತ್ತಾರೆಂಬ ಭರವಸೆಯು ಬಹಳ ಜನರಿಗೆ ಇತ್ತು. ಆದರೆ ಘನಸರಕಾರದವರು ಆ ಸಂಗತಿಯನ್ನು ತಾವಿಲ್ಲಿವರೆಗೆ ಮನಸ್ಸಿಗೆ ತೆಗೆದುಕೊಂಡಂತೆ ಕಾಣುವುದಿಲ್ಲ. ಕಳೆದ ಮಳೆಗಾಲದಲ್ಲಿ ರೈತರು ಬಹಳ ತೊಂದರೆಗೆ ಒಳಗಾಗಿರುತ್ತಾರೆ. ಕೆಲವು ರೂಪಾಯಿಗಳನ್ನು ಖರ್ಚುಮಾಡಿ 2—3ಸಾರಿ ಪಾಲ ಹಾಕಿದರೂ ಸಹ ನೆರೆಯು ತುಂಬಿದ ಕಾರಣ ಪಾಲವು ಕೊಚ್ಚಿಕೊಂಡು ಹೋಗುವುದೇ ಖಚಿತ. ಆದಕಾರಣ ಸದರಿ ಹೊಳೆಗೆ ಸೇತುವೆಯನ್ನು, ಈ ಮಳೆಗಾಲ ಹಿಡಿಯುವದರೊಳಗೆ ಕೆಲಸವನ್ನು ಪೂರೈಸಿ ಬಡರೈತರಾದ ನಮಗಳ ಅನಾನುಕೂಲಗಳನ್ನು ಕೊನೆಗಾಣಿಸಿ, ಹೋಗಲು ಬರಲು ತೊಂದರೆ ಇಲ್ಲದ ರೀತಿ ಘನಸರಕಾರದವರು ಮೇಲ್ಕಂಡ ಸಂಗತಿಗೆ ಹೆಚ್ಚು ನಿಗ ತೆಗೆದುಕೊಂಡು, ಮಾಡುವರಾಗಿ ನನ್ನ ಪ್ರಾರ್ಥನೆ.

ಬಡರೈತ.

ಪ್ರಿಯ "ಕೊಡಗು" ಚಂದಾದಾರ ಮಹಾಶಯರೆ!

ನಮ್ಮ ಪತ್ರಿಕೆಯು ಹುಟ್ಟಿ ನಾಲ್ಕೈದು ವರ್ಷವಾಗುತ್ತಾ ಬಂದರೂ ಪತ್ರಿಕೆಯ ಪ್ರಾಣಾವಸ್ಥೆ ಇನ್ನೂ ಹೋಗದಿಲ್ಲವೆಂಬುದು ಬಹು ವಿಷಾದಕರವಾದ ಸಂಗತಿಯಾಗಿದೆ. ಇದರ ಹುಟ್ಟೋಣದ ಮುಂಚೆ ಇದ್ದ ಈ ದೇಶದ ಸ್ಥಿತಿಯನ್ನು ಈಗ ಇರುವ ಸ್ಥಿತಿಯನ್ನು ತುಲನಮಾಡಿ ನೋಡಿದರೆ ಆಗಿನ ಸಮಯಕ್ಕೂ ಈಗಿನ ಸಮಯಕ್ಕೂ ಅಜಗಜಾಂತರದ ಭೇದವಿರುತ್ತದೆ. ಹೀಗೆ ಈ ಪತ್ರಿಕೆಯು ತನ್ನ ಅವತಾರವೆತ್ತಿದಂದಿನಿಂದ ಸಮಯಗತಿಸಿದ ಹಾಗೆಲ್ಲಾ ದೇಶದ ಸ್ಥಿತಿಯು ದಿನದಿನಕ್ಕೂ ಉನ್ನತಾವಸ್ಥೆಗೆ ಬಂದಿರುವದಾದರೂ ಇಂಥಾ ಸ್ಥಿತಿಗೆ ತಂದ ಪತ್ರಿಕೆಯ ಅಭಿವೃದ್ಧಿಯ ಸ್ಥಿತಿಯನ್ನು ದೇಶದ ಸರ್ವರು ಆಲೋಚಿಸದಿರುವದು ಕೃತಜ್ಞತಾ ಹೀನತೆಯ ಅಭಿಪ್ರಾಯವೆಂದರೂ ತಪ್ಪಾಗಲಾರದು. ಎಳೆ ಮಕ್ಕಳಂತಿರುವ ದೇಶೀಯರನ್ನು ತಕ್ಕಮಟ್ಟಿಗೆ ತರುಣರನ್ನಾಗಿ ಮಾಡಿದ ಪತ್ರಿಕೆಯನ್ನು ಇನ್ನು ಅದನ್ನು ಉತ್ತೇಜಿಸಲ್ಲದೆ ಕೃತಘ್ನತೆಕ್ಕೆ ಗುರಿಪಡಿಸುವದು ನಮಗೆ ನ್ಯಾಯವಲ್ಲ. ಕೆಲವರು ಪತ್ರಿಕೆ ಚಂದಾವನ್ನು ಅದರ ವಾಯಿದೆ ಗತಿಸುವವರೆಗೂ ಕೊಡದೆ ಎರಡನೆ ವರ್ಷದ ವಸೂಲಾತಿಯ ಸಮಯದಲ್ಲಿ ಹೇಗೂ ನಿರ್ವಾಹವಿಲ್ಲದೆ ಕಳೆದ ಸಾಲಿನ ಚಂದಾಪಾವತಿಮಾಡಿದವರಾಗಿಕೊಂಡು ಚಾಲ್ತಿವರ್ಷದ ಚಂದಾಹಣ ಕೇಳುವಾಗ್ಯೆ ನಿಮ್ಮ ಚಂದಾಹಣ ಈಗ ತಾನೆ ಕೊಟ್ಟದೆಂದೂ, ವರ್ಷಕ್ಕೆ ಎಷ್ಟಾವರ್ತಿ ಚಂದಾವಸೂಲಿ ಮಾಡುವಿರೆಂದೂ ಮುಂತಾದದೊಬ್ಬಾಳದ ನೆತಾವಣೆ ಮಾತನ್ನು ಹೇಳುತ್ತಾರೆ. ಹಾಗು ವಸೂಲಿ ಏಜಂಟರನ್ನು ಕಾಣಿಸಿಕೊಳ್ಳುವದೇ ದುರ್ಲಭ. ಹಾಗೂ ಕಾಣಿಸಿಕೊಂಡರೆ ನಿನ್ನ, ನಿನಗೆ ಇದೇ ಕೆಲಸವೇ? ಎಂದಂದುಕೊಂಡು ಈಗ ಇಲ್ಲ ಮತ್ತೆ ಕಾಣುವ ಎಂತ ನಿರುಪಯೋಗವಾದ ನೆವ ಹೇಳುತ್ತಾರೆ. ಮಾತ್ರವಲ್ಲ ತಮ್ಮ ಚಂದಾಹಣವನ್ನು ಈಗ ಇಷ್ಟೆ ನಿನ್ನೆ. ಯಸ್, ಮೆಸನ್ನು ಇದಕ್ಕೆ ಸಂಬಂಧಪಟ್ಟ ಜೇಬಿ ಏಜಂಟರ ಹಸ್ತ ಕೊಟ್ಟಿದ್ದೇವೆಯೆಂತಲೂ, ಅವರನ್ನು ಸಂದರ್ಭವಾಗದಿದ್ದರೆ ಪತ್ರಿಕೆಯ ಚಾಲಕರಹಸ್ತ ಸಲ್ಲಿಸಿದ್ದೇವೆಂದೂ, ಇಲ್ಲವೆ ಕೊಡಗು ಆಫೀಸಿಗೆ ಕಳುಹಿಸುತ್ತೇನೆ ಎಂದು ನಾನಾ ಬಗೆಯ ನೆವಗಳನ್ನು ಹೇಳಿಕೊಂಡು ಹೇಗೂ ಕಾಲಹರಣ ಮಾಡುವದಕ್ಕೆ ಹೇಸುವದಿಲ್ಲ. ಇನ್ನು ಕೆಲ ಮಹಾಶಯರ ಕಳೆದ ಎರಡು ವರ್ಷಗಳ ಚಂದಬಾಕಿದೆಂಬುದು ಬಹು ಶೋಚನೀಯವಾಗಿದೆ. ಇನ್ನು ಕೆಲವರು ತಮಗೆ ನಿಜವಾಗಿಯು ಪತ್ರಿಕೆಗಳು ಕ್ರಮವಾಗಿ ಬರುತ್ತಿದ್ದರೂ ಅವು ಸಿಕ್ಕಲಿಲ್ಲವೆಂದೂ ಆದ್ದರಿಂದ ಹೇಗೆ ಚಂದಾಹಣ ಕೊಡಲೆಂದೂ, ಮುಂತಾದ ನೆವಗಳಿಂದ ಹೇಗೂ ಮಜಂಟರ ಕಸ್ತಾರಿಯಾಗುವದೂ ಉಂಟು. ಮತ್ತು ಕೆಲ ಮಹಾಶಯರು ರಶೀತಿ ಬರೆಸುತ್ತಾ ಬರೆದು ಕೈಗೆ ಸಿಕ್ಕಿದ ಮೇಲೆ ಈಗ ಸ್ವಲ್ಪ ನಿಂತಮೇಲೆ ಹಣಕೊಡುತ್ತೇನೆಂದು ಮುಖತಾಗಿ ಸಹ ಮೋಸಮಾಡುವ ಸಂಗತಿಯು ಒಂದೆರಡು ನಡೆದದ್ದು ಸಹ ಅನುಭವಕ್ಕೆ ಬಂದಿದೆ. ಈ ಅತ್ಯಲ್ಪ ಕಾಲದಲ್ಲೇ ಕೊಡಗನ್ನು ಸಾಮಾನ್ಯವಾಗಿಯಾದರು ಸುಶಿಕ್ಷಿತೆಗೆ ಗುರಿಪಡಿಸಿದ ಈ ನಮ್ಮ ಪತ್ರಿಕೆಯ ಮೇಲೆ ಸ್ವಲ್ಪವೂ ಅಭಿಮಾನವಿಡದೆ ಕೇವಲ ಅತ್ಯಲ್ಪ ದ್ರವ್ಯವ್ಯಯಕ್ಕೆ ಭಯಪಡುವ ನಮ್ಮ ಅಭಿಮಾನ ಕೊರತೆಗೆ ಏನೆಂದರೂ ಸ್ವಲ್ಪವೇ—ಪತ್ರಿಕೆಯ ಆಯುಷ್ಯಕ್ಕೆ ಚಂದಾದಾರರು ಹೊಣೆಯಾಗಿಯೂ ಚಂದಾದಾರರ ಸುಶಿಕ್ಷಿತೆಗೆ ಪತ್ರಿಕೆಯು ಜವಾಬ್ದಾರಿಯಾಗಿಯೂ ಅನ್ಯೋನ್ಯ ಮಿಳಿತವಾಗಿದ್ದರೇನೆ ದೇಶವು ಉನ್ನತಿಯನ್ನು ಪಡೆಯುವದಲ್ಲದೆ ದೇಶದ ಯಾವನೋ ಒಂದು ಜಗಳದ ಇಲ್ಲವೆ ಚಳವಳದ ನೆವನಗಳನ್ನೆತ್ತಿಕೊಂಡಾಗಲಿ ಜನರಲ್ಲಿರುವ ಪರಸ್ಪರ ಅಸೂಯೆ ಮತ್ಸರ್ಯ ದ್ವೇಷಗಳನ್ನೆತ್ತಿಕೊಂಡಾಗಲಿ ತಾನು ಪತ್ರಿಕೆಗೆ ಚಂದಾದಾರನಾಗುವದಿಲ್ಲವೆಂದು ಮುಂತಾಗಿ ನಿಸ್ಸಹಾಯ ತೋರಿಸುವದು ಸರಿಯಲ್ಲ. ಪತ್ರಿಕೆ ಇರೋಣದರಿಂದ ಜನರಿಗೆ ಇಲ್ಲವೆ ಸರಕಾರಕ್ಕೆ ತನ್ನ ಮನಬಂದಂತೆ ವರ್ತಿಸಲಿಕ್ಕೆ ಸ್ವಲ್ಪ ಕಷ್ಟತರವಾಗಿ ಪರಿಣಮಿಸುತ್ತದೆ. ಹೇಗೂ ಮರ್ಯಾದೆಯನ್ನಪೇಕ್ಷಿಸತಕ್ಕವರಿಗೆ ಇದೊಂದು ಸಾಂಕುಶವೆಂದರೂ ತಪ್ಪಲ್ಲ. ಈಗ ಹಣಾಕೃಯಲ್ಲಿರುವ ಸಮಯವಾದ್ದರಿಂದ ಇಂಥಾ ಕಾಲದಲ್ಲೇ ತಮ್ಮ ಚಂದಾಹಣ ಪೂರ್ತಿ ಸಲ್ಲಿಸದೆ ಬಾಕಿ ಮಾಡಿಕೊಂಡಲ್ಲಿ ಬಾಕಿದಾರರ ಹೆಸರನ್ನು ಬಹಿರಂಗಪಡಿಸುವ ಪ್ರಸಂಗ ಒದಗುತ್ತದೆ. ಈಗಾಗಲೆ ಸಲ್ಲಿಸದ ಎಷ್ಟೋ ಮಹಾಶಯರು ಸಂಬಂಧಪಟ್ಟ ಅಧಿಕಾರಿಗಳೂ. ಯಾರೆಲ್ಲಾ ಬಾಕಿಮಾಡಿರುವರೆಂದೂ, ಅಂಥಾ ಬಾಕಿದಾರರ ಹೆಸರನ್ನೇಕೆ ಪ್ರಕಟಿಸಬಾರದೆಂದೂ ಸಹ ಪ್ರಶ್ನಿಸುತ್ತಾರೆ. ಹಾಗೂ ಬಾಕಿ ಮಾಡಿದವರ ಹೆಸರನ್ನು ಪ್ರಕಟಿಸಿ ವ್ಯರ್ಥಾ ಕಾಲಯಾಪನೆ ಮಾಡುವದಕ್ಕಿಂತ ಆ ಕಾಲವನ್ನು ಬಾಕಿ ವಸೂಲಾತಿಯ ಬಗ್ಗೆ ಉಪಯೋಗಿಸುವದೇ ಮೇಲೆಂದು ಕಾಣುವದಾದರ, ಬಾಕಿದಾರರು ಸದ್ಯವಾದರೂ ತಮ್ಮ ಬಾಕಿಯನ್ನು ಪಾವತಿಮಾಡದಿದ್ದಲ್ಲಿ ಅವರು ಪತ್ರಿಕೆಯಲ್ಲಿ ಬೈಲಿಗೆ ಬಾರದಿರಲಾರರು. ಆದ್ದರಿಂದ ಇನ್ನಾದರೂ ಈ ಪತ್ರಿಕೆಯ ಮೇಲೆ ಅಭಿಮಾನವಿಟ್ಟು ಬಾಕಿಯನ್ನು ಕೇಳಿಸಿಕೊಳ್ಳದೆ ತಾವೇ ಸ್ವತಃ ತಮ್ಮ ಹೆಸರನ್ನು ಬಾಕಿ ಪಟ್ಟಿಯಿಂದ ವಜಾಮಾಡಿಕೊಂಡು ಪತ್ರಿಕೆಗೆ ಆಯುಷ್ಯವನ್ನೂ ದೇಶಕ್ಕೆ ಕೀರ್ತಿಯನ್ನೂ ತರುವದಕ್ಕೆ ಸಹಾಯಕರಾಗಬೇಕಾಗಿ ಪ್ರಾರ್ಥಿಸುತ್ತೇನೆ.

ಚಂಗಂಡ ಕುಟ್ಟಪ್ಪ,
ಪತ್ರಿಕೆಯ ಪ್ರಚಾರಕ.

ಹುದಿಕೇರಿ ಸ್ಕೂಲು.

ಅಯ್ಯಾ,

ಹುದಿಕೇರಿಯ ಹೊರಗಿನ ವಿಷಯವನ್ನು ಬರೆಯುವ ಉಪಕ್ರಮಿಸುವ ಮೊದಲೇ ಇಲ್ಲಿಯ ಜನರಿಗೆ ಪ್ರಿಯವಾದ ಸ್ಕೂಲಿನ ಸ್ಥಿತಿಯನ್ನು ವರ್ಣಿಸುವೆ. ಈ ಶಾಲೆಯು ಕೊಡಗಿನ ಪ್ರೈಮರಿಶಾಲೆಗಳಲ್ಲಿ 2ನೇದೆಂದು ಹೇಳುತ್ತಿದ್ದರು. ಈಗ ಇದು ಕಳೆದ ವರ್ಷದಿಂದ ಹೈಯರ್ ಎಲಿಮೆಂಟರಿ ಶಾಲೆಯಾಗಿ ಪರಿಣಮಿಸಿರುತ್ತೆ. ಇದರ ಶಿಕ್ಷಣವೇನೋ ಹೈಯರ್ ಎಲಿಮೆಂಟರಿ ಶಾಲೆಯದಾಗಿದ್ದರೂ, ಒಳಗಿನ ಮಕ್ಕಳಿಗೆ ಇರುವ ತೊಂದರೆ, ಉಪಾಧ್ಯಾಯರ ಗೋಳನ್ನು ಈ ಕಾಲದಲ್ಲಿ ಮಧ್ಯಾಹ್ನ 12 ಘಂಟೆಯಿಂದ 3ಗಂಟೆಯವರೆಗೆ ಹೋಗುವವರಿಗೆ ಮಾತ್ರ ತಿಳಿಯುತ್ತೆ. ನಮ್ಮ ತಾಲೋಕಿನ ಕೌನ್ಸಿಲ್ ಮೆಂಬರು ಕಣ್ಣಾರೆ ನೋಡಿಯೂ ಇದರ ವಿಷಯ ಪತ್ರಿಕೆಯಲ್ಲಾಗಲಿ, ಕಾರ್ಯದಲ್ಲಾಗಲಿ ಏನೂ ನಡಿಸಿದಂತೆ ಕಾಣುವದಿಲ್ಲ. ಈ ಸ್ಕೂಲಿಗೆ ರೋಟಿಗೆ ಹಾಕುವ ಸೆಟ್ಲಿಂಗ್ ಕ್ಲಾಸನ್ನು ಹಾಕಿ ಸಣ್ಣದಾಕಿ ಗಾರೆ ಹಾಕಿದ್ದರು. ಈಗ ಈ ಗಾರೆಯೆಲ್ಲವೂ ಎದ್ದು ಸುಣ್ಣದ ಗಾಳಿ ಮಧ್ಯಾಹ್ನ ಮಕ್ಕಳಿಗೂ ಉಪಾಧ್ಯಾಯರಿಗೂ ಸಂಪೂರ್ಣ ಉಪಕಾರ ಮಾಡುತ್ತಿದೆ! ಈ ಸುಣ್ಣದ ಗಾಳಿಯನ್ನು ಅವರು ಹೇಗೆ ಸೇವಿಸಬೇಕಾಗಬಹುದು? ಇದಲ್ಲದೆ ನಲ್ಲು ಕ್ಲಾಸು ಇಡಲು ಸ್ಥಳವಿಲ್ಲದೆ ಒಂದೊಂದು ರೂಮಿನಲ್ಲಿ ಎರಡು ಕ್ಲಾಸುಗಳಂತೆ ಇಟ್ಟಿರುತ್ತಾರೆ. ಇದು ಮತ್ತೊಂದು ತೊಂದರೆ. ಈ ತೊಂದರೆಯನ್ನು ಹೋಗಲಾಡಿಸಲು ಸಾಕಷ್ಟು ಸ್ಥಳ ಇರದ್ದನ್ನು ಕಂಡು ಇಲ್ಲಿಯ ಹಳೇ ನಾಡು ಕಚೇರಿಯಲ್ಲಿ ಗರ್ಲ್ಸ್ ಸ್ಕೂಲ್ ಇಡುವಂತೆ ಗವರ್ನ್ಮೆಂಟಿನವರು ಕೊಟ್ಟಿದ್ದರು. ಇದಕ್ಕೆ ಕಿಟಕಿಯು ಸಾಕಷ್ಟು ಇಲ್ಲವೆಂದು ಮೊದಲಾಗಿ ಸ್ಕೂಲಿನವರು ಎತ್ತೋಧಿಸಿ ಕಾಲಿ ಬಿಟ್ಟಿದ್ದರು. ಇದನ್ನು ಸಹಕಾರಿ ಸಂಘದವರು ಕಂಡು ತಮ್ಮ ಆಫೀಸನ್ನು ಅಲ್ಲಿ ಇಟ್ಟುಕೊಂಡಿರುತ್ತಾರೆ.

ಇದು ಗರ್ಲ್ಸ್ ಸ್ಕೂಲಿನವರಿಗೆ ಬೇಡದಿದ್ದರೂ ಹುಡುಗರ ಸ್ಕೂಲಿನವರಿಗೆ ಬೇಕಾಗಿರುತ್ತೆ. ಇದು ದೊರೆತರೆ 1 ಯಾ 2 ಕ್ಲಾಸನ್ನು ಇಲ್ಲಿ ಇಟ್ಟರೆ ಸ್ವಲ್ಪವಾದರೂ ಸ್ಥಳ ಹೆಚ್ಚಾಗಬಹುದು. ಈ ಮಧ್ಯೆ ಗರ್ಲ್ಸ್ ಸ್ಕೂಲು ತಯಾರಾಗುತ್ತೆಯಾಗಿ ವದಂತಿ ಇತ್ತು. ಇದರ ಪ್ರಸ್ತಾಪವೇ ಈಗ ಕಾಣುವದಿಲ್ಲ. ಆದ್ದರಿಂದ ಹಳೇ ನಾಡು ಕಚೇರಿಯನ್ನು ಸ್ಕೂಲಿನವರಿಗೆ ಕೊಡದಿದ್ದರೆ ಇವರ ಕಷ್ಟವನ್ನು ಕಂಡರೂ ಕಾಣದಂತೆ ನಟಿಸಬೇಕಾಗಿರುತ್ತೆ.

ಆದ್ದರಿಂದ ಈ ಕಟ್ಟಡವನ್ನು ಸ್ಕೂಲಿನವರಿಗೆ ಬಿಟ್ಟು ಕೊಡಲು ನಾಡಿನವರು ಸರಕಾರದವರನ್ನು ಕೇಳಿಕೊಳ್ಳಬೇಕು. ಸಹಕಾರ ಸಂಘದವರಿಗೆ ಆಫೀಸು ಇಡಲು ಪ್ರತ್ಯೇಕವಾದಷ್ಟು ಇರುತ್ತೆ. ಇಲ್ಲಿಯ ಕಚೇರಿ ಶ್ರೀಮಂಗಲಕ್ಕೆ ಹೋದಂದಿನಿಂದ ಇಲ್ಲಿ ಕ್ಯಾಂಪುಭಾಗದ ಕ್ವಾರ್ಟರ್ಸ್ 2ಖಾಲಿ ಇರುತ್ತೆ. ಇದನ್ನು ಸಹಕಾರ ಸಂಘದವರು ಪಡೆಕೊಂಡರೆ ಆಫೀಸು ಇಡಲು ಅನುಕೂಲವಾಗುತ್ತೆ. ಇದಕ್ಕಾಗಿ ಸರಕಾರದವರು ಈ ಕಷ್ಟವನ್ನು ಗ್ರಹಿಸಿ ಜಾಗ್ರತೆ ಈ ಏರ್ಪಾಡು ಮಾಡಬೇಕೆಂದು ಪ್ರಾರ್ಥಿಸುತ್ತೇನೆ.

ಜಿ. ಸಾ. ಹುದಿಕೇರಿ.

ಮನೋಲ್ಲಾಸಿನಿ ತೈಲ.

ತಲೆನೋವು ತಲೆ ತಿರುಗುವುದು, ಕಣ್ಣು ಉರಿ, ತಲೆಯಿಂದ ಕೆಟ್ಟ ನೀರಿಳಿಯುವುದು, ಕಣ್ಣು ನೋವು, ಅಪಸ್ಮಾರ ನಿದ್ದೆ ಬಾರದಿರುವುದು, ನೆನಪು ಶಕ್ತಿ ಕುಂದಿಹೋಗುವುದು ಇವುಗಳನ್ನೆಲ್ಲ ಖಂಡಿತ ಗುಣಮಾಡುತ್ತದೆ ಉದುರುವ ಕೂದಲನ್ನು ನಿಲ್ಲಿಸಿ ಗಿಡ್ಡಗಿರುವ

ಕೂದಲನ್ನು ಬೆಳೆಯಿಸಿ ಕೂದಲಿಗೆ ಸೌಂದರ್ಯವನ್ನೂ ಹೊಳಪನ್ನೂ ಕೊಟ್ಟು, ಅಕಾಲಕ್ಕೆ ಹಣ್ಣಾಗುವ ಕೂದಲನ್ನು ಕಪ್ಪು ಮಾಡಿ ಕೂದಲು ಇಲ್ಲದ ಸ್ಥಳದಲ್ಲಿ ಹೊಸ ಕೂದಲನ್ನು ಹುಟ್ಟಿಸುತ್ತದೆ ಬೆಲೆ ಸೀಸೆಗೆ ರೂ 1, 3 ಸೀಸೆಗೆ 2—10—0, ಒಂದು ದೊಡ್ಡ ಸೀಸೆಗೆ ರೂ 2 3 ಸೀಸೆಗಳಿಗೆ 5—8—0

ಚಂದನಾಸವ.— ಇದು ಪ್ರಮೇಹ ಮೂತ್ರಕೃಚ್ಛ್ರ ಮೂತ್ರ ಪದೇ ಪದೇ ಹೋಗುವುದು, ಮೂತ್ರಕೋಶದ ಉರಿ, ಮೂತ್ರಪಿಂಡಗಳ ಉರಿ ಮೂತ್ರನಾಳದಲ್ಲಿ ಹುಣ್ಣು ಮೂತ್ರ ಹೊಯ್ಯುವಾಗ ಉರಿಯುವುದು ಮೂತ್ರನಾಳದಿಂದ ಕೀವು ಬರುವುದು ಮೂತ್ರದಲ್ಲಿ ಧಾತು ಹುಡಿ ಹೋಗುವುದು, ಆಗಾಗ್ಗೆ ಮೂತ್ರ ಬರುವುದು, ಮೂತ್ರ ತಡೆಯುವಿಕೆ ಸಾಮರ್ಥ್ಯವಿಲ್ಲದಿರುವುದು, ದೇಹದಲ್ಲಿ ಉರಿ ಬಾಯಾರಿಕೆ, ಸಕಾಮವಸ್ಥೆ, ಮೂತ್ರನಾಳದಲ್ಲಿ ಚುಚ್ಚುವ ನೋವು ಇವುಗಳಿಗೆ ಪರಮ ಔಷಧಿ ಗಂಡಸರಿಗೂ ಹೆಂಗಸರಿಗೂ ಇದು ಅತ್ಯುತ್ತಮ ಬೆಲೆ—ಬಾಟ್ಲಿ 1, 3, 6ಕ್ಕೆ ರೂ 1—4—0 1—8—0, 6—12—0

ರೋಮನಾಶಿನಿ— ಈ ಹುಡಿಯನ್ನು ನೀರಲ್ಲಿ ಕಲಸಿ ಹಚ್ಚಿದಲ್ಲಿ ರೋಮವಿರುವ ಭಾಗಕ್ಕೆ ಹಚ್ಚಲು ರೋಮವು ಉದುರಿ ಬೀಳುವುದು ಡಬ್ಬಿ ಒಂದಕ್ಕೆ 6 ಆಣೆ, 3 ಡಬ್ಬಿಗಳಿಗೆ ರೂ 1, 1 ಡಜನಿಗೆ 3 8 0

ಅಮೃತರಿಷ್ಟ.— ಇದು ಕ್ವಿನೈನು ಬೇಕಿಲ್ಲದಿರುವ ಉತ್ತಮವಾದ ಔಷಧಿ ಎಲ್ಲಾ ತರದ ಜ್ವರಕ್ಕೆ ಉತ್ತಮ, ಬೆಲೆ — ಬಾಟ್ಲಿ 1, 3, 6ಕ್ಕೆ ರೂ 1—4—0 3—8—0 6—12—0

ಲೋಹಾಸವ.— ಇದು ಜ್ವರಗಡ್ಡೆಗೆ ಮತ್ತು ಮಲೇರಿಯಾ ಜ್ವರದಿಂದುಂಟಾದ ಅಶಕ್ತತೆಗೆ ದಿವ್ಯೌಷಧ ಬೆಲೆ—ಬಾಟ್ಲಿ 1, 3, 6ಕ್ಕೆ ರೂ 1—4—0, 3—8—0 6—12—0

ನಮ್ಮ ಕೆಟಲಾಗು ತರಿಸಿ ನೋಡಿರಿ

ವಿಳಾಸ—ಮನೋಲ್ಲಾಸಿನಿ ಕಂಪೆನಿ,
9 ಮಂಗಳೂರು, ಕಂಕನಾಡಿ.

52—14

EMPIRE OF INDIA LIFE ASSURANCE CO., LTD.

(Established 1897)

Assets Exceed Rs 2,50,00,000

Lowest Premium Liberal Bonus and Absolute Security

Example—A Civilian in his 20th year may secure a policy for Rs 1000/- (with profits) Endowment payable at death or at the end of 20 years for an annual premium of Rs 48/10 Policies from Rs 500/ and above Lives upto age 55 are eligible for Assurance

Prospectus and Proposal forms may be obtained from—

C K Chengappa,	The Branch Secretary.
Special Agent Or	
Riverside Estate,	152 3 Commercial Street
Sidapur, S Coorg	Bangalore
24 7	

ಮುದ್ದಾದ ಪುಸ್ತಕ! ಮುದ್ದಾದ ಮುದ್ರಣ!

ಶರೀರ ಸುಖ, ಸಂಪತ್ತು, ಐಶ್ವರ್ಯಗಳನ್ನು ಸಂಪಾದಿಸಲು ಸಲಹೆಗಳನ್ನೂ ಮತ್ತು ಶರೀರ ಮರ್ಮಶಾಸ್ತ್ರ (ಕಾಮಶಾಸ್ತ್ರ)ವನ್ನೂ ತಿಳಿಸುವ

ಮರ್ಮ ಶಾಸ್ತ್ರ-ಎಂಬ ಕಾಮಶಾಸ್ತ್ರ.

ಈ ಪುಸ್ತಕವು ಮೊದಲು ಫ್ರಂಚ್ ಇಂಗ್ಲೀಷ್ ಹಿಂದೂಸ್ಥಾನಿ, ಸಂಸ್ಕೃತ ಮೊದಲಾದ ಭಾಷೆಗಳಲ್ಲಿ ಬಹು ಗುಪ್ತವಾಗಿತ್ತು ಇದನ್ನು ನಾವು ಪ್ರಯಾಸದಿಂದ ಸಂಪಾದಿಸಿ ಕನ್ನಡಕ್ಕೆ ತರ್ಜುಮೆ ಮಾಡಿ 84 ಚಿತ್ರಪಟಗಳ ಸಹಿತ ಥಳಥಳಿಸುವ ಕಾಗದದಲ್ಲಿ ಮುದ್ರಿಸಿ ತಯಾರಿಸಿರುವೆವು ಈ ಪುಸ್ತಕದಲ್ಲಿ ಸ್ತ್ರೀ ಪುರುಷರಿಗೆ ಬೇಕಾದ ಎಲ್ಲಾ ರಹಸ್ಯಗಳೂ, ಸ್ತ್ರೀ ಪುರುಷರು ಅನ್ಯೋನ್ಯವಾಗಿ ನಡೆದುಕೊಳ್ಳುವ ಮಾರ್ಗ ಸ್ತ್ರೀ ಪುರುಷರ ಗುಪ್ತ ರೋಗಗಳು ಮತ್ತು ಅಂಥ ವ್ಯಾಧಿಗಳನ್ನು ಗುಣಪಡಿಸಿಕೊಳ್ಳುವ ಚಿಕಿತ್ಸೆಗಳು ಇನ್ನೂ ಅನೇಕ ತರದ ಮರ್ಮವಾದ ರಹಸ್ಯಗಳು ಚಿತ್ರಪಟಗಳ ಸಹಿತ ತುಂಬಿರುವುದು ಈ ಪುಸ್ತಕದ ಹೆಸರನ್ನು ಕೇಳಿದ ಮಾತ್ರಕ್ಕೆ ಸಂತೋಷವಾಗುವುದು ಇದರ ಓದಲಿಕ್ಕೆ ಯಾರಿಗೆ ತಾನೇ ಸಂತೋಷವಾಗಲಾರದು

ಕ್ರಯ ಪುಸ್ತಕ ಒಂದಕ್ಕೆ ಒಂದೇ ಒಂದು ರೂಪಾಯಿ ರೂ. 1—0—0

T Ramachandar Rao & Co,	**ಟಿ. ರಾಮಚಂದ್ರರಾವ್ ಅಂಡ್ ಕೊ,**
Post Box No 232,	**ಪೋಸ್ಟ್ ಬಾಕ್ಸ್ ನಂ. 232.**
Madras	**ಮದ್ರಾಸ್.**

52—14

"ಲೋಕರಹಸ್ಯ."

ಕೃಷಿಯ ಅತ್ಯುತ್ತಮ ರೀತಿಗಳು, ವ್ಯಾಪಾರದ ವಿಷಯಗಳು, ಹೆಂಗಸರಿಗೆ ಬೇಕಾದ ಗೃಹಕೃತ್ಯದ ವಿಷಯಗಳು, ಹೂಳಿಗೆ ಮಕ್ಕಳನ್ನು ಸಾಕುವ ವಿಷಯಗಳು, ಬಡವರಿಗೆ ಬೇಕಾದ ಹಣ ಸಂಪಾದನೆಯ ವಿಷಯಗಳು, ರೈತರಿಗೆ ಉಪಯೋಗದ ವಿಚಾರ, ರಾಜಕೀಯ ವಿಷಯಗಳು ಆಯುರ್ವೇದಮುನಾನಿ ವೈದ್ಯ ಸಂಗ್ರಹ ಪ್ರತಿಯೊಬ್ಬನೂ ತಿಳಿಯಬೇಕಾದ 'ಆಚಾರ ವಿದ್ಯಾ ವಿಷಯ' ವೇದಾಂತ ವಿಚಾರಗಳಿಂದ ತುಂಬಿ ಪ್ರಕಟವಾಗುತ್ತಿರುವ ಈ ಮಾಸ ಪತ್ರಿಕೆಗೆ ವರ್ಷಕ್ಕೆ ಚಂದಾ ರೂ 3—8—0 ಮಾದರಿ ಸಂಚಿಕೆಗೆ 1—5—0

ಪ್ರತಿ ತಿಂಗಳಲ್ಲೂ 60 ಪುಟಗಳಿಗೆ ಕಡಿಮೆಯಿಲ್ಲದೆ ವಿಷಯಗಳಿರುತ್ತವೆ

ಲೋಕರಹಸ್ಯ ಆಫೀಸು
ವೀರರಾಜೇಂದ್ರಪೇಟೆ.
(ಕೊಡಗು)

24

ALot for SELECTION of Single Barrel Breach Loadig Guns at LOWEST PRICE EVER OFFERED.



Original Browning B B L 12 bore Take Down Hammerless Antomatic Ejector Gun, with safety catch .. ..Price, Rs. 140/-

Do do but by **Winchester** or **Remington** .... Price, Rs 160/-

Winchester or **Remigton S. B. B. L** 12 bore Six Shots Hammerless Repeating gun, 32 inches barrel with Safety catch .. .. Price Rs 150/

German S. B. B. L. 12 bore Hammerless Ejector Gun, 32 inches German Steel Barrel with safety catch .. Price, Rs 65/-

Continental Make Do Price, Rs 55/

Webley & Scott's S B B L 12 bore Semi Hammerless Ejector Gun, 32 inches Webley's Steel Barrel, ... Price, Rs 75/-

The above Guns can be had in 16, 20, & .410 bore Same as above a 12 bore **Special "Duck Gun"**, 36 inches barrel .. .. Price, Rs 80/-

W W Greener's "Gaffer" S B B L 12 bore Martini Action Ejector Gun 26 inch Greener's Steel Barrel .. .. Price, Rs 75/

W W Greener's as above but **Long Range Duck Gun"** with 32 inches barrel, and chamber for 2¾ inches to 3 inches case . Price, Rs 90/-

Midland's "Knock-About" S B B L Ejector Hammer Gun 32 inches barrel .. .. Price Rs 55/-

Continental Make S B B L folding Pattern Hammer Gun, 32 inches barrel beautifully engraved and carved. .. .. Price, Rs 15/

J Steven's 12 bore Ejector Hammer Gun, 32 inches Steel barrel.... .... .. Price, Rs 45/

Do do. Dread Naught" with heavy Breech .. Price, Rs/50,

Any of the above of J Steven's **Special Duck Gun** with 36 inches barrel Price, Rs 5 Extra.

ENQUIRIES SOLICITED.

THE BOMBAY ARMOURY,
331, ABDUL REHMAN STREET,
BOMBAY. 3

2+21

ಪ್ರಕಟಣೆ.

ಒಂದು ಕಡೆ ಇಂಗ್ಲೀಷಿನಲ್ಲಿಯೂ, ಇನ್ನೊಂದು ಕಡೆ ಕನ್ನಡದಲ್ಲಿಯೂ ಪ್ರಿಂಟಾಗಿರುವ ಕಾಫಿ ತೋಟದ ಆಳುಗಳ ಪ್ರಿಂಟಾದ ಕಂಟ್ರಾಕ್ಟು ಎಗ್ರಿಮೆಂಟ್ ಫಾರಮುಗಳೂ ಮತ್ತು ಆಪ್ಲಿಕೇಶನ್ (complaint) ಫಾರಂಗಳೂ ಸಹ ಮಾರಾಟಕ್ಕೆ ತಯಾರಿವೆ ಬೇಕಾದವರು 'ಕೊಡಗು' ಆಫೀಸಿನಿಂದ ಪಡಕೊಳ್ಳಬಹುದು.

ಮಡಿಕೇರಿ	ಮೇನೇಜರ್
ತಾ 7 9 21	ಕೊಡಗು ಆಫೀಸ್,

---

12 ರೋಲ್ಡ್ ಗೋಲ್ಡ್ ಬಾಟಲುಗಳು ಇನಾಮ.
ಬೆಸ್ಟ್ ಫೌಂಟನ್ ಪೇನಾ.

ಈ ಪೇನಾವು ಸೀಮೆ ಯಲ್ಲಿ ತಯಾರಾದದ್ದು. ಇದಕ್ಕೆ ಒಂದಾವರ್ತಿ ಇಂಕಿಯನ್ನು ಹಾಕಿದರೆ ಸುಮಾರು 1000 ಮೈಲುಗಳ ವರೆಗೂ ಬರೆಯಬಹುದು! 14 ಕ್ಯಾರೆಟ್ಟು ಭಂಗಾರದ ಮುಖವು ಇರುವದು. ಇದನ್ನು ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ 12 ರೋಲ್ಡ್ ಗೋಲ್ಡ್ ಬಾಟಲು ಇನಾಮವಾಗಿ ಕೊಡುವೆವು ಕ್ರಯ ಪೇನಾ 1ಕ್ಕೆ 2—0—0

ಮೂನ್ ಲೈಯಿಟು ಸೋಪು

ಈ ಸೋಪನ್ನು ಕೂದಲುಗಳಿಗೆ ಒಂದೇ ಒಂದು ಸಲ ಹಾಕಿದರೆ ಕಂಬಳಿಯಂತೆ ಬೆಳ್ಳಗಿರುವ ಕೂದಲು ಕಪ್ಪಾಗಿ ಒಂದು ಸ್ವಲ್ಪವೂ ತೊಂದರೆಯೂ ಇಲ್ಲದೆ ಕೂದಲನ್ನು ತೆಗೆದುಬಿಡುವದು.

ನಮ್ಮ ಸುವಾಸನೆಯ ಸೋಪ್, ಗಂಧ, ಪೌಡರು ಎಣ್ಣೆ, ಸೆಂಟು ಮೊದಲಾದ ಪದಾರ್ಥಗಳನ್ನು ಕ್ಷಣ ಮಾತ್ರದಲ್ಲಿ ಮಾರುವ ವಸ್ತು

3 ಸಾಬೂನುಗಳನ್ನು ಪೆಟ್ಟಿಗೆ 1ಕ್ಕೆ ರೂ 1—2—0
ಒಂದೇ ಸಲ 2 ಪೆಟ್ಟಿಗೆ ತರಿಸಿಕೊಂಡರೆ ರೂ 2—4—0

ವಿಳಾಸ—
ಎಲ್ಗಿನ್ ವಾಚ್ ಕಂಪೆನಿ
ಪಿ ಬಿ ನಂಬರ್ 1251
ಮದರಾಸ್.

12—6

ಒಂದೇ ಮೂರು ರೂಪಾಯಿಗಳಲ್ಲಿ!

ಟಿಕ್ = ಟಾಕ್ (ರಿಜಿಸ್ಟರ್ಡ್)



ಎಂಬ ಗಡಿಯಾರನ್ನು ಮಾರಾಟ ಮಾಡುತ್ತೇವೆ. ಇದು ಕರಾರು ಗಂಟೆಯನ್ನು ತೋರಿಸುವದು. ಇದಕ್ಕೆ ಕೀಗೆ ಕೊಡಬೇಕಾಗಿಲ್ಲ. ಇದರಲ್ಲಿ ತೂಗುತ್ತಿರುವ ಗುಂಡನ್ನು ಮೇಲಕ್ಕೇರಿದರೆ ಸಾಕು ತನ್ನಷ್ಟಕ್ಕೆ ತಾನೇ ಸರಿಯಾದ ಕಾಲವನ್ನು ತೋರಿಸುವದು. ಇವತ್ತೇ ತರಿಸಿಕೊಳ್ಳಿರಿ

ನಮ್ಮ ಸ್ಪೆಷಲ್ "ಕ್ರಿಸ್ಮಸ್" ಹಬ್ಬದ ಮಾರಾಟ

ಪ್ರಾರಂಭ ತಾ 1ನೇ ಜನವರಿ 1926

ಕಡೆ ತಾ 31ನೇ ಮಾರ್ಚಿ 1926

"ಕೊಡಗು" ಚಂದಾದಾರರಿಗೆ ಮಾತ್ರ

ಎಲ್ಲಾ ವಾಚುಗಳಿಗೂ ಜಾಮೀನು ಐದು ವರುಷಗಳು

No 515 Rs 10 No 511 Rs 11

22 ಕ್ಯಾರೆಟ್ ರೋಲ್ಡ್ ಗೋಲ್ಡ್ ಕೈಗೆ ಕಟ್ಟಿಕೊಳ್ಳುವ ಗಡಿಯಾರುಗಳು

No 507 Rs 12 No 518 Rs 9

No 519 Rs 9 No 516, Rs 10

ಸರ್ವೋತ್ತಮ, ಬಹಳ ಅಗ್ಗ, ಅಚ್ಚು ಕಟ್ಟಾದ ಕೈ ಗಡಿಯಾರುಗಳು

ಪುಗಸಟ್ಟೆ ಪ್ರತಿ ಒಂದು ವಾಚಿನ ಕೂಡ ಈಗಲೇ ಕೂಡ ಒಂದು ವ್ಯಾಕ್ ಟೇಪ್ ಮತ್ತು ಒಂದು ವೃದು ಮೇಲಾದ ರೇಷ್ಮೆ ಪಟ್ಟಿ ಒಟ್ಟಿ ಕಳುಹಿಸುವೆವು. ಬೇಕು

ಪೀಟರ ವಾಚ ಕಂಪನಿ,
ಪೋಸ್ಟ್ ಬಾಕ್ಸ ನಂಬರ 27
ಮದ್ರಾಸ್.

ಅತ್ಯಲ್ಪವೆ! ಉಚಿತ!



ಕೇವಲ ಉಚಿತ! **ಕೇವಲ ಉಚಿತ!!**

"ತಾರಾ" ಲೀವರ ರಿಜಿಸ್ಟರ್ಡ್ ಪೋಕೆಟ್ ವೊಚ್ಚು ೧೮ ಕೆರೆಟ್ ರೋಲ್ಡ ಗೋಲ್ಡಿನದು. ಮುಖಪಟ್ಟಿಯ ಮೇಲೆ ೫ ವರ್ಷದ ಗ್ಯಾರಂಟಿ ಇರುವದೆಂದು ಗಡಿಯಾರ ಕರ್ತರು ಅಚ್ಚು ಹೊಡೆದಿರುವರು. ಈ ಗಡಿಯಾರವನ್ನು ಕೊಂಡುಕೊಳ್ಳುವವರಿಗೆ ನಾವು ನಮ್ಮ "ಸಿ" ರಿಜಿಸ್ಟರ ಟ್ಯಾಂಟ್ರೀಸನ್ನು ಉಚಿತವಾಗಿ ಕೊಡುತ್ತೇವೆ. ಇದೊಂದು ಅಪೂರ್ವ ಕಾಣಿಕ. ಕೆಲವೇ ಗಡಿಯಾರಗಳಿವೆ. ಬೇಗ್ನೆ ಕೊಂಡುಕೊಳ್ಳಿರಿ! ಉಚಿತವಾಗಿ ತಿಗುವ ಹಾಗು "ತಾರಾ" ಲೀವರ ರಿಜಿಸ್ಟರ್ಡ ೧೮ ಕೆರೆಟ್ ರೋಲ್ಡಗೋಲ್ಡಿನ ಪೋಕೆಟ್‌ವೊಚ್ ಗಡಿಯಾರಗಳಿಗೆ ಕೂಡಿ ಒಟ್ಟೇ ರೂಪಾಯಿ ೫.

CAPTAIN WATCH CO., P. B. 265, MADRAS

12-9

ಕಿರ್ಲೋಸ್ಕರ ಗಾಣಗಳು

ಈ ತರಹ ಕಬ್ಬಿನ ಗಾಣಗಳು ನಮ್ಮ ಫ್ಯಾಕ್ಟರಿಯಲ್ಲಿ ತಯಾರಾಗುತ್ತವೆ

೧ ಕಿರ್ಲೋಸ್ಕರ ನಂ ೫

೨ ಕಿಸಾನ

೩ ಕಮಲ ಚಕ್ರ

ಇವುಗಳ ವಿಸ್ತಾರ ಸಂಗತಿ ಒಗ್ಗೆ ಹಾಗೂ ಬೆಲೆಯ ಬಗ್ಗೆ ಕೂಡಲೇ ತಿಳಿದುಕೊಳ್ಳಿರಿ

ಕರ್ನಾಟಕ ತರುಣರ ಉನ್ನತಿಗೋಸ್ಕರ

ಕಿರ್ಲೋಸ್ಕರ ವಾರ್ತಾ,

ಎಂಬ ತಿಂಗಳಿನ ಹೊಸ ಪತ್ರಿಕೆಯನ್ನು ಪ್ರಕಟಿಸುತ್ತೇವೆ. ವಾ ಚ ೧ ರೂ ಮಾದರಿ ಸಂಚಿಕೆ ಪುಕ್ಕಟೆ

ಕಿರ್ಲೋಸ್ಕರ ಬಂಧು, ಲಿಮಿಟೆಡ್.
ಕಿರ್ಲೋಸ್ಕರವಾಡಿ,

16—6 ಜಿ. ಸಾತಾರ್.

ಲೋಕಪ್ರಸಿದ್ಧವಾದ! ಅನುಭವಸಿದ್ಧವಾದ!

ಮುರಿರುದಿವಸಗಳಲ್ಲಿ ಗುಣಸಿಕ್ಕದಿದ್ದರೆ ಔಷದಿಯಕ್ರಯ ವಾಪಾಸು. ಜೀರ್ಣಶಕ್ತಿ, ರಕ್ತವೃದ್ಧಿ, ಧಾತುಪುಷ್ಟಿ, ಮನೋಲ್ಲಾಸ ಇವುಗಳಿಂದ ಮೊದಲಾದ ಸರ್ವ ಜೀವನಕ್ಕೆ ಬೇಕಾದ ಆರೋಗ್ಯದಾಯಿಸಿ

ಟ್ರೇಡ್‌ಮಾರ್ಕ | **ಅಗಸ್ತ್ಯ** [ನೋಡಿ ತಿಳ್ಕೊಳ್ಳಿರಿ

ಮನ್ಮಥ ಚಿಂತಾಮಣಿ ಲೇಹ

ರಿಜಿಸ್ಟರ್ ಆದದ್ದು

ಆಬಾಲವೃದ್ಧ ಸ್ತ್ರೀ ಪುರುಷರ ಅನೇಕ ರೋಗಗಳ ಮೇಲೆ ಗಣ ಕಾರ್ಯ ದ ಮೇಹ ವಿಕಾರಉದ್ಭವಗಳಿಗೂ, ಸಿಸ್ತು ಇಲ್ಲದವರಿಗೇ, ಸ್ವಪ್ನೇಂದ್ರಿಯವಾಗುವ ಬಾಲಕರಿಗೂ ಬ್ರಾಹ್ಮಿ ಸುಜ್ಞಾನಿಗಳಿಗೂ ಉಪಯೋಗವುಳ್ಳ ಬಹುಪರಮಾನಂದ ಔಷದಿ 1ಸೇರು 48ದಿವಸ ಸೇವಿಸಬಹುದು. ನಂ (1) 1ಸೇರ ಡಬ್ಬಿ 1ಕ್ಕೆ ರುಪಾಯಿ 3—0—0 ½ಸೇರು ಡಬ್ಬಿ 1ಕ್ಕೆ ರುಪಾಯಿ 1—9—0 ನಂ (2) 1ಸೇರು ಡಬ್ಬಿ 1ಕ್ಕೆ ರುಪಾಯಿ 2—0—0, ½ ಸೇರು ಡಬ್ಬಿ 1ಕ್ಕೆ 1—1—0 ವಿ ಪಿ ಖರ್ಚು ಪ್ರತ್ಯೇಕ. ವಿಶೇಷ ಮಾಹಿತಿಗೆ ಬರೆಕೊಳ್ಳಿರಿ

ವಿಳಾಸ.—ದೇವಣ್ಣ ನಾರಾಯಣಸೇಟ್
ಗೂಳಿಕಟ್ಟಾ,
ಮಂಗಳೂರು,

52—30 ದ ಕ

ಸತ್ಯಮೇವಜಯತೇ.
(ಗುಣವಾಗದಿದ್ದರೆ ಹಣ ವಾಪಸ)

ದಾತುಪುಷ್ಟಿ ಕಾಮೋತ್ತೇಜಕ, ಇಂದ್ರಿಯಸ್ತಂಭಕವಾದ

ಮದನೋದ್ಭವ ಗುಳಿಗೆ.

ಒನಕೆ ಇಂದ್ರಿಯದ ಶಿಥಿಲತೆ ನಿರ್ಬಲತೆ ನಪುಂಸಕತ್ವ ಕ್ಷೀಣತೆ, ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯು ಸೇವನೆಯಿಂದ ಗುಣವಾಂಶವಾಗಿ ಧಾತು ಪೌಷ್ಟಿಕ, ವೀರ್ಯವರ್ಧಕ ರಕ್ತಶೋಧಕ ಕಾಮೋತ್ತೇಜಕ, ಮನೋಲ್ಲಾಸಕ ಇಂದ್ರಿಯಸ್ತಂಭಕ, ಗರ್ಮಿ, (ಟಾಕಿ) ಗುಪ್ತಪ್ರದೇಶದ ಮೇಲೆ ಹುಟ್ಟುವ ಎಲ್ಲ ತರದ ಚಕ್ಕೆಗಳು, ಹುಣ್ಣುಗಳು ಪಿತ್ತದ ಬಾಧೆಗಳು, ಕಟಿಶೂಲೆ ವಾತರೋಗವು ಮುಂತಾದವು ಆಶ್ಚರ್ಯ ಗುಣವಾಗಿ ಶರೀರಕ್ಕೆ ಆರೋಗ್ಯವೂ ಕಾಂತಿಯೂ ರತಿಸುಖಕ್ಕೆ ಸಂಪೂರ್ಣ ಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗುತ್ತವೆ. ಕಿಮ್ಮತ್ತು ೬೦ ಗುಳಿಗೆಗಳಿಗೆ ೪ ರೂಪಾಯಿ. ಇದನ್ನು ಸೇವಿಸುವಾಗ್ಗೆ **ನಪುಂಸಕತ್ವಾರಿ ತೈಲವನ್ನು** ಉಪಯೋಗಿಸಿದರೆ ಉತ್ತಮ. ಕಿಮ್ಮತ್ತು ಬಾಟ್ಲಿಗೆ ರೂ ೨—೧೨—೦

ಪ್ರಮೇಹನಿವಾರಣಿ—ಇದರ ಸೇವನೆಯಿಂದ ಮೂತ್ರಸ್ರಾವದಿಂದ ಕೆಂಪು ಹಳದಿಯಂತೆ ಹೋಗತಕ್ಕ ಕೀವು, ಉರಿ ವಗೈರೆ ಅಗದಿ ಶೀಘ್ರದಿಂದ ಗುಣವಾಗುವದು. ಕಿಮ್ಮತ್ತು ಬಾಟ್ಲಿಗೆ ರೂ ೩—೮—೦ ೮ ಬಿ ಚೀಲ ಅನುಪಾನಪತ್ರಿಕೆ ಔಷಧದ ಸಂಗಡ

ವಂದಾಗಿ ಪ್ರಾಂತ ಕಳುಹಿಸಿದರೆ ಕ್ಯಾಟಲಾಗವು

ವಿಳಾಸ.—

ವೈದ್ಯ ಜಿ ಎಲ್ ಜೋಶಿ ಮತು ಕಂಪನಿ.

16 ನಂ ರ. ಪೋಸ್ಟ ಒಸವಾಸಿ, ಉತ್ತರ ಕಾನಡಾ

ಜ್ವರಗಳ ಮೇಲೆ ಅಮೂಲ್ಯ ಔಷಧವು.

ಕಲೋನಾ

ವಾಟರ್ ಸಿರಪ್
(ಶಕ್ತಿವರ್ಧಕ ಸರಬತ್ತು)

ಥಂಡಿಜ್ವರ, ಮಲೇರಿಯ ಮೊದಲಾದ ಜ್ವರಗಳು ಬಿಟ್ಟ ನಂತರ ಬರುವ ಅಶಕ್ತತೆ, ಸಣ್ಣಜ್ವರವು ಬರುತ್ತಿರುವುದು ಮೊದಲಾದವುಗಳ ಮೇಲೆ ಇದು ಒಂದು ಅಮೂಲ್ಯ ಔಷಧವಾಗಿರುತ್ತದೆ

ನಮ್ಮ ಎಗ್ಯೂಮಿಕ್ಶ್ಚರನ್ನು ಸೇರಿಸಿ ಗುಣವನ್ನು ಹೊಂದಿದ ಪ್ರತಿಯೊಬ್ಬನು ಇದರ ಒಂದು ಬಾಟ್ಲಿಯನ್ನಾದರೂ ಅಗತ್ಯವಾಗಿ ಸೇವಿಸಬೇಕು. ಆದರೆ ಅವನಿಗೆ ಜ್ವರದನಂತರ ಬರುವ ಅಶಕ್ತತೆಯು ಬರಲಿಕ್ಕೇ ಇಲ್ಲ

ಬೆಲೆ ೧ ರೂಪಾಯಿ. ಟಪಾಲು ವೆಚ್ಚ ಬೇರೆ.

12—9 ಅಶೋಕ ಬ್ರದರ್ಸ
ಗಿರಗಾಂವ್, ಮುಂಬಾಯಿ.

ಬೇಕಾಗಿದೆ

ನಳಜೆ ಗ್ರಾಮದಲ್ಲಿ ನನ್ನ ವಾಪಿಯನ್ನು ವ್ಯವಸಾಯ ಮಾಡಿಸಲಿಕ್ಕಾಗಿ ೩೦ರಿಂದ ೩೫ ವರ್ಷ ಪ್ರಾಯದ ಉತ್ಸಾಹವುಳ್ಳ ಒಬ್ಬ ರೈತರು ಬೇಕಾಗಿದ್ದಾರೆ. ಅವರು ೧೮ರಿಂದ ೨೦ ಕಂಡಿಗ ಬತ್ತ ಬೆಳೆಯುವ ಒಂದು ಬೇಕು. ಕಷ್ಟಪಟ್ಟು ಕೆಲಸ ಮಾಡುವವರಿಗೆ ಒಳ್ಳೇ ಸಂಬಳವೂ ಉತ್ತೇಜನವೂ ಕೊಡಲಾಗುವುದು. ಮತ್ತು ಈ ಕೆಳಗಿನ ವಿಳಾಸಕ್ಕೆ ಬರೆಯಬೇಕು

ಎಂ ಸಿ ಅಪ್ಪಯ್ಯ
ರಿಟೈರ್ಡ್ ಎಸ್ಟೇಟ್
12 ಸೋಮವಾರಪೇಟೆ

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್,
ಲಿಮಿಟೆಡ್, ಕೋ ಆಪರೇಟಿವ್ ಸೊಸೈಟೀಸ್
ಆಕ್ಟಿನ ಪ್ರಕಾರ ರಿಜಿಸ್ಟರಾಗಿದೆ.

		ರೂ
ಶೇರ್ ಬಂಡವಾಳ	—	50,000
ವಸೂಲಾದ ಶೇರ್ ಮೊಬಲಗು	—	7,000
ಜಮೆಬಂದ ಠೇವಣಾತಿ	—	90,000

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲಕೊಡತಕ್ಕದ್ದು

ಒಂದು ವರ್ಷ ಅವಧಿಯ ಅಥವ ಹೆಚ್ಚಿನ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ ರೂ 6-4 ರ ದರದಲ್ಲಿ ಬಡ್ಡಿ ದೊರೆಯುತ್ತೆ. ಕಡಿಮೆ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ ೫ರ ಬಡ್ಡಿ ದೊರೆಯುತ್ತೆ

ವರ್ಷಕ್ಕೊಂದಾವರ್ತಿ ಕೋ ಆಪರೇಟಿವ್ ರಿಜಿಸ್ಟ್ರಾರವರು ಲೆಕ್ಕ ತನಿಖೆಯನ್ನು ಮಾಡುತ್ತಾರೆ

ಪ್ರೆಸಿಡೆಂಟರು, ಡೈರೆಕ್ಟರ್
ಕೊಡಂದೆರ ಕುಟ್ಟಯ್ಯನವರು, ಮು ಮುದ್ದಂಗರಾಯರು
ರಾಯ್ ಬಹದ್ದೂರ್ ಎಂ.ಎ, ಬಿ ಎಲ್

ಸೆಕ್ರೆಟರಿ
ಸಿ ಯನ್ ವೆಂಕಪ್ಪಯ್ಯನವರು, ಬಿ ಎ ಬಿ ಎಲ್
ತಾರೀಕ 20—8—1925

ARMS & AMMUNITION MART.

Mahomedally Noorbhoy

321 Abdul Rehman Street, near Crawford Market, BOMBAY 3
Telegraphic Address—"SHOOTER" Bombay.

52—30 Please write for Reduced nett prices list for 1926

Printed & published by Kodanda Appayya, R. B. Chairman, Board of Directors, at 'Kodagu' Press Mercara for "Kodagu" Ltd.

KODAGU OFFICE MERCARA

ಕೊಡಗು.

ಸಂಪಾದಕ—ಪಂದ್ಯಂಡ ಐ. ಬೆಳ್ಯಪ್ಪ

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವದು.

ಸಂಪುಟ 8] [illegible] ಏಪ್ರಿಲ್ ತಾರೀಕು 2 ನೇ ಶುಕ್ರವಾರ [ಸಂಚಿಕೆ 13

PATENT MEDICINCES ETC.,

[illegible]		[illegible]	5—0	Lucryl tooth powder	„ 0—14
[illegible]		[illegible]	-1 & 3	Kolynos tooth paste	„ 0—11
Alc[illegible]		[illegible]	1—0	Euthymal „ „	„ 0—14
Antiphl[illegible]		[illegible]	4—8	Pepsodent „ „	„ 0—14
Bathw[illegible] mixture	1—[illegible]	Sanatogen	„ 1-12	Cuticura soap per box	Rs. 2—6
Burgoynes [illegible] Syrup	3 12	Emulsion Scotts	3—0	Erasmic „ „ „	„ 1—3
Celerina	„ [illegible]—14	Waterbury's cod liver oil	Rs. 2—15 & 5—8	Goodwins bath soap for 6	„ 2—8
Cuticura ointment	3—4	Wincarnis	1—2	Palm olive soap per cake	„ 0—6
Dejonghs cod liver oil	„ 2	Woodwards gripe water	Rs. 0 15 & 2—2	Pear's glycerine soap per box	„ 1—5
Deschiens Syrup	„ 2—8	Zam buk	0 15	Vinolia baby „ „	„ 1—6
Enos fruit salt	„ 2—10	Calox tooth powder	0—7	„ Premier „	„ 1—3
Esnofeic pills	„ 0—15	Calverts' carbolic powder	0-11	Wright's coal tar „ „	„ 1—4
Genaspirin	„ 3—12	Colgates dental cream		Turkish bath soap 12 cakes	„ 2—8
Sulphur bitters					

Reduction in prices of Stationary department made permanent
GET IT AT SPENCERS!
THE SHOPPING CENTRE OF COORG.

Spencer & Co. Ltd,
MERCARA, & POLLIBETTA.

52—22

ನೋಟೀಸ್.

ಈ ಕೆಳಗಿನ ಮಹನೀಯರು "ಕೊಡಗು" ಪತ್ರಿಕೆಯ ಚಂದಾ ಹಣವನ್ನು ವಸೂಲ್ಮಾಡಲು ಒಪ್ಪಿಕೊಂಡದ್ದರಿಂದ, ಅವರಿಗೆ ರಶೀತಿ ಪುಸ್ತಕಗಳನ್ನು ನಮ್ಮ ಏಜಂಟರು ಮೆ ಚಂ ಗಂಡ ಕುಟ್ಟಪ್ಪನವರ ಜವಾಬುದಾರಿಕೆಯ ಮೇಲೆ ಕೊಡಲಾಗಿದೆ. ದಯವಿಟ್ಟು ಚಂದಾದಾರರೆಲ್ಲರೂ ಅವರಿಗೆ ಅನುಕೂಲವಿರುವ ಜಾಗದಲ್ಲಿ ಪಾವತಿ ಮಾಡಬೇಕಾಗಿ ಕೋರಿಕೆ.

ಏಜಂಟರುಗಳು.

ವೀರಾಜಪೇಟೆ—ಖಾದಿ ಭಂಡಾರದಲ್ಲಿ ಮೆ. ಜೆಂಬಾಂಡ ಮುತ್ತಣ್ಣನವರು.

ಮೂರ್ನಾಡು—ಅಮೆರಿಕಿಯನ್ ಸ್ಟೋರಿನಲ್ಲಿ ಮೆ. ಮ ಡೆಯಂಡ ಸಿ [illegible]ಯ್ಯನವರು

ನಾಪೋಕ್ಲು—ಮೆ. ಅರಮಣ ಸುಬ್ಬಯ್ಯನವರು.

„ ಮೆ. ಪೂಣಚಂಡ ಮುದ್ದಪ್ಪನವರು.

ಪೊನ್ನಂಪೇಟೆ—ಮ ಬಿ. ಪಿ. ಮುದ್ದಯ್ಯನವರು.

ಗೋಣಿಕೊಪ್ಪಲು—ಮೆ. [illegible] ಮಾದಪ್ಪನವರು.

ಹುದಿಕೇರಿ—ಮೆ. ಜಿ ಮಾಪಯ್ಯನವರು

ಅಮ್ಮತ್ತಿ ಸಿದ್ದಾಪುರ—ಮೆ. ಐನಂಡ ಮಾದಪ್ಪನವರು ಮತ್ತು ವೀರಾಜಪೇಟೆ—ಮೆ. ಕಲಿಯಂಡ

„ ಪೋಪಯ್ಯನವರು.

ಶ್ರೀಮಂಗಲ—ಮೆ ಇಟ್ಟಿರ ಚಂಗಪ್ಪನವರು.

ಅಲ್ಲದೆ ಈ ಸಮ್ಮಂಧ ಮೆ. ಚಂಗಂಡ ಕುಟ್ಟಪ್ಪ ಮು ಕೊಡಗಿನ ಎಲ್ಲಾ ಕಡೆಗಳಲ್ಲು ಸಂದರ್ಭಾನುಸಾರ ಸುತ್ತುತ್ತಿರುವಾಗ ಅವರಿಗೂ ಹಣ ಕೊಡಬಹುದು. ಕೊಡಬೇಕಾಗಿ ಕೋರಿಕೆ.

ಮೇನೇಜರ್, "ಕೊಡಗು" ಆಫೀಸು.

ಡಾಕ್ಟರ್ ಎಸ್ ಎನ್ ಅಯ್ಯಂಗಾರ್, [illegible]
ಎಲ್. ಆರ್ ಸಿ. ಪಿ. ಅಂಡ್. ಎಸ್. [illegible]
ಎಲ್. ಎಫ್. ಪಿ ಅಂಡ್ ಎಸ್. [illegible]

ದಂತ ವೈದ್ಯರು.

ಮಡಿಕೇರಿ ಮಹದೇವ ಪೇಟೆ [illegible] ಸಿದ್ದೇಶ್ವರ ಅಂಗಡಿಯ ಎದುರು [illegible] ಇರುತ್ತಾರೆ ಇವರು ಶೀಘ್ರದಲ್ಲೇ [illegible] ಹೋಗುವುದಕ್ಕೆ ಬೇಡವು ತಾ. 27ರಿಂದ [illegible] ರಾಜಪೇಟೆ ಟ್ರಾವೆಲ್ಲರ್ಸ್ ಬಂಗ್ಲೆಯಲ್ಲಿ ಉಳಿದುಕೊಳ್ಳುವುದರಿಂದ ಅವರನ್ನು ಅಲ್ಲಿ ಬೇಗನೆ ಭೇಟಿಮಾಡಿಕೊಳ್ಳುವುದು ಉತ್ತಮ.

ದಂತ ಸಂಜೀವಿನಿ.

ಯಾವ ತರದ ಹಲ್ಲುನೋವನ್ನಾದರೂ ಕ್ಷಣದಲ್ಲಿ ಶಮನ ಮಾಡುವ ಶಕ್ತಿಯುಳ್ಳ ಈ ದಂತ ಸಂಜೀವಿನಿ ಕುಪ್ಪಿ ಒಂದಕ್ಕೆ ಕ್ರಯ ರೂ 1—0—0 ಮಾತ್ರ

ಎಸ್. ರಾಮಣ್ಣ,
C/o. ಡಾಕ್ಟರ್ ಎಸ್. ಎನ್. ಅಯ್ಯಂಗಾರ್,
ಮಹದೇವಪೇಟೆ, ಮಡಿಕೇರಿ.

48-13

ನೋಟೀಸ್.

ಒಡೆದು ಹಾಕಿದ ಬೆಪ್ಪುನಾಡು, ಎಡೆನಾಲ್ಕುನಾಡು ಮತ್ತು ಅಮ್ಮತ್ತಿನಾಡು ದನ ವಿಮೆ ಸಂಘಗಳ ಮೀಟಿಂಗಿನಲ್ಲಿ ಈ ಕೆಳಗೆ ಕಾಣಿಸಿರುವ ಸ್ಥಳಗಳಲ್ಲಿ, ಆಯಾಯ ತಾಲೋಕುಗಳಲ್ಲಿ ಈ ಕೆಳಗೆ ರುಜು ಮಾಡಿರುವವರಿಂದ ನಡೆಸಲ್ಪಡುವುದು. ಆಯಾಯ ವಿಮೆಸಂಘಗಳಿಗೆ ಸೇರಿದ ಎಲ್ಲಾ ಮೆಂಬರುಗಳು ಸಮಯಕ್ಕೆ ಸರಿಯಾಗಿ ಈ ಕೆಳಗೆ ರುಜುಮಾಡಿದವರ ರುಜು [illegible] ಹಾಜರಾಗಿ [illegible] ಮೀಟಿಂಗು ಮಾಡಿಲ್ಲವನ್ನು [illegible] ಸಲ್ಲಿ ಆಯಾಯ ಸಂಘಗಳಲ್ಲಿ [illegible] ರಿ ಹಣ ನೂಡತಾಗ ವೃದು. ಮೀಟಿಂಗಿಗ ರುಜು ರುಜು [illegible] ಅಭಿಪ್ರಾಯವಾಗಲೀ, ಪುಕಾರವ [illegible] ನ್ನಾಗ ೯ ಹಿಂದಿನಿಂದ ಗಮನಕ್ಕೆ ತೆಗೆದುಕೊಳ್ಳಲಾಗುವುದಿಲ್ಲ.

6—4—26 (ಮಂಗಳವಾರ) ಮಧ್ಯಾಹ್ನ 2ಗಂಟೆಗೆ ವೀರಾಜಪೇಟೆ ತಾಲೋಕು ಕಚೇರಿ ಬಳಿ ಮೈದಾನದಲ್ಲಿ ಬೆಪ್ಪುನಾಡು, ಎಡೆನಾಲ್ಕುನಾಡು, ದನವಿಮೆ ಸಂಘಗಳ ಮೀಟಿಂಗು. 8—4—26ರಲ್ಲಿ (ಗುರುವಾರ) ಮಧ್ಯಾಹ್ನ 1ಗಂಟೆಗೆ ಅಮ್ಮತ್ತಿಯಲ್ಲಿ, ಅಮ್ಮತ್ತಿನಾಡಿನ ದನಗಳ ವಿಮೆಸಂಘದ ಮೀಟಿಂಗು.

ವೀರಾಜಪೇಟೆ — ಕೆ. ಪಿ. ಚಿಣ್ಣಪ್ಪ,
ತಾ. 1 3 [illegible] — ದನವಿಮೆಸಂಘಗಳ ರಿಜಿಸ್ಟ್ರಾರ್.

2 2'

ಕೆ. ಸಿ. ಅಪ್ಪಯ್ಯ,

ದಂತ ವೈದ್ಯರು.

ಇದೇ ತಾರೀಖು 4ರಿಂದ ಏಪ್ರಿಲ್ ತಾರೀಖು [illegible] ವರೆಗೆ ವೀರರಾಜೇಂದ್ರಪೇಟೆ ಟ್ರಾವೆಲ್ಲರ್ಸ್ ಬಂಗ್ಲೆಯಲ್ಲಿ ಉಳಕೊಳ್ಳುವರು.. ಬಾಯಿ ಹಲ್ಲಿನ ರೋಗದವರು ಅವರನ್ನು ಅಲ್ಲಿ ಹೋಗಿ ನೋಡಬಹುದು. ಇಂ ಕನ್ಸಲ್ಟೇ ಷನ್ ಸಮಯವನ್ನು ಕಳಕೊಳ್ಳದೆಯಿರಿ [illegible] ಗ್ ಚಾರ್ಜು ಇಲ್ಲದೆ ನೋಡುವರು. 52-2

ಆಂಧ್ರ ಆಯುರ್ವೇದಿಕ್ ಫಾರ್ಮಸಿ.

ಬ್ರಾಂಚ್, ಬೆಂಗಳೂರು ಸಿಟಿ

ಚ್ಯವನಪ್ರಾಸ ಲೇಹ.



ಇದು ಸರ್ವೋತ್ಕೃಷ್ಟವಾದ ಗಿಡಮೂಲಿಕೆಗಳಿಂದ ತಯಾರಿಸಲ್ಪಟ್ಟ ಆಯುರ್ವೇದ ರಸಾಯನೌಷಧವು. ವಿದ್ಯಾರ್ಥಿಗಳೂ ವಿಶೇಷವಾಗಿ ಬುದ್ಧಿಯನ್ನು ಪ್ರಯೋಗಿಸಿ ಕೆಲಸ ಮಾಡುವವರೂ ಈ ಲೇಹವನ್ನು ಸೇವಿಸಿದರೆ ವಿಶೇಷವಾಗಿ ಬುದ್ಧಿಶಕ್ತಿಯನ್ನೂ ಜ್ಞಾಪಕಶಕ್ತಿಯನ್ನೂ ಹೊಂದುವರು. ದೀರ್ಘಕಾಲದ ವ್ಯಾಧಿಯಿಂದಾಗಲೀ ಕೆಟ್ಟ ನಡತೆಯಿಂದಾಗಲೀ, ಸ್ವಭಾವ ಶಕ್ತಿಯ ಕೊರತೆಯಿಂದಾಗಲೀ ಶರೀರ ಕಾಂತಿಯು ಕುಂದಿ ರಕ್ತ ಕೆಟ್ಟು ಇಂದ್ರಿಯ ದಾರ್ಬಲ್ಯವೇ ಮೊದಲಾದ ವಿಕಾರಗಳಿಂದ ಪೀಡಿತರಾಗಿರುವವರು ಈ ಲೇಹವನ್ನು ಸೇವಿಸಿದರೆ ಈ ತರದ ವಿಕಾರಗಳನ್ನೆಲ್ಲಾ ಪರಿಹರಿಸಿ ದೇಹಕ್ಕೂ ಮನಸ್ಸಿಗೂ ಉಲ್ಲಾಸವನ್ನುಂಟುಮಾಡಿ ಮೊಂದ ಬಿಂದಗೆಗೂ ನರಗಳಿಗೂ ಬಲವನ್ನು ಕೊಟ್ಟು ದೇಹಪುಷ್ಟಿಯನ್ನುಂಟುಮಾಡಿ ನವಚೈತನ್ಯವನ್ನುಂಟುಮಾಡುವುದು. ಅಲ್ಲದೆ ಆರೋಗ್ಯದ ದೃಢಶರೀರವುಳ್ಳವರಾಗಿ ದೀರ್ಘಕಾಲ ಬದುಕುವರು. ಕೆಮ್ಮು ಉಬ್ಬಸ ವ್ಯಾಧಿಯುಳ್ಳವರಿಗೂ ಮುಖ್ಯವಾಗಿ ಕ್ಷಯರೋಗಿಗಳಿಗೂ ಇದು ಸಂಜೀವಿನಿಯೇ ಸರಿ! ಚರಕ ಸಂಹಿತೆಯಲ್ಲಿ ಇದರ ಗುಣವು ವಿಸ್ತಾರವಾಗಿ ಹೇಳಲ್ಪಟ್ಟಿದೆ. ೧೦ ತೊಲೆಗೆ ೭ ರೂಪಾಯಿ. ೪೦ ತೊಲೆಗೆ ೩ ರೂಪಾಯಿ.

ಎಲ್ಲಾ ಕಡೆಯ ಸ್ಥಳಿಯೂ ಏಜಂಟರು ಬೇಕು.

[illegible] ಎಲ್ಲಾ ಬಿಸನಗಳು [illegible] ಆಯುರ್ವೇದ ಫಾರ್ಮಸಿ [illegible] ರೋಗಗಳನ್ನು ಪರೀಕ್ಷಿಸಿ [illegible] ಚಿಕಿತ್ಸೆಯನ್ನು ಪ್ರತಿದಿನವೂ ನಡಿಸುವರು. ವಿಶೇಷ ಸಂಗತಿಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಟಿ. ಸಿ. ಎಸ್. ಮಣಿಯಂ ಅಂಡ್ ಕೋ.,

ಮ್ಯಾನೇಜಿಂಗ್ ಏಜಂಟ್ಸ್, ಆಂಧ್ರ ಆಯುರ್ವೇದಿಕ್ ಫಾರ್ಮಸಿ

16—9 ಟಿ. ಚಿಕ್ಕಪೇಟೆ, ಬೆಂಗಳೂರು ಸಿಟಿ.

"ಕೊಡಗು"

ಸನ್ ೧೯೨೬ನೇ ಇಸವಿ ಏಪ್ರಿಲ್ ತಾ.
೨ ನೇ ಶುಕ್ರವಾರ.

ಪ್ರಜೆಯರ ಹಕ್ಕು ಬಾಧ್ಯತೆಗಳು.

೨.

ಪ್ರಜೆಯ ದೇಹದ ಸ್ವಾತಂತ್ರ್ಯಕ್ಕೆ ಹಿಂದುಸ್ಥಾನದಲ್ಲಿ ಇರುವ ಅನೇಕ ನಿರ್ಬಂಧನೆಗಳನ್ನು ಸಾಮದಾರ ಶಾಸ್ತ್ರಿಗಳು ವಿವರಿಸಿರುವರು. ಮನುಷ್ಯನ ದೇಹಸ್ವಾತಂತ್ರ್ಯವೆಂದರೆ— ಯಾವ ಮನುಷ್ಯನ ದೇಹವನ್ನಾದರೂ ನಿರ್ಬಂಧ ಪಡಿಸಬೇಕಾದರೆ ಅವನ ಮೇಲೆ ಏನಾದರೂ ಕ್ರಿಮಿನಲ್ ತಕ್ಸೀರು ಆರೋಪಿಸಿ ಮೇಜಿಸ್ಟ್ರೇಟರ ಮುಂದೆ ವಿಚಾರಕ್ಕೆ ತೆಗೆದುಕೊಂಡು ಹೋಗಲಿಕ್ಕಾಗಲಿ, ಅಥವಾ ಮೇಜಿಸ್ಟ್ರೇಟರ ಮುಂದೆ ವಿಚಾರವಾಗಿ ಸಜಾ ಶಿಕ್ಷೆಗೆ ಗುರಿಪಡಿಸಲ್ಪಟ್ಟ ಕಾರಣವಾಗಲೀ ಮಾತ್ರ ದೇಹದ ನಿರ್ಬಂಧಪಡಿಸಬಹುದಷ್ಟೆ. ಬೇರೆ ಯಾವ ಕಾರಣದಿಂದಲೂ ದೇಹದ ನಿರ್ಬಂಧಪಡಿಸ ಕೂಡದು. ಹಿಂದುಸ್ಥಾನದಲ್ಲಿ ಇಂಥಾ ವಿಚಾರಕ್ಕಲ್ಲದೆ ಬೇರೆ ಕಾರಣಗಳಿಗೆ ಮನುಷ್ಯರನ್ನು ನಿರ್ಬಂಧಪಡಿಸುವ ಹಕ್ಕು ಅನೇಕ ಅಧಿಕಾರಿಗಳಿಗೆ ಕೊಡಲ್ಪಟ್ಟಿವೆ. ಹೀಗೆ ಇರುವ ಹಕ್ಕುಗಳನ್ನು ಅಧಿಕಾರಿಗಳು ಬಹಳ ಸುಲಭದಲ್ಲಿ ಉಪಯೋಗಿಸುತ್ತಾರೆ. ಇಂಗ್ಲಂಡಿನ ಶಾಸನಗಳಲ್ಲಿಯೂ ಅಧಿಕಾರಿಗಳಿಗೆ ಇದೇ ರೀತಿ ಹಕ್ಕುಗಳಿದ್ದರೂ ಅಲ್ಲಿಯ ಅಧಿಕಾರಿಗಳು ಅವನ್ನು ಉಪಯೋಗಿಸುವದಿಲ್ಲ. ಯಾಕೆಂದರೆ, ಅಲ್ಲಿಯ ನ್ಯಾಯಾಧಿಪತಿಗಳು ಪ್ರಜೆಯ ಸ್ವಾತಂತ್ರ್ಯವನ್ನು ಬಹು ಜಾಗರೂಕರಾಗಿ ಕಾದುಕೊಳ್ಳುತ್ತಾರೆ. ಅಧಿಕಾರಿಗಳು ಪ್ರಜೆಯ ಸ್ವಾತಂತ್ರ್ಯಕ್ಕೆ ವಿರೋಧವಾಗಿ ನಡೆದರೆ ಅಧಿಕಾರಿಗಳನ್ನಾದರೂ ನ್ಯಾಯಾಧೀಶರು ಶಿಕ್ಷಿಸಿ ಬಿಡುತ್ತಾರೆ. ಹಿಂದುಸ್ಥಾನದ ನ್ಯಾಯಾಧಿಪತಿಗಳು ಪ್ರಜೆಯ ಸ್ವಾತಂತ್ರ್ಯವನ್ನು ಕಾದುಕೊಳ್ಳುವದರಲ್ಲಿ ತಮ್ಮ ಕರ್ತವ್ಯವನ್ನು ತಿಳಿದುಕೊಂಡಿರುವದಿಲ್ಲ. ಅಧಿಕಾರಿಗಳನ್ನು ಕಾಪಾಡಲಿಕ್ಕೂ ಅಧಿಕಾರಿಗಳು ಹೇಳಿದಂತೆ ನಡಿಸಲಿಕ್ಕೂ ಹಿಂಜರಿಯುವದಿಲ್ಲ, ಎಂತ ಸಾಮದಾರ ಶಾಸ್ತ್ರಿಗಳು ತಮ್ಮ ಉಪನ್ಯಾಸದಲ್ಲಿ ಹೇಳಿದರು. ಈ ಆಕ್ಷೇಪಕ್ಕೆ ನಮ್ಮ ಕೊಡಗು ದೇಶದ ಅಧಿಕಾರಿಗಳು ಗುರಿಯಾಗದೆ ಇಲ್ಲ. ಕೆಳಗಿನ ದರ್ಜೆ ಮೇಜಿಸ್ಟ್ರೇಟರುಗಳು ಸಾಧಾರಣವಾಗಿ ಪೋಲೀಸಿಗೂ ಮೇಲಧಿಕಾರಿಗಳಿಗೂ ಹೆದರುತ್ತಾ ಅದಿಕಾರಿಗಳ ಅಪೇಕ್ಷೆಯಂತೆಯೇ ನಡೆದುಕೊಳ್ಳುತ್ತಾರೆಂದು ಹಲವರ ಅಭಿಪ್ರಾಯ. ಇದಕ್ಕೆ ವ್ಯಸನಪಡಬೇಕಾದರೂ ಆಶ್ಚರ್ಯವೇನೂ ಇಲ್ಲ. ಮೇಲಧಿಕಾರಿಗಳ ಮೆಚ್ಚುಸಂಪಾದಿಸಬೇಕಾದದ್ದು ತಮ್ಮ ಮುಂದಿನ ಅಭಿವೃದ್ಧಿಗೆ ಅವಶ್ಯವೆಂದು ಕೆಲವು ಮೇಜಿಸ್ಟ್ರೇಟರು ನಂಬಿರುವರೋ ಎಂಬ ಸಂಶಯವು ತೋರುತ್ತದೆ. ಪ್ರಜೆಯ ಸ್ವಾತಂತ್ರ್ಯವೆಂದರೆ ಏನೆಂತ ಸಹ ಚೆನ್ನಾಗಿ ಅವರು ತಿಳಿದುಕೊಂಡಿರುವದಿಲ್ಲ. ಆದರೆ ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟ್ ಮತ್ತು ಸುಪಾರಿಂಟೇಂಟ್ ಜಡ್ಜಿಯಂಥಾ ದೊಡ್ಡ ನ್ಯಾಯಾಧಿಪತಿಗಳು ಸಹ ಕ್ರಿಮಿನಲ್ ಪ್ರೊಸೀಜರ್ ಕೋಡಿನ 144ನೇ ಸೆಕ್ಷನನ್ನು ದೇಶದ ಹೊರಗಿನಿಂದ ಬಂದ ಕೆಲವು ಮುಂದಾಳುಗಳ ಮೇಲೆ ಉಪಯೋಗಿಸಿದ್ದು ಎಲ್ಲರ ನೆನಪಿನಲ್ಲಿ ಇದೆಯಷ್ಟೆ. ಸ್ವತಂತ್ರ ಅಭಿಪ್ರಾಯವನ್ನು ಹುಡುಗರು ಇಂಗ್ಲೀಷ್ ವಿದ್ಯಾರ್ಥಿಗಳಲ್ಲಿ ಅಭ್ಯಾಸ ನಡಿಸಿದ ನ್ಯಾಯಾಧಿಪತಿಯವರೂ ಸಹ ಪೋಲೀಸ್ ಅಪೇಕ್ಷೆಗೆ ಒಳಗಾಗುತ್ತಿರುವಾಗ ನಮ್ಮ ದೇಶದ ನ್ಯಾಯಾಧಿಪತಿಗಳು ಪ್ರಜೆಯ ಸ್ವಾತಂತ್ರ್ಯವನ್ನು ಕಾಪಾಡಲು ಎಷ್ಟರಮಟ್ಟಿಗೆ ಸಮರ್ಥರಾಗಿದ್ದಾರೆಂದು ಹೇಳಬಹುದು ಹೇ?

ನ್ಯಾಯಾಧಿಪತಿಗಳಂತೆಯೇ ಬಲವಾದ ಮತ್ತು ಸ್ವತಂತ್ರ ಪ್ರಿಯರಾದ ಲಾಯರುಗಳಿಂದಲೂ ಪ್ರಜೆಗಳಿಗೆ ತುಂಬಾ ಸಹಾಯವಿದೆ. ಪ್ರಜೆಗಳ ಹಕ್ಕುಗಳಿಗೆ ಅಧಿಕಾರಿಗಳಿಂದ ಅಡಿಂಗ ಬಾರದಂತೆ ಕಾಪಾಡುವ ಲಾಯರುಗಳಿಗೆ ಸಮುದಾಯದ ಧನ್ಯವಾದಗಳು ಸಲ್ಲಬೇಕಾಗಿದೆ, ಎಂದು ಉಪನ್ಯಾಸಕರು ಹೇಳಿದರು.

ಹಿಂದುಸ್ಥಾನದ ಪ್ರಜೆಗಳ ದೇಹಸ್ವಾತಂತ್ರ್ಯ, ಭಾಷಣ ಸ್ವಾತಂತ್ರ್ಯ ಮುಂತಾದ್ದಕ್ಕೆ ಅಡ್ಡಿಮಾಡುವದು ಹಿಂದುಸ್ಥಾನದಲ್ಲಿರುವ ಬಿಳೀಜನರ ಭದ್ರತೆಗಾಗಿಯೇ ಎಂತ ಶಾಸ್ತ್ರಿಗಳು ಲೆಜಿಸ್ಲೇಟಿವ್ ಎಸೆಂಬ್ಲಿಯಲ್ಲಿ ವಾದಮಾಡಿದ್ದಾರಂತೆ. ಮಹಾತ್ಮ ಗಾಂಧಿಯವರ ಒಂದು ಬರವಣಿಗೆಯಿಂದ ಈ ಮಾತುಗಳನ್ನು ಎತ್ತಿ ಹೇಳಿದ್ದಾರೆ. "ಬಿಳೀಜನರ ಪ್ರತಿನಿಧಿಗಳಂತಿರುವ ಈ ಸರಕಾರವು ರಾಜಕೀಯ ಚಳವಳ ನಡಿಸುವ ಜನರನ್ನು ಜೈಲಿಯಲ್ಲಿ ಇಟ್ಟು ಅಲ್ಲಿ ಹಿಂಸೆಪಡಿಸುವದು ಬಿಳೀಜನರ ಭದ್ರತೆಗೆ ಅವಶ್ಯವೆಂತ ನಂಬಿದೆ." ವಿಚಾರವಿಲ್ಲದೆ ಬಂದೀಖಾನೆಯಲ್ಲಿ ಇಡಬಹುದೆಂತ ಖಾನೂನುಗಳನ್ನೆಲ್ಲಾ ವಿವರಿಸಿ ತೋರಿಸಿ, ಬೂಸಿತಕ್ಸೀರು ಮಾಡಿದ ಅಪರಾಧಿಗೆ ಸಹ ಪಬ್ಲಿಕ್ ಕೋರ್ಟಿನಲ್ಲಿ ವಿಚಾರವಾಗಬೇಕೆಂತ ಖಾನೂನು ಇರುವಾಗ ಪ್ರಜಾಹಿತಕ್ಕೆ ಹೋರಾಡುವ ಜನರ ದೇಹಸ್ವಾತಂತ್ರ್ಯಕ್ಕೆ ವಿರೋಧವಾಗಿ ವಿಚಾರವಿಲ್ಲದೆ ಸಜಾವಿಧಿಸುವದರ ಅನ್ಯಾಯವನ್ನು ಮನಮುಟ್ಟುವಂತೆ ವಿವರಿಸಿ ಹೇಳಿದರು.

ಮತಸ್ವಾತಂತ್ರ್ಯಕ್ಕೆ ವಿರೋಧವಾಗಿ ಮಿಶನರಿ ಸ್ಕೂಲುಗಳಲ್ಲಿ ಕ್ರಿಷ್ಟಿಯನ್ ಮತಕ್ಕೆ ಸೇರದವರು ಸಹ ಆನರ ಕ್ರಿಷ್ಟಿಯನ್ ಮತಬೋಧನೆಯನ್ನು ಹೊಂದಬೇಕೆಂತ ಒತ್ತಾಯಪಡಿಸುತ್ತಿರುವದಕ್ಕೆ ವ್ಯಸನವನ್ನು ಸೂಚಿಸಿ ವಿದ್ಯಾಇಲಾಖೆಯ ರೂಲ್ಸಿನಲ್ಲಿ ಕ್ರಿಷ್ಟಿಯನ್ ಶಾಲೆಗಳಿಗೆ ಹೋಗುವ ಕ್ರಿಷ್ಟಿಯನರಲ್ಲದವರಿಗೆ ಈ ಬೋಧನೆಗೆ ಸೇರುವ ಜುಲುಮೆ ಇಲ್ಲದಂತೆ ಮಾಡಬೇಕೆಂತ ಕೇಳಿಕೊಂಡರು. ನಾಗರೀಕತೆ ಹೊಂದಿದ ಎಲ್ಲಾ ಸರಕಾರಗಳಲ್ಲೂ ಸರಕಾರದಿಂದ ಧನ ಸಹಾಯಹೊಂದುವ ಶಾಲೆಗಳಲ್ಲಿ ಈ ಮತಸ್ವಾತಂತ್ರ್ಯವನ್ನು ವಿದ್ಯಾರ್ಥಿಗಳಿಗೆ ಕೊಟ್ಟಿದ್ದಾರೆ. ಹಿಂದುಸ್ಥಾನದಲ್ಲಿ ಮಾತ್ರ ಈ ಸ್ವಾತಂತ್ರ್ಯವಿಲ್ಲ. ನ್ಯಾಯವಿಧಾಯಕ ಸಭೆಗಳ ಮೆಂಬರುಗಳು ಈ ವಿಷಯದಲ್ಲಿ ಜಾಗರೂಕರಾಗಬೇಕೆಂತ ಉಪನ್ಯಾಸಕರು ಕೇಳಿಕೊಂಡಿದ್ದಾರೆ.

ಸರಕಾರಿ ಉದ್ಯೋಗಗಳು ಯಾವ ಮನುಷ್ಯನಿಗೇ ಆಗಲೀ ಅರ್ಹತೆಮೇಲೆ ಸಿಕ್ಕಬೇಕೇ ಹೊರತು ಜಾತಿಮೇಲೆ ಸಿಕ್ಕುವಂತೆ ಇರಬಾರದು. ಹಿಂದುಸ್ಥಾನದ ಖಾನೂನುಮೇರೆ ಯಾವ ಉದ್ಯೋಗಕ್ಕೇ ಆಗಲೀ ಪ್ರತಿಯೊಬ್ಬ ಪ್ರಜೆಗೂ ಹಕ್ಕು ಇದೆಯಾದರೂ ಜಾರಿಯಲ್ಲಿ ಬಿಳೀಜನರ ಹಕ್ಕಾಗಿಯೇ ಅನೇಕ ಉದ್ಯೋಗಗಳನ್ನು ಇಟ್ಟುಕೊಂಡಿರುವದು ಎಲ್ಲರಿಗೂ ತಿಳಿದ ವಿಷಯವಾಗಿದೆ. ಸರಕಾರಿ ಉದ್ಯೋಗಕ್ಕೆ ಜಾತಿಮೇಲೆ ಅರ್ಹತೆಯು ಮದ್ರಾಸಿನಲ್ಲಿ ಜಾರಿಗೆ ಬಂದಿರುವದನ್ನು ಸೂಚಿಸಿ ಈ ಪದ್ಧತಿಯನ್ನು ಖಂಡಿಸಿ ಹೇಳಿರುವದೇನೆಂದರೆ,— "ಸರಕಾರಿ ಉದ್ಯೋಗದಲ್ಲಿರುವ ಯಾವ ಮನುಷ್ಯನೇ ಆಗಲಿ, ತನ್ನ ಉದ್ಯೋಗಕ್ಕಾಗಲೀ, ತನಗೆ ಸಿಕ್ಕುವ ಗೌರವಕ್ಕಾಗಲೀ, ಪ್ರಮೋಶನಿಗೇ ಆಗಲೀ ಯಾವದಾದರೊಂದು ಜಾತಿಯ ಮುಂದಾಳುಗಳ ದಯೆಪಡೆಯಬೇಕೆಂಬ ಭಾವನೆ ಹುಟ್ಟುವಂತೆ ಇರಬಾರದು. ಈ ಭಾವನೆ ಹುಟ್ಟಿದರೆ ಉದ್ಯೋಗಸ್ಥರು ಸರಕಾರದ ನೌಕರರಲ್ಲ. ಆ ಜಾತಿಯ ನೌಕರರಾಗುತ್ತಾರೆ." ನಮ್ಮ ದೇಶದಲ್ಲಿ ಇಂಥಾ ವರ್ತನೆಗೆ ಮೇಲಧಿಕಾರಿಗಳು ಎಡೆಗೊಡಬಾರದೆಂತ ಹಾರೈಸುತ್ತೇವೆ. ನ್ಯಾಯಾಧಿಪತಿಗಳಂತೂ ಜಾತಿ ಅಭಿಮಾನವನ್ನು ನ್ಯಾಯಸ್ಥಾನದಿಂದ ತೋರಿಸಲೇಬಾರದು. ಈ ಮಾತನ್ನು ನಾವು ಬರೆಯಬೇಕಾಗಿದೆಯೆಲ್ಲಾ ಎಂತ ವ್ಯಸನಪಡಬೇಕಾಗಿದೆ. ಇದೇ ಸಂದರ್ಭದಲ್ಲಿ ಅವರು ಇನ್ನೂ ಹೇಳಿರುವದೇನೆಂದರೆ—ಸರಕಾರಿ ಉದ್ಯೋಗಸ್ಥರು ತಮ್ಮ ಜಾತಿಯ ಕ್ಷೇಮಕ್ಕಾಗಿ ಕೆಲಸಮಾಡುವ ಭಾವನೆಯನ್ನೇ ಇಟ್ಟುಕೊಳ್ಳಬಾರದು. ಸರಕಾರಿ ಉದ್ಯೋಗವನ್ನು ಕೈಕೊಂಡ ಮೇಲೆ ಜಾತಿಯ ಅಭಿಪ್ರಾಯವನ್ನೇ ಬಿಟ್ಟು ಪ್ರಜೆಗಳೊಳಗೆ ತಾರತಮ್ಯವಿಲ್ಲದೆ ಪ್ರಜಾಕ್ಷೇಮಕ್ಕೆ ಸಹಾಯವಾಗುವಂತೆ ನಡೆಯಬೇಕು. ಅಂಥವನನ್ನು ನಂಬಬಹುದು. ಅಂಥವನಿಂದ ದೇಶಕ್ಕೂ ಒಳ್ಳೇದಾಗುತ್ತದೆ," ಎಂತ ಉಪನ್ಯಾಸದಲ್ಲಿ ಹೇಳಿದ್ದಾರೆ.

ನ್ಯಾಯವಿಚಾರದ ಅಧಿಕಾರಗಳನ್ನೂ, ಆಡಳಿತದ ಅಧಿಕಾರಗಳನ್ನೂ ಬೇರೆ ಬೇರೆಯಾಗಿ ಇಡಬೇಕೆಂಬ, ನಾಗರೀಕತೆಯನ್ನು ಹೊಂದಿದ ಎಲ್ಲಾ ಸರಕಾರಗಳಲ್ಲೂ ಒಪ್ಪುವ ಮಾತನ್ನು ಹಿಂದುಸ್ಥಾನದಲ್ಲಿ ಮಾತ್ರ ಒಪ್ಪುವದಿಲ್ಲ. ನಮ್ಮ ಈ ಕೊಡಗು ದೇಶದಲ್ಲಂತೂ ಪಾರುಪತ್ಯೆಗಾರರಿಂದ ಕಮಿಶನರವರೆಗೂ ಈ ಅಧಿಕಾರಗಳು ಬೆರೆಕೆಯಾಗಿರುವದು ಬಹಳ ವಿಷಾದಕರ. ಈ ಅತ್ಯಾವಶ್ಯಕವಾದ ಮಾರ್ಪಾಡು ಎಂದು ಸಾಧ್ಯವಾಗುತ್ತದೆಯೋ ಅಂದೇ ದೇಶಕ್ಕೆ ಕ್ಷೇಮವಿದೆಯೆಂತ ಎಲ್ಲಾ ಮುಂದಾಳುಗಳ ಅಭಿಪ್ರಾಯವಾಗಿದೆ.

ಹಿಂದುಸ್ಥಾನದಲ್ಲಿ ಖಾನೂನು ಮೇರೆ ಪ್ರಜೆಯು ಮಾಡಬೇಕಾದ ಕೆಲವು ಕರ್ತವ್ಯಗಳಿವೆ. ಕಂದಾಯವನ್ನು ಕೊಡುವದು, ಸೆಶನ್ ಕೇಸುಗಳಲ್ಲಿ ಪಂಚಾಯಿತನಾಗಿ ಇರುವದು, ಕೆಲವು ಕ್ರಿಮಿನಲ್ ತಕ್ಸೀರುಗಳಾದರೆ ಪೋಲೀಸಿಗೆ ತಿಳಿಸಬೇಕಾದುದು, ಸ್ಪೆಶಿಯಲ್ ಪೋಲೀಸ್ ಕಾನ್ಸ್ಟೇಬಲುಗಳಾಗಿ ಕೆಲಸ ಮಾಡುವದು, ದೇಶದ ಸರಕಾರದ ಸಭೆಗಳಿಗೆ ಪ್ರತಿನಿಧಿಗಳ ಚುನಾವಣೆಯಲ್ಲಿ ಓಟ್ ಕೊಡುವದು; ಈ ಕೆಲಸವನ್ನು ಮಾಡದಿದ್ದರೆ ಸರಕಾರಕ್ಕೆ ಸಹಾಯಮಾಡಲಿಲ್ಲವೆಂತ ಮಾತ್ರವಲ್ಲದೆ ಓಟ್ ಕೊಡದೆ ಇರುವವನು ಪ್ರಜಾಪ್ರತಿನಿಧಿ ಸರಕಾರ ಪದ್ಧತಿಗೆ ತಯಾರಿಲ್ಲವೆಂತ ಪ್ರಪಂಚಕ್ಕೆ ಬಹಿರಂಗಪಡಿಸಿದಂದಾಗುತ್ತದೆ. ಅಲ್ಲದೆ ಅರ್ಹರಾದವರು ಸಮುದಾಯದ ಪ್ರಯೋಜನಕ್ಕಾಗಿ ಸರಕಾರದ ಸಭೆಗಳಲ್ಲಿ ಕೆಲಸಮಾಡಲಿಕ್ಕೂ ತಯಾರಾಗಿರಬೇಕು. ಓಟ್ ಕೊಡುವ ಮತ್ತು ಮೆಂಬರುಗಳಾಗುವ ಕೆಲಸದಿಂದ ತನಗೂ, ತನ್ನ ಕುಟುಂಬಕ್ಕೂ, ತನ್ನ ದೇಶಕ್ಕೂ, ಒಟ್ಟು ಮನುಷ್ಯವರ್ಗಕ್ಕೂ ಸಹ ಪ್ರಯೋಜನವಾಗುವ ಕೆಲಸಗಳನ್ನು ಮಾಡಬಹುದು. ಪ್ರತಿಯೊಬ್ಬ ಪ್ರಜೆಯು ಈ ಕರ್ತವ್ಯಗಳನ್ನು ಮಾಡದಿದ್ದರೆ ಏನಾಗುತ್ತದೆಂದರೆ—"ಸ್ವಾರ್ಥಪರರು, ಸ್ವಾರ್ಥ ಪ್ರಯೋಜನಕ್ಕಾಗಿ ಮುಂದೆ ಬರುತ್ತಾರೆ. ಕೆಟ್ಟ ಮನುಷ್ಯರು ದ್ವೇಷದಿಂದ ಕೆಲಸಮಾಡಲು ಮೆಂಬರುಗಳಾಗುತ್ತಾರೆ. ಲಂಚಕೋರರು ಸರಕಾರದಿಂದಲೂ ಜನರಿಂದಲೂ ಏನಾದರೂ ಧನ ಸಹಾಯಪಡೆಯಲು ಅವಕಾಶಮಾಡಿಕೊಳ್ಳುತ್ತಾರೆ. ಸ್ವಾರ್ಥತ್ಯಾಗವು, ಆತ್ಮ ಸಂಯಮವು, ಧರ್ಮವು, ದೇಶಭಕ್ತಿಯು, ಪ್ರಾಮಾಣಿಕತೆಯು ಮನುಷ್ಯರಿಗೆ ಎಡೆ ಇಲ್ಲದೆ ಹೋಗುತ್ತದೆ. ಆದ್ದರಿಂದ ದೇಶದ ಪ್ರತಿಯೊಬ್ಬ ಹಕ್ಕಿರುವವನೂ ಓಟ್ ಕೊಡಲು ಮುಂದೆ ಬರಬೇಕು. ಸಭೆಗಳಲ್ಲಿ ಕೆಲಸಮಾಡಲು ಯೋಗ್ಯತೆ ಇರುವವರು ಮೆಂಬರುಗಳಾಗಲು ತಯಾರಿರಬೇಕು," ಎಂತ ಸಾಮದಾರ ಶ್ರೀನಿವಾಸಶಾಸ್ತ್ರಿಗಳು ಒತ್ತಿ ಹೇಳಿದ್ದಾರೆ. ಈ ಮಾತುಗಳಿಗೆ ಪ್ರತಿಯೊಬ್ಬ ಪ್ರಜೆಯು ಮನಸ್ಸು ಕೊಡಬೇಕಾಗಿದೆ. ಪ್ರತಿಯೊಬ್ಬ ಪ್ರಜೆಯೂ ತನ್ನ ಕರ್ತವ್ಯವನ್ನು ಮಾಡಿದರೆ ಅರ್ಹರಾದವರಿಗೆ ಮೆಂಬರುತನ ಮುಂತಾದದ್ದು ತತ್ಕಾಲಕ್ಕೆ ದೊರೆತರೂ ಇನ್ನೊಂದು ಚುನಾವಣೆಯಲ್ಲಿ ಮೂಲೆಗೆ ಒತ್ತಲ್ಪಡುತ್ತಾರೆ. ಸಮುದಾಯದ ಪ್ರಜಾಜನವು ಈ ವಿಷಯದಲ್ಲಿ ಎಷ್ಟರಮಟ್ಟಿಗೆ ಜಾಗರೂಕರಾಗಿರುತ್ತಾರೋ, ಅಷ್ಟರಮಟ್ಟಿಗೆ ಆ ದೇಶದ ಜನರು ಸ್ವರಾಜ್ಯಕ್ಕೆ ಅರ್ಹರೆಂತ ಹೇಳಬಹುದು.

ಪ್ರತಿಯೊಬ್ಬ ಪ್ರಜೆಯೂ ತನ್ನ ಸ್ವಂತ ಬುದ್ಧಿಯನ್ನು ಉಪಯೋಗಿಸಲು ಹಕ್ಕುದಾರನಾಗಿರುತ್ತಾನೆ. ಆದ್ದರಿಂದ ಸರಕಾರಕ್ಕೆ ಎದುರಾಗಿ ಯಾವಾಗ ನಿಲ್ಲಬೇಕೆಂಬುದನ್ನು ಅವನೇ ನಿಶ್ಚಯಿಸಿಕೊಳ್ಳಬೇಕು. ಆದರೆ ತಾನು ಎದುರು ನಿಲ್ಲುವದರಿಂದ ಒಟ್ಟು ದೇಶಕ್ಕೂ ಜನಾಂಗಕ್ಕೂ ಏನು ಕೆಡಕಾಗಬಹುದೆಂಬುದನ್ನು ಚೆನ್ನಾಗಿ ಯೋಚಿಸಿಕೊಂಡೇ ಎದುರು ನಿಲ್ಲಬೇಕೆಂತ ಉಪನ್ಯಾಸಕರು ಬೋಧಿಸಿರುತ್ತಾರೆ. ಬಹುಮತಕ್ಕೆ ನಿಕ್ಕರು ಒಪ್ಪಲೇಬೇಕೆಂಬ ಎಲ್ಲಾ ಪ್ರಜಾಸತ್ತಾತ್ಮಕ ಸರಕಾರಗಳ ತತ್ವವಾದರೂ, ಬಹುಮತದ ತೀರ್ಮಾನವು ಬುದ್ಧಿಪೂರ್ವಕವಾಗಿಯೂ, ಸಮುದಾಯದ ಪ್ರಯೋಜನಕ್ಕಾಗಿಯೂ, ಧರ್ಮಕ್ಕೆ ವಿರೋಧವಿಲ್ಲದ್ದಾಗಿಯೂ ಇದ್ದರೆ ಮಾತ್ರ ಬಹುಮತಕ್ಕೆ ಒಳಗಾಗಬೇಕು. ಬಹುಮತದವರು ಒಬ್ಬ ವ್ಯಕ್ತಿಯ ಜುಲುಮೆಗಾಗಿಯಾಗಲೀ, ಬೆದರಿಕೆಗಾಗಿಯಾಗಲೀ ಜಾತಿಮೇಲೆಯಾಗಲೀ ಅಭಿಪ್ರಾಯಕೊಟ್ಟಿದ್ದಾದರೆ ಅದಕ್ಕೆ ಎದುರು ನಿಲ್ಲಬಹುದು ಎಂತ ಬೇರೆ ಗ್ರಂಥಕರ್ತರ ಆಧಾರದೊಡನೆ ಶಾಸ್ತ್ರಿಗಳು ಹೇಳಿದರು.

ಡಿಸ್ಟ್ರಿಕ್ಟ್ ಬೋರ್ಡ್.

ಕಳೆದ ಒಂದು ವರ್ಷವು ಕೊಡಗಿನಲ್ಲಿ ಡಿಸ್ಟ್ರಿಕ್ಟ್ ಬೋರ್ಡು ಇಲ್ಲದೇನೇ ಕಳೆದುಹೋದ ವಿಶೇಷ ಸಂಗತಿಯು ಎಲ್ಲರಿಗೂ ತಿಳಿದೇ ಇದೆ. ಈ ವಿಷಯ ಕೌನ್ಸಿಲಿನ ಕಳೆದ ಮೀಟಿಂಗಿನಲ್ಲಿ ಪ್ರತಿನಿಧಿ ಮೆಂಬರುಗಳು ಸರ್ಕಾರದ ವರ್ತನೆಯನ್ನು ಖಂಡಿಸಿ ಮಾತಾಡಿದ್ದಕ್ಕೆ ಅಧಿಕಾರಿಗಳು ಗಮನಕೊಟ್ಟಂತೆ ಕಾಣುತ್ತದೆ. ಹೊಸ ಬೋರ್ಡಿನ ಮೆಂಬರುಗಳ ಚುನಾವಣೆಯ ರೂಲ್ಸುಗಳು ತಯಾರಾಗುವವರೆಗೆ ತತ್ಕಾಲ ಬಂದು ಬೋರ್ಡನ್ನು ಸರ್ಕಾರದವರು ನೇಮಿಸುವರೆಂದೂ ಇದಕ್ಕೆ ನಾಲ್ಕು ಉದ್ಯೋಗಸ್ಥ ಮೆಂಬರುಗಳಲ್ಲದೆ ಹದಿನೈದಕ್ಕೆ ಮೀರದಂತೆ ಉದ್ಯೋಗಸ್ಥರಲ್ಲದ ಮೆಂಬರುಗಳನ್ನು ಚೀಫ್ ಕಮಿಶನರವರು ನೇಮಿಸುವರೆಂದೂ ಪ್ರಕಟವಾಗಿದೆ. ಬೋರ್ಡು ಇಲ್ಲದೇ ಇರುವ ಈ ಬದಲಾವಣೆಯ ಸಮಯದಲ್ಲಿ ಮುಂದಿನ ಬೋರ್ಡು ಚುನಾವಣೆಯ ರೂಲ್ಸುಗಳ ಚರ್ಚೆಯನ್ನು ಅಧಿಕಾರಿಗಳೇ ಮಾಡದೆ ಉದ್ಯೋಗಸ್ಥರಲ್ಲದ ಮೆಂಬರುಗಳ ಬಹುಮತವಿರುವ ಬೋರ್ಡನ್ನಾದರೂ ನೇಮಿಸುವದು ಲೇಸು. ಚುನಾಯಿತ ಮೆಂಬರುಗಳೇ ರೂಲ್ಸುಗಳನ್ನು ಚರ್ಚಿಸಿದ್ದರೆ ಉತ್ತಮವಾಗಿತ್ತು. ಆದರೆ ಅದು ಥಕ್ಕನೆ ಸಾಧ್ಯವಿಲ್ಲದ್ದರಿಂದ ನೇಮಿಸಿದ ಬೋರ್ಡಿನವರೂ ರೂಲ್ಸುಗಳನ್ನು ಬೇಗನೆ ತಯಾರಿಸಿ ಖಾಯಂ ಬೋರ್ಡಿನ ಚುನಾವಣೆಯನ್ನು ಎರಡು ಮೂರು ತಿಂಗಳೊಳಗಾಗಿ ನಡಿಸಬೇಕಾಗಿದೆ. ಇಲ್ಲವಾದರೆ ಈಗಿನ ನೇಮಿತ ಬೋರ್ಡಿನಿಂದ ಜನರು ಎಂದಿಗೂ ತೃಪ್ತರಾಗಲು ಕಾರಣವಿಲ್ಲ.

ತಾತ್ಕಾಲಿಕ ಬೋರ್ಡಿಗೆ ಮೆಂಬರುಗಳನ್ನು ನೇಮಿಸುವದರಲ್ಲಿ ಜನರಲ್ಲಿರುವ ಅಸಮಾಧಾನವನ್ನು ಸ್ವಲ್ಪ ಮಟ್ಟಿಗಾದರೂ ಹೋಗಲಾಡಿಸಿಕೊಳ್ಳಬಹುದು. ದೇಶದ ಬಹುಮತ ಜನಪ್ರೀತಿಗೆ ಪಾತ್ರರಾದವರನ್ನು ಬೋರ್ಡಿಗೆ ನೇಮಿಸುವದರಿಂದ ಚರ್ಚಿಸಲ್ಪಡುವ ರೂಲ್ಸುಗಳು ಹೆಚ್ಚಿನ ಜನರ ಒಪ್ಪಿಗೆಯನ್ನು ಪಡೆಯುವವು. ಹೇಗೂ ಹೊಸ ಬೋರ್ಡಿನ ಚುನಾವಣೆಯನ್ನು ಬರುವ ಮಳೆಗಾಲದೊಳಗೆ ನಡಿಸುವದಾದರೆ ಈಗಿನ ಏರ್ಪಾಡಿಗೆ ದೇಶದವರು ಆಕ್ಷೇಪಿಸಲಿಕ್ಕಿಲ್ಲವಾಗಿ ನಂಬುತ್ತೇವೆ.

ಮಹಾತ್ಮ ಗಾಂಧಿಯವರ ಸ್ವಚರಿತ್ರೆ.

(ಕಳೆದ ವಾರದಿಂದ ಮುಂದುವರಿದದ್ದು)

ಹೆಂಡತಿಯ ಮೇಲೆ ಅನುಮಾನ.

ನನ್ನ ಹೆಂಡತಿಗೂ ನನಗೂ ಮನಸ್ತಾಪವುಂಟಾಗಲು ಆ ಸ್ನೇಹಿತನ ಸಹವಾಸವೇ ಕಾರಣವು. ನನಗೆ ನನ್ನ ಹೆಂಡತಿಯ ಮೇಲೆ ಪ್ರೀತಿಯಿದ್ದಿತ್ತು. ಅದುಕಾರಣ ಅನುಮಾನವು ಹೆಚ್ಚಾಗಿದ್ದಿತು. ಆ ಸ್ನೇಹಿತನು ನನ್ನ ಅನುಮಾನವನ್ನು ಮತ್ತಷ್ಟು ಹೆಚ್ಚಿಸಿದನು. ಅವನ ಮಾತು ನನಗೆ ಅಗಣಿತವಾಕ್ಯವಾಗಿದ್ದಿತು. ಅವನ ಮಾತನ್ನು ನಂಬಿ ಅನೇಕ ಸಲ ನಾನು ನನ್ನ ಹೆಂಡತಿಯನ್ನು ಪೌರುಷದ ಮಾತುಗಳಿಂದ ನಿಂದಿಸುತ್ತಿದ್ದೆನು. ಅದಕ್ಕಾಗಿ ಈಗಲೂ ನನ್ನ ಚರ್ಯವನ್ನು ನಾನು ಎಷ್ಟು ನಿಂದಿಸಿದರೂ ನನ್ನ ಮನಸ್ಸಿಗೆ ತೃಪ್ತಿಯುಂಟಾಗುವುದಿಲ್ಲ. ಹಾಗೆ ನಿಷ್ಕಾರಣವಾಗಿ ಪತಿಯು ತನ್ನನ್ನು [illegible] ಮಾಡಿಸುತ್ತಿದ್ದರೂ ಕೂಡ ಸಹಿಸಿಕೊಂಡಿರುವ ಒಬ್ಬ ಸತಿ [illegible] ಪ್ರತಾಪಶೀಲಗಳಾದ ಹಿಂದೂ ಪತಿವ್ರತೆಯರಿಗೆ [illegible] ಸಾಧ್ಯವು. ಅದುಕಾರಣ ಸ್ತ್ರೀಯರು [illegible] ರೂಪಿಣಿಯರೆಂದು ನಾನು [illegible] ಸುತ್ತಿರುವೆನು. [illegible] ಜವಾನನು ತನ್ನನ್ನು ಅವಮಾನಪಡಿಸಿದಲ್ಲಿ ನೌಕರನು [illegible] ಬಿಟ್ಟು ಹೋಗುವನು. ತಂದೆಯು ಹಾಗೆ ಅವಮಾನಪಡಿಸಿದಲ್ಲಿ ಮಗನು ತಂದೆಯ ಮನೆಯನ್ನು ಬಿಟ್ಟು ಹೋಗುವನು. ಸ್ನೇಹಿತನು ಹಾಗೆ ಅವಮಾನ ಮಾಡಿದಲ್ಲಿ ಮಿತ್ರನು ಅವನ ಕಡೆ [illegible] ಗಿನ್ನೋಡುವುದಿಲ್ಲ. ಹೆಂಡತಿಗೆ ಗಂಡನ ಮೇಲೆ ಅನುಮಾನ ಹುಟ್ಟಿದಲ್ಲಿ ಆಕೆಯು ತನ್ನ ಮನಸ್ಸಿನಲ್ಲೇ ಅದಗಿಸಿಕೊಂಡಿರುವಳಲ್ಲದೆ ಹೊರಕ್ಕೆ ತೋರಿಸುವುದಿಲ್ಲ. ಗಂಡನಿಗೆ ಹೆಂಡತಿಯ ಮೇಲೆ ಅನುಮಾನವುಂಟಾದಲ್ಲಿ [illegible] ಗತಿಯೇ ಆಗುವುದು. ಆಕೆಯು ಎಲ್ಲಿಗೆ ತಾನೆ ಹೋಗುವಳು? ಹಿಂದೂ ಯುವತಿಯು ತನ್ನ [illegible] ಪಡಿಸಿಕೊಳ್ಳಲು ಕೋರ್ಟಿಗೆ ಹೋಗಲು ಅಂಗೀಕರಿಸುವುದಿಲ್ಲ. ಆದುದರಿಂದ ಒಬ್ಬಳಿಗೆ ಸಮ [illegible] ಸಂದಿಕ್ಷನಲ್ಲ. ಅದುಕಾರಣ ನಾನು ನನ್ನ ಹೆಂಡತಿಯ ಮೇಲೆ ಅಪಾರ ಅನುಮಾನಪಟ್ಟು ಆಕೆಯನ್ನು ಅವಮಾನಪಡಿಸಿದ್ದಕ್ಕಾಗಿ ನನಗೆ ಬಹಳ ಪಶ್ಚಾತ್ತಾಪವುಂಟಾಯಿತು. ಅಹಿಂಸಾತತ್ವವು ನನಗೆ ಚೆನ್ನಾಗಿ ಬೋಧೆಯಾದಮೇಲೆ ನನಗೆ ಆ ಅನುಮಾನವು ಸಂಪೂರ್ಣವಾಗಿ ನಿವಾರಣೆಯಾಯಿತು. ಆಗಲೇ ಬ್ರಹ್ಮಚರ್ಯೆಯೊಂದರ ಮಹಾಮಹಿಮೆಯನ್ನು ನಾನು ಸಂಪೂರ್ಣವಾಗಿ ಗ್ರಹಿಸುವವನಾದೆನು. ಹೆಂಡತಿಯು ಗಂಡನಿಗೆ ಸಹಧರ್ಮಚಾರಿಣಿಯೆಂದೂ, ಸಹಕಾರಿಣಿಯೆಂದೂ, ಸುಖದುಃಖಗಳಲ್ಲಿ ಸಮಭಾಗಿನಿಯೆಂದೂ, ತನಗೆ ಅನುಕೂಲವಾದ ಮಾರ್ಗವನ್ನು ಅನುಸರಿಸಲು ಗಂಡನಿಗೆ ಸಮಾನವಾಗಿ ಸ್ವಾತಂತ್ರವು ಮನೆಯಜಮಾನಿಯಮೇಲೆ ಬಿದ್ದಿರುವುದಲ್ಲದೆ, ಗಂಡ ಹೆಂಡತಿಗೆ ಯಾವ ಜೀವವೂ ಸಂಬಂಧವಿರುವುದೆಂದು ತಿಳಿಯುವುದು ಬಹಳ ಕಷ್ಟವು. ನಾನು ಹೇಗೆ ನನ್ನ ಮಿತ್ರನ ಮಾತನ್ನು ವೇದವಾಕ್ಯವೆಂದು ನಂಬಿ ನನ್ನ ಹೆಂಡತಿಯನ್ನು ಕಠಿಣವಾಗಿ ನಿಂದಿಸುತ್ತಿದ್ದ ಕಾಲವನ್ನು ಸ್ಮರಿಸಿಕೊಂಡಾಗಲೆಲ್ಲಾ ನನಗೆ ವಿಶೇಷ ಪರಿತಾಪವುಂಟಾಗುತ್ತಿರುವುದು.

ಎಂಟನೆಯ ಪ್ರಕರಣ.

ದೊಂಗತನವೂ ಪ್ರಾಯಶ್ಚಿತ್ತವೂ.

ನನ್ನ ವಿವಾಹವು ಆಗುವ ಸಮಯದಲ್ಲೂ, ಅದರ ಮೇಲೂ, ಮಾಂಸವನ್ನು ತಿನ್ನುವುದಕ್ಕೆ ಪೂರ್ವದಲ್ಲೂ, ತಿಂದ ಮೇಲೂ ನಾನು ಮಾಡಿದ ಅಕಾರ್ಯಗಳನ್ನು ಕುರಿತು ಹೇಳಬೇಕಾದುದು ಇನ್ನೂ ಇದೆ. ನನ್ನ ಬಂಧು ಒಬ್ಬನೂ ನಾನೂ ಇಬ್ಬರೂ ಸೇರಿ ಹೊಗೆಬತ್ತಿಯನ್ನು ಸೇದಲು ಇಚ್ಛೆಪಟ್ಟೆವು. ಆದರೆ ನಮಗೆ ಹಣ ಸಿಕ್ಕಿರಲಿಲ್ಲವು. ಚುಟ್ಟ ಸೇದುವುದರಿಂದ ಲಾಭವುಂಟೆಂದಾಗಲಿ, ಚುಟ್ಟದವಾಸನೆಯು ಬಹಳ ಇಂಪಾಗಿರುತ್ತದೆಂದಾಗಲಿ ಅಭಿಲಾಷೆಯು ಹುಟ್ಟಿದುದಾಗಿರಲಿಲ್ಲ. ನನ್ನ ಚಿಕ್ಕಪ್ಪನು ಚುಟ್ಟವನ್ನು ಸೇದಿ ಹೊರಕ್ಕಾಗಿ ಹೊಗೆಯನ್ನು ಬಿಡುತ್ತಿದ್ದನು. ಅದನ್ನು ನೋಡಿ ನಾವು ಕೂಡ ಚುಟ್ಟವನ್ನು ಸೇದಿ ಚಿಕ್ಕ ಮೋಜುವನ್ನುಂಟುಮಾಡಬೇಕೆಂದು ಇಚ್ಛೆಪಟ್ಟೆವು. ಆದರೆ ನಮ್ಮ ಕೈಯಲ್ಲಿ ದುಡ್ಡಿಲ್ಲ. [illegible] ನಮ್ಮ ಚಿಕ್ಕಪ್ಪನು ಅರ್ಧವಾಗಿ ಸೇದಿ [illegible] ಬಿಸುಡುತ್ತಿದ್ದ ಸಿಗರೇಟಿನ ತುಂಡುಗಳನ್ನು ಆದುಕೊಂಡು [illegible] ನೆರವೇರಿಸಿಕೊಳ್ಳುತ್ತಿದ್ದೆವು. ಆ ತುಂಡುಗಳು [illegible] ಸಿಕ್ಕುತ್ತಿರಲಿಲ್ಲವು. ದೊರಕಿದಾಗ ಅವುಗಳಿಂದ ಹೊಗೆಯು ಚೆನ್ನಾಗಿ ಬರುತ್ತಿರಲಿಲ್ಲವು. ಆದುಕಾರಣ ನೌಕರನಿಗೆ ಕೊಡುವುದಕ್ಕಾಗಿ ಕೊಟ್ಟ ದುಡ್ಡಿನಲ್ಲಿ ನಾವು ಕೊಂಚವನ್ನು ಕದ್ದು, ಕೆಲವು ಅದರಿಂದ ದೇಶೀಯ ಸಿಗರೇಟನ್ನು ಕೊಂಡುಕೊಳ್ಳುತ್ತಿದ್ದೆವು. ಅವನ್ನು ಎಲ್ಲಿ ಬಚ್ಚಿಡಬೇಕೆಂಬುದು ಗೊತ್ತಾಗಲಿಲ್ಲವು. ದೊಡ್ಡವರಿಗೆ ತಿಳಿಯಕೂಡದು. ಕೊಂಚಕಾಲದವರೆಗೆ ಈ ಕದ್ದಹಣದಿಂದ ಕಾಲಕಳೆದೆವು. ಒಂದು ಜಾತಿಯ ಗಿಡದ ಚಕ್ಕೆಯಿಂದ ಸಿಗರೇಟಿನಂತೆಯೇ ಸೇದಬಹುದೆಂದು ತಿಳಿದು ಅದನ್ನು ತಂದು ಸೇದಲುಪಕ್ರಮಿಸಿದೆವು.

ಆತ್ಮಹತ್ಯೆ ಮಾಡಿಕೊಳ್ಳಲೆಳಸಿದುದು.

ಮನಸ್ಸಿಗೆ ಮಾತ್ರ ತೃಪ್ತಿಯಿಲ್ಲವು. ಸಿಗರೇಟನ್ನು ಸೇದಲು ಸಹ ಸ್ವತಂತ್ರವಿಲ್ಲದ ಮೇಲೆ ಬದುಕಿ ಪ್ರಯೋಜನವಿಲ್ಲವಾದುದರಿಂದ ಪ್ರಾಣತ್ಯಾಗ ಮಾಡುವುದೇ ಲೇಸೆಂದು ನಾವು ನಿಶ್ಚಯಿಸಿದೆವು. ಆದರೆ ಆತ್ಮಹತ್ಯೆಮಾಡಿಕೊಳ್ಳುವುದು ಹೇಗೆ? ವಿಷ ದೊರಕುವುದೆ? ದತ್ತೂರಿಯನ್ನು ತಿಂದರೆ ಪ್ರಾಣಹೋಗುವುದೆಂದು ತಿಳಿದು ಅದನ್ನು ತರಲು ಕಾಡಿಗೆ ಹೋದೆವು. ಸಂಧ್ಯಾಕಾಲದಲ್ಲಿ ಕೇದಾರೇಶ್ವರದೇವಸ್ಥಾನವನ್ನು ಪ್ರವೇಶಿಸಿ ಒಳಗೆ ಉರಿಯುತ್ತಿದ್ದ ದೀಪಕ್ಕೆ ಎಣ್ಣೆಯನ್ನು ಹಾಕಿ ದೇವರ ದರ್ಶನಮಾಡಿಕೊಂಡು ಗಿಡವಿರುವ ಸ್ಥಳಕ್ಕೆ ಹೋದೆವು. ಅಷ್ಟರಲ್ಲಿ ಧೈರ್ಯವು ತಗ್ಗಿತು. ಕೂಡಲೆ ಪ್ರಾಣಹೋಗದಿದ್ದರೇ? ಇಷ್ಟಾಗಿ ಆತ್ಮಹತ್ಯೆಯಿಂದ ಲಾಭವೇನು? ಸ್ವತಂತ್ರವಿಲ್ಲದಿದ್ದರೂ ಬದುಕಿರಬಾರದೆ? ಈ ಪ್ರಕಾರವಾಗಿ ಆಲೋಚನೆ ಹುಟ್ಟಿತು. ಅಷ್ಟರಲ್ಲಿ 2--3 ದತ್ತೂರಿಬೀಜಗಳನ್ನು ತಿಂದಿದ್ದೆವು. ಪುನಃ ತಿನ್ನಲಿಲ್ಲ. ಪ್ರಾಣಭಯದಿಂದ ಇಬ್ಬರಿಗೂ ಭಯವುಂಟಾಯಿತು. ಅದರ ಮೇಲೆ ಆತ್ಮಹತ್ಯೆಮಾಡಕೂಡದೆಂದು ನಿರ್ಧರಿಸಿಕೊಂಡೆವು. ರಾಮಜೀವರ ದೇವಸ್ಥಾನಕ್ಕೆ ಹೋಗಿ ದೇವರದರ್ಶನದಿಂದ ಮನಸ್ಸನ್ನು ಶಾಂತಮಾಡಿಕೊಂಡೆವು. ಪ್ರಾಣತ್ಯಾಗಮಾಡಬೇಕೆಂದು ನಿಶ್ಚಯಿಸುವುದು ಸುಲಭ. ಆದರೆ [illegible] ಸುಲಭವಲ್ಲವೆಂದು ನನಗೆ ಗೊತ್ತಾಯಿತು. ಆದುಕಾರಣ ಯಾರಾದರೂ ಆತ್ಮಹತ್ಯೆ ಮಾಡಿಕೊಳ್ಳುತ್ತೇನೆಂದು ಹೆದರಿಸಿದರೆ ನಾನು ಲಕ್ಷ್ಯಮಾಡುವುದಿಲ್ಲ. ಆತ್ಮಹತ್ಯೆಮಾಡುವುದರಲ್ಲಿ ಆ ಪ್ರಯತ್ನದಿಂದ ಒಂದು [illegible] ಚುಟ್ಟವನ್ನು ಸೇದು ಪುದ [illegible] ಬಿ ತಿನ್ನುವುದನ್ನು ನಾವು ಬಿಟ್ಟುಬಿಟ್ಟೆವು. ಆ [illegible] ಆ ದುರ್ವ್ಯಸನವು ತಪ್ಪಿಹೋಯಿತು. [illegible] ಸೇದುವ ಅಭ್ಯಾಸವು ಏತರಿಂದ ಹುಟ್ಟಿತು? [illegible] ಅಲ್ಲದೆ ಅದು ಬಹು ನೀಚವೂ ಅಸಹ್ಯವೂ ಹಾನಿಕರವೂ ಎಂದು ತೋರಿ ಬರುತ್ತಿದೆ. [illegible] ಈ ಧೂಮಪಾನದ [illegible] ಅನೇಕರು [illegible] ನನಗೆ [illegible] ನರಕದಂತೆ ತೋರುವುದು. ಏಕೆಂದರೆ ಆ ಧೂಮದಿಂದ ನನ್ನ ಉಸಿರುಕಟ್ಟಿ ಹೋಗುತ್ತದೆ.

ಸ್ವ[illegible]ದಾರಿ.

ನಾನು 12-13 ನೇ ವರ್ಷ [illegible] ರುವಾಗಲೇ ಈ ಚುಟ್ಟದ ವ್ಯಸನ [illegible]. 15 ವರ್ಷ ವಯಸ್ಸಿನವನಾಗ ಅದಕ್ಕಿಂತಲೂ ದೊಡ್ಡ ಕಳ್ಳತನವನ್ನು ಮಾಡಿದೆನು. ನನ್ನ ಚಿಕ್ಕಣ್ಣನು ಮಾಂಸಭಕ್ಷಕನೆಂದು ಮೊದಲೇ ಹೇಳಿದ್ದೇನೆ. ಅದಕ್ಕಾಗಿ ಅವನು 25 ರೂಪಾಯಿ ಬಾಕಿ ಕೊಡಬೇಕಾಗಿದ್ದಿತು. ಅದನ್ನು ತೀರಿಸುವ ಬಗೆ ಹೇಗೆ? ಅವನಲ್ಲಿ ಒಂದು ಭಂಗಾರದ ಕಡವಿದ್ದಿತು. ಅದರಲ್ಲಿ ಒಂದು ತುಂಡನ್ನು ಕತ್ತರಿಸಿಕೊಂಡು, ವಿಕ್ರಯಿಸಿ ಬಂದ ರೂಪಾಯಿಯಿಂದ ಸಾಲತೀರಿಸಬೇಕಾಗಿ ಬಂದಿತು. ನಾನು ಆ ಅಭಿಪ್ರಾಯವನ್ನು ಅನುಮೋದಿಸಿದೆನು. ಅದರಂತೆ ಆ ಭಂಗಾರದ ಮುರುಕನ್ನು ಮಾರಿಬಂದ ದುಡ್ಡಿನಿಂದ ಬಾಕಿಸಾಲವನ್ನು ತೀರಿಸಿದೆವು. ಆದರೆ ಅದು ನನಗೆ ಬಹಳ ದುಸ್ಸಹವಾಗಿ ತೋರಿತು. ಇನ್ನು ಎಂದೆಂದಿಗೂ ಕಳ್ಳತನಮಾಡಕೂಡದೆಂದೂ, ಈ ಸಂಗತಿಯನ್ನು ನನ್ನ ತಂದೆಗೆ ತಿಳಿಸಬೇಕೆಂದೂ ನಾನು ನಿರ್ಧರಿಸಿಕೊಂಡೆನು. ಆದರೆ ನನಗೆ ಆತ್ಮಧೈರ್ಯವಿರಲಿಲ್ಲವು. ನಾನು ಹಾಗೆ ಹೇಳಿದರೆ ತಂದೆಯು ನನ್ನನ್ನು ದಂಡಿಸುತ್ತಾರೆಂಬ ಭಯವಿಂದಲ್ಲವು. ಏಕೆಂದರೆ, ನನಗೆ ಅಂತಹ ಭಯವೇ ಇರಲಿಲ್ಲವು. ಆದಲ್ಲದೆ ನನ್ನ ತಂದೆಯು ಯಾವಾಗಲೂ ಹೊಡೆದುದಿಲ್ಲವು. ಆದರೆ ಅವರ ಮನಸ್ಸಿಗೆ ಬಹು ವ್ಯಾಕುಲವಾಗುತ್ತದೆಂಬ ಭಯವೂ ನನಗಿದ್ದಿತು. ನನ್ನನ್ನು ಹೇಳಿದ ಹೊರತು ಪಾಪಪರಿಹಾರವಾಗುವುದಿಲ್ಲವೆಂದು ನನ್ನ ಅಭಿಪ್ರಾಯವು.

ತಂದೆಗೆ ಪತ್ರಬರೆದುದು.

ಬಾಯಿಮಾತಿನಲ್ಲಿ ಹೇಳಲಾರನೆ ಕಾಗದದ ಮೇಲೆ ಕ್ಷಮಾಪಣೆಯನ್ನು ಕೇಳಿ ಎಲ್ಲಾ ಸಂಗತಿಯನ್ನು ಸಂಪೂರ್ಣವಾಗಿ ಬರೆಯಬೇಕೆಂದು ನಿರ್ಧರಿಸಿ ಆ ಪ್ರಕಾರ ಬರೆದು ನಾನೇ ಸ್ವಯಮಾಗಿ ತಂದೆಗೆ ಕೊಟ್ಟೆನು. ನಿಶ್ಚಯಸಂಗತಿಯೆಲ್ಲವನ್ನೂ ಪ್ರಕಟಿಸಿ ಬರೆದು ಕಠಿಣವಾಗಿ ಶಿಕ್ಷಿಸಬೇಕೆಂದು ಕೇಳಿಕೊಂಡಿದ್ದೆನು. ನಾನು ಮಾಡಿದ ತಪ್ಪಿಗೆ ತಾವು ವ್ಯಾಕುಲಪಡಕೂಡದೆಂದು ಪ್ರಾರ್ಥಿಸಿದೆನು. ಇನ್ನು ಮುಂದೆ ನಾನು ಎಂದಿಗೂ ಕಳ್ಳತನವನ್ನು ಮಾಡುವುದಿಲ್ಲವೆಂದು ಬರೆದಿದ್ದೆ. ಆಗ ನನ್ನ ತಂದೆಯು [illegible] ವ್ಯಾಧಿಯಿಂದ ಬಳಲುತ್ತ ಬಾಧೆಪಡುತ್ತ ಒಂದು ಮಂಚದಮೇಲೆ ಮಲಗಿದ್ದರು. ನಾನು ಅವರಿದ್ದಲ್ಲಿಗೆ ಹೋಗಿ ಆ ಕಾಗದವನ್ನು ಅವರಿಗೆ ಕೊಟ್ಟೆನು. ಅಗ ನನ್ನ ಕೈಯ [illegible] ಗಡಗಡನೆ ನಡುಗುತ್ತಿದ್ದವು.

ಆನಂದವಾದ ಸ್ವಭಾವವು.

ನನ್ನ ತಂದೆ ಎದ್ದು ಕುಳಿತುಕೊಂಡು ಕಾಗದವನ್ನು ಮೊದಲಿಂದ ಕಡೆಯವರೆಗೂ ಓದಿದರು. ಅವರ ಕಣ್ಣುಗಳಿಂದ ಪಟಪಟನೆ ನೀರು ಸುರಿಯಿತು. ಅವರು ಸ್ವಲ್ಪ ಹೊತ್ತು ಕಣ್ಣುಗಳನ್ನು ಮುಚ್ಚಿಕೊಂಡು ಆಲೋಚಿಸಿ ನನ್ನ ಕಾಗದವನ್ನು ಹರಿದು ಬಿಸಾಡಿ ಮರಳಿ ಮಲಗಿಕೊಂಡರು. ಅವರ ಪರಿತಾಪವನ್ನು ನೋಡಿ ನನಗೂ ದುಃಖ ಬಂದಿತು. ನಾನು ಗಟ್ಟಿಯಾಗಿ ಅತ್ತುಬಿಟ್ಟೆನು. ಆ ಸಂಗತಿಯು ನನಗೆ ಈಗಲೂ ಕಣ್ಣಿಗೆ ಕಟ್ಟಿದಂತಿದೆ. ನಾನು ಚಿತ್ರ ಬರೆಯುವವನಾಗಿದ್ದಲ್ಲಿ ಅದನ್ನು ಸರಿಯಾಗಿ ಬರೆಯುತ್ತಿದ್ದೆನು.

[illegible]ಲೋಚನೆ.

ಪ್ರೇಮಾಧಿಕ್ಯದಿಂದ ಸುರಿಸಿದ ನನ್ನ ತಂದೆಯ ದುಃಖದಿಂದಲೇ ನನ್ನ ಪಾಪವಿಮೋಚನೆಯಾಯಿತು. ನನ್ನ ಹೃದಯಕಲ್ಮಷವು ಹೋಯಿತು. ಆ ಪ್ರೇಮವು ಬರೀ ಅನುಭವೈಕವೇದ್ಯವೇ ಆಗಿದ್ದಿತು. ಅಹಿಂಸಾಧರ್ಮಕ್ಕೆ ನನಗೆ ಅದೊಂದು ಮುಖ್ಯೋಪದೇಶವಾಗಿದ್ದಿತು. ಆಗ ನಾನು ಅದು ಕೇವಲ ಪಿತೃಪ್ರೇಮವೆಂದೇ ತಿಳಿದಿದ್ದೆನು. ಅದು ಬರೀ ಅಹಿಂಸೆಯೇ ಎಂದು ಈಗ ನಾನು ಗ್ರಹಿಸಿಕೊಂಡಿರುವೆನು. ಅಂತಹ ಅಹಿಂಸೆಯನ್ನು ಎಂತಹವರು ಕೂಡ ಅವಲಂಬಿಸಿದರೆ ಅದು ಎಲ್ಲವನ್ನೂ ವೃದ್ಧಿಪಡಿಸುವುದು. ಅದರ ಶಕ್ತಿಯು ಅಪಾರವಾದುದು. ಇಂತಹ ವಿಶ್ವಾಸದ ಪ್ರಶಾಂತಿಯು ನನ್ನ ತಂದೆಗೆ ಸ್ವಭಾವಾಗಲೂ ಇರಲಿಲ್ಲ. ಅದುಕಾರಣ ಅವರು ಕೋಪದಿಂದ ಬಯ್ಯುವರೋ, ಹೊಡೆಯುವರೋ, ತಮ್ಮ ತಲೆಯನ್ನು ಚಚ್ಚಿಕೊಳ್ಳುವರೋ ಎಂದು ನಾನು ತಿಳಿದಿದ್ದೆನು. ಆದರೆ ನಾನು ನಿಜವನ್ನು ಪೂರ್ತಿಯಾಗಿ ತಿಳಿದಿದ್ದುದರಲ್ಲಿ ಅವರಿಗೆ ಅಪಾರವಾದ ಮನಶ್ಶಾಂತಿಯುಂಟಾಗಿದ್ದಿತು. ನನ್ನ ಕ್ಷಮಾಪಣೆಯನ್ನು ಗ್ರಹಿಸಲು ನನ್ನ ತಂದೆಯೇ ಅರ್ಹರಾದ ಪ್ರಯುಕ್ತ ನಾನು ನಿಜವೆಲ್ಲವನ್ನೂ ತಿಳಿಸಿ ಇನ್ನು ಮುಂದೆ ಇಂತಹ ದುಷ್ಕೃತ್ಯವನ್ನು ಮಾಡುವುದಿಲ್ಲವೆಂದು ವಾಗ್ದಾನಮಾಡುವುದೇ ಪವಿತ್ರವಾದ ಪಶ್ಚಾತ್ತಾಪವಾದುದರಿಂದ ನನ್ನ ತಂದೆಗೆ ನನ್ನ ಮೇಲೆ ನಂಬಿಕೆಯುಂಟಾಯಿತು. ಮತ್ತು ನನ್ನ ಮೇಲೆ ಅವರಿಗೆ ಪ್ರೇಮವು ಕೂಡ ಹೆಚ್ಚಾಯಿತು.

"ವೈ. ಸ್ವಾಮಿ."

(ಮುಂದುವರಿಯುವುದು)

ತನ್ನ ಯೋಗ್ಯತೆ.

ಯಾವ ಮನುಷ್ಯನು ನಿಜವಾಗಿ ಯೋಗ್ಯತೆಯುಳ್ಳವನೋ ಅವನಿಗೆ ತನ್ನ [illegible]ವನ್ನು ಹೊಗಳಿಕೊಳ್ಳುವದು ಸೇರುವುದಿಲ್ಲ. ಸಾಮಾನ್ಯವು ತನ್ನ ಯೋಗ್ಯತೆಯ ಬಗ್ಗೆ ಬಡಾಯಿ ಹೇಳಿಕೊಳ್ಳುವ ಅವಶ್ಯಕತೆಯೇ ಇರುವುದಿಲ್ಲ. ಆದಾಗ್ಯೂ ಇನ್ನೊಬ್ಬರ ಪ್ರೋತ್ಸಾಹದ ಇದಕ್ಕೆ ಮುಖ್ಯ ಗುಣಗಳು ಅವಶ್ಯಕವಿಲ್ಲೆಂದು. ಮಾತ್ರ ತಿಳಿಸುಕೊಡದು. ಇದರಲ್ಲಿ ಕಾಂತಿಯಿರಬೇಕು. ಅದು ತೇಜಃಪುಂಜವಾಗಿರಬೇಕು. ತೂಕದಲ್ಲಿ ಭಾರವಾಗಿರಬೇಕು. ಇಷ್ಟು ಗುಣವಿದ್ದಲ್ಲಿ ಇದು ರತ್ನಕ್ಕಿಂತ ಮೇಲೆಂದೆನಿಸಿಕೊಳ್ಳಬಹುದು. ಮಾಣಿಕ್ಯವು ಈ ಮೇಲಿನ ಗುಣಗಳನ್ನು ಪೂರ್ತಿಯಿಂದಾದರೂ ಸಿದ್ಧಮಾಡಿ ತೋರಿಸಿಕೊಡಬೇಕಾಗುವುದು. ಅದರಂತೆ ಜಗತ್ತೆಂಬ ಪೇಟೆಯಲ್ಲಿ ಸೇರುವ ಮನುಷ್ಯನ ಯೋಗ್ಯತೆಯು ಇದೇ ಮೇರೆಗೆ ಪರೀಕ್ಷಿಸಲ್ಪಡುವುದು. ಅದ್ದರಿಂದ ಯಶಸ್ಸನ್ನು ಸಂಪಾದಿಸುವ ಮನುಷ್ಯನು ಮೊದಲು ತನ್ನ ಯೋಗ್ಯತೆಯನ್ನು ತಾನು ಕಂಡುಹಿಡಿಯುವುದು ಅವಶ್ಯಕ!

ಒಂದು ವೇಳೆ ನೀವು ಎಷ್ಟೇ ಗುಣವಂತರಿದ್ದರೂ ನಿಮ್ಮ ಯೋಗ್ಯತೆಯನ್ನು ನೀವು ತಿಳಿಸುಕೊಳ್ಳದೆ ವ್ಯವಹಾರದಲ್ಲಿ ಕಾಲಿಡಹತ್ತಿದಿರೆಂದರೆ ನಿಮಗೆ ಜಗತ್ತಿನಲ್ಲಿ ಯೋಗ್ಯ ಮರ್ಯಾದೆಯು ದೊರೆಯದು. ನೀವು ಕೈಕೊಳ್ಳುವ ಕಾರ್ಯದಲ್ಲಿ ನಿಮಗೆ ಯಶಸ್ಸು ಬಂದು ಜನರು ನಿಮ್ಮನ್ನು ಗೌರವಿಸಬೇಕಾದಲ್ಲಿ ಮೊದಲು ನಿಮ್ಮ ಯೋಗ್ಯತೆಯನ್ನು ನೀವು ತಿಳಿದುಕೊಳ್ಳಿರಿ. ಆ ಮೇಲೆ ಅದರಂತೆ ವ್ಯವಹಾರದಲ್ಲಿ ಕಾಲಿಡಿರಿ.

ಅಂಜಿಕೆ, ಹಿಂದೆ ಮುಂದೆ, 'ಟಕಮಕ' ನೋಡುತ್ತ ಕಾಲಿಡಲೋ ಬೇಡೋ ಎಂಬ ಸಂಶಯದಿಂದಲೂ ಅಧೈರ್ಯದಿಂದಲೂ ವ್ಯವಹಾರದಲ್ಲಿ ಕಾಲಿಡಹತ್ತಿದಿರೆಂದರೆ ನಿಮಗೆ ಯಾರೂ ಹಾದಿಕೊಡುವುದಿಲ್ಲ. ನಿಮ್ಮ ಕಡೆಗೆ ಯಾರೂ ನೋಡುವುದಿಲ್ಲ. ಒಂದು ವೇಳೆ ತಿರಸ್ಕಾರ ನೋಟದಿಂದಲೇ ನೋಡುವರು. ಮತ್ತು ನಿಮ್ಮನ್ನು ಹಿಂದಕ್ಕೊತ್ತಲು ಪ್ರಯತ್ನಿಸುವರು. ಈ ರೀತಿಯಿಂದ ನೀವು ಹಿಂದಕ್ಕೆ ಉಳಿಯುವಿರಿ.

ಇದರಲ್ಲಿ ಜನರದೇನೂ ತಪ್ಪಿಲ್ಲ. ಅದು ಕೇವಲ ಮುಂದೆ ಬರುವ ತರುಣನ ಸ್ಥಿತಿಯಲ್ಲಿರುವುದು. ಇದರ ಮೇಲಿಂದ ನಿಮ್ಮ ತಯಾರಿಯಬಗ್ಗೆ ಜಗತ್ತಿನಮುಂದೆ ಡಂಗುರವನ್ನು ಸಾರುತ್ತ ಬರಬೇಕೆಂತಲ್ಲ. ನೀವು ಬರುವಂತೆ ಬನ್ನಿರಿ, ಆದರೆ ಹೇಗೆ ಬನ್ನಿರಿ! ಆತ್ಮವಿಶ್ವಾಸದ ತೇಜವು ನಿಮ್ಮ ಕಣ್ಣುಗಳಲ್ಲಿ ಥಳಥಳ ಹೊಳೆಯುತ್ತಿರಬೇಕು. ಜನರ ದೃಷ್ಟಿಯು ನಿಮ್ಮ ಮೇಲೆ ಬಿದ್ದಕೂಡಲೆ ಅವರು ಚಕಿತರಾಗಬೇಕು. ಹಾಗು ನಿಮಗೆ ದಾರಿಯನ್ನು ತಾವಾಗಿಯೇ ಬಿಡಬೇಕು.

ಹೀಗೆ ತೇಜಃಪುಂಜರಾಗಿ ಮುಂದೆ ಬನ್ನಿರಿ! ಕುಲುಕುಲು ನಗೆಯುಳ್ಳ ಮುಖಮುದ್ರೆಯಿಂದ ಬನ್ನಿರಿ! ವಿಚಾರವು ಗಹನವಾಗಿರಲಿ! ಎದುರಿಗೆ ಬಂದ ಸಂಕಟಕ್ಕೆ ಎದೆಗುಂದದೆ ಅದರ ಗೂಢ ಹೋರಾಡಿ ಅದನ್ನು ಲೀಲೆಯಿಂದ ಸುಲಭ ಸುಖವಾಗಿ ಪುಡಿ ಪುಡಿ ಮಾಡುವಷ್ಟು ಧೈರ್ಯವಿರಲಿ! ಪ್ರತಿಯೊಂದು ಅಡಿಯನ್ನು ಇಡುತ್ತಲೇ ಅದರಕೂಡ ನಿಮ್ಮ ನಿಶ್ಚಯವು ದೃಢವಾಗುತ್ತ ನಡೆಯಲಿ! ಇಟ್ಟ ಅಡಿಯನ್ನು ಮರಳಿ ತೆಗೆದುಕೊಳ್ಳದಷ್ಟು ಬಿಡಿರಿ! ಈ ಮೇಲೆ ನೋಡುವಾ, ನಿಮ್ಮನ್ನು ಯಾರು ತಡೆಯುವರು!

ಇಷ್ಟರಿಂದ ಕರ್ತವ್ಯವು ತೀರಲಿಲ್ಲ. ನಿಮ್ಮ ಮನುಷ್ಯತ್ವವು ಪ್ರಾಮಾಣಿಕವಾದ ರಂಗಭೂಮಿಯಲ್ಲಿಡುವದು. ಅದನ್ನು ಒಳ್ಳೇ ಭಕ್ತಿಯಿಂದ ನೋಡುತ್ತ ಹೋಗುವದು ಮನುಷ್ಯತ್ವ. ಇಲ್ಲವಾದರೆ ಕೇವಲ ಹೊರಗಿನ ಹೊಳಪಿಗೆ ಯಾರು ಮೊಹಿತರಾಗುವರು. ಕರ್ತವ್ಯ ಮಾಡತಕ್ಕವನ ಪ್ರಶಂಸೆಯು ಆಗೇ ಆಗುವದು. ನಿಮ್ಮಲ್ಲಿರುವ ಗುಣಗಳ ಬಗ್ಗೆ ಮುಸುಕು ಹಾಕಿ ನಿಮ್ಮನ್ನು ತಿರಸ್ಕಾರ ಬುದ್ಧಿಯಿಂದ ನೋಡುವಂಥ ಕೀಳು ಜನರು ಇದ್ದೇ ಇರುವರು. ಆದರೆ ನೀವು ಮಾತ್ರ ತ

ತ್ರಕಡೆಗೆ ಎಳ್ಳಷ್ಟಾದರೂ ನೋಡಕೂಡದು. ಅದರಂತೆ ನಿಮ್ಮ ಕರ್ತವ್ಯಕ್ಕೆ ವ್ಯತ್ಯಾಸವನ್ನೂ ತರಕೂಡದು. ಇಲ್ಲಿಯೇ ನಿಮ್ಮ ಪರೀಕ್ಷೆಯು.

ಮಹಾ ಭಾರತದಲ್ಲಿಯ ಕರ್ಣ ಪರಾಕ್ರಮವು ತರುಣರಿಗೆ ಆದರ್ಶವಿರುವದು. ಅವನಂತೆ ಆತ್ಮ ವಿಶ್ವಾಸದಿಂದ ಹೋರಾಡುವವನ ಯೋಗ್ಯತೆಯೇ ದೊಡ್ಡದು.

ಪ್ರಕಟಣೆ.

ಕೊಡಗಿನ ಹೊಸ ಲೇಬರ್ (ಬ್ರೀಚ್ ಆಫ್ ಕಂಟ್ರಾಕ್ಟು) ಆಕ್ಟಿನ ಮೇರೆ ಯಜಮಾನರಿಗೂ ಆಳುಗಳಿಗೂ ಬಾಯಿ ಮಾತಿನ ಕಂಟ್ರಾಕ್ಟು ಮಾಡಕೂಡದು. ಮತ್ತು ಈ ಆಕ್ಟಿನ ಮೇರೆ ಮಾಡಲ್ಪಟ್ಟ ಕರಾರುಗಳನ್ನು ರುಜು ಯಾ ಹೆಬ್ಬೆಟ್ಟು ಗುರ್ತು ಹಾಕಿಸಲಿಕ್ಕಾಗಿ ಸಂಬಳವಿರುವ ಮೇಜಿಸ್ಟ್ರೇಟರ ಯಾ ಪಾರುಪತ್ಯಗಾರರಿಗಿಂತ ಕಡಿಮೆ ದರ್ಜೆಯಲ್ಲದ ರೆವಿನ್ಯು ಆಫೀಸರರ ಅಥವಾ ಇದಕ್ಕಾಗಿ ಸರ್ಕಾರದಿಂದ ನೇಮಿಸಲ್ಪಟ್ಟಿರುವವರ ಮುಂದೆ ಬಾಜಾಪತಿ ಪಡಿಸತಕ್ಕದ್ದು. ಹೀಗೆ ರುಜು ಹಾಕಿಸಲ್ಪಡದೆ ಇರುವ ಕರಾರುಗಳು ಸರ್ಕಾರದಿಂದ ಅಂಗೀಕರಿಸಲ್ಪಡುವುದಿಲ್ಲ.

30—3—26. ಕಮೀಷನರು.

ಮಡಿಕೇರಿ.

ಜ್ಞಾಪಕ ಪತ್ರ

ನಾಡುಕೆಲ್ಸಗಾರರು ಮತ್ತು ತ್ಯಾಸಭೋಗಿಗಳಿಗೆ ಬ್ರೀಚ್ ಆಫ್ ಕಂಟ್ರಾಕ್ಟ್ ಕರಾರುಗಳಿಗೆ ಆಳುಗಳಿಂದ ರುಜು ಹಾಕಿಸುತ್ತಿದ್ದ ಕ್ರಮವು ತಾ 31—3—26 ರಂದ ನಿಲ್ಲಿಸಲ್ಪಟ್ಟಿದೆ. ಹೊಸ ಆಕ್ಟು ಜಾರಿಗೆ ಬರುವಂದಿನಿಂದ ಪಾರುಪತ್ಯಗಾರರುಗಳು (ಯಾ ಅಧಿಕಾರ ಹೊಂದಿದ ಬೇರೆಯವರು) ರುಜು ಹಾಕಿಸುವರು. ಮತ್ತು ಅವರು ಈ ಕೆಳಗೆ ಕಾಣಿಸಲ್ಪಟ್ಟ ಮೇರೆ ರಿಜಿಸ್ಟರಿಗೆ ದಾಖಲು ನಡೆಸುವರು. ಸದರಿ ರಿಜಿಸ್ಟರಿನಲ್ಲಿ ಇರಬೇಕಾದ ವಿಷಯಗಳು — (1) ಯಜಮಾನನ ಹೆಸರು ಮತ್ತು ವಿಳಾಸ (2) ಕೆಲಸಗಾರನ ಹೆಸರು. (3) ಕೆಲಸಗಾರನ ಡಿಸ್ಟ್ರಿಕ್ಟು ಮತ್ತು ಹುಟ್ಟಿದ ಸ್ಥಳ. (4) ಕೆಲಸಗಾರನ ಜಾತಿ (5) ಅಡ್ವಾನ್ಸು ಮೊಬಲಗು. (6) ಕಂಟ್ರಾಕ್ಟಿನ ಅವಧಿ (7) ಕೂಲಿಯನ್ನು ಮಾಡಬೇಕಾದ ಕೆಲಸ ಎರಡು ಕಡೆಯವರಿಗೂ ಕರಾರಿನ ಶರತ್ತುಗಳೆಲ್ಲವೂ ಚೆನ್ನಾಗಿ ವಿವರಿಸಲ್ಪಟ್ಟು ಅವರು ಅವುಗಳನ್ನು ತಿಳಕೊಂಡಿದ್ದಾರೆಂದು ಕರಾರಿನ ಅಷ್ಟೆರಿನಲ್ಲಿ ಬರೆಯಬೇಕು. ಇಂಥ ಕರಾರುಗಳ ಮುದ್ರೆಯು ಬೇಗನೆ ಒದಗಿಸಿಕೊಡಲ್ಪಡುವದು

30—3—26 ಕಮೀಷನರು.

ಮಡಿಕೇರಿ.

ಒಂದು ಪ್ರಬಲವಾದ ಪ್ರಶ್ನೆ.

ನಮ್ಮ ಜೀವವನ್ನು ಏತಕ್ಕಾಗಿ ವಿಮೆ ಮಾಡಬೇಕು?

ವೃದ್ಧಾಪ್ಯದಲ್ಲಿ ನಮ್ಮ ಮತ್ತು ಹೆಂಡತಿ ಮಕ್ಕಳ ಪೋಷಣೆಗಾಗಿ!

ಈಗಾಗಲೇ ಸಾವಿರಾರು ಜನರು ವಿಮೆ ಮಾಡಿರುವ ಏಳು ಕೋಟಿ ರೂಪಾಯಿಗಿಂತ ಹೆಚ್ಚು ಒಂದವಾಳವಿರುವ ದೇಶೀಯ ವಿಮೆ ಕಂಪೆನಿಯಲ್ಲಿ ಅತ್ಯಂತ ದೊಡ್ಡದಾದ ಸಾವಿರ ರೂಪಾಯಿ ವಿಮೆ ಮಾಡಿದವರಿಗೆ ವರ್ಷಕ್ಕೆ 18 ರೂ. ಕಡಿಮೆ ಯಿಲ್ಲದೆ ಲಾಭ ಕೊಡುವ 'ಓರಿಯಂಟಲ್' ಗವರ್ನ್‌ಮೆಂಟ್ ಸೆಕ್ಯುರಿಟಿ ಕಂಪೆನಿಯ ಏಜೆಂಟರಿಗೆ, ಶರತ್ತಿಗೂ ಈ ಕೆಳಗಿನವರಿಗೆ ಬರೆದು ತಿಳಿಯತಕ್ಕದ್ದು

ಪಾಡಿಬಳ್ಳಿ ಎಂದರೇನು?

ದೇಶೀಯ ಪದ್ಧತಿಯಲ್ಲಿ ಕೈಯಿಂದಲೇ ಮಾಡಿದ ತೆಗೆದು ಇಲ್ಲಿಯೇ ತಯಾರಿಸುವ ಒಳ್ಳೇ 'ಪಾಡಿ.' ಈಗಾಗಲೇ ನಮ್ಮ ನೆಲ್ಲೂರಿನಲ್ಲಿ ಸರ್ವೇಶೀಖಡ್ಡಿಗಿಂತ ಗಟ್ಟಿಯಾಗಿಯೂ ಅಂದವಾಗಿಯೂ ಕಡಿಮೆ ಕ್ರಯದಲ್ಲಿ, ಎಲ್ಲಾ ತರದ ಪೀಠಿಗಳು ಚೆಕ್ಕೆಗಳು, ಕಾಲು ಒರಸುವ ಎಲ್ಲಾ ತರದ ಚಾಪೆಗಳು ತಯಾರಾಗಿವೆ. ನಮೂನೆಗಳ ಪ್ರೈಸ್‌ಲಿಸ್ಟು ಕಾಗದ ಬರೆದರೆ ಕಳುಹಿಸುತ್ತೇವೆ. [illegible] ಬೇಕು.

ವೀರಾಜಪೇಟೆ, ಕೆ. ಪಿ. ಚಿಣ್ಣಪ್ಪ,

ದಕ್ಷಿಣ ಕೊಡಗು. ಪ್ರೊಪ್ರೈಟರ್, [illegible]

ಉತ್ತಮ ವ್ಯವಸಾಯವು.

ಒಂದಾನೊಂದು ದಿನ ಭಗವಾನ್ ಬುದ್ಧದೇವನು ತನ್ನ ಪದ್ಧತಿಯಂತೆ ಭಿಕ್ಷೆಗಾಗಿ ಹೊರಟು, ಧನಿಕನಾದ ಒಬ್ಬ ಜಮೀನುದಾರನು ತನ್ನ ಆಳುಗಳೊಡನೆ ಗೋಧಿಯನ್ನು ತುಂಬಿಕೊಡುತ್ತಿದ್ದ ಸ್ಥಳಕ್ಕೆ ಬಂದನು. ಮತ್ತು ಶಾಂತಸ್ವರೂಪವೇ ಮೂರ್ತಿಗೊಂಡಿರುವಂತಿದ್ದ ಆ ಮಹಾತ್ಮನು ಶಾಂತವಾದ ಮುಖಭಾವದಿಂದ ಆ ಉಳ್ಳವನ ಗುಂಪಿನಲ್ಲಿ ನಿಂತು, ಬೇಡುವ ಭಿಕ್ಷೆಗಾಗಿ ತನ್ನ ಕೈಯಲ್ಲಿದ್ದ ಕಪ್ಪರವನ್ನು ಮುಂದಕ್ಕೆ ಹಿಡಿದನು. ಅದನ್ನು ಕಂಡು ಆ ಜಮೀನುದಾರನು ಆ ಮಹಾತ್ಮನ ಪ್ರಭಾವವನ್ನೂ ತೇಜಸ್ಸನ್ನೂ ತಿಳಿಯಲಾರದೆ—"ನೀನೇಕೆ ಭಿಕ್ಷೆಗೆ ಬರಲು ಕಾರಣವೇನು? ಇಲ್ಲಿ ಭೂಮಿಯನ್ನು ಬಿತ್ತಿ ಬೆಳೆ ಮಾಡುವ ಕಷ್ಟ ಜೀವಿಗಳಿಗೆ ಮಾತ್ರ ನಾನು ಆಹಾರ ಪದಾರ್ಥಗಳನ್ನು ಹಂಚಿಕೊಡುತ್ತಿದ್ದೇನೆ. ನೀನಾದರೋ ಕಷ್ಟ ಜೀವಿಯಲ್ಲ, ಭಿಕ್ಷುಕ. ಸ್ವತಃ ಕಷ್ಟಪಡಲು ಮೈಗಳ್ಳತನದಿಂದ ಬೇರೆಯವರ ಕಷ್ಟದಿಂದ ಜೀವಿಸಲಪೇಕ್ಷಿಸುವ ನಿನಗೆ ಇಲ್ಲಿ ಭಿಕ್ಷೆ ಸಿಕ್ಕಲಾರದು. ಇಲ್ಲಿಂದ ಹೊರಡು" ಎಂದನು. ಧನಿಕನ ಈ ಮಾತುಗಳನ್ನು ಕೇಳಿ ಶಾಂತಮೂರ್ತಿಯಾದ ಬುದ್ಧದೇವನು ಹಸನ್ಮುಖದಿಂದ "ಹಾಗಲ್ಲ, ನಾನೂ ಒಬ್ಬ ವ್ಯವಸಾಯಿಯೇ! ನಾನೂ ನನ್ನದೊಂದು ಹೊಲವನ್ನು ಉಳುತ್ತಿದ್ದೇನೆ. ಈ ದೇಹವೆಂಬುದೇ ನನ್ನ ಆ ಹೊಲ, ನಾನು ಇದನ್ನು ನೇಗಿಲಿನಿಂದ ಉತ್ತು ಹದಗೊಳಿಸುತ್ತಿದ್ದೇನೆ. ಇದರಲ್ಲಿ ತುಂಬಿರುವ ಕಳೆಗಳನ್ನು ತೆಗೆಯುತ್ತಿದ್ದೇನೆ. ಉತ್ತಮವಾದ ಬೀಜಗಳನ್ನು ಬಿತ್ತಿ, ಶಾಂತಿ ಅಥವಾ ನಿರ್ವಾಣವೆಂಬ ಪೈರನ್ನು ಬೆಳಸುತ್ತೇನೆ. ನನ್ನ ಈ ಗೇಹವನ್ನು ಆತ್ಮಸಂಯಮ, ಶುದ್ಧಾಲೋಚನೆ, ಯೋಗ್ಯಕಾರ್ಯಗಳು ಎಂಬಿವುಗಳಿಂದ ಸುಸ್ಥಿತಿಯಲ್ಲಿಡುತ್ತೇನೆ, ಮತ್ತು ನಾನು ಈ ದೇಹವೆಂಬ ಹೊಲವನ್ನು ಉಳುವ ವಿಧವನ್ನು ಹೇಳುತ್ತೇನೆ ಕೇಳು, ಶ್ರದ್ಧಾಭಕ್ತಿಗಳೇ ನಾನು ಉಪಯೋಗಿಸುವ ಬಿತ್ತಗಳು, ನಿತ್ಯದ ಅನುಷ್ಠಾನವೇ—ಸತತಪ್ರಯತ್ನವೇ ನನ್ನ ಭೂಮಿಯ ಮೇಲೆ ಸುರಿಯುವ ಮಳೆ. ಮನಸವೇ ನನ್ನ ನೇಗಿಲು. ಪರಿಶುದ್ಧತೆಯೇ ಆ ನೇಗಿಲಿನ ಮಧ್ಯದ ಕಟ್ಟಿಗೆ. ಆ ಮನಸ್ಸೆಂಬುದೇ ಈ ಎಲ್ಲಾ ವ್ಯವಸಾಯ ಸಾಧನಗಳನ್ನೂ ಕಟ್ಟುವ ಹಗ್ಗ. ಸ್ಥಿರಚಿತ್ತತೆಯಿಂದ ಕೂಡಿದ ಲಕ್ಷ್ಯವೇ (ಗುರಿ) ಗುಳ (ನೇಗಿಲಿನ ತುದಿಗಿರುವ ಕಬ್ಬಿಣದ ಸಲಾಕೆ.) ಈ ಒಗಯ ವ್ಯವಸಾಯದಿಂದ ನನ್ನ ಈ ದೇಹವನ್ನು ಪಾಪಮಾರ್ಗದಿಂದ ತಪ್ಪಿಸಿ ಶುದ್ಧವಾಗಿಡುತ್ತೇನೆ. ಆಹಾರಪಾನೀಯಗಳಲ್ಲಿ ನಾನು ಮಿತವಾಗಿದ್ದೇನೆ. ಸತ್ಯವೆಂಬುದೇ ಕಳೆಯನ್ನು ತೆಗೆಯಲು ನಾನು ಉಪಯೋಗಿಸುವ ಆಯುಧ. ಶಾಂತಿಯೆಂಬುದೇ ಶ್ರಮಬಾಯಕವಾದ ಈ ವ್ಯವಸಾಯಕ್ರಿಯೆಯನಂತರ ನಾನು ಪಡೆಯುವ ವಿಶ್ರಾಂತಿ. ನನ್ನೀ ದೇಹಶಕ್ತಿಯೇ ವ್ಯವಸಾಯಕ್ಕಾಗಿ ನಾನು ಉಪಯೋಗಿಸುವ ಎತ್ತುಗಳು. ಈ ರೀತಿಯಲ್ಲಿ ಸುಖ, ಸಂತೋಷ ಸಮಾಧಾನಗಳೆಂಬ ಪೈರನ್ನು ಹೊಂದಿ ನಾನು ವ್ಯಸನದಿಂದ ಹೊರಗಾಗಿದ್ದೇನೆ. ಚಿಂತೆಯೆಂಬ ಕ್ಷಾಮವು ನನ್ನನ್ನು ಸೋಕಲಾರದು. ಇದೇ ನಾನು ನನ್ನ ದೇಹವೆಂಬ ಈ ಕ್ಷೇತ್ರವನ್ನು ಉತ್ತು ನಿರ್ವಾಣವೆಂಬ ಫಲವನ್ನು ಪಡೆವ ಉತ್ತಮ ವ್ಯವಸಾಯದ ಮಾರ್ಗವು ಎಂದು ಪ್ರತ್ಯುತ್ತರವನ್ನು ಕೊಟ್ಟನು.

ಬುದ್ಧದೇವನ ಈ ಭಾಷಣವು, ಆ ಧನಿಕನ ಮನಸ್ಸನ್ನು ಸಂಪೂರ್ಣವಾಗಿ ಪರಿವರ್ತನಗೊಳಿಸಿತು. ತರುವಾಯ ಬುದ್ಧನಿಗೆ ಭಿಕ್ಷೆ ಸಿಕ್ಕಿತೆಂದು ಹೇಳಬೇಕೇನು? ಆ ಜಮೀನುದಾರನು ಆ ಮಹಾತ್ಮನ ಪಾದಗಳಲ್ಲಿ ಶರಣುಹೊಂದಿ ಶಿಷ್ಯವೃತ್ತಿಯನ್ನು ಸ್ವೀಕರಿಸಿದುದಲ್ಲದೆ, ತನ್ನ ಸಮಸ್ತ ಸಂಪತ್ತನ್ನೂ ಧರ್ಮ ಕಾರ್ಯಗಳಿಗಾಗಿ ಉಪಯೋಗಿಸಲು ನಿಶ್ಚಯಿಸಿದನು.

ಸುಬೋಧ

ಚಂದಾದಾರರಲ್ಲಿ ವಿಜ್ಞಾಪನೆ.

ನಮ್ಮ ಚಂದಾದಾರರಲ್ಲಿ ಹಲವರು ತಮ್ಮ ಚಂದಾ ಹಣವನ್ನು ಬೇಗನೆ ಕಳುಹಿಸಿಕೊಡುತ್ತೇವೆಂಬದಾಗಿಯೂ ಪತ್ರಿಕೆಯನ್ನು ಸರಿಯಾಗಿ ಕಳುಹಿಸುತ್ತಾ ಇರಬೇಕಾಗಿಯೂ ಕೇಳಿಕೊಂಡ ಮೇರೆ ಇದುವರೆಗೂ ಹಾಗೆ ನಡಿಸುತ್ತಾ ಬಂದಿದ್ದೇವೆ. ಉತ್ಪತ್ತಿಯ ಕಾಲವಾದ ಈಗ ಎಲ್ಲರ ಕೈಯಲ್ಲೂ ಹಣವಿರುವದರಿಂದ ಅಂಥ ಚಂದಾದಾರರು ತಮ್ಮ ಬಾಕಿಯಾದ ಚಂದಾ ಹಣವನ್ನು ಮನಿಯಾರ್ಡರ್ ಮೂಲಕವಾಗಿಯಾಗಲೀ ಇಲ್ಲವೆ ಏಜಂಟರ ಮೂಲಕವಾಗಿಯಾಗಲೀ ಒಡನೆ ಪಾವತಿ ಮಾಡಿ ನಮ್ಮ ಕಂಪೆನಿಯ ಕೆಲಸಕ್ಕೆ ಉತ್ತೇಜನ ಕೊಡಬೇಕಾಗಿ ಕೋರುತ್ತೇವೆ

'ಕೊಡಗು" ಮೇನೇಜರ್.

ಮುದ್ದಾದ ಪುಸ್ತಕ! ಮುದ್ದಾದ ಮುದ್ರಣ!!

ಶರೀರ ಸುಖ, ಸಂಪತ್ತು, ಐಶ್ವರ್ಯಗಳನ್ನು ಸಂಪಾದಿಸಲು ಸಲಹೆಗಳನ್ನೂ ಮತ್ತು ಶರೀರ ಮರ್ಮಶಾಸ್ತ್ರ (ಕಾಮಶಾಸ್ತ್ರ)ವನ್ನೂ ತಿಳಿಸುವ

ಮರ್ಮ ಶಾಸ್ತ್ರ-ಎಂಬ ಕಾಮಶಾಸ್ತ್ರ.

ಈ ಪುಸ್ತಕವು ಮೊದಲು ಫ್ರೆಂಚ್, ಇಂಗ್ಲೀಷ್, ಹಿಂದುಸ್ತಾನಿ, ಸಂಸ್ಕೃತ ಮುಂತಾದ ಭಾಷೆಗಳಲ್ಲಿ ಬಹು ಗುಪ್ತವಾಗಿತ್ತು. ಇದನ್ನು ನಾವು ಪ್ರಯಾಸದಿಂದ ಸಂಪಾದಿಸಿ ಕನ್ನಡಕ್ಕೆ ತರ್ಜುಮೆ ಮಾಡಿ (84 ಚಿತ್ರಪಟಗಳ ಸಹಿತ) ಥಳಥಳಿಸುವ ಕಾಗದದಲ್ಲಿ ಮುದ್ರಿಸಿ ತಯಾರಿಸಿದ್ದೇವೆ. ಈ ಪುಸ್ತಕದಲ್ಲಿ ಸ್ತ್ರೀ ಪುರುಷರಿಗೆ ಬೇಕಾದ ಎಲ್ಲಾ ಮರ್ಮ ರಹಸ್ಯಗಳೂ, ಸ್ತ್ರೀ ಪುರುಷರು ಅನ್ಯೋನ್ಯವಾಗಿ ನಡೆದುಕೊಳ್ಳುವ ಮಾರ್ಗ. ಸ್ತ್ರೀ ಪುರುಷರಿಗೆ ಉಂಟಾಗುವ ಎಲ್ಲಾ ತರದ ಮರ್ಮವ್ಯಾಧಿಗಳು ಮತ್ತು ಅಂಥಾ ವ್ಯಾಧಿಗಳನ್ನು ಗುಣಮಾಡಿಕೊಳ್ಳುವ ಚಿಕಿತ್ಸೆಗಳೂ ಇನ್ನು ಅನೇಕ ತರದ ಮರ್ಮರಹಸ್ಯಗಳು ಚಿತ್ರಪಟಗಳ ಸಹಿತ ತುಂಬಿರುವದು. ಈ ಪುಸ್ತಕದ ಹೆಸರನ್ನು ಕೇಳಿದ ಮಾತ್ರಕ್ಕೆ ಸಂತೋಷವಾಗುವದು. ಅದರ ಓದಲಿಕ್ಕೆ ಯಾರಿಗೆ ತಾನೇ ಸಂತೋಷವಾಗಲಾರದು.

ಕ್ರಯ ಪುಸ್ತಕ ಒಂದಕ್ಕೆ ಒಂದೇ ಒಂದು ರೂಪಾಯಿ. ರೂ. 1—0—0

T. Ramachandar Rao & Co., Post Box No. 232, Madras.

ಟಿ. ರಾಮಚಂದ್ರರಾವ್ ಅಂಡ್ ಕೊ, ಪೋಸ್ಟ್ ಬಾಕ್ಸ್ ನಂ. 232. ಮದ್ರಾಸ್.

52—14

A Lot for SELECTION of Single Barrel Breach Loadig Guns at LOWEST PRICE EVER OFFERED.

Original BrowningS.B B.L. 12 bore Take Down Hammerless Automatic Ejector Gun with safety catch .... Price, Rs. 140/-

Do do but by **Winchester** or **Remington** .... Price, Rs. 160/.

Winchester or Remigton S. B. B. L. 12 boreSix Shots Hammerless Repeating gun, 32 inches barrel with Safety catch, ... Price, Rs. 150/.

German S. B. B. L. 12 bore Hammerless Ejector Gun, 32 inches German Steel Barrel with safety catch .... Price, Rs. 65/.

Continental Make Do .... Price, Rs. 55/-

Webley & Scott's S. B B. L 12 bore Semi Hammerless Ejector Gun, 32 inches Webley's Steel Barrel, ... Price, Rs. 75/-

The above Guns can be had in .1, 20, & .410 bore Same as above in 12 bore **Special "Duck Gun"** 3inches barrel.... .... Price, Rs 80/.

W. W. Greener's "Gaffer" S. B B L. 12 bore Martini Action Ejector Gun, 26 inches Greener's Steel Barrel ....Price, Rs. 75/.

W. W. Greener's as above but **Long Range Duck Gun** " with 32 inches barrel, and chamber for 2¾ inches to 3 inches case.... .... Price, Rs. 90/-

Midland's "Knock-About" S. B B L. Ejector Hammer Gun 32 inches barrel. ....Price, Rs. 55/-

Continental Make S. B. B. L. folding Pattern Hammer Gun, 32 inches barrel beautifully engraved and carved..... .... Price, Rs. 45/.

J. Steven's 12 bore Ejector Hammer Gun, 32 inches Steel barrel..... .... Price, Rs. 45/

Do do. 'Dread Naught' with heavy Breech Price/-Rs/50,

Any of the above of J. Steven's **Special Duck Gun** with 36 inches barrel, Price, Rs. 5 Extra.

ENQUIRIES SOCLIITED.

THE BOMBAY ARMOURY,

331, ABDUL REHMAN STREET,

BOMBAY. 3

24-21

ವರ್ತಮಾನ ಸಂಗ್ರಹ.

ಒಳದೇಶ

ಪಂಚಾಯಿತ ಬಿಲ್ಲಿನ ಸಿಲೆಕ್ಟ್ ಕಮಿಟಿಮೀಟಿಂಗು ಈ ತಾ. 7ರಲ್ಲಿ ಕೌನ್ಸಿಲು ಹಾಲಿನಲ್ಲಿ ನಡೆಯುವುದು.

ಕೊಡಗು ಜಮೀನ್ದಾರರ ಸಂಘದ ಕಾರ್ಯನಿರ್ವಾಹಕ ಮಂಡಲಿಯ ಮೀಟಿಂಗ್ ತಾ. 10ನೇ ಶನಿವಾರ ದಿನ 4 ಗಂಟೆಗೆ ಸಂಘದ ಆಫೀಸಿನಲ್ಲಿ ನಡೆಯಲಿಕ್ಕಿದೆ.

ನಾಕೊಕ್ಲುನಾಡಿನ ಮೆ. ಎಸ್. ಎಸ್. ಸುಬ್ಬಯ್ಯ ರವರು ಕಳೆದ ತಾ. 27ರಲ್ಲಿ ಬೆಳಿಗ್ಗೆ ತನ್ನ ಮನೆಯಲ್ಲಿ ಗುಂಡು ಹೊಡೆದುಕೊಂಡು ಆತ್ಮಹತ್ಯೆಮಾಡಿಕೊಂಡರು.

"ಕೊಡಗು" ಕಂಪೆನಿಯ ಡೈರೆಕ್ಟರುಗಳ ಮೀಟಿಂಗ್ ಇದೇ ತಾ. 10ನೇ ಶನಿವಾರ ದಿನ ಸಾಯಂಕಾಲ 5 ಗಂಟೆಗೆ "ಕೊಡಗು" ಆಫೀಸಿನಲ್ಲಿ ನಡೆಯುತ್ತೆ.

ಶ್ರೀಮಂಗಲ ನಾಡು ಕಚೇರಿಯಲ್ಲಿ ನಾಡ್ ಕ್ಲಾರ್ಕ್ ಆಗಿದ್ದ ಮೆ. ಮಾತಂಡ ಮಂದಣ್ಣನವರು [illegible] ತರಾದರೆಂದು ತಿಳಿಸಲು ವಿಷಾದಿಸುತ್ತೇವೆ

ವೇಕ್ಸಿನೇಶನ್ ಇನ್ಸ್‌ಪೆಕ್ಟರಾಗಿದ್ದ ಮೆ. ಪಟ್ಟೆಮನೆ ದಪ್ಪನವರು ಕಳೆದ ತಾ 1ರಿಂದ ರಜೆಯ ಮೇಲಿದ್ದುದರಿಂದ ಮೆ. ಮಂಡೇಪಂಡ ಚಿಣ್ಣಪ್ಪನವರನ್ನು ಆ ಉದ್ಯೋಗಕ್ಕೆ ತಾತ್ಕಾಲಿಕವಾಗಿ ನೇಮಿಸಿರುತ್ತಾರೆ.

ತಾಲೂಕು 10ನೇ ಶನಿವಾರ ದಿನ ಸಾಯಂಕಾಲ 5 ಗಂಟೆಗೆ ಮಡಿಕೇರಿ ಮುನಿಸಿಪಲ್ ಆಫೀಸಿನಲ್ಲಿ ಕೊಡಗ ಜಿಲ್ಲಾ ಯನ್ ಕಾಫಿಪ್ಲಾಂಟರುಗಳ ಕೋಆಪರೇಟಿವ್ ಸೊಸೈಟಿಯ ಜನರಲ್ ಮೀಟಿಂಗ್ ನಡೆಯುತ್ತೆ.

ಗುಬ್ಬಿ ಶ್ರೀಚನ್ನಬಸವೇಶ್ವರ ನಾಟಕ ಕಂಪನಿಯವರು ಮಡಿಕೇರಿಯಲ್ಲಿ ಈ ತಾ. 5ರಲ್ಲಿ ನಾಟಕ ಅಭಿನಯಿಸಲು ಪ್ರಾರಂಭಿಸುವರು. ಮಹಾತ್ಮಕಬೀರ್ ದಾಸರ ಚರಿತ್ರೆಯು ಪ್ರಥಮ ಆಟವಂತೆ.

ಮಡಿಕೇರಿಯ ಫಿಶ್ ರಿವರ್ ದಲ್ಲಿ ಒಂದು ಸೇತುವೆಯನ್ನು ಕಟ್ಟುತ್ತಿರುವುದರಿಂದ ತಾ. 25-3-'26ರಿಂದ ಎರಡು ತಿಂಗಳವರೆಗೆ ಆ ರಸ್ತೆಗಾಗಿ ಗಾಡಿ ವಗೈರೆ ಹೋಗಲು ಇರುವುದಿಲ್ಲವೆಂದು ಎಗ್ಸಿಕ್ಯೂಟಿವ್ ಇಂಜಿನೀಯರು ತಿಳಿಸಿರುತ್ತಾರೆ.

ಕಳೆದ ಅಕ್ಟೋಬರ್ ತಿಂಗಳಲ್ಲಿ ಮದ್ರಾಸಿನಲ್ಲಿ ಸಹಕಾರಿ ಎಡ್ವಾನ್ಸ್ಡ್ ಗ್ರೇಡ್ ಟ್ರೈನಿಂಗಿಗೆ ಹೋದ ಮೂವರ ಪೈಕಿ ಬೆಳ್ಳಿಚೆಟ್ಟಿರ ಚಂಗಪ್ಪನವರು ಮತ್ತು ಕಲಿಯಂಡ ಸೋಮಯ್ಯನವರು ಪಾಸಾಗಿರುತ್ತಾರೆಂತ ತಿಳಿಯಬಂದಿದೆ.

ತಾ. 21—3—26ರಲ್ಲಿ ನಡೆದ ಗೋಣಿಕೊಪ್ಪಲು ಮುತ್ತಪ್ಪ ದೇವರ ಉತ್ಸವಕ್ಕೆ ಸುಮಾರು 1500 ಜನರು ನೆರೆದಿದ್ದರೆಂದೂ, ಅಲ್ಲಿ ನೆಲಗುಂಡು ಹಾರಿಸುವಾಗ ಗುಂಡು ಒಡೆದು ಮೂರು ಜನರಿಗೆ ಅಪಾಯ ಸಂಭವಿಸಿದೆಯೆಂದೂ ವರ್ತಮಾನ.

ಅಮ್ಮತ್ತಿನಾಡಿನ ಕಾವಾಡಿ ಗ್ರಾಮದ ಮೆ. ಕುಟ್ಟಂಡ ತಮ್ಮಯ್ಯನವರ ಜ್ಯೇಷ್ಠ ಪತ್ನಿಯವರು ಕಳೆದ ತಾ 27ರಲ್ಲಿಯೂ, ಬಿಳುಗುಂದ ಗ್ರಾಮದ ಮೆ. ಬಸಂಡ ಕಾರ್ಯಪ್ಪನವರ ಪತ್ನಿಯವರು ತಾ. 31ರಲ್ಲಿಯೂ ಮೃತರಾದರೆಂದು ತಿಳಿಯಲು ವ್ಯಸನಪಡುತ್ತೇವೆ.

ಮಡಿಕೇರಿ ವೇದಾಂತಸಂಘದವರು ಶ್ರೀ ರಾಮಕೃಷ್ಣಪರಮಹಂಸರವರ 91ನೇ ಜಯಂತಿ ಉತ್ಸವವನ್ನು ಏಪ್ರಿಲ್ ತಾ. 17ರಲ್ಲಿ ಸಾರ್ವಜನಿಕ ಹಾಲಿನಲ್ಲಿ ಮೈಸೂರಿನ ಸ್ವಾಮಿ ಸಿದ್ಧೇಶ್ವರಾನಂದರವರ ಅಧ್ಯಕ್ಷತೆಯಲ್ಲಿ ನಡೆಸಲಿಕ್ಕಿರುವರು. ಪ್ರಸಿದ್ಧ ಉಪನ್ಯಾಸಕರಾದ ಮೈಸೂರಿನ ಮೆ. ಕಸ್ತೂರಿ ಯಂ. ಎ. ಬಿ. ಎಲ್ ರವರು ಸಹ ಬರುವರೆಂದು ಸುದ್ದಿ.

ಈ ತಾ. 3ನೇ ಶನಿವಾರ ಸಾರ್ವಜನಿಕ ಹಾಲಿನಲ್ಲಿ ನಡೆಯುವ ಮೀಟಿಂಗಿನ ನೋಟೀಸಿನಲ್ಲಿ 'ಪಾಡಿನಾಲ್ಕುನಾಡು ತಾಲೋಕಿನ ಜಮೀನ್ದಾರರಸಂಘದ ಸ್ವಾಗತ ಕಮಿಟಿ' ಮತ್ತು 'ಪಾಡಿನಾಲ್ಕುನಾಡು ತಾಲೋಕಿನವರ ಪರವಾಗಿ' ಎಂಬುದರ ಬದಲಾಗಿ ಬರೇ 'ಪಾಡಿನಾಲ್ಕುನಾಡಿನವರ' ಎಂದು ಕೈತಪ್ಪಿನಿಂದ ಪ್ರಿಂಟಾದದನ್ನು 'ತಾಲೋಕಿನವರ' ಎಂದು ತಿದ್ದಿಕೊಳ್ಳಬೇಕೆಂದು ಆ ಕಮಿಟಿಯ ಜನರಲ್ ಸೆಕ್ರೆಟರಿಯವರು ಕೇಳಿಕೊಳ್ಳುತ್ತಾರೆ.

ಬಲಮುರಿ ಸಹಕಾರಸಂಘದಲ್ಲಿಯೂ ಮತ್ತು ಯೂನಿಯನಿನಲ್ಲಿಯೂ ಇದ್ದಂಥ ಕುಂದುಕೊರತೆಗಳನ್ನು ಹೋಗಲಾಡಿಸಲು ತಾರೀಕು 30. 3. 26ರಲ್ಲು ಜನರಲ್ ಮೀಟಿಂಗು ಮಾಡಿ ಭಿನ್ನ ಭೇದವಾಗಿ ನಡೆಯುತ್ತಿದ್ದ ಕಾರ್ಯಗಳನ್ನು ಸರಿಪಡಿಸಿ ಗ್ರಾಮಾಭಿವೃದ್ಧಿಗಾಗಿ ನ್ಯಾಯರೀತಿಯಿಂದ ಒಗ್ಗಟ್ಟನ್ನು ಕಾಪಾಡುವವೇ ಗ್ರಾಮಸ್ಥರ ಉದ್ದೇಶವಾಗಿರಬೇಕಾಗಿ ತೀರ್ಮಾನಮಾಡಿಕೊಂಡರೆಂದು ಒಬ್ಬರು ಬರೆದಿರುತ್ತಾರೆ.

ಕಳೆದತಾ.19ರಸಾಯಂಕಾಲ ಕಾಂತುಮೂರ್ನಾಡು ಹೊಸಗೇರಿ ಗ್ರಾಮದ ಚೆಂಬಮನೆ ಕುಶಾಲಪ್ಪನವರ ಮನೆಯಲ್ಲಿ ನಾಲ್ಕು ಗುಬ್ಬದ ಹಸುಗಳು ಹಗಲೆಲ್ಲಾ ಚೆನ್ನಾಗಿ ಮೇಯುದುಕೊಂಡು ಬಂದು 5 ನಿಮಿಷದಲ್ಲಿ ಕೊಟ್ಟಿಗೆಯಲ್ಲಿ ಇದ್ದಕ್ಕಿದ್ದಹಾಗೆ ಏಕಕಾಲದಲ್ಲಿ ಸತ್ತುಬಿದ್ದವು; ಅವುಗಳಿಗೆ ಕಾಯಿಲೆ ವೇನೂ ಇರಲಿಲ್ಲ; ಆ ವೇಳೆಯಲ್ಲಿ ಒಂದು ವಿಕಾರ ಶಬ್ದವು ಅವುಗಳು ಬಿದ್ದ ಸ್ಥಳದಿಂದ ಬಿರಬಿರನೆ ಕೇಳಿಸುತ್ತಾ ಆಕಾಶಕ್ಕೆ ಹೊರಟುಹೋಯಿತೆಂದು ಒಂದು ವಾರ್ತೆ.

ಮೂರ್ನಾಡು ಮರುಗೋಡು ಗ್ರಾಮದ ಗೌಡರಿಬ್ಬರು ಕಳೆದ ತಾ. 2ರಲ್ಲಿ ಕುಳಿಕಾತು ಒಂದು ಜಾತಿಗೆ ಗುಂಡ ಹೊಡೆದು ಗಾಯವಾಗಲು ಅದು ಹುದಿಯೊಂದು ಮರುದಿನ ಬೇಟೆಗೋದ ಗೌಡರ ಪಾಂಡಂಡ ಕೃಷ್ಣಪ್ಪನವರಿಗೆ ಆ ಗಾಯವಾದ ಹುಲಿ ಕಚ್ಚಿ ಗಾಯಮಾಡಿತು. ಅವರ ಹುಲಿಯು ಬೇರೆಯವರಿಂದ ಕೊಲ್ಲಲ್ಪಟ್ಟಿತು. ಕೃಷ್ಣಪ್ಪನವರು ಮಡಿಕೇರಿ ಆಸ್ಪತ್ರೆಯಲ್ಲಿ ಚಿಕಿತ್ಸೆಹೊಂದುತ್ತಿದ್ದರೂ ಆ ದಿನ ಸಾಯಂಕಾಲ ಮೃತರಾದರು.

ಕೊಡವ ಸಭೆಯ ಪ್ರಥಮ ಜನರಲ್ ಮೀಟಿಂಗು ಕಳೆದ ತಾ 28ರಲ್ಲಿ ವೀರಾಜಪೇಟೆ ಮೋಡಲ್ ಸ್ಕೂಲು ಹಾಲಿನಲ್ಲಿ ನಡೆದು ನಿಯಮಗಳು ಮಂಜೂರುಮಾಡಲ್ಪಟ್ಟವೆಂದೂ ಅಲ್ಲಿ ಹಾಜರಿದ್ದ ಸುಮಾರು 120ಜನರ ಪೈಕಿ ಸಭೆಗೆ ಹಂಗಾಮಿ ಪ್ರೆಸಿಡೆಂಟಾಗಿ ರಾ ಬಾ ಕೆ ಕುಟ್ಟಯ್ಯನವರೂ, ವೈಸ್ ಪ್ರೆಸಿಡೆಂಟರುಗಳಾಗಿ ರಾ.ಸಾ ಕ.ಸುಬ್ಬಯ್ಯನವರು ಮತ್ತು ಮೆ. [illegible] ಚಂಗಪ್ಪನವರೂ, ಜನರಲ್ ಸೆಕ್ರೆಟರಿಯಾಗಿ ಮೆ. ಸಿ. ಯಮ್ ಉತ್ತಯ್ಯನವರೂ, ಜನರಲ್ ಟ್ರಜರ‍್ರಿ ಮೆ. [illegible] ಬಿ. ಪಪ್ಪನವರೂ ಮತ್ತು ಎಗ್ಸಿಕ್ಯೂಟಿವ್ ಕಮಿಟಿಯ ಸಭ್ಯರುಗಳೂ ಚುನಾಯಿಸಲ್ಪಟ್ಟರೆಂದೂ ತಿಳಿಯಬರುತ್ತದೆ.

ಡಿಸ್ಟ್ರಿಕ್ಟ್ ಬೋರ್ಡಿನ ಚುನಾವಣೆ ರೂಲ್ಸುಗಳು ಆಗುವ ವರೆಗೆ ಡಿಸ್ಟ್ರಿಕ್ಟ್ ಮೆಜಿಸ್ಟ್ರೇಟರು, ಸಿವಿಲ್ ಸರ್ಜನರು, ಎಗ್ಸಿಕ್ಯೂಟಿವ್ ಇಂಜಿನೀಯರು ಮತ್ತು ಶಾಲಾ ಅಸಿಸ್ಟೆಂಟ್ ಇನ್ಸ್‌ಪೆಕ್ಟರು ಈ ನಾಲ್ಕು ಉದ್ಯೋಗಸ್ಥರೆಂ ಒರುಗಳು, [illegible] ಕಮಿಷನರು [illegible] ಸಭ್ಯರಿಕ್ಕ ಸರ್ಕಾರದ ಉದ್ಯೋಗಸ್ಥರಲ್ಲದ ಮೆಂಬರುಗಳು [illegible] ಮೆಂಬರುಗಳು ಸರ್ಕಾರದಿಂದ ನಾಮಕರಣ ಹೊಂದಿದ ಮೆಂಬರುಗಳು ಇರುವ ಒಂದು ತಾತ್ಕಾಲಿಕ ಬೋರ್ಡನ್ನು ನೇಮಿಸುವುದೆಂದೂ, ಇದು ಏಪ್ರಿಲ್ ಮಾಹೆ [illegible] ತಾ 10ರ ರೊಳಗೆ ಸರ್ಕಾರ್ ಒರಕೊಳ್ಳಬೇಕೆಂದೂ ಗಜೆಟಿನಲ್ಲಿ ಪ್ರಕಟವಾಗಿದೆ.

ಸಹಕಾರಿ ಸೆಂಟ್ರಲ್ ಬ್ಯಾಂಕಿನ ಡೈರೆಕ್ಟರುಗಳ ಮೀಟಿಂಗ್ ಕಳೆದ ತಾ17ರಲ್ಲಿ ನಡೆದು, ವೀರಾಜಪೇಟೆ ಸೊಸೈಟಿಗೆ 5000 ರೂ. ಸುಂಟಿಕೊಪ್ಪ ಮಹದೇವಪೇಟೆ ಸೊಸೈಟಿಗೆ 1000 ರೂ. ಪೊನ್ನಂಪೇಟೆ ಸೊಸೈಟಿಗೆ 2000 ರೂ. ಬೇಂಗೂರು ಸೊಸೈಟಿಗೆ 1000 ರೂ ಕಾತೂರು ಕೂಡಿಗೆ ಮಗ್ಗುಲ ಗೋಡು ಸೊಸೈಟಿಗೆ 1500 ರೂ ಮುಗುಟಗೇರಿ ಸೊಸೈಟಿಗೆ 1500 ರೂ. ಹುಬ್ಬಾಲೆ ಪಾಚಸೊಸೈಟಿಗೆ 400 ರೂ. ಮಗ್ಗುಲ ಸೊಸೈಟಿಗೆ 200ರೂ. ಕುಂದ ಸೊಸೈಟಿಗೆ 200ರೂ ನಾಪೋಕ್ಲು ಸೊಸೈಟಿಗೆ 00 ರೂ. ಕೂಡುಮಂಗಳೂರು ಸೊಸೈಟಿಗೆ 500 ರೂ. ಕಿರೂರು ಸೊಸೈಟಿಗೆ 1000 ರೂ. ಬೇಬೋಳಿ ಸೊಸೈಟಿಗೆ 125ರೂ. ನೂರಂಬಡ ಸೊಸೈಟಿಗೆ 1000 ರೂ. ಸಾಲ ಮಂಜೂರಾದೆ

ಹಿಂದೂದೇಶ.

ಇಂದೂರಿನ ಮಾಜಿ ಮಹಾರಾಜರವರು ಕಳೆದ ತಾ. 30ರಲ್ಲಿ ಕರಾಚಿಯಿಂದ ಯೂರೋಪಿಗೆ ಹಡಗು ಹತ್ತಿದರು.

ಬರುವ ಮೇ ಗಳಲ್ಲಿ ಯೂರೋಪಿನ ಫಿನ್ಲೇಂಡಿನಲ್ಲಿ ನಡೆಯುವ ಪ್ರಪಂಚದ ವಿದ್ಯಾರ್ಥಿಗಳ ಕಾನ್ಫರೆನ್ಸಿಗೆ ಮಹಾತ್ಮಗಾಂಧಿಯವರು ಹೋಗುವ ಸಂಭವವಿದೆಯೆಂದು ವರ್ತಮಾನ.

ಪಂಡಿತ ಮದನ ಮೋಹನ ಮಾಳವೀಯರು ಹೊಸ ನೇಶನಲಿಸ್ಟ್ ಪಾರ್ಟಿಯ ಸಂಘಟನ ಕೆಲಸವನ್ನು ಕಳೆದ ತಾ 25ರಲ್ಲಿ ಡೆಲ್ಲಿಯಲ್ಲಿ ಸಾರಂಭ ಮಾಡಿದರು.

ಸನ್ಯಾಸಿ ವೃತ್ತಿಯು ಈಗಿನ ಕಾಲಾವಸ್ಥೆಗೆ ಯೋಗ್ಯವಾದದ್ದಲ್ಲವೆಂದೂ ಆ ವೃತ್ತಿಯನ್ನು ರಷ್ಯಾದಲ್ಲಿ ಪೂರ್ತಿ ನಿಲ್ಲಿಸಬೇಕೆಂದೂ ಮೊಸ್ಕೋ ಸೋವಿಯಟ್ ಸೈನ್ ಡ್ ರವರು ತೀರ್ಮಾನಿಸಿರುವರು.

ಬೊಂಬಾಯಿಯ ಅಮಲೇಟಿಯ ಕಾನ್ಫರೆನ್ಸಿನ ಜೋಸೆಫ್ ಬ್ಯಾಪ್ಟಿಸ್ಟಾರ ಅಧ್ಯಕ್ಷತೆಯಲ್ಲಿ ತಾ. 29—3—26ರಲ್ಲಿ ನಡೆಯಿತು. ವಿ. ಜೆ. ಪಟೇಲರವರು ಮೀಟಿಂಗಿನಲ್ಲಿ ಹಾಜರಿದ್ದರು.

ಸರ್ ತೇಜ್ ಬಹದ್ದೂರ್ ಸಾಪ್ರು ಮತ್ತು ಡಾಕ್ಟರ್ ಆನಿಬೆಸೆಂಟರವರು ಏರ್ಪಡಿಸಿರುವ ನೇಶನಲ್ ಫೆಡರೇಶನ್ ಕಾನ್ಫರೆನ್ಸು ಈ ತಾ. ಏಪ್ರಿಲ್ 5ರಲ್ಲಿ ಬೊಂಬಾಯಿಯಲ್ಲಿ ನಡೆಯುವುದು.

ಇಂಡಿಯಾ ಕೌನ್ಸಿಲ್ ಮೆಂಬರಾಗಿದ್ದ ಬಿಟಿಯರ್ [illegible] ದ್ದ ಒಂಗಾಳದ ಒಬ್ಬ ಹಿರಿಯನಾದ ಸರ್. ಕೆ. ಜಿ ಗುಪ್ತರವರು ಕಳೆದ ತಾ29ರಲ್ಲಿ ಕಲ್ಕತ್ತಾದಲ್ಲಿ ಮೃತರಾದರು. ಬಂಗಾಳ ಸರ್ಕಾರದ ಆಫೀಸುಗಳೆಲ್ಲಾ ಆದಿನ ಮುಚ್ಚಲ್ಪಟ್ಟಿದ್ದವು.

ಕಲ್ಕತ್ತೆಯ ಸುಭಾಷ ಚಂದ್ರಘೋಸರವರು 'ಇಂಗ್ಲಿಷ್ ಮ್ಯಾನ್' ಪತ್ರಿಕೆಯ ಸಂಪಾದಕರ ಮೇಲೆ ರೂ. 50000 ಗಳಿಗೆ ಮಾನನಷ್ಟ ದಾವೆಹೂಡಿ ಕಳೆದ ತಾ. 29ರಲ್ಲಿ ಕಲ್ಕತ್ತಾ ಹೈಕೋರ್ಟಿನಲ್ಲಿ ಆರಂಭವಾಯಿತು. ಅದರ ತೀರ್ಪು ಇನ್ನೂ ಕೊಡಲ್ಪಟ್ಟಿರುವುದಿಲ್ಲ.

ಬಂಗಾಳದ ಬಾರಿಸ್ ಡಿಸ್ಟ್ರಿಕ್ಟಿನ ಲೌಕಾತಿ ಎಂಬ ಸ್ಥಳದಲ್ಲಿ ಜನರ ಇಚ್ಛೆಗೆ ವಿರೋಧವಾಗಿ ಯೂನಿಯನ್ ಬೋರ್ಡನ್ನು ಸ್ಥಾಪಿಸಿದ್ದರಿಂದ ಆ ಯೂನಿಯನ್ನಿಗೆ ಕರಗಳನ್ನು ಕೊಡುವುದಿಲ್ಲವೆಂದು ಅಲ್ಲಿಯವರು ತೀರ್ಮಾನಿಸಿರುವರು. ಈ ತೀರ್ಮಾನವು ಸರ್ಕಾರದವರನ್ನು ಜನರನ್ನೂ ಎಚ್ಚರಗೊಳಿಸಿದೆ.

ಸ್ವರಾಜ್ಯ ಪಾರ್ಟಿಗೆ ಕೆಲವು ಮೆಂಬರುಗಳು ರಾಜೀನಾಮೆ ಕೊಟ್ಟಿರುವರೆಂದು ಪತ್ರಿಕೆಗಳಲ್ಲಿ ಪ್ರಕಟವಾಗುತ್ತಿರುವುದು ನಿಜವಲ್ಲವೆಂತಲೂ ನಮ್ಮ ಪಾರ್ಟಿಯ ಮೆಂಬರುಗಳೆಲ್ಲರೂ ಅದರಲ್ಲಿ ತಮ್ಮ ವಿಶ್ವಾಸವನ್ನು ಒಡಂಬಡಿಕೆಗೆ ಮೂಲಕ ಪುನಃ ದೃಢೀಕರಿಸಬೇಕೆಂತಲೂ ಪಂಡಿತ ಮೋತಿಲಾಲ್ ನೆಹರೂರವರು ಕೇಳಿಕೊಂಡಿರುವರು.

ಕಳೆದ ತಾ. 27ರಲ್ಲಿ ಲಾಲಾಲಜಪತರಾಯರು ಲಾಹೋರಿನಲ್ಲಿ ಒಂದು ದೊಡ್ಡ ಸಭೆಯ ಮುಂದೆ ಮಾಡಿದ ಭಾಷಣದಲ್ಲಿ, ಸರ್ಕಾರದೊಂದಿಗೆ ಸಹಕರಿಸಿ ಸ್ವರಾಜ್ಯ ಪಡೆಯುವುದು ಅಸಾಧ್ಯವೆಂತಲೂ, ಪಂಡಿತ ಮಾಳವೀಯರು ಏರ್ಪಡಿಸಲು ಪ್ರಯತ್ನಿಸುತ್ತಿರುವ ಯುನೈಟೆಡ್ ನೇಶನಲ್ ಪಾರ್ಟಿಯು ಒಂದು ವಾರವೂ ಸಹ ಜೀವಿಸಲಾರದೆಂದೂ ಮುಂತಾಗಿ ಹೇಳಿದರು.

ವಿದೇಶ.

ತುರ್ಕಿಸ್ಥಾನದಲ್ಲಿ ತುರ್ಕಿ ಸರ್ಕಾರಕ್ಕೆ ಎದುರು ನಿಂತಿರುವ ಪಂಗಡದ ಮುಂದಾಳಾದ ಶೇಖೂ ಎಂಬವರು ಬ್ರಿಟಿಷ್ ಸರ್ಕಾರದ ಸಂರಕ್ಷಣೆಯನ್ನು ಕೇಳಿರುವರು.

ಚೈನಾದಲ್ಲಿ ನಡೆಯುತ್ತಿರುವ ಒಳಯುದ್ಧವು ವಿಕೋಪ ಸ್ಥಿತಿಗೆ ಬಂದಿದೆ. ಚಾಂಗ್‌ಸೋಲಿನ್‌ರವರೂ, ಉಪೀಫೂರವರೂ ಪೆಕಿಂಗ್ ಪಟ್ಟಣದ ಮೇಲೆ ದಂಡೆತ್ತಿ ಹೋಗುತ್ತಿರುವರಂತೆ.

ಜರ್ಮನಿಯ ಪ್ರೆಸಿಡೆಂಟರಾದ ಫಾನ್ ಹಿಂಡನ್ ಬರ್ಗರವರು ಲೀಪ್‌ಜಿಗ್ ಪಟ್ಟಣವನ್ನು ಸಂದರ್ಶಿಸಿದಾಗ ಅಲ್ಲಿಯ ಸುಮಾರು ಇಪ್ಪತ್ತು ಸಾವಿರ ನಿರುದ್ಯೋಗಿಗಳು ಜುಲೂಸು ಹೊರಟು ಯಾವ ಕೆಲಸವೂ ಮಾಡಲಿಕ್ಕಿಲ್ಲವೆಂದೂ, ಇದನ್ನು ವಿಚಾರಿಸದಿದ್ದಲ್ಲಿ ಅವರಿಗೆ ಕೊಟ್ಟಿದ್ದ ಆಹಾರದಲ್ಲಿ ಜನರಿಗೆ ವಿಷವಿ ಹಾಕಲ್ಪಟ್ಟಿತೆಂದೂ ತಿಳಿಯಬಂದಿದೆ. ವಿಚಾರವು ಮುಂದುವರಿಯುತ್ತಿದೆಯಂತೆ.

ಪತ್ರವ್ಯವಹಾರ

ಬರೆಯುವವರು ವಿಷಯವ ಅಭಿಪ್ರಾಯಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲ. ಸಂ.

[illegible]

ಬಲಮುರಿ ಛತ್ರ.

ಬಲಾ ಬಲಾ ಬಲಮುರಿ ಛತ್ರದ ಬಲು ವಿಚಿತ್ರದ ನಿರೀಕ್ಷಕ ಬಂದಿವೆ ನಿನ್ನಯ ವಿಹಾರದ ಪತ್ರ|| ಭಾಧಿದ ನಿನ್ನಯ ಘನ ವಿಚಿತ್ರದ ಮನಸನು ಪಾವನವಾದರೆನೋ ವಾಚಿಸದಿರೆ ಬಲು ವಿಚಿತ. ಮನಯುತಿರುವ ನಿನ್ನಯ ಬಲು ಅಸೂಯೆ ಚಿತ್ತ ಬಲಮುರಿ ಧೀರನ ಬಾಧಿಪುದೆ? ಘನ ಸರ್ಪನ ಕಾಲದ ವಿಷಕೆಂದು ಗರುಡನು ಮುಸುಕನು ಹಾಕುವನೇ|| ನಿರೀಕ್ಷಿಕ ನಿನ್ನನ್ನು ಈ ಕ್ಷಣ ಪತ್ರವು ಪಾವನವಲ್ಲದೆ ಮುತ್ತಿಹುದೇ?

ರಾಂ. ರಾಂ. ನಿರೀಕ್ಷಿಕ- ಲೋಕಪಾವನದ ಸಂಚಿಕೆಯಲ್ಲಿ ನಿನ್ನ ಹಂಬಲನೇ, ನಿನ್ನ ವೈಭವವೇ! ಬಲಮುರಿಯಲ್ಲೇ ಉದ್ಭವಿಸಿರುವಿಯೂ? ಅಲ್ಲ, ಲೋಕಪಾವನಳಾದ ಕಾವೇರಿಯಲ್ಲಿಯೇ ತೇಲುತ್ತಿರುವಿಯೂ! ನಿನ್ನದೇನು? ಬಲಮುರಿ ಛತ್ರದಲ್ಲಿ ಎರಡು ಫೋಟೊಗಳನ್ನು ಇಟ್ಟರೆಂದೇ! ಇದಕ್ಕೆ ವಿರುದ್ಧ ನರ್ತನ! ನರ್ತನ! ಒಂದು ಛತ್ರದಲ್ಲಿಯಾಗಲಿ ಪಬ್ಲಿಕ್ ಹಾಲಿನಲ್ಲಿಯಾಗಲಿ ಒಬ್ಬಿಬ್ಬ ಮಹಾತ್ಮರ ಭಾವಚಿತ್ರಗಳನ್ನು ಸಂಭ್ರಮದಿಂದ ಇಟ್ಟ ಬಳಿಕ ಇನ್ನಾವ ಫೋಟೊಗಳಿಂದಲೂ ಆ ಹಾಲುಗಳನ್ನು ಶೋಭ್ರಮದ ಮೆರಣಿಗೆ ಇಲ್ಲವೆ ಇದು ಬಾರದೆಂಬದೇ ನಿನ್ನ ಅರ್ಥ. ಅಯ್ಯೋ, ನಿನ್ನ ವ್ಯರ್ಥದ ಮನೋಗತವೇ! ನಿರೀಕ್ಷಕನ ಫೋಟೊ ಇಟ್ಟುಕೊಳ್ಳಬಾರದೇಕೆ? ಬಲಮುರಿ ಛತ್ರದ ಗೋಡೆ ಬಲವಿದೆ. ಭಯ ಪಡಬೇಡ ನಿನ್ನ ಉದ್ದೇಶ ಇದಲ್ಲ. ಬೇರೆ ಇದೆ. ಬೇರು ಕತ್ತರಿಸಬೇಕೆಂದಲ್ಲವೇ? ಇಂಥಾ ನಿಂದನೆಗಳಿಂದ ಸ್ವಾರ್ಥತ್ಯಾಗಿಗಳನ್ನು ಮೂಲೆಗಿರಿಸಿ ತಮ್ಮ ಉದ್ದೇಶ ನೆರವೇರಿಸಬೇಕೆಂದಲ್ಲವೇ? ಹಾಗಾದರೆ ನಿನ್ನ ಒಡ ಲೇಖನವನ್ನು ಅರ್ಥ ಮಾಡಲಿಕ್ಕೆ ಶಕ್ತಿ ಇಲ್ಲದವರು ನಮ್ಮ ಈ ಚಿಕ್ಕ ಸೀಮೆಯಲ್ಲಿ ಬಹಳ ಕಮ್ಮಿ, ಇದನ್ನು ತಿಳಿ. ಇದರಿಂದ ಅವರಿಗೆ .... ಗುಣವಿಲ್ಲದೆ ಕಡಕ್ಕಿಲ್ಲ. ಕಿಚ್ಚು ಹಿಡಿದ ಮರವು ಮೊದಲು ತಾನು ಸುಟ್ಟು ಭಸ್ಮವಾಗಿ ಬಿದ್ದನಂತರ ಬೇರೆ ಕಾಡಿಗೆ ಕಿಚ್ಚನ್ನು ಪ್ರಸರಿಸುವದು, ಅದರಂತೆಯೇ ಕಿಚ್ಚಿನಿಂದ ಕೂಡಿದ ಮನದ ಪಾಡೂ ಎಂಬುದನ್ನು ಕಲಿ.

ಈಕ್ಷಕ.

ಮೂರ್ನಾಡು ಕನ್ಸ್ಯೂಮರ್ಸ್ ಸ್ಟೋರ್.

ಮೂರ್ನಾಡು ಕನ್ಸ್ಯೂಮರ್ಸ್ ಸ್ಟೋರಿನವರು ಈ ವರ್ಷ ವಿಗೂ ನಡೆಸುತ್ತಿದ್ದ ವ್ಯಾಪಾರದ ಲಾಭವು ಅಂಶಗಾರರ ನಿಶ್ಚಯ ದಂತೆ ಒಬ್ಬ ವ್ಯಾಪಾರದ ಒಂದು ಶಾಖೆಯನ್ನೂ ಮತ್ತು ಆಯುರ್ವೇದ ಔಷಧಿಯ ಒಂದು ಶಾಖೆಯನ್ನೂ ಸ್ಥಾಪಿಸಲು ಏರ್ಪಡಿಸಿ ತಾ 24—3—26ರಲ್ಲು, ಮೆ. ಪಿ. ಯಂ. ಸುಬ್ಬಯ್ಯನವರ ಅಧ್ಯಕ್ಷತೆಯಲ್ಲು ರಾ. ಸಾ. ಕೋಡಿಮಣಿಯಂಡ ಸುಬ್ಬಯ್ಯನವರಿಂದ ತೆರೆಯಲ್ಪಡಲಾಯಿತು. ಅಲ್ಲಿ ನೆರೆದಿದ್ದ ಜನರಿಗೆಲ್ಲಾ ಒಂದು ಉಪಭೋಜನವನ್ನೂ ಸಹ ಕೊಟ್ಟರು. ಸದರಿ ಒಬ್ಬ ಶಾಖೆಯನ್ನು ತೆರೆಯಲು ಕೇರಿದ ಮಹನೀಯರ-

ಗಳಿಗೆಲ್ಲಾ ಮೆ. ಪಿ. ಯಂ. ಮುತ್ತಣ್ಣನವರು ಮರಿಸಿ ಹೇಳಿದ್ದೇನೆಂದರೆ, ಈ ವ್ಯಾಪಾರವನ್ನು ನಾವು ಬರೇ ವ್ಯಾಪಾರದ ಲಾಭಕ್ಕೋಸ್ಕರ ಮಾಡುವದಲ್ಲ. ನಮ್ಮಲ್ಲಿ ಹಣವಿಲ್ಲದಿದ್ದರೂ ನಮ್ಮ ತರುಣ ಜನಾಂಗದ ಅಭಿವೃದ್ಧಿಗೋಸ್ಕರ ಮಾಡುವದಾಗಿರುತ್ತದೆ. ನಮ್ಮ ಅಜ್ಜಂದಿಯರು ಸಂಪಾದಿಸಿದ ಭೂಮಿ ಕಾಣೆಯಲ್ಲು ನಾವು ಕೃಷಿಕಾರರೆಂಬ ಹೆಸರಿನಿಂದಲೇ ನಾವು ಕ್ಷೀಣಿಸುತ್ತಾ ಇರುವದು ನಮ್ಮ ದುಃಸ್ಥಿತಿಯಾಗಿರುತ್ತದೆ. ನಾವು ಎಷ್ಟು ಓದಿದರೂ ನಾಗರಿಕತೆಯನ್ನು ಸ್ಥಾಪಿಸಿದರೂ ನಮ್ಮ ಅಜ್ಜಂದಿಯರಿಂದ ಪಾರಾಗಿರುವದಿಲ್ಲ. ವ್ಯಾಪಾರವನ್ನೂ, ಕೈಗಾರಿಕೆಯನ್ನೂ ಒಂದಕ್ಕೊಂದು ಕೃಷಿಯೊಡನೆ ಹೋಲಿಸಿದ ವಿನಹ ನಾವು ಮುಂದೆ ಸಾಗದೆ ಗುಲಾಮಗಿರಿಯಲ್ಲೇ ನಿದ್ರಿಸಬೇಕಾಗುವದು. ಸಂಶಯವೇ ನಮ್ಮ ಕಾಲುಬುಡಕ್ಕೆ ಬರಲು ಕಾಯುತ್ತಿರುವದು ನಮ್ಮ ಜನಾಂಗದ ಹೀನಾವಸ್ಥೆಯಾಗಿರುತ್ತದೆ. ಈ ವಿಷಯ ನಾನು ಮೊದಲೇ ನನ್ನ ಪುಸ್ತಕದಲ್ಲು ತೋರಿಸಿರುತ್ತೇನೆ. ಅನ್ಯರು ಪರದೇಶದಿಂದ ಬಂದು ನಮ್ಮ ಹಣದಿಂದ ಇಲ್ಲಿಯೂ ಅವರ ದೇಶದಲ್ಲಿಯೂ ಸುಖ ಜೀವನದಿಂದಿರುವದಲ್ಲದೆ ನಮ್ಮ ಅಜ್ಜಂದಿಯರು ಪ್ರಾಚೀನ ಕಾಲದಲ್ಲು ಸಂಪಾದಿಸಿಕೊಟ್ಟಿರುವ ಭೂಮಿ ಕಾಣೆಯಲ್ಲು ನಮ್ಮ ತಂದೆಯವರು ಕಲಿಸಿಕೊಟ್ಟಿರುವ ವ್ಯವಸಾಯದಲ್ಲೇ ನಾವು ಇನ್ನೂ ಮಗ್ನರಾಗಿರುತ್ತೇವೆ. ನಾವು ಸದರಿ ವ್ಯಾಪಾರದಿಂದಲೂ ಕೈಗಾರಿಕೆಯಿಂದಲೂ ಮುಂದುವರಿಯಬೇಕೇ ಹೊರತು ಬರೇ ಕೃಷಿಯಿಂದ ಮುಂದೆ ಸಾಗಲಾರೆವು. ಆದರೆ ಇದನ್ನು ಬಾಯಿಯಲ್ಲಿ ಹೇಳಿ ತೋರಿಸುವದಕ್ಕಿಂತ ಗಟ್ಟಿಬನಾದರೂ ಕೈಯಲ್ಲು ಮಾಡಿ ತೋರಿಸಲು ಪ್ರಯತ್ನಿಸುತ್ತೇನೆ. ಸದರಿ ವ್ಯಾಪಾರದಲ್ಲು ಸ್ವಾಭಾವಿಕ ವಿದ್ಯೆ ಗಳಿಸಲು ಮೊದಲು ಕಷ್ಟವಾದರೂ ನಾವು ನಮ್ಮ ತರುಣ ಜನಾಂಗದ ಅಭಿವೃದ್ಧಿಗೆಂದು ವ್ಯಾಪಾರವಾಗಲಿ, ಕೈಗಾರಿಕೆಯನ್ನಾಗಲಿ ಮಾಡಲೇಬೇಕು. ಇದೆಲ್ಲಾ ನಮ್ಮ ವ್ಯಾಪಾರಕ್ಕಿರುವ ಯುಕ್ತಿಯೆಂದು ಅನೇಕರು ಗ್ರಹಿಸಲೂ ಬಹುದು. ಅದು ಖಂಡಿತವಾಗಿಯೂ ಅಲ್ಲವೆಂದು ಹೇಳುವದಕ್ಕೆ ನಾವು ಈ ವ್ಯಾಪಾರವನ್ನು ಯಾರಾದರು ನಮ್ಮ ದೇಶಿಯರು ಇಲ್ಲಿ ಬಂದು ಕೈಕೊಂಡಲ್ಲಿ ಈ ಕ್ಷಣವೇ ಅವರಿಗೆ ಬಿಟ್ಟುಕೊಡಲು ತಯ್ಯಾರಿದ್ದೇವಲ್ಲದೆ ಹಣಕ್ಕೆ ಸಹ ಸಮಯ ಕೊಡಲಾದೀತು. ಅಲ್ಲದೆ ಪ್ರತಿಯೊಬ್ಬನು ದೇಶಿಯರ ವ್ಯಾಪಾರಕ್ಕೂ ಕೈಗಾರಿಕೆಗೂ ತಿಳಿಯದೆ ಬರುವ ಯಾವ ಕುಂದಕಕ್ಕೂ ಮನ್ನಿಸಿ ಪ್ರೋತ್ಸಾಹಿಸಬೇಕೆಂದು ಮೊದಲಾಗಿ ಮಾತಾಡಿದರು.

ರಾ. ಸಾ. ಸುಬ್ಬಯ್ಯನವರು ಹೇಳಿದ್ದೇನೆಂದರೆ, ಈ ವ್ಯಾಪಾರವೇ ನಮ್ಮ ದೇಶಿಯರ ಒಗ್ಗಟ್ಟಿಗಿರುವ ಮೂಲ ಮಂತ್ರವಾಗಿರುತ್ತದೆ. ನಮ್ಮ ಒಗ್ಗಟನ್ನು ಮತ್ತಷ್ಟು ಬಲಪಡಿಸಲು ಈಗ ತೆಗೆಯುವ ವ್ಯಾಪಾರವು ಒಂದನೇ ಮೆಟ್ಟಲಾಗಿರುತ್ತದೆ. ಆದುದರಿಂದ ಎಲ್ಲರೂ ದೇಶಿಯರ ವ್ಯಾಪಾರವನ್ನು ಪ್ರೋತ್ಸಾಹಿಸಲೇ ಬೇಕೆಂದು ಹೇಳಿದರು.

ಮೆ. ಕಂಬಡತಂಡ ಪೊಣ್ಣಪ್ಪನವರು, ನಾವುಗಳು ನಮ್ಮ ಒಗ್ಗಟ್ಟನ್ನು ಬಲಪಡಿಸಲು ಯಾವಾಗಲೂ ನಾವುಗಳು ನಮ್ಮ ದೇಶಿಯರ ವ್ಯಾಪಾರವನ್ನೇ ನಷ್ಟವಾದರೂ ಸಹ ಪ್ರೋತ್ಸಾಹಿಸಬೇಕೆಂದು ಹೇಳಿದರು.

ಮೆ. ಯಂ. ಸುಬ್ಬಯ್ಯನವರು ಹೇಳಿದ್ದೇನೆಂದರೆ—ನಾವುಗಳು ವ್ಯಾಪಾರದಲ್ಲು ಬಹಳ ಹಿಂದಾಗಿ ಗರೀಬರಾಗಿಯೇ ಜೀವಿಸುತ್ತೇವೆ. ನಮ್ಮ ಜನಾಂಗ ಮುಂದುವರಿಯಬೇಕಾದಲ್ಲಿ ನಮ್ಮ ದೇಶದಲ್ಲು ಪ್ರತಿ ಒಂದು ಬಾಬಿನ ವೃತ್ತಿಯನ್ನೂ ನಾವು ದೇಶಿಯರೇ ಕೈಕೊಳ್ಳಬೇಕು. ಮತ್ತು ದೇಶಿಯರಿಗೆ ಪ್ರೋತ್ಸಾಹಿಸಬೇಕಾಗಿ ಮೊದಲುಗೊಂಡು ಮಾತಾಡಿದರು.

ಕೆ. ರಾಮನಾಯಕ.

ಮುತ್ತೂರು ದೇವಸ್ಥಾನ.

ಅಯ್ಯಾ,

ನಮ್ಮ ನಾಡು ದೇವಸ್ಥಾನವಾದ ಮುತ್ತೂರು ಭೂತನಾಥ ಅಯ್ಯಪ್ಪ ದೇವರಿಗೆ ಅಷ್ಟ ಗಂಧ ಕಲಶ ಸಂಪ್ರೋಕ್ಷಣೆಗಾಗಿ ಸಹಾಯ ಕೊಟ್ಟ ಮಹನೀಯರು:—

		ರೂ. ಆ. ಪೈ.
1	ಬೆಸಗೂರು ಗ್ರಾಮಸ್ಥರು	68—8—0
2	ಕಿರುಗೂರು ,,	60—8—0
3	ಕೋಟೂರು ,,	40—0—0
4	ಮತ್ತೂರು ,,	37—0—0
5	ನಲ್ಲೂರು ,,	26—0—0
6	ಮುಗುಟಗೇರಿ ,,	20—0—0
7	ದೇಶಬಾಂಧವರಿಂದ ,,	55—0—0
8	ನಾರ್ವಂಗಳ ಕುಟುಂಬದವರಿಂದ	100—0—0
9	ಚೆಪ್ಪುಡೀರ ಎ. ಬೆಳ್ಯಪ್ಪ ಮತ್ತು ಸಹೋದರರಿಂದ	50—0—0
10	ಚೆಪ್ಪುಡೀರ ಪಟ್ಟೆದಾರರಾದ ಕರಿಯಣ್ಣನವರಿಂದ	25—0—0
11	ಕುಟ್ಟಮಾಡ ಕೆ. ಪೊವ್ವಯ್ಯನವರಿಂದ	15—0—0
12	ಚೆಪ್ಪುಡೀರ ಎಸ್. ಪೊನ್ನಪ್ಪನವರಿಂದ	5—0—0
13	ಚೆರಿಯಪಂಡ ಪೊನ್ನಪ್ಪನವರಿಂದ	5—0—0
14	ಸೋಮೆಯಂಗಳ ಸೋಮಯ್ಯನವರಿಂದ	5—0—0
15	ಮುಕ್ಕಾಟಿ ಗೋಪಾಲಯ್ಯನವರಿಂದ	8—0—0
16	ಚೆಪ್ಪುಡೀರ ಟಿ. ಬೆಳ್ಯಪ್ಪನವರಿಂದ	5—0—0
17	ಚೆಪ್ಪುಡೀರ ಅ. ಪೊನ್ನಪ್ಪನವರಿಂದ	5—0—0
18	ಕುಟ್ಟಮಾಡ ಯಂ ಬೆಳ್ಯಪ್ಪನವರಿಂದ	5—0—0

ಇದಲ್ಲದೆ ದೇವಾಲಯಕ್ಕೆ ಉಚಿತಾರ್ಥವಾಗಿ ಚೆಪ್ಪುಡೀರ ಪೊನ್ನಪ್ಪ ಮತ್ತು ಪೂವಯ್ಯನವರು ಪೂರ್ವ ಭಾಗದ ಜಗಲಿಗೂ, ಕೈಸಾಲೆಗೂ, ಏಮರಕ್ಕೂ ಕಲ್ಲು ಹಾಸಿಸಿರುತ್ತಾರೆ.

ದಕ್ಷಿಣ ಭಾಗದ ಜಗಲಿಗೆ ಪಿ. ಕೆ. ಪೂವಯ್ಯನವರು ಕಲ್ಲು ಹಾಸಿಸಿದ್ದಾರೆ. ಪಶ್ಚಿಮ ಭಾಗದ ಜಗಲಿಗೆ [illegible] ಕುಟುಂಬಸ್ಥರು ಕಲ್ಲು ಹಾಸಿರುತ್ತಾರೆ. ಉತ್ತರ ಭಾಗದ ಜಗಲಿಗೆ ಪಿ. ಗಣಪತಯ್ಯನವರು ಕಲ್ಲು ಹಾಸಿಸಿದ್ದಲ್ಲದೆ ಏಕಾರ್ಪಣವಾಗಿ ಒಂದು ಬಲಿ ಮೂರ್ತಿ ಮತ್ತು [illegible]ಲದ ಸುತ್ತಲಿನ ಗೋಡೆ ಸಹ ಕಟ್ಟಿಸಿರುತ್ತಾರೆ.

ಚೆಪ್ಪುಡೀರ ಲೇಟ್ ತಮ್ಮಯ್ಯನವರ ಕುಟುಂಬವು ಪೂರ್ವಭಾಗದ ಕಯ್ಯಾಲೆಯ ನೆಲಕ್ಕೆ ಕಡಪಕಲ್ಲು ಹಾಕಿಸಿರುತ್ತಾರೆ. ಮನೆಯಪಂಡ ದೇವಯ್ಯನವರ ಲೇಟ್ ಸ್ತ್ರೀಯವರ ಹೆಸರಿನಲ್ಲಿ ದೇವಾಲಯದ ಎಡಭಾಗದಲ್ಲಿ ಒಂದು ಬಾವಿ ಕಟ್ಟೆಯನ್ನು ಕಟ್ಟಿಸಿರುತ್ತಾರೆ.

ಮೇಲ್ಕಂಡ ಮಹನೀಯರಿಗೆಲ್ಲಾ ದೇವರ ಪರವಾಗಿಯೂ ನಾಡಿನವರ ಪರವಾಗಿಯೂ ಸಹ ನಾನು ಅಭಿವಂದನೆಗಳನ್ನು ಸಮರ್ಪಿಸುತ್ತೇನೆ.

ಐದು ರೂಪಾಯಿಗೆ ಮೇಲ್ಪಟ್ಟು ಚಂದಾ ಕೊಟ್ಟವರ ಹೆಸರುಗಳನ್ನು ಮಾತ್ರ ಇಲ್ಲಿ ನಮೂದಿಸಿದೆ.

ಇದೇ ಏಪ್ರಿಲ್ ತಾರೀಕು 4ರಿಂದ ದೇವರ ಉತ್ಸವವು ಪ್ರಾರಂಭಿಸುವ ಬುದ್ಧಿಕ್ಕೆ ದೇವಭಕ್ತಸಿಗೆಲ್ಲಾ ದಯಮಾಡಿ ದೇವರ ದರ್ಶನದಿಂದ ತೀರ್ಥ ಪ್ರಸಾದದೊಡನೆ [illegible] ಬೇಕಾಗಿ ವಿನಂತಿ ಮಾಡಿಕೊಳ್ಳುವ.

ತಮ್ಮ ವಿಧೇಯ
ಪಿ. [illegible]ಪಯ್ಯ.

— — —

ರೆಡ್ ಕ್ರಾಸ್ ಸಂಘದ ಕೆಲಸ

ಮಹನೀಯರೇ,

ಕಣ್ಣಾರೆ ಕಂಡರೂ ಕಿವಿಯಿಂದ ಕೇಳಿದರೂ ಪರಾಂಬರಿಸಿ ನೋಡಬೇಕೆಂದು ಹೇಳುವ ಹಾಗೆ ಪರಾಂಬರಿಸಿದ್ದನ್ನು ಇಲ್ಲಿ ಪ್ರಕಟಗೊಳಿಸಿದ್ದಾಗಿದೆ.

ಅದೇನೆಂದರೆ, ರೆಡ್ ಕ್ರಾಸ್ ಸಂಘದವರ ಬ್ರಾಂಚ್ ಮಡಿಕೇರಿಯಲ್ಲಿ ಸ್ಥಾಪಿಸಿದ್ದಾರೆಂಬುವುದನ್ನು ಕೆಲವು ವರುಷಗಳಿಂದ ಕೇಳುತ್ತಿದ್ದದ್ದು ಸರಿಯಷ್ಟೆ. ಈ ಅದು ದೊಡ್ಡ ಅರಣ್ಯದ ಒಂದು ಮೂಲೆಯಲ್ಲಿ ಮಿಣುಗುತ್ತಿರುವ ಒಂದು ಬೆಂಕಿ ಕಿಡಿಯ ಹಾಗೆ ಇದ್ದುದರಿಂದ ಅರಣ್ಯದ ಮಿಕ್ಕ ಗಡಿಗಳಲ್ಲಿದ್ದವರೆಲ್ಲರೂ ಕಿಡಿಯು ಆರಿಹೋಯಿತೋ ಏನೋ ಎಂಬ ಸಂಶಯದಲ್ಲಿದ್ದಿರ ಬಹುದು. ಆದರೆ ಈಗ ಕೊಂಚ ದಿವಸಗಳ ಹಿಂದೆ ಮ. ರಾ. ಎ. ಬಿ. ಕಾರ್ಯಪ್ಪನವರು ಬಾರ್-ಆಟ್-ಲಾ ಮುಖರ್ಜಿ ಇಟ್ಟು ಮಾಡಿದ ಕಾರ್ಯದಿಂದ ಈ ಕಿಡಿಯು ಕಾಡುಗಿಚ್ಚಿನೋಪಾದಿಯಲ್ಲಿ ಮಧ್ಯದಲ್ಲಿ ಅರಣ್ಯವನ್ನು ಬೇಯಿಸಿ ಒಂದು ಕಡೆಯನ್ನು ಇನ್ನೊಂದು ಕಡೆಗೆ ಸ್ವಲ್ಪಮಟ್ಟಿಗೆ ಕಾಣುವ ಹಾಗೆ ಮಾಡಿದೆ.

ಈ ಸಂಘವು ತಾ. 7ರಲ್ಲಿ ಗೋಣಿಕೊಪ್ಪಲಿನಲ್ಲಿ ತಲೆದೋರಿತು. ಈ ಸಂಘದವರು ಬರುವ ವಿಷಯ ಮೊದಲೇ ಪ್ರಕಟ ಮಾಡದೆ ಇದ್ದುದರಿಂದ ಅನೇಕ ಜನರು ತಮ್ಮ ತಮ್ಮ ಮನೆಗಳಿಗೆ ಹೋಗಿ ಬಿಟ್ಟಿದ್ದರು. ಆದರೆ ಸಂತೆ ದಿನವಾದುದರಿಂದ ಕೂಡಲೇ ಆ ಸ್ಥಳವನ್ನು ಬಿಡಲು ಮನಸ್ಸಿಲ್ಲದೆಯೂ ಮತ್ತು ಆಸ್ಪದವಿಲ್ಲದೆಯೂ ಅತ್ತಿತ್ತ ತಿರುಗಾಡುತ್ತಿದ್ದ ಕೆಲವರು ಮ. ರಾ. ಎ. ಬಿ. ಕಾರ್ಯಪ್ಪನವರು ಬಾರ್-ಆಟ್-ಲಾ ಇವರ ಆಗಮನವನ್ನು ಕೊಂಚ ಹೊಸ ಮೇಲೆ ಮಿಸ್ಟರ್ ಮತ್ತು ಮಿಸೆಸ್ ತಿಮ್ಮಯ್ಯನವರ ಆಗಮನವನ್ನೂ ಕಂಡು ಇದೇನೋ ವಿಶೇಷ ಸಮಾಚಾರವಿರಬೇಕೆಂದು ಕಾಲವಿಳಂಬ ಮಾಡಿದರು. ಕೊಂಚ ಹೊತ್ತಿನ ಮೇಲೆ ಶಿಶುಪೋಷಣೆಯ ವಿಷಯ ಒಂದು ಪ್ರದರ್ಶನವಾಗುವುದು ಕೇಳಿ ಇದು ಹಣ ವಸೂಲು ಮಾಡಲಿಕ್ಕಿರುವ ಉಪಾಯ ಎಂದುಕೊಂಡು ಕೆಲವರು ಕಾಲಿಗೆ ಬುದ್ಧಿ ಹೇಳಿದರು. ಆದರೆ ಮ. ರಾ. ಎ. ಬಿ. ಕಾರ್ಯಪ್ಪನವರು ಅತ್ತಿತ್ತ ಹೋಗುತ್ತಿದ್ದ ಜನರನ್ನು ಕರೆದು ನಾವು ಎಲ್ಲಾ ಸಂಘಗಳ ಹಾಗೆ ಹಣ ವಸೂಲಿಗೇನೂ ಬಂದಿರುವುದಿಲ್ಲ. ನಮ್ಮ ಸ್ವಂತ ಖರ್ಚಿನಿಂದ ಜನರಿಗೆ ಶಿಶುಪೋಷಣೆಯ ವಿಷಯ ಕೆಲವು ಅಂಶಗಳನ್ನು ಪ್ರದರ್ಶನ ಮೂಲಕ ತೋರಿಸುವ ಅಭಿಲಾಷೆಯಿಂದ ಬಂದಿದ್ದೇವೆ ಎಂದು ಹೇಳಿದ ಮಾತುಗಳನ್ನು ಕೇಳಿ ಒಂದೊಂದಾಗಿ ಜನಸಮುದಾಯವು ಹೆಚ್ಚಾಯಿತು.

ಹ್ಯಾಗೆಂದರೆ, ಮುಫತ್ತಾಗಿ ಕೊಡಿಸುತ್ತಾರೆ ಎಂಬ ಕುತೂಹಲದಿಂದಲ್ಲ. ಹಣ ಕೊಡಲಿಕ್ಕೆ ಮನಸ್ಸಿಲ್ಲದಿದ್ದರೂ ಒಳ್ಳೇ ಕೆಲಸಕ್ಕೆ ಹತ್ತು ಸೇರು ಭತ್ತವನ್ನಾದರೂ ಕೊಡಲಿಕ್ಕೆ ಯಾರೊಬ್ಬರೂ ಹಿಂಜರಿಯುವುದಿಲ್ಲ. ಭತ್ತ, ಅಕ್ಕಿ ಕೊಡುವುದರಲ್ಲಿ ಕೊಡಗರಂಥ ಧರ್ಮಿಷ್ಠರು ಯಾರು ಎಂಬುದು ಎಲ್ಲೆಲ್ಲೂ ವಾಕ್ಯವಿಳವಾಗಿದೆ. ಈ ವಿಷಯದಲ್ಲಿ ಯಾರೂ ಹಿಂಜರಿಯುವುದಿಲ್ಲವೆಂದು ನಾನು ನಂಬುತ್ತೇನೆ. ಆದರೆ ಈ ಸಂಘದವರು ಮುಖ್ಯವಾಗಿ ಮಿಸೆಸ್ ತಿಮ್ಮಯ್ಯನವರು (ಅಂದರೆ ಕೊಡಗು ಸ್ತ್ರೀಯರಲ್ಲಿಯೇ ಕೆಲಸಕ್ಕೆ ಮೊದಲು ಕೈಹಾಕಿದವರು) ಇಷ್ಟು ಮುತುವರ್ಜಿಯಿಂದ ಸ್ವಂತ ಖರ್ಚಿನಿಂದ ಪರೋಪಕಾರಾರ್ಥವಾದ ಕೆಲಸವನ್ನು ಮಾಡುತ್ತಾರೆಂಬ ಕುತೂಹಲದಿಂದ ಜನರು ಸೇರಿದರು.

ಕೂಡಲೆ ಮಲೇರಿಯ ಜ್ವರದ ವಿಷಯ ಪ್ರದರ್ಶಿಸಿದ ಬಳಿಕ ಶಿಶು ಪೋಷಣೆಯನ್ನು ಪ್ರದರ್ಶಿಸಿದರು. ಇಷ್ಟಕ್ಕೆ ಮುಕ್ತಾಯವಾಗಬಹುದೋ ಎಂದು ಕೇಳಲಾಗಿ ಜನರು, ಇಲ್ಲ, ಇಲ್ಲ, ಕುಡುಕತನದ ವಿಷಯ ಹೇಳುತ್ತೀರಲ್ಲ, ಅದನ್ನೂ ತೋರಿಸಿ ಎಂದು ಹೇಳಿದರು. ವಾಚಕರೇ, ಕೊಂಚ ಪರ್ಯಾಲೋಚಿಸಿ ನೋಡಿ! ಮೊದಲು ಹೊತ್ತಾಗಿ ಹೋದರೆ ಹೆಂಗಸರು ಮನೆಯಲ್ಲಿ ಬೈಯ್ಯುವರೋ, ಅಲ್ಲ ಈ ಸಂಘದವರು ಹಣ ಸೆಳೆದುಕೊಂಡು ಹೋಗುವುದಕ್ಕೆ ಬಂದಿದ್ದಾರೋ ಎನ್ನುವ ಸಂಶಯವು ಕಾಲಿಗೆ ಬುದ್ಧಿ ಹೇಳಲಿಕ್ಕೆ ಮಾಡಿತ್ತು. ಆದರೆ ನಾನು ಮೊಟ್ಟಮೊದಲೇ ಸೂಚಿಸಿದ ಪ್ರಕಾರ "ಕಣ್ಣಾರೆ ಕಂಡರೂ ಪರಾಂಬರಿಸಿ ನೋಡಬೇಕು." ಪರಾಂಬರಿಸಿದನಂತರ ಕೊಂಚ ಹೊತ್ತಾದರೂ ಸರಿಯೇ ಎನ್ನಲಿಕ್ಕೆ ತೊಡಗಿದರು. ಕುಡುಕತನದ ವಿಷಯ ತೋರಿಸಿ ಪ್ರದರ್ಶನವನ್ನು ಮುಕ್ತಾಯ ಮಾಡಿದ ಕೂಡಲೆ ಕೆಲವು ಮಹನೀಯರು ಎಲ್ಲಾ ಜನರಿಗೂ ಇದರ ವಿಷಯ ಮಾಡಲೆ ತಿಳಿಯುವುದರಿಂದ ಇನ್ನೊಂದು ದಿನ ಇಲ್ಲಿಯೇ ನಡೆಸಬೇಕು ಎಂದು [illegible]. ವಾಚಕ ಮಹಾಶಯರೇ, ಹೀಗೆ ಹೇಳಲೆಂದರೆ ನಿಷ್ಕಿ ನೋಡಬೇಕೆಂಬ ಕುತೂಹಲವು. ಆದರೆ ಅತಿ ಚಮತ್ಕಾರದಿಂದ ಅರಿಸಲ್ಪಟ್ಟ ನಕ್ಷೆಗಳನ್ನು ಒಂದರ ಹಿಂದೆ ಒಂದನ್ನು ಪ್ರದರ್ಶಿಸುತ್ತಾ ಹೋದ ಹಾಗೆಲ್ಲಾ ಅದರ ಉಪಯೋಗ [illegible] ಜನರ ಉಲ್ಲಾಸಕ್ಕೆ ಪಾರವೇ ಇಲ್ಲದ್ದಾಯಿತು. ಮಲೇರಿಯ ಜ್ವರದಿಂದ [illegible] ಹೊಂದುವುದೆಂದರೆ ಶರೀರವು ಎಷ್ಟು ಹೆಚ್ಚು ಹೀನವಾಗಿ ದುಡಿದು ಚಟುವಟಿಕೆಯನ್ನು ರೋಗಪೀಡಿಸುವುದು. ಶಿಶು ಪ್ರದರ್ಶನದಿಂದ ಕಾರಣಾಂತರಗಳಿಂದಲೂ ಕಾಲಾವಸ್ಥೆಯಿಂದಲೂ ಅಕಾಲ ಮರಣ ಹೊಂದುವ ಶಿಶುಗಳನ್ನು ಪೋಷಿಸಿ ಸಂತಾನವೃದ್ಧಿಗೊಳಿಸುವದು. ಕುಡುಕತನದ ಪ್ರದರ್ಶನದಿಂದ [illegible] ವಿಧದಲ್ಲಿಯೂ ಕಡಕಾಪದ ಎಂದು ತೋರಿಸಲಾಯಿತು. ಇವು ಜನಗಳ ಮನಸ್ಸಿನಲ್ಲಿ ಮೂಲಪಾಠಗಳ ಹಾಗೆ ನಾಟಿವೆ. ಈ ತತ್ವಗಳನ್ನು ಅನುಸರಿಸಿ ನಡೆದರೆ ಅದಷ್ಟು ಮಟ್ಟಿಗೆ ಜನರು ಸುಖಿಗಳಾಗಿರಬಹುದೆಂಬುದರಲ್ಲಿ ಲೇಶ ಮಾತ್ರವೂ ತಪ್ಪಿಲ್ಲ.

ತಾ. 8ರಲ್ಲಿ ಮಡಿಕೇರಿಯಲ್ಲಿಯೂ, 9ರಲ್ಲಿ ಪೊನ್ನಂಪೇಟೆಯಲ್ಲಿಯೂ ಪ್ರದರ್ಶನಗಳಾದುವು. ಜನರ ಸಂತೋಷಕ್ಕೆ ಪಾರವೇ ಇಲ್ಲ. ಕೆಲವರು ನಾಟಕವೆಂದೂ ಇನ್ನು ಕೆಲವರು ಬಯಸ್ಕೋಪ್ ಎಂದೂ ಒಂದು ಸೇರಿದರು. ಹ್ಯಾಗೆ ಊಹಿಸಿಕೊಂಡರೇನು? ಮುಂದಿನ್ನಾದರೆ ಸಾಕು. ಪೂರ್ವ ಕಾಲದಲ್ಲಿ ಋಷಿಗಳು ಈ ರೀತಿಯಿಂದ ನಾಟಕ ಸಾಹಿತ್ಯಗಳಿಂದಲ್ಲವೆ ಜನರನ್ನು ಸುಗತಿಗೆ ತಂದದ್ದು?

ಇಷ್ಟೆಲ್ಲಾ ಬರೆದು ಇವರ ವಿಷಯದಲ್ಲಿ ಈ ಸ್ಥಳದಲ್ಲಿ ಹೆಚ್ಚು ಮುತುವರ್ಜಿ ತೆಗೆದುಕೊಂಡ ಮ|| ರಾ|| ಕೋಡಿರ ಉತ್ತಪ್ಪನವರ ಹೆಸರನ್ನು ಬಿಟ್ಟು ಬಿಟ್ಟರೆ ಮುಂದಕ್ಕೆ ಇವರಿಗೆ ಇದರಲ್ಲಿ ಯಾವ ಸ್ವಾರಸ್ಯವೂ ಇರಲಾರದು. ಈ ಮಹನೀಯರ ಹಾಗೆಯೇ ಬೇರೆ ಸ್ಥಳಗಳಲ್ಲಿರುವವರೂ ಕೊಂಚ ಕೊಂಚ ತಿಂಗಳಿಗೊಮ್ಮೆಯಾದರೂ ಆಯಾ ಸ್ಥಳಗಳಲ್ಲಿ ರೆಡ್ ಕ್ರಾಸಿನ ವಿಷಯ ಉಪನ್ಯಾಸಗಳನ್ನು ಏರ್ಪಡಿಸಿ ಇದರ ಹೆಸರು ಯಾವಾಗಲೂ ಜನರ ನೆನಪಿನಲ್ಲಿರುವ ಹಾಗೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಇಲ್ಲದ ಪಕ್ಷಕ್ಕೆ ಒಂದು ದಫ ಚೆನ್ನಾಗಿ ಊದಿ ಬೆಂಕಿ ಹೊತ್ತಿಸಿ ಬಿಟ್ಟು ಬಿಟ್ಟರೆ ಹ್ಯಾಗೆ ಕೆಂಡವೂ ಸಹ ಬೂದಿಯಾಗಿ ಕಡೆಗೆ ಕಿಡಿಯೂ ಸಹ ಕಾಣದೆ ಹೋಗುವುದೋ ಹಾಗಾಗುವದು.

ಇಷ್ಟೇ ಅಲ್ಲ, ಇದಕ್ಕೆ ಬೇಕಾಗುವ ಸಾಮಗ್ರಿಗಳನ್ನು ತಯಾರು ಮಾಡಿಕೊಳ್ಳುವ ಯಂತ್ರಗಳೂ ಬೇಕು. ಅಂದರೆ ಮೋಟಾರು ಸರ್ವಿಸ್ ಇಟ್ಟ ಮೇಲೆ ಅದಕ್ಕೆ ಸೇರಿದ ವರ್ಕ್ ಶಾಪು ಬೇಕು. ಯಾವದಾದರೂ ಸಾಮಾನುಗಳು ಮುರಿದು ಹೋದ ಪಕ್ಷಕ್ಕೆ ಅವುಗಳನ್ನು ತಯಾರಿಸಿಕೊಳ್ಳುವ (Lathe) ಯಂತ್ರಗಳೂ ಚತುರನಾದ ಕಸಬುಗಾರನೂ ಬೇಕು. ಇಲ್ಲದ ಪಕ್ಷಕ್ಕೆ ಬಸ್ಸು ನಿಂತು ಹೋದಾಗಲೆಲ್ಲಾ ಮೈಸೂರು ಬೆಂಗಳೂರಿಗೆ ಓಡುವದು ಎಂದರೆ ಹ್ಯಾಗೆ? ತಾವೇ ಕೊಂಚ ಯೋಚಿಸಿರಿ! ಆದುಕಾರಣ ನಮ್ಮ ಮಹನೀಯರು ಕೈಕೊಂಡಿರುವ ಕಾರ್ಯಕ್ಕೆ ಬತ್ತಾಸೆಯಾಗಿ ವೀರರಾಜೇಂದ್ರಪೇಟೆಯಲ್ಲಿ ಒಬ್ಬ ಲೇಡಿ ಡಾಕ್ಟರನ್ನು ನೇಮಿಸಿ ದಾದಿಯರ ಮತ್ತು ಸೂಲಗಿತ್ತಿಯರ ಟ್ರೈನಿಂಗ್ ಸ್ಕೂಲುಗಳನ್ನು ಮಡಿಕೇರಿ, ವೀರರಾಜೇಂದ್ರಪೇಟೆ, ಗೋಣಿಕೊಪ್ಪಲು ಇನ್ನು ಕೆಲವು ಬೇರೆ ಸ್ಥಳಗಳಲ್ಲಿ ವಾರಕ್ಕೆ ಎರಡು ದಫವಾದರೂ ಸೇರುವ ಹಾಗೆ ಸ್ಥಾಪಿಸಿದರೆ ಈ ಕೈಕೊಂಡಿರುವ ಕಾರ್ಯಕ್ಕೆ ಬೇಕಾದ ಸಾಮಗ್ರಿಗಳನ್ನು (Trained Nurses) ಯಾವಾಗ ಬೇಕಾದರೂ ಒದಗಿಸಿಕೊಳ್ಳಬಹುದು. ಇದಲ್ಲದೆ ಪ್ರತಿಯೊಬ್ಬ ಸ್ತ್ರೀಯು ಇದನ್ನು ಕಲಿತುಕೊಂಡರೆ ತನ್ನ ಗೃಹದಲ್ಲಿ (Medical Aid) ವೈದ್ಯನ ಸಹಾಯವಿಲ್ಲದೆ ತಕ್ಕಮಟ್ಟಿಗೆ ಬೇಡದ ಹಾಗೆ ಮಾಡಿಕೊಳ್ಳಬಹುದು. ರೆಡ್ ಕ್ರಾಸ್ ಸಂಘದ ಕೆಲಸವೂ ಈ ತತ್ವವನ್ನು ಅವಲಂಬಿಸಿದರೆ ಚೆನ್ನಾಗಿ ಫಲಿಸುವದು. ಇಲ್ಲದ ಪಕ್ಷಕ್ಕೆ ಇವರ ಉಪದೇಶವು ಕಲಿತುಕೊಳ್ಳಲಿಕ್ಕೆ ಯಾರೂ ಇಲ್ಲದೆ, ಹಿಂದು ಕಳೆದ ಯಾವಾಗಲೂ ಇವರನ್ನೇ ಹಿಂಬಾಲಿಸುವದು.

ಆದುಕಾರಣ ನಾನು ತಿಳಿದು ಬರೆದಿದ್ದೇನೋ ಇಲ್ಲವೇ ತಿಳಿಯದೆ ಬರೆದಿದ್ದೇನೋ, ಅದನ್ನ ಹೆಚ್ಚು ತಿಳಿದವರು ಮನ್ನಿಸಿ, ಈ ಸೂಚನೆಯು ಉಪಯುಕ್ತವಿದ್ದ ಪಕ್ಷಕ್ಕೆ ಇದನ್ನು ಮುಂದರಿಸಬೇಕೆಂದು ಕೇಳಿಕೊಳ್ಳುತ್ತೇನೆ.

X Y Z.

ಮನೋಲ್ಲಾಸಿನಿ ತೈಲ.

ತಲೆನೋವು, ತಲೆ ತಿರುಗುವುದು, ತಲೆಯಲ್ಲಿ ಕಣ್ಣು, ಕಿವಿಯಿಂದ ಕೀವು ಸೋರುವುದು ಕಿವುಡುತನ, ಕಣ್ಣುನೋವು, ಅಪಸ್ಮಾರ ನಿದ್ರೆ ಬಾರದಿರುವುದು, ನೆನಪು ಶಕ್ತಿ ಕುಂದಿಹೋಗುವುದು ಇವುಗಳನ್ನೆಲ್ಲ ಖಂಡಿತ ಗುಣಪಡಿಸುತ್ತದೆ. ಉದುರುವ ಕೂದಲನ್ನು ನಿಲ್ಲಿಸಿ ಗಿಡ್ಡಗಿರುವ ಕೂದಲನ್ನು ಬೆಳೆಯಿಸಿ ಕೂದಲಿಗೆ ಕಾಂತಿಯನ್ನೂ ಹೊಳಪನ್ನೂ ಕೊಟ್ಟು ಅಕಾಲಿಕ ಬಣ್ಣವಿದ ಕೂದಲನ್ನು ಕಡಮೆ ಕೂದಲು ಇಲ್ಲದ ಸ್ಥಳದಲ್ಲಿ ಹೊಸ ಕೂದಲನ್ನು ಹುಟ್ಟಿಸುತ್ತದೆ. ಚಿಕ್ಕ ಸೀಸೆಗೆ ರೂ 1, 3 ಸೀಸೆಗೆ 2—10—0, ಒಂದು ದೊಡ್ಡ ಸೀಸೆಗೆ ರೂ. 2, 3 ಸೀಸೆಗಳಿಗೆ 5—8—0

ಚಂದನಾಸವ.— ಇದು ಪ್ರಮೇಹ ಮೂತ್ರಕೃಚ್ಛ್ರ, ಮೂತ್ರ ಹನಿಹನಿಯಾಗಿ ಹೋಗುವುದು ಮೂತ್ರಕೋಶದ ಉರಿ, ಮೂತ್ರಪಿಂಡದ ಉರಿ ಮೂತ್ರನಾಳದಲ್ಲಿ ಹುಣ್ಣು, ಮೂತ್ರ ಹೊಯ್ಯುವಾಗ ಉರಿಯುವುದು, ಮೂತ್ರನಾಳದಿಂದ ಕೀವು ಬರುವುದು, ಮೂತ್ರದಲ್ಲಿ ಧಾತು, ಹುಡಿ ಹೋಗುವುದು, ಆಗಾಗ್ಗೆ ಮೂತ್ರ ಬರುವದು, ಮೂತ್ರ ತಡೆಯಲಿಕ್ಕೆ ಸಾಮರ್ಥ್ಯವಿಲ್ಲದಿರುವುದು, ಸೊಂಟದಲ್ಲಿ ಉರಿ, ಬಾಯಾರಿಕೆ, ಸ್ವಪ್ನಾವಸ್ಥೆ, ಮೂತ್ರನಾಳದಲ್ಲಿ ಚುಚ್ಚುವ ನೋವು ಇವುಗಳಿಗೆಲ್ಲವು ಔಷಧಿ ಗಂಡಸರಿಗೂ ಹೆಂಗಸರಿಗೂ ಇದು ಅತ್ಯುತ್ತಮ. ಬೆಲೆ—ಬಾಟ್ಲಿ 1, 3, 6ಕ್ಕೆ ರೂ 1—4—0, 3—8—0, 6—12—0,

ರೋಮನಾಶಿನಿ.— ಈ ಹುಡಿಯನ್ನು ನೀರಲ್ಲಿ ಕಲಸಿ ಹಚ್ಚಿದಲ್ಲಿ ರೋಮವಿರುವ ಭಾಗಕ್ಕೆ ಹಚ್ಚಲು ರೋಮವು ಉದುರಿ ಬೀಳುವುದು ಡಬ್ಬಿ ಗಳಿಗೆ 6 ಆಣೆ, 3 ಡಬ್ಬಿಗಳಿಗೆ ರೂ 1, 1 ದಜನಿಗೆ 3—8—0

ಅಮೃತರಿಷ್ಟ.— ಇದು ಕ್ಷೀಣಿಸು ಪಿಸಿದಿರುವ ಉತ್ತಮವಾದ ಔಷಧಿ ಎಲ್ಲಾ ತರದ ಜ್ವರಕ್ಕೆ ಉತ್ತಮ, ಬೆಲೆ — ಬಾಟ್ಲಿ 1, 3, 6ಕ್ಕೆ ರೂ 1—4—0 3—8— 6— —

ಲೋಹಾಸವ.— ಇದು ಜ್ವರದ್ದಗೆ ಮತ್ತು ಮಲೇರಿಯಾದಿಂದುಂಟಾದ ಅರಕ್ತತೆಗೆ ದಿವ್ಯವಾದ್ದು ಬೆಲೆ—ಬಾಟ್ಲಿ 1, 3, 6ಕ್ಕೆ ರೂ. 1—4—0, 3—8—0, 6— —0

ನಮ್ಮ ಕೆಟಲಾಗು ತರಿಸಿ ನೋಡಿರಿ

ವಿಲಾಸ-ಮನೋಲ್ಲಾಸಿನಿ ಕಂಪೆನಿ,
52—15 9 ಮಂಗಳೂರು, ಕೆಂಕನಾಡಿ.

Apply for our shooting Season's Clearance Sale Catalogue of Brand New Goods.

10 to 25 percent Reductions in Prices

No License Required !! No License Required



Webley and Scott Air Pistol cal 177 or 22 bore Powerful and Accurate complete with a sample box of slugs, two pair washers, a brush forcleaning and a bookletof instructions Rs. 30/- Free delivery

Pwerful German Diana Air gun Handsome and Accurate takes B. S. A. Patern No 1 Slugs and Darts expressly recommendable for Target Practice Rs 15 Free delivery

Brilliant Search Light Lamp for Night Shoots Rs 30 — Free delivery

No License required to purchase or to possess the above items.

Reliable D B B L 12 bore guns	Rs. 60/- and upwards		
Do S. B B L 12	do	do 40/-	do
D. B M L Guns	„	35/-	do
S. B M L. do.	„	30/-	do
S B. B L Rifles	„	25/-	do
B L Revolvers and Pistols	„	30/-	do.

Arms, Ammunition and shooting requisites of almost every kind andquality offered at exceptionally favourable rates ANumber of good quality second hand weapons also offered for sale in theNew Catalogue.

GOOLAMHUSIAIN ALLIBHOY & SONS

Largest Importers of Firearms and Ammunition,

Cheapest priced firm in India,

10 210 AbdulRehman Sreet, BOMBAY.

೧೦೦೦ ರೂಪಾಯಿಗಳ ಬಹುಮಾನ.

ಲೋಕಪ್ರಸಿದ್ಧವಾದ ಸಾಲಂಮಿಸ್ರಿ ಮುರಬ್ಬಾ.

ನಮ್ಮ ಟ್ರೇಡ್ ಮಾರ್ಕನ್ನು ನೋಡಿ ಈ ಔಷಧ ತೆಗೆದುಕೊಳ್ಳಿರಿ.

ಇದರ ಸೇವನೆಯಿಂದ ವೀರ್ಯವು ನೀರಿನಂತೆ ಇದ್ದರೂ, ಜ್ಞಾನೇಂದ್ರಿಯ ಶಾದರೂ, ಸ್ತ್ರೀ ಸಂಪರ್ಕ ಮೊದಲೇ ಸ್ಖಲನವಾದರೂ, ಮೂತ್ರದೊಂದಿಗೆ ಹೋಗುತ್ತಿದ್ದರೂ ದೋಷರಹಿತವಾಗಿ ಶರೀರಕ್ಕೆ ಆರೋಗ್ಯವನ್ನು ಧಾರ್ಢ್ಯತೆ ಯನ್ನೂ ಆಯುಸ್ಸು, ಬಲ, ತೇಜಸ್ಸು ಉಂಟು ಮಾಡುವದು ಅಜೀರ್ಣ ಮಲಬದ್ಧತೆ, ಪಿತ್ತ ಬಲಹೀನತೆ, ಕೈಕಾಲು ಸೊಂಟ ನೋವುಗಳಿಗೆ ಇದು ದಿವ್ಯ ಔಷಧ. ಈ ಸಾಲಂಮಿಸ್ರಿ ಎಂಬುವದು ಕಾಬೂಲ್ ಕಂದಹಾರ ಪ್ರಾಂತ್ಯದಲ್ಲಿ ಬೆಳೆಯುತ್ತದೆ.

ಈ ಔಷಧದಿಂದ ಗುಣಹೊಂದಿರುವ ಅನೇಕ ಮಹಾಶಯರು ತಾವಾಗಿಯೇ ಅನೇಕ ದೇಶಗಳಾದಲೂ ಆಫ್ರಿಕ, ಒಮನ್, ಪಿನಾಂಗ್ ಸಿಂಗಪೂರ್, ಸಿಲೋನ್, ಪಂಜಾಬು ಕಲ್ಕತ್ತ, ಮದ್ರಾಸು ಮತ್ತು ಇಂಡಿಯಾದೇಶದಲ್ಲಿ ಎಲ್ಲಾ ಸ್ಥಳಗಳಿಂದಲೂ ನಮಗೆ ಯೋಗ್ಯತಾ ಪತ್ರಗಳನ್ನು ಕಳುಹಿಸಿರುವರು.. ಇವುಗಳ ನಕಲನ್ನು ಯಾರಾದರೂ ತರಿಸಿ ನೋಡಬಹುದು.. ಇವುಗಳು ಸುಳ್ಳು ಎಂದು ಸಿದ್ಧಾಂತಪಡಿಸುವವರಿಗೆ ಮೇಲೆ ಕಂಡ ಬಹುಮಾನವು ಕೊಡಲ್ಪಡುತ್ತೆ. ನಾವು ಹಾಗೆ ಕೊಡದೇ ನಿರಾಕರಿಸಿದಲ್ಲಿ ಕೋರ್ಟಿನ ಮೂಲಕ ಅದನ್ನು ಪಡೆಯಬಹುದು. ೧ ಡಬ್ಬವನ್ನು ೧೫ ದಿನ ಸೇವಿಸಿದಲ್ಲಿ ಗುಣವು ಖಂಡಿತವಾಗಿ ತೋರಬಹುದು ೩ಯಾ ೪ ಡಬ್ಬಿಗಳು ಎಷ್ಟು ಅಶಕ್ತರಿಗೂ ಪೂರ್ಣವಾಗಿ ಗುಣವನ್ನುಂಟು ಮಾಡುವವು. ಹೆಸರು ವಿಳಾಸಗಳನ್ನು ವಿವರವಾಗಿ ಬರೆಯಬೇಕು. ಒಂದಾವರ್ತಿ ಇದ ಉಪಯೋಗಿಸಿ ನೋಡಿದಲ್ಲಿ ಖಾತ್ರಿ ಉಂಟಾಗುತ್ತೆ.

ಕ್ರಯ ಡಬ್ಬಿ ಗಳಿಗೆ ರೂ. ೨—೦—೦ ಛಾಂಗಿ ಚಾರ್ಜು ೧ರಿಂದ ೩ ಡಬ್ಬಿಗಳಿಗೆ ೦—೮—೦ ಆಣೆ ಏಜಂಟರುಗಳು ಎಲ್ಲಾ ಸ್ಥಳಗಳಲ್ಲಿಯೂ ಅವಶ್ಯಕವಾಗಿರುತ್ತೆ ರೂಲ್ಸು ತರಿಸಿಕೊಳ್ಳಬಹುದು ಆರ್ಡರು ಕೊಡುವಾಗ ಕಾಲದಲ್ಲಿ ಈ ಪತ್ರಿಕೆಯ ಹೆಸರನ್ನು ಬರೆಯಬೇಕು

ಟೆಲಿಗ್ರಾಫ್ ಅಡ್ರೆಸ್, ಮಿಸ್ರಿ ಬೆಂಗಳೂರು ಸಿಟಿ, } ಡಿ. ಮನ್ನಾಲಾಲ್, ದಿಲ್ಲಿ ನೇಟಿವ್ ಕೈದ್ಯರು, ಸಾಲಂಮಿಸ್ರಿ ಮುರಬ್ಬ ಡಿಪೋ, ಬೆಂಗಳೂರು ಸಿಟಿ,

12—1

ಬೇಕಾಗಿವೆ.

ಬೀಟಿಮರದ ಕೊಲೆಗಳು ಬೇಕಾಗಿವೆ.

ಒಳ್ಳೇ ಬೆಲೆ ಕೊಡಲಾಗುವುದು. ಹೆಚ್ಚಿನ ಸಂಗತಿಗೆ ದಯಮಾಡಿ ಈ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳುವುದು.

WANTED

Rose wood logs (Beeti)

Good price offered.

For further particulars please apply to:—

R FRAMJEE.

12.2 Mercara.

ಮಾರಾಟಕ್ಕೆ ಸಿದ್ಧವಾಗಿದೆ.

ಮೈಸೂರು ಸಿಟಿಯಲ್ಲಿ ಬಂಗ್ಲೆ ನಿವೇಶನಗಳು.

ರಾಜಧಾನಿಯ ವಾಣೀವಿಲಾಸ ಯಕ್ಸ್ ಟೆನ್ಷನ್ನಿನ 1ನೇ ಬ್ಲಾಕಿನಲ್ಲಿ 3 ಮತ್ತು 4ನೇ ನಿವೇಶನಗಳು, ಅಳತೆ 285 X 160ಅಡಿಗಳು, ಮೈಸೂರು ಕನ್ನಂಬಾಡಿ ರೋಡಿನಲ್ಲಿ ಪಕ್ಕ ಇಟ್ಟಿಗೆ ಕಂಪೌಂಡು ಎರಡು ಗೇಟುಬಾಗಲುಗಳು, ನೀರಿನ ನಲ್ಲಿ ಕನೆಕ್ಷನು ಇರುತ್ತೆ. ಗೋಡೆ ಮತ್ತು ಗೇಟುಬಾಗಲುಗಳು ಸೇರಿ ಖರೀದಿ 7147—6—0 ರೂ ಮೈಸೂರು ಸಿಟಿ, ಇಂಪ್ರೂವ್ಮೆಂಟು ಟ್ರಸ್ಟಿನವರ ಶರತ್ತಿಗೆ ಅನುಸರಿಸಿ ಮಾರಾಟ ಮಾಡಲ್ಪಡುತ್ತೆ ಅಪೇಕ್ಷೆಯುಳ್ಳವರು ಇದರಡಿ ಸಮೂದಿಸಿರುವವರಿಗೆ ಬರೆದುಕೊಳ್ಳಬಹುದು.

ಸುಪರಿಂಟೆಂಡೆಂಟರು,
4—1 ಲೇಬರ್ ಡಿಪಾರ್ಟ್ಮೆಂಟು,
ಮೈಸೂರು

ಪ್ರಕಟಣೆ.

ಪೊನ್ನಂಪೇಟೆ ನಾಡ ಅರ್ವತೊಕ್ಲು ಗ್ರಾಮದಲ್ಲಿ ಬ್ರಾಹ್ಮಣರ ಗಂಗಾಧರಯ್ಯ ನಾದ ನನ್ನ ಹೆಸರಿನಲ್ಲಿ ಜಮಾಬಂದಿ ದಾಖಲಾಗಿ ನನ್ನ ಸ್ವಾಧೀನದಲ್ಲಿ ಇರುವ ಸುಮಾರು 4000 ರೂಪಾಯಿ ಕ್ರಯಬಾಳುವ 150 ಬಟ್ಟಿ ಗದ್ದೆ ಮತ್ತು ಇದಕ್ಕೆ ಸೇರಿದ ಬಾಣೆ, ಹಿತ್ಲು, ಇದರಲ್ಲಿ ಇರುವ ಒಂದು ಕಾಂಕ್ರೀಟು ಹಾಕಿ ಹುಲ್ಲು ಹೊದಿಸಿರುವ ಮನೆ, ಕೊಟ್ಟಿಗೆ ಇದಕ್ಕೆ ಸೇರಿದ ಅಡಿಕೆ, ತೆಂಗು, ಬಾಳೆ, ಕಾಫಿ ವಗೈರೆ ಇರುವ ಹಿತ್ಲು ಸಹ ಮಾರಾಟಕ್ಕೆ ಸಿದ್ಧವಾಗಿದೆ. ಕಾಯಿಸುವವರು ಈ ಕೆಳಗಿನ ವಿಳಾಸಕ್ಕೆ ಬರೆದು ಹೆಚ್ಚಿನ ವಿಷಯ ತಿಳಿದುಕೊಳ್ಳಬಹುದು.

೭—೭. ಬ್ರಾ. ಗಂಗಾಧರಯ್ಯ,
ಅರ್ವತೊಕ್ಲು.
ಗೋಣಿಕೊಪ್ಪಲು.

ಸ್ವಯಂಸೇವಕರು ಬೇಕಾಗಿದ್ದಾರೆ.

ಇದೇ ಏಪ್ರಿಲ್ ತಾ. 17, 18, 19ರಲ್ಲಿ ನಾಪೋಕ್ಲಿನಲ್ಲಿ ಜರುಗುವ ಜಮೀನ್ದಾರಸಂಘದ ಸ್ವಾಗತದ ಕೆಲಸಕ್ಕೆ ಸ್ವಯಂಸೇವಕರು (ವಾಲಂಟೀಯರುಗಳು) ಬೇಕಾಗಿದ್ದಾರೆ. ಕೊಡಗು ದೇಶದ ಎಲ್ಲಾ ಕಡೆಯಿಂದಲೂ ಸ್ವಯಂಸೇವಕರ ಸೇವೆಯನ್ನು ನಿರೀಕ್ಷಿಸುತ್ತಲೇ ಇದ್ದೇವೆ. ನಾಲ್ಕುನಾಡು, ಕಡಿಯತ್ತುನಾಡು, ಕುಯ್ಯಂಗೇರಿನಾಡು, ಬೇಂಗುನಾಡು, ತಾವುನಾಡು ಮತ್ತು ಕೊಂಪಾಜೆನಾಡಿನಿಂದ ಕಡಿಮೆ ಪಕ್ಷ ಒಂದು ನೂರು ಜನರೂ, ದೇಶದ ಇತರ ಭಾಗಗಳಿಂದ 50 ಜನರೂ ಒಟ್ಟು 150 ಜನರು ಬೇಕಾಗಿದ್ದಾರೆ. ದಯಮಾಡಿ ಸ್ವಯಂಸೇವಕರಾಗಿ ಕೆಲಸಮಾಡಲು ತಯಾರಾಗಿರುವವರು ಈ ಕೆಳಗೆ ರುಜು ಮಾಡಿದವರಿಗೆ ಬರೆಯೋಣವುದಲ್ಲದೆ ಬರುವ ಏಪ್ರಿಲ್ 5ನೇ ಶನಿವಾರ ಮಧ್ಯಾಹ್ನ ನಾಪೋಕ್ಲಿನಲ್ಲಿ ಜರುಗುವ ಮೀಟಿಂಗಿಗೆ ಮುಖ್ಯವಾಗಿ ಹಾಜರಾಗಿ ಹೆಚ್ಚಿನ ವಿವರ ತಿಳಿಕೊಳ್ಳಬೇಕಾಗಿ ಕೋರಿಕೆ.

ಕೆ. ಪಿ. ಚಿನ್ನಪ್ಪ.
3—3 ಸ್ವಾಗತ ಕಮಿಟಿಯ ಜನರಲ್ ಸೆಕ್ರೆಟರಿ.
ನಾಪೋಕ್ಲು.

ಅಂಪಾಯರ್ ಆಫ್ ಇಂಡಿಯಾ ಲೈಫ್ ಯಶುರೆನ್ಸ್ ಕಂಪೆನಿ ಲಿಮಿಟೆಡ್.

(ಸ್ಥಾಪಿತ 1897)

ಮೂಲಧನ ರೂ. 2,50,00,000 ಕ್ಕೆ ಮಿಕ್ಕಿದ

ವಿಮೆ ದರಗಳು ಅತ್ಯಂತ ಕಡಿಮೆ. ಉದಾರತ್ವದ ಲಾಭ ಮತ್ತು ಪೂರ್ಣ ಭದ್ರತೆ.

ಉದಾಹರಣೆ.—ಯಾವನೊಬ್ಬ ಸಿವಿಲಿಯನ್ನನು ಇಪ್ಪತ್ತನೆ ವಯಸ್ಸಿನಲ್ಲಿ ತನ್ನ ಮರಣಾನಂತರ ಲಾಭಸಹಿತ ದೊರಕುವ 1000ರೂಪಾಯಿಯ ಪಾಲಿಸಿಯನ್ನು ಇಳ್ಳಿದ ಸಾಲಿಯನ ರೂ 48—10—0 ವಿಮೆಯ ಮೇಲೆ 20ವರುಷ ಗಳಾಂತ್ಯದಲ್ಲಿ ದೊರಕುವ ರೂ. 100ರ ಪಾಲಿಸಿಯನ್ನು ಪಡೆಯಬಹುದು.. ಪಾಲಿಸಿಗಳು ರೂ. 500ರಿಂದ ಮೇಲೆ, ವಿಮೆ ವನ್ನು 55ನೇ ವಯಸ್ಸಿನ ವರೆಗೆ ವಿಮೆಮಾಡಲ್ಪಡುವದು.

ಸೂಚನೆ ಪತ್ರವು ಮತ್ತು ದಾಖಲಾತಿ ಫಾರಂಗಳು ಈ ಕೆಳಗಿನ ವಿಳಾಸದಲ್ಲಿ ದೊರೆಯುತ್ತವೆ:—

ಸಿ. ಕೆ. ಚಂಗಪ್ಪ, ಬ್ರಾಂಚ್ ಸೆಕ್ರೆಟರಿ,
ಸ್ಪೆಷಲ್ ಏಜಂಟ್, 152 3 ಕಮರ್ಷಿಯಲ್ ಸ್ಟ್ರೀಟ್,
ಬಿವರ್ ಸ್ಲೈ ಎಸ್ಟೇಟ್, ಅಥವಾ ಬೆಂಗಳೂರು,
ಸಿದ್ದಾಪುರ, ದಕ್ಷಿಣಕೊಡಗು.

ಒಂದೇ ನೂರು ರೂಪಾಯಿಗಳಲ್ಲಿ!
ಟಿಕ್=ಟಾಕ್ (ರಿಜಿಸ್ಟರ್ಡ್).



ಎಂಬ ಗಡಿಯಾರವನ್ನು ನಿಮಗ ಕೊಡುತ್ತೇವೆ. ಇದು ಕರಾರು ಗಂಟೆಯನ್ನು ತೋರಿಸುವದು. ಇದಕ್ಕೆ ಬೀಗ ಕೊಡಬೇಕಾಗಿಲ್ಲ. ಇದರಲ್ಲಿ ಕಾಣುತ್ತಿರುವ ಗುಂಡನ್ನು ಮೇಲಕ್ಕೇರಿದರೆ ಸಾಕು ತನ್ನಷ್ಟಕ್ಕೆ ತಾನೇ ಸರಿಯಾದ ಕಾಲವನ್ನು ತೋರಿಸುವದು ಇವತ್ತೇ ತರಿಸಿಕೊಳ್ಳಿರಿ.

ನಮ್ಮ ಸ್ಪೆಷಲ್ "ಕ್ರಿಸ್ಮಸ್" ಹಬ್ಬದ ಮಾರಾಟ

ಪ್ರಾರಂಭ ತಾ 1ನೇ ಜನವರಿ 1926
ಕಡೆ ತಾ 5ನೇ ಮಾರ್ಚ 1926.
"ಕೊಡಗು" ಚಂದಾದಾರರಿಗೆ ಮಾತ್ರ



ಸರ್ವೋತ್ತಮ, ಬಹಳ ಅಗ್ಗ, ಅಚ್ಚು ಕಟ್ಟಾದ ಕೈ ಗಡಿಯಾರುಗಳು

ಪುಗಸಟ್ಟೆ ಪ್ರತಿ ಒಂದು ವಾಚಿನ ಕೂಡ ಈಗಲೇ ಕೊಡುವ ಒಂದು ಫೌಂಟನ್ ಪೆನ್ ಮತ್ತು ಬರೆಯುವುದು ಮೇಲಾದ ರಿಪೇರಿ ಪಟ್ಟಿ ಬಿಟ್ಟಿ ಕಳುಹಿಸುವೆವು. ಬೇಕು

ಪೀಟರ ವಾಚ ಕೆಂಪನಿ,
ಪೋಸ್ಟ ಬಾಕ್ಸ ನಂಬರ 27
ಮದ್ರಾಸ್.

ಅತಿಲಾಭ! ಉಚಿತ!



ಕೇವಲ ಉಚಿತ! ಕೇವಲ ಉಚಿತ!!

"ತಾರಾ" ಲೀವರ ರಿಜಿಸ್ಟರ್ಡ ಪೋಕೆಟ ವಾಚು ೧೮ ಕರೆಟ್ ರೋಲ್ಡು ಗೋಲ್ಡಿನದು. ಮುಖಬಿಲ್ಲೆಯು ಮೇಲೆ ೫ ವರ್ಷದ ಗ್ಯಾರಂಟಿ ಇರುವದರಿಂದ ಗಡಿಯಾರ ಕರ್ಕರು ಅಚ್ಚು ಜೋಡಿಸಿದವರು. ಈ ಗಡಿಯಾರವನ್ನು ಕೊಂಡುಕೊಳ್ಳುವವರಿಗೆ ನಾವು ನಮ್ಮ "A" ರಿಜಿಸ್ಟರ [illegible] ಉಚಿತವಾಗಿ ಕೊಡುತ್ತೇವೆ. ಇನ್ನೊಂದು ಅಪೂರ್ವ ಅವಕಾಶ ಕೆಲವೇ ಗಡಿಯಾರಗಳಿವೆ. ಒಮ್ಮೆ ಕೊಂಡು ನೋಡಿರಿ! ಉಚಿತವಾಗಿ ಕೊಡುವ ಹಾಗು "ತಾರಾ" ಲೀವರ ರಿಜಿಸ್ಟರ್ಡ ೧೮ ಕರೆಟ್ ರೋಲ್ಡ ಗೋಲ್ಡಿನ ಪೋಕೆಟ್ ವಾಚ್ ಗಡಿಯಾರಗಳಿಗೆ ಕೂಡಿ ಒಟ್ಟೇ ರೂಪಾಯಿ ೫.

CAPTAIN WATCH CO., P. B. 265, MADRAS

12–10

ಕಿರ್ಲೋಸ್ಕರ ಗಾಯನಗಳು.

ಈ ಕೆಳಗಿನ ಕಬ್ಬಿನ ಗಾಣಗಳು ನಮ್ಮ ಕಾರ್ಖಾನೆಯಲ್ಲಿ ತಯಾರಾಗುತ್ತವೆ

೧ ಕಿರ್ಲೋಸ್ಕರ ನಂ. ೫
೨ 'ಕಿಸಾನ'
೩ "ಕಮಲ ಚರಕ"

ಇವುಗಳ ಸವಿಸ್ತಾರ ಸಂಗತಿ ಬಗ್ಗೆ ಹಾಗೂ ಬೆಲೆಯ ಬಗ್ಗೆ ಕೂಡಲೇ ತಿಳಿದುಕೊಳ್ಳಿರಿ.

ಕರ್ನಾಟಕ ತರುಣರ ಉನ್ನತಿಗೋಸ್ಕರ
ಕಿರ್ಲೋಸ್ಕರ ವಾರ್ತೆ,
ಎಂಬ ತಿಳಿಗನ್ನಡ ಮಾಸ ಪತ್ರಿಕೆಯನ್ನು ಪ್ರಕಟಿಸುತ್ತೇವೆ. ವಾ. ಚ. ೧| ರೂ. ಮಾದರಿ ಸಂಚಿಕೆ ಪುಕ್ಕಟೆ.

ಕಿರ್ಲೋಸ್ಕರ ಬಂಧು, ಲಿಮಿಟೆಡ್.
ಕಿರ್ಲೋಸ್ಕರವಾಡಿ,
16—7 ಜಿ. ಸಾತಾರ್.

ಲೋಕಪ್ರಸಿದ್ಧವಾದ! ಅನುಭವಸಿದ್ಧವಾದ!

ಮೂರುದಿವಸಗಳಲ್ಲಿ ಗುಣಸಿಕ್ಕದಿದ್ದರೆ ಔಷಧಿಯಕ್ರಯ ವಾಪಾಸು ಜೀರ್ಣಶಕ್ತಿ, ರಕ್ತವೃದ್ಧಿ ಧಾತುಪುಷ್ಟಿ, ಮನೋಲ್ಲಾಸ, ಪರಮಾನಂದ ಮೊದಲಾದ ಸುಖ ಜೀವನಕ್ಕೆ ಬೇಕಾದ ಆರೋಗ್ಯದಾಯಿನಿ

ಟ್ರೇಡ್‍ಮಾರ್ಕ]] ಅಗಸ್ತ್ಯ [ನೋಡಿ ಕೇಳ್ಕೊಳ್ಳಿರಿ.

ಮನ್ಮಥ ಚಿಂತಾಮಣಿ ಲೇಹ

ರಿಜಿಸ್ಟರ್ ಆದದ್ದು.

ಆಬಾಲವೃದ್ಧ ಸ್ತ್ರೀ-ಪುರುಷರ ಅನೇಕ ರೋಗಗಳ ಮೇಲೆ ಗುಣ ಕಾರಿಯಾದ್ದು. ಮೇಹ ವಿಕಾರವಿದ್ದವರಿಗೂ, ನಿದ್ರೆ ಇಲ್ಲದವರಿಗೂ, ಸ್ವಪ್ನೇಂದ್ರಿಯವಾಗುವ ಬಾಲಕರಿಗೂ, ಜ್ಞಾನಿ ಸುಜ್ಞಾನಿಗಳಿಗೂ ಉಪಯೋಗವುಳ್ಳ ಬಹುಪರಮಾನಂದ ಔಷಧಿ. 1ಸೇರು 48ದಿವಸ ಸೇವಿಸಬಹುದು ನಂ (1) 1ಸೇರು ಡಬ್ಬಿ 1ಕ್ಕೆ ರುಪಾಯಿ 3—0—0. ½ಸೇರು ಡಬ್ಬಿ 1ಕ್ಕೆ ರುಪಾಯಿ 1—9—0, ನಂ. (2) 1ಸೇರು ಡಬ್ಬಿ 1ಕ್ಕೆ ರುಪಾಯಿ 2—0—0, ½ ಸೇರು ಡಬ್ಬಿ 1ಕ್ಕೆ 1—1—0 ವಿ. ಪಿ. ಖರ್ಚು ಪ್ರತ್ಯೇಕ. ವಿಶೇಷ ಮಾಹಿತಿಗೆ ಬರಕೊಳ್ಳಿರಿ.

ವಿಳಾಸ—ದೇವಣ್ಣ ನಾರಾಯಣಸೇಟ್,
ಗೋಳಿಕಟ್ಟೆ,
ಮಂಗಳೂರು,

52—31 ದ ಕ.

ಸತ್ಯಮೇವ ಜಯತೇ.
(ಗುಣವಾಗದಿದ್ದರೆ ಹಣ ಹಿಂತಿರುಗಿಸಲಾಗುವುದು)

ಧಾತುಪೌಷ್ಟಿಕ ಕಾಮೋತ್ತೇಜಕ, ಇಂದ್ರಿಯಸ್ತಂಭಕವಾದ

ಮದನೋದ್ಭವ ಗುಳಿಗೆ.

ಜನನೇಂದ್ರಿಯದ ಶಿಥಿಲತೆ ನಿರ್ಬಲತೆ ನಪುಂಸಕತ್ವ ಸ್ತ್ರೀ [illegible] ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣವಾಗುತ್ತವೆ. ಧಾತು ಪೌಷ್ಟಿಕ, ವೀರ್ಯವರ್ಧಕ [illegible] ಕಾಮೋತ್ತೇಜಕ, ಮನೋಲ್ಲಾಸಕ ಇಂದ್ರಿಯಸ್ತಂಭಕ, [illegible] ಗುಪ್ತಪ್ರದೇಶದ ಮೇಲೆ [illegible] ಬಕ್ಕೆಗಳು, ಮುಣ್ಣುಗಳು [illegible] ಗಳು, ಕಟಿಬಿಟ್ಟಿ ವಾತರೋಗವು ಮುಂತಾದವು [illegible] ಗುಣವಾಗಿ ಶರೀರಕ್ಕೆ ನಿರೋಗತ್ವವೂ [illegible] ಶಕ್ತಿ ಸಂಪೂರ್ಣ ಒಕ್ಕಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗುವವು. [illegible] ೬೦ ಗುಳಿಗೆಗಳ ೧ ಡಬ್ಬಿಯನ್ನು ಸೇವಿಸಿದಾಗ್ಗೆ ನಪುಂಸಕತ್ವವು [illegible] ಶೈಲನನ್ನು ಉಪಯೋಗಿಸಿದರ ಉತ್ತಮ. [illegible] ಡಬ್ಬಿಗೆ ರೂ. ೨—೧೨—೦.

ಪ್ರಮೇಹಚಿಂತಾಮಣಿ—ಇದರ ಸೇವನೆಯಿಂದ [illegible] ಪ್ರಮೇಹ [illegible] ಗುಣವಾಗುವವು. [illegible] ಡಬ್ಬಿಗೆ ರೂ ೧—೮—೦. ವಿ ಪಿ ಚಾರ್ಜ ಆನುವಾ ಸಪ್ರತ್ಯೇಕ [illegible]

ವಿಶೇಷ [illegible] ಕೆಟಲಾಗನ್ನು [illegible]

ವಿಳಾಸ:—
ವೈದ್ಯ ಜಿ. ಎಲ್ ಜೋಶಿ ಮತು ಕಂಪೆನಿ.
[illegible] ನಂ 6. ಪೋಸ್ಟು ಬಸವನ [illegible], ಉತ್ತರ ಕಾನಡಾ.

ಜ್ವರಗಳ ಮೇಲೆ ಅಮೂಲ್ಯ ಔಷಧವು.



(ಶಕ್ತಿವರ್ಧಕ ಸರಬತ್ತು)

ಥಂಡೀಜ್ವರ, ಮಲೇರಿಯ ಮೊದಲಾದ ಜ್ವರಗಳು ಬಿಟ್ಟ ನಂತರ ಬರುವ ಅಶಕ್ತತೆ, ಸಣ್ಣಜ್ವರವು ಬರುತ್ತಿರುವುದು ಮೊದಲಾದವುಗಳ ಮೇಲೆ ಇದು ಒಂದು ಅಮೂಲ್ಯ ಔಷಧವಾಗಿರುತ್ತದೆ.

[illegible]

[illegible], ಮುಂಬಾಯಿ.

ಬೇಕಾಗಿದೆ

ನಂಬಿ ಗುತ್ತಿಗೆಯನ್ನು ನಮ್ಮ ಭೂಮಿಯನ್ನು [illegible] ಬೇಕಾಗಿದ್ದಾರೆ. [illegible] ಈ ಕೆಳಗೆ [illegible] ಬರಕೊಳ್ಳುವುದು.

ಯು ಪಿ ಅಪ್ಪಯ್ಯ.
ಕಿ.ಸಿ ರಿಜೆಟ್ಟ ಎಸ್ಟೇಟು,
4-3 ಸೋಮವಾರಪೇಟೆ.

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್, ಕೊ ಆಪರೇಟಿವ್ ಸೊಸೈಟೀಸ್ ಆಕ್ಟಿನ ಪ್ರಕಾರ ರಿಜಿಸ್ಟರಾಗಿದೆ.

		ರೂ.
ಶೇರ್ ಬಂಡವಾಳ	—	50,000
ವಸೂಲಾದ ಶೇರ್ ಮೊಬಲಗು	—	3690
ಜಮೂಬಂದ ಠೇವಣಾತಿ	—	90,000

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹುಟ್ಟಾಗಿ ಸಾಲಕೊಡತಕ್ಕದ್ದು.

ಒಂದು ವರ್ಷ ವಾಯಿದೆ ಅಥವ ಹೆಚ್ಚಿನ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ ರೂ. 6-4-0ರ ದರದಲ್ಲಿ ಬಡ್ಡಿ ದೊರೆಯುತ್ತೆ. ಕಡಿಮೆ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ ೫ರ ಬಡ್ಡಿ ದೊರೆಯುತ್ತೆ.

ವರ್ಷಕ್ಕೊಂದಾವರ್ತಿ ಕೊ ಆಪರೇಟಿವ್ ರಿಜಿಸ್ಟ್ರಾರವರು ಲೆಕ್ಕ ಪರಿಶೋಧಿಸಿ ನಡಿಸುತ್ತಾರೆ.

ಪ್ರಸಿಡೆಂಟರು,	ಟ್ರೆಜರರ.
ಕೊಡಂದೆರ ಕುಟ್ಟಯ್ಯನವರು,	ಎಮ್. ಭುಜಂಗರಾಯರು
ರಾಯ್ ಬಹದ್ದೂರ್.	ಬಿ.ಎ, ಬಿ.ಎಲ್.

ಸೆಕ್ರೆಟರಿ.
ಸಿ. ಯನ್. ವೆಂಕಟಪ್ಪಯ್ಯನವರು, ಬಿ.ಎ., ಬಿ.ಎಲ್.
ತಾರೀಖು 29—8—1925.

ARMS & AMMUNITION MART,
Mahomedally Noorbhoy



321 Abdul Rehman Street, near Crawford Market, BOMBAY 3
Telegraphic Address—"SHOOTER" Bombay.

[52—31] Please write for Reduced nett prices list for 1926

Printed & published by Kodanda Appayya, P B Chairman, Board of Directors, at " Kodagu " Press, Mercara for " Kodagu " Ltd.

KODAGI [illegible] MERCARA

ಕೊಡಗು.

[illegible]]

ಸಂಪಾದಕ—ಪಂದ್ಯಂಡ ಐ. ಬೆಳ್ಯಪ್ಪ.

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವದು.

ಸಂಪುಟ ೫] ಕೊಡಗು, [illegible] ಇಸವಿ ಏಪ್ರಿಲ್ ತಾರೀಕು [illegible] ನೇ ಶುಕ್ರವಾರ [ಸಂಚಿಕೆ ೧೩

PERFUMERY & PATENT MEDICINCES TC.,

Aletris cordial	Rs 3—4	[illegible]	[illegible]	Lacryl tooth powder	,, 0—11
Antiphlogistine	,, 1—8	[illegible]	Rs 1—1, 1—12 & [illegible]	Koynos tooth paste	,, 0—11
Bathwalas ague mixture	,, 1—3	[illegible]	,, 1—0	Euthymol ,,	,, 0—11
Burgoynes Eastons' Syrup	,, 1—6	[illegible]	,, 4—8	Pepsodent ,,	,, 0—11
Celerina	,, [illegible]	[illegible]	,, 1—12	Cuticura soap per box	Rs. 2—6
Cuticura ointment	,, 0—14	[illegible]	,, [illegible]	[illegible] ,,	,, 1—4
Dejongh's cod liver oil	,, 3—4	[illegible]	Rs [illegible]	Goonerams bath soap for 6	,, [illegible]—8
Deschiens' Syrup	,, 2—12	Woodwards gripe water	1—2	Palm olive soap per cake	,, 0—6
Enos fruit salt	,, 2—8	Zambuk	Rs 0—15 & 2—2	Pear's glycerine soap per box	,, 1—8
Esnoleic pills	,, 2—10	Calox tooth powder	0—15	Vinolia baby ,,	,, 1—6
Genasprin	,, 0—15	Calverts carbolic powder	0—7	,, Premier ,,	,, 1—4
Sulphur bitters	,, 3—12	Colgates' dental cream	0—11	Wright's coal tar ,,	,, 1—2
				Turkish bath soap 12 cakes	,, 2—8

Reduction in prices of Stationary department made permanent
GET IT AT SPENCERS!
52—23 **THE SHOPPING CENTRE OF COORG.**

Spencer & Co. Ltd,
MERCARA, & POLLIBETTA.

ಸ್ಥಾಪಿತವಾದದ್ದು 1874. ಮೂಲಧನ 1 ಕೋಟಿ ರೂಪಾಯಿಗಳು

ಓರಿಯಂಟಲ್ ಗವರ್ನ್ಮೆಂಟ್ ಸೆಕ್ಯೂರಿಟಿ ಲೈಫ್ ಅಷ್ಯೂರೆನ್ಸ್ ಕಂಪೆನಿ ಲಿಮಿಟೆಡ್, ಹೆಡ್ ಆಫೀಸು— ಬೊಂಬಾಯಿ.

1922—1924 ಈ ಮೂರು ವರ್ಷಗಳಲ್ಲಿ ಕಂಪೆನಿಯಲ್ಲಿ ನಡೆದ ಕೆಲಸದ ಫಲಿತಾಂಶಗಳು —

ಲಾಭ— ರೂ. 51,00,000 (ಐವತ್ತೊಂದು ಲಕ್ಷ ರೂಪಾಯಿಗಳು) ಈ ಪೈಕಿ 45,74,80 [illegible] ಮೆ ಮಾಡಿರುವವರ ವಿಮೆ ಹಣಕ್ಕೆ ಹೆಚ್ಚು ಬೋನಸ್ [illegible]

ಜೀವಮಾನಾವಧಿಯ ವಿಮೆದಾರರಿಗೆ ರೂ. 1000 ವಿಮೆ ಹಣಕ್ಕೆ

ಈ ಮೂರು ವರ್ಷಗಳಿಗೆ ರೂ. 67½.

ನಿಶ್ಚಿತಕಾಲದ ವಿಮೆದಾರರಿಗೆ [illegible] ವಿಮೆ ಹಣಕ್ಕೆ

ಈ ಮೂರು ವರ್ಷಗಳಿಗೆ ರೂ. 54.

ಈ ಕಂಪೆನಿಯಲ್ಲಿ [illegible] ವ್ಯಕ್ತವಾಗುತ್ತದೆ.

1923ರಲ್ಲಿ—ರೂ 1,74,00,000
1924 ,, 2,37,00,000
1925 ,, 2,90,00,000

ಇನ್ನೂ ದಿನದಿನಕ್ಕೂ ಅಭಿವೃದ್ಧಿಯಾಗುತ್ತಲೇ ಇದೆ. [illegible] ಇದೇ ಸುಸಮಯ.

ಬೇಕಾದ ವಿಷಯಗಳನ್ನು ಈ ಕೆಳಗಿನ ವಿಳಾಸಕ್ಕೆ ಬರೆದು ತಿಳಿದುಕೊಳ್ಳಬಹುದು.

ಓರಿಯಂಟಲ್ ಬಿಲ್ಡಿಂಗ್ಸ್,
ಪೋಸ್ಟ್ ಬಾಕ್ಸ್ 56
ಬೆಂಗಳೂರು

ಪಿ. ವಿ. ಸುಬ್ರಹ್ಮಣ್ಯಂ,
ಬ್ರಾಂಚ್ ಸೆಕ್ರೆಟರಿ.

52—1.

ಆಂಧ್ರ ಆಯುರ್ವೇದಿಕ್ ಫಾರ್ಮಸಿ.

ಬ್ರಾಂಚ್, ಬೆಂಗಳೂರು ಸಿಟಿ

ಚ್ಯವನಪ್ರಾಶ ಲೇಹ.

ಇದು ಸರ್ವೋತ್ಕೃಷ್ಟವಾದ ಗಿಡಮೂಲಿಕೆಗಳಿಂದ [illegible] ಆಯುರ್ವೇದ ರಸಾಯನ [illegible]

[illegible]

ವಿಳಾಸ [illegible]

[illegible]

ಮುದ್ದಾದ ಪುಸ್ತಕ! ಮುದ್ದಾದ ಮುದ್ರಣ!!

ಶರೀರ ಸುಖ, ಸಂಪತ್ತು, [illegible] ಶರೀರ [illegible] (ಕಾಮಶಾಸ್ತ್ರ) [illegible]

ಮರ್ಮ ಶಾಸ್ತ್ರ-ಎಂಬ ಕಾಮಶಾಸ್ತ್ರ

ಈ ಪುಸ್ತಕವು ಮೊದಲು ಫ್ರೆಂಚ್, ಇಂಗ್ಲೀಷ್, [illegible] ಸಂಸ್ಕೃತ [illegible] ಬಹು ಗುಪ್ತವಾಗಿತ್ತು. [illegible] ಥಳಥಳಿಸುವ ಕಾಗದದಲ್ಲಿ ಮುದ್ರಿಸಿ ತಯಾರಿಸಿದ್ದೇವೆ. [illegible] ಸ್ತ್ರೀ ಪುರುಷರ [illegible] ಗುಹ್ಯವ್ಯಾಧಿಗಳು ಮತ್ತು ಅಂಥಾ ವ್ಯಾಧಿಗಳನ್ನು [illegible] ಚಿತ್ರಗಳ ಸಹಿತ ತುಂಬಿರುವವು. [illegible] ಓದಲಿಕ್ಕೆ ಯಾರಿಗೆ ತಾನೇ ಸಂತೋಷವಾಗಲಾರದು.

ಕ್ರಯ ಪುಸ್ತಕ ಒಂದಕ್ಕೆ ಒಂದೇ ಒಂದು ರೂಪಾಯಿ ರೂ. 1—0—0

T. Ramachandar Rao & Co.,
Post Box No. 232,
Madras.

ಟಿ. ರಾಮಚಂದ್ರರಾವ್ ಅಂಡ್ ಕೋ,
ಪೋಸ್ಟ್ ಬಾಕ್ಸ್ ನಂ. 232.
ಮದ್ರಾಸ್.

52—15

"ಕೊಡಗು"

೧೯೨೬ನೇ ಇಸವಿ ಏಪ್ರಿಲ್ ತಾ. ೯ ನೇ ಶುಕ್ರವಾರ

ಪ್ರಜೆಯರ ಹಕ್ಕು ಬಾಧ್ಯತೆಗಳು.

೩

ಈ ಲೇಖನದಲ್ಲಿ ನಾಮದಾರ ಶಾಸ್ತ್ರಿ... ಉಪನ್ಯಾಸವನ್ನು ಪೂರೈಸುತ್ತೇವೆ ಅವರ ಉಪನ್ಯಾಸದಲ್ಲಿ ... ಕಿರುವದೇನೆಂದರೆ—ಪ್ರಜೆಯ ಹಕ್ಕುಗಳೂ ಜವಾಬ್ದಾರಿ... ಟ್ಟು ಸಂಸ್ಥಾನಕ್ಕೆ ಸಂಬಂಧಪಟ್ಟವಾಗಿರಬೇಕೇ ಹೊರತು ... ಜೆಗೂ ಸಂಸ್ಥಾನಕ್ಕೂ ಮಧ್ಯ ಬೇರೆ ... ಇರಕೂಡದು ಯಾವದಾದರೂ ಸಂಸ್ಥಾನವು ... ಜೆಗೂ ಮಧ್ಯೆ ಯಾವದಾದರೊಂದು ... ಗೀಕರಿಸಿದರೆ ಅಂಥಾ ಸಂಸ್ಥಾನವು ... ತ್ತದೆ ಯಾವನಾದರೂಬ್ಬ ಪ್ರಜೆಯು ತನ್ನ ... ಸಂಸ್ಥಾನಕ್ಕೆ ಅಲ್ಲ, ಒಂದು ಜಾತಿಯ ಗುಂಪಿಗೆ ಮಾತ್ರ ... ಹೇಳಿದರೆ ಅಂಥಾ ಪ್ರಜೆಯಿಂದ ಸಂಸ್ಥಾನಕ್ಕೆ ... ಅಂಥವನಿಂದ ಸಂಸ್ಥಾನಕ್ಕೂ ... ತ್ತದೆ ಅಂಥವನು ... ವ ಮುಸ್ಲಿಮನಾದರೂ ಒಬ್ಬ ಪ್ರಜೆಗೆ ... ಇಂಥಾ ಜಾತಿಯಭಿಮಾನಿಗಳು ... ಎಂತ ಹೇಳಿದರೆ, ಅಂಥಾ ಸಂಸ್ಥಾನವು ತನ್ನನ್ನು ... ದುಕೊಳ್ಳುತ್ತದೆಂಬುದರಲ್ಲಿ ಸಂಶಯವಿಲ್ಲ ಅಂಥಾ ಸಂಸ್ಥಾನಕ್ಕೆ ಆ ಜಾತಿಯ ಜನರ ಸಹಾಯವೇನೂ ದೊರೆಯದಿಲ್ಲ ... ಜಾ ಸಮುದಾಯದ ಪ್ರತಿಯೊಬ್ಬ ವ್ಯಕ್ತಿಯ ಸಹಾಯವು ಇಲ್ಲದೆ ಪ್ರಜಾ ಸತ್ತಾತ್ಮಕ ಸರಕಾರವು ನಡೆಯದು ... ಸ್ಥಾನದ ಕಾರ್ಯಗಳಲ್ಲಿ ಇಂಥಾ ಜಾತಿ ಅಭಿಮಾನವು ... ಮುಖ್ಯತೆಗೆ ಒಂದರೆ ಅದರಿಂದ ಉಂಟಾಗುವ ಕೆಡಕುಗಳಿಗೆ ಉದಾಹರಣೆ ಕೊಟ್ಟು ವಿವರಿಸಿದರು ... ವಿಚಾರವಿಲ್ಲದೆ ಗಳಿಸಾಧ್ಯವಾದಂತೆ ... ಸು 1818ನೇ ಇಸವಿ ... ಬ ಠರಾವು ಲೆಜಿಸ್ಲೇಟಿವ್ ಎಸಂಬ್ಲಿಯಲ್ಲಿ ಚರ್ಚೆಯಾಗ ... ಈ ಕಾನೂನು ಜಾರಿ ... ತ್ರವೆಂತ ಹೇಳಿ ಜಾತಿ ಅಭಿಮಾನದ ... ಗಳು ಓಟು ಕೊಡಬಂತೆ ಮಾಡಿದ್ದರಿಂದ ಠರಾವು ... ದಿಂದ ತಿರಸ್ಕರಿಸಲ್ಪಟ್ಟಿತು ಪ್ರಜೆಯ ದೇಹ ಸ್ವಾತಂತ್ರ್ಯಕ್ಕೆ ವಿರೋಧವಾದ ಇಂಥಾ ಕಾನೂನಿಗೆ ವಿರೋಧವಾಗಿ ... ವಂತೆ ಜಾತಿ ಅಭಿಮಾನವು ... ನದಿಂದ ಪ್ರಜಾ ಸಮುದಾಯಕ್ಕೆ ಕೆಡುಕಲ್ಲದೆ ... ಬ್ಬ ವ್ಯಕ್ತಿಯ ಜಾತಿ ಯಾವದಾದರೂ, ಪಾರ್ಟಿ ಯಾವದಾದರೂ ಅಂಥವರ ದೇಹ ಸ್ವಾತಂತ್ರ್ಯಕ್ಕೆ ... ಬೇಡವೇ? ಒಬ್ಬ ಪ್ರಜೆಯು ಅತ್ಯಂತ ... ಬ್ಬ ಪ್ರಜೆಯ ದೇಹ ಸ್ವಾತಂತ್ರ್ಯಕ್ಕೆ ಹಾನಿಬಂದರೆ ಅಂಥವನಿಗೆ ಸಹಾಯಕೊಡಬೇಕೆಂಬದು ... ಪ್ರತಿಯೊಬ್ಬ ಪ್ರಜೆಯ ಕರ್ತವ್ಯವಾಗಿದೆ ಯಾಕೆಂದರೆ, ಒಬ್ಬನ ಸ್ವಾತಂತ್ರ್ಯಕ್ಕೆ ಭಂಗ ಬಂದರೆ ಎಲ್ಲರ ಸ್ವಾತಂತ್ರ್ಯಕ್ಕೂ ಭಂಗ ಬಂದಂತೆಯೇ ಆಯಿತು ಅದರಿಂದ ಒಟ್ಟು ಸಂಸ್ಥಾನಕ್ಕೂ ... ದರಲ್ಲಿ ಸಂಶಯವಿಲ್ಲ ಜಾತಿ ದೃಷ್ಟಿಯಿಂದ ನೋಡುವ ಸ್ವಭಾವವು ಪ್ರಜೆಗಳಲ್ಲಿ ವಾಡಿಕೆಯಾಗಿ ಬಿಟ್ಟರೆ ಯಾವ ಪಕ್ಷದೂ ವೃದ್ಧರೂ, ಸರಕಾರಿ ಉದ್ಯೋಗಿಗಳೂ ... ಇಲ್ಲದವರೂ, ಪ್ರತಿದಿವಸವೂ ಪ್ರತಿಯೊಂದು ಕಾರ್ಯದಲ್ಲೂ ಜಾತಿಯನ್ನೇ ಮುಂದೆ ಇಟ್ಟು ಕೆಲಸಮಾಡುವದಾದರೆ ಸಂಸ್ಥಾನವು ಮುಕ್ತಾಯವಾಯಿತೆಂದೇ ಹೇಳಬಹುದು. ಸಂಸ್ಥಾನವನ್ನು ... ಬೇರೆ ಯಾವ ಪ್ರಯತ್ನವು ... ಬೇಕಾಗಿಲ್ಲ ಜಾತಿಯ ದೃಷ್ಟಿಯಿಂದ ನೋಡುವವರಾಗಿ ಒಟ್ಟು ಸಮುದಾಯದ ದೃಷ್ಟಿಯಿಂದ ನೋಡುವದು ಸಾಧ್ಯವೇ ಇಲ್ಲ. ಕಲ್ಕತ್ತಾ ಯೂನಿವರ್ಸಿಟಿಯ ... ಕಾರಿಗಳೊಬ್ಬರು ಮುಸ್ಲಿಮರ ವಿದ್ಯಾಭ್ಯಾಸವನ್ನು ಕಲ್ಕತ್ತಾ ಯೂನಿವರ್ಸಿಟಿಯಿಂದ ವಿನಾಯಿತಿ ಪಡೆಯಬೇಕೆಂತ ಹೇಳಿದರಂತೆ ಅಂದರೆ ಮುಸಲ್ಮಾನರಿಗೆ ಪ್ರತ್ಯೇಕ ವಿದ್ಯಾಭ್ಯಾಸದ ಏರ್ಪಾಡು ಮಾಡಬೇಕೆಂತ ಹೇಳಿದಂತಾಯಿತು ಉಪನ್ಯಾಸಕರು ಈ ಅಭಿಪ್ರಾಯಕ್ಕೆ ವ್ಯಸನವನ್ನು ಸೂಚಿಸಿ ವಿದ್ಯಾಶಾಲೆಗಳಲ್ಲಿ ವಿದ್ಯಾರ್ಥಿಗಳೆಲ್ಲರೂ ಜಾತಿಮತ ಭೇದವಿಲ್ಲದೆ ಅನ್ಯೋನ್ಯವಾಗಿ ಇರದೆ ಜಾತಿಯ ಮೇಲೆ ಪ್ರತ್ಯೇಕ ಪ್ರತ್ಯೇಕವಾಗಿ ಇದ್ದರೆ ಪ್ರಜಾಸಮುದಾಯದಲ್ಲಿ ಅನ್ಯೋನ್ಯತೆ ಬೆಳೆಯುವದು ಹೇಗೆ ಎಂತ ಹೇಳಿ ಉಪನ್ಯಾಸಕರು ತುಂಬಾ ವ್ಯಸನಪಟ್ಟರು ... ಎಂತ ಹೋರಾಡುತ್ತಿದ್ದಲ್ಲಿ ತಾಯಿಯು ಮಗುವನ್ನು ಕತ್ತರಿಸಿ ... ಭಾಗಮಾಡಿ ... ಕೊಳ್ಳಿರೆಂತ ಹೇಳಿದಾಗ ಮಗುವಿನ ನಿಜವಾದ ತಾಯಿಯು ಕತ್ತರಿಸುವದು ಬೇಡ, ಇನ್ನೊಬ್ಬಳಿಗೆ ಕೊಟ್ಟು ... ಎಂತ ಹೇಳಿದಂತೆ ... ಶಾಸ್ತ್ರಿಗಳು ... ಭೇದ ತಂದು ... ಹೇಳಿ, ವಿದ್ಯಾಭ್ಯಾಸದಲ್ಲಿ ... ತಾಯಿಗೆ ಉಂಟಾದ ... ಜಾತಿ ಅಭಿಮಾನವನ್ನು ... ಜಾತಿಯ ... ಎಂತ ಶಾಸ್ತ್ರಿಗಳು ... ಜಾತಿ ಕಡಕುಗಳಿಗಾಗಿ ... ದ್ಧರಿ ಅಂದರೆ ... ಪ್ರಯತ್ನಿಸುವದರಲ್ಲಿ ... ಸಂಶಯವಿಲ್ಲ ... ಆದರೆ ...

... ಈ ಭಾಗ ... ಜಾತಿ ... ಹೇಳಿದರು ... ತಮ್ಮ ಜಾತಿಗ... ಆಗುವಂತೆ ... ಜಾತಿಯ ... ಇದ್ದರೆ ... ಸರಕಾರದ ... ಉದ್ಯೋಗ ... ಜಾತಿಯ ... ಸಂಸ್ಥಾನಕ್ಕೆ ... ಹಾನಿಯಿದೆ ಎಂಬದನ್ನು ಮರೆಯಬಾರದು. ಜಾತಿಯ ಅಭಿಮಾನ ... ಧ್ಯೇಯವಾದರೆ ತನ್ನ ಕೆಲಸದಿಂದ ಇತರ ಜಾತಿಯವರಿಗೆ ಆಗುವ ಕೆಡುಕು ಮನಸಿಗೆ ಗೋಚರವೇ ಆಗದೆ ಹೋಗುತ್ತದೆ

(ಪ್ರಜೆಗಳ ಹಕ್ಕುಗಳಿಗಾಗಿ ಹೋರಾಡಬೇಕೆಂತ ತಾವ ಹೇಳ... ಜನರಲ್ಲಿ ವ್ಯಾಖ್ಯಾನಮಾಡುವ ಸ್ವಭಾವವು ... ಕೊಟ್ಟಂತಾಯಿತೆಂತ ಕೆಲವರು ಆಕ್ಷೇಪಿಸಬಹುದು ಪ್ರಜೆಗಳು ಹಕ್ಕಿಗಾಗಿ ಕೋರ್ಟುಗಳಲ್ಲಿ ಹೋರಾಡಲು ... ಹೋರಾಡಲು ... ಪ್ರಿಯರಿಸಿಕೊಳ್ಳುವದಿಲ್ಲ ... ಶ್ರಗಳಿಗೆ ಒಂದರೂ ಸಾಲದು ಮೀಟಿಂಗುಗಳಲ್ಲಿ ಚರ್ಚೆ ... ಸಾಲದ ... ದರೂ ಸಾಲದು ... ಕೋರ್ಟುಗಳಲ್ಲಿ ವ್ಯವಹರಿಸಬೇಕು ಕೊಡಗ ದೇಶದ ಜನಗಳ ... ದಾಗ ಸಿವಿಲ್ ಕೋರ್ಟುಗಳಲ್ಲಿ ವ್ಯವಹರಿಸಿ ... ಇಂಥಾ ಹಕ್ಕಿಗಾಗಿ ... ಮಾಡುವುದು ...

ಬ್ರಿಟಿಷ್ ಸರಕಾರದ ದೊಡ್ಡ ಗುಣವು ಯಾವದೆಂದರೆ ಕಾನೂನಿನ ಗೌರವ ಒಬ್ಬ ವ್ಯಕ್ತಿಯ ಇಚ್ಛಾನುಸಾರ ಆಡಳಿತ ನಡೆಯಬಾರದೆಂಬುದೇ ಅಗಿನ ಸಾಧಾರಣ ... ಅಭಿಪ್ರಾಯವಾಗಿದೆ ಪ್ರಜಾ ಸಮುದಾಯದ ಸಮ್ಮತಿಯಿಂದನೆ ಮಾಡಿದ ಕಾನೂನನ್ನು ಅಧಿಕಾರಿಗಳು ಜಾರಿ... ಹೋದರೆ ಅಂಥಾ ಅಧಿಕಾರಿಗಳಿಂದ ಕಡಕವಾಗುವ ಸಂಭವ ಕಡಿಮೆ ಅಧಿಕಾರಿಗಳು ಕಾನೂನಿಗೆ ವಿರೋಧವಾಗಿ ... ಕೋರ್ಟುಗಳಲ್ಲಿ ... ಕಾನೂನಿಗೂ ... ಸಾಧ್ಯವಾ... ಪ್ರಜೆಗಳ ಹಕ್ಕುಗಳಿಗೆ ... ಸಾಲದು. ಪ್ರಜೆಗಳು ತಮ್ಮ ಹಕ್ಕುಗಳು ಯಾವದೆಂತ ತಿಳಿದರೆ ಮಾತ್ರ ಸಾಲದು. ಅಂಥಾ ಹಕ್ಕುಗಳಿಗೆ ಹಾನಿಬಂದಾಗ ಅವಶ್ಯಕ್ಕಿ ಹೋರಾಡಲು ಯಾವಾಗಲೂ ಸಿದ್ಧರಿರಬೇಕು ಹಕ್ಕುಗಳಿಗಾಗಿ ಜಾತಿ ಮತಭೇದವಿಲ್ಲದೆ ಹೋರಾಡಲು ತಯಾರಿಲ್ಲದ ಜನಸಮುದಾಯಕ್ಕೆ ತಮ್ಮನ್ನು ತಾವೆ ಆಳುವ ಹಕ್ಕುಗಳನ್ನು ಕೊಟ್ಟರೆ ಕೆಡಕಾದೀತೇ ಹೊರತು ಕ್ಷೇಮವಾಗಲಾರದು

ಈ ಮೂರು ಲೇಖನಗಳಲ್ಲಿ ನಾಮದಾರ ಶ್ರೀನಿವಾಸ ಶಾಸ್ತ್ರಿಗಳ ಉಪನ್ಯಾಸಗಳ ಒಟ್ಟು ಸಂಕ್ಷೇಪ ಸಾರಾಂಶವನ್ನು ಕೊಟ್ಟಿದ್ದೇವೆ ಈ ಉಪನ್ಯಾಸಗಳನ್ನು ಕನ್ನಡ ಭಾಷೆಗೆ ತರ್ಜುಮೆ ಮಾಡಿ ಪ್ರತಿಯೊಬ್ಬ ಪ್ರಜೆಗೂ ಓದಿ ತಿಳಿದುಕೊಳ್ಳಲು ಅನುಕೂಲಮಾಡಿಕೊಟ್ಟರೆ ರಾಜಕೀಯ ತಿಳುವಳಿಕೆಯನ್ನು ಹೆಚ್ಚಿಸಲು ತುಂಬಾ ಸಹಾಯವಾದಂತೆ ಆಗುವದು

ಜಮೀನ್ದಾರರ ಸಂಘದ ವಾರ.

1926ನೇ ಇಸವಿ ಏಪ್ರಿಲ ತಾ 17 18 ಮತ್ತು 19ರಲ್ಲಿ ಕೊಡಗು ಜಮೀನ್ದಾರರ ಸಂಘದ ವಾರ್ಷಿಕ ಸಮ್ಮೇಳನವು, ಮೈಸೂರಿನ ಪ್ರಸಿದ್ಧ ಲಾಯರಾದ ಮ ಮಂಜೇರಿ ರಾಮಯ್ಯನವರ ಅಧ್ಯಕ್ಷತೆಯಲ್ಲಿ ನಡೆಯುತ್ತ ಸದರಿ ದಿನಗಳಲ್ಲಿ ಆಗತಕ್ಕಂತ ಕಾರ್ಯಕ್ರಮಗಳ ಪಟ್ಟಿ (Programme)

ತಾ 17—4—26

ಮಧ್ಯಾಹ್ನ 1 ಘಂಟೆಯಿಂದ ಸಾಯಂಕಾಲ 4½ ಗಂಟೆಯವರೆಗೆ ಸ್ವಾಗತ ಕಮಿಟಿಯ ಅಧ್ಯಕ್ಷರ, ಸಮ್ಮೇಳನದ ಅಧ್ಯಕ್ಷರ ಭಾಷಣಗಳು ಮತ್ತು ಸಂಘದ ಜನರಲ್ ಸೆಕ್ರೆಟರಿಯವರ ರಿಪೋರ್ಟು

... ಗಂಟೆಯಿಂದ 6 ಗಂಟೆಗೆ ವಿದ್ಯಾರ್ಥಿಗಳ ಸಮ್ಮೇಳನ ... ಅಧ್ಯಕ್ಷರು ... ಮ. ಎ ... ನಡೆಸಲ್ಪಡುವರು.

6½ ಗಂಟೆಯಿಂದ 8 ಗಂಟೆಯವರೆಗ, ಮಲೇರಿಯಾ, ಶಿಶು ಸಂರಕ್ಷಣೆ ಮದ್ಯಪಾನ ನಿಷೇಧ ಇವುಗಳ ವಿಷಯಗಳಲ್ಲಿ ಲೆಕ್ಚರ್ ... ಲ್ಯಾಂಟರ್ನ್ ಸ್ಲೈಡ್ಸ್ ತೋರಿಸುವುದು

ರಾತ್ರಿ 9½ ಯಿಂದ 2 ಗಂಟೆಯವರೆಗೆ—ವೀರಾಜಪೇಟೆ ಹೈಸ್ಕೂಲ ವಿದ್ಯಾರ್ಥಿಗಳ ಯಯಾತಿ ರಾಜನ ನಾಟಕ.

ತಾ 18—4—26 ಬೆಳಿಗ್ಗೆ

ಗಂಟೆ 8ರಿಂದ 9½ ವರೆಗೆ ಕೃಷಿ ಕಾನ್ಫರೆನ್ಸ್ ಅಧ್ಯಕ್ಷರು ... ಬಿ ಎಲ್

9½ರಿಂದ 11 ಗಂಟೆವರೆಗೆ ವೇದಾಂತ ಮೀಟಿಂಗು—ಮ ... ಎಲ್ ರವರ ಭಾಷಣ ... ಅಧ್ಯಕ್ಷರು ಸ್ವಾಮಿ ... ನಂದರು

1ಗಂಟೆಯಿಂದ ಸಾಯಂಕಾಲ 7ಗಂಟೆ ವರೆಗೆ ಜಮೀನ್ದಾರರ ಸಂಘದ ಠರಾವುಗಳ ಚರ್ಚೆ

ರಾತ್ರಿ 9 ಗಂಟೆಯಿಂದ ... ಗಂಟೆವರೆಗೆ ... ನಡೆಯುವ ನಾಟಕ

19 4 26ರಲ್ಲಿ

ಬೆಳಿಗ್ಗೆ 8ರಿಂದ 9½ ಗಂಟೆವರೆಗೆ ಮದ್ಯಪಾನ ನಿಷೇಧ ಸಂಘದ ಕಾನ್ಫರೆನ್ಸ್

9½ರಿಂದ 10½ಗಂಟೆವರೆಗೆ ಥಿಯೊಸಫೀ ವಿಷಯ ಪ್ರೆಸಿಡೆಂಟರ ಭಾಷಣ

1ಗಂಟೆಯಿಂದ 3ಗಂಟೆ ವರೆಗೆ ಕೊಡಗರ ಮತ್ತು ಇತರ ಪಂಗಡಗಳ ಸಮಾಜ ಸುಧಾರಣೆ ವಿಷಯ ಮೀಟಿಂಗುಗಳು ನಡೆಸಲ್ಪಡುತ್ತವೆ

(1) ಮೇಲಿನ ಸಮಯ ನಿಶ್ಚಯ ಸದರಿ ದಿನಗಳಲ್ಲಿ ತಿದ್ದುಪಡಿಗೂ ಬದಲಾವಣೆಗೂ ಒಳಪಟ್ಟಿರುತ್ತವೆ

(2) ಮೀಟಿಂಗಿಗೆ ದಯಮಾಡಿಸುವಂತ ಮಹನೀಯರು ಗಳು ಅವರವರಿಗೆ ಪ್ರತ್ಯೇಕ ಏರ್ಪಾಡುಗಳನ್ನು ನಾವೆ ಅವಶ್ಯವಿದ್ದಲ್ಲಿ ಸ್ವಾಗತ ಕಮಿಟಿಯ ಜನರಲ್ ಸೆಕ್ರೆಟರಿ, ನಾಪೋಕ್ಲು ವಿಳಾಸಕ್ಕೆ ಮೊದಲಾಗಿಯೇ ಬರೆಕೊಳ್ಳಬೇಕು

ಕೆ. ಪಿ. ಚೆಣ್ಣಪ್ಪ,

ನಾಪೋಕ್ಲು. ಸ್ವಾಗತ ಕಮಿಟಿ ಜನರಲ್ ಸೆಕ್ರೆಟರಿ.

ವಿನಂತಿ.

47 ವರ್ಷಗಳಿಂದ ದಾಂಪತ್ಯ ಸುಖವನ್ನು ಅನುಭವಿಸಿದ ನನ್ನ ಜೇಷ್ಠ ಪತ್ನಿ ಪೂನ್ನವ್ವನು ತನ್ನ 65ನೇ ವಯಸ್ಸಿನಲ್ಲಿ ಅಂದರೆ ತಾ. 27—3—1926ರಲ್ಲಿ ಪತಿವಿಯೋಗದಿಂದ ಶಿವಾಧೀನವಾದ ಶೋಕವಾರ್ತೆಯ ಕೇಳಿ ನನ್ನ ಸ್ವಜನ ಬಂಧು ಮಿತ್ರರಾದವರೂ, ಅನ್ಯ ಜನರೂ ತಮ್ಮ ತಾಪವನ್ನು ತಂತಿ ಮತ್ತು ಪತ್ರಗಳ ಮೂಲಕವಾಗಿ ವ್ಯಕ್ತಪಡಿಸಿರುವವರೆಲ್ಲರಿಗೆ ಈ ಮೂಲಕ ವಂದಿಸಿ ಅವರಿಗೆ ಭಗವಂತನು ಆಯುರಾರೋಗ್ಯ ಅಭಿವೃದ್ಧಿಯನ್ನು ಕೊಟ್ಟು ಕಾಪಾಡಲೆಂದು ಪ್ರಾರ್ಥನೆ

ತಾ. 3-4-26. ಕುಟ್ಟಂಡ ತಮ್ಮಯ್ಯ.

ಮಹಾತ್ಮಗಾಂಧಿಯವರ ಸ್ವಚರಿತ್ರೆ

[ಕಳೆದ ವಾರದಿಂದ ಮುಂದುವರಿದುದು.]

೯ನೆಯ ಪ್ರಕರಣ.

ತಂದೆಯ ಮರಣವು ಮತ್ತು ನನಗುಂಟಾದ ಮಹಾವಮಾನವು.

ನನಗೆ 16ನೇ ವರ್ಷ ವಯಸ್ಸು ಪ್ರಾರಂಭವಾಯಿತು. ನನ್ನ ತಂದೆಯು ಮೂಲವ್ಯಾಧಿಯಿಂದ ಬಹಳ ಬಾಧೆಪಡುತ್ತಿದ್ದು ಮಂಚ ಬಿಟ್ಟು ಇಳಿಯುತ್ತಿರಲಿಲ್ಲ. ನಾನೂ ನನ್ನ ತಾಯಿಯೂ ಒಬ್ಬ ವೃದ್ಧ ಸೇವಕನನ್ನು ತಂದೆಯ ಉಪಚಾರಕ್ಕಾಗಿ ನಿಯಮಿಸಿದ್ದೆವು. ಗಾಯಕ್ಕೆ ಕಟ್ಟನ್ನು ಕಟ್ಟಿ, ಔಷಧಿಯನ್ನು ಕೊಡುವುದು, ಅವಸರವಾದಾಗ ಮನೆಯಲ್ಲೇ ಔಷಧವನ್ನು ಮಾಡುವುದು ಮೊದಲಾದ ಕಾರ್ಯಗಳನ್ನು ನಾನೇ ಮಾಡುತ್ತಿದ್ದೆನು. ಪ್ರತಿ ದಿವಸವೂ ರಾತ್ರಿ ವೇಳೆ ನಾನು ನನ್ನ ತಂದೆಯ ಕಾಲುಗಳನ್ನು ಒತ್ತಿ ಅವರಿಗೆ ನಿದ್ರೆ ಹತ್ತಿದ ಮೇಲೆ ಹೋಗಿ ಮಲಗಿಕೊಳ್ಳುತ್ತಿದ್ದೆನು. ನಾನು ಹಾಗೆ ಪೂರ್ಣ ಭಕ್ತಿಯಿಂದಲೂ, ಪ್ರೇಮದಿಂದಲೂ ಪಿತೃ ಸೇವೆ ಮಾಡುತ್ತಿದ್ದೆನು. ಈ ವಿಷಯದಲ್ಲಿ ನಾನು ಯಾವಾಗಲೂ ಆಸಕ್ತಿ ತೋರಿದವನೇ ಅಲ್ಲ. ದಿನಚರ್ಯೆ, ಪಾಠಶಾಲೆ, ಪಿತೃಸೇವೆ ಎಂದು ಮೂರು ಭಾಗಗಳನ್ನಾಗಿ ನನ್ನ ಕಾಲವನ್ನೆಲ್ಲಾ ವಿಭಾಗಿಸಿಕೊಂಡಿದ್ದೆನು. ತಂದೆಯು ಅಪ್ಪಣೆ ಕೊಟ್ಟ ಮೇಲೆ ಮಾತ್ರ ಸಾಯಂಕಾಲದಲ್ಲಿ ಬೀದಿಗೆ ಹೋಗುತ್ತಿದ್ದೆನು

ಪತ್ನಿಯು ಗರ್ಭವತಿಯಾದುದು.

ಆಗಲೇ ನನ್ನ ಪತ್ನಿಯು ಮೊದಲನೇ ಸಾರಿಗೆ ಗರ್ಭಿಣಿಯಾಗಿದ್ದಳು. ಅದು ನನಗೆ ಬಹಳ ಅವಮಾನಕರವಾಗಿ ಕಂಡುಬಂದಿತು. ನಾನು ವಿದ್ಯಾರ್ಥಿಯಾಗಿದ್ದೂ ಸ್ತ್ರೀ ಸಂಭೋಗ ಬಿಡದಿದ್ದುದೊಂದು ಅವಮಾನವು. ಪಿತೃಭಕ್ತಿಯುಳ್ಳವರಲ್ಲೆಲ್ಲಾ ಅಗ್ರಗಣ್ಯನೆಂದು ನಾನು ಭಾವಿಸಿದ್ದೆನಾದರೂ ನನ್ನ ಕಾಮಾಂಧಕಾರಾಧಿಕ್ಯವು ತಂದೆಯ ಸೇವೆಗೂ, ವಿದ್ಯಾಭ್ಯಾಸಂಗಕ್ಕೂ ಅಡಚಣೆಯಾಗಿದ್ದುದು ಮತ್ತೊಂದು ಅವಮಾನವು. ಗರ್ಭಿಣಿ ಸಂಭೋಗ ಮಾಡಕೂಡದೆಂದು ವೈದ್ಯ ಶಾಸ್ತ್ರವೂ, ಧರ್ಮ ಶಾಸ್ತ್ರವೂ, ಲೋಕಜ್ಞಾನವೂ ಬೋಧಿಸುತ್ತಿದ್ದರೂ, ಆ ಕಾಲದಲ್ಲಿ ರಾತ್ರಿವೇಳೆ ನನ್ನ ತಂದೆಯ ಕಾಲುಗಳನ್ನು ಒತ್ತುತ್ತ ಕುಳಿತಿದ್ದ ವೇಳೆಯಲ್ಲಿ ನನ್ನ ಮನಸ್ಸು ನನ್ನ ಮಲಗುವ ಮನೆಯ ಕಡೆಗೇ ಎಳೆಯುತ್ತಿದ್ದಿತು. ನನ್ನ ತಂದೆಗೆ ನಿದ್ರೆ ಹತ್ತಿದ ಕೂಡಲೆ ಅಥವ ಹೋಗೆಂದು ಹೇಳಿದ ಕೂಡಲೆ ನಾನು ಅವರಿಗೆ ನಮಸ್ಕಾರ ಮಾಡಿ ಆತ್ಯಾತುರದಿಂದ ನನ್ನ ಮಲಗುವ ಮನೆಗೋಡಿ ಹೋಗುತ್ತಿದ್ದೆನು.

ವೈಷ್ಣವರಿಗೆ ಸಹಜವಾದ ಶೌಚವಿಧಿ.

ನನ್ನ ತಂದೆಯ ದೇಹಸ್ಥಿತಿಯು ದಿನದಿನಕ್ಕೆ ಬಹಳ ಶೋಚನೀಯವಾಗುತ್ತ ಬಂದಿತು. ಆಯುರ್ವೇದ ವೈದ್ಯರು, ಯುನಾನಿ ಹಕೀಮರು, ಅಲ್ಲೋಪಾಯಿ ವೈದ್ಯರು ಇವರೆಲ್ಲರೂ ಒಂದು ಔಷಧವನ್ನು ಕೊಟ್ಟು ಪರೀಕ್ಷಿಸಿದರು. ಒಬ್ಬ ಆಂಗ್ಲ ವೈದ್ಯನು ಕೂಡ ಔಷಧಿಕೊಟ್ಟು ರೋಗ ಚಾಡ್ಯಕ್ಕೆ ಶಸ್ತ್ರ ಚಿಕಿತ್ಸೆ ಮಾಡಬೇಕೆಂದು ಹೇಳಿದನು. ಮನೆಯ ವೈದ್ಯನು ಅದಕ್ಕೆ ಸಮ್ಮತಿಸಲಿಲ್ಲ. ನನ್ನ ತಂದೆಯು ಬಹಳ ವೃದ್ಧರಾಗಿದ್ದುದರಿಂದ ಆ ವಯಸ್ಸಿನಲ್ಲಿ ಶಸ್ತ್ರ ಚಿಕಿತ್ಸೆ ಮಾಡಕೂಡದೆಂದು ನಮ್ಮ ಮನೆಯ ವೈದ್ಯನ ಅಭಿಪ್ರಾಯವಾಗಿದ್ದಿತು. ಆತನು ಬಹಳ ಪ್ರಸಿದ್ಧನಾಗಿಯೂ, ಸಮರ್ಥನಾಗಿಯೂ ಇದ್ದುದರಿಂದ ಆತನ ಸಲಹೆಯನ್ನು ಅಂಗೀಕರಿಸಿ ಶಸ್ತ್ರ ಚಿಕಿತ್ಸೆಯನ್ನು ನಮ್ಮವರು ತಿರಸ್ಕರಿಸಿದರು. ಶಸ್ತ್ರ ಚಿಕಿತ್ಸೆಗಾಗಿ ಕೊಂಡು ತರಲ್ಪಟ್ಟಿದ್ದ ಔಷಧವೆಲ್ಲವೂ ವ್ಯರ್ಥವಾಯಿತು. ಶಸ್ತ್ರ ಚಿಕಿತ್ಸೆಗೆ ಅಂಗೀಕರಿಸಿದ್ದಲ್ಲಿ ನನ್ನ ತಂದೆಯ ಗಾಯವು ಚಾಗ್ರತೆಯಲ್ಲಿ ವಾಸಿ ಆಗುತ್ತಿದ್ದಿತೆಂದು ನಾನು ತಿಳಿದುಕೊಂಡಿದ್ದೆನು. ಬೊಂಬಾಯಿನಲ್ಲಿದ್ದ ಒಬ್ಬ ಪ್ರಸಿದ್ಧ ಸರ್ಜನ್ನಿನಿಂದಲೇ ಶಸ್ತ್ರ ಚಿಕಿತ್ಸೆ ಮಾಡಿಸಲು ಆಲೋಚಿಸಲ್ಪಟ್ಟಿತು. ಕಡೆಗೆ ಅದು ನಡೆಯಲಿಲ್ಲವು. ಭಗವತ್ಸಂಕಲ್ಪವು ಬೇರೆಯಾಗಿದ್ದಿತು. ಮರಣವು ಸನ್ನಿಹಿತವಾದಾಗ ಉತ್ತಮ ಸಾಧನವನ್ನು ಕುರಿತು ಯಾರು ತಾನೇ ಆಲೋಚಿಸುವರು? ನನ್ನ ತಂದೆಯು ಬೊಂಬಾಯಿನಿಂದ ಪುನಃ ಸ್ವಗ್ರಾಮಕ್ಕೆ ಬಂದರು. ಇನ್ನು ಬದುಕುವುದಿಲ್ಲವೆಂದು ಅವರಿಗೆ ಅಧ್ಯವಸಾಯವುಂಟಾಯಿತು. ಕ್ರಮವಾಗಿ ಬಲವು ತಗ್ಗುತ್ತ ಹಾಸಿಗೆಯನ್ನು ಬಿಟ್ಟೇಳಲು ಶಕ್ತಿಯಿಲ್ಲವಾಯಿತು. ಆದರೂ ನನ್ನ ತಂದೆಯು ಹೇಗೋ ತಾವೇ ಎದ್ದು ಶೌಚಾದಿಗಳನ್ನು ತೀರಿಸಿಕೊಳ್ಳುತ್ತಿದ್ದರು. ಅವರಿಗೆ ವೈಷ್ಣವಸದಾಚಾರದಲ್ಲೂ ಶೌಚವಿಧಿಯಲ್ಲೂ ವಿಶೇಷ ಪಕ್ಷಪಾತಾಭಿಮಾನವಿದ್ದಿತು. ಅಷ್ಟು ಪರಿಶುಭ್ರತೆಯು ಅವಶ್ಯವಾಗಿದ್ದಲ್ಲಿ ಅಲ್ಲದೆ ಮಂಚದಿಂದೇಳಲು ಆಗದಿದ್ದಲ್ಲಿ ಇದ್ದಲ್ಲಿಯೇ ಸ್ನಾನ ಶೌಚಾದಿಗಳನ್ನು ತೀರಿಸಿಕೊಳ್ಳಬಹುದೆಂದು ಪಾಶ್ಚಾತ್ಯ ವೈದ್ಯ ಶಾಸ್ತ್ರಗಳು ನಮಗೆ ಬೋಧಿಸುತ್ತಿವೆ. ವೈಷ್ಣವರಿಗೆ ಅಂತಹ ಪರಿಶುಭ್ರತೆಯು ಮುಖ್ಯವಾದರೂ ಅಸ್ವಸ್ಥತೆಯಿಂದ ಅಷ್ಟು ಬಲಹೀನವಾಗಿರುವಾಗ್ಗೆ ನನ್ನ ತಂದೆಯು ಬಹಳ ಶ್ರಮಪಟ್ಟು ಮಾಡುತ್ತಿದ್ದುದು ನನಗೆ ಬಹಳ ಆಶ್ಚರ್ಯವಾಗಿ ಕಂಡುಬಂದಿತು.

ಅವಸಾನ ಕಾಲವು.

ಕಾಳ ರಾತ್ರಿ ಬಂದಿತು. ನನ್ನ ಚಿಕ್ಕಪ್ಪನು ಆಗ ರಾಜಕೋಟೆಯಲ್ಲಿದ್ದರು. ನನ್ನ ತಂದೆಯ ಕಾಯಿಲೆ ಹೆಚ್ಚಾಗಿರುವುದೆಂದು ತಿಳಿದು ಅವರು ರಾಜಕೋಟೆಗೆ ಬಂದರೆಂದು ನನಗೆ ಕೊಂಚ ಜ್ಞಾಪಕವಿದೆ. ನನ್ನ ತಂದೆಗೂ ಚಿಕ್ಕಪ್ಪನಿಗೂ ಸೋದರ ಪ್ರೀತಿಯು ಬಹಳವಾಗಿದ್ದಿತು. ನನ್ನ ಚಿಕ್ಕಪ್ಪನು ಹಗಲೂ ರಾತ್ರಿ ನನ್ನ ತಂದೆಯ ಬಳಿ ಇರುತ್ತಿದ್ದರು. ರಾತ್ರಿ ನಮ್ಮೆಲ್ಲರನ್ನು ಕಳುಹಿಸಿಬಿಟ್ಟು ಅವರು ಅಲ್ಲೇ ಮಲಗಿಕೊಳ್ಳುತ್ತಿದ್ದರು. ನನ್ನ ತಂದೆಯು ಇನ್ನು ಬದುಕುವುದಿಲ್ಲವೆಂದು ಎಲ್ಲರೂ ತಿಳಿದಿದ್ದರಾದರೂ ಆ ರಾತ್ರಿಯೇ ಸತ್ತುಹೋಗುತ್ತಾರೆಂದು ಯಾರೂ ತಿಳಿದಿರಲಿಲ್ಲವು. ರಾತ್ರಿ 10½, 11 ಗಂಟೆ ಸಮಯದಲ್ಲಿ ನಾನು ನನ್ನ ತಂದೆಯ ಕಾಲನ್ನು ಒತ್ತುತ್ತಿರುವಾಗ್ಗೆ ಚಿಕ್ಕಪ್ಪನು ಬಂದು ನೀನು ಹೋಗಿ ಮಲಗಿಕೊಳ್ಳುವಂತೆ ಹೇಳಿದರು. ನಾನು ಆತುರದಿಂದ ನನ್ನ ಕೊಠಡಿಗೋಡಿದೆನು. ನನ್ನ ಹೆಂಡತಿಯು ಮಲಗಿ ನಿದ್ರಿಸುತ್ತಿದ್ದಳು. ಇನ್ನು 6-7 ನಿಮಿಷಗಳ ತರುವಾಯ ಆಳು ಬಂದು ಬಾಗಿಲನ್ನು ತಟ್ಟಿದನು, ನನಗೆ ಬಹಳ ದಿಗಿಲಾಯಿತು. “ಯಜಮಾನರಿಗೆ ಬಹಳ ಆಯಾಸವಾಗಿದೆ; ಎದ್ದು ಬನ್ನಿ” ಎಂದು ಹೇಳಿದನು. ಆಯಾಸ ಹೆಚ್ಚಾಗಿದೆಯೆಂದು ಕೇಳುತ್ತಲೆ ನನಗೆ ಸಂದೇಹವುಂಟಾಯಿತು. ದಿಗಿಲು ಬೀಳಬೇಡವಾಗಿ ತಿಳಿಸೆಂದು ನಾನು ಹೇಳಿದೆನು. ಯಜಮಾನರು ಸತ್ತುಹೋದರೆಂದು ಅವನಂದನು.

ನನಗೆ ಆಗ ತಡೆಯಲಾರದಷ್ಟು ದುಃಖಬಂದಿತು. ಕಾಮಾಂಧಕಾರದಿಂದ ಕಣ್ಣು ಕಾಣದೆ ಹೆಂಡತಿಯ ಸಮೀಪಕ್ಕೆ ಓಡಿಹೋದ ಮಹಾಪಾಪಿಯೆಂದು ನನ್ನನ್ನು ನಾನೇ ಬಹಳವಾಗಿ ನಿಂದಿಸಿದೆನು. ಆ ಕಾಮ ಪಿಶಾಚವು ನನ್ನನ್ನು ಹಿಡಿದುಕೊಂಡಿರದಿದ್ದರೆ ನಾನು ಕಡೆಯ ವರೆಗೂ ನನ್ನ ತಂದೆಯ ಸನಿಹದಲ್ಲೇ ಕಾದುಕೊಂಡಿರುತ್ತಿದ್ದೆನು. ಕಡೆಯಲ್ಲಿ ಸೇವೆ ಮಾಡುವ ಮಹಾ ಭಾಗ್ಯವು ನನ್ನ ಚಿಕ್ಕಪ್ಪನಿಗಲ್ಲದೆ ನನಗೆ ಲಭಿಸಲಿಲ್ಲವು. ಅವಸಾನ ಕಾಲವು ಪ್ರಾಪ್ತವಾಯಿತೆಂದು ನನ್ನ ತಂದೆಯು ತಿಳಿದು ಕಾಗದವನ್ನು ಕಡ್ಡಿಯನ್ನೂ ತರಬೇಕೆಂದು ಹೇಳಿದರು. ಅವನ್ನು ತೆಗೆದುಕೊಂಡು “ನಾನು ಇನ್ನು ಬದುಕುವುದಿಲ್ಲ. ಪ್ರಾಯಶ್ಚಿತ್ತಾದಿಗಳನ್ನು ಮಾಡಿಬಿಡುವುದು” ಎಂದು ಬರೆದು ತಿಳಿಸಿದರು. ತಮ್ಮ ಹತ್ತಿರವಿದ್ದ ತಾಯಿತವನ್ನೂ ಕತ್ತಿನಲ್ಲಿದ್ದ ಭಾಗಾರದ ತುಳಸೀ ಸರವನ್ನೂ ತೆಗೆದು ಬಿಸಾಡಿದರು. ಆದಾದ ಎರಡು ನಿಮಿಷಗಳಲ್ಲಿ ಪ್ರಾಣವು ಹೋಯಿತು. ಈ ಸಂಗತಿಯನ್ನು ಆಳು ಹೇಳಿದ ಕೂಡಲೆ ನಾನು ತಂದೆಯ ಬಳಿಗೋಡಿ ಹೋದೆನು. ತಂದೆಯ ಪ್ರಾಣವು ಹೋಗುವಾಗಲು ಕೂಡ ಸ್ತ್ರೀ ಮೋಹದ ವ್ಯಾಮೋಹವನ್ನು ನಾನು ಬಿಡಲಾರದೆ ಹೋದ ಮಹಾ ಅವಮಾನವನ್ನು ನಾನು ಎಂದಿಗೂ ಕಾದುಕೊಳ್ಳಲಾರದೆ ಹೋದೆನು. ನನಗೆ ತಂದೆಯ ವಿಚಾರದಲ್ಲಿ ವಿಶೇಷ ಭಕ್ತಿಯಿದ್ದರೂ ವಿಷಯ ವಿಷ್ಟಲವು ಕೂಡ ಪ್ರಬಲವಾಗಿ ನನ್ನನ್ನು ಬಾಧಿಸಿದ್ದಿತೆಂದು ನಾನು ಯಾವಾಗಲೂ ತಿಳಿದುಕೊಂಡಿದ್ದೆನು. ನಾನು ಏಕಪತ್ನಿವ್ರತಶೀಲನಾಗಿದ್ದೆನೆಂದು ತಿಳಿದಿದ್ದೆನು. ಆ ಕಾಮ ಪಿಶಾಚವನ್ನು ಪೂರಣ ಮಾಡಲು ಬಹುಕಾಲ ಹಿಡಿದಿತು.

ಜನಿಸಿದ ಮಗುವು ಸತ್ತುಹೋಯಿತು.

ಮೊದಲನೆಯಾವರ್ತಿ ಹುಟ್ಟಿದ ಮಗುವು 3-4 ದಿನಗಳು ಮಾತ್ರ ಬದುಕಿದ್ದಿತು. ಅಂತಹ ಬಾಲ್ಯದಶೆಯು (16ನೇ ವರ್ಷದಲ್ಲಿ) ಹುಟ್ಟಿದ ಮಗುವು ಬದುಕುವುದೆ? ಯುವಕ ಯುವತಿಯರು ನನ್ನ ಚರಿತ್ರೆಯಿಂದ ಈ ದುರ್ಗತಿಯನ್ನು ಗಮನಿಸಿ ಬುದ್ಧಿ ಕಲಿತುಕೊಳ್ಳುವವರಾಗಲಿ

ಮ್ಯು. ಸ್ಟಾರ್.

(ಎಂಗ್ ಇಂಡಿಯಾ ತಾ. 4—2—26)

ಧೂಮಸೇವನೆಯಿಂದುಂಟಾಗುವ ಕೆಡಕುಗಳು.

(ಇಂಡಿಯನ್ ಟೆಂಪರೆನ್ಸ್ ನ್ಯೂಸ್ ಪತ್ರಿಕೆಯಿಂದ)

ಬೀಡಿ, ಚುಟ್ಟ, ಸಿಗರೇಟ್ ಮೊದಲಾದ ನಾನಾ ರೂಪಗಳಲ್ಲಿ ಹೊಗೆಸೊಪ್ಪು ಚಿಕ್ಕ ಹುಡುಗರ ಆರೋಗ್ಯಕ್ಕೇನೇ ಬಾಧೆ ತರುತ್ತಿದೆ. ಮಾನವ ದೇಹದ ಮೇಲೆ ಹೊಗೆಸೊಪ್ಪು ಬಹಳ ಕೆಟ್ಟ ಪರಿಣಾಮವನ್ನುಂಟುಮಾಡುವುದೆಂಬುದಕ್ಕೆ ಅನೇಕ ಪ್ರಸಿದ್ಧ ಡಾಕ್ಟರುಗಳು ತಮ್ಮ ಅಭಿಪ್ರಾಯಗಳನ್ನಿತ್ತಿರುತ್ತಾರೆ. ಹೊಗೆಸೊಪ್ಪು ಮಬ್ಬು ಹಿಡಿಸಿ ಯಾವುದಾದರೊಂದು ಬಾಧೆಯ ಅನುಭವವನ್ನು ಕಡಿಮೆ ಮಾಡುತ್ತದಲ್ಲದೆ ಹೆಚ್ಚಿಗೆ ಸೇವಿಸಿದರೆ ಸಂಪೂರ್ಣ ಆಲಸ್ಯವನ್ನುಂಟುಮಾಡುತ್ತದೆ. ಇಂದ್ರಿಯಗಳು ಸಮಾಧಾನವಾಗಿ ತಮ್ಮ ಕಾರ್ಯ ಮಾಡತೊಡಗುತ್ತವೆ. ಹೊಗೆಸೊಪ್ಪಿನಲ್ಲಿ ಶೇಕಡ 200ದ 8 ಅಂಶದವರೆಗೆ 'ನಿಕೊಟ್ಯಾನ' ಎಂಬ ಪದಾರ್ಥವಿದೆ. ಇದು ನರಗಳ ಶಕ್ತಿ ಕುಂದಿಸುವ ತೀವ್ರವಾದೊಂದು ವಿಷವೇ ಆಗಿದೆ. ಬೇರೆ ಬೇರೆ ರೂಪಗಳಲ್ಲಿ ಈ ವಿಷ ಪದಾರ್ಥದ ಸೇವನೆಯಿಂದ ಮೊದಲು ಮೊದಲು ಅಶಕ್ತಿ ನಿರುತ್ಸಾಹಗಳುಂಟಾಗಿ ಕೊನೆಗೆ ಸಂಪೂರ್ಣ ಶಕ್ತಿಕುಂದಿಹೋಗುತ್ತದೆ. ಹೊಗೆಸೊಪ್ಪಿನ ಸೇವನೆಯಿಂದ ಹೃದಯ ಮತ್ತು ಶ್ವಾಸಕೋಶಗಳ ನರಗಳು ದುರ್ಬಲವಾಗಿ ಹೋಗುತ್ತವೆ. ಅಗ್ನಿಮಾಂದ್ಯ, ಕುರುಡತನ, ಕಂಪಕಾಲೆ, ಮೊದಲಾದ ರೋಗಗಳಿಗೆ ಹೊಗೆಸೊಪ್ಪು ಕಾರಣವಾಗುತ್ತದೆ.

ಇಂಗ್ಲಂಡಿನಲ್ಲಿ ಶರೀರ ದುರ್ಬಲತೆಯ ಕುರಿತು ವಿಚಾರಿಸಲು ನಿಯಮಿಸಲ್ಪಟ್ಟ ಒಂದು ಕಮಿಶನಿನವರು, ಮಕ್ಕಳ ವಿಷಯದಲ್ಲಿ ಹೊಗೆಸೊಪ್ಪು ಸಂಪೂರ್ಣ ದುಷ್ಪರಿಣಾಮವನ್ನುಂಟುಮಾಡುವುದಾಗಿದೆ. ಎಂಬ ನಿರ್ಧಾರಕ್ಕೆ ಬಂದಿರುವರು. ಮಕ್ಕಳ ವಿಷಯದಲ್ಲಿ ಕೆಲಸ ಮಾಡುತ್ತಲಿದ್ದ ಅಧ್ಯಾಪಕರೂ, ಡಾಕ್ಟರುಗಳೂ, ಹೊಗೆಸೊಪ್ಪು ಅವರ ದೇಹಾಭಿವೃದ್ಧಿಗೂ ಮನೋವಿಕಾಸಕ್ಕೂ ತಡೆಯನ್ನುಂಟುಮಾಡಿ, ಶಾರೀರಿಕ ಮತ್ತು ಮಾನಸಿಕೋನ್ನತಿಗೆ ಪ್ರತಿಬಂಧಕವನ್ನು ತರುವುದಾಗಿದೆಯೆಂದು ದೃಢವಾಗಿ ಹೇಳಿರುವರು.

ಸಿಗರೇಟಿನಿಂದ 'ನಿಕೊಟ್ಯಾನ್' ಎಂಬೀ ಪದಾರ್ಥವನ್ನು ತೆಗೆದು ಯಾವುದಾದರೊಂದು ದ್ರವದೊಂದಿಗೆ ಸೇರಿಸಿ ಒಂದು ಕಪ್ಪೆಯ ದೇಹಕ್ಕೆ ಇಂಜಕ್ಟ್ ಮಾಡಿದರೆ ಒಡನೆಯೇ ಈ ಕಪ್ಪೆಯು ಸಾಯುವುದು. ಬೆಕ್ಕು 15 ನಿಮಿಷಗಳ ತನಕ ಒದ್ದಾಡಿ ಪ್ರಾಣಬಿಡುವುದು. ಸ್ವಲ್ಪ ಹೊಗೆಸೊಪ್ಪನ್ನು ಒಂದು ಕಪ್ ನೀರಲ್ಲಿ ಕುದಿಸಿ, ಈ ನೀರನ್ನು ಮೀನುಗಳಿರುವ ಒಂದು ಭರಣಿಗೆ ಹೊಯ್ದರೆ 25 ಮಿನಿಟುಗಳೊಳಗೆ ಅವುಗಳೆಲ್ಲಾ ಸತ್ತುಹೋಗುವುವು. ಇದರಿಂದ ಹೊಗೆಸೊಪ್ಪಿನಲ್ಲಿರುವ ವಿಷದ ಪರಿಣಾಮವು ಎಷ್ಟು ತೀವ್ರವಿದೆಯೆಂಬುದು ವಿದಿತವಿದೆ.

ಡಾಕ್ಟರ್ ಶೀವರ್ ಎಂಬವರು ಹೊಗೆಸೊಪ್ಪು ಸೇದುವವರ ಮತ್ತು ಸೇವಿಸುವವರ ವಿದ್ವತ್ತಿಕೆಯನ್ನು ಪರೀಕ್ಷಿಸಿದಲ್ಲಿ, ಉಚ್ಚಶ್ರೇಣಿಯ ವಿದ್ಯಾರ್ಥಿಗಳಲ್ಲಿ 100ರಲ್ಲಿ 5 ಮಂದಿ ಮಾತ್ರ ಧೂಮಸೇವಕರಾಗಿದ್ದರು. ಧೂಮಸೇವನೆಯು ಮಾನಸಿಕ ಚಟುವಟಿಕೆಗೂ ವಿದ್ವತ್ತಿಕೆಗೂ ತಡೆಯನ್ನುಂಟು ಮಾಡುವುದೆಂಬುದರಲ್ಲಿ ಸಂಶಯವೇ ಇರದು. ಈ ವಿಷಯವು ಇತರ ಕೆಲವು ವಿಶ್ವವಿದ್ಯಾಲಯಗಳ ಉದಾಹರಣೆಯಿಂದಲೂ ಸಮರ್ಥಿಸಲ್ಪಟ್ಟಿದೆ.

ಅಮೆರಿಕದ ಯುನೈಟೆಡ್ ಸ್ಟೇಟ್ಸ್ ದೇಶದಲ್ಲಿ ದೊಡ್ಡ ರೈಲ್ವೆ ಕಂಪೆನಿಗಳಲ್ಲಿಯೂ ವ್ಯಾಪಾರ ಫರ್ಮ್‌ಗಳಲ್ಲಿ ಮತ್ತು ಇನ್‌ಸ್ಯೂರೆನ್ಸ್ ಕಂಪೆನಿಗಳಲ್ಲಿಯೂ, ಬೇಂಕುಗಳಲ್ಲಿಯೂ, ದೊಡ್ಡ ಅಂಗಡಿಗಳಲ್ಲಿಯೂ ಸಿಗರೇಟು ಸೇದುವವರಿಗೆ ಕೆಲಸಗಳನ್ನು ಕೊಡುವುದಿಲ್ಲ. ಇಲ್ಲಿಯ ನೇವಲ್ ಸ್ಕೂಲಿನವರು ಧೂಮಪಾಯಿಗಳಿಗೆ ಪ್ರವೇಶವನ್ನು ಕೊಡುವುದಿಲ್ಲ. ಹೆನ್ರಿ ಫೋರ್ಡ್ ಮೊದಲಾದ ಲೋಕಪ್ರಸಿದ್ಧ ವ್ಯಾಪಾರಿಗಳು ಧೂಮಪಾಯಿಗಳಿಗೆ ಉದ್ಯೋಗಗಳನ್ನೇ ಕೊಡಬಾರದೆಂದು ನಿರ್ಧರಿಸಿರುವರು. ಇವರೆಲ್ಲಾ ಇಷ್ಟೊಂದು ವಿರುದ್ಧ ವಿಧಿಗೆ ಕಾರಣ ಪ್ರಬಲಕಾರಣವಿರಬೇಕು. ಅಲ್ಲವಾದರೆ ಪ್ರಸಿದ್ಧ ವ್ಯಾಪಾರಿಗಳಾದ ಈ ಪುರುಷರೇನೂ ಬುದ್ಧಿ ಶೂನ್ಯರಲ್ಲ. ಧೂಮಸೇವನೆಯು ಜನರನ್ನು ಅಲಕ್ಷ್ಯ, ಆಲಸ್ಯ ಸ್ವಭಾವದವರನ್ನಾಗಿಯೂ, ಜವಾಬ್ದಾರಿಯನ್ನು ತಿಳಿಯದವರಾಗಿ ಅನೇಕನೇಳೆ ಅಪ್ರಾಮಾಣಿಕರನ್ನಾಗಿಯೂ ಮಾಡುತ್ತದೆಂದು ಈ ಮಹಾ ಪುರುಷರ ಹೇಳಿಕೆಯಿದೆ.

ಎಳೆಪ್ರಾಯದವರ ತಕ್ಸೀರುಗಳನ್ನು ವಿಚಾರಿಸುವ ಕೋರ್ಟಿನ ಜಡ್ಜರಾದ ಲಿಂಡ್ಸೆ ಎಂಬವರು, 'ತಮ್ಮ ಮರ್ಯಾದೆಯನ್ನು ಕಳಕೊಂಡು ತಮ್ಮ ತಂದೆ ತಾಯಿಗಳ ಅವಮಾನಕ್ಕೆ ಕಾರಣರಾದ ಸಾವಿರಾರು ಹುಡುಗರ ತಕ್ಸೀರುಗಳನ್ನು ವಿಚಾರಿಸುವ ಸಂದರ್ಭವು ನನಗೊದಗಿತ್ತು. ಧೂಮ ಸೇವನೆಗಿಂತ ಬೇರೆ ಯಾವ ಅಭ್ಯಾಸವೂ ಈ ಹುಡುಗರ ದುರ್ವರ್ತನೆಗೆ ಪ್ರಮುಖ್ಯ ಕಾರಣವಾದುದು ನನಗೆ ಕಂಡುಬರಲಿಲ್ಲ. ಧೂಮ ಸೇವನೆಯು ಮಕ್ಕಳಿಗೆ ಬಹಳ ಹಾನಿಯನ್ನುಂಟುಮಾಡುತ್ತಿದೆ; ಅವರ ಪ್ರಾಣವನ್ನೇ ಹೀರುತ್ತಿದೆ; ಬುದ್ಧಿ ವಿಕಾಸದ ಮೊಳಕೆಯನ್ನೇ ಮುರಿದುಬಿಡುತ್ತದೆ; ಅವರನ್ನು ನಾನಾ ದುಷ್ಕೃತ್ಯಗಳಿಗೆ ಬಲಿ ಬೀಳುವಂತೆ ಮಾಡುತ್ತದೆ. ಅಪರಾಧಿಗಳೆಂದು ನನ್ನ ಬಳಿಗೆ ತರಲ್ಪಟ್ಟ ಸೇಕಡ 99 ಹುಡುಗರು ಸಿಗರೇಟ್ ಸೇದುವವರಾಗಿದ್ದರು, ಎಂದು ಹೇಳಿರುವರು. ಇದೇ ರೀತಿಯಲ್ಲಿ ಅನೇಕರು ಧೂಮ ಪಾನದ ಕುರಿತು ತಮ್ಮ ಅನುಭವಪೂರ್ವಕ ಅಭಿಪ್ರಾಯವನ್ನಿತ್ತು, ಅದನ್ನು ನಿಷೇಧಿಸಿರುವರು.

ಧೂಮಪಾನದ ಶಾರೀರಿಕ, ಮಾನಸಿಕ, ನೈತಿಕ ಪರಿಣಾಮಗಳಲ್ಲದೆ ಆರ್ಥಿಕ ಪರಿಣಾಮವೂ ಶೋಚನೀಯವಾಗಿದೆ. ತಿಂಗಳಿಗೆ 15 ಅಥವಾ 30 ರೂ. ಸಂಬಳವಿರುವ ಹಿಂದೀಯನೊಬ್ಬನು, ತನ್ನ ಎಳೆಮಕ್ಕಳಿಗೆ ಆಹಾರದ ಅಭಾವವನ್ನುಂಟುಮಾಡಿ ಅವುಗಳ ಜೀವನಕ್ಕಾಗಿ ಕೊಂಡದ್ದನ್ನು ತಾವಣೆ ಧೂಮಸೇವನೆಯಲ್ಲಿ ಸ್ವಚ್ಛಂದವಾಗಿ ವೆಚ್ಚಿಸುವುದಾದರೂ ಹೇಗೆ?

"ನವಯುಗ"

ಮಾರಾಟಕ್ಕೆ! (FOR SALE).

ಕಡಿಯತ್ತನಾಡ ನರ್ಸಂದರ ಗ್ರಾಮದಲ್ಲಿರುವ ಎಸ್. ಕೆ. ಗಣಪ್ಪಯ್ಯನವರ ಕೊಳಕೆರ ಭೂಮಿ, ಎಂದು 3—23 ಯೆಕ್ರೆ ಭೂಮಿ, 13—12 ವಿಸ್ತೀರ್ಣ ಬಾಣೆಯು ಸಹ ಮಾರಾಟಕ್ಕೆ ತಯಾರಿದೆ. ಕೊಂಡುಕೊಳ್ಳಲು ಅಪೇಕ್ಷೆಯುಳ್ಳವರು ಹೆಚ್ಚಿನ ವಿವರಕ್ಕೆ ಈ ಕೆಳಗಿನ ಅಡ್ರೆಸ್ಸಿನವರಿಗೆ ಬರಕೊಳ್ಳಬಹುದು.

ಎಸ್. ಎಸ್. ಶಂಕರನಾರಣೈಯ್ಯ,
ಕಾಫಿ ಪ್ಲಾಂಟರು,
ನರ್ಸಂದರ ಗ್ರಾಮ,
ಚಕ್ಕಬೆ ಪೋಸ್ಟು

ಕೊಡವ ಸಭೆ ಮೀಟಿಂಗು.

ಕೊಡವ ಸಭೆಯ ಜನರಲ್ ಮೀಟಿಂಗ್ ತಾ. 28—3—26 ರಲ್ಲು ಮಧ್ಯಾಹ್ನ 1ಗಂಟೆಗೆ ಮೋಡೆಲ್ ಸ್ಕೂಲ್ ಹಾಲಿನಲ್ಲಿ ಹಂಗಾಮಿ ಪ್ರೆಸಿಡೆಂಟರ ಅಧ್ಯಕ್ಷತೆಯಲ್ಲಿ ನಡೆಯಿತು. ಅಧ್ಯಕ್ಷರು ಈ ಸಭೆಯು ಸ್ಥಾಪಿತವಾಗುವದಕ್ಕೆ ದೇಶದಲ್ಲೆಲ್ಲ ಸುಳ್ಳು ವರ್ತಮಾನ ಹುಟ್ಟಿಸಿ ನಾಡು ಜನರ ಮನಸ್ಸನ್ನು ಅಲ್ಲೋಲ ಕಲ್ಲೋಲ ಪಡಿಸಿದ ಕೆಲವು ಮಹಾನುಭಾವರ ಅಭಿಪ್ರಾಯ ಕೇವಲ ಸ್ವಾರ್ಥತೆಯಿಂದ ಕೂಡಿದೆಂತಲೂ, ಇದಕ್ಕಾಗಿ ಸಭೆಗೆ ಜನರು ಪ್ರೋತ್ಸಾಹ ಕೊಡಲು ಬಹಳ ಅವಶ್ಯವೆಂಟಾಯಿತೆಂತಲೂ, ಹಂಗಾಮಿ ಕಮಿಟಿ ಮೆಂಬರುಗಳು ಈಗಿನ ಕೊಡಗಿನ ಸ್ಥಿತಿಗನುಗುಣವಾಗಿ ರೂಲ್ಸ್ ತಯಾರಿಸಿರುವರೆಂತಲೂ, ಇದನ್ನು ತಯಾರುಮಾಡಲು ತೊಂದರೆ ತೆಗೆದುಕೊಂಡ ಮೆ॥ ಕೋದಂಡ ಉತ್ತಯ್ಯ, ಪಾಲೆಕಂಡ ಮೇದಪ್ಪ, ಮಾಚಿಮಾಡ ದೇವಯ್ಯ ಮತ್ತು ಪುಚ್ಚಿಮಾಡ ನಾಣಯ್ಯ ಎಂಬುವರುಗಳಿಗೆ ಸಭೆಯು ವಂದಿಸುವದಾಗಿಯೂ ಹೇಳಿ ಸಭೆಯ ಮುಂದೆ ರೂಲ್ಸ್‌ಗಳನ್ನು ಚರ್ಚೆಗೆ ಇಟ್ಟರು. ದೇಶದ ಎಲ್ಲಾ ಕಡೆಯಿಂದ ಬಂದು ನೆರೆದ ಸುಮಾರು ಒಂದುನೂರೈವತ್ತು ಮಂದಿ ಮಹಾನುಭಾವರು ಮೆ॥ ಉತ್ತಯ್ಯನವರು ಓದಿದ ಹಾಗೆ ಪ್ರತಿಯೊಂದು ರೂಲ್ಸನ್ನು ಚೆನ್ನಾಗಿ ಚರ್ಚಿಸಿ ಕೆಲವನ್ನು ತಿದ್ದಿ ಕೆಲವನ್ನು [illegible] ಒಪ್ಪಿಕೊಂಡರು. [illegible] ಕೊಂಡು ತಿರುಗುವ ಕೆಲವು ಜನರಿಗೆ ದೇವರು ಒಳ್ಳೆ ಬುದ್ಧಿ ಕೊಡಲೆಂತಲೂ ಮೊದಲಾಗಿ ಸಭೆಯನ್ನು ಸ್ಥಾಪಿಸಿರುತ್ತೇನೆ ಎಂದು ಹೇಳಿ ಸಭಾ ಸ್ಥಾಪನೆಮಾಡಿದರು. ನಂತರ ಅಧ್ಯಕ್ಷರು ನಮ್ಮ ದೇಶದಲ್ಲಿ ಸಭಾ ಸ್ಥಾಪನೆಗಳು ಸುಲಭವಾಗಿ ಆಗುವದಾಗಿಯೂ ಸಭಾ ಕೈಕೊಂಡ ಕೆಲಸಗಳು ಬಹುಸುಸ್ಥಿತಿಯಿಂದ ನಡೆಯುವ ಮಾಮೂಲನ್ನು ಬಿಟ್ಟು ಈ ಸಭೆಯು ಮುತುವರ್ಜಿಯಿಂದ ಕೆಲಸಮಾಡಬೇಕಾಗಿ ಕೋರಿಕೊಂಡರು. ತದನಂತರ ಮೆ॥ ಕೋದಂಡ ಉತ್ತಯ್ಯನವರು ಸಭೆಯು ಸ್ಥಾಪಿತವಾಗಿ ರೂಲ್ಸ್‌ಗಳು ಮಂಜೂರಾಗಿರುವದರಿಂದ ಸದರಿ ರೂಲ್ಸ್ ಮೇರೆ ಈ ಸಭೆಯು ಡೆಲಿಗೇಟುಗಳ ಮೂಲಕ ನಡೆಯಬೇಕಾದ್ದರಿಂದ ಸದರಿ ಡೆಲಿಗೇಟುಗಳನ್ನು [illegible] ಒಳ್ಳೆ ಮತ್ತು ಒಂದು ವರುಷದ ವರೆಗೆ ಎಲ್ಲಾ ಕೆಲಸ ನಡಿಸುವದಕ್ಕೆ ಒಂದು ಸ್ಪೆಷಿಯಲ್ ಆಫೀಸ ಮಂಡಳಿ ನೇಮಕವಾಗಬೇಕೆಂಬ ಠರಾವು ತಂದದಕ್ಕೆ ಮೆ॥ ಪಾಲೆಕಂಡ ಮೇದಪ್ಪನವರು ಅನುಮೋದಿಸಿ ಮೆ॥ ಪಟ್ಟಂಡ ಬೋಪಯ್ಯನವರು [illegible] ಸರ್ವಾನುಮತದಿಂದ ಮಂಜೂರಾಯಿತು. ಸದರಿ ಮಂಡಳಿಗೆ ಈ ಕೆಳಗೆ ಕಂಡ ಚುನಾವಣೆ ಆಯಿತು.

1. ಪ್ರೆಸಿಡೆಂಟರು. ರಾವುಬಹದ್ದೂರ್ ಕೊಡಂದೇರ ಕುಟ್ಟಯ್ಯನವರು.

2. ವೈಸ್‌ಪ್ರೆಸಿಡೆಂಟರುಗಳು—ರಾವುಸಾಹೇಬ್ ಕೋಡಿಮಣ್ಯಂಡ ಸುಬ್ಬಯ್ಯನವರು, ಮೆ. ಅಪ್ಪಾರಂಡ ಚಂಗಪ್ಪನವರು, ಯಂ ಯಲ್. ಸಿ.

3 ಜನರಲ್ ಸೆಕ್ರೆಟರಿ ಮೆ. ಕೋದಂಡ ಉತ್ತಯ್ಯನವರು.

4. ಜನರಲ್ ಟ್ರೆಜರರ್. ಮೆ. ಅಪ್ಪಾರಂಡ ಮಾದಪ್ಪನವರು

70ಜನರು ಕಮಿಟಿಮೆಂಬರುಗಳಾಗಿ ಚುನಾಯಿಸಲ್ಪಟ್ಟರು. [ಸ್ಥಳಸಂಕೋಚದಿಂದ ಇವರ ಹೆಸರುಗಳನ್ನು ಪ್ರಕಟಿಸಲಾಗಲಿಲ್ಲ. ಸಂ.]

ಈ ಸಭೆಯ ರೂಲ್ಸುಗಳ ಇಂಗ್ಲಿಷ್ ಪ್ರತಿಯೊಂದನ್ನು ಕಮಿಶನರ್ ಸಾಹೇಬರವರಿಗೆ ಕಳುಹಿಸಬೇಕಾಗಿ ಮೆ. ಕುಟ್ಟಯ್ಯನವರು ತಂದ ಠರಾವನ್ನು ಕೇಳಪಂಡ ಅಚ್ಚಯ್ಯನವರು ಅನುಮೋದಿಸಿ ಸರ್ವಾನುಮತದಿಂದ ಮಂಜೂರಾಯಿತು.

ಈ ಸಭೆಯ ಪ್ರೊಸೀಡಿಂಗ್ಸನ್ನು ಎರಡು ಪತ್ರಿಕೆಗಳಿಗೂ ಕಳುಹಿಸಿಕೊಡಬೇಕಾಗಿ ಮಂಜೂರಾಗಿ ಸಭೆಯು ಭಂಗವನ್ನು ಆಯಿತು.

ಸಿ. ಯಸ್. ಉತ್ತಯ್ಯ,
ಜನರಲ್ ಸಕ್ರೆಟರಿ

ರೆಡ್ ಕ್ರಾಸ್ ಸಂಘದ ವಾರ.

ಮಡಿಕೇರಿಯಲ್ಲಿ ರೆಡ್ ಕ್ರಾಸ್ ಸಂಘದವಾರವು ತಾ. 3 ರಿಂದ 8ರವರೆಗೆ ಮಾರ್ಕೆಟಿನಲ್ಲಿ ನಡೆಯಿತು. ಪ್ರಥಮ ದಿನ ಬೆಳಗ್ಗೆ ಬೀದಿಗಳಲ್ಲಿ ಮಕ್ಕಳ ಮೆರವಣಿಗೆಯೂ, ಸಾಯಂಕಾಲ ರಾ ಬಾ. ಕೆ ಕುಟ್ಟಯ್ಯನವರ ಅಧ್ಯಕ್ಷತೆಯಲ್ಲಿ ಆರೋಗ್ಯ ಮತ್ತು ಕುಡಿಯುವ ನೀರಿನ ವಿಷಯ ರಿಟಯರ್ಡ್ ಸಬ್ ಅಸಿಸ್ಟೆಂಟ್ ಸರ್ಜನ್ ಕೊಂಗೆಟ್ಟಿರ ಮುಂದಣ್ಣನವರ ಭಾಷಣವೂ, ತಾ. 4ರಲ್ಲಿ ರಾ. ಸಾ ಕೆ. ಸುಬ್ಬಯ್ಯನವರ ಅಧ್ಯಕ್ಷತೆಯಲ್ಲಿ ಮಲೇರಿಯ ಜ್ವರದ ವಿಷಯ ಸಿ. ಅ. ಸರ್ಜನ್ ಮೆ. ಸಿ ಕಾರ್‍ಯಪ್ಪನವರ ಭಾಷಣವೂ ತಾ. 5ರಲ್ಲಿ ಮೆ. ಕೋದಂಡ ತಿಮ್ಮಯ್ಯನವರ ಅಧ್ಯಕ್ಷತೆಯಲ್ಲಿ ಶಿಶು ಸಂರಕ್ಷಣೆಯ ವಿಷಯ ಡಾ. ಎನ್ ಸಿ. ಅಪ್ಪಯ್ಯನವರ ಭಾಷಣವೂ ತಾ. 6ರಲ್ಲಿ ಮೆ. ಸಿ ಏ. ಬೆಳ್ಯಪ್ಪನವರ ಅಧ್ಯಕ್ಷತೆಯಲ್ಲಿ ಪ್ರಥಮ ಚಿಕಿತ್ಸೆಯ ವಿಷಯ ಸಿ ಅ. ಸರ್ಜನರಾದ ಮೆ. ಎ ಡಬ್ಲ್ಯು. ಕಾಳೈಯ್ಯನವರ ಭಾಷಣವೂ ಆದವು. ಆಯಾಯ ದಿನ ರಾತ್ರಿ 7 ಗಂಟೆಗೆ ಭಾಷಣದ ವಿಷಯ ಲ್ಯಾಂಟರ್ನ್ ಸ್ಲೈಡ್ಸ್‌ಗಳೂ ತೋರಿಸಲಾದವು. ತಾ. 7ರಲ್ಲಿ ಮಧ್ಯಾಹ್ನ 2 ಗಂಟೆಗೆ ಸಂಘದ ಪ್ರೆಸಿಡೆಂಟರಾದ ಮೆ. ಟಿ ಜೆ. ಟಾಸ್ಕರ್‌ರವರು ಆರೋಗ್ಯ ಪ್ರದರ್ಶನವನ್ನು ತೆರೆದರು. ನಂತರ ಮೆ. ಡಬ್ಲ್ಯು ಆರ್. ಕೈಟರವರ ಅಧ್ಯಕ್ಷತೆಯಲ್ಲಿ ವೆಟರಿನರಿ ಅ ಸರ್ಜನರಾದ ಮೆ. ಸಿ. ಸೋಮಣ್ಣನವರು ಆರೋಗ್ಯಕ್ಕೂ ಹಾಲಿಗೂ ಇರುವ ಸಂಬಂಧವನ್ನು ತಿಳಿಸಿ, ಮಾತಾಡಿದರು. ಮೆ ಸಿ ಪಿ ಮೇದಪ್ಪನವರು ಭಾಷಣ ಮಾಡಿದರು. 5 ಗಂಟೆಗೆ ಮೆ ಪಿ ಎ. ಮುತ್ತಣ್ಣನವರು ಆರೋಗ್ಯವನ್ನು ಕುರಿತು ಉಪನ್ಯಾಸಮಾಡಿದರು 7 ಗಂಟೆಗೆ ಓಂಕಾರೇಶ್ವರ ದೇವಸ್ಥಾನದ ಮುಂಭಾಗದಲ್ಲಿ ಮಹಿಳೆಯರಿಗೆ ಲ್ಯಾಂಟರ್ನ್ ಸ್ಲೈಡ್ಸ್‌ಗಳು ತೋರಿಸಲಾದವು. ತಾ. 8 ರಲ್ಲಿ ಮಧ್ಯಾಹ್ನ 1 ಗಂಟೆಗೆ ಶಿಶುಗಳ ಪ್ರದರ್ಶನವು, ಮಿಸೆಸ್ ಕೆ. ಸಿ. ತಿಮ್ಮಯ್ಯನವರಿಂದ ತೆರೆಯಲಾಯಿತು. ನಂತರ ಮೆ ಯಂ. ಯಂ. ಸಿದ್ದೀಕ ರವರ ಮತ್ತು ಮೆ. ಪಿ ಮಂಗೇಶರಾಯರ ಭಾಷಣವಾದಮೇಲೆ ಉತ್ತಮವಾದ 12 ಶಿಶುಗಳಿಗೆ ಬಹುಮಾನಗಳೂ ಪ್ರಥಮ ಚಿಕಿತ್ಸೆಯಲ್ಲಿ ಪಾಸಾದವರಿಗೆ ಸರ್ಟಿಫಿಕೇಟುಗಳೂ ಕೊಡಲಾದವು.

THE STUDENTS CONFERENCE

As it is proposed to commence a conference of the students of Coorg, all the students of Coorg are hereby requested to attend the same on the 17th April, at Napoklu. The Head Masters of the different Elementary schools are all requested to send their students for the same and encourage the organisation. M. R. Ry. K. M Chengappa, Avl, B. A, R. B. D. M. of Coorg, has kindly consented to preside. The students of the two High schools in Coorg are considered to be the backbones of the above convention, and hence are cardially requested to attend in order to avoid the failure of the same For meals and other conveniences, arrangements are made by Land Holders' Asso. Committee. The object of the convention will be announced there by the well wishers of the organisation.

B. M. Cariappa,
Organiser.

ನೋಟೀಸ್

ಬೆಂಗುನಾಡು ದನಗಳ ವಿಮಾಸಂಘದ ಲಿಕ್ವಿಡೇಶನ್ ಬಗ್ಗೆ ಒಂದು ಜನರಲ್ ಮೀಟಿಂಗ್ ಏಪ್ರಿಲ್ ತಾ 22ನೇ ಗುರುವಾರ ಮಧ್ಯಾಹ್ನ 2ಗಂಟೆಗೆ ಶಾಂತಿಗುಂಡದಕಟ್ಟೇರಿ ಬಳಿ ನಡೆಯುವದು. ಪ್ರತಿಮೆಂಬರಿಗೂ ಪ್ರತ್ಯೇಕ ನೋಟೀಸ್ ಕೊಟ್ಟದಲ್ಲದೆ ಈ ಮೂಲಕ ತಿಳಿಸಲಾಗಿದೆ. ಈ ಸಂಘದ ಸಿಲ್ಕು ಬಾಕಿ ರೂ. 523, 10, 5, ನ್ನು ವಿನಿಯೋಗಿಸುವದರ ಬಗ್ಗೆ ಈ ಮೀಟಿಂಗಿನ ಉದ್ದೇಶ. ಹಾಜರಾಗಲು ತಪ್ಪಿದವರು [illegible] ಈ ಸಂಗತಿಯೂ [illegible]

Mercara, P. C. Chengappa,
D. 7. 4. 26 Liquidator,
Banguad Cattle Insurance,
Society.

ಪ್ರಶ್ನಮಾಲಿಕೆ.

ಕರ್ನಾಟಕದ ಏಕೀಕರಣದ ಬಗ್ಗೆ.

(೧) ಹಿಂದುಸ್ಥಾನದಲ್ಲಿ ಭಾಷಾನುಕ್ರಮವಾಗಿ ಪ್ರಾಂತರಚನೆಯಾಗಬೇಕೆಂಬ ತತ್ವಕ್ಕೆ ತಮ್ಮ ಒಪ್ಪಿಗೆ ಇರುವದೋ?

(೨) ಸದ್ಯಕ್ಕಿದ್ದ ಬ್ರಿಟಿಶ ಪ್ರಾಂತಗಳ ರಚನೆಯು ಭಾಷಾನುಕ್ರಮದಿಂದ ಮಾಡಲ್ಪಟ್ಟಿಲ್ಲವೆಂಬದನ್ನು ತಾವು ಬಲ್ಲಿರೋ?

(೩) ಬ್ರಿಟಿಶ ಕರ್ನಾಟಕವು ಮುಂಬಯಿ, ಮದ್ರಾಸ, ಕೊಡಗು ಎಂಬ ಮೂರು ಬೇರೆ ಬೇರೆ ಆಡಳಿತಗಳಿಗೆ ಒಳಗಾಗಿದೆಯೆಂಬದು ತಮಗೆ ಗೊತ್ತಿರುವದೋ?

(೪) ಬ್ರಿಟಿಶ ಕರ್ನಾಟಕವು ಹೀಗೆ ಮೂರು ಆಡಳಿತಗಳಲ್ಲಿ ಹರಿದು ಹಂಚಲ್ಪಟ್ಟದ್ದರಿಂದ ಕರ್ನಾಟಕದ ಸಾಂಸ್ಕೃತಿಕ, ರಾಜಕೀಯ, ಔದ್ಯೋಗಿಕ, ಸಾಂಪತ್ತಿಕ ಪ್ರಗತಿಗೆ ಬಾಧೆಯುಂಟಾಗಿರುವದೆಂದು ನಿಮಗೆ ತೋರುವದಿಲ್ಲವೋ?

(೫) ಹಿಂದ ಸ್ಥಾನದಲ್ಲಿ ಬಂಗಾಲ ಹಾಗೂ ಆಸಾಮ ಪ್ರಾಂತಗಳು ಭಾಷಾನುಕ್ರಮದಿಂದ ರಚಿಸಲ್ಪಟ್ಟಿರುವವೆಂಬ ಸಂಗತಿಯೂ ಒರಿಸಾ ಹಾಗು ಆಂಧ್ರ ಪ್ರಾಂತಗಳು ಇದರ ಸಲುವಾಗಿಯೇ ಚಳವಳಿ ಮಾಡುತ್ತಿರುವವೆಂಬ ಸಂಗತಿಯೂ ತಮಗೆ ಗೊತ್ತಿರುವದಷ್ಟೇ?

(೬) ಭಾಷಾನುಕ್ರಮದಿಂದ ಪ್ರಾಂತರಚನೆ ಮಾಡಬೇಕೆಂಬ ತತ್ವವನ್ನು ಬ್ರಿಟಿಶ ಸರಕಾರದವರು ಒಪ್ಪಿಕೊಂಡಿರುವರೆಂಬದನ್ನು ತಾವು ಅರಿತಿರುವಿರೋ?

("ಇಂಡಿಯನ ಕಾನಸ್ಟಿಟ್ಯೂಶನಲ್ ರಿಫಾರ್ಮ" ದ ಮೇರೆ ಮಾಂಟೆಗ್ಯು ಮತ್ತು ಚೆಮ್ಸಫೋರ್ಡ ಸಾಹೇಬರು ಮಾಡಿದ ಪರಿಚ್ಛೇದ ೨೪೬ ಪಾನು ೧೯೮ ೧೯೯ ನೋಡಬೇಕು.)

(೭) ಭಾರತೀಯ ಮಹಾಸಭೆಯು (ಕಾಂಗ್ರೆಸ್ಸು) ಈ ತತ್ವಕ್ಕೆ ಒಪ್ಪಿಗೆಯನ್ನಿತ್ತು ೧೯೨೦ ರಲ್ಲಿ ಆದ ನಾಗಪುರದ ಅಧಿವೇಶನದಲ್ಲಿ ಭಾಷಾನುಕ್ರಮವಾಗಿ ಕಾಂಗ್ರೆಸ ಪ್ರಾಂತಗಳನ್ನು ಮಾಡಿ ಕರ್ನಾಟಕಕ್ಕೆ ಒಂದು ಪ್ರತ್ಯೇಕ ಕಾಂಗ್ರೆಸ ಪ್ರಾಂತವನ್ನು ಕೊಟ್ಟದ್ದು ತಮಗೆ ಗೊತ್ತಿರುವದೋ?

(೮) ನಮ್ಮ ಕರ್ನಾಟಕದ ಸದ್ಯದ ವಿಚ್ಛಿನ್ನ ಸ್ಥಿತಿಯನ್ನು ಲಕ್ಷ್ಯಕ್ಕೆ ತಂದರೆ ಈಗ ನಾವು ನಮ್ಮ ಕರ್ನಾಟಕವನ್ನು ಏಕೀಕರಿಸಿ ಭಾಷಾನುಕ್ರಮವಾದ ಒಂದು ಪ್ರಾಂತವನ್ನಾಗಿ ಮಾಡಿಕೊಳ್ಳದಿದ್ದರೆ ನಮ್ಮ ನೆರೆಹೊರೆಯ ಪ್ರಾಂತಗಳಲ್ಲಿ ನಾವು ಸಮಾವಿಷ್ಟರಾಗಿ ಹೋಗುವೆವೆಂದು ನಿಮಗೆ ತೋರುವದಿಲ್ಲವೋ?

(೯) ಎಲ್ಲ ವಿಷಯಗಳಲ್ಲಿಯೂ ಕರ್ನಾಟಕದ ಏಳ್ಗೆಯಾಗಬೇಕಾದರೆ ಕರ್ನಾಟಕವು ಒಂದು ಪ್ರತ್ಯೇಕ ಪ್ರಾಂತವಾಗುವದು ಅವಶ್ಯವಿರುವದೆಂದು ತಮಗೆ ತೋರುವದಿಲ್ಲವೋ?

(೧೦) ಒಂದು ಏಕೀಕೃತ ಕರ್ನಾಟಕ ಪ್ರಾಂತವಾಗಬೇಕೆಂಬ ಧ್ಯೇಯವನ್ನು ಸಾಧಿಸಿಕೊಳ್ಳಲಿಕ್ಕೆ ಯಾವ ಸಾಧನಗಳನ್ನು ತಾವು ಸೂಚಿಸುವಿರಿ?

(೧೧) ಈ ಏಕೀಕರಣದ ಬಗ್ಗೆ ತಮ್ಮ ಆಕ್ಷೇಪಗಳೇನಾದರೂ ಇವೆಯೋ? ಇಲ್ಲವಾದರೆ ಯಾವ ಆಕ್ಷೇಪಗಳಿಗಾದರೂ ಆಸ್ಪದವಿರುವದೋ?

(೧೨) ಈ ವಿಷಯದ ಬಗ್ಗೆ ಮತ್ತೇನಾದರೂ ಪ್ರಶ್ನೆಗಳು ತಮ್ಮ ಜ್ಞಾಪಕಕ್ಕೆ ಬರುವವೋ? ಬಂದರೆ ಅವುಗಳನ್ನು ಬರೆದು ಅವುಗಳಿಗೆ ದಯವಿಟ್ಟು ಉತ್ತರಗಳನ್ನು ಕೊಡಬೇಕು.

[ಕರ್ನಾಟಕ ಏಕೀಕರಣದ ಬಗ್ಗೆ ಜನರ ಅಭಿಪ್ರಾಯವನ್ನು ತಿಳಿಯಲಿಕ್ಕಾಗಿ ಕರ್ನಾಟಕ ಏಕೀಕರಣ ಸಭೆಯವರು ಮತ್ತು ಕರ್ನಾಟಕಪ್ರಾಂತೀಕ ಕಾಂಗ್ರೆಸ್ ಕಮಿಟಿಯವರು ಮೇಲಿನ ಪ್ರಶ್ನೆಗಳನ್ನು ತಯಾರಿಸಿ ಅವುಗಳಿಗೆ ಉತ್ತರಕೊಡಲಿಕ್ಕಾಗಿ ಹಲವು ಮಂದಿ ಮಹಾಶಯರುಗಳಿಗೆ ಕಳುಹಿಸಿರುವರು. ಕೊಡಗಿನಲ್ಲಿಯೂ ಕೆಲವರಿಗೆ ಕಳುಹಿಸಲ್ಪಟ್ಟಿದೆಯಾಗಿ ತಿಳಿಯುತ್ತೇವೆ. ಸಂ.]

ಡಾಕ್ಟರ್ ಎಸ್ ಎನ್. ಅಯ್ಯಂಗಾರ್, ಬಿ ಎ.,
ಎಲ್ ಆರ್ ಸಿ. ಪಿ. ಅಂಡ್. ಎಸ್. (ಎಡಿನ್‌ಬರ್ಗ್)
ಎಲ್. ಎಫ್ ಪಿ ಅಂಡ್ ಎಸ್., [ಗ್ಲಾಸ್‌ಗೊ]

ದಂತ ವೈದ್ಯರು

ಮಡಿಕೇರಿ ಮಹದೇವ ಪೇಟೆಯಲ್ಲಿ ಮೆ॥ ಯಂ. ಯಂ ಸಿದ್ದೀಕ್‌ರವರ ಅಂಗಡಿಯ ಎದುರಿನ ಮನೆಯಲ್ಲಿ ಇಳಿದುಕೊಂಡಿರುತ್ತಾರೆ. ಇವರು ಶೀಘ್ರದಲ್ಲೇ ಸೋಮವಾರಪೇಟೆಗೆ ಹೋಗುವುದಕ್ಕೆ ಮೊದಲು ತಾ. 20ರಿಂದ ಕೆಲವು ದಿನ ಮಡಿಕೇರಿಯಲ್ಲಿ ಉಳಿದುಕೊಳ್ಳುವುದರಿಂದ ಅವರನ್ನು ಅಲ್ಲಿ ಬೇಗನೆ ಭೇಟಿಮಾಡಿಕೊಳ್ಳುವುದು ಉತ್ತಮ.

ದಂತ ಸಂಜೀವಿನಿ.

ಯಾವ ತರದ ಹಲ್ಲುನೋವನ್ನಾದರೂ ಥಕ್ಕನೆ ಶಮನ ಮಾಡುವ ಶಕ್ತಿಯುಳ್ಳ ಈ ದಂತ ಸಂಜೀವಿನಿ ಕುಪ್ಪಿ ಒಂದಕ್ಕೆ ಕ್ರಯ ರೂ 1—0—0 ಮಾತ್ರ ಎಸ್. ರಾಮಣ್ಣ,
C/o ಡಾಕ್ಟರ್ ಎಸ್. ಎನ್. ಅಯ್ಯಂಗಾರ್,
48-14 ಮಹದೇವಪೇಟೆ ಮಡಿಕೇರಿ.

ವರ್ತಮಾನ ಸಂಗ್ರಹ.

ಒಳದೇಶ

ಮಡಿಕೇರಿ ಹೈಸ್ಕೂಲು ಬೇಸಿಗೆ ಕಾಲದ ರಜಕ್ಕಾಗಿ ಏಪ್ರಿಲ್ 20ರಿಂದ ಮೇ ತಿಂಗಳ 23ರ ವರೆಗೆ ಮುಚ್ಚಲ್ಪಟ್ಟಿದೆ.

ಸಹಕಾರಿ ಸೆಂಟ್ರಲ್ ಬ್ಯಾಂಕಿನ ಡೈರೆಕ್ಟರುಗಳ ಮೀಟಿಂಗು ತಾ 13ರಲ್ಲಿ ಮಡಿಕೇರಿಯಲ್ಲಿ ನಡೆಯುವುದು.

ಕಳೆದ ಶನಿವಾರ ಕೆಲವು ಕಡೆಗಳಿಗೆ ಮಳೆಯು ಚೆನ್ನಾಗಿ ಬಿದ್ದಿದೆ. ಈ ಮಳೆಯು ಕಾಫಿ ಫಸಲಿಗೆ ಅನುಕೂಲವಾದದ್ದು. ಮಡಿಕೇರಿಗೆ ಮಳೆಯು ಜೋರಾಗಿರಲಿಲ್ಲ.

ಫಾರೆಸ್ಟ್ ಎಕ್ಸ್‌ಟ್ರಾ ಅಸಿಸ್ಟೆಂಟ್ ಕನ್ಸರ್ವೇಟರಾದ ಮೆ ಚೋನೀರ ಬೆಳ್ಯಪ್ಪನವರಿಗೆ ಏಪ್ರಿಲ್ 10ರಿಂದ ಮೂರು ತಿಂಗಳು ರಜೆ ಮಂಜೂರಾಗಿದೆ.

ಪಂಚಾಯಿತಿ ಬಿಲ್ಲಿನ ಸೆಲೆಕ್ಟ್ ಕಮಿಟಿ ಮೀಟಿಂಗು ಈ ತಾ 7 ಮತ್ತು 8ರಲ್ಲಿ ಮರ್ಕರಾದಲ್ಲಿ ನಡೆದು ಬಿಲ್ಲು ಸೆಕ್ಷನ್‌ವಾರು ಚರ್ಚಿಸಲ್ಪಟ್ಟು ಕೆಲವು [illegible] ಮಾಡಲ್ಪಟ್ಟವೆಂದು ತಿಳಿಯಬರುತ್ತದೆ.

ಚೀಫ್ ಕಮಿಷನರವರು ತಾ 8ರಲ್ಲಿ ಬೆಂಗಳೂರಿನಿಂದ ಮಡಿಕೇರಿಗೆ ಬಂದರು. ಇವರು ಸ ವರು ಬಂದು ತಿಂಗಳವರೆಗೆ ಕೊಡಗಿನಲ್ಲಿರುವರೆಂದೂ ಇಲ್ಲಿ ಕೆಲವು ಕಾರ್ಯಗಳನ್ನು ವಿಚಾರಿಸುವರೆಂದೂ ವರ್ತಮಾನ.

ಮೆ ಕೆ ಪಿ ಚಿನ್ನಪ್ಪನವರು [illegible] ಪ್ರಿಂಟರ್ ಮತ್ತು ಪಬ್ಲಿಷರಾದ [illegible] ಸ್ಲೀಫ್ [illegible] ಹೊಸ ಮರ್ಕರಾದ ಮುದ್ರಣಾಲಯವನ್ನು [illegible] ಇಟ್ಟದ್ದು ಮುಂದುವರಿಸಲ್ಪಟ್ಟಿದೆಯೆಂದು [illegible]

ಬೆಕ್ಕೆತ್ತ್ಯನಾಡಿನ [illegible] ಯವರ ಕುಟುಂಬಸ್ಥರ ಕಾಫಿ [illegible] ತಾ 3ರಲ್ಲಿ ಡಿಸ್ಟ್ರಿಕ್ಟ್ ಮೆಜಿಸ್ಟ್ರೇಟರಾದ [illegible] ಯವರಿಂದ ತೆರೆಸಿದರು. ಈ ಕುಟುಂಬಸ್ಥರ [illegible] ದ ಕೆಲಸವು ಸ್ತೋತ್ರಾರ್ಹವಾಗಿದೆ.

ಕೊಡಗಿನ ಶಾಲೆಗಳ 7ನೇ ಮತ್ತು 8ನೇ ಸ್ಟೇಂಡಾರ್ಡ್ ಗಳ ಮತ್ತು III ಫಾರಮಿನ ವಿದ್ಯಾರ್ಥಿಗಳಿಗೆ ಕೆಲವು ಸಂಬಳಗಳಲ್ಲ ಈ ತಾ 6ರಲ್ಲಿ ಬೋರ್ಡ್ ಪರೀಕ್ಷೆಯು ನಡೆಯಿತು. ಈ ಪರೀಕ್ಷೆಯ ಫಲಿತಾಂಶವು ಸ್ಕೂಲ್ ಇನ್‌ಸ್ಪೆಕ್ಟರವರಿಂದ ಗೊತ್ತು ಮಾಡಲ್ಪಡುವುದು.

ಬೊಂಬಾಯಿಯಲ್ಲಿದ್ದ ಮೆ. ಅಲ್ಲಪಂಡ ಗಣಪತಿಯವರು ಕಳೆದ ತಾ 27ರಲ್ಲಿ ಅಲ್ಲಿಯ ಕಿಂಗ್ ಎಡ್ವರ್ಡ್ ಮೆಮೋರಿಯಲ್ ಆಸ್ಪತ್ರೆಯಲ್ಲಿ ಮೃತರಾದರೆಂದೂ, ಅವರ ಶವವನ್ನು ಅಲ್ಲಿರುವ ಕೊಡಗರು ಹಿಂದು ಪದ್ಧತಿಪ್ರಕಾರ ದಹನ ಮಾಡಿದರೆಂದೂ ತಿಳಿಯುತ್ತೇವೆ.

ಮೂರ್ನಾಡು ಬಾಡಗ ಗ್ರಾಮದ ಬ್ರಾಹ್ಮಣರ ಕೃಷ್ಣೈಯ್ಯನವರ ವಿಧವೆಯು ತಾ. 27—3—36ರಲ್ಲಿ ಬಲಮುರಿಯಲ್ಲಿ ಕಾವೇರಿ ನದಿಯಲ್ಲಿ ಸ್ನಾನಮಾಡುತ್ತಿದ್ದಾಗ ಆಕಸ್ಮಿಕವಾಗಿ ನೀರಿನಲ್ಲಿ ಕೊಚ್ಚಲ್ಪಟ್ಟು ನೀರಿನಲ್ಲಿ ಮುಳುಗಿ ಹೋದವಳನ್ನು ಬೇರೊಬ್ಬ ಹೆಂಗಸು ಬಂದು ದಡಕ್ಕೆ ತಂದು ಹಾಕಿದರೂ ಸ್ವಲ್ಪ ಹೊತ್ತಿನಲ್ಲೇ ಮೃತಳಾದಳು.

ಜಮೀನ್ದಾರರ ಸಂಘದ ವಾರ್ಷಿಕ ಸಮ್ಮೇಳನದ ಸಮಯದಲ್ಲಿ ಬೊಂಬಾಯಿ ಕರ್ನಾಟಕದಿಂದ ದೇಶಭಕ್ತ ಗಂಗಾಧರರಾವ್ ದೇಶಪಾಂಡೆ, ಶ್ರೀ|| ಶ್ರೀನಿವಾಸರಾವ್ ಕೌಜಲಗಿ, ಶ್ರೀ|| ಮುದವೀಡ್ಕರ್ ಕೃಷ್ಣರಾವ್, ಶ್ರೀ|| ಆರ್ ಆರ್ ದಿವಾಕರ್, ಶ್ರೀ|| ಶಂಭಾಜಿ ಮತ್ತು ಡಾಕ್ಟರ್ ಎಚ್ ಎಸ್ ಹರ್ಡೀಕರ್‌ರವರು ಮತ್ತು ನಾಪೋಕ್ಲಿಗೆ ಬರುವರೆಂದು ವರ್ತಮಾನವಿದೆ.

ಕೊಡಗಿನ ರಾಮಸ್ವಾಮಿ ಕ್ಷೇತ್ರದಲ್ಲಿ ಈ ತಾ 19ರಲ್ಲಿ ಅಂಕುರಾರ್ಪಣವೂ, 20ರಲ್ಲಿ ಧ್ವಜಾರೋಹಣವೂ 21ರಲ್ಲಿ ಗಂಗಾಭಿಷೇಕದ ರಥೋತ್ಸವಗಳೂ, 22ರಲ್ಲಿ ತೆಪ್ಪೋತ್ಸವವೂ 23ರಲ್ಲಿ ತೀರ್ಥಸ್ನಾನ ವಗೈರೆಗಳೂ ಜರಗುತ್ತವೆ. ಇದೇ ಸಮಯದಲ್ಲಿ ನಡೆಯುವ ಗೋಪ್ರದರ್ಶನದಲ್ಲಿ ಉತ್ತಮವಾದ ಜಾನುವಾರುಗಳಿಗೆ ಬಹುಮಾನಗಳೂ ಕೊಡಲ್ಪಡುವುವೆಂದು ತಿಳಿಯಬರುತ್ತದೆ.

ಗುಬ್ಬಿ ಶ್ರೀಚನ್ನಬಸವೇಶ್ವರ ನಾಟಕ ಮಂಡಳಿಯವರು ಮಡಿಕೇರಿಯಲ್ಲಿ ಇತ್ತಲಾಗಿ 'ಕಬೀರದಾಸ ಮತ್ತು ಕಾಳಿದಾಸ, ಎಂಬ ನಾಟಕಗಳನ್ನು ಅಭಿನಯಿಸಿರುವರು. ಆ ದಿನ ರಾತ್ರಿ ಸಕಾರಾಂ ನಾಟಕವನ್ನಾಡುವರು. ಅವರ ಉತ್ತಮ ನಾಟಕವಾದ ಕಬೀರದಾಸ ಚರಿತ್ರೆಯನ್ನಾಡಿದ ಪ್ರಥಮ ದಿನ ನಾಟಕ ಶಾಲೆಯು ಜನರಿಂದ ಕಿಕ್ಕಿರಿದುಹೋಗಿ ಸ್ಥಳವೇ ಇಲ್ಲದಾಗಿತ್ತು. ಬರುವ ಸೋಮವಾರ ಗುರೆಚಕಾವಳಿ, ಬುಧವಾರ ಸದಾರಮೆ, ಮತ್ತು ಶುಕ್ರವಾರ ಪುನಹ ಕಬೀರದಾಸ ನಾಟಕಗಳನ್ನು ಆಡುವರಂತೆ.

ಪೋಲೀಸು ಸಬ್ ಇನ್‌ಸ್ಪೆಕ್ಟರುಗಳಾದ ಮೆ ಕಳಿಯಂಡ ಮೆ [illegible]ನವರನ್ನು ಮಡಿಕೇರಿಯಿಂದ ಪೊನ್ನಂಪೇಟೆಗೂ ಮೆ. ಕೋದಂಡ ಸುಬ್ಬಯ್ಯನವರನ್ನು ಪೊನ್ನಂಪೇಟೆಯಿಂದ ಮಡಿಕೇರಿ ಪಟ್ಟಣಕ್ಕೂ, ಮೆ. ಕೋದಂಡ ಮುದ್ದಪ್ಪನವರನ್ನು ಮಡಿಕೇರಿಯಿಂದ ಸುಂಟಿಕೊಪ್ಪಕ್ಕೂ ಮೆ ಮಂಡೇಪಂಡ ಗಣಪತಿಯವರನ್ನು ಸುಂಟಿಕೊಪ್ಪದಿಂದ ಮಡಿಕೇರಿ ತಾಲೋಕಿಗೂ ಮೆ ಬಲ್ಲಚಂಡ [illegible]ರವರನ್ನು ನಾಪೋಕ್ಲಿನಿಂದ ಸಿದ್ದಾಪುರಕ್ಕೂ, ಮೆ ಕಂಡ್ರತಂಡ ಕಾಯಪ್ಪನವರನ್ನು ಸಿದ್ದಾಪುರದಿಂದ ನಾಪೋಕ್ಲಿಗೂ ಈ ತಾ 1ರಿಂದ [illegible] ಮಾಡಿರುವರೆಂದು ತಿಳಿಯುತ್ತೇವೆ.

ಹಿಂದೂದೇಶ.

ಮೆ ಸೆನ್ ಗುಪ್ತರವರು ಕಲ್ಕತ್ತಾ ಮುನ್ಸಿಪಾಲಿಟಿಯ ಪ್ರೆಸಿಡೆಂಟರಾಗಿ ಪುನಹ ಚುನಾಯಿಸಲ್ಪಟ್ಟಿರುವರು.

ಬೊಂಬಾಯಿ ಮುನ್ಸಿಪಾಲಿಟಿಯವರು ಮೆ ಆರ್ ಎಂ ಜಿರಾಜಿಯವರನ್ನು ತಮ್ಮ ಅಧ್ಯಕ್ಷರಾಗಿ ಆರಿಸಿರುವರು.

ಇಂಡಿಯಾದ ಪಬ್ಲಿಕ್ ಸರ್ವಿಸ್ ಕಮಿಷನಿನ ಅಧ್ಯಕ್ಷರಾಗಿ ಇಂಗ್ಲೆಂಡಿನ ಎಜ್ಯುಕೇಶನ್ ಬೋರ್ಡಿನ ಸೆಕ್ರೆಟರಿಯಾಗಿದ್ದ ಮೆ ಸರ್ [illegible]ರವರನ್ನು ನೇಮಿಸುವರು.

[illegible] ತಾ [illegible] ಬೊಂಬಾಯಿಯಿಂದ ಇಂಗ್ಲೆಂಡಿಗೆ ಪ್ರಯಾಣ ಹೋದರು. ಅದೇ ದಿನ [illegible] ವೈಸರಾಯರ ಪದವಿಯನ್ನು ವಹಿಸಿಕೊಂಡ [illegible] ಬೊಂಬಾಯಿ [illegible] ತಾ 1ರಲ್ಲಿ [illegible] ನಾಡಿನ [illegible]

[illegible] ಇಂಗ್ಲೆಂಡಿನ [illegible] ಕಾರ್ಯವನ್ನು [illegible] ನಡೆಸುವರು [illegible]

ಈ ತಾ [illegible] ದಲ್ಲಿ ಸಭೆ ನಡೆದ ಕಾಂಗ್ರೆಸ್ಸಿನಲ್ಲಿ ಸ್ವಾಗತ [illegible] ಇವರ [illegible] ಶ್ರೀನಿವಾಸ [illegible] ಅಧ್ಯಕ್ಷರಾಗಿಯೂ [illegible] ಸಹಕಾರಿಗಳಾಗಿ ಆರಿಸಲ್ಪಟ್ಟಿರುವರು.

ಉತ್ತರಹಿಂದೂಸ್ಥಾನದ ಪಂಜಾಬಿನ ಜಿಲ್ಲೆಯ ಮದೇರಿಯ ಪ್ರದೇಶದಲ್ಲಿ [illegible] ನದಿಯಲ್ಲಿ ವಿಶೇಷವಾದ ನೆರೆಯಿಂದ ಸಮೀಪದಲ್ಲಿನ ಗ್ರಾಮಗಳು ಕೊಚ್ಚಲ್ಪಟ್ಟವು. ಹಲವು ದೋಣಿಗಳು ಮುಳುಗಿಹೋದವು. ಅನೇಕ ಮನೆಗಳು ಬಿದ್ದುಹೋಗಿ ಸುಮಾರು 1000 ಕುಟುಂಬದವರಿಗೆ ಉಳಿಕೊಳ್ಳಲು ಸ್ಥಳವಿಲ್ಲದಾಗಿದೆ. ಸುಮಾರು ನೂರು ಜನರು ಮೃತಪಟ್ಟಿರುವರಂತೆ.

ಹರಿದ್ವಾರದ ಗುರುಕುಲದ ವಾರ್ಷಿಕೋತ್ಸವವು ತಾ 5ರಲ್ಲಿ ಮೆ [illegible] ವೈದ್ಯರವರ ಅಧ್ಯಕ್ಷತೆಯಲ್ಲಿ ನಡೆಯಿತು. [illegible] ಆ ವೇಳೆ 87000 ರೂ [illegible] ದಾನಿ ನೆರವಿನ [illegible] ಆಧಿಕ ಶಾಸ್ತ್ರವನ್ನು ಕಲಿಸಲಿಕ್ಕಾಗಿ [illegible] 30000 ರೂ ಕೊಡುವನಾಗಿ [illegible] ಬಹಾದೂರರವರ ಮೂಲಕ [illegible]

ಎರಡು ತಿಂಗಳು [illegible] ಹಿಂದೆ [illegible] ದಿನ [illegible] ಕಳೆದು ಹೋಗಿದ್ದವು [illegible] ರಹಸ್ಯವಾಗಿ [illegible] ಅವರ ಎರಡು ದಂತಗಳೂ ಮುರಿದು ಹೋಗಿದ್ದವು. ಇವನ್ನು [illegible] ಅವರ ಮೈಯಲ್ಲಿ ಎರಡು ದಂತಗಳ ತುದಿಗಳು ನಾಟಿಕೊಂಡಿದ್ದವೆಂದು ಸುದ್ದಿ.

ಸೆಂಟ್ರಲ್ ಖಿಲಾಫತ್ ಲೀಗಿನ 5ನೇ ಕಾನ್ಫರೆನ್ಸು ತಾ 3ರಲ್ಲಿ ಲಾಹೋರಿನಲ್ಲಿ ಬಾಬಾ ಗುರ್ದಿತ್ ಸಿಂಗರವರ ಅಧ್ಯಕ್ಷತೆಯಲ್ಲಿ ನಡೆಯಿತು. [illegible] ಬಿಟ್ಟು ಬಗ್ಗೆ [illegible] ಮಾಡಿದರು. [illegible] ಪ್ರತಿನಿಧಿತ್ವದಿಂದ [illegible] ಪ್ರಯೋಜನವುಂಟಾಗುವುದಿಲ್ಲವೆಂದೂ, [illegible] ಪ್ರತಿನಿಧಿತ್ವವನ್ನು [illegible] ಪ್ರಯತ್ನಿಸುವುದೇ ದೇಶದ ಏಳಿಗೆಯ [illegible] ಕೆಲಸವೆಂದೂ [illegible]

ಕನ್ನಡ [illegible] ನಾಡಿನಲ್ಲಿ ಕರ್ನಾಟಕದಲ್ಲಿಯೂ ದಕ್ಷಿಣ ದೇಶದಲ್ಲಿ ಕೀರ್ತಿಯನ್ನು ಪಡೆದಿದ್ದ ಮೆ [illegible] ವರದಾಚಾರ್ಯರು ಈ ತಾ 4ರ ರಾತ್ರಿ ಬೆಂಗಳೂರಿನಲ್ಲಿ ಮೃತರಾದದ್ದು ವ್ಯಸನಕರವು. ತಮ್ಮ 57ನೇ ವಯಸ್ಸಿನಲ್ಲಿ ಮೃತಪಟ್ಟ ಇವರು 28 ವರ್ಷಗಳಿಂದಲೂ ಅನೇಕ ಪೌರಾಣಿಕ ನಾಟಕಗಳನ್ನು ಅಭಿನಯಿಸುವುದರಲ್ಲಿ ಅಗ್ರಗಣ್ಯರೆನಿಸಿಕೊಂಡಿದ್ದರು. ಇವರಿಗೆ ಅನೇಕ ಬಹುಮಾನಗಳು ಕೊಡಲ್ಪಟ್ಟಿದ್ದವು. ಇವರು ತಮ್ಮ ಸಂಪಾದನೆಯಲ್ಲಿ ತುಂಬಾ ದ್ರವ್ಯವನ್ನು ಸಾರ್ವಜನಿಕ ಕೆಲಸಕ್ಕಾಗಿ ಕೊಟ್ಟು ಉದಾರಿಗಳೆನಿಸಿಕೊಂಡಿದ್ದರು. ಇವರ ಮರಣವು ಕರ್ನಾಟಕ ನಾಟಕ ಮಂಡಳಿಗೆ ದೊಡ್ಡ ನಷ್ಟವೇ ಸರಿ.

ಕಲ್ಕತ್ತಾ ಪಟ್ಟಣದಲ್ಲಿ ಕಳೆದವಾರ ಬಂದ ಮುಸಲ್ಮಾನರ ಮುಂದೆ ಆರ್ಯ ಸಮಾಜದವರ ಮೆರವಣಿಗೆಯು ದಾಟುತ್ತಿರುವಾಗ ಗಲಭೆಯುಂಟಾಗಿ ಹಿಂದೂ ಮುಸಲ್ಮಾನರೊಳಗೆ ಬಂಗಾಳ ಪ್ರಾಂತದ ಕೆಲವು ನಾಲ್ಕು ದಿವಸಗಳವರೆಗೂ ಅಲ್ಲಲ್ಲಿ ಕದನಗಳು ನಡೆದವು. ಹಲವರಿಗೆ ಗಾಯವುಂಟಾಯಿತು. ಸುಮಾರು 10 ಜನರ ವರೆಗೆ ಮೃತರಾಗಿರುವರಂತೆ. ಸುಮಾರು 300 ಜನರು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವರು. 300 ಜನರ ಮೇಲೆ ಕೇಸು ಹಾಕಲ್ಪಟ್ಟಿರುವರು. ಮಿಲಿಟರಿಯವರು, ಪೋಲೀಸಿನವರು ಮತ್ತು ಸ್ವಯಂಸೇವಕರು ಕದನಗಳು ಮುಂದರಿಯದಂತೆ ಎಚ್ಚರ ವಹಿಸಿಕೊಳ್ಳುತ್ತಿರುವರು. ಮುನ್ಸಿಪಾಲಿಟಿಯ ಅಧ್ಯಕ್ಷರ ಕೋರಿಕೆ ಮೇರೆ ಪಟ್ಟಣದ ಪ್ರಮುಖ ನಿವಾಸಿಗಳ ಕಾನ್ಫರೆನ್ಸು ನಡೆದು ಮುಂದೆ ಗಲಭೆ ನಡೆಯದಂತೆ ಎಚ್ಚರ ತೆಗೆದುಕೊಳ್ಳಲು ಏರ್ಪಡಿಸುವಂತೆ ತೀರ್ಮಾನಿಸಿರುವರು.

ವಿದೇಶ.

ಚೈನಾದ ಪೆಕಿಂಗ್ ಪಟ್ಟಣದ ಮೇಲೆ ನಾಲ್ಕು ದಿವಸಗಳಿಂದ ಜಪಾನಿನ ಶತ್ರುಗಳು ಹಾರಿಸುತ್ತಿರುವರು. ಉಭಯ ಪಕ್ಷದವರು ರಾಜಿ ಸಂಧಾನಕ್ಕೆ ಪ್ರಯತ್ನಿಸುತ್ತಿರುವರಂತೆ.

ಗ್ರೀಸಿನ ಸರಕಾರದ ಅಧ್ಯಕ್ಷರ ಚುನಾವಣೆಯನ್ನು ಒಂದು ವಾರ ಮುಂದರಿಸಬೇಕೆಂದು ಕೇಳಿಕೊಂಡದ್ದಕ್ಕೆ ಸರಕಾರದವರು ಒಪ್ಪಿಕೊಳ್ಳದೆ ಅಲ್ಲಿಯ ಯುನೈಟೆಡ್ ಪಂಗಡದವರು ಸದರಿ ಚುನಾವಣೆಯನ್ನು ಬಹಿಷ್ಕರಿಸಿರುವರು.

ಜಪಾನ್ ದೇಶದ ಟೋಕಿಯೋ ಎಂಬಲ್ಲಿ ಒಂದು ಭಯಂಕರವಾದ ಬೆಂಕಿ ಉಂಟಾಗಿ ಒಂದು ದಿನವೆಲ್ಲಾ ಕೆಡಿಸಲಾಗದೆ ಹೋಯಿತು. 612 ಮನೆಗಳು ಸುಟ್ಟುಹೋಗಿ ಸುಮಾರು 4000 ಜನರಿಗೆ ಮನೆಮಠಗಳಿಲ್ಲದಾಗಿದೆ. 32 ಜನರ ಪ್ರಾಣನಷ್ಟವಾಯಿತು.

ಇಂಗ್ಲೆಂಡಿನ ವೃತ್ತಪತ್ರಿಕೆಗಳು ವೈಸರಾಯಿ ಪದವಿಯಿಂದ ನಿವೃತ್ತರಾಗಿ ಇಂಗ್ಲೆಂಡಿಗೆ ವಾಪಸು ಹೋದ ಲಾರ್ಡ್ ವಿಲಿಂಗ್‌ಡನ್‌ರವರು ವೈಸರಾಯರಾಗಿ ಬ್ರಿಟಿಷ್ ಸಾಮ್ರಾಜ್ಯಕ್ಕೆ ಮಾಡಿದ ಕೆಲಸಗಳನ್ನು ಹೊಗಳಿ ಇಂಗ್ಲಿಷ್ ಜನಾಂಗವು ಅವರಿಗೆ ಕೃತಜ್ಞರಾಗಿದ್ದಾರೆಂದು ಸೂಚಿಸುತ್ತಿವೆ.

ಪತ್ರವ್ಯವಹಾರ

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ಪತ್ರಿಕಾ ಕರ್ತರು ಉತ್ತರವಾದಿಗಳಲ್ಲ. ಸಂ

ನಾಪೋಕ್ಲು ಮೀಟಿಂಗು.

ಅಯ್ಯಾ,

ತಾರೀಖು 3—4—36ರಲ್ಲು ನಾಪೋಕ್ಲು ಬೋರ್ಡ್ ಸ್ಕೂಲಿನಲ್ಲು ಜಮೀನ್ದಾರರ ಸಂಘದ ಸ್ವಾಗತ ಕಮಿಟಿ ಮೀಟಿಂಗಿಗೆ ಹಳೇ ಪಾಡಿನಾಲ್ಕುನಾಡು ತಾಲೋಕಿನವರೆಲ್ಲ ಸೇರಿ ಮೆ ಕೋದಂಡ ಅಪ್ಪಯ್ಯ ಅರ್ ಪಿ ಯವರಾದ ಆ ಸಂಘದ ಪ್ರೆಸಿಡೆಂಟರ ಅಧ್ಯಕ್ಷತೆಯಲ್ಲು ಒಂದು ಮೀಟಿಂಗ್ ನಡೆಯಿತು. ಸದರಿ ಮೀಟಿಂಗಿನಲ್ಲು ಈ ತಾ 17, 18, 19ರಲ್ಲು ನಡೆಯಬೇಕಾದ ಕಾರ್ಯಕ್ರಮಗಳ ಪಟ್ಟಿಯಲ್ಲು ಮೆ ಕೋದಂಡ ಅಪ್ಪಯ್ಯ ಒಟ್ಟೆಯಂಡ ನಂಜಪ್ಪ ವಗೈರೆ ಹೆಸರಿನಿಂದ ಕೊಡಗು ದೇಶದಲ್ಲೆಲ್ಲಾ ಬಟವಾಡೆಯಾಗಿರುವ ಮಸ್ತಪತ್ರಿಕೆಯಂತೆ ತಾ 18ರಲ್ಲು ಕೊಡವಸಭೆ ಬೇಕೋ ಬೇಡವೋ ಎಂಬ ವಿಷಯಕ್ಕೆ ಜಮೀನ್ದಾರರ ಸಂಘದಲ್ಲು ಸ್ಥಳಕೊಡಬೇಕಾಗಿ ಮೆ ಕೋಟೆರ ಚಿಣ್ಣಪ್ಪನವರು ತಂದ ಠರಾವು ಚರ್ಚೆಯಿಂದ ಕೊಡವಸಭೆ ಸ್ಥಾಪನೆಯಾಗಿರುವುದರಿಂದಲೂ ಈ ಸಂಗತಿ ಜಾತಿ ಪದ್ಧತಿಯದಾದ್ದರಿಂದ ಜಮೀನ್ದಾರರ ಸಂಘದಲ್ಲಿ ಚರ್ಚಿಸ ಹಕ್ಕಿಲ್ಲವಾದ್ದರಿಂದ ಎಡೆಕೊಡಲಾಗದೆಂದು ಮೂದಂಡ ಮುಂದಣ್ಣನವರು ವಿರೋಧಿಸಿದ್ದಕ್ಕೆ ಮೆ ಮುಕ್ಕಾಟಿರ ಉತ್ತಯ್ಯನವರು ಬಹುಮತದಿಂದ ಜಮೀನ್ದಾರರ ಸಂಘದಲ್ಲು ಎಡೆಕೊಡಲು ಆಗುವದಿಲ್ಲ ಹಾಗಿ ತೀರ್ಮಾನವಾಯಿತು.

ಉದಿಯಂಡ ಮಾಚ್ಚಯ್ಯ.

ಕಡಿಯತ್ತುನಾಡಿನ ಪಾರಾಣೆ ಶಾಲೆ

ಅಯ್ಯಾ,

ಪಾರಾಣೆಯಲ್ಲಿ ಬಾಲಕ ಬಾಲಕಿಯರ ಸ್ಕೂಲು ಬೇರೆಬೇರೆಯಾಗಿದ್ದು ಬಾಲಕರ ಸ್ಕೂಲಿನಲ್ಲಿ ಸುಮಾರು 50—60 ವಿದ್ಯಾರ್ಥಿಯಾಗ ಮಾತ್ರ ಸ್ಥಳವಿದೆ. ಸದರಿ ಸ್ಕೂಲಿಗೆ ಆಜುಬಾಜಿನ ಕೊಣಂಜಗೇರಿ, ಬಲಮುರಿ, ಬಾವಲಿ, ಕೈಕಾಡು, ಕಿರುಂದಾಡು, ಕುಂಜಿಲಗೇರಿ ವಗೈರೆ ಗ್ರಾಮಸ್ಥರ ಮಕ್ಕಳು ಬರುವವರಾಗಿದ್ದಾರೆ. ಸ್ಕೂಲಿನಲ್ಲಿ ಸ್ಥಳ ಇಲ್ಲದೆ ಇರುವದರಿಂದ ಹಲವು ವಿದ್ಯಾರ್ಥಿಗಳು ಬರುವದು ಬಾಕಿಯಾಗಿದೆ. ಸದರಿ ಸ್ಥಳದಲ್ಲಿ ಮೇಲ್ಕಂಡ ಗ್ರಾಮದ ಮಕ್ಕಳಿಗೆ ವಿದ್ಯೆ ಕಲಿಸುವ ಬಗ್ಗೆ ಸರಕಾರದವರು [illegible] ಹಾಲಿ ಇರುವ [illegible] ಕಟ್ಟಡವನ್ನು ಹೆಚ್ಚಿಗೆ ಸೇರಿಸಿ [illegible] ಈ ಭಾಗದ [illegible] ಸರಕಾರದವರು ಸಹಾಯ ಸಾಲದಕ್ಕೆ ಮೇಲ್ಕಂಡ [illegible] ಗ್ರಾಮಸ್ಥರು ಸದರಿ ಸ್ಕೂಲು ಕಟ್ಟಡಕ್ಕೆ ಕರ್ತವ್ಯ ಸಾರ ಸಹಾಯ ಒದಗಿಸಲು ಸರ್ವರು ತಯಾರಿದ್ದಾರೆ ತೆಗೆದುಕೊಂಡು ದ್ರವ್ಯ ಸಹಾಯ ಕೊಡುವದಲ್ಲದೆ ಸಂಬಂಧಪಟ್ಟವರೆಲ್ಲರಿಗೂ ಅನುಕೂಲ ಕೊಟ್ಟರೆ ನಮ್ಮ ಮುಂದಿನ ಮಕ್ಕಳ ಅಭಿವೃದ್ಧಿಗೆ ಅನುಕೂಲವಾಗುವುದು. ಈ ವಿಷಯದಲ್ಲಿ ಸರಕಾರದವರು ಮತ್ತು ಆಯಾಯ ಗ್ರಾಮಸ್ಥರು ಸ್ಕೂಲು

ಪಂಚಾಯತರು ಅಲ್ಲದೆ ಸ್ಕೂಲುಮಾಸ್ತರವರು ಹೆಚ್ಚಿನ ಪ್ರಯತ್ನಗಳನ್ನು ತೆಗೆದು ಕಾಲ ವಿಳಂಬವಿಲ್ಲದೆ ಸ್ಕೂಲು ಕಟ್ಟಿಡುವನ್ನು ಮಾಡಬಹುದೆಂದು ನಂಬುತ್ತೇನೆ.

ಮಕ್ಕಳ ತಂದೆ.

ವಿರಾಜಪೇಟೆ ಹೈಸ್ಕೂಲಿನ ಪಾಡು.

ಮಹಾಶಯರೆ,

ಒಂದು ಶಾಲೆಯ ಕೆಲಸ ಮತ್ತು ಅಭಿವೃದ್ಧಿಯನ್ನು ಸ್ಕೂಲ್ ಫೈನಲ್ ಪರೀಕ್ಷೆಯ ಫಲಿತಾಂಶದಿಂದೆಣಿಸುವುದು ಯುಕ್ತವಲ್ಲವೆಂದು ಮೆ. ಜಿ. ಕೆ. ಚೆಟ್ಟೂರರವರು ತಮ್ಮ ಭಾಷಣದಲ್ಲಿ ಹೇಳಿದ್ದು ಕಿವಿಯಲ್ಲಿ ಕೇಳಿದವರಿಗೂ, ಪತ್ರಿಕೆಯಲ್ಲಿ ಓದಿದವರಿಗೂ ನೆನಪಿರಬಹುದೆಂದು ಊಹಿಸೋಣವಾಗಿದೆ. ಇವರ ಈ ವಾಕ್ಯಾರ್ಥವು ಈ ಸ್ಕೂಲಿಗೆ ಸರಿಹೋಲುವುದು. ಈ ಶಾಲೆಯ ಹುಡುಗರಲ್ಲಿ ಐದಾರು ಮೈಲಿಗಳ ದೂರದಿಂದ ಓದುವವರೇ ಹೆಚ್ಚು. ಅವರಿಂದೇನು ಮಾಡಲಾದೀತು? ಶಾಲೆಯಲ್ಲಿ ಪಾಠಕ್ಕೆ ಮನಸ್ಸಿಡಲಾಗೀತೇ ಅಥವ ಅವರಿಗೆ ಮನೆಯಲ್ಲಿ ಮಾಡಲಿಕ್ಕೆ ಕೊಟ್ಟ ಕಲಸವನ್ನು ಮಾಡುವರೇ? ಇಲ್ಲ. ಇದರ ಬದಲು ಬೇರೆ ಯಾರಾದರೂ ಮಾಡಿದ್ದನ್ನು ಕೇಳಿಕೊಂಡು ನಕಲು ಮಾಡುವರು. ಇಂಥವರಿರುವಾಗ ಶಾಲೆಯ ಸ್ಕೂಲ್ ಫೈನಲ್ ಪರೀಕ್ಷೆಯ ಫಲಿತಾಂಶವು ಚೆನ್ನಾಗಿರುವುದೇ? ಇವರ ತಂದೆತಾಯಿಗಳ ಇಚ್ಛೆಯು, ತಮ್ಮ ಮಕ್ಕಳು ಮನೆಯಲ್ಲಿ ಆನಂದವನ್ನೂ, ಶಾಲೆಯಲ್ಲಿ ವಿದ್ಯೆಯನ್ನೂ ಕಲಿಯಬೇಕೆಂದು. ಇದು ಎಂದಾದರೂ ಸಾಧ್ಯವೇ? ಮಕ್ಕಳಿಗೆ ಬೇಕಾದ ಅನುಕೂಲತೆಗಳು ಅವರ ಮನಸ್ಸಿಗೆ ತೋರುವುದೇ ಇಲ್ಲ. ಹೀಗಿರುವುದರಿಂದ ಈ ಶಾಲೆಯ ಹುಡುಗರ ಸ್ಥಿತಿ ಪಟ್ಟಣದಲ್ಲಿ ವಾಸಮಾಡುವವರು ಬಹಳ ಕಮ್ಮಿ, ಬೋರ್ಡಿಂಗ್ ಕಟ್ಟಡದಲ್ಲಿ ಹೆಚ್ಚು ಹುಡುಗರಿಗೆ ಸ್ಥಳವಿಲ್ಲ. ಇದು ಶಾಲಾಧಿಕಾರಿಗಳ ಚಿತ್ತಕ್ಕೆ ಬರಲೇ ಇಲ್ಲ. ಏನು ಮಾಡಲಾದೀತು? ಯೂನಿಯನ್ ಸಿ. ಕಮಿಟಿಯವರ ಸಹಾಯವು ಶಾಲಾ ಹುಡುಗರ ಡಿಬೇಟಿಂಗ್ ಸೊಸೈಟಿಯಲ್ಲಿ ಹುಡುಗರ ಚರ್ಚೆಯ ಹಾಗೆ, ಶಾಲಾ ಉಪಾಧ್ಯಾಯರು ಮುತುವರ್ಜಿಯಿಂದ ಕೆಲಸಮಾಡುವುದರಿಂದ ಈ ಶಾಲೆಯ ಅಭಿವೃದ್ಧಿಯು ಇಷ್ಟರ ಮಟ್ಟಿಗಾದರೂ ಇದೆಯಲ್ಲದೆ ಬೇರೆ ಯಾವ ಕಾರಣದಿಂದಲೂ ಅಲ್ಲ.

ಈ ಶಾಲೆಯು ಅಭಿವೃದ್ಧಿಯನ್ನು ಹೊಂದಬೇಕಾದರೆ ಸರಕಾರದವರೂ, ದೇಶದ ಪಕ್ಷಪಾತರಹಿತ ದ್ರವ್ಯಸಹಾಯವೂ ಬೇಕು. ಕಳೆದ ಸಾರಿ ಶಾಲಾ ಹುಡುಗರ ಸ್ಪೋರ್ಟ್ಸಿಗೆ ಈ ಸ್ಥಳದ ಧನವಂತರು ಸಾಧಾರಣ 30 ರೂ ಬಹುಮಾನಾರ್ಥವಾಗಿ ಕೊಟ್ಟರಂತೆ! ಇದೀಗ ಪರೋಪಕಾರ, ಇದೀಗ ದೇಶಸೇವೆ, ಇದೀಗ ಶಾಲಾ ಹುಡುಗರ ಮೇಲಿನ ಪ್ರೇಮ. ಹೀಗೆಯೇ ಎಲ್ಲರೂ ಸಹಾಯಮಾಡಿದರೆ ಶಾಲೆಯ ಅಭಿವೃದ್ಧಿಗೆ ಯಾವ ಕೊರತೆಯಾದರೂ ಬರಬಹುದು. ಇತರ ದೇಶಗಳಲ್ಲಿ ನೂತನ ತರದ ಶಿಕ್ಷಣಗಳನ್ನು ತಂದು ಹಿಡಿಯಲೂ, ವಿದ್ಯಾರ್ಥಿಗಳ ಅನುಕೂಲತೆಗಳನ್ನು ಹೆಚ್ಚಿಸಲೂ ವಿಶೇಷವಾಗಿ ಧನವನ್ನು ವೆಚ್ಚಮಾಡುತ್ತಾರೆ. ಕೊಡಗಿನಲ್ಲಿಯಾದರೋ, ಪ್ರತಿವರ್ಷವೂ ಆಗುವ ಖರ್ಚಲ್ಲದೆ (Recurring Expenditure) ವಿದ್ಯಾಭಿವೃದ್ಧಿಗೆ ಬೇರೆ ಖರ್ಚಾದದ್ದು ನನಗೆ ನೆನ. ಈ ಮುಂದಿನ ವರ್ಷಕ್ಕಾಗಿ ಇನ್ನೂ ನನಪಿರುವುದಿಲ್ಲ. ಕೌನ್ಸಿಲ್ ಮೆಂಬರುಗಳು ವಿಧ್ಯಾಭ್ಯಾಸದ ವಿಷಯ ಬಹಳ ಯೋಚಿಸುತ್ತೇವೆಂದರು. ಇವರಿಂದೇನಾದರೂ ಸಾಧ್ಯವಾಯಿತೇ? ತಿಳಿಯಲಪೇಕ್ಷಿಸುವೆನು.

ಇಷ್ಟೇ ಅಲ್ಲ. ಸರಕಾರದವರು ಈ ಸ್ಕೂಲಿನ ಅಭಿವೃದ್ಧಿಗೆ ಸಹಾಯ ಮಾಡಿದ್ದನ್ನು ಕೇಳುವಾಗ ನನಗೇನೇ ಬಹಳ ವ್ಯಸನವಾಗುತ್ತೆ. ಈ ಶಾಲೆಯ ಸ್ಥಿತಿಗ ಸರಿಯಾದ ಅನುಕೂಲತೆಗಳಿಲ್ಲವೆಂಬ. ನಮಗೆಲ್ಲರಿಗೂ ತಿಳಿದೇ ಇದೆ. ಇದು ಹೈಸ್ಕೂಲ್ ಆದ್ದರಿಂದ ಇಲ್ಲಿ ಅನೇಕ ಮೀಟಿಂಗ್‌ಗಳೂ, ಡಿಬೇಟಿಂಗ್ ಸೊಸೈಟಿ ಮೆಂಬರುಗಳ ಕೂಟಗಳೂ, ಶಾಲೆಯ ವಾರ್ಷಿಕೋತ್ಸವಗಳೂ ವಾರವಾರವೂ ವರ್ಷವರ್ಷವೂ ನಡೆಯುತ್ತಾ ಇರುವುದು. ಡಿಬೇಟಿಂಗ್ ಸೊಸೈಟಿಯ ಒಂದು ಪಬ್ಲಿಕ್ ಮೀಟಿಂಗ್ ನಡಿಸಬೇಕಾದರೆ ಬೋರ್ಡ್ ಸ್ಕೂಲ್ 'ಹಾಲಿಗೆ' ಹೋಗಬೇಕು. ಶಾಲೆಯ ವಾರ್ಷಿಕೋತ್ಸವದ ಕೆಲಸ ನಡಿಸಬೇಕಾದರೆ ಅಲ್ಲಿಗೇನೇ ಹೋಗಬೇಕು. ಅದಕ್ಕೆ ಶಾಲಾ ಅಧಿಕಾರಿಯ ಅಪ್ಪಣೆಬೇಕು. ಕುರ್ಚಿ, ಮೇಜು ಇವೇ ಮೊದಲಾದ ಸಾಮಾನುಗಳನ್ನು ಅಲ್ಲಿಗೆ ಕೊಂಡೊಯ್ಯಬೇಕು. ಶಾಲೆಯ ಕಳೆದ ವಾರ್ಷಿಕೋತ್ಸವದ ಸಮಯದಲ್ಲಿ ಶಾಲೆಯ ಹುಡುಗರೂ, ಉಪಾಧ್ಯಾಯರೂ ತಮ್ಮ ಆಟದಾಟಗಳನ್ನು ತೋರಿದ. ದೃಶ್ಯವನ್ನು ಜ್ಞಾನದೃಷ್ಟಿಯು ಪಡೆಯಲಿಕ್ಕೆ ನಿಗದಿ, ಕಣ್ಣಾರೆ ಕಂಡ ನನಗೂ ತಿಳಿಯುವುದಲ್ಲದೆ ಸರಕಾರದವರಿಗಾಗಲೀ, ಸೋದರರಿಗಾಗಲೀ ಅಲ್ಲ. ಹೀಗಿರುವಾಗ ಅವರು ಸರಕಾರದವರನ್ನು ಒಂದು ದೊಡ್ಡ 'ಹಾಲಿಗೆ' ಕೇಳುವಾಗ, ಸರಕಾರದಲ್ಲಿ ಹಣವಿಲ್ಲವಂತೆ! ಇಲ್ಲಿಯ ಡಿಬೇಟಿಂಗ್ ಸೊಸೈಟಿಗೊಂದು, ಪ್ರತ್ಯೇಕ ಕೋಣೆಯೂ, ಶಾಲೆಗೆ ಕೆಲವು ಹೆಚ್ಚಿನ ಅಂಕಣಗಳೂ ಬೇಕು. ಇವಕ್ಕೆ ಹಣವಿಲ್ಲವಂತೆ, ಇಲ್ಲಿಯ ಬೋರ್ಡಿಂಗಿನ ಪಾಡು—ಶಿವಾ! ಇದನ್ನು ಅಭಿವೃದ್ಧಿಸಲು ಹಣವಿಲ್ಲವಂತೆ, ಇಲ್ಲ ಗಣಿತಶಾಸ್ತ್ರವನ್ನು ಕಲಿಸಲು ಹಣ ಸಾಲದಂತೆ, ಮಡಿಕೇರಿ ಹೈಸ್ಕೂಲಿನಲ್ಲಿ ಹೆಚ್ಚಾಗಿ ಗ್ರ್ಯಾಜ್ಯುಯೇಟ್ ಉಪಾಧ್ಯಾಯರು; ಇಲ್ಲಿಯಾದರೋ ಮೂವರು ಮಾತ್ರ—ಇವರ ಸಂಖ್ಯೆಯನ್ನು ಹೆಚ್ಚಿಸಲು ಹಣವಿಲ್ಲವಂತೆ, ಒಂದು ಆಟದ ಮೈದಾನ ತಯಾರುಮಾಡಲು ಇಂಜಿನೀಯರು ಎಸ್ಟಿ-

ಮೇಟ್ ಮಾಡಿ, ಸೈಟ್ ಕಮಿಟಿಯವರು ನೋಡಿ, ಈ ವರುಷ ಮಾಡುತ್ತೇವೆಂದು ಹೇಳಿದರು, ವರ್ಷವೃತೀರುತ್ತಾ ಬಂತು, ಕೆಲಸವು ನಿದ್ರಿಸುತ್ತಿರುವುದು. ಮಡಿಕೇರಿಯವರಂ ಅದೃಷ್ಟವು ಒಳ್ಳೆಯದು. ಮೂರು ಆಟದ ಮೈದಾನಗಳಿದ್ದರೂ, 1500 ರೂ. ಖರ್ಚುಮಾಡಿ ಇನ್ನೊಂದರ ಕೆಲಸವು ತೀರಿತೆಂದು ವರ್ತಮಾನ. ಹೀಗೆಯೇ ಒಂದು ಶಾಲೆಯ ಗತಿ" ವೊರಟಾ ಕುಣಿಕೇ ಪಾಲ್ ಕೊಡ್ ಪಂಜಿ ವೊರದತಾನ ಮುಲೆಕ್ಕೊಕ್ಯವ್ ದಾ?,,

ಮನನೊಂದವ.

ಹೆಬ್ಬಾಲೆಯಲ್ಲಿ ಕುಡಿಯುವನೀರು.

ಅಯ್ಯಾ,

ತಾ. 7—2—26ರಲ್ಲು ಯಾರೋ ಒಬ್ಬರು ಮೋಟಾರ್ ಬೈಸಾಕಲ್ಲಿನಲ್ಲಿ ಕಣಿವೆ ಹೋಬಳಿ ಹೆಬ್ಬಾಲೆ ಬೋರೆ ಬಳಿ ಬಂದು, ಅಲ್ಲಿದ್ದ ಕೆಲವು ಜನರ ಸಂಗಡ ಹಿರೀಕೆರೆಗೆ ಪಂಪುತುದಗಿ ಈ ಗ್ರಾಮಕ್ಕೆ ನೀರು ತಂದರೆ ಪಂಪು ಇಡುವ ಜಾಗದಲ್ಲಿ ಆನೆ ಕಾಟ, ಪಂಪು ಹಾಳುಮಾಡುತ್ತವೆ. ಇದರಿಂದ ಆಗಾಗ್ಯೆ ಬಹಳ ತಾಪತ್ರಯಕ್ಕ ಬರುತ್ತದೆ; ಅಲ್ಲದೆ ಪಂಪು ಹುಡಗಲು ಸದ್ಯ ಈಗ 10-15ಸಾವಿರ ರೂಪಾಯಿ ಬೇಕಾಗುತ್ತದೆ. ಆದ್ದರಿಂದ ನಿಮ್ಮ ಗ್ರಾಮಕ್ಕ ಭಾವಿ ತೆಗೆಯುವಂತೆ ಏರ್ಪಾಡುಮಾಡುತ್ತೇವೆ. ಈ ಕೆಲಸಕ್ಕೆ ನೀವು ಒಪ್ಪಿಕೊಳ್ಳಿಯೆಂದು ಹೇಳಿ ಕೂಡಲೆ ಹೊರಟುಹೋದರಂತೆ. ಅಂತು ಇವರು ಯಾರೆಂಬ ಸಂಗತಿ ಈವರಿಗೂ ಗೊತ್ತೇ ಆಗಲಿಲ್ಲ.

ಮಹಾನೀಯರ, ಈ ಗ್ರಾಮದಲ್ಲಿ ಭಾವಿ ತೆಗೆಯುವದೆಂದರೆ ಗೌವರ್ನ್‌ಮೆಂಟ್ ಹಣ ನಷ್ಟವಲ್ಲದೆ ಅರ್ಥವಿಲ್ಲವೆಂದು ದೃಢವಾಗಿ ಹೇಳಬಹುದು. ಉದಾಹರಣೆಗೆ ಈಗ ನಾಲ್ಕಾರು ಭಾವಿಗಳು ಪಾಳುಬಿದ್ದು ಇವೆ. ಹಿಂದೆ ಗೌವರ್ನ್‌ಮೆಂಟಿನವರು 80 ಅಡಿಯ ವರೆಗೆ ಭಾವಿ ತೆಗೆಯಿಸಿ ನೀರುಸಿಕ್ಕದೆ ಸಾವಿರಾರು ರೂಪಾಯಿ ನಷ್ಟವಡಗಿದ್ದ ಜ್ಞಾಪಕ ಬೇಡವೇ? ಈ ಮಧ್ಯೆ ಕುಡಿಯುವ ನೀರಿಗ ಈ ಗ್ರಾಮದಲ್ಲಿ ಭಾವಿ ತೆಗೆಯುತ್ತೇವೆ ಎಂಬವರ ಅರ್ಥವೇನು? ನೀರೇನೋ ಊರೊಳಗೆ ಒದಗುವ ಸಂಭವವಿಲ್ಲ. ನೀರಿಗೆ ಸರಿಯಾದ ಲೆವಲ್ ನೋಡಿ ಊರ ಹೊರಗೆ ಒಂದೆರಡು ಫರ್ಲಾಂಗ್ ದೂರದಲ್ಲಿ ಭಾವಿ ತೆಗೆಯುವರೆಂದು ಊಹಿಸೋಣ. ಅಲ್ಲಿ ತೆಗೆದದ್ದಾದರೂ ಕೊಡ ನಮ್ಮ ಹಳ್ಳಿಯ ಹೆಂಗಸರು ಭಾವಿಯಿಂದ ಎಳೆಯುವ ನೋವಿಗೋಸ್ಕರ, ಇಲ್ಲಿವರೆಗೆ ಬಂದಿರುತ್ತೇವೆ, ಇಲ್ಲಿ ಗಲಾಟೆಯೊಳಗೆ ನೀರುಸೇದುವ ಒಡಲು ಹೊಳೆಗೆ ಹೋಗಿ ಹೊತ್ತುಕೊಂಡು ಬರೋಣವೆಂದು ಹೇಳಿಕೊಂಡು, ಕಾಲಕ್ರಮೇಣ ಭಾವಿ ಹಾಳುಬೀಳುವದೇ ಹೊರತು ಪ್ರಯೋಜನಕ್ಕೆ ಬರುವಂತಿಲ್ಲ. ಸದ್ಯ ಇದೇ ಗ್ರಾಮಕ್ಕೆ ನಾವು ಕೋರಿರುವ ಪಂಪಿನ ನೀರು ಆವಶ್ಯವಲ್ಲದೆ, ಮೇಲೆ ಪಾಳು ಬಿದ್ದಿರುವ ನಾಲ್ಕಾರು ಗ್ರಾಮಗಳು ರಾಜಿತಕ್ಕೆ ಬರಲು ಯಾವ ಅಭ್ಯಂತರವಿಲ್ಲ. ಹಿರೀಕೆರೆಗೆ 10-15ಸಾವಿರ ರೂಪಾಯಿ ಗೌವರ್ನ್‌ಮೆಂಟಿನವರು ಖರ್ಚು ಮಾಡಿದಲ್ಲಿ ಕರೆಯಿಂದ ನಾಲ್ಕಾರು ಹಾಳು ಗ್ರಾಮಗಳು ತುಂಬಾ ನೀರಾವರಿಯಾಗಿ, ಇದರಿಂದ ಸರಕಾರಕ್ಕೇ ಎಷ್ಟೋ ಲಾಭವಿರುತ್ತದೆ. ರೈತರು ಸಹ ಕುಡಿಯುವ ನೀರಿನ ಆಸೆಯಿಂದಲೂ ನೀರಾವರಿಯ ಆಸೆಯಿಂದಲೂ, ಈ ಪಾಳು ಪ್ರಾಂತವನ್ನೆಲ್ಲ ರೂಪಕಕ್ಕೆ ತರುವರು. ಹಾಳಿ ಇರುವ ಗ್ರಾಮಗಳ ಕುಡಿಯುವ ನೀರಿನ ಅಭಾವವು ತಪ್ಪಿ ಕಣಿವೆ ಹೋಬಳಿಯು ಮಲೇರಿಯ ಜ್ವರದಿಂದ ಪಾರಾಗಬಹುದಾಗಿದೆ. ಘನಸರಕಾರದವರು ಮೇಲ್ಕಂಡ ಹಿರೀಕೆರೆಯ ಪಂಪು ಯೂ ಕಟ್ಟಡವನ್ನು ಪ್ರೋತ್ಸಾಹಿಸಿ, ಹಾರಂಗಿ ನಾಲೆಯ ಮೇಲಿರುವ ನಾಲ್ಕಾರು ಗ್ರಾಮಗಳನ್ನು ರೂಪಿತಕ್ಕೆ ತಂದಲ್ಲ ಆನೇ ಕಾಟವು ಇಲ್ಲವೇ ಇಲ್ಲ. ಈ ಗ್ರಾಮಕ್ಕೆ ಭಾವಿತೆಗೆಯಲು 4600ರೂಪಾಯಿ ಮಂಜೂರಾಗಿದೆಯಾಗಿ ವರ್ತಮಾನ. ಭಾವಿ ಕೆಲಸ ಸುರು ಆಗುವದರೊಳಗೆ ಈ ವಿಷಯ ಕೊಂಚ ಆಲೋಚನೆಗೆ ತರಬೇಕಾಗಿ ಈ ಮೂಲಕ ಅರಿಕೆ.

ಗ್ರಾಮಸ್ಥ.

ಉದ್ಯೋಗಂ ! ಪುರುಷ ಲಕ್ಷಣಂ !"

ಅಯ್ಯಾ,

ಹೆಂಗಸರ ಉದ್ಯೋಗದ ವಿಷಯವಾಗಿ "ಕೊಡಗಿನ" 39ನೇ ಸಂಚಿಕೆಯಲ್ಲಿ ಬರೆದ "ನಾಡಿನವ"ರಿಗೆ ಈ ಉತ್ತರಕ್ಕೆ ದಯವಿಟ್ಟು ನಿಮ್ಮ ಪತ್ರಿಕೆಯಲ್ಲಿ ಎಡೆ ಕೊಡಿ.

ಅಯ್ಯಾ, "ನಾಡಿನವ"ರೇ! ನಿಮ್ಮ ಬಾತ್ಮಿಯಲ್ಲಿ ಉದ್ದೇಶಕ್ಕೂ ಕರ್ತವ್ಯಕ್ಕೂ ಮತ್ತು ಉದ್ಯೋಗಕ್ಕೂ ಇರುವ ಭೇದವನ್ನು ಅರಿತುಕೊಂಡಂತೆ ಬರೆಯಲಿಲ್ಲ. ಕರ್ತವ್ಯ (Duty) ಉದ್ಯೋಗ (work). ಕರ್ತವ್ಯವು ದೇವಸ್ವರೂಪವಾದದ್ದು. ಉದ್ಯೋಗವು ಯಾ ಕಲಸವು ಮನುಷ್ಯಸ್ವರೂಪವಾದದ್ದು. ಕರ್ತವ್ಯವನ್ನು ಮಾಡುವವರು ಅದರ ಪ್ರತಿಫಲವನ್ನು ಅಪೇಕ್ಷಿಸಕೂಡದು. ಕೆಲಸ ಯಾ ಉದ್ಯೋಗವು ಪ್ರತಿಫಲಕ್ಕಾಗಿಯೇ ಮಾಡುವದಾಗಿದೆ. ಅಂದಮೇಲೆ ನಿಮ್ಮ ಬಾತ್ಮಿಯ ಅಭಿಪ್ರಾಯ "ಹೇನೆಂದರೆ—ಹೆಂಗಸರು "ಮನೆ" ಕೆಲಸವನ್ನು, ಗಂಡಸರು "ಹೊರಗಿನ" ಕೆಲಸವನ್ನು ಮಾಡಬೇಕೆಂಬುದೆ! "ಮನೆ" ಕೆಲಸವನ್ನು "ಹೊರಗಿನ" ಕೆಲಸವನ್ನು ವಿಂಗಡಿಸುವದು ಸಾಧ್ಯವಾದದ್ದೆಂದು ಯೋಚಿಸಬೇಡಿ. ಸರ್ವ "ಹೊರಗಿನ" ಕೆಲಸವೂ "ಮನೆ" ಕೆಲಸಕ್ಕೆ ಪೂರಾ ಸಂಬಂಧಿಸಿರುವದರಿಂದ ಯಾವ ಕೆಲಸವು "ಮನೆ" ಕೆಲಸ ಮತ್ತು ಯಾವದು "ಹೊರಗಿನ"ದು? ಆದ್ದರಿಂದ ಯಾವ ಕೆಲಸವನ್ನು ಹೆಂಗಸರು ಮತ್ತು ಯಾವ ಕೆಲಸವನ್ನು ಗಂಡಸರು ಮಾಡಬೇಕೆಂಬುದು ಹೇಳುವದು ಅಸಾಧ್ಯ. ನಿಮ್ಮ ವಿಧಾನವು ಹೇಗೆ? ಅಡಿಗೆ ಮಾಡಿಕೊಂಡು ಬೆಳಿಗ್ಗೆ ಮತ್ತು ಸಾಯಂಕಾಲ ದೇವರ ಪೂಜೆಗಳನ್ನು ಅವಳೇ ಮಾಡಬೇಕು! ಪೂಜೆ ಮಾಡುವದು, ಕೆಲಸವೋ ಯಾ ಕರ್ತವ್ಯವೋ? ಪೂಜೆಮಾಡುವದೆಂದರೇನು? ದೇವರ ಪ್ರಾರ್ಥನೆಯೆಂದರೇನು? ಪೂಜೆಮಾಡುವದಕ್ಕೆ 'ನ್ಯಾಯವಾದ' ಹೊತ್ತು ಯಾವದು? "ಹೆಂಗಸಿಗೆ ಮಕ್ಕಳ ಪೋಷಣೆಯು ಬಹು ಮುಖ್ಯವಾದ ಕಸಬು. ...... ಚಿಕ್ಕಮಕ್ಕಳು ತಂದೆಗಿಂತ ತಾಯಿಯ ಹತ್ತರವೇ ಇರುವಕಾರಣ, ಮಕ್ಕಳನ್ನು ಯಾವ ರೀತಿಯಲ್ಲಿ ತರಬೇತುಮಾಡಬೇಕೆಂಬುದನ್ನು ತಾಯಿಯು ಚೆನ್ನಾಗಿ ತಿಳಿದುಕೊಂಡಿರಬೇಕ" ಎಂದು ನೀವು ಬರೆಯುತ್ತೀರಿ. 'ಮಕ್ಕಳು' ಎಂದರೆ ಗಂಡೊ, ಹೆಣ್ಣೊ, ಎರಡು ಕೂಡಿತಲ್ಲವೆ? ಹೆಣ್ಣುಮಕ್ಕಳನ್ನೇನೋ ತಾಯಿಯು ನಿಮ್ಮ ಅಭಿಪ್ರಾಯದ ಪ್ರಕಾರ ಮಾಡುವ ಕಸಬಿನ ಪ್ರಕಾರ ಸಾಕಬಹುದು. ಗಂಡುಮಗುವಿನ ವಿಷಯವಾದರೂ ಏನು? ಕೆಲಸದಲ್ಲಿ ಮಗ್ನಳಾದ ತಾಯಿಯು, ಹೊರಗಿನ ಕೆಲಸಕ್ಕೆ ತರಬೇತಾಗಬೇಕಾದ ಗಂಡು ಮಗುವನ್ನು ಸಾಕುವದಾದರೂ ಹೇಗೆ? 'ಮನೆ' ಕೆಲಸವನ್ನು ಮಾಡಿಕೊಂಡಿದ್ದರೆ ಮಾತ್ರ ಪತಿವ್ರತೆಯರೆ? ಹಾಗಾದರೆ ಸೀತೆಯ ಪಾಡೇನು? ದ್ರೌಪದಿಯನ್ನು ಹೇಗೆ ಕರೆಯುವಿರಿ? ಸಾವಿತ್ರಿಯು ಯಾರು? ಇವರು ಯಾರೂ ಹೊರಗೆ ದಾಟಲೇ ಇಲ್ಲವೆ?

ಅಯ್ಯೋ 'ನಾಡಿನವರೆ'! ಕರ್ತವ್ಯವೆಂಬುದು ಸರ್ವಜನರ ಆಸ್ತಿಯಾಗಿದೆ. ಕೆಲಸವೆಂಬುದು ಸ್ವಾರ್ಥತೆಯ ಬೀಜ. ಆದ್ದರಿಂದ ಒಂದಕ್ಕೆ ಒಂದನ್ನು ಸೇರಿಸಲು ಯತ್ನಿಸಬೇಡಿ. ಅದು ಸರಿಯಾಗಲಿಕ್ಕಿಲ್ಲ. ಆದ್ದರಿಂದ ಒಬ್ಬ ಹೆಂಗಸು ಮತ್ತು ಗಂಡಸು ಆ ಸ್ಥಿತಿಯಲ್ಲಿರುವಾಗ್ಗ ಮಾಡುವದೆಲ್ಲವೂ 'ಕೆಲಸ'. ಯಾವಾಗ ಅವರು ತಾಯಿ ಮತ್ತು ತಂದೆಯರೆನಿಸಿಕೊಂಡರೋ ಆಗ ಅವರು 'ಕರ್ತವ್ಯ'ವನ್ನು ಮಾಡತೊಡಗುವರು. ಇದು ಕಾರಣಾಂತರದಿಂದ ರೂಢಿಯಲ್ಲದೆ, ಮತ್ತು ಸಂದರ್ಭಾನುಸಾರ ಸಹಜವೂ ಹೌದು. ಹೆಂಗಸರು ಮನೆಯಿಂದ ಹೊರಗೆ ದಾಟಿದ ಮಾತ್ರಕ್ಕೆ ಅವರು ಪತಿವ್ರತೆಯರಲ್ಲದೆ ಹೋದಾರು ಎಂಬ ಭೀತಿಯು ನಿಮಗಿದ್ದು ಈ ರೀತಿಯಲ್ಲಿ ಹೊರಡಿಸಿರುತ್ತೀರೊ? ಸರ್ವದಾ ಮನೆಯಿಂದ ಹೊರಗಿದ್ದರೂ ಸಹ ಪತಿವ್ರತೆಯರಲ್ಲಿರುತ್ತೀರಿ ಎಂಬ ನಂಬಿಕೆಯನ್ನಿಟ್ಟುಕೊಂಡು ನಮ್ಮನ್ನು ಎಂದೂ ಸಂಶಯದಿಂದ ಕಾಣದೆ ಪ್ರೀತಿಯೆಂಬ ಸಾಗರದಲ್ಲಿ ಮುಳುಗಿಸುವ ನಮ್ಮ ಸ್ತ್ರೀಯರಾದರೋ ಎಷ್ಟು ಆತ್ಮಶುದ್ಧಿಯಿಂದ ಇರಬಹುದು!! ಹೀಗಿದ್ದರೂ ಸಹ ನೀವು ಅವರನ್ನು ಸಂಶಯದಿಂದ ಕಾಣಲು ಕಾರಣವೇನು? ಹಾಗಾದರೆ ಸರ್ವ ಕೆಲಸಕ್ಕೂ ಯೋಗ್ಯರು ಯಾರು? ಪತಿವ್ರತಾತನವೆಂದರೇನು? ಪತಿವ್ರತಾ ಧರ್ಮವನ್ನು ಕಲಿಸುವದು ಅಸಾಧ್ಯ ಮಾತ್ರವಲ್ಲ, ಅನ್ಯಾಯವೂ ಹೌದು. ಆದ್ದರಿಂದ ಅವರನ್ನು ತಾವಾಗಿಯೇ ಅರಿತುಕೊಳ್ಳಲು ಬಿಡಬೇಕು. ಇದು ಹೆಚ್ಚಾಗಿ ಗಂಡಸರ ಗುಣಕ್ಕನುಗುಣವಾಗಿ ಹೋಗುತ್ತೆ! ಮನೆಯಿಂದ ಹೊರಗೆ ದಾಟಿದವರು ಎಷ್ಟೋ ಪತಿವ್ರತೆಯರಲ್ಲದ ಹೆಂಗಸರು ಇರುವದಿಲ್ಲವೆ? ವನವಾಸಕ್ಕೆ ಹೋದ ಸೀತೆ, ಭಿಕ್ಷಾವಾಸಕ್ಕೆ ಹೇಳಿದ ದ್ರೌಪದಿಯರಂತ ಸ್ತ್ರೀರತ್ನಗಳು ಈಗಲೂ ಇಲ್ಲವೆಂದೋ ನಿಮ್ಮ ಭಾವನೆ? ಭೇದವು ಇಷ್ಟೆ; ರಾಮಾಯಣ, ಭಾರತವನ್ನು ಬರೆದಂತ ಶ್ರೇಷ್ಠ ಲೇಖಕರು ಈಗ ಇಲ್ಲವೆಯಿರುವದೆ! ಹಾಗಾದರೆ ಅದು ಹೆಂಗಸರ ತಪ್ಪಲ್ಲ. ಸತಿವ್ರತದಲ್ಲಿಲ್ಲದ ಮತ್ತು ಪತಿವ್ರತದಲ್ಲಿರಲಿಕ್ಕೆ ಬಿಡದ ಗಂಡಸರ ತಪ್ಪೂ ಸಹ ಹೌದು.

ಪತಿಯರು ಇರುವಾಗ್ಗೆ 'ಹೊರಗಿನ' ಕೆಲಸಕ್ಕೆ ಕೈಹಾಕದೆ, ಅದರ ವಿಷಯವಾಗಿ ಏನೊಂದನ್ನೂ ತಿಳಿಯದೆ ಇದ್ದ ಹೆಂಗಸರು ವಿಧವೆಯರಾದ ಕೂಡಲೆ ಸಾವಿರಾರು ಕಷ್ಟಗಳನ್ನು ಅನುಭವಿಸುತ್ತಿರುವ ಲಕ್ಷಾಂತರ ಉದಾಹರಣೆಗಳು ನಿಮ್ಮ ನಿಗಕ್ಕೆ ಬಂದಿರುವದಿಲ್ಲವೆ? 'ರಾಜಕೀಯ ವಿಷಯಗಳನ್ನು ಚರ್ಚಿಸುವ ಅವಶ್ಯವು ಅವರಿಗೆ ಇರುವದಿಲ್ಲವೆ? ಅವರು ಪೂಜೆ ಪುಷ್ಪಾದಿಗಳನ್ನು ಮಾಡಿ ಮತವನ್ನು ಕಾಪಾಡಬೇಕೆಂಬುದು ನಿಮ್ಮ ಅಭಿಪ್ರಾಯ. ರಾಜಕೀಯಕ್ಕೆ ಮಾತ್ರ ಕೈಹಾಕಬಾರದು! ರಾಜಕೀಯವಿಲ್ಲದೆ ಮತವೆಲ್ಲಿಯದು? ನಮ್ಮ ಸ್ತ್ರೀಯರು ಇದಕ್ಕೆ ಒಪ್ಪುವರೆ?

ಸರಿ, 'ನಾಡಿನವರೆ' ನಿಮ್ಮ ಅಭಿಪ್ರಾಯವು ಈಗ ಸ್ವಲ್ಪ ತಿಳಿಯಿತು. ಜಮೂನು ಇರುವವರಿಗೆ ಒಂದು ಸಂಘ ಇದೆ! ಮಹಮ್ಮದೀಯರಿಗೆ ಬೇರೆಯಿದೆ! ಬ್ರಾಹ್ಮಣರಿಗೆ ಅವರದಿದೆಯಂತೆ! ಗೌಡರುಗಳಿಗೆ ಅವರದಿದೆಯಂತೆ! ಕೊಡವರಿಗೆ ಅವರ ಸಭೆ ಆಗುತ್ತಿದೆಯಂತೆ! ಇನ್ನು ಬಾಕಿ ಯಾವುದು? ಹೆಂಗಸರು ಮತ್ತು ಗಂಡಸರು ಎಂಬ ಭೇದ ಮಾತ್ರವಲ್ಲವೆ? ಇಂಥ ತರ್ಕ ಸಂಬಂಧವಾದ (Controversial topics) ಸಂಗತಿಗಳನ್ನು ಮುಂದಕ್ಕೆ ತಂದು ಹೆಂಗಸರದೊಂದು ಸಭೆಗೆ ಮತ್ತು ಗಂಡಸರದೊಂದು ಸಭೆಗೆ ಅನುಕೂಲಿಸಿದರೆ ನಮ್ಮ ನಾಡನ್ನು ಹಾಗೆ ಗೊಳಿಸುವದಕ್ಕೆ ಸಾಕ್ಷಾತ್ ಬ್ರಹ್ಮನೇ ಭೂಮಿಗಿಳಿಯುವನು! ಅಷ್ಟು, ಹೆಂಗಸರ ಮೇಲ್ಮಾದ ಬುದ್ಧಿಗೆ (Superior intellect) ಎಡೆಕೊಟ್ಟರೆ ನಮಗೆ ಅಡಿಗೆ ಮಾಡುವ ಗತಿಯು ದೊರಕೀತೆಂಬ ಹೆದರಿಕೆಯೊ? ಆದರೂ ಚಿಂತೆಯಿಲ್ಲ. ನಮಗೆ ಬೇಕಾದದ್ದು ಸುಖವು. ಸುಖವು ಯಾರಿಂದ ಬೇಕಾದರೇನು! ಸ್ತ್ರೀಯರೆ! ಎಚ್ಚರ!!

ಬಿ. ಪಿ. ಮುತ್ತಣ್ಣ.

ಮನೋಲ್ಲಾಸಿನಿ ತೈಲ.

ಚಂದನಾಸವ.—

ಲೋಮನಾಶಿನಿ.—

ಅಮೃತರಿಷ್ಟ.—

ಲೋಹಾಸವ.—

ನಮ್ಮ ಕೆಟಲಾಗು ತರಿಸಿ ನೋಡಿರಿ.

ವಿಳಾಸ—ಮನೋಲ್ಲಾಸಿನಿ ಕಂಪೆನಿ,
9 ಮಂಗಳೂರು, ಕೆಂಕನಾಡಿ.

52—16

Apply for our shooting Season's Clearance Sale Catalogue of Brand New Goods.

10 to 25 percent Reductions in Prices.

No License Required!! No Licenser Required



· Webley and Scott Air Pistol, cal 177 or ·22 bore Powerful and Accurate complete with a sample box of slugs, two spare washers a brush forcleaning, and a bookletof instructions Rs. 30/– Free delivery.

Pweiful German Diana Air gun. Handsome and Accurate, takes B S· A· Patern No· 1 Slugs and Darts. expressly recommendable for Target Practice Rs 15/ Free delivery

Brilliant Search Light Lamp for Night Sports Rs. 30/– Free delivery.

No License required to purchase or to possess the above items.

Reliable D B·B L 12 bore guns	Rs. 60/– and upwards·		
Do· S.B B L 12	do·	do· 40 -	do
D· B M L Guns		,, 45 -	do
S. B M· L. do.		,, 30/–	do·
S B.B L Rifles		,, 25/–	do
B L Revolvers and Pistols		, 30/–	do.

Arms, Ammunition and shooting requisites of almost every kind andquality offered at exceptionally favourable rates ANumber of good quality second hand weapons also offered for sale in theNew Catalogue.

GOOLAMHUSIAIN ALLIBHOY & SONS
Largest Importers of Firearms and Ammunition,
Cheapest priced firm in India,
11 210 AbdulRehman Street, BOMBAY·

೧೦೦೦ ರೂಪಾಯಿಗಳ ಬಹುಮಾನ.
ಲೋಕಪ್ರಸಿದ್ಧವಾದ ಸಾಲಂಮಿಸ್ರಿ ಮುರಬ್ಬಾ.

ನಮ್ಮ ಟ್ರೇಡ್ ಮಾರ್ಕನ್ನು ನೋಡಿ ಈ ಔಷಧ ತೆಗೆದುಕೊಳ್ಳಿರಿ.



ಟೆಲಿಗ್ರಾಫ್ ಅಡ್ರೆಸ್, ಮಿಸ್ರಿ, ಬೆಂಗಳೂರು ಸಿಟಿ.

ಡಿ. ಮನ್ನಾಲಾಲ್, ಡಿಲ್ಲಿ ನೇಟಿವ್ ವೈದ್ಯರು, ಸಾಲಂಮಿಸ್ರಿ ಮುರಬ್ಬಾ ಡಿಪೋ, ಬೆಂಗಳೂರು ಸಿಟಿ.

12—2

ಬೇಕಾಗಿದೆ.

ಬೀಟಿ ಮರದ ತೊಲೆಗಳು ಬೇಕಾಗಿವೆ.

ಒಳ್ಳೇ ಬೆಲೆ ಕೊಡಲಾಗುವದು. ಹೆಚ್ಚಿನ ಸಂಗತಿಗೆ ದಯವಿಟ್ಟು ಈ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳುವುದು.

WANTED·

Rose wood logs (Beeti)

Good price offored.

For further particulars please apply to:—

R. FRAMJEE,
12·3 Mercara.

ನೆಲರಾಟಕ್ಕೆ ಸಿದ್ಧವಾಗಿದೆ.
ಮೈಸೂರು ಸಿಟಿಯಲ್ಲಿ ಬಂಗ್ಲೆ ನಿವೇಶನಗಳು.

ಸುಪರಿಂಟೆಂಡೆಂಟರು,
4—4 ಲೇಬರ್ ಡಿಪಾರ್ಟ್ಮೆಂಟು,
ಮೈಸೂರು.

ಚೇಳುಗಳ ವಿಷಧ್ವಂಸಿನಿ

ಕ್ರಯ ಶೀಸೆ 1ಕ್ಕೆ 8 ಆಣೆ ಡಜನ್ 1 ರೂ· 5·

ಬಗುಳಿ ಅಂಚಿನ ಸೀರೆಗಳು

ಕ್ರಯ ನಂ. 1. 6—8—0
ನಂ. 2· 7—8—0

ವಿಳಾಸ.— ಎಸ್. ಆರ್. ಕೃಷ್ಣ ಅಂಡ್ ಕೊ·

ಕೆ. ಸಿ. ಅಪ್ಪಚ್ಚು.
ದಂತ ವೈದ್ಯರು.

52·3

ಅಂಪಾಯರ್ ಆಫ್ ಇಂಡಿಯಾ ಲೈಫ್ ಯಸ್ಯುರೆನ್ಸ್ ಕಂಪೆನಿ ಲಿಮಿಟೆಡ್.

(ಸ್ಥಾಪಿತ 1897)

ಮೂಲಧನ ರೂ. 2,50,00,000 ಕ್ಕೆ ಮಿಗಿಲಿದೆ.

ಸಿ ಕೆ. ಚಂಗಪ್ಪ, ಬ್ರಾಂಚ್ ಸೆಕ್ರೆಟರಿ, 152/3 ಕಮರ್ಷಿಯಲ್ ಸ್ಟ್ರೀಟ್, ಬೆಂಗಳೂರು.

24·9

ಸತ್ಯಮೇವಜಯತೇ.

(ಗುಣವಾಗದಿದ್ದರೆ ಹಣ ಪರತ)

ಧಾತುಪೌಷ್ಟಿಕ ಕಾಮೋದ್ರೇಕ ಇಂದ್ರಿಯಸ್ತಂಭಕವಾದ

ಮದನೋದ್ಭವ ಗುಳಿಗೆ.

ಜನನೇಂದ್ರಿಯದ ಶಿಥಿಲತೆ ನಿರ್ಬಲತೆ ನಪುಂಸಕತೆ ... ಧಾತು ಪೌಷ್ಟಿಕ ... ಸ್ವಪ್ನಸ್ಖಲನ ... ನವೀನ ಶಕ್ತಿಯು ಉಂಟಾಗುತ್ತದೆ ... ನಪುಂಸಕತ್ವಾರಿ ತೈಲವನ್ನು ಉಪಯೋಗಿಸಿದರೆ ಉತ್ತಮ ...

ಪ್ರಮೇಹನಿವಾರಣಿ—ಇದರ ಸೇವನೆಯಿಂದ ಮೂತ್ರ ಕೃಚ್ಛ್ರ ... ಅನುಭವ ಪೂರ್ವಕ ಶೋಧನೆ ... ಪಟ್ಟಿಗಾಗಿ ಬರೆಯಿರಿ.

ವಿಳಾಸ—

ವೈದ್ಯ ಜಿ ಎಲ್ ಜೋಶಿ ಮತ್ತು ಕಂಪೆನಿ.

12 ನಂ 6 ಪೋಸ್ಟ ಬಸವಾ ... ಉತ್ತರ ಕಾನಡಾ

ಒಂದು ಪ್ರಬಲವಾದ ಪ್ರಶ್ನೆ.

ನಮ್ಮ ಜೀವವನ್ನು ಏತಕ್ಕಾಗಿ ವಿಮೆಮಾಡಿಸಬೇಕು! ವೃದ್ಧಾಪ್ಯದಲ್ಲಿ ನಮ್ಮ ... ಹೆಂಡತಿ ಮಕ್ಕಳ ಪೋಷಣೆಗಾಗಿ!

ಈಗಾಗಲೇ ಸಾವಿರಾರು ಜನರು ವಿಮೆಮಾಡಿರುವ ವಿ... ಕೋಟಿ ರೂಪಾಯಿಗಿಂತ ಹೆಚ್ಚು ... ದೇಶೀಯ ವಿಮೆಕಂಪೆನಿಗಳಲ್ಲಿ ಅತ್ಯಂತ ದೊಡ್ಡದಾದ ... 1874 ... ಓರಿಯಂಟಲ್ ಗವರ್ನಮೆಂಟ್ ಸೆಕ್ಯೂರಿಟಿ ... ಕಂಪೆನಿಯ ರಿಪೋರ್ಟ ... ಈ ಕೆಳಗಿನವರಿಗೆ ಬರೆದು ತಿಳಿದುಕೊಳ್ಳಿ.

ಖಾದಿಬಟ್ಟೆ ಎಂದರೇನು?

ದೇಶೀಯ ಹತ್ತಿಯಲ್ಲಿ ಕೈರಾಟೆಯಿಂದ ನೂ... ತೆಗೆದು ಇಲ್ಲಿಯೇ ತಯಾರಿಸುವ ಬಟ್ಟೆಯೇ 'ಖಾದಿ.' ಈಗಾಗಲೇ ನಮ್ಮ ಸ್ಟೋರಿನಲ್ಲಿ ... ಗಟ್ಟಿಯಾದ್ದಲ್ಲದೆ ... ಕೋಟುಗಳು, ಶಾಲು ... ದಯವಿಟ್ಟು ಪ್ರೋತ್ಸಾಹಿಸಿ ... ಖಾದಿಯಿಂದಲೇ ದೇಶೋದ್ಧಾರ ...

ವೀರಾಜಪೇಟೆ, ದಕ್ಷಿಣ ಕೊಡಗು — ... ಪ್ರೊಪ್ರೈಟರ್, ಖಾದಿಭಂಡಾರ

52—2.

ಕಿರ್ಲೋಸ್ಕರ ಪೇಟೆಂಟ ಎರಬತ್ತಾದ ತಪ್ಪಲಿ.

ಈ ತಪ್ಪಲಿಯು ನಮ್ಮ ಕಾರ್ಖಾನೆಯಲ್ಲಿಯೇ ತಯಾರಾಗುತ್ತದೆ ... ಟ್ ದೊರೆತಿರುತ್ತದೆ ... ಇದರ ಮುಖ್ಯ ಗುಣಗಳು

೧. ನೀರನ್ನು ಮುಟ್ಟಿದ ಕೂಡಲೇ ತುಂಬಿ ಒದು ಬರುವದು

೨. ಮಲಕ್ಕೆ ಬರುವಾಗ್ಗೆ ಒಂದು ಹನಿ ನೀರು ಸೋರುವದಿಲ್ಲ

೩ ದೋಣಿಯಲ್ಲಿ ನೀರು ಚೆಲ್ಲುವಾಗ್ಗೆ ... ತಪ್ಪಲಿಯಂತೆ ... ಹೆಚ್ಚಿನ ಸಂಗತಿ ... ತಿಳಿದುಕೊಳ್ಳಿರಿ

ಕಿರ್ಲೋಸ್ಕರ ಬಂಧು, ಲಿಮಿಟೆಡ್.

ಕಿರ್ಲೋಸ್ಕರವಾಡಿ,

16—8 ಜಿ. ಸಾತಾರ್.

ಲೋಕಪ್ರಸಿದ್ಧವಾದ! ಅನುಭವಸಿದ್ಧವಾದ!

ಮೂರುದಿನಗಳಲ್ಲಿ ಗುಣಪಡಿಸುವ ಔಷದಿಯಿದು ವಾತ... ವೀರ್ಯನಾಶ, ರಕ್ತಶುದ್ಧಿ, ಧಾತುವೃದ್ಧಿ ... ಜೀವನಕ್ಕೆ ಬೇಕಾದ ಆರೋಗ್ಯದಾಯಿನಿ

ಪ್ರೀತಿವರ್ಧಕ [ಅಗಸ್ತ್ಯ [ಸೋಡಿ ತೆಗೆಯಲ್ಪಟ್ಟ

ಮನ್ಮಥ ಚಿಂತಾಮಣಿ ಲೇಹ

ರಿಜಿಸ್ಟರ್ ಆದದ್ದು

ಬಾಲವೃದ್ಧ ಸ್ತ್ರೀ ಪುರುಷರ ಅನೇಕ ರೋಗಗಳ ... ಕಾಯಿಲೆಯವರಿಗೂ ... ಬಾಲಕರಿಗೂ ... ಸೇವಿಸಬಹುದು ನಂ (1) 1ಸೇರು ಡಬ್ಬಿ 1ಕ್ಕೆ ರುಪಾಯಿ 3—0—0 ½ಸೇರು ಡಬ್ಬಿ 1ಕ್ಕೆ ರುಪಾಯಿ 1—9—0 ನಂ (2) 1ಸೇರು ಡಬ್ಬಿ 1ಕ್ಕೆ ರುಪಾಯಿ 2—0—0, ½ ಸೇರು ಡಬ್ಬಿ 1ಕ್ಕೆ 1—1—0 ... ವಿಶೇಷ ಮಾಹಿತಿಗೆ ಬರೆಯಿರಿ

ವಿಳಾಸ—ದೇವಣ್ಣ ನಾರಾಯಣಸೆಟ್,

ಗೋಳಿಕಟ್ಟಾ, ಮಂಗಳೂರು,

52—32 ದ ಕ

ಜ್ವರಗಳ ಮೇಲೆ ಅಮೂಲ್ಯ ಔಷಧವು.

ಕರ್ಣಿಕ ಎಗ್ಯೂ ಮಿಕ್ಸ್ಚರ್

(ಶಕ್ತಿವರ್ಧಕ ಸರಬತ್ತು)

ಛಳಿಜ್ವರ, ಮಲೇರಿಯ ಮೊದಲಾದ ಜ್ವರಗಳು ಬಿಟ್ಟ ನಂತರ ... ಒಂದು ಅಮೂಲ್ಯ ಔಷಧವಾಗಿರುತ್ತದೆ

ನಮ್ಮ ಎಗ್ಯೂಮಿಕ್ಸ್ಚರನ್ನು ... ಜ್ವರದನಂತರ ...

ಬೆಲೆ ೧ ರೂಪಾಯಿ ಟಪಾಲು ವೆಚ್ಚ ಬೇರೆ.

12—11 ಕರ್ಣಿಕ ಬ್ರದರ್ಸ್

ಗಿರಗಾಂವ, ಮುಂಬಾಯಿ.

ಬೇಕಾಗಿದೆ

ನೆಲಜಿ ಗ್ರಾಮದಲ್ಲಿರ ವ ನನ್ನ ಭೂಮಿಯನ್ನು ವ್ಯವಸಾಯ ಮಾಡಿಸಲಿಕ್ಕಾಗಿ 30ರಿಂದ 35 ವರ್ಷ ಪ್ರಾಯದ ಉತ್ಸಾಹವುಳ್ಳ ... ಬೇಕಾಗಿದ್ದಾರೆ ... ಹೆಚ್ಚಿನ ವಿಷಯಕ್ಕೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಯಂ ಪಿ ಅಪ್ಪಯ್ಯ

ಕಿಬ್ಬೆಟ್ಟಿ ಎಸ್ಟೇಟ್

44 ಸೋಮವಾರಪೇಟೆ

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್, ಕೊ ಆಪರೇಟಿವ್ ಸೊಸೈಟೀಸ್ ಆಕ್ಟ್ಸ್ ಪ್ರಕಾರ ರಿಜಿಸ್ಟರಾಗಿದೆ.

		ರೂ
ಶೇರ ಬಂಡವಾಳ	—	50,000
ವಸೂಲಾದ ಶೇರ್ ಮೊಬಲಗು	—	9890
ಜಮೂಒಟ್ಟು ಕೇವಣಾತಿ	—	90,600

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲಕೊಡತಕ್ಕದ್ದು.

ಒಂದು ವರ್ಷ ಮಾಯಿದೆ ಅಥವ ಹೆಚ್ಚಿನ ಮಾಯಿದೆಯ ಠೇವಣಾತಿಗಳಿಗೆ ಶೇಕಡ ನಾಲಿಯಾನ ರೂ 6—4—0ರ ದರದಲ್ಲಿ ಬಡ್ಡಿ ದೊರೆಯುತ್ತೆ. ಕಡಿಮೆ ಮಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ 5ರ ಬಡ್ಡಿ ದೊರೆಯುತ್ತೆ.

ವರ್ಷಕ್ಕೊಂದಾವರ್ತಿ ಕೊ ಆಪರೇಟಿವ್ ರಜಿಸ್ಟ್ರಾರವರು ಲೆಕ್ಕ ಆಡಿಟುಮಾಡುತ್ತಾರೆ

ಪ್ರೆಸಿಡೆಂಟರು, ಕೊಡಂದೆರ ಕುಟ್ಟಯ್ಯನವರು, ರಾಯ್ ಬಹದ್ದೂರ್. — ಟ್ರೆಜರರ್ ಯಂ ಭುಜಂಗರಾಯರು ಬಿ.ಎ, ಬಿ.ಎಲ್.

ಸೆಕ್ರಟರಿ.

ಸಿ. ಯನ್ ವೆಂಕಪ್ಪಯ್ಯನವರು, ಬಿ.ಎ., ಬಿ ಎಲ್.

ತಾರೀಖು 29—8—1925.

A Lot for SELECTION of Single Barrel Breach Loadig Guns at LOWEST PRICE EVER OFFERED.

Original BrowningS B B.L 12 bore Take Down Hammerless Automatic Ejector Gun with safety catch . . Price, Rs. 140/-

1 of do but by Winchester or Remington . Price, Rs 160/-

Winchester or Remigton S B B L 12 boreSix Shots Hammerless Repeating gun, 32 inches barrel with Safety catch . .. Price, Rs 150/

German S B B L 12 bore Hammerless Ejector Gun, 32 inches German Steel Barrel with safety catch . .. .. Price, Rs. 65/-

Continental Make Do . .. .. Price, Rs 55/-

Webley & Scott's S B B. L 12 bore Semi Hammerless Ejector Gun, 32 inches Webley's Steel Barrel, ... Price, Rs 75/-

The above Guns can be had in 16, 20, & 410 bore Same as above in 12 bore Special "Duck Gun" 3inches barrel . Price, Rs 80/

W W. Greener's "Gaffer" S B B L 12 bore Martini Action Ejector Gun, 25 inches Greener's Steel Barrel . . . .. .Price, Rs. 75/-

W W Greener's as above but Long Range Duck Gun " with 32 inches barrel, and chamber for 2¾ inches to 3 inches case . .. ... Price, Rs 90/.

Midland's ' Knock-About " S. B B L Ejector Hammer Gun 32 inches barrel. .... Price, Rs 55/-

Continental Make S. B B L folding Pattern Hammer Gun, 32 inches barrel beautifully engraved and carved . . .. Price, Rs. 45/

J. Steven's 12 bore Ejector Hammer Gun, 32 inches Steel barrel .. . Price, Rs. 45 /

Do do ' Dread Naught " with heavy Breach Price/-Rs/50,

Any of the above of J. Steven'sSpecial Duck Gun with 36 inches barrel. Price, Rs. 5 Extra.

ENQUIRIES SOCLIITED.

24 22 THE BOMBAY ARMOURY, 331, ABDUL REHMAN STREET, BOMBAY. 3

ARMS & AMMUNITION MART.

Mahomedally-Noorbhoy

321 Abdul Rehman Street, near Crawford Market, BOMBAY. 3

Telegraphic Address - "SHOOTER" Bombay.

[52—32] Please write for Reduced nett prices list for 1926

Printed & published by Kodanda Appayya, R.B., Chairman, Board of Directors, at " Kodagu " Press, Mercara fr "Kodagu" Ltd.

Reg. No. M. 1550.
"KODAGU", MERCARA

ಕೊಡಗು.

ಶಕ್ಯೇನ ಭೂತದಯಯಾ ವಿದ್ಯಾ ನಾತಿ ಪ್ರಯುಕ್ತಯಾ || ಐಕ್ಯಮತ್ಯೇನ ದೇಶಾನಾಂ ಸುಸ್ಥಿರಾ ರಾಜ್ಯ ಸಂಪದಾ ||

ಸಂಪಾದಕ—ಕಂದ್ಯಂಡ ಬಿ. ಬೆಳ್ಯಪ್ಪ.

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವದು.

ಸಂಪುಟ ೫] ಕೊಡಗು, ೧೯೨೬ನೇ ಇಸವಿ ಏಪ್ರಿಲ್ ತಾರೀಕು ೧೬ ನೇ ಶುಕ್ರವಾರ [ಸಂಚಿಕೆ ೪೪

PERFUMERY & PATENT MEDICINCES TC.,

Aletris cordial	Rs. 3—4	[illegible]	„ 5—0	Eucryl tooth powder	„ 0—14
Antiphlogistine	„ 1—8	Ovaltine	Rs 1—1 1—12, & 3—3	Kolynos tooth paste	„ 0—11
Bathwalas' ague mixture	„ 1—3	Peps	„ 1—0	Euthymol „ „	„ 0—14
Burgoynes' Eastons' Syrup	1—6	Sanatogen	„ 4—8	Pepsodent „ „	„ 0—14
Celerina	„ 3 12	[illegible]	„ 1 12	Cuticura soap per box	Rs 2—6
Cuticura ointment	„ 0—14	[illegible] liver oil	„ 3—0	Erasmic „ „ „	„ 1—3
Dejonghs' cod liver oil	„ 3—4	[illegible]	Rs 2—15 & 5—8	Goodwins bath soap for 6	„ [illegible]—8
Deschiens' Syrup	„ 2—12	Woodwards gripe water	1—2	Palm olive soap per cake	„ 0—6
Enos' fruit salt	„ 2—8	Zambuk	Rs 0-15 & 2—2	Pear's glycerine soap per box	„ 1—5
Lanofele pills	„ 2—10	Calox tooth powder	0 15	Vinolia baby „ „	„ 1—6
Genaspirin	„ 0—15	Calverts carbolic powder	0—7	„ Premier „	„ 1—3
Sulphur bitters	„ 3 12	Colgates' dental cream	0 11	Wright's coal tar „ „	„ 1—2
				Turkish bath soap 12 cakes	„ 2—8

Reduction in prices of Stationary department made permanent
GET IT AT SPENCERS!
52—24 THE SHOPPING CENTRE OF COORG.

Spencer & Co. Ltd,
MERCARA, & POLLIBETTA.

ಸ್ಥಾಪಿತವಾದದ್ದು 1874. ಮೂಲಧನ 7 ಕೋಟಿ ರೂಪಾಯಿಗಳು

ಓರಿಯಂಟಲ್ ಗವರ್ನ್ಮೆಂಟ್ ಸೆಕ್ಯೂರಿಟಿ ಲೈಫ್ ಅಷ್ಯೂರೆನ್ಸ್ ಕಂಪೆನಿ ಲಿಮಿಟೆಡ್, ಹೆಡ್ ಆಫೀಸು= ಬೊಂಬಾಯಿ.

1922—1924 ಈ ಮೂರು ವರ್ಷಗಳಲ್ಲಿ ಕಂಪೆನಿಯಲ್ಲಿ ನಡೆದ ಕೆಲಸದ ಫಲಿತಾಂಶಗಳು.—

ಲಾಭ— ರೂ. 51,00,000 (ಐವತ್ತೊಂದು ಲಕ್ಷರೂಪಾಯಿಗಳು) ಈ ಪೈಕಿ 45,91,830 ರೂಪಾಯಿಗಳನ್ನು ಲಾಭ ಸಹಿತ ವಿಮೆ ಮಾಡಿಡುವವರ ವಿಮೆ ಹಣಕ್ಕೆ ಹೆಚ್ಚು ಬೋನಸ್ ಜವಾಬಾಗಿ ಈ ಕಳಗೆ ಕಾಣಿಸಿರುವ ರೀತಿಯಲ್ಲಿ ಸೇರಿಸಿರುತ್ತದೆ

ಜೀವಮಾನಾವಧಿಯ ವಿಮೆದಾರರಿಗೆ ರೂ. 1000 ವಿಮೆ ಹಣಕ್ಕೆ
ಈ ಮೂರು ವರ್ಷಗಳಿಗೆ ರೂ. 67½.
ಕ್ಲಿಪ್ತಕಾಲದ ವಿಮೆದಾರರಿಗೆ ರೂ. 1000 ವಿಮೆ ಹಣಕ್ಕೆ
ಈ ಮೂರು ವರ್ಷಗಳಿಗೆ ರೂ. 54.

ಈ ಕಂಪೆನಿಯಲ್ಲಿ ಕ್ರಮೇಣ ಹೆಚ್ಚುತ್ತಿರುವ ಜನಾನುರಾಗವು ಈ ಕೆಳಗೆ ಕೊಟ್ಟಿರುವ ಹೊಸ ಕೆಲಸದ ಪಟ್ಟಿಯಿಂದ ವ್ಯಕ್ತವಾಗುತ್ತದೆ.

1923ರಲ್ಲಿ—ರೂ 1,74,00,000
1924 „ 2,37,00,000
1925 „ 2,96,00,000

ಇನ್ನೂ ದಿನದಿನಕ್ಕೂ ಅಭಿವೃದ್ಧಿಯಾಗುತ್ತಲೇ ಇದೆ. ಜೀವವಿಮೆ ಪತ್ರದಲ್ಲಿ ಹಣವನ್ನು ಲಾಭಕರವಾಗಿ ಕೊಳ್ಳಲು ಇದೇ ಸುಸಮಯ.

ಬೇಕಾದ ವಿಷಯಗಳನ್ನು ಈ ಕೆಳಗಿನ ವಿಳಾಸಕ್ಕೆ ಬರದು ತಿಳಿದುಕೊಳ್ಳಬಹುದು.

ಓರಿಯಂಟಲ್ ಬಿಲ್ಡಿಂಗ್ಸ್,
ಪೋಸ್ಟ್ ಬಾಕ್ಸ್ 56
ಬೆಂಗಳೂರು

ಪಿ. ಎ. ಸುಬ್ರಮಣ್ಯಯ್ಯರ್,
ಬ್ರಾಂಚ್ ಸೆಕ್ರೆಟರಿ.

52—2.

ಮುದ್ದಾದ ಪುಸ್ತಕ! ಮುದ್ದಾದ ಮುದ್ರಣ!!

ಶರೀರ ಸುಖ, ಸಂಪತ್ತು, ಐಶ್ವರ್ಯಗಳನ್ನು ಸಂಪಾದಿಸಲು ಸಲಹೆಗಳನ್ನೂ ಮತ್ತು ಶರೀರ ಲಕ್ಷಣಶಾಸ್ತ್ರ (ಸಾಮುದ್ರಿಕಶಾಸ್ತ್ರ) ವನ್ನೂ ತಿಳಿಸುವ

ಮರ್ಮ ಶಾಸ್ತ್ರ-ಎಂಬ ಕಾಮಶಾಸ್ತ್ರ

ಬಹು ಗುಪ್ತವಾಗಿ... ಫಲಪ್ರದವಾದ ... ರಹಸ್ಯಗಳೂ ... ಮರ್ಮವ್ಯಾ... ಸ್ಯಗಳು ಚಿತ್ರ... ಪುಟಗಳಲ್ಲಿ ...

ಈ ಪುಸ್ತಕವು ಮೊದಲು ಫ್ರಂಚ್, ಇಂಗ್ಲೀಷ್, ಹಿಂದೂಸ್ಥಾನಿ, ಸಂಸ್ಕೃತ ಮುಂತಾದ ಭಾಷೆಗಳಲ್ಲಿ ಇದನ್ನು ನಾವು ಪ್ರಯಾಸದಿಂದ ಸಂಪಾದಿಸಿ ಕನ್ನಡಕ್ಕೆ ಭಾಷಾಂತರಮಾಡಿ (34 ಚಿತ್ರಪಟಗಳ ಸಹಿತ) ಮುದ್ರಿಸಿ ತಯಾರಿಸಿದ್ದೇವೆ. ಈ ಪುಸ್ತಕದಲ್ಲಿ ಸ್ತ್ರೀ ಪುರುಷರಿಗೆ ಬೇಕಾದ ಎಲ್ಲಾ ಮರ್ಮ... ಸ್ತ್ರೀ ಪುರುಷರು ಅನ್ಯೋನ್ಯವಾಗಿ ನಡೆದುಕೊಳ್ಳುವ ಮಾರ್ಗ, ಸ್ತ್ರೀ ಪುರುಷರಿಗೆ ಉಂಟಾಗುವ ಎಲ್ಲಾ ತರದ ... ಮತ್ತು ಗುಹ್ಯ ವ್ಯಾಧಿಗಳನ್ನು ಗುಣಮಾಡಿಕೊಳ್ಳುವ ಚಿಕಿತ್ಸೆಗಳೂ ಇನ್ನು ಅನೇಕ ತರದ ಮರ್ಮದಾಯ... ಗಳ ಸಹಿತ ತುಂಬಿರುವದು. ಈ ಪುಸ್ತಕದ ಹೆಸರನ್ನು ಕೇಳಿದ ಮಾತ್ರಕ್ಕೆ ಸಂತೋಷವಾಗುವದು. ಅದರ... ತಾನೇ ಸಂತೋಷವಾಗಲಾರದು.

ಪುಸ್ತಕ ಒಂದಕ್ಕೆ ಒಂದೇ ಒಂದು ರೂಪಾಯಿ ರೂ. 1—0—0

ಟಿ. ರಾಮಚಂದ್ರರಾವ್ ಅಂಡ್ ಕೊ,
ಪೋಸ್ಟ್ ಬಾಕ್ಸ ನಂ. 232.
ಮದ್ರಾಸ್.

T. Ramchandar Rao & Co,
Post Box No 232.
Madras.

52—17.

ಆಂಧ್ರ ಆಯುರ್ವೇದಿಕ್ ಫಾರ್ಮಸಿ
ಬ್ರಾಂಚ್, ಬೆಂಗಳೂರು ಸಿಟಿ

ಚ್ಯವನಪ್ರಾಸ ಲೇಹ.

ಇದು ಸರ್ವೋತ್ಕೃಷ್ಟವಾದ ಗಿಡಮೂಲಿಕೆಗಳಿಂದ ತಯಾರಿಸಲ್ಪಟ್ಟ ಆಯುರ್ವೇದ ರಸಾಯನೌಷಧವು. ವಿದ್ಯಾರ್ಥಿಗಳೂ ವಿಶೇಷವಾಗಿ ಬುದ್ಧಿಯನ್ನು ಪ್ರಯೋಗಿಸಿ ಕೆಲಸ ಮಾಡುವವರೂ ಈ ಲೇಹವನ್ನು ಸೇವಿಸಿದರೆ ವಿಶೇಷವಾಗಿ ಬುದ್ಧಿಶಕ್ತಿಯನ್ನೂ ಜ್ಞಾಪಕಶಕ್ತಿಯನ್ನೂ ಹೊಂದುವರು.

ದೀರ್ಘಕಾಲದ ವ್ಯಾಧಿಯಿಂದಾಗಲೀ, ಕೆಟ್ಟ ನಡತೆಯಿಂದಾಗಲೀ, ಸ್ವಭಾವ ಶಕ್ತಿಯ ಕೊರತೆಯಿಂದಾಗಲೀ ಶರೀರ ಕಾಂತಿಯು ಕುಂದಿ ರಕ್ತ ಕೆಟ್ಟು ಇಂದ್ರಿಯ ದೌರ್ಬಲ್ಯವೇ ಮೊದಲಾದ ವಿಕಾರಗಳಿಂದ ಪೀಡಿತರಾಗಿರುವವರು ಈ ಲೇಹವನ್ನು ಸೇವಿಸಿದರೆ ಈ ತರದ ವಿಕಾರಗಳನ್ನೆಲ್ಲಾ ಪರಿಹರಿಸಿ ದೇಹಕ್ಕೂ ಮನಸ್ಸಿಗೂ ಉಲ್ಲಾಸವನ್ನುಂಟುಮಾಡಿ ಮಾಂಸ ಖಂಡಗಳಿಗೂ ನರಗಳಿಗೂ ಬಲವನ್ನು ಕೊಟ್ಟು ದೇಹಪುಷ್ಟಿಯನ್ನುಂಟುಮಾಡಿ ನವಚೈತನ್ಯವನ್ನುಂಟುಮಾಡುವುದು. ಅಲ್ಲದೆ ಆರೋಗ್ಯದೃಢಶರೀರವುಳ್ಳವರಾಗಿ ದೀರ್ಘಕಾಲ ಬದುಕುವರು. ಕೆಮ್ಮು ಉಬ್ಬಸ ವ್ಯಾಧಿಯುಳ್ಳವರಿಗೂ ಮುಖ್ಯವಾಗಿ ಕ್ಷಯರೋಗಿಗಳಿಗೂ ಇದು ಸಂಜೀವಿನಿಯೇ ಸರಿ! ಚರಕ ಸಂಹಿತೆಯಲ್ಲಿ ಇದರ ಗುಣವು ಅದ್ಭುತವಾಗಿ ಹೇಳಲ್ಪಟ್ಟಿದೆ. ೧೦ ತೊಲೆಗೆ ೧ ರೂಪಾಯಿ. ೪೦ ತೊಲೆಗೆ ೩ ರೂಪಾಯಿ.

ಎಲ್ಲಾ ಕಡೆಯಲ್ಲಿಯೂ ಏಜಂಟರು ಬೇಕು.

ಸೂಚನೆ—ಇಲ್ಲಿ ಶಾಸ್ತ್ರೀಯವಾದ ಎಲ್ಲಾ ಔಷಧಗಳೂ ಹೆಚ್ಚಾ... ಆಯುರ್ವೇದ ಭೂಷಣ ... ರೋಗಿಗಳನ್ನು ... ಚಿಕಿತ್ಸೆಯನ್ನು ಪ್ರತಿದಿನವೂ ನಡಿಸುವರು. ವಿಶೇಷ ಸಂಗತಿಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಟಿ. ಸಿ. ಎಸ್. ಮುನಿಯಂ ಅಂಡ್ ಕೋ,
ಮ್ಯಾನೇಜಿಂಗ್ ಏಜಂಟ್ಸ್, ಆಂಧ್ರ ಆಯುರ್ವೇದಿಕ್ ಫಾರ್ಮಸಿ,
೬೬ ಚಿಕ್ಕಪೇಟೆ, ಬೆಂಗಳೂರು ಸಿಟಿ.

16—11

"ಕೊಡಗು"

ಸನ್ ೧೯೨೬ನೇ ಇಸವಿ ಏಪ್ರಿಲ್ ತಾ. ೧೬ನೇ ಶುಕ್ರವಾರ.

ಕೊಡಗಿನಲ್ಲಿ ಚೀಫ್ ಕಮಿಷನರವರು.

ಇದೇ ಏಪ್ರಿಲ್ ತಾರೀಖು ೪ರಲ್ಲಿ ಮಡಿಕೇರಿಗೆ ಬಂದಿರುವ ಕೊಡಗಿನ ಚೀಫ್ ಕಮಿಷನರಾದ ಮಿ. ಪೀಯರ್ಸ್‌ರವರು ಈ ದೇಶದಲ್ಲಿ ಸುಮಾರು ಒಂದು ತಿಂಗಳವರೆಗೆ ಇರುವರೆಂದು ವರ್ತಮಾನವಿದೆ. ಇವರು ಚೀಫ್ ಕಮಿಷನರಾಗಿ ಬಂದಮೇಲೆ ಕೊಡಗಿನಲ್ಲಿ ದೀರ್ಘಕಾಲ ನಿಲ್ಲುವುದು ಇದೇ ಮೊದಲಾಗಿದೆ. ಚೀಫ್ ಕಮಿಷನರುಗಳು ಬೇಸಿಗೆಕಾಲದಲ್ಲಿ ಈ ದೇಶಕ್ಕೆ ಒಂದು ಇಲ್ಲವೆ ಎರಡು ತಿಂಗಳು ಇದ್ದು ಹೋಗುವುದು ವಾಡಿಕೆಯಾಗಿತ್ತಿದೆ. ಇವರು ಈ ರೀತಿ ಮಾಡಬೇಕಾದದ್ದು ಅವಶ್ಯಕವೂ ಆಗಿದೆ. ಯಾಕೆಂದರೆ—ಇವರು ಕೊಡಗಿನ ಚೀಫ್ ಕಮಿಷನರಾದರೂ ಮೈಸೂರು ಪ್ರಾಂತ್ಯದ ರೆಸಿಡೆಂಟರಾದ ಕಾರಣ ಇವರ ಖಾಯಂ ವಾಸವು ಬೆಂಗಳೂರಿನಲ್ಲಾಗಿದೆ. ಆದುದರಿಂದ ಇವರಿಗೆ ಕೊಡಗಿನ ನಿಜಸ್ಥಿತಿಯನ್ನು ಖುದ್ದಾಗಿ ನೋಡಿ ತಿಳಕೊಳ್ಳಲು ಹೆಚ್ಚಿನ ಅವಕಾಶ ಸಿಗುವುದಿಲ್ಲ ಮತ್ತು ಇಲ್ಲಿಯೇ ವಾಸವಿರುವ ಉದ್ಯೋಗಸ್ಥರನ್ನು ಕೇಳಿ ತಿಳಕೊಳ್ಳಬೇಕಾಗುತ್ತದೆ. ಇದು ಎಂದಿಗೂ ತೃಪ್ತಿಕರವಲ್ಲ. ಸ್ಥಳೀಯ ಸರಕಾರದ ಮುಖ್ಯ ಅಧಿಕಾರಿಯಾದ ಚೀಫ್ ಕಮಿಷನರವರು ವರ್ಷಕ್ಕೆ ಒಂದೆರಡು ಸಾರಿಯಾದರೂ ಇಲ್ಲಿ ದೀರ್ಘಕಾಲ ನಿಂತು ಗ್ರಾಮಾಂತರಗಳಿಗೆ ಹೋಗಿ ಜನರಲ್ಲಿ ಮುಕ್ತವಾಗಿ ಅವರ ಕಷ್ಟ ಸುಖಗಳನ್ನು ವಿಚಾರಿಸಿ ದೇಶದ ಸ್ಥಿತಿಯನ್ನು ಇರುವ ಹಾಗೆ ತಿಳಕೊಳ್ಳುವುದು ರಾಜಧರ್ಮವಾಗಿದೆ. ಈ ಉದ್ದೇಶದಿಂದಲೇ ಚೀಫ್ ಕಮಿಷನರವರು ಈಗ ಕೊಡಗಿಗೆ ಬಂದಿರುವುದಾಗಿ ನಂಬುತ್ತೇವೆ.

ಸರಕಾರದ ಮೇಲಧಿಕಾರಿಯವರು ತಮ್ಮ ಆಡಳಿತದಲ್ಲಿರುವ ಪ್ರಜೆಗಳ ಸ್ಥಿತಿಗತಿಯನ್ನು ಖುದ್ದಾಗಿ ಪರಾಂಬರಿಸಿ ಚೆನ್ನಾಗಿ ಅರಿತುಕೊಂಡರೆ ಪ್ರಜೆಯರ ಕಷ್ಟನಿವಾರಣೆ ಬಗ್ಗೆ ಯಾ ಪ್ರಯೋಜನಾರ್ಥವಾಗಿ ಯಾವ ಕಾರ್ಯವನ್ನೂ ನಡಿಸಲು ಮಂಜೂರು ಮಾಡಲಿಕ್ಕೆ ಕೆಳ ಉದ್ಯೋಗಸ್ಥರ ಶಿಫಾರಸ್ಸನ್ನೇ ಕಾಯಬೇಕಾದ ಅಗತ್ಯವಿರುವುದಿಲ್ಲ ; ತಮ್ಮ ತಿಳುವಳಿಕೆಯಿಂದಲೇ ದೇಶಕ್ಕೆ ಒಳ್ಳೆಯದಾಗುವ ಕೆಲಸಗಳಿಗೆ ಕೈಹಚ್ಚಬಹುದು. ಅದಲ್ಲದಿದ್ದರೂ, ಪ್ರಜೆಯರ ಸಹಾಯಾರ್ಥವಾಗಿ ಇಲ್ಲಿಯಾ ಕೌನ್ಸಿಲಿನವರೂ ಅಧಿಕಾರಿಗಳೂ ಶಿಫಾರಸ್ಸು ಮಾಡುವ ಕಾರ್ಯಗಳಿಗೆ ಅನುಮತಿಕೊಡಲು ಸುಲಭವಾಗುವುದು. ಮಿ. ಪೀಯರ್ಸ್‌ರವರು ಕೊಡಗಿನಲ್ಲಿ ತಮ್ಮ ಒಂದು ತಿಂಗಳ ಕಾಲವನ್ನು ಹೇಗೆ ವಿನಿಯೋಗಿಸುವರೆಂದು ಎಲ್ಲರೂ ಕುತೂಹಲದಿಂದ ನೋಡುತ್ತಿರುವರು. ಇವರು ಕೆಲವು ಕಡೆಗಳಲ್ಲಾದರೂ ಊರುಕೇರಿಗಳೊಳಗೆ ಹೋಗಿ ರೈತರ ಬಡ ಮನೆಮಠಗಳನ್ನೂ ಅವುಗಳ ಅನಾರೋಗ್ಯ ಸ್ಥಿತಿಯನ್ನೂ ನೋಡುವುದು ಉತ್ತಮವಾಗಿದೆ. ಇದು ಸಾಧ್ಯವಲ್ಲವೆಂತಾದರೆ ರಸ್ತೆ ಇರುವ ಕಡೆಗಳಿಗಾದರೂ ಹೋಗಿ ಸುತ್ತಮುತ್ತಲಿನ ಗ್ರಾಮಸ್ಥರಿಗೆ ಅವರ ಕಷ್ಟ ಹವಾಲುಗಳನ್ನು ಹೇಳಿಕೊಳ್ಳಲು ಅವಕಾಶ ಕಲ್ಪಿಸಿಕೊಡಬೇಕು. ಇವರ ಸಂಚಾರದ ಕಾಲಕ್ರಮ ಪಟ್ಟಿಯನ್ನೂ ಇವರು ಪ್ರಜೆಗಳಿಂದ ಅರ್ಜಿಗಳನ್ನು ತೆಗೆದುಕೊಳ್ಳುವ ಸಮಯವನ್ನೂ ಮುಂಚಿತವಾಗಿಯೇ ಎಲ್ಲರಿಗೂ ತಿಳಿಯುವಂತೆ ಪ್ರಕಟಿಸಿದರೆ ಗ್ರಾಮವಾಸಿಗಳಿಗೆ ಅವರ ಕಷ್ಟನಷ್ಟಗಳನ್ನು ಇವರಿಗೆ ಅರ್ಜಿಮೂಲಕವೂ ಖುದ್ದಾಗಿಯೂ ತಿಳಿಸಲು ಅನುಕೂಲವಾಗುವುದು. ಅರ್ಜಿಗಳ ವಿಷಯವಾಗಿ ಜನರನ್ನು ವಿಚಾರಿಸಲು ಚೀಫ್ ಕಮಿಷನರವರಿಗೂ ಸುಲಭವಾಗುವುದು. ಹೀಗೆ ಮಾಡಿದ್ದೇ ಆದರೆ ದೇಶದ ನಿವಾಸಿಗಳ ಹೀನಸ್ಥಿತಿಯನ್ನು ಅರಿತವರಾದ ಚೀಫ್ ಕಮಿಷನರವರಿಗೆ ದೇಶಾಭಿವೃದ್ಧಿಯ ಕೆಲಸಗಳಿಗೆ ಸರಕಾರದಲ್ಲಿ "ಹಣವಿಲ್ಲ" ವೆಂಬ ವಾಡಿಕೆಯ ಉತ್ತರವನ್ನು ಕೊಡಲು ಕಷ್ಟ ತೋರುವುದು. ಮಾತ್ರವಲ್ಲದೆ, ರಾಜರ ಪ್ರತಿನಿಧಿಗಳಲ್ಲಿಯೂ ಪ್ರಜೆಗಳಲ್ಲಿಯೂ ಪರಸ್ಪರ ಅನುರಾಗವೂ ವಿಶ್ವಾಸವೂ ಹೆಚ್ಚುವುದು.

ಜನಸಮುದಾಯವೂ ಕೌನ್ಸಿಲಿನ ಮೂಲಕ ಅವರ ಪ್ರತಿನಿಧಿಗಳೂ ದೇಶದಲ್ಲಿ ಮಾಡಬೇಕೆಂದು ಸರಕಾರದೊಂದಿಗೆ ಹೋರಾಡುತ್ತಿರುವ ಕೆಲವು ಮುಖ್ಯ ಕೆಲಸಗಳ ವಿಷಯ ವಿಚಾರಿಸಲು ಚೀಫ್ ಕಮಿಷನರವರಿಗೆ ಇದೀಗ ತಕ್ಕ ಸಮಯವೆಂದು ಹೇಳದಿರಲಾರೆವು. ಮರೆನಾಡಿಗೆ ರಸ್ತೆ ಇಲ್ಲದೆ ಇರುವುದರಿಂದ, ಅಲ್ಲಿಯ ಜನರು ಕೊಡುತ್ತಿರುವ ಕಂದಾಯಕ್ಕೆ ಪ್ರತಿಫಲವಾಗಿ ಸರಕಾರದಿಂದ ಸಲ್ಲಬೇಕಾದ ವೈದ್ಯ ಚಿಕಿತ್ಸೆ, ವಿದ್ಯಾಭ್ಯಾಸ, ವ್ಯಾಪಾರ ಮೊದಲಾದ ಅನುಕೂಲಗಳು ಅವರಿಗೆ ದೊರೆಯುತ್ತಿರುವುದಿಲ್ಲವೆಂಬುದೂ ಮಳೆಗಾಲದಲ್ಲಿ ಪೇಟೆಪಟ್ಟಣಗಳಿಂದಲೂ ಬೇರೆ ಊರುಗಳಿಂದಲೂ ಗಡೀಪಾರು ಆದಂತಿರುವ ಆ ನಾಡಿನವರ ಕಷ್ಟವು ಹೋಗಲಾರದೆಂಬುದೂ ಚೀಫ್ ಕಮಿಷನರವರು ಹೋಗಿ ನೋಡಿ ವಿಚಾರಿಸಿದರೆ ಮನಸ್ಸಿನವಾಗುವುದರಲ್ಲಿ ಸಂಶಯವಿಲ್ಲ. ಈ ನಾಡಿಗೆ ಸಾವಿರಗಟ್ಟಲೆ ರೂಪಾಯಿ ಖರ್ಚುಮಾಡಿ ರಸ್ತೆಮಾಡಿಸಿದರೆ ಸರಕಾರಕ್ಕೆ ಹೆಚ್ಚಿನ ಉತ್ಪತ್ತಿ ದೊರೆಯುವುದೋ ಎಂಬ ಪ್ರಶ್ನೆಯು ಅಧಿಕಾರಿಗಳ ಮನಸ್ಸಿನಲ್ಲಿ ಹುಟ್ಟಬಹುದು. ಈ ರಸ್ತೆಗೆ ಖರ್ಚುಮಾಡುವ ಹಣಕ್ಕೆ ಪ್ರತಿಫಲವು ಸರಕಾರಕ್ಕೆ ಒಡನೆ ಸಿಕ್ಕದೆಹೋದರೂ ಕ್ರಮೇಣ ರಾಜಾದಾಯವು ಹೆಚ್ಚುವುದರಲ್ಲಿ ಸಂದೇಹವಿಲ್ಲ. ಅಲ್ಲಿಯ ಉತ್ಪತ್ತಿಗಳಿಗೆ ಹೆಚ್ಚಿನ ಬೆಲೆಯು ದೊರೆಯುವಾಗ ಆ ನಾಡಿನಲ್ಲಿ ಪಾಳು ಬಿದ್ದಿರುವ ಭೂಮಿಯೆಲ್ಲವೂ ಸಾಗುವಳಿ ಮಾಡಲ್ಪಡುವುವು; ಇದರಿಂದಲೂ, ರಸ್ತೆಯ ಬಾಜಿನಲ್ಲಿರುವ ಭೂಮಿಗಳ ಉತ್ಪತ್ತಿಗೆ ಹೆಚ್ಚು ಕ್ರಯವು ಬರುವದರಿಂದಲೂ ಹೆಚ್ಚಿನ ಕಂದಾಯವು ಸಿಕ್ಕುವುದು. ಇನ್ನು ಬೇರೆ ವಿಧಗಳಲ್ಲಿಯೂ ಸರಕಾರದ ಉತ್ಪತ್ತಿಯು ಹೆಚ್ಚುವುದು. ಆದರೆ ಉತ್ಪತ್ತಿಯೇ ಸರಕಾರದ ಉದ್ದೇಶವಲ್ಲ. ತಮ್ಮ ಆಳಿಕೆಯಲ್ಲಿರುವ ಪ್ರಜೆಗಳ ಅಭಿವೃದ್ಧಿಯನ್ನೂ, ತೃಪ್ತಿಯನ್ನೂ ಕಾಯುವುದು ಸರಕಾರದ ಕರ್ತವ್ಯವಾಗಿದೆ. ಆದುದರಿಂದ ಮರೆನಾಡು ರಸ್ತೆಯಿಂದ ಸರಕಾರದ ಆದಾಯವು ಹೆಚ್ಚದಿದ್ದರೂ ಕೂಡ ಆ ಪ್ರಾಂತ್ಯದ ಜನರ ಅಭಿವೃದ್ಧಿಗಾಗಿಯೂ ತೃಪ್ತಿಗಾಗಿಯೂ ಆ ಕೆಲಸಕ್ಕೆ ಒಡನೆ ಕೈಹಚ್ಚುವಂತೆ ಚೀಫ್ ಕಮಿಷನರವರು ತೀರ್ಮಾನಿಸಬೇಕಾಗಿದೆ.

ನಂಜರಾಜಪಟ್ಣ ತಾಲೋಕಿನ ಜನರು ಹೋರಿಯಾಡುತ್ತಿರುವ ಹಾರಂಗಿ ನಾಲೆಯ ವಿಷಯವೂ ಚೀಫ್ ಕಮಿಷನರವರು ವಿಚಾರಿಸತಕ್ಕದಿದೆ. ಚೀಫ್ ಕಮಿಷನರವರು ಆ ಸ್ಥಳವನ್ನು ಸಂದರ್ಶಿಸಿದಾದರೆ ಪಿ. ಡಬ್ಲ್ಯು. ಇಲಾಖೆಯವರು ಈಗ ಒಂದು ವರ್ಷದಿಂದ ಅಲ್ಲಿ ಮಾಡುತ್ತಿರುವ ಕೆಲಸವು ಎಷ್ಟರ ಮಟ್ಟಿಗೆ ಮುಂದರಿಸಿದೆ ಎಂಬುದನ್ನು ನೋಡಬಹುದು. ಅಲ್ಲದೆ ಆ ಕಾಮಗಾರಿಗೆ ಅದರಿಂದ ಪ್ರಯೋಜನ ಹೊಂದಬಹುದಾದ ರೈತರು ಹಣಸಹಾಯ ಮಾಡಲು ತಯಾರಾಗಿದ್ದಾರೆಂದು ಹೇಳುತ್ತಿರುವದನ್ನು ಖುದ್ದಾಗಿ ವಿಚಾರಿಸಿ ಅದರಿಂದ ಎಷ್ಟು ದ್ರವ್ಯ ಸಂಗ್ರಹಿಸಬಹುದೆಂಬದನ್ನು ಕಂಡು ಹಿಡಿದು, ಇದು ತಕ್ಕಷ್ಟು ದೊಡ್ಡ ಮೊಬಲಗಾದರೆ ಬಾಕಿ ಹಣವನ್ನು ಇಂಡಿಯಾ ಸರಕಾರದಿಂದ ಸಾಲತೆಗೆದುಕೊಳ್ಳುವ ಏರ್ಪಾಡು ಮಾಡಬಹುದಲ್ಲವೇ? ಈ ಕೆಲಸಕ್ಕೆ ದೊಡ್ಡ ಹಣ ಬೇಕಾಗಿರುವುದರಿಂದ ದೇಶದ ವಾರ್ಷಿಕ ಉತ್ಪತ್ತಿಯನ್ನು ವಿನಿಯೋಗಿಸಲು ಸಾಧ್ಯವಿಲ್ಲ. ನಮ್ಮ ಪ್ರಾಂತ್ಯದ ಸರಕಾರವನ್ನು ಪ್ರತ್ಯೇಕಿಸುವ ವರೆಗೆ ನಮ್ಮ ದೇಶದಿಂದ ದೊರೆತ ಖರ್ಚು ಕಳೆದು ನಿಂತ ಉಳಿತಾಯವನ್ನು ಇಂಡಿಯಾ ಸರಕಾರದವರು ಉಪಯೋಗಿಸಿಕೊಂಡಿದ್ದರಿಂದ, ಅದರಿಂದ ನಮ್ಮ ದೇಶದ ದೊಡ್ಡ ಕೆಲಸಗಳಿಗೆ ದ್ರವ್ಯಸಹಾಯ ದೊರಕಿಸಿಕೊಳ್ಳುವ ಪ್ರಯತ್ನ ಮಾಡಬೇಕಾಗಿದೆ. ಉತ್ತರಕೊಡಗಿನ ಜನರ ಇನ್ನೊಂದು ಕೋರಿಕೆಯಾದ ಕೆರೆಗಳ ರಿಪೇರಿಯ ಕೆಲಸದ ಕಡೆಗೂ ಚೀಫ್ ಕಮಿಷನರು ಗಮನವನ್ನೀಯಬೇಕಾಗಿದೆ. ಈ ಕೆಲಸದಿಂದ ಜನರಿಗೆ ಎಷ್ಟರ ಮಟ್ಟಿಗೆ ಪ್ರಯೋಜನವಾಗಬಹುದೆಂಬದನ್ನೂ, ಇದನ್ನು ಸರಕಾರದವರು ಕೈಕೊಳ್ಳದೆ ಇರುವುದರಿಂದ ಅಲ್ಲಿಯ ಜನರು ಎಷ್ಟು ನೊಂದುಕೊಳ್ಳುತ್ತಿದ್ದಾರೆಂಬುದನ್ನೂ ಚೀಫ್ ಕಮಿಷನರವರು ಅಲ್ಲಿಗೆ ತಾವಾಗಿಯೇ ಹೋದರೆ ತಿಳಕೊಳ್ಳಬಹುದು.

ಇವರ ದೃಷ್ಟಿಯು ಹಾರಂಗಿ ನಾಲೆಯ ಕೆಲಸದ ಕಡೆಗೆ ಬಿದ್ದರೆ ಅಲ್ಲಿ ಕಡಿದು ಬೀಳಿಸಲ್ಪಟ್ಟಿರುವ ಮರದ ತೊಲೆಗಳನ್ನು ಬಳಸುವುದಕ್ಕೆ ಸಾಗಿಸುವುದರಿಂದ ಸರಕಾರಕ್ಕೇನಾದರೂ ಲಾಭವು ದೊರೆಯುವುದೋ ಎಂಬದನ್ನು ವಿಚಾರಿಸಬಹುದಲ್ಲದೆ, ಅಲ್ಲಿರುವ ಟ್ರಾಮ್ವೇಗೆ ಸಂಬಂಧಪಟ್ಟ ಯಂತ್ರಗಳೂ ಬೇರೆ ಕಬ್ಬಿಣದ ಸಾಮಾನುಗಳೂ ಅಲ್ಲಿ ಮಣ್ಣುಹಿಡಿದು ಹಾಳಾಗುವುದರ ಬದಲು ಅವುಗಳನ್ನು ಬೇಗನೆ ಮಾರಾಟ ಮಾಡುವ ಏರ್ಪಾಡನ್ನು ಮಾಡಿಸಬಹುದು. ಸರಕಾರದವರು ತಾತ್ಕಾಲಿಕವಾಗಿ ನಿಲ್ಲಿಸಲ್ಪಟ್ಟಿರುವದಾಗಿ ಹೇಳುವ ನಷ್ಟದ ಆ ಟ್ರಾಮ್ವೇಯ ಕೆಲಸವನ್ನು ಖಾಯಂ ಆಗಿ ನಿಲ್ಲಿಸುವಂತೆ ತೀರ್ಮಾನಿಸಬೇಕೆಂದು ನಾವು ಎಷ್ಟು ಒತ್ತಿ ಹೇಳಿದರೂ ಸಾಲದು.

ನಂಜರಾಜಪಟ್ಣ ತಾಲೋಕಿನಲ್ಲಿ ಒಮ್ಮೆ ಜನಭರಿತವಾಗಿ ಒಳ್ಳೇ ಸ್ಥಿತಿಯಲ್ಲಿದ್ದ ಹಲವು ಗ್ರಾಮಗಳು ಈಗ ಪಾಳುಬಿದ್ದಿರುವುದನ್ನು ನೋಡಿದರೆ ಯಾರ ಮನಸ್ಸು ತಾನೇ ಕರಗದಿರುವುದು. ಇವು ಬೇರ್ಪಡಲು ಕಾರಣಗಳು ಯಾವವೇ ಇರಲಿ. ಇವುಗಳ ಈಗಿನ ಅವಸ್ಥೆಯನ್ನು ನೋಡಿದರೆ ಈ ತಾಲೋಕು ಬ್ರಿಟಿಷ್ ಸರಕಾರದ ಆಡಳಿತದಲ್ಲಿ ಅಭಿವೃದ್ಧಿಹೊಂದುವುದರ ಬದಲು ಹೀನಸ್ಥಿತಿಗೆ ಇಳಿದಿದೆ ಎಂಬುದು ಸ್ಪಷ್ಟವಾಗುತ್ತದೆ. ಸರಕಾರದ ಮೇಲಿರುವ ಈ ಅಪವಾದವನ್ನು ಹೋಗಲಾಡಿಸಬೇಕೆಂದೋ, ಅಥವಾ ಆ ಪ್ರಾಂತ್ಯದ ಕೀಳು ಸ್ಥಿತಿಯನ್ನು ನೋಡಿ ತಾಳಲಾರದೆಯೋ ನಮ್ಮ ಈಗಿನ ಕಮಿಷನರವರು ಆ ಗ್ರಾಮಗಳನ್ನು ಜೀರ್ಣೋದ್ಧಾರಮಾಡುವ ಏರ್ಪಾಡನ್ನು ಕೈಕೊಂಡಿರುವರು. ಪಾಳುಬಿಟ್ಟಿರುವ ಗ್ರಾಮಗಳಲ್ಲಿ ಪುನಃ ಜನರು ಹೋಗಿ ವಾಸಿಸುವ ಹಾಗೆ ಅನುಕೂಲಪಡಿಸುವಂತೆ ಒಬ್ಬ ಆಫೀಸರನ್ನು ನೇಮಿಸಿರುವರು. ಈ ಆಫೀಸರು ಈಗ ಎಂಟುತಿಂಗಳಿಂದ ಮಾಡಿದ ಕೆಲಸವು ಎಷ್ಟರಮಟ್ಟಿಗೆ ಮುಂದುವರಿದಿದೆಯೆಂತಲೂ, ಈ ಹೊಸ ಏರ್ಪಾಡಿನಿಂದ ಅಲ್ಲಿಯ ನಿವಾಸಿಗಳಿಗೆ ಎಷ್ಟು ಪ್ರಯೋಜನ ಉಂಟಾಗಿದೆಯೆಂದೂ, ಇನ್ನು ಎಷ್ಟು ಉಂಟಾಗಬಹುದೆಂದೂ, ಚೀಫ್ ಕಮಿಷನರವರೇ ಆ ಗ್ರಾಮಗಳಿಗೆ ಹೋಗಿ ನೋಡಿ ಅಜಮಾಯಿಸುವುದು ಅವಶ್ಯವಾಗಿದೆ.

ಬೆಟ್ಟಗುಡ್ಡಗಳಿಂದಲೂ ಹಳ್ಳತಿಟ್ಟಗಳಿಂದಲೂ ಕೂಡಿರುವ ಈ ದೇಶದಲ್ಲಿ ರಸ್ತೆಗಳ ಆವಶ್ಯಕತೆ ತುಂಬಾ ಇದೆ ಎಂಬುದು ಎಲ್ಲರಿಗೂ ತಿಳಿದ ಸಂಗತಿಯಾಗಿದೆ. ಗ್ರಾಮಾಂತರಗಳಿಗೆ ರಸ್ತೆಗಳನ್ನು ಮಾಡಿಸಿಕೊಡಬೇಕೆಂದು ಹಲವು ಕಡೆಗಳ ಜನರ ಅರ್ಜಿಗಳು ಬರುತ್ತಿವೆ. ಇವುಗಳನ್ನೆಲ್ಲಾ ಒಂದೇ ಸಾರಿ ಮಾಡಿಸಿಕೊಡಲು ಸಾಧ್ಯವಿಲ್ಲದ್ದರಿಂದ ಇವುಗಳು ಬಾಲಬಹುದಾದ ಪ್ರದೇಶಗಳನ್ನು ನೋಡಿ ಪ್ರಾಮುಖ್ಯತೆಯ ಪ್ರಕಾರ ಇವುಗಳ ಕೆಲಸವನ್ನು ಒಂದರನಂತರ ಒಂದಾಗಿ ಕೈಕೊಳ್ಳಲು ತೀರ್ಮಾನಿಸಬಹುದು.

ದೇಶದ ಜನರು ದೇಶಾಭಿವೃದ್ಧಿಯ ವಿಷಯದಲ್ಲಿ, ಹೆಚ್ಚಿನ ರಾಜಕೀಯ ಸುಧಾರಣೆಯನ್ನು ಪಡೆಯಬೇಕೆಂಬುದರಲ್ಲಿ ಎಷ್ಟು ಉತ್ಸಾಹವುಳ್ಳವರಾಗಿದ್ದಾರೆಂಬುದನ್ನು ತಿಳಿಯಲು ಚೀಫ್ ಕಮಿಷನರವರಿಗೆ ಒಂದು ಒಳ್ಳೇ ಅವಕಾಶವು ಒದಗಿದೆ. ನಾಳೆದಿನವೇ ನಾಪೋಕ್ಲಿನಲ್ಲಿ ಪ್ರಾರಂಭವಾಗುವ ಜಮೀನುದಾರರ ಸಂಘದ ವಾರ್ಷಿಕ ಸಮ್ಮೇಳನವನ್ನು ನೋಡಿದ್ದೇ ಆದರೆ ಅಲ್ಲಿ ನೆರೆಯುವ ದೇಶದ ಎಲ್ಲಾ ಭಾಗಗಳ ಸಾಮಾನ್ಯಜನರ ಉತ್ಸಾಹಕತೆ ಮತ್ತು ಬುದ್ಧಿ ಚಾತುರ್ಯಗಳಿಗೂ ತುಂಬಾ ವಿದ್ಯಾವಂತರದವುಗಳಿಗೂ ಹೆಚ್ಚಿನ ವ್ಯತ್ಯಾಸಗಳಿಲ್ಲವೆಂಬುವುದು ವ್ಯಕ್ತವಾದೀತು.

ಮೇಲೆ ಸೂಚಿಸಲ್ಪಟ್ಟಿರುವವುಗಳು ಚೀಫ್ ಕಮಿಷನರವರು ಖುದ್ದಾಗಿ ನೋಡಬೇಕಾದ ವಿಷಯಗಳಲ್ಲಿ ಕೆಲವು ಮಾತ್ರ ಆಗಿವೆ. ಅವರು ಸಂದರ್ಶಿಸಿ ವಿಚಾರಿಸಬೇಕಾದ ಇನ್ನೂ ಅನೇಕ ಸಂಗತಿಗಳಿರುವವು. ಆದುದರಿಂದ ಇವರು ... ನ ಒಂದು ತಿಂಗಳ ಸಮಯದಲ್ಲಿ ದೇಶದ ... ಸುತ್ತಿ ಜನರ ನಿಜಸ್ಥಿತಿಯನ್ನು ಅರಿತುಕೊಳ್ಳಲು ... ವರಾಗಿ ಆಶಿಸುತ್ತೇವೆ.

ಓರಿಯಂಟಲ್ ಜೀವವಿ...

ಓರಿಯಂಟಲ್ ಗವರ್ನಮೆಂಟ್ ಸ... ಇನ್ಶ್ಯೂರೆನ್ಸ್ ಕಂಪೆನಿಯ ಕೆಲಸದ ವಿಷಯ ಕ... ನ ದಿವಾನರಾಗಿದ್ದ ಸರ್ ಎ. ಆರ್. ಬಾನಜಿ... ರುವ ಪತ್ರವನ್ನು ಆ ಕಂಪೆನಿಯವರ ಕೋರಿಕೆ... ಟದಲ್ಲಿ ಪ್ರಕಟಿಸಿರುತ್ತೇವೆ. ಈ ಪತ್ರವು ... ಕಂಪೆನಿಯ ಕಾರ್ಯನಿರ್ವಾಹಕತೆ ... ಹೇಗಿದೆಂಬುದ... ತ್ತದೆ. ಸದರಿ ಕಂಪೆನಿಯಲ್ಲಿ ಜೀವವಿಮೆ ... ಈ ಪತ್ರವನ್ನು ಓದುವುದು ಸಹಾಯಕರವ...

... MART.
...orbhoy
...Y. ...
...TER"
...bay.
...nett
Kodanda
...ard of
...Mercara

ಮಹಾತ್ಮಗಾಂಧಿಯವರ ಸ್ವಚರಿತ್ರೆ

(ಕಳೆದವಾರದಿಂದ ಮುಂದುವರಿದದ್ದು)

10ನೆಯ ಪ್ರಕರಣ

ಕಿಂಚಿತ್ತು ಮತಸ್ವರೂಪಾವಲೋಕನ.

ನಾನು 6ನೆಯ ವರ್ಷದಿಂದ 16ನೆಯ ವರ್ಷದವರೆಗೆ ಶಾಲೆಯಲ್ಲಿ ಓದಿದೆನು. ಉಪಾಧ್ಯಾಯರು ಪ್ರಯತ್ನಪೂರ್ವಕವಾಗಿ ತಿಳುಹಿದ ವಿಷಯಗಳ ಹೊರತಾಗಿ ಅವರ ಪ್ರಯತ್ನವಿಲ್ಲದೆ ನಾನು ಯಾವ ವಿಷಯವನ್ನೂ ಗ್ರಹಿಸದಿದ್ದಾಗ್ಯೂ ಇತರ ವಿಧವಾಗಿ ಕೆಲ ವಿಷಯಗಳನ್ನು ತಿಳಿದುಕೊಂಡಿದ್ದೆ. ಮತವೆಂದರೆ ಸ್ವಸ್ವರೂಪಸಂದರ್ಶನವೆಂದೇ ಅಂದರೆ ಆತ್ಮಜ್ಞಾನವೆಂದೇ ನನ್ನ ಅಭಿಪ್ರಾಯವು. ನನ್ನ ಮನೆತನದವರು ವೈಷ್ಣವ ಮತಾವಲಂಬಿಗಳಾಗಿದ್ದುದರಿಂದಲೇ ನಾನು ವಿಷ್ಣುದೇವಾಲಯಕ್ಕೆ ಹೋಗಬೇಕಾಗಿದ್ದಿತು. ಆದರೆ ಅಲ್ಲಿನ ಶೃಂಗಾರಾಡಂಬರಾದಿಗಳು ನನಗೆ ಆಕರ್ಷಣವಾಗಿರಲಿಲ್ಲವು. ಆಲಯ ಅರ್ಚಕರು ದುರ್ನೀತಿಪರರಾಗಿದ್ದರೆಂದು [illegible] ಕೇಳಿದೆ. ಆದರಿಂದ ನನಗೆ ಆಸಕ್ತಿಯು ಕಡಿಮೆಯಾಗಿದೆ [illegible] ವನೋಲಿಯಲ್ಲಿ ನಾನೇನನ್ನೂ ಗ್ರಹಿಸಿಕೊಂಡಿರಲಿಲ್ಲವು.

ರಾಮನಾಮಸ್ಮರಣೆ

ಸಣ್ಣ ವಯಸ್ಸಿನಿಂದಲೂ ನಮ್ಮ ಮನೆಯ ಕೆಲಸಮಾಡಿಕೊಂಡಿದ್ದ ರಂಭಾ ಎಂಬ ಮುದುಕಿಯು ನನ್ನನ್ನು ಸಲಹಿದಳು. ಆಕೆಯಿಂದ ನಾನು ಬಹಳ ವಿಷಯವನ್ನು ತಿಳಿದುಕೊಂಡೆನು. ಆಕೆಗೆ ನನ್ನ ಮೇಲೆ ಬಹಳ ಪ್ರೀತಿ ಇದ್ದಿತು. ಅದು ನನಗೆ ಈಗಲೂ ಸ್ಮರಣೆಗೆ ಬರುತ್ತಲೇ ಇದೆ. ದಯ್ಯಭೂತಗಳೆಂದರೆ ನನಗೆ ಬಹಳ ಭಯವಾಗುತ್ತಿದ್ದಿತು. ರಾಮನಾಮ ಸ್ಮರಣೆ ಮಾಡಿದರೆ ಆ ಭಯವು ಹೋಗುತ್ತದೆಂದು ರಂಭೆಯು ನನಗೆ ಹೇಳುತ್ತಿದ್ದಳು. ಚಿಕ್ಕವನಾಗಿದ್ದುದರಿಂದ ನನಗೆ ಆಗ ರಾಮನಾಮದ ಮಹಿಮೆಯಲ್ಲಿ ನಂಬುಗೆಯಿಲ್ಲದಿದ್ದರೂ ನನ್ನ ರಂಭೆಯ ಮಾತಿನಲ್ಲಿ ಬಹಳ ನಂಬಿಕೆಯಿದ್ದ ಪ್ರಯುಕ್ತ ನಾನು ಆಗ ರಾಮನಾಮಸ್ಮರಣೆಮಾಡಲಾರಂಭಿಸಿದೆನು. ಆಕೆಯ ಸದುಪದೇಶವು ವ್ಯರ್ಥವಾಗಲಿಲ್ಲವಲ್ಲದೆ ಈಗ ನನಗೆ ರಾಮನಾಮವು ತಾರಕವಾಗಿ ಪರಿಣಮಿಸಿರುತ್ತದೆ.

ಆ ಕಾಲದಲ್ಲಿ ನನ್ನ ಜ್ಞಾತಿಯೊಬ್ಬನು ಬಹುಭಕ್ತಿಯಿಂದ ರಾಮಾಯಣವನ್ನು ಪೂಜಿಸುತ್ತಿದ್ದನು. ನಾನೂ ನನ್ನ ಸೋದರನೂ ರಾಮರಕ್ಷಾಸ್ತೋತ್ರವನ್ನು ಕಲಿಯಲು ಆತನು ಏರ್ಪಡಿಸಿದನು. ನಾವು ಅದನ್ನು ಪಠಿಸುತ್ತಿದೆವು. ಪ್ರತಿದಿನ ಪ್ರಾತಃಕಾಲದಲ್ಲಿ ಸ್ನಾನಮಾಡಿ ಮುಖ್ಯವಾಗಿ ಆ ಸ್ತೋತ್ರವನ್ನು ಮಾಡುತ್ತಿದ್ದೆವು. ಪೋರಬಂದರಿನಲ್ಲಿ ನಾವಿದ್ದವರೆಗೂ ಆ ದೀಕ್ಷೆಯು ಸರಿಯಾಗಿ ನಡೆದಿತಾದರೂ ಅದರಲ್ಲಿ ನನಗೆ ಸ್ಥಿರವಾದ ನಂಬಿಕೆಯಿರಲಿಲ್ಲವಾಗಿ ರಾಜಕೋಟೆಗೆ ಬಂದಮೇಲೆ ಆ ದೀಕ್ಷೆಯು ಹೋಯಿತು. ಪೋರಬಂದರಿನಲ್ಲಿರುವಾಗ್ಗೆ ನನ್ನ ಜ್ಞಾತಿಯ ಪ್ರೀತಿಯನ್ನು ಸಂಪಾದಿಸುವುದಕ್ಕಾಗಿಯೇ ನಾನು ಆ ಸ್ತೋತ್ರವನ್ನು ಪಠಿಸುತ್ತಿದ್ದೆನು. ಅದಲ್ಲದೆ ನಾನು ಅದನ್ನು ಬಹಳ ಸ್ಫುಟವಾಗಿ ಹೇಳುವವನೆಂಬ ಗರ್ವವು ನನಗಿದ್ದಿತು.

ರಾಮಾಯಣ ಪಾರಾಯಣದಿಂದ ಕುಷ್ಠರೋಗ ಒಳವುದಿಲ್ಲ.

ನನ್ನ ತಂದೆಗೆ ರೋಗವಾದ ಮೇಲೆ ನಾನು ಕೆಲ ಕಾಲದವರೆಗೆ ಪೋರಬಂದರಿನಲ್ಲಿದ್ದೆನು. ಆಗ ಪ್ರತಿದಿನ ಸಾಯಂಕಾಲ ಬಿಲ್ವೇಶ್ವರದ ನಿವಾಸಿಯಾದ ಲಾಧಾ ಮಹಾರಾಜನೆಂಬ ಪರಮ ರಾಮಭಕ್ತನು ನಮ್ಮ ಮನೆಯಲ್ಲಿ ರಾಮಾಯಣವನ್ನೋದುತ್ತಿದ್ದನು. ಲಾಧಾ ಮಹಾರಾಜನಿಗೆ ಕುಷ್ಠರೋಗ ಪ್ರಾಪ್ತವಾಗಲು ಆತನು ಔಷಧವನ್ನು ತೆಗೆದುಕೊಳ್ಳದೆ ಬಿಲ್ವೇಶ್ವರನ ದೇವಾಲಯದಲ್ಲಿ ಪೂಜೆಮಾಡಿ ವಿಸರ್ಜಿಸಲ್ಪಟ್ಟ ಶಿವನಿರ್ಮಾಲ್ಯವಾದ ಬಿಲ್ವಪತ್ರೆಯನ್ನು ತನ್ನ ಗಾಯಕ್ಕೆ ಕಟ್ಟಿ ರಾಮಾಯಣವನ್ನೋದುತ್ತಿದ್ದುದರಿಂದಲೇ ಆತನ ಕುಷ್ಠರೋಗವು ವಾಸಿಯಾಯಿತೆಂದು ನಾನು ಕೇಳಿದ್ದೆನು. ಆತನು ನಮ್ಮ ಮನೆಯಲ್ಲಿ ರಾಮಾಯಣವನ್ನೋದುತ್ತಿರುವಾಗಲೇ ಆತನಿಗೆ ಕುಷ್ಠರೋಗವು ಸಂಪೂರ್ಣವಾಗಿ ವಾಸಿಯಾಯಿ[illegible]ರಸ್ವರವು ಬಹಳ ಮಾಧುರ್ಯವಾಗಿದ್ದುದರಿಂ[illegible] ಶ್ಲೋಕಗಳನ್ನು ಆತನು ಪರವಶನಾಗಿ [illegible]ರವಾಗಿ ಓದುದಿದ್ದನಲ್ಲದೆ [illegible] ಸ್ವರನಾಗಿ ಮಾಡುತ್ತಿದ್ದನು. ನನಗೆ ಆ[illegible] ಮಾತ್ರವಾಗಿದ್ದರೂ ಆ ಪುರಾಣವೆ[illegible]ಗೆ ಮೈಮರೆತುಹೋಗುತ್ತಿದ್ದಿತು. ರಾ[illegible] ನನಗೆ ವಿಶೇಷ ಭಕ್ತಿಹುಟ್ಟಲು ಅದೇ [illegible]ಕ್ತಿಯನ್ನು ಹೆಚ್ಚಿಸುವಂತಹ ಗ್ರಂಥ[illegible] ಬಹು ಗುಣವಾಗಿ[illegible] ರಾಮಾಯಣವು ಬಹಳ ಶ್ರೇಷ್ಠ[illegible]ಧಕಧಕಿಸುವ [illegible] ನಾನು ನಂಬುತ್ತೇನೆ.

ರಾಜಕೋಟೆಯ[illegible]

ಭಾಗವತ ಶ್ರವಣ.

[illegible] ದಿನಗಳ ಮೇಲೆ ನಾನು ರಾಜಕೋಟೆಗೆ ಬಂ[illegible] ರಾಮಾಯಣಪುರಾಣಪಾರಾಯಣವಿರಲಿಲ್ಲವು. [illegible]ಕಾದಶೀ ದಿವಸ ಭಾಗವತವು ಓದಲ್ಪಡುತ್ತಿದ್ದಿ[illegible] ಮಾನಾದ ಶ್ರದ್ಧೆಯಿಂದ ಕೇಳುತ್ತಿದ್ದೆನಾದರೂ, ಆ [illegible]ಕನು ಸಮರ್ಥನಾಗಿಲ್ಲದಿದ್ದುದರಿಂದ ಅದು ನ[illegible]ಕರ್ಷಣೀಯವಾಗಿರಲಿಲ್ಲವು. ಕಾಲಾಂತರದಲ್ಲಿ ಗುಜರಾತಿ ಭಾಷೆಯಲ್ಲಿ ಭಾಗವತವನ್ನು ನಾನು ಬಹಳ ಶ್ರದ್ಧೆಯಿಂದ ಓದಿದೆನು. ನಾನು ಡಿಲ್ಲಿಯಲ್ಲಿ 21ದಿನದ ಉಪವಾಸವ್ರತವನ್ನಾಚರಿಸಿದಾಗ ಪಂಡಿತ ಮದನಮೋಹನ ಮಾಲವೀಯರವರು ಮೂಲದಲ್ಲಿ (ಹಿಂದಿಯೋ, ಸಂಸ್ಕೃತವೋ?) ಕೆಲಭಾಗವನ್ನು ನನಗೋದಿ ಹೇಳಿದರು. ಪಂಡಿತ ಮಾಲವೀಯರವರ ಮುಖಾಂತರ ನನ್ನ ಚಿಕ್ಕವಯಸ್ಸಿನಲ್ಲೇ ಭಾಗವತವನ್ನು ಕೇಳುವ ಭಾಗ್ಯವು ನನಗುಂಟಾಗಿದ್ದರೆ ಆಗಲೇ ನನಗೆ ಅದರಮೇಲೆ ಬಹಳ ಭಕ್ತಿಯುಂಟಾಗುತ್ತಿದ್ದಿತು. ಆದರೆ ನನಗೆ ಅಂತಹ ಭಾಗ್ಯವುಂಟಾಗಿರಲಿಲ್ಲವೆಂದು ನನಗೆ ವ್ಯಸನವುಂಟಾಯಿತು. ಸಣ್ಣತನದಲ್ಲಿ ಕೇಳಿದ ವಿಷಯವು ಚಿರಕಾಲಸ್ಥಾಯಿಯಾಗಿ ಮನಸ್ಸಿನಲ್ಲಿ ನಾಟಿರುವುದು. ಅಂತಹ ಉತ್ತಮವಾದ ಮತಗ್ರಂಥಗಳನ್ನು ನಾನು ನನ್ನ ಬಾಲ್ಯದಲ್ಲಿ ಹೆಚ್ಚಾಗಿ ಕೇಳುವ ಭಾಗ್ಯವು ನನಗುಂಟಾಗಿರಲಿಲ್ಲವು.

ಎಲ್ಲ ಮತಸಹನೆಯು

ರಾಜಕೋಟೆಯಲ್ಲಿ ನನ್ನ ತಂದೆತಾಯಿಗಳು ವಿಷ್ಣುದೇವಾಲಯಗಳಿಗೂ ಶಿವದೇವಾಲಯಗಳಿಗೂ ಹೋಗುತ್ತಿದ್ದರ[illegible] ಕರೆದುಕೊಂಡು ಹೋಗುತ್ತಿದ್ದುದರಿಂದ ನನಗೆ ಆಗಲೇ ಸರ್ವಮತಸಹಿಷ್ಣುತ್ವವುಂಟಾಯಿತು. ಜೈನಮತ ಗುರುಗಳ ಕೆಲರು ಆಗಾಗ್ಗೆ ನನ್ನ ತಂದೆ ಬಳಿಗೆ ಬರುತ್ತಿದ್ದರು. ನಾವು ಜೈನರಲ್ಲವಾದ ದರಿಂದ ಅವರು ನಮ್ಮ ಮನೆಯಲ್ಲಿ ಊಟಮಾಡುವುದು ನಿಷಿದ್ಧವಾದರೂ ಅವರು ನಮ್ಮ ಮನೆಯಲ್ಲಿ [illegible]ತ್ತಿದ್ದರು. ಅವರು ಮತ ತತ್ವವನ್ನೂ, ಇತರ ವಿಷಯವನ್ನೂ ಕುರಿತು ನನ್ನ ತಂದೆಯೊಡನೆ ಸಂಭಾಷಿಸುತ್ತಿದ್ದರು. ಮಹಮ್ಮದೀಯರಲ್ಲೂ ಪಾರ್ಸಿಗಳಲ್ಲೂ ನನ್ನ ತಂದೆಗೆ ಸ್ನೇಹಿತರಿದ್ದರು. ಅವರು ಸಹ ಅವರವರ ಮತಗಳಿಂದ ನನ್ನ ತಂದೆ ಯೊಡನೆ ಸಂಭಾಷಿಸುತ್ತಿದ್ದರಲ್ಲದೆ ನನ್ನ ತಂದೆಯು ಅವರನ್ನು ಬಹುಗೌರವಿಸುತ್ತಿದ್ದರು. ನಾನು ನನ್ನ ತಂದೆಗೆ ಉಪಚಾರಮಾಡುತ್ತಿದ್ದೆನಾದುದರಿಂದ ಅವರುಗಳ ಸಂಭಾಷಣೆಯನ್ನು ಕೇಳುತ್ತಿದ್ದೆನು. ಈ ಕಾರಣಗಳಿಂದಲ್ಲ ನನಗೆ ಸರ್ವಮತಸಹನೆಯು ಚೆನ್ನಾಗಿ ಉಂಟಾಯಿತು.

ಕ್ರೈಸ್ತಮತ

ಆಗ ಕ್ರೈಸ್ತಮತವನ್ನು ಕುರಿತು ನಾನು ಸಂಪೂರ್ಣ [illegible] ನಮ್ಮಲ್ಲಿರಲಿಲ್ಲವು. ಆಗ ಆ ಮತವನ್ನು ಕುರಿತು ನನಗೆ ಕೊಂಚ ಅಸಹ್ಯ ಕೂಡ ಹುಟ್ಟಿದ್ದಿತು. ಆ ಕಾಲದಲ್ಲಿ ಕ್ರೈಸ್ತಮತ ಪ್ರಚಾರಕರು ರಸ್ತೆ ಮೂಲೆಗಳಲ್ಲಿ ನಿಂತು ಹಿಂದೂ ದೇವತೆಗಳನ್ನೂ ಹಿಂದೂಗಳನ್ನೂ ನಿಂದಿಸಿ ಬೋಧಿಸುತ್ತಿದ್ದರು. ನಾನು ಅದನ್ನು ಸಹಿಸದವನಾಗಿದ್ದೆನು. ಒಂದಾವರ್ತಿಯ ಮಾತ್ರ ನಾನು ನಿಂತು ಕೇಳಿದೆನು. ಆ ಅವಹೇಳನ ವಾಕ್ಯಗಳನ್ನು ದೂಷಿಸ ಹತ್ತಿದರು. ಆದುದರಿಂದ ನನ್ನ ಮನಸ್ಸು ಕೆಟ್ಟುಹೋಯಿತು. ಅಂದಿನಿಂದ ನಾನು ಯಾವಾಗಲೂ ಅಲ್ಲಿ ಕೇಳುವವನಲ್ಲವು. ಆ ಕಾಲದಲ್ಲೇ ಬಹಳ ಪ್ರಸಿದ್ಧನಾದ ಧನಿಕನೂ ಆಗಿದ್ದ ಒಬ್ಬ ಹಿಂದುವನ್ನು ಕ್ರೈಸ್ತಮತಕ್ಕೆ ಸೇರಿಸಿಕೊಂಡರು. ಆಗ ಅವನು ಮಾಂಸವನ್ನು ತಿಂದನು. ಸಾರಾಯಿಯನ್ನು ಕುಡಿದನು. ಹಿಂದೂವೇಷವನ್ನು ತೆಗೆದುಹಾಕಿ ಪಾಶ್ಚಾತ್ಯವೇಷವನ್ನು ಧರಿಸಿದನೆಂದು ನಾನು ಕೇಳಿದ್ದೆನು. ಆಗ ಅಂದಿನಿಂದಲೂ ಆ ವೇಷದಲ್ಲೇ ಇರುವನು. ಈ ಸಂಗತಿಯು ಕೇಳಿ ನನ್ನ ಮನಸ್ಸು ಕೆಟ್ಟುಹೋಯಿತು. ಹಾಗೆ ಮಾಂಸವನ್ನು ತಿನ್ನಬೇಕೆಂದೂ, ಸಾರಾಯಿಯನ್ನು ಕುಡಿಯಬೇಕೆಂದೂ, ವೇಷವನ್ನು ಬದಲಾಯಿಸಬೇಕೆಂದೂ ಒತ್ತಾಯಿಸುವ ಮತವು ಮತವೇ ಅಲ್ಲವೆಂದು ತಿಳಿದುಕೊಂಡೆನು. ಹೊಸದಾಗಿ ಕ್ರೈಸ್ತನಾದ ಆ ಹಿಂದುವು ಕೂಡ ತಾನು ಹುಟ್ಟಿದ ಹಿಂದೂಮತವನ್ನೂ ಹಿಂದುಗಳ ಆಚಾರವನ್ನೂ ನಿಂದಿಸಲಾರಂಭಿಸಿದನೆಂದು ನಾನು ಕೇಳಿದ್ದೆನು. ಈ ಕಾರಣಗಳಿಂದಲ್ಲ ನನಗೆ ಕ್ರೈಸ್ತಮತದ ಮೇಲೆ ಅಸಹ್ಯತೆಯುಂಟಾಗಿದೆ.

ಮನುಸ್ಮೃತಿಯಲ್ಲಿ ಸಂಶಯವು

ನಮಗೆ ಇತರ ಮತಗಳ ವಿಚಾರದಲ್ಲಿ ಸಹನೆ ಹುಟ್ಟಿದ ಮಾತ್ರದಿಂದಲೇ ದೇವರಲ್ಲಿ ನನಗೆ ಪೂರ್ಣ ವಿಶ್ವಾಸ ಹುಟ್ಟಿತೆಂದು ತಿಳಿಯಕೂಡದು. ನನ್ನ ತಂದೆಯ ಗ್ರಂಥಗಳಲ್ಲಿ ಮನುಸ್ಮೃತಿ ಸಹ ಇದ್ದಿತು. ಅದನ್ನು ನಾನು ಆಗ ನೋಡಿದೆನು. ಸೃಷ್ಟ್ಯಾದಿ ವಿಷಯಗಳನ್ನು ಕುರಿತು ಮನುಸ್ಮೃತಿಯಲ್ಲಿ ವಿವರಿಸಲ್ಪಟ್ಟಿರುವ ರೀತಿಯು ನನಗೆ ಸರಿದೋರಲಿಲ್ಲವು. ಅದು ಕಾರಣ ನಾಸ್ತಿಕಭಾವನೆಗಳು ನನಗೆ ಕೊಂಚ ಅಧಿಕವಾಗಿ ಹುಟ್ಟಿತು. ನನ್ನ ಜ್ಞಾತಿಯೊಬ್ಬನು ಆಗ ಬದುಕಿದ್ದನು. ಆತನು ಬಹು ಬುದ್ಧಿಶಾಲಿಯೆಂದು ನಾನು ಆತನನ್ನು ಗೌರವಿಸುತ್ತಿದ್ದೆನು. ಈ ನನ್ನ ಸಂಶಯವನ್ನು ಆತನಿಗೆ ತಿಳಿಸಿದೆನು. ಆತನು ಆ ದಕ್ಕೆ ತಕ್ಕ ಸಮಾಧಾನವನ್ನು ಹೇಳದೆ ಕಾಲಚಾರದ ಸಲುವಾಗಿ ನನ್ನನು "ನೀನು ಆ ವಿಷಯವನ್ನು ಕುರಿತು ಆಲೋಚಿಸಬಾರದು. ನೀನು ಚಿಕ್ಕವನು, ದೊಡ್ಡವನಾದಮೇಲೆ ಅವೆಲ್ಲವೂ ನಿನಗೇ ಗೊತ್ತಾಗುವುವು" ಎಂದು ಆತನು ಉತ್ತರಕೊಟ್ಟನು. ಆಗ ಇಂದ ನಾನು ಸುಮ್ಮನಿದ್ದೆನಲ್ಲದೆ ನನ್ನ ಮನಸ್ಸಿಗೆ ಸಮಾಧಾನವಾಗಲಿಲ್ಲವು. ಆಹಾರವಿಚಾರವಾಗಿ ಮನುಸ್ಮೃತಿಯಲ್ಲಿ ವಿವರಿಸಲ್ಪಟ್ಟಿರುವ ನಿಬಂಧನೆಯು ಲೋಕಾಚಾರಕ್ಕೆ ವಿರೋಧವಾಗಿರುವಂತೆ ಸಹ ನನಗೆ ತೋರಿತು. ಅದಕ್ಕೆ ಸಹ ನನ್ನ ಜ್ಞಾತಿಯು ತಕ್ಕ ಸಮಾಧಾನವನ್ನು ಹೇಳಲಾರದೆಹೋದನು. ದೊಡ್ಡವನಾದಮೇಲೆ ನನಗೇ ತಿಳಿಯುವುದೆಂದು ಹೇಳಿ ಸುಮ್ಮನಾದನು.

ಅಹಿಂಸೆ.

ಆಗ ಮನುಸ್ಮೃತಿಯು ಅಹಿಂಸೆಯನ್ನು ಬೋಧಿಸುತ್ತದೆಂದು ನನಗೆ ತೋರಲಿಲ್ಲವು. ನಾನು ಮಾಂಸವನ್ನು ತಿಂದೆನೆಂದು ಆದನ್ನು ಮಾಡಲೇ ಹೇಳಿರುವೆನು. ಮಾಂಸವನ್ನು ತಿನ್ನಬಹುದೆಂದು ಮನುಸ್ಮೃತಿಯಲ್ಲಿ ಬೋಧಿಸಲ್ಪಟ್ಟಿದೆಯೆಂದು ನನಗೆ ತೋರಿತು. ಹಾವು, ನಲ್ಲಿ, ಹೇನು ಮೊದಲಾದವುಗಳನ್ನು ಕೊಲ್ಲುವುದು ದೋಷವಲ್ಲವೆಂದು ನನಗೆ ಆಗ ತೋರಿತು. ಆಗ ನಾನು ನಲ್ಲಿ ಮೊದಲಾದವುಗಳನ್ನು ಸಾಯಿಸಿದೆನೆಂದು ನನಗೆ ಜ್ಞಾಪಕವಿದೆ. ಅದು ನನ್ನ ಧರ್ಮವೆಂದೇ ನಾನು ತಿಳಿದಿದ್ದೆನು.

ನೀತಿ-ಸತ್ಯವು

ಎಲ್ಲದಕ್ಕೂ ನೀತಿಯೇ ಮೂಲಾಧಾರವು ಎಂದು ನಾನು ಆಗ ಸ್ಪಷ್ಟವಾಗಿ ತಿಳಿದುಕೊಂಡಿದ್ದೆನು. ಆದುಕಾರಣ ನನಗೆ ಸತ್ಯವು ಪ್ರಧಾನವಾಗೇರ್ಪಟ್ಟಿತು. ಕ್ರಮಕ್ರಮವಾಗಿ ನನ್ನ ನಂಬಿಕೆಯು ಪ್ರಬಲಿಸಿತು. ಸತ್ಯಶಬ್ದ ನಿರ್ವಚನವು ಅತಿ ವಿಶಾಲವೆಂದು ಸಹ ನನಗೆ ಗ್ರಾಹ್ಯವಾಯಿತು. "ಅಪಕಾರಿಗೆ ಉಪಕಾರವನ್ನು ಯಾವಾಗಲೂ ಎಸಗು ಸುಮತಿ" ಎಂಬ ಆದರ್ಶ ವಾಕ್ಯವು ಕೂಡ ಚೆನ್ನಾಗಿ ನಾಟಿಕೊಂಡಿತು. ಅದರಿಂದ ನನ್ನ ವಿಚಾರದಲ್ಲಿ ನಾನು ಅನುಷ್ಠಾನವನ್ನು ಕೂಡ ಪ್ರಾರಂಭಿಸಿದೆನು.

ಉತ್ತಮವಾದ ಉಪದೇಶವಾಕ್ಯವು.

"ಕುಡಿಯಲು ನೀರುಕೊಟ್ಟವನಿಗೆ ಹೊಟ್ಟೆತುಂಬ ಅನ್ನದಾನ ಮಾಡು. ಉಪಚರಿಸಿದವನನ್ನು ದ್ವಿಗುಣವಾಗಿ ಉಪಚರಿಸು. ಒಂದು ಕಾಸು ದಾನಮಾಡಿದವನಿಗೆ ಒಂದು ಭಂಗಾರದ ಕಾಸನ್ನು ಕೊಡು. ಪ್ರಾಣರಕ್ಷಣೆ ಮಾಡಿದವನನ್ನು ಕಾಪಾಡಲು ಪ್ರಾಣವನ್ನಾದರೂ ಅರ್ಪಿಸಬೇಕು. ವಿದ್ವಾಂಸರ ಬೋಧನೆಯನ್ನೂ ಕಾರ್ಯವನ್ನೂ ಭಕ್ತಿಯಿಂದ ಅನುಸರಿಸಬೇಕು. ಉಪಕಾರಕ್ಕೆ ಪತ್ತುಮಡಿ ಅಧಿಕವಾಗಿ ಪ್ರತ್ಯುಪಕಾರ ಮಾಡಬೇಕು. [illegible] ಎಂದು ಮಹನೀಯರು ಭಾವಿಸುವರು. ಅದುಕಾರಣ ಅಪಕಾರಮಾಡಿದವನಿಗೆ ಸಂತೋಷದಿಂದ ಉಪಕಾರವನ್ನು ಮಾಡಬೇಕು."

"ವೈ. ನ್ಯಾರ್"

ದೈವಭಕ್ತಿ—ದೇಶಭಕ್ತಿ.

ಮನುಷ್ಯ ಸರ್ವಶ್ರೇಷ್ಠನಾದ ತನ್ನ ಜನ್ಮವನ್ನು ಸಾರ್ಥಕಪಡಿಸಿಕೊಳ್ಳಬೇಕಾದರೆ ಸರ್ವೇಶ್ವರನಲ್ಲಿ ಭಕ್ತಿ ಮಾತ್ರವೇ [illegible] ನಿರ್ವಿವಾದ ವಿಚಾರವಷ್ಟೆ! ಆದರೆ ನಮ್ಮ ದೈವಭಕ್ತಿಯೆಂಬುದು ಈಚೀಚೆಗೆ ಅತಿ ಸಣ್ಣಲ ಸ್ವರೂಪವನ್ನು ಹೊಂದುತ್ತಿದೆ. ಬಗೆಬಗೆಯ ಭಕ್ಷ್ಯಭೋಜ್ಯಗಳಿಂದ ಕೂಡಿದ ಉಪಚಾರಗಳು, ಪೋಲಿಸ ವಸ್ತ್ರಾಭರಣ[illegible] ಸಮರ್ಪಣೆಗಳು ಇವುಗಳಿಂದ ನಮ್ಮ ದೇವತಾ ವಿಗ್ರಹಗಳನ್ನು ಆರಾಧಿಸಿ, ಅದೇ ಸರ್ವಾರ್ಥಸಿದ್ಧಿಯೆಂದು ಭ್ರಾಂತರಾಗಿದ್ದೇವೆ. ಹೀಗೆ ಆಡಂಬರದಿಂದ ದ್ರವ್ಯವ್ಯಯಮಾಡಲು ನಾವು ಧೈರ್ಯವಿಲ್ಲದ ಬಡವರು, ಧನವಂತರ ಈ ಬಗೆಯ ಆಡಂಬರವನ್ನು ಕಂಡು "ಅಯ್ಯೋ! ದೇವರನ್ನು ಭಕ್ತಿ ಪೂರ್ವಕವಾಗಿ ಸೇವಿಸುವ ಯೋಗ್ಯತೆ ಇಲ್ಲವಲ್ಲಾ!" ಎಂದು ಪಶ್ಚಾತ್ತಾಪಗೊಳ್ಳುತ್ತಿರುವರು. ಆದರೆ ನಿಜವಾದ ದೇವರ ಸೇವೆಗೆ ಈ ಆಡಂಬರಗಳು ಅವಶ್ಯಕವೆ? ಆಕಾಶವನ್ನು ನೋಡುವುದಕ್ಕೆ ಸೂರ್ಯನ ಬೆಳಕಿನ ಹಂಗೇಕೆ? ಎಂಬಂತೆ ಸರ್ವೇಶ್ವರನನ್ನು ಸೇವಿಸುವುದಕ್ಕೆ ಧನಕನಕಾದಿಗಳು ಅತ್ಯಾವಶ್ಯಕವಲ್ಲ. ಅವು ಇದ್ದು ನಿಷ್ಕಾಮ ಬುದ್ಧಿಯಿಂದ ಅರ್ಪಿಸುವುದಾದರೆ ಶ್ರೇಯಸ್ಕರವು. ಹಾಗಿಲ್ಲದ ಮನುಷ್ಯರು ಕೇವಲವಾಗಿ ಚೆಲುವೇ ಇಲ್ಲದೆ ಸಮಸ್ತ ಲೋಕವನ್ನೂ ತೋರಿಸುತ್ತಿರುವ "ಪತ್ರಂ ಪುಷ್ಪಂ ಫಲಂ ತೋಯಂ" ಈ ವಸ್ತುಗಳನ್ನು ಸಮರ್ಪಿಸಿದರೂ ಸ್ವೀಕರಿಸುವೆನೆಂದು ಭಗವಂತನೇ ನುಡಿದಿರುವನಲ್ಲವೇ!

ಇನ್ನು ದೇಶಭಕ್ತಿಯೋ ಎಂದರೆ, ಇದು ಅನೇಕರಿಗೆ ತಲೆನೋವನ್ನುಂಟುಮಾಡುವುದಾಗಿದೆ. ದೇಶಸೇವೆ ಮಾಡುವುದೆಂದರೆ ಮನೆಮಠಗಳನ್ನೂ ಬಂಧುಬಾಂಧವರನ್ನೂ ಬಿಟ್ಟು ಸಂಕಟಗಳನ್ನು ಅನುಭವಿಸಬೇಕಾಗುವುದೆಂದು ಅನೇಕರು ಭಾವಿಸಿರುವುದುಂಟು. ಆದರೆ ಹಾಗಲ್ಲ, ಸ್ವಲ್ಪ ವಿಚಾರಿಸಿದ ನೋಡಿದರೆ ದೈವಭಕ್ತಿ—ದೇಶಭಕ್ತಿ ಇವುಗಳಿಗೆ ಹೆಚ್ಚು ವ್ಯತ್ಯಾಸವಿಲ್ಲವೆಂಬುದನ್ನು ಮನಗಾಣಬಹುದು. ಈ ವಿಷಯದಲ್ಲಿ 'ಶ್ರೀ ಬಂಗ ಪುರಾಣ' ವೆಂಬ ಗ್ರಂಥದಲ್ಲಿ ಹೀಗೆ ಹೇಳಿದೆ:

ಶ್ಲೋ. ಪ್ರ— 'ದೇವಭಕ್ತಿ ಸ್ವದೇಶಭಕ್ತಿ' ಎಂದೆರಡರಲಿ ಭಾವಿಸಲು ದೇಶಭಕ್ತಿಯನೊಂದನಾಚರಿಸೆ। ದೇವತಾಭಕ್ತಿಯದರೊಳು ಸಮ್ಮಿಳಿತವಾಯಿತೆಂಬುದಕೆ ಸಂದೇಹವೇ?॥ ದೇವರೀವ [illegible] ದೇವರೆಂದರಿ ಬದ್ಧಿ, ದೇಶವಿಂದರಿ[illegible] ಸದಾ ಮನುಷ್ಯನು. ಕೆ ಡುವದು ಬೆಳಗುವುದು ದೇ[illegible]॥

[illegible] ದೇವಭಕ್ತಿ ದೇಶಭಕ್ತಿಗಳಿಗೆ ಭೇದವಿಲ್ಲ, ದೇವರೇ ದೇಶ ಸ್ವರೂಪನಾಗಿ ತೋರುತ್ತಿರುವನು, ಎಂಬುದನ್ನು ಈ ಪದ್ಯದಲ್ಲಿ ಹೇಳಿ[illegible]ವರು.

ದೇವರಲ್ಲಿ ನಿಷ್ಕಾಮಕರ್ಮ, ದೇಶದ ಧರ್ಮ। ದೇವರಿಂ [illegible] ದೇಶದಲ್ಲಿ ಭಕ್ತಿಯುಳ್ಳ ದೇಶಾಭಿಮಾನಿ [illegible] ಲ್ಲ ದೇವರ ಸ್ವರ್ಗದಲ್ಲಿಯು ಪ್ರಶಂಸೆಯಿಲ್ಲ॥ ದೇವರನು ದೇಶ

ವನು ಈತೆರದಲನ್ನೋ ಇನ್ನ। ಭಾವದಿಂದಲಿ ತಿಳಿಯೆ ಭೇದವಿಲ್ಲಾದರೂ। ದೇವಂ ವ್ಯಕ್ತವಾಗಿಹನು ಪಂಚೇಂದ್ರಿಯಕ ದೇಶವೇ ಸುವ್ಯಕ್ತವು॥

ದೇವರಲ್ಲಿ ಭಕ್ತಿಯು ಉಂಟಾಗಬೇಕಾದರೂ ಭಗವತ್ಕಥಾಶ್ರವಣ ಭಗವದ್ಗುಣ ಕೀರ್ತನ ಶ್ರೀ ಹರಿನಾಮಸ್ಮರಣ, ವಂದನದಾಸ್ಯ ಮುಂತಾದ ನವವಿಧ ಭಕ್ತಿಗಳು ಆವಶ್ಯಕವಲ್ಲವೆ? ಹಾಗೆಯೇ ದೇಶಭಕ್ತಿಯುಂಟಾಗಬೇಕಾಗಿದ್ದರೂ,

ದೇಶಭಕ್ತಿಗೆ ಶ್ರವಣ ಕೀರ್ತನಸ್ಮರಣವು ಎ। ಶೇಷವಾಗಿಹ ಮೂರು ಸಾಧನವುಗಳಲಿ। ದೇಶದ ಚರಿತವೊಂದು ಕೀರ್ತನವೆರಡು ಅದರ ಮನನ ಮೂರನೆಯದಾಗಿ॥ ತೋಷದಲಿ ಕೇಳುತ್ತ ಹೊಗಳುತ್ತ ನೆನೆಯುತ್ತ। ಸಾಹಸೈಯಲು ಮತ್ತೆ ಕಾರ್ಯದಕ್ಷತೆಯನ್ನು। ಎಾ ಸುಗುಣವವನ್ನಿ ಮನೆಮಾಡಿ ನೆಲೆಸುವುದು ಒಲುಲಕ್ಷ್ಮಿ ಕೈಹಿಡಿವಳು॥

ದೇಶದ ಚರಿತೆಯ ಪಠನ ದೇಶದ ಮಹತ್ವ ಸ್ಮರಣ ಅದರ ಮಹಿಮೆಯ ಕೀರ್ತನ ಮುಂತಾದುವು ದೇಶಪುತ್ರರಲ್ಲಿ ದೇಶಭಕ್ತಿಯನ್ನು ಉಂಟುಮಾಡುವುದರಲ್ಲಿ ಹೆಚ್ಚು ಸಹಾಯ ಮಾಡುವುವು. ಆದುದರಿಂದ ಪ್ರತಿಯೊಬ್ಬರೂ ನಮ್ಮ ದೇಶದ ಪೂರ್ವ ಇತಿಹಾಸವನ್ನೂ ಅದರ ಘನತೆಯನ್ನೂ ತಿಳಿಯಲು ಪ್ರಯತ್ನಿಪುದು ಪ್ರಥಮ ಕರ್ತವ್ಯವು!

ನಮ್ಮ ಮನಯು ಅನ್ನವನ್ನು ನಾವುಂಡು ಸಮ್ಮನ ದೇಶಸೇವೆಯೆಂದು. ದೇಶಸೇವೆ ಮಾಡಿದರೆ ಪ್ರಯೋಜನವೇನೆಂದು ಕೇಳುವುದಾದರ ಅದಕ್ಕೆ ಉತ್ತರ ಕೊಡಬೇಕಷ್ಟೆ। ದೇಶಭಕ್ತಿಗೆ ದೈವಭಕ್ತಿಗೆ ಸರಿಸಮಾನವಾದ ಪ್ರಾಶಸ್ತ್ಯವುಂಟಾದ ಮೇಲೆ ದೇಶಸೇವೆ ಮಾಡುವುದರಿಂದ ಪ್ರಯೋಜನವೇನೆಂದು ಕೇಳಿದರೆ ದೇಶಸೇವೆ ಮಾಡುವುದರಿಂದಲೂ ಪ್ರಯೋಜನವೇನೆಂದು ಕೇಳಿದಂತೆಯೇ ಆಗಿತ ಭಗವತ್ಸೇವೆಗೆ ತೊಡಗುವವನು ಅದರಿಂದ ಪ್ರಯೋಜನವನ್ನು ಅಪೇಕ್ಷಿಸುವುದಾದರ ಅವನೂ ಕೂಲ್ಯ [illegible] ವ್ಯಾಪಾರದಾತನಾಯಿತಲ್ಲದೆ ನಿಸ್ಪೃಹ ಭಕ್ತನೆನ್ನಿಸಿಕೊಳ್ಳಲಾರದ [illegible] ಒಂದುವೇಳೆ ಪ್ರತಿಫಲಾಪೇಕ್ಷೆಯಿಂದ ದೇಶಸೇವೆಯಲ್ಲಿ ತೊಡಗುವವನಾದರೆ ಅವನಿಗೂ ಸಿರಿಯುಂಟಾಗುವುದು

ಪರದಾಸ ಪುರಂದರ ದೇಶದಾಸ ಪಂಕಿಕಲು ದಾಸರಲಿ [illegible] ಪರದಾಸನೇ ಪಾಪಿ ಹರಿದಾಸನುತ್ತಮನು ದೇಶಮಾತೆಯ ದಾಸನು॥ ಧರೆಯಲ್ಲಿ ಶ್ರೀಕೃಷ್ಣ ನಿಹಪರಗಳೆರಡಾತನಿಗೆ। ಹರಿದಾಸನಾದವಗೆ ಪರಲೋಗ ಪ್ರಾಪ್ತಿಹುದು। ಪರದಾಸನೆಂಬುವನು ಇಹಪರಗಳೆಲ್ಲವಿಹ ಪರದೇಶಿಯಾಗಿರುವನು॥

ಆದ ದರಿಂದ ಕರ್ನಾಟಕರು ತಮ್ಮ ದೇಶ ಮತ್ತು ಭಾಷಾಮಾತೆಯ ಪಾದ ಕೆಂದಗಳಲ್ಲಿ ನಿಸ್ಸೀಮ ಭಕ್ತಿಭಾಗ್ಯವನ್ನು ಗಳಿಸಿ ಆಕೆಯ ಸೇವೆಗಾಗಿ ತನುಮನ ಧನಗಳನ್ನು ಸಮರ್ಪಿಸಿ ತಮ್ಮ ಜನ್ಮಗಳನ್ನು ಸಾರ್ಥಕಪಡಿಸಿಕೊಳ್ಳುವವರಾಗಲಿ.

"ಸಂಶೋಧ

"ಕೊಡಗು" ಕಂಪೆನಿಯ ಡೈರೆಕ್ಟರುಗಳ ಮೀಟಿಂಗು

ತಾ 7—3—26ರಲ್ಲಿ ವೀರಾಜಪೇಟೆಯಲ್ಲಿ ನಡದ ಮೀಟಿಂಗಿನ ವಿವರ—

[illegible]

— 1925ನೇ [illegible]

2 [illegible]

3 [illegible]

4 ಕಂಪೆನಿಯ ಸಿಬ್ಬಂದಿಯವರಿಗ ಕಾರ್ಯಾಧ್ಯಕ್ಷರು ನ್ಯಾಯವಾದ ರೀತಿ ಸಂಬಳ ಒಪ್ಪಿ ಮಾಡುವ ಹೆಂತಲೂ [illegible] ಅವರಿಂದ ನ್ಯಾಯವಾದ [illegible] ಮೆಂಟ್ ಒರಸಿಕೊಳ್ಳಬೇಕೆಂತಲೂ ತೀರ್ಮಾನವಾಯಿತು.

5 ಮೆ ಸಿ ಯಂ. ಅಪ್ಪಚ್ಚನವರ ಅಪ್ಲಿಕೇಶನ್ ಮೇರೆ ಅವರ ತಂದೆಯವರ ಶೇರುಗಳು ಅವರ ಮತ್ತು ಪಿ. ಸಿ. ಯಂ ದೇವಯ್ಯನವರ ಹೆಸರುಗಳಿಗೆ ವರ್ಗಾಯಿಸಲ್ಪಟ್ಟವು

6 ಲಕ್ಷ್ಮಮ್ಮನವರ ಅಪ್ಲಿಕೇಶನ್ ಮೇರೆ ಲೇಟ್ ಪಿ. ಯಸ್ ಕಾವೇರಿಯಪ್ಪನವರ ಶೇರು ಅವಳ ಗಾರ್ಡಿಯನ್ ಶಿಪ್ಪಿನಲ್ಲಿ ಅವರ ಮಗ ಪಿ ಆರ್ ಮುಂಜುನಾಥಯ್ಯನವರ ಹೆಸರಿಗೆ ವರ್ಗಾಯಿಸಲ್ಪಟ್ಟಿತು.

7 ಕಂಪೆನಿಯವರು ಮೈಸೂರು ಬ್ಯಾಂಕಿನಲ್ಲಿ ಇಟ್ಟಿರುವ ಸಿರಕ. ಡಿಪಾಸಿಟಿಯ ಅವಧಿಯು ತೀರಿದೊಡನೆ ಕಂಪೆನಿ ಒಪ್ಪಿಸಿದ್ದಾರರ ಸಂಘಕ್ಕೆ ಕೊಡಬೇಕಾದ ಸಾಲದ ಕಂತಿನ ಹಣವನ್ನು ಪಾವತಿಮಾಡಬೇಕೆಂದು ತೀರ್ಮಾನವಾಯಿತು

8 ಶೇರುಗಳ 2 ಮತ್ತು 3ನೇ ಕಂತುಗಳ ಹಣವನ್ನು ಪಾವತಿಮಾಡಲು ಮಾರ್ಚಿ ಆಖೈರುವರೆಗೆ ಅವಧಿಕೊಟ್ಟ ಜನರಲ್ ಮೀಟಿಂಗಿನ ಠರಾವಿನ ಮೇರೆಯೂ, ಕಂಪೆನಿಗಳ 20ನೇ ರೂಲಿನ ಮೇರೆಯೂ ಶೇರು ಹಣ ಪೂರ್ತಿ ಕೊಡದವರಿಗ ನೋಟೀಸು ಕೊಡಬೇಕೆಂದು ತೀರ್ಮಾನವಾಯಿತು

9 ಮೆ ಬಿ ಯಂ ಕಾರ್ಯಪ್ಪನವರು ಡೈರೆಕ್ಟರು ಪದವಿಗೆ ಕೊಟ್ಟ ರಾಜಿನಾಮೆ ಪತ್ರವು ಓದಲಾಗಿ ರಾಜಿನಾಮೆಯು ಒಪ್ಪಲಾಯಿತು. ಅವರ ಪತ್ರದಲ್ಲಿ ಸೂಚಿಸಿರುವ ಆಕ್ಷೇಪಗಳು ನಿಜವಲ್ಲವೆಂತಲೂ ಒಡಂಬಡವೆಂತಲೂ ಡೈರೆಕ್ಟರು ದಾಖಲು ಮಾಡಿದರು

ತಾ 10—4—26ರಲ್ಲಿ ಮಡಿಕೇರಿಯಲ್ಲಿ ನಡದ ಮೀಟಿಂಗಿನ ವಿವರ—

ಆರು ಡೈರೆಕ್ಟರುಗಳು ಹಾಜರಿದ್ದರು ರಾ॥ ಎಾ॥ ಕೆ ಅಪ್ಪಯ್ಯನವರು ಅಧ್ಯಕ್ಷರಾಗಿದ್ದರು

1. ಕಳದ ಮೀಟಿಂಗಿನ ಪ್ರೊಸೀಡಿಂಗ್ಸು ಓದಿ ಒಪ್ಪಲಾಯಿತು

2 ಫೆಬ್ರವರಿ ಮತ್ತು ಮಾರ್ಚಿ ತಿಂಗಳ ಲೆಖ್ಖಗಳು ಓದಿ ಒಪ್ಪಲಾದವು

3 ಕಂಪನಿಗಳ ಆಕ್ಟಿನ ಒಂದನೇ ಶೆಡ್ಯೂಲಿನ 24 ಮತ್ತು 20ನೇ ರೂಲುಗಳ ಮೇಲೆ ಶೇರು ಹಣ ಪೂರ್ತಿ ಸಲ್ಲಿಸಿ ಮಾಡದ ಇರುವವರಿಗ ಮೇ ತಿಂಗಳು ಆಖೈರೊಳಗೆ ಬಾಕಿ ಶೇರು ಹಣಗಳು ಪಾವತಿ ಮಾಡದ ಹೋದರ ಅವರ ತಮ್ಮ ಶೇರುಗಳನ್ನು ಕಳಕೊಳ್ಳಬೇಕಾಗುವುದೆಂದು ನೋಟೀಸು ಕೊಡುವಂತೆ ತೀರ್ಮಾನವಾಯಿತು

4 ರಾಜಿನಾಮೆ ಕೊಟ್ಟಿರುವ ಮೆ ಬಿ ಯಂ ಕಾರ್ಯಪ್ಪನವರ ಸ್ಥಳಕ್ಕೆ ಕಂಪೆನಿಯ ಡೈರೆಕ್ಟರಾಗಿ ಮೆ॥ ಐ ಪಿ ಮಾದಪ್ಪನವರು ಚುನಾಯಿಸಲ್ಪಟ್ಟರು.

5 ಮೆ ಸಿ ಯಸ್ ಉತ್ತಯ್ಯನವರು ಕೆಲವು ತಿಂಗಳ ಹಿಂದೆ ಕಂಪೆನಿಯ ವಿಷಯ ಕೇಳಿದ್ದ ಪ್ರಶ್ನೆ ಮತ್ತು ಅವುಗಳ ಉತ್ತರಗಳನ್ನು ಪತ್ರಿಕೆಯನ್ನು ಪ್ರಕಟಿಸಬೇಕೆಂದು ಅವರು ಒರೆದಿದ್ದ ಕಾಗದ ಓದಲಾಯಿತು. ಅವುಗಳು ಕಂಪೆನಿಯ ತಾ 31.5 25ರ ಸ್ಥಿತಿಗೆ ಸಂಬಂಧಿಸುವುದರಿಂದ ಅವುಗಳನ್ನು ಈಗ ಪ್ರಕಟಿಸುವ ಅವಶ್ಯವಿಲ್ಲವೆಂದು ತೀರ್ಮಾನವಾಯಿತು

ಕೆ ಅಪ್ಪಯ್ಯ
(ಕಾರ್ಯಾಧ್ಯಕ್ಷರು)

COORG FOREST DEPARTMENT SOUTH DIVISION.

NOTICE.

Mercara the 12th April 1926

It is hereby notified that the following quantities of sawn timber of various sizes stored in the Timber Depot situated in the elephant pit, Mercara will be sold by public auction at 10 A. M on 20—4—1926 —

Teak	1261	c. ft
Beete	16	,,
Honne	269	,,
Nandi	1	,,

For further particulars apply to the DIVISIONAL FOREST OFFICER, SOUTH COORG, MERCARA

ಕೊಡಗು ಫಾರೆಸ್ಟ್ ಇಲಾಖೆ, ದಕ್ಷಿಣ ಕೊಡಗು

ನೋಟೀಸ್.

ಮಡಿಕೇರಿ ತಾ 12—4—1926

ಏಪ್ರಿಲ್ ೨೦ನೇ ತಾರೀಖು 10ಘಂಟೆಗೆ ಮಡಿಕೇರಿ ಆನೆಗುಂಡಿಯಲ್ಲಿರುವ ಮರದ ಡಿಪೋದಲ್ಲಿ ಈ ಕೆಳಗೆ ಕಂಡಿರುವ ಬೇರೆ ಬೇರೆ ಪರಿಮಾಣಗಳ ಕುಯಿದ ಮರಗಳು ಹರಾಜು ಮಾಡಲ್ಪಡುತ್ತವೆ

ತೇಗ	1261	ಅಡಿ
ಬೀಟೆ	16	,,
ಹೊನ್ನೆ	269	,,
ನಂದಿ	1	,,

ಹೆಚ್ಚಿನ ಸಂಗತಿಗಳಿಗೆ ದಕ್ಷಿಣ ಕೊಡಗು ಫಾರೆಸ್ಟ್ ಡಿವಿಜನಲ್ ಆಫೀಸರವರಿಗೆ ಬರಕೊಳ್ಳತಕ್ಕದ್ದು

ಚೇಳುಗಳ ವಿಷಧ್ವಂಸಿನಿ

ಚೇಳು ಹೊಡೆದ ಸ್ಥಳದಲ್ಲಿ ಸರ್ವ ಚೇಳುಗಳ ವಿಷದ [illegible] ಈ ಔಷಧವನ್ನು ಹಚ್ಚಿ ಒಡನೆಯೇ ಗರ[illegible] ಕಂಡ ಸರ್ಪವು ತೊಲಗಿದಂತೆ ಒಂದೇ ಒಂದು ನಿಮಿ[illegible] ಉರಿಯೂ ತಳುಕೂ ಮಾಯವಾಗುವವು

ಔಷಧದಲ್ಲಿ ಗುಣವಿಲ್ಲವೆಂದು ವ್ಯಕ್ತಪಡಿಸುವವರಿಗೆ ಕೂಡಲೆ ಬಹುಮಾನ ಕೊಡುವೆವು.

ಕ್ರಯ ಶೀಸೆ 1ಕ್ಕೆ 8 ಆಣೆ ಡಜನ್ 1 [illegible]

18 ಮೈಲ ದೂರ ಇರುವದು [illegible]

ಬಾಗುಡಿ ಅಂಚಿನ ಸೀರೆಗಳು.

ಬೆಂಗಳೂರು ಅರಳೆಪೇಟೆಯ ಸೀರೆಯಂತೆಯೇ [illegible] ಉಡುವದಕ್ಕೆ ಲಕ್ಷಣವಾಗಿಯೂ, ನಯವಾಗಿ ಇರುವದು ಸುಂದರವಾದ ರೇಶ್ಮೆಯ ಸರಗು ಮತ್ತು [illegible] ಅಂಚು ಒಣ್ಣ ಹೋಗದು [illegible] ಗ [illegible] ಆಯಬಾರದು [illegible] ಈಗಿನ ಕಾಲದಲ್ಲಿ ಈ ಕ್ರಂ[illegible] ಪಟ್ಟಣದಲ್ಲಿಯೂ ಸಿಕ್ಕಲಾರವು [illegible] ಲನ್ನು ಮಾತ್ರ ತಯಾರಿಸಿರುವೆವು ಒಂದೆರಡನ್ನು [illegible] ರೀಕ್ಷಿಸಿ

ಕ್ರಯ ನಂ 1		6—8—[illegible]
ನಂ 2		7—8—[illegible]

ವಿಳಾಸ — ಎಸ್ ಆರ್. ಕೃಷ್ಣ ಅಂಡ್ ಕೋ

12—1 [illegible] ನಂ॥ [illegible] ತಿರುಮಲನಾಯಕನ ಬೀದಿ ಮದುರಾ

ವೀರಾಜಪೇಟೆಯ ಶಿಶು ಪ್ರದರ್ಶನ.

[ಒಬ್ಬ ಬಾತ್ಮಿದಾರರಿಂದ]

ಉತ್ತರ ಕೊಡಗಿಗೆ ಮಡಿಕೇರಿಯಲ್ಲಿ ರೆಡ್‌ಕ್ರಾಸ್ ಸಂಘದ ಮೂಲಕ ನಡಿಯುತ್ತಿದ್ದ ಶಿಶುಪ್ರದರ್ಶನವನ್ನು ದಕ್ಷಿಣ ಕೊಡಗಿಗೂ ವಿಸ್ತರಿಸಬೇಕೆಂದು ರೆಡ್‌ಕ್ರಾಸ್ ಸಂಘದ ಸೆಕ್ರೆಟರಿಗಳಾದ ಮೆ ಎ ಪಿ ಕಾರ್ಯಪ್ಪನವರು ದಕ್ಷಿಣಕೊಡಗಿನ ಕೆಲವು ಮಹನೀಯರಿಗೆ ಪತ್ರ ಮುಖಾಂತರ ತಿಳಿಸಿದರ ವೀರಾಜಪೇಟೆಯ ಕೆಲವು ಜನರು ಮೆ ಎ ಪಿ ಕಾರ್ಯಪ್ಪನವರ ಅಧ್ಯಕ್ಷತೆಯಲ್ಲಿ ತಾ 12—3—26ರಲ್ಲಿ ಸೇರಿ ರೆಡ್‌ಕ್ರಾಸ್ ಸಂಘದ ಒಂದು ಶಾಖೆಯನ್ನು ದಕ್ಷಿಣಕೊಡಗಿನಲ್ಲಿ ಸ್ಥಾಪಿಸಬೇಕೆಂದು ಅಭಿಪ್ರಾಯಪಟ್ಟರು. ಆದರೆ ಬಾಸನದ ಮೇರೆ ಸದರಿ ಶಾಖೆಯನ್ನು ಏರ್ಪಡಿಸಲಾಗದೆ ಇದ್ದುದರಿಂದ ದಕ್ಷಿಣಕೊಡಗು ಹೆಲ್ತ್ ಅಂಡ್ ವೆಲ್‌ಫೇರ್ ಅಸೋಸಿಯೇಶನ್ ಎಂದರೆ ಆರೋಗ್ಯಾಭಿವೃದ್ಧಿ ಸಂಘವನ್ನು ಸ್ಥಾಪಿಸಿ, ಮಡಿಕೇರಿಯ ಪ್ರದರ್ಶನವು ಮುಗಿದ ಕೂಡಲೆ ವೀರಾಜಪೇಟೆಯಲ್ಲಿ ಪ್ರದರ್ಶನ ಮಾಡಬೇಕೆಂದು ಮೀಟಿಂಗಿನಲ್ಲೇ ಸದರಿ ಸಂಘವನ್ನು ಸ್ಥಾಪಿಸಿ ಏಪ್ರಿಲ್ ತಾ 9 ಮತ್ತು 10ರಲ್ಲಿ ವೀರಾಜಪೇಟೆಯಲ್ಲಿ ಪ್ರದರ್ಶನ ಮಾಡುವದಾಗಿ ಸರ್ವಸಮ್ಮತದಿಂದ ಒಪ್ಪಿದರು

ಸದರಿ ಸಂಘಕ್ಕೆ ಮೆ ಸಿ ಎನ್ ಮುತ್ತಣ್ಣನವರು ಅಧ್ಯಕ್ಷರಾಗಿಯೂ, ಮೆ ಸಿ ಜಿ. ಲೋಬೋರವರು ಗೌರವ ಕಾರ್ಯದರ್ಶಿ ಮತ್ತು ಖಜಾಂಚಿಯಾಗಿಯೂ, ಬೇರೆ 8ಜನರಿಂದ ಕೂಡಿದ ಕಮಿಟಿಯೂ ಮೇಲೆಹೇಳಿದ ಮೀಟಿಂಗಿನಲ್ಲಿ ಏರ್ಪಡಾಯಿತು.

ಈ ತಾ. 9ನೇ ಶುಕ್ರವಾರ ಸಾ[illegible]ಕಾದ ಇನ್ಸ್[illegible] ಐದುಗಂಟೆವರೆಗೆ ವೀರಾಜಪೇಟೆ ಮೊ[illegible]ದಲ್ಲಿ ಆರೋಗ್ಯಾಭಿವೃದ್ಧಿ ಪರಗಳ ನ್ಯಾಸಗಳು ಮುಂದೆ ಪ್ರಕಟಿಸಿದ[illegible]ಯಿತು. ಆದಿರಿ ರಾತ್ರಿ ಆರು[illegible]ದ ವಿಷಯ ಮತ್ತು ಕೊಕ್ಕೆಹುಳ[illegible] ದೀಪ ಪ್ರದರ್ಶನ ಮತ್ತು [illegible] ಡಾಕ್ಟರ್ ಶಂಕರರಾಯರು [illegible] ಬಿ. ಮೇದಪ್ಪನವರು ನಡಿಸಿದರು.

10ನೆ ಶನಿವಾರ ಬೆಳಗ್ಗೆ 9ರಿಂದ [illegible] ಗ್ಯಾಭಿವೃದ್ಧಿ, ಫಲಗಳ ಪ್ರದರ್ಶನ ಮತ್ತು [illegible] ವು ಡಾಕ್ಟರ್ ಶಂಕರರಾಯರು, [illegible]ಪ್ಪನವರು. ಮತ್ತು ಮೆ. ಪಿ ಜಿ ಲೋ[illegible] ನೆಗಳನ್ನು ಮಾಡಿದರು.

ಮಧ್ಯಾಹ್ನ [illegible]ಗಂಟೆಯಿಂದ [illegible]ಗಂಟೆ [illegible] ನವಾಯಿತ [illegible] ಮಕ್ಕಳ[illegible] ವು ಇವುಗಳಲ್ಲಿ ಪನ್ನೆರಡು ಮಕ್ಕಳಿಗೆ [illegible]

[illegible] MART.
[illegible]orbhoy

[illegible]y.
[illegible]nett
[illegible]danda
[illegible]d of
[illegible]ercara

ಸನಾತನ ಪತ್ರಿಕೆ.

ರಾಜಮಂತ್ರ ಧುರೀಣ ಸರ್ ಪಿ ಆರ್. ಬಾನರ್ಜೀ, Kt, ಎಂ. ಎ, ಸಿ ಎಸ್. ಐ., ಸಿ. ಐ. ಇ—ಮೈಸೂರು ದಿವಾನರವರು ಇವರಿಂದ

ಬೊಂಬಾಯಿನ ಓರಿಯಂಟಲ್ ಗೌರ್ನಮೆಂಟ್ ಸೆಕ್ಯೂರಿಟಿ ಲೈಫ್ ಅಷ್ಯೂರೆನ್ಸ್ ಕಂಪೆನಿಗೆ.

ಅಯ್ಯ,—ತಮ್ಮ ಕಂಪೆನಿಯಲ್ಲಿ ಜೀವವಿಮೆ ಮಾಡಿದ್ದ ಪತ್ರದ ಬಾಬ್ತು ನನಗೆ ಸಲ್ಲಬೇಕಾದ ವಿಮೆ ಮೊಬಲಗು ಮತ್ತು ಅದರ ಲಾಭ ಇವುಗಳಿಗೋಸ್ಕರ ತಾವು ಕಳುಹಿಸಿದ ಚೆಕ್ಕು ನನ್ನ ಕೈಸೇರಿತು ಹಕ್ಕಿನ ವ್ಯವಸ್ಥೆಯು ಇಷ್ಟು ತ್ವರೆಯಾಗಿ ಆಗಿರುವುದು ನೋಡಿದರೆ ತಮ್ಮ ಕಂಪನಿಯು ಕಾರ್ಯನಿರ್ವಾಹಕ ವಿಷಯದಲ್ಲಿ ಎಷ್ಟು ಉತ್ಸಾಹವುಳ್ಳದ್ದಾಗಿಯೂ ಮತ್ತು ಜಾಗರೂಕತೆಯುಳ್ಳದ್ದಾಗಿಯೂ ಇದೆ ಎನ್ನುವುದು ಚೆನ್ನಾಗಿ ವ್ಯಕ್ತವಾಗುತ್ತದೆ. 'ಓರಿಯಂಟಲ್' ನ ಜೀವವಿಮೆ ಪತ್ರವು ತುಂಬಾ ಲಾಭಕರವಾದ್ದೆನ್ನುವುದಕ್ಕೆ ತಾವು ಕೊಟ್ಟಿರುವ ಬೋನಸ್ ಹಾಗೇ ಸಾಕ್ಷಿಯಾಗಿರುತ್ತದೆ. ತಮ್ಮ ಕಂಪೆನಿಯು ಹಿಂದೂಸ್ಥಾನದ ಜೀವವಿಮೆ ಕಂಪೆನಿಗಳೊಳಗೆಲ್ಲಾ ಅದ್ವಿತೀಯವಾದುದೆಂದು ಅಂಗೀಕರಿಸಲ್ಪಟ್ಟಿರುವುದು ಯುಕ್ತವೇ ಆಗಿದೆ. ಜೀವವಿಮೆಯ ಉಪಯೋಗವನ್ನು ಈಗತಾನೇ ತಿಳಿಯುತ್ತಿರುವ ಸಾವಿರಾರು ಜನಗಳಿಗೆ ತಮ್ಮ ಕಂಪೆನಿಯು ಬಹಳ ಮಟ್ಟಿಗೆ ಉಪಕಾರವಾಗುವಂತೆ ಅದಕ್ಕೆ ವಿಜಯವನ್ನು ಮತ್ತು ಶ್ರೇಯೋಭಿವೃದ್ಧಿಯನ್ನು ಕೋರುತ್ತೇನೆ

(ಸ್ವ) ಪಿ ಆರ್. ಬಾನರ್ಜಿ.

ಲಾಯ್ತು. ಬಹುಮಾನ ಸಿಕ್ಕಿದ ಮಕ್ಕಳ ಪೈಕಿ ಮೂರು ಮಕ್ಕಳಿಗೆ ಪ್ರತ್ಯೇಕ ಬಹುಮಾನಗಳು ಸಹ ಇದ್ದವು.

ದಕ್ಷಿಣಕೊಡಗು ಆರೋಗ್ಯಾಭಿವೃದ್ಧಿ ಸಂಘದ ಅಧ್ಯಕ್ಷರ ಕೋರಿಕೆ ಮೇರೆ ಶ್ರೀಮತಿ ಕೊಡಂದೇರ ಸೀತವ್ವನವರು ಬಹುಮಾನಗಳನ್ನು ಹಂಚಿದರು. ಬಳಿಕ (ಫಸ್ಟ್ ಏಡ್) ಪ್ರಥಮಚಿಕಿತ್ಸೆಯಲ್ಲಿ ತೇರ್ಗಡೆಹೊಂದಿದ ವಿದ್ಯಾರ್ಥಿಗಳಿಗೆ ಸರ್ಟಿಫಿಕೇಟುಗಳು ಕೊಡಲ್ಪಟ್ಟವು. ಈ ಪ್ರದರ್ಶನವನ್ನು ನಡಿಸಲು ಸಹಾಯಮಾಡಿದ ಮಹನೀಯರಿಗೆ ದಕ್ಷಿಣಕೊಡಗು ಆರೋಗ್ಯಾಭಿವೃದ್ಧಿ ಸಂಘದವರು ಈ ಮೂಲಕ ತುಂಬಾ ವಂದನೆಗಳನ್ನು ಅರ್ಪಿಸುತ್ತಾರೆಂದು ಸದರಿ ಸಂಘದ ಸೆಕ್ರೇಟರಿಯವರು ನಮಗೆ ಬರೆದಿರುತ್ತಾರೆ.

ವರ್ತಮಾನ ಸಂಗ್ರಹ.

ಒಳದೇಶ

ಕೊಡಗಿನ ಎಲ್ಲಾ ಸಿವಿಲ್ ಕೋರ್ಟುಗಳು, ಕೊಡಗಿನ ಜುಡಿಶ್ಯಲ್ ಕಮಿಶನರ ಕೋರ್ಟು ಸಹ [illegible] ಏಪ್ರಿಲ್ ತಾ. 26ರಿಂದ ಜೂನ್ ತಾ. 5ರ ವರೆಗೆ ಮುಚ್ಚಲ್ಪಡುವವು.

ಮೈಸೂರಿನ ಮೆ. ಪಾಪಾರಾಮುರವರ ಮೋಟರ್ ಬಸ್ಸ್ ಸರ್ವಿಸು ಆಗ ಮೈಸೂರಿನಿಂದ ಗೋಣಿಕೊಪ್ಪಲು, ವೀರಾಜಪೇಟೆಗಳಿಗೆ ಸೀದಾ ತಲಚೇರಿಗೆ ಇಡಲ್ಪಟ್ಟಿದೆಯೆಂದು ತಿಳಿಯಬರುತ್ತದೆ

ತಾ 14ರ ರಾತ್ರಿ ಮಡಿಕೇರಿ ಸಯನ್ಸಿಯರ್ ಬೀದಿಯಲ್ಲಿಯ ಇಬ್ಬರು ಮೋಚಿಗಳು ಹೊಡೆದಾಡಿ ಜಯರಾಮನೆಂಬವನು ಮೃತನಾದನು. ರಂಗನೆಂಬವನು ದಸ್ತಗಿರಿಮಾಡಲ್ಪಟ್ಟು ರಿಮಾಂಡಿನಲ್ಲಿ ಡಲ್ಪಟ್ಟಿರುವನು.

[illegible] ವೇದಾಂತ ಸಂಘದವರು, ಶ್ರೀರಾಮಕೃಷ್ಣ ಪರಮಹಂಸರ [illegible] ಜಯಂತ್ಯುತ್ಸವವನ್ನು ಓಂಕಾರೇಶ್ವರ ದೇವಸ್ಥಾನದ [illegible] ತಾ 17 ಮತ್ತು 18ರಲ್ಲಿ ಶ್ರೀಸ್ವಾಮಿ [illegible] ಶ್ವರಾನಂದರವರ ಅಧ್ಯಕ್ಷತೆಯಲ್ಲಿ ನಡಿಸಲಿಕ್ಕಿರುವರು.

ಮಡಿಕೇರಿಯಲ್ಲಿ ಮೋಟರ್‌ಬಸ್ಸು ಸರ್ವೀಸಿನ ಏಜಂಟನಾಗಿದ್ದ [illegible] ಮಂಜಪ್ಪನೆಂಬವನ ಹೆಣವು ತಾ 11ರ ಬೆಳಿಗ್ಗೆ ಓಂಕಾರೇಶ್ವರ ದೇವಸ್ಥಾನದ ಕೆರೆಯಲ್ಲಿ ಕಾಣಲು ಸಿಕ್ಕಿ ಹೊರಗೆ ತೆಗೆಯಲಾಯಿತು. ಇವನು ತಾ. 9ರಲ್ಲಿಯೇ ಕೆರೆಗೆ ಬಿದ್ದನೆಂದು ತಿಳಿಯಬಂದಿದೆ ಆತ್ಮಹತ್ಯಕ್ಕೆ ಸಾಲದ ಬಾಧೆಯೇ ಕಾರಣವೆಂದು ನಂಬಲಾಗಿದೆ.

ಗುಬ್ಬಿ ಶ್ರೀ ಚನ್ನಬಸವೇಶ್ವರ ನಾಟಕ ಕಂಪೆನಿಯವರು ರೆಡ್‌ಕ್ರಾಸ್ ಸಂಘಕ್ಕೆ ಸಹಾಯಾರ್ಥವಾಗಿ ತಾ. 14ರಲ್ಲಿ ಪ್ರವೀಳೆಯೆಂಬ ನಾಟಕವನ್ನಾಡಿ ಉತ್ಪತ್ತಿಯ ಮೂವರಲ್ಲಿ ಒಂದು ಭಾಗವನ್ನು ಆ ಸಂಘಕ್ಕೆ ಕೊಟ್ಟರು. ಆ ರಾತ್ರಿ ನಾಟಕ ಮುಗಿದ ನಂತರ ಸದರಿ ಸಂಘದ ಪರವಾಗಿ ಮೆ. ಎ. ಬಿ. ಕಾರ್ಯಪ್ಪನವರು ಈ ನಾಟಕ ಮಂಡಳಿಯ ಪ್ರೊಪ್ರೈಟರಾದ ಮೆ. ಗುಬ್ಬಿ ಹೆಚ್. ವೀರಣ್ಣನವರಿಗೆ ಒಂದು ಬಂಗಾರದ ಪದಕವನ್ನು ಬಹುಮಾನವಾಗಿ ಕೊಟ್ಟರು.

ತಾ 12-3-36ರ ಕೊಡಗು ಪತ್ರಿಕೆಯಲ್ಲಿ ಪ್ರಕಟವಾದ ಮೆ. ಕೆ. ಪಿ. ಚಿಣ್ಣಪ್ಪನವರ ಒಂದು ಜಾಹೀರಾತಿಗಾಗಿ ಮೆ. ಬಿದ್ದಂಡ ಬೋಪ್ಪಯ್ಯನವರು ಮೆ. ಕೆ ಪಿ. ಚಿಣ್ಣಪ್ಪನವರ ಮತ್ತು "ಕೊಡಗು" ಪತ್ರಿಕೆಯ ಪ್ರಿಂಟರ್ ಮತ್ತು ಪಬ್ಲಿಷರಾದ ರಾ. ಬಾ. ಕೆ. ಅಪ್ಪಯ್ಯನವರ ಮೇಲೆ ಮಾನನಷ್ಟದ ಕ್ರಿಮಿನಲ್ ಮೊಕದ್ದಮೆಯನ್ನು ಡಿಸ್ಟ್ರಿಕ್ಟ್ ಮೆಜಿಸ್ಟ್ರೇಟರ ಕೋರ್ಟಿಗೆ ದಾಖಲು ಮಾಡಿದ್ದು ಸಬ್‌ಜಡ್ಜಿಯವರ ಕೋರ್ಟಿಗೆ ವರ್ಗಾಯಿಸಲ್ಪಟ್ಟಿದೆಯೆಂದು ತಿಳಿಯುತ್ತೇವೆ.

ಹಿಂದೂದೇಶ.

ಕಲ್ಕತ್ತಾ ಪಟ್ಟಣದಲ್ಲಿ ಹಿಂದೂಮುಸಲ್ಮಾನರಿಗೆ ನಡೆಯುತ್ತಿದ್ದ ಜಗಳಗಳು ನಿಂತು ಈಗ ಎಲ್ಲಾ ಶಾಂತವಾಗಿದೆ. ವ್ಯಾಪಾರಗಳು ಎಂದಿನಂತೆಯೇ ನಡೆಯುತ್ತಿವೆ.

ಬೊಂಬಾಯಿಯ ಮುನ್ಸಿಪಾಲಿಟಿಯವರು ಮಾಂಸ ಮಾ[illegible]ಕೊಲ್ಲುವ ಮೃಗಗಳನ್ನು ಪರೀಕ್ಷಿಸಲು ರೂಲು [illegible] [illegible]ಯ ಕಟುಗರು ವ್ಯಾಪಾರ ನಡಿಸದೆ [illegible] ಆದರೆ ಅದು ಈಗ ಶಾಂತವಾಗಿದೆ

[illegible] ಕಾಂಗ್ರೆಸ್ ಕಮಿಟಿಯಲ್ಲಿ [illegible] [illegible]ಕ್ಕಾಗಿ ಅಲ್ಲಿಗೆ ಹೋಗಿದ್ದ ಪಂಡಿತ [illegible] [illegible] ಜಯತೀಲರಾಗದೆ ವಾಪಸು ಬಂದವರು [illegible]ಯವರು ಆ ಕಮಿಟಿಯಿಂದ ತಮ್ಮ ರಾಜೀನಾಮೆ ವಾಪಸು ತೆಗೆದುಕೊಂಡಿರುವುದಿಲ್ಲವಂತೆ.

[illegible] ತಾ 10ರಲ್ಲಿ ಒಂದು ದೊಡ್ಡ ಸಭೆಯಲ್ಲಿ [illegible] ನರಿಮನವರು ಬೊಂಬಾಯಿಯಲ್ಲಿ [illegible] ಬಹು ಗುಪ್ತವಾಗಿತ್ತು [illegible]ಯ ಚಳವಳವನ್ನು ಬಿಂಬಿಸಿ [illegible] ಘೋಷಿಸುವ [illegible]ರಾಗಿದ್ದ ಲಾಲಾ ಲಜಪತರಾಯರೂ ಸರಕಾರ ಕಾಯ್ದೆಗಳೂ [illegible]ಗಳನ್ನು ಒಪ್ಪಿಕೊಳ್ಳುವುದು ಎಂದೂ ಉಚಿತವ ಮರ್ಮವ್ಯಾ[illegible]ಂತಾಗಿ ಹೇಳಿದರು.

[illegible]ಸ್ಯಗಳು [illegible] ಇದ ಗಾರಿಪುರ ಎಂಬಲ್ಲಿ ಗಿರಣಿ ಕೆಲಸಗಾರ [illegible] [illegible]ನನ್ನು ಒಬ್ಬ ಯೂರೋಪಿಯರವನು ಹೊಡ [illegible]ನೆಂದು ಸಾವಿರಾರು ಜನ ಕೆಲಸಗಾರರು ಕೆಲಸಕ್ಕೆ T. Ram [illegible] ಮುಷ್ಕರ ಹಿಡಿದಿರುವರು. ಕೆಲವರು ಯೂರೋಪಿಯ ಮೇಲೆ ಕೈಮಾಡಿದರು. ಆಯುಧಪಾಣಿಗಳಾ 53—17 [illegible] ಸಿಪಾಯರು ಅಲ್ಲಿಗೆ ಕಳುಹಲ್ಪಟ್ಟಿರುವರು.

ಕಾಂಗ್ರೆಸ್ಸಿನ ಪರವಾಗಿ ಎಸೆಂಬ್ಲಿ ಮತ್ತು ಪ್ರಾಂತೀಕ ಲೆಜಿಸ್ಲೇಟಿವ್ ಕೌನ್ಸಿಲುಗಳಿಗೆ ಚುನಾವಣೆಗೆ ನಿಲ್ಲಲಿಕ್ಕಿರುವ ಉಮೇದುವಾರರ ಹೆಸರುಗಳನ್ನು ಏಪ್ರಿಲ್ ಆಖೈರೊಳಗೆ ಅಖಿಲ ಭಾರತ ಕಾಂಗ್ರೆಸಿನ ವರ್ಕಿಂಗ್ ಕಮಿಟಿಯ ಒಪ್ಪಿಗೆಗಾಗಿ ಪ್ರಾಂತೀಕ ಕಾಂಗ್ರೆಸ್ ಕಮಿಟಿಗಳು ಕಳುಹಿಸಬೇಕೆಂದು ಕಾಂಗ್ರೆಸ್ ಕಮಿಟಿಯ ಜನರಲ್ ಸೆಕ್ರೆಟರಿಯಾದ ಮೆ. ರಂಗಸ್ವಾಮಿ ಅಯ್ಯಂಗಾರ್‌ರವರು ಪ್ರಕಟಿಸುತ್ತಾರೆ.

ಈ ತಿಂಗಳು 4ರಲ್ಲಿ ಬೊಂಬಾಯಿಯಲ್ಲಿ ನಡೆದ ವೈದ್ಯರ ಸಮ್ಮೇಳನದಲ್ಲಿ ಪ್ರೊಫೆಸರ್ ದೇಶಬಂಧು ಎಂಬವರು ಒಂದು ಅದ್ಭುತ ಕಾರ್ಯವನ್ನು ಮಾಡಿದರು. ತಮ್ಮ ಮನಶ್ಶಕ್ತಿಯಿಂದ ಜನರ ನಾಡಿಗತಿಯನ್ನು 3 ನಿಮಿಷಗಳ ವರೆಗೂ ಹೃದಯದ ಚಲನೆಯನ್ನು 18 ಸೆಕೆಂಡುಗಳ ವರೆಗೂ ನಿಲ್ಲಿಸಿ ಅಲ್ಲಿದ್ದ ವೈದ್ಯರನ್ನು ವಿಸ್ಮಯಗೊಳಿಸಿದರು. ಇದನ್ನು ಸಾಧಿಸುವುದು ಹೇಗೆಂದು ವೈದ್ಯರಿಗೆ ಇನ್ನೂ ಗೊತ್ತಾಗಿರುವುದಿಲ್ಲವಂತೆ.

ವಿದೇಶ.

ಫ್ರಾನ್ಸು ಮತ್ತು ಸ್ಪೈನಿಗೂ ಮೊರಾಕ್ಕೋದ [illegible] ಜನ[illegible] ರಾಜಿಸಂಧಾನದ ಪ್ರಯತ್ನಗಳು ನಡೆಯುತ್ತಿವೆ

ಇಟಲಿಯ ಪ್ರಧಾನ ಮಂತ್ರಿಯಾದ ಸಿ. ಮುಸ್ಸೊಲೋನಿಯವರು ತಾ. 7 ರಲ್ಲಿ ರೋಮಿನಲ್ಲಿ ಒಂದು ಮೀಟಿಂಗಿನಿಂದ ಹೊರಗೆ ಬರುತ್ತಿದ್ದಾಗ ವಯಲೆಟ್ ಗಿಬ್ಸನ್ ಎಂಬ ಒಬ್ಬ ಇಂಗ್ಲಿಷ್ ಸ್ತ್ರೀಯು ಪಿಸ್ತೋಲಿನಿಂದ ಅವರಿಗೆ ಗುಂಡುಹಾರಿಸಿದಳು. ಅದರಿಂದ ಅವರ ಮೂಗಿಗೆ ಮಾತ್ರ ಸ್ವಲ್ಪ ಗಾಯವಾಯಿತು. ಅವಳನ್ನು ಸೆರೆಯಲ್ಲಿಟ್ಟಿರುವರು. ಇದು ಜನರನ್ನು ಸಿಟ್ಟಿಗೆಬ್ಬಿಸಿದೆ.

ಚೈನಾ ಸರ್ಕಾರದ ಅಧ್ಯಕ್ಷರಾದ ಟಾನ್‌ಚಿ ರವರು ಆ ಪದವಿಗೆ ಬಂದುದರಿಂದ ದೇಶಕ್ಕೆ ಕೆಲವು ಕಡೆಗಳನ್ನು ಮಾಡಿರುವರೆಂದು ಕಾಮಿಟಸ್ ಮಂದಿಗಳು ಪೆಕಿಂಗಾ ಪಟ್ಟಣದಲ್ಲಿ ಕೋಟೆಯ ಹೆಬ್ಬಾಗಿಲನ್ನು ತಂತಿಗಳನ್ನು ಕತ್ತರಿಸಿ ಆವರ ಮುಖ್ಯ ಕಾರ್ಯನಿರ್ವಾಹಕ ಮಂಡಳಿಯ ಆಫೀಸನ್ನು ಮುತ್ತಿಗೆ ಹಾಕಿದರು. ಈ ಮೊದಲೇ ಅಧ್ಯಕ್ಷರು ಫ್ರೆಂಚ್ ರಾಯಭಾರಿಯಲ್ಲಿಗೆ ಹೋಗಿಬಿಟ್ಟಿದ್ದರಂತೆ

ಟೈಗ್ರಿಸ್ ನದಿಯು ನಗರದ ಕಟ್ಟೆಯನ್ನು ಒಡೆದುಹೋದುದರಿಂದುಂಟಾಗಿರುವ ನೆರೆಯಿಂದ ಬಗ್ದಾದ್ ಪಟ್ಟಣಕ್ಕೆ ತುಂಬಾ ನಷ್ಟ ಉಂಟಾಗಿದೆ. ಹಗಲಿರುಳು ಐದುಸಾವಿರ ಜನರು ಕಟ್ಟೆಯನ್ನು ಭದ್ರಪಡಿಸಲು ಪ್ರಯತ್ನಿಸುತ್ತಿದ್ದರೂ ನೆರೆಯ ಭಯವು ಹೆಚ್ಚುತ್ತಲಿದೆ. ಪಟ್ಟದ ಜನರೆಲ್ಲರೂ ಗಾಬರಿಯಲ್ಲಿರುವರು ಈಗಾಗಲೇ ಒಂದು ಮಿಲಿಯ ಪೌಂಡಿಗಿಂತ ಹೆಚ್ಚಿಗೆ ನಷ್ಟಸಂಭವಿಸಿದೆ. ಪಟ್ಟದೊಳಗೆ ನೀರು ನುಗ್ಗಿದರೆ ಮನೆಮಾರುಗಳ ನಷ್ಟವೂ ಪ್ರಾಣನಷ್ಟವೂ ತುಂಬಾ ಆಗುವದೆಂಬ ಭಯವಿದೆಯಂತೆ

ನೋಟೀಸು.

ಇದರಿಂದ ಸರ್ವರಿಗೂ ತಿಳಿಯಪಡಿಸುವದೇನೆಂದರೆ:—

ಹಾಲೇನಾಡ್ಪೋಕ್ಲುನಾಡು ನರಿಯಂದಡ ಗ್ರಾಮದ ಕಕ್ಕಬೆಹೊಳೆಗರ ಮನೆ ಗಣಪ್ಪಯ್ಯನವರ ಹೆಂಡತಿ ದೇವಮ್ಮನವರ, ನರಿಗ್ರಾಮದ ಎಡನಾಡಿನಲ್ಲಿ ಇರುವ ಸಾಗಿನ ಸರ್ವೆ ನಂಬರು 40, 41/2, 41/3 ರ ಬಿಳುವೆಲ್ಲಿ ಏಕರೆ ವರಡ 27ರೂ 6 ಆ. ಕಂದಾಯದ ಭೂಮಿ ವಗೈರೆ ಆಸ್ತಿಯನ್ನು ಯಾರಿಗಾದರೂ ವಿಕ್ರಯಿಸುವ ತರದೂದಿನಲ್ಲಿ ಇರುವದಾಗಿ ತಿಳಿಯಬರುತ್ತೆ. ಈ ಭೂಆಸ್ತಿಯು ಅವರಿಗೆ ಜೀವನಾಂಶಕ್ಕಾಗಿ ಕೊಟ್ಟದ್ದಾಗಿರುತ್ತೆ. ಈ ಭೂಮಿ ವಗೈರೆಯನ್ನು ವಿಕ್ರಯಿಸುವದಕ್ಕೆ ಸದರಿ ದೇವಮ್ಮನವರಿಗೆ ಯಾವ ಹಕ್ಕು, ಸ್ವತಂತ್ರವಿರುವದಿಲ್ಲ. ಈ ಆಸ್ತಿಯನ್ನು ಯಾರೂ ಕೊಂಡುಕೊಳ್ಳಕೂಡದು. ಈ ಆಸ್ತಿಯನ್ನು ಮಾರಾಟಮಾಡುವ ವಿಷಯದಲ್ಲಿ ಕುಟುಂಬದವರ ತಕರಾರು ಪೂರ ಇರುತ್ತೆ. ಈ ಸಂಗತಿ ತಿಳಿದೂ ಸಹ ಕೊಂಡುಕೊಳ್ಳುವವರು ನಷ್ಟಕ್ಕೂ ತೊಂದ್ರೆಗೂ ಗುರಿಯಾಗುವರಾಗಿ ಈ ಮೂಲಕ ಖಂಡಿತವಾಗಿ ತಿಳಿಸಲಾಗಿದೆ.

ತಾ. 15—4—36 ಯಸ್. ಎಸ್. ಶಂಕರನಾರಾಯ್ಯಯ್ಯ,
ಜಮೀನ್‌ದಾರ್, ಮತ್ತು
4—1. ಕಾಫಿಪ್ಲಾಂಟರ್.

ಸಹಕಾರಿ ಸೆಂಟ್ರಲ್ ಬ್ಯಾಂಕ್ ಮೀಟಿಂಗು.

ಈ ತಾ 15ರಲ್ಲಿ ಮಡಿಕೇರಿಯಲ್ಲಿ ನಡೆದ ಸೆಂಟ್ರಲ್‌ಬ್ಯಾಂಕಿನ ಡೈರಕ್ಟರುಗಳ ಮೀಟಿಂಗಿನಲ್ಲಿ ಕೊಡಗು ವಿದ್ಯಾ ಇಲಾಖೆಯ ಆಫೀಸರುಗಳ ಸಹಕಾರಿ ಸಂಘಕ್ಕೆ ರೂ. 1000, ಕಾಮೂರು ಸಂಘಕ್ಕೆ ರೂ. 1500, ಈರಳೆ ಸಂಘಕ್ಕೆ ರೂ. 500, ಐಮಂಗಲ ಸಂಘಕ್ಕೆ ರೂ 1500, ಕುಂದಲಗೇರಿ ಸಂಘಕ್ಕೆ ರೂ 1000, ಪಾಲೂರು ಸಂಘಕ್ಕೆ ರೂ. 1500, ಹೊದ್ದೂರು ಸಂಘಕ್ಕೆ ರೂ. 1500, ಕಾಂತೂರು ಸಂಘಕ್ಕೆ ರೂ. 1000, ಕೈಕೇರಿಸಂಘಕ್ಕೆ ರೂ 2000, ಬಿಳುಗುಂದ ಸಂಘಕ್ಕೆ ರೂ 1500, ಹೊಸ್ಕೇರಿ ಸಂಘಕ್ಕೆ ರೂ. 250, ಕುತ್ತುನಾಡು ಸಂಘಕ್ಕೆ ರೂ. 1000, ಬೇಲೂರು ಸಂಘಕ್ಕೆ ರೂ 500, ಕಿಕ್ಕರ ಕುಟುಂಬ ಫಂಡಿಗೆ ರೂ. 500, ಬಳೂರು ಸಂಘಕ್ಕೆ ರೂ. 1000, ಅರೆಯೂರು ಸಂಘಕ್ಕೆ ರೂ 500, ಚೆಂಬೆಬೆಳ್ಳೂರು ಸಂಘಕ್ಕೆ ರೂ 2000, ಚೇಂದಂಡ ಕುಟುಂಬ ಫಂಡಿಗೆ ರೂ 1500, ಅರ್ವತ್ತೊಕ್ಲು ಸಂಘಕ್ಕೆ ರೂ. 1200, ನಾಂಗಾಲ ಸಂಘಕ್ಕೆ ರೂ. 2000, ಮತ್ತು ನೆಲಜಿ ಸೊಸೈಟಿಗೆ ರೂ. 500, ಒಟ್ಟು ರೂ. 23950 ಸಾಲ ಮಂಜೂರಾಯಿತು,

ಮಾರಾಟಕ್ಕೆ.

ಒಳ್ಳೆ ಕಾಲ, ಒಳ್ಳೆ ಆಸ್ತಿ, ತಳೆಯಬೇಡಿರಿ.

(1) ಪೊನ್ನಂಪೇಟೆ ಸ್ಕೂಲಿಗೆ ಬಳಿ ವಗೈರೆ ನಾನಾ ಸು ವ್ಯಾಪಾರಕ್ಕೆ ಬೀಳುವ ಮನೆ, ಹಿಂಭಾಗದಲ್ಲಿರುವ ಎರಡು ಭಾಗದ ಉದ್ದ ಲೈನ್ ಮನೆಗಳು ಮತ್ತು ಕಾಫಿ ಗಿಡ ವಗೈರೆಯಿರುವ ಹಿತ್ಲು ಸಹ 9000/—ರೂಪಾಯಿಗೂ,

(2) ಪೊನ್ನಂಪೇಟೆ, ದೊಡ್ಡ ಹಾದಿ ಬಲಪಾರ್ಶ್ವದಲ್ಲು ವಾಸಕ್ಕೂ ವ್ಯಾಪಾರಕ್ಕೂ ಯೋಗ್ಯವಾದ ಮಹಡಿಮನೆ, ಮತ್ತು ಹಿಂಭಾಗದ ಉದ್ದ ಲೈನ್ ಮನೆ, ವಾಸಕ್ಕೆ ಅನುಕೂಲವಿರುವ ಒಂದು ಸಣ್ಣ ಮನೆ, ಸಹ 6000/—ರೂಪಾಯಿಗೂ,

(3) ಒಂದನೇ ನಂಬರು ಅಂಗಡಿಯಲ್ಲಿರುವ ಒಟ್ಟೆ, ಸ್ಟೇಶನರಿ ಕಟ್ಲೆರಿ ವಗೈರ ಸಾಮಾನು ಮತ್ತು ಸೋಡಾ ಫೇಕ್ಟರಿ ಸಹ ಕಮ್ಮಿ ಕ್ರಯಕ್ಕೆ ಮಾರಲಿಕ್ಕೆ ಸಿದ್ಧವಾಗಿದೆ.

ಖಾಯಿಷ್‌ದಾರರು ಆದಷ್ಟು ಜಾಗ್ರತೆಯಲ್ಲು ಕೆಳಗಿನ ವಿಳಾಸಕ್ಕೆ ಬರೆಕೊಳ್ಳಬಹುದು.

V. E. N. Ahamad,
General Merchant,
Ponnampett.

ಪತ್ರವ್ಯವಹಾರ.

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ಪತ್ರಿಕಾ ಕರ್ತರು ಉತ್ತರವಾದಿಗಳಲ್ಲ. ಸಂ.

ಶ್ರೀ ಗುಬ್ಬಿ ಚನ್ನಬಸವೇಶ್ವರ ನಾಟಕ ಮಂಡಳಿ.

ಈ ಮಂಡಳಿಯವರು. ಮಡಿಕೇರಿಯಲ್ಲಿ ಎರಡು ವಾರದಿಂದಲೂ ನಾಟಕಗಳನ್ನಾಡುತ್ತಿರುವರು. ಇವರು ಆಡಿದ ಎಲ್ಲಾ ಆಟಗಳಿಗೂ ಒಳ್ಳೆ ಕೂಟ ಸೇರಿತ್ತು.

ಕಬೀರದಾಸ್ ನಾಟಕವಂತೂ ಇವರ ಬಲಗೈ. ಈ ನಾಟಕದಲ್ಲಿ ಪ್ರಾಮುಖ್ಯವಾಗಿ ಬಂದನಟರು—ಶ್ರೀಗಳಾದ ಮಲ್ಲಪ್ಪನವರು, ವೀರಣ್ಣನವರು, ನಾರಾಯಣರಾಯರು, ನಾರಾಯಣಸ್ವಾಮಿನಾಯ್ಡುಯವರು. ಈ ನಾಟಕಕ್ಕೆ ಗವಾಯಿ ನಾಗೇಶರಾಯರು ಹಾಜರಿರಲಿಲ್ಲ. ಕಬೀರದಾಸರ ಭೂಮಿಕೆಯು ಶ್ರೀಮಲ್ಲಪ್ಪನವರದಾಗಿತ್ತು. ಇವರ ಕುರಿತು ನಾವು ಎಷ್ಟು ಹೊಗಳಿದರೂ ಅದು ಸ್ವಲ್ಪವೇ ಆಗಿದೆ. ಇವರು ನಾಟಕದ ನಾಯಕರಾಗಿದ್ದು ಸರ್ವ ಭಾಗದಲ್ಲಿಯೂ ಯೋಗ್ಯತೋರುವಂತೆ ಅಭಿನಯಿಸಿದರು. ಇವರ ಹಾಡುಗಳನ್ನು ಕೇಳಿ ಸಭಿಕರು ಸ್ಫೂರ್ತಿಗೊಳ್ಳುತ್ತಿದ್ದರು 'ಹಣವೇ ನಿನ್ನಯ' ಎಂಬ ಹಾಡು ಸಭಿಕರನ್ನು ಮುಗ್ಧರನ್ನಾಗಿ ಮಾಡಿತು. ವೀರಣ್ಣನವರು ರಾಕೋದರನ ಪಾತ್ರವನ್ನಭಿನಯಿಸಿದ್ದರು. ಇವರ ವರ್ತನವು ಚಾಲೋಚಿತವಾಗಿತ್ತು. ಶ್ರೀ ಬಸವರಾಜರ ಭೂಮಿಕೆಯು ಸಿಂಗಾರ ಎಂಬ ಸೇವಕನದಾಗಿತ್ತು. ಇವರ ಮಾತು ಸ್ಪಷ್ಟವಾಗಿಯೂ ಬೋಧಪ್ರದವಾಗಿಯೂ ಇದ್ದಿತು. ಒಟ್ಟಿನಲ್ಲಿ ಈ ನಾಟಕವು ಬಹಳ ಚಲೋದಾಗಿತ್ತು.

ಎರಡನೇ ದಿವಸದ ನಾಟಕವು ಕಾಳಿದಾಸನದು. ಐತಿಹಾಸಿಕ ದೃಷ್ಟಿಯಿಂದ ಈ ಕಥಾವಸ್ತುವು ಒಪ್ಪತಕ್ಕದ್ದಲ್ಲವಾಗಿದೆ. ಕಾಳಿದಾಸನ ಪ್ರಕೃತಿಯ ನಿಜತ್ವವನ್ನು ಮತ್ತು ಜನ ಜೀವನದ ತಿರುಳನ್ನು ತಿಳಿದುಕೊಂಡವನಾದುದರಿಂದಲೇ ಉದ್ಗ್ರಂಥಗಳನ್ನು ಬರೆಯುವ ಸಾಮರ್ಥ್ಯವು ಅವನಿಗಿತ್ತು. ಇಂಥಾ ಉದ್ದಾಮಕವಿಯು ವೇಶ್ಯಯಮನೆಗೆ ಹೋಗುವ ವಿಷಯವು ನಂಬತಕ್ಕದಲ್ಲ. ಇದು ಕೇವಲ ಕಾಲ್ಪನಿಕವು ಈ ನಾಟಕವನ್ನಾಡಿ ಕಾಳಿದಾಸನ ಕೀರ್ತಿಯನ್ನು ಮಾಸುವದಕ್ಕಿಂತಲೂ, ಇವನಿಂದಲೇ ರಚಿತವಾದ ನಾಟಕಗಳಲ್ಲಿ ಯಾವುದಾದರೊಂದನ್ನು ಅಭಿನಯಿಸಿದರೆ ಸೊಗಸಿದ್ದಿತು ಇನ್ನಾದರೂ ಈ ಮಂಡಳಿಯವರು ಈ ಸೂಚನೆಗೆ ಲಕ್ಷ್ಯಕೊಡುವರೇ?

ಮೂರನೇ ಆಟವು ತುಕಾರಾಂ ಸಾಧುವಿನದು. ಕಥಾವಸ್ತುವು ರಮ್ಯವಾಗಿದೆ. ಸ್ತ್ರೀ ಪುರುಷರಿಗೆ ಹೆಚ್ಚಾಗಿ ಜಪಟನನ್ನಾಸಿಗಳಿಗೆ ಈ ಆಟವು ಮೋದದ ಪಾತವಾಗಿದೆ. ಈ ಆಟದ ನಾಯಕನೇ ಮಹಾರಾಷ್ಟ್ರ ವಾಙ್ಮಯವನ್ನು ಬೆಳಸಿದ ತುಕಾರಾಮನು. ಇವನು ನಾಮ ದೇವನಂತೆ ತತ್ವಜ್ಞಾನಿಯು ತುಕಾರಾಮನ ಮೈಧುಮಧುರವಾದ ನುಡಿಗಳಿಗೆ ಶಿವಾಜಿಯು ಕರಗಿಹೋಗಿ ರಾಜ್ಯ ಪರಿತ್ಯಾಗವಮಾಡಿದ ಮಾತು ಯಾವ ಸಾಮಾಜಿಕನ ಮನಸ್ಸನ್ನು ಕರಗಿಸುವುದಿಲ್ಲ? ತುಕಾರಾಮನ ಪಾತ್ರವನ್ನು ಮಲ್ಲಪ್ಪನವರು ತಾಳಿದ್ದರ. ಕಷ್ಟದಲ್ಲಿಯೂ ಸುಖದಲ್ಲಿಯೂ ಸುಖನು ಸಮಚಿತ್ತನಾಗಿಯೇ ಇದ್ದನೆಂಬುದನ್ನು ಮಲ್ಲಪ್ಪನವರು ನಮ್ಮ ಮುಂದೆ ಮೂರ್ತಿಮತ್ತಾಗಿ ಅಭಿನಯಿಸಿ ತೋರಿದರು. ಶಿವಾಜಿ ಪಾತ್ರವು ತಾಗಿಸ್ವಾಮಿಗೆ ನುಸಿಯೂ ಟನೆ ಭಾರತ ಭಕ್ತಿ ಸಾಮ್ರಾಜ್ಯದ ಸಾಕ್ಷಾತ್ ವಿವಾಹದಿಯೇ ಒಂದನೆಂದು ನಾವು ಚಿಕಿತರಾದೆವು. ತುಕಾರಾಮನ ಪತ್ನಿಯ ಭೂಮಿಕೆಯು ಒಳ್ಳೆನಟರಾದ ಶ್ರೀ. ನಾರಾಯಣರಾಯರದಾಗಿತ್ತು. ರಾಣಿಗೆ ನೀರಾಳಿ ತೆಗೆಯುವಾಗ ಇವರ ಅಭಿನಯವು ಮೇರೆ ಮೀರಿತ್ತು. ಆದರೆ ರಂಗಭೂಮಿಯಮೇಲೆ ಆಗಬಾರದ ಸಂಗತಿಗಳು ಅನೇಕ ಅವೆ. ರಂಗಭೂಮಿಗೆ ಹಿಡಿಗಿಬ್ಬನ್ನು ತರುವನು ಅಸಹ್ಯವು ದೃಷ್ಟಿ ತೆಗೆಯುವುದು, ಒಂದು ಪಾತ್ರವು ಮಾತನಾಡುತ್ತಿರುವಾಗ್ಗೆ ಇನ್ನೊಂದು ಪಾ

ತ್ರುವು ಮೇಲೆ ಬಿದ್ದು ಸಂಭಾಷಿಸುವುದು, ವಿಳಂಬವಾಗಿ ರತಿ ಕಲಾಪವನ್ನು ಪ್ರದರ್ಶಿಸುವುದು, ಇವುಗಳೆಲ್ಲವೂ ವಿದ್ಯಾವಂತರಿಗೆ ಒಗ್ಗದ ಸಂಗತಿಗಳು. ವೀರಣ್ಣನವರು ವಿದ್ಯಾಂಸನಾದ ಮುಂಬಾಜಿಪಾತ್ರವನ್ನು ಅಚ್ಚುಕಟ್ಟಾಗಿ ಅಭಿನೈಸಿದರು. ಬಸವರಾಜರು ಮುಂಬಾಜಿಗೆ ಯೋಗ್ಯ ಶಿಷ್ಯರಾಗಿದ್ದರು. ಇವರ ವಿನೋದಕರವಾದ ಮಾತುಗಳು ನೀತಿಯನ್ನು ಬೋಧಿಸುತ್ತಿದ್ದುವು. ಅನಂತರ ನಾರಾಯಣಸ್ವಾಮಿನಾಯ್ಡುಯವರ ವಿಷಯವಾಗಿ ಬರೆಯುವಾಗ ಇವರು ಉತ್ತಮ ನಟರೆಂದು ನಾವು ಉಲ್ಲೇಖಿಸಬೇಕಾಗುತ್ತೆ. ಇವರ ನಡೆನುಡಿಗಳು ಉಚಿತವಾಗಿದ್ದುವು. ಇವರಿಗೆ ಒಳ್ಳೆ ಕಂಠವಿಲ್ಲದಿದ್ದರೂ ಇದೀ ನಾಟಕಮಂಡಳಿಯಲ್ಲಿ ಸಂಗೀತಶಾಸ್ತ್ರದ ಇಂಗಿತವನ್ನು ತಿಳಿದವರು ಶ್ರೀ. ನಾಗೇಶರಾಯರನ್ನು ಬಿಟ್ಟರೆ ಇವರೇ ಎಂದು ನಾವು ಗೊತ್ತುಪಡಿಸುವೆವು. ಇವರು ಛತ್ರಪತಿ ಶಿವಾಜಿಯ ಪತ್ನಿಯ ಪಾತ್ರವನ್ನು ಮನೋರಂಜಕವಾಗಿ ನಡಿಸಿದರು.

ನಾಲ್ಕನೇ ಆಟವಾದ ಸದಾರಮೆ ನಾಟಕದಲ್ಲಿ ವೀರಣ್ಣನವರು ಹೆಸರುಗೊಂಡಿರುವರು. ಇವರು ಕಳ್ಳನ ಪಾತ್ರವೂ ವೈಶ್ಯಕೋಮಟಿಯ ಪಾತ್ರವೂ ಹರ್ಷದಾಯಕವಾಗಿದ್ದುವು. ಸದಾರಮೆ ಬಾಲಿಕೆಯನ್ನು ವಹಿಸಿದ್ದ ನಾಯ್ಡುಯವರು ಸೂಸಕರಾಗಿಯೇ ಅಭಿನಯಿಸಿದರು.

ನಾಟ್ಯಕಲಾಭಿಮಾನಿ.

"ಪ್ರೀತಿಯ ಮಹತ್ವ"

ಲೋಕದಲ್ಲಿ ಜನರುಗಳಿಗೆ ಇದೊಂದು ಸಂಚಿತ ಧನವಾಗಿದೆ. ಇದಕ್ಕೆ ವೃದ್ಧಿಕ್ಷಯಗಳಿರುವದೇ ಇಲ್ಲ. ಇದು ಲೋಕವನ್ನು ಸ್ವಾಧೀನಪಡಿಸತಕ್ಕ ವಶೀಕರಣವಾಗಿರುತ್ತದೆ. ಈ ಪ್ರೀತಿಯ ಅಭಾವದಿಂದಲೇ ಜನಗಳು ವಿಪರೀತಾವಸ್ಥೆಗೆ ಗುರಿಯಾಗುತ್ತಾರೆ. ಪ್ರೀತಿಗೆ ಮಿಕ್ಕಿದ ವಸ್ತುವೇ ಇಲ್ಲ. ಜನಗಳನ್ನು ಅನರ್ಥಪರಂಪರೆಗೆ ಗುರಿಪಡಿಸಿ ಕಷ್ಟಕ್ಕೀಡುಮಾಡಿಕೊಂಡು ಜನಗಳಿಗೆ ಒಂದನೇ ಶತ್ರುವಾಗಿರುವದೇ ದ್ವೇಷವು. ಈ ದ್ವೇಷವನ್ನು ಗೆಲ್ಲತಕ್ಕ ಸಾಧನವೇ ಪ್ರೀತಿಯು. ದ್ವೇಷವು ದ್ವೇಷದಿಂದ ಹೆಚ್ಚುವುದರಿಂದ ನಾವು ದ್ವೇಷಿಕರಲ್ಲಿ ದ್ವೇಷವನ್ನು ಬೆಳಸಲೇ ಬಾರದು. ಪ್ರೀತಿಯಿಂದ ದ್ವೇಷವು ಕ್ಷೀಣವಾಗುವದರಿಂದ ದ್ವೇಷಿಕರನ್ನು ಗೆಲ್ಲುವದಕ್ಕೆ ಪ್ರೀತಿಯೇ ಮುಖ್ಯ ಸಾಧನವು. ದ್ವೇಷ, ಪ್ರೀತಿಗಳೆರಡು ಭಾವನೆಗೆ ಮನುಷ್ಯನ ಮನಸ್ಸೇ ಕಾರಣವಾಗಿರುತ್ತದೆ. ಮನ ಏವ ಮನುಷ್ಯಾಣಾಂ ಕಾರಣಂ ಬಂಧ ಮೋಕ್ಷಯೋಃ, ಎಂಬಂತೆ ಮನುಷ್ಯರ ಕಷ್ಟಸುಖಗಳಿಗೆ ಮನಸ್ಸೇ ಮುಖ್ಯ ಕಾರಣವು. ಲೋಕದಲ್ಲಿ ಮನುಷ್ಯರಿಗೆ ಪ್ರಥಮ ಶತ್ರುವಾಗಿರುವದೇ ಕ್ರೋಧವು. ಕಾಷ್ಠದಲ್ಲಿ ಬೆಂಕಿಯು ವ್ಯಾಪಿಸಿಕೊಂಡಿದ್ದು ಕ್ರಮೇಣ ಕಾಷ್ಠವನ್ನೇ ಸುಡುವಂತೆ ಕ್ರೋಧವೆಂಬ ಶತ್ರುವು ಮನುಷ್ಯರ ಅಂತರ್ಭಾಗದಲ್ಲೇ ಇದ್ದುಕೊಂಡು ಸಮಯಬಿದ್ದಾಗ ಹೊರಗೆ ಬಂದು ಮನುಷ್ಯರನ್ನು ನಾಶಪಡಿಸುತ್ತದೆ. ಆದ್ದರಿಂದ ಮನುಷ್ಯರಿಗೆ ಶತ್ರುಗಳಾಗಲಿ, ಮಿತ್ರರಾಗಲಿ ಬೇರೆ ಎಲ್ಲಿಯೂ ಹೊರಗೆ ಇರುವದೇ ಇಲ್ಲ. ದ್ವೇಷ ಪ್ರೀತಿಗಳೆರಡೂ ಸಾಧನಗಳು ಮನುಷ್ಯರನ್ನಾಶ್ರಯಿಸಿಕೊಂಡು ಮನವನ್ನು ದುರ್ಜನ ಸಜ್ಜನರೆಂದು ಎರಡು ಭಾಗಮಾಡಿರುತ್ತವೆ. ಮನದಲ್ಲಿ ಸ್ನೇಹ ಬೆಳೆಸದಿದ್ದರೆ ದ್ವೇಷವನ್ನು ಕಟ್ಟಿಕೊಳ್ಳಬೇಕೆಂತಿಲ್ಲ. ಮನಸ್ಸಿಗೆ ಪ್ರೀತಿಯೇ ಮಿತ್ರತ್ವ, ದ್ವೇಷವೇ ಶತ್ರು. ಎರಡ ಅವಿವೇಕಿಯಾದವನು ಕಡಿದ ಕೋಪವನ್ನು ಒಡನೆ ಬಿಡದೆ ಹಿಡಿದುಕೊಂಡು ಕೂಡಲೆ ತಾನು ಅಂಧನಾಗುತ್ತಾನೆ. ಈ ಅಂಧತ್ವದ ಬೆಳೆಸಿದ ಬಳಿಕ್ಕೇ ಜನರು ಕಣ್ಣು ಕಾಣದ ಕಾಡಿನಲ್ಲಿ ಬಿದ್ದುಕೊಂಡು ಕಡೆಗೆ ನಷ್ಟಪಡುವರು. ಉಂಟು. ದುರ್ಜನರಲ್ಲಿ ಸ್ನೇಹವಿದ್ದರೂ ಸಜ್ಜನರಲ್ಲಿ ಅಪ್ರಿಯಕೆಟ್ಟ ದುಃಖದಿಂದ ಕ್ರೋಧವಿಲ್ಲದ ಪ್ರೀತಿಯೇ ಸತ್ಕಾರ್ಯ.

ಪ್ರೀತಿಗೆ ಉದಾತ್ತ ಪದಾರ್ಥಗಳು ಬಂಧುವಾಗಿಯೂ ದ್ವೇಷಕ್ಕೆ ಸ್ವಾರ್ಥ ಅಸೂಯೆಗಳು ಬಂಧುವಾಗಿಯೂ ಇರುತ್ತವೆ. ಈ ಎರಡು ಬಗ್ಗೆ ಮನಸ್ಸಿನಲ್ಲಿರತಕ್ಕ ಗುಣಗಳೇ ಅವರವ ಈ ಎರಡು ಸಾಧನಗಳಿಂದಲೇ ಲೋಕವು ಬಾಳುತ್ತದೆ. ಮೊದಲನೆಯದರಿಂದ ಸಾರಾಸಾರವಾಗಿಯೂ ಎರಡನೆಯದರಿಂದ ನಿರಂಕುಶವಾಗಿಯೂ ಆಳ್ವಿಕೆ ನಡೆವುದರಿಂದಲೇ ಲೋಕದ ಸುಭಿಕ್ಷ ದುರ್ಭಿಕ್ಷಗಳಿಗೆ ಇವೆರಡೇ ಕಾರಣವಾಗಿರುತ್ತವೆ. ಆದರೆ ಸಾಮಾನ್ಯವಾಗಿ ಲೋಕವು ಎರಡನೆಯದರಿಂದ ಆಳಲ್ಪಡುವದರಿಂದ ಹೆಚ್ಚಿನ ಹಾಹಾಕಾರಕ್ಕೆ ಕಾರಣವಾಗುತ್ತದೆ. ಸೂಕ್ಷ್ಮವಿಚಾರಿಸಿದರೆ ಈ ಹಾಹಾಕಾರದ ಕಾರಣಕ್ಕೆ ಮನುಷ್ಯರೇ ಮುಖ್ಯಕಾರಣವು. ಈ ಎರಡನೆಯ ಆಳ್ವಿಕೆಯು ಬೆಳೆದಂದಿನಿಂದಲೇ ಈ ಕಾಲವು ಕಲಿಕಾಲವೆನ್ನಿಸಿದ್ದು ವೇದವಿದ ಕಾಲದಲ್ಲಿ ಈ ಎರಡನೆಯ ಸಾಧನವು ಕಡಿದ ಜನರ ಹಸ್ತಗತವಾಗಿಯೇ ಇರುತ್ತದೆ. ಯಾವ ಸಮಯದಲ್ಲಿ ಎರಡನೆಯ ಆಳ್ವಿಕೆಗೆ ಲೋಕವು ಎಡೆಗೊಟ್ಟಿತೋ ಆ ಕಾಲದಿಂದಲೇ ಲೋಕವು ಕ್ಷೀಣಗತಿಗೆ ಇಳಿಯ ತೊಡಗಿದೆ. ಒಟ್ಟು ದೇಶವಾಗಲಿ ಲೋಕವಾಗಲಿ ಕ್ಷೀಣಗತಿಗೆ ಬರುತ್ತಿರುವದರ ಎರಡನೆ ಉತ್ತಮಗತಿಗೆ ಬರಲು ಬಹಳ ಬೇಕಾಗುವುದು. ಲೋಕದ ಅವಸ್ಥೆಯನ್ನು ನಾಲ್ಕು ವಿಭಾಗ ಮಾಡಿಯೇ ಪೂರ್ವಿಕರು ಕೃತ, ತ್ರೇತ, ದ್ವಾಪರ, ಕಲಿ, ಎಂಬಿದಾಗಿ ನಾಲ್ಕು ವಿಭಾಗದಲ್ಲಿ ನಮೂದಿಸಿ ಹೆಸರನ್ನು ಕೊಟ್ಟಿದ್ದಾಗಿರುತ್ತದೆ. ಲೋಕವು ಕ್ಷೀಣಗತಿಗೆ ಬರುತ್ತಿರುವದರಿಂದ ದೇಶದ ಅಲ್ಲಲ್ಲಿ ದುರ್ಭಿಕ್ಷ, ಜಗಳ, ಜನರಲ್ಲಿ ಪ್ರೀತಿ ಕಡಿಮೆಯಾಗೋಣ, ಪರಸ್ಪರ ವೈಮನಸ್ಸು, ಅವಿಶ್ವಾಸಗಳುಂಟಾಗಿ ದುರ್ಭಿಕ್ಷಗಳುಂಟಾಗುತ್ತದೆ. ದೇಶದಲ್ಲಿ ಎಂದು ದುರ್ಭಿಕ್ಷವು ಕಾಲಿಟ್ಟಿತೋ ಅಂದಿನಿಂದ ಜನಗಳಲ್ಲಿ ಅಶಾಂತತೆಯು ನೆಲೆಗೊಂಡು ಕಪಟ, ವಂಚನೆ, ಕಳ್ಳತನ, ವ್ಯಭಿಚಾರ, ದುರಾಲಮರಣಾದಿಗಳುಂಟಾಗುವದು ಸ್ವಭಾವ ಗುಣವಾಗಿದೆ. ಅಂಥಾ ಸಮಯದಲ್ಲಿ ದೇಶೋನ್ನತಿಗಾಗಿ ಎಷ್ಟು ಪ್ರಯಾಸಪಟ್ಟರೂ ಕೂಡಲೆ ಸರಿ ಕೂಡುವದು ಬಹು ದುರ್ಲಭಕರವಾಗಿರುತ್ತದೆ. ಇಷ್ಟೆಲ್ಲಾ ಅನರ್ಥಕ್ಕೆ ಜನರಲ್ಲಿರುವ ಪ್ರೀತಿಯ ಅಭಾವವೇ ಮುಖ್ಯಕಾರಣವು. ಅದೊಂದನ್ನು ಚೆನ್ನಾಗಿಟ್ಟುಕೊಂಡರೆ ಎಂಥಾ ವಿಷಯವನ್ನಾದರೂ ಗೆಲ್ಲಬಹುದು. ಕೆಡಕು ಮಾಡಿದವರಿಗೆ ಪ್ರತಿ ಕೆಡಕುಮಾಡದೆ ಆ ಮನುಷ್ಯರಿಂದ ಕೆಡಕು ಮಾಡುವ ಗುಣವನ್ನು ಹೋಗಲಾಡಿಸಿ ಪ್ರೀತಿಯನ್ನು ಅವರಲ್ಲಿ ತುಂಬಿಸುವ ಕರ್ತವ್ಯವೇ ಎಲ್ಲರದಾಗಿರಬೇಕು. ದ್ವೇಷ, ಪ್ರೀತಿಗಳ ಬೆಳವಣಿಗೆಗೆ ಅವಿಚಾರ, ವಿಚಾರಗಳೇ ಮುಖ್ಯಕಾರಣವು. ವಿಚಾರಶೀಲರಲ್ಲಿ ಪ್ರೀತಿಯು ತುಂಬಿತುಳುಕುತ್ತಿರುವದರಿಂದ ಅಂಥವರಿಗೆ ದ್ವೇಷಿಗಳಾದರೂ ಇರಲಾರರು. ಅಂದಾ ಸ್ಥೈರ್ಯಗುಣವನ್ನು ಹೊಂದತಕ್ಕ ಪ್ರೀತಿಯನ್ನು ಬೆಳೆಸಿಕೊಳ್ಳಲಿಕ್ಕೆ ಅಭ್ಯಾಸಿಸುವದೇ ಸರ್ವರ ಕರ್ತವ್ಯವಾಗಿರಬೇಕು.

ಪ್ರಿಯೋತ್ತಮ.

ಕೊಡಗಿನಲ್ಲಿ ಒಂದು ಕೊರತೆ

ಮಹನೀಯರೆ,

ಇಡೀ ರಾಷ್ಟ್ರವು ಎಲ್ಲಾ ವಿಷಯಗಳಲ್ಲೂ ವೃದ್ಧಿಹೊಂದುತ್ತಿರುವಾಗ ಕರ್ನಾಟಕದ ರಾಷ್ಟ್ರದ ಒಂದು ಅಂಗವಾದ ಈ ಕೊಡಗೇಕೆ ಹಿಂದುಳಿದಿರಬೇಕೆಂದು ನನಗೆ ಅದೂ ಸಹ ಕೊನೆಗೆ ಒಂದೆರಡು ವೃತ್ತ ಪತ್ರಗಳಿಗೆ ಜನ್ಮಕೊಟ್ಟಿತು. ಅಂತಹವುಗಳ ಹೊರಡುವಿಕೆಗೆ ಕಾರಣರಾದ ಸದ್ಗೃಹಸ್ಥರಿಗೆ ದೇಶೀಯರ ವಂದನೆಗಳು ಎಂದೂ ಇರುತ್ತವೆ. ಆದರೆ ಈ ವೃತ್ತಪತ್ರಿಕೆಗಳೂ, ಮಾಸಿಕಗಳೂ ದೇಶಕ್ಕೆ ಮಾಡಬಹುದಾಗಿದ್ದಷ್ಟು ಒಳ್ಳೇದನ್ನೂ, ಜಾಗ್ರತೆಯನ್ನೂ ಮಾಡಿದೆ ಎಂದು ಹೇಳಲಿಕ್ಕೆ ಬಾರದು. ಇದರ ತಪ್ಪೆಲ್ಲವೂ ಪತ್ರ ಚಾಲಕರದೇ ಅಲ್ಲ, ಈ ಮಾಸ್ಯಕ್ಕೆ ದೇಶೀಯರು ಅನೇಕ ವಿಧಗಳಲ್ಲಿ ಜವಾಬ್ದಾರರು.

ಎಲ್ಲಿ ನೋಡಿದರಲ್ಲಿಯೂ ಪತ್ರಿಕೆಗಳು ಲಾಭಗಳಿಸಿ ನಡೆಯುವುದಿಲ್ಲ. ಲಾಭ ಹಂಚಿದ ಸಂಗತಿಯು ಕಡಿಮೆಯಾಗಿದೆ. ಅನೇಕ ಎಷ್ಟೊಂದು ಉತ್ತಮ ಪತ್ರಗಳು ಜನತೆಯ ಆಶ್ರಯವಿಲ್ಲದೆ ನಿಂತುಹೋಗಿವೆ? ಹೋಗುತ್ತಿವೆ? ಪತ್ರಗಳು ನಡೆಯಬೇಕೆಂದರೆ ಜನತೆಯಲ್ಲಿ ವಾಚನಾಭಿರುಚಿಯಿದ್ದು ಅವರ ಉದಾರಾಶ್ರಯ ದೊರೆಯಬೇಕು. ಇವೆರಡು ಸಂಗೂಡಲಿಲ್ಲವೆಂದರೆ ಮತ್ತೆ ತೀರಿತು, ಅಸ್ತಮದಲ್ಲಿ ಶನಿ!

ಈ ಪುಟ್ಟ ಲೇಖನದ ವಿವರಣೆಯಿಂದ ಕೊಡಗಿನಲ್ಲಿ ಅಂತಹವರೇ ಇಲ್ಲವೆಂದು ಗ್ರಹಿಸತಕ್ಕದ್ದಿಲ್ಲ. ಹಿರಿಗಿದೆ ಆದರೆ ಇಂತಹ ಕೆಲಸಕ್ಕೆ ಕೈ ಹಚ್ಚುವ ಆ ಉತ್ಸುಕತೆಯೂ, ನಮ್ಮ ಒಲಿಕೆ ಮಾಡುವ ಆ ಬುದ್ಧಿತನವೂ, ಸಮಾಜದ ಮೇಲ್ಮೆಯನ್ನು ಬಯಸುವ ಆ ಕುತೂಹಲತೆಯೂ ನಮ್ಮವರಲ್ಲಿ ತೀರ ಕಡಿಮೆ ಎಂದು ನಾನು ಹೇಳಿಯೇ ಹೇಳುವೆನು. ಇಲ್ಲದಿದ್ದರೆ, ನಮ್ಮ ಸರಕಾರದಲ್ಲಿ ಚಾಕರಿಗೆ ಸಹ ಆಗುವುದಕ್ಕಿಂತ ಹೆಚ್ಚು ಬಿ. ಎ. ಬಿ. ಎಲ್ಲಾಗಳೂ, ಎಲ್. ಟಿ. ಗಳೂ, ಅಲ್ಲದೆ ಹಾದಿ ಕೆಲವು, ಗ್ರಾಜ್ಯುಯೇಟರು ಇದ್ದು ನಮ್ಮಲ್ಲಿರುವ ಇವರ ಒಂದು ಒಂದೇ ಒಂದು ಲೇಖನವನ್ನು ಚಾತಕ ಪಕ್ಷಿಯಂತೆ ಕಾದರೂ ನೋಡಲಿಕ್ಕೆ ಕಷ್ಟವಿರುತ್ತದೆ. ಸರಕಾರಿ ಚಾಕರಿಯಲ್ಲಿರುವವರು ರಾಜಕೀಯ ಸಂಗತಿಗಳನ್ನು ಬಿಟ್ಟು ಬಾಕಿ ಸಂಗತಿಗಳಲ್ಲಿ ತಮ್ಮ ಲೇಖನಿಗೆ ಕೆಲಸ ಕೊಡಬಾರದೇನು?

ಇಲ್ಲಿನ ಉಚ್ಚ ತರಗತಿಯ ವಿದ್ಯಾವಂತರು ಹೀಗೆ ಉದಾಸೀನರಾಗಿರೋಣದ್ದರಿಂದ ಎಷ್ಟೋ ತರಗತಿ ಅಥವಾ ಅದಕ್ಕೆ ಕಡಿಮೆ ದರ್ಜೆಯವರ ಲೇಖನಗಳನ್ನೇ ನಾವು ಪತ್ರಿಕೆಗಳಲ್ಲಿ ಕಾಣುವೆವು. ಅಲ್ಲದೆ ಈ ಉದಾಸೀನತೆಯಿಂದ ಇನ್ನೊಂದು ಕುಂದಕ! ಕೆಲವು ಸಮಯಗಳಲ್ಲಿ ಪತ್ರಿಕೆಗಳ ಪುಟಗಳನ್ನೆಲ್ಲಾ ಸಂಪಾದಕರುಗಳೇ ಬರೆದು ತುಂಬಿಸುವರು. ಇಲ್ಲದಿದ್ದರೆ ಬೇರೆ ಪತ್ರಿಕೆಗಳಿಂದ ಲೇಖನಗಳನ್ನು ಎತ್ತಿಹಾಕುವರು. "ಪರೋಪಕಾರಾರ್ಥಮಿದಂ ಶರೀರಂ" ಎಂದಿದ ಮೇಲೆ ಪ್ರಾಜ್ಞರು ಅದರಲ್ಲಿಯೂ ನಮ್ಮ ದೇಶವು ಪಾರತಂತ್ರ್ಯದಲ್ಲಿ ಬಿದ್ದು ಕೊಳೆಯುತ್ತಿರುವಾಗ, ಜನತೆಯನ್ನು ಜಾಗ್ರತಗೊಳಿಸಿ ದೇಶವಾಸಿಯ ಬಂಧ ಶೃಂಖಲೆಗಳನ್ನು ಬಿಡಿಸಲು ಕೃಪೆಚ್ಛೆ ಸಕಲ ಪ್ರಯತ್ನದಲ್ಲಿ ನಮ್ಮ ದೇಹಗಳ ಸವೆಯಿಸುವ ಬದಲು ಕೈಕಟ್ಟಿಕೊಂಡು ಕೂತಿರುವುದು ಅದೇನು ತರವೋ, ಯಾರು ಹೇಳಬಲ್ಲರು?

"ಸುಪ್ರಸಾದ"

ಕೊಡಗು ಮುಸಲ್ಮಾನರು ಮತ್ತು ಮಾಪಿಳ್ಳೆ ಸಹೋದರರಲ್ಲಿ ಅರಿಕೆ.

ಅಂಜುಮನ್ ಇಸ್ಲಾಮಿಯಾದಿಂ ಕಡೆಯಿಂದ ಕೊಡಗು ದೇಶದ ಮುಸಲ್ಮಾನರ ವಿದ್ಯಾಹೀನತೆ ವಿಷಯದಲ್ಲಿ ಕೊಡಗು ಕಮಿಷನರ್ ಸಾಹೇಬರ ಜನಾಬಿನಲ್ಲಿ ಬರಕೊಂಡ ಕಾಗದದ ವಿಷಯ ಈ ದಿನ ಚರ್ಚೆಮಾಡಲಿಕ್ಕೆ ಇದ್ದಮೇರೆ ನಾವು ೩ ಜನರು ಅವರ ಆಫೀಸಿಗೆ ಹೋಗಿದಲ್ಲಿ ಕಮಿಷನರು ಈ ದೇಶದಲ್ಲಿ ಮುಸಲ್ಮಾನರ ವಿಧ್ಯಾಹೀನತೆ ವಿಷಯದಲ್ಲು ಬಹು ವ್ಯಸನಪಟ್ಟರು. ಹಿಂದು ಜನರಲ್ಲಿ 10ಕ್ಕೆ ಒಬ್ಬರು ಸ್ಕೂಲಿಗೆ ಹೋಗುತ್ತಾರೆಂತಲೂ ಮುಸಲ್ಮಾನರಲ್ಲಿ 60 ಜನರಲ್ಲಿ ಒಬ್ಬರು ಸ್ಕೂಲಿಗೆ ಹೋಗುತ್ತಾರೆಂತಲೂ ಸೂಚಿಸಿದರು. ಅಲ್ಲದೆ ಹೆಚ್ಚಿನ ವಿದ್ಯೆ ಕಲಿಯುವವರು ಸಹ ಯಾರು ಇಲ್ಲ. ಇದು ಬಹು ಘೋರವಾದ ಸಂಗತಿಯಾಗಿದೆಯೆಂದು ಹೇಳಿ ಆಗ್ಯೆ ಏನುಮಾಡಬೇಕೆಂದು ಕೇಳಿದರು. ಅದಕ್ಕಾಗಿ ನಮ್ಮ ಕಡೆಯಿಂದ ಅಬ್ದುಲ್ ಗಫೂರ್ ಖಾನ್ ಸಾಹೇಬರವರು, 25 ಮಕ್ಕಳಿಗೆ ಕಡಿಮೆ ಇಲ್ಲದಷ್ಟು ಇರುವಂಥ ಕಡೆಗಳಲ್ಲಿ ಸ್ಕೂಲ್‌ಗಳು ಇಡಬೇಕಾಗಿಯೂ, ಒಬ್ಬ ಮುಸಲ್ಮಾನ್ ಸುಪರ್‌ವೈಜರ್ ನೇಮಿಸಬೇಕಾಗಿಯೂ, ಕಂಪಲ್‌ಸರಿ (ಒತ್ತಾಯ) ವಿದ್ಯೆ ಖಾನೂನ್ ಜಾರಿಮಾಡಬೇಕಾಗಿಯೂ ಸೂಚಿಸಿದರು. ಇದಕ್ಕೆ ಕಮಿಷನರ್ ಸಾಹೇಬರು ಈ ವರುಷಕ್ಕೆ ಪೊನ್ನಂಪೇಟೆ, ಅಮ್ಮತ್ತಿ, ಫ್ರೇಜರ್‌ಪೇಟೆ, ಶನಿವಾರಸಂತೆ ಈ ನಾಲ್ಕು ಸ್ಥಳಗಳಲ್ಲಿ ಸ್ಕೂಲುಗಳು ಜಾರಿಮಾಡಲಿಕ್ಕೆ ಪ್ರಯತ್ನ ಪಡುತ್ತೇನೆಂತಲೂ ಅಲ್ಲದೆ ಕನ್ನಡ ಸ್ಕೂಲುಗಳು ಇರುವ ಜಾಗದಲ್ಲು ಮುಸಲ್ಮಾನ್ ಮಕ್ಕಳು ಕೇಳಿದರೆ ಒಬ್ಬ ಮುಸಲ್ಮಾನ್ ಟೀಚರ್ ಕೂಡಬಹುದಾಗಿಯೂ, ಸುಪರ್‌ವೈಜರ್ ಬದಲಿಗೆ ವೀರಾಜಪೇಟೆ ಅಲ್ಲವೆ ಮಡಿಕೇರಿ ಹೆಡ್‌ಮಾಸ್ಟರು ಮೇಲ್‌ವಿಚಾರಣೆ ನೋಡಿಕೊಳ್ಳಬಹುದಾಗಿಯೂ ಕಂಪಲ್‌ಸರಿ ವಿದ್ಯೆ ಮುಂದಕ್ಕೆ ಜಾರಿಮಾಡಬಹುದಾಗಿಯೂ ಅಪ್ಪಣೆಯನ್ನು ದಯಪಾಲಿಸಿದರು. ಅನಂತರ ಬಹು ಸಂತೋಷದಿಂದ ಮುಸಲ್ಮಾನರ ವಿದ್ಯೆ ವಿಷಯ ನೀವು ಕೇಳಿದ ಸಂಗತಿ ಬಹು ನ್ಯಾಯವಾಗಿದೆಯೆಂತ ಅಪ್ಪಣೆ ಕೊಟ್ಟರು. ನಾವು ಕಮಿಷನರ್ ಸಾಹೇಬರ ಜನಾಬಿನಲ್ಲಿ ತುಂಬ ವಂದನೆಯನ್ನು ಅರಿಕೆಮಾಡಿ ಸ್ವಗೃಹಕ್ಕೆ ತೆರಳು ಬಂದೆವು.

ಮುಸಲ್ಮಾನ್ ಸಹೋದರರೇ,

ಸರಕಾರದವರು ನಮಗೆ ವಿದ್ಯೆ ಕಲಿಸಲಿಕ್ಕೆ ತುಂಬ ಕುತೂಹಲದಲ್ಲಿ ಇದ್ದಾರೆ. ನಮ್ಮ ಮಕ್ಕಳಿಗೆ ವಿದ್ಯೆ ಕಲಿಸದೆ ಇರುವದು ನಮ್ಮ ಶುದ್ಧ ತಪ್ಪಾಗಿದೆ. ವಿದ್ಯಾಹೀನ ಪಶುಗೆ ಸಮಾನಯೆಂಬದು ತಮ ಗೆಲ್ಲರಿಗೂ ತಿಳಿದೇ ಇದೆ. ಮೇಲಣ ನಮ್ಮ ವಿದ್ಯಾಭಿವರ್ಧಿ ನೋಡಿದರೆ ಅಂದರೆ ಹಿಂದು ಜನರಲ್ಲಿ 10ಕ್ಕೆ ಒಬ್ಬರು ಸ್ಕೂಲಿಗೆ ಹೋಗುತ್ತಾರೆ, ಮುಸಲ್ಮಾನರಲ್ಲಿ 60 ಜನರಲ್ಲಿ ಒಬ್ಬರು ಸ್ಕೂಲಿಗೆ ಹೋಗುತ್ತಾರೆ. ಇದು ಎಷ್ಟು ನಾಚಿಕೆ ಮತ್ತು ವ್ಯಸನದ ಸಂಗತಿ. ಆದ್ದರಿಂದ ಕೂಡ್ಲೆ ನಮ್ಮ ಮಕ್ಕಳನ್ನ ಕನ್ನಡ ಸ್ಕೂಲಿಗೆ ಸೇರಿಸಿ ಅಲ್ಲಿನ ಹೆಡ್‌ಮಾಸ್ಟರಿಂದ ರಿಪೋರ್ಟುಮಾಡಿಸಿ ನೀವು ಸಹ ಒಂದು ಅರ್ಜಿ ಬರಕೊಡಬೇಕಾಗಿಯೂ ಅಲ್ಲದೆ ನಮ್ಮ ಹಬ್ಬ ಕಳೆದನಂತರ ನಾವು ನಿಮ್ಮ ಮುಕಾಮುಗಳಿಗೆ ಬರುತ್ತೇವೆ, ಆಗ್ಯೆ ನೀವು ಸಹ ಸೇರಿ ಎಲ್ಲಾ ಹುಡುಗರು ಮತ್ತು ಹುಡಿಗಿಯರನ್ನು ಸ್ಕೂಲಿಗೆ ಕಳಿಸಿ ನಿಮ್ಮ ಸಹೋದರರಾದ ನಮ್ಮ ಅರಿಕೆ ಮೇರೆ ನಮ್ಮ ಸಂಗಡ ಸೇರಿ ಮುಸಲ್ಮಾನರ ವಿದ್ಯಾಭಿವೃದ್ಧಿಯಲ್ಲು ತುಂಬಾ ಸಹಾಯ ಮಾಡಬೇಕಾಗಿ ಬಹು ವಿನಯದಿಂದ ಅರಿಕೆ ಮಾಡಿಕೊಳ್ಳುವ.

ಯಂ. ಯಂ. ಸಿದ್ದೀಕ್,
ಅಬ್ದುಲ್ ಗಫೂರ್ ಖಾನ್,
ತಾ 12—4—26 ಮೋಹ್ಮದ್ ಯೂಸುಫ್.

ಕಣಿವೆಹೋಬಳಿಯ ಪಾಳುಗ್ರಾಮಗಳು.

ಅಯ್ಯಾ,

ಕಣಿವೆ ಹೋಬಳಿಯಲ್ಲಿ ಪಾಳುಬಿದ್ದಿರುವ 10—20 ಗ್ರಾಮಗಳನ್ನು ರೂಪಿತಕ್ಕೆ ತರಬೇಕೆಂದು ಗವರ್ನ್‌ಮೆಂಟಿನವರು ರೈತರಿಗೆ ಸ್ವಲ್ಪ ಸಲಹೆಗಳನ್ನು ತೋರಿಸಿರುವ ಸಂಧಿವ ಸ್ವಲ್ಪ ಕಾಣುತ್ತದೆ. ಇಷ್ಟು ತೊಂದರೆಗಳಿಂತ, ಎಂದರೆ ರೈತರಿಗೆ ಸರ್ಕಾರದಿಂದ ಸಾಲ ಮತ್ತು, ಕುಡಿಯುವ ನೀರಿನ ಏರ್ಪಾಡು ಇತ್ಯಾದಿಗಳಿಗಿಂತ ಸರಕಾರದವರೇ ಮುಂಚೆಯೇ, ಹಿರೇಕೆರೆ, ಅಳುವಾರದಕೆರೆ, ದೊಡ್ಡಕೆರೆ ಇವೇರಿಗೆ ತರವೂದ್ ಕೆಲಸ ಮಾಡುವದಲ್ಲಾ ನೀರಾವರಿಯ ಅನುಕೂಲವಿದ ಮಿಟಿಂಗಿನ ಪ್ರೋತ್ಸಾಹವೂ ಇಲ್ಲದೆ ಕಾಲವಾಗಿಯೇ ... ದ ಪಾಳು ಗ್ರಾಮಕ್ಕೆ ಒಕ್ಕಲು ಹೋಗಿ... ಕಾದ ಇನ್ನು ಗಿರುತ್ತಾರೆಂದು ನಾನು ಕೇಳಬಲ್ಲೆನು. ... ರಕಾರದಿಂದ ಯಾವ ಸಾಲ ಇತ್ಯಾದಿ ... ತಿರುವದಿಲ್ಲ. ಕಾಡು ಪ್ರಾಂತಮಧ್ಯದಲ್ಲಿ ... ಯೆಂಬ ಗ್ರಾಮದ ರೈತರು ಊರು ... ಲೆ ಗ್ರಾಮಕ್ಕೆ ಬಂದು ಮನೆಮಾರು ... ಮಾಡುತ್ತಾ ಇದ್ದಾರೆ. ಕೆಲವ... ಲೇ ಪ್ರಯಾಣ ಮಾಡುತ್ತಾರೆ. ... ಯಿಂದ ಪಾಳಿ ಇರುವ ಗ್ರಾಮ... ಶಿರಂಗಾಲ, ತೊರೆನೂರು ಕೂಡ ಜನ... ಚಿಯಿಂದಲೂ, ಕುಡಿಯುವ ನೀರಿನ ಅಭಾ... ಇತ್ತಾರು ವರ್ಷದಲ್ಲಿ ತನೋರೀತಿಯಾಗಿ... ವಿಲ್ಲ. ಮೇಲ್ಕಂಡ ಕೆರೆಗಳ ದುರಸ್ತಿ... ಕೈಕೊಂಡು, ಪಾಳು ಗ್ರಾಮಗಳು ... ಯೂ ಪಾಳಿ ಇರುವ ಗ್ರಾಮಗಳು ಅಭಿ... ದಂತೆಯೂ ಸರಕಾರದವರು ಶೀಘ್ರ ಏರ್ಪಾ... ದು ಹಾರೈಸುತ್ತೇನೆ.

ಮನೋಲ್ಲಾಸಿನಿ ತೈಲ.

ತಲೆನೋವು ತಲೆ ತಿರುಗುವುದು, ತಲೆಯಲ್ಲಿ ಹೊಟ್ಟು, ಕಿವಿಯಿಂದ ಕೀವು ಸೋರುವುದು ಕಿವುಡುತನ, ಕಣ್ಣು ನೋವು, ಅಪಸ್ಮಾರ ನಿದ್ದೆ ಬಾರದಿರುವುದು, ನೆನಪು ಶಕ್ತಿ ಕುಂದಿಹೋಗುವುದು ಇವುಗಳನ್ನೆಲ್ಲ ಖಂಡಿತ ಗುಣಮಾಡುತ್ತದೆ. ಉದುರುವ ಕೂದಲನ್ನು ನಿಲ್ಲಿಸಿ ಗಿಡ್ಡಗಿರುವ ಕೂದಲನ್ನು ಬೆಳೆಯಿಸಿ ಕೂದಲಿಗೆ ಸೌಂದರ್ಯವನ್ನು ಹೊಳಪನ್ನು ಕೊಟ್ಟು ಅಕಾಲಕ್ಕೆ ಹಣ್ಣಾಗುವ ಕೂದಲನ್ನು ತಡೆದು ಕೂದಲು ಇಲ್ಲದ ಸ್ಥಳದಲ್ಲಿ ಹೊಸ ಕೂದಲನ್ನು ಹುಟ್ಟಿಸುತ್ತದೆ. ಬೆಲೆ ಸೀಸೆಗೆ ರೂ 1, 3 ಸೀಸೆಗೆ 2—10—0 ಒಂದು ದೊಡ್ಡ ಸೀಸೆಗೆ ರೂ 2, 3 ಸೀಸೆಗಳಿಗೆ 5—8—0

ಚಂದನಾಸವ — ಇದು ಪ್ರಮೇಹ ಮೂತ್ರಕೃಚ್ಛ್ರ, ಮೂತ್ರ ಹನಿಹನಿಯಾಗಿ ಹೋಗುವುದು, ಮೂತ್ರಕೋಶದ ಉರಿ, ಮೂತ್ರಪಿಂಡಗಳ ಉರಿ ಮೂತ್ರನಾಳದಲ್ಲಿ ಹುಣ್ಣು, ಮೂತ್ರ ಹೊಯ್ಯುವಾಗ ಉರಿಯುವುದು ಮೂತ್ರನಾಳದಿಂದ ಕೀವು ಬರುವುದು, ಮೂತ್ರದಲ್ಲಿ ಧಾತು ಹಾದಿ ಹೋಗುವುದು, ಆಗಾಗ್ಗೆ ಮೂತ್ರ ಬರುವದು, ಮೂತ್ರ ಕಡೆಯಲಿಕ್ಕೆ ಸಾಮರ್ಥ್ಯವಿಲ್ಲದಿರುವುದು, ದೇಹದಲ್ಲಿ ಉರಿ ಬಾಯಾರಿಕೆ, ಸ್ವಪ್ನಾವಸ್ಥೆ, ಮೂತ್ರನಾಳದಲ್ಲಿ ಚುಚ್ಚುವ ನೋವು ಇವುಗಳಿಗೆ ಪರಮ ಔಷಧಿ. ಗಂಡಸರಿಗೂ ಹೆಂಗಸರಿಗೂ ಇದು ಅತ್ಯುತ್ತಮ. ಬೆಲೆ—ಬಾಟ್ಲು 1, 3, 6ಕ್ಕೆ ರೂ 1—4—0 3—8—0, 6—12—0

ರೋಮನಾಶಿನಿ — ಈ ಪುಡಿಯನ್ನು ನೀರಲ್ಲಿ ಕಲಸಿ ಮೈಯಲ್ಲಿ ರೋಮವಿರುವ ಭಾಗಕ್ಕೆ ಹಚ್ಚಲು ರೋಮವು ಉದುರಿ ಬೀಳುವುದು. ಡಬ್ಬಿ 1ಕ್ಕೆ 6 ಆಣೆ, 3 ಡಬ್ಬಿಗಳಿಗೆ ರೂ 1 1 ಡಜನಿಗೆ 3 8 0

ಅಮೃತಾರಿಷ್ಟ.— ಇದು ...ನು ವಿಕಸದಿರುವ ಉತ್ತಮವಾದ ಔಷಧಿ. ಎಲ್ಲಾ ತರದ ಜ್ವರಕ್ಕೆ ಉತ್ತಮ. ಬೆಲೆ — ಬಾಟ್ಲು 1, 3ಕ್ಕೆ ರೂ 1—4— 3—8— 6 1 —

ಲೋಹಾಸವ — ಇದು ರಕ್ತದಲ್ಲಿ ಮತ್ತು ಮಲಬದ್ಧದಿಂದುಂಟಾದ ಅಶಕ್ತತೆಗೆ ದಿವ್ಯವಾದ್ದು. ಬೆಲೆ—ಬಾಟ್ಲು 1, 3 ಕ್ಕೆ ರೂ 1—4—0 3 8—0 6 —

ನಮ್ಮ ಕೆಟಲಾಗು ಕೇಳಿ...

ವಿಳಾಸ—ಮನೋಲ್ಲಾಸಿನಿ ಕಂಪನಿ,
52—17 9 ಮಂಗಳೂರು, ಕಂಕನಾಡಿ.

ಆರೋಗ್ಯ ಚಂದ್ರಿಕೆ.

ಮದ್ರಾಸ್

ಸಂಪಾದಕರು ಡಾಕ್ಟರ್ ಯು ರಾಮರಾವ್,
ಯಮ್. ಎಲ್ ಸಿ ಯವರು

ಆರೋಗ್ಯ ಚಂದ್ರಿಕೆಯು ಆರೋಗ್ಯ ಮತ್ತು ಚಿಕಿತ್ಸಾ ವಿಷಯದಲ್ಲಿ ಸಾಧಾರಣ ಪ್ರಜಾವರ್ಗಕ್ಕೆ ತಿಳುವಳಿಕೆ ದೊರೆಯುವದಕ್ಕಾಗಿ ಪ್ರಕಟಿಸುವ ಒಂದು ಸಚಿತ್ರ ಮಾಸಪತ್ರಿಕೆ. ಈ ಮಾಸಪತ್ರಿಕೆಯು ಹೆಲ್ತ್ ಎಂಬ ಇಂಗ್ಲಿಷ್ ಮಾಸಪತ್ರಿಕೆಯ ಕನ್ನಡ ಪ್ರತಿಯಾಗಿದೆ. ಆರೋಗ್ಯ ಚಂದ್ರಿಕೆಯಲ್ಲಿ ಪ್ರಸಿದ್ಧರಾದ ಡಾಕ್ಟರುಗಳ ಮತ್ತು ಆಯುರ್ವೇದ ಪಂಡಿತರ ಲೇಖನಗಳು ಆಗಿಂದಾಗ್ಗೆ ಪ್ರಕಟವಾಗುವುದು.

ಆರೋಗ್ಯ ಚಂದ್ರಿಕೆಯಲ್ಲಿರುವ ಲೇಖನಗಳು ಹಳೆಯದಾಗದೆ ಪುನಃ ಪುನಃ ಓದಲು ಅರ್ಹವಾದವುಗಳಾಗಿರುವುವು. ಆರೋಗ್ಯ ಚಂದ್ರಿಕೆಯನ್ನು ತಿಸಿ ಬೈಂಡ್ ಮಾಡಿಸಿ ಇಟ್ಟುಕೊಂಡರೆ ಎಲ್ಲರಿಗೂ ಉಪಯುಕ್ತವಾಗುವ ಅಮೂಲ್ಯವಾದ ಗ್ರಂಥವಾಗುವುದು. ಅಂಚೆಯ ವೆಚ್ಚ ಸೇರಿ ಈ ಪತ್ರಿಕೆಯ ಚಂದಾ ಮುಂಗಡ ವರ್ಷಕ್ಕೆ 1-8-0 ಬಿಡಿ ಪತ್ರಿಕೆ 1ಕ್ಕೆ ? 2-0 ಹಿಂದಿನ ಸಂಚಿಕೆಗಳು ಕೂಡಾ ದೊರೆಯುವವು.

ಪತ್ರವ್ಯವಹಾರ ಆರೋಗ್ಯ ಚಂದ್ರಿಕಾ 323,

Apply for our shooting Season's Clearance Sale Catalogue of Brand New Goods

10 to 25 percent Reductions in Prices

No License Required No Licenser Required

Webley and Scott Air Pistol, cal 177 or 22 bore Powerful and Accurate complete with a sample box of slugs two spare washers a brush for cleaning and a bookletof instruction Rs 30 — Free delivery

Pwerful German Diana Air gun Handsome and Accurate, takes B S A Patern No 1 Slugs and Darts expressly recommendable for Target Practice Rs 15, Free delivery

Brilliant Search Light Lamp for Night Sports Rs 50/— Free delivery

No License required to purchase or to possess the above items.

Reliable D B B L 12 bore guns	Rs	60/— and upwards	
Do S.B B L 12	do	do 40/—	do
D B M L Guns		„ 45 -	do
S.B M L do		„ 30/—	do
S B B L Rifles		„ 25/—	do
B L Revolvers and Pistols		, 30/—	do

Arms, Ammunition and shooting requisites of almost every kind andquality offered at exceptionally favourable rates ANumber of good quality second hand weapons also offered for sale in theNew Catalogue

GOOLAMHUSIAIN ALLIBHOY & SONS

Largest Importers of Firearms and Ammunition,

Cheapest priced firm in India,

24 12 210 Abdul Rehman Street, BOMBAY.

MY SCIENTIFIC SYSTEM OF GRADUATED PHYSICAL CULTURE.

SENT FREE TO EVERY ONE.

This will show you some of my remarkable achievements in health building exercises many pages with nice photographs of myself and a number of my pupils Read what they say about my system Don't take my word for it This book will be an impetus and inspiration to every young man All I ask is the price of postage two annas Remember this does not pobligate you in any way so don't delay one minute This may be the turning point in your life Write for this big book now while it is on your mind

Prof I V KRISHNA RAO
P O Basavanagudi
Bangalore City (S I.)

ಕೆ. ಸಿ. ಅಪ್ಪಚ್ಚು.

ದಂತ ವೈದ್ಯರು.

ಇವರು ತಾರೀಖು ... ರಂದು ... ಯಲ್ಲಿ ಉಳಕೊಳ್ಳುವರು ... ಅವರನ್ನು ಅಲ್ಲಿ ಹೋಗಿ ನೋಡಬಹುದು ... ಸಮಯದಲ್ಲಿ ... ಗೆ ಚಾರ್ಜ್ ಇಲ್ಲದೆ ನೋಡುವರು. 24

ಬೇಕಾಗಿದೆ.

ಬೀಟಿ ಮರದ ದಿಮ್ಮಿಗಳು ಬೇಕಾಗಿದೆ

ಒಳ್ಳೇ ಬೆಲೆ ಕೊಡಲಾಗುವುದು. ಹೆಚ್ಚಿನ ಸಂಗತಿಗಳಿಗೆ ಈ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳುವುದು

WANTED

Rose wood logs (Beeti)

Good price offored.

For further particulars please apply to —

R FRAMJEE
12 4 Mercara

೧೦೦೦ ರೂಪಾಯಿಗಳ ಬಹುಮಾನ.

ಲೋಕಪ್ರಸಿದ್ಧವಾದ ಸಾಲಂಮಿಸ್ರಿ ಮುರಬ್ಬಾ.

ನಮ್ಮ ಟ್ರೇಡ್ ಮಾರ್ಕನ್ನು ನೋಡಿ ಈ ಔಷಧ ತೆಗೆದುಕೊಳ್ಳಿರಿ.

ಇದರ ಸೇವನೆಯಿಂದ ವೀರ್ಯವು ನೀರಿನಂತೆ ಇದ್ದರೂ ಸ್ವಪ್ನದಲ್ಲಿ ... ಸ್ತ್ರೀ ಸಂಪರ್ಕ್ಕೆ ಮೊದಲೇ ಸ್ಖಲನವಾದರೂ, ಮೂತ್ರದೊಂದಿಗೆ ಹೋಗುತ್ತಿದ್ದರೂ ದೋಷರಹಿತವಾಗಿ ಶರೀರಕ್ಕೆ ಆರೋಗ್ಯವನ್ನೂ ದಾರ್ಢ್ಯತೆಯನ್ನೂ ಆಯಸ್ಸು ... ಉಂಟು ಮಾಡುವದು. ಅಜೀರ್ಣ ಮಲಬದ್ಧತೆ ... ನ್ಯಾಯಕ ... ನೋವುಗಳಿಗೆ ಇದು ದಿವ್ಯ ಔಷಧ. ಈ ಸಾಲಂಮಿಸ್ರಿ ... ಪ್ರಾಂತ್ಯದಲ್ಲಿ ಬೆಳೆಯುತ್ತದೆ

ಈ ... ಗುಣಹೊಂದಿರುವ ಅನೇಕ ಮಹನೀಯರು ತಾವಾಗಿಯೇ ಅನೇಕ ... ಆಫ್ರೀಕ, ಬರ್ಮ ಪಿನಾಂಗ್ ಸಿಂಗಪೂರ್, ಸಿಲೋನ್, ಬೊಂಬಾಯಿ ಕಲ್ಕತ್ತ ಮದ್ರಾಸು ಮತ್ತು ಇಂಡಿಯಾದೇಶದಲ್ಲಿ ಎಲ್ಲಾ ಸ್ಥಳಗಳಿಂದಲೂ ನಮಗೆ ಯೋಗ್ಯತಾ ಪತ್ರಿಕೆಗಳನ್ನು ಕಳುಹಿಸಿರುವರು. ಇವುಗಳ ನಕಲನ್ನು ಯಾರಾದರೂ ತರಿಸಿ ನೋಡಬಹುದು. ಇವುಗಳು ಸುಳ್ಳು ಎಂದು ಸಿದ್ಧಪಡಿಸುವವರಿಗೆ ಮೇಲೆ ಕಂಡ ಬಹುಮಾನವು ಕೊಡಲ್ಪಡುತ್ತೆ. ನಾವು ಹಾಗೆ ಕೊಡದೇ ನಿರಾಕರಿಸಿದಲ್ಲಿ ಕೋರ್ಟ ಮೂಲಕ ಅದನ್ನು ಪಡೆಯಬಹುದು. ... ಡಬ್ಬಿಯನ್ನು ಬಹು ಗುಪ್ತವಾಗಿ ... ಕಳುಹಿಸುವ ... ಗೆ ನಾವು ಖಂಡಿತವಾಗಿ ತೋರಬಹುದು ... ಡಬ್ಬಿಗಳು ... ಪೂರ್ಣ ರಾಹಸ್ಯಗಳೂ ... ಮಾಡುವವು. ಹೆಸರು ವಿಳಾಸಗಳನ್ನು ವಿವರವಾಗಿ ಬರೆಯಬೇಕು. ಒಂದಾವರ್ತಿ ಅಜಮಾಯಿಷಿ ನೋಡಿದಲ್ಲಿ ಖಾತ್ರಿ ಉಂಟಾಗುತ್ತೆ.

... ಗಳು ... ರೂ. ೨—೦—೦ ಛಾಂಗಿ ಚಾರ್ಜು ೧ರಿಂದ ೩ ಡಬ್ಬಿಗಳಿಗೆ ೦—೮—೦ ಆಣೆ ಏಜಂಟರುಗಳು ... ಯಲ್ಲಿ ಅವಶ್ಯಕವಾಗಿರುತ್ತೆ. ... ಕಾಲದಲ್ಲಿ ಈ ... ಹೆಸರನ್ನು ಬರೆಯಬೇಕು

T Reg. ಟೆಲಿಗ್ರಾಫ್ ಅಡ್ರೆಸ್, ಮಿಸ್ರಿ ಬೆಂಗಳೂರು ಸಿಟಿ, }
ಡಿ. ಪನ್ನಾಲಾಲ್, ಡಿಲ್ಲಿ ನೇಟಿವ್ ವೈದ್ಯರು,
ಸಾಲಂಮಿಸ್ರಿ ಮುರಬ್ಬ ಡಿಪ್ಪೋ,
ಬೆಂಗಳೂರು ...

52—17,

ಎಂಪಾಯರ್ ಆಫ್ ಇಂಡಿಯಾ ಲೈಫ್ ಅಶ್ಯೂರೆನ್ಸ್ ಕಂಪೆನಿ ಲಿಮಿಟೆಡ್.

(ಸ್ಥಾಪಿತ 1897)

ಮೂಲಧನ ರೂ 2,50,00,000 ಕ್ಕೆ ಮಿಕ್ಕಿದೆ

ವಿಮೆ ದರಗಳು ಅತ್ಯಂತ ಕಡಿಮೆ. ಉದಾರತ್ವದ ಲಾಭ ಮತ್ತು ಪೂರ್ಣ ಭದ್ರತೆ

ಉದಾಹರಣೆ —ಹೊಸದಾಗಿ ... ಇಪ್ಪತ್ತನೆ ವಯಸ್ಸಿನಲ್ಲಿ ತನ್ನ ಮರಣಾನಂತರ ... ದೊರಕುವ 1000ರೂಪಾಯಿಯ ಪಾಲಿಸಿಯನ್ನು ... ಪಾಲಿಸಿಗಾಗಿ ರೂ 48—10—0 ಏಳೆಯ ಮೇಲೆ 20ವರುಷಗಳಾಂತ್ಯದಲ್ಲಿ ... ಪಾಲಿಸಿಯನ್ನು ... ರೂ 500ರಿಂದ ಮೇಲೆ ... ವನ್ನು ... ಕಂತುಗಳನ್ನು ...

ಸೂಚನೆ ಪತ್ರವು ಮತ್ತು ದಾಖಲಾತಿ ಫಾರಂಗಳು ಈ ಕೆಳಗಿನ ವಿಳಾಸದಲ್ಲಿ ದೊರೆಯುತ್ತವೆ —

... ಶಾಂಗಪ್ಪ, ಬ್ರಾಂಚ್ ಸೆಕ್ರೆಟರಿ,
ಸ್ಪೆಷಲ್ ಏಜಂಟ್, 152/3 ಕಮರ್ಷಿಯಲ್ ಸ್ಟ್ರೀಟ್,
... ಎಸ್ಟೇಟ್, ಅಥವಾ ಬೆಂಗಳೂರು
ಸಿದ್ದಾಪುರ, ದಕ್ಷಿಣಕೊಡಗು
24-10

ಸತ್ಯಮೇವಜಯತೇ.

(ಗುಣವಾಗದಿದ್ದರೆ ಹಣ ಹರತ.)

ಧಾತುಪೌಷ್ಟಿಕ ಕಾಮೋತ್ತೇಜಕ, ಇಂದ್ರಿಯಸ್ತಂಭಕವಾದ

ಮದನೋದ್ಭವ ಗುಳಿಗೆ.

ಜನನೇಂದ್ರಿಯದ ಶಿಥಿಲತೆ ನಪುಂಸಕತ್ವ ಇ ... ಅತಿ ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತು ಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋಲ್ಲಾಸಕ ಇಂದ್ರಿಯಸ್ತಂಭಕ, ಗರ್ಮಿ, (ಟಾಕಿ) ಗುಪ್ತಪ್ರದೇಶದ ಮೇಲೆ ಹುಟ್ಟುವ ಎಲ್ಲಾ ತರಹದ ಬಕ್ಕೆಗಳು, ಹುಣ್ಣುಗಳು ಪಿತ್ತದ ಭಾಧೆಗಳು, ಕಟಿಶೂಲೆ ವಾತರೋಗವು ಮುಂತಾದವು ಅತಿತ್ವರ್‍ಯ ಗುಣವಾಗಿ ಶರೀರಕ್ಕೆ ನಿರೋಗತ್ವವೂ ಕಾಂತಿಯೂ ರತಿಸುಖಕ್ಕೆ ಸಂಪೂರ್ಣ ಶಕ್ತಿಯೂ ಉಂಟಾಗುತ್ತದೆ ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗುತ್ತವೆ. ಕಿಮ್ಮತ್ತು ೬೦ ಗುಳಿಗೆಗಳಿಗೆ ೪ ರೂಪಾಯಿ ಇದನ್ನು ಸೇವಿಸುವಾಗ್ಗೆ **ನಪುಂಸಕತ್ವಾರಿ ತೈಲವನ್ನು** ಉಪಯೋಗಿಸಿದರೆ ಉತ್ತಮ. ಕಿಮ್ಮತ್ತು ಬಾಟ್ಲಿಗೆ ರೂ. ೩–೧೨–೦

ಪ್ರಮೇಹನಿವಾರಣಿ—ಇದರ ಸೇವನೆಯಿಂದ ಮೂತ್ರಸ್ಥಾನದಿಂದ ಕೆಂಪು, ಹಳದಿಯಂತೆ ಹೋಗತಕ್ಕ ಕೀವು, ಉರಿ, ಪಸ್ಮೆ ಆಗದಿಷಾತ್ರಿಯಿಂದ ಗುಣವಾಗುವದು ಕಿಮ್ಮತ್ತು ಬಾಟ್ಲಿಗೆ ರೂ ೩–೮–೦. ಟಿ ಪಿ. ಬೇರೆ ಅನುಪಾನಪತ್ರಿಕೆ ಔಷಧ ಸಂಗಡ

ವಂದಾಣ ಸ್ಟಾಂಪು ಕಳುಹಿಸಿದರೆ ಕ್ಯಾಟಲಾಗ ...

ವಿಳಾಸ,—

ವೈದ್ಯ ಜಿ. ಎಲ್. ಜೋಶಿ ಮತು ಕಂಪೆನಿ.

13. ನಂ 6. ಪೋಸ್ಟ ಒಸವಾಸ, ಉತ್ತರ ಕಾನಡಾ.

ಒಂದು ಪ್ರಬಲವಾದ ಪ್ರಶ್ನೆ.

ನಮ್ಮ ಜೀವವನ್ನು ಏತಕ್ಕಾಗಿ ವಿಮೆಮಾಡಬೇಕು!

ವೃದ್ಧಾಪ್ಯದಲ್ಲಿ ನಮ್ಮ ಮತ್ತು ಸಂತತಿ ಮಕ್ಕಳ ಪೋಷಣೆಗಾಗಿ!

ಈಗಾಗಲೇ ಸಾವಿರಾರು ಜನರು ವಿಮೆಮಾಡಿರುವ ಏಳುಕೋಟಿ ರೂಪಾಯಿಗಿಂತ ಹೆಚ್ಚು ಬಂಡವಾಳವಿರುವ ದೇಶೀಯ ವಿಮೆಕಂಪೆನಿಯಲ್ಲಿ ಅತ್ಯಂತ ದೊಡ್ಡದಾದ ಸಾವಿರ ರೂಪಾಯಿ ವಿಮೆಮಾಡಿದವರಿಗೆ ವರ್ಷಕ್ಕೆ 18ರೂ ಕಡಿಮೆಯಿಲ್ಲದೆ ಲಾಭ ಕೊಡುವ 'ಓರಿಯಂಟಲ್' ಗವರ್ನಮೆಂಟ್ ಜೀವವಿಮೆ ಕಂಪೆನಿಯ ರೂಲ್ಸುಗಳು, ಕರತಿಗೂ ಈ ಕೆಳಗಿನವರಿಗೆ ಬರೆದು ತಿಳಿದುಕೊಳ್ಳಿ

ಖಾದಿಬಟ್ಟೆ ಎಂದರೇನು?

ದೇಶೀಯ ಹತ್ತಿಯಲ್ಲಿ ಕೈರಾಟೆಯಿಂದ ನೂಲು ತೆಗೆದು ಇಲ್ಲಿಯೇ ತಯಾರಿಸುವ ಬಟ್ಟೆಯೇ 'ಖಾದಿ.' ಈಗಾಗಲೇ ನಮ್ಮ ಸ್ಟೋರಿನಲ್ಲಿ ಪರದೇಶೀ ಬಟ್ಟೆಗಿಂತ ಗಟ್ಟಿಯಲ್ಲಿಯೂ ಅಂದದಲ್ಲಿಯೂ ಕಡಿಮೆ ಇಲ್ಲದಂತೆ, ಎಲ್ಲಾ ತರದ ಸೀರೆಗಳು, ಜೆಕ್ಕುಗಳು, ಶಾಲು, ಪಸ್ಮೆ ಎಲ್ಲಾ ತರದ ಬಟ್ಟೆಯು ತಯಾರಾಗಿದೆ. ದಯವಿಟ್ಟು ಪ್ರೋತ್ಸಾಹಿಸಿರಿ! ಖಾದಿಯಿಂದಲೇ ಸ್ವರಾಜ್ಯ. ಖಾದಿಯಿಂದಲೇ ಮೋಕ್ಷ ... ಮರೆಯ ಬೇಡಿರಿ.

ವೀರಾಜಪೇಟೆ, ದಕ್ಷಿಣ ಕೊಡಗು. — ಕ. ಪಿ. ಚಿನ್ನಪ್ಪ, ಪ್ರೊಪ್ರೈಟರ್, ಖಾದಿಭಂಡಾರ.

52—3.

ಕಿರ್ಲೋಸ್ಕರ ಪೇಟೆಂಟ ನಾಂಗರ ... ಕುಸ್ತಲಿ.



ಈ ತರ್ಪಲಿಯು ನಮ್ಮ ಕಾರ್ಖಾನೆಯಲ್ಲಿಯೇ ತಯಾರಾಗುತ್ತದೆ. ಸರಕಾರದಿಂದ ಇದಕ್ಕೆ ಪೇಟಂಟ ದೊರಕಿರುತ್ತದೆ. ಇದರ ಮುಖ್ಯ ಗುಣಗಳು·

೧. ನೀರನ್ನು ಮುಟ್ಟಿದ ಕೂಡಲೇ ತುಂಬಿ ಬರುವದು.

೨. ಮೇಲಕ್ಕೆ ಬರುವಾಗ್ಗೆ ಒಂದು ಹನಿ ಸಹ ನೀರು ಸೋರುವದಿಲ್ಲ.

೩. ದೋಣಿಯಲ್ಲಿ ನೀರು ಬೀಳುವಾಗ್ಗೆ ತೊಗಲಿನ ತಪ್ಪಲಿಯಂತೆ ಎತ್ತನೂ ಹೋಗ ನದಿಲ್ಲ.

ಬೆಲೆಯು ಅಗ್ಗ· ಹೆಚ್ಚಿನ ಸಂಗತಿ ಬಗ್ಗೆ ಬರೆದು ತಿಳಿದುಕೊಳ್ಳಿರಿ.

ಕಿರ್ಲೋಸ್ಕರ ಬಂಧು, ಲಿಮಿಟೆಡ್.

ಕಿರ್ಲೋಸ್ಕರವಾಡಿ,

16—9 ಜಿ. ಸಾತಾರ್.

ಲೋಕಪ್ರಸಿದ್ಧವಾದ! ಅನುಭವಸಿದ್ಧವಾದ!

ಮೂರುದಿವಸಗಳಲ್ಲಿ ಗುಣಸಿಕ್ಕದಿದ್ದರೆ ಔಷಧಿಯ ಕ್ರಯ ವಾಪಾಸು. ಜೀರ್ಣಶಕ್ತಿ, ರಕ್ತವೃದ್ಧಿ, ಧಾತುಪುಷ್ಟಿ, ಮನೋಲ್ಲಾಸ, ಪರಮಾನಂದ ಮೊದಲಾದ ಸುಖ ಜೀವನಕ್ಕೆ ಬೇಕಾದ ಆರೋಗ್ಯದಾಯಿನಿ.

ಟ್ರೇಡಮಾರ್ಕ], **ಅಗಸ್ತ್ಯ** [ನೋಡಿ ತೆಕ್ಕೊಳ್ಳಿರಿ

ಮನ್ಮಥ ಚಿಂತಾಮಣಿ ಲೇಹ

ರಿಜಿಸ್ಟರ್ ಆದದ್ದು.

ಆಬಾಲವೃದ್ಧ ಸ್ತ್ರೀ-ಪುರುಷರ ಅನೇಕ ರೋಗಗಳ ಮೇಲೆ ಗುಣ ಕಾರಿಯಾದದ್ದು. ಮೇಹ ವಿಕಾರಪಿದ್ದವರಿಗೂ, ನಿದ್ರೆ ಇಲ್ಲದವರಿಗೂ, ಸ್ವಪ್ನೇಂದ್ರಿಯವಾಗುವ ಬಾಲಕರಿಗೂ, ಚಳ್ಳಿನಿ ಮುಟ್ಟಾನಿಗಳಿಗೂ ಉಪಯೋಗವುಳ್ಳ ಬಹುಪರಮಾನಂದ ಔಷಧಿ. 1ಸೇರು 48ದಿವಸ ಸೇವಿಸಬಹುದು. ನಂ. (1) 1ಸೇರು ಡಬ್ಬಿ 1ಕ್ಕೆ ರುಪಾಯಿ 3—0—0. ½ಸೇರು ಡಬ್ಬಿ 1ಕ್ಕೆ ರುಪಾಯಿ 1—9—. ನಂ. (2) 1ಸೇರು ಡಬ್ಬಿ 1ಕ್ಕೆ ರುಪಾಯಿ 2—0—0, ½ ಸೇರು ಡಬ್ಬಿ 1ಕ್ಕೆ 1—1—0, ವಿ ಪಿ. ಖರ್ಚು ಪ್ರತ್ಯೇಕ. ವಿಶೇಷ ಮಾಹಿತಿಗೆ ಬರಕೊಳ್ಳಿರಿ·

ವಿಳಾಸ.—ದೇವಣ್ಣ ನಾರಾಯಣಸೇಟ್,
ಗೋಳಿಕಟ್ಟಾ,
ಮಂಗಳೂರು,
ದ. ಕ.

52—33

ಜ್ವರಗಳ ಮೇಲೆ ಅಮೂಲ್ಯ ಔಷಧವು.

ಕರ್ಣಾಟಕ

ವೈಭವ ... ವಸ್ತ್ರ ...

ಟಾನಿಕ್ ಸಿರಪ್.

(ಶಕ್ತಿವರ್ಧಕ ಸರಬತ್ತು.)

ಥಂಡಿಜ್ವರ, ಮಲೇರಿಯ ಮೊದಲಾದ ಜ್ವರಗಳು ಬಿಟ್ಟನಂತರ ಬರುವ ಅಶಕ್ತತೆ, ಸಣ್ಣಜ್ವರವು ಬರುತ್ತಿರುವುದು ಮೊದಲಾದವುಗಳ ಮೇಲೆ ಇದು ಒಂದು ಅಮೂಲ್ಯ ಔಷಧವಾಗಿರುತ್ತದೆ.

ನಮ್ಮ ಎಗ್ಯುಮುಕೋತ್ತಲನ್ನು ಸೇರಿಸಿ ಗುಣವನ್ನು ಹೊಂದಿದ ಪ್ರತಿಯೊಬ್ಬನು ಇದರ ಬರಿಯ ಬಾಟ್ಲಿಯನ್ನಾದರೂ ಅಗತ್ಯವಾಗಿ ಸೇವಿಸಬೇಕು ... ಅವನಿಗೆ ಜ್ವರದನಂತರ ಬರುವ ಅಶಕ್ತತೆಯ ... ಇಲ್ಲ.

ಬೆಲೆ ೧ ರೂಪಾಯಿ ಟಪಾಲು ವೆಚ್ಚ ಬೇರೆ.

12—12 ಕರ್ಣಾಟಕ ಬ್ರದರ್ಸ
ಗಿರಗಾಂವ, **ಮುಂಬಾಯಿ.**

ಡಾಕ್ಟರ್ ಎಸ್. ಎನ್. ಅಯ್ಯಂಗಾರ್, ಬಿ. ಎ.,

ಎಲ್ ಆರ್ ಸಿ. ಪಿ. ಅಂಡ್. ಎಸ್. (ಎಡಿನ್‌ಬರ್ಗ)

ಎಲ್. ಎಫ್. ಪಿ. ಅಂಡ್ ಎಸ್., [ಗ್ಲಾಸ್‌ಗೊ.]

ದಂತ ವೈದ್ಯರು

ಮಡಿಕೇರಿ ಮಹದೇವ ಪೇಟೆಯಲ್ಲಿ ನಂ ಯಂ. ಯಂ ಸಿದ್ದೀಕ್ ರವರ ಅಂಗಡಿ ... ಮನೆಯಲ್ಲಿ ಇಳಿದುಕೊಂಡಿರುತ್ತಾರೆ. ಇವರು ... ಸೋಮವಾರಪೇಟೆಗೆ ಹೋಗುವುದಕ್ಕೆ ಮೊದಲು ... ದಿಂದ ಕೆಲವು ದಿನ ಮಡಿಕೇರಿಯಲ್ಲಿ ಇಳಿದುಕೊಳ್ಳುವದರಿಂದ ಅವರನ್ನು ಅಲ್ಲಿ ಬೇಗನೆ ಭೇಟಿಮಾಡಿಕೊಳ್ಳುವುದು ಉತ್ತಮ.

ದಂತ ಸಂಜೀವಿನಿ.

ಯಾವ ತರದ ಹಲ್ಲುನೋವನ್ನಾದರೂ ಫಕ್ಕನೆ ಶಮನ ಮಾಡುವ ಶಕ್ತಿಯುಳ್ಳ ಈ ದಂತ ಸಂಜೀವಿನಿ ಕುಪ್ಪಿ ಒಂದಕ್ಕೆ ಕ್ರಯ ರೂ 1—0—0 ಮಾತ್ರ.

ಎಸ್ ರಾಮಣ್ಣ,
C o ಡಾಕ್ಟರ್ ಎಸ್. ಎನ್. ಅಯ್ಯಂಗಾರ್.
48-15 ಮಹದೇವಪೇಟೆ, ಮಡಿಕೇರಿ.

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್, ಕೊ ಆಪರೇಟಿವ್ ಸೊಸೈಟೀಸ್ ಆಕ್ಟಿನ ಪ್ರಕಾರ ರಿಜಿಸ್ಟರಾಗಿದೆ.

		ರೂ.
ಶೇರ್ ಬಂಡವಾಳ	—	50,000
ವಸೂಲಾದ ಶೇರ್ ಮೊಬಲಗು	—	3890
ಜಮಾಟಿಂದ ಠೇವಣಾತಿ	—	90,600

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲಕೊಡತಕ್ಕದ್ದು.

ಒಂದು ವರ್ಷ ವಾಯಿದೆ ಅಥವ ಹೆಚ್ಚಿನ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ ರೂ. 6–4–0ರ ದರದಲ್ಲಿ ಬಡ್ಡಿ ದೊರೆಯುತ್ತೆ. ಕಡಿಮೆ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ ೫ರ ಬಡ್ಡಿ ದೊರೆಯುತ್ತೆ.

ವರ್ಷಕ್ಕೊಂದಾವರ್ತಿ ಕೊ ಆಪರೇಟಿವ್ ರಿಜಿಸ್ಟ್ರಾರವರು ಲೆಕ್ಕ ಆಡಿಟ್ ಮಾಡುತ್ತಾರೆ.

ಪ್ರೆಸಿಡೆಂಟರು, ಕೊಡಂದೆರ ಕುಟ್ಟಯ್ಯನವರು, ರಾಯ್ ಬಹದ್ದೂರ್.

ಟ್ರೆಜರರ್, ಯಂ. ಭುಜಂಗರಾಯರು ಬಿ.ಎ, ಬಿ.ಎಲ್.

ಸೆಕ್ರೆಟರಿ.

ಸಿ. ಯನ್. ವೆಂಕಪ್ಪಯ್ಯನವರು, ದ ...

ತಾರೀಕು 29—3—1925.

A Lot for SELECTION of Single Barrel Breach Loadig Guns at LOWEST PRICE EVER OFFERED.

Original BrowningS.B.B.L. .12 bore Take Down Hammerless Antomatic Ejector Gun with safety catch .... Price, Rs. 140/-

Do do but by **Winchester or Remington** .... Price, Rs. 160/-

Winchester or Remigton S. B. B. L. 12 boreSix Shots Hammerless Repeating gun, 32 inches barrel with Safety catch .... Price, Rs. 150/-

German S. B. B. L. .12 bore Hammerless Ejector Gun, 32 inches German Steel Barrel with safety catch .... Price, Rs. 65/-

Continental Make Do. .... Price, Rs. 55/-

Webley & Scott's S. B. B. L. .12 bore Semi Hammerless Ejector Gun, 32 inches Webley's Steel Barrel, ... Price, Rs. 75/-

The above Guns can be had in .1, 20, & 410 bore Same as above in 12 bore **Special "Duck Gun"** 36 inches barrel .... Price, Rs. 80/

W. W. Greener's "Gaffer" S. B. B. L. 12 bore Martini Action Ejector Gun, 26 inches Greener's Steel Barrel ....Price, Rs. 75/-

W. W. Greener's as above but **Long Range Duck Gun** " with 32 inches barrel, and chamber for 2¾ inches to 3 inches case .... Price, Rs. 90/-

Midland's "Knock-About" S. B. B. L. Ejector Hammer Gun 32 inches barrel. ....Price, Rs. 55/-

Continental Make S. B. B. L. folding Pattern Hammer Gun 32 inches barrel beautifully engraved and carved .... Price, Rs. 45/

J. Steven's 12 bore Ejector Hammer Gun, 32 inches Steel barrel .... Price, Rs. 45./

Do do. ' Dread Naught " with heavy Breech Price/-Rs/50,

Any of the above of J. Steven's **Special Duck Gun** with 36 inches barrel. Price, Rs. 5 Extra.

ENQUIRIES SOCLIITED.

THE BOMBAY ARMOURY,

331, ABDUL REHMAN STREET,

BOMBAY. 3

24-23

ARMS & AMMUNIT... MART.

Mahomedally-... orbhoy

321 Abdul Rehman ...
Crawford Marke ... St, near
Telegraphic Ad ... "BR" ... bay.

[52—33] ... nett

Pr ... Ar ... odanda ... rd of ... mercara

Reg. N. M. 1550.
If not delivered please return to
. KODAGU" OFFICE MERCARA

ಕೊಡಗು.

ವಾರ್ಷಿಕ ಚಂದಾ ರೂ. ೪-೦-೦

ಸತ್ಯೇನ ಧರ್ಮದಯಾಯುತ ವಿದ್ಯಾ, ನೀತಿ ಪ್ರಯತ್ನತಾ || ಐಕ್ಯಮತ್ಯೇನ ದೇಶಾನಾಂ ಸುಸ್ಥಿರಾ ರಾಜ್ಯ ಸಂಪದಾ ||

ಸಂಪಾದಕ—ಪಂದ್ಯಂಡ ಐ. ಬೆಳ್ಯಪ್ಪ.

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವದು.

ಸಂಪುಟ ೫] ಕೊಡಗು, ಸನ್ ೧೯೨೬ನೇ ಇಸವಿ ಏಪ್ರಿಲ್ ತಾರೀಖು ೨೩ ನೇ ಶುಕ್ರವಾರ [ಸಂಚಿಕೆ ೧೬

PERFUMERY & PATENT MEDICINCES TC.,

Aletris cordial	Rs 3—4-	apoli wine	„ 5—0	Encryl tooth powder	„ 0—14
Antiphlogistine	„ 1—8	Ovaltine	Rs. 1—1, 1—12-, & 3—3.	Kolynos tooth paste	„ 0—11-
Bathwalas' ague mixture	„ 1—4-	Peps	„ 3- 0.	Euthymal „ „	„ 0—14-
Burgoynes' Eastons' Syrup	„ 1—6-	Sanatogen	„ 4—8-	Pepsodent „ „	„ 0—14-
Celerma	„ 3-12-	Emulsion Scott's	„ 1-12.	Cuticura soap per box	Rs. 2—6-
Cuticura ointment	„ 0—14-	Waterbury's cod liver oil	„ 3—0	Erasmic „ „ „	„ 1—3-
Dejonghs' cod liver oil	„ 3—4	Wincarnis	Rs. 2- 15- & 5—8.	Goodwins bath soap for 6	„ 2—8-
Deschiens' Syrup	„ 2-12-	Woodwards gripe water	1—2.	Palm olive soap per cake	„ 0—6-
Enos' fruit salt	„ 2—8.	Zam buk	Rs 0 15. & 2—2.	Pear's glycerine soap per box	„ 1—5.
Esnofele pills	„ 2—10	Calox tooth powder	0 15.	Vinolia baby „ „	„ 1—6.
Genaspirin	„ 0—15.	Calverts' carbolic powder	0—7.	„ Premier „	„ 1—3.
Sulphur bitters	„ 1-12.	Colgates' dental cream	0 11-	Wright's coal tar „ „	„ 1—2.
				Turkish bath soap 12 cakes	„ 2—8-

Reduction in prices of Stationary department made permanent.
GET IT AT SPENCERS!
52–25 **THE SHOPPING CENTRE OF COORG.**

Spencer & Co. Ltd,
MERCARA, & POLLIBETTA.

ಸ್ಥಾಪಿತವಾದದ್ದು 1874. ಮೂಲಧನ ೭ ಕೋಟಿ ರೂಪಾಯಿಗಳು

ಓರಿಯಂಟಲ್ ಗವರ್ನ್‌ಮೆಂಟ್ ಸೆಕ್ಯೂರಿಟಿ ಲೈಫ್ ಅಷ್ಯೂರೆನ್ಸ್ ಕಂಪೆನಿ ಲಿಮಿಟೆಡ್, ಹೆಡ್ ಆಫೀಸು= ಬೊಂಬಾಯಿ.

1922–1924 ಈ ಮೂರು ವರ್ಷಗಳಲ್ಲಿ ಕಂಪೆನಿಯಲ್ಲಿ ನಡೆದ ಕೆಲಸದ ಫಲಿತಾಂಶಗಳು —

ಲಾಭ— ರೂ. 51,00,000 (ಐವತ್ತೊಂದು ಲಕ್ಷ ರೂಪಾಯಿಗಳು.) ಈ ಪೈಕಿ 45,94,80 ರೂಪಾಯಿಗಳನ್ನು ಲಾಭ ಪಡೆ ಪ ಮಾಡಿಸುವವರ ವಿಮೆ ಹಣಕ್ಕೆ ಹೆಚ್ಚು ಬೋನಸ್ ಎವರೂಪವಾಗಿ ಈ ಕೆಳಗೆ ಕಾಣಿಸಿರುವ ರೀತಿಯಲ್ಲಿ ಸೇರಿಸಿರುತ್ತದೆ

ಜೀವಮಾನಾವಧಿಯ ವಿಮೆದಾರರಿಗೆ ರೂ. 1000 ವಿಮೆ ಹಣಕ್ಕೆ
ಈ ಮೂರು ವರ್ಷಗಳಿಗೆ ರೂ. 67½.
ಕ್ಲುಪ್ತಕಾಲದ ವಿಮೆದಾರರಿಗೆ ರೂ. 1000 ವಿಮೆ ಹಣಕ್ಕೆ
ಈ ಮೂರು ವರ್ಷಗಳಿಗೆ ರೂ. 54.

ಈ ಕಂಪೆನಿಯಲ್ಲಿ ಕ್ರಮೇಣ ಹೆಚ್ಚುತ್ತಿರುವ ಜನಾನುರಾಗವು ಈ ಕೆಳಗೆ ಕೊಟ್ಟಿರುವ ಹೊಸ ಕೆಲಸದ ಪಟ್ಟಿಯಿಂದ ವ್ಯಕ್ತವಾಗುತ್ತದೆ.

1923ರಲ್ಲಿ—	ರೂ	1,74,00,000
1924	„	2,37,00,000
1925	„	2,96,00,000

ಇನ್ನೂ ದಿನದಿನಕ್ಕೂ ಅಭಿವೃದ್ಧಿಯಾಗುತ್ತಲೇ ಇದೆ. ಜೀವವಿಮೆ ಪತ್ರದಲ್ಲಿ ಹಣವನ್ನು ಲಾಭಕರವಾಗಿ ತೊಡಗಿಸಲು ಇದೇ ಸುಸಮಯ.

ಬೇಕಾದ ವಿಷಯಗಳನ್ನು ಈ ಕೆಳಗಿನ ವಿಳಾಸಕ್ಕೆ ಬರೆದು ತಿಳಿದುಕೊಳ್ಳಬಹುದು.

ಓರಿಯಂಟಲ್ ಬಿಲ್ಡಿಂಗ್ಸ್,
ಪೋಸ್ಟ್ ಬಾಕ್ಸ್ 56
ಬೆಂಗಳೂರು

ಪಿ ಐ. ಸುಬ್ರಮಣ್ಯಯ್ಯರ್,
ಬ್ರಾಂಚ್ ಸೆಕ್ರೆಟರಿ.

52—3,

ಮುದ್ದಾದ ಪುಸ್ತಕ! ಮುದ್ದಾದ ಮುದ್ರಣ!!

ಶರೀರ ಸುಖ, ಸಂಪತ್ತು, ಐಶ್ವರ್ಯಗಳನ್ನು ಸಂಪಾದಿಸಲು ಸಲಹೆಗಳನ್ನೂ ಮತ್ತು ಶರೀರ ಮರ್ಮಶಾಸ್ತ್ರ (ಕಾಮಶಾಸ್ತ್ರ)ವನ್ನು ತಿಳಿಸುವ

ಮರ್ಮ ಶಾಸ್ತ್ರ-ಎಂಬ ಕಾಮಶಾಸ್ತ್ರ

ಈ ಪುಸ್ತಕವು ಮೊದಲು ಫ್ರೆಂಚ್, ಇಂಗ್ಲಿಷ್, ಹಿಂದುಸ್ತಾನಿ, ಸಂಸ್ಕೃತ ಮುಂತಾದ ಭಾಷೆಗಳಲ್ಲಿ ಬಹು ಗುಪ್ತವಾಗಿತ್ತು. ಇದನ್ನು ನಾವು ಪ್ರಯಾಸದಿಂದ ಸಂಪಾದಿಸಿ ಕನ್ನಡಕ್ಕೆ ತರ್ಜುಮೆ ಮಾಡಿ (84 ಚಿತ್ರಪಟಗಳ ಸಹಿತ) ಥಳಥಳಿಸುವ ಕಾಗದದಲ್ಲಿ ಮುದ್ರಿಸಿ ತಯಾರಿಸಿದ್ದೇವೆ ಈ ಪುಸ್ತಕದಲ್ಲಿ ಸ್ತ್ರೀ ಪುರುಷರಿಗೆ ಬೇಕಾದ ಎಲ್ಲಾ ಮರ್ಮ ರಹಸ್ಯಗಳೂ, ಸ್ತ್ರೀ ಪುರುಷರು ಅನ್ಯೋನ್ಯವಾಗಿ ನಡೆದುಕೊಳ್ಳುವ ಮಾರ್ಗ- ಸ್ತ್ರೀ ಪುರುಷರಿಗೆ ಉಂಟಾಗುವ ಎಲ್ಲಾ ತರದ ಮರ್ಮವ್ಯಾಧಿಗಳು ಮತ್ತು ಅಂಥಾ ವ್ಯಾಧಿಗಳನ್ನು ಗುಣಮಾಡಿಕೊಳ್ಳುವ ಚಿಕಿತ್ಸೆಗಳೂ ಇನ್ನೂ ಅನೇಕ ತರದ ಮರ್ಮರಹಸ್ಯಗಳು ಚಿತ್ರಪಟಗಳ ಸಹಿತ ತುಂಬಿರುವದು. ಈ ಪುಸ್ತಕದ ಹೆಸರನ್ನು ಕೇಳಿದ ಮಾತ್ರಕ್ಕೆ ಸಂತೋಷವಾಗುವದು ಅದರ ಓದಲಿಕ್ಕೆ ಯಾರಿಗೆ ತಾನೇ ಸಂತೋಷವಾಗಲಾರದು.

ಕ್ರಯ ಪುಸ್ತಕ ಒಂದಕ್ಕೆ ಒಂದೇ ಒಂದು ರೂಪಾಯಿ ರೂ. 1—0—0

T. Ramachandar Rao & Co.,
Post Box No. 232,
Madras.

ಟಿ. ರಾಮಚಂದ್ರರಾವ್ ಅಂಡ್ ಕೊ,
ಪೋಸ್ಟ್ ಬಾಕ್ಸ್ ನಂ. 232.
ಮದ್ರಾಸ್.

52—17

ಆಂಧ್ರ ಆಯುರ್ವೇದಿಕ್ ಫಾರ್ಮಸಿ.

ಬ್ರಾಂಚ್, ಬೆಂಗಳೂರು ಸಿಟಿ

ಚ್ಯವನಪ್ರಾಸ ಲೇಹ.

ಇದು ಸರ್ವೋತ್ಕೃಷ್ಟವಾದ ಗಿಡಮೂಲಿಕೆಗಳಿಂದ ತಯಾರಿಸಲ್ಪಟ್ಟ ಆಯುರ್ವೇದ ರಸಾಯನೌಷಧವು. ವಿದ್ಯಾರ್ಥಿಗಳೂ ವಿಶೇಷವಾಗಿ ಬುದ್ಧಿಯನ್ನು ಪ್ರಯೋಗಿಸಿ ಕೆಲಸ ಮಾಡುವವರೂ ಈ ಲೇಹವನ್ನು, ಸೇವಿಸಿದರೆ ವಿಶೇಷವಾಗಿ ಬುದ್ಧಿಶಕ್ತಿಯನ್ನೂ ಜ್ಞಾಪಕಶಕ್ತಿಯನ್ನೂ ಹೊಂದುವರು. ದೀರ್ಘಕಾಲದ ವ್ಯಾಧಿಯಿಂದಾಗಲೀ ಕೆಟ್ಟ ನಡತೆಯಿಂದಾಗಲೀ, ಸ್ವಭಾವ ಶಕ್ತಿಯ ಕೊರತೆಯಿಂದಾಗಲೀ ಶರೀರ ಕಾಂತಿಯು ಕುಂದಿ ರಕ್ತ ಕೆಟ್ಟು ಇಂದ್ರಿಯ ದೌರ್ಬಲ್ಯವೇ ಮೊದಲಾದ ವಿಕಾರಗಳಿಂದ ಪೀಡಿತರಾಗಿರುವವರು ಈ ಲೇಹವನ್ನು ಸೇವಿಸಿದರೆ ಈ ತರದ ವಿಕಾರಗಳನ್ನೆಲ್ಲಾ ಪರಿಹರಿಸಿ ದೇಹಕ್ಕೂ ಮನಸ್ಸಿಗೂ ಉತ್ಸಾಹವನ್ನುಂಟುಮಾಡಿ ಮಾಂಸಖಂಡಗಳಿಗೂ ನರಗಳಿಗೂ ಬಲವನ್ನು ಕೊಟ್ಟು ದೇಹಪುಷ್ಟಿಯನ್ನುಂಟುಮಾಡಿ ನವಚೈತನ್ಯವನ್ನುಂಟುಮಾಡುವುದು. ಇಲ್ಲದೆ ಆರೋಗ್ಯವುಳ್ಳ ಶರೀರವುಳ್ಳವರಾಗಿ ದೀರ್ಘಕಾಲ ಬದುಕುವರು. ಕೆಮ್ಮು ಉಬ್ಬಸ ವ್ಯಾಧಿಯುಳ್ಳವರಿಗೂ ಮುಖ್ಯವಾಗಿ ಕ್ಷಯರೋಗಿಗಳಿಗೂ ಇದು ಸಂಜೀವಿನಿಯೇ ಸರಿ! ಚರಕ ಸಂಹಿತೆಯಲ್ಲಿ ಇದರ ಗುಣವು ಅದ್ಭುತವಾಗಿ ಹೇಳಲ್ಪಟ್ಟಿದೆ. ೧೦ ತೊಲೆಗೆ ೧ ರೂಪಾಯಿ. ೪೦ ತೊಲೆಗೆ ೩ ರೂಪಾಯಿ

ಎಲ್ಲಾ ಕಡೆಯಲ್ಲಿಯೂ ಏಜಂಟರು ಬೇಕು.

ಸೂಚನೆ— ಇಲ್ಲಿ ದಾಸ್ತಾನಿಯಾದ ಎಲ್ಲಾ ಔಷಧಗಳೂ ಹೋಲ್‌ಸೇಲ್ ಕ್ರಯಕ್ಕೆ ಸಿಗುತ್ತವೆ. ಆಯುರ್ವೇದ ಭೂಷಣ ಕೆ. ನಾರಾಯಣರಾವ್ ಎ. ಎಂ. ಎ. ಸಿ. ಯವರು ರೋಗಿಗಳನ್ನು ಪರೀಕ್ಷಿಸಿ ಚಿಕಿತ್ಸೆಯನ್ನು ಪ್ರತಿದಿನವೂ ನಡಿಸುವರು. ವಿಶೇಷ ಸಂಗತಿಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಬಿ. ಸಿ. ಎಸ್. ಸುಬ್ಬಯ್ಯ ಅಂಡ್ ಕೋ,

ಚಿಕ್ಕಪೇಟೆ ಬ್ರಾಂಚ್ ಏಜಂಟ್ಸ್, ಆಂಧ್ರ ಆಯುರ್ವೇದಿಕ್ ಫಾರ್ಮಸಿ.

10—12 ೬೬, ಚಿಕ್ಕಪೇಟೆ, ಬೆಂಗಳೂರು ಸಿಟಿ.

"ಕೊಡಗು"

ಸನ್ ೧೯೨೬ನೇ ಇಸವಿ ಏಪ್ರಿಲ್ ತಾ. ೨೩ನೇ ಶುಕ್ರವಾರ

ಜಮೀನ್ದಾರರ ಸಂಘದ ಅಧ್ಯಕ್ಷರ ಭಾಷಣ.

ಕಳೆದ ವಾರ ನಾಪೋಕ್ಲಿನಲ್ಲಿ ನಡೆದ ಜಮೀನ್ದಾರರ ಸಂಘದ ವಾರ್ಷಿಕ ಮಹಾಸಭೆಯ ಅಧ್ಯಕ್ಷರಾಗಿ ಕಲ್ಲಿಕೋಟೆಯ ಶ್ರೀಯುತ ಮಂಜೇರಿರಾಮಯ್ಯರವರು ತಮ್ಮ ದೀರ್ಘವಾದ ಭಾಷಣವನ್ನು ಮಲೆಯಾಳ ಭಾಷೆಯಲ್ಲಿ ಮಾಡಿದರೂ ಕೂಡ ಅಲ್ಲಿ ನೆರೆದಿದ್ದ ಶೇಕಡ 99 ಜನರಿಗೂ ತಿಳಿಯಿತು. ದೇಶದ ಆರೋಗ್ಯ, ಆರ್ಥಿಕ, ವಿದ್ಯೆ ಮತ್ತು ರಾಜಕೀಯ ಸ್ಥಿತಿಯನ್ನು ವರ್ಣಿಸಿ ಎಷ್ಟರಮಟ್ಟಿಗೆ ಮತ್ತು ಯಾವ ರೀತಿಯಲ್ಲಿ ಇವುಗಳನ್ನು ಅಭಿವೃದ್ಧಿಗೊಳಿಸಬಹುದು ಎಂಬುದನ್ನು ವಿವರಿಸಿ ಹೇಳಿದರು. ದೇಶದ ಬಗ್ಗೆ ರೈತರ ಚಿಕ್ಕ ಚಿಕ್ಕ ಕಷ್ಟಗಳು ಇವರಿಗೆ ತಿಳಿದಿರತಕ್ಕದ್ದಾದರೂ ಪ್ರಜೆಗಳಿಗೆ ಸಂಬಂಧಪಡುವ ದೊಡ್ಡ ವಿಷಯಗಳಿಗೆ ತಕ್ಕಷ್ಟು ಗಮನಕೊಟ್ಟಿರುತ್ತಾರೆ. ಪರಪ್ರಾಂತ್ಯದಿಂದ ಅಧ್ಯಕ್ಷರನ್ನು ಆರಿಸಿದ್ದು ತೃಪ್ತಿಕರವಲ್ಲವೆಂತ ಕೆಲವರಿಗೆ ಇದ್ದ ಶಂಕೆಯನ್ನು ಇವರ ಸ್ಪಷ್ಟವಾದ ಭಾಷಣದಿಂದ ನಿವಾರಿಸಿದರು. ಪರಪ್ರಾಂತ್ಯದಲ್ಲಿ ರಾಜಕೀಯ ಹೋರಾಟದಲ್ಲಿ ಭಾಗಿಗಳಾದವರು ತಮ್ಮ ಅನುಭವವನ್ನು ಹೇಳಿಕೊಟ್ಟು ಈ ದೇಶದ ಉನ್ನತಿಗೆ ಸಹಾಯ ಮಾಡಲು ಅವಕಾಶವಿದೆ. ಅವರ ಅನುಭವಗಳನ್ನು ನಮ್ಮ ದೇಶಕ್ಕೆ ತಿಳಿಸಿಕೊಡುವುದರಿಂದ ನಮ್ಮ ದೇಶದ ಸಾರ್ವಜನಿಕ ಕೆಲಸಗಳಲ್ಲಿ ಕೆಲಸಮಾಡುವವರು ಅವರ ಅನುಭವಗಳನ್ನು ಉಪಯೋಗಿಸಿಕೊಳ್ಳುವಂತೆ ಕಾರ್ಯಕ್ಕೆ ಬಹಳ ಅನುಕೂಲವಾಗುತ್ತದೆ. ಪರಪ್ರಾಂತ್ಯಗಳಲ್ಲಿ ನಡೆಯುವ ನಮ್ಮ ಪ್ರಾಂತ್ಯದಲ್ಲೇ ನಡೆಯುವ ಆಸಕ್ತಿ ಇಲ್ಲದ ಅನೇಕ ಭಾವನೆಗಳು ಹೋಗಲಾಡಿಸಲ್ಪಡುವುವು. ಹೊರಗಿನ ಉದ್ಯೋಗಿಗಳಿಂದ ನಮ್ಮ ದೇಶದ ಏಳ್ಗೆ ಇದರಿಂದ ನಮಗೆ ಸ್ವರಾಜ್ಯವು ದೊರೆತಿದೆಯೆಂದು ಹೇಳುವವರೂ ಕೆಲವರಿದ್ದಾರೆ. ನಮ್ಮ ದೇಶದ ಆರ್ಥಿಕ ಮತ್ತು ಆರೋಗ್ಯಸ್ಥಿತಿಗಳು ಬೇರೆ ಪ್ರಾಂತ್ಯದವರುಗಳಿಗಿಂತ ಕೀಳು ತರದಲ್ಲಿವೆ ಎಂಬುದನ್ನು ತೋರಿಸಿಕೊಟ್ಟು ಈ ವಿಷಯಗಳಲ್ಲಿ ಅಭಿವೃದ್ಧಿಪಡಿಸಿಕೊಳ್ಳಲು ಉತ್ತೇಜನಕೊಡಲು ಪರಪ್ರಾಂತ್ಯದ ಮುಂದಾಳುಗಳಿಗೆ ಸಾಧ್ಯವಿದೆ. ಆದುದರಿಂದ ಪರಪ್ರಾಂತ್ಯದವರನ್ನು ಇಂಥಾ ಸಮ್ಮೇಳನಗಳಿಗೆ ಕರೆಯಿಸುವುದರಿಂದ ತುಂಬಾ ಪ್ರಯೋಜನವಿದೆಯೆಂಬುದನ್ನು ದೇಶೀಯರು ಮರೆಯದೆ ಈ ವಿವಾದ ಉದಾಹರಣೆಯನ್ನು ಮುಂದಕ್ಕೂ ಅನುಸರಿಸುವರಾಗಿ ನಂಬುತ್ತೇವೆ. ಈ ಕ್ರಮವು ಹೊಸದಾಗಿ ಪ್ರಾರಂಭಿಸುವ ಜನಸಮೂಹದಲ್ಲಿ ಬೇರೆ ಪ್ರಾಂತ್ಯಗಳ ತಮ್ಮ ಸಾರ್ವಜನಿಕ ಕಾರ್ಯಭಾರಗಳಿಗೆ ಮಾದರಿಯಾಗಿ ಮಾಡಿಕೊಳ್ಳುವಷ್ಟೇ ಅನುಸರಿಸ್ಯಾರು.

ನಮ್ಮ ಈ ದೇಶದವರ ತಮ್ಮ ದೃಷ್ಟಿಯನ್ನು ಈ ದೇಶದ ಮೇರೆಗಳೊಳಗೆ ನಿಸರ್ಗ ಆಧಾರಪಡಿಸದೆ ನೆರೆಹೊರೆ ಜಿಲ್ಲೆಗಳ ಮತ್ತು ಒಟ್ಟು ಹಿಂದೂಸ್ಥಾನದ ಕಡೆಗೆ ತಿರುಗಿಸಬೇಕೆಂದು ಉಪಾಸ್ತ್ರ ಕಸ್ತೂರಿ ಅಧ್ಯಕ್ಷರು ಹೇಳಿದರು. ಕಾವೇರಿ ದಿಯು ಇಲ್ಲಿ ಹುಟ್ಟಿದ ಮಾತ್ರದಿಂದ ಅದು ಬೇರೆ ಅನೇಕ ಜಿಲ್ಲೆಗಳಿಗಾಗಿ ಹರಿದುಹೋಗುವ ರಾಜ್ಯ ಇಲ್ಲಿಯವರಿಗೆ ಮಾತ್ರವಲ್ಲ. ಅದರಿಂದ ಪ್ರಯೋಜನ ಹೊಂದುವವರಿಗಳು ಇದ್ದಾರೆ, ಇಡೀ ಹಿಂದೂದೇಶದವರಿಗೂ ಅದರ ಪವಿತ್ರತೆಯ ಮೇಲೆ ಸಂಪೂರ್ಣ ಭಕ್ತಿ ಇರುವುದರಿಂದ ಹಾಗಿದೆ. ಇಲ್ಲಿಯ ನಿವಾಸಿಗಳು ಹಿಂದೂದೇಶದ ಬೇರೆ ಪ್ರಾಂತ್ಯದವರೊಂದಿಗೆ ತಮ್ಮ ಸಂಬಂಧವನ್ನು ಬೆಳೆಸಬೇಕೆಂದೂ ಸೂಚಿಸಿದರು.

ದೇಶದ ಆರೋಗ್ಯವನ್ನು ಕುರಿತು 1924—25ರ ಅಧಿಕೃತ ವರದಿಯಿಂದ ಜನನ ಮರಣದ ಸಂಖ್ಯೆಗಳನ್ನು ಎತ್ತಿ ತೋರಿಸಿ ಜನಸಂಖ್ಯೆಯು ಕಡಿಮೆಯಾಗುತ್ತಿರುವುದೂ, ಶಿಶು ಮರಣ ಹೆಚ್ಚುತ್ತಿರುವುದೂ ಶೋಚನೀಯ ಸ್ಥಿತಿಯೆಂದು ಹೇಳಿದರು. ಇದಕ್ಕಾಗಿ ಆರೋಗ್ಯ (ಹೆಲ್ತ್) ಆಫೀಸರುಗಳನ್ನು ನೇಮಿಸುವುದಲ್ಲದೆ ಬಂಗಾಳದಂತೆ ಮಲೇರಿ ನಿವಾರಕ ಸಂಘಗಳನ್ನು ಏರ್ಪಡಿಸುವುದು ಉತ್ತಮವೆಂದು ಸೂಚಿಸಿದರು. ಈ ಮುಖ್ಯವಾದ ವಿಷಯಕ್ಕೆ ಕೊಡಗು ಕೌನ್ಸಿಲಿನವರು ಗಮನವನ್ನಿತ್ತು ಮಲೇರಿಯ ಕಮಿಟಿಯನ್ನು ಏರ್ಪಡಿಸಿರುವರು. ಈ ಕಮಿಟಿಯವರು ಮೇಲಿನ ಸೂಚನೆಗಳನ್ನು ಈಗಾಗಲೇ ಚರ್ಚಿಸಿರುವರೆಂದು ತಿಳಿಯಬರುವುದರಿಂದ ಅವರ ರಿಪೋರ್ಟಿನಲ್ಲಿ ಇವುಗಳನ್ನು ಕುರಿತು ಬಲವತ್ತಾದ ಸಿಫಾರಸ್ಸುಗಳನ್ನು ಬರೆಯುವರಾಗಿ ನಂಬುತ್ತೇವೆ.

ಅಧ್ಯಕ್ಷರು ಹೇಳಿದಂತೆ ವ್ಯವಸಾಯಕ್ಕೆ ಶತ್ರುವಾಗಿರುವ ಬಂತಾನ ನಾಶದಲ್ಲಿ ಜನರು ಹೆಚ್ಚು ಶ್ರದ್ಧೆಯನ್ನು ವಹಿಸಬೇಕಾಗಿದೆ. ಕಿತ್ತಳೆ ಬೋರರ ಕಡೆಗೂ ಸರ್ಕಾರದವರು ಸಾಕಷ್ಟು ನಿಗ ಕೊಡಬೇಕಾಗಿದೆ. ಕೊಡಗಿನಲ್ಲಿ ದೊಡ್ಡ ಕಾರ್ಖಾನೆಗಳಾಗಲೀ ಕೈಗಾರಿಕೆಗಳಾಗಲೀ ಇಲ್ಲದೆ ಇರುವುದರಿಂದ ರೈಲ್ವೆಗೆ ದೊಡ್ಡ ಹಣವನ್ನು ಖರ್ಚು ಮಾಡುವ ವಿಷಯದಲ್ಲಿ ಜಾಗರೂಕರಾಗಿರಬೇಕೆಂಬುದು ಒಪ್ಪತಕ್ಕ ಮಾತಾಗಿದೆ. ದೇಶದಲ್ಲಿ ಕೈಗಾರಿಕೆ ಕೆಲಸಗಳಿಗೆ ಉತ್ತೇಜನ ಕೊಡುವುದರಲ್ಲಿ ಈ ಇಲಾಖೆಗೆ ದೊಡ್ಡ ಸಂಬಳದ ಅಧಿಕಾರಿಗಳನ್ನು ನೇಮಿಸುವುದನ್ನೂ ಹೆಚ್ಚು ಬೆಲೆಯ ಯಂತ್ರಗಳನ್ನು ತರಿಸುವುದನ್ನೂ ಮನ್ನ ಮಾಡಬೇಕೆಂಬ ಸೂಚನೆಯು ಉತ್ತಮವಾದದ್ದಾಗಿದೆ. ಈ ಮೇಲಿನ ಕಾರಣಗಳಿಂದಲೇ ಪೂವ್ವಸೂಟ ಟ್ಯಾನ್ಸರಿಯು ಲಕ್ಷಗಟ್ಟಲೆ ರೂಪಾಯಿಗಳನ್ನು ನುಂಗಿದ್ದಾಗಿದೆ. ಕೊಚ್ಚಿ ದೇಶದಲ್ಲಿರುವ ಟ್ಯಾನ್ಸರಿಯನ್ನು ಸಾಧಾರಣ ಸಂಬಳದ ಯೋಗ್ಯ ಇಂಡಿಯನ್ ಆಫೀಸರುಗಳು ನಡಿಸುತ್ತಿರುವುದರಿಂದ ಅದು ಲಾಭಕರವಾಗಿದೆಯೆಂದು ಹೇಳಿದರು. ಅವರೆ ಹಾಗೆ ನಡಿಸುವ ಅಧಿಕಾರವು ಇಲ್ಲಿ ಜನರ ಪ್ರತಿನಿಧಿಗಳಿಗಿಲ್ಲದ್ದರಿಂದ ಬಿಳೀ ಆನೆಯಂತಿರುವ ಈ ಕೆಲಸವನ್ನು ಪೂರ್ತಿ ನಿಲಿಸುವುದೇ ಉತ್ತಮವಾಗಿದೆ. ಕೈಗಾರಿಕೆ ಅಭಿವೃದ್ಧಿಗಾಗಿ ವೀರರಾಜೇಂದ್ರಪೇಟೆಯಲ್ಲಿ ಈ ಸಂಬಂಧ ಒಂದು ಶಾಲೆಯು ಸ್ಥಾಪಿಸಲ್ಪಟ್ಟಿದೆ. ಇದರಂತೆಯೇ ಅವಶ್ಯವಿರುವ ಪೇಟೆ ಕಡೆಗಳಲ್ಲೂ ಕೈಗಾರಿಕೆ ಶಾಲೆಗಳನ್ನು ತೆರೆಯಬೇಕು. ಬೆಂಕಿಪೆಟ್ಟಿಗೆ ಸೀಸದ ಪೆನ್ಸಿಲು ಮುಂತಾದ ಕೈಗಾರಿಕೆಗಳನ್ನು ಮಾಡಲೂ ನೀರಿನ ಪ್ರವಾಹದ ಶಕ್ತಿಯಿಂದ ವಿದ್ಯುಚ್ಛಕ್ತಿಯನ್ನು ನಿರ್ಮಾಣಿಸಿ ಅದನ್ನು ಕಾರ್ಖಾನೆಗಳನ್ನು ನಡಿಸಲಿಕ್ಕಾಗಲೀ ಪಟ್ಟಣಗಳಲ್ಲಿ ಬೆಳಕು ಹಚ್ಚಲಿಕ್ಕಾಗಲೀ ಉಪಯೋಗಿಸಲು ಈ ದೇಶದಲ್ಲಿ ಅನುಕೂಲವಿದೆಯೆಂಬದೇನೋ ನಿಜ. ಆದರೆ ಈ ಕೆಲಸಗಳನ್ನು ಸರ್ಕಾರವೇ ಮುಂದೆ ಬಂದು ಕೈಕೊಳ್ಳಬೇಕು, ಇಲ್ಲವೆ ಧನ ಸಹಾಯಕೊಟ್ಟು ಖಾಸಗಿ ಮಹನೀಯರು ಇಂಥಾವುಗಳಿಗೆ ಕೈಹಚ್ಚುವಂತೆ ಉತ್ತೇಜನ ಕೊಡಬೇಕು. ಸಹಕಾರಿ ಸಂಘಗಳ ಚಳವಳವು ಈ ದೇಶದಲ್ಲಿ ಚೆನ್ನಾಗಿ ಹಬ್ಬಿರುವುದು ಸಂತೋಷಕರ ಎಂಬುದರಲ್ಲಿ ನಿಜವಿದೆ. ಈ ಸಂಘಗಳು ದೇಶದ ಜನರನ್ನು ಸಾಲದಲ್ಲಿ ಮುಳುಗಿಸಿ ಅವರ ಅಭಿವೃದ್ಧಿಗೆ ಅಡಚಣೆಯಾಗಿವೆಯೆಂದು ಹೇಳುವ ಅಲ್ಪ ಸಂಖ್ಯಾಕರು ಅಧ್ಯಕ್ಷರ ಮೇಲಿನ ಅಭಿಪ್ರಾಯಕ್ಕೆ ಗಮನ ಕೊಡುವರೇ?

ವಿದ್ಯಾಭ್ಯಾಸವನ್ನು ಕುರಿತು, ಹೆಚ್ಚು ಕಮ್ಮಿ ಕೊಡಗಿನಷ್ಟೇ ವಿಸ್ತೀರ್ಣದ ದೇಶೀಯ ರಾಜರ ಆಡಳಿತದಲ್ಲಿರುವ ಕೊಚ್ಚಿ ದೇಶದೊಂದಿಗೆ ಈ ದೇಶವನ್ನು ಹೋಲಿಸಿರುವರು. ಉಚ್ಚ ವಿದ್ಯಾಭ್ಯಾಸದಲ್ಲಿ ನಮ್ಮ ದೇಶವು ಎಷ್ಟರಮಟ್ಟಿಗೆ ಹಿಂದುಳಿದೆಯೆಂಬುದು ಈ ಹೋಲಿಕೆಯಿಂದ ವಿಶದವಾಗುತ್ತದೆ. ಕೊಡಗಿನಲ್ಲಿ ಒಂದು ಕಾಲೇಜಾದರೂ ಇಲ್ಲದೆ ಇರುವುದು ಕಾಲೇಜು ವಿದ್ಯಾಭ್ಯಾಸದ ಅನುಕೂಲತೆಯು ಚೆನ್ನಾಗಿರುವ ಪರಪ್ರಾಂತ್ಯದವರಿಗೇ ಯಾರಿಗಾದರೂ ಆಶ್ಚರ್ಯವನ್ನುಂಟು ಮಾಡದೆ ಇರುವುದೇ? ಆದರೆ ಇಂಥಾ ವಿಷಯಗಳು "ಹಣದ ಅಭಾವ" ವೆಂಬ ಮಂತ್ರವನ್ನು ಜಪಿಸುವ ಸರ್ಕಾರದವರಿಗೆ ಎಂದೂ ವಿಶೇಷವಾಗಿ ತೋರುವುದಿಲ್ಲ.

ನಿಷಾನ್ ಸೇರ್ಪಡ ವಿಷಯ ಮೆ. ರಾಮಯ್ಯರವರ ಅಭಿಪ್ರಾಯಗಳಿಗೆ ನಾವು ಸಂಪೂರ್ಣ ಒಪ್ಪುತ್ತೇವೆ. ವಿತರಣೆಯನ್ನು ಕುರಿತು ಶಾಲೆಗಳಲ್ಲಿ ಬೋಧಿಸುತ್ತಿರುವರೆಂದು ಆಡಳಿತ ವರದಿಯಲ್ಲಿ ಬರೆದದ್ದು ಕಾಗದದ ಮೇಲೆ ಮಾತ್ರ ಇರುವುದಲ್ಲದೆ ಕಾರ್ಯತಃ ನಡಿಸುವುದಿಲ್ಲವೆಂದು ಹೇಳಲು ಸಂಕೋಚಪಡಬೇಕಾದುದಿಲ್ಲ. ಈ ಜಾಬಿನಲ್ಲಿ ಮೂರುವರೆಲಕ್ಷ ರೂಪಾಯಿ ಆಸ್ತಿಯ ಉತ್ಪತ್ತಿಯನ್ನು ಸರ್ಕಾರದವರು ಬಿಟ್ಟುಬಿಡಲು ತಯಾರಾಗಬೇಕಾದದ್ದು ಧರ್ಮವಾಗಿದೆ. ನಮ್ಮ ಉತ್ಪತ್ತಿಯ ಕಮ್ಮಿ ಪಕ್ಷ ನಾಲ್ಕರಲ್ಲಿ ಒಂದು ಭಾಗವನ್ನಾದರೂ ಈ ಅಧರ್ಮದ ಅಭ್ಯಾಸದಲ್ಲಿ ಕಳಕೊಳ್ಳುತ್ತಿರುವ ದೇಶೀಯರು ನಿಷಾವರ್ ವಿರೋಧಕ್ಕಾಗಿ ತಕ್ಕಷ್ಟು ಚಳವಳ ನಡಿಸಿರುವುದಿಲ್ಲವೆಂಬ ದರಲ್ಲಿ ಸಂಶಯವಿಲ್ಲ. ಅಲ್ಲಲ್ಲಿ ಸ್ವಲ್ಪ ಕೆಲಸ ನಡೆಯುತ್ತಿದೆ. ಕಮಿಷನರವರು ಮಿತಪಾನದ ಚಳವಳದಲ್ಲಿ ಸಹಾನುಭೂತಿಯುಳ್ಳವರಾಗಿರುವ ಈ ಸಮಯದಲ್ಲಿ ಜನರು ಹಿಂದೆ ನಿಲ್ಲುವುದು ನ್ಯಾಯವಲ್ಲ.

ಅಧಿಕಾರ ಚಲಾಯಿಸುವುದೂ ನ್ಯಾಯತೀರ್ಪುಕೊಡುವುದೂ ಒಬ್ಬ ಆಫೀಸರನ ಕೈಯಲ್ಲೇ ಇರುವುದು ನ್ಯಾಯವಲ್ಲವಾದುದರಿಂದಲೂ ಇದರಿಂದ ಪ್ರಜೆಗಳಿಗೆ ತುಂಬಾ ತೊಂದರೆಯುಂಟಾಗುತ್ತಿರುವುದರಿಂದಲೂ ಇವೆರಡು ಕೆಲಸಗಳನ್ನು ಬೇರ್ಪಡಿಸಬೇಕೆಂಬುದು ಇಡೀ ಹಿಂದೂದೇಶದ ಹೋರಾಟವಾಗಿದೆ. ಈ ದೇಶದಲ್ಲಿ ಇದಕ್ಕೂ ಸರಕಾರದವರು ಹಣವಿಲ್ಲವೆಂದು ಹೇಳಿ ಪ್ರಜೆಗಳ ಬಾಯಿ ಮುಚ್ಚಿಸುತ್ತಿರುವರು. ಇಲ್ಲಿಯ ನ್ಯಾಯತೀರ್ಪಿನ ಇಲಾಖೆಯನ್ನು ಮದ್ರಾಸಿನ ಹೈಕೋರ್ಟಿನ ಆಧೀನದಲ್ಲಿರುವುದು ಉತ್ತಮವೆಂದು ಸೂಚಿಸಿದ ಅಧ್ಯಕ್ಷರ ಅಭಿಪ್ರಾಯಕ್ಕೆ ಇಲ್ಲಿ ಹೆಚ್ಚಿನ ಆಕ್ಷೇಪಣೆ ಇರಲಾರದು.

ಈ ದೇಶವು ದೊಡ್ಡ ಪ್ರಾಂತ್ಯದೊಂದಿಗೆ ಸೇರಿಕೊಳ್ಳುವದು ಅಥವಾ ಪ್ರತ್ಯೇಕ ಆಡಳಿತೆಯನ್ನು ನಡಿಸಿಕೊಳ್ಳುವದರ ವಿಷಯವೂ ಕರ್ನಾಟಕ ಏಕೀಕರಣವನ್ನು ಕುರಿತೂ ಅಧ್ಯಕ್ಷರು ಕೊಟ್ಟ ಅಭಿಪ್ರಾಯಗಳನ್ನು ಬೇರೆ ಬರುವ ವಾರ ಟೀಕಿಸುವೆವು.

ಅಧ್ಯಕ್ಷರ ಭಾಷಣ.

ಜಮೀನ್ದಾರರ ಸಂಘದ ವಾರ್ಷಿಕ ಸಮ್ಮೇಳನದ ಅಧ್ಯಕ್ಷರಾದ ಮ್ಯಾಕ್ಯೂರ್ ವಕೀಲ್ ಮೆ. ಮಂಜೇರಿರಾಮಯ್ಯರವರ ಭಾಷಣದ ಸಾರಾಂಶ —

ತನ್ನನ್ನು ಅಧ್ಯಕ್ಷನನ್ನಾಗಿ ಆರಿಸಿದ್ದಕ್ಕೆ ಸಂಘಕ್ಕೆ ವಂದಿಸಿ, ದೇಶದ ವಿಷಯ ವಿಶೇಷ ಸಂಗತಿಗಳು ತನಗೆ ಗೊತ್ತಿಲ್ಲದಿದ್ದರೂ ದೂರದಿಂದ ನಿಂತು ನೋಡುವವನಿಂದ ಆಗುವ ಸಹಾಯವನ್ನು ಮಾಡಲು ತಯಾರಿದ್ದೇನೆಂತ ಹೇಳಿ ಮುಂದರಿದ್ದೇನೆಂದರೆ —

ಕಾವೇರಮ್ಮನನ್ನು ನಿಮ್ಮ ಇಷ್ಟದೇವತೆಯಾಗಿ ಇಟ್ಟುಕೊಂಡಿದ್ದೀರಿ. ಆದರೆ ನಾನು ತಿರುಚನಾಪಳ್ಳಿಯಲ್ಲಿ ಇದ್ದದ್ದರಿಂದ ಕಾವೇರಿಮಾತೆಯ ಆಶ್ರಯದಲ್ಲಿ ನಾನು ಸಹ ಬೆಳೆದವನು. ಕಾವೇರಿ ನೀರು ಕುಡಿದವರಿಗೆ ಗಣಿತ ಶಾಸ್ತ್ರವು ಚನ್ನಾಗಿ ತಲೆಗೆ ಹತ್ತುತ್ತದೆಯೆಂತ ತಿರುಚನಾಪಳ್ಳಿಯವರು ಹೇಳುತ್ತಾರೆ. ಅಲ್ಲದೆ ಕಾವೇರಿ ನದಿಯ ಒಟ್ಟು ಹಿಂದೂ ಸ್ನಾನದವರದೆಂಬುದಕ್ಕೆ "ಗಂಗೇಚ ಯಮುನೇ ಚೈವ ಗೋದಾವರಿ ಸರಸ್ವತಿ ನರ್ಮದಾ ಸಿಂಧು ಕಾವೇರಿ ಜಲೇಸ್ಮಿನ್ ಸನ್ನಿಧಿಂಕುರು" ಎಂತ ನಾನು ಉಪಯೋಗಿಸುವ ನೀರಿನಲ್ಲಿ ಈ ಎಲ್ಲಾ ನದಿಗಳ ನೀರು ಇರಲಿ ಎಂಬ ಅರ್ಥದ ಶ್ಲೋಕವನ್ನು ನಾವು ಯಾವಾಗಲೂ ಹೇಳುತ್ತೇವೆ. ಗಂಗಾಯಮುನಾದಿ ನದಿಗಳಂತೆಯೇ ಕಾವೇರಿಯೂ ಅಖಿಲ ಹಿಂದೂಸ್ಥಾನದವರದಾಗಿದೆ. ಇದರಿಂದ ನಮ್ಮ ಪೂರ್ವಿಕರ ದೃಷ್ಟಿಯೂ ಚಿಕ್ಕ ಪ್ರಾಂತ್ಯದೊಳಗೆ ಅಡಗಿ ಇರದೆ ಎಷ್ಟು ವಿಸ್ತಾರವಾಗಿತ್ತೆಂಬುದು ತಿಳಿಯುತ್ತದೆ.

ಒಂದು ಜನಾಂಗದ ಕ್ಷೇಮವು ಆ ಜನಾಂಗದ ಆರೋಗ್ಯ, ಐಶ್ವರ್ಯ, ವಿದ್ಯೆ ಮತ್ತು ಸಂಪತ್ತಿಯನ್ನು ಹೊಂದಿರುತ್ತದೆ. 1924—25 ನೇ ಇಸ್ವಿಯ ಗವರ್ನಮೆಂಟ್ ಆಡಳಿತದ ರಿಪೋರ್ಟಿನಲ್ಲಿ ನಿಮ್ಮ ದೇಶದ ಜನಾಂಗವು 1,63,8*10 ಆಗಿದೆಯೆಂತಲೂ ಜನನದ ಸಂಖ್ಯೆಯು ಸಾವಿರಕ್ಕೆ 21 20, ಮರಣದ ಸಂಖ್ಯೆ ಸಾವಿರಕ್ಕೆ 41 0n ಆಗಿತ್ತೆಂತಲೂ ಇದೆ. ಹಿಂದಿನ ವರ್ಷದಲ್ಲಿ 1000ಕ್ಕೆ 29 14 ಮಾತ್ರವಿತ್ತು. ಹಂಗಾಮಿಯಾಗಿ ನೌಕರಿ ಮುಂತಾದ್ದಕ್ಕೆ ಬಂದು ಹೋಗುವ ಜನರನ್ನು ಬಿಟ್ಟರೂ ಸಹ ಈ ಜನನಮರಣದ ದರವು ಗಾಬರಿಯನ್ನುಂಟುಮಾಡುವಂಥಾದ್ದಾಗಿದೆ. ಒಂದು ವರ್ಷದವಳಗಿನ ಪ್ರಾಯದ ಮಕ್ಕಳ ಮರಣಸಂಖ್ಯೆಯು 238 ಹೆಚ್ಚಿದೆಯೆಂತಲೂ ಶಾಲಾವಿದ್ಯಾರ್ಥಿಗಳ ಆರೋಗ್ಯಪರೀಕ್ಷೆಯಿಂದ ತುಂಬಾ ಬಾಲಕರಿಗೆ ಜ್ವರದಗೆಡ್ಡೆ ಇದೆಯೆಂತಲೂ ತಿಳಿಯುತ್ತದೆ. ಹೈದರ್ ಆಲಿಯ ದೌಲತ್ತಿನ ಉನ್ನತಕಾಲದಲ್ಲಿ ಆತನನ್ನು ಎದುರಿಸಿದ ಬಲಾಢ್ಯರ ಜನಾಂಗವು ಕ್ಷೀಣಗತಿಯನ್ನು ಹೊಂದಿದಂತೆ ಈ ವಿಷಯದಲ್ಲೇ ತಕ್ಕ ಆಲೋಚನೆಮಾಡಬೇಕು. ಮಲೇರಿಯಾಜ್ವರವೇ ನಿಮ್ಮ ದೊಡ್ಡ ಶತ್ರುವಾಗಿದೆ. ಅದನ್ನು ಹೋಗಲಾಡಿಸಲಿಕ್ಕೆ ಔಷಧಉಪಯೋಗಿಸಬೇಕಾದದ್ದಲ್ಲದೆ ಬೇರೆ ಉಪಾಯಗಳನ್ನು ಯೋಚಿಸಿ ಜಾರಿಗೆ ತರಬೇಕು. ಮದ್ರಾಸಿನ ಪ್ರತಿ ಜಿಲ್ಲೆಯಲ್ಲೂ ಒಬ್ಬ ಹೆಲ್ತ್ ಆಫೀಸರು ಇರುತ್ತಾನೆ. ಇಲ್ಲಿಯೂ ಒಬ್ಬನನ್ನು ನೇಮಿಸಿಕೊಳ್ಳಬೇಕು. ದೊಡ್ಡ ಸಂಬಳದ ಆಫೀಸರನ್ನು ನೇಮಿಸಿಬಿಟ್ಟರೆ ಕೊಳ್ಳೆಗಳು ಬಿಡುವದಿಲ್ಲ. ಕಮ್ಮಿ ಸಂಬಳದಲ್ಲಿ ಚನ್ನಾಗಿ ಕೆಲಸಮಾಡುವಂಥವರನ್ನು ನೇಮಿಸಿಕೊಳ್ಳಬೇಕು. ಬಂಗಾಳದಲ್ಲಿ ಒಳ್ಳೇ ಪ್ರಯೋಜನವನ್ನು ಕೊಟ್ಟಿರುವ ಮಲೇರಿಯಾ ಕೋಆಪರೇಟಿವ್ ಸಂಘಗಳನ್ನು ಮಾಡಿಕೊಳ್ಳಬೇಕು. ಕೊಡಗಿನಲ್ಲಿ ಸ್ವಾಭಾವಿಕ ಆರ್ಥಿಕ ಸಹಾಯವು ತುಂಬಾ ಇದೆ. ಇಲ್ಲಿನ ಫಲವತ್ತಾದ ಭೂಮಿಯಲ್ಲಿ ಬೆಳೆಯದೆ ಇರುವ ವಸ್ತುವೇ ಇಲ್ಲ. ತುಂಬಾ ಉತ್ಪತ್ತಿ

(4ನೇ ಪುಟದಲ್ಲಿ ಮುಂದುವರಿದಿದೆ)

ಕ್ಕೆ ಪ್ರಯೋಜನವಾಗಿರುವದಿಲ್ಲ. ಕೆಲಸ ಗೊತ್ತಿರಲಿ ಇಲ್ಲದಿರಲಿ ಇನ್ನೊಬ್ಬ ಯೂರೋಪಿಯನ್ ಆಫೀಸರಿಗೆ ಉದ್ಯೋಗ ಒಂದು ದೊರಕಲಿ ಎಂಬುದಾಗಿ ಮಾಡಬಾರದು. ಸ್ಥಳದ ಜನರನ್ನು ದೇಶಾಂತರಗಳಲ್ಲಿ ತಯಾರುಮಾಡಿ ಕಡಿಮೆ ಸಂಬಳದಲ್ಲಿ ನೇಮಿಸಿಕೊಳ್ಳಬೇಕು. ಇದಕ್ಕೆ ಬೇಕಾದ ಮೂಲಧನವನ್ನು ಸಹಕಾರ ತತ್ವವನ್ನು ಉಪಯೋಗಿಸಿ ಒದಗಿಸಿಕೊಳ್ಳಬಹುದು. ಈ ದೇಶದಲ್ಲಿ 163ಸಾವಿರ ಜನರಿಗೆ 110 ಸಂಘಗಳಿವೆ ಎಂಬದನ್ನು ನೋಡಿದರೆ ಇಲ್ಲಿ ಸಹಕಾರ ಚಳವಳವು ತೃಪ್ತಿಕರವಾಗಿ ಬೆಳೆದಿದೆಯೆಂತ ನೋಡಿ ಸಂತೋಷವಾಯಿತು. ಈಗ ಬರೇ ಸಾಲಕೊಡುವ ಸಂಘಗಳೇ ಹೆಚ್ಚಾಗಿವೆ. ಇನ್ನು ಮುಂದೆ ಕೈಗಾರಿಕೆಗಳನ್ನು ಹೆಚ್ಚಿಸುವ ಕಾರ್ಯಗಳನ್ನು ಏರ್ಪಡಿಸಲು ಸಹ ಸಹಕಾರ ಸಂಘಗಳನ್ನು ಮಾಡಿಕೊಳ್ಳಬೇಕು.

ವಿದ್ಯಾ ಪ್ರಚಾರದಲ್ಲಿಯೂ ಬೇಕಾದಷ್ಟು ಸಹಾಯ ದೊರೆತಿಲ್ಲ. ಮಾಧ್ಯಮಿಕ ಶಾಲೆಗಳ ಸಂಖ್ಯೆಯು 8 ಕಡಿಮೆಯಾಗಿ 3 ಶಾಲೆಗಳಿವೆಯೆಂತ ತಿಳಿಯಲು ವ್ಯಸನಪಡುತ್ತೇನೆ. ಮಾಧ್ಯಮಿಕ ಶಾಲೆಗಳನ್ನು ಹೆಚ್ಚಿಸಬೇಕು. ಪ್ರೈಮರಿ ವಿದ್ಯೆಯೊಂದಿಗೆ ಕಸಬು ವಿದ್ಯೆಯನ್ನು ಸೇರಿಸಿಕೊಂಡು, ಕಡ್ಡಾಯವಾಗಿ ಕಲಿಸುವಂತೆ ಮಾಡಿಕೊಳ್ಳಬೇಕು. ಗ್ರಾಮ ಪಂಚಾಯತಿಗಳ ಮೂಲಕ ಶಾಲೆಗಳನ್ನು ನಡಿಸಬೇಕು. ಸೆಕೆಂಡರಿ ವಿದ್ಯೆಗೂ ಬೇಕಾದಷ್ಟು ಸಹಾಯ ದೊರೆತಿಲ್ಲ. ಪ್ರತಿ ತಾಲೋಕಿನಲ್ಲೂ ಒಂದೊಂದು ಸೆಕೆಂಡರಿ ಶಾಲೆಯ ಆವಶ್ಯಕತೆ ಇದೆಯೆಂತ ತಿಳಿಯುತ್ತೇನೆ. ಮಡಿಕೇರಿಯಲ್ಲಿ ಒಂದು ಕಾಲೇಜ್ ಸಹ ಬೇಕು.

ನಿಷಾ ಪದಾರ್ಥಗಳಿಂದ ಸರಕಾರಕ್ಕೆ ಬರುವ ಉತ್ಪತ್ತಿಯು ಹೆಚ್ಚಿದೆಯೆಂತ ತಿಳಿಯುತ್ತದೆ. ಸ್ಕೂಲುಗಳಲ್ಲಿ ನಿಷಾ ಸೇವನೆಯಲ್ಲಿ ಹಿತ ಬೇಕೆಂಬದನ್ನು ಕಲಿಸುತ್ತಿದೆಯೆಂತ ಬರದಿರುವದರಿಂದ ನಿಷಾ ಸೇವನೆಯು ತಕ್ಕಷ್ಟು ಪ್ರಬಲವಾಗಿಯೇ ಇದೆ ಎಂಬುದು ಸ್ಪಷ್ಟವಾಯಿತು. ಸಮಾಜದಲ್ಲಿ ನಿಷಾ ಸೇವನೆಯು ಅವಶ್ಯವೆಂಬ ಭಾವನೆ ಇದೆ ಎಂತ ತಿಳಿಯುತ್ತೇನೆ. ಒಂದು ಜನಾಂಗವನ್ನು ನಿಷಾಸೇವನೆಯು ವಶಪಡಿಸಿಕೊಂಡರೆ ಆದರ ಬಾಯಿಯಿಂದ ತಪ್ಪಿಸಿಕೊಳ್ಳುವದು ಬಹಳ ಕಷ್ಟ. ಪಾಶ್ಚಿಮಾತ್ಯ ರಾಜ್ಯವಾದ ಅಮೇರಿಕದಲ್ಲಿಯೇ ನಿಷಾ ಹೋರಾಟವನ್ನು ಮಾಡಬಾರದೆಂಬ ಖಾನೂನು ಮಾಡಿದುದಾಗ ಕೊಡಗಿನವರೂ ನಿಷಾ ಸೇವನೆಯನ್ನು ಸಂಪೂರ್ಣ ನಿಲ್ಲಿಸಬೇಕಾದ ಕಾಲ ಬಂದಿದೆ. ಡಿಲ್ಲಿಯ ಅಖಿಲ ಹಿಂದೂಸ್ಥಾನದ ನಿಷಾ ನಿಷೇಧ ಸಂಘದ ಶಾಖೆಗಳನ್ನು ಅಲ್ಲಲ್ಲಿ ಸ್ಥಾಪಿಸಿಕೊಂಡು ಸಂಪೂರ್ಣವಾಗಿ ನಿಷಾ ಸೇವನೆಯನ್ನು ನಿಲ್ಲಿಸಿಬಿಡುವಂತೆ ಮಾಡಲು ದೇಶದ ಹಿತಚಿಂತಕರು ಒತ್ತಾಯಪಡಿಸಬೇಕು. ಮೂರು ಲಕ್ಷ ರೂಪಾಯಿ ಉತ್ಪತ್ತಿಯು ಹೋಗುವದಕ್ಕೆ ಬೇಸರಪಡದೆ ಮೂರು ಲಕ್ಷದ ಪಟ್ಟರಷ್ಟು ಪ್ರಯೋಜನ ಹೊಂದಿಕೊಳ್ಳಬಹುದಾದ ಸ್ಥಿತಿಯನ್ನು ಮಾಡಿಕೊಳ್ಳುವದು ಲೇಸು.

ನ್ಯಾಯವಿಚಾರದ ಕ್ರಮವನ್ನು ತಿದ್ದಿಕೊಳ್ಳಬೇಕಾದದ್ದು ಇನ್ನೊಂದು ಆವಶ್ಯವಾದ ವಿಷಯವಾಗಿದೆ. ಮೊದಲಿಂದ ಹಿಡಿದು ಕಡೆಯವರೆಗೂ ಅಂದರೆ ಪಾರುಪತ್ತೆಗಾರರು, ಸುಭೇದಾರರು, ಅಸಿಸ್ಟೆಂಟ್ ಕಮಿಷನರು, ಕಮಿಷನರು, ಚೀಫ್ ಕಮಿಷನರು ಸಹ ಆಡಳಿತದ ಮತ್ತು ನ್ಯಾಯ ವಿಚಾರ ನಡಸುವ ಆಫೀಸರುಗಳಾಗಿದ್ದಾರೆ. ಇಬ್ಬರು ಸಿವಿಲ್ ಜಡ್ಜಿಯವರು ಆಡಳಿತದ ಆಫೀಸರುಗಳಲ್ಲದೆ ಇದ್ದರೂ ಅವರ ಫೈನಲ್ ಮೇಲೆ ಅಪೀಲ್ ಹೋಗಬೇಕಾದ ಅಧಿಕಾರಿಗಳಲ್ಲಿ ಆಡಳಿತವೂ ನ್ಯಾಯ ವಿಚಾರವೂ ಬೆರೆತಿರುವುದಿದೆ. ಆಡಳಿತದ ಅಧಿಕಾರವನ್ನೂ, ನ್ಯಾಯವಿಚಾರದ ಅಧಿಕಾರವನ್ನೂ ತಲೆಯಿಂದ ತಲೆಗೂ ಬದಲಾಯಿಸಿ ಆಸಾಮ್ ಪ್ರಾಂತ್ಯದವರು ತಕ್ಕಷ್ಟು ಪದವಿಕೆ ಕೊಟ್ಟು ಬಂಗಾಳದ ಹೈಕೋರ್ಟಿನ ಅಧೀನರಾಗಿರುವಂತೆ ಇಲ್ಲಿಯವರು ಮದ್ರಾಸ್ ಹೈಕೋರ್ಟಿಗೆ ಸೇರಿಕೊಳ್ಳಬಹುದು.

ಈ ದೇಶದಲ್ಲಿ ದೊಡ್ಡ ಪ್ರಾಂತ್ಯದೊಂದಿಗೆ ಸೇರಿಕೊಳ್ಳಬೇಕೆಂಬ ಒಂದು ಪಾರ್ಟಿಯು ಪ್ರತ್ಯೇಕ ಪ್ರಾಂತ್ಯವಾಗಿಯೇ ಇರಬೇಕೆಂಬ ಇನ್ನೊಂದು ಪಾರ್ಟಿಯು ಇದೆಯೆಂತ ತಿಳಿದಿದ್ದೇನೆ. ಕೌನ್ಸಿಲ್ ದೊರೆತನಂತರ ದೊಡ್ಡ ಪ್ರಾಂತ್ಯದೊಡನೆ ಸೇರಬೇಕೆಂಬ ಪಾರ್ಟಿಯ ಸಂಖ್ಯೆ ಕಡಿಮೆಯಾಗಿದೆಯೆಂತ ತಿಳಿಯುತ್ತೇನೆ. ಈ ಸೊಗಸಾದ ಕೊಡಗು ಪ್ರಾಂತ್ಯದ ಒಸರು ಪ್ರತ್ಯೇಕ ಸರಕಾರವಾಗಿಯೇ ಇರಬೇಕೆಂತ ಆಶಿಸುವದರಲ್ಲಿ ನ್ಯಾಯವಿದೆಯೆಂತ ಎಲ್ಲರೂ ಒಪ್ಪಬೇಕಾಗಿದೆ. ಬೇರೆ ಬೇರೆ ಪ್ರಾಂತ್ಯಗಳನ್ನು ಒಳಕೊಂಡ ರಾಷ್ಟ್ರೀಯ ಸಂಯುಕ್ತ ಹಿಂದೂಸ್ಥಾನದಲ್ಲಿ ತನ್ನ ವ್ಯಕ್ತಿತ್ವವನ್ನು ಉಳಿಸಿಕೊಂಡು ಸ್ವರಾಜ್ಯ ಪಡೆಯಬೇಕಾದದ್ದೇ ನಿಮ್ಮ ಧ್ಯೇಯವಾಗಿರಬೇಕು.

1915ರಿಂದ 1919ನೇ ಇಸವಿ ವರೆಗೆ ನಡೆದ ಅದ್ಭುತ ಸ್ವರಾಜ್ಯ ಚಳವಳದಲ್ಲಿ ಕೊಡಗು ಸಿಗದೆ ಹೋಗಿದ್ದುದರಿಂದ ಮೊಂಟೇಗ್ಯೂ ಚೆಲ್ಮ್ಸ್‌ಫರ್ಡ್ ರಿಪೋರ್ಟಿನಲ್ಲಿ ಕೊಡಗನ್ನು ಒಂದೇ ಪಂಕ್ತಿಯಲ್ಲಿ ತೀರಿಸಿಬಿಟ್ಟಿದ್ದಾಗಿದೆ. ಸ್ವರಾಜ್ಯದ ಹಾದಿಯಲ್ಲಿ ಇನ್ನು ಮೇಲಕ್ಕೆ ಹತ್ತುವದರಲ್ಲಿ ಇದ್ದೇವೆ. ಆನ್ನೀಬೆಸೆಂಟಮ್ಮನವರು ತಯಾರಿಸಿದ ಕಾಮನ್‌ವೆಲ್ತ್ ಆಫ್ ಇಂಡಿಯಾ ಬಿಲ್ ಪಾರ್ಲಿಮೆಂಟಿನ ಮುಂದೆ ಇದೆ. ಅದು ಒಂದಲ್ಲ ಒಂದು ದಿನ ಮಂಜೂರಾಗಿಯೇ ಆಗುತ್ತದೆ. ಹಿಂದುಸ್ಥಾನದವರೆಲ್ಲರೂ ಒಗ್ಗಟ್ಟಾದರೆ ಅದು ಶೀಘ್ರದಲ್ಲೇ ಮಂಜೂರಾಗಬಹುದು. ಎಲ್ಲಾ ಪಾರ್ಟಿಗಳನ್ನು ಒಟ್ಟಿಗೂ ಸೇರಿಸಿ ನಡಿಯುತ್ತಿರುವ ಪ್ರಯತ್ನವು ಸಫಲವಾಗಲೆಂತ ಆಶಿಸುತ್ತೇನೆ. ಬ್ರಿಟಿಷ್ ಚಕ್ರವರ್ತಿಯವರ ಅಧೀನದಲ್ಲಿ ಸ್ವತಂತ್ರ ರಾಜ್ಯವಾಗಲು ಎಲ್ಲಾ ಪಂಗಡಗಳು ಒಗ್ಗಟ್ಟಾದಾರೆಂತ ನಂಬುತ್ತೇನೆ. ಕೊಡಗರ ರಾಜಭಕ್ತಿಯು ಸುಪ್ರಸಿದ್ಧವಾಗಿದೆ. ಗೋಪಾಲಕೃಷ್ಣ ಗೋಖಲೆಯವರು ಹೇಳಿದಂತೆ ಹಿಂದುಸ್ಥಾನವು ಬ್ರಿಟಿಷ್ ಆದಿಪತ್ಯಕ್ಕೆ ಸೇರಿದ್ದು ಹಿಂದುಸ್ಥಾನದ ಅಭ್ಯುದಯಕ್ಕೆಂತ ನೀವು ನಂಬಿರುವವರಾಗಿದ್ದೀರಿ. ಬ್ರಿಟಿಷ್ ಚಕ್ರವರ್ತಿಯವರ ಅಧೀನದಲ್ಲೇ ಇರುವ ಆಡಳಿತ ಪದ್ಧತಿಯನ್ನು ತಪ್ಪಿಸಿ ಸ್ವರಾಜ್ಯ ಪಡೆಯಬೇಕೆಂಬದೇ ನಮ್ಮ ಉದ್ದೇಶವಾಗಿದೆ. (ಕಾಮನ್‌ವೆಲ್ತ್ ಆಫ್ ಇಂಡಿಯಾ ಬಿಲ್ಲಿನ ಕೆಲವು ಭಾಗಗಳನ್ನು ಉದ್ದವಾಗಿ ವಿವರಿಸಿ ಅದಕ್ಕೆ ಉತ್ತೇಜನ ಕೊಡಬೇಕೆಂತ ಕೇಳಿಕೊಂಡರು.)

ಕೊಡಗು ಕೇರಳ ತೀರದ ಸ್ವಿಟ್ಜರ್‌ಲ್ಯಾಂಡಿನಂತೆ ಇದೆ. ಪೂರ್ಣ ಪ್ರಜಾ ಜವಾಬ್ದಾರಿ ಸರಕಾರ ಪದ್ಧತಿಯನ್ನು ಪಡೆಕೊಳ್ಳಲು ಕೊಡಗು ಪ್ರಯತ್ನಿಸಲೇ ಬೇಕು. ಶ್ರೀ|| ಸರ್ ರಾಮವರ್ಮ ಮಹಾರಾಜರ ಅಧೀನದಲ್ಲಿ ಇರುವ ಕೊಚ್ಚಿ ಸಂಸ್ಥಾನಕ್ಕೆ ಕೊಡಗನ್ನು ಹೋಲಿಸಿ ನೋಡಬಹುದು. ಕೊಡಗು ಚಿಕ್ಕ ಸೀಮೆ, ಕೊಚ್ಚಿ ಸಮುದ್ರ ಕರಾವಳಿ ದೇಶವಾಗಿರುವದರಿಂದ ಒಂದಕ್ಕೊಂದು ಸಂಬಂಧವಿಲ್ಲವೆಂತ ತೋರಬಹುದು. ಎರಡು ದೇಶಗಳ ವಿಸ್ತೀರ್ಣ ಸಾಧಾರಣ ಒಂದಾಗಿಯೇ ಇದೆ. ಜನಸಂಖ್ಯೆ ಮಾತ್ರ ಕೊಚ್ಚಿಯಲ್ಲಿ ಸುಮಾರು ಹತ್ತು ಲಕ್ಷ ಇರುತ್ತದೆ. ಕೊಚ್ಚಿಯ ಸ್ಥಿತಿಯನ್ನು ಅವಲೋಕಿಸಿ ನೋಡಿದರೆ ನಿಮ್ಮ ದೇಶದ ಅಭಿವೃದ್ಧಿ ಹೇಗೆ ಮಾಡಿಕೊಳ್ಳಬಹುದೆಂಬುದನ್ನು ತಿಳಿದುಕೊಳ್ಳಬಹುದು. ಕೊಚ್ಚಿಯಲ್ಲಿ ಪ್ರಾಥಮಿಕವಾದ ಟ್ರಾಮ್ವೇ ಲೈನ್ ಒಂದು ಇದೆ 65 ಮೈಲ್ ರೈಲ್ವೇ ಇದೆ 171 ಸರಕಾರಿ ಸೆಕೆಂಡರಿ ಶಾಲೆಗಳೂ 326 ಪ್ರಾಥಮಿಕ ಶಾಲೆಗಳೂ, 37 ಅಪ್ಪರ್ ಸೆಕೆಂಡರಿ ಶಾಲೆಗಳೂ, 748 ಪ್ರೈವೇಟ್ ಶಾಲೆಗಳೂ, 83 ಬಾಲಿಕಾ ಶಾಲೆಗಳೂ, 36789 ಶಾಲೆಗಳಿಗೆ ಹೋಗುವ ವಿದ್ಯಾರ್ಥಿನಿಯರೂ ಇದ್ದಾರೆ. ಸ್ಕೂಲ್ ಫೈನಲ್ ಪರೀಕ್ಷೆಗೆ 1526 ವಿದ್ಯಾರ್ಥಿಗಳು 1125ರಲ್ಲಿ ಹೋಗಿದ್ದಾರೆ. ನಿಮ್ಮಲ್ಲಿ ಬರೇ 41 ವಿದ್ಯಾರ್ಥಿಗಳು ಮಾತ್ರ ಹೋಗಿದ್ದಾರೆ. ಬಾಲಿಕೆಯರಿಗೆ 10 ಹೈಸ್ಕೂಲುಗಳಿವೆ 11ರಾತ್ರಿ ಶಾಲೆಗಳೂ ಇವೆ. ಒಂದು ಕ್ರಿಶ್ಚಿಯನ್ ಕಾಲೇಜ್ ಮತ್ತೊಂದು ಸರಕಾರಿ ಕಾಲೇಜ್ ಸಹ ಇವೆ. ಇವುಗಳಿರುವ ಒಂದು 750 ವಿದ್ಯಾರ್ಥಿಗಳಿದ್ದಾರೆ. ಬಾಲಿಕೆಯರಿಗೆ ಒಂದು ಕಾಲೇಜ್ ಇದೆ. ಪ್ರಜಾಪ್ರತಿನಿಧಿ ಸರಕಾರವಿಲ್ಲದಿದ್ದರೂ ಸ್ವತಂತ್ರ ರಾಜ್ಯವಾದರೆ ಯಾವರೀತಿ ಅಭಿವೃದ್ಧಿ ಹೊಂದಬಹುದೆಂಬುದು ಇದರಿಂದ ಗೊತ್ತಾಗುತ್ತದೆ.

ದೇಶದ ಏಳಿಗೆಗೆ ವಿದ್ಯಾಭ್ಯಾಸವೇ ಆತ್ಯವಶ್ಯವಾಗಿದೆ. ಸ್ವಾರ್ಥತೆಯು ಜಾತಿ ಅಭಿಮಾನವೆಂಬ ಪಿಶಾಚಿಯು ನಿಮ್ಮ ದೇಶದಲ್ಲಿ ತಲೆದೋರದಂತೆ ಜಾಗರೂಕರಾಗಿರಿ. ಜಾತಿ ಜಾತಿಯವರನ್ನು ಹಿಮ್ಮೆಟ್ಟಿ ಒಂದೇ ಜಾತಿ ಮುಂದುವರಿಯಲು ಪ್ರಯತ್ನಿಸುವದು ತಪ್ಪು. ಎಲ್ಲರಿಗೂ ಸ್ವರಾಜ್ಯದ ಅನುಕೂಲತೆಗಳು ದೊರಕಲು ಪ್ರಯತ್ನಿಸಬೇಕು. ಕುಲಕ್ಕೆಂತ ನಡತೆಗೂ, ಅಜ್ಞಾನಕ್ಕೆಂತ ಜ್ಞಾನಕ್ಕೂ ಮೇಲ್ಮೆ ಕೊಡಿರಿ. ಮಾತೃಭೂಮಿಗೆ ಸ್ವರಾಜ್ಯ ಪಡೆಯಲು ಸಹಾಯಮಾಡಿರಿ.

ವರ್ತಮಾನ ಸಂಗ್ರಹ.

ಒಳದೇಶ

ಈ ತಾ 21 ರಲ್ಲಿ ದೇಶದ ಕೆಲವು ಕಡೆಗಳಿಗೆ ಮಳೆಯು ಬಿದ್ದಿದೆ.

ಬ್ಯಾರದ ಗೆಡ್ಡೆಯ ವಿಷದಿಂದ ಪಿಂಟೋರಿಯಾ ಪಟ್ಟಣ ಮಿಸಲ್ಲಿ ನೆಪಾರ 70 ಜನರು ಜಪ್ತಿಗೆ ಮಾಡಲ್ಪಟ್ಟಿರುವದಾಗಿ ವರ್ತಮಾನ.

ಮಡಿಕೇರಿಯಲ್ಲಿ ಕ್ರಿಕೆಟ್ ಟೂರ್ನಮೆಂಟು ನಡೆಯುತ್ತಲಿದೆ. ತಾ. 21,22ರಲ್ಲಿ ನಡೆದ ಪ್ರಥಮ ಪಂಥದಾಟದಲ್ಲಿ ಕಾಸ್ಮೊಪೊಲಿಟನ್ ಕ್ಲಬ್ಬಿನವರು ವಿದ್ಯಾ ಇಲಾಖೆಯ ಟೀಮಿನವರನ್ನು ಸೋಲಿಸಿದರು.

ಮಡಿಕೇರಿಯಲ್ಲಿರುವ ಕಟಿಗರು ಮಾಂಸದ ಕ್ರಯವನ್ನು ಸೇರಿಗೆ 14 ಅಣೆ ಸಿಂದ ಇಳಿಸಲಿಕ್ಕಾಗುವದಿಲ್ಲವೆಂದು ಒಂದೆರಡು ದಿನ ಮುಷ್ಕರ ಹೂಡಿದರೂ ಕೂಡ ಈಗ 12 ಮತ್ತು 10 ಆಣೆಯಲ್ಲಿ ಮಾರುತ್ತಿರುವರು.

ಸೋಲಾಪುರ ಸಿಟಿಯ ಮೇ॥ ಜಿ ಪಿ ಬೆಂಗೆಯವರು ಕಳುಹಿಸಿರುವ ಶೃಂಗೇರಿಯಲ್ಲಿರುವ ಜಗದ್ಗುರು ಶಂಕರಾಚಾರ್ಯ ಶ್ರೀ. ಚಂದ್ರಶೇಖರ ಭಾರತಿಸ್ವಾಮಿಗಳ ಒಳ್ಳೆ ಅಂದವಾದ ಪಟವನ್ನು (ಕ್ರಯ 0–6–0) ಸಂತೋಷದಿಂದ ಸ್ವೀಕರಿಸುತ್ತೇವೆ.

ಶನಿವಾರಸಂತೆ ಹೋಬಳಿ ಮಾದ್ರೆಪಳ್ಳಿಗ್ರಾಮದಲ್ಲಿ ಕೆ. ಕುಮಾರಪ್ಪನವರ ಮನೆಗೂ, ಕುರುಡುಪಳ್ಳಿಗ್ರಾಮದ ಕಪ್ಪೀರು ಗೌಡಿಕೊಳ್ಳದಸ್ವಾಮಿಯವರ ಮನೆಗೂ ಕಳ್ಳರು ಬೆಂಕಿಇಟ್ಟು ಬಿಡುಮಾಡಿ ತುಂಬಾ ನಷ್ಟ ಉಂಟಾಗಿದೆಯಂತೆ.

ಉತ್ತರ ಕನ್ನಡದ ಧುರೀಣರಾದ ಶ್ರೀ ಕೌಜಲಗಿ ಪಾಟೀಲರವರು ಕೊಡಗು ರಾಷ್ಟ್ರೀಯ ವಾರದಲ್ಲಿ ನಾಪೋಕ್ಲಿನಲ್ಲಿ ವಸ್ತ್ರಾಟಕ್ಕೆ ಇಟ್ಟಿದ್ದ ವೀರರಾಜೇಂದ್ರಪೇಟೆ ಒಡ್ಡರ ಜಾತಾ ಧನದಿಂದ ಹಾರಿಸಿಬಿಟ್ಟಿಯೆನ್ನು ತಂದು. ಮಡಿಕೇರಿಯಲ್ಲಿ ಶಾ, ಇಬ್ರಾಹಿಂ ಮನೆ ಎನಗೆ ಬೆಂಕ್ಕೊಂಡುಮಹೇಗೆ. ಸೇವೆ . 130 ರೂಪಾಯಿಯು ಒಟ್ಟಿಯನ್ನು ಮಾಡಿದರು.

ಗುಬ್ಬಿ ಶ್ರೀ ಚೆನ್ನ ಬಸವೇಶ್ವರ ನಾಟಕಮಂಡಳಿಯವರು ತಾ. 21ರ ರಾತ್ರಿ ಗುಲೇಬಕಾವಲಿ ಎಂಬ ನಾಟಕವನ್ನು ಅಭಿನಯಿಸಿ ಬಂದ ಉತ್ಪತ್ತಿಯಲ್ಲಿ 500 ರೂಪಾಯಿಗಳನ್ನು ಕೊಡವ ಸಭೆಗೆ ಧರ್ಮಾರ್ಥವಾಗಿ ಕೊಟ್ಟರು. ಕಂಪೆನಿಯ ಪ್ರೊಪ್ರೈಟರಾದ ಮೇ॥ ವೀರಣ್ಣನವರಿಗೆ ಕೊಡವಸಭೆಯವರು ಒಂದು ಚಿನ್ನದ ಪದಕವನ್ನು (ಮೆಡಲ್) ಬಹುಮಾನವಾಗಿ ಕೊಟ್ಟರು.

ಕರ್ನಾಟಕ ಕಾಂಗ್ರೆಸ್ ಕಮಿಟಿಯ ಅಧ್ಯಕ್ಷರಾದ ವಿಜಾಪುರದ ಶ್ರೀ. ವಿ ಯಸ್. ಕೌಜಲಗಿಯವರು ಕರ್ನಾಟಕದ ಏಕೀಕರಣದ ವಿಷಯವೂ, ಧಾರವಾಡದ "ಕರ್ಮವೀರ" ಪತ್ರಿಕೆಯ ಸಂಪಾದಕರಾದ ಶ್ರೀ. ದಿವಾಕರ್‌ರವರು ಖಾದಿಪ್ರಚಾರದ ವಿಷಯವೂ, ಶ್ರೀ. ಬಾಸೊಳಿಕರವರು ರಾಷ್ಟ್ರೀಯ ವಿದ್ಯಾಭ್ಯಾಸದ ವಿಷಯವೂ ತಾ 20ರ ಸಾಯಂಕಾಲ ಮಡಿಕೇರಿ ರಾಜಾಸೀಟಿನ ಬಳಿ ಮೇ॥ ಕೋರಂಡ ತಿಮ್ಮಯ್ಯನವರ ಅಧ್ಯಕ್ಷತೆಯಲ್ಲಿ ಭಾಷಣ ಮಾಡಿದರು.

ಹಿಂದೂದೇಶ.

ದಕ್ಷಿಣ ಕನ್ನಡ ಡಿಸ್ಟ್ರಿಕ್ಟ್ ರಾಜಕೀಯ ಕಾನ್ಫರೆನ್ಸು ಇದೇ ತಾ 27,28ರಲ್ಲಿ ಮಂಗಳೂರಿನಲ್ಲಿ ನಡೆಯುವುದು.

ಕಡಿಮೆ ಸಂಬಳದ ಅತೃಪ್ತಿಯಿಂದ ಬಂಗಾಳದಲ್ಲಿ 30000 ಗಿರಣಿ ಕೆಲಸಗಾರರು ಕೆಲಸಕ್ಕೆ ಹೋಗದೆ ಮುಷ್ಕರಹಿಡಿದಿರುವರು.

ಪಂಜಾಬು ಖಿಲಾಫತ್ ಕಮಿಟಿಯವರು ಕೌನ್ಸಿಲು ಬಹಿಷ್ಕಾರವನ್ನು ರದ್ದುಮಾಡುವಂತ ಒಂದು ಠರಾವನ್ನು ಪಾಸುಮಾಡಿದರು.

ಇದೇ ವರ್ಷ ಮೇ ತಿಂಗಳು 20, 21 ತಾರೀಖುಗಳಲ್ಲಿ ನಾಲ್ಕನೇ ಕರ್ನಾಟಕ ಪ್ರಾಂತೀಕ ಮಹಾಸಭೆಯೂ ಕರ್ನಾಟಕ ಏಕೀಕರಣ ಸಭೆಯೂ 22,23 ತಾರೀಖುಗಳಲ್ಲಿ ಕರ್ನಾಟಕ ಸಾಹಿತ್ಯಪರಿಷತ್ತೂ ಬಳ್ಳಾರಿಯಲ್ಲಿ ಜರಗುವವು.

ಹಿಂದೂದೇಶದಲ್ಲಿ ಮೊಕದ್ದಮೆಗಳನ್ನು ನಡಿಸುವದರಲ್ಲಿ ತುಂಬಾ ಹೆಸರುವಾಸಿಗೊಂಡಿರುವ ಮೇ॥ ಇ. ನಾರ್ಟನ್ ರವರು ಖಾಯಂ ಆಗಿ ಇಂಗ್ಲೆಂಡಿಗೆ ಹೊರಟುಹೋಗುವುದರಿಂದ ಅವರಿಗೆ ತಕ್ಕದಾದ ರೀತಿಯಲ್ಲಿ ಸತ್ಕಾರವನ್ನು ಮಾಡಲಿಕ್ಕಿರುವ ಏರ್ಪಾಡಿಗೆ ಅನೇಕರು ಚಂದಾ ಕಳುಹಿಸುತ್ತಿರುವರಂತೆ. ಅವರು ಈಗ ಕೊಡೆಕನಾಲಿನಲ್ಲಿದ್ದಾರೆ.

ಸ್ವರಾಜ್ಯಪಾರ್ಟಿಯವರಿಗೂ ರೆಸ್ಪಾನ್ಸಿವ್ ಪಾರ್ಟಿಯವರಿಗೂ ರಾಜಿಮಾಡುವ ಬಗ್ಗೆ ಮಹಾತ್ಮ ಗಾಂಧಿಯವರು ಸಬರಮತಿಯಲ್ಲಿ ಒಂದು ಮೀಟಿಂಗನ್ನು ಏರ್ಪಡಿಸಿರುವರು. ಈ ಮೀಟಿಂಗು ತಾ 20 ಮತ್ತು 21ರಲ್ಲಿ ನಡೆಯುತ್ತಿದೆ. ಎರಡು ಪಾರ್ಟಿಯ ಪ್ರತಿನಿಧಿಗಳೂ ಶ್ರೀಮತಿ ಸರೋಜಿನಿದೇವಿಯವರೂ ಮಹಾತ್ಮರೂ ಹಾಜರಿರುವರು.

ವಿದೇಶ.

ಗ್ರೀಸ್ ದೇಶದ ಸರ್ಕಾರದ ಅಧ್ಯಕ್ಷರಾಗಿ ಜನರಲ್ ಪಾಂಗಲಾಸ್‌ರವರು ಚುನಾಯಿಸಲ್ಪಟ್ಟಿರುವರು. ಇವರು ರಾಜಕೀಯ ಕೈದಿಗಳನ್ನೆಲ್ಲಾ ಬಿಡುಗಡೆಮಾಡಿರುವರು.

ಅಮೇರಿಕ ದೇಶದ ಹವಾಯಿ ಎಂಬಲ್ಲಿ ಮೌನ ಲೋ ಎಂಬ ಜ್ವಾಲಾಮುಖಿ ಪರ್ವತದಿಂದ ಲಾವಾರಸವು ಹೊರಬಿದ್ದು 18 ಮೈಲು ದೂರದಲ್ಲಿರುವ ಹೂಸಲೋ ಗ್ರಾಮವನ್ನು ಮುಚ್ಚಿಕೊಂಡಿರುವದರಿಂದ ಅಲ್ಲಿಯ ನೂರಾರು ಜನರ ಗತಿಯು ಏನಾಯಿತೆಂದು ಗೊತ್ತಾಗಿರುವುದಿಲ್ಲ. ಈ ಲಾವಾರಸವು ಸಮುದ್ರಕ್ಕೆ ಹರಿದು ಅಲ್ಲಿ ನೂರಾರು ಅಡಿಗಳ ವರೆಗೆ ನೀರು ಕುದಿಯುವಂತೆ ಮಾಡಿತಂತೆ.

ಕೊಡಗಿನ ಬಾಂಧವರಿಗೊಂದು ಬಿನ್ನಹ.

ಬಾಂಧವರೇ! ಭಾಷಾನುಸಾರವಾದ ಪ್ರಾಂತರಚನೆಯ ತತ್ವದ ಮೇರೆಗೆ ಇಡೀ ಬ್ರಿಟಿಷ್ ಕರ್ನಾಟಕವನ್ನು ಒಂದೇ ಪ್ರಾಂತ್ಯವನ್ನು ಮಾಡುವ ಬಗ್ಗೆ ಕರ್ನಾಟಕದಲ್ಲಿ ಒಲವಾದ ಚಳವಳವು ಉಂಟಾಗಿದೆ ಎಂಬುದು ತಮ್ಮೆಲ್ಲರಿಗೂ ಗೊತ್ತಿದ್ದ ಮಾತು. ಈ ನಮ್ಮ ಕರ್ನಾಟಕವು ಅತ್ತಿತ್ತ ಕಡೆಗೆ ಹರಿದು ಹೋಗಿರುವದರಿಂದ ಆರ್ಥಿಕ ಉನ್ನತಿಯನ್ನಾಗಲೀ ರಾಜಕಾರಣ ವಿಷಯದ ಉನ್ನತಿಯನ್ನಾಗಲೀ ಸಾಂಸ್ಕೃತಿಕ ಉನ್ನತಿಯನ್ನಾಗಲೀ ಹೊಂದಿಕೊಳ್ಳುವುದು ಅವಶ್ಯವಾಗಿದೆ. ತಮ್ಮೆಲ್ಲರ ತಾಯಿಯಾದ ಭಾರತ ದೇಶದ ಸೇವೆಯನ್ನು ಮಾಡುವ ಕಾರ್ಯದಲ್ಲಿಯೂ ಕರ್ನಾಟಕದಿಂದ ಏನೂ ಆಗುವದು ಅಸಂಭವನೀಯವಾಗಿದೆ. ನಾವು ಸುತ್ತಮುತ್ತಲಿರುವ ಪ್ರಾಂತಗಳಿಗಿಂತಲೂ ರಾಜಕಾರಣದಲ್ಲಿಯೂ ಶಿಕ್ಷಣದಲ್ಲಿಯೂ ನಾಡ್ನುಡಿಯಲ್ಲಿಯೂ ಕಲೆಯಲ್ಲಿಯೂ ಸಾಮಾಜಿಕ ಜೀವನದಲ್ಲಿಯೂ ಹಿಂದುಳಿದುಹೋಗಿರುವೆವೆಂಬುದು ಸ್ಪಷ್ಟವಿದೆ. ನಮ್ಮ ಸಂಸ್ಕೃತಿಯ ಪ್ರಗತಿಯನ್ನಾಗಲೀ ರಾಜಕಾರಣದ ಪ್ರಗತಿಯನ್ನಾಗಲೀ ಕರ್ನಾಟಕದ ಏಕೀಕರಣವಿಲ್ಲದೆ ಆಗುವಂತಿಲ್ಲ. ಆದ್ದರಿಂದ ಕೊಡಗು ಬಾಂಧವರೇ! ಈ ಸತ್ಕಾರ್ಯದಲ್ಲಿ ನಮಗೆ ನೀವೂ ಬಹಳ ವಿಧದ ಬೆಂಬಲವನ್ನು ಕೊಡುವಿರೆಂದು ನಂಬಿರುವೆವು.

ಕೊಡಗು ನಾಡಿನ ಶೂರರಾದ ಒಮ್ಮೆಗಾರರಿಗೂ ಇಷ್ಟರ ವಳಗಾಗಿ ನಾವು ಅರಿಕೆಮಾಡಿಕೊಳ್ಳುವದು ನಮ್ಮ

ಕರ್ತವ್ಯವೆಂದು ಭಾವಿಸುತ್ತೇವೆ. ನಮ್ಮ ತಾಯಿನುಡಿಯಾದ ಕನ್ನಡ ಭಾಷೆಯೂ ನಾವು ಪೂಜಿಸುವ ದೇವರ ವಿಷಯವಾಗಿರುವ ಭಕ್ತಿ ಶ್ರದ್ಧೆಗಳೂ ನಮ್ಮೆಲ್ಲರಲ್ಲಿ ಬಿಗಿಯಾಗಿ ಬಂದಿರುವೆ. ಕೊಡಗು ಬಾಂಧವರಾದ ನಿಮ್ಮಲ್ಲಿ ಕಂಡುಬರುವ ವಿಲಕ್ಷಣವಾದ ವಂಶಾಭಿಮಾನವನ್ನೂ ಸಾಹಿತ್ಯದ ಭಾವನೆಗಳನ್ನೂ ನೋಡಿ ಯಾರಿಗಾದರೂ ಸೋಜಿಗವಾಗಬಹುದು. ಏಕೆಂದರೆ, ಇಂಥ ಸಣ್ಣ ಸಮಾಜವಾದರೂ ಇಂಥ ಗಟ್ಟಿತನವನ್ನು ನಮ್ಮ ಜನಾಂಗದ ಇತಿಹಾಸದಲ್ಲಿಯಂತೂ ಯಾರೂ ತೋರಿಸಿರುವದಿಲ್ಲ. ನಿನ್ನೆ ನಾವು ನಮ್ಮ ಉತ್ಕರ್ಷದ ಶಿಖರದಿಂದ ಪತಿತರಾಗಿರುವದೇನೋ ನಿಜ. ಆದರೆ ಇಂದಿಲ್ಲ, ನಾಳೆಯಾದರೂ ನಮ್ಮ ಹೆಸರಿಗೆ ತಕ್ಕಂಥ ಪರಾಕ್ರಮವನ್ನು ನಾವು ಮಾಡಿ ತೋರಿಸಬಹುದೆಂದು ನಮಗೆ ಧೈರ್ಯವುಂಟು. ಕರ್ನಾಟಕ ಮಾತೆಯ ಉದ್ಧಾರದ ಈ ಕಾರ್ಯದಲ್ಲಿ ಕೊಡಗು ಬಾಂಧವರೆಲ್ಲರೂ ಹಿರಿದಾದ ಮುಂದಾಳುಗಳಾಗಿ ನಿಲ್ಲುವರೆಂದು ನಮ್ಮ ಕೋರಿಕೆಯಿದೆ.'

ಆದುದರಿಂದ ನೀವು ನಿಮ್ಮ ದೃಷ್ಟಿಯನ್ನು ಕೊಂಚ ವಿಸ್ತೃತವನ್ನಾಗಿ ಮಾಡಿ ಸಂಯುಕ್ತ ಕರ್ನಾಟಕವನ್ನು ತಮ್ಮ ಕಣ್ಣೆದುರಿಗೆ ತಂದುಕೊಳ್ಳಬೇಕು. ಕರ್ನಾಟಕದಲ್ಲಿ ಕೊಡಗು ಪ್ರದೇಶದ ನಿಮಗಿದ್ದ ವ್ಯಕ್ತಿತ್ವವು ಮಾಯವಾಗ ಬಹುದೆಂಬ ಅಂಜಿಕೆಯನ್ನು ಬಿಟ್ಟು ಬಿಡಬೇಕು. ಕರ್ನಾಟಕದಲ್ಲಿ ನೀವು ಒಂದು ಕೂಡಿಕೊಂಡರೆ ನೀವು ನಿಮ್ಮ ಪ್ರಗತಿಯನ್ನು ಮಾಡಿಕೊಳ್ಳುವದಲ್ಲದೆ ಕರ್ನಾಟಕ ಮಾತೆಯ ಸೇವೆಯನ್ನೂ ಮಾಡಿದಂತಾಗುವದು. ಕರ್ನಾಟಕದ ಸೇವೆಯಿಂದಲೇ ಭಾರತ ರಾಷ್ಟ್ರದ ಸೇವೆಯಲ್ಲವೇನು? ಆದದರಿಂದ ವಿಶ್ವವಿದ್ಯಾಲಯದಿಂದೊಡಗೂಡಿದಂಥ ಸಂಯುಕ್ತ ಕರ್ನಾಟಕದ ನೋಟವನ್ನು ನಾವು ನಮ್ಮ ಕಣ್ಣಿನ ಮುಂದೆ ಕಟ್ಟಿಕೊಳ್ಳಬೇಕು.

ಈ ಹವಣಿಕೆಗೆ ಸರಕಾರದವರೂ ಸಮ್ಮತಿಯನ್ನು ಕೊಟ್ಟಿರುವರು. ಜಾತಿವಿಶಿಷ್ಟವಾದಂಥಾ ಪ್ರಾಂತವನ್ನಾಗಲೀ ಭಾಷೆ ವಿಶಿಷ್ಟವಾದ ಪ್ರಾಂತವನ್ನಾಗಲೀ ಮಾಡುವ ಅಧಿಕಾರವನ್ನು ಪಾರ್ಲಿಮೆಂಟಿನವರು ಗವರ್ನರ ಜನರಲ್ಲರಿಗೆ ಕೊಟ್ಟಿರುತ್ತಾರೆ. ನಮ್ಮ ತೀವ್ರವಾದ ಕಾಯಿದೆಗೆ ವಿರುದ್ಧವಲ್ಲದಂಥ ಹವಣಿಕೆಯಿಂದಲೇ ನಾವು ಕರ್ನಾಟಕ ಪ್ರಾಂತದ ಏಕೀಕರಣವನ್ನು ಮಾಡಬೇಕಾಗಿದೆ. ಮೋಂಟೆಗ್ಯೂ ಚೆಲ್ಮ್ಸ್‌ಫರ್ಡ ಸಾಹೇಬರ ವರದಿ ರಿಪೋರ್ಟಿನ ೨೪೬, ೨೪೭ನೇ ಕಲಂಗಳಲ್ಲಿ ಇದೇ ವಿಷಯದ ಚರ್ಚೆಯನ್ನು ಮಾಡಿ ಹೊಸ ಪ್ರಾಂತ್ಯಗಳನ್ನು ಹೇಗೆ ಮಾಡಬಹುದೆಂಬದರ ಬಗ್ಗೆ ನಿಶ್ಚಿತವಾಗಿಯೂ ಹೇಳಿರುವರು. ಪಾರ್ಲಿಮೆಂಟಿನ ಸಿಲೆಕ್ಟ್ ಕಮಿಟಿಯವರು ಇದಕ್ಕೆ ಬೆಂಬಲವನ್ನು ಕೊಟ್ಟಿರುವರು. ಮುಂಬಯಿ ಮತ್ತು ಮದರಾಸಿನ ವಿಶ್ವವಿದ್ಯಾಲಯಗಳೂ ಈ ತತ್ವಗಳಿಗೆ ತಮ್ಮ ಅನುಮತಿಯನ್ನು ಕೊಟ್ಟದಲ್ಲದೆ ಅದೇ ತತ್ವದ ಮೇರೆಗೆ ಕಾರ್ಯವನ್ನು ಮಾಡುತ್ತಲಿರುವರು.

ಆದುದರಿಂದ ಕೊಡಗಿನ ಪ್ರಿಯ ಬಾಂಧವರೇ! ಈ ಸಮಯದಲ್ಲಿ ನಾವೆಲ್ಲ ಹಿಂದುಳಿದುಕೊಂಡರೆ ನಮ್ಮ ಕಾಲಿನ ಮೇಲೆ ನಾವೇ ಕಲ್ಲು ಹಾಕಿಕೊಂಡಂತೆ ಆಗುವದು. ನಮ್ಮ ಒಟ್ಟು ಸಿದ್ಧವಾದಂಥ ಪಕ್ಕಿನ ದೆಸೆಯಿಂದ ನಾವೆಲ್ಲರೂ ಕೂಡಿ ಒಮ್ಮನಸ್ಸಿನಿಂದಲೂ ಒಗ್ಗಟ್ಟಿನಿಂದಲೂ ಹೋರಾಡೋಣ. ಕರ್ನಾಟಕದ ಉದ್ಧಾರವೆಂದರೇನೇ ಭಾರತ ಮಾತೆಯ ಉದ್ಧಾರವಾಗಿರುವದರಿಂದ ಈ ಪುಣ್ಯ ಕಾರ್ಯದಲ್ಲಿ ನೀವು ಹಿರಿದಾದ ಬೆಂಬಲವನ್ನು ಕೊಡುವಿರೆಂದು ನಂಬಿದ್ದೇವೆ.

ಶ್ರೀ ಶ್ರೀನಿವಾಸರಾವ್ ಕೌಜಲಗಿ, ಬಿ. ಎ. ಎಲ್ ಎಲ್. ಬಿ.
ರಂಗರಾವ್ ದಿವಾಕರ ಎಂ. ಎ., ಎಲ್ ಎಲ್. ಬಿ
[illegible] ಬಿ. ಎ. ಎಲ್ ಎಲ್. ಬಿ
[illegible]
ಶ್ರೀ ಶ್ರೀಧರರಾವ್ [illegible]

ಪತ್ರವ್ಯವಹಾರ

ಪತ್ರಲೇಖಕರ ಪಡೆದ ಅಭಿಪ್ರಾಯಗಳಿಗೆ ಪತ್ರಿಕಾ ಕರ್ತರು ಉತ್ತರವಾದಿಗಳಲ್ಲ. ಸಂ.

ಉದ್ಯೋಗಂ ಪುರುಷಲಕ್ಷಣಂ

ಅಯ್ಯಾ ಪತ್ರಿಕಾಕರ್ತರೇ,

ಈ ಸನ್ 1936ನೇ ಇಸವಿ ಏಪ್ರಿಲ್ 9ನೇ ತಾರೀಕಿನ ಸಂಚಿಕೆಯಲ್ಲಿ ಮಿ. ಎ. ಪಿ. ಮುತ್ತಣ್ಣನವರು ಮೇಲಿನ ಹೆಸರಿನಿಂದ, ಅದಕ್ಕೆ ಹಿಂದಿನ "ಹೆಂಗಸರ ಉದ್ಯೋಗ" ಎಂಬ ನಾಮಧೇಯದಿಂದ ನಾನು ಬರೆದಿದ್ದ ಬಾತ್ಮಿಗೆ ಉತ್ತರವನ್ನು ಕೊಟ್ಟಿದ್ದಾರಷ್ಟೆ. ಅವರಿಗೆ ಪ್ರತಿ ಉತ್ತರವನ್ನು ಕೊಡಲು ತಮ್ಮ ಅಮೂಲ್ಯವಾದ ಪತ್ರಿಕೆಯಲ್ಲಿ ಸ್ವಲ್ಪ ಎಡೆಯನ್ನು ಕೊಡಬೇಕಾಗಿ ಈ ಮೂಲಕ ಕೇಳಿಕೊಳ್ಳುತ್ತೇನೆ.

ಅಯ್ಯಾ ಮುತ್ತಣ್ಣನವರೇ! ನೀವು ನನ್ನ ಬಾತ್ಮಿಯನ್ನು ಪೂರಾ ತಪ್ಪು ಅರ್ಥಮಾಡಿಕೊಂಡಿರುವಿರಿ. ನನ್ನ ಬಾತ್ಮಿಯಲ್ಲಿ ನಾನು ಉದ್ಯೋಗವೆಂದರೆ ಅವರವರ ಕರ್ತವ್ಯವೆಂದು ಜನರು ತಿಳಿದುಕೊಳ್ಳದೆ ಸರ್ಕಾರಿ ಉದ್ಯೋಗವೆಂದು ತಿಳಿದುಕೊಂಡಿರುತ್ತಾರೆಂದೂ ಅದು ತಪ್ಪು ಅಭಿಪ್ರಾಯವೆಂದೂ ಸೂಚಿಸಿದ್ದೆನು. ಆದರೆ ನೀವು ಆ ವಿಷಯವನ್ನೇ ಬಿಟ್ಟು ನಿಮಗೆ ತೋರಿದ ಇನ್ನೊಂದು ವಿಷಯವನ್ನು ಬರೆದಿರುತ್ತೀರಿ. ಅದರಿಂದ ನಿಮ್ಮ ಬಾತ್ಮಿಗೆ ನಾನು ಜವಾಬು ಬರೆಯಬೇಕಾದ ಅಗತ್ಯವಿರುವದಿಲ್ಲವಾದರೂ ನಮ್ಮಿಬ್ಬರ ಬಾತ್ಮಿಯನ್ನು ಒದಿಯಲ್ಲಿ (Side by side) ಇಟ್ಟುಕೊಂಡು ಓದುವವರು ನಿಮ್ಮದೇ ನ್ಯಾಯವೆಂತಲೂ ನನ್ನ ಬಾತ್ಮಿಯು ತಪ್ಪೆಂದೂ ತಿಳಿದುಕೊಳ್ಳದ ಹಾಗೆ ನಾನು ಈ ಜವಾಬು ಬರೆಯಬೇಕಾಯಿತು. ಅದೇನೆಂದರೆ —

ನೀವು ಉದ್ಯೋಗ (Work) ಮತ್ತು ಕರ್ತವ್ಯ (duty) ಎಂಬುದರ ಭೇದವನ್ನು ನಾನು ತಿಳಿದುಕೊಂಡಿರುವದಿಲ್ಲವೆಂದು ಬರೆಯುವಿರಿ. ನಿಮ್ಮ ಬಾತ್ಮಿಯನ್ನು ಓದಿದರೆ ನಿಮಗೆ ಅವುಗಳ ಭೇದವು ತಿಳಿಯದಂತೆ ತೋರುವದೇ ಹೊರ್ತು ನನಗಲ್ಲ. ನೀವು ಕರ್ತವ್ಯವೆಂದರೆ "ದೇವಸ್ವರೂಪವೆಂದೂ" ಉದ್ಯೋಗವೆಂದರೆ 'ಮನುಷ್ಯಸ್ವರೂಪವೆಂದೂ,' ಬರೆಯುತ್ತೀರಿ. ಇದು ತಪ್ಪು. ಯಾವ ಮನುಷ್ಯನೇ ಆಗಲಿ ಅವನವನ ಕೆಲಸಗಳನ್ನು ಸಮಯಕ್ಕೆ ಸರಿಯಾಗಿ ಮಾಡಿಕೊಂಡು ಬರುವದೇ ಅವನ ಕರ್ತವ್ಯವಾಗಿರುವದು. ಇಂಥಾ ಕರ್ತವ್ಯವು ಎಲ್ಲಾ ತರದ ಕರ್ಮವನ್ನೂ ಒಳಕೊಂಡಿದೆ. ಅದು ಹ್ಯಾಗೆಂದರೆ —

Duty towards God (ದೇವರ ಸಮ್ಮಂಧ ಕರ್ಮ)
Duty towards King (ರಾಜರ ಸಮ್ಮಂಧ ಕರ್ಮ)
Duty towards parents (ತಂದೆ ತಾಯಿಗಳ ಸಂಬಂಧ ಕರ್ಮ)
Duty towards friends (ಸ್ನೇಹಿತರ ಸಮ್ಮಂಧ ಕರ್ಮ)
Religious duty (ಮತಸಮ್ಮಂಧ ಕರ್ಮ)

ಇದೇ ಮೇರೆ ಇನ್ನೂ ಅನೇಕ ಇವೆ. 'ಕರ್ತವ್ಯವನ್ನು ಮಾಡುವವರು ಅದರ ಪ್ರತಿಫಲವನ್ನು ಹಾರೈಸಕೂಡದು' ಎಂಬುದು ನಿಷ್ಕಾಮಕರ್ಮ. ಇದರ ವಿಷಯವನ್ನೇ ನಾನು ಮಾತಾಡಿರುವದಿಲ್ಲ. ಆದುದರಿಂದ ಈ ವಿಷಯ ನೀವು ನನ್ನ ಬಾತ್ಮಿಗೆ ಬರೆದ ಜವಾಬಿನಲ್ಲಿ ತರಬೇಕಾದ ಅವಶ್ಯವಿರಲಿಲ್ಲ. ಇದಲ್ಲದೆ ನೀವು ಮನೆಯ ಒಳಗಿನ ಕೆಲಸವನ್ನೂ ಹೊರಗಿನ ಕೆಲಸವನ್ನೂ ವಿಂಗಡಿಸುವದು ಅಸಾಧ್ಯವೆಂದು ಹೇಳುವಿರಿ. ಇದು ಹೇಗೆ? ಹೆಂಗಸರು ಹೊರಗಿನ ಕೆಲಸ ಅಂದರೆ ಭೂಮಿಯಲ್ಲಿ ಬೆಳೆಸಲಿಕ್ಕೆ ಬೇಕಾದ ಮಾಡುವ, ಅಡಿಗೆಗೆ ಬೇಕಾದ ಸೌದೆಯನ್ನು ಕಡಿಯುವ ಮತ್ತು ಇತರ ಗಂಡಸರು ಮಾಡಬೇಕಾದ ಕೆಲಸವನ್ನು ಮಾಡಬಲ್ಲರೇ? ಇಲ್ಲ. ಅದೇ ರೀತಿ ಗಂಡಸರು ಮಕ್ಕಳ ಪೋಷಣೆ, ಮನೆಯನ್ನು ಅಚ್ಚುಕಟ್ಟಾಗಿ ಇಟ್ಟುಕೊಳ್ಳುವದು ವಗೈರೆ ಮನೆಯೊಳಗಿನ ಕೆಲಸಗಳನ್ನು ಹೆಂಗಸರಷ್ಟು ತೃಪ್ತಿಕರವಾಗಿ ಮಾಡಲಾರರು. ಈಗ "ಪೂಜೆಮಾಡುವದು ಕೆಲಸವೋ ಯಾ ಕರ್ತವ್ಯವೋ?" ಎಂಬ ನಿಮ್ಮ ಪ್ರಶ್ನೆಗೆ ನೀವೇ ಜವಾಬು ಮಾಡಿಕೊಳ್ಳಬಹುದಲ್ಲವೇ? "ಪೂಜೆಮಾಡುವದಕ್ಕೆ ನ್ಯಾಯವಾದ ಹೊತ್ತು ಯಾವುದು?" ಎಂದು ಕೇಳುತ್ತೀರಲ್ಲ. ಇದನ್ನು ನಾನು ಮೊದಲೇ ತಿಳಿಸಿರುವದಿಲ್ಲವೇ? ದಯವಿಟ್ಟು ನನ್ನ ಬಾತ್ಮಿಯನ್ನು ಪುನ ಓದಿನೋಡಿ. ಇದಲ್ಲದೆ ಗಂಡುಮಕ್ಕಳನ್ನು ಹೊರಗಿನ ಕೆಲಸಕ್ಕೆ ತಾಯಿಯು ತರಬೇತು ಮಾಡುವದು ಹ್ಯಾಗೆಂದು ಕೇಳುತ್ತೀರಲ್ಲ. ಗಂಡುಮಕ್ಕಳು ಹುಟ್ಟಿದ ಕೂಡಲೆ ಹೊರಗಿನ ಕೆಲಸಕ್ಕೆ ಹೋಗುತ್ತಾರೆಯೊ, ಅವರು ಹೊರಗಿನ ಕೆಲಸಕ್ಕೆ ಹೋಗುವವರೆಗೆ ತಾಯಿಯ ಹತ್ತರ ಇರಬೇಡವೇ? ಆಗ ತಾಯಿಯು ಅವರನ್ನು ತರಬೇತುಮಾಡಬೇಡವೇ? ಹಾಗಾದರೆ ಮಕ್ಕಳು ಕೆಲಸಮಾಡುವಷ್ಟು ದೊಡ್ಡವರಾದ ಮೇಲೆ ಮಾತ್ರ ಅವರ ಎಚ್ಚರಿಕೆ ತೆಗೆದುಕೊಳ್ಳಬೇಕೆಂದು ನಿಮ್ಮ ಅಭಿಪ್ರಾಯವೋ? ಅಲ್ಲ. ಮಕ್ಕಳ ವಿದ್ಯೆಯು ಅವರು ತೊಟ್ಟಿಲಲ್ಲಿರುವಾಗಲೇ ಸುರುವಾಗುತ್ತದೆಂದು ನಿಮಗೆ ತಿಳಿಯಲಿಲ್ಲವೇ? ಇನ್ನಾದರೂ ಇದನ್ನು ಚೆನ್ನಾಗಿ ಜ್ಞಾಪಕದಲ್ಲಿಡಿ. ಹೆಂಗಸರು 'ಮನೆಕೆಲಸವನ್ನು ಮಾಡಿಕೊಂಡಿದ್ದರೆ ಮಾತ್ರ ಪತಿವ್ರತೆ'ಯೆಂದು ನಾನು ಹೇಳಲಿಲ್ಲ. ಆದರೆ ಅವರು ತಮ್ಮ ಕರ್ತವ್ಯಗಳನ್ನು ಸರಿಯಾಗಿ ಮಾಡಿಕೊಂಡು, ಅತಿ ಪತಿವ್ರತೆಯರೆನ್ನಿಸಿಕೊಂಡವರ ಉದಾಹರಣೆಗಳನ್ನು ತೆಗೆದುಕೊಂಡು ಅವರಂತೆಯೇ ತಾವು ಸಹ ಆಗಬೇಕೆಂದು ಪ್ರಯತ್ನಿಸಬೇಕೇ ಹೊರ್ತು ಸರ್ಕಾರಿ ಉದ್ಯೋಗಕ್ಕೆ ಗಮನಕೊಡಲಿಕ್ಕಿಲ್ಲ. . 'ವೆಂದು ಹೇಳಿರುವೆನು. ಇಲ್ಲಿ 'ಕರ್ತವ್ಯಕ್ಕೆ' ಮುಖ್ಯ ಸ್ಥಾನವಲ್ಲದೆ (Importance) 'ಮನೆಕೆಲಸಕ್ಕೆ' ಅಲ್ಲ. ಸೀತೆ, ದ್ರೌಪತಿ ಮತ್ತು ಸಾವಿತ್ರಿಯರು ಹೊರಗೆ ಹೋದರೂ ಪತಿವ್ರತೆಯರಲ್ಲವೇ? ಎಂದು ಕೇಳುತ್ತೀರಲ್ಲ. ಅವರು ಪತಿಯರ ಸೇವೆಯನ್ನು ಮಾಡಿಕೊಂಡು ಅವರ ಹಿಂದೆಯೇ ತಾವೂ ಹೋದರೇ ಹೊರ್ತು ಪತಿಯರನ್ನು ಅಗಲಿ ದುಡಿದು ಸಂಪಾದಿಸಲಿಕ್ಕೆ ಹೊರಗೆ ಹೋದರೇ? ಸರ್ಕಾರಿ ಉದ್ಯೋಗಕ್ಕೆ ಹೋದರೇ? ಸ್ವಲ್ಪ ತಿಳಿಸಿ.

ಕರ್ತವ್ಯವನ್ನು ಕೆಲಸಕ್ಕೆ ಸೇರಿಸಲು ಎತ್ತಿಸಬೇಡವೆಂದು ಹೇಳುತ್ತೀರಲ್ಲ. ಈಗ ಇವೆರಡರ ವ್ಯತ್ಯಾಸ ತಿಳಿಯಿತೇ? ಬೇರೆ ಬೇರೆ ಇಂಗ್ಲಿಷ್ ಶಬ್ದವಿದ್ದ ಮಾತ್ರಕ್ಕೆ ಅವುಗಳು ಬೇರೆಯಲ್ಲವೆಂದು ತಿಳಿಯಿರಿ. ಕರ್ತವ್ಯವೆಂದರೆ ಧರ್ಮವೆಂದು ಇನ್ನೊಂದು ಅರ್ಥವಿದೆ. ಆ ಪ್ರಕಾರವಾದರೂ ಸಹ ಗಂಡಸಿಗೆ ಅವನ ಧರ್ಮವಿದೆ. ಹೆಂಗಸಿಗೆ ಅವಳ ಧರ್ಮವಿದೆ. ಮಕ್ಕಳಿಗೆ ಅವರ ಧರ್ಮವಿದೆ. ಅವರವರು ಅವರವರ ಧರ್ಮವನ್ನು ಮಾಡಿಕೊಂಡು ಬಂದರೆ ಸಾಕು. ಹೆಂಗಸರು ಗಂಡಸರ ಯಾ ಮಕ್ಕಳ ಧರ್ಮವನ್ನು ಮಾಡಬೇಕಾದ ಅವಶ್ಯವಿಲ್ಲ. ಹೆಂಗಸು ಮತ್ತು ಗಂಡಸು ತಾಯಿತಂದೆಯರೆನ್ನಿಸಿಕೊಂಡ ಮೇಲೆ ಮಾಡುವದು ಮಾತ್ರ ಕರ್ತವ್ಯವೆಂದು ಹೇಳುತ್ತೀರಲ್ಲಾ! ವಿದ್ಯಾರ್ಥಿಯ ಕರ್ತವ್ಯ (Student's duty) ಎಂಬುದನ್ನು ನೀವು ಕೇಳಿರುವದಿಲ್ಲವೇ? ವಿದ್ಯಾರ್ಥಿ ಎಂದರೆ ತಂದೆ ಅಥವಾ ತಾಯಿ ಎಂದರ್ಥವಾಗುತ್ತದೆಯೇ? ಹೆಂಗಸರು ಹೊರಗೆ ದಾಟಿದರೆ ಅವರು ಪತಿವ್ರತೆಯರಲ್ಲದೆ ಹೋದಾರು ಎಂಬುದಾಗಿ ನಾನು ಸೂಚಿಸಿರುವದಿಲ್ಲ. ಪರಂತು ಅವರು ಹೊರಗೆ ಹೋದರೆ ಅವರ ಮುಖ್ಯವಾದ ಕರ್ತವ್ಯವನ್ನು ಮಾಡಲು ಆಸ್ಪದವಿಲ್ಲ. ಹಾಗಾಗಿ ಅವರು ಅದನ್ನು ಉದಾಸೀನ (neglect) ಮಾಡುತ್ತಾರೆಂದು ತಿಳಿಸಿರುವೆನು.

ಅಯ್ಯಾ ಮುತ್ತಣ್ಣನವರೇ, ನಮ್ಮ ಸ್ತ್ರೀಯರು ನಮ್ಮನ್ನ ಪ್ರೀತಿಯೆಂಬ ಸಾಗರದಲ್ಲಿ ಮುಳುಗಿಸುತ್ತಾರೆಂದು ಹೇಳುತ್ತೀರಲ್ಲ. ಇದು "ರಾಧೆಗೆ" "ಕೃಷ್ಣನ" ಮೇಲಿನ ಪ್ರೀತಿಗೆ ಸಮವೆಂದು ತಿಳಿದುಕೊಂಡಿರುವಿರೋ? ಎಂದೂ ಅಲ್ಲ. ಅದನ್ನು ನಿಜವಾದ ಪ್ರೀತಿಯೆಂದು ತಪ್ಪು ಅಭಿಪ್ರಾಯ ಪಟ್ಟುಕೊಳ್ಳಬೇಡ. ನೀವು ಆರೋಗ್ಯಸ್ಥರಾಗಿದ್ದು ದುಡಿದು ತಂದು ಹಾಕುತ್ತಾ ಇರುವವರೆಗೆ ಆ ಪ್ರೀತಿ ಇರಬಹುದು. ನಿಮ್ಮಿಂದ ದುಡಿಯಲಿಕ್ಕೆ ಆಗದೆ ಇರುವ ಸಮಯದಲ್ಲಿ ಆ ಪ್ರೀತಿಯು ಕ್ರಮೇಣ ಕಡಿಮೆಯಾಗುತ್ತಾ ಬರುವದು. ನೀವು ಒಂದು ವೇಳೆ 8—10 ದಿನ ಕಾಯಿಲೆಯಲ್ಲಿ ಮಲಗಿದ್ದರೆ ನಿಮ್ಮ ಹೆಂಡತಿಯು ಅತಿ ಆತುರದಿಂದ ಚೆನ್ನಾಗಿ ನೋಡುವಳು. ಇದರಲ್ಲಿ ಸಂದೇಹವಿಲ್ಲ. ಆದರೆ ಒಬ್ಬನು ಎರಡು ವರ್ಷ ಕಾಯಿಲೆಯನ್ನಾಗಿ ಮಲಗಿದ್ದಿರಲಿ. ಆಗ ಅವನ ಹೆಂಡತಿಯು ಹ್ಯಾಗೆ ನೋಡುತ್ತಾಳೆಂಬುದನ್ನು ಚೆನ್ನಾಗಿ ವಿಚಾರಿಸಿ. ಹೀಗೆ ಮಲಗಿದಲ್ಲಿರುವದಕ್ಕಿಂತ ಸತ್ತಿದ್ದರೆ ಒಳ್ಳೆಯದಾಗಿತ್ತು ಎಂದು ಹೇಳುವದಿಲ್ಲವೇ? ಆಗ ಇಂಥಾ ಪ್ರೀತಿಯು ಎಲ್ಲಿಗೆ ಹೋಗುವದು? ಯಾರಾದರೂ ಸತ್ತುಹೋದವರ ಮನೆಗೆ ಎಂದಾದರೂ ಹೋಗಿ ಅವನ ಹೆಂಡತಿಯಾಗಲೀ, ಸಮ್ಮಂಧಕರಾಗಲೀ ಅಳುವದನ್ನು ಕೇಳಿರುತ್ತೀರೋ? ನೀನು ಸತ್ತುಹೋದೆಯಲ್ಲಾ? ನಿನ್ನ ಮುಂದಿನ ಪಾಡೇನು? ಸ್ವರ್ಗವನ್ನು ಸೇರುವಿಯೋ? ನರಕವನ್ನು ಸೇರುವಿಯೋ? ಪುನಃ ಉತ್ತಮವಾದ ಜನ್ಮವೆತ್ತುವಿಯೋ? ಏನಾಗುತ್ತೀಯೋ? ಎಂಬುದಾಗಿ ಯಾರಾದರೂ ಒಂದು ಶಬ್ದವನ್ನಾದರೂ ಅವನ ವಿಷಯವೆತ್ತುವರೇ? ಇಲ್ಲ. ನೀನು ಸತ್ತುಹೋದೆ, ನನ್ನ ಪಾಡೇನು, ನಾನು ಹೇಗೆ ಬದುಕಲಿ, ಮಕ್ಕಳನ್ನು ಹೇಗೆ ಸಾಕಲಿ, ಸಾಯುವಾಗ ಏನೂ ಸಂಪಾದಿಸಿ ಇಡಲಿಲ್ಲವಲ್ಲಾ, ನನಗೆ ಒಂದು ಧೈರ್ಯವನ್ನು ಹೇಳಲಿಲ್ಲವಲ್ಲಾ ಎಂದು ಮಾತ್ರ ಅಳುವರು. ಇದು ಸ್ವಾರ್ಥತೆಯಲ್ಲವೇ? ನಿಜವಾದ ಪ್ರೀತಿಯಾಗಿದ್ದರೆ ಇಬ್ಬರ ಕಷ್ಟ ಸುಖವನ್ನು ಯಾಕೆ ಹೇಳಬಾರದು? ಇದರಿಂದ ದಯವಿಟ್ಟು ಸಂಸಾರದ ಅಸ್ಥಿರತ್ವದ ವಿಷಯ ಪಂಡಿತರು ಬರೆದಿರುವ ಕೆಲವು ತತ್ವಗಳನ್ನು ಓದಿ. ಪತಿವ್ರತಾಧರ್ಮವನ್ನು ಕಲಿಸುವದು ಅಸಾಧ್ಯ ಮಾತ್ರವಲ್ಲ, ಅವಿಚಾರವೂ ಹೌದು, ಎಂಬದಾಗಿ ತಿಳಿದುಕೊಂಡಿರುತ್ತೀರಲ್ಲ. ಇದನ್ನು ಕಲಿಸದಿದ್ದರೆ ಅವರೇ ತಿಳಿದುಕೊಳ್ಳುವ ಬಗೆ ಹೇಗೆ? ಇದು ಎಂದೂ ಗಂಡಸರ ಗುಣಕ್ಕನುಗುಣವಾಗಿ ಹೋಗುವದಿಲ್ಲ. ಗಂಡಸರು ಎಷ್ಟು ದುಷ್ಕೃತ್ಯವನ್ನು ಮಾಡಿದರೂ ಸಹ ಅವರ ಹೆಂಗಸರು ಅವರ ಕರ್ತವ್ಯದಿಂದ ಪತಿವ್ರತೆಯರೆನ್ನಿಸಿಕೊಳ್ಳುವರೆಂದು ಚೆನ್ನಾಗಿ ತಿಳಿಯಿರಿ. ಹೆಂಗಸಿಗೆ ಈ ವಿಷಯವು ಚೆನ್ನಾಗಿ ತಿಳಿದಿದ್ದರೆ ಅವರನ್ನು ಅಂಥಾ ಕರ್ತವ್ಯದಿಂದ ಬಿಡಿಸಲು ಯಾರಿಂದಲೂ ಸಾಧ್ಯವಿಲ್ಲ.

ಪತಿಯರು ಇರುವಾಗ ಹೊರಗಿನ ಕೆಲಸಕ್ಕೆ ಹೋಗದೆ ಇದ್ದು ಪತಿಯ ದಿನವು ಕಳೆದ ಮೇಲೆ ಉಣ್ಣುವದಕ್ಕಾಗಲೀ ಸೌದೆಯನ್ನು ಕಡಿಯಲಿಕ್ಕಾಗಲೀ ಪೇಟೆಯಲ್ಲಿ ವ್ಯಾಪಾರ ಮಾಡಲಿಕ್ಕಾಗಲೀ, ಅಥವಾ ಬೇರೆ ಏನಾದರೂ ಸರ್ಕಾರಿ ಉದ್ಯೋಗಕ್ಕಾಗಲೀ ಹೋದ ಹೆಂಗಸರೆಷ್ಟು ನಮ್ಮಲ್ಲಿರುವರು? ಆಗಲೂ ಸಹ ಅವರು ಒಳಗಿನ ಕೆಲಸದಲ್ಲಿರುವರೇ ಹೊರ್ತು ಹೊರಗಿನ ಕೆಲಸವನ್ನು ಮಾಡಲಾರರು. ಆಗ ಅವರಿಗೆ ಆ ಕೆಲಸವನ್ನು ಮಾಡಲು ಅವರ ದೇಹರಚನೆಯು ಬದಲಾಗುವದಿಲ್ಲ. ಅದಕ್ಕಾಗಿ ಅವರನ್ನು ಮೊದಲೇ ತರಬೇತು ಮಾಡಬೇಕಾದ ಅವಶ್ಯವಿಲ್ಲ. "ರಾಜಕೀಯವಿಲ್ಲದೆ ಮತವಿಲ್ಲಯೆ." ಎಂದು ಹೇಳುತ್ತೀರಲ್ಲ. ಇದು ಪಾಶ್ಚಿಮಾತ್ಯರ ಧರ್ಮವಲ್ಲದೆ ಹಿಂದುಗಳದಲ್ಲ. ಪೂರ್ವಕಾಲದಿಂದಲೇ ಹಿಂದುಗಳ ಸ್ವಭಾವ ಗುಣವು ಮತವನ್ನು ಅವಲಂಬಿಸಿದೆಯಲ್ಲದೆ ರಾಜಕೀಯವನ್ನಲ್ಲ. ಇದಕ್ಕೆ ನಮ್ಮ ಪೂರ್ವಿಕರ ಚರಿತ್ರೆಯೇ ಆಧಾರವಾಗಿದೆ. ಅಲ್ಲದೆ ಈ ವಿಷಯ ನನ್ನ ಸ್ವಾಮಿ ವಿವೇಕಾನಂದರವರು ಘಂಟಾ ಘೋಷವಾಗಿ ಹೇಳಿರುತ್ತಾರೆ. ಆದುದರಿಂದ ನಮ್ಮ ಹೆಂಗಸರು ಈ ವಿಷಯವನ್ನು ಕೈಕೊಂಡರೆ ಅವರ ಮುಖ್ಯವಾದ ಕರ್ತವ್ಯವನ್ನು ಅವರು ಮಾಡುವದಿಲ್ಲವೆಂದು ನಾನು ಹೇಳಿದ್ದಾಗಿದೆ. ದಯವಿಟ್ಟು ನನ್ನ ಬಾತ್ಮಿಯನ್ನು ಪುನಃ ಓದಿ ತಾಯಿಯು ಹೊರಗೆ ಹೋದರೆ ಮಕ್ಕಳ ಸ್ಥಿತಿಯು ಏನಾಗುತ್ತದೆಂದು ಹೇಳಿದ್ದನ್ನು ಸ್ವಲ್ಪ ಮನಸ್ಸಿಗೆ ತೆಗೆದುಕೊಳ್ಳಿ.

ಈಗಲಾದರೂ ನನ್ನ ನಿಜವಾದ ಅಭಿಪ್ರಾಯವನ್ನು ತಿಳಿದುಕೊಂಡು ಈ ವಿಷಯ ನೀವು ತಪ್ಪು ಅಭಿಪ್ರಾಯ ಮಾಡಿಕೊಂಡದ್ದನ್ನು ದಯವಿಟ್ಟು ತಿದ್ದಿಕೊಳ್ಳಿ. ಈ ರೀತಿ ನನ್ನ ಅಭಿಪ್ರಾಯ ನನ್ನ ನೆರವೇರಿಸಲು ಹೆಂಗಸರು ಸಭೆಯನ್ನು ಮಾಡಿಕೊಂಡು ಅಂಥಾ ವಿಷಯವನ್ನು ಚರ್ಚಿಸಿದರೆ ಅದರಿಂದ ಹೆಂಗಸರ ಮತ್ತು ಗಂಡಸರ ಈಗಿನ ಸ್ಥಿತಿಯು ಉತ್ತಮವಾಗುವದಲ್ಲದೆ ಎಂದೂ ಕೆಡುಕುಂಟಾಗುವದಿಲ್ಲ. ಇದರಿಂದ ನೀವು ಈ ವಿಷಯದಲ್ಲಿ ಸ್ವಲ್ಪವೂ ಸಂದೇಹವೂ ಭಯವೂ ಪಡಬೇಕಾದುದಿಲ್ಲ. ಆದುದರಿಂದ ಹೆಂಗಸರೇ ನೀವು ನಿಮ್ಮ ಕರ್ತವ್ಯವನ್ನು ಸರಿಯಾಗಿ ಮಾಡಿಕೊಂಡು ಸಂಸಾರವನ್ನು ಇದರಿಂದ ಹಿಂದೂ ದೇಶವನ್ನು ಉದ್ಧಾರಮಾಡಿ.

ನಾಡಿನವ.

ಮನೋಲ್ಲಾಸಿನಿ ತೈಲ.

ತಲೆನೋವು, ತಲೆ ತಿರುಗುವುದು, ತಲೆಯಿಂದ ಕಣ್ಣು, ಕಿವಿಯಿಂದ ಕೀವು ಸೋರುವುದು ಕಿವುಡುತನ, ಕಣ್ಣುನೋವು, ಅಪಸ್ಮಾರ, ನಿದ್ರೆ ಬಾರದಿರುವುದು, ನೆನಪು ಶಕ್ತಿ ಕುಂದಿಹೋಗುವುದು ಇವುಗಳನ್ನೆಲ್ಲ ಖಂಡಿತ ಗುಣಮಾಡುತ್ತದೆ ಉದುರುವ ಕೂದಲನ್ನು ನಿಲ್ಲಿಸಿ ಬೆಳೆಯುವ



ಕೂದಲನ್ನು ಬೆಳೆಯಿಸಿ ಕೂದಲಿಗೆ ಸೌಂದರ್ಯವನ್ನೂ ಹೊಳಪನ್ನೂ ಕೊಟ್ಟು ಅಕಾಲಕ್ಕೆ ಹಣ್ಣಾಗುವ ಕೂದಲನ್ನು ತಡೆದು ಕೂದಲು ಇಲ್ಲದ ಸ್ಥಳದಲ್ಲಿ ಹೊಸ ಕೂದಲನ್ನು ಹುಟ್ಟಿಸುತ್ತದೆ. ಬೆಲೆ ಸೀಸೆಗೆ ರೂ 1, 3 ಸೀಸೆಗೆ 2—10—0, ಒಂದು ದೊಡ್ಡ ಸೀಸೆಗೆ ರೂ 2, 3 ಸೀಸೆಗಳಿಗೆ 5—8—0.

ಚಂದನಾಸವ.— ಇದು ಪ್ರಮೇಹ, ಮೂತ್ರಕೃಚ್ಛ್ರ, ಮೂತ್ರ ಪದೇಪದೇ ಹೋಗುವುದು, ಮೂತ್ರಕೋಶದ ಉರಿ, ಮೂತ್ರಸಂದಿಗಳ ಉರಿ ಮೂತ್ರನಾಳದಲ್ಲಿ ಹುಣ್ಣು, ಮೂತ್ರ ಹೊಯ್ಯುವಾಗ ಉರಿಯುವುದು, ಮೂತ್ರನಾಳದಿಂದ ಕೀವು ಬರುವುದು, ಮೂತ್ರದಲ್ಲಿ ಧಾತು, ಹುಡಿ ಹೋಗುವುದು, ಆಗಾಗ್ಗೆ ಮೂತ್ರ ಬರುವದು, ಮೂತ್ರ ತಡೆಯಲಿಕ್ಕೆ ಸಾಮರ್ಥ್ಯವಿಲ್ಲದಿರುವುದು, ದೇಹದಲ್ಲಿ ಉರಿ, ಬಾಯಾರಿಕೆ, ಸ್ವಪ್ನಾವಸ್ಥೆ, ಮೂತ್ರನಾಳದಲ್ಲಿ ಚುಚ್ಚುವ ನೋವು ಇವುಗಳಿಗೆ ಪರಮ ಔಷಧಿ ಗಂಡಸರಿಗೂ ಹೆಂಗಸರಿಗೂ ಇದು ಅತ್ಯುತ್ತಮ ಬೆಲೆ—ಬಾಟ್ಲಿ 1, 3, 6ಕ್ಕೆ ರೂ 1—4—0, 3—8—0, 6—12—0.

ರೋಮನಾಶಿನಿ— ಈ ಹುಡಿಯನ್ನು ನೀರಲ್ಲಿ ಕಲಸಿ ಮೈಯಲ್ಲಿ ರೋಮವಿರುವ ಭಾಗಕ್ಕೆ ಹಚ್ಚಲು ರೋಮವು ಉದುರಿ ಬೀಳುವುದು ಡಬ್ಬಿ ೧ಕ್ಕೆ 6 ಆಣೆ, 3 ಡಬ್ಬಿಗಳಿಗೆ ರೂ. 1, 1 ಡಜನಿಗೆ 3—8—0

ಅಮೃತರಿಷ್ಟ.— ಇದು ಕ್ವಿನೀನು ಮೀಸದಿರುವ ಉತ್ತಮವಾಗಿರುವ ಔಷಧಿ ಎಲ್ಲಾ ತರದ ಜ್ವರಕ್ಕೆ ಉತ್ತಮ, ಬೆಲೆ.— ಬಾಟ್ಲಿ 1, 3, 6ಕ್ಕೆ ರೂ 1—1—0; 3—8—0; 6—12—0

ಲೋಹಾಸವ.— ಇದು ಜ್ವರಗಡ್ಡೆಗೆ ಮತ್ತು ಮಲೇರಿಯ ಜ್ವರದಿಂದುಂಟಾದ ಅಶಕ್ತತೆಗೆ ಉಪಯುಕ್ತ ಬೆಲೆ—ಬಾಟ್ಲಿ 1, 3, 6ಕ್ಕೆ ರೂ, 1—4—0; 3—8—0, 6—12—0,

ನಮ್ಮ ಕೆಟಲಾಗು ತರಿಸಿ ನೋಡಿರಿ.

ವಿಳಾಸ—ಮನೋಲ್ಲಾಸಿನಿ ಕಂಪೆನಿ,
52—18 9 ಮಂಗಳೂರು, ಕಂಕನಾಡಿ.

Apply for our shooting Season's Clearance Sale Catalogue of Brand New Goods.

10 to 25 percent Reductions in Prices.

No License Required !! No Licenser Required



Webley and Scott Air Pistol, cal ·177 or 22, bore Powerful and Accurate complete with a sample box of slugs, two spare washers, a brush for cleaning, and a bookletof instructions Rs. 30/— Free delivery.

Pwerful German Diana Air gun Handsome and Accurate, takes B S A Patern No· 1 Slugs and Darts· expressly recommendable for Target Practice Rs 15/ Free delivery

Brilliant Search Light Lamp for Night Sports Rs 30 — Free delivery

No License required to purchase or to possess the above. items.

Reliable D B B L 12 bore guns	Rs. 60/— and upwards	
Do S. B B L 12	do Rs 40/-	do
D· B· M L· Guns	„ 45 -	do
S. B· M· L. do.	„ 30/—	do
S· B. B L· Rifles	„ 25/—	do
B L· Revolvers and Pistols	„ 30/—	do.

Arms, Ammunition and shooting requisites of almost every kind andquality offered at exceptionally favourable rates ANumber of good quality second hand weapons also offered for sale in theNew Catalogue

GOOLAMHUSIAIN ALLIBHOY & SONS
Largest Importers of Firearms and Ammunition,
Cheapest priced firm in India,

24. 13 210 Abdul Rehman Street, BOMBAY·

೧೦೦೦ ರೂಪಾಯಿಗಳ ಬಹುಮಾನ.

ಲೋಕಪ್ರಸಿದ್ಧವಾದ ಸಾಲಂಮಿಸ್ರಿ ಮುರಬ್ಬಾ.

ನಮ್ಮ ಟ್ರೇಡ್ ಮಾರ್ಕನ್ನು ನೋಡಿ ಈ ಔಷಧ ತೆಗೆದುಕೊಳ್ಳಿರಿ.

ಇದರ ಸೇವನೆಯಿಂದ ವೀರ್ಯವು ನೀರಿನಂತೆ ಇದ್ದರೂ, ಸ್ವಪ್ನೇಂದ್ರಿಯವಾದರೂ, ಸ್ತ್ರೀ ಸಂಘಕ್ಕೆ ಮೊದಲೇ ಸ್ಖಲನವಾದರೂ, ಮೂತ್ರದೊಂದಿಗೆ ಹೋಗುತ್ತಿದ್ದರೂ ದೋಷರಹಿತವಾಗಿ ಶರೀರಕ್ಕೆ ಆರೋಗ್ಯವನ್ನೂ ಧಾರ್ಢ್ಯತೆಯನ್ನೂ ಆಯುಸ್ಸು, ಬಲ, ತೇಜಸ್ಸು ಉಂಟು ಮಾಡುವದು. ಅಜೀರ್ಣ ಮಲಬದ್ಧತೆ, ಮೈದಾನ ಬಹಿರ್ದೆಸೆ, ಕೈಕಾಲು ಸೊಂಟ ನೋವುಗಳಿಗೆ ಇದು ದಿವ್ಯ ಔಷಧವು ಈ ಸಾಲಂಮಿಸ್ರಿ ...



... ಬೆಳೆಯುತ್ತದೆ.

ಈ ಔಷಧದಿಂದ ಗುಣಹೊಂದಿರುವ ಅನೇಕ ಮಹನೀಯರು ತಾವಾಗಿಯೇ ಅನೇಕ ದೇಶಗಳಿಂದಲೂ ಆಫ್ರಿಕ, ಬರ್ಮ, ಪಿನಾಂಗ, ಸಿಂಗಪೂರ್, ಸಿಲೋನ್, ಬೊಂಬಾಯಿ, ಕಲ್ಕತ್ತ, ಮದ್ರಾಸು ಮತ್ತು ಇಂಡಿಯದ ಅನೇಕದಲ್ಲಿ ಎಲ್ಲಾ ಸ್ಥಳಗಳಿಂದಲೂ ನಮಗೆ ಯೋಗ್ಯತಾ ಪತ್ರಿಕೆಗಳನ್ನು ಕಳುಹಿಸಿರುವರು. ಇವುಗಳ ನಕಲನ್ನು ಯಾರಾದರೂ ತರಿಸಿ ನೋಡಬಹುದು. ಇವುಗಳು ಸ್ವಂತ ... ಮೇಲೆ ... ನಾವು ... ೧ ಡಬ್ಬವನ್ನು ೧೫ ದಿನ ಸೇವಿಸಿದಲ್ಲಿ ಗುಣವು ಖಂಡಿತವಾಗಿ ತೋರಬಹುದು ... ಡಬ್ಬಿಗಳು ... ವಾಗಿ ಗುಣವನ್ನುಂಟು ಮಾಡುವವು. ಹೆಸರು ವಿಳಾಸಗಳನ್ನು ವಿವರವಾಗಿ ಬರೆಯಬೇಕು. ... ಮಾಡಿ ನೋಡಿದರೆ ಖಾತ್ರಿ ಉಂಟಾಗುತ್ತೆ.

ಕ್ರಯ ಡಬ್ಬಿ ೧ಕ್ಕೆ ರೂ, ೩—೦—೦ ಅಂಚೆ ಖರ್ಚು ೧ರಿಂದ ೩ ಡಬ್ಬಿಗಳಿಗೆ ೦—೮—೦ ಆಣೆ ... ಎಲ್ಲಾ ಸ್ಥಳಗಳಲ್ಲಿಯೂ ಅವಶ್ಯಕವಾಗಿರುತ್ತೆ. ... ಈ ಪತ್ರಿಕೆಯ ಹೆಸರನ್ನು ಬರೆಯಬೇಕು.

ಟೆಲಿಗ್ರಾಫ್ ಅಡ್ರೆಸ್, } ಡಿ. ಮನ್ನಾಲಾಲ್, ದಿಲ್ಲಿ ನೇಟಿವ್ ವೈದ್ಯರು,
ಮಿಸ್ರಿ, ಬೆಂಗಳೂರು ಸಿಟಿ, } ಸಾಲಂಮಿಸ್ರಿ ಮುರಬ್ಬ ಡಿಪೋ,
ಬೆಂಗಳೂರು ಸಿಟಿ.

12—4

"ಲೋಕರಹಸ್ಯ."

ಸೃಷ್ಟಿಯ ಅತ್ಯಾಶ್ಚರ್ಯ ರೀತಿಗಳು, ವ್ಯಾಪಾರದ ವಿಷಯಗಳು, ಹೆಂಗಸರಿಗೆ ಬೇಕಾದ ಗೃಹಕೃತ್ಯದ ವಿಷಯಗಳು, ಮಕ್ಕಳನ್ನು ಸಾಕುವ ವಿಷಯಗಳು, ಬಡವರಿಗೆ ಬೇಕಾದ ಹಣ ಸಂಪಾದನೆಯ ವಿಷಯಗಳು, ರಸಿಕರಿಗೆ ವಿನೋದ ವಿಚಾರ, ರಾಜಕೀಯ ವಿಷಯಗಳು, ಆಯುರ್ವೇದಯುನಾನಿ ವೈದ್ಯ ಸಂಗ್ರಹ, ಪ್ರತಿಯೊಬ್ಬನೂ ತಿಳಿಯಬೇಕಾದ 'ಲಾ' ವಿಚಾರ, ವಿದ್ಯಾ ವಿಷಯ, ವೇದಾಂತ ವಿಚಾರಗಳಿಂದಲೂ, ತುಂಬಿ ತುಳುಕುತ್ತಿರುವ ಈ ಹೊಸ ಪತ್ರಿಕೆಗೆ ವರ್ಷಕ್ಕೆ ಚಂದಾ ರೂ. 3—8—0 ಮಾದರಿ ಸಂಚಿಕೆಗೆ 0—5—0.

ಪ್ರತಿ ತಿಂಗಳಲ್ಲೂ 60 ಪುಟಗಳಿಗೆ ಕಡಿಮೆಯಿಲ್ಲದೆ ವಿಷಯಗಳಿರುತ್ತವೆ

"ಲೋಕರಹಸ್ಯ" ಆಫೀಸು
ವೀರರಾಜೇಂದ್ರಪೇಟೆ,
(ಕೊಡಗು.)

2

ಚೇಳುಗಳ ವಿಷಧ್ವಂಸಿ

ಚೇಳು ಕಡಿದ ಸ್ಥಳದಲ್ಲಿ ಸರ್ವ ಚೇಳುಗಳ ವಿಷಧ್ವಂಸಿಯ ... ಈ ಔಷಧವನ್ನು ಇಟ್ಟ ಒಡನೆಯೇ ಗುಣವನ್ನು ... ಒಂದು ನಿಮಿಷದಲ್ಲಿ ... ಮಾಡುವದಾಗುವದು.

ಔಷಧದಲ್ಲಿ ... ಗುಣ ... 100 ರೂಪಾಯಿ ಬಹುಮಾನ ಕೊಡುವೆವು.

ಕ್ರಯ. ಸೀಸೆ 1ಕ್ಕೆ 8 ಆಣೆ. ಡಜನ್ 1 ರೂ 5.
16 ... ದೊಡ್ಡ ಪೇಟೆ

ಬಾಗುಡಿ ಅಂಜಿನ ಸೀರೆಗಳು

ಬಂಗಾರದ ಅರಸೀನ ಸೀರೆಯಂತೆಯೇ ಇರುವವು. ... ಸಮವಾಗಿಯೂ ಇರುವದು. ... ಸೀರೆಗಳು ... ಈ ಕ್ರಯಕ್ಕೆ ... ಒಂದೆರಡನ್ನು ತರಿಸಿ ಪರೀಕ್ಷಿಸಿರಿ.

ಕ್ರಯ ನಂ. 1. 6—8—0
ನಂ. 2 7—8—0

ವಿಳಾಸ — ... ಕೃಷ್ಣ ಅಂಡ್ ಕೋ·
12—11 ನಂ ... ತಿಮ್ಮನಾಯಕನ ಕೇರಿ, ಮದರಾಸು.

ಬೇಕಾಗಿವೆ.

ಬೀಟೆಮರದ ತೊಲೆಗಳು ಬೇಕಾಗಿವೆ.

ಒಳ್ಳೇ ಬೆಲೆ ಕೊಡಲಾಗುವದು. ಹೆಚ್ಚಿನ ಸಂಗತಿಗೆ ದಯವಿಟ್ಟು ಈ ಕಳಗಿನ ವಿಳಾಸಕ್ಕೆ ಬರೆದುಕೊಳ್ಳುವದು.

WANTED

Rose wood logs (Beeti)

Good price offored.

For further particulars please apply to:—

R. FRAMJEE,
12.5 **Mercara**

ಅಂಪಾಯರ್ ಆಫ್ ಇಂಡಿಯಾ ಲೈಫ್ ಇನ್ಶುರೆನ್ಸ್ ಕಂಪೆನಿ ಲಿಮಿಟೆಡ್.

(ಸ್ಥಾಪಿತ 1897)

ಮೂಲಧನ ರೂ. 2,50,00,000 ಕ್ಕೆ ಮೀರಿದೆ

ವಿಮೆ ದರಗಳು ಅತ್ಯಂತ ಕಡಿಮೆ. ಉದಾರತ್ವದ ಲಾಭ ಮತ್ತು ಪೂರ್ಣ ಭದ್ರತೆ.

ಉದಾಹರಣೆ:—ಯಾವನೊಬ್ಬ ... ಇಪ್ಪತ್ತನೆ ವಯಸ್ಸಿನಲ್ಲಿ ತನ್ನ ಮರಣಾನಂತರ ಲಾಭದೊಡನೇ ದೊರಕುವ 1000 ರೂಪಾಯಿಯ ಪಾಲಿಸಿಯನ್ನು ... ರೂ. 48—10—0 ... 20 ವರುಷಗಳ ... 1000 ಯ ಪಾಲಿಸಿಯನ್ನು ... ಪಾಲಿಸಿಗೆ ... ವಯಸ್ಸಿನ ವರೆಗೆ ... ಕೊಡಲ್ಪಡುವದು.

... ಈ ಕಳಗಿನ ವಿಳಾಸದಲ್ಲಿ ದೊರೆಯುತ್ತವೆ:—

... ಬ್ರಾಂಚ್ ಸೆಕ್ರೆಟರಿ,
... 152 ... ಕಮರ್ಶಿಯಲ್ ಸ್ಟ್ರೀಟ್,
... ಎಸ್ಟೇಟ್, ಅಥವಾ ಬೆಂಗಳೂರು.

24-11

ಸತ್ಯಮೇಜಯತೇ.

(ಗುಣವಾಗದಿದ್ದರೆ ಹಣ ವಾಪಸ)

ಧಾತುಪೌಷ್ಟಿಕ ಕಾಮೋತ್ತೇಜಕ, ಇಂದ್ರಿಯಸ್ತಂಭಕವಾದ

ಮದನೋದ್ಭವ ಗುಳಿಗೆ.

ಜನನೇಂದ್ರಿಯದ ಶಿಥಿಲತೆ ನಿಬಾ೯ಲತೆ ನಪುಂಸಕತ್ವ ಶೀಘ್ರ ಸ್ಖಲನ ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣವಾಗಿ ಧಾತು ಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋಲ್ಲಾಸಕ ಇಂದ್ರಿಯಸ್ತಂಭಕ, ಗರ್ಮಿ, (ಟಾಕಿ) ಗುಪ್ತಪ್ರದೇಶದ ಮೇಲೆ ಹುಟ್ಟುವ ಎಲ್ಲ ತರಹದ ಬಕ್ಕೆಗಳು, ಹುಣ್ಣುಗಳು ಪಿತ್ತದ ಬಾಧೆಗಳು, ಕಟಿಶೂಲೆ ವಾತರೋಗವು ಮುಂತಾದವು ಅತಿತ್ವರಿತ ಗುಣವಾಗಿ ದೇಹಕ್ಕೆ ನಿರೋಗತ್ವವೂ ಕಾಂತಿಯೂ ಮನಸ್ಸಿಗೆ ಸಂಪೂರ್ಣ ತೃಪ್ತಿಯೂ ಉಂಟಾಗುತ್ತದೆ ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗುತ್ತವೆ ಕಿಮ್ಮತ್ತು ೬೦ ಗುಳಿಗೆಗಳಿಗೆ ೪ ರೂಪಾಯಿ ಇದನ್ನು ಸೇವಿಸುವಾಗ್ಗೆ **ನಪುಂಸಕತ್ವಾರಿ ತೈಲವನ್ನು** ಉಪಯೋಗಿಸಿದರೆ ಉತ್ತಮ. ಕಿಮ್ಮತ್ತು ಬಾಟ್ಲಿಗೆ ರೂ. ೨-೧೨-೦

ಪ್ರಮೇಹನಿವಾರಿಣೀ—ಇದರ ಸೇವನೆಯಿಂದ ಮೂತ್ರಸ್ಥಾನದ ಕೀವು, ಹನಿಹನಿಯಂತೆ ಹೋಗತಕ್ಕ ಕೀವು, ಉರಿ ಎಲ್ಲವು ಅಗದಿಪಾತ್ರಿಯಿಂದ ಗುಣವಾಗುವದು ಕಿಮ್ಮತ್ತು ಬಾಟ್ಲಿಗೆ ರೂ ೧-೮-೦ ಟಪಾಲು ಖರ್ಚು ಪ್ರತ್ಯೇಕ ಬರೆದ ಸ್ಥಳ

ಧಡಿಗಾರ ಸ್ಥಳದ ಕಳುಹಿಸಿದರೆ ಕ್ಯಾಟಲಾಗವು

ವಿಳಾಸ,—

ವೈದ್ಯ ಜಿ ಎಲ್ ಜೋಶಿ ಮತು ಕಂಪನಿ.

11. ನಂ 6 ಪೋಸ್ಟ್ ಬಸವಾಡಿ, ಉತ್ತರ ಕಾನಡಾ

ಒಂದು ಪ್ರಬಲವಾದ ಪ್ರಶ್ನೆ.

ನಮ್ಮ ಜೀವವನ್ನು ಏತಕ್ಕಾಗಿ ವಿಮೆಮಾಡಬೇಕು! ವೃದ್ಧಾಪ್ಯದಲ್ಲಿ ನಮ್ಮ ಮತ್ತು ಹೆಂಡತಿ ಮಕ್ಕಳ ಪೋಷಣೆಗಾಗಿ!

ಈಗಾಗಲೇ ಸಾವಿರಾರು ಜನರು ವಿಮೆಮಾಡಿರುವ ಐವತ್ತೊಂದು ಕೋಟಿ ರೂಪಾಯಿಗಿಂತ ಹೆಚ್ಚು ಒಡವೆಗಳನ್ನಿರುವ ದೇಶೀಯ ವಿಮೆಕಂಪೆನಿಯಲ್ಲಿ ಅತ್ಯಂತ ದೊಡ್ಡದಾದ ಸಾವಿರ ರೂಪಾಯಿ ವಿಮೆ ಮಾಡಿದವರಿಗೆ ವರ್ಷಕ್ಕೆ 18ರೂ ಕಡಿಮೆಯಿಲ್ಲದೆ ಲಾಭ ಕೊಡುವ 'ಓರಿಯಂಟಲ್' ಗವರ್ನ್‌ಮೆಂಟ್ ಸೆಕ್ಯುರಿಟಿ ಕಂಪೆನಿಯ ಏಜೆಂಟರಿಗೂ, ಶಿಕ್ಷಕರಿಗೂ ಈ ಕೆಳಗಿನವರಿಗೆ ಬರೆದು ತಿಳಿಯಿರಿ.

ಖಾದಿಬಟ್ಟೆ ಎಂದರೇನು?

ದೇಶೀಯ ಹತ್ತಿಯಲ್ಲಿ ಕೈರಾಟೆಯಿಂದ ನೂಲು ತೆಗೆದು ಇಲ್ಲಿಯೇ ತಯಾರಿಸುವ ಬಟ್ಟೆಯೇ 'ಖಾದಿ.' ಈಗಾಗಲೇ ನಮ್ಮ ಸ್ಟೋರಿನಲ್ಲಿ ಪರದೇಶೀ ಬಟ್ಟೆಗಿಂತ ಗಟ್ಟಿಯಲ್ಲಿಯೂ ಅಂದದಲ್ಲಿಯೂ ಕಡಿಮೆ ಇಲ್ಲದಂತೆ, ಎಲ್ಲಾ ತರದ ಶೀರೆಗಳು ಜೆಕ್ಕಗಳು, ಶಾಲು, ಪಟ್ಟಾ ಎಲ್ಲಾ ತರದ ಬಟ್ಟೆಯು ತಯಾರಾಗಿದೆ. ಗಮನವಿಟ್ಟು ನೋಡಿ ಕೊಳ್ಳಿರಿ! ಖಾದಿಯಿಂದಲೇ ಸ್ವರಾಜ್ಯ. ಖಾದಿಯಿಂದಲೇ ಮೋಕ್ಷವೆಂಬುದನ್ನು ಮರೆಯಬೇಡಿರಿ.

ವೀರಾಜಪೇಟೆ, | ಕೆ. ಪಿ. ಚಣ್ಣಪ್ಪ,
ದಕ್ಷಿಣ ಕೊಡಗು. | ಪ್ರೊಪ್ರೈಟರ್,
| ಖಾದಿಭಂಡಾರ.

52—4.

ಕಿರ್ಲೋಸ್ಕರ ಪೇಟೆಂಟ್ ಮಲ್ಹಾರ ತಪ್ಪಲಿ.

ಈ ತಪ್ಪಲಿಯು ನಮ್ಮ ಕಾರ್ಖಾನೆಯಲ್ಲಿಯೇ ತಯಾರಾಗಿ ತೃಪ್ತಿ ಸರಕಾರದಿಂದ ಇದಕ್ಕೆ ಪೇಟೆಂಟ್ ದೊರೆತಿರುತ್ತದೆ. ಇದರ ಮುಖ್ಯ ಗುಣಗಳು:

೧. ನೀರನ್ನು ಮುಟ್ಟಿದ ಕೂಡಲೇ ತುಂಬಿ ಒಡುವದು.

೨. ಮಲಲಕ್ಕ ಬರುವಾಗ್ಗೆ ಒಂದು ಹನಿ ಸಹ ನೀರು ಸೋರುವದಿಲ್ಲ.

೩. ದೋಣಿಯಲ್ಲಿ ನೀರು ಚೆಲ್ಲುವಾಗ್ಗೆ ತೆಳಗಿನ ತಪ್ಪಲಿಯಂತೆ ನಿತ್ಯವಾದಿ ಹೋಗುವದಿಲ್ಲ.

ಬೆಲೆಯು ಅಗ್ಗ ಹೆಚ್ಚಿನ ಸಂಗತಿ ಬಗ್ಗೆ ಬರೆದು ತಿಳಿದುಕೊಳ್ಳಿರಿ

ಕಿರ್ಲೋಸ್ಕರ ಬಂಧು, ಲಿಮಿಟೆಡ್.
ಕಿರ್ಲೋಸ್ಕರವಾಡಿ,
16—10 **ಜಿ. ಸಾತಾರ್.**

ಲೋಕಪ್ರಸಿದ್ಧವಾದ! ಅನುಭವಸಿದ್ಧವಾದ!

ಮೂರುದಿವಸಗಳಲ್ಲಿ ಗುಣಸಿಕ್ಕದಿದ್ದರೆ ಔಷಧಿಯಕ್ರಯ ವಾಪಾಸು! ಜೀರ್ಣಶಕ್ತಿ, ರಕ್ತವೃದ್ಧಿ, ಧಾತುಪುಷ್ಟಿ, ಮನೋಲ್ಲಾಸ ಪರಮಾನಂದ ಮೊದಲಾದ ಸುಖ ಜೀವನಕ್ಕೆ ಬೇಕಾದ ಆರೋಗ್ಯದಾಯಿನಿ ಟ್ರೇಡ್‌ಮಾರ್ಕ] **ಅಗಸ್ತ್ಯ** [ನೋಡಿ ತೆಕ್ಕೊಳ್ಳಿರಿ.

ಮನ್ಮಥ ಚಿಂತಾಮಣಿ ಲೇಹ

ರಿಜಿಸ್ಟರ್ ಆದದ್ದು.

ಆಬಾಲವೃದ್ಧ ಸ್ತ್ರೀ-ಪುರುಷರ ಅನೇಕ ರೋಗಗಳ ಮೇಲೆ ಗುಣ ಕಾರಿಯಾದದ್ದು ಮೇಹ ವಿಕಾರಗಳಿದ್ದವರಿಗೂ, ಸಿದ್ಧಿ ಇಲ್ಲದವರಿಗೂ, ಸ್ವಪ್ನೇಂದ್ರಿಯವಾಗುವ ಬಾಲಕರಿಗೂ, ಜ್ಞಾನಿ ಮುಬಾಲ್ಯರಿಗೆಗೂ ಉಪಯೋಗವುಳ್ಳ ಬಹುಪರಮಾನಂದ ಔಷಧಿ. 1ಸೇರು 48ದಿವಸ ಸೇವಿಸಬಹುದು ನಂ. (1) 1ಸೇರು ಡಬ್ಬಿ 1ಕ್ಕೆ ರುಪಾಯಿ 3—0—0. ½ಸೇರು ಡಬ್ಬಿ 1ಕ್ಕೆ ರುಪಾಯಿ 1—9—0, ನಂ. (2) 1ಸೇರು ಡಬ್ಬಿ 1ಕ್ಕೆ ರುಪಾಯಿ 2—0—0, ½ ಸೇರು ಡಬ್ಬಿ 1ಕ್ಕೆ 1—1—0 ವಿ. ಪಿ. ಖರ್ಚು ಪ್ರತ್ಯೇಕ. ವಿಶೇಷ ಮಾಹಿತಿಗೆ ಬರಕೊಳ್ಳಿರಿ

ವಿಳಾಸ.—ದೇವಣ್ಣ ನಾರಾಯಣಸೆಟ್,
ಗೋಳಿಕಟ್ಟಾ,
ಮಂಗಳೂರು,
52—34 ದ. ಕ.

ಜ್ವರಗಳ ಮೇಲೆ ಅಮೂಲ್ಯ ಔಷಧವು.

ಕರ್ಣಿಕ

ಎಗ್ಯು ಮಿಕ್ಸ್ಚರ್

ಟಾನಿಕ್ ಸಿರಪ್.
(ಶಕ್ತಿವರ್ಧಕ ಸರಬತ್ತು.)

ಥಂಡಿಜ್ವರ, ಮಲೇರಿಯ ಮೊದಲಾದ ಜ್ವರಗಳು ಬಿಟ್ಟನಂತರ ಬರುವ ಅಶಕ್ತತೆ, ಸಣ್ಣಜ್ವರವು ಬರುತ್ತಿರುವುದು ಮೊದಲಾದವುಗಳ ಮೇಲೆ ಇದು ಒಂದು ಅಮೂಲ್ಯ ಔಷಧವಾಗಿರುತ್ತದೆ. ನಮ್ಮ ಎಗ್ಯುಮಿಕ್ಸ್ಚರನ್ನು ಸೇರಿಸಿ ಗುಣವನ್ನು ಹೊಂದಿದ ಪ್ರತಿಯೊಬ್ಬನು ಇದರ ಒಂದು ಬಾಟ್ಲಿಯನ್ನಾದರೂ ಅಗತ್ಯವಾಗಿ ಸೇವಿಸಬೇಕು. ಅಂದರೆ ಅವನಿಗೆ ಜ್ವರದನಂತರ ಬರುವ ಅಶಕ್ತತೆಯು ಬರಲಿಕ್ಕೆ ಇಲ್ಲ.

ಬೆಲೆ ೧ ರೂಪಾಯಿ ಟಪಾಲು ವೆಚ್ಚ ಬೇರೆ.

12—1 ಕರ್ಣಿಕ ಬ್ರದರ್ಸ್
ಗಿರಗಾಂವ, ಮುಂಬಾಯಿ.

ಡಾಕ್ಟರ್ ಎಸ್ ಎನ್ ಅಯ್ಯಂಗಾರ್, ಬಿ ಎ.,
ಎಲ್ ಆರ್ ಸಿ ಪಿ ಅಂಡ್ ಎಸ್. (ಎಡಿನ್‌ಬರ್ಗ್)
ಎಲ್. ಎಫ್ ಪಿ ಅಂಡ್ ಎಸ್., [ಗ್ಲಾಸ್‌ಗೊ.]

ದಂತ ವೈದ್ಯರು

ಮಡಿಕೇರಿ ಮಹದೇವ ಪೇಟೆಯಲ್ಲಿ ಕೆ. ಯು. ಯಂ ಸಿದ್ದೀಕ್‌ರವರ ಅಂಗಡಿಯ ಎದುರಿನ ಮನೆಯಲ್ಲಿ ಇಳಿದುಕೊಂಡಿರುತ್ತಾರೆ. ಇವರು ಶೀಘ್ರದಲ್ಲೇ ಸೋಮವಾರಪೇಟೆಗೆ ಹೋಗುವುದಕ್ಕೆ ಮೊದಲು ತಾ 25ರ ತನಕ ಕೆಲವು ದಿನ ಮಡಿಕೇರಿಯಲ್ಲಿ ಉಳಿದುಕೊಳ್ಳುವುದರಿಂದ ಅವರನ್ನು ಅಲ್ಲಿ ಬೇಗನೆ ಭೇಟಿಮಾಡಿಕೊಳ್ಳುವುದು ಉತ್ತಮ.

ದಂತ ಸಂಜೀವಿನಿ.

ಯಾವ ತರದ ಹಲ್ಲುನೋವನ್ನಾದರೂ ಥಕ್ಕನೆ ಶಮನ ಮಾಡುವ ಶಕ್ತಿಯುಳ್ಳ ಈ ದಂತ ಸಂಜೀವಿನಿ ಕುಪ್ಪಿ ಒಂದಕ್ಕೆ ಕ್ರಯ ರೂ 1—0—0 ಮಾತ್ರ ಎಸ್. ರಾಮಣ್ಣ,
C/o ಡಾಕ್ಟರ್ ಎಸ್. ಎನ್. ಅಯ್ಯಂಗಾರ್.
48-16 ಮಹದೇವಪೇಟೆ, ಮಡಿಕೇರಿ.

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್, ಕೊ ಅಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ.

		ರೂ.
ಶೇರ್ ಬಂಡವಾಳ	—	50,000
ವಸೂಲಾದ ಶೇರ್ ಮೊಬಲಗು	—	9890
ಜಮೆಬಂದ ಠೇವಣಾತಿ	—	90,600

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೆನೇ ಹೆಚ್ಚಾಗಿ ಸಾಲಕೊಡತಕ್ಕದ್ದು.

ಒಂದು ವರ್ಷ ವಾಯಿದೆ ಅಥವ ಹೆಚ್ಚಿನ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ ರೂ. 6-4-0ರ ದರದಲ್ಲಿ ಬಡ್ಡಿ ದೊರೆಯುತ್ತೆ. ಕಡಿಮೆ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ 5ರ ಬಡ್ಡಿ ದೊರೆಯುತ್ತೆ. ವರ್ಷಕ್ಕೊಂದಾವರ್ತಿ ಕೊ ಅಪರೇಟಿವ್ ರಿಜಿಸ್ಟ್ರಾರವರು ಲೆಕ್ಕ ಆಡಿಟ್‌ಮಾಡಿ ಮಾಡುತ್ತಾರೆ.

ಪ್ರೆಸಿಡೆಂಟರು, | ಟ್ರೆಜರರ್.
ಕೊಡಂದೆರ ಕುಟ್ಟಯ್ಯನವರು, | ಯಂ. ಭುಜಂಗರಾಯರು
ರಾಯ್ ಬಹದ್ದೂರ್. | ಬಿ.ಎ, ಬಿ.ಎಲ್.

ಸೆಕ್ರೆಟರಿ,
ಸಿ. ಯನ್. ವೆಂಕಟಯ್ಯನವರು, ಬಿ.ಎ, ಬಿ.ಎಲ್.
ತಾರೀಕು 29—3—1925.

A Lot for SELECTION of Single Barrel Breach Loadig Guns at LOWEST PRICE EVER OFFERED.

Original BrowningS.B.B L. 12 bore Take Down Hammerless Automatic Ejector Gun with safety catch.... .... Price, Rs. 140/-

Do do but by **Winchester** or **Remington** ... . Price, Rs. 160/-

Winchester or **Remigton S. B. B. L.** 12 boreSix Shots Hammerless Repeating gun, 32 inches barrel with Safety catch .... Price, Rs. 150/-

German S. P. B. L. 12 bore Hammerless Ejector Gun, 32 inches German Steel Barrel with safety catch .... Price, Rs. 65/-

Continental Make .... Price, Rs. 55/

Webley & Scott's S. B. B. L. 12 bore Semi Hammerless Ejector Gun, 32 inches Webley s Steel Barrel, ... Price, Rs. 75/-

The above Guns can be had in 1, 20, & 410 bore Same as above in 12 bore **Special "Duck Gun"** 3inches barrel.... .... Price, Rs 80/-

W. W. Greener's "Gaffer" S. B. B. L. 12 bore Martini Action Ejector Gun, 26 inches Greener's Steel Barrel.... ....Price, Rs. 75/-

W. W. Greener's as above but **Long Range Duck Gun** " with 32 inches barrel, and chamber for 2¾ inches to 3 inches cases.. .... Price, Rs. 90/-

Midland's "Knock-About" S. B. B. L. Ejector Hammer Gun 32 inches barrel. ....Price, Rs. 55/-

Continental Make S. B. B. L. folding Pattern Hammer Gun, 32 inches barrel beautifully engraved and carved..... .... Price, Rs. 45/

J. Steven's 12 bore Ejector Hammer Gun, 32 inches.Steel barrel..... .... Price, Rs. 45./

Do do. 'Dread Naught' with heavy Breech Price/--Rs/50,

Any of the above of J. Steven'sSpecial DuckGun with 36 inches barrel. Price, Rs. 5 Extra.

ENQUIRIES SOCLIITED.

24-24 **THE BOMBAY ARMOURY,**
331, ABDUL REHMAN STREET,
BOMBAY. 3

ARMS & AMMUNITION MART.
Mahomedally-Noorbhoy



331 Abdul Rehman Street,near Crawford Market, BOMBAY. 3
Telegraphic Address.-"SHOOTER" Bombay.

[52—34] Please write for Reduced nett prices list for 1926.

Printed & published by Kodanda Appayya, R.B., Chairman, Board of Directors, at "Kodagu" Press, Mercara fr "Kodagu" Ltd.

Reg. N. R. 1550.
If not delivered please return to
"KODAGU" OFFICE MERCARA.

ಕೊಡಗು.

ವಾರ್ಷಿಕ ಚಂದಾ ರೂ. ೩—೦—೦

ಕಸ್ಯೇನ ಧೂತಕರ್ಮೇಣ ವಿದ್ಯಾ ಜಕೆ ಪ್ರಯತ್ನತಾ || ವಿಶ್ವತುಷ್ಟೇನ ದೇಶಾನಾಂ ಸುಸ್ಥಿರಾ ರಾಜ್ಯ ಸಂಪದಾ ||

ಸಂಪಾದಕ—ಪಂದ್ಯಂಡ ಐ. ಬೆಳ್ಯಪ್ಪ

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವದು.

ಸಂಪುಟ ೫] ಕೊಡಗು, ಸ್ವ ೧೯೨೬ನೇ ಇಸವಿ ಏಪ್ರಿಲ್ ತಾರೀಖು ೩೦ ನೇ ಶುಕ್ರವಾರ [ಸಂಚಿಕೆ ೧೭.

PERFUMERY & PATENT MEDICINCES ETC.,

Aletris cordial	Rs. 3—4-	anola wine	,, 3—0.	Energl tooth powder	,, 0—14-
Antiphlogistine	,, 1—8	Ovaltine	Rs' 1—1-, 1—12-, & 3—3.	Kolynos tooth paste	,, 0—11-
Batliwalas' ague mixture	,, 1—3-	Peps	,, 1- 0-	Euthymal ,, ,,	,, 0—14
Burgoynes' Eastons' Syrup	,, 1—6	Sanatogen	,, 4—8-	Pepsodent ,, ,,	,, 0—14-
Celerina	,, 3-12	Emulsion Scott's	,, 1—12	Cuticura soap per box	Rs. 2—8.
Cuticura ointment	,, 0—14-	Waterbury's cod liver oil	,, 3—0	Erasmic ,, ,, ,,	,, 1—3-
Dejonghs' cod liver oil	,, 3—4	Wincarnis	Rs. 2—15- & 5—8-	Goodwins bath soap for 6	,, —8-
Deschiens' Syrup	,, 2—12-	Woodwards gripe water	1—2-	Palm olive soap per cake	,, 0—6-
Enos fruit salt	,, 2—8-	Zam buk	Rs 0-15- & 2—2-	Pear's glycerine soap per box	,, 1—5-
Esnofele pills	,, 2—10-	Calox tooth powder	0-15-	Vinolia baby ,, ,,	,, 1—6-
Genaspirin	,, 0—15-	Calverts carbolic powder	0—7-	,, Premier ,,	,, 1—3-
Sulphur bitters	,, 3-12-	Colgates' dental cream	0-11-	Wright's coal tar ,, ,,	,, 1—2
				Turkish bath soap 12 cakes	,, 2—8-

Reduction in prices of Stationary department made permanent.
GET IT AT SPENCERS!
52—26 THE SHOPPING CENTRE OF COORG.

Spencer & Co. Ltd,
MERCARA, & POLLIBETTA.

ಸ್ಥಾಪಿತವಾದದ್ದು 1874. — ಮೂಲಧನ 7 ಕೋಟಿ ರೂಪಾಯಿಗಳು

ಓರಿಯಂಟಲ್ ಗವರ್ನ್ಮೆಂಟ್ ಸೆಕ್ಯೂರಿಟಿ ಲೈಫ್ ಅಷ್ಯೂರೆನ್ಸ್ ಕಂಪೆನಿ ಲಿಮಿಟೆಡ್, ಹೆಡ್ ಆಫೀಸು= ಬೊಂಬಾಯಿ.

1922—1924 ಈ ಮೂರು ವರ್ಷಗಳಲ್ಲಿ ಕಂಪೆನಿಯಲ್ಲಿ ನಡೆದ ಕೆಲಸದ ಫಲಿತಾಂಶಗಳು. —

ಲಾಭ— ರೂ. 51,00,000 (ಐವತ್ತೊಂದು ಲಕ್ಷ ರೂಪಾಯಿಗಳು) ಈ ಪೈಕಿ 45,94,80 ರೂಪಾಯಿಗಳನ್ನು ಲಾಭ ಸಹಿತ ವಿಮೆ ಮಾಡಿದವರ ವಿಮೆ ಹಣಕ್ಕೆ ಹೆಚ್ಚು ಬೋನಸ್ ಜವೆಯಾಗಿ ಈ ಕೆಳಗೆ ತೋರಿಸಿರುವ ರೀತಿಯಲ್ಲಿ ಸೇರಿಸಿರುತ್ತದೆ.

ಜೀವಮಾನಾವಧಿಯ ವಿಮೆದಾರರಿಗೆ ರೂ. 1000 ವಿಮೆ ಹಣಕ್ಕೆ
ಈ ಮೂರು ವರ್ಷಗಳಿಗೆ ರೂ. 67½.
ಕ್ಲಿಪ್ತಕಾಲದ ವಿಮೆದಾರರಿಗೆ ರೂ. 1000 ವಿಮೆ ಹಣಕ್ಕೆ
ಈ ಮೂರು ವರ್ಷಗಳಿಗೆ ರೂ. 54.

ಈ ಕಂಪೆನಿಯಲ್ಲಿ ಕ್ರಮೇಣ ಹೆಚ್ಚುತ್ತಿರುವ ಜನಾನುರಾಗವು ಈ ಕೆಳಗೆ ಕೊಟ್ಟಿರುವ ಹೊಸ ಕೆಲಸದ ಪಟ್ಟಿಯಿಂದ ವ್ಯಕ್ತವಾಗುತ್ತದೆ.

1923ರಲ್ಲಿ—ರೂ. 1,74,00,000
1924 ,, 2,37,00,000
1925 ,, 2,96,00,000

ಇನ್ನೂ ದಿನದಿನಕ್ಕೂ ಅಭಿವೃದ್ಧಿಯಾಗುತ್ತಲೇ ಇದೆ. ಜೀವವಿಮೆ ಪತ್ರದಲ್ಲಿ ಹಣವನ್ನು ಲಾಭಕರವಾಗಿ ಶೇಖರಿಸಲು ಇದೇ ಸುಸಮಯ.

ಬೇಕಾದ ವಿಷಯಗಳನ್ನು ಈ ಕೆಳಗಿನ ವಿಳಾಸಕ್ಕೆ ಬರೆದು ತಿಳಿದುಕೊಳ್ಳಬಹುದು.

ಓರಿಯಂಟಲ್ ಬಿಲ್ಡಿಂಗ್ಸ್, ಪೋಸ್ಟ್ ಬಾಕ್ಸ್ 56, ಬೆಂಗಳೂರು — ಸಿ. ವಿ. ಸುಬ್ರಮಣ್ಯಯ್ಯರ್, ಬ್ರಾಂಚ್ ಸೆಕ್ರೆಟರಿ

52—4.

ಆಂಧ್ರ ಆಯುರ್ವೇದಿಕ್ ಫಾರ್ಮಸಿ.

ಬ್ರಾಂಚ್, ಬೆಂಗಳೂರುಸಿಟಿ

ಚ್ಯವನಪ್ರಾಸ ಲೇಹ.

ಇದು ಸರ್ವೋತ್ಕೃಷ್ಟವಾದ ಗಿಡಮೂಲಿಕೆಗಳಿಂದ ತಯಾರಿಸಲ್ಪಟ್ಟ ಆಯುರ್ವೇದ ರಸಾಯನೌಷಧವು. ವಿದ್ಯಾರ್ಥಿಗಳೂ ವಿಶೇಷವಾಗಿ ಬುದ್ಧಿಯನ್ನು ಪ್ರಯೋಗಿಸಿ ಕೆಲಸ ಮಾಡುವವರೂ ಈ ಲೇಹವನ್ನು ಸೇವಿಸಿದರೆ ವಿಶೇಷವಾಗಿ ಬುದ್ಧಿಶಕ್ತಿಯನ್ನೂ ಜ್ಞಾಪಕಶಕ್ತಿಯನ್ನೂ ಹೊಂದುವರು.



ದೀರ್ಘಕಾಲದ ವ್ಯಾಧಿಯಿಂದಾಗಲೀ ಕೆಟ್ಟ ನಡತೆಯಿಂದಾಗಲೀ, ಸ್ವಭಾವ ಶಕ್ತಿಯ ಕೊರತೆಯಿಂದಾಗಲೀ ಶರೀರ ಕಾಂತಿಯು ಕುಂದಿ ರಕ್ತ ಕೆಟ್ಟು ಇಂದ್ರಿಯ ದೌರ್ಬಲ್ಯವೇ ಮೊದಲಾದ ವಿಕಾರಗಳಿಂದ ಪೀಡಿತರಾಗಿರುವವರು ಈ ಲೇಹವನ್ನು ಸೇವಿಸಿದರೆ ಈ ತರದ ವಿಕಾರಗಳನ್ನೆಲ್ಲಾ ಪರಿಹರಿಸಿ ದೇಹಕ್ಕೂ ಮನಸ್ಸಿಗೂ ಉಲ್ಲಾಸವನ್ನುಂಟುಮಾಡಿ ಮಾಂಸ ಖಂಡಗಳಿಗೂ ನರಗಳಿಗೂ ಬಲವನ್ನು ಕೊಟ್ಟು ದೇಹಪುಷ್ಟಿಯನ್ನುಂಟುಮಾಡಿ ನವಚೈತನ್ಯವನ್ನುಂಟುಮಾಡುವುದು. ಅಲ್ಲದೆ ಆರೋಗ್ಯದೃಢಶರೀರವುಳ್ಳವರಾಗಿ ದೀರ್ಘಕಾಲ ಬದುಕುವರು. ಕೆಮ್ಮು ಉಬ್ಬಸ ವ್ಯಾಧಿಯುಳ್ಳವರಿಗೂ ಮುಖ್ಯವಾಗಿ ಕ್ಷಯರೋಗಿಗಳಿಗೂ ಇದು ಸಂಜೀವಿನಿಯೇ ಸರಿ. ಚರಕ ಸಂಹಿತೆಯಲ್ಲಿ ಇದರ ಗುಣವು ಅದ್ಭುತವಾಗಿ ಹೇಳಲ್ಪಟ್ಟಿದೆ. ೧೦ ತೊಲೆಗೆ ೧ ರೂಪಾಯಿ. ೪೦ ತೊಲೆಗೆ ೩ ರೂಪಾಯಿ.

ಎಲ್ಲಾ ಕಡೆಯಲ್ಲಿಯೂ ಏಜಂಟರು ಬೇಕು.

ಸೂಚನೆ— ಇಲ್ಲಿ ಶಾಸ್ತ್ರೀಯವಾದ ಎಲ್ಲಾ ಔಷಧಗಳೂ ಶಾಸ್ತ್ರೋಕ್ತ ಕ್ರಮಕ್ಕೆ ಸರಿಯಾಗಿ ಆಯುರ್ವೇದ ಭೂಷಣ ಶ್ರೀ ನಾರಾಯಣರಾವ್ ಎ. ಎಂ. ಎ. ಸಿ. ಯವರು ರೋಗಿಗಳನ್ನು ಪರೀಕ್ಷಿಸಿ ಚಿಕಿತ್ಸೆಯನ್ನು ಪ್ರತಿದಿನವೂ ನಡೆಸುವರು. ವಿಶೇಷ ಸಂಗತಿಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಟಿ. ಸಿ. ಎಸ್. ಮಣಿಯಂ ಅಂಡ್ ಕೋ,

ಮ್ಯಾನೇಜಿಂಗ್ ಏಜಂಟ್ಸ್, ಆಂಧ್ರ ಆಯುರ್ವೇದಿಕ್ ಫಾರ್ಮಸಿ,

14—13 ೬೬ ಚಿಕ್ಕಪೇಟೆ, ಬೆಂಗಳೂರು ಸಿಟಿ.

ಮುದ್ದಾದ ಪುಸ್ತಕ! ಮುದ್ದಾದ ಮುದ್ರಣ!!

ಶರೀರ ಸುಖ, ಸಂಪತ್ತು, ಐಶ್ವರ್ಯಗಳನ್ನು ಸಂಪಾದಿಸಲು ಸಲಹೆಗಳನ್ನೂ ಮತ್ತು ಶರೀರ ಮರ್ಮಶಾಸ್ತ್ರ (ಕಾಮಶಾಸ್ತ್ರ)ವನ್ನೂ ತಿಳಿಸುವ

ಮರ್ಮ ಶಾಸ್ತ್ರ-ಎಂಬ ಕಾಮಶಾಸ್ತ್ರ.

ಈ ಪುಸ್ತಕವು ಮೊದಲು ಫ್ರೆಂಚ್, ಇಂಗ್ಲೀಷ್, ಹಿಂದುಸ್ಥಾನಿ, ಸಂಸ್ಕೃತ ಮುಂತಾದ ಭಾಷೆಗಳಲ್ಲಿ ಬಹು ಪ್ರಸಿದ್ಧವಾಗಿತ್ತು. ಇದನ್ನು ನಾವು ಪ್ರಯಾಸದಿಂದ ಸಂಪಾದಿಸಿ ಕನ್ನಡಕ್ಕೆ ತರ್ಜುಮೆಮಾಡಿ (84 ಚಿತ್ರಪಟಗಳ ಸಹಿತ) ಥಳಥಳಿಸುವ ಕಾಗದದಲ್ಲಿ ಮುದ್ರಿಸಿ ತಯಾರಿಸಿದ್ದೇವೆ. ಈ ಪುಸ್ತಕದಲ್ಲಿ ಸ್ತ್ರೀ ಪುರುಷರಿಗೆ ಬೇಕಾದ ಎಲ್ಲಾ ಮರ್ಮ ರಹಸ್ಯಗಳೂ, ಸ್ತ್ರೀ ಪುರುಷರು ಅನ್ಯೋನ್ಯವಾಗಿ ನಡೆದುಕೊಳ್ಳುವ ಮಾರ್ಗ- ಸ್ತ್ರೀ ಪುರುಷರಿಗೆ ಉಂಟಾಗುವ ಎಲ್ಲಾ ತರದ ಮರ್ಮವ್ಯಾಧಿಗಳು ಮತ್ತು ಅಂಥಾ ವ್ಯಾಧಿಗಳನ್ನು ಗುಣಮಾಡಿಕೊಳ್ಳುವ ಚಿಕಿತ್ಸೆಗಳೂ ಇನ್ನು ಅನೇಕ ತರದ ಮರ್ಮಭಾವ ಗಳು ಚಿತ್ರಪಟಗಳ ಸಹಿತ ತುಂಬಿರುವದು. ಈ ಪುಸ್ತಕದ ಹೆಸರನ್ನು ಕೇಳಿದ ಮಾತ್ರಕ್ಕೆ ಸಂತೋಷವಾಗುವದು. ಆದರೆ ಓದಲಿಕ್ಕೆ ಯಾರಿಗೆ ತಾನೇ ಸಂತೋಷವಾಗಲಾರದು.

ಕ್ರಯ ಪುಸ್ತಕ ಒಂದಕ್ಕೆ ಒಂದೇ ಒಂದು ರೂಪಾಯಿ ರೂ. 1—0—0

T. Ramachandar Rao & Co.,
Post Box No. 232,
Madras.

ಟಿ. ರಾಮಚಂದ್ರರಾವ್ ಅಂಡ್ ಕೊ,
ಪೋಸ್ಟ್ ಬಾಕ್ಸ್ ನಂ. 232.
ಮದ್ರಾಸ್.

52—16

"ಕೊಡಗು"

ಸ್ ೧೯೩೬ನೇ ಇಸವಿ ಏಪ್ರಿಲ್ ತಾ. ೩೦ನೇ ಶುಕ್ರವಾರ

ಜಮೀನ್‌ದಾರರ ಸಂಘದ ಅಧ್ಯಕ್ಷರ ಭಾಷಣ ಮತ್ತು ಈ ದೇಶದ ಮುಂದಿನ ರಾಜಕೀಯ ಪರಿಸ್ಥಿತಿ.

ಅಧ್ಯಕ್ಷರಾದ ಮಂಜೇರಿ ರಾಮೈಯ್ಯರು ಕೊಡಗನ್ನು ಮದ್ರಾಸಿಗೆ ಸೇರಿಸುವ ವಿಷಯದಲ್ಲಿ ವಿರೋಧಿಸಿದರು. ಈ ಮದ್ರಾಸಿಗೆ ಸೇರಿಸಬೇಕೆಂಬ ಚಳವಳಿಯು ನಿಂತು ಮೂರು ವರ್ಷದ ಮೇಲಾಯಿತು. ಆದ್ದರಿಂದ ಇವರ ಈ ಅಭಿಪ್ರಾಯವು ತತ್ಕಾಲ ಅವಶ್ಯವಿರಲಿಲ್ಲ. ಕಾಮನ್‌ವೆಲ್ತ್ ಆಫ್ ಇಂಡಿಯಾ ಬಿಲ್ಲಿನಲ್ಲಿ ಇರುವ ಮೇರೆ ಆಡಳಿತದ ಅಧಿಕಾರಗಳನ್ನು ಗ್ರಾಮಗಳಿಗೇನೇ ಹೆಚ್ಚಾಗಿ ಹಂಚಿಕೊಡಬೇಕೆಂಬ ತತ್ವಕ್ಕೆ ಒಪ್ಪುವವರಾದ ಇವರು ಪ್ರತ್ಯೇಕವಾಗಿರುವ ಈ ಕೊಡಗು ಪ್ರಾಂತ್ಯವು ತನ್ನ ತನ್ನ ಹದ್ದಿನೊಳಗೆ ಸಾಧ್ಯವಾದಷ್ಟು ಕೆಲಸಗಳನ್ನು ತಾನೇ ಮಾಡಿಕೊಳ್ಳುತ್ತಾ ತನ್ನಿಂದ ಮಾತ್ರವೇ ಸಾಧ್ಯವಾಗದೆ ಇರುವ ಕೆಲಸಗಳಿಗೆ ಬೇರೆ ಪ್ರಾಂತ್ಯಗಳೊಡನೆ ಸೇರಿಕೊಳ್ಳುವದುತ್ತಮವೆಂತ ಹೇಳಿದರು. ಚಿಕ್ಕ ಪ್ರಾಂತ್ಯದ ಸರಕಾರವಾದರೆ ಕೆಲವು ವಿಷಯಗಳಿಗೆ ಅನುಕೂಲವಾಗಿದ್ದರೂ ಇನ್ನೂ ಅನೇಕ ವಿಷಯಗಳಲ್ಲಿ ತೊಂದರೆಯಿದೆಯೆಂಬುದನ್ನು ಇವರು ತಮ್ಮ ಮೊದಲಿನ ಭಾಷಣದಲ್ಲಿ ಮರೆತರೂ ಅನಂತರ ಕರ್ನಾಟಕದ ಏಕೀಕರಣದ ಠರಾವಿನ ಮೇಲೆ ಭಾಷಣ ಮಾಡುವಾಗ ಒಪ್ಪಿದರು. ಚಿಕ್ಕಪ್ರಾಂತ್ಯವಾದದ್ದರಿಂದ ಒಂದು ಕಾಲೇಜ್ ಸಿಕ್ಕದೆ ಇರಲಿಕ್ಕೆ ಕಾರಣವಾಗಿದೆಯೆಂತಲೂ ಹೈಕೋರ್ಟು ಪ್ರತ್ಯೇಕವಿಲ್ಲದೆ ಇರಲು ಕಾರಣವಾಗಿದೆಯೆಂತಲೂ, ರೈಲ್‌ವೇ ಬರಲು ಅಡಚಣೆಯಾಗಿದೆಯೆಂತಲೂ, ಆಡಳಿತ ಮತ್ತು ನ್ಯಾಯ ತೈಸಲ್ ಮಾಡುವ ಅಧಿಕಾರಗಳು ಒಂದೊಂದು ವ್ಯಕ್ತಿಯಲ್ಲಿ ಹೆಚ್ಚಾಗಿ ನಿಲ್ಲಲು ಕಾರಣವಾಗಿದೆಯೆಂತಲೂ, ಯುವಕರಿಗೆ ತಮ್ಮ ಶಕ್ತಿಯನ್ನು ಪ್ರಕಾಶಗೊಳಿಸಲು ಅವಕಾಶ ಕಡಿಮೆಯಿದೆಯೆಂತಲೂ ಮುಂತಾಗಿ ಒಪ್ಪಿಕೊಂಡರು.

ಮದ್ರಾಸ್ ಪ್ರಾಂತ್ಯಕ್ಕೆ ಸೇರಿಕೊಳ್ಳುವ ಪ್ರಶ್ನೆಯು ಈಗ ದೇಶದ ಮುಂದೆ ಇಲ್ಲದ್ದರಿಂದ ಅದರ ವಿಷಯ ಹೆಚ್ಚಿಗೆ ಬರೆಯಬೇಕಾದುದಿಲ್ಲ. ಕಾನ್ ಬಹದ್ದೂರ್ ಮಣಿಯಪ್ಪಂಡ ಮುತ್ತಣ್ಣನವರು ಮದ್ರಾಸಿಗೆ ಸೇರಿಸಬೇಕೆಂಬ ಚಳವಳಿಯನ್ನು ದೇಶದ ಎಲ್ಲಾ ಮುಖಂಡರ ಅನುಮತಿಯೊಡನೆ ಎಬ್ಬಿಸಿ ಇದ್ದಾಗ ದೇಶದವರು—ಕೇಳಿಕೊಂಡಿದ್ದದ್ದೇನೆಂದರೆ—ದೊಡ್ಡ ಪ್ರಾಂತ್ಯಗಳಿಗೆ ದೊರೆವ ರಾಜಕೀಯ ಹಕ್ಕುಗಳು ನಮ್ಮ ದೇಶಕ್ಕೂ ಸಿಕ್ಕುವದಿಲ್ಲವಾದರೆ ದೊಡ್ಡ ಪ್ರಾಂತ್ಯದೊಂದಿಗೆ ಸೇರಿಸಿಬಿಡಬೇಕೆಂತ ಕೇಳಿಕೊಂಡಿದ್ದಾಗಿತ್ತು. ಸರಕಾರದವರು ಈಗ ಈ ದೇಶಕ್ಕೆ ಕೊಟ್ಟಿರುವ ಕೌನ್ಸಿಲನ್ನು ಕೊಡುತ್ತೇವೆಂತ ಹೇಳಿದ್ದರಿಂದ ದೇಶದ ಮುಖಂಡರುಗಳು ಮಂಜೂರ್‌ಮಾಡುವ ಕೌನ್ಸಿಲನ್ನು ಉಪಯೋಗಿಸಿ ನೋಡಿ ಅನಂತರ ತೀರ್ಮಾನಿಸಿಕೊಳ್ಳಬಹುದೆಂಬ ಅಭಿಪ್ರಾಯಪಟ್ಟು ಮದ್ರಾಸಿಗೆ ಸೇರಿಸುವ ಚಳವಳಿಯನ್ನು ಬಿಟ್ಟುಬಿಟ್ಟಿದ್ದಾಗಿದೆ. ೭ ವರ್ಷಗಳವರೆಗೆ ಮಾಡಿದ ಈಗಿನ ಕೌನ್ಸಿಲಿನ ಕೆಲಸದಿಂದ ದೇಶಕ್ಕೆ ಆಗಬೇಕಾದಷ್ಟು ಪ್ರಯೋಜನವಾಗುತ್ತಿಲ್ಲವೆಂತಲೂ ಇದಕ್ಕಿಂತ ಹೆಚ್ಚಿಗೆ ಪ್ರಯೋಜನವಡಿಕೊಳ್ಳಲು ಈ ದೇಶದ ಉಂಡಾಯದ ಉತ್ಪತ್ತಿ ಸಾಲದೆಂತಲೂ ಕಂಡುಬರುತ್ತಲಿದೆ. ದೊಡ್ಡ ಪ್ರಾಂತ್ಯಗಳಿಗೆ ದೊರೆತ ಹಕ್ಕುಗಳನ್ನು ಈ ದೇಶಕ್ಕೂ ಕೊಡಿಸಿಕೊಡಬೇಕೆಂತ ಕೌನ್ಸಿಲಿನಲ್ಲಿ ಪಾಸಾದ ಠರಾವು ಸಹ ಮೂಲೆಗೆ ಬಿದ್ದುಹೋಯಿತು. ಆದ್ದರಿಂದ ಮುಂದಿನ ದೇಶದ ಧ್ಯೇಯವೇನಿರಬೇಕೆಂಬದನ್ನು ದೇಶದವರು ಯೋಚಿಸಿ ತೀರ್ಮಾನಿಸಿಕೊಳ್ಳಬೇಕಾಗಿದೆ.

ಈ ಮಧ್ಯೆ ಭಾಷಾವಾರಾಗಿ ಹಿಂದುಸ್ಥಾನವನ್ನು ಹಂಚಿ ಪ್ರತ್ಯೇಕ ಪ್ರಾಂತ್ಯಗಳಾಗಿ ಮಾಡಿಕೊಡಬಹುದೆಂಬ ಮೊಂಟೆಗೂ ಚೆಲ್‌ಮ್ಸ್‌ಫರ್ಡ್ ರಿಪೋರ್ಟಿನ ಅಭಿಪ್ರಾಯದ ಮೇರೆ ಕೆಲವು ಕಾಲದಿಂದ ಬೇರೆ ಕಡೆಗಳಲ್ಲಿ ಹೊರಟ ಕರ್ನಾಟಕ ಏಕೀಕರಣದ ಚಳವಳಿಯು ನಮ್ಮ ದೇಶದಲ್ಲೂ ನಾಪೋಕ್ಲಿನಲ್ಲಿ ತಲೆದೋರಿತು. ಮದ್ರಾಸ್ ಪ್ರಾಂತ್ಯದಿಂದ ಕೌನ್ಸಿಲ್ ಆಫ್ ಸ್ಟೇಟಿಗೆ ಪ್ರತಿನಿಧಿಯಾಗಿ ಹೋದ ಡಾಕ್ಟರ್ ರಾಮರಾಯರು ಕನ್ನಡವನ್ನು ಉಪಯೋಗಿಸುವ ಬೇರೆ ಬೇರೆ ರಾಜ್ಯಗಳನ್ನೆಲ್ಲಾ ಒಂದುಗೂಡಿಸಬೇಕೆಂಬ ಠರಾವನ್ನು ಆ ಸಭೆಯಲ್ಲಿ ತಂದರು. ಬಹಳ ಜನರೊಳಗೆ ಈ ಅಭಿಪ್ರಾಯವು ಹೆಚ್ಚಾಗಿರುವದಿಲ್ಲವಾದ್ದರಿಂದ ಸರಕಾರವು ಈ ಠರಾವಿಗೆ ಒಪ್ಪುವದಿಲ್ಲವೆಂತ ಜವಾಬು ಕೊಟ್ಟರು. ಆದ್ದರಿಂದ ಧಾರವಾಡ ಪ್ರಾಂತ್ಯದಲ್ಲಿ ಏರ್ಪಾಡಾದ ಕರ್ನಾಟಕ ಸಭೆಯವರೂ, ಕರ್ನಾಟಕ ಪ್ರಾಂತೀಕ ಕಾಂಗ್ರೆಸ್ ಕಮಿಟಿಯವರೂ ದೇಶದಲ್ಲಿ ಬಹಳ ಬೋಧನೆ ಕೊಟ್ಟು ಕನ್ನಡಿಗರಲ್ಲಿ ಕನ್ನಡವನ್ನು ಉಪಯೋಗಿಸುವ ಜನರೆಲ್ಲರೂ ಒಂದು ಅಧಿಕಾರದೊಳಗೆ ಇರಬೇಕೆಂಬ ಆಶೆಯನ್ನು ಹುಟ್ಟಿಸುತ್ತಿದ್ದಾರೆ. ಕರ್ನಾಟಕಸಭೆಗೆ ಧಾರವಾಡದ ವಕೀಲರಾದ ರಾವ್ ಬಹದ್ದೂರ್ ಕಂಬಳಿ ಯಂ ಎಲ್. ಸಿ ಯವರು ಅಧ್ಯಕ್ಷರಾಗಿದ್ದಾರೆ. ಇವರು ಲಿಂಗಾಯತರು. ಬಿಜಾಪುರದಲ್ಲಿ ಕಲೆಕ್ಟರಾಗಿರುವ ಶ್ರೀಯುತ ನಾಯಕ್ ಎಂಬವರು ಕರ್ನಾಟಕದ ಏಕೀಕರಣಕ್ಕಾಗಿ ಕೆಲಸ ಮಾಡುತ್ತಿದ್ದಾರೆಂತ ತಿಳಿಯುತ್ತೇವೆ. ಹೀಗಿರುವದರಿಂದ ಈ ಚಳವಳದಲ್ಲಿ ಜಾತಿ ಮತಬೇಧವಿಲ್ಲದೆ ಕೆಲಸ ಮಾಡುತ್ತಿರುವಂತೆ ಕಾಣುತ್ತೆ.

ನಮ್ಮ ದೇಶದಲ್ಲಿ ಮುಖ್ಯಪಟ್ಟ ಜನಾಂಗದವರು ಮನೆಯಲ್ಲಿ ಆಡುವ ಭಾಷೆ ಕನ್ನಡವಲ್ಲದ್ದರಿಂದ ಕರ್ನಾಟಕ ಜಾತಿಗೆ ಈ ದೇಶದಲ್ಲಿ ವಿಶೇಷ ಸ್ವಾನುಭೂತಿ ಬಾರದೆ ಇರಲು ಒಂದು ಕಾರಣವಾಗಿದೆ. ಈ ಜನಾಂಗಕ್ಕೆ ಇರುವ ವಿಶೇಷ ಹಕ್ಕುಗಳು ಕೆಲವು ಹೋಗಿ ಬಿಟ್ಟಾವೋ ಎಂಬ ಇನ್ನೊಂದು ಭಯ. ಕೊಡಗ ಜನರಲ್ಲಿ ವಿಶೇಷವಾದುದೊಂದು ವ್ಯಕ್ತಿತ್ವ ಇರುವದಕ್ಕೆ ಬಾಧಕ ಬಂದೀತೋ ಎಂಬದೊಂದು ಸಂಶಯ. ಸಂಘದ ಮಹಾ ಸಭೆಯ ಮುಂದೆ ಇಡಲ್ಪಟ್ಟ ಮಂಜೂರಾದ ಠರಾವಿನ ಪದಗಳನ್ನು ಜೋಡಿಸಿದ ಪ್ರಿಯ ಮಿತ್ರ ಮಂಜೇರಿ ರಾಮ ಐಯ್ಯರ್ ರವರೂ ಆ ಠರಾವನ್ನು ಓದಿನೋಡಿದರೆ "ಕೊಡಗಿನ ವ್ಯಕ್ತಿತ್ವಕ್ಕೆ ಠರಾವಿನಿಂದ ಕೊರತೆ ಬರುವದಿಲ್ಲವೆಂಬುದನ್ನು ಎಲ್ಲರೂ ತಿಳಿದುಕೊಳ್ಳಬಹುದಾದ ವಿಷಯವಾಗಿದೆ. ಈ ವ್ಯಕ್ತಿತ್ವವನ್ನು ಉಳಿಸಿಕೊಂಡು ಯಾವ ರೀತಿಯಲ್ಲಿ ಬೃಹತ್ ಕರ್ನಾಟಕದಲ್ಲಿ ಕೊಡಗು ಸೇರಿಕೊಳ್ಳಬಹುದೆಂತ ಇನ್ನು ಮೇಲೆ ಯೋಚಿಸಿಕೊಳ್ಳಬೇಕಾಗಿದೆ. ಸಂಘದ ಮಹಾ ಸಭೆಯಲ್ಲಿ ಮ ರಾ ಶ್ರೀ ಕುಟ್ಟಂಡ ತಮ್ಮಯ್ಯನವರು ಈ ಏಕೀಕರಣವು ಯಾವ ರೀತಿಯಲ್ಲಿ ಆಗಬೇಕು? ಇದರ ಶರತುಗಳೇನು, ಎಂಬದೆಲ್ಲಾ ತಿಳಿದನಂತರ ಯೋಚಿಸಬಹುದೆಂತ ಹೇಳಿದರು. ಅದಕ್ಕೆ ಏಕೀಕರಣದ ತತ್ವಕ್ಕೆ ಕೊಡಗು ದೇಶವು ಒಪ್ಪುತ್ತದಾದರೆ ಅನಂತರ ಕೊಡಗಿನ ಮುಖಂಡರನ್ನು ಸೇರಿಸಿಕೊಂಡೇ ಮುಂದಿನ ಯೋಚನೆ ಮಾಡಲಾಗುತ್ತೆ ಎಂತ ಉತ್ತರ ಕೊಟ್ಟರು.

ಪ್ರಜೆಗಳಿಗೆ ಜವಾಬ್ದಾರಿಯಾಗಿರುವ ಸರಕಾರವು ಈ ದೇಶಕ್ಕೆ ಸಿಕ್ಕುವದು ಸಾಧ್ಯವಾದರೆ ಮತ್ತು ಅಂಥಾ ಸರಕಾರವನ್ನು ನಡಿಸುವಷ್ಟು ಹಣವು ನಮ್ಮ ದೇಶದಲ್ಲಿ ಉತ್ಪತ್ತಿಯಾಗುವದಾದರೆ ಈ ದೇಶವನ್ನು ಬೇರ ಪ್ರಾಂತ್ಯಗಳೊಂದಿಗೆ ಸೇರಿಸುವ ಅವಶ್ಯಕತೆಯೇ ಇಲ್ಲ. ದೊಡ್ಡ ಪ್ರಾಂತ್ಯಗಳಿಗೆ ದೊರೆತಿರುವ ರಾಜಕೀಯ ಸುಧಾರಣೆಗಳು ಈ ದೇಶಕ್ಕೆ ಸಿಕ್ಕಿದರೆ ಕಡಿಮೆ ಪಕ್ಷ ಒಬ್ಬ ಎಗ್ಸಿಕ್ಯೂಟಿವ್ ಕೌನ್ಸಿಲರು ಒಬ್ಬ ಮಂತ್ರಿಯಾದರೂ ಇರಬೇಡವೇ? ಇವರಿಗೆ ಕಮಿಷನರಿಗಿಂತ ಕಡಿಮೆ ಸಂಬಳ ಕೊಟ್ಟರೆ ಸಾಕಾಗುತ್ತದೆಯೇ? ಹಾಗಿಂದ ಮೇಲೆ ಒಬ್ಬೊಬ್ಬರಿಗೆ ಎರಡೆರಡು ಸಾವಿರ ರೂಪಾಯಿ ಮಾಸತಿಂಗಳ ಸಂಬಳ ಕೊಡಬೇಕಾಯಿತು. ಅಂದರೆ ವರ್ಷ ಒಂದಕ್ಕೆ ಅರ್ಧ ಲಕ್ಷ ರೂಪಾಯಿ ಹೆಚ್ಚಿಗೆ ಖರ್ಚು ಪ್ರಜೆಗಳ ಮೇಲೆ ಬೀಳುತ್ತದೆ. ಪ್ರತ್ಯೇಕ ಹೈಕೋರ್ಟು ಒಂದು ಆಗಲೇ ಬೇಕು. ಇಬ್ಬರು ಜಡ್ಜಿಯವರಾದರೂ ಇರಬೇಕು. ಇವರಿಗೆ ಸಂಬಳ ಎರಡೆರಡು ಸಾವಿರವಾದರೂ ಆಗಬೇಕು. ಇದೊಂದು ಅರ್ಧಲಕ್ಷವಾಯಿತು. ಸಿಬ್ಬಂದಿ ಮುಂತಾದ ಆಫೀಸಿನ ಖರ್ಚು ಇದ್ದೇ ಇದೆ. ಈ ಪ್ರಾಂತ್ಯವನ್ನು ಪ್ರತ್ಯೇಕ ಸರಕಾರವಾಗಿ ಇಟ್ಟುಕೊಳ್ಳಬೇಕಾದರೆ ಅಧಿಕಾರಿಗಳ ಸಂಬಳವನ್ನು ದೇಶದ ಶಕ್ತಿಗನುಸಾರವಾಗಿ ನಿರ್ಣಯಿಸಲು ಪ್ರಜೆಗಳಿಗೆ ಹಕ್ಕು ಇದ್ದರೆ ಆಗಬಹುದು. ಕಮಿಷನರಿಗೆ ಐದುನೂರು, ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರಿಗೆ 300, ಸಬ್ ಜಡ್ಜಿಯರಿಗೆ 300, ಫಾರೆಸ್ಟ್ ಆಫೀಸರಿಗೆ 300, ಸಿವಿಲ್ ಸರ್ಜನರಿಗೆ 300 ಮತ್ತು ಇದೇ ರೀತಿ ಇತರ ಆಫೀಸರುಗಳಿಗೆ ಸಂಬಳ ಕಡಿಮೆ ಮಾಡಿದರೆ ಪ್ರಜೆಗಳಿಗೆ ಪ್ರಯೋಜನವಾಗುವಂತೆ ಸರಕಾರವನ್ನು ನಡಿಸಬಹುದು. ಗವರ್ನಮೆಂಟ್ ಆಫ್ ಇಂಡಿಯಾ ಆಕ್ಟಿನ ಮೇರೆ ಹೆಚ್ಚಿಗೆ ಯಾವ ತರದ ಸುಧಾರಣೆ ದೊರೆತರೂ ಇಂಪೀರಿಯಲ್ ಆಫೀಸರುಗಳ ಸಂಬಳ ಕಡಿಮೆ ಮಾಡಲು ಸಾಧ್ಯವಿಲ್ಲ. ಶ್ರೀಯುತ ರಾಮೈಯ್ಯನವರೂ ಸಹ ಅಧಿಕಾರಿಗಳ ಸಂಬಳ ಹೆಚ್ಚಾಗಿದೆಯೆಂಬುದನ್ನು ಅನೇಕ ಸಾರಿ ಬೇರೆ ಬೇರೆ ವಿಧದಿಂದ ಹೇಳಿ ತೋರಿಸಿದ್ದಾರು. ಈ ವಿಷಯವನ್ನು ನೆನಪಿನಲ್ಲಿಡಬೇಕು.

ದೇಶದ ಅಧಿಕಾರಗಳೆಲ್ಲಾ ದೇಶೀಯರಲ್ಲೇ ಹೆಚ್ಚಾಗಿ ಇರುವಾಗ ದೇಶಕ್ಕೆ ಸ್ವರಾಜ್ಯವೇ ಬಂತಲ್ಲ ಎಂತ ಹೇಳುವವರಿಗೆ ಶ್ರೀಯುತ ಕೌಂಡಲಗಿಯವರು ಜವಾಬು ಹೇಳಿದ್ದೇನೆಂದರೆ—ದೊಡ್ಡ ಪ್ರಾಂತ್ಯಗಳಲ್ಲಿ ಪ್ರತಿ ಜಿಲ್ಲೆಯಲ್ಲೂ ಒಬ್ಬ ಅಥವ ಇಬ್ಬರು ಯೂರೋಪಿಯನ್ ಆಫೀಸರುಗಳಿರುತ್ತಾರೆ. ಉಳಿದವರೆಲ್ಲರೂ ದೇಶಿಯರೇ ಆಗಿರುತ್ತಾರೆ. ಆದರೆ ಇದು ಸ್ವರಾಜ್ಯವಲ್ಲ. ಆಡಳಿತವು ದೇಶದವರ ಅಪೇಕ್ಷೆ ಮೇರೆ ನಡೆಯುವ ವರೆಗೆ ಸ್ವರಾಜ್ಯ ಎಂದೂ ಬರುವದಿಲ್ಲವೆಂತ ಹೇಳಿದರು.

ತತ್ಕಾಲಕ್ಕೆ ಕರ್ನಾಟಕದ ಏಕೀಕರಣವಾಗಿ ಹೋಗುವದಿಲ್ಲ. ಈ ಚಿಕ್ಕ ದೇಶವು ಪ್ರತ್ಯೇಕ ಸರಕಾರವಾಗಿ ಇರುವದು ಸಾಧ್ಯವಿಲ್ಲವಾದರೆ ವಿಧ ವಿಧ ಭಾಷೆಗಳನ್ನು ಅವಲಂಬಿಸಿಕೊಂಡಿರುವ ಮದ್ರಾಸ್ ಪ್ರಾಂತ್ಯಕ್ಕೆ ಸೇರುವ ಬದಲು ಕರ್ನಾಟಕ ಪ್ರಾಂತ್ಯಕ್ಕೆ ಸೇರುವದು ಲೇಸು ಎಂತ ಸಂಘವು ತೀರ್ಮಾನಿಸಿದಂತಾಯಿತು. ಮದ್ರಾಸ್ ಪ್ರಾಂತ್ಯವೆಲ್ಲಾ ಭಾಷಾವಾರಾಗಿ ವಿಂಗಡವಾಗುವ ಸಂಭವವಿದ್ದರೆ ಈ ದೇಶವು ಮಲೆಯಾಳಕ್ಕಾಗಲೀ ತಮಿಳು ರಾಜ್ಯಕ್ಕಾಗಲೀ ಸೇರಿಕೊಳ್ಳುವ ಬದಲು ಕರ್ನಾಟಕ ರಾಜ್ಯದಲ್ಲಿ ಸೇರಿಕೊಳ್ಳುವದು ಲೇಸೆನ್ನುವದು ಯುಕ್ತವಾಗಿದೆ. ಈ ತತ್ವಕ್ಕೆ ಸಂಘದ ಅಧ್ಯಕ್ಷರಾದ ಶ್ರೀಯುತ ರಾಮಯ್ಯರವರು ಒಪ್ಪಿಗೆಕೊಟ್ಟಿದ್ದಾರೆ.

ಮಡಿಕೇರಿಯಲ್ಲು ನಡೆದ ಪಬ್ಲಿಕ್ ಮೀಟಿಂಗಿನಲ್ಲಿ ಸಹ ಏಕೀಕರಣಕ್ಕೆ ವಿರೋಧವಿದ್ದವರು ಮೌನವಾಗಿದ್ದರೆಂತ ಶ್ರೀಯುತ ಕೌಂಡಲಗಿಯವರು ಹೇಳಿದರು. ಅದಕ್ಕೆ ಯಾರೂ ಮುಂದೆ ಬರಲಿಲ್ಲ. ಕೊಡವ ಸಭೆಯ ಗೌರವಾರ್ಥ ಗುಬ್ಬಿ ನಾಟಕದಲ್ಲಿ ಪುರಂದರದಾಸ ನಾಟಕ ರಾ ರಾ ಶ್ರೀ ರಾವ್‌ಸಾಹೇಬ ಕೋಡಿಮಣಿಯಂಡ ಸ ಬೆಳ್ಳಿಯಪ್ಪನವರು ಏಕೀಕರಣವನ್ನು ಹರಿದಿದ್ದಾರೆ. ಸಂಘದಲ್ಲಿ ಈ ಠರಾವಿನ ಮೇಲೆ ವಾದಿಸಿದವರು ಸಹ ತತ್ವಕ್ಕೆ ಒಪ್ಪುತ್ತೇವೆಂತ ಹೇಳಿದರು. ಆದ್ದರಿಂದ ಸಂಘದ ಠರಾವಿಗೆ ದೇಶದ ಒಪ್ಪಿಗೆಯಿದೆಯೆಂತ ಧಾರಾಳವಾಗಿ ಹೇಳಬಹುದು.

ಪ್ರಶ್ನಮಾಲಿಕೆ.

(ಪ್ರಾಂತಿಕ ಕಾಂಗ್ರೆಸ್ ಕಮಿಟಿಯಿಂದ ಬಂದದ್ದು)

ಕರ್ನಾಟಕ ವಿದ್ಯಾಪೀಠದ ಬಗ್ಗೆ

(೧) ಭಾಷಾನುಕ್ರಮವಾಗಿ ವಿಶ್ವವಿದ್ಯಾಲಯಗಳನ್ನು ಸ್ಥಾಪಿಸಬೇಕೆಂಬ ತತ್ವವು ನಿಮಗೆ ಮಾನ್ಯವಿರುವದೋ? ಮಾನ್ಯವಿದ್ದರೆ ಕರ್ನಾಟಕದಲ್ಲಿ ಈ ತರದ ವಿಶ್ವವಿದ್ಯಾಲಯವನ್ನು ಸ್ಥಾಪಿಸುವ ಸಮಯವು ಈಗ ಬಂದಿರುವದೆಂದು ನಿಮಗೆ ತೋರುವದಿಲ್ಲವೋ? ಟಿಪ್ಪಣಿ—ಈ ಸಂದರ್ಭದಲ್ಲಿ ಮುಂಬೈ ಸರಕಾರದವರು ಈ ತತ್ವವನ್ನು ಒಪ್ಪಿಕೊಂಡಿರುವರೆಂಬದನ್ನು ಅವರ ವಿಶ್ವವಿದ್ಯಾಲಯ ಸುಧಾರಣಾ ಕಮಿಟಿ (೧೯೨೪—೧೯೨೫) ಯ ವರದಿಯ ಪುಟ ೧೭ ಪರಿಚ್ಛೇದ ೫೮ರಲ್ಲಿ ನೋಡಬಹುದು. ಮುಂಬೈ ವಿಶ್ವವಿದ್ಯಾಲಯದವರೂ ಈ ತತ್ವವನ್ನು ಒಪ್ಪಿಕೊಂಡಿರುವರು.

(೨) ಬ್ರಿಟಿಶ ಕರ್ನಾಟಕಕ್ಕೆ ಅಂದರೆ ಮುಂಬೈ ಮದ್ರಾಸ ಇಲಾಖೆಗಳೊಳಗಿನ ಕರ್ನಾಟಕಭಾಗ ಹಾಗೂ ಕೊಡಗು ಪ್ರಾಂತಗಳಿಗೆ ಒಂದು ಪ್ರತ್ಯೇಕ ವಿಶ್ವವಿದ್ಯಾಲಯವು ಇರುವದು ಯೋಗ್ಯವಾಗುವದೆಂದು ನಿಮಗೆ ತೋರುವದೋ?

(೩) ಬ್ರಿಟಿಶ ಕರ್ನಾಟಕ ವಿಶ್ವವಿದ್ಯಾಲಯವು ಯಾವ ಮಾದರಿಯದಿರಬೇಕೆಂದು ನಿಮ್ಮ ಅಭಿಪ್ರಾಯವು? ಅದು ಯುನಿಟರಿ ಅಂದರೆ ಒಂದೇ ಕೇಂದ್ರದಲ್ಲಿ ಎಲ್ಲ ಕಾಲೇಜುಗಳಿದ್ದು ಕಲಿಸುವ ಜವಾಬುದಾರಿಯನ್ನು ಸಹ ಹೊತ್ತ, ಅಥವಾ ಫೆಡರೇಟೆಡ್ ಅಂದರೆ ಬೇರೆ ಬೇರೆ ಕೇಂದ್ರಗಳಲ್ಲಿ ಕಾಲೇಜುಗಳಿದ್ದು ಅವು ತಮ್ಮ ತಮ್ಮ ವ್ಯವಸ್ಥೆಯನ್ನು ನೋಡಲಿಕ್ಕೆ ಸ್ವತಂತ್ರವಿದ್ದರೂ ಅವೆಲ್ಲವೂ ಒಂದೇ ಮಧ್ಯವರ್ತಿ ಶೈಕ್ಷಣಿಕ ಪರೀಕ್ಷಾಕಾರಕ ಮಂಡಳಿಗೆ ಒಳಪಟ್ಟ, ಅಥವಾ ಅಫಿಲಿಯೇಟೆಡ್ ಅಂದರೆ ಈಗಿರುವ ಮುಂಬೈ ವಿಶ್ವವಿದ್ಯಾಲಯಗಳಂತೆ ಕೇವಲ ಪರೀಕ್ಷಕ ವಿಶ್ವವಿದ್ಯಾಲಯವಿರಬೇಕೋ?

(೪) ಬ್ರಿಟಿಶ ಕರ್ನಾಟಕಕ್ಕೆ ಒಂದು ಪ್ರತ್ಯೇಕ ವಿಶ್ವವಿದ್ಯಾಲಯವನ್ನು ಸ್ಥಾಪಿಸುವದು ಶಕ್ಯವಿಲ್ಲವಿದ್ದರೆ ಸದ್ಯಕ್ಕೆ ಮೈಸೂರ ವಿಶ್ವವಿದ್ಯಾಲಯವನ್ನೇ ಅಖಿಲ ಕರ್ನಾಟಕ ವಿಶ್ವವಿದ್ಯಾಲಯವನ್ನಾಗಿ ಮಾಡಿಕೊಳ್ಳುವದು ಯೋಗ್ಯವಾಗುವದೋ? ಹಾಗೆಂದ ಪಕ್ಷದಲ್ಲಿ ಅದನ್ನು ಯಾವ ಶರ್ತುಗಳ ಮೇಲೆ ಮಾಡಿಕೊಳ್ಳಬೇಕು.

(೫) ಈ ಎರಡು ವಿಶ್ವವಿದ್ಯಾಲಯಗಳಲ್ಲಿ ಇಡೀ ಬ್ರಿಟಿಶ ಕರ್ನಾಟಕಕ್ಕೆ ಯಾವದು ಹೆಚ್ಚು ಮಾನ್ಯವಾಗುವದು?

(೬) (ಅ) ಬ್ರಿಟಿಶ ಕರ್ನಾಟಕ ವಿಶ್ವವಿದ್ಯಾಲಯವನ್ನು ಸ್ಥಾಪಿಸಬೇಕೆಂದು ನಿಮ್ಮ ಅಭಿಪ್ರಾಯವಿದ್ದರೆ ಅದನ್ನು ಸಾಧಿಸಲಿಕ್ಕೆ ಯಾವ ಉಪಾಯಗಳನ್ನು ಸೂಚಿಸುವಿರಿ?

(ಬ) ಮೈಸೂರ ವಿಶ್ವವಿದ್ಯಾಲಯವನ್ನು ಅಖಿಲ ಕರ್ನಾಟಕ ವಿಶ್ವವಿದ್ಯಾಲಯವನ್ನು ಮಾಡಿಕೊಳ್ಳಬೇಕೆಂದು ನಿಮ್ಮ ಮತವಿದ್ದರೆ ಅದರ ಸಂಬಂಧ ಯಾವ ಉಪಾಯಗಳನ್ನು ನೀವು ಸೂಚಿಸುವಿರಿ?

ಮಹಾತ್ಮಗಾಂಧಿಯವರ ಸ್ವಚರಿತ್ರೆ

(ತಾ. 16–4–36ರ ಸಂಚಿಕೆಯಿಂದ ಮುಂದುವರಿದದ್ದು)

11 ನೆಯ ಪ್ರಕರಣ.

ನನ್ನ ಇಂಗ್ಲೆಂಡಿನ ಪ್ರಯಾಣ ಸನ್ನಾಹ.

1887 ನೇ ಇಸವಿಯಲ್ಲಿ ನಡೆದ ಮೆಟ್ರಿಕ್ಯುಲೇಷನ್ ಪರೀಕ್ಷೆಯಲ್ಲಿ ಉತ್ತೀರ್ಣನಾದೆನು. ಆಗ ಅಹಮದಾಬಾದಿನಲ್ಲಿಯೂ ಬೊಂಬಾಯಿನಲ್ಲಿಯೂ ಈ ಪರೀಕ್ಷೆಯು ನಡೆಯುತ್ತಿದ್ದಿತು. ದೇಶವು ಬಡಸ್ಥಿತಿಯಲ್ಲಿದ್ದುದರಿಂದ ಕಾಠೇವಾಡದ ವಿದ್ಯಾರ್ಥಿಗಳು ಸಮೀಪದ ಕೇಂದ್ರಸ್ಥಾನಕ್ಕೇ ಹೋಗುತ್ತಿದ್ದರು. ನಮ್ಮ ಕುಟುಂಬದವರು ಬಡವರಾಗಿದ್ದುದರಿಂದ ನಾನು ಸಮೀಪದಲ್ಲಿದ್ದ ಅಹಮದಾಬಾದಿಗೆ ಪ್ರಯಾಣಮಾಡಿದೆನು. ರಾಜಕೋಟೆಯಿಂದ ಅಹಮದಾಬಾದಿಗೆ ಜತೆಯಿಲ್ಲದೆ ನಾನು ಒಂಟಿಯಾಗಿ ಪ್ರಯಾಣಮಾಡಲು ಅದೇ ಮೊದಲು. ಪರೀಕ್ಷೆಯಲ್ಲಿ ಕೃತಾರ್ಥನಾದ ಮೇಲೆ ನಾನು ಪ್ರೌಢ ವಿದ್ಯಾಲಯದಲ್ಲಿ ಓದಬೇಕೆಂದು ಹಿರಿಯರು ಪ್ರೋತ್ಸಾಹಿಸಿದರು. ಭಾವನಗರದಲ್ಲಿಯೂ ಒಂದು ಕಾಲೇಜು, ಬೊಂಬಾಯಿನಲ್ಲಿ ಮತ್ತೊಂದು ಕಾಲೇಜೂ ಇದ್ದುವು. ಭಾವನಗರದ ಕಾಲೇಜಿನಲ್ಲಿ ವೆಚ್ಚವು ಕಡಿಮೆಯಾಗಿದ್ದುದರಿಂದ ಅಲ್ಲಿನ ಶ್ಯಾಮಲದಾಸ್ ಕಾಲೇಜಿಗೆ ಸೇರಿದೆನು. ಉಪಾಧ್ಯಾಯರ ಬೋಧೆಯನ್ನು ನಾನು ಗ್ರಹಿಸಲಾರದೆ ಹೋದೆನು. ಅದು ಅವರ ತಪ್ಪಲ್ಲ. ನಾನು ಹೊಸಬ; ಮೊದಲನೇ ಆರು ತಿಂಗಳು ಮುಗಿಯುತಲೇ ರಜಾದಲ್ಲಿ ಊರಿಗೆ ಹೋದೆನು. ಮಾವ್‌ಜೀ ದವೆಯವರು ವಿದ್ಯಾವಂತರೂ, ಸೂಕ್ಷ್ಮಬುದ್ಧಿಯುತರೂ ಆದ ಬ್ರಾಹ್ಮಣರು. ನಮ್ಮ ಕುಟುಂಬದ ಮಿತ್ರರು. ನನ್ನ ತಂದೆ ಸತ್ತಮೇಲೂ ಕೂಡ ನಮ್ಮ ಕುಟುಂಬದ ಕಷ್ಟಸುಖವನ್ನು ವಿಚಾರಿಸಿಕೊಳ್ಳುತ್ತಿದ್ದರು. ಇವರು ಒಂದು ದಿವಸ ನಮ್ಮ ಮನೆಗೆ ಬಂದು ನನ್ನ ವಿದ್ಯಾಭ್ಯಾಸದ ವಿಚಾರವಾಗಿ ನನ್ನ ತಾಯಿ ಕೂಡಲೂ ಅಣ್ಣನ ಕೂಡಲೂ ಪ್ರಸ್ತಾಪಿಸಿದರು. ನಾನು ಶ್ಯಾಮಲದಾಸ್ ಕಾಲೇಜಿನಲ್ಲಿ ಓದುತ್ತಿದ್ದೇನೆಂದು ತಿಳಿದು "ಕಾಲವು ಮಾರಿಹೋಗಿದೆ. ಉನ್ನತಪರೀಕ್ಷೆಯಲ್ಲಿ ಉತ್ತೀರ್ಣರಾದ ಹೊರತು ನಿಮ್ಮಲ್ಲಿ ಯಾರೂ ನಿಮ್ಮ ತಂದೆಯ ಸ್ಥಾನವನ್ನು ಆಕ್ರಮಿಸಲಾರರು. ಈ ಹುಡುಗನು ಇನ್ನೂ ಓದುತ್ತಿದ್ದಾನೆ. ಇವನು ನಿಮ್ಮ ತಂದೆ ಸ್ಥಾನವನ್ನಾಕ್ರಮಿಸುವಂತೆ ನೀವು ಪ್ರಯತ್ನಿಸಬೇಕು. ಈತನು ಪಟ್ಟಾಂಬಿತನಾಗ (ಡಿಗ್ರಿತೆಗೆದುಕೊಳ್ಳಲು) ಇನ್ನೂ 4 ವರ್ಷ ಕಾಲ ಹಿಡಿಯುವುದು. ಡಿಗ್ರಿತೆಗೆದುಕೊಂಡರೂ ಸಹ 60 ರೂ. ಸಂಬಳಕ್ಕೆ ಸೇರಲು ಅರ್ಹನಾಗುವನಲ್ಲದೆ ದಿವಾನ್ ಪದವಿಯನ್ನು ಹೊಂದಲಾರನು. ನನ್ನ ಮಗನಂತೆ ಈತನು ನ್ಯಾಯವಾದಿ (ಲಾಯರು) ಆಗಲು ಇನ್ನೂ ಬಹಳ ಕಾಲಹಿಡಿಯುವುದು. ಆಗ್ಗೆ ಅನುಭವವೂ, ಸಾಮರ್ಥ್ಯವೂ ಇರುವ ನ್ಯಾಯವಾದಿಗಳೆಷ್ಟೋ ಜನರು ದಿವಾನ್ ಉದ್ಯೋಗವನ್ನು ಹೊಂದಲು ಪ್ರಯತ್ನಿಸುವರು. ನೀವು ಈತನನ್ನು ಇಂಗ್ಲೆಂಡಿಗೆ ಕಳುಹಿಸುವುದು ಉತ್ತಮವೆಂದು ನನ್ನ ಅಭಿಪ್ರಾಯವು. ಬ್ಯಾರಿಸ್ಟರ್ ಪರೀಕ್ಷೆಯಲ್ಲಿ ತೇರ್ಗಡೆಹೊಂದುವುದು ಬಹಳ ಸುಲಭವೆಂದು ನನ್ನ ಮಗನು ಹೇಳುತ್ತಾನೆ. ಮೂರು ವರ್ಷದಲ್ಲಿ ಹಿಂದಿರುಗಿ ಬರಬಹುದು. ವೆಚ್ಚವು 4-5 ಸಾವಿರ ರೂಪಾಯಿಗಿಂತ ಹೆಚ್ಚಾಗಿ ಆಗುವುದಿಲ್ಲ. ಬ್ಯಾರಿಸ್ಟರ್ ಪರೀಕ್ಷೆಯಲ್ಲಿ ಕೃತಾರ್ಥನಾಗಿ ಹಿಂದಿರುಗಿಬಂದು ಕೇಳಿದ ಮಾತ್ರಕ್ಕೇ ದಿವಾನುದ್ಯೋಗವು ಈತನಿಗೆ ಕೊಡಲ್ಪಡುವುದು. ಈ ವರ್ಷವೇ ನೀವು ಮೋಹನದಾಸನನ್ನು ಇಂಗ್ಲೆಂಡಿಗೆ ಕಳುಹಿಸಬೇಕೆಂದು ಸೂಚಿಸುತ್ತೇನೆ. ನನ್ನ ಮಗನಾದ ಕೇವಲರಾಮನಿಗೆ ಇಂಗ್ಲೆಂಡಿನಲ್ಲಿ ಎಷ್ಟೋ ಜನ ಸ್ನೇಹಿತರಿರುತ್ತಾರೆ. ಅವನು ಇವನಿಗೆ ಪರಿಚಿತನಾಗುವಂತೆ ಕಾಗದಗಳನ್ನು ಬರೆದುಕೊಡುವನು. ಮೋಹನದಾಸನು ಅಲ್ಲಿ ಸುಲಭವಾಗಿ ವಿದ್ಯಾಭ್ಯಾಸ ಮಾಡಬಹುದು," ಎಂದು ಮಾವ್‌ಜೀ ಈ ಮಾತನ್ನು ಹೇಳಿ ನನ್ನ ಕಡೆಗೆ ತಿರುಗಿಕೊಂಡು "ಇಲ್ಲೇ ವಿದ್ಯಾಭ್ಯಾಸ ಮಾಡಬೇಕೆಂದಿಷ್ಟವೇ? ಇಂಗ್ಲೆಂಡಿಗೆ ಹೋಗಲಿಷ್ಟವೇ? " ಎಂದು ಕೇಳಿದರು. ಇಲ್ಲಿ ಓದುವುದು ನನಗೆ ಕಷ್ಟವಾಗಿದ್ದುದರಿಂದ ಮಾವ್‌ಜೀಯವರ ಸೂಚನೆಯನ್ನು ಆತುರದಿಂದ ಅನುಮೋದಿಸಿದೆನು. [illegible] ವೈದ್ಯಪರೀಕ್ಷೆಗೇಕೆ ಓದಬಾರದೆಂದು ಕೇಳಿದರು. "ನಮ್ಮ ತಂದೆಯು ಆ ವೃತ್ತಿಯನ್ನು ಸಮ್ಮತಿಸಲಿಲ್ಲವು. ಶಸ್ತ್ರ ಹೆಣವನ್ನು ಕೊಯ್ಯುವುದು ಮೊದಲಾದ ಕೃತ್ಯವನ್ನು ವೈಷ್ಣವರು ಮಾಡಕೂಡದೆಂದು ಅವರು ಹೇಳುತ್ತಿದ್ದರು. ನ್ಯಾಯವಾದ ವೃತ್ತಿಯಲ್ಲೇ ಸೇರಬೇಕೆಂಬುದು ಅವರ ಅಭಿಪ್ರಾಯವಾಗಿತ್ತು" ಎಂದು ನಮ್ಮಣ್ಣನು ಹೇಳಿದನು. "ನಿಮ್ಮ ತಂದೆಯಂತೆ ನನಗೆ ವೈದ್ಯವೃತ್ತಿಯಲ್ಲಿ ದ್ವೇಷಭಾವವಿಲ್ಲವು. ನಮ್ಮ ಶಾಸ್ತ್ರದಲ್ಲೂ ವೈದ್ಯವೃತ್ತಿಯನ್ನು ನಿಷೇಧಿಸಿಲ್ಲವು. ಅಲ್ಲದೆ ನೀನು ವೈದ್ಯಪರೀಕ್ಷೆಯಲ್ಲಿ ಕೃತಾರ್ಥನಾಗಿ ಬಂದರೂ ದಿವಾನುದ್ಯೋಗವನ್ನು ಹೊಂದಬಹುದು. ನೀನು ದಿವಾನನಾಗಬೇಕೆಂದು ನನ್ನ ಅಭಿಲಾಷೆಯು. ಆಗ ನಿಮ್ಮ ದೊಡ್ಡ ಕುಟುಂಬವನ್ನು ಕಾಪಾಡಲಾಗುವುದು. ಕಾಲವು ವ್ಯತ್ಯಾಸವಾಗುತ್ತಿದೆ. ಜೀವನವು ದಿನದಿನಕ್ಕೆ ಕಷ್ಟವಾಗುತ್ತಿದೆ. ಆದುದರಿಂದ ಬ್ಯಾರಿಸ್ಟರ್ ಪರೀಕ್ಷೆಗೋದುವುದು ಉತ್ತಮವು," ಎಂದು ಹೇಳಿದುದಲ್ಲದೆ ನನ್ನ ತಾಯಿಯನ್ನು ಕುರಿತು "ನಾನು ಹೊರಡುತ್ತೇನೆ. ನಾನು ಹೇಳಿದ ವಿಷಯವನ್ನು ಕುರಿತು ಚೆನ್ನಾಗಿ ಆಲೋಚಿಸಿ. ಪುನಃ ನಿಮ್ಮನ್ನು ನೋಡಲು ಬಂದಾಗ ಮೋಹನದಾಸನು ಇಂಗ್ಲೆಂಡಿಗೆ ಪ್ರಯಾಣಸನ್ನದ್ಧನಾಗಿರುವನೆಂದು ನಂಬುತ್ತೇನೆ. ನಾನು ಮಾಡಬೇಕಾದ ಸಹಾಯವನ್ನೆಲ್ಲಾ ಮಾಡುತ್ತೇನೆ " ಎಂದು ಅವರು ಹೇಳಿದರು.

ಮಾವ್‌ಜೀಯವರು ಅನುಮತಿಯನ್ನು ಪಡೆದುಹೋದರು. ನನ್ನ ವಿಚಾರತರಂಗಕ್ಕೆ ಪಾರವಿಲ್ಲದಾಯಿತು. ನಮ್ಮಣ್ಣನು ಆಲೋಚನಾಸಮುದ್ರದಲ್ಲಿ ಮುಳುಗಿದನು. ನನ್ನನ್ನು ಇಂಗ್ಲೆಂಡಿಗೆ ಕಳುಹಲು ಹಣವಾಗಬೇಕು. ಹಣವನ್ನು ಒದಗಿಸುವ ಬಗೆ ಹೇಗೆ? ಚಿಕ್ಕವಯಸ್ಸಿನವನಾದ ನನ್ನನ್ನು ಒಂಟಿಯಾಗಿ ದೂರದೇಶಕ್ಕೆ ಕಳುಹುವುದು ಉಚಿತವೆ? ಎಂದು ಅವರು ಚಿಂತಿಸುವವರಾದರು. ನನ್ನನ್ನು ಬಿಟ್ಟಿರಲು ನನ್ನ ತಾಯಿಗೆ ಕಷ್ಟವಾಗಿ ತೋರಿತು. ಈ ಇಂಗ್ಲೆಂಡು ಪ್ರಯಾಣವನ್ನು ಕುಟುಂಬಕ್ಕೆ ದೊಡ್ಡವರಾದ ನಮ್ಮ ಚಿಕ್ಕಪ್ಪನು ಅಂಗೀಕರಿಸಬೇಕೆಂದು ನಮ್ಮ ತಾಯಿಯು ಹಟಹಿಡಿದಳು. ನಮ್ಮಣ್ಣನಿಗೆ ಮತ್ತೊಂದು ಯೋಚನೆ ಹುಟ್ಟಿತು. ಪೋರಬಂದರ ಸಂಸ್ಥಾನದಮೇಲೆ ನಮಗೆ ಕೊಂಚ ಹಕ್ಕಿದೆ. ಏಜಂಟರಾದ ಲೇಲಿಯವರಿಗೆ ನಮ್ಮ ಕುಟುಂಬದ ವಿಚಾರದಲ್ಲಿ ಗೌರವಭಾವವಿರುತ್ತದೆ. ನಮ್ಮ ಚಿಕ್ಕಪ್ಪನಮೇಲೂ ಅವರಿಗೆ ಅಭಿಮಾನ ಸ್ವಲ್ಪಮಟ್ಟಿಗಿರುತ್ತದೆ. ಈ ವೆಚ್ಚಕ್ಕೆ ಸಂಸ್ಥಾನದವರು ಕೊಂಚ ಸಹಾಯಮಾಡುವಂತೆ ಅವರು ಪ್ರಯತ್ನಿಸಬಲ್ಲರೆಂದು ನಮ್ಮಣ್ಣನು ಹೇಳಿದನು.

ನಾನು ಪೋರಬಂದರಿಗೆ ಹೊರಟೆನು. ಆಗ ರೈಲಿರಲಿಲ್ಲವು. ಐದುದಿವಸ ಎತ್ತಿನ ಬಂಡಿಯಲ್ಲಿ ಪ್ರಯಾಣಮಾಡಿದೆನು. ನಾನು ಅಂಜುಪುಕಲನೆಂದು ಮೊದಲೇ ಹೇಳಿರುತ್ತೇನೆ. ಆದರೆ ಈ ಸಮಯದಲ್ಲಿ ಆ ನನ್ನ ಅಂಜುಪುಕಲತನವೆಲ್ಲಾ ಮಾಯವಾಗಿಹೋಯಿತು. ಧೋರಾಜಿವರೆಗೆ ಎತ್ತಿನ ಬಂಡಿಯಲ್ಲಿ ಹೋಗಿ ಅಲ್ಲಿಂದ ಪೋರಬಂದರಿಗೆ ಒಂಟೆಯಮೇಲೆ ಹೋದೆನು. ನನ್ನ ಚಿಕ್ಕಪ್ಪನನ್ನು ನೋಡಿ ಎಲ್ಲ ವಿಷಯವನ್ನು ತಿಳಿಸಿದೆನು. ಅವನು ಆಲೋಚಿಸಿ, 'ಧರ್ಮಕ್ಕೆ ಭಂಗವಿಲ್ಲದ ರೀತಿಯಲ್ಲಿ ಇಂಗ್ಲೆಂಡಿನಲ್ಲಿರಲು ಅಸಂಭವವೆಂದು ಯೋಚಿಸುತ್ತೇನೆ. ಇಲ್ಲಿರುವ ದೊಡ್ಡ ಬ್ಯಾರಿಸ್ಟರುಗಳನ್ನು ನೋಡಿ ನನಗೆ ಕೊಂಚ ಸಂಶಯವುಂಟಾಗಿದೆ. ಆಂಗ್ಲೇಯರ ಜೀವನಕ್ಕೂ ಅವರ ಜೀವನಕ್ಕೂ ಯಾವ ಭೇದವೂ ಕಾಣಬರುವುದಿಲ್ಲ. ಎಂಥ ಅಸಂಬದ್ಧವಾದ ಆಹಾರವನ್ನಾದರೂ ತೆಗೆದುಕೊಳ್ಳುತ್ತಾರೆ. ಚುಟ್ಟವನ್ನು ಸದಾ ಸೇದುತ್ತಿರುವರು. ಇದು ನಮ್ಮ ಕುಟುಂಬಸಂಪ್ರದಾಯಕ್ಕೆ ವಿರುದ್ಧವಾದುದು. ಆದರೆ ನಿನ್ನ ಉತ್ಸಾಹಕ್ಕೆ ನಾನು ಭಂಗಪಡಿಸುವುದಿಲ್ಲ. ನಾನು ಕೂಡಲೇ ತೀರ್ಥಯಾತ್ರೆಗೆ ಹೊರಡುವೆನು. ಬಹುದಿವಸ ನಾನು ಬದುಕಿರುವುದು ಅಸಂಭವವು. ಮರಣವು ಸನ್ನಿಹಿತವಾಗುತ್ತಿರುವ ಈ ಸಮಯದಲ್ಲಿ ಸಮುದ್ರದಾಟಿ ಇಂಗ್ಲೆಂಡು ಪ್ರಯಾಣಕ್ಕೆ ನಾನು ಹೇಗೆ ಸಮ್ಮತಿಯನ್ನು ಕೊಡುವುದು? ಆದರೆ ನಾನು ಆತಂಕಪಡಿಸುವುದಿಲ್ಲ. ನಿನ್ನ ತಾಯಿಯ ಅನುಮತಿಯೇ ಮುಖ್ಯವು. ಆಕೆಯು ಅಂಗೀಕರಿಸಿದಲ್ಲಿ ನಿನಗೆ ಶುಭವಾಗಲೆಂದು ಆಶೀರ್ವದಿಸುತ್ತೇನೆ. ನನ್ನ ಆಶೀರ್ವಾದವನ್ನು ಹೊಂದಿ ನೀನು ಹೊರಡಬಹುದು.' ಎಂದು ಹೇಳಿದನು.

ನೀವು ಹೀಗೆ ಸಹಾನುಭೂತಿಯನ್ನು ತೋರಿಸುವಿರೆಂದು ನನಗೆ ಗೊತ್ತು. ನನ್ನ ತಾಯಿಯ ಅನುಮತಿಯನ್ನು ಪಡೆಯುತ್ತೇನೆ. ಆದರೆ ನೀವು ಲೇಲಿಯವರಿಗೆ ಶಿಫಾರಸ್ಸುಮಾಡುತ್ತೀರಾ? ಎಂದು ಕೇಳಿದೆನು. "ನಾನು ಆ ಕೆಲಸವನ್ನು ಹೇಗೆ ಮಾಡಲಾದೀತು? ಆದರೆ ದೊರೆಯು ಒಳ್ಳೆಯವನು. ನಮ್ಮ ಕುಟುಂಬದ ಪರಿಚಯವನ್ನು ಅವನಿಗೆ ತಿಳಿಸಿದಲ್ಲಿ ನಿನಗೆ ತಪ್ಪದೆ ಅವರು ಒಂದು ಕೆಲಸವನ್ನು ಕೊಡುವರು.' ಎಂದು ಹೇಳಿದರು. ಇಂಗ್ಲೆಂಡಿಗೆ ಹೋಗುವುದು ಮತಸಂಪ್ರದಾಯಕ್ಕೆ ವಿರುದ್ಧವೆಂದು ನಮ್ಮ ಚಿಕ್ಕಪ್ಪನ ಅಭಿಪ್ರಾಯವಾಗಿದ್ದರೂ, ನನ್ನ ಪ್ರಯತ್ನಕ್ಕೆ ಪ್ರತ್ಯಕ್ಷವಾಗಿ ಪ್ರತಿಬಂಧಕ ತೋರಿಸಲು ಅವರು ಸಂಕೋಚಪಟ್ಟರು.

ಲೇಲಿಯವರಿಗೆ ಮುಂದಾಗಿ ಒಂದು ಕಾಗದವನ್ನು ಬರೆದು ಅನಂತರ ಅವರ ದರ್ಶನಕ್ಕಾಗಿ ಹೊರಟೆನು. ಮಹಡಿಯ ಮೆಟ್ಟಿಲನ್ನು ಹತ್ತುತ್ತ ಅವರು ನನ್ನನ್ನು ನೋಡಿ 'ಬಿ. ಎ. ಪರೀಕ್ಷೆಯಲ್ಲಿ ತೇರ್ಗಡೆಯನ್ನು ಹೊಂದಿದ ಮೇಲೆ ಬಂದು ನನ್ನನ್ನು ನೋಡು. ಈಗ ಯಾವ ಸಹಾಯಮಾಡಲೂ ನೊರ್ಗವಿಲ್ಲ' ಎಂದರು. ಈ ಎರಡುಮಾತುಗಳನ್ನು ಆಡಿ ಅವರು ಮಹಡಿಯ ಮೇಲಕ್ಕೆ ಹತ್ತಿ ಹೊರಟುಹೋದರು. ಸಾಹೇಬರನ್ನು ನೋಡಲು ನಾನು ಎಷ್ಟೋ ಪ್ರಯಾಸಪಟ್ಟೆನು. ಅವರಿಗೆ ಸಲಾಮು ಮಾಡುವ ಕ್ರಮವನ್ನೂ ಅವರೊಡನೆ ಹೇಳಬೇಕಾದ ಮಾತುಗಳನ್ನೂ, ತೋರಿಸಬೇಕಾದ ವಿಧೇಯತೆಯ ಕ್ರಮವನ್ನೂ ತಿಳಿದುಕೊಂಡಿದ್ದೆನು. ಬಗ್ಗಿ ಸಲಾಮು ಮಾಡಿದೆನು. ಆದರೂ ಪ್ರಯೋಜನವೇನೂ ಆಗಲಿಲ್ಲವು.

ನನ್ನ ಹೆಂಡತಿಯ ಮೇಲೆ ಆಲೋಚನೆ ಹೋಯಿತು. ನನ್ನ ಅಣ್ಣನು ಯಾವುದೋ ಒಂದು ವಿಧವನ್ನು ತೋರಿಸಿಕೊಡುವನೆಂದು ನನಗೆ ನಂಬಿಗೆಯಿದ್ದಿತು. ಪೋರಬಂದರಿನಿಂದ ರಾಜಕೋಟೆಗೆ ಹಿಂತಿರುಗಿಬಂದು ನನ್ನ ಅಣ್ಣನಿಗೂ ತಾಯಿಗೂ ಎಲ್ಲಾ ಸಂಗತಿಯನ್ನು ತಿಳಿಸಿದೆನು. ಮಾವ್‌ಜೀಯವರೊಡನೆ ಆಲೋಚಿಸಿದೆನು. ಸಾಲವನ್ನಾದರೂ ಮಾಡಿ ನನ್ನನ್ನು ಇಂಗ್ಲೆಂಡಿಗೆ ಕಳುಹಿಸುವುದು ಉಚಿತವೆಂದು ಅವರು ಹೇಳಿದರು. ನನ್ನ ಹೆಂಡತಿಯ ಆಭರಣದ ವಿಚಾರವಾಗಿ ಹೇಳಿದೆನು. ಕಡೆಗೆ ಯಾವುದೋ ಒಂದು ವಿಧದಲ್ಲಿ ಹಣವನ್ನು ಒದಗಿಸುತ್ತೇನೆಂದು ನನ್ನ ಅಣ್ಣನು ಹೇಳಿದನು. ಆದರೆ ನನ್ನ ತಾಯಿಯು ಇನ್ನೂ ಸಮ್ಮತಿಸಿರಲಿಲ್ಲವು. ಇಂಗ್ಲೆಂಡಿನಲ್ಲಿ ಯುವಕರು ಕೆಟ್ಟುಹೋಗುವ ಮಾರ್ಗದಲ್ಲಿ ಸಂಚರಿಸುವರೆಂದು ಆಕೆಗೆ ಯಾರೋ ಹೇಳಿದ್ದರು. ಮಾಂಸ ತಿನ್ನುವುದು, ಸಾರಾಯಿ ಕುಡಿಯುವುದು ಬಹಳ ಸುಲಭವೆಂದು ಸಹ ಹೇಳಿದರು. ಈ ವಿಚಾರವಾಗಿ ಆಕೆಯು ನನ್ನನ್ನು ಕೇಳಿದಳು. ಅದಕ್ಕೆ ನಾನು ನನ್ನ ಮೇಲೆ ನಿನಗೆ ವಿಶ್ವಾಸವಿಲ್ಲವೆ? ನಾನು ನಿನಗೆ ಸುಳ್ಳುಹೇಳುವುದಿಲ್ಲ. ಆ ದುರ್ವ್ಯಸನಕ್ಕೆ ನಾನು ಗುರಿಯಾಗುವುದಿಲ್ಲವೆಂದು ಪ್ರಮಾಣವಾಗಿ ಹೇಳುತ್ತೇನೆ. ಏನಾದರೂ ಕೆಡುಕಿದ್ದರೆ ಮಾವ್‌ಜೀಯವರು ಅಂಗೀಕರಿಸುತ್ತಿದ್ದರೇ? ಎಂದು ಹೇಳಿದೆನು. 'ದೂರದೇಶದಲ್ಲಿ ನೀನಿದ್ದರೆ ಕೊಂಚ ಸಂಕೋಚ ಹುಟ್ಟುತ್ತದೆ. ನನಗೇನೂ ತೋರುವುದಿಲ್ಲ. ಬೇಚರ್ಜಿ ಸ್ವಾಮಿಯವರನ್ನು ಕೇಳುತ್ತೇನೆ" ಎಂದು ನನ್ನ ತಾಯಿ ಹೇಳಿದಳು. ಬೇಚರ್ಜಿಸ್ವಾಮಿಯವರು ಜೈನಸನ್ಯಾಸಿಗಳು; ನಮ್ಮ ಕುಟುಂಬಕ್ಕೆ ಆಪ್ತರು. ನನ್ನಿಂದ ಮೂರು ವ್ರತಗಳನ್ನು ಮಾಡಿಸಿಕೊಂಡು ನನ್ನನ್ನು ಇಂಗ್ಲೆಂಡಿಗೆ ಕಳುಹಿಸಬಹುದೆಂದು ಹೇಳಿದರು. ಸಾರಾಯಿ, ಮಾಂಸ, ಪರಸ್ತ್ರೀ ಇವುಗಳನ್ನು ಮುಟ್ಟುವುದಿಲ್ಲವೆಂದು ನಾನು ಅವರೆದುರಿಗೆ ಪ್ರಮಾಣಮಾಡಿದೆನು. ಅನಂತರ ನನ್ನ ತಾಯಿಯು ನನ್ನ ಪ್ರಯಾಣವನ್ನು ಅಂಗೀಕರಿಸಿದಳು. ಪಾಠಶಾಲೆಯಲ್ಲಿ ವಿದ್ಯಾರ್ಥಿಗಳು ನನಗೊಂದು ವಿನೋದೋತ್ಸವವನ್ನು ಮಾಡಿದರು. ರಾಜಕೋಟೆಯಿಂದ ಇದುವರೆಗೆ ಯಾರೂ ಸೀಮೆಗೆ ಹೋಗಿರಲಿಲ್ಲ. ನನ್ನನ್ನು ಗೌರವಿಸಿದುದಕ್ಕಾಗಿ ವಂದನೆಯನ್ನು ತಿಳಿಸಲು ಒಂದು ಉಪನ್ಯಾಸವನ್ನು ಬರೆದಿದ್ದೆನು. ನಾನು ಒಂದು ಮಾತನ್ನೂ ಆಡಲಾರದೆ ಹೋದೆನು. ದೊಡ್ಡ ಆಶೀರ್ವಾದವನ್ನು ಹೊಂದಿ ರಾಜಕೋಟೆಯಿಂದ ಬೊಂಬಾಯಿಗೆ ಪ್ರಯಾಣಮಾಡಿದೆನು.

ಜಮೀನ್ದಾರರಸಂಘದ ವಾರ್ಷಿಕ ಸಭೆಯಲ್ಲಿ ಪಾಸಾದ ಠರಾವುಗಳು

1 ದೊಡ್ಡ ಪ್ರಾಂತ್ಯಗಳಿಗೆ ದೊರಕಿರುವ ರಾಜಕೀಯ ಸುಧಾರಣೆಗಳೇ ಈ ದೇಶಕ್ಕೂ ಕೂಡಲೇ ಕೊಡಬೇಕು ಎಂಬ ಠರಾವನ್ನು ಅಧ್ಯಕ್ಷರೇ ಚಿಕ್ಕದೊಂದು ಭಾಷಣಮಾಡಿ ಸಭೆಯ ಮುಂದೆ ಇಟ್ಟು ಒಮ್ಮತದಿಂದ ಮಂಜೂರಾಯಿತು.

2. ಕೊಡಗಿನ ಪ್ರೊವಿನ್ಸಿಯಲ್ ಗ್ರೇಡಿನ ಗಜೆಟೆಡ್ ಆಫೀಸರುಗಳನ್ನು 5 ವರ್ಷ ಅಂಥ ಕೆಲಸ ನೋಡಿದನಂತರ ಮದ್ರಾಸ್ ಪ್ರಾಂತ್ಯಕ್ಕೆ ವರ್ಗಮಾಡಲು ಅವಕಾಶ ಕೊಡುವಂತೆ ನಮ್ಮ ಸರಕಾರವು ಮದ್ರಾಸ್ ಸರಕಾರದೊಡನೆ ಏರ್ಪಾಡು ಮಾಡಿಕೊಳ್ಳಬೇಕೆಂತ ಸಂಘವು ನಮ್ಮ ಸರಕಾರವನ್ನು ಕೇಳಿಕೊಳ್ಳುತ್ತದೆ.

ಈ ಠರಾವನ್ನು ಮ. ರಾ. ಶ್ರೀ. ಪಮ್ಮುಡ ಮಾದಪ್ಪನವರು ಸಭೆಯಮುಂದೆ ತಂದರು. ಮ. ರಾ. ಶ್ರೀ. ಮನೆಯಪ್ಪಂಡ ಬೆಳ್ಯಪ್ಪನವರು ಅನುಮೋದಿಸಿ ಮ. ರಾ. ಶ್ರೀ. ಕೊಳ್ಳಿಮಾಡ ಕರುಂಬಯ್ಯನವರು ಪುಷ್ಟೀಕರಿಸಿದನಂತರ ಮ. ರಾ. ಶ್ರೀ. ಉದಿಯಂಡ ಮೊಣ್ಣಯ್ಯನವರೂ, ಬಿದ್ದಂಡ ಬೋಪಯ್ಯನವರೂ, ಪಟ್ಟಮಾಡ ಕುಂಞಪ್ಪನವರೂ ವಿರೋಧಿಸಿದರು.

ಮ. ರಾ. ಶ್ರೀ. ಮಂಡೆಯಂಡ ಕುಟ್ಟಪ್ಪನವರೂ, ಮನೆಯಪ್ಪಂಡ ಚಿಣ್ಣಪ್ಪನವರೂ, ಕೋಟೆರ ಚಿಣ್ಣಪ್ಪನವರೂ, ಪುದ್ಯಂಡ ಬೆಳ್ಯಪ್ಪನವರೂ, ನಿಡ್ಯಮಲೆ ಮುದ್ದಪ್ಪನವರೂ ಠರಾವಿನ ಪರವಾಗಿಯೂ, ಶ್ರೀಯುತ ಮಾದಂಡ ಮಂದಣ್ಣನವರೂ, ಬೇರೆರ ಚಿಣ್ಣಪ್ಪನವರೂ, ಬಿದ್ದಂಡ ಸುಬ್ಬಯ್ಯನವರೂ ವಿರೋಧಿಸಿಯೂ ಮಾತನಾಡಿದರು

ಓಟಿಗೆ ಹಾಕಲಾಗಿ ಸುಮಾರ ಪತ್ತುಮಂದಿ ಮಾತ್ರ ವಿರೋಧವಾಗಿ ಓಟು ಕೊಟ್ಟರಲ್ಲದೆ ಉಳಿದವರೆಲ್ಲರೂ ಪರವಾಗಿ ಓಟು ಕೊಟ್ಟದ್ದರಿಂದ ಠರಾವು ಬಹಳ ದೊಡ್ಡ ಬಹುಮತದಿಂದ ಪಾಸಾಯಿತು.

3. ಕೊಡಗು ಬೆನವಲೆಂಟ್ ಫಂಡ್ಸ್ ರೆಗ್ಯುಲೇಶನ್ ಮೇರೆ ಬೆನವಲೆಂಟ್ ಫಂಡ್ಸ್ ಕಮಿಟಿ ಚುನಾವಣೆಗೆ ಸರಕಾರಿ ಉದ್ಯೋಗಸ್ಥರು ಉಮೇದ್ವಾರರಾಗಿ ನಿಲ್ಲಬಾರದೆಂತ ಸರಕಾರವು ಹುಕುಂಮಾಡಬೇಕೆಂತ ಸಂಘವು ಕೇಳಿಕೊಳ್ಳುತ್ತದೆ.

ಮ. ಚೌರಿರ ಅಪ್ಪಯ್ಯನವರು ಠರಾವನ್ನು ಸೂಚಿಸಿ ಭಾಷಣ ಮಾಡಿದನಂತರ ಮ. ರಾ. ಶ್ರೀ. ಕೋಟೆರ ಚಿಣ್ಣಪ್ಪನವರು ಅನುಮೋದಿಸಿದರು.

ಮ. ರಾ. ಶ್ರೀ. ಬಿದ್ದಂಡ ಬೋಪಯ್ಯನವರೂ, ಮ. ರಾ. ಶ್ರೀ. ಪಟ್ಟಮಾಡ ಕುಂಞಪ್ಪನವರೂ, ಮ. ರಾ. ಶ್ರೀ. ಉದಿಯಂಡ ಮೊಣ್ಣಯ್ಯನವರೂ ವಿರೋಧಿಸಿ ಭಾಷಣ ಮಾಡಿದರು. ಮ. ರಾ. ಶ್ರೀ. ಮನೆಯಪ್ಪಂಡ ಬೆಳ್ಯಪ್ಪನವರೂ, ಪುದ್ಯಂಡ ಬೆಳ್ಯಪ್ಪನವರೂ ಠರಾವಿನ ಪರವಾಗಿ ಮಾತನಾಡಿದರು.

ಓಟಿಗೆ ಹಾಕಲಾಗಿ ನಾಲ್ಕುಮಂದಿ ಮಾತ್ರ ವಿರೋಧವಾಗಿಯೂ ಉಳಿದ ಬಹುಮತವು ಠರಾವಿನ ಪರವಾಗಿಯೂ ಓಟು ಕೊಟ್ಟು ಠರಾವು ಪಾಸಾಯಿತು.

4. ಸುಂಟಿಕೊಪ್ಪ - ಸಿದ್ದಾಪುರ, ವಿರಾಜಪೇಟೆ, ಮತ್ತು ಮಡಿಕೇರಿ - ಮೂರ್ನಾಡು - ವಿರಾಜಪೇಟೆ ರಸ್ತೆಗಳಲ್ಲಿ ಬಸ್ಸು ಸರ್ವಿಸ್ ನಡೆಸುವ ಹಕ್ಕನ್ನು ಒಂದು ಕಂಪೆನಿಯ ಹಕ್ಕಿಗೆ ಸಂಬಂಧಪಟ್ಟ ಅಧಿಕಾರಿಗಳು ಮಾಡಿಕೊಟ್ಟದ್ದಕ್ಕೆ ದೇಶದಲ್ಲಿ ತುಂಬಾ ಅತೃಪ್ತಿಯಿದೆಯೆಂತ ಸರಕಾರಕ್ಕೆ ಸಂಘವು ತಿಳಿಸುತ್ತದೆ

ಎಂಬ ಠರಾವನ್ನು ಮೆ ಒಮ್ಮುಡ ಮಾದಪ್ಪನವರು ಸಭೆಯ ಮುಂದೆ ತಂದ ಮಂಡೆಡ ಕುಟ್ಟಪ್ಪನವರು ಅನುಮೋದಿಸಿದ ನಂತರ ಪಟ್ಟಮಾಡ ಕುಂಞಪ್ಪನವರು ವಿರೋಧಿಸಿದರು ಆ ಬ್ದುಲ್‌ಗಫೂರ್‌ಖಾನ್ ಶೈಖ್ಗಿಯವರು ಠರಾವಿಗೆ ಬತ್ತಾಸಿಯಾಗಿ ಮಾತನಾಡಿದರು

ಠರಾವು ವಿರೋಧ ಓಟು ಇಲ್ಲದೆ ಪಾಸಾಯಿತು

5 ಪ್ರಿವಿಲೀಜ್ ಸಾಗು ಭೂಮಿ ಮತ್ತು ಸಾಗೆಯನ್ನು ಪರಾಧೀನ ಮಾಡಿದಾಗ ಅದನ್ನು ಅನ್‌ಪ್ರಿವಿಲೀಜ್ ಆಗಿ ಸಾಮಿಲ್ ಮಾಡಬಾರದೆಂತ ಸರಕಾರವನ್ನು ಸಂಘವು ಕೇಳುತ್ತದೆ

ಮ ರಾ ಶ್ರಿ ಸೂಚಿಮಂಡ ಸಿದ್ದಯ್ಯನವರು ಈ ಠರಾವು ತಂದರು ಅನುಮೋದನೆಯಾಗಿ ಬಹುಮತದಿಂದ ಮಂಜೂರಾಯಿತು

1978ನೇ ಇಸವಿಯಿಂದ ಈಚೆಗೆ ಪ್ರಿವಿಲೀಜ್ ಸಾಗು ಭೂಮಿಯನ್ನು ಮೊಂದಕೆ ಕೂಂಡವರ ಹೆಸರಲ್ಲಿ ಅದನ್ನು ಅನ್‌ಪ್ರಿವಿಲೀಜ್ ಎಂತ ದಾಖ್ಲೆಮಾಡಿ ಎಕರೆ ಬಾಗದಲ್ಲಿ 10ಎಕರೆ ವ್ಯವಸಾಯಕ್ಕೆ ಮಾಫಿಯನ್ನು ಕೊಡದೆ ಹಾಕುತ್ತಾರೆ ಈ ರೂಲನ್ನು ರದ್ದುಪಡಿಸಬೇಕೆಂಬುದೇ ಠರಾವಿನ ಉದ್ದೇಶವಾಗಿದೆ.

6 ಸರಕಾರಿ ಕಂದಾಯ ಕಟ್ಟಲಿಕ್ಕೆ ಫೆಬ್ರುವರಿ ಮಾರ್ಚ್ ಏಪ್ರಿಲ್ ತಿಂಗಳ ಗಡು ಕೊಡಬೇಕೆಂತ ಸರಕಾರವನ್ನು ಕೇಳುವುದು ಎಂದಾಗಿ ಮ ರಾ ಶ್ರಿ ಮಾಚಿಮಂಡ ಸಿದ್ದಯ್ಯನವರು ಠರಾವು ತಂದದ್ದು ಬಹುಮತದಿಂದ ಮಂಜೂರಾಯಿತು

7 ಪಟ್ಟಣ್ಣದ ಇಂಗ್ಲಿಷ್ ಸ್ಕೂಲಿನಲ್ಲಿ ವಿದ್ಯಾರ್ಥಿಗಳನ್ನು ಶಿಕ್ಷಿಸಿ ಸೀರು ಪ್ರೀಮಿಯಂ ಕಲಾಪವು ಮೊದಲಿನಂತೆ ನಡೆಸಬೇಕೆಂತ ಸರಕಾರವನ್ನು ಕೇಳಿಕೊಳ್ಳಲಾಗಿದ ಈ ಠರಾವನ್ನು ಮ ರಾ ಶ್ರಿ ಬಸ್ಸಯ್ಯನವರು ಸಭೆಯ ಮುಂದೆ ತಂದು ಬಹುಮತದಿಂದ ಮಂಜೂರಾಯಿತು.

8 ಖಾಸಗಿ ಶಾಲೆಗಳಿಗೆ ಗ್ರಾಂಟು ಕೊಡುವ ರೂಲ್ಸುಗಳಲ್ಲಿ ಕಾನ್ಷನ್ಸ್ ಕ್ಲಾಸ್ ಒಂದು ಸೇರಿಸಬೇಕು, ಎಂದು ವಿದ್ಯಾಭಿಮಾನಿಗಳನ್ನು ಸಂಘವು ಕೇಳುತ್ತದೆ

ಗವರ್ನ್‌ಮೆಂಟ್ ಗ್ರಾಂಟ್ ಹೊಂದುವ ಶಾಲೆಗೆ ಹೋಗುವ ವಿದ್ಯಾರ್ಥಿಗಳಿಗೆ ಕ್ರಿಶ್ಚಿಯನ್ ಮತಬೋಧನೆಯು ಬಲಾತ್ಕಾರದಿಂದ ಕೊಡುತ್ತಾರೆಂತಲೂ ಇದರಿಂದ ಜನರಿಗೆ ತೊಂದರೆಯದೆಯೆಂತಲೂ ಪ್ರಾಟೆಸ್ಟೆಂಟ್ ವಿದ್ಯಾರ್ಥಿಗಳನ್ನು ರೋಮನ್ ಕ್ಯಾಥೊಲಿಕ್ ಶಾಲೆಗೆ ಕಳುಹಿಸಲು ಪ್ರಾಟೆಸ್ಟೆಂಟ್ ಜನರು ಒಪ್ಪದಂತೆ ಇರುವಾಗ ಹಿಂದು ವಿದ್ಯಾರ್ಥಿಗಳಿಗೆ ಅನ್ಯಮತ ಬೋಧನೆಮಾಡಲು ಹಿಂದುಗಳು ಸಹ ಮತದವರೂ ಕೊಡುವ ಹಣವನ್ನು ಸರಕಾರದಿಂದ ಶಾಲೆಗಳಿಗೆ ಗ್ರಾಂಟು ಕೊಡಬೇಕಾದರೆ ಮತಬೋಧನೆಗೆ ಸೇರುವುದು ಬಿಡುವುದು ವಿದ್ಯಾರ್ಥಿಗಳ ಅವರ ಆಸಂ ತಂದೆ ತಾಯಿಗಳ ಇಚ್ಛೆಯಾಗಿರಬೇಕೆಂಬ ರೂಲ್ ಮಾಡಬೇಕೆಂತ ಈ ಠರಾವಿನ ಮೂಲಕ ಕೇಳುವದಾಗಿದೆ

ಠರಾವು ಬಹುಮತದಿಂದ ಮಂಜೂರಾಯಿತು

9 ಬೀಟಿಮರಗಳನ್ನಾಗಲೀ ಇತರ ಮರಗಳನ್ನಾಗಲೀ ಬೀಟಿಮರ ಹಾಕಿ ಸಾಗಿಸಲು ಅನುಮತಿಕೊಡಬೇಕೆಂತ ಕೇಳಿದ ಕಾವಲೇ ಇಲಾಖೆಯವರ ಬೀಟೆಸಾಗಿಸಿ ಮಾರಲು ಅನುಮತಿ ಕೊಡಬೇಕು ... ಕುಪ್ಪಕಾಣಿಕೆ ದರ ಹೆಚ್ಚು ಮಾಡುವ ಅಭಿಪ್ರಾಯವಿದೆಯೆಂತ ಸರ್ಕಾರಕ್ಕೆ ತಿಳಿಯುವದರಿಂದ ಆಂಥ ಅಭಿಪ್ರಾಯಕ್ಕೆ ಸಂಘವು ವಿರೋಧಿಸುತ್ತದೆ ಎಂಬ ಠರಾವನ್ನು ಮ ರಾ ಶ್ರಿ ಅಬ್ದುಲ್ ಗಫೂರ್‌ಖಾನ್ ಶೈಖ್ಗಿಯವರು ಸೂಚಿಸಿ ಬಹುಮತದಿಂದ ಮಂಜೂರಾಯಿತು.

10 ... ಬಾಣೆ ಗ್ರಾಮಕ್ಕೆ ಹೊಸ್ತುಕೊಡುವ ... ಅದರ ರಸ್ತೆಯನ್ನು ... ಗ್ರಾಮದಲ್ಲಿ ... ರಸ್ತೆಗೆ ಸೇರಿಸಬೇಕು.

11 ... ಇಲ್ಲದೆ ಸರ್ಕಾರಿಗಳಿಗೆ ಸಹ ಒಂದು ರಸ್ತೆಮಾಡಿಕೊಡಬೇಕು

12 ... ಜಿಲ್ಲಾ ಬೋರ್ಡು ಕಲ್ಲು ... ರಸ್ತೆಗೆ ಸೇರುವಂತೆ ರಸ್ತೆಮಾಡಿಸಿಕೊಡಬೇಕು

13 ... ರಸ್ತೆಯಿಂದ ಕಟ್ಟಮಾಡಿ ಗಾಂಧಿ ವಿದ್ಯಾಪೀಠ ರಸ್ತೆಗೆ ಸೇರುವಂತೆ ಒಂದು ರಸ್ತೆ ಮಾಡಿಕೊಡಬೇಕು

ಈ ಠರಾವುಗಳನ್ನು ಕಾಳಿಮಾಡ ಕರಿಯಪ್ಪ, ಪೂಕ್ಕಾಳಡ ಬಿದ್ದಯ್ಯ, ಕಂಬಡಕ್ಕಂಡ ನಂಜಪ್ಪನವರು ಸೂಚಿಸಿ ಚರ್ಚೆ ಇಲ್ಲದೆ ಮಂಜೂರಾಯಿತು

14 ಮಡಿಕೇರಿ ಸರಕಾರೀ ಶಾಲೆಯಲ್ಲಿ ಸ್ಕೂಲ್ ಫೀಸ್ ... ಮಾಡಬೇಕು.

... ಸೂಚಿಸಿದ ಈ ಠರಾವು ಮಂಜೂರಾಯಿತು

15 ... ಬೇಕೆಂತ ಕೇಳಿದ ... ಸಂಘವು ... ಕೇಳಿಕೊಳ್ಳುತ್ತದೆ, ... ಠರಾವು ಚರ್ಚೆ ಇಲ್ಲದೆ ಮಂಜೂರಾಯಿತು.

16 ಎಲ್ಲಾ ಪೋಸ್ಟ್ ಆಫೀಸುಗಳಲ್ಲಿ ಕೋರ್ಟ್ ಫೀ ಸ್ಟಾಂಪು ಸ್ಟ್ರಾಂಪು ಕಾಗದವು ದೊರೆಯುವಂತೆ ಮಾಡಿಕೊಡಬೇಕು.

ವಾದವಿಲ್ಲದೆ ಮಂಜೂರಾಯಿತು.

17 ಸಿವಿಲ್ ಕೋರ್ಟು ಸಮನ್ಸ್ ಜಾರಿಮಾಡುವದು ಕ್ರಮವಿಲ್ಲದೆ ಕಕ್ಷಿಗಾರರಿಗೆ ಅನ್ಯಾಯವಾಗುವದರಿಂದ ಚಿಕಿತ್ಸೆಯಿಸಿ ಮಾಡುವ ತಾಲ್ಲೂಕು ಪ್ರಯೋಜನವಾಗುವಂತೆ ಸರಿಯಾದ ರೂಲ್ಸುಗಳನ್ನು ಮಾಡಬೇಕೆಂದು ಕೇಳಿಕೊಳ್ಳಲಾಗಿದೆ.

ಕಳಿಪಮಾಡ ಕರುಂಬಯ್ಯನವರು ಸೂಚಿಸಿದ ಠರಾವು ಪಾಸಾಯಿತು

18 ರೆವಿನ್ಯು ರೆಗ್ಯುಲೇಶನ್ ಮತ್ತು ರೂಲ್ಸುಗಳನ್ನು ತಿದ್ದುಪಡಿ ಮಾಡಲು ಒಂದು ಕಮಿಟಿಯನ್ನು ನೇಮಿಸಬೇಕೆಂತ ಸಂಘವು ಕೇಳಿಕೊಳ್ಳುತ್ತದೆ

ಮ ರಾ ಶ್ರಿ ಕೋದಂಡ ತಿಮ್ಮಯ್ಯನವರು ಸೂಚಿಸಿದ ಈ ಠರಾವು ಚರ್ಚೆಯಿಲ್ಲದೆ ಮಂಜೂರಾಯಿತು

19 ಮಡಿಕೇರಿ ಮುನಿಸಿಪಾಲಿಟಿಯೊಳಗೆ ಒಂದು ಧಾರೆಕ್ಸ್ ಇಡಕೂಡದು.

ಎಂಬ ಠರಾವು ವಾದವಿಲ್ಲದೆ ಮಂಜೂರಾಯಿತು

20 ರಸ್ತೆ ಬದಿಯಲ್ಲಿ ಇರುವ ಮರಗಳನ್ನು ಸರಕಾರದವರು ಕಡಿದು ಮಾರಿಕೊಳ್ಳುತ್ತಾರೆ ಇಂಥಾ ಜಾಗಗಳನ್ನು ಸರಕಾರದವರು ಪರಿಹಾರ ಕೊಟ್ಟು ಹಕ್ಕು ಮಾಡಿಕೊಳ್ಳದೆ ಇರುವದಾದರೆ ಆ ಜಾಗದ ಮರಗಳನ್ನು ಉಪಯೋಗಿಸಿಕೊಳ್ಳಲು ಮಾಲೀಕರಿಗೇನೇ ಬಿಡಬೇಕು

ಪಬ್ಲಿಕ್ ರಸ್ತೆ ಬದಿಯಲ್ಲಿ ಸರಕಾರದವರು ಸಂಬಂಧಪಟ್ಟ ರೈತರಿಗೆ ಪರಿಹಾರ ಕೊಡದೆ ಕಲ್ಲು ಹಾಕಿಕೊಂಡಿದ್ದಾರೆ ಆದರೆ ಅಂಥಾ ಜಾಗದಲ್ಲಿ ಇರುವ ಮರಗಳನ್ನು ಸರಕಾರದವರೇ ಕಡಿದು ಮಾರಿಕೊಳ್ಳುತ್ತಾರೆಂತ ತಿಳಿದುಬಂದದ್ದರಿಂದ ಈ ಠರಾವನ್ನು ಮಂಜೂರು ಮಾಡುವದಾಗಿದೆ.

21 ರಕಾಬ ಹಣಕ್ಕೆ ಬಡ್ಡಿ ಕೊಡಿಸುವದರಲ್ಲಿ ಸಾಲ ಹೊಂದಿದವರಿಗೆ ಅನ್ಯಾಯವಾಗುತ್ತಿದೆಯೆಂತ ತಿಳಿದುಬಂದಿದೆ ಇದು ಸಿಟಿವ್ರೋ ಎಂಬುದನ್ನು ಕಮೀಷನರು ಉಪಾಯಿಸಿ ಹಾಗಿದ್ದರೆ ಸರಿಪಡಿಸಿಕೊಡಬೇಕಾಗಿ ಸಂಘವು ಕೇಳಿಕೊಳ್ಳುತ್ತದೆ ಎಂಬ ಠರಾವನ್ನು ಮ ರಾ ಶ್ರಿ ಕಳ್ಳಿರ ನಂಜಪ್ಪನವರು ಸೂಚಿಸಿ ಮ ಚೇಂದಿರ ತಿಮ್ಮಯ್ಯನವರು ಅನುಮೋದಿಸಿದರು

ಮ ರಾ ಶ್ರಿ ಕೂಂಗಂಡ ಸುಬ್ಬಯ್ಯನವರೂ ಮೆ ಬಿದ್ದಂಡ ಜೋಯ್ಯಯ್ಯನವರೂ ವಿರೋಧಿಸಿದರು.

ಠರಾವು ಬಹುಮತದಿಂದ ಮಂಜೂರಾಯಿತು.

22 ಇಂಪೀರಿಯಲ್ ಬ್ಯಾಂಕಿನ ಒಂದು ಶಾಖೆಯನ್ನು ಕೊಡಗಿನಲ್ಲಿ ಇಡುವಂತೆ ಮಾಡಬೇಕಾಗಿ ಸರಕಾರವನ್ನು ಸಂಘವು ಕೇಳಿಕೊಳ್ಳುತ್ತದೆ.

ಮ ರಾ ಶ್ರಿ ಕೂಳಿಮಾಡ ಕರುಂಬಯ್ಯನವರು ಸೂಚಿಸಿದ ಈ ಠರಾವಿಗೆ ಮ ರಾ ಶ್ರಿ ಕೂಂಗಂಡ ಸುಬ್ಬಯ್ಯನವರು ವಿರೋಧಿಸಿದರು. ಠರಾವು ವಿರೋಧ ಓಟಿಲ್ಲದೆ ಪಾಸಾಯಿತು

23. ಎಗ್ಸಿಕ್ಯೂಟಿವ್ ಮತ್ತು ಜುಡಿಶಿಯಲ್ ಅಧಿಕಾರಗಳನ್ನು ಪ್ರತ್ಯೇಕಿಸಿ ಕೊಡಬೇಕು.

ಎಂಬ ಠರಾವು ಅಧ್ಯಕ್ಷಸ್ಥಾನದಿಂದಲೇ ಸೂಚಿಸಲ್ಪಟ್ಟು ಮಂಜೂರಾಯಿತು

24. ಗದ್ದೆಗೂ ಹಾಳೆಗೂ ಮಧ್ಯೆ ಇರುವ ಹಳೆಮುಡಿ ಜಾಗದಲ್ಲಿ ಇರುವ ಮರ ಮಟ್ಟುಗಳನ್ನು ಅಂಥಾ ಗದ್ದೆಯ ಮಾಲೀಕರು ಉಪಯೋಗಿಸಿಕೊಳ್ಳಲು ಬಿಡಬೇಕು.

ಮ ರಾ ಶ್ರಿ ಬಾಳೆಕುಟ್ಟಿರ ಮುಂದಣ್ಣನವರಿಂದ ಸೂಚಿಸಲ್ಪಟ್ಟು ಮಂಜೂರಾಯಿತು.

25 ಎಲ್ಲಾ ಸ್ಕೂಲ್ ಮಾಸ್ತರುಗಳಲ್ಲಿಯೂ ಕೊಯಿನಾಇಂಟು ಗ್ರಾಮವಾಸಿಗಳಿಗೆ ಸುಲಭವಾಗಿ ದೊರೆಯುವಂತೆ ಮಾಡಿಕೊಡಬೇಕು ಮಲೇರಿಯಾ ನಿವಾರಕ ಸಂಘಗಳನ್ನು ಮಾಡಿಕೊಡಬೇಕು ಎಂಬ ಠರಾವನ್ನು ಮ ರಾ ಶ್ರಿ ಬಾಳೆಕುಟ್ಟಿರ ಮುಂದಣ್ಣನವರು ಸೂಚಿಸಿದರು ಮ ರಾ ಶ್ರಿ ಬಿದ್ದಂಡ ಜೋಯ್ಯಯ್ಯನವರು ಮೊದಲನೇ ಭಾಗಕ್ಕೆ ವಿರೋಧಿಸಿದರು ಠರಾವು ಮಂಜೂರಾಯಿತು.

26 ಭೂಮಿಯನ್ನು ತಾಕೀದುಗಳಾಗಲೀ, ಕೋಆಪರೇಟಿವ್ ಸೊಸೈಟಿಗಳಾಗಲೀ, ಕಂಪೆನಿಗಳಾಗಲೀ ಹರಾಜು ಮೂಲಕ ಮಾರಾಟ ಮಾಡಿದಾಗ ಅದಕ್ಕೆ ಸೇರಿದ ಬಾಣೆಯು ಮಾರಾಟವಾಗದೆ ಇದ್ದಾಗ ಅಂಥಾ ಬಾಣೆಗೆ ಕಂದಾಯ ಹಾಕುತ್ತಾರೆ ಹಾಗೆ ಕಂದಾಯ ಹಾಕಕೂಡದು ಮೆ ಚೇಂದಿರ ತಿಮ್ಮಯ್ಯನವರು ಸೂಚಿಸಿ ಸರ್ವ ಸಮ್ಮತದಿಂದ ಮಂಜೂರಾಯಿತು .

27 ಮೂರ್ನಾಡು, ಪೊನ್ನಂಪೇಟೆ ಮಡಿಕೇರಿ, ಶನಿವಾರಸಂತೆ, ಸೋಮವಾರಪೇಟೆ, ನಾಪೋಕ್ಲು, ಕೊಡ್ಲಿಪೇಟೆ ಮತ್ತು ಭಾಗಮಂಡಲ ಈ ಸ್ಥಳಗಳಲ್ಲಿ ಲೋವರ್ ಸೆಕೆಂಡರಿ ಶಾಲೆಗಳನ್ನು ಮಾಡಿಕೊಡಬೇಕು.

ಕಳ್ಳಿರ ಮಾದಪ್ಪನವರಿಂದ ಸೂಚಿಸಲ್ಪಟ್ಟು ಯಸ್ ಯನ್ ಶಂಕರನಾರಾಯಣಯ್ಯನವರಿಂದ ಅನುಮೋದಿಸಲ್ಪಟ್ಟು ಸರ್ವ ಸಮ್ಮತದಿಂದ ಮಂಜೂರಾಯಿತು

28. ಬೇತರಿ ಕಡವಿಗೆ ಸೇತುವೆ ಮಾಡಿಕೊಡಬೇಕು.

ಅಧ್ಯಕ್ಷರಿಂದಲೇ ಸೂಚಿಸಲ್ಪಟ್ಟು ಸರ್ವ ಸಮ್ಮತದಿಂದ ಮಂಜೂರಾಯಿತು.

29. ಸಿವಿಲ್ ಮತ್ತು ಕ್ರಿಮಿನಲ್ ಕೋರ್ಟುಗಳಲ್ಲಿ ಸಾಕ್ಷಿಯರ ಹೈಕೋತನ್ನು ಕನ್ನಡದಲ್ಲೇ ರಿಕಾರ್ಡ್ ಮಾಡಬೇಕು

ಅಧ್ಯಕ್ಷರಿಂದಲೇ ಸೂಚಿಸಲ್ಪಟ್ಟು ಸರ್ವ ಸಮ್ಮತದಿಂದ ಮಂಜೂರಾಯಿತು

30 ಕಂಡಂಗಾಲ ಮತ್ತು ಬಾಡಗ ಸ್ಕೂಲ್‌ಗಳಲ್ಲಿ ಸ್ಕೂಲ್ ಫೀಜ್ ಮಾಫಿ ಮಾಡಬೇಕು.

ಮಳಿಯಂಡ ಚಿಣ್ಣಪ್ಪನವರು ಸೂಚಿಸಿ ಸರ್ವ ಸಮ್ಮತದಿಂದ ಮಂಜೂರಾಯಿತು.

31 ಕೊಡಗು ಕೌನ್ಸಿಲಿನಲ್ಲಿ ಇಂಗ್ಲೀಷಿನಲ್ಲಿ ಮಾಡುವ ಭಾಷಣಗಳನ್ನು ಕನ್ನಡದಲ್ಲಿ ಹೇಳುವಂತೆಯೂ ಕನ್ನಡದಲ್ಲಿ ಮಾಡುವ ಭಾಷಣಗಳನ್ನು ಇಂಗ್ಲೀಷಿನಲ್ಲಿ ಹೇಳುವಂತೆಯೂ ಮಾಡಿಕೊಡಬೇಕು.

ಮೆ ಯನ್ ಆರ್ ಸುಬ್ಬಯ್ಯನವರು ಸೂಚಿಸಿ ಸರ್ವ ಸಮ್ಮತದಿಂದ ಮಂಜೂರಾಯಿತು.

32. ಸಮ್ಮ ಭೂಮಿಯನ್ನು ಏಳು ವರ್ಷಕ್ಕೆ ಲೀಜ್ ಕೊಡಲು ಕಮೀಷನರ ಹುಕ್ಕುಂ ಬೇಡವೆಂತ ರೂಲ್ ಮಾಡಬೇಕು.

ಮೆ ಪುಟ್ಟಿಚಂಡ ಮುದ್ದಪ್ಪನವರು ಸೂಚಿಸಿದರು. ನಯಡ ಕುಟ್ಟಪ್ಪನವರೂ, ಯಂ ಭುಜಂಗರಾಯರೂ ಮತ್ತು ಇತರರೂ ವಿರೋಧಿಸಿ ಠರಾವು ನಾಪಾಸಾಯಿತು

33 ನಾಪೋಕ್ಲು, ಭಾಗಮಂಡ್ಲ ರಸ್ತೆಯನ್ನು ಡಿಸ್ಟ್ರಿಕ್ಟ್ ಬೋರ್ಡಿನವರು ವಹಿಸಿಕೊಂಡು ಒಳ್ಳೇ ಸ್ಥಿತಿಯಲ್ಲಿ ಇಡಬೇಕು

ಮೆ ನಾಪನೆರವಂಡ ಪೊಣ್ಣಪ್ಪನವರು ಸೂಚಿಸಿ, ಮೆ ಉದಿಯಂಡ ಪೂಚ್ಚಯ್ಯನವರಿಂದ ಅನುಮೋದಿಸಲ್ಪಟ್ಟು ಸರ್ವ ಸಮ್ಮತದಿಂದ ಮಂಜೂರಾಯಿತು

34 ಎಲ್ಲಾ ಪಟೇಲರುಗಳಿಗೂ ಕುಳುವಾಡಿಗಳನ್ನು ನೇಮಿಸಿಕೊಡಬೇಕು.

ಮೆ ಬೆಳ್ಳಚೆಟ್ಟಿರ ಅಚ್ಚಯ್ಯನವರು ಸೂಚಿಸಿ ಸರ್ವಸಮ್ಮತದಿಂದ ಮಂಜೂರಾಯಿತು.

35. ಪ್ರೈಮರಿ ವಿದ್ಯಾಭ್ಯಾಸವನ್ನು ಮಾಫಿಯಾಗಿಯೇ ಕೊಡಬೇಕು ಬೆಳ್ಳಚೆಟ್ಟಿರ ಅಚ್ಚಯ್ಯನವರಿಂದ ಸೂಚಿಸಲ್ಪಟ್ಟು ಸರ್ವ ಸಮ್ಮತದಿಂದ ಮಂಜೂರಾಯಿತು.

36 ಮೀನು ಹಿಡಿಯಲಿಕ್ಕೆ ಇರುವ ಅಡಂಕವನ್ನು ತೆಗೆದು ಹಾಕಬೇಕು.

ಮೆ ಬೆಳ್ಳಚೆಟ್ಟಿರ ಅಚ್ಚಯ್ಯನವರು ಸೂಚಿಸಿ ಸರ್ವಸಮ್ಮತದಿಂದ ಮಂಜೂರಾಯಿತು

37 ಟಕಾವಿ. ಕಂದಾಯ ಬಾಕಿಗೆ ಚರಸೊತ್ತು, ಮತ್ತು ಫಸಲಿನಿಂದಲೂ ಭರ್ತಿಮಾಡಲು ಪ್ರಯತ್ನಿಸಬೇಕು, ಇದರಿಂದಲೂ ಆಗದಿದ್ದರೆ ಭೂಮಿಗೇನು ಹರಾಜಿನಿಂದ ವಸೂಲ್ ಮಾಡಬೇಕೇ ಶಿವಾಯ್ ಭೂಮಿ ಹರಾಜುಮಾಡಬಾರದು

ಮೆ ಬೆಳ್ಳಚೆಟ್ಟಿರ ಅಚ್ಚಯ್ಯನವರು ಸೂಚಿಸಿ ವಾದವಿಲ್ಲದೆ ಮಂಜೂರಾಯಿತು

38 ನಾಡು ಹೆಡ್‌ಕ್ವಾರ್ಟರ್‌ಗಳಲ್ಲಿ ಗೋಳಿಗಳನ್ನು ಸರಕಾರದವರು ಇಡಬೇಕು

ಮ ರಾ ಶ್ರಿ ಬಿಳಿಗೇರಿ ರಾಮಯ್ಯನವರಿಂದ ಸೂಚಿಸಲ್ಪಟ್ಟು ಗ್ರಾಮಕ್ಕೊಂದರ ಮೇಲೆ ಇಡಬೇಕು. ನಾಡಿಗೆ ಒಂದು ಸಾಲದು ಎಂತ ಮುಂತಾಗಿ ವಾದ ನಡೆದು ಠರಾವು ಮಂಜೂರಾಯಿತು

39 ಬಾಣೆಜಾಗದಲ್ಲಿ ಲಂತಾನ ತೆಗೆದು ವ್ಯವಸಾಯವೂ ಡಿದರೆ ಯಾವ ಕಾರಣದಿಂದಲೂ ಕಂದಾಯ ಹಾಕಬಾರದು

ಮ ರಾ ಶ್ರಿ ಬಿಳಿಗೇರಿ ರಾಮಯ್ಯನವರಿಂದ ಸೂಚಿಸಲ್ಪಟ್ಟು ಸರ್ವಸಮ್ಮತದಿಂದ ಮಂಜೂರಾಯಿತು.

40 ಹೈಗುಂದ, ಕೂಟ್ಟಿಯಾಲ ರಸ್ತೆಯನ್ನು ಒಳ್ಳೆಸ್ಥಿತಿಯಲ್ಲಿಡಬೇಕು ಚೇಂದಿರ ತಿಮ್ಮಯ್ಯನವರಿಂದ ಸೂಚಿಸಲ್ಪಟ್ಟು ಮಂಜೂರಾಯಿತು

41 ಮರೆನಾಡು ನಾಲ್ಕು ಶಾಲೆಗಳಲ್ಲೂ, ಶ್ರೀಮಂಗಲ, ಶೆಟ್ಟಿಗೇರಿ, ಮಂಚಳ್ಳಿ, ಹೇರುವನಾಡು, ಹುದಿಕೇರಿ ಹರಿಹರ, ಕೆದಮುಳ್ಳೂರು ನಡಿಕೇರಿ, ಮುಗುಟಗೇರಿ ಬೇಗೂರು ಗ್ರಾಮಗಳಲ್ಲಿ ಇಂಗ್ಲೀಷ್ ಕಲಿಸಬೇಕು.

ಚೇಂದಿರ ತಿಮ್ಮಯ್ಯನವರ ಸೂಚನೆಮೇರೆ ಮಂಜೂರಾಯಿತು.

42 ಮಡಿಕೇರಿ ಬಡೇಲು ಕಟ್ಟಡವನ್ನು ಶಾಲೆಯವರಿಗೆ ಬಿಟ್ಟುಕೊಡಬೇಕು

ಮ. ರಾ ಶ್ರಿ. ಚೇಂದಿರ ತಿಮ್ಮಯ್ಯನವರ ಸೂಚನೆ ಮೇರೆ ಮಂಜೂರಾಯಿತು

43 ಪ್ರತ್ಯೇಕ ಕರ್ನಾಟಕ ಸಂಯುಕ್ತ ಪ್ರಾಂತ್ಯವಾಗಲಿಕ್ಕೂ ಅಂಥಾ ಕರ್ನಾಟಕ ರಾಜ್ಯದ ಬೇಸಗೆ ರಾಜಧಾನಿಯು ಮಡಿಕೇರಿಯಾಗಿ ಮಾಡಿಕೊಂಡು ತನ್ನ ವ್ಯಕ್ತಿತ್ವವನ್ನು ಉಳಿಸಿಕೊಂಡು ಅಂಥಾ ಸಂಯುಕ್ತ ಪ್ರಾಂತ್ಯದಲ್ಲಿ ಸೇರಿಕೊಳ್ಳಲಿಕ್ಕೂ ಕೊಡಗು ಒಪ್ಪುತ್ತದೆಯೆಂತ ಬಿಮರ್ನಿಸ್ಥಾರದ ಸಂಘದ ಅಭಿಪ್ರಾಯವಾಗಿದೆ

ಈ ಠರಾವನ್ನು ಮ. ರಾ, ಶ್ರಿ.ಐರಿರಾಡ ಸುಬ್ಬಯ್ಯನವರು ಸೂಚಿಸಿ ಭಾಷಣಮಾಡಿದರು. ಮೆ. ಪಾರುಸಾಗಡ ಕಾಳಪ್ಪನವರು ಅನುಮೋದಿಸಿದರು.

ಮ. ರಾ. ಶ್ರಿ ಪಟ್ಟಮಾಡ ಕುಂಞಪ್ಪನವರು ವಿರೋಧಿಸಿದರು. ಮ ರಾ ಶ್ರಿ ಕುಟ್ಟಂಡ ತಮ್ಮಯ್ಯನವರು ಠರಾವಿನ ಪಕ್ಷಕ್ಕೆ ಆಕ್ಷೇಪಣೆ ಇಲ್ಲವಾದವರೂ ದೇಶದಲ್ಲಿ ಒಡಕು ಹೆಚ್ಚಾಗದಂತೆ ದೇಶದ ಎಲ್ಲರನ್ನೂ ಕೇಳಿ ಅನಂತರ ಒ

ಪ್ಪಿಗೆ ಕೊಡಬೇಕೆಂತ ಹೇಳಿದರು. ಮ. ರಾ. ಶ್ರೀ. ಬಿದ್ದಂಡ ಸುಬ್ಬಯ್ಯನವರು, ಬೋಪೈಯ್ಯನವರು ಸದು ತತ್ವಕ್ಕೆ ಒಪ್ಪಿದರು. ಆದರೆ ಅನುಮತಿಕೊಡಲು ವಾಯಿದೆ ಬೇಕೆಂತ ಕೇಳಿದರು. ಬೇರಿರ ಚಣ್ಣಪ್ಪನವರೂ, ಕೊಂಗಂಡ ಸುಬ್ಬಯ್ಯನವರೂ, ಉದಿಯಂಡ ಮಾಚೈಯ್ಯನವರೂ ಸಹ ಇದೇ ರೀತಿ ಭಾಷಣಮಾಡಿದರು. ಮ. ರಾ ಶ್ರೀ. ಕೊಳ್ಳಿಮಾಡ ಕರುಂಬೈಯ್ಯನವರೂ, ಪಂದ್ಯಂಡ ಬೆಳ್ಯಪ್ಪನವರೂ, ರಾವಿಗೆ ವಕ್ತಾನೆಯಾಗಿ ಮಾತನಾಡಿದರು.

ಅಧ್ಯಕ್ಷರ ಅನುಮತಿಯಿಂದ ಶ್ರೀಯುತ ಶ್ರೀನಿವಾಸಂತಾವ್ ಕೌಜಲಗಿಯವರು ಮಾತನಾಡಿದರು

ಠರಾವಿನ ಮೇಲೆ ಓಟ್ ತೆಗೆಯಲಾಗಿ ಠರಾವಿನ ಪರವಾಗಿ 322ಜನರು ಓಟ್ ಕೊಟ್ಟರು. ವಿರೋಧವಾಗಿ ಒಬ್ಬರೂ ಓಟ್ ಕೊಡಲಿಲ್ಲ ಠರಾವಿನ ಮೇಲೆ ಅಭಿಪ್ರಾಯಕೊಡಲು ವಾಯಿದೆ ಬೇಕನ್ನುವವರ ಓಟ್ ತೆಗೆಯಲಾಗಿ 36ಜನರು ಮಾತ್ರ ಆ ಅಭಿಪ್ರಾಯಕ್ಕೆ ಓಟ್ ಕೊಟ್ಟರು

44. ಕರ್ನಾಟಕಕ್ಕೆ ಒಂದು ವಿಶ್ವವಿದ್ಯಾಲಯವು ಬೇಕು.

ಈ ಠರಾವು ಸಹ ಅರೆಯಡ ಸುಬ್ಬಯ್ಯನವರಿಂದ ಸೂಚಿಸಲ್ಪಟ್ಟು ತಕರಾರಿಲ್ಲದೆ ಪಾಸಾಯಿತು.

45. ಸ್ಕೂಲ್ ಕಟ್ಟಡಗಳನ್ನು ಏಟಿಂಗ್ ಒಗ್ಗ ಕೆಸಿಟ್ಟದ್ದಕ್ಕೆ ಶಾಲಾ ಇನ್ಸ್ಪೆಕ್ಟರಿಗೆ ಸಂಘವು ವಂದಿಸುತ್ತದೆ.

46. ಇನ್ಸ್‌ಪೆಕ್ಷನ್ ಬಂಗ್ಲೆಯನ್ನು ಅತಿಥಿಗಳಿಗೆ ಇಳಕೊಳ್ಳಲಿಕ್ಕೆ ಕೊಟ್ಟದ್ದಕ್ಕೆ ಕಮೀಶನರಿಗೆ ಸಂಘವು ಅಭಿವಂದಿಸುತ್ತದೆ.

47. ಮೀಟಿಂಗಿನ ದಿನಗಳಲ್ಲಿ ಸೇಂದಿ, ಸಾರಾಯಿ ಅಂಗಡಿಗಳನ್ನು ಮುಚ್ಚಿದ್ದಕ್ಕೆ ಕಮೀಶನರಿಗೆ ಸಂಘವು ಅಭಿವಂದಿಸುತ್ತದೆ

48. ಸ್ವಾಗತ ಕಮಿಟಿಯವರಿಗೂ, ಸ್ವಯಂಸೇವಕರಿಗೂ ಸಂಘವು ವಂದನೆಗಳನ್ನು ಅರ್ಪಿಸುತ್ತದೆ

ಈ ನಾಲ್ಕು ಠರಾವುಗಳನ್ನು ರಾಮುಟಿಸರ್ದಾರ್ ಕೊಂದಂಡ ಅಪ್ಪಯ್ಯನವರು ಸೂಚಿಸಿ ಮಂಜೂರಾದವು

ಅಧ್ಯಕ್ಷರಾದ ಮುಂಡಾನೀರಿರಾಜೈಯ್ಯನವರು ಸುಮಾರು ಅರ್ಧ ಘಂಟೆ ಸಭೆಯದ ವರೆಗೆ ಸಂಕ್ಷೇಪವಾಗಿ ತಮ್ಮ ಕಚೇರಿ ಬಿಟ್ಟುಂದ ಮೆಂಬರುಗಳನ್ನು ಶ್ಲಾಘಿಸಿಯೂ ಜೇಕೆ ಒದ್ದಿ ವಾದಗಳನ್ನು ಹೇಳಿಯೂ ಸಭೆಯು ಭಕರ್ಣಸ್ನಾಯಿತ

ವರ್ತಮಾನ ಸಂಗ್ರಹ.

ಒಳದೇಶ

ಕಳೆದ ಶುಕ್ರವಾರ, ಶನಿವಾರ ಮತ್ತು ನಿನ್ನೆ ದಿನ ದೇಶದ ಹಲವುಕಡೆಗಳಿಗೆ ಮಳೆಯು ಬಿದ್ದಿದೆ.

ಕಳೆದವಾರ ಮಡಿಕೇರಿಯಲ್ಲಿ ನಡೆದ ಕ್ರಿಕೆಟ್ ಟೂರ್ನಮೆಂಟಿನಲ್ಲಿ ಕಾಸ್ಮೊಪಾಲಿಟನ್ ಕ್ಲಬ್ಬಿನ ಟೀಮಿನವರು ಬಹುಲವಾಗಿ ಬೆಟ್ಟನ್ನು ಗೆದ್ದರು.

ಕಿರುಂದಾಡು ಗ್ರಾಮದ ಅಪ್ಪನೆರವಂಡ ಅಪ್ಪಚ್ಚ ಕವಿಯವರ ಮನೆಗೆ ತಾ. 27ರ ರಾತ್ರಿ ಬೆಂಕಿಬಿದ್ದು ಬಿಂದುಹೋಗಿ ತುಂಬಾ ನಷ್ಟವುಂಟಾಗಿದೆಯೆಂದು ವರ್ತಮಾನ.

ಕೆಲವು ದಿವಸಗಳ ಹಿಂದೆ ಗುಬ್ಬಿನಾಟಕದವರು ರೆಡ್‌ಕ್ರಾಸ್ ಸಂಘದವರಿಗಾಗಿ ಅಭಿನಯಿಸಿದ ಪ್ರಮಿಳಾ ಎಂಬ ನಾಟಕದ ಉತ್ಪತ್ತಿಯಲ್ಲಿ ನವರ ಸಂಘದವರಿಗೆ ಕೊಟ್ಟ 121-6 ನ್ನು ಅವರು ವಂದನಾಪೂರ್ವಕ ಸ್ವೀಕರಿಸಿದ್ದಾರಂತೆ.

ಕಳೆದ ಒಂದು ತಿಂಗಳಿಂದ ಮಡಿಕೇರಿಯಲ್ಲಿ ನಾಟಕವಾಡುತ್ತಿದ್ದ ಗುಬ್ಬಿ ಶ್ರೀ ಚನ್ನಬಸವೇಶ್ವರ ನಾಟಕಮಂಡಳಿಯವರು ಈ ರಾತ್ರಿ ಐದೈದು ನಾಟಕವನ್ನಾಡಿ ಇನ್ನು ಹುಣಸೂರಿಗೆ ಹೋಗುವವರಾಗಿರುವರು.

ಮೆ. ಕೋಟಿರ ಚಣ್ಣಪ್ಪನವರು ಮತ್ತು ಮೆ. ಬಿದ್ದಂಡ ಬೋಪೈಯ್ಯನವರು ದಾಖಲುಮಾಡಿರುವ ಮೊಸನಸ್ಟದ ಕ್ರಿಮಿನಲ್ ಮೊಖದಮ್ಮೆಗಳು ಎರಡೂ ಮೆ. ತಾ. 4ರಲ್ಲಿ ಸಬ್ ಜಡ್ಜಿಯವರ ಕೋರ್ಟಿನಲ್ಲಿ ವಿಚಾರಕ್ಕೆ ಇಡಲ್ಪಟ್ಟಿದೆ

ಕೊಡಗಿನ ವೆಸ್ಲಿಯನ್ ಮಿಶನಿನ ಸುಪರಿಂಟೆಂಡೆಂಟರಾಗಿದ್ದ ರೆವರೆಂಡ್ ಪಿ. ಸಿ. ಬ್ರಂಟನ್‌ರವರು ತಾ 24ರಲ್ಲಿ ಇಂಗ್ಲೆಂಡಿಗೆ ಹೊರಟುಹೋದರು ಇವರ ಬದಲಿಗೆ ಸೀಲಂನಿಂದ ರೆವರೆಂಡ್ ಮೋಸಸ್ ಮೆತ್ಯೂ ಎಂಬವರು ಬಂದಿರುವರು

ಮೆ. ಕೇಳಪಂಡ ಐಯ್ಯಣ್ಣನವರು ಅಮ್ಮತ್ತಿನಾಡಿನ ನಾಡುಪಕ್ಕಗಾರರಾಗಿ ನೇಮಿಸಲ್ಪಟ್ಟು ಅಲ್ಲಿ ನಾಡುಪಕ್ಕಗಾರರಾಗಿದ್ದ ಮೆ. ಕಂಡ್ರತಂಡ ಪೊನ್ನಪ್ಪನವರು ಕೌನ್ಸಿಲ್ ಚುನಾವಣೆಯ ಓಟರುಗಳ ಪಟ್ಟಿಯನ್ನು ತಯಾರಿಸುವ ಕೆಲಸಕ್ಕೆ ನೇಮಿಸಲ್ಪಟ್ಟಿರುವರು

ಮೇ ತಾ. 5ರಲ್ಲಿ ರಜೆಯಲ್ಲಿ ಇಂಗ್ಲೆಂಡಿಗೆ ಹೋಗಲಿಕ್ಕಿರುವ ಮಿ. ಟಿ. ಜೆ. ಟಾಸ್ಕರ್‌ರವರ ಬದಲಿಗೆ ಹಂಗಾಮಿ ಕಮಿಷನರಾಗಿ ಮಲಬಾರಿನ ಹೆಡ್‌ಕ್ವಾರ್ಟರ್ಸ್ ಸಬ್‌ಕಲೆಕ್ಟರಾದ ಮಿ. ಇ. ಸಿ. ಬುಡ್ ಐ. ಸಿ. ಯಸ್. ರವರು ತಾ. 29ರಲ್ಲಿ ಬಂದಿರುವರು. ಇವರು ಮೇ ತಾ 3ರಲ್ಲಿ ಚಾರ್ಜುತೆಗೆದುಕೊಳ್ಳುವರು

ಇಂಗ್ಲೆಂಡಿನ ಸೇಂಟ್ ಪರ್ಸ್ಟ್ ಕಾಲೇಜಿನಲ್ಲಿ ಮಿಲಿಟರಿ ತರಬೇತುಹೊಂದುತ್ತಿದ್ದ ಮೆ ಕೊಡಂದೇರ ತಿಮ್ಮಯ್ಯನವರ ಮಗ ಲೆಪ್ಟಿನೆಂಟ್ ಸುಬ್ಬಯ್ಯನವರು ತಮ್ಮ ತರಬೇತನ್ನು ಮುಗಿಸಿ ಈಗ ಮಡಿಕೇರಿಗೆ ಬಂದಿರುವರು. ಇವರನ್ನು ಬೆಂಗಳೂರಿನಲ್ಲಿ ಉದ್ಯೋಗಕ್ಕೆ ನೇಮಿಸಿರುವರಾಗಿ ವರ್ತಮಾನ

ಈ ವರೆಗೆ ಮೈಸೂರಿನ ಮೋಟರುಬಸ್ಸು ಮೈಸೂರಿಂದ ಮಡಿಕೇರಿಗೆ ವ ಧ್ಯಾಹ್ನ 12ಗಂಟೆಗೆ ತಲುಪಿ ಆ ದಿನವೇ ಟಪ್ಪಾಲು ಬಟವಾಡೆಯಾಗುತ್ತಿತ್ತು. ಆದರೆ ಮೇ ತಾರೀಖು 1ರಿಂದ ಮೆಯಿಲ್ ಬಸ್ಸು ಸಾಯಂಕಾಲ 7ಗಂಟೆಗೆ ಮಡಿಕೇರಿಗೆ ತಲುಪುವುದರಿಂದ ಟಪ್ಪಾಲು ಮರುದಿನ ಬಟವಾಡೆ ಮಾಡಲ್ಪಡುವುದಾಗಿ ತಿಳಿಯಬರುತ್ತದೆ

ಹಿಂದೂದೇಶ.

ಜಿನೇವಾ ಪಟ್ಟಣದಲ್ಲಿ ನಡೆಯುವ ಕೂಲಿಕಾರರ ಸಮ್ಮೇಳನಕ್ಕೆ ಹಿಂದೂದೇಶದ ಕೂಲಿಕಾರರ ಪ್ರತಿನಿಧಿಯಾಗಿ ಲಾಲಾ ಲಜಪತರಾಯರು ಯೂರೋಪಿಗೆ ತಾ. 24ರಲ್ಲಿ ಹೊರಟುಹೋದರು.

ಮಧ್ಯಪ್ರಾಂತ್ಯದಲ್ಲಿ ದ್ವಿಮುಖ ಸರ್ಕಾರಕ್ರಮವು ಬಯಲಾಗಿದ್ದರಿಂದ ಟ್ರಾನ್ಸ್‌ಫರ್ಡ್ ಇಲಾಖೆಗಳನ್ನೆಲ್ಲಾ ಗವರ್ನರು ಎಗ್ಸಿಕ್ಯುಟಿವ್ ಕೌನ್ಸಿಲೊಂದಿಗೆ ಬರುವ ಜನವರಿ ಆಖೈರುವರೆಗೆ ತಮ್ಮ ಅಧೀನಕ್ಕೆ ತೆಗೆದುಕೊಂಡಿರುವರು.

ಭಾವನಗರ ಸಂಸ್ಥಾನದ ಕಾರಭಾರಿಯಾಗಿರುವ ಸರ್ ಪ್ರಭಾಶಂಕರ ಪಟ್ಟಣಿಯವರು ಏಳುದಿನ ಉಪವಾಸವನ್ನು ಪ್ರಾರಂಭಿಸಿದರು. ಆರನೇ ದಿವಸ ಡಾಕ್ಟರುಗಳ ಮಾತಿನ ಮೇರೆ ಹಣ್ಣಿನ ರಸವನ್ನು ತೆಗೆದುಕೊಂಡರು ಉಪವಾಸದ ಕಾರಣವನ್ನು ಅವರು ಇನ್ನೂ ಬಹಿರಂಗಪಡಿಸಿರುವುದಿಲ್ಲ

ಯುದ್ಧವಾದನಂತರ ಪ್ರಥಮತ ಒದಗುವ ಆಗೋಸ್ಟು ತಿಂಗಳಲ್ಲಿ ಫಿನ್ಲೇಂಡಿನಲ್ಲಿ ನಡೆಯಲಿಕ್ಕಿರುವ ಪ್ರಪಂಚದ ವಿದ್ಯಾರ್ಥಿಗಳ ಕಾನ್‌ಫರೆನ್ಸಿನವರು ಮಹಾತ್ಮ ಗಾಂಧಿಯವರಿಗೆ ಆಮಂತ್ರಣವನ್ನು ಕಳುಹಿಸಿರುವರು. ತನ್ನ ಉಪವಾಸವನ್ನು ಆಧಾರವನ್ನಾಗಿ ಒದಗಾಯಿಸುವದಾಗುವುದಿಲ್ಲವೆಂಬ ಕಾರಣದ ಮೇಲೆ ಅಲ್ಲಿಗೆ ಹೋಗಲು ಗಾಂಧಿಯವರು ಒಪ್ಪಿರುವರು. ಭಾಷಣಮಾಡಲು ಇಷ್ಟಪಡುವುದಿಲ್ಲವೆಂದು ತಿಳಿಸಿರುವರು.

ಕೊಯಮುತ್ತೂರಿನ ಸ್ವರಾಜ್ ಪಾರ್ಟಿಗೆ ಸೇರಿದ ಮುಂಬ್ಳರ್. ಸಿ ಯರಾದ ಪಿ. ಸಿ ವಿ. ವೆಂಕಟರಮಣ ಐಯ್ಯಂಗಾರ್‌ರವರು ಬಂದು ಲಕ್ಷರೂಪಾಯಿಯ ಆಸ್ತಿಯನ್ನು ದಾನಕ್ಕಾಗಿ ಕೊಟ್ಟಿರುವರು. ಇದನ್ನು ಒಂದು ಕಮಿಟಿಯವರ ಆಡಳಿತಕ್ಕೆ ಬಿಟ್ಟಿರುವರು. ಇದರಿಂದುಂಟಾಗುವ ವಾರ್ಷಿಕ ಉತ್ಪತ್ತಿ ಹನ್ನೆರಡುಸಾವಿರ ರೂಪಾಯಿಗಳನ್ನು ದೇವಸ್ಥಾನ ಮತ್ತು ಧರ್ಮಸಂಬಂಧ ಕೆಲಸಗಳಿಗೂ, ಬಡವರ ಕಷ್ಟನಿವಾರಣೆಗೂ, ಗ್ರಾಮ ನಿವಾಸಿಗಳ ಸಹಾಯಾರ್ಥವಾಗಿಯೂ, ವಿದ್ಯಾಭಿವೃದ್ಧಿಗೂ ಸಮವಾಗಿ ಹಂಚುವಂತೆ ನಿರ್ಧರಿಸಿರುವರಂತೆ.

ಸಬರಮತಿಯಲ್ಲಿ ಸ್ವರಾಜ್ಯಪಾರ್ಟಿಯವರಿಗೂ ರೆಸ್ಪಾನ್ಸಿವ್ ಪಾರ್ಟಿಯವರಿಗೂ ನಡೆದ ಕಾನ್‌ಫರೆನ್ಸಿಗೆ ಬಯಿಸಾಗಿದೆ ಎರಡು ಪಾರ್ಟಿಯವರು ಒಂದು ಒಪ್ಪಂದಕ್ಕೆ ಬಂದಿರುವರು. ಆಯಾಯ ಪ್ರಾಂತೀಕ ಕೌನ್ಸಿಲುಗಳ ಕಾಂಗ್ರೆಸ್ ಮೆಂಬರುಗಳು ತೀರ್ಮಾನಿಸಿದ ಮೇರೆ ಜವಾಬ್ದಾರಿಯೂ ಅಧಿಕಾರವು ದೊರೆಯುವದಾದರೆ ಮಂತ್ರಿ ಕೆಲಸವನ್ನು ಕಾಂಗ್ರೆಸ್ಸಿನವರು ಸ್ವೀಕರಿಸಬಹುದೆಂದು ತೀರ್ಮಾನವಾಗಿದೆ. ಈ ರ ಠರಾವು ಅಖಿಲಭಾರತ ಕಾಂಗ್ರೆಸ್ ಕಮಿಟಿಯ ಸಮ್ಮತಿಯನ್ನು ಪಡೆಯಬೇಕಾಗಿದೆ. ಇದಕ್ಕಾಗಿ ಮೇ ತಾ. 5ರಲ್ಲಿ ಮೀಟಿಂಗು ನಡೆಯುವುದು.

ಕಲ್ಕತ್ತಾಪಟ್ಟಣದಲ್ಲಿ ಹತ್ತು ಹನ್ನೆರಡು ದಿವಸಗಳವರೆಗೆ ಎಲ್ಲೆಲ್ಲೂ ಶಾಂತವಾಗಿದ್ದು ಈಗ ಪುನಃ ಕದನಗಳು ನಡೆಯುತ್ತಿವೆ. ಹಿಂದೂ ಮುಸಲ್ಮಾನರ ಇಬ್ಬರವೇ ಕೆಲುವರು ಕಾದಾಡುತ್ತಿರುವರು ಅನೇಕರಿಗೆ ಜಖಂಆಗಿರುವದಲ್ಲದೆ ಕೆಲವರು ಮೃತಪಟ್ಟಿರುವರು. ಬಂಗಾಳ ಕೌನ್ಸಿಲ್ ಮೀಟಿಂಗೊಂದನ್ನು ತುರ್ತಿನಲ್ಲಿ ಮಾಡಬೇಕೆಂದು ಬಬ್ಬ ಕೌನ್ಸಿಲ್‌ಮೆಂಬರರು ಗವರ್ನರವರನ್ನು ಕೇಳಿಕೊಂಡಿರುವರು. ದಂಡಿನ ಪಾರನ್ನು ಅಲ್ಲಿ ಜಾರಿಗೆತರಬೇಕೆಂದು ಕೆಲವು ಮಹಮ್ಮದೀಯರು ಕೇಳುತ್ತಿರುವರು. ಆ ಸ್ಥಳದಲ್ಲಿ ವ್ಯಾಪಾರವು ನಿಂತುಹೋಗಿ ಆಹಾರ ಸಾಮಗ್ರಿಗಳೇ ದೊರೆಯುವುದು ಕಷ್ಟವಾಗಿದೆಯಂತೆ.

ವಿದೇಶ.

ಪರ್ಶಿಯಾದ ಹೊಸ ಷಾ ರಾದ ರಾಜಾ ಷಾ ಪಾಹ್ಲೆವಿಯವರ ಪಟ್ಟಾಭಿಷೇಕವು ತಾ. 22–4–26ರಲ್ಲಿ ಮುಖ್ಯ ಸಟ್ಟಣವಾದ ಟೆಹರಾನ್ ಪಟ್ಟಣದಲ್ಲಿ ಬಹು ಸಾಂಭ್ರಮದಲ್ಲಿ ನಡೆಯಿತು.

ದಕ್ಷಿಣ ಆಫ್ರಿಕದಲ್ಲಿ ಇಂಡಿಯನ್ ಪ್ರತಿನಿಧಿಗಳನ್ನೊಳಕೊಂಡ ಕಾನ್‌ಫರನ್ಸಿನ ತೀರ್ಮಾನದವರೆಗೆ ಏಷ್ಯಾಟಿಕ್ ಬಿಲ್ಲನ್ನು ಚರ್ಚಿಸದೆ ಬಾಕಿ ಇಡುವುದಾಗಿ ಅಲ್ಲಿಯ ಪಾರ್ಲಿಮೆಂಟಿನವರು ಒಪ್ಪಿರುವರು.

ಯೂರೋಪಿಗೆ ಹೋಗಿರುವ ಇಂದೋರಿನ ಮಾಜಿ ಮಹಾರಾಜರವರು ಇಂಗ್ಲೆಂಡಿನಲ್ಲಿ ಕೆಲವು ದಿನ ಇರುತ್ತಾರೆಂದೂ, ತನ್ನನ್ನು ಸಿಂಹಾಸನ ಭ್ರಷ್ಟನನ್ನಾಗಿ ಮಾಡಿದ್ದಕ್ಕೆ ಕುರಿತು ಇಂಡಿಯಾ ಸ್ಟೇಟ್ ಸೆಕ್ರೆಟರಿಯಾದ ಲಾರ್ಡ್ ಬರ್ಕನ್‌ಹೆಡ್ ನವರ ಸಂಗಡ ಸಂಭಾಷಣೆ ಮಾಡಿರುವರೆಂದೂ, ಅವರು ಇನ್ನು ಕೆಲವು ದಿನಗಳನ್ನು ಲಂಡನ್ನಿನಲ್ಲಿ ಕಳೆಯುವರೆಂದೂ ವರ್ತಮಾನ.

ಇಟಲಿಯವರ ಆಡಳಿತದಲ್ಲಿರುವ ಸೋಮಾಲಿಲೇಂಡಿನಲ್ಲಿ ಅಲ್ಲಿಯ ನಿವಾಸಿಗಳಿಗೂ ಸರ್ಕಾರದ ಸೈನ್ಯಕ್ಕೂ ಯುದ್ಧವು ನಡೆಯುತ್ತಿದೆಯಂತೆ. ಸರಕಾರದ ಸೈನ್ಯಕ್ಕೆ ತುಂಬಾ ನಷ್ಟವುಂಟಾಗಿದೆಯಂತೆ ಅವರ ಸೇನಾನಾಯಕರು ಬಂದು ಯುದ್ಧಗಳಲ್ಲಿ ಸೋಲಿಸಲ್ಪಟ್ಟಿರುವರಂತೆ ಇಟಲಿಯವರು ಅಲ್ಲಿಯ ನಿವಾಸಿಗಳ ಪಡೆಗಳನ್ನೆಲ್ಲಾ ಮುತ್ತಿಗೆ ಹಾಕುತ್ತಿರುವರೆಂದೂ ಸುದ್ದಿ.

ಪ್ರತ್ಯುತ್ತರ

ಬಾತ್ಮೀದಾರರು ಪ್ರಕಟಿಸುವ ಅಭಿಪ್ರಾಯಗಳಿಗೆ ಪತ್ರಿಕಾ ಕರ್ತರು ಉತ್ತರವಾದಿಗಳಲ್ಲ. ಸಂ.

ಗುಬ್ಬಿನಾಟಕಮಂಡಳಿ, ಕೊಡವಸಭೆ ಮತ್ತು ಕರ್ನಾಟಕ ಏಕೀಕರಣ

ತಾ. 21—1—26ರಲ್ಲಿ ಗುಬ್ಬಿನಾಟಕ ಮಂಡಳಿಯವರು 'ಗುಲೇಬಕಾವಳಿ' ಎಂಬ ನಾಟಕವನ್ನು ಆಡಿದರು. ಪ್ರೇಕ್ಷಕರಲ್ಲಿ ಕೊಡವಸಭೆಯ ಪ್ರೋತ್ಸಾಹಕರು ಕೆಲವರಾಗಿದ್ದರು. ನಾಟಕದ ಅಭಿನಯವು ಆಖೈರಾಗುವ ಮುಂಚೆ ಗವರ್ನಮೆಂಟ್ ಪ್ಲೀಡರ್ ಮತ್ತು ಪಬ್ಲಿಕ್ ಪ್ರಾಸಿಕ್ಯೂಟರಾದ ರಾವ್‌ಸಾಹೇಬ್ ಕೋಡಿಮಣಿಯಂಡ ಸುಬ್ಬೈಯ್ಯನವರು ಕೊಡವಸಭೆಯ ಪರವಾಗಿ ಒಂದು ಭಾಷಣಮಾಡಿ ಒಂದು ಮೆಡಲನ್ನು ನಾಟಕಮಂಡಲಿಯ ಮಾಲೀಕರಾದ ಶ್ರೀಯುತ ವೀರಣ್ಣನವರಿಗೆ ಒಪ್ಪಿಸಿದರು. ರಾವ್‌ಸಾಹೇಬ್ ಸುಬ್ಬಯ್ಯನವರ ಭಾಷಣದ ಸಾರಾಂಶವೇನೆಂದರೆ—ಕೊಡಗಿಗೆ ಈ ಮೊದಲು ಅನೇಕ ನಾಟಕಮಂಡಲಿಯವರು ಬಂದಿದ್ದರು. ಆದರೆ ಈ ಸಾರಿ ಬಂದ ಗುಬ್ಬಿ ನಾಟಕ ಕಂಪನಿಯಷ್ಟು ಭಲೋದಾಗಿ ಆಡಿದವರು ಯಾರೂ ಇಲ್ಲ. ದೋಷಗಳು ಇಲ್ಲವೆಂತಲ್ಲ. ಪ್ರಪಂಚದಲ್ಲಿ ಯಾವಲ್ಲಿ ಲೋಪಗಳಿಲ್ಲ? ಈ ದಿನ ಆಡಿದ ನಾಟಕದಿಂದ ದೇವರ ಭಕ್ತಿ ಹೆಚ್ಚುವಂತೆ ಮಾಡಿದೆ ಕೊಡವಸಭೆಯವರು ಶ್ರೀಯುತ ವೀರಣ್ಣನವರ ಅಭಿನಯಕ್ಕೆ ಮೆಚ್ಚಿ ಭಂಗಾರದ ಪದಕವನ್ನು ಒಪ್ಪಿಸಿರುವದಾಗಿದೆ. ಈಚೆಗೆ ಪ್ರಾರಂಭವಾದ ಕರ್ನಾಟಕ ಪ್ರಾಂತ್ಯಗಳನ್ನೆಲ್ಲಾ ಒಟ್ಟುಗೂಡಿಸಿ ಒಂದು ಪ್ರಾಂತ್ಯವನ್ನಾಗಿ ಮಾಡಬೇಕೆಂಬ ಚಳವಳಿಕ್ಕೆ ಇಂಥಾ ನಾಟಕಮಂಡಳಿಯವರಿಂದ ಸಹಾಯವಾಗುತ್ತದೆ, ಎಂತ ಹೇಳಿ ಭಾಷಣವನ್ನು ಮುಗಿಸಿದರು.

ಶ್ರೀಯುತ ವೀರಣ್ಣನವರು ಜವಾಬಿನಲ್ಲಿ ಹೇಳಿದ್ದೇನೆಂದರೆ, ಇಲ್ಲಿ ಹಾಜರಿರುವ ಸಭೆಯವರ ಹಿರಿಯರಂತೆ ಇದ್ದೀರಿ. ನಾಟಕ ಮಂಡಲಿಯವರು ಬಾಲಕರಂತೆ ಇದ್ದೇವೆ ಹಿರಿಯರು ಮಕ್ಕಳ ಆಟವನ್ನು ನೋಡಿ ಲೋಪಗಳನ್ನು ಮರೆತು ಸಂತೋಷಪಡುವಂತೆ ನೀವು ಸಹ ನಮ್ಮ ಲೋಪಗಳನ್ನು ಮರೆತು ಒಳ್ಳೇದನ್ನೇ ತೆಗೆದುಕೊಳ್ಳಬೇಕಾಗಿ ಕೋರುತ್ತೇನೆ. ಈ ದಿನ ಆದ ಉತ್ಪತ್ತಿಯಿಂದ 500 ರೂ ನಮ್ಮ ಕೊಡವ ಸಭೆಗೆ ಧರ್ಮವಾಗಿ ಕೊಡಲು ಒಪ್ಪಿರುತ್ತೇನೆ. ಈ ದ್ರವ್ಯವನ್ನು ಸದ್ವಿನಿಯೋಗಮಾಡುವರೆಂತ ನಂಬುತ್ತೇನೆ ಕೊಡವ ಸಭೆಯವರು ಕೊಟ್ಟ ಪದಕವನ್ನು ಅಂಗೀಕರಿಸಿರುತ್ತೇನೆ.

ಹಾಜರಿದ್ದವ.

'ಗುಬ್ಬಿಕಂಪೆನಿಯ ಪ್ರಭಾವಮಣಿ'

ಗುಬ್ಬಿಕಂಪೆನಿಯವರು ತಾರೀಕು 19ನೇ ಸೋಮವಾರ "ಪ್ರಭಾವಮಣಿವಿಜಯ" ಎಂಬ ನಾಟಕವನ್ನು ಅಭಿನಯಿಸಿದರು. ಅದರಲ್ಲಿ ಮುಖ್ಯ ಪಾತ್ರವಾದ ಕನಕಸುಂದರನ ಪಾತ್ರವನ್ನು ಶ್ರೀಯುತ ಜಿ. ನಾಗೇಶರಾಯರು ತನ್ನ ಕಡೆ ವಹಿಸಿಕೊಂಡಿದ್ದರು 'ನರ ಹಾಡುಗಾರಿಕೆಯ ಕೆಲ ಪಾಡ' [illegible] ಸಡೆಸುತ್ತ ಎಂಬ [illegible] ನೆಯಲ್ಲಿ [illegible] ಕುಂದಣ ಕೆಲಸವನ್ನು ಮಾಡಿದಂತೆ ಅವರು. ವೇಷಧರಾಗದಲ್ಲಿ ಹಾಡಿದ "ವಿಧಿನೀ ಸ್ವತಂತ್ರ ನೆನಸಿದಾ" ಎಂಬ ಛಂದಶಾಸ್ತ್ರ ವಿರುದ್ಧವಾದ ಕಂದವು ಪ್ರೇಕ್ಷಕರ ಮನಸ್ಸನ್ನೇನೋ ಆಕರ್ಷಿಸಿತು. ಆದರೆ ಅವರೇನೋ ತಮ್ಮ ರಾಗಪಾಂಡಿತ್ಯದಿಂದ ಪ್ರೇಕ್ಷಕರ ಮನಸ್ಸನ್ನು ಮರುಳುಗೊಳಿಸಿದರೂ, ಅದೇ ಕಂದವನ್ನು ಛಂದಶಾಸ್ತ್ರಕ್ಕನುಸಾರವಾಗಿ ಹೇಳಿದ್ದರೆ ಭಾಷಾಭಿಮಾನಿಗಳು ಅತ್ಯಂತಸಂತೋಷಭಾಗಿಗಳಾಗುತ್ತಿದ್ದರು.

ಇನ್ನು ಮುಖ್ಯ ಪಾತ್ರಧಾರಿಣಿಯಾದ ತಾರಾಮಣಿಯ ಭೂಮಿಕೆಯು ರಂಗಸ್ಥಳದಲ್ಲಿ ಶ್ರೀಮತಿ ಸುಂದರಮ್ಮನವರಿಂದ ಅಲಂಕರಿಸಲ್ಪಟ್ಟಿತ್ತು. ಅವರ ಭೂಮಿಕೆಯಲ್ಲಿನ ಶಬ್ದ ಕಲಾಪಗಳ ಲಾಲಿತ್ಯವು ಅತಿಸ್ಫುಟವಾಗಿಯೂ, ಸರಳಾಲಂಕಾರ ದ ಗರ್ಭಿತವಾಗಿಯೂ, ಶಬ್ದೋಚ್ಚಾರಣೆಯು ಸ್ತೋತ್ರಾರ್ಹವಾಗಿಯೂ ಇತ್ತು.

ಪ್ರಿಯ ವಾಚಕ ಮಹಾಶಯರೇ, ಇನ್ನು ಹುಚ್ಚನ ಭೂಮಿಕೆಯನ್ನು ವಿಚಾರಿಸುವ. ಆ ಪಾತ್ರವು ಕಂಪೆನಿಯ ಒಡೆಯರಾದ ಶ್ರೀಯುತ ಗುಬ್ಬಿ ವೀರಣ್ಣನವರ ಆಶ್ರಯದಿಂದ ಮೆರೆಯಿತು. ಅವರು ಪ್ರದರ್ಶಿಸಿದ ಹಾಸ್ಯರಸೋಕ್ತಿಗಳು ಶಿಷ್ಟಗಳ ಸಮುದಾಯವು ಕೇವಲ ಗ್ರಾಮ್ಯಗಳಾದರೂ ಬಂದು ರೀತಿಯಲ್ಲೇನೋ ಇತ್ತು. ಆದರೆ ಅವರು ಆಗಾಗ್ಗೆ ಕುಕವಿಕೆಯ ಪದಲಾಲಿತ್ಯವನ್ನು ಹಾಸ್ಯರಸಪ್ರಿಯರಾಗಿ ಉಪಯೋಗಿಸುವದು ಒಮ್ಮೆ ಸಕವಿಕೆಯಿಂದ ಪ್ರಯೋಗಿಸಿದ್ದಲ್ಲಿ ಭಾಷಾಭಿಮಾನಿಗಳು ಸಂತೋಷಿಸುತ್ತಿದ್ದರು. ಇದಕ್ಕೆ ಅವರು ಸಂಬೋಧಿಸಿದ "ಭಾಮಾಮಣಿ ಮುಖಿ" ಎಂಬ ಪದವೂ, "ಆಕೆಯು ತನ ಪ್ರೇಮದೋಷದ" ಎಂಬ ಕಂದವೂ, ಉದಾಹರಣೆಯಾಗಿರುತ್ತವೆ.

"ಪ್ರಭಾವಮಣಿ ವಿಜಯದ" ಸೂತ್ರಧಾರನಾದ ದುರ್ಜಯನ ಭೂಮಿಕೆಗೆ ಆಶ್ರಯದಾತರು ಮನಸಿನ ಸೌಭಾಗ್ಯದಕ್ಷರು ಗಳು ನಮಗೆ ಅಪರಿಚಿತರಾದರೂ, ಅವರು ರಂಗಸ್ಥಳದಲ್ಲಿ ನಟಿಸಿದ ನಟನೆಯೂ, ವಾಕ್ಯೋಚ್ಚಾರಣೆಯೂ, ವೇಷವೂ ದಿವಂಗತರಾದ ಶ್ರೀಯುತ ನಾಟಕ ಶಿರೋಮಣಿ ಎ. ವಿ. ವರದಾಚಾರ್ಯರನ್ನು ಜ್ಞಾಪಿಸುವಂತಿದ್ದವು. ಅವರು ಸ್ತ್ರೀಯರಂತೆ ನಟನೆ, ಉಚ್ಚಾರಣೆಗೆ ಒದಗಾಗಿ ಮತ್ತುಗಳ ಹೂವಿನಾ

ತೆ ಶೋಭಿಸುತ್ತಾ, ಕನ್ನಡಭಾಷೆಯನ್ನು ಹಲವು ಬಾರಿ ಹಾಳು ಮಾಡಿದರು. ಮುಖ್ಯವಾಗಿ ಅವರು ಇನ್ನುಮೇಲೆ ಯಾವ ಭೂಮಿಕೆಗೆ ಆಶ್ರಯವನ್ನಿತ್ತರೂ, ಭಾಷೆಯನ್ನು ಕೆಡಿಸದಿರಲೆಂದು ಭಾಷಾಭಿಮಾನಿಗಳ ಕೋರಿಕೆ. ಅಲ್ಲದೆ ಇವರು ತಮ್ಮ ಶಕ್ತಿಮೀರಿ ಮತ್ತೊಬ್ಬರನ್ನು ಅಣಕಿಸಿ ತಮ್ಮ ನಿಜತ್ವವನ್ನು ತೋರಗೊಡಿಸಿಕೊಳ್ಳುವುದರ ಬದಲು, ನಿಲುಕದ ಮಣ್ಣಿಗೆ ಕೈ ಚಾಚದೆ ತಮ್ಮ ಶಕ್ತಿಯ ಎಲ್ಲೆಯನ್ನು ಮೀರುವುದಿಲ್ಲವೆಂದು ನಮ್ಮ ಮತವು.

ಇನ್ನು ಉಪನಟರಾದ ಶ್ರೀಯುತ ... ಆವರು ಉಪಭೂಮಿಕೆಯಾದ ತೋಳ್ಪಿಚಾನೆ ಕಾವೇರಿನಾಟಕ ನಾಟ್ಯದಲ್ಲಿ ಕರ್ನಾಟಕ ಭಾಷೆಗೆ ಇರತಕ್ಕ ಅನೇಕ ಮಾನ ರಸವನ್ನು ತೋರ್ಪಡಿಸಿದರು. ಆವರು ಇದೀ ನಾಟಕಮಂಡಳಿಯಲ್ಲೇ ಉಪನಟರಾದರೂ ಕರ್ನಾಟಕ ಭಾಷೋತ್ಸಾಹದ ಗೆಯಲ್ಲಿ ಅಗ್ರಪೀಠಕ್ಕೆ ಅರ್ಹರು.

ಇನ್ನು ನಾಟಕ ಕಲಾಕಲ್ಪ ಮಂಗಳ ... ವಿಷಲ್ ಶಬ್ದವನ್ನು ಪ್ರಾರಂಭಿಸುತ್ತಿದ್ದುದು ಮನೋರಂಜಕವಾಗಿತ್ತು. ನಾಟಕ ಕಲ್ಪಕನಾದ ಪ್ರಧಾನ ಪಾತ್ರ ವಹಿಸಿದ್ದ ಬಾಲಕನ ನಟನೆಯು ಸ್ತೋತ್ರಾರ್ಹವಾಗಿತ್ತು. ಅಂತೂ ಕ್ಷೀರಸಾಗರದ ಸ್ವಾದುವಂತೆ ಆವರು ಅಭಿನಯಿಸಿದ ನಾಟಕವು ಸ್ವಾರಸ್ಯವಾಗಿತ್ತು. ಕನ್ನಡದೇಶದಲ್ಲಿ, ಕನ್ನಡ ಭಾಷೆಯಲ್ಲಿ ಕನ್ನಡ ನಾಟಕವನ್ನು ಅಭಿನಯಿಸುತ್ತಾ ಕನ್ನಡ ಭಾಷಾಭಿಮಾನವನ್ನು ಮಾರುತ್ತಿರುವ ಈ ಮಂಡಳಿಗೆ ಭಗವಂತನು ಚಿರಕಾಲ ಸುಖಸ್ಥಿತಿಯನ್ನು ಕೊಡಲಿ. ವ ಂದೇ ... ನಾಟಕಗಳನ್ನು ಪ್ರದರ್ಶಿಸಿ ಎಂದು ಕರ್ನಾಟಕ ಸುಕೃತವಾದ ಕರ್ನಾಟಕ ಭಾಷೆಯು ಆಶ್ರಯದಲ್ಲಿ ಸದಾ ಮೆರೆಯಲಿ ಅಮರವಾಗಲಿ" ಚಿರಕಾಲ ಬಾಳಲಿ!!!

ಮನಾ ಶ್ರೀಕಂಠರಾವ್,
ಕರ್ನಾಟಕ ನಾಟ್ಯಕಲಾಭಿಮಾನಿ.

ಮೂರ್ನಾಡು ಗ್ರಾಮದ ಪರವಾಗಿ ಪ್ರಾರ್ಥನೆ

ಘನವೆತ್ತ ಸರಕಾರದವರೇ, ಮತ್ತು ಕೌನ್ಸಿಲ್ ಮೆಂಬರಗಳೇ ನಮ್ಮ ಬಡಗ್ರಾಮವಾಸಿಗಳ ಪರಾಮರಿಕೆಯನ್ನು ಚಿತ್ತಕ್ಕೆ ತೆಗೆದುಕೊಳ್ಳಬೇಕಾಗಿ ಕೋರುತ್ತೇನೆ.

(1) ನಮ್ಮ ಗ್ರಾಮದ ಬಡ ವಿದ್ಯಾರ್ಥಿಗಳಿಗೆ ಒಂದು ಮಿಡ್ಲ್ ಸ್ಕೂಲ್ ವಿದ್ಯಾಶಾಲೆಯನ್ನು ಏರ್ಪಡಿಸಿ ಕೊಡಬೇಕಾಗಿದೆ.

(2) ನಮ್ಮ ಗ್ರಾಮವು ಮಡಿಕೇರಿಯಿಂದ ನಾಪೋಕ್ಲಿಗೆ ಹೋಗುವ ಪಬ್ಲಿಕ್ ರಸ್ತೆಯಿಂದ ಸುಮಾರು 6—7 ಮೈಲು ದೂರದ ಮೂಲೆ ಪ್ರಾಂತ್ಯದ ಹಳ್ಳಿಯಾಗಿರುತ್ತದೆ.

ನಮ್ಮ ಗ್ರಾಮದಲ್ಲಿ ಬೆಳೆಸುವ ಭತ್ತ, ಅಕ್ಕಿ, ತೆಂಗಿನಕಾಯಿ, ಅಡಿಕೆ ವಗೈರೆ ಸಾಮಾನುಗಳನ್ನು ಒಂದೂರಿಗೆ ಸಾಗಿಸಿ ಯೋಗ್ಯ ಬೆಲೆಗೆ ಮಾರುವರೇ ಕೊಯನಾಡು ಮೊದ್ದ ಹೊಳೆಯಿಂದಲೂ ಮತ್ತು ದಬ್ಬಡ್ಕ ಎಂಬ ಹೊಳೆಯಿಂದಲೂ ಬಹಳ ತೊಂದರೆವುಂಟಾಗುತ್ತದೆ. ಅದ್ದರಿಂದಲೇ ನಮ್ಮ ಗ್ರಾಮದ ಬಡ ಜನಾಂಗಕ್ಕೆ ಜೀವಿಸಲಿಕ್ಕೆ ಬಹಳ ಬಡತನವೆಂತ ನಂಬುತ್ತೇವೆ. ಆದ್ದರಿಂದ ಸದರಿ ಹೊಳೆಗಳಿಗೆ ಸಂಕ ಹಾಕಿಸಿಕೊಡಬೇಕು.

(3) ನಮ್ಮ ಗ್ರಾಮವು ಆನೆ ಕಲ್ಲುಮಲೆ ಮತ್ತು ಕೋಟೆ ಮಲೆ ಕೋಪಟ್ಟಿ ಮಲೆಯ ಸಮೀಪದಲ್ಲಿ ಇರುವದರಿಂದ ಸದರಿ ಮಲೆಯಿಂದ ಇಳಿದು ಬರುವ ನೀರನ್ನು ಹೆಚ್ಚಾಗಿ ಬಡ ಜನರು ಸೇವಿಸುವದರಿಂದ ಸದಾ ರೋಗಿಗಳಾಗಿರುತ್ತಾರೆ.

ಅದ್ದರಿಂದ ಸರಕಾರದ ಪಬ್ಲಿಕ್ ರಸ್ತೆ ಬಳಿ ಒಂದು ಧರ್ಮದ ಆಸ್ಪತ್ರೆಯನ್ನು ಸ್ಥಾಪಿಸ ... ಮಾಡಿಕೊಡಬೇಕಾಗಿ ಕೇಳಿಕೊಳ್ಳುತ್ತೇನೆ.

(4) ನಾಪೋಕ್ಲು ಜಮಾವಾಸಿಗಳು ಈ ಮೊದಲಿನ ಸಂವತ್ಸರಗಳಲ್ಲಿ ಒರಕೆಯಿಂದ ಅವರಿಗೆ ಉಪಯೋಗವಾದ ಹುಕುಂ ಇಲ್ಲದೆ ಇರುವದರಿಂದಲೂ ಮತ್ತು ಈ ಮೊದಲು ಯಾವ ಸಾಹುಕಾರನ್ನಾದರೂ ಕಾಣುವಾಗ್ಯೂ ಅವರುಗಳ ಬಾಣೆ ಜಮಾಬಂದಿ ಜೇಳಿಕೆಯಂದದಕ್ಕೆ ಯಾವುದೊಂದು ಹುಕುಂ ಇಲ್ಲದೆ ಇರುವದರಿಂದ ಬಹಳ ಕಷ್ಟಪಡುತ್ತೇವೆ.

(5) ಪ್ರಾಣಿವೃದ್ಧಿ ... ಇಲ್ಲವೆ ಕೌನ್ಸಿಲ್ ಮೆಂಬರಗಳು ಮೇಲಿನ ಸಂಗತಿಗಳನ್ನು ಚಿತ್ತದಲ್ಲಿ ಆನುಸರಿಸಿ ಬಡನಿವಾಸಿಗಳ ಕಷ್ಟವನ್ನು ಹೋಗಲಾಡಿಸಿ ಸುಖವನ್ನು ಉಂಟುಮಾಡಿಸಬೇಕಾಗಿ ಪ್ರಾರ್ಥಿಸುತ್ತೇನೆ.

ಜನಸದರು ಕೊಗನ್ನ.

ಕರ ಜಾರಿಗಳೇ,

ನಮ್ಮ ಕೊಡಗಿನವರು ಒಡಕಿನಿಂದ ಕಷ್ಟ ನಷ್ಟ ಪಟ್ಟು ಸ್ವೈರಾಚಾರದಿ ಬಾರಿ ಬಾರಿಗೂ ನನ್ನ ... ವನ್ನು ಮಾಡುತ್ತಾ ಗೋಳಿಡುತ್ತಿರುವಲ್ಲಿ ಕಂಡೂ ಕಾಣದಂತೆ ಒಳ್ಳೆಯವರು ಧುಮುಕೋಡುವೆ ಕಣ್ಣು ಮುಚ್ಚಿಕೊಂಡು ಕುಳಿತಿರುವೆಯಲ್ಲಾ! ಓ ತಂದೆ, ಪರಕ್ಕಾಗಿ ನಿನ್ನ ಮೇಲೆ ದೂರು ಹಾಕಿದೆನು, ಆದರೆ ಇದು ನಿನ್ನ ನಿರ್ದಯವೇ, ನಮ್ಮ ದುರ್ಗುಣವೇ ನೋಡಿದರೆ ಈ ಸಾಕ್ಷ್ಯ ದೃಷ್ಟಿಯಿಂದ ನೋಡಿದರೆ ನಮ್ಮಲ್ಲಿ ಸ್ವಜನ ಪ್ರೀತಿಯೇ ಕಾಣದಿರುವುದಿಲ್ಲ. ಅಹೋ ನಾಡದ ಕೆಲವರು ಸಮಾಜದ ಸಂಗತಿ ನಮ್ಮವರ ಉದ್ಧಾರಕ್ಕೋಸ್ಕರ ನಮ್ಮವರಿಗೆ ಒಂದು ಸಭೆ ಬೇಕೆಂದು ಪ್ರಯತ್ನಪಡುವರು. ಅದನ್ನು ಪೂರ್ತಿಗೊಳಿಸಲು ಬಡಿವಾರದಿಂದ ಕೆಲವರು ಬೇಡದ ಸಂಗಿಲ್ಲದೆ ಪ್ರಯತ್ನಿಸುವರು. ನೋಡಿದಿರಾ, ನಮ್ಮ ಜನಾಂಗದ ಜೀವನವಾಗಿಯು ನ್ನು ಚಿಂತಿಸುವ ನಮ್ಮ ಘನವಂತರ ನಾಯಕರು ಇರಲಿ, ದಯಾಘನನೇ, ನಿನ್ನ ದೃಷ್ಟಿಮಾತ್ರಕ್ಕೆ ತಪ್ಪಿಯು ಉಪ್ಪಿಂಗಯಾಗುವರು, ಉಪ್ಪಿಂಗೆಯು ತಪ್ಪಿಯಾಗುವದು. ಅಂದ ಒಳಿತ ನಮ್ಮವರನ್ನು ದೂರುವದೇಕೆ? ದಯಾಘನನೇ ನಿನ್ನ ಬಂದೆ ಹೆಚ್ಚಿನ ಸುಧಾರಣೆಯನ್ನು ಹೇಳಿಕೊಳ್ಳಲು ಸೂಕ್ಷ್ಮ ಶಾಂತಿಕ್ಯವು ನನಗಿಲ್ಲ. ಎರಡೇ ಮಾತಿನಿಂದ ನನ್ನ ಅಭಿಪ್ರಾಯವನ್ನು ಪೂರ್ತಿಗೊಳಿಸುವೆನು. ನಿನ್ನ ದಯವು ಕೊಡಗಿನವರ ಮೇಲೆ ಪೂರ್ತಿ ಇರುವದು ನಿಜವಾದರೆ ಕೊಡಗಿನವರು ಒಬ್ಬರಿಗೊಬ್ಬರು ಮತ್ಸರ ಪಡುವದನ್ನು ನಿರ್ಮೂಲಗೊಳಿಸಿ ಪ್ರೀತಿಗಟ್ಟನ್ನು ಹುಟ್ಟಿಸಿ ಸಭೆಯ ಮೂಲಕ ದೊಡ್ಡದೊಡ್ಡ ವ್ಯಾಪಾರಮಾಡಲು ಧನವಂತರಿಗೆ ಮನಗೊಟ್ಟು ಪರದೇಶದಿಂದ ನಮ್ಮವರಿಗೆ ಬೇಕಾಗುವ ಸಾಮಾನುಗಳನ್ನು ತರಿಸಿ ತರಿಸಿ ಸುಲಭ ಕ್ರಯಕ್ಕೆ ಮಾರುವಂತೆ ಮಾಡಿ ನಮ್ಮ ಬಡಜನರ ಉದ್ಧಾರವನ್ನು ಮಾಡು. ಇಷ್ಟಾದರೆ ತೀರಿತು. ನಿನ್ನ ಕೃಪೆಯು ಪೂರ್ತಿ ನಮ್ಮ ಪರ ಮೇಲೆ ಉಳಿದಂತಾಯಿತು.

ಯನ್. ಕೆ. ಅಪ್ಪಚ್ಚು.

ಆಯ್ಯ,

ಕೌನ್ಸಿಲು ಮೀಟಿಂಗಿನಲ್ಲಿ ಮಾಸುಕೊಲ್ಲಿ ಫಾರೆಸ್ಟಿನಲ್ಲಿ ಮುಫತಾಗಿ ದನಮೇಯಲು ಬಿಡಬೇಕೆಂದು ಕೇಳಿದಕ್ಕೆ ಸಿಕ್ಕಿದ ಜವಾಬು ಬಹಳ ಚೆನ್ನಾಗಿದೆ. ದನಗಳನ್ನು ಕಾಡಿನಲ್ಲಿ ಮೇಯಲು ಬಿಟ್ಟರೆ ಜಾತಿಮರಗಳೆಲ್ಲವೂ ಆಳಿದುಹೋಗುತ್ತವಂತೆ. ಮಾಸುಕೊಲ್ಲಿಯಲ್ಲಿರುವ ಪರೀಕ್ಷಾಕ್ಷೇತ್ರವೂ (Experimental plot) ಮತ್ತು ಗಂಧದತೋಟವೂ ಮಾತ್ರ ಮಾಸುಕೊಲ್ಲಿ ಫಾರೆಸ್ಟು ಎಂದು ಕೊಡಗಿನ ಚೀಫ್ ಫಾರೆಸ್ಟ್ ಆಫೀಸರು ತಿಳಿದಿರುವರೇನು? ದಿವಸಕ್ಕೆ ಹೆಚ್ಚು ಕಮ್ಮಿ ಐವತ್ತು ರೂಪಾಯಿಗಳ ಸಂಬಳವನ್ನು ಬಡ ಕೊಡಗಿನ ಖಜಾನೆಯಿಂದ ಹೊಂದಿಕೊಳ್ಳುವ ಇವರು ಈ ಫಾರೆಸ್ಟನ್ನು ಎಂದಾದರೂ ನೋಡಿರುವರೇನು? ಇಡೀ ಫಾರೆಸ್ಟಿನ ಸುಮಾರು ಮುಕ್ಕಾಲು ಪಾಲು ಲಂತಾನದಿಂದ ತುಂಬಿಹೋಗಿ ದನಗಳಿಗೆ ತಲೆ ಹಾಕಲಿಕ್ಕಾಗದಂತಾಗಿರುವದು ಪಾಪ! ಇವರಿಗೇನುಗೊತ್ತು? ಗಂಧದತೋಟದವರೆಗಲ್ಲವೆ ಮೋಟಾರು ರಸ್ತೆ! ಈ ಲಂತಾನದೊಳಗಿರುವ ಮರಗಳನ್ನು ದನಗಳು ಹಾಳುಮಾಡುತ್ತದೆಂಬುದೇ ಇವರ ಹೆದರಿಕೆ! ಚೆನ್ನಾಯಿತು! ಫೀಸಾಯಿಲ್ಲದೆ ಬಿಟ್ಟರೆ ದನಮೇಯಿಸುವವರು ಕಾಡಿಗೆ ಬೆಂಕಿಹಾಕಿಬಿಡುತ್ತಾರಂತೆ! ಫೀಸ್ ಇದ್ದರೆ ಬೆಂಕಿಬೀಳುವದಿಲ್ಲವೇನು? ಬೆಂಕಿಗೂ ದನಮೇಯುವದಕ್ಕೂ ಸಮ್ಮಂಧವೇನು? ಇಡೀ ವರ್ಷವೆಲ್ಲ ಬಿಡಬೇಕೆಂದು ಮಿ. ಚಿಣ್ಣಪ್ಪನವರು ಕೇಳಿದಂತೆ ಕಾಣುವದಿಲ್ಲ. ವರ್ಷಕ್ಕೆ ನಾಲ್ಕು ಆಣೆ ಹೆಚ್ಚಲ್ಲವಂತೆ! ಇದು ವರ್ಷಕ್ಕೆ ಅಲ್ಲ! ಒಂದು ಎತ್ತಿಗೆ ಆರುತಿಂಗಳಿಗೆ ಕೊಡಬೇಕಾದ ಫೀಜು ಆಗಿದೆ. ಈ ಕಾರಣಾಯುವ್ವು ದಿವಸಕ್ಕೆ ಸುಮಾರು ಐವತ್ತು ರೂಪಾಯಿಗಳನ್ನು ತೆಗೆದುಕೊಳ್ಳುವ ನಮ್ಮ ಫಾರೆಸ್ಟಿನ ದೊಡ್ಡ ಸಾಹೇಬರಿಗೆ ಏನರಿವು?

ಸರಕಾರದವರಿಗೆ ತುಂಬ ಖರ್ಚಿನ ಸಂಗ್ತಿಗಳು ಇರುವದರಿಂದ ಅವರ ಉತ್ಪತ್ತಿಯನ್ನು ಕಡಿಮೆಮಾಡಲು ಕೇಳಿದಕ್ಕೆ ಮಿ. ಅಪ್ಪಾರಂಡ ಚಂಗಪ್ಪನವರಿಗೆ ಬಹಳ ಬೇಜಾರು. ಹಾಗಾದರೆ ಭೂಮಿಕಂದಾಯವನ್ನು (ಕಾಫಿಕಂದಾಯವಲ್ಲ!) ಒಂದರಿಂದ ಎರಡಕ್ಕೆ ಏರಿಸಿ ಸರಕಾರಕ್ಕೆ ಸಹಾಯವನ್ನು ಮಾಡುವ ಯೋಚನೆಯನ್ನು ದಯಮಾಡಿ ಎತ್ತಿ ಬಡ ಸರಕಾರವನ್ನು ಉದ್ಧರಿಸಿರಿ! ಆದರೂ, ಹೇಗೂ ಮಾಲ್ದಾರೆಯಲ್ಲಿಯೂ ದನವನ್ನು ಫಾರೆಸ್ಟಿನಲ್ಲಿ ಮೇಯಲಿಕ್ಕೆ ಬಿಡಬೇಕಂತೆ? ....

ಇದೆಲ್ಲವೂ ಮಿ. ಚಿಣ್ಣಪ್ಪನವರ ತಪ್ಪು! ಈ ಸಂಗ್ತಿಯ ವಿಷಯ ವಾಗಿ ಚೆನ್ನಾಗಿ ಅರಿತುಕೊಳ್ಳದೆ ಇದ್ದದರಿಂದಲ್ಲವೇ ಚೀಫ್ ಫಾರೆಸ್ಟು ಆಫೀಸರು ಮಾಡಿದ ವಾದಕ್ಕೆ ಮರುಜವಾಬು ಕೊಡಲಾಗಲಿಲ್ಲ. ನಾವು ನಮ್ಮ ಮೂಢತ್ವವನ್ನು ಎಷ್ಟು ತೋರಿಸುತ್ತೇವೋ ಅಷ್ಟೇ ಚಮತ್ಕಾರವು ಸರಕಾರದಿಂದ ಹೊರಡಬೇಕುತ್ತೆ! ಇಂಥಾದ್ದರಿಂದ ಕೊಡಗಿನ ಹೊರ ದೇಶದವರು ನಮ್ಮ ಮತ್ತು ನಮ್ಮ ಹೋರಾಟದ ವಿಷಯವಾಗಿ ಯಾವ ಅಭಿಪ್ರಾಯವನ್ನು ಪಡುವರೊ ಶಿವನೇ ಬಲ್ಲ!

ಐನಂಗ ಪಿ. ಮುತ್ತಣ್ಣ.

ಜಾತಿಗೆ ಖ್ಯಾತಿ.

ಮ. ರಾ. ರಾ. ಪುಟ್ಟಿಚಂಡ ಕಾಳಪ್ಪನವರನ್ನು ಅವರ ಬಂಧುಮಿತ್ರರೂ ಅವರ ಪ್ರಾಯಶ್ಚಿತ್ತವನ್ನು ಅಂಗೀಕರಿಸಿ, ಜಾತಿಗೆ ತೆಗೆದುಕೊಂಡರೆಂದು ಕೇಳಿ ದೇಶದ ಆದರಲ್ಲೂ ಜಾತಿಯ ಹಿತಚಿಂತಕರೆಲ್ಲರಿಗ ಬಹಳ ಸಂತೋಷವಾಯಿತು. ಹಿಂದಿನ ಮೆಟ್ಟಿಲೆ ಮಾತೆ ಕಾವೇರಿಯು ಕಾಳಪ್ಪನವರನ್ನು ಜಾತಿಗೆ ತಂದದ್ದಕ್ಕೂ ಆವರ ಸೆಂಟಿಮೆಂಟರು ಕಾಳಪ್ಪನವರು. ಅನೇಕ ವರ್ಷಗಳಿಂದ ಪ್ರಯತ್ನಿಸಿ ತ್ರಿಕರಣ ಪೂರ್ವಕವಾಗಿ ಒಪ್ಪಿಸಿದ ಪ್ರಾಯಶ್ಚಿತ್ತವನ್ನು ಧರ್ಮಾನುಸಾರ ಅಂಗೀಕರಿಸಿದ್ದಕ್ಕೂ ಎಷ್ಟು ಜನಗಳಿದ್ದರೂ ಸಾಲದಾಗುತಿತ್ತು. ಆದರೆ ಎಲ್ಲವೂ ಆವರ ಮನಸ್ಸು ಅಡಗಿಹೋಯಿತು. ಪ್ರಾಚೀನಕಾಲದ ಎಳೆಬಿಸಿಲು ಕಳ್ಳಿಸಿದಂತಾಯಿತು, ಕಾರ್ಮುಗಿಲು ಕವಿಯಿತು. ಕಗ್ಗತ್ತಲೆ ಮನೆ ಮಾಡಿ ನಷ್ಟತ... ಎಲ್ಲವೂ ನಿಸ್ತಂತೆ. ಆಸೆಯು ನಿರಾಶೆಯಾಯಿತು. ಜಾತಿಗೆ ಬಂದಿದೆ ಖ್ಯಾತಿಯು ರಸಾತಳ ಪಾತಾಳಕ್ಕೆ ಇಳಿದುಹೋಯಿತು. ತಾನು ಮಾಡಿದ ತಪ್ಪನ್ನು ಒಪ್ಪಿಕೊಂಡು ಬಹಳ ಶ್ರಮ ಮತ್ತು ಸಮಯ ವ್ಯಯಮಾಡಿ ಪ್ರಾಯಶ್ಚಿತ್ತವನ್ನು ಒಪ್ಪಿಸಿದರೂ ಅದನ್ನು ತಿರಸ್ಕರಿಸಿದರಲ್ಲಾ. ಅಯ್ಯೋ ಪಾಪ!

ಈ ತಿರಸ್ಕಾರವು ನಮ್ಮ ಜಾತಿಯ ಕಳೆಯನ್ನು ಕುಂದಿಸಿತು, ಬಣ್ಣಕೆಡಿಸಿತು. ನಮ್ಮ ಜಾತಿಯಲ್ಲಿರುವ ಕೆಲವು ಅನುಕೂಲಗಳನ್ನು ಕೆಳಗೆ ವಿವರಿಸುವೆನು. ಆ ವಿವರಣೆಯನ್ನು ಮನನಮಾಡಿ ಪರಿಸಿ ನನ್ನ ಅಭಿಪ್ರಾಯವನ್ನು ತಪ್ಪೆಂದು ಹಿರಿಯರೂ ಅರಿಯುವವರೂ ಹೇಳಿದರೆ ನನ್ನ ತಲೆ ಬಾಗಿ, ಒಪ್ಪಿಕೊಳ್ಳುವೆನು. ಅದು ಸರಿಯೆಂದಾದರೆ ಕಾಳಪ್ಪನವರು ಮಾಡಿದ್ದು ಒಂದೇ ತಪ್ಪು—ಪರಸ್ತ್ರೀಯನ್ನು ಮದುವೆಮಾಡಿಕೊಂಡದ್ದು. ಆ ತಪ್ಪಿಗಾಗಿ ಆ ಸ್ತ್ರೀಯನ್ನು ಕಾಲನ ಸಹಾಯದಿಂದ ತ್ಯಜಿಸಿ ತನ್ನ ಪೂರ್ವದ ಬಂಧುಗಳನ್ನು ಸಾಷ್ಟಾಂಗದಿಂದ ಬೇಡಿದರೆ ಸಾಲದಾಯಿತೆ? ಈ ಕಾರ್ಯಮಾತ್ರದಿಂದ ಜನ್ಮಸಿಗಳು ಕಾಳಪ್ಪನವರನ್ನು ಬಹಿಷ್ಕರಿಸುವರು. ಕಾಳಪ್ಪನವರು ಜನ್ಮಸಿಯಾದರೆ ಮನೆಯವರು ಊರವರು ಅವರನ್ನು ಬಹಿಷ್ಕರಿಸಿದರೂ ತಾನು ತನ್ನ ಮಿತ್ರರ ಸಹಾಯದಿಂದಲಾದರೂ ತನ್ನ ಜಾತಿಯ ನೀತಿರೀತಿಗಳನ್ನು ಅನುಸರಿಸಿ ಮಾಡಿದ ತಪ್ಪನ್ನು ಮರೆಯುವರು. ಕೊಡಗನಾಗಿ ಹುಟ್ಟಿ ಕೊಡಗನಾಗಿಯೇ ಶಿವಾಧೀನನಾಗುವರು.

ನಾವು ಕೊಡಗರು ಈಗಿನ ಕಾಲದ ಸ್ಥಿತಿಗತಿಗೆ ಯೋಗ್ಯರಾದವರು ನಮ್ಮ ನೆರೆಹೊರೆಯಲ್ಲಿರುವ ಸಾಮಾಜಿಕ ಕುಂದುಕೊರತೆಗಳಲ್ಲನೇಕ ನಮ್ಮಲ್ಲಿ ಕಾಣಲಿರವು. ಎಳೆ ಬಾಲಕ ಮದುವೆ ಇಲ್ಲ, ವಿಧವಾ ವಿವಾಹವಿದೆ. ಅಳಿಸು ಕಟ್ಟಿಲ್ಲ. ಒಂಧು ಒಳಗವನ್ನು ನಡಿಸುವಂತೆ ವರದಕ್ಷಿಣೆಯು ಇಲ್ಲವೇ ಇಲ್ಲ. ನಮ್ಮ ಶುಭ ಶೋಭಾನಗಳಲ್ಲಿಗಲಿ ತಿಥಿಕರ್ಮಾಂತರ ಗಳಲ್ಲಿಗಲಿ ಸಾಂಜಾತಿಯರ ಹಂಗು ನಮಗಿಲ್ಲ. ಅಷ್ಟೆ ಅಲ್ಲ, ನಮ್ಮ ಜಾತಿಯೆಲ್ಲಾ ಒಂದೆ. ಕೀಳುಮೇಲಿಲ್ಲ, ಇವುಗಳಲ್ಲದೆ ಇನ್ನು ಕೆಲವು ಅನೇಕ ಅನುಕೂಲಗಳನ್ನು ಹೇಳುತ್ತಾ ಹೋದರೆ ೭ ತರದಿಗೆ ರುಚಿಸದು.

ನಮ್ಮ ಪದ್ಧತಿ ಮತ್ತು ಪೂರ್ವಚರಣೆಗಳಲ್ಲಿ ನಾವು ಕೊಡಗರು ಎಷ್ಟು ಮತಸ್ಥರ ಹಿಡಿಯುವುವೋ ಅಷ್ಟೆ ನಮ್ಮ ದಿವಸ ಕಾರ್ಯಗಳಲ್ಲಿ ಲೋಕೀಕ ಜಾತಿಯವರಂತೆ ಅನುವರ್ತಿಸುವೆವು We, coorgs, are as orthodox in our ancestrial customs, as we are cosmopolitans in our every day systems. Does it seem paradoxical?

ನಾವು ಪೂರ್ವಚಾರಪದ್ಧತಿಗಳನ್ನು ಸನ್ಮಾನಿಸುತ್ತೇವೆಂಬುದು ಈ ಕಾಳಪ್ಪನವರ ಪ್ರಯತ್ನದಿಂದಲೂ ಸಂಕಷ್ಟದಿಂದಲೂ ತಿಳಿಯಬರುವುದು. ಹಿರಿಯರ ಮುಷ್ಕರವು ತೆಸ್ಸರ್ಕನೆ ಆಯಿತು. ಆದರೆ ಕಡಂಚಮಟ್ಟಿಗಾದರು, 'ಕಾಲಕ್ಕಾ ನರಿಯಾಯಿತ್ ಕೋಲಕಟ್ಟಂಡು,' ನಮ್ಮ ನೆರೆಹೊರೆಯ ದೇಶಗಳಲ್ಲಿ ನಮಗಿಂತ ಕೀಳ ಮತ್ತು ಮೇಲು ಜಾತಿಯವರು ಪರಸ್ತ್ರೀಯರನ್ನು ಮದುವೆಮಾಡಿಕೊಂಡು ಇದ್ದರೂ ಹಿಂದುಗಳಾಗಿ ಜೀವಿಸುವ ಉದಾಹರಣೆಗಳು ಒಂದೆರಡಲ್ಲ, ಇನ್ನವರೆಗೆ ಹೋಗಲು ನಮ್ಮ ಹಿರಿಯರು ಒಪ್ಪರು. ಆದರೆ ನಮ್ಮಷ್ಟು ಸ್ವಾತಂತ್ರ್ಯವಿರುವ ಜಾತಿಯವರು ಕಾಳಪ್ಪನವರನ್ನು ಮತ್ತೆ ಹಿಂದಕ್ಕೆ ತೆಗೆದುಕೊಂಡರೆ ಯಾವ ಕುಂದಕವೂ ಆಗುವಂತೆ ಕಾಣುವುದಿಲ್ಲ.

ನಮಗೆ ಕಟ್ಟು ಕಟ್ಟಲೆಗಳು ಹುಚ್ಚಿಲ್ಲ. ಮಹಮ್ಮದೀಯರ ಮತೀಧಿಯು ನೋಡಲು ಅಂದವಾಗಿದ್ದರೆ ನೋಡಿ ಆನಂದಿಸುತ್ತೇವೆ. ಕ್ರೈಸ್ತರ ಇಗರ್ಜಿಯು ಶೋಭಾಯಮಾನವಾಗಿದ್ದರೆ ಕಣ್ಣದಣಿಯ ನೋಡಿ ಸುಖಿಸುತ್ತೇವೆ. ಯಾವ ಜಾತಿಯ ಸ್ಪರ್ಶಮಾತ್ರದಿಂದ ಏನೊಂದು ದೋಷವು ಆಗದು. ನಾವು ಸಾಮಾನ್ಯವಾಗಿ ತಿನ್ನುವಂತ ತಿಂಡಿಯನ್ನು ಯಾರು ಶುದ್ಧವಾಗಿ ಅಡಿಗೆಮಾಡಿ ಇಕ್ಕಿದರೂ ತಿನ್ನುತ್ತೇವೆ. ಹೀಗೆ ಮಾಡಿದರೆ ನಾವು ಜಾತಿಗೆ ಬಾಹಿರರಾಗೆವು ನಾವು ಹತ್ತಿದ ಈ ಕೆಲವು ಮೆಟ್ಟಿಗಳನ್ನು ಹಿಂದೂದೇಶವು ಒಂದಾಗಿ ಹತ್ತಿದರೆ ಸ್ವರಾಜ್ಯವು ಸಮೀಪಿಸುವುದೆಂದು ಸಮಾಜೋದ್ಧಾರಕರು ಬಾರಿ ಬಾರಿಗೂ ಸಾರುತ್ತಿರುವರು. ಹೀಗಿದ್ದರೂ ಪಿಶಾಚವು ಅಪಧೈರ್ಯವನ್ನು ನುಡಿಯುತ್ತಿದೆ.

ಲೋಕವು ಅಂಗೀಕರಿಸುವಂತಾ ನಾಗರಿಕತೆಯನ್ನು ಹೊಂದಿದ ಮತ್ತು ಶಾಡುಜನರೆಂದು ಹಿಯಾಳಿಸಲ್ಪಡುವ ನಮ್ಮ ದೇವಿಯರು ಈ ಮಹನೀಯರನ್ನ ಜಾತಿಗೆ ತೆಗೆದುಕೊಂಡಿದ್ದರೆ ಅರ್ಕಸಮಾಜವಂತ ಮಹಾವನಮಾಜದ ಬಣ್ಣವು ಸಹ ಕೆಡುತಿತ್ತು? ಹಾಗೆ ಮಾಡದಿದ್ದ ಕಾರಣ ನಮ್ಮ ಜಾತಿಯ ಬಣ್ಣವು ಹ್ಯಾಗಾಯಿತು. ಆದರೆ ಇಷ್ಟಕ್ಕೆ ಜಾತಿಯಿಂದ ಬರುವುದು ಹೋಗುವುದು ಬರೇ ಆಟವಾಗಿ ಪರಿಣಮಿಸುವುದೆಂದು ಕೆಲವರಿಗೆ ಸಂಶಯ ಮೋರಬಹುದು. But burnt child dreads fire. ಅಷ್ಟುಮೇಲೆ ಒಲೆ ಕಾಯಿಸಿದ ಕಟ್ಟವೇನಾದರೂ ಬುದ್ಧಿ ಬಾರದೆ ಒಬ್ಬೊಬ್ಬರು ಕಟ್ಟಿಗೆ ಎಲ್ಲರಿಗೂ ಬುದ್ಧಿ ಬರುವುದು. ನಮ್ಮ ಜಾತಿಯಿಂದ ಆಲೋಚನಾಪರರಾದವರು ಯಾರು ಬಾಹಿರರಾಗರು, ಯಾಕೆಂದರೆ ಇವರಲ್ಲಿ ಕಟ್ಟು ಕಟ್ಟಲೆಗಳು ಕಮ್ಮಿ. ಸ್ವತಂತ್ರ್ಯ ಹೆಚ್ಚು ಇದೆ.

ಹೀಗಿರುವಾಗ ಪುನಃ ಕಾಳಪ್ಪನವರ ಗುರುಹಿರಿಯರು ಚೆನ್ನಾಗಿ ಆಲೋಚನೆಮಾಡಿ ನ್ಯಾಯವಾದ ರೀತಿಯನ್ನು ಕಂಡುಹಿಡಿದರೆ ಅವರನ್ನು ಹಿಂದಕ್ಕೆ ತೆಗೆದುಕೊಳ್ಳುವುದೇ ನೀತಿಯೆಂದು ತಿಳಿಯುವುದು. ಪರರ ಕಷ್ಟಕ್ಕೆ ನಾವು ಗಣನೆ ಮಾಡಿದರೆ ಹೀಗೆ ತಿಳಿಯುವುದು. ಹೀಗೆಯೇ ನಮ್ಮ ಜಾತಿಯಿಂದ ಬಾಹಿರರಾದ ಇನ್ನು ಕೆಲ ಮಾನವರ ಹಿತಕ್ಕಾಗಿದರೆ ಏನೆಂದು ನೋಡೋಣ! ಈ ಮಾನವರು ಮಂದಿಗೆ ಹಿಂತಿರುಗಿದರೆ ದೇಶದ ಮನವಾಣಿಯತ್ತ ಹೊಂದಕಬಿಷ್ಟವಿದೆ?

ಸರಸ್ವತಿ.

ಮನೋಲ್ಲಾಸಿನಿ ತೈಲ.

ತಲೆನೋವು, ತಲೆ ತಿರುಗುವುದು, ತಲೆಯಲ್ಲಿ ಕಣ್ಣು, ಕಿವಿಯಿಂದ ಕೀವು ಸೋರುವುದು ಕಿವುಡುತನ, ಕಣ್ಣುನೋವು, ಅಪಸ್ಮಾರ ನಿದ್ರೆ ಬಾರದಿರುವುದು, ನೆನಪು ಶಕ್ತಿ ಕುಂದಿಹೋಗುವುದು. ಇವುಗಳನ್ನೆಲ್ಲ ಖಂಡಿತ ಗುಣಪಡಿಸುತ್ತದೆ. ಉದುರುವ ಕೂದಲನ್ನು ನಿಲ್ಲಿಸಿ ಗಿಡ್ಡಗಿರುವ ಕೂದಲನ್ನು ಬೆಳೆಯಿಸಿ ಕೂದಲಿಗೆ ಸೌಂದರ್ಯವನ್ನೂ ಹೊಳಪನ್ನೂ ಕೊಟ್ಟು ಅಕಾಲಕ್ಕೆ ಹಣ್ಣಾಗುವ ಕೂದಲನ್ನು ತಡೆದು ಕೂದಲು ಇಲ್ಲದ ಸ್ಥಳದಲ್ಲಿ ಹೊಸ ಕೂದಲನ್ನು ಹುಟ್ಟಿಸುತ್ತದೆ. ಬೆಲೆ ಸೀಸೆಗೆ ರೂ 1, 3 ಸೀಸೆಗೆ 2—10—0, ಒಂದು ದೊಡ್ಡ ಸೀಸೆಗೆ ರೂ. 2, 3 ಸೀಸೆಗಳಿಗೆ 5—8—0

ಚಂದನಾಸವ.— ಇದು ಪ್ರಮೇಹ, ಮೂತ್ರಕೃಚ್ಛ್ರ, ಮೂತ್ರ ಹನಿಹನಿಯಾಗಿ ಹೋಗುವುದು, ಮೂತ್ರಕೋಶದ ಉರಿ, ಮೂತ್ರಪಿಂಡಗಳ ಉರಿ, ಮೂತ್ರನಾಳದಲ್ಲಿ ಹುಣ್ಣು, ಮೂತ್ರದಲ್ಲಿ ಧಾತು, ಹೊಯ್ಯುವಾಗ ಉರಿಯುವದು, ಮೂತ್ರನಾಳದಿಂದ ಕೀವು ಬರುವುದು, ಮೂತ್ರ ತಡೆಯಲಿಕ್ಕೆ ಸಾಮರ್ಥ್ಯವಿಲ್ಲದೆ ಹಾಗೆ ಹೋಗುವುದು, ಆಗಾಗ್ಗೆ ಮೂತ್ರ ಬರುವದು, ಮೂತ್ರ ತಡೆಯಲಿಕ್ಕೆ ... ಮೂತ್ರನಾಳದಲ್ಲಿ ಚುಚ್ಚುವ ನೋವು, ದೇಹದಲ್ಲಿ ಉರಿ, ಬಾಯಾರಿಕೆ, ಸ್ವಪ್ನಾವಸ್ಥೆ, ಮೂತ್ರನಾಳದಲ್ಲಿ ... ಇವುಗಳಿಗೆ ಪರಮ ಔಷಧಿ. ಗಂಡಸರಿಗೂ ಹೆಂಗಸರಿಗೂ ಇದು ಅತ್ಯುತ್ತಮ. ಬೆಲೆ—ಬಾಟ್ಲಿ 1, 3, 6ಕ್ಕೆ ರೂ 1—4—0, 3—8—0, 6—12—0.

ರೋಮನಾಶಿನಿ.— ಈ ಪುಡಿಯನ್ನು ನೀರಲ್ಲಿ ಕಲಸಿ ಮೈಯಲ್ಲಿ ರೋಮವಿರುವ ಭಾಗಕ್ಕೆ ಹಚ್ಚಲು ರೋಮವು ಉದುರಿ ಬೀಳುವುದು. ಡಬ್ಬಿ ೧ಕ್ಕೆ 6 ಆಣೆ, 3 ಡಬ್ಬಿಗಳಿಗೆ ರೂ. 1, 1 ಡಜನಿಗೆ 3-8-0

ಅಮೃತಾರಿಷ್ಟ.— ಇದು ಕ್ವಿನೈನು ಬೆರಸದಿರುವ ಉತ್ತಮೋತ್ತಮವಾದ ಔಷಧಿ. ಎಲ್ಲಾ ತರದ ಜ್ವರಕ್ಕೆ ಉತ್ತಮ. ಬೆಲೆ—ಬಾಟ್ಲಿ 1, 3, 6ಕ್ಕೆ ರೂ 1—4—0, 3—8—0; 6—12—0

ಲೋಹಾಸವ.— ಇದು ಜ್ವರದಿಂದ ಮತ್ತು ಮಲೇರಿಯದಿಂದುಂಟಾದ ಅಶಕ್ತತೆಗೆ ದಿವ್ಯವಾದ್ದು. ಬೆಲೆ—ಬಾಟ್ಲಿ 1, 3, 6ಕ್ಕೆ ರೂ. 1—4—0; 3—8—0; 6—12—0

ನಮ್ಮ ಕೆಟಲಾಗು ತರಿಸಿ ನೋಡಿ

ವಿಳಾಸ—ಮನೋಲ್ಲಾಸಿನಿ ಕಂಪೆನಿ.
9 ಮಂಗಳೂರು, ಕಂಕನಾಡಿ.

52—19

Apply for our shooting Season's Clearance Sale Catalogue of Brand New Goods. 10 to 25 percent Reductions in Prices. No Licenser Required

No License Required!!



Webley and Scott Air Pistol, cal 177 or 22, bore Powerful and Accurate, complete with a sample box of slugs, two spare washers, a brush for cleaning, and a bookletof instructions Rs 30/– Free delivery.

Pweiful German Diana Air gun Handsome and Accurate, takes B S A Patern No. 1 Slugs and Darts, expressly recommendable for Target Practice Rs 15/ Free delivery

Brilliant Search Light Lamp for Night Sports Rs 30/– Free delivery

No License required to purchase or to possess the above items.

Reliable D. B B L. 12 bore guns	Rs 60/– and upwards	
Do S. B B L. 12	do 40/-	do
D. B. M. L. Guns	„ 45 -	do
S. B. M L. do.	„ 30/-	do
S. B. B L. Rifles	„ 25/–	do
B L Revolvers and Pistols	„ 30/–	do.

Arms, Ammunition and shooting requisites of almost every kind andquality offered at exceptionally favourable rates. ANumber of good quality second hand weapons also offered for sale in theNew Catalogue.

GOOLAMHUSIAIN ALLIBHOY & SONS
Largest Importers of Firearms and Ammunition,
Cheapest priced firm in India,
210 Abdul Rehman Street, BOMBAY.

24. 14

೧೦೦೦ ರೂಪಾಯಿಗಳ ಬಹುಮಾನ.
೧ ಸಾಲಂಮಿಸ್ರಿ ಮುರಬ್ಬಾ.
ಲೋಕಪ್ರಸಿದ್ಧವಾದ ಸಾಲಂಮಿಸ್ರಿ ಮುರಬ್ಬಾ ತೆಗೆದುಕೊಳ್ಳಿರಿ.

ನಮ್ಮ **ಟ್ರೇಡ್ ಮಾರ್ಕನ್ನು ನೋಡಿ ಈ ಔಷಧ ತೆಗೆದುಕೊಳ್ಳಿರಿ.** ಸ್ತ್ರೀ ಸಂಘಕ್ಕೆ ಮೊದಲೇ ಇದರ ಸೇವನೆಯಿಂದ ವೀರ್ಯವು ನೀರಿನಂತೆ ಇದ್ದರೂ, ಸ್ವಪ್ನೇಂದ್ರಿಯಪಾತವಾದರೂ, ಮೂತ್ರದೊಂದಿಗೆ ಹೋಗುತ್ತಿದ್ದರೂ ದೋಷರಹಿತವಾಗಿ ಶರೀರಕ್ಕೆ ಆರೋಗ್ಯವನ್ನೂ ಧಾರ್ಢ್ಯತೆಯನ್ನೂ ಆಯಸ್ಸು, ಬಲ, ತೇಜಸ್ಸು ಉಂಟು ಮಾಡುವದು. ಅಜೀರ್ಣ ಮಲಸ್ಥಲನವಾದರೂ ... ನೋವುಗಳಿಗೆ ಇದು ದಿವ್ಯ ಔಷಧವು. ಈ ಸಾಲಂಮಿಸ್ರಿ ಎಂಬುವದು ಕಾಬೂಲ್ ಕಂದಹಾರ ಪ್ರಾಂತ್ಯದಲ್ಲಿ ಬೆಳೆಯುತ್ತದೆ.

ಈ ಔಷಧದಿಂದ ಗುಣಹೊಂದಿರುವ ಅನೇಕ ಮಹನೀಯರು ತಾವಾಗಿಯೇ ಅನೇಕ ದೇಶಗಳಿಂದಲೂ ಆಫ್ರಿಕ, ಬರ್ಮ, ಪಿನಾಂಗ್, ಸಿಂಗಪೂರ್, ಸಿಲೋನ್, ಮುಂಬಾಯಿ, ಕಲ್ಕತ್ತೆ, ಮದ್ರಾಸು ಮತ್ತು ಇಂಡಿಯಾದೇಶದಲ್ಲಿ ಎಲ್ಲಾ ಸ್ಥಳಗಳಿಂದಲೂ ನಮಗೆ ಯೋಗ್ಯತಾ ಪತ್ರಿಕೆಗಳನ್ನು ಕಳುಹಿಸಿರುವರು. ಇವುಗಳ ನಕಲನ್ನು ಯಾರಾದರೂ ತರಿಸಿ ನೋಡಬಹುದು. ಇವುಗಳು ಸುಳ್ಳು ಎಂದು ನಿರ್ಧರಪಡಿಸುವವರಿಗೆ ಮೇಲೆ ಕಂಡ ಬಹುಮಾನವು ಕೊಡಲ್ಪಡುತ್ತದೆ. ನಾವು ಹಾಗೆ ಕೊಡದೇ ನಿರಾಕರಿಸಿದಲ್ಲಿ ಕೋರ್ಟು ಮೂಲಕ ಅದನ್ನು ಪಡೆಯಬಹುದು. ೧ ಡಬ್ಬಿಯನ್ನು ... ಪೂರ್ಣ ೧೫ ದಿನ ಸೇವಿಸಿದಲ್ಲಿ ಗುಣವು ಖಂಡಿತವಾಗಿ ತೋರಬಹುದು ... ವಿಳಾಸಗಳನ್ನು ಸ್ಪಷ್ಟವಾಗಿ ಬರೆಯಬೇಕು. ಒಂದಾವರ್ತಿ ಉಪಯೋಗಿಸಿ ನೋಡಿದಲ್ಲಿ ಖಾತ್ರಿ ಉಂಟಾಗುತ್ತೆ.

ಕ್ರಯ ಡಬ್ಬಿ ೧ಕ್ಕೆ ರೂ. ೩—೦—೦ ಛಾಂಗಿ ಬಾಜು ೧೦೦ರ ೩ ಡಬ್ಬಿಗಳಿಗೆ ೦—೮—೦ ಆಣೆ. ಏಜಂಟರುಗಳು ಬೇಕಾಗಿದ್ದಾರೆ. ... ಎಲ್ಲಾ ಸ್ಥಳಗಳಲ್ಲಿಯೂ ಅವರ ಹೆಸರುಗಳನ್ನು ... ಪತ್ರಿಕೆಯ ಹೆಸರನ್ನು ಬರೆಯಬೇಕು

ಬ್ರಾಂಚ್ ಆಫೀಸ್, ಮಿಸ್ರಿ ಬೆಂಗಳೂರು ಸಿಟಿ. } ಡಿ. ಮನ್ನಾಲಾಲ್, ದಿಲ್ಲಿ ನೇಟಿವ್ ವೈದ್ಯರು, ಸಾಲಂಮಿಸ್ರಿ ಮುರಬ್ಬಾ ಡಿಪೋ, ಬೆಂಗಳೂರು ಸಿಟಿ.

12—5

ನೋಟೀಸು.

ಇದರಿಂದ ಸರ್ವರಿಗೂ ತಿಳಿಯಪಡಿಸುವದೇನೆಂದರೆ:—

ಹಾಲೇರಿ ನಾಡು ... ಗ್ರಾಮದ ... ಸುಬೇದಾರರ ಮನೆ ... ಪತ್ನಿ ದೇವಮ್ಮನವರು, ಸದರಿ ಗ್ರಾಮದ ... ದಲ್ಲಿ ಇರುವ ಸಾಗಿನ ಸರ್ವೆ ನಂಬರು 40 41/2, 41 ... ಪಕರು ... 27ರೂ 6 ಆ. ಕಂದಾಯದ ಭೂಮಿ ವಗೈರೆ ಆಸ್ತಿಯನ್ನು ಯಾರಿಗಾದರೂ ವಿಕ್ರಯಿಸುವ ಅಧಿಕಾರವಿಲ್ಲ. ಇರುವದಾಗಿ ತಿಳಿದುಬರುತ್ತೆ. ಈ ಭೂಆಸ್ತಿಯು ಅವರಿಗೆ ಜೀವನಾಂಶಕ್ಕಾಗಿ ಕೊಟ್ಟದ್ದಾಗಿರುತ್ತೆ. ಈ ಭೂಮಿ ವಗೈರೆಯನ್ನು ವಿಕ್ರಯಿಸುವದಕ್ಕೆ ಸದರಿ ದೇವಮ್ಮನವರಿಗೆ ಯಾವ ಹಕ್ಕು, ಸ್ವತಂತ್ರವಿರುವದಿಲ್ಲ. ಈ ಆಸ್ತಿಯನ್ನು ಯಾರೂ ಕೊಂಡುಕೊಳ್ಳಕೂಡದು. ಈ ಆಸ್ತಿಯನ್ನು ಮಾರಾಟಮಾಡುವ ವಿಷಯದಲ್ಲಿ ಕುಟುಂಬದವರ ತಕರಾರು ಪೂರ್ತ ಇರುತ್ತೆ. ಈ ಸಂಗತಿ ತಿಳಿದೂ ಸಹ ಕೊಂಡುಕೊಳ್ಳುವವರು ನಷ್ಟಕಷ್ಟ ಹೊಂದುವರಾಗಿ ಈ ಮೂಲಕ ಖಂಡಿತವಾಗಿ ತಿಳಿಸಲಾಗಿದೆ.

ತಾ. 15—4—26 ಯಸ್. ಎನ್. ಶಂಕರನಾರಾಯಣಯ್ಯ,
ಜಮೀನ್‌ದಾರ್, ಮತ್ತು
ಕಾಫಿಪ್ಲಾಂಟರ್.

4—2.

ಚೇಳುಗಳ ವಿಧ್ವಂಸಿ

ಚೇಳು ಕಡಿದ ಸ್ಥಳದಲ್ಲಿ ಸರ್ಪ ಚೇಳುಗಳ ವಿಧ್ವಂಸಿ ಎಂಬ ಈ ಔಷಧವನ್ನು ಇಟ್ಟ ಒಡನೆಯೇ ಗರುಡನನ್ನು ಕಂಡ ಸರ್ಪವು ತೊಲಗಿದಂತೆ ಒಂದೇ ಒಂದು ನಿಮಿಷದಲ್ಲಿ ಉರಿಯೂ ಹಾಗೂ ... ಮಾಯವಾಗುವವು.

ಔಷಧದಲ್ಲಿ ಗುಣವಿಲ್ಲವೆಂದು ವ್ಯಕ್ತಪಡಿಸುವವರಿಗೆ 100 ರೂಪಾಯಿ ಬಹುಮಾನ ಕೊಡುವೆವು.

ಕ್ರಯ ಸೀಸೆ 1ಕ್ಕೆ 8 ಆಣೆ. ಡಜನ್ 1 ರೂ 5. ದೊಡ್ಡ ಸೀಸೆ 18 ಆಣೆ ...

ಬುಗುಡಿ ಅಂಚಿನ ಸೀರೆಗಳು.

ಬೆಂಗಳೂರು ಅರಳೇಪೇಟೆಯ ಸೀರೆಯಂತೆಯೇ ಇರುವವು. ಉಡುವದಕ್ಕೆ ಲಕ್ಷಣವಾಗಿಯೂ, ನಯವಾಗಿಯೂ ಇರುವವು. ಸುಂದರವಾದ ರೇಶ್ಮೆಯ ಸರಗು ಮತ್ತು ದೊಡ್ಡ ಅಂಚು ಒಣ್ಣ ಹೋಗದು. ... ಈಗಿನ ಕಾಲದಲ್ಲಿ ಈ ಕ್ರಯಕ್ಕೆ ಯಾವ ಪಟ್ಟಣದಲ್ಲಿಯೂ ಸಿಕ್ಕಲಾರವು. ... ತರಿಸಿ ...

ಕ್ರಯ ನಂ. 1. 6—8—0
ನಂ. 2 7—8—0

ವಿಳಾಸ.— ಎಸ್. ಆರ್. ಕೃಷ್ಣ ಅಂಡ್ ಕೊ
12—12 ನಂ ೧ ತಂಬುಸೆಟ್ಟಿ ಬೀದಿ, ಮದರಾಸು.

ಬೇಕಾಗಿದೆ.

ಬೀಟಿಮರದ ತೊಲೆಗಳು ಬೇಕಾಗಿವೆ. ಒಳ್ಳೇ ಬೆಲೆ ಕೊಡಲಾಗುವುದು. ಹೆಚ್ಚಿನ ಸಂಗತಿಗೆ ದಯವಿಟ್ಟು ಈ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳುವುದು.

WANTED
Rose wood logs (Beeti)
Good price offored.
For further particulars please apply to:—

R. FRAMJEE,
Mercara

12.6

ಎಂಪಾಯರ್ ಆಫ್ ಇಂಡಿಯಾ ಲೈಫ್ ಇನ್ಶುರೆನ್ಸ್ ಕಂಪೆನಿ ಲಿಮಿಟೆಡ್.

(ಸ್ಥಾಪಿತ 1897)

ಮೂಲಧನ ರೂ. 2,50,00,000 ಕ್ಕೆ ಮೀರಿದೆ.
ವಿಮೆ ದರಗಳು ಅತ್ಯಂತ ಕಡಿಮೆ. ಉದಾರತ್ವದ ಲಾಭ ಮತ್ತು ಪೂರ್ಣ ಭದ್ರತೆ.

ಉದಾಹರಣೆ:—ಯಾವನೊಬ್ಬ ... ನೆ ವಯಸ್ಸಿನಲ್ಲಿ ತನ್ನ ಮರಣಾನಂತರ ಲಾಭದೊಡನೇ ದೊರಕುವ 1000 ರೂಪಾಯಿಯ ಪಾಲಿಸಿಯನ್ನು ಇಳಿದರೆ ವಾರ್ಷಿಕ ರೂ. 48—10—0 ವಿಮೆಯು ಮೇಲೆ 20 ವರುಷ ... ಗಳಾಂತ್ಯದಲ್ಲಿ ದೊರಕುವ ರೂ. 1000ಯ ಪಾಲಿಸಿಯನ್ನು ... ವನ್ನು 55ನೇ ವಯಸ್ಸಿನ ವರೆಗೆ ವಿಮೆ ಮಾಡಲ್ಪಡುವುದು.

... ಪತ್ರವು ಮತ್ತು ... ಫಾರಂಗಳು ಕೆಳಗಿನ ವಿಳಾಸದಲ್ಲಿ ದೊರೆಯುತ್ತವೆ:—

ಸಿ. ಕೆ. ಪಂಗಪ್ಪ, ಸ್ಪೆಷಲ್ ಏಜಂಟ್, ರಿವರ್‌ಸೈಡ್ ಎಸ್ಟೇಟ್, ಅಥವಾ ಸಿ ...
ಬ್ರಾಂಚ್ ಸೆಕ್ರೆಟರಿ, 15 ಕಮರ್ಷಿಯಲ್ ಸ್ಟ್ರೀಟ್, ಬೆಂಗಳೂರು

24-12

ಸತ್ಯಮೇವಜಯತೇ.

(ಗುಣವಾಗದಿದ್ದರೆ ಹಣ ವಾಪಸ)

ಧಾತುಪುಷ್ಟಿಕರ ಕಾಮೋತ್ತೇಜಕ, ಇಂದ್ರಿಯಸ್ತಂಭಕವಾದ

ಮದನೋದ್ಭವ ಗುಳಿಗೆ.

ಜನನೇಂದ್ರಿಯದ ಶಿಥಿಲತೆ ನಿರ್ಬಲತೆ ನಪುಂಸಕತ್ವ ಸ್ವಪ್ನದಲ್ಲಿ ಸ್ಖಲನವಾಗುವದು ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತು ಪುಷ್ಟಿಕರ ವೀರ್ಯವರ್ಧಕ ರಕ್ತಶೋಧಕ, ಕಾಮೋತ್ತೇಜಕ, ಮನೋಲ್ಹಾಸಕ ಇಂದ್ರಿಯಸ್ತಂಭಕ, ಗರ್ಮಿ, (ಟಾಕಿ) ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲ ತರಹದ ಒಕ್ಕೆಗಳು, ಹುಣ್ಣುಗಳು ಪಿತ್ತದ ಬಾಧೆಗಳು ಕಟುಪೂಲೆ ವಾತರೋಗವು ಮುಂತಾದವು ಆಶ್ಚರ್ಯ ಗುಣವಾಗಿ ಶರೀರಕ್ಕೆ ನಿರೋಗತ್ವವೂ ಕಾಂತಿಯೂ ರತಿಸುಖಕ್ಕೆ ಸಂಪೂರ್ಣ ಶಕ್ತಿಯೂ ಉಂಟಾಗುತ್ತದೆ ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗುತ್ತವೆ. ಕಿಮ್ಮತ್ತು ೬೦ ಗುಳಿಗೆಗಳಿಗೆ ೪ ರೂಪಾಯಿ ಇದನ್ನು ಸೇವಿಸುವಾಗ್ಗೆ **ನಪುಂಸಕತ್ವಾರಿ ತೈಲವನ್ನು** ಉಪಯೋಗಿಸಿದರೆ ಉತ್ತಮ ಕಿಮ್ಮತ್ತು ಒಂದು ಬಾಟ್ಲಿಗೆ ರೂ ೨-೮-೦

ಪ್ರಮೇಹನಿವಾರಣ—ಇದರ ಸೇವನೆಯಿಂದ ಮೂತ್ರಸ್ಥಾನದಿಂದ ಕೆಂಪು ಹಳದಿಯಂತೆ ಮೊಗಕ್ಕೆ ೮ ವು ಉರಿ ವಗೈರೆ ಅಗದಿಶೀಘ್ರಯಿಂದ ಗುಣವಾಗುವದು ಕಿಮ್ಮತ್ತು ಬಾಟ್ಲಿಗೆ ರೂ ೩-೮-೦ ಟಿ ಪಿ ೭-೦ ಅನುಪಾನಪತ್ರಿಕ ಔಷಧ ಸಂಗಡ

ವೇದಾನಾ ಸ್ಟಾಂಪು ಕಳುಹಿಸಿದರೆ ಕ್ಯಾಟಲಾಗವು

ವಿಳಾಸ —

ವೈದ್ಯ ಜಿ ಎಲ್ ಜೋಶಿ ಮತು ಕಂಪನಿ.

15 ನಂ 6 ಪೋಸ್ಟ ಒನವಾಡ, ಉತ್ತರ ಕಾನಡಾ

ಕಿರ್ಲೋಸ್ಕರ ಪೇಟೆಂಟ ನಂಬ್ರ ೫ ತಪ್ಪಲಿ.

ಈ ತಪ್ಪಲೆಯು ನಮ್ಮ ಕಾರ್ಖಾನೆಯಲ್ಲಿ ತಯಾರಾಗುತ್ತದೆ. ಸರಕಾರದಿಂದ ಇದಕ್ಕೆ ಪೇಟಂಟ್ ದೊರೆತಿರುತ್ತದೆ. ಇದರ ಮುಖ್ಯ ಗುಣಗಳು

೧ ನೀರನ್ನು ಮುಟ್ಟಿದ ಕೂಡಲೇ ತುಂಬಿ ಒರುವದು

೨ ಮೇಲಕ್ಕೆ ಬರುವಾಗ್ಗೆ ಒಂದು ಹನಿ ಸಹ ನೀರು ಸೋರುವದಿಲ್ಲ

೩. ದೋಣಿಯಲ್ಲಿ ನೀರು ಬೀಳುವಾಗ್ಗೆ ಬೇರೆಗಳಿನ ತಪ್ಪಲಿಯಂತ ಚಿತ್ರನವಿದೆ ಹೋಗುವದಿಲ್ಲ

ಬೆಲೆಬಹು ಅಗ್ಗ ಹೆಚ್ಚಿನ ಸಂಗತಿ ಬಗ್ಗೆ ಒರೆದು ತಿಳಿದುಕೊಳ್ಳಿರಿ

ಕಿರ್ಲೋಸ್ಕರ ಬಂಧು, ಲಿಮಿಟೆಡ್.

ಕಿರ್ಲೋಸ್ಕರವಾಡಿ,

16—11 **ಜಿ. ಸಾತಾರ್.**

ಜ್ವರಗಳ ಮೇಲೆ ಅಮೂಲ್ಯ ಔಷಧವು.

ಕರ್ಣಾಟಕ

ಎಗ್ಯೂ ಮಿಕ್ಶ್‌ರ್.

ಟಾನಿಕ್ ಸಿರಪ್.

(ಶಕ್ತಿವರ್ಧಕ ಸರಬತ್ತು)

ಥಂಡಿಜ್ವರ, ಮಲೇರಿಯ ಮೊದಲಾದ ಜ್ವರಗಳು ಬಿಟ್ಟನಂತರ ಒರುವ ಅಶಕ್ತತೆ, ಸಣ್ಣಜ್ವರವು ಬರುತ್ತಿರುವುದು ಮೊದಲಾದವುಗಳ ಮೇಲೆ ಇದು ಒಂದು ಅಮೂಲ್ಯ ಔಷಧವಾಗಿರುತ್ತದೆ

ನಮ್ಮ ಎಗ್ಯೂಮಿಕ್ಶ್‌ರನ್ನು ಸೇರಿಸಿ ಗುಣವನ್ನು ಹೊಂದಿದ ಪ್ರತಿಯೊಬ್ಬನು ಇದರ ಒಂದು ಬಾಟ್ಲಿಯನ್ನಾದರೂ ಅಗತ್ಯವಾಗಿ ಸೇವಿಸಬೇಕು ಅಂದರೆ ಅವನಿಗೆ ಜ್ವರದನಂತರ ಬರುವ ಅಶಕ್ತತೆಯು ಬರಲಿಕ್ಕೇ ಇಲ್ಲ

ಬೆಲೆ ೧ ರೂಪಾಯಿ ಟಪಾಲು ವೆಚ್ಚ ಬೇರೆ.

12—2 ಕರ್ಣಾಟಕ ಬ್ರದರ್ಸ

ಗಿರಗಾಂವ, ಮುಂಬಾಯಿ.

ಒಂದು ಪ್ರಬಲವಾದ ಪ್ರಶ್ನೆ.

ನಮ್ಮ ಜೀವವನ್ನು ಎತಕಕ್ಕಾಗಿ ವಿಮೆಮಾಡಬೇಕು!

ವೃದ್ಧಾಪ್ಯದಲ್ಲಿ ನಮ್ಮ ಮತ್ತು ಹೆಂಡತಿ ಮಕ್ಕಳ ಪೋಷಣೆಗಾಗಿ!

ಈಗಾಗಲೇ ಸಾವಿರಾರು ಜನರು ವಿಮೆಮಾಡಿರುವ ಎಂಟುಕೋಟಿ ರೂಪಾಯಿಗಿಂತ ಹೆಚ್ಚು ಬಂಡವಾಳವಿರುವ ದೇಶೀಯ ವಿಮೆಕಂಪನಿಯಲ್ಲಿ ಅತ್ಯಂತ ದೊಡ್ಡದಾದ ಸಾವಿರ ರೂಪಾಯಿ ವಿಮೆಮಾಡಿದವರಿಗೆ ವರ್ಷಕ್ಕೆ 18ರೂ ಕಡಿಮೆಯಿಲ್ಲದೆ ಲಾಭ ಕೊಡುವ ಓರಿಯಂಟಲ್ ಗವರ್ನಮೆಂಟ್ ಜೀವವಿಮೆ ಕಂಪನಿಯ ರೂಲ್ಸಿಗೂ, ಶರತ್ತಿಗೂ ಈ ಕೆಳಗಿನವರಿಗೆ ಬರೆದು ತಿಳುಕೊಳ್ಳಿ

ಖಾದಿಬಟ್ಟೆ ಎಂದರೇನು?

ದೇಶೀಯ ಹತ್ತಿಯಲ್ಲಿ ಕೈರಾಟೆಯಿಂದ ನೂಲು ತೆಗೆದು ಇಲ್ಲಿಯೇ ತಯಾರಿಸುವ ಬಟ್ಟೆಯೇ 'ಖಾದಿ' ಈಗಾಗಲೇ ನಮ್ಮ ಸ್ಟೋರಿನಲ್ಲಿ ಪರದೇಶೀಬಟ್ಟೆಗಿಂತ ಗಟ್ಟಿಯಲ್ಲಿಯೂ ಅಂದದಲ್ಲಿಯೂ ಕಡಿಮೆ ಇಲ್ಲದಂತ, ಎಲ್ಲಾ ತರದ ಶೀರೆಗಳು ಚೆಕ್ಕಗಳು, ಶಾಲು ವಗೈರ ಎಲ್ಲಾ ತರದ ಬಟ್ಟೆಯು ತಯಾರಾಗಿದೆ. ದಯವಿಟ್ಟು ಪ್ರೋತ್ಸಾಹಿಸಿರಿ! ಖಾದಿಯಿಂದಲೇ ಸ್ವರಾಜ್ಯ ಖಾದಿಯಿಂದಲೇ ಮೋಕ್ಷವೆಂಬುದನ್ನು ಮರೆಯಬೇಡಿರಿ.

ವೀರರಾಜಪೇಟೆ, ಕೆ ಪಿ ಚಣ್ಣಪ್ಪ,

ಪಶ್ಚಿಮ ಕೊಡಗು. ಪ್ರೊಪ್ರೈಟರ್,

ಖಾದಿಭಂಡಾರ

32—3

ಲೋಕಪ್ರಸಿದ್ಧವಾದ! ಅನುಭವಸಿದ್ಧವಾದ!

ಮೂರುದಿವಸಗಳಲ್ಲಿ ಗುಣಸಿಕ್ಕದಿದ್ದರೆ ಔಷಧಿಯಕ್ರಯ ವಾಪಾಸು ಜೀರ್ಣಶಕ್ತಿ, ರಕ್ತವೃದ್ಧಿ, ಧಾತುಪುಷ್ಟಿ, ಮನೋಲ್ಹಾಸ, ಪರಮಾನಂದ ಮೊದಲಾದ ಸುಖ ಜೀವನಕ್ಕೆ ಬೇಕಾದ ಆರೋಗ್ಯದಾಯಿನಿ

[ಟ್ರೇಡ್‌ಮಾರ್ಕ] **ಅಗಸ್ತ್ಯ** [ನೋಡಿ ತಿಳ್ಕೊಳ್ಳಿರಿ

ಮನ್ಮಥ ಚಿಂತಾಮಣಿ ಲೇಹ

ರಿಜಿಸ್ಟರ್ ಆದದ್ದು

ಅಬಾಲವೃದ್ಧ ಸ್ತ್ರೀ ಪುರುಷರ ಅನೇಕ ರೋಗಗಳ ಮೇಲೆ ಗುಣ ಕಾರಿಯಾದದ್ದು ಮೇಹ ವಿಕಾರಪಿದ್ದವರಿಗೂ, ನಿದ್ರೆ ಇಲ್ಲದವರಿಗೂ, ಸ್ವಪ್ನೇಂದ್ರಿಯವಾಗುವ ಬಾಲಕರಿಗೂ, ವಿದ್ವಾನ ಸುಜ್ಞಾನಿಗಳಿಗೂ ಉಪಯೋಗವುಳ್ಳ ಬಹುಪರಮಾನಂದ ಔಷಧಿ 1ಸೇರು 48ದಿವಸ ಸೇವಿಸಬಹುದು ನಂ (1) 1ಸೇರು ಡಬ್ಬಿ 1ಕ್ಕೆ ರುಪಾಯಿ 3—0—0. ½ಸೇರು ಡಬ್ಬಿ 1ಕ್ಕೆ ರುಪಾಯಿ 1—9—0. ನಂ. (2) 1ಸೇರು ಡಬ್ಬಿ 1ಕ್ಕೆ ರುಪಾಯಿ 2—0—0, ½ ಸೇರು ಡಬ್ಬಿ 1ಕ್ಕೆ 1—1—0, ವಿ ಪಿ. ಕರ್ಚು ಪ್ರತ್ಯೇಕ ವಿಶೇಷ ಮಾಹಿತಿಗೆ ಬರೆಕೊಳ್ಳಿರಿ

ವಿಳಾಸ—ದೇವಣ್ಣ ನಾರಾಯಣಸೇಟ್,

ಗೋಳಿಕಟ್ಟಾ,

ಮಂಗಳೂರು,

52—35 ದ. ಕ.

ಡಾಕ್ಟರ್ ಎಸ್ ಎನ್ ಅಯ್ಯಂಗಾರ್, ಬಿ ಎ.,

ಎಲ್ ಆರ್ ಸಿ. ಪಿ. ಅಂಡ್ ಎಸ್ (ಎಡಿನ್‌ಬರ್ಗ)

ಎಲ್ ಎಫ್ ಪಿ ಅಂಡ್ ಎಸ್, [ಗ್ಲಾಸ್‌ಗೊ]

ದಂತ ವೈದ್ಯರು

ಮಡಿಕೇರಿ ಕ್ರಾಸಲಾರ್ ಬಂಗ್ಲೆಯಲ್ಲಿ ಒಂದು ವಾರದವರೆಗೆ ಇದ್ದು, ಇವರು ಶೀಘ್ರದಲ್ಲೇ ಸೋಮವಾರಪೇಟೆಗೆ ಹೋಗುವರು..

ದಂತ ಸಂಜೀವಿನಿ.

ಯಾವ ತರದ ಹಲ್ಲುನೋವನ್ನಾದರೂ ಥಕ್ಕನೆ ಶಮನ ಮಾಡುವ ಶಕ್ತಿಯುಳ್ಳ ಈ ದಂತ ಸಂಜೀವಿನಿ ಕುಪ್ಪಿ ಒಂದಕ್ಕೆ ಕ್ರಯ ರೂ 1—0—0 ಮಾತ್ರ ಎಸ್ ರಾಮಣ್ಣ.

C/o ಡಾಕ್ಟರ್ ಎಸ್. ಎನ್, ಅಯ್ಯಂಗಾರ್

48.17 ಮಹದೇವಪೇಟೆ, ಮಡಿಕೇರಿ.

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್, ಕೊ ಆಪರೇಟಿವ್ ಸೊಸೈಟೀಸ್ ಆಕ್ಟ್ಪ್ರಕಾರ ರಿಜಿಸ್ಟರಾಗಿದೆ.

		ರೂ.
ಶೇರ್ ಬಂಡವಾಳ	—	50,000
ವಸೂಲಾದ ಶೇರ್ ಮೊಬಲಗು	—	3890
ಜಮಾಬಂದ ಠೇವಣಾತಿ	—	90,600

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲಕೊಡುತಕ್ಕದ್ದು.

ಒಂದು ವರ್ಷ ವಾಯಿದೆ ಅಥವ ಹೆಚ್ಚಿನ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ ರೂ. 6–4–0ರ ದರದಲ್ಲಿ ಬಡ್ಡಿ ದೊರೆಯುತ್ತೆ ಕಡಿಮೆ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ 5ರ ಬಡ್ಡಿ ದೊರೆಯುತ್ತೆ.

ವರ್ಷಕ್ಕೊಂದಾವರ್ತಿ ಕೊ ಆಪರೇಟಿವ್ ರಜಿಸ್ಟ್ರಾರವರು ಲೆಕ್ಕ ಆಡಿಟುಮಾಡುತ್ತಾರೆ.

ಪ್ರೆಸಿಡೆಂಟರು, ಟ್ರೆಜರರ್

ಕೊಡಂದೆರ ಕುಟ್ಟಯ್ಯನವರು, ಯಂ. ಭುಜಂಗರಾಯರು

ರಾಯ್ ಬಹದ್ದೂರ್. ಬಿ.ಎ, ಬಿ.ಎಲ್.

ಸೆಕ್ರೆಟರಿ.

ಸಿ. ಯಸ್. ವೆಂಕಟಯ್ಯನವರು, ಬಿ.ಎ, ಬಿ.ಎಲ್.

ತಾರೀಕು 29—8—1925.

A Lot for SELECTION of Single Barrel Breach Loadig Guns at LOWEST PRICE EVER OFFERED.

Original **Browning S B B L** 12 bore Take Down Hammerless Automatic Ejector Gun with safety catch .. .. .. Price, Rs. 140/

Do Do but by **Winchester** or **Remington** .... Price, Rs 160/-

Winchester or **Remigton S B. B L** 12 bore Six Shots Hammerless Repeating gun, 32 inches barrel with Safety catch . .... Price, Rs 150/-

German S B B L 12 bore Hammerless Ejector Gun, 32 inches German Steel Barrel with safety catch .... Price, Rs. 65/-

Continental Make Do . . . Price, Rs. 55/-

Webley & Scott's S. B B L 12 bore Semi Hammerless Ejector Gun, 32 inches Webley's Steel Barrel, ... Price, Rs. 75/

The above Guns can be had in 1, 20 & 410 bore Same as above in 12 bore **Special "Duck Gun"** inches barrel ... ... Price, Rs 80/

W W. Greener's "Gaffer" S B B L 12 bore Martini Action Ejector Gun, 26 inches Greener's Steel Barrel. .. .. Price, Rs. 75/-

W W Greener's as above but **Long Range Duck Gun"** with 32 inches barrel, and chamber for 2¾ inches to 3 inches case. . .... Price, Rs 90/-

Midland's "Knock-About" S B B L Ejector Hammer Gun 32 inches barrel. .. ..Price, Rs. 55/-

Continental Make S. B B L folding Pattern Hammer Gun, 32 inches barrel beautifully engraved and carved . .. . Price, Rs. 45/

J Steven's 12 bore Ejector Hammer Gun, 32 inches Steel barrel ... .. Price, Rs. 45-/

Do do "Dread Naught" with heavy Breech Price/-Rs/50,

Any of the above of J Steven's **Special Duck Gun** with 36 inches barrel. Price, Rs. 5 Extra.

ENQUIRIES SOLICITED.

THE BOMBAY ARMOURY,

331, ABDUL REHMAN STREET,

24 1 **BOMBAY. 3**

ARMS & AMMUNITION MART.

Mahomedally-Noorbhoy

331 Abdul Rehman Street, near Crawford Market, BOMBAY. 3

Telegraphic Address.-"SHOOTER" Bombay.

[52—35] **Please write for Reduced nett prices list for 1926**

Printed & published by Kodanda Appayya, R B., Chairman, Board of Directors, at "Kodagu" Press, Mercara for "Kodagu" Ltd

Reg. N. M. 1550.
If not delivered please return to
KODAGU" OFFICE, MERCARA.

ಕೊಡಗು.

ಸಂಪಾದಕ— ಪಂದ್ಯಂಡ ಐ. ಬೆಳ್ಯಪ್ಪ

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವದು.

ಸಂಪುಟ ೫] ಕೊಡಗು, ಸ[illegible] ೧೯೨೬ನೇ ಇಸವಿ [illegible] ತಾರೀಖು [illegible] ನೇ ಶುಕ್ರವಾರ [ಸಂಚಿಕೆ [illegible]

PERFUMERY & PATENT MEDICINCES ETC.,

Aletris cordial	Rs. [illegible]	[illegible]	[illegible]	[illegible] tooth powder	„ 0–14
Antiphlogistine	1–8	[illegible]	Rs. [illegible] 1–12	[illegible] tooth paste	„ 0–11
Bathwalas' ague mixture	„ 1–4	[illegible]	„ [illegible]	[illegible] „ „	„ 0–14
Burgoynes' Eastons Syrup	„ 1–6	Sanatogen	4–8	Pepsodent „ „	„ 0–14
Celerina	„ 3–12	Emulsion Scott's	„ [illegible]–12	Cuticura soap per box	Rs. 2–6
Cuticura ointment	„ 0–14	Waterbury's cod liver [illegible]	„ [illegible]	[illegible] „ „ „	„ 1–3
Dejonghs' cod liver oil	„ 4–4	Wincarnis	Rs. [illegible]	[illegible] bath soap for [illegible]	„ [illegible]–8
Deschiens Syrup	„ 2–12	Woodward's gripe water	1–2	[illegible] olive soap per cake	„ 0–6
Enos' fruit salt	„ 2–8	Zam buk	Rs. 0–15 & 2–2	Pears glycerine soap per box	„ 1–5
Esnofele pills	„ 2–10	Calox tooth powder	0–15	[illegible]	„ 1–6
Genaspirin	„ 0–15	Calverts' carbolic powder	1–7	[illegible] Premier	„ 1–3
Sulphur bitters	„ 3–12	Colgates dental cream	0–11	Wrights coal tar „ „	„ 1–2
				Turkish bath soap 12 cakes	„ 2–8

Reduction in prices of Stationary department made permanent
GET IT AT SPENCERS!
52–27 THE SHOPPING CENTRE OF COORG.

Spencer & Co. Ltd,
MERCARA & POLLIBETTA.

ಸ್ಥಾಪಿತವಾದದ್ದು 1874. ಮೂಲಧನ 7 ಕೋಟಿ ರೂಪಾಯಿಗಳು.

ಓರಿಯಂಟಲ್ ಗವರ್ನ್‌ಮೆಂಟ್ ಸೆಕ್ಯೂರಿಟಿ ಲೈಫ್ ಅಷ್ಯೂರೆನ್ಸ್ ಕಂಪೆನಿ ಲಿಮಿಟೆಡ್, ಹೆಡ್ ಆಫೀಸು— ಬೊಂಬಾಯಿ.

1922–1924 ಈ ಮೂರು ವರ್ಷಗಳಲ್ಲಿ ಕಂಪೆನಿಯಲ್ಲಿ ನಡೆದ ಕೆಲಸದ ಫಲಿತಾಂಶಗಳು —

ಲಾಭ— ರೂ. 51,00,000 (ಐವತ್ತೊಂದು ಲಕ್ಷ ರೂಪಾಯಿಗಳು) ಈ ಸೈಕಿ 45,91,80 ರೂಪಾಯಿಗಳ[illegible] ಮೆ ಮಾಡಿದವರ ವಿಮೆ ಹಣಕ್ಕೆ ಹೆಚ್ಚು ಬೋನಸ್ ಆಗಿ [illegible] ಜೀವಮಾನಪರ್ಯಂತ ವಿಮೆದಾರರಿಗೆ ರೂ. 1000 ವಿಮೆ ಹಣಕ್ಕೆ ಈ ಮೂರು ವರ್ಷಗಳಿಗೆ ರೂ. [illegible]71.
[illegible] ವಿಮೆದಾರರಿಗೆ ರೂ. 1000 ವಿಮೆ ಹಣಕ್ಕೆ ಈ ಮೂರು ವರ್ಷಗಳಿಗೆ ರೂ. [illegible]4.

ಈ ಕಂಪೆನಿಯಲ್ಲಿ ಕ್ರಮೇಣ ಹೆಚ್ಚುತ್ತಿರುವ [illegible] ವ್ಯಕ್ತವಾಗುತ್ತದೆ.

1923ರಲ್ಲಿ—ರೂ. 1,74,00,000
1924 „ [illegible],57,00,000
1925 „ 2,[illegible],00,000

ಇನ್ನೂ ದಿನದಿನಕ್ಕೂ ಅಭಿವೃದ್ಧಿಯಾಗುತ್ತಲೇ ಇದೆ. [illegible] ಇದೇ ಸುಸಮಯ.

ಹೆಚ್ಚಾದ ವಿಷಯಗಳನ್ನು ಈ ಕೆಳಗಿನ ವಿಳಾಸಕ್ಕೆ ಬರೆದು ತಿಳಿದುಕೊಳ್ಳಬಹುದು.

ಓರಿಯಂಟಲ್ ಬಿಲ್ಡಿಂಗ್ಸ್,
ಪೋಸ್ಟ್ ಬಾಕ್ಸ್ 56
ಬೆಂಗಳೂರು.

[illegible] ಸುಬ್ರಹ್ಮಣ್ಯಂ,
ಬ್ರಾಂಚ್ ಸೆಕ್ರೆಟರಿ.

52–5

ಆಂಧ್ರ ಆಯುರ್ವೇದಿಕ್ ಫಾರ್ಮಸಿ.
ಬ್ರಾಂಚ್ [illegible] ಬೆಂಗಳೂರು ಸಿಟಿ.

ಚ್ಯವನಪ್ರಾಸ ಲೇಹ.

ಇದು ಸರ್ವೋತ್ಕೃಷ್ಟವಾದ ಗಿಡಮೂಲಿಕೆಗಳಿಂದ ತ[illegible] ಯಾರಿಸಲ್ಪಟ್ಟ ಆಯುರ್ವೇದ ರಸಾಯನೌಷಧವು. ವಿದ್ಯಾರ್ಥಿಗಳೂ ವಿಶೇಷವಾಗಿ ಬುದ್ಧಿಯನ್ನು ಪ್ರಯೋಗಿಸಿ ಕೆಲಸ ಮಾಡುವವರೂ ಈ ಲೇಹವನ್ನು ಸೇವಿಸಿದರೆ ವಿಶೇಷವಾಗಿ ಬುದ್ಧಿಶಕ್ತಿಯನ್ನೂ ಜ್ಞಾಪಕಶಕ್ತಿಯನ್ನೂ ಹೊಂದುವರು. ದೀರ್ಘಕಾಲದ ವ್ಯಾಧಿಯಿಂದಾಗಲೀ ಕೆಟ್ಟ ನಡತೆಯಿಂದಾಗಲೀ, ಸ್ವಭಾವ ಶಕ್ತಿಯು ಕುಂದಿ ಶರೀರ ಕಾಂತಿಯು ಕುಂದಿ ರಕ್ತ ಕೆಟ್ಟು ಇಂದ್ರಿಯ ದೌರ್ಬಲ್ಯವೇ ಮೊದಲಾದ ವಿಕಾರಗಳಿಂದ ಪೀಡಿತರಾಗಿರುವವರು ಈ ಲೇಹವನ್ನು ಸೇವಿಸಿದರೆ ಈ ತರದ ವಿಕಾರಗಳನ್ನೆಲ್ಲಾ ಪರಿಹರಿಸಿ ದೇಹಕ್ಕೂ ಮನಸ್ಸಿಗೂ ಉತ್ಸಾಹವನ್ನುಂಟುಮಾಡಿ ಮೂಳೆ ಬಂಧಗಳಿಗೂ ನರಗಳಿಗೂ ಬಲವನ್ನು ಕೊಟ್ಟು ದೇಹಪುಷ್ಟಿಯನ್ನುಂಟುಮಾಡಿ ನವ್ಯತಾರುಣ್ಯವನ್ನುಂಟುಮಾಡುವುದು. ಅಲ್ಲದೆ ಆರೋಗ್ಯದ್ದವರಾದವರು ದೀರ್ಘಕಾಲ ಬದುಕುವರು. ಕೆಮ್ಮು ಉಬ್ಬಸ ವ್ಯಾಧಿಯುಳ್ಳವರಿಗೂ ಮುಖ್ಯವಾಗಿ ಕ್ಷಯರೋಗಿಗಳಿಗೂ ಇದು ಸಂಜೀವಿನಿಯೇ ಸರಿ! ಚರಕ ಸಂಹಿತೆಯಲ್ಲಿ ಇದರ ಗುಣವು ಅದ್ಭುತವಾಗಿ ಹೇಳಲ್ಪಟ್ಟಿದೆ. ೧೦ ತೊಲೆಗೆ ೧ ರೂಪಾಯಿ. ೪೦ ತೊಲೆಗೆ ೩ ರೂಪಾಯಿ.

ಎಲ್ಲಾ ಕಡೆಯಲ್ಲಿಯೂ ಏಜಂಟರು ಬೇಕು.

[illegible] ಚ್ಯವನಪ್ರಾಸ [illegible] ಆಯುರ್ವೇದ ಭೂಷಣ ಕೆ. ನಾರಾಯಣ [illegible] ಎಲ್. ಎ. ಎಂ. ಎಸ್. [illegible] ರೋಗಗಳನ್ನು [illegible] ವಿಳಾಸ ತಿಳಿಸಿದರೆ ಔಷಧ [illegible] ಬರೆಯಿರಿ.

ಟಿ. ಸಿ. ಎಸ್. ಸುಬ್ಬಯ್ಯಂ ಅಂಡ್ ಕೋ.,
[illegible]
16–11 [illegible] ಬೆಂಗಳೂರು ಸಿಟಿ.

ಮುದ್ರಣವಾದ ಪುಸ್ತಕ! ಮುದ್ರಣವಾದ ಮುದ್ರಣ!!

ಶರೀರ ಸುಖ, ಸಂತತಿ, ಐಶ್ವರ್ಯಗಳನ್ನು ಹೊಂದಿಸಲು ನಿಯಮಗಳನ್ನೂ ಮತ್ತು ಶರೀರ ಸಂಬಂಧ ಶಾಸ್ತ್ರ (ಕಾಮಶಾಸ್ತ್ರ)ವನ್ನೂ ವಿವರಿಸುವ

ಮರ್ಮ ಶಾಸ್ತ್ರ-ಎಂಬ ಕಾಮಶಾಸ್ತ್ರ.

ಈ ಪುಸ್ತಕವು ಮೊದಲು ಫ್ರೆಂಚ್, ಇಂಗ್ಲಿಷ್, ಹಿಂದುಸ್ಥಾನಿ, ಸಂಸ್ಕೃತ ಮೊದಲಾದ ಭಾಷೆಗಳಲ್ಲಿ ಬಹು ಗುಪ್ತವಾಗಿತ್ತು. ಇದನ್ನು ನಾವು ಪ್ರಯಾಸದಿಂದ ಸಂಪಾದಿಸಿ ಕನ್ನಡ [illegible] ಉತ್ತಮವಾದ ಕಾಗದದಲ್ಲಿ ಮುದ್ರಿಸಿ ತಯಾರಿಸಿದ್ದೇವೆ. ಈ ಪುಸ್ತಕದಲ್ಲಿ [illegible] ರಹಸ್ಯಗಳೂ, ಸ್ತ್ರೀ ಪುರುಷರ [illegible] ಮರ್ಮ ವ್ಯಾಧಿಗಳು ಮತ್ತು ಅಂಥಾ ವ್ಯಾಧಿಗಳನ್ನು ಗುಣಮಾಡತಕ್ಕ [illegible] ನ್ನಗಳು ಚಿತ್ರಗಳ ಸಹಿತ ಕೊಡಲಾಗಿರುವುದು. ಈ ಪುಸ್ತಕದ ಹೆಸರನ್ನು ಕೇಳಿದ ಮಾತ್ರಕ್ಕೆ ಸಂಕೋಚಪಡಬಾರದು. ಓದಲಿಕ್ಕೆ ಯಾರಿಗೆ ತಾನೇ ಸಂಕೋಚವಾಗಲಾರದು.

ಕ್ರಯ ಪುಸ್ತಕ ಒಂದಕ್ಕೆ ಒಂದೇ ಒಂದು ರೂಪಾಯಿ. ರೂ. 1–0–0

T. Ramachandar Rao & Co.,
Post Box No. 232,
Madras.

ಟಿ. ರಾಮಚಂದ್ರರಾವ್ ಅಂಡ್ ಕೋ.,
ಪೋಸ್ಟ್ ಬಾಕ್ಸ್ ನಂ. 232,
ಮದ್ರಾಸ್.

52–19

"ಕೊಡಗು"

ಸನ್ ೧೯೨೬ನೇ ಇಸವಿ ಮೇ ತಾ. ೭ನೇ ಶುಕ್ರವಾರ

ಗಜೆಟೆಡ್ ಉದ್ಯೋಗಸ್ಥರ ವರ್ಗಾವರ್ಗಿ.

ಸರ್ಕಾರಿ ಉದ್ಯೋಗಸ್ಥರು ಕೆಳಗಿನ ದರ್ಜೆಯವರೇ ಆಗಲಿ, ಮೇಲಿನ ದರ್ಜೆಯವರೇ ಆಗಲಿ ಒಂದೇ ಸ್ಥಳದಲ್ಲಿ ಬಹು ಕಾಲ ಅಂದರೆ ಸಾಧಾರಣ ಐದು ವರ್ಷಗಳಿಗಿಂತ ಹೆಚ್ಚಾಗಿ ಇರಕೂಡದೆಂಬ ತತ್ವವನ್ನು ಸರ್ಕಾರದವರು ಒಪ್ಪುತ್ತಾರೆ. ಇದು ಪ್ರಜೆಗಳ ಹಿತಕ್ಕಾಗಿ ಇರುವ ನೀತಿಯೆಂತ ನಾವು ನಂಬುತ್ತೇವೆ. ವೈಸರಾಯರು, ಗವರ್ನರುಗಳು, ಎಗ್ಸಿಕ್ಯೂಟಿವ್ ಕೌನ್ಸಿಲರುಗಳು, ಚೀಫ್ ಕಮೀಷನರುಗಳು, ಕಮೀಷನರುಗಳು, ಕಲೆಕ್ಟರುಗಳು, ಡಿಸ್ಟ್ರಿಕ್ಟ್ ಜಡ್ಜಿಗಳು, ಕನ್ಸರ್ವೇಟರುಗಳು ಮುಂತಾದ ಇಂಪೀರಿಯಲ್ ಆಫೀಸರುಗಳೆಲ್ಲರೂ ಇಂಡಿಯಾ ದೇಶದ ಯಾವ ಭಾಗದಲ್ಲೂ ಒಂದೇ ಸ್ಥಳದಲ್ಲಿ ಐದು ವರ್ಷಕ್ಕಿಂತ ಹೆಚ್ಚಾಗಿ ಇರ ಕೂಡದೆಂಬುದು ಎಲ್ಲರಿಗೂ ತಿಳಿದ ಸಂಗತಿಯಾಗಿದೆ. ನಮ್ಮ ದೇಶದಲ್ಲೂ ನಮ್ಮ ಚೀಫ್ ಕಮೀಷನರುಗಳು, ಕಮೀಷನರುಗಳು, ಐ. ಸಿ. ಯಸ್. ಆಫೀಸರುಗಳೇ ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರಾಗಿದ್ದಾಗ ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರುಗಳು, ಕನ್ಸರ್ವೇಟರುಗಳು, ಎಗ್ಸಿಕ್ಯೂಟಿವ್ ಇಂಜಿನೀಯರುಗಳು, ಸಿವಿಲ್ ಸರ್ಜನರುಗಳು ಐದು ವರ್ಷಕ್ಕೊಂದಾವರ್ತಿ ಬದಲಾಗುತ್ತಾ ಇರುವದು ವಾಚಕರ ಅನುಭವದಲ್ಲಿದೆ. ಮದ್ರಾಸು ಅಧಿಪತ್ಯದಲ್ಲಿ ಮುನ್ಸೀಫರೇ ಮೊದಲಾದ ಸಿವಿಲ್ ಜಡ್ಜಿಯರು ನಾಲ್ಕು ಅಥವಾ ಐದು ವರ್ಷಕ್ಕಿಂತ ಹೆಚ್ಚು ಒಂದೇ ಕಡೆಯಲ್ಲಿ ಇರಲು ಹುದ್ದಿಲ್ಲ. ಕೊಡಗಿನ ಪ್ರೊವಿನ್ಸ್ಯಲ್ ಗಜೆಟೆಡ್ ಆಫೀಸರುಗಳನ್ನು ಈ ಪದ್ಧತಿಗೆ ಒಳಪಡಿಸಲು ಅನುಕೂಲವಿಲ್ಲವೆ ಎಂಬ ತೊಂದರೆ ಯಾಗಿದೆ. ಚಿಕ್ಕ ಉದ್ಯೋಗಸ್ಥರನ್ನಾದರೂ ಒಂದು ನಾಡಿನಿಂದ ಇನ್ನೊಂದು ನಾಡಿಗೂ, ಒಂದು ತಾಲೋಕಿನಿಂದ ಇನ್ನೊಂದು ತಾಲೋಕಿಗೂ, ಒಂದು ಆಫೀಸಿನಿಂದ ಇನ್ನೊಂದು ಆಫೀಸಿಗೂ ವರ್ಗಾಯಿಸುವ ಅನುಕೂಲವಿರುವುದರಿಂದ ವರ್ಗಾವರ್ಗಿಯ ತತ್ವವನ್ನು ಅನುಸರಿಸಲು ಅಡಚಣೆ ಇರುವುದಿಲ್ಲ. ಅಂಥಾ ಚಿಕ್ಕ ಉದ್ಯೋಗಸ್ಥರು ಒಂದೇ ಕಡೇ ಹೆಚ್ಚು ಕಾಲವಿದ್ದರೂ ದೊಡ್ಡ ತೊಂದರೆಗಳೇನೂ ಉಂಟಾಗುವುದಿಲ್ಲ. ಆದರೆ ಪ್ರೊವಿನ್ಸ್ಯಲ್ ಗ್ರೇಡಿಗೆ ಸೇರಿಸಲ್ಪಟ್ಟ ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರು, ಡಿಪ್ಯುಟಿ ಕಲೆಕ್ಟರವರು, ಸಬ್ ಜಡ್ಜಿಯವರು, ಮುನ್ಸೀಫರು, ಪೊಲೀಸ್ ಡಿಪ್ಯುಟಿ ಸುಪರಿಂಟೆಂಡೆಂಟರವರು ನಮ್ಮ ಐದು ವರ್ಷಕ್ಕೊಂದಾವರ್ತಿ ಬದಲಾಗಲು ಅವಕಾಶವಿಲ್ಲದೆ ಇರುವುದೇ ಒಂದು ಆಕ್ಷೇಪಕರವಾದ ಸಂಗತಿಯಾಗಿದೆ.

ಇಂಥಾ ದೊಡ್ಡ ಉದ್ಯೋಗಗಳನ್ನು ದೇಶೀಯರಿಗೇನೇ ಕೊಡಬೇಕೆಂದು ಹಲವು ವರುಷಗಳಿಂದ ಜಮೀನ್ದಾರರ ಸಂಘವು ಹೋರಾಡಿದರ ಪರಿಣಾಮವಾಗಿಯೂ, ದೊಡ್ಡ ಪದವಿಗಳಿಗೆ ಹಿಂದೀಯರನ್ನು ಹೆಚ್ಚಾಗಿ ನೇಮಿಸಬೇಕೆಂಬ ಹಿಂದೂದೇಶದ ಸರ್ಕಾರದ ಈಗಿನ ತತ್ವಕ್ಕನುಗುಣವಾಗಿಯೂ ಈ ಉದ್ಯೋಗಗಳಿಗೆ ದೇಶದವರನ್ನೇ ನೇಮಿಸಿದ್ದಾಗಿರಬೇಕು. ಆದೇ ಜಮೀನ್ದಾರರ ಸಂಘವು ಈಗ ಇಂಥಾ ಉದ್ಯೋಗಸ್ಥರನ್ನು ಐದು ವರ್ಷಕ್ಕೊಂದು ಸಾರಿ ವರ್ಗಾಯಿಸಬೇಕೆಂದು ಕರಾವು ಮಾಡಿದೆ. ಈ ಕರಾವು ಸಂಘದ ಮೊದಲಿನ ಕೋರಿಕೆಗೆ ವಿರೋಧವೆಂದು ಕೆಲವರಿಗೆ ತೋರಬಹುದು. ಇದು ಎಂದಿಗೂ ಒಂದಕ್ಕೊಂದು ವಿರೋಧವಾಗಿಲ್ಲ. ದೊಡ್ಡ ಪದವಿಗಳು ದೇಶೀಯರಿಗೆ ದೊರೆಯಬೇಕೆಂಬ ತತ್ವಕ್ಕೆ ಸಂಘವು ಈಗಲೂ ವಿರೋಧಿಸುವದಿಲ್ಲ. ಆದರೆ ಅಂಥ ಉದ್ಯೋಗಕ್ಕೆ ಬರುವ ಅಧಿಕಾರಿಗಳು ಅವರು ಪೆನ್ಸನ್ ಹೊಂದುವ ವರೆಗೂ ಅದೇ ಉದ್ಯೋಗದಲ್ಲಿ ಒಂದೇ ಕಡೆ ಇರಬೇಕೆಂದು ಆ ಮೊದಲು ಸಂಘವು ಮಾಡಿದ ಕೋರಿಕೆಯ ಅರ್ಥವಲ್ಲ. ಇಂಥಾ ದೊಡ್ಡ ಉದ್ಯೋಗಸ್ಥರನ್ನು ಆಗಾಗ್ಯೆ ವರ್ಗಾಯಿಸದೆ ಹೋದರೆ ಪ್ರಜೆಗಳಿಗೆ ತೊಂದರೆಯಾಗುತ್ತದೆಂಬುದನ್ನು ದೇಶದವರು ಅನುಭವದಿಂದ ಕಂಡುದರಿಂದ ಈ ವರ್ಗಾವರ್ಗಿಯ ವಿಷಯ ದೇಶದಲ್ಲಿ ಚಳವಳವು ಹುಟ್ಟಿದ್ದಾಗಿದೆ. ಈಗ ಸುಮಾರು ಒಂದು ವರ್ಷದಿಂದ ಈ ವಿಷಯ ಪಿಟಿಷನುಗಳಲ್ಲೂ ಪತ್ರಿಕೆಯ ಮೂಲಕವೂ ಚರ್ಚೆಯು ನಡೆಯುತ್ತಿದ್ದರೂ ದೇಶದ ಜನ ಮತದವರ ಅಭಿಪ್ರಾಯವು ಏನೆಂಬುದು ತಿಳಿಯುವಂತಿರಲಿಲ್ಲ. ಅದರ ಕಳೆದ ತಿಂಗಳಲ್ಲಿ ನಾಪೋಕ್ಲಿನಲ್ಲಿ ನಡೆದ ಜಮೀನ್ದಾರರ ಸಂಘದ ಸಮ್ಮೇಳನದಲ್ಲಿ ಗಾಸಾದ ಠರಾವಿನ ಮೂಲಕ ಇದು ಹೊರಬಿದ್ದಿದೆ. ಈ ಠರಾವು ಹಿಂದೆ ಸ್ವಲ್ಪ ಕಾಲ ದೇಶದ ಎಲ್ಲಾ ಕಡೆಗಳಿಂದಲೂ ಬಂದ ಸುಮಾರು ಎಂಟು ನೂರು ಜನರಲ್ಲಿ ಮತ್ತು ಒಬ್ಬರು ಮಾತ್ರ ವಿರೋಧಿಸಿ ಒಪ್ಪಿಕೊಂಡಿದ್ದರಲ್ಲ. ಇದರಿಂದ ದೇಶದ ಜನರ ಅಭಿಪ್ರಾಯವೇನೆಂಬುದು ಸ್ಪಷ್ಟವಾಗುತ್ತದೆ.

ದೇಶದ ಜನರ ಅಭಿಪ್ರಾಯಕ್ಕನುಗುಣವಾಗಿಯೋ ಕೆಲವು ಕೌನ್ಸಿಲು ಮೆಂಬರುಗಳು ಇದೇ ಠರಾವನ್ನು ಕೌನ್ಸಿಲಿನಲ್ಲಿ ಚರ್ಚೆಗೆ ಕಳುಹಿಸಿಕೊಟ್ಟು ಕೆಲವು ಕಾಲವಾದರೂ ಅದನ್ನು ಕೌನ್ಸಿಲಿನಲ್ಲಿ ಚರ್ಚೆಗೆ ಇಡದೆ ಇರುವುದು ವಿಶಾದಕರವಾಗಿದೆ. ದೇಶದ ಕ್ಷೇಮಕ್ಕೆ ಅತ್ಯವಶ್ಯವಾದ ಇಂಥಾ ಮುಖ್ಯ ಸಂಗತಿಯನ್ನು ಪಡನೆ ಚರ್ಚೆಗೆ ತಾರದೆ ಸಾವಕಾಶ ಮಾಡಲು ಕಾರಣವೇನೆಂದು ತಿಳಿಯುವುದಿಲ್ಲ. ಈಗಲಾದರೂ ದೇಶದ ಅಭಿಪ್ರಾಯವನ್ನು ಜಮೀನ್ದಾರರ ಸಂಘವು ಸಂಶಯಕ್ಕೆ ಎಡೆ ಇಲ್ಲದಂಥಾ ಮಾತುಗಳಿಂದ ಸ್ಪಷ್ಟಪಡಿಸಿರುವಾಗ ಕೌನ್ಸಿಲಿನ ಬರುವ ಮೀಟಿಂಗಿನಲ್ಲಾದರೂ ಚರ್ಚೆಗೆ ಇಡುವಂತೆ ಚೀಫ್ ಕಮೀಷನರವರು ಹುಕುಂ ಮಾಡುವರಾಗಿ ನಂಬುತ್ತೇವೆ.

ಕೊಡಗಿನ ಪ್ರೊವಿನ್ಸ್ಯಲ್ ಗ್ರೇಡಿನ ಗಜೆಟೆಡ್ ಆಫೀಸರುಗಳನ್ನು ಐದು ವರ್ಷ ಅಂಥ ಕೆಲಸ ನೋಡಿದನಂತರ ಮದ್ರಾಸು ಪ್ರಾಂತ್ಯಕ್ಕೆ ವರ್ಗ ಮಾಡಲು ಅವಕಾಶ ಕೊಡುವಂತೆ ನಮ್ಮ ಸರ್ಕಾರವು ಮದ್ರಾಸು ಸರ್ಕಾರದೊಡನೆ ಏರ್ಪಾಡು ಮಾಡಿಕೊಳ್ಳಬೇಕೆಂತ ಜಮೀನ್ದಾರರ ಸಂಘವು ಸರ್ಕಾರವನ್ನು ಕೇಳಿಕೊಂಡದ್ದಾಗಿದೆ. ಇದರಿಂದ ಸಂಬಂಧಪಟ್ಟ ಅಧಿಕಾರಿಗಳಿಗೇನೂ ಕೆಡಕಿಲ್ಲ. ಈ ಆಫೀಸರುಗಳು ಇಲ್ಲಿ ಐದು ವರ್ಷ ಕೆಲಸ ಮಾಡಿದನಂತರ ಇವರನ್ನು ಮದ್ರಾಸು ಅಧಿಪತ್ಯದಲ್ಲಿ ಇದೇ ದರ್ಜೆಯ ಅಥವಾ ಹೆಚ್ಚಿನ ದರ್ಜೆಯ ಉದ್ಯೋಗಗಳಿಗೆ ತೆಗೆದುಕೊಳ್ಳಲು ಸಾಧ್ಯವಿದೆಯೋ ಎಂತ ನಮ್ಮ ಸರ್ಕಾರವು ಮದ್ರಾಸು ಸರ್ಕಾರವನ್ನು ಕೇಳಿಕೊಳ್ಳಬೇಕೆಂಬುದೇ ಈ ಠರಾವಿನ ಅಭಿಪ್ರಾಯವಾಗಿದೆ. ಕೌನ್ಸಿಲಿಗೆ ಕಳುಹಿಸಿರುವ ಠರಾವು ಇದೇ ಅಭಿಪ್ರಾಯದ್ದಾಗಿಯೆಂತ ತಿಳಿಯುತ್ತೇವೆ. ಆದುದರಿಂದ ನಾಲ್ಕೈದು ತಿಂಗಳನಂತರ ನಡೆಯಲಿಕ್ಕಿರುವ ಕೌನ್ಸಿಲಿನ ಬರುವ ಮೀಟಿಂಗಿಗೆ ಮೊದಲೇ ಅಧಿಕಾರಿಗಳು ಈ ವಿಷಯ ಮದ್ರಾಸು ಸರ್ಕಾರದೊಂದಿಗೆ ಪತ್ರವ್ಯವಹಾರ ನಡಿಸಿ ಆ ಸರ್ಕಾರದ ಅಭಿಪ್ರಾಯವನ್ನು ತಿಳಕೊಂಡರೆ ಕೌನ್ಸಿಲಿನ ಚರ್ಚೆಗೆ ಅನುಕೂಲವಾಗುವುದು.

ಮದ್ರಾಸು ಸರ್ಕಾರದವರು ಇಂಥಾ ವರ್ಗಾವರ್ಗಿಯ ವಿಷಯಕ್ಕೆ ಆಕ್ಷೇಪಿಸಲು ಕಾರಣವಿಲ್ಲವೆಂತ ನಂಬುತ್ತೇವೆ. ನಮ್ಮ ಸರ್ಕಾರದ ಡಿ. ಪಿ. ಡಬ್ಲ್ಯು. ಮತ್ತು ಫಾರೆಸ್ಟು ಇಲಾಖೆಗಳಿಗೆ ಮದ್ರಾಸು ಪ್ರಾಂತ್ಯದಿಂದ ಪ್ರೊವಿನ್ಸ್ಯಲ್ ಗಜೆಟೆಡ್ ಉದ್ಯೋಗಸ್ಥರನ್ನು ಎರವಾಗಿ ಕಳುಹಿಸುವುದು ಈಗಲೂ ಬಾರಿಯಲ್ಲಿದೆ. ಮಾತ್ರವಲ್ಲ, ಗಜೆಟೆಡ್ ಗ್ರೇಡಿಗೂ ಕಮ್ಮಿ ಇರುವ ನೆಕ್ಸ್ ಆಫೀಸರುಗಳಾದ ಸೌ ಜನ್ಮೇರಿಯೆಂಡ ಮುತ್ತಣ್ಣನವರು ಮತ್ತು ಪೆಂ ಕುಟ್ಟಂಡ ಮುತ್ತಣ್ಣನವರನ್ನು ಮದ್ರಾಸು ಇಲಾಖೆಗೆ ತೆಗೆದುಕೊಂಡಿರುವರು. ಇವರು ಮದ್ರಾಸಿನ ಬೇರೆ ಜಿಲ್ಲೆಗಳಿಗೆ ವರ್ಗಾಯಿಸಲ್ಪಟ್ಟು ಅವರ ಬದಲಿಗೆ ಮದ್ರಾಸಿನಿಂದ ಇಲ್ಲಿಗೆ ಬೇರೆಯವರು ಬರುವ ಅನುಕೂಲವುಂಟಾಗಿದೆ. ಈ ರೀತಿ ಕಡಿಮೆ ಸಂಬಳದ ಆಫೀಸರುಗಳನ್ನು ದೇಶದಿಂದ ಹೊರಗೆ ವರ್ಗಾಯಿಸುವ ಅಗತ್ಯವೂ ಇಲ್ಲ, ಮತ್ತು ಅಂಥಾ ವರ್ಗಾವರ್ಗಿಯಿಂದ ಅವರಿಗೆ ಕಷ್ಟವೂ ಸಂಭವಿಸುತ್ತದೆ. ನಾವು ಮೊದಲೇ ಹೇಳಿದಂತೆ ನೆಕ್ಸ್ ಆಫೀಸರುಗಳನ್ನು ದೇಶದ ಒಳಗೇನೇ ಒಂದು ಕಡೆಯಿಂದ ಇನ್ನೊಂದು ಕಡೆಗೆ ವರ್ಗಾಯಿಸಲು ಅನುಕೂಲವಿದೆ. ಚಿಕ್ಕ ಸಂಬಳದಿಂದ ದೂರ ಪ್ರಾಂತ್ಯದಲ್ಲಿ ಜೀವನ ನಡಿಸುವುದು ಅವರಿಗೆ ಕಷ್ಟವಾಗುವುದು. ಅಧಿಕಾರಿಗಳಿಗೆ ಮನಸ್ಸು ಬಂದಾಗ ಅನಾವಶ್ಯಕವಾದ ಮತ್ತು ತೊಂದರೆಯನ್ನುಂಟು ಮಾಡುವ ವರ್ಗಾವರ್ಗಿಗೆ ಮದ್ರಾಸು ಸರ್ಕಾರದೊಂದಿಗೆ ಒಪ್ಪಂದ ಮಾಡಿಕೊಳ್ಳಲು ಅನುಕೂಲವಿರದಾಗ್ಯೆ ದೇಶದ ಹಿತಕ್ಕಾಗಿ ಅಧಿಕಾರಿಗಳಿಗೆ ನಷ್ಟ ಉಂಟಾಗದಂತೆ ಮತ್ತು ಬೇರೆ ಕಡೆಗಳಲ್ಲಿ ಜಾರಿಯಲ್ಲಿರುವಂತೆ ದೊಡ್ಡ ಉದ್ಯೋಗಸ್ಥರನ್ನು ವರ್ಗಾಯಿಸುವ ಕ್ರಮವನ್ನು ಮದ್ರಾಸು ಸರ್ಕಾರದವರು ಒಪ್ಪದೆ ಇರಲು ಕಾರಣವಿಲ್ಲ.

ಇದನ್ನು ಕಾರ್ಯತಃ ಯಾವ ರೀತಿಯಲ್ಲಿ ಜಾರಿಗೆ ತರುವದೆಂಬುದು ನಮ್ಮ ದೇಶದ ಗಹನ ಠರಾವಿಗೆ ತೋರದೆ ಇರುವುದು. ನಮ್ಮ ದೇಶದ ದೇಶೀಯರೊಬ್ಬರು ಇಂಥಾ ಹುದ್ದೆಯಲ್ಲಿ ಐದು ವರ್ಷಗಳ ವರೆಗೆ ಇದ್ದನಂತರ ಅವರನ್ನು ಮದ್ರಾಸು ಸರ್ಕಾರದವರು ತೆಗೆದುಕೊಂಡು ಅವರ ಬದಲಿಗೆ ಮದ್ರಾಸಿನಿಂದ ಒಬ್ಬರನ್ನು ಕಳುಹಿಸಿಕೊಡಬೇಕು. ಇಂಥವರು ಐದು ವರ್ಷಕ್ಕೊಂದಾವರ್ತಿ ಬದಲಾಗುತ್ತಾ ಇರಬೇಕು. ನಮ್ಮ ದೇಶೀಯನು ಮದ್ರಾಸು ಇಲಾಖೆಯಲ್ಲಿ ಹುದ್ದೆಯಲ್ಲಿ ಇರುವ ವರೆಗೆ ಮದ್ರಾಸಿನವರು ಇಲ್ಲಿಗೆ ಬರುತ್ತಿರಬೇಕು. ಮದ್ರಾಸಿಗೆ ಹೋದಂಥ ನಮ್ಮ ದೇಶೀಯನು ರಿಟೈರ್ ಆದನಂತರ ಇಲ್ಲಿ ಆ ದರ್ಜೆಯ ಉದ್ಯೋಗಕ್ಕೆ ಬೇರೊಬ್ಬ ನಮ್ಮ ದೇಶೀಯನನ್ನು ನೇಮಿಸಬೇಕು. ಇಲ್ಲಿಂದ ಹೋಗುವ ಆಫೀಸರ, ಮತ್ತು ಮದ್ರಾಸಿನಿಂದ ಇಲ್ಲಿಗೆ ಬರುವವರ ಪೆನ್ಶನಿಗೆ ಆಯಾಯ ಸರ್ಕಾರದವರು ದಾಮಾಶಾಯಿ ಮೇರೆ ವಂತಿಕೆ ಕೊಡಬೇಕು.

ಹೀಗೆ ನಮ್ಮ ದೇಶೀಯರು ಮದ್ರಾಸು ಪ್ರಾಂತ್ಯಕ್ಕೆ ವರ್ಗವಾಗುವುದರಿಂದ ಅಂಥಾ ಆಫೀಸರುಗಳಿಗೆ ಇನ್ನೂ ಹೆಚ್ಚಿನ ಪದವಿಗಳಿಗೆ ಏರಲು ಅವಕಾಶದೊರೆಯುತ್ತದೆ. ಈ ದೇಶದಲ್ಲಿ ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟ್, ಸಬ್ ಜಡ್ಜ್, ಡಿಪ್ಯುಟಿ ಕಲೆಕ್ಟರ್, ಮುನ್ಸೀಫ್ ಮತ್ತು ಪೊಲೀಸ್ ಡಿಪ್ಯುಟಿ ಸುಪರಿಂಟೆಂಡೆಂಟ್ ಉದ್ಯೋಗಗಳಿಗೆ ಏರಿದಾತನಾಗಿ ಈ ದೇಶದಲ್ಲಿ ಅದಕ್ಕಿಂತ ಮೇಲೆ ಹೋಗಲು ಅನುಕೂಲವಿಲ್ಲ.

ಸರಕಾರಿ ಅಧಿಕಾರಿಗಳಿಗೆ ಸ್ಥಿರಸೊತ್ತು ಇರುವ ಜಿಲ್ಲೆಯಲ್ಲಿ ಅಥವಾ ಸರಹದ್ದಿನಲ್ಲಿ ಉದ್ಯೋಗ ಮಾಡಕೂಡದೆಂತ ಸರಕಾರದವರು ಹುಕ್ಕುಂ ಮಾಡಬಹುದೆಂದು ಸರಕಾರಿ ಉದ್ಯೋಗಸ್ಥರ ನಡತೆಯ ರೂಲ್ಸ್‌ಗಳ 10 ನೇ ರೂಲ್‌ನಲ್ಲಿ ಇದೆ. ಈ ರೂಲನ್ನು ಸರಕಾರದ ಪ್ರಯೋಜನಕ್ಕಾಗಿಯೂ ಪ್ರಜೆಗಳ ಹಿತಕ್ಕಾಗಿಯೂ ಮಾಡಿದ್ದಾಗಿರಬೇಕು. ಅವರಿಗೆ ಆಸ್ತಿ ಇರುವ ಸರಹದ್ದಿನೊಳಗೆ ಅಧಿಕಾರವಿದ್ದರೆ ತಮ್ಮ ಸಮಯವನ್ನು ಸರಕಾರದ ಕೆಲಸಕ್ಕೆ ಉಪಯೋಗಿಸುವದರ ಬದಲು ತಮ್ಮ ಆಸ್ತಿಯ ಉತ್ಪನ್ನದಾರಿಗೆ ಉಪಯೋಗಿಸಿಯಾರು ಎಂತಲೂ, ತಮ್ಮ ಆಸ್ತಿಗೆ ಸಂಬಂಧಪಡುವ ವಿಷಯದಲ್ಲಿ ಸರಕಾರಕ್ಕೆ ನ್ಯಾಯವಾಗಿ ತೀರ್ಮಾನ ಕೊಡಲಾರರೆಂತಲೂ ಸರಕಾರಕ್ಕೆ ಭೀತಿ ಇದೆ. ತಮ್ಮ ಆಸ್ತಿಗೆ ಸಂಬಂಧಪಡುವ ವಿಷಯಗಳಲ್ಲಿ ನೆರೆಹೊರೆಯವರಿಗೆ ನ್ಯಾಯಸಿಗಲಾರದೆಂತ ಪ್ರಜೆಗಳಿಗೆ ಭೀತಿ ಇದೆ. ಈ ಕಾರಣಗಳಿಂದ 10ನೇ ರೂಲನ್ನು ಮಾಡಿರಬೇಕು. ಸಿವಿಲ್, ಕ್ರಿಮಿನಲ್ ಕೋರ್ಟುಗಳಲ್ಲಿ ಬರುವ ಮೊಕದ್ದಮೆಗಳಲ್ಲಿ ಜಡ್ಜಿಗೆ ಸ್ವಂತ ಸಂಬಂಧವೇನಾದರೂ ಇದ್ದರೆ ಅಂಥಾ ಮೊಕದ್ದಮೆಯನ್ನು ಅಂಥಾ ಜಡ್ಜಿಯು ತೀರ್ಮಾನಮಾಡಬಾರದೆಂತಲೂ ಕಾನೂನು ಇದೆ. ಕೊಡಗಿನಂತ ಚಿಕ್ಕ ದೇಶದಲ್ಲಿ ಆಫೀಸರುಗಳ ಮುಂದೆ ಬರುವ ವಿಷಯಗಳು ಅವರಿಗೆ ಸ್ವಂತ ಸಂಬಂಧವಾಗುವ ಸಂಭವಗಳು ಹೆಚ್ಚು ಇವೆ. ಮೇಲೆ ಬರೆದ ರೂಲ್ ಮೇರೆ ಈ ದೇಶದವರಿಗೆ ಯಾರಿಗೂ ಈ ದೇಶದಲ್ಲಿ ಕೆಲಸವಿರಬಾರದೆಂತ ವಾದಿಸಬಹುದು. ನಾವಾಗಲೀ ಜಮೀನ್ದಾರರ ಸಂಘವಾಗಲೀ ಅಷ್ಟರಮಟ್ಟಿಗೆ ಹೇಳುವದಿಲ್ಲ. ದೇಶದವರಿಗೆ ದೊಡ್ಡ ಅಧಿಕಾರಗಳು ಸಿಕ್ಕಬಾರದೆಂತ ಹೇಳುವದಿಲ್ಲ. ದೊಡ್ಡ ಉದ್ಯೋಗದಲ್ಲಿ ಐದು ವರ್ಷಕ್ಕಿಂತ ಹೆಚ್ಚಿನ ಕಾಲ ಇರಬಾರದೆಂತ ಮಾತ್ರ ಹೇಳುವದಾಗಿದೆ. ದೇಶದ ಈ ಮುಖ್ಯ ಕೋರಿಕೆಗೆ ಸರಕಾರದವರು ಶೀಘ್ರದಲ್ಲೇ ಗಮನಕೊಡಬೇಕೆಂತ ಹಾರೈಸುತ್ತೇವೆ.

ಭಾಷಾನ್ವಯ ವಿಶ್ವವಿದ್ಯಾಲಯಗಳು ಈಗಲೆ ಹೊರಡುವದಕ್ಕೆ ಯೋಚನೆಯು.

ಲೇಖಕ ಶ್ರೀ ಆರ್ ಎಚ್ ರೆಣ್ಣಯ್ಯ ಬಿ ಎ ಎಲ್ ಟಿ
ಟೀಚರ್, ಮಡಿಕೇರಿ ಹೈಸ್ಕೂಲ್

ಈಗಿನ ಮದ್ರಾಸು ವಿಶ್ವವಿದ್ಯಾಲಯವೆಂದರೆ ದೊಡ್ಡದೊಂದು ಅವಿಭಕ್ತ ಕುಟುಂಬವೇ ಆಗಿರುತ್ತದೆ. ಈ ಅವಿಭಕ್ತ ಕುಟುಂಬದಲ್ಲಿ ೧ ಕೋಟಿ ೭೨ ಲಕ್ಷ ತಮಿಳರು, ೧ ಕೋಟಿ ೩೭ ಲಕ್ಷ ಆಂಧ್ರರು, ೩೨ ಲಕ್ಷ ಮಲಯಾಳಿಗಳು, ೨೪ ಲಕ್ಷ ಕನ್ನಡಿಗರು ಮತ್ತು ೧೮ ಲಕ್ಷ ಉತ್ಕಲರೂ ಇರುವರು. ಇವರೆಲ್ಲರಿಗೂ ತಮ್ಮ ತಮ್ಮ ಬೇರೆ ದೇಶಗಳಿವೆ. ಮುಸಲ್ಮಾನರು ೨೮ ಲಕ್ಷ ಜನರಿರುವರು. ಇವರಿಗೆ ಬೇರೆ ದೇಶವಿಲ್ಲ. ಎಲ್ಲ ಕಡೆಗೂ ಹಂಚಿ ಹೋಗಿರುವರು. ಅವರಲ್ಲಿ ೧೦ ಲಕ್ಷ ಜನರು ಹಿಂದೂಸ್ಥಾನಿಯನ್ನು ಮಾತಾಡುವರು. ಮಿಕ್ಕವರು ಮಲೆಯಾಳ ಅಥವಾ ತಮಿಳು ಮಾತಾಡುವರು. ಅವರ ಸರಿಯಾದ ಸಂಖ್ಯೆಯನ್ನು ತಿಳಿಯಲಿಕ್ಕೆ ಮಾರ್ಗವಿಲ್ಲ. ಕನ್ನಡಿಗರ ೨೪ ಲಕ್ಷ ಸಂಖ್ಯೆಯಲ್ಲಿ ಕೊಂಕಣಿ, ತುಳು ಮತ್ತು ಕೊಡಗು ಮಾತಾಡುವ ಒಟ್ಟು ೮ ಲಕ್ಷ ಜನರನ್ನೂ ಕೂಡಿಸಿ ಹಿಡಿದಿದೆ. ಏಕೆಂದರೆ, ಇವರೆಲ್ಲರೂ ಮೊದಲಿನಿಂದಲೂ ಕನ್ನಡವನ್ನೇ ತಮ್ಮ ಶಾಲಾ ಭಾಷೆಯಾಗಿಯೂ ಕೋರ್ಟ್ ಭಾಷೆಯಾಗಿಯೂ ಸ್ವೀಕರಿಸಿರುತ್ತಾರೆ. ಅಲ್ಲದೆ, ಅವರ ಸಂಖ್ಯೆಯ ಮೇಲಿಂದ ಅವರಿಗೆ ಪ್ರತ್ಯೇಕವಾದ ವಿಶ್ವವಿದ್ಯಾಲಯವು ಅವಶ್ಯವಿಲ್ಲವೆಂದು ಹೇಳಬಹುದು.

ಆಂಧ್ರರು ಬಹಳ ಕೂಗಾಡಿದ್ದರಿಂದಲೂ ಎಲ್ಲರಿಗಿಂತ ಅವರ ಮೇಲೆ ಪ್ರೀತಿ ಹೆಚ್ಚಿಗಿರುವದರಿಂದಲೂ, ಈ ಅವಿಭಕ್ತ ಕುಟುಂಬದ ಹಿರಿಯರು ಆಂಧ್ರ ತಮ್ಮನಿಗೆ ಪ್ರತ್ಯೇಕವಾದ ವಿಶ್ವವಿದ್ಯಾಲಯವನ್ನು ಕೊಟ್ಟು ಶಾಂತಗೊಳಿಸಿದರು.

ಮಿಕ್ಕವರ ಗತಿಯೇನು?

ಅರ್ಥಾತ್ ಮಿಕ್ಕ ತಮ್ಮಂದಿರುಗಳಿಗೂ ಬೇರೆ ವಿಶ್ವವಿದ್ಯಾಲಯಗಳು ಸಿಗಲೇಬೇಕು. ಬಹುಶಃ ಒಂದೆರಡು ವರ್ಷಗಳಲ್ಲಿ ಗಲಾಟೆ ತೆಗೆದಿರುವ ತಮಿಳ ಬಂಧುವಿಗೂ ಬೇರೆ ವಿಶ್ವವಿದ್ಯಾಲಯವು ದೊರೆಯುವದು. ಉಳಿದವರಿಗೆ ಮಾತ್ರ ತೀವ್ರ ದೊರೆಯುವ ಆಶೆಯಿಲ್ಲ. ಹೊಸ ವಿಶ್ವವಿದ್ಯಾಲಯಗಳನ್ನು ತೆಗೆಯಲಿಕ್ಕೆ ಬೇಕಾಗುವಷ್ಟು ಹಣವಿಲ್ಲವೆಂದು ಹಿರಿಯರ ಆಳಬುರುಕ ತಕರಾರು. ಆಂಧ್ರರಿಗೆ ವಿಶ್ವವಿದ್ಯಾಲಯವನ್ನು ಕೊಡುವಾಗ ಮಿಕ್ಕವರೂ ಬೇಡಬಹುದು, ಅವರಿಗೂ ಕೊಡಬೇಕಾಗುವುದು ಎಂಬುದು ಇವರಿಗೆ ತಿಳಿಯಬಾರದೋ?

ಆಂಧ್ರರಲ್ಲಿ ಅನೇಕ ಧನವಂತ ಜಮೀನದಾರರಿದ್ದು ಅವರೆಲ್ಲರೂ ವಿಶ್ವವಿದ್ಯಾಲಯಕ್ಕೆ ಮುಕ್ತಹಸ್ತದಿಂದ ಧನಸಹಾಯ ಮಾಡಲೊಪ್ಪಿರುವುದರಿಂದ ಆಂಧ್ರರು ಪುಣ್ಯವಂತರೆಂಬುದು ಸಂತೋಷದ ಮಾತು. ಆಂಧ್ರ ವಿಶ್ವವಿದ್ಯಾಲಯದ ಮುಖ್ಯ ಸ್ಥಾನವು ತಮ್ಮ ಕ್ಷೇತ್ರದಲ್ಲಿ ಆಗಬೇಕೆಂದು ಆಂಧ್ರ ಜಮೀನುದಾರರು ಹೋರಾಟ ನಡಿಸಿರುವದನ್ನು ನೋಡಿ ಆನಂದವಾಗುತ್ತದೆ. ಆಂಧ್ರರೇ ನೀವು ಧನ್ಯರು! "ಆರ್ಟ್ಸ್" ದಿಂದ ನೀವು ತೃಪ್ತರಾಗಿಲ್ಲವೆಂದು ತೋರುತ್ತದೆ. ಇರಲಿ, ಈಗ ಕೊಟ್ಟಿರುವ ಸಂಧಿಯ ಲಾಭವನ್ನು ತೆಗೆದುಕೊಂಡು ಆದಷ್ಟು ಮಟ್ಟಿಗೆ ಸಾಯಿನ್ಸ ಅಂದರೆ ಶಾಸ್ತ್ರೀಯ ವಿಷಯ ಮತ್ತು ಕೈಗಾರಿಕೆ ಮುಂತಾದುವುಗಳನ್ನು ಬೆಳಸಿಕೊಳ್ಳಿರಿ. ತಮಿಳ ಬಂಧು

(೩ನೇ ಪುಟದಲ್ಲಿ ಮುಂದುವರಿದಿದೆ)

ಮಹಾತ್ಮಗಾಂಧಿಯವರ ಸ್ವಚರಿತ್ರೆ.

(ಕಳೆದವಾರದಿಂದ ಮುಂದುವರಿದದ್ದು.)

12 ನೆಯ ಪ್ರಕರಣ

ನನ್ನ ಇಂಗ್ಲೆಂಡು ಪ್ರಯಾಣವು.

ನಾನು ಇಂಗ್ಲೆಂಡಿಗೆ ಪ್ರಯಾಣಮಾಡಲು ನನ್ನ ತಾಯಿ ಆಶೀರ್ವಾದ ಪೂರ್ವಕವಾಗಿ ಅನುಜ್ಞೆಯನ್ನಿತ್ತಳು. ಅದ ನಾನು ಅಧಿಕೋತ್ಸಾಹದಿಂದ ಬೊಂಬಾಯಿಗೆ ಹೊರ ಬಂದೆನು. ಆಗ್ಗೆ ನನ್ನ ಪತ್ನಿಯು ಹೆತ್ತು ಕೆಲವು ತಿಂಗಳು ತ್ರವಾಗಿದ್ದಿತು. ಆ ಎಳೇ ಮಗುವನ್ನೂ ಪತ್ನಿಯನ್ನೂ ನ್ನು ಸೀಮೆಗೆ ಪ್ರಯಾಣಮಾಡಿದೆನು. ಜೂನ್, ಜುಲೈ ತಿಂ ಗಳಲ್ಲಿ ಹಿಂದೂಸಾಗರವು ಬಹಳ ಉಗ್ರವಾಗಿದ್ದಿತು. "ನಿ ತಮ್ಮನು (ಮಹಾತ್ಮರು) ಇದುವರೆಗೆಂದೂ ಸ್ಟೀಮರಿ ಪ್ರಯಾಣಮಾಡಿರಲಿಲ್ಲವು, ಅಲ್ಲದೆ ನವಂಬರ್ ತಿಂಗಳವರೆ ಹೊರಡಕೂಡದು. 2-3 ದಿನಗಳ ಹಿಂದೆ ಒಂದು ಸ್ಟೀಮ ಗಾಳಿಯಾಧಿಕ್ಯದಿಂದ ಮುಳುಗಿಹೋಯಿತ" ಎಂದು ಬೊಂಬಾಯಿನಲ್ಲಿ ಕೆಲವು ಸ್ನೇಹಿತರು ನಮ್ಮಣ್ಣನಿಗೆ ಹೇಳಿದರು. ದರಿಂದ ಆಗ ನಾನು ಹೊರಡಲು ನಮ್ಮಣ್ಣನು ಸಮ್ಮತಿಸಲಿ ಲ್ಲವು. ಬೊಂಬಾಯಿನಲ್ಲಿ ಒಬ್ಬ ಸ್ನೇಹಿತನ ಮನೆಯಲ್ಲಿ ನ ವಾಸಕ್ಕೇರ್ಪಡಿಸಿ ನಮ್ಮ ಅಣ್ಣನು ರಾಜಕೋಟೆಗೆ ಹೋ ತನ್ನ ಕೆಲಸಕ್ಕೆ ಸೇರಿದನು. ನನ್ನ ಪ್ರಯಾಣದ ವೆಚ್ಚಕ್ಕೆ ಬೇಕಾದಷ್ಟು ಹಣವನ್ನು ಕಳುಹಿಸುತ್ತೇನೆಂದು ನನ್ನ ಭಾವನ ಕೂಡ ಹೇಳಿದನಲ್ಲದೆ ನನಗೆ ಬೇಕಾದ ಸಹಾಯವನ್ನು ಮಾಡ ಬೇಕೆಂದು ಸ್ನೇಹಿತರಿಗೆ ಹೇಳಿ ಹೊರಟನು. ಬೊಂಬಾಯಿನ ನನಗೇನೋ ಹೊತ್ತು ಹೋಗುತ್ತಿರಲಿಲ್ಲ. ಸ್ಟೀಮರಿನಲ್ಲಿ ಹೋಗುತ್ತಿದ್ದಂತೆಯೇ ಕನಸು ಬೀಳುತ್ತಿದ್ದಿತು.

ಬಹಿಷ್ಕಾರ.

ಇಷ್ಟರೊಳಗೆ ನಮ್ಮ ಜಾತಿಯವರಲ್ಲಿ ನನ್ನ ಪ್ರಯಾಣ ದ ವಿಚಾರವಾಗಿ ಚರ್ಚೆಯು ಹುಟ್ಟಿತು. ಆ ವರೆಗೆ ನಮ್ಮ ಜಾತಿಯವ (ಬನಿಯಾ ಜನ) ರಲ್ಲಿ ಯಾರೂ ಇಂಗ್ಲೆಂಡಿಗೆ ಹೋಗಿರಲಿಲ್ಲವು. ನಾನು ಸೀಮೆಗೆ ಹೊರಡಲೆತ್ನಿಸಿದುದರಿಂ ದ ನನ್ನನ್ನು ಬಹಿಷ್ಕರಿಸಬೇಕೆಂದು ಕುಲದಲ್ಲಿ ಕೆಲವರಿಗೆ ಆವೇಶ ವುಂಟಾಯಿತು. ಒಂದು ಸಭೆ ಸೇರಿತು. ಕುಲಸ್ಥರು ಬಹಳ ಜನ ಬಂದಿದ್ದರು, ನನ್ನನ್ನು ಕರೆಸಿದರು. ನನಗೆ ಅಷ್ಟು ಧೈರ್ಯ ವು ಹೇಗೆ ಬಂದಿತೋ ನನಗೆ ತಿಳಿಯಲಿಲ್ಲವಾದರೂ ನಾನು ನಿರ್ಭ ಯವಾಗಿ ಸಭೆಗೆ ಹೋದೆನು. ಕುಲದ ಯಜಮಾನನಿಗೂ ನನ್ನ ತಂದೆಗೂ ಬಹಳ ವಿಶ್ವಾಸವಿದ್ದಿತು. ಆತನಿಗೂ ನಮಗೂ ಕೊಂಚ ದೂರ ಬಾಂಧವ್ಯ ಸಹ ಉಂಟು. ಆತನನ್ನು ನೋಡಿಂದು ಕರೆಯುವರು. "ನೀನು ಸೀಮೆಗೆ ಹೋಗಕೂಡದೆಂದು ಕುಲ ದವರೆಲ್ಲರ ಅಭಿಪ್ರಾಯವಾಗಿದೆ. ಪರದೇಶಕ್ಕೆ ಹೋಗುವುದು ನಮ್ಮ ಆಚಾರಕ್ಕೆ ವಿರುದ್ಧವು. ಅಲ್ಲಿಗೆ ಹೋದಮೇಲೆ ಸದಾ ಚಾರಕ್ಕೆ ಭಂಗವುಂಟಾಗದಂತಿರಲು ಅವಕಾಶವಿಲ್ಲವೆಂದು ಕೇ ಳುತ್ತೇನೆ. ಅಲ್ಲಿ ಪಾಶ್ಚಾತ್ಯರೊಡನೆ ಕಲೆತು ತಿನ್ನುವುದೂ, ಕುಡಿಯುವುದೂ ಮೊದಲಾದುದನ್ನು ಮಾಡದೆ ಇರಲಾಗದು.' ಎಂದು ಸೇಟರು ಹೇಳಿದರು. "ಅಂಗ್ಲದೇಶಕ್ಕೆ ಹೋಗುವುದು ಧರ್ಮಾಚಾರಕ್ಕೆಷ್ಟು ಮಾತ್ರವೂ ವಿರುದ್ಧವಲ್ಲವು, ನಾನು ಓ ದಲೆಕ್ಕಾಗಿಯೇ ಅಲ್ಲಿಗೆ ಹೋಗುವುದು. ನೀವು ಯಾವುದ ನ್ನು ಕುರಿತು ಬಹಳ ಭಯಪಡುತ್ತೀರೋ ಅವು ಮೂರನ್ನು ನಾನು ಮಾಡುವುದಿಲ್ಲವೆಂದು ಇದಕ್ಕೆ ಮೊದಲೇ ದೇವರ ಸಾ ಕ್ಷಿಯಾಗಿ ನಮ್ಮ ತಾಯಿ ಇದಿರಿಗೆ ಪ್ರಮಾಣಮಾಡಿರುತ್ತೇನೆ. ಅದಕ್ಕೆ ನಿಯಮಭಂಗವುಂಟಾಗದಂತೆ ಭಗವಂತನು ಕಾಪಾಡು ತ್ತಾನೆಂದು ನಾನು ನಂಬಿರುತ್ತೇನೆ' ಎಂದು ನಾನು ಉತ್ತರ ಕೊಟ್ಟೆನು. "ಅಲ್ಲಿಗೆ ಹೋದಮೇಲೆ ಸದಾಚಾರವು ಎಷ್ಟು ಮಾತ್ರಕ್ಕೂ ನಡೆಯುವುದಿಲ್ಲವೆಂದು ನಾವು ಖಂಡಿತವಾಗಿ ಹೇಳಬಲ್ಲೆವು. ನಿನ್ನ ತಂದೆಗೂ ನನಗೂ ಇದ್ದ ಸ್ನೇಹವನ್ನು ನೀನು ಬಲ್ಲೆಯಾದುದರಿಂದ ನನ್ನ ಮಾತನ್ನು ನೀನು ಲಾಲಿಸ ಬೇಕು" ಎಂದು ಸೇಟರು ಹೇಳಿದರು. "ಆ ಸ್ನೇಹವು ನ ನಗೆ ತಿಳಿದಿರುವುದು. ನೀವು ನನಗೆ ಪೂಜ್ಯರಾದರೂ ಈ ವಿ ಷಯದಲ್ಲಿ ಮಾತ್ರ ನಾನೇನೂ ಮಾಡಲಾಗುವುದಿಲ್ಲ. ನಾ ನು ಸೀಮೆಗೆ ಹೋಗದೆ ತಪ್ಪುವುದಿಲ್ಲ. ನನ್ನ ತಂದೆಗೆ ಪ್ರಿ ಯ ಸ್ನೇಹಿತರಾಗಿದ್ದ ಒಬ್ಬ ಬ್ರಾಹ್ಮಣ ವಿದ್ವಾಂಸನೂ, ನನ್ನ ತಾಯಿಯೂ, ನನ್ನ ಅಣ್ಣನೂ ಸಮ್ಮತಿಸಿರುವರು' ಎಂದು ನಾನು ಹೇಳಿದೆನು. "ಕುಲಸ್ಥರ ಮಾತನ್ನು ನೀನು ಬಿಕ್ಕಿಸುವು ದಿಲ್ಲವೇ?" ಎಂದು ಸೇಟರು ಕೇಳಲು "ನಾನೇನು ಮಾಡಲಿ? ಕುಲಸ್ಥರು ಈ ವಿಷಯದಲ್ಲಿ ಪ್ರವೇಶಿಸಕೂಡದೆಂಬುದೇ ನನ್ನ ಅಭಿಪ್ರಾಯವು" ಎಂದು ನಾನು ಅಂದೆನು. ಆ ಮಾತನ್ನು ಕೇಳಿ ಸೇಟರಿಗೆ ಬಹಳ ಕೋಪ ಬಂದಿತು. ಅವರು ಗಟ್ಟಿಯಾ ಗಿ ಕೂಗಿ, ಬಯ್ಯಲುಪಕ್ರಮಿಸಿದರು. ನಾನು ಮರುಮಾತ ನ್ನಾಡದೆ ಕುಳಿತಿದ್ದೆನು. ಆ "ದಿವಸದಿಂದ ಈ ಹುಡುಗನ ನ್ನು ಬಹಿಷ್ಕರಿಸಿರುತ್ತೇನೆ. ಇವನಿಗೆ ಸಹಾಯಮಾಡುವವ ರೂ, ಇವನನ್ನು ಸಾಗ ಕಳುಹಲು ಸ್ಟೀಮರಿರುವ ರೇವಿಗೆ ಹೋಗುವವರೂ ತಲೆಯೊಂದಕ್ಕೆ 1-4-0 ರೂ. ನಂತೆ ಅಪರಾಧ ವನ್ನು ಕೊಡಬೇಕು." ಎಂದು ಸೇಟರು ಆಜ್ಞಾಪಿಸಿದರು. ನಾನು ಕೊಂಚವೂ ಹೆದರಲಿಲ್ಲ. ಸೇಟರ ಅಪ್ಪಣೆಯನ್ನು ಪ ಡೆದು ನಾನೆದ್ದು ಬಂದುಬಿಟ್ಟೆನು. ನನ್ನ ಅಣ್ಣನಿಗೆ ಈ ಸಂಗ ತಿಯು ತಿಳಿದು ಅವನೇನಾದರೂ ಹೆದರಿಕೊಳ್ಳುವನೇನೋ ಎಂ ದಂದುಕೊಂಡೆನು. ಆದರೆ ಅವನು ಕೂಡ ಹೆದರಲಿಲ್ಲ. "ನೀನು ಕುಲದವರು ಬಹಿಷ್ಕಾರಹಾಕಿದರೂ ಭಯವಿಲ್ಲ. ನೀನು ಮುಖ್ಯವಾಗಿ ಸೀಮೆಗೆ ಪ್ರಯಾಣಮಾಡಬೇಕಲ್ಲದೆ ಬಿಡಕೂಡ ದು," ಎಂದು ನನ್ನ ಅಣ್ಣನು ನನಗೆ ಕಾಗದವನ್ನು ಬರೆದನು.

ಪ್ರಯಾಣವು.

"ಇನ್ನು ನಿಧಾನಮಾಡಲಾಗದು. ಇವರೆಲ್ಲರೂ ಸೇರಿ ನನ್ನ ಅಣ್ಣನಿಗೆ ಬಲವಂತಪಡಿಸಿದರೆ, ಆತನ ಮನಸ್ಸು ಬದಲಾ ಯಿಸುವುದೋ ಏನೋ? ' ಎಂದು ನಾನು ಬಹಳವಾಗಿ ಚಿಂ ತಾಕ್ರಾಂತನಾದೆನು. ಸೆಪ್ಟಂಬರ್ ತಾ|| 4 ರಲ್ಲಿ ಒಂದು ಹಡ ಗು ಹೊರಡುವುದೆಂದೂ, ಸೀಮೆಯಲ್ಲಿ ಬ್ಯಾರಿಸ್ಟರ್ ಪರೀಕ್ಷೆ ಗೋದಲು ಜುನಾಘಡಸಂಸ್ಥಾನದವನಾದ ಒಬ್ಬ ಪ್ಲೀಡರು ಅದೇ ಹಡಗಿನಲ್ಲಿ ಹೊರಡುತ್ತಾನೆಂದೂ ನನಗೆ ತಿಳಿದುಬಂದಿತು. ಈ ಸಂಗತಿಯನ್ನು ನನ್ನನ್ನು ಸಾಗಕಳುಹುವವರಾದ ಸ್ನೇಹಿತರಿಗೆ ತಿಳಿಸಿದೆನು. ಒಳ್ಳೇ ಜತೆದೊರಕಿರುವುದರಿಂದ ಖಂಡಿತವಾಗಿ ಹೊರಡಬೇಕೆಂದು ಅವರು ಕೂಡ ನಿಶ್ಚಯಿಸಿದರು. ನನ್ನ ಅ ಣ್ಣನಿಗೆ ತಂತಿವಾರ್ತೆಯಿಂದ ತಿಳುಹಲು ಆತನೂ ಅದಕ್ಕೆ ಸ ಮ್ಮತಿಸಿದನು. ಆಗ ರೂಪಾಯಿಗಳನ್ನು ಕೊಡಬೇಕೆಂದು ನ ಮ್ಮ ಭಾವನನ್ನು ಕೇಳಿದೆನು. ನನ್ನನ್ನು ಕುಲದವರು ಬಹಿಷ್ಕ ರಿಸುತ್ತಾರಾದುದರಿಂದ ನಾನು ಕೊಡುವುದಿಲ್ಲವೆಂದನು. ನ ಮ್ಮ ಕುಟುಂಬದವರಮೇಲೆ ಬಹಳ ಅಭಿಮಾನಶಾಲಿಯಾದ ಒ ಬ್ಬ ಸ್ನೇಹಿತನಲ್ಲಿಗೆ ಹೋಗಿ 'ಸೀಮೆಗೆ ಹೊರಡಲು ಬೇಕಾಗು ವಷ್ಟು ಹಣವನ್ನು ನೀವು ಕೊಟ್ಟಿದ್ದು ನನ್ನ ಅಣ್ಣನಿಂದ ನೀವು ಹಿಂತಿರುಗಿ ಪಡೆದುಕೊಳ್ಳುವುದು.' ಎಂದು ಕೇಳಿದೆನು. ಆತನು ಬಹು ಸಂತೋಷದಿಂದೊಪ್ಪಿಕೊಂಡುದಲ್ಲದೆ ನನಗೆ ಬ ಹಳ ಪ್ರೋತ್ಸಾಹಪಡಿಸಿದನು. ಆ ಹಣವನ್ನು ಈಸಿಕೊಂಡ ಕೂಡಲೆ ಸ್ಟೀಮರ್ ಟಿಕೆಟ್ಟನ್ನು ಕೊಂಡುಕೊಂಡೆನು. ಇ ನ್ನು ಉಡುಪುಗಳು ಮೊದಲಾದ ಪದಾರ್ಥಗಳು ಬೇಕಾಗಿ ದ್ದವು. ಒಬ್ಬ ಸ್ನೇಹಿತನಿಗೆ ಆ ವಿಚಾರದಲ್ಲಿ ಒಳ್ಳೇ ಅನುಭವ ವಿದ್ದುದರಿಂದ ಅವನು ಒಟ್ಟ ಮೊದಲಾದುವನ್ನು ಸಿದ್ಧಪಡಿಸಿದ ನು. ಅವುಗಳಲ್ಲಿ ನನ್ನ ಮನಸ್ಸಿಗೆ ಕೆಲವು ಒಪ್ಪಿದುವು ಮತ್ತೆ ಕೆಲವು ಒಪ್ಪಲಿಲ್ಲ. ಆಗ ನೆಕ್‌ಟೈ ಎಂಬ ಕತ್ತಿನಪಟ್ಟಿಯು ಬಹ ಳ ಅಸಹ್ಯವಾಗಿ ತೋರಿತು. ತರುವಾಯ ನೆಕ್‌ಟೈಯನ್ನು ಬಿ ಡದೆ ಕಟ್ಟಿಕೊಂಡೇ ಇದ್ದೆನು. ಜಾಕೆಟ್ಟನ್ನು ತೊಟ್ಟುಕೊಳ್ಳ ಲು ನನಗೆ ಬಹಳ ನಾಚಿಗೆಯಾಗಿದ್ದಿತು. ಹೇಗಾದರೇನು, ನಾನು ಸೀಮೆಗೆ ಹೊರಡಬೇಕೆಂಬ ಕುತೂಹಲವು ಬಹಳವಾಗಿ ದ್ದುದರಿಂದ ಈ ಸಣ್ಣ ವಿಷಯಗಳನ್ನು ನಾನು ಅಷ್ಟು ದೊಡ್ಡ ದಾಗಿ ಎಣಿಸಲಿಲ್ಲವು. ತಿಂಡಿಯಪದಾರ್ಥವು ಎಷ್ಟೋಷ್ಟವಾ ಗಿದ್ದಿತು. ಜುನಾಘಡ ವಕೀಲನ ಹೆಸರು ತ್ರಯಂಬಕರಾಯ ಮುಜುಂದಾರ್ ಎಂದು. ಸ್ಟೀಮರಿನಲ್ಲಿ ಒಂದೇ ಕಡೆ ನನಗೂ ಆ ವಕೀಲರಿಗೂ ನನ್ನ ಸ್ನೇಹಿತರು ಸ್ಥಳಗಳನ್ನೇರ್ಪಡಿಸಿದರು. ಆ ವರಿಗೆ ಲೋಕಜ್ಞಾನವೂ ಅನುಭವವೂ ಚೆನ್ನಾಗಿದ್ದಿತು. ನ ನಗಿಂತಲೂ ವಯಸ್ಸಿನಲ್ಲಿ ಕೊಂಚ ದೊಡ್ಡವರಾಗಿದ್ದರು. ನನ ಗೆ 18ವರ್ಷ ವಯಸ್ಸಾಗಿದ್ದರೂ ಅನುಭವವೇನೂ ಇರಲಿಲ್ಲವು. 'ಈ ಮ ದುಗನಿಗೆ ಯಾವ ತೊಂದರೆಯೂ ಆಗದಂತೆ ನಾನು ನೋಡಿಕೊಳ್ಳುವೆನು. ನೀವು ಭಯಪಡಬೇಡಿರಿ' ಎಂದು ಮುಜುಂದಾರರವರು ನನ್ನ ಸ್ನೇಹಿತರಿಗೆ ಧೈರ್ಯ ಹೇಳಿದ ರು. ಸೆಪ್ಟಂಬರ್ ತಾ. 4ರಲ್ಲಿ ಬೊಂಬಾಯಿನಿಂದ ಸೀಮೆಗೆ ಹೊರಟೆನು.

13 ನೆಯ ಪ್ರಕರಣ

ಲಂಡನ್ ಪಟ್ಟಣವನ್ನು ತಲುಪಿದುದು.

ಸ್ಟೀಮರಿನಲ್ಲಿ ನನಗೆ ಸಮುದ್ರಯಾನ ಸಂಬಂಧವಾದ ಅ ಸ್ವಸ್ಥತೆಯೇನೂ ಉಂಟಾಗದಿದ್ದರೂ ಪ್ರಯಾಣವು ಬೇಗ ಸಾ ಗದುದರಿಂದ ಮನಸ್ಸಿಗೆ ಬಹಳ ಜುಗುಪ್ಸೆಯುಂಟಾಯಿತು. ಸ್ಟೀಮರಿನ ಸ್ಟೂವಾರ್ಡನೊಡನೆ ಮಾತನಾಡಲು ಕೂಡ ನನಗೆ ಧೈರ್ಯವಿರಲಿಲ್ಲವು. ಆಂಗ್ಲಭಾಷೆಯಲ್ಲಿ ಮಾತಾಡಲು ನನಗೆ ಅಭ್ಯಾಸವಿರಲಿಲ್ಲ ನನ್ನ ಒಂದಿಯಲ್ಲಿದ್ದ ಪ್ರಯಾಣಿಕರಲ್ಲಿ ಮ ಜುಂದಾರರ ಹೊರತು ಮಿಕ್ಕವರೆಲ್ಲ ಆಂಗ್ಲೇಯರೇ. ಅವರು ನನ್ನಬಳಿ ಒಂದು ಮಾತನಾಡಿದಾಗ ಅವರಭಿಪ್ರಾಯವೇನೆಂಬು ದು ನನಗೆ ಗೊತ್ತಾಗುತ್ತಿರಲಿಲ್ಲ. ಒಂದೊಂದು ವೇಳೆ ತಿಳಿದರೂ ಉತ್ತರವನ್ನು ಕೊಡಲಾರದವನಾಗಿದ್ದೆನು. ಮೊದಲು ಮನ ಸ್ಸಿನಲ್ಲಿ ಗುಣಿಸಿಕೊಂಡು ಅನಂತರ ಬಾಯಲ್ಲಿ ಹೇಳುವ ಸ್ಥಿತಿ ಯಲ್ಲಿದ್ದೆನು. ಊಟದವೇಳೆಯಲ್ಲಿ ಚೂರಿ ಚಂಚಗಳನ್ನು ನಾನುಪಯೋಗಿಸುವ ಪಾಡಿಕೆಯಿರಲಿಲ್ಲವು. ಅವರು ಮಾ ಡಿದ ಪದಾರ್ಥಗಳಲ್ಲಿ ಯಾವುದು ಮಾಂಸಮಿಶ್ರವಾಗಿರುವುದು, ಯಾವುದು ಇಲ್ಲವೆಂದು ಕೇಳಲು ಧೈರ್ಯವಿರಲಿಲ್ಲ. ಆದುದ ರಿಂದ ನಾನು ಯಾವಾಗಲೂ ಭೋಜನಶಾಲೆಯಲ್ಲಿ 10 ಜನ ರೊಡನೆ ಸೇರಿ ಭೋಜನಮಾಡಲಿಲ್ಲ. ನನ್ನ ಸ್ಥಳದಲ್ಲಿ ನಾ ನೊಬ್ಬನೇ ತಿನ್ನುತ್ತಿದ್ದೆನು. ಮುಖ್ಯವಾಗಿ ನಾನು ತಂದಿದ್ದ ತಿಂಡಿಪದಾರ್ಥವನ್ನೂ ಹಣ್ಣನ್ನೂ ಮಾತ್ರ ತಿನ್ನುತ್ತಿದ್ದೆನು. ಮುಜುಂದಾರರಿಗೆ ಈ ತೊಂದರೆಯೇ ಇರಲಿಲ್ಲ. ಅವರು ಎ ಲ್ಲರೊಡನೆಯೂ ಕೂಡಿ ಊಟಮಾಡುತ್ತಿದ್ದರು. ಸ್ಟೀಮರಿನ ಪಡಸಾಲೆಯಲ್ಲಿ ಎಲ್ಲರೊಡನೆ ಮಿತ್ರವಾಗಿ ತಿರುಗುತ್ತಿದ್ದರು. ನಾನು ಹಗಲಿನಲ್ಲಿ ಕುಳಿತಿದ್ದ ಸ್ಥಳವನ್ನುಬಿಟ್ಟು ಕದಲುತ್ತಿರಲಿ ಲ್ಲ; ಸಾಯಂಕಾಲದಲ್ಲಿ ಜನಸಂದಣಿಯು ಕಡಿಮೆಯಾದ ತರುವಾಯ ಪಡಸಾಲೆಯಲ್ಲಿ ತಿರುಗಾಡುತ್ತಿದ್ದೆನು. ಆ ಗ ಮಾತ್ರ ನಾನು ಎಲ್ಲರೊಡನೆ ಸೇರಿಕೊಂಡಿರಬೇಕಲ್ಲದೆ ಒಂ ಟಿಯಾಗಿರಬಾರದು. ಅವರಲ್ಲೂ ಮಾತಾಡಿಕೊಂಡಿರಬೇ ಕು. ನ್ಯಾಯವಾದಿ (ವಕೀಲಿ) ವೃತ್ತಿಯನ್ನು ಅವಲಂಬಿಸ ಲಿಚ್ಛಿಸಿರುವೆ; ಮುಂದೆ ಹೇಗೆ? ನ್ಯಾಯವಾದಿಗಳು ಯಾವಾ ಗಲೂ ಹತ್ತುಜನರೊಡನೆ ಮಾತನಾಡುತ್ತಲೇ ಇರಬೇಕು. ತಪ್ಪಾದರೆ ಬಾಧಕವೇನು? ಆಂಗ್ಲಭಾಷೆಯು ನನ್ನ ಮಾ ತೃಭಾಷೆಯಲ್ಲವಾದುದರಿಂದ ತಪ್ಪು ಎಲ್ಲರಿಗೂ ಬರುವುದು. ಧೈರ್ಯದಿಂದ ಮಾತನಾಡುತ್ತಿರಬೇಕು,' ಎಂದು ಮಜುಂ ದಾರರು ನನಗೆ ಬಹಳವಾಗಿ ಬೋಧಿಸುತ್ತಿದ್ದರು. ಆದರೂ ನನ್ನ ಶಂಕೆಯು ಮಾತ್ರ ಹೋಗಲಿಲ್ಲವು.

ಒಬ್ಬ ಆಂಗ್ಲೇಯನು ದಯವಿಟ್ಟು ನನ್ನಕೂಡ ಮಾತ ನಾಡಲಾರಂಭಿಸಿದನು. ಆತನು ನನಗಿಂತ ದೊಡ್ಡವನು. 'ನೀನು ಸ್ಟೀಮರಿನಲ್ಲಿ ಏನನ್ನು ತಿನ್ನುತ್ತಿಯೇ, ನಿನ್ನ ಉ ದ್ಯೋಗವೇನು, ಎಲ್ಲಿಗೆ ಹೋಗುತ್ತೀಯೆ, ನಿನಗ್ಯಾಕಿಷ್ಟು ನಾಚಿಕೆ, ಹತ್ತುಜನರೊಡನೆ ಸೇರಿ ಏಕಕ್ಕಾಗಿ ಊಟಮಾ ಡುವುದಿಲ್ಲ?' ಎಂದು ಆತನು ಕೇಳಿದನು. ನಾನು ಮಾಂ ಸವನ್ನು ತಿನ್ನುವುದಿಲ್ಲವೆಂದು ಹೇಳಲು ಆತನು ನಕ್ಕು 'ಬಿಸ್ಕೆ ನಮುದ್ರವನ್ನು ನೋಡಿದಮೇಲೆ ಈ ನಿಯಮವು ಸಾಗದು. ಆಂಗ್ಲದೇಶದಲ್ಲಿ ಚಳಿಯು ವಿಪರೀತವಾಗಿರುವುದು.' ಎಂದು ಆತನು ಅಂದನು. ಪೋರ್ಟ್‌ಸೈದನ್ನು ತಲುಪುವುದಕ್ಕೆ ಮೊದ ಲೇ ಈ ಸಂಭಾಷಣೆಯು ನಡೆದುದು. 'ಆಂಗ್ಲದೇಶದಲ್ಲು ಕೂಡ ಮಾಂಸವನ್ನು ತಿನ್ನದೇ ಇರಬಹುದೆಂದು ನಾನು ಕೇಳಿ ದ್ದೇನೆ' ಎಂದು ನಾನು ಹೇಳಿದೆನು. 'ಅದು ಬರೀ ಸು ಳ್ಳು. ನಾನು ತಿಳಿದಮಟ್ಟಿಗೂ ಆ ದೇಶದಲ್ಲಿ ಅಂತಹವರಾ ರೂ ಇಲ್ಲವು. ನೀನು ಸಾರಾಯನ್ನು ಕುಡಿಯದಿದ್ದರೂ ಪ ರವಾ ಇಲ್ಲವು. ನಾನು ಆಂಗ್ಲೇಯನಾಗಿದ್ದರೂ, ನನಗದು ರುಚಿ ಇಲ್ಲವು. ಆದರೆ ಮಾಂಸವನ್ನು ತಿನ್ನದೆ ಹೋದರೆ ನೀನು ಆಂಗ್ಲದೇಶದಲ್ಲಿ ಬದುಕಿರಲಾರೆ,' ಎಂದು ಆತನು ಹೇಳಿದ ನು. 'ನಿಮ್ಮ ಬೋಧೆಗಾಗಿ ವಂದಿಸುತ್ತೇನೆ. ಆದರೆ ನಾ ನು ಮಾಂಸವನ್ನು ತಿನ್ನುವುದಿಲ್ಲವೆಂದು ನಮ್ಮ ತಾಯಿಗೆ ಪ್ರಮಾಣ ಮಾಡಿ ಹೇಳಿರುತ್ತೇನೆ. ಆ ಮಾತನ್ನು ಉಳಿಸಿಕೊಳ್ಳುವುದಕ್ಕಾಗಿ ನ ನ್ನ ಸ್ವದೇಶಕ್ಕಾದರೂ ಹಿಂದಿರುಗಿಹೋಗುವೆನೇ ಹೊರತು ಮಾಂಸವನ್ನು ಎಷ್ಟು ಮಾತ್ರಕ್ಕೂ ತಿನ್ನಲಾರೆನು.' ಎಂದು ನಾನು ಹೇಳಿದೆನು.

ಇನ್ನು ಕೆಲವುದಿವಸಗಳಲ್ಲಿ ನಮ್ಮ ಹಡಗು ಬಿಸ್ಕೆ ಸಮು ದ್ರವನ್ನು ಪ್ರವೇಶಿಸಿತು. ಆದರೆ ಮದ್ಯಮಾಂಸಗಳ ಅವಶ್ಯಕ ತೆಯು ನನಗೆಷ್ಟು ಮಾತ್ರಕ್ಕೂ ಹುಟ್ಟಲಿಲ್ಲವು. ನಾನು ಮಾಂ ಸವನ್ನು ತಿನ್ನಲಿಲ್ಲವೆಂದು ಒಂದು ಸರ್ಟಿಫಿಕೇಟನ್ನು ತೆಗೆದು ಕೊಂಡು ಬರಬೇಕೆಂದು ನಮ್ಮ ಜನರು ಹೇಳುತ್ತಾರೆ ಆ ದುದರಿಂದ ನನ್ನ ಆಂಗ್ಲೇಯಮಿತ್ರನನ್ನು ಕೇಳಿದೆನು. ಆತನು ಸಂತೋಷದಿಂದ ಬರೆದುಕೊಟ್ಟನು. ನಾನು ಅದನ್ನು ಕೆಲ ಕಾಲದವರೆಗೆ ಭದ್ರವಾಗಿ ಕಾಪಾಡಿದೆನು. ಮಾಂಸವನ್ನು ತಿ ನ್ನುತ್ತಿರುವವರು ಕೂಡ ತಿನ್ನಲಿಲ್ಲವೆಂದು ಸರ್ಟಿಫಿಕೇಟನ್ನು ಸಂಪಾದಿಸಿಕೊಳ್ಳುತ್ತಿದ್ದುದನ್ನು ನೋಡಿದನಂತರ ನನಗೆ ಅದ ರಮೇಲೆ ವಿಶ್ವಾಸ ಕಡಿಮೆಯಾಯಿತು. ನನ್ನ ಮಾತನ್ನು ನಂಬದಿರುವವರು ಸರ್ಟಿಫಿಕೇಟನ್ನು ಮಾತ್ರ ನಂಬುವರೆ? ಎಂ ದು ನಾನು ಹೇಳಿದೆನು. ಒಂದು ಶನಿವಾರದವಸ (ಹಾಗೆ ನನಗೆ ಜ್ಞಾಪಕ) ಸೌತಾಂಪ್ಟಾಂ ರೇವಿಗೆ ನಮ್ಮ ಹಡ ಗು ಸೇರಿತು. ನನ್ನ ಸ್ನೇಹಿತರಲ್ಲೊಬ್ಬನು ಬಿಳೀ ಫ್ಲಾನೆಲ್ಲಿ ನ ಕರಾಯ ಕೋಟು ವೇಸ್ಟ್‌ಕೋಟುಗಳನ್ನು ನನಗೆ ಕೊಟ್ಟಿ ದ್ದನು. ಸ್ಟೀಮರಿನಿಂದಿಳಿಯುತ್ತಲೆ ಅವನ್ನು ಧರಿಸಿಕೊಂಡ ನು. ಆಗ ಬಿಳೀ ಉಡುಪೇ ನನಗೆ ಚೆನ್ನಾಗಿರುತ್ತದೆಂದು ತೀರ್ಮಾನಿಸಿದ್ದೆ ಸ್ಟೀಮರಿನಲ್ಲಿ ಕಪ್ಪು ಉಡುಪನ್ನೇ ಹಾಕಿಕೊಂ ಡಿದ್ದೆನು. ಸ್ಟೀಮರಿನಿಂದಿಳಿಯುತ್ತಲೆ ಫ್ಲಾನೆಲ್ಲು ಬಟ್ಟೆಗಳನ್ನು ಹಾಕಿಕೊಂಡೆನು. ಅದು ಸೆಪ್ಟಂಬರ್ ತಿಂಗಳ ಕಡೆಯವಾರ ವು. ಅಲ್ಲಿದ್ದವರಲ್ಲಿ ನಾನಲ್ಲದೆ ಬೇರೆ ಯಾರೂ ಅಂತಹ ಉ ಡುಪನ್ನು ಧರಿಸಿರಲಿಲ್ಲವು. ಬಹುಜನರು ತಮ್ಮ ಸಾಮಾನ ನ್ನು ಗ್ರೀಂಡ್ಲೆ ಕಂಪೆನಿಯವರ ವಶಕ್ಕೆ ಕೊಟ್ಟುಹೋಗುತ್ತಿ ದ್ದುದರಿಂದ ನಾನು ಹಾಗೆಯೇ ಮಾಡಿದೆನು. ಬೀಗದ ಕೈ ಗಳ ಗೊಂಚಲನ್ನು ಸಹ ಆತನಿಗೆ ಕೊಟ್ಟೆನು. ಡಾಕ್ಟರ್ ಪಿ. ಜೆ. ಮೆಹತ, ದಲಪತರಾಂ ಶುಕ್ಲಾ, ರಣಜಿತಸಿಂಹು ಮಹಾರಾಜ, ದಾದಾಭಾಯಿ ನವರೋಜಿ ಇವರುಗಳ ಹೆಸರಿಗೆ ನನ್ನ ಸ್ನೇಹಿ ತರು ಬರೆದುಕೊಟ್ಟಿದ್ದ ಶಿಫಾರಸ್ಸು ಕಾಗದಗಳು ನನ್ನ ಬಳಿಯ ಲ್ಲೇ ಇದ್ದುವು. ಲಂಡನ್ ನಗರದಲ್ಲಿ ವಿಕ್ಟೋರಿಯಾ ಹೋ ಟೆಲಿನೊಳಗೆ ಇಳಿಯಬೇಕೆಂದು ಹಡಗಿನಲ್ಲಿ ಒಬ್ಬನು ಹೇಳಿದ್ದ ನು. ಆದುದರಿಂದ ನಾನೂ, ಮುಜುಂದಾರರೂ ಆ ಹೋಟೇ ಲಿಗೆ ಹೋದೆವು. ನಾನೊಬ್ಬನೇ ಬಿಳೀ ಫ್ಲಾನೆಲ್ಲು ಉಡು ಪನ್ನು ಧರಿಸಿದ್ದೆನು, ಮತ್ತಾರೂ ಧರಿಸಿರಲಿಲ್ಲವೆಂದು ನನ್ನ ಮನ ಸ್ಸಿಗೆ ಖಿನ್ನವಾಯಿತು. ಮಾರನೆಯದಿನ ಭಾನುವಾರವಾದು ದರಿಂದ ಗ್ರೀಂಡ್ಲೆ ಕಂಪೆನಿಯವರು ಆ ದಿವಸ ಕೊಡುವುದಿಲ್ಲ ವೆಂದು ಹೋಟೆಲಿನಲ್ಲಿ ತಿಳಿದ ದರಿಂದ ನನಗೆ ಮತ್ತಷ್ಟು ಅಸ ಮಾಧಾನವಾಯಿತು.

(ಮುಂದುವರಿಯುವುದು)

ಕೆ. ಸಿ. ಅಪ್ಪಚ್ಚು.

ದಂತ ವೈದ್ಯರು.

ಇದೇ ತಾರೀಖು 23ರಿಂದ ಮಡಿಕೇರಿ ಯಲ್ಲಿ ಉಳಕೊಳ್ಳುವರು. ಬಾಯಿ ಪರ್ದಾರವು ಳ್ಳವರು ಅಲ್ಲಿ ಹೋಗಿ ನೋಡಬಹುದು. ಇಂ ಅವನ್ನು ಅಲ್ಲಿ ಹೋಗಿ ನೋಡಬಹುದು. ಇಂ ಥಾ ಸಮಯವನ್ನು ಕಳಕೊಳ್ಳಬೇಡಿರಿ. ಈ ಸಲ್ವಿಂ ಗ ಚಾರ್ಜು ಇಲ್ಲದೆ ನೋಡುವರು. 52-5

(೩ನೇ ಪುಟದಿಂದ ಮುಂದುವರಿದದ್ದು.)

ಗಳ ಪ್ರಶ್ನೆಯು ಅಷ್ಟು ಕಠಿಣವಾಗಿಲ್ಲ. ಆಂದರೆ ಅವರಲ್ಲಿಯೂ ದೊಡ್ಡ ಬಮಿನುದಾರರಿರುವರು. ಅವರೂ ಹೊಸ ವಿಶ್ವವಿದ್ಯಾಲಯಕ್ಕೆ ಕೈಗೊಟ್ಟೇಗೊಡುವರು. ಸರ್ ಶಂಕರ ನಾಯರ ಇವರು ತಮಿಳ ನಾಡನ್ನು ಪ್ರತ್ಯೇಕವಾಗಿ ಮಾಡಿಕೊಡಬೇಕೆಂಬ ಸೂಚನೆಯು ಮಾನ್ಯವಾಗಲಿಲ್ಲ; ಪ್ರಾಂತ ಇನ್ನ ತಮಿಳನಾಡಿಗೊಂದು ವಿಶ್ವವಿದ್ಯಾಲಯದ ಸೂಚನೆಯು ಮುಂದೆ ಬಂದೇ ಬರುವದು. ಆದರೆ ತಮಿಳನಾಡನ್ನು ಪ್ರತ್ಯೇಕ ಪ್ರಾಂತವಾಗಿ ಮಾಡುವ ಪ್ರಶ್ನೆಗೆ, ಸರಕಾರದವರು ದಾಣ್ಯ ಯು. ರಾಮರಾಯರಿಗೆ ಉತ್ತರ ಕೊಟ್ಟಂತೆಯೇ ಜನರ ಬಹುತರದ ಬೇಡಿಕೆಯು ಇಲ್ಲವೆಂದು ಉತ್ತರ ಕೊಡುವ ಸಂಭವವುಂಟು. ಆದರೆ ಇಷ್ಟರಲ್ಲಿ ತಮಿಳರು ಆ ಪ್ರಕಾರದ ಬೇಡಿಕೆಯನ್ನು ಹುಟ್ಟಿಸಬಹುದು. ಅದು ಏನೇ ಇರಲಿ, ನಮಗೆ ದೊಡ್ಡದೊಂದು ಗಂಡಾಂತರ ಒದಗುವ ಸಂಭವವುಂಟು. ಅದೇನೆಂದರೆ, ತಮಿಳರು ಇಂಜನಿಯರಿಂಗ, ಮೆಡಿಕಲ್, ಲಾ ಮುಂತಾದ ಅನೇಕ ಕಾಲೇಜುಗಳಿಂದ ಯುಕ್ತವಾಗಿರುವ ಈಗಿನ ಮದ್ರಾಸದ ವಿಶ್ವವಿದ್ಯಾಲಯವನ್ನೇ ತಮ್ಮ ತಮಿಳ ವಿಶ್ವವಿದ್ಯಾಲಯವನ್ನಾಗಿ ಮಾಡಿಕೊಳ್ಳುವ ಸಂಭವವಿರುವದು. ಹಾಗಾದರೆ, ನಾವೆಲ್ಲರೂ ಕೂಡಿ ಕಷ್ಟಪಟ್ಟು ದುಡಿದು ಕಟ್ಟಿದ ಈ ದೊಡ್ಡ ವಿಶ್ವವಿದ್ಯಾಲಯವನ್ನು ತಮಿಳರು ತಮ್ಮ ಹಿಡಿತದಲ್ಲಿ ಹಾಕಿಕೊಳ್ಳುವದನ್ನು ಕಣ್ಣಿನಿಂದ ನೋಡುತ್ತ ಸ್ವಸ್ಥವಾಗಿ ಕುಳಿತುಕೊಳ್ಳಬೇಕಾಗುವ ಪ್ರಸಂಗವು ಒದಗಬಹುದು. ಮತ್ತು ನಾವೆಲ್ಲರೂ ಉಪವಾಸ ಸಾಯಬೇಕಾಗಬಹುದು. ಆದಕಾರಣ ಕನ್ನಡಿಗರೇ ಎಚ್ಚರಿಕೆ.

(ಮುಂದುವರಿಯುವದು.)

ಮಡಿಕೇರಿ ಮದುವೆ.

[ಹಾಜರಿದ್ದವರಿಂದ]

ಈ ತಾ 2ರಲ್ಲು ನಡೆದ ಮೆ. ಕಂಬೇರಂಡ ಗಣಪತ್ತಿ ಬಾರ್-ಎಟ್-ಲಾ ರವರ ಮದುವೆಯಲ್ಲಿ ಮುಹೂರ್ತ ಕಳೆದು ಊಟವಾದನಂತರ ಕೊಡಂದೇರ ಮನೆಯಲ್ಲಿ ಮದುಮಗಳ ಮುಹೂರ್ತಕ್ಕೆ ಹೋಗಿದ್ದವರ ಪೈಕಿ ರಾ. ಬಾ. ಕೇಟೋಳೀರ ಚಂಗಪ್ಪನವರು, (ಡಿಸ್ಟ್ರಿಕ್ಟ ಮೇಜಿಸ್ಟ್ರೇಟರು) ಮೆ. ಸಡಿಕೇರಿಯಂಡ ಕಾಳಪ್ಪನವರು, (ಪೋಲೀಸು ಡಿಪ್ಯುಟಿ ಸುಪರಿಂಟೆಂಡೆಂಟರು), ಮೆ. ಸಿ. ಎನ್. ಮುತ್ತಣ್ಣನವರು (ಮುನಸೀಫರ), ರಾ ಸಾ ಪಟ್ಟಮಾಡ ದೇವಯ್ಯನವರು (ಮಾಜಿ ಪೋಲೀಸು ಡಿಪ್ಯುಟಿ ಸುಪರಿಂಟೆಂಡೆಂಟರು), ಮೆ. ಪಾಲೇಕಂಡ ವೇದಪ್ಪನವರು, ಮೆ ಮೇರಿಯಂಡ ಭೀಮಯ್ಯನವರು, ರಾ. ಸಾ. ಕೋಡಿಮಣಿಯಂಡ ಸುಬ್ಬಯ್ಯನವರು, ಮೆ. ಕೂಂಗಟ್ಟಿರ ಮಂದಣ್ಣನವರು, ಮೆ. ನರವಂಡ ನಂಜಪ್ಪನವರು, ಮೆ. ಪಟ್ಟಮಾಡ ಚಿಣ್ಣಪ್ಪನವರು, ಮೆ. ಪಾಲೇಕಂಡ ಮುತ್ತಣ್ಣನವರು ಮೆ. ಬಲ್ಲಚಂಡ ಬೆಳ್ಯಪ್ಪನವರು, ಮೆ. ಕಡೇಮಾಡ ಕರುಂಬಯ್ಯನವರು, ಮೆ. ಅಪ್ಪಾರಂಡ ಅಪ್ಪಚ್ಚನವರು, ಮೆ. ಕೋದಂಡ ಸೋಮಣ್ಣನವರ, ಮತ್ತು ಇನ್ನೂ ಸುಮಾರು 20 ಕೊಡವ ಮಹನೀಯರು ಮದುಮಗನ ಮನೆಗೆ ಒಂದು ಪಟ್ಟಡ ಸಿ. ಉತ್ತಪ್ಪನವರಿಗೆ ಮದುವೆಯ ಆಮಂತ್ರಣ ಕಳುಹಿಸಲ್ಪಟ್ಟಿತ್ತೋ, ಅವರು ಮದುವೆಯ ಕಾರ್ಯದಲ್ಲಿ ಭಾಗಿಗಳಾಗಿ ಪಂಕ್ತಿಯ ಊಟಕ್ಕೆ ಸೇರಿದ್ದರೋ ಎಂದು ಮುಂತಾಗಿ ಮದುಮಗನನ್ನು ಕೇಳಿ, ಈ ಪ್ರಶ್ನೆಗಳಿಗೆ ಹೌದೆಂದು ಜವಾಬು ದೊರೆತನಂತರ ಯಾವ ಕಾರಣದಿಂದಲೋ ಅವರೆಲ್ಲರೂ ಮದುಮಗನಿಗೆ (ಹಣ ಕಟ್ಟದೆ) ಆಶೀರ್ವದಿಸದೆಯೂ ಊಟ ಉಪಚಾರ ಸ್ವೀಕರಿಸದೆಯೂ ಮದುವೆ ಮನೆಯಿಂದ ಇಳಿದು ಹೋಗಿಬಿಟ್ಟರು.

ಬಳ್ಳಾರಿಯಲ್ಲಿ ಸಮಾವೇಶಗಳು.

ಬಳ್ಳಾರಿಯಲ್ಲಿ ಇದೇ ತಿಂಗಳು ೨೦, ೨೧ನೇ ತೇದಿಗಳಲ್ಲಿ ೪ನೆಯ ಕರ್ನಾಟಕ ಪ್ರಾಂತೀಕ ರಾಜಕೀಯ ಸಮಾವೇಶವು ಜರುಗುವದು. ಇದಕ್ಕೆ ಶ್ರೀಯುತ ಯಸ್. ಶ್ರೀನಿವಾಸ ಅಯ್ಯಂಗಾರರವರು ಅಧ್ಯಕ್ಷರಾಗಿರಲು ಒಪ್ಪಿರುತ್ತಾರೆ

೧೯ನೇ ತೇದಿ ಕರ್ನಾಟಕ ಏಕೀಕರಣ ಸಭೆಯ ಸಮಾವೇಶವು ನೆರೆಯುವದು. ಇದೇ ದಿವಸ ಕರ್ನಾಟಕ ಪ್ರಾಂತೀಕ ಕಾಂಗ್ರೆಸು ಕಮಿಟಿಯೂ ಇದರ ಕೌನ್ಸಿಲ್ ಸಭೆಯೂ ಸಹಾ ಜರುಗುವವು

೨೦ನೇ ತೇದಿ ಖಾದೀ ಸಮ್ಮೇಳನವು ನಡೆಯುವದು.

೨೨ನೇ ತೇದಿ ಸ್ವಯಂಸೇವಕರ ಸಮ್ಮೇಳನವು ಆಗುವದು. ಇದಕ್ಕೆ ಶ್ರೀಯುತ ಹೊಸಕೊಪ್ಪ ಕೃಷ್ಣರಾಯರು ಅಧ್ಯಕ್ಷರಾಗಿರಲು ಅನುಮೋದಿಸಿರುತ್ತಾರೆ. ಇದೇ ದಿನ ಕರ್ನಾಟಕ ವಿಶ್ವವಿದ್ಯಾಲಯದ ಪರಿಷತ್ತು ಆಗುವದು

೨೩-೨೪ನೇ ತೇದಿಗಳಲ್ಲಿ ಕರ್ನಾಟಕ ಸಾಹಿತ್ಯ ಪರಿಷತ್ತು ಕೂಡುವದು. ಬಿಜಾಪುರದ ವಕೀಲ ರಾವ್‌ಸಾಹೇಬ ಹಳಕಟ್ಟಿ ಇವರು ಅಧ್ಯಕ್ಷರಾಗಿರಲು ಸಮ್ಮತಿಸಿರುತ್ತಾರೆ.

ಬಳ್ಳಾರಿಯಲ್ಲಿರುವ ಕರ್ನಾಟಕ ರಾಜಕೀಯ ಸಭೆಯ ಆಹ್ವಾನ ಮಂಡಲಿಯವರಿಗೆ ಕರ್ನಾಟಕ ಪ್ರಾಂತ್ಯದ ಯಾವತ್ತು ಡಿಸ್ಟ್ರಿಕ್ಟ ಕಾಂಗ್ರೆಸು ಕಮಿಟಿಯವರೂ ೧೬ನೇ ತೇದಿ ಒಳಗಾಗಿ ಪ್ರಾಂತೀಕ ಸಮಾವೇಶಕ್ಕೆ ಡೆಲಿಗೇಟರ ಹೆಸರುಗಳನ್ನು ಕಳುಹಿಸಬೇಕಾಗಿ ಸೂಚನೆ.

ಟಿಕೆಟ್ ವಗೈರೆ ದರಗಳು.

ರಾಜಕೀಯ ಆಹ್ವಾನ ಮಂಡಲಿಯ ಸದಸ್ಯರಾಗಲು, ೧ನೇ ತರಗತಿ ರೂ. ೨೫ಗಳಿಗೆ ಮೇಲ್ಪಟ್ಟು, ೨ನೇ ತರಗತಿ ರೂ. ೧೫ರ ಮೇಲ್ಪಟ್ಟು, ಡೆಲಿಗೇಟರಿಗೆ ರೂ. ೩, ಪ್ರೇಕ್ಷಕರಿಗೆ. ಗೃಹಸ್ಥರು, ರೂ. ೫; ರೂ. ೩; ರೂ ೧, ಸ್ತ್ರೀಯರು, ರೂ, ೧, ೦-೮-೦. ಭೋಜನ ವಗೈರೆ ದಿನ ಒಂದಕ್ಕೆ ರೂ. ೧-೮-೦, ಇಳಿಯುವ ಜಾಗಕ್ಕೆ (೧೯ರಿಂದ ೨೪ ವರೆಗೆ) ರೂ. ೧-೦-೦,

ಕೃ. ತಿ. ಶ್ರೀನಿವಾಸಾಚಾರ್ಯ.
ಡಿ. ಯಸ್. ಹನುಮಂತರಾಯರು,
ಟಿ. ಎಚ್. ಎಂ ಚಂದ್ರಶೇಖರ ಶಾಸ್ತ್ರಿ.

ಬಳ್ಳಾರಿ, ಕಾರ್ಯದರ್ಶಿಗಳು ಆಹ್ವಾನ ಮಂಡಲಿ.
೧-೫-೨೬. ೪ನೇ ಕರ್ನಾಟಕ ಪ್ರಾಂತೀಕ ಮಹಾ ಸಭಾ.

OFFICE OF THE PRESIDENT VIRAJPET MUNICIPALITY.

Dated the 26th April 1926.

Applications are invited from persons duly qualified to audit the accounts of the Municipality for the year 1925-26. Applications mentioning qualifications of Auditor and remuneration required should reach the Municipal Office not later than 5 P. M. on the 22nd May 1926.

The President reserves the right to reject any application, without assigning any reason therefor.

P. J. LOBO.

26—4—1926

PRESIDENT.

FOR SALE.

12 ft English Rover Car, latley over hauled, in good order Owner going to England

Price Rs. 1500 Apply to the CHAPLAIN of MERCARA

3—1

ನೋಟೀಸ್.

ಪಾಡಿನಾಲ್ಕುನಾಡು ತಾಲೋಕುಬಮೀನ್ದಾರರ ಸಂಪದಸ್ವಾಗತ ಕಮಿಟಿಯವರಿಂದ ಈ ತಾಲೋಕಿನ ಎಲ್ಲಾ ಗ್ರಾಮಗಳ ಸ್ವಾಗತದ ಗ್ರಾಮ ಕಮಿಟಿಯವರಿಗೆ ಈ ಮೂಲಕ ತಿಳಿಸುವದೇನೆಂದರೆ,—ಈ ತಾ. 28ನೇ ಶುಕ್ರವಾರ ಮಧ್ಯಾಹ್ನ 1 ಗಂಟೆಗೆ ನಾಪೋಕ್ಲು ಕಚೇರಿ ಒಳ ಸ್ವಾಗತದ ಎಲ್ಲಾ ಲೆಕ್ಕಗಳನ್ನು ಚರ್ಚಿಸಿ, ಉಳಿಕೆಯಿರುವ ಹಣದ ವಿಲೆವಾರಿ ಮಾಡುವುದಕ್ಕಾಗಿ ಸ್ವಾಗತ ಕಮಿಟಿಯವರ ಜನರಲ್ ಮೀಟಿಂಗ್ ಆಗುವುದರಿಂದ, ಎಲ್ಲಾ ಗ್ರಾಮ ಕಮಿಟಿಯವರು ಆವರವರ ರಶೀತಿ ಪುಸ್ತಕ ಮತ್ತು ಲೆಕ್ಕ ಸಹಿತ ಮೀಟಿಂಗಿಗೆ ದಯಮಾಡಿಸಬೇಕಾಗಿ ಕೋರುತ್ತೇವೆ. ರಶೀತಿ ಪುಸ್ತಕಗಳನ್ನು ಹಾಜರು ಪಡಿಸದ ಮತ್ತು ಲೆಕ್ಕಗಳನ್ನು ಒಪ್ಪಿಸದ ಕಮಿಟಿ ಮೆಂಬರುಗಳ ಮೇಲೆ ತಕ್ಕ ಕ್ರಮ ಜರಗಿಸಲಾಗುವುದು

ತಾ 1—5—26. ಕ. ಪಿ ಚಿಣ್ಣಪ್ಪ,
2—1. ಸ್ವಾಗತದ ಜನರಲ್ ಸೆಕ್ರೆಟರಿ.

ಬೆಸ್ಟ ಲೀವರ್ ಪಾಕೆಟ್ ವಾಚ್.

ಈ ಗಡಿಯಾರವು ಉತ್ತಮವಾದ ಸಾಮಾನುಗಳಿಂದ ತಯಾರಿಸಲ್ಪಟ್ಟದ್ದು. ನೋಟಕ್ಕೆ ಬಹು ಗಂಭೀರವಾಗಿಯೂ ಸುಂದರವಾಗಿಯೂ ಉಳ್ಳದ್ದು ಇದರ ಎಲ್ಲಾ ಸಾಮಾನುಗಳು ಬಹು ನಾಜೂಕಾದ ಯಂತ್ರಗಳಿಂದ ತಯಾರಿಸಲ್ಪಟ್ಟದ್ದು. ಇದನ್ನು ಜೇಬಿನಲ್ಲಿ ಹಾಕಿಕೊಂಡು ಎಷ್ಟು ದೂರ ಓಡಿದಾಗ್ಯೂ ನಿಲ್ಲದೆ ನಡೆಯುತ್ತಿರುವದು. ಇಷ್ಟು ಸುಲಭ ಕ್ರಯಕ್ಕ ಇತರ ಕಂಪೆನಿಯಲ್ಲಿ ದೊರೆಯಲಾರದು

ಇದರ ಕ್ರಯ ರೂ. 4-0-0.

ಸಗೆ ಆಟದ ಮನೆ ಮತ್ತು ದಾಳ.

ಕಾಲ ಕಳೆಯುವದಕ್ಕಾಗಲೀ, ವಿನೋದಕ್ಕಾಗಲೀ, ಆಡುವದಕ್ಕೆ ಇದೊಂದು ತರದ ಆಟವಾಗಿರುವದ. ಅನೇಕ ತರದ ಕಳಲಾತ್ ಬನಾತುಗಳಿಂದ ಆಟದ ಮನೆಗಳನ್ನು ಹೊಲದಿರುತ್ತೆ. 4 ಬಣ್ಣಗಳ 16 ಪಗಡೆ ಕಾಯಿಗಳು ಮತ್ತು ದಾಳಗಳು ಸಹ ಇರುವದು. ಸೆಟ್ 1ಕ್ಕೆ (0—10—0.)

ವಿಳಾಸ—

ಎಲ್ಜಿನ್ ವಾಚ್ ಕಂಪೆನಿ,
ಪಿ ಬಿ. ನಂಬರ್ 1251
ಮದರಾಸು.

ಹಿಂದೂದೇಶದ ಜೀವವಿಮೆಯಲ್ಲಿ ಒಂದು ಮಹತ್ತಾದ ಕಾರ್ಯಸಾಧನ

ಹೊಸದಾಗಿ ಜೀವವಿಮೆ ಆದುದು	1923ರಲ್ಲಿ	ರೂ. 1,74,04,000	ಜಾಸ್ತಿ ರೂ 63,30,000
	1924 "	" 2,37,34,000	
	1925 "	" 2,96,42,000	" " 59,08,000

ಈ ಮೂರು ವರ್ಷಗಳಲ್ಲಿ ಕಂತುಗಳ ಆದಾಯವು ರೂ. 18,55,000 ರಿಂದ ರೂ. 92,66,000ಕ್ಕೆ ಜಾಸ್ತಿಯಾಗಿರುತ್ತದೆ.

" ಜೀವವಿಮೆಯ ಮೂಲಧನವು " 1,42,76,000 " " 6,69,54,000ಕ್ಕೆ "

" ಜಾರಿಯಲ್ಲಿರುವ ಪಾಲಿಸಿ ಪತ್ರಗಳು 16,530ಕ್ಕೆ ರೂ. 4,32,71,000 ಇದ್ದುದು ಈಗ 1,01,458 ಪಾಲಿಸಿ ಪತ್ರಗಳಿಗೆ ರೂ. 21,26,12,000ಕ್ಕೆ ಜಾಸ್ತಿಯಾಗಿರುತ್ತದೆ.

ಕಳೆದ ಲೆಖ್ಖಾಚಾರದ ಪ್ರಕಾರ ಪಾಲಿಸಿಗಳ ಮೇಲೆ ಜಾಸ್ತಿ ಬೋನಸ್ ದರವು ಈ ಕೆಳಗೆ ನಮೂದಿಸಿರುವ ರೀತಿಯಲ್ಲಿ ಹಂಚಲ್ಪಟ್ಟಿರುತ್ತದೆ.

ಜೀವಮಾನಾವಧಿಯ ವಿಮೆಗಳಿಗೆ ರೂ. 1000 ವಿಮೆ ಹಣಕ್ಕೆ ಒಂದು ವರ್ಷಕ್ಕೆ ರೂ. 22½.

ಕ್ಲಪ್ತಕಾಲದ ವಿಮೆಗಳಿಗೆ " 1000 " " " 18.

ಓರಿಯಂಟಲ್ ಗವರ್ನಮೆಂಟ್ ಸೆಕ್ಯೂರಿಟಿ ಲೈಫ್ ಅಶ್ಯೂರೆನ್ಸ್ ಕಂಪೆನಿಯ ಕಾರ್ಯದ ಫಲಿತಾಂಶಗಳೇ ಇವು.

ಸ್ಥಾಪಿತವಾದುದು 1874ರಲ್ಲಿ. ಹೆಡ್ ಆಫೀಸು, ಬೊಂಬಾಯಿ.

ಇತರ ಆಫೀಸುಗಳು.

ಅಹಮ್ಮದಾಬಾದ್	ಕಲ್ಕತ್ತ	ಕರಾಚಿ	ಮದ್ರಾಸ್	ಪೂನ
ಅಜ್ಮೀರ್	ಕೊಲಂಬೊ	ಕ್ವಾಲಲಂಪೂರ್	ಮಾಂಡಲೆ	ರಂಗೂನ್
ಅಲಹಾಬಾದ್	ಢಕ್ಕ	ಲಾಹೋರ್	ಮಂಗಳೂರು	ರಾವಲ್‌ಪಿಂಡಿ
ಬೆಂಗಳೂರು	ಡೆಲ್ಲಿ	ಲಖ್ನೌ	ನಾಗಪೂರ್	ತ್ರಿವಾಂಡ್ರಮ್

ನಿಮ್ಮ ಜೀವವಿಮೆಗೆ ಬೇಕಾಗುವ ಎಲ್ಲಾ ವಿಚಾರಗಳಿಗೂ ಮತ್ತು ವಿಮೆಯ ದರಖಾಸ್ತು ಫಾರಂಗಳಿಗೂ ಮೇಲ್ಕಂಡ ಕಂಪೆನಿಯ ಯಾವ ಆಫೀಸಿಗೆ ಬರದುಕೊಂಡರೂ ತಕ್ಷಣವೇ ಕಳುಹಿಸಲ್ಪಡುವುವು.

ಓರಿಯಂಟಲ್ ಬಿಲ್ಡಿಂಗ್ಸ್, ಪೋಸ್ಟು ಬಾಕ್ಸ್ ನಂ.56, ಬೆಂಗಳೂರು.

ಪಿ. ವಿ. ಸುಬ್ರಮಣ್ಯಯ್ಯರ್,
ಬ್ರಾಂಚು ಸೆಕ್ರೆಟರಿ.

ವರ್ತಮಾನ ಸಂಗ್ರಹ.

ಒಳದೇಶ

ಹಾಕತ್ತೂರು ಗ್ರಾಮದ ಮ ಬಿದ್ದಂಡ ಪೂದಪ್ಪನವರು ಈ ತಾ. 3ರಲ್ಲಿ ಶಿವಾಧೀನರಾದರು.

ಮೋಟರ್ ಬಸ್ಸು ಸರ್ವೀಸು ಈಗ ಮೈಸೂರಿನಿಂದ ಬೆಳಿಗ್ಗೆ ಹೊರಟು ಮಧ್ಯಾಹ್ನ ಮಡಿಕೇರಿಗೆ ತಲುಪಿ, ಪುನಃ ಮಡಿಕೇರಿಯಿಂದ ವಾಪಸು ಹೊರಟು ಸಾಯಂಕಾಲ ಮೈಸೂರು ತಲುಪುತ್ತದೆ.

ಬ್ರೀಚ್ ಆಫ್ ಕಂಟ್ರಾಕ್ಟು ಆಕ್ಟಿನ ಮೊಕದ್ದಮೆಗಳನ್ನು ವಿಚಾರಿಸಲು ಸೋಮವಾರಪೇಟೆ, ಪೊನ್ನಂಪೇಟೆ, ವೀರಾಜಪೇಟೆ ಮತ್ತು ನಾಪೋಕ್ಲು ಮುನಸೀಫರಿಗೂ ಅಧಿಕಾರವು ಕೊಡಲಾಗಿದೆ.

ತಾ. 1ರಲ್ಲಿ ಮಡಿಕೇರಿಯಲ್ಲಿ ಮೃತಪಟ್ಟ ಮ ಅಜ್ಜಮಾಡ ಉತ್ತಯ್ಯನವರ ಶವವು ಆ ದಿನವೇ ಶ್ರೀಮಂಗಲನಾಡು ಬೀರುಗ ಗ್ರಾಮದಲ್ಲಿರುವ ಅವರ ಮನೆಗೆ ಒಯ್ಯಲ್ಪಟ್ಟು ಅಲ್ಲಿ ದಫನ್ ಮಾಡಲಾಯಿತು.

ತಾ 30—4—26ರಲ್ಲಿ ಮಡಿಕೇರಿಯ ದೇವಾಂಗ ಸಮಾಜದವರು ಗುಬ್ಬಿ ನಾಟಕ ಕಂಪನಿಯ ಮ.. ಮಲ್ಲಪ್ಪನವರಿಗೂ, ಈ ತಾ 2ರಲ್ಲಿ ಸೀರಕ್ಷೈಮರು ಮ ಗುಬ್ಬಿ ವೀರಣ್ಣನವರಿಗೂ ಬಂಗಾರದ ಪದಕಗಳನ್ನು ಬಹುಮಾನವಾಗಿ ಕೊಟ್ಟರು.

ಮ ಯೇಟ್ಸ್ ರವರು ರಜೆಯಲ್ಲಿ ಇಂಗ್ಲೆಂಡಿಗೆ ಹೋಗಿರುವುದರಿಂದ ಅವರು ಕೊಡಗು ಕೌನ್ಸಿಲು ಮೆಂಬರುತನಕ್ಕೆ ರಾಜೀನಾಮೆ ಕೊಟ್ಟಿರುವರು. ಅವರ ಬದಲಿಗೆ ಹೊಸ ಇನ್ಸ್ಪೆಕ್ಟರಾದ ಮ. ನಾಂದರ್ಗರವರು ಕೌನ್ಸಿಲ್ ಮೆಂಬರಾಗಿ ನೇಮಿಸಲ್ಪಟ್ಟಿರುವರು.

ಉತ್ತರ ಕೊಡಗಿನ ಪೊಲೀಸ್ ಸರ್ಕಲ್ ಇನ್ಸ್ಪೆಕ್ಟರಾಗಿರುವ ಮ. ಗಡಿಕೇರಿಯಂಡ ಚಿಣ್ಣಪ್ಪನವರು ಪ್ರಾಸಿಕ್ಯೂಟಿಂಗ್ ಸಬ್ ಇನ್ಸ್ಪೆಕ್ಟರಾಗಿಯೂ, ಪ್ರಾ. ಸಬ್ ಇನ್ಸ್ಪೆಕ್ಟರಾಗಿರುವ ಮ. ಬಿಟ್ಟಿಯಂಡ ಕುಟ್ಟಪ್ಪನವರು ಸರ್ಕಲ್ ಇನ್ಸ್ಪೆಕ್ಟರಾಗಿಯೂ ನೇಮಿಸಲ್ಪಡುವರೆಂಬ ವರ್ತಮಾನ.

ತಾ 1 ರಿಂದ ಒಂದು ತಿಂಗಳ ವರೆಗೆ ಪ್ರಯಾಣಿಕರನ್ನು ಕರೆದುಕೊಂಡು ಹೋಗತಕ್ಕಂತೆ ಕೊಡಗು ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರಿಂದ ಮೆಯಿಲ್ ಬಸ್ಸ್ ಕಂಟ್ರಾಕ್ಟರ್ ಮ. ಪಿ ಬಾಲಂಜಯನವರಿಗೆ ಹುಕುಂ ಒಂದು ಆಗಿ ಆದೇ ದಿನ ಸಾಯಂಕಾಲ ಆ ಹುಕುಮನ್ನು ರದ್ದಾಯಿತೆಂದು ತಿಳಿಯುತ್ತೇವೆ.

ಮ ಇ. ಸಿ ಉಡ್ ಐ. ಸಿ. ಯಸ್ ರವರು ಮಲಬಾರಿನಿಂದ ತಾ 3ರಲ್ಲಿ ಮಡಿಕೇರಿಗೆ ಬಂದು ತಾ. 4ರಲ್ಲಿ ಕಮಿಷನರ್ ಹುದ್ದೆಯ ಚಾರ್ಜನ್ನು ತೆಗೆದುಕೊಂಡರು. ಮ ಟಿ ಜೆ ಟಾಸ್ಕರ್ ಒ ಬಿ ಇ., ಐ ಸಿ ಯಸ್. ರವರು 4 ತಿಂಗಳು 12 ದಿವಸ ರಜೆಯಲ್ಲಿ ಮಡಿಕೇರಿಯಿಂದ ತಾ 5ರಲ್ಲಿ ಇಂಗ್ಲೆಂಡಿಗೆ ಹೊರಟು ಹೋದರು.

ತಾ 6—5—1926ರಲ್ಲಿ ಕೊಡಗು ಕೋಆಪರೇಟಿವ್ ಸೆಂಟ್ರಲ್ ಬ್ಯಾಂಕಿನ ಡೈರೆಕ್ಟರುಗಳ ಓಟಿಂಗು ನಡೆದು, ಕಿತ್ತೂರು ಸೊಸೈಟಿಗೆ 750. ರೂ ಚಿಕ್ಕಭಂಡಾರ ಸೊಸೈಟಿಗೆ 400ರೂ ಹುತ್ತರಿ ಸೊಸೈಟಿಗೆ 700 ರೂ. ಕಂಗಳತ್ತನಾಡು ಸೊಸೈಟಿಗೆ 1500 ರೂ ಕೊಡಮಕೇರಿ ಸೊಸೈಟಿಗೆ 1000 ರೂ ನಲ್ವತ್ತೊಕ್ಲು ಸೊಸೈಟಿಗೆ 500 ರೂ ಕೋತೂರು ಸೊಸೈಟಿಗೆ 2030 ರೂ ಬಲಮುರಿ ಸೊಸೈಟಿಗೆ 1003 ರೂ. ಕುಪ್ಪಂಡ ಮನೆ ಫಂಡಿಗೆ 750 ರೂ. ಸಾಲ ಮಂಜೂರಾಗಿದೆ

ದಕ್ಷಿಣ ಕೊಡಗಿನ ಸುಪೀರಾದರಾಗಿರುವ ಮ. ಕೀತಿಯಂಡ ಕಾಳಪ್ಪನವರು ಪುನಃ ಸಬ್ ಜಡ್ಜಿಯವರ ಕೋರ್ಟ್ ಶಿರಸ್ತೇದಾರರಾಗಿಯೂ, ಶಿರಸ್ತೇದಾರರಾಗಿರುವ ಮ. ಕೀತಿಯಂಡ ಬೆಳ್ಯಪ್ಪನವರು ಸೋಮವಾರಪೇಟೆ ಪಾರುಪತ್ಯಗಾರರಾಗಿಯೂ ಅಲ್ಲಿ ಪಾರುಪತ್ಯಗಾರರಾಗಿರುವ ಮ. ಚಂಗಪ್ಪಯವರು ದಕ್ಷಿಣ ಕೊಡಗು ಸುಪೀರಾದರಾಗಿಯೂ ನೇಮಿಸಲ್ಪಡುವರಾಗಿ ವರ್ತಮಾನ.

ಈ ತಾ. 22ರಲ್ಲಿ ಪಾಡಿ ಸುಬ್ರಮಣ್ಯ ದೇವರ ಭಕ್ತಜನ ಸಂಘದವರು ಇಗ್ಗುತಪ್ಪ ದೇವಸ್ಥಾನದಲ್ಲಿ ಸಂಘದ 7ನೇ ವರ್ಷಾಂತಿ ಆರಾಧನೆಯನ್ನು ಜರುಗಿಸುವುದಕ್ಕೆ ಏರ್ಪಾಟುಗಳನ್ನು ಮಾಡಲು ನಿಶ್ಚೈಸಿರುವರು. ಆ ದಿನ ಸಾಯಂಕಾಲ ಮಕ್ಕಳ ಸ್ಪೋರ್ಟ್ಸ್, ಮಲೇರಿಯಾ ಜ್ವರ ವಗೈರೆ ಕುರಿತು ಕನ್ನಡ ಸ್ಲೈಡುಗಳ ಮ್ಯಾಜಿಕ್ ಲ್ಯಾಂಟರ್ನ್ ಮೂಲಕ ಚಿತ್ರಪಟಗಳನ್ನು ತೋರಿಸುವಂತೆ ರೆಡ್ ಕ್ರಾಸ್ ಸಂಘದ ಸೆಕ್ರಟರಿಯವರನ್ನು ಕೇಳಿಕೊಳ್ಳಲಾಗಿದೆಯಂತೆ.

ತಾ. 4ರಲ್ಲಿ ವೆಸ್ಲಿಯನ್ ಕಾಂಪೌಂಡಿನಲ್ಲಿ ಟೆಂಟಿಸೇರಿಯದ ಹೆಚ್ ಪಟುಣಾಮಿನ ಸ್ಪೋರ್ಟ್ಸ್ ನಡೆಯಿತು. ಆಮಂತ್ರಿಸಲ್ಪಟ್ಟಿದ್ದ ಅತಿಥಿಗಳಿಗೆ ಟೀ ಪಾರ್ಟಿಯೂ ಇತ್ತು. ಈ ವರ್ಷ ಗೆದ್ದ ಜನರ ಕಂಪೆನಿಯು ಆಟೋಟಗಳಲ್ಲಿ 8ರಲ್ಲಿ 6 ಆಟ್ಟಗಳ ಬಹುಮಾನವನ್ನು ಗೆದ್ದರು. ಮಿಸೆಸ್ ಸ್ಕ್ರಾಟರವರು ಗೆದ್ದವರಿಗೆ ಬಹುಮಾನಗಳನ್ನು ಹಂಚಿದರು. ಆ ದಿನ ರಾತ್ರಿ ಸಿಪಾಯಿಗಳಿಗೂ ಮರುದಿನ ರಾತ್ರಿ ಆಫೀಸರುಗಳಿಗೂ, ಔತಣ ಕೊಡಲಾಯಿತು. ಈ ಔತಣದ ಖರ್ಚಿಗಾಗಿ ಪಬ್ಲಿಕಿನ ಕೆಲವರಿಂದ ಕಮ್ಮಿ 25 ರೂ ದರದಲ್ಲಿ ಚಂದಾ ಎತ್ತಲ್ಪಟ್ಟಿತು.

ಮ. ಕೋಡಿರ ಚಿಣ್ಣಪ್ಪನವರು ಮತ್ತು ಮ.. ಬಿದ್ದಂಡ ಬೋಪಯ್ಯನವರು ದಾವಾ ಮಾಡಿರುವ ಮಾನ ನಷ್ಟದ ಕ್ರಿಮಿನಲ್ ಮೊಕದ್ದಮೆಗಳು ತಾ 4ರಲ್ಲಿ ಸಬ್ ಜಡ್ಜ್ ಕೋರ್ಟಿನಲ್ಲಿ ವಿಚಾರಕ್ಕಿದ್ದವು, ಈ ತಾ. 25ಕ್ಕೆ ಅಡ್ಜರ್ನ್ ಆಗಿದೆ. ಈ ಮೊಕದ್ದಮೆಗಳನ್ನು ಈ ಕೋರ್ಟಿನಿಂದ ಬೇರೆ ಕೋರ್ಟಿಗೆ ವರ್ಗಾಯಿಸುವಂತೆ ಚೀಫ್ ಕಮಿಷನರಿಂದ ಹುಕುಂ ಕಳಿಸುವ ಬಗ್ಗೆ ಸಿವಿಲ್ ಕೋರ್ಟ್ ಕೇಳಿದನಂತರ (ತಾ 7-4-26ರ ನಂತರ) ಮೇಲಿನ ದಾವೆಗಳ ವರ್ಗ ಮಾಡಿಸಿಕೊಡಬೇಕೆಂತ ಮ. ಚಿಣ್ಣಪ್ಪನವರು ಅರ್ಜಿ ಒದಗಿಸಿದರೆ ಮೂರು ವಾರ ಮಾತ್ರ ಸೇವಕರುಗಳನ್ನು ಮ ಬದಲಿಸಿಟ್ಟಿದ್ದಾರೆ.

ಹಿಂದೂದೇಶ.

ಮಲಬಾರಿನಲ್ಲಿ ಮಾಪಿಳ್ಳೆಗಳ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಹೈದರಾಬಾದಿನ ನೈಜಾಮರು 50,000 ರೂ ಉಚಿತವಾಗಿ ಕೊಟ್ಟಿರುವರು.

ಎಗ್ರಿಕಲ್ಚರಲ್ ಕಮಿಷನಿನ ವಿಷಯ ಆಲೋಚನೆಕೊಡಲಿಕ್ಕಾಗಿ ಮಹಾತ್ಮಾ ಗಾಂಧಿಯವರು ಬೊಂಬಾಯಿ ಗವರ್ನರರ ಕೋರಿಕೆ ಮೇರೆ ಅವರನ್ನು ಕಾಣಲು ತಾ. 5ರಲ್ಲಿ ಸಬರಮತಿಯಿಂದ ಬೊಂಬಾಯಿಗೆ ಹೊರಡಲಿಕ್ಕಿದ್ದರು.

ಕಲ್ಕತ್ತೆಯ ಸ.ಬಾಸ್ ಚಂದ್ರಬೋಸ್‌ರವರು “ಇಂಗ್ಲಿಷ್ ಮ್ಯಾನ್” ಮತ್ತು ‘ಸ್ಟೇಟ್ಸ್‌ಮನ್’ ಪತ್ರಿಕೆಗಳ ಮೇಲೆ ದಾಖಲುಮಾಡಿದ್ದ ಮಾನನಷ್ಟದ ಮೊಕದ್ದಮೆಗಳಲ್ಲಿ ಆ ಪತ್ರಿಕೆಗಳ ಸಂಪಾದಕರು 2000 ಮತ್ತು 4000 ರೂ ನಷ್ಟಪರಿಹಾರ ಬೋಸರವರಿಗೆ ಕೊಡುವಂತೆ ತೀರ್ಪಾಯಿತು.

ಅಮೇರಿಕಾದಲ್ಲಿರುವ ಲಾರೆನ್ಸ್ ಎಗ್ರಪಿಡಲ್ಲಿ ‘ನೀವು ಕತ್ತಿಯಿಂದಲೋ ಬಂದೂಕಿನಿಂದಲೋ ಕೊಲ್ಲುವಿರೋ’ ಎಂದು ಒಂದು ಶಿಕ್ಷಾರ್ಥಿ ಪ್ರಶ್ನೆ ಮಾಡಿದ್ದಕ್ಕೆ ಆತನು ‘ನೇಣು’ ಎಂದು ಉತ್ತರ... ಹಾಕುವುದು ಬೇಡ; ಅದನ್ನು ಕತ್ತಿ ಮತ್ತು ಲೇಖನಿಯಿಂದ ನಿಮ್ಮ ಸೇವೆ ಪಡೆದೇನು, ಎಂದು ಸರ್ಕಾರದವರು ತಿದ್ದಿ ಬರೆದನ್ನು ಕೈಬಿಟ್ಟು ಪಡಿಸಿರುವರು.

ಹಾಲಿ ವೈಸರಾಯರಾದ ಲಾರ್ಡ್ ಇರ್ವಿನ್‌ರವರು ಹಿಂದೂದೇಶದ ರಾಜಕೀಯ ಪರಿಸ್ಥಿತಿಯನ್ನು ಚೆನ್ನಾಗಿ ಅರಿತುಕೊಳ್ಳಲು ಪ್ರಯತ್ನಿಸುತ್ತಿರುವರು. ಪ್ರಾಮುಖ್ಯ ಮುಖಂಡರುಗಳ ಸಂಗಡ ಸಂಭಾಷಣೆ ಮಾಡಿರುವುದಲ್ಲದೆ ಮಹಾತ್ಮಾ ಗಾಂಧಿಯವರ ಸಂಗಡ ಬೇಗನೆ ಸಂಭಾಷಣೆ ನಡೆಸುವರೆಂಬ ವರ್ತಮಾನ ಇದೆ.

ಸ್ವರಾಜ್ಯವಾದಿಗಳಿಗೂ ರೆಸ್ಪಾನ್ಸಿವ್ ಪಾರ್ಟಿಯವರಿಗೂ ಒಪ್ಪಂದದ ಶರತ್ತುಗಳು ಒಪ್ಪಿಕೊಂಡವರಿಂದ ಸಬರಮತಿ ಒಪ್ಪಂದವು ಮುರಿದುಹೋಯಿತು. ಅಖಿಲಭಾರತ ಕಾಂಗ್ರೆಸ್ ಕಮಿಟಿಯಿಂದಲೂ ರೆಸ್ಪಾನ್ಸಿವ್ ಪಂಗಡದವರು ಹೋಗಲಿಲ್ಲ ಇಲ್ಲ.

ಮದ್ರಾಸು ಅಧಿಸಿಕ್ಕಿದಲ್ಲಿ ಸರ್ಕಾರಿ ಉದ್ಯೋಗಕ್ಕೆ ಹೋಗುವ ಉಮೇದುವಾರರು ಮುಂತಾದ ಮೊದಲಾದ ದೊಡ್ಡ ಅಧಿಕಾರಿಗಳಿಂದ ಸಿಫಾರಸು ಪತ್ರಗಳನ್ನು ತೆಗೆದುಕೊಂಡು ಹೋಗಕೂಡದೆಂದೂ ಹಾಗೆ ತೆಗೆದುಕೊಂಡು ಹೋದರೆ ಅಂಥ ಅರ್ಜಿಗಳು ತಿರಸ್ಕರಿಸಲ್ಪಡುವವೆಂದೂ ಸರ್ಕಾರದವರು ಸರ್ಕ್ಯೂಲರ್ ಹೊರಡಿಸಿರುವರು.

ಮೈಸೂರು ಸರ್ಕಾರದವರು ಹಾಕಿರುವ ಕಾಫಿ ಸೆಸ್ಸಿನ ವಿಷಯ ಮಹಾರಾಜರವರಿಗೆ ರೆಪ್ರಸೆಂಟೇಶನ್ ಕಳುಹಿಸುವುದನ್ನು ಪ್ಲಾಂಟರುಗಳಿಗೆ ಒಂದು ಬ್ಯಾಂಕನ್ನು ಏರ್ಪಡಿಸುವುದನ್ನು ಚರ್ಚೆಸಲಿಕ್ಕಾಗಿ ತಾ 20 ರಲ್ಲಿ ಚಿಕ್ಕಮಗಳೂರಿನಲ್ಲಿ ಮ. ದಿ ಒ ಕ ಪಿ ಪುಟ್ಟಣ್ಣ ಚೆಟ್ಟಿಯವರ ಅಧ್ಯಕ್ಷತೆಯಲ್ಲಿ ಮೈಸೂರು ಇಂಡಿಯನ್ ಕಾಫಿಪ್ಲಾಂಟರುಗಳ ಕಾನ್ಫರೆನ್ಸು ನಡೆಯಲಿಕ್ಕಿದೆ.

ಕಳೆದ ಆದಿತ್ಯವಾರ ಬೊಂಬಾಯಿಯಲ್ಲಿ ನಡೆದ ಬ್ರಾಹ್ಮಣೇತರರ ಕಾನ್ಫರೆನ್ಸಿನಲ್ಲಿ ವಿಷಯ ನಿರ್ಧಾರಕ ಕಮಿಟಿಯ ಮೆಂಬರುಗಳ ಚುನಾವಣೆಯಲ್ಲಿ ಪಕ್ಷದ ಪ್ರತಿನಿಧಿಗಳಿಗೂ ಗಣ್ಯರಾಗರಿಂದಲೂ ಬಂದ ಹಲಿಗೇಟರುಗಳಿಗೂ ವಿವಾದವನೆದು ತುಂಬಾ ಗಲಾಟೆಯುಂಟಾಯಿತು. ರಾತ್ರಿ ಬಹಳ ಹೊತ್ತಿನ ನಂತರ ಅಧ್ಯಕ್ಷರು ಚಮತ್ಕಾರದಿಂದ ಸಮಾಧಾನಗೊಳಿಸಿ ವಿಷಯಗಳನ್ನು ಮುಂದರಿಸಿದರು.

ವಿದೇಶ.

ಫ್ರೆಂಚ್ ಮತ್ತು ಸ್ಪೇನಿನ ಕೌಲಿನ ಶರತ್ತುಗಳನ್ನು ರಿಫ್ ಜನರ ಮುಖಂಡನಾದ ಅಬ್ದುಲ್ ಕರೀಮ್‌ರವರು ಒಪ್ಪುವ ಸಂಭವ ಕಾಣುವುದಿಲ್ಲವಂತೆ.

ಪಾರ್ಲಿಮೆಂಟಿನ ಇಂಡಿಯನ್ ಮೆಂಬರಾದ ಮ.. ಸಕ್ಲಾತವಾಲರವರು ಹೈಡ್ ಪಾರ್ಕಿನಲ್ಲಿ ಮಾಡಿದ ಒಂದು ಭಾಷಣವು ರಾಜದ್ರೋಹಕರವಾದದೆಂದು ಅವರನ್ನು ದಸ್ತಗಿರಿಮಾಡಿ ಜಾಮೀನಿನ ಮೇಲೆ ಬಿಟ್ಟಿರುವರು.

ಆಸ್ಟ್ರೇಲಿಯದ ನ್ಯೂ ಸೌತ್ ವೇಲ್ಸಿನಲ್ಲಿ ಇಂಜಿನಿಯರಿಂಗ್ ವರ್ಕ್‌ಶಾಪುಗಳಲ್ಲಿ ಒಬ್ಬರು ವಾರಕ್ಕೆ 44 ಗಂಟೆ ಮೇಲೆ ಕೆಲಸಮಾಡಲಿಕ್ಕಾಗುವುದಿಲ್ಲವೆಂದು ತೀರ್ಮಾನಿಸಿದುದರಿಂದ 500 ವರ್ಕ್‌ಶಾಪುಗಳಲ್ಲಿ 40000 ಜನರನ್ನು ಕೆಲಸದಿಂದ ತೆಗೆದುಹಾಕಿರುವರು.

ಇಂಗ್ಲೆಂಡಿನಲ್ಲಿ ಕಲ್ಲಿದ್ದಲು ಗಣಿಗಳಲ್ಲಿ ಕೆಲಸಮಾಡುವವರಿಗೂ ಯಜಮಾನರಿಗೂ ಸಂಬಳದ ವಿಷಯ ನಡೆಯುತ್ತಿದ್ದ ವಿವಾದವು ಇನ್ನೂ ನಿಂತಿರುವುದಿಲ್ಲ. ಸರ್ಕಾರದ ಅಧಿಕಾರಿಗಳಿಂದಲೂ ಇದನ್ನು ಸಮಾಧಾನಪಡಿಸಲು ಸಾಧ್ಯವಾಗಲಿಲ್ಲ. ತಾ. 3ರಲ್ಲಿ ಇಡೀ ದೇಶದಲ್ಲಿ ಆ ಕೆಲಸಗಾರರು ಕೆಲಸಕ್ಕೆ ಹೋಗದೆ ಮುಷ್ಕರ ಹೂಡಿದರು. ಸುಮಾರು ಒಂದು ಮಿಲಿಯ ಜನರು ಕೆಲಸವಿಲ್ಲದೆ ಸುಮ್ಮನಿರುವರು. ಈ ಮುಷ್ಕರದ ಈ ಗಣಿಗೆ ಸಂಬಂಧಪಟ್ಟ ಸುಮಾರು ಒಂದೂವರೆಮಿಲಿಯ ಕೆಲಸಗಾರರಿಗೆ ಹರಡಲಿಕ್ಕಿದೆ. ಇದರ ಫಲಿತಾಂಶವಾಗಿ ಇಡೀ ಇಂಗ್ಲೆಂಡಿನಲ್ಲಿ ವರ್ತಮಾನ ಪತ್ರಿಕೆಗಳೇ ಪ್ರಕಟವಾಗುತ್ತಿರುವದಿಲ್ಲವೆಂದು ಸುದ್ದಿ. ಪಾರ್ಲಿಮೆಂಟಿನವರು ಈ ವಿಷಯ ಚರ್ಚಿಸುತ್ತಿರುವರು.

ಮಾರಾಟಕ್ಕೆ!

ಒಳ್ಳೆ ಸಮಯ! ಭದ್ರವಾದ ಆಸ್ತಿ! ಸುಲಭ ಕ್ರಯ.

ಇದರಿಂದ ಸಮಸ್ತ ಜನರಿಗೂ ತಿಳಿಯಪಡಿಸುವುದೇನೆಂದರೆ— ಟಿ ಸಿ ರುಕ್ಮಣಿಯಮ್ಮನಾದ ನಾನು ಮಡಿಕೇರಿಯಲ್ಲಿರುವ ಈ ಕೆಳಗೆ ಕಂಡ ನನ್ನ ಸ್ವಂತ ಆಸ್ತಿಗಳನ್ನು ಮಾರಲು ತಯಾರಿದ್ದೇನೆ. ಖಾಯಿಷ್‌ದಾರರು ಆಸ್ತಿಯನ್ನು ನೋಡಿಕೊಂಡುಕೊಳ್ಳಬಹುದು. ಹೆಚ್ಚಿನ ವಿವರವು ಈ ಕೆಳಗಿನ ಈ ದೈಸಿನವರಾದ ನನ್ನಿಂದ ರೂಬರೂ ತಿಳಿಯಲಾಗುವುದು.

ಆಸ್ತಿಯ ತಪಶೀಲ್

1 ಸಾಮ್ಸನ್ಸ್ ರೋಡಿನಲ್ಲಿ ನಾನು ವಾಸವಿರುವ ಮನೆ 1. (ಯುನೈಟೆಡ್ ಕ್ಲಬ್ಬಿನ ಪಕ್ಕದ)

2 ಗಣಪತಿ ಬೀದಿಯಲ್ಲಿ ನಂ. 6ನೇ ಸಾರಾಯಿ ಅಂಗಡಿ ಇಟ್ಟಿರುವ ಮನೆ 1.

3 ಗಣಪತಿ ಬೀದಿಯಲ್ಲಿ ಬಿ ಮಂಜಪ್ಪನವರು ಹೋಟೇಲ್ ಇಟ್ಟಿರುವ ಮನೆ 1

ಟಿ. ಸಿ. ರುಕ್ಮಣಿಯಮ್ಮ,

2 1 ಸಾಮ್ಸನ್ಸ್ ರೋಡ್,

ಮಡಿಕೇರಿ.

ಪತ್ರವ್ಯವಹಾರ

ಚಾತ್ರಿದಾರರು ನಡುವೆ ಅಭಿಪ್ರಾಯಗಳಿಗೆ ಪತ್ರಿಕಾ ಕರ್ತರು ಉತ್ತರವಾದಿಗಳಲ್ಲ. ಸಂ.

ಸ್ತ್ರೀವಿದ್ಯಾಭ್ಯಾಸ

ಮಹಾಶಯರೇ —

ನಾನು ಎರಡು ವಾರಗಳ ಹಿಂದಿನ ಪತ್ರಿಕೆಯಲ್ಲಿಯೂ ಕಳೆದ ವಾರದ ಪತ್ರಿಕೆಯಲ್ಲಿಯೂ ಸ್ತ್ರೀವಿದ್ಯಾಭ್ಯಾಸ ಮತ್ತು ಅವರ ಕರ್ತವ್ಯದ ವಿಷಯ ಯಾರೋ ಇಬ್ಬರು ಬರದುತ್ತ ಅವರರಿಗೆ ತಿಳಿದ ಮಟ್ಟಿಗೆ ವಿಮರ್ಶಿಸಿದ್ದನ್ನು ಓದಿನೋಡಿ ಸಂತೋಷಪಟ್ಟೆನು.

ಎಲ್ಲಾ ಜನರಲ್ಲಿಯೂ ಸಾಮಾನ್ಯವಾಗಿ ಮಕ್ಕಳು ಹುಟ್ಟಿದಂದಿನಿಂದ ತಾಯಿ ಇಲ್ಲವೆ ದಾದಿ ಇವರ ಬಳಿಯಲ್ಲಿರುತ್ತಾರೆ. ಈ ಹೆಂಗಸರು ಅವಿದ್ಯಾವಂತೆಗಳಾಗಿದ್ದರೆ, ಮಕ್ಕಳು ವಿಳೆಗೆ ಬರುವುದು ಹೇಗೆ? ಹೀಗಲ್ಲದೆ ಅವರು ವಿದ್ಯಾವತಿಯರಾಗಿದ್ದರೆ ತಮ್ಮ ಮಕ್ಕಳನ್ನು ಉತ್ತಮರೀತಿಯಲ್ಲಿ ಶಿಕ್ಷಿಸುವರು. ಮಕ್ಕಳು ಸಾಮಾನ್ಯವಾಗಿ ಇತರರು ನಡೆವಂತೆ ನಡೆವ ಸ್ವಭಾವವುಳ್ಳವರು. ಸ್ತ್ರೀಯರು ವಿದ್ಯಾವತಿಯರಾಗಿ ಸನ್ಮಾರ್ಗದಲ್ಲಿ ನಡೆದರೆ, ಅವರಂತೆಯೇ ಅವರ ಮಕ್ಕಳು ನಡೆದುಕೊಂಡು ಮುಂದಕ್ಕೆ ಒಳಿತಾಕುವುವು. “ತಾಯಿಯಂತೆ ಮಗಳು ನೂಲಿನಂತೆ ಸೀರೆ” ಎಂಬ ಗಾದೆಯು ಬಲು ಪ್ರಸಿದ್ಧವಷ್ಟೆ. ಮನುಷ್ಯನ ಬುದ್ಧಿಯೂ ಗುಣವೂ ತನ್ನ ತಾಯಿಯು ಗರ್ಭದಲ್ಲಿರುವಾಗಲೇ ರೂಪುಗೊಳ್ಳುವುವೆಂತಲೂ, ಈ ಗುಣಗಳ ಸ್ವರೂಪವು ಬಹು ಕರವಾಗಿ ತಾಯಿಯ ಗುಣಗಳನ್ನೇ ಅನುಸರಿಸುತ್ತದೆಯೆಂತಲೂ ಶಾಸ್ತ್ರಜ್ಞರು ನಿಶ್ಚಯಿಸಿರುವರು. ಆದುದರಿಂದ ಹೆಂಗಸರಿಗೆ ವಿದ್ಯೆಕಲಿಸಿ ಜ್ಞಾನಾಭಿವೃದ್ಧಿ ಮಾಡಿದರೆ, ಬುದ್ಧಿವಂತರಾದ ಜನರು ಹುಟ್ಟುವುದು ನಿಶ್ಚಯವೆ.

ಸೀತೆ, ಸಾವಿತ್ರಿ, ದ್ರೌಪದಿ ಮೊದಲಾದವರು ವಿದ್ಯಾವತಿಯರಾಗಿದ್ದರೇ? ಅವರವರ ಮಕ್ಕಳು ವಿದ್ಯಾವಂತರಾಗಿಯೂ ಗುಣಾಢ್ಯರಾಗಿಯೂ ಇದ್ದಿಲ್ಲವೋ? ಎಂದು ಕೆಲವರು ಕೇಳಬಹುದು. ಆದರೆ ಆ ಕಾಲವು ಹಾಗಿದ್ದಿತು. ಆ ಕಾಲವು ಚಿನ್ನದಂಥ ಕಾಲವು. ಈ ಕಾಲವಾದರೋ ಕಲಿಯುಗ, ರೂಪಾಯಿಗೆ 5 ಸೇರು ಅಕ್ಕಿ. ಆ ಕಾಲದಲ್ಲಿ ಸುಮ್ಮನೆ ಮನೆಮನೆಗೆ ಹೋಗಿ ಕೇಳಿದಲ್ಲಿ ಹೊರುವಷ್ಟು ಅಕ್ಕಿ ಕೊಡುತ್ತಿದ್ದರು. ಆದುದರಿಂದ ಕಾಲಕ್ಕೆ ಸರಿಯಾಗಿ ನಡೆಯಬೇಕು. ಈ ನನ್ನಿಂದ ರೀತಿಯಾಗಿ ನೋಡಿದರೆ ಪೂರ್ವಕಾಲದಲ್ಲಿ ಬ್ರಾಹ್ಮ, ಕ್ಷತ್ರಿಯ, ವೈಶ್ಯ, ಶೂದ್ರರೆಂಬ ನಾಲ್ಕು ಪಂಗಡಗಳಿದ್ದುವು. ಅವರವರು ಅವರವರ ಜಾತಿಗೆ ಸಂಬಂಧವಾದ ಕೆಲಸ ಮಾಡುತ್ತಿದ್ದರು. ಬ್ರಹ್ಮ ಎಂದರೆ ಬ್ರಾಹ್ಮಣರು ಪೂಜೆ ಮೊದಲಾದ ಉತ್ತಮಕಾರ್ಯಗಳನ್ನು, ಕ್ಷತ್ರಿಯರು ಯುದ್ಧ ಮೊದಲಾದ ಶೌರ್ಯದ ಕಾರ್ಯಗಳನ್ನೂ, ವೈಶ್ಯರು ವ್ಯಾಪಾರವೂ ಆದ ಕಾರ್ಯಗಳನ್ನೂ, ಶೂದ್ರರು ಬೇಸಾಯ ಮೊದಲಾದ ಕಾರ್ಯಗಳನ್ನೂ ಮಾಡುತ್ತಿದ್ದರು. ಆದರೆ ಈಗಿನ ಕಾಲದಲ್ಲಿ ಆ ರೀತಿಯಾಗಿ ನಡೆದದ್ದೇ ಆದರೆ ತಿನ್ನುವುದಕ್ಕೆ ಅನ್ನ ಕೂಡ ಸಿಕ್ಕುವುದು ದುರ್ಲಭವಲ್ಲವೇ? ಬ್ರಾಹ್ಮಣರು ಕ್ಷತ್ರಿಯರ ಕೆಲಸವಲ್ಲದೆ ವೈಶ್ಯ ಮತ್ತು ಶೂದ್ರರ ಕೆಲಸಗಳನ್ನು ಮಾಡುತ್ತಾರೆ. ಕ್ಷತ್ರಿಯರು ಬ್ರಾಹ್ಮಣರ ಕೆಲಸಗಳಲ್ಲದೆ ಎಲ್ಲಾ ಕೆಲಸಗಳನ್ನು ಮಾಡುತ್ತಾರೆ. ಆಗಿನ ಕಾಲದಲ್ಲಿ ಹಾಗೆ ಮಾಡುತ್ತಿದ್ದರೋ? ಆಗಿನ ಕಾಲದಲ್ಲಿ, ಕ್ಷತ್ರಿಯರು ಎಷ್ಟು ಎದೆಯಿಂದ ಯುದ್ಧಮಾಡುತ್ತಿದ್ದರು. ಈಗಿನ ಕಾಲದಲ್ಲಿ ಕತ್ತಿಯಿಂದ ಯುದ್ಧಮಾಡಿದರೂ ಆವಶ್ಯಕವೆಂತು ಮಾಡುವರು. ಚೆನ್ನಾಗಿ ವಿಚಾರಿಸಿ ನೋಡಿದಲ್ಲಿ ಇದು ನಾಚಿಕೆಯೆಂದು ತೋರದೆ ಇರುವುದಿಲ್ಲವೇ? ಆ ಆ ಕಾಲದಲ್ಲಿ ಹೇಗೆ ನಡೆಯಬೇಕೋ ಹಾಗೆಯೇ ನಡೆಯಬೇಕು. ಆದುದರಿಂದ ಈಗಿನ ಕಾಲದಲ್ಲಿ ಸ್ತ್ರೀಯರಿಗೆ ವಿದ್ಯೆಯನ್ನು ಕಲಿಸಿದರೆ ಆಗಿನ ಕಾಲದ ಕೀರ್ತಿಯನ್ನು ತೆಗೆದುಕೊಳ್ಳಬಹುದು.

ಯೋಗ್ಯರೊಡನೆ ಸಂಭಾಷಣೆಯಿಂದ ಆನಂದವಾಗುವ್ರದು. ಅನೇಕ ವಿಷಯಗಳನ್ನು ಅರಿತ ಹೊರತು ಸಂಭಾಷಣೆಗೆ ಯೋಗ್ಯರೆನಿಸುವುದಿಲ್ಲ. ಅನೇಕ ವಿಷಯ ಮತ್ತು ಜ್ಞಾನವು ವಿದ್ಯೆಯಿಂದಲೇ ಬರುವುದು. ಪ್ರಕೃತಸ್ಥಿತಿಯಲ್ಲಿ ಇಬ್ಬರ ಹೆಂಗಸರು ಸೇರಿದರೆ, ನೆರೆಮನೆಯವರ ದೂರು ಹೊರತು ಪ್ರಯೋಜನಕರವಾದ ಬೇರೆ ವಿಷಯವು ಅವರ ಸಂಭಾಷಣೆಗೆ ದೊರೆಯುವುದಿಲ್ಲ. ಇದಕ್ಕೆ ವಿದ್ಯೆ ಇಲ್ಲದಿರುವುದೇ ಕಾರಣ. ಪುರುಷರು ವಿದ್ಯೆಯಲ್ಲಿ ಶ್ರೇಷ್ಠರಾಗಿ ಹೆಂಗಸರು ಪಶುಗಳಂತೆ ಮೂಢರಾಗಿ ಯಥಾಜಾತರೆನಿಸಿದ್ದರೆ, ಇಬ್ಬರಿಗೂ ಪರಸ್ಪರ ಪ್ರೀತಿ ಹೆಚ್ಚೀತೆ? ಸ್ತ್ರೀಯರೊಡನೆ ಸಂಭಾಷಣೆ ಮಾಡುವುದರಿಂದ ಆನಂದವೂ, ಸ್ತ್ರೀಯರು ಹಿತೈಷಿಗಳಾದ ಮಿತ್ರರಂತೆ ಆಚರಿಸಿ ಪುರುಷರು ಮಾಡುವ ಕೆಲಸಗಳಲ್ಲಿ ಸಹಾಯಕರೂ ಆಗಬೇಕಾದರೆ, ಅವರಿಗೆ ಪುರುಷರಂತೆಯೇ ವಿದ್ಯಾಭ್ಯಾಸದಿಂದುಂಟಾಗುವ ಜ್ಞಾನವೂ, ಯುಕ್ತಾಯುಕ್ತವಿವೇಕವೂ, ಕಾರ್ಯನಿರ್ವಾಹಕ ಶಕ್ತಿಯೂ ಇರಬೇಕು.

ದೇವರ ಸೃಷ್ಟಿಯಲ್ಲಿ ಗಂಡಸರೂ ಹೆಂಗಸರೂ ಒಂದೇ. ಗಂಡಸರಿಗೆ ವಿದ್ಯೆಯನ್ನು ಕಲಿಸಲು ಹೇಗೆ ಸ್ವಭಾವಸಿದ್ಧವಾದ ಬಾಧ್ಯತೆ ಇರುವುದೋ ಹಾಗೆಯೇ ಹೆಂಗಸರಿಗೂ ಇದೆ.

ಆದುದರಿಂದ ಸ್ತ್ರೀಯರಿಗೆ ವಿದ್ಯೆಯನ್ನು ಕಲಿಸದೆ ಮೂಢರನ್ನಾಗಿ ಮಾಡುವುದು ಒಂದು ಅನ್ಯಾಯ. ತಾನು ಸಾಕುವ ಕುದುರೆ ನಾಯಿ ಗಿಳಿ ಮುಂತಾದ ಪ್ರಾಣಿಗಳಿಗೂ ಮನುಷ್ಯನು ತಕ್ಕ ವಿದ್ಯೆಗಳನ್ನು ಕಲಿಸುವನು. ಸ್ತ್ರೀಯರಿಗೆ ವಿದ್ಯೆ ಕಲಿಸದಿರುವುದು ಬಹಳ ಆಶ್ಚರ್ಯವು. ಆದುದರಿಂದ ವಿದ್ಯೆಯನ್ನು ಕಲಿವ ಶಕ್ತಿಯುಳ್ಳ ಸ್ತ್ರೀಯರಿಗೆ ಉಚಿತ ವಿದ್ಯೆಯನ್ನು ಕಲಿಸುವುದು ಭಗವನ್ನಿಯಮಿತವಾದ ಕೆಲಸವೆಂದೇ ತಿಳಿಯಬೇಕು.

ಈ ಕಾರಣಗಳಿಂದಲೇ ಅಮೆರಿಕ, ಯೂರೋಪ್ ಖಂಡಗಳಲ್ಲಿ ಗಂಡಸರಂತೆ ಹೆಂಗಸರಿಗೂ ವಿದ್ಯೆಯನ್ನು ಕಲಿಸುವರು. ವಿದ್ಯಾಬಲದಿಂದ ಅಲ್ಲಿ ಹೆಂಗಸರೂ ಸರ್ಕಾರ ಅಧಿಕಾರಗಳನ್ನು ನಡೆಸುತ್ತಿರುವರು. ಆದರೆ ಹಿಂದೂದೇಶದಲ್ಲಿ ಚಿರಕಾಲದಿಂದಲೂ ಸ್ತ್ರೀವಿದ್ಯಾಭ್ಯಾಸವು ಇಲ್ಲದಿದೆ. ಸ್ತ್ರೀವಿದ್ಯಾಭ್ಯಾಸ ವಿಷಯದಲ್ಲಿ ಆಧುನಿಕರಾದ ನಮ್ಮವರು ಅನೇಕ ಆಕ್ಷೇಪಣೆಗಳನ್ನು ಮಾಡುತ್ತಿದ್ದಾರೆ. ಕೆಲವರು, ಸ್ತ್ರೀಯರು ವಿದ್ಯೆ ಕಲಿವುದರಿಂದ ಅವರಿಗೆ ದುರಹಂಕಾರ ಬರುವುದು. ಎನ್ನುವರು. 'ಅಲ್ಪವಿದ್ಯೋ ಮಹಾ ಗರ್ವಿ' ಎಂಬಂತೆ ಅಧಿಕ ವಿದ್ಯೆಯನ್ನು ಕಲಿಸದೆ ಸ್ವಲ್ಪ ವಿದ್ಯೆಯನ್ನು ಕಲಿಸಿದರೆ, ಹೀಗೆ ಆಗುವುದು ಸಹಜ. "ತುಂಬಿದ ಕೊಡ ತುಳುಕುವುದಿಲ್ಲ" ಯಾರಲ್ಲಿಯೂ ಇಲ್ಲದ ಅತಿಶಯವಾದ ವಸ್ತು ಒಬ್ಬರಲ್ಲಿದ್ದರೆ, ಅವರಿಗೆ ಹೆಮ್ಮೆ ಬರುವುದು. ಎಲ್ಲಾ ಹೆಂಗಸರಿಗೂ ವಿದ್ಯೆ ಕಲಿಸಿದರೆ ಗರ್ವಕ್ಕೆ ಅವಕಾಶವೇ ಇರುವುದಿಲ್ಲ. ಇನ್ನು ಕೆಲವರು 'ಹೆಂಗಸರಿಗೆ ವಿದ್ಯೆ ಕಲಿಸುವುದರಿಂದ, ಸಂಸಾರದ ಕೆಲಸಗಳು ಸರಿಯಾಗಿ ನಡೆಯದೆ ಸಂಸಾರಕ್ಕೆ ಕುಂದುಬರುವುದು' ಎಂದು ಹೇಳುವರು, ಇದು ಸರಿಯಲ್ಲ. ವಿದ್ಯಾವತಿಯರಿರುವ ರಾಜ್ಯಗಳಲ್ಲಿ ಅವರು ಮಾಡಬೇಕಾದ ಕೆಲಸಗಳಿಗೆ ವಿದ್ಯೆ ಎಂದಿಗೂ ಕುಂದನ್ನು ತಂದಿಲ್ಲ. ಅವುಗಳನ್ನು ಚೆನ್ನಾಗಿ ಮಾಡುವಂತೆ ಬುದ್ಧಿಕುಶಲತೆಯನ್ನು ಬಲಪಡಿಸಿದೆ. ಮತ್ತೆ ಕೆಲವರು 'ಸ್ತ್ರೀಯರಿಗೆ ವಿದ್ಯೆಯನ್ನು ಹೇಳಿಕೊಡುವುದರಿಂದ, ಅವರು ಪುರುಷರಿಗೆ ಸ್ವಲ್ಪವೂ ಹೆದರದೆ, ಇದಿರುಬಿದ್ದು ಅವರನ್ನು ಲಕ್ಷ್ಯಮಾಡುವುದಿಲ್ಲ. ದುರ್ವ್ಯಾಪಾರಗಳಿಗುಪಕ್ರಮಿಸಿ, ತಮ್ಮ ಶೀಲವನ್ನೇ ಹಾಳುಮಾಡಿಕೊಳ್ಳುವರು" ಎಂದು ಆಕ್ಷೇಪಿಸುವರು. ಇದು ಸದ್ವಿದ್ಯೆಯ ಫಲಗಳು ಸತ್ಯ, ಹಿರಿಯರಲ್ಲಿ ಭಕ್ತಿ, ಪತಿಯಲ್ಲಿ ಪ್ರೀತಿ ಮುಂತಾದ ಸುಗುಣಗಳು ಆದಾವೇ ಹೊರತು, ದುರ್ವ್ಯಾಪಾರಕ್ಕೆ ಪ್ರವರ್ತಿಸುವ ಬುದ್ಧಿ, ಪತಿಯಲ್ಲಿ ಅಸಹನ, ಅಲಕ್ಷ್ಯತೆ, ಅನಿರ್ಭೀತಿ ಮೊದಲಾದ ದುರ್ಗುಣಗಳಾಗಲಾರವು. ವಿದ್ಯೆ ಕಲಿಯಲಿ, ಕಲಿಯದಿರಲಿ, ದುಷ್ಟಸ್ವಭಾವರು ದುರ್ಮಾರ್ಗದಲ್ಲಿ ನಡೆವುದು ಸಹಜ. ಇದರ ದುರ್ಗುಣಕ್ಕೆ ವಿದ್ಯೆಯೇ ಕಾರಣವೆನ್ನುವುದು ಶುದ್ಧ ಮೂಢತನವು. ಸ್ತ್ರೀಯರಿಗೆ ವಿದ್ಯಾಭ್ಯಾಸದಿಂದ ಜ್ಞಾನೋದಯವಾಗದಿದ್ದರೆ, ಅವರಿಗೂ ಪಶುಗಳಿಗೂ ವಿಶೇಷ ತಾರತಮ್ಯವಿರುವುದಿಲ್ಲ. ವಿದ್ಯೆ ಇಲ್ಲದ ಹೆಂಗಸರು ತಾಯಿಯರೂ, ಹೆಂಡತಿಯರೂ ಆಗಲು ಅರ್ಹರಾದಾರೆ? ಇವರಿಗೆ ವಿದ್ಯೆ ಕಲಿಸದಿದ್ದರೆ, ದೇಶದಲ್ಲಿರುವ ಅರ್ಧಪಾಲು ಪ್ರಜೆಗಳಿಗೆ ವಿದ್ಯೆ ಕಲಿಸದೆ, ಬೇಕೆಂದು ಮೂಢರನ್ನಾಗಿ ಮಾಡಿದಂತಾಗುವುದು. ಪುರುಷರಿಗೆ ಹತ್ತು ವಿದ್ಯೆ ಕಲ್ಲಿಸಿದ್ದರೂ, ಪ್ರಪಂಚದ ನರಳಿಕೆಯಲ್ಲಿ ತಲೆ ತಾಗಿ ಬದ್ಧಿಬರುವುದು. ಹೆಂಗಸರಿಗೆ ಬಾಲ್ಯದಲ್ಲಿಯೇ ವಿದ್ಯೆ ಕಲಿಸಿ, ಜ್ಞಾನವನ್ನು ಅಭಿವೃದ್ಧಿಪಡಿಸಿ, ಯುಕ್ತಾಯುಕ್ತವನ್ನು ತಿಳಿಸಿದ್ದರೆ, ಅವರಿಗೆ ಮುಂದಕ್ಕೆ ಈ ಗುಣಗಳುಂಟಾಗುವುದು ಬಹು ಕಷ್ಟ.

ಈಹಗೆ ಹಿಂದೂದೇಶದಲ್ಲಿ ಈ ಸ್ತ್ರೀವಿದ್ಯಾಭ್ಯಾಸವು ಮೊದಲಾಗಿದೆ. ಈಗ ಸರ್ಕಾರದವರು, ಹೆಂಗಸರಿಗೋಸ್ಕರ ಸಣ್ಣಲುಗಳನ್ನು ಶಾಲೆಗಳನ್ನು ಸ್ಥಾಪಿಸಿ, ಗಂಡಸರಿಗೆ ಹೇಗೋ ಹಾಗೆಯೇ ಅವರಿಗೂ ವಿದ್ಯಾಭ್ಯಾಸವನ್ನು ಮಾಡಿಸುತ್ತಿದ್ದಾರೆ. ಇದು ಅವರಿಗೆ ಪುಣ್ಯಕಾರ್ಯವು. ಹೀಗೆ ಚಿರಕಾಲ ಸ್ತ್ರೀವಿದ್ಯಾಭ್ಯಾಸವು ಇಲ್ಲಿ ನಿರ್ವಿಘ್ನವಾಗಿ ನಡೆದರೆ ಪಾಶ್ಚಾತ್ಯರಲ್ಲಿ ಸ್ತ್ರೀವಿದ್ಯಾಭ್ಯಾಸದಿಂದಾಗಿರುವ ಉತ್ತಮೋಗಗಳೇ ನಮ್ಮಲ್ಲಿಯೂ ಆಗುವುವು.

ಎ. ಆರ್. ಜಿ

ಹುದಿಕೇರಿಯಲ್ಲಿ ಬೋರ್ಡಿಂಗ್ ಮನೆ

ತಾರೀಖು 22 4 26ರಲ್ಲು ಹುದಿಕೇರಿ ಸ್ಕೂಲ್ ಹಾಲಿನಲ್ಲಿ ಮೆ ಇಟ್ಟಿರ ಪೊನ್ನಪ್ಪನವರ ಅಧ್ಯಕ್ಷತೆಯಲ್ಲಿ ಶ್ರೀಮಂಗಲ ನಾಡಿನವರ ಒಂದು ಮೀಟಿಂಗು ನಡೆಯಿತು.

ಈ ಶಾಲೆಯು ಹೈಯರ್ ಎಲಿಮೆಂಟರಿ ಶಾಲೆಯಾಗಿದೆ. ಇದರ ಉಪಯೋಗವನ್ನು ಇಡೀ ಶ್ರೀಮಂಗಲನಾಡು ಹೊಂದಿಕೊಳ್ಳಲು ಅನುಕೂಲವಿಲ್ಲದೆ ಹೋಗಿದೆ. ದೂರದಲ್ಲಿರುವವರಿಗೆ ಹುದಿಕೇರಿಯಲ್ಲಿ ಹೈಯರ್ ಎಲಿಮೆಂಟರಿ ಶಾಲೆ ಇದ್ದಾಗ್ಯೂ ಅವರ ಮಕ್ಕಳನ್ನು ಶಾಲೆಗೆ ಕಳುಹಿಸಲು ವಾಸಕ್ಕೆ ಯೋಗ್ಯವಾದ ಸ್ಥಳವಿಲ್ಲದಿರುವ ಕಾರಣ ಮಕ್ಕಳನ್ನು ಶಾಲೆಗೆ ಕಳುಹಿಸದೆ ಮನೆಯಲ್ಲಿ ತಡೆಕೊಳ್ಳಬೇಕಾಗಿದೆ. ಆದುದರಿಂದ ವಿದ್ಯಾರ್ಥಿಗಳಿಗೆ ವಾಸಕ್ಕೆ ಯೋಗ್ಯವಾದ ಒಂದು ಬೋರ್ಡಿಂಗ್ ಇದ್ದ ಪಕ್ಷದಲ್ಲಿ ಹುದಿಕೇರಿ ಶಾಲೆಯಲ್ಲಿ ಈಗ ಇರುವದಕ್ಕಿಂತಲೂ ಹೆಚ್ಚು ವಿದ್ಯಾರ್ಥಿಗಳು ಸೇರಿ ನಮ್ಮ ಶಾಲೆಯು ಸಹ ಇತರ ಶಾಲೆಗಳಂತೆ ಅಭಿವೃದ್ಧಿ ಹೊಂದುವುದರಲ್ಲಿ ಯಾವ ಸಂದೇಹವೂ ಇಲ್ಲ, ವಿಸ್ತಾರವಾಗಿ ಅಧ್ಯಕ್ಷರು ವಿವರಿಸಿ ಹೇಳಿದರು. ಅಲ್ಲಿ ನೆರೆದಿದ್ದವರೆಲ್ಲರೂ ಏಕ ಕಂಠರಾಗಿ ತಮಗೆ ಬೋರ್ಡಿಂಗು ಅತ್ಯಾವಶ್ಯವೆಂದು ಹೇಳಿ ಒಂದು ಬೋರ್ಡಿಂಗು ಏರ್ಪಡಿಸಲೇ ಬೇಕೆಂದು ಒಪ್ಪಿ ಆ ಉದ್ದೇಶ್ಯ ಒಂದು ಕಮಿಟಿ ಏರ್ಪಾಡಾಯಿತು. ಅಲ್ಲದೆ ಅಲ್ಲಿ ನೆರೆದಿದ್ದ ಅನೇಕ ಮಹನೀಯರು ಧನ ಸಹಾಯ ಮಾಡುವದಾಗಿ ವಾಗ್ದಾನ ಮಾಡಿದರು. ಕಮಿಟಿಯು ಮತ್ತು ಧನ ಸಹಾಯ ಮಾಡುವದಾಗಿ ವಾಗ್ದಾನ ಮಾಡಿದವರ ಹೆಸರುಗಳು ಈ ಕೆಳಗೆ ನಮೂದಿಸಲ್ಪಟ್ಟಿವೆ.

ಧನ ಸಹಾಯ ಮಾಡಲು ವಾಗ್ದಾನ ಮಾಡಿದ ಮಹನೀಯರ ಹೆಸರು ಮತ್ತು ಮೊಬಲಗು——

1 ಮೆ. ಇಟ್ಟಿರ ಪೊನ್ನಪ್ಪನವರು, ರೂ 25 2 ಮೆ ಚೇಂದಿರ ಕರುಂಬೈಯ್ಯನವರು ರೂ 25 3. ಮೆ ಚೇಂದಿರ ಪೊನ್ನಪ್ಪನವರು. ರೂ. 10. 4 ಮೆ. ಕಾಕಮಾಡ ಗಣಪತಿಯವರು ರೂ 5. 5 ಮೆ ಚೆಂದಿಕ ಕುಟ್ಟಪ್ಪನವರು, ರೂ 1 6 ಮೆ. ದಡ್ಡೇರ ಗಣಪತಿಯವರು. ರೂ 10 7. ಮೆ ಅಯ್ಯಮಾಡ ಸುಬ್ಬೈಯ್ಯನವರು, ರೂ 10 8 ಮೆ ಅಜ್ಜಮಾಡ ಸೋಮಯ್ಯನವರ, ರೂ 5 9 ಮೆ. ಅಜ್ಜಿಕುಟ್ಟಿರ ಸಂಜಪ್ಪನವರು, ರೂ 1 10. ಮೆ ತೀತಿರ ಕೆ. ಸುಬ್ಬೈಯ್ಯನವರು, ರೂ 1 11 ಮೆ. ಕೋಳೆರ ಕರುಂಬೈಯ್ಯನವರು, ರೂ. 25 12. ಮೆ ಅಜ್ಜಿಕುಟ್ಟಿರ ಸುಬ್ಬೈಯ್ಯನವರ, ರೂ 1 13 ಮೆ ತೀತಿರ ದೇವೈಯ್ಯನವರು, ರೂ. 2. 14. ಮೆ ಮಲ್ಲಚೀರ ಗಣಪತಿಯವರು, ರೂ 1. 15 ಮೆ. ಕಿರಿಯಮಾಡ ಸುಬ್ಬೈಯ್ಯನವರು ರೂ. 2 16 ಮೆ. ಚೇಂದಿರ ತಿಮ್ಮೈಯ್ಯನವರು, ರೂ 2 17 ಮೆ. ಕೋಳೆರ ಸಂಜಪ್ಪನವರು, ರೂ 2 18 ಮೆ. ಇಟ್ಟಿರ ಪಿ ಚಂಗಪ್ಪನವರು, ರೂ. 10 ಒಟ್ಟು ರೂ 138.

ಆಡಳಿತ ಕಮಿಟಿ—1 ಮೆ. ಇಟ್ಟಿರ ಪೊನ್ನಪ್ಪನವರು, ಪ್ರೆಸಿಡೆಂಟರು. 2 ಮೆ. ಚೇಂದಿರ ಕರುಂಬೈಯ್ಯನವರು, ವೈಸ್ ಪ್ರೆಸಿಡೆಂಟರು 3 ಮೆ ಕೆ. ಯಸ್ ಗೋವಿಂದೈಯ್ಯನವರು (ಹೆಡ್ ಮಾಸ್ಟರು) ಸಕ್ರೆಟರಿ. 4. ಮೆ ಗುಂಬಿರ ಮೊದಮ್ಮೈಯ್ಯನವರು, ಜಾಯಿಂಟ್ ಸಕ್ರೆಟರಿ. ಕಮಿಟಿ ಮೆಂಬರುಗಳು—5 ಕಾಕಮಾಡ ಗಣಪತಿಯವರು, 6. ಮೆ. ಕಿರಿಯಮಾಡ ಸಂಜಪ್ಪನವರು, 7 ಮೆ. ಚೇಂದಿರ ತಿಮ್ಮೈಯ್ಯನವರು, 8. ಮೆ ಚೇಂದಿರ ಸುಬ್ಬೈಯ್ಯನವರು, 9. ಮೆ ಕೋಳೇರ ಕರುಂಬೈಯ್ಯನವರು, 10 ಮೆ. ಅಯ್ಯಮಾಡ ಸುಬ್ಬೈಯ್ಯನವರು 11 ಮೆ ಕಾಡ್ಯಮಾಡ ಐಯ್ಯಮ್ಮನವರ, 12 ಮೆ ದಡ್ಡೇರ ಗಣಪತಿಯವರು, 13, ಮೆ ತೀತಿರ ದೇವೈಯ್ಯನವರು, 14. ಮೆ ಚಕ್ಕೆರ ಸಂಜಪ್ಪನವರು, 15 ಮೆ. ಅಜ್ಜಿಕುಟ್ಟಿರ ಸುಬ್ಬೈಯ್ಯನವರು, 16 ಮೆ. ಚೇಂದಿರ ಪೊನ್ನಪ್ಪನವರು, ಈ ಮೇಲ್ಕಂಡ ಮೆಂಬರರನ್ನು ಚುನಾಯಿಸಿದನಂತರ ಆಡಳಿತ ಕಮಿಟಿಯು ಪ್ರೆಸಿಡೆಂಟರು, ಕಮಿಟಿ ಮೆಂಬರುಗಳು ಮುತುವರ್ಜಿಯಿಂದ ಕೆಲಸಮಾಡಬೇಕೆಂದೂ, ಅದಷ್ಟು ಜಂಬಾ ಪಸೂಲಾತಿಯಲ್ಲಿ ಗಮನ ಕೊಡಬೇಕೆಂದೂ, ಬೋರ್ಡಿಂಗ್ ಕೆಲಸವು ತಮ್ಮ ಸ್ವಂತ ಕೆಲಸಕ್ಕಿಂತ ಹೆಚ್ಚೆಂದು ಭಾವಿಸುತ್ತಾ ಕೆಲಸವೂಡಿ ಸಕಲ ಕೆಲಸದಲ್ಲಿಯೂ ಸಹಾಯ ಮಾಡಬೇಕಾಗಿ ಕೇಳಿಕೊಂಡರು.

ಉದಾರ ಚರಿತ್ರರೂ ದೇಶಾಭಿಮಾನಿಗಳೂ ಆದ ಸಕಲ ಮಹನೀಯರೂ ಅವರವರ ಶಕ್ತ್ಯಾನುಸಾರ ಧನ ಸಹಾಯ ಮಾಡಬೇಕಾಗಿ ಕೋರುತ್ತೇನೆ. ಧನ ಸಹಾಯ ಮಾಡುವಂಥಾ ಮಹನೀಯರು ಆಡಳಿತ ಕಮಿಟಿಯ ಸಕ್ರೆಟರಿ ಮೆ ಕೆ. ಯಸ್ ಗೋವಿಂದೈಯ್ಯನವರು, ಹುದಿಕೇರಿಗೆ ಕಳುಹಿಸಿಕೊಡಬೇಕಾಗಿ ಕೋರುತ್ತೇನೆ.

ಇ. ಪೊನ್ನಪ್ಪ

ಕಣಿವೆ ಹೋಬಳಿ ಶಿರಂಗಾಲ ಗ್ರಾಮ

ಅಯ್ಯಾ,

ಇದೊಂದು ಕೊಡಗಿನ ದೊಡ್ಡ ಗ್ರಾಮವಾಗಿರುತ್ತದೆ. ಈ ಗ್ರಾಮದಲ್ಲಿ 500 ಮನೆಗಳ ವರೆಗೆ ಇರುತ್ತವೆ. ಈ ಗ್ರಾಮದಲ್ಲಿ ಮಂಟಿ ಅಮ್ಮನೆಂಬ ದೇವತೆಯ ದೇವಾಲಯವಿರುತ್ತದೆ. ಈ ದೇವತೆಗೆ ಎರಡು ವರ್ಷಗಳಿಗೊಂದಾವರ್ತಿ ಪೂಜೆ ನಡೆದು ಜಾತ್ರೆಯು ನೆರೆಯುತ್ತದೆ.

ಈ ದೇವತೆಯ ಪೂಜಾಕಾಲದಲ್ಲಿ ಉತ್ತಮರೆಲ್ಲರಿಗೂ ಪ್ರವೇಶವೂ, ಹಣ್ಣುಕಾಯಿ ಪೂಜೆಯೂ ನಡೆದು ಬರುತ್ತಿತ್ತು. ಕೆಲವು ದಿನಗಳಿಂದೀಚೆಗೆ ಗ್ರಾಮದ ವಿಶ್ವಕರ್ಮ ಬ್ರಾಹ್ಮಣರಿಗೂ, ಇತರರಿಗೂ, ದೇವಸ್ಥಾನ ಸಂಬಂಧ ಕಲಹಗಳು ಹುಟ್ಟಿ ವಿಶ್ವಕರ್ಮರಿಗೆ ದೇವಾಲಯದೊಳಗೆ ಪ್ರವೇಶಕ್ಕೂ ಪೂಜೆಗೂ ಎಡೆ ಕೊಡಬಾರದೆಂಬ ಕಟ್ಟು ಕಟ್ಟಳೆಯನ್ನು ವಿಶ್ವಕರ್ಮೇತರರು ಮಾಡಿಕೊಂಡಿದ್ದರು. ಈ ವಿಚಾರ ಕುರಿತು ಸರಕಾರದವರ ಸಹಾಯವನ್ನು ಈ ವರ್ಷದ ಹಬ್ಬದಲ್ಲಿ ವಿಶ್ವಕರ್ಮರು ಕೋರಿಕೊಂಡರು. ಸರಕಾರದವರ ಸಹಾಯದಿಂದ ಪೂಜೆಯು ನಡೆದು ಬಂತು. ಜನರಿಗೆ ಹೆಚ್ಚಿನ ಶಾಂತಿಯನ್ನು ಬೋಧಿಸಿದ್ದೂ ಆಯಿತು.

ಹಬ್ಬದನಂತರ ವಿಶ್ವಕರ್ಮರಲ್ಲಿ ಇತರ ಜನಾಂಗದವರು ಅಸಹಕಾರವನ್ನು ಕೈಕೊಂಡು ಇರುತ್ತಾರೆ.

ಇದರಿಂದ ಅವರ ಭೂಮಿ, ಕೈಗಾರಿಕೆ ವೃತ್ತಿ, ವ್ಯಾಪಾರ ಸಂಭಾಷಣೆ ಮುಂತಾದುವುಗಳ ಕೆಲಸಗಳು ನಿಂತೇ ಹೋಗಿರುತ್ತವೆ.

ವಾಚಕ ಮಹಾಶಯರೇ, ಈ ಗ್ರಾಮದವರಲ್ಲಿನ ಈ ವಿಧವಾದ ವರ್ತನೆಯನ್ನು ನೋಡಿದರೆ, ಭೇದಭಾವ, ಅಸ್ಪೃಶ್ಯತೆ, ಸಹೋದರಭಾವ, ವಿಶ್ವಾಸ, ಪರಸ್ಪರ ಸಹಾಯ ಮುಂತಾದ ಗುಣಗಳೇನೆಂಬುದನ್ನೇ ಅರಿಯದವರಾಗಿ ಕಂಡು ಬರುತ್ತದೆ.

ವರ್ತಮಾನ ಪತ್ರಿಕೆಗಳನ್ನು ತರಿಸಿ ಓದಿದ್ದರೆ, ಇಷ್ಟೊಂದು ತೊಂದರೆಗಳಿಗೆ ಆಸ್ಪದವಿರುತ್ತಿರಲಿಲ್ಲ. ನಮ್ಮ ಈ ಕೊಡಗಿನಲ್ಲಿ 4–5 ಪತ್ರಗಳು ಹೊರಬರೂ ಈ ಗ್ರಾಮದವರು ಒಂದನ್ನಾದರೂ ನೋಡಿದವರೇ ಇಲ್ಲವಾಗಿ ಕಂಡುಬರುತ್ತದೆ.

ಈ ಗ್ರಾಮದ ಎಲ್ಲೆಲ್ಲೂ ಇಸ್ಪೀಟ್ ಆಟ ಆಡುವದು ಕಣ್ಣಿಗೆ ಕಂಡುಬರುತ್ತದೆ. ಈ ಮಹನೀಯರು ಕಾಲವನ್ನು ಆಟದಲ್ಲಿ ಕಳೆಯುವುದಕ್ಕೆ ಬದಲಾಗಿ ವೃತ್ತಾಂತ ಪತ್ರಿಕೆಗಳನ್ನು ಓದಿದರೆ ಎಷ್ಟೋ ಲಾಭಕರವಾಗುತ್ತಿತ್ತು. 2000 ಜನರಿರುವ ಗ್ರಾಮಕ್ಕೆ 2 ಪತ್ರಿಕೆಗಳೆಂದರೆ ಎಷ್ಟು ಬೇಸರವಾಗುವುದು.

ಮಹಾತ್ಮರು ಬೋಧಿಸುವ ಅಸ್ಪೃಶ್ಯರಿಗೂ ಕೂಡ ಹಿಂದೂ ದೇವಾಲಯಗಳಲ್ಲಿ ಪ್ರವೇಶವಿರಬೇಕೆಂಬ ತತ್ವ ಓದಿದ್ದರೇನೇ ತಿಳಿಯುತ್ತಿತ್ತು. ಇನ್ನು ಮುಂದಕ್ಕಾದರೂ ಗ್ರಾಮದ ಮುಂದಾಳುಗಳು ತಮ್ಮ ಗಾಢ ನಿದ್ರೆಯಿಂದ ಎಚ್ಚತ್ತು ದುರಭಿಮಾನ, ಆತ್ಮಶ್ಲಾಘನೆ, ಸ್ವಾರ್ಥತೆ, ಅಸ್ಪೃಶ್ಯತೆ, ಸೋಮಾರಿತನ ಮುಂತಾದವುಗಳಿಗೆ ಎಡೆಕೊಡದೆ ಪಂಗಡ ದ್ವೇಷ, ಜಾತಿ ದ್ವೇಷ, ಕೋಪ ಸ ದ್ವೇಷಗಳನ್ನು ಬಿಟ್ಟು ಅಂತಃಕಲಹಗಳನ್ನು ಬೆಳೆಸದೆ ಸ್ನೇಹಪರರೂ, ಪರಸ್ಪರ ಸಹಾಯಕರೂ, ಶಾಂತಚಿತ್ತರೂ ಆಗಿ ಲೋಕವನ್ನೇ ಗುರು ಸ್ವರೂಪವಾಗಿಯೂ, ಲೋಕ ಸೇವೆಯೇ ಗುರು ಸೇವೆ ಎಂದೂ ತಿಳಿದು ತನ್ನ ಕುಟುಂಬದಿಂದ ಗ್ರಾಮ, ಜಾತಿ, ದೇಶ, ಲೋಕದ ಅಭಿಮಾನಿಗಳಲ್ಲಿ ಸಿಟ್ಟು, ಪರಪೀಡನೆಯೇ ಮಹಾ ನರಕ ಕೂಪವೆಂದೂ, ಪರೋಪಕಾರವೇ ಪರಮ ಪುಣ್ಯವೆಂದೂ ಭಾವಿಸಿ ನಡೆದ ಪುಣ್ಯಪುರುಷರನ್ನಿಸಿಕೊಳ್ಳುವುದರಲ್ಲಿ ಯಾವ ಸಂದೇಹವೂ ಇಲ್ಲ.

ಗ್ರಾಮವನ್ನು ಬಿಟ್ಟ ಗ್ರಾಮಸ್ಥ.

ಪೊಳ್ಳೆಬೆಟ್ಟ ಕೊಡವ ಸಮಾಜ

ಮಹನೀಯರೇ,

ಪೋಲಿಸ ಸಮಾಜವು ಆದರ ಹದ್ದು ಬಸ್ತಿನೊಳಗಿದ್ದು (ಮೇರೆ) ಸಮಾಜದ ಮೆಂಬರರಾಗಿರುವವರಲ್ಲ್ಲ ಕೊಡವರ ಸಮೂಚಿತ ಮತ್ತು ಸಾಂಪತ್ತಿಕ ಅಭಿವೃದ್ಧಿಗಾಗಿ ಸ್ಥಾಪಿಸಲ್ಪಟ್ಟದ್ದು ಆದರ ಉದ್ದೇಶವೆಂದು ಈ ಮೊದಲು ಕೊಡಗು ಪತ್ರಿಕೆಯಲ್ಲು 2–3 ವಾರ್ತೆಗಳು ಪ್ರಕಟಿಸಲ್ಪಟ್ಟಿತು. ಇದು ಮಹನೀಯರು ತಿಳಿದಿರಬಹುದು. ಆದರೆ ಮೇಲ್ಕಂಡ ಸಮಾಜದ ರೂಲ್ಸುಗಳಿಗೆ ವಿರೋಧವಾಗಿ ಮೆ ಕೂತಂಡ ಜೋಯಪ್ಪನವರು ತಾ 2–5–26ರಲ್ಲು ತನ್ನ ಮಗಳ ಮದುವೆಯಲ್ಲು ಸಮಾಜದ ಹದ್ದು ಬಸ್ತಿನೊಳಗಿದ್ದು ಮೆಂಬರಾಗದೆ ಇರುವ 2 ಜನರನ್ನು ಸೇರಿಸಿಕೊಂಡದ್ದು ಸಮಾಜದ ಮೆಂಬರರಿಗೆ ಅತೃಪ್ತಿ ತೋರಿದ ಕಾರಣ ಅವರಲ್ಲ ಸಹಕರಿಸಲು ನಿರಾಕರಿಸಿ ಮುಹೂರ್ತಕ್ಕೆ ಮೊದಲೇ ತಿಳಿಸಿದರು. ವಾದ್ಯಗಾರರು ಹಿಂದೆಯೇ ದಾರಿ ಹಿಡಿದರು. ಮದುವೆ ಮನೆಯು ನಿಶ್ಶಬ್ದವಾಯಿತು. ನೆಂಟರಿಷ್ಟರು ಬೆರಗಾದರು.

ತದನಂತರ ಮೆಂಬರಲ್ಲದ ಇಬ್ಬರು ಅಂದರೆ ಮೆ. ಕುಟ್ಟಂಡ ಮುತ್ತಣ್ಣನವರು (ಸೆಕ್ಷನ್ ಆಫೀಸರ್) ಮೆ. ಚೇಂದ್ರಮಾಡ ಉತ್ತಯ್ಯನವರು (ಕ್ಲಬ್ ಮೇನೇಜರ್), ಮೆ. ಕೂತಂಡ ಜೋಯಪ್ಪನವರು ಮತ್ತು ಕೆಲವರೊಡನೆ ಸಮಾಜದ ಮೆಂಬರನ್ನು ದಾರಿಯಲ್ಲು ಅಡ್ಡಕಟ್ಟಿ ತಡೆದು ನಾವು ಮೆಂಬರಾಗಿ ಸಮಾಜದ ಬೈಲಾಕ್ಕೆ ಅನುಗುಣವಾಗಿ ನಡೆಯುತ್ತೇವೆಂದೂ, ಮೆ. ಕೂತಂಡ ಜೋಯಪ್ಪನವರು ನಾಶ ಮಾಡಿದ್ದು ತಪ್ಪೆಂತಲೂ, ಸಮಾಜದ ಮೆಂಬರರೆಲ್ಲರೂ ಹಿಂದಕ್ಕೆ ಮನೆಗೆ ತೆರಳಿ ಲಗ್ನಕಾರ್ಯವನ್ನು ಚೆನ್ನಾಗಿ ನೆರವೇರಿಸಿಕೊಡಬೇಕೆಂದು ಕೇಳಿಕೊಂಡ ಮೇರೆ ಸಮಾಜದ ಮೆಂಬರರೆಲ್ಲರೂ ತೆರಳಿ ಲಗ್ನ ಕಾರ್ಯವನ್ನು ನೆರವೇರಿಸಿದರು.

ಈ ಸಂಗತಿ ಎಲ್ಲಾ ಮೆಂಬರರಿಗೂ ತಿಳಿಸಲೆಂದೂ ಮತ್ತು ಒಬ್ಬ ಹಿತಚಿಂತಕರು ಇದನ್ನು ಪ್ರಕಟಿಸಬೇಕೆಂದು ಕೇಳಿಕೊಂಡ ಮೇರೆ ಇದರ ಸಾರಾಂಶವನ್ನು ಪ್ರಕಟಿಸಿದೆ.

ಸಕ್ರೆಟರಿ.

ಮನೋಲ್ಲಾಸಿನಿ ತೈಲ.

ತಲೆನೋವು, ತಲೆ ತಿರುಗುವುದು, ತಲೆಬುರಿ ಕಣ್ಣುರಿ, ಕಿವಿಯಿಂದ ಕೀವು ಸೋರುವುದು ಕಿವುಡುತನ, ಕಣ್ಣುನೋವು, ಅಪಸ್ಮಾರ ನಿದ್ದೆ ಬಾರದಿರುವುದು, ನೆನಪು ಶಕ್ತಿ ಕುಂದಿಹೋಗುವುದು ಇವುಗಳನ್ನೆಲ್ಲ ಖಂಡಿತ ಗುಣಮಾಡುತ್ತದೆ. ಉದುರುವ ಕೂದಲನ್ನು ನಿಲ್ಲಿಸಿ ಗಿಡ್ಡಗಿರುವ

ಕೂದಲನ್ನು ಬೆಳೆಯಿಸಿ ಕೂದಲಿಗೆ ಸೌಂದರ್ಯವನ್ನೂ ಹೊಳಪನ್ನೂ ಕೊಟ್ಟು ಅಕಾಲಕ್ಕೆ ಹಣ್ಣಾಗುವ ಕೂದಲನ್ನು ಕಡೆದು ಕೂದಲು ಇಲ್ಲದ ಸ್ಥಳದಲ್ಲಿ ಹೊಸ ಕೂದಲನ್ನು ಹುಟ್ಟಿಸುತ್ತದೆ ಬೆಲೆ ಸೀಸೆಗೆ ರೂ. 1, 3 ಸೀಸೆಗೆ 2—10—0, ಒಂದು ದೊಡ್ಡ ಸೀಸೆಗೆ ರೂ. 2, 3 ಸೀಸೆಗಳಿಗೆ 5—8—0.

ಚಂದನಾಸವ.— ಇದು ಪ್ರಮೇಹ ಮೂತ್ರಕೃಚ್ಛ್ರ, ಮೂತ್ರ ಹನಿಹನಿಯಾಗಿ ಹೋಗುವುದು, ಮೂತ್ರಕೋಶದ ಉರಿ, ಮೂತ್ರಪಿಂಡಗಳ ಉರಿ ಮೂತ್ರನಾಳದಲ್ಲಿ ಹುಣ್ಣು, ಮೂತ್ರ ಹೊಯ್ಯುವಾಗ ಉರಿಯುವುದು, ಮೂತ್ರನಾಳದಿಂದ ಕೀವು ಬರುವುದು, ಮೂತ್ರದಲ್ಲಿ ಧಾತು, ಸುಣ್ಣ ಹೋಗುವುದು, ಅಗಾಗ್ಗೆ ಮೂತ್ರ ಬರುವದು, ಮೂತ್ರ ತಡೆಯಲಿಕ್ಕೆ ಸಾಮರ್ಥ್ಯವಿಲ್ಲದಿರುವುದು, ದೇಹದಲ್ಲಿ ಉರಿ, ಬಾಯಾರಿಕೆ, ಸ್ವಪ್ನಾವಸೆ, ಮೂತ್ರನಾಳದಲ್ಲಿ ಚುಚ್ಚುವ ನೋವು ಇವುಗಳಿಗೆ ಪರಮ ಔಷಧಿ ಗಂಡಸರಿಗೂ ಹೆಂಗಸರಿಗೂ ಇದು ಅತ್ಯುತ್ತಮ. ಬೆಲೆ—ಬಾಟ್ಲು 1, 3, 6ಕ್ಕೆ ರೂ 1—4—0, 3—8—0; 6—12—0.

ರೋಮನಾಶಿನಿ— ಈ ಹುಡಿಯನ್ನು ನೀರಲ್ಲಿ ಕಲಸಿ ಮೈಯಲ್ಲಿ ರೋಮವಿರುವ ಭಾಗಕ್ಕೆ ಹಚ್ಚಲು ರೋಮವು ಉದುರಿ ಬೀಳುವುದು ಡಬ್ಬಿಗಳಿಗೆ 6 ಆಣೆ, 3 ಡಬ್ಬಿಗಳಿಗೆ ರೂ. 1, 1 ಡಜನಿಗೆ 3—8—0.

ಅಮೃತಾರಿಷ್ಟ.— ಇದು ಕ್ವಿನೀನು ಬೆರಸದಿರುವ ಉತ್ತಮವಾಗಿಯು ಔಷಧಿ ಎಲ್ಲಾ ತರದ ಜ್ವರಕ್ಕೆ ಉತ್ತಮ. ಬೆಲೆ.— ಬಾಟ್ಲು 1, 3, 6ಕ್ಕೆ ರೂ 1—4—0, 3—8—0, 6—12—0

ಲೋಹಾಸವ.— ಇದು ಜ್ವರಗಡ್ಡೆಗೆ ಮತ್ತು ಮಲೇರಿಯದಿಂದುಂಟಾದ ಅಶಕ್ತತೆಗೆ ದಿವ್ಯನಾದ್ದು. ಬೆಲೆ—ಬಾಟ್ಲು 1, 3, 6ಕ್ಕೆ ರೂ. 1—4—0; 3—8—0; 6—12—0

ನಮ್ಮ ಕೆಟಲಾಗು ತರಿಸಿ ನೋಡಿರಿ

ವಿಳಾಸ—ಮನೋಲ್ಲಾಸಿನಿ ಕಂಪನಿ,
52—20 9 ಮಂಗಳೂರು, ಕಂಕನಾಡಿ.

Apply for our shooting Season's Clearance Sale Catalogue of Brand New Goods.

10 to 25 percent Reductions in Prices.

No License Required!! No Licenser Required



Webley and Scott Air Pistol, cal 177 or ·22, bore Powerful and Accurate complete with a sample box of slugs, two spare washers, a brush forcleaning, and a bookletof instructions Rs. 30/– Free delivery.

Pwerful German Diana Air gun· Handsome and Accurate, takes B S A Patern No· 1 Slugs and Darts· expressly recommendable for Target Practice Rs 15/ Free delivery·

Brilliant Search Light Lamp for Night Sports Rs 30/– Free delivery

No License required to purchase or to possess the above items.

Reliale D B B L· 12 bore guns	Rs. 60/– and upwards		
Do· S.B B L· 12	do·	do 40/–	do·
D B M·L· Guns		„ 45/–	do
S.B·M L. do.		„ 30/–	do·
S· B.B L· Rifles		„ 25/–	do
B L· Revolvers and Pistols		, 30/–	do.

Arms, Ammunition and shooting requisites of almost every kind andquality offered at exceptionally favourable rates ANumber of good quality second hand weapons also offered for sale in theNew Catalogue.

GOOLAMHUSIAIN ALLIBHOY & SONS
Largest Importers of Firearms and Ammunition,
Cheapest priced firm in India,

24· 15 **210 Abdul Rehman Street, BOMBAY·**

೧೦೦೦ ರೂಪಾಯಿಗಳ ಬಹುಮಾನ.
ಲೋಕಪ್ರಸಿದ್ಧವಾದ ಸಾಲಂಮಿಸ್ರಿ ಮುರಬ್ಬಾ.
ನಮ್ಮ ಟ್ರೇಡ್ ಮಾರ್ಕನ್ನು ನೋಡಿ ಈ ಔಷಧ ತೆಗೆದುಕೊಳ್ಳಿರಿ.

ಇದರ ಸೇವನೆಯಿಂದ ವೀರ್ಯವು ನೀರಿನಂತೆ ಇದ್ದರೂ, ನಪುಂಸಕತ್ವವಾದರೂ, ಸ್ತ್ರೀ ಸಂಭೋಗಕ್ಕೆ ಮೊದಲೇ ಸ್ಖಲನವಾದರೂ, ಮೂತ್ರದೊಂದಿಗೆ ಹೋಗುತ್ತಿದ್ದರೂ ಮೋಹರಹಿತವಾಗಿ ಶರೀರಕ್ಕೆ ಆರೋಗ್ಯವನ್ನೂ ಧಾರ್ಢ್ಯತೆಯನ್ನೂ ಆಯುಸ್ಸು, ಬಲ, ತೇಜಸ್ಸು ಉಂಟು ಮಾಡುವದು. ಅಜೀರ್ಣ ಮಲಬದ್ಧತೆ, ಮೆದುಳಿನ ಬಲಹೀನತೆ, ಕೈಕಾಲು ಸೊಂಟ ನೋವುಗಳಿಗೆ ಇದು ದಿವ್ಯ ಔಷಧವು. ಈ ಸಾಲಂಮಿಸ್ರಿ ಎಂಬುವದು ಕಾಬೂಲ್ ಕಂದಾಹಾರ ಪ್ರಾಂತ್ಯದಲ್ಲಿ ಬೆಳೆಯುತ್ತದೆ.

ಈ ಔಷಧದಿಂದ ಗುಣಹೊಂದಿರುವ ಅನೇಕ ಮಹನೀಯರು ತಾವಾಗಿಯೇ ಅನೇಕ ದೇಶಗಳಿಂದಲೂ ಆಫ್ರೀಕ, ಬರ್ಮ, ಪಿನಾಂಗ್, ಸಿಂಗಪೂರ್, ಸಿಲೋನ್, ಬೊಂಬಾಯಿ, ಕಲ್ಕತ್ತ, ಮದ್ರಾಸು ಮತ್ತು ಇಂಡಿಯಾದೇಶದಲ್ಲಿ ಎಲ್ಲಾ ಸ್ಥಳಗಳಿಂದಲೂ ನಮಗೆ ಯೋಗ್ಯತಾ ಪತ್ರಿಕೆಗಳನ್ನು ಕಳುಹಿಸಿರುವರು. ಇವುಗಳ ನಕಲನ್ನು ಯಾರಾದರೂ ತರಿಸಿ ನೋಡಬಹುದು. ಇವುಗಳು ಸುಳ್ಳು ಎಂದು ನಿರ್ಧರಿಸಿದವರಿಗೆ ಮೇಲೆ ಕಂಡ ಬಹುಮಾನವು ಕೊಡಲ್ಪಡುತ್ತೆ. ನಾವು ಹಾಗೆ ಕೊಡದೇ ನಿರಾಕರಿಸಿದಲ್ಲಿ ಕೋರ್ಟು ಮೂಲಕ ಅದನ್ನು ಪಡೆಯಬಹುದು. ೧ ಡಬ್ಬಿವನ್ನು ೧೫ ದಿನ ಸೇವಿಸಿದಲ್ಲಿ ಗುಣವು ಖಂಡಿತವಾಗಿ ತೋರಬಹುದು. ೨ಯಾ ೩ ಡಬ್ಬಿಗಳು ಜನ್ಮಾಂತ್ಯದವರೆಗೂ ಪೂರ್ಣವಾಗಿ ಗುಣವನ್ನುಂಟು ಮಾಡುವವು. ಹೆಸರು ವಿಳಾಸಗಳನ್ನು ವಿವರವಾಗಿ ಬರೆಯಬೇಕು. ಒಂದಾವರ್ತಿ ಅಭ್ಯಾಸಿಸಿ ಮಾಡಿ ನೋಡಿದಲ್ಲಿ ಖಾತ್ರಿ ಉಂಟಾಗುತ್ತೆ.

ಕ್ರಯ ಡಬ್ಬಿಗಳಿಗೆ ರೂ. ೩—೦—೦ ಥಾಂಗಿ ಚಾರ್ಜು ೧ರಿಂದ ೩ ಡಬ್ಬಿಗಳಿಗೆ ೦—೮—೦ ಆಣೆ. ಏಜಂಟರುಗಳು ಎಲ್ಲಾ ಸ್ಥಳಗಳಲ್ಲಿಯೂ ಅವಶ್ಯಕವಾಗಿರುತ್ತೆ. ದರಖಾಸ್ತು ತರಿಸಿಕೊಳ್ಳಬಹುದು ಆರ್ಡರು ಕೊಡತಕ್ಕ ಕಾಲದಲ್ಲಿ ಈ ಪತ್ರಿಕೆಯ ಹೆಸರನ್ನು ಬರೆಯಬೇಕು.

ಟೆಲಿಗ್ರಾಫ್ ಅಡ್ರೆಸ್, ಮಿಸ್ರಿ ಬೆಂಗಳೂರು ಸಿಟಿ, } **ಡಿ. ಮುನ್ನಾಲಾಲ್, ದಿಲ್ಲಿ ನೇಟಿವ್ ವೈದ್ಯರು, ಸಾಲಂಮಿಸ್ರಿ ಮುರಬ್ಬ ಡಿಪೋ,** ಬೆಂಗಳೂರು ಸಿಟಿ.

12—6

ನೋಟೀಸು.

ಇದರಿಂದ ಸರ್ವರಿಗೂ ತಿಳಿಯಪಡಿಸುವದೇನೆಂದರೆ.—

ಹಾಲಿನಾಡ್ ತಾಲ್ಲೂಕು ನಾಡು ಸರಿಯಂದದ ಗ್ರಾಮದ ಶ್ಯಾಸುಭೋಗರ ಮನೆ ಗಣಪ್ಪಯ್ಯನವರ ಹೆಂಡತಿ ದೇವಮ್ಮನವರು, ಸದರಿಗ್ರಾಮದ ಎಡವಾಲದಲ್ಲು ಇರುವ ಸಾಗಿನ ಸರ್ವೆ ನಂಬರು 40. 41/2, 41/3 ರ ಏಕುಚಿಲ್ಲೆ ಏಕರು ಪಿಕ್ಯದ 27ರೂ 6 ಆ. ಕಂದಾಯದ ಭೂಮಿ ವಗೈರೆ ಆಸ್ತಿಯನ್ನು ಯಾರಿಗಾದರೂ ವಿಕ್ರಯಿಸುವ ತರದೂದಿನಲ್ಲು ಇರುವದಾಗಿ ತಿಳಿಯಬರುತ್ತೆ. ಈ ಭೂಆಸ್ತಿಯು ಅವರಿಗೆ ಜೀವನಾಂಶಕ್ಕಾಗಿ ಕೊಟ್ಟದ್ದಾಗಿರುತ್ತೆ. ಈ ಭೂಮಿ ವಗೈರೆಯನ್ನು ವಿಕ್ರಯಿಸುವದಕ್ಕೆ ಸದರಿ ದೇವಮ್ಮನವರಿಗೆ ಯಾವ ಹಕ್ಕು, ಸ್ವತಂತ್ರವಿರುವದಿಲ್ಲ. ಈ ಆಸ್ತಿಯನ್ನು ಯಾರೂ ಕೊಂಡುಕೊಳ್ಳಕೂಡದು. ಈ ಆಸ್ತಿಯನ್ನು ಮಾರಾಟಮಾಡುವ ವಿಷಯದಲ್ಲು ಕುಟುಂಬದವರ ತಕರಾರು ಪೂರ ಇರುತ್ತೆ. ಈ ಸಂಗತಿ ತಿಳಿದೂ ಸಹ ಕೊಂಡುಕೊಳ್ಳುವವರು ನಷ್ಟಕ್ಕೂ ತೊಂದ್ರೆಗೂ ಗುರಿಯಾಗುವರಾಗಿ ಈ ಮೂಲಕ ಖಾತರವಾಗಿ ತಿಳಿಸೋಣಾಗಿದೆ.

ತಾ. 15—4—26· ಯಸ್. ಎನ್. ಶಂಕರನಾರಾಯ್ಣಯ್ಯ.
ಜಮೀನ್‌ದಾರ್, ಮತ್ತು
4—3. ಕಾಫಿಪ್ಲಾಂಟರ್.

ನೋಟೀಸು.

ಒಳ್ಳೆಕಾಲ, ಒಳ್ಳೆ ಆಸ್ತಿ, ಕಳೆಯಬೇಡಿರಿ.

(1) ಪೊನ್ನಂಪೇಟೆ ಸ್ಕೂಲ್‌ಬಳಿ ಬಟ್ಟೆ ವಗೈರೆ ಸಾಮಾನು ವ್ಯಾಪಾರಕ್ಕಿಟ್ಟಿರುವ ಮಹಡಿಮನೆ, ಹಿಂಭಾಗದಲ್ಲಿರುವ ಎರಡು ಭಾಗದ ಉದ್ದ ಲೈನ್ ಮನೆಗಳು ಮತ್ತು ಕಾಫಿಗಿಡ ವಗೈರೆಯುಳ್ಳ ಹಿತ್ತಲು ಸಹ 9000/—ರೂಪಾಯಿಗೂ,

(2) ಪೊನ್ನಂಪೇಟೆ, ದೊಡ್ಡ ಬೀದಿ ಬಲಪಾರ್ಶ್ವದಲ್ಲು ವಾಸಕ್ಕೂ ವ್ಯಾಪಾರಕ್ಕೂ ಯೋಗ್ಯವಾದ ಮಹಡಿಮನೆ, ಮತ್ತು ಹಿಂಭಾಗದ ಉದ್ದ ಲೈನ್ ಮನೆ, ವಾಸಕ್ಕೆ ಅನುಕೂಲವಿರುವ ಒಂದು ಸಣ್ಣ ಮನೆ ಸಹ 6000/—ರೂಪಾಯಿಗೂ,

(3) ಒಂದನೇ ನಂಬರು ಅಂಗಡಿಯಲ್ಲಿರುವ ಬಟ್ಟೆ, ಸ್ಟೇಶನರಿ ಕಟ್ಲರಿ ವಗೈರೆ ಸಾಮಾನು ಮತ್ತು ಸೋಡಾ ಫೇಕ್ಟರಿ ಸಹ ಕಮ್ಮಿ ಕ್ರಯಕ್ಕೆ ಮಾರಲಿಕ್ಕೆ ಸಿದ್ಧವಾಗಿದೆ. ಖಾಯಿಷ್‌ದಾರರು ಆದಷ್ಟು ಜಾಗ್ರತೆಯಲ್ಲು ಕೆಳಗಿನ ವಿಳಾಸಕ್ಕೆ ಬರಕೊಳ್ಳಬಹುದು.

4—2. V· E· N· Ahamad,
General Merchant,
Ponnampett

ಬೇಕಾಗಿದೆ.

ಬೀಟೆಮರದ ತೊಲೆಗಳು ಬೇಕಾಗಿದೆ.

ಒಳ್ಳೇ ಬೆಲೆ ಕೊಡಲಾಗುವುದು. ಹೆಚ್ಚಿನ ಸಂಗತಿಗೆ ದಯವಿಟ್ಟು ಈ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳುವುದು.

WANTED
Rose wood logs (Beeti)
Good price offored.
For further particulars please apply to:—

R. FRAMJEE,
12.7 **Mercara**

EMPIRE OF INDIA, LIFE ASSURANCE CO, LTD
(Established 1897·)

All WITH PROFIT POLICIES issued before 28th February· 1927 will share in the BONUS Distribution for the five years ending on that date.

Bangalore Branch· Madras Branch·
PROSPECTUS ON APPLICATION·
152 Commercial Street· 9 & 10 Second
24—13· Line Beach·

ಅದ್ಭುತ! ಆಶ್ಚರ್ಯಕರ! ಬಲ ಸಮಾಪ್ತಿ!

ಪೊಕೆಟ್ ಡಿಟೆಕ್ಟಿವ್

ಇಪ್ಪತ್ತನೆಯ ಶತಮಾನದ ವಿಚಿತ್ರಗಳಲ್ಲಿ ಒಂದು

ಪೆಟೆಂಟ್ ಪಡೆದ ವಸ್ತು ... ಪ್ರತಿಯೊಬ್ಬನಿಗೂ ... ಅತಿ ... ಆತ್ಮ ರಕ್ಷಣೆ ... ಇದು ಏಕ ಪ್ರಕಾರ ... ಮಾಡುವುದು ... 1 ತಲಾಂತರ ಬಾಳಿಕೆ ಬರುವುದು ಉಪಯೋಗಕ್ಕೆ ... ಸಿದ್ಧವಿರುವುದು ಇದನ್ನು ತೆಗೆದುಕೊಂಡವರಿಗೆ ... ಪ್ರಸಿದ್ಧ ... ಚಿಹ್ನೆ ... ಪರಗಳು ಉಚಿತವಾಗಿ ಕೊಡಲ್ಪಡುವವು ... ಒಂದರ ಬೆಲೆ ರೂ 200 ಒಮ್ಮೆಗೆ ಮೂರು ... ರೂ 580 ಮಾತ್ರ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ

ಪಿ ಕೆ ಸ್ವಾಮಿ,
17 ಈರ್ನಂಗ್ ಬಜಾರ್, ಜಿ ಟಿ ಮದ್ರಾಸು

ರೂ, 2೦ ಕ್ರಯಬಾಳುವ 100 ಅತ್ಯುಪಯುಕ್ತ ವಸ್ತುಗಳಿರುವ

ಜರ್ಮನ್ ಕೋಂಬಿನೇಶನ್ ಪೆಟ್ಟಿಗೆ

ಈ ಪೆಟ್ಟಿಗೆಯಲ್ಲಿರುವ ವಸ್ತುಗಳು

ದಿ ಸಿಲ್ಕ್ರೈಟ್ ಪೌಂಟನ್‌ಪೇನು ಒಂದು 22 ಕ್ಯಾರೆಟ್ ಗೋಲ್ಡ್ ಪ್ಲೇಟ್ ಇಮಿಟೇಶನ್ ವಜ್ರದ ಉಂಗುರ 2 22 ಕ್ಯಾರೆಟ್ ಗೋಲ್ಡ್ ಪ್ಲೇಟ್ ಲಿಂಕ್ಸ್ ಮತ್ತು ಸ್ಟಡ್ಸ್ ... 1, 8 ... 12 ... 1 ... 1 ... 2೦ ... 12 ... 1 ... 1 ... 12

ಹೀಗೆ ಒಟ್ಟು 100 ... ರೂ 3—6—0 ... ಬರೆದುಕೊಳ್ಳಿರಿ

ಸಿಂಪ್ಲೆಕ್ಸ್ ನೊವೆಲ್ಟಿ ಹೌಸ್,
... ಮದ್ರಾಸು

ವಿಶೇಷದ ನೂರಾಟ!

ಉಚಿತ! ಉಚಿತ!

18 ಕ್ಯಾರೆಟ್ ಗೋಲ್ಡ್ ... ಪ್ಲೇಟ ... ಗಡಿಯಾರ ನಂ 100

ಇದು ಅತ್ಯಂತ ಹೊಸ ಮಾದರಿಯು, ಸುಂದರವಾದ ...

... 100 ... ಕಡಿಮೆ ... ಸುಂದರವಾಗಿಯೂ ಚಿಕ್ಕದಾಗಿಯೂ ಇದೆ ... ಉಪಯೋಗಿಸಲು



... ಇದರ ಕಾರ್ಯದಕ್ಷತೆ ... ಗ್ಯಾರಂಟಿ ... ಒಂದು ... ಇದರ ಜೊತೆಯಲ್ಲಿ ... ಉಚಿತವಾಗಿ ಕೊಡಲಾಗುತ್ತದೆ ಕ್ರಯ 7-0-0

ದಿ ವಿನ್ನರ್ ವಾಚ್ ಮತ್ತು ಕಂಪೆನಿ,
... ಮದ್ರಾಸು

ನೋವೆಲ್ ಜೋಕಿಂಗ್ ಕ್ಲಾಕ್

... ಹೊಸ ... ದಲ್ಲಿ ಮಾರಲ್ಪಡುತ್ತಿದೆ

... ಕೊಡಲ್ಪಡುವುದು ... ಬರೆಯಿರಿ!

ಜಿ. ಪಿ. ಬಿ
ಕೇರಿಯೋ ವಾಚ್ ಕಂಪೆನಿ,
ಮದ್ರಾಸು

ತಿರ್ಲೋಕಸ್ಸರ ಪೇಟೆಂಟ್ ಸಮ್ಮರ ತಪ್ಪಲು



... ದರವೇ ... ಗಣಗಳು ... ಸೀರನ್ನು ಪಟ್ಟಿದ ಕೂಡಲೇ ತುಂಬ ... ಪಟ್ಟಿಕ್ಕೆ ಬರುವಾಗ್ಗೆ ಒಂದು ... ನೀರು ನೂರರ ... ಪರ್ಣ ... ಬಗ್ಗೆ ...

ತಿಲ್ರ್ಲೋಕಸ್ಸರ ಬಂಧು, ಲಿಮಿಟೆಡ್.
ತಿರ್ಲೋಕಸ್ಸರವಾಡಿ, ...

ಲೋಕಪ್ರಸಿದ್ಧವಾದ! ಅನುಭವಸಿದ್ಧವಾದ!

ಮನುಷ್ಯನಿಗೆ ... ಔಷಧಿಯು ... ವೀರ್ಯ ವೃದ್ಧಿ, ದಾತುಪುಷ್ಟಿ, ... ಸುಖ ಜೀವನಕ್ಕೆ ... ಆರೋಗ್ಯದಾಯಿ ...

ಟ್ರೇಡ್ ಮಾರ್ಕ್] **ಅಗಸ್ತ್ಯ** [ನೋಡಿ ತೆಕ್ಕೊಳ್ಳಿ

ಮನ್ಮಥ ಚಿಂತಾಮಣಿ ಲೇಹ

ರಿಜಿಸ್ಟರ್ ಆದದ್ದು

ಬಾಲವೃದ್ಧ ಸ್ತ್ರೀ ಪುರುಷರ ಅನೇಕ ರೋಗಗಳ ... 1ಸೇರು 48ದಿವಸ ಸೇವಿಸಬಹುದು ನಂ (1) 1ಸೇರು ಡಬ್ಬಿ 1ಕ್ಕೆ ರುಪಾಯಿ 3—0—0 ½ಸೇರು ಡಬ್ಬಿ 1ಕ್ಕೆ ರುಪಾಯಿ 1—9—0 ನಂ (2) 1ಸೇರು ಡಬ್ಬಿ 1ಕ್ಕೆ ರುಪಾಯಿ 2—0—0, ½ ಸೇರು ಡಬ್ಬಿ 1ಕ್ಕೆ 1—1—0 ವಿ ಪಿ ಖರ್ಚು ಪ್ರತ್ಯೇಕ ... ಒರಕೊಳ್ಳಿರಿ

ವಿಳಾಸ —ದೇವಣ್ಣ ನಾರಾಯಣಸೆಟ್,
ಗೂಳಿಕಟ್ಟಾ
ಮಂಗಳೂರು,
52—30 ದ ಕ

ಸತ್ಯಮೇವಜಯತೇ.

(ಗುಣವಾಗದಿದ್ದರೆ ಹಣ ಪರತ)

ಧಾತುಪುಷ್ಟಿಕ ಕಾಮೋತ್ತೇಜಕ, ಇಂದ್ರಿಯಸ್ತಂಭಕವಾದ

ಮದನೋತ್ಸವ ಗುಳಿಗೆ.

... ನಪುಂಸಕತ್ವ ... ಕ್ರಯ ...

ಪ್ರಮೇಹನಿವಾರಣಿ— ... ಈ ಮಾತ್ರೆಯು ... ಕ್ರಯ ... ಬರೆದು ಕೇಳಿ ...

ವೈದ್ಯ ಜಿ ಎಲ್ ಜೋಶಿ ಮತ್ತು ಕಂಪೆನಿ.
... ಉತ್ತರ ಕಾನಡಾ

ಒಂದು ಪ್ರಬಲವಾದ ಪ್ರಶ್ನೆ.

ನಿಮ್ಮ ಜೀವವನ್ನು ಏತಕ್ಕಾಗಿ ವಿಮೆ ಮಾಡಬೇಕು!

ವೃದ್ಧಾಪ್ಯದಲ್ಲಿ ನಿಮ್ಮ ಹೆಂಡತಿ ಮಕ್ಕಳ ... ಗೋಸ್ಕರ!

... ಅನೇಕ ... ವಿಮೆ ಮಾಡಿರುವ ... ಬಂಡವಾಳವಿರುವ ... ಅತ್ಯಂತ ದೊಡ್ಡದಾದ ... ವರ್ಷಕ್ಕೆ 18ರೂ ... ಇಲ್ಲದ ಲಾಭ ಕೊಡುವ 'ಓರಿಯಂಟಲ್ ಗವರ್ನ್‌ಮೆಂಟ್ ಜೀವವಿಮೆ ಕಂಪನಿಯ ರೂಲ್ಸಿಗೂ, ಶರತಿಗೂ ಈ ಕೆಳಗಿನವರಿಗೆ ಬರೆದು ತಿಳಿದುಕೊಳ್ಳಿ

ಖಾದಿಬಟ್ಟೆ ಎಂದರೇನು?

ದೇಶೀಯ ಹತ್ತಿಯಲ್ಲಿ ಕೈರಾಟೆಯಿಂದ ನೂಲು ತೆಗೆದು ಇಲ್ಲಿಯೇ ತಯಾರಿಸುವ ಬಟ್ಟೆಯೇ 'ಖಾದಿ.' ... ಪರದೇಶೀ ಬಟ್ಟೆಗಿಂತ ಗಟ್ಟಿಯಲ್ಲಿಯೂ ... ಕಡಿಮೆ ಇಲ್ಲದಾತ, ಎಲ್ಲಾ ತರದ ಶೀರೆಗಳು ... ಶಾಲು ವಸ್ತ್ರ ಎಲ್ಲಾ ತರದ ಬಟ್ಟೆಯು ತಯಾರಾಗಿದೆ ... ಪ್ರೋತ್ಸಾಹಿಸಿರಿ! ಖಾದಿಯಿಂದಲೇ ಸ್ವರಾಜ್ಯ ಖಾದಿಯಿಂದಲೇ ಮೋಕ್ಷವೆಂಬುದನ್ನು ಮರೆಯಬೇಡಿ

ವೀರರಾಜಪೇಟೆ, ಕ ಪಿ. ಚಿಣ್ಣಪ್ಪ,
ದಕ್ಷಿಣ ಕೊಡಗು ಪ್ರೊಪ್ರೈಟರ್,
ಖಾದಿಭಂಡಾರ

52—6

ಡಾಕ್ಟರ್ ಎಸ್ ಎನ್ ಆಯ್ಯಂಗಾರ್, ಬಿ ಎ.,
ಎಲ್ ಆರ್ ಸಿ ಪಿ ಅಂಡ್ ಎಸ್ (ಎಡಿನ್‌ಬರ್ಗ್)
ಎಲ್ ಎಫ್ ಪಿ ಅಂಡ್ ಎಸ್. [ಗ್ಲಾಸ್‌ಗೊ.]

ದಂತ ವೈದ್ಯರು

ಮಡಿಕೇರಿ ಬ್ರಾಹ್ಮಿನಲ್ಸ್ ಬಂಗ್ಲೆಯಲ್ಲಿ ಒಂದು ವಾರದ ವರೆಗೆ ಇದ್ದು, ಇವರು ಶೀಘ್ರದಲ್ಲೇ ಸೋಮವಾರಪೇಟೆಗೆ ಹೋಗುವರು

ದಂತ ಸಂಜೀವಿನಿ.

ಯಾವ ತರದ ಹಲ್ಲುನೋವನ್ನಾದರೂ ಥಕ್ಷನೆ ಶಮನ ಮಾಡುವ ಶಕ್ತಿಯುಳ್ಳ ಈ ದಂತ ಸಂಜೀವಿನಿ ಬುಡ್ಡಿ ಒಂದಕ್ಕೆ ಕ್ರಯ ರೂ 1—0—0 ಮಾತ್ರ ಎಸ್ ರಾಮಣ್ಣ.
C/o ಡಾಕ್ಟರ್ ಎಸ್. ಎನ್. ಆಯ್ಯಂಗಾರ್.
48-18 ಮಹದೇವಪೇಟೆ, ಮಡಿಕೇರಿ.

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್, ಕೋ ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ.

		ರೂ.
ಶೇರ್ ಬಂಡವಾಳ	—	50,000
ವಸೂಲಾದ ಶೇರ್ ಮೊಬಲಗು	—	3890
ಒಪ್ಪಿಬಂದ ಠೇವಣಾತಿ	—	90,600

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲಕೊಡತಕ್ಕದ್ದು.

ಒಂದು ವರ್ಷ ವಾಯಿದೆ ಅಥವ ಹೆಚ್ಚಿನ ವಾಯಿದೆಯ ಠೇವಣಾತಿಗಳಿಗೆ ಶೇಕಡ ನಾಲಿಯಾನ ರೂ. 6-4-0ರ ದರದಲ್ಲಿ ಬಡ್ಡಿ ದೊರೆಯುತ್ತೆ ಕಡಿಮೆ ವಾಯಿದೆಯ ಠೇವಣಾತಿಗಳಿಗೆ ಶೇಕಡ ನಾಲಿಯಾನ 5ರ ಬಡ್ಡಿ ದೊರೆಯುತ್ತೆ.

ವರ್ಷಕ್ಕೊಂದಾವರ್ತಿ ಕೋ ಆಪರೇಟಿವ್ ರಿಜಿಸ್ಟ್ರಾರವರು ಲೆಕ್ಕ ಆಡಿಟುಮಾಡಿಸಿ ಮಾಡುತ್ತಾರೆ.

ಪ್ರೆಸಿಡೆಂಟರು, ಟ್ರೆಜರರ.
ಕೊಡಂದೇರ ಕುಟ್ಟಯ್ಯನವರು, ಯಂ. ಭುಬಂಗರಾಯರು
ರಾಯ್ ಬಹದ್ದೂರ್. ಬಿ.ಎ, ಬಿ.ಎಲ್.

ಸೆಕ್ರಿಟರಿ,
ಸಿ ಯನ್ ವೆಂಕಟ್ಸೈಯ್ಯನವರು, ಬಿ.ಎ., ಬಿ.ಎಲ್.

ತಾರೀಖು 29—8—1925.

ARMS & AMMUNITION MART.

Mahomedally-Noorbhoy



321 Abdul Rehman Street, near Crawford Market, BOMBAY. 3
Telegraphic Address.—"SHOOTER" Bombay.

[52—36] Please write for Reduced net prices list for 1926

Printed & published by Kodanda Appayya, R B., Chairman, Board of Directors, at "Kodagu" Press, Mercara for "Kodagu" Ltd.

Reg. N. S. 1550.

Licensed to post without prepayment.

KODAGU OFFICE, MERCARA

ಕೊಡಗು.

[ವಾರ್ಷಿಕ ಮುಂಗಡ ರೂ. ೨-೮-೦

ಸ್ವಕೀಯ ಕೊಡಗು ದೇಶದ ಹಿತಕ್ಕೆ ಸ್ವಪ್ರಯತ್ನ ಬೇಕು || ಐಕ್ಯಮತ್ಯೇನ ದೇಶಾನಾಂ ಸುಸ್ಥಿರಾ ರಾಜ್ಯ ಸಂಪದಾ ||

ಸಂಪಾದಕ—ಪಂದ್ಯಂಡ ಐ. ಬೆಳ್ಯಪ್ಪ.

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವದು.

ಸಂಪುಟ ೫] ಕೊಡಗು, ೧೯೨೬ನೇ ಇಸವಿ ಮೇ ತಾರೀಖು ೧೪ ನೇ ಶುಕ್ರವಾರ [ಸಂಚಿಕೆ ೧೮

PERFUMERY & PATENTI MEDICINCES ETC.,

Aletris cordial	Rs. 3—4-	anola wine	,, 5—0-	Kucryl tooth powder	,, 0—14-
Antiphlogistine	,, 1—8-	Ovaltine	Rs. 1—1-; 1—12-, & 3—3-	Kolynos tooth paste	,, 0—11-
Bathwalas' ague mixture	,, 1—3-	Peps	,, 1—0-	Enthymal ,, ,,	,, 0—14-
Burgoynes' Eastons' Syrup	,, 1—6-	Sanatogen	, 4—8-	Pepsodent ,, ,,	,, 0—14-
Celerina	,, 3-12-	Emulsion Scott's	, 1-12..	Cuticura soap per box	Rs. 2—6-
Cuticura ointment	,, 0—14-	Waterbury's cod liver oil	,, 3—0	Erasmic ,, ,, ,,	,, 1—3-
Dejonghs' cod liver oil	, 3—4	Wincarnis	Rs. 2—15- & 5—8-	Goodwins bath soap for 6	,, 2—8-
Deschiens Syrup	,, 2-12-	Woodward's gripe water	1—2-	Palm olive soap per cake	,, 0—6-
Enos' fruit salt	,, 2—8-	Zam buk	Rs. 0-15- & 2—2-	Pear's glycerine soap per box	,, 1—5-
Esnofele pills	, 2—10-	Calox tooth powder	0-15-	Vinolia baby ,, ,,	,, 1—6-
Genaspirin	,, 0—15-	Calverts' carbolic powder	0—7-	,, Premier ,,	,, 1—3
Sulphur bitters	,, 3-12-	Colgates' dental cream	0-11-	Wright's coal tar ,, ,,	,, 1—2-
				Turkish bath soap 12 cakes	,, 2—8-

Reduction in prices of Stationary department made permanent.
GET IT AT SPENCERS!
52—28 **THE SHOPPING CENTRE OF COORG.**

Spencer & Co. Ltd,
MERCARA & POLLIBETTA.

ಸ್ಥಾಪಿತವಾದದ್ದು 1874 ಮೂಲಧನ 7 ಕೋಟಿ ರೂಪಾಯಿಗಳು

ಓರಿಯಂಟಲ್ ಗವರ್ನ್‌ಮೆಂಟ್ ಸೆಕ್ಯೂರಿಟಿ ಲೈಫ್ ಅಷ್ಯೂರೆನ್ಸ್ ಕಂಪೆನಿ ಲಿಮಿಟೆಡ್, ಹೆಡ್ ಆಫೀಸು— ಬೊಂಬಾಯಿ.

1922–1924 ಈ ಮೂರು ವರ್ಷಗಳಲ್ಲಿ ಕಂಪೆನಿಯಲ್ಲಿ ನಡೆದ ಕೆಲಸದ ಫಲಿತಾಂಶಗಳು.—

ಲಾಭ— ರೂ. 51,00,000 (ಐವತ್ತೊಂದು ಲಕ್ಷ ರೂಪಾಯಿಗಳು.) ಈ ಪೈಕಿ 45,94,80 ರೂಪಾಯಿಗಳನ್ನು ಲಾಭ ಸಹಿತ ವಿಮೆ ಮಾಡಿರುವವರ ವಿಮೆ ಹಣಕ್ಕೆ ಹೆಚ್ಚು ಬೋನಸ್ ಆಗುವಂತೆ ಈ ಕೆಳಗೆ ಕಾಣಿಸಿರುವ ರೀತಿಯಲ್ಲಿ ಸೇರಿಸಿರುತ್ತದೆ.

ಜೀವಪೂರ್ಣಾವಧಿಯ ವಿಮೆದಾರರಿಗೆ ರೂ. 1000 ವಿಮೆ ಹಣಕ್ಕೆ

ಈ ಮೂರು ವರ್ಷಗಳಿಗೆ ರೂ. 67½.

ಕ್ಲಿಪ್ತಕಾಲದ ವಿಮೆದಾರರಿಗೆ ರೂ. 1000 ವಿಮೆ ಹಣಕ್ಕೆ

ಈ ಮೂರು ವರ್ಷಗಳಿಗೆ ರೂ. 54.

ಈ ಕಂಪೆನಿಯಲ್ಲಿ ಕ್ರಮೇಣ ಹೆಚ್ಚುತ್ತಿರುವ ಜನಾನುರಾಗವು ಈ ಕೆಳಗೆ ಕೊಟ್ಟಿರುವ ಹೊಸ ಕೆಲಸದ ಪಟ್ಟಿಯಿಂದ ವ್ಯಕ್ತವಾಗುತ್ತದೆ.

1923ರಲ್ಲಿ—ರೂ 1,74,00,000
1924 ,, 2,37,00,000
1925 ,, 2,96,00,000

ಇನ್ನೂ ದಿನದಿನಕ್ಕೂ ಅಭಿವೃದ್ಧಿಯಾಗುತ್ತಲೇ ಇದೆ. ಜೀವವಿಮೆ ಪತ್ರದಲ್ಲಿ ಹಣವನ್ನು ಲಾಭಕರವಾಗಿ ಶೇಖರಿಸಲು ಇದೇ ಸುಸಮಯ.

ಬೇಕಾದ ವಿಷಯಗಳನ್ನು ಈ ಕೆಳಗಿನ ವಿಳಾಸಕ್ಕೆ ಬರೆದು ತಿಳಿದುಕೊಳ್ಳಬಹುದು.

ಓರಿಯಂಟಲ್ ಬಿಲ್ಡಿಂಗ್ಸ್,
ಪೋಸ್ಟ್ ಬಾಕ್ಸ್ 56
52—6 ಬೆಂಗಳೂರು

ಪಿ. ಪಿ. ಸುಬ್ರಮಣ್ಯಯ್ಯರ್,
ಬ್ರಾಂಚ್ ಸೆಕ್ರೆಟರಿ.

ಆಂಧ್ರ ಆಯುರ್ವೇದಿಕ್ ಫಾರ್ಮಸಿ.

ಬ್ರಾಂಚ್, ಬೆಂಗಳೂರು ಸಿಟಿ

ಚ್ಯವನಪ್ರಾಸ ಲೇಹ.

ಇದು ಸರ್ವೋತ್ಕೃಷ್ಟವಾದ ಗಿಡಮೂಲಿಕೆಗಳಿಂದ ತಯಾರಿಸಲ್ಪಟ್ಟ ಆಯುರ್ವೇದ ರಸಾಯನೌಷಧವು. ವಿದ್ಯಾರ್ಥಿಗಳೂ ವಿಶೇಷವಾಗಿ ಬುದ್ಧಿಯನ್ನು ಪ್ರಯೋಗಿಸಿ ಕೆಲಸ ಮಾಡುವವರೂ ಈ ಲೇಹವನ್ನು ಸೇವಿಸಿದರೆ ವಿಶೇಷವಾಗಿ ಬುದ್ಧಿಶಕ್ತಿಯನ್ನೂ ಜ್ಞಾಪಕಶಕ್ತಿಯನ್ನೂ ಹೊಂದುವರು.



ದೀರ್ಘಕಾಲದ ವ್ಯಾಧಿಯಿಂದಾಗಲೀ ಕೆಟ್ಟ ನಡತೆಯಿಂದಾಗಲೀ, ಸ್ವಭಾವ ಶಕ್ತಿಯ ಕೊರತೆಯಿಂದಾಗಲೀ ಶರೀರ ಕಾಂತಿಯು ಕುಂದಿ ರಕ್ತ ಕೆಟ್ಟು ಇಂದ್ರಿಯ ದೌರ್ಬಲ್ಯವೇ ಮೊದಲಾದ ವಿಕಾರಗಳಿಂದ ಪೀಡಿತರಾಗಿರುವವರು ಈ ಲೇಹವನ್ನು ಸೇವಿಸಿದರೆ ಈ ತರದ ವಿಕಾರಗಳನ್ನೆಲ್ಲಾ ಪರಿಹರಿಸಿ ದೇಹಕ್ಕೂ ಮನಸ್ಸಿಗೂ ಉಲ್ಲಾಸವನ್ನುಂಟುಮಾಡಿ ಮಾಂಸ ಖಂಡಗಳಿಗೂ ನರಗಳಿಗೂ ಬಲವನ್ನು ಕೊಟ್ಟು ದೇಹಪುಷ್ಟಿಯನ್ನುಂಟುಮಾಡಿ ಜನವಶ್ಯತ್ವವನ್ನುಂಟುಮಾಡುವುದು. ಅಲ್ಲದೆ ಆರೋಗ್ಯದೃಢಶರೀರವುಳ್ಳವನಾಗಿ ದೀರ್ಘಕಾಲ ಬದುಕುವನು. ಕೆಮ್ಮು ಉಬ್ಬಸ ವ್ಯಾಧಿಯುಳ್ಳವರಿಗೂ ಮುಖ್ಯವಾಗಿ ಕ್ಷಯರೋಗಿಗಳಿಗೂ ಇದು ಸಂಜೀವಿನಿಯೇ ಸರಿ! ಚರಕ ಸಂಹಿತೆಯಲ್ಲಿ ಇದರ ಗುಣವು ಅದ್ಭುತವಾಗಿ ಹೇಳಲ್ಪಟ್ಟಿದೆ. ೧೦ ತೊಲೆಗೆ ೧ ರೂಪಾಯಿ. ೪೦ ತೊಲೆಗೆ ೩ ರೂಪಾಯಿ.

ಎಲ್ಲಾ ಕಡೆಯಲ್ಲಿಯೂ ಏಜಂಟರು ಬೇಕು.

ಸೂಚನೆ — ಇಲ್ಲಿ ಶಾಸ್ತ್ರೀಯವಾಗಿ ಎಲ್ಲಾ ಔಷಧಗಳೂ ತಯಾರಿಸಿ ಕ್ರಯಕ್ಕೆ ಸಿಗುವುವು. ಆಯುರ್ವೇದ ಭೂಷಣ ಶ್ರೀ ನಾರಾಯಣರಾವ್ ಎ. ಎಂ. ಎ. ಸಿ. ಯವರು ರೋಗಿಗಳನ್ನು ಪರೀಕ್ಷಿಸಿ ಚಿಕಿತ್ಸೆಯನ್ನು ಪ್ರತಿದಿನವೂ ನಡೆಸುವರು. ವಿಶೇಷ ಸಂಗತಿಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಟಿ. ಸಿ. ಎಸ್. ಮುನಿಯಪ್ಪ ಅಂಡ್ ಕೋ,

ಮ್ಯಾನೇಜಿಂಗ್ ಏಜೆಂಟ್ಸ್, ಆಂಧ್ರ ಆಯುರ್ವೇದಿಕ್ ಫಾರ್ಮಸಿ,

10—15 ಚಿಕ್ಕಪೇಟೆ, ಬೆಂಗಳೂರು ಸಿಟಿ.

ಮನೋಲ್ಲಾಸಿನಿ ತೈಲ.

ತಲೆನೋವು, ತಲೆ ತಿರುಗುವುದು, ತಲೆಯು ಕಾವೇರಿ, ಕಿವಿಯಿಂದ ಕೀವು ಸೋರುವುದು ಕಿವುಡುತನ, ಕಣ್ಣುನೋವು, ಅಪಸ್ಮಾರ ನಿದ್ದೆ ಬಾರದಿರುವುದು, ಸಿಟ್ಟು ಬುದ್ಧಿ ಕುಂದಿಹೋಗುವುದು ಇವುಗಳನ್ನೆಲ್ಲಾ ಖಂಡಿತ ಗುಣಪಡಿಸುತ್ತದೆ. ಉದುರುವ ಕೂದಲನ್ನು ನಿಲ್ಲಿಸಿ ಗಿಡ್ಡಗಿರುವ ಕೂದಲನ್ನು ಬೆಳೆಸಿ ಕೂದಲಿಗೆ ಸೌಂದರ್ಯವನ್ನೂ ಹೊಳಪನ್ನೂ ಕೊಟ್ಟು ಅಕಾಲಿಕ ಹಣ್ಣಾಗಿರುವ ಕೂದಲನ್ನು ತಡೆದು ಕೂದಲು ಇಲ್ಲದ ಸ್ಥಳದಲ್ಲಿ ಹೊಸ ಕೂದಲನ್ನು ಹುಟ್ಟಿಸುತ್ತದೆ. ಬೆಲೆ ಸೀಸೆಗೆ ರೂ 1, 3 ಸೀಸೆಗೆ 2—10—0, ಒಂದು ದೊಡ್ಡ ಸೀಸೆಗೆ ರೂ 2, 3 ಸೀಸೆಗಳಿಗೆ 5—8—0

ಚಂದನಾಸವ.— ಇದು ಪ್ರಮೇಹ ಮೂತ್ರಕೃಚ್ಛ್ರ, ಮೂತ್ರ ರಸಿಕವಾಗಿ ಸೋರುವುದು, ಮೂತ್ರಕೋಶದ ಉರಿ, ಮೂತ್ರಪಿಂಡಗಳ ಉರಿ ಮೂತ್ರನಾಳದಲ್ಲಿ ಹುಣ್ಣು, ಮೂತ್ರ ಹೊಯ್ಯುವಾಗ ಉರಿಯುವುದು, ಮೂತ್ರನಾಳದಿಂದ ಕೀವು ಬರುವುದು, ಮೂತ್ರದಲ್ಲಿ ಧಾತು, ಹುಡಿ ಹೋಗುವುದು, ಆಗಾಗ್ಗೆ ಮೂತ್ರ ಬರುವದು, ಮೂತ್ರ ತಡೆಯಲಿಕ್ಕೆ ಸಾಮರ್ಥ್ಯವಿಲ್ಲದಿರುವುದು, ದೇಹದಲ್ಲಿ ಉರಿ, ಬಾಯಾರಿಕೆ, ಸ್ವಪ್ನಾವಸೆ, ಮೂತ್ರನಾಳದಲ್ಲಿ ಚುಚ್ಚುವ ನೋವು ಇವುಗಳಿಗೆ ಪರಮ ಔಷಧಿ ಗಂಡಸರಿಗೂ ಹೆಂಗಸರಿಗೂ ಇದು ಅತ್ಯುತ್ತಮ ಬೆಲೆ—ಬಾಟ್ಲಿ 1, 3, 6ಕ್ಕೆ ರೂ 1—4—0; 3—8—0; 6—12—0.

ರೋಮನಾಶಿನಿ.— ಈ ಹುಡಿಯನ್ನು ನೀರಲ್ಲಿ ಕಲಸಿ ಮೈಯಲ್ಲಿ ರೋಮವಿರುವ ಭಾಗಕ್ಕೆ ಹಚ್ಚಲು ರೋಮವು ಉದುರಿ ಬೀಳುವುದು. ದಬ್ಬಿ ೧ಕ್ಕೆ 6 ಆಣೆ, 3 ಡಬ್ಬಿಗಳಿಗೆ ರೂ. 1, 1 ಡಜನಿಗೆ 3—8—0.

ಅಮೃತಾರಿಷ್ಟ.— ಇದು ಕ್ಷೀಣತೆ ಬೆಳೆಸಿರುವ ಉತ್ತಮವಾದೀಯ ಔಷಧಿ. ಎಲ್ಲಾ ತರದ ಜ್ವರಕ್ಕೆ ಉತ್ತಮ. ಬೆಲೆ:— ಬಾಟ್ಲಿ 1, 3, 6ಕ್ಕೆ ರೂ. 1—4—0; 3—8—0; 6—12—0.

ಲೋಹಾಸವ.— ಇದು ಸ್ತ್ರೀಯರಿಗೆ ಮತ್ತು ಮಕ್ಕಳಿಗೆ ರಕ್ತದಿಂದುಂಟಾದ ಅಶಕ್ತತೆಗೆ ದಿವ್ಯವಾದ್ದು. ಬೆಲೆ—ಬಾಟ್ಲಿ 1, 3, 6ಕ್ಕೆ ರೂ. 1—4—0; 3—8—0; 6—12—0.

ಪತ್ರ ಬರೆಯುವಾಗ ಈ ಪತ್ರಿಕೆಯ
52—21 ಹೆಸರನ್ನು ಬರೆಯಿರಿ.

ವಿಳಾಸ—ಮನೋಲ್ಲಾಸಿನಿ ಕಂಪೆನಿ,
9 ಮಂಗಳೂರು, ಕೊಡಿಯಾಲ.

"ಕೊಡಗು"

ಕ್ರಿ. ೧೯೩೬ನೇ ಇಸವಿ ಮೇ ತಾ.
೧೪ನೇ ಶುಕ್ರವಾರ

ಗ್ರಾಮಾಭಿವೃದ್ಧಿ.

ಯಾವ ತರದ ಸರಕಾರ ಬರಲಿ, ಯಾವ ಅಧಿಕಾರಿಗೆ ದೊಡ್ಡ ಪದವಿ ದೊರೆಯಲಿ, ದೊರೆಯದಿರಲಿ ಗ್ರಾಮವಾಸಿಗಳ ಸ್ಥಿತಿಯು ಅಭಿವೃದ್ಧಿಯಾಗುವದು ಬಹಳ ನಿಧಾನ. ಗ್ರಾಮವಾಸಿಗಳಿಗೆ ಉನ್ನತ ದರ್ಜೆಯ ರಾಜಕೀಯ ಚಳವಳವು ಅಷ್ಟೊಂದು ರುಚಿಸುವದಿಲ್ಲ. ಅವರಿಗೆ ಹೊಟ್ಟೆ ತುಂಬ ಅನ್ನ, ಮೈ ತುಂಬ ಬಟ್ಟೆ, ಬೇಕಾದಷ್ಟು ಕುಡಿಯುವ ನೀರು ಮತ್ತು ಖಾಯಿಲೆಗಳಿಗೆ ಸುಲಭದಲ್ಲಿ ಚಿಕಿತ್ಸೆ ದೊರೆತರೆ ಅವರು ತೃಪ್ತರಾಗಿಯೇ ಇರುತ್ತಾರೆ. ಸರಕಾರವು ನಡೆಯಲು ಬೇಕಾದ ಹಣದ ಹೆಚ್ಚಿನ ಭಾಗವನ್ನು ಗ್ರಾಮವಾಸಿಗಳೇ ಒದಗಿಸಿಕೊಡುತ್ತಾರೆ. ಆದರೆ ಅವರಿಗೆ ಬೇಕಾದ ಅನುಕೂಲಗಳನ್ನು ದೊರಕಿಸಲು ಸರಕಾರವು ಸಾಕಷ್ಟು ಗಮನ ಕೊಡುವದಿಲ್ಲ. ಈಗ ಜಾರಿಯಲ್ಲಿರುವ ಸರಕಾರದ ರಚನೆಯು ಜಾರಿಯಲ್ಲಿ ಇರುವಷ್ಟು ಕಾಲ ಸರಕಾರದಿಂದ ಗ್ರಾಮಾಭಿವೃದ್ಧಿಗೆ ಸಹಾಯ ಹೆಚ್ಚಬೇಕೆಂಬ ಆಶೆ ಇಡುವದು ನಿಷ್ಪ್ರಯೋಜನ. ಸರಕಾರದವರು ತಮ್ಮ ಕರ್ತವ್ಯವನ್ನು ತಿಳಿದುಕೊಂಡು ಪ್ರಜೆಗಳ ಸಹಾಯಕ್ಕೆ ಬರುವದನ್ನು ಕಾಯದೆ ದೇಶದ ಜನರಿಗಾಗಿ ಅವರ ಮುಂದಾಳುಗಳು ಕೆಲಸಮಾಡಿಯೇ ತೀರಬೇಕು. ಸಭೆಗಳನ್ನು ಸೇರಿಸಿ ಉಪನ್ಯಾಸಗಳನ್ನು ಕೊಟ್ಟು ಹೋದರೆ ಮುಂದಾಳುಗಳ ಕೆಲಸ ತೀರಲಿಲ್ಲ. ಪಂಗಡಗಳನ್ನು ಮಾಡಿಕೊಂಡು ಮೇಲ್ಮೆಗೆ ಹೋರಾಡ ಹತ್ತಿದರೆ ಗ್ರಾಮವಾಸಿಗಳ ಕ್ಷೇಮವನ್ನು ಮರೆಯುವ ಸಂಭವವಿದೆ. ಯಾವ ಮುಂದಾಳೇ ಆಗಲಿ ಗ್ರಾಮವಾಸಿಗಳ ಅಂದರೆ ಬಡವರು ಮತ್ತು ಕಡಿಮೆ ದರ್ಜೆಯ ಜನರ ಕ್ಷೇಮಕ್ಕಾಗಿ ಕೆಲಸಮಾಡಿದರೆ ಅಂಥಾ ಮುಂದಾಳಿಗೆ ಗ್ರಾಮವಾಸಿಗಳು ಕೃತಜ್ಞರಾಗದೆ ಇರಲಾರರು.

ಗ್ರಾಮಗಳಿಗೆ ಹೊಕ್ಕು ಗ್ರಾಮವಾಸಿಗಳ ಅಭಿವೃದ್ಧಿಗೆ ಕೆಲಸಮಾಡಲು ಜನರು ಬೇಕು. ಈ ಕೆಲಸದಿಂದ ಹೆಸರು ಬರಲಾರದು, ಐಶ್ವರ್ಯ ಸಿಗಲಾರದು, ಬಿರುದು ಬರಲಾರದು, ಸರಕಾರಿ ಉದ್ಯೋಗ ದೊರೆಯಲಾರದು. ಸಮಾಜದ ಏಳಿಗೆಗ ಕೆಲಸಮಾಡಿದೆನೆಂಬ ತನ್ನ ಮನಸಾಕ್ಷಿಯ ತೃಪ್ತಿಯನ್ನೇ ಪ್ರತಿಫಲವಾಗಿ ಇಟ್ಟುಕೊಳ್ಳಬೇಕಷ್ಟೆ. ಈ ರೀತಿ ಕೆಲಸ ಮಾಡಲು ಮುಂದೆ ಬರುವ ಜನರು ಅತಿವಿರಳ. ಈ ರೀತಿ ಗ್ರಾಮವಾಸಿಗಳ ಮತ್ತು ಸಾಧಾರಣವಾಗಿ ಬಡ ಜನರ ಸೇವೆ ಮಾಡಲು ತಯಾರಿರುವ ಹತ್ತೆಂಟು ಜನರು ಮುಂದೆ ಬಂದರೆ ಗ್ರಾಮವಾಸಿಗಳ ಗೋಳನ್ನು ಕೆಲವು ಮಟ್ಟಿಗಾದರೂ ನಿವಾರಿಸಬಹುದು. ಈ ರೀತಿ ಕೆಲಸ ಮಾಡುವ ಜನರಿಗೆ ಪ್ರತಿಫಲವನ್ನು ಒದಗಿಸಿಕೊಡುವಂತಾದ್ದು ಅನುಕೂಲಸ್ಥರ ಕೆಲಸವಾಗಿದೆ. ಕೆಲಸಗಾರರು ಜನರ ನಿಜವಾದ ಸೇವಕರಾಗಿದ್ದು ಪ್ರಮಾಣಿಕತನದಲ್ಲಿ ಇದ್ದರೆ ಗ್ರಾಮವಾಸಿಗಳಿಂದಲೇ ಕೆಲಸಗಾರರ ಜೀವನಕ್ಕೆ ಬೇಕಾದಷ್ಟು ಧನಸಹಾಯವನ್ನು ಒದಗಿಸಿಕೊಳ್ಳಬಹುದು.

ನಾವು ಹಿಂದಿನವರ್ಷದಲ್ಲಿ ಬರೆದ ರೀತಿ ಈಗತಾನೇ ಟ್ರಿಂಟೋರಿಯಲ್ ಐಲಾಮಿನಲ್ಲಿ ಬೆಳಿಗ್ಗೆ 5ಘಂಟೆಯಿಂದ ಸಾಯಂಕಾಲ 6ಘಂಟೆವರೆಗೆ ಕೆಲಸಮಾಡಿ ಹೋದ ಯುವಕರಲ್ಲಿ ಕೆಲವರಿಗಾದರೂ ದೇಶಭಕ್ತಿ ಹುಟ್ಟಿ ತಾವು ಆ ಐದು ತಿಂಗಳಲ್ಲಿ ಮಾಡಿದ ಕೆಲಸದ ಅರ್ಧ ಅಥವಾ ಕಾಲು ಭಾಗವನ್ನಾದರೂ ತನ್ನ ಗ್ರಾಮಕ್ಕೆ ಅಥವ ನಾಡಿಗೆ ಉಪಯೋಗಿಸುವಂತೆ ತೋರಿದರೆ ದೇಶದ ಕಲ್ಯಾಣವು ಅತಿ ಶೀಘ್ರದಲ್ಲೇ ಆದೀತು. ಮಡಿಕೇರಿಯಲ್ಲಿ ಹೊಂದಿದ ತರಬೇತು ಪಡೆಯುವ ಸಂದರ್ಭ ತಮ್ಮ ಸಮಯದಲ್ಲಿ ದಿವಸಕ್ಕೆ ಒಂದು ಘಂಟೆಯನ್ನಾದರೂ ತಮ್ಮ ಗ್ರಾಮಕ್ಕೆ ಉಪಯೋಗಿಸುತ್ತೇವೆಂಬ ತೀರ್ಮಾನಮಾಡಿಕೊಳ್ಳಬೇಕೆಂತ ಅವರನ್ನು ನಾವು ಕೇಳಿಕೊಳ್ಳುತ್ತೇವೆ.

ದೇಶದಿಂದ ಹೊರಕ್ಕೆ ವಿದ್ಯಾರ್ಜನೆಗಾಗಿ ಹೋದ ಯುವಕರನೇಕರು ರಜಾಕಾಲವಾದ್ದರಿಂದ ಈಗ ದೇಶದಲ್ಲಿ ಇದ್ದಾರೆ. ಇವರಾದರೂ ತಮ್ಮ ರಜಾ ದಿನಗಳನ್ನು ಗ್ರಾಮದ ಹಿತಚಿಂತನೆಯನ್ನು ಯೋಚಿಸುವವರಲ್ಲಿ ಕಳೆದರೆ ಬಹಳ ಪ್ರಯೋಜನವಾದೀತು. ಈಗ ದೊರೆಯುವ ವಿದ್ಯೆಯ ಸ್ವಭಾವದಿಂದ ಈ ರೀತಿ ದೇಶಭಕ್ತಿ ಹುಟ್ಟುವ ಸಂಭವವೇ ಕಡಿಮೆ. ಅದರಲ್ಲೂ ನಮ್ಮ ದೇಶದಿಂದ ವಿದ್ಯಾಭ್ಯಾಸಕ್ಕೆ ಬೇರೆ ದೇಶಗಳಿಗೆ ಹೋದವರು ಈ ಕಾಲದ ನಾಗರೀಕತೆಯ ಹೊರಗಿನ ಆಡಂಬರಗಳಿಗೆ ಮೆಚ್ಚಿ ದೇಹಶ್ರಮವಾಗುವ ಕೆಲಸಮಾಡಲು ಹಿಂಜರಿಯುತ್ತಾರೆ. ವಿದ್ಯಾರ್ಜನೆಗಾಗಿ ಹೊರಗೆ ಹೋದ ಯುವಕರನ್ನು ಗ್ರಾಮಾಭಿವೃದ್ಧಿ ಕೆಲಸಕ್ಕೆ ಬನ್ನಿ ಎಂತ ಮುಂದಾಳುಗಳು ಕರೆಯಲೇ ಇಲ್ಲವೆಂತ ತೋರುತ್ತದೆ. ಹಾಗೆ ಕರೆಯದೆ ಇದ್ದರೂ ಜಮೀನ್ದಾರರ ಸಂಘದ ಮಹಾಸಭೆ ನಡೆದ ಸಮಯದಲ್ಲಿ ಸ್ವಯಂಸೇವಕರಾಗಿ ಕೆಲಸಮಾಡಲು ಆತುರಪಟ್ಟು ಮುಂದೆ ಬರಬಹುದಿತ್ತು, ಅಥವಾ ಬೇರೆಯವರಾದರೂ ಸಾರ್ವಜನಿಕ ಕೆಲಸ ಕೈಕೊಳ್ಳಬಹುದಿತ್ತು. ಈ ರೀತಿ ತಮ್ಮ ದೇಶದ ಕ್ಷೇಮದ ಯೋಚನೆ ಸಹ ಯುವಕರಿಗೆ ತೋರದೆ ಇರುವದು ಬಹಳ ವ್ಯಸನಕರ.

ಈರೀತಿ ತಿಳುವಳಿಕೆಯಿರುವವರು ಮುಂದೆ ಬಂದರೆ ಗ್ರಾಮಸ್ಥರನ್ನು ಸೇರಿಸಿಕೊಂಡು ಗ್ರಾಮದ ಬೆಳವಣಿಗೆಗೆ ಸಹಾಯ ಮಾಡಲು ಅನೇಕ ದಾರಿಗಳಿವೆ. ಆಹಾರಸಾಮಗ್ರಿಗಳನ್ನು ಒದಗಿಸಿಕೊಳ್ಳಲು ತಾವು ಬೆಳೆಸಿದ ಮಾರಾಟದ ವಸ್ತುಗಳನ್ನು ಮಾರಾಟಮಾಡಲಿಕ್ಕೂ ಸಹಕಾರಿಸಂಘಗಳನ್ನು ಏರ್ಪಾಡುಮಾಡಬಹುದು. ಗ್ರಾಮಗಳಲ್ಲಿ ಸಾಲಕೊಡುವ ಸೊಸೈಟಿಗಳಿದ್ದರೂ ಒಗ್ಗಟ್ಟಾಗಿಕೊಳ್ಳುವ ಮತ್ತು ಮಾರುವ ಸಂಘಗಳು ಇಲ್ಲದಿರುವದು ದೊಡ್ಡದೊಂದು ಲೋಪವೆ. ಇಂಥಾ ಸಂಘಗಳಿಲ್ಲವೆಂತ ಸರಕಾರವನ್ನಾಗಲೀ ಸಂಬಂಧಪಟ್ಟ ಅಧಿಕಾರಿಯನ್ನಾಗಲೀ ಆಕ್ಷೇಪಿಸದೆ ಯಾವದಾದರೊಂದು ಗ್ರಾಮದಲ್ಲಾದರೂ ಇಂಥಾ ಸಂಘವೊಂದನ್ನು ಸ್ಥಾಪಿಸಿ ನಡಿಸಲು ಸಹಾಯಮಾಡಿದರೆ ದೇಶಕ್ಕೆ ಎಷ್ಟೋ ಉಪಕಾರಮಾಡಿದಂತಾದೀತು. ಈ ತರದ ಸಂಘಗಳನ್ನು ನಡಿಸಲು ಪ್ರಮಾಣಿಕತೆ ತುಂಬಾ ಬೇಕು. ಈ ಗುಣವನ್ನು ಉಚ್ಚವಿದ್ಯೆ ಪಡೆಯುತ್ತಿರುವ ವಿದ್ಯಾರ್ಥಿಗಳಿಗೆ ನಿದರ್ಶಿಸಲು ತುಂಬಾ ಅವಕಾಶವಿದೆ. ಅಂಥಾ ವಿದ್ಯಾರ್ಥಿಗಳು ಈ ದೇಶದಲ್ಲಿ ಇರುವ ಎರಡು ತಿಂಗಳ ಸಮಯದಲ್ಲಿ ತಾವೇ ಅಂಥಾ ಸಂಘಗಳ ಸೆಕ್ರೆಟರಿಗಳಾಗಿ ಕೆಲಸಮಾಡಿ ಲೆಕ್ಕ ಪತ್ರಗಳನ್ನು ಮಾದರಿಯಾಗಿ ಇಟ್ಟು ಗ್ರಾಮವಾಸಿಗಳಿಗೆ ತೋರಿಸಿಕೊಟ್ಟರೆ ಮುಂದಕ್ಕೆ ಗ್ರಾಮವಾಸಿಗಳೇ ನಡೆಸಿಕೊಂಡು ಹೋದಾರು.

ಗ್ರಾಮಸೇವಕರಾಗಿ ಕೆಲಸಮಾಡಲು ಮುಂದೆ ಬರುವ ಯುವಕರಿದ್ದರೆ ಗ್ರಾಮದ ಅಶುಚಿಯನ್ನು ಹೋಗಲಾಡಿಸಲು ತಾವಾಗಿಯೇ ಕೆಲಸಮಾಡಿ ತೋರಿಸಬಹುದು. ಲಂಕಾನ ಸಂಘಗಳಲ್ಲಿ ತಾವು ಕೆಲಸಮಾಡಿ ತೋರಿಸಬಹುದು. ಗ್ರಾಮಗಳಲ್ಲಿ ಮನೆ ಮನೆಗೆ ಹೋಗಿ ತಾವು ಕಲಿತುಬಂದ ವಿಷಯಗಳ ಮೇಲೆ ಮಾತನಾಡಬಹುದು. ಗ್ರಾಮವಾಸಿಗಳು ಕುಡಿಯುವ ನೀರು ಅಶುಚಿಯಾಗಿದ್ದರೆ ಅಂಥಾ ನೀರಿನ ಭಾವಿಗಳನ್ನು ಶುಚಿ ಮಾಡಲು ತಾವಾಗಿಯೇ ಕೆಲಸಮಾಡಲು ಸೊಂಟಕಟ್ಟಬಹುದು. ಅವರವರ ಮನೆಗೆ ಹೋಗಿ ಕೆಲಸಮಾಡುವದು ನಾಚಿಕೆಗೇಡೆಂತ ತೋರಿದರೆ ತಮ್ಮ ತಮ್ಮ ಭಾವಿ, ಮನೆ, ಕೊಟ್ಟಿಗೆ, ಪಟ್ಟಣ ಮುಂತಾದನ್ನು ಶುಚಿಮಾಡಲು ತಾವೇ ಸ್ವತಃ ಹೊರಡಬಹುದು.

ಈ ತರದ ಕೆಲಸಗಳು ತಮ್ಮ ಗೌರವಕ್ಕೆ ಕಡಿಮೆಯೆಂತ ಭಾವಿಸುವದಾದರೆ ದೇಶಕ್ಕಾಗಿ ಕೆಲಸಮಾಡುವ ಸಂಸ್ಥೆಗಳ ಪ್ರಚಾರ ಕೆಲಸಮಾಡಬಹುದು. ಈ ತ್ಯಾಗದ ಕೆಲಸಮಾಡುವ ಒಗ್ಗೆ ಗ್ರಾಮಗಳಿಗೆ ಹೋದರೆ ಗ್ರಾಮಾಭಿವೃದ್ಧಿಗಾಗಿ ಕೆಲಸಮಾಡುವ ಸಂಸ್ಥೆಗಳಿಗೆ ಸಹಾಯಮಾಡುವದೂ ಅಲ್ಲದೆ ತವ ಮಾತೃಭೂಮಿಯ ಜನರ ಸ್ಥಿತಿಯನ್ನು ತಿಳಿದುಕೊಳ್ಳಲು ಅವಕಾಶದೊರೆಯುತ್ತದೆ. ಮುಂದೆ ಯಾವ ಉದ್ಯೋಗದಲ್ಲೇ ಆಗಲಿ ತನ್ನ ಜೀವನ ನಡಿಸಿಕೊಳ್ಳುವಾಗ ಗ್ರಾಮವಾಸಿಗಳ ಕ್ಷೇಮವು ತಮ್ಮ ಮನಸ್ಸಿನಲ್ಲಿ ನಿಲ್ಲದೆ ಇರಲಾರದು.

ಈ ನಮ್ಮ ಮಾತುಗಳೆಲ್ಲಾ ಕಾಲೇಜುಗಳಲ್ಲಿ ಅಥವಾ ಶಾಲೆಗಳಲ್ಲಿ ಓದುವವರಿಗೆ ಮಾತ್ರ ಅನ್ವಯವಾಗುತ್ತದೆಯೆಂತ ವಾಚಕರು ಊಹಿಸಬಾರದು. ತನ್ನ ಸ್ವಂತ ಸಂಸಾರಕ್ಕಾಗಿ ಕೆಲಸಮಾಡುತ್ತಿರುವವರು ಸಹ ತಮ್ಮ ಗ್ರಾಮದ ಕೆಲಸವನ್ನು ಮರೆಯಬಾರದೆಂತ ಪ್ರತಿಯೊಬ್ಬರನ್ನೂ ನಾವು ಕೇಳಿಕೊಳ್ಳುವದಾಗಿದೆ. ಪ್ರತಿಯೊಬ್ಬ ಮನುಷ್ಯನಿಗೂ ಎಡೆಯಿರುವಾಗ ಸಮುದಾಯದ ಕೆಲಸ ಮಾಡಬೇಕು. ಗ್ರಾಮವಾಸಿಗಳಿಗೆ ಸುಲಭಕ್ಕೆ ಹಾಕಲು ಹೊರಗಿನಿಂದ ಬಂದವರು ಇಳಿದರೆ ಗ್ರಾಮವಾಸಿಗಳು ಸುಲಭದಲ್ಲೇ ಹಿಂಬಾಲಿಸುತ್ತಾರೆ. ಈಗಾಗಲೇ ಗ್ರಾಮಗಳಲ್ಲಿ ತಮ್ಮ ಸ್ವಂತ ಜೀವನೋಪಾಯಕ್ಕೆ ಕೆಲಸಮಾಡುತ್ತಿರುವ ಮಧ್ಯ ತಿಂಗಳಿಗೊಂದಾವರ್ತಿಯಾದರೂ ಗ್ರಾಮಸ್ಥರಲ್ಲಿ ಕೆಲವರಾದರೂ ಒಂದುಗೂಡಿ ಮೀಟಿಂಗ್ ಸೇರುವದು ಮುಂತಾದ ಪದ್ಧತಿಯು ರೂಢಿಗೊಂಡಿದೆ. ಇಂಥಾ ಸಮುದಾಯದ ಕೆಲಸಗಳಿಗೆ ಹೆಚ್ಚೆಚ್ಚು ಸೇರುವ ಸ್ವಭಾವವು ಬೆಳೆಯುವಂತೆ ಮಾಡುವದು ಮುಂದಾಳುಗಳ ಕೆಲಸವಾಗಿದೆ. ಸಮುದಾಯಕ್ಕಾಗಿ ಕೆಲಸಮಾಡುವ ಸ್ವಭಾವದ ಜನರು ಹೆಚ್ಚಾಗಿ ಮುಂದೆ ಬಂದರೆ ಹೊಟ್ಟೆತುಂಬಾ ಅನ್ನ, ಮೈತುಂಬಾ ಬಟ್ಟೆ ಮುಂತಾದ್ದನ್ನು ಒದಗಿಸಿಕೊಳ್ಳುವ ಅನುಕೂಲಗಳನ್ನು ಮಾಡಿಕೊಳ್ಳಬಹುದು.

ದಿವಂಗತ ಆರ್ ಬಿ ಅಪ್ಪಾರಂಡ ಮುದ್ದಪ್ಪನವರು

ರಾವ್ ಬಹದ್ದೂರ್ ಅಪ್ಪಾರಂಡ ಮುದ್ದಪ್ಪನವರು ಈ 11ನೇ ದಿನ ಸಾಯಂಕಾಲ 7½ಘಂಟೆಗೆ ತಮ್ಮ ಮಡಿಕೇರಿ ಮನೆಯಲ್ಲಿ ಕಾಗದ ಬರೆಯುತ್ತಿದ್ದಹಾಗೆ ಅಕಸ್ಮಾತ್ತಾಗಿ ಶಿವಾಧೀನರಾದರು. ಇವರು ಆ ದಿನವೇ ತಮ್ಮ ನಲ್ಲೂರು ತೋಟದಿಂದ ಒಂದು ಸಾಯಂಕಾಲ ಗಾಳಿಸವಾರಿಗೆ ಹೋಗಿ ಮನೆಗೆ ವಾಪಸು ಬಂದು ತಮ್ಮ ಆಫೀಸಿನಲ್ಲಿ ಕೆಲಸಮಾಡುತ್ತಿದ್ದಾಗ ಹೃದಯ ತಂಬಾದದ್ದಾಗಿದೆ. ಇವರು ಬಹುಕಾಲ ಬದುಕಿ ಬಾಳಿ ಸ್ವಭಾವ ಮರಣಹೊಂದಿದರು. ಇವರ ದೇಹವನ್ನು ತಾ 12-5-36ರಲ್ಲಿ ನಾಲ್ಕುನಾಡು ಅರಮನೆ ಬಳಿ ಇರುವ ಇವರ ಮನೆಗೆ ಸಾಗಿಸಿದರು.

ಇವರು ದೀರ್ಘಕಾಲ ಸರಕಾರಿ ಉದ್ಯೋಗಮಾಡಿ ಕೊಡಗಿನ ಮೊದಲನೆ ಅಸಿಸ್ಟೆಂಟ್ ಕಮಿಶನರಾಗಿ ನೇಮಿಸಲ್ಪಟ್ಟು 1900ನೇ ಇಸವಿಯಲ್ಲಿ ಪೆನ್ಶನ್ ಪಡಕೊಂಡರು. ಇವರಿಗೆ 78ವರ್ಷ ಪ್ರಾಯವಾಗಿತ್ತು. ಇವರು ರಿಟಯರ್ ಆದ ವೇಳೆ ರಾಜಕೀಯ ಚಳವಳದಲ್ಲಿ ತುಂಬಾ ಭಾಗ ತೆಗೆದುಕೊಳ್ಳದಿದ್ದರೂ ಪ್ರತಿಯೊಂದು ಸಾರ್ವಜನಿಕ ಕಾರ್ಯದಲ್ಲೂ ಸಹಾನುಭೂತಿಯುಳ್ಳವರಾಗಿದ್ದರು. ಇವರ ಜೀವಾತ್ಮಕ್ಕೆ ಶಾಂತಿ ಇರಲಿ.

ಭಾಷಾನ್ವಯ ವಿಶ್ವವಿದ್ಯಾಲಯಗಳು ಈಗಲೆ ಹೊರಡುವದಕ್ಕೆ ಯೋಚನೆಯು.

(ಕಳೆದವಾರದಿಂದ ಮುಂದುವರಿದದ್ದು)

ಇತ್ತ, ಮತ್ತೊಂದು ಕಡೆಗೆ. ದಿವಾನ ಬಾಹದೂರ್ ಕೃಷ್ಣನ್ ನಾಯರ ಇವರು ಮದ್ರಾಸ ಇಲಾಖೆಯ ಪಶ್ಚಿಮ ಭಾಗಕ್ಕೊಂದು ವಿಶ್ವವಿದ್ಯಾಲಯವನ್ನು ತೆಗೆಯಬೇಕೆಂಬ ಉದ್ದೇಶದಿಂದ ಮಲೆಯಾಳ ಮತ್ತು ಕನ್ನಡಿಗರು ಕೂಡಿಕೊಂಡು ಯತ್ನಿಸಬೇಕೆಂದು ಉಪದೇಶಿಸುತ್ತಿರುವರು. ಆದರೆ ಕನ್ನಡಿಗರು ಇವರ ಮೋಹಕ್ಕೆ ಬಲಿ ಬೀಳಬಾರದು. ಹೀಗೆ ಮಲೆಯಾಳಿಗಳೂ ಕನ್ನಡಿಗರೂ ಒಂದಾಗಿ ವಿಶ್ವವಿದ್ಯಾಲಯವನ್ನು ತೆಗೆದರೆ ಭಾಷಾನ್ವಯ ವಿಶ್ವವಿದ್ಯಾಲಯದ ಲಾಭವು ದೊರೆಯುವದಿಲ್ಲ. ಸಾರಾಂಶ, ಕನ್ನಡಿಗರಿಗೆ ಒಂದು ಕಡೆಗೆ ಕೆರೆ, ಒಂದು ಕಡೆಗೆ ಭಾವಿ ಹೀಗೆ ಸ್ಥಿತಿಯಾಗಿರುತ್ತದೆ. ಇವೆರಡುಗಳ ಮಧ್ಯದಿಂದ ಪಾರಾಗಬೇಕಾಗಿದೆ. ಈಗಿದ್ದ ಕಾಯದೆಯಂತೆ ಮದ್ರಾಸದ ಕನ್ನಡಿಗರು ಮದ್ರಾಸ ಇಲಾಖೆಯ ಹೊರಗಿರುವ ತಮ್ಮ ಬಾಂಧವರೊಡನೆ ಕೂಡಲಿಕ್ಕೆ ಬರುವಂತಿಲ್ಲ. ಉತ್ಕಲದವರ ತಗಾಬರವೂ ಹಾಗೆಯೇ ಇದೆ. ಉತ್ಕಲದವರು ಗಂಟಲ ಹಿಡಿದುಕೊಂಡು ತಮಗೊಂದು ಪ್ರತ್ಯೇಕ ಪ್ರಾಂತವನ್ನು ದೊರಕಿಸಿಕೊಂಡಿರುವರು. ತಮಿಳ, ತೆಲುಗು, ಹಿಂದೂಸ್ಥಾನಿಯನ್ನಾಡುವ ಮುಸಲ್ಮಾನರು ಇಲಾಖೆಯ ತುಂಬ ಹಬ್ಬಿರುವರು. ಇಂಥ ಸ್ಥಿತಿಯಲ್ಲಿ ಮಿಕ್ಕ ಬಂಧುಗಳಿಗೆ ಭಾಷಾನ್ವಯ ವಿಶ್ವವಿದ್ಯಾಲಯಗಳು ದೊರಕುವ ಬಗೆ ಏನು?

ಸರಕಾರದವರು ತಮ್ಮ ಬೆಟ್ಟವನ್ನು ವಿಪರೀತವಾಗಿ ಬೆಳಸಿರುವರು. ಆದಕಾರಣ ಅವರೂ ತಾವಾಗಿಯೇ ಹೊಸ ವಿಶ್ವವಿದ್ಯಾಲಯಗಳನ್ನು ಸ್ಥಾಪಿಸುವ ಸಂಭವವಂತೂ ಇಲ್ಲವೇ ಇಲ್ಲ. ಆದಕಾರಣ, ಅವರು ನಮಗೆ 'ತಾಳಿರಿ' 'ತಾಳಿರಿ' ಎಂದೇ ಕೊನೆಯವರೆಗೆ ಉಪದೇಶ ಮಾಡುವವರು. ಹೊಸದಾಗಿ ಭಾಷಾನ್ವಯ ಪ್ರಾಂತಗಳ ರಚನೆಯಾಗುವವರೆಗೆ ತಾಳಿರಿ ಎಂದು ಹೇಳಬಹುದು. ಅಥವಾ ಮುಂದೆ ಬರುವ ಶಾಸನ ಸಭೆಯವರು ಈ ವಿಷಯ ವಿಚಾರ ಮಾಡಬಹುದೆಂದು ಅವರು ಹೇಳಬಹುದು. ಅದು ಮುಂದಿನ ಮಾತು! "ನಮ್ಮ ಸಂಸ್ಥಾನಗಳ ಆಶ್ರಯವನ್ನು ಹಿಡಿಯಿರಿ" ಎಂದು ಹಲವರು ಉಪದೇಶಿಸುತ್ತಾರೆ. ಮತ್ತೆ ಕೆಲವರು ಆ ಸಂಸ್ಥಾನದ ವಿಶ್ವವಿದ್ಯಾಲಯಗಳಲ್ಲಿಯೇ ಸೇರಿಕೊಳ್ಳಿರೆಂದು ಹೇಳುತ್ತಾರೆ. ಹೀಗಾಗುವದಕ್ಕೆ ಕಾಯದೆಯ ಮತ್ತೂ ರಾಜಕೀಯ ತೊಂದರೆಗಳೂ ಅನೇಕವಿರುವದಲ್ಲದೆ, ಈ ಸೂಚನೆಯು ಅಲ್ಲಿಯವರಿಗೆ ಎಷ್ಟರಮಟ್ಟಿಗೆ ಮಾನ್ಯವಾಗುತ್ತದೆಯೋ ಎಂಬದು ಸಂದೇಹದ ಮಾತು. ಮೇಲಾಗಿ ಅವರು ಒಂದುವೇಳೆ ಒಪ್ಪಿದರೂ ನಾವು ಎಷ್ಟರಮಟ್ಟಿಗೆ ವಿದ್ಯಾ ವಿಷಯದ ಮಟ್ಟಿಗೆ ಏಕಾಗಲೊಲ್ಲದು, ಅವರೊಡನೆ ಬೆರೆಯುವದು ವ್ಯವಹಾರ ದೃಷ್ಟಿಯಿಂದ ಸರಿಯಾದುದು ಎಂಬದೂ ಯೋಚಿಸಬೇಕಾದ ವಿಷಯವೇ ಆಗಿರುವದು. ಹಾಗಾದರೆ, ವಿದ್ಯಾತಜ್ಞರು ಸುವರ್ಣ ವೃಷ್ಟಿಯನ್ನು ಸುರಿಸುವ ವರೆಗೆ ತಣ್ಣಗೆ ಕೈಮುಚ್ಚಿಕೊಂಡು ಕುಳಿತುಕೊಳ್ಳಬೇಕೋ?

ಈಗಿಂದೀಗಲೇ ಭಾಷಾನ್ವಯ ವಿಶ್ವವಿದ್ಯಾಲಯಗಳು ೩೪ ಲಕ್ಷ ಮರಾಠಿಗರ, ೬೩ ಲಕ್ಷ ಗುಜರಾತಿಗರ, ೭೬-೭೬ ಲಕ್ಷ ಸಿಂಧ ಮತ್ತು ಕನ್ನಡಿಗರ ಸಲುವಾಗಿ ಬೇರೆ ಬೇರೆ ವಿಶ್ವವಿದ್ಯಾಲಯಗಳಿರುವದು ಇಷ್ಟವೆಂದು ಮುಂಬಯಿ ವಿಶ್ವವಿದ್ಯಾಲಯದವರು ನೇಮಿಸಿದ ಕಮಿಟಿಯವರು ಹೇಳುತ್ತಾರೆ. ಇದರಿಂದ ಮದ್ರಾಸದ ಕನ್ನಡಿಗರಿಗೆ ಬಲವುಂಟಾಗಿದೆ. ಏಕೆಂದರೆ ಮದ್ರಾಸದ ಕನ್ನಡಿಗರೂ ಕಡಿಮೆ ಇಲ್ಲ. ೧೧ ಲಕ್ಷ ಹಿಂದುಸ್ಥಾನಿ ಜನರ ವಿಚಾರವನ್ನು ಅವರೂ ಯಾವಕಾಲ ನಡಿಂದವರೋ ಮಾಡಿಲ್ಲ. ಮದ್ರಾಸ ಇಲಾಖೆಯಲ್ಲಿ ವಿಶೇಷ

(4ನೇ ಪುಟದಲ್ಲಿ ಮುಂದುವರಿದಿದೆ.)

ಮಹಾತ್ಮಗಾಂಧಿಯವರ ಸ್ವಚರಿತ್ರೆ.

(ಕಳೆದ ವಾರದಿಂದ ಮುಂದುವರಿದದ್ದು.)

ಸೌತಾಂಪ್ಟನ್ನಿಂದ ನಾನು ಡಾಕ್ಟರ್ ಮೆಹತಾಯವರಿಗೆ ತಂತಿವಾರ್ತೆಯನ್ನು ಕೊಡಲಾಗಿ ಭಾನುವಾರ ರಾತ್ರಿ 8ಗಂಟೆಗೆ ಅವರು ನಮ್ಮ ಹೋಟೆಲಿಗೆ ಬಂದು ನನ್ನನ್ನು ಬಹಳವಾಗಿ ಆದರಿಸಿ ಫ್ಲಾನೆಲ್ ಉಡುಪನ್ನು ನಾನು ಧರಿಸಿದ್ದುದನ್ನು ಅವರು ನೋಡಿ ನಕ್ಕರು. ನಾವು ಮಾತನಾಡುತ್ತಿರುವಾಗ್ಗೆ ಅವರ ಟೊಪ್ಪಿಗೆಯನ್ನು ನಾನು ಕೈಗೆ ತೆಗೆದುಕೊಂಡು ಅದು ಎಷ್ಟು ಮೆತ್ತಗಿದೆಯೆಂದು ನವರುನೋಡುವ ಸಂಭ್ರಮದಲ್ಲಿ ಅದರ ರೇಷ್ಮೆಯು ಕೆದರಿಹೋಯಿತು. ಮೆಹತಾಯವರು ಕೋಪದೃಷ್ಟಿಯಿಂದ ನೋಡಿ ನನ್ನನ್ನು ಅಡ್ಡಿಪಡಿಸಿದರು. ಆದರೆ ನನ್ನ ಕೈಯಿಂದ ಟೋಪಿಗೆ ಕೊಂಚ ನಷ್ಟವಾಯಿತು. ಇದು ಮೊದಲನೆಯ ಎಚ್ಚರಿಕೆ. ಪಾಶ್ಚಾತ್ಯದೇಶದ ನಡವಳಿಕೆಯನ್ನು ಕುರಿತು ಆಗಲೇ ಮೆಹತಾಯವರು ಚಮತ್ಕಾರವಾಗಿ ನನಗೆ ಮೊದಲನೆಯ ಪಾಠವನ್ನು ಬೋಧಿಸಿದರು. "ಇತರರ ಪದಾರ್ಥಗಳನ್ನು ಮುಟ್ಟಬಾರದು, ಹೊಸಬನಾಗಿ ನೋಡಿದವರನ್ನು ಮೊದಲನೆಯಸಾರಿ ಯಾವ ಪ್ರಶ್ನೆಯನ್ನೂ ಕೇಳಕೂಡದು, ನಮ್ಮ ಭಾರತದೇಶದಲ್ಲಿ ಅಪರಿಚಿತನಾದವನನ್ನು ಕೂಡ ಪ್ರಶ್ನೆ ಕೇಳುವಂತೆ ಇಲ್ಲಿ ಪ್ರಶ್ನಿಸುವುದು ಮರ್ಯಾದೆ ಅಲ್ಲವು. ಗಟ್ಟಿಯಾಗಿ ಮಾತಾಡಬಾರದು, ಒಬ್ಬರ ಕೂಡ ಮಾತನಾಡಬೇಕಾದಾಗ ನಮ್ಮ ದೇಶದಲ್ಲಿ ಮೊದಲು ಸರ್ ಎಂದು ಆರಂಭಿಸುವೆವು, ಇಲ್ಲಿ ಆಳುಕಾಳುಗಳು ತಮ್ಮ ಯಜಮಾನರನ್ನು ಸರ್ ಎಂದು ಸಂಬೋಧಿಸುವರಲ್ಲದೆ ಸಮಾನಸ್ಕಂದರೆಂದಿಗೂ ಆ ರೀತಿ ಯಾರನ್ನೂ ಸಂಬೋಧಿಸುವುದಿಲ್ಲ" ಎಂದು ವಿವರವಾಗಿ ಎಲ್ಲ ಪದ್ಧತಿಯನ್ನು ಅವರು ನನಗೆ ತಿಳಿಸಿದರು. ಹೋಟೆಲಿನಲ್ಲಿ ಖರ್ಚು ಹೆಚ್ಚಾಗುವುದರಿಂದ ಒಂದು ಕುಟುಂಬದವರ ಮನೆಯಲ್ಲಿ ವಾಸಮಾಡುವುದುತ್ತಮವೆಂದು ಸಹ ಹೇಳಿದರು. ಸೋಮವಾರ ಆ ವಿಚಾರವನ್ನು ಗೊತ್ತುಮಾಡಬೇಕೆಂದು ನಿರ್ಧರಿಸಿಕೊಂಡೆನು. ಹೋಟೆಲಿನ ವಾಸವು ನನಗೇ ಅಲ್ಲದೆ ಮಜುಂದಾರರಿಗೂ ಕಷ್ಟವಾಗಿ ತೋರಿತು. ವೆಚ್ಚವು ಬಹಳ ಹೆಚ್ಚಾಗಿದ್ದಿತು. ನಮ್ಮ ಹಡಗಿನಲ್ಲೇ ಮಾಲ್ಟಾದಿಂದ ಒಂದ ಒಬ್ಬ ಸಿಂಧೂದೇಶದವನು ಕೂಡ ಆ ಹೋಟೇಲಿನಲ್ಲೇ ಇಳಿದಿದ್ದನು. ಆತನಿಗೆ ಲಂಡನ್ ನಗರವು ಹೊಸದಲ್ಲವಾದುದರಿಂದ ಹೊರಗೆ ಸ್ಥಳವನ್ನು ವಿಚಾರಿಸುತ್ತೇನೆಂದು ನಮ್ಮ ಕೂಡ ಹೇಳಿದನು. ಸೋಮವಾರ ದಿವಸ ಗ್ರಿಂಡ್ಲೇ ಕಂಪೆನಿಯವರು ನಮ್ಮ ಸಾಮಾನುಗಳನ್ನು ಕಳುಹಿಸಿಕೊಡುತ್ತಲೆ ನಾನು ಹೋಟೆಲಿನವರಿಗೆ ಕೊಡಬೇಕಾದ ಹಣವನ್ನು ಕೊಟ್ಟುಬಿಟ್ಟೆನು, ಎರಡು ದಿವಸಕ್ಕೆ ನನಗೆ ಹೋಟೇಲಿನಲ್ಲಿ 45 ರೂಪಾಯಿಗಳ ಖರ್ಚು ಮಾಡಲ್ಪಟ್ಟಿತು. ಇಷ್ಟಾದರೂ ನಾನು ತಿಂದುದೇನೂ ಇಲ್ಲವು. ನನಗೆ ಅವು ಏನೂ ರುಚಿಸಲಿಲ್ಲ. ಇದು ಚೆನ್ನಾಗಿಲ್ಲವೆಂದು ಹೇಳಿ ಬೇರೆ ತರಿಸಿಕೊಂಡುದಕ್ಕೆ ಅವರು ಎರಡಕ್ಕೂ ಹಣವನ್ನು ತೆಗೆದುಕೊಂಡರು. ಅವರೆಗೂ ನಾನು ಬೊಂಬಾಯಿಯಿಂದ ತಂದಿದ್ದ ಹಣ್ಣುರೊಟ್ಟಿಯೇ ನನಗಾಧಾರವಾಗಿದ್ದುವು.

ಸಿಂಧೂದೇಶದ ಸ್ನೇಹಿತನು ಮನೆಯನ್ನು ಗೊತ್ತುಮಾಡಿದ್ದನು. ಸೋಮವಾರದಿವಸ ನಾವು ಆ ಮನೆಗೆ ಹೋದೆವು. ಅಲ್ಲಿ ಸಹ ನನ್ನ ಮನಸ್ಸಿಗೆ ಸಮಾಧಾನವಾಗಲಿಲ್ಲವು. ನನಗೆ ಯಾವಾಗಲೂ ಮನೆಯಕಡೆಗೇ ಬುದ್ಧಿಯೋಡುತ್ತಿದ್ದಿತು. ರಾತ್ರಿ ಮಲಗಿಕೊಂಡಾಗ ಎಲ್ಲ ಸಂಗತಿಯೂ ಜ್ಞಾಪಕಕ್ಕೆ ಬರುತ್ತಿದ್ದಿತು. ಯಾವಾಗಲೂ ಕಣ್ಣಿನಲ್ಲಿ ನೀರು ಸುರಿಯುತ್ತಿದ್ದಿತು ಅದ್ದರಿಂದ ನಿದ್ರೆಯು ಬರುತ್ತಿರಲಿಲ್ಲ. ಈ ರಹಸ್ಯವನ್ನು ಯಾರೊಂದಿಗೂ ಹೇಳಲು ಧೈರ್ಯ ಸಾಲದು. ಹೇಳಿದರೂ ಪ್ರಯೋಜನವಿರಲಿಲ್ಲ. ಈ ವಿಚಾರವನ್ನು ಬಿಟ್ಟುಬಿಡಲು ನನಗೆ ಉಪಾಯವು ತೋರಲಿಲ್ಲ. ಪ್ರಜೆಗಳ ಆಚಾರವ್ಯವಹಾರಂಗಳೂ ಅವರ ಮನೆಯೂ ನನಗೆ ಹೊಸದಾಗಿಯೇ ಇದ್ದುವು. ಆಂಗ್ಲೇಯರ ಪದ್ಧತಿಯು ನನಗೆ ಅಗಮ್ಯಗೋಚರವಾಗಿದ್ದಿತು. ಪ್ರತಿಯೊಂದು ಸಣ್ಣ ವಿಷಯವನ್ನೂ ತಿಳಿದುಕೊಳ್ಳಬೇಕಾಗಿ ಬಂದಿತು. ಇದರ ಮೇಲೆ ಮಾಂಸಾಹಾರವನ್ನು ಬಿಟ್ಟಿದ್ದುದು ಒಂದು ದೊಡ್ಡ ಕಷ್ಟವಾಗಿದ್ದಿತು. ನಾನು ತಿನ್ನಬಹುದಾದ ಪದಾರ್ಥವು ಕೂಡ ನನಗೆ ರುಚಿಕರವಾಗಿರಲಿಲ್ಲ. ಈ ರೀತಿಯಾಗಿ ನನ್ನ ಕೆಲಸವು ಪೇಚಾಟಕ್ಕಿಟ್ಟುಕೊಂಡಿತು. ಆಂಗ್ಲದೇಶದಲ್ಲಿರಲಿಕ್ಕಿಲ್ಲ; ಆದರೆ ಭಾರತದೇಶಕ್ಕೆ ಹಿಂತಿರುಗಿ ಬರುವಂತಿಲ್ಲ. ಇಲ್ಲಿಗೇನೊ ಬಂದುಬಿಟ್ಟೆನು. ಇನ್ನು ಮೂರುವರ್ಷ ಹೇಗೊ ಕಣ್ಣುಮುಚ್ಚಿಕೊಂಡು ಕಳೆದುಬಿಡಬೇಕೆಂದು ನನ್ನ ಅಂತರಾತ್ಮವು ಬೋಧಿಸುತ್ತಿತ್ತು.

14ನೆಯ ಪ್ರಕರಣ.

ಲಂಡನ್ ಪಟ್ಟಣದಲ್ಲಿ ವಾಸದೇರ್ಪಾಟು.

ನಾನು ವಿಕ್ಟೋರಿಯಾ ಹೋಟೇಲಿನಲ್ಲೇ ಇದ್ದೇನೆಂದು ತಿಳಿದು ಸೋಮವಾರ ಡಾಕ್ಟರ್ ಮೆಹತಾರವರು ಅಲ್ಲಿಗೆ ಬಂದರು. ನಾವು ಅಲ್ಲಿಂದ ಹೊರಟು ಹೋದೆವೆಂದು ಅಲ್ಲಿಯ ಕೆಲಸಗಾರರು ಮೆಹತಾಯವರಿಗೆ ತಿಳಿಸಿದರು, ಅಲ್ಲದೆ ನಮ್ಮ ಹೊಸ ವಾಸಸ್ಥಳದ ಗುರುತನ್ನು ಸಹ ಹೇಳಿದರು. ಅದರ ಮೇಲೆ ಮೆಹತಾರವರು ನಮ್ಮ ವಾಸಸ್ಥಳಕ್ಕೆ ಬಂದರು. ಹಡಗಿನಲ್ಲಿರುವಾಗ್ಗೆ ಸಮುದ್ರದ ನೀರಿನಿಂದಲೇ ಸ್ನಾನವನ್ನು ಮಾಡುತ್ತಿದ್ದೆನು. ಆ ನೀರಿನಲ್ಲಿ ಸಾಬೂನು ಕರಗುವುದಿಲ್ಲವು. ನಾನು ನಾಗರಿಕತೆಗಾಗಿ ಸಾಬೂನಿನಿಂದ ಮೈಯನ್ನುಜ್ಜಿ ಸ್ನಾನಮಾಡುತ್ತಿದ್ದೆನು. ಅದರಿಂದ ಮೈಕೊಳೆ ಹೋಗುವುದಕ್ಕೆ ಬದಲು ದೇಹವೆಲ್ಲಾ ಜಿಡ್ಡಾಗಿರಲಾರಂಭವಾಯಿತು. ಕ್ರಮೇಣ [illegible]. ಇದು [illegible]ವೆಂದು ತಿಳಿದು ಡಾಕ್ಟರ್ ಮೆಹತಾರವರಿಗೆ ತಿಳಿಸಿದೆನು. ಅವರು "ಅಸಿಟಿಕ್ ಆಸಿಡ್"ನ್ನು ಸವರಬೇಕೆಂದು ಹೇಳಿದರು. ಅದನ್ನು ಸವರುತ್ತಲೆ ಹೊಪ್ಪಳೆದ್ದಿತು. ಡಾಕ್ಟರ್ ಮೆಹತಾರವರು ಅದನ್ನು ಪರೀಕ್ಷಿಸಿದರು. ಅವರಿಗದು ಗೊತ್ತಾಗಲಿಲ್ಲವು.

"ನಾವು ಈ ಆಂಗ್ಲದೇಶಕ್ಕೆ ಬಂದಿರುವುದು ವಿದ್ಯಾಭ್ಯಾಸಕ್ಕಾದರೂ ಇಲ್ಲಿಯ ಪ್ರಜೆಗಳ ಆಚಾರವ್ಯವಹಾರಗಳನ್ನು ಕೂಡ ಗ್ರಹಿಸಬೇಕಾಗಿರುವುದರಿಂದ ಆ ಕಾರ್ಯಕ್ಕೆ ಈ ವಾಸಸ್ಥಳವು ಉಪಯೋಗವಿಲ್ಲವು. ಯಾವುದೋ ಒಂದು ಕುಟುಂಬದವರೊಡನೆ ಮಿಶ್ರವಾಗಿರಬೇಕು. ಮೊದಲು ಕೆಲದಿನಗಳಲ್ಲಿ ಆ ಜನರ ಪದ್ಧತಿಯನ್ನು ತಿಳಿದುಕೊಳ್ಳಬೇಕು. ನಾನು ನಿನ್ನನ್ನು ಅಲ್ಲಿಗೆ ಕರೆದುಕೊಂಡು ಹೋಗುತ್ತೇನೆ ಬಾ" ಎಂದು ಮೆಹತಾರವರು ಹೇಳಿದರು. ನನಗೆ ಬಹಳ ಸಂತೋಷವಾಯಿತು. ಅದೇ ಪ್ರಕಾರ ನನ್ನ ಸ್ನೇಹಿತನ ವಾಸಸ್ಥಳಕ್ಕೆ ನನ್ನ ಸಾಮಾನನ್ನು ತೆಗೆದುಕೊಂಡು ಹೋದೆನು. ಅವನು ನನ್ನನ್ನು ಸೋದರನಂತೆ ಬಹಳ ಪ್ರೀತಿಯಿಂದ ಆದರಿಸಿದನು. ಆಂಗ್ಲದೇಶೀಯರ ಪದ್ಧತಿಯನ್ನೂ ಆಚಾರವನ್ನೂ ನಾನು ಅಲ್ಲಿ ಅನುಸರಿಸಬೇಕಾದ ಕ್ರಮವನ್ನೂ ಹೇಳಿಕೊಟ್ಟನು, ಆಂಗ್ಲಭಾಷೆಯಲ್ಲೇ ಮಾತನಾಡುವಂತೆ ಮಾಡಿದನು. ಆಹಾರ ಮಾತ್ರ ನನಗೆ ಸರಿಬೀಳಲಿಲ್ಲವು. ಕಾಯಿಪಲ್ಯಗಳಿಗೆ ಉಪ್ಪು ಖಾರ ಹಾಕಲ್ಪಟ್ಟಿದ್ದಾಗ್ಯೂ ಅವು ನನಗೆ ರುಚಿಸಲಿಲ್ಲವು. ಊಟಕ್ಕೆ ಹಾಕುತ್ತಿದ್ದ ಆ ಮನೆ ಯಜಮಾನಿಗೂ ಸಹ ನನ್ನ ಭೋಜನದ ವಿಚಾರದಲ್ಲಿ ಏನೂ ತೋಚಲಿಲ್ಲವು. ಬೆಳಗಿನ ವೇಳೆಯಲ್ಲಿ ಓಟು ಮೀಲುಗಂಜಿಯನ್ನು ಮಾತ್ರ ತೆಗೆದುಕೊಳ್ಳುತ್ತಿದ್ದೆನಲ್ಲದೆ ಮಧ್ಯಾಹ್ನವೂ ರಾತ್ರೆಯೂ ಏನೂ ಸೇರುತ್ತಿರಲಿಲ್ಲವು. ಇದರಿಂದ ಉಪವಾಸವೇ ಇರಬೇಕಾಗಿದ್ದಿತು. ಮಾಂಸವನ್ನು ತಿನ್ನಬೇಕೆಂದು ಆ ಸ್ನೇಹಿತನು ಬಹಳವಾಗಿ ಹೇಳುತ್ತಿದ್ದನಾದರೂ ನಾನು ನನ್ನ ಪ್ರಮಾಣದ ಸಂಗತಿಯನ್ನು ತಿಳಿಸಿ ತೆಗೆದುಕೊಳ್ಳುತ್ತಿರಲಿಲ್ಲವು. ಬಾಕಿ ಎರಡುವೇಳೆಯ ಬ್ರೆಡ್ಡು ರೊಟ್ಟಿ ಮತ್ತು ಪಚಡಿಯನ್ನು ಹಾಕುತ್ತಿದ್ದಳು. ನಾನು ಚೆನ್ನಾಗಿ ಊಟಮಾಡುವವನಾದುದರಿಂದ ಆಕೆಯು ಇಡುತ್ತಿದ್ದ ರೊಟ್ಟಿಯು ಸಾಲುತ್ತಿರಲಿಲ್ಲ. ಪುನಃ ಕೇಳಿ ಬಡಿಸಿಕೊಳ್ಳುವುದು ಮರ್ಯಾದೆಯಲ್ಲವೆಂದು ತಿಳಿದು ಆಕೆ ಮೊದಲಾವೃತ್ತಿ ಬಡಿಸಿದ 2-3 ರೊಟ್ಟಿಚೂರುಗಳನ್ನು ಮಾತ್ರ ತಿಂದು ಸುಮ್ಮನಿರುತ್ತಿದ್ದೆನು. ಅಲ್ಲಿ ಹಾಲನ್ನು ಕೊಡುವ ಪದ್ಧತಿಯಿಲ್ಲ. ನನ್ನ ಊಟದ ರೀತಿಯನ್ನು ನೋಡುತ್ತಿದ್ದ ನನ್ನ ಮಿತ್ರನು ಒಂದುದಿವಸ ಬಹಳ ಕೋಪಗೊಂಡು "ನೀನು ನನಗೆ ಏಕೋದರನಾದ ತಮ್ಮನಂತಿರದಿದ್ದರೆ ನಿನ್ನನ್ನು ಸ್ವದೇಶಕ್ಕೆ ಕಳುಹಿಸಿಬಿಡುತ್ತಿದ್ದೆನು. ಇಲ್ಲಿಯ ಪರಿಸ್ಥಿತಿಯನ್ನು ತಿಳಿಯದೇನೇ ಓದಲು ಬರುವಾಗ್ಗೆ ನಿನ್ನ ತಾಯಿಯ ಹತ್ತಿರ ಪ್ರಮಾಣಮಾಡಿದ್ದ ಮಾತ್ರಕ್ಕೆ ಈಗ ಮಾಂಸವನ್ನೇಕೆ ತಿನ್ನಬಾರದು? ಆ ಪ್ರಮಾಣವು ನಿನ್ನನ್ನು ಬಾಧಿಸಲಾರದು. ಅದಕ್ಕಾಗಿ ಹೀಗೆ ಆಹಾರವನ್ನು ತೆಗೆದುಕೊಳ್ಳದಿರುವುದು ಶುದ್ಧ ದಡ್ಡತನವೇ. ಮೊದಲು ನೀನು ಮಾಂಸವನ್ನು ತಿಂದಿರುತ್ತೀಯೇ, ನಿನಗೆ ಅದು ಹಿತವಾಗಿದ್ದಿತೆಂದು ಕೂಡ ಹೇಳಿದ್ದೆ. ನಿಷ್ಕಾರಣವಾಗಿ ಆಗ ಮಾಂಸವನ್ನು ತಿಂದೆ. ಈಗ ತಿನ್ನಬೇಕಾದ ಅವಶ್ಯಕತೆ ಇರುವಾಗ್ಗೆ ತಿನ್ನುವುದಿಲ್ಲವೆಂದು ಪ್ರತಿಜ್ಞೆಮಾಡಿರುವೆ. ಇದರಿಂದ ನಿನಗೇನೂ ಪ್ರಯೋಜನವಾಗುವುದಿಲ್ಲ." ಎಂದು ಆ ಸ್ನೇಹಿತನು ಹೇಳಿದನು. ನಾನು ಮಾತ್ರ ಕೇಳಲಿಲ್ಲವು. ಪ್ರತಿದಿವಸದಲ್ಲೂ ನಮಗೆ ಈ ವಿಚಾರದಲ್ಲಿ ಚರ್ಚೆಯು ನಡೆಯುತ್ತಲೇ ಇದ್ದಿತು. ಆತನ ವಾದವು ಪ್ರಬಲವಾದಂತೆಲ್ಲ ನನ್ನ ಪ್ರತಿಜ್ಞೆಯೂ ದೃಢವಾಗುತ್ತಿತ್ತು. ನಾನು ಪ್ರತಿದಿನವೂ ಭಗವಂತನನ್ನು ಪ್ರಾರ್ಥಿಸುತ್ತಿದ್ದೆನು. ಆ ಕಾರಣದಿಂದ ನನ್ನ ಪ್ರತಿಜ್ಞೆಯು ಅಳ್ಳಾಡಲಿಲ್ಲವು. ನನಗೆ ಆಗ ಭಗವಂತನನ್ನು ಕುರಿತು ಸರಿಯಾಗಿ ತಿಳಿಯದಿದ್ದರೂ ನನ್ನ ದಾದಿಯಾದ ರಂಭೆಯು ಚಿಕ್ಕತನದಲ್ಲಿ ನೆಟ್ಟ ಒಳ್ಳೇಬೀಜದ ಫಲವೇ ಆ ವಿಶ್ವಾಸವಾಗಿದ್ದಿತು. ಒಂದುದಿವಸ ನನ್ನ ಸ್ನೇಹಿತನು ಬೆಂಥಮರವರು ಬರೆದ "ಥಿಯರಿ ಆಫ್ ಯುಟಿಲಿಟಿ" ಎಂಬ ಗ್ರಂಥವನ್ನು ಓದಲುಪಕ್ರಮಿಸಿದನು. ಆ ವಿಷಯವೇನೂ ನನಗೆ ಗೊತ್ತಾಗಲಿಲ್ಲವು. ನನ್ನ ಸ್ನೇಹಿತನು ಅದನ್ನು ಕುರಿತು ನನಗೆ ಬೋಧಿಸುವವನಾದನು. "ನನಗೆ ಈ ವಾದವು ತಿಳಿಯದು, ಅದನ್ನು ಗ್ರಹಿಸಲು ತಕ್ಕ ಶಕ್ತಿಯಿಲ್ಲವು. ಮಾಂಸವನ್ನು ತಿನ್ನುವುದು ಆಗತ್ಯವೆಂದು ನಾನು ಅಂಗೀಕರಿಸಿದೆನಾದರೂ ನಾನು ನನ್ನ ಪ್ರಮಾಣವನ್ನು ಅತಿಕ್ರಮಿಸಲಾರೆನು. ನಾನು ನಿನ್ನಕೂಡ ವಾದಿಸತಕ್ಕವನಲ್ಲ. ನೀನು ನನಗೆ ಒಳ್ಳೆಯದಕ್ಕಾಗಿ ಇಷ್ಟು ಬುದ್ಧಿಹೇಳುತ್ತಿದ್ದೀಯೇ ಎಂಬುದನ್ನು ಸಹ ಬಲ್ಲೆನು. ಆದರೂ ನಾನು ನನ್ನ ನಿಯಮವನ್ನು ಬಿಡಲಾರೆನು. ಅದು ಅಸಂಭವವು, ಮತ್ತು ಅನುಲ್ಲಂಘನೀಯವು" ಎಂದು ನಾನು ಹೇಳಿದೆನು. ನನ್ನ ಮಾತನ್ನು ಕೇಳಿ ಆತನು ಬಹಳ ಆಶ್ಚರ್ಯಪಟ್ಟನು. "ಹಾಗಾದರೆ ಸರಿ, ಈ ವಿಷಯವನ್ನು ಕುರಿತು ಇನ್ನು ನಾನು ವಾದಿಸುವುದಿಲ್ಲ" ಎಂದು ಆತನು ಹೇಳಿ ಪುಸ್ತಕವನ್ನು ಮುಚ್ಚಿಬಿಟ್ಟನು. ಪುನಃ ನನ್ನ ವಿಷಯವನ್ನು ಕುರಿತು ಆತನು ಯಾವಾಗಲೂ ನನ್ನ ಕೂಡ ಮಾತನಾಡಲಿಲ್ಲವು. ಆದರೆ ನನ್ನ ಭೋಜನದ ವಿಷಯದಲ್ಲಿ ಆತನಿಗೆ ಬಹಳ ಅಸಮಾಧಾನವಾಗಿದ್ದಿತು. ಆತನು ಚುಟ್ಟವನ್ನು ಸೇದುತ್ತಿದ್ದನು, ಮತ್ತು ಮದ್ಯಸೇವನೆಮಾಡುತ್ತಿದ್ದನು. ಆದರೆ ಅವನ್ನು ಕುರಿತು ನನ್ನ ಕೂಡ ಎಂದೂ ಹೇಳಲಿಲ್ಲವು. ಅವನ್ನು ಅಭ್ಯಾಸಮಾಡಬಾರದೆಂದೇ ಆತನು ನನಗೆ ಹೇಳಿದನು. ಮಾಂಸವನ್ನು ತಿನ್ನದಿದ್ದಲ್ಲಿ ನೀರಸವಧಿಕವಾಗಿ ಆಂಗ್ಲದೇಶದಲ್ಲಿ ವಾಸಮಾಡಲು ಅವಕಾಶವಾಗದಂತಹ ಸ್ಥಿತಿಯಲ್ಲಿ ಪ್ರಾಪ್ತವಾಗುತ್ತದೋ ಎಂದು ಭಯಪಡುತ್ತಿದ್ದನು.

ಆವನ ವಾಸಸ್ಥಳವು ರಿಚ್ಮಂಡಿನಲ್ಲಿ. ಅವನ ಮನೆಯಲ್ಲಿ ಕೆಲದಿನಗಳಿದ್ದೆನು. ಆ ಕಾಲದಲ್ಲಿ ಲಂಡನ್ನಿಗೆ ವಾರಕ್ಕೊಂದೆರಡು ಸಲಕ್ಕಿಂತ ಹೆಚ್ಚಾಗಿ ಹೋಗಲವಕಾಶವಿರಲಿಲ್ಲವು. ಆದರಿಂದ ನನಗೊಂದು ಕುಟುಂಬದಲ್ಲಿ ವಾಸಮಾಡಲೇರ್ಪಡಿಸಬೇಕೆಂದು ಡಾಕ್ಟರ್ ಮೆಹತಾಯವರೂ ದಲ್ಪತ್ ರಾಂ ಶುಕ್ಲಾಯವರೂ ನಿಶ್ಚಯಿಸಿದರು. ವೆಸ್ಟ್ ಕೆನ್ಸಿಂಗ್ಟನ್ನಿನಲ್ಲಿ ಒಂದು ಆಂಗ್ಲೋ ಇಂಡಿಯನ್ ಕುಟುಂಬದಲ್ಲಿ ಶುಕ್ಲಾರವರು ನನಗೆ ವಸತಿಯನ್ನೇರ್ಪಡಿಸಿದರು. ನಾನು ಅಲ್ಲಿಗೆ ಹೋದೆನು. ಆ ಮನೆಯ ಯಜಮಾನಿಯು ವಿತಂತುವು. ನಾನು ಮಾಂಸವನ್ನು ತಿನ್ನುವುದಿಲ್ಲವೆಂದು ಆಕೆಗೆ ಹೇಳಿದೆನು. ಒಳ್ಳೇ ವಿಚಾರಮಾಡಲ್ಪಡುವುದೆಂದು ತಿಳಿಯಬಂದಿತಾದರೂ ಅಲ್ಲಿಯು ಕೂಡ ನನಗೆ ಊಟವು ಉಪವಾಸಪ್ರಾಯವಾಗಿಯೇ ಇದ್ದಿತು. ಹಸಿವು ಮೊದಲಾದುವನ್ನು ಕಳುಹಿಸಿಕೊಡಬೇಕೆಂದು ನಮ್ಮ ಊರಿ (ರಾಜಕೋಟೆ) ಗೆ ಬರೆದಿದ್ದೆನಾದರೂ ಬಂದಿರಲಿಲ್ಲ. ಯಾವ ವಸ್ತುವೂ ರುಚಿಸುತ್ತಿರಲಿಲ್ಲವು. ಪಾಪ ಆ ಯಜಮಾನಿಯು ಪ್ರತಿದಿನವೂ ಇದು ಚೆನ್ನಾಗಿದೆಯೇ ಅದು ಚೆನ್ನಾಗಿದೆಯೇ ಎಂದು ಕೇಳುತ್ತಿದ್ದಳು. ಪುನಃ ಕೇಳಿ ಬಡಿಸಿಕೊಳ್ಳಲು ನನಗೆ ನಾಚುಗೆಯು ಹೋಗಿರಲಿಲ್ಲವು. ಅವಳು ಹಾಕಿದುದನ್ನು ತಿಂದು ಸುಮ್ಮನೆಯಿರುತ್ತಿದ್ದೆನು. ಆಕೆಗೆ ಇಬ್ಬರು ಹೆಣ್ಣುಮಕ್ಕಳಿದ್ದರು. ಅವರು ಬೇರೆ ಒಂದು ರೊಟ್ಟಿಚೂರನ್ನು ಬಲವಂತದಿಂದ ನನ್ನ ಎಡೆಗೆ ಹಾಕುತ್ತಿದ್ದರು. ಆದರೆ ಅದು ನನಗೆ ಯಾವಲೆಕ್ಕ! ಒಂದು ದೊಡ್ಡ ರೊಟ್ಟಿ ಪೂರ್ತಿಯಾಗಿದ್ದರೂ ಸಾಕಾಗುತ್ತಿರಲಿಲ್ಲ. ನಾನು ಇನ್ನು ಸರಿಯಾಗಿ ಓದಲುಪಕ್ರಮಿಸಿರಲಿಲ್ಲ. ಶುಕ್ಲಾಯವರು ವರ್ತಮಾನ ಪತ್ರಿಕೆಗಳನ್ನು ಕೊಡುತ್ತಿದ್ದುದರಿಂದ ಅವನ್ನು ಓದಲುಪಕ್ರಮಿಸಿದೆನು, ಭರತಖಂಡದಲ್ಲಿ ನಾನೆಂದೂ ವೃತ್ತಪತ್ರಿಕೆಗಳನ್ನೋದಿದುದಿಲ್ಲ. ಆಂಗ್ಲದೇಶದಲ್ಲಿ ಅವರ ಮೇಲೆ ಅಭಿಲಾಷೆಹುಟ್ಟಿತು. ಡೆಯಿಲೀನ್ಯೂಸ್, ಡೆಯಿಲೀ ಟೆಲಿಗ್ರಾಫ್, ಪಾಲು ಮಾಲು ಗೆಜೆಟ್ ಈ ಮೂರು ಪತ್ರಿಕೆಗಳನ್ನೂ ನಾನು ಪ್ರತಿದಿನವು ಒಂದು ಗಂಟೆಯಲ್ಲಿ ಓದಿಬಿಡುತ್ತಿದ್ದೆನು. ಉಳಿದ ವೇಳೆಯಲ್ಲಿ ಊರಿನಲ್ಲೆಲ್ಲಾ ತಿರುಗಾಡುತ್ತಿದ್ದೆನು. ಮಾಂಸಮಿಶ್ರವಾದ ಉಪಹಾರವನ್ನು ವಿಕ್ರಯಿಸುವ ಅಂಗಡಿಗಳು ಪಟ್ಟಣದಲ್ಲಿರುತ್ತವೆಂದು ನಮ್ಮ ಮನೆಯ ಯಜಮಾನಿಯು ಹೇಳಿದ್ದರಿಂದ ಅತ್ತಕಡೆ ತಿರುಗಿ ನೋಡುತ್ತಿರಲಿಲ್ಲವು. ಸಾಮಾನ್ಯವಾಗಿ ಅಂಗಡಿಗೆ ಹೋಗಿ ಹೊಟ್ಟೆತುಂಬ ರೊಟ್ಟಿಯನ್ನು ಕೊಂಡುಕೊಂಡು ತಿನ್ನುತ್ತಿದ್ದೆನಾದರೂ ತೃಪ್ತಿಯಾಗುತ್ತಿರಲಿಲ್ಲವು. ಒಂದು ದಿವಸ ಫಾರಿಂಗ್ಟನ್ ಬೀದಿಯಲ್ಲಿ ಒಂದು ಶಾಕಾಹಾರದ ಅಂಗಡಿಯು ಕಣ್ಣಿಗೆಬಿದ್ದಿತು. ಆಗ ಅದರಿಂದ ನನಗೆ ಹಿಡಿಯಲಾರದಷ್ಟು ಸಂತೋಷವಾಯಿತು. ಅಲ್ಲಿ ಶಾಕಾಹಾರಸಂಬಂಧವಾದ ಪುಸ್ತಕವು ಕೂಡ ವಿಕ್ರಯಿಸಲ್ಪಡುತ್ತಿದ್ದಿತು. "ಸಾಲ್ಟ್ಸ್ ಪ್ಲೀ ಫಾರ್ ವೆಜಿಟೇರಿಯನಿಜಂ" ಎಂಬ ಪುಸ್ತಕವನ್ನು 12 ಆಣೆಕೊಟ್ಟು ಕೊಂಡುಕೊಂಡು ತಿಂಡಿತಿನ್ನಲು ಒಳಕ್ಕೆ ಹೋದೆನು. ಆಂಗ್ಲದೇಶಕ್ಕೆ ಕಾಲಿಟ್ಟಮೇಲೆ ನಾನು ಹೊಟ್ಟೆತುಂಬ ಊಟಮಾಡಿದುದು ಆ ದಿವಸವೇ. ದೇವರಿಗೆ ಆಗ ನನ್ನ ಮೇಲೆ ದಯೆಹುಟ್ಟಿತು. ಆ ಪುಸ್ತಕವನ್ನು ನಾನು ಸಾದ್ಯಂತವಾಗಿ ಓದಿದೆನು. ಅದು ನನಗೆ ಚೆನ್ನಾಗಿ ಒಪ್ಪಿತು. ಅಷ್ಟರಲ್ಲಿ ನನಗೆ ಶಾಕಾಹಾರ ಸಂಬಂಧವಾದ ನಂಬಿಕೆಯು ಮತ್ತಷ್ಟು ದೃಢವಾಯಿತು. ಅದುವರೆಗೆ ನಾನು ಪ್ರಮಾಣಕ್ಕೋಸ್ಕರ ಮಾಂಸಾಹಾರವನ್ನು ಬಿಟ್ಟಿದ್ದೆನಾದರೂ ಮಾಂಸಾಹಾರವು ದುಷ್ಟವೆಂಬುದು ನನಗೆ ತೋರಲಿಲ್ಲವು. ಅದು ಅಗತ್ಯವೆಂದೇ ನಾನು ಸಹ ಯಾವಾಗಲೂ ಅದಕ್ಕಾಗಿ ಬಲವಾದ ಪ್ರಯತ್ನಮಾಡಬೇಕೆಂದು ಕೂಡ ತಿಳಿದಿದ್ದೆನಾದರೂ ಸಾಲ್ಟ್ಯುವರ ಪುಸ್ತಕವನ್ನು ಓದಿದಮೇಲೆ ನನ್ನ ಅಭಿಪ್ರಾಯವು ಸಂಪೂರ್ಣವಾಗಿ ಬದಲಾಯಿಸಿ ಹೋಯಿತು. ಶಾಕಾಹಾರವೇ ಶ್ರೇಷ್ಠವೆಂದು ಚೆನ್ನಾಗಿ ದೃಢಪಟ್ಟಿತು.

"ವೈ. ನಾರಿ."

NOTICE.

Applications are invited for the post of a Police Sub-Inspector on a pay of Rs. 65-3-110-5-125 plus a conveyance allowance of Rs. 25/- per mensem.

Applicants must hold at least a completed Secondary School Leaving Certificate issued under the authority of the Government of Madras. They should be 5 feet 5 inches in height and 32 inches round the chest, age not under 21 nor over 25 and should appear in person, bringing specimens of hand-writing in English and Kannada and testimonials as to character and social status, before the under-signed not later than 30th June 1926.

The successful candidate will be trained for one year at the Provincial Training School, Vellore. During the period of training he will draw only Rs. 35/- p. m.

3-1 Sd. N. I. Kalappa,

Mercara. Dy. Supt of Police.

(ಎರಡನೆ ಪುಟದಿಂದ ಮುಂದುವರಿದದ್ದು.)

ಹೆಚ್ಚಿಗೆ ಖರ್ಚು ಹಿಡಿಯದೆ ಹೊಸ ವಿಶ್ವವಿದ್ಯಾಲಯಗಳು ಹೊರಡುವದಕ್ಕೆ ಒಂದೇ ಯುಕ್ತಿಯುಂಟು. ಅದಾವುದೆಂದರೆ ಮದ್ರಾಸವಿಶ್ವವಿದ್ಯಾಲಯವು ಈಗಿದ್ದಂತೆಯೇ ಇದ್ದು, ಅದರ ಅಧಿಕಾರವ್ಯಾಪ್ತಿ ಯು ತುಂಬ ಹಬ್ಬಿರಬೇಕು. ಅಲ್ಲದೆ ಬೇರೆ ವಿಶ್ವವಿದ್ಯಾಲಯವನ್ನು ತೆಗೆಯುವ ಶಕ್ತಿಯಿಲ್ಲದ ಸಂಸ್ಥಾನಗಳನ್ನೂ ಅದು ತನ್ನಲ್ಲಿ ಸೇರಿಸಿಕೊಳ್ಳಬೇಕು. ಮತ್ತು ಒಮ್ಮೆಲೆ ಎಲ್ಲ ಭಾಷಾನ್ವಯ ವಿಶ್ವವಿದ್ಯಾಲಯಗಳು ಹೊರಡಲಿ. ಮದ್ರಾಸ ವಿಶ್ವವಿದ್ಯಾಲಯವೆಂದು ಭಾಷಾನ್ವಯ ವಿಶ್ವವಿದ್ಯಾಲಯವಾಗದೆ, ಅದು ಇಂಜನಿಯರಿಂಗ ಮೆಡಿಸಿನ್, ಲಾ, ಮುಂತಾದ ಬಹಳ ವೆಚ್ಚ ಹಿಡಿಯುವ ವಿದ್ಯೆಗಳನ್ನು ಕಲಿಸುವ ವಿಶ್ವವಿದ್ಯಾಲಯವಾಗಲಿ. ಹೀಗೆ ಮಾಡುವದರಿಂದ, ಪ್ರತಿಯೊಬ್ಬ ಬಾಂಧವನಿಗೂ ತನಗೆ ಅವಶ್ಯವಾಗಿರುವ ಅನುಕೂಲತೆಯು ದೊರೆಯುವದಲ್ಲದೆ, ಹಿರಿಯರ ಹಣದ ಆಶ್ರಯವೂ ತಪ್ಪುವದಿಲ್ಲ. ಈಗ ಮದ್ರಾಸಿನಲ್ಲಿರುವ ಶಾಲೆಗಳೂ ಕಾಲೇಜುಗಳೂ ಚಿಂಗಲಪೇಟ ಜಿಲ್ಲೆಯಲ್ಲಿ ಸೇರ್ಪಡೆಯಾಗಲಿ ಮದ್ರಾಸಿನಲ್ಲಿ ಮುಖ್ಯ ವಿಶ್ವವಿದ್ಯಾಲಯವಿರುವದರಿಂದ ಎಲ್ಲರಿಗೂ ಅನುಕೂಲವೇ ಆಗುವದು. ಮತ್ತು ಆಯಾ ಭಾಷೆಯ ಜನರಲ್ಲಿ ಏಳಿಗೆಯು ಬೆಳೆಯುವದಕ್ಕೆ ಅದು ಸಾಧನವಾಗುವದು

ಸಾರಾಂಶ, ಪ್ರತ್ಯೇಕ ಭಾಷಾಪ್ರಾಂತಗಳೂ ಭಾಷಾವಿಶ್ವವಿದ್ಯಾಲಯಗಳೂ ಯಾವಾಗ ಹೊರಡುವವೋ ಹೊರಡಲಿ. ಆದರ ನಾವು ಈಗಲೆ ಆ ವಿಶ್ವವಿದ್ಯಾಲಯಗಳನ್ನು ಹೊರಡಿಸುವ. ಈ ವಿಶ್ವವಿದ್ಯಾಲಯಗಳಲ್ಲಿ ಮದ್ರಾಸ ವಿಶ್ವವಿದ್ಯಾಲಯದಲ್ಲಿ ಕಲಿಸಲ್ಪಡುವ ಇಂಜಿನಿಯರಿಂಗ, ಲಾ ಮುಂತಾದ ವಿಷಯಗಳನ್ನಿಡುವ ಅವಶ್ಯಕತೆಯಿಲ್ಲ. ಸದ್ಯದ ಮಟ್ಟಿಗೆ ಹೀಗೆ ವ್ಯವಸ್ಥೆಯನ್ನು ಮಾಡುವದರಿಂದ, ಬಹಳ ವೆಚ್ಚ ಹಿಡಿಯುವ ಕೆಲವು ಶಾಖೆಗಳನ್ನು ತೆಗೆಯುವ ಕಾರಣವು ಬೀಳದೆ, ಭಾಷೆಯ ಉನ್ನತಿಯ ಪ್ರಶ್ನೆಯೂ ಬಿಡಿಸಲ್ಪಡುವದು. ಇದರಿಂದ ಪೂರ್ಣ ಸಮಾಧಾನವಾಗಲಾರದೆಂಬುದು ನಮಗೂ ಗೊತ್ತುಂಟು. ಆದರೆ ಉಪವಾಸವಿರುವದಕ್ಕಿಂತಲೂ ಅರೆಹೊಟ್ಟೆಯುಣ್ಣುವದು ಲೇಸಲ್ಲವೇ? ಕಟ್ಟಡ ಮುಂತಾದವುಗಳಿಗಾಗಿ ಒಮ್ಮೆಲೆ ಖರ್ಚುಮಾಡುವ ಅವಶ್ಯಕತೆಯೂ ಹೋಗುವದು. ಮತ್ತು ಪ್ರತಿಯೊಬ್ಬ ಭಾಷಾಬಂಧುವಿಗೆ ತನ್ನದೊಂದು ವಿಶ್ವವಿದ್ಯಾಲಯವು ಸಿಕ್ಕಿದಂತಾಗುವದು.

ಅಧವಾ, ಇದು ಸದ್ಯದಮಟ್ಟಿಗೆ ಮಾತ್ರ ವ್ಯವಸ್ಥೆಯು. ಮುಂದೆ ನಾವೆಲ್ಲರೂ ಬಾಂಧವರು ಮತ್ತಷ್ಟು ವಿಚಾರಮಾಡಿ ನಮ್ಮ ನಮ್ಮ ಪಾಲುಗಳು ಸರಿಯಾಗಿವೆಯೋ ಇಲ್ಲವೋ ಎಂಬದನ್ನು ನೋಡಿಕೊಂಡು ನಮ್ಮ ನಮ್ಮ ಆವಶ್ಯಕತೆಗಳನ್ನು ಲಕ್ಷ್ಯದಲ್ಲಿ ತಂದುಕೊಂಡು ಹೊಸಗೊಂಡು ವಿಭಾಗ ಪತ್ರವನ್ನು ಮಾಡಿಕೊಳ್ಳಲೇ ಬೇಕಾಗುವದು. ಆಂಧ್ರರ ಕ್ಷೇತ್ರದಲ್ಲಿ, ಈಗ ಇಂಜನಿಯರಿಂಗ ಮತ್ತು ಮೆಡಿಕಲ್ ಕಾಲೇಜುಗಳಿರುತ್ತವೆ. ಮಧುರಾ ಮತ್ತು ತಂಜಾವೂರಿನ ಮೆಡಿಕಲ್ ಸ್ಕೂಲುಗಳೂ ಕೊಯಮುತ್ತೂರಿನ ಅಗ್ರಿಕಲ್ಚರಲ್ ಕಾಲೇಜೂ ತಮಿಳರ ಕ್ಷೇತ್ರದಲ್ಲಿ ಇರುವವು. ಇದರಿಂದ ಆಯಾ ಜನರಿಗೆ ಹೆಚ್ಚಿಗೆ ಲಾಭವಾಗುವದು. ಈ ತರಹದ ಸಂಸ್ಥೆಗಳಿಲ್ಲದಿರುವದರಿಂದ, ಮಿಕ್ಕಬಂಧುಗಳಿಗೆ ಹಾನಿಯಾಗುವದು. ಇವನ್ನೆಲ್ಲ ಲಕ್ಷ್ಯದಲ್ಲಿ ತಂದು, ಮುಂದೆ ಮತ್ತೊಮ್ಮೆ ಪಾಲುಗಳನ್ನು ಹಂಚಿಕೊಳ್ಳಬೇಕಾದೀತು, ಇರಲಿ.

ಈ ಯೋಜನೆಯು ವ್ಯವಹಾರ್ಯವಲ್ಲನೆಂದೂ ಹೀಗೆ ಮಾಡುವದಕ್ಕೆ ಹಣದ ಅನಾನುಕೂಲತೆಗಳಿರುವವೆಂದೂ ಹಿರಿಯರು ಗುಣಗುಟ್ಟಬಹುದು. ಹೊಸದೊಂದು ವ್ಯವಸ್ಥೆಯಾಗುವದು ಅವಶ್ಯವಿರುವದಿಲ್ಲವೋ ಅವರೇ ಹೇಳಲಿ, ಹಾಗೆ ಅದು ಅವಶ್ಯವಿದ್ದ ಬಳಿಕ, ಹಣದ ನೆವವನ್ನು ಮುಂದೆ ತಂದು ಪ್ರಯೋಜನವಿಲ್ಲ. ಹೊಸ ಯೋಜನೆಗಳಿಗೆ ತುಸು ಹೆಚ್ಚು ವೆಚ್ಚವು ಹಿಡಿದೇ ಹಿಡಿಯುವದು. ಹೊಸ ಆದಾಯ ಪತ್ರಿಕೆಯಲ್ಲಿ ಹಾಯುಡಸ್ಸು ಇಲೆಕ್ಟ್ರಿಕ್ ಮುಂತಾದ ಯೋಜನೆಗಳಿಗೆ ಎಲ್ಲಿಂದ ಹಣವನ್ನು ತಂದರು? ಭಾಷಾನ್ವಯ ವಿಶ್ವವಿದ್ಯಾಲಯವಾಗುವದು ಅದಕ್ಕಿಂತ ಕಡಿಮೆ ಮಹತ್ವದ ಪ್ರಶ್ನೆಯೋ? ಸದ್ಯಕ್ಕೆ ನಮಗೆ ಅಲ್ಪ ಶಾಖೆವುಳ್ಳ ವಿಶ್ವವಿದ್ಯಾಲಯವು ಹೊರಟರೂ ಎಷ್ಟೋ ಕಾರ್ಯವಾಗುತ್ತದೆ. ವಿಲು ವರ್ಷಗಳ ಹಿಂದೆ, ಮೈಸೂರ ವಿಶ್ವವಿದ್ಯಾಲಯವು ಹೊರಟಾಗ್ಗೆ ಎಲ್ಲ ಶಾಖೆಗಳು ತೆಗೆಯಲ್ಪಟ್ಟಿದ್ದವೋ? ಇಲ್ಲ. ನಮ್ಮ ಭಾಷೆಯ ಉನ್ನತಿಗೋಸ್ಕರ ನಾವು ಮೇಲ್ಕಾಣಿಸಿದಂಥ ಯಾವದೊಂದು ಯೋಜನೆಯನ್ನು ಏಕೆ ಕೈಕೊಳ್ಳಬಾರದು.

"ಜಯಕರ್ನಾಟಕ"

ಅಮ್ಮತ್ತಿ ಮೀಟಿಂಗು.

ಮ. ರಾ. ಶ್ರೀ ಗಳಾದ ಕುಟ್ಟಂಡ ತಮ್ಮಯ್ಯನವರು, ಜಮ್ಮಡ ಮಾದಪ್ಪನವರು, ಮಂಡೆಯಡ ಮೊಣ್ಣಪ್ಪನವರು, ಮತ್ತು ಪಂದ್ಯಂಡ ಬೆಳ್ಳಪ್ಪನವರು, ಇವರುಗಳ ಕೋರಿಕೆ ಮೇರೆ ಅಮ್ಮತ್ತಿ ನಸ್ಕಲು ಬಳಿ ಮೈದಾನದಲ್ಲಿ ತಾ. 11ರಲ್ಲು ಅಮ್ಮತ್ತಿ ನಾಡಿನವರ ಒಂದು ಮೀಟಿಂಗು ನಡೆಯಿತು. ಸುಮಾರು 150 ಜನರು ಹಾಜರಿದ್ದರು. ಮೇ ಮಾಚಿಮಾಡ ಅಪ್ಪಚ್ಚನವರು ಅಧ್ಯಕ್ಷರಾಗಿದ್ದರು. ನೋಟೀಸು ಕೊಟ್ಟವರು ಮೀಟಿಂಗಿನ ಉದ್ದೇಶವನ್ನು ವಿವರಿಸಿದನಂತರ ಗಜೆಟೆಡ್ ಉದ್ಯೋಗಸ್ಥರ ವರ್ಗಾವರ್ಗಿಯ ವಿಷಯ ಧೀರ್ಘ ಚರ್ಚೆ ನಡೆಯಿತು. ಕೊಡಗಿನಲ್ಲಿರುವ ಪ್ರೊವಿನ್ಸ್ಯಲ್ ಗಜೆಟೆಡ್ ಉದ್ಯೋಗಸ್ಥರನ್ನು ಐದುವರ್ಷಕೊಂದಾವರ್ತಿ ವರ್ಗಾಯಿಸುವುದಕ್ಕಾಗಿ ಮದ್ರಾಸು ಸರ್ಕಾರದೊಂದಿಗೆ ಏರ್ಪಾಡು ಮಾಡಬೇಕೆಂದು ಈ ದೇಶದ ಸರ್ಕಾರವನ್ನು ಕೇಳಿಕೊಳ್ಳುವಂತೆ ಜಮೀನ್ದಾರರ ಸಂಘವು ನಾಪೋಕ್ಲು ಕಾನ್ಫರೆನ್ಸಿನಲ್ಲಿ ತೀರ್ಮಾನಿಸಿದಕ್ಕೆ ಈ ಸಭೆಯು ಸಂಪೂರ್ಣ ಸಮ್ಮತಿಸುತ್ತದೆ ಎಂಬ ಠರಾವು ಸರ್ವ ಸಮ್ಮತದಿಂದ ಮಂಜೂರಾಯಿತು.

ಕರ್ನಾಟಕ ಏಕೀಕರಣದ ವಿಷಯ ಜಮೀನ್ದಾರರ ಸಂಘದವರು ಪಾಸುಮಾಡಿರುವ ಠರಾವು ಚೆನ್ನಾಗಿ ವಿವರಿಸಲಾಯಿತು ಈ ಸಂಗತಿಯನ್ನು ಕುರಿತ ಸಂಘದ ಠರಾವಿಗೂ ಈ ಸಭೆಯಲ್ಲಿ ಯಾರೂ ವಿರೋಧಿಸಲಿಲ್ಲ. ಕರ್ನಾಟಕ ಏಕೀಕರಣದ ತತ್ವಕ್ಕೆ ಎಲ್ಲರೂ ಒಪ್ಪಿಗೆಯನ್ನಿತ್ತರು.

ಕೊಡಗಿನಲ್ಲಿರುವ ಎಲ್ಲಾ ಬಸ್ಸ್ ಸರ್ವೀಸುಗಳಿಗೆ ಮುಖ್ಯವಾಗಿ ವೀರಾಜಪೇಟೆಯಿಂದ ಅಮ್ಮತ್ತಿ ಸಿದ್ದಾಪುರಕ್ಕಾಗಿ ಮಡಿಕೇರಿಗೆ ಹೋಗುವ ಲೈನಿನಲ್ಲಿ ಬಸ್ಸ್ ಸರ್ವೀಸಿಗೆ ಲೈಸೆನ್ಸು ಕೇಳಿದವರಿಗೆಲ್ಲಾ ಲೈಸೆನ್ಸು ಕೊಟ್ಟು, ಸ್ಪರ್ಧೆಗೆ ಬಿಡಬೇಕೆಂದು ಈ ಸಭೆಯು ಸರ್ಕಾರವನ್ನು ಕೇಳಿಕೊಳ್ಳುತ್ತದೆಂಬ ಠರಾವೂ ಒಮ್ಮತದಿಂದ ಪಾಸಾಯಿತು. ಅಧ್ಯಕ್ಷರಿಗೆ ವಂದನೆಗಳಿಂದ ಮೀಟಿಂಗು ಬರಖಾಸ್ತಾಯಿತು.

NOTICE

From and after 15th May 192(Anekad firewood will be delivered at Mercara at Rs. 20/ per lorry load and Rs 10/ per trailer (half lorry load) delivered at or near purchaser's house

S/d G. C. Robinson,
Chief Forest Officer,
2–1 Mercara.

ಕರ್ನಾಟಕ ಪ್ರಾಂತಿಕ ಕಾಂಗ್ರೆಸ ಕಮಿಟಿಯೂ

ಹಿಂದೀ ಪ್ರಚಾರವೂ.

ಸ್ವಾಮಿ!

ಕಳೆದ ಎಳೆಂಟು ವರ್ಷಗಳಿಂದೀಚೆಗೆ ದಕ್ಷಿಣ ಭಾರತದಲ್ಲಿ ಹಿಂದೀಭಾಷಾ ಪ್ರಚಾರವಾಗುತ್ತಿರುವುದು ತಮಗೆಲ್ಲ ತಿಳಿದ ವಿಷಯವೇ. ಅಖಿಲಭಾರತ ಹಿಂದೀಮಹಾ ಸಮ್ಮೇಳನದ ಶಾಖೆಯೊಂದು ಮದ್ರಾಸಿನಲ್ಲಿದ್ದು ಅ ಮೂಲಕ ದಕ್ಷಿಣ ದೇಶದ ಬೇರೆ ಬೇರೆ ಪ್ರಾಂತಗಳಿಗೆ ತಕ್ಕಷ್ಟು ಧನಸಹಾಯವೂ ಸಿಗುತ್ತಿರುವುದು. ಮದ್ರಾಸಿನ ಕಾರ್ಯಾಲಯವನ್ನು ಬೆಂಬಲವಾಗಿಟ್ಟುಕೊಂಡು ಹಿಂದೀ ಪ್ರಚಾರ ಕಾರ್ಯವನ್ನು ಮುಂದರಿಸಿದ ಪ್ರಾಂತಗಳಲ್ಲಿ ತಮಿಳುನಾಡು ಮತ್ತು ಆಂಧ್ರದೇಶಗಳು ಹೆಚ್ಚಿನ ಉನ್ನತಿಯನ್ನು ಸಾಧಿಸಿರುತ್ತವೆ. ವರ್ಷಂಪ್ರತಿ ಆವೆರಡು ಪ್ರಾಂತಗಳಿಗೆ ಸಾಕಷ್ಟು ಧನಸಹಾಯವು ಸಿಗುತ್ತಿರುವುದೇ ಇದಕ್ಕೆ ಕಾರಣವು. ಇತ್ತೀಚೆಗೆ ಕರ್ನಾಟಕ ಪ್ರಾಂತದಲ್ಲಿಯೂ ಪ್ರಚಾರ ಕಾರ್ಯವು ಆರಂಭವಾಗಿದೆ. ಮತ್ತು ಕಳೆದ ಒಂದು ವರ್ಷದ ಅನುಭವದಿಂದ ಕರ್ನಾಟಕದಲ್ಲಿ ಪ್ರಚಾರವು ಒಳ್ಳೆಯ ರೀತಿಯಿಂದ ನಡೆಯಬಹುದೆಂದು ಕಾಣುತ್ತದೆ. ಮಾತ್ರ ಸಾಕಷ್ಟು ಧನಸಹಾಯವು ಬೇಕು. ಆದ್ದರಿಂದ ಈ ಕಡೆಗೆ ಮಹಾ ಜನರು ಮಾತ್ರವಲ್ಲ, ಕ. ಪ್ರಾ. ಕಮಿಟಿಯವರು ವಿಶೇಷ ಲಕ್ಷ್ಯವಿಡಬೇಕಾಗಿದೆ. ಕಾಂಗ್ರೆಸ್ಸಿನ ವಿಧಾಯಕ ಕಾರ್ಯಕ್ರಮಗಳಲ್ಲಿ ಖಾದಿಯಂತೆ ಹಿಂದೀಪ್ರಚಾರಕ್ಕೂ ಪ್ರಾಮುಖ್ಯತೆಯಿರುವುದರಿಂದ ಕಾಂಗ್ರೆಸಿನವರು ಇದನ್ನು ಎಂದಿಗೂ ಬಿಡಲಾಗುವುದಿಲ್ಲ. ಆದ್ದರಿಂದ ಬರುವ ಬಳ್ಳಾರಿಯ ಪ್ರಾಂತಿಕ ಪರಿಷತ್ತಿನಲ್ಲಿ ಹಿಂದೀಪ್ರಚಾರಕ್ಕೆ ಸಾಕಷ್ಟು ಧನಸಹಾಯವನ್ನು ಕೊಡಿಸುವ ನಿಶ್ಚಯವಾಗಬೇಕು. ಮತ್ತು ಸದರಿ ವಿಚಾರಪರವಾದ ಠರಾವು ಸಭೆಯ ಮುಂದಿಡಲ್ಪಟ್ಟಾಗ ಸಮಸ್ತರೂ ಅದನ್ನು ಸಮರ್ಥಿಸಬೇಕೆಂದು ನವಿನಯ ವಿನಂತಿ.

ಇತಿ,

ತಾ|| ೯–೫–೨೬.
ಬೆಂಗಳೂರು.

ಮ|| ರಾ|| ಗಳಾದ ಬಿ. ಕೆ. ಭಾರದ್ವಾಜ
" ಕೋಲಾರ ಸಂಪದ್ಗಿರಿರಾವ್, ಎಂ. ಎ.
" ದೇವುಡು ನರಸಿಂಹ ಶಾಸ್ತ್ರಿ, ಎಂ ಎ.
" ಜ ಮಹದೇವಯ್ಯ ಬಿ. ಎ.
" ಹರಪನಹಳ್ಳಿ ರಾಮರಾವ್, ಬಿ. ಎ.
" ನಿಟ್ಟೂರು ಶ್ರೀನಿವಾಸರಾವ್, ಬಿ. ಎಸ್. ಸಿ.

ಕೆ. ಸಿ. ಅಪ್ಪಚೆಟ್ಟಿ.

ದಂತ ವೈದ್ಯರು.

ಇದೇ ತಾರೀಖು ೭ರಿಂದ ಮಡಿಕೇರಿಯಲ್ಲಿ ಉಳಕೊಳ್ಳುವರು.. ಖಾಯಿಷಾದಾರರು ಅವರನ್ನು ಅಲ್ಲಿ ಹೋಗಿ ನೋಡಬಹುದು. ಇಂಥಾ ಸಮಯವನ್ನು ಕಳಕೊಳ್ಳಬೇಡಿರಿ. ಈ ಸಲ್ಪಿಂಗ್ ಚಾರ್ಜು ಇಲ್ಲದೆ ನೋಡುವರು. 526

FOR SALE.

12 ft. English Rover Car, latley overhauled, in good order. Owner going to England.

Price Rs 1500. Apply to the CHAPLAIN of MERCARA.

3–2.

ಬಡತನವು ಕಡುಕಷ್ಟಕರವಾದುದು

ವೃತ್ತ :—
ಬಡತನದಿಂದೆ ಬಾಳ್ವವನ ಮಾತನೆ ಬಂಧು ಜನಂಗಳಾಲಿಸರ್ -
ಕಡುಗೆಳೆಗೊಂಡ ಮಿತ್ರಜನಮುಂ ವಿಮುಖಂ ಬಡದಕ್ಕು
ವೆರ್ಚುಗುಂ || ಅಡಿಗಡಿ ಗಾಪದಂಗ ಳೆಗುಂಮುಬಲಂ, ಕ
ಲಶೀಲ ಚಂದ್ರನೊಳ್ | ಕಡೆಗು ವಿದುಲ್ಲ ದನ್ಯಕೃತ ಪಾ
ಪವ ನಾತನೊಳಾಡುಗುಂ ಜನಂ || ೧ ||

ಅಂತು ಮಲ್ಲದೆ

ಕಳೆಯಂ ಗೈಯನದಾವನುಂ ಒಡವನೊಳ್ ಮೇಳೊಲ್ದು ಯಿಂ
ಭಾಷಿಸಂ | ಮಳಿನಾತ್ಮಾಂ ಶುಕನೂಂತು ನಾಣ್ಚಿ ಕೆಯಿ
ನಾ ದಂದೂರದಲ್ಲಿರ್ದೊಡಂ || ಪಳಿಸರ್ ಮೇಳ್ಧನಿಸದ್ಮ
ಕೆಯ್ದು ಶುಭದೊಳ್ ನೋಡಲ್ಕೆ ಗೌರವ್ಯನಂ | ದುಃಖವರ್ಷ
ವದರಿಂದ ವಿಊ ಬಡತನಂ ಷಷ್ಠಂ ಮಹಾಪಾತಕಂ || ೨ ||

(ಮೃಚ್ಛಕಟಿಕ ಪ್ರಕರಣ)

ಭಾರತೀಯರಾದ ನಾವುಪ್ರಕೃತ ಇಂತಹ ಬಡತನಕ್ಕೆ ತುಡಾಗಿರುವುದರಿಂದಲೇ (ಷಷ್ಠಂ) ಮಹಾ ಪಾತಕಿಗಳಾಗಿರುವ ನಮಗೆ ಸ್ವದೇಶ ಪರದೇಶಗಳೆಂಬ ಭೇದವಿಲ್ಲದೆ ಎಲ್ಲಾ ಕಡೆಯಲ್ಲಿ ಸಹಿಸಲಾಗದ ಅಪಮಾನಗಳೂ ಅಪಚಾರಗಳೂ ಅನೇಕವಾಗಿ ಉಂಟಾಗುತ್ತಿರುವುವು. ಈ ದಾರಿದ್ರ್ಯ ರೋಗವು ಒಂದೆರಡು ದಿನಗಳಿಂದ ಬಂದುದಲ್ಲ. ನಮ್ಮ ದೇಶಕ್ಕೆ ಈ ರೋಗವು ವ್ಯಾಪ್ತವಾಗಿ ಹತ್ತಿರ ಹತ್ತಿರ ಸಾವಿರ ವರ್ಷಗಳಾಗುತಾ ಬಂತು. ಇಂತಹ ದೀರ್ಘ ದಾರಿದ್ರ್ಯ ರೋಗವು ತಕ್ಕಂತಹ ಔಷಧ ಸೇವನೆಯಾಗದೆ ಯೋಗ್ಯಪಥ್ಯವಿರದೆ ಇನ್ನರೆ ವಾಸಿಯಾಗುವ ಮಾರ್ಗವಾವುದು? ಆದುದರಿಂದಲೇ ದೀರ್ಘಾನುಭವಿಗಳೂ ದೇಶ ವಿಚಾರದಲ್ಲಿ ಪೂರ್ಣ ಪರಿಶ್ರಮಿಗಳೂ ಆದ ಘನ ವೈದ್ಯರಾದ ಮಹಾತ್ಮರು ಈ ರೋಗ ನಿವಾರಣೆಗಾಗಿ ಕೆಲವು ಔಷಧಗಳನ್ನೂ ಮತ್ತು ಕೆಲವು ಪಥ್ಯಗಳನ್ನೂ ವಿಧಿಸಿದರು. ಅವುಗಳಲ್ಲಿ (೧) ಸ್ವದೇಶದಲ್ಲೇ ಸ್ವಹಸ್ತಗಳಿಂದಲೇ ಸ್ವಕೀಯ ಮಗ್ಗಗಳಲ್ಲೇ ತಯಾರಿಸಲ್ಪಟ್ಟ 'ಖಾದಿ'ಯ ವಸ್ತ್ರಗಳನ್ನುಡುವುದು. (೨) ದುಂದು ವೆಚ್ಚಗಳನ್ನು ಬಿಟ್ಟು ಮಿತವ್ಯಯಿಗಳಾಗಿರುವುದು. (೩) ಮದ್ಯಪಾನಾದಿಗಳನ್ನು ತ್ಯಜಿಸಿ ನಿರ್ವ್ಯಸನಿಗಳಾಗಿರುವುದು. (೪)ಎಲ್ಲಾ ಭೇದಭಾವಗಳನ್ನು ಬದಿಗೊತ್ತಿ ಐಕ್ಯಮತ್ಯದಿಂದಿರುವುದು ಎಂಬಿವೇ ಮುಖ್ಯವಾದುವು. ವೈದ್ಯನು ವಿಧಿಸುವ ಔಷಧ ಪಥ್ಯಗಳು ಅಸಹ್ಯವಾದರೆ, ರೋಗಿಯು ಅದೇ ರೋಗದಿಂದಲೇ ನರಳಿ ಕೊನೆಗೆ ಮೃತ್ಯುಮುಖನಾಗಬೇಕಾದುದು ಅನಿವಾರ್ಯವಷ್ಟೆ. ಅವುಗಳನ್ನು ಕೇಳಿ, ಅವುಗಳಿಂದಾಗುವ ಪ್ರಯೋಜನವನ್ನು ತಿಳಿದೂ ನಾವು ಅಪಥ್ಯ ಸೇವನೆಯನ್ನು ಬಿಡದೆ ಇದ್ದು,

ಕಂದ:—ಬಡತನಮೆ ನಿನಗೆ ಶೋಕಿಪೆ |
ನಡಿಗಡಿಗಾ, ನೆಸ್ನೊಳರ್ದು ಕೆಳೆತನಮಂ ನೀಂ ||
ಬಿಡದೆ ಹತಭಾಗ್ಯ ನಪ್ಪೆ |
ನ್ನೊಡಲಳಿಯ ಲೆಲ್ಲಿಗುವೆತ್ತ ಲೆನಗಿದುದುಃಖಂ ||

ಎಂದು ಮರುಗಿದ ದರಿದ್ರನಂತೆ ನಾವು ಆ ಬಡತನವನ್ನೇ ಆಲಂಗಿಸಬೇಕೆಂದು ಅಪೇಕ್ಷಿಸುತ್ತಾ, ಪ್ರತೀಕಾರ ಮಾರ್ಗವನ್ನು ಕೈಕೊಳ್ಳಲು ಉಪೇಕ್ಷಿಸಿದೆವಾದರೆ, ಪಾಪ, ಆ ಬಡತನವಾದರೂ ನಮ್ಮನ್ನು ಬಿಟ್ಟು ಎಕೆ, ಹೇಗೆ ತೊಲಗೀತು!

'ಸುಬೋಧ'

ಮಾರಾಟಕ್ಕೆ!

ಒಳ್ಳೆ ಸಮಯ! ಘನವಾದ ಆಸ್ತಿ!

ಸುಲಭ ಕ್ರಯ.

ಇದರಿಂದ ಸಮಸ್ತ ಜನರಿಗೂ ತಿಳಿಯಪಡಿಸುವುದೇನೆಂದರೆ—

ಬಿ. ಸಿ. ರುಕ್ಮಿಣಿಯಮ್ಮನಾದ ನಾನು ಮಡಿಕೇರಿಯಲ್ಲಿರುವ ಈ ಕೆಳಗೆ ಕಂಡ ನನ್ನ ಸ್ವಂತ ಆಸ್ತಿಗಳನ್ನು ಮಾರಲು ತಯಾರಿದ್ದೇನೆ. ಖಾಯಿಷ್‌ದಾರರು ಆಸ್ತಿಯನ್ನು ನೋಡಿಕೊಂಡುಕೊಳ್ಳಬಹುದು. ಹೆಚ್ಚಿನ ವಿವರವು ಈ ಕೆಳಗಿನ ವಿಳಾಸದವಳಾದ ನನ್ನಿಂದ ರೂಬರೂಬ್ ತಿಳಿಯಲಾಗುವುದು.

ಆಸ್ತಿಯ ತಪಶೀಲ್.

1. ಸಾಸನ್ಸ್ ರೋಡಿನಲ್ಲಿ ನಾನು ವಾಸವಿರುವ ಮನೆ 1. (ಯುನೈಟೆಡ್ ಕ್ಲಬ್ಬಿನ ಹತ್ತಿರ)

2. ಗಣಪತಿ ಬೀದಿಯಲ್ಲಿ ನಂ. 6ನೇ ನಂಬರು ಅಂಗಡಿ ಇಟ್ಟಿರುವ ಮನೆ 1.

3. ಗಣಪತಿ ಬೀದಿಯಲ್ಲಿ ಬಿ. ಮಂಜಪ್ಪನವರು ಹೊಟೇಲ್ ಇಟ್ಟಿರುವ ಮನೆ 1.

ಬಿ. ಸಿ. ರುಕ್ಮಿಣಿಯಮ್ಮ.
2–2. ಸಾಸನ್ಸ್ ರೋಡ್,
ಮಡಿಕೇರಿ.

ಚಂದಾದಾರರಲ್ಲಿ ವಿನಂತಿ

ನಮ್ಮ ಚಂದಾದಾರರಲ್ಲಿ 1ರಿಂದ 423ನೇ ನಂಬರಿನ ವರೆಗಿನವರ ವಾಯಿದೆಯು ಈ ತಿಂಗಳ ಅಂತ್ಯಕ್ಕೆ ತೀರುವುದರಿಂದ ಅವರು ದಯವಿಟ್ಟು ತಮ್ಮ ಬರುವವರ್ಷದ ಚಂದಾಹಣವನ್ನು ಜೂನ್ 1ರೊಳಗೆ ನಮಗೆ ತಲುಪುವಂತೆ ಕಳುಹಿಸಿಕೊಡಬೇಕಾಗಿಯೂ, ಈ ವರ್ಷದ ಚಂದಾ ಕೊಡದೆ ಬಾಕಿ ಇರುವವರು ಅದರ ಬಾಕಿಯನ್ನು ವಹನೆ ಕಳುಹಿಸಿಕೊಡಬೇಕಾಗಿಯೂ ಕೋರುತ್ತೇವೆ

ಮೇನೇಜರ್.

ವರ್ತಮಾನ ಸಂಗ್ರಹ.

ಒಳದೇಶ

ರಾವ್‌ಬಹದ್ದೂರ್ ಅಪ್ಪಾರಂಡ ಮುದಣ್ಣನವರು ತಾ. 11ನೇ ಸಾಯಂಕಾಲ ಅವರ ಮಡಿಕೇರಿಮನೆಯಲ್ಲಿ ಶಿವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ.

ರಿಟಯರ್ಡ್ ಸಬ್ ಅಸಿಸ್ಟೆಂಟ್ ಸರ್ಜನರಾದ ಮೆ. ಚೇರಂಡ ಸೋಮಯ್ಯನವರು ಈಗ ನೀಲಗಿರಿಯಲ್ಲಿ ಉದ್ಯೋಗವನ್ನು ಕೈಕೊಂಡಿರುವರು.

ತಾ. 11ರಲ್ಲಿ ಮೆ. ಮಾಚಿಮಂಡ ಅಪ್ಪಚ್ಚನವರ ಅಧ್ಯಕ್ಷತೆಯಲ್ಲಿ ಅಮ್ಮತ್ತಿನಾಡಿನವರ ಮೀಟಿಂಗೊಂದು ಅಮ್ಮತ್ತಿ ಶಾಲೆಯ ಬಳಿ ನಡೆಯಿತು. ಇದರ ವಿವರವು ಇನ್ನೊಂದು ಕಡೆ ಪ್ರಕಟವಾಗಿದೆ.

ಗುಹ್ಯ ಗ್ರಾಮದ ಪುಟ್ಟನೆಂಬ ಯರವನು ಒಬ್ಬ ಮಲೆಯತಿ ಯೊಡನೆ ಅಕ್ರಮ ಸಂಗ (ರೇಪ್) ಮಾಡಿದ ಕೇಸು ಶೆಷನ್ಸ್ ಜಡ್ಜಿಯವರ ಕೋರ್ಟಿನಲ್ಲಿ ತಾ 13ರಲ್ಲಿ ವಿಚಾರಿಸಲ್ಪಟ್ಟು ಅವನಿಗೆ ನಾಲ್ಕುವರ್ಷ ಕಠಿಣಸಜೆಯೂ 15 ಕೊರಡ ಪೆಟ್ಟುಗಳೂ ವಿಧಿಸಲಾಗಿದೆ.

ಈ ತಾ. 15ರಿಂದ ಮೆ. ಕೀತಿಯಂಡ ಚಿಣ್ಣಪ್ಪನವರನ್ನು ಸಾಪೋಕ್ಲು ಪಾರುಪತ್ಯಗಾರರಾಗಿಯೂ, ಮೆ. ಕರವಂಡ ಚಂಗಪ್ಪನವರನ್ನು ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟ್ ಕೋರ್ಟು ಶಿರಸ್ತೇದಾರರಾಗಿಯೂ, ಮೆ. ಸಣ್ಣುವಂಡ ಸುಬ್ಬಯ್ಯನವರನ್ನು ಸೋಮವಾರಪೇಟೆ ಪಾರುಪತ್ಯಗಾರರಾಗಿಯೂ ವರ್ಗಾಯಿಸಿರುವರೆಂದು ತಿಳಿಯಬರುತ್ತದೆ.

ಮೂರುತಿಂಗಳಹಿಂದೆ ಪೆರಾಜೆಯಲ್ಲಿ ಒಬ್ಬ ಪಾಲೆಯವನು ಮೃತಪಟ್ಟ ಖೂನಿ ಮೊಕದ್ದಮೆ ತಾ. 12ರಲ್ಲಿ ವಿಚಾರವಾಗಿ ಒಂದನೇ ಅಪರಾಧಿಯಾದ ತಜಾವುಲ ಕುಟ್ಟಿಗೆ ಎರಡುವರ್ಷ ಕಠಿಣಸಜೆಯೂ, 2ನೇ ಅಪರಾಧಿಯಾದ ನಾಯರ ಚಂದುಗೆ 30ರೂ. ಜುಲುಮಾನೆಯೂ ಶೆಷನ್ಸ್ ಜಡ್ಜಿಯವರಿಂದ ವಿಧಿಸಲಾಗಿದೆ.

ಹಿಂದೂದೇಶ.

ಎಲ್ಲಾ ಪ್ರಜೆಗಳ ಉನ್ನತಿಯಾದ ಸರ್ಕಾರದ ಹಣದಿಂದ ಕೋಮುವಾರು ಕಾಲೇಜುಗಳನ್ನು ನಡಿಸಬಾರದೆಂದು ಕಲ್ಕತ್ತೆ ವಿಶ್ವವಿದ್ಯಾಲಯದವರು ಠರಾವು ಪಾಸುಮಾಡಿರುವರು.

ಅಮೃತಸರದಿಂದ ತನ್ನ ಚಿಕ್ಕತಂದೆ ಮತ್ತು ತಾಯಿಯವರು ತನ್ನ ಒಂದು ವರ್ಷ ಪ್ರಾಯದ ಮಗುವನ್ನು ತೆಗೆದುಕೊಂಡು ಬೊಂಬಾಯಿಗೆ ಹೋಗಿ ಬಿಟ್ಟಿರುವರೆಂದು ಮುಮ್ತಾಜ್ ಬೇಗಮಳು ಮೇಜಿಸ್ಟ್ರೇಟರಿಗೆ ಕೇಸು ಕೊಟ್ಟಿರುವಳು.

ಕಲ್ಕತ್ತಾದಲ್ಲಿ ನಡೆದ ಹಿಂದೂ ಮುಸಲ್ಮಾನರ ಒಗಳದ ದೆಸೆಯಿಂದ ಒಂಗಾಳದ ಜನರ ಜೀವ ಮತ್ತು ಆಸ್ತಿ ನಷ್ಟಗಳಿಗೆ ಆ ರಿತಿ ಬಾನಡಸು ಒಂದು ಕೌನ್ಸಿಲಿನ ಬರುವ ಮೀಟಿಂಗಿನಲ್ಲಿ ಚರ್ಚೆಗೆ ತರಲ್ಪಡುವುದು.

ಮದ್ರಾಸಿನ ಮುಖ್ಯ ಮಂತ್ರಿಯಾದ ಪನಗಲಿನ ರಾಜರ ಮೇಲೆ ಮೆ. ಸಿ. ಕಂದ ಸ್ವಾಮಿ ಚೆಟ್ಟಿಯವರು ನಡಿಸಿದ ಮಾನನಷ್ಟದ ಮೊಕದ್ದಮೆಯಲ್ಲಿ ಪನಗಲರಿಗೆ ಒಂದು ಕಾಸು ಜುಲುಮಾನೆಯು ವಿಧಿಸಲಾಯಿತು.

ಈ ವರೆಗೆ ಫಾರೆಸ್ಟಿನ ವಿದ್ಯೆಯಲ್ಲಿ ಇಂಗ್ಲೆಂಡಿನಲ್ಲಿ ನಡಿಸುತ್ತಿದ್ದ ತರಬೇತನ್ನು ಇನ್ನು ಮುಂದೆ ಇಂಡಿಯಾದ ಡೇರಾಡನ್-ಕಾಲೇಜಿನಲ್ಲಿಯೇ ಕೊಡುವಂತೆ ಇಂಡಿಯಾಸರ್ಕಾರದವರು ತೀರ್ಮಾನಿಸಿರುವರು. ಇದರಿಂದ ಹಿಂದೂದೇಶದ ವಿದ್ಯಾರ್ಥಿಗಳಿಗೆ ಬಹಳ ಅನುಕೂಲವಾಗಿದೆ.

ಇಂದೂರಿನ ಈಗಿನ ಮಹಾರಾಜರವರು ಮೈಸೂರಿನ ರಾಜಕುಮಾರಿಯನ್ನು ಭೇಟಿಮಾಡಿದರ ಫಲಿತಾಂಶವಾಗಿ ಈ ರಾಜಕುಮಾರನ್ನು ಆಕ್ಸ್‌ಫರ್ಡಿಗೆ ತಮ್ಮ ವಿದ್ಯಾಭ್ಯಾಸವನ್ನು ಸಂಪೂರ್ಣಗೊಳಿಸಲಿಕ್ಕಾಗಿ ಹೋಗುವಂತೆ ತೀರ್ಮಾನವಾಗಿದೆ. ಅವರು ಇಂಗ್ಲೆಂಡಿಗೆ ತಾ. 22ರಲ್ಲಿ ಹೊರಡುವರು.

ಕಲ್ಕತ್ತೆ ಮುನ್ಸಿಪಾಲಿಟಿಯ 90 ಮೆಂಬರುಗಳ ಪೈಕಿ 61 ಮೆಂಬರುಗಳು ಅದರ ಉಪ ಅಧ್ಯಕ್ಷರಾದ ಮೆ. ಸುಹ್ರವಾರ್ದಿಯವರ ಮೇಲೆ ಅವರಿಗೆ ವಿಶ್ವಾಸವಿಲ್ಲವೆಂತಲೂ ಅವರು ಆ ಪದಕ್ಕೆ ರಾಜಿನಾಮೆ ಕೊಡಬೇಕೆಂತಲೂ ಒಂದು ಪತ್ರವನ್ನು ಬರೆದು ಅಧ್ಯಕ್ಷರಿಗೆ ಕಳುಹಿಸಿರುವರು. ಮುಸಲ್ಮಾನ್ ಮೆಂಬರುಗಳು ಮಾತ್ರ ಪತ್ರಕ್ಕೆ ರುಜುಹಾಕಿರುವುದಿಲ್ಲ.

ಇಂಡಿಯಾದ ಎಲ್ಲಾ ರಾಜಕೀಯ ಸಂಗಡಗಳ ಒಗ್ಗಟ್ಟಿನ ವಿಷಯ ಚರ್ಚಿಸಲು ಅಖಿಲಭಾರತ ಕಾಂಗ್ರೆಸ್ಸಿನ ಒಂದು ವಿಶೇಷ ಅಧಿವೇಶನವನ್ನು ಮಾಡಬೇಕೆಂದು ಅಖಿಲಭಾರತ ಕಾಂಗ್ರೆಸ್ ಕಮಿಟಿ ಮೀಟಿಂಗಿನಲ್ಲಿ ಪಂಡಿತ ಮಾಳವೀಯರು ಸೂಚಿಸಿದ್ದ ಠರಾವನ್ನು ಚರ್ಚೆಯಾದನಂತರ ವಾಪಸು ತೆಗೆದುಕೊಂಡರು.

ಕಾಂಗ್ರೆಸ್ಸಿನ ಮುಂದಾಳುಗಳಾದ ಶ್ರೀನಿವಾಸ ಅಯ್ಯಂಗಾರ್, ಅಣ್ಣಾಂಕರ್, ಸತ್ಯಮೂರ್ತಿ, ಮತ್ತು ರಂಗಸ್ವಾಮಿ ಅಯ್ಯಂಗಾರ್‌ರವರು ರಸ್‌ಪಾಸ್ಟಿವಿಸ್ಟರ ಮಧ್ಯಸ್ಥಳವಾದ ಪೂನಾದಲ್ಲಿ ಒಂದು ಪಬ್ಲಿಕ್ ಮೀಟಿಂಗು ನಡಿಸಿ ಬರುವ ಚುನಾವಣೆಯ ವಿಷಯ ಭಾಷಣಮಾಡಿದರು. ರಸ್‌ಪಾಸ್ಟಿವಿಸ್ಟರು ಕೆಲವರು ಮೀಟಿಂಗಿನಲ್ಲಿ ಗಲಾಟೆ ಎಬ್ಬಿಸಲು ಪ್ರಯತ್ನಿಸಿದರೂ ಫಲಿಸಲಿಲ್ಲ. ಅಲ್ಲಿ ಚುನಾವಣೆಯಲ್ಲಿ ಕಾಂಗ್ರೆಸ್ ಪಾರ್ಟಿಗೆ ಜಯವಾಗುವ ಸಂಭವ ತುಂಬಾ ಇದೆಯೆಂತ ತೋರುತ್ತದೆ.

ಖಿಲಾಫತ್ ಕಾನ್‌ಫರೆನ್ಸಿನ ವಿಶೇಷ ಅಧಿವೇಶನವು ತಾ. 8ರಲ್ಲಿ ಡೆಲ್ಲಿಯಲ್ಲಿ ನಡೆಯಿತು. ಹೆಡ್ಜಾಜ್ ಮುಸ್ಲಿಮ್ ಕಾನ್‌ಫರೆನ್ಸಿಗೆ ಹೋಗಲಿಕ್ಕಿರುವ ಖಿಲಾಫತ್ ಡೆಪ್ಯುಟೇಶನಿನ ಮುಂದಾಳಾದ ಮೌಲಾನ ಸಯುದ್ ಸುಲೇಮಾನ್ ನಾಡ್ವಿಯವರು ಅಧ್ಯಕ್ಷರಾಗಿದ್ದರು. ಖಿಲಾಫತ್ ಕಾನ್‌ಫರೆನ್ಸಿನ ಮೊದಲಿನ ತತ್ವವನ್ನು ಬದಲಾಯಿಸಿ ಮುಸಲ್ಮಾನರ ಎಲ್ಲಾ ತರದ ಹಿತವನ್ನು ಇದರ ಉದ್ದೇಶದೊಳಗೆ ಅಡಗುವಂತೆಯೂ, ಹಿಂದೂಮುಸಲ್ಮಾನರಿಗೆ ಆಗಾಗ್ಯೆ ಸಂಭವಿಸುತ್ತಿರುವ ಕಲಹಗಳ ದೆಸೆಯಿಂದ ಇಂಥಾ ಕಲಹಗಳನ್ನು ರಾಜಿಯಿಂದ ನಿಲ್ಲಿಸಲೂ, ಸಾಧ್ಯವಿಲ್ಲದಿದ್ದರೆ ಮುಸಲ್ಮಾನರನ್ನು ಕಾಪಾಡಲು ಅಹಿಂಸ ತತ್ವವನ್ನು ಅವಲಂಬಿಸಿ ಎಲ್ಲಾ ವಿಧಗಳಲ್ಲಿಯೂ ಏರ್ಪಾಡುಗಳನ್ನು ಮಾಡಬೇಕೆಂಬ ಠರಾವುಗಳು ಧೀರ್ಘಚರ್ಚೆ ನಡೆದು ಮಂಜೂರಾದವು.

ವಿದೇಶ.

ಡೆಲ್ಲಿಪಟ್ಟಣವು ಭೂಲೋಕದ ಅತಿ ಸುಂದರವಾದ ರಾಜಧಾನಿಗಳಲ್ಲಿ ಒಂದಾಗುವದೆಂದು ಲಾರ್ಡ್ ರೀಡಿಂಗ್‌ರವರು ಇಂಗ್ಲೆಂಡಿನಲ್ಲಿ ಒಂದು ಮೀಟಿಂಗಿನಲ್ಲಿ ಸೂಚಿಸಿದರು.

ಬ್ರಿಟಿಶ್ ಪಾರ್ಲಿಮೆಂಟಿನಲ್ಲಿ ಇಂಡಿಯನ್ ಮೆಂಬರಾದ ಮೆ ಸಕ್ಲಾತವಾಲಾರವರು ಹೌಸ್ ಆಫ್ ಕಾಮನ್ಸ್‌ನಲ್ಲಿ ಮಾತ್ರ ಭಾಷಣಮಾಡುವುದಾಗಿ ಮಾತು ಕೊಟ್ಟದ್ದರಿಂದ ಅವರನ್ನು ಸೆರೆಯಿಂದ ಬಿಟ್ಟಿರುವರು.

ರಿಫ್‌ಜನರಿಗೂ ಫ್ರೆಂಚ್ ಮತ್ತು ಸ್ಪೈನರಿಗೂ ನಡೆಯುತ್ತಿದ್ದ ರಾಜಿ ಸಂಧಾನಗಳು ಮುರಿದುಹೋದದ್ದರಿಂದ ಪುನಹ ಯುದ್ಧವು ಪ್ರಾರಂಭವಾಗಿದೆ. ಪ್ರಥಮದಲ್ಲೇ ಫ್ರೆಂಚ್ ಸೈನಿಕರಿಗೂ ರಿಫ್ ಸಿಪಾಯಿಗಳಿಗೂ ಕೈಕೈ ಜಗಳವಾಗಿ ರಿಫ್‌ರನ್ನು ಹಿಂದಕ್ಕೆ ತಳ್ಳಿರುವರು.

ಜರ್ಮನಿಯ ರಾಯಭಾರಿಗಳೆಲ್ಲರೂ ರಿಪಬ್ಲಿಕನ್ ಬಾವುಟದೊಂದಿಗೆ ರಾಜರ ಕಾಲದ ರಂಗುಗಳಿಂದ ಕೂಡಿದ ವ್ಯಾಪಾರದ ಬಾವುಟವೊಂದನ್ನು ಹಾಯಿಸಬೇಕೆಂದು ಜರ್ಮನಿಯ ಪ್ರೆಸಿಡೆಂಟರವರು ಹುಕುಂ ಮಾಡಿರುವರು. ಇದು ಅಲ್ಲಿಯ ಅನೇಕರಿಗೆ ಸಿಟ್ಟನ್ನುಂಟುಮಾಡಿದೆ.

ಇಂಗ್ಲೆಂಡಿನಲ್ಲಿ ಕೂಲಿಗಾರರು ಮುಷ್ಕರ ಹಿಡಿದು ತಾ. 11ಕ್ಕೆ ಒಂದು ವಾರವಾದರೂ ಅದರ ತೀರ್ಮಾನಕ್ಕೆ ಯಾವದೊಂದು ಕೆಲಸವೂ ಫಲಿಸಿರುವಂತೆ ಕಾಣುವದಿಲ್ಲ. ಕೂಲಿಗಾರರ ಬದಲು ಬೇರೆ ಜನರು ಸ್ವಯಂಸೇವಕರಾಗಿ ಕೆಲಸಕ್ಕೆ ಪ್ರಾರಂಭಿಸಿರುವರು. ಈ ಮಧ್ಯ ಮೂರುಕಡೆಗಳಲ್ಲಿ ರೈಲ್ವೆಗಾಡಿಗಳ ಅನಾಹುತವು ನಡೆದು ಅನೇಕ ಪ್ರಾಣ ನಷ್ಟವುಂಟಾಗಿದೆ. ಕೆಲವು ಕೂಲಿಪಕ್ಷದ ಮುಂದಾಳುಗಳು ಸೆರೆಹಿಡಿಯಲ್ಪಟ್ಟಿರುವರು.

ಕೌನ್ಸಿಲು ಚುನಾವಣೆ.

(ಕೊಡಗು ಗಜೆಟಿನಿಂದ ಸಂಗ್ರಹಿಸಿದ್ದು)

ಕೊಡಗು ಲೆಜಿಸ್ಲೇಟಿವ್ ಕೌನ್ಸಿಲಿನ ಬರುವ ಚುನಾವಣೆಗೋಸ್ಕರ ಓಟರುಗಳ ಪಟ್ಟಿಯು ರಿಟರ್ನಿಂಗ್ ಆಫೀಸರುಗಳಿಂದ ಬರುವ ಆಗೋಸ್ತು ತಿಂಗಳಲ್ಲಿ ತಯಾರಿಸಲ್ಪಟ್ಟು ಪ್ರಕಟಿಸಲ್ಪಡುವುದು. ಸದರಿ ಪಟ್ಟಿಯಲ್ಲಿ ಓಟಿಗೆ ಹಕ್ಕಿಲ್ಲದವರ ಹೆಸರು ಸೇರಿ ಹೋಗಿದ್ದರೆ ಅಥವಾ ಹಕ್ಕಿರುವವರ ಹೆಸರು ಬಿಟ್ಟು ಹೋಗಿದ್ದರೆ ಆ ವಿಷಯ ಸೆಪ್ಟೆಂಬರ್ 30ರೊಳಗೆ ರಿವೈಜಿಂಗ್ ಆಫೀಸರುಗಳಿಗೆ ಸಂಬಂಧಪಟ್ಟವರು ಬರೆಕೊಳ್ಳತಕ್ಕದ್ದು. ರಿವೈಜಿಂಗ್ ಆಫೀಸರುಗಳು ನಿರ್ಣಯಿಸುವ ತಾರೀಕಿನಲ್ಲಿ ಪುಕಾರುಗಳ ತನಿಖೆ ಮಾಡಲಾಗುವುದು. ಅಕ್ಟೋಬರು 1ನರೊಳಗೆ ರಿವೈಜಿಂಗ್ ಆಫೀಸರುಗಳು ತಿದ್ದುಪಡಿ ಮಾಡಿ ಸರಿಪಡಿಸಿದ ಓಟರುಗಳ ಪಟ್ಟಿಯನ್ನು ಆಯಾ ರಿಟರ್ನಿಂಗ್ ಆಫೀಸರುಗಳಿಗೆ ಕಳುಹಿಸತಕ್ಕದ್ದು. ಅಕ್ಟೋಬರು 25ರಲ್ಲಿ ರಿಟರ್ನಿಂಗ್ ಆಫೀಸರುಗಳು ಅಂಥಾ ಸರಿಪಡಿಸಲ್ಪಟ್ಟ ಪಟ್ಟಿಗಳನ್ನು ನವಂಬರು 10ರೊಳಗೆ ಪುನಹ ಪ್ರಕಟಿಸತಕ್ಕದ್ದು.

ನಂಜರಾಜಪಟ್ನ ಮತ್ತು ಮಡಿಕೇರಿ ತಾಲೋಕುಗಳಿಗೆ ಉತ್ತರಕೊಡಗಿನ ಸುಬೇದಾರರೂ, ವೀರಾಜಪೇಟೆ—ಸಾಪೋಕ್ಲು-ಅಮ್ಮತ್ತಿ ಮತ್ತು ಪೊನ್ನಂಪೇಟೆ-ಶ್ರೀಮಂಗಲ ತಾಲೋಕುಗಳಿಗೆ ದಕ್ಷಿಣಕೊಡಗಿನ ಸುಬೇದಾರರೂ, ಯೂರೋಪಿಯನ್ ಕಾನ್‌ಸ್ಟಿಟುವೆನ್ಸಿಗೆ ಯೂರೋಪಿಯನ್ ಪ್ಲಾಂಟರುಗಳ ಸಂಘದ ಸೆಕ್ರೆಟರಿಯವರೂ ರಿಟರ್ನಿಂಗ್ ಆಫೀಸರುಗಳಾಗಿಯೂ ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರು ಇಡೀ ದೇಶಕ್ಕೆ ರಿವೈಜಿಂಗ್ ಆಫೀಸರಾಗಿಯೂ ನೇಮಿಸಲ್ಪಟ್ಟಿರುತ್ತಾರೆ.

ಬರುವ ಚುನಾವಣೆ ಬಗ್ಗೆ ಯುರೋಪಿಯನ್ ಪ್ಲಾಂಟರುಗಳಿಗೆ ಮಡಿಕೇರಿಯೂ, ನಂಜರಾಜಪಟ್ನ ತಾಲೋಕಿನವರಿಗೆ ಸೋಮವಾರಪೇಟೆಯೂ, ಮಡಿಕೇರಿ ತಾಲೋಕಿನವರಿಗೆ ಮಡಿಕೇರಿಯೂ, ವೀರಾಜಪೇಟೆ- ಸಾಪೋಕ್ಲು- ಅಮ್ಮತ್ತಿ ತಾಲೋಕಿನವರಿಗೆ ವೀರಾಜಪೇಟೆಯೂ, ಪೊನ್ನಂಪೇಟೆ— ಶ್ರೀಮಂಗಲ ತಾಲೋಕಿನವರಿಗೆ ಪೊನ್ನಂಪೇಟೆಯೂ ಹೆಡ್ ಕ್ವಾರ್ಟರ್ಸ್ ಆಗಿರುವುದು.

ಬೆಸ್ಟ್ ಲೀವರ್ ಪಾಕೆಟ್ ವಾಚ್.

ಈ ಗಡಿಯಾರವು ಉತ್ತಮವಾದ ಸಾಮಾನುಗಳಿಂದ ತಯಾರಿಸಲ್ಪಟ್ಟದ್ದು. ನೋಟಕ್ಕೆ ಬಹು ಗಂಭೀರವಾಗಿಯೂ ಸುಂದರವಾಗಿಯೂ ಉಳ್ಳದ್ದು. ಇದರ ಎಲ್ಲಾ ಸಾಮಾನುಗಳು ಬಹು ನಾಜೂಕಾದ ಯಂತ್ರಗಳಿಂದ ತಯಾರಿಸಲ್ಪಟ್ಟದ್ದು. ಇದನ್ನು ಜೇಬಿನಲ್ಲಿ ಹಾಕಿಕೊಂಡು ಎಷ್ಟು ದೂರ ಓಡಿದಾಗ್ಯೂ ನಿಲ್ಲದೆ ನಡೆಯುತ್ತಿರುವದು. ಇಷ್ಟು ಸುಲಭ ಕ್ರಯಕ್ಕೆ ಇತರ ಕಂಪೆನಿಯಲ್ಲಿ ದೊರೆಯಲಾರದು

12—2 ಇದರ ಕ್ರಯ ರೂ. 4-0-0.

ಪಗಡೆ ಆಟದ ಮನೆ ಮತ್ತು ದಾಳ.

ಕಾಲ ಕಳೆಯುವದಕ್ಕಾಗಲೀ, ವಿನೋದಕ್ಕಾಗಲೀ, ಆಡುವದಕ್ಕೆ ಇದೊಂದು ತರದ ಆಟವಾಗಿರುವದು. ಅನೇಕ ತರದ ಕಲಾಬತ್ ಬನಾತುಗಳಿಂದ ಆಟದ ಮನೆಗಳನ್ನು ಹೊಲಿದಿರುತ್ತೆ. 4 ಬಣ್ಣಗಳ 16 ಪಗಡೆ ಕಾಯಿಗಳು ಮತ್ತು ದಾಳಗಳು ಸಹ ಇರುವದು. ಸೆಟ್ 1ಕ್ಕೆ (0—10—0.)

ವಿಳಾಸ.—

ಎಲ್ಜಿನ್ ವಾಚ್ ಕಂಪೆನಿ,
ಪಿ. ಬಿ. ನಂಬರ್ 1251.
ಮದರಾಸು.

ರಾಮಕೃಷ್ಣಪರಮಹಂಸರ ಜೀವಚರಿತ್ರೆ.

(ನಾಪೋಕ್ಲಿನಲ್ಲಿ ಸ್ವಾಮಿ ಸಿದ್ಧೇಶ್ವರಾನಂದರವರ ಭಾಷಣ)

ಮಹಾಶಯರೇ,

ಬ್ರಹ್ಮಜ್ಞಾನವನ್ನು ಸಂಪಾದಿಸುವುದಕ್ಕಭಿಲಾಷೆಯುಳ್ಳ ಎಲ್ಲಾ ಜೀವಿಗಳಿಗೂ ಸಾಧನ ಚತುಷ್ಟಯ ಸಂಪತ್ತಿ ಇರಬೇಕೆಂಬದಾಗಿ ತ್ರಿಮತಸ್ಥರೂ ಒಪ್ಪುತ್ತಾರೆ. ಅವುಗಳಲ್ಲಿ ಮನುಷ್ಯತ್ವವು ಮೊದಲನೆಯದು. ಈ ಪ್ರಪಂಚದಲ್ಲಿ ವಾಸಮಾಡುತ್ತಿರುವ ಸಕಲ ಚರಾಚರಗಳನ್ನೂ ಒಂದು ಮಹತ್ತಾದ ಪುಣ್ಯ ಸ್ಥಳಕ್ಕೆ ಹೋಗುತ್ತಿರುವ ಜಾತ್ರೆಗೆ ಹೋಲಿಸಬಹುದು. ಗುಂಪುಗುಂಪಾಗಿ ಹೋಗುತ್ತಿರುವರೇ ಜಾತ್ರೆಗಾರರು ಬಹಳ ಅಡಚಣೆಗಳಿಗೀಡಾಗುವರು, ಕೆಲವರು ಸರಿಯಾದ ದಾರಿ ಕಾಣದೆ ಕಾಡು ಮೇಡುಗಳಲ್ಲಿ ಬಿದ್ದು ಅಲೆಯುವರು ಮತ್ತೆ ಕೆಲವರು ದಾರಿಯಲ್ಲಿ ರಮ್ಯವಾದ ಪಟ್ಟಣಗಳಲ್ಲಿನ ಆಟನೋಟಗಳಿಗೆ ಬೆರಗಾಗಿ ಜಾತ್ರೆಯನ್ನೇ ಮರೆತುಬಿಡುವರು; ಆದರೆ ಬ್ರಹ್ಮ ಸಾಕ್ಷಾತ್ಕಾರವನ್ನು ಪಡೆದು ಜೀವನ್ಮುಕ್ತರಾಗಿರುವ ಅವತಾರಪುರುಷರನ್ನು ಹಿಂಬಾಲಿಸುವ ಕೆಲವು ಮಂದಿ ಮಾತ್ರ ತಮ್ಮ ಶಕ್ತಿಯಿಂದಲೂ ಭಕ್ತಿಯಿಂದಲೂ ದುರ್ಗಮವಾದ ಬೆಟ್ಟಗುಡ್ಡಗಳನ್ನು ದಾಟಿ ಪುಣ್ಯ ಸ್ಥಳವನ್ನು ಸೇರಿ ತಮ್ಮ ಜೀವಿತವನ್ನು ಪಾವನಮಾಡಿಕೊಳ್ಳುವರು. ಆದರೆ ಏಕಾಗ್ರಚಿತ್ತದಿಂದ ಆತ್ಮಜ್ಞಾನವನ್ನು ಸಂಪಾದಿಸಬೇಕೆಂಬ ಅಭಿಲಾಷೆಯುಳ್ಳವರಲ್ಲಿ ನಮ್ಮ ಭಾರತೀಯರು ಅಗ್ರಸ್ಥಾನವನ್ನು ವಹಿಸುವರು. ಈಶ್ವರ, ಆತ್ಮ, ಪರಕಾಲ ಮುಂತಾದ ಇಂದ್ರಿಯಾತೀತವಾದ ವಸ್ತುಗಳು ಪರಮ ಸತ್ಯವೆಂಬ ಜ್ಞಾನದಿಂದ ಅವುಗಳನ್ನು ಪ್ರತ್ಯಕ್ಷ ಮಾಡಿಕೊಳ್ಳಲು ಪ್ರಾಚೀನ ಕಾಲದಿಂದಲೂ ನಮ್ಮ ದೇಶದವರು ತಮ್ಮ ತನು, ಮನ, ಧನಗಳನ್ನು ಉಪಯೋಗಿಸಿ ಈ ವಿಧವಾದ ಸಾಕ್ಷಾತ್ಕಾರವೇ ಪ್ರತಿ ಮನುಷ್ಯನ ಮತ್ತು ಪ್ರತಿ ಜನಾಂಗದ ಪರಮ ಉದ್ದೇಶವೆಂದು ಸಿದ್ಧಾಂತಮಾಡಿದ್ದಾರೆ.

ನಮ್ಮ ದೇಶದಲ್ಲಿ ನಿಯತವಾಗಿ ಜನ್ಮಗ್ರಹಣಮಾಡುತ್ತಾ ಬಂದಿರುವ ಪ್ರತ್ಯಕ್ಷಾನುಭವಶಾಲಿಗಳಾದ ಮಹಾಪುರುಷರು ಪರಮ ಪದಪ್ರಾಪ್ತಿಗಾಗಿ ಕ್ರೈಸ್ತ, ಮತ್ತು ಮುಸಲ್ಮಾನ ಮತಗಳ ಹಾಗೆ ಎಲ್ಲಾ ಜೀವಿಗಳಿಗೂ ಒಂದೇ ಮಾರ್ಗವನ್ನು ಪದೇಶಿಸದೆ ಅವರವರ ಚಿತ್ತವೃತ್ತಿಗಳಿಗನುಸಾರವಾಗಿ ಮಾರ್ಗಗಳನ್ನು ಕಲ್ಪಿಸಿದ್ದಾರೆ. ಹೀಗೆ ನಾನಾ ಮತ ಸಿದ್ಧಾಂತಗಳು ನಮ್ಮ ಭರತಖಂಡದಲ್ಲಿ ಹುಟ್ಟಿ ಬೆಳೆದದ್ದರಿಂದ ಅಲ್ಪಜ್ಞರಾದ ಅನುಯಾಯಿಗಳಲ್ಲಿ ಕಲಹಗಳು ಹೆಚ್ಚಾಗುವದಕ್ಕಾಸ್ಪದವಾಯಿತು

ಈ ರೀತಿ ಧರ್ಮಗ್ಲಾನಿಯಾದರೆ ತಾನು ತನ್ನ ಮಾಯಾಶಕ್ತಿಯನ್ನವಲಂಬನ ಮಾಡಿ ಶರೀರ ಧಾರಣ ಮಾಡುವುದಾಗಿಯೂ ಪುನಃ ಪುನಃ ಶಾಂತಿಯ ಅಧಿಕಾರಿಯನ್ನಾಗಿ ಮಾಡುವುದಾಗಿಯೂ ಗೀತೆಯ ಮುಖೇನ ಭಗವಂತನು ಪ್ರತಿಜ್ಞೆ ಮಾಡಿರುತ್ತಾನೆ. ಅದರಂತೆಯೇ ಅವನು ಧರ್ಮಕ್ಕೆ ಕುಂದು ಬಂದಾಗಲೆಲ್ಲಾ ರಾಮಕೃಷ್ಣಾದ್ಯವತಾರಗಳನ್ನು ಮಾಡಿಯೂ ದಿವ್ಯ ಗುಣ ವಿಶಿಷ್ಟರಾದ ಮಹಾತ್ಮರನ್ನು ಸೃಷ್ಟಿಸಿಯೂ ಅದನ್ನು ಉದ್ಧರಿಸಿ ರಕ್ಷಿಸಿದ್ದಾನೆ. ಚರಿತ್ರಗಾರರಿಗೆ ಗೋಚರವಾದ ಮೂರುಸಾವಿರ ವರುಷಗಳಿಂದೀಚೆಗೆ ಮಹಾಮಹಿಮರಾದ ಗೌತಮ ಬುದ್ಧ, ಶಂಕರಾಚಾರ್ಯ, ರಾಮಾನುಜಾಚಾರ್ಯ, ಬಸವೇಶ್ವರ, ಮಧ್ವಾಚಾರ್ಯ, ರಾಮಾನಂದ, ಕಬೀರ, ನಾನಕ, ಚೈತನ್ಯ ಮುಂತಾದವರು ಭಾರತಭೂಮಿಯಲ್ಲಿಯೂ, ಝೂರಾಸ್ಟರ್, ಕನ್ಫ್ಯೂಷಿಯಸ್, ಏಸುಕ್ರಿಸ್ತ, ಮಹಮ್ಮದ, ಕ್ಯಾಲ್ವಿನ್, ವೆಸ್ಲಿ ಮುಂತಾದವರು ಇತರಭೂಭಾಗಗಳಲ್ಲಿಯೂ ಅವತರಿಸಿ, ಲುಪ್ತವಾಗಿ ಹೋಗಿದ್ದ ಮತಧರ್ಮಗಳನ್ನು ಉದ್ಧರಿಸಿ, ಪ್ರಯೋಜನಾಂಗದ ಶಿಕ್ಷಾಚಾರಗಳನ್ನೂ ಮತಧರ್ಮಗಳನ್ನೂ ನೆಲೆಗೊಳಿಸಿದರು.

ನಮ್ಮ ಇಂಡಿಯಾ ದೇಶದಲ್ಲಿ 1757ರಿಂದ ಪಾಶ್ಚಾತ್ಯರ ಆಡಳಿತವು ಪ್ರಬಲವಾಗುತ್ತಾ ಬಂದು ಒಂದು ಶತಮಾನದೊಳಗೆ ಇಡೀ ಭಾರತವರ್ಷವು ಆಂಗ್ಲೇಯರ ಸ್ವಾಧೀನವಾಯಿತು

1836ರಲ್ಲಿ ಕೊಡಗಿನ ರಾಜವಂಶವನ್ನು ಸೆರೆಯಲ್ಲಿರಿಸಿ ರಾಜ್ಯಾಡಳಿತವನ್ನು ಆಂಗ್ಲೇಯರಿಗೊಪ್ಪಿಸಿದ ಬೆಂಟಿಂಕ್ ಪ್ರಭುವು ಪಾಶ್ಚಾತ್ಯ ಸಂಸ್ಕೃತಿಯನ್ನು ಭರತಖಂಡದಲ್ಲಿ ಸ್ಥಾಪಿಸಲೋಸುಗ ಇಂಗ್ಲೀಷು ಭಾಷೆಯನ್ನು ಶಿಕ್ಷಣಭಾಷೆಯನ್ನಾಗಿ ಮಾಡಿದನು. ಅನಂತರ ಆಂಗ್ಲೇಯರ ವ್ಯಾಪಾರಕಸುಬು ಕ್ರೈಸ್ತ ಮತಪ್ರಚಾರಕರ ಪ್ರಯತ್ನಗಳಿಗೂ ಸಹಾಯದಂತಿರುವುದೆಂದು ಆತನು ನಂಬಿದನು. ಆದರೆ ಪಾಶ್ಚಾತ್ಯ ಸಂಸ್ಕೃತಿಯ ಸಮ್ಮೇಳನ ಸಹವಾಸಗಳಿಂದ ಭಾರತ ಧರ್ಮಕ್ಕೂ ಭಾರತೀಯರ ಶ್ರೇಯಸ್ಸಿಗೂ ಅನೇಕ ಅಪಾಯಗಳು ಕಂಡುಬಂದುವು. ಏಕೆಂದರೆ ನಾವು ಪಾಶ್ಚಾತ್ಯರಂತೆ ಐಹಿಕ ಉನ್ನತಿಯನ್ನು ಪಡೆಯಬೇಕಾದರೆ ಪುರಾತನವಾದ ಧರ್ಮಭಾವವನ್ನು ಬಿಟ್ಟು ಭೋಗಲೋಲುಪರಾಗಿಯೂ ಸ್ವಾರ್ಥಪರರಾಗಿಯೂ ಆಗಲೇಬೇಕು.

ಬೆಂಟಿಂಕ್ ಪ್ರಭುವಿನ ಕಾಲದಲ್ಲಿ ಆಂಗ್ಲೇಯ ವಿದ್ಯಾಭ್ಯಾಸವು ವಂಗ ದೇಶದಲ್ಲಿ ಬಹಳ ಅಭಿವೃದ್ಧಿ ಹೊಂದಿತು. ಎಷ್ಟೋ ಮಂದಿ ಉತ್ತಮ ಮನೆತನದ ಯುವಕರು ಪೂರ್ವದ ಶಿಕ್ಷಾದೀಕ್ಷೆಗಳನ್ನು ಬಿಟ್ಟು ಪ್ರಭುಗಳ ಮತವನ್ನವಲಂಬಿಸಿದರು. ನಾಸ್ತಿಕ್ಯ, ಪಾಶ್ಚಾತ್ಯರನ್ನು ಅನುಕರಿಸುವುದರಲ್ಲಿ ಪ್ರೀತಿ, ಆತ್ಮ ವಿಶ್ವಾಸರಾಹಿತ್ಯ ಇವುಗಳು ಎಲ್ಲೆಲ್ಲಿಯೂ ತಲೆದೋರಿ ಭಾರತಮಾತೆಯ ಮಕ್ಕಳನ್ನು ಬೆನ್ನು ಮೂಳೆಯಿಲ್ಲದ ಪ್ರಾಣಿಗಳಂತೆ ನಿರ್ವೀರ್ಯರನ್ನಾಗಿ ಮಾಡಿತು. ಮಂತ್ರ ದ್ರಷ್ಟರಾದ ಋಷಿವರ್ಯರು ಸ್ಥಾಪಿಸಿ ಪೂರ್ವ ಕಾಲದಿಂದ ಅನುಷ್ಠಾನಮಾಡುತ್ತಿದ್ದ ಸಮಸ್ತ ಸಿದ್ಧಾಂತಗಳೂ ಭ್ರಮೆ ಎಂದು ತಿರಸ್ಕರಿಸಲುಪಕ್ರಮಿಸಿದರು. ಹೀಗೆ ನಾವಿಕನಿಲ್ಲದ ದೋಣಿಯಂತೆ ಪರಾನುಕರಣವೆಂಬ ವಾಸನಾ ಎಂಬ ಗಾಳಿಗೆ ಎದುರಾಗಿ ಸ್ವೇಚ್ಛೆಯಿಂದ ತಿರುಗಾಡುವುದಕ್ಕೆ ಆರಂಭಿಸಿದರು. ಆದ್ದರಿಂದ ಬೆಂಟಿಂಕ್ ಪ್ರಭುವಿನ ವಿದ್ಯಾಭ್ಯಾಸ ಕ್ರಮ ಪ್ರಾರಂಭಿಸಿದ 1836ರಲ್ಲೇ ಅದರಿಂದುಂಟಾಗುವ ಅನಾಹುತಗಳನ್ನು ಪರಿಹರಿಸಿ ವಂಗ ದೇಶೀಯರನ್ನು ಮತ್ತು ಇತರ ಪ್ರಾಂತ್ಯಗಳ ಜನಾಂಗಗಳನ್ನು ಪುನರುಜ್ಜೀವನ ಮಾಡುವುದಕ್ಕೆ ಕಾಮಾರಪುಕುರವೆಂಬ ಸಣ್ಣ ಗ್ರಾಮದಲ್ಲಿ ಭಗವಾನ್ ಶ್ರೀ ರಾಮಕೃಷ್ಣರವರು ಅವತಾರಮಾಡಿದರು. ಬಾಲ್ಯದಿಂದಲೂ ಸದಾ ಆನಂದಮಯರಾಗಿ ದೇವಾರಾಧನೆ, ಸಂಕೀರ್ತನೆ, ಸಾಧುಸೇವೆ, ಮುಂತಾದ ಸತ್ಕಾರ್ಯಗಳಲ್ಲಿ ನಿರತರಾಗಿ ರಾಮಾಯಣ, ಭಾರತ, ಭಾಗವತವನ್ನು ಕಂಠಸ್ಥವಾಗುವಂತೆ ಪಠಿಸಿಕೊಂಡರು. ಜಗಜ್ಜನನಿಯ ಉಪಾಸನೆಯಲ್ಲಿ ನಿಮಗ್ನರಾಗಿ ಬಾಹ್ಯಪ್ರಜ್ಞೆಯನ್ನು ಕಳೆದುಕೊಂಡಿದ್ದರಿಂದ ಆ ಬಾಲಕನನ್ನು ಅದ್ಭುತಪುರುಷನೆಂದು ಪಂಡಿತರೂ ಪಾಮರರೂ ಪ್ರೀತಿಸುತ್ತಲಿದ್ದರು.

ತಮ್ಮ ಹದಿನೇಳನೆ ವಯಸ್ಸಿನಲ್ಲಿ ತಂದೆಯು ಪರಲೋಕವನ್ನೈದಿದ್ದರಿಂದ ತಮ್ಮ ಹಿರಿಯಣ್ಣನೊಡನೆ ಅವರು ನಾನಾಸ್ಥಳ ಸಮೀಪದ ಭಾಗೀರಥೀ ತೀರದ ದಕ್ಷಿಣೇಶ್ವರಕ್ಕೆ ಬಂದರು. ಕೆಲವು ದಿನಗಳೊಳಗೆ ರಾಣಿ ರಾಸಮಣಿಯವರು ಹೊಸದಾಗಿ ಪ್ರತಿಷ್ಠೆಮಾಡಿದ್ದ ಶ್ರೀ ಕಾಳೀ ಮಂದಿರದಲ್ಲಿ ಅವರ ಹಿರಿಯಣ್ಣಂದಿರನ್ನು ವೈದಿಕ ಅರ್ಚಕರಾಗಿ ನಿಯಮಿಸಿದ ಕಾರಣ ಶ್ರೀರಾಮಕೃಷ್ಣರೂ ಕೂಡ ಭಕ್ತಿಗೋಸ್ಕರ ದಯಮಾಡಿಸಿ ಭಗವಂತನ ದರ್ಶನವನ್ನು ಮಾಡಬೇಕೆಂದು ಪುರಾಣೇತಿಹಾಸಾಧನೆ ಮಾಡುತ್ತಾ ಬಂದರು. ಭಗವತಿಯನ್ನು ಪೂಜೆಮಾಡುವಾಗಲೂ ಮತ್ತು ಇತರ ಸಾಧನೆಗಳ ಕಾಲದಲ್ಲಿಯೂ ತಾಯಿಯನ್ನು ಬಿಟ್ಟಗಲಿದ ಮಗುವಿನಂತೆ ದೇವೀದರ್ಶನಕ್ಕಾಗಿ ಕಣ್ಣೀರು ಸುರಿಸಿ ಉನ್ಮತ್ತರೋಪಾದಿಯಲ್ಲಿ ತಿರುಗಾಡುತ್ತಿದ್ದರು. ಕಡೆಗೆ ಅವರ ಅಪಾರವಾದ ಭಕ್ತಿಗೆ ಮೆಚ್ಚಿ ಕರುಣಾಮಯಿಯಾದ ಕಾಳೀದೇವಿಯು ಅವರಿಗೆ ದರ್ಶನವನ್ನು ಕೊಟ್ಟು ಆಶೀರ್ವದಿಸಿದಳು.

ಈ ಸ್ಥಿತಿಯ ಅವರ ಚಿತ್ತವೃತ್ತಿಯನ್ನು ನೋಡಿ ಅವರ ಬಂಧುಗಳೆಲ್ಲರೂ ಇವರಿಗೆ ಮದುವೆ ಮಾಡಿದರೆ ಬುದ್ಧಿಯು ಸರಿಯಾಗುವುದೆಂದಾಲೋಚಿಸಿ ಶಾರದಾಮಣೀದೇವಿ ಎಂಬ ಕನ್ಯೆಯನ್ನು ತಂದು ಅವರ 23ನೇ ವಯಸ್ಸಿನಲ್ಲಿ ವಿವಾಹವನ್ನು ಬೆಳಸಿದರು. ಆದರೆ ಎಲ್ಲಾ ಸ್ತ್ರೀಯರನ್ನೂ ಪ್ರತ್ಯಕ್ಷ ಜಗದಂಬೆಯಾದ ಲಕ್ಷ್ಮೀ ಸ್ವರೂಪರೆಂದು ಭಾವಿಸಿ ಆರಾಧಿಸುತ್ತಿದ್ದ ಭಗವಾನರಿಗೆ ಸಾಂಸಾರಿಕತ್ವಕ್ಕೆ ವಿವಾಹವಾಯಿತು. ಶಾರದಾ ದೇವಿಯು ಅವರ ಶಿಷ್ಯ ಕೋಟಿಗಳಲ್ಲಿ ಸೇರಿದವರಾದರು. ಹೀಗಿರುವಲ್ಲಿ ಬ್ರಾಹ್ಮಣ ಸನ್ಯಾಸಿನಿಯೊಬ್ಬಳು ದಕ್ಷಿಣೇಶ್ವರಕ್ಕೆ ಬಂದು ರಾಮಕೃಷ್ಣರಿಗೆ ತಂತ್ರೋಕ್ತವಾದ ಅನೇಕ ಸಾಧನೆಗಳನ್ನು ಉಪದೇಶಿಸಿದರು. ನಂತರ ತೋತಾಪುರಿ ಎಂಬ ಅದ್ವೈತನಿಷ್ಠ ಸನ್ಯಾಸಿಯೊಬ್ಬರು ಭಗವಾನರಿಗೆ ಸನ್ಯಾಸವನ್ನು ಕೊಟ್ಟು ವೇದಾಂತವನ್ನು ಉಪದೇಶಿಸಿದ ಮೇಲೆ ಮೂರು ದಿನಗಳಲ್ಲಿಯೇ ಶ್ರೀ ರಾಮಕೃಷ್ಣರು ಆರು ತಿಂಗಳ ಕಾಲ ನಿರ್ವಿಕಲ್ಪಸಮಾಧಿಯಲ್ಲಿದ್ದರು.

ಮತ್ತೆ ಭರತಖಂಡದಲ್ಲಿ ಬಂದು ಬೇರೂರಿರುವ ಮಹಮ್ಮದೀಯ ಮತದಲ್ಲಿಯೂ ಉಪದೇಶವನ್ನು ಪಡೆದು ಅವರ ಪರಮ ಪದವಾದ "ಅಲ್ಲಾ"ವನ್ನೂ ಕಂಡು ಅನುಗ್ರಹೀತರಾದರು. ಹೀಗೆಯೇ ಕ್ರಿಸ್ತಭಕ್ತರ ಉಪಾಸನೆಯನ್ನನುಸರಿಸಿ ಸಮಾಧಿಯಲ್ಲಿ ಅವರ ದರ್ಶನವನ್ನು ಹೊಂದಿದರು. ಈ ರೀತಿಯಲ್ಲಿ ಬೇರೆ ಬೇರೆ ತೋರುವ ಮತಗಳು ನಮ್ಮ ಸ್ಥಾನಕ್ಕೆ ಹೋಗುವ ಬೇರೆ ಬೇರೆ ಮಾರ್ಗಗಳಲ್ಲದೆ ಪರಸ್ಪರವಿರುದ್ಧಗಳಲ್ಲವೆಂದು ಸಿದ್ಧಾಂತ ಮಾಡಿದರು. ಅವರು ತಮ್ಮ ವಚನಾಮೃತದಲ್ಲಿ ಹೇಳುವಂತೆ ಒಂದು ಕೊಳಕ್ಕೆ ಮೂರು ನಾಲ್ಕು ಘಟ್ಟಗಳಿವೆ. ಒಂದು ಘಟ್ಟದಲ್ಲಿ ಹಿಂದುಗಳು ನೀರನ್ನು ಕುಡಿಯುತ್ತಾರೆ. ಅವರು ಅದಕ್ಕೆ 'ಜಲ' ಎಂದು ಹೇಳುತ್ತಾರೆ. ಮತ್ತೊಂದು ಘಟ್ಟದಲ್ಲಿ ಮುಸಲ್ಮಾನರು ಕುಡಿಯುತ್ತಾರೆ. ಅವರು ಅದನ್ನು 'ಪಾನಿ' ಎಂದು ಕರೆಯುತ್ತಾರೆ. ಇನ್ನೊಂದು ಘಟ್ಟದಲ್ಲಿ ಇಂಗ್ಲೀಷಿನವರು ಕುಡಿಯುತ್ತಾರೆ. ಅವರು 'ವಾಟರ್' ಎಂದು ಹೇಳುತ್ತಾರೆ. ಈ ಮೂವರು ಕುಡಿಯುವುದು ನೀರೇ, ಆದರೆ ಹೆಸರು ಮಾತ್ರ ಬೇರೆ ಬೇರೆ. ಹಾಗೆಯೇ ಭಗವಂತನನ್ನು ಕೆಲವರು 'ಅಲ್ಲಾ' ಎಂದೂ, ಕೆಲವರು 'ಗಾಡ್' ಎಂದೂ, ಕೆಲವರು 'ಬ್ರಹ್ಮ' ಎಂದೂ, ಕೆಲವರು 'ಕಾಳೀ' ಎಂದೂ ಕೆಲವರು ರಾಮ, ಹರಿ, ಎಂದೂ ಕೆಲವರು 'ಯೇಸುಕ್ರಿಸ್ತ' ಎಂದೂ, ಕೆಲವರು 'ದುರ್ಗಾ' ಎಂದೂ ಹೇಳುತ್ತಾರೆ. ಆದ್ದರಿಂದ ಶ್ರೀ ರಾಮಕೃಷ್ಣಾವತಾರದಲ್ಲಿ ಲೋಕಕ್ಕೆ ದೊರೆತ ಪರಮಾನುಗ್ರಹವೇನೆಂದರೆ ಯಾರೂ ತಮ್ಮ ಮತವನ್ನು ದೂಷಿಸಿ ಇನ್ನೊಬ್ಬರ ಧರ್ಮವನ್ನವಲಂಬಿಸುವುದು ಅನಾವಶ್ಯಕ, ಎಷ್ಟು ಮತಗಳಿವೆಯೋ ಅಷ್ಟು ಪಥಗಳಿವೆ ನಿರ್ವಾಂತಃಕರಣದಿಂದ ಯಾವುದರಲ್ಲಾದರೂ ಅನುಷ್ಠಾನ ಮಾಡು, ಅದರಿಂದಲೇ ನೀನು ಭಗವಂತನನ್ನು ಹೊಂದುತ್ತೀ. ದೇವರು ಭಕ್ತವತ್ಸಲನು, ಭಕ್ತನು ಯಾವ ರೂಪವನ್ನು ಪ್ರೀತಿಸುತ್ತಾನೆಯೋ ಅದೇ ರೂಪದಲ್ಲಿ ಅವನಿಗೆ ಕಾಣಿಸಿಕೊಳ್ಳುತ್ತಾನೆ ಎಂದು ಅಪ್ಪಣೆ ಕೊಡಿಸಿದರು.

ಮತ್ತೆ ಈ ಕಲಿಯುಗದಲ್ಲಿ ಭಕ್ತಿಯೋಗವೆ ಯುಗ ಧರ್ಮವೆಂದು ಅವರು ಸಾಧಿಸಿದರು. ಭಗವಂತನ ನಾಮೋಚ್ಚಾರಣ ಗುಣಗಾನ ಮತ್ತು ಪ್ರಾರ್ಥನೆಯನ್ನು ಹೃದಯಂಗಮವಾದ ಭಕ್ತಿಯಿಂದ ಮಾಡಿದರೆ ಮುಕ್ತಿಯು ಸುಲಭ ಸಾಧ್ಯವೆಂದು ನಮ್ಮನ್ನು ಉತ್ತೇಜಿಸಿದರು.

ನಮ್ಮ ಸಹಜೀವಿಗಳೆಲ್ಲರನ್ನೂ ದೇವರೆಂದು ತಿಳಿದು ಭಕ್ತಿಪೂರ್ವಕವಾಗಿ ಸೇವೆಮಾಡುವುದು ಉತ್ತಮವಾದ ಸಾಧನೆಯೆಂದು ಶ್ರೀ ರಾಮಕೃಷ್ಣರು ಬೋಧಿಸಿದರು. ತಮ್ಮ ಮುಕ್ತಿಯನ್ನೇ ಗುರಿಯಾಗಿಟ್ಟು ಕಾಲನಿರ್ಯಾಣಮಾಡುತ್ತಿರುವ ಸ್ವಾರ್ಥಪರರಾದ ಸನ್ಯಾಸಿಗಳನ್ನು ಖಂಡಿಸಿ ಆತ್ಮನೋ ಮೋಕ್ಷಾರ್ಥಂ ಜಗದ್ಧಿತಾಯಚ ' ಎಂಬ ವೇದವಾಕ್ಯವನ್ನು ತಮ್ಮ ಶಿಷ್ಯರಿಗೆ ಉಪದೇಶಿಸಿ ವೈರಾಗ್ಯ ಕೇಸರಿಗಳಾದ ವಿವೇಕಾನಂದ ಪ್ರಭೃತಿಗಳನ್ನು ಭಾರತೀಯರ ಸೇವೆಗೆ ದಾನಮಾಡಿದರು.

ಈಗ ರಾಮಕೃಷ್ಣ ಪರಮಹಂಸರ ಶಿಷ್ಯರಿಂದ ನಡೆಸಲ್ಪಡುವ ಆಸ್ಪತ್ರಾಲಯಗಳೂ, ಸೇವಾಶ್ರಮಗಳೂ, ನಿರಾಶ್ರಿತ ಶಾಲೆಗಳೂ, ಅನ್ನ ಛತ್ರಗಳೂ, ವಿದ್ಯಾರ್ಥಿಮಂದಿರಗಳೂ ಭಾರತವರ್ಷದಲ್ಲಿ ಎಲ್ಲೆಲ್ಲಿಯೂ ಹರಡಿರುವುವು. ಪುರಾತನವಾದ ಆಧ್ಯಾತ್ಮಿಕ ತತ್ವಗಳನ್ನು ಬಹುಕಾಲದಿಂದ ಮರೆತುಹೋಗಿದ್ದ ಭಾರತೀಯರಿಗೂ ಐಹಿಕಸುಖ ಸಂಪತ್ತಿಗಳಲ್ಲಿ ನರಳುತ್ತಿರುವ ಪಾಶ್ಚಾತ್ಯರಿಗೂ ಬೋಧಿಸಿ ಪ್ರಪಂಚದಲ್ಲೆಲ್ಲಾ ನವಚೈತನ್ಯವನ್ನು ಸೃಷ್ಟಿಸುತ್ತಿರುವರು.

ಭಗವಂತನಲ್ಲಿ ಭಕ್ತಿಯಿಲ್ಲದೆ ಸಂಸಾರದಲ್ಲಿ ಮಗ್ನರಾದರೆ ಅದರಲ್ಲಿ ಸಿಕ್ಕಿಬಿದ್ದು ವಿಷಯ ಶೋಕತಾಪಗಳಿಂದ ಬೆಂದು ಬಳಲುತ್ತೀರೆಂದು ಅವರು ತಮ್ಮ ಗೃಹಸ್ಥರಾದ ಶಿಷ್ಯರಿಗೆ ಉಪದೇಶಿಸಿದರು. ಕಾಮಿನೀ ಕಾಂಚನಗಳಿಂದ ಕೈ ಕಾಲುಗಳು ಕಟ್ಟಲ್ಪಟ್ಟವರಾಗಿ ಈಶ್ವರ ಚಿಂತೆಯನ್ನು ಮಾಡದೆ ಮರಣೋನ್ಮುಖನಾದರೂ "ಅಯ್ಯೋ! ದೀಪವು ಇದೇಕೆ ಇಷ್ಟು ದೊಡ್ಡದಾಗಿ ಉರಿಯುತ್ತದೆ. ಬತ್ತಿಯನ್ನು ಕೊಂಚ ಒಳಕ್ಕೆ ಎಳೆಯಿರಿ ಎಂದು ಬುದ್ಧ ಜೀವನು ಸನ್ನೆ ಮಾಡುತ್ತಾನೆ". ಆದರೆ ಈಶ್ವರ ಭಕ್ತಿ ಎಂಬ ಎಣ್ಣೆಯನ್ನು ಸಂಪಾದಿಸಿಕೊಂಡರೆ ಸಂಸಾರವೆಂಬ ಹಲಸಿನ ಹಣ್ಣಿನಲ್ಲಿ ಕೈಯಿಕ್ಕಬಹುದು. ಜನರು, ಹೆಂಡರು ಮಕ್ಕಳಿಗೋಸ್ಕರ ಒಂದು ಬಿಂದಿಗೆಯ ತುಂಬ ಕಣ್ಣೀರನ್ನು ಸುರಿಸುತ್ತಾರೆ. ಹಣಕ್ಕಾಗಿ ಕಣ್ಣೀರಲ್ಲಿ ತೇಲಿ ಹೋಗುತ್ತಾರೆ. ಈಶ್ವರನಿಗಾಗಿ ಯಾರು ತಾನೇ ಅಳುವರು?

ಈ ರೀತಿಯಾಗಿ ಭಗವಾನ್ ಶ್ರೀರಾಮಕೃಷ್ಣ ಪರಮಹಂಸರು ಮತ ವಿಚಾರವನ್ನು ಸ್ಪಷ್ಟಪಡಿಸಿ ದುರಭಿಮಾನದಿಂದ ಅನ್ಯಮತೀಯರನ್ನು ದೂರುವುದು ತಪ್ಪೆಂದು ತಿಳಿಸಿ ಸನಾತನ ಧರ್ಮದ ನಿಜವಾದ ತತ್ವಗಳನ್ನು ವಿಶದ ಪಡಿಸಿ ನಿರ್ಜೀವಿಗಳಿಗೆ ಸದುಪದೇಶ ಸಂಜೀವನದಿಂದ ಚೈತನ್ಯವನ್ನುಂಟು ಮಾಡಿದರು. ಮತ್ತು ಅವರ ಶಿಷ್ಯರ ಮೂಲಕ ಈಗಲೂ ಮಾಡುತ್ತಿರುವರು. ಪರಮಹಂಸರು ಗಹನವಾದ ತತ್ವಾರ್ಥಗಳನ್ನು ಶಿಷ್ಯ ಮಂಡಲಿಗೆ ವ್ಯಾವಹಾರಿಕ ದೃಷ್ಟಾಂತಗಳಿಂದ ಸುಲಭವಾಗಿ ಬೋಧನೆಯಾಗುವ ಹಾಗೆ ಉಪದೇಶಿಸಿದ್ದಾರೆ. ಅಜ್ಞರಿಗೂ, ಪ್ರಾಜ್ಞರಿಗೂ, ಸಂಸಾರಿಗಳಿಗೂ, ಸನ್ಯಾಸಿಗಳಿಗೂ, ಸ್ತ್ರೀಯರಿಗೂ, ಬಾಲಕರಿಗೂ ಚೆನ್ನಾಗಿ ತಿಳಿಯುವ ರೀತಿಯಲ್ಲಿ ಅತ್ಯಂತ ಗೂಢವಾದ ವೇದಾಂತಾರ್ಥಗಳನ್ನು ಬಹು ಸುಲಭವಾದ ಉದಾಹರಣೆಗಳಿಂದ ವ್ಯಕ್ತಗೊಳಿಸಿದ್ದಾರೆ. ಮಹದ್ಬೋಧನೆಗಳು ಈ ದಿನ ಅಮೇರಿಕಾ, ಇಂಗ್ಲೆಂಡ್, ಫ್ರಾನ್ಸ್, ಸ್ವಿಟ್ಸರ್‌ಲೆಂಡ್, ಇಟಲಿ, ಜೆಕೊಸ್ಲೋವಿಯಾ ಮೊದಲಾದ ಅಷ್ಟದಿಕ್ಕುಗಳಲ್ಲಿಯೂ ಹರಡಿ ವ್ಯಾಕುಲತೆಯನ್ನು ಹೋಗಲಾಡಿಸಿ ಶಾಂತಿಯನ್ನು ನೆಲೆಗೊಳಿಸುತ್ತಲಿವೆ. ನಾವೆಲ್ಲರೂ ಅವರ ಕರುಣಾ ಕಟಾಕ್ಷಕ್ಕೆ ಪಾತ್ರರಾಗಿ ವಿವೇಕ ವೈರಾಗ್ಯ ಜ್ಞಾನ ಭಕ್ತಿಗಳೆಂಬ ಅಮೋಘಫಲಗಳನ್ನು ಸಂಪಾದಿಸಿ ಪಾರಮಾರ್ಥಿಕ ಸುಖಸಂಪತ್ತಿಯನ್ನು ಪಡೆದು ದೇಶಸೇವಾನಿರತರಾಗುವಂತೆ ಕೃಪಾಸಾಗರರಾದ ಶ್ರೀ ರಾಮಕೃಷ್ಣ ಪರಮಹಂಸರನುಗ್ರಹಿಸಲಿ.

ಓಂ ತತ್ಸತ್.

ಪತ್ರವ್ಯವಹಾರ

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ಪತ್ರಿಕಾ ಕರ್ತರು ಉತ್ತರವಾದಿಗಳಲ್ಲ. ಸಂ.

ಗಜೆಟೆಡ್ ಆಫೀಸರುಗಳ ವರ್ಗಾವರ್ಗಿ.

ಅಯ್ಯಾ,

ಕಳೆದವಾರದ ಸಂಚಿಕೆಯ ಅಗ್ರಲೇಖನದಲ್ಲಿ ನೀವು ಮೇಲಿನ ವಿಷಯ ದೇಶದವರ ಅಭಿಪ್ರಾಯವನ್ನು ಎತ್ತಿ ಬರೆದದ್ದಕ್ಕೆ ವಂದಿಸುತ್ತೇನೆ. ಆದರೆ ಗಜೆಟೆಡ್ ಉದ್ಯೋಗಸ್ಥರುಗಳನ್ನು ಐದು ಯಾ ಮೂರು ವರ್ಷಕ್ಕಿಂತ ಹೆಚ್ಚು ಕಾಲ ಒಂದೇ ಸ್ಥಳದಲ್ಲಿಟ್ಟರೆ ಆಗುವ ತೊಂದರೆಗಳನ್ನು ವಿವರಿಸಿರುವುದಿಲ್ಲ. ಈ ವಿಷಯ ಕೌನ್ಸಿಲಿನಲ್ಲಿ ಇನ್ನೂ ಚರ್ಚೆಯಾಗದಿರುವುದು ವ್ಯಸನಕರ. ಒಂದೇ ಸ್ಥಳದಲ್ಲಿ ಬಹುಕಾಲ ಗಜೆಟೆಡ್ ಆಫೀಸರುಗಳು ಇರುವದರಿಂದ ಆಗುವ ಕಷ್ಟಗಳನ್ನು ಕೌನ್ಸಿಲರುಗಳು ವಿವರಿಸಿಯಾರೆಂತ ಎದುರು ನೋಡುತ್ತೇವೆ. ಇದನ್ನು ಚರ್ಚೆಗೆ ತಂದರೆ ಸರಕಾರಕ್ಕೆ ಆಗುವ ನಷ್ಟವೇನು? ಯಾವ ಕಾರಣದಿಂದ ದಿನ ನೂಕುತ್ತಾರೋ ತಿಳಿಯುವುದಿಲ್ಲ. ನಮ್ಮ ಕೌನ್ಸಿಲು ಮೆಂಬರುಗಳ ಪೈಕಿ ಈ ಠರಾವು ತಂದವರು ಏತಕ್ಕಾಗಿ ಸುಮ್ಮನಿದ್ದಾರೆ. ಅವರು ಬಡನೇ ಡೆಪ್ಯುಟೇಶನ್ ಹೋಗಿ, ಚೀಫ್ ಕಮಿಷನರವರಲ್ಲಿ ಈ ವಿಷಯವನ್ನು ಆ ಚರ್ಚಿಸಲಿಕ್ಕೆ ಬಾಧಕವೇನು?

ನಮ್ಮ ಕಮಿಷನರಾಗಿದ್ದ ಮಿ. ಟಾಸ್ಕರ್ ಸಾಹೇಬರವರು ಕಮಿಷನರಾಗಿ ಮಾಡಿದ ಆಡಳಿತದಲ್ಲಿ ನ್ಯಾಯ ಪರಿಪಾಲನೆ ಮಾಡಲಿಕ್ಕೆ ಶಕ್ಯವಷ್ಟು ಪ್ರಯತ್ನಪಟ್ಟರೂ, ಗಜೆಟೆಡ್ ಆಫೀಸರುಗಳ ವರ್ಗಾವರ್ಗಿಯ ವಿಷಯ ಪತ್ರಿಕೆಗಳಲ್ಲಿಯೂ ಮೀಟಿಂಗುಗಳಲ್ಲಿಯೂ ಚಳವಳ ನಡೆಸಿದರೂ ಯಾವ ತೊಂದರೆ ತೆಗೆದುಕೊಳ್ಳದೆ ಇರುವುದು ಬಹಳ ವ್ಯಸನಕರ. ಇವರನ್ನು ಐದು ವರ್ಷದನಂತರ ವರ್ಗ ಮಾಡಲು ಏರ್ಪಾಡು ಮಾಡದಿದ್ದರೆ ಕೊಡಗು ದೇಶದ ರೈತನಿಗೆ ಸುಖವಿಲ್ಲ.

ಕೊಡಗಿನಲ್ಲಿ ಈಚೀಚೆಗೆ ಸಾಮಾಜಿಕವೆಂಬ ನೆವನದಿಂದ ರಾಜಕೀಯವನ್ನು ತರುವುದೂ, ಪಂಗಡ ಭೇದಗಳನ್ನುಂಟು ಮಾಡುವುದೂ ತಲೆದೋರಲಿಕ್ಕೆ ಪ್ರಾರಂಭವಾಗಿದೆ. ಹೀಗಿರುವಾಗ ಇಂಥಾ ಉದ್ಯೋಗಸ್ಥರ ಅಣ್ಣ ತಮ್ಮಂದಿಯರೂ, ನೆಂಟರಿಷ್ಟರೂ ಒಂದೊಂದು ಪಂಗಡಕ್ಕೆ ಸೇರಿ ಹೋರಾಡುತ್ತಿರುವಾಗ ಇಂಥಾ ಉದ್ಯೋಗಸ್ಥರ ಸ್ಥಿತಿಯೇನು? ಮತ್ತು ಅಭಿಪ್ರಾಯಗಳು ಯಾವ ರೀತಿಯಲ್ಲಿ ಒಂದಾವು. ಮನುಷ್ಯ ಸ್ವಭಾವವನ್ನು ಮೀರಲು ಸಾಧ್ಯವಿಲ್ಲದ್ದರಿಂದ ವಿರೋಧ ಪಂಗಡದವರ ಪಾಡೇನಾಗಬೇಕೆಂಬದನ್ನು ದೇಶಿಯರೂ, ಸರಕಾರದವರೂ, ಚೆನ್ನಾಗಿ ಪರ್ಯಾಲೋಚಿಸಬೇಕು. ಈಗ ಕಾನೇ ಸಿಲ್ ಮೆಟ್ ಸಕ್ಕರ ಕೋರ್ಟಿನಲ್ಲಿ ಅಸ್ಸಾಮಿನ ಕೋಟಗಾರನೊಬ್ಬನು ಒಬ್ಬ ಆಳನ್ನು ಒದ್ದು ಕೊಂದ ಸಂದರ್ಭದಲ್ಲಿ ಜಡ್ಜಿಯವರು ಜಡ್ಜ್‌ಮೆಂಟು ಬರೆಯುವಾಗ ತನ್ನ ಜಡ್ಜ್‌ಮೆಂಟಿನಲ್ಲಿ ರಾಜಕೀಯ ಭೇದವನ್ನು ಕಾಣಿಸಿದ್ದಕ್ಕಾಗಿ ಕಲಕತ್ತಾ ಹೈಕೋರ್ಟ್ ಜಡ್ಜ್‌ಗಳು ಈ ರೀತಿ ಟಿಪ್ಪಣಿಸಿರುವರು. "Certain expressions too in the charge appear to me to verge on politics- expressions much to be regretted. It will be an evil day for the administration of justice if political considerations are to influence the Judicial mind of the Judge, which should be free from all taint of bias on political, racial, social or personal grounds." "ಈ ಕೇಸಿಗೆ ಸಂಬಂಧಪಟ್ಟ ಕೆಲವು ಹೇಳಿಕೆಗಳು ರಾಜಕೀಯ ವಿಷಯವನ್ನೊಳಗೊಂಡಿವೆ. ಇಂಥಾ ಹೇಳಿಕೆಗೆ ಅತ್ಯಂತ ವಿಷಾದಿಸಬೇಕಾಗಿದೆ. ಜಡ್ಜ್‌ಗಳ ಮನಸ್ಸು ರಾಜಕೀಯ, ಸಾಮಾಜಿಕ, ಜಾತಿ ಯಾ ವ್ಯಕ್ತಿ, ಕುರಿತು ಎಂದೂ ಇರದೆ ಇದರಿಂದ ಪೂರ್ತಿ ಬಿಡುಗಡೆಯಾಗಿರಬೇಕಲ್ಲದೆ, ಜಡ್ಜ್‌ಗಳು ರಾಜಕೀಯ ಭಿನ್ನಾಭಿಪ್ರಾಯಗಳನ್ನು ಮನಸ್ಸಿಗೆ ತೆಗೆದುಕೊಂಡು ಕೆಲಸ ಮಾಡುವುದಾದರೆ ಅಂಥಾ ಸಮಯವು, ದೇಶದ ರಾಜ್ಯಾಡಳಿತಕ್ಕೆ ಬಹಳ ಕೆಟ್ಟದಾಗುತ್ತದೆ." ಒಂದೇ ಸ್ಥಳದಲ್ಲಿ ದೊಡ್ಡ ದೊಡ್ಡ ಆಫೀಸರುಗಳು 5 ವರ್ಷಕ್ಕಿಂತ ಹೆಚ್ಚಿಗೆ ಇದ್ದರೆ ಈ ಹೈಕೋರ್ಟು ಜಡ್ಜ್‌ಮೆಂಟಿನಲ್ಲಿ ಹೇಳುವ ಆಕ್ಷೇಪಣೆಗಳಿಗೆ ಗುರಿಯಾಗುವ ಸಂಭವವಿದೆಯಲ್ಲವೇ?

ಸಾಮಾಜಿಕವೆಂಬ ಕಾರಣವು ರಾಜಕೀಯ ಪಂಗಡಗಳನ್ನೊಳಗೊಂಡು, ಮದುವೆ, ಮುಂಜೆಗಳಲ್ಲಿಯೂ ಸಹ ಇದರ ಪರಿಣಾಮವು ಆಚರಣೆಗೆ ಬಂದಿವೆ. ಸರಕಾರದವರು ಒಂದುವೇಳೆ. ಸಾಮಾಜಿಕ ಪ್ರಶ್ನೆಯಾದ್ದರಿಂದ ಅವರಿಗೆ ಸಂಬಂಧವಿಲ್ಲವೆಂದು ಹೇಳಬಹುದು. ಆದರೆ ಸರಕಾರದವರು, ದಯವಿಟ್ಟು ಯಾವುದು ಸಾಮಾಜಿಕ, ಯಾವುದು ರಾಜಕೀಯವೆಂಬುದನ್ನು ವಿವರಿಸಿ ಕೊಟ್ಟಿದ್ದರೆ ಚೆನ್ನಾಗಿತ್ತು. ಯಾವುದಾದರೂ ಒಂದು ಪಂಗಡಕ್ಕೆ ದೊಡ್ಡ ದೊಡ್ಡ ಉದ್ಯೋಗಸ್ಥರು ಸೇರಿದ್ದರೆ ಅಂಥಾ ಪಂಗಡಗಳ ಮುಖ್ಯಸ್ಥರಿಗೆ ದೇಶವನ್ನೇ ತಮ್ಮ ಕೈಯಲ್ಲಿಟ್ಟುಕೊಳ್ಳಬಹುದಲ್ಲವೇ? ಇಂಥಾ ಆಕ್ಷೇಪಣೆಗಳಿಗೆ ಎಡೆ ದೊರೆಯದಂತೆ ದೇಶದ ಕ್ಷೇಮವನ್ನು ಬಯಸಿ, ನಮ್ಮ ಸರಕಾರದವರು ಗಜೆಟೆಡ್ ಉದ್ಯೋಗಸ್ಥರ ವರ್ಗಾವರ್ಗಿಯಲ್ಲಿ ತಕ್ಕ ಏರ್ಪಾಡು ಮಾಡುವರೆಂದು ಪ್ರಾರ್ಥಿಸುವ,

[illegible]

Apply for our shooting Season's Clearance Sale Catalogue of Brand New Goods.

10 to 25 percent Reductions in Prices.

No License Required!! No License Required



Webley and Scott Air Pistol, cal 177 or 22, bore Powerful and Accurate, complete with a sample box of slugs, two spare washers, a brush forcleaning, and a bookletof instructions Rs. 30/– Free delivery.

Pwerful German Diana Air gun, Handsome and Accurate, takes B S A Patern No 1 Slugs and Darts, expressly recommendable for Target Practice Rs 15/ Free delivery.

Brilliant Search Light Lamp for Night Sports Rs 30/– Free delivery.

No License required to purchase or to possess the above items.

Reliale D B B L 12 bore guns	Rs. 60/– and upwards		
Do S.B B L 12	do	do 40/–	do
D B. M L Guns		„ 45/–	do
S B M L. do.		„ 30/–	do
S B. B L Rifles		„ 25/–	do
B L Revolvers and Pistols		, 30/–	do.

Arms, Ammunition and shooting requisites of almost every kind andquality offered at exceptionally favourable rates ANumber of good quality second hand weapons also offered for sale in theNew Catalogue.

GOOLAMHUSIAIN ALLIBHOY & SONS
Largest Importers of Firearms and Ammunition, Cheapest priced firm in India,

24 16 **210 Abdul Rehman Street, BOMBAY.**

೧೦೦೦ ರೂಪಾಯಿಗಳ ಬಹುಮಾನ.
ಲೋಕಪ್ರಸಿದ್ಧವಾದ ಸಾಲಂಮಿಸ್ರಿ ಮುರಬ್ಬಾ.
ನಮ್ಮ ಟ್ರೇಡ್ ಮಾರ್ಕನ್ನು ನೋಡಿ ಈ ಔಷಧ ತೆಗೆದುಕೊಳ್ಳಿರಿ.

ಇದರ ಸೇವನೆಯಿಂದ ವೀರ್ಯವು ನೀರಿನಂತೆ ಇದ್ದರೂ, ಸ್ವಪ್ನೇಂದ್ರಿಯವಾದರೂ, ಸ್ತ್ರೀ ಸಂಘಕ್ಕೆ ಮೊದಲೇ ಸ್ಖಲನವಾದರೂ, ಮೂತ್ರದೊಂದಿಗೆ ಹೋಗುತ್ತಿದ್ದರೂ ದೋಷರಹಿತವಾಗಿ ಶರೀರಕ್ಕೆ ಆರೋಗ್ಯವನ್ನೂ ಧಾರ್ಡ್ಯತೆ

ಯನ್ನೂ ಆಯಸ್ಸು, ಬಲ, ತೇಜಸ್ಸು ಉಂಟು ಮಾಡುವದು. ಅಜೀರ್ಣ ಮಲಬದ್ಧತೆ, ಮಿದುಳಿನ ಬಲಹೀನತೆ, ಕೈಕಾಲು ಸೊಂಟ ನೋವುಗಳಿಗೆ ಇದು ದಿವ್ಯ ಔಷಧವು. ಈ ಸಾಲಂಮಿಸ್ರಿ ಎಂಬುವದು ಕಾಬೂಲ್ ಕಂದಾಹಾರ ಪ್ರಾಂತ್ಯದಲ್ಲಿ ಬೆಳೆಯುತ್ತದೆ.

ಈ ಔಷಧದಿಂದ ಗುಣಹೊಂದಿರುವ ಅನೇಕ ಮಹನೀಯರು ತಾವಾಗಿಯೇ ಅನೇಕ ದೇಶಗಳಿಂದಲೂ ಆಫ್ರೀಕ, ಬರ್ಮ, ಪಿನಾಂಗ್, ಸಿಂಗಪೂರ್, ಸಿಲೋನ್, ಬೊಂಬಾಯಿ, ಕಲ್ಕತ್ತ, ಮದ್ರಾಸು ಮತ್ತು ಇಂಡಿಯಾದೇಶದಲ್ಲಿ ಎಲ್ಲಾ ಸ್ಥಳಗಳಿಂದಲೂ ನಮಗೆ ಯೋಗ್ಯತಾ ಪತ್ರಿಕೆಗಳನ್ನು ಕಳುಹಿಸಿರುವರು. ಇವುಗಳ ನಕಲನ್ನು ಯಾರಾದರೂ ತರಿಸಿ ನೋಡಬಹುದು. ಇವುಗಳು ಸುಳ್ಳು ಎಂದು ನಿರ್ಧರಪಡಿಸುವವರಿಗೆ ಮೇಲೆ ಕಂಡ ಬಹುಮಾನವು ಕೊಡಲ್ಪಡುತ್ತೆ. ನಾವು ಹಾಗೆ ಕೊಡದೇ ನಿರಾಕರಿಸಿದಲ್ಲಿ ಕೋರ್ಟು ಮೂಲಕ ಅದನ್ನು ಪಡೆಯಬಹುದು. ೧ ಡಬ್ಬವನ್ನು ೧೫ ದಿನ ಸೇವಿಸಿದಲ್ಲಿ ಗುಣವು ಖಂಡಿತವಾಗಿ ತೋರಬಹುದು ೨ಯಾ ೩ ಡಬ್ಬಿಗಳು ಜನ್ಮಾಂತ್ಯದವರಿಗೂ ಪೂರ್ಣವಾಗಿ ಗುಣವನ್ನುಂಟು ಮಾಡುವವು. ಹೆಸರು ವಿಳಾಸಗಳನ್ನು ವಿವರವಾಗಿ ಬರಯಬೇಕು. ಒಂದಾವರ್ತಿ ಆಜಮಾಯಿಸಿ ಮಾಡಿ ನೋಡಿದಲ್ಲಿ ಖಾತ್ರಿ ಉಂಟಾಗುತ್ತೆ.

ಕ್ರಯ ಡಬ್ಬಿ ೧ಕ್ಕೆ ರೂ. ೨–೦–೦ ಛಾಂಗಿ ಚಾರ್ಜು ೧ರಿಂದ ೩ ಡಬ್ಬಿಗಳಿಗೆ ೦–೮–೦ ಆಣೆ ಏಜಂಟರುಗಳು ಎಲ್ಲಾ ಸ್ಥಳಗಳಲ್ಲಿಯೂ ಅವಶ್ಯಕವಾಗಿರುತ್ತೆ ರೂಲ್ಸ್ ತರಿಸಿಕೊಳ್ಳಬಹುದು ಆರ್ಡರು ಕೊಡತಕ್ಕ ಕಾಲದಲ್ಲಿ ಈ ಪತ್ರಿಕೆಯ ಹೆಸರನ್ನು ಬರೆಯಬೇಕು.

ಟೆಲಿಗ್ರಾಫ್ ಅಡ್ರೆಸ್, ಮಿಸ್ರಿ ಬೆಂಗಳೂರು ಸಿಟಿ, } ಓ. ಮುನ್ನಾಲಾಲ್, ಡಿಲ್ಲಿ ನೇಟಿವ್ ವೈದ್ಯರು, ಸಾಲಂಮಿಸ್ರಿ ಮುರಬ್ಬ ಡಿಪೋ, ಬೆಂಗಳೂರು ಸಿಟಿ.

12—7

ಇಮಿಟೇಷನ್ ರೇಷ್ಮೇ ಸೀರೆಗಳು.

ಈ ಸೀರೆಗಳು 18ಮೊಳ, ಉದ್ದ ಪ್ರಾ2½ಮೊಳ ಅಗಲ ಇದೆ. ಈ ಸೀರೆಗಳನ್ನು ಹೊಸದಾದ ಇಮಿಟೇಷನ್ ಸಿಲ್ಕ್ ಗಟ್ಟಿ ದಾರದಿಂದ ತಯಾರಿಸಿದೆ. ಇದು ನೋಡಲಿಕ್ಕೆ ಭಾರಿ ಕ್ರಯದ ಸೀರೆಗಳಂತೆ ಕಾಣುವದಲ್ಲದೆ ಆದವಾದ ಬಣ್ಣ, ಸುಂದರವಾದ ಸಾಜಾ ರೇಷ್ಮೆಯ ಸೆರಗೂ ಇರುವದು. ಈ ಮಾದರಿ ಸೀರೆಗಳು ಬೇರೆ ಯಾರಲ್ಲಿಯೂ ಈ ಕ್ರಯಕ್ಕೆ ಸಿಕ್ಕಲಾರವು. ಈ ಸೀರೆಗಳು ಶ್ರೀಮಂತರೂ, ಗರೀಬರೂ, ಉಡಲಿಕ್ಕೆ ಬರುವ ಹಾಗೆ ಮಿತ್ರಾದವು ಮಾಡರಿಗಾಗಿ ಕೆಲವನ್ನು ಮಾತ್ರ ತಯಾರಿಸಿರುತ್ತೇವೆ. ಆದ್ದರಿಂದ ಬೇಗನೆ ತರಿಸಿಕೊಳ್ಳುವವರಿಗೆ ಮಾತ್ರ ಸಿಕ್ಕುವವು.

ಕ್ರಯ ಸೀರೆ 1ಕ್ಕೆ ನಂ 1. ರು. 6–8–0

„ ನಂ 2. ರು. 7–8–0

ವಿಳಾಸ.—ಮದರಾಸ ಟ್ರೇಡಿಂಗ್ ಕಂಪನಿ,
16 ತಿರುಪಳಿ ಬೀದಿ,
ಮದರಾಸು.

ಈಗಲೇ ಪ್ರಿಂಟಾಗಿದೆ! ಶೃಂಗಾರವಾದ ಪುಸ್ತಕ!!

ಸ್ತ್ರೀ ಪುರುಷರ ಪ್ರೀತಿಯ ಮರ್ಮಗಳನ್ನು ಚಿತ್ರಪಟಗಳ ಸಹಿತ ತಿಳಿಸುವ

ಮನ್ಮಥ ಶಾಸ್ತ್ರ.



ಫ್ರೆಂಚ್ ಭಾಷೆಯಲ್ಲಿ ಇದ್ದದನ್ನು ಸುಲಭ ಶೈಲಿಯಲ್ಲಿ ಕನ್ನಡ ಭಾಷೆಗೆ ಭಾಷಾಂತರಿಸಿರುತ್ತೇವೆ. ಸ್ತ್ರೀಪುರುಷರುಗಳಿಗೆ ಬೇಕಾದ ಎಲ್ಲಾ ಮರ್ಮ ರಹಸ್ಯಗಳು, ರತಿ ಮನ್ಮಥನು ಆನಂದವಾಗಿರುವದಕ್ಕೆ ಬೇಕಾದ ಉಪಾಯಗಳು, ಸ್ತ್ರೀ ಪುರುಷರ ಜಾತಿಯ ಲಕ್ಷಣಗಳು ಗರ್ಭಧರಿಸುವದು, ಶಿಶು ಉತ್ಪತ್ತಿವಿಧ, ಗುಪ್ತ ವೈದ್ಯ, ಶಯನ ಗೃಹದ ನಿಯಮಗಳು, ಇನ್ನೂ ಸ್ತ್ರೀಪುರುಷರಿಗೆ ಬೇಕಾದ ಲೀಲ ರಹಸ್ಯಗಳು ತುಂಬಿವೆ. ಈ ಶೃಂಗಾರವಾದ ಪುಸ್ತಕವನ್ನು ತರಿಸಿ ಆನಂದ ಹೊಂದುತ್ತಾರೆಂದು ನಂಬಿರುತ್ತೇವೆ ಪಟಗಳ ಸಹಿತ ಕ್ರಯ ಪುಸ್ತಕ 1ಕ್ಕೆ ರು. 1—0—0

ವಿಳಾಸ.—ಬಿ ರಾಮಚಂದ್ರರಾವ್ ಕಂಪೆನಿ,

52—21 ಪೋಸ್ಟು ಬಾಕ್ಸ್ ನಂ. 232, ಮದರಾಸ್.

ನೋಟೀಸು.

ಇದರಿಂದ ಸರ್ವರಿಗೂ ತಿಳಿಯಪಡಿಸುವದೇನೆಂದರೆ:—

ಹಾಲಿನಾಪೋಕ್ಲು ನಾಡು ನರಿಯಂದಡ ಗ್ರಾಮದ ಕ್ಯಾಮುಘೋಗರ ಮನೆ ಗಣಪೈಯ್ಯನವರ ಹೆಂಡತಿ ದೇವಮ್ಮನವರು, ಸದರಿಗ್ರಾಮದ ಎಡಪಾಲದಲ್ಲು ಇರುವ ಸಾಗಿನ ಸರ್ವೆ ನಂಬರು 40. 41/2, 41/3 ರ ಏಳುಚಲ್ಲಿ ಏಕರು ಏಕ್ರದ 27ರೂ 6 ಆ. ಕಂದಾಯದ ಭೂಮಿ ವಗೈರೆ ಆಸ್ತಿಯನ್ನು ಯಾರಿಗಾದರೂ ವಿಕ್ರಯಿಸುವ ತರದೂದಿನಲ್ಲು ಇರುವದಾಗಿ ತಿಳಿಯಬರುತ್ತೆ. ಈ ಭೂಆಸ್ತಿಯು ಅವರಿಗೆ ಜೀವನಾಂಶಕ್ಕಾಗಿ ಕೊಟ್ಟದ್ದಾಗಿರುತ್ತೆ. ಈ ಭೂಮಿ ವಗೈರೆಯನ್ನು ವಿಕ್ರಯಿಸುವದಕ್ಕೆ ಸದರಿ ದೇವಮ್ಮನವರಿಗೆ ಯಾವ ಹಕ್ಕು, ಸ್ವತಂತ್ರವಿರುವದಿಲ್ಲ. ಈ ಆಸ್ತಿಯನ್ನು ಯಾರೂ ಕೊಂಡುಕೊಳ್ಳಕೂಡದು. ಈ ಆಸ್ತಿಯನ್ನು ಮಾರಾಟಮಾಡುವ ವಿಷಯದಲ್ಲು ಕುಟುಂಬದವರ ತಕರಾರು ಪೂರ ಇರುತ್ತೆ. ಈ ಸಂಗತಿ ತಿಳಿದೂ ಸಹ ಕೊಂಡುಕೊಳ್ಳುವವರು ನಷ್ಟಕ್ಕೂ ತೊಂದ್ರೆಗೂ ಗುರಿಯಾಗುವರಾಗಿ ಈ ಮೂಲಕ ಖಂಡಿತವಾಗಿ ತಿಳಿಸಲಾಗಿದೆ!

ತಾ. 15—4—26. ಯಸ್. ಎನ್. ತಂಕರನಾರಣೈಯ್ಯ, ಜಮೀನ್‌ದಾರ್, ಮತ್ತು ಕಾಫಿಪ್ಲಾಂಟರ್

4—4.

ನೋಟೀಸು.

ಒಳ್ಳೆಕಾಲ, ಒಳ್ಳೆ ಆಸ್ತಿ, ಕಳಯಬೇಡಿರಿ.

(1) ಪೊನ್ನಂಪೇಟೆ ಸ್ಕೂಲ್‌ಬಳಿ ಒಟ್ಟಿ ವಗೈರೆ ಸಾಮಾನು ವ್ಯಾಪಾರಕ್ಕಿಟ್ಟಿರುವ ಮಹಡಿಮನೆ, ಹಿಂಭಾಗದಲ್ಲಿರುವ ಎರಡು ಭಾಗದ ಉದ್ದ ಲೈನ್ ಮನೆಗಳು ಮತ್ತು ಕಾಫಿ ಗಿಡ ವಗೈರೆಯಿರುವ ಹಿತ್ಲು ಸಹ 9000/—ರೂಪಾಯಿಗೂ,

(2) ಪೊನ್ನಂಪೇಟೆ, ದೊಡ್ಡ ಬೀದಿ ಬಲಪಾರ್ಶ್ವದಲ್ಲು ವಾಸಕ್ಕೂ ವ್ಯಾಪಾರಕ್ಕೂ ಯೋಗ್ಯವಾದ ಮಹಡಿಮನೆ, ಮತ್ತು ಹಿಂಭಾಗದ ಉದ್ದ ಲೈನ್ ಮನೆ, ವಾಸಕ್ಕೆ ಅನುಕೂಲವಿರುವ ಒಂದು ಸಣ್ಣ ಮನೆ, ಸಹ 6000/—ರೂಪಾಯಿಗೂ,

(3) ಒಂದನೇ ನಂಬರು ಅಂಗಡಿಯಲ್ಲಿರುವ ಒಟ್ಟಿ, ಸ್ಟೇಷನರಿ ಕಟ್ಲರಿ ವಗೈರೆ ಸಾಮಾನು ಮತ್ತು ಸೋಡಾ ಫೇಕ್ಟರಿ ಸಹ ಕಮ್ಮಿ ಕ್ರಯಕ್ಕೆ ಮಾರಲಿಕ್ಕೆ ಸಿದ್ಧವಾಗಿದೆ.

ಖಾಯಷ್‌ದಾರರು ಆದಷ್ಟು ಜಾಗ್ರತೆಯಲ್ಲು ಕೆಳಗಿನ ವಿಳಾಸಕ್ಕೆ ಬರೆಕೊಳ್ಳಬಹುದು.

4—5. V. E N. Ahamad,
General Merchant,
Ponnampett.

ಬೇಕಾಗಿದೆ.

ಬೀಟಿಮರದ ತೊಲೆಗಳು ಬೇಕಾಗಿವೆ.

ಒಳ್ಳೇ ಬೆಲೆ ಕೊಡಲಾಗುವದು. ಹೆಚ್ಚಿನ ಸಂಗತಿಗೆ ದಯವಿಟ್ಟು ಈ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳುವದು.

WANTED

Rose wood logs (Beeti)
Good price offored.
For further particulars please apply to:—

R. FRAMJEE,
12.8 **Mercara.**

EMPIRE OF INDIA, LIFE ASSURANCE CO, LTD.

(Established 1897.)

ALL WITH PROFIT POLICIES issued before 28th February, 1927 will share in the **BONUS** Distribution for the five years ending on that date.

Bangalore Branch. Madras Branch:

PROSPECTUS ON APPLICATION

152 Commercial Street. 9 & 10 Second Line Beach.

24—14.

ಅದ್ಭುತ! ಆಶ್ಚರ್ಯಕರ! ಬಲು ತಮಾಷೆ!

ಪೊಕೆಟ್ ಡಿಟೆಕ್ಟಿವ್

ಇಪ್ಪತ್ತನೆಯ ಶತಮಾನದ ವಿಚಿತ್ರವೇ ಇದು:

ಪೇಟೆಂಟ್ ಪಡೆದ ಇತ್ತಲಾಗಿನ ಸೋಜಿಗ ವಸ್ತು; ಪ್ರತಿಯೊಬ್ಬನಿಗೂ ಬೇಕಾದುದು ನಿಮ್ಮ ಅನುರಾಗದ ಅತಿ ಸುಂದರಿ ಸ್ತ್ರೀಯನ್ನೂ ಅವಳ ಕಾರ್ಯ ಕಲಾಪಗಳೆಲ್ಲವನ್ನೂ ಬೇರೆಯವರೂ ತಿಳಿಯದಂತೆಯೇ ನೋಡಬಹುದು ಎಲ್ಲಾ ವಾಯುಗುಣಗಳಲ್ಲಿಯೂ ಇದು ಒಳೆ ಪ್ರಕಾರ ಕೆಲಸ ಮಾಡುವುದು ಗಟ್ಟಿಯಾಗಿದ್ದು 1 ತಲಾಂತರ ಬಾಳಿಕೆ ಬರುವುದು ಉಪಯೋಗಕ್ಕೆ ಯಾವಾಗಲೂ ಸಿದ್ಧವಿರುವುದು. ಇದನ್ನು ತೆಗೆದುಕೊಂಡವರಿಗೆ 6 ಪ್ರಸಿದ್ಧ ಪಾರೀಸ್ ಬೆಡಾರೂಂ ಪಟಗಳು ಉಚಿತವಾಗಿ ಕೊಡಲ್ಪಡುವವು ಸೂಚನೆಗಳ ಸಮೇತ ಒಂದರ ಬೆಲೆ ರೂ 2-0-0. ಒಮ್ಮೆಗೆ ಮೂರು ತರಿಸಿದರೆ ರೂ 5-8-0 ಮಾತ್ರ. ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಪಿ ಕೆ ಸ್ವಾಮಿ,
17 ಕಿವ್‌ನಂಗ್ ಬಜಾರ್, ಪಿ ಟಿ. ಮದ್ರಾಸು.

ರೂ, 25 ಕ್ರಯಬಾಳುವ 100 ಅತ್ಯುಪಯುಕ್ತ ವಸ್ತುಗಳಿರುವ

ಜರ್ಮನ್ ಕೋಂಬಿನೇಶನ್ ಪೆಟ್ಟಿಗೆ

ಈ ಪೆಟ್ಟಿಗೆಯಲ್ಲಿರುವ ವಸ್ತುಗಳು.

ದಿ ಸಿಲ್ವ್ರೈಟ್ ಪೌಂಟನ್‌ಪೇನು ಒಂದು, 22 ಕ್ಯಾರೆಟ್ ಗೋಲ್ಡ್‌ಪ್ಲೇಟ್ ಇಮಿಟೇಶನ್ ವಜ್ರದ ಉಂಗುರ 2, 22 ಕ್ಯಾರೆಟ್ ಗೋಲ್ಡ್‌ಪ್ಲೇಟ್ ಲಿಂಕ್ಸ್ ಮತ್ತು ಸ್ಟಡ್ಸ್‌ಗಳು 12, ಬಂಗಾರದ ಕತ್ತನೆಯ ನೆಕ್ಟೈಪಿನ್ನು 1, B ಸ್ಟೀಲು ನಿಬ್ಬುಗಳು 12, ಶಾಯಿ-ಪೊಟ್ಟಣಗಳು 12, ಅತ್ಯುತ್ತಮ ಪೆನ್‌ಸ್ಟೆಂಡ್ 1, ಅತ್ಯುತ್ತಮ ಕತ್ತರಿ 1, ನಿಕ್ಕಲ್ ಚೈನ್ ಇರುವ ಕೈಚೀಲ 1, ಬೇರೆ ಬೇರೆ ಫ್ಯಾನ್ಸಿ ಸೇಫ್ಟಿಪಿನ್ನುಗಳು 25, ಉತ್ತಮ ಪೆನ್ಸಿಲುಗಳು 12, ತರತರದ ಫ್ಯಾನ್ಸಿ ಶಾಯಿದಪ್ಪಿಗಳು 6, ಸೆಂಟ್ ಬಾಟ್ಲ 1, ಉಪ್ಪ ಬಾಚಣಿಗೆ 1, ನೇಚರಲ್ ಟ್ರೇನ್‌ಫರ್ ಚಿತ್ರಗಳು 12.

ಹೀಗೆ ಒಟ್ಟು 100 ಅತ್ಯುಪಯುಕ್ತ ವಸ್ತುಗಳ ಬೆಲೆ ರೂ 3—8—0 ಬೇಕಾದವರು ಬೇಗನೆ ಈ ವಿಳಾಸಕ್ಕೆ ಬರೆದುಕೊಳ್ಳಿರಿ.

ಸಿಂಪ್ಲೆಕ್ಸ್ ನೋವೆಲ್ಟಿ ಹೌಸ್,
ಪೋಸ್ಟಾಫೀಸ್ ನಂಬ್ರ 142 ಮದ್ರಾಸು.

ವಿಶೇಷದ ಮಾರಾಟ!

ಉಚಿತ! ಉಚಿತ!

18 ಕ್ಯಾರೆಟ್ ರೋಲ್ಡ್‌ಗೋಲ್ಡ್ ಪ್ಲೇಟ್ ಚಿನ್ನದ ಮುಖ ಬಿಲ್ಲೆಯಿರುವ ಮುಂಗೈ ಗಡಿಯಾರ ನಂ. 100.

ಇದು ಅತ್ಯಂತ ಹೊಸ ಮಾದರಿದು, ಸುಂದರವಾದ ಆಕಾರ, ನೂಗ ನಾದ ಕೆಲಸ, ಸ್ವಿಸ್ ಮೇಡ್,

A B C D

ಮುಖ ಬಿಲ್ಲೆಯು ಥಳ ಥಳ ಹೊಳೆಯುತ್ತಾ ಆಕರ್ಷಿಸುತ್ತದೆ 100 ರೂ. ಮತ್ತು ಹೆಚ್ಚಿಗೆ ಬೆಲೆಯಿರುವ ಉತ್ಕೃಷ್ಟ ವಾಚಿನಂತೆ ಕಾಣುತ್ತದೆ. ಸುಂದರವಾಗಿಯೂ ಚಿಕ್ಕದಾಗಿಯೂ ಇದೆ. ಗಂಡಸರಿಗೂ ಹೆಂಗಸರಿಗೂ ಉಪಯೋಗಿಸಲು



ಅನುಕೂಲವಿರುವ ಅತ್ಯುತ್ತಮ ವಾಚ್. ಯಾವ ಹವೆದಲ್ಲಾದರೂ ಸರಿಯಾದ ಟೈಮು ಕೊಡುವ ವಾಚ್. ಮೂರು ವರ್ಷಗಳ ಗ್ಯಾರೆಂಟಿ ಕೊಡಲಾಗುತ್ತೆ. ಯಾವ ಆಕಾರದ್ದಾದರೂ ಒಂದು ವಾಚನ್ನು ಒಂದು ತಿಂಗಳೊಳಗೆ ಕೊಂಡುಕೊಂಡವರಿಗೆ ನಿಕಲ್ ಟೇಬಲ್ ಟೈಮ್ ಪೀಸ್ ಒಂದು ಉಚಿತವಾಗಿ ಕೊಡಲಾಗುತ್ತದೆ. ಕ್ರಯ 7-0-0.

ದಿ ವಿನ್ನರ್ ವಾಚ್ ಮತ್ತು ಕಂಪೆನಿ,
ಪೋಸ್ಟಾಫೀಸ್ ಬಾಕ್ಸ್ ನಂ 371,
ಮೌಂಟ್ ರೋಡ್, ಮದ್ರಾಸು

ನೋವೆಲ್ ಜೋಕಿಲಿ ಕ್ಲಾಕ್

ಎಂಬ ಹೊಸ ನಮೂನೆಯ ಗಡಿಯಾರಗಳನ್ನು ಸುಲಭ ಕ್ರಯದಲ್ಲಿ ಮಾರಲು ನಿಶ್ಚಯಿಸುತ್ತೇವೆ

ಗೋಡೆ ಮೇಲೆ ಇರುವ ಸುಂದರವಾದ ಸುಲಭ ಕೆಲಸದ ಸಡಗರದಿಂದ ನಡೆಯುವ ಗಡಿಯಾರ. ವಾಚ್ ರಿಪೇರರ ಆಶ್ರಯ ಬೇಡ ಸ್ವಭಾವಿಕವಾಗಿ ಕಾಣುತ್ತದೆ. ವಾಲ್ನಟ್ ಮರದ ಗೂಡು. ಎಲ್ಲಾ ಆಫೀಸ್, ದ್ರಾಯಿಂಗ್ ರೂಮುಗಳಿಗೂ ಅಲಂಕಾರಕ್ಕೆ ಯೋಗ್ಯವಾದದ್ದು. ಸುಲಭವಾದರೂ ಶಾಶ್ವತವಾದದ್ದು. ಬೆಲೆ ಒಂದಕ್ಕೆ ಮೂರ ರೂಪಾಯಿ. ಒಂದನ್ನು ಕೊಳ್ಳಲಿಕ್ಕೆ ಒಳ್ಳೇ ಸಮಯ!



ಜಿ. ಓ. ಬಿ.
ಕೇಡಿಯೋ ವಾಚ್ ಕಂಪೆನಿ,
ಮದ್ರಾಸು

52-2

ಕಿರ್ಲೋಸ್ಕರ ಪೇಟೆಂಟ ಪಂಪ್ಲಾರ ತಪ್ಪಲಿ.

ಈ ತಪ್ಪಲಿಯು ನಮ್ಮ ಕಾರ್ಖಾನೆಯಲ್ಲಿಯೇ ತಯಾರಾಗುತ್ತದೆ ಸರಕಾರದಿಂದ ಇದಕ್ಕೆ ಪೇಟಂಟ್ ದೊರತ್ತಿರುತ್ತದೆ. ಇದರ ಮುಖ್ಯ ಗುಣಗಳು:—

೧. ನೀರನ್ನು ಮುಟ್ಟಿದ ಕೂಡಲೇ ತುಂಬಿ ಒಕ್ಕುವದು.

೨. ಮೇಲಕ್ಕೆ ಬರುವಾಗ್ಗೆ ಒಂದು ಹನಿ ಸಹ ನೀರು ಸೋರುವದಿಲ್ಲ.

೩. ದೋಣಿಯಲ್ಲಿ ನೀರು ಹೇಳುವಾಗ್ಗೆ ತಿಂಗಳಿನ ತಪ್ಪಲಿಯಂತೆ ಪಿತ್ತನಿವಡೆ ಹೋಗುವದಿಲ್ಲ.

ಬೆಲೆಯು ಅಗ್ಗ. ಹೆಚ್ಚಿನ ಸಂಗತಿ ಬಗ್ಗೆ ಒರೆದು ತಿಳಿದುಕೊಳ್ಳಿರಿ

ಕಿರ್ಲೋಸ್ಕರ ಬಂಧು, ಲಿಮಿಟೆಡ್,
ಕಿರ್ಲೋಸ್ಕರವಾಡಿ,
16—17 ಜಿ. ಸಾತಾರ್.

ಲೋಕಪ್ರಸಿದ್ಧವಾದ! ಅನುಭವಸಿದ್ಧವಾದ!

ಮೂರುದಿವಸಗಳಲ್ಲಿ ಗುಣಸಿಕ್ಕದಿದ್ದರೆ ಔಷಧಿಯಕ್ರಯ ವಾಪಾಸು. ಜೀರ್ಣಶಕ್ತಿ, ರಕ್ತವೃದ್ಧಿ, ಧಾತುಪುಷ್ಟಿ, ಮನೋಲ್ಲಾಸ, ಪರಮಾನಂದ ಮೊದಲಾದ ಸುಖ ಜೀವನಕ್ಕೆ ಬೇಕಾದ ಆರೋಗ್ಯದಾಯಿನಿ.

ಟ್ರೇಡ್‌ಮಾರ್ಕ್] **ಅಗಸ್ತ್ಯ** [ನೋಡಿ ತಿಳ್ಕೊಳ್ಳಿರಿ.

ಮನ್ಮಥ ಚಿಂತಾಮಣಿ ಲೇಹ

ರಿಜಿಸ್ಟರ್ ಆದದ್ದು.

ಆಬಾಲವೃದ್ಧ ಸ್ತ್ರೀ-ಪುರುಷರ ಅನೇಕ ರೋಗಗಳ ಮೇಲೆ ಗುಣ ಕಾರಿಯಾದದ್ದು ಮೇಹ ವಿಕಾರವಿದ್ದವರಿಗೂ, ನಿದ್ರೆ, ಇಲ್ಲದವರಿಗೂ, ಸ್ವಪ್ನೇಂದ್ರಿಯವಾಗುವ ಬಾಲಕರಿಗೂ, ಜ್ಞಾನಿ ಸುಜ್ಞಾನಿಗಳಿಗೂ ಉಪಯೋಗವುಳ್ಳ ಬಹುಪರಮಾನಂದ ಔಷಧಿ. 1ಸೇರು 48ದಿವಸ ಸೇವಿಸಬಹುದು. ನಂ. (1) 1ಸೇರು ಡಬ್ಬಿ 1ಕ್ಕೆ ರುಪಾಯಿ 3—0—0. ½ಸೇರು ಡಬ್ಬಿ 1ಕ್ಕೆ ರುಪಾಯಿ 1—9—0. ನಂ. (2) 1ಸೇರು ಡಬ್ಬಿ 1ಕ್ಕೆ ರುಪಾಯಿ 2—0—0, ½ ಸೇರು ಡಬ್ಬಿ 1ಕ್ಕೆ 1—1—0, ವಿ ಪಿ. ಖರ್ಚು ಪ್ರತ್ಯೇಕ. ವಿಶೇಷ ಮಾಹಿತಿಗೆ ಬರಕೊಳ್ಳಿರಿ

ವಿಳಾಸ—ದೇವಣ್ಣ ನಾರಾಯಣಸೇಟ್,
ಗೋಳಿಕಟ್ಟಾ,
ಮಂಗಳೂರು,
52—37 ದ. ಕ.

ಸತ್ಯಮೇವಜಯತೇ.
(ಗುಣವಾಗದಿದ್ದರೆ ಹಣ ಪರತ)
ಧಾತುಪುಷ್ಟಿಕ ಕಾಮೋತ್ತೇಜಕ, ಇಂದ್ರಿಯಸ್ತಂಭಕವಾದ

ಮದನೋದ್ಭವ ಗುಳಿಗೆ.

ಅತಿಸೇಂದ್ರಿಯದ ಶಿಥಿಲತೆ ನಿರ್ಬಲತೆ ನಪುಂಸಕತ್ವ ಶೀಘ್ರಸ್ಖಲನ ಸ್ವಪ್ನಸ್ಖಲನ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣವಾಗುವದಲ್ಲದೆ ಧಾತು ಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋಲ್ಲಾಸಕ ಇಂದ್ರಿಯಸ್ತಂಭಕ, ಗರ್ಮಿ, (ಬಾತ) ಗುಪ್ತಪ್ರದೇಶದ ಮೇಲೆ ಹುಟ್ಟುವ ... ಗಳು, ಹುಣ್ಣುಗಳು ಪಿತ್ತದ ಬಾಧೆಗಳು, ... ನಾಶರೋಗವು ಮುಂತಾದವು ಅತ್ಯರ್ಕ ಗುಣವಾಗಿ ... ರೋಗಗ್ರಸ್ತರು ಕಾಂತಿಯೂ ಶಕ್ತಿಯೂ ... ಉಂಟಾಗುತ್ತದೆ ಒಟ್ಟಿಗೆ ೬೦ ಗುಳಿಗೆಗಳು ... ೬೦ ಗುಳಿಗೆಗಳಿಗೆ ... ನಪುಂಸಕತ್ವಾರಿ ತೈಲವನ್ನು ಉಪಯೋಗಿಸಿದರೆ ಉತ್ತಮ. ಕಿಮ್ಮತ್ತು ... ರೂ ೨—೧೨—೦

ಪ್ರಮೇಹನಿವಾರಣಿ—ಇದರ ಸೇವನೆಯಿಂದ ಮೂತ್ರಸ್ಥಾನದಿಂದ ಕೆಂಪು, ಹಳದಿಯಂತೆ ಹೋಗುವದು ಕೀವು, ... ವಗೈರೆ ಆರಂಭಾತ್ರಿಯಿಂದ ಗುಣವಾಗುವದು ಕಿಮ್ಮತ್ತು ಬಾಟ್ಲಿಗೆ ರೂ. ... ಔಷಧದ ಸಂಗಡ

ಮಂದಾಣ ಸ್ಟ್ಯಾಂಪು ಕಳುಹಿಸಿದರೆ ಕ್ಯಾಟಲಾಗವು

ವಿಳಾಸ,—

ವೈದ್ಯ ಜಿ. ಎಲ್. ಜೋಶಿ ಮತ್ತು ಕಂಪೆನಿ.
17 ನಂ 6. ಪೋಸ್ಟ ಬನವಾಸಿ, ಉತ್ತರ ಕಾನಡಾ.

ಒಂದು ಪ್ರಬಲವಾದ ಪ್ರಶ್ನೆ.

ನಮ್ಮ ಜೀವನವನ್ನು ಏತಕ್ಕಾಗಿ ವಿಮೆಮಾಡಬೇಕು!

ವೃದ್ಧಾಪ್ಯದಲ್ಲಿ ನಮ್ಮ ಮತ್ತು ಹೆಂಡತಿ ಮಕ್ಕಳ ಪೋಷಣೆಗಾಗಿ!

ಈಗಾಗಲೇ ಸಾವಿರಾರು ಜನರು ವಿಮೆಮಾಡಿರುವ ಏಳು ಕೋಟಿ ರೂಪಾಯಿಗಿಂತ ಹೆಚ್ಚು ಒಂದವಾಳವಿರುವ ದೇಶೀಯ ವಿಮೆಕಂಪೆನಿಯಲ್ಲಿ ಅತ್ಯಂತ ದೊಡ್ಡದಾದ ಸಾವಿರ ರೂಪಾಯಿ ವಿಮೆ ಮಾಡಿದವರಿಗೆ ವರ್ಷಕ್ಕೆ 18ರೂ. ಕಡಿಮೆಯಿಲ್ಲದೆ ಲಾಭ ಕೊಡುವ 'ಓರಿಯಂಟಲ್' ಗವರ್ನಮೆಂಟ್ ಜೀವವಿಮೆ ಕಂಪೆನಿಯ ರೂಲ್ಸುಗಳು, ಕೆಳಗಿನವರಿಗೆ ಬರೆದು ತಿಳಿದುಕೊಳ್ಳಿ.

ಖಾದಿಬಟ್ಟೆ ಎಂದರೇನು?

ದೇಶೀಯ ಹತ್ತಿಯಲ್ಲಿ ಕೈರಾಟೆಯಿಂದ ನೂಲು ತೆಗೆದು ಇಲ್ಲಿಯೇ ತಯಾರಿಸುವ ಬಟ್ಟೆಯೇ 'ಖಾದಿ.' ಈಗಾಗಲೇ ನಮ್ಮ ಸ್ಟೋರಿನಲ್ಲಿ ಪರದೇಶೀಬಟ್ಟೆಗಿಂತ ಗಟ್ಟಿಯಲ್ಲಿಯೂ ಅಂದದಲ್ಲಿಯೂ ಕಡಿಮೆ ಇಲ್ಲದಂತೆ, ಎಲ್ಲಾ ತರದ ಸೀರೆಗಳು ಚಿಕ್ಕಗಳು, ಶಾಲು ವಗೈರೆ ಎಲ್ಲಾ ತರದ ಬಟ್ಟೆಯು ತಯಾರಾಗಿದೆ. ದಯವಿಟ್ಟು ಪ್ರೋತ್ಸಾಹಿಸಿರಿ! ಖಾದಿಯಿಂದಲೇ ಸ್ವರಾಜ್ಯ. ಖಾದಿಯಿಂದಲೇ ಮೋಕ್ಷವೆಂಬುದನ್ನು ಮರೆಯಬೇಡಿರಿ.

ವೀರಾಜಪೇಟೆ, ದಕ್ಷಿಣ ಕೊಡಗು. — ಕೆ. ಪಿ. ಚಿನ್ನಪ್ಪ, ಪ್ರೊಪ್ರೈಟರ್, ಖಾದಿಭಂಡಾರ.

52—7.

ಡಾಕ್ಟರ್ ಎಸ್. ಎನ್. ಅಯ್ಯಂಗಾರ್, ಬಿ ಎ.,
ಎಲ್ ಆರ್ ಸಿ. ಪಿ ಅಂಡ್. ಎಸ್. (ಎಡಿನ್‌ಬರ್ಗ್)
ಎಲ್. ಎಫ್ ಪಿ: ಅಂಡ್ ಎಸ್., [ಗ್ಲಾಸ್‌ಗೊ.]

ದಂತ ವೈದ್ಯರು

ಸೋಮವಾರಪೇಟೆ ದೊಡ್ಡ ಬೀದಿಯಲ್ಲಿ ಉಳಕೊಳ್ಳುವರು. ಅಲ್ಲಿ ಅವರನ್ನು ಭೇಟಿಮಾಡಬಹುದು.

ದಂತ ಸಂಜೀವಿನಿ.

ಯಾವ ತರದ ಹಲ್ಲುನೋವನ್ನಾದರೂ ಥಟ್ಟನೆ ಶಮನ ಮಾಡುವ ಶಕ್ತಿಯುಳ್ಳ ಈ ದಂತ ಸಂಜೀವಿನಿ ಕುಪ್ಪಿ ಒಂದಕ್ಕೆ ಕ್ರಯ ರೂ 1—0—0 ಮಾತ್ರ. ಎಸ್. ರಾಮಣ್ಣ.
C/o ಡಾಕ್ಟರ್ ಎಸ್. ಎನ್, ಅಯ್ಯಂಗಾರ್.
48-19 ಮಹದೇವಪೇಟೆ, ಮಡಿಕೇರಿ.

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್, ಕೋ ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ.

		ರೂ.
ಶೇರ್ ಬಂಡವಾಳ	—	50,000
ವಸೂಲಾದ ಶೇರ್ ಮೊಬಲಗು	—	3830
ಜಮಾಬಂದ ಠೇವಣಾತಿ	—	90,600

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲಕೊಡತಕ್ಕದ್ದು.

ಒಂದು ವರ್ಷ ವಾಯಿದೆ ಅಥವ ಹೆಚ್ಚಿನ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ ರೂ. 6-4-0ರ ದರದಲ್ಲಿ ಬಡ್ಡಿ ದೊರೆಯುತ್ತೆ. ಕಡಿಮೆ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ 5ರ ಬಡ್ಡಿ ದೊರೆಯುತ್ತೆ.

ವರ್ತಕಕ್ಕೊಂದಾವರ್ತಿ ಕೋ ಆಪರೇಟಿವ್ ರಿಜಿಸ್ಟ್ರಾರವರು ಲೆಕ್ಕ ಆಡಿಟ್ ಮಾಡುತ್ತಾರೆ.

ಪ್ರೆಸಿಡೆಂಟರು, ಕೊಡಂದೆರ ಕುಟ್ಟಯ್ಯನವರು, ರಾಯ್ ಬಹದ್ದೂರ್. — ಟ್ರೆಜರರ್. ಯಂ. ಭುಜಂಗರಾಯರು ಬಿ.ಎ, ಬಿ.ಎಲ್.

ಸೆಕ್ರೆಟರಿ.
ಸಿ. ಯಸ್. ವೆಂಕಟಸ್ವಯ್ಯನವರು, ಬಿ.ಎ, ಬಿ.ಎಲ್.

ತಾರೀಖು 29—3—1925.

ARMS & AMMUNITION MART.

Mahomedally-Noorbhoy

321 Abdul Rehman Street, near Crawford Market, BOMBAY. 3
Telegraphic Address:—"SHOOTER" Bombay.

[52—37] Please write for Reduced nett prices list for 1926.

Printed & published by Kodanda Appayya, R.B., Chairman, Board of Directors, at "Kodagu" Press, Mercara fr "Kodagu" Ltd.

Reg. N. M. 1550.
If not delivered please return to
"KODAGU" OFFICE MERCARA

ಕೊಡಗು.

ಸಂಪಾದಕ—ಪಂಡ್ಯಂಡ ಐ. ಬೆಳ್ಯಪ್ಪ

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವದು.

ಸಂಪುಟ ೫] ಕೊಡಗು, ಸ ೧೯೨೬ನೇ ಇಸವಿ ಮೇ ತಾರೀಖು ೨೧ ನೇ ಶುಕ್ರವಾರ [ಸಂಚಿಕೆ ೧೯

ಸ್ಥಾಪಿತವಾದದ್ದು 1874. ಮೂಲಧನ 7 ಕೋಟಿ ರೂಪಾಯಿಗಳು.

ಓರಿಯಂಟಲ್ ಗವರ್ನ್ಮೆಂಟ್ ಸೆಕ್ಯೂರಿಟಿ ಲೈಫ್ ಅಸ್ಯೂರೆನ್ಸ್ ಕಂಪೆನಿ ಲಿಮಿಟೆಡ್, ಹೆಡ್ ಆಫೀಸು= ಬೊಂಬಾಯಿ.

1922–1924 ಈ ಮೂರು ವರ್ಷಗಳಲ್ಲಿ ಕಂಪೆನಿಯಲ್ಲಿ ನಡೆದ ಕೆಲಸದ ಫಲಿತಾಂಶಗಳು. —

ಲಾಭ— ರೂ. 51,00,000 (ಐವತ್ತೊಂದು ಲಕ್ಷ ರೂಪಾಯಿಗಳು.) ಈ ಪೈಕಿ 45,94,80 ರೂಪಾಯಿಗಳನ್ನು ಲಾಭ ಸಹಿತ ವಿ ಮಾಡಿಸುವವರ ವಿಮೆ ಹಣಕ್ಕೆ ಹೆಚ್ಚು ಬೋನಸ್ ಜಮಾವಾಗಿ ಈ ಕೆಳಗೆ ಕಾಣಿಸಿರುವ ರೀತಿಯಲ್ಲಿ ಸೇರಿಸಿರುತ್ತದೆ

ಜೀವಮಾನಾವಧಿಯ ವಿಮೆದಾರರಿಗೆ ರೂ. 1000 ವಿಮೆ ಹಣಕ್ಕೆ

ಈ ಮೂರು ವರ್ಷಗಳಿಗೆ ರೂ. 67½.

ಕ್ಲುಪ್ತಕಾಲದ ವಿಮೆದಾರರಿಗೆ ರೂ. 1000 ವಿಮೆ ಹಣಕ್ಕೆ

ಈ ಮೂರು ವರ್ಷಗಳಿಗೆ ರೂ. 54.

ಈ ಕಂಪೆನಿಯಲ್ಲಿ ಕ್ರಮೇಣ ಹೆಚ್ಚುತ್ತಿರುವ ಜನಾನುರಾಗವು ಈ ಕೆಳಗೆ ಕೊಟ್ಟಿರುವ ಹೊಸ ಕೆಲಸದ ಪಟ್ಟಿಯಿಂದ ವ್ಯಕ್ತವಾಗುತ್ತದೆ.

1923ರಲ್ಲಿ—ರೂ	1,74,00,000
1924 ,,	2,37,00,000
1925 ,,	2,96,00,000

ಇನ್ನೂ ದಿನದಿನಕ್ಕೂ ಅಭಿವೃದ್ಧಿಯು ಹೆಚ್ಚಲೇ ಇದೆ. ಜೀವವಿಮೆ ಪತ್ರದಲ್ಲಿ ಹಣವನ್ನು ಲಾಭಕರವಾಗಿ ಹೂಡಲು ಇದೇ ಸುಸಮಯ.

ಬೇಕಾದ ವಿಷಯಗಳನ್ನು ಈ ಕೆಳಗಿನ ವಿಳಾಸಕ್ಕೆ ಬರೆದು ತಿಳಿದುಕೊಳ್ಳಬಹುದು.

ಓರಿಯಂಟಲ್ ಬಿಲ್ಡಿಂಗ್ಸ್,
ಪೋಸ್ಟ್ ಬಾಕ್ಸ್ 56
ಬೆಂಗಳೂರು.

ಸಿ. ಎ. ಸುಬ್ರಮಣ್ಯಯ್ಯರ್,
ಬ್ರಾಂಚ್ ಸೆಕ್ರಿಟರಿ.

52—7.

ಮನೋಲ್ಲಾಸಿನಿ ತೈಲ.

ತಲೆನೋವು, ತಲೆ ತಿರುಗುವುದು, ತಲೆಯಿಂದ ಕಣ್ಣು, ಕಿವಿಯಿಂದ ಕೀವು ಸೋರುವುದು, ಕಣ್ಣು ನೋವು, ಅಪಸ್ಮಾರ, ನಿದ್ದೆ ಬಾರದಿರುವುದು, ನೆನಪು ಶಕ್ತಿ ಕುಂದಿಹೋಗುವುದು ಇವುಗಳನ್ನೆಲ್ಲಾ ಗುಣಮಾಡುತ್ತದೆ. ಉದುರುವ ಕೂದಲನ್ನು ನಿಲ್ಲಿಸಿ ಗಿಡ್ಡಗಿರುವ ಕೂದಲನ್ನು ಬೆಳೆಯಿಸಿ ಕೂದಲಿಗೆ ಸೌಂದರ್ಯವನ್ನೂ ಹೊಳಪನ್ನೂ ಕೊಟ್ಟು ಅಕಾಲಕ್ಕೆ ಹಣ್ಣಾಗುವ ಕೂದಲನ್ನು ತಡೆದು ಕೂದಲು ಇಲ್ಲದ ಸ್ಥಳದಲ್ಲಿ ಹೊಸ ಕೂದಲನ್ನು ಹುಟ್ಟಿಸುತ್ತದೆ. ಬೆಲೆ ಸೀಸೆಗೆ ರೂ 1, 3 ಸೀಸೆಗೆ 2—10—0, ಒಂದು ದೊಡ್ಡ ಸೀಸೆಗೆ ರೂ 2, 3 ಸೀಸೆಗಳಿಗೆ 5—8—0



ಚಂದನಾಸವ — ಇದು ಪ್ರಮೇಹ ಮೂತ್ರಕೃಚ್ಛ್ರ, ಮೂತ್ರ ಹನಿಹನಿಯಾಗಿ ಹೋಗುವುದು, ಮೂತ್ರಕೋಶದ ಉರಿ, ಮೂತ್ರಪಿಂಡಗಳ ಉರಿ ಮೂತ್ರನಾಳದಲ್ಲಿ ಹುಣ್ಣು, ಮೂತ್ರ ಹೊಯ್ಯುವಾಗ ಉರಿಯುವುದು, ಮೂತ್ರನಾಳದಿಂದ ಕೀವು ಬರುವುದು, ಮೂತ್ರದಲ್ಲಿ ಧಾತು ಹೋಗುವುದು, ಆಗಾಗ್ಗೆ ಮೂತ್ರ ಬರುವದು, ಮೂತ್ರ ತಡೆಯಲಿಕ್ಕೆ ಸಾಮರ್ಥ್ಯವಿಲ್ಲದಿರುವುದು, ದೇಹದಲ್ಲಿ ಉರಿ, ಬಾಯಾರಿಕೆ, ಸ್ವಪ್ನಾವಸ್ಥೆ, ಮೂತ್ರನಾಳದಲ್ಲಿ ಚುಚ್ಚುವ ನೋವು ಇವುಗಳಿಗೆ ಪರಮ ಔಷಧಿ ಗಂಡಸರಿಗೂ ಹೆಂಗಸರಿಗೂ ಇದು ಅತ್ಯುತ್ತಮ ಬೆಲೆ—ಬಾಟ್ಲಿ 1, 3, 6ಕ್ಕೆ ರೂ 1—4—0, 3—8—0, 6—12—0.

ರೋಮನಾಶಿನಿ — ಈ ಪುಡಿಯನ್ನು ನೀರಲ್ಲಿ ಕಲಸಿ ಮೈಯಲ್ಲಿ ರೋಮವಿರುವ ಭಾಗಕ್ಕೆ ಹಚ್ಚಲು ರೋಮವು ಉದುರಿ ಬೀಳುವುದು ಡಬ್ಬಿ ೧ಕ್ಕೆ 6 ಆಣೆ, 3 ಡಬ್ಬಿಗಳಿಗೆ ರೂ. 1, 1 ಡಜನಿಗೆ 3—8—0.

ಅಮೃತಾರಿಷ್ಟ.— ಇದು ಕ್ವಿನಾಯಿನ್ ಬೆರಸದಿರುವ ಉತ್ತಮವಾದ ಔಷಧಿ ಎಲ್ಲಾ ತರದ ಜ್ವರಕ್ಕೆ ಉತ್ತಮ. ಬೆಲೆ — ಬಾಟ್ಲಿ 1, 3, 6ಕ್ಕೆ ರೂ 1—4—0; 3—8—0; 6—12—0

ಲೋಹಾಸವ.— ಇದು ಜ್ವರಗಳಿಗೆ ಮತ್ತು ಮಲೇರಿಯಾ ಜ್ವರದಿಂದುಂಟಾದ ಅಶಕ್ತತೆಗೆ ದಿವ್ಯವಾದದ್ದು. ಬೆಲೆ — ಬಾಟ್ಲಿ 1, 3, 6ಕ್ಕೆ ರೂ. 1—4—0; 3—8—0; 6—12—0.

ಪಟ್ಟಿ ಉಚಿತವಾಗಿ ತರಿಸಿ ನೋಡಿರಿ

ವಿಳಾಸ—ಮನೋಲ್ಲಾಸಿನಿ ಕಂಪೆನಿ.
9 ಮಂಗಳೂರು, ಕಂಕನಾಡಿ.

52—22

ಆಂಧ್ರ ಆಯುರ್ವೇದಿಕ್ ಫಾರ್ಮಸಿ.

ಬ್ರಾಂಚ್, ಬೆಂಗಳೂರು ಸಿಟಿ

ಚ್ಯವನಪ್ರಾಸ ಲೇಹ.

ಇದು ಸರ್ವೋತ್ಕೃಷ್ಟವಾದ ಗಿಡಮೂಲಿಕೆಗಳಿಂದ ತಯಾರಿಸಲ್ಪಟ್ಟ ಆಯುರ್ವೇದ ರಸಾಯನೌಷಧವು. ವಿದ್ಯಾರ್ಥಿಗಳೂ ವಿಶೇಷವಾಗಿ ಬುದ್ಧಿಯನ್ನು ಪ್ರಯೋಗಿಸಿ ಕೆಲಸ ಮಾಡುವವರೂ ಈ ಲೇಹವನ್ನು ಸೇವಿಸಿದರೆ ವಿಶೇಷವಾಗಿ ಬುದ್ಧಿಶಕ್ತಿಯನ್ನೂ ಜ್ಞಾಪಕಶಕ್ತಿಯನ್ನೂ ಹೊಂದುವರು. ದೀರ್ಘಕಾಲದ ವ್ಯಾಧಿಯಿಂದಾಗಲೀ ಕೆಟ್ಟ ನಡತೆಯಿಂದಾಗಲೀ, ಸ್ವಭಾವ ಶಕ್ತಿಯ ಕೊರತೆಯಿಂದಾಗಲೀ ಶರೀರ ಕಾಂತಿಯು ಕುಂದಿ ರಕ್ತ [illegible] ಇಂದ್ರಿಯ ದೌರ್ಬಲ್ಯವೇ ಮೊದಲಾದ ವಿಕಾರಗಳಿಂದ ಪೀಡಿತರಾಗಿರುವವರು ಈ ಲೇಹವನ್ನು



ಸೇವಿಸಿದರೆ ಈ ತರದ ವಿಕಾರಗಳನ್ನೆಲ್ಲಾ ಪರಿಹರಿಸಿ ದೇಹಕ್ಕೂ ಮನಸ್ಸಿಗೂ ಉಲ್ಲಾಸವನ್ನುಂಟುಮಾಡಿ ಮಾಂಸ ಖಂಡಗಳಿಗೂ ನರಗಳಿಗೂ ಬಲವನ್ನು ಕೊಟ್ಟು ದೇಹಪುಷ್ಟಿಯನ್ನುಂಟುಮಾಡಿ ನವಚೈತನ್ಯವನ್ನುಂಟುಮಾಡುವುದು. ಅಲ್ಲದೆ ಆರೋಗ್ಯದ್ಧ ಶರೀರವುಳ್ಳವರಾಗಿ ದೀರ್ಘಕಾಲ ಬದುಕುವರು. ಕೆಮ್ಮು ಉಬ್ಬಸ ವ್ಯಾಧಿಯುಳ್ಳವರಿಗೂ ಮುಖ್ಯವಾಗಿ ಕ್ಷಯರೋಗಿಗಳಿಗೂ ಇದು ಸಂಜೀವನಿಯೇ ಸರಿ! ಚರಕ ಸಂಹಿತೆಯಲ್ಲಿ ಇದರ ಗುಣವು ಅದ್ಭುತವಾಗಿ ಹೇಳಲ್ಪಟ್ಟಿದೆ. ೧೦ ತೊಲೆಗೆ ೧ ರೂಪಾಯಿ. ೪೦ ತೊಲೆಗೆ ೩ ರೂಪಾಯಿ.

ಎಲ್ಲಾ ಕಡೆಯಲ್ಲಿಯೂ ಏಜಂಟರು ಬೇಕು.

ಸೂಚನೆ — ಇಲ್ಲಿ ಶಾಸ್ತ್ರೀಯವಾದ ಎಲ್ಲಾ ಔಷಧಗಳೂ ಹೆಚ್ಚಾಗಿ ಕ್ರಯಕ್ಕೆ ಸಿಗುವವು. ಆಯುರ್ವೇದ ಭೂಷಣ ಕೆ. ನಾರಾಯಣರಾವ್ ಎ. ಎಂ. ಎ. ಸಿ. ಯವರು ರೋಗಗಳನ್ನು ಪರೀಕ್ಷಿಸಿ ಚಿಕಿತ್ಸೆಯನ್ನು ಪ್ರತಿದಿನವೂ ನಡಿಸುವರು. ವಿಶೇಷ ಸಂಗತಿಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ

ಟಿ. ಸಿ. ಎಸ್. ಮುನಿಯಂ ಅಂಡ್ ಕೋ,

ಮ್ಯಾನೇಜಿಂಗ್ ಏಜೆಂಟ್ಸ್, ಆಂಧ್ರ ಆಯುರ್ವೇದಿಕ್ ಫಾರ್ಮಸಿ,

16—16 ೬೬ ಚಿಕ್ಕಪೇಟೆ, ಬೆಂಗಳೂರು ಸಿಟಿ.

ಬೆಸ್ಟ್ ಲೀವರ್ ವಾಚ್ ವಾಚ್.

ಈ ಗಡಿಯಾರವು ಉತ್ತಮವಾದ ಸಾಮಾನುಗಳಿಂದ ತಯಾರಿಸಲ್ಪಟ್ಟದ್ದು. ನೋಟಕ್ಕೆ ಬಹು ಗಂಭೀರವಾಗಿಯೂ ಸುಂದರವಾಗಿಯೂ ಉಳ್ಳದ್ದು. ಇದರ ಎಲ್ಲಾ ಸಾಮಾನುಗಳು ಬಹು ಸೂಕ್ಷ್ಮವಾದ ಯಂತ್ರಗಳಿಂದ ತಯಾರಿಸಲ್ಪಟ್ಟದ್ದು. ಇದನ್ನು ಜೇಬಿನಲ್ಲಿ ಹಾಕಿಕೊಂಡು ಎಷ್ಟು ದೂರ ಓಡಿದಾಗ್ಯೂ ನಿಲ್ಲದೆ ನಡೆಯುತ್ತಿರುವದು. ಇಷ್ಟು ಸುಲಭ ಕ್ರಯಕ್ಕೆ ಇತರ ಕಂಪೆನಿಯಲ್ಲಿ ದೊರೆಯಲಾರದು.

12—3 ಇದರ ಕ್ರಯ ರೂ. 4.0.0.

ಸಗಣಿ ಆಟದ ಮನೆ ಮತ್ತು ದಾಳ.

ಕಾಲ ಕಳೆಯುವದಕ್ಕಾಗಲೀ, ವಿನೋದಕ್ಕಾಗಲೀ, ಆಡುವದಕ್ಕೆ ಇದೊಂದು ತರದ ಆಟವಾಗಿರುವದು. ಅನೇಕ ತರದ ಕಲಾಪ್ ಬಣ್ಣಗಳಿಂದ ಆಟದ ಮನೆಗಳನ್ನು ಹೊಲಿದಿರುತ್ತೆ. 4 ಬಣ್ಣಗಳ 16 ಸಗಣಿ ಕಾಯಿಗಳು ಮತ್ತು ದಾಳಗಳು ಸಹ ಇರುವವು. ಸೆಟ್ 1ಕ್ಕೆ (0—10—0.)

ವಿಳಾಸ— ಎಲ್ಲಿಸ್ ವಾಚ್ ಕಂಪೆನಿ.
ಪಿ. ಪಿ. ನಂಬರ್ 1251
ಮದರಾಸು.

12—2.

ಬೇಕಾಗಿವೆ.

ಬೀಟಿಮರದ ತೊಲೆಗಳು ಬೇಕಾಗಿವೆ.

ಒಳ್ಳೇ ಬೆಲೆ ಕೊಡಲಾಗುವದು. ಹೆಚ್ಚಿನ ಸಂಗತಿಗೆ ದಯವಿಟ್ಟು ಈ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳುವದು.

WANTED

Rose wood logs (Beeti)

Good price offored.

For further particulars please apply to:—

R. FRAMJEE,
Mercara.

12'9

ಕೆ. ಸಿ. ಅಪ್ಪಚ್ಚು.

ದಂತ ವೈದ್ಯರು.

ಇದೇ ತಾರೀಖು 25ರಿಂದ ಮಡಿಕೇರಿಯಲ್ಲಿ ಇರುತ್ತಾರೆ. ಬಾಯಿನೋವಿರುವವರು ಅವರನ್ನು ಅಲ್ಲಿ ಹೋಗಿ ನೋಡಬಹುದು. ಇಂಥಾ ಸಮಯವನ್ನು ಕಳಕೊಳ್ಳಬೇಡಿರಿ. ಕನ್ನಡ ಸ್ಕೂಲ್ ಬಳಿ [illegible] ಬಜಾರ್ ಇಲ್ಲದೆ ನೋಡುವರು. 52.7

EMPIRE OF INDIA LIFE ASSURANCE CO., LTD.

(Established 1897)

ALL WITH PROFIT POLICIES

Issued before 28th February, 1927 will share in the BONUS Distribution for the five years ending on that date.

PROSPECTUS ON APPLICATION

Bangalore Branch
152 Commercial Street
24—15.

Madras Branch
9 & 10 Second Line Beach

"ಕೊಡಗು"

೭೯ ೧೯೨೬ನೇ ಇಸವಿ ಮೇ ತಾ. ೨೧ನೇ ಶುಕ್ರವಾರ

ಬ್ರಿಟನ್ನಿನಲ್ಲಿ ಕೆಲಸಗಾರರ ಮುಷ್ಕರ.

ಕೆಲವು ಕಾಲದಿಂದಲೇ ಬ್ರಿಟನ್ನಿನಲ್ಲಿ ಯಜಮಾನರಿಗೂ ದಿನಸಂಬಳದಲ್ಲಿ ಕೆಲಸಮಾಡುವವರಿಗೂ ಸಂಬಳದ ವಿಷಯದಲ್ಲಿ ಕೆಲಸದ ಸಮಯದ ವಿಷಯದಲ್ಲಿ ವಾದಗಳು ನಡೆಯುತ್ತಲೇ ಇದ್ದವು. ಹೆಚ್ಚು ಸಮಯ ಕೆಲಸ, ಕಮ್ಮಿ ಸಂಬಳವೆಂದು ಯಜಮಾನರ ಮತ್ತು ಕಮ್ಮಿ ಸಮಯ ಕೆಲಸ ಹೆಚ್ಚು ಸಂಬಳವೆಂದು ಕೆಲಸಗಾರರ ಮತವಾಗಿದೆ. ಈ ವ್ಯತ್ಯಾಸವು ಕಲ್ಲಿದ್ದಲು ಗನಿಗಳಲ್ಲಿ ಪ್ರಬಲವಾಗುತ್ತಾ ಬಂತು. ಕೆಲವು ಗನಿಗಳಲ್ಲಿ ದೊರಕುವ ಕಲ್ಲಿದ್ದಲು ಕೀಳುತರದ್ದಾದ ಕಾರಣ ಅವುಗಳಲ್ಲಿ ಕೆಲಸಮಾಡುವವರಿಗೆ ಉತ್ತಮ ಗನಿಗಳಲ್ಲಿ ಕೆಲಸಮಾಡುವವರಷ್ಟು ಸಂಬಳಕೊಟ್ಟರೆ ಅವುಗಳ ಮಾಲೀಕರಿಗೆ ನಷ್ಟವಾಗುವ್ರದರಿಂದ ಅವರು ಸಂಬಳ ಹೆಚ್ಚಿಸಲು ಒಪ್ಪಲಿಲ್ಲ. ಗನಿಗಳನ್ನೆಲ್ಲಾ ಸರ್ಕಾರದವರು ವಹಿಸಿಕೊಂಡು ಎಲ್ಲಾ ಗನಿಗಳ ಕೆಲಸಗಾರರಿಗೂ ಒಂದೇ ತರದ ಸಂಬಳ ಕೊಡಬೇಕೆಂದೂ, ಉತ್ತಮ ಗನಿಗಳಲ್ಲಿ ದೊರಕುವ ಲಾಭವನ್ನು ಕನಿಷ್ಠತರದ ಗನಿಗಳಲ್ಲಿ ಕೆಲಸಮಾಡುವವರಿಗೆ ಹಂಚಿ ಕೊಡಬಾರದೆಂದೂ ಕೆಲಸಗಾರರ ಪಕ್ಷಗಳಾಗಿವೆ. ಕೆಲವು ತಿಂಗಳುಗಳಿಂದ ನಡೆಯುತ್ತಿದ್ದ ಈ ವಿವಾದವನ್ನು ತೀರಿಸಲಿಕ್ಕಾಗಿ ಸರ್ಕಾರದವರು ಮುಂದೆ ಬಂದರು. ಪ್ರಧಾನ ಮಂತ್ರಿಯಾದ ಮಿ ಬಾಲ್ಡ್ವಿನ್ನರು ಎರಡು ವರ್ಗದವರೊಳಗೆ ಒಪ್ಪಂದ ನಡೆಸುವ ಕೆಲಸಕ್ಕೆ ಕೈಹಚ್ಚಿದರು. ಆದರೆ ಇದರ ಮಧ್ಯೆ ಕೆಲಸಗಾರರ ವಾದವನ್ನು ವಿರೋಧಿಸಿ ಬರೆದ ಒಂದು ಅಗ್ರಲೇಖನವನ್ನು "ದಿ ಡೆಯಿಲಿ ಮೆಯಿಲ್" ಪತ್ರಿಕೆಯಲ್ಲಿ ಅಚ್ಚುಹಾಕಲು ಅದರ ಕೆಲಸಗಾರರು ತಿರಸ್ಕರಿಸಿದರೆಂಬ ಕಾರಣದಿಂದ ಮಂತ್ರಿಯವರು ಒಪ್ಪಂದ ನಡೆಸುವ ಕೆಲಸವನ್ನು ನಿಲ್ಲಿಸಿಬಿಟ್ಟರು. ಈ ವಿವಾದವು ತೀರ್ಮಾನಕ್ಕೆ ಬರುತ್ತಿದ್ದ ಸಮಯದಲ್ಲಿ ಬಾಲ್ಡ್ವಿನ್ನರವರು ಅಲ್ಪ ಕಾರಣಕ್ಕಾಗಿ ರಾಜಿ ತೀರ್ಮಾನದ ಕೆಲಸವನ್ನು ಕೈಬಿಟ್ಟದ್ದು ಉಚಿತವಾಗಲಿಲ್ಲವೆಂಬುದು ನಂತರದ ಕಾರ್ಯಗಳಿಂದ ತಿಳಿಯಬರುತ್ತದೆ.

ದಿನದಿನ ಸಂಬಳದಿಂದ ಜೀವಿಸುವವರ ಹಿತವನ್ನು ಸಾಧಿಸಲಿಕ್ಕಾಗಿ ಲೇಬರಾಪಾರ್ಟಿಯೆಂಬ ಒಂದು ಪಾರ್ಟಿಯು ಬ್ರಿಟನ್ನಿನಲ್ಲಿ ಸ್ಥಾಪಿತವಾಗಿರುವುದು ಎಲ್ಲರಿಗೂ ತಿಳಿದ ಸಂಗತಿಯಾಗಿದೆ. ಈ ಪಾರ್ಟಿಯ ಪ್ರತಿನಿಧಿಯೆಂಬರುಗಳು ಅನೇಕರು ಪಾರ್ಲಿಮೆಂಟಿನಲ್ಲಿರುವರು. ಇವರ ಹೋರಾಟವು ಬಾಲ್ಡ್ವಿನ್ನ ಸರ್ಕಾರದೊಂದಿಗೆ ಫಲಿಸಲಿಲ್ಲ. ಕೆಲಸಗಾರರ ಪ್ರಯೋಜನಾರ್ಥವಾಗಿ ಸ್ಥಾಪಿಸಲ್ಪಟ್ಟಿರುವ 'ಟ್ರೇಡ ಯೂನಿಯನ ಕಾಂಗ್ರೆಸ್' ಸಂಸ್ಥೆಯವರು ತಮ್ಮ ಕಾರ್ಯವನ್ನು ಸಾಧಿಸಲಿಕ್ಕಾಗಿ ಇಡೀ ಬ್ರಿಟನ್ನಿನಲ್ಲಿ ಕಲ್ಲಿದ್ದಲು ಗನಿಗಳ ಕೆಲಸಗಾರರಲ್ಲದೆ ಕೆಲಸಕ್ಕೆ ಹೋಗದೆ ಮುಷ್ಕರ ಹಿಡಿಯಬೇಕೆಂದು ತೀರ್ಮಾನಿಸಿದರು. ಅದರಂತೆಯೇ ತಾ. 3 ರಿಂದ 12 ರ ವರೆಗೆ ಬ್ರಿಟನ್ನಿನಲ್ಲಿ ಮಿಲಿಯಗಟ್ಟಲೆ ಜನರು ಕೆಲಸಕ್ಕೆ ಹೋಗದೆ ನಿಲ್ಲಿಸಿದ್ದರು. ಗನಿಗಳ ಕೆಲಸಗಾರರಿಗೆ ಸಹಾನುಭೂತಿಯುಳ್ಳವರಾದುದರಿಂದ ಮುದ್ರಣಾಲಯಗಳು, ಧಾನ್ಯಗಳ ಗಾಡಿಗಳು, ರೈಲ್ವೆಗಳು, ವಿದ್ಯುಚ್ಛಕ್ತಿ ಕಾರ್ಖಾನೆಗಳ ಕೆಲಸಗಾರರೂ ಮುಷ್ಕರ ಹಿಡಿದರು. ದೇಶದಲ್ಲಿ ದೈನಂದಿನ ಕಾರ್ಯಗಳಿಗೆ ಬಹಳ ತೊಂದರೆಯಾಯಿತು. ವರ್ತಮಾನಪತ್ರಿಕೆಗಳೇ ಪ್ರಕಟವಾಗದೆ ನಿಂತುಹೋದವು. ಹಲವು ಕಡೆಗಳಲ್ಲಿ ಗಲಭೆ, ದಂಗೆ, ಲೂಟಿಗಳಾದುವು. ಜನರ ಜೀವನಕ್ಕೆ ಮುಖ್ಯವಾದುದನ್ನು ಕೊಂಡುಕೊಳ್ಳುವುದು ಕಷ್ಟವಾಯಿತು. ಆದರೆ ಸರ್ಕಾರದವರು ಕಳೆದ ಹತ್ತು ತಿಂಗಳುಗಳಿಂದ ಇಂಥಾ ಮುಷ್ಕರ ಆಗುವದೆಂದು ತಿಳಿದು ಅದನ್ನು ಸಹಿಸಲಿಕ್ಕಾಗಿ ತಕ್ಕ ಸನ್ನಾಹಗಳನ್ನು ಮಾಡಿದ್ದರು. ಮುಷ್ಕರವು ಪ್ರಾರಂಭವಾದ ಕೂಡಲೇ ನಾನಾ ಮಹನೀಯರು ಸಾವಿರಗಟ್ಟಲೆ ಸ್ವಯಂಸೇವಕರಾಗಿ ಮುಂದೆ ಬಂದು ಎಲ್ಲಾ ತರಹದ ಕೆಲಸಗಳನ್ನು ಮಾಡಿದರು. ಆದುದರಿಂದ ಮುಷ್ಕರದ ಪೆಟ್ಟು ಜನಾಂಗಕ್ಕೆ ಹೆಚ್ಚು ತಗಲಲಿಲ್ಲವೆಂದು ಹೇಳಬಹುದು. ಆದರೂ ಕೂಡ ಮುಷ್ಕರದಿಂದ ಉಂಟಾದ ಗಲಿಬಿಲಿಯನ್ನೂ ಗಲಾಟೆಯನ್ನೂ ತಾಳಲಾರದೆ ಸರ್ಕಾರದವರು ತುರ್ತು ಕಾನೂನನ್ನು ಪಾರ್ಲಿಮೆಂಟಿನ ಸುಂಬೂರಾತಿ ಮೂಲಕ ಜಾರಿಗೆ ತಂದರು. ಇದರ ಮೇರೆ ಪೋಲೀಸಿನವರಿಗೆ ತುಂಬಾ ಅಧಿಕಾರವು ಕೊಡಲಾಯಿತು. ವಾರಂಟಿಲ್ಲದೆ ಜನರನ್ನು ದಸ್ತಗಿರಿ ಮಾಡುವ ಅಧಿಕಾರವು ಪೋಲೀಸಿನವರಿಗೆ ದೊರೆತದ್ದರಿಂದ ಯಾವ ಕೂಟವನ್ನೇ ಆಗಲಿ ಅವರು ಚದರಿಸಬಲ್ಲವರಾಗಿದ್ದರು. ಹಲವು ಕೆಲಸಗಾರರೂ ಕೆಲವು ಮುಂದಾಳುಗಳೂ ಸೆರೆಹಿಡಿಯಲ್ಪಟ್ಟರು. ಇಷ್ಟುಮಾತ್ರವಲ್ಲದೆ ಕೆಲಸಗಾರರ ಅಥವಾ ಅವರ ಸಂಸ್ಥೆಗಳ ತಂತೀವರ್ತಮಾನಗಳನ್ನು ಕಳುಹಿಸಕೂಡದೆಂದೂ ಕೂಡ ಟೆಲಿಗ್ರಾಫ್ ಆಫೀಸುಗಳಿಗೆ ಸರ್ಕಾರದವರು ಹುಕುಂ ಮಾಡಿದರು, ಆದರೂ ಕೂಡ ಮುಷ್ಕರ ಹಿಡಿದವರು ಹೆದರಲಿಲ್ಲ.

ಮುಷ್ಕರ ಹಿಡಿದವರಿಗೆ ಬ್ರಿಟನ್ನಿನ ಲೇಬರ್ ಪಾರ್ಟಿಯವರೆಲ್ಲರೂ ಸಹಾಯಕರಾಗಿದ್ದದಲ್ಲದೆ ಜರ್ಮನಿ, ರಷ್ಯಾ, ಹಾಲೆಂಡ ಮೊದಲಾದ ಬೇರೆ ಯೂರೋಪಿಯನ್ ದೇಶಗಳ ಲೇಬರ್ ಸಂಸ್ಥೆಗಳೂ ತಮ್ಮ ಸಹಾಯ ಕೊಡಲು ಒಪ್ಪಿದರು. ಆದರೆ ಸರ್ಕಾರದವರು ಹೊರದೇಶದಿಂದ ಹಣತರಿಸಿಕೊಳ್ಳಕೂಡದೆಂದೂ ಅಪ್ಪಣೆ ಕೊಡಿಸಿದರು. ಕೆಲಸಗಾರರು ತಮ್ಮ ಕಷ್ಟ ನಿವಾರಣೆಗೆ ಬಗ್ಗೆ ಮತ್ತು ಅನುಕೂಲಗಳನ್ನು ಪಡೆಯಲು ಹೋರಾಡುತ್ತಿರುವಾಗ್ಯೆ ದೇಶದ ಎಲ್ಲಾ ಜನರ ಪ್ರಯೋಜನಾರ್ಥವಾಗಿ ರಾಜ್ಯಭಾರಮಾಡುತ್ತಿರುವ ಸರ್ಕಾರವು ಇಂಥಾ ಕಠಿಣ ಶಾಸನಗಳನ್ನು ಜಾರಿಗೆ ತಂದದ್ದು ಎಂದೂ ನ್ಯಾಯವಲ್ಲ. ಧನಿಕರು ದ್ರವ್ಯದ ಮಾಲೀಕರಾದರೂ ಕೂಡ ಅದನ್ನು ಸಂಪಾದಿಸಲು ದುಡಿಯುವುದು ದಿನಗೂಲಿಯವರಾಗಿರುವರು. ಕೆಲಸಗಾರರು ಬೆವರು ಸುರಿಸದೆ ಹೋದರೆ ಧನಿಕರ ಹಣವೆಂದಿಗೂ ಬೆಳೆಯಲಾರದು. ಆದುದರಿಂದ ಯಜಮಾನರು ತಮ್ಮ ಕೆಲಸಗಾರರ ಹಿತವನ್ನು ಬಯಸುವವರಾಗಿರಬೇಕಲ್ಲದೆ ಅವರ ಅನುಕೂಲಕ್ಕಾಗಿ ತಮ್ಮ ಆದಾಯದ ನ್ಯಾಯವಾದ ಭಾಗವನ್ನು ವಿನಿಯೋಗಿಸಬೇಕಾದದ್ದು ಅವರ ಕರ್ತವ್ಯವಾಗಿದೆ. ಧನಿಕರ ಸ್ವಾರ್ಥತೆಯೇ ಈ ಗೊಂದಲಕ್ಕೆ ಮೂಲಕಾರಣವೆಂಬುದರಲ್ಲಿ ಸಂಶಯವಿಲ್ಲ.

ಈ ಹೋರಾಟದಲ್ಲಿ ಲೇಬರ್ ಪಾರ್ಟಿಯವರು ಮಾತ್ರ ಒಂದು ಕಡೆಯಲ್ಲೂ ಬಾಕಿ ಜನಾಂಗವೆಲ್ಲವೂ ಸರ್ಕಾರದ ಸಮೇತ ಇನ್ನೊಂದು ಕಡೆಯಲ್ಲು ಇದ್ದರೂ ಕೂಡ ಮುಷ್ಕರವನ್ನು ಸುಲಭದಲ್ಲಿ ನಿಲ್ಲಿಸಲು ಸಾಧ್ಯವಾಗಲಿಲ್ಲ. ತಪ್ಪಿತಸ್ಥರಲ್ಲದವರೂ ಸಹ ಈ ಮುಷ್ಕರದ ಪೆಟ್ಟಿಗೆ ಒಳಗಾಗಬೇಕಾದ ಕಾರಣ ಇಂಥಾ ವಿವಾದಗಳನ್ನು ತೀರಿಸಲು ಮುಷ್ಕರದ ದಾರಿಯು ಕಾಯಿದೆಗನುಗುಣವಾದದೂ ಅಲ್ಲ, ನ್ಯಾಯಸಮ್ಮತವಾದುದೂ ಅಲ್ಲವೆಂದು ಕನ್‌ಸರ್ವೇಟಿವ್ ಪಾರ್ಟಿಗೂ ಲೇಬರ್ ಪಾರ್ಟಿಗೂ ಮಧ್ಯದಲ್ಲಿರುವ ಲಿಬರಲ್ ಪಾರ್ಟಿಯವರು ಅಭಿಪ್ರಾಯ ಪಟ್ಟದ್ದರಿಂದ ಸರಕಾರದ ವರ್ತನೆಗೆ ಜನಾಂಗದ ಹೆಚ್ಚಿನ ಜನರು ಒತ್ತಾಸೆ ಕೊಟ್ಟಂತಾಯಿತು. ಇಷ್ಟಾದರೂ ಕೆಲಸಗಾರರು ಜಗ್ಗಲಿಲ್ಲ. ಅವರ ಸಂಘ ಶಕ್ತಿಯು ಬಲವಾಗಿತ್ತು. ಮುಷ್ಕರವು ನಿಲ್ಲಬೇಕೆಂಬ ಕಾಂಕ್ಷೆಯು ಎಲ್ಲರಿಗೂ ಇತ್ತು. ಆದರೆ ಎರಡು ಪಕ್ಷದವರೂ ಒರಟರಾಗಿ ನಿಂತರು. ಮುಷ್ಕರವು ಪ್ರಾರಂಭವಾಗಿ ಒಂಭತ್ತು ದಿವಸಗಳಾದವು. ಲಿಬರಲ್ ಪಾರ್ಟಿಯ ಮುಂದಾಳೊಬ್ಬರು ಎರಡು ಪಕ್ಷದವರಿಗೂ ಕಠಿಣವಾಗದ ರೀತಿ ಶರತುಗಳನ್ನು ಹಾಕಿ ಒಂದು ಸುಮೋರಾಂಡವನ್ನು ಸರ್ಕಾರಕ್ಕೆ ಕಳುಹಿಸಿದರು. ಇದರ ಮೇರೆ ಸರ್ಕಾರದವರು ಮೊದಲಿನಂತೆ ರಾಜಿಸಂಧಾನ ಮಾಡಲು ಸಮ್ಮತಿಸಿದರು. ಸಂಬಳವನ್ನೂ, ಕೆಲಸದ ಸಮಯವನ್ನು ಅಗಿಂದಾಗ್ಯೆ ನಿಶ್ಚಯಿಸಲಿಕ್ಕೆ ಯಜಮಾನರ ಮತ್ತು ಕೆಲಸಗಾರರ ಪ್ರತಿನಿಧಿಗಳೂ ಎರಡು ಪಾರ್ಟಿಗೂ ಸೇರದ ಕೆಲವು ಮೆಂಬರುಗಳೂ ಉಳ್ಳ ಒಂದು ಕಮಿಟಿಯಾಗಬೇಕೆಂದೂ, ನಿಗದಿಪಡಿಸಿದ್ದ ಸಂಬಳವನ್ನು ತತ್ಕಾಲ ಕಡಿಮೆಮಾಡಕೂಡದೆಂದೂ ಮೊದಲಾದ ಶರತ್ತುಗಳಾಗಿದ್ದುದರಿಂದ ಟ್ರೇಡ ಯೂನಿಯನ್ ಕಾಂಗ್ರೆಸ್ಸಿನವರು ಇದಕ್ಕೆ ಒಪ್ಪಿ ಮುಷ್ಕರವನ್ನು ನಿಲ್ಲಿಸಲು ತೀರ್ಮಾನಿಸಿದ ಮೇರೆ ತಾ. 12ರಿಂದ ಕೆಲಸಗಾರರು ಪುನಹ ಕೆಲಸಕ್ಕೆ ಪ್ರಾರಂಭಿಸಿದರು. ಈ ವರ್ತಮಾನವು ಇಡೀ ಬ್ರಿಟನ್ನಿನ ಜನರಿಗೆ ಸಮಾಧಾನವನ್ನುಂಟುಮಾಡಿತು. ಹೇಗೂ ಕೆಲಸಗಾರರಿಗೆ ಜಯವಾಯಿತೆಂದೇ ಹೇಳಬೇಕು. ಮುಷ್ಕರದ ಉದ್ದೇಶವು ತಕ್ಕ ಮಟ್ಟಿಗಾದರೂ ಕೈಗೂಡಿತು. ಕದನ ನಡೆಯುತ್ತಿರುವ ಎರಡು ಪಂಗಡಗಳೊಳಗೆ ರಾಜಿಸಂಧಾನಮಾಡಲು ತಿರಸ್ಕರಿಸಿದ ಪ್ರಧಾನ ಮಂತ್ರಿಯವರು ಪುನಹ ಆ ಕೆಲಸವನ್ನು ಕೈಕೊಂಡಿರುವರು. ಇದೇ ಮುಷ್ಕರದ ಫಲಿತಾಂಶವು

ಈ ಮುಷ್ಕರದಿಂದ "ಸಂಘೇ ಶಕ್ತಿಃ ಕಲೌ ಯುಗೇ" ಎಂಬುದು ವಿಶದೀಕರಿಸಲ್ಪಟ್ಟಂತಾಯಿತು. ದಿನಂಪ್ರತಿ ಸಂಬಳ ಹೊಂದಿಕೊಂಡು ಜೀವನಮಾಡುವವರಿಗೆ ತಮ್ಮ ಸಂಬಳವನ್ನು ಹೆಚ್ಚಿಸಿಕೊಳ್ಳುವುದಕ್ಕೋಸ್ಕರ, ಭದ್ರತೆಗೆ ಹೆಸರುಗೊಂಡಿರುವ ಇಂಗ್ಲೆಂಡಿನ ಸರ್ಕಾರವನ್ನೂ ಅದರೊಂದಿಗೆ ಜನಾಂಗದ ಹೆಚ್ಚಿನ ಭಾಗವನ್ನೂ ಎದುರಾಡಲು ಶಕ್ತಿ ಇರುವದೆಂದು ಈ ಮೊದಲು ಯಾರಾದರೂ ಯೋಚಿಸಬಲ್ಲವರಾಗಿದ್ದರೇ? ಆದರೆ ಇಂದು ಅವರು ಎದುರಾಡಿದ್ದು ಮಾತ್ರವಲ್ಲ, ಹಾಗೆ ಮಾಡಿ ತಮ್ಮ ಕಾರ್ಯವನ್ನು ಸಾಧಿಸಿಕೊಂಡಂತೆಯೂ ತೋರುತ್ತದೆ. ಇದೆಲ್ಲವೂ ಕೆಲಸಗಾರರು ಒಗ್ಗಟ್ಟಾಗಿ ಸಂಸ್ಥೆಗಳನ್ನು ಏರ್ಪಡಿಸಿಕೊಂಡು ಅವುಗಳ ತೀರ್ಮಾನದಂತೆ ಒಬ್ಬರಿಗೊಬ್ಬರು ಒತ್ತಾಸೆಯಾಗಿ ವರ್ತಿಸಿದರಿಂದಲೇ ಸಾಧ್ಯವಾಯಿತಷ್ಟೆ. ಹೀಗೆಯೇ ನಮ್ಮ ದೇಶದವರೂ ತಮ್ಮ ಕಾರ್ಯಗಳನ್ನು ಸಾಧಿಸಲು ಒಗ್ಗಟ್ಟಾಗಿ ಪ್ರಯತ್ನಿಸಿದರೆ ಎಷ್ಟು ಭದ್ರವಾಗಿರುವ ಸಂಗಡವಾದರೂ ಅಥವಾ ಸರ್ಕಾರವಾದರೂ ಬಗ್ಗಬೇಕಾಗುವುದು. ಈ ದೇಶದ ಗ್ರಾಮಗಳಲ್ಲಿ ವಿದ್ಯಾಭ್ಯಾಸವು ಮುಂದರಿದಿರುವುದಿಲ್ಲ, ಜನರು ಬಹಳ ಬಡವರು, ತಮ್ಮಿಂದ ಏನುತಾನೇ ಸಾಧ್ಯವಾಗುವುದೆಂದು ಜನರು ಅಧೈರ್ಯಪಟ್ಟು ಸುಮ್ಮನಿರಬಾರದು. ಬಡವರೇ ಆಗಲಿ, ಗ್ರಾಮಸ್ಥರೇ ಆಗಲಿ, ದೇಶದವರೇ ಆಗಲಿ ಎಲ್ಲರೂ ಒಗ್ಗಟ್ಟಾಗಿ ವರ್ತಿಸಿದರೆ ಯಾವ ಕಾರ್ಯವನ್ನಾದರೂ ಸಾಧಿಸಬಹುದು. ಎಲ್ಲಾ ಸುಧಾರಣೆಗಳು ಬೇಗನೇ ದೊರೆಯುವವು. ಆದೇಕೆ, ಸ್ವರಾಜ್ಯವೇ ಲಭಿಸುವುದರಲ್ಲಿ ಸಂದೇಹವೇನು ?

ಓರಿಯಂಟಲ್ ಜೀವವಿಮೆ ಕಂಪೆನಿ.

ಓರಿಯಂಟಲ್ ಗವರ್ನಮೆಂಟ್ ಸೆಕ್ಯೂರಿಟಿ ಜೀವವಿಮೆ ಕಂಪೆನಿಯ 1925ನೇ ವರ್ಷದ ವರದಿಯ ಕೆಲವು ಮುಖ್ಯಾಂಶಗಳನ್ನು ಇನ್ನೊಂದು ಕಡೆ ಪ್ರಕಟಿಸಿರುತ್ತೇವೆ. ಈ ವರದಿಯಲ್ಲಿ ಕಾಣಿಸಿರುವ ಲೆಕ್ಕಾಚಾರದ ಪ್ರಕಾರ ಅದರ 6ಕೋಟಿ 16 ಲಕ್ಷ ರೂಪಾಯಿಗಳ ಮೂಲಧನವು ಕಂಪನಿಯ ಭದ್ರತೆಯನ್ನೂ, 47 ಲಕ್ಷ ರೂಪಾಯಿ ಆದಾಯದಿಂದ ಖರ್ಚು ಕಳೆದು ಉಳಿದ ಸಿಲ್ಕು ಅದರ ಉತ್ತಮ ಆಡಳಿತೆಯನ್ನೂ ವರದಿಯ ವರ್ಷದಲ್ಲಿ ಕಂಪೆನಿಗೆ ಬಂದ 19824 ವಿಮೆ ದರಖಾಸ್ತುಗಳು ಅದರ ಮೇಲೆ ಜನರಿಗೆ ಇರುವ ಭರವಸೆಯನ್ನೂ ವಿಶದ ಪಡಿಸುತ್ತವೆ. ಈ ಕಂಪೆನಿಯಿಂದ ಹಂಚಲ್ಪಡುವ ಲಾಭವು ವರ್ಷವರ್ಷ ಹೆಚ್ಚುತ್ತಿರುವ ಕಾರಣದಿಂದಲೇ ಇದು ಹೆಚ್ಚು ಜನಪ್ರಿಯವಾಗುತ್ತಿರುವದಾಗಿದೆ. ಈ ಸಾಲಿನಲ್ಲಿ ಪಾಲಿಸಿಗಳ ಹಕ್ಕುಗಳ ಮೇಲೆ 53ಲಕ್ಷ 32ಸಾವಿರ ರೂಪಾಯಿಗಳು ಹಂಚಲ್ಪಟ್ಟದ್ದನ್ನು ನೋಡಿದರೆ ಈ ಕಂಪೆನಿಯಿಂದ ಎಷ್ಟೋ ಜನರು ಪ್ರಯೋಜನ ಹೊಂದುತ್ತಿದ್ದಾರೆಂದು ಹೇಳಲು ಸಂಶಯವಿಲ್ಲ. ನಮ್ಮ ದೇಶದಲ್ಲಿಯೂ ಹಲವರು ಈ ಕಂಪೆನಿಯಲ್ಲಿ ಜೀವವಿಮೆ ಮಾಡಿರುವರು. ಈ ವರದಿಯು ಅಂಥಾವರಿಗೆ ತೃಪ್ತಿಯನ್ನುಂಟುಮಾಡುವುದಲ್ಲದೆ ಇನ್ನು ಮುಂದೆ ವಿಮೆಮಾಡಲು ಇಚ್ಛೈಸುವವರಿಗೂ ಬಹು ಉಪಯುಕ್ತವಾಗುವುದು.

ಗೋಮಾತೆಯ ಸಂರಕ್ಷಣ.

ಗೋಮಾತೆಯ ಮೇಲಿನ ಕನಿಕರದಿಂದ ನಾವು ಮಹಮ್ಮದೀಯ ಬಂಧುಗಳನ್ನು ಪ್ರಾರ್ಥಿಸುತ್ತಿದ್ದೇವೆ. ಪ್ರಾಣದಯೂಪ್ರೇರಣೆಯಿಂದ "ಗೋವಧೆ"ಯನ್ನು ಅಲ್ಲಲ್ಲಿ ತಡೆಗಟ್ಟಿರುವರೆಂದು ಕೇಳಿ ಆನಂದ ಭಾಷ್ಪಗಳನ್ನು ಸುರಿಸುತ್ತಿದ್ದೇವೆ. ಆದರೆ ಹಿಂದೂಗಳಾಗಿ ಹುಟ್ಟಿ ನಾವು ಮಾಡುತ್ತಿರುವುದೇನು? ಒಂದು ಕಡೆ ಪೂಜೆ, ಒಂದು ಕಡೆ ರಕ್ತಪಾನ. ಇದು "ಪರಿಶುದ್ಧ, ಪವಿತ್ರ"ವೆನ್ನುವ ಅತ್ಯುಚ್ಚ ಹಿಂದೂ ಕುಟುಂಬಗಳಲ್ಲಿ ಕೂಡ ಅದ್ವ್ಯಾಪಿನಡೆಯುತ್ತಿದೆ. ಹೆಸರು ಮಾತ್ರ ಬೇರೆ. "ಶಕ್ತಿವರ್ಧಕ ಆಹಾರ" ಎಂದು. ಇದು ಪ್ರಧಮತಃ "ಗೋವಿನ ರಕ್ತ ಮಾಂಸಗಳ ಸಾರ"ವೆಂದು ಸೂಚಿಸುವ ಹೆಸರಿನೊಡನೆಯೇ ವಿದೇಶದಿಂದ ಇಲ್ಲಿಗೆ ಬಂದಿತು. ಗುಟ್ಟುರಟ್ಟಾಗಿ ಹಿಂದೂಗಳು ಬಹಿಷ್ಕರಿಸುತ್ತಲೂ 'ಹೆಸರು ಬದಲಾಯಿಸಿತು;' ದೇಶೀಯರನ್ನು ಮೋಸಗೊಳಿಸಿತು. ಈ ಮೋಸಕ್ಕಾಗಿ ಬರೇ ವಿದೇಶೀಯರನ್ನೇ ದೂಷಿಸಿ ಫಲವಿಲ್ಲ. ವಿದೇಶದ ನಡೆ, ನುಡಿ, ಆಚಾರ, ವ್ಯವಹಾರ, ಊಟ, ತಿಂಡಿಗಳೆಲ್ಲ "ಸ್ವರ್ಗೀಯ"ವೆಂದೇ ಭಾವಿಸಿರುವ ಎಷ್ಟೋ ಮೂರ್ಖ ವಿದ್ಯಾವಂತರು ನಮ್ಮಲ್ಲಿದ್ದಾರೆ. ಮಾತ್ರವಲ್ಲ; ಸ್ವದೇಶದ ಯಾವುದೊಂದರಲ್ಲಿಯೂ ತಿರುಳು ಕಾಣದ ಇವರಿಗೆ, ವಿದೇಶೀಯ ಶಿಕ್ಷಣದ "ಡಾಕ್ಟರ"ರ ಉಪದೇಶವೂ ದೊರೆತಿತೆಂದ ಬಳಿಕ, ಪ್ರತ್ಯಕ್ಷ ಗೋಮಾಂಸವನ್ನೇ ತಮ್ಮ ನಿತ್ಯಾಹಾರವನ್ನಾಗಿ ಮಾಡಿಕೊಳ್ಳಲೂ ಇವರು ಹೇಸಿಯಾರೇ? ಆದಕಾರಣ ನಾವು ನಮ್ಮನ್ನು ತಿದ್ದಿಕೊಳ್ಳುವ ಮೊದಲು, ಮಹಮ್ಮದೀಯ ಬಂಧುಗಳನ್ನು ಪ್ರಾರ್ಥಿಸುವುದು ನಾಚಿಕೆಗೇಡಿನ ಕೆಲಸ. ಹಿಂದೂ ಬಂಧುಗಳೇ! ಶಕ್ತಿವರ್ಧಕ ಔಷಧಗಳು ನಿಮ್ಮ ದೇಶದಲ್ಲಿಯೇ ಬೇಕಷ್ಟಿರುವಾಗ ವಿಸುಕಿದ್ದಕ್ಕೆಲ್ಲ "ಡಾಕ್ಟರ"ರ ಮಾತಿಗೇ ಕಟ್ಟುಬೀಳುವುದಾದರೂ ಏಕೆ? ಆಯುರ್ವೈದ್ಯ ವಿದ್ಯೆಯು ದಿನೇ ದಿನೇ ತನ್ನ ಪ್ರಭಾವ ಪ್ರಾಚುರ್ಯಗಳಿಂದ ನಿಮ್ಮ ಸಂಕಟಗಳನ್ನು ಪರಿಹರಿಸುತ್ತಿರುವಾಗ, "ಗೋರಕ್ತ ಮಾಂಸ"ವನ್ನೇ ತಿಂದು ಪಾಪ ಭಾಜನರಾಗುವುದಾದರೂ ಏಕೆ? ಜೀವದ ಭದ್ರತೆಗೆ ಗೋರಕ್ತವೇ ಬೇಕೇ? ಎಂದು "ಕುತೂಹಲವಾನು" ಕೇಳುವನು.

ಮಹಾತ್ಮಾಗಾಂಧಿಯವರ ಸ್ವಚರಿತ್ರೆ

೧೫ನೆಯ ಅಧ್ಯಾಯ.

(ಕಳೆದ ವಾರದಿಂದ ಮುಂದುವರಿದುದು)

ನಾಗರಿಕನಾದುದು

'ಸಸ್ಯಾಹಾರದಲ್ಲಿ' ನನ್ನ ನಂಬಿಕೆಯು ಬರಬರುತ್ತಾ ಹೆಚ್ಚಿತು. 'ಸಾಲ್ಟ್'ನ ಪುಸ್ತಕವನ್ನು ಓದಿದ್ದರಿಂದ ಆಹಾರ ವಿಷಯಕವಾದ ಪುಸ್ತಕಗಳನ್ನು ಓದಬೇಕೆಂಬ ತೀವ್ರವಾದ ಇಚ್ಛೆ ಉಂಟಾಯಿತು. ದೊರಕಿದ ಪುಸ್ತಕಗಳನ್ನೆಲ್ಲಾ ಕೊಂಡುಕೊಂಡು ಓದಿದೆನು. ಇವುಗಳಲ್ಲೊಂದಾದ ಹವರ್ಡ್ ವಿಲಿಯಮ್ಸ್ ಎಂಬಾತನ "ಆಹಾರ ನೀತಿ" ಎಂಬ ಪುಸ್ತಕದಲ್ಲಿ ಪುರಾತನಕಾಲದಿಂದ ಇಂದಿನವರೆಗೂ ಜನಿಸಿದ ಜ್ಞಾನಿಗಳು ಮತ್ತು ಅವತಾರಪುರುಷರು ತೆಗೆದುಕೊಳ್ಳುತ್ತಿದ್ದ ಆಹಾರ ಮತ್ತು ಆಹಾರದ ವಿಷಯದಲ್ಲಿನ ಅವರ ಅಭಿಪ್ರಾಯಗಳು ವರ್ಣಿಸಲ್ಪಟ್ಟಿದ್ದುವು. ಪೈಥಾಗೋರಾಸ್ ಮತ್ತು ಕ್ರಿಸ್ತನೇ ಮೊದಲಾದವರು ಸಸ್ಯಾಹಾರವನ್ನು ತೆಗೆದುಕೊಳ್ಳುತ್ತಿದ್ದರೆಂದು ತೋರಿಸುವುದಕ್ಕೆ ಈ ಗ್ರಂಥಕರ್ತರು ಪ್ರಯತ್ನಪಟ್ಟಿದ್ದರು. ಡಾ|| ಮಿಸೆಸ್ ಅನ್ನಾ ಕಿಂಗ್ಸ್‌ಫರ್ಡ್ ಎಂಬಾಕೆಯ "ಉತ್ಕೃಷ್ಟ ಆಹಾರದ ರೀತಿ" ಎಂಬ ಪುಸ್ತಕವೂ ಹೃದಯಂಗಮವಾಗಿತ್ತು. ಇದೇ ರೀತಿಯಾಗಿ ಡಾ|| ಅಲಿನ್‌ಸನ್ನರ ಆರೋಗ್ಯವಿಷಯಕವಾದ ಲೇಖನಗಳಿಂದಲೂ ನಾನು ಬಹಳ ಪ್ರಯೋಜನವನ್ನು ಹೊಂದಿದೆನು. ಇವರು ರೋಗದ ಚಿಕಿತ್ಸೆಗೆ ಔಷಧವನ್ನು ಕೊಡುವುದರ ಬದಲು ರೋಗಿಗೆ ಉಚಿತವಾದ ಆಹಾರವನ್ನು ಕೊಟ್ಟು ವಾಸಿಮಾಡಲು ಸಾಧ್ಯವೆನ್ನುವ ಅಭಿಪ್ರಾಯವುಳ್ಳವರಾಗಿದ್ದರು. ಅವರು ಸ್ವಯಂ ಶಾಕಾಹಾರಿಗಳಾಗಿದ್ದರಲ್ಲದೆ ರೋಗಿಗಳೂ ಕೂಡ ಸಸ್ಯಾಹಾರಿಗಳಾಗಬೇಕೆಂದು ಸಲಹೆ ಕೊಡುತ್ತಿದ್ದರು. ಈ ಎಲ್ಲಾ ಪುಸ್ತಕಗಳನ್ನು ಓದಿದ್ದರಿಂದ ಆದ ಪರಿಣಾಮವೇನೆಂದರೆ—ಆಹಾರದ ವಿಚಾರದ ಶೋಧನೆಗಳು ನನ್ನ ಜೀವನದಲ್ಲಿ ಪ್ರಾಮುಖ್ಯಸ್ಥಾನವನ್ನು ಹೊಂದಿದವು. ಮೊದಲು ಇವುಗಳನ್ನು ಆರೋಗ್ಯದೃಷ್ಟಿಯಿಂದಲೇ ಮಾಡಿದ್ದು. ಆದರೆ ಆ ಮೇಲೆ ಧಾರ್ಮಿಕದೃಷ್ಟಿಯೇ ಎಲ್ಲದರ ಮೇಲೂ ಬಿತ್ತು.

ಇದರ ಮಧ್ಯೆ ನನ್ನ ಆ ಸ್ನೇಹಿತರಿಗೆ ನನ್ನ ವಿಷಯದಲ್ಲಿನ ಚಿಂತೆಯು ದೂರವಾಗಲಿಲ್ಲ. ಅವನು ಪ್ರೇಮಕ್ಕೆ ವಶೀಭೂತರಾಗಿ ನಾನು ಮಾಂಸಾಹಾರವನ್ನು ಮಾಡದಿದ್ದರೆ ದುರ್ಬಲನಾಗುವುದೊಂದೇ ಅಲ್ಲದೆ ಇಂಗ್ಲಿಷ್ ಸಮಾಜದಲ್ಲಿ ಸರಿಯಾಗಿ ವರ್ತಿಸುವುದಕ್ಕೆ ಬಾರದ ಮುಟ್ಠಾಳನಾಗುತ್ತೇನೆಂದು ಶಂಕಿಸುತ್ತಿದ್ದರು. ನಾನು ಸಸ್ಯಾಹಾರವಿಷಯಕವಾದ ಪುಸ್ತಕಗಳನ್ನು ಓದುತ್ತಿರುವೆನೆಂದು ಅವರಿಗೆ ತಿಳಿಯುತ್ತಲೆ ಈ ಓದಾಟದಿಂದ ನನಗೆ ಚಿತ್ತಭ್ರಮೆಯಾಗುವದೆಂದೂ, ಈ ಶೋಧನೆಗಳಲ್ಲೇ ನನ್ನ ಜೀವನವೆಲ್ಲಾ ವ್ಯರ್ಥವಾಗುವುದೆಂದೂ, ನಾನು ನನ್ನ ಕರ್ತವ್ಯಗಳನ್ನು ಮರೆತು ಕೇವಲ ಹುಚ್ಚನಾಗುವೆನೆಂದೂ ಭಯಪಟ್ಟು ನನ್ನನ್ನು ಸರಿಯಾದ ದಾರಿಗೆ ತರಬೇಕೆಂದು ಅವರು ಒಂದು ಅಂತಿಮಪ್ರಯತ್ನವನ್ನು ಮಾಡಿದರು. ಒಂದು ದಿನ ನನ್ನನ್ನು ನಾಟಕವನ್ನು ನೋಡುವುದಕ್ಕೆ ಕರೆದರು. ನಾಟಕಶಾಲೆಗೆ ಹೋಗುವುದಕ್ಕೆ ಮೊದಲು ನಾವು ಹಾಲ್‌ಬಾರ್ನ್ ಎಂಬ ಭೋಜನಗೃಹದಲ್ಲಿ ನಾವಿಬ್ಬರೂ ಜೊತೆಗೆ ಊಟಮಾಡಬೇಕೆಂದು ಏರ್ಪಾಡಾಯಿತು. ಆ ಭೋಜನಗೃಹವು ನನಗೆ ಅರಮನೆಯಂತೆ ಕಂಡಿತು. ವಿಕ್ಟೋರಿಯಾ ಹೋಟೆಲನ್ನು ಬಿಟ್ಟ ಮೇಲೆ ಅಂಥಾ ಗೃಹದೊಳಕ್ಕೆ ಪ್ರವೇಶಿಸಿದ್ದು ಇದೇ ನನ್ನ ಮೊದಲನೆ ಅನುಭವ. ಆ ಹೋಟೆಲಿಗೆ ಹೋಗಿದ್ದಾಗ ನಾನು ಗಾಬರಿಬಿದ್ದುದರಿಂದ ಅಲ್ಲಿನ ಅನುಭವವು ವ್ಯರ್ಥವೆಂದೇ ಹೇಳಬೇಕು. ನಾನು ಲಜ್ಜೆಯಿಂದಲಾದರೂ ಊಟದ ಪದಾರ್ಥಗಳ ವಿಚಾರವಾಗಿ ಪ್ರಶ್ನೆಗಳನ್ನು ಕೇಳುವುದಿಲ್ಲವೆಂಬ ಆಸೆಯಿಂದ ನನ್ನ ಮಿತ್ರರು ನನ್ನನ್ನು ಈ ಗೃಹಕ್ಕೆ ಕರೆತಂದಿದ್ದರು. ನೂರಾರು ಜನರ ಮಧ್ಯದಲ್ಲಿ ನಾವಿಬ್ಬರೂ ಪ್ರತ್ಯೇಕವಾಗಿ ಒಂದು ಮೇಜಿನ ಬಳಿ ಕುಳಿತುಕೊಂಡೆವು. ಮೊದಲು ನಮ್ಮ ಮುಂದೆ ಇಟ್ಟ ತಟ್ಟೆಗಳಲ್ಲಿ ಒಂದು ತರಹ ಸಾರು (ಸೂಪ್) ಇತ್ತು. ನನಗೆ ಅದು ಏನು ಹಾಕಿ ಮಾಡಿದ್ದು ಎಂದು ಸಂಶಯವಾಯಿತು. ಆದರೆ ಮಿತ್ರರನ್ನು ಕೇಳುವುದಕ್ಕೆ ಧೈರ್ಯವಾಗಲಿಲ್ಲ. ಆದ್ದರಿಂದ ಹತ್ತಿರ ಇದ್ದ ಆಳನ್ನು ಕರೆದೆನು. ಮಿತ್ರರು ಇದನ್ನು ತಿಳಿದು ಸಿಟ್ಟಿನಿಂದ 'ಏನು ಸಮಾಚಾರ'ವೆಂದು ಕೇಳಿದರು. ನಾನು ಸಂಕೋಚದಿಂದ, "ಇದಾಗಿ ಮಾಂಸವೇನಾದರೂ ಹಾಕಿದೆಯೋ ಏನೋ ವಿಚಾರಿಸೋಣವೆಂದು ಅವನನ್ನು ಕರೆದೆ" ಎಂದೆನು.

"ಈ ಗೃಹದಲ್ಲಿ ಹೀಗೆ ಹಳ್ಳಿಯ ಗಮಾರನಹಾಗೆ ವರ್ತಿಸಕೂಡದು. ನಿನಗೆ ಸರಿಯಾಗಿ ನಡೆದುಕೊಳ್ಳುವುದಕ್ಕೆ ಬಾರದಿದ್ದರೆ ಹೊರಗೆ ಹೋಗಿ ಬೇರೆ ಯಾವುದಾದರೂ ಭೋಜನಗೃಹದಲ್ಲಿ ಊಟಮಾಡಿ ನಾನು ಬರುವವರೆಗೂ ಹೊರಗೆ ಕಾದುಕೊಂಡಿರು" ಎಂದರು.

ಈ ಶಿಕ್ಷೆಯಿಂದ ನನಗೆ ಬಹಳ ಸಂತೋಷವಾಯಿತು. ನಾನು ಹೊರಕ್ಕೆ ಹೋಗಿ ಬೇರೆ ಭೋಜನಗೃಹವನ್ನು ಹುಡುಕಿದೆನು. ಹತ್ತಿರವೇ ಒಂದು ಸಸ್ಯಾಹಾರದ ಭೋಜನಗೃಹವಿತ್ತು. ಆದರೆ ಅದು ಮುಚ್ಚಿತ್ತು. ನನಗೆ ಏನು ಮಾಡಬೇಕೆಂದು ತಿಳಿಯಲಿಲ್ಲ. ಆ ರಾತ್ರಿಯನ್ನು ಊಟವಿಲ್ಲದೆ ಕಳೆದೆನು. ನಾವು ನಾಟಕಮಂದಿರಕ್ಕೆ ಹೋದೆವು. ಮಿತ್ರರು ಆ ದೃಶ್ಯದ ಸಂಬಂಧವಾಗಿ ಒಂದು ಶಬ್ದವನ್ನು ಕೂಡ ಮಾತಾಡಲಿಲ್ಲ. ನಾನು ತಾನೇ ಏನು ಹೇಳುವುದು?

ಇದೇ ನಮ್ಮಿಬ್ಬರಿಗೂ ಆದ ಕಡೆಯ ಮಿತ್ರಯುದ್ಧ. ಇದರಿಂದ ನಮ್ಮ ಸಂಬಂಧವೇನೂ ತಪ್ಪಲಿಲ್ಲ. ನಮ್ಮ ಮನಸ್ಸು ಕೆಡಲಿಲ್ಲ. ಇವರ ಎಲ್ಲಾ ಪ್ರಯತ್ನಗಳಿಗೂ ಇವರ ನನ್ನ ಮೇಲಿಟ್ಟಿದ್ದ ಸ್ನೇಹವೇ ಮೂಲವೆಂದು ಅರಿತಿದ್ದೆನು. ಆಚಾರ ವಿಚಾರಗಳಲ್ಲಿ ಭಿನ್ನಾಭಿಪ್ರಾಯವಿದ್ದರೂ ಅವರಲ್ಲಿ ನನಗೆ ಆದರವೇನೂ ಕಡಮೆಯಾಗಲಿಲ್ಲ. ಜಾಸ್ತಿಯೇ ಆಯಿತು.

ನಾನು ಅವರ ಭಯವನ್ನು ದೂರಮಾಡಿಬಿಡಬೇಕೆಂದು ನಿಶ್ಚಯಿಸಿ "ನಾನು ಗಮಾರನಂತಿರಕೂಡದು. 'ನಾಗರಿಕನ' ಲಕ್ಷಣಗಳನ್ನು ಅಭ್ಯಾಸಮಾಡಿ ಇತರ ಪ್ರಕಾರಗಳಲ್ಲಿ ಸಮಾಜದೊಡನೆ ಸೇರುವುದಕ್ಕೆ ಯೋಗ್ಯನಾಗಬೇಕು. ನಾನು ಶಾಕಾಹಾರಿಯಾಗಿರುವುದರಿಂದ ಉಂಟಾಗಿರುವ ವಿಚಿತ್ರತೆಯನ್ನು ಈ ರೀತಿಯಾಗಿ ಹೋಗಲಾಡಿಸಬೇಕು" ಎಂದು ಯೋಚಿಸಿದೆನು.

ಈ ಉದ್ದೇಶದಿಂದ ನನ್ನ ಶಕ್ತಿಗೆ ಮೀರಿದ ಇಂಗ್ಲಿಷ್ "ಜಂಟಲ್ ಮೆನ್" (ಆಂಗ್ಲೇಯ ನಾಗರಿಕ) ಆಗಬೇಕೆಂಬ ಕೆಲಸವನ್ನು ಕೈಕೊಂಡೆನು.

ಮುಂಬಯಿಯಲ್ಲಿ ಹೊಲಿಸಿದ ಉಡುಪುಗಳು ಇಂಗ್ಲಿಷ್ ಸಮಾಜಕ್ಕೆ ತಕ್ಕುವಲ್ಲವೆಂದು "ಆರ್ಮಿ ಅಂಡ್ ನೇವಿಸ್ಟೋರ್ಸ್"ನಲ್ಲಿ ಹೊಸಬಟ್ಟೆಗಳನ್ನು ತಯಾರುಮಾಡಿಸಿದೆನು. ೧೯ ಷಿಲ್ಲಿಂಗ್ (ಸುಮಾರು ೧೯ ರೂ) —ಆಗ್ಯೆ ಇದು ಬಹಳ ಹೆಚ್ಚು ಬೆಲೆ—ಕೊಟ್ಟು ಒಂದು ಚಿಮಣಿ ಮಾದರಿಯ ಟೋಪಿಯನ್ನು ಕೊಂಡುಕೊಂಡೆನು. ಇಷ್ಟಕ್ಕೇ ತೃಪ್ತಿಪಡದೆ ಸೊಗಸುಗಾರರ ಮಾತೃಕ್ಷೇತ್ರವಾದ ಬಾಂಡ್ ಸ್ಟ್ರೀಟ್‌ಗೆ ಹೋಗಿ ೧೦ ಪೌಂಡು (ಸುಮಾರು ೧೫೦ ರೂ) ಸುರಿದು ಸಂಜೆಯ ಪೋಷಾಕನ್ನು (ಈವಿನಿಂಗ್ ಸೂಟ್) ಹೊಲಿಸಿದೆನು. ರಾಜಸಂತತಿಯ ಮನುಷ್ಯನಾದ ನಮ್ಮಣ್ಣನಿಗೆ ಬರೆದು ಗಡಿಯಾರಕ್ಕೆ ಹಾಕುವ ಎರಡು ಎಳೆಯ ಚಿನ್ನದ ಸರಪಣಿಯನ್ನು ತರಿಸಿಕೊಂಡೆನು. ತಯಾರುಮಾಡಿದ ನೆಕ್‌ಟೈಯನ್ನು ಧರಿಸಿಕೊಳ್ಳುವುದು ಶಿಷ್ಟಾಚಾರವಲ್ಲವೆಂದೆಣಿಸಿ ಅದನ್ನು ಅಂದವಾಗಿ ಕಟ್ಟಿಕೊಳ್ಳುವ ಕಲೆಯನ್ನು ಹಸ್ತಗತ ಮಾಡಿಕೊಂಡೆನು. ಭಾರತ ದೇಶದಲ್ಲಿ ಕ್ಷೌರಮಾಡಿಸಿಕೊಂಡಾಗ ಮಾತ್ರ ಕನ್ನಡಿಯನ್ನು ನೋಡುವ ಸಂಭವ ಬರುತ್ತಿತ್ತು. ಇಲ್ಲಾದರೋ ಪ್ರತಿನಿತ್ಯವೂ ಒಂದು ದೊಡ್ಡ ಕನ್ನಡಿಯ ಮುಂದೆ ನಿಂತುಕೊಂಡು ನೆಕ್‌ಟೈಯನ್ನು ಅಂದವಾಗಿ ಕಟ್ಟಿಕೊಳ್ಳುವುದರಲ್ಲಿಯೂ ಬೈತಲೆಯನ್ನು ನೇರವಾಗಿ ಬಿಡಿಸಿಕೊಳ್ಳುವುದರಲ್ಲಿಯೂ ಹತ್ತು ಹತ್ತು ನಿಮಿಷಗಳನ್ನು ಕಳೆಯುತ್ತಿದ್ದೆನು. ಕೂದಲು ಒರಟಾಗಿದ್ದುದರಿಂದ ಅದನ್ನು ಸರಿಮಾಡುವುದರಲ್ಲಿ ಪ್ರತಿದಿನವೂ ಬ್ರಷ್‌ನೊಡನೆ ಯುದ್ಧಮಾಡಬೇಕಾಗುತ್ತಿತ್ತು. ಟೋಪಿಯನ್ನು ಹಾಕಿಕೊಳ್ಳುವಾಗ ಮತ್ತು ತೆಗೆಯುವಾಗ ಕೈಯು ತನ್ನಷ್ಟಕ್ಕೆ ತಾನೆ ಬೈತಲೆಯನ್ನು ಸರಿಮಾಡುವುದಕ್ಕೆ ಹೋಗುತ್ತಿತ್ತು. ನಾಲ್ಕು ಜನರ ಮಧ್ಯೆ ಕುಳಿತಿರುವಾಗ ಕ್ಷಣಕ್ಷಣಕ್ಕೊಂದುಸಲ ಬೈತಲೆಯನ್ನು ಸರಿಮಾಡಿಕೊಳ್ಳುವ ನಾಗರಿಕ ಲಕ್ಷಣದ ವಿಚಾರವನ್ನು ಹೇಳಬೇಕಾದ್ದೇ ಇಲ್ಲ.

ಈ ಸಂಭ್ರಮವು ಇಷ್ಟಕ್ಕೆ ಮುಗಿಯಲಿಲ್ಲ. ಕೇವಲ ಸರಿಯಾದ ನಾಗರಿಕನ ಪೋಷಾಕನ್ನು ಧರಿಸುವುದರಿಂದಲೇ ಸರಿಯಾದ ನಾಗರಿಕನಾಗುವನೇ? ನಾಗರಿಕನಿಗೆ ಬೇಕಾದ ಇನ್ನು ಕೆಲವು ಬಾಹ್ಯಗುಣಗಳನ್ನು ತಿಳಿದುಕೊಂಡು ಅವುಗಳನ್ನು ಅಭ್ಯಾಸಮಾಡುವುದು ಉಳಿದಿತ್ತು. ಇಂಥ ನಾಗರಿಕನಿಗೆ ನರ್ತನವು ಬರಬೇಕು. ಫ್ರೆಂಚ್ ಭಾಷೆಯೂ ಚೆನ್ನಾಗಿ ಬರಬೇಕು. ಏಕೆಂದರೆ ಫ್ರೆಂಚ್ ಇಂಗ್ಲೆಂಡಿನ ಪಕ್ಕದಲ್ಲಿರುವ ಫ್ರಾನ್ಸ್ ದೇಶದ ಭಾಷೆಯಾಗಿರುವುದಲ್ಲದೆ ಸಮಸ್ತ ಯೂರೋಪ್ ಖಂಡದ ರಾಷ್ಟ್ರಭಾಷೆ ಮತ್ತು ನನಗೆ ಯೂರೋಪ್ ದೇಶವನ್ನೆಲ್ಲಾ ನೋಡಬೇಕೆಂಬ ಇಚ್ಛೆಯಿತ್ತು. ನಾಗರಿಕ ಮನುಷ್ಯನಿಗೆ ಉತ್ತಮವಾದ ಉಪನ್ಯಾಸಗಳನ್ನು ಕೊಡುವುದೂ ಬರಬೇಕು. ನಾನು ನಾಟ್ಯವನ್ನು ಕಲಿತುಕೊಳ್ಳಬೇಕೆಂದು ನಿಶ್ಚಯಿಸಿ ಇದಕ್ಕಾಗಿ ಏರ್ಪಟ್ಟ ಒಂದು ವರ್ಗಕ್ಕೆ ಸೇರಿಬಿಟ್ಟು ಒಂದು ಟರ್ಮಿಗಾಗಿ ೩ ಪೌಂಡನ್ನು ಕೊಟ್ಟೆನು. ಮೂರು ವಾರಗಳಲ್ಲಿ ನಾನು ಆರು ಸಲ ಹೇಳಿಸಿಕೊಳ್ಳುವುದಕ್ಕೆ ಹೋಗಿರಬೇಕು. ಪಿಯಾನೋ ತಾಳಕ್ಕೆ ಸರಿಯಾಗಿ ನನ್ನ ಕಾಲು ಬೀಳುತ್ತಿರಲಿಲ್ಲ. ಪಿಯಾನೋವನ್ನು ನುಡಿಸುತ್ತಿದ್ದರು. ಆದರೆ ಅದರ ಸಂಗೀತವು ನನಗೆ ತಿಳಿಯುತ್ತಿರಲಿಲ್ಲ. ಏನುಮಾಡುವುದು? ಇಲಿಗಳ ಗಲಾಟೆಯಿಂದ ತಪ್ಪಿಸಿಕೊಳ್ಳುವುದಕ್ಕಾಗಿ ಬೆಕ್ಕನ್ನು ಸಾಕಿದ ಸನ್ಯಾಸಿಯ ಕಥೆಯ ಹಾಗಾಯಿತು. ಬೆಕ್ಕಿಗೆ ಹಾಲು ಒದಗಿಸುವುದಕ್ಕೆ ಒಂದು ಆಕಳು, ಆ ಆಕಳನ್ನು ಕಾಪಾಡುವುದಕ್ಕೆ ಒಬ್ಬ ಆಳು, ಹೀಗೆ ಆತನ ಪರಿವಾರವು ವೃದ್ಧಿಯಾದಂತೆ ನನ್ನ ಲೋಭದ ಪರಿವಾರವು ಕೂಡ ದೊಡ್ಡದಾಯಿತು. ತಾಳಜ್ಞಾನವನ್ನು ಸಂಪಾದಿಸುವುದಕ್ಕೋಸ್ಕರ ಪಿಟೀಲು ಬಾರಿಸುವುದನ್ನು ಅಭ್ಯಾಸಮಾಡಬೇಕೆಂದು ಮನಸ್ಸುಮಾಡಿ ೩ ಪೌಂಡು ಕೊಟ್ಟು ಪಿಟೀಲನ್ನು ಕೊಂಡುಕೊಂಡದ್ದಲ್ಲದೆ ಇದನ್ನು ಕಲಿತುಕೊಳ್ಳುವುದಕ್ಕಾಗಿ ಇನ್ನಷ್ಟು ಹಣವನ್ನು ವಿನಿಯೋಗಮಾಡಿದೆನು. ಉಪನ್ಯಾಸ ಕೊಡುವುದನ್ನು ಕಲಿಯುವುದಕ್ಕೋಸ್ಕರ ಮೂರನೇ ಶಿಕ್ಷಕನನ್ನು ಹುಡುಕಿ ಆತನಿಗೆ ಒಂದು ಗಿನಿ (ಸುಮಾರು ೧೫ ರೂ.) ಕೊಟ್ಟೆನು. ಆತನ ನೀತಿಯ ಪ್ರಕಾರ "ಬೆಲ್ಸ್ ಸ್ಟ್ಯಾಂಡರ್ಡ್ ಎಲೊಕ್ಯೂಷನಿಸ್ಟ" ಎಂಬ ಪುಸ್ತಕವನ್ನು ಕೊಂಡುಕೊಂಡು ಪಿಟ್ ಮಹಾಶಯನ ಭಾಷಣವನ್ನು ಮೊದಲು ಮಾಡಿದೆನು.

ಬೆಲ್ ಸಾಹೇಬರು ನನ್ನ ಕಿವಿಯಲ್ಲಿ ಎಚ್ಚರಿಕೆಯ ಘಂಟೆಯನ್ನು ಬಾರಿಸಿದರು. ನಾನು ಎಚ್ಚೆತ್ತೆನು.

"ನಾನು ಇಂಗ್ಲೆಂಡಿನಲ್ಲಿ ಎಷ್ಟು ದಿನವನ್ನು ಕಳೆಯಬೇಕು? ಇಂಗ್ಲಿಷ್ ಭಾಷೆಯಲ್ಲಿ ಒಳ್ಳೆಯ ಭಾಷಣವನ್ನು ಮಾಡುವುದನ್ನು ಕಲಿತು ನಾನು ಮಾಡುವುದೇನು? ನಾಟ್ಯವಾಡುವುದನ್ನು ಕಲಿಯುವುದರಿಂದ ನಾನು ದೊಡ್ಡ ಮನುಷ್ಯನಾಗುತ್ತೇನೆಯೇ? ಪಿಟೀಲನ್ನು ನಮ್ಮ ದೇಶದಲ್ಲಿಯೇ ಕಲಿಯಬಹುದು. ನಾನು ವಿದ್ಯಾರ್ಥಿ. ನನ್ನ ಓದುವಿಕೆಗೆ ಸಂಬಂಧಪಟ್ಟ ಶಾಸ್ತ್ರಗಳನ್ನು ಕಲಿತುಕೊಂಡು ವಕೀಲಿ ಶಾಲೆಗೆ ಸೇರಲು ಯೋಗ್ಯತೆಯನ್ನು ಸಂಪಾದಿಸಬೇಕು. ನನ್ನ ವ್ಯವಹಾರದಿಂದ ನಾನು ನಾಗರಿಕನೆನಿಸಿಕೊಂಡರೆ ಒಳ್ಳೆಯದೇ ಆಯಿತು. ಇಲ್ಲದಿದ್ದರೆ ಇದರ ಲೋಭವನ್ನು ಬಿಡಬೇಕು."

ಈ ರೀತಿಯಾದ ಯೋಚನೆಗಳು ನನ್ನ ಮನಸ್ಸನ್ನು ಹಿಡಿದವು. ನನಗೆ ಭಾಷಣವನ್ನು ಕಲಿಸುತ್ತಿದ್ದ ಶಿಕ್ಷಕನಿಗೆ ಇವುಗಳನ್ನೆಲ್ಲಾ ನಿರೂಪಿಸಿ ಇನ್ನು ಮುಂದೆ ಪಾಠಕ್ಕೆ ಬರದೇ ಇರುವುದಕ್ಕಾಗಿ ಕ್ಷಮಿಸಬೇಕೆಂದು ಪತ್ರ ಬರೆದೆನು. ಎರಡು ಮೂರು ವಾರಗಳು ಮಾತ್ರ ಆಗಿದ್ದವು. ನಾಟ್ಯದ ಶಿಕ್ಷಕನಿಗೂ ಇದೇ ರೀತಿಯಾದ ಕಾಗದವನ್ನು ಬರೆದೆನು. ಪಿಟೀಲಿನ ಶಿಕ್ಷಕಳ ಮನೆಗೆ ಪಿಟೀಲನ್ನು ತೆಗೆದುಕೊಂಡು ಹೋಗಿ ಅದನ್ನು ದೊರೆತಷ್ಟು ಬೆಲೆಗೆ ಮಾರಿಬಿಡುವುದಕ್ಕೆ ಆಕೆಗೆ ಅಧಿಕಾರವನ್ನು ಕೊಟ್ಟೆನು. ಆಕೆಯು ನನ್ನೊಡನೆ ಕೊಂಚ ಮಿತ್ರಭಾವದಿಂದ ವರ್ತಿಸುತ್ತಿದ್ದುದರಿಂದ ನೈಜವಲ್ಲದ ಧ್ಯೇಯವನ್ನಿಟ್ಟುಕೊಂಡಿರುವೆನೆಂಬ ಜ್ಞಾನವು ನನ್ನಲ್ಲಿ ಹುಟ್ಟಿದ ರೀತಿಯನ್ನು ಆಕೆಗೆ ತಿಳಿಸಿದೆನು. ನೃತ್ಯಾದಿಗಳನ್ನೆಲ್ಲಾ ಬಿಟ್ಟು ಬಿಟ್ಟುದು ಸರಿಯೆಂದು ಆಕೆಯು ನನಗೆ ಹೇಳಿದಳು.

ನಾಗರಿಕನಾಗಬೇಕೆಂಬ ಈ ಹುಚ್ಚು ನನಗೆ ಸುಮಾರು ಮೂರು ತಿಂಗಳು ಹಿಡಿದಿರಬೇಕು. ಪೋಷಾಕಿನ ಠೀವಿಯು ಇನ್ನೂ ಅನೇಕ ವರ್ಷಗಳಿತ್ತು. ಆದರೆ ಅಂದಿನಿಂದ ನಾನು ವಿದ್ಯಾರ್ಥಿಯಾದೆನು.

ಓರಿಯಂಟಲ್ ಗವರ್ನ್‌ಮೆಂಟ್ ಸೆಕ್ಯೂರಿಟಿ ಜೀವವಿಮೆ ಕಂಪೆನಿ ಲಿಮಿಟೆಡ್:—

1925ನೇ ವರ್ಷದ (ಕಂಪೆನಿಯ ಐವತ್ತೊಂದನೆಯ) ಜನರಲ್ ಮೀಟಿಂಗ್‌ನಲ್ಲಿ ನಡೆದ ಡೈರೆಕ್ಟರುಗಳ ವರದಿಯ ಕೆಲವು ಮುಖ್ಯಾಂಶಗಳು:—

ಹಿಂದಿನಂತೆಯೇ ಈಗಲೂ ಈ ಕಂಪೆನಿಯ ಕಾರ್ಯವು ತುಂಬ ಅಭಿವೃದ್ಧಿಯಾಗಿದೆಯೆಂದು ಹೇಳಲು ಡೈರೆಕ್ಟರುಗಳು ಅತಿಶಯವಾದ ಸಂತೋಷಪಡುತ್ತಾರೆ. ಮೂಲಧನವು ಈಗ ರೂ. 6,96,77417-6-0 (6 ಕೋಟಿ 96 ಲಕ್ಷ ರೂಪಾಯಿಗಳು) ಆಗಿರುತ್ತದೆ. ಹೀಗೆ ಸೇರಿರುವ ಮೂಲಧನವೇ ಪಾಲಿಸಿದಾರರಿಗೆ ಅನುಮಾನಾಸ್ಪದವಿಲ್ಲದೆ ಸೆಕ್ಯೂರಿಟಿಯಾಗಿರುತ್ತದೆ. ತಿಂಗಳುಗಳು ಹೋಗಿರಲಾಗಿ ಈ ಸಾಲಿನ ಬಡ್ಡಿಯ ದರವು ಸರಾಸರಿ ಶೇಕಡ 5—3 ಕ್ಕಿಂತ ಜಾಸ್ತಿಯಾಗಿಯೇ ಇರುತ್ತದೆ.

ಈ ವರ್ಷದಲ್ಲಿ ಕಂಪೆನಿಗೆ 19824 ವಿಮೆಯ ದರಖಾಸ್ತುಗಳು 4,37,39,000 ರೂಪಾಯಿಗಳಿಗೆ ಕಳುಹಿಸಲ್ಪಟ್ಟವು. ಈ ಪೈಕಿ 13,545 ದರಖಾಸ್ತುಗಳು ಪಾಲಿಸಿಗಳಾದವು. ಮಿಕ್ಕವು ವಜಾಮಾಡಲ್ಪಟ್ಟವು, ಹಿಂದಕ್ಕೆ ತೆಗೆದುಕೊಳ್ಳಲ್ಪಟ್ಟವು, ಅಥವ ಪೂರ್ತಿಯಾಗುವುದರಲ್ಲಿಯೇ ಇರುತ್ತವೆ.

ಈ ಬಾರಿ ವಿಮೆಮಾಡಲ್ಪಟ್ಟ ಹಣದ ಮೊತ್ತವು ರೂ. 2,96,42,700 (2 ಕೋಟಿ, 96 ಲಕ್ಷ ರೂಪಾಯಿಗಳು) ಈ ಪೈಕಿ (ಪ್ರಿಮಿಯಂ) ಕಂತುಗಳ ಹಣವು ರೂ. 17,21,944 ಇದರಲ್ಲಿ ರೂ. 17,19,254—6—9 ಸಾಲಿಯಾನ ಕಟ್ಟತಕ್ಕವುಗಳಾಗಿಯೂ ಮತ್ತು ರೂ. 2689-10-0 ಒಂದೇ ಕಂತಿನವುಗಳಾಗಿಯೂ ಇವೆ.

ಎರಡಾವರ್ತಿ ವಿಮೆಮಾಡಲ್ಪಟ್ಟ ಭಾಗವು ಹೋಗಲಾಗಿ ಈ ಸಾರಿ ಒಬ್ಬರಿಂದಲೇ ವಿಮೆಮಾಡಲ್ಪಟ್ಟ ಅತ್ಯಂತ ದೊಡ್ಡ ಹಣವು 75000 ರೂಪಾಯಿಗಳು.

ಕಂಪೆನಿಯ ಪುಸ್ತಕಗಳ ಪ್ರಕಾರ ಜಾರಿಯಲ್ಲಿರುವ ಪಾಲಿಸಿಗಳ ಒಟ್ಟು ಮೊತ್ತವು 1,01,458 ಇವುಗಳ ಮೇಲಿನ ವಿಮೆ ಹಣವು ಬೋನಸ್ ಸೇರಿ ಒಟ್ಟು ರೂ. 21,36,27,487-7-3 (21 ಕೋಟಿ 36 ಲಕ್ಷ ರೂಪಾಯಿಗಳು) ಈ ಪೈಕಿ ಪುನಃ ವಿಮೆ ಮಾಡಲ್ಪಟ್ಟ ಮೊಬಲಗು ರೂ. 10,14,928—1—8

ಈ ಸಾಲಿನಲ್ಲಿ ಹಕ್ಕುಗಳನ್ನು ಕೆಳಗೆ ಕಂಡ ಪಾಲಿಸಿಗಳ ಮೇಲೆ ಕೊಟ್ಟದುದರ ಒಟ್ಟುಮೊತ್ತ ರೂ. 53,92,943-15-4 (53 ಲಕ್ಷ 92 ಸಾವಿರ ರೂಪಾಯಿಗಳು.)

1. ಮೃತಪಟ್ಟ 1118 ಜನಗಳ 1,359 ಪಾಲಿಸಿಗಳು
2. ವಿಮೆಯ ಕ್ಲಿಪ್ತಕಾಲಾನಂತರ ನಿಲ್ಲಬೇಕಾಗಿದ್ದ 1132 ಜನಗಳ 1235 ಪಾಲಿಸಿಗಳು

ಈ ವರ್ಷದಲ್ಲಿ ಕೆಳಗೆ ಕಾಣಿಸಿರುವ ಪ್ರಕಾರ ಆದಾಯವು ಮೊತ್ತವು ರೂ. 1,30,50,442—8—10.

ಪ್ರೀಮಿಯಂಗಳಿಂದ ರೂ. 92,66,381-8-6
ಮೂಲಧನದ ಮೇಲಿನ ಬಡ್ಡಿ ರೂ. 33,97,380-12-3
ಇತರ ಬಾಬುಗಳಿಂದ ರೂ. 3,86,680-4-1

ಈ ವರ್ಷದಲ್ಲಿ ಹಕ್ಕುಗಳು ಕೊಟ್ಟದ್ದು ಮತ್ತು ಕೊಡಬೇಕಾಗಿರುವುದು, ಪಿಂಚನಿಗಳು, ಸರೆಂಡರುಗಳು, ವರ್ಷಾಶನಗಳು, ಡಿವಿಡೆಂಡುಗಳು, ಬೋನಸ್ಸುಗಳು ಮತ್ತು ಆಡಳಿತದ

ವೆಚ್ಚಗಳು ಇವುಗಳಿಗೋಸ್ಕರ ಒಟ್ಟು ಖರ್ಚು ರೂ. 83,14,530—7—3. ಆದ್ದರಿಂದ ಆದಾಯದಿಂದ ಖರ್ಚು ಕಳೆಯಲಾಗಿ ಉಳಿದ ಮೊಬಲಗು ರೂ· 47,35,912-1-7.

ಸಭಾಧ್ಯಕ್ಷರ ಭಾಷಣದ ಕೆಲವು ಮುಖ್ಯಾಂಶಗಳು.—

ಕಾರ್ಯಕಾರಿಣಿ ವರದಿಯನ್ನು ನಿಮಗಳ ಮುಂದಿಡುವ ಬಗ್ಗೆ ನಿಮಗೆ ತಿಳಿಸಬೇಕಾದುದೇನೆಂದರೆ ನಿಮ್ಮ ಕಂಪೆನಿಯು ಅದರ ಚರಿತ್ರೆಯಲ್ಲಿ ಒಂದು ದೊಡ್ಡ ಸಾಧನವನ್ನು ಕೈಕೊಂಡು ಜಯಶಾಲಿಯಾಗಿರುತ್ತದೆ. ಅಂದರೆ 1924ನೆ ವರ್ಷಕ್ಕೆ ಅಖೈರಾದ ಮೂರು ವರ್ಷಗಳ ಲೆಖ್ಖಾಚಾರದ ಫಲಿತಾಂಶಗಳನ್ನು ಕುರಿತು ಹೇಳುತ್ತೇನೆ.

ಈಗ ಬಂದ ಲಾಭವು ಹಿಂದೆ ಇದುವರೆಗೆ ಬಂದಿರುವ ಯಾವತ್ತಿನ ಲೆಖ್ಖಾಚಾರಕ್ಕಿಂತ ಎರಡರಷ್ಟಕ್ಕೂ ಜಾಸ್ತಿಯಾಗಿಯೇ ಬಂದಿರುತ್ತದೆ. ಪಾಲಿಸಿದಾರರಿಗೆ ಬೋನಸ್ಸೂ, ಷೇರುದಾರರಿಗೆ ಡಿವಿಡೆಂಡೂ ಅತಿಶಯವಾಗಿ ಬಂದಿರುವುದು. ಈ ಕಂಪೆನಿಗೆ ಸಂಬಂಧಪಟ್ಟ ಪ್ರತಿಯೊಬ್ಬನಿಗೂ ಸಂತೋಷವನ್ನೂ ಆಶ್ಚರ್ಯವನ್ನೂ ಉಂಟುಮಾಡಿರಬೇಕು. ಈ ರೀತಿಯಾದ ಫಲಿತಾಂಶವು ಮುಂದೆ ಓರಿಯಂಟಲ್‌ನಲ್ಲಿ ವಿಮೆಮಾಡತಕ್ಕ ಜನಗಳಿಗೆ ಅದು ಒಳ್ಳೆ ಆಕರ್ಷಕವಾದ ಲಾಭಕರವಾದ ಕಂಪೆನಿಯೆಂಬ ಹೆಚ್ಚಾದ ನಂಬಿಕೆಯನ್ನು ಕೊಡುವುದರಲ್ಲಿ ಯಾವ ಸಂದೇಹವೂ ಇರುವುದಿಲ್ಲ. ಇಂಡಿಯಾ, ಬರ್ಮಾ ಸಿಲೋನ್ ಮುಂತಾದ ಪ್ರಾಂತಗಳಲ್ಲಿ ಹೀಗೆ ವೃದ್ಧಿಯಾಗುತ್ತಿರುವ ... ವೃದ್ಧಿಯೂ 1925ರಲ್ಲಿ ನಡೆದ ಕಂಪೆನಿಯ ಕೆಲಸದ ಫಲಿತಾಂಶಗಳನ್ನೊಳಗೊಂಡಿರುವ ನಿಮಗೆ ಮುಂದಿರುವ ಲೆಖ್ಖಾಚಾರದ ವರದಿಯಿಂದ ತಿಳಿಯಬರುತ್ತದೆ.

ಮಹಾಶಯರೇ, ಈಗ ನಮ್ಮ ಕಂಪೆನಿಯ ಧನಸಂಚಯದ ವಿಚಾರವನ್ನು ನೋಡೋಣ. ಈ ತಿಂಗಳ ಆದಿಯಲ್ಲಿ ಕಂಪೆನಿಯ ಪೂರ್ತಿ ಇನ್‌ವೆಸ್ಟ್‌ಮೆಂಟುಗಳ ಮಾರ್ಕೆಟ್ ಬೆಲೆಯು ಬ್ಯಾಲೆನ್ಸ್ ಶೀಟಿನಲ್ಲಿ ಕಂಡುಬರುವ ಬೆಲೆಗಿಂತ 40ಲಕ್ಷ ರೂಪಾಯಿಗಳು ಜಾಸ್ತಿಯಾಗಿರುತ್ತದೆಂಬ ವಿಚಾರ ವರದಿಯಲ್ಲಿ ಕಂಡುಬರುತ್ತದೆ. ಇನ್‌ವೆಸ್ಟ್‌ಮೆಂಟ ಗಳ ಬೆಲೆಯು ಹೆಚ್ಚುಕಡಿಮೆಗಳ ಬಗ್ಗೆ ಇರುವ 20½ಲಕ್ಷ ರಿಜರ್ವ್‌ಫಂಡ್ ಅಲ್ಲದೇನೇ ಹಾಲಿ ಈಗಿನ ಮಾರ್ಕೆಟ್ಟಿನ ಬೆಲೆಯು ಬುಕ್ಕಿನ ಬೆಲೆಗಿಂತ ಮೊತ್ತದಲ್ಲಿ 75ಲಕ್ಷಕ್ಕೆ ಜಾಸ್ತಿಯಾಗಿಯೇ ಇರುತ್ತದೆ. ಮೇಲ್ಕಂಡ ಸ್ಥಿತಿಯಲ್ಲಿರುವುದು, ಒಳ್ಳೆ ಉತ್ತಮವೇ ಸರಿ. ಈ ವ್ಯತ್ಯಾಸವನ್ನು ಈಗ ನಾವು ಲಕ್ಷಿಸುವ ಆವಶ್ಯಕತೆಯಿರುವುದಿಲ್ಲ. ಆದರೆ ಮುಂದಿನ ಲೆಖ್ಖಾಚಾರದ ವೇಳೆಗೆ ಈ ಜಾಸ್ತಿ ಲಾಭದಲ್ಲಿ ಒಂದು ಭಾಗವಾದರೂ ಷೇರುದಾರರಿಗೆ ಡಿವಿಡೆಂಡ್ ಹಂಚಿಕೆಯಲ್ಲಿಯೂ, ಪಾಲಿಸಿದಾರರಿಗೆ ಬೋನಸ್ಸಿನ ಹಂಚಿಕೆಯಲ್ಲಿಯೂ ಭಾಗವಾಗುವುದೆಂದು ಹೇಳುವುದರಲ್ಲಿ ಯಾವ ಸಂದೇಹವೂ ಇರುವುದಿಲ್ಲ.

ವರದಿಯಲ್ಲಿನ ಕೆಲವು ಮುಖ್ಯ ವಿಚಾರಗಳಿಗೆ ನಿಮ್ಮ ಗಮನವನ್ನು ನಾನು ಎಳೆದುದರಲ್ಲಿ ಕಂಪೆನಿಯು ತನ್ನ ಉದ್ದೇಶದಲ್ಲಿ ಎಷ್ಟರಮಟ್ಟಿಗೆ ಮುಂದಾಗಿದೆಯೆನ್ನುವುದು ಚೆನ್ನಾಗಿ ಸ್ಪಷ್ಟವಾಗುತ್ತದೆ. ನಮ್ಮ ಕಾರ್ಯದ ಸ್ಥಳಗಳು ವರ್ಷಂಪ್ರತಿ ಜಾಸ್ತಿಯಾಗುತ್ತಿರುವುದಲ್ಲದೆ 'ಜೀವವಿಮೆ' ಎಂದ ಮಾತ್ರಕ್ಕೇನೆ 'ಓರಿಯಂಟಲ್' ಎಂಬ ಹೆಸರು ಮನಸ್ಸಿಗೆ ಹೊಳೆಯುವ ಕಾಲವು ದೂರವಾಗಿಲ್ಲ.

ಮುಕ್ತಾಯದಲ್ಲಿ ನಾನು ಹೇಳುವುದೇನಂದರೆ, ಹೀಗೆಯೇ ಇದು ಅಭಿವೃದ್ಧಿಯಲ್ಲಿರಬೇಕಾದರೆ ನೀವು ಒಬ್ಬರಿಗೊಬ್ಬರ ಸೇರಿ ನಡೆಯುವುದೂ ನಿಮ್ಮ ಎಲ್ಲಾ ಕಾಲದಲ್ಲಿಯೂ ಸಹಾಯವೂ ಪೂರ್ಣ ಶ್ರದ್ಧೆಯೂ ಬೇಕಾಗಿದೆ. ಆದ್ದರಿಂದ ನೀವು ಪ್ರತಿಯೊಬ್ಬರೂ ಕಂಪೆನಿಗೋಸ್ಕರ ಕೈಲಾದಷ್ಟು ಶ್ರದ್ಧೆಯನ್ನೂ ವಹಿಸಬೇಕು, ಮತ್ತು ಓರಿಯಂಟಲ್ ಎಂಬುದು ನಿಮ್ಮ ಸ್ವದೇಶ ಕಂಪೆನಿ ಎಂಬುದನ್ನು ಚೆನ್ನಾಗಿ ಗಮನದಲ್ಲಿಟ್ಟುಕೊಂಡು ಆ ವಿಚಾರದಲ್ಲಿ ಹೆಮ್ಮೆಯುಳ್ಳವರಾಗಿ ಅದಕ್ಕೆ ಕೀರ್ತಿಯನ್ನೂ ಜಯವನ್ನೂ ಕೋರಬೇಕೆಂದು ನನ್ನ ಪ್ರಾರ್ಥನೆ.

ಗೃಹವೂ ಗೃಹಿಣಿಯೂ.

ಜಗದ್ವಿಖ್ಯಾತ ಕವಿಗಳ ಪವಿತ್ರವಾದ ಹೃದಯ ಮಂದಿರದಲ್ಲಿ ಜಾಗರಿತವಾದ ಹಾಗೂ ಅವರ ಪರಮ ಪಾವನವಾದ ಲೇಖಣಿಯಿಂದ ಅನಾಯಾಸವಾಗಿ ಸುರಿಯುವ ಕಾವ್ಯರಸದಿಂದ ಗೃಹಸ್ಥಾಶ್ರಮವೆಂಬ ಸಾಮ್ರಾಜ್ಯಕ್ಕೆ ರಮಣಿಯೇ ರಾಣಿಯೆಂದು ದೃಢವಾಗುವುದು. ಗೃಹಸ್ಥಾಶ್ರಮವೇ ಸರ್ವಾಶ್ರಮಗಳ ಉತ್ಪತ್ತಿಸ್ಥಾನವು. ಏಕೆಂದರೆ ಈ ಗೃಹಸ್ಥಾಶ್ರಮದಲ್ಲಿ ಮನುಷ್ಯನು ಜನ್ಮಧಾರಣೆಮಾಡಿ, ಜಗತ್ತಿನ ವೈಚಿತ್ರ್ಯವನ್ನು ಶೃಂಗರಿಸುವನು; ಇಪ್ಪತ್ತು ನಾಲ್ಕು ವರ್ಷಗಳ ಬ್ರಹ್ಮಚರ್ಯೆ ಎಂಬ ತಪಸ್ಸನ್ನು ಪೂರ್ತಿಮಾಡಿ ವನು. ತನ್ನ ಪ್ರೇಮ ಪುಷ್ಪಗಳು ಇರುವ ಪುತ್ರರ ವಿಮಲ ಮಂದಹಾಸದಿಂದವನ್ನು ದರ್ಶನಮಾಡಿ ತಮ್ಮ ಜೀವನವೃಕ್ಷದ ಮೂಲವನ್ನು ದೃಢಪಡಿಸುವನು. ಮತ್ತು ಇದೇ ಸೌಂದರ್ಯಮಯ ಸರೋವರದ ಶೀತಲ ಕಮಲಗಳ ಶ್ರೇಷ್ಠ ಸುಗಂಧದಿಂದ ತನ್ನ ಮನೋಮಂದಿರದ ಇಷ್ಟದೇವತೆಯ ಆರಾಧನೆಯನ್ನು ಮಾಡಿ ಹೃದಯವನ್ನು ಪವಿತ್ರವನ್ನಾಗಿ ಮಾಡಿಕೊಳ್ಳುವನು. ರಮಣಿಯು ಈ ಆಶ್ರಮದ ಅಧಿದೇವಿಯು; ಪುರುಷನು ಹೊರಗಿನ ಆಡಂಬರಗಳಿಂದ ಅದನ್ನು ಸಂತೋಷಪಡಿಸುವ ಪೂಜಾರಿಯು. ವಿಗ್ರಹವಿಲ್ಲದ ದೇವಾಲಯವು ಹೇಗೆ ಶೂನ್ಯವಾಗಿರುವುದೋ ಹಾಗೆಯೇ ಗೃಹಿಣಿ ಇಲ್ಲದ ಗೃಹಸ್ಥನ ಸ್ಥಿತಿಯೂ ಶೂನ್ಯವಾಗಿರುವುದು. ಗೃಹಸ್ಥಾಶ್ರಮದ ರಥವನ್ನೆಳೆಯಲು ರಮಣಿಯರ ಆವಶ್ಯಕತೆಯು ಅನಿವಾರ್ಯವಾಗಿರುವುದು. ಆವರ ಮಧುರವಾಣಿಯಿಂದ ದೂರವಾದ ಗೃಹವು ಭೂತಪಿಶಾಚಿಗಳ ಬೀಡಾಗಿ ಬಿಡುವುದು ನಮಗೆ ಪ್ರತ್ಯಕ್ಷವಾಗಿ ತೋರುವುದೇನೆಂದರೆ ಯಾವ ಮನೆಯಲ್ಲಿ ರಮಣಿಯು ಪ್ರಭಾತವಾಗುವುದಿಲ್ಲವೋ, ಅಲ್ಲಿನ ಮಾಧುರ್ಯ, ಸಂತೋಷ, ಸುಖ, ಸರ್ವಪ್ರಿಯತೆಯು ಎಲ್ಲ ಓಡಿಹೋಗುವುದೋ ತಿಳಿಯದು. ಪತ್ನಿವಿಹೀನನಾದ ಪತಿಯು ಸಂಧ್ಯಾಕಾಲದ ನಕ್ಷತ್ರದಂತೆ ಕಾಂತಿಹೀನನೂ ಸಂಭ್ರಷ್ಟನೂ ಆಗುವನು.

ಪರಂತು ಆಧುನಿಕ ಸಮಯದ ಮಹಾ ದುರ್ದಶೆಯನ್ನು ನೋಡಿ ನೋಡಿ ಸರ್ವರೂ ಸ್ತ್ರೀಯರ ಮೂರ್ಖತೆಯ ಮೇಲೆ ಕಣ್ಣೀರು ಸುರಿಸುತ್ತಿರುವರು. ನಾರಿಯರ ಪ್ರಕೃತಿಸ್ಥಿತಿಯ ಅಶಾಂತಿಯು ಭಯಂಕರ ರೂಪವನ್ನು ಧರಿಸಿ ಭಾರತಭೂಮಿಯ ಮೂಲೆಮೂಲೆಗಳಲ್ಲಿಯೂ ಹಾಹಾಕಾರದ ಚೀತ್ಕಾರವನ್ನು ಸುರಿಸುತ್ತಿರುವುದು. ನಮ್ಮ ಸೌಭಾಗ್ಯದ ಚಂದ್ರನು ಘೋರವಾದ ಮೇಘಗಳಿಂದ ಆಚ್ಛಾದಿಸಲ್ಪಟ್ಟಿರುವನು. ನಾರೀರತ್ನಗಳ ಅನವಧಾನದಿಂದಲೇ ಗೃಹಸ್ಥಾಶ್ರಮಕ್ಕೆ ಈ ದುರ್ದಶೆಯು ಪ್ರಾಪ್ತಿಸುತ್ತಲಿದೆ. ಪತಕ್ಕಿಂದರ ಈ ಪುಣ್ಯಭೂಮಿಯಲ್ಲಿ ಪೂರ್ವದಲ್ಲಿದ್ದಂತೆ ಆದರ್ಶಮಹಿಳೆಯರ ಸಂಖ್ಯೆಯು ಬೇಕಾದಷ್ಟಿಲ್ಲ.

ಪ್ರಾಚೀನ ಭಾರತ ರಮಣಿಯರಂತೆ ತಮ್ಮ ಧರ್ಮಕರ್ಮಗಳನ್ನರಿತು ಇತರರಿಗೆ ಸದ್ಬೋಧೆಯನ್ನು ಮಾಡಲು ಈಗಿನ ಮಹಿಳೆಯರಿಂದ ತಿಲಮಾತ್ರವೂ ಸಾಧ್ಯವಿಲ್ಲ. ಈಗಿನ ಕಾಲದ ನೈಸರ್ಗಿಕ ಸ್ಥಿತಿಯು ಕುಂಬಾ ಕೆಟ್ಟಿರುವುದು. ಇದರಿಂದಲೇ ಹಿಂದೂಸಮಾಜವು "ಸ್ತ್ರೀಶಿಕ್ಷಣ"ವೆಂಬ ಶಬ್ದೋಚ್ಚಾರ ಮಾತ್ರದಿಂದ ಕಂಪಿತವಾಗುವುದು; ಪುರುಷರು ಸ್ತ್ರೀಯರನ್ನು ಕೇವಲ ದಾಸೀಭಾವದಿಂದ ನೋಡಲಾರಂಭಿಸಿರುವರು, ಕಾರಣ ದಾಸಿಯ ಯೋಗ್ಯತೆಯಿಂದ ಗೃಹಕೃತ್ಯವು ಯಾವ ರೀತಿಯಲ್ಲಾಗುವುದೋ ಹಾಗೆಯೇ ಆಗುತ್ತಲಿರುವದು.

ವರ್ತಮಾನ ಕಾಲದ ಸ್ತ್ರೀಶಿಕ್ಷಣವು ಸ್ತ್ರೀಯರನ್ನು ಎರಡು ಪಂಗಡಗಳನ್ನಾಗಿ ವಿಭಾಗಿಸಿರುವುದು. ಒಂದು ಪಂಗಡದವರು ಕೇವಲ ನಿರಕ್ಷರ ಕುಕ್ಷಿಗಳು. ಮತ್ತೊಂದು ಪಂಗಡದವರು ನವೀನ ವಿದ್ಯಾಭ್ಯಾಸದ ಸಂಸ್ಕಾರಕ್ಕೊಳಗಾಗಿ ತಮ್ಮನ್ನು ತಾವೇ ಬುದ್ಧಿವಂತರೆಂತಲೂ, ಸರ್ವಜ್ಞರೆಂತಲೂ ಭಾವಿಸಿ, ಮೊದಲಿನ ಪಂಗಡದವರಾದ ತಮ್ಮ ಸಹೋದರಿಯರಿಗೆ ಸದ್ಬೋಧೆಯನ್ನು ಮಾಡುವುದಕ್ಕೆ ಬದಲಾಗಿ ಅವರೊಡನೆ ಜಗಳಾಡುವುದು. ಕೂಡು ಅವಮಾನಾಸ್ಪದವೆಂದರಿತು ಅವರೊಡನೆ ದ್ವೇಷಾಸೂಯೆಯಿಂದ ವರ್ತಿಸುವರು. ನಿರಕ್ಷರಕುಕ್ಷಿಗಳಾಗಿ ಕೇವಲ ಮೂರ್ಖರಾದವರು ಹೇಗೋ ಹಾಗೋ ತಮ್ಮ ಗೃಹಕೃತ್ಯಗಳನ್ನು ನಿರ್ವಹಿಸಿಕೊಳ್ಳುವರು. ಪರಂತು ಯಾರು ವರ್ತಮಾನ ಕಾಲದ ವಿದುಷೀಮಣಿಯರೆಂದೆನ್ನಿಸಿಕೊಳ್ಳುವರೋ, ಅವರು ಗೃಹಕೃತ್ಯ ಶಿಕ್ಷಣಾಭಾವದಿಂದ ಗೃಹಕೃತ್ಯಗಳನ್ನು ನಿಂದನೀಯವಾಗಿಯೂ, ತುಚ್ಛವಾಗಿಯೂ ಲೆಕ್ಕಿಸುವರು. ಗೃಹಕೃತ್ಯದ ಭಾರವನ್ನೆಲ್ಲಾ ಆಳುಗಳ ತಲೆಯಮೇಲೆ ಹಾಕಿ ತಾವು ಆನಂದೈಶ್ವರ್ಯ ಸಾಗರದಲ್ಲಿ ಮುಳುಗಿ ತೇಲುತ್ತಿರುವರು. ಆದರೆ ಇದರ ಲಾಭನಷ್ಟಗಳ ಮೇಲೆ ಈಗಿನ ಸುಶಿಕ್ಷಿತ ವಿದುಷೀಮಣಿಯರಿಂದು ಭಾವಿಸುವ ಭಾರತ ಭಗಿನಿಯರ ಕರುಣಾದೃಷ್ಟಿಯು ಬೀಳುವುದು ತುಂಬಾ ಕಷ್ಟವಾಗಿದೆ. ಆದ್ದರಿಂದ ಆಳುಗಳು ತಮ್ಮ ಮನಸ್ಸಿಗೆ ಬಂದಂತೆ ಕಾರ್ಯಸಾಧನೆಯನ್ನು ಮಾಡುವರು. ಆಳುಗಳ ಪ್ರಭಾವದಿಂದ ಖರ್ಚು ಹೆಚ್ಚಾಗುವುದಲ್ಲದೆ, ಊಟ ಉಪಚಾರಗಳಲ್ಲಿ ನಿಜವಾದ ಆನಂದ ಸೌಖ್ಯವು ದೊರೆಯುವುದೂ ಅಸಂಭವವಾಗುವುದು. ಗೃಹಿಣೀಯರಿಗೆ ಮೇಲ್ಕಂಡ ವಿಷಯದಲ್ಲಿ ತುಂಬಾ ಲಕ್ಷ್ಯವಿರಬೇಕು. ಗೃಹಕೃತ್ಯದ ಎಲ್ಲಾ ಕೆಲಸಗಳನ್ನೂ ತಮ್ಮ ಕೈಯಿಂದ ಮಾಡುವುದು ಸರ್ವೋತ್ತಮವು. ಒಂದು ವೇಳೆ ಪರಿಚಾರಕರಿಂದ ಕೆಲಸಮಾಡಿಸುವ ಸಂದರ್ಭದಲ್ಲಿ ಅವರ ಕಾರ್ಯಕ್ರಮದಲ್ಲಿ ಯಾವ ವಿಧವಾದ ಕೊರತೆಯೂ ಬಾರದಂತೆ ನೋಡಿಕೊಳ್ಳಬೇಕು. ಗೃಹಕೃತ್ಯದ ಸರ್ವಭಾರವೂ ಗೃಹಿಣೀಯನ್ನವಲಂಬಿಸಿರುವುದು. ಯಾವ ಸಾಧ್ವಿಯು ಆ ಭಾರವನ್ನು ವಹಿಸಲು ಸಮರ್ಥಳೋ, ಅವಳೇ ಗೃಹಿಣಿಯ ಪದವಿಯನ್ನು ಅಲಂಕರಿಸಲು ಯೋಗ್ಯಳು. ಆಕೆಯ ಕಾರ್ಯದ ಗಣನೆಯನ್ನು ಯಾರಿಂದ ತಾನೇ ಮಾಡಲಾದೀತು? ಆದರ ಮುಖ್ಯವಾದ ಕಾರ್ಯಗಳು — ಅಂದರೆ ಭಕ್ಷ್ಯಭೋಜ್ಯಗಳನ್ನು ತಯಾರಿಸುವುದು, ಶಿಲ್ಪವಿದ್ಯೆ ತಮ್ಮ ಮಕ್ಕಳಿಗೆ ಯೋಗ್ಯವೋಷಣೆ ಶಿಕ್ಷಣಕೊಡುವುದು, ಮನೆಯ ಲೆಕ್ಕಗಳನ್ನಿಡುವುದು ಇತ್ಯಾದಿ ಕಾರ್ಯಗಳಿರುವುವು. ಇವುಗಳನ್ನೆಲ್ಲಾ ಇಲ್ಲಿ ಸ್ಥಳಾಭಾವದಿಂದ ವರ್ಣಿಸಲಾರೆವು.

ಬಾಲಕರ ಭವಿಷ್ಯವು ಮಾತೆಯ ಕೈಯಲ್ಲಿರುವುದು. ಬೇಕಾದರೆ ಅವನನ್ನು ವಿಭೀಷಣನಂತೆ ಭಗವದ್ಭಕ್ತನನ್ನಾಗಿ ಮಾಡುವುದು ಅಥವಾ ರಾವಣನಂತೆ ದುಷ್ಟನನ್ನಾಗಿ ಮಾಡಬಹುದು. ಮದಾಲಸೆಯು ಹೆಸರನ್ನು ಭಾರತೀಯರೆಲ್ಲರೂ ಬಲ್ಲರು. ಮಧುರಾಮೃತದಿಂದ ತುಂಬಿದ್ದ ಆಕೆಯ ವಾಕ್ಯಗಳ ಗಾನವನ್ನು ಮಾಡುತ್ತಾ ಈ ಹೊತ್ತಿಗೂ ಭಾರತೀಯರು ಆ ಸಾಧ್ವೀಮಣಿಯನ್ನು ಸ್ಮರಿಸಿಲ್ಲ. ಆಹಾ! ಮದಾಲಸೆಯು ಎಷ್ಟು ಮಧುರಸ್ವರದಿಂದ ಗಾನಮಾಡುತ್ತಿರುವಳು!

"ಶುದ್ಧೋಸಿಬುದ್ಧೋಸಿ ನಿರಂಜನೋಸಿ |
ಸಂಸಾರ ಮಾಯಾಪರಿವರ್ಜಿತೋಸಿ ||
ಸಂಸಾರ ಸ್ವಪ್ನತ್ಯಜಮೋಹನಿದ್ರಾಂ |
ಮದಾಲಸಾ ವಾಕ್ಯಮುವಾಚ ಪುತ್ರಂ ||"

ಎಷ್ಟು ಮಧುರ! ಈ ಸಂಸಾರ ಸ್ವಪ್ನದಿಂದ ನಿವೃತ್ತರನ್ನಾಗಿ ಮಾಡುವ ಈ ಮನೋಹರ ವಾಕ್ಯವು! ಏನು? ಈಗಿನ ಕಾಲದಲ್ಲಿ ನಾವೇ ಸುಶಿಕ್ಷಿತ ವಿದುಷಿಯರೆಂದು ಭಾವಿಸುವ ನಾರಿಯರಲ್ಲಿ ಯಾರಾದರೂ ಮದಾಲಸೆಗೆ ಸರಿಹೋಗುವ ಯೋಗ್ಯತೆಯನ್ನು ಸಂಪಾದಿಸಿರುವರೋ? ಮಂಡನಮಿಶ್ರರಂತಹ ಪಂಡಿತಾಗ್ರೇಸರರೊಡನೆ ವಾದಮಾಡುವ ಸಾಮರ್ಥ್ಯವು ಮದಾಲಸೆಗಲ್ಲದೆ ಇನ್ನಾರಿಗಿರುವುದು? ಇಂಥಾ ವಿಚಾರಗಳು ಈಗಿನ ನಮ್ಮ ಭಾರತ ಸ್ತ್ರೀಸಮಾಜವನ್ನು ಬಿಟ್ಟು ಸಾವಿರಾರು ಯೋಜನಗಳಷ್ಟು ದೂರ ಓಡಿಹೋಗಿರುವುವು. ಈಗಿನ ಕಾಲದಲ್ಲಿ ಇಬ್ಬರಿಂದ ಮೂವರು ಸ್ತ್ರೀಯರು ಒಂದು ಕಡೆ ಪರಸ್ಪರ ಕಲೆತರೆ, ಪರನಿಂದೆಯ ಬಾಗಿಲು ತೆಗೆಯಲ್ಪಡುವುದು. ಹೊಟ್ಟೆಯ ಪಾಡಿಗಾಗಿ ಬೆಳಗಿನಿಂದ ಸಾಯಂಕಾಲದವರೆಗೂ ಪಡಬಾರದ ಕಷ್ಟಗಳನ್ನು ಪಟ್ಟು, ನೊಂದು, ಸಾಕಾಗಿ ಬಂದಿರುವ ಪತಿಯನ್ನು ಶಾಂತಸ್ವಭಾವದಿಂದ ಉಪಚರಿಸುವುದಕ್ಕೆ ಬದಲಾಗಿ ತಮ್ಮ ಅತ್ತೆ—ನಾದಿನಿಯರ ಮೇಲೆ ದೂರುಹೇಳಿಕೊಳ್ಳುವರು. ಇದರಿಂದ ಗೃಹದಲ್ಲಿ ಸಂತೋಷಾನಂದಗಳುಂಟಾಗುವುದಕ್ಕೆ ಬದಲಾಗಿ ಕೋಪ, ತಾಪ, ದುಃಖಗಳುಂಟಾಗುವುವು.

ಭಾರತ ಭಗಿನಿಯರೇ, ಈಗಿನ ನಿಮ್ಮ ವೇಷಧಾರಣೆಯನ್ನು ಬಿಟ್ಟು, ನಿಮ್ಮ ಧರ್ಮ- ಕರ್ಮಗಳನ್ನರಿತುಕೊಳ್ಳಿ; ತಮ್ಮ ಸಂಬಂಧಿಗಳಲ್ಲಿ ದ್ವೇಷಾಸೂಯೆಗಳನ್ನು ಕಟ್ಟಿಕೊಳ್ಳುವುದಕ್ಕೆ ಬದಲಾಗಿ ಅವರಲ್ಲಿ ಪ್ರೇಮದ ಬೀಜವನ್ನು ಬಿತ್ತಿರಿ. ನೀವು ನಿಮ್ಮ ನರಕ ಸದೃಶ ಗುಡಿಸಲಿನಲ್ಲಿಯೇ ಸ್ವರ್ಗಸುಖವನ್ನು ಪಡೆಯಬಹುದು. ಅಥವಾ ನಿಮ್ಮ ಆನಂದ ಭವನವನ್ನು ಭೂತಬೇತಾಳಗಳು ವಾಸಿಸುವ ಸ್ಮಶಾನವನ್ನಾಗಿಯಾದರೂ ಮಾಡಬಹುದು. ಆದ್ದರಿಂದ ನೀವು ನಿಮ್ಮ ಕಾರ್ಯದಲ್ಲಿ ಸದಾತತ್ಪರರಾಗಿರಿ, ನಿಮ್ಮ ಧರ್ಮಕರ್ಮಗಳನ್ನು ಸರಿಯಾದ ರೀತಿಯಲ್ಲಿ ನೋಡಿಕೊಳ್ಳಿರಿ, ನಿಮ್ಮ ಕಾರ್ಯತತ್ಪರತೆಯಿಂದ ಭಾರತವರ್ಷದ ಮೂಲೆ ಮೂಲೆಯಲ್ಲಿಯೂ ಸುಖಸಮುದ್ರದ ತರಂಗಗಳೇಳುವುವು; ಮತ್ತು ಭಾರತವು ತನ್ನ ಪೂರ್ವ ವಿಸ್ಮೃತಸ್ವತಂತ್ರವನ್ನು ಪುನಃ ಪಡೆಯುವದು.

ಸರಸ್ವತಿ

ವಿಮರ್ಶೆ.

'ಕರ್ಣಾಟಕಕ್ಕೊಂದು ವಿಶ್ವವಿದ್ಯಾನಿಲಯ.' ಎಂಬ ಒಂದು ಹಸ್ತಪುಸ್ತಕವು ನಮ್ಮ ಕೈಸೇರಿದೆ. ಇದರಲ್ಲಿ ಹಲವು ಪತ್ರಿಕಾಕರ್ತರ ಮತ್ತು ವಿದ್ಯಾಪಟುಗಳ ಭಿನ್ನಭಿನ್ನ ಅಭಿಪ್ರಾಯಗಳು ಒಂದಿವೆ. ಕರ್ಣಾಟಕ ಪ್ರಾಂತಿಕ ಕಾಂಗ್ರೆಸ್ ಉಪಸಭೆಯವರು ಈ ಸಂಬಂಧವಾಗಿ ಒಂದು ಪ್ರಶ್ನಮಾಲಿಕೆಯನ್ನು ತಯಾರಿಸಿ ಕನ್ನಡ ಪತ್ರಗಳಲ್ಲಿ ಅದನ್ನು ಪ್ರಕಟಿಸಿ, ಅವುಗಳಲ್ಲಿ ಬಂದ ಉತ್ತರಗಳನ್ನೂ ಅಭಿಪ್ರಾಯಗಳನ್ನೂ ಈಗ ಪುಸ್ತಕರೂಪವಾಗಿ ಪ್ರಕಟಿಸುವುದು ಮೆಚ್ಚುಗೆಯ ಕೆಲಸ. ಪತ್ರದಲ್ಲಿ ಎಂಟು ಮಂದಿ ವೈಸರು ವಿದ್ಯಾನಿಲಯವನ್ನೇ ಅಖಿಲಕರ್ಣಾಟಕ ವಿಶ್ವವಿದ್ಯಾನಿಲಯವನ್ನಾಗಿ ಮಾರ್ಪಡಿಸುವುದು ಸಮಯುಕ್ತವೆಂದು ಅಭಿಪ್ರಾಯಪಟ್ಟಂತೆ ತೋರುವುದು. ಈ ತಿಂಗಳ 21ನೇ ತಾರೀಖಿನಲ್ಲಿ ನೆರೆಯುವ ಸಭೆಯ ಮುಂದೆ ಈ ಪುಸ್ತಕವು ಇರಿಸಲಾಗುವುದು. ಕರ್ಣಾಟಕದ ಏಕೀಕರಣವಾಗಲಿಕ್ಕೆ ವಿಶ್ವವಿದ್ಯಾನಿಲಯವು ಪ್ರಥಮ ಸೋಪಾನವೆಂದೂ, ಕರ್ಣಾಟಕ ತನ್ನ ಸಂಸ್ಕೃತಿಯನ್ನು ಕಾಪಾಡಿಕೊಳ್ಳಬೇಕೆಂದಿರುವ ಈ ಪ್ರಯತ್ನಕ್ಕೆ ಕನ್ನಡಿಗರು ಕೈಗೊಡಬೇಕೆಂದೂ ನಮ್ಮ ಕೋರಿಕೆ. ಈ ಪುಸ್ತಕವನ್ನೋದುವುದರಿಂದ ವಿಶ್ವವಿದ್ಯಾನಿಲಯವು ಎಂಥ ಮಹತ್ವದ ಸಂಗತಿಯಾಗಿದೆಂಬುದು ಓದುಗರಿಗೆ ತಿಳಿಯುವುದು. ಕರ್ಣಾಟಕವೃತ್ತ, ಕನ್ನಡಿಗ, ಕನ್ನಡ ಧುರೀಣ, ನವಯುಗ, ಸುಬೋಧ, ವಿಶ್ವಕರ್ಣಾಟಕ ಈ ಪತ್ರಿಕೆಗಳ ಅಭಿಪ್ರಾಯಗಳೂ, ಶ್ರೀ. ರಾ. ಬ. ಹೆಚ್. ನಾರಾಯಣರಾಯ, ಶ್ರೀ. ಬಿ. ರಾಮರಾಯ, ಮತ್ತು ರಾಜಸಭಾಭೂಷಣ ಕರ್ಪೂರ ಶ್ರೀನಿವಾಸರಾವ್ ಇವರ ಅಭಿಪ್ರಾಯಗಳೂ ವಾಚನಾರ್ಹವಾಗಿವೆ.

NOTICE.

P. B. Somappa L M. & S. has much pleasure in announcing to the public that he has started private medical practice with a dispensary at virajpeti, since the 17th of May 1926.

ಪ. ಬಾದಂಡ ಬಿ. ಸೋಮಪ್ಪ ಎಲ್. ಯಂ. ಎಂಡ್ ಎಸ್. ರವರು ಇದೇ ಮೇ ತಾರೀಖು 17ನೇ ವೀರಾಜಪೇಟೆಯಲ್ಲಿ ವೈದ್ಯಶಾಲೆಯನ್ನು ತೆರೆದಿರುತ್ತಾರೆಂದು ಜನರಿಗೆ ತಿಳಿಸಲು ತುಂಬಾ ಸಂತೋಷಪಡುತ್ತಾ

ವರ್ತಮಾನ ಸಂಗ್ರಹ.

ಒಳದೇಶ

ಮಡಿಕೇರಿಯ ಮೆ. ಗುಬ್ಬಿಚಪ್ಪನವರ ಪತ್ನಿಯವರು ಈ ತಾ. 19ರಲ್ಲಿ ಪರಲೋಕವನ್ನೈದಿದರು.

ಕೊಡಗಿನ ಸಿವಿಲ್ ಸರ್ಜನರಾದ ಕ್ಯಾಪ್ಟನ್ ತಾಂಟನ್‌ರವರಿಗೆ ಪ್ರೇಜರ್ ಬಡತಿ ದೊರೆತ ವರ್ತಮಾನವನ್ನು ಕೇಳಲು ಸಂತೋಷಪಡುತ್ತೇವೆ.

ಲೇಟ್ ಡಾಕ್ಟರ್ ಪಾಡಂಡ ಬೆಳ್ಳಿಯಪ್ಪನವರ ಪುತ್ರರಾದ ಸೋಮಪ್ಪ ಎಲ್. ಯಂ. ಎಂಡ್ ಎಸ್. ರವರು ಈ ತಾರೀಕು 17ರಿಂದ ಪೇಟೆಶಾಲೆಯಲ್ಲಿ ವೈದ್ಯಶಾಲೆಯನ್ನು ತೆರೆದಿರುವರು.

ಗಜೆಟೆಡ್ ಉದ್ಯೋಗಸ್ಥರ ವರ್ಗಾವರ್ಗಿಯನ್ನೂ ಕರ್ನಾಟಕ ಏಕೀಕರಣವನ್ನೂ ಕುರಿತು ಚರ್ಚಿಸಲು ಈ ತಾ. 29ರಲ್ಲಿ ಬೆಂಗಳೂರಿನಲ್ಲಿಯೂ ತಾ. 31ರಲ್ಲಿ ಮಡಿಕೇರಿಯಲ್ಲಿಯೂ ಪಬ್ಲಿಕ್ ಮೀಟಿಂಗುಗಳು ನಡೆಯಲಿಕ್ಕಿವೆ ಎಂದು ತಿಳಿಯಬರುತ್ತದೆ.

ಇದೇ ತಾ. 25ರಲ್ಲಿ ಜಮೀನ್ದಾರರ ಸಂಘದ ಕಾರ್ಯನಿರ್ವಾಹಕ ಕಮಿಟಿಯ ಮೀಟಿಂಗ, ಸಂಘದ ಮಡಿಕೇರಿ ಆಫೀಸಿನಲ್ಲೂ, ಅದೇ ದಿನ 'ಕೊಡಗು' ಕಂಪೆನಿಯ ಡೈರೆಕ್ಟರುಗಳ ಮೀಟಿಂಗು ಕಂಪೆನಿಯ ಆಫೀಸಿನಲ್ಲೂ ನಡೆಯುವುದು.

ವೀರರಾಜಪೇಟೆ ಮುನ್ಸಿಪಾಲಿಟಿ ಮೆಂಬರುತನಕ್ಕೆ ಮೆ॥ ಕೋದಂಡ ಉತ್ತಯ್ಯನವರು ರಾಜಿನಾಮೆ ಕೊಟ್ಟಿದ್ದರಷ್ಟೆ. ಆ ಸ್ಥಳಕ್ಕೆ ಬೇಗನೆ ನಡೆಯಲಿಕ್ಕಿರುವ ಚುನಾವಣೆಗೆ ಮೆ॥ ಪಟ್ಟಿಯಂಡ ಸಂಜಪ್ಪನವರೊಬ್ಬರೇ ಉಮೇದುವಾರರಾಗಿ ನಿಂತಿರುವರು.

ಮೈಸೂರು (ಮತ್ತು ಕೊಡಗು) ಡಿವಿಜನ್ನಿನ ಫಾರೆಸ್ಟ್ ಕನ್ಸರ್ವೇಟರಾದ ಲೆಫ್ಟಿನೆಂಟ್ ಕರ್ನಲ್ ಡಬ್ಲ್ಯು ಸ್ಮಿತ್‌ರವರನ್ನು ನೀಲಗಿರಿ ಡಿವಿಜನ್ನಿಗೂ, ಬೆಂಗಳೂರಿನಿಂದ ಮೆ. ಜೆ. ಫರ್ಗ್ಯುಸನ್‌ರವರನ್ನು ಮೈಸೂರು ಡಿವಿಜನ್ನಿಗೂ ವರ್ಗಾಯಿಸಿರುವರು.

ರಜೆಯಲ್ಲಿ ಇಂಗ್ಲೆಂಡಿಗೆ ಹೋಗಿರುವ ಮೆ. ಟಿ. ಜೆ. ಟ್ಯಾಸ್ಕರರವರು ಕೌನ್ಸಿಲು ಮೆಂಬರುತನಕ್ಕೆ ರಾಜಿನಾಮೆ ಕೊಟ್ಟಿರುವರು. ಇವರ ಬದಲು ಈಗಿನ ಕಮಿಷನರಾದ ಮೆ. ಉಡ್‌ರವರು ಕೌನ್ಸಿಲು ಮೆಂಬರಾಗಿಯೂ, ಉಪಾಧ್ಯಕ್ಷರಾಗಿಯೂ ನೇಮಿಸಲ್ಪಟ್ಟಿರುವರು.

ಲೀಂಜರಾಗಿದ್ದ ಮೆ. ಬಿದ್ದಂಡ ಯಸ್. ಚಂಗಪ್ಪನವರಿಗೆ ಯಾವ ಪರೀಕ್ಷೆಗೂ ಒಳಗಾಗದೆ ಪ್ರೊವಿನ್ಶಿಯಲ್ ಗ್ರೇಡಿನ ಶಿಕ್ಷಣಕ್ಕಾಗಿ ಡೆಹರಾಡೂನ್ ಫಾರೆಸ್ಟ್ ಕಾಲೇಜಿಗೆ ಸೇರಲು ಅನುಕೂಲದೊರೆತು ಅವರು ಅಲ್ಲಿಗೆ ಹೊರಟುಹೋದರೆಂದು ತಿಳಿಸಲು ಸಂತೋಷಪಡುತ್ತೇವೆ.

ಮದ್ರಾಸು ಪ್ರಾಂತ್ಯದಲ್ಲಿ ಫಾರೆಸ್ಟ್ ಎಕ್ಸ್ಟ್ರಾ ಅಸಿಸ್ಟೆಂಟ್ ಕನ್ಸರ್ವೇಟರಾಗಿರುವ ಮೆ. ಚೆನ್ನಿರ ಕುಶಾಲಪ್ಪನವರು ಕೊಡಗಿಗೆ ವರ್ಗಾಯಿಸಲ್ಪಟ್ಟಿರುವರೆಂದೂ, ಅವರು ಇಲ್ಲಿಗೆ ಬೇಗನೆ ಬಂದು ಚಾರ್ಜ ತೆಗೆದುಕೊಂಡನಂತರ ಮೆ. ಚೋನಿರ ಬೆಳ್ಳಿಯಪ್ಪನವರು ರಜೆಯಲ್ಲಿ ಹೋಗುವರೆಂದೂ ವರ್ತಮಾನ.

ಈ ತಾ. 15ರಲ್ಲಿ ಕಾವೇರಿಬಸ್ಸ್ ಸರ್ವೀಸಿನ ಬಸ್ಸೊಂದು ಸಿದ್ದಾಪುರದಿಂದ ಮಡಿಕೇರಿಗೆ ಬರುತ್ತಿದ್ದಾಗ 5/15ನೇ ಮೈಲ್ ಬಳಿ ರಸ್ತೆಕರೆಯಲ್ಲಿದ್ದ ಬರೆಗೆ ತಗಲಿ ಬಸ್ಸಿಗೆ ಜಖಮೂ ಪ್ರಯಾಣಿಕರಲ್ಲಿ ಕೆಲವರಿಗೆ ಸ್ವಲ್ಪ ನೋವೂ ಉಂಟಾಯಿತೆಂದು ಸುದ್ದಿ. ಆ ಬಸ್ಸು ರಿಪೇರಿಯಲ್ಲಿದ್ದ ಕಾರಣ ತಾ. 19ರ ವರೆಗೆ ಆ ಸರ್ವೀಸು ನಿಂತುಹೋಗಿ ಈಗ ಪುನಹ ಎಂದಿನಂತೆ ನಡೆಯುತ್ತಿದೆ.

ಕಳೆದ ಇಂಟರ್ ಮೀಡಿಯೆಟ್ ಪರೀಕ್ಷೆಯಲ್ಲಿ ಶ್ರೀಮತಿ ನೆರವಂಡ ಯಸ್. ಪೊನ್ನಮ್ಮನವರು ಫಸ್ಟ್‌ಕ್ಲಾಸಿನಲ್ಲಿಯೂ, ಮೆ. ಪುಲಿಯಂಡ ಜಿ. ಐಯ್ಯಪ್ಪನವರು, ಮೆ. ಚೇಯಕಪೂವಂಡ ಭೀಮಯ್ಯನವರು, ಮೆ. ಪಂಡೇಪಂಡ ಡಬ್ಲ್ಯು. ಕಾಳಪ್ಪನವರು, ಮೆ. ಸೀತಾರಾಮಯ್ಯನವರು, ಮತ್ತು ಮೆ. ಮುಂಡಂಡಿರ ಕಾಳಪ್ಪನವರು ಸಂಪೂರ್ಣವಾಗಿಯೂ, ಮೆ. ಹೆಚ್. ಬಿ. ಮಂಜಪ್ಪನವರು 1ನೇ ಭಾಗದಲ್ಲೂ, ಮೆ. ಕೆ. ಎಸ್. ಮಂಜಯ್ಯನವರು 2ನೇ ಭಾಗದಲ್ಲೂ ತೇರ್ಗಡೆ ಹೊಂದಿರುವರು. ಕೊಡವ ಯುವತಿಯರಲ್ಲಿ ಇಂಟರ್ ಮೀಡಿಯೆಟ್ ಪರೀಕ್ಷೆಯಲ್ಲಿ ಮೊದಲನೆಯದಾಗಿ ಫಸ್ಟ್‌ಕ್ಲಾಸಿನಲ್ಲಿ ಪಾಸಾದ ಶ್ರೀಮತಿ ಪೊನ್ನಮ್ಮನವರನ್ನು ಅಭಿನಂದಿಸುತ್ತೇವೆ. ಇವರ ಉತ್ತಮ ಜಯವು ನಮ್ಮ ದೇಶದಸ್ತ್ರೀಯರ ಉಚ್ಚವಿದ್ಯಾಭ್ಯಾಸಕ್ಕೆ ಉತ್ತೇಜನಕರವಾಗಿರುವುದು.

ಹಿಂದೂದೇಶ.

ಬಂಗಾಳ ಎಮರ್ಜನ್ಸಿ ಬಿಲ್ಲನ್ನು ವಿರೋಧಿಸಿ ಕಲ್ಕತ್ತಾ ಮುನ್ಸಿಪಾಲಿಟಿಯವರು ಠರಾವನ್ನು ಪಾಸುಮಾಡಿರುವರು.

ಪಂಜಾಬಿನ ಹಿಸ್ಸಾರ್ ಎಂಬ ಪಟ್ಟಣದಲ್ಲಿ ಕಳೆದ ಮೂರು ತಿಂಗಳಿಂದ ಪ್ಲೇಗು ರೋಗವು ಹಬ್ಬಿಕೊಂಡಿದ್ದುದರಿಂದ ಈಗ ಆ ಪಟ್ಟಣವು ಹೆಚ್ಚು ಕಮ್ಮಿ ಪಾಳುಬಿದ್ದಂತಾಗಿದೆ.

ಇಂಡಿಯನ್ ಸಿವಿಲ್ ಸರ್ವಿಸಿಗೆ ಈ ವರ್ಷ ಅಲ್ಲಾಹಾಬಾದಿನಲ್ಲಿ ನಡೆವ ಪರೀಕ್ಷೆಗೆ ಕೂತವರಿಂದ ಮೂವರನ್ನು ಮಾತ್ರ ತೆಗೆದುಕೊಳ್ಳುವರು ಮತ್ತು ನಾಲ್ಕು ಜನರನ್ನು ಸರಕಾರದವರು ನೇಮಿಸುವರು.

ಕೋಮುವಾರು ಸಭೆಗಳಲ್ಲಿ ಕಾರ್ಯನಿರ್ವಾಹಕ ಕೆಲಸಗಳನ್ನು ಅಂದರೆ ಅಧ್ಯಕ್ಷರು ಕಮಿಟಿಮೆಂಬರುಗಳ ಕೆಲಸವನ್ನು ಸರ್ಕಾರಿ ಉದ್ಯೋಗಸ್ಥರು ವಹಿಸಿಕೊಳ್ಳಕೂಡದೆಂದು ಬೊಂಬಾಯಿ ಸರ್ಕಾರದವರು ಹುಕುಂ ಮಾಡಿರುವರು.

ಕಲ್ಕತ್ತಾದಲ್ಲಿ ನಡೆದ ಆಂಗ್ಲೋಇಂಡಿಯನರ ಮಹಾಸಭೆಯಲ್ಲಿ ಅಧ್ಯಕ್ಷರಾಗಿದ್ದ ಕರ್ನಲ್ ಗಿಡ್ನಿಯವರು ತಾವೂ ಹಿಂದೂದೇಶದ ಜನ್ಮನಿವಾಸಿಗಳೆನ್ನಿಸಿಕೊಳ್ಳುವುದು ತಮಗೆ ಗೌರವವೆನಿಸುತ್ತದೆಂದು ಮುಂತಾಗಿ ಹೇಳಿದರು.

ಡಾ. ರವೀಂದ್ರನಾಥ್ ಟಾಗೋರರವರು ತಮ್ಮ 65 ನೇ ಜನ್ಮದಿನ ಉತ್ಸವವನ್ನು ಬೋಲ್ಪುರದ ಶಾಂತಿನಿಕೇತನದಲ್ಲಿ ನಡಿಸಿದರು. ಪರದೇಶಗಳ ರಾಜ್ಯಭಾರಿಗಳು ಆಯಾಯ ಜನಾಂಗಗಳ ಪರವಾಗಿ ಬಿನ್ನಹ ಪತ್ರಗಳನ್ನು ಅರ್ಪಿಸಿದರು.

ಡಾಕ್ಟರ್ ರವೀಂದ್ರನಾಥ್ ಟಾಗೋರ್‌ರವರು ತಮ್ಮ ಇಟೇಲಿಯನ್ ಸ್ನೇಹಿತರಿಗೆ ಮಾತು ಕೊಟ್ಟಿರುವರೆಯೂ ಇಟಲಿಯ ಸರ್ಕಾರದ ಕೋರಿಕೆ ಮೇರೆಯೂ ಮತ್ತು ಚಿಕಿತ್ಸೆ ಮಾಡಿಸಿಕೊಂಡು ವಿಶ್ರಾಂತಿ ಪಡೆಯಲಿಕ್ಕಾಗಿಯೂ ಇಟಲಿಗೆ ಹೋಗಿರುವರು.

ಭೋಪಾಲದೇಶದ ಆಡಳಿತವನ್ನು ಬೇಗಮ್‌ರವರು ಅವರ ಮಗ ಹಮೀದುಲ್ಲಾಖಾನರವರಿಗೆ ವಹಿಸಿಬಿಟ್ಟು ತಾನು ವಿಶ್ರಾಂತಿಯನ್ನು ತೆಗೆದುಕೊಳ್ಳುವೆನೆಂದು ಲಂಡನಿನಿಂದ ವೈಸರಾಯರಿಗೆ ತಂತಿವರ್ತಮಾನ ಕಳುಹಿಸಿದರು. ಆ ಮೇರೆ ಹಮೀದುಲ್ಲಾಖಾನ್‌ರವರು ಈ ತಾ. 15ರಿಂದ ರಾಜ್ಯಾಡಳಿತವನ್ನು ಕೈಕೊಂಡಿರುವರು.

ಪಂಡಿತಮೋತಿಲಾಲ್‌ನೆಹರೂರವರು ಡಾಕ್ಟರುಗಳ ಹೇಳಿಕೆ ಮೇರೆ ಎರಡು ತಿಂಗಳು ಬೆಟ್ಟಪ್ರದೇಶದಲ್ಲಿ ವಿಶ್ರಾಂತಿ ತೆಗೆದುಕೊಳ್ಳಲಿಕ್ಕಿರುವುದರಿಂದ ಅವರು ಯೂರೋಪಿಗೆ ಹೋಗಲು ಮಾಡಿದ್ದ ಏರ್ಪಾಡನ್ನು ಬದಲಾಯಿಸಿದರು. ಸ್ವರಾಜ್ಯಪಾರ್ಟಿಯ ಮುಂದಾಳುತನವನ್ನು ಅವರ ಗೈರುಹಾಜರಿನಲ್ಲಿ ಮೆ. ಯಸ್. ಶ್ರೀನಿವಾಸಅಯ್ಯಂಗಾರ್‌ರವರುಗಳು ವಹಿಸುವರೆಂದು ಸುದ್ದಿ.

ಇಂಡಿಯಾದ ಪಬ್ಲಿಕ್ ಸರ್ವಿಸ್ ಕಮಿಷನಿನ ಅಧ್ಯಕ್ಷರಾಗಿ ಮೆ. ಬಾರ್ಕರ್‌ರವರನ್ನೂ, ಮೆಂಬರುಗಳಾಗಿ ಸರ್ ಫಿಲಿಪ್ ಹಟ್ರೊಗ್, ಮೆ. ಎ. ಹೆಚ್. ಲೆ, ಸರ್ ಟಿ. ವಿಜಯರಾಘವಾಚಾರ್ಯ ಮತ್ತು ಮೆ. ಸಯುದ್ ರಜಾ ಅಲಿಯವರನ್ನೂ ನೇಮಿಸಿರುವರು. ಅಧ್ಯಕ್ಷರು ನಿವ್ವಳಕ್ಕೆ ಬಂದು ತಲಪಿದರು. ಅಧ್ಯಕ್ಷರಿಗೆ ಮಾಸಿಯಾನ 5000 ರೂಪಾಯಿಯೂ, ಮೆಂಬರುಗಳಿಗೆ 3500ರೂ.ಗಳೂ ಸೆಕ್ರೆಟರಿಯವರಿಗೆ ರೂ. 2500 ಸಂಬಳವಂತೆ.

ಬಂಗಾಳ ಕೌನ್ಸಿಲಿನಿಂದ ಕಳೆದ ಮಾರ್ಚಿಯ ಬಜೆಟ್ ಮೀಟಿಂಗಿನಲ್ಲಿ ಎದ್ದು ಹೊರಟುಹೋದ ಸ್ವರಾಜಪಾರ್ಟಿಮೆಂಬರುಗಳು ಈಗ ಬಂಗಾಳದಲ್ಲಿ ಜಾರಿಗೆ ತರಬೇಕೆಂದಿರುವ ಎಮರ್ಜನ್ಸಿ ಬಿಲ್ಲಿಗೆ ವಿರೋಧಿಸಲಿಕ್ಕಾಗಿ ಕೌನ್ಸಿಲ್ ಮೀಟಿಂಗಿಗೆ ತಾ. 17ರಲ್ಲಿ ಬಂದು ಆ ಪಾರ್ಟಿಯವರೆಲ್ಲರೂ ಬಿಲ್ಲಿಗೆ ವಿರೋಧವಾಗಿ ಓಟು ಕೊಟ್ಟರು. ಆದರೂ ಬಿಲ್ಲು ಬಹುಮತದಿಂದ ಪಾಸಾಯಿತು. ಕೂಡಲೆ ಸ್ವರಾಜ್ಯಪಾರ್ಟಿ ಮೆಂಬರುಗಳು ಮತ್ತು ಇನ್ನು ಕೆಲವು ನೇಶನಲಿಸ್ಟ್ ಮೆಂಬರುಗಳು ಮೀಟಿಂಗಿನಿಂದ ಎದ್ದುಹೋಗಿಬಿಟ್ಟರು.

ವಿದೇಶ.

ತುರ್ಕಿದೇಶದ ಮಾಜಿಸುಲ್ತಾನರು ಸಾನ್‌ರೀಮಿಯೊ ಪಟ್ಟಣದಲ್ಲಿ ತಾ. 15ರ ರಾತ್ರಿ ಕ್ಷಿಪ್ರಸನ್ನಿಪಾತಜ್ವರದಿಂದ ಮೃತರಾದರು.

ಲಾರ್ಡ್ ಬೈಂಗ್‌ರವರ ನಂತರ ಕೆನಡಾದ ಗವರ್ನರ್ ಜನರಲಾಗಿ ವಿಲ್ಲಿಂಗ್ಡನ್ ಪ್ರಭುಗಳು ಹೋಗುವರೆಂಬ ವರ್ತಮಾನವು ಇಂಗ್ಲೆಂಡಿನ ಬಂದೆರಡು ಪತ್ರಿಕೆಗಳಲ್ಲಿ ಪ್ರಕಟವಾಗಿದೆ.

ಪೋಲೆಂಡಿನ ದಂಗೆಯ ಫಲಿತಾಂಶವಾಗಿ ಅಲ್ಲಿಯ ಸರ್ಕಾರದ ಅಧ್ಯಕ್ಷರೂ ಪ್ರಧಾನಮಂತ್ರಿಯವರೂ ರಾಜಿನಾಮೆ ಕೊಟ್ಟಿರುವರು. ಪಿಲ್ಸುಡ್ಸ್ಕಿಯವರು ಸರ್ಕಾರವನ್ನು ವಹಿಸಿಕೊಂಡು ತತ್ಕಾಲ ಹೊಸ ಅಧ್ಯಕ್ಷರನ್ನೂ ಮಂತ್ರಿಯನ್ನೂ ನೇಮಿಸಿರುವರು.

ಬ್ರಿಟನ್ನಿನಲ್ಲಿ ಕೆಲಸಗಾರರ ಮುಷ್ಕರವು ತಾ. 12ರಲ್ಲಿ ಮುಗಿಯಿತು. ಕೆಲಸಗಾರರಿಗೂ ಯಜಮಾನರಿಗೂ ರಾಜಿ ಸಂಧಾನಗಳು ನಡೆಯುತ್ತವೆ. ಕೆಲಸಗಾರರೆಲ್ಲರೂ ಪುನಹ ಎಂದಿನಂತೆ ಕೆಲಸ ಮಾಡುತ್ತಿರುವರು. ಇದರಿಂದ ಇಡೀ ಬ್ರಿಟಿಷ್ ಜನಾಂಗಕ್ಕೆ ಸಮಾಧಾನ ಉಂಟಾಗಿದೆ.

ದಿ|| ಟಿ|| ರಾವ್‌ಬಹದ್ದೂರ್ ಅಪ್ಪಾರಂಡ ಮಂದಣ್ಣನವರ ಜೀವ ಚರಿತ್ರೆ.

(ಬರದುಬಂದದು)

ದಿ|| ಅಪ್ಪಾರಂಡ ದಿವಾನ್ ಬೋಪಣ್ಣನವರ ಪುತ್ರರಾದ ಮೆ. ಮಂದಣ್ಣನವರು 1849ನೇ ಇಸವಿ ಮೇ ತಾ. 12ರಲ್ಲಿ ಜನಿಸಿದರು. ಇವರ ತಂದೆಯವರು ತಮ್ಮ 8?ನೇ ವಯಸ್ಸಿನಲ್ಲಿ 18?? ನೇ ಇಸವಿಯಲ್ಲಿಯೂ ತಾಯಿ ಅಕ್ಕಮ್ಮನವರು 1869ರಲ್ಲಿಯೂ ದಿವಂಗತರಾದರು. ಇವರು 1860 ರಲ್ಲಿ ವಿದ್ಯಾಭ್ಯಾಸಕ್ಕಾಗಿ ಮಡಿಕೇರಿ ಸೆಂಟ್ರಲ್ ಹೈಸ್ಕೂಲಿಗೆ ಸೇರಿದರೂ ಕೂಡ ಊರಲ್ಲಿ ಗೃಹಕೃತ್ಯವನ್ನು ನೋಡಲು ಬೇರೆ ಯಾರೂ ಇಲ್ಲದ್ದರಿಂದ ಇವರು ಸ್ವಲ್ಪ ಕಾಲದಲ್ಲಿಯೇ ವಿದ್ಯಾಭ್ಯಾಸವನ್ನು ಬಿಟ್ಟು ಮನೆಗೆ ಹೋಗಬೇಕಾಯಿತು. ಕೆಲವು ಸಮಯದನಂತರ ಮೆ. ಮಾತಂಡ ಅಪ್ಪಚ್ಚು ದಿವಾನರು ಮತ್ತು ಮೆ. ಕೊಳುವಂಡ ಕಾರ್ಯಪ್ಪನವರು ಇವರನ್ನು ಕರೆಯಿಸಿ 1870ರಲ್ಲಿ ಮಡಿಕೇರಿಯಲ್ಲಿ ಮಾಸಿಯಾನ 20 ರೂ. ಸಂಬಳದ ಮುನಷಿ ಕೆಲಸಕ್ಕೆ ಸೇರಿಸಿದರು. ಕೆಲವು ತಿಂಗಳುಗಳಲ್ಲೇ 30 ರೂ. ಸಂಬಳದ ರೆವಿನ್ಯು ಎಕೌಂಟೆಂಟ್ ಕೆಲಸಕ್ಕೆ ಏರಿದರು. 1895 ರಲ್ಲಿ ಮೆ|| ಚೆಪ್ಪುಡೀರ ಸುಬ್ಬಯ್ಯನವರು ಇವರನ್ನೂ ಮೆ|| ಕೊಂಗಂಡ ಗಣಪತಿಯವರನ್ನೂ ಪ್ರಿನ್ಸ್ ಎಡ್ವರ್ಡ್ ವಿಕ್ಟರ್ ಅಫ್ ವೇಲ್ಸರವರು ಮದ್ರಾಸಿಗೆ ದಯಮಾಡಿಸಿದಾಗ ಇವರಲ್ಲಿಗೆ ಕೊಡಗು ಡೆಪ್ಯುಟೇಶನಾಗಿ ಕರೆದುಕೊಂಡುಹೋದರು.

1876ನೆ ಇಸವಿ ಜನವರಿ ತಿಂಗಳಲ್ಲಿ ಇವರನ್ನು ಮಡಿಕೇರಿ ನಾಡು ಪಾರುಪತ್ಯಗಾರರಾಗಿ ನೇಮಿಸಿದರು. 1878ನೇ ಇಸವಿ ಜೂನ್ ತಿಂಗಳಲ್ಲಿ ಮಾಸಿಯಾನ 50 ರೂ. ಸಂಬಳದಲ್ಲಿ ಪಾಡಿನಾಲ್ಕು ನಾಡು ಸುಭೇದಾರರಾಗಿ ನೇಮಿಸಲ್ಪಟ್ಟರು. 1880ನೆ ಇಸವಿ ಫೆಬ್ರವರಿಯಲ್ಲಿ ಅಲ್ಲಿಂದ ನಂಜರಾಜಪಟ್ಟಣ ತಾಲೋಕಿಗೆ ವರ್ಗಾಯಿಸಲ್ಪಟ್ಟರು. ಈ ಸಂವತ್ಸರದಲ್ಲಿಯೇ ಮೈಸೂರ್ ಮಹಾರಾಜರಾಗಿದ್ದ ಚಾಮರಾಜ ಒಡೆಯರವರ ಮದುವೆ ಕಾಲದಲ್ಲಿ ಇತರ ಕೆಲವು ಕೊಡಗು ಮಹನೀಯರ ಸಂಗಡ ಸರ್ಕಾರ ಪರವಾಗಿ ಇವರು ಮೈಸೂರಿಗೆ ಹೋದರು. ಇದೇ ವರ್ಷದಲ್ಲಿ ಇವರು ಮತ್ತು ಕೊಂಗಂಡ ಮುದ್ದಯ್ಯ ಸುಭೇದಾರರು ಸಹ ಸೇರಿ ನಾಪೋಕ್ಲಿನಲ್ಲಿ ಒಂದು ಛತ್ರ ಕಟ್ಟಿಸಿದರು. ಈ ಕಟ್ಟಡವು ಹಾಲಿ ಬಾಲಕಿಯರ ಶಾಲೆಗಾಗಿ ಉಪಯೋಗಿಸಲ್ಪಡುತ್ತಿದೆ. 1881ನೆ ಇಸವಿ ಜೂನ್ ತಿಂಗಳಲ್ಲಿ ಮೈಸೂರು ಮಹಾರಾಜ ಚಾಮರಾಜೇಂದ್ರ ಒಡೆಯರಿಗೆ ಪಟ್ಟಾಭಿಷೇಕವಾದಾಗ ಇವರು ಇತರ ದೊಡ್ಡ ಮಹನೀಯರ ಸಂಗಡ ಮೈಸೂರಿಗೆ ಸರಕಾರದವರ ಮೂಲಕ ಕಳುಹಿಸಲ್ಪಟ್ಟರು. ಪುನಹ ಲಾರ್ಡ್ ರಿಪ್ಪನ್ ದೊರೆಗಳು ಮೈಸೂರಿಗೆ ದಯಮಾಡಿಸಿದಾಗ್ಯೂ ಅವರ ಭೇಟಿಗೂ ಮತ್ತು ಲಾರ್ಡ್ ಎಲ್ಗಿನ್ ದೊರೆಗಳು ಮೈಸೂರಿಗೆ ದಯಮಾಡಿಸಿದಾಗ ಅವರ ಭೇಟಿಗೂ ಲಾರ್ಡ್ ಡಫರಿನ್ ದೊರೆಗಳು ಮೈಸೂರಿಗೆ ದಯಮಾಡಿಸಿದಾಗ್ಯೂ ಅವರ ಭೇಟಿಗೂ ಸಹ ಕೊಡಗು ಡೆಪ್ಯುಟೇಶನ್ ಸಂಗಡ ಇವರನ್ನು ಮೈಸೂರಿಗೆ ಕಳುಹಿಸಿದರು. ಅಲ್ಲದೆ 1875ರಲ್ಲಿ ಪ್ರಿನ್ಸ್ ಆಫ್ ವೇಲ್ಸ್ ಅಂದರೆ ಈಗಿನ ಚಕ್ರವರ್ತಿಯವರು ಮೈಸೂರಿಗೆ ದಯಮಾಡಿಸಿದಾಗಲೂ 1898ರಲ್ಲಿ ಲಾರ್ಡ್ ಕರ್ಜನ್ ದೊರೆಗಳವರು ಮೈಸೂರಿಗೆ ದಯಮಾಡಿಸಿದಾಗಲೂ ಮತ್ತು 1878ರಲ್ಲಿ ಮದ್ರಾಸ್ ಗವರ್ನರು ಬೆಂಗಳೂರಿಗೆ ದಯಮಾಡಿಸಿದಾಗಲೂ ಸಹ ಕೊಡಗು ಡೆಪ್ಯುಟೇಶನನ್ನು ಇವರು ಮುಂದಾಳಾಗಿ ಕರಕೊಂಡು ಹೋದರು. 1897ನೆ ಇಸವಿ ಜನವರಿ ತಿಂಗಳಲ್ಲಿ ಇವರು ಕೊಡಗು ಅಸಿಸ್ಟೆಂಟ್ ಕಮಿಷನರಾಗಿ ನೇಮಿಸಲ್ಪಟ್ಟು 1901ನೆ ಇಸವಿ ಏಪ್ರಿಲ್ ತಿಂಗಳಲ್ಲಿ ಪೆನ್‌ಶನ್ ಹೊಂದಿ ಕೆಲಸದಿಂದ ಬಿಡುಗಡೆಯಾದರು. ಇವರು 31ವರ್ಷ 3ತಿಂಗಳು ಸರಕಾರ ಉದ್ಯೋಗದಲ್ಲಿದ್ದರು.

ಇವರು ಮೈಸೂರು ಮಹಾರಾಜರಾದ ಕೃಷ್ಣರಾಜ ಒಡೆಯರವರ ಮದುವೆ ಮತ್ತು ಪಟ್ಟಾಭಿಷೇಕ ಸಮಯದಲ್ಲಿ ಅಂದರೆ 1901 ಮತ್ತು 1902ನೇ ಇಸವಿಯಲ್ಲಿ ಮೈಸೂರಿಗೆ ಡೆಪ್ಯುಟೇಶನ್ ಹೋದರು. ಮತ್ತು 1903ನೆ ಇಸವಿಯಲ್ಲಿ ಕಿಂಗ್ ಎಡ್ವರ್ಡ್ ದೊರೆಗಳವರ ಡೆಲ್ಲಿ ದರ್ಬಾರ್ ಪಟ್ಟಾಭಿಷೇಕವಾದಾಗ ಇವರು ಮತ್ತು ರಾ|| ಬ|| ಚೆಪ್ಪುಡಿರ ಸೋಮಯ್ಯನವರು ಸಹ ಡೆಲ್ಲಿಗೆ ಸರಕಾರದವರ ಇರಾದೆಯಂತೆ ಹೋದರು. ಲಾರ್ಡ್ ಮಿಂಟೊ ಮತ್ತು ಲಾರ್ಡ್ ಹಾರ್ಡಿಂಜ್ ದೊರೆಗಳವರು ಮೈಸೂರಿಗೆ ದಯಮಾಡಿಸಿದಾಗ್ಯೂ ಪುನಹ ಇವರನ್ನು ಕೊಡಗು ಡಿಪ್ಯುಟೇಶನ್ ಜೊತೆಯಲ್ಲಿ ಕಳುಹಿಸಿದರು. ಅಲ್ಲದೆ 1911ನೇ ಡಿಸೆಂಬರು ತಿಂಗಳಲ್ಲಿ ಕಿಂಗ್ ಜಾರ್ಜ್ ದೊರೆಗಳವರ ಪಟ್ಟಾಭಿಷೇಕ ಡೆಲ್ಲಿಯಲ್ಲಿ ಆದಾಗ ಇವರನ್ನು ಮತ್ತು ರಾ|| ಬ|| ಕೋದಂಡ ಅಪ್ಪಯ್ಯನವರನ್ನು ಕೊಡಗಿನಿಂದ ಡೆಪ್ಯುಟೇಶನ್ ಬಗ್ಗೆ ಸರಕಾರದವರು ಕಳುಹಿಸಿದರು. ಮೆ. ಮಂದಣ್ಣನವರು ಹೀಗೆ ಅನೇಕಾವರ್ತಿ ಸರಕಾರದವರ ಕೋರಿಕೆಯಂತೆ ಅನೇಕ ವೈಸರಾಯ್ ಮತ್ತು ಚಕ್ರವರ್ತಿಗಳವರ ಪಟ್ಟಾಭಿಷೇಕ ಕಾಲದಲ್ಲು ಆಯಾಯ ದೊರೆಗಳವರ ಭೇಟಿಮಾಡಿ ಮೈಸೂರ, ಬೆಂಗಳೂರು, ಡೆಲ್ಲಿ, ಕಲ್ಕತ್ತಾ ವಗೈರೆ ಅನೇಕ ಮುಖ್ಯಪಟ್ಟಣಗಳನ್ನು ನೋಡಿಕೊಂಡು ಬಂದು ಕೊಡಗಿನಲ್ಲಿ ಇದುವರೆಗೆ ಅಂದರೆ ತಾ. 11–5–1926 ರವರೆಗೆ ಸರಕಾರದಿಂದ ಪೆನ್‌ಶನ್ ಹೊಂದಿಕೊಂಡಿದ್ದು ಅದೇ ದಿನ ರಾತ್ರಿ 7½ಗಂಟೆಗೆ ಬರಗಣ ಕೆಲಸ ಮಾಡುತ್ತಾ ಇದ್ದ ಹಾಗೆಯೇ ಏನೊಂದು ಕಾಯಿಲ ಇಲ್ಲದೆ ಸ್ವರ್ಗಸ್ಥರಾದರು.

ಪತ್ರವ್ಯವಹಾರ

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ಪತ್ರಿಕಾ ಕರ್ತರು ಉತ್ತರವಾದಿಗಳಲ್ಲ. ಸಂ.

ಮಹನೀಯರೆ, ಸತ್ಯಕ್ಕೆ ಎಡೆಇಲ್ಲದಾಯಿತೇ?

ಈ ತಾ. 2 ರಲ್ಲಿ ಮಡಿಕೇರಿಯಲ್ಲಿ ನಡೆದ ಕಂಬೀರಂಡ ಮದುವೆಯಲ್ಲಿ ಕೆಲವು ಮಹನೀಯರು ಯಾವದೋ ಕಾರಣದಿಂದ ಮದುಮಗನಿಗೆ ಪಣಕಟ್ಟಿಸಿಯೂ ಆಶೀರ್ವಾದಿಸದೆಯೂ ಮದುವೆಮನೆಯಿಂದ ಇಳಿದುಹೋಗಿಬಿಟ್ಟರೆಂಬ ವಿಶೇಷ ವರ್ತಮಾನವನ್ನು ಈ ಪತ್ರಿಕೆಯು ಮೂಲಕವಲ್ಲದೆ ಆ ವೇಳೆಯಲ್ಲಿ ಆ ಮದುವೆಮನೆಯಲ್ಲಿ ಹಾಜರಿದ್ದವರಿಂದ ಕೇಳಿಯೂ ತಿಳಿವೆನು. ಈ ಸಂಗತಿಯು ನಡೆದು ಎರಡು ವಾರಗಳು ಕಳೆದರೂ ಇದನ್ನು ವಿರೋಧಿಸಿ ಯಾರೂ ಬರೆಯಲಿಲ್ಲವಾದುದರಿಂದ, ಈ ಬರೆದ್ದವರು, ಈ ಪತ್ರಿಕೆಯ ತಾ. 7–4–26 ರ ಸಂಚಿಕೆಯಲ್ಲಿ ಪ್ರಕಟಿಸಿದ್ದು ನಿಜವೆಂದೇ ನಂಬಬೇಕಾಗಿದೆ. ನಿಜವಾದರೆ ಇದು ಕೊಡವರಿಗೆ ಒಂದು ಬಹು ವಿಶೇಷವಾದ ವರ್ತಮಾನವೆಂಬುದರಲ್ಲಿ ಸಂಶಯವಿಲ್ಲ. ಕೊಡವರ ಮದುವೆಯಲ್ಲಿ ಹೀಗೆ ಮಾಡಿದ್ದು ನನಗೆ ಕೇಳಿ ತಿಳಿದಮಟ್ಟಿಗೆ ಇದೇ ಮೊದಲಾಗಿದೆ. ಹೀಗೆ ಮಾಡುವುದು ಕೊಡವ ಪದ್ಧತಿಗೆ ವಿರೋಧವೆ

ದೇ ನನ್ನ ಭಾವನೆ. ಮದುವೆಕಾರ್ಯ ನಡಿಸುವವರು ಏನು ತಪ್ಪುಮಾಡಿದ್ದರೂ ಕರೆಯ ಮದುವೆ ಮನೆಗೆ ಹೋದವರೇಲ್ಲ ವ ದುಮುಗನಿಗೆ ಯೂ ಮದುಮಗಳಿಗೆ ಹಣಕಟ್ಟಿ ಆಶೀರ್ವದಿಸಿದ್ದರೆ ಸಾಕು. ಮುಂಚೆ ಅವರ ತಪ್ಪಿನ ವಿಷಯ ವಿಚಾರಿಸಿ ತೀರ್ಮಾನಿಸಬೇಕಾದದ್ದು ಕೊಡವರ ಪದ್ಧತಿಯಾಗಿದೆ. ಹೀಗೆ ಮಾಡುವುದರ ಬದಲು ಬಂದ ಹಾಗೆ ಇಳಿದು ಹೋದದ್ದು ಯಾವ ಪದ್ಧತಿಯೋ ತಿಳಿಯೆ. ತಿಳಿದವರಾದರೂ ಬರೆದು ಪ್ರಕಟಿಸಿದ್ದರೆ ಉಪಕಾರವಾಗುತ್ತಿತ್ತು.

ಓಹೋ, ಮರೆತೆ! ಇದೊಂದು ಹೊಸ ಪದ್ಧತಿ. ಎಲ್ಲಾ ಹೊಸ ವಿಷಯಗಳು ಮಡಿಕೇರಿಯಲ್ಲಿ ಹುಟ್ಟುವಂತೆ ಇದೂ ಮಡಿಕೇರಿಯಲ್ಲಿ ಜನಿಸಿದೆ. ಇದು ಹೊಸ ಕೊಡವಸಭೆಯವರಿಂದ ತೋರಿಸಲ್ಪಟ್ಟ ಸುಧಾರಣೆಯ ಹೊಸಪದ್ಧತಿಯೋ ಏನೋ? ಈ ನವೀನ ಪದ್ಧತಿಯು ವಿದ್ಯಾವಂತರೆನಿಸಿಕೊಂಡಿರುವ ಮಡಿಕೇರಿಯವರಿಗೇನೇ ಇದ್ದುಕೊಳ್ಳಲಿ. ಮಡಿಕೇರಿ ಹೊಟ್ಟೆ ಇಳಿದು ನಾಡುಗಳಿಗೆ ಹಬ್ಬದಂತೆ ಎಲ್ಲರೂ ಎಚ್ಚರ ತೆಗೆದುಕೊಳ್ಳುವದು ಅವಶ್ಯವಾಗಿದೆ. ಅದಂತಿರಲಿ.

ಈ ಸಿಬಿ ಸಂಗತಿಯನ್ನು ನಾಡು ಜನರ ತಿಳುವಳಿಕೆ ಬಗ್ಗೆ ಈ ಪತ್ರಿಕೆಯಲ್ಲಿ ಪ್ರಕಟಿಸಿದ್ದಕ್ಕ ಹಲಕೆಲವರು ಕುಪಿತರಾಗಿರುವರಂತೆ. ಇದೊಂದು ತುಚ್ಛವಾರ್ತೆಯೆಂದೂ, ಅದನ್ನು ಪ್ರಕಟಿಸಲು ಏಕೆ? ಸಂಪಾದಕರನ್ನು ದಫ್ತಾರಕಟ್ಟಿಸಬೇಕೆಂದೂ, ಇದರ ಪ್ರಕಟನೆಯು ಕೊಡವರಲ್ಲಿ ಪಂಗಡ ಭೇದವನ್ನು ಹಬ್ಬಿಸುತ್ತದೆಂದೂ ಅವರು ಉದ್ಗಾರವೆತ್ತುತ್ತಿರುವರಂತೆ. ಹಾಗಾದರೆ, ಸತ್ಯಸಂಗತಿಯನ್ನು ಪ್ರಕಟಿಸಬಾರದೆಂದೋ? ಅಥವಾ ಮಡಿಕೇರಿಯ ವಿದ್ಯಾವಂತರು ಮಾಡುವ ಸಂಗತಿಗಳು ನಾಡಿನವರಿಗೆ ತಿಳಿಯಬಾರದೆಂದೋ? ಸಿಬಿವರ್ತಮಾನವನ್ನು ಪ್ರಕಟಿಸಿದ ಸಂಪಾದಕರ ಕೆಲಸವು ಅತ್ಯಂತ ತಪ್ಪಾದರೆ ಸುಳ್ಳುವರ್ತಮಾನಕ್ಕೂ ನಡೆಯದ ಸಂಗತಿಗಳಿಗೂ ಎಡಕೊಡುವ ಸಂಪಾದಕರೇ ಪತ್ರಿಕೆಯನ್ನು ನಡಿಸಲು ಯೋಗ್ಯರೆಂದಾಯಿತಲ್ಲವೇ? ಕಲಿಕಾಲವೇ—ಸತ್ಯಕ್ಕೆ ಎಡೆ ಇಲ್ಲದಾಯಿತೇ! ಈ ಸಂಗತಿಯನ್ನೊಳಕೊಂಡ ವಾರ್ತೆಯು ತುಚ್ಛವಾರ್ತೆಯಾದರೆ ಈ ಸಂಗತಿಯು (ಮದುವೆಯಿಂದ ಎದ್ದು ಹೋದದ್ದು) ಎಷ್ಟು ತುಚ್ಛವಾಗಿರಬೇಕು? ಇದರ ಪ್ರಕಟಣೆಯು ಕೊಡವರಲ್ಲಿ ಪಂಗಡಭೇದವನ್ನು ಹಬ್ಬಿಸುವದಾದರೆ ಈ ಸಂಗತಿಯೇ ಎಷ್ಟರಮಟ್ಟಿಗೆ ಕೊಡವರನ್ನು ಪಂಗಡಿಸಬೇಕು? ಪ್ರಕಟಣೆಗೆ ಅಂಜುವಂಥಾ ಮಹನೀಯರು ಅಂಥಾ ಕೆಲಸವನ್ನು ಮಾಡಲು ಅಂಜಬೇಡವೇ? ಈ ಸಂಗತಿಯನ್ನು ನಡೆದ ಹಾಗೆಯೇ ಪ್ರಕಟಿಸಿದ್ದು ತಪ್ಪಾಯಿತೇ? ಪತ್ರಿಕೆಯಲ್ಲಿ ಇದ್ದಕ್ಕಿದ್ದ ಹಾಗೆ ಪ್ರಕಟಿಸದೆ ಹೋಗಿದ್ದರೆ ಇದಕ್ಕೆ ಕೈ ಕಾಲು ರೆಕ್ಕೆಗಳು ಹುಟ್ಟಿ ಒಂದಕ್ಕೆ ಎರಡು ಮೂರರಷ್ಟು ಅತಿಶಯವಾಗಿ ದೇಶದಲ್ಲಿ ಹಬ್ಬುತ್ತಿರಲಿಲ್ಲವೇ?

ಈ 'ಕೊಡಗು' ಪತ್ರಿಕೆಯನ್ನು ನಡಿಸುತ್ತಿರುವ ಕಂಪೆನಿಯು ಇನ್ನಿಬ್ಬರ ಅಥವಾ ಸ್ವಲ್ಪ ಜನರ ಅಭಿಪ್ರಾಯದಂತೆ ನಡೆಯುತ್ತಿರುವದಾಗಿದ್ದರೆ ಇದರ ಗತಿಯು ಈ ಹೊದಲೇ ಏನಾಗುತ್ತಿತ್ತೋ ಎಂದು ಹೇಳಲಾರೆ. ಇದು ದೇಶದ ಜನರ ಬಹುಮತದ ಇಚ್ಛೆಯಂತೆ ನಡಿಸಲ್ಪಡುತ್ತಿರುವ ಕಾರಣವೇ ಇದಕ್ಕೆ ಜಯವೆಂಬುದರಲ್ಲಿ ಸಂಶಯವಿಲ್ಲ. ಹುಳಿಹರ್ಮವನ್ನು ಹೊದ್ದುಕೊಂಡಿರುವ ಗುಳ್ಳೇನರಿಯ ಕುಯುಕ್ತಿಗಳಿಂದ ದೇಶೀಯರೆಂದಿಗೂ ಮೋಸಹೋಗಲಾರರು. ಸತ್ಯವಿದ್ದರೆ ಎತ್ತೆಂತ ಧರ್ಮವಿದೆಯೆಂಬುದನ್ನು ಯಾರೂ ಮರೆಯದಿರಲಿ.

'ನಾಡಿನವ.'

ನಮ್ಮ ಕೊಡಗಿನ ಪರಿಸ್ಥಿತಿ

ಪ್ರಪಂಚದ ಒಂದು ಪರಿಣಾಮ ಬಾಗಾಗಿ ನಮ್ಮ ದೇಶದಲ್ಲಿ ಆರಂಭಿಸಿ ಪಾಶ್ಚಾತ್ಯದತ್ತ ಡಿ. ಇದು ಪರಿಷದಿಗೆ ಹುಡುಗರಲ್ಲಿ ಏಕಮತ್ಯವಿತ್ತು. ಈಗ ಇದು ಕಡಿಮೆಯಾಗಿದೆ. ಇಂದಿನ ಪ್ರಪಂಚದಲ್ಲಿ ಸುಧಾರಣೆಯ ಶೀಘ್ರ ಕಡೆಯಿಂದ ನಡೆಯುತ್ತಿದೆ. ಆಂಗ್ಲೇಯರು, ಬರ್ಮನರು ತಮ್ಮ ತಮ್ಮ ಸಾಂಪತ್ತಿಕ ಸ್ಥಿತಿಯನ್ನು ಉತ್ತಮಗೊಳಿಸಬೇಕೆಂದು ಪ್ರಯತ್ನಿಸುತ್ತಲಿದ್ದಾರೆ. ಹಿಂದೂ ದೇಶದ ಪರಿಸ್ಥಿತಿಯನ್ನು ಪರಿಶೀಲಿಸಿದರೆ, ಹಿಂದೂಜನರು ಏಳಿಗೆ ಹೊಂದಲಿಲ್ಲವೆಂದು ತೋರುವುದು.

ಬಂಗಾಳದಲ್ಲಿ ಹಿಂದೂ ಮಹಮ್ಮದೀಯರಿಗೆ ಜಗಳ ನಡೆದರೆ ಮದ್ರಾಸಿನಲ್ಲಿ ಬ್ರಾಹ್ಮಣ ಬ್ರಾಹ್ಮಣೇತರರಿಗೆ ಜಗಳ. ಮೈಸೂರಿನಲ್ಲಿ ಬ್ರಾಹ್ಮಣ ಲಿಂಗಾಯತರಿಗೆ ಹಾಗೆಯೇ ಕೊಡಗಿನಲ್ಲಿ ಕೊಡವರೊಳಗಿನ ಧನಾಢ್ಯ ಧನಹೀನರ ಗುಂಪುಗಳೊಳಗೆ ಕಾದಾಟ.

ಕೊಡವ ಸಭೆಯು ಒಂದು ಸಂಘಟನ ಕಾರ್ಯವು. ಈಗಿನ ಕಾಲದಲ್ಲಿ ಇದು ಪರಿಪೂರ್ಣವೆಂದು ಕೆಲವರು ವಾದಿಸುವರು. ಹಿಂದೂ ಮಹಾಸಭೆಯು ಕಾರ್ಯಕಲಾಪವನ್ನು ನಮ್ಮ ಸಭೆಯೊಂದಿಗೆ ತಾಳೆಹಾಕುವರು. ಆದರೆ ಮಹಾಸಭೆಯು ಜಾರಿಗೆ ಬರಲಿಕ್ಕೆ ಕಾರಣವೇನೆಂದೂ, ಅದು ಸ್ಥಾಪಿಸಲ್ಪಟ್ಟನಂತರ ಏನೇನು ಪ್ರಯೋಜನಗಳಾಗಿವೆ ಎಂದೂ ನಾವು ತಿಳಿದುಕೊಳ್ಳಬೇಕು. ಯಾವ ಜನಾಂಗವು ಉದ್ಧಾರವಾಗಬೇಕಾದರೂ ಸಂಘಟನವು ಅವಶ್ಯ. ಸಂಘಟನವು ಭಾರತೀಯರಲ್ಲಿ ಇಲ್ಲದಿರುವುದರಿಂದಲೇ ಅವರು ಹಿಂದೆ ಬಿದ್ದಿರುವರು. ಆಂಗ್ಲೇಯರು ತಮ್ಮ ಸಂಘಟನ ಶಕ್ತಿಯಿಂದಲೇ ಪ್ರಪಂಚದ ಏಳನೇ ಒಂದು ಭಾಗವನ್ನು ಆಳುತ್ತಿರುವರು. ಇನ್ನು ಹಿಂದೂ ಮಹಾಸಭೆಯ ಸಂಘಟನ ಕಾರ್ಯವು ಆಂಗ್ಲೇಯರ ಹಾಗಲ್ಲ. ಜಾತಿಬಹಿಷ್ಕೃತರಾದವರನ್ನು ಹಿಂದೂಮತಕ್ಕೆ ಸೇರಿಸಿಕೊಳ್ಳಬೇಕೆಂದು ಬದಲ್ಲು, ಹಿಂದುಗಳು ಈಗಿನ ಕಾಲದಲ್ಲಿ ಮತಾಂತರರಾಗಬಾರದೆಂಬುದಕ್ಕೂ ಹಿಂದೂ ಮಹಾಸಭೆಯು ಸ್ಥಾಪಿಸಲ್ಪಟ್ಟಿತು. ಇದರ ಎರಡನೆ ಉದ್ದೇಶವಾದರೋ ಅಸ್ಪೃಶ್ಯತೆಯನ್ನು ದೂರಮಾಡುವುದು. ಆದರೆ ಕೊಡವರೊಳಗೆ ಮಹಾಸಭೆಯ ಉದ್ದೇಶಗಳೇನೂ ಇಲ್ಲ. ಕೊಡವಸಭೆಯ ಮುಖ್ಯೋದ್ದೇಶವೇನೆಂದರೆ ಕೊಡವ ಜನರ ಸಾಂಪತ್ತಿಕ ಸ್ಥಿತಿಯನ್ನು ಸಂಘ ಶಕ್ತಿಯಿಂದ ಉದ್ಧರಿಸುವುದು. ಸಂಘಟನೆಯಿಂದ ಜನರೊಳಗೆ ಪ್ರೀತಿ ವಿಶ್ವಾಸಗಳು ವೃದ್ಧಿಯಾಗಬೇಕು. ನಮ್ಮ ಕೊಡವ ಜನರ ಸಾಂಪತ್ತಿಕ ವಿಷಯ ಕೇವಲ ಶೋಚನೀಯವಾಗಿದೆ. ಕೊಡಗಿನ ಹಳ್ಳಿಯ ಸುಧಾರಣೆಯಾಗಬೇಕಾದ್ದು ಮೊದಲ ಹೆಜ್ಜೆ. ಕೊಡಗಿನ ಆಯ ವ್ಯಯದ ಪಟ್ಟಿಯಿಂದ ಅದರ ಹೀನ ಸ್ಥಿತಿಯು ವ್ಯಕ್ತವಾಗುವುದು. ಕೊಡವರಿಗೆ ಸಂಘಟನೆಯು ಬೇಕು. ಆದರೆ ಆ ಸಂಘಟನೆಯು ಧನಾಢ್ಯರನ್ನು ಮೇಲೈಗೂ, ಧನಹೀನರನ್ನು ಕೀಳ್ಗೆಗೂ ಒಯ್ಯಬಾರದ. ಹನಾಗಾದರೂ ಗರೀಬರನ್ನು ಮೇಲಕ್ಕೆತ್ತುವ ಸಂಘಟನ ಕಾರ್ಯವು ದೇವರಿಗೆ ಮೆಚ್ಚು. ಕೊಡವರಾದ ನಮ್ಮೊಳಗೆ ಭೇದಭಾವಗಳುಂಟಾದರೆ ದೇಶದಲ್ಲಿ ಶಾಂತಿ ಇರಲಿಕ್ಕೆ ಸಾಧ್ಯವಿದೆಯೇ? ಆದುದರಿಂದ ಸಂಘಟನಕಾರ್ಯದಲ್ಲಿ ಪ್ರವೃತ್ತರಾಗಿರುವ ಮುಂದಾಳುಗಳು ಜನಶಕ್ತಿಯ ಶ್ರೇಷ್ಠತೆಯನ್ನರಿತು ಅಲ್ಪ ಸಂಗತಿಗಳಿಗಾಗಿ ಕಲಹ ಬೆಳೆಸಿಕೊಳ್ಳದಂತೆ ಪ್ರಯತ್ನಿಸಬೇಕು.

ಒಂದು ಗುಂಪಿನೊಳಗೆ ಸಂಘಟನವಾಗಬೇಕಾದರೆ ಮೊದಲು ಬಹುಮಂದಿಯರ ಸಮ್ಮತಬೇಕು. ಸಂಘಟನವು ಸರಿಡು ತೀರಿಸುವ ನಿವೇದಿಂದ ಸ್ಥಾಪಿಸಲ್ಪಡಬಾರದು. ಮೈಸೂರು ಸರಕರಿಗೆ ಈ ವಿಚಾರದಲ್ಲಿ ದೂರದೃಷ್ಟಿ ಇರಬೇಕು.

ಈಗಿನ ಸ್ಥಿತಿಯನ್ನು ಹೀಗೆಯೇ ಇರಲಿಕ್ಕೆ ಬಿಟ್ಟರೆ ದೇಶಕ್ಕೆ ಕೇಡುಕುಂಟಾಗುವುದು. ನಾವು ಏಳಿಗೆಗೆ ಬರಬೇಕಾದರೆ ನಮ್ಮ ಅಂತಃಕಲಹಗಳನ್ನು ದೂರಮಾಡಬೇಕು. ದೇಶದಲ್ಲಿ ವಿದ್ಯೆಯು ಚೆನ್ನಾಗಿ ಪ್ರಸಾರವಾಗುವಂತೆ ಮಾಡಬೇಕು. ವಿದ್ಯೆ ಹೆಚ್ಚಿದಂತೆ, ಜನರ ಸಾಮಾಜಿಕ ಸ್ಥಿತಿಯೂ ವೃದ್ಧಿಯಾಗುವುದು. ನಾವು ಯಾದವರಂತೆ ಕಲಹವಾಡಿಕೊಳ್ಳಬಾರದು.

ಕೊಡಗಿನಲ್ಲಿ ವಿದ್ಯೆ ಅಷ್ಟೇನು ಹೆಚ್ಚು ಮುಂದರಿದಿಲ್ಲ. ವಿದ್ಯೆ ಮುಂದರಿಯದಿದ್ದಾಗ ದೇಶದಲ್ಲಿ ಕಲಹಗಳು ತಲೆದೋರುವುವು ನಿಜ. ಇಂಗ್ಲಾಂಡಿನಲ್ಲಿಯೂ ವಿದ್ಯೆಯು ಹರಡುವುದಕ್ಕೆ ಮೊದಲು ಹುಂಬಾ ಮತ ಸಂಬಂಧವಾದ ಕಲಹಗಳಿದ್ದವೆಂದೂ, ಸ್ಮರಣೆ ಮತ್ತು ಮನಸಾಕ್ಷಿ ಸ್ವಾತಂತ್ರ್ಯ, ಇವುಗಳಿಂದ ದೂರಾದುವೆಂದೂ ಲಾರ್ಡ್ ಏಲಿನವರು ಬರೆದಿರುವರು. ಇವರ ಅಭಿಪ್ರಾಯದಂತೆ ನಾವು ಸ್ಮರಣೆಯಿಂದ ಸಂಘಟನೆಯ ಕಾರ್ಯವನ್ನು ನಡೆಸುವುದು ಹಿತವಾದದ್ದು.

ನಮ್ಮಲ್ಲಿ ಯುವಕರು ಶಾಲೆ ಬಿಟ್ಟನಂತರ, ಸರಕಾರಿ ಕೆಲಸಕ್ಕೆ ಹೋಗುವವರು. ಸರಕಾರಿ ಕೆಲಸಗಳು ಕಡಿಮೆ, ಆದರೆ ಉಮೇದುವಾರರು ಹೆಚ್ಚು. ಹಾಗಾದರೆ ವೈಮನಸ್ಯ ಕಡಿಮೆಯೇ! ಸರಕಾರಿ ನೌಕರಿಯನ್ನು ಅಪೇಕ್ಷಿಸುವುದರ ಬದಲು, ನಾವು ನಮ್ಮ ಹಳ್ಳಿಗಳನ್ನು ಚೇತರಿಸೋದ್ಧಾರಮಾಡುವುದು ಪ್ರಯೋಜನಕಾರಿಯಲ್ಲವೇ? ನಾವು ನಮ್ಮ ಜನ್ಮಭೂಮಿಯನ್ನು ರೂಢಿಸುವವರಾದರೆ ನಮಗೂ ನಮ್ಮ ದೇಶಕ್ಕೂ ಶೀಘ್ರವಾಗಿ ಏಳಿಗೆಯುಂಟಾಗುವುದು.

'ಬೈತ'

ಕುಟ್ಟ ಬಸ್ಸುಸರ್ವೀಸು

ಅಯ್ಯಾ,

ಚಿಕ್ಕದಾದ ನಮ್ಮ ಈ ಕೊಡಗು ದೇಶದಲ್ಲಿ ಎದಾರು ಮಾರ್ಗಗಳಿಂದಲೇ ಬಸ್ಸುಗಳ ಓಡಾಟದಿಂದ ಪ್ರಯಾಣಿಕರಿಗುಂಟಾದ ಪ್ರಯೋಜನವನ್ನು ನಾನೊಬ್ಬನು ಪ್ರತ್ಯೇಕ ಹೇಳಬೇಕಾಗಿಲ್ಲ. ಕೆಲವು ಲೈನುಗಳಲ್ಲಿ ಎರಡು ಯಾ ಮೂರು ಕಂಪೆನಿಗಳ ಬಸ್ಸುಗಳು ನಡೆಯುವುದರಿಂದ ಪ್ರಯಾಣಿಕರ ಸಂತೋಷವು ಇಮ್ಮಡಿಯಾಗಿದೆ. ಕೆಲವು ತಿಂಗಳುಗಳಿಂದ ಸ್ವಲ್ಪ ಕಾಲ ಪ್ರವೇಶವಾದ ಕುಟ್ಟಕ್ಕೂ ನಿತ ಒಂದು ಬಸ್ಸು ವೀರರಾಜಪೇಟೆಯಿಂದ ಪೊನ್ನಂಪೇಟೆಗಾಗಿ ತಿರುಗಾಡುತ್ತಿದೆ. ಆದರೆ ಇದರಲ್ಲಿ ಪ್ರಯಾಣ ಮಾಡುವ ಜನರ ಗೋಳನ್ನು ನಿಸೆಂದು ವರ್ಣಿಸಲಿ!

ನಾನು ಕಳೆದ ತಾರೀಖು 30ಲ್ಲಿ ಕುಟ್ಟದಲ್ಲಿ ಸ್ವಲ್ಪ ಕೆಲಸವಿದ್ದುದರಿಂದ ಈ ಬಸ್ಸಿನಲ್ಲಿ ಹೊರಟೆನು. ಪ್ರಯಾಣಿಕರ ಸೀಕರು ಇದ್ದುದರಿಂದಲೂ ಇನ್ನೊಂದು ಸ್ಪೆಶಿಯಲ್ ಬಸ್ಸು ಹೊರಟದ್ದರಿಂದಲೂ, ಈ ಕಂಪೆನಿಯವರ ಚಕ್ರದಂತೆ ಪೊನ್ನಂಪೇಟೆಯಿಂದ ಈ ಬಸ್ಸು ಹೊರಡಲು ಸುಮಾರು 1½ ಘಂಟೆ ತಡವಾಯಿತು. ಯುಡಿಕೇರಿ ದಾಟುತ್ತಲೇ ಇದು ಮೆಟ್ಟಿಲ ಹತ್ತಲಿಕ್ಕಾಗದೆ ನಿಂತುಹೋಯಿತು. ಇನ್ನು ಈ ಬಸ್ಸು ಹೊರಡಬೇಕಾದರೆ ಅದನ್ನು ಸ್ವಲ್ಪ ದೂರ ನೂಕಬೇಕೆಂದು ಡ್ರೈವರು ಹೇಳಿದರು. ಇದಕ್ಕೆ ನಾವು ಪ್ರಯಾಣಿಕರು ಸಹಾಯ ಮಾಡಿದೆವು. ಆಗಾಗ್ಗೆ ಮೆಟ್ಟಿಲುಹತ್ತುಗಳಲ್ಲಿ ಬಸ್ಸು ನಿಲ್ಲುತ್ತಲೂ, ಡ್ರೈವರು ನೂಕಲು ನಮ್ಮನ್ನು ಬೇಡಿಕೊಳ್ಳುತ್ತಲೂ ನಾವು ಅದನ್ನು ಸಹಾಯಮಾಡುತ್ತಲೂ ಶ್ರೀಮಂಗಲವನ್ನು ತಲುಪಿದೆವು. ನಾವು ಇದರಲ್ಲಿ ಒಂದರಕ್ಕೆ ನಮ್ಮ ಪ್ರಯಾಣದ ಕೊನೆಯನ್ನು ರಾತ್ರಿಯಾಗುವ ಮುಂಚೆ ಹತ್ತಾಗಬೇಕೆಂದು ಸಾರಬೇಕೆಂದು ನಮ್ಮ ಕೈಯ್ಯಲ್ಲಾದಷ್ಟು ಸಹಾಯಮಾಡಿದ್ದಾಯಿತು. ಇನ್ನು ನಮ್ಮ ನೂಕುವ ಪಾಡು ನಿಲ್ಲಲಿಲ್ಲ. ಆದರೆ ಎಷ್ಟು ಪ್ರಯತ್ನಿಸಿದರೇನು ಹದಿನಾಲ್ಕನೇ ಮೈಲು ಕಲ್ಲಿನಲ್ಲಿ ಎಷ್ಟು ನೂಕಿದರೂ ಬಸ್ಸು ಸ್ಟಾರ್ಟ್ ಆಗಲಿಲ್ಲ. ಇಷ್ಟರಲ್ಲಿ ನಮಗೆ ನೂಕಿದ ಆಯಾಸವೂ, ಕತ್ತಲೆ, ಅಂಧಕಾರವೂ ನಮ್ಮನ್ನು ಬಂಧಿಯಾಗಿ ಮಾಡಿದ ಭಯವೊಂದು ಕಡೆ, ಮತ್ತು ನಮ್ಮ ನಮ್ಮ ಸಾಮಾನುಗಳ ನಾಡಿನ ಬೇಸರಿಕೆಯೊಂದು ಕಡೆ. ಕುಟ್ಟಕ್ಕೆ ತಲಪಬೇಕಾದರೆ ಇನ್ನೂ ಆರುಮೈಲು ಇತ್ತು. ಇದರಲ್ಲಿ ಇಬ್ಬರಿಗೆ ಕುಟ್ಟ ದಾಟಿ ಮೂರು ಮೈಲು ಹೋಗಬೇಕಾಗಿತ್ತು. ನಾವೆಲ್ಲರೂ ಪೂರ್ತಿ ಬಾರ್ಜ್ ಕೊಟ್ಟು ಬಿಟ್ಟಿದ್ದೆವು. ಇನ್ನು ಬೇರೆ ಉಪಾಯ ಕಾಣದೆ ನಾವು ಕಾಲಿನರು ನಮ್ಮ ಕಾಲಿಗೆ ಬುದ್ಧಿ ಹೇಳಿದೆವು. ಆ ಹಿಂದ್ರಸ್ಥಿತಿದ ರಾತ್ರಿಯಲ್ಲಿ ನಮ್ಮ ನಮ್ಮ ಸ್ಥಳವನ್ನು ತಲುಪಿದ ಕಷ್ಟವನ್ನು ವರ್ಣಿಸಲು ಅಸಾಧ್ಯ.

ಇಂತಹ ಬಸ್ಸುಗಳು ಇದ್ದೂ ಇಲ್ಲದಹಾಗೆ. ಗೋಣಿಕೊಪ್ಪಲ ಒಬ್ಬ ಸರ್ವೀಸುಗಳಿಲ್ಲ. ಆದರೆ ಈ ಒಬ್ಬ ಮಧ್ಯದಾರಿಯಲ್ಲಿ ನಿಂತದ್ದು ಇದು ಒಂದೇ ಬಾರಿಯಲ್ಲ. ಹೀಗೆ ಅನೇಕ ಸಾರಿ ನಿಂತು ಪ್ರಯಾಣಿಕರಿಗೆ ಬಹಳ ತೊಂದರೆಯನ್ನು ಕೊಟ್ಟಿದೆಯೆಂದು ತಿಳಿದಿದೆ. ಟಿಕೇಟಿನ ಹಿಂದೆಯೇ ನೋಡಿ ಬಸ್ಸು ಆಕಸ್ಮಿಕ ನಿಂತುಹೋದರೆ ಮೋನೇಜರು ಬಾಧ್ಯಸ್ಥರಲ್ಲವೆಂದು ಮುಂತಾಗಿ ಬರೆದುಬಿಟ್ಟಿದ್ದಾರೆ. ಇದರಿಂದ ಪ್ರಯಾಣಿಕರ ಹಣವೊಂದು ನಷ್ಟ, ಮತ್ತು ಮನೆ ಸೇರುವ ಗೋಳೊಂದು ಕಡೆ.

ಈ ಲೈನಿಗಾಗಿ ಬೇರೆ ಕಂಪೆನಿಗಳು ಬಸ್ಸು ಮಡಗಲು ಲೈಸೆನ್ಸು ಕೇಳುತ್ತಾರೆಂದು ತಿಳಿದೆನು. ಆದುದರಿಂದ ಬೇರೆ ಕಡೆಗಳಲ್ಲಿ ಒಂದಕ್ಕಿಂತ ಹೆಚ್ಚು ಸರ್ವೀಸಿನವರಿಗೆ ಒಂದೇ ಲೈಸೆನ್ಸ್ ಕೊಟ್ಟ ಹಾಗೆ ಈ ಲೈನಿನಲ್ಲಿಯೂ ಲೈಸೆನ್ಸು ಕೊಟ್ಟು ಪ್ರಯಾಣಿಕರ ಇಂತಹ ಕಷ್ಟವನ್ನು ಮೇಲಧಿಕಾರಿಗಳು ನಿವಾರಣೆ ಮಾಡಬೇಕಾಗಿ ಈ ಮೂಲಕ ಕೋರುತ್ತೇನೆ.

ಒಬ್ಬ ಪ್ರಯಾಣಿಕ.

ಕುಟ್ಟದ ಕಾಳಿದೇವರ ಉತ್ಸವದ ವರ್ತಮಾನ

ಅಯ್ಯಾ ವಾಚಕಮಹಾಶಯರೇ, ಶ್ರೀಮಂಗಲನಾಡು ಕುಟ್ಟ ಗ್ರಾಮದ ಕಾಳಿದೇವರ ಉತ್ಸವವು ತಾ. 4–5–26ರಲ್ಲು ವಿಜೃಂಭಣೆಯಿಂದ ನಡೆಯಿತು. ದೇವರ ದರ್ಶನಕ್ಕಾಗಿಯೂ ಪ್ರಾರ್ಥನೆ ತೀರಿಸಲಿಕ್ಕಾಗಿಯೂ ತುಂಬಾ ಜನರು ನೆರೆದಿದ್ದರು. ವ್ಯಾಪಾರಸ್ಥರ ಅಂಗಡಿಗಳು, ನಾನಾ ಸಾಮಾನು ಮಾರಾಟಗಳು ಒಂದು ಒಂದಿಗಳ. ಅನೇಕವಿದ್ದವು. ಇವೆಲ್ಲಾ ಯಾತ್ರಿಕರಿಗೆ ಅನುಕೂಲಕರವಾದದ್ದು ಸಂತೋಷವೇ ಸರಿ. ಆದಂತಿರಲಿ—ಅಲ್ಲಿಯ ನ್ಯೂನತೆಗಳನ್ನು ಸ್ವಲ್ಪ ಮಟ್ಟಿಗೆ ವಿಮರ್ಶೆಸೋಣ. ಮನುಷ್ಯನಿಗೆ ಆರೋಗ್ಯಭಾಗ್ಯಕ್ಕೆ ಮುಖ್ಯವಾದದ್ದು ಶುಭ್ರವಾದ ನೀರೆಂಬುದು ಎಲ್ಲರಿಗೂ ತಿಳಿಯದ ವಿಷಯವಲ್ಲ. ಅಂಥಾ ನೀರಿನ ತೊಂದರೆಯನ್ನು ಬರೆದು ತಿಳಿಸಲಾರೆನು. ಕಾಲವಾದರೋ ಬೇಸಿಗೆಕಾಲ. ಏರಿಸುವ ರಾತ್ರಿ ಜಾಗ್ರತೆ, ಬೆಳಗ್ಗೆ ಕುಣಿಯುವದು ತಿಂಡಿ ಪಲಹಾರ, ಶಾಸ್ತ್ರ ಪಲ್ಲಕ್ಕಿ ಏರಿ ವಿಶ್ರಮವಾದ ಕೆರೆಕು ನೀರು. ಈ ನೀರಾದರೋ ಸಾಕಷ್ಟು ಇದೆಯೋ? ಅದಕ್ಕೂ ಹಿಡಿದಾಟ, ಮಾರನೇದಿನ 12ಗಂಟೆ ಸಮಯಕ್ಕೆ ನೀರೇ ಇಲ್ಲ. ಬಂದಿಯವರ ತಕ್ಷ ಹೋಳಿತ್ತು. ಈಗಿನ ಸಮಯವೇ ಜನರಿಗೆ ಕಾಯಿಲೆಕ್ಕೆ ಹುಟ್ಟಿಸಮಯ. ಅಂಥಾದ್ದರಲ್ಲಿ ಇದು ಕಾಯಿಲೆಕ್ಕೆ ಹುಟ್ಟಿನ ಉತ್ಸೇಜನ ಕೊಟ್ಟಂತಾಗಲಿಲ್ಲವೇ? ಇನ್ನು ಮುಂದೆ ಎಲ್ಲಿ ಕೇಳಿದರೂ ಜನರಲ್ಲಿ ಕುಟ್ಟದ ಜಾತ್ರೆಗೆ ಹೋಗಿ ಬಂದಂದಿನಿಂದ ನನ್ನ ಹೆಂಡತಿಗೆ ಕಾಯಿಲ, ಮಕ್ಕಳಿಗೆ ಕಾಯಿಲ, ತಂದೆಗೆ ಕಾಯಿಲೆಂದು ಹೇಳುವುದು ಎಲ್ಲೆಲ್ಲಿಯೂ ಕೇಳಿಸುತ್ತಿ. ಇಂಥಾ ಸಲಕ್ಕೆ ಜನರು ಸೇರುವ ಜಾಗಿಯಾಗುವುದೂ ಇಲ್ಲ. ಮೂಲಕ ತಪ್ಪುವುದೂ ಇಲ್ಲ. ದೇವರಾದರೋ ಒಬ್ಬನ ಸ್ವಂತ ದೇವರೆಂದು ಹೇಳಲಿಕ್ಕಾಗುವುದಿಲ್ಲ. ಗ್ರಾಮದೇವರೋ ನಾಡುದೇವರೋ ಎಂಬುದು ಸಂಶಯ. ದೇಶದೇವರೆಂದರೆ ಎಂದೂ ಹೇಳ್ಳಾಗಲಾರದು. ಆದರಿಂದಲೇ ಇದರಲ್ಲಿ ನಮ್ಮ ಮುಖ್ಯಾಂಶವೇನೆಂದರೆ, ಅಲ್ಲಿ ನೀರಿನ ವಸತಿ ಚನ್ನಾಗಿ ಮಾಡಬೇಕೆಂಬದೇ ಮುಖ್ಯವಾಗಿದೆ. ಅಂಥಾ ಮುಖ್ಯವಾದ ಧರ್ಮ ಕೆಲಸವು ಒಬ್ಬ ಪುಣ್ಯಾತ್ಮ ನಿಂದ ಬರಿಗೆ ಆ ಮಹಾಕಾಳಿಯ ಕರುಣಾ ಕಟಾಕ್ಷಕ್ಕೆ ಪಾತ್ರರಾಗಿದ್ದರೆ ಚನ್ನಾಗಿತ್ತು. ಅದಲ್ಲದೆ ಹತ್ತರ ಹುಲ್ಲು ಕಡ್ಡಿ ಒಬ್ಬನ ಕಲೆ ಹೊರೆಯೆಂಬಂತೆ ಪ್ರತಿಯೊಬ್ಬ ಮಹನೀಯರು ತಮ್ಮ ತಮ್ಮ ಗ್ರಾಮಗಳಲ್ಲಿ ಅದಷ್ಟು ಹಂಡಾ ಶೇಗಡು ಶೇಖರಿಸಿಕೊಟ್ಟರೆ ಆಗಬಹುದು. ದೇವಸ್ಥಾನದ ಸಮಿತಿಯವರು ಒಂದು ಬಾವಿ ತೋಡಿಸಬೇಕೆಂಬ ಅಭಿಪ್ರಾಯವಾಗಿದೆ. ಅದಕ್ಕೆ ಬಾಬ್ತು (1000—0—0) ಒಂದು ಸಾವಿರ ರೂಪಾಯಿ ಬೇಕಾಗಿದೆ. ಈ ವಿಷಯಕ್ಕೆ ದೇಶದ ಮಹನೀಯರು ಈ ಪತ್ರಿಕಾ ಮೂಲಕ ಚರ್ಚಿಸುವರೆಂಬ ಸದಲ್ಲದು ಅವರಿಗೆ ವಾತ್ರೆಯೂರ ಮುಂಬದಿಗಳನ್ನು ವಸ್ತ್ರಪಿರಾಗಿ ಬಯಸಲು ಕೋರುತ್ತೇನೆ. ಈಗಾಗಲೇ ಅಲ್ಪತಕ್ಕ ವಸಾಗು ನಡಿಯುತ್ತಲಿದೆ. ಮುಂದಾಗಿಯೇ ಹಿಂದಿರಾತ್ರಿ ಹಸಿಕೆತ್ತಿಯಿರುವ ಅಭಿಪ್ರಾಯವಲ್ಲ. ಶಿಕ್ಷಣತ್ವಕಾರ್ಯವನ್ನು ಮಹಾಕಾಳಿಯ ಮುಂದಿಟ್ಟು ದೇಶದೇಶಭಾಗಕ್ಕೆ ಸೇರಿಸಿ ಹಸಿದ ಶ್ರೀನ ಸಮಿಷದ ವಿಳಾಸವನ್ನು ಪ್ರಕಾಶಿಸಂತರ ಕೊಡುತ್ತೇನೆ.

ಕೊಂಡಯನ್ನು ಅನುಭವಿಸಿದವ.

...ಯರಿ,

...ಪೇಟೆ ನಾಡು ದೇವಣಗೇರಿ ಗ್ರಾಮದ ಮು...ದ ಲೇಟ್ ಮೊದ್ದೆಯ್ಯನವರ ಮಕ್ಕಳು 1 ನೇ ಮುತ್ತಣ್ಣ ... 2 ನೇ ಪೊನ್ನಪ್ಪನವರು ಸಹ ಕೆಲವು ವರ್ಷಗಳ ಹಿಂದೆ ...ಂತರ ಹೋದವರು ಇವರಿಗೂ ಪತ್ತೆಯಾಗುವುದಿಲ್ಲ. ಪಾ...ಪ್ರಕಾಶಕರಿಗೆ ಯಾರಿಗಾದರೂ ಅವರ ವಿಚಾರವು ತಿಳಿ...ಲ್ಲಿ ದಯವಿಟ್ಟು ಈ ಪತ್ರಿಕೆಯ ಮೂಲಕ ತಿಳಿಸಬೇಕಾಗಿ ...ತ್ತೇನೆ.

ಮುಕ್ಕಾಟಿರ ಕಟ್ಟಪ್ಪ.

NOTICE·

Applications are invited for the post of a ...ice Sub-Inspector on a pay of Rs. 65-3-110-25 plus a conveyance allowance of Rs 25 - mensem.

Applicants must hold at least a complete ...condary School Leaving Certificate issued ...der the authority of the Government of Madras. ...ey should be 5 feet 5 inches in height and 32 ...ches round the chest, age not under 21 nor ...er 25 and should appear in person, bringing ...ecimens of hand-writing in English and Kannada ...d testimonials as to character and social status, ...efore the undersigned not later than 30th ...une 1926.

The successful candidate will be trained for ...ne year at the Provincial Training School, Vellore. During the period of training he will draw only Rs. 35/- p. m.

3 2 Sd. N. I. Kalappa,
Mercara. Dy. Supt. of Police.

ನೋಟೀಸು.

ಒಳ್ಳೆಕಾಲ, ಒಳ್ಳೆ ಆಸ್ತಿ, ಕಳೆಯಬೇಡಿರಿ.

(1) ಪೊನ್ನಂಪೇಟೆ ಸ್ಕೂಲ್‌ಬಳಿ ಒಟ್ಟೆ ವಗೈರೆ ಸಾಮಾನು ವ್ಯಾಪಾರಕ್ಕಿಟ್ಟಿರುವ ಮಹಡಿಮನೆ, ಹಿಂಭಾಗದಲ್ಲಿರುವ ಎರಡು ಭಾಗದ ಉದ್ದ ಲೈನ್ ಮನೆಗಳು ಮತ್ತು ಕಾಫಿ ಗಿಡ ವಗೈರೆಯಿರುವ ಹಿತ್ತಲು ಸಹ 9000/—ರೂಪಾಯಿಗೂ,

(2) ಪೊನ್ನಂಪೇಟೆ, ದೊಡ್ಡ ಬೀದಿ ಬಲಪಾರ್ಶ್ವದಲ್ಲಿ ವಾಸಕ್ಕೂ ವ್ಯಾಪಾರಕ್ಕೂ ಯೋಗ್ಯವಾದ ಮಹಡಿಮನೆ, ಮತ್ತು ಹಿಂಭಾಗದ ಉದ್ದ ಲೈನ್ ಮನೆ, ವಾಸಕ್ಕೆ ಅನುಕೂಲವಿರುವ ಒಂದು ಸಣ್ಣ ಮನೆ ಸಹ 6000 —ರೂಪಾಯಿಗೂ,

(3) ಒಂದನೇ ನಂಬರು ಅಂಗಡಿಯಲ್ಲಿರುವ ಒಟ್ಟೆ, ಸ್ಟೇಶನರಿ ಕಟ್ಲರಿ ವಗೈರೆ ಸಾಮಾನು ಮತ್ತು ಸೋಡಾ ಫ್ಯಾಕ್ಟರಿ ಸಹ ಕಮ್ಮಿ ಕ್ರಯಕ್ಕೆ ಮಾರಲಿಕ್ಕೆ ಸಿದ್ಧವಾಗಿದೆ

ಖಾಯಿಷ್‌ದಾರರು ಆದಷ್ಟು ಜಾಗ್ರತೆಯಲ್ಲಿ ಕೆಳಗಿನ ವಿಳಾಸಕ್ಕೆ ಬರಕೊಳ್ಳಬಹುದು.

4—4. V· E N· Ahamad,
General Merchant,
Ponnampett.

NOTICE

From and after 15th May 1926 Aliekad firewood will be delivered at Mercara at Rs. 20/- per lorry load and Rs 10 - per trailer (half lorry load) delivered at or near purchaser's house

S/d· G. C· Robinson,
Chief Forest Officer,
2–2 Mercara·

FOR SALE·

12 ft· English Rover Car, latley over hauled, in good order· Owner going to **England·**

Price Rs· 1500· Apply to the CHAPLAIN of MERCARA,

1—1

Apply for our shooting Season's Clearance Sale Catalogue of Brand New Goods.

10 to 25 percent Reductions in Prices.

No License Required!! **No License Required**



Webley and Scott Air Pistol, cal 177 or 22, bore Powerful and Accurate, complete with a sample box of slugs, two spare washers, a brush forcleaning, and a bookletof instructions Rs. 30/- Free delivery.

Powerful German Diana Air gun, Handsome and Accurate, takes B. S. A· Patern No 1 Slugs and Darts· expressly recommendable for Target Practice Rs 15/ Free delivery·

Brilliant Search Light, Lamp for Night Sports Rs 30/- Free delivery·

No License required to purchase or to possess the above items.

Reliale D B B L 12 bore guns		Rs 60	— and upwards	
Do	S. B B L 12	do	do 40 -	do
D B. M L Guns			,, 45 -	do
S B M L. do.			,, 30/-.	do
S B. B L Rifles			,, 25 -	do
B L Revolvers and Pistols			,, 30 -	do.

Arms, Ammunition and shooting requisites of almost every kind and quality offered at exceptionally favourable rates ANumber of good quality second hand weapons also offered for sale in the New Catalogue.

GOOLAMHUSIAIN ALLIBHOY & SONS
Largest Importers of Firearms and Ammunition,
Cheapest priced firm in India,

24 17 **210 Abdul Rehman Street, BOMBAY·**

೧೦೦೦ ರೂಪಾಯಿಗಳ ಬಹುಮಾನ·
ಲೋಕಪ್ರಸಿದ್ಧವಾದ ಸಾಲಂಮಿಸ್ರಿ ಮುರಬ್ಬಾ.
ನಮ್ಮ ಟ್ರೇಡ್ ಮಾರ್ಕನ್ನು ನೋಡಿ ಈ ಔಷಧ ತೆಗೆದುಕೊಳ್ಳಿರಿ.

ಇದರ ಸೇವನೆಯಿಂದ ವೀರ್ಯವು ಹೀನವಾಗಿ ಇದ್ದರೂ, ಸ್ವಪ್ನೇಂದ್ರಿಯ ಪಾತವಾದರೂ, ಸ್ತ್ರೀ ಸಂಘಕ್ಕೆ ಮೊದಲೇ ಸ್ಖಲನವಾದರೂ, ಮೂತ್ರದೊಂದಿಗೆ ಹೋಗುತ್ತಿದ್ದರೂ ದೋಷರಹಿತವಾಗಿ ಶರೀರಕ್ಕೆ ಆರೋಗ್ಯವನ್ನು ಧಾರ್ಢ್ಯತೆಯನ್ನೂ ಆಯುಸ್ಸು, ಬಲ, ತೇಜಸ್ಸು ಉಂಟು ಮಾಡುವದು. ಅಜೀರ್ಣ ಮಲಬದ್ಧತೆ. ಮೆದುಳಿನ ಬಲಹೀನತೆ, ಕೈಕಾಲು ಸೊಂಟ ನೋವುಗಳಿಗೆ ಇದು ದಿವ್ಯ ಔಷಧವು. ಈ ಸಾಲಂಮಿಸ್ರಿ ಎಂಬುವದು ಕಾಬೂಲ್ ಕಂದಾಹಾರ ಪ್ರಾಂತ್ಯದಲ್ಲಿ ಬೆಳೆಯುತ್ತದೆ.

ಈ ಔಷಧದಿಂದ ಗುಣಹೊಂದಿರುವ ಅನೇಕ ಮಹನೀಯರು ತಾವಾಗಿಯೇ ಅನೇಕ ದೇಶಗಳಿಂದಲೂ ಆಫ್ರೀಕ, ಬರ್ಮ, ಪೆನಾಂಗ್, ಸಿಂಗಪೂರ್, ಸಿಲೋನ್, ಬೊಂಬಾಯಿ, ಕಲ್ಕತ್ತ, ಮದ್ರಾಸು ಮತ್ತು ಇಂಡಿಯಾದೇಶದಲ್ಲಿ ಎಲ್ಲಾ ಸ್ಥಳಗಳಿಂದಲೂ ನಮಗೆ ಯೋಗ್ಯತಾ ಪತ್ರಿಕೆಗಳನ್ನು ಕಳುಹಿಸಿರುವರು. ಇವುಗಳ ನಕಲನ್ನು ಯಾರಾದರೂ ತರಿಸಿ ನೋಡಬಹುದು. ಇವುಗಳು ಸುಳ್ಳು ಎಂದು ನಿರ್ಧರಪಡಿಸುವವರಿಗೆ ಮೇಲೆ ಕಂಡ ಬಹುಮಾನವು ಕೊಡಲ್ಪಡುತ್ತೆ. ನಾವು ಹಾಗೆ ಕೊಡದೇ ನಿರಾಕರಿಸಿದಲ್ಲಿ ಕೋರ್ಟಿನ ಮೂಲಕ ಅದನ್ನು ಪಡೆಯಬಹುದು. ೧ ಡಬ್ಬವನ್ನು ...ದಿನ ಸೇವಿಸಿದಲ್ಲಿ ಗುಣವು ನಿಂದಿತವಾಗಿ ತೋರಬಹುದು ೩ ಯಾ ೪ ಡಬ್ಬಿಗಳು ಜನ್ಮಾಂತ್ಯದವರಿಗೂ ಪೂರ್ಣವಾಗಿ ಗುಣವನ್ನುಂಟು ಮಾಡುವವು. ಹುಳಿ ಪಳಾಸಗಳನ್ನು ಪವಿತ್ರವಾಗಿ ಬಿಡಬೇಕು. ಒಂದಾವರ್ತಿ ಉಪಯೋಗಿಸಿ ಮಾಡಿ ನೋಡಿದಲ್ಲಿ ಖಾತ್ರಿ ಉಂಟಾಗುತ್ತೆ

ಕ್ರಯ ಡಬ್ಬಿ ೧ಕ್ಕೆ ರೂ. ೩—೦—೦ ಛಾಂಗಿ ಚಾರ್ಜ ೧೦ ೦ದ ೩ ಡಬ್ಬಿಗಳಿಗೆ ೦—೮—೦ ಆಣೆ ಏಜಂಟರುಗಳು ಎಲ್ಲಾ ಸ್ಥಳಗಳಲ್ಲಿಯೂ ಅವಶ್ಯಕವಾಗಿರುತ್ತೆ ರೂಲ್ ತರಿಸಿಕೊಳ್ಳಬಹುದು ಆರ್ಡರು ಕೊಡತಕ್ಕ ಕಾಲದಲ್ಲಿ ಈ ಪತ್ರಿಕೆಯ ಹೆಸರನ್ನು ಬರೆಯಬೇಕು.

ಟೆಲಿಗ್ರಾಫ್ ಅಡ್ರೆಸ್,
ಮಿಸ್ರಿ ಬೆಂಗಳೂರು ಸಿಟಿ,

ಡಿ. ಮುನ್ನಾಲಾಲ್, ಡಿಲ್ಲಿ ನೇಟಿವ್ ವೈದ್ಯರು,
ಸಾಲಂಮಿಸ್ರಿ ಮುರಬ್ಬ ಡಿಪೋ,
ಬೆಂಗಳೂರು ಸಿಟಿ.

12—8

ಇಮಿಟೇಷನ್ ರೇಷ್ಮೇ ಸೀರೆಗಳು.

ಈ ಸೀರೆಗಳು 18ಮೊಳ, ಉಗ್ರವು 2½ಮೊಳ ಅಗಲವೂ ಇದೆ ಈ ಸೀರೆಗಳನ್ನು ಹೊಸದಾದ ಇಮಿಟೇಷನ್ ಸಿಲ್ಕ್ ಗಟ್ಟಿದಾರದಿಂದ ತಯಾರಿಸಿದೆ. ಇದು ನೋಡಲಿಕ್ಕೆ ಭಾರಿ ಕ್ರಯದ ಸೀರೆಗಳಂತೆ ಕಾಣುವದಲ್ಲದೆ ಅಂದವಾದ ಅಂಚೂ, ಸುಂದರವಾದ ಸಾಚಾ ರೇಷ್ಮೆಯ ಸೆರಗೂ ಇರುವದು. ಈ ಮಾದರಿ ಸೀರೆಗಳು ಬೇರೆ ಯಾರಲ್ಲಿಯೂ ಈ ಕ್ರಯಕ್ಕೆ ಸಿಕ್ಕಲಾರದು. ಈ ಸೀರೆಗಳು ಶ್ರೀಮಂತರೂ, ಗರೀಬರೂ, ಉಡಲಿಕ್ಕೆ ಬಹು ಲಾಯಕ್ಕಾದವು ಮಾದರಿಗಾಗಿ ಕೆಲವನ್ನು ಮಾತ್ರ ತಯಾರಿಸಿರುತ್ತೇವೆ. ಜಲ್ದಿಯಿಂದ ಬೇಗನೆ ತರಿಸಿಕೊಳ್ಳುವವರಿಗೆ ಮಾತ್ರ ಸಿಕ್ಕುವವು.

ಕ್ರಯ ಸೀರೆ 1ಕ್ಕೆ ನಂ 1. ರೂ. 6—8—0
,, ನಂ 2. ರೂ 7—8—0

ವಿಳಾಸ.—ಮಧುರಾ ಟ್ರೇಡಿಂಗ್ ಕಂಪನಿ,
16 ತಿರುಪಳ್ಳಿ ಬೀದಿ,
ಮದರಾಸು.

ಈಗಲೇ ಪ್ರಿಂಟಾಗಿದೆ! **ಶೃಂಗಾರವಾದ ಪುಸ್ತಕ!!**

ಸ್ತ್ರೀ ಪುರುಷರ ಪ್ರೀತಿಯ ಮರ್ಮಗಳನ್ನು ಚಿತ್ರಗಳ ಸಹಿತ ತಿಳಿಸುವ

ಮನ್ಮಥ ಶಾಸ್ತ್ರ.

ಫ್ರೆಂಚ್ ಬಾಷೆಯಲ್ಲಿ ಇದ್ದದನ್ನು ಸುಲಭ ಶೈಲಿಯಲ್ಲಿ ಕನ್ನಡ ಭಾಷೆಗೆ ಭಾಷಾಂತರಿಸಿರುತ್ತೇವೆ. ಸ್ತ್ರೀಪುರುಷರುಗಳಿಗೆ ಬೇಕಾದ ಎಲ್ಲಾ ಮರ್ಮ ರಹಸ್ಯಗಳು, ರತಿ ಮನ್ಮಥನು ಆನಂದವಾಗಿರುವದಕ್ಕೆ ಬೇಕಾದ ಉಪಾಯಗಳು, ಸ್ತ್ರೀ ಪುರುಷರ ಜಾತಿಯ ಲಕ್ಷಣಗಳು ಗರ್ಭಧಾರಣೆ, ಶಿಶು ಉತ್ಪತ್ತಿವಿಧ, ಗುಪ್ತ ವೈದ್ಯ, ಶಯನ ಗೃಹದ ಸೊಬಗುಗಳು, ಇನ್ನೂ ಸ್ತ್ರೀಪುರುಷರಿಗೆ ಬೇಕಾದ ಕೆಲವು ರಹಸ್ಯಗಳು ತುಂಬಿದೆ. ಈ ಶೃಂಗಾರವಾದ ಪುಸ್ತಕವನ್ನು ತರಿಸಿ ಆನಂದ ಹೊಂದುವಿರೆಂದು ನಂಬಿರುತ್ತೇವೆ. ಪಟಗಳ ಸಹಿತ ಕ್ರಯ ಪುಸ್ತಕ 1ಕ್ಕೆ ರೂ. 1—0—0

ವಿಳಾಸ.—ಟಿ ರಾಮಚಂದ್ರರಾವ್ ಕಂಪನಿ,

52—22 ಪೋಸ್ಟ್ ಬಾಕ್ಸ್ ನಂ. 232, ಮದರಾಸ್.

ಅದ್ಭುತ! ಆಶ್ಚರ್ಯಕರ! ಬಲು ತಮಾಷೆ!

ಪೋಕೆಟ್ ಡಿಟೆಕ್ಟಿವ್

ಇಪ್ಪತ್ತನೆಯ ಶತಮಾನದ ವಿಚಿತ್ರವೇ ಇದು!

ಪೇಟೆಂಟ್ ಪಡೆದ ಅತ್ಯಲ್ಪಾಗಿನ ಸೋಜಿಗ ವಸ್ತು; ಪ್ರತಿಯೊಬ್ಬನಿಗೂ ಬೇಕಾದುದು. ನಿಮ್ಮ ಅನುರಾಗದ ಅತಿ ಸುಂದರ ಸ್ತ್ರೀಯನ್ನೂ ಅವಳ ಕಾರ್ಯ ಕಲಾಪಗಳೆಲ್ಲವನ್ನೂ ಬೇರೆ ಯಾರಿಗೂ ತಿಳಿಯದಂತೆಯೇ ನೋಡಬಹುದು. ಎಲ್ಲಾ ವಾಯುಗುಣಗಳಲ್ಲಿಯೂ ಇದು ಏಕ ಪ್ರಕಾರ ಕೆಲಸ ಮಾಡುವುದು. ಗಟ್ಟಿ ಮುಟ್ಟಾಗಿದ್ದು 1 ತಲಾಂತರ ಬಾಳಿಕೆ ಬರುವುದು. ಉಪಯೋಗಕ್ಕೆ ಯಾವಾಗಲೂ ಸಿದ್ಧವಿರುವುದು. ಇದನ್ನು ತೆಗೆದುಕೊಂಡವರಿಗೆ 6 ಪ್ರಸಿದ್ಧ ಪಾರ್ಸಿ ಬೆಡ್‌ರೂಂ ಪಠಗಳು ಉಚಿತವಾಗಿ ಕೊಡಲ್ಪಡುವವು. ಸೂಚನೆಗಳ ಸಮೇತ ಒಂದರ ಬೆಲೆ ರೂ 2-0-0 ಒಮ್ಮೆಗೆ ಮೂರು ತರಿಸಿದರೆ ರೂ 5-8-0 ಮಾತ್ರ. ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಓ ಕೆ ಸ್ವಾಮಿ,
17 ಈವ್ನಿಂಗ್ ಬಜಾರ್, ಪಿ ಟಿ, ಮದ್ರಾಸು.

ರೂ, 25 ಕ್ರಯಬಾಳುವ 100 ಅತ್ಯುಪಯುಕ್ತ ವಸ್ತುಗಳಿರುವ

ಜರ್ಮನ್ ಕೋಂಬಿನೇಶನ್ ಪೆಟ್ಟಿಗೆ

ಈ ಪೆಟ್ಟಿಗೆಯಲ್ಲಿರುವ ವಸ್ತುಗಳು.

ದಿ ಸಿಲ್ವರ್ಕ್ರೆಟ್ ಫೌಂಟನ್‌ಪೆನ್ ಒಂದು, 22 ಕ್ಯರೆಟ್ ಗೋಲ್ಡ್‌ಪ್ಲೇಟ್ ಇಮಿಟೇಶನ್ ವಜ್ರದ ಉಂಗುರ 2, 22 ಕ್ಯರೆಟ್ ಗೋಲ್ಡ್‌ಪ್ಲೇಟ್ ಲಿಂಕ್ ಮತ್ತು ಸ್ಟಡ್‌ಗಳು 12, ಥಳಗಾರದ ಕತ್ತಿನೆಯ ನೆಕ್ಟಿಪಿನ್ 1, B ಸ್ಟೀಲು ನಿಬ್ಬುಗಳು 12, ಶಾಪಿಪ್ರೊಟ್ಟಗಳು 12, ಅತ್ಯುತ್ತಮ ಪೌನ್ಸೈನ್ 1, ಅತ್ಯುತ್ತಮ ಕತ್ತರಿ 1, ಸಿಕ್ಲರ್ ಜೋಡಿ ಇರುವ ಚೈನಾತಪ್ಪು 2, ಬೇರೆ ಬೇರೆ ನಮೂನೆ ನೆಕ್ಟಿಪಿನ್ನುಗಳು 25 ಉತ್ತಮ ಪೆನ್ಸಿಲುಗಳು 12, ತರತರದ ಸೇಫ್ಟಿ ಶಾಪಿಡಪ್ಪಿಗಳು 6, ಸಂಟ್ ಬಾಟ್ಲಿ 1, ಉದ್ದ ಬಾಚಣಿಗೆ 1 ನೇಶನಲ್ ಟೀಸಾಸರ್ ಚಿತ್ರಗಳು 12

ಹೀಗೆ ಒಟ್ಟು 100 ಅತ್ಯುಪಯುಕ್ತ ವಸ್ತುಗಳು ಬೆಲೆ ರೂ 3—8—0 ಬೇಕಾದವರು ಬೇಗನೆ ಈ ವಿಳಾಸಕ್ಕೆ ಬರೆದುಕೊಳ್ಳಿರಿ.

ಸಿಂಪ್ಲೆಕ್ಸ್ ನೊವೆಲ್ಟಿ ಹೌಸ್,
ಪೋಸ್ಟ್ ಬೋಕ್ಸ್ ನಂಬ್ರ 142 ಮದ್ರಾಸು.

ವಿಶೇಷದ ಮಾರಾಟ!

ಉಚಿತ! **ಉಚಿತ!**

18 ಕ್ಯಾರೆಟ್ ರೋಲ್ಡ್‌ಗೋಲ್ಡ್ ಪ್ಲೇಟ್ ಚಿನ್ನದ ಮುಚ್ಚಳಿಯಿರುವ ಮುಂಗೈ ಗಡಿಯಾರ ನಂ 100

ಇದು ಅತ್ಯಂತ ಹೊಸ ಮಾದರಿಯು, ಸುಂದರವಾದ ಆಕಾರ, ನೊಗಸಾದ ಕೆಲಸ, ಸ್ವಿಸ್ ಮೇಡ್,

A B C D



ಮುಂದಿ ಪಟ್ಟಿಯು ಪಳಪಳ ಹೊಳೆಯುತ್ತಾ ಆಕರ್ಷಿಸುತ್ತದೆ 100 ರೂ. ಮತ್ತು ಹೆಚ್ಚಿಗೆ ಬೆಲೆಯಿರುವ ಉತ್ಕೃಷ್ಟ ವಾಚಿನಂತೆ ಕಾಣುತ್ತದೆ. ಸುಂದರವಾಗಿಯೂ ಚಿಕ್ಕದಾಗಿಯೂ ಇದೆ. ಗಂಡಸರಿಗೂ ಹೆಂಗಸರಿಗೂ ಉಪಯೋಗಿಸಲು ಅನುಕೂಲವಿರುವ ಅತ್ಯುತ್ತಮ ವಾಚ್. ಯಾವ ಹವದಲ್ಲಾದರೂ ಸರಿಯಾದ ಟೈಮು ಕೊಡುವ ವಾಚ್. ಮೂರು ವರ್ಷಗಳ ಗ್ಯಾರಂಟಿ ಕೊಡಲಾಗುತ್ತೆ. ಯಾವ ಆಕಾರದ್ದಾದರೂ ಒಂದು ವಾಚನ್ನು ಒಂದು ತಿಂಗಳೊಳಗೆ ಕೊಂಡುಕೊಂಡವರಿಗೆ [illegible] ಒಂದು ಉಚಿತವಾಗಿ ಕೊಡಲಾಗುತ್ತದೆ. ಕ್ರಯ 7-8-0.

ದಿ ಪಿನ್ಸರ್ ವಾಚ್ ಮತ್ತು ಕಂಪೆನಿ,
ಪೋಸ್ಟ್ ಬೋಕ್ಸ್ ನಂ 371,
[illegible], ಮದ್ರಾಸು.

ನೋವೆಲ್ ಜೋಕಿಲಿ ಕ್ಲಾಕ್

[illegible]



[illegible] ... ಬಿಲ ಒಂದಕ್ಕೆ [illegible] ರೂಪಾಯಿ. ಒಂದನ್ನು ಕೊಳ್ಳಿರಿ ಒಳ್ಳೇ ಸಮಯ!

ಜಿ. ಪಿ. ಬಿ.
ಕೇರಿಯೋ ವಾಚ್ ಕಂಪೆನಿ,
ಮದ್ರಾಸು.

52-3

ಕಿರ್ಲೋಸ್ಕರ ಪೇಟೆಂಟ ಮಲ್ಹಾರ ತಪ್ಪಲಿ.

ಈ ತಪ್ಪಲಿಯು ನಮ್ಮ ಕಾರ್ಖಾನೆಯಲ್ಲಿಯೇ ತಯಾರಾಗುತ್ತದೆ. ಸರಕಾರದಿಂದ ಇದಕ್ಕೆ ಪೇಟಂಟ ದೊರೆತ್ತಿರುತ್ತದೆ. ಇದರ ಮುಖ್ಯ ಗುಣಗಳು:—

೧. ನೀರನ್ನು ಮಟ್ಟಿದ ಕೂಡಲೇ ತುಂಬಿ ಒಳುವದು.

೨. ಮಲಕ್ಕೆ ಬರುವಾಗ್ಗೆ ಒಂದು ಹನಿ ನಹ ನೀರು ಸೋರುವದಿಲ್ಲ.

೩. ದೋಣಾಯಲ್ಲಿ ನೀರು ಬೀಳುವಾಗ್ಗೆ ತೊಗಲಿನ ತಪ್ಪಲಿಯಂತ ವಿಸ್ತಾರವಿಡೆ ಹೋಗುವದಿಲ್ಲ.

ಬೆಲೆಬಗ್ಗೆ ಹೆಚ್ಚಿನ ಸಂಗತಿ ಬಗ್ಗೆ ಬರೆದು ತಿಳಿದುಕೊಳ್ಳಿರಿ

ಕಿರ್ಲೋಸ್ಕರ ಬಂಧು, ಲಿಮಿಟೆಡ್,
ಕಿರ್ಲೋಸ್ಕರವಾಡಿ,
16—14 **ಜಿ. ಸಾತಾರ್.**

ಲೋಕಪ್ರಸಿದ್ಧವಾದ! ಅನುಭವಸಿದ್ಧವಾದ!

ಮೂರುದಿವಸಗಳಲ್ಲಿ ಗುಣಸಿಕ್ಕದಿದ್ದರೆ ಔಷಧಿಯಕ್ರಯ ವಾಪಾಸು. ಜೀರ್ಣಶಕ್ತಿ, ರಕ್ತವೃದ್ಧಿ, ಧಾತುಪುಷ್ಟಿ, ಮನೋಲ್ಲಾಸ, ಪರಮಾನಂದ ಮೊದಲಾದ ಸುಖ ಜೀವನಕ್ಕೆ ಬೇಕಾದ ಆರೋಗ್ಯದಾಯಿಸಿ.

ಟ್ರೇಡ್‌ಮಾರ್ಕ್] **ಅಗಸ್ತ್ಯ** [ನೋಡಿ ತಿಳ್ಕೊಳ್ಳಿರಿ.

ಮನ್ಮಥ ಚಿಂತಾಮಣಿ ಲೇಹ

ರಿಜಿಸ್ಟರ್ ಆದದ್ದು.

ಆಬಾಲವೃದ್ಧ ಸ್ತ್ರೀ ಪುರುಷರ ಅನೇಕ ರೋಗಗಳ ಮೇಲೆ ಗುಣ ಕಾರಿಯಾದದ್ದು. ಮೇಹ ವಿಕಾರವಿದ್ದವರಿಗೂ, ಸಿದ್ಧೆ ಇಲ್ಲದವರಿಗೂ, ನಷ್ಟೇಂದ್ರಿಯವಾಗುವ ಬಾಲಕರಿಗೂ, ಜ್ಞಾನಿ ಸುಜ್ಞಾನಿಗಳಿಗೂ ಉಪಯೋಗವುಳ್ಳ ಏಸುಪರಮಾನಂದ ಔಷಧಿ. 1ಸೇರು 48ದಿವಸ ಸೇವಿಸಬಹುದು. ನಂ. (1) 1ಸೇರು ಡಬ್ಬಿ 1ಕ್ಕೆ ರುಪಾಯಿ 3—0—0, ½ಸೇರು ಡಬ್ಬಿ 1ಕ್ಕೆ ರುಪಾಯಿ 1—9—0, ನಂ. (2) 1ಸೇರು ಡಬ್ಬಿ 1ಕ್ಕೆ ರುಪಾಯಿ 2—0—0, ½ ಸೇರು ಡಬ್ಬಿ 1ಕ್ಕೆ 1—1—0, ವಿ ಪಿ. ಖರ್ಚು ಪ್ರತ್ಯೇಕ. ವಿಶೇಷ ಮಾಹಿತಿಗೆ ಬರಕೊಳ್ಳಿರಿ.

ವಿಳಾಸ—ದೇವಣ್ಣ ನಾರಾಯಣಸೇಟ್,
ಗೋಳಿಕಟ್ಟಾ,
ಮಂಗಳೂರು,
52—38 ದ ಕ.

ಸತ್ಯಮೇವಜಯತೇ.

(ಗುಣವಾಗದಿದ್ದರೆ ಹಣ ಶರತ)

ಧಾತುಪೌಷ್ಟಿಕ ಕಾಮೋತ್ತೇಜಕ, ಇಂದ್ರಿಯಸ್ತಂಭಕವಾದ

ಮದನೋದ್ಭವ ಗುಳಿಗೆ.

ಜನನೇಂದ್ರಿಯದ ಶಿಥಿಲತೆ ನಿರ್ಬಲತೆ ನಪುಂಸಕತ್ವ ಕ್ಷೀಣತೆ, ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತು ಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋಲ್ಲಾಸಕ ಇಂದ್ರಿಯಸ್ತಂಭಕ, ಗರ್ಮಿ, (ಟಾಕಿ) ಗುಪ್ತಪ್ರದೇಶದ ಮೇಲೆ ಹುಟ್ಟುವ ಎಲ್ಲ ತರಹದ ಬಕ್ಕೆಗಳು, ಹುಣ್ಣುಗಳು ಪಿತ್ತದ ಭಾಧೆಗಳು, ಕಟಶೂಲೆ ವಾತರೋಗವು ಮುಂತಾದವು ಆಶ್ಚರ್ಯಕರವಾಗಿ ನಿರ್ಮೂಲವಾಗಿ ಶರೀರಕ್ಕೆ ನಿರೋಗತ್ವವೂ ಕಾಂತಿಯೂ ರತಿಸುಖಕ್ಕೆ ಸಂಪೂರ್ಣ ಶಕ್ತಿಯೂ ಉಂಟಾಗುತ್ತವೆ ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗುತ್ತವೆ. ಕಿಮ್ಮತ್ತು ೬೦ ಗುಳಿಗೆಗಳಿಗೆ ೪ ರೂಪಾಯಿ ಇದನ್ನು ಸೇವಿಸುವಾಗ್ಗೆ **ನಪುಂಸಕತ್ವಾರಿ ತೈಲವನ್ನು** ಉಪಯೋಗಿಸಿದರೆ ಉತ್ತಮ. ಕಿಮ್ಮತ್ತು ಬಾಟ್ಲಿಗಳಕ್ಕೆ ರೂ. ೨—೧೨—೦,

ಪ್ರಮೇಹನಿವಾರಣೆ—ಇದರ ಸೇವನೆಯಿಂದ ಮೂತ್ರ [illegible] ಗುಣವಾಗುವವು ಕಿಮ್ಮತ್ತು ಬಾಟ್ಲಿಗಳಕ್ಕೆ ರೂ ೩—೮—೦ [illegible]

[illegible] ಕಳುಹಿಸಿದರೆ ಕ್ಯಾಟಲಾಗವು [illegible]

ವೈದ್ಯ ಜಿ. ಎಲ್. ಜೋಶಿ ಮತ್ತು ಕಂಪೆನಿ.
18. ನಂ 6. ಪೋಸ್ಟು ಜನವಾಸಿ, ಉತ್ತರ ಕಾನಡಾ.

ಒಂದು ಪ್ರಬಲವಾದ ಪ್ರಶ್ನೆ.

ನಮ್ಮ ಜೀವವನ್ನು ಏತಕ್ಕಾಗಿ ವಿಮೆಮಾಡಬೇಕು!

ವೃದ್ಧಾಪ್ಯದಲ್ಲಿ ನಮ್ಮ ಮತ್ತು ಹೆಂಡತಿ ಮಕ್ಕಳ ಪೋಷಣೆಗಾಗಿ!

ಈಗಾಗಲೇ ಸಾವಿರಾರು ಜನರು ವಿಮೆಮಾಡಿರುವ ೪ ಕೋಟಿ ರೂಪಾಯಿಗಿಂತ ಹೆಚ್ಚು ಬಂಡವಾಳವಿರುವ ದೇಶೀಯ ವಿಮೆಕಂಪನಿಯಲ್ಲಿ ಅತ್ಯಂತ ದೊಡ್ಡದಾದ ಸಾವಿರ ರೂಪಾಯಿ ವಿಮೆಮಾಡಿದವರಿಗೆ ವರ್ಷಕ್ಕೆ 18ರೂ. ಕಡಿಮೆಯಿಲ್ಲದೆ ಲಾಭ ಕೊಡುವ ' **ಓರಿಯಂಟಲ್** ' ಗವರ್ನಮೆಂಟ್ ಜೀವವಿಮೆ ಕಂಪೆನಿಯ ರೂಲ್ಸಿಗೂ, **ಶರತಿಗೂ ಈ ಕೆಳಗಿನವರಿಗೆ** ಬರೆದು **ತಿಳಿದುಕೊಳ್ಳಿ**.

ಖಾದಿಬಟ್ಟೆ ಎಂದರೇನು?

ದೇಶೀಯ ಹತ್ತಿಯಲ್ಲಿ ಕೈರಾಟೆಯಿಂದ ನೂಲು ತೆಗೆದು ಇಲ್ಲಿಯೇ ತಯಾರಿಸುವ ಬಟ್ಟೆಯೇ ' ಖಾದಿ. ' **ಈಗಾಗಲೇ** ನಮ್ಮ ಸ್ಟೋರಿನಲ್ಲಿ ಪರದೇಶೀಬಟ್ಟೆಗಿಂತ ಗಟ್ಟಿಯಲ್ಲಿಯೂ ಅಂದದಲ್ಲಿಯೂ ಕಡಿಮೆ ಇಲ್ಲದಂತ, ಎಲ್ಲಾ ತರದ ಶೀರೆಗಳು ಚಿಕ್ಕಗಳು, ಶಾಲು ವಸ್ತ್ರ ಎಲ್ಲಾ ತರದ ಬಟ್ಟೆಯು ತಯಾರಾಗಿದೆ. ದಯವಿಟ್ಟು ಪ್ರೋತ್ಸಾಹಿಸಿರಿ! ಖಾದಿಯಿಂದಲೇ ಸ್ವರಾಜ್ಯ. ಖಾದಿಯಿಂದಲೇ ಮೋಕ್ಷವೆಂಬುದನ್ನು ಮರೆಯಬೇಡಿರಿ.

ವೀರರಾಜಪೇಟೆ, ಕೆ. ಪಿ. ಚಿಣ್ಣಪ್ಪ,
ದಕ್ಷಿಣ ಕೊಡಗು. ಪ್ರೊಪ್ರೈಟರ್,
ಖಾದಿಭಂಡಾರ.

52—8.

ಡಾಕ್ಟರ್ ಎಸ್ ಎನ್. ಅಯ್ಯಂಗಾರ್, ಬಿ ಎ.,
ಎಲ್ ಆರ್ ಸಿ ಪಿ ಅಂಡ್ ಎಸ್. (ಎಡಿನ್‌ಬರ್ಗ್)
ಎಲ್. ಎಫ್ ಪಿ ಅಂಡ್ ಎಸ್., [ಗ್ಲಾಸ್‌ಗೊ.]

ದಂತ ವೈದ್ಯರು

ಸೋಮವಾರಪೇಟೆ ದೊಡ್ಡ ಬೀದಿಯಲ್ಲಿ ಉಳಕೊಳ್ಳುವರು. ಅಲ್ಲಿ ಅವರನ್ನು ಭೇಟಿಮಾಡಬಹುದು.

ದಂತ ಸಂಜೀವಿನಿ.

ಯಾವ ತರದ ಹಲ್ಲುನೋವನ್ನಾದರೂ ಥಕ್ಕನೆ ಶಮನ ಮಾಡುವ ಶಕ್ತಿಯುಳ್ಳ ಈ ದಂತ ಸಂಜೀವಿನಿ ಕುಪ್ಪಿ ಒಂದಕ್ಕೆ ಕ್ರಯ ರೂ 1—0—0 ಮಾತ್ರ. ಎಸ್ ರಾಮಣ್ಣ.
C/o ಡಾಕ್ಟರ್ ಎಸ್. ಎನ್, ಅಯ್ಯಂಗಾರ್.
48-20 ಮಹದೇವಪೇಟೆ, ಮಡಿಕೇರಿ.

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್, ಕೊ ಅಪರೇಟಿವ್ ಸೊಸೈಟೀಸ್ ಆಕ್ಟ್ಪ್ರಕಾರ ರಿಜಿಸ್ಟರಾಗಿದೆ.

		ರೂ.
ಶೇರ್ ಬಂಡವಾಳ	—	50,000
ವಸೂಲಾದ ಶೇರ್ ಮೊಬಲಗು	—	3890
ಜಮಾಬಂದ ಠೇವಣಾತಿ	—	90,600

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲಕೊಡತಕ್ಕದ್ದು.

ಒಂದು ವರ್ಷ ವಾಯಿದೆ ಅಥವ ಹೆಚ್ಚಿನ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ ರೂ. 6-4-0ರ ದರದಲ್ಲಿ ಬಡ್ಡಿ ದೊರೆಯುತ್ತೆ. ಕಡಿಮೆ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ 5ರ ಬಡ್ಡಿ ದೊರೆಯುತ್ತೆ.

ವರ್ಷಕ್ಕೊಂದಾವರ್ತಿ ಕೊ ಅಪರೇಟಿವ್ ರಿಜಿಸ್ಟ್ರಾರವರು ಲೆಕ್ಕ ಅಜಮಾಯಿಷಿ ಮಾಡುತ್ತಾರೆ.

ಪ್ರೆಸಿಡೆಂಟರು, ಟ್ರೆಜರರ್.
ಕೊಡಂದೆರ ಕುಟ್ಟಯ್ಯನವರು, ಯಂ. ಭುಜಂಗರಾಯರು
ರಾಯ್ ಬಹದ್ದೂರ್. ಬಿ.ಎ, ಬಿ.ಎಲ್.

ಸೆಕ್ರೆಟರಿ.

ಸಿ ಯನ್. ವೆಂಕಪ್ಪಯ್ಯನವರು, ಬಿ.ಎ, ಬಿ.ಎಲ್.

ತಾರೀಖು 29—8—1925.

ARMS & AMMUNITION MART.

Mahomedally-Noorbhoy

321, Abdul Rehman Street, near Crawford Market, BOMBAY 3
Telegraphic Address.—"SHOOTER" Bombay.
[52—38] Please write for Reduced nett prices list for 1926.

Printed & published by Kodanda Appayya, R B, Chairman, Board of Directors, at " Kodagu " Press, Mercara fr " Kodagu " Ltd.

ಕೊಡಗು.

KODAGU (COORG) WEEKLY MERCARA

ಸತ್ಯೇನ ಧಾರ್ಯತೇ ಪೃಥ್ವೀ ಸತ್ಯೇನ ತಪತೇ ರವಿಃ || ಸತ್ಯಮಕ್ಷೀಣ ದೇಶಾನಾಂ ಸುಸ್ಥಿರಾ ರಾಜ್ಯ ಸಂಪದಾ ||

ಸಂಪಾದಕ—ಪಂದ್ಯಂಡ ಐ. ಬೆಳ್ಯಪ್ಪ

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವದು.

ಸಂಪುಟ ೫] ಕೊಡಗು, ಸ್ ೧೯೨೬ನೇ ಇಸವಿ ಮೇ ತಾರೀಕು ೨೮ ನೇ ಶುಕ್ರವಾರ [ಸಂಚಿಕೆ ೫೦

ಸ್ಥಾಪಿತವಾದದ್ದು 1874 ಮೂಲಧನ 7 ಕೋಟಿ ರೂಪಾಯಿಗಳು

ಓರಿಯಂಟಲ್ ಗವರ್ನ್‌ಮೆಂಟ್ ಸೆಕ್ಯೂರಿಟಿ ಲೈಫ್ ಅಷ್ಯೂರೆನ್ಸ್ ಕಂಪೆನಿ ಲಿಮಿಟೆಡ್, ಹೆಡ್ ಆಫೀಸು— ಬೊಂಬಾಯಿ

1922–1924 ಈ ಮೂರು ವರ್ಷಗಳಲ್ಲಿ ಕಂಪೆನಿಯಲ್ಲಿ ನಡೆದ ಕೆಲಸದ ಫಲಿತಾಂಶಗಳು —

ಲಾಭ— ರೂ 51,00,000 (ಐವತ್ತೊಂದು ಲಕ್ಷ ರೂಪಾಯಿಗಳು) ಈ ಪೈಕಿ 15 94 80 ರೂಪಾಯಿ ಗಳನ್ನು ಲಾಭ ಸಹಿತ ವಿಮೆ ಮಾಡಿರುವವರ ವಿಮೆ ಹಣಕ್ಕೆ ಹೆಚ್ಚು ಬೋನಸ್ ರೂಪವಾಗಿ ಈ ಕೆಳಗೆ ಕಾಣಿಸಿರುವ ರೀತಿಯಲ್ಲಿ ಸೇರಿಸಿರುತ್ತದೆ

ಜೀವಮಾನಾವಧಿಯ ವಿಮೆದಾರರಿಗೆ ರೂ 1000 ವಿಮೆ ಹಣಕ್ಕೆ

ಈ ಮೂರು ವರ್ಷಗಳಿಗೆ ರೂ 67½

ಕ್ಲಿಪ್ತಕಾಲದ ವಿಮೆದಾರರಿಗೆ ರೂ 1000 ವಿಮೆ ಹಣಕ್ಕೆ

ಈ ಮೂರು ವರ್ಷಗಳಿಗೆ ರೂ 54

ಈ ಕಂಪೆನಿಯಲ್ಲಿ ಕ್ರಮೇಣ ಹೆಚ್ಚುತ್ತಿರುವ ಜನಾನುರಾಗವು ಈ ಕೆಳಗೆ ಕಟ್ಟಿರುವ ಹೊಸ ಕೆಲಸದ ಪಟ್ಟಿಯಿಂದ ವ್ಯಕ್ತವಾಗುತ್ತದೆ

1923ರಲ್ಲಿ—ರೂ	1 74 00,000
1924 ,,	2 37 00,000
1925 ,,	2 96 00,000

ಇನ್ನೂ ದಿನದಿನಕ್ಕೂ ಅಭಿವೃದ್ಧಿಯಾಗುತ್ತಲೇ ಇದೆ ಜೀವವಿಮೆ ಪತ್ರದಲ್ಲಿ ಹಣವನ್ನು ಲಾಭಕರವಾಗಿ ತೊಡಗಿಸಲು ಇದೇ ಸುಸಮಯ

ಬೇಕಾದ ವಿಷಯಗಳನ್ನು ಈ ಕೆಳಗಿನ ವಿಳಾಸಕ್ಕೆ ಬರೆದು ತಿಳಿದುಕೊಳ್ಳಬಹುದು.

ಓರಿಯಂಟಲ್ ಬಿಲ್ಡಿಂಗ್ಸ್,
ಪೋಸ್ಟ್ ಬಾಕ್ಸ್ 56
ಬೆಂಗಳೂರು

ಪಿ ಪಿ ಸುಬ್ರಹ್ಮಣ್ಯಯ್ಯರ್,
ಬ್ರಾಂಚ್ ಸಕ್ರೆಟರಿ

52—8

ಮನೋಲ್ಲಾಸಿನಿ ತೈಲ.

ತಲೆನೋವು ತಲೆ ತಿರುಗುವುದು, ತಲೆಯಿಂ ಕಣ್ಣುರಿ, ಕಿವಿಯಿಂದ ಕೀವು ಸೋರುವುದು ಕಿವುಡುತನ, ಕಣ್ಣುನೋವು, ಅಪಸ್ಮಾರ ನಿದ್ರೆ ಬಾರದಿರುವುದು, ನೆನಪು ಶಕ್ತಿ ಕುಂದಿಹೋಗುವುದು ಇವುಗಳನ್ನೆಲ್ಲ ಖಂಡಿತ ಗುಣಪಡಿಸುತ್ತದೆ ಉದುರುವ ಕೂದಲನ್ನು ನಿಲ್ಲಿಸಿ ಗಿಡ್ಡಗಿರುವ ಕೂದಲನ್ನು ಬೆಳೆಯಿಸಿ ಕೂದಲಿಗೆ ಸೌಂದರ್ಯವನ್ನೂ ಹೊಳಪನ್ನೂ ಕೊಟ್ಟು ಅಕಾಲಕ್ಕೆ ಹಣ್ಣಾಗುವ ಕೂದಲನ್ನು ತಡೆದು ಕೂದಲು ಇಲ್ಲದ ಸ್ಥಳದಲ್ಲಿ ಹೊಸ ಕೂದಲನ್ನು ಹುಟ್ಟಿಸುತ್ತದೆ ಬೆಲೆ ಸೀಸೆಗೆ ರೂ 1, 3 ಸೀಸೆಗೆ 2—10—0 ಒಂದು ದೊಡ್ಡ ಸೀಸೆಗೆ ರೂ 2, 3 ಸೀಸೆಗಳಿಗೆ 5—8—0

ಚಂದನಾಸವ.— ಇದು ಪ್ರಮೇಹ ಮೂತ್ರಕೃಚ್ಛ್ರ ಮೂತ್ರ ಹನಿಹನಿಯಾಗಿ ಹೋಗುವುದು ಮೂತ್ರಕೋಶದ ಉರಿ, ಮೂತ್ರ ಪಿಂಡಗಳ ಉರಿ ಮೂತ್ರನಾಳದಲ್ಲಿ ಹುಣ್ಣು ಮೂತ್ರ ಹೊಯ್ಯುವಾಗ ಉರಿಯುವುದು ಮೂತ್ರನಾಳದಿಂದ ಕೀವು ಬರುವುದು ಮೂತ್ರದಲ್ಲಿ ಧಾತು ಹುದಿ ಹೋಗುವುದು, ಆಗಾಗ್ಗೆ ಮೂತ್ರ ಬರುವದು ಮೂತ್ರ ಸಡೆ ಮಲಿಕ್ಕೆ ಸಾಮರ್ಥ್ಯವಿಲ್ಲದ ದ ಪ್ರವ ದೇಹದಲ್ಲಿ ಉರಿ ಬಾಯಾರಿಕೆ, ಸ್ವಪ್ನಾವಸ್ಥೆ ಮೂತ್ರನಾಳವನ್ನು ಮುಟ್ಟುವ ನೋವು ಇವುಗಳಿಗೆ ಪರಮ ಔಷಧಿ ಗಂಡಸರಿಗೂ ಹೆಂಗಸರಿಗೂ ಅತ್ಯುತ್ತಮ ಬೆಲೆ—ಬಾಟ್ಲಿ 1 3 6ಕ್ಕೆ ರೂ 1—1—0 3—8—0 —1—0

ರೋಮನಾಶಿನಿ — ಈ ಹುಡಿಯನ್ನು ನೀರಲ್ಲಿ ಕಲಸಿ ಎಲ್ಲಿ ರೋಮವಿರುವ ಭಾಗಕ್ಕೆ ಹಚ್ಚಲು ರೋಮವು ಉದುರಿ ಬೀಳುವುದು ಡಬ್ಬಿ ೧ಕ್ಕೆ 6 ಆಣೆ, 3 ಡಬ್ಬಿಗಳಿಗೆ ರೂ 1, 1 ಡಜನಿಗೆ 3-8-0

ಅಮೃತರಿಷ್ಟ.— ಇದು ಕ್ವಿನೈನು ಬೆರಸದಿರುವ ಉತ್ತಮವಾದ ಔಷಧಿ ಎಲ್ಲಾ ತರದ ಜ್ವರಕ್ಕೆ ಉತ್ತಮ ಬೆಲೆ — ಬಾಟ್ಲಿ 1, 3, 6ಕ್ಕೆ ರೂ 1—4—0 3—8—0 6—12—0

ಲೋಹಾಸವ.— ಇದು ಜ್ವರಗಡ್ಡೆಗೆ ಮತ್ತು ಮಲೇರಿಯದಿಂದುಂಟಾದ ಅಶಕ್ತತೆಗೆ ದಿವ್ಯವಾದ್ದು ಬೆಲೆ—ಬಾಟ್ಲಿ 1, 3 6ಕ್ಕೆ ರೂ, 1—4—0 3—8—0, 6—12—0

ನಮ್ಮ ಕೆಟಲಾಗು ತರಿಸಿ ನೋಡಿರಿ

ವಿಳಾಸ—ಮನೋಲ್ಲಾಸಿನಿ ಕಂಪೆನಿ,
9 ಮಂಗಳೂರು, ಕಂಕನಾಡಿ.

52—23

ಸತ್ಯಮೇವ ಜಯತೇ.

(ಗುಣವಾಗದಿದ್ದರೆ ಹಣ ಪರತ)

ಪಾಶ್ಚಾತ್ಯ ಕಾಮೋತ್ತೇಜಕ ಇಂದ್ರಿಯಸ್ತಂಭಕವಾದ

ಮದನೋದ್ಭವ ಗುಳಿಗೆ.

ಜನನೇಂದ್ರಿಯದ ಶಿಥಿಲತೆ ನಬಲತೆ ನಪುಂಸಕತ್ವ ಶೀಘ್ರ ಸ್ಖಲನ ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತು ಪೌಷ್ಟಿಕ, ವೀರ್ಯವರ್ಧಕ ರಕ್ತಶೋಧಕ ಕಾಮೋತ್ತೇಜಕ ಮನೋಲ್ಲಾಸಕ ಇಂದ್ರಿಯಸ್ತಂಭಕ ಗರ್ಮಿ (ಬಿ—) ಗುಹ್ಯಪ್ರದೇಶದ ಮೇಲೆ ಹುಟ್ಟಿರುವ ಎಲ್ಲ ತರಹದ ಚಕ್ಕೆಗಳು, ಹುಣ್ಣುಗಳು ಪಿತ್ತದ ಭಾಧೆಗಳು, ಕಟಿವಾತ ವಾತರೋಗವು ಮುಂತಾದವೆ ಆಶ್ಚರ್ಯಕರವಾಗಿ ವಾಸಿಯಾಗುತ್ತವೆ ... ಶಾಂತಿಯೂ ರತಿಸುಖಕ್ಕೆ ಸಂಪೂರ್ಣ ಶಕ್ತಿಯೂ ಉಂಟಾಗುತ್ತದೆ ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗುತ್ತವೆ ಕಿಮ್ಮತ್ತು ೬೦ ಗುಳಿಗೆಗಳಿಗೆ ೪ ರೂಪಾಯಿ ಇವನ್ನು ಸೇವಿಸುವಾಗ್ಗೆ **ನಪುಂಸಕತ್ವಾರಿ ತೈಲವನ್ನು** ಉಪಯೋಗಿಸಿದರೆ ಉತ್ತಮ ಕಿಮ್ಮತ್ತು ಬಾಟ್ಲಿ ೧ಕ್ಕೆ ರೂ ೨—೮—೦

ಪ್ರಮೇಹನಿವಾರಣಿ—ಇದರ ಸೇವನೆಯಿಂದ ಮೂತ್ರಸಾಗದಿಂದ ಕೆಂಪು ಹಳದಿಯಂತೆ ಹೋಗತಕ್ಕ ಕೀವು ಉರಿ ವಗೈರೆ ಆಗದಿನಾಕ್ಷಿಯಿಂದ ಗುಣವಾಗುವದು ಕಿಮ್ಮತ್ತು ಬಾಟ್ಲಿ ೧ಕ್ಕೆ ರೂ ೧—೨—೦ ಟಿ ಪಿ ಬೇರೆ ಅನುಪಾನ ಪತ್ರಿಕೆ ಔಷಧದ ಸಂಗಡ

ಮಂದಾಗ ಸ್ಟಾಂಪು ಕಳುಹಿಸಿದರೆ ಕ್ಯಾಟಲಾಗು

ವಿಳಾಸ —

ವೈದ್ಯ ಜಿ ಎಲ್ ಜೋಶಿ ಮತು ಕಂಪೆನಿ.

19 ನಂ 6 ಪೋಸ್ಟ ಒನವಾಲ, ಉತ್ತರ ಕಾನಡಾ

EMPIRE OF INDIA LIFE ASSURANCE CO., LTD.

(Established 1897)

ALL WITH PROFIT POLICIES

Issued before 28th February, 1927 will share in the BONUS Distribution for the five years ending on that date

PROSPECTUS ON APPLICATION

Bangalore Branch
152 Commercial Street
24-16

Madras Branch
9 & 10 Second
Line Beach

ARMS & AMMUNITION MART,

Mahomedally-Noorbhoy



321 Abdul Rehman Street, near Crawford Market, BOMBAY 3
Telegraphic Address – "SHOOTER" Bombay

[52—33] Please write for Reduced nett prices list for 1926

ಬೆಸ್ಟ್ ಲೀವರ್ ಪಾಕೆಟ್ ವಾಚ್.

ಈ ಗಡಿಯಾರವು ಉತ್ತಮವಾದ ಸಾಮಾನುಗಳಿಂದ ತಯಾರಿಸಲ್ಪಟ್ಟದ್ದು ನೋಟಕ್ಕೆ ಬಹು ಗಂಭೀರವಾಗಿಯೂ ಸುಂದರವಾಗಿಯೂ ಉಳ್ಳದ್ದು ಇದರ ಎಲ್ಲಾ ಸಾಮಾನುಗಳು ಬಹು ನಾಜೂಕಾದ ಯಂತ್ರಗಳಿಂದ ತಯಾರಿಸಲ್ಪಟ್ಟದ್ದು ಇದನ್ನು ಬೇಕಾದಲ್ಲಿ ಹಾಕಿಕೊಂಡು ಎಷ್ಟು ದೂರ ಓಡಿದಾಗ್ಯೂ ನಿಲ್ಲದೆ ನಡೆಯುತ್ತಿರುವದು ಇಷ್ಟು ಸುಲಭ ಕ್ರಯಕ್ಕೆ ಇತರ ಕಂಪೆನಿಯಲ್ಲಿ ದೊರೆಯಲಾರದು

12—4 ಇದರ ಕ್ರಯ ರೂ 4 0 0

ಪಗಡೆ ಆಟದ ಮನೆ ಮತ್ತು ದಾಳ

ಕಾಲ ಕಳೆಯುವದಕ್ಕಾಗಲೀ, ವಿನೋದಕ್ಕಾಗಲೀ, ಆಡುವದಕ್ಕೆ ಇದೊಂದು ಚಂದ ಆಟವಾಗಿರುವದು. ಅನೇಕ ತರದ ಕಲಾತ್ ಬನಾತುಗಳಿಂದ ಆಟದ ಮನೆಗಳನ್ನು ಹೊಲಿದಿರುತ್ತೆ 4 ಬಣ್ಣಗಳ 16 ಪಗಡೆ ಕಾಯಿಗಳು ಮತ್ತು ದಾಳಗಳು ಸಹ ಇರುವದು ಸೆಟ್ 1ಕ್ಕೆ (0—10—0)

ವಿಳಾಸ — ಎಲ್ಗಿನ್ ವಾಚ್ ಕಂಪೆನಿ,
ಪಿ ಬಿ. ನಂಬರ್ 1251
ಮದರಾಸು.

ಬೇಕಾಗಿವೆ.

ಬೀಟಿ ಮರದ ತೊಲೆಗಳು ಬೇಕಾಗಿವೆ

ಒಳ್ಳೆ ಬೆಲೆ ಕೊಡಲಾಗುವುದು. ಹೆಚ್ಚಿನ ಸಂಗತಿಗಳನ್ನು ಈ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳುವದು

WANTED

Rose wood logs (Beeti)
Good price offered.
For further particulars please apply to.—

R FRAMJEE,
Mercara.

12 ...

ಕೆ. ಸಿ. ಅಪ್ಪಚ್ಚು.
ದಂತ ವೈದ್ಯರು.

ಇದೇ ತಾರೀಖು ೭ರಿಂದ ಮಡಿಕೇರಿಯಲ್ಲಿ ಉಳಕೊಳ್ಳುವರು. ಬಾಯಿನೋವುದಾರರು ಅವರನ್ನು ಅಲ್ಲಿ ಹೋಗಿ ನೋಡಬಹುದು. ಇಂಥಾ ಸಮಯವನ್ನು ಕಳಕೊಳ್ಳಬೇಡಿರಿ ಕನ್ಸಲ್ಟಿಂಗ್ ಚಾರ್ಜು ಇಲ್ಲದೆ ನೋಡುವರು 52-8

"ಕೊಡಗು"

೧೯೩೬ನೇ ಇಸವಿ ಮೇ ತಾ
೨೯ನೇ ಶುಕ್ರವಾರ

ಬಸ್ಸು ಸರ್ವೀಸುಗಳು.

ಕೊಡಗು ದೇಶದಲ್ಲಿ [illegible] ಟಾಗುವ ಅಪಾಯಕರಗಳನ್ನು [illegible] [illegible]

[illegible]

ರಿಗೆ ನಡೆಸುತ್ತದೆನ್ನು

ಬಸ್ಸು [illegible] [illegible]

[illegible] ಸರ್ವೀಸುಗಳಲ್ಲಿ ಎಷ್ಟು ದುಃಖಕ್ಕೆ ದರೂ ಸಾಧಾರಣವಾಗಿ ಪ್ರಯಾಣಿಕರ ಸಾಮಾನುಗಳನ್ನೆಲ್ಲಾ ಪ್ರಕಟಿಸಿಯಾಗಿ ತಗೆದು [illegible]

ಕೊಂಡುಹೋಗುತ್ತಿರುವದು ಸರಿಯೇ ಅಲ್ಲವೇ? ವೀರಾಜ ಪೇಟೆ ಮಡಿಕೇರಿ ಲೈನಿನಲ್ಲಿರುವ ಕೂತಿಲಿ ಹಾಗಿನ ವ ಕ್ಕ್ಯ ಗಂಡಸರ ಸುಂದರ [illegible] ಎತ್ತಿ ನ ಕ [illegible] ಬಸ್ಸುಗಳ ಬಲು ವ್ಯಸನಾದ ಮೆಯಿ ಲಿ ಸರ್ವೀಸಿನವರೂ ವಿಶಿಷ್ಟ ಯು ವೀರಾಜಪೇಟೆ ಸರ್ವೀಸಿನವರೂ [illegible] ಬಸ್ಸುಗ ಳನ್ನು ಹೊಸದಾಗಿ [illegible] ಪೋಸ್ಟಾಫೀಸು [illegible] ಮಡಿಕೇರಿ [illegible]

[illegible]

ಬಸ್ಸಿನ [illegible] ಲೈನನ್ನು ಕೂಡ [illegible] ಬಸ್ಸುಗಳಾದರೆ [illegible] ಒಂದು ಕಂಪೆನಿಯವರ [illegible] ಒಟ್ಟಿರುವದು ಎಂದೂ [illegible] ಬಸ್ಸು ಸರ್ವೀಸುಗಳನ್ನು [illegible] ಬಂದಾದನಂತರ ಅರ್ಜಿಯನ್ನು [illegible] ನಾವಾಗಿ ತಿಳಿಯಬಂದಿದೆ. ಈ ಇತ್ತ [illegible] ಅಲ್ಲದೆ ರಸ್ತೆಗಳನ್ನು ಮಾಡುತ್ತಿರುವ [illegible] ಒಂದೇ ಸಮನಾಗಿ ಸಂಬಂಧಿಸಿದುದರಿಂದ [illegible] ಲೈನನ್ನು ಕೂಡಲು ಅಂಥಾ [illegible] ಕಾರಣವಿಲ್ಲ. ಒಂದು ವೇಳೆ [illegible] ತಿಳಿಯಬರುತ್ತಿವೆ ಎಂದು [illegible] ಕೆಲವು ಕಂಪೆನಿಗಳಾದವು. ಇನ್ನು ಬಸ್ಸುಗಳನ್ನು ಓಡಿಸಗೊಡದೆ ಇರುವದರ ಅರ್ಥವೇನು? ತ. ಪಟ್ಟಣದ ಲೈನುಗಳಲ್ಲಿ ಅಂದರೆ ವೀರಾಜಪೇಟೆ-ತಲಚೇರಿ, ವೀ

ರಾಜಪೇಟೆ ಮೈಸೂರು, ಮಡಿಕೇರಿ-ಮೂದಾಪುರ ರಸ್ತೆಗಳ ಲ್ಲಿ ಹಾಗೆ ಸರ್ವೀಸಿಗೆ ಲೈಸೆನ್ಸು ಕೊಟ್ಟು ವೀರಾಜಪೇಟೆ-ಮಡಿಕೇರಿ ಲೈನಿಗೆ ಮಾತ್ರ ಆಷ್ಟು ಹಾಕಿದವರ ಕಡೆ ಬೇರೆ ಜನರಿಗೆ ಲೈಸೆನ್ಸು ಕೊಡದೆ ಬಾಕಿ ಇಡಲು ಕಾರಣವೇ ನೆಂಬುದನ್ನು ಅಧಿಕಾರಿಗಳು ಜನರ ತಿಳುವಳಿಕೆ ಬಗ್ಗೆ ವಹನೆ ಪ್ರಕಟಿಸವೇಕಾದದ್ದು ಅವಶ್ಯವಾಗಿದೆ.

ಸ್ಪರ್ಧೆ ಏಟ್ಟರೆ ಹಲವು ಬಸ್ಸುಗಳು ಒಂದೇ ಲೈನಿಗಾ [illegible] ಓಡಾಡುವುದರಿಂದ ರಸ್ತೆಯು ಹಾಳಾಗುತ್ತದೆಂದು ಹೇಳ [illegible] ಬೇರೆ ಪ್ರಾಂತಗಳಲ್ಲಿ ಬಸ್ಸಿಗೆ [illegible] ಉಪಯೋಗಿಸುತ್ತಿ [illegible] ಬಾರಿಗೆ ತರಬೇ [illegible] ಕಾಯಮ್ಮಾತಾ [illegible] ಒಂದು ಲೈನಿ [illegible] ಉಚಿತವ [illegible] ಅತಿ ಕಮ್ಮಿ ದರದಲ್ಲಿಯೂ, ಪ್ರ [illegible] ಕೂಡಬಾರ [illegible] ಲೈಸಾ [illegible] ರಸ್ತೆಯು ಕೂಡಾಗಿನ [illegible] ಬಸ್ಸುಗಳು ಓಡ್ಡಾಡಲು [illegible] ಸಾಧ್ಯವಿಲ್ಲ.

[illegible] ಬಹಳ ಹಿಂ [illegible] ಉತ್ಸಾ [illegible]

[illegible]

[illegible] ಪೋಟಿ [illegible]

[illegible] ಮಡಿಕೇರಿ [illegible] ಅಧಿಕಾರಿ [illegible]

[illegible] ಕೊಡಗಿನ [illegible] ಸರ್ಕಾರದ [illegible] ಒಟ್ಟಾಗಿ [illegible] ಹೋಗಲಾಡಿಸಿ [illegible] ಬರೆಯಲಿಕ್ಕೆ ಸಾಗಿ ನಂಬುತ್ತೇವೆ.

ಇಂಗ್ರಿಯ ವಿಜಯ

"ಬಲವಾನಿಂದ್ರಿಯಗ್ರಾಮೋ ವಿದ್ವಾಂಸಮಪಿ ಕ ರ್ಷತಿ" ಎಂದರೆ ಇಂದ್ರಿಯಗಳು ವಿದ್ವಾಂಸನನ್ನಾದರೂ ಎಳೆ ದು [illegible] ವಿದ್ವಾಂಸನನಕ್ಕೆ ಒಂದು [illegible] ಇಂದ್ರಿಯಗಳ ಅಧೀನರಾಗಿ ಒಂದು [illegible] ಶಕ್ತಿಯು ಬಹು [illegible] ಅದರಲ್ಲಿ ವಿದ್ಯಾ [illegible] ಶಕ್ತಿಯುಂಟಾಗಿದೆ. ಆದರೆ ಎಲ್ಲವೂ ಆಗಲಾರದ [illegible] ಅನೇಕ [illegible] ಬಿಡುವದು [illegible] ಉಪಯೋಗಿಸುವದು ವಿ [illegible] ಹಿತವಾಗಿರುತ್ತದೆ. ವೇದದಲ್ಲು ಹುಟ್ಟಿದವನ್ನು [illegible] ಉಪಯೋಗಿಸದೆ ಕೆಲವು ಕಾಲ ಮೂಲೆಯಲ್ಲಿಟ್ಟಿದ್ದರೆ [illegible] [illegible] ಅದನ್ನು [illegible] ಹೆಚ್ಚಿನ ಪ್ರಯತ್ನವೇ ಬೇಕಾಗುವ ದು. ಈ ಸಂಗತಿಗಳು ಎಲ್ಲರಿಗೂ ತಿಳಿದವೇ ಆಗಿವೆ. [illegible] ಸಾಧನಗಳಾದ ಆಯುಧಗಳ ವಿಷಯವು, ಹೇಗೋ ಅಂತಃ [illegible] ಶಕ್ತಿಸಾಧನಗಳ ವಿಷಯವೂ ಹಾಗೆಯೇ. ಯಾರಿಗೆ ಯಾ [illegible] ವೃದಲ್ಲಿ ಆಸಕ್ತಿ ಇದೆಯೋ, ಅವರಿಗೆ ಆ ಸಂಬಂಧವಾದ ಶಕ್ತಿ [illegible]

(4 ನೇ ಪುಟದಲ್ಲಿ ಮುಂದುವರಿದಿದೆ.)

ಮಹಾತ್ಮಗಾಂಧಿಯವರ ಸ್ವಚರಿತ್ರೆ.

(ಕಳೆದ ವಾರದಿಂದ ಮುಂದುವರೆದದ್ದು.)

16 ನೆಯ ಪ್ರಕರಣ

ಬದಲಾವಣೆ.

ನಾನು ನರ್ತನಗಾನಾದಿಗಳನ್ನು ಕಲಿಯುತ್ತಿದ್ದವೇಳೆಯಲ್ಲಿ ಭೋಗಲಾಲಸನಾಗಿದ್ದೆನೆಂದು ಯಾರೂ ತಿಳಿಯಬಾರದು. ಆಗಲೂ ನಾನು ನನ್ನ ಶರೀರದ ವಿಚಾರವಾಗಿ ಯೋಚಿಸುತ್ತಿದ್ದೆನು. ಆತ್ಮಪರೀಕ್ಷೆಯನ್ನು ಮಾಡಿಕೊಳ್ಳುತ್ತಲೇ ಇದ್ದೆನು. ನಾನು ವ್ಯಯಮಾಡಿದ ಹಣದಲ್ಲಿ ಆಣೆ ಮತ್ತು ಕಾಸಿಗೆ ಸಹ ಲೆಕ್ಕವಿಟ್ಟಿದ್ದೆನು. ಟ್ರಾಂ ಬಂಡಿ ಇತರ ಬಂಡಿ ಬಾಡಿಗೆ, ಅಂಚೆಕಾಗದದ ವೆಚ್ಚ, ವರ್ತಮಾನಪತ್ರಿಕೆಯ ಬೆಲೆ ಮೊದಲಾದವುಗಳನ್ನೆಲ್ಲಾ ಸಾಕಲ್ಯವಾಗಿ ಬರೆದು ಆಯಾ ದಿವಸ ರಾತ್ರಿ ಮಲಗಿಕೊಳ್ಳುವದಕ್ಕೆ ಮೊದಲು ತಾಳೆ ನೋಡಿಕೊಳ್ಳುತ್ತಿದ್ದೆನು. ಆ ಪದ್ಧತಿ ಬಿಟ್ಟಿಲ್ಲವಾದುದರಿಂದಲೇ ಲಕ್ಷಾವಧಿ ಜನಗಳ ಧನವು ನನ್ನ ಕೈಯಿಂದ ವ್ಯಯವಾಗುತ್ತಿದ್ದರೂ ಕೂಡ ವ್ಯಯಮಾಡುವುದರಲ್ಲಿ ನಾನು ಬಹಳ ಎಚ್ಚರಿಕೆಯಿಂದಿರುವನಾದರೂ ಬರಬೇಕಾದ ಬಾಕಿ ಹಣವನ್ನು ತೋರಿಸುವುದಕ್ಕೆ ಬದಲು ಎಲ್ಲ ವಿಧದ ಹಣದಲ್ಲಿ ಬಾಕಿ ಉಳಿಯುವ ಮೊಬಲಗನ್ನು ತೋರಿಸುವುದರಲ್ಲಿ ನಾನು ಬಹಳ ಎಚ್ಚರಿಕೆಯಿಂದಿರುವೆನು. ಈ ವಿಷಯವನ್ನು ಪ್ರತಿ ಯುವಕನೂ ಬಹಳ ಶ್ರದ್ಧೆಯಿಂದ ಗಮನಿಸಿ ಈ ರೀತಿಯಾಗಿ ತನ್ನ ವಶಕ್ಕೆ ಇತರರು ಕೊಟ್ಟ ಹಣಕ್ಕೂ ತಾನು ವ್ಯಯಮಾಡಿದ ಹಣಕ್ಕೂ ಆಗಾಗ್ಗೆ ಲೆಕ್ಕಬರೆದಿಡುವುದು ಬಹಳ ಒಳ್ಳೆಯದು. ಈ ರೀತಿಯಾಗಿ ನಾನು ಶ್ರದ್ಧೆಯಿಂದ ಇದ್ದುದಕ್ಕಾಗಿ ನನ್ನ ಆದಾಯವನ್ನು ಅನುಸರಿಸಿಯೇ ವೆಚ್ಚವನ್ನು ಮಾಡಲು ಅನುಕೂಲವಾಗಿದ್ದಿತು, ಮತ್ತು ನನ್ನ ವೆಚ್ಚವನ್ನಾದರೂ ಬಹಳಮಟ್ಟಿಗೆ ಕಡಿಮೆಮಾಡಿದ್ದೆನು. ಒಂದು ಕುಟುಂಬದವರ ಮನೆಯಲ್ಲಿ ನಾನು ವಾಸಮಾಡುತ್ತಿದ್ದುದರಿಂದ ಅವರಿಗೆ ಪ್ರತಿವಾರದಲ್ಲೂ ನಾನು ಹಣವನ್ನು ಕೊಡುವ ಪದ್ಧತಿಯನ್ನಿಟ್ಟಿದ್ದೆನು. ಅವರು ವಾರಕ್ಕೊಂದುವೇಳೆ ಬಿಲ್ಲನ್ನು ಕೊಡುತ್ತಿದ್ದರು. ಮರ್ಯಾದಸ್ಥರಾದ ಆ ಕುಟುಂಬದವರು ಯಾರ ಮನೆಗಾದರೂ ಔತಣಕ್ಕೆ ಹೋಗುವಾಗ್ಗೆ ನನ್ನನ್ನು ಕೂಡ ಕರೆದುಕೊಂಡು ಹೋಗುತ್ತಿದ್ದರು, ಮತ್ತು ನಾನು ಹೋಗಬೇಕಾದಾಗ ಅವರನ್ನು ಕರೆದುಕೊಂಡು ಹೋಗುತ್ತಿದ್ದೆನು. ಅವರು ನನ್ನನ್ನು ಕರೆದುಕೊಂಡು ಹೋಗುವಾಗಲೂ, ನಾನು ಅವರನ್ನು ಕರೆದುಕೊಂಡು ಹೋಗುವಾಗಲೂ ಬಂಡಿಬಾಡಿಗೆ ಮೊದಲಾದವಕ್ಕೆಲ್ಲಾ ನಾನೇ ಕೊಡುತ್ತಿದ್ದೆನು. ಯಾಕೆಂದರೆ ಆತನು ವೆಚ್ಚವನ್ನೆಲ್ಲಾ ಗಂಡಸರೇ ವಹಿಸಬೇಕಲ್ಲದೆ ಸ್ತ್ರೀಯರು ಕೊಡತಕ್ಕ ವಾಡಿಕೆಯು ಆ ಊರಲ್ಲಿರಲಿಲ್ಲ. ಹೀಗೆ ಔತಣಕ್ಕೆ ಹೋದ ದಿವಸದಲ್ಲೂ ಯಥಾಪ್ರಕಾರ ಅವರ ಬಿಲ್ಲಿನ ಹಣವನ್ನು ಕೊಡಬೇಕಾಗಿದ್ದುದಲ್ಲದೆ ಹೆಚ್ಚು ಖರ್ಚನ್ನು ನಾನೇ ವಹಿಸಬೇಕಾಗಿದ್ದುದರಿಂದ ಆ ಕುಟುಂಬದಲ್ಲಿರಕೂಡದೆಂದು ನಿರ್ಧರಿಸಿದೆನು.

ಪ್ರತ್ಯೇಕವಾಗಿ ಕೊಠಡಿಯನ್ನು ಮಾಡಿಕೊಂಡು ವಾಸಿಸಿ ಅದರನುಭವಮಾಡಿಕೊಳ್ಳುವುದಕ್ಕಾಗಿ ಕೆಲವುಕಾಲ ಒಂದು ವೀದಿಯಲ್ಲೂ ಮತ್ತೆ ಕೆಲವು ಕಾಲ ಮತ್ತೊಂದು ಬೀದಿಯಲ್ಲೂ ವಾಸಮಾಡುವುದುತ್ತಮವೆಂದು ತಿಳಿದು ಕೆಲಸಮಾಡುವ ಸ್ಥಳಕ್ಕೆ ಅರ್ಧಗಂಟೆಕಾಲದೊಳಗೆ ನಡೆದುಕೊಂಡು ಹೋಗಬಹುದಾದಷ್ಟು ದೂರದಲ್ಲಿರುವ ಒಂದು ಕೊಠಡಿಯನ್ನು ಬಾಡಿಗೆಗೆ ತೆಗೆದುಕೊಂಡೆನು. ಇದರಿಂದ ಪ್ರತಿನಿತ್ಯದಲ್ಲೂ 8 ಮೈಲಿದೂರ ನಡೆದುಕೊಂಡು ಹೋಗುವಂತಾದುದಲ್ಲದೆ ಕಾಲಹರಣವೂ ಧನವ್ಯಯವೂ ವಿಗತವಾದುವು. ಈ ಪ್ರಕಾರವಾಗಿ ಬಹಳದೂರ ಪ್ರತಿನಿತ್ಯದಲ್ಲೂ ನಡೆಯುತ್ತಿದ್ದುದರಿಂದಲೇ ಆಂಗ್ಲದೇಶದಲ್ಲಿ ನನಗೆ ಅಸ್ವಸ್ಥತೆಯುಂಟಾಗದಿದ್ದುದಲ್ಲದೆ ಬಹಳಮಟ್ಟಿಗೆ ದಾರ್ಢ್ಯವು ಕೂಡ ಉಂಟಾಗಿದ್ದಿತು. ಆ ಕುಟುಂಬವನ್ನು ಬಿಡಲು ನಿಶ್ಚಯಿಸಿದಾಗ ನಾನು ಮಲಗಿಕೊಳ್ಳಲಿಕ್ಕೆ ಒಂದು ಕೊಠಡಿ, ಓದುವುದಕ್ಕೂ ಇತರ ಕೆಲಸಗಳಿಗೂ ಮತ್ತೊಂದು ಕೊಠಡಿ, ಈ ಪ್ರಕಾರ ಎರಡು ಕೊಠಡಿಗಳನ್ನು ಗೊತ್ತುಮಾಡಿದೆನು. ಇದು ಎರಡನೆಯ ದೆಶೆ. ಮೂರನೆಯ ದೆಶೆಯನ್ನು ಕುರಿತು ಮುಂದೆ ವಿವರಿಸುತ್ತೇನೆ. ಈ ಕ್ರಮದಿಂದ ವೆಚ್ಚದಲ್ಲಿ ಬಹಳಮಟ್ಟಿಗೆ ಕಡಿಮೆಯಾಯಿತು. ಬ್ಯಾರಿಸ್ಟರ್ ಪರೀಕ್ಷೆಗೋದಲು ಪ್ರತಿದಿವಸ ಕೊಂಚಕಾಲ ವಿನಿಯೋಗಮಾಡಿದರೆ ಸಾಕಾಗಿದ್ದಿತಾದುದರಿಂದ ಉಳಿದ ಕಾಲವನ್ನು ಕಳೆಯುವುದು ಹೇಗೆಂದು ಯೋಚಿಸತೊಡಗಿದೆನು. ಆಂಗ್ಲಭಾಷೆಯಲ್ಲಿ ಪಾಂಡಿತ್ಯವು ಸಾಲದೆಂಬ ಕೊರತೆಯು ನನ್ನ ಮನಸ್ಸನ್ನು ಬಹಳವಾಗಿ ಬಾಧಿಸುತ್ತಿದ್ದಿತು. 'ಮೊದಲು ಬಿ.ಎ. (ಗ್ರಾಜ್ಯುಯೇಟ್) ಪರೀಕ್ಷೆಯನ್ನು ಕೊಟ್ಟು ಅನಂತರ ನನ್ನ ಹತ್ತಿರ ಬಾ' ಎಂದು ಸರ್ ಫ್ರೆಡರಿಕ್ ಲೇಲಿಯವರು ಹೇಳಿದ್ದ ಮಾತನ್ನು ನಾನು ಮರೆತಿರಲಿಲ್ಲ. (ಆಗ್ಗೆ ಅವರಿಗಿನ್ನೂ ಸರ್ ಪ್ರಶಸ್ತಿಯು ಲಭ್ಯವಾಗಿರಲಿಲ್ಲ; ಅನಂತರ ಬಂದಿತು.) ಆದ ಕಾರಣ ನಾನು ಆ ಬಿ.ಎ. ಪ್ರಶಸ್ತಿಯನ್ನು ಪಡೆಯುವುದಕ್ಕಾಗಿ ವ್ಯಾಸಂಗಮಾಡಲಪೇಕ್ಷಿಸಿದೆನು. ಆಕ್ಸ್‌ಫರ್ಡ್, ಕೇಂಬ್ರಿಡ್ಜ್ ವಿಶ್ವವಿದ್ಯಾಲಯಗಳನ್ನು ಕುರಿತು ಸ್ನೇಹಿತರನ್ನು ಕೇಳಲು ಬಹಳ ಹಣ ವೆಚ್ಚವಾಗುವುದಕ್ಕೂ ದೀರ್ಘಕಾಲ ಆಂಗ್ಲದೇಶದಲ್ಲಿರುವುದಕ್ಕೂ ಸಿದ್ಧನಾಗಿದ್ದರೆ ಓದಬಹುದೆಂದು ಹೇಳಿದರು. "ಕಠಿಣವಾದ ಪರೀಕ್ಷೆಯಲ್ಲಿ ಕೃತಾರ್ಥನಾಗಬೇಕೆಂಬಿಚ್ಛರೆ ಲಂಡನ್ ಮೆಟ್ರಿಕ್ಯುಲೇಷನ್ ಪರೀಕ್ಷೆಗೋದುವುದುತ್ತಮ"ವೆಂದು ಒಬ್ಬ ಸ್ನೇಹಿತನು ಹೇಳಿದನು. ಆದರಿಂದ ನನಗೆ ವೆಚ್ಚವೇನೂ ಇಲ್ಲ. ಕಾಲವು ಚೆನ್ನಾಗಿ ಕಳೆಯುವುದು; ಲೋಕಜ್ಞಾನವು ಸಹ ಬರುವುದು ಎಂದು ಮೊದಲು ಸಂತೋಷದಿಂದ ಅಂಗೀಕರಿಸಿದೆನು. ಆದರೆ ಓದಬೇಕಾದ ಪುಸ್ತಕಗಳನ್ನು ನೋಡಿದಮೇಲೆ ಮಾತ್ರ ನನಗೆ ಬಹಳ ಭಯಹುಟ್ಟಿತು. ಲ್ಯಾಟಿನ್ನೂ, ನವೀನಭಾಷೆಯೂ ನಿರ್ಬಂಧವಾಗಿದ್ದುವು. ನಾನು ಲ್ಯಾಟಿನನ್ನು ಕಲಿಯುವುದು ಹೇಗೆ? ಎಂದು ಚಿಂತಿಸುತ್ತಿದ್ದೆನು. 'ನ್ಯಾಯವಾದಿಗಳಿಗೆ ಲ್ಯಾಟಿನು ಬಹಳ ಉಪಯೋಗಕರವು. ಅದನ್ನು ಕಲಿತುಕೊಂಡರೆ ನ್ಯಾಯಶಾಸ್ತ್ರಗ್ರಂಥಗಳು ಚೆನ್ನಾಗಿ ಬೋಧವಾಗುವುವು. ರೋಮನ್ ಲಾ ಸಂಬಂಧವಾದ ಪರೀಕ್ಷಾಪತ್ರವು ಲ್ಯಾಟಿನ್ ಭಾಷೆಯಲ್ಲಿರುವುದು. ಲಾಟಿನ್ ಭಾಷೆಬಂದವರಿಗೆ ಒಳ್ಳೇ ಪಾಂಡಿತ್ಯವುಂಟಾಗುವುದು' ಎಂದು ನನ್ನ ಸ್ನೇಹಿತನು ಬಹಳವಾಗಿ ಒತ್ತಿಹೇಳಿದನು. ಅದು ನನ್ನ ಮನಸ್ಸಿಗೆ ಬಹಳವಾಗಿ ನಾಟಿದುದರಿಂದ ಕಷ್ಟವಾದರೂ ಸರಿ ಲ್ಯಾಟಿನ್ ಓದಲೇಬೇಕೆಂದು ನಾನು ನಿಶ್ಚಯಿಸಿದೆನು. ನಾನು ಆಗಲೇ ಫ್ರೆಂಚ್ ಭಾಷೆಯನ್ನು ಪ್ರಾರಂಭಿಸಿದ್ದೆನಾದುದರಿಂದ ಅದೇ ನವೀನಭಾಷೆಯಾಗಿ ಕೆಲಸಕ್ಕೆ ಬರುವುದೆಂದು ಊಹಿಸಿದೆನು. ಒಂದು ಪ್ರೈವೇಟ್ ಮೆಟ್ರಿಕ್ಯುಲೇಷನ್ ತರಗತಿಗೆ ಸೇರಿದೆನು. ಆರು ತಿಂಗಳಿಗೊಂದಾವರ್ತಿ ಪರೀಕ್ಷೆಯು ನಡೆಯುವುದು. ಒಂದುತಿಂಗಳು ಕಳೆದುಹೋಯಿತು. ಇನ್ನು ಐದು ತಿಂಗಳ ಅವಧಿಯಿದ್ದಿತು. ಇದು ಬಹಳ ದುಸ್ಸಾಹಸವೇ ಆಗಿದ್ದರೂ ಆಂಗ್ಲದೇಶೀಯನೆನ್ನಿಸುವುದಾಗಿ ಹೇಳಿಸಿಕೊಳ್ಳಬೇಕೆಂದು ಮೊದಲು ನಾನು ಹೇಗೆ ಕೋರಿದೆನೋ ಹಾಗೆ ಬಹಳ ಶ್ರದ್ಧೆಯಿಂದ ಓದಲು ಕೂಡ ನಾನು ಕೋರಿದೆನು. ನಾನು ಒಂದುಕ್ಷಣವಾದರೂ ಸುಮ್ಮನೆ ಕಾಲ ಕಳೆಯದೆ ಓದಲು ಕಾಲನಿರ್ಣಯವನ್ನು ಮಾಡಿ 5 ತಿಂಗಳೊಳಗೆ ಲ್ಯಾಟಿನನ್ನು ಫ್ರೆಂಚ್ ಭಾಷೆಗಳನ್ನೂ ಇತರ ವಿಷಯಗಳನ್ನೂ ಪೂರ್ತಿಯಾಗಿ ತಿಳಿದುಕೊಳ್ಳಲು ತಕ್ಕ ಮೇಧಾಶಕ್ತಿಯೂ ಜ್ಞಾಪಕಶಕ್ತಿಯೂ ನನಗಿರಲಿಲ್ಲವು. ಆದುದರಿಂದ ನಾನು ಲ್ಯಾಟಿನ್ನಲ್ಲಿ ವಿಫಲನಾಗಬೇಕಾಯಿತು. ನನಗೆ ಅದರಿಂದ ಕೊಂಚ ಯೋಚನೆ ಹುಟ್ಟಿತಲ್ಲದೆ ನಿರುತ್ಸಾಹವಾಗಲಿಲ್ಲ. ನನಗೆ ಲ್ಯಾಟಿನ್ನ ಮೇಲೆ ಆಸೆಹುಟ್ಟಿದ್ದಿತು. ಇನ್ನೊಂದುಸಾರಿ 6 ತಿಂಗಳು ಓದಿದರೆ ಫ್ರೆಂಚ್ ಭಾಷೆಯಲ್ಲಿಯೂ ಕೂಡ ಪಾಂಡಿತ್ಯವಧಿಕವಾಗುವುದೆಂದು ತಿಳಿದೆನು. ಸಯನ್ಸು ಭಾಗದಲ್ಲಿ ಬೇರೊಂದು ಹೊಸವಿಷಯವನ್ನು ಪ್ರಾರಂಭಿಸಬೇಕೆಂದು ನಾನು ಯೋಚಿಸಿದೆನು. ಮೊದಲನೇಸಾರಿ ಕೆಮಿಸ್ಟ್ರಿ ತೆಗೆದುಕೊಂಡೆನು. ಅದು ಬಹಳ ಒಳ್ಳೇ ವಿಷಯವಾಗಿದ್ದರೂ ಅನುಭವಪೂರ್ವಕವಾಗಿ ತಿಳಿಯಲವಕಾಶವಿಲ್ಲದಿದ್ದುದರಿಂದ ಅದು ನನಗೆ ರುಚಿಸಲಿಲ್ಲವು. ಭರತಖಂಡದಲ್ಲಿ ಕೆಮಿಸ್ಟ್ರಿಯು ನಿರ್ಬಂಧವಿಷಯವಾಗಿದ್ದುದರಿಂದ ಆಂಗ್ಲದೇಶದಲ್ಲೂ ಅದನ್ನೇ ಮೊದಲು ನಾನು ತೆಗೆದುಕೊಂಡೆನು. ಎರಡನೆಯಸಾರಿ ಹೀಟ್ ಮತ್ತು ಲೈಟ್ ಎಂಬ ವಿಷಯವನ್ನು ತೆಗೆದುಕೊಂಡೆನು. ಅದು ಬಹಳ ಸುಲಭ ವಿಷಯವೆಂದು ನನ್ನ ಸ್ನೇಹಿತನು ಹೇಳಿದ್ದನಲ್ಲದೆ ನನಗೂ ಹಾಗೆಯೇ ಕಂಡುಬಂದಿತು.

ಈ ವೇಳೆ ಪುನಃ ಆರುತಿಂಗಳು ಓದಲು ನಿಶ್ಚಯಿಸುವೆನಲ್ಲದೆ ನನ್ನ ವೆಚ್ಚವನ್ನು ಇನ್ನೂ ಕಡಿಮೆ ಮಾಡಿದೆನು. ನನ್ನ ಅಣ್ಣನು ಬಹಳ ಕಷ್ಟಪಟ್ಟು ನನಗೆ ಮಾತ್ರ ತಪ್ಪದೆ ಹಣವನ್ನು ಕಳುಹಿಸುತ್ತಿದ್ದನು. ನನಗೋಸ್ಕರ ಕುಟುಂಬದವರೆಲ್ಲರೂ ಬಹು ಕಷ್ಟಪಟ್ಟುಕೊಂಡು ನನಗೆ ಮಾತ್ರ ಸಮಯಕ್ಕೆ ಕಳುಹುತ್ತಾರಲ್ಲ ಎಂದು ನನಗೆ ಇನ್ನಷ್ಟು ವ್ಯಸನವಾಯಿತು. ವಿದ್ಯಾರ್ಥಿವೇತನವನ್ನು ಹೊಂದಿದವರು ತಿಂಗಳಿಗೆ ಮೊದಲು 225 ರೂಪಾಯಿಗಳವರೆಗೆ ವ್ಯಯಮಾಡುತ್ತಿದ್ದರು. ಕೆಲವು ಬಡವಿದ್ಯಾರ್ಥಿಗಳು ನನಗಿಂತಲೂ ಬಹಳ ಕಡಿಮೆಯಾಗಿಯೇ ವೆಚ್ಚಮಾಡುತ್ತಿದ್ದರು. ಒಬ್ಬ ವಿದ್ಯಾರ್ಥಿಯು ಬಡವರ ಕೇರಿಯಲ್ಲಿ ವಾರಕ್ಕೆ 1½ ರೂಪಾಯಿ ಬಾಡಿಗೆಗೆ ಒಂದು ಕೊಠಡಿಯನ್ನು ತೆಗೆದುಕೊಂಡನು. 'ಲಾಕ್‌ಹಾರ್ಟ್ಸ್ ಚೀಪ್ ಕೋಕೋ ರೂಂ' ಎಂಬ ಕಾಫಿ ಅಂಗಡಿಯಲ್ಲಿ ಒಂದು ಊಟಕ್ಕೆ ನಾಲ್ಕು ದುಡ್ಡನ್ನು ಕೊಡುತ್ತಿದ್ದನು. ಅದಕ್ಕೆ ಅವರು ರೊಟ್ಟಿಯನ್ನೂ ಕೋಕೋಯನ್ನೂ ಅವನಿಗೆ ಕೊಡುತ್ತಿದ್ದರು. ಅವನ ಹಾಗೆ ನಾನೂ ಕೂಡ ಮಾಡಬೇಕೆಂದಪೇಕ್ಷಿಸಿದೆನು. ಆದರೆ ಅದು ನನಗೆ ಬಹಳ ಅಸಾಧ್ಯವಾದ ಕೆಲಸವಾಗಿದ್ದಿತಾದರೂ ಒಂದೇ ಕಡೆ ಕಾಲಕ್ಷೇಪಮಾಡಬಹುದಾಗಿದ್ದಿತು. ಎರಡನೆಯದಾಗಿ ಅಂತಹ ಅವಸರವೇನೂ ಇರಲಿಲ್ಲ. ನಾನೇ ಆಗಾಗ್ಗೆ ಹೋಗಿ ಮಲಗಿಕೊಳ್ಳುತ್ತಿದ್ದೆನು. ಅದರಿಂದ ತಿಂಗಳಿಗೆ 60 / 75 ರೂಪಾಯಿಗಳನ್ನು ಕೂಡಿ ಹಾಕಬಹುದೆಂದು ನಾನು ನಿಶ್ಚಯಿಸಿದೆನು. ಅದಕ್ಕೆ (ಸಿಂಪಲ್ ಲಿವಿಂಗ್) ಸಂಬಂಧವಿಟ್ಟ ಪುಸ್ತಕವು ಕೂಡ ನನಗೆ ದೊರಕಿತು. ಆದುಕಾರಣ ನಾನು ಎರಡು ಕೊಠಡಿಗಳನ್ನು ಬಿಟ್ಟು ಬೇರೊಂದನ್ನು ಮಾಡಿಕೊಂಡೆನು. ಒಂದು ಸ್ಟೋವನ್ನು ಕೊಂಡುಕೊಂಡು ಬೆಳಗಿನ ವೇಳೆ ಅಡಿಗೆಯನ್ನು ಮಾಡಲು ಪ್ರಾರಂಭಿಸಿದೆನು. ಓಟ್ಸ್ ವಿನ ಗಂಜಿಯನ್ನೂ ಕೋಕೋಗಾಗಿ ನೀರನ್ನೂ ಕಾಯಿಸಲು 20 ನಿಮಿಷ ಮಾತ್ರ ಹಿಡಿಯುತ್ತಿದ್ದಿತು. ಮಧ್ಯಾಹ್ನದಲ್ಲಿ ಮಾತ್ರ ಎಲ್ಲಿಯಾದರು ಆಹಾರ ಮಾಡುತ್ತಿದ್ದೆನು. ರಾತ್ರಿವೇಳೆ ಮನೆಯಲ್ಲಿ ರೊಟ್ಟಿಯನ್ನೂ ಕೋಕೋಯನ್ನೂ ತೆಗೆದುಕೊಳ್ಳುತ್ತಿದ್ದೆನು. ಇದಕ್ಕಾಗಿ ದಿನವಹಿ 13 ಆಣೆ ವೆಚ್ಚವಾಗುತ್ತಿದ್ದಿತು. ಆಗ ಬಹಳ ಕಷ್ಟಪಟ್ಟು ಓದುತ್ತಿದ್ದೆನು. ನಿತ್ಯದಲ್ಲೂ ಬಹಳಹೊತ್ತು ಓದುವಂತಾದುದಕ್ಕೆ ಸೌಖ್ಯಜೀವನ ಪದ್ಧತಿಯೇ ಕಾರಣವು. ಈ ರೀತಿಯಾಗಿ ಪರೀಕ್ಷೆಯಲ್ಲಿ ಉತ್ತೀರ್ಣನಾದೆನು. ಹೀಗೆ ಬಹಳ ಉಪಾಯದಿಂದ ಜೀವಿಸುತ್ತಿದ್ದೆನೆನ್ನುವುದರಿಂದ ಬಹಳ ಕಷ್ಟಪಡುತ್ತಿದ್ದೆನೆಂದು ಯಾರೂ ಭಾವಿಸಕೂಡದು. ಈ ಪದ್ಧತಿಯಿಂದ ನನ್ನ ಮನಸ್ಸಿಗೆ ಬಹಳ ಆನಂದವೂ ಶರೀರಕ್ಕೆ ಬಹಳ ಆರೋಗ್ಯವೂ ಉಂಟಾದುವು. ನನ್ನ ಕುಟುಂಬದ ಆದಾಯಕ್ಕೆ ತಕ್ಕರೀತಿಯಲ್ಲಿ ನನ್ನ ವ್ಯಯವನ್ನು ಸರಿಪಡಿಸಿಕೊಂಡೆನು.

17 ನೆಯ ಪ್ರಕರಣ.

ಭೋಜನ ವಿಷಯ.

ನಾನು ಬಲವಾಗಿ ಆತ್ಮಪರೀಕ್ಷೆಯನ್ನು ಮಾಡಿಕೊಂಡುದರಿಂದ ಬಾಹ್ಯಾಭ್ಯಂತರ ಸಂಸ್ಕರಣಾವಶ್ಯಕತೆಯು ನನಗೆ ಗೋಚರಿಸುತ್ತಿತು. ನಾನು ನನ್ನ ವೆಚ್ಚವನ್ನು ಕಡಿಮೆಮಾಡಲುಪಕ್ರಮಿಸಿದುದರಿಂದ ಭೋಜನಪದ್ಧತಿಯನ್ನು ಕೂಡ ವ್ಯತ್ಯಾಸಮಾಡಲುಪಕ್ರಮಿಸಿದೆನು. ಶಾಕಾಹಾರವನ್ನು ಪ್ರಶಂಸಿಸಿ ಬರೆದ ಗ್ರಂಥಕರ್ತರು ಮತ, ವೈದ್ಯ, ಪ್ರಕೃತಿಶಾಸ್ತ್ರಾನುಗುಣ್ಯವಾಗಿಯೂ, ಆಚರಣಾನುಗುಣ್ಯವಾಗಿಯೂ ಆಹಾರವಿಷಯವನ್ನು ಕುರಿತು ಪ್ರಬಲವಾಗಿ ಪರೀಕ್ಷಿಸಿಯೇ ಬರೆದಿರತಕ್ಕರು. ಮನುಷ್ಯನು ಇತರ ಜಂತುಗಳಿಗಿಂತ ಶ್ರೇಷ್ಠನಾಗಿರುವುದರ ಫಲವು ಜಂತುವುಗಳನ್ನು ಕೊಂದು ತಿನ್ನುವುದಲ್ಲ. ಪ್ರಬಲರು ದುರ್ಬಲರನ್ನು ಕಾಪಾಡುವುದು ಧರ್ಮವು. ಆದಕಾರಣ ಮನುಷ್ಯರಿಗೆ ಮನುಷ್ಯರಲ್ಲಿ ಮಾತ್ರವಲ್ಲದೆ ಸಮಸ್ತಜೀವರಾಶಿಗಳಲ್ಲೂ ಪ್ರೇಮವಿರಬೇಕು. ಮನುಷ್ಯನು ಊಟಮಾಡುವುದು ರುಚಿಗಾಗಿರದೆ ಬದುಕುವುದಕ್ಕಾಗಿಯೇ ಎಂದು ಅವರು ನಿಶ್ಚಿತವಾಗಿ ನಿರ್ಧರಿಸಿರುವರು. ಬಹಳ ಜನರು ಮಾಂಸ, ಕೋಳಿಮೊಟ್ಟೆ ಮೊದಲಾದವುಗಳನ್ನು ತಿನ್ನುವುದನ್ನು ಬಿಟ್ಟಿರುವರು. ಮತ್ತೆ ಕೆಲವರು ಹಾಲನ್ನೂ, ಅದರಿಂದಾಗುವ, ಮೊಸರು ಬೆಣ್ಣೆ ತುಪ್ಪ ಮೊದಲಾದವುಗಳನ್ನು ಸಹ ಸಂಪೂರ್ಣವಾಗಿ ತ್ಯಜಿಸಿರುವರು. ಮನುಷ್ಯನು ತನ್ನ ಅಂಗನಿರ್ಮಾಣಕ್ಕಾಗಿ ಅಪಕ್ವಪದಾರ್ಥಗಳನ್ನು ತಿನ್ನಬೇಕೆಂಬುದೇ ಭಗವತ್ಸಂಕಲ್ಪವಲ್ಲದೆ ಪಕ್ವಪದಾರ್ಥಗಳನ್ನು ತಿನ್ನಬೇಕೆಂಬುದಲ್ಲ. ಬಾಲ್ಯದಲ್ಲಿ ಹಲ್ಲು ಬರುವವರೆಗೆ ತಾಯಿಹಾಲನ್ನು ಕುಡಿಯಬೇಕು. ಅನಂತರ ಗಟ್ಟಿಪದಾರ್ಥಗಳನ್ನು ತಿನ್ನಬಹುದು ಎಂದು ಕೆಲವರು ಹೇಳುತ್ತಾರೆ. ವೈದ್ಯಶಾಸ್ತ್ರರೀತಿಯಾಗಿ ಉಪ್ಪಿನಕಾಯಿ ಮೊದಲಾಗಿ ಮಸಾಲೆಪದಾರ್ಥಗಳು ವರ್ಜನೀಯವು. ಆರೋಗ್ಯಾನುಕೂಲವಾಗಿಯೂ ಧನವಿಚಾರವಾಗಿಯೂ ನೋಡಿದರೂ ಶಾಕಾಹಾರಕ್ಕೆ ವೆಚ್ಚವು ಬಹಳ ಕಡಿಮೆಯಾಗುವುದೆಂದು ಅವರು ನಿರ್ಣಯಿಸಿರುವರು. ಈ ಗ್ರಂಥಗಳನ್ನು ಓದಿದುದರಿಂದ ಈ ವಿಷಯಗಳೆಲ್ಲ ನನಗೆ ಚೆನ್ನಾಗಿ ಮನದಟ್ಟಾಗಿರುವುವು. ಶಾಕಾಹಾರವನ್ನು ಮಾಡತಕ್ಕ ಭೋಜನಶಾಲೆಗಳಲ್ಲಿ ಈ ನಿಯಮವನ್ನನುಸರಿಸುವ ಬಹಳ ಜನರನ್ನು ನೋಡಿದೆನು. ಆಂಗ್ಲದೇಶದಲ್ಲಿ ಶಾಕಾಹಾರಪ್ರಚಾರಕ ಸಂಘವೊಂದು ಸಹ ಇದೆ. ಅವರು ಒಂದು ವಾರಪತ್ರಿಕೆಯನ್ನು ಹೊರಡಿಸುತ್ತಿರುವರು. ನಾನು ಆ ಸಂಘಕ್ಕೆ ಸೇರಿದೆನು, ಮತ್ತು ಆ ಪತ್ರಿಕೆಗೊಬ್ಬ ಚಂದಾದಾರನಾದೆನು. ಸ್ವಲ್ಪದಲ್ಲಿಯೇ ಅದರ ಕಾರ್ಯನಿರ್ವಾಹಕ ಸಂಘಕ್ಕೆ ನಾನೊಬ್ಬ ಮೆಂಬರಾಗಿ ತೆಗೆದುಕೊಳ್ಳಲ್ಪಟ್ಟೆನು. ಅದರಲ್ಲಿ ನಿಷ್ಠರಾದ ಶಾಕಾಹಾರಿಗಳು ಬಹಳ ಜನರು ನನ್ನ ಪರಿಚಿತಸ್ಥರಾದರು. ನಾನು ಅದನ್ನೇ ಅಭ್ಯಾಸಮಾಡಲಾರಂಭಿಸಿದೆನು.

ನಮ್ಮೂರಿನಿಂದ ಬಂದದ್ದ ಹಸಿಟ್ಟು ಉಪ್ಪಿನಕಾಯಿ ಮೊದಲಾದವುಗಳನ್ನು ತಿನ್ನುವುದನ್ನು ಬಿಟ್ಟೆನು, ಮತ್ತು ಅವುಗಳ ಮೇಲೆ ನಿರಕ್ತಿಯು ನನಗೆ ಹುಟ್ಟಿತು. ಇಂಗ್ಲೆಂಡಿನಲ್ಲಿದ್ದಾಗ್ಗೆ ಬೇಯಿಸಿದ ಬಸಳೆಸೊಪ್ಪು ನನ್ನ ನಾಲಿಗೆಗೆ ಸಪ್ಪೆಯಾಗಿ ಕಂಡುಬಂದಿದ್ದುದು. ಈಗ ಅದು ಬಹಳ ರುಚಿಯಾಗಿ ಕಂಡುಬಂದುದರಿಂದ ಅದಕ್ಕೆ ಮಸಾಲೆಹಾಕದೆಯೇ ಬೆಂದುದದನ್ನು ತಿನ್ನಲಾರಂಭಿಸಿದೆನು. ಈ ಪರೀಕ್ಷೆಯಿಂದ ರುಚಿಗೆ ಪ್ರಧಾನಸ್ಥಾನವು ಮನಸ್ಸಲ್ಲದೆ ನಾಲಿಗೆಯಲ್ಲವೆಂದು ನಾನು ತಿಳಿದುಕೊಂಡೆನು. ಧನವ್ಯಯವನ್ನು ತಗ್ಗಿಸುವ ವಿಚಾರವನ್ನು ಕೂಡ ನಾನು ಮರೆಯಲಿಲ್ಲವು. ಆ ಕಾಲದಲ್ಲಿ ಕೆಲವರು ಕಾಫಿಯನ್ನೂ ಟೀಯನ್ನೂ ತ್ಯಜಿಸಿಬಿಟ್ಟು ಕೋಕೋವನ್ನು ಮಾತ್ರ ತೆಗೆದುಕೊಳ್ಳುತ್ತಿದ್ದರು. ಶರೀರಕ್ಕೆ ಪುಷ್ಟಿಯನ್ನು ಕೊಡುವಂತಹ ಪದಾರ್ಥಗಳನ್ನು ಮಾತ್ರ ತಿನ್ನತಕ್ಕುದೆಂದು ನಾನು ನಿಶ್ಚಯಿಸಿದುದರಿಂದ ನಾನು ಕೂಡ ಕಾಫಿ, ಟೀ ಕುಡಿತವನ್ನು ಬಿಟ್ಟು ಕೋಕೋವನ್ನು ಮಾತ್ರ ಕುಡಿಯಲಾರಂಭಿಸಿದೆನು. ಶಾಕಾಹಾರಭೋಜನಶಾಲೆಯಲ್ಲಿ ಎರಡು ತರಗತಿಗಳಿರುವುವು. ಒಂದು ತರಹ ಧನವಂತರಿಗೆ. ಅದರಲ್ಲಿ ಅನೇಕ ಬಗೆಗಳು ಮಾಡಲ್ಪಡುವುವು. ಒಂದು ವೇಳೆ ಊಟಕ್ಕೆ 12 ಆಣೆಯಿಂದ 1½ ರೂಪಾಯಿವರೆಗೂ ದರವುಂಟು. ಎರಡನೆಯ ತರಗತಿಯದು ಬಡವರಿಗಾಗಿ. ಅಲ್ಲಿ ಮೂರುಪದಾರ್ಥಗಳೂ ಒಂದು ರೊಟ್ಟಿಯೂ ಕೊಡಲ್ಪಡುವುವು. ಒಂದು ಹೊತ್ತಿಗೆ 6 ಆಣೆ ಕೊಡಬೇಕು. ನಾನು ಆ ತಪೋದೀಕ್ಷೆಯನ್ನು ಅವಲಂಬಿಸಿದ ಮೇಲೆ 6 ಆಣೆಯನ್ನು ಕೊಟ್ಟು ಊಟಮಾಡಲುಪಕ್ರಮಿಸಿದೆನು.

ಕೆಲವು ಕಾಲ ಗಂಜಿಯಂತಿರುವ ಪದಾರ್ಥವನ್ನು ತಿನ್ನದೆ ರೊಟ್ಟಿಯನ್ನೂ, ಹಣ್ಣನ್ನೂ ಮಾತ್ರ ತಿನ್ನುತ್ತಿದ್ದೆನು. ಇನ್ನು ಕೆಲವು ಕಾಲ ಹಾಲು ಬೆಣ್ಣೆ ಮೊಟ್ಟೆಗಳನ್ನು ಮಾತ್ರ ತಿನ್ನುತ್ತಿದ್ದೆನು. ಈ ಕಡೇ ಪದ್ಧತಿಯು 15 ದಿವಸಗಳು ಮಾತ್ರ ನಡೆಯಿತು. ಗಂಜಿಯಿಲ್ಲದ ಪದಾರ್ಥವನ್ನು ತಿನ್ನಬಹುದೆಂದು ಬೋಧಿಸಿದ ಸಂಸ್ಕರ್ತನು ಮೊಟ್ಟೆಯನ್ನು ಬಹಳವಾಗಿ ಪ್ರಶಂಸಿಸಿದ್ದನು. ಮೊಟ್ಟೆಯು ಮಾಂಸವಲ್ಲವು. ಅದನ್ನು ತಿನ್ನುವುದ

ರಿಂದ ಯಾವ ಜಂತುವನ್ನೂ ಬಾಧಪಡಿಸಿದಂತಾಗುವುದಿಲ್ಲವೆಂದು ನನಗೂ ತೋರಿತು. ಇದರಿಂದ ನಾನು ಮನಸ್ಸೋಕ್ತೆ ನಾದರೂ ನನ್ನ ಪ ಮಾಣವ್ರನ್ನನ್ನು ಬಾಧಿಸುತ್ತಲೇ ಇದ್ದಿತು. ಮೊಟ್ಟೆಯನ್ನು ನವ ತಿನ್ನಕೂಡದೆಂದು ನನ್ನ [illegible] ಯ [illegible] ಮೊಟ್ಟೆಯು ಮಾಂಸವಲ್ಲವೆಂದು ನಾನು ಪತ್ [illegible] ವ್ಯಾಖ್ಯಾನವನ್ನು ಮಾಡಬೇಕು' ಎಂಬ [illegible] ನನಗೆ ಚೆನ್ನಾಗಿ ತೋರಿದುದರ ಮೇಲೆ ಈ ಪದ್ಧತಿಯನ್ನು ಬಿಟ್ಟುಬಿಟ್ಟೆನು.

ಆಂಗ್ಲದೇಶದಲ್ಲಿ ಮಾಂಸವೆಂದರೇನು' ಎಂಬ ವಿಷಯಕ್ಕೆ ಮೂರು ವ್ಯಾಖ್ಯಾನಗಳು ನನಗೆ ತಿಳಿದು ಬಂದವು. [illegible] ಗಪಕ್ಷಿಗಳ ಮಾಂಸವೇ ಮಾಂಸವೆಂದು ಒಂದು ಅಭಿಪ್ರಾಯ [illegible] ಈ ಅಭಿಪ್ರಾಯವನ್ನು ಅಂಗೀಕರಿಸಿದವರು ಮೊಟ್ಟೆಯನ್ನೂ ಮೀನನ್ನೂ ತಿನ್ನಬಹುದೆಂಬ [illegible] ಮಾತ್ರ ಬಿಟ್ಟುಬಿಟ್ಟರು. ಮತ್ತೆ ಕೆಲವರು ಮೀನನ್ನು [illegible] ಮೊಟ್ಟೆಯನ್ನು ಮಾತ್ರ ತಿನ್ನುತ್ತಿದ್ದರು. [illegible] ಮೊದಲಾದ [illegible] ವಸ್ತುಗಳನ್ನು [illegible] ತುಗಳಂತ [illegible] ಮೊಟ್ಟೆ ಹಾಲು ಮೊದಲಾದ ಪದಾರ್ಥಗಳನ್ನು [illegible] ಕಾಪಾರವಿಕ [illegible] ಅನೇಕ ಪದಾರ್ಥಗಳ [illegible] [illegible] ಇದರಿಂದ [illegible] ಅದರೆ ನನ್ನ ಪ್ರಮಾಣವು [illegible] ಈ [illegible] ಆರೋಗ್ಯಕರವಾಗ [illegible] ಪದಾರ್ಥಗಳನ್ನು ಮಾತ್ರ ನಾನು [illegible] ಕುರಿತು ಪರೀಕ್ಷೆ [illegible] ಇನ್ನು ಮೇಲೆ [illegible] ಬೇಕಾಗುವುದ [illegible] [illegible]

[illegible] ತಮಗ ಅನುಕೂಲ [illegible] ಈ ಪ [illegible] ಇದಕ್ಕೆ [illegible] ಅತ್ಯಂತ [illegible] [illegible] ಈ ಎರಡು [illegible] ಅದ ಕಾರಣ ಆಹಾರವನ್ನು ಕುರಿತು [illegible] ಅರ್ಥವೇ ನನಗ ಅ [illegible] ಆಹಾರಾಭಾವದಿಂದ ನಾನು [illegible] ಆಂಗ್ಲದೇ [illegible] ಪರೀಕ್ಷಿಸ [illegible] ಆಂಗ್ಲದೇಶದಲ್ಲೇ ಅಂ [illegible]

ತಿಯಾಗಿದ್ದಿತು. ಅದುವರೆಗೂ ನನಗೆ ನವ ಮಾಂಸಾಹಾರದಲ್ಲಿ ವಿಶೇಷ ಸಂಬಂಧವಿದ್ದುದರಿಂದಲೇ ನನಗೂ ದಾಕ್ಷಿಣ್ಯ ರಾಭಿಮಾನವು ನೂತನಪರಿವರ್ತನವೇ. ಅದರಿಂದ ಲಂಡನ್ ಪಟ್ಟಣದಲ್ಲಿ ನಾನು ವಾಸಮಾಡುತ್ತಿದ್ದ [illegible] ಎಂಬ ಪೇಟೆಯಲ್ಲಿ ಒಂದು ಶಾಕಾಹಾರ ಸಂಘವು ಏರ್ಪಡುವಂತೆ ಮಾಡಿದೆನು. ಅದರ ಪ್ರೋತ್ಸಾಹಾರ್ಥವಾಗಿ ಸರ್ ಎಡ್ವಿನ್ ಆರ್ನಲ್ಡ್ ಯವರನ್ನು ಉಪಾಧ್ಯಕ್ಷರನ್ನಾಗಿಯೂ, ಶಾಕಾಹಾರಪತ್ರಿಕಾಸಂಪಾದಕರಾದ ಡಾಕ್ಟರು ಓಲ್ಡ್‌ಫೀಲ್ಡ್‌ರವರನ್ನು ಅಧ್ಯಕ್ಷರನ್ನಾಗಿಯೂ ಮಾಡಿದೆನು. ಆದರೆ ಆ ಸಂಘವು ಕೆಲವು ಕಾಲ ಮಾತ್ರವಿದ್ದು ಅನಂತರ ಬಾಳಲಾಯಿತು. ಏಕೆಂದರೆ, ಒಂದು ಪೇಟೆಯಲ್ಲೇ ಸ್ಥಿರವಾಗಿರಕೂಡದೆಂದು ನಾನು ನಿರ್ಧರಿಸಿದ್ದುದರಿಂದ ನಾನು ಅಲ್ಲಿಂದ ಬಿಟ್ಟು ಹೊರಟುಹೋದೆನು. ನಾನು ಹೋದಕೂಡಲೇ ಆ ಸಂಘವು ಕೂಡ ಹೋಯಿತು. ಆದರೆ ಈ ಅನುಭವದಿಂದ ಸಂಸ್ಥೆಗಳನ್ನೇರ್ಪಡಿಸಲು ನನಗೆ ಶಕ್ತಿಯುಂಟಾಯಿತು.

'ಮೈಸೂರು ಸ್ಟಾರ್'

ಇಂದ್ರಿಯ ವಿಜಯ.

(೨ ನೇ ಪುಟದಿಂದ ಮುಂದುವರಿದದ್ದು)

ಯು ಹುರುಕಾಗಿರುವದು. ವಿದ್ಯಾಂಸರಿಗ ಮೇಧಾಶಕ್ತಿಯು ಚೆನ್ನಾಗಿರುವುದೆಂದ ಮಾತ್ರಕ್ಕೆ ಇತರಶಕ್ತಿಗಳು ಮಲಿನವೆಂದರ್ಥವಲ್ಲ. ಯಾವ ಶಕ್ತಿಯು ನನಗೆ ಅನಿಷ್ಟವೋ ಅದ ತಲೆಯೆತ್ತದಂತೆ [illegible] ಒಡಿದಿಟ್ಟರೇಕು. ವಿಷಯಾಸಕ್ತಿಯನ್ನು ದೂರಮಾಡಬೇಕಾಗಿದ್ದರೆ ಅತ್ತಕಡೆಗೆ ಮನಸ್ಸು [illegible] ಕಾಯಾ ಗಮನಕೊಡಬಾರದು. ವಿದ್ವಾಂಸರು ಹೀಗ ಮಾಡುವದಿಲ್ಲವೆಂದಲ್ಲ. ಅವರು ವಿದ್ಯಾರ್ಜನೆಯಲ್ಲಿ ನಿರತರಾಗಿ ಇತರ ವ್ಯಸನಗಳನ್ನು ದೂರಮಾಡಿರುವ ವರೆಗೂ ಅವರ ಮೇಲೆ ಇಂದ್ರಿಯಗಳ ಅಧಿಕಾರವು ನಡೆಯುವದಿಲ್ಲ. ಅವು ದಾಸ್ಯವೃತ್ತಿಯಲ್ಲಿಯೇ ಇರುವವು. ವಿದ್ಯಾರ್ಜನೆಯು ಸಂಪೂರ್ಣ ಮುಗಿದ ಬಳಿಕ ದುರ್ವ್ಯಸನಗಳಿಗೆ ಕೆರಳುಗೊಡದೆ [illegible] ಉದ್ಯೋಗದಲ್ಲಿ ಮನುಷ್ಯನು ನಿರತನಾದರೆ ಸರಿ. ಇಲ್ಲದಿದ್ದರೆ ಪರಾಧೀನನಾಗುವದು. ದುರ್ವ್ಯಸನಗಳಾದರೋ, ತಮಗ ಪೂರ್ವದಿಂದಲೂ ಪರಿಚಿತರಾದವರ [illegible] ಕಡಿಸುವದಕ್ಕಿಂತಲೂ ಘೋರತರವಾಗಿ ಇತರರನ್ನು ಕಡಿಸುವವು. ಕುಡಿತ ಮತ್ತು ವ್ಯಭಿಚಾರ ಈ ಚಟಗಳುಳ್ಳವರ ಲೋಕದೃಷ್ಟಿಯಲ್ಲಿ ಹೇಯವಾದ ಬಾಳ್ವೆಯನ್ನು ಬಾಳುವರು. ಸುಮುಷ್ಟ! ಮೊದಮೊದಲು ಶುದ್ಧವಾಗಿದ್ದ ಮಧ್ಯಕಾಲದಲ್ಲಿ ಈ ಚಟಗಳನ್ನು ಕಲಿತು ನವರ ಅವಸ್ಥೆಯನ್ನು ನೋಡಿರಿ. ಇಂದ್ರಿಯನಿಗ್ರಹಪೂರ್ವಕವಾಗಿ ಕಾಪಾಡಿಕೊಂಡಿದ್ದ ಬಿಳುವಾದ ಕಟ್ಟನ್ನು ಒಮ್ಮೆ ಸಡಲಿಸಿತೆಂದರೆ, ಮೊದಲು ಮಂಗಳಪ್ರದವಾಗಿದ್ದ ಶಕ್ತಿಯೇ ನಾಶಕಾರಿಯಾಗಿ ಪರಿಣಮಿಸಿ ಅವರನ್ನು ನರಕಕ್ಕಿಂತಲೂ ನಿಕೃಷ್ಟವಾದ ಅಧೋಗತಿಗೆ ತಳ್ಳಿಬಿಡುವದು. ಕಟ್ಟೆಯು ಸರಿಯಾದ ಸ್ಥಿತಿಯಲ್ಲಿದ್ದಾಗ ಅಲ್ಲಿಂತ ನೀರು ಸ್ನಾನಪಾನಗಳಿಗೂ, ವ್ಯವಸಾಯಕ್ಕೂ ಸಹಕಾರಿಯಾಗಿ ನಾಡಿನಭ್ಯುದಯಕ್ಕೆ ಮೂಲಾಧಾರವಾಗಿರುವದು. ಆ ಕಟ್ಟೆಯಲ್ಲಿ ಒಂದು ಸಾಮಾನ್ಯವಾದ ಬೋಳು ಬಿದ್ದರೂ ನೀರು ಅದನ್ನು ಕೊರೆದು ದೊಡ್ಡದು ಮಾಡಿ ಕಟ್ಟೆಯನ್ನೊಡೆದುಕೊಂಡು ನುಗ್ಗಿ ಹರಿದು ಪೈರುಪಚ್ಚೆಗಳನ್ನೂ ಮನೆ ಮಠಗಳನ್ನೂ ನಾಶಮಾಡಿ ಅನರ್ಥಕಾರಿಯಾಗುವದು. ಆದುದರಿಂದ ಕಟ್ಟೆ ಸಡಲುವದಕ್ಕೆ ಸ್ವಲ್ಪವೂ ಅವಕಾಶಕೊಡಬಾರದು. ಎರಡು ಬಿಯಾನಗಳಲ್ಲಿ ಬಂತಾನ ಮುಂತಾದ ಕಟ್ಟ ಜಾತಿಯ ಗಿಡಗಳು ಬೆಳೆಯುವದು ಸರಿಯಷ್ಟೆ! ಇದಕ್ಕೆ ವ್ಯವಸಾಯ ಬೇಕಿಲ್ಲ. ಕಾಲಕಾಲಕ್ಕೆ ಮಳೆ ಬೇಕಿಲ್ಲ. ಆ ಗಿಡಗಳು ಬೆಳೆಯುವದೂ ನಮಗೆ ಬೇಕಿಲ್ಲ. ಆದರೂ ಬೆಳೆಯುತ್ತವೆ. ಇಂಥ ಗಿಡಗಳ ಬೀಜಗಳನ್ನು ರೈತರು ಕಷ್ಟಪಟ್ಟು ಹಸನು ಮಾಡಿದ ಹಿಡುವಳಿ ಬಯಲುಗಳಲ್ಲಿ ಬಿತ್ತಿದರೆ ಕೇಳುವದೇನು? ಕ್ಷಿಪ್ರದಲ್ಲಿಯೇ ಘೋರಾರಣ್ಯವಾಗುವದು. ಹಿರಾಬು ಬಯಲಿನಲ್ಲಿನ ಬಂತಾನ ಬೆಳವಳಿಗೆಗೂ ನಾಗುವಳಿ ಬಯಲಿನಲ್ಲಿನ ಬಂತಾನ ಬೆಳವಳಿಗೆಗೂ ತಾರತಮ್ಯವನ್ನು ನೋಡಿದಿರಾ? ಉತ್ಕೃಷ್ಟವಾದ ಭೂಮಿಯಲ್ಲಿ ಹಾಳುಮೂಳುಗಳು ಬೆಳೆದು ಅನರ್ಥವಾಗದಂತೆ ಯಾವಾಗಲೂ ಯೋಗ್ಯವಾದ ವ್ಯವಸಾಯವನ್ನು ಮಾಡಿ ಕಾಪಾಡಿಟ್ಟುಕೊಂಡು ಪ್ರಯೋಜನವನ್ನು ಅನುಭವಿಸುವಂತ ಸತ್ಕ್ಷೇತ್ರದಲ್ಲಿ ದುರ್ವ್ಯಸನಗಳ ಬೇರನ್ನೂ ರದೆ ಹಿಂದ್ಬಾದ [illegible] ಮನುಷ್ಯನಲ್ಲಿ ಆ ವಾಹಿನಿಯಾಗಿರುವ ದೇವತ್ವದ ಪೂರ್ಣಾನುಭವವನ್ನು ಪಡೆಯಲು ನಮುಷ್ಯರೂ ಪ್ರಯತ್ನಿಸಬೇಕು. ಈ ನಿರಂತರವಾದ ವ್ಯವಸಾಯವನ್ನೇ ಅಭ್ಯಾಸವೈರಾಗ್ಯಗಳೆಂದೆರಡು ಬಾಗಗಳಾಗಿ ವಿಂಗಡಿಸಿ ಇವುಗಳ ಸಹಾಯದಿಂದ ಇಂದ್ರಿಯಗಳ (ಅಗ್ರಗಾಮಿಯೂ ಅದಿರಾಜನೂ ಆದ ಮನಸ್ಸೂ)ನ್ನು ಬಯಿಸಬೇಕೆಂದು ಶ್ರೀಕೃಷ್ಣ ಪರಮಾತ್ಮನು ಅರ್ಜುನನನ್ನು ಕುರಿತು ಉಪದೇಶ ಮಾಡಿದ್ದಾನೆ.

[illegible]

ಎಂಪೈರ್ ಆಫ್ ಇಂಡಿಯಾ, ಲೈಫ್ ಅಷ್ಯೂರೆನ್ಸ್ ಕಂಪೆನಿ

ಲಿಮಿಟೆಡ್, ಬೊಂಬಾಯಿ.

ಕಳೆದ ವರ್ಷದ ವರದಿಯು (Report) ಈಗ ತಾನೇ ಪ್ರಕಟವಾಗಿದೆ. ಕಳೆದ ವರ್ಷ ರೂ 85,00,000ಕ್ಕಿಂತಲೂ ಹೆಚ್ಚು ಮೊಬಲಗಿನ ವಿಮೆಯದಾರರು ಕಂಪೆನಿಗೆ ಹೊಸದಾಗಿ ದಾಖಲಾಗಿರುತ್ತಾರೆ. ಒಟ್ಟು ವಾರ್ಷಿಕ ಆದಾಯವು ರೂ 39,00,000ಕ್ಕಿಂತಲೂ ಹೆಚ್ಚಿರುವುದು. ಒಂದಣಾಳವು ರೂ 2,69,00,000ಕ್ಕಿಂತಲೂ ಹೆಚ್ಚಾಗಿದೆ. ಈ ಕಂಪೆನಿಯು ಇಂಡಿಯಾ ದೇಶದಲ್ಲಿನ ಮುಖ್ಯವಾದ ಇನ್‌ಷ್ಯೂರೆನ್ಸ್ ಕಂಪೆನಿಗಳಲ್ಲಿ ಒಂದಾಗಿರುವ [illegible] ವಾದ ಪಾಯದಿಂದ ನಡೆಸಲ್ಪಡುತ್ತಿರುವುದಾಗಿಯೂ ಇದೆ. ಈ ಕಂಪೆನಿಯ ವಿಮೆ ದರಗಳು ಕೇವಲ ಕಮ್ಮಿಯಾದುವು. ಈ ಕಂಪೆನಿಯು ಸಂಗ್ರಹಿಸಲ್ಪಟ್ಟ ಧನಗಳೆಲ್ಲವೂ ಇಂಡಿಯಾ ಗವರ್ನಮೆಂಟ್ ಮತ್ತು ಇತರ ಉತ್ತಮವಾದ ಸೆಕ್ಯೂರಿಟಿಗಳಲ್ಲಿಯೂ ಡಿಪಾಜಿಟ್ಟುಗಳಾಗಿ ಇಡಲ್ಪಟ್ಟಿದೆ. ಮತ್ತು ಹಾಗೆ ಡಿಪಾಜಿಟ್ಟು ಮಾಡಲ್ಪಟ್ಟ ಧನಗಳು ಡಿಪಾಜಿಟ್ಟಾದ ಕಾಲದಿಂದ ಈಚೆಗೆ ಒಟ್ಟು ಮೊಬಲಿನಲ್ಲಿ ರೂ. 13,00,000 ವರೆಗೂ ಹೆಚ್ಚಿವೆ. ಈಗಿನ ಲಾಭಾಂಶದರವು (Bonus) ವರ್ಷ ಒಂದಕ್ಕೆ ರೂ 100ಕ್ಕೆ ಹತ್ತು ರೂಪಾಯಿಯಂತೆ ನಿರ್ಣಯಿಸಲ್ಪಟ್ಟಿದೆ. ಮುಂದಿನ ಲಾಭಾಂಶ ವ್ಯಯದ ಲೆಕ್ಕಾಚಾರವು ಈ ವರ್ಷದ ಅತ್ಯಂತ ಬಾಗದಲ್ಲಿ ನಡೆಯತಕ್ಕದಾಗಿದೆ. ಇನ್ನು ಮುಂದೆ ಪಡೆಯತಕ್ಕ (ಲಾಭ ಸಹಿತವಾದ) ವಿಮೆಪತ್ರಗಳೂ ನಹ ಈಗಿನ ಲಾಭಾಂಶ ಹಂಚಿಕೆಗೆ ಭಾಗಿಗಳಾಗುವಂತೆ ಜೀವವಿಮೆ ಪತ್ರಗಳನ್ನು ಪಡೆಯಲು ಪ್ರಯತ್ನಪಡುವ ಮಹನೀಯರು ವಿಮೆಮಾಡುವದಕ್ಕೆ ಮುಂಚೆ ಈ ಕಂಪೆನಿಯ ಸೂಚನಾ ಪತ್ರ (Prospectus)ವನ್ನು ಈ ಕಂಪೆನಿಯ ಬೆಂಗಳೂರು ಬ್ರಾಂಚ ಆಫೀಸಿನಿಂದಾಗಲೀ ಅಥವಾ ಆಯಾ ಸ್ಥಳದ ಏಜಂಟರಿಂದಾಗಲೀ ತರಿಸಿಕೊಂಡು ನೋಡಿ ತಮ್ಮ ಮನಸ್ಸನ್ನು ಸಮಾಧಾನಪಡಿಸಿಕೊಳ್ಳಬಹುದು.

ಕರ್ನಾಟಕ ಏಕೀಕರಣದ ಬಳ್ಳಾರಿ ಪರಿಷತ್ತು: ಸ್ವಾಗತಾಧ್ಯಕ್ಷರ ಭಾಷಣದ ಸಾರಾಂಶ.

ಕರ್ನಾಟಕ ಸಹೋದರ ಸಹೋದರಿಯರೇ,

ದೇಶೀಯ ಮಹಾಸಭೆಯು ಕೈಕೊಂಡ ಭಾರತೀಯ ಜನಾಂಗದ ಪುನರುಜ್ಜೀವನ ಮಹತ್ಕಾರ್ಯದಲ್ಲಿ ಭಾಷೆಗಳನ್ನನುಸರಿಸಿ ಪ್ರಾಂತ್ಯ ರಚನಾಕಾರ್ಯವು ಅಡಕವಾಗಿರುತ್ತೆ. ಎಂದಿನಿಂದ ಮಹಾಸಭೆಯು ಧ್ಯೇಯವು ಜನರ ಅರ್ಜಿಗಳ ಪದ್ಧತಿಯನ, ಬಿಟ್ಟು ಜನಾಂಗದ ಆರ್ಥಿಕಸಮಾಜಿಕ ಮತ್ತು ರಾಜಕೀಯ ಪುನರುದ್ಧಾರಣ ಕಾರ್ಯದಲ್ಲಿ, ವಿಧಾಯಕ ಕಾರ್ಯಕ್ರಮದದ್ವಾರಾ ಸ್ವಾವಲಂಬನ ಪದ್ಧತಿಗೆ ಮಾರ್ಪಟ್ಟಿತೋ, ಅಂದಿನಿಂದ ಈ ಸಂದೇಶವು ಕೇವಲ ವಿದ್ಯಾವಂತರಿಗೆ ಮಾತ್ರವಲ್ಲದೆ ಹಳ್ಳಿಹಳ್ಳಿಗಳಲ್ಲಿರುವ ಪ್ರತಿಯೊಬ್ಬ ಕುಟೀರವಾಸಿಗೂ ತಿಳಿಯಪಡಿಸಬೇಕೆಂಬುವ ಆವಶ್ಯಕತೆಯು ಕಂಡುಬಂದಿತ. ಆದುದರಿಂದಲೇ, ದೇಶೀಯ ಮಹಾಸಭೆಯು ಕಾರ್ಯಕ್ರಮವನ್ನೂ ಮತ್ತು ಸಂದೇಶವನ್ನೂ ದೇಶಭಾಷೆಗಳ ಮೂಲಕವೇ ಪ್ರಚಾರಗೊಳಿಸುವ ಸಂಭವವು ಒದಗಿತು. ೧೯೨೦ ನೇ ಸಂವತ್ಸರದಲ್ಲಿ ದೇಶೀಯ ಮಹಾಸಭೆಯು ಈ ಪ್ರಾಮುಖ್ಯವನ್ನನುಸರಿಸಿ, ಕನ್ನಡನಾಡಿಗೆಲ್ಲಾ ಪ್ರತ್ಯೇಕ ಒಂದು ಪ್ರಾಂತರಚನೆ ಮಾಡಿದ್ದು ಕನ್ನಡಿಗರ ಚೈತನ್ಯಕ್ಕೆ ಕಳೆತುಂಬಿಸಿದಂತಾಗಿದೆ. ಈ ಪ್ರಕಾರವಾಗಿ ನಮ್ಮ ಕನ್ನಡನಾಡಿಗೆ ಬೇರೆ ಪ್ರಾಂತ್ಯವನ್ನು ದೊರಕಿಸಿಕೊಡಲು ಹೋರಾಡಿದ ನಮ್ಮ ಮುಂದಾಳುಗಳಿಗೆ ನಾವು ಎಷ್ಟು ವಂದಿಸಿದರೂ ಸಾಲದು.

ದೇಶೀಯ ಮಹಾ ಸಭೆಯು, ಈ ತತ್ವಕ್ಕೆ ಪ್ರಾಶಸ್ತ್ಯವನ್ನು ಕೊಡುವದಕ್ಕೆ ಪೂರ್ವದಲ್ಲಿಯೇ ಭಾರತೀಯ ಸರಕಾರದವರು ಇದೇತತ್ವಕ್ಕೆ ಒಂದು ರೀತಿಯಾಗಿ ಒಪ್ಪಿಗೆಯನ್ನು ಕೊಟ್ಟಿದ್ದರು. ೧೯೧೮ರಲ್ಲಿ ಮಾಂಟೆಗ್ಯೂ ಮತ್ತು ಚೆಮ್ಸ್‌ಫರ್ಡ್ ಸಾಹೇಬರವರು, ರಚಿಸಿದ ಹಿಂದ ಶಾಸನದ ಸುಧಾರಣಾ ಸಂಬಂಧದ ನಿವೇದನದಲ್ಲಿ, ಈ ತತ್ವವನ್ನು ಚರ್ಚಿಸಿ ಸಂಪೂ

ಹೊಸ ಸಾಮಾನುಗಳು! ಸುಲಭ ಕ್ರಯ!! ಈಗತಾನೇ ಬಂದಿವೆ!!!

ಇಂಥ ಸುಸಮಯವನ್ನು ಕಳಕೊಳ್ಳಬೇಡಿರಿ!

[illegible] 1ಕ್ಕೆ	ರೂ	15—0—0
[illegible] (ಎರಡು) 1ಕ್ಕೆ	,,	61—1—0
,,	,,	65—0—0
[illegible] 1ಕ್ಕೆ	,	85—0—0
12 [illegible] 100ಕ್ಕೆ	,	14—0—0
[illegible]	,,	16—0—0
[illegible]	,,	10—0—0
[illegible] ಸಾಮಾನುಗಳ 1 ಪೆಟ್ಟಿಗೆಗ		27—8—0
[illegible] 1 [illegible]	ರೂ	1—5—0
[illegible] 1ಕ್ಕೆ	,	1—0—0
[illegible] 1ಕ್ಕೆ	,	0—10—0
[illegible] 1 ಡಜನ್ನಿಗ	,	33—0—0
4	,,	30—0—0
[illegible] ಡಜನ್ನಿಗ	,,	60—0—0
3 ,,	,	48—0—0
[illegible] ಡಜನ್ನಿಗ	,,	54—0—0
ಇಂಗ್ಲೀಷ್ [illegible] ಡಜನ್ನಿಗ	,	15—0—0

ಮೆಕ್ಡೋಲ್ ಕಂಪೆನಿ,
ಮಡಿಕೇರಿ.

12-1

Messers Mc Dowell & Co
Mercara

...ರ್ ಒಪ್ಪಿಗೆಯನ್ನು ೨೪೭ನೇ ಪಾರಾದಲ್ಲಿ ವ್ಯಕ್ತಪಡಿಸಿರುವರು.

ಕನ್ನಡಿಗರ ಛಿನ್ನಭಿನ್ನತೆಯೂ, ಶಿಥಿಲತ್ವವೂ, ಅವರಲ್ಲಿರುವ ಮಾಂದ್ಯತೆಗೂ, ಅನೈಕ್ಯಮತ್ಯಕ್ಕೂ ಮುಖ್ಯಕಾರಣವು ಕನ್ನಡನಾಡಿಗೆ ಒದಗಿದ ಕಪ್ರಿಥವಾದ ನಿರ್ಹೇತುಕವಾದ ಮತ್ತು ವಿಪರೀತಪರಿಣಾಮಕಾರಕವಾದ ಛಿನ್ನಭಿನ್ನತೆಗೆ ಕನ್ನಡನಾಡು ತುತ್ತಾದಂತೆ ಹಿಂದುಸ್ಥಾನದ ಇತಿಹಾಸಗಳಲ್ಲಿ ಬೇರೆ ಯಾವ ಪ್ರಾಂತ್ಯಕ್ಕೂ ಆಗಿಲ್ಲವೆಂದು ನಾನು ನಿರ್ಭಯದಿಂದ ಹೇಳುವೆನು.

ಬಹುಕಾಲದಿಂದ, ಬೇರೆ ಬೇರೆ ಆಡಳಿತಗಳಿಗೆಲ್ಲ ಅಲ್ಲಲ್ಲಿಯ ಸ್ಥಾನೀಕ ಪದ್ಧತಿಗಳಿಗೆ ಒಳಪಟ್ಟದ್ದರಿಂದ ನವೀನ ವಾತಾವರಣವನ್ನು ಅನುಸರಿಸುವದು, ಸ್ವಲ್ಪ ಕಷ್ಟತರವಾಗಿರುತ್ತೆ. ನಮ್ಮಲ್ಲಿಯ ಐಕ್ಯಮತ್ಯದ ಬಾವನೆ, ಮಾತೃಭಾಷೆಯ ಮೇಲಿನ ಗೌರವವು ಪೂರ್ತಿಯಾಗಿ ಅಳಿದುದರಿಂದ ಈ ಹೊಸ ಪ್ರಾಂತ್ಯರಚನೆಯ ವಿಷಯವು ಕೆಲವರಿಗೆ ಆಗಿಹೋಗದ ಮಾತೆಂದು ಅನಿಸಬಹುದು. ಏಕೀಕರಣ ವಿಷಯದಲ್ಲಿ ಮುಂಬಾಯಿ ಇಲಾಖೆಯಲ್ಲಿಯ ಸರ್ವೆ ಭೂಕಂದಾಯ [illegible] ಪದ್ಧತಿ ಬಗ್ಗೆ ಮದ್ರಾಸ ಕನ್ನಡಿಗರಿಗೆ ಭಯ. ಮುಂದೆ ನಿರ್ಮಾಣವಾಗುವ ಪ್ರಾಂತ್ಯವು ಮುಂಬಾಯಿ ಇಲಾಖೆಗಾಗಲಿ, ಮದ್ರಾಸು ಇಲಾಖೆಗಾಗಲಿ ಸೇರಿದ್ದಾಗುವದಿಲ್ಲ. ಅದು ಕರ್ನಾಟಕ ಪ್ರಾಂತ್ಯವೆಂಬ ಹೊಸರಾಷ್ಟ್ರವಾಗುವದು. ಈ ಭೂಕಂದಾಯದ ವಿಷಯವಾಗಿ ನಮ್ಮ ಪದ್ಧತಿಗಳು ನಮಗೇ ಉಳಿಯುತ್ತವೆ. ಈಗ ಮದ್ರಾಸು ಅಧಿಪತ್ಯದಲ್ಲಿಯೇ ಮಲೆಯಾಳ ಭೂಕಂದಾಯ ಪದ್ಧತಿ ಒಂದು, ಒಮಾಸುದಾರರುಗಳ [illegible] ಭೂಕಂದಾಯ ಪದ್ಧತಿ ಮತ್ತೊಂದು. ಈ ತರವಾದ ವಿವಿಧ ಭೂಕಂದಾಯ ಪದ್ಧತಿಗಳಿಗೆ ನಾವು ಒಳಗಾಗಿಲ್ಲವೇ? ಭೂಕಂದಾಯ ಪದ್ಧತಿಗಳಿಗೆ ನಾವು ಒಳಗಾಗಿಲ್ಲವೇ? ಭೂಕಂದಾಯ ಪದ್ಧತಿಗಳಿಗ್ [illegible] ಅನಾಸ್ಥಾಯ ಮುಂತಾದ ಅಲ್ಪ ಭೇದಗಳಿಂದ ಉಂಟಾದ, ಅನಾವಶ್ಯಕವಾದ [illegible] ಕೂಲಕೆಗೀತೆಯೂ, [illegible] ಯು ಹೆಚ್ಚಿನ ಮಹತ್ವದ್ದೆಂದು ನಿಸ್ಸಂಶಯವಾಗಿ ಹೇಳಬಹುದು. ಏಕೀಕರಣಕ್ಕೆ ಈಗಿನ ಕನ್ನಡ ಭಾಷೆಯು ಭಿನ್ನಭಿನ್ನ ಪ್ರಾಂತ್ಯಗಳಲ್ಲಿ ಒಂದೊಂದು ರೀತಿಯಾಗಿ ಉಪಯೋಗಿಸಲ್ಪಡುತ್ತದೆಂಬುವದು ಮತ್ತೊಂದಾಕ್ಷೇಪಣೆ. ಈ ಆಕ್ಷೇಪಣೆಯು ಸಾಧಾರಣವಾಗಿ ಸಕಲ ದೇಶಭಾಷೆಗಳಿಗೂ ಅನ್ವಯಿಸುತ್ತದೆ. ನಾನಾ ಜಿಲ್ಲೆಗಳ ಪುಸ್ತಕಗಳಲ್ಲಿ ತೋರುವ ಸೂಚಕರಿಗೆ ಬೇಧಭಾವನೆಯನ್ನು ಕಲ್ಪಿಸಿಕೊಡುವದೇ, ಹೇಗೆ ಎಂದಿಗೂ ಇಲ್ಲ.

ಏಕೀಕರಣ ಪ್ರಶ್ನೆಯು ವ್ಯವಸ್ಥೆಯಲ್ಲಿ ಗಡಿಬಿಡಿಗಳು, ಕೆಲವು ತೊಂದರೆಗಳನ್ನು ಕೊಡುತ್ತ ಬಳ್ಳಾರಿ ಜಿಲ್ಲೆಯು ಮೇಲೆ ಆಂಧ್ರ ಮತ್ತು ಕರ್ನಾಟಕ ಪ್ರಾಂತೀಕಕಾಂಗ್ರೆಸು ಕಮಿಟಿಗಳ ಅಧಿಕಾರವನ್ನು ನಿರ್ಧರಿಸುವದಕ್ಕಾಗಿ ಅಖಿಲ ಭಾರತ ಕಾಂಗ್ರೆಸ ಕಮಿಟಿಯವರು ಶ್ರೀಯುತ ಎನ್. ಸಿ. ಕೇಳಕರ್ ರವರನ್ನು ಪಂಚಾಯಿತದಾರನನ್ನಾಗಿ ನಿಯಮಿಸಿದ ವಿಷಯವೂ, ಅವರು ಬಳ್ಳಾರಿ ಜಿಲ್ಲೆಯನ್ನು ಎರಡು ಪ್ರಾಂತೀಕ ಕಮಿಟಿಗಳಲ್ಲಿ ವಿಭಾಗಿಸಿ, ಬಳ್ಳಾರಿಯನ್ನು ಕೂಡಿಸಿ ೯ ತಾಲೂಕುಗಳನ್ನು ಕರ್ನಾಟಕ ಪ್ರಾಂತ್ಯಕ್ಕೂ ಉಳಿದ ೩ ತಾಲೋಕುಗಳನ್ನು ಆಂಧ್ರಪ್ರಾಂತ್ಯಕ್ಕೂ ಹಂಚಿಕೊಟ್ಟಿರುವರು. ಶ್ರೀಮಾನ್ ಕೇಳಕರರವರೇ ತಮ್ಮ ತೀರ್ಪಿನ ಕೊನೆಯಲ್ಲಿ 'ಇಡೀ ಬಳ್ಳಾರಿ ಜಿಲ್ಲೆಯನ್ನು ಕರ್ನಾಟಕ ಪ್ರಾಂತೀಕ ಕಾಂಗ್ರೆಸ ಕಮಿಟಿಗೆ, ನಾನು ಕೊಟ್ಟಿದ್ದರೆ ನ್ಯಾಯವಾಗುತ್ತಿತ್ತು. ಆದರೆ ನಾನು ಹಾಗೆ ಮಾಡಲಿಲ್ಲ. ಸ್ವಾಭಾವಿಕ ವಿಭಾಗಕ್ಕನುಸಾರವಾಗಿ ನಾನು ಜಿಲ್ಲೆಯನ್ನು ಹಂಚಿ, ಪೂರ್ವಭಾಗವನ್ನು ಆಂಧ್ರಪ್ರಾಂತಕ್ಕೂ ಪಶ್ಚಿಮಭಾಗವನ್ನು ಕರ್ನಾಟಕ ಪ್ರಾಂತ್ಯಕ್ಕೂ ಕೊಟ್ಟಿದ್ದೇನೆ.' ತತ್ಕಾಲಿಕವಾದರೂ ಈ ತೀರ್ಮಾನವು ಕರ್ನಾಟಕದಿಂದ ಮಾನ್ಯ ಮಾಡಲ್ಪಟ್ಟಿದೆ. ಆದರೆ ನಮ್ಮ ಬಳ್ಳಾರಿ ಪ್ರಶ್ನೆಯ ವಿಷಯವಾಗಿ ಇರುವ ನಿಜತತ್ವಗಳ ಬಗ್ಗೆ ನಮ್ಮ ಆಂಧ್ರ ಸಹೋದರರಲ್ಲಿ ಕೆಲವು ಮುಖಂಡರೂ, ಮತ್ತು ಜವಾಬ್ದಾರಿತ್ವವುಳ್ಳ ಮಹನೀಯರೂ ಪ್ರದರ್ಶಿಸುತ್ತಿರುವ ವಿಚಿತ್ರತರವಾದ ಪ್ರವರ್ತನೆಯನ್ನು ಅವರ ಯಥಾರ್ಥವನ್ನು ಸ್ವರೂಪ ಜ್ಞಾನಾಭಾವವನ್ನು ಕಂಡು ಖೇದಗೊಂಡು ಈ ಪ್ರಶ್ನೆಯನ್ನು ನಿವಾರಿಸಬೇಕಾಗಿದೆ. ನಮ್ಮ ಜಿಲ್ಲೆಯ ತರುವ [illegible] ೪೦೦ ಶಿಲಾಶಾಸನಗಳಲ್ಲಿ ನೂರೂರು ಮಾತ್ರ ತೆಲುಗುಭಾಷೆಯಲ್ಲಿರುವವು!!

ಏಕೀಕರಣಾ ಕಾರ್ಯವು ಅನೇಕ ತೊಂದರೆಗಳಿಂದ ಕೂಡಿದಾಗ್ಯೂ, ನಾವು ನಿರಾಶೆಯನ್ನು ಹೊಂದುವ ಕಾರಣವಿಲ್ಲ. ಕಳೆದ ಕೆಲವು ಸಂವತ್ಸರಗಳಲ್ಲಿ ಕರ್ನಾಟಕವು ಅತ್ಯದ್ಭುತ ಜಾಗ್ರತೆಯನ್ನು ಹೊಂದಿದೆ, ಮತ್ತೂ ಏಕೀಕರಣ ಪ್ರಶ್ನೆಯೂ, ಕರ್ನಾಟಕದ ಮುಖಂಡರಲ್ಲಿ ಅವರು ರಾಷ್ಟ್ರೀಯ ಪಕ್ಷದವರೇ ಇರಲಿ, ಅಥವಾ ಬೇರೆಯವರೇ ಇರಲಿ ಏಕಭಾವವನ್ನು ಉತ್ಪನ್ನಮಾಡಿ, ಅವರು ಒಂದೇ ಕಾರ್ಯಕ್ಷೇತ್ರದಲ್ಲಿ ಕೆಲಸಮಾಡುವ ಹಾಗೆ ಮಾಡಿದೆ.

ಮಹಾಶಯರೇ! ನಮ್ಮ ಪವಿತ್ರ ತಾಯ್ನುಡಿಯ ಮತ್ತೂ ನಮ್ಮ ಸಂಸ್ಕೃತಿಯ ಅಸ್ತಿತ್ವವನ್ನು ಕಾಯ್ದುಕೊಳ್ಳಲಿಕ್ಕೆ ನಾವು ಪ್ರಯತ್ನ ಪಡಬೇಕೋ ಬೇಡವೋ? ನಾವು ಸ್ವಯಂಕೃತ ತಂತ್ರ ಪ್ರಾಂತ್ಯವನ್ನು ರಚಿಸಿಕೊಂಡು ಭರತಮಾತೆಯ ಬಾಧು ವಿಮೋಚನೆಯಲ್ಲಿ ಐಕ್ಯಮತ್ಯತೆಯಿಂದ ಉತ್ಸಾಹದಿಂದ ದೃಢಸಂಕಲ್ಪ ಸಾಮರ್ಥ್ಯದಿಂದ ಪ್ರಯತ್ನಿಸುವ.

'ಕರ್ಣವೀರ.'

ವರ್ತಮಾನ ಸಂಗ್ರಹ.

ಒಳದೇಶ

ಸಹಕಾರಿ ಸೆಂಟ್ರಲ್ ಬ್ಯಾಂಕಿನ ಡೈರೆಕ್ಟರುಗಳ ಮೀಟಿಂಗು ಮಡಿಕೇರಿಯಲ್ಲಿ ಜೂನ್ ತಾ ೯ರಲ್ಲಿ ನಡೆಯಲಿಕ್ಕಿದೆ.

ಕಳೆದವಾರ ವೀರಾಜಪೇಟೆ ಹೈಸ್ಕೂಲಿನ ಹೆಡ್ ಮಾಸ್ಟರಾದ ಮೆ. ಸಿ. ಯಂ ರಾಮರಾಯರ ಪತ್ನಿಯವರು ಶಿವಾಧೀನರಾದರೆಂದು ತಿಳಿಸಲು ವ್ಯಸನಪಡುತ್ತೇವೆ.

ಕಳೆದವಾರ ಹೆಸರುಗಳು ಪ್ರಕಟವಾದವರಲ್ಲದೆ ಮೆ. ಚಿಪ್ಪಂಡ [illegible] ಮಂದಣ್ಣನವರೂ ಇಂಟರ್‌ಮೀಡಿಯೇಟ್ ಪರೀಕ್ಷೆಯಲ್ಲಿ ತೇರ್ಗಡೆಹೊಂದಿರುವರೆಂದು ತಿಳಿಯಬರುತ್ತೆ.

1926ನೇ ಇಸವಿಯ ಬ್ರೀಚ್ ಆಫ್ ಕಂಟ್ರಾಕ್ಟ್ ಆಕ್ಟಿನ ಪ್ರತಿಗಳು ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರವರ ಆಫೀಸಿನಲ್ಲಿ ಪ್ರತಿ ಒಂದಕ್ಕೆ 2 ಆಣೆ ಕ್ರಯದಲ್ಲಿ ಮಾರಲ್ಪಡುವವೆಂದು ಆ ಆಫೀಸಿನವರು ತಿಳಿಸಿರುತ್ತಾರೆ.

ಈ ತಾ. 14ರಲ್ಲಿ ಕಕ್ಕಬೆಯಲ್ಲಿ ಸಹಕಾರಿ ಸಂಘಗಳ ಮತ್ತು ದವಸದ ಬಂಡಾರಗಳ ಒಂದು ಕಾನ್ಫರೆನ್ಸು ನಡೆಯಿತು. ಸಹಕಾರಿ ಸಂಘಗಳ ರಿಜಿಸ್ಟ್ರಾರರವರು ಅಧ್ಯಕ್ಷರಾಗಿದ್ದರು. ಇದರ ವಿವರವು ಇನ್ನೊಂದುಕಡೆ ಪ್ರಕಟವಾಗಿದೆ.

ಗವರ್ನ್‌ಮೆಂಟ್ ಉದ್ಯೋಗಸ್ಥರ ವರ್ಗಾವರ್ಗ ಮತ್ತು ಕರ್ನಾಟಕ ಏಕೀಕರಣವನ್ನು ಕುರಿತು ಚರ್ಚಿಸಲು ಜೂನ್ ತಾ. 10ರಲ್ಲಿ ಪೊನ್ನಂಪೇಟೆಯಲ್ಲಿಯೂ, ತಾ 20ರಲ್ಲಿ ಕ್ಯಾಕೇರಿ ದೇವಸ್ಥಾನದ ಬಳಿಯಲ್ಲಿಯೂ ಪಬ್ಲಿಕ್ ಮೀಟಿಂಗುಗಳು ನಡೆಯುವವೆಂದು ತಿಳಿಯಬರುತ್ತದೆ.

ಟ್ರಿಚಿಯಲ್ಲಿ ಹಣ ಕಾಣೆ ಆದ ಕೇಸಿನ ಅಪೀಲಿನಲ್ಲಿ ಸೆಶನ್ ಜಡ್ಜಿಯವರು ಮೆ. ಪಾಡೆಯಂಡ ಸೋಮಯ್ಯನವರಿಗೆ ಕೆಳಕೋರ್ಟಿನ ಶಿಕ್ಷೆಯನ್ನೇ ಖಾಯಂ ಮಾಡಿದರು. ಅವರಿಗೆ ವಿಧಿಸಿದ [illegible] ಹಣವು ಟ್ರಿಚಿರವರಿಗೆ ಸಲ್ಲತಕ್ಕವರದಲ್ಲ, ಸರ್ಕಾರಕ್ಕೆ ಸಲ್ಲತಕ್ಕದ್ದೆಂದು ತೀರ್ಮಾನಿಸಿರುವರು.

[illegible] ಸಡ್ ಸಕಂಡರಿ ಬೋರ್ಡಿನ ಪರೀಕ್ಷೆಯಲ್ಲಿ ಮಡಿಕೇರಿ ಹುಡುಗಿಯರ ಹೈಸ್ಕೂಲಿನಿಂದ (ಕಾನ್ವೆಂಟು) 7ರಲ್ಲಿ 6 ವಿದ್ಯಾರ್ಥಿನಿಯರು, ಮಡಿಕೇರಿ ಸೆಂಟ್ರಲ್ ಹೈಸ್ಕೂಲಿನಿಂದ 70ರಲ್ಲಿ 41 ಮಂದಿಯೂ ವೀರಾಜಪೇಟೆ ಹೈಸ್ಕೂಲಿನಿಂದ [illegible] 11 ಮಂದಿಯರೂ ತೇರ್ಗಡೆಹೊಂದಿರುವರು.

ಮೆ. ಕೋಟೆರ ಚಿನ್ನಪ್ಪನವರ ಮತ್ತು ಮೆ. ಬಿದ್ದಂಡ ಜೋಯ್ಯಮ್ಮನವರ ಮಾನ ನಷ್ಟದ ಕ್ರಿಮಿನಲ್ ಮೊಕದ್ದಮೆಗಳನ್ನು ಸಬ್ ಜಡ್ಜಿಯವರ ಕೋರ್ಟಿನಿಂದ ವರ್ಗಾಯಿಸಬೇಕೆಂದು ಮೆ. ಚಿನ್ನಪ್ಪನವರು ಚೀಫ್ ಕಮಿಷನರವರಿಗೆ ಅರ್ಜಿ ಒಪ್ಪಿಸಿದುದರಿಂದ ಆ ಕೇಸುಗಳ ವಿಚಾರಣೆಯನ್ನು ಜೂನ್ ತಾ. 7ಕ್ಕೆ ಮುಂದರಿಸಿರುವರು.

ಒಸುವನ ಕೊಪ್ಪಲು ವಕ್ಕಲಿಗರ ಸುಬ್ಬಯ್ಯಗೌಡರು ವಕ್ಕಲಿಗರ ಬಸವೈಯ್ಯಗೌಡರಿಗೆ ಗುಂಡುಹೊಡೆದರೆಂಬದಾಗಿ ಮಾಡಿದ ಸೆಶನ್ಸ್ ಕೇಸಿನಲ್ಲಿ ಅಪರಾಧಿಗೆ ತಾ. 25ರಲ್ಲಿ ಬಿಡುಗಡೆಯಾಯಿತು. ಮೆ ಯಂ. ಭುಜಂಗರಾಯರು ಮೆ ತಿರುಮಲಾಚಾರ್ಯರ ಸಮೇತ ಅಪರಾಧಿಯ ಕಡೆ ವಾದಿಸಿದರು. ಕುಂಬಾರ ಆದ ಅಪ್ಪಿ ಕುಟ್ಟಿರ—ಚಿಮ್ಮಣ್ಣನವರ ಕೂಸಿ ಮಾಡಿದವರು ಮಿಲ್ಲಾ ನ ಭುಜಂಗರಾಯರೇ ಲಾಯರಾಗಿದ್ದರು.

ಈ ವರ್ಷ [illegible] ಪರೀಕ್ಷೆಯಲ್ಲಿ ಶ್ರೀಮತಿ ಕೋದಂಡ ಸೀತಮ್ಮನವರು, ಮೆ. ಕೋದಂಡ ಯಂ ಗಣಪತಿಯವರು, ಮೆ. ಮನೆಯಪಂಡ ಯನ್. ಚಿಟ್ಟಿಯಪ್ಪನವರ, ಮೆ ಪಳೆಯಂಡ [illegible] ಕುಶಾಲಪ್ಪನವರ, ಮೆ. ಗುಂಡುರಾಯರು, ಮೆ. ಕಾಳೇಂಗಡ [illegible] ಯ್ಯಮ್ಮನವರು ಮೆ. ಬಿ. ವೆಂಕಟರಮಣನವರು, ಮೆ. ಕೂಡುವೆರ ಯಂ. ಸಂಬಪ್ಪನವರು ಮೆ. ಡಿ. ಯನ್. ಕೃಷ್ಣಯ್ಯನವರು ಸಂಪೂರ್ಣವಾಗಿಯೂ, ಮೆ. ಮೇಚಿಯಂಡ ಜಿ. ಮಾದಪ್ಪನವರು ಮತ್ತು ಮೆ. ಮಹಾಬಲರೈಯವರು ಒಂದು ಭಾಗದಲ್ಲಿ ಮಾತ್ರವೂ ಮೆ. ಎಸ್. ಆರ್. ಗೋಪಾಲಕೃಷ್ಣಯ್ಯನವರು ಮೈನೂರು ಬಿ. ಎ ಯಲ್ಲಿ ಸೆಕೆಂಡ್ ಕ್ಲಾಸಿನಲ್ಲಿಯೂ ಮೆ. ಪಟ್ಟಮಾಡ ಪೂವಯ್ಯನವರು ಸ್ಪೆಶಲ್ ಇಂಗ್ಲಿಷ್ ಸಮೇತ ಯಲ್. ಟಿ. ಯಲ್ಲಿಯೂ ಪಾಸಾಗಿರುವರೆಂದು ತಿಳಿಸಲು ಸಂತೋಷಪಡುತ್ತೇವೆ. ಇವರೆಲ್ಲರನ್ನು ನಾವು ಅಭಿನಂದಿಸುತ್ತೇವೆ.

ಹಿಂದೂದೇಶ.

ಬಂಗಾಳ ಕೌನ್ಸಿಲಿನಲ್ಲಿ ಪಾಸಾದ ಬಂಗಾಳ [illegible] ನ್ಸಿ ಬಿಲ್ಲನ್ನು ಅಲ್ಲಿಯ ಗವರ್ನರವರು ಮಂಜೂರು ಮಾಡಿರುವರು.

[illegible] ವಿರಾಘವಾ ಕಮಿಟಿಯವರು ಸ್ವರಾಜ್ಯಪಾರ್ಟಿಯವರೊಂದಿಗೆ [illegible] ಬರುವ ಕೌನ್ಸಿಲ್ ಚುನಾವಣೆಗೆ ನಿಲ್ಲುವಂತೆ [illegible] ಸಿದ ರು.

ರೆಸ್ಪಾನ್ಸಿವಿಸ್ಟ ಪಂಗಡದ ಮುಂದಾಳುಗಳಾದ ಮೆ. ಯಂ. ಜಯಕರ್ ಮೆ. ಕಲ್ಕಾರ್ ಮತ್ತು ಮೆ. ಡಿ. ವಿ. ಗೋಖಲೆಯವರು ನೇಶನಲಿಸ್ಟ ಪಾರ್ಟಿಗೆ ಸೇರಿರುವರು.

ಪೂನಾದಲ್ಲಿ 'ಸರ್ವೆಂಟ್ ಆಫ್ ಇಂಡಿಯಾ ಸೊಸೈಟಿಯವರ ಛಾಪಖಾನೆಯು ತಾ. 25ರಲ್ಲಿ ಬೆಂದು ಹೋಗಿ ತುಂಬಾ ನಷ್ಟ ಉಂಟಾಗಿದೆ. ಅದರಲ್ಲಿ "ಧ್ಯಾನ ಪ್ರಕಾಶ" ಮತ್ತು 'ಸರ್ವೆಂಟ್ ಆಫ್ ಇಂಡಿಯಾ' ಪತ್ರಿಕೆಗಳು ಪ್ರಿಂಟಾಗುತ್ತಿದ್ದವು. ಅದರ ನಷ್ಟವು ಇನ್ನು ಎಷ್ಟೆಂದು ಹೇಳಲಿಕ್ಕಾಗದಿದ್ದರೂ ಅನೇಕ ಲಕ್ಷ ರೂಪಾಯಿಗಳಾಗುವವಂತೆ.

ಪಂಜಾಬು ಹಿಂದೂ ಕಾನ್ಫರೆನ್ಸಿನ ಅಧ್ಯಕ್ಷರ್ ಮೂಂಜೆಯವರು ಮಾಡಿದ ಭಾಷಣದಿಂದ [illegible] ವಾರು ದ್ವೇಷವು ಹೆಚ್ಚುಬಹುದಾದ ಕಾರಣ ಅವರಮೇಲೆ ಫಿರ್ಯಾದಿನಡಿಸಬೇಕೆಂದು ಮಹಮ್ಮದ್ ಅಬ್ದುಲ್‌ಹಾಯಿಯವರು ಅಲ್ಲಿಯ ಸರ್ಕಾರವನ್ನು ಕೋರಿದಕ್ಕೆ ಹಾಗೆ ಮಾಡಲು ಆಗುವದಿಲ್ಲವೆಂದು ಸರ್ಕಾರದವರು ಜವಾಬುಕೊಟ್ಟಿರುವರು.

ಅನೇಕ ವರ್ಷಗಳಿಂದ ಇಂಡಿಯಾದಲ್ಲಿ ವಕೀಲಿತನವನ್ನು ನಡಿಸಿ ಪ್ರಖ್ಯಾತಿಯನ್ನು ಹೊಂದಿರುವ ಮೆ ಇ. ನಾರ್ಟನ್‌ರವರು ಖಾಯಂ ಆಗಿ ಇಂಗ್ಲೆಂಡಿಗೆ ಹೊರಟು ಹೋಗುವ್ವದರಿಂದ ಅವರಿಗೆ ಮದ್ರಾಸು ಪ್ರಾಂತ್ಯದ ಹಲವು ಡಿಸ್ಟ್ರಿಕ್ಟುಗಳ ಲಾಯರುಗಳ ಪ್ರತಿನಿಧಿಗಳು ತಾ. 24ರಲ್ಲಿ ಕೊಡೆಕಾನಲ್ಲಿ ಒಂದು ಬಹುಮಾನ ಪತ್ರವನ್ನು ಅರ್ಪಿಸಿದರು. ಇಂಡಿಯಾದವರು ಸ್ವರಾಜ್ಯವನ್ನು ತೊಂದರೆ ಇಲ್ಲದೆ ನಡಿಸಲು ಶಕ್ತರಾದರೆ ಸ್ವರಾಜ್ಯ ಕೊಡಲು ಇಂಗ್ಲೆಂಡು ತಯಾರಾಗಿದೆಯೆಂದೂ, ಹಿಂದೂ ಮುಸಲ್ಮಾನರ ಮತ್ತು ಬ್ರಾಹ್ಮಣ ಬ್ರಾಹ್ಮಣೇತರರ ಜಗಳವು ಸ್ವರಾಜ್ಯ ಸಂಪಾದನೆಗೆ ಅಡ್ಡಿಯಾಗುತ್ತಿವೆಯೆಂದೂ ಮೆ. ನಾರ್ಟನ್‌ರವರು ಉತ್ತರಕೊಟ್ಟರು.

ತಾ. 22ರಲ್ಲಿ ಕೃಷ್ಣನಗರದಲ್ಲಿ ನಡೆದ ಬಂಗಾಳ ಪ್ರಾಂತೀಕ ಕಾನ್ಫರೆನ್ಸಿನಲ್ಲಿ ಅಧ್ಯಕ್ಷರಾದ ಮೆ. ಬಿ. ಯನ್. ಶಾಸ್ಮಲ್‌ರವರು ತಮ್ಮ ಭಾಷಣದಲ್ಲಿ ಬಂಗಾಳದ ಅನಾಯಕತ್ವದ ವಿಷಯ ಕೊಟ್ಟ ಅಭಿಪ್ರಾಯವು ಅಲ್ಲಿ ನೆರೆದಿದ್ದ ಡೆಲಿಗೇಟರನೇಕರಿಗೆ ಒಪ್ಪದ್ದರಿಂದ ಅಧ್ಯಕ್ಷರು ತಮ್ಮ ಪದವಿಯನ್ನು ಬಿಡಬೇಕಾಗಿ ಬಂತು. ಅಧ್ಯಕ್ಷರು ಇಲ್ಲದ್ದರಿಂದ ಕಾನ್ಫರೆನ್ಸನ್ನು ಮುಂದಿನ ತಾರೀಕಿಗೆ ಇಡಬೇಕೆಂದು ಪ್ರಾಂತೀಕ ಕಾಂಗ್ರೆಸ್ ಕಮಿಟಿಯ ಅಧ್ಯಕ್ಷರಾದ ಸೆನ್‌ಗುಪ್ತರವರು ಸೂಚಿಸಿದಕ್ಕೆ ಹಲವರು ಒಪ್ಪದ್ದರಿಂದ ಅವರು ಮೀಟಿಂಗನ್ನು ಬರಕಾಸ್ತು ಮಾಡಿದರು. ಆದರೆ ಅನೇಕರು ಅಲ್ಲಿ ನಿಂತು ಬೇರೊಬ್ಬ ಅಧ್ಯಕ್ಷರನ್ನು ಆರಿಸಿ ಹಿಂದೂ ಮುಸಲ್ಮಾನರಿಗಿದ್ದ ಬಂಗಾಳ ಒಪ್ಪಂದವನ್ನು ವಜಾಮಾಡುವಂಥ ಠರಾವನ್ನು ಪಾಸುಮಾಡಿದರು.

ವಿದೇಶ.

ಇಂಗ್ಲೆಂಡಿನ ಪ್ರಧಾನ ಮಂತ್ರಿಯವರು ಕಲ್ಲಿದ್ದಲುಗಣಿಗಳ ಮಾಲೀಕರಿಗೂ ಕೆಲಸಗಾರರಿಗೂ ಇದ್ದ ವಿವಾಹದ ಸಂಬಂಧ ಸೂಚಿಸಿದ ಶರತ್ತುಗಳನ್ನು ಎರಡು ಕಡೆಯವರೂ ತಿರಸ್ಕರಿಸಿರುವರು.

ಈಜಿಪ್ಟ ದೇಶದ ಪಾರ್ಲಿಮೆಂಟಿನ ಚುನಾವಣೆಯಲ್ಲಿ ಝಗ್ಲುಲ್ ಪಾರ್ಟಿಯವರಿಗೆ ಜಯವಾಗಿದೆ. ಜಾಗ್ಲುಲ್ ಪಾರ್ಟಿಯ 150 ಮೆಂಬರುಗಳೂ, ಲಿಬರಲ್ ಪಂಗಡದ 24 ಮೆಂಬರುಗಳೂ ಬೇರೆ 13 ಮೆಂಬರುಗಳೂ ಚುನಾವಣೆಯಲ್ಲಿ ಜಯಶೀಲರಾಗಿರುವರು.

ಮೊರಾಕ್ಕೋದಲ್ಲಿ ರಿಫರ ಮುಖಂಡನಾದ ಅಬ್ದುಲ್ ಕ್ರಿಂ ವರವರ ಕುಟುಂಬವನ್ನು ಫ್ರೆಂಚ್ ಸೈನ್ಯದವರು ಸೆರೆಹಿಡಿದಿರುವರಾದರೂ ಇದುವರೆಗೆ ಕಡೇ ಮನುಷ್ಯನು ಬೀಳುವವರೆಗೂ ಯುದ್ಧಮಾಡಬೇಕೆಂದು ಅಬ್ದುಲ್ ಕ್ರಿಮರು ರಿಫ್‌ಜನರಿಗೆಲ್ಲಾ ಕೋರಿಕೆಯನ್ನಿತ್ತಿರುವರೆಂದೂ ಫ್ರೆಂಚರ ಕಡೆಯ ವರ್ತಮಾನ.

ದೇವರಿಂದ ಆತೀವಾರ್ದವಪಡೆಯಬೇಕೆಂಬ ಇರಾದೆಯಿಂದ ಮಹಮ್ಮದನ ಗೋರಿಯನ್ನು ಮುಟ್ಟಕೂಡದೆಂದೂ, ಅಂಥಾದ ಕಡೆಗಳು ಶಾದಾವಾಗಿರಬೇಕಾದೂ, ಅಲ್ಲಿ ಹೊಗೆಸೊಪ್ಪನ್ನು ಸೇವಿಸಕೂಡದೆಂದೂ ಮತ್ತು ಸಂಗೀತವನ್ನು ಮಾಡಕೂಡದೆಂದೂ, ಈ ಶರತ್ತುಗಳಿಗೆ ಒಳಪಟ್ಟರೇನೇ ಮಹಮ್ಮದನಗೋರಿಗೆ ಜನರನ್ನು ಹೋಗಲಿಕ್ಕೆ ಬಿಡಬಹುದೆಂದೂ ಇಬ್ನಸಾಡ್‌ರವರು ಪ್ರಕಟಿಸಿರುವರು. ಈ ಶರತ್ತುಗಳನ್ನು ಈಜಿಪ್ಟಿನ ಸರ್ಕಾರವು ಒಪ್ಪಿಕೊಂಡಿದೆ.

NOTICE

P B. Somappa L.M.&S. has much pleasure in announcing to the public that he has started private medical practice with a dispensary at virajpett, since the 17th of May 1926

ಮೆ: ಪಾಡಂಡ ಬಿ ಸೋಮಪ್ಪ ಎಲ್. ಯಂ. ಎಂಡ್ ಎಸ್. ರವರು ಇದೇ ಮೇ ತಾರೀಕು 17ರಿಂದ ವೀರಾಜಪೇಟೆಯಲ್ಲಿ ವೈದ್ಯಶಾಲೆಯನ್ನು ತೆರೆದಿರುತ್ತಾರೆಂದು ಜನರಿಗೆ ತಿಳಿಸಲು ತುಂಬಾ ಸಂತೋಷಪಡುತ್ತಾರೆ.

4—2

ಪತ್ರವ್ಯವಹಾರ

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲ. ಸಂ.

[illegible]

ಬಾಲಕನ ವಿಜ್ಞಾಪನೆ.

(ಈ ಭಾಷಣ ಮಡಿಕೇರಿ ಹಮದ್ ಎಲಿಮೆಂಟರಿ ಶಾಲಾ ವಾರ್ಷಿಕೋತ್ಸವ ದಿನ ಮಡಿಕೇರಿ ಶಾಲೆಯ ೬ನೆ ತರಗತಿಯಲ್ಲಿ ಓದುವ ಕೆ ಕುಶಾಲಪ್ಪನವರಿಂದ ಕೊಡಲ್ಪಟ್ಟಿತು)

ಅಧ್ಯಕ್ಷರೇ! ಸಭಿಕರೇ!!

ಚಿಕ್ಕ ಬಾಲಕನಾದ ನಾನು ನಿಮ್ಮ ತಾನೆ ಈ ಮಹಾ ಸಭೆಯ ಮುಂದೆ ಮಾತನಾಡಲು [illegible] ಬಾಲಕರಾದ ನಮಗಳ ಮುಂದಿನ ಶ್ರಯೋಭಿವೃದ್ಧಿಗಾಗಿ [illegible]. ತಂದೆಗಳಾದ

ನೀವುಗಳು ದಯೆ ... ಕ್ತರಾಗಿ ಸಹಾಯಮಾಡಬೇಕಾದ ಕೆಲವಂಶಗಳನ್ನು ... ಬಾಲಕಿಯರ ಪರವಾಗಿ ಮಾಡುವೆನು

ನಾವು ಚಿಕ್ಕ ಚಿಕ್ಕ ಮಕ್ಕಳು ಹುಟ್ಟಿದಾರಭ್ಯ ನಾಲ್ಕೈದು ವರ್ಷಗಳವರೆಗೆ ತಾಯಿತಂದೆಗಳ ಪೋಷಣೆಯಲ್ಲಿ ಬಾಲಲೀಲೆಗಳನ್ನಾಡುತ್ತಾ ಇದ್ದೆವು. ಈಗಲಾದರೋ, ಗುರುಗಳ ಸನ್ನಿಧಿಯಲ್ಲಿ ನಿಮ್ಮೆಲ್ಲರ ಅನುಗ್ರಹ ಕಟಾಕ್ಷದಿಂದ ವಿದ್ಯಾಭ್ಯಾಸ ಮಾಡುತ್ತಾ ಇರುವೆವು. ಅನಂತರ ಮುಂದಿನ ಸ್ಥಿತಿಗತಿಗಳು ಭಗವದನುಗ್ರಹಕ್ಕೆ ಒಳಪಟ್ಟಿರುತ್ತೆ. ನೀವಾದರೊ, ಗೃಹಸ್ಥಾಶ್ರಮ ಧರ್ಮವನ್ನು ಕೈಗೊಂಡು ಸಂಸಾರ ಪಾಶದಿಂದ ಬಿಗಿಯಲ್ಪಟ್ಟು ಸಕಲ ಧರ್ಮಾಧರ್ಮಗಳನ್ನು ಬಲ್ಲಂಥವರು. ಸಕಲ ವಿದ್ಯಾಪ್ರವೀಣರಾದ ನೀವುಗಳು ಮನೆಗೆ ಬಂದ ಅತಿಥಿ ಅಭ್ಯಾಗತರಿಗೆ ಪಾತ್ರಾಪಾತ್ರಗಳನ್ನರಿತು ಸತ್ಕಾರಗಳನ್ನು ನಡಿಸುತ್ತಿರುವುದೊಂದು, ಅವರ ಮಧ್ಯೆ ಮಕ್ಕಳಾದ ನಾವುಗಳು ಆಗಾಗ ಪೀಡಿಸುತ್ತಿರುವದೊಂದು, ಅಂತಿಂತು ನಿಮಗಳ ಜೀವನಕ್ರಮವೇ ಬಹು ಕಠಿಣತರ. ಅಲ್ಲದೆ ಕಾಲಭೇದಗಳೂ ಮಳೆಬೆಳೆಗಳೂ ಪ್ರತಿಕೂಲ. ಇವುಗಳಿಂದ ನಿಮ್ಮ ಮನಸ್ಸಾದರೊ, 'ನೀರು ಸೋಕಿದರೆ ಹಸಿ, ಗಾಳಿ ಬೀಸಿದರೆ ಒಣ' ಎಂಬಂತೆ ಹಣ್ಣು ಹಣ್ಣಾಗಿ ಹೋಗಿರಬಹುದು. ಆದರೆ ಇಷ್ಟೆಲ್ಲಾ ಅನುಭವಗಳಿಗೆ ನೀವು ಪ್ರತಿ ನಿಮಿಷದಲ್ಲಿಯೂ ಒಳಪಟ್ಟಿದ್ದರೂ ಕೂಡ ನಮಗಳನ್ನು ಒಂದು ಸಾರಿ ಶಾಲೆಗೆ ಸೇರಿಸುವದಕ್ಕೆ ... ತ ಪಾತ್ರರಾಗಿದ್ದೀರಿ ಶಿವಾಯಿ. ಆಗಾಗ ನಮಗಳ ಶಿಕ್ಷಣಾ ಕ್ರಮಗಳು ಸರಿಯಾಗಿ ನಡೆಯುತ್ತಿರುವದೇ ಎಂದು ನೀವು ಸ್ವಲ್ಪವೂ ಗಮನ ಕೊಡುವುದಿಲ್ಲ. ಶಾಲೆಯ ಸ್ಥಿತಿಗತಿಗಳನ್ನು ನಾವು ತಿಳಿದಷ್ಟು, ಯಾ ಅಲ್ಲಸಲ್ಲದ ವರ್ತಮಾನ ಪತ್ರಿಕೆಗಳ ಹಾಳೆಗಳಿಗೆಲ್ಲಾ ಮನಸ್ಸುಗೊಡುತ್ತೀರೀ. ನೀವು ಶಾಲೆಗೆ ದಯಮಾಡಿಸಿ ನೋಡದಕ್ಕೆ ನಾನು ಎಷ್ಟು ವ್ಯಸನಿಸಿದರೂ ಸ್ವಲ್ಪವೇ. ಇದಾ ಈ ಸುದಿನದಲ್ಲಿ ತಮಗಳ ಹರ್ಷಪ್ರದವಾದ ಮುಖವನ್ನು ನೋಡಿ ಬಾಲಬಾಲಕಿಯರ ಪರವಾಗಿ ತಮ್ಮೆಲ್ಲರಿಗೂ ವಂದನಪೂರ್ವಕವಾಗಿ ವಂದಿಸುವವನಾಗಿರುತ್ತೇನೆ.

ಅನೇಕ ಜನರು ಪಿತಭಾವ ವಿತಪ್ಪಿಯಗಳನ್ನು ಅಂಯದೆ ಸಮಯವರಿತು ಕೆಲವು ತರದ ದುರಭ್ಯಾಸಗಳಿಗೆ ದ್ರವ್ಯ ನಷ್ಟಮಾಡಿ ಅನಾರೋಗ್ಯವನ್ನು ಪಡೆಯುವುದರ ಬದಲಿಗೆ ಮಕ್ಕಳ ವಿದ್ಯಾಭ್ಯಾಸದ ವಿಷಯಕ್ಕೆ ಆ ಗಮನವನ್ನು ಕೊಟ್ಟರೆ ನಿಮ್ಮ ಮುಂದಿನ ಜನಾಂಗವೇ ಮುಂದರಿಯಲಾರದೆ? ಆಗಾಗ ಎಷ್ಟೋ ಜನರು ನ್ಯಾಯ ಕೂಟಗಳಿಂದ ಸಭಸೇರಿ ಬಹಳ ಸನಿಸಿಂದ ತೀರಿಸಲಾರದ ವಿಷಯಗಳಿಂದ ಒರಬಾಸ್ಯ ಮಾಡುತ್ತಾರಲ್ಲವೇ! ಅದರೆ ಅಂಥಾ ಸಭೆಗಳಲ್ಲಿ ಮುಂದಿನ ಜನಾಂಗದ ಅಭಿವೃದ್ಧಿಗಾಗಿ ಮಕ್ಕಳ ವಿದ್ಯಾಭ್ಯಾಸ, ಶೃಂಗಾರಿಕ, ವ್ಯವಸಾಯಕ್ರಮ, ಮಕ್ಕಳ ಪೋಷಣಾಕ್ರಮ ಮತ್ತು ದೇವರ ಮೇಲಿನ ಪ್ರೀತಿ ಮೊದಲಾದ ಈ ವಿಷಯಗಳಿಗೆ ತಕ್ಕ ಏರ್ಪಾಡುಗಳನ್ನು ಉಂಟುಮಾಡಿಸಲೋಸುಗ ಯೋಚಿಸುವುದು ಒಹಳ ಅಪರೂಪವಲ್ಲವೇ? ಅಷ್ಟು ನಮಗಳ ಮೇಲೆ ಕರುಣಾವು ಹುಟ್ಟಲಾರದಾಯಿತೇ! ಶ್ರೀ ಭಗವಂತನಾದರೂ ನಿಮಗಳ ಮನಸ್ಸನ್ನು ಒಡಂಬಡಿಸಲು ಮರೆತನೇ? ಇನ್ನಾದರೂ ಕರುಣಿಸಲೆಂದು ಆತನನ್ನು ಅನುದಿನವೂ ಬೇಡುತ್ತೇವೆ.

ಅಲ್ಲದೆ ಬಾಲಕರ ಪರವಾಗಿ ತಮ್ಮೆಲ್ಲರನ್ನು ನಾನು ಬಿನ್ನಹಿಸುತ್ತಾನೆ ಪೇಳಲಿ! ಅಂದರೆ, ಪೂರ್ವಕಾಲದಲ್ಲಿ ಹಿರಣ್ಯಕಶಿಪುವಿನ ವಧೆಯಾದನಂತರ ಪ್ರಹ್ಲಾದನು ರಾಜ್ಯವಾಳಲು ಒಂದಾಗ ತನ್ನ ತಂದೆಯ ಕಾಲದಲ್ಲಿದ್ದ ಯಾವತ್ತೂ ಜನರನ್ನೂ, ಸಂಪತ್ತನ್ನೂ ಕಾಣದೆ ವ್ಯಸನಪಟ್ಟನು. ಮತ್ತು ತಂದೆಗೆ ಸಕಲ ಸಂಪತ್ತೈಶ್ವರ್ಯಗಳಿದ್ದರೂ ಕೂಡ ದೇವರ ದಯ ಒಂದಿಲ್ಲದ್ದರಿಂದ ಈ ಗತಿಯಾಯಿತೆಂದು ಬಹಳ ವ್ಯಸನಪಟ್ಟನು. ಆದರೆ ಆ ಸಂಪತ್ತು ಯಾವುದೂ ಇಲ್ಲದ್ದರಿಂದ ತನಗೆ ರಾಜ್ಯವಾಳುವುದಕ್ಕೆ ಮನಸ್ಸೇ ಬಾರದೆ ದೇವರನ್ನು ಕುರಿತು ತಪಸ್ಸು ಮಾಡಲು ಕಾಡಿಗೆ ಹೋದನು. ಆತನ ಭಕ್ತಿಗೆ ಮೆಚ್ಚಿ ಭಗವಂತನು ಪ್ರತ್ಯಕ್ಷವಾಗಿ ಬಂದು ಬೇಕಾದ ವರವನ್ನು ಬೇಡಲು ಹೇಳಿದನು. ಆಗ ಆ ಚಿಕ್ಕ ಮಗುವಿಗೆ ಒಂದನ್ನು ಕೇಳಿದರೆ ಒಂದು ಬಿಟ್ಟುಹೋಗುತ್ತೆ ಎಂದು ಯಾವುದನ್ನು ಬೇಡುವದಕ್ಕೂ ಗೊತ್ತಾಗಲಿಲ್ಲ. ಕಡೆಗೆ ಇದೋ, ಅದೋ ಎಂದು ಯಾವುದೂ ತೋಚದೆ ತನಗೆ ಯಾವುದು ಬೇಕೋ ಅದನ್ನು ಭಗವಂತನೇ ಅನುಗ್ರಹಿಸಬೇಕೆಂದು ಕೇಳಿಕೊಂಡನಂತೆ. ಅದರಂತೆಯೇ ನಮಗಳ ವಿದ್ಯಾಭ್ಯಾಸಕ್ಕ ಅನುಕೂಲರೀತಿ ಯಾವ ಯಾವ ಏರ್ಪಾಡುಗಳನ್ನು ಮಾಡಬೇಕೋ ಅವುಗಳನ್ನು ತಾವುಗಳೇ ಅನುಗ್ರಹಿಸಿಕೊಟ್ಟು ನಮ್ಮನ್ನು ವಿದ್ಯಾಭ್ಯಾಸಕ್ಕೆ ಬಿಟ್ಟುಕೊಡಬೇಕಾಗಿ ಬಿತ್ತಿ ಹೇಳುತ್ತೇನೆ.

ಅಲ್ಲದೆ ನನ್ನ ಈ ಚಿಕ್ಕ ಭಾಷಣವು ಕನ್ನಡವಾದ್ದರಿಂದ ತಮಗಳಿಗೆಲ್ಲರಿಗೂ ಬೇಸರಕ ಹುಟ್ಟಿರಬಹುದು. ಆದರೆ ನಮ್ಮ ಮಾತೃ ಭಾಷೆಗೆ ಉತ್ತೇಜನ ಕೊಡಲು ಮರೆಯಬೇಡಿರಿ. ಈಗ ಹೊರಟಿರುವ 'ವಿದ್ಯಾರ್ಥಿ' ಎಂಬ ಪತ್ರಿಕೆಗೆ ಪೋಷಕರಾಗಿ ಸ್ವವಿಷಯಗಳನ್ನು ತಿಳಿದು ಕೃತಾರ್ಥರಾಗಲು ಹಿಂಜರಿಯಬೇಡಿರಿ. ಚಿಕ್ಕಬಾಲಕನ ಮೃದುವಾದ ನಯದ ನುಡಿಗಳ ಮಹಿಮೆಗಳು ಹಿಂಜರಿಯುವವರು ಕೆಲವರು ಇರಬಹುದು. ಆದರೆ, ಗಾಳದ ಕೊನೆಗೆ ತಗಲಿಸಿದ ಹುಳುವಿನ ಆಸೆಗಾಗಿ ಒಳಿದ್ದುಬೆಯುವ ಮೀನಿನಂತೆ, ಧನ ಕನಕ ರತ್ನಾದಿಗಳು ಅಧಿಕಾರ ಪದವಿಗಳು ಬಿರುದು ಬಾವಲಿಗಳು ಮುಂತಾದವುಗಳಿಗೆ ಆಗಾಗ ಬಾಯಿಬಿಟ್ಟು ಮರುಳಾಗಬೇಡಿರಿ. ಇನ್ನೂ ಮಾತನಾಡುವೆನೆಂದರೆ ನಾನೇನೋ ಚಿಕ್ಕ ಬಾಲಕ ಆಡಿದ ಮಾತುಗಳಲ್ಲಿ ತಪ್ಪು ಅಭಿಪ್ರಾಯಗಳಿದ್ದರೆ ದಯವಿಟ್ಟು ಕ್ಷಮಿಸಬೇಕಾಗಿ ಬೇಡುತ್ತೇನೆ.

ಸಹಕಾರಿ ಸಂಘದ ಕಾನ್ಫರನ್ಸ್

ತಾರೀಕು 14-5-26ರಲ್ಲು ಕೊಡಗು ಸಹಕಾರಿ ಸಂಘಗಳ ರಿಜಿಸ್ಟ್ರಾರವರಾದ ಮ ರಾ ಶ್ರಿ. ಕೆ. ಎಸ್ ಸುಬ್ಬಾಯರವರ ಅಧ್ಯಕ್ಷತೆಯಲ್ಲು ಕಕ್ಕಬೆ ಸಹಕಾರಿ ಸಂಘ ನೆಲಜಿ ಭಂಡಾರ ಸಂಘ, ಪೊರಾಲುಕೇರಿ ಭಂಡಾರ ಸಂಘದ ಒಂದು ಕಾನ್ಫರನ್ಸ್ ಕಕ್ಕಬೆ ಒಳ ಬಾಣೆಯಲ್ಲು ನಡಿಯಿತು 54 ಗಂಡಸರು 5 ಜನ ಮಹಿಳೆಯರು ಸಭ ನೆರದಿದ್ದರು.

ಈ ಕೆಳಗ ಕಂಡ ಠರಾವುಗಳು ಸಭೆಯಮುಂದೆ ಇಡಲ್ಪಟ್ಟವು.

1 ನೆಲಜಿ ಸಂಘದಿಂದ ಕಕ್ಕಬೆ ಸಂಘಕ್ಕೆ ಕೊಡಬೇಕಾಗಿದ್ದ ಸಾಲದ ಒಡ್ಡಿಯನ್ನು ಕೊಡದ ಸಂಗತಿಯಾಗಿ ಚರ್ಚೆ ನಡೆದು ನೆಲಜಿ ಸಂಘದಿಂದ ಕಕ್ಕಬೆ ಸಂಘಕ್ಕೆ ಕೇಳದ ಸಾಲಿಯಾನ 3-2 0 ಪ್ರೋಸ್ಪಾಟೀಸು ಬಡ್ಡಿ ನಿಂತ ವರ್ಷಗಳಿಗೆ ಕೊಡಬೇಕಾಗಿ ಅಧ್ಯಕ್ಷರು ತೀರ್ಮಾನ ಮಾಡಿದಕ್ಕ ಉಭಯ ಸಂಘದವರ ಕಬೂಲಿನಿಂದ ತೀರ್ಮಾನವಾಯಿತು.

2 ಸಂಘಗಳಿಂದ ಕೊಡುವ ಸಾಲಕ್ಕೆ ಒರಸಿಕೊಳ್ಳುವ ಕರಾರುಗಳನ್ನು ಟಕಾವಿ ಸಾಲಕ್ಕೆ ಬರೆಸಿಕೊಳ್ಳುವ ಕರಾರುಗಳಂತೆ ದ್ವಿಪ್ರತಿ ಬರೆಸಿಕೊಂಡು ಒಂದು ಪ್ರತಿಗೆ ಸಬ್ ರಿಜಿಸ್ಟ್ರಾರವರಿಂದ ಎಟೆಸ್ಟ್ ಮಾಡಿ ಸಂಘಕ್ಕ ವಾಪಸು ಕೊಡುವಂತೆಯೂ, ಇನ್ನೊಂದು ಪ್ರತಿಯನ್ನು ಸಬ್ ರಿಜಿಸ್ಟ್ರಾರವರ ಆಫೀಸಿನಲ್ಲು ಟಕಾವಿ ಕರಾರುಗಳನ್ನು ಫೈಲ್ ಮಾಡಿಕೊಳ್ಳುವಂತೆ ಫೈಲ್ ಮಾಡಿಕೊಳ್ಳುವ ವಿಷಯ ಸರಕಾರವನ್ನು ಕೇಳಿಕೊಳ್ಳಬೇಕಾಗಿ ಮೆ ಉದಿಯಂಡ ಮಾಚ್ಚಯ್ಯನವರು ತಂದ ಠರಾವನ್ನು ಮ ನಾಪನೆರವಂಡ ಮೊಣ್ಣಪ್ಪನವರ ಅನುಮೋದಿಸಿದ ಮೇಲೆ ಸರ್ವ ಸಮ್ಮತದಿಂದ ಮಂಜೂರಾಯಿತು.

3 ಸಹಕಾರಿ ಸಂಘಗಳ ಬಾಕಿದಾರರ ಮೇಲೆ ಅಮಲಾವಾರಿ ಕೋರಿದರೆ ಅಮೀನರು ಈಗಿನ ರೆವಿನ್ಯೂ ಡಿಪಾರ್ಟ್ಮೆಂಟ್ ಮೇರೆ ಕೆಲಸ ಹೆಚ್ಚಿದ್ದರಿಂದ ಸಾವುಕಾರರ ವಸೂಲಿ ಮೊದಲು, 2ನೇ ಸಹಕಾರಿ ಸಂಘದ ಕೆಲಸ ಮಾಡುತ್ತಾರಾದ ಕಾರಣ ನ್ಯಾಯವಾದ ವಸೂಲಿ ನಡಿಯದ್ದರಿಂದ ಹಾಲ ಕಂದಾಯದ ವಸೂಲಿಗೆ ಹೆಚ್ಚಿಗ ಪ್ರೋಸಸ್ ಅಮೀನರನ್ನು ನೇಮಕಮಾಡುವಂತೆ ಸರಕಾರದವರು ಸಹಕಾರಿ ಸಂಘಗಳ ಡಿಕ್ರಿಬಾಬ್ತು ಹಣವನ್ನು ವಸೂಲ್ ಮಾಡುವದಕ್ಕೆ ಬೇಕಷ್ಟು ಅಮೀನರನ್ನು ಎರಡು ತಿಂಗಳ ಮಟ್ಟಿಗೆ ನೇಮಕಮಾಡಬೇಕೆಂದು ಸರಕಾರದವರನ್ನು ಕೇಳಿಕೊಳ್ಳಬೇಕು. ಸರಕಾರವು ಇದಕ್ಕೆ ಒಪ್ಪದಿದ್ದಲ್ಲಿ ಸಹಕಾರಿ ಸಂಘದಿಂದ ಎರಡು ತಿಂಗಳ ಸಂಬಳ ಕೊಡಬಹುದಾಗಿ ಮೆ ಮೂದಂಡ ಮುಂದಣ್ಣನವರು ತಂದ ಠರಾವನ್ನು ಮೆ ಉ ಮಾಚ್ಚಯ್ಯನವರು ವಿವರವಾಗಿ ಹೇಳಿದರ ಮೇಲೆ ಸರ್ವ ಸಮ್ಮತದಿಂದ ಮೇಲ್ಕಂಡ ಠರಾವು ಸರಕಾರಕ್ಕೆ ಕಳುಹಿಸಬೇಕಾಗಿ ತೀರ್ಮಾನವಾಯಿತು.

(4) ಗ್ರಾಮದ ಸರ್ವೆ ಪ್ಲಾನ್‌ಗಳನ್ನು ಪ್ರತಿ ಸಂಘಕ್ಕೂ ಹಾಲಿ ಪ್ರತಿ ಶಾಲೆಗಳಿಗೆ ಯಾವ ಮೇರೆ ಮುಫತ್ತಾಗಿ ಕೊಟ್ಟಿದೆಯೋ ಅದರಂತೆ ಕೊಟಿಸಿಕೊಡಬೇಕು. ಹಾಗೆ ಕೊಡಲು ಆಗದಿದ್ದರೆ ಒಂದು ಗ್ರಾಮದ ಪ್ಲಾನಿಗ 0-3-0 ಆನೆ ದರದಲ್ಲಿ ಕ್ರಯವನ್ನು ಸಂಘದಿಂದ ವಸೂಲ್ ಮಾಡಿಕೊಂಡಾದರೂ ಕೊಡಿಸಿ ಕೊಡಬೇಕಾಗಿ ಸರಕಾರವನ್ನು ಕೇಳಿಕೊಳ್ಳಬೇಕಾಗಿ ಮ. ನಾಪನೆರವಂಡ ಪೊಣ್ಣಪ್ಪನವರು ತಂದ ಠರಾವನ್ನು ಮೆ ಕಂಬೆಯಂಡ ಬೇಯಣ್ಣನವರು ಅನುಮೋದಿಸಿದನ್ನ ಮೆ. ಉದಿಯಂಡ ಮಾಚ್ಚಯ್ಯನವರು ಇದರಿಂದುಂಟಾಗುವ ನಷ್ಟಕಷ್ಟಗಳನ್ನು ವಿವರಿಸಿ ಪುಷ್ಟೀಕರಿಸಿ ಬೇರೆ ದೇಶಗಳಲ್ಲು ಕೊಡುತ್ತಾರಾಗಿ ಹೇಳಿದರ ಮೇಲೆ ಸರಕಾರವನ್ನು ಕೇಳಿಕೊಳ್ಳಬೇಕಾಗಿ ಸರ್ವ ಸಮ್ಮತದಿಂದ ಮಂಜೂರಾಯಿತು.

(5) ಒಮ್ಮದ ಭೂಮಿಯನ್ನು ಸಂಘದಿಂದ ಕೊಡುವ ಸಾಲಕ್ಕೆ ಗಿರ್ವಿ ತೆಗೆದುಕೊಳ್ಳಲು ಕಮಿಷನರ್ ಸಾಹೇಬರವರ ಮಂಜೂರಾತಿ ಪ್ರತಿ ದಫ ಪಡೆಯುವದನ್ನು ನಿಲ್ಲಿಸಿ ಒಂದು ದಫ ಪಡೆದ ಮಂಜೂರಾತಿ ಮೇರ ಸಾಲ ಕೊಡುವಂತೆ ಮಾಡಬೇಕಾಗಿ ಮೆ. ಉದಿಯಂಡ ಮಾಚ್ಚಯ್ಯನವರು ತಂದ ಠರಾವನ್ನು ಚರ್ಚಿಸಿ ಯಾರೂ ಅನುಮೋದಿಸದ್ದರಿಂದ ವಜಾಯಿತು.

(6) ಸಂಘದಿಂದ ಸಾಲ ಕೊಡಬೇಕಾದರೆ ಕುಟುಂಬದ 18 ವರ್ಷಕ್ಕೆ ಮೇಲ್ಪಟ್ಟ ಪ್ರತಿ ಮೆಂಬರುಗಳ ಒಪ್ಪಿಗೆ ಸೈನ್ ಕೊಟ್ಟ ಹೊರತು ಹಣ ಮಂಜೂರ್ ಮಾಡಬಾರದೆಂಬ ಸಂಗತಿಯಲ್ಲು ಚರ್ಚೆ ನಡೆದು ಬಂದೆರಡು ಜನರು ಒಪ್ಪದ ಪಕ್ಷ ಸೂತ್ರನ್ನು ಗೇಣಾಗಿ ತೆಗೆದುಕೊಂಡು ಹಣ ಕೊಡಬೇಕೇ ಹೊರತು ಗಿರ್ವಿ ತೆಗೆದುಕೊಳ್ಳಲು ಆಗುವದಿಲ್ಲವೆಂದು ತೀರ್ಮಾನವಾಯಿತು.

(7) ಸ್ಕೂಲ್ ಕಟ್ಟಡಗಳಲ್ಲು ಶಾಲೆ ಇಡದ ದಿನಗಳಲ್ಲು ಸಹಕಾರಿ ಸಂಘಗಳ ಜನರಲ್ ಮೀಟಿಂಗ್, ಕಾನ್ಫರೆನ್ಸ ನಡಿಸುವ ಸಮಯದಲ್ಲು ಸಂಘಕ್ಕೆ ಬಿಟ್ಟುಕೊಡುವಂತೆ ಶಾಲಾ ಇಲಾಖೆಯವರಿಗೆ ಹುಕುಂ ಕೊಡಿಸುವಂತೆ ಸರಕಾರವನ್ನು ಕೇಳಿಕೊಳ್ಳಬೇಕಾಗಿ ಮೆ ಉದಿಯಂಡ ಮಾಚ್ಚಯ್ಯನವರು ತಂದ ಠರಾವನ್ನು ಮೆ. ಮೂದಂಡ ಮುಂದಣ್ಣನವರು, ಮತ್ತು ಮೆ. ಕಂಬೆಯಂಡ ಬೇಯಣ್ಣನವರು ವಿವರಿಸಿ ಹೇಳಿದರ ಮೇಲೆ ಸರ್ವ ಸಮ್ಮತದಿಂದ ಮಂಜೂರಾಯಿತು.

(8) ಅಧ್ಯಕ್ಷರು ಸಹಕಾರಿ ಸಂಘದ ತತ್ವಗಳನ್ನು ಹೇಳಿದಲ್ಲದೆ ಬಾಕಿ ಪಟ್ಟಿಯನ್ನು ಓದಿ ಬಾಕಿದಾರರನ್ನು ಕರೆದು ಬೋಧಿಸಿ ಸಭಿಕರ ಮನಸ್ಸೋಲ್ಲಾಸಪಡಿಸಿದರು. ಇದೂ ಅಲ್ಲದೆ ಸಹಕಾರಿ ಸಂಘಗಳ ಮೆಂಬರುಗಳ ಕಂದಾಯವನ್ನು ಸಂಘವೇ ಕಟ್ಟಿ ಮೆಂಬರುಗಳಿಂದ ಭತ್ತ ವಸೂಲ್ ಮಾಡಿಟ್ಟುಕೊಂಡು ಕಂದಾಯದ ಕಾಲ ತೀರಿದನಂತರ ಒಳ್ಳೇ ಕ್ರಯಕ್ಕೆ ಮಾರಾಟ ಮಾಡಿ ಮೆಂಬರುಗಳಿಗೆ ಸ್ವಲ್ಪ ಮಟ್ಟಿಗಾದರೂ ಪ್ರಯೋಜನವುಂಟಾಗುವ ಹಾಗೆ ಪ್ರಯತ್ನ ಮಾಡಬೇಕೆಂಬದಾಗಿಯೂ ಮೆಂಬರುಗಳಿಗೆ ಅತ್ಯಗತ್ಯವಾಗಿ ಬೇಕಾಗುವ ಸಾಮಾನುಗಳ ಪೈಕಿ ಕೆಲವನ್ನಾದರೂ ಇಂಡೆಂಟ್ ಮೇರೆ ತರಿಸಿ ಕೊಡುವ ಏರ್ಪಾಡು ಮಾಡಬೇಕೆಂಬದಾಗಿ ವಿವರಿಸಿ ಹೇಳಿದರು.

(9) ಅಧ್ಯಕ್ಷರಿಗೂ, ಸಬ್ ರಿಜಿಸ್ಟ್ರಾರರಿಗೂ, ಬೇರೆ ಸಂಘಗಳ ಪ್ರೆಸಿಡೆಂಟರಿಗೂ ಮಹಿಳೆಯರಿಗೂ, ಕಕ್ಕಬೆ ಸಂಘದ ಪ್ರೆಸಿಡಂಟರು ವಂದಿಸಿ ಸಭೆಯು ಮುಕ್ತಾಯವಾಯಿತು.

ಪ್ರೆಸಿಡೆಂಟ್.

'ಬಲಮುರಿಯ ಸತ್ಯಸಂಗತಿ'

ಅಯ್ಯಾ,

'ಲೋಕಪಾವನ' ಪತ್ರಿಕೆಯಲ್ಲಿ ಈ ಮೊದಲು ನಾಲ್ಕೈದು ಸಾರಿ ಕೆಲವು ಲೇಖನಗಳು ಹೊರಪಟ್ಟಿರುವದನ್ನು ವಾಚಕರು ನೋಡಿರಬಹುದಷ್ಟೆ. ಸಾಮಾನ್ಯ ಪತ್ರಿಕೆಗಳಲ್ಲಿ ಹೊರಡುವ ಸಂಗತಿಗಳೆಲ್ಲವು ನಿಜವಾಗಿಯೂ ಸಾಧುವಾಗಿಯೂ, ಮಹತ್ವವುಳ್ಳದ್ದಾಗಿಯೂ, ಜನರನ್ನು ಮುಂದಕ್ಕೆ ತರುವ ಮೊದಲಿನ ಸೂಚನೆಯುಳ್ಳದ್ದಾಗಿಯೂ ಜನರಲ್ಲಿ ಪರಸ್ಪರ ಪ್ರೀತಿಹುಟ್ಟಿಸತಕ್ಕದ್ದಾಗಿಯೂ ನೀತಿಬೋಧಪ್ರದವಾಗಿರಬೇಕಲ್ಲದೆ, ಅಲ್ಪಸಂಗತಿಯನ್ನು ಮಹತ್ವಮಾಡಿಕೊಂಡು ಒಬ್ಬೊಬ್ಬರ ನ್ಯಾಯಕೂಟವನ್ನು ಎತ್ತಿಕೊಂಡು ಜನರಲ್ಲಿ ಪರಸ್ಪರ ಜಗಳಗಂಟಿಕ್ಕುವ ಸಂಗತಿಗಳನ್ನು ಉಲ್ಲೇಖಿಸುವ ಪತ್ರಿಕೆಯು ನಿಜವಾದ ಪತ್ರಿಕೆಯೆನ್ನಿಸಿಕೊಳ್ಳಲಾರದು. ಆದರೆ ಅಂಥಾ ಅಲ್ಪಸಂಗತಿಗಳನ್ನು ಎತ್ತಿಕೊಂಡು ಹೊರಡುವ ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನಗಳ ಮಹತ್ವವಾದರೂ ಇಷ್ಟೇ ಇರಬೇಕೆಂಬದನ್ನು ವಿಚಾರಶೀಲರು ಚೆನ್ನಾಗಿ ತಿಳಿದುಕೊಳ್ಳದಿರಲಾರರಾದರೂ, ಇಲ್ಲದ ಸಲ್ಲದ ಅರೋಪಗಳು ಒಬ್ಬರ ಮೇಲಾಗಲಿ ಒಂದು ಗ್ರಾಮ ಯಾ ಕೂಟದ ಮೇಲಾಗಲಿ ಹೊರಿಸಲ್ಪಟ್ಟರೆ ಆರೋಪ ಹೊಂದಿಕೊಂಡ ಕರ್ತರು ಒಮ್ಮೆ ಅದರ ನಿಜಾಂಶವನ್ನು ವಾಚಕರ ಮುಂದಿಡಬೇಕಾದುದು ಅತ್ಯಾವಶ್ಯಕ.

ನಮ್ಮ ಸಿದ್ಧಾಪುರ ಹೋಬಳಿ ನಂಜ ಗ್ರಾಮಗಳಿಗನುಸಾರವಾಗಿ ಯಾವ ಪತ್ರಿಕೆಯಲ್ಲಾದರೂ ಇಂಥಾ ಟೊಳ್ಳುಸಂಗತಿ ಹೊರಬಿದ್ದಲ್ಲಿ ಪತ್ರಿಕೆಯ ಬೆಲೆಕಾಳು ಗೊತ್ತಿದ್ದ ಕೆಲವು ವಿಚಾರಶೀಲರು ಮಾತ್ರ ಆರೋಪಣೆಯ ನಿಜಾಂಶ ತಿಳಕೊಂಡಾರೇ ವಿನಹ ವಾಚಕರು ತಿಳಿಕೊಂಡರೆಂಬ ಅರ್ಥವಾಗುವದಿಲ್ಲವಾದ್ದರಿಂದ ಪ್ರಕೃತ ನಮ್ಮ ಲೋಕಪಾವನ ಪತ್ರಿಕೆಯಲ್ಲು ಹೊರಬಿದ್ದ ಪೊಳ್ಳುಸಂಗತಿಯ ಕುರಿತು ಒಮ್ಮೆ ಲೇಖಿಸಲೇ ಬೇಕಾಯಿತು. ಒಂದು ಮನೆತನದವರ ಮೇಲಿನ ಆರೋಪಣೆಯನ್ನು ಗ್ರಾಮದ ಚಳವಳವೆಂದೆಂದುಕೊಂಡು ದೊಡ್ಡ ದೊಡ್ಡ ಅಕ್ಷರಗಳಿಂದ ಪ್ರಕಟಿಸಿದನ್ನು ನೋಡುವಾಗ ಈ ಲೋಕಪಾವನ ಪತ್ರಿಕಗೆ ನಮ್ಮ ಬಲಮುರಿಯ ಮೇಲೆ ಬಹಳ ಮಮತೆ ಇದೆಯೆಂದು ಮೊದಲು ನೆನಸಬೇಕಾಗಿದೆ. ಹಾಗೂ ಹೊರಟ ಲೇಖನಗಳ ಶಿರೋನಾಮೆ ಎಷ್ಟೆಂದೂ, ಲೇಖನಕರ್ತರ ಪರಿಣಾಮವಾದರೂ ಅವುಗಳನ್ನು ಒಮ್ಮೆ ವಿಮರ್ಶಿಸೋಣ. ಈ ಲೋಕಪಾವನ ಪತ್ರಿಕೆಗೆ ಗ್ರಾಮದವನೆಂದೂ ನಿರೀಕ್ಷಕನೆಂದೂ ಮುಂತಾಗಿ ಹಲವು ಲೇಖನ ಲೇಖಿಸಿದ್ದು ಒಬ್ಬನೆಂದೂ, ಎಲ್ಲಾ ಲೇಖನಗಳ ಹೊರಳಾಟವು ಒಬ್ಬ ಮನೆತನದವರ ಮೇಲೆಂದೂ ಗ್ರಾಮದ ಯಾವ ಚಳವಳ ಎಬ್ಬಿಸಲಿಕ್ಕೂ ಈ ಲೇಖನ ಕರ್ತರ ಮನೆತನದವರೆ ಭಾಗಿಗಳೆಂದೂ ಇಂತಾದ ವಿಷಯಗಳು ಇವರ ಪ್ರಕಟನೆಯಲ್ಲೇ ಕಾಣಬರುತ್ತದಲ್ಲದೆ ಪಾವನ ಪತ್ರಿಕೆಯ ಸಂಪಾದಕರಿಗೆ ಈ ವಿಷಯ ಚೆನ್ನಾಗಿ ಗೊತ್ತೇ ಇದೆ. ಆದಮೇಲೆ ಈ ನ್ಯಾಯವು ಒಬ್ಬಿಬ್ಬರ ಅಲ್ಲವೆ ಉಭಯ ಮನೆತನದವರ ಸ್ವಂತ ನ್ಯಾಯವಾಯಿತೇ ಹೊರತು ಗ್ರಾಮದ ಚಳವಳವಾಗಿಲ್ಲವು. ಒಬ್ಬಿಬ್ಬರ ನ್ಯಾಯಕ್ಕೂ ಗ್ರಾಮಕ್ಕೂ ಯಾವ ಸಂಬಂಧವಿಲ್ಲವಲ್ಲದೆ ಈ ಸ್ವಂತ ನ್ಯಾಯಗಳನ್ನು ಎತ್ತಿಕೊಂಡು ಹೊರಡುವುದು ಪತ್ರಿಕೆಗಳ ಘನತೆಗೆ ಸರಿಯೇ ಆಗಲಾರದು. ಆಗಲಿ ಈ ಲೇಖನ ವಿಚಾರಿಸಿದರೆ ಬಲಮುರಿಯೆಂದರೆ ಒಂದು ಮನೆತನದವರ ಮೇಲೆ ಹೊಂದಿಕೊಂಡಿದೆಯೆಂದೂ, ಈ ಮನೆತನದವರ ನಡತೆಗಳು ಬಲಮುರಿಯ ಚಳವಳವೆಂದೂ, ಕಾಣುವ ಈ ಲೇಖನವು ಎಷ್ಟು ಅಬದ್ಧವೆಂದೂ, ಇದನ್ನು ಯಾರೂ ನಂಬತಕ್ಕದ್ದಲ್ಲವೆಂದೂ, ಲೇಖನ ನೋಡಿದೊಡನೆಯೇ ಚೆನ್ನಾಗಿ ಕಾಣುತ್ತದೆ. (2) ಇನ್ನು ಮೆ ಚೆಣ್ಣಪ್ಪನವರ ಚಿತ್ರದ ವಿಚಾರ ಕಾಣುತ್ತದೆ. ಈ ಚಿತ್ರವು ಬಲಮುರಿಕ್ಷೇತ್ರದಲ್ಲಿ ಎಲ್ಲಿ ಹುಡುಕಿದರೂ ಕಾಣುವದಿಲ್ಲ. ಅಲ್ಲಿ ಕಾನ್ಸಿಲ್ ಮೆಂಬರುಗಳ ಫೋಟೋ ಮಾತ್ರ ಇದೆ. ಇದು ಚೆಣ್ಣಪ್ಪನವರ ಭಾವಚಿತ್ರವೆ? ಸಬರ್ಡಿನೇಟ್ ಜಡ್ಜ್ ಕಮಿಷನರ್ ಸಾಹೇಬರವರ ಚಿತ್ರವೆಂದು ಏಕೆ ಹೇಳಕೂಡದು? ಹಾಗೂ ಆ ಫೋಟೋದ ಮಧ್ಯಭಾಗದಲ್ಲಿ ಹುಜೂರ್‌ಗಳವರು ಇರುವದರಿಂದ ಬಾಧಿತನಾಗಿಯೂ ಅವರ ಫೋಟೋವೆಂದೇ

[illegible]

(5) ಇನ್ನು ಒಬ್ಬ ಮಹಾನ ಬಾವದ ಪ್ರೊಫೆಸರು [illegible]

[illegible]

ಇಂಥಾ ತಂತ್ರ ಲೋಪವನ್ನು ಅಕ್ಷಮ್ಯ [illegible] ಗಿದೆ [illegible] ಈ ಪಾಪ [illegible] ತ್ರಿ ಕಗಾದರು ಗೊತ್ತಿಲ್ಲವೆ? ಅದಕಾರಣ ಇಂಥಾ [illegible] ಗತಿಯನ್ನು ಹೊಂದುವದು ಶ್ರೇಯಸ್ಕರವಲ್ಲವೆಂದು ಇಷ್ಟನ್ನು ನಮ್ಮ ವಾಚಕರ ಮುಂದೆ ಇಟ್ಟು ಇಂದ ನಮ್ಮ ಲೇಖನಿಗೆ ವಿಶ್ರಾಂತಿಯನ್ನು ಕೊಡುವೆವು

'ಗ್ರಾಮಸ್ಥ'

NOTICE

Applications are invited for the post of Police Sub Inspector on a pay of Rs 6 3 110 [illegible] plus conveyance allowance of Rs 25/ per mensem

Applicants must hold at least a completed [illegible]

[illegible] June 19[illegible]

[illegible]

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್, ಕೊ ಆಪರೇಟಿವ್ ಸೊಸೈಟಿ_ಸ್ [illegible] ಪ್ರಕಾರ ರಿಜಿಸ್ಟರಾಗಿದೆ.

		ರೂ
ಶೇರ್ ಬಂಡವಾಳ	—	50,000
ವಸೂಲಾದ ಶೇರ್ ಮೊಬಲಗು	—	9890
ಒಸೊಬಂದ ಠೇವಣಾತಿ	—	90,600

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗ [illegible] ಸಾಲಕೊಡತಕ್ಕದ್ದು

[illegible] ವಾಯಿದೆ ಆಧವ ಹೆಚ್ಚಿನ ವಾಯಿದೆಯ [illegible] ಶೇಕಡ ಸಾಲಿಯಾನ ರೂ 6-4-0ರ [illegible] ಕಡಿಮೆ ವಾಯಿದೆಯ [illegible] ಸಾಲಿಯಾನ 5ರ ಬಡ್ಡಿ ದೊರೆಯುತ್ತೆ [illegible] ಆಪರೇಟಿವ್ ರಿಜಿಸ್ಟ್ರಾರವರು [illegible]

[illegible] ಟ್ರೆಜರರ

[illegible] ಯು ಬಂಗಾರಯ್ಯ [illegible]

ಬಿ. ಎ., ಬಿ. ಎಲ್.

[illegible]

Apply for our [illegible] Clearance Sale Catalogue of Brand New Goods [illegible] Reductions in Prices

No License Required

No License Required



[illegible] 22 [illegible] and Accurate [illegible] two [illegible] free delivery [illegible] Target Practice Rs 15/ [illegible] delivery

[illegible] to purchase or possess the above items.

No License required [illegible]

Rs [illegible] D B B L 12 bore gun	Rs [illegible]	— and upward	
D B B L 12	do	do 4[illegible]	do
D P M L Guns		30 —	do
S B M L do		25 —	do
S B B L Rifles		3 —	do

[illegible] and Pistols [illegible] very kind and quality [illegible] good quality second hand weapons [illegible]

GOOLAMHUSAIN ALLIBHOY & SONS

Largest Importers of Firearms and Ammunition,

Cheapest priced firm in India,

[illegible] Abdul Rehman Street BOMBAY

24 18

ಸಚಿತ್ರ [illegible] ಕಥೆ.

[illegible]

ಸಮ್ಮಲ್ಲಿ ದೊರೆಯ [illegible] ಪುಸ್ತಕಗಳ ಪಟ್ಟಿ (ಕ್ಯಾಟಲಾಗ್)ಗೆ ಬರೆದರೆ ಕಳುಹಿಸುವೆವು

ನಮ್ಮ ವಿಳಾಸ— ಎಂ ಆರ್. ಕೃಷ್ಣಸ್ವಾಮಿ ಶೆಟ್ಟಿ,
ಬುಕ್ಕಡಿಪೋ, ಚಿಕ್ಕಪೇಟೆ,
ಬೆಂಗಳೂರು ಸಿಟಿ

52—1

ಅದ್ಭುತ! ಆಶ್ಚರ್ಯಕರ! ಬಲು ತಮಾಷೆ!

ಪ್ರೊಕೆಟ್ ಡಿಟೆಕ್ಟಿವ್

ಇಪ್ಪತ್ತನೆಯ ಶತಮಾನದ ವಿಚಿತ್ರವೇ ಇದು:

[illegible]

ಪಿ. ಕೆ. [illegible]

[illegible]

ಕಿರ್ಲೋಸ್ಕರ ಪೇಟೆಂಟ್ ಸುಧಾರ ತಪ್ಪಲೆ.

ಈ ತಪ್ಪಲೆಯು, ನಮ್ಮ ಕಾರ್ಖಾನೆಯಲ್ಲಿಯೇ ತಯಾರಾಗತಕ್ಕದ್ದು. ಸಂಕ್ಷಿಪ್ತವಾಗಿ ಇದಕ್ಕೆ ನೇಟು ಟು ದೊರತ್ತಿರುತ್ತದೆ. ಇ[illegible] [illegible]

[illegible] ಬಟ್ಟೆದ ಕೂಡಲೇ ತುಂಬಿ [illegible]

[illegible] ಒಂದು [illegible]

[illegible] ನೀರು [illegible] ಕಳ್ಳುವಷ್ಟು [illegible] ಮೆತ್ತ [illegible] ಹೋಗುವದಿಲ್ಲ.

[illegible] ಸಂಗತಿ [illegible] ತಿಳಕೊಳ್ಳಿರಿ.

ಕಿರ್ಲೋಸ್ಕರ ಬಂಧು, ಲಿಮಿಟೆಡ್.

ಕಿರ್ಲೋಸ್ಕರವಾಡಿ,

1[illegible]—1[illegible] ಜಿ. ಸಾತಾರ್.

ಒಂದು ಪ್ರಬಲವಾದ ಪ್ರಶ್ನೆ.

ನಮ್ಮ ಜೀವವನ್ನು ಏತಕ್ಕಾಗಿ ವಿಮೆಮಾಡಬೇಕು!

ವೃದ್ಧಾಪ್ಯದಲ್ಲಿ ನಮ್ಮ ಮತ್ತು ಹೆಂಡತಿ ಮಕ್ಕಳ ಪೋಷಣೆಗಾಗಿ!

ಈಗಾಗಲೇ ಸಾವಿರಾರು ಜನರು ವಿಮೆಮಾಡಿರುವ ೩ ಕೋಟಿ ರೂಪಾಯಿಗಿಂತ ಹೆಚ್ಚು ಬಂಡವಾಳವಿರುವ ದೇಶೀಯ ವಿಮೆಕಂಪನಿಯಲ್ಲಿ ಅತ್ಯಂತ ದೊಡ್ಡದಾದ ಸಾವಿರ ರೂಪಾಯಿ ವಿಮೆಮಾಡಿದವನಿಗೆ ವರ್ಷಕ್ಕೆ 18ರೂ. ಕಡಿಮೆಯಿಲ್ಲದೆ ಲಾಭ ಕೊಡುವ 'ಓರಿಯಂಟಲ್' ಗವರ್ನಮೆಂಟ್ ಜೀವವಿಮೆ ಕಂಪೆನಿಯ ರೂಲ್ಸುಗೂ, ಶರತ್ತುಗೂ ಈ ಕೆಳಗೆ ನವರಿಗೆ ಬರೆದು ತಿಳಿದುಕೊಳ್ಳಿ.

ಖಾದಿಬಟ್ಟೆ ಎಂದರೇನು?

ದೇಶೀಯ ಹತ್ತಿಯಲ್ಲಿ ಕೈರಾಟೆಯಿಂದ ನೂಲು ತೆಗೆದು ಇಲ್ಲಿಯೇ ತಯಾರಿಸುವ ಬಟ್ಟೆಯೇ 'ಖಾದಿ.' ಈಗಾಗಲೇ ನಮ್ಮ ಸ್ಟೋರಿನಲ್ಲಿ ಪರದೇಶೀಬಟ್ಟೆಗಿಂತ ಗಟ್ಟಿಯಲ್ಲಿಯೂ ಅಂದದಲ್ಲಿಯೂ ಕಡಿಮೆ ಇಲ್ಲದಂತ, ಎಲ್ಲಾ ತರದ ಸೀರೆಗಳು ಚೆಕ್ಕುಗಳು, ಶಾಲು ವಗೈರೆ ಎಲ್ಲಾ ತರದ ಬಟ್ಟೆಯು ತಯಾರಾಗಿದೆ. ದಯವಿಟ್ಟು ಪ್ರೋತ್ಸಾಹಿಸಿರಿ! ಖಾದಿಯಿಂದಲೇ ಸ್ವರಾಜ್ಯ. ಖಾದಿಯಿಂದಲೇ ಮೋಕ್ಷವೆಂಬುದನ್ನು ಮರೆಯಬೇಡಿರಿ.

ಸೋಮವಾರಪೇಟೆ, ದಕ್ಷಿಣ ಕೊಡಗು.

ಕೆ. ಪಿ. ಚಣ್ಣಪ್ಪ, ಪ್ರೊಪ್ರೈಟರ್, ಖಾದಿಭಂಡಾರ.

52—9.

ಸಾ[illegible] ಕ್ರಯಕ್ಕಾಗುವ [illegible] ಉಪಯುಕ್ತವಸ್ತುಗಳಿರುವ

ಜವರ್ಲಿನ್ ಕೋಂಬಿನೇಶನ್ ಪೆಟ್ಟಿಗೆ

ಈ ಪೆಟ್ಟಿಗೆಯಲ್ಲಿರುವ ವಸ್ತುಗಳು.

[illegible] ಒಂದು, 22 ಕ್ಯಾರೆಟ್ ಗೋಲ್ಡ್ [illegible] ಉಂಗುರ 2, 22 ಕ್ಯಾರೆಟ್ ಗೋಲ್ಡ್ [illegible] ಮತ್ತು ಸ್ಟಡ್ಸುಗಳು 12, ಭಂಗಾರದ [illegible] 1, [illegible] 12, [illegible] 12, [illegible] 1, [illegible] 1, [illegible] 1, [illegible] 25, [illegible] 12, [illegible] 6, [illegible] ಬಾಟ್ಲಿ 1, [illegible] 1, [illegible] 12.

ಹೀಗೆ ಒಟ್ಟು 100 ಅತ್ಯುಪಯುಕ್ತ ವಸ್ತುಗಳ ಬೆಲೆ ರೂ. 3—8—0. ಬೇಕಾದವರು ಬೇಗನೆ ಈ ವಿಳಾಸಕ್ಕೆ ಬರೆದುಕೊಳ್ಳಿರಿ.

ಸಿಂಪ್ಲೆಕ್ಸ್ ನೊವೆಲ್ಟಿ ಹೌಸ್,

ಪೋಸ್ಟ್ ಬಾಕ್ಸ್ ನಂಬ್ರ 142 ಮದ್ರಾಸು.

ಇಮಿಟೇಷನ್ ರೇಷ್ಮೇ ಸೀರೆಗಳು.

ಈ ಸೀರೆಗಳು 18ಮೊಳ, ಉದ್ದ ಪೂರ್ತಿಮೊಳ ಅಗಲವೂ ಇದೆ. ಈ ಸೀರೆಗಳನ್ನು ಹೊಸತಾದ ಇಮಿಟೇಷನ್ ಸಿಲ್ಕ್ ಗಟ್ಟಿದಾರದಿಂದ ತಯಾರಿಸಿದೆ. ಇದು ನೋಡಲಿಕ್ಕೆ ಬಾರಿ ಕ್ರಯದ ಸೀರೆಗಳಂತೆ ಕಾಣುವದಲ್ಲದೆ ಅಂದವಾದ [illegible], ಸುಂದರವಾದ ಸಾಚಾ ರೇಷ್ಮೆಯ ಸಂಗೂ ಇರುವದು. ಈ ಮಾದರಿ ಸೀರೆಗಳು ಬೇರೆ ಯಾರಲ್ಲಿಯೂ ಈ ಕ್ರಯಕ್ಕೆ ಸಿಕ್ಕಲಾರದು. ಈ ಸೀರೆಗಳು ಶ್ರೀಮಂತರೂ, ಗರೀಬರೂ, ಉಡಲಿಕ್ಕೆ ಬಹು ಲಾಯಕ್ಕಾದವು. ಮಾದರಿಗಾಗಿ ಕೆಲವನ್ನು ಮಾತ್ರ ತಯಾರಿಸಿರುತ್ತೇವೆ. ಆದ್ದರಿಂದ ಬೇಗನೆ ತರಿಸಿಕೊಳ್ಳುವವರಿಗೆ ಮಾತ್ರ ಸಿಕ್ಕುವವು.

ಕ್ರಯ ಸೀರೆ 1ಕ್ಕೆ ನಂ 1. ರೂ. 6—8—0

„ ನಂ 2. ರೂ. 7—8—0

ವಿಳಾಸ.—ಮಹರಾಜ ಟ್ರೇಡಿಂಗ್ ಕಂಪೆನಿ,

16 ತಿರುಪಳ್ಳಿ ಬೀದಿ,

ಮದರಾಸು.

ಈಗಲೇ ಪ್ರಿಂಟಾಗಿದೆ! ಶೃಂಗಾರವಾದ ಪುಸ್ತಕ!!

ಸ್ತ್ರೀ ಪುರುಷರ ಪ್ರೀತಿಯ ಮರ್ಮಗಳನ್ನು ಚಿತ್ರಪಟಗಳ ಸಹಿತ ತಿಳಿಸುವ

ಮರ್ಮ ಶಾಸ್ತ್ರ.

ಫ್ರೆಂಚ್ ಬಾಷೆಯಲ್ಲಿ ಇದ್ದದನ್ನು ಸುಲಭ ಶೈಲಿಯಲ್ಲಿ ಕನ್ನಡ ಭಾಷೆಗೆ ಬಾಷಾಂತರಿಸಿರುತ್ತೇವೆ. ಸ್ತ್ರೀಪುರುಷರುಗಳಿಗೆ ಬೇಕಾದ ಎಲ್ಲಾ ಮರ್ಮ ರಹಸ್ಯಗಳು, ರತಿ ಮನ್ಮಥನು ಆನಂದವಾಗಿರುವದಕ್ಕೆ ಬೇಕಾದ ಉಪಾಯಗಳು, ಸ್ತ್ರೀ ಪುರುಷರ ಜಾತಿಯ ಲಕ್ಷಣಗಳು ಗರ್ಭಧರಿಸುವದು, ಶಿಶು ಉತ್ಪತ್ತಿವಿಧ, ಗುಪ್ತ ವೈದ್ಯ, ಶಯನ ಗೃಹದ ನಿಯಮಗಳು, ಇನ್ನೂ ಸ್ತ್ರೀಪುರುಷರಿಗೆ ಬೇಕಾದ ಲೀಲ ರಹಸ್ಯಗಳು ತುಂಬಿದೆ. ಈ ಶೃಂಗಾರವಾದ ಪುಸ್ತಕವನ್ನು ತರಿಸಿ ಆನಂದ ಹೊಂದುತ್ತಾರೆಂದು ನಂಬಿರುತ್ತೇವೆ. ಪಟಗಳ ಸಹಿತ ಕ್ರಯ ಪುಸ್ತಕ 1ಕ್ಕೆ ರೂ. 1—0—0

ವಿಳಾಸ:—ಟಿ ರಾಮಚಂದ್ರರಾವ್ ಕಂಪೆನಿ,

52—23 ಪೋಸ್ಟು ಬಾಕ್ಸ್ ನಂ. 232, ಮದರಾಸ್.

ವಿಶೇಷದ ಮಾರಾಟ!

ಉಚಿತ! ಉಚಿತ!

18 ಕ್ಯಾರೆಟ್ ರೋಲ್ಡ್‌ಗೋಲ್ಡ್ ಪ್ಲೇಟ್ ಹೊದ್ದ ಮು[illegible] ಪಿ ಬಲ್ಲೆಯಿರುವ ಮುಂಗೈ ಗಡಿಯಾರ ನಂ. 100.

ಇದು ಅತ್ಯಂತ ಹೊಸ ಮಾದರಿ, ಸುಂದರವಾದ ಆಕಾರ, ನೂಗ[illegible] ಸಾದ ಕೆಲಸ, [illegible]



[illegible]

ಕ್ರಯ 7—0—0.

ದಿ ವಿನ್ನರ್ ವಾಚ್ ಮತ್ತು ಕಂಪನಿ,

ಪೋಸ್ಟ್ ಬಾಕ್ಸ್ ನಂ [illegible],

[illegible] ಮದ್ರಾಸು.

ನೋವೆಲ್ ಚೋರಿಕಿ ಕ್ಲಾಕ್

[illegible]

[illegible]

ಡೇಲಿಯೋ ವಾಚ್ ಕಂಪೆನಿ,

(G.P.O.) ಜಿ. ಪಿ. ಒ.

52—4 ಮದ್ರಾಸು.

೧೦೦೦ ರೂಪಾಯಿಗಳ ಬಹುಮಾನ.

ಲೋಕಪ್ರಸಿದ್ಧವಾದ ಸಾಲಂಮಿಸ್ರಿ ಮುರಬ್ಬಾ.

ನಮ್ಮ ಟ್ರೇಡ್ ಮಾರ್ಕನ್ನು ನೋಡಿ ಈ ಔಷಧ ತೆಗೆದುಕೊಳ್ಳಿ

ಇದರ ಸೇವನೆಯಿಂದ ವೀರ್ಯವು ನೀರಿನಂತೆ ಇದ್ದರೂ, ಸ್ವಪ್ನೇಂದ್ರಿಯವಾದರೂ, ಸ್ತ್ರೀ ಸಂಘಕ್ಕೆ ಮೊದಲೇ ಸ್ಖಲನವಾದರೂ, ಮೂತ್ರದೊಂದಿಗೆ ಹೋಗುತ್ತಿದ್ದರೂ ದೋಷರಹಿತವಾಗಿ ಶರೀರಕ್ಕೆ ಆರೋಗ್ಯವನ್ನೂ ಧಾರ್ಢ್ಯತೆಯನ್ನೂ ಆಯುಸ್ಸು, ಬಲ, ತೇಜಸ್ಸು ಉಂಟು ಮಾಡುವದು. ಅಜೀರ್ಣ ಮಲಬದ್ಧತೆ, ಮೆದುಳಿನ ಬಲಹೀನತೆ, ಕೈಕಾಲು ಸೊಂಟ ನೋವುಗಳಿಗೆ ಇದು ದಿವ್ಯ ಔಷಧವು. ಈ ಸಾಲಂಮಿಸ್ರಿ ಎಂಬುವದು ಕಾಬೂಲ್ ಕಂದಾಹಾರ ಪ್ರಾಂತ್ಯದಲ್ಲಿ ಬೆಳೆಯುತ್ತದೆ.

ಈ ಔಷಧದಿಂದ ಗುಣಹೊಂದಿರುವ ಅನೇಕ ಮಹನೀಯರು ತಾವಾಗಿಯೇ ಅನೇಕ ದೇಶಗಳಿಂದಲೂ ಆಫ್ರೀಕ, ಬರ್ಮ, ಪಿನಾಂಗ್, ಸಿಂಗಪೂರ್, ಸಿಲೋನ್, ಬೊಂಬಾಯಿ, ಕಲ್ಕತ್ತ, ಮದ್ರಾಸು ಮತ್ತು ಇಂಡಿಯಾದೇಶದಲ್ಲಿ ಎಲ್ಲಾ ಸ್ಥಳಗಳಿಂದಲೂ ನಮಗೆ ಯೋಗ್ಯತಾ ಪತ್ರಿಕೆಗಳನ್ನು ಕಳುಹಿಸಿರುವರು. ಇವುಗಳ ನಕಲನ್ನು ಯಾರಾದರೂ ತರಿಸಿ ನೋಡಬಹುದು. ಇವುಗಳು ಸುಳ್ಳು ಎಂದು ಸಿದ್ಧಾಂತಪಡಿಸುವವರಿಗೆ ಮೇಲೆ ಕಂಡ ಬಹುಮಾನ ಕೊಡಲ್ಪಡುತ್ತೆ. ನಾವು ಹಾಗೆ ಕೊಡದೇ ನಿರಾಕರಿಸಿದಲ್ಲಿ ಕೋರ್ಟು ಮೂಲಕ ಅದನ್ನು ಪಡೆಯಬಹುದು. ೧ ಡಬ್ಬವನ್ನು [illegible] ಗುಣವು [illegible] ತೋರಬಹುದು. ೩ ಯಾ ೪ ಡಬ್ಬಿಗಳು ಜನ್ಮಾಂತ್ಯದವರಿಗೂ ಪೂರ್ಣ [illegible] ಗುಣವನ್ನುಂಟು ಮಾಡುವವು. ಹೆಸರು ವಿಳಾಸಗಳನ್ನು ವಿವರವಾಗಿ ಬರೆಯಬೇಕು. ಒಂದಾವರ್ತಿ [illegible] ಮಾಡಿ ನೋಡಿದಲ್ಲಿ ಖಾತ್ರಿ ಉಂಟಾಗುತ್ತೆ.

ಕ್ರಯ ಡಬ್ಬಿ ೧ಕ್ಕೆ ರೂ. ೨—೦—೦ ಭಾಂಗಿ ಚಾರ್ಜು ೧ರಿಂದ ೩ ಡಬ್ಬಿಗಳಿಗೆ ೦—೮—೦ ಅಣೆ. ಏಜಂಟರುಗಳು ಎಲ್ಲಾ ಸ್ಥಳಗಳಲ್ಲಿಯೂ ಆವಶ್ಯಕವಾಗಿರುತ್ತೆ. ರೂಲ್ಸ್ ತರಿಸಿಕೊಳ್ಳಬಹುದು. ಆರ್ಡರು ಕೊಡತಕ್ಕ ಕಾಲದಲ್ಲಿ ಈ ಪತ್ರಿಕೆಯ ಹೆಸರನ್ನು ಬರೆಯಬೇಕು.

ಟೆಲಿಗ್ರಾಫ್ ಅಡ್ರೆಸ್, ಮಿಸ್ರಿ ಬೆಂಗಳೂರು ಸಿಟಿ.

ಡಿ. ಮನ್ನಾಲಾಲ್, ಡಿಲ್ಲಿ ನೇಟಿವ್ ವೈದ್ಯರು,

ಸಾಲಂಮಿಸ್ರಿ ಮುರಬ್ಬ ಡಿಪೋ,

ಬೆಂಗಳೂರು ಸಿಟಿ.

12—9

Printed & published by Kodanda Appayya, R.B., Chairman. Board of Directors, at "Kodagu" Press, Mercara for "Kodagu" Ltd.

1926-27

Reg. No. M. 534.

"KODAGU" BULLETIN

ಕೊಡಗು.

ಶಕ್ತ್ಯಾನ ಭೂತದಯಾ ವಿದ್ಯಾ ಶೀಲ ಪ್ರಯತ್ನತಾ || ಐಕ್ಯಮತ್ಯೇನ ದೇಶಾನಾಂ ಸುಸ್ಥಿರಾ ರಾಜ್ಯ ಸಂಪದಾ ||

ಸಂಪಾದಕ—ಪಂದ್ಯಂಡ ಐ. ಬೆಳ್ಯಪ್ಪ.

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವದು.

ಸಂಪುಟ ೬] ಕೊಡಗು, ಶಕ ೧೮೫೬ನೇ ಇಷವ ಜೂನ್ ತಾರೀಕು ೪ ನೇ ಶುಕ್ರವಾರ [ಸಂಚಿಕೆ ೧

ಸ್ಥಾಪಿತವಾದದ್ದು 1874 ಮೂಲಧನ 7 ಕೋಟಿ ರೂಪಾಯಿಗಳು

ಓರಿಯಂಟಲ ಗವರ್ನ್ಮೆಂಟ್ ಸೆಕ್ಯೂರಿಟಿ ಲೈಫ್ ಅಸ್ಯೂರೆನ್ಸ್ ಕಂಪೆನಿ ಲಿಮಿಟೆಡ್, ಹೆಡ್ ಆಫೀಸು= ಬೊಂಬಾಯಿ.

1922-1924 ... ಗಳಲ್ಲಿ ಕಂಪೆನಿಯಲ್ಲಿ ... ಭಲಾರಾಂಶಗಳು —

... ಈ ಮೂರು ವರ್ಷಗಳಿಗೆ ...

... ಈ ಮೂರು ವರ್ಷಗಳಿಗೆ ...

ಈ ಕಂಪೆನಿಯಲ್ಲಿ ... ಕೆಲಸದ ... ಕ್ಕಸಾಗುತ್ತದೆ.

1923 ... 1710
1924 ... 2570
1925 ... 2960

ಇನ್ನೂ ದಿನದಿನಕ್ಕೂ ಅಭಿವೃದ್ಧಿಯಾಗುತ್ತಲೇ ಇದೆ. ... ಹಣವನ್ನು ಲಾಭಕರವಾಗಿ ... ಇದೇ ಸುಸಮಯ

ಬೇಕಾದ ವಿಷಯಗಳನ್ನು ಈ ಕಳ ...

ಓರಿಯಂಟಲ್ ಬಿಲ್ಡಿಂಗ್ ... ಸುಬ್ರಹ್ಮಣ್ಯರು,

ಪೋಸ್ಟ್ ... ಬ್ರಾಂಚ್ ಸೆಕ್ರೆಟರಿ.

52—9

ಸತ್ಯಮೇವಜಯತೇ.

(ಗುಣವಾಗದಿದ್ದರೆ ಹಣ ವಾಪಸ)

ಧಾತುಪೌಷ್ಟಿಕ ಕಾಮೋತ್ತೇಜಕ, ಇಂದ್ರಿಯಸ್ತಂಭಕವಾದ

ಮದನೋದ್ಭವ ಗುಳಿಗೆ.

ಜನನೇಂದ್ರಿಯದ ಶಿಥಿಲತೆ ನಿಬಲತೆ ನಪುಂಸಕತ್ವ ಕ್ಷೀಣ ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣವಾಗುತ್ತವೆ. ಧಾತು ಪೌಷ್ಟಿಕ ವೀರ್ಯವರ್ಧಕ ರಕ್ತ ಶೋಧಕ, ಕಾಮೋತ್ತೇಜಕ, ಮನೋತ್ಸಾಹಕ ಇಂದ್ರಿಯ ಸ್ತಂಭಕ, ... ಗಳು, ... ಕಾಂತಿಯೂ ... ಗುಳಿಗೆಗಳು ... ರೂಪಾಯಿ ... ನಪುಂಸಕತ್ವಾರಿ ತೈಲವನ್ನು ಉಪಯೋಗಿಸಿದರೆ ಉತ್ತಮ ... ರೂ 3—13—0

ಪ್ರಮೇಹನಿವಾರಣಿ—ಇದರ ಸೇವನೆಯಿಂದ ... ಗುಣವಾಗುವದು ... ರೂ 2—0—0 ...

ಹೆಚ್ಚಿನ ಸಂಗತಿ ...

ವಿಳಾಸ —

ವೈದ್ಯ ಜಿ. ಎಲ್ ಜೋಶಿ ಮತ್ತು ಕಂಪೆನಿ.

20 ನಂ 6, ಪೋಸ್ಟ್ ಬಸವಾಪುರ, ಉತ್ತರ ಕಾನಡಾ.

ಕಲಿಸೋಪು. ಕಲೆ ಕಿರುಗುವದು, ಕಲೆ ... ವದಿರುವದು, ನೆನಪು ಶಕ್ತಿ ಕುಂದಿಹೋಗು ...

... ಕೂದಲನ್ನು ... ಕೊಟ್ಟು ...

... 1 ರೂ 3 8 0

ಅಮೃತರಿಷ್ಟ.— ...

ಲೋಪಾಸವ.— ...

1—4—0, 3—8—0, 6—1—0

ನಮ್ಮ ಕೆಟಲಾಗು ಕರಿಸಿ ನೋಡಿರಿ

52—24 ವಿಳಾಸ—ಮನೋಲಾ ಸಿನಿ ಕಂಪೆನಿ,

9 ಮಂಗಳೂರು, ಕಂಕನಾಡಿ.

EMPIRE OF INDIA LIFE ASSURANCE CO., LTD.

(Established 1897)

ALL WITH PROFIT POLICIES

Issued before 28th February, 1927 will share in the BONUS Distribution for the five years ending on that date.

PROSPECTUS ON APPLICATION

Bangalore Branch — 152 Commercial Street

Madras Branch — 9 & 10 Second Line Beach

24 17

ಬೆಸ್ಟ್ ಲೀವರ್ ಪಾಕೆಟ್ ವಾಚ್.

ಈ ಗಡಿಯಾರವು ಉತ್ತಮವಾದ ಸಾಮಾನುಗಳಿಂದ ... ಸಲ್ಪಟ್ಟದ್ದು. ನೋಟಕ್ಕೆ ಬಹು ಗಂಭೀರವಾ ... ವಾಗಿಯೂ ಇಲ್ಲದ್ದು. ಇದರ ... ಯಂತ್ರಗಳಿಂದ ತಯಾರಿಸಲ್ಪಟ್ಟದ್ದು. ... ಹಾಕಿಕೊಂಡು ಎಷ್ಟು ದೂರ ... ದೆ ನಡೆಯುತ್ತಿರುವದು. ಇದನ್ನು ... ಕಂಪನಿಯಲ್ಲಿ ನೋಡಬಹುದು.

ಇದರ ಕ್ರಯ. ರೂ. 4-0-0

ನಗಡೆ ಆಟದ ಮನ ಮತ್ತು ಏಣಿ.

... ಕಳೆಯುವದಕ್ಕಾಗಲೀ, ವಿನೋದಕ್ಕಾಗಲೀ, ಇದೊಂದು ಕಂದ ಆಟವಾಗಿರುವದು. ಅನೇಕ ... ಬಣ್ಣಗಳ 16 ಪಗಡ ಕಾಯಿಗಳು ಮತ್ತು ... ಇರುವದು. ಸೆಟ್ 1ಕ್ಕೆ (0—10—0)

... ಕಾಂತಾಪಿನ್ ಕಾಬಾರ್ ಕಂಪೆನಿ,

... ಎಂಬ ಗ್ರಂಥ್ 1251 ...

ಬೇಕಾಗಿವೆ.

ಬೀಟೆಯ ರೂ ಕೊರೆಗಳು ಬೇಕಾಗಿವೆ

ಒಳ್ಳೇ ಬೆಲೆ ಕೊಡಲಾಗುವದು. ಹೆಚ್ಚಿನ ಸಂಗತಿಗ ... ಅಡಿಯಲ್ಲಿ ... ವಿಳಾಸಕ್ಕೆ ಬರೆದುಕೊಳ್ಳುವದು.

WANTED

Rose wood logs (Beeti)

Good price offered.

For further particulars please apply to:—

R FRAMJEE,

12 11 Mercara

ಕೆ. ಸಿ. ಅಪ್ಪಚ್ಚು.

ದಂತ ವೈದ್ಯರು.

ಇದೇ ತಾರೀಖು ೨೦ರ ಮಡಿಕೇರಿ ... ಬಲ್ಲಿ ಉಳಕೊಳ್ಳುವರು. ... ಅವರನ್ನು ಅಲ್ಲಿ ಹೋಗಿ ನೋಡಬಹುದು ... ಸಮಯವನ್ನು ಕಳಕೊಳ್ಳಬೇಡಿರಿ, ... ಗಾ ಚಾರ್ಜು ಇಲ್ಲದೆ ನೋಡುವರು. 52-9

ARMS & AMMUNITION MART,

Mahomedally-Noorbhoy

321 Abdul Rehman Street, near Crawford Market, BOMBAY 3

Telegraphic Address —"SHOOTER" Bombay.

[52—40] Please write for Reduced nett prices list f. 1926

Regd. N. M. 530.

KODAGU WEEKLY

ಕೊಡಗು.

ಸತ್ಯೇನ ಧರ್ಮದಯಯಾ ವಿದ್ಯಾ ನೀತಿ ಪ್ರಯುಕ್ತಾ || ಐಕ್ಯಮತ್ಯೇನ ದೇಶಾನಾಂ ಸುಸ್ಥಿರಾ ರಾಜ್ಯ ಸಂಪದಾ ||

ಸಂಪಾದಕ—ಪಂದ್ಯಂಡ ಐ ಬೆಳ್ಯಪ್ಪ.

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವದು.

ಸಂಪುಟ ೬] ಕೊಡಗು, ಸಿ. ೧೯೨೬ನೇ ಇಸವಿ ಜೂನ್ ತಾರೀಕು ೪ ನೇ ಶುಕ್ರವಾರ [ಸಂಚಿಕೆ ೧

ಸ್ಥಾಪಿತವಾದದ್ದು 1874 ಮೂಲಧನ 7 ಕೋಟಿ ರೂಪಾಯಿಗಳು

ಓರಿಯಂಟಲ ಗವರ್ನ್ಮೆಂಟ್ ಸೆಕ್ಯೂರಿಟಿ ಲೈಫ್ ಅಶ್ಯೂರೆನ್ಸ್ ಕಂಪೆನಿ ಲಿಮಿಟೆಡ್, ಹೆಡ್ ಆಫೀಸು= ಬೊಂಬಾಯಿ.

192[illegible] 1924 [illegible] ಗಳಲ್ಲಿ ಕಂಪನಿಯಲ್ಲಿ ನಡೆದ ಕೆಲಸದ ಫಲಿತಾಂಶಗಳು.

[illegible] 15,94,80[illegible] ರೂಪಾಯಿಗಳನ್ನು [illegible]

[illegible] ಬೋನಸ್ [illegible]

[illegible] ಈ ಕಂಪೆನಿಯಲ್ಲಿ [illegible] ನಿಂದ ಹೆಚ್ಚುತ್ತಿರುವ [illegible] ಕೆಲಸದ [illegible]

1923	1,74,0[illegible]
1924	2,[illegible]7,00
1925	2,[illegible]9,0[illegible]

[illegible] ದಿನದಿನಕ್ಕೂ ಅಭಿವೃದ್ಧಿಯಾಗುತ್ತಲೇ ಇದೆ. [illegible] ಹಣವನ್ನು [illegible] ಸಮಯ.

ಬೇಕಾದ ವಿಷಯಗಳನ್ನು ಈ ಕಛೇರಿ [illegible] ಒಂದು [illegible]

ಓರಿಯಂಟಲ್ ಬಿಲ್ಡಿಂಗ್ಸ್, ಪೋಸ್ಟ್ ಬಾಕ್ಸ್ [illegible] ಬೆಂಗಳೂರು — ಪಿ. ಪಿ. ಸುಬ್ರಹ್ಮಣ್ಯಯ್ಯರ್ ಬ್ರಾಂಚ್ ಸೆಕ್ರೆಟರಿ.

52—9

ಸತ್ಯಮೇವಜಯತೇ.

(ಗುಣವಾಗದಿದ್ದರೆ ಹಣ ಹರತ)

ಧಾತುಪುಷ್ಟಿಕ ಕಾಮೋತ್ತೇಜಕ, ಇಂದ್ರಿಯಸ್ತಂಭಕವಾದ

ಮದನೋದ್ಭವ ಗುಳಿಗೆ.

ಜನನೇಂದ್ರಿಯದ ಶಿಥಿಲತೆ [illegible] ನಪುಂಸಕತ್ವ [illegible] ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣಾಂತರವಾಗಿ ಧಾತು ಪುಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ ಇಂದ್ರಿಯಸ್ತಂಭಕ, [illegible] ಗುಳಿಗೆಗಳು ಬೇಕಾಗುತ್ತವೆ ಕಿಮ್ಮತ್ತು ೬೦ ಗುಳಿಗೆಗಳಿಗೆ ೪ ರೂಪಾಯಿ [illegible] **ನಪುಂಸಕತ್ವಾರಿ ತೈಲವನ್ನು** ಉಪಯೋಗಿಸಿದರೆ ಉತ್ತಮ. ಕಿಮ್ಮತ್ತು ಬಾಟ್ಲಿಗೆ ರೂ ೩—೧೨—೦

ಪ್ರಮೇಹನಿವಾರಣಿ—ಇದರ ಸೇವನೆಯಿಂದ ಮೂತ್ರ [illegible] ಕೆಂಪು ಹಳದಿ [illegible] ಗುಣವಾಗುವದು. ಕಿಮ್ಮತ್ತು ಬಾಟ್ಲಿಗೆ ರೂ ೩—೮—೦ [illegible]

[illegible] ಸ್ಟಾಂಪು ಕಳುಹಿಸಿದರೆ ಕ್ಯಾಟಲಾಗನ್ನು

ವಿಳಾಸ,—

ವೈದ್ಯ ಜಿ. ಎಲ್ ಜೋಶಿ ಮತ್ತು ಕಂಪೆನಿ.

20 ನಂ ೬. ಪೋಸ್ಟ ಒನವಾಸಿ, ಉತ್ತರ ಕಾನಡಾ.

ಮನೋಲ್ಲಾಸಿನಿ ತೈಲ.

ತಲೆನೋವು ತಲೆ ತಿರುಗುವುದು, [illegible] ಕಣ್ಣುನೋವು, ಅಪಸ್ಮಾರ [illegible] ನೆನಪು ಶಕ್ತಿ ಕುಂದಿಹೋಗುವುದು [illegible] ಕೂದಲನ್ನು [illegible]

[illegible] 1, 3 [illegible] 2—10—0 [illegible]

ಚಂದನಾಸವ. [illegible] ಮೂತ್ರ [illegible]

ರೋಮನಾಶಿನಿ [illegible]

[illegible] 1 [illegible] 3 8 0

ಅಮೃತರಿಷ್ಟ.— [illegible] 1, 3, 6ಕ್ಕೆ ರೂ 1—4—[illegible] —8—0 [illegible]

ಲೋಹಾಸವ.— [illegible] 1—4—0, 3—8—0, 6—12—0

ನಮ್ಮ ಕೆಟಲಾಗು ತರಿಸಿ ನೋಡಿರಿ

ವಿಳಾಸ—ಮನೋಲ್ಲಾಸಿನಿ ಕಂಪೆನಿ,

9 ಮಂಗಳೂರು, ಕಂಕನಾಡಿ.

52—24

EMPIRE OF INDIA LIFE ASSURANCE CO., LTD.

(Established 1897)

ALL WITH PROFIT POLICIES

Issued before 28th February, 1927 will share in the BONUS Distribution for the five years ending on that date.

PROSPECTUS ON APPLICATION

Bangalore Branch — 152 Commercial Street — 24-17

Madras Branch — 9 & 10 Second Line Beach

ಬೆಸ್ಟ್ ಲೀವರ್ ಪಾಕೆಟ್ ವಾಚ್.

ಈ ಗಡಿಯಾರವು ಉತ್ತಮವಾದ ಸಾಮಾನುಗಳಿಂದ [illegible] ನೋಟಕ್ಕೆ ಬಹು ಗಂಭೀರವಾಗಿಯೂ [illegible] ಯಂತ್ರಗಳಿಂದ ತಯಾರಿಸಲ್ಪಟ್ಟಿದೆ. [illegible] ಜೇಬಿನಲ್ಲಿ ಹಾಕಿಕೊಂಡು [illegible] ನಡೆಯುತ್ತಿರುವದು. ಇಷ್ಟು ಸುಲಭ [illegible] ಕಂಪನಿಯಲ್ಲಿ ದೊರೆಯಲಾರದು.

ಇದರ ಕ್ರಯ ರೂ 4-0-0.

ಪಗಡೆ ಆಟದ [illegible]

[illegible] ಕಳೆಯುವದಕ್ಕಾಗಲೀ ವಿನೋದಕ್ಕಾಗಲೀ, ಇದೊಂದು ಶರದ ಆಟವಾಗಿರುವದು. ಅನೇಕ [illegible] ಆಟದ ಮನೆಗಳನ್ನು [illegible] 4 ಬಣ್ಣಗಳ 16 ಪಗಡೆ ಕಾಯಿಗಳು ಮತ್ತು [illegible] ಇರುವದು. ಸೆಟ್ 1ಕ್ಕೆ (0-10-0.)

ಒಂದು [illegible] ಕಂಪೆನಿ, [illegible] ಎಂಬ ಗ್ರಂಥ 1251 [illegible]

ಬೇಕಾಗಿವೆ.

[illegible] ಬೇಕಾಗಿವೆ [illegible] ಹೆಚ್ಚಿನ ಸಂಗತಿಗ [illegible] ವಿಳಾಸಕ್ಕೆ ಬರೆದುಕೊಳ್ಳುವದು.

WANTED

Rose wood logs (Beeti)

Good price offered.

For further particulars please apply to:—

R. FRAMJEE,

Mercara

12 11

ಕೆ. ಸಿ. ಅಪ್ಪಚ್ಚು.

ದಂತ ವೈದ್ಯರು.

ಇದೇ ತಾರೀಖು ೭ರಿಂದ ಮಡಿಕೇರಿಯಲ್ಲಿ [illegible] ಅವರನ್ನು ಅಲ್ಲಿ ಹೋಗಿ ನೋಡಬಹುದು. [illegible] ಕೇಳಿಕೊಳ್ಳಬೇಡಿರಿ. [illegible] ಚಾರ್ಜು ಇಲ್ಲದೆ ನೋಡುವರು. 52-9

ARMS & AMMUNITION MART.

Mahomedally-Noorbhoy

321 Abdul Rehman Street, near Crawford Market, BOMBAY. 3

Telegraphic Address.—"SHOOTER" Bombay.

[52—46] Please write for Reduced nett prices list for 1926

"ಕೊಡಗು"

೪೮ ೧೯೨೬ನೇ ಇಸವಿ ಜೂನ್ ತಾ.
೪ ನೇ ಶುಕ್ರವಾರ

ಸ್ವವಿಷಯ.

ಈ ಪತ್ರಿಕೆಯು ಜನ್ಮವೆತ್ತಿ ಈ ವಾರಕ್ಕೆ ಐದು ವರ್ಷಗಳಾದವು. ಈ ವಾರದ ಸಂಚಿಕೆಯಿಂದ ಇನ್ನೊಂದು ಹೊಸ ವರ್ಷವು ಪ್ರಾರಂಭವಾಗಿದೆ. ಈ ವರೆಗೆ ನಾವು ನಮ್ಮ ಕರ್ತವ್ಯವನ್ನು ನಿಷ್ಪಕ್ಷಪಾತದಿಂದಲೂ ನಿರ್ಭೀತಿಯಿಂದಲೂ ಸಮುದಾಯದ ಹಿತಕ್ಕಾಗಿ ಮಾಡಿರುತ್ತೇವೆ. ಇನ್ನು ಮುಂದೆ ಇದೇ ರೀತಿ ಅವಕಾಶ ಸಿಕ್ಕಿದಷ್ಟು ಕಾಲ ಸ್ವಾರ್ಥತೆಯನ್ನು ಯೋಚಿಸದೆ ಕೆಲಸಮಾಡಲು ತಯಾರಾಗಿದ್ದೇವೆ. ಪತ್ರಿಕೆಯಲ್ಲಿ ಬರೆಯುವ ಲೇಖನಗಳಿಗೆ ಜವಾಬ್ದಾರರಾಗಿರುವ ವ್ಯಕ್ತಿಯು ಯಾರೇ ಇರಲಿ ಪತ್ರಿಕೆಯ ಧ್ಯೇಯವು ಎಂದೂ ಕೀಳು ದರ್ಜೆಗೆ ಇಳಿಯಬಾರದೆಂಬುದೇ ನಮ್ಮ ಹಾರೈಕೆಯಾಗಿದೆ.

ಈಗ ಕಳೆದುಹೋದ ವರ್ಷದಲ್ಲಿ ನಮ್ಮನ್ನು ನಿಷ್ಕಾರಣವಾಗಿ ಅತಿ ತುಚ್ಛ ಮಾತುಗಳಿಂದ ನಮ್ಮ ಊರಿನ ಇನ್ನೊಂದು ಪತ್ರಿಕೆಯು ದೂರಿತು. ಆ ದೂರುಗಳಿಂದ ಅಂಥಾ ಬರವಣಿಗೆಗೆ ಜವಾಬ್ದಾರರಾದ ಒಬ್ಬೊಬ್ಬರ ಸ್ವಭಾವವು ಹೊರಬಿತ್ತೇ ಹೊರತು ನಮಗೇನೂ ಕಳಂಕ ಬರಲಿಲ್ಲ. ನಮ್ಮ ಮೇಲೆ ಹೊರಿಸಿದ ಸ್ವಾರ್ಥಪರತೆ ಮುಂತಾದ ಸ್ವಭಾವವು ನಮ್ಮಲ್ಲಿ ಇದೆಯೋ ಇಲ್ಲವೋ ಎಂಬುದನ್ನು ದೇಶದವರು ಅರ್ಥಮಾಡಿಕೊಂಡಿದ್ದಾರೆ. ನಮ್ಮ ಧ್ಯೇಯಗಳಿಗೆ ದೇಶವೆಲ್ಲಾ ಒಪ್ಪುತ್ತದೆ ಎಂಬ ನಮ್ಮ ಭಾವನೆಯು ನಿರಾಧಾರವಾದದ್ದು ಎಂಬುದು ಆಗಾಗ್ಗೆ ಜನಸಮುದಾಯದವರು ನಡೆಸುವ ಮೀಟಿಂಗುಗಳಿಂದ ಪ್ರತ್ಯಕ್ಷವಾಗುತ್ತದೆ. ಜನಸಮುದಾಯಕ್ಕೆ ನಮ್ಮ ಧ್ಯೇಯವು ಸರಿಯಿಲ್ಲದೆ ಇರಲು ಸಾಧ್ಯವೇ ಇಲ್ಲ. ನಮ್ಮ ಇರುವಿಕೆಯೇ ಜನಸಮುದಾಯದ ಸಮ್ಮತಿಯಿಂದಾಗಿದೆ. ಒಬ್ಬರಿಬ್ಬರ ಹೇಳಿಕೆಯಿಂದ ನಡೆಯುವಂಥಾ ಪತ್ರಿಕೆಯು ನಮ್ಮದಲ್ಲ. ಒಬ್ಬರಿಬ್ಬರ ಹೇಳಿಕೆಗೆ ಒಳಪಡದೆ ಜನಸಮುದಾಯದ ಹಿತಕ್ಕಾಗಿ ಕೆಲಸಮಾಡುತ್ತಿರುವದು ಆ ಒಬ್ಬರಿಬ್ಬರಿಗೆ ರುಚಿಸದೆ ನಮ್ಮನ್ನು ಅನಾವಶ್ಯವಾಗಿ ನಿಂದಿಸುವದಾಗಿದೆ.

ಕಳೆದ ತಿಂಗಳಲ್ಲಿ ಇಂಗ್ಲೆಂಡಿನ ದೊಡ್ಡ ಮನುಷ್ಯರೊಬ್ಬರು ಪತ್ರಿಕಾಕರ್ತರ ಕರ್ತವ್ಯವನ್ನು ಕುರಿತು ಹೀಗೆಂತ ಹೇಳಿದ್ದಾರೆ. 'ದ್ವೇಷ ಮತ್ತು ಕೆಡಕುಮಾಡಿದವನಿಗೆ ಇನ್ನಷ್ಟು ಕೆಡಕುಮಾಡಬೇಕೆಂಬ ಸ್ವಭಾವ ವರ್ತಮಾನಪತ್ರಿಕೆಗಳಿಗೆ ಇರಬಾರದು. ಅತಿ ಕಠಿಣ ಕೋಪೋದ್ರೇಕಕ್ಕೆ ಕಾರಣ ಒಂದೊದಗಿದರೂ ಒಂದು ತಪ್ಪು ಕೆಲಸವನ್ನಾದರೂ ಪತ್ರಿಕಾಕರ್ತರು ಮಾಡಬಾರದು. ಈ ಉಚ್ಚ ಧ್ಯೇಯವನ್ನು ಅನುಸರಿಸಲು ನಾವು ಎಂದೂ ಜಾಗರೂಕರಾಗಿದ್ದೇವೆ. ಅದೇ ಮಹನೀಯರು ಇನ್ನೂ ಹೇಳಿರುವದೇನೆಂದರೆ—'ಎಂಥಾ ದೊಡ್ಡ ಪದವಿಯಲ್ಲಿ ಇರುವವನಿಗಾದರೂ ಪತ್ರಿಕಾಕರ್ತನು ಹೆದರಬಾರದು. ಆದರೆ ಯಾವ ಮನುಷ್ಯನೇ ಆಗಲಿ ತನ್ನ ಅಭಿಪ್ರಾಯಗಳಿಗೆ ವಿರೋಧವಿದ್ದಾನೆ ಎಂಬ ಕಾರಣದಿಂದ ಅಂಥವನನ್ನು ದ್ವೇಷಿಸಬಾರದು. ನ್ಯಾಯಪ್ರಿಯನಾಗಿಯೂ, ದಯಾಳುವಾಗಿಯೂ ಇರಬೇಕು. ಈ ಗುಣಗಳು ಎಲ್ಲಾ ಇಂಗ್ಲಿಷ್ ಪತ್ರಿಕೆಗಳಲ್ಲಿ ಇದೆಯೆಂತ ನಾನು ಹೇಳುವದಿಲ್ಲ. ಆದರೆ ಈ ಧ್ಯೇಯಗಳನ್ನು ಕಣ್ಣೆದುರಿಗೆ ಇಟ್ಟುಕೊಂಡಿದ್ದರೆ ಬ್ರಿಟಿಷ್ ಪತ್ರಿಕೆಗಳಾಗಲೀ, ಬ್ರಿಟಿಷ್ ಸಾಮ್ರಾಜ್ಯವಾಗಲೀ ಕೆಡಲಾರದು.' ಎಂತ ಹೇಳಿರುತ್ತಾರೆ. ಇದರಲ್ಲಿ ಹೇಳಿರುವಂತೆ ಈ ಗುಣಗಳನ್ನು ಜಾರಿಯಲ್ಲಿಟ್ಟುಕೊಳ್ಳುವದು ಸುಲಭಸಾಧ್ಯವಲ್ಲ. ಆದರೆ ಈ ಧ್ಯೇಯಗಳನ್ನು ನಮ್ಮ ಎದುರಿಗೆ ಯಾವಾಗಲೂ ಇಟ್ಟುಕೊಂಡೇ ಕೆಲಸಮಾಡುತ್ತೇವೆ ಎಂತ ವಾಚಕರಿಗೆ ಭರವಸೆಕೊಡಬಹುದು.

ಅದೇ ಮಹನೀಯರು ವರ್ತಮಾನಪತ್ರಿಕೆಗಳ ವಿಷಯ ಇನ್ನೂ ಹೇಳಿರುವದೇನೆಂದರೆ—' ಈಗಿನ ಕಾಲದಲ್ಲಿ ವರ್ತಮಾನ ಪತ್ರಿಕೆಗೆ ಇರುವ ಶಕ್ತಿಯು ಬಹಳವಾಗಿದೆ. ಆದರೆ ಅದರ ಶಕ್ತಿಯು ಅದನ್ನು ನಡಿಸುವವನ ಶಕ್ತಿಯನ್ನು ಹೊಂದಿದೆ. ಆ ... ನಡಿಸುವವನ ನಡತೆಯು ಒಳ್ಳೇದಾಗಿದ್ದರೆ ರಾಜಕೀಯ ಮುಂದಾಳುಗಳಿಗಿಂತ ಹೆಚ್ಚಿಗೆ ಶಕ್ತಿಯು ಪತ್ರಿಕಾಕರ್ತನಲ್ಲಿ ಇರುತ್ತದೆ.' ದೇಶದ ರಾಜಕೀಯ ಚಳವಳಿಗಳಿಗೆಲ್ಲಾ ವೃತ್ತಾಂತಪತ್ರಿಕೆಗಳೇ ಆಧಾರವಾಗಿದೆ. ರಾಜಕೀಯ ಚಳವಳಿದ ಎಚ್ಚರವನ್ನು ಜನಸಮುದಾಯದಲ್ಲಿ ಹುಟ್ಟಿಸಬೇಕಾದರೆ ವೃತ್ತಾಂತಪತ್ರಿಕೆಗಳ ಸಹಾಯಬೇಕೇಬೇಕು. ಸರಕಾರದ ಗುಣದೋಷಗಳನ್ನಾದರೂ ಜನರಿಗೆ ತಿಳಿಸಿಕೊಡಲು ವೃತ್ತಾಂತಪತ್ರಿಕೆಗಳಿಗೆ ಇರುವ ಅನುಕೂಲ ಬೇರೆ ಯಾವ ಸಂಸ್ಥೆಗೂ ಇಲ್ಲ. ನಮ್ಮ ದೇಶದಲ್ಲಿ ಜನಸಮುದಾಯದಲ್ಲಿ ರಾಜಕೀಯ ಮತ್ತು ಸಾಮಾಜಿಕ ವಿಷಯಗಳಲ್ಲಿ ಜಾಗ್ರತೆಯು ಈ ಪತ್ರಿಕೆಯು ಜನ್ಮವೆತ್ತಿದನಂತರ ಬಹಳವಾಗಿ ಮುಂದುವರಿದಿದೆ ಎಂತ ನಾವು ಧೈರ್ಯವಾಗಿ ಹೇಳಬಲ್ಲೆವು.

ನಿಜವಾದ ವರ್ತಮಾನಗಳನ್ನು ಕೊಡುವದು ನಮ್ಮ ಕರ್ತವ್ಯವೆಂತ ನಾವು ಯಾವಾಗಲೂ ನೆನಪಿನಲ್ಲಿಟ್ಟುಕೊಂಡಿದ್ದೇವೆ. ನಾವು ಒಂದೊಂದಾವರ್ತಿ ಕೊಡುವ ವರ್ತಮಾನವು ಕೆಲವರಿಗೆ ಅಪ್ರಿಯವಾಗುವದರಿಂದ ಅವರು ನಮ್ಮ ಕರ್ತವ್ಯದ ಮೇಲೆ ನಮಗೆ ದೂಷಿಸುತ್ತಾರೆ. ರಾಜಕೀಯ ಮುಂದಾಳುಗಳೇ ಆಗಲೀ ಸರಕಾರಿ ಅಧಿಕಾರಿಗಳೇ ಆಗಲೀ ಮೇಲೆ ಮೇಲೆ ಒಂದಂತೆ ಜನರು ಅವರ ಕಾರ್ಯಗಳನ್ನು ಹೊಗಳಿ ನೋಡುತ್ತಿರುತ್ತಾರೆಂಬುದು ಎಲ್ಲರಿಗೂ ತಿಳಿದ ಸಂಗತಿಯಾಗಿದೆ. ಅಂಥಾ ಮುಖಂಡರು ಮಾಡುವ ಉತ್ಕೃಷ್ಟ ಕಾರ್ಯಗಳನ್ನು ಶ್ಲಾಘಿಸುವದೂ ಸಮಾಜಕ್ಕೆ ಕೆಡಕಾಗುವಂಥ ಕಾರ್ಯಗಳನ್ನು ನಿಂದಿಸುವದೂ ಜನರ ಸ್ವಭಾವವಾಗಿದೆ. ಹಾಗೆ ಮಾಡುವದು ಅವಶ್ಯವೂ ಇದೆ. ತನ್ನ ಪದವಿಯ ಜವಾಬ್ದಾರಿ ತನ್ನ ಕರ್ತವ್ಯವನ್ನು ಮರೆಯುವ ಸಂಭವವಿದೆ. ನಿರಾತಂಕವಾದ ಅಧಿಕಾರವುಳ್ಳವನಾಗಿ ಅವನಿಗೆ ಇರುವ ... ಜನಸಮುದಾಯದ ಟೀಕೆ, ಚಕ್ರವರ್ತಿಯಾದರೂ ತನ್ನ ಕಾರ್ಯಗಳಿಗೆ ಜನಸಮುದಾಯದವರ ... ಧರ್ಮತತ್ವ ನ್ಯಾಯಕ್ಕೆ ... ತಿಳಿದುಕೊಳ್ಳುತ್ತಾನೆ. ಸಮಾಜದಲ್ಲೇ ಆಗಲಿ ಜನಸಮುದಾಯದಲ್ಲೇ ಆಗಲೀ ಈ ಸಮುದಾಯದ ಟೀಕೆಗೆ ಮದ ... ಪ್ರತಿಯೊಬ್ಬ ವ್ಯಕ್ತಿಯೂ ತನ್ನ ಕರ್ತವ್ಯಗಳನ್ನು ಮಾಡುತ್ತಾನೆ. ಸಮುದಾಯದ ಅಭಿಪ್ರಾಯಗಳು ನಿಯಮಕ್ಕೆ ಒಳಪಡುವಂತೆ ನಡೆಯಬೇಕಾದ್ದು ಮುಂದಾಳುಗಳ ಮೇಲೆ ಇದೆ. ಸಮುದಾಯದವರು ತಮ್ಮ ಟೀಕೆಯನ್ನು ನ್ಯಾಯವಾಗಿ ಮಾಡಬೇಕಾದರೆ ಮುಂದಾಳುಗಳು ನಡಿಸುವ ಕೆಲಸಗಳ ನಿಜವಾದ ವರ್ತಮಾನ ಅವರಿಗೆ ದೊರಕುವಂತೆ ಮಾಡಬೇಕಾದದ್ದು ನಮ್ಮ ಕೆಲಸವಾಗಿದೆ.

ಎಲ್ಲಾ ಜಾತಿಗಳಲ್ಲೂ ಪಂಗಡಗಳು ಇರುವಾಗ ಒಂದೇ ಜಾತಿಯಲ್ಲಿ ಪಂಗಡಗಳು ಹೆಚ್ಚುವಂತೆ ನಾವು ಸಹಾಯ ಮಾಡುತ್ತೇವೆಂತ ನಮ್ಮ ಮೇಲೆ ಇನ್ನೊಂದು ಆಕ್ಷೇಪಣೆ ಉಂಟು. ಯಾವ ಸಮಾಜಗಳಲ್ಲೇ ಆಗಲೀ ಪಂಗಡಗಳು ಬಂದಾಗ ಅಂಥಾ ಪಂಗಡಗಳನ್ನು ಹೋಗಲಾಡಿಸಲಿಕ್ಕೆ ನಾವು ಪ್ರಯತ್ನಿಸುತ್ತೇವೆಯೇ ಹೊರತು ಪಂಗಡವನ್ನು ಹೆಚ್ಚಿಸಲು ನಾವು ಎಂದೂ ಸಹಾಯಕರಾಗುವದಿಲ್ಲ. ಯಾವ ಸಮಾಜದಲ್ಲೇ ಆಗಲೀ ಇರುವ ಪಂಗಡಗಳಿಗೆ ಕಾರಣಗಳನ್ನು ಸಮಾಜದವರೆಲ್ಲರೂ ಸರಿಯಾಗಿ ತಿಳಿದುಕೊಂಡರೆ ಅಂಥಾ ಪಂಗಡಗಳನ್ನು ಹೋಗಲಾಡಿಸಿಕೊಳ್ಳಲು ಅನುಕೂಲವಾಗುತ್ತದೆ. ಪಂಗಡ ಭೇದಗಳಿಗೆ ಮೂಲ ಕಾರಣವು ಅತಿ ಸ್ವಲ್ಪವಾದರೂ ಅದರ ಮೇಲೆ ಬೆಳೆಯುವ ಮನಸ್ತಾಪಗಳಿಂದ ಮೂಲ ಕಾರಣವನ್ನು ಮರೆಯುವ ಸಂಭವವಿದೆ. ಅದ್ದರಿಂದ ಅಂಥಾ ಮೂಲ ಕಾರಣಗಳನ್ನು ಸಮುದಾಯಕ್ಕೆ ತಿಳಿಸಿಕೊಡಬೇಕಾದದ್ದು ಸಮುದಾಯದ ಹಿತಚಿಂತಕರ ಕರ್ತವ್ಯವಾಗಿದೆ. ಈ ಧ್ಯೇಯಕ್ಕಿಂತ ಹೆಚ್ಚಿಗೆ ನಾವೇನೂ ಮಾಡಲಿಲ್ಲ.

ನಮ್ಮ ಲೇಖನಿಯು ಬಲ ಕೆಲವರ ಹೇಳಿಕೆಯಲ್ಲಿದೆ ಎಂತ ನಮ್ಮ ಮೇಲೆ ಇನ್ನೊಂದು ಆಕ್ಷೇಪವಾಗಿದೆ. ಬಲ ಕೆಲವರ ಹೇಳಿಕೆಗೆ ನಾವು ಒಳಗಾಗಲಿಲ್ಲವೆಂಬ ಕಾರಣದಿಂದಲೇ ನಮ್ಮ ಮೇಲೆ ಈ ಆಕ್ಷೇಪವನ್ನು ಹೊರಿಸುವದಾಗಿದೆ. ದೇವರಿಗೆ ಹೆದರಿ ನಾವು ಕೆಲಸ ಮಾಡುತ್ತಿದ್ದೇವೆಯೇ ಹೊರತು ಬಲ ಕೆಲವರ ಬೆದರಿಕೆಗೆ ನಾವು ಬೆದರಲಿಲ್ಲ. ಇದೇ ನಮ್ಮ ತಪ್ಪಾಗಿದೆ. ಸಮುದಾಯದ ಹಿತಕ್ಕಾಗಿಯೇ ನಾವು ಹಗಲಿರುಳು ಹೋರಾಡಲು ತಯಾರಿದ್ದೇವೆ. ಇದೇ ನಮ್ಮ ಸ್ವಾರ್ಥತೆ. ಜನಸಮುದಾಯವು ಸ್ವಾರ್ಥಪರರ ಬೋಧನೆಗೆ ಒಳಗಾಗದೆ, ಜನಸಮುದಾಯವು ತನ್ನ ಕ್ಷೇಮವನ್ನು ಅರಿತುಕೊಂಡು ಅದಕ್ಕಾಗಿ ಹೋರಾಡಬೇಕೆಂತ ನಾವು ಬೋಧಿಸುತ್ತೇವೆ. ಇದು ಸ್ವಾರ್ಥಪರರ ಬಳಸಂಚುಗಳಿಗೆ ಕುಂದಕವಾಗುವದರಿಂದ ಇದೇ ಆ ಸ್ವಾರ್ಥಪರರಿಗೆ ಮೋಸವಾಗಿ ತೋರುತ್ತದೆ. ಇದಲ್ಲದೆ ಬೇರೆ ಯಾವ ರೀತಿಯಿಂದಲೂ ನಾವು ಸ್ವಾರ್ಥತೆಯನ್ನು ಅರಸಿ ಯೋಚಿಸಿರುವದಿಲ್ಲ, ಮೋಸಮಾಡಲು ಯೋಚಿಸಿರುವದಿಲ್ಲ. ಈ ದುರ್ಗುಣಗಳಿರುವ ಯಾವ ಮುಂದಾಳೇ ಆಗಲೀ ಪತ್ರಿಕಾಕರ್ತರೇ ಆಗಲೀ ಬಹುಕಾಲ ಜನಸಾಮಾನ್ಯದ ಪ್ರೀತಿಗೆ ಪಾತ್ರರಾಗರು.

ಇಷ್ಟುಕಾಲ ದೇಶಸೇವೆ ಮಾಡಲು ನಮಗೆ ಎಡೆಕೊಟ್ಟದಕ್ಕೆ ನಮ್ಮ ಎಲ್ಲಾ ಪೋಷಕರಿಗೂ ಅಭಿನಂದಿಸುತ್ತೇವೆ. ಇನ್ನು ಮುಂದೆ ಸಹ ಜನಸಮುದಾಯದವರೆಲ್ಲರೂ ತಮ್ಮ ಅಭಿಪ್ರಾಯವನ್ನು ಈ ಪತ್ರಿಕೆಗೆ ಕೊಟ್ಟು ಸಹಾಯ ಮಾಡಬೇಕೆಂತ ಕೇಳಿಕೊಳ್ಳುತ್ತೇವೆ. ಈಚೆಗೆ ನಮ್ಮ ಇರುವಿಕೆಯನ್ನೇ ನಾಶಗೊಳಿಸಬೇಕೆಂತ ನಾಡಿಕಾರರು ಕೆಲವರು ಪ್ರಯತ್ನಿಸುತ್ತಿದ್ದಾರೆಂದು ತಿಳಿದು ಬರುತ್ತದೆ. ಆದರೆ ದೇವರು ಮೆಚ್ಚುವ ಕೆಲಸ ನಾವು ಮಾಡುತ್ತಿರುವಷ್ಟು ಕಾಲ ಜಗದೀಶ್ವರನ ಸಹ ಪ್ರಯತ್ನದಿಂದ ನಮ್ಮ ಜೀವಕ್ಕೇನೂ ಹಾನಿ ಬರಲಾರದೆಂತ ನಾವು ನಂಬುತ್ತೇವೆ. ಈ ರೀತಿ ಕೆಡಕನ್ನು ಯೋಚಿಸುವವರ ಬೋಧನೆಗೆ ನಮ್ಮ ಪೋಷಕರು ಒಳಗಾಗದೆ ಈ ವರೆಗಿನಂತೆಯೇ ಜನತೆಯ ಸೇವೆಗೆ ನಮಗೆ ಅನುಕೂಲ ಕೊಡಬೇಕೆಂತ ಕೋರುತ್ತೇವೆ.

ಖಾದಿ.

ಇದು ಅವರ್ಣ್ಯ ಅನೇಕರಿಗೆ ತಿಳಿಯದೆ ಇರುವದು. ಕೈರಾಟೆಯಿಂದ ಹತ್ತಿಯಲ್ಲಿ ನೂಲು ತೆಗೆದು ಕೈಮಗ್ಗದಲ್ಲಿ ನೆಯ್ದ ಬಟ್ಟೆಗೆ ಖಾದಿಯೆನ್ನುವುದೇ ಹೊರತು, ಮಿಲ್ಲಿನಲ್ಲಿ ಆದ ದಪ್ಪ ನೂಲಿನ ಬಟ್ಟೆಯು ಖಾದಿ ಎನ್ನಿಸಲಾರದು. ಕೆಲವರು ಇಂಥ ದಪ್ಪ ಬಟ್ಟೆಯನ್ನು ಹಾಕಿಕೊಂಡು ತಾವೂ ಖಾದಿಬಟ್ಟೆಯನ್ನು ಧರಿಸಿದೆವೆಂದುಕೊಳ್ಳುವರು. ಕೆಲವರು ಖಾದಿಯನ್ನು ಯಾಕೆ ಹಾಕಬೇಕು? ಅದರಿಂದ ಪ್ರಯೋಜನವೇನು? ಅದರ ಬೆಲೆ ಬಹಳ ಹೆಚ್ಚು! ಅದು ಕಮ್ಮಿ ಬೆಲೆಗೆ ಸಿಕ್ಕಿದರೆ ನಾವೂ ಹಾಕುತ್ತೇವೆ. ಅದು ಬಹು ದಪ್ಪ. ಇನ್ನು ಸ್ವಲ್ಪ ತೆಳುವಾಗಿದ್ದರೆ ಚೆನ್ನಾಗಿತ್ತು. ವಿದೇಶಿ ಬಟ್ಟೆಯನ್ನು ಯಾಕೆ ಹಾಕಬಾರದು, ಎಂಬ ಅನೇಕ ಬಗೆಯ ಪ್ರಶ್ನೆಗಳನ್ನು ಹಾಕಿ ಆಕ್ಷೇಪಿಸುವರು. ಮೇಲೆ ಹೇಳಿದ ಖಾದಿಯು ಅರ್ಥಪ್ರಧಾನ ಮತ್ತು ಸಾಂಪತ್ತಿಕ ದೃಷ್ಟಿಯಿಂದ ಅದರ ಪ್ರಯೋಜನವು ಪರದೇಶಿ ಮತ್ತು ಮಿಲ್ಲಿನ ಬಟ್ಟೆಗಳು ತಯಾರಾಗುವಿಕೆಯಲ್ಲಿ ನಡೆಯುವ ಪಾಪಕಾರ್ಯಗಳೂ ಮತ್ತು ನಮ್ಮವರಿಗೆ ಸಂಭವಿಸುವ ದುರಂತ ಕಷ್ಟಗಳೂ ತಿಳಿಯದ್ದರಿಂದ ಇಂಥ ಪ್ರಶ್ನೆಗಳು ಬರಲು ಕಾರಣವಾಗುವವೆಂದು ಹೇಳಬಹುದು. ಈಗ ಪ್ರಾಪ್ತವಾಗಿರುವ ಬಡತನ, ರೋಗ ಮುಂತಾದುವುಗಳು ಯಾತರಿಂದ ಹುಟ್ಟಿದುವೆಂದರೆ ನಮ್ಮ ದೇಶದ ಕೈಗಾರಿಕೆಗಳು ಹಾಳಾಗಿ ಮಿಲ್ಲುಗಳು ಪ್ರಾರಂಭವಾದ್ದರಿಂದಲೇ ಪ್ರಾಪ್ತವಾಯಿತೆಂದು ಧೈರ್ಯವಾಗಿ ಹೇಳಬಹುದು. ಪೂರ್ವದಲ್ಲಿ ನಮ್ಮ ಹಳ್ಳಿಯವರು ಮುಖ್ಯವಾಗಿ ವ್ಯವಸಾಯದಿಂದಲೇ ಜೀವಿಸುತ್ತಿದ್ದರು. ಗಂಡಸರು ಹೊಲಗಳಲ್ಲೂ ಗದ್ದೆಗಳಲ್ಲೂ ಕೆಲಸಮಾಡಿ ಮನೆಗೆ ಬೇಕಾದಷ್ಟು ದವಸಧಾನ್ಯಗಳನ್ನು ಬೆಳೆಯುತ್ತಿದ್ದರು. ಹೆಂಗಸರಾದರೂ ಮನೆಯ ಕೆಲಸಗಳನ್ನು ಮುಗಿಸಿಕೊಂಡು ಕೈರಾಟೆಗಳಲ್ಲಿ ಮನೆಗೆ ಬೇಕಾದಷ್ಟು ಬಟ್ಟೆಗೆ ದಾರವನ್ನು ಮಾಡುತ್ತಿದ್ದರು. ಇದರಿಂದ ಹೊಟ್ಟೆಗೂ ಬಟ್ಟೆಗೂ ಯಾವ ಯೋಚನೆಯೂ ಇಲ್ಲದೆ ಸುಖದಿಂದಿದ್ದರು. ಈಚೆಗಾದರೋ ಈ ಮಿಲ್ಲುಗಳಿಗೂ ಪರದೇಶಕ್ಕೂ ನಮ್ಮ ದೇಶದ ಹತ್ತಿಯು ರಫ್ತಾಗಿಹೋಗುವದರಿಂದ ಹತ್ತಿಯ ಕಿರೀಡಿಯು ಜಾಸ್ತಿಯಾಗಿ ಎಲ್ಲರೂ ಹಣದಿಂದ ಬೆಳೆಯೆಂದು ಹತ್ತಿಯು ಬೆಳೆಯನ್ನೇ ಪ್ರಾರಂಭಿಸಿದರು. ಇದರಿಂದ ದವಸಧಾನ್ಯಗಳು ಬೆಳೆಯುವದು ಕಡಿಮೆಯಾಗಿ ನಮ್ಮ ಒಕ್ಕಲಿಗರು ಹೊಟ್ಟೆಗಿಲ್ಲದೆ ಹಳ್ಳಿಯನ್ನು ಬಿಟ್ಟು ದೊಡ್ಡ ಪಟ್ಟಣಗಳಿಗೆ ಬಂದು ಮಿಲ್ಲುಗಳಿಗೆ ಕೂಲಿಗರಾಗಿ ಸೇರಬೇಕಾಯಿತು.

"ಪರೋಪಕಾರವೇ ಪುಣ್ಯ, ಪರಪೀಡೆಯೇ ಪಾಪ" ಎಂಬುದು ಎಲ್ಲಾ ಧರ್ಮಗಳ ತತ್ವವಷ್ಟೆ! ಈ ತತ್ವವನ್ನನುಸರಿಸಿದರೂ ಮಿಲ್ಲಿನಲ್ಲಾದ ಪರದೇಶಿಬಟ್ಟೆಗೂ ಇರುವ ವ್ಯತ್ಯಾಸವನ್ನು ನೋಡುವಲ್ಲಿ ಮಿಲ್ಲುಗಳು ಬೆಂಕಿಯಿಂದ ಅಥವಾ ಹಬೆಯ ಸಹಾಯದಿಂದ ನಡೆಯುವದರಿಂದ ಅದರ ವಾರಣದಲ್ಲಿ ಅನೇಕ ಕ್ರಿಮಿಕೀಟಗಳು ಮತ್ತು ಪ್ರಾಣಿಗಳು ಸಾಯುವವು. ಹೀಗೆ ಮೊದಲೇ ಪಾಪವು ಪ್ರಾರಂಭವಾಯಿತು. ಮೇಲೆ ಹೇಳಿದಂತೆ ಈ ಮಿಲ್ಲುಗಳ ಕೆಲಸಕ್ಕಾಗಿ ಹಳ್ಳಿಯವರು ವ್ಯವಸಾಯ ವೃತ್ತಿಯನ್ನು ಬಿಟ್ಟು ನಾನಾ ಹೆಂಗಸರೂ ಗಂಡಸರೂ ಬಂದು ಸೇರಿದ್ದರಿಂದ ಈ ಕೆಲಸಕ್ಕೆ ಸಿಕ್ಕಿ ದುಡಿದು ದುಡಿದು ಎಂಥಾ ಹೀನಸ್ಥಿತಿಗೆ ಬಂದದ್ದನ್ನು ನೋಡಬಹುದು ಮತ್ತು ಅಲ್ಲಿ ಅವರಿಗೆ ಅನೇಕ ದುರಾಚಾರಗಳಿಂದ ರೋಗಗ...

(4 ನೇ ...

ಮಹಾತ್ಮಗಾಂಧಿಯವರ ಸ್ವಚರಿತ್ರೆ.

(ಕಳೆದ ವಾರದಿಂದ ಮುಂದುವರಿದದ್ದು)

18 ನೆಯ ಪ್ರಕರಣ

ಶಾಕಾಹಾರ[illegible]ಸಿಸ್ವರು ನನ್ನನ್ನು ಕೂಡ ಒಬ್ಬ ಕಾರ್ಯ[illegible]ಹಕ ಸಂಘಸದಸ್ಯನನ್ನಾಗಿ ತೆಗೆದುಕೊಂಡರು. ನಾನು ಪ್ರತಿ ಸಭೆಗೂ ತಪ್ಪದೇ ಹೋಗುತ್ತಿದ್ದೆನಲ್ಲದೆ ಬಾಯಿಬಿಟ್ಟು ಮಾತನಾಡಲು ಮಾತ್ರ ಧೈರ್ಯವಿರಲಿಲ್ಲವು. "ನೀನು ನನ್ನೊಡನೆ ಮಾತನಾಡುವಾಗ್ಗೆ ಇಷ್ಟು ಚೆನ್ನಾಗಿ ಮಾತನಾಡುತ್ತೀಯೆಲ್ಲಾ ಸಭೆಯಲ್ಲಿ ಮಾತ್ರ ಒಂದು ದಿವಸವಾದರೂ ಬಾಯಿಬಿಡಲಿಲ್ಲವೇಕೆ? ನೀನು ಸಮಯದಲ್ಲಿ ಕೆಲಸಕ್ಕೆ ಬರತಕ್ಕವನಲ್ಲವು' ಎಂದು ಒಂದುಸಾರಿ ಡಾಕ್ಟರ್ ಓಲ್ಡ್‌ಫೀಲ್ಡ್‌ರವರು ನನ್ನನ್ನು ಮೂದಲಿಸಿದರು. ಡ್ರೋನ್ ಅಂದರೆ ಸೋಮಾರಿ ನೊಣವರು. ಈ ನೊಣವರು ಸಾಧಾರಣವಾಗಿ ಹಗಲೆಲ್ಲ ವಿರಾಮವಿಲ್ಲದಂತೆ ಕೆಲಸಮಾಡುತ್ತಲೇ ಇರುವರು. ಆದರೆ ರಾಣಿಯೇ ಈ ಸಭೆಯಲ್ಲಿ ಇತರರೆಲ್ಲರೂ ಸತತ[illegible] ವಾಗ್ಗೆ ನಾನು ಮಾತ್ರ ಮೂಗನಂತೆ ಕೂತುಕೊಂಡಿರುವುದರಿಂದಲೇ ಅವರು ಹಾಗೆ ಹಾಸ್ಯಮಾಡಿದರು. ನನಗೆ ಮಾತನಾಡಬೇಕೆಂದ ಬುದ್ಧಿ ಹುಟ್ಟದೆ ಇರಲಿಲ್ಲವಾದರೂ ನನ್ನ ಅಭಿಪ್ರಾಯವನ್ನು ಹೇಗೆ ತಿಳಿಸಬೇಕೆಂಬುದು ನನಗೆ ಗೊತ್ತಾಗದಿದ್ದಿತು. ಉಳಿದವರೆಲ್ಲರಿಗೂ ವಿಷಯವು ಚೆನ್ನಾಗಿ ತಿಳಿದಿದ್ದಿತೆಂದೂ, ನನಗೆ ಮಾತ್ರ ಹೊಸ ವಿಷಯವು ತಿಳಿಯದೆಂದೂ ನನಗೆ ತೋರುತ್ತಿದ್ದಿತು. ಹೇಗೋ ಮಾತನಾಡಬೇಕೆಂದು ನಾನು ಧೈರ್ಯವನ್ನು ಮಾಡಿದ ಕೂಡಲೆ ವಿಷಯವು ಮರೆತುಹೋಗುತ್ತಿದ್ದುದರಿಂದ ತೆಪ್ಪಗಿರಬೇಕಾಗುತ್ತಿತ್ತು. ಒಂದು ವೇಳೆ ಬಹು ಮುಖ್ಯ ವಿಷಯವನ್ನು ಚರ್ಚಿಸಬೇಕಾಗಿದ್ದುದರಿಂದ ಆ ಸಭೆಗೆ ಹೋಗದೆ ತಪ್ಪಿಸಿಕೊಳ್ಳಲಾಗಲಿಲ್ಲ. ಸುಮ್ಮನೆ ಮತ ಕೊಡದಿರುವುದು ಹೇಡಿತನವು. ದೊಡ್ಡ ವ್ರತನಾವಿಕ ಕಂಪೆನಿಯ ಅಧ್ಯಕ್ಷರಾದ ಹಿಲ್ಸ್‌ರವರು ಸಂಘಕ್ಕೆ ಅಧ್ಯಕ್ಷರು. ಅವರು ಪ್ಯೂರಿಟನ್ನರು ಅಂದರೆ ನೈತಿಕಾಭಿಮಾನಿ. ಅವರೇ ಮುಖ್ಯವಾಗಿ ಸಂಘಕ್ಕೆ ಧನಸಹಾಯವನ್ನು ಮಾಡುತ್ತಿದ್ದವರು. ಸಭೆಯಲ್ಲಿ ಅನೇಕರು ಅವರನ್ನು ಅನುಸರಿಸುತ್ತಿದ್ದರು. ಶಾಕಾಹಾರವಿಷಯದಲ್ಲಿ ಸುಪ್ರಸಿದ್ಧರಾದ ಡಾಕ್ಟರ್ ಅಲ್ಲಿನ್ಸನ್ನರವರು ಕೂಡ ಶಾಕಾಹಾರಪ್ರಚಾರಕ ಸಂಘಕ್ಕೆ ಒಬ್ಬ ಮೆಂಬರರಾಗಿದ್ದರು. ಆಗ ಸಂತಾನನಿರೋಧ ಸಮಸ್ಯೆಯು ಹೊಸದಾಗಿ ಹುಟ್ಟಿತ್ತು. ಆ ವಿಚಾರದಲ್ಲಿ ಅಲ್ಲಿನ್ಸನ್ನರವರು ಅಭಿಮಾನವುಳ್ಳವರಾಗಿದ್ದರು. ಅದನ್ನು ಕುರಿತು ಅವರು ಸಾಮಾನ್ಯ ಜನರಿಗೆ ಬೋಧಿಸುತ್ತಿದ್ದರು. ಈ ಸಂತಾನನಿರೋಧಪದ್ಧತಿಯು ನೀತಿಗೆ ಬಹಳ ಭಂಗಕಾರವೆಂದು ಹಿಲ್ಸ್‌ರವರ ಅಭಿಪ್ರಾಯವು. ಶಾಕಾಹಾರ ಸಂಘವು ಆಹಾರವಿಷಯದಲ್ಲಿ ಮಾತ್ರವಲ್ಲದೆ ನೀತಿವಿಷಯದಲ್ಲೂ ಕೂಡ ಕೆಲಸಮಾಡಬೇಕಾಗಿದ್ದುದರಿಂದ ಇಂತಹ ವಿಪರೀತಭಾವವುಳ್ಳ ಅಲ್ಲಿನ್ಸನ್ನರವರಂತಹವರು ಸಂಘದಲ್ಲಿರಲು ಅರ್ಹರಲ್ಲವೆಂದು ಹಿಲ್ಸ್‌ರವರು ಹೇಳಿದರು. ಆದ್ದರಿಂದ ಅವರನ್ನು ತೆಗೆದುಹಾಕಲು ಒಂದು ತೀರ್ಮಾನವು ಉಪಪಾದಿಸಲ್ಪಟ್ಟಿತು. ನಾನೂ ಹಿಲ್ಸ್‌ರವರ ಕೂಡ ಸೇರಿಕೊಂಡೆನು. ಅಲ್ಲಿನ್ಸನ್ನರವರ ಅಭಿಪ್ರಾಯವು ಬಹಳ ಹಾನಿಕರವೆಂದು ಭಾವಿಸಿದೆನಾದುದರಿಂದ ಹಿಲ್ಸ್‌ರವರು ಅಲ್ಲಿನ್ಸನ್ನರವರಿಗೆ ಪ್ರತಿಕೂಲವಾಗಿರುವುದು ನ್ಯಾಯವೆಂದೇ ನಾನು ತಿಳಿದೆನು. ಹಿಲ್ಸ್‌ರವರ ಔದಾರ್ಯಕ್ಕಾಗಿ ಅವರಲ್ಲಿ ನನಗೆ ಬಹಳ ಗೌರವವುಂಟಾಗಿದ್ದಿತು. ಆದರೆ ನೀತಿವಿಷಯದಲ್ಲಿ ಭಿನ್ನಾಭಿಪ್ರಾಯವುಳ್ಳ ಮಾತ್ರಕ್ಕೆ ಒಬ್ಬ ಮೆಂಬರನನ್ನು ಶಾಕಾಹಾರ ಸಂಘದಿಂದ ಹೊರಡಿಸುವುದು ನ್ಯಾಯವಲ್ಲವೆಂದು ತೋರಿತು. ಹಿಲ್ಸ್‌ರವರು ನೈತಿಕಾಭಿಮಾನಿಯಾದುದರಿಂದ ಅವರಿಗೆ ವ್ಯಕ್ತಿಸಂಬಂಧವಾಗಿ ಆಕ್ಷೇಪವು ಇದ್ದರೂ ಇರಬಹುದೇ ಹೊರತು ಆ ಸಂಘದ ಉದ್ದೇಶಕ್ಕೆ ಸಂಬಂಧಪಟ್ಟುದಲ್ಲ. ಶಾಕಾಹಾರವನ್ನು ವಿಸ್ತರಿಸುವುದೇ ಸಂಘದ ಉದ್ದೇಶವಲ್ಲದೆ ನೀತಿಬೋಧಕವಲ್ಲವು. ಅದುದರಿಂದ ಬೇರೆ ಅಭಿಪ್ರಾಯವು ಹೇಗಿದ್ದರೂ ಶಾಕಾಹಾರಿಗಳಾದವರೆಲ್ಲರೂ ಈ ಸಂಘದ ಮೆಂಬರರಾಗಲು ಅರ್ಹರೇ ಎಂದು ನಾನು ಭಾವಿಸಿದೆನು.

ಈ ವಿಷಯದಲ್ಲಿ ಸಂಘದ ಕೆಲವು ಮೆಂಬರುಗಳು ಕೂಡ ನನ್ನೊಡನೆ ಏಕೀಭವಿಸಿದರು. ಅವರೂ ನಾನೇ ಮಾತನಾಡಬೇಕೆಂದು ನಿಶ್ಚಯಿಸಿದರು. ಅದು ಹೇಗೆ ಸಾಧ್ಯವಾಗುವುದು? ನನಗೆ ಧೈರ್ಯವಾಗಲಿಲ್ಲ. ಆದ್ದರಿಂದ ಬರೆದುಕೊಂಡು ಹೋದೆನು. ಬರೆದಿದ್ದುದನ್ನು ಕೂಡ ನಾನು ಓದಲಾರದವನಾದುದರಿಂದ ಅಧ್ಯಕ್ಷರ ವಶಕ್ಕೆ ಕೊಟ್ಟೆನು. ಅವರು ಇನ್ನೊಬ್ಬರಿಂದ ಓದಿಸಿದರಾದರೂ ಅಲ್ಲಿನ್ಸನ್ನರವರನ್ನು ಹೊರಡಿಸಬೇಕೆಂಬ ತೀರ್ಮಾನವು ಅನುಮೋದಿಸಲ್ಪಟ್ಟಿತು. ಮೊದಲನೆಯ ಪ್ರಯತ್ನದಲ್ಲೇ ನನಗೆ ಪರಾಜಯವಾಯಿತಾದರೂ ನನ್ನ ಅಭಿಪ್ರಾಯವು ಸರಿಯಾದುದೆಂಬ ಸಮಾಧಾನವು ಮಾತ್ರ ನನಗುಂಟಾಗಿದ್ದಿತು. ಅನಂತರ ನಾನು ಕಾರ್ಯನಿರ್ವಾಹಕ ಸಂಘದ ಮೆಂಬರುತನಕ್ಕೆ ರಾಜೀನಾಮೆಕೊಟ್ಟೆನೆಂಬ ಜ್ಞಾಪಕವಿದೆ. ನಾನು ಆಂಗ್ಲದೇಶದಲ್ಲಿದ್ದಷ್ಟು ಕಾಲ ನನಗೆ ಆ ಹೇಡಿತನವು ಹೋಗಲಿಲ್ಲವು. ಸ್ನೇಹಿತರ ಮನೆಗೆ ಹೋದರೂ ಕೂಡ ಹತ್ತು ಜನರು ಸೇರಿದ್ದರೆ ನನಗೆ ಮಾತನಾಡಲಾಗುತ್ತಿರಲಿಲ್ಲ. ನಾನು ಒಂದುವೇಳೆ ಮಜುಂದಾರರೊಡನೆ ಹೋದೆನು. ಅಲ್ಲಿ ಒಂದು ಶಾಕಾಹಾರ ಕುಟುಂಬದಲ್ಲಿಳಿದುಕೊಂಡೆವು. ದಿ ಎಥಿಕ್ಸ್ ಆಫ್ ಡಯಟ್ ಎಂಬ ಗ್ರಂಥವನ್ನು ರಚಿಸಿದ ಹೋವರ್ಡ್‌ರವರೂ ಅಲ್ಲೇ ವಾಸಿಸುತ್ತಿದ್ದರು. ಎಂಟನರು ಆರೋಗ್ಯಸ್ಥಳವು. ನಾನು ಹೋದದ್ದನ್ನು ನೋಡಿ ಮಾತನಾಡಿ ಶಾಕಾಹಾರಪ್ರಚಾರಕ್ಕಾಗಿ ಒಂದು ಸಭೆಯನ್ನು ಏರ್ಪಡಿಸಿದೆನು. ಆ ಸಭೆಯಲ್ಲಿ ಮಾತನಾಡಲೇಬೇಕೆಂದು ಅವರು ನನಗೆ ಹೇಳಿದರು. ಅಂತಹ ಸಭೆಯಲ್ಲಿ ಬರೆದು ಓದುವುದು ತಪ್ಪಲ್ಲವೆಂದು ನಾನು ತಿಳಿದೆನು. ಅನೇಕರು ಹಾಗೆಯೇ ಮಾಡುತ್ತಾರೆ. ನಾನು [illegible]ಕೊಳ್ಳದೆ ಮಾತನಾಡುವುದು ಅಸಂಭವವಾದುದರಿಂದ ನಾನಾಡಬೇಕೆಂದಿದ್ದ ವಿಷಯವನ್ನು ಬರೆದುಕೊಂಡು ಹೋದೆನು. ಅದು ಒಂದು ಪುಟ್ಟ ಕಾಗದಕ್ಕಿಂತ ಹೆಚ್ಚಾಗಿರಲಿಲ್ಲವಷ್ಟೆ. ನಾನು ಸಭೆಯಲ್ಲಿದ್ದು ನಿಂತುಕೊಂಡ ಕೂಡಲೆ ನನ್ನ ಕಣ್ಣುಗಳು ಮಂಜಾದುವು, ಶರೀರವೆಲ್ಲವೂ ನಡುಗಲಾರಂಭಿಸಿತು. ಅಲ್ಲದೆ ಬಾಯಿಯೇ ಬಿಡಲಿಲ್ಲವು. ಆದಕಾರಣ ನನ್ನ ಮುಜುಂದಾರರೇ ಓದಿದರು. ಅವರು ಪ್ರತ್ಯೇಕವಾದ ಉಪನ್ಯಾಸವನ್ನು ಮಾಡಿದಾಗ ಸಭಿಕರು ಹರ್ಷಧ್ವನಿಮಾಡಿದರು. ಆಗ ನನಗೆ ಬಹಳ ಲಜ್ಜೆಯುಂಟಾಯಿತು. ಈ ಪಾಪಿಷ್ಟ ನಾಚುಗೆಯು ನನಗೇಕೆ ಉಂಟಾಯಿತೆಂದು ಬಹಳವಾಗಿ ಚಿಂತಿಸಿದೆನು.

ಕಡೆಯಸಾರಿ ನಾನು ಆಂಗ್ಲದೇಶವನ್ನು ಬಿಟ್ಟು ಭರತಖಂಡಕ್ಕೆ ಹೊರಡುವಾಗಲೂ ಪುನಃ ಒಂದು ಸಭೆಯಲ್ಲಿ ಮಾತನಾಡಲು ಪ್ರಯತ್ನಿಸಿದೆನು. ಆ ಸಾರಿಯೂ [illegible] ಆಭಾಸವಾಯಿತು. ಶಾಕಾಹಾರಿಗಳಾದ ಮಿತ್ರರೆಲ್ಲರನ್ನೂ [illegible] ರೆಸ್ಟೋರೆಂಟಿನಲ್ಲಿ ಶಾಕಾಹಾರ ಔತಣಮಾಡಿಸಲೋಸುಗ ಅವರನ್ನು ಆಹ್ವಾನಿಸಿದೆನು. ಅದು ಶಾಕಾಹಾರಹೋಟೆಲಲ್ಲವಾದರೂ ನಾನು ಮೇನೇಜರಿಗೆ ಹೇಳಿ ಶಾಕಾಹಾರ ಊಟವನ್ನೇರ್ಪಡಿಸಿದೆನು. ನನ್ನ ಸ್ನೇಹಿತರು ಈ ಹೊಸ ಪದ್ಧತಿಗೆ ಬಹಳ ಸಂತೋಷಪಟ್ಟರು. ಔತಣವು ವಿಷಯಸುಖಕ್ಕಾಗಿಯೇ ಆದರೂ ಪಾಶ್ಚಾತ್ಯರ ಔತಣದಲ್ಲಿ ಬಹು ಶ್ರೇಷ್ಠವಾಗಿರುವ ಸಂಯುಕ್ತ ಅಲ್ಲಿ ಬಹಳ ವೈಭವದಿಂದ ಸಂಗೀತ [illegible] ವಿನೋದಗಳಿಂದ ಸಂತೋಷ ಕೂಟವು ನಡೆಯುವುದುಂಟು. ನಾನು ಕೊಂಡ ಜನರನ್ನೇ ಆಹ್ವಾನಿಸಿ[illegible] ಉಪನ್ಯಾಸವು ಯಥಾಪ್ರಕಾರ ಒದಗಿತು. ನನ್ನ ಸರದಿಯು ಬಂದಾಗ ನಾನು ಎದ್ದು ನಿಂತುಕೊಂಡೆನು. ಸ್ವಲ್ಪ ಮಾತನಾಡಬೇಕೆಂದು ಯೋಚಿಸಿದೆನಾದರೂ ಒಂದು ವಾಕ್ಯವನ್ನು ಮಾತ್ರ ಹೇಳುವಷ್ಟರಲ್ಲಿ ನನಗೆ ವಾಗ್ಬಂಧವಾಯಿತು. ವಿನೋದಕರವಾಗಿ ಮಾತನಾಡುವುದಕ್ಕೆ ಯತ್ನಿಸಿ ಹ್ಯಾಡಿಸನ ಅನುಕರಣಮಾಡಿಕೊಂಡೆನು. ನೀವು ದಯೆಯಿಟ್ಟು ಬಂದುದಕ್ಕಾಗಿ ವಂದಿಸುತ್ತೇನೆಂದು ಹೇಳಿ ಕುಳಿತುಕೊಂಡೆನು. ಅನಂತರ ಆಡಿಸನ್‌ರವರು ಹೌಸ್ ಆಫ್ ಕಾಮನ್ಸ್‌ನಲ್ಲಿ ಮೊದಲನೆಯಸಾರಿ ಮಾತನಾಡುವಾಗ್ಗ ನಾನು ನಾನು ನಾನು ಎಂದು ಮೂರುಸಾರಿ ಹೇಳಿದರು. ಅದರ ಮೇಲೆ ಮಾತೇ ಹೊರಡಲಿಲ್ಲವು. ಅದನ್ನು ನೋಡಿ ಒಬ್ಬನು ಎದ್ದು ಇವರ ಮೂರು ಮಾತಿನಿಂದಲೂ ಏನೂ ಹುಟ್ಟಿದುದೂ ಕಾಣುಬರಲಿಲ್ಲವೆಂದು ಪರಿಹಾಸಮಾಡಿದನು. ಆ ಕಥೆಯನ್ನು ಕುರಿತು ಹಾಸ್ಯರಸಪ್ರಧಾನವಾಗಿ ಮಾತನಾಡಬೇಕೆಂದು ಅಪೇಕ್ಷಿಸಿದೆನಾದರೂ ಹಾಗೆ ಮಾಡಲಾರದೆ ಹೋದೆನು.

ನನಗೆ ಈ ನಾಚುಗೆಯು ಯಾವಾಗಲೂ ಪೂರ್ತಿಯಾಗಿ ಹೋಗಲಿಲ್ಲವಾದರೂ ದಕ್ಷಿಣಆಫ್ರಿಕೆಯಲ್ಲಿ ಬಹಳಮಟ್ಟಿಗೆ ಕಡಿಮೆಯಾಯಿತು. ಸರಾಗವಾಗಿ ನಾನು ಮಾತನಾಡಲಾರೆನು. ಹೊಸಬರನ್ನು ಕಂಡಲ್ಲಿ ನನಗೆ ಬಹಳ ಸಂಕೋಚವಾಗುವುದರಿಂದ ನಾನು ಅವರ ಕೂಡ ಮಾತನಾಡಲು ತಪ್ಪಿಸಿಕೊಳ್ಳುವುದಕ್ಕೆ ಪ್ರಯತ್ನಿಸುವೆನು. ಈಗಲಾದರೂ ಸ್ನೇಹಿತರ ಕೂಡ ಸೇರಿದಾಗ ನನಮಾಡಿಕೊಂಡು ಯಾವ ವಿಚಾರವಾದರೂ ಮಾತನಾಡಬೇಕೆಂದರೆ ನನಗೆ ಸಾಧ್ಯವಲ್ಲವು.

ಈ ನಾಚುಗೆಯ ದೆಸೆಯಿಂದ ಆಗಾಗ್ಗೆ ಪರಿಹಾಸವಾಗಿ ಸಭಿಕರು ನಗುವುದರ ವಿನಾ ಮತ್ತಾವ ಹಾನಿಯೂ ಆಗುತ್ತಿರಲಿಲ್ಲವು. ಅಲ್ಲದೆ ನನಗೆ ಬಹಳ ಲಜ್ಜೆಯನ್ನುಂಟುಮಾಡುವುದಾಗಿದ್ದಿತಾದರೂ ಈಗ ಬಹಳ ಉಪಕಾರಿಯೇ ಆಗಿದೆ. ಅವಸರದಿಂದ ಮಾತನಾಡುವ ಅಭ್ಯಾಸವಿಲ್ಲದಂತಾಯಿತು. ಮಿತವಾಗಿ ಮಾತನಾಡುವ ಅಭ್ಯಾಸವಾಗಿರುವುದು. ತನ್ನನ್ನು ನಿರ್ಬಂಧಿಸುವ ಶಕ್ತಿಯು ಕೂಡ ಬಂದಿದೆ. ಆಲೋಚಿಸದೆ ಯಾವ ಮಾತನ್ನು ಆಡುವುದಾಗಲಿ ಬರೆಯುವುದಾಗಲಿ ಇಲ್ಲವೆಂದು ನಾನು ಧೈರ್ಯವಾಗಿ ಹೇಳುತ್ತೇನೆ. ತೊಂದರೆಪಟ್ಟುಕೊಂಡು ಮಾತನಾಡಬೇಕಾಗಿದ್ದ ಮಾತನ್ನಾಡುವುದೂ ಒ[illegible] ಬರೆಯುವುದೂ ಅನಂತರ ಚಿಂತಿಸುವುದೂ [illegible] ಬರುವುದಿಲ್ಲವು. ಈ ರೀತಿಯಾಗಿ ಅನೇಕ [illegible] ಕಾಲಯಾಪನೆಯೂ ತಪ್ಪಿರುತ್ತವೆ. [illegible] ಒಂದು ಮುಖ್ಯ [illegible] ಯೆಂದು ನಾನು ಅನುಭವದಿಂದ ತಿಳಿದಿರುವೆನು. ಅತಿಶಯೋಕ್ತಿಯಿಂದ ತಿಳಿಸುವುದೂ ಸತ್ಯವನ್ನು ಮರೆಮಾಚಿ ಹೇಳುವುದೂ ಮನುಷ್ಯನ ಸಹಜವಾದ ಮನೋದೌರ್ಬಲ್ಯವು. ಅದುಕಾರಣ ಮೌನವೂ ಮಿತಭಾಷೆಯೂ ಆಗತ್ಯವು. ಮಿತಭಾಷಿಯು ಅಪ್ರಸ್ತುತಪ್ರಸಂಗವನ್ನು ಎಂದಿಗೂ ಮಾಡುವುದಿಲ್ಲ. ನಿಧಾನಿಸಿ ಮಾತನಾಡಲು ಬಹಳ ಜನರು ಪ್ರಯತ್ನಿಸುವರು. ಪ್ರತಿಸಭೆಯಲ್ಲೂ ಮಾತನಾಡಲು ಅಪ್ಪಣೆಯನ್ನು ಕೋರಿ ಅನೇಕರು ಅಧ್ಯಕ್ಷನಿಗೆ ಚೀಟಿಯನ್ನು ಬರೆದು ಕಳುಹಿಸುತ್ತಿರುವರು. ಅಪ್ಪಣೆದೊರೆತರೆ ಕ್ಲಪ್ತಕಾಲ ಮೀರಿ ಮಾತನಾಡುವರು. ಇನ್ನು ಕೊಂಚಕಾಲ ಬೇಕೆಂದು ಕೇಳುವರು. ಅಪ್ಪಣೆ ಕೊಡುವುದಿಲ್ಲವೆಂದರೂ ಸುಮ್ಮನೆ ಮಾತನಾಡುತ್ತಲೇ ಇರುತ್ತಾರೆ. ಈ ಪೊಳ್ಳುಮಾತುಗಳಿಂದ ಲೋಕಕ್ಕೆ ತೃಣಮಾತ್ರ ಪ್ರಯೋಜನವಿಲ್ಲವು. ಅದರಿಂದ ವೃಥಾ ಕಾಲಕ್ಷೇಪವೇ ಹೊರತು ಮತ್ತೇನೂ ಇಲ್ಲ. ಅದುಕಾರಣ ನನ್ನ ನಾಚುಗೆಯೇ ನನಗೆ ಒಂದು ಗುರಾಣಿಯಾಗಿರುವುದು. ನನ್ನ ಅಭಿವೃದ್ಧಿಗೂ ಕೂಡ ಅದೇ ಕಾರಣವು. ಸತ್ಯಪರೀಕ್ಷೆಯಲ್ಲೂ ಕೂಡ ಅದು ನನಗೆ ಕಂಡುಬಂದಿತು.

19ನೆಯ ಪ್ರಕರಣ.

ಅಸತ್ಯಪರತ್ವವು.

40 ವರ್ಷಗಳ ಹಿಂದೆ ಆಂಗ್ಲದೇಶದಲ್ಲಿ ಭಾರತೀಯ ವಿದ್ಯಾರ್ಥಿಗಳ ಸಂಖ್ಯೆಯು ಬಹಳಮಟ್ಟಿಗೆ ಕಡಿಮೆಯಾಗಿದ್ದಿತು. ಅವರಿಗೆ ಮದುವೆಯಾಗಿದ್ದರೂ ಆಗದಿದ್ದವರಂತೆ ಅವರೆಲ್ಲರೂ ನಟಿಸುತ್ತಿರುವುದು ಸಂಪ್ರದಾಯವಾಗಿರುತ್ತದೆ. ಆ ದೇಶದಲ್ಲಿ ವಿದ್ಯಾಭ್ಯಾಸವನ್ನು ಪೂರೈಸುವವರೆಗೂ ಆಂಗ್ಲೇಯರು ಮದುವೆಯಾಗುವುದಿಲ್ಲವು. ಭಾರತದೇಶದಲ್ಲೂ ಕೂಡ ಪ್ರಾಚೀನ ಕಾಲದಲ್ಲಿ ಅದೇ ಪದ್ಧತಿಯಿದ್ದಿತು. ಅದುಕಾರಣವೇ ಆ ಕಾಲದಲ್ಲಿ ವಿದ್ಯಾರ್ಥಿಗಳೆಲ್ಲರಿಗೂ ಬ್ರಹ್ಮಚಾರಿ ಎಂಬ ಹೆಸರು ಸಾರ್ಥಕವಾಗಿದ್ದಿತು. ಈಗ ಬಾಲ್ಯವಿವಾಹವು ನಮ್ಮ ದೇಶದಲ್ಲಿ ಹುಟ್ಟಿದುದರಿಂದ ಆ ಉತ್ಕೃಷ್ಟ ಪದ್ಧತಿಯು ಮಾಯವಾಗಿರುವುದು. ಆದರೆ ಆಂಗ್ಲದೇಶಕ್ಕೆ ಹೋದ ಭಾರತೀಯ ವಿದ್ಯಾರ್ಥಿಗಳು ತಮಗೆ ವಿವಾಹವಾಗಿದೆಯೆಂದು ಹೇಳಿಕೊಳ್ಳಲು ನಾಚಿಕೊಂಡು ಅದನ್ನು ಮರೆಮಾಚುತ್ತಿದ್ದರು. ಮದುವೆಯಾಗಿದೆಯೆಂದು ಹೇಳಿದಲ್ಲಿ ತಾವು ವಾಸಮಾಡುವ ಮನೆಯಲ್ಲಿರುವ ಮದುವೆಯಿಲ್ಲದ ಯುವತಿಯರೊಡನೆ ಕೂಡಿಕೊಂಡಿರಲು ಅವಕಾಶವಿಲ್ಲವು. ಮದುವೆಯಿಲ್ಲದೆ ಯುವಕ ಯುವತಿಯರುಗಳು ಒಟ್ಟುಗೂಡಿ ಬೆರೆಸಿಕೊಂಡಿರುವುದು ಆ ದೇಶದಲ್ಲಿ ಸಾಮಾನ್ಯಾಚಾರವಾಗಿರುವುದು. ಅದು ಬಹಳಮಟ್ಟಿಗೆ ನಿರ್ಮಲವಾದ ಸಾಹಚರ್ಯವಾಗಿರುವುದಲ್ಲದೆ ನಿಂದ್ಯವಾಗಿ ಭಾವಿಸಲ್ಪಟ್ಟಿಲ್ಲವು. ತಂದೆತಾಯಿಗಳು ಕೂಡ ಅಂತಹ ಸಾಹಚರ್ಯವನ್ನು ಅನುಮತಿಸಿ ತಮ್ಮ ಪುತ್ರಿಯರನ್ನು ಪ್ರೋತ್ಸಾಹಿಸುತ್ತಿರುವರು. ಆ ದೇಶದಲ್ಲಿ ಒಬ್ಬಳೇ ವಧುವನ್ನು ಗೊತ್ತುಮಾಡಿಕೊಂಡಿರಬೇಕಾದ ದಲ್ಲವಾದ ದರಿಂದ ಅಂತಹ ಯುವಕ ಯುವತಿಯರು ಒಟ್ಟುಗೂಡಿರಲು ಅವಶ್ಯವಾಗಿಯೂ ಇರಬೇಕು. ಅದು ಆಂಗ್ಲೇಯ ಯುವಕರುಗಳಿಗೆ ಸಹಜವಾಗಿದ್ದರೆ ಭಾರತ ಯುವಕರು ಆ ದೇಶದಲ್ಲಿ ಸರಿಯಾಗಿ ನಡೆದುಕೊಳ್ಳದೆ ಈ ರೀತಿ ದುಶ್ಚೇಷ್ಟೆಯನ್ನು ಮಾಡಲಾರಂಭಿಸಿದಲ್ಲಿ ಬಹಳ ಕ್ಲೇಶಕ್ಕೆ ಗುರಿಯಾಗುವುದು ಖಾಡಿತ. ಅನೇಕರಿಗೆ ಅಂತಹ ಕಷ್ಟವಾಗಿತ್ತು. ಭಾರತ ಯುವಕರು ಈ ವ್ಯಸನಕ್ಕೆ ದಾಸರಾಗಿ ಸಹಚರ್ಯವನ್ನು ಹೊಂದಲು ಅಸತ್ಯಜೀವನವನ್ನು ಜರಗಿಸಲೊಪ್ಪಿಬಿಟ್ಟರು. ಆಂಗ್ಲ ಯುವಕರ ವಿಷಯದಲ್ಲಿ ಅನಿಂದ್ಯವಾಗಿದ್ದರೂ ಭಾರತ ಯುವಕರಿಗೆ ಮಾತ್ರ ಅದು ನಿಂದ್ಯವೇ. ನಾನು ಕೂಡ ಈ ಭ್ರಮೆಗೆ ಬಿದ್ದಿದ್ದೆನು. ನನಗೆ ಆಗ ಒಬ್ಬ ಮಗನು ಹುಟ್ಟಿದ್ದರೂ ನಾನು ಕೂಡ ಬ್ರಹ್ಮಚಾರಿಯ ಹಾಗೇ ನಟಿಸಿದೆನು. ಆ ನಟನೆಯಿಂದ ನನಗೆ ಆನಂದವೇನೂ ಆಗಲಿಲ್ಲವು. ನಾನು ಬಹಳಮಟ್ಟಿಗೆ ನಾಚುಗೆಯುಳ್ಳವನಾಗಿದ್ದೆನಾದುದರಿಂದ ನನಗಷ್ಟು ಅಪಚಾರವಾಗಲಿಲ್ಲವು. ನಾನು ಮುಂದುವರಿಯುತ್ತಿದ್ದರೂ ಯಾವ ಯುವತಿಯೂ ನನ್ನ ಕೂಡ ಮಾತನಾಡುತ್ತಿರಲಿಲ್ಲ. ನನ್ನ ಸಮೀಪಕ್ಕೆ ಬರಲಾಗೀಕರಿಸುತ್ತಿರಲಿಲ್ಲ.

ನನ್ನನ್ನು ನಾಚುಗೆಯು ಹೇಡಿತನವು ಸಂರಕ್ಷಿಸಿದ್ದುವು. ಮನೆಯವರು ಮನೆಯಲ್ಲಿರುವ ಯುವಕರನ್ನು ಬೇಟೆಗೆ ಕರೆಯುವುದೊಂದು ಪದ್ಧತಿಯು. ನಾನು ವಾಸಮಾಡುತ್ತಿದ್ದ ಮನೆಯಜಮಾನನ ಹೆಂಡತಿಯು ಒಂದು ದಿವಸ ನನ್ನನ್ನು ಮನೋಹರವಾದ ಗುಡ್ಡಕ್ಕೆ ಬರಬೇಕೆಂದು ಕರೆದಳು. ನಾವಿಬ್ಬರು ಹೊರಟೆವು. ನಾನೂ ಬೇಗನೆ ನಡೆಯುವವನಾದರೂ ಆಕೆಯು ನನಗಿಂತ ವೇಗವಾಗಿ ನಡೆಯಲಾರಂಭಿಸಿದಳು. ಆಕೆಯು ಏನೇನೋ ಮಾತನಾಡುತ್ತಿದ್ದಳು. ನಾನು "ಹೌದು, ಅಲ್ಲಿ ಬಹಳ ಚೆನ್ನಾಗಿದೆ" ಎಂದು ಮಾತ್ರ ಆಗಾಗ್ಗೆ ಪ್ರತ್ಯುತ್ತರವನ್ನು ಕೊಡುತ್ತಿದ್ದುದರ ವಿನಾ ಮತ್ತಾವ ಮಾತನ್ನೂ ಆಡದೆ ಆಕೆಯ ಕೂಡ ನಡೆದು ಹೋಗುತ್ತಿದ್ದೆನು. ಆಕೆಯು ಓಡುತ್ತಿದ್ದಳು. ನಾನು ಯಾವಾಗ ಮನೆಗೆ ಹೋದೇನೆಂದು ಆತುರಪಡುತ್ತಿದ್ದೆನು. ಈ ಪ್ರಕಾರವಾಗಿ ನಾವು ಬೆಟ್ಟದ ಮೇಲಕ್ಕೆ ಹತ್ತಿದೆವು. ಆಕೆಯ ವಯಸ್ಸು 25 ವರ್ಷ. ಆಕೆ ಎತ್ತರವಾದ ಜೋಡನ್ನು ಹಾಕಿಕೊಂಡಿದ್ದರೂ ಗಾಳಿಯಂತೆ ವೇಗವಾಗಿ ಕೆಳಕ್ಕೆ ಇಳಿಯುತ್ತಿದ್ದಳು. ನಾನು ಇಳಿಯಲು ಬಹಳ ಕಷ್ಟಪಡುತ್ತಿದ್ದೆನಲ್ಲದೆ ಆಕೆಯನ್ನು ನೋಡಿ ಬಹು ನಾಚುಗೆಗೊಳ್ಳುತ್ತಿದ್ದೆನು. ಆಕೆಯು ಕೆಳಕ್ಕಿಳಿದು ನನ್ನನ್ನು ನೋಡಿ ನಕ್ಕು ನನಗೆ ಪ್ರೋತ್ಸಾಹ ಪಡಿಸುವುದಕ್ಕಾಗಿ ನಾನು ಬಂದು ಕೈಹಿಡಿದು ಇಳಿಸಿಕೊಳ್ಳಲೆ ಎಂದು ಕೇಳುತ್ತಿದ್ದಳು. ಆಕೆಯ ಸಹಾಯವನ್ನು ನಾನು ಹೇಗೆ ಅಪೇಕ್ಷಿಸುವುದು? ಹೇಗೋ ಕಷ್ಟಪಟ್ಟು ಕೆಳಕ್ಕಿಳಿದೆನು. ಆಕೆಯು ನನ್ನನ್ನು ನೋಡಿ ಕೇಕೆ ಹಾಕಿ ನಕ್ಕು ನನ್ನನ್ನು ಮತ್ತಷ್ಟು ಪರಿಹಾಸಗೊಳಿಸಿದಳು. ಪ್ರತಿಯೊಂದು ಸಂದರ್ಭದಲ್ಲೂ ನಾನು ಈ ರೀತಿಯಾಗಿ ತಪ್ಪಿಸಿಕೊಳ್ಳಲಿಕ್ಕಾಗಲಿಲ್ಲವಾಯಿತು. ಆ ಸತ್ಯಪಿಶಾಚಿಯಿಂದ ನನ್ನನ್ನು ವಿಮುಕ್ತನನ್ನಾಗಿ ಮಾಡಲು ದೇವರು ನಿಶ್ಚಯಿಸಿದನು. ವೆಂಟನರಂತೆ ಬ್ರೈಟನ್ನು ಸಹ ಆರೋಗ್ಯಸ್ಥಳವು. ನಾನೊಂದಾವರ್ತಿ ಬ್ರೈಟನ್ನಿಗೆ ಹೋ

ಗಿದ್ದೆನು ಮೊದಲು ಬ್ರೈಟನ್ನಿಗೆ ಹೋಗಿ ಅನಂತರ ನಾನು ವೆಂಟನರಿಗೆ ಹೋದೆನು ಅಲ್ಲಿ ಒಂದು ಹೋಟೆಲಿನಲ್ಲಿ ಒಬ್ಬ ವೃದ್ಧಪತಂತುವು ಗೋಚರಿಸಿದಳು ಆಕೆಯು ಧನವಂತಳಾಗಿಲ್ಲದಿದ್ದರೂ ಅನ್ನವಸ್ತ್ರಗಳಿಗೆ ಅಭಾವವಿಲ್ಲದೆ ಕಾಲಕ್ಷೇಪಮಾಡುತ್ತಿದ್ದಳು ನಾನು ಆಂಗ್ಲದೇಶಕ್ಕೆ ಹೋದ ವರ್ಷದಲ್ಲೇ ಈ ಸಂಗತಿಯು ಜರುಗಿದುದು ಆಹಾರ ಪದಾರ್ಥಗಳೆಲ್ಲವೂ ಫ್ರೆಂಚ್ ಭಾಷೆಯಲ್ಲೇ ತಿಳಿಸಲ್ಪಡುತ್ತಿದ್ದುವು ಆ ವೃದ್ಧ ಸ್ತ್ರೀಯೂ ನಾನೂ ಒಂದೇ ಕಡೆ ಕುಳಿತು ಕೊಳ್ಳುತ್ತಿದ್ದೆವು ನಾನು ಹೊಸಬನೆಂದೂ ಸಂಕೋಚಪಡುತ್ತೇನೆಂದೂ ಆಕೆಯು ತಿಳಿದುಕೊಂಡಳು ನೀನು ಹೊಸಬನಾಗಿ ತೋರುತ್ತೀಯೆ, ಈವರೆಗಿಲ್ಲಿಗೆಂದೂ ಬಂದಿರಲಿಲ್ಲವೇ? ಯಾತಕ್ಕಾಗಿ ಸಂಕೋಚಪಡುತ್ತೀಯೆ? ಒಂದು ಪದಾರ್ಥವನ್ನಾದರೂ ಕೇಳಿ ತರಿಸಿಕೊಳ್ಳಬಾರದೆ? ಎಂದು ಆಕೆಯು ನನ್ನನ್ನು ಕೇಳಿದಳು ನಾನು ಪರಿಚಾರಕನನ್ನು ಕೂಗಬೇಕೆಂದಿರುವಷ್ಟರಲ್ಲಿ ಆಕೆಯು ಹೀಗೆ ಪ್ರಶ್ನಿಸಿದಳು ನಾನು ಆಕೆಯನ್ನು ವಂದಿಸಿ ನಾನು ಶಾಖಾಹಾರಿಯೆಂದೂ ನನಗೆ ಫ್ರೆಂಚ್ ಭಾಷೆ ಬರುವುದಿಲ್ಲವೆಂದೂ ಮಾಡಿದ ಪದಾರ್ಥಗಳಲ್ಲಿ ಶಾಕಾಹಾರವಿದೆಯೋ ಇಲ್ಲವೋ ಎಂದು ತಿಳಿಯದೆ ಪೇಚಾಡುತ್ತಿದ್ದೇನೆಂದೂ ತಿಳಿಸಿದೆನು

ಅನಂತರ ಆಕೆಯು ನನಗೆ ವಿವರಿಸಿ ಹೇಳಿದಳು ಈ ರೀತಿಯಾಗಿ ಆಕೆಗೂ ನನಗೂ ಮೊದಲನೆಯ ಪರಿಚಯವಾದುದು ಸ್ನೇಹವಾಗಿ ಪರಿಣಮಿಸಿತು ನಾನು ಆಂಗ್ಲದೇಶದಲ್ಲಿದ್ದವರೆಗೂ ಅನಂತರವೂ ಆಕೆಯ ಪರಿಚಯವೂ ಸ್ನೇಹವೂ ಹೆಚ್ಚುತ್ತಿದ್ದಿತು ಆಕೆಯು ಲಂಡನ್ ನಗರದಲ್ಲಿ ವಾಸಿಸುತ್ತಿದ್ದಳು ಆಕೆಯು ತನ್ನ ವಿಳಾಸವನ್ನು ನನಗೆ ತಿಳಿಸಿ ಪ್ರತಿ ಭಾನುವಾರವೂ ತನ್ನ ಮನೆಗೆ ಒಂದು ಊಟಕ್ಕೆ ಬರಬೇಕೆಂದು ಕೋರಿಕೊಂಡಳು ಆದಿತ್ಯವಾರ ಮಾತ್ರವಲ್ಲದೆ ಹಬ್ಬಗಳ್ಳಲಿಯ ಕಾಲಗಳಲ್ಲೂ ನನ್ನನ್ನು ಆಹ್ವಾನಿಸುತ್ತಿದ್ದಳು ನನ್ನ ನಾಚಿಕೆಯನ್ನು ಹೋಗಲಾಡಿಸುವುದಕ್ಕಾಗಿ ಯುವತಿಯರ ಪರಿಚಯ ಮಾಡಿಸಿ ಅವರ ಕೂಡ ಸಂಭಾಷಿಸಲು ಅವಕಾಶವನ್ನು ಕಲ್ಪಿಸಿಕೊಡುತ್ತಿದ್ದಳು ಮುಖ್ಯವಾಗಿ ಒಬ್ಬ ಯುವತಿಯು ಆಕೆಯ ಮನೆಯಲ್ಲೇ ಇರುತ್ತಿದ್ದಳು ಆಕೆಯು ಮಾತ್ರ ಸ್ತ್ರೀಯರನ್ನೂ ಮನೆಯಲ್ಲಿ ಬಿಟ್ಟು ಹೊರಕ್ಕೆ ಹೋಗುತ್ತಿದ್ದಳು ಅದೆಲ್ಲವೂ ನನಗೆ ಬಹಳ ಕಷ್ಟವಾಗಿದ್ದಿತು ನಾನು ಆತನಾಡುವ ಸಂದರ್ಭವನ್ನು ಉಪಯೋಗಿಸಿಕೊಳ್ಳಲಾರದವನಾಗಿದ್ದೆನು ಕ್ರಮಕ್ರಮವಾಗಿ ಆ ಯುವತಿಯು ನನಗೆ ಇವೆಲ್ಲವನ್ನೂ ಕಲಿಸಿಕೊಡುವವಳಾದಳು ನಾನು ಕಲಿತುಕೊಂಡೆನು ಪ್ರತಿ ಆದಿತ್ಯವಾರವೂ ಆ ಯುವತಿಯ ಕೂಡ ಮಾತನಾಡಲು ನಾನು ಉತ್ಸಾಹವುಳ್ಳವನಾದೆನು ಆ ವೃದ್ಧಪತಂತುವು ಪ್ರತಿದಿನವೂ ಈ ಕ್ರಮವನ್ನು ಇನ್ನೂ ಹೆಚ್ಚಿಸುತ್ತಾ ಬಂದಳು ಆಕೆಗೆ ಯಾವ ಉದ್ದೇಶವು ಇದ್ದುದರಿಂದ ನಮ್ಮಿಬ್ಬರನ್ನು ಒಂದುಕಡೆ ಸೇರಿಸುವವಳಾಗಿದ್ದಳು ನನಗೆ ಮದುವೆಯಾಗಿದೆಯೆಂದು ಆಕೆಯೊಡನೆ ಹೇಳಿದರೊಳ್ಳೆಯದೆಂದು ನನಗೆ ತೋರಿದುದರಿಂದ ನಾನು ಆಕೆಗೆ ಒಂದು ಕಾಗದವನ್ನು ಬರೆದೆನು 'ಬ್ರೈಟನ್ನಿನಲ್ಲಿ ನಮಗೆ ಪರಿಚಯವಾದಾರಭ್ಯ ನೀವು ನನಗೆ ಬಹಳ ದಯಾಶಾಲಿಯಾಗಿದ್ದೀರಿ ಹೆತ್ತತಾಯಿಗಿಂತಲೂ ಹೆಚ್ಚಾಗಿ ನೀವು ನನ್ನನ್ನು ಆದರಿಸಿದಿರಿ ನನಗೆ ಮದುವೆಯನ್ನು ಮಾಡಬೇಕೆಂಬ ಅಭಿಪ್ರಾಯದಿಂದ ನೀವು ನನಗೆ ಯುವತಿಯೊಡನೆ ಪರಿಚಯವನ್ನು ಮಾಡಿಸಿದಿರಿ ನನಗೆ ಇದಕ್ಕೆ ಮೊದಲೇ ವಿವಾಹವಾಗಿದೆಯೆಂದು ನಿಮಗೆ ತಿಳಿಸಬೇಕಾಗಿದ್ದಿತು ಆದರೆ ವಿದ್ಯಾರ್ಥಿಗಳಲ್ಲರೂ ಆಂಗ್ಲದೇಶದಲ್ಲಿ ಅವಿವಾಹಿತರಂತೆಯೇ ನಟಿಸುತ್ತಿದ್ದಾರೆ ಅದರಂತೆ ನಾನೂ ಈ ವರೆಗೆ ಅವರಂತೆ ನಟಿಸಿದೆನು ಅದು ತಪ್ಪೆಂದು ನನಗೆ ಈಗ ಗೊತ್ತಾಯಿತು ನನಗೆ ಬಾಲ್ಯದಲ್ಲೇ ವಿವಾಹವಾಯಿತು ನನಗೊಬ್ಬ ಮಗನು ಸಹ ಹುಟ್ಟಿದ್ದನು ಈ ಸಂಗತಿಯನ್ನು ಇದುವರೆಗೆ ನಿಮಗೆ ತಿಳಿಸದಿದ್ದುದರಿಂದ ನನಗೆ ಬಹಳ ಖೇದವಾಗಿರುತ್ತದಾದರೂ ಈಗಲಾದರೂ ತಿಳಿಸಲು ದೇವರು ನನಗೆ ಧೈರ್ಯವನ್ನು ಕೊಟ್ಟುದಕ್ಕಾಗಿ ನಾನು ಬಹಳ ಕೃತಜ್ಞನಾಗಿರುತ್ತೇನೆ ನೀವು ನನ್ನನ್ನು ಕ್ಷಮಿಸುವಿರಾ? ನೀವು ಪರಿಚಯಮಾಡಿಸಿದ ಯುವತಿಯ ಕೂಡ ನಾನು ಯಾವ ಅವನೀತಿಯನ್ನೂ ತೋರಿಸಿದ್ದಿಲ್ಲ ನಾನು ಮರ್ಯಾದೆಯಿಂದಲೇ ನಡೆದುಕೊಂಡಿರುವೆ ಇನ್ನು ಈ ವಿಷಯದಲ್ಲಿ ಪ್ರಯತ್ನಿಸಬಾರದೆಂದು ನಿಮ್ಮಲ್ಲಿ ನಾನು ಈ ಲೇಖನವನ್ನು ಬರೆದಿರುವೆನು ಇನ್ನು ನಾನು ನಿಮ್ಮ ಆರೋಗ್ಯವನ್ನು ಸ್ವೀಕರಿಸಲು ಅನರ್ಹನೆಂದು ನಿಮಗೆ ತೋರಿದಲ್ಲಿ ನಾನದನ್ನು ಮಾತ್ರಕ್ಕೂ ಚಿಂತಿಸತಕ್ಕವನಲ್ಲ ನಿಮ್ಮ ದಯೆಗಾಗಿ ನಾನು ಯಾವಾಗಲೂ ಕೃತಜ್ಞನಾಗಿರುವೆನು ಇನ್ನು ಮೇಲೂ ನೀವು ನನ್ನನ್ನು ಆದರಿಸುವುದು ನಾನು ಬಹಳವಾಗಿ ಸಂತೋಷಿಸುವೆನು ಎಂದು

ನಾನು ಈ ಕಾಗದವನ್ನು ಒಂದೇ ಆವರ್ತಿಗೆ ಬರೆಯಲಾರದೆ ಹೋದೆನಾದುದರಿಂದ ಅನೇಕವೇಳೆ ಬರೆದೂ ಹರಿದೂ ಹಾಕಿ ಕೆಲವು ದಿನಗಳಲ್ಲಿ ಅದನ್ನು ಮುಗಿಸಿದೆನು. ನನ್ನ ಕಾಗದ ತಲುಪಿದ ಕೂಡಲೇ ಆಕೆಯು ಉತ್ತರವನ್ನು ಬರೆದಳು

ನೀವು ದಾಕ್ಷಿಣ್ಯವಾಗಿ ಬರೆದ ಕಾಗದವು ತಲುಪಿತು ನಾವಿಬ್ಬರೂ ಅದನ್ನು ಓದಿ ನಕ್ಕು ಬಿಟ್ಟೆವು ನೀವು ನಿಮ್ಮ ವಿವಾಹ ರಹಸ್ಯವನ್ನು ಹೇಳದಿದ್ದುದು ಮಹಾಪರಾಧವೆಂದು ನಾನು ಭಾವಿಸುತ್ತೇನೆ ಈಗಲಾದರೂ ನೀವು ನಿಜವನ್ನು ಹೇಳಿದುದಕ್ಕಾಗಿ ಸಂತೋಷಿಸುತ್ತೇನೆ ಯಾವಾಗಲೂ ನನಗೆ ಅನುಕೂಲವಾಗಿ ನೀವು ಬರುತ್ತಿರಬೇಕು ನೀವು ಒಂದು ಬಾಲ್ಯವಿವಾಹವನ್ನು ವಿವರಿಸಿ ಹೇಳಿ ನಮಗೆ ಸಂತೋಷವನ್ನುಂಟುಮಾಡುವುದು ನಮ್ಮ ಸ್ನೇಹಕ್ಕೆ ಇದರಿಂದ ಯಾವ ಭಂಗವೂ ಉಂಟಾಗುವುದಿಲ್ಲವೆಂದು ನಂಬುತ್ತೇನೆ' ಎಂದು ಆಕೆಯು ಬರೆದಳು ಈ ಪ್ರಕಾರವಾಗಿ ಈ ಆಗತ್ಯದ ಆಚಾರವನ್ನು ನಾನು ಉಚ್ಚಾಟನೆಮಾಡಿದೆನು ಅನಂತರ ನನ್ನ ವಿವಾಹವನ್ನು ಕುರಿತು ಹೇಳಬೇಕಾದ ಸಂದರ್ಭವೊದಗಿದಾಗ ನಾನು ಯಾವ ಸಂಶಯವನ್ನೂ ಪಡಲಿಲ್ಲ

ವೈ ಸ್ಟಾರ್

ಖಾದಿ

(2 ನೇ ಪುಟದಿಂದ ಮುಂದುವರಿದದ್ದು)

ಗುವುವು ಕೆಲವ ಪಟ್ಟಣಗಳಲ್ಲಿ ಮಿಲ್ಲಿಗೆ ಕೆಲಸಕ್ಕೆ ಹೋಗುವಾಗ ಹೆಂಗಸರು ತಮ್ಮ ಮಕ್ಕಳನ್ನು ಜೊತೆಯಲ್ಲಿ ಕರೆದುಕೊಂಡು ಹೋಗುವುದಕ್ಕೆ ಆಗದೆ ಮಕ್ಕಳಿಗೆ ಮಾದಕ ದ್ರವ್ಯಗಳನ್ನು (ಅಫೀಮು) ಹಾಕಿ ಕೆಲಸಕ್ಕೆ ಹೋಗುವರು ಅವರು ಮಿಲ್ಲಿನಿಂದ ಬರುವವರೆಗೂ ಆ ಮಕ್ಕಳು ಆಹಾರವಿಲ್ಲದೆ ಬಿದ್ದಿರುತ್ತವೆ. ಕೆಲವು ವೇಳೆಗಳಲ್ಲಿ ಸಾಯುವ ಸಂಭವವೂ ಉಂಟು ಇದರಿಂದ ಶಿಶುಹತ್ಯವು ಅಧಿಕವಾಗುವುದಕ್ಕೆ ಪ್ರಾರಂಭವಾಯಿತು ಕೊನೆಯದಾದ ಪಾಪವೆಂದರೆ ಈ ಮಿಲ್ಲುಗಳಿಂದ ಗೋಹತ್ಯವು ಜಾಸ್ತಿಯಾಯಿತು ಅನೇಕರು ಈ ಗೋಹತ್ಯವು ನಮ್ಮ ಮುಸಲ್ಮಾನ ಬಂಧುಗಳಿಂದ ನಡೆಯುವುದೆಂದು ತಿಳಿದಿರುವರು! ಆದರೆ ಈ ಹತ್ಯಾಕಾರ್ಯಕ್ಕೆ ಅವರೊಂದೇ ಕಾರಣವಲ್ಲ ಈ ಗೋವುಗಳನ್ನು ಕೇವಲ ಮಾಂಸಕ್ಕಾಗಿ ಹತ್ಯಾಗಿ ಕೊಲ್ಲುವುದಿಲ್ಲ ಆದರೆ ಚರ್ಮಕ್ಕಾಗಿ ಬಹಳ ಹಸುಗಳನ್ನೂ ಕರುಗಳನ್ನೂ ಕೊಲ್ಲುತ್ತಾರೆ ಈ ಹಸುವಿನ ಮತ್ತು ಕರುಗಳ ಚರ್ಮವು ವಿಶೇಷವಾಗಿ ಈ ಮಿಲ್ಲುಗಳಿಗೆ ಬೇಕು ಸುಮಾರು ೨೮೮ ಆಕಳ ಕರುಗಳ ಚರ್ಮವು ಒಂದು ಸಾಧಾರಣ ಮಿಲ್ಲಿಗೆ ಬೇಕಾಗುತ್ತದೆಂದು ಹೇಳುತ್ತಾರೆ ಈ ಮಿಲ್ಲುಗಳ ಪರದೇಶೀ ಬಟ್ಟೆಯನ್ನು ಹಾಕುವುದರಿಂದ ಗೋಹತ್ಯ ಮತ್ತು ಶಿಶುಹತ್ಯಗಳಿಗೆ ಪ್ರೋತ್ಸಾಹಮಾಡಿದಲ್ಲದೆ ನಮ್ಮ ಮೂವತ್ತು ಮೂರು ಕೋಟಿ ದೇಶಬಾಂಧವರಲ್ಲಿ ಮೂರನೆ ಒಂದು ಭಾಗಕ್ಕೂ ಕೂಡ ಸರಿಯಾಗಿ ಒಪ್ಪತ್ತು ಊಟಸಿಕ್ಕದೆ ಇರುವುದಕ್ಕೂ ಮೂಲಕಾರಣರಾದಂತಾಯಿತು ಖಾದಿಯನ್ನು ಧರಿಸುವುದರಿಂದ ಇಂಥ ಪಾಪಕಾರ್ಯಗಳಾಗುವುದಿಲ್ಲ ಮನೆಯಲ್ಲಿ ಕೈರಾಟೆಗಳಿಂದ ನೂಲು ತೆಗೆದು ಕೈಮಗ್ಗದಲ್ಲಿ ನೇಯುವುದರಿಂದಲೂ ಮಕ್ಕಳು ಮರಿಗಳ ಜೊತೆಯಲ್ಲಿ ಒಳ್ಳೆಯ ವಾತಾವರಣದಲ್ಲಿರುವುದರಿಂದಲೂ ಅನಾಚಾರ ಗೋಹತ್ಯ ಮತ್ತು ಶಿಶುಹತ್ಯ ಮುಂತಾದ ಪಾಪಕಾರ್ಯಗಳಾಗುವುದಕ್ಕೆ ಅವಕಾಶವಿಲ್ಲ

ಕೆಲವರು ಈ ಮಿಲ್ಲುಗಳ ಪರದೇಶಿ ಬಟ್ಟೆಯನ್ನು ಬಿಟ್ಟರೆ ಪರದೇಶಿಯರಿಗೂ ಮಿಲ್ಲಿನವರಿಗೂ ಹೊಟ್ಟೆತುಂಬದಂತಾಗುವುದಿಲ್ಲವೇ ಎನ್ನುವರು ಆದರೆ ಆ ತತ್ತ್ವ ಹಾಗಲ್ಲ! ಈ ಮಿಲ್ಲಿಗೂ ಮತ್ತು ಪರದೇಶಿಬಟ್ಟೆಗೂ ಪ್ರೋತ್ಸಾಹಕೊಟ್ಟರೆ ಹೊಟ್ಟೆತುಂಬಿ ಅಜೀರ್ಣವಾದವರಿಗೆ ಅನ್ನ ಕೊಟ್ಟು ಹಸಿದವರಿಗೆ ಅನ್ನವಿಲ್ಲದಂತೆ ಮಾಡಿದಂತಾಗುವುದು ಖಾದಿಯನ್ನು ಹಾಕುವುದರಿಂದ ನಮ್ಮಲ್ಲಿ ಹೊಟ್ಟೆಗಿಲ್ಲದವರಿಗೆ ಮಾರ್ಗತೋರಿದಂತಾಯಿತು ಹಾಗಲ್ಲದೆ ಆ ಬಟ್ಟೆಯನ್ನು ಹಾಕುವುದರಿಂದ ಲಾಭವು ಮಿಲ್ಲಿನ ಮಾಲೀಕನಿಗೆ ಹೋಗುವುದಲ್ಲದೆ ನಮ್ಮ ಬಡವರಿಗೆ ಒಂದು ಕಾಸೂ ಜಾಸ್ತಿ ಸಿಗುವುದಿಲ್ಲ ಆದರೆ ಖಾದಿಗೆ ಎಷ್ಟು ಜಾಸ್ತಿಕೊಟ್ಟರೂ ನಮ್ಮವರಿಗೇ ಸೇರಿ ಪ್ರತಿವರ್ಷವೂ ಬಟ್ಟೆಗೋಸ್ಕರವಾಗಿಯೇ ಪರದೇಶಕ್ಕೆ ಹೋಗುವ ಅರುವತ್ತು ಕೋಟಿ ರೂಪಾಯಿಗಳು ಉಳಿಯುವುವು

ಸಾಂಪತ್ತಿಕ ದೃಷ್ಟಿಯಿಂದ ಇವುಗಳ ತಾರತಮ್ಯವನ್ನು ನೋಡುವುದಾದರೆ ಪ್ರತಿವರ್ಷವೂ ಹಿಂದೂಸ್ಥಾನದಲ್ಲಿ ೧೬೦ ದೂವರಕೋಟಿ ಎಕರೆಯ ಭೂಮಿಯಲ್ಲಿ ೬೫ ಲಕ್ಷ ಗಂಟು (೪೦೦ ಪೌಂಡಿಗೆ ೧ ಗಂಟು) ಹತ್ತಿ ಬೆಳೆಯುತ್ತದೆ ಇದರಲ್ಲಿ ೩೦ ಲಕ್ಷ ಗಂಟು ಪರದೇಶಕ್ಕೆ ಹೋಗಿ (ಗಂಟು ಒಂದಕ್ಕೆ ರೂ ೧೦೦ ಯಂತೆ) ೩೦ ಕೋಟಿ ರೂಪಾಯಿಗಳು ನಮ್ಮ ದೇಶಕ್ಕೆ ಬರುತ್ತವೆ ಈ ೩೦ ಲಕ್ಷ ಗಂಟುಗಳ ಪೈಕಿ ೬ ಲಕ್ಷ ಗಂಟು ಹತ್ತಿಯು ಬಟ್ಟೆಯಾಗಿ ನಮ್ಮ ದೇಶಕ್ಕೆ ಅರುವತ್ತು ಕೋಟಿ ರೂಪಾಯಿಗಳಿಗೆ ಬರುತ್ತದೆಯಾದ್ದರಿಂದ ಪ್ರತಿವರ್ಷವೂ ಹಿಂದೂಸ್ಥಾನದಿಂದ ಬಟ್ಟೆ ಒಕ್ಕರೆ ಮುಂತಾದುವುಗಳಿಗೆ ೧೬೫ ಕೋಟಿ ರೂಪಾಯಿಗಳು ಪರದೇಶಕ್ಕೆ ಹೋಗುತ್ತಿದ್ದರೆ ಮೇಲೆ ಹೇಳಿದಂತೆ ನಮ್ಮ ಬಡವರು ಒಪ್ಪತ್ತಿನ ಊಟವನ್ನಾದರೂ ಹೇಗೆ ಕಂಡಾರು ಈ ಹಿಂದೂಸ್ಥಾನದಲ್ಲಿ ಕೆಲಸವಿಲ್ಲದೆ ಅನೇಕರಿರುವುದರಿಂದ ಅವರು ಈ ಖಾದಿ ಕೆಲಸವನ್ನು ತೆಗೆದುಕೊಂಡರೆ ಈ ಪರದೇಶಕ್ಕೆ ಹೋಗುವ ದ್ರವ್ಯವನ್ನು ನಿಲ್ಲಿಸಬಹುದು 'ಸಮಾರು ಒಬ್ಬ ಮನುಷ್ಯನು ಒಂದು ಗಂಟೆಗೆ ಎರಡುವರೆ ತೊಲೆಗಳಂತೆ ಒಂದು ದಿನಕ್ಕೆ ಎಂಟು ಗಂಟೆಗಳ ಕಾಲ ಕೆಲಸಮಾಡಿ ಅರ್ಧ ಪೌಂಡು ನೂಲನ್ನು ತೆಗೆಯಬಹುದು ವರ್ಷಕ್ಕೆ ನಿರಾಯಾಸವಾಗಿ ೧೫೦ ಪೌಂಡು ದಾರವನ್ನು ತೆಗೆಯಬಹುದು ಒಬ್ಬ ಬಟ್ಟೆಯನ್ನು ನೇಯುವವನು ಒಂದು ವರ್ಷಕ್ಕೆ ಸರಾಸರಿ ೨೦೦೦ ಗಜ ಬಟ್ಟೆಯನ್ನು ನೇಯುತ್ತಾನೆ ಈ ಹಿಂದೂಸ್ಥಾನಕ್ಕೆ ಬಟ್ಟೆಯನ್ನು ಒದಗಿಸಲು ಒಂದು ಕೋಟಿ ನೂಲುವವರೂ ೨೫ ಲಕ್ಷ ನೇಯ್ಗೆಯವರೂ ಸಿಕ್ಕಿದರೆ ಸಾಕು ತಗಿರುವ ಬಡತನವು ಹೋಗಿ ದೇಶದಲ್ಲಿ ಸೌಖ್ಯವುಂಟಾಗಿ ದೇಶವು ಅಭಿವೃದ್ಧಿಯಾಗುವುದು ಕಣ್ಣಿಗೆ ಚಂದಕಾಣುತ್ತದೆಂದಾಗಲೀ ನಯವಾಗಿರುತ್ತದೆಂದಾಗಲೀ ಮೋಹಕ್ಕೆ ವಶರಾಗಿ ಪರದೇಶದ ಮಿಲ್ಲಿನ ಬಟ್ಟೆಯ ಜಾಲದಲ್ಲಿ ಸಿಕ್ಕಿದರೆ ಖಂಡಿತವಾಗಿಯೂ ಹಾಳಾಗುತ್ತೇವೆ ಮೊದಮೊದಲು ಖಾದಿಯೂ ಒರಟಾಗಿತ್ತು ಈಗ ಎಷ್ಟೋ ನಯವಾದ ಖಾದಿಯು ಬಂದಿದೆ ಇನ್ನು ಹೆಚ್ಚು ಹೆಚ್ಚು ಪ್ರೋತ್ಸಾಹಸಿಕ್ಕಿದಂತೆ ತೆಳುವಾದ ಬಟ್ಟೆಯನ್ನು ಮಾಡುವ ಸಂಭವವು ಬಂದೇ ಬರುವುದು ಆದುದರಿಂದ ಖಾದಿಯು ಕಾಮಧೇನುವಿನಂತಿದೆ ಎನ್ನಬಹುದು ಮಿಲ್ಲುಗಳ ಪರದೇಶಿ ಬಟ್ಟೆಯೆಂಬ ಕಾರುಗತ್ತಲೆಯು ಹೋಗಿ ಶಾಂತಮಯವಾದ ಖಾದಿಯೆಂಬ ರವಿಯು ಪ್ರಕಾಶಿಸುವನು ಎಂಬ ದೃಢಭಾವವು ಉದಯಿಸಲಿ ಸಕಲರೂ ಖಾದಿಯನ್ನೇ ಧರಿಸಿ ಸುಖಶಾಂತಿಗಳನ್ನು ಅನುಭವಿಸಲಿ

ಸುಬೋಧ'

ವರ್ತಮಾನ ಸಂಗ್ರಹ.

ಒಳದೇಶ

ಮೇ ತಾ 29ರಲ್ಲಿ ಸಾಯಂಕಾಲ ಕೊಡ್ಲಿಪೇಟೆ ಗ್ರಾಮದ ಮ ಅಪ್ಪಾರಂಡ ಸಂಜಪ್ಪನವರು ಶಿವಾಧೀನರಾದರು.

ಮ ಕೆ. ಯಸ್ ಶಂಕರನಾರಾಯ್ಯನವರು ಬಿ ಎ. ಪರೀಕ್ಷೆಯ 1 ನೇ ಭಾಗದಲ್ಲಿ (ಇಂಗ್ಲೀಷಿನಲ್ಲಿ) ಪಾಸಾಗಿರುವರೆಂದು ತಿಳಿಯಬಂದಿದೆ.

ಕೊಡಗು ಕಂಪೆನಿಯ ಡೈರೆಕ್ಟರುಗಳ ಮೀಟಿಂಗೂ, ಬಹಿಷ್ಕಾರರ ಸಂಘದ ಕಾರ್ಯನಿರ್ವಾಹಕ ಕಮಿಟಿಯ ಮೀಟಿಂಗು ಈ ತಾ 1೭ರಲ್ಲಿ ವೀರರಾಜಪೇಟೆಯಲ್ಲಿ ನಡೆಯಲಿಕ್ಕಿದೆ.

ನೈಟ್ರೇಟ್ ಆಫ್ ಸೋಡಾ

ಎಲ್ಲಾ ಬೆಳೆಗಳಿಗೂ ಅತ್ಯುತ್ತಮವಾದ ಗೊಬ್ಬರ

Nitrate of Soda 15-16 per cent. N

ಈ ಗೊಬ್ಬರದಲ್ಲಿ ಬೆಳೆಗಳಿಗೆ ಅತ್ಯಗತ್ಯವಾದ
ನೈಟ್ರೋಜನ್ ಸಸ್ಯಾಹಾರವು

15-16 % ಅಂದರೆ ಮೀನು ಮತ್ತು ಎಣ್ಣೇಯ ಹಿಂಡಿ ಗೊಬ್ಬರದಲ್ಲಿರುವುದಕ್ಕಿಂತಲೂ ಮೂರು ಎರಡಷ್ಟು ಜಾಸ್ತಿಯಾಗಿರುವದು ಇದರಲ್ಲಿ ಸಿಕ್ಕುವಷ್ಟು ಸಾರಜನಕ (Nitrogen) ವು ಬೇರೆ ಯಾವ ಗೊಬ್ಬರಗಳಿಂದಲೂ ಗಿಡಗಳಿಗೆ ದೊರೆಯಲಾರದು ಆದ್ದರಿಂದಲೇ ಜಗತ್ತಿನ ಎಲ್ಲಾ ಭಾಗಗಳಲ್ಲಿಯೂ ರೈತರು ಇದನ್ನು ವಿಶೇಷವಾಗಿ ಉಪಯೋಗಿಸುತ್ತಾರೆ

ಭತ್ತ, ಕಬ್ಬು, ತೆಂಗು, ಅಡಿಕೆ, ಮಾವು ಹೂಗೆಸೊಪ್ಪು, ತರಕಾರಿ ಮೊದಲಾದವುಗಳಿಗೂ ಕಾಫಿ ಚಾ ರಬ್ಬರು, ಏಲಕ್ಕಿ ಮೊದಲಾದ ತೋಟ ಪೈರುಗಳಿಗೂ ಎಲುಬಿನ ಪುಡಿ ಅಥವಾ ಮೀನು ಗೊಬ್ಬರ ಹಟ್ಟಿ ಗೊಬ್ಬರ ಮುಂತಾದ ಗೊಬ್ಬರಗಳ ಜೊತೆಯಲ್ಲಿ ಈ ಗೊಬ್ಬರವನ್ನು ಉಪಯೋಗಿಸುವದರಿಂದ ಬೆಳೆಯು ಸಮೃದ್ಧಿಯಾಗುವದು ನೈಟ್ರೇಟ್ ಆಫ್ ಸೋಡಾದಲ್ಲಿರತಕ್ಕ ಸೋಡವು ಮಣ್ಣಿನಲ್ಲಿರುವ ಪೊಟೇಷ್ ಎಂಬ ಇನ್ನೊಂದು ತರಹ ಸಸ್ಯಾಹಾರವನ್ನು ಗಿಡಗಳಿಗೆ ಒದಗಿಸಿ ಕೊಡುತ್ತದೆ

ಈ ಗೊಬ್ಬರವು ನೋಟಕ್ಕೆ ಬಿಳಿ ಉಪ್ಪಿನ ಹಾಗಿದ್ದು ಅಪಾಯಕರವಲ್ಲ ಎಕರೆ ಒಂದಕ್ಕೆ 100-200 ರಾತಲು ಸಾಕಾಗುವದು. ಹೆಚ್ಚಿನ ಮಾಹಿತಿ ಮತ್ತು 'ಕೃಷಿಸುಧಾರ' ಎಂಬ ಪುಸ್ತಕವನ್ನು ಈ ಕೆಳಗಿನ ವಿಳಾಸದಾರರಿಂದ ಧರ್ಮಾರ್ಥವಾಗಿ ಪಡೆಯಬಹುದು

52-1

CHILEAN NITRATE COMMITTEE,
Post Box 469, CALCUTTA

ಕಮೀಷನರವರ ಆಫೀಸು ಮ್ಯಾನೇಜರು ಉದ್ಯೋಗವು ಸ್ಪಷ್ಟ ಮಂಜೂರಾಗಿದೆ. ರಜೆಯಲ್ಲಿರುವ ಮಿ. ಹೆಚ್. ಯಂ. ಕಾಮತ್‌ರವರು ಈ ಉದ್ಯೋಗಕ್ಕೆ ಸೇರುವ ವಿಷಯ ಈ ದಿನ ವಿಷಯವರನ್ನು ಕಾಣಲಿಕ್ಕಿರುವರು.

ಮಿ. ಕೋದಂಡ ಉತ್ತಯ್ಯನವರು ರಾಜಿನಾಮೆ ಕೊಟ್ಟಿದ್ದ ವೀರರಾಜಪೇಟೆ ಮುನ್ಸಿಪಲ್ ಕೌನ್ಸಿಲ್ ಮೆಂಬರುತನಕ್ಕೆ ಕಳೆದ ತಾ. 29ರಲ್ಲಿ ನಡೆದ ಚುನಾವಣೆಯಲ್ಲಿ ಮಿ. ಬಿಟ್ಟಿಯಂಡ ಸಂಜಪ್ಪನವರು ಯಾರಿಂದಲೂ ವಿರೋಧಿಸಲ್ಪಡದೆ ಚುನಾಯಿತರಾದರು

ಕಳೆದ ತಾ. 31 ರಲ್ಲಿ ಮಡಿಕೇರಿಯಲ್ಲಿಯೂ, ಈ ತಾ. ರಲ್ಲಿ ಪೊನ್ನಂಪೇಟೆಯಲ್ಲಿಯೂ ನಡೆದ ಸಾರ್ವಜನಿಕ ಮೀಟಿಂಗುಗಳಲ್ಲಿ ಗಜೆಟೆಡ್ ಉದ್ಯೋಗಸ್ಥರು ವರ್ಗಾವರ್ಗಿಯಾಗಬೇಕೆಂದೂ ಮತ್ತು ಕರ್ನಾಟಕ ಏಕೀಕರಣದ ತತ್ವಕ್ಕೆ ಒಪ್ಪಿಯೂ ಠರಾವುಗಳು ಬಹುಮತದಿಂದ ಪಾಸಾದವೆಂದು ತಿಳಿಯಬರುತ್ತದೆ

ಅಮ್ಮತ್ತಿನಾಡು ಕಾವಾಡಿಗ್ರಾಮದಲ್ಲಿ ಸುಮಾರು 15 ದಿವಸಗಳಿಂದ ಸಾಧಾರಣ ಬಿಳೀ ವರ್ಣದ ಎರಡು ಕೋಣಗಳು ಪೋಲಿ ಬಂದು ಇವೆ. [illegible] ತಪ್ಪಿಸಿಕೊಂಡ ಕೋಣಗಳಿಗೆ ಎರಡೆರಡು ವರ್ಷಗಳಾಗಿರಬಹುದು. ರಾತ್ರಿ ಹಗಲು ಸ್ವೇಚ್ಛೆಯಾಗಿ ಮೇಯುತ್ತಿರುವುದರಿಂದ ವಾರಸುದಾರರು ಬರಬಹುದೆಂದು ಮಿ. ಎ. ಪಿ. ಮಾದಪ್ಪನವರು ತಿಳಿಸುತ್ತಾರೆ.

ಬೂದು ಬಣ್ಣದ, ಮುಖದಲ್ಲಿ ಸ್ವಲ್ಪ ಕಪ್ಪು ಮತ್ತು ಕಣ್ಣು ಸುತ್ತಲೂ ಕಪ್ಪು ಇರುವ ಗೇಣುದ್ದದ ಕೊಡು ಕೂಂಬಿಗೆ ಕುಳ್ಳಿಯಾದರೋ ಒಂದು ಎತ್ತು ಸುಮಾರು ಎರಡು ತಿಂಗಳಿಂದ ತನ್ನ ದನಗಳ ಜೊತೆಯಲ್ಲಿಯೇ ಇದೆಯೆಂದೂ ಅದರ ವಾರೀಸುದಾರನು ಬಂದು ಕಳು ಬರುವಾತನೊಡನೆ ಅದನ್ನು ಹಿಡಿದುಕೊಂಡು ಹೋಗಬಹುದೆಂದೂ ಅಮ್ಮತ್ತಿನಾಡು ಕಳಾತುಮಾಡು ಗ್ರಾಮದ ಕತ್ರಿಕೊಲ್ಲಿ ಕಾಳಪ್ಪನವರು ತಿಳಿಸಿರುತ್ತಾರೆ

ಮೇ ತಾ. 21ರಲ್ಲಿ ಬಟ್ಟಂಗಾಲದಲ್ಲಿ ಜೋಯಿಮಾಡ ಮನೆಯಲ್ಲಿ ಒಂದು ಮದುವೆಯೂ, ಪೊನ್ನಕಚ್ಚೀರ ಮನೆಯಲ್ಲಿ ಒಂದು ಸಾವೂ ಆದ ಕಾರಣ ಆ ದಿನದ ಪಬ್ಲಿಕ್ ಮೀಟಿಂಗಿಗೆ ಸಾಕಷ್ಟು ಜನರು ಬಾರದ್ದರಿಂದ ಗಜೆಟೆಡ್ ಉದ್ಯೋಗಸ್ಥರ ವರ್ಗಾವರ್ಗಿ ಮತ್ತು ಕರ್ನಾಟಕ ಏಕೀಕರಣವನ್ನು ಕುರಿತು ಚರ್ಚಿಸಲು ವೀರರಾಜಪೇಟೆಯಲ್ಲಿ ಜೂನ್ ತಾ. 12ರಲ್ಲಿ ಒಂದು ಪಬ್ಲಿಕ್ ಮೀಟಿಂಗ್ ಮಾಡುವಂತೆ ಅಲ್ಲಿ ನೆರೆದಿದ್ದ ಕೆಲವರು ತೀರ್ಮಾನಿಸಿದರು.

ಹಿಂದೂದೇಶ.

ಇಂಡಿಯಾಸರ್ಕಾರದ ಸೂಚನೆ ಮೇರೆ ಲಾಹೋರಿನ ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರು ಜಾತಿದ್ವೇಷವನ್ನು ಹುಟ್ಟಿಸಕೂಡದೆಂದು ಲಾಹೋರಿನ ಪತ್ರಿಕೆಗಳ ಸಂಪಾದಕರಿಗೆ ಎಚ್ಚರಿಕೆ ಕೊಟ್ಟಿರುವರು.

ಪೋಲೀಸು ಸ್ಪೆಶ್ಯಲ್ ಸುಪರಿಂಟೆಂಡೆಂಟರಾದ ರಾಯಬಹದ್ದೂರ್ ಭೂಪೇಂದ್ರನಾಥ್ ಚಟರ್ಜಿಯವರನ್ನು ಕಳೆದ ತಾ 28ರಲ್ಲಿ ಸಾಯಂಕಾಲ ಅಲಿಪುರದ ಸೆಂಟ್ರಲ್ ಜೈಲಿನಲ್ಲಿ ಒಬ್ಬ ಕೈದಿಯು ಒಂದು ಚೂರಿಯಿಂದ ತಿವಿದು ಕೊಂದುಬಿಟ್ಟನು

ಬರ್ಮಾಕ್ಕೆ ಸೇರಿದ ಅರಕನ್ ಸಮುದ್ರತೀರದಲ್ಲಿ ಕಳೆದ ತಾ. 22 ರಲ್ಲಿ ಮತ್ತು 23 ರಲ್ಲಿ ಬಿರುಗಾಳಿಯಿಂದ ದೊಡ್ಡ ನಷ್ಟ ಉಂಟಾಗಿದೆ. ಸುಮಾರು 1200 ಜನರು ಮೃತಪಟ್ಟದ್ದು ತಿಳಿದು ಬಂದಿದೆ. ನಷ್ಟದ ಅಂದಾಜು ಇನ್ನೂ ಪೂರ್ತಿಯಾಗಿರುವುದಿಲ್ಲ

ಸರ್ವೆಂಟ್ ಆಫ್ ಇಂಡಿಯಾ ಸೊಸೈಟಿಯವರು ತಮ್ಮ ಪತ್ರಿಕೆಗಳನ್ನು ಪುನಹ ಪ್ರಕಟಿಸಲು ಸಹಾಯಾರ್ಥವಾಗಿ ಹಲವರು ಉಚಿತ ಹಣ ಕೊಡುತ್ತಿದ್ದಾರೆ. ಹೈದರಾಬಾದಿನಲ್ಲಿ ಬಡ್ಡರಾಗಿರುವ ಮಿ. ಕೇಶವರಾವ್‌ರವರು 5000 ರೂಪಾಯಿಗಳನ್ನು ಕೊಟ್ಟಿರುವರು.

ಬೊಂಬಾಯಿ ಯುನಿವರ್ಸಿಟಿಯ ಕಳೆದ ಮೆಟ್ರಿಕ್ಯುಲೇಶನ್ ಪರೀಕ್ಷೆಗೆ ಹೋದ 9000 ವಿದ್ಯಾರ್ಥಿಗಳಲ್ಲಿ ಶೇಕಡ 47 ರಷ್ಟು ಪಾಸಾಗಿರುವರು. ಮಿಸ್ ನೆಸು ಅಭ್ಯಾಂಕರ್ ಎಂಬ ವಿದ್ಯಾರ್ಥಿನಿಯು ಈ ಪರೀಕ್ಷೆಯಲ್ಲಿ ಒಂದನೇಯವಳಾಗಿ ಹಲವು ಇನಾಮುಗಳನ್ನು ಪಡೆದಳು. ಮಿಸ್ ಮಣಿ ದೇಸಾಯಿ ಎಂಬ ಇನ್ನೊಬ್ಬಳು ಇಂಗ್ಲಿಷ್ ಇನಾಮನ್ನು ಗೆದ್ದಳು.

ಹಿಂದೂಮುಸಲ್ಮಾನರಿಗೆ ಆಗಾಗ್ಯೆ ನಡೆಯುತ್ತಿರುವ ದಂಗೆಗಳನ್ನು ನಿಲ್ಲಿಸಲು ಅಂಥಾ ಜಗಳಗಳು ನಡೆಯುವ ಸ್ಥಳಗಳ ಜನರಿಗೆ ಕೆಲವು ವರ್ಷಗಳ ವರೆಗೆ ಲೋಕಲ್ ಬೋರ್ಡುಗಳಿಗಾಗಲೀ, ಕೌನ್ಸಿಲುಗಳಿಗಾಗಲೀ ಮೆಂಬರುಗಳನ್ನು ಚುನಾಯಿಸುವ ಓಟಿನ ಹಕ್ಕು ಕೊಡಬಾರದೆಂಬ ಕಾನೂನು ಮಾಡಬೇಕೆಂದು ಸರ್ ತೇಜ್ ಬಹದ್ದೂರ್ ಸಪ್ರುರವರು ಸೂಚಿಸಿರುವರು.

ಸುಮಾರು ದೊಡ್ಡ ಪಟ್ಟಣಗಳಲ್ಲಿ ಆಗಾಗ್ಯೆ ನಡೆಯುತ್ತಿರುವ ಕುದರೆ ಜೂಜಿಗೆ ವ್ಯಸನಿಯಾದವರಿಂದ ಉಗ್ರಾಣಿಯವರೆಗೂ, ಕೋಟ್ಯಾಧೀಶರಿಂದ ಬಿಕ್ಷೆಬೇಡುವವರ ವರೆಗೂ ಪ್ರೋತ್ಸಾಹ ದೊರೆಯುತ್ತಿರುವುದು. ಇದರಿಂದ ಅನೇಕ ಅನರ್ಥಗಳು ಒದಗುವದಲ್ಲದೆ ಹಲವರು ಪ್ರಾಣಕಳಕೊಂಡಿರುವರು. ಇಂಥ ಈ ದುಷ್ಟ ಆಟವು ತನ್ನ ರಾಜ್ಯದಲ್ಲಿ ನಡೆಯಕೂಡದೆಂದು ಗ್ವಾಲ್ಹೇರದ ರಾಣಿಯವರು ಪ್ರತಿಬಂಧಿಸಿರುವರು.

ತಿರುವಾಂಕೂರಿನಲ್ಲಿ ಪ್ರತಿ ಪತ್ರಿಕೆಯವರೂ ಮೊದಲು 500 ರೂ. ಠೇವಣಾತಿ ಇಡಬೇಕೆಂದೂ, ಪತ್ರಿಕೆಯು ತಪ್ಪಿತಕ್ಕೆ ಗುರಿಯಾದರೆ ಈ ಹಣವನ್ನು ದಿವಾನರು ಸರ್ಕಾರಕ್ಕೆ ಸೇರಿಸಿಕೊಳ್ಳಬಹುದೆಂದೂ, ಪತ್ರಿಕೆಯನ್ನು ಮುಂದರಿಸಬೇಕಾದರೆ ಪುನಹ 2500 ರೂ. ಠೇವಣಾತಿ ಕಟ್ಟಬೇಕೆಂದಲೂ, ಈ ಹಣವೂ ಸರ್ಕಾರದ ಪಾಲಾದರೆ ತಿರುಗಿ ಪತ್ರಿಕೆಯನ್ನು ನಡಿಸಲು ಲೈಸನ್ಸು ಕೊಡಲಾಗುವುದಿಲ್ಲವೆಂತಲೂ ಸರ್ಕಾರದ ಈ ವರ್ತನೆಯನ್ನು ಕುರಿತು ಯಾವ ಕೋರ್ಟಿನಲ್ಲಿಯೂ ಚರ್ಚಿಸಕೂಡದೆಂತಲೂ ಹೊಸ ಪ್ರೆಸ್ಸು ಕಾನೂನನ್ನು ಮಾಡಿರುವರು.

ವಿದೇಶ.

ಮೊರೊಕ್ಕೊದಲ್ಲಿ ರಿಫ್ ಜನರ ಮುಖಂಡನಾದ ಅಬ್ದುಲ್ ಕರೀಮನವರನ್ನು ಫ್ರೆಂಚರು ಸೆರೆಹಿಡಿದಿರುವರಂತೆ. ಇವರು ಶರಣಾಗತರಾದುದರಿಂದ ಅವರನ್ನು ಮನ್ನಿಸಬಹುದೆಂದೂ ಅವರ ಘೋರ ಕೃತ್ಯವನ್ನು ಮರೆಯಲಾಗದೆಂದೂ ಮುಂತಾಗಿ ಫ್ರೆಂಚ್ ಪತ್ರಿಕೆಗಳು ಸಂತೋಷದಿಂದ ಬರೆದಿರುತ್ತವೆ.

ಕೆನ್ಯಾದಲ್ಲಿ ಬಿಳೀ ಹೆಂಗಸರ ಮೇಲೆ ಅಲ್ಲಿಯ ನಿವಾಸಿಗಳು ನಡಿಸುತ್ತಿರುವ ಅಕ್ರಮಗಳು ಹೆಚ್ಚುತ್ತಿರುವದರಿಂದ ಅವುಗಳನ್ನು ಕಡಿಮೆ ಮಾಡಲು ಅಂಥವರಿಗೆ ಶಿಕ್ಷೆಯನ್ನು ಕಠಿಣಮಾಡುವ ಹೊಸ ಕಾನೂನನ್ನು ಬೇಗನೆ ಮಾಡಲಾಗುವದೆಂದು ಅಲ್ಲಿಯ ಗವರ್ನರರು ನ್ಯಾಯ ವಿಧಾಯಕ ಸಭೆಯಲ್ಲಿ ಸೂಚಿಸಿರುವರು

ಪೋಲೆಂಡಿನ ಚುನಾವಣೆಯಲ್ಲಿ ಮಿಲಿಟರಿ ಮುಖಂಡರುಗಳಾದ ಪಿಲ್ಸುಡ್ಸ್ಕಿಯವರು ಅಲ್ಲಿಯ ಸರಕಾರದ ಅಧ್ಯಕ್ಷರಾಗಿ ಚುನಾಯಿಸಲ್ಪಟ್ಟಿರುವರು. ಆದರೆ ಅಧ್ಯಕ್ಷರಿಗೆ ಪಾರ್ಲಿಮೆಂಟನ್ನು ಬರಖಾಸ್ತು ಮಾಡುವ ಅಧಿಕಾರ ಇಲ್ಲದಿರುವ ಕಾರಣ ಆ ಪದವಿಯನ್ನು ಒಪ್ಪಿಕೊಳ್ಳುವುದಿಲ್ಲವೆಂದು ಪಿಲ್ಸುಡ್ಸ್ಕಿಯವರು ಹೇಳಿರುವರು

ಕಳೆದ ತಾ. 28ರಲ್ಲಿ ಪೋರ್ಚುಗಲ್ ದೇಶದ ಎರಡು ಡಿವಿಜನ್ ಸೈನ್ಯದವರು ಸರ್ಕಾರಕ್ಕೆ ವಿರುದ್ಧವಾಗಿ ದಂಗೆ ಎದ್ದರು. ಹೊಗೆಸೊಪ್ಪು ವ್ಯಾಪಾರದ ಸಂಬಂಧದ ಸಮಂಧ ಪಾರ್ಲಿಮೆಂಟಿನಲ್ಲಿ ಉಂಟಾದ ಕಠಿಣವಾದ ಚರ್ಚೆಯೇ ಈ ದಂಗೆಗೆ ಕಾರಣವೆಂದು ಊಹಿಸಲಾಗಿದೆ. ಮಿಲಿಟರಿಯವರು ಸರ್ಕಾರವನ್ನು ಸೋಲಿಸಿ ಜನರಲ್ ಡಿಕೋಸ್ಟಾರವರ ಸರ್ಕಾರವನ್ನು ನಡಿಸಲಿಕ್ಕಿರುವರು.

ಪತ್ರವ್ಯವಹಾರ

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ಪತ್ರಿಕಾ ಕರ್ತರು ಉತ್ತರವಾದಿಗಳಲ್ಲ ಸಂ.

[illegible]

ನಾನು ಬೊಂಬಾಯಿ ಪ್ರೆಸಿಡೆನ್ಸಿಯಲ್ಲಿ ನೌಕರಿ ಮಾಡಲಿಕ್ಕೆ ಹತ್ತಿ ಇಪ್ಪತ್ತೊಂದು ವರ್ಷ ಆಗುತ್ತಾ ಬಂತು. ಇದು ಅಲ್ಲದೆ ಕೆಲವು ಜಿಲ್ಲಾ ಮತ್ತು ರೈಲ್ವೆಗಳಲ್ಲಿ ನೌಕರಿ ಮಾಡಿದ ಅನುಭವದ ಮೇಲಿಂದ ನೋಡಲಾಗಿ ಎಲ್ಲಾ ತರದ ಕಸಬುಗಳಿಗಿಂತ ಹೆಚ್ಚು ಉತ್ಪನ್ನದ ಕಸಬು ಈಗ ವ್ಯಾಪಾರ ಶಿವಾಯಿ ಎರಡನೆಂದು ಇಲ್ಲ. ವ್ಯಾಪಾರದಲ್ಲಿ ಅನೇಕ ತರದವು ಅವೆ. ಅವುಗಳ ಪೈಕಿ ಕಿರಾಣಿ, ಬಟ್ಟೆ, ಕಾಫಿ, ವಗೈರೆ ವ್ಯಾಪಾರವು ನಡಿಯುತ್ತಿರುವುದು ಎಲ್ಲರಿಗೆ ತಿಳಿದೇ ಇದೆ. ತನಗೆ ಯಾವದರಲ್ಲಿ ರುಚಿ ಅದೆ ಅದನ್ನು ಕೈಕೊಳ್ಳಬೇಕು. ಇದಕ್ಕೆ ಬಂಡವಾಳದ ಹೊರ್ತು ಕೈಕೊಳ್ಳಲಿಕ್ಕೆ ಆಗುವದಿಲ್ಲ ಎಂತ ಅನೇಕ ಜನರ ಮತವಾಗಿದೆ. ಇದು ತಪ್ಪು ತಿಳುವಳಿಕೆಯಾಗಿದೆ. ಮೊದಲು ವ್ಯಾಪಾರ ಕಲಿತು ಅನಂತರ ಬಂಡವಾಳದ ಕಡೆಗೆ ಲಕ್ಷ್ಯ ಕೊಡಬಹುದು. ವ್ಯಾಪಾರಕ್ಕೆ ಸ್ಪೆಶ್ಯಲ್ ತಲೆ ಇದ್ದಲ್ಲಿ ವ್ಯಾಪಾರ ಮಾಡಬೇಕು. ಇಲ್ಲವಾದರೆ 'ಇಲ್ಲ ಮನಸ್ಸು ಮಾತ್ರ ಇದ್ದವನಿಗೆ ಮುಂದಿನ ದಾರಿ ಹ್ಯಾಗೂ ಸಿಗತ್ತದೆಂಬ' ಗಾದೆಗೆ ಅನುಸರಿಸಿ ನಡಿಯಬೇಕು. ಬೊಂಬಾಯಿ ಇಲಾಖೆಯಲ್ಲಿ ಗುಜರ, ಮಾರವಾಡಿ, ಲಿಂಗಾಯಿತ ವಗೈರೆ ಇತರ ಜಾತಿಯವರು ಶ್ರೀಮಂತರಾದದ್ದು ವ್ಯಾಪಾರದಿಂದಲೇ ಎಂತ ಅನ್ನಲಿಕ್ಕೆ ಏನೂ ಸಂದೇಹವಿಲ್ಲ. ಇದು ಅನೇಕರಿಗೆ ಗೊತ್ತಿದೆ. ವ್ಯಾಪಾರ ಎಂಬುವುದು ಅವರ ಮುಖ್ಯ ವೃತ್ತಿಯೆಂತ ತಲೆಗೆ ಹೊಕ್ಕಿದ್ದರಿಂದ ಅವರಲ್ಲಿ ಪ್ರತಿಯೊಬ್ಬನೂ ವ್ಯಾಪಾರದಲ್ಲಿ ಪ್ರವರ್ತನಾಗುತ್ತಾನೆ. ಎಲ್ಲವರು ಬಂಡವಾಳವಿದ್ದೇ ಶ್ರೀಮಂತರಾದರೆಂದು ಹೇಳಲಿಕ್ಕೆ ಬಂದೀತೆ, ಏನು? ನಿಜವಾಗಿ ಇಲ್ಲ. ತಮ್ಮ ಹಿಂದಿಯರ ಕಾಲದಲ್ಲಿದ್ದ ಪ್ರವೃತ್ತಿಯನ್ನು ಹಾಸಬೇಕೆಂತ ಈಗಿನ ಕಾಲದಲ್ಲಿ ಕೂಡಾ ಹಲವಾಡಿದಲ್ಲಿ ಅದರಿಂದ ಹಾಯಿದೆ. ಆಗದೆ ಹಿಂದಿನಿಂದ ಪಶ್ಚಾತ್ತಾಪ ಆಗುತ್ತೆ. ಹಿಂದಿನ ಕಾಲದಲ್ಲಿ ಆಯಾಯ ದಿನದ ಅನುಕೂಲದ ಪ್ರಕಾರ ಜಾತಿ ವಿಂಗಡ ಆಗಿ ಆಯಾಯ ಜಾತಿಯವರ ಆಯಾಯ ಪ್ರವೃತ್ತಿ ತಕ್ಕೊಳ್ಳಬೇಕೆಂತ ಇತ್ತು. ಈ ಕಾಲದಲ್ಲಿ ಪ್ರತಿಯೊಬ್ಬನಿಗೆ ತನ್ನ ಜವಾಬ್ದಾರಿ ತನ್ನ ಮೇಲೆ ಅನಿಸುವಂತ ತಿಳಿಯುವಷ್ಟು ಜ್ಞಾನ ಇರುವುದರಿಂದ ತನಗೆ ರುಚಿಕರವಾದ ಪ್ರವೃತ್ತಿ ತಕ್ಕೊಂಡರೆ ತನಗೆ ಫಾಯಿದೆಯೂ ಮತ್ತು ಮಾನವೂ ದೊರೆಯುವುದು. ಹೀಗಿರುತ್ತಾ ಕೊಡಗಿನಲ್ಲಿ ಹಿಂದುಳಿದ ಜಾತಿಯವರ ಪೈಕಿ ಒಬ್ಬರು ಇರುತ್ತಿದ್ದು [illegible] ಈ ಕುತೂಹಲ ಹೆಚ್ಚು ಇರತಕ್ಕದ್ದು. "ತನ್ನ [illegible]ನ್ನು ತಾನೇ ಬರೆದು ತೆಗೆಯಲಿಕ್ಕೆ ಇನ್ನೊಬ್ಬರ ಹಾಕ್ಕಿಲ್ಲ ಎಂದು" ಹೀಗೆಯೇ ಪ್ರತಿಯೊಬ್ಬನು ತಿಳುಕೊಂಡು ತನ್ನ ಸಾಮರ್ಥ್ಯವನ್ನು ತೋರಿಸಿದರೆ "ನನಗೆ ತಾನೇ ಸಹಾಯ ಮಾಡಿಕೊಂಡವನಿಗೆ ದೇವರು ಸಹಾಯ ಮಾಡುತ್ತಾನೆಂಬ' ಗಾದೆಗೆ ಅನುಸರಿಸಿ ಫಲ ಹೊಂದುವಂತೆ ಆಗುತ್ತದೆ

ಒಂದು ವೇಳೆ ವ್ಯಾಪಾರದಲ್ಲಿ ತಲೆ ಇಲ್ಲದವನಾದರೆ ಕೈಗಾರಿಕೆ ಕೆಲಸಕ್ಕೆ ತೊಡಗಬೇಕು. ಈ ಕೆಲಸಕ್ಕೆ ಹೆಚ್ಚಿನ ತಲೆಬೇಡ. ಪ್ರಕೃತ ಮೇಹನತ್ತು ಅಂದರೆ ಶ್ರಮ್ರೆ ಇರಬೇಕು. ಇದು ನಾನಾತರದು ಅವೆ. ಅಂದರೆ ಆರನಿಸೋಯವುದು, ಚಿತ್ರಗಾರ ಕೆಲಸ, ಕಮ್ಮಾರ ಕೆಲಸ ವಗೈರೆ ಈ ಪ್ರಕಾರ ಅವೆ. ಬರೀ ಸರಕಾರಿ ಕೆಲಸಮಾಡಿ ಕಾಯಿಯಿದ್ದು ಶರೀರವನ್ನು ಕ್ಷೀಣಮಾಡಿಕೊಂಡು ಪೆನ್ಶನ್ ತಗೊಳ್ಳುವ ಮೊದಲು ಹೆಂಡತಿ ಮಕ್ಕಳನ್ನು ತಮ್ಮ ಪಾಡಿಗೆ ಬಿಟ್ಟು ಜೀವಕಳಕೊಳ್ಳುವುದರಲ್ಲಿ ಏನು ಹಿತವಿದೆ. ಬರೇ ವ್ಯಸನಾಯದ ರುಚಿ ಇರುವವನು ಇದನ್ನು ತಪ್ಪದೆ ಕೈಗೊಳ್ಳಬೇಕು. ನಮ್ಮ ಹಿಂದುಳಿದ ಕೊಡಗಿನ ಕ್ಷತ್ರಿಯ ಧರ್ಮದವರು ಯಂತ ತಿಳಕೊಂಡು ಬಡಾಯಿಗೆ ಅಪಾಯಕ್ಕಾದವರು ಮತ್ತು ಪ್ರಕೃತ ವ್ಯವಸಾಯಕ್ಕೆ ಅಲಾಯಕ್ಕಾದವರೂ ಎಂತ ವಗೈರೆ ಮನುಷ್ಯ ಸ್ವಭಾವದಿಂದ ಬೇರೆ ವೃತ್ತಿ ಮಾಡಲಿಕ್ಕೆ ಕೈಗೊಳ್ಳದೆ ಹೋದರೆ ನಮಗಿಂತ ಹಿಂದುಳಿದ ಕೀಳುಜಾತಿಯವರು ಸಹ ನಮ್ಮನ್ನು ಹಿಂದೆ ಹಾಕಿ ಅವರು ಮುಂದೆ ಹೋಗುವ ಸಂಭವ ಇದೆ. ಅತಿ ಶ್ರೇಷ್ಠರೆನಿಸುವ ಬ್ರಾಹ್ಮಣ ಜಾತಿಯವರು ಸಹ ತಮ್ಮ ಕುಲವೃತ್ತಿ ಬಿಟ್ಟು ಅನೇಕ ಜನರ ಸಮೂಚಿತದಲ್ಲಿರುವ ಹೀನಕಸಬಿಗೆಸಹ ಪ್ರವರ್ತರಾಗಿರುತ್ತಾರೆ. ಹಾಗಾದರೆ ಇವರು ಬುದ್ಧಿಹೀನರೋ ಎಂದರೆ ಅಲ್ಲ. ನಮ್ಮನ್ನು ಆಳುವ ಬ್ರಿಟಿಷರು ವ್ಯಾಪಾರಸ್ಥರಲ್ಲವೇ? ಕೈಕೊಂಡ ಯಾವದೇ ವೃತ್ತಿಯನ್ನು ಪೂರ್ಣತೆ ಮಾಡಬೇಕಾದರೆ, ಅದರ ಮರ್ಮವನ್ನು ಕಲಿತ ಹೊರ್ತು ಜಯ ಸಿಗಲಾರದು. ಜಯ ಹೊಂದಿದರೆ ಮಾತ್ರ ಶ್ರಮಪಟ್ಟದಕ್ಕೆ ಫಲ ತಂದಿತಾಗುವುದು.

ಇದೇ ಅದರ ಸಾರಾಂಶ. ಯಾಸಂದರ್ಭ ತನಗೆ ಯಾವದು ರುಚಿ ಆಗುತ್ತದೋ ಅದನ್ನು ಕೈಕೊಂಬಲಿಕ್ಕೆ ಸಂದೇಹ ಮಾಡಬಾರದು. ಹೀಗೆ ಕೈಕೊಂಡಲ್ಲಿ ಯಾವತ್ತೂ ಜಯಶಿಗುವುದು.

ಇದು ಸ್ವತಹ ಅನುಭವದಿಂದ ಜಾಹೀರ ಮಾಡುವುದರಿಂದ ಇದನ್ನು ತಿಳಿಯದವರು ತಮ್ಮ ಲಕ್ಷ್ಯಕ್ಕೆ ತರಬೇಕೆಂತ ನನ್ನ ಪ್ರಾರ್ಥನೆಯದೆ. ಹೇಳುವವರು ಮಾಡಲಿಕ್ಕಿಲ್ಲ ಎಂಬ ಗಾದೆಗೆ ಇದು ಅನುಸರಿಸಿಯಿಲ್ಲ ಅಂತ ತಿಳಿಯಬಹುದು.

ಕಾರಣ ನಾನು ನನ್ನ ಕೈಯಲ್ಲಿ ಆದ ಸಹಾಯ ಮಾಡದಲೇ ಬೇಕಾದಷ್ಟು ಜಾಹೀರ ಮಾಡಿದಲ್ಲಿ ಅದಕ್ಕೆ ಜನರು ಬೆಲೆ ಕೊಡಲಿಕ್ಕಿಲ್ಲ ಎಂಬುವ ಅಂಜಿಕೆಯಿಂದ ಮೇಲೆ ನಮೂದಿಸಿದ ವ್ಯಾಪಾರ ಅಥವಾ ಕೈಗಾರಿಕೆ ನನ್ನಿಂದ ಹೆಚ್ಚಿನ ವಿದ್ಯೆ ಕಲಿಯಲಿಕ್ಕೆ ಕುತೂಹಲ ಇದ್ದು ಹಣಕ್ಕೆ ತೊಂದರೆ ಆಗುವವನಿಗೆ ದರ ತಿಂಗಳ 5 ರೂಪಾಯಿಯಂತೆ ಮೂರು ವರುಷದ ವರೆಗೆ ಸಹಾಯ ಮಾಡಲಿಕ್ಕೆ ತಯಾರಿದ್ದೇನೆ. ಈ ಬಗ್ಗೆ ಮಡಿಕೇರಿ ಹೈಸ್ಕೂಲ್ ಹೆಡ್‌ಮಾಸ್ಟರರಿಗೆ ಬರೆದಿದೆ. ಅವರು ಯಾವ ಕೊಡಗಿನ ವಿದ್ಯಾರ್ಥಿಗೆ ಶಿಫಾರಸು ಮಾಡುತಾರೋ ಅವರಿಗೆ ಸದರಿ ಸ್ಕಾಲರಶಿಪ್ಪು ಸಿಗುವುದು. ಕಾರಣ ಅವಶ್ಯವುಳ್ಳ ವಿದ್ಯಾರ್ಥಿ ಕೂಡ್ಲೆ ಸದರಿ ಹೆಡ್‌ಮಾಸ್ಟರರಿಗೆ ಅರ್ಜಿ ಮಾಡಿಕೊಂಡಲ್ಲಿ ಅವರ ತ[illegible] ತಿಳಿಸುವರು.

ಮುಂಡುಗೋಡ ಪಾಂಡಂಡ ಮುದ್ದಪ್ಪ
ಸಬ್ ಇನ್‌ಸ್ಪೆಕ್ಟರು.
26-5-26 ಬೊಂಬಾಯಿ ಪೋಲೀಸ್.

ನಮ್ಮನ್ನು ಆಳುವ ಬ್ರಿಟಿಷ್ ಸರಕಾರಕ್ಕೆ ವಿನಂತಿ

ವಿನಂತಿಯನ್ನು ಕೇಳುವ ಸರಕಾರವು ಕೊಡಗಿಗೆ ಇನ್ನೂ ಸಿಕ್ಕಿಲ್ಲವೋ ಎಂಬ ಸಂಶಯವು ಹಲವರಿಗಿದೆ. ನಾನೊಬ್ಬ ಬಡ ಹೆಂಗಸು. ಗಂಡಸರ ಕೂಗನ್ನು ಕೇಳದ ಸರಕಾರವು ಹೆಂಗಸಾದ ನನ್ನ ಮೊರೆಯನ್ನಾದರೂ ಕೇಳೀತೇ. ಕೊಡಗಿನ ಹೆಂಗಸರ ಸ್ಥಿತಿಯು ಅಧೋಗತಿಗೆ ಇಳಿದಿದೆ. ಕಾಯಿಲೆಯಾದರೆ ಗಂಡಸರಾದ ಡಾಕ್ಟರಿಂದ ಉಪಚಾರ ಹೊಂದಬೇಕು. ಹಿಂದಿಯರಲ್ಲಿ ಪರ ಗಂಡಸರಿಂದ ನಮ್ಮ ಶರೀರವನ್ನು ಮುಟ್ಟಿಸಿಕೊಳ್ಳುವದಕ್ಕಿಂತಲೂ ಮರಣವೇ ಉತ್ತಮವೆಂದು ಭಾವಿಸುವ ಹೆಂಗಸರು 100ಕ್ಕೆ ಇನ್ನೂ 90 ಮಂದಿಯಿದ್ದಾರೆ. ಇವರಿಗೆ ಕಾಯಿಲೆ ಬಂತೆಂದರೆ ಭಗವಂತನಿಂದ ಉಳಿಯಬೇಕಲ್ಲದೆ ಈಗಿನ ಡಾಕ್ಟರುಗಳಿಂದಲ್ಲ. ಅದರಲ್ಲೂ ಗರ್ಭಿಣಿಯರಾದ ಕಾಲದಲ್ಲಿ ನಮಗೆ ಮರಣವೇ ನಿಶ್ಚಯವೆಂದು ನೆನೆಸಿಕೊಂಡಿರುತ್ತಿರುವೆವು. ದೇಶದ ಸಂತತ್ಯ ಕಮ್ಮಿಯಾಗಿ ಬಡತನವು ಈಗ್ಯೆ 20 ವರ್ಷಗಳಿಂದ ತಲೆದೋರಿದೆ. ಇದಕ್ಕೆ ಕಾರಣವು ಸರಕಾರವೇ ಆದರೂ ಸರಕಾರದವರು ರೈತರಾದ ನಾವೇ ಕಾರಣವೆಂದು ಅನ್ನುತ್ತಿರುವರು. ಯಾರಾದರೂ ಆಗಲಿ—ಹಾಲು ಮಜ್ಜಿಗೆ ಕಾಣದ ಹೆಂಗಸರಾದ ನಮ್ಮ ಬಲವು ದಿನೇ ದಿನೇ ಕುಗ್ಗುತ್ತಿದೆ. ಹೆರಿಗೆಯಲ್ಲಿ ಡಾಕ್ಟರುಗಳ ಸಹಾಯ ಬೇಕೇಬೇಕು. ಸ್ತ್ರೀಯರಾದ ನಮಗೆ ಪರಪುರುಷರಾದ ಅದರಲ್ಲೂ ಗಂಡಸು ಡಾಕ್ಟರುಗಳ ದರ್ಶನವು ರಾಕ್ಷಸರು ಯಾ ಯಮಭಟರ ದರ್ಶನದಂತೆ ಹೆರಿಗೆಯಲ್ಲಿ ಕಾಣಬರುತ್ತಿದೆ. ಇವರಿಗಿರತಕ್ಕ ನರ್ಸ್‌ಗಳೂ ಯಾವ ನಿಜವಾದ ಟ್ರೈನಿಂಗ್ ಇಲ್ಲದವರೇ ಹೆಚ್ಚು. ನಮ್ಮ ಮೇಲೆ ನಡಿಸುವ ಪರೀಕ್ಷೆಯಿಂದಲೇ ಅವರ ವಿದ್ಯೆ ಕಲಿಯುತ್ತಿರುವರೆಂಬುದು ನಮ್ಮ ಭಾವನೆ. ಈ ಡಾಕ್ಟರು ನರ್ಸ್‌ಗಳಿಂದ ಕೂಡಿದ ಹೆಂಗೆ (delivery) ಕೇಸ್‌ಗಳಂತೂ ನಮ್ಮ ಮಕ್ಕಳು ಪ್ರಾಣವನ್ನು ತೆಗೆಯುತ್ತಿದೆ. ಈ ದೇಶದಲ್ಲಿ ಹೆರಿಗೆಯಲ್ಲಿ ಮರಣ ಹಡುತ್ತಿರುವ ಹೆಂಗಸರ ಮತ್ತು ಚಿಕ್ಕ ಕೂಸುಗಳ ಮರಣಸಂಖ್ಯೆಯನ್ನು ಬಿಟ್ಟಾರೆ ಮೂಲನಿವಾಸಿಗಳ ಜನಸಂಖ್ಯೆಯೂ ಕಮ್ಮಿಯಾಗುತ್ತಿರುವ ಸ್ಥಿತಿಯನ್ನು ಸ್ಥಳೀಕ ಸರಕಾರದವರು ಕಂಡರೂ ಕಾಣದ ಹಾಗೆ ಇದ್ದಾರೆ. ಮತ್ತು ಅದಕ್ಕೆ ತಕ್ಕ ಉಪಾಯಗಳನ್ನು ಕಲ್ಪಿಸಲು ಮನಸ್ಸು ಬಂದಿಲ್ಲ. ಬ್ರಿಟಿಷ್ ಸರಕಾರಕ್ಕೆ ಇಲ್ಲಿನ ವ್ಯಸನಕಾರಿಗೆ ಈ ನಮ್ಮ ಚಿಕ್ಕ ದೇಶದ ನಿಜಸ್ಥಿತಿಯು ತಿಳಿದಿಲ್ಲ. ದಯಾಶೀಲರಾದ ಬ್ರಿಟಿಷ್ [illegible] ನಾಂಗವು ಧರ್ಮಾರ್ಥವಾಗಿಯಾದರೂ ಈ ದುರ್ಮರಣವನ್ನು ನಿಲ್ಲಿಸಲು ಬಂದು ಹೆಂಗಸರ ಆಸ್ಪತ್ರೆಯನ್ನು ಇಡದೆ ಇರರು. ಇದು ಅಲ್ಲಿ ವರೆಗೆ ಮುಟ್ಟೀತೇ? 10 ವರ್ಷಕ್ಕೊಮ್ಮೆ ಶಾನೆಸ್ ಮಾರಿ! (Census). ಆ ಸಮಯದಲ್ಲಿ ಇದ್ದ ಚೀಫ್ ಕಮೀಶನರಿಗೆ ತಿಳಿಯಿತೋ ಇಲ್ಲವೋ ಅನ್ನುವಷ್ಟರಲ್ಲಿ ಹೊಸ ಚೀಫ್ ಕಮೀಶನರ್ ಬಂದರು. ಅವರು ಇದನ್ನು ಮರೆತರು. ಇಲ್ಲವೇ ಜನಸಂಖ್ಯೆಗೆ ತಕ್ಕ ಕಾರಣವನ್ನು ಅವರಿಗೆ ಹೇಳಿ

ದಂತೆ ಕಲ್ಪಿಸಿ ಸುಮ್ಮನಾದರು ರೈತರು ಮೊರೆಯಿಟ್ಟರೂ ಹ
ಣವಿಲ್ಲವೆಂದು ಸರಕಾರವು ಹೇಳುತ್ತಿದೆ ಹಣವೆಲ್ಲಿಂದ?
45 ಜನ ಘನ ಆಫೀಸರುಗಳಿಗೆ 60,70 ಸಾವಿರದಷ್ಟು ರೂ
ಪಾಯಿ ವರ್ಷಕ್ಕೆ ಬೇಕು ಕೊಡಗು ಬೇರೆ ಡಿಸ್ಟ್ರಿಕ್ಟ್‌ಗಳ
ತಾಲೋಕಿಗೆ ಸಮ. ಇಷ್ಟು ಚಿಕ್ಕ ಜಿಲ್ಲೆಯಾದರೂ ಘನ
ಆಫೀಸರುಗಳನ್ನು ಸಾಕುತ್ತಿದ್ದಾರೆ ಇದಕ್ಕೊಂದು ರಬ್ಬರಿ
ನ ಗೊಂಬೆಗಳಂತಿರುವ ಕೌನ್ಸಿಲ್. ಈ ಗೊಂಬೆಗಳು ಈ ಘ
ನ ಆಫೀಸರುಗಳನ್ನು ತೆಗೆದುಹಾಕಿ ಎಂದು ಹೇಳಿದರೆ, ಈ ಸಂ
ಗತಿ ಸಮಗಿಲ್ಲ, ಧರಾವು ವಾಪಸು ತೆಗೆಯಿರಿ ಎಂದು ಸರಕಾರ
ವು ಅನ್ನುತ್ತಿದೆ ಆಯಿತು, ಇನ್ನು ಈ ಘನ ಆಫೀಸರುಗಳ
ಗೋಜಿಗೆ ಹೋಗುವವರು ಯಾರು?

ಚೀಫ್ ಕಮಿಷನರ್ ಸಾಹೇಬರೇ ಇನ್ನು ಯಾವ ಬಾಬಿಗಾ
ದರೂ ಈ ತಲೆಭಾರದ ಖರ್ಚಿನ ಘನ ಉದ್ಯೋಗಸ್ಥರನ್ನು
ತೆಗೆಯಲು ಸಿದ್ಧಿಗೆ ಮನಸ್ಸು ಬಾರದೆಹೋದರೆ ದಿಕ್ಕಿಲ್ಲದೆ ಸಾ
ಯುತ್ತಿರುವ ಹೆಂಗಸರ ಮತ್ತು ಬಿಕ್ಕಬಿಕ್ಕಿ ...ಳುವಾರೂ
ಕರ ಜೆಯಿಟ್ಟು ಘನ ಉದ್ಯೋಗಸ್ಥರಲ್ಲಿ ಇಬ್ಬರನ್ನಾದರೂ ತೆ
ಗೆದುಹಾಕಿ ಈ ಹಣದಿಂದ ಚಿಕ್ಕದೊಂದು ಹೆಂಗಸರ ಆಸ್ಪತ್ರೆ
ಯನ್ನಾದರೂ ಮಾಡಿಸಿ ಕಾಪಾಡಿ ಇಲ್ಲವೇ ಬ್ರಿಟಿಷ್ ಪಾರ್ಲಿ
ಮೆಂಟಿಗೂ ಪಬ್ಲಿಕಿಗೂ ನಮ್ಮ ಸ್ಥಿತಿಯನ್ನು ತಿಳಿಸಿ ಅವರೇನಾ
ದರೂ ಧರ್ಮಾರ್ಥದ ಸಹಾಯವನ್ನಾದರೂ ಮಾಡ್ಯಾರು. ನಿ
ಮ್ಮ ಆಶ್ರಯವನ್ನು ಕೋರುವ ಸಾವಿರಗಟ್ಟಲೆಯಾಗಿ ಸಾಯು
ತ್ತಿರುವ ಹೆಂಗಸು ಮಕ್ಕಳ ಜೀವ ಉಳಿಸಲಿಕ್ಕೆ ತತ್ತ ಪಿಪಾ
ಡು ಮಾಡಿದ ಈ ರೀತಿ ನೆ ನೂರು 11 ಲಕ್ಷ ಉತ್ಪತ್ತಿಯ ದೇ
ಶಕ್ಕೆ ಲಕ್ಷ ರೂಪಾಯಿಗಳನ್ನು ಸಾಹೇಬರುಗಳು ಘನ ಆಫೀಸರು
ಗಳಿಗೆ ತಿನ್ನಿಸುತ್ತಿರುವುದಾ ಇದೇನೋ ಬ್ರಿಟಿಷ್ ಧರ್ಮ, ಇದೇ
ಯೋ ಬ್ರಿಟಿಷ್ ನ್ಯಾಯ ಇವೆರಡೂ ನಿಮ್ಮಲ್ಲಿ ಇಲ್ಲವೆಂದರೆ, ನೀ
ವು ನಮ್ಮನ್ನು ಆಳುತ್ತಿರುವ ಉದ್ದೇಶ್ಯವೇನು? ನಿಮ್ಮ ಮ
ನೋಗತವೇನು? ನಮ್ಮ ಈ ಚಿಕ್ಕ ಜನಾಂಗವು ಪೂರಾನಾಶ
ವಾಗಿ, ಕೊಡಗು ಅರಣ್ಯಪ್ರದೇಶವಾಗುವ ವರೆಗೂ ಕಂದಾಯ
ವಸೂಲಿಯಲ್ಲಿಯೂ ಸರ್ಕಾರದ ಬಂದೋಬಸ್ತಿನಲ್ಲಿಯೇ ಇರುವ
ದರಲ್ಲಿ ಉದ್ಯುಕ್ತರಾಗಿರುವಿರಾ? ಹಾಗಾದರೂ ಬಹಿರಂಗ ಪ
ಡಿಸಿ ಕೂರ್ಗಿನ ಆಳುವಿಕೆಯ ವಿಷಯ ಇಂಡ್ಯಾದ ಯಾವ ಭಾ
ಗದಲ್ಲಿಯೂ ಇಷ್ಟು ಚಿಕ್ಕ ಡಿಸ್ಟ್ರಿಕ್ಟಿಗೆ ಇರದು ಪ್ರಜೆಗಳ
ಸಂಪತ್ತೇ ನಮ್ಮ ಸಂಪತ್ತು ಪ್ರಜೆಗಳ ತೃಪ್ತಿಯೇ ನಮ್ಮ ಉ
ದ್ದೇಶವೆಂದು ಮೊದಲಾಗಿ ತಲೆಗಳಿಂದಲೂ ನಮ್ಮ ಬ್ರಿಟಿಷ್
ರಾಜರುಗಳು ಇತ್ತಿರುವರು. ಸಾರಿದ ಬಂಗಾರದಸವ್ವ ಸು
ಳ್ಳಾಗದಂತೆಯಾದರೆ ಇಂಡ್ಯಾದೇಶದಲ್ಲಿಲ್ಲದ ರಾಜಭಕ್ತಿಗೆ
ಹೆಸರುಗೊಂಡ ಈ ಚಿಕ್ಕ ಜನಾಂಗದ ರಾಜ್ಯಾಡಳಿತದಲ್ಲಿ ಹ
ಕ್ಕ ಒಡವಾವಳಿಗಳನ್ನು ಮಾಡಿ ಉಪಕಾರವಿಲ್ಲದೆ ಸಾಯಿಸಬಿಟ್ಟಿ
ಯಲ್ಲಿ ಸಾಯುತ್ತಿರುವ ವೇಳೆಯಿಂದ ತುಂಬಿದ ಹೆಂಗಸು
ಮಕ್ಕಳ ಮೇಲೆ ಕರುಣೆಯಿಟ್ಟು ಒಂದು ಹೆಂಗಸರ ಆಸ್ಪತ್ರೆ
ಯನ್ನು ಕೊಡಗಿಗೆ ಏರ್ಪಡಿಸಲಾರದೇ?

ಅಮ್ಮತಿ

ಸತ್ಯ ವಿಚಾರ

ವಾಚಕ ಪ್ರಿಯರೆ!

ನಮ್ಮ ಬಿಲಮೂರಿ ಗ್ರಾಮದ ಸಂಘಗಳಲ್ಲಿ ಕೆಲವು ಪಂ
ಚರುಗಳು ಕಮಿಟಿತನಕ್ಕೆ ಮೇಲಿಂದ ಮೇಲೆ ಪಿತ್ರಾರ್ಜಿತದ
ಹಕ್ಕಿನಂತೆ ಅವರೇ ಚುನಾಯಿತರಾಗಿ ಬರುತ್ತಾರೆಂದೂ ಒಂ
ದೇ ಪಂಗಡದಲ್ಲಿ ನಾಲ್ವರು ಚುನಾಯಿತರಾಗಿರುವರೆಂದೂ
ಬೇರೆ... ಬರು ಅನುತ್ತಾರೆ ಇವರ ಅಳಿಗೇಡಿತನಕ್ಕೆ
ಎಣ್ಣೆ ಎರದು ಅದು ಸ್ನೇಹ ಎಲ್ಲಿ ಚುನಾವಣೆಯ ರೀತಿ ಇ
ರುತ್ತೋ ಅಲ್ಲಿ ಒಬ್ಬರಿಗೊಬ್ಬರ ಪ್ರೀತಿಗೆ ಪಾತ್ರರೇ ಮುಂದ
ಕ್ಕೆ ಬರುತ್ತಾರೆಂಬುದೂ, ಮತ್ತೂ ಆ ಕಾರ್ಯ ನಡಸಲಿಕ್ಕೆ ಅ
ವರೇ ಯೋಗ್ಯರೆಂಬುದೂ, ಯೋಗ್ಯರಾಗುವುದರಲ್ಲಿಯೂ ಆ
ಕಾರ್ಯದಲ್ಲಿ ಮುಂದೆ ಬಂದೇ ಬರುತ್ತಿರೆಂಬುದೂ ಸರ್ವರಿ
ಗೆ ವಿದ್ಯಮಾನ ಸಂಗತಿಯೇ ಆಗಿರುವಲ್ಲಿ ಗುಣಕ್ಕೆ ಪ್ರತ್ಯ
ಸವ ಬಿಚ್ಚಬ್ಬರು ಬಾಯಿ ಬಡಕೊಂಡಲ್ಲಿ ಎಳ್ಳಷ್ಟೂ ಪ್ರ
ಯೋಜನವಿಲ್ಲ ಹೆಚ್ಚಿನ ಮಹತ್ವ ಗುಣವಿಲ್ಲದಿರುವದರಿಂದ
ಲೇ ಈ ಬಾಯಿ ಬಡಿಕರು ಮುಂದಕ್ಕೆ ಬರಲಾಗದಿಲ್ಲವೆಂದೂ
ಹಣ್ಣಿನ ಒಡಮಂತಿದವರ ಪ್ರೀತಿಗೆ ತಾವು ಪಾತ್ರರಲ್ಲವೆಂದೂ,
ಆದ್ದರಿಂದಲೇ ತಮ್ಮ ಪಾಲಿಗೆ ಒಡುವುತ ದೊರೆಯುವದಿಲ್ಲ
ವೆಂಬುದನ್ನು ತಿಳಿಯುವದಿಲ್ಲ ಪ್ರಕೃತ ನಮ್ಮ ಚಾಪಳ ಕ
ರ್ತರು ಬೂಡಾ ಇಂಥಾ ಮಹತ್ವವುಳ್ಳವರೆಂಬುದನ್ನು ನಾವೂ
ಸ್ಪಷ್ಟ ಆಲಾಪಿಸ ಬೇಡವಷ್ಟೆ. ಯಾರು ಬಾಗಿಲಾಯಿತಿನಿಂದಲೇ
ಎರಡು ಸಂಘಗಳಿಗೂ ಕಾರಕರಾಗಿಕೊಂಡು ಸಾಲ ಸಂ
ವಾಯಿ ಶದಲ್ಲಿ ಕಮಿಟಿಗಳಿಗೆ ಹೇರಳ ತೊಂದರೆಯೆಂಬ ಮೂ
ಡ ತ್ರ ವಿವಾದರೂ ಆಕ್ಷೇಪಣೆಗೆ ಗುರಿಯಾಗಿಕೊಂಡು ಇ
ಷ್ಟು ಆ ಸಾಲ ತೀರಿಸಲಿಕ್ಕಾಗಿ ಯಾವದಾದರೂ ಇಲ್ಲದ ಸ
ಲ್ಲದ ಕೃತ್ಯಗಳನ್ನು ಮಾಡಿಕೊಂಡು ಜೀವಿಸುವರೆಂದು ಬೆಪ್ಪಿ
ಟ್ಟರೆ ಅದು ಅರಣ್ಯರೋಧನದಂತಾಗುವದಲ್ಲದೆ ಮತ್ತೇನೂ
ಆಗುವದಿಲ್ಲ ಗ್ರಾಮದಲ್ಲಿ ಒಮ್ಮೆ ಚುನಾಯಿತರಾದ ಮೇಲೆ
ಬಿರೇ ಬಲಾಬಲ್ಯೆ ಚುನಾಯಿತರಾಗಿ ಬರಲಿಕ್ಕೂ ಒಂದೇ
ಪಂಗಡದವರೇ ಹೆಚ್ಚಾಗಿ ಚುನಾಯಿತರಾಗಲಿಕ್ಕೂ ಆ ಗ್ರಾ
ಮದಲ್ಲಿ ಒಂದೊ, ಕಡಿಗಾರರೇ ಹೆಚ್ಚಾಗಿ ಚುನಾವಣೆ ಸಿಸ್ಟ
ತಕ್ಕವರು ಕಮ್ಮಿಯಾಗಿಯೂ, ಇಲ್ಲವೇ ಈ ಕಾರ್ಯನಿರ್ವಾ
ಹಕ ಸಮರ್ಥರೆಯುವರು ಬೇರೆ ಯಾರೂ ಇಲ್ಲದಾಗಿಯೂ
ಇದ್ದರೇನೇ ಮೇಲಿಂದ ಮೇಲೆ ಮುಂದಿನವರೇ ಚುನಾಯಿತ
ರಾಗಲು ಮುಖ್ಯ ಕಾರಣ ಉಳ್ಳವರಾಗುತ್ತಾರೆ ಮತ್ತು
ಇಂಥಾ ಚುನಾವಣೆ ಮಾಡುವ ಹಕ್ಕು ಮೆಂಬರರ ಕೈ
ಯಲ್ಲಿರುವದರಿಂದ ಒಂದೇ ಪಂಗಡದವರಾಗಲೀ ಮುಂದಿನವ
ರೇ ಆಗಲೀ ಹೆಚ್ಚಾಗಿ ಚುನಾಯಿತರಾಗಿಕೊಳ್ಳುವದು ಎಲ್ಲ
ವೂ ಈ ಚುನಾಯಿತರು ಸಂಘದ ಮೆಂಬರರ ಹೆಚ್ಚಿನ ಜನರ
ಪ್ರೀತಿಗೆ ಪಾತ್ರರಾಗಿರುವದೂ, ಸಂಘದ ಕೆಲಸಗಳನ್ನು ನೆಟ್ಟ
ಗಾಗಿ ನಡೆಸಿಕೊಂಡು ಬರುವದೂ, ಇದೇ ಕಾರಣವಲ್ಲದೆ
ಮತ್ತೇನೂ ಅಲ್ಲ ಇಂಥಾ ಸಂಗತಿಗಳನ್ನು ವಿಪರೀತ ಕಲ್ಪ
ನೆಯಿಂದ ಲೇಖಿಸುವವರ ಈ ಗುಣ ನಡತೆಯಾದರೂ ಯಾವ
ವಿಧದಲ್ಲಿರುತ್ತದೆಂಬುದನ್ನು ಸ್ವಲ್ಪ ಯೋಚಿಸಬೇಡವೇ? ಇಂ
ಥಾ ಕುಕಲ್ಪನ ಕಲ್ಪಿಸುವ ಅವಿವೇಕರ ವರ್ತನೆಯು ಸಾರ್ವಜನಿಕರಿಗೆ
ಇನ್ನು ಮುಂದಾದರೂ ತಿಳಿಯದಿರಲಾರದು ಆದರೆ ನಮ್ಮ
ಪಾವನ ಕರ್ತರಿಗೆ ಸಹಿತ ಲಕ್ಷ್ಯಕ್ಕೆ ಬಾರದಿರಬಹುದು.
ಹಾಗು ಸಂಪೂರ್ಣವಾಗಿ ಇವರಿಗೂ ಕೃಪಣೀಯ ಗೋಚರಕ್ಕೆ
ಬಂದೇ ಬರುತ್ತದೆ

ಗ್ರಾಮದ ಸಂಘದಲ್ಲಿ ತನ್ನ ನಡತೆ ಕುರಿತ ಪ್ರೊಪಗಂ
ಡ್ಡ ಮಾಡಿಕೊಂಡವರಿಗೂ ನೇರಿ... ಸಾಧಿಸಿಕೊಂಡವ
ರಿಗೂ ಆಗಾಗ್ಗಾಯಿತಿಂದಲೂ ಕಡಗಾರರಾಗಿಕೊಂಡು ಜೀ
ವಿತವನ್ನು ಕಿಂಚಿತ ವೃತ್ತಿಯಲ್ಲಿ ನಡೆಸಿಕೊಂಡು ತನ್ನಿಂದ ಯಾ
ವ ಕೆಲಸವಾಗದಿದ್ದರೂ ಗ್ರಾಮದ ಅಭಿವೃದ್ಧಿಯ ಪ್ರತಿವಿಷಯ
ದಲ್ಲಿ ಅಡ್ಡಬರುತ್ತಿರುವ ಇಲ್ಲದ ಚಪಲ ಉಂಟೆಂದು
ಮಾಡುವವರಿಗೂ ಇರುವ ಅಭಿಪ್ರಾಯ ಎಷ್ಟು ಜನನ್ನಾಗಿರಬ
ಹುದೆಂಬುವದನ್ನು ನಾವೊಮ್ಮೆ ಹೇಳಬೇಕಾಗಿಲ್ಲ ವಿದ್ಯಾಭ್ಯಾ
ಸ ಉದ್ಯೋಗ ನೋಡಲಾಗದವರುಗಳಲ್ಲಿ ಅಲ್ಪ ಸ್ವಲ್ಪ ಕಾಲವಿದ್ದು
ಹುಬ್ಬಾರು ಸ್ಥಳ ತಿರುಗಿ ಕೂಸೆ ಮುಟ್ಟಿಸದೆ ಕಟ್ಟ ಕಡೆಗೆ ಗೃ
ಹಾಧಿಪರಾಗಿಯೂ ಬಲವಾದ ಮೂಸಾಡ ಸಾಕ್ಷಿ...
ಗಳ ನಕ್ರಬುದ್ಧಿತನದ ರುಚಿನೋಡಿ ಸದಾ ಸಂಘಗಳಿಂದ ಹೆಚ್ಚಿ
ನ ಸಹಾಯ... ಗಳಿಂದಿಗೆ ಮುಕ್ತಿ ಹೊಂದಿಕೊಂಡ ಮಹ
ನೀಯರ ಗಿ... ವಿಷಯದಲ್ಲಿ ನಾವು ಹೇಳತಕ್ಕ ನೂತನ ಇ
ನ್ನ ನವಿಲ್ಲ ನೀವೇ ಆದ ... ಯ ಕರ ನಪಲನ್ನು ಪಿಸ್ಸ
... ಹರಾಜಿ... ಪಡದು ಪಸಲು ಆನುಪಪಿಸಿ ... ಪ
ರಾಜು ಮಾಡಲಿಗು ಕಟ್ಟದೆ ಸಕಾರಣದವರು ತಗಾದಿಸುವಾಗ್ಯೆ
ಸರಸಾಯೇಲಿಯಿಂದ ಸರಕಾರವು ಕರಾರು ಮಾಡಿಸಲು ಬಿಟ್ಟ
ನೀನವನ್ನು ಗಟ್ಟಿ ಮಾಡಿಕೊಂಡು ಕರಾರಿಲ್ಲದೆ ಹಣ ಕೇಳು
ವದ ಸಂಕರಾತಕ್ಕೆ ಯಾವ ಪಕ್ಕಿರ ತಕ್ಕದೆಂದು ಕಮಿಷನರರಿಗೆ
ರಿಜಿಸ್ಟರ್ ನೋಟೀಸು ಕೊಟ್ಟ ಜಾಣತನದವರಿಗೂ ಇತರರು
ಗಳ ... ಗ್ರಾಮಗಳಲ್ಲಿ ಇಂಥಾ
ಜಾಣರು ಬಹು ಬೇರಾಗಿದ್ದಾರೆ ಇಂಥಾ ಜಾಣರು
ಬಿದ್ದಿದ್ದರಾದರೂ ಸರಿ ಇವರಿಗೆ ಗ್ರಾಮಗಳಲ್ಲಿ ಜನ
ಮೇಕ್ಕ ಕಡೆವೇ ಏನೂ ಇಲ್ಲ ನಮ್ಮ ಕೂಡಿನ ಸಂಘಗ ನೆಂ
ಬರನ್ನು ಸರಿಪ ವ ಆರ್ಗನೈಜರ್ ಕೆಲಸಕ್ಕೆ ಬಹು ಜಾಣರು
ಬೇಕಾಗಿರುವದರಿಂದ ಇಂಥಾ ಜಾಣ ಲೇಖನಕ್ಕೆ ಕೊಡಗಿನ
ಭಯಂದರೆ ತನ್ನ ಪ್ರಾಣವನ್ನು ವ ಪಾವವನ್ನು ಬಿಟ್ಟ ಕೂಡಲೆ
ಕಾಯಿತು ಇಂಥಾ ಅವರುಗಳಿಗೆ ಪತ್ರಿಕೆಗಳಿಗೆ ಆಶ್ರಯ
ಕೊಟ್ಟು ತನ್ನ ಕಾರ್ಯಕ್ಕೆ ಬಹು ಜಾಣರೊಬ್ಬರನ್ನು ನಿಂದಾ
ನಿಸಿದ ಈ ನಾವನ ಪತ್ರಿಕೆಯ ಜಾಣತನಕ್ಕೆ ಬಹು ಚಲೋ
ದೇ ಸರಿ ಇಂದಾದರು ... ನಮ್ಮ ದನ್ನು ಪ್ರ
ಗಾವ ನಿರುತ್ತದ ಆದರೆ ಈ ಪ್ರಿಯ ಮಿತ್ರರ ಬಗೆತ
ರಲ್ಲಿ ಕನ್ನಡಿ ಹಿಡಿದ ಹಾಗೆ ಯಾರು ಜಾಣರಾಗುವರೆಂಬುದನ್ನು ಮತ್ತೆ
ನೋಡಲಿಕ್ಕಿರುತ್ತದೆ ಆದರೂ ನಮ್ಮ ನಾವನವು ಇನ್ನು
ಮುಂದಾದರೂ ಇಂಥಾ ಪರಕಿಲ್ಲದ ಬಾತ್ಮಿಯನ್ನು ಪ್ರಕ
ಟಿಸಿ ಜನರಲ್ಲಿ ಪರಸ್ಪರ ದ್ವೇಷವನ್ನು ಬಿಟ್ಟಿಸುವದಿಲ್ಲವೆಂದು ನಾವು
ಆ ಪತ್ರಿಕೆಯನ್ನು ಪ್ರಾರ್ಥಿಸುತ್ತೇವೆ ವಿವರಾದೆ ದೇಶದಲ್ಲಾ
ಗಲಿ ಗ್ರಾಮಗಳಲ್ಲಾಗಲಿ ಕಾರಣಾಂತರ ಸ್ವಂತ ಕಲಹ ತಕ್ಕೆ
ಗಳ ಕುರಿತು ಜನವೇನೋ ಗ್ರಾಮದವರಿಂದೋ ಹಾಳು
ತ್ತಾ ಬಿಟ್ಟರೆ ಲೀಪಿಸುವ ಲೇಖನವು ನಿಜವಾಗಿ ಸುಳ್ಳೋ
ಗಳೂ ಪತ್ರಿಕೆಯಲ್ಲಿ ಹೊಂಚರ ಯಾರು ಬರೆದಿದ್ದಂದೂ,
ಯಾವ ಕಾರಣವೆಂದೂ, ಥಕ್ಕನೆ ಜನರಿಗೆ ತಿಳಿಯದ್ದರಿಂದ ಸ
ತ್ಯಾಸತ್ಯ ವಿಚಾರ ವಿಮರ್ಶೆಯ ಗ್ರಹಿಕೆಯಲ್ಲಿ ಜನರಿಗೆ ವ್ಯ
ತ್ಯಾಸ ಉಂಟಾಗಬಹುದಾದ ಕಾರಣ ವೃತ್ತ ಪತ್ರಿಕೆಗಳು ಓ
ಲ್ಲ ಸಂಗತಿಯಲ್ಲ ಎಂದೂ ಸೃಷ್ಟಿ ಕ್ಕಲೇ ಎರಡಾಗಿದೆ ಈ
ಬಾತ್ಮಿಯನ್ನು ಪತ್ರಕರ್ತರು ದಯವಿಟ್ಟು ಬಿಲಮೂರಿ ಗ್ರಾಮ
ದ ಮೇಲೆ ಒಡ್ಡಿದ ಟೂಕ್ಕ ಸಂಗತಿಯ ವಿಚಾರವನ್ನು ವಾಚಕ
ರ ಅವಗಾಹನೆಗೆ ತರಬೇಕಾಗಿ ಪತ್ರಕರ್ತರನ್ನು ಬೇಡಿಕೊಂ
ಡ ಇಲ್ಲಿಗೆ ನನ್ನ ಲೇಖನಿಗೆ ವಿದ್ಯ ಬರಾಸು. ಕೊಡವನ್ನು
ಸತ್ಯ ವಿಚಾರ ಕುರಿತು ನಾವು ಈ ಬಾತ್ಮಿ ಲೇಖಿಸಿದಲ್ಲದೆ ಉ
ತ್ತರವನ್ನಪೇಕ್ಷಿಸಿ ಲೇಖಿಸಿದ್ದಲ್ಲವಾಗಿರುತ್ತದೆ

ಬಿ ಯಂ

ಗಜಚ್ಛಾಯ.

ಮೈ ಟಿ ವಿ ಕೃಷ್ಣಶಾಸ್ತ್ರಿಗಳು ಪ್ರಿವಾಣ... ಸ ಆರ
ನೂ ಬಾಲಿಕಾಪಾಠಶಾಲಾ ಸಹಾಯೋಪಾಧ್ಯಾಯರು ಮೈ
ಸೂರು ಇವರು ಬರೆದ ಶ್ರೀಮದಕ್ಷಯನಾಮಸಂವತ್ಸರದ
ಸಿದ್ಧಾಂತ ಪಂಚಾಂಗದಲ್ಲಿ ಭಾದ್ರಪದ ಬಹುಳ ದ್ವಾದಶಿ ಭಾ
ನುವಾರ (ತಾ 3—10—26) ಗಜಚ್ಛಾಯ ಪುಣ್ಯಕಾಲವು
ಸಂಭವಿಸುತ್ತದೆ ಇದು ಬಹಳ ವಿಶೇಷವಾದದ್ದು ಅನೇಕವ
ರ್ಷಗಳಿಗೊಂದಾವೃತ್ತಿ ಸಂಭವಿಸತಕ್ಕದ್ದಾಗಿರುತ್ತದೆ. ಏಕಕಾ
ಲದಲ್ಲಿ ಒಂದು ಕೋಟಿ ಸೂರ್ಯಗ್ರಹಣಗಳು ಸಂಭವಿಸಿದರೆ
ಎಷ್ಟು ಪುಣ್ಯಪ್ರದವಾದದ್ದೋ, ಅಷ್ಟು ಪುಣ್ಯಪ್ರದವಾದದ್ದು.
ಅಂದರೆ, ಆ ದಿನ ಸ್ನಾನ, ಜಪ, ದಾನ, ತರ್ಪಣಾದಿಗಳನ್ನು
ಮಾಡಿದರೆ ಬಹಳ ಪುಣ್ಯವುಂಟಾಗುವದು, ಎಂದು ಬರೆದಿರು
ತ್ತಾರೆ ಆದರೆ ಬೇರೆ ಪಂಚಾಂಗ ಕರ್ತರು ಇದನ್ನು ಬರೆಯ
ಲ್ಲಿಲ್ಲವಾತಕಕ್ಕೋ ನಾನರಿಯೆನು ಇನ್ನಾದರೂ ಇವರುಗಳು
ಶಾಸ್ತ್ರಪರಿಶೋಧಿಸಿ ಈ ಸುದಿವಸವನ್ನು ಪತ್ರಿಕಾಮೂಲಕ ಪ್ರ
ಕಟಿಸಿದ್ದಾದರೆ ಲೋಕ ಹಿತವಾಗುತ್ತಿತ್ತು ಯಾವ ಯಾವ
ವಿಶೇಷ ಕಾಲಗಳು ಬಂದಾದಾಗ್ಯೆ ಈ ಸುಯೋಗ ಕಾಲವ
ನ್ನು ನಿಶ್ಚಯಿಸುವರೆಂಬುದನ್ನು ತಿಳಿದ ಮಹನೀಯರು ಪ್ರಕಾಶಿಸ
ಬೇಕಾಗಿ ಹಾರೈಸುತ್ತೇನೆ ಅರ್ಧೋದಯ ಗಜಚ್ಛಾಯ
ಮುಂತಾದ ಮಹಾಪುಣ್ಯಕಾಲಗಳು ಮಹಾಸಂಕಲ್ಪದಲ್ಲಿ ವಿವ
ರಿಸಿದೆಯೆಂದು ನಮ್ಮ ಪುರೋಹಿತರು ಬ್ರಹ್ಮ ಶ್ರೀ ನಾರ್ಸೋಕ
ಬು ರಾಮಭಟ್ಟರು ಅಪ್ಪಣೆಕೊಡಿಸಿದರು ಆದ್ದರಿಂದ ಸತ್ಕಾ
ರ್ಯಮಾಡಪೇಕ್ಷೆಯುಳ್ಳ ಮಹನೀಯರು ಮೇಲೆ ಸವ ಬರೆ
ದ ಕಾಲನಿರೀಕ್ಷಣೆಯ ದಿವಿದ್ದು ಶಕ್ತ್ಯಾನುಸಾರ ತೀರ್ಥಕ್ಷೇ
ತ್ರಾದಿಗಳಿಗೆ ಪ್ರಯಾಣಿಸಿ ಪುಣ್ಯಾರ್ಜನೆ ಮಾಡಿಕೊಳ್ಳಲು ಸ
ಕಾಲವಾದ. ಪೂಜ್ಯರುಗಳಿಗೆ ನನ್ನ ಕೃತಜ್ಞತಾಪೂರ್ವಕವಾ
ದ ವಂದನೆಯುಗಳನ್ನು ಸಮರ್ಪಿಸಿದ್ದಾಗಿದೆ

ಸಿ ಯಂ ವೆಂಕಪ್ಪಯ್ಯ.

ಗ್ರಾಮದ ಸಾಂಪತ್ತಿಕಕ್ಕೆ ಅವಸ ಮೂಲಸಾಧನ?

ದೇಶದ ಉನ್ನತಿಕೆಗೆ ಗ್ರಾಮದ ಸಾಂಪತ್ತಿಕ ವೃದ್ಧಿಯೇ
ಮುಖ್ಯಕಾರಣವು ಗ್ರಾಮವು ಉನ್ನತಿಕೆಯನ್ನು ಹೊಂದಿ
ದ ವಿನಹ ದೇಶವು ಮುಂದೆ ಬರಂದೆ ಬರಲಾರದು.
ವ್ಯಕ್ತ್ಯೈಕರೂಪ ತಾಳಿದಾಗ್ಯಂತೆ ದೇಶಕ್ಕೆ ಗ್ರಾಮವೇ ಮೂಲ
ಸ್ಥಾನವಾಗಿರುತ್ತದೆ ಆದ ರಿಂದ ಮೊಟ್ಟಮೊದಲು ದೇಶದ
ಪ್ರತಿ ಗ್ರಾಮಗಳ ಕುರಿತು ಸಾಂಪತ್ತಿಕ ಸ್ಥಿತಿಯಲ್ಲಿ ವಿಚಾರಿಸ
ಲೇ ಬೇಕಾಗಿದೆ ದೇಶದ ಯಾವ ವಿಷಯದ ಉನ್ನತಿಕೆಗೂ
ದ್ರವ್ಯವೂ, ಆರೋಗ್ಯವೂ ಎರಡೇ ಮೂಲಸಾಧನವಾಗಿರು
ತ್ತದೆ ಆರೋಗ್ಯವಿಲ್ಲದ ಭಾಗ್ಯವೂ ದ್ರವ್ಯ ಇಲ್ಲದವನ ಪ್ರ
ಯತ್ನವೂ ಎರಡೂ ನಿಷ್ಫಲವೇ ಸರಿ ಆ ಕಾರಣ ಗ್ರಾಮ
ದಲ್ಲಿ ಮೊದಲು ಇವೆರಡನ್ನು ಗಳಿಸುವ ಮಾರ್ಗವು ಮಾಡ
ಬೇಕು ಇಂಥಾ ವಿಷಯಗಳಿಗೆ ಗ್ರಾಮಸ್ಥರೆಲ್ಲರೂ ಒಗ್ಗಟ್ಟಿ
ನಿಂದಿರುವದೇ ಪ್ರಧಾನ ಪ್ರಯತ್ನವು ಸಂಸರ್ಗದಿಂದಲೂ,
ಕೂಡಿಕೂಡುವಿಕೆಯಿಂದಲೂ ಜನರಲ್ಲಿ ಒಳ್ಳೆ ಗುಣಗಳು ಹಂ
ಚುವ ಪ್ರಸಂಗ ಒದಗುತ್ತದೆ ಒಗ್ಗಟ್ಟಿನ ಸೇರೋಣದ
ರಿಂದ ಅವಿಶ್ವಾಸ ತೊಲಗಿ, ವಿಶ್ವಾಸ ಹೆಚ್ಚಿ ಸಹಾಯವೂ, ವ್ಯಕ್ತಿ
ಗಳಿಗೆ ಒಬ್ಬರ ವಿಕಾಸವೂ ಉಂಟಾಗುತ್ತದೆ. "ಊರಿದ್ದಲ್ಲಿ
ಹೊಲಗೇರಿ ಇರತ್ತದೆಂಬಂತೆ" ಗುಣಗಳಿದ್ದಲ್ಲಿ ದುರ್ಗುಣಗ
ಳೂ, ಸುಖವಿದ್ದಲ್ಲಿ ದುಃಖವೂ, ಇರುವದು ಸ್ವಾಭಾವಿಕವಾಗಿ
ರುವದರಿಂದ ಗ್ರಾಮದಲ್ಲಾಗಲೀ, ದೇಶದಲ್ಲಾಗಲೀ ಪುರೋ
ಭಿವೃದ್ಧಿಯ ಕುರಿತು ಪ್ರಯತ್ನಪಡುವವರು ಎಲ್ಲರು ಇರ
ಲಾರರು ಇದು ಪ್ರಪಂಚ ಧರ್ಮವಾಗಿರತ್ತದೆ 'ಲೋ
ಕೋ ಭಿನ್ನ ರುಚಿ ಎಂಬಂತೆ ಪ್ರತಿಯೊಬ್ಬರಲ್ಲಿಯೂ ಅಭಿ
ಪ್ರಾಯಗಳು ಬೇರೆ ಬೇರಾಗಿರುವದರಿಂದ ಒಗ್ಗಟ್ಟು ಸಾಧಿಸಲು
ಬಹುಪ್ರಯತ್ನ ಬೇಕಾಗುವದು.

ಈ ವಿಷಯಕ್ಕೆ ಹಚ್ಚಿಗನ ಸಹಕಾರಪ್ರಯತ್ನಪಡುವವ
ರೇ ಮುಂದಾಳುಗಳಾಗುವರು ಇಂಥಾ ಜನರು ಬಹು ವಿರ
ಳರಾಗಿರುತ್ತಾರೆ. ಇಂಥಾವರಿಗಾದರೋ ಸತ್ಯವೇ ತಾಯಿ
ಯಾಗಿಯೂ ಜ್ಞಾನವೇ ತಂದೆಯಾಗಿಯೂ, ಧರ್ಮವೇ ಒ
ಡಹುಟ್ಟಿಗಳಾಗಿಯೂ ದಯೆಯೇ ಸ್ನೇಹಿತರಾಗಿಯೂ ಶಾಂ
ತಿಯೇ ಹೆಂಡತಿಯಾಗಿಯೂ ಕ್ಷಮೆಯೇ ಪುತ್ರರಾಗಿಯೂ
ಇರುವ ಬಂಧುಗಳಿರುತ್ತಾರೆ ಯಾವ ಮುಂದಾಳೆಂಬವರು
ಈ ಬಂಧುಗಳಿಂದ ವಿರಹಿತರಾಗಿರುತ್ತಾರೋ ಅವರ ಕಾರ್ಯಗ
ಳು ಎಷ್ಟು ಗಾಂಭೀರವಾದರೂ ಕೊನೆಮುಟ್ಟಲಾರವು ಯಾರು
ಈ ಬಂಧುಗಳಿಂದ ಕೂಡಿರುತ್ತಾರೋ ಅವರಿಗೆ ಇಹಪರಗಳ
ವೆರಡರಲ್ಲೂ ಸುಖಸಮೃದ್ಧಿಯುಂಟಾಗುತ್ತದೆ ಗ್ರಾಮಗಳ
ಲ್ಲಾಗಲಿ, ದೇಶಗಳಲ್ಲಾಗಲಿ ಈ ಜನರು ಹೆಚ್ಚಿದಂತೆ ದೇಶ
ಗ್ರಾಮಗಳ ಸಮೃದ್ಧಿಯನ್ನು ಹೊಂದುತ್ತದಲ್ಲದೆ ಇತರ ಯಾವ
ಪ್ರಯತ್ನದಿಂದಲೂ ಪ್ರತೀಕ್ಷ್ಯ ಬರಲಾರದು. ನೀತಿಬೋಧೆ
ಯಿಂದ ಜನರನ್ನು ಮುಂದಕ್ಕೆ ತರಬೇಕಾದರೂ ಮೊದಲು
ನಾವು ಹೇಳತಕ್ಕ ನೀತಿಯು ಅವರ ತಲೆಗೆ ಹತ್ತುವ ಪ್ರಯತ್ನ
ನಡತಿ ಆ ಮೇಲೆ ಬೋಧಿಸಿದರೇನೇ ಫಲಕಾರಿಯಾಗುತ್ತದ
ಲ್ಲದೆ ಬೇರೆ ವಿಧದಿಂದ ಫಲಕಾರಿಯಾಗುವದೇ ಇಲ್ಲ ವಿಚಾ
ರಶೀಲರುಕಡಮೆಯಾದ ಹಾಗೆಲ್ಲಾ ಗ್ರಾಮವಾಗಲಿ, ದೇಶ
ವಾಗಲಿ ಕ್ಷೀಣತೆಗೆ ಬರುತ್ತದೆ ಆಂಥಾ ಕ್ಷೀಣತೆಯ
ಪ್ರದೇಶ ಗ್ರಾಮಗಳಲ್ಲಿ ವಿಚಾರಶೀಲರಾದ ಮುಂದಾಳುಗಳ
ಬಹು ವಿರಳರೆಂದು ನಾವೊಮ್ಮೆ ಹೇಳಬೇಕಾಗಿಲ್ಲ ಇಂಥ
ಮುಂದಾಳುಗಳು ಪ್ರಯತ್ನಪೂರ್ವಕ ತಮ್ಮ ತಮ್ಮ ಗ್ರಾಮ
ಗಳನ್ನು ಅಭಿವೃದ್ಧಿಪಡಿಸಲು ಯತ್ನಿಸಿದರೆ ದೇಶವು ಸ್ವತಃ ಅ
ಭಿವೃದ್ಧಿಯನ್ನು ಹೊಂದುತ್ತದೆ ಮರದ ಬುಡಕ್ಕೆ ನೀರೆ
ರೆಯದಬಿಟ್ಟು ಅಗ್ರಭಾಗಕ್ಕೆ ನೀರೆರೆದರೆ ತಾನು ಬೆಳೆದು
ವೃದ್ಧಿಯಾಗುವದೇ, ತನ್ನ ಗ್ರಾಮದ ವಿಷಯಬಿಟ್ಟು ದೇ
ಶದಲ್ಲಿ ಹೋರಾಟ ತಿರುಗಿದರೆ ಹೋರಾಟದ ಫಲವೇ ಆ
ದೆ ಮತ್ತೇನೂ ಉಂಟಾಗಲಾರದು ಗ್ರಾಮದಲ್ಲಿ ಗ್ರಾಮ

ಸ್ಥರೆಲ್ಲರನ್ನೂ ಆಗಾಗ್ಗೆ ಸೇರಿಸುತ್ತಾ ತಮ್ಮ ಗ್ರಾಮದ ಕಷ್ಟಸುಖಕ್ಕೆ ಯಾವುದು ಮೂಲಕಾರಣವೆಂದೂ ಗ್ರಾಮಸ್ಥರು ಯಾವ ವಿಧದಲ್ಲಿ ವರ್ತಿಸಿದರೆ ಗ್ರಾಮವು ಅಭಿವೃದ್ಧಿಗೆ ಬರಬಹುದೆಂಬದನ್ನು ಆಲೋಚಿಸುತ್ತಾ ಆ ವಿಧದ ವರ್ತನೆ ವರ್ತಿಸಿಕೊಂಡು ಬರುವದೇ ಗ್ರಾಮಾಭಿವೃದ್ಧಿಯ ಪ್ರಯತ್ನವಾಗುತ್ತದೆ. ಇಂಥಾ ಪ್ರಯತ್ನ ಸಫಲಕ್ಕೆ ಗ್ರಾಮದವರೆಲ್ಲರು ಪರಸ್ಪರ ಪ್ರೀತಿಯುಕ್ತರಾಗಿರಲೇ ಬೇಕು. ಪ್ರತಿ ಗ್ರಾಮದಲ್ಲಿ ವಾಚನಾಲಯ ಪುಸ್ತಕಭಂಡಾರಗಳನ್ನು ಸಾಧ್ಯವಾದಷ್ಟು ಮಟ್ಟಿಗೆ ಏರ್ಪಡಿಸಿ ವೃತ್ತಪತ್ರಿಕೆಗಳನ್ನು ಪ್ರತಿ ಜನರು ಓದುವಂತೆ ಏರ್ಪಡಿಸಿಕೊಂಡು ಜನರಲ್ಲಿರುವ ಅವಿದ್ಯೆಯನ್ನು ಪ್ರಥಮತಃ ಹೋಗಲಾಡಿಸಬೇಕು. ಗ್ರಾಮದ ಸಾಂಪತ್ತಿಕ ಅಭಿವೃದ್ಧಿಗೆ ಒಗ್ಗಟ್ಟೇ ಮೂಲಸಾಧನವು. ಈ ಒಗ್ಗಟ್ಟಿಗೆ ಜನರಲ್ಲಿರುವ ಅವಿದ್ಯೆ ತೊಲಗಿ ಪರಸ್ಪರ ಪ್ರೀತಿ ತುಂಬಿಸುವದೊಂದೇ ಉಪಾಯವಾಗಿದೆ. ಇಂಥಾ ವಿಷಯದಲ್ಲಿ ಹೆಚ್ಚು ಪ್ರಯತ್ನ ತೆಗೆದುಕೊಳ್ಳುವವರು ಗ್ರಾಮದಲ್ಲಾಗಲಿ, ದೇಶದಲ್ಲಾಗಲಿ ಬಹು ವಿರಳರಾಗಿರುವದರಿಂದಲೂ, ಒಳ್ಳೆಯ ಕಾರ್ಯಕ್ಕೆ ವಿಘ್ನಗಳು ಹೆಚ್ಚಿರುವದರಿಂದಲೂ, ಪ್ರಯತ್ನ ಪಡತಕ್ಕವರು ಒಬ್ಬಿಬ್ಬರಾದರು ಎದೆಗುಂದದೆ ತನ್ನ ಮನಸಾಕ್ಷಿಗೆ ವಿರೋಧವಿಲ್ಲದೆ ಬಹು ಸಹನೆಯುಳ್ಳವರಾಗಿ ವರ್ತಿಸಿದರೇನೇ ಅವರ ಪ್ರಯತ್ನವು ಕ್ರಮೇಣವಾದರೂ ಸಾಫಲ್ಯವನ್ನು ಹೊಂದಿಯೇ ಹೊಂದುತ್ತದೆ.

"ಪೂರದೃಷ್ಟಿ."

NOTICE

P. B Somappa L.M &S has much pleasure in annou cing to the public that he has started private medical practice with a dispensary at virajpett, since the 17th of May 1926.

ಪಾಡಂಡ ಬಿ ಸೋಮಪ್ಪ ಎಲ್ ಯಂ ಎಂಡ್ ಎಸ್ ರವರು ಕಳೆದ ಮೇ ತಾರೀಕು 17 ರಿಂದ ವೀರಾಜಪೇಟೆಯಲ್ಲಿ ವೈದ್ಯಶಾಲೆಯನ್ನು ತೆರೆದಿರುತ್ತಾರೆಂದು ಜನರಿಗೆ ತಿಳಿಸಲು ತುಂಬಾ ಸಂತೋಷಪಡುತ್ತಾರೆ

4—3

ಜ್ವರಗಳ ಮೇಲೆ ಅಮೂಲ್ಯ ಔಷಧವು.

ಕರ್ಣೇಶ

ಎಗ್ನ್ಯೂ ಮಿಕ್ಶ್ಚರ್

ಟಾನಿಕ್ ಸಿರಪ್.

(ಶಕ್ತಿವರ್ಧಕ ಸರಬತ್ತು.)

ಥಂಡಿಜ್ವರ, ಮಲೇರಿಯ ಮೊದಲಾದ ಜ್ವರಗಳು ಬಿಟ್ಟನಂತರ ಬರುವ ಅಶಕ್ತತೆ, ಸಣ್ಣಜ್ವರವು ಬರುತ್ತಿರುವುದು ಮೊದಲಾದವುಗಳ ಮೇಲೆ ಇದು ಒಂದು ಅಮೂಲ್ಯ ಔಷಧವಾಗಿರುತ್ತದೆ.

ನಮ್ಮ ಎಗ್ನ್ಯೂಮಿಕ್ಶ್ಚರನ್ನು ಸೇರಿಸಿ ಗುಣವನ್ನು ಹೊಂದಿದ ಪ್ರತಿಯೊಬ್ಬನು ಇದರ ಒಂದು ಬಾಟ್ಲಿಯನ್ನಾದರೂ ಅಗತ್ಯವಾಗಿ ಸೇವಿಸಬೇಕು. ಅಂದರೆ ಅವನಿಗೆ ಜ್ವರದನಂತರ ಬರುವ ಅಶಕ್ತತೆಯು ಒರಲಿಕ್ಕೇ ಇಲ್ಲ.

ಬೆಲೆ ೧ ರೂಪಾಯಿ ಟಪಾಲು ವೆಚ್ಚ ಬೇರೆ.

12—1 ಕರ್ಣೇಶ ಬ್ರದರ್ಸ

ಗಿರಗಾಂವ, ಮುಂಬಾಯಿ.

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್, ಕೋ ಆಪರೇಟಿವ್ ಸೊಸೈಟೀಸ್ ಆಕ್ಟಿನ ಪ್ರಕಾರ ರಿಜಿಸ್ಟರಾಗಿದೆ.

		ರೂ.
ಶೇರ್ ಬಂಡವಾಳ	—	50,000
ವಸೂಲಾದ ಸೇರ್ ಮೊಬಲಗು	—	3890
ಜಮೂಬಂದ ಠೇವಣಾತಿ	—	90,600

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲಕೊಡತಕ್ಕದ್ದು.

ಒಂದು ವರ್ಷ ವಾಯಿದೆ ಅಥವ ಹೆಚ್ಚಿನ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ ರೂ. 6-4-0ರ ದರದಲ್ಲಿ ಬಡ್ಡಿ ದೊರೆಯುತ್ತೆ. ಕಡಿಮೆ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ 5ರ ಬಡ್ಡಿ ದೊರೆಯುತ್ತೆ.

ವರ್ಷಕ್ಕೊಂದಾವರ್ತಿ ಕೋ ಆಪರೇಟಿವ್ ರಿಜಿಸ್ಟ್ರಾರವರು ಲೆಕ್ಕ ಆಡಿಟ್ ಮಾಡುತ್ತಾರೆ.

ಪ್ರೆಸಿಡೆಂಟರು, ಟ್ರೆಜರರ್.

ಕೊಡಂದೆರ ಕುಟ್ಟಯ್ಯನವರು, ಯಂ. ಭುಜಂಗರಾಯರು

ರಾಯ್ ಬಹದ್ದೂರ್. ಬಿ.ಎ., ಬಿ.ಎಲ್.

ಸೆಕ್ರೆಟರಿ.

12— ಮುನ್ಷಿ, ವೆಂಕಟಪ್ಪಯ್ಯನವರು. ಬಿ.ಎ., ಬಿ.ಎಲ್.

1925.

Apply for our shooting Season's Clearance Sale Catalogue of Brand New Goods.

10 to 25 percent Reductions in Prices.

No License Required!! No Licenser Required



Webley and Scott Air Pistol, cal 177 or 22, bore Powerful and Accurate, complete with a sample box of slugs, two spare washers, a brush forcleaning, and a bookletof instructions Rs. 30, — Free delivery.

Pwerful German Diana Air gun, Handsome and Accurate, takes B S A Patern No 1 Slugs and Darts expressly recommendable for Target Practice Rs 15/ Free delivery.

B Mint Search Light Lamp for Night Sports Rs 30/— Free delivery.

No License required to purchase or to possess the above items.

Rehale D B B L 12 bore guns	Rs. 60	—	and upwards
Do S. B B L 12 do	do 40	—	do
D B. M L Guns	" 45	—	do
S B M L do.	" 30/—		do
S. B. B L Rifles	" 25	—	do
B L Revolvers and Pistols	" 30	—	do.

Arms, Ammunition and shooting requisites of almost every kind andquality offered at exceptionally favourable rates ANumber of good quality second hand weapons also offered for sale in theNew Catalogue.

GOOLAMHUSIAIN ALLIBHOY & SONS

Largest Importers of Firearms and Ammunition,

Cheapest priced firm in India,

24 19 210 Abdul Rehman Street, BOMBAY.

---

೧೬ ಚಿತ್ರಗಳು ... ೮ ಕಥೆಗಳು ೫೧೨ ಪುಟಗಳ

ಸಚಿತ್ರ ಶುಕಸಪ್ತತಿ ಕಥೆ.

ಈ ಕಥೆಯು ಧರ್ಮಶಾಸ್ತ್ರ ವೇದಾಂತ, ಸ್ತ್ರೀಪಾತಿವ್ರತ್ಯ, ಬ್ರಾಹ್ಮಣ, ವೈಶ್ಯ, ಶೂದ್ರರೆಂಬ ನಾಲ್ಕು ವರ್ಣದವರು ನಡೆಯತಕ್ಕ ... ಧರ್ಮವೇ ಮುಂತಾದ ಸದ್ವಿಚಾರಗಳನ್ನು ಬೋಧಿಸುವ್ವದು. ... ಕಥಾರೂಪದಲ್ಲಿ ಚಿತ್ರಕಥಾ ಚಮತ್ಕಾರ ... ಇದ ನೆದರಿಂದ ಸ್ತ್ರೀಯರು, ಪುರುಷರು, ಬಾಲಕರು ಎಂಬ ಭೇದವಿಲ್ಲದೆ ಎಲ್ಲರೂ ಓದಬಹುದ. ... ಲೋಕಾನುಭವಕ್ಕೆ ಬೇಕಾದ ಅನೇಕ ವಿಷಯಗಳು ಇದರಿಂದ ತಿಳಿದುಬರುವುದು ... ಈ ಕಥೆಯನ್ನು ಓದುವದರಿಂದ, ಮನಸ್ಸಿನ ದುರಾಚಾರದಲ್ಲಿ ಬಿಡದಂತೆ ಸದಾಚಾರದಲ್ಲಿಯೇ ನಡೆಯುವಂತೆ ಮಾಡುವುದು. ... ವಿವೇಕಾವಿವೇಕವನ್ನು ತಿಳಿಯತಕ್ಕ ಜ್ಞಾನವನ್ನು ಉಂಡುಮಾಡುವುದು. ಬೇಕಾದವರು ವಿ. ಪಿ. ಪೋಸ್ಟು ಮೂಲಕ ತರಿಸಿಕೊಳ್ಳಬಹುದು.

ದಪ್ಪಕಾಗದ ಕ್ರಯ ಪ್ರತಿ ಒಕ್ಕೆ ರೂ. ೨-೦-೦. ಟಪ್ಪಾಲು ಹಾಸಿಲು ೦-೬-೦.

ಸಚಿತ್ರ ಭಟ್ಟಿ ವಿಕ್ರಮಾದಿತ್ಯರಾಯನ ಕಥೆ ... ಭಾಗಸೇರಿದ್ದು ... ಪುಟಗಳು ಕ್ರಯ ೨-೪-೦. ಸಚಿತ್ರರಾಜ ಕಂಠೀರವ ಕಥೆ ... ಪುಟಗಳು, ಕ್ರಯ ರೂ ೨.

ಸಚಿತ್ರ ಶ್ರೀರಾಮತ್ಯಾಸ್ವಮೇಧ ಎಂಬ ಸೀತಾರಾಮಾಂಜನೇಯ ಸಂವಾದ ... ಪುಟಗಳು ೧-೮-೦. ಇವುಗಳಿಗೆ ಟಪಾಲು ಹಾಸಿಲು ಬೇರೆ.

ನಮ್ಮಲ್ಲಿ ದೊರೆಯುವ ಎಲ್ಲಾ ಪುಸ್ತಕಗಳ ಕ್ರಯಪಟ್ಟಿ (ಕ್ಯಾಟಲಾಗ್)ಗೆ ಬರೆದರೆ ಕಳುಹಿಸುವೆವು.

52—2 ನಮ್ಮ ವಿಳಾಸ— ಎಂ ಆರ್ ಕೃಷ್ಣಸ್ವಾಮಿ ಶೆಟ್ಟಿ,

ಬುಕ್ಕುಡಿಪೋ, ಚಿಕ್ಕಪೇಟೆ, ಬೆಂಗಳೂರು ಸಿಟಿ

ಹೊಸ ಸಾಮಾನುಗಳು! ಸುಲಭ ಕ್ರಯ!! ಈಗತಾನೇ ಬಂದಿವೆ!!!

ಇಂಥ ಸುಸಮಯವನ್ನು ಕಳಕೊಳ್ಳಬೇಡಿರಿ!

12 ಬೋರ್ ಜೋಡಿ ಕೊಳವಿನ ತೋಟ ಕೋವಿ 1ಕ್ಕೆ	ರೂ.	115—0—0
12 ,, 12 ಇಂಚಿನ ಒಂಟಿ ಕೊಳವಿನ ತೋಟ ಕೋವಿ (...) 1ಕ್ಕೆ.	,,	60—0—0
,, ,, 15 ,, ,, ,, ,,	,,	65—0—0
ಜೋಡಿ ಕೊಳವಿನ ಕೇಪು ಕೋವಿ 20ನೇ ನಂಬ್ರ 1ಕ್ಕೆ..	,,	85—0—0
12 ಬೋರ್ ಚಿಲ್ಲು ತೋಟಗಳು (ಒಳ್ಳೇ ನಮೂನೆ) 100ಕ್ಕೆ	,,	14—0—0
,, ,, ಆನೆ ಚಿಲ್ಲು ,, ,, ,,	,,	16—0—0
,, ,, ಗುಂಡು ತೋಟಗಳು ,, ,, ...	,,	19—0—0
ಕೋವಿ ಕ್ಲೀನ್ ಮಾಡುವ ಮತ್ತು ತೋಟ ತುಂಬಿಸುವ ಸಾಮಾನುಗಳ 1 ಪೆಟ್ಟಿಗೆಗೆ		27—8—0
ಕೇಪು 250ರ 1 ಟಿನ್ನಿಗೆ	ರೂ.	1—5—0
ಕಾಲು ಪಾವು 2 ಯಷಾನ ಮದ್ದು ಡಬ್ಬ 1ಕ್ಕೆ	,,	1—0—0
ಚಿಲ್ಲು ... ತರದ ನಮೂನೆ ರಾತ್ತ್ಲ 1ಕ್ಕೆ	,	0—10—0
ಪ್ರಾನ್ಸ ಉಕ್ಕಿನ ಸೊಗಸಾದ ಗುದ್ದಲಿಗಳು 5 ಪೌಂಡಿನ 1 ಡಜನ್ನಿಗೆ ..	,,	33—0—0
,, ,, ,, 4 ,, ,, ...	,,	30—0—0
4 ಮುಳ್ಳಿನ ಮುಳ್ಳು ಗುದ್ದಲಿಗಳು ಡಜನ್ನಿಗೆ	,,	60—0—0
3 ,, ,, ...	,,	48—0—0
4 ಪೌಂಡಿನ ಮರ ಕಡಿಯುವ ಕೊಡಲಿಗಳು ಡಜನ್ನಿಗೆ	,,	54—0—0
ಇಂಗ್ಲಿಷ್ ನಮೂನೆ ಕಸಾಯಿ ಚಾಕುಗಳು ಡಜನ್ನಿಗೆ	,	15—0—0
ಮಿಶನ್ ಕೂಡಿಗಳು ದೊಡ್ಡ ಸೈಜ್ (ಸ್ವಿಟ್ಜರ್ಲ್ಯಾಂಡ್) 1ಕ್ಕೆ	,,	5—0—0
,, ಸಣ್ಣ ಸೈಜ್ ,, ,, ...	,,	4—12—0
,, ,, ಹೋಟೆಲಿಗಾಗಿ ,, ..	,,	ಕಮ್ಮಿ ಕ್ರಯ

ಮೆ.ಕ್ಡೋವೆಲ್ ಕಂಪೆನಿ,

ಮಡಿಕೇರಿ.

Messers Mc Dowell & Co

12-2 Mercara

ಅದ್ಭುತ! ಆಶ್ಚರ್ಯಕರ! ಬಲುತಮಾಷೆ!

ಪೊಕೆಟ್ ಡಿಟೆಕ್ಟಿವ್

ಇಪ್ಪತ್ತನೆಯ ಶತಮಾನದ ವಿಚಿತ್ರವೇ ಇದು



ಪೇಟೆಂಟ್ ಪಡೆದ ... ವಸ್ತು, ಪ್ರತಿಯೊಬ್ಬರಿಗೂ ... ಅನುದಿನದ ಅತಿ ... ಅವರ ಕಾರ್ಯ ... ಯಾರಿಗೂ ತಿಳಿಯದಂತೆಯೇ ನೋಡಬಹುದು ... ಈ ವಸ್ತು 1 ತಿಂಗಳ ಬಾಳಿಕೆ ಬರುವುದು ... ಬೆಲೆ ರೂ 200 ... 580 ...

ಪಿ ಕೆ ಸ್ವಾಮಿ,
17 ... ಬಜಾರ್, ... ಮದ್ರಾಸು

ರೂ. ... ಕ್ರಯಬಾಳುವ 100 ಅತ್ಯುಪಯುಕ್ತ ವಸ್ತುಗಳಿರುವ

ಜರ್ಮನ್ ಕೋಂಬಿನೇಶನ್ ಪೆಟ್ಟಿಗೆ

... ಪೆಟ್ಟಿಗೆಯಲ್ಲಿರುವ ವಸ್ತುಗಳು

... ಗೋಲ್ಡ್ ಫೈಲ್ ಇಮಿಟೇಶನ್ ... ಗೋಲ್ಡ್ ... 12 ... 12, ... 1 ... 1, ... 1 ... 12 ... 1, ... 1, ... 12

ಹೀಗೆ ಒಟ್ಟು 100 ಅತ್ಯುಪಯುಕ್ತ ವಸ್ತುಗಳ ಬೆಲೆ ರೂ 1—8—0 ಬೇಕಾದವರು ಬೇಗನೆ ಈ ವಿಳಾಸಕ್ಕೆ ಬರೆದುಕೊಳ್ಳಿರಿ.

ಸಿಂಪ್ಲೆಕ್ಸ್ ನೋವೆಲ್ಟಿ ಹೌಸ್,
ಪೋಸ್ಟ್ ಬಾಕ್ಸ್ ನಂಬ್ರ 112 ಮದ್ರಾಸು

ವಿಶೇಷದ ಮಾರಾಟ!

ಉಚಿತ! ಉಚಿತ!

18 ಕ್ಯಾರಟ್ ರೋಲ್ಡ್ ಗೋಲ್ಡ್ ಪ್ಲೇಟ್ ಚಿನ್ನದ ... ಬೆಲ್ಲೆಯಿರುವ ಮುಂಗೈ ಗಡಿಯಾರ ನಂ 100

ಇದು ಅತ್ಯಂತ ಹೊಸ ಮಾದರಿಯು, ಸುಂದರವಾದ ...

... ಬೆಲ್ಲೆಯು ... 100 ... ಕೈ ... ಸುಂದರವಾಗಿಯೂ ಚಿಕ್ಕದಾಗಿಯೂ ಇದೆ ... ಉಪಯೋಗಿಸಲು ...

... ಯಾವ ... ಕೊಡುವ ವಾಚ್ ... ವರ್ಷಗಳ ಗ್ಯಾರಂಟಿ ಕೊಡಲಾಗುತ್ತೆ ... ಒಂದು ವಾಚನ್ನು ಒಂದು ತಿಂಗಳೊಳಗೆ ಕೊಂಡುಕೊಂಡವರಿಗೆ ನಿಕಲ್ ... ಪೀಸ್ ಒಂದು ... ಕೊಡಲಾಗುತ್ತದೆ ಕ್ರಯ 7—0—0.

ದಿ ವಿನ್ಸರ್ ವಾಚ್ ಮತ್ತು ಕಂಪೆನಿ,
ಪೋಸ್ಟಾಫೀಸ್ ಬಾಕ್ಸ್ ನಂ 3/1
... ರೋಡ್, ಮದ್ರಾಸು.

ನೋವೆಲ್ ಜೋಕಲಿ ಕ್ಲಾಕ್

ಎಂಬ ಹೊಸ ನವ ಮಾದರಿಯ ಗಡಿಯಾರಗಳನ್ನು ... ಕ್ರಯದಲ್ಲಿ ಮಾರಲು ನಿಶ್ಚೈಸಿರುತ್ತೇವೆ

ಗೋಡೆ ಮೇಲೆ ಇರುವ ಸುಂದರವಾದ ... ದ ಸರಪಣಿಯಿಂದ ... ಯಾರ ... ಬೇಡ ಸ್ವಭಾವಿಕವಾಗಿ ಕಾಣುತ್ತದೆ ... ಆಟಿಕೆಸ್, ... ಮಗಳಿಗೂ ... ವಾದದ್ದು ... ಶಾಶ್ವತವಾದದ್ದು ... ರು ... ಲಿಕ್ಕೆ ಒಳ್ಳೇ ಸಮಯ!



ರೇಡಿಯೋ ವಾಚ್ ಕಂಪೆನಿ,
(G.P.O) ಬಿ. ಓ. ಓ.
52—5 ಮದ್ರಾಸು

... ಪೇಟೆಂಟ್ ... ಪಸ್ತು.

... ಸರಕಾರ ... ಗಳು ... ತ್ತದೆ ...

ಕಿರ್ಲೋಸ್ಕರ ಬಂಧು, ...
ಕಿರ್ಲೋಸ್ಕರವಾಡಿ,
... ಸಾತಾರ್

ಒಂದು ಪ್ರಬಲವಾದ ಪ್ರಶ್ನೆ.

ನಮ್ಮ ಜೀವವನ್ನು ವಿಮೆ ಮಾಡಬೇಕು! ... ದಲ್ಲಿ ನಮ್ಮ ... ಮಕ್ಕಳ ಪೋಷಣೆಗಾಗಿ!

... ಸಾವಿರಾರು ಜನರು ವಿಮೆ ಮಾಡಿರುವ ... ರೂಪಾಯಿಗಿಂತ ಹೆಚ್ಚು, ಒಂದುವರೆ ... ದೊಡ್ಡದಾದ ಸಾವಿರ ರೂಪಾಯಿ ... 18ರೂ ... ಓರಿಯಂಟಲ್ ' ಗವರ್ನ್‌ಮೆಂಟ್ ಬೀಮವಿಮೆ ಕಂಪೆನಿಯ ... ಈ ಕಳಗಿನವರಿಗೆ ಬರೆದು ತಿಳಿದುಕೊಳ್ಳಿ

ಖಾದಿಬಟ್ಟೆ ಎಂದರೇನು?

ದೇಶೀಯ ಹತ್ತಿಯಲ್ಲಿ ಕೈರಾಟೆಯಿಂದ ನೂಲು ತೆಗೆದು ಇಲ್ಲಿಯೇ ತಯಾರಿಸುವ ಬಟ್ಟೆಯೇ ಖಾದಿ.' ಈಗಾಗಲೇ ನಮ್ಮ ... ಗಟ್ಟಿಯಲ್ಲಿಯೂ ... ಎಲ್ಲಾ ತರದ ... ತಯಾರಾಗಿದೆ ... ದೇಶೀಯರು ...

ಪೇಟೆ ... ಕೆ. ಪಿ ಚಿಣ್ಣಪ್ಪ,
ದಕ್ಷಿಣ ಪ್ರೊಪ್ರೈಟರ್,
ಖಾದಿಭಂಡಾರ

52—10.

ಇಮಿಟೇಷನ್ ರೇಷ್ಮೆ ಸೀರೆಗಳು.

ಈ ... ಇದೆ ಈ ಸೀರೆಗಳನ್ನು ಹೊಸತಾದ ಇಮಿಟೇಷನ್ ಸಿಲ್ಕ್ ಗಟ್ಟಿ ... ಕಾಣುವುದಲ್ಲದೆ ಅಂದ ... ಇದ್ದವು ಈ ಪೂರದ ಸೀರೆಗಳು ... ಈ ಸೀರೆಗಳು ... ಗರೀಬರೂ, ... ಇದ್ದ ...

ಕ್ರಯ ... 1 ... ರು 6—8—0
... ರು 7—5—0

ವಿಳಾಸ —ಮಹರಾಜ ಟ್ರೇಡಿಂಗ್ ಕಂಪೆನಿ,
... ಬೀದಿ,
ಮದರಾಸು

ಈಗಲೇ ಪ್ರಿಂಟಾಗಿದೆ! ಶೃಂಗಾರನಾದ ಪುಸ್ತಕ!!

... ಪುರುಷರ ಪ್ರೀತಿಯ ... ಚಿತ್ರಸಂಗಡ ಸಹಿತ ತಿಳಿಸುವ

ಮನ್ಮಥ ಶಾಸ್ತ್ರ.

... ಕನ್ನಡ ಭಾಷೆಗೆ ಭಾಷಾಂತರಿಸಿರುತ್ತೇವೆ ಸ್ತ್ರೀಪುರುಷರುಗಳಿಗೆ ... ರಹಸ್ಯಗಳು, ರತಿ ... ಬೇಕಾದ ಉಪಾಯಗಳು, ಸ್ತ್ರೀ ... ಜಾತಿಯ ಲಕ್ಷಣಗಳು ಗರ್ಭಧರಿಸುವುದು, ... ಶಿಶು ಉತ್ಪತ್ತಿ ..., ಗುಪ್ತ ವೈದ್ಯ, ಶಯನ ಗೃಹದ ಸೆಯ... ಇನ್ನೂ ಸ್ತ್ರೀಪುರುಷರಿಗೆ ಬೇಕಾದ ... ರಹಸ್ಯಗಳು ... ಈ ಶೃಂಗಾರವಾದ ಪುಸ್ತಕವನ್ನು ... ಪಟಗಳ ಸಹಿತ ಕ್ರಯ ಪುಸ್ತಕ 1ಕ್ಕೆ ರೂ 1—0—0

ವಿಳಾಸ —ಟಿ ರಾಮಚಂದ್ರರಾವ್ ಕಂಪನಿ,
...—24 ಪೋಸ್ಟು ಬಾಕ್ಸ್ ನಂ 232, ಮದರಾಸ್.

೧೦೦೦ ರೂಪಾಯಿಗಳ ಬಹುಮಾನ.

ಲೋಕಪ್ರಸಿದ್ಧವಾದ ನಾಲಂಮಿಸ್ರಿ ಮುರಬ್ಬಾ.

ನಮ್ಮ ಟ್ರೇಡ್ ಮಾರ್ಕನ್ನು ನೋಡಿ ಈ ಔಷಧ ತೆಗೆದುಕೊಳ್ಳಿ

ಇದರ ಸೇವನೆಯಿಂದ ... ಸ್ತ್ರೀ ಸಂಪರ್ಕ ಮೊದಲೇ ... ದೋಷರಹಿತವಾಗಿ ಶರೀರಕ್ಕೆ ಆರೋಗ್ಯವನ್ನೂ ದಾರ್ಢ್ಯತೆ ಯನ್ನೂ ಆಯಸ್ಸು ಬಲ ತೇಜಸ್ಸು ಉಂಟು ಮಾಡುವುದು ... ಸೋಂಟ ನೋವುಗಳಿಗೆ ಇದು ದಿವ್ಯ ಔಷದವು ಈ ನಾಲಂಮಿಸ್ರಿ ... ಕಾಬೂಲ್‌ಕಂದಾಹಾರ ಪ್ರಾಂತ್ಯದಲ್ಲಿ ಬೆಳೆಯುತ್ತದೆ.

ಈ ಔಷಧದಿಂದ ... ಅನೇಕ ಮಹನೀಯರು ತಾವಾಗಿಯೇ ... ದೇಶಗಳಿಂದಲೂ ಆಫ್ರಿಕ, ಬರ್ಮ, ಪಿನಾಂಗ್, ಸಿಂಗಪೂರ್, ಸಿಲೋನ್, ... ಕಲ್ಕತ್ತ, ಮದ್ರಾಸು ಮತ್ತು ಇಂಡಿಯಾದೇಶದಲ್ಲಿ ಎಲ್ಲಾ ಸ್ಥಳಗಳಿಂದಲೂ ... ಇವುಗಳ ನಕಲನ್ನು ... ಇವುಗಳು ಸುಳ್ಳು ಎಂದು ನಿರ್ಧರಿಸಿದವರಿಗೆ ... ಬಹುಮಾನವು ಕೊಡಲ್ಪಡುತ್ತೆ ನಾವು ಹಾಗೆ ಕೂಡನೇ ... ಮೂಲಕ ... ಜನ್ಮಾಂತ್ರದವರಿಗೂ ಪೂರ್ಣ ... ವಿವರವಾ ... ಒಂದಾವರ್ತಿ ... ಪ್ರಾತ್ರಿ ...

ಕ್ರಯ ... ೧೦೦೦ ... ಏಜಂಟರುಗಳು ... ಕಾಲದಲ್ಲಿ ಈ ... ಹೆಸರನ್ನು ಬರಮಾಡಿಕೊ

ಬೆಂಗಳೂರ್ ಅಫೀಸ್, ... ಬೆಂಗಳೂರು ಸಿಟಿ }
ಡಿ. ಮನ್ನಾಲಾಲ್, ದಿಲ್ಲಿ ನೇಟಿವ್ ವೈದ್ಯರು,
ನಾಲಂಮಿಸ್ರಿ ಮುರಬ್ಬ ಡಿಪೋ,
ಬೆಂಗಳೂರು ಸಿಟಿ

12—10

Printed & published by Kodanda Appayya, R B., Chairman, ... Directors, at "Kodagu" Press, Mercara for "Kodagu", Ltd.

If not delivered please return to
"KODAGU" OFFICE MERCARA

ಕೊಡಗು.

[ಶಿಕ್ಷೇನ ಭೂತದಯಯಾ ವಿದ್ಯಾ ಏಕ ಪ್ರಯುಕ್ತತಾ || ಐಕ್ಯಮತ್ಯೇನ ದೇಶಾನಾಂ ಸುಸ್ಥಿರಾ ರಾಜ್ಯ ಸಂಪದಾ ||]

ಸಂಪಾದಕ—ಪಂದ್ಯಂಡ ಐ. ಬೆಳ್ಯಪ್ಪ.

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವದು.

ಸಂಪುಟ ೬] ಕೊಡಗು, ಸ೯ ೧೯೨೬ನೇ ಇಸವಿ ಜೂನ್ ತಾರೀಕು ೧೧ ನೇ ಶುಕ್ರವಾರ [ಸಂಚಿಕೆ ೨

ಸ್ಥಾಪಿತವಾದದ್ದು 1874 ಮೂಲಧನ 7 ಕೋಟಿ ರೂಪಾಯಿಗಳು

ಓರಿಯಂಟಲ್ ಗವರ್ನ್‌ಮೆಂಟ್ ಸೆಕ್ಯೂರಿಟಿ ಲೈಫ್ ಅಷ್ಯೂರೆನ್ಸ್ ಕಂಪೆನಿ ಲಿಮಿಟೆಡ್, ಹೆಡ್ ಆಫೀಸು= ಬೊಂಬಾಯಿ.

1922-1924 ಈ ಮೂರು ವರ್ಷಗಳಲ್ಲಿ ಕಂಪೆನಿಯಲ್ಲಿ ನಡೆದ ಕಲಸದ ಫಲಿತಾಂಶಗಳು. —

ಲಾಭ— ರೂ. 51,00,000 (ಐವತ್ತೊಂದು ಲಕ್ಷ ರೂಪಾಯಿಗಳು) ಇದರಲ್ಲಿ 45,91,80 ರೂಪಾಯಿಗಳನ್ನು ಲಾಭ ಸಹಿತ ವಿಮೆ ಮಾಡಿದವರ ಪಾಲಿಸಿ ಹಣಕ್ಕೆ ಹೆಚ್ಚು ಬೋನಸ್ ಒಪ್ಪವಾಗಿ ಈ ಕೆಳಗೆ ತೋರಿಸಿರುವ ರೀತಿಯಲ್ಲಿ ಸೇರಿಸಿರುತ್ತದೆ

ಜೀವಮಾನಾವಧಿಯ ಪಾಲಿಸಿದಾರರಿಗೆ ರೂ. 1000 ಪಾಲಿಸಿ ಹಣಕ್ಕೆ

ಈ ಮೂರು ವರ್ಷಗಳಿಗೆ ರೂ 671.

ನಿಶ್ಚಯಕಾಲದ ಪಾಲಿಸಿದಾರರಿಗೆ ರೂ 1000 ಪಾಲಿಸಿ ಹಣಕ್ಕೆ

ಈ ಮೂರು ವರ್ಷಗಳಿಗೆ ರೂ. 54

ಈ ಕಂಪೆನಿಯಲ್ಲಿ ಕ್ರಮೇಣ ಹೆಚ್ಚುತ್ತಿರುವ ಜನಾನುರಾಗವು ಈ ಕೆಳಗೆ ಕೊಟ್ಟಿರುವ ಹೊಸ ಕೆಲಸದ ಪಟ್ಟಿಯಿಂದ ವ್ಯಕ್ತವಾಗುತ್ತದೆ.

1923ರಲ್ಲಿ	—ರೂ	1 74 00,000
1924	"	2 57,00,000
1925	"	2 96,00,000

ಇನ್ನೂ ದಿನದಿನಕ್ಕೂ ಅಭಿವೃದ್ಧಿಯಾಗುತ್ತಲೇ ಇದೆ. ಜೀವವಿಮೆ ಪತ್ರದಲ್ಲಿ ಹಣವನ್ನು ಲಾಭಕರವಾಗಿ ತೊಡಗಿಸಲು ಇದೇ ಸುಸಮಯ.

ಬೇಕಾದ ವಿಷಯಗಳನ್ನು ಈ ಕೆಳಗಿನ ವಿಳಾಸಕ್ಕೆ ಬರೆದು ತಿಳಿದುಕೊಳ್ಳಬಹುದು.

ಓರಿಯಂಟಲ್ ಬಿಲ್ಡಿಂಗ್ಸ್,
ಪೋಸ್ಟ್ ಬಾಕ್ಸ್ 56
ಬೆಂಗಳೂರು

ಪಿ. ವಿ. ಸುಬ್ರಮಣ್ಯಯ್ಯರ್,
ಬ್ರಾಂಚ್ ಸೆಕ್ರೆಟರಿ.

52—10

ಮನೋಲ್ಲಾಸಿನಿ ತೈಲ.

ತಲೆನೋವು, ತಲೆ ತಿರುಗುವುದು, ತಲೆಬುರುಡೆ ಕಣ್ಣುರಿ, ಶಿರಿಯಿಂದ ಕಣ್ಣು ನೋವು, ಕಣ್ಣು ನೋವು, ಅಪಸ್ಮಾರ ನಿದ್ರೆ ಬಾರದಿರುವುದು, ನೆನಪು ಶಕ್ತಿ ಕುಂದಿಹೋಗುವುದು ಇವುಗಳನ್ನೆಲ್ಲ ನಿಂತಿತ ಗುಣಮಾಡುತ್ತದೆ ಉದುರುವ ಕೂದಲನ್ನು ನಿಲ್ಲಿಸಿ ಗಿಡ್ಡಗಿರುವ

ಕೂದಲನ್ನು ಬೆಳಯಿಸಿ ಕೂದಲಿಗೆ ಸುಗಂಧ ಸುವಾಸನೆಯನ್ನೂ ಹೊಳಪನ್ನೂ ಕೊಟ್ಟು ಅಕಾಲಿಕ ಹಣ್ಣಾಗುವ ಕೂದಲನ್ನು ತಡೆದು ಕೂದಲು ಇಲ್ಲದ ಸ್ಥಳದಲ್ಲಿ ಹೊಸ ಕೂದಲನ್ನು ಹುಟ್ಟಿಸುತ್ತದೆ ಬೆಲೆ ಸೀಸೆಗೆ ರೂ 1, 3 ಸೀಸೆಗೆ 2—10—0, ಒಂದು ದೊಡ್ಡ ಸೀಸೆಗೆ ರೂ 2, 3 ಸೀಸೆಗಳಿಗೆ 5—8—0

ಚಂದನಾಸವ.— ಇದು ಪ್ರಮೇಹ ಮೂತ್ರಕೃಚ್ಛ್ರ, ಮೂತ್ರ ಹನಿಹನಿಯಾಗಿ ಹೋಗುವುದು, ಮೂತ್ರಕೋಶದ ಉರಿ, ಮೂತ್ರಪಿಂಡಗಳ ಉರಿ ಮೂತ್ರನಾಳದಲ್ಲಿ ಹುಣ್ಣು, ಮೂತ್ರ ಬೊಯ್ಯುವಾಗ ಉರಿಯುವುದು, ಮೂತ್ರ ನಾಳದಿಂದ ಕೀವು ಬರುವುದು, ಮೂತ್ರದಲ್ಲಿ ಧಾತು, ಹುಡಿ ಹೋಗುವುದು, ಆಗಾಗ್ಗೆ ಮೂತ್ರ ಬರುವದು ಮೂತ್ರ ತಡೆಯಲಿಕ್ಕೆ ಸಾಮರ್ಥ್ಯವಿಲ್ಲದಿರುವುದು, ದೇಹದಲ್ಲಿ ಉರಿ, ಬಾಯಾರಿಕೆ, ಸ್ವಪ್ನಾವಸ್ಥೆ, ಮೂತ್ರನಾಳದಲ್ಲಿ ಚುಚ್ಚುವ ನೋವು ಇವುಗಳಿಗೆ ಪರಮ ಔಷಧಿ ಗಂಡಸರಿಗೂ ಹೆಂಗಸರಿಗೂ ಇದು ಅತ್ಯುತ್ತಮ ಬೆಲೆ—ಬಾಟ್ಲಿ 1, 3, 6ಕ್ಕೆ ರೂ 1—4—0 3—8—0, 6—12—0

ರೋಮನಾಶಿನಿ — ಈ ಹುಡಿಯನ್ನು ನೀರಲ್ಲಿ ಕಲಸಿ ಮೈಯಲ್ಲಿ ರೋಮವಿರುವ ಭಾಗಕ್ಕೆ ಹಚ್ಚಲು ರೋಮವು ಉದುರಿ ಬೀಳುವುದು ಡಬ್ಬಿ 1ಕ್ಕೆ 1 ಆಣೆ, 3 ಡಬ್ಬಿಗಳಿಗೆ ರೂ. 1, 1 ಡಜನಿಗೆ 3-8-0

ಅಮೃತಾರಿಷ್ಟ.— ಇದು ಕ್ವಿನೈನು ಬೆರಸದಿರುವ ಉತ್ತಮೋತ್ತಮವಾದ ಔಷಧಿ ಎಲ್ಲಾ ತರದ ಜ್ವರಕ್ಕೆ ಉತ್ತಮ. ಬೆಲೆ — ಬಾಟ್ಲಿ 1, 3, 6ಕ್ಕೆ ರೂ 1—4—0 3—8—0, 6—12—0

ಲೋಹಾಸವ.— ಇದು ಜ್ವರಗಳಿಗೆ ಮತ್ತು ಮಲೇರಿಯದಿಂದುಂಟಾದ ಅಶಕ್ತತೆಗೆ ದಿವ್ಯೌಷಧ ಬೆಲೆ — ಬಾಟ್ಲಿ 1, 3, 6ಕ್ಕೆ ರೂ. 1—4—0, 3—8—0; 6—12—0

ನಮ್ಮ ಕೆಟಲಾಗು ತರಿಸಿ ನೋಡಿರಿ

ವಿಳಾಸ — ಮನೋಲ್ಲಾಸಿನಿ ಕಂಪೆನಿ,
9 ಮಂಗಳೂರು, ಕಂಕನಾಡಿ.

52—25

ಜ್ವರಗಳ ಮೇಲೆ ಅಮೂಲ್ಯ ಔಷಧವು.

ಕರ್ಣಾಟಕ

ಎಗ್ಯೂ ಮಿಕ್ಸ್ಚರ್

ಟಾನಿಕ್ ಸಿರಪ್.

(ಶಕ್ತಿವರ್ಧಕ ಸರಬತ್ತು)

ಥಂಡಿಜ್ವರ, ಮಲೇರಿಯ ಮೊದಲಾದ ಜ್ವರಗಳು ಬಿಟ್ಟನಂತರ ಬರುವ ಅಶಕ್ತತೆ, ಸಣ್ಣಜ್ವರವು ಬರುತ್ತಿರುವುದು ಮೊದಲಾದವುಗಳ ಮೇಲೆ ಇದು ಒಂದು ಅಮೂಲ್ಯ ಔಷಧವಾಗಿರುತ್ತದೆ. ನಮ್ಮ ಎಗ್ಯೂಮಿಕ್ಸ್ಚರನ್ನು ಸೇರಿಸಿ ಗುಣವನ್ನು ಹೊಂದಿದ ಪ್ರತಿಯೊಬ್ಬನು ಇದರ ಒಂದು ಬಾಟ್ಲಿಯನ್ನಾದರೂ ಅವಶ್ಯವಾಗಿ ಸೇವಿಸಬೇಕು. ಅಂದರೆ ಅವನಿಗೆ ಜ್ವರದನಂತರದ ಅಶಕ್ತತೆಯು ಬರಲಿಕ್ಕೇ ಇಲ್ಲ.

ಬೆಲೆ 1 ರೂಪಾಯಿ ಟಪಾಲು ವೆಚ್ಚ ಬೇರೆ.

12—2

ಕರ್ಣಾಟಕ ಬ್ರದರ್ಸ್
ಗಿರಗಾಂವ, ಮುಂಬಾಯಿ.

ಬೇಕಾಗಿವೆ.

ಬೀಟಿ ಮರದ ತೊಲೆಗಳು ಬೇಕಾಗಿವೆ

ಒಳ್ಳೇ ಬೆಲೆ ಕೊಡಲಾಗುವುದು. ಹೆಚ್ಚಿನ ಸಂಗತಿಗೆ ದಯವಿಟ್ಟು ಈ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳುವುದು.

WANTED

Rose wood logs (Beeti)

Good price offored.

For further particulars please apply to:—

R. FRAMJEE,
Mercara.

12 12

ಕೆ. ಸಿ. ಅಪ್ಪಚ್ಚು.

ದಂತ ವೈದ್ಯರು.

ಇದೇ ತಾರೀಕು 20ರಿಂದ ಮಡಿಕೇರಿಯಲ್ಲಿ ಉಳಕೊಳ್ಳುವರು. ಖಾಯಿಷ್ ದಾರರು ಅವರನ್ನು ಅಲ್ಲಿ ಹೋಗಿ ನೋಡಬಹುದು, ಇಂಥಾ ಸಮಯವನ್ನು ಕಳಕೊಳ್ಳಬೇಡಿರಿ ಕನ್ಸಲ್ಟಿಂಗ್ ಚಾರ್ಜು ಇಲ್ಲದೆ ನೋಡುವರು. 52-10

ಸತ್ಯಮೇವಜಯತೇ.

(ಗುಣವಾಗದಿದ್ದರೆ ಹಣ ಹರತ)

ಧಾತುಪೌಷ್ಟಿಕ ಕಾಮೋತ್ತೇಜಕ, ಇಂದ್ರಿಯಸ್ತಂಭಕವಾದ

ಮದನೋದ್ಭವ ಗುಳಿಗೆ.

ಜನನೇಂದ್ರಿಯದ ಶಿಥಿಲತೆ ನಿರ್ಬಲತೆ ನಪುಂಸಕತ್ವ ಕ್ಷೀಣತೆ ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣವಾಗಿ ಧಾತು ಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ ಇಂದ್ರಿಯಸ್ತಂಭಕ, ಗರ್ಮಿ (ಟಾಕಿ) ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲ ತರದ ಬೊಕ್ಕೆಗಳು, ಹುಣ್ಣುಗಳು ಪಿತ್ತದ ಬಾಧೆಗಳು, ಕಟುಡಲೆ ನಾಶರೋಗವು ಮುಂತಾದವು ಅತಿಸ್ವಲ್ಪ ಗುಣವಾಗಿ ಶರೀರಕ್ಕೆ ನಿರೋಗತ್ವವೂ ಕಾಂತಿಯೂ ದೇಹಸುಖಕ್ಕೆ ಸಂಪೂರ್ಣ ಶಕ್ತಿಯೂ ಉಂಟಾಗುತ್ತದೆ ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗುತ್ತವೆ ಕಿಮ್ಮತ್ತು ೬೦ ಗುಳಿಗೆಗಳಿಗೆ ೪ ರೂಪಾಯಿ ಇದನ್ನು ಸೇವಿಸುವಾಗ **ನಪುಂಸಕತ್ವಾರಿ ತೈಲ**ವನ್ನು ಉಪಯೋಗಿಸಿದರೆ ಉತ್ತಮ. ಕಿಮ್ಮತ್ತು ಬಾಟ್ಲಿ ೧ಕ್ಕೆ ರೂ ೨—೧೨—೦

ಪ್ರಮೇಹನಿವಾರಣಿ—ಇದರ ಸೇವನೆಯಿಂದ ಮೂತ್ರ ಕ್ಷಾರವಿರುವ ಕೆಂಪು ಹಳದಿಯಂತೆ ನೋಗತಕ್ಕ ಕೀವು, ಉರಿ ವಗೈರೆ ಆಗದಿಯಾತ್ರಿಯಿಂದ ಗುಣವಾಗುವದು ಕಿಮ್ಮತ್ತು ಬಾಟ್ಲಿ ೧ಕ್ಕೆ ರೂ ೩—೮—೦ ಟಿ ಪಿ ಖರ್ಚು ಅನುಪಾನ ಪತ್ರಿಕೆ ಔಷಧದ ಸಂಗಡ

ದಂಪಾಣ ಸ್ಟಾಂಪು ಕಳುಹಿಸಿದರೆ ಕ್ಯಾಟಲಾಗು

ವಿಳಾಸ,—

ವೈದ್ಯ ಜಿ. ಎಲ್ ಜೋಶಿ ಮತು ಕಂಪೆನಿ.
21 ನಂ 6 ಪೋಷ್ಟ ಒನವಾಸಿ, ಉತ್ತರ ಕಾನಡಾ

EMPIRE OF INDIA LIFE ASSURANCE CO., LTD.

(Established 1897)

ALL WITH PROFIT POLICIES

Issued before 28th February, 1927 will share in the BONUS Distribution for the five years ending on that date.

PROSPECTUS ON APPLICATION

Bangalore Branch
152 Commercial Street.
24—18

Madras Branch
9 & 10 Second Line Beach

ARMS & AMMUNITION MART.

Mahomedally-Noorbhoy



321 Abdul Rehman Street, near Crawford Market, BOMBAY. 3

Telegraphic Address.—"SHOOTER" Bombay.

[52—41] Please write for Reduced nett prices list for 1926.

"ಕೊಡಗು"

೧೯೨೬ನೇ ಇಸವಿ ಜೂನ್ ತಾ. ೧೧ನೇ ಶುಕ್ರವಾರ

ಡಿಸ್ಟ್ರಿಕ್ಟ್ ಬೋರ್ಡ್.

ನಮ್ಮ ದೇಶದಲ್ಲಿ ಇರುವ ಡಿಸ್ಟ್ರಿಕ್ಟ್‌ಬೋರ್ಡಿನ ಆಡಳಿತವನ್ನು ಪ್ರಜೆಗಳ ಪ್ರತಿನಿಧಿಗಳಿಗೆ ಬಿಟ್ಟುಕೊಡಬೇಕೆಂಬ ಹೋರಾಟವು 1918ನೇ ಇಸ್ವಿಯಿಂದಲೇ ನಡೆಯುತ್ತಿದ್ದರೂ ಈಗಲಾದರೂ ಅದನ್ನು ಪ್ರಜಾಪ್ರತಿನಿಧಿಗಳ ಅಭಿಪ್ರಾಯದ ಮೇರೆ ನಡೆಯುವಂತೆ ಮಾಡುವ ಏರ್ಪಾಡು ನಡೆಯುತ್ತಿದೆ. 1925ನೇ ವರುಷದ ವರೆಗಿದ್ದ ಡಿಸ್ಟ್ರಿಕ್ಟ್‌ಬೋರ್ಡಿನಲ್ಲಿ ಸರಕಾರ ಉದ್ಯೋಗಸ್ಥರ ಸಂಖ್ಯೆಯೇ ಹೆಚ್ಚಾಗಿ ಇದ್ದದಲ್ಲದೆ ಪ್ರಜೆಗಳ ಪ್ರತಿನಿಧಿಗಳಾಗಿ ಹೋಗುವವರು ಸಹ ಪ್ರಜೆಗಳಿಂದ ಚುನಾಯಿತರಾದವರಾಗಿರಲಿಲ್ಲ. ಸರ್ಕಾರದ ದಯದಿಂದ ಉದ್ಯೋಗಸ್ಥರಲ್ಲದವರನ್ನು ನೇಮಿಸುವ ಮುಂಚೆ ಸುಭೇದಾರರುಗಳು ಆಯಾ ತಾಲೋಕಿನ ಜನರ ಅಭಿಪ್ರಾಯ ತೆಗೆದುಕೊಳ್ಳುವ ಪದ್ಧತಿಯೊಂದು ಜಾರಿಗೆ ಬಂದಿತ್ತು. ಪ್ರಜೆಗಳಿಂದ ಕ್ರಮವಾಗಿ ಚುನಾಯಿತರಾದವರ ಸಂಖ್ಯೆಯು ಹೆಚ್ಚಬೇಕೆಂಬುದೇ ಜನರ ಕೋರಿಕೆಯಾಗಿತ್ತು.

ಈ ಕೋರಿಕೆಯನ್ನು ನೆರವೇರಿಸಬೇಕಾದರೆ ಹೊಸ ರೂಲ್ಸುಗಳನ್ನು ತಯಾರಿಸಬೇಕಾಗಿತ್ತು. ಕಮೀಶನರಿಗೆ ಬೇರೆ ಕೆಲಸ ಹೆಚ್ಚಿದ್ದುದರಿಂದ ರೂಲ್ಸುಗಳನ್ನು ತಯಾರಿಸಲು ಸಮಯ ದೊರೆಯದೆ 1924ರಲ್ಲಿ ಹಳೆ ಮೆಂಬರುಗಳ ಮೆಂಬರ್ತನವನ್ನೇ ಒಂದು ವರುಷಕ್ಕೆ ಹೆಚ್ಚಿಸಿಕೊಂಡರು. ಒಂದು ವರುಷದ ಅವಧಿಯಲ್ಲಿ ಪ್ರಜೆಗಳಿಗೆ ಮೆಂಬರುಗಳನ್ನು ಚುನಾಯಿಸುವ ಹಕ್ಕು ಸಿಕ್ಕದಿದ್ದಾದರೆ ಹಳೆ ಮೆಂಬರುಗಳ ಅವಧಿಯನ್ನೇ ಒಂದು ವರ್ಷಕ್ಕೆ ಮುಂದರಿಸಬಹುದೆಂತ ಜಮೀನ್‌ದಾರರ ಸಂಘದಲ್ಲಿ ಠರಾವು ಪಾಸಾಗಿತ್ತು. ಅದರಂತೆಯೇ ಕಮೀಶನರು ಜಾರಿ ಮಾಡಿದ್ದಾಗಿರಬೇಕು.

ಕಳೆದ ಕೌನ್ಸಿಲ್ ಮೀಟಿಂಗಿನಲ್ಲಿ, ಡಿಸ್ಟ್ರಿಕ್ಟ್ ಬೋರ್ಡ್ ಇಲ್ಲದೆ ಡಿಸ್ಟ್ರಿಕ್ಟ್ ಬೋರ್ಡಿನ ಆಡಳಿತವನ್ನು ಕಮೀಶನರವರೇ ನಡಿಸುವ ವಿಷಯದಲ್ಲಿ ಕೌನ್ಸಿಲಿನ ಕೆಲವು ಮೆಂಬರುಗಳು ಕಠಿಣವಾದ ಆಕ್ಷೇಪಣೆ ಮಾಡಿದ್ದಕ್ಕೆ ಹೊಸ ಡಿಸ್ಟ್ರಿಕ್ಟ್ ಬೋರ್ಡ್ ಆಕ್ಟೇ ಮಂಜೂರಾಗಬೇಕೆಂತ ಕೌನ್ಸಿಲ್ ಮೆಂಬರುಗಳ ಅಭಿಪ್ರಾಯವಾಗಿದ್ದುದರಿಂದ ಹೊಸ ರೂಲ್ಸು ಮಾಡುವ ಯೋಚನೆ ಮಾಡಲಿಲ್ಲವೆಂತ ಕಮೀಶನರು ಸಮಾಧಾನ ಹೇಳಿದರು. ಹೊಸ ಆಕ್ಟು ಮಾಡುವ ವರೆಗೆ ಪ್ರಜಾಪ್ರತಿನಿಧಿಗಳಿಲ್ಲದೆ ಕಮೀಶನರೊಬ್ಬರೇ ಆಡಳಿತ ನಡಿಸಬಹುದೆಂತ ಯಾರೂ ಅಭಿಪ್ರಾಯ ಕೊಟ್ಟಿರಲಿಲ್ಲ. ಹಳೇ ಪದ್ಧತಿ ಮೇರೆ ನಾಮಿನೇಶನ್ ಅಂದರೆ ಕಮೀಶನರು ಉದ್ಯೋಗಸ್ಥರಲ್ಲದ ಮೆಂಬರುಗಳನ್ನು ನೇಮಿಸಿಕೊಳ್ಳಬೇಕಿತ್ತು. ಈ ರೀತಿ ಕೌನ್ಸಿಲಿನಲ್ಲಿ ಕೆಲವು ಮೆಂಬರುಗಳು ಅಭಿಪ್ರಾಯ ಕೊಟ್ಟದ್ದನ್ನು ಕಮೀಶನರು ಅಂಗೀಕರಿಸಿ ಈಗ ಹೊಸ ರೂಲ್ಸುಗಳನ್ನು ಜನರ ಅಭಿಪ್ರಾಯವನ್ನು ತೆಗೆದುಕೊಳ್ಳುವ ಬಗ್ಗೆ ಗಜೆಟಿನಲ್ಲಿ ಪ್ರಕಟಿಸಿದ್ದಾರೆ. ಅಂಥಾ ರೂಲ್ಸುಗಳ ಮೇಲೆ ದೇಶದ ಅಭಿಪ್ರಾಯ ದೊರೆತ ನಂತರ ಅವನ್ನು ಚೀಫ್ ಕಮೀಶನರು ಮಂಜೂರ್ ಮಾಡಿ ಅವುಗಳ ಮೇರೆ ಓಟರುಗಳ ಪಟ್ಟಿ ತಯಾರಾಗಿ ಚುನಾವಣೆಯಾಗುವ ವರೆಗೆ ಡಿಸ್ಟ್ರಿಕ್ಟ್ ಬೋರ್ಡಿನ ಆಡಳಿತ ನಡಿಸುವ ಬಗ್ಗೆ ಹೆಚ್ಚಾಗಿ ಕೌನ್ಸಿಲ್ ಮೆಂಬರುಗಳನ್ನೂ ಇನ್ನು ಕೆಲವರನ್ನೂ ಡಿಸ್ಟ್ರಿಕ್ಟ್ ಬೋರ್ಡಿಗೆ ನೇಮಿಸಿಕೊಳ್ಳುವ ಏರ್ಪಾಡು ನಡೆಯುತ್ತಿದೆಯಾಗಿ ತಿಳಿದು ಬಂದಿದೆ. ರೂಲ್ಸು ಮಂಜೂರಾಗಿ ಚುನಾವಣೆ ನಡೆಯುವ ವರೆಗೆ ಡಿಸ್ಟ್ರಿಕ್ಟ್ ಬೋರ್ಡ್ ಇಲ್ಲದೆ ಇರುವುದಕ್ಕಿಂತ ನೇಮಿತ ಮೆಂಬರುಗಳನ್ನಾದರೂ ಒಳಕೊಂಡ ಬೋರ್ಡ್ ಒಂದು ಇರುವದು ಲೇಸು. ಯಾರನ್ನು ನೇಮಿಸಬೇಕೆಂಬುದರಲ್ಲಿ, ದೇಶದಿಂದ ಚುನಾವಣೆಯಾಗಿ ಬಂದ ಕೌನ್ಸಿಲ್ ಮೆಂಬರುಗಳನ್ನು ಹಂಗಾಮಿಯಾಗಿ ನೇಮಿಸಿಕೊಂಡದ್ದು ಯಕ್ತವೇ. ಆದರೆ ಒಬ್ಬರಿಬ್ಬರು ಚುನಾಯಿತ ಕೌನ್ಸಿಲ್ ಮೆಂಬರುಗಳನ್ನು ಬಿಟ್ಟದ್ದು ಯುಕ್ತವಾಗಿ ತೋರುವದಿಲ್ಲ. ಹೆಚ್ಚಿನ ಮೆಂಬರುಗಳು ಬೇಕಾಗಿದ್ದರೆ ಅಂಥವರನ್ನು ಸಹ ನೇಮಿಸಿಕೊಳ್ಳಬಹುದಾಗಿತ್ತು.

ಇನ್ನು ಪ್ರಕಟವಾಗಿರುವ ರೂಲ್ಸುಗಳನ್ನು ನೋಡೋಣ. ಕೌನ್ಸಿಲ್ ಚುನಾವಣೆ ರೂಲ್ಸುಗಳಿಗೂ ಇವಕ್ಕೂ ಇರುವ ಮುಖ್ಯ ಎರಡು ಭೇದಗಳು ಮುಂದಾಗಿ ಕಂಡುಬರುತ್ತವೆ. ಡಿಸ್ಟ್ರಿಕ್ಟ್‌ಬೋರ್ಡ್ ಚುನಾವಣೆಗೆ ನಾಡಿಗೆ ಒಬ್ಬ ಮೆಂಬರನಂತೆ ಹಾಲಿ ಇರುವ ಹನ್ನೊಂದು ನಾಡುಗಳಿಗೆ ಹನ್ನೊಂದು ಚುನಾಯಿತ ಮೆಂಬರುಗಳಿರುವರು. ತಾಲೋಕು ವಾರು ಚುನಾವಣೆಗಿಂತ ನಾಡುವಾರು ಚುನಾವಣೆಯೇ ಉತ್ತಮ. ಕೌನ್ಸಿಲ್ ಚುನಾವಣೆಗೆ ಇರುವಂತೆ ಒಬ್ಬ ಓಟರಿಗೆ ಎರಡು, ಮೂರು ಓಟ್ ಇಲ್ಲ. ಒಬ್ಬ ಓಟರಿಗೆ ಒಂದೇ ಓಟ್. ಇದು ಸಹ ಒಳ್ಳೆಯದೇ. ಇದಕ್ಕಿಂತಲೂ ವಿಶೇಷವಾದ ಇನ್ನೊಂದು ವ್ಯತ್ಯಾಸವೇನಂದರೆ, ಸಾಗು, ಜಮ್ಮ ಎಂಬ ಪ್ರತ್ಯೇಕ ಪ್ರತ್ಯೇಕ ಚುನಾವಣೆಯಿಲ್ಲ. ಪ್ರತಿಯೊಬ್ಬ ಮೆಂಬರನೂ ನಾಡಿನಲ್ಲಿ ವಾಸ ಇರುವ ಯೂರೋಪಿಯನ್ನರಿದ ಸಾಗು 10 ರೂ ಜಮ್ಮ 5 ರೂ ಕಂದಾಯ ಕೊಡುವ ಪ್ರತಿಯೊಬ್ಬ ಓಟರಿನಿಂದಲೂ ಓಟು ಪಡೆದೇ ಮೆಂಬರನಾಗಿ ಚುನಾಯಿಸಲ್ಪಡಬೇಕು. ಕೌನ್ಸಿಲಿನಲ್ಲೇ ಈ ವ್ಯತ್ಯಾಸ ಇಡಬಾರದಿತ್ತು. ಡಿಸ್ಟ್ರಿಕ್ಟ್‌ಬೋರ್ಡಿನಲ್ಲಂತೂ ಈ ವ್ಯತ್ಯಾಸವನ್ನು ತರಲು ಏನೇನೂ ಕಾರಣವಿಲ್ಲ. ಡಿಸ್ಟ್ರಿಕ್ಟ್‌ಬೋರ್ಡಿನ ಆಡಳಿತವನ್ನು ಜಾತಿ ಮತ ಭೇದವಿಲ್ಲದೆ ಸಮುದಾಯಕ್ಕೆ ಹಿತವಾಗಿ ನಡಿಸಲು ಮನಸ್ಸೂ ಅರ್ಹತೆಯೂ ಇರುವವರೇ ಚುನಾಯಿತರಾಗಬೇಕೇ ಹೊರತು ಒಂದು ಜಾತಿ ಅಥವಾ ಒಂದು ವಿಧದ ಭೂಕಂದಾಯ ಕೊಡುವವರ ಹಿತಕ್ಕೆ ಮಾತ್ರ ಕೆಲಸ ಮಾಡುವವರು ಡಿಸ್ಟ್ರಿಕ್ಟ್‌ಬೋರ್ಡಿನಲ್ಲಿ ಬೇಕಾಗಿರುವದಿಲ್ಲ. ಹಾಗೆ, ಜಮ್ಮ ಸಾಗು ಎಂಬ ಭೇದವನ್ನು ತರದೆ ಇದ್ದದ್ದಕ್ಕೆ ಕಮೀಶನರಿಗೂ ಚೀಫ್ ಕಮೀಶನರಿಗೂ ನಮ್ಮ ಅಭಿನಂದನೆಗಳಿವೆ.

ಓಟ್ ಕೊಡಲು ಅರ್ಹತೆಯು 5 ರೂ ಜಮ್ಮ ಕಂದಾಯ, ಅಥವಾ 10 ರೂ ಸಾಗು ಕಂದಾಯ ಕೊಡುತ್ತಿರಬೇಕೆಂತ ಮಾಡಿದ್ದು ತೃಪ್ತಿಕರವೆಂತ ಹೇಳಲಿಕ್ಕಾಗುವದಿಲ್ಲ. ಒಂದು ಅಥವಾ ಎರಡು ರೂಪಾಯಿ ಕಂದಾಯ ಕೊಡುವವನಿಗೂ ಓಟ್ ಕೊಡುವ ಹಕ್ಕು ಕೊಡಬಹುದಿತ್ತು. ಕೌನ್ಸಿಲಿಗೂ ಡಿ. ಬೋರ್ಡಿಗೂ ಒಂದೇ ಅರ್ಹತೆ ಇಟ್ಟದ್ದರಿಂದ ಓಟರ ಪಟ್ಟಿ ತಯಾರು ಮಾಡುವದು ಸುಲಭವಾಗುತ್ತದೆ. ಈ ಕಾರಣದಿಂದಲೇ ಓಟರುಗಳ ಅರ್ಹತೆಯನ್ನು ಹೆಚ್ಚಾಗಿ ಇಟ್ಟದ್ದಾರೋ ಎಂಬ ಸಂಶಯ ಬರುತ್ತದೆ. ಮುನಿಸಿಪಾಲಿಟಿಗಳಲ್ಲಿ 1 ರೂ ಕಂದಾಯ ಕೊಡುವವರು ಓಟ್ ಕೊಡಲು ಅರ್ಹರೆಂತ ಇಟ್ಟಿರುವಾಗ ಡಿ. ಬೋರ್ಡಿಗೂ ಹಾಗೆಯೆ ಇಡಬಹುದಿತ್ತು.

ಸ್ತ್ರೀಯರಿಗೆ ಓಟ್ ಕೊಡುವ ಹಕ್ಕು ಕೊಟ್ಟಿರುವದಿಲ್ಲ. ವೀರಾಜಪೇಟೆ ಮುನಿಸಿಪಾಲಿಟಿ ಚುನಾವಣೆಯಲ್ಲಿ ಸ್ತ್ರೀಯರು ಓಟ್ ಕೊಡಬಹುದೆಂಬ ರೂಲ್ ಮಾಡಿ ಮೇಲ್ಪಂಕ್ತಿ ಹಾಕಿರುವಾಗ ಡಿಸ್ಟ್ರಿಕ್ಟ್ ಬೋರ್ಡಿನಲ್ಲೂ ಸ್ತ್ರೀಯರ ಹಕ್ಕನ್ನು ಅಂಗೀಕರಿಸಬೇಕಾದದ್ದು ಯುಕ್ತವಾಗಿದೆ. ಇದು ಅಲ್ಲದೆ ಬಲ್ಲ ಸ್ತ್ರೀಯರ ಸಂಖ್ಯೆಯು ಹೆಚ್ಚಾಗಿರುವ ಈ ದೇಶದಲ್ಲಿ ಸ್ತ್ರೀಯರಿಗೆ ಡಿಸ್ಟ್ರಿಕ್ಟ್ ಬೋರ್ಡಿಗೆ ಓಟ್ ಕೊಡುವ ಹಕ್ಕನ್ನು ಕೊಡಬೇಕಾದದ್ದು ಅವಶ್ಯವಿದೆ. ಇತರ ಕೆಲವು ದೊಡ್ಡ ಪ್ರಾಂತ್ಯಗಳಲ್ಲಿ ಕೌನ್ಸಿಲ್ ಚುನಾವಣೆಯಲ್ಲೇ ಹೆಂಗಸರಿಗೆ ಓಟಿನ ಹಕ್ಕು ಕೊಟ್ಟಿರುವಾಗ ಇಲ್ಲಿ ಡಿಸ್ಟ್ರಿಕ್ಟ್ ಬೋರ್ಡಿನ ಚುನಾವಣೆಯಲ್ಲಿ ಈ ಹಕ್ಕು ಕೊಡಬೇಕಾದದ್ದು ನ್ಯಾಯವಾಗಿದೆ.

ಹನ್ನೊಂದು ನಾಡುಗಳಿಗೆ ಹನ್ನೊಂದು ದೇಶೀಯ ಮೆಂಬರುಗಳೂ, ಇಬ್ಬರು ಯೂರೋಪಿಯನ್ ಮೆಂಬರುಗಳೂ ಹಿಂದುಳಿದ ಪಂಗಡಗಳ ಕ್ಷೇಮವನ್ನು ಕಾಪಾಡಲಿಕ್ಕೆ ಇಬ್ಬರು ನಿಯಮಿತ ಮೆಂಬರುಗಳೂ, ಐದು ಅಫೀಸರುಗಳೂ ಸಹ ಉಳ್ಳ 20 ಮೆಂಬರುಗಳುಳ್ಳ ಬೋರ್ಡ್ ಆಗುತ್ತೆ. ಚುನಾಯಿತ ಮೆಂಬರುಗಳ ಸಂಖ್ಯೆ 13 ಎಂತ ತೋರಿದರೂ ಯೂರೋಪಿಯನ್ ಮೆಂಬರುಗಳು ಸಾಧಾರಣವಾಗಿ ಸರಕಾರದ ಪಕ್ಷದವರಾದ್ದರಿಂದ ಪ್ರಜಾಕ್ಷೇಮವನ್ನು ಕಾಪಾಡುವ ಚುನಾಯಿತ ಮೆಂಬರುಗಳು ಹನ್ನೊಂದು ಮಾತ್ರವೇ ಆದಂತಾಯಿತು. ಪ್ರಜೆಗಳ ಪ್ರತಿನಿಧಿಗಳಿಗೆ ವಿರೋಧವಾಗಿ ಒಂಭತ್ತು ಸರಕಾರಿ ತರಫಿನ ಮೆಂಬರುಗಳಾದಂತಾಯಿತು. ಕೌನ್ಸಿಲಿನಲ್ಲಿ ಸಹ 20 ಮೆಂಬರುಗಳಲ್ಲಿ ಹದಿಮೂರು ದೇಶೀಯರಿಂದ ಚುನಾಯಿತರಾಗಿರುವ ಮೆಂಬರುಗಳಾಗಿದ್ದಾರೆ. ಹೀಗಿರುವಾಗ ಡಿಸ್ಟ್ರಿಕ್ಟ್ ಬೋರ್ಡಿನಲ್ಲಿ 20ಕ್ಕೆ ಹನ್ನೊಂದೇ ದೇಶೀಯ ಚುನಾಯಿತ ಮೆಂಬರುಗಳನ್ನು ಕೊಟ್ಟಿರುವದು ಬಹಳ ಅತೃಪ್ತಿಕರ. ಚುನಾಯಿತ ದೇಶೀಯರ ಸಂಖ್ಯೆಯನ್ನು 15 ಕ್ಕಾದರೂ ಏರಿಸಬೇಕು. ನಾಡುವಾರು ಚುನಾವಣೆ ಇಟ್ಟದ್ದನ್ನು ವ್ಯತ್ಯಾಸ ಮಾಡಲು ನಾವು ಸಮ್ಮತಿಸುವದಿಲ್ಲ. ಜನರುಗಳ ಸಂಖ್ಯೆ ಹೆಚ್ಚಿರುವ ನಾಲ್ಕು ನಾಡುಗಳವರಿಗೆ ಎರಡೆರಡು ಮೆಂಬರುಗಳನ್ನು ಕೊಟ್ಟು ಚುನಾಯಿತ ಮೆಂಬರುಗಳ ಸಂಖ್ಯೆಯನ್ನು ಹೆಚ್ಚಿಸಬೇಕು.

ಒಬ್ಬ ಉಮೇದುವಾರನು ಒಂದಕ್ಕಿಂತ ಹೆಚ್ಚು ನಾಡುಗಳಲ್ಲಿ ಚುನಾವಣೆಗೆ ಉಮೇದುವಾರನಾಗಿ ನಿಲ್ಲಬಹುದು. ಒಂದಕ್ಕಿಂತ ಹೆಚ್ಚು ನಾಡುಗಳಲ್ಲಿ ಚುನಾವಣೆಯಾದರೆ ಯಾವ ನಾಡಿನ ಪ್ರತಿನಿಧಿಯಾಗಿರಲು ಒಪ್ಪುತ್ತೇನೆಂತ ಚುನಾವಣೆಯಾದ 24 ಘಂಟೆಯೊಳಗೆ ತಿಳಿಸಬೇಕು. ಒಂದಕ್ಕಿಂತ ಹೆಚ್ಚು ಕಡೆಗಳಲ್ಲಿ ಚುನಾವಣೆಗೆ ನಿಲ್ಲುವ ಹಕ್ಕು ಕೊಟ್ಟದ್ದು ಒಳ್ಳೇದೇ. ಒಂದಲ್ಲ, ಒಂದರಲ್ಲಾದರೂ ಚುನಾವಣೆಯಾಗಬೇಕೆಂತ ಪ್ರಯತ್ನಿಸುವ ಉಮೇದುವಾರರಿಗೆ ಅನುಕೂಲವಿದೆ.

ಇತರ ರೂಲ್ಸುಗಳೆಲ್ಲಾ ಕೌನ್ಸಿಲ್ ಚುನಾವಣೆಯ ರೂಲ್ಸುಗಳನ್ನೇ ಅನುಸರಿಸಿವೆ. ಆದುದರಿಂದ ಅವುಗಳ ಮೇಲೆ ವಿಶೇಷ ಟೀಕೆ ಅವಶ್ಯವಿಲ್ಲ.

ಬೋರ್ಡಿನ ಪ್ರಸಿಡೆಂಟರು ಕಮೀಶನರೇ ಆಗಿರಬೇಕೆಂತಲೂ ವೈಸ್ ಪ್ರಸಿಡೆಂಟರು ಮಾತ್ರ ಬೋರ್ಡಿನಿಂದ ಚುನಾಯಿತರಾಗಬೇಕೆಂತಲೂ ರೂಲಿನಲ್ಲಿ ಇದೆ. ಪ್ರಸಿಡೆಂಟ್ ಪದವಿ ಸಹ ಚುನಾವಣೆಗೆ ಒಳಪಟ್ಟಿರಬೇಕೆಂತ ನಮ್ಮ ಅಭಿಪ್ರಾಯವಾಗಿದೆ. ಚುನಾಯಿತ ಮೆಂಬರುಗಳು ಹೆಚ್ಚಿರುವ ಬೋರ್ಡ್ ಆಗಕೂಡಲೇ ಸ್ಥಾಪಿಸಲ್ಪಡುವದರಿಂದ ಚುನಾಯಿತ ವೈಸ್ ಪ್ರಸಿಡೆಂಟರಿಗೆ ಎಷ್ಟು ಅಧಿಕಾರ ಕೊಡುತ್ತಾರೆಂಬುದು ನೋಡಿ ಪ್ರಸಿಡೆಂಟ್ ಪದವಿ ಸಹ ಕೂಡಲೇ ಚುನಾವಣೆಗೆ ಒಳಪಡಿಸಬೇಕೋ ಎಂಬುದನ್ನು ಹೇಳಬಹುದು.

ಈ ಹೊಸ ರೂಲ್ಸುಗಳ ಮೇರೆ ಚುನಾವಣೆಯು ಡಿಸಂಬರಿನಲ್ಲಿ ಆಗಬಹುದೆಂತ ತಿಳಿಯುತ್ತದೆ. ಕೌನ್ಸಿಲ್ ಚುನಾವಣೆಯೂ ಡಿಸ್ಟ್ರಿಕ್ಟ್ ಬೋರ್ಡ್ ಚುನಾವಣೆಯೂ ಒಂದೇ ಕಾಲದಲ್ಲಿ ಆಗುವದು ಸರಿಯಲ್ಲ. ಓಟರುಗಳಿಗೆ ಗಲಿಬಿಲಿಯಾಗಬಹುದು. ರೂಲ್ಸುಗಳನ್ನು ಜುಲೈ ತಿಂಗಳಲ್ಲೇ ಮಂಜೂರ್ ಮಾಡಿ ಸೆಪ್ಟಂಬರ್ ತಿಂಗಳಲ್ಲೇ ಡಿಸ್ಟ್ರಿಕ್ಟ್ ಬೋರ್ಡ್ ಚುನಾವಣೆ ಮಾಡಿದರೆ ಅನುಕೂಲವೆಂತ ನಮ್ಮ ಅಭಿಪ್ರಾಯ.

ಯೋಗಿಗಳ ಅದ್ಭುತ ಶಕ್ತಿ.

ಈ ವಿಷಯವಾಗಿ ಅನೇಕ ಇಂಗ್ಲಿಷ್ ಪತ್ರಿಕೆಗಳಲ್ಲಿ ಬಂದ ಸಂಗತಿಗಳು —

(೧) ಗದರ್ ಕಾಲದಲ್ಲಿಯ ಸಿಪಾಯಿಗಳ ದಂಗೆಯ ಕಾಲಕ್ಕೆ ಒಬ್ಬ ಇಂಗ್ಲಿಷ್ ಸಿಪಾಯಿಯು ದಂಗೆಯಿಂದ ತಪ್ಪಿಸಿಕೊಂಡು ಹೆಂಡತಿ ಮತ್ತು ಮಗುವಿನೊಡನೆ ಹಿಮಾಲಯದ ಕಡೆಗೆ ಓಡಿಹೋದನು. ಮಾರ್ಗದಲ್ಲಿ ಆ ಮಗುವು ಕಾಯಿಲೆಯಾಗಿ ಸತ್ತು ಹೋಯಿತು. ಆಗ ಅದನ್ನು ಹೂಳಬೇಕೆಂದು ಯೋಚಿಸಿ ಆ ಸಿಪಾಯಿಯು ಹೂಳುವದಕ್ಕೆ ಬೇಕಾಗುವ ಸಲಕರಣೆಗಳನ್ನು ಕೊಡಬೇಕೆಂದು ಒಬ್ಬ ಬ್ರಾಹ್ಮಣನನ್ನು ಕೇಳಿದನು. ಆಗ ಆ ಬ್ರಾಹ್ಮಣನು ತಾನೊಂದು ಸಲ ಆ ಮಗುವನ್ನು ನೋಡುವೆನೆಂದು ಹೇಳಿದನಂತೆ. ಮಗುವಿನ ಮೇಲಿದ್ದ ಬಟ್ಟೆಯನ್ನು ತೆಗೆದು ತೋರಿಸಲಾಗಿ ಬ್ರಾಹ್ಮಣನು ಏನೋ ಮಂತ್ರಗಳನ್ನುಚ್ಚರಿಸಿ ಆ ಮಗುವನ್ನು ಎಬ್ಬಿಸಿದನು.

(೨) ಮಧ್ಯ ಹಿಂದೂಸ್ಥಾನದ ಗ್ವಾಲೇರಿನ ಹತ್ತರ ಒಬ್ಬ ಹಿಂದೂ ಯೋಗಿಯು ವಾಸಿಸುತ್ತಿದ್ದನು. ಯಾವುದಾದರೂ ದ್ರವ್ಯವಾಗಲಿ ಇನ್ನಾವುದಾಗಲಿ ಇರುವ ಸ್ಥಳವನ್ನು ಅವನು ತಿಳಿಯಬಲ್ಲವನಾಗಿದ್ದನು.

(೩) ಇನ್ನೊಂದು ಸಲ, ಪಂಜಾಬದ ಕೆಲವು ಯೂರೋಪಿಯನ್ನರು ಹಿಂದೂ ಯೋಗಿಗಳ ಶಕ್ತಿಯನ್ನು ಪರೀಕ್ಷಿಸಬೇಕೆಂದು ಒಬ್ಬ ಯೋಗಿಯ ಹತ್ತರ ಹೋಗಿ ಕೇಳಿದರು. ಆ ಯೋಗಿಯು "ನಾನು ಹೇಳಿದ ಪ್ರಕಾರ ನೀವು ನಡೆವುದಾದರೆ, ದೇವರು ನನಗೆ ಕೊಟ್ಟಿರುವ ಶಕ್ತಿಯನ್ನು ತೋರಿಸುವೆನು, ಇಲ್ಲದಿದ್ದರೆ ಆಗಲಾರದು' ಎಂದು ಹೇಳಲಾಗಿ ಇಂಗ್ಲಿಷರು ಒಪ್ಪಿಕೊಂಡರು. ಯೋಗಿಯು ಅವರ ಕೈಯ ಬೆರಳಿನಲ್ಲಿದ್ದ ಒಂದು ಉಂಗುರವನ್ನು ಕೊಡಲು ಹೇಳಿ ತಾನು ಹೇಳಿಕೊಡುವ ಮಂತ್ರವನ್ನುಚ್ಚರಿಸುತ್ತ ಆ ಉಂಗುರವನ್ನು ಹತ್ತಿರವಿದ್ದ ಬಾವಿಗೆ ಹಾಕಿ ಬರಲು ಹೇಳಿದನು. ಆ ಮೇರೆಗೆ ಉಂಗುರವು ಎಸೆಯಲ್ಪಟ್ಟಿತು. ಆದರೆ ಆ ಯೋಗಿಯು ಅದನ್ನು ಅಲ್ಲಿಯೆ ತೆಗೆದು ತೋರಿಸಿದನು.

(೪) ಇವು ಹಿಂದಿನ ಕಥೆಗಳಾದುವು. ಆದರೆ ಲಂಡನ್‌ದಲ್ಲಿ ಡಾಕ್ಟರ ರಾಮರಾಜ್ ಎಂಬ ಫಕೀರನು ಪ್ರತ್ಯಕ್ಷವಾಗಿ ಅದ್ಭುತ ಪ್ರಯೋಗಗಳನ್ನು ಈಗ ಮಾಡಿ ತೋರಿಸುತ್ತಿರುವನು. ಅವುಗಳಲ್ಲಿ ಕೆಲವು ಹೀಗೆ ಇವೆ.

(೧) ಕುತ್ತಿಗೆಯ ಹಿಂಬದಿಯಲ್ಲಿಯೂ ಕಾಲುಗಳ ಹಿಂಬದಿಯಲ್ಲಿಯೂ ಕುದುಗೋಲುಗಳನ್ನು ಕಟ್ಟಿಕೊಂಡು ಮಲಗಿದಾಗ ಆತನಿಗೆ ಸುತ್ತಿಗೆಯಿಂದ ಎಷ್ಟು ಪೆಟ್ಟು ಹೊಡೆದರೂ ಆತನಿಗೆ ನೋವು ಆಗುವದಿಲ್ಲ.

(೨) ಆತನು ತನ್ನ ಗಲ್ಲಗಳಿಗೆ ಸೂಜಿಗಳನ್ನು ಚುಚ್ಚಿಕೊಂಡು ತನ್ನ ಗಂಟಲನ್ನು ಕಠಾರಿಯಿಂದ ಇರಿದುಕೊಂಡು ನಾಟಕಗೃಹದಲ್ಲಿ ಆಡ್ಡಾಡಿದನು. ಅವನು ಚುಚ್ಚಿಕೊಂಡ ಸ್ಥಳದಲ್ಲಿ ಏನೂ ರಕ್ತವು ಹರಿಯಲಿಲ್ಲ.

(೩) ಜನರು ತಮ್ಮ ಮನಸ್ಸಿಗೆ ಬೇಕಾದ್ದನ್ನು ಬರೆದು ತಮ್ಮ ಹತ್ತರ ಬಚ್ಚಿಟ್ಟಾಗ್ಯೂ ಈ ಫಕೀರನು ದೂರದಿಂದಲೇ ಅದರಲ್ಲಿ ಬರೆದುದ್ದನ್ನು ಹೇಳುತ್ತಾನೆ.

(೪) ಫಕೀರನು ತನ್ನ ಮೂಗಿನ ಹೊರಳುಗಳಲ್ಲಿಯೂ ಬಾಯಿಯಲ್ಲಿಯೂ ಅರಳೆಯನ್ನು ತುಂಬಿಕೊಂಡು ತನ್ನ ಮೋರೆಯ ಮೇಲೆ ಮುಸುಕು ಹಾಕಿಕೊಂಡು ಶವದ ಪೆಟ್ಟಿಗೆಯಲ್ಲಿ ತಾನು ಮಲಗಿಕೊಂಡು ಬಿಟ್ಟನು. ಆ ಪೆಟ್ಟಿಗೆಯ ಮೇಲೆ ೧೦ ನಿಮಿಷಗಳ ತನಕ ಮುಸುಕು ಮುಚ್ಚಿದ್ದರು. ಆ ಮೇಲೆ ಆ ಪೆಟ್ಟಿಗೆಯನ್ನು ಹೊರಗೆ ತೆಗಿಸಿ ನೋಡಲಾಗಿ ಅವನಿಗೆ ಎಚ್ಚರಿಕೆ ಇದ್ದಿಲ್ಲ. ಅವನ ತುಟಿಗಳೆಲ್ಲ ಉಬ್ಬಿ ಹೋಗಿದ್ದವು. ಮುಂದೆ ೩ ನಿಮಿಷಗಳ ಮೇಲೆ ಆತನು ಪೂರ್ಣವಾಗಿ ಎಚ್ಚತ್ತನು.

"ಜಯಕರ್ನಾಟಕ"

ಮಹಾತ್ಮಗಾಂಧಿಯವರ ಸ್ವಚರಿತ್ರೆ.

(ಕಳೆದ ವಾರದಿಂದ ಮುಂದುವರಿದದ್ದು.)

20 ನೆಯ ಪ್ರಕರಣ.

ವಿವಿಧ ಮತಗಳ ಸಂಪ್ರದಾಯವನ್ನು ತಿಳಿದುಕೊಳ್ಳಲು ಪ್ರಯತ್ನಿಸಿದುದು.

ಇಂಗ್ಲಂಡದಲ್ಲಿ ನಾನು ಓದುತ್ತಿರುವಾಗ ಇನ್ನೂ ಎರಡನೆಯ ವರ್ಷ ಮುಗಿಯುವುದರೊಳಗಾಗಿ ದಿವ್ಯಜ್ಞಾನಸಮಾಜದವರಿಬ್ಬರು ನನಗೆ ಪರಿಚಿತರಾದರು. ಅವರಿಬ್ಬರೂ ಸಹೋದರರಾಗಿದ್ದರಲ್ಲದೆ ಇನ್ನೂ ಮದುವೆಮಾಡಿಕೊಂಡಿರಲಿಲ್ಲವು. ಅವರು ಭಗವದ್ಗೀತೆಯನ್ನು ಕುರಿತು ಪ್ರಸಂಗಿಸಲಾರಂಭಿಸಿದರು. ಗೀತೆಗೆ ಸರ್ ಎಡ್ವಿನ್ ಅರ್ನಾಲ್ಡರವರು ಇಂಗ್ಲಿಷ ಭಾಷೆಯಲ್ಲಿ ಬರೆದ ಟೀಕೆಯನ್ನು ಓದಿದ್ದರು. ನಾನು ಆ ವರೆಗೆಂದೂ ಗೀತೆಯನ್ನು ಓದಿರಲಿಲ್ಲ. ಆ ಸಂಗತಿಯನ್ನು ಅವರಿಗೆ ತಿಳಿಸಲು ನನಗೆ ಬಹಳ ಲಜ್ಜೆಯಾಗಿದ್ದರೂ ನಿಜವನ್ನು ತಿಳಿಸದಿದ್ದರೆ ಯತ್ನವಿರಲಿಲ್ಲವಾಗಿ ತಿಳಿಸಿದೆನು. ನನಗೆ ಸಂಸ್ಕೃತ ಭಾಷಾಜ್ಞಾನವು ಹೆಚ್ಚಾಗಿಲ್ಲದಿದ್ದರೂ ಸಂಸ್ಕೃತ ಶ್ಲೋಕಗಳಿಗೆ ಇಂಗ್ಲಿಷ ಭಾಷೆಯಲ್ಲಿ ಬರೆದ ಅರ್ಥವಿದ್ದರೂ ಸರಿಯಾಗಿಲ್ಲದಿದ್ದಲ್ಲಿ ಅದನ್ನು ತಿಳಿದುಕೊಳ್ಳುವಷ್ಟು ಭಾಷಾಜ್ಞಾನವು ನನಗೆ ಇಲ್ಲದೆ ಇರಲಿಲ್ಲವು. ಆ ಸಂಗತಿಯನ್ನು ಕೂಡ ಅವರಿಗೆ ತಿಳಿಸಿದೆನು. ಅವರೊಡನೆ ಸೇರಿ ನಾನೂ ಓದಲಾರಂಭಿಸಿದೆನು. ಶ್ಲೋ॥ ಧ್ಯಾಯತೋ ವಿಷಯಾನ್ ಪುಂಸ ಸ್ಸಂಗಸ್ತೇಷೂಪಜಾಯತೇ। ಸಂಗಾತ್ಸಂಜಾಯತೇ ಕಾಮಃ ಕಾಮಾತ್ಕ್ರೋಧೋಽಭಿಜಾಯತೇ॥ ಕ್ರೋಧಾದ್ಭವತಿ ಸಂಮೋಹ ಸ್ಸಂಮೋಹಾತ್ಸ್ಮೃತಿವಿಭ್ರಮಃ। ಸ್ಮೃತಿಭ್ರಂಶಾದ್ಬುದ್ಧಿನಾಶೋ ಬುದ್ಧಿನಾಶಾತ್ಪ್ರಣಶ್ಯತಿ." ಎಂಬ ಶ್ಲೋಕವನ್ನು ಓದಿದಾಗ ನನ್ನ ಮನಸ್ಸಿನಲ್ಲಿ ಅದು ಚೆನ್ನಾಗಿ ನಾಟಿತು. ಇಂದಿಗೂ ಆ ಶ್ಲೋಕವು ನಿರಂತರದಲ್ಲಿ ಸ್ಮರಣೆಗೆ ಬರುತ್ತಲೇ ಇದೆ. ಭಗವದ್ಗೀತೆಯು ಅಮೂಲ್ಯಗ್ರಂಥರತ್ನವೆಂದು ನಾನು ಆಗ ಗ್ರಹಿಸಿಕೊಂಡೆನು. ಗೀತೆಗೆ ಸಾಟಿಯಾದ ಗ್ರಂಥವು ಮತ್ತೊಂದು ಭಗವತ್ತತ್ವಪ್ರಬೋಧವಾದುದು ಇಲ್ಲವೇ ಇಲ್ಲವೆಂದು ಈಗ ನಾನು ನಿಶ್ಚಯವಾಗಿ ನಂಬಿರುತ್ತೇನೆ. ನಾನು ಆ ಶ್ಲೋಕವನ್ನು ಕಲಿತುಕೊಂಡಾಗ್ಗೆ ಗೀತೆಯು ನನಗೆ ಅತ್ಯಧಿಕಮನಶ್ಶಾಂತಿಯನ್ನುಂಟುಮಾಡಿತು. ಗೀತೆಗೆ ಇಂಗ್ಲಿಷ ಭಾಷೆಯಲ್ಲಿ ಬರೆಯಲ್ಪಟ್ಟಿರುವ ಟೀಕೆಗಳೆಲ್ಲವನ್ನೂ ನಾನು ಓದಿದೆನು. ಎಲ್ಲದರಲ್ಲೂ ಅರ್ನಾಲ್ಡರವರು ಬರೆದಿರುವುದೆ ಶ್ರೇಷ್ಠವಾದುದು. ಅವರು ಸರಿಯಾಗಿ ಅರ್ಥವನ್ನು ಬರೆದಿರುವರು. ಅದನ್ನು ಓದುವವರಿಗೆ ಅದು ಅನುವಾದವಾಗಿ ತೋರುವದಿಲ್ಲ. ಆಗ ನಾನು ಅವರೊಡನೆ ಸೇರಿ ಮೊದಲನೆಯಾವರ್ತಿ ಗೀತೆಯನ್ನು ಓದಿದಾಗ ಅದು ಶ್ರದ್ಧಾಸ್ಪದವೆಂದು ಹೇಳಬಹುದಾಗಿದ್ದಿತು. ಆದಾದಮೇಲೆ ಇನ್ನು ಕೆಲ ವರ್ಷಗಳಲ್ಲಿ ಅದನ್ನು ನಾನು ಶ್ರದ್ಧೆಯಿಂದ ಓದುವುದಕ್ಕೂ, ನಿತ್ಯದಲ್ಲೂ ಪಾರಾಯಣಮಾಡಲಿಕ್ಕೂ ಪ್ರವರ್ತಿಸಿದೆನು.

ಅರ್ನಾಲ್ಡರವರು ಬರೆದ "ಲೈಟ್ ಆಫ್ ಏಷಿಯಾ" ಎಂಬ ಗ್ರಂಥವನ್ನು ಓದಬೇಕೆಂದು ಆ ಸಹೋದರರು ನನಗೆ ಸೂಚಿಸಿದರು. ಗೀತೆಗಿಂತಲೂ ಹೆಚ್ಚು ಶ್ರದ್ಧೆಯಿಂದ ಅದನ್ನು ಓದಲಾರಂಭಿಸಿ ಮಧ್ಯದಲ್ಲಿ ಬಿಡಲು ನನಗಿಷ್ಟವಾಗಲಿಲ್ಲವು. ಆ ಬಳಿಕ ಒಂದಾವರ್ತಿ ನನ್ನನ್ನು ಮೇಡಂ ಬ್ಲಾವಟ್ಸ್ಕಿಯವರ ಮನೆಗೆ ಸಂಗಡ ಕರೆದುಕೊಂಡು ಹೋಗಿ ಆಕೆಯವರ ಮತ್ತು ಬೆಸಂಟರವರ ಪರಿಚಯವನ್ನು ಮಾಡಿಸಿದರು. ಆಗಲೇ ಬೆಸೆಂಟರವರು ದಿವ್ಯಜ್ಞಾನ ಸಮಾಜವನ್ನು ಸೇರಿದುದು ಆ ವಿಚಾರವಾಗಿ ವೃತ್ತಪತ್ರಿಕೆಗಳಲ್ಲಿ ಕಠಿಣವಾಗಿ ಚರ್ಚೆಯು ಜರುಗುತ್ತಿದ್ದಿತು. ಆ ಲೇಖಗಳನ್ನು ನಾನು ಬಹಳ ಆಸಕ್ತಿಯಿಂದ ಓದುತ್ತಿದ್ದೆನು. ಸಮಾಜವನ್ನು ಸೇರಬೇಕೆಂದು ಆ ಸ್ನೇಹಿತರು ನನಗೆ ಸೂಚಿಸಿದರು. ಆದರೆ ನಾನು ವಿನಯದಿಂದ ನಿರಾಕರಿಸಿದೆನು. "ಸ್ವಮತಪರಿಜ್ಞಾನವೇ ನನಗಿನ್ನೂ ಇಲ್ಲವು. ಹೀಗಿರುವಾಗ್ಗೆ ನಾನು ಇತರ ಮತಕ್ಕೆ ಹೇಗೆ ಸೇರಲಾಗುವುದು?" ಎಂದು ಹೇಳಿದೆನು. ಅವರ ಪ್ರೋತ್ಸಾಹದಿಂದ ನಾನು "ಕೀ ಟು ಥಿಯಾಸಫಿ" ಎಂಬ ಗ್ರಂಥವನ್ನೋದಿದೆನು. ಅದನ್ನು ಬ್ಲಾವಟ್ಸ್ಕಿಯವರೇ ಬರೆದಿದ್ದರು. ಅದರಲ್ಲಿ ಹಿಂದೂಮತ ಗ್ರಂಥವನ್ನೋದಲೇಬೇಕೆಂಬ ಆಸಕ್ತಿಯುಂಟಾಯಿತು. ಹಿಂದುಮತವು ಮೂಢವಿಶ್ವಾಸದಿಂದ ಕೂಡಿರುವುದೆಂದು ಕ್ರೈಸ್ತಮತಪ್ರಚಾರಕರಾದ ಮಿಷನರಿಗಳು ಹಿಂದುಮತದಮೇಲೆ ಹೊರಿಸಾರೋಪಣೆಮಾಡುವುದು ನಿರಾಧಾರವಾದುದೆಂದು ಹಿಂದುಮತಗ್ರಂಥಗಳನ್ನೋದಿದುದರಿಂದ ನಾನು ಗ್ರಹಿಸುವವನಾದೆನು. ಒಂದು ದಿವಸ ಒಂದು ಶಾಕಾಹಾರಭೋಜನಶಾಲೆಯಲ್ಲಿ ಮ್ಯಾಂಚೆಸ್ಟರ್ ಪಟ್ಟಣದಿಂದ ಬಂದಿದ್ದ ಒಬ್ಬ ಕ್ರೈಸ್ತಮತಪ್ರಚಾರಕನ ಕೂಡ ಸೇರಿದೆನು. ಅತನು ಬಹು ಒಳ್ಳೆಯ ಮನುಷ್ಯನು; ನನಗೆ ಕ್ರೈಸ್ತಮತವನ್ನು ಕುರಿತು ಬೋಧಿಸಿದನು. ರಾಜಕೋಟೆಯಲ್ಲಿ ಮಿಷನರಿಗಳ ಚರ್ಯವನ್ನು ಕುರಿತು ನಾನು ವಿವರಿಸಿ ಹೇಳಿದೆನು. ಅತನು ಕೇಳಿ ವಿಶೇಷವಾಗಿ ವಿಷಾದಿಸಿದನು. "ನಾನು ಮದ್ಯಮಾಂಸವನ್ನು ಸೇವಿಸುವದಿಲ್ಲ. ಅವನ್ನು ಸೇವಿಸಲು ಬೈಬಲ್ಲಿನಲ್ಲೆಲ್ಲೂ ಹೇಳಿಲ್ಲವು. ಬಹಳ ಜನ ಮತಪ್ರಚಾರಕರು ಅವನ್ನು ಸೇವಿಸುವರು. ನೀನು ಬೈಬಲ್ಲನ್ನು ಓದಬೇಕು" ಎಂದು ಅತನು ನನಗೆ ಬೋಧಿಸಿದನು. ಅಲ್ಲದೆ ಒಂದು ಹೊಸ ಬೈಬಲ್ಲನ್ನು ಸಹ ಕೊಟ್ಟನು. ಅವನಲ್ಲಿದ್ದ ತತ್ಸಂಬಂಧವಾದ ಪಟಗಳು ಮುಂತಾದವುಗಳನ್ನು ಸಹ ಕೊಂಡುಕೊಂಡೆನು. ನಾನು ಅದನ್ನು ಓದಲು ಅಪೇಕ್ಷೆಪಟ್ಟೆನಾದರೂ ಏನೂ ರುಚಿಸಲಿಲ್ಲವು. ಓದಿದ್ದೆನೆಂದು ಹೇಳಲು ಹೇಗೋ ಒಂದು ಸಾರಿ ಶಾಂತಿಯಿಂದ ನೋಡಿದೆನು. ನನಗೇನೂ ಆಸಕ್ತಿಹುಟ್ಟಲಿಲ್ಲ; ಶ್ರದ್ಧೆಯುಂಟಾಗಲಿಲ್ಲ. ಇದು ಹಳೇ ಟೆಸ್ಟಮೆಂಟಿನ ವಿಚಾರ. ನ್ಯೂಟೆಸ್ಟಮೆಂಟು ಹಾಗಲ್ಲವು. ಅದು ಬಹಳ ಆಕರ್ಷಕವಾಗಿರುವುದು. ಸೆರ್ಮನ್ ಆನ್ದಿ ಮೌಂಟ್ ಎಂಬ ಭಾಗವು ಮನಸ್ಸಿನಲ್ಲಿ ಚೆನ್ನಾಗಿ ನಾಟಿತು. ನಾನು ಅದನ್ನು ಭಗವದ್ಗೀತೆಗೆ ಹೋಲಿಸಿದೆನು.

'ಅಪಕಾರಕ್ಕೆ ಪ್ರತ್ಯುಪಕಾರವನ್ನು ಮಾಡಬೇಕು. ಒಂದು ದವಡೆಯ ಮೇಲೆ ಒಬ್ಬನು ಹೊಡೆದರೆ ಎರಡನೆಯ ದವಡೆಯನ್ನು ಕೂಡ ತೋರಿಸಬೇಕು. ಒಬ್ಬನು ನಿನ್ನ ಅಂಗಿಯನ್ನು ಕಿತ್ತುಕೊಂಡರೆ ನಿನ್ನ ಬಟ್ಟೆಯೆಲ್ಲವನ್ನೂ ಅವನಿಗೊಪ್ಪಿಸಬೇಕು" ಎಂಬ ವಾಕ್ಯಗಳು ನನಗೆ ಬಹಳ ಸಂತೋಷವನ್ನುಂಟುಮಾಡಿದುವು. "ಕುಡಿಯಲು ನೀರನ್ನು ಕೊಟ್ಟವನಿಗೆ ಹೊಟ್ಟೆತುಂಬ ಊಟಕ್ಕಿಡಬೇಕು" ಎಂಬ ಶ್ಯಾಮಲಭಟ್ಟನ ವಾಕ್ಯವು ನನ್ನ ಮನಸ್ಸಿಗೆ ಜ್ಞಾಪಕ ಬಂದಿತು. ವೈರಾಗ್ಯವೇ ಉತ್ತಮವಾದ ಮತದ ನಂಬಿಗೆಯು ಎಂದು ನನಗಾಗ ಗಾಢವಾಗಿ ಹುಟ್ಟಿತು. ನಾನು ಓದಿದ ಗ್ರಂಥಗಳೆಲ್ಲವನ್ನೂ ಸಮನ್ವಯ ಮಾಡಬೇಕೆಂದು ಬಾಲ್ಯ ಸಹಜವಾದ ಬುದ್ಧಿಯಿಂದ ನಾನು ಪ್ರಯತ್ನಿಸಿದೆನು. ಆಗ ಇತರ ಮತ ಕರ್ತರ ಜೀವಿತ ಚರಿತ್ರೆಯನ್ನೋದಬೇಕೆಂದು ಕೂಡ ನನಗೆ ಆಸಕ್ತಿ ಹುಟ್ಟಿತು. "ಹೀರೋಸ್ ಅಂಡ್ ಹೀರೋ ವರ್ಷಿಪ್" ಎಂಬ ಕಾರ್ಲೈಲನ ಗ್ರಂಥವನ್ನು ಓದಬೇಕೆಂದು ಒಬ್ಬ ಸ್ನೇಹಿತನು ಹೇಳಿದನು. ಮಹಮ್ಮದನ ಜೀವಿತ ಚರಿತ್ರೆಯನ್ನೋದಿದೆನು. ಅತನ ಮಹಿಮೆಯನ್ನೂ, ಧೈರ್ಯವನ್ನೂ, ಕಠಿಣ ನಿಯಮಪರತೆಯನ್ನೂ ಗ್ರಹಿಸಿಕೊಂಡೆನು. ಆಗ ಪರೀಕ್ಷೆಗೋದಬೇಕಾಗಿದ್ದುದರಿಂದ ಇತರ ಗ್ರಂಥಗಳನ್ನೋದಲು ನನಗೆ ಅವಕಾಶವಿರಲಿಲ್ಲವು. ಬೇರೆ ಬೇರೆ ಮತಸಿದ್ಧಾಂತವನ್ನು ಚೆನ್ನಾಗಿ ತಿಳಿದುಕೊಳ್ಳುವದಕ್ಕಾಗಿ ಬಹಳ ಮತಗ್ರಂಥಗಳನ್ನು ಓದಬೇಕೆಂದು ಮಾತ್ರ ನಾನು ಆಗ ನಿಶ್ಚಯಿಸಿಕೊಂಡೆನು. ನಾಸ್ತಿಕತ್ವವನ್ನು ಕುರಿತು ಕೊಂಚ ವಿಷಯವನ್ನು ತಿಳಿದುಕೊಂಡೆನು.

ಬ್ರಾಡ್ಲಾಯವರ ಹೆಸರನ್ನು ಎಲ್ಲರೂ ಕೇಳಿದ್ದರು. ನಾಸ್ತಿಕತ್ವವನ್ನು ಕುರಿತು ಕೂಡ ನಾನೊಂದು ಗ್ರಂಥವನ್ನು ಓದಿದೆನು. ಆದರೆ ಅದು ನನ್ನ ಮನಸ್ಸಿಗೆ ಹಿಡಿಯಲಿಲ್ಲವು. ಆ ವರೆಗೂ ನಾಸ್ತಿಕರಾಗಿದ್ದ ಬೆಸಂಟರವರು ಆಗಲೇ ಆಸ್ತಿಕರಾದರು. ಆ ವಿಷಯದಲ್ಲಿ ಬೆಸಂಟರವರು ಬರೆದ ಗ್ರಂಥವನ್ನು ಕೂಡ ಓದಿದೆನು. ಆ ಕಾಲದಲ್ಲೇ ಬ್ರಾಡ್ಲಾಯವರು ತೀರಿಕೊಂಡರು. ಓಕಿಂಗು ಸೆಮಿಟ್ರಿ ಅಂದರೆ ಸ್ಮಶಾನದಲ್ಲಿ ಅವರು ಸಮಾಧಿಗೊಳಿಸಲ್ಪಟ್ಟರು. ಆಗ ಲಂಡನ್ನಿನಲ್ಲಿದ್ದ ಭಾರತೀಯರೆಲ್ಲರೂ ಆ ದಿವಸ ಶವದ ಕೂಡ ಹೊರಟಿದ್ದರು. ನಾನೂ ಹೋಗಿದ್ದೆನು. ಕೆಲವು ಮಂದಿ ಕ್ರೈಸ್ತಮತ ಪ್ರವರ್ತಕರು (ಕ್ಲರ್ಜಿ) ಕೂಡ ಬಂದಿದ್ದರು. ಅಂತ್ಯಕ್ರಿಯೆಯಾದ ಮೇಲೆ ರೈಲುಬಂಡಿಯನ್ನು ನಿರೀಕ್ಷಿಸಿಕೊಂಡು ನಾವು ಸ್ಟೇಷನಿನಲ್ಲಿ ಕೊಂಚಕಾಲ ಕಾದುಕೊಂಡಿರಬೇಕಾಗಿ ಬಂದಿತು. ಅಲ್ಲಿ ಒಬ್ಬ ನಾಸ್ತಿಕನು ಆಸ್ತಿಕವಾದವನ್ನು ಖಂಡಿಸಲಾಗಿ ಮತ ಪ್ರಚಾರಕರಲ್ಲಿ ಒಬ್ಬರಿಗೊಬ್ಬರಿಗೆ ಪ್ರಶ್ನೋತ್ತರ ನಡೆಯಿತು.

ಪ್ರ.—ದೇವರಿದ್ದಾನೆಯೋ?
ಉ.—ಇದ್ದಾನೆ.
ಪ್ರ.—ಪ್ರಪಂಚದ ಸುತ್ತಳತೆಯು 28,000 ಮೈಲಿಗಳೇ?
ಉ.—ಹೌದು.
ಪ್ರ.—ದೇವರ ಆಳತೆಯೆಷ್ಟು, ಅವನೆಲ್ಲಿದ್ದಾನೆ?
ಉ.—ಅತನು ನಿನ್ನ ಹೃದಯದಲ್ಲೂ, ನನ್ನ ಹೃದಯದಲ್ಲೂ, ಎಲ್ಲರ ಹೃದಯದಲ್ಲೂ ಇದ್ದಾನೆ.
ಪ್ರ.—ನಾನು ಎಳೆ ಮಗುವೆಂದು ತಿಳಿದು ಈ ಮಾತುಗಳನ್ನು ಹೇಳುತ್ತಿದ್ದೀರಾ!

ಎಂದು ನಾಸ್ತಿಕನು ದರ್ಪದಿಂದ ಹೇಳಿದನು. ಮತಪ್ರಚಾರಕನು ವಿನಯದಿಂದ ಮೌನವಾಗಿದ್ದನು. ಈ ಸಂಭಾಷಣೆಯಿಂದ ನಾಸ್ತಿಕವಾದದ ಮೇಲೆ ನನಗೆ ಮತ್ತಷ್ಟು ಅವಿಶ್ವಾಸವು ಹೆಚ್ಚಿತು.

ಮ್ಯ. ನ್ಯಾರಾ.

೬ನೇ ಕರ್ನಾಟಕ ಪ್ರಾಂತಿಕ ಸಮ್ಮೇಲನದಲ್ಲಿ ಅಧ್ಯಕ್ಷರ ಭಾಷಣದ ಸಾರಾಂಶವು.

ಸ್ವರಾಜ್ಯಪಕ್ಷದ ಪ್ರಸಿದ್ಧ ಮುಖಂಡರಾದ ಸ್ವಾರ್ಥತ್ಯಾಗಿ ಶ್ರೀಮಾನ್ ಶ್ರೀನಿವಾಸಯ್ಯಂಗಾರರು ಬಳ್ಳಾರಿಯಲ್ಲಿ [illegible] ನೇ ದಿವಸ ಆದದ್ದೇನೆಂದರೆ,—ನನ್ನ ಪ್ರಿಯ ಬಂಧುಭಗಿನಿಯರೇ, ನನಗೆ ಕನ್ನಡ ಮಾತಾಡಲಿಕ್ಕೆ ಬರುವದಿಲ್ಲವಾದದ್ದರಿಂದ ನಾನು ವ್ಯಸನಪಡುತ್ತೇನೆ. ತಾವು ನನ್ನನ್ನು ಅಧ್ಯಕ್ಷನನ್ನಾಗಿ ಮಾಡಿ ಆದರಿಸಿದ್ದಕ್ಕೆ ನಾನು ಆನಂದವನ್ನು ವ್ಯಕ್ತ ಮಾಡಬೇಕಾಗಿದೆ. ಕರ್ನಾಟಕ ಪ್ರಾಂತದ ಪರಿಚಯವು ನನಗೆ ಹೆಚ್ಚು ಆಗಬೇಕೆಂದು ನಾನು ಇಲ್ಲಿಗೆ ಬಂದಿರುವೆನು. ಸದ್ಯದ ಪರಿಸ್ಥಿತಿಯು ಬಹಳ ಇರುಕಿನದಿರುವದು, ಎಲ್ಲಿ ನೋಡಿದರೂ ಜಾತಿದ್ವೇಷ, ಜಾತಿಯುದ್ಧಗಳು ನಡೆದಿರುವವು. ಆಳರಸರ ಕೂಡ ಹೋರಾಡುವದನ್ನು ಬಿಟ್ಟು ನಾವು ನಮ್ಮನಮ್ಮೊಳಗೆ ಬಡಿದಾಡುತ್ತಿರುವೆವು. ಸ್ವರಾಜ್ಯಪಕ್ಷವು ತನ್ನ ಕಾರ್ಯವನ್ನು ಉತ್ತಮ ರೀತಿಯಿಂದ ಮಾಡುತ್ತಿರುವದನ್ನು ಕಂಡು ಬೇರೆ ಪಕ್ಷದವರು ಅಸೂಯೆಪಡುತ್ತಲಿದ್ದಾರೆ. ಇಂಗ್ಲಂಡದಲ್ಲಿ ಕಾನಸರವೇಟಿವ್ ಪಕ್ಷವು ಅಧಿಕಾರಾರೂಢವಾಗಿದೆ. ಆದರೆ ನಾವು ಆಳರಸರ ಸಂಗಡ ನಿಜವಾದ ರಾಷ್ಟ್ರಭಕ್ತಿಯಿಂದ ಹೋರಾಡಿ ಅವರನ್ನು ಸೋಲಿಸಬೇಕಾಗಿದೆ.

ಸ್ವರಾಜ್ಯಪಕ್ಷ.

ಸ್ವರಾಜ್ಯಪಕ್ಷ ಪ್ರತಿಸಹಕಾರ ಪಕ್ಷ ಮುಂತಾದ ಪಕ್ಷಗಳಲ್ಲಿ ಐಕ್ಯವಿರುವದೆಂದು ಕೆಲವರು ಅನ್ನುವರು, ಆದರೆ ಅದು ಭ್ರಮವು. ಧ್ಯೇಯವು ಒಂದೇ ಇರಬಹುದು. ಆದರೆ ಸಾಧನದ ಮಾರ್ಗಗಳು ಸಂಪೂರ್ಣ ಭಿನ್ನವಿರುವವು. ಸರಕಾರೀ ಅಧಿಕಾರಗಳನ್ನು ಸ್ವೀಕರಿಸುವದೆಂದರೆ ಅರಸರಿಗೆ ಶರಣಹೋಗುವದೇ. ಎಲ್ಲ ಅಧಿಕಾರಿಗಳು ಹಿಂದೀಯರಾದರೂ ಅದು ಸ್ವರಾಜ್ಯವಲ್ಲ. ಮಂತ್ರಿಪದವು ಸರಕಾರಕ್ಕೆ ಸಂಪೂರ್ಣ ಅಧೀನವಾದದ್ದು. ಮಂತ್ರಿ ಪದವನ್ನು ಸ್ವೀಕರಿಸಿ ಜನಹಿತವನ್ನು ಸಾಧಿಸಬಹುದೆಂಬುದು ಕೇವಲ ಭ್ರಮವು. ಸ್ವರಾಜ್ಯವು ಹೀಗೆ ದೊರೆಯದು. ಅದನ್ನು ನಾವು ನಮ್ಮ ದೃಢನಿಶ್ಚಯದಿಂದ ನಮ್ಮ ಸ್ವಾರ್ಥತ್ಯಾಗದಿಂದ, ನಮ್ಮ ಉದ್ಯೋಗದಿಂದ, ನಮ್ಮ ರಾಷ್ಟ್ರಭಕ್ತಿಯಿಂದ ದೊರಕಿಸಲಿಕ್ಕೆ ಬೇಕು. ದೇಶಬಂಧು ದಾಸ ಹಾಗೂ ನೆಹರು ಇವರ ಧುರೀಣತ್ವದಲ್ಲಿ ಸ್ವರಾಜ್ಯ ಪಕ್ಷದವರು ಮಾಡಿದ ಕಾರ್ಯವನ್ನು ನೋಡಿ ಇಂಗ್ಲಂಡದ ಮುತ್ಸದ್ದಿಗಳು ಸಹ ಬೆಟ್ಟುಕಚ್ಚಿದರು.

ನಾ. ಶಾಸ್ತ್ರಿಯಂಥವರು ನಮಗೆ ಒಳ್ಳೇ ಸಮಯದ ಉಪದೇಶ ಕೊಡಬಹುದು. ಆದರೆ ಪ್ರತ್ಯಕ್ಷಕಾರ್ಯದಲ್ಲಿ ಅವರದೇನೂ ಉಪಯೋಗವಾಗಲಿಕ್ಕಿಲ್ಲ. ಅವರು ಬಲವುಳ್ಳವರ ಬೆನ್ನು ಹತ್ತುವರು. ನೀವು ಬಲಾಢ್ಯರಾದರೆಂದರೆ ನಿಮ್ಮ ಬೆನ್ನು ಹತ್ತುವರು.

ಈ ಸರಕಾರವು ಬಿಡುವ ತುತ್ತುಗಳಿಂದ ನಮ್ಮನ್ನು ಮೋಹಿಸಲಿಕ್ಕೆ ಯತ್ನಿಸುವದು. ಆದರೆ ನಾವು ಮೋಸ ಹೋಗಕೂಡದು. ಮದ್ರಾಸದ ಮಂತ್ರಿಪಕ್ಷದವರು ಒಳ್ಳೇ ದೊಡ್ಡ ಕಾರ್ಯಗಳನ್ನು ಸ್ವೀಕರಿಸಿದರು. ಆದರೆ ಇಷ್ಟು ದಿವಸ ಅವರ ಹಣೆಬರಹವೆನಿಸಿರುವದು ಈಗ ಕೊಟ್ಟ ಸುಧಾರಣೆಗಳು ನಿರರ್ಥಕವಿರುವವೆಂದು ಸರ್ ಕೆ. ವಿ. ರೆಡ್ಡಿಯವರು ಹೇಳಕ್ಕೆ ತಿರುಗುತ್ತಿರುವರು. ಜಸ್ಟಿಸ ಪಕ್ಷವೆಂದರೆ ಸರಕಾರದ ಕೈಯಲ್ಲಿ ಆಡುತ್ತಿರುವ ಸೂತ್ರಗೊಂಬೆಯು. ಆ ಗೊಂಬೆಯನ್ನು ಮುಂದೆಮಾಡಿ ಆಳರಸರು ಕಪಟ ನಾಟಕವನ್ನು ನಡೆಸಿರುವರು. ಈ ಬ್ರಾಹ್ಮಣೇತರ ಜಸ್ಟಿಸ ಪಕ್ಷದ ಮುಖ್ಯಗಳು ತಾತ್ಕಾಲಿಕ ಅಧಿಕಾರಗಳ ಮೋಹಕ್ಕೆ ಒಳಗಾಗಿ ಜಾತಿ ವಾರತಮ್ಯವನ್ನು ಹರಡಲಿಕ್ಕೆ ಯತ್ನಿಸಿ ರಾಷ್ಟ್ರದ ನಾಶಕ್ಕೆ ಕಾರಣರಾಗುತ್ತಿರುವರು. ಸರಕಾರದ ಕೂಡ ಸಹಕಾರ ಮಾಡುವದರಿಂದ ನಮಗೆ ಅಥವಾ ನಮ್ಮ ಆಪ್ತೇಷ್ಟರಿಗೆ ಕೆಲವು ದೊಡ್ಡ ಸಂಬಳದ ಅಧಿಕಾರ ಪದವಿಗಳು ದೊರೆಯಬಹುದು. ಆದರೆ ರೈತರ ಹಿತವನ್ನು ಸಾಧಿಸಲಿಕ್ಕೆ ಅವಶ್ಯವಿದ್ದ ಅಧಿಕಾರವನ್ನು ಅವರು ನಮ್ಮ ಕೈಯಲ್ಲಿ ಎಂದೂ ಕೊಡುವದಿಲ್ಲ. ನೌಕರೀ ಮಾಡಿ ಲೋಕಹಿತವನ್ನು ಸಾಧಿಸುವ ಭ್ರಮವು ನಮ್ಮಲ್ಲಿಂದ ಯಾವದಿನ ಹೋಗುವದೋ ಅದೇ ಸುದಿನವು. ನೌಕರೀ ಮಾಡುವದರಲ್ಲಿ ಸಹ ಸ್ವದೇಶಾಭಿಮಾನವಿರುವದೆಂದು ಸಾರುವವರು ರಾಷ್ಟ್ರಘಾತಮಾಡುತ್ತಿರುವರು. ಸರಕಾರದ ಸದ್ಯದ ಧೋರಣವು ಬದಲಾಗಿ ರಾಷ್ಟ್ರಹಿತವನ್ನು ಅವರು ನಿಜವಾಗಿ ಮಾಡಲಿಕ್ಕೆ ಉದ್ಯುಕ್ತರಾಗುವವರೆಗೆ ನೌಕರಿಗಳ ಮಾತೇ ಮೂರ್ಖತನವು. ಆದರೆ ನಮ್ಮಲ್ಲಿ ಬುದ್ಧಿಗೇಡಿಗಳಿರುವರು, ಮೂಢರಿರುವರು, ಮೂರ್ಖರಿರುವರು, ಸರಕಾರದ ಜಾಲಬಿದ್ದು ಅಧಿಕಾರಿಗಳಿಗೆ ಬೆಣ್ಣೆಹಚ್ಚಿ ಲಾಭವಾಗುವದೆಂದು ನಮ್ಮಲ್ಲಿಯ ಕೆಲವು ಪಂಡಿತಮೂರ್ಖರು ತಿಳಿದಿರುವರು. ಅವರ ಭ್ರಮನಿರಸನಗೈದು ನಾವು ಹೋರಾಡುವದು ಅವಶ್ಯವಿದೆ.

ಸ್ವರಾಜ್ಯ ಪಕ್ಷದ ಕಾರ್ಯವು

ಸ್ವರಾಜ್ಯಪಕ್ಷವು ಕೌನ್ಸಿಲುಗಳಿಗೆ ಹೋದಂದಿನಿಂದ ಅಲ್ಲಿ ಒಂದು ಹೊಸ ವಾತಾವರಣವೇ ಉಂಟಾಗಿದೆ. ಮವಾಳರಕಿಂತ ಮವಾಳರಾದವರು ಸಹ ಈಗ ಧೈರ್ಯದಿಂದ ಮಾತಾಡುತ್ತಾರೆ. ಆಳರಸರ ಬಗ್ಗೆ ಇದ್ದ ಭಯದಾಕ್ಷಿಣ್ಯ ಮುಂತಾದವುಗಳು ಅಳಿದು ಹೋಗಿ ಧೈರ್ಯ, ಸ್ಪಷ್ಟೋಕ್ತಿ ಇವುಗಳು ನೆಲೆಗೊಂಡಿವೆ. ಯಾವದೇ ತರಹ ಲೋಭಕ್ಕೆ ತಾವು ಬಲಿಯಾಗುವವರಲ್ಲವೆಂಬುದನ್ನು ಸ್ವರಾಜ್ಯಪಕ್ಷದವರು ಸಿದ್ಧಮಾಡಿ ತೋರಿಸಿದ್ದಾರೆ. ಆಳರಸರ ಕೃತಕ ಕೃತ್ಯಗಳನ್ನು ಬೈಲಿಗೆಳೆಯುವದರಲ್ಲಿ ಇವರು ಪ್ರಮುಖರಾಗಿದ್ದಾರೆ. ದುಷ್ಟವಾದ ಜಾತಿತತ್ತ್ವ (Communalism) ವನ್ನು ಬಗ್ಗುಬಡಿದು ರಾಷ್ಟ್ರೀಯತ್ವವನ್ನು ಸ್ಥಾಪಿಸಲಿಕ್ಕೆ ಇವರು ಯತ್ನಿಸಿದ್ದಾರೆ. ತಮಿಳನಾಡಿನ ಪ್ರಾಂತಿಕ ಕಾಂಗ್ರೆಸ ಕಮೀಟಿಯಲ್ಲಿ ಸಹ ಬ್ರಾಹ್ಮಣೇತರರೇ ಹೆಚ್ಚಾಗಿದ್ದಾರೆ. ನಾಲ್ಕು ಜನ ಬ್ರಾಹ್ಮಣೇತರರು ೧ ಬ್ರಾಹ್ಮಣರೂ ಇರುವರು. ಇದನ್ನು ನೋಡಿ ಕರ್ನಾಟಕದ ಬ್ರಾಹ್ಮಣೇತರರು ಪಾಠವನ್ನು ಕಲಿಯಬಹುದು. ಇದರಲ್ಲಿ ಎಲ್ಲ ಪಕ್ಷಗಳ ಹಿತವಿರುವದು.

ಕಾಂಗ್ರೆಸಿನ ಕಾರ್ಯಕ್ರಮವು

ಅಸಹಕಾರದ ಚಳವಳಿಯು ಜನರಿಗೆ ತಮ್ಮ ಗುಪ್ತಶಕ್ತಿ

ಯನ್ನು ಎಚ್ಚರಿಕೆಯನ್ನು ಹುಟ್ಟಿಸಿರುವದು ಸದ್ಯಕ್ಕೆ ಹಿಂದೂ ಮುಸಲ್ಮಾನ, ಬ್ರಾಹ್ಮಣ ಬ್ರಾಹ್ಮಣೇತರ ಮುಂತಾದ ಪಂಗಡಗಳಲ್ಲಿ ಭಯಂಕರ ಅನಾಹುತಗಳಾಗುತ್ತಿದ್ದರೂ ಈ ಪರಿಸ್ಥಿತಿಯು ಬಹುದಿನ ಬಾಳಲಿಕ್ಕಿಲ್ಲವೆಂದು ನನ್ನ ವಿಶ್ವಾಸವಿದೆ. ಜಾತಿಪಂಥ ಪಂಗಡಗಳನ್ನು ದಾಟಿರುವ ರಾಷ್ಟ್ರೀಯತ್ವದ ತತ್ವವನ್ನು ಪ್ರಸ್ಥಾಪಿಸುವದು ರಾಷ್ಟ್ರೀಯ ಪಕ್ಷದ ಮೊದಲನೇ ಕಾರ್ಯವಾಗಿದೆ. ಕಾಂಗ್ರೆಸ್ಸಿನ ಸದ್ಯದ ಧ್ಯೇಯವು ಎಲ್ಲರಿಗೂ ಒಪ್ಪಲಿಕ್ಕೆ ಬರುವಂತಿದೆ. ನಾ. ಶಾಸ್ತ್ರೀಯಂಥವರು ಖಾದಿಯ ಬಗ್ಗೆ ನುಡಿದ ಉದ್ಗಾರಗಳನ್ನು ಕೇಳಿ ಇಂಥ ಮಹನೀಯರ ಮನೋರಚನೆಯನ್ನು ನೋಡಿ ಆಶ್ಚರ್ಯವಾಗುವಂತಿದೆ.

ಸರಕಾರೀ ದರಬಾರದಲ್ಲಿ ಅಥವಾ ಲೆವಿ (Levy) ಗೆ ಹೋಗುವಾಗ ಸರಕಾರದವರು ಹೇಳಿದಂಥ ವಿಶಿಷ್ಟತರದ ಒಟ್ಟೆಗಳನ್ನು ಹಾಕಿಕೊಳ್ಳಲಿಕ್ಕೆ ಶಾಸ್ತ್ರೀಯವರದೇನೂ ಅಡ್ಡಿಇಲ್ಲ. ಆದರೆ ಖಾದೀ ಹಾಕಿಕೊಳ್ಳಬೇಕೆಂದು ಹೇಳಿಕೊಂಡರೆ ಮಾತ್ರ ಅದು ಇವರಿಗೆ ಬಲುಮೆಯಂತೆ ಭಾಸವಾಗುತ್ತದೆ. ಸವಿನಯ ಕಾಯದೇ ಭಂಗವು ನಮ್ಮ ಶಾಸ್ತ್ರಾಸ್ತ್ರಗಳಲ್ಲಿ ಒಂದಾಗಿರುವದೆಂದು ನೂತನ ರಾಷ್ಟ್ರೀಯ ಪಕ್ಷದವರು ಸಹ ಒಪ್ಪಿಕೊಂಡಿರುವರು! ಅಂದ ಮೇಲೆ ಕಾಂಗ್ರೆಸದವರು ಹಾಗೆ ಅಂದರೆ ಅದರಲ್ಲಿ ಅವರದೇನು ತಪ್ಪು? ಸೋಕರಿಗಳನ್ನು ಸ್ವೀಕರಿಸದೇ ಇರುವ ಬಗ್ಗೆ ಹಿಂದೆ ಗಟ್ಟಿಯಾಗಿರಲಿಕ್ಕೆ ಬೇಕು. ಸ್ಥಾನಿಕ ಸ್ವರಾಜ್ಯ ಸಂಸ್ಥೆಗಳಲ್ಲಿ ನಿಮ್ಮ ಪಕ್ಷದವರು ಒರುವಂತೆ ಯತ್ನಮಾಡಲಿಕ್ಕೆ ಬೇಕು. ಕೌನ್ಸಿಲ ಪ್ರವೇಶದಲ್ಲಿ ನನ್ನ ವಿಶ್ವಾಸವಿಲ್ಲವೆಂಬ ಮಾತು ನಿಜವಿದ್ದರೂ ಅಲ್ಲಿರುವರ ಕೂಡ ಹೋರಾಡಲಿಕ್ಕೆ ಅದೊಂದು ಒಳ್ಳೇ ಕಾರ್ಯಕ್ಷೇತ್ರವೆಂದು ನಾವು ಅಲ್ಲಿ ಉತ್ತಮವಾದ ಜನರನ್ನು ಕಳಿಸಬೇಕಾಗಿದೆ.

ಈ ಎಲ್ಲ ಕಾರ್ಯವನ್ನು ಚನ್ನಾಗಿ ಮಾಡಬೇಕಾದರೆ ನಾವು ಕಾಂಗ್ರೆಸ ಕಮಿಟಿಗಳನ್ನು ದೃಢಪಡಿಸಿ ಕಾಂಗ್ರೆಸ ಉದ್ದೇಶಗಳನ್ನು ಎಲ್ಲರಿಗೆ ತಿಳಿಸಿ ರಾಷ್ಟ್ರದಲ್ಲಿ ಕಾಂಗ್ರೆಸ್ಸಿನ ಮಹತ್ವವನ್ನು ಬೆಳಸಲಿಕ್ಕೆ ಬೇಕು.

ಬ್ರಾಹ್ಮಣೇತರರಿಗೆ.

ಕರ್ನಾಟಕದಲ್ಲಿಯೂ ಬ್ರಾಹ್ಮಣೇತರ ಪಕ್ಷವಿರುವದೆಂಬದನ್ನು ನೋಡಿ ನಾನು ವಿಷಾದಿಸುತ್ತೇನೆ. ಆದರೆ ಮದ್ರಾಸ ಇಲಾಖೆಯಲ್ಲಿ ಒಳ್ಳೇ ಬುದ್ಧಿವಂತರಾದ ಬ್ರಾಹ್ಮಣೇತರರಾಗಿ ಕಾಂಗ್ರೆಸನ್ನು ಸೇರಿ ರಾಷ್ಟ್ರಕಾರ್ಯವನ್ನು ಮುಂದುವರಿಸಬೇಕೆಂದು ನಾನು ಅವರಿಗೆ ಹೇಳುವೆನು. ರಾಷ್ಟ್ರೀಯ ಪಕ್ಷವೇ ದೇಶದ ಉದ್ಧಾರವನ್ನು ಮಾಡಬಲ್ಲದೆಂದು ನಾನು ದೃಢವಾಗಿ ನಂಬಿರುವೆನು.

ವಂದೇಮಾತರಮ್

" ಕರ್ಮವೀರ."

ಗೋಸಂರಕ್ಷಣೆಯ ಆವಶ್ಯಕತೆ.

ಕೊಲ್ಲದಿಪ್ಪುದೆ ಧರ್ಮ| ಬಲ್ಲಂಗೆ ಸನ್ಮಂತ್ರ| ಅಲ್ಲದೇ ನೀರಿ ಕೊಲ್ಲುವನು| ನರಕದೊಳು ಇಲ್ಲದೇ ಹೋಹ|| ಸರ್ವಜ್ಞ.

ಮನುಷ್ಯನು ಮನುಷ್ಯರನ್ನು ಹಿಂಸಿಸದಿದ್ದರೆ ಅಹಿಂಸಾವ್ರತದಲ್ಲಿ ಮೊದಲನೆಯ ಆಚರಣೆಯನ್ನು ಪಾಲಿಸಿದಂತಾಯಿತು. ಯಾವ ಪ್ರೇಮದಿಂದ ಮನುಷ್ಯರನ್ನು ಹಿಂಸಿಸುವದಿಲ್ಲವೋ ಅದೇ ಪ್ರೇಮವನ್ನು ದನಗಳ ಮೇಲೆಯೂ ಇಟ್ಟರೆ ಆಗ ಅಹಿಂಸಾಮಹಾವ್ರತವನ್ನಾಚರಿಸಲು ಒಂದು ಹೆಜ್ಜೆ ಮುಂದಿಟ್ಟಂತಾಗುವದು. ಯಾವ ಪ್ರಾಣಿಗಳು ಮನುಷ್ಯನ ಜೀವಿತಕ್ಕೆ ಬಹು ಸಹಾಯವನ್ನು ಮಾಡುತ್ತಲಿವೆಯೋ ಅಂಥ ಪಶುಗಳ ವಿಷಯದಲ್ಲಿ ಅಹಿಂಸಾವ್ರತವನ್ನಾಚರಿಸುವದು ಮನುಷ್ಯನ ಮುಖ್ಯ ಕರ್ತವ್ಯವಾಗಿಯೇ ಇದೆ.

ಪ್ರಾಣಿಕೋಟಿಯಲ್ಲಿ ಗೋವಿನಷ್ಟು ಸಹಾಯವನ್ನು ಮಾಡುವ ಪ್ರಾಣಿಯು ಬೇರೊಂದಿಲ್ಲ. ಹೆತ್ತ ತಾಯಿಯಂತೆ ಹಾಲನ್ನು ಕೊಟ್ಟು ಮನುಷ್ಯನನ್ನು ಪೋಷಣಮಾಡುತ್ತದೆ. ಇಷ್ಟೇ ಅಲ್ಲ, ನಮ್ಮ ಆಹಾರದ ಧಾನ್ಯಾದಿ ಪದಾರ್ಥಗಳನ್ನು ಬೆಳೆಯಲು ಮುಖ್ಯ ಸಾಧನವಾದ ಎತ್ತುಗಳನ್ನು ಹೆತ್ತು ಮನುಷ್ಯಜಾತಿಗೆ ಮಹದುಪಕಾರವನ್ನು ಮಾಡುತ್ತದೆ. ಇಂಥ ಗೋಮಾತೆಯನ್ನು ನಾಲಿಗೆಯ ಕ್ಷಣಿಕ ರುಚಿಗಾಗಲಿ ಅಥವಾ ಧಾರ್ಮಿಕ ಮೂಢನಂಬಿಕೆಯಿಂದಾಗಲಿ ಕೊಲ್ಲುವದು ಮನುಷ್ಯಜಾತಿಗೇನೇ ಮಹದನರ್ಥಕಾರಿಯಾದುದಲ್ಲವೇ? ಈ ಪವಿತ್ರ ಭೂಮಿಯಾದ ಭರತಖಂಡದಲ್ಲಿ ಎಲ್ಲಿಯವರೆಗೂ ಗೋಸಂರಕ್ಷಣೆಯು ತೃಪ್ತಿಕರವಾಗಿ ಜರುಗುತ್ತಿದ್ದಿತೋ, ಗೋಮಾತೆಯನ್ನು ಎಂತಹ ಪಾಪಿಯೂ ಕೂಡಾ ಎಲ್ಲಿಯವರೆಗೂ ಕೊಲ್ಲುತ್ತಿರಲಿಲ್ಲವೋ, ಗೋವುಗಳು ಪ್ರಾಣಭಯವಿಲ್ಲದೆ ಸಕಲರಿಂದಲೂ ಪೂಜೆಗೊಳ್ಳುತ್ತ ಸುಖಸಮಾಧಾನಗಳಿಂದ ಎಲ್ಲಿಯವರೆಗೂ ಅತ್ಯಧಿಕವಾಗಿದ್ದವೋ, ಅಲ್ಲಿಯವರೆಗೂ ಭಾರತೀಯರಿಗೆ ಧನಧಾನ್ಯಗಳೂ, ಹಾಲು, ತುಪ್ಪ ಮೊದಲಾದ ಪೌಷ್ಟಿಕ ಪದಾರ್ಥಗಳೂ ಸಮೃದ್ಧಿಯಾಗಿಯೇ ಇದ್ದವು.

ಎಂದಿನಿಂದ ನಮ್ಮನ್ನು ಸಂರಕ್ಷಿಸುವ ಇಂಥಾ ಸಾಧು ಪ್ರಾಣಿಗಳೇ ಭರತಖಂಡದಲ್ಲಿ ಕೊಲ್ಲಲುಪಕ್ರಮಿಸಲ್ಪಟ್ಟವೋ, ಎಂದಿನಿಂದ ಈ ಪುಣ್ಯಭೂಮಿಯು ಗೋಮಾತೆಯ ರಕ್ತಪ್ರವಾಹದಿಂದ ಅಪವಿತ್ರವಾಗಲುಪಕ್ರಮಿಸಿತೋ, ಎಂದಿನಿಂದ ಮಹೋಪಕಾರಿಯಾದ ಈ ಜೀವಪ್ರಾಣಿಯ ಸಾವಿನ ದುರ್ವ್ಯಸನವು ಭರತಖಂಡದಲ್ಲೆಲ್ಲಾ ವ್ಯಾಪಿಸಲುಪಕ್ರಮಿಸಿತೋ ಅಂದಿನಿಂದಲೇ ನಾವು ದುಃಸ್ಥಿತಿಗೀಡಾಗುತ್ತಾ ಬಂದೆವು. ನಮಗೆ ಉಪಕಾರಮಾಡುವ ಪ್ರಾಣಿಗಳಿಗೆ ನಾವು ಅಪಕಾರಮಾಡಲುಪಕ್ರಮಿಸಿದಂದಿನಿಂದ ಆ ನಮ್ಮ ಕೃತಘ್ನತನದ ಪಾಪಕೃತ್ಯಕ್ಕೆ ದಾರಿದ್ರ್ಯ, ಕ್ಷಾಮ, ನಾನಾರೋಗಾದಿಗಳೇ ಫಲಗಳಾದವು. ಆ ದುಷ್ಫಲಗಳನ್ನೇ ಈಗ ನಾವು ಅನುಭವಿಸುತ್ತಿದ್ದೇವೆ.

ಅತ್ಯಂತ ಕ್ಷುದ್ರವಾದ ನಾಲಿಗೆಯ ರುಚಿಗಾಗಿ ಪ್ರತಿವರ್ಷ ಈ ದೇಶದಲ್ಲಿ ಅನೇಕ ಲಕ್ಷ ಗೋವುಗಳನ್ನೂ ಎತ್ತುಗಳನ್ನೂ ಕ್ರೈಸ್ತಬಾಂಧವರು ಸಂಹಾರ ಮಾಡುತ್ತಿದ್ದಾರೆ. ನಮ್ಮ ಮುಸಲ್ಮಾನ ಬಾಂಧವರು ಧರ್ಮದ ಹೆಸರಿನಿಂದ ಸಹಸ್ರಾಧಿ ಗೋವುಗಳನ್ನು ಪ್ರತಿ ವರ್ಷ ಕೊಲ್ಲುತ್ತಿದ್ದಾರೆ. ಆದರೆ ಇತ್ತೀಚೆಗೆ ನಮ್ಮ ಹಿಂದೂಬಾಂಧವರ ಮನಸ್ಸನ್ನು ನೋಯಿಸಬಾರದೆಂದು ಮಹಾತ್ಮಾ ಗಾಂಧಿಯವರ ದಿವ್ಯತರವಾದ ಸದ್ಬೋಧದಿಂದ ನಮ್ಮ ಅನೇಕ ಮುಸಲ್ಮಾನ ಬಾಂಧವರ ಹೃದಯವು ಗೋಮಾತೆಯ ವಿಷಯದಲ್ಲಿ ಕರಗಿ ಗೋವಧೆಯನ್ನು ಎಷ್ಟೋ ಮಟ್ಟಿಗೆ ನಿಲ್ಲಿಸಿದ್ದಾರೆ. ಅಯ್ಯೋ! ಗೋವುಗಳನ್ನು ಪೂಜೆಮಾಡುತ್ತಿರುವ ಹಿಂದುಗಳಲ್ಲಿಯೇ ಈಗ ಅಸಂಖ್ಯ ಜನರು ಹಣದಾಶೆಯಿಂದ ತಮಗೆ ಬಹು ದಿವಸಗಳವರೆಗೆ ಹಾಲು ಮೊಸರು ಮೊದಲಾದುವುಗಳನ್ನು ಒದಗಿಸಿ ಹಲವು ಕರುಗಳನ್ನು ಕೊಟ್ಟು ಅತ್ಯಂತ ಉಪಕಾರಮಾಡಿದ ಆಕಳು ಮುಪ್ಪನ್ನು ಹೊಂದಲು, ಕೃತಘ್ನರಾದ ಮನೆಯ ಯಜಮಾನರು ಕೇವಲ ನಾಲ್ಕಾರು ರೂಪಾಯಿಗಳ ಆಶೆಯಿಂದ ಕಟುಕರಿಗೆ ವಿಕ್ರಯಿಸುವರು. ಈ ಪ್ರಕಾರ ಆ ಪುಣ್ಯಭೂಮಿಯಲ್ಲಿ ಗೋವಧೆಯ ಭಯಂಕರ ಪಾಪಕೃತ್ಯವು ಜರುಗುತ್ತಲಿದೆ!

'ಅಯ್ಯೋ! ಮನುಷ್ಯರು ಎಷ್ಟು ಕಠಿಣಹೃದಯದವರಾದರಲ್ಲಾ! ಇವರ ಕೃತಘ್ನತೆಯನ್ನು ಎಷ್ಟೆಂದು ಹೇಳಬೇಕು? ತಮ್ಮ ಮನುಷ್ಯತ್ವಕ್ಕೇನೇ ಕಲಂಕವುಂಟಾಗುವಂತಹ ಘೋರ ತರವಾದ ಅಪರಾಧವನ್ನು ನಾಚಿಕೆಯಿಲ್ಲದೆ ಮಾಡುತ್ತಿರುವರಲ್ಲಾ! ಬಹು ಕ್ಷುದ್ರವಾದ ಹುಲ್ಲನ್ನು ತಿಂದು ಅತಿ ಮೌಲ್ಯವಾದ ಅಮೃತವನ್ನು ಕೊಟ್ಟು ಇವರನ್ನು ಸಂತೋಷಪಡಿಸಿದುದಕ್ಕೆ ಈ ಮರಣದಂಡನೆಯೇ ನಮಗೆ ಬಹುಮಾನವೇ? ಅಯ್ಯೋ! ಯಾವ ಕೈಗಳಿಂದ ನಮ್ಮ ಹಾಲನ್ನು ಹಿಂಡಿಕೊಂಡರೋ ಅದೇ ಕೈಗಳಿಂದ ನಮ್ಮನ್ನು ಕಡಿಯಲಿಕ್ಕೆ ಕೊಡುತ್ತಿರುವರಲ್ಲಾ! ಯಾವ ಕೈಗಳಿಂದ ನಮ್ಮ ಹಾಲನ್ನು ಸೇವಿಸುತ್ತಿದ್ದಾರೆಯೋ ಅದೇ ಕೈಗಳಿಂದ ನಮ್ಮ ಕತ್ತನ್ನು ಕತ್ತರಿಸುತ್ತಿರುವರಲ್ಲಾ! ಅಹಹ! ಹಾವಿಗೆ ಹಾಲೆರೆದಂತಾಯಿತಲ್ಲಾ!' ಎಂದು ಗೋವುಗಳು ಮರುಗುತ್ತಿರಲಿಕ್ಕಿಲ್ಲವೇ? ಅವುಗಳಿಗೆ ಆ ಕಸಾಯಿಖಾನೆಗೆ ಕೊಂಡೊಯ್ಯುವದು ಬಂದುಬಿಟ್ಟರೆ ಅವು ಅದೇ ಪ್ರಕಾರ ಮೊರೆ ಇಡಲಿಕ್ಕಿಲ್ಲವೇ? ಅವುಗಳ ನ್ಯಾಯವಾದ ಈ ಮೊರೆಯನ್ನು ಕೇಳಿದರೂ ಗೋವುಗಳನ್ನು ಕೊಲ್ಲುವವರು ಮತ್ತು ಕೊಲ್ಲಲಿಕ್ಕೆ ಕೊಡುವವರು ತಲೆಯೆತ್ತಿ ತಿರುಗಾಡಲು ನಾಚಲಿಕ್ಕಿಲ್ಲವೇ? ಆದಕಾರಣ ಮನುಷ್ಯಜಾತಿಗೆ ಅತ್ಯಂತ ಉಪಕಾರ ಮಾಡುತ್ತಿರುವ ಆಕಳು, ಎತ್ತು ಮೊದಲಾದ ಪ್ರಾಣಿಗಳನ್ನು ಯಾವ ಕಾರಣದಿಂದಲಾದರೂ ಕೊಲ್ಲದಿರುವದೇ ಮನುಷ್ಯರಾದವರ ಮುಖ್ಯ ಕರ್ತವ್ಯವಾಗಿದೆ.

ಪೂರ್ವಕ್ಕೆ ಪ್ರತಿಗ್ರಾಮದಲ್ಲಿಯೂ ಪಟ್ಟಣದಲ್ಲಿಯೂ ಗೋರಕ್ಷಣೆ ಮಾಡಿರಲು, ಪರಿಪಾಲನಾಸಂಘಗಳೂ ಇದ್ದವು. ಅಮೃತಸಮಾನವಾದ ಹಾಲು, ಮೊಸರು, ತುಪ್ಪವು ಸಮೃದ್ಧಿಯಾಗಿ ದೊರೆಯುತ್ತಿದ್ದ ಕಾರಣ ನಮ್ಮ ಹಿರಿಯರು ಬಹು ದೀರ್ಘಾಯುಗಳಾಗಿದ್ದರು. ಈಗಾದರೋ ಯಾವ ಕಡೆ ನೋಡಿದರೂ ಗೋಹತ್ಯ ಶಾಲೆಗಳೂ, ಮಾಂಸದ ಅಂಗಡಿಗಳೂ, ಸಾರಾಯಿ ಮತ್ತು ಮದ್ಯಪಾನಾದಿ ಮಂದಿರಗಳೂ ನಾಗರೀಕತೆ ಹೆಸರಿನ, ವಿದ್ಯಾವಂತರಾದ ಯೂರೋಪ್ಯರಲ್ಲಿ ನೋಡಿದರೂ, ಚರ್ಮದ ಪಾಕೀಟುಗಳೂ, ಚರ್ಮದ ಸೊಂಟಪಟ್ಟಿಗಳೂ, ಪೇಗದ ಕೈಗಳಿಗೆ ಚರ್ಮದ ಪರಸಣಿಗಳೂ, ಚರ್ಮದ ಟೋಪಿಗಳೂ, ಚರ್ಮದ ಹಾಸಿಗೆ ಕಟ್ಟುವ ದಾರಗಳೂ ತಾಂಡವವಾಡುತ್ತಿರುವವು. ಭಾರತೀಯರೇ! ಚಿನ್ನದ ಸರಪಣಿಗಳೂ, ಚಿನ್ನ ಬಿಲ್ಲೆಗಳೂ ಮುಂತಾದ ಬಂಗಾರದಾಭರಣಗಳು ಪರದೇಶದ ಹಾದಿಯನ್ನು ಹಿಡಿದು ಚರ್ಮದಾಭರಣಗಳನ್ನು ಧರಿಸುವ ವಿಪರೀತ ಕಾಲ ಬಂತಲ್ಲ! ಚರ್ಮವನ್ನು ಮುಟ್ಟಲು ಭಯಪಡುತ್ತಿದ್ದ ನಮ್ಮ ಭಾರತ ಪುತ್ರರು ಈಗ ಯಥೇಚ್ಛವಾಗಿ ಬಟ್ಟೆಗಳಂತೆ ಚರ್ಮವನ್ನು ಉಪಯೋಗಿಸುವ ಶೀಲವಂತರಾದರಲ್ಲಾ! ಮೈಮೇಲೆ ಚರ್ಮ, ಕೈಯಲ್ಲಿ ಚರ್ಮ, ಮನೆಯಲ್ಲಿ ಚರ್ಮ, ಪುಸ್ತಕದ ಮೇಲೆ ಚರ್ಮ, ಕಡೆಗೆ ತಲೆಯ ಮೇಲೆ ಚರ್ಮ, ಹಾ! ಪರಮೇಶ್ವರಾ! ಹಿಂದೂದೇಶದಲ್ಲಿ ವರುಷ ಒಂದಕ್ಕೆ ಚರ್ಮಗಳಿಗಾಗಿಯೇ 37,50,000 ಸಾಧುಪ್ರಾಣಿಗಳನ್ನು ಕೊಲ್ಲುತ್ತಿರುವರಲ್ಲಾ! ಸಮಶೀತೋಷ್ಣದೇಶವಾದ ನಮ್ಮ ಭರತಖಂಡದಲ್ಲಿ ಉಪಯೋಗಿಸುವ ಮಾಂಸ ಪೂರ್ವಾಚಾರವು ಹೋಗಿ, ನವೀನಾಚಾರವು ಬಂದಿರುತ್ತದೆ. ಅಣ್ಣಗಳಿರಾ! ನೀವು ನಿಜವಾಗಿ ಭಾರತೀಯರೆನಿಸಿಕೊಳ್ಳಬೇಕಾದರೆ ಸನಾತನ ಧರ್ಮಾವಲಂಬಿಗಳಾಗುವವಾದರೆ ದೈವಸಹಕ್ಕರಾಗಿ ಮೋಕ್ಷವನ್ನಪೇಕ್ಷಿಸುವವರಾದರೆ, ನಿಮ್ಮ ಸತ್ಕಾರ್ಯಗಳೆಲ್ಲವೂ ಕೈಗೂಡಬೇಕಾದರೆ, ನಿಮ್ಮ ಸಂತಾನಗಳು ಪೂರ್ಣಾರೋಗ್ಯವನ್ನು ಹೊಂದಿ ಕೀರ್ತಿವಂತರಾಗಬೇಕಾದರೆ ಪ್ರತಿಯೊಬ್ಬರೂ, ಪವಿತ್ರವಾದ ಗೋರಕ್ಷಣೆ ಮಾಡುವದಕ್ಕೆ ದೇವಸಾಕ್ಷಿತವಾದ ದೃಢಪ್ರತಿಜ್ಞೆಯನ್ನು ಮಾಡಿಕೊಳ್ಳಿರಿ. ಜೀವ ದಯೆಯನ್ನು ಬೋಧಿಸಿರಿ! ಪರಮೇಶ್ವರನು ಸಕಲೈಶ್ವರ್ಯಗಳನ್ನೂ ಕೊಡುವನು.

' ಸು ಬೋ ಧ.'

ನೋ ಟೀ ಸ್.

ವೀರಾಜಪೇಟೆ ನಾಡು ಕೊಟ್ಟೋಳಿ ಗ್ರಾಮದ ಮಾಪ್ಪೆಲು ಪೌತಿ ತಿಮ್ಮಯ್ಯನವರ ಮಗ ರಾಮಯ್ಯನು ನಿಸ್ಸಂತತಿಯಾಗಿ ಮೃತಪಟ್ಟಿದ್ದು ಸರಿಯಷ್ಟೆ. ಪೌತನಿಗೆ ತಾಯಿ ಮತ್ತು ಹೆಂಡತಿ ಮಾತ್ರ ಇರುತ್ತಾರೆ. ಇವರಿಗೆ ಇವರ ಜೀವಮಾನವಿರುವವರೆಗೂ ಜೀವನಾಂಶಕ್ಕೆ ಹಕ್ಕೇ ಹೊರತು ಪೌತನ ಯಾವ ಆಸ್ತಿಯನ್ನು ಮಾರುವುದಕ್ಕಾಗಲಿ, ಭೋಗ್ಯ ವಗೈರೆ ಪರಾಧೀನಮಾಡುವುದಕ್ಕಾಗಲಿ ಹಕ್ಕು ಇರುವದಿಲ್ಲ. ಸದರಿ ಹೆಂಗಸರಿಗೆ ಯಾರಾದರೂ ದುರ್ಬೋಧನೆ ಹೇಳಿ ಪೌತನ ಯಾವುದಾದರೂ ಸೊತ್ತನ್ನು ಕ್ರಯಕ್ಕೆ ಪಡೆದರೆ ಅಥವ ಭೋಗ್ಯ ವಗೈರೆ ಪರಾಧೀನ ಮಾಡಿಕೊಂಡರೆ ಅಂಥಾ ಪರಾಧೀನವು ಅಸಿಂಧು ಆಗಿರತಕ್ಕದ್ದು. ಪೌತನ ಬಾಬ್ತು ಚರಸ್ಥಿರ ವಿಶಿಷ್ಟ ಆಸ್ತಿಗಳಿಗೂ ನಾವು ಹಕ್ಕುದಾರರಾಗಿರುತ್ತೇವೆ.

ಅಲ್ಲದೆ ಪೌತನ ಬಾಬ್ತು ಕೊಟ್ಟೋಳಿಯಲ್ಲಿರುವ ಭೂಮಿಯನ್ನು ಪಂಚಾಯಿತರ ಮೂಲಕ ನಮಗಳಿಗೆ ವರ್ಷವಂದಕ್ಕೆ 60 ಬಟ್ಟಿ ಬತ್ತಕ್ಕೆ ವಾರಕ್ಕೆ ಕೊಟ್ಟಿರುತ್ತಾರೆ. ಈ ಸಂಗತಿಯು ಸಕಲರಿಗೂ ತಿಳಿದಿರತಕ್ಕದ್ದು.

ಈ ಚಂದ್ರಪ್ಪಯ್ಯ ಅಂಡ್ ಬ್ರದರ್ಸ್,
ಕೊಟ್ಟೋಳಿ ಗ್ರಾಮ.

ನೈಟ್ರೇಟ್ ಆಫ್ ಸೋಡಾ

ಎಲ್ಲಾ ಬೆಳೆಗಳಿಗೂ ಅತ್ಯುತ್ತಮವಾದ ಗೊಬ್ಬರ

Nitrate of Soda 15-16 per cent. N

ಈ ಗೊಬ್ಬರದಲ್ಲಿ ಬೆಳೆಗಳಿಗೆ ಅತ್ಯಗತ್ಯವಾದ ನೈಟ್ರೋಜನ್ ಸಸ್ಯಾಹಾರವು

15-16 ಅಂದರೆ ಮೂರು ಪಾಲು ಒಳ್ಳೆಯ ಹಿಂಡಿ ಗೊಬ್ಬರದಲ್ಲಿರುವುದಕ್ಕಿಂತಲೂ ಮೂರು ನಾಲಕ್ಕು ಜಾಸ್ತಿಯಾಗಿರುವದು. ಇದರಲ್ಲಿ ಸಿಕ್ಕುವಷ್ಟು ನೈಟ್ರೋಜನ (Nitrogen) ವು ಬೇರೆ ಯಾವ ಗೊಬ್ಬರಗಳಿಂದಲೂ ಗಿಡಗಳಿಗೆ ದೊರೆಯಲಾರದು. ಆದ್ದರಿಂದಲೇ ಭೂಲೋಕದ ಎಲ್ಲಾ ಜಾಗಗಳಲ್ಲಿಯೂ ರೈತರು ಇದನ್ನು ವಿಶೇಷವಾಗಿ ಉಪಯೋಗಿಸುತ್ತಾರೆ.

ಭತ್ತ, ಕಬ್ಬು, ತೆಂಗು, ಅಡಿಕೆ, ಹೂವು, ಹೊಗೆಸೊಪ್ಪು, ತರಕಾರಿ ಮೊದಲಾದವುಗಳಿಗೂ ಕಾಫಿ, ಚಾ, ರಬ್ಬರು, ಏಲಕ್ಕಿ ಮೊದಲಾದ ತೋಟ ಪೈರುಗಳಿಗೂ ಎಲುಬಿನ ಪುಡಿ ಅಥವಾ ಮೂಳೆ ಗೊಬ್ಬರ ವಗೈರೆ ಊರ ಗೊಬ್ಬರಗಳ ಜೋತೆಯಲ್ಲಿ ಈ ಗೊಬ್ಬರವನ್ನು ಉಪಯೋಗಿಸುವದರಿಂದ ಬೆಳೆಯು ಸಮೃದ್ಧಿಯಾಗುವದು. ನೈಟ್ರೇಟ್ ಆಫ್ ಸೋಡಾದಲ್ಲಿರತಕ್ಕ ಸೋಡವು ಮಣ್ಣಿನಲ್ಲಿರುವ ಪೊಟೇಷ್ ಎಂಬ ಇನ್ನೊಂದು ತರದ ಸಸ್ಯಾಹಾರವನ್ನು ಗಿಡಗಳಿಗೆ ಒದಗಿಸಿ ಕೊಡುತ್ತದೆ.

ಈ ಗೊಬ್ಬರವು ನೋಟಕ್ಕೆ ಬರೇ ಉಪ್ಪಿನ ಹಾಗಿದ್ದು ಅಹಸ್ಯಕರವಲ್ಲ. ಎಕರೆ ಒಂದಕ್ಕೆ 100-200 ರಾತ್ತಲು ಬೇಕಾಗುವದು. ಹೆಚ್ಚಿನ ಮಾಹಿತಿ ಮತ್ತು "ಕೃಷಿಸುಧಾರ" ಎಂಬ ಪುಸ್ತಕವನ್ನು ಈ ಕೆಳಗಿನ ವಿಳಾಸದಾಕಲಿಂದ ಧರ್ಮಾರ್ಥವಾಗಿ ಪಡೆಯಬಹುದು.

52-2

CHILEAN NITRATE COMMITTEE,
Post Box 469, CALCUTTA.

ಚಂದಾದಾರರಲ್ಲಿ ವಿಜ್ಞಾಪನೆ.

ಈ ತಿಂಗಳು ನಮ್ಮ ಹೊಸ ವರ್ಷದ ಪ್ರಾರಂಭವಾದುದರಿಂದ ಕಳೆದ ಮೇ ಆಖೈರಿಗೆ ಪಾಯಿದೆ ತೀರಿದ ಚಂದಾದಾರರು ಹಲವರಿರುವರು. ಅವರಿಗೆಲ್ಲಾ ಪಾಯಿದೆ ತೀರುವುದಕ್ಕೆ ಎರಡು ವಾರಕ್ಕೆ ಮುಂಚಿತವಾಗಿಯೇ ನೋಟೀಸು ಕಳುಹಿಸಿದ್ದೆವು. ಆ ಮೇಲೆ ಹಲವರು ತಮ್ಮ ಚಂದಾ ಹಣವನ್ನು ನಮಗೆ ಕಳುಹಿಸಿದಕ್ಕೆ ಅವರಿಗೆ ನಮ್ಮ ವಂದನೆಗಳಿವೆ. ಆದರೆ ಉಳಿದ ಕೆಲವರು ತಮ್ಮ ವಾರ್ಷಿಕ ಚಂದಾವನ್ನು ಕಳುಹಿಸದೆಯೂ, ಪತ್ರಿಕೆಯನ್ನು ಮುಂದರಿಸಬೇಕೋ ಬೇಡವೋ ಎಂಬುದನ್ನು ನಮಗೆ ತಿಳಿಸದೆಯೂ ಇರುವುದು ವ್ಯಸನಕರ. ಕಳೆದ ವರ್ಷದ ಚಂದಾ ಬಾಬ್ತುಗಳನ್ನು ಕೆಲವರು ಇನ್ನೂ ಪಾವತಿಮಾಡದೆ ಇರುವುದು ಮತ್ತಷ್ಟು ಶೋಚನೀಯ. ವಾರ್ಷಿಕ ಚಂದಕ್ಕೆ ವಿ. ಪಿ. ಮೂಲಕ ಪತ್ರಿಕೆಯನ್ನು ಹೊಂದಿಕೊಳ್ಳಲು ಇಚ್ಛೆಸುವವರು ತಿಳಿಸಿದಲ್ಲಿ ಹಾಗೆ ಕಳುಹಿಸಲಾಗುವುದು. ವಿ. ಪಿ. ಗೆ 0—3—0 ಹೆಚ್ಚು ಚಾರ್ಜಾಗುವುದು. ಚಂದಾ ಬಾಕಿ ಇರುವವರು ಬಾಕಿಯನ್ನು ಪಾವತಿ ಮಾಡದೆ ತೀರಿ ಪತ್ರಿಕೆಯನ್ನು ಮುಂದರಿಸಬೇಕೆಂದಿರುವವರು ಈ ವರ್ಷದ ಚಂದಾವನ್ನು ಮುಂಗಡವಾಗಿಯೂ [illegible] ಕಳುಹಿಸದೆ ಹೋದರೆ ಅವರಿಗೆ ಪತ್ರಿಕೆಯು ನಿಲ್ಲಿಸಲಾಗುವುದು. ಆದುದರಿಂದ ನಮ್ಮ ವಾಚಕ ಮಹಾಶಯರು ಈ ವಿಷಯಕ್ಕೆ ಹುಂಬಾಸಿಗ ಕೊಡಬೇಕಾಗಿ ಕೋರುತ್ತೇವೆ.

"ಕೊಡಗು" ಮೇನೇಜರ್,
ಮಡಿಕೇರಿ.

ವರ್ತಮಾನ ಸಂಗ್ರಹ.

ಒಳದೇಶ

ವಿರಾಜಪೇಟೆಯಲ್ಲಿ ಭತ್ತಕ್ಕೆ ಗಾಡಿಗೆ 95 ರೂಪಾಯಿ ಕ್ರಯವಿರುತ್ತೆ.

ಮ. ಬಿಜಟ್ಟೀರ ಸಿ ಸುಬ್ಬಯ್ಯನವರು ಬಿ. ಎ. ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿರುವರು.

ಕೊಡವ ನಾಯಿಯ ಆಡಳಿತ ಕಮಿಟಿ ಮೀಟಿಂಗು ಈ ತಾ. 12ರಲ್ಲಿ ವೀರರಾಜಪೇಟೆಯಲ್ಲಿ ನಡೆಯಲಿಕ್ಕಿದೆ.

ಮಳೆಯು ತಾರೀಕು 8ರಲ್ಲಿ ಪ್ರಾರಂಭವಾಗಿರುವುದರಿಂದ ರೈತರು ವ್ಯವಸಾಯ ಕೆಲಸದಲ್ಲಿ ಬಹು ಆತುರರಾಗಿರುತ್ತಾರೆ.

ಕಮೀಷನರ ಆಫೀಸಿನ ಹೆಡ್ ಎಕೌಂಟೆಂಟರಾದ ಮೆ. ಕೆ. ನಾರಾಯಣರಾಯರು ಆರು ತಿಂಗಳು ರಜೆಯಲ್ಲಿರುವುದರಿಂದ ಮೆ. ಮೇರಿಯಂಡ ಭೀಮಯ್ಯನವರು ಸದರಿ ಕೆಲಸವನ್ನು ಮಾಡುತ್ತಿರುವರು.

ಮೆ. ಎ. ಕಾಳಮ್ಮನವರು ನಾಲ್ಕು ತಿಂಗಳ ರಜೆಯಲ್ಲಿರುವುದರಿಂದ ಮೆ. ನಾಯಡ ಚಿಣ್ಣಪ್ಪನವರು ದಕ್ಷಿಣಕೊಡಗಿನ ಸ್ಕೂಲುಗಳ ಆಕ್ಟಿಂಗ್ ಸುಪರ್‌ವೈಜರಾಗಿ ನೇಮಿಸಲ್ಪಟ್ಟಿರುವರು.

ಬಿದ್ದಂಡ ಲೇಟ್ ಪೂವಯ್ಯನವರ ಪತ್ನಿಯವರು ತನ್ನ 70 ನೇ ವಯಸ್ಸಿನಲ್ಲಿ ಈ ತಾರೀಕು 8 ರಲ್ಲಿ ಕೈಕೇರಿ ಗ್ರಾಮದ ಬನ್ನಮ್ಮಡ ಲೇಟ್ ಬೆಳ್ಯಪ್ಪನವರ ಪತ್ನಿ ಮುದ್ದಪ್ಪನವರು ಈ ತಾ. 6ರಲ್ಲೂ ಶಿವಾಧೀನರಾದರು.

ಇದೇ ತಾರೀಕು 11 ರಲ್ಲಿ ಕೌನ್ಸಿಲಿನ ಪಂಚಾಯಿತಿ ಸಿಲೆಕ್ಟ್ ಕಮಿಟಿ ಮೀಟಿಂಗೂ, ತಾರೀಕು 15 ರಲ್ಲಿ ಮಲೇರಿಯ ಸಿಲೆಕ್ಟ್ ಕಮಿಟಿಮೀಟಿಂಗೂ ಮಡಿಕೇರಿಯಲ್ಲಿ ನಡೆಯುವುದು.

ಬರುವ ಆಗೋಸ್ಟು ತಾ. 1ರಿಂದ ಯಲಕನೂರು ಗ್ರಾಮವನ್ನು ಫ್ರೇಜರ್‌ಪೇಟೆ ಹೋಬಳಿಯಿಂದ ಸೋಮವಾರಪೇಟೆ ನಾಡಿಗೆ ವರ್ಗಾಯಿಸಿರುವರು.

ರಾ. ಸಾ. ಬಿ. ಯಂ. ರಾಮುತಾರವರು ಈ ತಾ. 5 ರಲ್ಲಿ ಕಮೀಷನರವರ ಆಫೀಸಿನ ಮೇನೇಜರು ಕೆಲಸದ ಚಾರ್ಜು ತೆಗೆದುಕೊಂಡರು.

ಕಳೆದ ತಾರೀಕು 31ರಲ್ಲಿ ಅಮ್ಮತ್ತಿಯಲ್ಲಿಯೂ, ಈ ತಾ. 1ರಲ್ಲಿ ಪೊಂಬೆಳಿಯೂರಲ್ಲಿಯೂ, 2ರಲ್ಲಿ ವೀರರಾಜಪೇಟೆಯಲ್ಲಿಯೂ ಸಹಕಾರ ಸಂಘಗಳ ಕಾನ್‌ಫರೆನ್ಸು ರಿಜಿಸ್ಟ್ರಾರವರಿಂದ ನಡೆಸಲ್ಪಟ್ಟು, ಎರಡು ಯೂನಿಯನ್‌ಗಳು ಸ್ಥಾಪಿತವಾದ್ದಲ್ಲದೆ ಅನೇಕ ಸಹಕಾರ ವಿಷಯಗಳು ಚರ್ಚಿಸಲ್ಪಟ್ಟವು.

ಈ ತಾ. 9ರಲ್ಲು ಒಂಮ್ಮುರಿದೇವಸ್ಥಾನದ ಬಳಿ ಕಾವೇರಿ ಹೊಳೆಯಲ್ಲು ಒಬ್ಬ ತೀಯರ ಹೆಂಗಸು ಸತ್ತು ಬಿದ್ದಿದ್ದಳಂತೆ. ಮರಣದ ಕಾರಣವು ಗೊತ್ತಾಗಿರುವುದಿಲ್ಲ. ಕೆಲವು ತಿಂಗಳುಗಳ ಹಿಂದೆ ಅಲ್ಲಿಯೇ ಒಬ್ಬ ಬ್ರಾಹ್ಮಣರ ಹೆಂಗಸು ಮೃತಳಾಗಿದ್ದಳು.

ಅಬ್ಕಾರಿ ಸಬ್ ಇನ್ಸ್‌ಪೆಕ್ಟರಾದ ಮೆ. ಬಿ ಸುಬ್ರಹ್ಮಣ್ಯನವರು 3 ತಿಂಗಳು ರಜೆಯಲ್ಲಿ ಹೋಗಿರುವುದರಿಂದ ಆ ಕೆಲಸಕ್ಕೆ ಮೆ. ಕೇಳಪಂಡ ನಾಣಯ್ಯನವರೂ, ಮಿಲಿಟರಿ ಸ್ಟೋರ್‌ಕೀಪರ್ ಕೆಲಸಕ್ಕೆ ಮೆ. ಸಿರಕಜೆ ರಾಮಪ್ಪನವರೂ ನೇಮಿಸಲ್ಪಟ್ಟಿರುವರು.

ಮೆ. ಕೆ ಪಿ. ಚಿಣ್ಣಪ್ಪನವರು 'ಲೋಕಪಾವನ' ದ ಪ್ರಕಾಶಕರ ಮೇಲೆ ಕೊಟ್ಟಿರುವ ಮಾನನಷ್ಟದ ಕ್ರಿಮಿನಲ್ ಮೊಕದ್ದಮೆಯನ್ನು ಸಬ್‌ಜಡ್ಜಿಯವರ ಕೋರ್ಟಿನಿಂದ ಬೇರೆಕಡೆ ವರ್ಗಾಯಿಸಲಿಕ್ಕಾಗುವುದಿಲ್ಲವೆಂದು ಚೀಫ್ ಕಮೀಷನರವರು ಹುಕುಂಮಾಡಿರುವುದರಿಂದ ಸಬ್‌ಜಡ್ಜಿಯರ ಕೋರ್ಟಿನಲ್ಲಿ ಸದರಿ ಕೇಸಿನ ವಿಚಾರವು ಈ ತಾ. 19 ಕ್ಕೆ ಇಡಲಾಗಿದೆ.

ಮೆ. ಬಿದ್ದಂಡ ಬೋಪಯ್ಯನವರು ಮೆ. ಕೆ. ಪಿ. ಚಿಣ್ಣಪ್ಪನವರ ಮೇಲೆ ಕೊಟ್ಟಿರುವ ಮಾನನಷ್ಟದ ಕೇಸಿನ ವರ್ಗಾವರ್ಗಿಯ ಅರ್ಜಿಯನ್ನು ಮೆ. ಚಿಣ್ಣಪ್ಪನವರು ಸರ್ಕಾರಕ್ಕೆ 200 ರೂಪಾಯಿಗೆ ಮುಚ್ಚಳಿಕೆಯನ್ನೂ ಒಬ್ಬ ಜಾಮೀನುದಾರನನ್ನೂ ಕೊಟ್ಟರೆ ವಿಚಾರಿಸಲಾಗುವದೆಂದು ಚೀಫ್ ಕಮೀಷನರವರು ಹುಕುಂಮಾಡಿರುವರೆಂದು ತಿಳಿಯ ಬರುತ್ತದೆ.

ಪಾಡಿನಾಲ್ಕುನಾಡು ತಾಲೋಕಿನವರ ಜಮೀನ್ದಾರರ ಸಂಘದ ಸ್ವಾಗತಕಮಿಟಿಯ ಮೀಟಿಂಗ್ ಕಳೆದ ವಾರದಲ್ಲಿ ನಡೆದು ಉಳಿಕೆಯಾದ ಎರಡುನೂರು ಚಿಲ್ರೆ ರೂಪಾಯಿಗಳನ್ನು ನಾಪೋಕ್ಲಿನಲ್ಲಿ ಗಣಪತಿ ವಾಚನಾಲಯದ ಶಾಖೆಯನ್ನು ಏರ್ಪಡಿಸುವುದಕ್ಕೆ ಉಪಯೋಗಿಸಲು ತೀರ್ಮಾನವಾಡಿರುವರೆಂದು ತಿಳಿಯುತ್ತೇವೆ.

ಬಾಗಮಂಡಲ ಶಿರಸ್ತೇದಾರರಾದ ಮೆ ಯು. ಮಂಜುನಾಥಯ್ಯನವರು ನಾಲ್ಕು ತಿಂಗಳು ರಜೆಯಲ್ಲಿ ಹೋಗುವುದರಿಂದ ಮೆ. ಕೇತಿಯಂಡ ಕಾಳಪ್ಪನವರನ್ನು ಬಾಗಮಂಡಲ ಶಿರಸ್ತೇದಾರರಾಗಿಯೂ, ಮೆ.. ಕೇತಿಯಂಡ ಬೆಳ್ಯಪ್ಪನವರನ್ನು ಸಬ್‌ಜಡ್ಜ್ ಕೋರ್ಟಿನ ಶಿರಸ್ತೇದಾರರಾಗಿಯೂ, ಮೆ. ಕೊಡಂದೇರ ಸುಬ್ಬಯ್ಯನವರನ್ನು ನಾಪೋಕ್ಲು ನಾಡುಪಾರುಪತ್ಯಗಾರರಾಗಿಯೂ, ಮೆ. ಮುಕ್ಕಾಟೀರ ಮುದ್ದಪ್ಪನವರನ್ನು ಫ್ರೇಜರ್‌ಪೇಟೆ ಪಾರುಪತ್ಯಗಾರರಾಗಿಯೂ ವರ್ಗಾಯಿಸಿರುವರು.

ಪ್ರೀಚ್ ಆಫ್ ಕಂಟ್ರಾಕ್ಟು ಕರಾರುಗಳನ್ನು 'ಎಟೆಸ್ಟ್' ಮಾಡುವ ಅಧಿಕಾರವು ಈ ಕೆಳಗಿನ ಮಹನೀಯರಿಗೂ ಕೊಡಲಾಗಿದೆ. 1. ಮಡಿಕೇರಿಯ ಟ್ರೆಜರಿ ಆಫೀಸರು. 2. ಕೊಡಗಿನ ಸಹಕಾರ ಸಂಘಗಳ ರಿಜಿಸ್ಟ್ರಾರವರು. 3. ಉತ್ತರ ಮತ್ತು ದಕ್ಷಿಣ ಕೊಡಗು ತಾಲೋಕು ಆಫೀಸುಗಳ ಶಿರಸ್ತೇದಾರರುಗಳು. 4. ಪೊನ್ನಂಪೇಟೆಯ ಅಸಿಸ್ಟೆಂಟ್ ಪಾರುಪತ್ಯಗಾರರು. 5. ಕಡಮಕಲ್ಲು ರಬ್ಬರ್ ಎಸ್ಟೇಟ್ ಸಿಂಡಿಕೇಟಿನ ಸುಪರಿಂಟೆಂಡೆಂಟರಾದ ಮೆ. ಜೆ. ಪಿ ವ್ಹೈಟ್‌ರವರು. 6. ದಕ್ಷಿಣ ಇಂಡಿಯಾದ ಯುನೈಟೆಡ್ ಪ್ಲಾಂಟರ್ಸ್ ಎಸ್ಸೋಸಿಯೇಶನ್ನಿನ ಮಂಗಳೂರು, ಕೊಯಮುತ್ತೂರು ಮತ್ತು ಮೈಸೂರಿನಲ್ಲಿರುವ ಲೇಬರ್ ಇಲಾಖೆಗಳ ಸುಪರಿಂಟೆಂಡೆಂಟರುಗಳು.

ಹಿಂದೂದೇಶ.

ಮಹಾತ್ಮಗಾಂಧಿಯವರು ಫಿನ್ಲೇಂಡಿಗೆ ಹೋಗುವ ಸಂಭವವು ಬಹು ಕಡಿಮೆಯೆಂದು ಅವರು ತಿಳಿಸಿರುತ್ತಾರೆ.

ಅಸೆಂಬ್ಲಿಯಲ್ಲಿ ಮತ್ತು ಲೆಜಿಸ್ಲೇಟಿವ್ ಕೌನ್ಸಿಲುಗಳ ಬರುವ ಚುನಾವಣೆಯು ನವಂಬರ ತಿಂಗಳ ಒಂದನೇ ವಾರದಲ್ಲಿ ನಡೆಯುವದೆಂದು ವರ್ತಮಾನ.

ವ್ಯವಸಾಯದ ರಾಯಲ್ ಕಮಿಶನಿನ ಸಂಬಂಧ ಎಲ್ಲಾ ಪ್ರಾಂತ್ಯಗಳ ಪ್ರತಿನಿಧಿಗಳ ಕಾನ್‌ಫರೆನ್ಸೊಂದು ತಾ. 7ರಲ್ಲಿ ಸಿಮ್ಲಾದಲ್ಲಿ ನಡೆಯಿತು.

ಬ್ರಿಟಿಷ್ ಸಾಮ್ರಾಜ್ಯದ ವಿಶ್ವವಿದ್ಯಾಲಯಗಳ ಕಾನ್‌ಫರೆನ್ಸಿಗೆ ಕಲ್ಕತ್ತಾ ವಿಶ್ವವಿದ್ಯಾಲಯ ಪ್ರತಿನಿಧಿಯಾಗಿ ಸರ್ ಪಿ. ಸಿ. ರಾಯಿಯವರು ತಾ. 5 ರಲ್ಲಿ ಬೊಂಬಾಯಿಂದ ಇಂಗ್ಲೆಂಡಿಗೆ ಹೊರಟುಹೋದರು.

ಭೋಪಾಲದ ಬೇಗಮ್‌ರವರು ತನ್ನ ಮಗ ನವಾಬ್ ಮಿಡುಲ್ಲಾ ಖಾನ್ ಮತ್ತು ಮೂರು ಮೊಮ್ಮಕ್ಕಳ ಸಮೇತ ಇಂಗ್ಲೆಂಡಿನಿಂದ ಬೊಂಬಾಯಿಗೆ ತಾ. 3 ರಲ್ಲಿ ಬಂದು ತಲುಪಿದರು. ಅವರ ಸಂಸ್ಥಾನದ ದೊಡ್ಡ ಉದ್ಯೋಗಸ್ಥರು ಅವರಿಗೆ ಸ್ವಾಗತವನ್ನಿತ್ತರು.

ಮಂಗಳೂರಲ್ಲಿ ಬರುಗಾಲದಲ್ಲಿ ಅನಾವೃಷ್ಟಿಯಿಂದುಂಟಾದ ನಷ್ಟಪರಿಹಾರಾರ್ಥವಾಗಿ ಬರ್ಮಾ ಸರ್ಕಾರದವರು 50000 ರೂಪಾಯಿ. ಮಂಜೂರ ಮಾಡಿರುವರು. ಈ ಅನಾಹುತದಲ್ಲಿ ಸುಮಾರು 2800 ಜನರು ಮೃತಪಟ್ಟಿರುವರು. ಈ ವರೆಗೆ ಸುಮಾರು 1500 ಜನರಿಗೆ ಸಹಾಯದೊರೆತಿದೆ. ನಷ್ಟಪರಿಹಾರಕ್ಕೆ ಫಂಡಿಗೆ ಚಂದಾವು ವಸೂಲಾಗುತ್ತಲೇ ಇದೆ.

ಅಸ್ಸಾಮಿನ ಸ್ವರಾಜ್ಯ ಪಾರ್ಟಿಯ ಅಧ್ಯಕ್ಷರಾದ ಮೆ. ಟಿ ಫೂಕನ್‌ರವರು ಮತ್ತು ಅಲ್ಲಿಯ ಕಾಂಗ್ರೆಸ್ ಕಮಿಟಿಯ ಸೆಕ್ರೆಟರಿಯಾದ ಮೆ ಆರ್. ಕೆ. ಚೌಧುರಿಯವರು ಮೋಟಾರು ಕಾರಿನಲ್ಲಿ ಮನೆ ಮನೆ ಸುತ್ತಿ ಬರುವ ನೇಶನಲ್ ಕಾಂಗ್ರೆಸಿನ ಖರ್ಚಿಗೆ ಒಂದೇ ವಾರದಲ್ಲಿ 25,000 ರೂ. ವಸೂಲಿ ಮಾಡಿರುವರು.

ಬರ್ಮಾಸರ್ಕಾರದ 'ಹೋಮ್' ಮೆಂಬರಾದ ಮೆ. ಯು.. ಮ. ಟಿ [illegible] ರವರು ತಾ. 6 ರಲ್ಲಿ ಮೃತರಾದರು. ಬರ್ಮಾದ ಲೆಜಿಸ್ಲೇಟಿವ್ ಕೌನ್ಸಿಲ ಪದವಿಗಳೂ, 'ಹೋಮ್' ಮೆಂಬರ್ ಪದವಿಗೂ ಬಂದ ಬರ್ಮಾದವರ ಪೈಕಿ ಇವರು ಒಬ್ಬರೇ ಯವರು. [illegible] ಹೈಕೋರ್ಟು ಜಡ್ಜಿಗಳಲ್ಲಿಯೂ ಒಬ್ಬರಾಗಿದ್ದವು.

[illegible] ಹಿಂದೂಮುಸಲ್ಮಾನರಿಗೆ ಜಗಳವುಂಟಾಗುವ ಸಂಭವ [illegible] ಕಾರಣ ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರು ಕ್ರಿ. ಪ್ರೊ. ಕೋಡಿನ 144 ನೇ ಸೆಕ್ಷನ್ ಮೇರೆ ಅಲ್ಲಿ ಎರಡು ತಿಂಗಳವರೆಗೆ ಯಾರೂ ಕತ್ತಿ ಕೋವಿಗಳನ್ನೂ ದೊಣ್ಣೆಗಳನ್ನೂ ತೆಗೆದುಕೊಂಡು ತಿರುಗಾಡಕೂಡದೆಂದೂ ಕಲ್ಲು, ಇಟ್ಟಿಗೆ, ಮೊದಲಾದವುಗಳನ್ನು ಮನೆಯ ಒಳ ಎಲ್ಲಿಯಾದರೂ ಗುಡ್ಡೆ ಹಾಕಿಡಕೂಡದೆಂತಲೂ ಹುಕುಂಮಾಡಿರುವರು.

ವಿದೇಶ.

ಈಜಿಪ್ಟಿನ ಪ್ರಧಾನ ಮಂತ್ರಿತ್ವವನ್ನು ವಹಿಸಿಕೊಂಡು ಮಂತ್ರಿಮಂಡಳಿಯನ್ನು ರಚಿಸುವ ಭಾರವನ್ನು ಜಗ್ಲುಲ್ ಪಾಷಾರವರು ಎಲ್ಲಿ ನಿರಾಕರಿಸಿ ಬಿಟ್ಟಿರುವರು.. ಈಜಿಪ್ಟಿನ ರೆಸಿಡೆಂಟರಾದ ಲಾರ್ಡ್ ಲಾಯಿಡ್‌ರವರ ಸಂಗಡ ಜಗ್ಲುಲ್ ಪಾಷಾರವರು ಸಂಭಾಷಣೆ ನಡೆಸಿದನಂತರ ಈಜಿಪ್ಟಿನ ರಾಷ್ಟ್ರೀಯ ಪಕ್ಷದವರಿಗೂ ಮತ್ತು ಬ್ರಿಟಿಷರಿಗೂ ಇರುವ ಸಂಬಂಧವು ಸುಲಭವಾಗುತ್ತಿದೆಯಂತೆ.

ಇಟಲಿಗೆ ತಾ. 4ರಲ್ಲಿ ತಲುಪಿದ ಡಾಕ್ಟರ್ ಠಾಗೋರ್‌ರವರಿಗೆ ನೇಪಲ್ಸಿನಲ್ಲಿ ಸುಸ್ವಾಗತವನ್ನೀಡಿದರು. ಅಲ್ಲಿಂದ ಅವರನ್ನು ರೋಮಾಪಟ್ಟಣಕ್ಕೆ ಸ್ಪೆಶಲ್ ಟ್ರೈನಿನಲ್ಲಿ ಕರಕೊಂಡು ಹೋದರು. ಅಲ್ಲಿ ಡಾಕ್ಟರರವರು ಸಿನಾರ್ ಮುಸ್ಸೊಲೊನಿಯವರೊಂದಿಗೆ ಸಂಭಾಷಣೆ ಮಾಡಿದರು. ಠಾಗೋರ್‌ರವರು ಇಟಲಿಯ ಹಲವು ವಿಶ್ವವಿದ್ಯಾಲಯಗಳಲ್ಲಿ ಭಾಷಣ ಮಾಡಲಿಕ್ಕಿರುವರು.

WANTED!

Wanted a whole-time Secretary to the Virajpet co-op. Credit Society Ltd. Virajendrapet.

Apply with testimonials, stating the salary desired, to reach the president by the 25th June 1926.

ಮಡಿಕೇರಿ ಮೀಟಿಂಗು.

ಕಳೆದ ಮೇ ತಾರೀಕು 31 ರಲ್ಲಿ ಮಡಿಕೇರಿ ಮೈದಾನದಲ್ಲಿ ಒಂದು ಸಾರ್ವಜನಿಕ ಮೀಟಿಂಗು ನಡೆಯಿತು. ಮೆ. ತೀತಿರ ಸುಬ್ಬಯ್ಯನವರು ಅಧ್ಯಕ್ಷರಾಗಿ ಆರಿಸಲ್ಪಟ್ಟರು. 153 ಜನರು ಹಾಜರಿದ್ದರು. ಮೀಟಿಂಗಿನ ನೋಟೀಸು ಕೊಟ್ಟ ಮ. ರಾ. ಶ್ರೀ, ಗಳಾದ ಪಿ. ಟಿ. ಕುಶಾಲಪ್ಪನವರು, ಪಿ. ಗಣಪಯ್ಯನವರು, ಯಂ. ಯಂ. ಚಿಣ್ಣಪ್ಪನವರು ಮತ್ತು ಕೆ. ಕರುಂಬಯ್ಯನವರು ಮೀಟಿಂಗಿನ ಉದ್ದೇಶವನ್ನು ವಿವರಿಸಿ ಹೇಳಿದರು. ಕೊಡಗಿನಲ್ಲಿರುವ ಗಜೆಟೆಡ್ ಉದ್ಯೋಗಸ್ಥರನ್ನು ವರ್ಗಾಯಿಸಬೇಕೋ, ಬೇಡವೋ ಎಂಬ ವಿಷಯ ಚರ್ಚಿಸಲ್ಪಟ್ಟನಂತರ, 'ಈ ದೇಶದಲ್ಲಿರುವ ಪ್ರೊವಿನ್ಸಿಯಲ್ ಗಜೆಟೆಡ್ ಉದ್ಯೋಗಸ್ಥರನ್ನು ಐದು ವರ್ಷಕ್ಕೊಂದಾವರ್ತಿ ವರ್ಗಾಯಿಸುವುದಕ್ಕೋಸ್ಕರ ಮದ್ರಾಸು ಸರ್ಕಾರದೊಂದಿಗೆ ಏರ್ಪಾಡು ಮಾಡಬೇಕೆಂದು ಇಲ್ಲಿಯ ಸರ್ಕಾರವನ್ನು ಕೇಳುವಂತೆ ಜಮೀನ್ದಾರರ ಸಂಘವು ನಾಪೋಕ್ಲು ಕಾನ್‌ಫರೆನ್ಸಿನಲ್ಲಿ ಮಾಡಿದ ತೀರ್ಮಾನಕ್ಕೆ ಈ ಸಭೆಯು ಒಪ್ಪುತ್ತದೆ' ಎಂಬ ಠರಾವು ಸರ್ವಾನುಮತದಿಂದ ಮಂಜೂರಾಯಿತು.

ಕನ್ನಡ ಭಾಷೆಯನ್ನಾಡುವವರ ಪ್ರಾಂತ್ಯಗಳನ್ನೆಲ್ಲಾ ಒಗ್ಗಟ್ಟಿಗೆ ತರುವ ಅಂದರೆ ಕರ್ನಾಟಕ ಏಕೀಕರಣದ ವಿಷಯ ಜಮೀನ್ದಾರರ ಸಂಘದವರು ಪಾಸು ಮಾಡಿರುವ ಠರಾವು ಜನಸ್ಸಾಗಿ ವಿವರಿಸಲಾಯಿತು. ಈ ಠರಾವಿಗೂ ಯಾರೂ ವಿರೋಧಿಸಲಿಲ್ಲ.

ಅಧ್ಯಕ್ಷರಿಗೆ ವಂದನೆಗಳಿಂದ ಮೀಟಿಂಗು ಬರಕಾಸ್ತು ಮಾಡಲಾಯಿತು.

ತೀತಿರ ಸುಬ್ಬಯ್ಯ
(ಅಧ್ಯಕ್ಷರು)

ಪೊನ್ನಂಪೇಟೆ ಮೀಟಿಂಗು.

ಇದೇ ಜೂನ್ ತಾರೀಕು 1 ರಲ್ಲಿ ಪೊನ್ನಂಪೇಟೆ ಕಚೇರಿ ಬಳಿ ಮೆ. ಯಂ. ಯಂ. ಚಿಣ್ಣಪ್ಪನವರ ಅಧ್ಯಕ್ಷತೆಯಲ್ಲಿ ಒಂದು ಪಬ್ಲಿಕ್ ಮೀಟಿಂಗು ನಡೆಯಿತು. ಗಜೆಟೆಡ್ ಉದ್ಯೋಗಸ್ಥರ ವರ್ಗಾವರ್ಗಿ ವಿಷಯ ಧೀರ್ಘ ಚರ್ಚೆ ನಡೆದರೂ ಮೇಲೆ ನಮೂದಿಸಿದಂತೆ ಈ ಸಂಬಂಧ ಮಡಿಕೇರಿ ಮೀಟಿಂಗಿನಲ್ಲಿ ಪಾಸಾದಂತಹ ಠರಾವು ಬಹುಮತದಿಂದ ಪಾಸಾಯಿತು.

ಕರ್ನಾಟಕ ಏಕೀಕರಣದ ವಿಷಯ ಕೆಲವರು ಮಾತಾಡಿದನಂತರ ಈ ತತ್ವಕ್ಕೆ ಅಲ್ಲಿ ನೆರದಿದ್ದವರೆಲ್ಲರೂ ಒಪ್ಪಿ, ಈ ಸಂಬಂಧ ಜಮೀನ್ದಾರರ ಸಂಘದ ಠರಾವಿಗೆ ಸರ್ವರೂ ಸಮ್ಮತಿಯನ್ನಿತ್ತರು.

ಅಧ್ಯಕ್ಷರು ಮೀಟಿಂಗನ್ನು ಸಾಂಗವಾಗಿ ನಡಿಸಿಕೊಟ್ಟದ್ದಕ್ಕೆ ಅವರಿಗೆ ವಂದಿಸಿದನಂತರ ಮೀಟಿಂಗು ಮುಗಿಯಿತು.

ಯಂ. ಯಂ. ಚಿಣ್ಣಪ್ಪ
(ಅಧ್ಯಕ್ಷರು)

ಮಹಾತ್ಮಾಜಿಯವರು ಸಹಕಾರಿಗಳಾದರೇನು?

ಗವರ್ನರರು ಮಹಾತ್ಮಜಿಯವರನ್ನು ಭೇಟಿಗೆ ಕರೆದದ್ದರಿಂದ ಮಹಾಬಲೇಶ್ವರಕ್ಕೆ ಹೋಗಿ ಗವರ್ನರಿಗೆ ಭೇಟಿಯಾದರು. ಇದನ್ನು ಕಂಡು ಕೆಲವು ಅಸಹಕಾರಿಗಳು ಮಹಾತ್ಮಾಜಿಯವರ ವರ್ತನವನ್ನು ನೋಡಿ ಸಂಶಯಪಡಲಾರಂಭಿಸಿದರು. 'ಇದನ್ನು ನೋಡಿ ಮಹಾತ್ಮಾಜಿಯವರು ಬರೆದದ್ದೇನಂದರೆ, "ಗವರ್ನರ್‌ಸಾಹೇಬರು ನನ್ನನ್ನು ಖಾಸಗೀ ಭೇಟಿಗಾಗಿ ಕರೆದರು. ಅದರಿಂದ ನಾನು ಅವರಿಗೆ ಭೇಟಿಯಾದೆನು. ನಾನು ಮನಸಾ ಸಂಪೂರ್ಣ ಅಸಹಕಾರಿಯಾಗಿಯೇ ಇರುವೆನು. ಸರಕಾರದವರಿಗೆ ಭೇಟಿಯಾಗುವದರಿಂದ ನಮಗೇನಾದರೂ ಲಾಭವಾದೀತೆಂಬ ಆಶೆಯಿಂದ ನಾನು ಭೇಟಿಗೆ ಹೋಗಿಲ್ಲ. ಸಂಪೂರ್ಣ ಅಸಹಕಾರದಿಂದ ನಮ್ಮ ಶಕ್ತಿಯನ್ನು ಬೆಳಿಸುವದರಿಂದಲೇ ನಮಗೆ ಸ್ವಾತಂತ್ರ್ಯವು ದೊರೆಯುವುದೆಂದು ನಾನು ನಂಬಿದ್ದೇನೆ. ನಾನು ಚರಕವನ್ನು ತಿರುಗಿ ಅವರ ಕೂಡ ಮಾತಾಡಿ ಮಾತಾಡಿದೆನು. ಚರಕದಲ್ಲಿ ಅಡಗಿರುವ ವಿಶ್ವಾಸವನ್ನು ನೆಲೆಗೊಳಿಸಲಿಕ್ಕೆ ನಾನು ಯತ್ನಿಸಿದೆನು. ಹೀಗೆ ಯತ್ನಮಾಡುವದು ಯಾವ ರೀತಿಯಿಂದ ಅಸಹಕಾರವೆ

ಸಿಸಲಾರದು. ಅಸಹಕಾರಿಯು ತನ್ನ ಶತ್ರುವನ್ನು ಸಹ ತನ್ನ ಮತಕ್ಕೆ ಎಳಕೊಳ್ಳಲಿಕ್ಕೆ ಯತ್ನಮಾಡಬಹುದು. ಹಾಗೆ ಮಾಡಲಿಕ್ಕೆ ಅವನು ಪೂರ್ಣ ಸ್ವತಂತ್ರನಿರುವನು. ನನ್ನ ವರ್ತನವನ್ನು ಎಷ್ಟೋ ಜನರು ಟೀಕಿಸುತ್ತಿರುವರೆಂಬುದು ನನಗೆ ಗೊತ್ತಿದೆ. ಅವರು ವಿಪರೀತಸದೃಷ್ಟಿಯಿಂದ ನನ್ನ ವರ್ತನವನ್ನು ನೋಡುತ್ತಿರುವರೆಂಬುದೂ ನನಗೆ ಗೊತ್ತಿದೆ. ಆದರೆ ಎಲ್ಲಿಯವರೆಗೆ ನಾನು ನಡೆಸಿದ ಕಾರ್ಯಕ್ಕೆ ಅವರ ಟೀಕೆಯಿಂದ ಕುಂದುಬರುವದಿಲ್ಲವೋ ಅಲ್ಲಿಯವರೆಗೆ ನಾನು ಟೀಕಾಕಾರರಿಗೆ ಉತ್ತರ ಕೊಡುವ ಗೋಜಿಗೆ ಹೋಗುವದಿಲ್ಲ. ಅಸಹಕಾರೀ ಮಿತ್ರರು ನನ್ನ ವರ್ತನದ ಕಡೆಗೆ ಇಷ್ಟೊಂದು ಸಂಶಯದಿಂದ ನೋಡುವ ಕಾರಣವಿಲ್ಲ. ಅವರು ನನ್ನನ್ನು ಇನ್ನೂ ಸಂಪೂರ್ಣವಾಗಿ ಅರಿತಿಲ್ಲವೆಂದು ತೋರುತ್ತದೆ." ಕ. ವಿ

ಪತ್ರವ್ಯವಹಾರ

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲ. ಸಂ.

— ೧ —

ಬಸ್ಸು ಸರ್ವಿಸುಗಳು.

ಮಹಾಶಯರೆ,

ಬಸ್ ಸರ್ವಿಸುಗಳ ವಿಷಯ ನನ್ನ ಮನಸ್ಸಿನ ಎರಡು ಪತ್ರಿಕೆಗಳೂ ಒಂದು ಅಭಿಪ್ರಾಯವನ್ನು ಪ್ರಕಟಿಸಿದ್ದವು. ಕೊಡಗಿನಲ್ಲಿರುವ ಬಸ್ಸುಲೈಸೆನ್ಸುಗಳನ್ನು ಏಲಂ ಮೇಲಾಟಕ್ಕೆ ಬಿಟ್ಟರೆ ಚಾರ್ಜು ಕಡಿಮೆಯಾಗಿ ಉತ್ತಮ ಬಸ್ಸುಗಳನ್ನು ನಡಿಸಿ ಪ್ರಯಾಣಿಕರಿಗೆ ಅನುಕೂಲ ಉಂಟಾಗುವದೆಂದು "ಕೊಡಗು" ಪತ್ರಿಕೆಯ ವಾದವಾಗಿದೆ. ಲೈಸೆನ್ಸುಗಳನ್ನು ಪೈಪೋಟಿಗೆ ಬಿಟ್ಟರೆ ಲೆಕ್ಕವಿಲ್ಲದಷ್ಟು ಪ್ರಾಣಹಾನಿಯು ಉಂಟಾಗುವದೆಂದೂ, ದೇಶೀಯ ಕಂಪನಿಗೆ ಉತ್ತೇಜನ ಕೊಡಲು, 'ಪ್ರೊಟೆಕ್ಷನ್ ಪಾಲಿಸಿ"ಯನ್ನು ಸರಕಾರದವರು ಕೈಕೊಳ್ಳಬೇಕಾದುದರಿಂದ ಏಲಂ ಸ್ಪರ್ಧೆಗೆ ಬಿಡಬಾರದೆಂತಲೂ "ಲೋಕಪಾವನ"ದ ಲೇಖನದ ಸಾರಾಂಶವಾಗಿದೆ.

ಇವೆರಡು ಅಭಿಪ್ರಾಯಗಳನ್ನು ಹೋಲಿಸಿ ನೋಡಿದರೆ ಪ್ರಯಾಣಿಕರಿಗೆ ಯಾವುದು ಸಹಾಯಕರವಾದುದೆಂದು ಎಲ್ಲರಿಗೂ ಗೊತ್ತಾಗುವದು. "ಸದ್ಯ ಯಾವ ಲೈಸನ್ಸಿನಲ್ಲಾದರೂ ಎರಡು ಬಸ್ಸುಗಳ ಮೇಲೆ ಓಡ್ಯಾಡುವದಿಲ್ಲ" ಎಂಬ "ಲೋಕಪಾವನದ" ಮಾತು ನಿಜವಲ್ಲ. ಮಡಿಕೇರಿ-ಫ್ರೇಜರ್‌ಪೇಟೆ ಲೈಸಿನ್ಸಿನಲ್ಲಿ ಮೋಡರ್ನ್ ಸರ್ವಿಸ್, ವಿಕ್ಟೋರಿಯ ಸರ್ವಿಸ್ ಮತ್ತು ಕೊಡ್ಲಿಪೇಟೆ ಸರ್ವಿಸ್, ಇವು ಮೂರು ಸರ್ವಿಸ್‌ಗಳೂ, ಸಿದ್ದಾಪುರ-ಹುಣಸೂರು ಲೈಸಿನ್ಸಿನಲ್ಲಿ ಮೆಯಿಲ್ ಬಸ್ಸು ಸರ್ವಿಸ್ ಮೋಡರ್ನ್ ಸರ್ವಿಸ್ ಮತ್ತು ಹುಣಸೂರು ಮೋಟಾರ್ ಸರ್ವಿಸ್, ಇವು ಮೂರು ಸರ್ವಿಸ್‌ಗಳೂ, ವೀರರಾಜೇಂದ್ರಪೇಟೆ-ಗೋಣಿಕೊಪ್ಪಲು ಲೈಸಿನ್ಸಿನಲ್ಲಿ ಮೋಡರ್ನ್ ಬಸ್ಸುಸರ್ವಿಸ್, ಚಾಮುಂಡಿ ಸರ್ವಿಸ್, ಕುಟ್ಟಾ ಸರ್ವಿಸ್ ಮತ್ತು ಪೊನ್ನಂಪೇಟೆ ಸರ್ವಿಸ್, ಇವು ನಾಲ್ಕು ಸರ್ವಿಸ್‌ಗಳೂ ಇರುವವು. ಈ ಲೈಸನುಗಳಲ್ಲಿ ಇಷ್ಟರವರೆಗೆ ಬಸ್ಸುಗಳಿಂದ ಎಷ್ಟು ಪ್ರಾಣಹಾನಿಯಾಗಿವೆ ಎಂಬುದನ್ನು "ಲೋಕಪಾವನ"ದವರು ತಿಳಿಸಿಕೊಟ್ಟಿದ್ದರೆ ಉತ್ತಮವಾಗುತ್ತಿತ್ತು.

ಮಡಿಕೇರಿ-ಸಿದ್ದಾಪುರ-ವೀರರಾಜಪೇಟೆ ಲೈಸಿನ್ಸಿನಲ್ಲಿ ಎರಡು ಸರ್ವಿಸುಗಳಿವೆಯೆಂದು ಬರೆದಿರುವರು. ಆದರೆ ಮಡಿಕೇರಿಯಿಂದ ಸಿದ್ದಾಪುರಕ್ಕಾಗಿ ವೀರರಾಜಪೇಟೆಗೆ ಎರಡು ಸರ್ವಿಸ್‌ಗಳಿಲ್ಲ. ಬೆಳಿಗ್ಗೆ ಮೆಯಿಲ್ ಬಸ್ಸಿನಲ್ಲಿ ಸಿದ್ದಾಪುರದವರೆಗೆ ಹೋಗಿ ಅಲ್ಲಿ ಮಧ್ಯಾಹ್ನದವರೆಗೆ ಕಾದು ಹುಣಸೂರು ಬಸ್ಸಿನಲ್ಲಿ ವೀರರಾಜಪೇಟೆಗೆ ಹೋಗುವವರು ಯಾರಾದರೂ ಇರುವರೋ? ಇದು ಪ್ರಯಾಣಿಕರಿಗೆ ಅನುಕೂಲವೋ? ಆದುದರಿಂದ ಈ ಲೈಸಿನ್ಸು ಮೇಲಾಟಕ್ಕೆ ಎಡೆಯೇ ಇಲ್ಲ. ಒಂದು ಕಂಪನಿಯವರಿಗೇನೇ ಬೆಳಿಗ್ಗಿನ ಮತ್ತು ಸಾಯಂಕಾಲದ ಸರ್ವಿಸುಗಳ ಲೈಸನ್ಸನ್ನು ಕೊಡುವದರ ಬದಲು ಬೇರೆ ಬೇರೆ ಕಂಪನಿಯವರಿಗೆ ಯಾಕೆ ಕೊಡಬಾರದು? ಮಡಿನಾಡು ಲೈಸಿನ್ಸಲ್ಲಿ ಇರುವದು ಒಂದೇ ಸರ್ವಿಸ್ ಅಲ್ಲವೇ? ಅದರಲ್ಲಿ ಯಾಕೆ ಬೇರೆಯವರಿಗೆ ಲೈಸನ್ಸು ಕೊಡಬಾರದು?

ದೇಶೀಯ ಕಂಪನಿಗೆ ಉತ್ತೇಜನ ಕೊಡುವುದಕ್ಕಾಗಿ ಸ್ಪರ್ಧೆಗೆ ಬಿಡಬಾರದೆಂದರೆ ದೇಶೀಯರಲ್ಲಿಯೇ ಕೆಲವರು ವೀರರಾಜಪೇಟೆ-ಮಡಿಕೇರಿ ಲೈಸಿನ್ಸಿಗಾಗಿ ಲೈಸನ್ಸು ಕೇಳಿದಾಗ್ಯೂ ಅವರಿಗೇಕೆ ಲೈಸನ್ಸು ಕೊಡಲ್ಪಡಲಿಲ್ಲ? ಈಗ ಬಸ್ಸು ಕಂಪನಿಯನ್ನು ನಡಿಸುತ್ತಿರುವ ದೇಶೀಯರೇ ಯೋಗ್ಯ ಗೃಹಸ್ಥರೆಂದೂ ಬಾಕಿಯವರು ಅನುಭವವಿಲ್ಲದವರೆಂಬ ಆಧಾರವಿಲ್ಲದ ಮಾತುಗಳಿಗೆ ಯಾರೂ ಬೆಲೆ ಕೊಡಲಾರರು.

ಎಲ್ಲ ಸರ್ವಿಸುಗಳೂ ಮೈಲಿಗೆ 0—1 -0ಯಂತೆ ಚಾರ್ಜು ಮಾಡುತ್ತಿದ್ದಾರೆಂಬುದು ಎಷ್ಟರ ಮಟ್ಟಿಗೆ ನಿಜವೆಂದು ನೋಡುವ. ವೀರರಾಜಪೇಟೆಯಿಂದ ಮೈಸೂರಿಗೆ ಸುಮಾರು 75 ಮೈಲಿಗೆ ರೂ. 1-8-0 ಯಂತೆಯೂ ಮಡಿಕೇರಿಯಿಂದ ಸೋಮವಾರಪೇಟೆಗ 38 ಮೈಲಿಗೆ 1-4-0 ಯಂತೆಯೂ ಚಾರ್ಜು ಮಾಡುತ್ತಿರುವರು. ಇದು ಮೈಲಿಗೆ ಒಂದಾಣೆಯಂತಾಯಿತೇ? ಅಲ್ಲದೆ ಎಲ್ಲಾ ಲೈಸನುಗಳಲ್ಲಿ ಒಂದೇ ತರದ ದರಗಳಿರಬೇಕೆಂದು ಹೇಳಕೂಡದು. ಸದಾ ಹೆಚ್ಚು ಪ್ರಯಾಣಿಕರು ತಿರುಗಾಡುವ ಲೈಸಿನ್ಸಿನಲ್ಲಿ ಚಾರ್ಜು ಕಡಿಮೆಯಾಗುವುದೂ, ಕಡಿಮೆ ಜನರು ತಿರುಗಾಡುವಲ್ಲಿ ಚಾರ್ಜು ಹೆಚ್ಚಿರುವುದೂ ಸಾಧಿಕೆ. ಆದುದರಿಂದ ತುಂಬ ಪ್ರಯಾಣಿಕರು ತಿರುಗಾಡುವ ವೀರರಾಜಪೇಟೆ-ಮಡಿಕೇರಿ ಲೈಸಿನ್ಸಿನಲ್ಲಿ ಮೈಲಿಗೆ ಒಂದಾಣೆ ಚಾರ್ಜು ಮಾಡುವುದು ಕಡಿಮೆಯೆಂದು ಎಂದೂ ಹೇಳಕೂಡದು.

"ಕೊಡಗು" ಪತ್ರಿಕೆಯು ಜನರ ಹಿತಕ್ಕಾಗಿ ಬಸ್ಸುಲೈಸೆನ್ಸುಗಳನ್ನು ಪೈಪೋಟಿಗೆ ಬಿಡಬೇಕೆಂದು ಹೋರಾಡುತ್ತಿರುವಾಗ್ಯೆ "ಲೋಕಪಾವನವು" ವೀರರಾಜಪೇಟೆ-ಮಡಿಕೇರಿ ಲೈಸನ್ನು ಸ್ಪರ್ಧೆಗೆ ಬಿಡದೆ ಈಗಿರುವ ಸರ್ವಿಸಿನವರಿಗೆ ಬಿಟ್ಟುಕೊಡಬೇಕೆಂಬುದರಲ್ಲಿ ನ್ಯಾಯವಿದೆ. ಯಾಕೆಂದರೆ "ಕೊಡಗು" ಪತ್ರಿಕೆಯು ದೇಶದ ಹಲವು ಜನರ ಶೇರ್ ಹಣದಿಂದ ನಡಿಸಲ್ಪಡುವ ಪತ್ರಿಕೆಯಾಗಿದೆ. ಅದು ದೇಶದವರ ಹಿತಕ್ಕೆ ಹೋರಾಡಬೇಕಾದದ್ದು ಅದರ ಧರ್ಮ. ಆದರೆ "ಲೋಕಪಾವನ"ವು ಈಗಿನ ವೀರರಾಜಪೇಟೆ-ಮಡಿಕೇರಿ ಬಸ್ಸು ಸರ್ವಿಸನ್ನು ನಡಿಸುತ್ತಿರುವ ಕೆಲವರ ಆಶ್ರಯದಲ್ಲೇ ನಡಿಯುವಂಥ ಪತ್ರಿಕೆಯಾಗಿದೆ. ಅದು ಆ ಬಸ್ಸುಕಂಪನಿಯವರ ಹಿತವನ್ನು ಕಾಪಾಡಬೇಕಾದದ್ದು ಅದರ ಕರ್ತವ್ಯ.

ದೇಶಹಿತಕ್ಕಾಗಿ ಯಾವ ಸಂಗತಿಯನ್ನಾದರೂ ಚರ್ಚಿಸುವಾಗ ಅದರ ಗುಣ ಅವಗುಣವನ್ನು ಕುರಿತು ಚರ್ಚಿಸುವುದೇ ನ್ಯಾಯ ಸಮ್ಮತವಾದುದು. ಬಸ್ಸುಸರ್ವಿಸಿನ ವಿಷಯ ಈ ಪತ್ರಿಕೆಯಲ್ಲಿ ಬರೆದ ಅಗ್ರಲೇಖನದಲ್ಲಿ ಸೂಚಿಸಿರುವ ನ್ಯಾಯವಾದ ಕಾರಣಗಳಿಗೆ ಸರಿಯಾದ ಜವಾಬು ಕೊಡಲಾರದೆ ಇರುವಾಗ "ಲೋಕಪಾವನ"ವು ಕೊಡಗು ಪತ್ರಿಕೆಯ ಸಂಪಾದಕರನ್ನು ವ್ಯಕ್ತಿಕುರಿತು ಹಳಿಯುವ ತಾನೇ ಏನು ಮಾಡೀತು? ಬಸ್ಸುಸರ್ವಿಸಿಗೂ ಸಂಪಾದಕರ ಸಂಬಂಧಕ್ಕೂ ಅವನಿಗೂ ಇವರಿಗೂ ಸಾಬರಿಗೂ ಇರುವಷ್ಟೇ ಸಂಬಂಧವಿದೆಯೆಂದು ಯಾರಿಗೆ ತಾನೇ ತಿಳಿಯದು? "ಕೊಡಗು" ಕಂಪನಿಯ ಆಡಳಿತ ವಿಷಯ ಅದರ ಡೈರೆಕ್ಟರುಗಳೂ ಶೇರದಾರರೂ ಎಚ್ಚರಿಕೆ ತೆಗೆದುಕೊಳ್ಳುತ್ತಿರುವರು. ಆ ವಿಷಯ ಹಲಕೆಲವರ ಹಣದಿಂದ ನಡಿಸಲ್ಪಡುತ್ತಿರುವ "ಲೋಕಪಾವನ"ವು ಟೀಕಿಸುವ ಅವಶ್ಯವಿಲ್ಲ.

ಬಸ್ಸುಸರ್ವಿಸಿನ ವಿಷಯ ಹಲವರ ಮನಸ್ಸಿನಲ್ಲಿರುವ ಅಭಿಪ್ರಾಯಗಳನ್ನು ಈ ಪತ್ರಿಕೆಯು ಬಹಿರಂಗಪಡಿಸಿದಕ್ಕಾಗಿ ಅದನ್ನು ಬರೆದ ಲೇಖಕರನ್ನು ಹೀಯಾಳಿಸಿ ತಮ್ಮ ಕಂಪನಿಯ ಕಾರ್ಯವನ್ನು ಸಾಧಿಸಬೇಕೆಂದು ಪ್ರಯತ್ನಿಸುತ್ತಿರುವ "ಲೋಕಪಾವನ"ದ ಮಾತುಗಳಿಗೆ ಯಾರು ಮರುಳಾಗರು ಎಂಬುದನ್ನು ಇನ್ನು ಮುಂದಾದರೂ ಅದರ ಸಂಪಾದಕರು ಚೆನ್ನಾಗಿ ತಿಳಿದುಕೊಳ್ಳಲಿ. ಈ ಲೈಸಿನ ಬಸ್ಸಿನಲ್ಲಿರುವ ಕಷ್ಟ ಸುಖಗಳು ಅನಾಗ್ಯೆ ಅದರಲ್ಲಿ ತಿರುಗಾಡುವ ನಮಗೆ ಚೆನ್ನಾಗಿ ಅನುಭವವಿದೆ.

ಪ್ರಯಾಣಿಕ.

ಅಯ್ಯಾ ಎಡಿಟರವರೇ,

ಕುತ್ತುನಾಡು ಮಹದೇವರ ವಿಷಯ ಕೇಳುವಿರಾ, ಈ ದೇವಸ್ಥಾನವು ಹಿಂದೆ 1920 ನೇ ಇಸವಿ ವರೆಗೆ ಹೀನಸ್ಥಿತಿಯಲ್ಲಿ ಇದ್ದು ದೇವರ ಬಂಡಾರದಲ್ಲಿ 120 ರೂಪಾಯಿ ಮಾತ್ರ ಇತ್ತು. ಈ ಸಂದರ್ಭವನ್ನು ನೋಡಿ ಮೊದಲಿನ ಮುಖ್ತೇಸರನ್ನು ಬದಲಾಯಿಸುವಾಗ್ಯೆ ವಾಯಿದೆ ಮೀರಿದ ಪ್ರೋನೋಟುಗಳ ಮೇಲೆ 250 ರೂಪಾಯಿಗಳು ಇದ್ದವು. ಈ ವಿಷಯ ಮೀಟಿಂಗು ಮಾಡಿದಲ್ಲಿ ವಸೂಲಿ ಮಾಡದೆ ಬಿಟ್ಟದ್ದು ಮೆಂಬರುಗಳ ತಪ್ಪೆಂದು ತಿಳಿದ ಮೇಲೆ ಬೇರೆ ಮೆಂಬರುಗಳನ್ನು ಚುನಾಯಿಸಿದರು. ಚುನಾಯಿಸಲ್ಪಟ್ಟಿರುವ ಮೆಂಬರುಗಳ ಹೆಸರು ಮ. ರಾ. ರಾ. ದೇವತಕ್ಕರಾದ ಕುಂಜಾಂಗೇರ ಕುಂಜಪ್ಪನವರೂ, ಕಡೇಮಾಡ ಕಾರ್ಯಪ್ಪನವರು, ಕಡೇಮಾಡ ಐಯ್ಯಪ್ಪನವರು, ದೇವಜಂಗಡರಾದ ನಾಮೇರ ಕಾಳಪ್ಪನವರೂ, ಕತ್ತೂರ ಮಾದಪ್ಪನವರೂ, ಇವರುಗಳನ್ನು ಮೆಂಬರುಗಳಾಗಿ ಚುನಾಯಿಸಿ ಐದು ವರ್ಷದ ವರೆಗೆ ಇಟ್ಟಿದ್ದೇವೆ. ಈ ಮಹಾಶಯರು ಅಂದಿನಿಂದ ದೇವರ ಮೇಲೆ ಭಕ್ತಿಯಿಟ್ಟು ವಸೂಲಾಗ ಬೇಕಾದಂತ ಲೆಕ್ಕಪತ್ರಗಳನ್ನು ವಸೂಲ್‌ಮಾಡಿ 1921 ನೇ ಇಸವಿಯಲ್ಲಿ ದೇವಸ್ಥಾನದ ಪೂರಾ ಮರ ಕೆಲಸವನ್ನು ಪೂರೈಸಿದ ಜತೆಗೆ ಮ. ರಾ. ಶ್ರೀ. ದೇವತಕ್ಕರಾದ ಕೆ. ಕುಂಜಪ್ಪನವರು; ಮ. ರಾ. ಶ್ರೀ. ಚೆಂದಿರ ಬೆಳ್ಯಪ್ಪನವರು ಕೂಡಿ ಬೆಲಿಕೆ ಪ್ರೌಳಿಗೆ ಹಂಚು ಹಾಕಿಸಿದರು, ಅಲ್ಲದೆ ಮ. ರಾ. ಶ್ರೀ. ಚಿನ್ಯಮ್ಮನ ಅನಂತೈಯ್ಯನವರೂ, ಸ್ಥಾನಿಕ ಕೃಷ್ಣೈಯ್ಯನವರೂ, ಕತ್ತೂರ ಕಾರ್ಯಪ್ಪನವರೂ, ನಾಮೇರ ಪಮ್ಮೈಯ್ಯನವರೂ ಪಟಾತಿ ಕೃಷ್ಣೈಯ್ಯನವರೂ ಸೇರಿ ಮಂಟಪಕ್ಕೆ ಹಂಚು ಹಾಕಿಸಿದರು. ಈ ಜತೆಗೆ ಪೋಲ್ಯಂಡ ಮೆಂಬರುಗಳು ಬಹಳಷ್ಟು ಕೆಲಸಗಳನ್ನು ನಡೆಸುತ್ತಬಂದರು. 1923 ನೇ ಇಸವಿಯಲ್ಲ ನಾಡಿನವರು ಮೀಟಿಂಗು ಮಾಡಿ ನಮ್ಮ ನಾಡಿನ ದೊಡ್ಡ ಉದ್ಯೋಗಸ್ಥರಿಗೆ ಕಾಗದ ಬರೆದಲ್ಲಿ, ಮ. ರಾ. ಶ್ರೀ. ಡಾಕ್ಟರಾದ ಚೇರಂಡ ಸೋಮಯ್ಯನವರು 25 ರೂ, ಪಟ್ರಿಯವರ ತಮ್ಮ ಡಾಕ್ಟರಾದ ಅಚ್ಚಯ್ಯನವರು, ಮ. ರಾ. ಶ್ರೀ. ಡಾಕ್ಟರಾದ ಕಡೇಮಾಡ ಕರುಂಬೈಯ್ಯನವರೂ 25 ರೂ. ಯಂತೆಯೂ ಕಳುಹಿಸಿಕೊಟ್ಟಿದ್ದಾರೆ. ಅವರಿಗೆ ನಾಡಿನವರು ವಂದಿಸುತ್ತೇವೆ. ಅಲ್ಲದೆ ಈ ವರ್ಷ ಜನರಲ್ ಮೀಟಿಂಗಿನಲ್ಲಿ ಮೆಂಬರುಗಳನ್ನು ಚುನಾಯಿಸಿದ ತಪಶೀಲ್; ಮ. ರಾ. ಶ್ರೀ ಕಡೇಮಾಡ ಕಾರ್ಯಪ್ಪನವರು, ಕುಂಜಾಂಗೇರ ಕುಂಜಪ್ಪನವರು, ಕಾಳೇಂಗಡ ಚಿಣ್ಣಪ್ಪನವರು, ಕಾಳೇಂಗಡ ನಂಜಪ್ಪನವರು ಮತ್ತು ನಾಮೇರ ಪೂವೈಯ್ಯನವರು; ಈ ಮೆಂಬರುಗಳನ್ನು ಚುನಾಯಿಸಿದ ಜತೆಗೆ ಕಾಳೇಂಗಡ ಚಿಣ್ಣಪ್ಪನವರು ಮಲಬಾರಿಗೆ ಹೋಗಿ ಹಂಚು ತಂದಿದ್ದಾರೆ. ಇನ್ನು ದೇವಸ್ಥಾನಕ್ಕೆ ಸಹಾಯ ಕೊಡುವವರು ಪೋಲ್ಯಂಡ ಮೆಂಬರುಗಳಿಗೆ ಕಳುಹಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇವೆ.

"ನಾಡಿನವರಿಗಾಗಿ ಒಬ್ಬ"

ಕೌನ್ಸಿಲಿನ ಕೆಲಸ.

ಕೌನ್ಸಿಲು ಚುನಾಯಿತ ಮೆಂಬರುಗಳೇ,

ನಿಮುಗಳನ್ನು ಈ ದೇಶದ ಪ್ರಜೆಗಳಾದ ನಾವು ಚುನಾಯಿಸಿ ಕೌನ್ಸಿಲು ಮೆಂಬರುಗಳಾಗಿ ಕಳುಹಿಸಿದ್ದು ಸರಿಯಷ್ಟೆ. ಆದ್ದರಿಂದ ದಯಪಟ್ಟು ಕಳೆದ ಕೌನ್ಸಿಲ್ ಸ್ಥಾಪನೆಯಾದಂದಿನಿಂದ ಈ ವರೆಗೆ ನಡೆದ ಕೌನ್ಸಿಲ್ ಮೀಟಿಂಗುಗಳಲ್ಲಿ ಯಾವ ಯಾವ ಮೆಂಬರುಗಳು ದೇಶಕ್ಕೂ, ಪ್ರಜೆಗಳಿಗೂ, ಪ್ರಯೋಜನಕರವಾದಂತ ಯಾವ ಯಾವ ಠರಾವುಗಳನ್ನು ಕೌನ್ಸಿಲಿನ ಮುಂದೆ ಇಟ್ಟರು, ಅದಕ್ಕೆ ಯಾವ ಯಾವ ಮೆಂಬರುಗಳು ಒತ್ತಾಸೆ ಕೊಟ್ಟರು, ಯಾವ ಯಾವ ಮೆಂಬರುಗಳು ವಿರೋಧಿಸಿದರು ಎಂಬದನ್ನೂ ಮತ್ತು ಯಾವ ಯಾವ ಠರಾವುಗಳು ಮಂಜೂರಾದವು ಎಂಬದನ್ನೂ ಸಹ ಓಟರುಗಳಾದ ನಮ್ಮ ತಿಳುವಳಿಕೆ ಬಗ್ಗೆ ಈ ಪತ್ರಿಕೆಯಲ್ಲಿ ಪ್ರಕಟಿಸಬೇಕಾಗಿ ಕೇಳಿಕೊಳ್ಳುತ್ತೇನೆ ಯಾಕೆಂದರೆ ಮುಂದಿನ ಚುನಾವಣೆಯಲ್ಲಿ ಯಾರ್ಯಾರಿಗೆ ಓಟು ಕೊಡಬೇಕೆಂಬದನ್ನು ಮತ್ತು ಈ ಕೌನ್ಸಿಲಿನಿಂದ ದೇಶಕ್ಕೆ ಪ್ರಯೋಜನ ಇದೆಯೋ ಯಾ ಇಲ್ಲವೋ ಎಂಬದನ್ನು ತಿಳಿದುಕೊಳ್ಳಬೇಕಾದ ಸಂಗತಿ ಓಟರುಗಳಾದ ನಮುಗಳ ಕರ್ತವ್ಯವಾಗಿದೆ.

ಒಬ್ಬ ಓಟರು.

[ಸೂಚನೆ:— ಕೌನ್ಸಿಲು ಮೀಟಿಂಗುಗಳ ಪ್ರೊಸಿಡಿಂಗ್ಸನ್ನು ಆಗಾಗ್ಯೆ ಈ ಪತ್ರಿಕೆಯಲ್ಲಿ ಪ್ರಕಟಿಸುತ್ತಾ ಬಂದಿರುತ್ತೇವೆ. ಅದರಲ್ಲಿ ಕೌನ್ಸಿಲಿನಲ್ಲಿ ಚರ್ಚಿಸಲ್ಪಟ್ಟ ಎಲ್ಲಾ ಠರಾವುಗಳೂ, ಅವುಗಳಲ್ಲಿ ಮುಖ್ಯವಾದವುಗಳಿಗೆ ಒತ್ತಾಸೆ ಕೊಟ್ಟವರ ಮತ್ತು ವಿರೋಧಿಸಿದವರ ಹೆಸರುಗಳೂ ಪ್ರಕಟವಾಗಿವೆ. ಪುನಃ ಇನ್ನೊಮ್ಮೆ ಎಲ್ಲಾ ಠರಾವುಗಳನ್ನು ಪತ್ರಿಕೆಯಲ್ಲಿ ಪ್ರಕಟಿಸಲು ಹಲವು ವಾರಗಳು ಹಿಡಿಯುವವು.

ಸಂ.]

ಇದು ಕೊಡವರ ಪದ್ಧತಿಯೋ?

ಮಹಾಶಯರೆ,

ಕಳೆದ ಮೇ ತಿಂಗಳಲ್ಲಿ ಮಡಿಕೇರಿಯಲ್ಲಿ ನಡೆದ ಮೆ. ಕಂಬೀರಂಡ ಗಣಪತಿಯವರ ಮದುವೆಯಿಂದ ಕಲವರು ಎದ್ದು ಹೋದರೆಂಬ ಸಂಗತಿಯನ್ನು ನೀವೆಲ್ಲರೂ ಕೇಳಿರಬಹುದು. ಮ. ಪಿ. ಸಿ ಉತ್ತೈಯ್ಯನವರು ಆ ಮದುವೆಗೆ ಬಂದಿದ್ದ ಕಾರಣದಿಂದ ಹಾಗೆ ಕಲವರು ಎದ್ದುಹೋದದ್ದೆಂದೂ ಪ್ರಕಟವಾಗಿತ್ತು. ಆದರೆ ಹಾಗೆ ಎದ್ದು ಹೋದವರಲ್ಲಿ ಒಬ್ಬರಾದ ರಾ. ಬಾ. ಕೇಟೋಳಿರ ಚಂಗಪ್ಪನವರ ಮಗಳ ಮದುವೆಯಲ್ಲಿ ಸದರಿ ಮೆ. ಪಿ ಸಿ ಉತ್ತೈಯ್ಯನವರು ಮುಹೂರ್ತದಲ್ಲಿ ಪಣ ಕೊಟ್ಟದ್ದಲ್ಲದೆ ಪಂಕ್ತಿಯಲ್ಲಿ ಕೂತು ಭೋಜನವನ್ನೂ ಮಾಡಿದರು. ಈ ಪಂಕ್ತಿಭೋಜನದಲ್ಲಿ ಕಂಬೀರಂಡ ಮನೆಯಿಂದ ಎದ್ದುಹೋದವರಲ್ಲಿ ಹಲವರು ಹಾಜರಿದ್ದರು. ಇದು ಯಾವ ಪದ್ಧತಿಯೆಂದು ಗೊತ್ತಿರುವವರು ತಿಳಿಸುವಿರಾ? ಕಂಬೀರಂಡ ಮನೆಯಲ್ಲಿ ಪಿ. ಸಿ. ಉತ್ತೈಯ್ಯನವರು ಮುಹೂರ್ತಕ್ಕೆ ಬಂದು ಊಟ ಮುಗಿಸಿ ಹೋದಬಳಿಕ ಬಂದ ಕೆಲವರು ಅಲ್ಲಿಂದ ಎದ್ದು ಹೋಗಿದ್ದಲ್ಲ, ಕೇಟೋಳಿರ ಮನೆಯಲ್ಲಿ ಉತ್ತೈಯ್ಯನವರ ಸಂಗಡ ಪಂಕ್ತಿಯಲ್ಲಿ ಅಂಥವರು ಹೇಗೆ ಊಟಮಾಡಿದರು? ಇದು ಕೊಡವ ಪದ್ಧತಿಯೋ? ಮಡಿಕೇರಿಯಲ್ಲಿ ಅವನು ಬಂದಿದ್ದ ತಾಸಿರುವದಿಲ್ಲವೆಂದು ಎದ್ದುಹೋದವರು ಅವರನ್ನು ತನ್ನ ಮಗಳ ಲಗ್ನಕ್ಕೆ ಬರಮಾಡಿಕೊಂಡದ್ದು ಹೇಗೆ? ಇದು ಯಾವ ಪದ್ಧತಿ?

ಇದನ್ನೆಲ್ಲಾ ನೋಡುವಾಗ್ಯೆ ಕಂಬೀರಂಡ ಮದುವೆಯಲ್ಲಿ ಇಷ್ಟೆಲ್ಲಾ ಗದ್ದಲವಾದುದು ಮೆ. ಉತ್ತೈಯ್ಯನವರು ತಪ್ಪಿತಸ್ಥರೆಂದಲ್ಲ! ಮೆ. ಕೆ. ಗಣಪತಿಯವರಿಗೆ ಆಕ್ಷೇಪಣೆ ಮಾಡಬೇಕೆಂದು ಮಾಡಿದ್ದಾಗಿದೆಯೆಂದು ಯಾರಿಗಾದರೂ ತೋರದಿರುವುದಿಲ್ಲವೇ?

ಈ ಕೆಲಸಗಳೆಲ್ಲವೂ ಯಾವ ಕಾರಣದಿಂದಲೇ ಆಗಿರಲಿ ಇದರ ಮೂಲಕಾರಣವು ಬಹು ಅಲ್ಪವಾದ್ದೆಂದೂ ಇದನ್ನು ಇಷ್ಟು ಪ್ರಬಲಮಾಡಿದ್ದು ಮಡಿಕೇರಿಯ ವಿದ್ಯಾಬುದ್ಧಿವಂತರು ಹೊರಿಯಲ್ಲವೆಂದೂ ನಾಡಿನಲ್ಲಿರುವ ಸಜ್ಜನರಿಗೆ ಕಂಡುಬರುತ್ತದೆ. ಮಡಿಕೇರಿಯ ಕೊಡವರೊಳಗಿದ್ದ ಪಂಗಡಭೇದಗಳು ಹೋಗಿ ಎಲ್ಲರೂ ಒಗ್ಗಟ್ಟಾಗಿರುವರೆಂದು ಕೆಲವು ತಿಂಗಳುಗಳ ಹಿಂದೆ 'ಲೋಕಪಾವನ' ಪತ್ರಿಕೆಯಲ್ಲಿ ಓದಿದ್ದು ನನಗೆ ಜ್ಞಾಪಕವಿದೆ. ಇದು ನಿಜವಾಗಿದ್ದಲ್ಲಿ ಈಗಿನ ಈ ಭೇದಗಳ ಕಾರಣವೇನು? ರಾಜಿಯಾಗಬೇಕೆಂಬ ಕುತೂಹಲವು ಎರಡು ಕಡೆಯವರಿಗೂ ಇದೆಯೆಂದು ವರ್ತಮಾನ. ಹಾಗಾದರೆ ವ್ಯಕ್ತಿದ್ವೇಷವೇ ಇದಕ್ಕೆ ಅಡ್ಡಿಬರುವುದಾಗಿದೆಯೆಂದು ತೋರುತ್ತದೆ. ಸಮಾಜದಲ್ಲಿ ಇಂಥಾ ವ್ಯಕ್ತಿ ದ್ವೇಷಗಳಿಗೆ ಎಡೆಕೊಟ್ಟರೆ ಸಮಾಜವು ಎಂದಿಗೂ ಏಳಿಗೆಗೆ ಬರಲಾರದು ಎಂಬದನ್ನು ಎಲ್ಲಾ ಹಿತಚಿಂತಕರು ಮನಸ್ಸಿನಲ್ಲಿ ಇಟ್ಟುಕೊಳ್ಳಬೇಕಾಗಿದೆ. ಮಡಿಕೇರಿ ಸಮಾಜದವರು ಇನ್ನಾದರೂ ತಮ್ಮ ತಪ್ಪನ್ನು ತಿದ್ದಲು ಪ್ರಯತ್ನಿಸುವರೇ!

"ನಾಡಿನವ"

ಕರ್ನಾಟಕ ಏಕೀಕರಣ ಸಂಘ.

ಬಳ್ಳಾರಿಯಲ್ಲಿ ೧೯೨೬ನೇ ಇಸ್ವಿಯ ಮೇ ತಿಂಗಳ ೧೯-೨೦ನೇ ತಾರೀಖುಗಳ ದಿವಸ ಕೂಡಿದ ಕರ್ನಾಟಕ ಏಕೀಕರಣ ಸಮ್ಮೇಲನದ ಎರಡನೇ ಅಧಿವೇಶನದಲ್ಲಿ ಪಾಸಾದ ನಿರ್ಣಯಗಳು.

೧. ಈ ಸಮ್ಮೇಲನವು ಕೇವಲ ಕನ್ನಡಮಯವಾದ ಬಳ್ಳಾರಿ ಜಿಲ್ಲೆಯನ್ನು ಆಂಧ್ರ ವಿಶ್ವವಿದ್ಯಾಲಯದ ಅಧಿಪತ್ಯಕ್ಕೆ ಒಳಪಡಿಸಿದ್ದಕ್ಕಾಗಿ ಮದ್ರಾಸ ಶಾಸನ ಸಭೆಯ ಮಂತ್ರಿಮಂಡಲದ ಕೃತ್ಯವನ್ನು ತೀವ್ರವಾಗಿ ನಿಷೇಧಿಸುತ್ತದೆ

೨. ಅ. ಈ ಸಮ್ಮೇಲನವು ಕರ್ನಾಟಕದಲ್ಲಿಯ ಎಲ್ಲ ಲೋಕನಿಯುಕ್ತ ಸಂಸ್ಥೆಗಳ ಮತದಾರರು ಕರ್ನಾಟಕ ಏಕೀಕರಣದ ಕಾರ್ಯವನ್ನು ಮುಂದುಗಾಣಿಸುವ ಉಮೇದವಾರರಿಗೇನೇ ತಮ್ಮ ಮತವನ್ನು ಕೊಡಬೇಕೆಂದು ಆಗ್ರಹಪೂರ್ವಕವಾಗಿ ಕೇಳಿಕೊಳ್ಳುತ್ತದೆ.

ಆ. ಸಾಧ್ಯವಾದ ಎಲ್ಲ ಉಪಾಯಗಳಿಂದ ಕರ್ನಾಟಕ ಏಕೀಕರಣದ ಕಾರ್ಯವನ್ನು ಕೊನೆಗಾಣಿಸುವದಕ್ಕಾಗಿ ಕೌನ್ಸಿಲ್ ಆಫ್‌ಸ್ಟೇಟ್, ಲೆಜಿಸ್ಲೇಟಿವ್ ಅಸೆಂಬ್ಲಿ, ಮುಂಬಯಿ ಮತ್ತು ಮದ್ರಾಸಶಾಸನ ಸಭೆಗಳಲ್ಲಿಯ ಎಲ್ಲ ಕರ್ನಾಟಕಸ್ಥ ಸಭಾಸದರಿಗೂ ಮತ್ತು ಕರ್ನಾಟಕದಲ್ಲಿಯ ಎಲ್ಲ ಲೋಕನಿಯುಕ್ತ ಸಂಸ್ಥೆಗಳ ಸರ್ವ ಸದಸ್ಯರಿಗೂ ಬೇಡಿಕೊಳ್ಳುತ್ತದೆ.

೩. ಕರ್ನಾಟಕ ಏಕೀಕರಣದ ಕಾರ್ಯದಲ್ಲಿ ಸಹಾನುಭೂತಿಯನ್ನು ತೋರಿಸಿ ಕೈಲಾದ ಮಟ್ಟಿಗೆ ಕರ್ನಾಟಕಸ್ಥ ಸಭಾಸದರಿಗೆ ಈ ಕೆಲಸದಲ್ಲಿ ಸಹಾಯ ಮಾಡಬೇಕೆಂದು ಮುಂಬಯಿ ಮತ್ತು ಮದ್ರಾಸಶಾಸನ ಸಭೆಯಲ್ಲಿಯ ಉಳಿದ ಸಭಿಕರಿಗೆ ಪ್ರಾರ್ಥಿಸುತ್ತದೆ

೪. ಕರ್ನಾಟಕದಲ್ಲಿಯ ಎಲ್ಲ ಲೋಕನಿಯುಕ್ತ ಮತ್ತು ಸಾರ್ವಜನಿಕ ಸಂಸ್ಥೆಗಳು ಏಕೀಕರಣವನ್ನು ಸಮರ್ಥಿಸುವ ನಿರ್ಣಯಗಳನ್ನು ಪಾಸು ಮಾಡಬೇಕೆಂದು ಸೂಚಿಸುತ್ತದೆ.

೫. ಗಡಿನಾಡುಗಳಲ್ಲಿ ಸಂಚರಿಸಿ ಅಲ್ಲಿರುವ ಕನ್ನಡಿಗರಲ್ಲಿ ಏಕೀಕರಣದ ವಿಷಯಕ್ಕೆ ಜಾಗೃತಿಯನ್ನುಂಟುಮಾಡುವದಕ್ಕೋಸ್ಕರ ವಿಜಾಪೂರದ ರಾ. ಸಾ. ಹಳಕಟ್ಟಿ ಬೆಂಗಳೂರಿನ ಶ್ರೀ ಸಂಪದ್ಗಿರಿರಾವ ಹಾಗೂ ಶ್ರೀ ಟಿ. ಕೆ. ಭಾರದ್ವಾಜ ಇವರನ್ನೊಳಗೊಂಡ ಒಂದು ಉಪಮಂಡಲವನ್ನು ನೇಮಿಸಿರುತ್ತದೆ.

೬. ಅಖಿಲ ಕರ್ನಾಟಕಕ್ಕೆ ವಿಶ್ವ ವಿದ್ಯಾನಿಲಯವನ್ನು ಪಡೆಯಿಸಲು ದೀರ್ಘ ಪ್ರಯತ್ನವನ್ನು ಮಾಡಬೇಕೆಂದು ಕರ್ನಾಟಕ ವಿಶ್ವ ವಿದ್ಯಾನಿಲಯ ಸಮ್ಮೇಲನಕ್ಕೆ ಹೇಳಿಕೊಳ್ಳುತ್ತದೆ.

೭. ಬರುವ ವರ್ಷದಲ್ಲಿ ೫೦೦ ಜನ ಸಭಾಸದರನ್ನು ಕೂಡಿಕೊಳ್ಳುವದಕ್ಕಾಗಿ ಪ್ರತಿ ಜಿಲ್ಹಾ ಸಂಘದವರು ಪ್ರಯತ್ನಿಸಬೇಕಾಗಿ ಹೇಳುತ್ತದೆ.

೮ ಏಕೀಕರಣ ಸಂಘದ ಕಾರ್ಯಕಾರೀ ಮಂಡಲವು ಬರುವ ವರ್ಷದ ಕೊನೆಯ ವಳಗಾಗಿ ೫೦೦೦ ರೂಪಾಯಿಗಳನ್ನು ಕೂಡಿಸಲು ಪ್ರಯತ್ನಪಡಬೇಕಾಗಿ ತಿಳಿಸುತ್ತದೆ.

೯. ಸಮ್ಮೇಲನದ ಈ ಅಧಿವೇಶನದಲ್ಲಿ ಪಾಸಾದ ಸಂಘಟನೆಯನ್ನು ೧೯೨೬ನೇ ಆಕ್ಟೋಬರ ೧ನೇ ತಾರೀಖಿನ ಒಳಗಾಗಿಯೇ ಅಮಲಿನಲ್ಲಿ ತರಬೇಕೆಂದು ನಿಶ್ಚಯಿಸುತ್ತದೆ. ಮತ್ತು ಇದೇ ಅವಧಿಯಲ್ಲಿಯೇ ಪ್ರತಿಯೊಂದು ಜಿಲ್ಲೆಯಲ್ಲಿ ಜಿಲ್ಹಾ ಶಾಖಾ ಸಂಘಗಳನ್ನು ಸ್ಥಾಪಿಸಿ ಮಧ್ಯವರ್ತಿ ಮಂಡಲಕ್ಕೆ ತಮ್ಮ ಪ್ರತಿನಿಧಿಗಳನ್ನು ಆರಿಸಿ ೧೯೨೬ನೇ ಸಪ್ಟಂಬರ ೧೫ನೇ ತಾರೀಖಿನೊಳಗಾಗಿಯೇ ಅವರ ಹೆಸರುಗಳನ್ನು ಮಧ್ಯವರ್ತಿ ಮಂಡಲದ ಕಡೆಗೆ ಕಳುಹಿಸಬೇಕು.

೧೦. ಹೊಸ ಕಾರ್ಯಕಾರೀ ಮಂಡಲವು ಅಸ್ತಿತ್ವದಲ್ಲಿ ಬರುವವರೆಗೆ ಕೆಳಗೆ ಬರೆದ ಸದ್ಗೃಹಸ್ಥರನ್ನೊಳಗೊಂಡ ಒಂದು ಕಾರ್ಯಕಾರೀ ಮಂಡಲವನ್ನು ನಿಯಮಿಸಿರುತ್ತದೆ.

೧. ಶ್ರೀಯುತ ಪಂಡಿತ ರಾಯಸ್ವಾಮಿ ಚಕ್ರೋಡಿ ಬೆಳಗಾಂವ ಅಧ್ಯಕ್ಷ. ೨. ರಾ. ಸಾ. ಹಳಕಟ್ಟಿ ಪಿ. ಜಿ. ವಿಜಾಪೂರ, ಉಪಾಧ್ಯಕ್ಷ. ೩. ಶ್ರೀ ಶ್ರೀನಿವಾಸರಾವ ಕೌಜಲಗಿ, ವಿಜಾಪೂರ, ಉಪಾಧ್ಯಕ್ಷ. ೪ ಶ್ರೀ ವ್ಹಿ. ಎಸ್ ಜೋಗ ಧಾರವಾಡ ಕೋಶಾಧ್ಯಕ್ಷ. ೫ ಶ್ರೀ ಶಿವಮೂರ್ತಿಸ್ವಾಮಿ ಹಿರೇಮಠ ವೀರಾಪೂರ, ಕಾರ್ಯದರ್ಶಿ. ೬ ಶ್ರೀ ದಾ ಕಾಂತರಾವ ಕಮಲಾಪೂರ ಧಾರವಾಡ, ಕಾರ್ಯದರ್ಶಿ.

ಕಾರ್ಯಕಾರೀ ಮಂಡಲದ ಸಭಿಕರ ಹೆಸರುಗಳು

೧. ಶ್ರೀ ರಂಗನಾಥ ದಿವಾಕರ. ೨. ಶ್ರೀ ರಾಘವೇಂದ್ರರಾವ ಪಾ. ೩. ಶ್ರೀ ಕೃಷ್ಣರಾವ ಮುದವೇಡಕರ. ೪. ಶ್ರೀ ಸಿ. ವಡೆಯರ. ೫. ಶ್ರೀ ವೆಂಕಟರಾವ ಆಲೂರ. ೬ ಶ್ರೀ ... ಎಸ್ ಒಸವನಾಳ.

೧೧. ತಮ್ಮ ಕಾರ್ಯವನ್ನು ಉತ್ತಮ ರೀತಿಯಿಂದ ಮಾಡಿದ್ದಕ್ಕಾಗಿ ಕೆಲಸಬಿಟ್ಟು ನಿವೃತ್ತರಾಗುವ ಅಧ್ಯಕ್ಷ, ಮತ್ತು ಕಾರ್ಯದರ್ಶಿಗಳಿಗೆ ಈ ಸಮ್ಮೇಲನವು ಬಹಳ ಋಣಿಯಾಗುತ್ತದೆ.

ಸ್ವಾಗತ ಮಂಡಲದವರಿಗೂ ಮತ್ತು ಹಿಂದುಸ್ತಾನೀ ಸೇವಾದಲದವರಿಗೂ ಈ ಸಮ್ಮೇಲನದ ಅಧಿವೇಶನ ಕಾಲಕ್ಕೆ ಉತ್ತಮ ವ್ಯವಸ್ಥೆ ಮತ್ತು ಸಹಾಯ ಮಾಡಿದ್ದಕ್ಕಾಗಿ ಈ ಸಮ್ಮೇಲನವು ಆಭಾರ ಮನ್ನಿಸುತ್ತದೆ.

Apply for our shooting Season's Clearance Sale Catalogue of Brand New Goods.

10 to 25 percent Reductions in Prices.

No License Required !! **No Licenser Required**



Webley and Scott Air Pistol, cal ·177 or 22, bore Powerful and Accurate, complete with a sample box of slugs, two spare washers, a brush for cleaning, and a booklet of instructions Rs. 30 – Free delivery.

Pwerful German Diana Air gun, Handsome and Accurate, takes B. S. A Patern No 1 Slugs and Darts, expressly recommendable for Target Practice Rs 15/ Free delivery

Giant Search Light Lamp for Night Sports Rs 30/– Free delivery.

No License required to purchase or to possess the above items.

Reliable D B B L 12 bore guns	Rs. 60 –	and upwards
Do S. B B L 12	do	40 –	do
D B. M L Guns		„ 45 –	do
S B M L do.		„ 30 –	do
S B B L Rifles		„ 25 –	do
B L Revolvers and Pistols		„ 30 –	do.

Arms, Ammunition and shooting requisites of almost every kind and quality offered at exceptionally favourable rates ANumber of good quality second hand weapons also offered for sale in the New Catalogue.

GOOLAMHUSIAIN ALLIBHOY & SONS

Largest Importers of Firearms and Ammunition,

Cheapest priced firm in India,

24 20 210 Abdul Rehman Street, BOMBAY.

೧೭ ಚಿತ್ರ ಸಹಿತ

ಸಚಿತ್ರ ಶುಕಸಪ್ತತಿ ಕಥೆ.

೭೦ ಕಥೆಗಳು ೫೧೩ ಪುಟಗಳು

ಈ ಕಥೆಯು ಧರ್ಮಶಾಸ್ತ್ರ ವೇದಾಂತ, ಸ್ತ್ರೀಪಾತಿವ್ರತ್ಯ ಬ್ರಾಹ್ಮಣ, ವೈಶ್ಯ, ಶೂದ್ರರೆಂಬ ನಾಲ್ಕು ವರ್ಣದವರು ನಡೆಯತಕ್ಕ ವರ್ಣಾಶ್ರಮ ಧರ್ಮವೇ ಮುಂತಾದ ಸದ್ವಿಚಾರಗಳನ್ನು ಬೋಧಿಸುವುದು. ೧. ಕಥಾರೂಪದಲ್ಲಿ ಚಿತ್ರಕಥಾ ಚಮತ್ಕಾರ ಶೋಭಿತವಾಗಿಯೂ ನೀತಿಬೋಧಕವಾಗಿಯೂ ಇರುವದರಿಂದ ಸ್ತ್ರೀಯರು, ಪುರುಷರು, ಬಾಲಕರು ಎಂಬ ಭೇದವಿಲ್ಲದೆ ಎಲ್ಲರೂ ಓದಬಹುದು. ೨ ಲೋಕಾನುಭವಕ್ಕೆ ಬೇಕಾದ ಅನೇಕ ವಿಷಯಗಳು ಇದರಿಂದ ತಿಳಿದುಬರುವುದು ೩. ಈ ಕಥೆಯನ್ನು ಓದುವದರಿಂದ, ಮನಸ್ಸನ್ನು ದುರಾಚಾರದಲ್ಲಿ ಬಿಡದಂತೆ ಸದಾಚಾರದಲ್ಲಿಯೇ ನಡೆಯುವಂತೆ ಮಾಡುವುದು ೪ ವಿವೇಕಾನೇಕವನ್ನು ತಿಳಿಯತಕ್ಕ ಜ್ಞಾನವನ್ನು ಉಂಟುಮಾಡುವುದು. ಬೇಕಾದವರು ವಿ. ಪಿ. ಪೋಸ್ಟು ಮೂಲಕ ತರಿಸಿಕೊಳ್ಳಬಹುದು.

ದಪ್ಪಕಾಗದ ಕ್ರಯ ಪ್ರತಿ ೧ಕ್ಕೆ ರೂ. ೨-೦-೦. ಟಪ್ಪಾಲು ಹಾಸಲು ೦-೮-೦.

ಸಚಿತ್ರ ಬಟ್ಟಿ ವಿಕ್ರಮಾದಿತ್ಯರಾಜನ ಕಥೆ ೩ ಭಾಗಸೇರಿದ್ದು ೭೧೩ ಪುಟಗಳು ಕ್ರಯ ೨-೪-೦. ಸಚಿತ್ರರಾಜ ಕಂಠೀರವ ಕಥೆ ೩೮೦ ಪುಟಗಳು, ಕ್ರಯ ರೂ. ೨.

ಸಚಿತ್ರ ಶ್ರೀರಾಮತ್ರಾಮ್ಯಕ ಎಂಬ ಸೀತಾರಾಮಾಂಜನೇಯ ಸಂವಾದ ೩೪೬ ಪುಟಗಳು ೧-೮-೦. ಇವುಗಳಿಗೆ ಟಪಾಲು ಖರ್ಚು ಬೇರೆ.

ನಮ್ಮಲ್ಲಿ ದೊರೆಯುವ ಎಲ್ಲಾ ಪುಸ್ತಕಗಳ ಕ್ರಯ ಪಟ್ಟಿ (ಕ್ಯಾಟಲಾಗ್)ಗೆ ಬರೆದರೆ ಕಳುಹಿಸುವೆವು.

೫೨-೩ ನಮ್ಮ ವಿಳಾಸ— ಎಂ ಆರ್. ಕೃಷ್ಣಸ್ವಾಮಿ ಶೆಟ್ಟಿ,

ಬುಕ್ಕಡಿಪ್ಪೋ, ಚಿಕ್ಕಪೇಟೆ, ಬೆಂಗಳೂರು ಸಿಟಿ

ಹೊಸ ಸಾಮಾನುಗಳು! ಸುಲಭ ಕ್ರಯ!! ಈಗತಾನೇ ಬಂದಿವೆ!!!

ಇಂಥ ಸುಸಮಯವನ್ನು ಕಳಕೊಳ್ಳಬೇಡಿರಿ!

12 ಬೋರ್ ಜೋಡಿ ಕೊಳವಿನ ತೋಟ ಕೋವಿ 1ಕ್ಕೆ	ರೂ.	115—0—0
12 „ 32 ಇಂಚಿನ ಒಂಟಿ ಕೊಳವಿನ ತೋಟ ಕೋವಿ (ಬಿರ್ಮಿ) 1ಕ್ಕೆ.	„	60—0—0
„ „ 35 „ „ „ „	„	65—0—0
ಜೋಡಿ ಕೊಳವಿನ ಕೇಪು ಕೋವಿ 20ನೇ ನಂಬ್ರ 1ಕ್ಕೆ. .	„	85—0—0
12 ಬೋರ್ ಚಿಲ್ಲು ತೋಟಗಳು (ಒಳ್ಳೇ ನಮೂನೆ) 100ಕ್ಕೆ	„	14—0—0
„ „ ಆನೆ ಚಿಲ್ಲು „ „ „	„	16—0—0
ಗುಂಡು ತೋಟಗಳು „ „	„	19—0—0
ಕೋವಿ ಕ್ಲೀನ ಮಾಡುವ ಮತ್ತು ತೋಟ ತುಂಬಿಸುವ ಸಾಮಾನುಗಳ 1 ಪಟ್ಟಿಗೆಗೆ		27—8—0
ಕೇಪು ...ರ 1 ಟಿನ್ನಿಗೆ	ರೂ.	1—5—0
ಕಾಲು ಪೌಂಡು 2 ಯಫಾನ ಮದ್ದು ಡಬ್ಬಿ 1ಕ್ಕೆ	„	1—0—0
ಚಿಲ್ಲು ಎಲ್ಲಾ ತರಹದ ನಮೂನೆ ರಾತ್ತಲ್ 1ಕ್ಕೆ	„	0—10—6
ಪ್ರಾಕ್ ಉಕ್ಕಿನ ಸೊಗಸಾದ ಗುದ್ದಲಿಗಳು 5 ಪೌಂಡಿನ 1 ಡಜನ್ನಿಗೆ	„	33—0—0
„ „ „ 4 „ „	„	30—0—0
4 ಮುಳ್ಳಿನ ಮುಳ್ಳು ಗುದ್ದಲಿಗಳು ಡಜನ್ನಿಗೆ	„	60—0—0
3 „ „	„	48—0—0
4 ಪೌಂಡಿನ ಮರ ಕಡಿಯುವ ಕೊಡಲಿಗಳು ಡಜನ್ನಿಗ	„	54—0—0
ಇಂಗ್ಲಿಷ್ ನಮೂನೆ ಕಪಾತು ಚಾಕುಗಳು ಡಜನ್ನಿಗ	„	15—0—0
ಮಿತನ್ ಕೊಡೆಗಳು ದೊಡ್ಡ ಸ್ಟವ್ (ಸ್ಟಿಟಜರ್ ಲ್ಯಾಂಡ್) 1ಕ್ಕೆ	„	5—0—0
„ ಸಣ್ಣ ಸ್ಟವ್ „ „	„	4—12—0
„ „ ಹೋಲ್‌ಸೇಲಾಗ „ .	„	ಕಮ್ಮಿ ಕ್ರಯ

ಮೆಕ್ಡೋಲ್ ಕಂಪೆನಿ,
ಮಡಿಕೇರಿ.

Messers Mc, Dowell & Co
Mercara

12-3

ಕಿರ್ಲೋಸ್ಕರ ಪೇಟೆಂಟ ಮಲ್ಹಾರ ತಪ್ಪಲಿ.



ಈ ತಪ್ಪಲಿಯು ನಮ್ಮ ಕಾರ್ಖಾನೆಯಲ್ಲಿಯೇ ತಯಾರಾಗುತ್ತದೆ. ಸರಕಾರದಿಂದ ಇದಕ್ಕೆ ಪೇಟಂಟ್ ದೊರೆತ್ತಿರುತ್ತದೆ. ಇದರ ಮುಖ್ಯ ಗುಣಗಳು:

೧. ನೀರನ್ನು ಹುಟ್ಟಿದ ಕೂಡಲೇ ತುಂಬಿ ಒಳು ವದು.

೨. ಮಲಲಕ್ಕೆ ಒರುವಾಗ್ಗೆ ಒಂದು ಹನಿ ಸಹ ನೀರು ಸೋರುವದಿಲ್ಲ.

೩. ದೋಣಿಯಲ್ಲಿ ನೀರು ಬೀಳುವಾಗ್ಗೆ ತೊಗಲಿನ ತಪ್ಪಲಿಯಂತೆ ಎತ್ತನವಿದೆ ಹೋಗುವದಿಲ್ಲ.

ಬೆಲೆಬಹು ಅಗ್ಗ. ಹೆಚ್ಚಿನ ಸಂಗತಿ ಬಗ್ಗೆ ಬರೆದು ತಿಳಿದುಕೊಳ್ಳಿರಿ.

ಕಿರ್ಲೋಸ್ಕರ ಬಂಧು, ಲಿಮಿಟೆಡ್.
ಕಿರ್ಲೋಸ್ಕರವಾಡಿ,
1–1 ಜಿ. ಸಾತಾರ್.

ವಿಶೇಷದ ಮಾರಾಟ!

ಉಚಿತ! ಪಾಕೆಟ್ ವಾಚ್! ಉಚಿತ!

18 ಕ್ಯಾರೆಟ್ ರೋಲ್ಡ್‌ಗೋಲ್ಡ್ ಪ್ಲೇಟ್ ಚಿನ್ನದ ಮುಖ ಬಿಲ್ಲೆಯಿರುವ ಮುಂಗೈ ಗಡಿಯಾರ ನಂ. 100.

ಇದು ಅತ್ಯಂತ ಹೊಸ ಮಾದರಿಯು, ಸುಂದರವಾದ ಆಕಾರ, ಸೊಗಸಾದ ಬಣ್ಣ, ... ಮುಖ ಬಿಲ್ಲೆಯು ಥಳ ಥಳ ಹೊಳೆಯುತ್ತಾ ಆಕರ್ಷಿಸುತ್ತದೆ. 100 ರೂ. ಮತ್ತು ಹೆಚ್ಚಿಗೆ ಬೆಲೆಯಿರುವ ಉತ್ಕೃಷ್ಟ ವಾಚಿನಂತೆ ಕಾಣುತ್ತದೆ. ಸುಂದರವಾಗಿಯೂ ಚಿಕ್ಕದಾಗಿಯೂ ಇದೆ. ಗಂಡಸರಿಗೂ ಹೆಂಗಸರಿಗೂ ಉಪಯೋಗಿಸಲು ಅನುಕೂಲವಿರುವ ಅತ್ಯುತ್ತಮ ವಾಚ್. ಯಾವ ಹವದಲ್ಲಾದರೂ ಸರಿಯಾದ ಟೈಮು ಕೊಡುವ ವಾಚ್. ಮೂರು ವರ್ಷಗಳ ಗ್ಯಾರೆಂಟಿ ಕೊಡಲಾಗುತ್ತೆ. ಯಾವ ಆಕಾರದ್ದಾದರೂ ಒಂದು ವಾಚನ್ನು ಒಂದು ತಿಂಗಳೊಳಗೆ ಕೊಂಡುಕೊಂಡವರಿಗೆ ನಿಕಲ್ ಪಾಕೆಟ್ ವಾಚ್ ಒಂದು ಉಚಿತವಾಗಿ ಕೊಡಲಾಗುತ್ತದೆ. ಕ್ರಯ 8–0–0.

OVERSEAS SWISS WATCH CO.
POST BOX. No. 371,
Mount Road, MADRAS.
52–6

ಇಮಿಟೇಷನ್ ರೇಷ್ಮೇ ಸೀರೆಗಳು.

ಈ ಸೀರೆಗಳು 18ಮೊಳ ಉದ್ದವೂ 2½ಮೊಳ ಅಗಲವೂ ಇದೆ. ಈ ಸೀರೆಗಳನ್ನು ಹಸನಾದ ಇಮಿಟೇಷನ್ ಸಿಲ್ಕ್ ಗಟ್ಟಿ ದಾರದಿಂದ ತಯಾರಿಸಿದೆ. ಇದು ನೋಡಲಿಕ್ಕೆ ಭಾರಿ ಕ್ರಯದ ಸೀರೆಗಳಂತೆ ಕಾಣುವದಲ್ಲದೆ ಅಂದವಾದ ಅಂಚೂ, ಸುಂದರವಾದ ಸಾಚಾ ರೇಷ್ಮೆಯ ಸೆರಗೂ ಇರುವದು. ಈ ಮಾದರಿ ಸೀರೆಗಳು ಬೇರೆ ಯಾರಲ್ಲಿಯೂ ಈ ಕ್ರಯಕ್ಕೆ ಸಿಕ್ಕಲಾರದು. ಈ ಸೀರೆಗಳು ಶ್ರೀಮಂತರೂ, ಗರೀಬರೂ, ಉಡಲಿಕ್ಕೆ ಬಹು ಲಾಯಕ್ಕಾದವು. ಮೊದಲಿಗಾಗಿ ಕೆಲವನ್ನು ಮಾತ್ರ ತಯಾರಿಸಿರುತ್ತೇವೆ. ಆದ್ದರಿಂದ ಬೇಗನೆ ತರಿಸಿಕೊಳ್ಳುವವರಿಗೆ ಮಾತ್ರ ಸಿಕ್ಕುವವು.

ಕ್ರಯ ಸೀರೆ 1ಕ್ಕೆ ನಂ 1. ರು. 6–8–0
,, ನಂ 2. ರು. 7–8–0

ವಿಳಾಸ.—ಮಹರಾಜ ಟ್ರೇಡಿಂಗ್ ಕಂಪನಿ,
11 ತಿರುಪಳ್ಳಿ ಬೀದಿ,
ಮದರಾಸು.

ಈಗಲೇ ಪ್ರಿಂಟಾಗಿದೆ! ಶೃಂಗಾರವಾದ ಪುಸ್ತಕ!!

ಸ್ತ್ರೀ ಪುರುಷರ ಪ್ರೀತಿಯ ಮರ್ಮಗಳನ್ನು ಚಿತ್ರಪಟಗಳ ಸಹಿತ ತಿಳಿಸುವ

ಮರ್ಮ ಶಾಸ್ತ್ರ.

ಫ್ರೆಂಚ್ ಭಾಷೆಯಲ್ಲಿ ಇದ್ದದನ್ನು ಸುಲಭ ಶೈಲಿಯಲ್ಲಿ ಕನ್ನಡ ಭಾಷೆಗೆ ಭಾಷಾಂತರಿಸಿರುತ್ತೇವೆ. ಸ್ತ್ರೀಪುರುಷರುಗಳಿಗೆ ಬೇಕಾದ ಎಲ್ಲಾ ಮರ್ಮ ರಹಸ್ಯಗಳು, ರತಿ ಮನ್ಮಥರು ಆನಂದವಾಗಿರುವದಕ್ಕೆ ಬೇಕಾದ ಉಪಾಯಗಳು, ಸ್ತ್ರೀ ಪುರುಷರ ಜಾತಿಯ ಲಕ್ಷಣಗಳು, ಗರ್ಭಧರಿಸುವದು, ಶಿಶು ಉತ್ಪತ್ತಿವಿಧ, ಗುಪ್ತ ವೈದ್ಯ, ಶಯನ ಗೃಹದ ನಿಯಮಗಳು, ಇನ್ನೂ ಸ್ತ್ರೀಪುರುಷರಿಗೆ ಬೇಕಾದ ಲೀಲ ರಹಸ್ಯಗಳು ತುಂಬಿದೆ. ಈ ಶೃಂಗಾರವಾದ ಪುಸ್ತಕವನ್ನು ತರಿಸಿ ಆನಂದ ಹೊಂದುತ್ತಾರೆಂದು ನಂಬಿರುತ್ತೇವೆ. ಪಟಗಳ ಸಹಿತ ಕ್ರಯ ಪುಸ್ತಕ 1ಕ್ಕೆ ರೂ. 1–0–0

ವಿಳಾಸ:—ಟಿ ರಾಮಚಂದ್ರರಾವ್ ಕಂಪನಿ,
52–25 ಪೋಸ್ಟು ಬಾಕ್ಸ್ ನಂ. 232, ಮದರಾಸ್.

ಮಾರ್ಗ್ಲೈಯಿಟು ಸೋಪು.

ಈ ಸೋಪನ್ನು ಕೂದಲುಗಳಿಗೆ ಒಂದೇ ಒಂದು ನಿಮಿಷ ಹಾಕಿದರೆ ಕತ್ತಿಯಿಂದ ಕೌರ ಮಾಡಿಸಿ ಕೊಂಡದ್ದಕ್ಕಿಂತಲೂ ಚೆನ್ನಾಗಿ ಚರ್ಮಕ್ಕೆ ಯಾವತೊಂದರೆಯೂ ಇಲ್ಲದೆ ಕೂದಲನ್ನು ತೆಗೆದುಬಿಡುವುದು.

ನಮ್ಮ ಮಾರ್ಗ್ಲೈಟ್ ಸೋಪ್, ಗಂಧೆ, ಮೊಡವೆ, ಬಿಚ್ಚೆ, ತುರಿ, ನವೆ, ಮುಂತಾದುವುಗಳನ್ನು ಕ್ಷಣಮಾತ್ರದಲ್ಲಿ ಮಾಯಮಾಡುವುದು.

3 ಸಾಮಾನುಗಳನ್ನು ಪೆಟ್ಟಿಗೆ 1ಕ್ಕೆ ರೂ. 0–10–0

ರೇಷ್ಮೆ ವಸ್ತ್ರ.

5 ಮೊಳ ಉದ್ದ 2½ ಮೊಳ ಅಗಲ ಇರುವದು.

ಈ ವಸ್ತ್ರಗಳನ್ನು ರೇಷ್ಮೆಯಿಂದ ಮಾಡಿದೆ ನೋಡಲಿಕ್ಕೆ ಬಹು ಚೆನ್ನಾಗಿರುವವು. ಚಿಕ್ಕವರೂ ದೊಡ್ಡವರೂ ಸಹ ಉಪಯೋಗಿಸಬಹುದು. ಕಂಪು, ರೋಜಾ, ನೀಲಿ, ಹಸರು ಮುಂತಾದ ಬಣ್ಣಗಳಲ್ಲಿ ಇರುವವು. ಇವು ವಿಲಾಯಿತಿಯಲ್ಲಿ ತಯಾರಾದವು. ಇದರ ಸುತ್ತಲೂ ನೋಡಲಿಕ್ಕೆ ಚೆನ್ನಾಗಿರುವಂತೆ ಹುಪ್ಪಿನ ಕುಚ್ಚುಗಳು ಇರುವವು.

ಕ್ರಯ 1ಕ್ಕೆ ರೂ 3–8–0

ವಿಳಾಸ:—ಎಸ್. ಪಾಲ್ ಅಂಡ್ ಕೊ,
ಪಿ. ಬಿ. ನಂಬರ್. 514,
12–6 ಕೊ. ಮ. ಪಾರ್ಕ್‌ಟೌನ್ ಮದ್ರಾಸು.

ಒಂದು ಪ್ರಬಲವಾದ ಪ್ರಶ್ನೆ.

ನಮ್ಮ ಜೀವವನ್ನು ಏತಕ್ಕಾಗಿ ವಿಮೆಮಾಡಬೇಕು!

ವೃದ್ಧಾಪ್ಯದಲ್ಲಿ ನಮ್ಮ ಮತ್ತು ಹೆಂಡತಿ ಮಕ್ಕಳ ಪೋಷಣೆಗಾಗಿ!

ಈಗಾಗಲೇ ಸಾವಿರಾರು ಜನರು ವಿಮೆಮಾಡಿರುವ ಏಳುಕೋಟಿ ರೂಪಾಯಿಗಿಂತ ಹೆಚ್ಚು ಬಂಡವಾಳವಿರುವ ದೇಶೀಯ ವಿಮೆಕಂಪನಿಯಲ್ಲಿ ಅತ್ಯಂತ ದೊಡ್ಡದಾದ ಸಾವಿರ ರೂಪಾಯಿ ವಿಮೆಮಾಡಿದವರಿಗೆ ವರ್ಷಕ್ಕೆ 18ರೂ. ಕಡಿಮೆಯಿಲ್ಲದೆ ಲಾಭ ಕೊಡುವ ' ಓರಿಯಂಟಲ್ ' ಗವರ್ನ್‌ಮೆಂಟ್ ಜೀವವಿಮೆ ಕಂಪನಿಯ ರೂಲ್ಸಿಗೂ, ಕರಪಿಗೂ ಈ ಕೆಳಗಿನವರಿಗೆ ಬರೆದು ತಿಳಿದುಕೊಳ್ಳಿ.

ಖಾದಿಬಳ್ಳಿ ಎಂದರೇನು?

ದೇಶೀಯ ಹತ್ತಿಯಲ್ಲಿ ಕೈರಾಟೆಯಿಂದ ನೂಲು ತೆಗೆದು ಇಲ್ಲಿಯೇ ತಯಾರಿಸುವ ಬಟ್ಟೆಯೇ ' ಖಾದಿ. ' ಈಗಾಗಲೇ ನಮ್ಮ ಸ್ಟೋರಿನಲ್ಲಿ ಪರದೇಶೀಬಟ್ಟೆಗಿಂತ ಗಟ್ಟಿಯಲ್ಲಿಯೂ ಅಂದದಲ್ಲಿಯೂ ಕಡಮೆ ಇಲ್ಲದಂತ, ಎಲ್ಲಾ ತರದ ಶೀರೆಗಳು ಚೆಕ್ಕಗಳು, ಶಾಲು ಮತ್ತಿರೆ ಎಲ್ಲಾ ತರದ ಬಟ್ಟೆಯು ತಯಾರಾಗಿದೆ. ದಯವಿಟ್ಟು ಪ್ರೋತ್ಸಾಹಿಸಿರಿ! ಖಾದಿಯಿಂದಲೇ ಸ್ವರಾಜ್ಯ. ಖಾದಿಯಿಂದಲೇ ಮೋಕ್ಷವೆಂಬುದನ್ನು ಮರೆಯ ಬೇಡಿರಿ.

ವೀರಾಜಪೇಟೆ, ದಕ್ಷಿಣ ಕೊಡಗು.
ಕೆ. ಪಿ. ಚಿಣ್ಣಪ್ಪ, ಪ್ರೊಪ್ರೈಟರ್, ಖಾದಿಭಂಡಾರ.

52–11.

೧೦೦೦ ರೂಪಾಯಿಗಳ ಬಹುಮಾನ.

ಲೋಕಪ್ರಸಿದ್ಧವಾದ ಸಾಲಂಮಿಸ್ರಿ ಮುರಬ್ಬಾ.

ನಮ್ಮ ಟ್ರೇಡ್ ಮಾರ್ಕನ್ನು ನೋಡಿ ಈ ಔಷಧ ತೆಗೆದುಕೊಳ್ಳಿ

ಇದರ ಸೇವನೆಯಿಂದ ವೀರ್ಯವು ನೀರಿನಂತೆ ಇದ್ದರೂ, ಸ್ವಪ್ನೇಂದ್ರಿಯವಾದರೂ, ಸ್ತ್ರೀ ಸಂಘಕ್ಕೆ ಮೊದಲೇ ಸ್ಖಲನವಾದರೂ, ಮೂತ್ರದೊಂದಿಗೆ ಹೋಗುತ್ತಿದ್ದರೂ ದೋಷರಹಿತವಾಗಿ ಶರೀರಕ್ಕೆ ಆರೋಗ್ಯವನ್ನೂ ಧಾರ್ಢ್ಯತೆಯನ್ನೂ ಆಯಸ್ಸು, ಬಲ, ತೇಜಸ್ಸು ಉಂಟು ಮಾಡುವದು. ಅಜೀರ್ಣ ಮಲಬದ್ಧತೆ, ಮೆದುಳಿನ ಬಲಹೀನತೆ, ಕೈಕಾಲು ಸೊಂಟ ನೋವುಗಳಿಗೆ ಇದು ದಿವ್ಯ ಔಷಧವು. ಈ ಸಾಲಂಮಿಸ್ರಿ ಎಂಬುವದು ಕಾಬೂಲ್ ಕಂದಾಹಾರ ಪ್ರಾಂತ್ಯದಲ್ಲಿ ಬೆಳೆಯುತ್ತದೆ.

ಈ ಔಷಧದಿಂದ ಗುಣಹೊಂದಿರುವ ಅನೇಕ ಮಹನೀಯರು ತಾವಾಗಿಯೇ ಅನೇಕ ದೇಶಗಳಿಂದಲೂ ಆಫ್ರಿಕ, ಬರ್ಮ, ಪಿನಾಂಗ್, ಸಿಂಗಪೂರ್, ಸಿಲೋನ್, ಬೊಂಬಾಯಿ, ಕಲ್ಕತ್ತ, ಮದ್ರಾಸು ಮತ್ತು ಇಂಡಿಯಾದೇಶದಲ್ಲಿ ಎಲ್ಲಾ ಸ್ಥಳಗಳಿಂದಲೂ ನಮಗೆ ಯೋಗ್ಯತಾ ಪತ್ರಿಕೆಗಳನ್ನು ಕಳುಹಿಸಿರುವರು. ಇವುಗಳ ನಕಲನ್ನು ಯಾರಾದರೂ ತರಿಸಿ ನೋಡಬಹುದು. ಇವುಗಳು ಸುಳ್ಳು ಎಂದು ನಿರ್ಧರಪಡಿಸುವವರಿಗೆ ಮೇಲೆ ಕಂಡ ಬಹುಮಾನವು ಕೊಡಲ್ಪಡುತ್ತೆ. ನಾವು ಹಾಗೆ ಕೊಡದೇ ನಿರಾಕರಿಸಿದಲ್ಲಿ ಕೋರ್ಟು ಮೂಲಕ ಅದನ್ನು ಪಡೆಯಬಹುದು. ೧ ಡಬ್ಬಿಯನ್ನು ೧೫ ದಿನ ಸೇವಿಸಿದಲ್ಲಿ ಗುಣವು ಖಾಡಿತವಾಗಿ ತೋರಬಹುದು. ೨ ಯಾ ೩ ಡಬ್ಬಿಗಳು ಜನ್ಮಾಂತ್ರದವರಿಗೂ ಪೂರ್ಣವಾಗಿ ಗುಣವನ್ನುಂಟು ಮಾಡುವವು. ಹೆಸರು ವಿಳಾಸಗಳನ್ನು ವಿವರವಾಗಿ ಬರಯಬೇಕು. ಒಂದಾವರ್ತಿ ಅಜಮಾಯಿಸಿ ಮಾಡಿ ನೋಡಿದಲ್ಲಿ ಖಾತ್ರಿ ಉಂಟಾಗುತ್ತೆ.

ಕ್ರಯ ಡಬ್ಬಿ ೧ಕ್ಕೆ ರೂ. ೩–೦–೦ ಥಾಂಗಿ ಚಾರ್ಜು ೧ರಿಂದ ೩ ಡಬ್ಬಿಗಳಿಗೆ ೦–೮–೦ ಆಣೆ. ಏಜಂಟರುಗಳು ಎಲ್ಲಾ ಸ್ಥಳಗಳಲ್ಲಿಯೂ ಅವಶ್ಯಕವಾಗಿರುತ್ತೆ. ರಿಷಲ್ ತರಿಸಿಕೊಳ್ಳಬಹುದು. ಆರ್ಡರು ಕೊಡತಕ್ಕ ಕಾಲದಲ್ಲಿ ಈ ಪತ್ರಿಕೆಯ ಹೆಸರನ್ನು ಬರೆಯಬೇಕು.

ಟೆಲಿಗ್ರಾಫ್ ಅಡ್ರಸ್, ಮಿಸ್ರಿ ಬೆಂಗಳೂರು ಸಿಟಿ.
ಡಿ. ಮುನ್ನಾಲಾಲ್, ಡಿಲ್ಲಿ ನೇಟಿವ್ ವೈದ್ಯರು, ಸಾಲಂಮಿಸ್ರಿ ಮುರಬ್ಬ ಡಿಪೋ, ಬೆಂಗಳೂರು ಸಿಟಿ.

12—11

Printed & published by Kodanda Appayya, R.B., Chairman, Board of Directors, at " Kodagu " Press, Mercara for " Kodagu " Ltd.

Reg. N. M. 1550.

If not delivered please return to

"KODAGI" OFFICE MERCARA

ಕೊಡಗು.

ಸಕ್ಯೇನ ಧ್ಯಾಯಾ ವಿದ್ಯಾ ನೀತಿ ಸ್ವಯತ್ನ ಕಾಃ || ಐಕ್ಯಮತ್ಯೇನ ದೇಶಾನಾಂ ಸುಸ್ಥಿರಾ ರಾಜ್ಯ ಸಂಪದಾ ||

ಸಂಪಾದಕ—ಗುಂಡ್ಯಂಡ ಐ. ಬೆಳ್ಯಪ್ಪ.

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವದು.

ಸಂಪುಟ ೬] ಕೊ. ಸ. ೧೯೨೬ನೇ ಇಸವಿ ಜೂನ್ ತಾರೀಖು ೧೮ ನೇ ಶುಕ್ರವಾರ [ಸಂಚಿಕೆ ೩

ಸ್ಥಾಪಿತವಾದದ್ದು 1874 ಮೂಲಧನ 7 ಕೋಟಿ ರೂಪಾಯಿಗಳು

ಓರಿಯಂಟಲ್ ಗವರ್ನ್ಮೆಂಟ್ ಸೆಕ್ಯೂರಿಟಿ ಲೈಫ್ ಅಷ್ಯೂರೆನ್ಸ್ ಕಂಪೆನಿ

ಲಿಮಿಟೆಡ್, ಹೆಡ್ ಆಫೀಸು— ಬೊಂಬಾಯಿ.

1922—1924 ಈ ಮೂರು ವರ್ಷಗಳಲ್ಲಿ ಕಂಪೆನಿಯಲ್ಲಿ ನಡೆದ ಕೆಲಸದ ಫಲಿತಾಂಶಗಳು —

ಲಾಭ— ರೂ. 51,00,000 (ಐವತ್ತೊಂದು ಲಕ್ಷ ರೂಪಾಯಿಗಳು) ಈ ಪ್ರಕಿ 45,94,80 ರೂಪಾಯಿಗಳನ್ನು ಪಾಲಿಸಿ ಮಾಡಿದುವವರ ವಿಮೆ ಹಣಕ್ಕೆ ಹೆಚ್ಚು ಬೋನಸ್ ರೂಪವಾಗಿ ಈ ಕೆಳಗೆ ತೋರಿಸಿರುವ ರೀತಿಯಲ್ಲಿ ಸೇರಿಸಿರುತ್ತದೆ

ಜೀವಮಾನಾವಧಿಯ ಪಾಲಿಸಿಗೆ ರೂ. 1000 ವಿಮೆ ಹಣಕ್ಕೆ

ಈ ಮೂರುವರ್ಷಗಳಿಗೆ ರೂ. 67½.

ಕ್ಲಿಪ್ತಕಾಲದ ಪಾಲಿಸಿಗೆ ರೂ. 1000 ವಿಮೆ ಹಣಕ್ಕೆ

ಈ ಮೂರುವರ್ಷಗಳಿಗೆ ರೂ. 54.

ಈ ಕಂಪೆನಿಯಲ್ಲಿ ಕ್ರಮೇಣ ಹೆಚ್ಚುತ್ತಿರುವ ಅನುರಾಗವು ಈ ಕೆಳಗೆ ಕೊಟ್ಟಿರುವ ಹೊಸ ಕೆಲಸದ ಪಟ್ಟಿಯಿಂದ ವ್ಯಕ್ತವಾಗುತ್ತದೆ.

1923ರಲ್ಲಿ—1 1 74 00,000
1924 „ 2,37,00,000
1925 „ 2 96,00,000

ಇನ್ನೂ ದಿನದಿನಕ್ಕೂ ಅಭಿವೃದ್ಧಿಯಾಗುತ್ತಲೇ ಇದೆ. ಜೀವವಿಮಾ ಪತ್ರದಲ್ಲಿ ಹಣವನ್ನು ಲಾಭಕರವಾಗಿ ತೊಡಗಿಸಲು ಇದೇ ಸುಸಮಯ.

ಬೇಕಾದ ವಿಷಯಗಳನ್ನು ಈ ಕೆಳಗಿನ ವಿಳಾಸಕ್ಕೆ ಬರೆದು ತಿಳಿದುಕೊಳ್ಳಬಹುದು.

ಓರಿಯಂಟಲ್ ಬಿಲ್ಡಿಂಗ್ಸ್,
ಪೋಸ್ಟ್ ಬಾಕ್ಸ್ 56,
ಬೆಂಗಳೂರು

ಪಿ. ಪಿ. ಸುಬ್ರಮಣ್ಯಯ್ಯರ್,
ಬ್ರಾಂಚ್ ಸೆಕ್ರೆಟರಿ.

52—11.

ಮನೋಲ್ಲಾಸಿನಿ ತೈಲ

ತಲೆನೋವು, ತಲೆ ತಿರುಗುವುದು, ತಲೆಯ ಕಣ್ಣುರಿಯಿಂದ ಕೀವು ಸೋರುವುದು ಕಿವುಡುತನ, ಕಣ್ಣುನೋವು, ಅಪಸ್ಮಾರ ನಿದ್ರೆ ಬಾರದಿರುವುದು, ನೆನಪು ಶಕ್ತಿ ಕುಂದಿಹೋಗುವುದು ಇವುಗಳೆಲ್ಲ ಖಂಡಿತ ಗುಣವಾಗುತ್ತದೆ ಉದುರುವ ಕೂದಲನ್ನು ನಿಲ್ಲಿಸಿ ಗಿಡ್ಡಗಿರುವ ಕೂದಲನ್ನು ಬೆಳೆಯಿಸಿ ಕೆಳಗೆ ... ಹೊಳಪನ್ನು ಕೊಟ್ಟು ... ವಾಗುವ ಕೂದಲನ್ನು ತಡೆದು ಕೂದಲು ಇಲ್ಲದ ಸ್ಥಳದಲ್ಲಿ ಹೊಸ ಕೂದಲನ್ನು ಹುಟ್ಟಿಸುತ್ತದೆ ... ಸೀಸೆಗೆ ರೂ 1, 3 ಸೀಸೆಗೆ 2—10—0, ದೊಡ್ಡ ಸೀಸೆಗೆ ರೂ 2, 3 ಸೀಸೆಗಳಿಗೆ 5—0

ಚಂದನಾಸವ.— ಇದು ... ಮೂತ್ರಕೃಚ್ಛ್ರ, ಮೂತ್ರ ... ಮೂತ್ರನಾಳದಲ್ಲಿ ... ಹೊಯ್ಯುವಾಗ ಉರಿಯುವುದು, ಮೂತ್ರನಾಳದಿಂದ ಕೀವು ಬರುವುದು, ಮೂತ್ರದಲ್ಲಿ ಧಾತು ... ಬರುವದು, ... ಪರಿಹಾರಕ್ಕೆ ... ಜೌಷಧಿ ... ಬಾಟ್ಲಿ 1, 3, 6; ರೂ 1—4—0 3—8—0 —

ರೋಮನಾಶಿನಿ— ... ರೋಮವಿರುವ ಭಾಗಕ್ಕೆ ... ರೋಮವು ಉದುರಿ ಬೀಳುತ್ತದೆ ... 3 ಡಬ್ಬಿಗಳಿಗೆ ರೂ. 1, 1 ಡಜನಿಗೆ 3—8—0

ಅಮೃತಾರಿಷ್ಟ.— ಇದು ... ಜ್ವರಕ್ಕೆ ಉತ್ತಮ, ಬೆಲೆ — ಬಾಟ್ಲಿ 1, 3, 6ಕ್ಕೆ ರೂ 1—4—0, 3—8—0, 6—12—0

ಲೋಹಾಸವ.— ಇದು ಜ್ವರಗಡ್ಡೆಗೆ ... ರಕ್ತಹೀನತೆಗೆ ... ಬೆಲೆ — ಬಾಟ್ಲಿ 1, 3, 6ಕ್ಕೆ ರೂ. 1—4—0; 3—8—0, 6—12—0

ನಮ್ಮ ಕೆಟಲಾಗು ತರಿಸಿ ನೋಡಿರಿ

ವಿಳಾಸ—ಮನೋಲ್ಲಾಸಿನಿ ಕಂಪೆನಿ.
9 ಮಂಗಳೂರು, ಕೆಂಪನಾಡಿ.

52—26

ಸುವರ್ಣ ಅಯಸ್ಕಾಂತ ದ್ರಾವಕ.

(The Ideal Nervine Tonic)

ಇದು ಅತಿ ಆಶ್ಚರ್ಯಕರವಾದ ಟಾನಿಕ !

ಇದರಿಂದ ಕೆಟ್ಟು ಹೋಗಿರುವ ರಕ್ತವನ್ನು ಶುದ್ಧ ಮಾಡುವುದು ... ಫಲ. ಅತಿ ಉಷ್ಣದಿಂದ ತಣ್ಣಗೆ ... ಶಕ್ತಿಯನ್ನುಂಟುಮಾಡುವುದು ... ನರಗಳಿಗೆ ಬಲವನ್ನು ಕೊಡುವುದು. ... ಜೀವನ ... ಅನೇಕ ಗುಣಗಳನ್ನು ಕೊಟ್ಟು ... ರೋಗಗಳನ್ನು ಹೋಗಲಾಡಿಸಿ ಹೆಚ್ಚು ಬಲವನ್ನು ಕೊಡುವುದು.

ಇದನ್ನು 20 ದಿನ ಸೇವನೆ ಮಾಡುವದರಿಂದ ಮೇಲೆ ಹೇಳುವ ಗುಣಗಳನ್ನು ಕೊಟ್ಟು ಬಲಿಷ್ಠನಾಗಿ ಮಾಡುವುದು. ... ವರುಷದ ಸ್ತ್ರೀ ಪುರುಷರು, ದೊಡ್ಡವರ ವರೆಗೆ ಸೇವನೆ ಮಾಡಬಹುದು. ಉಪಯೋಗಿಸುವ ಕ್ರಮವು ... ಸಂಗಡ ಕಳುಹಿಸಲ್ಪಡುವುದು.

ಕ್ರಯ 20 ದಿನಗಳು ಸೇವನೆ ಮಾಡುವ ಬಾಟ್ಲಿ 1ಕ್ಕೆ 1—8—0
„ 40 „ „ „ 2—8—0.

ಪಿ. ಕೆ. ಎಸ್.
17 ಈವನಿಂಗ್ ಬಜಾರ್,
ಪಿ. ಟಿ. ಮದ್ರಾಸ್

ಸತ್ಯಮೇವ ಜಯತೇ.

(ಗುಣವಾಗದಿದ್ದರೆ ಹಣ ಪರತ)

ಧಾತುಪೌಷ್ಟಿಕ ಕಾಮೋತ್ತೇಜಕ, ಇಂದ್ರಿಯಸ್ತಂಭಕವಾದ

ಮದನೋದ್ಭವ ಗುಳಿಗೆ.

ಜನನೇಂದ್ರಿಯದ ಶಿಥಿಲತೆ ನಿಬಲತೆ ನಪುಂಸಕತ್ವ ಕ್ಷೀಣತೆ, ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣವಾಗುವದಲ್ಲದೆ ಧಾತು ಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋಲ್ಲಾಸಕ ಇಂದ್ರಿಯಸ್ತಂಭಕ, ಗರ್ಮಿ, (ಟಾಕಿ) ಗುಹ್ಯಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾ ತರದ ಬಕ್ಕೆಗಳು, ಹುಣ್ಣುಗಳು ಪಿತ್ತದ ಬಾಧೆಗಳು, ಕಟಿರೋಗ ವಾತರೋಗವು ಮುಂತಾದವು ಅತಿತ್ವರಿತ ಗುಣವಾಗಿ ... ಶಾಂತಿಯೂ ರತಿಸುಖಕ್ಕೆ ಸಂಪೂರ್ಣ ಶಕ್ತಿಯೂ ಉಂಟಾಗುತ್ತದೆ ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗುತ್ತವೆ ಕಿಮ್ಮತ್ತು ೬೦ ಗುಳಿಗೆಗಳಿಗೆ ೧ ರೂಪಾಯಿ ಇದನ್ನು ಸೇವಿಸುವಾಗ್ಯೆ ನಪುಂಸಕತ್ವಾರಿ ತೈಲವನ್ನು ಉಪಯೋಗಿಸಿದರೆ ಉತ್ತಮ. ಕಿಮ್ಮತ್ತು ಬಾಟ್ಲಿ ೧ಕ್ಕೆ ರೂ ೨—೧೨—೦.

ಪ್ರಮೇಹನಿವಾರಣಿ—ಇದರ ಸೇವನೆಯಿಂದ ಮೂತ್ರನಾಳದಿಂದ ಕೆಂಪು, ಹಳದಿಯಂತೆ ಹೋಗತಕ್ಕ ಕೀವು ಉರಿ ವಗೈರೆ ಅಗದಿಜಾಗ್ರತೆಯಿಂದ ಗುಣವಾಗುವದು ಕಿಮ್ಮತ್ತು ಬಾಟ್ಲಿ೧ಕ್ಕೆ ರೂ ೨—೮—೦ ಟ ಪ ಖರ್ಚು ಅಲಾಹಿದ ನಪತ್ರಿಕೆ ಔಷಧದ ಸಂಗಡ

... ಸ್ಟಾಂಪು ಕಳುಹಿಸಿದರೆ ಕ್ಯಾಟಲಾಗ್

ವಿಳಾಸ —
ವೈದ್ಯ ಜಿ. ಎಲ್ ಜೋಶಿ ಮತ್ತು ಕಂಪೆನಿ.
22 ನಂ 6. ಪೋಸ್ಟ್ ಬಂಕಾಪುರ, ಉತ್ತರ ಕಾನಡಾ.

EMPIRE OF INDIA LIFE ASSURANCE CO., LTD.

(Established 1897)

ALL WITH PROFIT POLICIES

Issued before 28th February, 1927 will share in the BONUS Distribution for the two years ending on that date.

PROSPECTUS ON APPLICATION.

Bangalore Branch · 152 Commercial Street.

Madras Branch · 9 & 10 Second Line Beach.

24—19

ARMS & AMMUNITION MART,

Mahomedally-Noorbhoy

321 Abdul Rehman Street, near Crawford Market, BOMBAY, 3

Telegraphic Address—"SHOOTER" Bombay.

[52—42] Please write for Reduced nett prices list for 1926.

"ಕೊಡಗು"

ಸನ್ ೧೯೨೬ನೇ ಇಸವಿ ಜೂನ್ ತಾ. ೧೮ ನೇ ಶುಕ್ರವಾರ

ಕೃಷಿಕನ ಸ್ಥಿತಿಯ ಮೇಲೆ ವೈಸ್‌ರಾಯರ ಭಾಷಣ.

ಹಿಂದೂಸ್ಥಾನದ ಕೃಷಿಕನ ಸ್ಥಿತಿಯನ್ನು ಯಾವ ರೀತಿಯಿಂದ ಅಭಿವೃದ್ಧಿಗೊಳಿಸಬಹುದೆಂಬದನ್ನು ಕಂಡು ಹಿಡಿಯಲಿಕ್ಕೆ ಚಕ್ರವರ್ತಿಯವರಿಂದಲೇ ಒಂದು ಕಮಿಶನ್ ನೇಮಕವಾಗಿದೆ. ಆ ಕಮಿಶನ್ ದೇಶದ ಜನರ ಅಭಿಪ್ರಾಯವನ್ನು ತೆಗೆದುಕೊಳ್ಳಲಿಕ್ಕೆ ಬರುವ ಅಕ್ಟೋಬರಿನಿಂದ ಶುರುಮಾಡುತ್ತದೆ. ಆ ಕಮಿಶನಿನ ಮುಂದೆ ಕೃಷಿ ಇಲಾಖೆಯ ಈ ವರೆಗಿನ ಅನುಭವವನ್ನು ಇಡಲಿಕ್ಕೂ ಜನರಿಂದ ಯಾವ ಯಾವ ವಿಷಯಗಳ ಮೇಲೆ ಅಭಿಪ್ರಾಯ ತೆಗೆದುಕೊಳ್ಳಬೇಕೆಂಬದನ್ನು ನಿಶ್ಚಯಿಸಲಿಕ್ಕೂ ಎಲ್ಲಾ ಪ್ರಾಂತೀಕ ಸರಕಾರಗಳ ಕೃಷಿ ಇಲಾಖೆಯ ಮಂತ್ರಿಗಳ ಸಭೆಯೊಂದು ಮೊನ್ನೆ 7ನೇ ತಾರೀಕಿನಲ್ಲಿ ಸಿಮ್ಲಾದಲ್ಲಿ ಸೇರಿತು. ಆ ಸಭೆಯ ಕೆಲಸವನ್ನು ಪ್ರಾರಂಭಿಸುವ ಸಮಾರಂಭದಲ್ಲಿ ವೈಸ್‌ರಾಯರು ಒಂದು ಭಾಷಣ ಮಾಡಿದರು. ಅದರಲ್ಲಿ ಕೃಷಿಯಿಂದ ಜೀವನ ಮಾಡುತ್ತಿರುವ ರೈತನ ವಿಷಯ ಕೆಲವು ಮಾತುಗಳನ್ನಾಡಿದರು. ಆ ಭಾಷಣವನ್ನು ಓದಿದರೆ ಈಗ ನೇಮಕವಾದ ಕಮಿಶನಿನಿಂದ ಕೃಷಿಕರ ಆರ್ಥೀಕ ಸ್ಥಿತಿಯು ಅಭಿವೃದ್ಧಿಯಾಗಬಹುದೆಂತ ಆಶೆ ಹುಟ್ಟುವಂತಿದೆ. ಅಂಥಾ ಕಮಿಶನಿನಿಂದ ವಿಶೇಷ ಪ್ರಯೋಜನವಾದೀತೆಂತ ನಮಗೇನೂ ಆಶೆ ಇಲ್ಲ. ಆದರೆ ವೈಸ್‌ರಾಯರು ಹೇಳುವ ಕಷ್ಟಗಳನ್ನು ಪರಿಹರಿಸಿಕೊಳ್ಳಲು ಕೃಷಿಕನಿಗೆ ಸರಕಾರವು ಸಹಾಯಕೊಟ್ಟರೆ ಕೃಷಿಕನಿಗೆ ತುಂಬಾ ಸಹಾಯ ಮಾಡಿದಂತೆ ಆದೀತು.

ಸರಕಾರದ ಉತ್ಪತ್ತಿಯ ಹೆಚ್ಚಿನ ಭಾಗಕ್ಕೆ ಕಾರಣನಾದ ಗ್ರಾಮವಾಸಿ ಕೃಷಿಕನಿಗೆ ಸರಕಾರದಿಂದ ಸಾಕಷ್ಟು ಸಹಾಯ ದೊರಕುತ್ತಿರುವದಿಲ್ಲವೆಂತ ನಾವು ಆಗಿಂದಾಗ್ಯೆ ಬರೆಯುತ್ತಿದ್ದೇವೆ, ಎಂಬದು ಎಲ್ಲರಿಗೂ ತಿಳಿದ ಸಂಗತಿಯಾಗಿದೆ. ಆ ಅಭಿಪ್ರಾಯವನ್ನು ವೈಸ್‌ರಾಯರೇ ಒಪ್ಪಿದರೆಂತಾದರೆ ಕೃಷಿಕನ ಬಾಳು ಅಭಿವೃದ್ಧಿಯಾಗಬಹುದೆಂತ ಆಶೆ ಹುಟ್ಟಲು ಕಾರಣವಿದೆ. ವೈಸ್‌ರಾಯರು ತಾನು ಸ್ವತಃ ಕೃಷಿಕನಾಗಿದ್ದು ಅನುಭವಪಟ್ಟವನಾಗಿ ಕೃಷಿಕನ ಕಷ್ಟಗಳನ್ನು ಚೆನ್ನಾಗಿ ತಿಳಿದವನಾಗಿದ್ದೇನೆಂತ ಹೇಳಿದ್ದಾರೆ. ಒಟ್ಟು ಹಿಂದೂಸ್ಥಾನವನ್ನು ಆಳುವಂಥ ದೊಡ್ಡ ಪದವೀಧರರಿಗೆ ಕೃಷಿಕರ ಅನುಭವವು ಸ್ವತಃ ಇರುವದು ಬಹಳ ಅಪರೂಪ. ಈಗ ಇಂಥಾ ಅನುಭವಶಾಲಿಯು ಹಿಂದೂಸ್ಥಾನದ ವೈಸ್‌ರಾಯ್ ಆಗಿ ಒಂದದ್ದರಿಂದ ಕೃಷಿಕನ ಕಡೆಗೆ ಸರಕಾರದ ದೃಷ್ಟಿ ಈಗಲಾದರೂ ಬೀಳದಿರಲಾರದೆಂತ ನಮಗೆ ತೋಚುತ್ತದೆ. ಹಿಂದೂಸ್ಥಾನಕ್ಕೆ ಸ್ವರಾಜ್ಯ ದೊರಕಿದಾಗ ಇಂಥಾ ಮನುಷ್ಯನೊಬ್ಬನು ಹಿಂದೂಸ್ಥಾನದ ಮುಖ್ಯ ಅಧಿಕಾರಕ್ಕೆ ಒಂದಿದ್ದರೆ ತುಂಬಾ ಸಹಾಯವಾಗುತ್ತಿತ್ತು. ಕೃಷಿಕನ ಅಭಿವೃದ್ಧಿಗೆ ಬೇಕಾದ ಅಭಿಪ್ರಾಯಗಳನ್ನೂ ಅಂಥಾ ಅಭಿಪ್ರಾಯಗಳನ್ನು ನೆರವೇರಿಸಲಿಕ್ಕೆ ಬೇಕಾದ ಧನಸಹಾಯವನ್ನೂ ಸೂಚಿಸಿದ್ದರೆ ಪ್ರಜೆಗಳ ಹಿತಚಿಂತಕರಾದ ಪ್ರಜಾಪ್ರತಿನಿಧಿಗಳು ಬೇಕಾದಷ್ಟು ಧನಸಹಾಯಕೊಟ್ಟು ಕೃಷಿಕನ ಸ್ಥಿತಿಯನ್ನು ಅಭಿವೃದ್ಧಿಗೊಳಿಸುತ್ತಿದ್ದರು. ಈಗಿನ ಆಡಳಿತ ಪದ್ಧತಿಯಲ್ಲಿ ವೈಸ್‌ರಾಯರಲ್ಲ ಚಕ್ರವರ್ತಿಯವರೇ ಪ್ರಜಾಪಕ್ಷದವರಾಗಿದ್ದರೂ ಪ್ರಜಾಹಿತಕ್ಕೆ ಬೇಕಾದ ಧನಸಹಾಯವೂ ಸಹಾನುಭೂತಿಯೂ ದೊರೆಯಲು ಸಾಧ್ಯವಿಲ್ಲ. ಸರಕಾರದ ಉತ್ಪತ್ತಿಯ ದೊಡ್ಡ ಭಾಗವು ಮಿಲಿಟರಿ ಇಲಾಖೆಗೂ ಪರದೇಶದಿಂದ ಬರುವ ಉದ್ಯೋಗಸ್ಥರ ಸಂಬಳಕ್ಕೂ ಹೋಗುತ್ತಿರುವಾಗ ತನ್ನ ಕಷ್ಟಗಳನ್ನು ಬಹಿರಂಗಪಡಿಸಲಿಕ್ಕೂ ಶಕ್ತಿ ಇಲ್ಲದ ಕೃಷಿಕನ ಅಭಿವೃದ್ಧಿಗೆ ಬೇಕಾಗುವ ಹಣವು ಸರಕಾರದಿಂದ ದೊರೆಯುವದು ಹೇಗೆ ಸಾಧ್ಯವಿದೆ? ಸಹಾನುಭೂತಿ ಇರುವ ವೈಸ್‌ರಾಯರು ಇರುವಾಗ ಅಲ್ಪಸ್ವಲ್ಪ ಸಹಾಯವಾದರೂ ದೊರಕೀತೆಂತ ನಂಬಬಹುದು.

ವೈಸ್‌ರಾಯರ ಭಾಷಣದಲ್ಲಿ ಕೃಷಿಕನ ಯಾವ ಯಾವ ಕಷ್ಟಗಳಿಗೆ ಪರಿಹಾರ ಒದಗಿಸಬೇಕೆಂಬದನ್ನು ವಿವರಿಸಿದ್ದಾರೆ. ಕೃಷಿಕನ ಅಜ್ಞಾನ, ಬಡತನ, ಬಂಡವಾಳವಿಲ್ಲದಿರುವಿಕೆ, ಅಂಥಾ ದೊರೆಯುವ ಹಣಕ್ಕೂ ಹೆಚ್ಚಿನ ಬಡ್ಡಿ, ಭೂಮಿಯನ್ನು ಅತಿ ಸಣ್ಣ ಭಾಗಗಳಾಗಿ ಪಾಲುಮಾಡಿಕೊಂಡಿರುವಿಕೆ, ಕ್ರಿಮಿಕೀಟಗಳ ಕಾಟ, ಜಾನುವಾರುಗಳ ಬಾಯಿಲೆ, ಬೆಳೆಸಿದ ಸಾಮಗ್ರಿಗೆ ಒಳ್ಳೆ ಧಾರಣೆ ದೊರೆಯದಿರುವಿಕೆ ಮುಂತಾದ ಕಷ್ಟನಿವಾರಣೆಗಳಿಗೆ ಉಪಾಯವನ್ನು ಕಂಡುಹಿಡಿಯಬೇಕಾದ ಅವಶ್ಯಕತೆ ಒಂದಿದೆಯೆಂತ ಹೇಳಿದ್ದಾರೆ. ಇದರ ಜೊತೆಗೆ ರೈತನಿಗೆ ಬಿದ್ದಿರುವ ಹೊರಲಸಾಧ್ಯವಾದ ವಿಧವಿಧದ ಕಂದಾಯದ ಕಷ್ಟವನ್ನೂ ಹೇಳಬಹುದಿತ್ತು. "ಒಟ್ಟು ಹಿಂದೂಸ್ಥಾನದಲ್ಲಿ ಕೃಷಿಕರ ಸಂಖ್ಯೆ ಶೇಕಡ 71ರಷ್ಟು ಇದೆ. ಹಿಂದೂಸ್ಥಾನದಲ್ಲಿ ಗ್ರಾಮವಾಸವೇ ಸ್ವಾಭಾವಿಕವಾಗಿದೆ. ಹಿಂದೂಸ್ಥಾನದ ಸ್ವಭಾವವನ್ನೂ ಸ್ಥಿತಿಯನ್ನೂ ತಿಳಿಯಬೇಕಾದರೆ ಗ್ರಾಮಾಂತರಗಳಿಗೆ ಹೋಗಬೇಕು. ಹಿಂದೂಸ್ಥಾನದ ಸಾಂಪತ್ತಿಕ ಸ್ಥಿತಿಯನ್ನೂ ರಾಜಕೀಯ ಬೆಳವಣಿಗೆಯನ್ನೂ ಹಿಂದೂಸ್ಥಾನದ ಕೃಷಿಕರೆಂಬ ಪಾಯದ ಮೇಲೆ ಕಟ್ಟಬೇಕಾಗಿದೆ. ಕೃಷಿಕನ ಬಾಳುವೆಯ ದರ್ಜೆಯನ್ನು ಮೇಲಕ್ಕೆ ಏರಿಸಲೂ ಮತ್ತು ಮುಂದಿನ ರಾಜ್ಯಾಡಳಿತದಲ್ಲಿ ಸರಿಯಾದ ಭಾಗ ತೆಗೆದುಕೊಳ್ಳಲು ಕೃಷಿಕನನ್ನು ತಯಾರಿಸಲೂ ಪ್ರಯತ್ನಿಸದ ಸರಕಾರವು ಸರಕಾರವೆನಿಸಿಕೊಳ್ಳಲು ಅರ್ಹತೆಯುಳ್ಳದ್ದಾಗದು. ಈಚೆಗೆ ಹಿಂದುಸ್ಥಾನದಲ್ಲಿ ಆದ ರಾಜಕೀಯ ಸುಧಾರಣೆಯಿಂದ ಗ್ರಾಮವಾಸಿಗಳಾದ ರೈತರಿಗೆ ಪ್ರಾಮುಖ್ಯತೆ ಒಂದಿದೆ. ಅವರ ಜವಾಬ್ದಾರಿಯನ್ನು ಸರಿಯಾಗಿ ವಹಿಸಿಕೊಳ್ಳಲು ಅವರನ್ನು ಅರ್ಹರಾಗುವಂತೆ ತಯಾರುಮಾಡಬೇಕು. ಅವರ ಸ್ಥಿತಿಯನ್ನು ಅಭಿವೃದ್ಧಿಗೊಳಿಸಿಕೊಳ್ಳಲಿಕ್ಕೆ ಮಾಡುವ ಪ್ರಯತ್ನವು ದೇಶದ ಮುಂದಿನ ಅಭಿವೃದ್ಧಿಗೆ ಸಹಾಯಕರವಾಗುತ್ತದೆ" ಎಂತ ಹೇಳಿದ್ದಾರೆ. ಈ ಮಾತುಗಳಲ್ಲಿ ಇರುವ ಅಭಿಪ್ರಾಯಗಳಿಗನುಸಾರವಾಗಿ ನಮ್ಮ ಸರಕಾರವು ನಡೆದುಕೊಂಡರೆ ಎಷ್ಟೋ ಪ್ರಯೋಜನವಾದೀತು. ತತ್ಕಾಲ ಅಂಥಾ ನಡವಳಿಕೆಗಳು ಕಾಣಬರಲಾರದಾದರೂ ಅಂಥಾ ಸಹಾನುಭೂತಿಯ ಮಾತುಗಳಿಂದಲೇ ಎಷ್ಟೋ ತೃಪ್ತಿಯಾಗುತ್ತದೆ.

ಜಗತ್ತಿನ ಭೂಮಂಡಲದ ಎಲ್ಲಾ ಭಾಗಗಳೊಂದಿಗೆ ವ್ಯಾಪಾರ ಮಾಡಲು ಪ್ರಾರಂಭಿಸಿದಂದಿನಿಂದಲೂ ದೇಶದೊಳಗೆ ಪ್ರಯಾಣದ ಅನುಕೂಲಗಳಾದಂದಿನಿಂದಲೂ ಉಂಟಾದ ಬದಲಾವಣೆಗಳಿಗೆ ಸರಿಯಾಗಿ ಕೃಷಿಕನ ಆರ್ಥೀಕ ಸ್ಥಿತಿಯು ಅಭಿವೃದ್ಧಿ ಹೊಂದಿದೆಯೋ ಎಂಬ ಸವಾಲ್ ಮಾಡಿ ನೋಡಬೇಕೆಂತ ವೈಸ್‌ರಾಯರು ಹೇಳಿದ್ದಾರೆ. ಇಲ್ಲ ಎಂಬ ಉತ್ತರ ದೊರೆಯುತ್ತದೆ ಎಂಬದು ವಾಚಕರಿಗೆ ಸ್ಪಷ್ಟವಾಗುತ್ತದಷ್ಟೆ. ಹಾಗಾದರೆ ಯಾವ ಕಾರಣದಿಂದ ಕೃಷಿಕರು ಅಭಿವೃದ್ಧಿ ಹೊಂದಲಿಲ್ಲವೆಂಬದನ್ನು ಕಂಡುಹಿಡಿಯಬೇಕೆಂತ ವೈಸ್‌ರಾಯರು ಹೇಳಿದ್ದಾರೆ. ಹಿಂದುಸ್ಥಾನದ ಕೃಷಿಕನು ಬರೇ ತನ್ನ ಹೊಟ್ಟೆಪಾಡಿಗೆ ಬೇಕಾದಷ್ಟು ಬೆಳೆದರೆ ಸಾಲದು. ಪ್ರಪಂಚದ ಇತರ ಭಾಗದ ಜನರಿಗೂ ಬೇಕಾದದ್ದನ್ನು ಒದಗಿಸಿಕೊಟ್ಟು ತನ್ನ ಆರ್ಥಿಕ ಸ್ಥಿತಿಯನ್ನು ಬೆಳೆಸಿಕೊಳ್ಳಬೇಕೆಂತ ವೈಸ್‌ರಾಯರು ಹೇಳಿರುತ್ತಾರೆ.

ಸರಕಾರದ ಮೇಲಧಿಕಾರಿಗಳೆಲ್ಲರೂ ತಮಗಿಂತ ಮುಂಚೆ ಇದ್ದ ಅಧಿಕಾರಿಗಳೂ ಮತ್ತು ಶಾಖೆಯಲ್ಲಿ ಇರುವ ಅಧಿಕಾರಿಗಳೂ ಮಾಡಿರುವ ಕೆಲಸವೆಲ್ಲಾ ತೃಪ್ತಿಕರವಾಗಿಯೇ ಆಗಿದೆಯೆಂತ ಹೇಳುವದು ಸ್ವಭಾವವಾಗಿದೆ. ಈ ಸ್ವಭಾವಿಕ ಗುಣಕ್ಕನುಸಾರವಾಗಿ "ಕೃಷಿಯ ಅಭಿವೃದ್ಧಿಗಾಗಿ ಈಚೆಗೆ ಸರಕಾರವು ಮಾಡಿರುವ ಏರ್ಪಾಡುಗಳು ತೃಪ್ತಿಕರವಾಗಿದೆ" ಎಂತ ಹೇಳಿದ್ದಾರೆ. ಬೇರೆ ಪ್ರಾಂತ್ಯಗಳಲ್ಲಿ ಕೃಷಿಯ ಅಭಿವೃದ್ಧಿಗಾಗಿ ಏನಾದರೂ ಆಚರಣೆಯಲ್ಲಿ ಮಾಡಿದ್ದಾರೋ ಏನೋ. ನಮ್ಮ ದೇಶದಲ್ಲಂತೂ ಅಲ್ಪಸ್ವಲ್ಪ ಹಣ ಖರ್ಚುಮಾಡುತ್ತಿರುವದೇನೋ ಹೌದಾದರೂ ಕೃಷಿಕನ ಭೂಮಿಯಲ್ಲಿ ಒಂದು ಕೆಸೆ ಬೆಳೆಯುವಲ್ಲಿ ಎರಡು ಬೆಳೆಯುವಂತೆ ಆಗಲಿಲ್ಲ, ಒಂದು ಕಾಳಾದರೂ ಹೆಚ್ಚು ಬೆಳೆಯುವಂತೆ ಆಗಲಿಲ್ಲ. ಹೀಗಿರುವಾಗ ಕೃಷಿಯ ಅಭಿವೃದ್ಧಿಗಾಗಿ ಸರಕಾರದವರು ಮಾಡಬೇಕಾದ ಕೆಲಸವನ್ನು ಮಾಡಿದ್ದಾರೆಂತ ಹೇಳಿದ್ದನ್ನು ಒಪ್ಪುವದು ಹೇಗೆ? ಈಗಲಾದರೂ ಕೃಷಿಕನಿಗೆ ಸಹಾಯಕ್ಕೆ ನಮ್ಮ ದೇಶದಲ್ಲೂ ತಕ್ಕಷ್ಟು ಏರ್ಪಾಡು ನಡೆದೀತೆಂತ ಹಾರೈಸುತ್ತೇವೆ. ಕೃಷಿಕನ ಅಭಿವೃದ್ಧಿಗೆಂತ ಇನ್ನೊಬ್ಬ ಸಾವಿರ ರೂಪಾಯಿ ಸಂಬಳದ ಆಫೀಸರನ್ನು ನೇಮಿಸುದರ ಪ್ರಯೋಜನವಾಗಲಾರದು. ಕೃಷಿ ವಿದ್ಯೆ ಕಲಿತ ದೇಶೀಯ ಯುವಕರನ್ನು ಗ್ರಾಮಾಂತರಗಳಲ್ಲಿ ತಿರುಗಿ ಜನರಿಗೆ ಬೋಧನೆ ಕೊಡಲು ಏರ್ಪಾಡು ಮಾಡಬೇಕು. ನಮ್ಮ ದೇಶದ ಕೃಷಿಕನಿಗೆ ಬೇಕಾದಷ್ಟು ಗೊಬ್ಬರವನ್ನು ಏರಿಸಿಕೊಳ್ಳಲು ಉಪಾಯಗಳನ್ನು ಹೇಳಿಕೊಡಬೇಕು. ನಮ್ಮ ದೇಶದಲ್ಲು ತುಂಬಾ ಸೊಪ್ಪು ದೊರೆಯುತ್ತದೆ. ಆ ಸೊಪ್ಪನ್ನು ಗೊಬ್ಬರಮಾಡಿಕೊಂಡರೆ ಆಗುವ ಪ್ರಯೋಜನವನ್ನು ಕೃಷಿ ಇಲಾಖೆಯವರು ತೋರಿಸಿಕೊಟ್ಟರೆ ಕೃಷಿಕರು ಹೆಚ್ಚಾಗಿ ಕಾಡು ಸೊಪ್ಪನ್ನು ಉಪಯೋಗಿಸಿಯಾರೆಂತ ನಂಬುತ್ತೇವೆ. ನಮ್ಮ ದೇಶದಲ್ಲಿ ನೀರಿನ ಜೋಗುಗಳು ಅಲ್ಲಲ್ಲಿ ಇವೆ. ಇವುಗಳಿಂದ ವಿದ್ಯುಚ್ಛಕ್ತಿಯನ್ನು ಉಂಟುಮಾಡಿಕೊಂಡು ಕೃಷಿಕರಿಗೆ ಯಾವ ರೀತಿಯಲ್ಲಿ ಸಹಾಯಮಾಡಬಹುದೆಂಬದನ್ನು ಯೋಚಿಸಬಹುದು.

ಇಂಡಿಯಾ ಸರಕಾರದವರು ಎಲ್ಲಾ ಸ್ಥಳೀಯ ಸರಕಾರಗಳಿಗೆ ಈ ತಾರೀಕು ಏಪ್ರಿಲ್ 26ರಲ್ಲಿ ಅವರವರ ಪ್ರಾಂತ್ಯಗಳಲ್ಲಿ ಕೃಷಿ ಅಭಿವೃದ್ಧಿಗೆ ಏನೇನು ಮಾಡಿದ್ದೀರಿ, ಏನುಮಾಡಲು ಯೋಚಿಸಿದ್ದೀರಿ ಎಂತ ಕೇಳಿದ್ದಾರಂತೆ. ನಮ್ಮ ಸರಕಾರದ ಜವಾಬು ಬಹಳ ಸುಲಭದಲ್ಲೇ ತೀರುತ್ತೆ. ಏನುಮಾಡಿರುವದಿಲ್ಲ ಎಂದರೆ ಅತಿಶಯೋಕ್ತಿಯಾಗಲಾರದು. ಆದರೆ ಇನ್ನು ಮುಂದೆ ಏನು ಮಾಡಬಹುದೆಂಬದನ್ನು ತುಂಬಾ ಒರೆಯಬೇಕು. ಸರಕಾರದವರೂ ದೇಶದವರೂ ಯಾವ ಯಾವ ರೀತಿಯಲ್ಲಿ ಕೃಷಿಕನಿಗೆ ಸಹಾಯಮಾಡಬಹುದೆಂಬದನ್ನು ಕೂಡ ಯೋಚಿಸ ತೊಡಗಬೇಕು. ಬರುವ ಅಕ್ಟೋಬರ್ ತಿಂಗಳಲ್ಲಿ ಪ್ರಾರಂಭವಾಗುವ ಕಮಿಶನ್ ಮುಂದೆ ನಮ್ಮ ಸರಕಾರವೂ ಪ್ರಜಾಪ್ರಮುಖರೂ ಅಭಿಪ್ರಾಯ ಕೊಡಲು ತಯಾರಾಗಬೇಕು.

ಮಾನವ ಜೀವನ ರಹಸ್ಯ.

ಕಷ್ಟದಿಂದ ದೊರೆಯತಕ್ಕಂಥ ವಸ್ತುವನ್ನು ಸಂಪಾದಿಸುವದೇ ಮನುಷ್ಯ ಜನ್ಮವೆತ್ತುವದು. ದೊರಕಿಸಲಿಕ್ಕೆ ಸಾಧ್ಯವಿಲ್ಲದ ವಸ್ತುವಿನ ಸಾಧನವೇ ಮನು ಅವತಾರದ ರಹಸ್ಯವಿರುವದು

—ಮಹಾತ್ಮಾ ಗಾಂಧಿ

ಮಹಾತ್ಮ ಗಾಂಧಿಯವರು ಬರೆದ "ಸ್ವಾಸ್ಥ್ಯಸಂರಕ್ಷಣ"ವೆಂಬ ಪುಸ್ತಕದ ಕೊನೆಯಲ್ಲಿ ಮೇಲಿನವಚನವು ಕಂಡುಬರುವದು. ಸಿಬಗಾಗಿ ನೋಡಿದಲ್ಲಿ ಮನುಷ್ಯನು ಈ ರೀತಿಯಿಂದ ಕಷ್ಟಪಡುತ್ತ ಒಂದು ವಸ್ತುವಿನಿಂದ ಮತ್ತೊಂದು ವಸ್ತುವನ್ನು ದೊರಕಿಸುವುದರಲ್ಲಿಯೂ ಅಸಾಧ್ಯವಿದ್ದದನ್ನು ಕೂಡ ಸಾಧ್ಯವಾಗಿ ಮಾಡಿಕೊಳ್ಳುವುದೂ ಅವನ ನಿತ್ಯ ಕರ್ತವ್ಯವಾಗಿರುವುದು.

ಕರ್ಮಭೂಮಿಯಲ್ಲಿ ವ್ಯಸನಿಗಳಿಗೂ, ಸೋಮಾರಿಗೂ ಎಡವೇ ಇಲ್ಲ. ವ್ಯಸನಿಯಾದವನು ಮಡುವಿನಲ್ಲಿ ಮುಳುಗಿ ಬಿಡುವನು. ಅವನಿಗೆ ಮೇಲಕ್ಕೇಳಲಿಕ್ಕ ಬರುವದೇ ಇಲ್ಲ. ಕೆಲಸ ಮಾಡುವದಕ್ಕೆ ಹಿಂಜರಿಯುವವನು ದುಡಿಯುವವ ಕಾಲಕೆಳಗಾಗಿ ತುಳಿಯಲ್ಪಡುವನು. ವೇದಾಂತ ದೃಷ್ಟಿಯಿಂದಾಗಲೀ, ಸಂಸಾರಿಕ ದೃಷ್ಟಿಯಿಂದಾಗಲೀ, ಯಾವದೇ ದೃಷ್ಟಿಯಿಂದ ನೋಡಿದರೂ ಕರ್ಮವು ಬಿಟ್ಟಿಲ್ಲ.

ಸಂಸಾರಿ ಮನುಷ್ಯನಿಗೆ ಸುಖ, ಸಂಪತ್ತು, ಮರ್ಯಾದೆ, ಆರೋಗ್ಯ, ದೀರ್ಘಾಯುಷ್ಯ ಇವೆಲ್ಲಾ ಬೇಕಾದದ್ದು. ಆದರೆ ಅವು ಸುಲಭ ಸಾಧ್ಯವಲ್ಲ. ಇವುಗಳನ್ನು ದೊರಕಿಸುವುದಕ್ಕೆ ಕಷ್ಟಪಡಲೇ ಬೇಕಾಗುವದು. ಕಷ್ಟದ ತಕ್ಕ ಅವನಿಗೆ ಯಶಸ್ಸು ದೊರಕುತ್ತ ಹೋಗುವದು. ನೀವು ಯಾವ ರೀತಿಯಿಂದ ದುಡಿವಿರೋ ಅದೇ ರೀತಿಯಿಂದ ಫಲ ದೊರೆಯುತ್ತ ಹೋಗುವದು. ಸಾರಾಂಶ ಇಚ್ಛಿತ ವಸ್ತುವನ್ನು ದೊರಕಿಸುವದಕ್ಕ ಪ್ರಯತ್ನ ಪಡಲೇಬೇಕು. ಕೂತಲ್ಲಿ ಯಾರಿಗೂ ದೊರಕಿಲ್ಲ, ದೊರಕಿದ್ದರೂ ದಕ್ಕಿಲ್ಲ.

ನೀವು ಹೇಳಿದಂತೆ ಇಚ್ಛಿತ ವಸ್ತುವಿನ ಸಲುವಾಗಿ ಕಷ್ಟಪಡಬೇಕಾದದೇನೋ ಸರಿ. ಆದರೆ ಕಷ್ಟವು ಸಾಧು ಮಾರ್ಗಕ್ಕೆ ಒಯ್ಯತಕ್ಕದ್ದು. ಇಲ್ಲವಾದರೆ ಕಳ್ಳನಿಗೂ ವ್ಯಾಪಾರಿಗೂ ಹಣ ಸಂಚಯಮಾಡಲಿಕ್ಕೆ ಕಷ್ಟವನ್ನು ಪಡೆಯಲೇ ಬೇಕಾದುದರಿಂದ ಉಭಯತರ ಯೋಗ್ಯತೆಯು ಒಂದೇ ಆದೀತು. ಅದು ಹಾಗಲ್ಲ. ಕಳ್ಳನಿಗೆ ಹಣಗಳಿಸುವದಕ್ಕೆ ಕಷ್ಟವಾದಂತೆ ಅದು ತನ್ನ ಕೈಯಲ್ಲಿ ಬಂದಾಗ್ಯೂ ಅವನಿಗೆ ಅದರಿಂದ ಸುಖವಿಲ್ಲ. ಅಷ್ಟೇ ಅಲ್ಲ ಅವನನ್ನು ಅವಲಂಬಿಸಿರುವವರಿಗೂ ಸುಖವಿಲ್ಲ. ಆದರೆ ವ್ಯಾಪಾರಿಯ ಕಷ್ಟವು ಸುಮಾರ್ಗವಾಗಿದ್ದರಿಂದ ಅವನು ಕಷ್ಟಪಟ್ಟದ್ದಕ್ಕೆ ಸಂಪತ್ತಿಯು ದೊರೆಯುವದರಿಂದ ಈ ಸಂಪತ್ತಿಯು ಅವನ ಕುಟುಂಬ ಪೋಷಣಕ್ಕೂ ರಾಷ್ಟ್ರದ ಉದ್ಯೋಗ, ವ್ಯಾಪಾರದ ಏಳ್ಗೆಗೂ ಉತ್ತೇಜನ ಕೊಡುವದು. ಸಾರಾಂಶ, ಕಷ್ಟಪಡುವದಾದರೂ ಯೋಗ್ಯ ವಸ್ತುವಿನ ಸಲುವಾಗಿ ಪಡಬೇಕಲ್ಲದೆ ಯಾವ ಕಷ್ಟದಿಂದ ತನ್ನ ಹಾಗು ದೇಶದ ಕಲ್ಯಾಣವಿಲ್ಲವೋ ಅದು ನಿರರ್ಥಕವು.

ಮೇಲಿನ ವಿವರಣೆಯಿಂದ ಉದ್ಯೋಗ ಮಾಡದ ಹೊರತು ಇಚ್ಛಿತವಸ್ತುವು ಕೈಗೆ ಹತ್ತುವದಿಲ್ಲೆಂಬದು ತಿಳಿದಂತಾಯಿತು. ಅವರಂತೆ ಕಷ್ಟಪಡಿಸಲಿಕ್ಕೆ ಹೆಚ್ಚುವದಕ್ಕೆ ನಮ್ಮಲ್ಲಿಯ

(4ನೇ ಪುಟದಲ್ಲಿ ಮುಂದುವರಿದಿದೆ)

ಮಹಾತ್ಮಗಾಂಧಿಯವರ ಸ್ವಚರಿತ್ರೆ

(ಕಳೆದವಾರದಿಂದ ಮುಂದುವರಿದದ್ದು)

21 ನೆಯ ಪ್ರಕರಣ.

ನಿರ್ಬಲಕೆ ಬಲರಾಂ.

ಪರಮೇಶ್ವರನಾದ ಶ್ರೀರಾಮಚಂದ್ರನೇ ಅನಾಥರಿಗೆ ನಾಥನಾಗಿಯೂ, ದುರ್ಬಲರಿಗೆ ಬಲನಾಗಿಯೂ ಇದ್ದಾನೆಂಬ ಭಾವವನ್ನು ನಿರ್ಬಲರಿಗೆ ಬಲರಾಂ ಎಂಬ ವಾಕ್ಯದಿಂದ ಸೂರದಾಸರು ಹೇಳಿರುತ್ತಾರೆ. ನನಗೆ ಹಿಂದೂಮತ ಮೊದಲಾಗಿ ವಿವಿಧಮತಗಳ ಸ್ವರೂಪ ಪರಿಜ್ಞಾನವು ಅತ್ಯಲ್ಪವಾಗಿದ್ದರೂ ಆಪತ್ತು ಬಂದ ವೇಳೆಯಲ್ಲಿ ನನ್ನನ್ನು ಕಾಪಾಡಲು ಅದು ಸಾಲದೆಂದು ನಾನು ಗ್ರಹಿಸಿಕೊಂಡಿರಬೇಕಾಗಿದ್ದಿತು. ಆಪತ್ತಿನಲ್ಲಿ ಧೈರ್ಯ ಹುಟ್ಟುವಂತಹ ಮಹಾಶಕ್ತಿಯ ವಿಚಾರದಲ್ಲಿ ಮನುಷ್ಯನಿಗೆ ಕೊಂಚವೂ ತಿಳಿಯದು. ಆ ತರುಣದಲ್ಲಿ ತದ್ವಿಷಯಕ ಜ್ಞಾನವಿರುವುದಿಲ್ಲ. ನಾಸ್ತಿಕನಾದಲ್ಲಿ ಅಕಸ್ಮಾತ್ತಾಗಿ ಆ ಧೈರ್ಯವು ತನಗುಂಟಾಯಿತೆಂದು ಭಾವಿಸುವನು. ಆಸ್ತಿಕನಾದಲ್ಲಿ ಭಗವಂತನೇ ತನ್ನನ್ನು ಕಾಪಾಡಿದನೆಂದು ಸಂತೋಷಪಡುವನು. ತಾನು ಮತಧರ್ಮವನ್ನು ಸಂಯೋಗದಿಂದ ಅವಲೋಕಿಸಿಕೊಂಡಿರುವಂತೆ ತನ್ನಮೇಲೆ ಭಗವದನುಗ್ರಹವುಂಟಾಗಿರುವುದೆಂದು ಕೊಂಚ ನಿರ್ಣಯಿಸುವನು. ಆದರೆ ಆಪತ್ಕಾಲದಲ್ಲಿ ಆ ವಿಷಯವನ್ನು ಅವನು ಗ್ರಹಿಸುವುದಿಲ್ಲ. ತಾನು ನಿಸ್ಸಹಾಯಕನೆಂದು ಗರ್ವ ಬಿಟ್ಟುಕೊಂಡಿರುವವನಿಗೆ ವಿನಮ್ರತೆಯಿದ್ದ ಹೊರತು ಅವನಿಗೆ ದೈವಸಾಕ್ಷಾತ್ಕಾರವಾಗುವುದಿಲ್ಲ. ಅನುಭವಸಿದ್ಧ ಮತಜ್ಞಾನವು ಆಪತ್ಕಾಲದಲ್ಲಿ ನಿಷ್ಫಲವು. ಈ ವಿಷಯವನ್ನು ನಾನು ಮೊದಲು ಆಂಗ್ಲದೇಶದಲ್ಲೇ ಗ್ರಹಿಸಿಕೊಂಡೆನು. ಆಗ್ಗೆ ನನಗೆ 20 ವರ್ಷ ವಯಸ್ಸಾಗಿದ್ದಿತು. ನನಗೆ ಮಗನು ಸಹ ಹುಟ್ಟಿದ್ದನು. ಆ ವರ್ಷದಲ್ಲಿ ನಾನು ಹೇಗೆ ಕಾಪಾಡಲ್ಪಟ್ಟೆನೋ ಅದು ನನಗೆ ತಿಳಿಯದು. 1890 ರಲ್ಲಿ ನಾನು ಆಂಗ್ಲದೇಶದಲ್ಲಿದ್ದಾಗ್ಗೆ ಪೋರ್ಟ್ಸ್‌ಮತ್ತಿನಲ್ಲಿ ಶಾಕಾಹಾರ ಸಭೆಯು ಒದಗಿತು. ಆ ಸಭೆಗೆ ನನ್ನನ್ನೂ ನನ್ನ ಸ್ನೇಹಿತನಾದ ಮತ್ತೊಬ್ಬ ಭಾರತೀಯನನ್ನೂ ಆಹ್ವಾನಿಸಿದ್ದರು. ಅದು ಒಂದು ರೇವು ಪಟ್ಟಣವು. ಸಮುದ್ರತೀರದಲ್ಲಿದೆ. ಅಲ್ಲಿಯ ಪ್ರಜೆಗಳಲ್ಲಿ ಬಹಳ ಜನರು ನಾವಿಕರಾಗಿರುವರು. ಅಲ್ಲಿ ವ್ಯಭಿಚಾರಿಣಿಯರು ಬಹಳ ಮಂದಿಯುಂಟು. ಅವರು ಗೂಡಸೆಟ್ಟಿಗಳು. ಸಂಸಾರಿಗಳಲ್ಲೂ ಪಾತಿವ್ರತ್ಯ ನಿಯಮವಿಲ್ಲವು. ಅಂತಹವರ ಮನೆಯಲ್ಲಿ ಒಂದು ಕೋಣೆಯು ನಮ್ಮ ವಾಸಕ್ಕೆ ಏರ್ಪಡಿಸಲ್ಪಟ್ಟಿತು. ಪ್ರತ್ಯೇಕವಾಗಿ ನಮಗೆ ಸನ್ಮಾನಸಂಘದವರು ಆ ಮನೆಯನ್ನು ಏರ್ಪಡಿಸುವ ಉದ್ದೇಶವುಳ್ಳವರಾಗಿರಲಿಲ್ಲವು. ನಾವು ಹೊಸಬರು. ಅದು ದೊಡ್ಡ ಪಟ್ಟಣವು. ಆದುದರಿಂದ ಯಾವ ಮನೆಯು ವಾಸಕ್ಕೆ ಯೋಗ್ಯವು, ಯಾವುದು ಅಯೋಗ್ಯವು ಎಂದು ನಿರ್ಣಯಿಸುವುದು ಕಷ್ಟವಾಗಿದ್ದಿತು.

ನಾವು ಸಭೆಗೆ ಹೋಗಿ ಸಾಯಂಕಾಲದಲ್ಲಿ ಮನೆಗೆ ಬಂದು ಭೋಜನಮಾಡಿದೆವು. ತರುವಾಯ ಬ್ರಿಡ್ಜ್ ಎಂಬ ಇಸ್ಪೀಟು ಆಟವನ್ನಾಡಲಾರಂಭಿಸಿದೆವು. ಅಲ್ಲಿ ಉತ್ತಮರಾದ ಸಂಸಾರಿಗಳ ಮನೆಯಜಮಾನಿಯರು ಕೂಡ ಪುರುಷರ ಜೊತೆಗೆ ಆಡುವರು. ಅದು ತಪ್ಪಲ್ಲವು. ಪೋರ್ಟ್ಸ್‌ಮತ್ತಿನಲ್ಲಿ ನಮ್ಮ ಮನೆಯ ಯಜಮಾನಿಯು ನಮ್ಮ ಜೊತೆಯಲ್ಲಿ ಆಟವಾಡಲುಪಕ್ರಮಿಸಿದಳು. ಸಾಧಾರಣವಾಗಿ ಎಲ್ಲರೂ ಪಾಪಭೀತಿಯಿಲ್ಲದೆ ಚಲ್ಲುಮಾತುಗಳನ್ನಾಡುವುದು ಸಹಜವಾಗಿದುದರಿಂದ ಆಗ ನನ್ನ ಕೂಡಯಿದ್ದ ಭಾರತೀಯನೂ, ಮನೆಯ ಯಜಮಾನಿಯೂ, ನೀತಿಬಾಹ್ಯವಾದ ಸರಸಸಲ್ಲಾಪಗಳನ್ನಾಡುವವರಾದರು. ಈ ಚೇಷ್ಟೆಯಲ್ಲಿ ನನ್ನ ಸಂಗಡಿಗನು ನಿಪುಣನೆಂದು ನನಗೆ ತಿಳಿಯದು. ಅವರ ಸರಸೋಕ್ತಿಯು ನನ್ನ ಮನಸ್ಸನ್ನಾಕರ್ಷಿಸಿತು. ನಾನೂ ಅವರ ಕೂಡ ಅಂತಹ ಮಧ್ಯೋಕ್ತಿಗಳನ್ನಾಡಲುಪಕ್ರಮಿಸಿದೆ. ನನ್ನ ವಿವೇಕವು ಮಾಯವಾಯಿತು. ನನ್ನ ಮನಸ್ಸು ಕಾಮಾಂಧಕಾರದಲ್ಲಿ ಮುಳುಗಿತು. ಇಸ್ಪೀಟು ಆಟವನ್ನು ಕಟ್ಟಿಟ್ಟು ಮೋಹವಿಕಾರವನ್ನು ತೋರಿಸುವವನಾದೆನು. ಅಷ್ಟರಲ್ಲಿ ನನ್ನ ಸ್ನೇಹಿತನ ಸ್ವರೂಪದಲ್ಲಿ ನಿವಾಸಿಯಾಗಿದ್ದ ಪರಮೇಶ್ವರನು ನನ್ನನ್ನು ಎಚ್ಚರಿಸಿ ನೀನು ಕೂಡ ಕಾಮಾಂಧನಾದೆಯಾ? ಕೂಡಲೆ ಈ ಸ್ಥಳವನ್ನು ಬಿಟ್ಟು ಹೋಗು ಎಂದು ಅವನ ಮುಖದ್ವಾರ ಭಗವಂತನು ನನ್ನನ್ನು ಎಚ್ಚರಗೊಳಿಸಿದನು. ಅಷ್ಟರಲ್ಲಿ ಕಾಮಪಿಶಾಚಿಯು ನನ್ನನ್ನು ಬಿಟ್ಟಿತು. ನನ್ನ ತಾಯಿಗೆ ನಾನು ಮಾಡಿದ ಪ್ರಮಾಣವು ನನ್ನ ಸ್ಮರಣೆಗೆ ಬಂದು ನನಗೆ ನಾಚಿಗೆಯುಂಟಾಯಿತು. ಮನಸ್ಸಿನಲ್ಲೇ ಆ ಸ್ನೇಹಿತನಿಗೆ ಕೃತಜ್ಞತೆಯಿಂದ ವಂದಿಸಿ ಅಲ್ಲಿಂದೆದ್ದು ಹೊರಟುಹೋದೆನು. ಹುಲಿಬಾಯಿಯಿಂದ ತಪ್ಪಿಸಿಕೊಂಡ ಕುರಿಮರಿಯಂತೆ ಧಡಧಡನೆ ಎದೆಯು ಬಡಿದುಕೊಳ್ಳುತ್ತಿದ್ದ ನಾನು ನನ್ನ ಸ್ಥಳವನ್ನು ಸೇರಿದೆನು.

ಪರಸ್ತ್ರೀಯನ್ನು ನೋಡಿ ಮೋಹಿತನಾದುದು ಅದೇ ಮೊದಲು. ಆ ರಾತ್ರಿ ನನಗೇನೇನೋ ಆಲೋಚನೆಯು ಹುಟ್ಟಿತು. ಸರಿಯಾಗಿ ನಿದ್ರೆಬರಲಿಲ್ಲವು. ನಾನು ಆ ಮನೆಯನ್ನು ಬಿಟ್ಟು ಹೋಗಲೇ? ಆ ಪಟ್ಟಣದಿಂದಲೇ ಮಾಯವಾಗಲೋ? ನಾನೆಲ್ಲಿದ್ದೆನು? ನಾನು ವಿವೇಕಹೀನನಾಗಿದ್ದಲ್ಲಿ ನನಗೆ ಎಂತಹ ಗತಿಯು ಪ್ರಾಪ್ತವಾಗುತ್ತಿದ್ದಿತ್ತು? ಎಂದು ನಾನು ಆಲೋಚಿಸುತ್ತಿದ್ದೆನು. ಸಭೆಯು ಮುಗಿಯುವುದಕ್ಕೆ ಪೂರ್ವವೇ ನಾನು ಆ ಪಟ್ಟಣವನ್ನು ಬಿಟ್ಟು ಹೊರಟೆನು. ನನ್ನ ಸ್ನೇಹಿತನು ನನ್ನ ಕೂಡ ಬರಲಿಲ್ಲವು; ಇನ್ನೂ ಕೆಲವು ಕಾಲ ಅಲ್ಲೇ ಇದ್ದನು. ಆಗ ನನಗೆ ಮತವನ್ನು ಕುರಿತೂ ದೇವರನ್ನು ಕುರಿತೂ ದೇವಸಹಾಯವನ್ನು ಕುರಿತೂ ಏನೂ ತಿಳಿಯದು. ಭಗವಂತನು ನನ್ನನ್ನು ಕಾಪಾಡಿದನೆಂದು ಮಾತ್ರ ನಾನು ತಿಳಿದುಕೊಂಡಿದ್ದೆನು. ದೇವರು ಈ ಪ್ರಕಾರವಾಗಿ ನನ್ನನ್ನು ಅನೇಕಸಾರಿ ವಿಪತ್ತಿನಿಂದ ಕಾಪಾಡಿರುವನೆಂದು ನನಗೆ ಈಗ ದೃಢವಾದ ನಂಬಿಕೆಯು ಹುಟ್ಟಿರುತ್ತದಲ್ಲದೆ ಅದನ್ನು ಈವರೆಗೂ ನಾನು ಸಾಕಲ್ಯವಾಗಿ ಗ್ರಹಿಸಿಕೊಂಡಿರಲಿಲ್ಲವು. ಇನ್ನೂ ಹೆಚ್ಚಾದ ಅನುಭವವುಂಟಾದ ಹೊರತು ನನಗದು ಸರಿಯಾಗಿ ಬೋಧವಾಗುವುದಿಲ್ಲವು. ಆಧ್ಯಾತ್ಮಿಕ ವಿಷಯದಲ್ಲಿರುವಾಗಲೂ, ನ್ಯಾಯವಾದಿಯಾಗಿದ್ದಾಗಲೂ, ರಾಜಕೀಯವಿಚಾರದಲ್ಲಿರುವಾಗಲೂ, ಸಂಸ್ಥೆಗಳನ್ನು ಸ್ಥಾಪಿಸುತ್ತಿದ್ದಾಗಲೂ ಅನೇಕಸಾರಿ ಭಗವಂತನೇ ನನ್ನನ್ನು ಕಾಪಾಡಿದನು. ಆಶೆಯೆಲ್ಲವು ಭಗ್ನವಾಗಿದ್ದಾಗಲೂ, ಸಹಾಯವು ಕಡಮೆಯಾದಾಗಲೂ, ಸಾಹಸವು ತಗ್ಗಿದಾಗಲೂ ನಾನು ಗ್ರಹಿಸದೆ ಇದ್ದಾಗ್ಯೂ ದೈವಸಹಾಯವು ನನಗೆ ಲಭಿಸುತ್ತಲೇ ಇದ್ದಿತು. ಭಗವದಾರಾಧನೆ, ಪ್ರಾರ್ಥನೆ, ಸಾಷ್ಟಾಂಗನಮಸ್ಕಾರ ಮೊದಲಾದವುಗಳು ಮೂಢವಿಶ್ವಾಸವೆಂದು ತಿಳಿಯುವುದು ಅವಿವೇಕವು. ತಿನ್ನುವುದು, ಕುಡಿಯುವುದು, ನಡೆಯುವುದು, ಮಲಗುವುದು ಮೊದಲಾದ ಕೃತ್ಯಗಳಿಗಿಂತ ಭಗವದ್ವಂದನಾರ್ಚನ ಪ್ರಾರ್ಥನಾದಿಗಳು ಬಹಳ ಫಲಪ್ರದವಾದುವು. ನಿತ್ಯಕೃತ್ಯಗಳು ಫಲಪ್ರದಗಳಲ್ಲವೇ ಅಲ್ಲ. ಭಗವತ್ಸೇವಾರೂಪವಾದ ಕಾರ್ಯಗಳೇ ಫಲಪ್ರದವೆಂದು ಹೇಳುವುದರಲ್ಲಿ ಅತಿಶಯೋಕ್ತಿ ಏನೂ ಮಾತ್ರವೂ ಇಲ್ಲವು. ಅಂತಹ ಸಿದ್ಧಿಫಲಾದಿಗಳನ್ನು ಪ್ರಜೆಗಳೆಲ್ಲರೂ ಪಡೆಯಲಾರರು. ಆ ಸ್ಮರಣೆಯು ನಾಲ್ಕು ದಿಕ್ಕುಗಳಿಂದ ಒಂದುವಲ್ಲವು. ಅದು ಮನಃಪೂರ್ವಕವಾದುದರಿಂದ ಮನಸ್ಸು ಪರಿಶುದ್ಧವಾಗಿ ಕೇವಲ ಪ್ರೇಮ ಮಾತ್ರ ಭರಿತವಾಗಿದ್ದರೆ, ಏಕಾಗ್ರತೆಯು ಕೈಕೂಡಿದ್ದರೆ, ತನ್ಮಯತ್ವವು ಕೈಕೂಡುವುದು. ಪ್ರಾರ್ಥನೆಗೆ ಬಾಯಿಮಾತು ಅನಾವಶ್ಯಕವು. ಅದು ಸಕಲೇಂದ್ರಿಯಾತೀತವು. ಹೃದಯವನ್ನು ಪರಿಶುದ್ಧಿಗೊಳಿಸಿ ಕಾಮಕ್ರೋಧಾದಿಗಳನ್ನು ಅಳಿಗಿಸಲು ಭಗವನ್ನಾಮಸ್ಮರಣೆಯೇ ಉತ್ತಮಸಾಧನವೆಂದು ನಾನು ನಿಸ್ಸಂಶಯವಾಗಿ ತಿಳಿಸಬೇಕಾಗಿದೆ. ಆತ್ಯಧಿಕವಾದ ವಿನಯವು ಇದ್ದಲ್ಲದೆ ಅದು ಪೂರ್ಣಫಲವನ್ನು ಕೊಡುವುದಿಲ್ಲ.

ವ್ಯ. ಸ್ಥ.

ಬಳ್ಳಾರಿಯ ಸಮ್ಮೇಲನಗಳ ಸಮಾಚಾರವು.

ಸಾಹಿತ್ಯ ಪರಿಷತ್ತು

ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಶ್ರೀ ಹಳಕಟ್ಟಿಯವರು ತಮ್ಮ ವಿಚಾರಪರಿಪೂರ್ಣವಾದ ಭಾಷಣವನ್ನು ಓದಿ ತೋರಿಸಿದರು. ಅದರ ಸಾರಾಂಶವೇನೆಂದರೆ, ಕರ್ನಾಟಕತ್ವವನ್ನು ಎಲ್ಲೆಲ್ಲಿಯೂ ಬೀರುವದೇ ಸಾಹಿತ್ಯಪರಿಷತ್ತಿನ ಮುಖ್ಯ ಕರ್ತವ್ಯವಿರುವದು. ಕರ್ನಾಟಕತ್ವವೆಂದರೆ ಕರ್ನಾಟಕದ ಸಂಸ್ಕೃತಿ, ಕರ್ನಾಟಕದ ಸಾಹಿತ್ಯ, ಕನ್ನಡ ಭಾಷೆ, ಕನ್ನಡ ಇತಿಹಾಸ ಇವುಗಳ ಜ್ಞಾನ ಹಾಗೂ ಅಭಿಮಾನ ಹಾಗೂ ಇವುಗಳನ್ನು ಬೆಳೆಸುವ ಉತ್ಕಟ ಇಚ್ಛೆ. ಪ್ರತಿಯೊಬ್ಬ ಸುಶಿಕ್ಷಿತನು ಸದ್ಯದ ಕನ್ನಡ ವಾಙ್ಮಯ ಕನ್ನಡ ಪುಸ್ತಕ ವರ್ತಮಾನ ಪತ್ರ ಮುಂತಾದವುಗಳ ಕೂಡ ಪರಿಚಿತನಾಗಲಿಕ್ಕೆ ಬೇಕು. ಇದು ಅವನ ಕರ್ತವ್ಯವಿರುವದು. ಇಲ್ಲದೇ ಹೋದರೆ ಅವನು ಸುಶಿಕ್ಷಿತನೆನಿಸಲಿಕ್ಕೆ ಯೋಗ್ಯನಲ್ಲ. ಈ ಕರ್ನಾಟಕತ್ವವು ಚನ್ನಾಗಿ ಬೇರೂರಬೇಕಾದರೆ ಎಲ್ಲ ಶಿಕ್ಷಣವು ನಮ್ಮ ಕೈಯಲ್ಲಿ ಇರಲಿಕ್ಕೆ ಬೇಕು. ಕೆಲವು ಸಂಸ್ಥಾನಗಳಲ್ಲಿ ಮೂರಾರು ವರ್ಷಸ್ಸು ಬಾಲ್ಯದಲ್ಲಿ ಇಂಗ್ಲೀಷ ಹೀಗಾಗಿ ಶುದ್ಧ ಕನ್ನಡದ ಬೆಡಗು ಎಲ್ಲಿಯೂ ದೃಗ್ಗೋಚರವಾಗದೇ ಹೋಗುವದು. ನಮ್ಮ ಹಳೇ ಸಂಸ್ಕೃತಿಯ ಪರಿಶೋಧನವಾಗಲಿಕ್ಕೆ ಬೇಕು. ಕರ್ನಾಟಕದ ಏಕೀಕರಣವಾಗಲಿಕ್ಕೆ ಬೇಕು. ಭಾಷೆಯಲ್ಲಿ ನಾವು ಉಪಯೋಗಿಸುವ ಪ್ರಯೋಗಗಳು ಇಡೀ ಕರ್ನಾಟಕದಲ್ಲಿ ಒಂದೇ ಆಗಬೇಕು. ಇದೇ ಸಾಹಿತ್ಯ ಪರಿಷತ್ತಿನ ಮುಖ್ಯ ಕರ್ತವ್ಯವು. ಇದನ್ನು ಅಲ್ಪಮಟ್ಟಿಗಾದರೂ ನಾವು ಮಾಡಿದರೆ ಕೃತಾರ್ಥರೇ ಸರಿ. ಸಾಹಿತ್ಯ ಪರಿಷತ್ತಿನಲ್ಲಿ ಪಾಸಾದ ಠರಾವುಗಳಲ್ಲಿ ಎರಡು ಮಹತ್ವದ ಠರಾವುಗಳಿದ್ದುವು. ಒಂದು ಹೊಸ ಶಬ್ದಗಳ ಯೋಜನೆಯನ್ನು ಪ್ರಚಲಿತ ಕನ್ನಡ ಲೇಖನದಲ್ಲಿ ಯಾವ ಬಗೆಯಿಂದ ಮಾಡಬೇಕು ಎಂಬ ಬಗ್ಗೆ. ಎರಡನೇಯದು, ಪ್ರತಿಜಿಲ್ಲೆಯಲ್ಲಿ ಪರಿಷತ್ತಿನ ಶಾಖೆಗಳನ್ನು ತೆರೆದು ಅಲ್ಲಲ್ಲಿ ಕಾರ್ಯ ಮಾಡಲಿಕ್ಕೆ ಅನುಕೂಲ ಮಾಡಿಕೊಡುವ ಬಗ್ಗೆ ಮಾಡಿದ ಠರಾವು.

ಸ್ವಯಂಸೇವಕರ ಪರಿಷತ್ತು.

ದಳದ ಸಂಚಾಲಕರಾದ ಡಾ. ಹರ್ಡೀಕರರವರ ಸ್ವಭಾವಕ್ಕನುಗುಣವಾಗಿ ಈ ಪರಿಷತ್ತಿನ ಲಕ್ಷ್ಯವು ಯಾವ ಠರಾವುಗಳನ್ನು ಪಾಸು ಮಾಡಬೇಕು ಎಂಬುವದರ ಕಡೆಗೆ ಇರದೇ ಯಾವ ಠರಾವುಗಳನ್ನು ಪಾಸ್ ಸ್ವಂತ ಅಮಲಿನಲ್ಲಿ ತರುವದು ಶಕ್ಯವಿರುವದು, ಎಂಬುದರ ಕಡೆಗೇ ಹೆಚ್ಚು ಇತ್ತು. ಶ್ರೀ ಹೊಸಕೊಪ್ಪ ಕೃಷ್ಣರಾಯರು ಅಲ್ಲಿಯೇ ಸ್ವಯಂಸೇವಕ ದೀಕ್ಷೆಯನ್ನು ಪಡೆದು ತಮ್ಮ ಭಾಷಣವನ್ನು ಓದಿ ತೋರಿಸಿದರು. ಭಾಷಣವು ಸ್ವಲ್ಪ ವಿಸ್ತೃತವಿದ್ದು ಎಲ್ಲ ವಿಷಯಗಳನ್ನು ಒಳಕೊಂಡಿತ್ತು. ಸ್ವಯಂಸೇವಕರ ಕರ್ತವ್ಯದ ಬಗ್ಗೆ ಅವರ ವಿಚಾರಗಳು ಬಹಳ ಮನನೀಯವಾಗಿದ್ದುವು. ಈ ಪರಿಷತ್ತಿನವರು ಹೆಚ್ಚು ಠರಾವುಗಳನ್ನು ಮಾಡುವ ಗೋಜಿಗೆ ಹೋಗದೇ ಒಂದೆರಡೇ ವ್ಯವಹಾರ್ಯವಾದ ಠರಾವುಗಳನ್ನು ಮಾಡಿ ಅವುಗಳನ್ನು ನೆರವೇರಿಸುವ ನಿಶ್ಚಯ ಮಾಡಿದರು. ತರುಣರೂ ಉತ್ಸಾಹಿಗಳೂ ಸಿರಿವಂತರೂ ಆದ ಶ್ರೀ ಹೊಸಕೊಪ್ಪ ಕೃಷ್ಣರಾಯರು ತಮ್ಮ ಧೈರ್ಯಯುಕ್ತ ಪ್ರಾಗತಿಕ ಸ್ವಭಾವಕ್ಕನುಸರಿಸಿ ಈ ವರ್ಷದ ಕೊನೆಯ ಒಳಗಾಗಿ ಸೇವಾದಲದ ಕಾರ್ಯಕ್ಕೆ ಕರ್ನಾಟಕದಲ್ಲಿ ಹೆಚ್ಚು ತೇಜಸ್ಸನ್ನು ತಂದು ಕೊಡುವರೆಂದು ನಾವು ನಂಬಿದ್ದೇವೆ.

ಭಗಿನೀಯರ ಸಮ್ಮೇಲನ.

ಇದು ೩ನೇ ಪರಿಷತ್ತು. ಇದಕ್ಕೆ ಬೆಂಗಳೂರಿನ ಶ್ರೀ ಕನಕಲಕ್ಷ್ಮಮ್ಮನವರು ಅಧ್ಯಕ್ಷರಾಗಿದ್ದರು. ತಮ್ಮ ವಿದ್ವತ್ತಿಗನುಸರಿಸಿ ಇವರು ಉತ್ತಮ ಭಾಷಣ ಮಾಡಿದರು. ಹಿಂದೂ ಸ್ತ್ರೀಯರ ಪ್ರಾಣ ಧರ್ಮವಾದ ಪತಿವ್ರತಾ ಧರ್ಮವನ್ನು ಬಹಳೇ ವರ್ಣಿಸಿ ಹೇಳಿದರು. ಇದೇ ಸಮ್ಮೇಲನದಲ್ಲಿ ಭಗಿನೀ ಮಂಡಲದ ಕಾರ್ಯದರ್ಶಿನಿಯವರಾದ ಶ್ರೀ ಉಮಾಬಾಯಿ ಕುಂದಾಪೂರ ಇವರು ಕನ್ನಡ ಭಾಷಣ ಮಾಡಿದರು. ಮಾತೃಭಾಷೆಯು ಮರಾಠಿ ಇರಲಿಕ್ಕಾಗಿ ಕಷ್ಟಪಟ್ಟು ಕನ್ನಡ ಕಲಿತು ಈಗ ಕನ್ನಡದಲ್ಲಿ ಅವರು ಭಾಷಣ ಮಾಡತೊಡಗಿರುತ್ತಾರೆ. ಅವರ ಕರ್ತವ್ಯ ಬುದ್ಧಿಯು ಇಷ್ಟೇ ಜಾಜ್ವಲ್ಯನೆಂದು ಹೇಳಲಿಕ್ಕಾಗುವದಿಲ್ಲ. ಇಂಥ ನಾರೀಮಣಿಯರು ನಮ್ಮಲ್ಲಿ ನಾಲ್ಕಾರು ಹೊರಟರೂ ಕರ್ನಾಟಕ ಮಹಿಳೆಯರು ಉದ್ಧಾರವಾಗಬಹುದೆಂದು ನಮ್ಮ ನಂಬಿಗೆಯು. ಇವರು ಭಾಷಣ ಮಾಡುವಾಗ ತಮ್ಮ ಎಲ್ಲ ಅನುಭವವನ್ನು ಸಂಪೂರ್ಣವಾಗಿ ಹೇಳಿದರು. ಸ್ತ್ರೀಯರ ಕಾರ್ಯಕ್ಷೇತ್ರವು ಮನೆಯಲ್ಲಿ ಅಷ್ಟೇ ಇರದೇ ಅದು ರಾಷ್ಟ್ರದ ತುಂಬ ಪಸರಿದೆ. ರಾಷ್ಟ್ರಕಾರ್ಯವನ್ನು ಕೈಕೊಂಡವರಿಗೆ ಸಹಾಯ ಮಾಡುವದು ಪ್ರತಿಯೊಂದು ಸ್ತ್ರೀಯ ಕರ್ತವ್ಯವಿದೆ. ಆ ದೃಷ್ಟಿಯಿಂದಲೇ ಸ್ವದೇಶೀ, ಖಾದೀ ಪ್ರಸಾರ, ಬಾಲಶಿಕ್ಷಣ, ಈ ವಿಷಯಗಳಲ್ಲಿ ಸ್ತ್ರೀಯರು ತಮ್ಮ ಅಂತಃಕರಣದಿಂದ ಪುರುಷರಿಗೆ ಸಹಾಯಭೂತರಾದರೆ ರಾಷ್ಟ್ರಕಾರ್ಯವು ದ್ರುತಗತಿಯಿಂದ ಸಾಗುವದೆಂದು ಅವರು ಹೇಳಿದರು. ಇಂಥ ವಿಚಾರಶೀಲರೂ ಧೈರ್ಯಸ್ಥರೂ ರಾಷ್ಟ್ರಭಾವನೆಯಿಂದ ಪರಿಪೂರ್ಣರೂ ಆದ ಸ್ತ್ರೀಯರು ಮೇಲಿಂದ ಮೇಲೆ ಒತ್ತಟ್ಟಿಗೆ ಕೂಡಿದರೆ ರಾಷ್ಟ್ರನಿರ್ಮಾಣ ಕಾರ್ಯವು ರಾಷ್ಟ್ರದಲ್ಲಿ ವೀರಕನ್ಯೆಯರನ್ನು, ವೀರಮಾತೆಯರನ್ನು, ವೀರಸ್ತ್ರೀಯರನ್ನು ವೀರಪತ್ನಿಯರನ್ನು ಹುಟ್ಟಿಸುವ ಕಾರ್ಯವು ಸಹಜವಾಗಿ ಆಗುವದೆಂದು ನಮ್ಮ ವಿಶ್ವಾಸವಿರುವದು.

ಸಂಪಾದಕರ ಪರಿಷತ್ತು

ಇದು ಕೇವಲ ಹೆಸರಿಗೆ ಮಾತ್ರ ಪರಿಷತ್ತಾಯಿತು. ಅದಕ್ಕೆ ಇನ್ನೂ ಮೂರ್ತಸ್ವರೂಪವು ಬರುವ ಸಮಯವು ಬಂದಿರಲಿಕ್ಕಿಲ್ಲ. ಆದರೆ (೧) ಸರಕಾರದವರು ಸಂಪಾದಕರ ಹಕ್ಕಿನ ಮೇಲೆ ಪುನಃ ಪುನಃ ತರುವ ದಾಳಿಯನ್ನು ಧಿಕ್ಕರಿಸುವದಕ್ಕಾಗಿಯೂ (೨) ಇಡೀ ಕರ್ನಾಟಕಕ್ಕೆ ಅವಶ್ಯವಿದ್ದ ಹಾಗೂ ಯಾವ ಮತಭೇದವೂ ಇಲ್ಲದ ವಿಷಯಗಳನ್ನು ವಿಶೇಷ ಬಲದಿಂದ ಏಕಾಸಮಯಕ್ಕ ಮುಂದುವರಿಸುವದಕ್ಕಾಗಿಯೂ (೩) ಎಲ್ಲ ಪತ್ರಗಳಲ್ಲಿಯೂ ಒಂದೇ ಮಾದರಿಯ ಪರಭಾಷೆಯನ್ನು ಹೊಸರಾಜಕೀಯ ಶಬ್ದಗಳನ್ನೂ ಉಪಯೋಗಿಸಬೇಕೆಂದು ನಿಶ್ಚಯಮಾಡುವದಕ್ಕಾಗಿಯೂ, ಸಂಪಾದಕರ ಸಂಘವೊಂದು ಕರ್ನಾಟಕದಲ್ಲಿ ಇರಬೇಕು, ಎಂಬ ಮಾತು ಚರ್ಚೆಯಿಂದ ನಿಶ್ಚಯಿಸಲ್ಪಟ್ಟಿತು. ಚರ್ಚೆಗೆ ಶ್ರೀ ಮುದವೀಡಕರ, ತಾರಾಚಾರ್ಯ ಶರ್ಮಾ, ಸಂಪನ್ನಿರರಾವ, ಭಾರದ್ವಾಜ ಕಬ್ಬೂರ, ದಿವಾಕರ, ಹರ್ಡೀಕರ, ಆಲೂರ ಮುಂತಾದವರು ಹಾಜರಿದ್ದರು.

ವಿಶ್ವವಿದ್ಯಾಲಯ ಪರಿಷತ್ತು.

ಈ ವಿಶ್ವವಿದ್ಯಾನಿಲಯ ಪರಿಷತ್ತಿನ ಅಧ್ಯಕ್ಷರು ಶ್ರೀ ಹಳಕಟ್ಟಿಯವರೇ ಇದ್ದರು. ಇದರಲ್ಲಿ ಆದ ಮುಖ್ಯ ಕಾರ್ಯವೇನಂದರೆ, ಒಂದು ಸ್ಥಾಯಿ ವಿಶ್ವವಿದ್ಯಾನಿಲಯ ಮಂಡಲಿಯನ್ನು ನೇಮಿಸಿ ಅದರ ದ್ವಾರಾ ಎಲ್ಲ ಪ್ರಯತ್ನಗಳನ್ನು ನಡಸಬೇಕು. ಆ ಮಂಡಲಿಯು ಪ್ರತಿನಿಧಿಕವೂ ವರ್ಚಸ್ಸುಳ್ಳದ್ದೂ ಇರಬೇಕು. ಆ ಮಂಡಲಿಯಲ್ಲಿ ಸುಮಾರು ೧೨೫ ವರೆಗೆ ಸಭಾಸದರಿರಬಹುದು. ಅವರು ತಮ್ಮದೊಂದು [illegible] ಜನರ ಕಾರ್ಯಕಾರೀ ಮಂಡಲವನ್ನು ನೇಮಿಸಿ ಕಾರ್ಯ ನಡಸಬೇಕು. ಸದ್ಯಕ್ಕೆ ಒಂದು ಸ್ಥಾಯೀ ಮಂಡಳ, ಒಂದು ಕಾರ್ಯಕಾರೀ ಹಾಗೂ ಒಂದು ತಜ್ಞರ ಮಂಡಲ (ವಿಶ್ವವಿದ್ಯಾಲಯದ ರಚನೆ) (Scheme) ಯನ್ನು ಬರೆದು ನಿವೇದಿಸಲಿಕ್ಕೆ ಹೀಗೆ ಮೂರು ಮಂಡಲಗಳು ನೇಮಿಸಲ್ಪಟ್ಟವು. ಈ ಪರಿಷತ್ತಿನಲ್ಲಿ ಪಾಸಾದ ಮುಖ್ಯ ಠರಾವೇನೆಂದರೆ ಇಡೀ ಕರ್ನಾಟಕಕ್ಕೆ ಒಂದೇ ವಿಶ್ವವಿದ್ಯಾಲಯವಿರಬೇಕು. ಹಾಗೂ ಮೈಸೂರು ವಿಶ್ವವಿದ್ಯಾಲಯವೇ ಕರ್ನಾಟಕ ವಿಶ್ವವಿದ್ಯಾಲಯವಾಗುವಂತೆ ಪ್ರಯತ್ನ ನಡಸಬೇಕು.

ಗೋರಕ್ಷಣ ಸಮ್ಮೇಲನ.

ಈ ಸಮ್ಮೇಲನದ ಶ್ರೇಯಸ್ಸೆಲ್ಲ ಬೆಂಗಳೂರಿನ ಗೋರಕ್ಷಣ ಸಂಸ್ಥೆಯ ಚಾಲಕರಾದ ಶ್ರೀ. [illegible] ಇವರಿಗೇ ಇರುವದು. ಈ ಪರಿಷತ್ತಿಗೆ [illegible] ತ್ತು. ಅದನ್ನು [illegible] ಎಲ್ಲರು ಮನುಷ್ಯನ [illegible] ಈ ಪರಿಷತ್ತಿ

ಸಲ್ಲಿ ಶ್ರೀ ತಾರಾನಾಥ, ಮಂಜಪ್ಪಾ ಹರ್ಡೇಕರ, ಶ್ರೀನಿವಾಸರಾವ ಕೌಜಲಗಿ ಇವರ ಭಾಷಣಗಳು ಬಹಳೇ ಸ್ಫೂರ್ತಿದಾಯಕವಾದವು. ತಾರಾನಾಥರು ನಾವೆಲ್ಲರೂ ಖಾದೀ ಬಟ್ಟೆಗಳನ್ನು ಧರಿಸಲಿಕ್ಕೆ ಪ್ರಾರಂಭ ಮಾಡುವ ತನಕ ಗೋರಕ್ಷಣ ಮಾಡುವದು ಶಕ್ಯವಿಲ್ಲೆಂದು ಹೇಳಿದರು. ಗಿರಣಿಗಳಿಗೆ ಗೋಚರ್ಮವು ಗೋವಿನ ಚರ್ಬಿಯೂ ಅವಶ್ಯವು. ಅವುಗಳಿಗೆ ಬೆಲೆ ಬಹಳವಿರುವುದರಿಂದ ಕಟುಕರು ಆ ಚರ್ಮಕ್ಕಾಗಿ ಗೋವುಗಳನ್ನು ಕಡಿದು ಗೋಮಾಂಸವನ್ನು ಸೋಯೀ ದರದಿಂದ ಮಾರುವರು. ಅದನ್ನು ಬಡ ಮುಸಲ್ಮಾನರು ತಮ್ಮ ಹೊಟ್ಟೇ ಹೊರಕೊಳ್ಳಲಿಕ್ಕೆ ಅವಶ್ಯವೆಂದು ಕೊಳ್ಳುವರು. ಆದುದರಿಂದ ಗೋವಧೆಗೆ ಗಿರಣೀ ಬಟ್ಟೆಗಳನ್ನು ಹಾಕಿಕೊಳ್ಳುವವರೇ ಕಾರಣರು. ಗಿರಣಿ ಬಟ್ಟೆಗಳನ್ನು ಹಾಕಿಕೊಂಡು "ಗೋಬ್ರಾಹ್ಮಣ ಹಿತಾಯಚ" ಅನ್ನುವನೆಂದರೆ ವೇಶ್ಯೆಯು ಬಾಗಿಲಲ್ಲಿ ನಿಂತು ಬ್ರಹ್ಮಚರ್ಯದ ಉಪದೇಶ ಮಾಡಿದಂತೆಯೇ ಸೈ. ಇದೇ ಪ್ರಕಾರ ಮಂಜಪ್ಪನವರು, ಗೋರಕ್ಷಣವೆಂದರೆ ಕೇವಲ ಕುರುಡ, ಕುಂಟ ಗೋವುಗಳ ರಕ್ಷಣವಲ್ಲ, ಆದರೆ ಸುಂದರ ಸುಪುಷ್ಟ ಆಕಳು ಹೋರಿಗಳನ್ನು ಹುಟ್ಟಿಸುವದು ನಮ್ಮ ಕರ್ತವ್ಯವೆಂದು ಒಳ್ಳೇ ಮಂದಟ್ಟಾಗಿ ಹೇಳಿದರು.

ತೃತೀಯ ಕರ್ನಾಟಕ ಪ್ರಾಂತೀಕ ಭಗಿನೀ ಮಂಡಲ ಸಮ್ಮೇಲನ

ಬಳ್ಳಾರಿಯ ಲ್ಲಿನ ಈ ಮೇ ತಿಂಗಳ ೩ನೇ ವಾರದಲ್ಲಿ ಸಭೆ ಅನೇಕ ಸಂ ... ಕರ್ನಾಟಕ ಪ್ರಾಂತಿಕ ಭಗಿನೀ ಮಂಡಲದ ಸಮ್ಮೇಲನವು ಒಂದಾಗಿರುವುದು. ಮೊದಲೇ ಪ್ರಕಟಿಸಲ್ಪಟ್ಟಂತೆ ಬೆಂಗಳೂರಿನ ಶ್ರೀ. ಕನಕ ಲಕ್ಷ್ಮಮ್ಮಾ ಎಮ್. ಎ. ಇವರು ಅಧ್ಯಕ್ಷರಾಗಿದ್ದರು. ಈ ಸಮ್ಮೇಲನಕ್ಕೆ ಬಳ್ಳಾರಿ ಜಿಲ್ಲೆಯ ಹೊರಗಿನ ಸುಮಾರು ೧೦ ಭಗಿನಿಯರು ಬಂದಿದ್ದರು. ಹಿಂದುಳಿದ ಕರ್ನಾಟಕ ಸದ್ಯಸ್ಥಿತಿಯಲ್ಲಿ ಈ ಸಂಖ್ಯೆಯು ಸಹ ಬಹಳ ಅಲ್ಪವೆನ್ನಲು ಕಾರಣವಿಲ್ಲ. ಸಭೆಗೆ ಬಟ್ಟ ಸ್ತ್ರೀಯರು ೫೦೦ಕ್ಕೆ ಮಿಕ್ಕಿ ಬಂದಿದ್ದರು. ಬಳ್ಳಾರಿಯಲ್ಲಿ ಸ್ತ್ರೀಯರ ಇಂಥ ದೊಡ್ಡ ಸಭೆಯು ಎಂದೂ ಕೂಡಿದ್ದಿಲ್ಲೆಂದು ಹೇಳುತ್ತಾರೆ. ಸಭೆಯಲ್ಲಿ ಐದು ಠರಾವುಗಳು ಪಾಸಾದವು. ಈ ಸಮ್ಮೇಲನದನಂತರ ಬಳ್ಳಾರಿಯಲ್ಲಿ ಕರ್ನಾಟಕ ಪ್ರಾಂತಿಕ ಭಗಿನಿ ಮಂಡಲದ ಒಂದು ಶಾಖೆಯು ಸ್ಥಾಪಿಸಲ್ಪಟ್ಟಿತು.

ಕ. ವಿ.

ಮಾನವ ಜೀವನ ರಹಸ್ಯ.

(2 ನೇ ಪುಟದಿಂದ ಮುಂದುವರಿದದ್ದು.)

ಆ ಕಾಂಕ್ಷೆಯೇ ಮೂಲವೆಂಬದನ್ನು ತಿಳಿಯತಕ್ಕದ್ದು. ಸಣ್ಣ ಕೂಸುಗಳು ತಾಯಿ—ತಂದೆಗಳ ಬದಿಯಲ್ಲಿ ಆಡುತ್ತಿರುವಾಗ್ಗೆ ಹತ್ತಿರದ್ದ ವಸ್ತುಗಳನ್ನು ಹಿಡಿಯುವುದಕ್ಕೆ ಪ್ರಯತ್ನ ಮಾಡುತ್ತಿರುತ್ತವೆ. ಒಂದು ದೊರಕೊಡನೆ ಅದರ ಕೂಡ ಆಟವಾಡಿ ಬೇಸತ್ತು ಮತ್ತೊಂದು ದೊರಕಿಸಲು ಪ್ರಯತ್ನಿಸುತ್ತವೆ. ಇದೇ ಪ್ರವೃತ್ತಿಯು ದೊಡ್ಡವರಲ್ಲಿಯೂ ಇರುತ್ತದೆ. ಕೈಕೊಂಡ ಕೆಲಸದಲ್ಲಿ ಯಶಸ್ಸನ್ನು ದೊರಕಿಸುವುದಕ್ಕೆ ಪ್ರಯತ್ನಪಡುತ್ತಿರುವವನು ಅದು ಸಾಧ್ಯವಾದ ಕೂಡಲೇ ಅವನ ಮನಸ್ಸು ಸ್ವಾಸ್ಥ್ಯಹೊಂದದೆ ಅದಕ್ಕೂ ಹೆಚ್ಚಿನ ವಸ್ತುವನ್ನು ಕೈವಶಮಾಡಿಕೊಳ್ಳುವದಕ್ಕೆ ಪ್ರಯತ್ನಮಾಡುತ್ತಹೋಗುವನು. ಎಲ್ಲ ಮಾನವ ಜಾತಿಯು ಇದೇ ರೀತಿಯಿಂದ ಗುದ್ದಾಡುತ್ತ ಹೋಗುವದು.

(ಮುಂದುವರಿಯುವದು.)

ನೋಟೀಸ್.

ಸರ್ 1926ನೇ ಇಸವಿ ಆಗಸ್ಟ ತಿಂಗಳು 1ರಿಂದ ಮುನಿಸಿಪಾಲಿಟಿ ಲೆಕ್ಕಗಳನ್ನು ಒಂದು ವರ್ಷದ ವರೆಗೆ ಆಡಿಟ್ ಮಾಡಲಿಕ್ಕೆ ಸರ್ಟಿಫಿಕೇಟು ಹೊಂದಿದಂತವರು ಬೇಕಾಗಿರುವದರಿಂದ ಅಂಥವರು ಪ್ರೆಸಿಡೆಂಟರವರಿಗೆ ತಾ. 31—7—26ರ ಮುಂದಾಗಿ ಅಪ್ಲಿಕೇಶನ್ ಬರಕೊಳ್ಳಬಹುದು.

ಕೆ. ಕುಟ್ಟಯ್ಯ.
ಪ್ರೆಸಿಡೆಂಟ್.

WANTED!

Wanted a whole-time Secretary to the Virajpet coop. Credit Society Ltd. Virajendrapet

Apply with testimonials, stating the salary desired, to reach the president by the 25th June 1926.

ವೀರರಾಜಪೇಟೆ ಪಬ್ಲಿಕ್ ಮೀಟಿಂಗು.

ತಾ. 12-6—26ರಲ್ಲಿ ಎರಡುವರೆ ಘಂಟೆಗೆ ಖಾದಿಭಂಡಾರದ ಮಹಡಿಯಲ್ಲಿ ಮ. ರಾ. ಶ್ರಿ ರಾ' ಬಾ. ಕೋದಂಡ ಕುಟ್ಟಯ್ಯನವರ ಅಧ್ಯಕ್ಷತೆಯಲ್ಲಿ ಪಬ್ಲಿಕ್ ಮೀಟಿಂಗು ನಡೆಯಿತು. ಪ್ರಾಂತೀಕ ಗಜೆಟೆಡ್ ಉದ್ಯೋಗಸ್ಥರನ್ನು ಮದ್ರಾಸ್ ಅಧಿಪತ್ಯಕ್ಕೆ ವರ್ಗಾಯಿಸಲು ನಮ್ಮ ಸರಕಾರದವರು ಮದ್ರಾಸ್ ಸರಕಾರದವರೊಂದಿಗೆ ವಿಚಾರ ಮಾಡಬೇಕೆಂದು ಜಮೀನ್‌ದಾರರ ಸಂಘವು ಮಾಡಿದ ತೀರ್ಮಾನಕ್ಕೆ ಒಪ್ಪಿಗೆ ತೆಗೆದುಕೊಳ್ಳಲಿಕ್ಕಾಗಿಯೂ, ಕರ್ನಾಟಕದ ಏಕೀಕರಣದ ಮೇಲೆ ಜನರ ಅಭಿಪ್ರಾಯವನ್ನು ತಿಳಿಯಲಿಕ್ಕಾಗಿಯೂ ಪಬ್ಲಿಕ್ ಮೀಟಿಂಗ್ ನಡಿಸಲು ಮ. ರಾ. ಶ್ರಿ. ಗಳಾದ ಪಟ್ಟೆಯಂಡ ಸಂಜಪ್ಪನವರೂ, ಕೆ. ಸಿ. ಚಿಣ್ಣಪ್ಪನವರೂ, ಸಿ. ಎ. ಬೆಳ್ಯಪ್ಪನವರೂ ಸಹ ಸೈನ್ ಮಾಡಿ ಕಳುಹಿಸಿದ ನೋಟೀಸ್ ಪ್ರಕಾರ ಈ ಮೀಟಿಂಗ್ ನಡೆದದ್ದಾಗಿದೆ. ಮೀಟಿಂಗಿನಲ್ಲಿ ಸುಮಾರು ೯೦ ಜನರು ಹಾಜರಿದ್ದರು.

ಮ. ಕೋಟೆರ ಚಿಣ್ಣಪ್ಪನವರು ಗಜೆಟೆಡ್ ಉದ್ಯೋಗಸ್ಥರ ವರ್ಗಾವರ್ಗಿಯ ಅವಶ್ಯಕತೆಯ ವಿಷಯವನ್ನೂ ಸಿವಿಲ್ ಸರ್ವೀಸ್ ಕಾಂಡಕ್ಟ್ ರೂಲ್ಸ್ ಮೇರೆ ಗಜೆಟೆಡ್ ಉದ್ಯೋಗಸ್ಥರಿಗೆ ಇಷ್ಟ ಇರುವಲ್ಲಿ ಕೆಲಸವಿರಬಾರದೆಂತಲೂ ವಿವರಿಸಿ, ಹೀಗಿರುವದರಿಂದಲೇ ಈ ಠರಾವಿಗೆ ಸರಕಾರದವರು ಒಪ್ಪಬೇಕೆಂತ ವಗೈರೆ ಹೇಳಿದರು. ಮ. ಮುಕ್ಕಾಟಿರ ಕಾಳಪ್ಪನವರು ಠರಾವಿಗೆ ವಿರೋಧಿಸಿ ಈ ಮೊದಲು ಮೈಕಲ್‌ಜಾನ್ ಮುಂತಾದವರು ಐದು ವರ್ಷಕ್ಕಿಂತ ಹೆಚ್ಚಾಗಿ ಕೆಲಸ ನೋಡಿದಾಗ ಯಾರೂ ಆಕ್ಷೇಪಿಸಲಿಲ್ಲ. ಕೊಡಗರಿಗೆ ದೊಡ್ಡ ಉದ್ಯೋಗ ಸಿಕ್ಕಿರುವಾಗ ಹೀಗೆ ಮಾಡುವದು ಯುಕ್ತವಲ್ಲವೆಂತ ಮುಂತಾಗಿ ಮಾತಾಡಿದರು. ಮ. ಕೊಳ್ಳಿಮಾಡ ಕರುಂಬೈಯ್ಯನವರು ಈ ಠರಾವನ್ನು ಈಗಿನ ಆಫೀಸರುಗಳ ಮೇಲಿನ ದ್ವೇಷದಿಂದ ತಂದದ್ದಲ್ಲ, ಇನ್ನು ಮುಂದೆ ಬರುವ ಯಾವ ಆಫೀಸರುಗಳಿಗಾದರೂ ಅನ್ವಯವಾಗುತ್ತದೆ. ವರ್ಗದಿಂದ ನಮ್ಮ ದೇಶದವರಿಗೆ ಹೊರಗೆ ಹೋಗಿ ಹೆಚ್ಚಿನ ಪದವಿಗಳಿಗೆ ಏರಲು ಅನುಕೂಲವಾಗುತ್ತದೆಯೆಂತ ಮುಂತಾಗಿ ಹೇಳಿ ಠರಾವಿಗೆ ಒತ್ತಾಸೆಕೊಟ್ಟರು. ಮ. ನಾಯಡ ಬೆಳ್ಯಪ್ಪನವರು ಹೇಳಿದ್ದೇನೆಂದರೆ—ಗಜೆಟೆಡ್ ಉದ್ಯೋಗಸ್ಥರು ಕೆಡಕು ಮಾಡುತ್ತಾರಾದರೆ ಅವರನ್ನು ಮನೆಗೆ ಕಳುಹಿಸಬೇಕೆಂತ ಕೇಳುವ, ಅವರಿಗಿಂತ ಪಾರುಪತ್ತೆಗಾರರುಗಳೂ, ಶ್ಯಾನುಭೋಗರುಗಳೂ ಮತ್ತು ಇತರ ಕೆಳಗಿನ ಉದ್ಯೋಗಸ್ಥರೂ ರೈತರಿಗೆ ಕೆಡಕು ಮಾಡುತ್ತಿರುವಲ್ಲಿ ದೊಡ್ಡ ಉದ್ಯೋಗಸ್ಥರ ವರ್ಗಾವರ್ಗಿ ಕೇಳುವದು ಯಾಕೆ? ಇದೇ ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರು ಈ ಕೆಲಸಕ್ಕೆ ಬಂದಾಗ ದೇಶದಲ್ಲೆಲ್ಲಾ ಅವರನ್ನು ಉಪಚರಿಸಿ ತಮ್ಮ ಸಂತೋಷವನ್ನು ಸೂಚಿಸಿರುವಾಗ ಅವರ ಕಾಲದಲ್ಲೇ ವರ್ಗಾವರ್ಗಿ ಕೇಳುವದು ಸರಿಯಲ್ಲ. ಇದರ ಬದಲು ಎಲ್ಲಾ ಬಿ. ಎ. ಪಾಸಾದ ಯುವಕರನ್ನು ಮದ್ರಾಸಿಗೆ ಕಳುಹಿಸುವಂತೆ ಪ್ರಯತ್ನಿಸುವ ಎಂತ ಮುಂತಾಗಿ ಹೇಳಿ ಠರಾವಿಗೆ ವಿರೋಧಿಸಿದರು. ಮ. ಬಿದ್ದಂಡ ಸುಬ್ಬಯ್ಯನವರೂ ಸಹ ಠರಾವಿಗೆ ವಿರೋಧಿಸಿ, ಮದ್ರಾಸಿಗೆ ಇಲ್ಲಿನ ಉದ್ಯೋಗಸ್ಥರನ್ನು ಕಳುಹಿಸಿದರೆ ಅವರ ಬದಲಿಗೆ ಬರುವ ಉದ್ಯೋಗಸ್ಥರು ತಮ್ಮ ಜಾತಿಗೆ ಗುಣ ಮಾಡದೆ ಇರುತ್ತಾರೋ, ಯೂರೋಪಿಯನ್ ಆಫೀಸರುಗಳು ದೇಶೀಯರೊಳಗೆ ಪಕ್ಷ ವಹಿಸಿಕೊಳ್ಳದಿದ್ದರೂ ಯೂರೋಪಿಯನರಿಗೆ ಸಹಾಯ ಮಾಡುತ್ತಾರೆಂಬುದು ಎಲ್ಲರಿಗೂ ತಿಳಿದ ವಿಷಯವಾಗಿದೆ. ಆದ್ದರಿಂದ ಹೊರಗಿನಿಂದ ಈ ದೇಶಕ್ಕೆ ಗಜೆಟೆಡ್ ಅಧಿಕಾರಿಗಳು ಬರಕೂಡದು ಎಂತ ವಾದಿಸಿದರು.

ಮ. ಜಮ್ಮಡ ಮಾದಪ್ಪನವರು ಹೇಳಿದ್ದೇನೆಂದರೆ—ಮ. ಬಿದ್ದಂಡ ಸುಬ್ಬಯ್ಯನವರು ಹೇಳಿದ ಮೇರೆ ಉದ್ಯೋಗಸ್ಥರು ತಮ್ಮ ಜಾತಿಯವರಿಗೆ ಸಹಾಯ ಮಾಡುವದಾದರೆ ಈಗ ಕೊಡಗರಲ್ಲಿದ ಹೆಚ್ಚಿನ ಜನಸಂಖ್ಯೆಯು ರೈತರಿಗೆ ನ್ಯಾಯ ಸಿಕ್ಕುವದು ಹೇಗೆ? ಆ ಕಾರಣದಿಂದಲೇ ಐದು ವರ್ಷಕ್ಕಿಂತ ಹೆಚ್ಚಿನ ಕಾಲ ಗಜೆಟೆಡ್ ಉದ್ಯೋಗಸ್ಥರು ಒಂದೇ ಕಡೆ ಇರಬಾರದು. ಈ ದೇಶದ ಉದ್ಯೋಗಸ್ಥರು ಹೊರಗೆ ಹೋಗಬಾರದೆಂದರೆ ಬೇರೆ ಕಡೆಗಳಲ್ಲಿ ಅವರಿಗೆ ಕೆಲಸ ಮಾಡಲು ಶಕ್ತಿಯಿಲ್ಲವೆಂತ ಹೇಳಿದಂತಾಗುತ್ತದೆಯೆಂತ ವಗೈರೆ ಹೇಳಿದರು. ಮ. ಬೇರಿರ ಚಿಣ್ಣಪ್ಪನವರೂ ಠರಾವಿಗೆ ವಿರೋಧಿಸಿದರು. ಮ. ಪಟ್ಟೆಯಂಡ ಸಂಜಪ್ಪನವರು ವರ್ಗಾವರ್ಗಿಯಿಂದ ಉದ್ಯೋಗಸ್ಥರಿಗೇನೇ ಅನುಕೂಲ. ಮುನಸೀಫರಾಗಿದ್ದವರು ಗೋಪಾಲರಾಯರು ಒಂದೇ ಕಡೆಯಲ್ಲಿಯೇ ಇಲ್ಲಿಯೇ ಇದ್ದು ಅವರಿಗೇನೇ ಬೇಸರವಾಗಿತ್ತು. ಈಗಿನ ಮುನಸೀಫರೂ ಸಹ ಇಲ್ಲಿ 17 ವರ್ಷದಿಂದ ಕೆಲಸ ಮಾಡುತ್ತಿದ್ದಾರೆ. ವರ್ಗವಾಗುವದು ಮಂಜೂರಾದರೆ ಅವರು ದೊಡ್ಡ ಪದವಿಗೆ ಹೋಗುತ್ತಾರೆ. ಇವರೂ, ಸಬ್‌ಜಡ್ಜಿಯರೂ ಹೊರಗೆ ಹೋಗಿದ್ದರೆ ಡಿಸ್ಟ್ರಿಕ್ಟ್ ಜಡ್ಜಿ ಸಹ ಆಗಬಹುದಿತ್ತು ಎಂತ ಹೇಳಿ ಠರಾವನ್ನು ಅನುಮೋದಿಸಿದರು.

ಮ. ಸಿ. ಯನ್. ಉತ್ತಯ್ಯನವರು ಹೇಳಿದ್ದೇನೆಂದರೆ—ಜಮೀನ್‌ದಾರರಸಂಘದಲ್ಲಿ ಈ ವಿಷಯ ಚರ್ಚೆಯಾಗುತ್ತದೆಯೆಂತ ಮೊದಲೇ ತಿಳಿಸಲಿಲ್ಲ. ಸಂಘದಲ್ಲಿ ತೀರ್ಮಾನವಾದ ಮೇಲೆ ಈಗ ಪುನಃ ಮೀಟಿಂಗ್ ಮಾಡುವದು ಏಕೆ? ವರ್ಗ ಬೇಕೆಂತ ಅಪೇಕ್ಷೆ ಇರುವದಾದರೆ ಆಫೀಸರುಗಳೇ ಕೇಳಿಕೊಳ್ಳಲಿ. ಪ್ರೊವಿನ್ಶಿಯಲ್ ಆಫೀಸರುಗಳೆಂಬದರಿಂದಲೇ ಇವರನ್ನು ಬೇರೆ ಕಡೆಗೆ ಕಳುಹಿಸಬಾರದೆಂತ ತಿಳಿಯುತ್ತದೆ. ಮದ್ರಾಸಿಗೆ ಹೋಗುವ ಅಧಿಕಾರಿಗಳು ಅಲ್ಲಿ ತಪ್ಪುಮಾಡದೆ ಅವರಿಗೆ ತಿಕ್ಕಟ್ಟು ಬಂದೀತು. ಆಗಲೂ ಹೊರಗಿನಿಂದ ಬಂದ ಆಫೀಸರು ಅವರ ವಾಯಿದೆ ತೀರದೆ ವಾಪಸು ಹೋಗುವದಿಲ್ಲ. ನಮ್ಮ ಸರಕಾರಕ್ಕೆ ಪೆನ್ಶನ್ ರೂಪದಲ್ಲಿ ಹೆಚ್ಚಿಗೆ ನಷ್ಟವಾಗುತ್ತದೆ ಎಂತ ಮುಂತಾಗಿ ಹೇಳಿ ಠರಾವಿಗೆ ವಿರೋಧಿಸಿದರು. ಮ. ಯನ್. ಮುದ್ದಪ್ಪನವರು ಹೇಳಿದ್ದೇನೆಂದರೆ—ಈ ಠರಾವಿನಿಂದ ಈಗಿನ ಉದ್ಯೋಗಸ್ಥರಿಗೆ ಕೆಡಕು ಮಾಡಲು ಯೋಚಿಸಿರುವದಿಲ್ಲ. ಈ ಠರಾವು ಜಾರಿಗೆ ಬರಬೇಕಾದರೆ ಇನ್ನೂ ನಾಲ್ಕೈದು ವರ್ಷವಾಗಬಹುದು. ಇದರೊಳಗೆ ಈಗ ಇರುವ ಆಫೀಸರುಗಳು ರಿಟೈರ್ ಆಗುತ್ತಾರೆ. ಪೂರ್ವದಲ್ಲಿ ಈ ದೇಶದಲ್ಲಿ ಉದ್ಯೋಗಸ್ಥರು ಹೆಚ್ಚು ಕಾಲ ಕೆಲಸಮಾಡಿದಾಗ ವಿರೋಧಿಸಲಿಲ್ಲವೆಂಬ ಕಾರಣದಿಂದ ಈಗಲೂ ವಿರೋಧಿಸಬಾರದೆಂತ ಹೇಳಲಿಕ್ಕಾಗುವದಿಲ್ಲ. ಈಗ ತಮ್ಮ ಅಭಿಪ್ರಾಯವನ್ನು ಸರಕಾರಕ್ಕೆ ಸಾರ್ವಜನಿಕ ಸಂಸ್ಥೆಗಳ ಮೂಲಕ ತಿಳಿಸಬಹುದೆಂದು ಜನರಿಗೆ ತಿಳುವಳಿಕೆ ಬಂದಿದೆ. ಕೆಳಗಿನ ದರ್ಜೆ ಆಫೀಸರುಗಳನ್ನು ಆಗಿಂದಾಗ್ಗೆ ಒಂದುಕಡೆಯಿಂದ ಒಂದುಕಡೆಗೆ ವರ್ಗಾಯಿಸುತ್ತಲೇ ಇದ್ದಾರೆ. ಹೆಚ್ಚು ಅಧಿಕಾರವಿರುವ ಗಜೆಟೆಡ್ ಉದ್ಯೋಗಸ್ಥರನ್ನು ಬಹುಕಾಲ ಒಂದೇ ಕೆಲಸದಲ್ಲಿ ಇಡುವದು ಒಳ್ಳೆಯದಲ್ಲ. ಈಗಿನ ಅಧಿಕಾರಿಗಳಿಗೆ ವಿರೋಧಿಸಿ ಈ ಠರಾವಿಗೆ ಒತ್ತಾಸೆಕೊಡುವದಲ್ಲವೆಂತ ಒತ್ತಿ ಹೇಳಿದರು.

ಮ. ರಾ. ಬಾ. ಕೊಡಂದೆರ ಕುಟ್ಟಯ್ಯನವರು ಹೇಳಿದ್ದೇನೆಂದರೆ—ನಾವೆಲ್ಲರೂ ಬಹುಕಾಲ ಉದ್ಯೋಗ ಮಾಡಲಿಲ್ಲವೇ, ಉದ್ಯೋಗದಲ್ಲಿ ಕೆಡಕುಮಾಡಿದರೆ ಜನರ ಮುಂದೆ ಬಂದರೆ ಆಕ್ಷೇಪಿಸುವದಿಲ್ಲವೇ? ತಮ್ಮ ದೇಶದಲ್ಲೇ ಕೆಲಸವಿರಬೇಕೆಂತ ಎಲ್ಲರಿಗೂ ಆಶೆಇರುತ್ತದೆ. ಗಜೆಟೆಡ್ ಅಧಿಕಾರಿಗಳು ಕೆಡಕುಮಾಡುತ್ತಾರೆಂತ ಅನೇಕರು ಹೇಳಿದರು. ಅದು ಎಲ್ಲಾ ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರನ್ನೇ ಹೇಳಿದರು. ಅಂಥ ಕೆಡಕುಮಾಡಿದ್ದರೆ ವಿವರಿಸಿ ಹೇಳಬೇಕು. ಮದ್ರಾಸ್ ಪ್ರಾಂತ್ಯಕ್ಕೆ ಇಲ್ಲಿನ ಉದ್ಯೋಗಸ್ಥರು ಹೋದರೆ ಅವರಿಗೆ ಒಳ್ಳೆದಾಗುವದು ನನಗೆ ತೋರುವದಿಲ್ಲವೆಂತ ಹೇಳಿ ಠರಾವಿಗೆ ವಿರೋಧಿಸಿದರು. ಮ. ಅಪ್ಪಾರಂಡ ಬಂಗಪ್ಪನವರು ಹೇಳಿದ್ದೇನೆಂದರೆ—ವರ್ಗವಾಗಬೇಕಾದರೆ ಮದ್ರಾಸಿಗೇ ಮಾಡಬೇಕೆಂತ ಕೇಳುವದು ಯಾಕೆ, ಒಂದು ದರ್ಜೆಗೆ ಏರಿದನಂತರ ಇಂಪೀರಿಯ

ನೈಟ್ರೇಟ್ ಆಫ್ ಸೋಡಾ

ಎಲ್ಲಾ ಬೆಳೆಗಳಿಗೂ ಅತ್ಯುತ್ತಮವಾದ ಗೊಬ್ಬರ

Nitrate of Soda 15-16 per cent. N

ಈ ಗೊಬ್ಬರದಲ್ಲಿ ಬೆಳೆಗಳಿಗೆ ಅತ್ಯಗತ್ಯವಾದ ನೈಟ್ರೋಜನ ಸಸ್ಯಾಹಾರವು

15-16% ಅಂದರೆ ಮೀನು ವ ಒಳ್ಳೆಯ ಹಿಂಡಿ ಗೊಬ್ಬರದಲ್ಲಿರುವುದಕ್ಕಿಂತಲೂ ಮೂರು ನಾಲಕ್ಕು ಪಾಲು ಜಾಸ್ತಿ ಯಾಗಿರುವದು. ಇದರಲ್ಲಿ ಸಿಕ್ಕುವಷ್ಟು ನಾರಜನಕ (Nitrogen) ವು ಬೇರೆ ಯಾವ ಗೊಬ್ಬರಗಳಿಂದಲೂ ರೈತರಿಗೆ ದೊರೆಯಲಾರದು. ಆದ್ದರಿಂದಲೇ ಭೂಲೋಕದ ಎಲ್ಲಾ ಭಾಗಗಳಲ್ಲಿಯೂ ರೈತರು ಇದನ್ನು ವಿಶೇಷವಾಗಿ ಉಪಯೋಗಿಸುತ್ತಾರೆ.

ಭತ್ತ, ಕಬ್ಬು, ತೆಂಗು, ಅಡಿಕೆ, ಹೂವು, ಹೊಗೆಸೊಪ್ಪು, ತರಕಾರಿ ಮೊದಲಾದವುಗಳಿಗೂ ಕಾಫಿ, ಚಹಾ, ರಬ್ಬರು ವಿಳ್ಯದೆಲೆ ಮೊದಲಾದ ತೋಟ ಪೈರುಗಳಿಗೂ ಎಲುಬಿನ ಪುಡಿ ಅಥವಾ ಮೀನು ಗೊಬ್ಬರ ವಗೈರೆ ಊರ ಗೊಬ್ಬರಗಳ ಜೊತೆಯಲ್ಲಿ ಈ ಗೊಬ್ಬರವನ್ನು ಉಪಯೋಗಿಸುವದರಿಂದ ಬೆಳೆಯು ಸಮೃದ್ಧಿಯಾಗುವದು. ನೈಟ್ರೇಟ್ ಆಫ್ ಸೋಡಾದಲ್ಲಿರತಕ್ಕ ಸೋಡವು ಮಣ್ಣಿನಲ್ಲಿರುವ ಪೊಟ್ಯಾಶ್ ಎಂಬ ಇನ್ನೊಂದು ತರದ ಸಸ್ಯಾಹಾರವನ್ನು ಗಿಡಗಳಿಗೆ ಒದಗಿಸಿ ಕೊಡುತ್ತದೆ.

ಈ ಗೊಬ್ಬರವು ನೋಟಕ್ಕೆ ಬರೇ ಉಪ್ಪಿನ ಹಾಗಿದ್ದು ಅಪಾಯಕರವಲ್ಲ. ಎಕರೆ ಒಂದಕ್ಕೆ 100-200 ರಾತ್ತಲು ಸಾಕಾಗುವದು. ಹೆಚ್ಚಿನ ಮಾಹಿತಿ ಮತ್ತು "ಕೃಷಿಸುಧಾರ" ಎಂಬ ಪುಸ್ತಕವನ್ನು ಈ ಕೆಳಗಿನ ವಿಳಾಸದಾರರಿಂದ ಧರ್ಮಾರ್ಥವಾಗಿ ಪಡೆಯಬಹುದು.

52—3

CHILEAN NITRATE COMMITTEE,
Post Box 469, CALCUTTA.

ಗ್ರೇಡಿಗೆ ಸೇರಿಸಿಕೊಳ್ಳಬೇಕೆಂತ ಇಂಡಿಯಾ ಸರಕಾರದವರ ಕೇಳುವದು ಉತ್ತಮವು. ಮದ್ರಾಸಿನಿಂದ ಬಂದಿರುವ ಫಾರೆಸ್ಟ್ ಅಧಿಕಾರಿಗಳನ್ನು ವಾಪಸು ಕಳುಹಿಸುವದು. ಕಷ್ಟವಾಗಿದೆ. ದೈವ ವಶಾತ್ ಫಾರೆಸ್ಟ್ ಇಂಜಿನಿಯರಿಗೆ ಬೇರೆ ಕೆಲಸ ಸಿಕ್ಕಿದ್ದರಿಂದ ನಮ್ಮ ಸರಕಾರಕ್ಕೆ ಸಾವಿರಾರು ರೂಪಾಯಿ ಉಳಿಯಿತು, ಎಂದು ವಾದಿಸಿದರು.

ಮೆ ಪಿ ಐ ಬೆಳ್ಯಪ್ಪನವರು ಹೇಳಿದ್ದೇನೆಂದರೆ—ಮದ್ರಾಸಿನಿಂದ ಎರವಾಗಿ ಇಲ್ಲಿಗೆ ಬಂದ ಆಫೀಸರುಗಳನ್ನು ಕಳುಹುವದು ಕಷ್ಟವಾದರೂ, ಆಫೀಸರುಗಳನ್ನು ವಾಪಸು ಕಳುಹುವಾಗ ಈ ಕಷ್ಟವಿರುವುದಿಲ್ಲ. ಫಾರೆಸ್ಟ್ ಇಂಜಿನಿಯರು ಇಂಪೀರಿಯಲ್ ಸರಕಾರದ್ದರಿಂದ ಅವರನ್ನು ಕಳುಹಿಸಿಬಿಡಬೇಕೆಂತ ಹೇಳಲಿಕ್ಕೆ ಕೌನ್ಸಿಲರುಗಳಿಗೆ ಸಾಧ್ಯವೇ ಇಲ್ಲ. ಇಂಪೀರಿಯಲ್ ದರ್ಜೆಗೆ ಏರುವ ಅರ್ಹತೆ ಒರಬೇಕಾದರೆ ಮೂವತ್ತು ವರ್ಷವಾಗುವುದಾದರೆ ಅಷ್ಟು ಕಾಲವೂ ಅವರು ಇಲ್ಲಿಯೇ ಇರಬೇಕೋ? ಜಮೀನ್‌ದಾರ ಸಂಘದ ವಾರ್ಷಿಕವಿಯೋಗದಲ್ಲಿ ಚರ್ಚೆಯಾಗುವ ವಿಷಯ ಮುಂದೆ ತಿಳಿಸುವ ಸದ್ಯಕ್ಕಿಲ್ಲ. ಮುಖ್ಯ ಸಂಗತಿಗಳನ್ನೆಲ್ಲಾ ಚರ್ಚಿಸಬಹುದಾಗಿದೆ. ಸಂಘದಲ್ಲಿ ತೀರ್ಮಾನವಾದ ಮಹಾ ಮುದ್ರಿಸಿಗಳ .... ಕಂಬಿ ಚಳವಳಿಯನ್ನು ಮೆ ಉತ್ತಯ್ಯನವರೇ ದೇಶದಲ್ಲೆಲ್ಲಾ ಮಾಡಲಿಲ್ಲವೇ? ಅಧಿಕಾರಿಗಳು ಮಾಡುವ ಕಡಕನ್ನು ಹೇಳುವರಿಗೆ ಧೈರ್ಯವಿರುವುದಿಲ್ಲ. ಅವರಿಗೆ ಅಧಿಕಾರಿಗಳು ಅವರ ಮೇಲೆ ಪ್ರಕಾರಿಗಳು ತರಬಹುದೆಂದು .... ಸ್ಥಾನದಲ್ಲೆಲ್ಲಾ ಇರುವ ರೂಲನ್ನೇ ಇಲ್ಲಿ ಒಂದಿಗ ತರಬೇಕೆಂತ ಕೇಳುವದಾಗಿದೆ. ಉಪ್ರಾಂತೀಕ ಸರಕಾರದಲ್ಲಿ ಒಂದೇ ಡಿಸ್ಟ್ರಿಕ್ಟ್ ಇರುವದರಿಂದ ಪ್ರಾಂತೀಕ ಅಧಿಕಾರಿಗಳಿಗೆ ವರ್ಗ ಕ್ಕೆ ಅನುಕೂಲವಿಲ್ಲದ್ದರಿಂದಲೇ ಮದ್ರಾಸಿಗೆ ವರ್ಗಮಾಡಬೇಕೆಂತ ಕೇಳುವದಾಗಿದೆ. ನಮ್ಮ ಆಫೀಸರುಗಳಾದರ ಹಾಲಿ ಕಮಾಗಳನ್ನು ಹೇಳಿಕೊಂಡರೆ ಸಹಾಯವಾಗುತ್ತದೆಂತ ವಾದಿಸುತ್ತಾರೆ. ಆದರೆ ಅಂಥಾ ದಾಕ್ಷಿಣ್ಯದಿಂದ ಒಂದೆ ಕಡೆಗೆ ಕುಳಿ ಮಾಡಿದರೆ ಇನ್ನೊಂದು ಕಡೆಗೆ ಅನ್ಯಾಯವಾಗುವುದಿಲ್ಲವೇ? ಪಕ್ಷಪಾತವಿಲ್ಲದ ನ್ಯಾಯದಂತೆ ಪ್ರಕಟಿಸ ... ಬೇರೆ ಉದ್ಯೋಗಸ್ಥರು ಇರಬೇಕಾದದ್ದು ಉದ್ಯೋಗಸ್ಥರ ಹಿತದಕ್ಕಾಗಿಯೂ ಈ ಚಳವಳಿ ಹೂಡಬೇಕಾಗಿದೆಂತ ಹೇಳಿ ರಾಪಿಗ ಒತ್ತಾಸೆಕೊಟ್ಟರು.

ರಾ ಸಾ ಕೆ ಸಿ ಪೃಥು ... ನವರ ... ಗೇಶನನ್ನು ಮದ್ರಾಸಿ ಸೇರಿಸಬೇಕೆಂಬ ಯೋಜನೆಯನ್ನು ... ಒಟ್ಟಿದ್ದೇ ಈ ಠರಾವನ್ನು ತಂದರೆ ನ ದ್ರಾಸಿಗೆ ನೌಕರರ ಕೊರತೆಯೇ ಆಗುತ್ತದೆ. ಆಫೀಸರ ಗಳು ತಪ್ಪು ಮಾಡಿದರೆ ಕೌನ್ಸಿಲಿನಲ್ಲಿ ಅಂಥಾದ್ದನ್ನು ನಟ್ಟಗೆ ಮಾಡಿಕೊಳ್ಳಬಹುದು, ಎಂದು ಹೇಳಿ ಠರಾವಿಗೆ ವಿರೋಧಿಸಿದರು. ಮೆ ಸಿ. ಟಿ ಕ ಶಾಸ್ತ್ರಿಯವರು—ವಿದ್ಯಾವಂತರಾದವರೇ ಅಧಿಕಾರಿಗಳಿಗೆ ಹೆದರುತ್ತಾರೆ. ಮೇಜಿಸ್ಟ್ರೇಟರಾದವರು ಎಲ್ಲಿದ್ದರೂ ಮೇಜಿಸ್ಟ್ರೇಟರೇ ಎಂತ ಹೇಳುತ್ತಾರೆ. ಹಾಗಿರುವಾಗ ಏನೂ ತಿಳಿಯದ ಮುವಾಸಿಗಳು ಕಷ್ಟಗ ಆಗುವ ಕೆಡಕನ್ನು ಹೇಗೆ ನಟ್ಟಗೆ ಮಾಡಿಕೊಳ್ಳುವದು? ಸ್ವರಾಜ್ಯ ಸಿಕ್ಕಬೇಕಾದರೆ ಎಷ್ಟೋ ಸ್ಥಾನಗಳನ್ನು ದಾಟಬೇಕು. ಹಾಗೆ ದಾಟುವಾಗ ಉದ್ಯೋಗಸ್ಥರು ಅಡ್ಡಿ ಒರುತ್ತಾರೆ. ಹಾಗೆ ಅಡ್ಡಿಯಿಂದ ಒಸರ ಆಫೀಸರುಗಳು ಯಾಗುವಿಕಾರು ನಮ್ಮ ದೇಶಸ್ಥರಿಗ ಬೇಡವೆಂಬವು ಯೋಚಿಸಿರುವದಾಗಿದೆ ಎಂತ ಮತ್ತು ಹೇಳಿದರು.

ಮ ಪಿ ಬಿ ಮೇದಪ್ಪನವರು ಹೇಳಿದ್ದೇನೆಂದರೆ ಈಗ ನಮಗೆ ಸಿಕ್ಕಿರುವ ದೊಡ್ಡ ಉದ್ಯೋಗಗಳನ್ನು ಬಿಟ್ಟರೆ ಅವನ್ನು ದೊರಕಿಸಿಕೊಳ್ಳುವದು ಕಷ್ಟವಾಗುತ್ತದೆ. ಈ ವರ್ಗಾವರ್ಗಿ ಕಾರಣದಿಂದ ಪೆನ್ಶನ್ ರೂಪದಲ್ಲಿ ಹೊರಗಿನವರಿಗೆ ನ ಸರಕಾರದಿಂದ ತುಂಬಾ ಹಣ ಹೋಗಬೇಕಾಗುತ್ತದೆ. ಇರುವ ಜಿಲ್ಲೆಯಲ್ಲಿ ಗಜಟೆಡ್ ಉದ್ಯೋಗ ಕೊಡಬಾರದೆಂಬ ರೂಲನ್ನು ಜಾರಿಗೆ ತರಬೇಕೆಂದರೆ ಇನ್ನು ಮುಂದೆ ದೇಶೀಯರಿಗೆ ದೊಡ್ಡ ಉದ್ಯೋಗದೊರಕಲಿಕ್ಕಿಲ್ಲವಂತಲೂ ಆಫೀಸರುಗಳು ತಪ್ಪು ಮಾಡಿದರೆ ಕೌನ್ಸಿಲಿನಲ್ಲಿ ಅದನ್ನು ಹೇಳುವ ಧೈರ್ಯ ಇರುವವರನ್ನೇ ಕೌನ್ಸಿಲಿಗೆ ಕಳುಹಿಸಬೇಕು ಎಂತ ಅಂತಾಗಿ ಹೇಳಿ ವರ್ಗಾವರ್ಗಿಗೆ ವಿರೋಧಿಸುತ್ತೇನೆಂತ ಹೇಳಿದರು.

ಠರಾವನ್ನು ಓಟಿಗೆಹಾಕುವ ಮುಂಚೆ ಅಧ್ಯಕ್ಷರಾದ ಮೆ ಓ. ತಿಮ್ಮಯ್ಯನವರು ವರ್ಗಾವರ್ಗಿಯಿಂದ ಅಧಿಕಾರಿಗಳೂ ದೇಶಕ್ಕೂ ಒಳ್ಳೆದೇ, ಗಜೆಟೆಡ್ ಉದ್ಯೋಗಸ್ಥರು ವರ್ಗಾವರ್ಗಿಯಿಂದ ಅಸಂತುಷ್ಟರಾಗದಂಬ ಭಾವನೆಯನ್ನು ಜೀವನಾಶಕರು ಮೊನ್ನೆ ತಾನೇ ಸೂಚಿಸಿರುವರು. ಆದರೆ ಉನ್ನತಗಿ ದೇಶೀಯರನ್ನೇ ನೇಮಿಸಬೇಕು ಎಂತ ಹೇಳಿ ಇದೇ ಅಭಿಪ್ರಾಯವನ್ನು ಒಳಕೊಂಡ ಈ ಕೆಳಗಿನ ಠರಾವನ್ನು ಮೆ. ಪಿ ಬಿ ಮೇದಪ್ಪನವರು ಸೂಚಿಸಿದರು.

"ಈ ದೇಶದ ಪ್ರಾಂತೀಕ ಗಜೆಟೆಡ್ ಉದ್ಯೋಗಗಳ ದೇಶೀಯರಿಗೇನೇ ಕೊಡಬೇಕೆಂತಲೂ ಅಂಥಾ ಉದ್ಯೋಗಸ್ಥರನ್ನು ಐದು ವರ್ಷದನಂತರ ವರ್ಗಾಯಿಸಬೇಕೆಂತಲೂ ಹೊರಗಿನವರನ್ನು ಕೇಳಿಕೊಳ್ಳಬೇಕು."

ಈ ಠರಾವಿನ ಅಭಿಪ್ರಾಯವನ್ನು ಜಾರಿಗೆ ತರಲು ಸಾಧ್ಯವಿಲ್ಲದಿದ್ದಲ್ಲಿ, ನಮ್ಮಲ್ಲಿಂದ ಉದ್ಯೋಗಸ್ಥರನ್ನು ಬೇರೆ ಪ್ರಾಂತ್ಯಕ್ಕೆ ವರ್ಗಮಾಡುವಾಗ ಅಲ್ಲಿನ ಉದ್ಯೋಗಸ್ಥರನ್ನು ಈ ದೇಶಕ್ಕೆಗೆದುಕೊಳ್ಳದೆ ಹೋದರೆ ಬೇರ ಸರಕಾರದವರು ಒಪ್ಪಲಾರರೆಂತ ಮೆ ಎನ್ ಮುದ್ದಪ್ಪನವರೂ ಮೆ. ಕೆ. ಪಿ ಚಿಣ್ಣಪ್ಪನವರೂ ವಿವರಿಸಿದರು.

ಅನಂತರ ಉಪ ಠರಾವನ್ನು ಓಟಿಗೆ ಹಾಕಲಾಗಿ ಹೆಚ್ಚು ಮತದಿಂದ ಪಾಸಾಯಿತು.

ಕರ್ನಾಟಕ ಏಕೀಕರಣದ ವಿಷಯವನ್ನು ಚರ್ಚಿಸಲಿಕ್ಕೆ ಸಮಯವಿಲ್ಲದ್ದರಿಂದ ಆ ವಿಷಯವನ್ನು ಮುಂದಕ್ಕೆ ಇಡಲಾಯಿತು.

ನೋಟೀಸು.

... ಕಲ್ಲು ಗ್ರಾಮದ ಮುಕ್ಕಾಟಿರ ಅಪ್ಪಚ್ಚನಾದ ನನ್ನ ಬಿಳಿ ... ಪಟ್ಟೆ ಇರುವ, ಕೊಂಬು 1½ ಅಡಿ ಉದ್ದದ, 3½ ಅಡಿ ಎತ್ತರ ಇರುವ ಗಾಡಿ ಎತ್ತಿನ ಹಾಗೆ ಕಾಣುವ ಒಂದು ಎತ್ತು ಕಳೆದ ... ದಿಂದ ಕಾಣೆಯಾಗಿದೆ. ಇದನ್ನು ಪತ್ತೆ ಮಾಡಿ ಕಟ್ಟಿದವರಿಗೆ 5 ರೂಪಾಯಿ ಇನಾಮು ಕೊಡುತ್ತೇನೆ.

ವೀರಾಜಪೇಟೆ ಮುಕ್ಕಾಟಿರ ಅಪ್ಪಚ್ಚ
ತಾ 18—6—26 ನಲ್ಲಿಕೊಪ್ಪಲು ಗ್ರಾಮ

ವರ್ತಮಾನ ಸಂಗ್ರಹ.

ಒಳದೇಶ

ಮಡಿಕೇರಿಯಲ್ಲಿ ಈ ವಾರ 7 ಇಂಚ 10 ಸೆಂಟ್ ಮಳೆ ಬಿದ್ದಿರುತ್ತೆ.

ಈಗ ರಜೆಯಲ್ಲಿರುವ ... ಡಿಕೇರಿಯಿಂದ ... ವಂಗ ... ವರ್ಗ ... ಆಗಿದೆಯೆಂದು ತಿಳಿದು ಬಂದಿದೆ.

ಸೆಂಟ್ರಲ್‌ಬ್ಯಾಂಕಿನ ಡೈರೆಕ್ಟರುಗಳ ಮೀಟಿಂಗ್ ತಾ 26 ನೇ ಶನಿವಾರ ದಿನ ಬೆಳಿಗ್ಗೆ 11 ಗಂಟೆಗೆ ಮಡಿಕೇರಿ ಮುನ್ಸಿಪಲ್ ಆಫೀಸಿನಲ್ಲಿ ನಡೆಯಲಿಕ್ಕಿರುವುದು.

ಮಡಿಕೇರಿ ಮುನಿಸಿಪಾಲಿಟಿಯ ಚುನಾವಣೆಯು ಜುಲೈ ತಾರೀಕು 15 ರಲ್ಲಿ ನಡೆಯುವುದು. ಮೆಂಬರುತನಕ್ಕೆ ಉಮೇದುವಾರರು ಈ ತಾ 24 ರೊಳಗೆ ಅಪ್ಲಿಕೇಶನ್ ಕಳುಹಿಸತಕ್ಕದ್ದು.

ವಿ ... ಹೈಸ್ಕೂಲು ಹೆಡ್ ಮಾಸ್ಟರಾದ ಮೆ. ಪಿ ಮಂಗೇಶರಾಯರಿಗೆ ನಾಲ್ಕು ತಿಂಗಳು ರಜೆ ಮಂಜೂರಾಗಿದೆಯೆಂದು ಅವರು ಆಗಸ್ಟ್ ತಿಂಗಳಿಂದ ರಜೆಯಲ್ಲಿ ಹೋಗುವರೆಂದೂ ವರ್ತಮಾನ.

ಪೋಲೀಸ್ ಸಬ್ ಇನ್‌ಸ್ಪೆಕ್ಟರ್ ಮೆ ... ಯವರು ಮುತ್ತಣ್ಣನವರನ್ನು ಸಾಪ್ಲೋಕ್ಲಿಗೂ ಮ ಕಂಡ್ರತಂಡ ಕಾಯಪ್ಪನವರನ್ನು ಪ್ರಾಸಿಕ್ಯೂಟಿಂಗ್ ಸಬ್ ಇನ್‌ಸ್ಪೆಕ್ಟರಾಗಿ ಮಡಿಕೇರಿಗೂ ವರ್ಗಾಯಿಸಿದ ವರದಿ ತಿಳಿಯಬರುತ್ತದೆ.

ಪಟ್ಟಣದಲ್ಲಿ ವ್ಯಾಪಾರಸ್ಥರಾಗಿದ್ದ ಮ. ಮುಕ್ಕಾಟಿರ ದೇವಯ್ಯನವರು ಈ ತಾ 12ರಲ್ಲಿ ಶಿವಮೊಗ್ಗ ಆಸ್ಪತ್ರೆಯಲ್ಲಿ ಮೃತರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಅಲ್ಲಿದ್ದ ಕೊಡವರು ಅವರನ್ನು ಅಲ್ಲಿಯೇ ದಹನ ಮಾಡಿದರಂತೆ.

ಹಿಂದೂದೇಶ.

ಮ ಹಾತ್ಮ ಗಾಂಧಿಯವರು ಯೂರೋಪಿಗೆ ಹೋಗುವದಿಲ್ಲವೆಂದು ತೀರ್ಮಾನಿಸಿರುವರು.

ಮದ್ರಾಸ ... ದಲ್ಲಿ ಕೆಲವರಿಂದ ಹೊಡೆಯಲ್ಪಟ್ಟ ... ನಾಲ್ಕೈದು ಜನರು ಎರಡು ವಾರಗಳಿಂದ ಮೃತಪಟ್ಟಿರುತ್ತಾರೆ.

ಕಲ್ಕತ್ತೆಯ ಫಾರ್ವರ್ಡ್ ಪತ್ರಿಕೆಯ ಎಡಿಟರಿಗೆ ಅದರ ಸೈರಕ್ಟರುಗಳು ಆಡಿದಾ ಮಾನಕ್ಕೆಗೂ ಅವರ ಅಪರಾಧ ಮತ್ತು ... ಪಡೆದದ್ದರಿಂದ ಸಂಪಾದಕತನಕ್ಕೆ ರಾಜಿನಾಮೆ ಕೊಟ್ಟಿರುವರು.

ರಾಜವಂಶೀಯ ಮ ... ಪಾಲಿಟಿಯೊಳಗಿರುವ ಜೈನ ಮಂದಿರಗಳಿಂದ ನೀರು ಇಳಿಸಲು ಕಂಟ್ರಾಕ್ಟ್ ಕೊಡಕೂಡದೆಂದು ಆ ಮುನಿಸಿಪಾಲಿಟಿಯವರು ತೀರ್ಮಾನಿಸಿರುವರು.

ಹತ್ತು ವರ್ಷಗಳಲ್ಲಿ ಅಫೀಮು ರಫ್ತನ್ನು ಹಿಂದೂದೇಶದಿಂದ ನಿಲ್ಲಿಸಲಾಗುವದೆಂದು ಇಂಡಿಯಾ ಸರಕಾರದವರು ಪ್ರಕಟಿಸಿರುವರು.

ತಾರೀಕು 13ರಲ್ಲಿ ಕಲಕತ್ತಾದಲ್ಲಿ ನಡೆದ ಬಂಗಾಳ ಪ್ರಾಂತೀಕ ಕಾಂಗ್ರೆಸ ಕಮಿಟಿ ಮೀಟಿಂಗಿನಲ್ಲಿ ಸೆನ್‌ಗುಪ್ತರವರ ಸ್ವರಾಜ್ಯಪಾರ್ಟಿಗೆ ಸಂಪೂರ್ಣ ಜಯವಾಗಿದೆ.

ಬಿಹಾರದ ಹಿಂದೂ ಮುಸಲ್ಮಾನರ ಮುಂದಾಳುಗಳು ತಮ್ಮ ಪ್ರಾಂತ್ಯದಲ್ಲೆಲ್ಲಾ ಸಂಚರಿಸಿ, ಹಿಂದೂ ಮುಸಲ್ಮಾನ ಐಕ್ಯತೆಯನ್ನು ಕುರಿತು ಭಾಷಣ ಮಾಡ ಬೇಕೆಂದು ತೀರ್ಮಾನಿಸಿರುವರು.

ಬರುವ ಕಾಂಗ್ರೆಸ್ಸಿನ ಅಧ್ಯಕ್ಷ ಪದವಿಗೆ ಶ್ರೀನಿವಾಸ ಅಯ್ಯಂಗಾರ್ಯರವರ ಹೆಸರನ್ನೂ, ಅವರು ಒಪ್ಪದಿದ್ದರೆ ಪಂಡಿತ ಮೋತಿಲಾಲನೆಹರೂರವರ ಹೆಸರನ್ನೂ ಆಸ್ಸಾಮಿನ ಸ್ವಾಗತ ಮಂಡಳಿಯವರು ಸೂಚಿಸುವರೆಂದು ತಿಳಿಯಬಂದಿದೆ.

ಸರ್ವೆಂಟ್ಸ್ ಆಫ್ ಇಂಡಿಯಾ ಸೊಸೈಟಿಯ ಬಾಪಟರ ಮೊಕದ್ದಮೆಯಲ್ಲಿ ಸುಪ್ರೀಂ ಕೋರ್ಟಿನ ನಷ್ಟವಾದ್ದಕ್ಕಾಗಿ ಧನಸಹಾಯ ಮಾಡಬೇಕೆಂದು ಮಹಾತ್ಮ ಗಾಂಧಿಯವರ, ಶ್ರೀನಿವಾಸಶಾಸ್ತ್ರಿಯವರ ಅಪೀಲು ಮಾಡಿರುತ್ತಾರೆ.

ಬಂಗಾಳದಲ್ಲಿ ಹಿಂದೂ ಮುಸಲ್ಮಾನರಿಗೆ ಉಂಟಾಗಿರುವ ಕೋಮು ಭಿನ್ನಾಭಿಪ್ರಾಯಗಳನ್ನು ನಿವಾರಿಸಿ, ಐಕ್ಯತೆಯನ್ನು ಸಾಧಿಸಲಿಕ್ಕಾಗಿ ಆ ಪ್ರಾಂತ್ಯದಲ್ಲೆಲ್ಲಾ ಸಂಚರಿಸಲು ಒಂದು ಪಾರ್ಟಿಯನ್ನು ಏರ್ಪಡಿಸುವಂತೆ ಅಲ್ಲಿಯ ಕಾಂಗ್ರೆಸ್ ಕಮಿಟಿಯವರು ತೀರ್ಮಾನಿಸಿರುವರು.

ಮದ್ರಾಸು ಸರಕಾರದವರು ಆ ಪ್ರಾಂತ್ಯದಲ್ಲಿರುವ ಲೈಬ್ರೆರಿಗಳಿಗೆ ಗ್ರ್ಯಾಂಟು ಕೊಡಲಿಕ್ಕಾಗಿ ಒಂದು ಲಕ್ಷ ಎಪ್ಪತ್ತು ಸಾವಿರ ರೂಪಾಯಿ ನಿಂತು ಇರಿಸ್ಮಾಡಿಸುತ್ತಾರೆ. ಒಂದೊಂದು ಲೈಬ್ರೆರಿಗೆ 400 ರೂಪಾಯಿಗಿಂತ ಮೀರದೆ ಕೊಡಬೇಕೆಂದು ತೀರ್ಮಾನಮಾಡಿರುವರು.

ಕಲಕತ್ತಾ ಮುನಿಸಿಪಾಲಿಟಿಯ ಡಿಪುಟಿ ಮೇಯರಾದ ಮೆ ಸುರವರ್ದಿಯವರ ನಡತೆಯ ವಿಷಯ ವಿಚಾರಿಸಲು ಒಂದು ಕಮಿಟಿಯನ್ನು ಏರ್ಪಡಿಸಿದಕ್ಕಾಗಿ ಹನ್ನೊಂದು ಮಹಮ್ಮದಿ ಮೆಂಬರ ಗಳು ಮುನಿಸಿಪಾಲಿಟಿ ಮೆಂಬರುತನಕ್ಕೆ ರಾಜಿನಾಮೆ ಕೊಟ್ಟಿರುವರು. ಆದರೆ ರಾಜಿನಾಮೆಯು ಒಪ್ಪಲ್ಪಡದ್ದರಿಂದ ಪುನಃ ಅವರನ್ನು ಆಲೋಚನೆ ಮಾಡಬೇಕೆಂದು ಕೇಳಿಕೊಂಡಿರುವರು.

ಕೊಲೊಂಬೋ ಪಟ್ಟಣದಲ್ಲಿ ಕೊಚ್ಚಿ ದೇಶದ ಮಾಪಿಳ್ಳೆಗುರ ವಾಗಿದ್ದವರ ಮಗ 10 ವರ್ಷ ಪ್ರಾಯದ ಸಯದ್ ಅಹಮದ್ ಕೋಯ ತಂಗಳ್ ಎಂಬ ಬಾಲಕನು ಅದ್ಭುತ ಶಕ್ತಿಗಳನ್ನು ತೋರಿಸುತ್ತಾನೆಂತ ವರ್ತಮಾನವಿದೆ. ರೈಲ್ವೆ ಬಂಡಿಗಳನ್ನೂ, ಟ್ರಾಮ್ ಕಾರುಗಳನ್ನೂ, ಜನಗಳನ್ನೂ ತನ್ನ ಮನಶಕ್ತಿಯಿಂದ ನಿಲ್ಲಿಸುತ್ತಾನೆಂತ ವರ್ತಮಾನವಿದೆ. ಒಂದು ಟ್ರಾಮ್ ಕಾರಿನಿಂದ ಚಾರ್ಜ್ ಕೊಡದೆ ಇದ್ದುದಕ್ಕಾಗಿ ಇವನನ್ನು ಇಳಿಸಿದ್ದಕ್ಕೆ ಟ್ರಾಮ್ ಕಾರನ್ನು ಅರ್ಧ ಗಂಟೆಯವರೆಗೆ ಮುಂದಕ್ಕೆ ಹೋಗಲಿಕ್ಕೆ ಬಿಡಲಿಲ್ಲವಂತೆ. ಇವನಿಗೆ ಅನೇಕ ಇನಾಮುಗಳನ್ನು ಅಲ್ಲಿಯ ಜನರು ಕೊಡುತ್ತಾರೆಂದೂ, ಒಬ್ಬ ಮುಸಲ್ಮಾನ ವ್ಯಾಪಾರಿಯು 2500 ರೂ ಬೆಲೆಯುಳ್ಳ ... ಕೊಟ್ಟಿರುತ್ತಾರೆಂದೂ ತಿಳಿಯುತ್ತೇವೆ. ಅವನು ಒಂದು ... ಕಾರಿನಲ್ಲಿದ್ದ ಒಬ್ಬ ಯೂರೋಪಿಯನ್ನಿಂದ ... ತನ್ನ ... ಹೋದ ಕೂಡಲೇ ಅದರ ... ಇನ್ನೊಬ್ಬ ಮುಸಲ್ಮಾನರವನು ಕೊಟ್ಟನಂತೆ.

ವಿದೇಶ.

ಕನಡಾದ ಗವರ್ನರ್ ಜನರಲಾಗಿ ಲಾರ್ಡ್ ವೆಲ್ಲಿಂಗ್ಡನ್ನರವರನ್ನು ನೇಮಿಸಿರುವರು.

ಜನಾಂಗಗಳ ಕೂಟದ ಬ್ರೆಜಿಲ್ ಪ್ರತಿನಿಧಿಗಳು ಮೆಂಬರುತನಕ್ಕೆ ರಾಜಿನಾಮೆ ಕೊಟ್ಟಿರುವರು.

ಮದ್ರಾಸಿನ ಕೃಷ್ಣಮೂರ್ತಿಯವರನ್ನು ಜಗಲೋಕದ ಶಿಕ್ಷಕರೆಂದು ಲಂಡನ್ನಿನಲ್ಲಿ ನಡೆದ ಥಿಯೊಸೋಫಿಕಲ್ ಸಂಘದವರು ಒಪ್ಪಿಕೊಂಡಿರುವರು.

ಪರದೇಶಸ್ಥರ ಶಾಂತಿಯಿಂದ ಹಿಂದೂದೇಶದೊಳಗೆ ... ದೊಡ್ಡ ವಿಪತ್ತಾಗಿದೆಯೆಂದು ಸರ್ ಜಗದೀಶಚಂದ್ರ ಬೋಸರವರು ಲಂಡನ್ನಿನಲ್ಲಿ ಮಾಡಿದ ಒಂದು ಉಪನ್ಯಾಸದಲ್ಲಿ ಸೂಚಿಸಿರುವರು.

ಜರ್ಮನಿಯ ಮಾಜಿ ಕೈಸರವರ ಮತ್ತು ಅವರ ಹಿರೀ ಮಗನ ಆಸ್ತಿಯನ್ನು ಸರಕಾರಕ್ಕೆ ವಹಿಸಿಕೊಳ್ಳಬೇಕೆಂದು ಅಲ್ಲಿಯ ಪಾರ್ಲಿಮೆಂಟಿನವರು ತೀರ್ಮಾನಿಸಿದರೆ ಸರಕಾರದ ಅಧ್ಯಕ್ಷ ಪದವಿಗೆ ರಾಜಿನಾಮೆ ಕೊಡುವರೆಂದು ಹಿಂಡನ್‌ಬರ್ಗರವರು ಸೂಚಿಸಿರುವರು.

ಮಹಮ್ಮದೀಯ ಮತದ ಅವಸ್ಥೆಯನ್ನು ಹೆಡ್ಜಾಜಿನ ಪವಿತ್ರ ಪಟ್ಟಣಗಳ ಮುಂದಿನ ಸ್ಥಿತಿಯನ್ನು ತೀರ್ಮಾನಿಸಲಿಕ್ಕಾಗಿ ಮುಸ್ಲಿಮ್ ಕಾಂಗ್ರೆಸ್, ತಾರೀಕು 8ರಲ್ಲಿ ಮೆಕ್ಕಾದಲ್ಲಿ ಇಬ್ನ ಸೌದರವರಿಂದ ಪ್ರಾರಂಭಿಸಲ್ಪಟ್ಟಿತು. ಇಂಡಿಯಾ, ರಷ್ಯಾ, ಜಾವಾ, ಪಾಲೆಸ್ಟೀನ್, ಹೆಡ್ಜಾಜ್, ಈಜಿಪ್ಟ್ ಮತ್ತು ಸಿರಿಯಾ ದೇಶಗಳ ಪ್ರತಿನಿಧಿಗಳು ಹಾಜರಿದ್ದರು. ಇಬ್ನ ಸೌದರು ಅಧ್ಯಕ್ಷರಾಗಿಯೂ, ಇಂಡಿಯಾದ ಮುಂದಾಳಾದ ಸುಲೇಮಾನ್ ನದ್ವಿಯವರು ಉಪಾಧ್ಯಕ್ಷರಾಗಿಯೂ ನೇಮಿಸಲ್ಪಟ್ಟಿರುವರು.

ನೋಟೀಸು.

ಮೂರ್ನಾಡು ಕಾಂತೂರು ಗ್ರಾಮದ ಪಳಂಗಂಡ ಅಪ್ಪಯ್ಯನ ವಂದನೆ.

ನನ್ನ ಬಾಬ್ತು ಕರಿವರ್ಣದ ಎಡದ ಕಿವಿ ಕುಯಿದಿರುವ ಬಾಡಗೋಡಿನ ಗಿಡ್ಡರಾಸು ಎಮ್ಮೆ ಒಂದು ಮತ್ತು ಎರಡು ಹಲ್ಲಿನ ನೀಲಿವರ್ಣದ ಕೊಡುಗೋಡಿನ ಎಮ್ಮೆ ಚೇಡಿ ಒಂದು ಅಂತು ಜುಮ್ಲ ಎರಡು ಎಮ್ಮೆ ರಾಸುಗಳು ಅಮ್ಮತ್ತಿನಾಡ ಕಾವಾಡಿ ಗ್ರಾಮದ ಕಟ್ಟಂಡ ಸೋಮಪ್ಪನವರ ಮನೆಯಲ್ಲಿ ನೇಯಲಿಕ್ಕೆ ಬಿಟ್ಟಲ್ಲಿ ಇದೇ ತಾರೀಕು ೧ರಿಂದ ಪರಾರಿಯಾಗಿರುತ್ತೆ. ಈ ಮೇಲ್ಕಂಡ ಎರಡು ರಾಸುಗಳು ಯಾರದಾದರೂ ವ ಹಸೀಯರ ರಾಸುಗಳ ಜೊತೆಯಲ್ಲಿ ಇರುವ ಪಕ್ಷ ನನ್ನ ಕೆಳಗಿನ ಅಡ್ರೆಸಿಗೆ ತಿಳಿಸಿದಲ್ಲಿ ಅವರಿಗೆ ಐದು ರೂಪಾಯಿ ಇನಾಂ ಕೊಡುತ್ತೇನೆ. ಅಲ್ಲದೆ ಅವರಿಗೆ ಮನಪೂರ್ತಿವಂದಿಸುತ್ತೇನೆ.

ಕಾಂತೂರು ಗ್ರಾಮ ಪಳಂಗಂಡ ಅಪ್ಪಯ್ಯ
ಮೂರ್ನಾಡು.

ಬಳ್ಳಾರಿಯಲ್ಲಿ ನಡೆದ ಅಖಿಲ ಕರ್ನಾಟಕ ರಾಜಕೀಯ ಪರಿಷತ್ತಿನ ಠರಾವುಗಳು.

(೧) ಇತ್ತೀಚಿನ ಸಾರ್ವಭೌಮ ... ಶ್ರೀಮತಿ ಕಮಲಾಬಾಯಿ ಪತಿತ, ಶ್ರೀ ಜೋಶಿ, ಶಿರೂರ, ಶಾಸ್ತ್ರಿ, ಇಟ್ಟಾಳ ಪರರಾಧ ಕೆಲಸಗಾರರು ತೀರಿಕೊಂಡ ಒಗ್ಗೆ ಈ ಪರಿಷತ್ತು ದುಃಖವನ್ನು ವ್ಯಕ್ತ ಮಾಡುತ್ತದೆ.

(೨) ದಕ್ಷಿಣ ಆಫ್ರಿಕೆಯ ಪಾರ್ಲಿಮೆಂಟಿನವರು ಗಾಂಧಿ ಸ್ಮಟ್ಸವರುಗಳಲ್ಲಾದ ಹಿಂದಿನ ನಿಬಂಧನೆಯನ್ನು ಮುರಿದು, ದ ವ್ರಂಸ್‌ಟೇಬಲ್ ಕಾನ್ಫರನ್ಸ ಕೂಡಿಸುವ ಹೊತ್ತಿಗೆ ವರ್ಣಭೇದದ ಶಾಸನವನ್ನು ಮಾಡಿದ್ದಕ್ಕಾಗಿ ಆ ಪರಿಷತ್ತು ವಿರೋಧಿಸುತ್ತದೆ.

(೩) ಕಲಕತ್ತೆಯಲ್ಲಾದ ದೊಂಬಿಗಳ ಬಗ್ಗೆ ಈ ಪರಿಷತ್ತಿಗೆ ಬಹು ದುಃಖವಾಗುತ್ತಿದೆ. ಪರಸ್ಪರ ತಾಳ್ಮೆಯಿಂದ ಇಂಥ ದೊಂಬಿಗಳಾಗದಂತೆ ಪ್ರತಿಬಂಧಿಸಬೇಕು.

(೪) ಕಾನಪುರ ಕಾಂಗ್ರೆಸನಲ್ಲಾದ ಏಳನೇ ನವಂಬರಿನ ಗೊತ್ತುವಳಿಯನ್ನೂ, ದಿಲ್ಲಿಯ ಅಖಿಲಭಾರತ ಮಂಡಲದಲ್ಲಾದ ನಾಲ್ಕನೇ ಗೊತ್ತುವಳಿಯನ್ನೂ ಈ ಪರಿಷತ್ತು ಒಪ್ಪುವದಲ್ಲದೆ ಕರ್ನಾಟಕದಿಂದ ಕಾಂಗ್ರೆಸ ಪರವಾಗಿ ಕಾನೂನು ಮಂಡಲಗಳಿಗೆ ಹುರಿಯಾಳಾಗಿ ನಿಲ್ಲುವವರು ಸ್ವತಃ ಖಾದಿಯನ್ನೇ ಧರಿಸುವದು ; ಕರ್ನಾಟಕ ಏಕೀಕರಣ, ಹಾಗೂ ಮದ್ಯ ನಿಷೇಧ ಖಾದಿ ಹಾಗೂ ಸ್ವದೇಶಿಯ ಪದಾರ್ಥಗಳಿಗೆ ಉತ್ತೇಜನ, ಸ್ವತಂತ್ರ ವಿಚಾರನಡಿಸಿ ಬೆಳೆಯ ಅನ್ಯಾಯ ನಿಲ್ಲಿಸುವದು, ಕಾಡಿನ ಖಾತೆಯವರಿಂದ ರೈತರುಗಳಿಗೆ ಒದಗುವ ಗೋಳನ್ನು ಬಿಡಿಸಿ ಅವರ ಹಿತ ಸಾಧಿಸುವದು, ಮದರಾಸ ಇಲಾಖೆಯಲ್ಲಿ ದೇವಾದಾಯ ಹಣದ ಬಗ್ಗೆ ಆದ ಕಟ್ಟಳೆಯನ್ನು ಪೂರ್ಣ ರದ್ದುಪಡಿಸಲು ಅಥವಾ ತಿದ್ದಲು ಪ್ರಯತ್ನಿಸುವದು.

(೫) ಬಳಿಕ ಬರುವ ಕೌನ್ಸಿಲು ಚುನಾವಣೆಯಲ್ಲಿ ಕರ್ನಾಟಕದ ಮತದಾರರೆಲ್ಲರೂ ರಾಷ್ಟ್ರೀಯ ಸಭೆಯ ಪ್ರತಿನಿಧಿಗಳಿಗೇ ಮತಕೊಡಬೇಕಲ್ಲದೆ ಜಾತಿ ಪಂಗಡಗಳನ್ನು ಈ ಪ್ರಸಕ್ತಿಯಲ್ಲಿ ಲಕ್ಷಿಸಕೂಡದು.

(೬) ನೂಲುವದು, ಹಾಗೂ ಖಾದಿ ನೇಯುವದು, ಇವೆರಡರಿಂದ ಚೆನ್ನಾಗಿ ಪರದೇಶದ ಬಟ್ಟೆಯನ್ನು ಬಹಿಷ್ಕರಿಸಿದಂತಾಗಿ, ಬಡವರಿಗೆ ಅನ್ನ ಕೊಟ್ಟಂತಾಗುವದರಿಂದ ಎಲ್ಲರೂ ಖಾದಿಯನ್ನು ಹೆಚ್ಚಾಗಿ ಹುಟ್ಟಿಸಿ, ಬಳಸುವರೆಂದು ಈ ಪರಿಷತ್ತು ನಂಬುತ್ತದೆ.

(೭) ಕಾಂಗ್ರೆಸ ಸಭೆಗಳೆಲ್ಲವೂ ಕರ್ನಾಟಕ ಏಕೀಕರಣ ಕಾರ್ಯಕ್ಕಾಗಿ ಒಂದಾಗಿ ಪ್ರಯತ್ನಿಸಬೇಕು.

(೮) ಬಳ್ಳಾರಿಯನ್ನು ಆಂಧ್ರದಿಂದ ಬೇರ್ಪಡಿಸಬೇಕೆಂದು ಕೇಳಲಿಕ್ಕೆ ಮದರಾಸ ನ್ಯಾಯವಿಧಾಯಕ ಸಭೆಯಲ್ಲಿರುವ ಸದಸ್ಯರು ಕರ್ನಾಟಕದಿಂದ ಹೋದ ಶಿಷ್ಟಮಂಡಲಿಯರಿಗೆ ತಮ್ಮ ಈ ಪರಿಷತ್ತು ಕೃತಜ್ಞನಾಗಿರುವದು.

(೯) ಶುದ್ಧ ಕನ್ನಡ ನಾಡಾದ ಬಳ್ಳಾರಿ ಜಿಲ್ಲೆಯ ಮೇಲೆ ಆಂಧ್ರ ವಿದ್ಯಾಪೀಠದವರು ತಮ್ಮ ಯೂನಿವರ್ಸಿಟಿ ಕಟ್ಟಳೆಯನ್ನು ತಂದು ಹೇರಿದ್ದಕ್ಕಾಗಿ ಮದರಾಸ ಕಾನೂನು ಮಂಡಲದವರ ಕೃತಿಗೆ ಈ ಪರಿಷತ್ತು ವಿರೋಧಿಸುತ್ತದೆ.

(೧೦) ಕರ್ನಾಟಕ ಪ್ರಾಂತದಲ್ಲಿ ಭಗಿನೀಮಂಡಲದ ಶಾಖೆಗಳನ್ನು ಸ್ಥಾಪಿಸಬೇಕು. ಅವುಗಳಿಗೆ ಸಾಧ್ಯವಾದ ಸಹಾಯಕೊಡಬೇಕು.

(೧೧) ಸ್ವಯಂಸೇವಕ ಪರಿಷತ್ತಿನವರು ಬರುವ ಸಪ್ಟಂಬರದೊಳಗಾಗಿ ೧೦ ಸಾವಿರ ಕಾಂಗ್ರೆಸ ಸಭಾಸದರನ್ನು ಮಾಡುವೆವೆಂದು ಮುಂದೆ ಬಂದುದಕ್ಕಾಗಿ ಈ ಪರಿಷತ್ತು ಅವರ ಅಭಿನಂದನೆ ಮಾಡುತ್ತದೆ.

(೧೨) ದೇಶಿಯ ಸಂಸ್ಥಾನದ ಅಂತ ಕಾರ್ಯಗಳಲ್ಲಿ ಕಾಂಗ್ರೆಸದವರು ಕೈಹಾಕಬಾರದೆಂದು ಕಾಂಗ್ರೆಸದವರು ಮಾಡಿದ ಗೊತ್ತುವಳಿಯನ್ನು ತೆಗೆದು ಹಾಕಬೇಕೆಂದು ಕಾಂಗ್ರೆಸಕ್ಕೆ ಈ ಪರಿಷತ್ತು ಶಿಫಾರಸ್ಸುಮಾಡುತ್ತದೆ.

"ಕರ್ಮವೀರ."

ಪತ್ರವ್ಯವಹಾರ

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ಪತ್ರಿಕಾಕರ್ತರು ಜವಾಬ್ದಾರರಲ್ಲ. ಸಂ.]

ಸಂಪಾಜೆ, ಚೆಂಬು ವಗೈರೆ ಗ್ರಾಮಗಳ ಸ್ಥಿತಿ.

ಅಯ್ಯಾ ಘನ ಸರಕಾರದವರೇ,

ನಮ್ಮ ಚೆಂಬು, ದಬ್ಬಡ್ಕ ವಗೈರೆ ಗ್ರಾಮದ ಬಡ ಜೀವಿಗಳಾದ ನಮಗಳ ಅರಿಕೆಯನ್ನು ದಿವ್ಯ ಚಿತ್ತದಲ್ಲಿ ಅನುಸರಿಸಬೇಕಾಗಿ ಅರಿಕೆಮಾಡಿಕೊಳ್ಳುತ್ತೇವೆ.

ನಮ್ಮ ಚೆಂಬು ಗ್ರಾಮದಲ್ಲಿ ಒಂದು ಬೋರ್ಡು ಶಾಲೆ ತೆರೆಯಬೇಕೆಂದು ನಾವು ಬರಕೊಂಡ ಅರ್ಜಿಗೆ ಯಾವ ಹುಕುಮು ಇಲ್ಲದೆ ಇರುವ ಸಂಗತಿಯಲ್ಲಿ ಬಹಳ ವ್ಯಸನ ಪಡುತ್ತೇವೆ. ಖಾವಂದರವರು ಇನ್ನಾದರೂ ಕೂಡಲೇ ಹುಕುಮು ದಯಪಾಲಿಸಿದರೆ ಬಡ ವಿದ್ಯಾರ್ಥಿಗಳು ಅಭಿವೃದ್ಧಿಗೆ ಬಂದ ಹಾಗೆ ಆಗುತ್ತಿತ್ತು, ಎಂತ ಹುಕುಮು ಕಾಯುತ್ತಿರುತ್ತೇವೆ.

ಅಲ್ಲದೆ ಸಂಪಾಜೆ ಪಬ್ಲಿಕ್ ರಸ್ತೆ ಬಳಿಯಲ್ಲಿ ಒಂದು ಕಾಯಂ ಆಸ್ಪತ್ರೆ ಇರಿಸಬೇಕೆಂಬುದಾಗಿ ಕೇಳಿಕೊಂಡ ಮೇರೆ ಕಳೆದ ವರುಷ ಹಂಗಾಮಿಯಾಗಿ ವಾರಕ್ಕೆ ಮೂರು ದಿವಸ ಇರುವಂತೆ ದಯಪಾಲಿಸಿದರು. ಇದರಿಂದ ಸ್ವಲ್ಪ ಜನರಿಗೆ ಎಷ್ಟೋ ಪ್ರಯೋಜನ ಹೊಂದಿರಬಹುದು. ಅಲ್ಲದೆ ಈ ವರ್ಷ ಹಂಗಾಮಿ ಆಸ್ಪತ್ರೆಯನ್ನು ವಾರಕ್ಕೆ ಎರಡೇ ದಿನ ಇಡುವ ಹಾಗೆ ಏರ್ಪಾಡು ಮಾಡಿದ್ದು ನೋಡಿದರೆ ಇದು ರೈತರಿಗೆ ದೊಡ್ಡ ಸಂಕಟಕರವಾದ ಸಂಗತಿಯಾಗಿದೆ. ಆದ್ದರಿಂದ ಸದ್ಯಕ್ಕೆ ಕಳೆದ ವರುಷದ ಹಾಗೆ ಮೂರು ದಿನವಾದರೂ ಇರಿಸುವ ಏರ್ಪಾಡು ಮಾಡಬೇಕಾಗಿ ಕೋರುತ್ತೇವೆ.

ಅಲ್ಲದೆ ಸದರಿ ಹಂಗಾಮಿ ಆಸ್ಪತ್ರೆಯನ್ನು ಈ ವಾರದಲ್ಲೇ ನಿಲ್ಲಿಸಿಬಿಡುತ್ತಾರೆಂಬ ವರ್ತಮಾನವಿದೆ. ಕಾಯಿಲೆಯು ನಮ್ಮ ಕಡೆ ಹೆಚ್ಚಾಗಿ ಹರಡಿಕೊಂಡಿರುವ ಈ ಸಮಯದಲ್ಲಿ ಆಸ್ಪತ್ರೆಯನ್ನು ಮುಚ್ಚಿದ್ದೇ ಆದರೆ ಜನರ ಕಷ್ಟವನ್ನು ಹೇಳಿ ಪೂರೈಸಲಾರೆನು. ಆದುದರಿಂದ ಮಳೆಗಾಲವು ಚೆನ್ನಾಗಿ ಹಿಡಿದು ಕಾಯಿಲೆಯು ಸ್ವಲ್ಪ ಮಟ್ಟಿಗಾದರೂ ಕಮ್ಮಿಯಾಗುವ ವರೆಗೆ ಅಂದರೆ ಜುಲೈ ತಾರೀಕು 15 ರ ವರೆಗಾದರೂ ಸದರಿ ಆಸ್ಪತ್ರೆಯನ್ನು ಇಟ್ಟರೆ ಬಹಳ ಉಪಕಾರವಾಗುವುದು.

"ಗ್ರಾಮಸ್ಥ"

ಡಿಸ್ಟ್ರಿಕ್ಟ್ ಬೋರ್ಡ.

ಸಂಪಾದಕರೇ,

ಡಿಸ್ಟ್ರಿಕ್ಟ್ ಬೋರ್ಡಿನ ಚುನಾವಣೆ ಬಗ್ಗೆ ಮಾಡಿದ ರೂಲ್ಸುಗಳ ಮೇಲೆ ನೀವು ಬರೆದ ಅಭಿಪ್ರಾಯಗಳನ್ನು ಓದಿ ನೋಡಿದೆನು. ಡಿಸ್ಟ್ರಿಕ್ಟ್ ಬೋರ್ಡಿಗೆ ಪ್ರಜಾಪ್ರತಿನಿಧಿಗಳ ಸಂಖ್ಯೆ ಹೆಚ್ಚಾಗಿರುವಂತೆ ಮಾಡಿಕೊಡುವ ಹಕ್ಕು ಚೀಫ್ ಕಮಿಶನರ ಸ್ವೇಚ್ಛೆಗೆ ಬಿಟ್ಟಿರುವದು ಯುಕ್ತವಲ್ಲ. ಅಂತೆ ಹೋಗುವವನಿಗೆ ಅರ್ಧ ರೊಟ್ಟಿ ಎಂಬ ಗಾದೆಗೆ ಸರಿಯಾಗಿ ಡಿಸ್ಟ್ರಿಕ್ಟ್ ಬೋರ್ಡ ಇಲ್ಲದೇನೇ ಡಿಸ್ಟ್ರಿಕ್ಟ್ ಬೋರ್ಡ ಆಡಳಿತ ನಡೆಯುತ್ತಿರುವದಕ್ಕಿಂತ ಚುನಾಯಿತ ಮೆಂಬರುಗಳಿರುವ ಡಿ. ಬೋರ್ಡನ್ನು ಮಾಡಿ ಕೊಟ್ಟದ್ದಕ್ಕೆ ಕಮೀಶನರಿಗೆ ನಾನು ವಂದಿಸುತ್ತೇನೆ. ಆದರೆ ಹೊಸ ಡಿಸ್ಟ್ರಿಕ್ಟ್ ಬೋರ್ಡ ಆಕ್ಟನ್ನು ಕೌನ್ಸಿಲಿನಲ್ಲಿ ಪಾಸು ಮಾಡಿಸಿಕೊಳ್ಳಬೇಕಾದದ್ದು ಬಹಳ ಅವಶ್ಯ. ಕೌನ್ಸಿಲಿನಲ್ಲಿ ಈ ಆಕ್ಟಿನ ಮಸೂದೆ ತಂದು ಚರ್ಚೆ ಮಾಡಿ ಪಾಸ್ ಮಾಡಬೇಕಾದರೆ ಒಂದು ವರ್ಷ ಸಮಯ ಬೇಕಾಗುವ್ರದರಿಂದ ಅದರ ಮಧ್ಯೆ ಈಗಿನ ರೂಲ್ಸು ಮೇರೆ ಬೋರ್ಡ ಏರ್ಪಾಡಾಗಿದೆ ಆದರೆ ಅಷ್ಟರಲ್ಲೇ ದೇಶದವರು ತೃಪ್ತರಾಗಿ ಸುಮ್ಮನಿರಬಾರದು ಈಗ ಇರುವ ಕೌನ್ಸಿಲ್ ಮೆಂಬರುಗಳ ವಾಯಿದೆ ಡಿಸೆಂಬರ್ ವರಗೇನೇ ಇರುವುದರಿಂದ ಆ ಮಧ್ಯೆ ಹೊಸ ಆಕ್ಟನ್ನು ಜಾರಿಗೆ ತರಲು ಸಮಯ ಸಾಲದು. ಆದ್ದರಿಂದ ಹೊಸ ಚುನಾವಣೆಗೆ ನಿಲ್ಲುವ ಉಮೇದ್ವಾರರಲ್ಲಿ ಡಿಸ್ಟ್ರಿಕ್ಟ್ ಬೋರ್ಡ ಆಕ್ಟನ್ನು ಮಂಜೂರು ಮಾಡಿಸಿಕೊಡುವಂತೆ ಓಟರುಗಳು ಅವರನ್ನು ಕೇಳಿಕೊಳ್ಳಬೇಕು. ಹೊಸ ಆಕ್ಟ್ ಜಾರಿಗೆ ಬರುವ ವರೆಗೆ ಡಿಸ್ಟ್ರಿಕ್ಟ್ ಬೋರ್ಡಿಗೆ ಕಂದಾಯ ಕೊಡುವವರು ಚಳವಳ ನಡಿಸುತ್ತಲೇ ಇರಬೇಕು.

"ವಾಚಕ."

ಮರೆನಾಡು ರಸ್ತೆ.

ಈಗ ಮಳೆಗಾಲ ಹಿಡಿಯಿತು. ನಮ್ಮ ನಾಡು ಅಂಡಮಾನ್ ದ್ವೀಪವಾಯಿತು. ಶೀಘ್ರದಲ್ಲೇ ಹಣ ಒದಗಿಸಿಕೊಡುತ್ತೇನೆಂತ ಹೇಳಿದ ಮಿ. ಟಾಸ್ಕರ್ ಸಾಹೇಬರು ಇಂಗ್ಲೆಂಡಿಗೆ ಹೊರಟು ಹೋದರು. ಮರೆನಾಡಿಗೆ ರಸ್ತೆ ಮಾಡಿಸಿದ ಖರ್ಚಿನ ಬಡ್ಡಿಯಾದರೂ ಸರಕಾರಕ್ಕೆ ಉತ್ಪತ್ತಿಯಾಗುತ್ತದೋ ಎಂತ ಇನ್ನು ಕೆಲವರು ಕೇಳುತ್ತಾರಂತೆ ಹೇಗೂ ಮುಂದೆ ಕತ್ತಲಾಗಿ ಕಾಣುತ್ತದೆಯೇ ಹೊರತು ಬೆಳಕು ದೂರದಲ್ಲಿ ಸಹ ಕಾಣುವದಿಲ್ಲ.

ಹೊಸದಾಗಿ ಬಂದಿರುವ ಕಮೀಷನರಿಗೆ ಮಿ. ಟಾಸ್ಕರವರ ವಾಗ್ದಾನಗಳನ್ನು ಯಾರಾದರೂ ತಿಳಿಸಿಕೊಟ್ಟು ಹಣ ಉತ್ಪತ್ತಿ ಮಾಡುವ ಕೆಲಸವನ್ನಾದರೂ ಪ್ರಾರಂಭಿಸಿಯಾರೋ ಎಂತ ಆಶೆ ಇದೆ.

"ಮರೆನಾಡು ರೈತ."

ಸಂಪಾದಕರೇ,

ಮಾಯಮುಡಿ ಗ್ರಾಮದ ಮಡಿಕಬೀಡಿನ ಕೆರೆಯನ್ನು ರಿಪೇರಿಮಾಡಿಸಿಕೊಡುತ್ತೇವೆಂಬ ಭರವಸೆ ಸರಕಾರಿ ಅಧಿಕಾರಿಗಳು ಕೊಟ್ಟದ್ದರಿಂದ ಆ ಕೆರೆಯ ಉಪಯೋಗವಿರುವ ಜನರೆಲ್ಲರೂ ತಮ್ಮ ಬಡತನವನ್ನು ಗಣನೆಗೆ ತೆಗೆದುಕೊಳ್ಳದೆ ನೀರು ಸಿಕ್ಕುತ್ತದಲ್ಲ ಎಂಬ ಆಸೆಯಿಂದ ವದಳಿಕೆ ಹಾಕಿಕೊಂಡು ಅಂಥಾ ಹಣವನ್ನು ನಾಡು ಖಜಾನೆಗೆ ಕೊಟ್ಟು ಬಹುಕಾಲವಾಯಿತು. ಹಣ ತೆಗೆದುಕೊಂಡು ಸುಮಾರು ಐದು ವರ್ಷವಾದರೂ ಇನ್ನೂ ಯಾಕೆ ಕೆರೆ ರಿಪೇರಿ ಮಾಡಲಿಲ್ಲವೆಂತ ಕೇಳಲಿಕ್ಕೆ ನಮ್ಮ ಕೌನ್ಸಿಲ್ ಮೆಂಬರಿಗೆ ಒಂದು ಅರ್ಜಿಯನ್ನು ಕಳುಹಿಸಿದೆವು. ಆ ಅರ್ಜಿಯನ್ನು ತೆಗೆದುಕೊಂಡು ನಮ್ಮ ಪ್ರತಿನಿಧಿ ಮೆಂಬರು ಕಮೀಶನರಲ್ಲಿ ಮಾತಾಡಿ ಅರ್ಜಿ ಕೊಟ್ಟು ಬಂದರೆಂತ ತಿಳಿದೆ. ತಾನು ಈ ವಿಷಯಕ್ಕೆ ಗಮನ ಕೊಡುವುದಾಗಿ ಸಹ ಕಮೀಷನರು ಹೇಳಿದರಂತೆ. ಹೀಗೆ ಹೇಳಿ ಎರಡು ತಿಂಗಳಾದರೂ ಇನ್ನೂ ಏನೊಂದು ಆಗದಿರುವದು ನೋಡಿ ವ್ಯಸನವಾಗಿದೆ. ಈಗ ಮಳೆಗಾಲವೂ ಬಂತು. ನಮ್ಮ ಹಣವನ್ನು ಸರಕಾರದವರು ಇಟ್ಟುಕೊಂಡು ಎಷ್ಟುದಿವಸ ಸುಮ್ಮನೆ ಇರುತ್ತಾರೋ ನೋಡಬೇಕು.

"ಸಾಗು ರೈತ"

ಒಂದು ಕಮ್ಮಿ ಅರುನೂರು.

ಎಲೈ ಅವ್ವೆ! ದೀರ್ಘಾಯುಗಳಾದ ಸೀರಾದಿ ವೀರರನ್ನು ಪಡೆದ ನಿನ್ನಲ್ಲಿ ಜನಿಸುವುದೇ ಒಂದು ಭಾಗ್ಯವಾಗಿತ್ತು, ನಿನ್ನಲ್ಲಿ ಜನ್ಮವೆತ್ತಿದನೆಂದರೆ ಸಕಲ ಭಾಗ್ಯಸಂಪನ್ನನೆನ್ನುವ ನಿನ್ನಲ್ಲೀಗ ಜನ್ಮವೆತ್ತುವದೆಂದರೆ ನರಕರೂಪ ಪ್ರಾಪ್ತಿಯಂತಾಗುತ್ತಲಿದೆ. ಹೇ, ಜನನೀ, ಕೊಡಗುಮಾತೆ, ನಿನ್ನ ಆರೋಗ್ಯ ಭಾಗ್ಯದ ಮಾಂಗಲ್ಯವನ್ನು ಅಪಹರಿಸಿದವರ್ಯಾರು? ಬರಬರುತ್ತಾ ನಿನ್ನುದರದಲ್ಲಿ ಜನಿಸಿದವರ ಆಯುಷ್ಯ ಪರಿಮಾಣವು 25-30 ವರ್ಷಕ್ಕೆ ಇಳಿದಿದೆಯಾಗಿಯೂ ಜನನಕ್ಕಿಂತ ಮರಣ ಹೆಚ್ಚಾಗುತ್ತಲಿದೆಯಾಗಿಯೂ ಹೀಗಾದರೆ 30—[illegible] ವರ್ಷಗಳಲ್ಲೇ ನಿರ್ಜನ ಪ್ರದೇಶವಾಗುವ ಸಂಭವವಿದೆಯಾಗಿಯೂ ಅಂದರೆ ನಮ್ಮ ಮಕ್ಕಳು ಮರಿ ನಮ್ಮ ಕಣ್ಣಾದುರಿಗೆ ಸತ್ತುಬಿದ್ದು ಅವರ ಮಧ್ಯ ಮನ್ನ ನಾವೂ ಸಾಯುವ ದೆಂತಾಯಿತು. ಎಂಥಾ ಘೋರ ನೋಟವನ್ನು ಈಗ ನೋಡುತ್ತಲೂ ಇನ್ನು ನೋಡುವದರಲ್ಲೂ ಇದ್ದೇವೆ. ಹೀಗೆ ಬಲ್ಲವರು ಸಾರಿ ಸಾರಿ ಹೇಳುತ್ತಿದ್ದರೂ ಗಮನ ಕೊಡುವ ದಿಕ್ಕಿಲ್ಲದಾಯಿತಲ್ಲ. ಯಾರನ್ನು ದೂರುವ? ಸರಕಾರವನ್ನೋ, ರೈತಾಪಿಯನ್ನೋ? ಸರಕಾರವೇನೋ "ಹಣವಿಲ್ಲ" ವೆಂಬ "ಚತುರ್ಥಾಕ್ಷರೀ" ಮಂತ್ರವನ್ನು ಸರಕಾರದ ಆಡಳಿತದ ವಿಷಯ ಗಮನ ಕೊಡುವ ಆಲೋಚನೆ ನನಗೆ ಹುಟ್ಟಿದ ಲಾಗಾಯತಿನಿಂದಲೇ ಅಡಿಗಡಿಗೆ ಜಪಿಸುತ್ತಿರುವದು ರೈತಾಪಿಯೋ ಧೃಢಾಂಗವಾದ ಶರೀರವನ್ನು ಕಟ್ಟುವ ಯೋಚನೆಯಿಲ್ಲದೆ 'ಉಂಡದ್ದು ಯಾರು ಕಾಣುವರು" ಎಂದು ಹೊರಬಣ್ಣದ ಪೋಷಾಕಿಗೆ ಸರ್ವಸ್ವವನ್ನೂ ವ್ಯಯ ಮಾಡುತ್ತಾ ಮರಳಿನ ಗೋಡೆಗೆ ವಿವಿಧ ಬಣ್ಣಗಳನ್ನು ಲೇಪಿಸುತ್ತಿರುವವರನ್ನು ತಡೆ ಕಟ್ಟುವವರ್ಯಾರು? ಗರ್ಭ ಧರಿಸುವದೇ ಮರಣಕ್ಕೆಂದೋ ಹೆತ್ತು ಸುರಕ್ಷಿತವಾಗಿರುವ ಹೆಂಗಸರ ಸಂಖ್ಯೆಯನ್ನು ಕೈಬೆರಳ ಮೇಲಿಂದ ಎಣಿಸುವಷ್ಟಿದೆ. ನಾನು ನೋಡಿದ 22 ಮದುವೆ ಕಾಗದಗಳಲ್ಲಿ ಮದುಮಗ, ಮದುಮಗಿತಿಯರಿಂದ ಆಗುವ 44ರಲ್ಲಿ 25 "ಲೇಟ್"ಗಳು ಇತ್ತು. ಅಂದರೆ 44ರಲ್ಲಿ 26 ಜನರ ತಂದೆಗಳು ಸತ್ತಿದ್ದಾರೆಂದಾಯಿತು. ತಾಯಿಗಳ ವಿಷಯ ಲಗ್ನ ಪತ್ರಿಕೆಯಲ್ಲಿ ಬಾರದೆ ಇರುವದರಿಂದ ಅವರೆಷ್ಟು ಉಳಿದಿರುವರೋ! ಆ ಶಿವನೇ ಬಲ್ಲ. ಜ್ವರದಿಂದ ಸತ್ತರೆಂದರೆ ಅದನ್ನು ಚಿಂತಿಸಬೇಕಾದ ಅವಶ್ಯವೇ ಇಲ್ಲದಂತಾಗಿದೆ ಜ್ವರವನ್ನು ತಡೆಗಟ್ಟುವದು ಬ್ರಹ್ಮನಿಗೂ ಸಹ ಅಸಾಧ್ಯವೆಂಬಂತಾಗಿದೆ. ಕೊಡಗಿನ ಸಾಧಾರಣ ಒಬ್ಬನು ವರ್ಷಕ್ಕೆ ಎಷ್ಟು ದಿನಗಳ ಪರಿಯಂತರ ಜ್ವರದಿಂದ ಪೀಡಿತನಾಗುವನೆಂಬ ಲೆಕ್ಕವನ್ನು ಅಲ್ಲಲ್ಲಿ ಮಹನೀಯರು ಇಡಬೇಕಾಗಿ ಬೇಡುತ್ತೇನೆ.

ಮಲೇರಿಯ ಜ್ವರವು ಸೊಳ್ಳೆಗಳ ಕಡಿತದಿಂದಲೂ ಸೊಳ್ಳೆಗಳ ಉತ್ಪತ್ತಿಯು ಜೌಗು ನೆಲಗಳಿಂದಲೂ ಎಂದರಿತಿರುವದು ಸಾಮಾನ್ಯವಲ್ಲದೆ ಕೆಲವು ಮಹನೀಯರು ಮ್ಯಾಜಿಕ್ ಲ್ಯಾಂಟರ್ನ್ ಮೂಲಕ ಅದರ ಉತ್ಪತ್ತಿ ಅದರ ನಾಶನ (ಸೀಮೆಣ್ಣೆ ಹುಯ್ಯುವುದು) ವಿಷಯ ಮಂದಟ್ಟು ಮಾಡುತ್ತಿರುವಾಗ ಸರಕಾರವು ಮಲೇರಿಯವನ್ನು (ಸೊಳ್ಳೆಗಳನ್ನು) ನಾಶ ಮಾಡಲು ಅನೇಕ ವರ್ಷಗಳಿಂದ ಚಿಂತಿಸಿ "ಚತುರ್ಥಾಕ್ಷರ" ಮಂತ್ರವನ್ನು ಒತ್ತಟ್ಟಿಗಿರಿಸಿ ಕೆಲವು ಹಣವನ್ನು ವಿನಿಯೋಗಿಸಲು ಆಲೋಚಿಸಿ ಮ್ಯಾಜಿಕ್ ಲ್ಯಾಂಟರ್ನ್ ಮೂಲಕವಾಗಲೀ ಇತರ ಸಂಸ್ಥೆಗಳ ಮೂಲಕವಾಗಲೀ ಎಂದೂ ತೋರಿಸದ ಒಂದು ಕಮಿಟಿಯನ್ನು ನೇಮಿಸಿದರು. ಆ ಕಮಿಟಿಯು ಮೋಟಾರು ಬಿಟ್ಟು ಊರೆಲ್ಲಾ ದೂಳೆಬ್ಬಿಸಿ ಸ್ವಲ್ಪ ಹಣವನ್ನು ವ್ಯಯ ಮಾಡಿ ನಾಶನ ಮಾಡುವ ಕಾರ್ಯವನ್ನು "ಊರೆಲ್ಲಾ ಸೂರೆ ಆದ ಮೇಲೆ ಬಾಗಿಲ ಹಾಕಿದರು" ಎಂಬಂತೆ ಹಿಂದಕ್ಕಿಟ್ಟಿರುವರು. ಹೆಚ್ಚಿನ ಕೆಲಸ ಮಾಡಬೇಕಾದರೆ ಇಂಡಿಯಾ ಸರಕಾರದ ಅಪ್ಪಣೆ ಬೇಕು. ಅದು ಬರುವದೆಂದು? ಊರೆಲ್ಲಾ ಸೂರೆ ಆದ ಮೇಲೆ

ಹೀಗಾಗಿ ಇಂತೆಲ್ಲಾ ಸಂಕಷ್ಟಗಳಲ್ಲಿ ಸಿಲುಕಿ ನರಳುತ್ತಿರುವ ನಮ್ಮ ದೇಶದಲ್ಲಿ, ದೇಶದ ಆರೋಗ್ಯ ಸ್ಥಳವೆಂದು ಊಹಿಸಲ್ಪಡುವ ವೀರರಾಜಪೇಟೆ ಆಸ್ಪತ್ರೆಯಿಂದ ಈಗ ಮೂರು ವಾರಗಳ ಹಿಂದೆ ಒಂದು ದಿನ ಐದು ನೂರ ತೊಂಭತ್ತೊಂಭತು (599) ಜನರು ಕಾಯಿಲೆಗಳಿಗೆ ಔಷಧಿ ತೆಗೆದುಕೊಂಡು ಹೋದರಂತೆ. ಅಲ್ಲದೆ ವೀರರಾಜಪೇಟೆಯಲ್ಲಿಟ್ಟಿರುವ ಮೂರು ಸ್ವತಂತ್ರ ಔಷಧಾಲಯಗಳಲ್ಲಿ ಹೆಚ್ಚುಕಮ್ಮಿ 150 ಜನರು ದಿನ ಮು[illegible]ದಾಗಿ ಮೇಲಿನ 4 ಔಷಧಾಲಯಗಳಿಂದ ಸುಮಾರು 350 ಜನರೂ ಔಷಧಿ ಪಡೆದಿರುವರು. ಆಸ್ಪತ್ರೆ ಔಷಧಿ ಮೇಲೆ ನಂಬಿಕೆ ಇಲ್ಲದವರೂ, ತರಲು ಹೋಗಲು ಅನುಕೂಲವಿಲ್ಲದವರ ಒಟ್ಟು ಸೇರಿದರೆ ಹೇಗೆಂದರೂ 2000 ಜನರು ಕಾಯಿಲೆಸ್ಥರಾಗಿ ನರಳುತ್ತಿರಬಹುದು ಎಂದು ಧಾರಾಳವಾಗಿ ಹೇಳಬಹುದು. ದೇಶದ ಆರ್ಥಿಕ ಸ್ಥಿತಿಯನ್ನು ಗಣಿಸುವದಾದರೆ ಇಷ್ಟೊಂದು ಜನರು ಕಾಯಿಲದಲ್ಲಿ ಬಿದ್ದಿರುವದರಿಂದ ದೇಶದ ದುರ್ಭಾಗ್ಯ ಕಡಿಮೆಯೇನು?

ಕಳೆದ ವರ್ಷ ನಮ್ಮ ಡಾಕ್ಟರು ಸಾಹೇಬರು ವರ್ಷ 1 ಒಂದು ವರ್ಷ ವಯಸ್ಸಿನ 700 ಮಕ್ಕಳು ಸಾಯುತ್ತಿರುವ[illegible]ಗ, ಹೃದಯ ಭೇದಕವಾಗುವ ಸಂಗತಿ ವಿವರಿಸಿ ಹೇಳಿ ಪ[illegible] ಒಬ್ಬಾದರೂ ಪ್ರವೃತ್ತಿ ಬಗ್ಗೆ ಕಾರ್ಯಥಾ ಆಚರಿಸುವ ಯೋಚನೆ ಹುಟ್ಟಿದಂತಿಲ್ಲ. ಸಂಚರಿಸುವ ಆಸ್ಪತ್ರೆಗಳನ್ನೂ ಲೇ[illegible]ಡಾಕ್ಟರುಗಳನ್ನೂ, ನರ್ಸುಗಳನ್ನೂ, ಹೆಚ್ಚಿನ ಆಸ್ಪತ್ರೆಗಳನ್ನು ಇಡಬೇಕೆಂಬ ಠರಾವುಗಳೆಲ್ಲಾ ಹೋದ ಬುದ ದಾರಿ ತಿಳಿ[illegible]ದಾಯಿತು. ಇದೇ ನಮ್ಮ ಚಕ್ರವರ್ತಿಯವರ ಆಡಳಿತದ [illegible]ವರ ಸ್ವಂತ ದೇಶವಾದ) ಇಂಗ್ಲೆಂಡಿನಲ್ಲಿ ಕಾಲು ಜ್ವರ, [illegible]ಯಿ ಜ್ವರದಿಂದ ಸಾಯುತ್ತಿರುವ ಎತ್ತು, ಹಂದಿ, ಆಡು, [illegible]ಗಳಿಗಾಗಿ 14250000 ರೂಪಾಯಿಗಳನ್ನು ರೈತರಿಗೆ ಕ್ರ[illegible] ರೂಪವಾಗಿ ಕೊಟ್ಟು ಸುಮಾರು 32132 ದನಗಳನ್ನೂ, 15[illegible] ಕುರಿಗಳನ್ನೂ, 17760 ಹಂದಿಗಳನ್ನೂ ಕೊಂದುಕೊಂಡು [illegible]ಯಿಲವು ಹರಡದಂತೆಯೂ, ರೈತರು ನಷ್ಟಪಡದಂತೆಯೂ ಇರುವರು. ಆದರೆ ನಮ್ಮ ಬಡ ದೇಶದಲ್ಲಿ ದನಕರಗಳಿರಲಿ, ಮನುಷ್ಯ ವರ್ಗದ ಕಾಯಿಲೆಕ್ಕೆ ತಕ್ಕ ಹಣ ವ್ಯ[illegible] "ಕೊಡರು" ಅಂದ ಮೇಲೆ ಮಾಡುವದೇನು?

ಸದ್ಯಕ್ಕೆ ನಮ್ಮ ಸರಕಾರದವರು ಕೌನ್ಸಿಲಿನಲ್ಲಿ ಪಾ[illegible] ಸಂಚರಿಸುವ ಆಸ್ಪತ್ರೆಗಳನ್ನೂ, ಲೇಡಿ ಡಾಕ್ಟರುಗಳನ್ನೂ, ನ[illegible]ಗಳನ್ನೂ ನೇಮಿಸಿ ಸೊಳ್ಳೆಗಳ ನಾಶನವನ್ನೂ ಒಡನೆ ಕೈಕೊ[illegible] ಅಕಾಲ ಮರಣಪಡುತ್ತಿರುವ ಜನಸಮುದಾಯವನ್ನು ಉಳಿಸುವ ತವದೂಡು ಮಾಡಬೇಕಾಗಿ ಕೋರುತ್ತೇನೆ.

ಎ. ಪಿ ಮೊದ[illegible]

ಬ್ರಾಹ್ಮಣ ವಿದ್ಯಾಭಿವೃದ್ಧಿ ನಿಧಿ.

ಈ ನಿಧಿಯ ಈ ವರ್ಷದ ಜನರಲ್ ಮೀಟಿಂಗಿನಲ್ಲಿ ಒಂದು ರಾವು ಪಾಸಾಗಿದೆಯೆಂತ ತಿಳಿಯುತ್ತೇನೆ. ಕೊಡಗು ದೇಶ ಹೈಸ್ಕೂಲುಗಳಲ್ಲಿ ಓದುವ ವಿದ್ಯಾರ್ಥಿಯೊಬ್ಬನಿಗೆ ಮೂರು ರಾಯಿನ ಸ್ಕಾಲರ್‌ಷಿಪ್ ಒಂದನ್ನು ಕೊಡಬಹುದೆಂತ ತೀರ್ಮಾನಿಸಿದ್ದಾರಂತೆ. ಇದು ಬಹಳ ತೃಪ್ತಿಕರ. ಈ ವರೆಗೆ ಪ್ರಮಾಂತರಗಳಲ್ಲಿ ನಿಧಿಗೆ ಧನಸಹಾಯಕೇಳಿದಾಗ ದೇಶದ ಪ ಓದುವ ವಿದ್ಯಾರ್ಥಿಗಳಿಗೆ ಏನೂ ಉತ್ತೇಜನವಿಲ್ಲ. ಕಾಲೇಜುಗಳಲ್ಲಿ ಓದುವವರಿಗೆ ಮಾತ್ರ ಸಹಾಯಕೊಡುತ್ತಾರೆಂತ ಕೆಲವರು ಹೇಳಿದರು. ಈ ಆಕ್ಷೇಪಣೆಗೆ ಇನ್ನು ಅವಕಾಶವಿಲ್ಲದಿರುವಾಗ ಗ್ರಾಮಗಳಲ್ಲಿರುವ ನಿಧಿಯ ಹಿತಚಿಂತಕರೆಲ್ಲರೂ ಸಹಾಯಮಾಡಿಯಾರೆಂತ ನಂಬುತ್ತೇನೆ. ದೇಶದ ಹೈಸ್ಕೂಲುಗಳಲ್ಲಿರುವ ವಿದ್ಯಾರ್ಥಿಗಳಿಗೆ ದೊರಕುವ ಉತ್ತೇಜನ ಸಾಲದು. ಮೂರು ರೂಪಾಯಿನ ಒಂದೇ ಸ್ಕಾಲರ್‌ಷಿಪ್ ಇದ್ದರೆ ಸಾಲದೆಂತ ಹೇಳಬಹುದು. ಧನಸಹಾಯ ತುಂಬಾ ಕೊಟ್ಟರೆ ವಿದ್ಯಾರ್ಥಿಗಳು ಬೇಕಾದಷ್ಟು ಸ್ಕಾಲರ್‌ಷಿಪ್‌ಗಳನ್ನು ಕೊಡದೆ ಇರಲಾರರೆಂತ ನನಗೆ ನಂಬಿಕೆ ಇದೆ. ಕಾಲೇಜಿನಲ್ಲಿ ಓದುವರಿಗೆ ಸಹ ಈಗ ಕೊಡುವುದು ಒಂದೇ ಸ್ಕಾಲರ್‌ಷಿಪ್ ಆಗಿ

ದೇಶದಲ್ಲೂ ದೇಶದ ಹೊರಗೂ ವಿದ್ಯಾರ್ಥಿಗಳಿಗೆ ತುಂಬ ಸಹಾಯ ದೊರಕುವಂತೆ ಹಿತಚಿಂತಕರೆಲ್ಲರೂ ಧನಸಹಾಯ ಧಾರಾಳವಾಗಿ ಮಾಡಿಯಾರೆಂತ ನಂಬುತ್ತೇನೆ

'ವಿದ್ಯಾರ್ಥಿ'

ಜ್ವರಗಳ ಮೇಲೆ ಅಮೂಲ್ಯ ಔಷಧವು.

ಕರ್ಣಾಟಕ

ಎಗ್ಯೂಮಿಕ್ಸ್ಚರ್

ಟಾನಿಕ್ ಸಿರಪ್.

(ಶಕ್ತಿವರ್ಧಕ ಸರಬತ್ತು)

ಥಂಡಿ, ಜ್ವರ, ಮಲೇರಿಯ ಮೊದಲಾದ ಜ್ವರಗಳು ಬಿಟ್ಟನಂತರ ಬರುವ ಅಶಕ್ತತೆ, ಸಣ್ಣಜ್ವರವು ಬರುತ್ತಿರುವುದು ಮೊದಲಾದವುಗಳ ಮೇಲೆ ಇದು ಒಂದು ಅಮೂಲ್ಯ ಔಷಧವಾಗಿರುತ್ತದೆ.

ನಮ್ಮ ಎಗ್ಯೂಮಿಕ್ಸ್ಚರನ್ನು ಸೇರಿಸಿ ಗುಣವನ್ನು ಹೊಂದಿದ ಪ್ರತಿಯೊಬ್ಬನು ಇದರ ಒಂದು ಬಾಟ್ಲಿಯನ್ನಾದರೂ ಅವಶ್ಯವಾಗಿ ಸೇವಿಸಬೇಕು. ಅಂದರೆ ಅವನಿಗೆ ಜ್ವರದನಂತರ ಬರುವ ಅಶಕ್ತತೆಯು ಬರಲಿಕ್ಕೇ ಇಲ್ಲ.

ಬೆಲೆ ೧ ರೂಪಾಯಿ ಟಪಾಲು ವೆಚ್ಚ ಬೇರೆ.

12—3 ಕರ್ಣಾಟಕ ಬ್ರದರ್ಸ್

ಗಿರಗಾಂವ, ಮುಂಬಾಯಿ.

ಕೆ. ಸಿ. ಅಪ್ಪಚೆಟ್ಟಿ.

ದಂತ ವೈದ್ಯರು.

ಇದೇ ತಾರೀಖು 20ರಿಂದ ಮಡಿಕೇರಿಯಲ್ಲಿ ಉಳಕೊಳ್ಳುವರು. ಬಾಯಿಹಾದಾದರು ಅವರನ್ನು ಅಲ್ಲಿ ಹೋಗಿ ನೋಡಬಹುದು ಇಂಥಾ ಸಮಯವನ್ನು ಕಳಕೊಳ್ಳಬೇಡಿ. ಕನ್ಸಲ್ಟಿಂಗ್ ಚಾರ್ಜು ಇಲ್ಲದೆ ನೋಡುವರು. 52-11

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್, ಕೊ ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ.

		ರೂ.
ರ	—	50,000
ರ್ ಮೊಬಲಗು	—	3890
ನಿಧಿ	—	90,600

ಈ ಕೊಡಗು ದೇಶದ ಸಹಕಾರಿ ಸಂಘಗಳಿಗೆ ... ಸಾಲಕೊಡತಕ್ಕದ್ದು.

... ವಾಯಿದೆ ಅಥವ ಹೆಚ್ಚಿನ ವಾಯಿದೆಯ ಡೀಪಾಸಿಟುಗಳಿಗೆ ಶೇಕಡ ಸಾಲಿಯಾನ ರೂ. 6-4-0ರ ದರದಲ್ಲಿ ಬಡ್ಡಿ ದೊರೆಯುತ್ತೆ. ಕಡಿಮೆ ವಾಯಿದೆಯ ಡೀಪಾಸಿಟುಗಳಿಗೆ ಶೇಕಡ ಸಾಲಿಯಾನ 5ರ ಬಡ್ಡಿ ದೊರೆಯುತ್ತೆ.

ವರ್ಷಕ್ಕೊಂದಾವರ್ತಿ ಕೊ ಆಪರೇಟಿವ್ ರಿಜಿಸ್ಟ್ರಾರವರು ಲೆಕ್ಕ ಆಜಮಾಯಿಷಿ ಮಾಡುತ್ತಾರೆ.

ಪ್ರೆಸಿಡೆಂಟರು, ಟ್ರೆಜರರ್.

ಕೊಡಂದೆರ ಕುಟ್ಟಯ್ಯನವರು, ಯಂ. ಭುಜಂಗರಾಯರು

ರಾಯ್ ಬಹದ್ದೂರ್. ಬಿ.ಎ., ಬಿ.ಎಲ್.

ಸೆಕ್ರೆಟರಿ.

ಸಿ. ಯನ್. ವೆಂಕಪ್ಪಯ್ಯನವರು, ಬಿ.ಎ., ಬಿ.ಎಲ್.

ತಾರೀಖು 29—8—1925.

Apply for our shooting Season's Clearance Sale Catalogue of Brand New Goods.

10 to 25 percent Reductions in Prices.

No License Required!! No License Required



Webley and Scott Air Pistol, cal ·177 or 22, bore Powerful and Accurate, complete with a sample box of slugs, two spare washers, a brush forcleaning, and a bookletof instructions Rs. 30/– Free delivery.

Pweiful German Diana Air gun, Handsome and Accurate, takes B· S· A· Patern No 1 Slugs and Darts, expressly recommendable for Target Practice Rs· 15/ Free delivery·

Brilliant Search Light Lamp for Night Sports Rs 30/– Free delivery·

No License required to purchase or to possess the above items.

Reliale D B B L 12 bore guns	Rs. 60/–	and upwards
Do S B B L· 12	do·	do 40/-	do·
D B. M L Guns	,,	45 -	do·
S B M L. do.	,,	30/–	do
S B. B L Rifles	,,	25/–	do
B L Revolvers and Pistols	,,	30/–	do.

Arms, Ammunition and shooting requisites of almost every kind andquality offered at exceptionally favourable rates ANumber of good quality second hand weapons also offered for sale in theNew Catalogue.

GOOLAMHUSIAIN ALLIBHOY & SONS:

Largest Importers of Firearms and Ammunition, Cheapest priced firm in India,

24 21 210 Abdul Rehman Street, BOMBAY·

---

೧೬ ಚಿತ್ರ ಪಟ ಗಳುಳ್ಳ

ಸಚಿತ್ರ ಶುಕಸಪ್ತತಿ ಕಥೆ.

೭೦ ಕಥೆಗಳು ೫೧೨ ಪುಟಗಳು

ಈ ಕಥೆಯು ಧರ್ಮಶಾಸ್ತ್ರ ವೇದಾಂತ, ಸ್ತ್ರೀಪಾತಿವ್ರತ್ಯ ಬ್ರಾಹ್ಮಣ, ವೈಶ್ಯ, ಶೂದ್ರರೆಂಬ ನಾಲ್ಕು ವರ್ಣದವರು ನಡಿಯತಕ್ಕ ವರ್ಣಾಶ್ರಮ ಧರ್ಮವೇ ಮುಂತಾದ ಸದ್ವಿಚಾರಗಳನ್ನು ಬೋಧಿಸುವುದು. ೧. ಕಥಾರೂಪದಲ್ಲಿ ಚಿತ್ರಕಥಾ ಚಮತ್ಕಾರ ಶೋಭಿತವಾಗಿಯೂ ಸಂತೋಷದಾಯಕವಾಗಿಯೂ ಇರುವದರಿಂದ ಸ್ತ್ರೀಯರು ಪುರುಷರು, ಬಾಲಕರು ಎಂಬ ಭೇದವಿಲ್ಲದೆ ಎಲ್ಲರೂ ಓದಬಹುದು. ೨. ಲೋಕಾನುಭವಕ್ಕೆ ಬೇಕಾದ ಅನೇಕ ವಿಷಯಗಳು ಇದರಿಂದ ತಿಳಿದುಬರುವುದು ೩. ಈ ಕಥೆಯನ್ನು ಓದುವದರಿಂದ, ಮನಸ್ಸನ್ನು ದುರಾಚಾರದಲ್ಲಿ ಬಿಡದುನೆ ಸದಾಚಾರದಲ್ಲಿಯೇ ನಡೆಯುವಂತೆ ಮಾಡುವುದು. ೪ ವಿವೇಕಾವಿವೇಕವನ್ನು ತಿಳಿಯತಕ್ಕ ಜ್ಞಾನವನ್ನು ಉಂಟುಮಾಡುವುದು. ಬೇಕಾದವರು ವಿ. ಪಿ. ಪೋಸ್ಟ್ ಮೂಲಕ ತರಿಸಿಕೊಳ್ಳಬಹುದು.

ದಪ್ಪ ಕಾಗದ ಕ್ರಯ ಪ್ರತಿ ೧ಕ್ಕೆ ರೂ. ೨-೦-೦. ಟಪ್ಪಾಲು ಹಾಸಲು ೦-೮-೦.

ಸಚಿತ್ರ ಭಟ್ಟಿ ವಿಕ್ರಮಾದಿತ್ಯರಾಯನ ಕಥೆ ೩ ಭಾಗಸೇರಿದ್ದು ೬೧೨ ಪುಟಗಳು ಕ್ರಯ ೨-೪-೦. ಸಚಿತ್ರರಾಜ ಕಂಠೀರವ ಕಥೆ ೪೮೦ ಪುಟಗಳು, ಕ್ರಯ ರೂ ೨.

ಸಚಿತ್ರ ಶ್ರೀರಾಮತತ್ವಾಮೃತ ಎಂಬ ಸೀತಾರಾಮಾಂಜನೇಯ ಸಂವಾದ ೨೪೬ ಪುಟಗಳು ೧-೮-೦. ಇವುಗಳಿಗೆ ಟಪಾಲು ಖರ್ಚು ಬೇರೆ.

ನಮ್ಮಲ್ಲಿ ದೊರೆಯುವ ಎಲ್ಲಾ ಪುಸ್ತಕಗಳ ಕ್ರಯಪಟ್ಟಿ (ಕ್ಯಾಟಲಾಗ್)ಗೆ ಬರೆದರೆ ಕಳುಹಿಸುವೆವು.

52—4 ನಮ್ಮ ವಿಳಾಸ— ಎಂ. ಆರ್. ಕೃಷ್ಣಸ್ವಾಮಿ ಶೆಟ್ಟಿ,

ಬುಕ್ಕುಡಿಪೋ, ಚಿಕ್ಕಪೇಟೆ, ಬೆಂಗಳೂರು ಸಿಟಿ

ಹೊಸ ಸಾಮಾನುಗಳು! ಸುಲಭ ಕ್ರಯ!! ಈಗತಾನೇ ಬಂದಿವೆ!!!

ಇಂಥ ಸುಸಮಯವನ್ನು ಕಳಕೊಳ್ಳಬೇಡಿರಿ!

12 ಬೋರ್ ಜೋಡಿ ಕೊಳವಿನ ತೋಟ ಕೋವಿ 1ಕ್ಕೆ .. .	ರೂ.	115—0—0
12 ,, 32 ಇಂಚಿನ ಒಂಟಿ ಕೊಳವಿನ ತೋಟ ಕೋವಿ (ಜರ್ಮನಿ) 1ಕ್ಕೆ.	,,	60—0—0
,, ,, 35 ,, ,, ,, ,,	,,	65—0—0
ಜೋಡಿ ಕೊಳವಿನ ಕೇಪು ಕೋವಿ 20ನೇ ನಂಬ್ರು 1ಕ್ಕೆ.... ..	,,	55—0—0
12 ಬೋರ್ ಚಿಲ್ಲು ತೋಟಗಳು (ಒಳ್ಳೇ ನಮೂನೆ) 100ಕ್ಕೆ	,,	14—0—0
,, ,, ಆನೆ ಚಿಲ್ಲು ,, ,, ,, .	,,	16—0—0
,, ,, ಗುಂಡು ತೋಟಗಳು ,, ,, ...	,,	19—0—0
ಕೋವಿ ಕ್ಲೀನ್ ಮಾಡುವ ವಸ್ತು ತೋಟ ತುಂಬಿಸುವ ಸಾಮಾನುಗಳ 1 ಪೆಟ್ಟಿಗೆಗೆ		27—8—0
ಕೇಪು 250ರ 1 ಟಿನ್ನಿಗೆ	ರೂ,	1—5—0
ಅರ್ಧ ಪೌಂಡು 2 ಯಥಾನ ಮದ್ದು ಡಬ್ಬಿ 1ಕ್ಕೆ	,,	1—0—0
ಚಿಲ್ಲು ಎಲ್ಲಾ ತರಹದ ನಮೂನೆ ರಾತ್ತಲ್ಲ 1ಕ್ಕೆ	,,	0—10—0
ಪ್ಲೋರಿನ್ ಉಕ್ಕಿನ ಸೊಗಸಾದ ಗುದ್ದಲಿಗಳು 5 ಪೌಂಡಿನ 1 ಡಜನ್ನಿಗೆ	,,	33—0—0
,, ,, ,, 4 ,, ,, ...	,,	30—0—0
4 ಮುಳ್ಳಿನ ಮುಳ್ಳು ಗುದ್ದಲಿಗಳು ಡಜನ್ನಿಗೆ	,,	60—0—0
3 ,, , ...	,,	48—0—0
4 ಪೌಂಡಿನ ಮರ ಕಡಿಯುವ ಕೊಡಲಿಗಳು ಡಜನ್ನಿಗೆ	,,	54—0—0
ಇಂಗ್ಲಿಷ್ ನಮೂನೆ ಕಸಾಯಿ ಚಾಕುಗಳು ಡಜನ್ನಿಗೆ	,	15—0—0
ಮಿಶನ್ ಕೊಡೆಗಳು ದೊಡ್ಡ ಸೈಜ್ (ಸ್ಪಿಟಜರ್‌ಲಾಂಡ್) 1ಕ್ಕೆ	,,	5—0—0
ಸಣ್ಣ ಸೈಜ್ ,, ,, ...	,,	4—12—0
ಹೋಲ್‌ಸೇಲಾಗೆ ,, ..	,,	ಕಮ್ಮಿ ಕ್ರಯ

ಮೆಕ್ಡೋವೆಲ್ ಕಂಪೆನಿ,

ಮಡಿಕೇರಿ.

Messers Mc. Dowell & Co

12-4 Mercara

ಕಿರ್ಲೋಸ್ಕರ ಪೇಟೆಂಟ ಮಲ್ಹಾರ ತಪ್ಪಲಿ.



ಈ ತಪ್ಪಲಿಯು ಸರ್ಕಾರ ಕಾರ್ಖಾನೆಯಲ್ಲಿಯೇ ತಯಾರಾಗುತ್ತದೆ ಸರಕಾರದಿಂದ ಇದಕ್ಕೆ ಪೇಟಂಟ್ ದೊರತ್ತಿರುತ್ತದೆ. ಇದರಮುಖ್ಯ ಗುಣಗಳು:—

೧. ನೀರನ್ನು ಮುಟ್ಟಿದ ಕೂಡಲೇ ತುಂಬಿ ಒರುವದು.

೨. ಮೆಲಬಕ್ಕ ಬರುವಾಗ್ಗೆ ಒಂದು ಹನಿ ಸಹ ನೀರು ಸೋರುವದಿಲ್ಲ.

೩. ದೋಣಿಯಲ್ಲಿ ನೀರು ಚೆಲ್ಲುವಾಗ್ಗೆ ತೊಗಲಿನ ತಪ್ಪಲಿಯಂತ ನಿತ್ಯಸಹಿತ ಹೋಗುವದಿಲ್ಲ.

ಬೆಲೆಯು ಬಗ್ಗೆ ಹೆಚ್ಚಿನ ಸಂಗತಿ ಬಗ್ಗೆ ಒದಿದು ತಿಳಿದುಕೊಳ್ಳಿರಿ.

ಕಿರ್ಲೋಸ್ಕರ ಬಂಧುಗಳು, ಲಿಮಿಟೆಡ್.

ಕಿರ್ಲೋಸ್ಕರವಾಡಿ,

1—1 ಜಿ. ಸಾತಾರ್.

ವಿಶೇಷದ ಮಾರಾಟ!

ಉಚಿತ! ಪಾಕೆಟ್ ವಾಚ್! ಉಚಿತ!

18 ಕ್ಯಾರೆಟ್ ರೋಲ್ಡ್ ಗೋಲ್ಡ್ ಪ್ಲೇಟ್ ಚಿನ್ನದ ಮುಖ ಬಲ್ಲೆಯುಳ್ಳ ರಿಸ್ಟ್ ಗಡಿಯಾರ ನಂ 101.

ಇದು ಅತಿ ಹೊಸ ಮಾದರಿಯ, ಸುಂದರವಾದ ಆಕಾರದ, ಸೊಗಸಾದ ತಳಪು, ಸ್ವಿಸ್ ಮೇಡ್, ಮುಖ ಬಲ್ಲೆಯು ಧಗ ಧಗ ಹೊಳೆಯುತ್ತಾ ಅಲಂಕರಿಸುತ್ತದೆ 10 ರೂ. ಮತ್ತು ಮೇಲ್ಪಟ್ಟ ಬೆಲೆಯುಳ್ಳ ವಾಚುಗಳಂತೆ ಕಾಣುತ್ತದೆ. ಸುಂದರವಾಗಿಯೂ ಚಿಕ್ಕದಾಗಿಯೂ ಇದೆ. ಗಂಡಸರಿಗೂ ಹೆಂಗಸರಿಗೂ ಉಪಯೋಗಿಸಲು ಅನುಕೂಲವಿರುವ ಅತ್ಯುತ್ತಮ. ವಾಚ್ ಯಾವ ಹವಾಮಾನದಲ್ಲೂ ಸರಿಯಾದ ಟೈಮ್ ತೋರುವ ವಾಚ್. ಮೂರು ವರ್ಷಗಳ ಗ್ಯಾರಂಟಿ ಕೊಡಲಾಗುತ್ತೆ. ಯಾವ ಆಕಾರವಾದ್ದಾದರೂ ಒಂದು ವಾಚನ್ನು ಒಂದು ತಿಂಗಳೊಳಗೆ ಕೊಂಡುಕೊಂಡವರಿಗೆ ನಿಕಲ್ ಪಾಕೆಟ್ ವಾಚ್ ಒಂದು ಉಚಿತವಾಗಿ ಕೊಡಲಾಗುತ್ತದೆ. ಕ್ರಯ 8-0-0.



OVERSEAS SWISS WATCH CO.

POST BOX No. 371,
Mount Road, MADRAS.

ಇಮಿಟೇಷನ್ ವಜ್ರದ ಉಂಗುರಗಳು.
(White Imitation Kammals.)

ಈ ಉಂಗುರಗಳನ್ನು ಒಂದು ವಿಧ ಹೊಸದ ಲೋಹದಿಂದ ಮಾಡಿ ಬಂಗಾರದಂತೆ ಗಿಲೀಟು ಮಾಡಿದೆ. ಮೇಲು ಭಾಗದಲ್ಲಿ ಕೆಂಪು, ಹಸರು ಮುಂತಾದ ಇಮಿಟೇಷನ್ ವಜ್ರದ ಕಲ್ಲುಗಳು ಇಟ್ಟು ಕಲ್ಪದ ಕಟ್ಟಿರುವರು. ನೋಡಲಿಕ್ಕೆ ನಿಜವಾದ ವಜ್ರದ ಉಂಗುರವೆಂದೇ ಹೇಳಬೇಕು. ಬೇಕಾದವರು ಬರವಣಿಗೆ ಅಳತೆಯನ್ನು ಕಳುಹಿರಿ.



ಕ್ರಯ 1ಕ್ಕೆ 1—1—0, 7ಕಲ್ಲಿನ ಬಿಳಿ ಕಮ್ಮಲು 2—8—0,
ಕ್ರಯ 3ಕ್ಕೆ 5—8—0. 7ಕಲ್ಲಿನ ಕೆಂಪು ಕಮ್ಮಲು 3—0—0.

P. K. Sawmy &Co,
No 17 Evening Bazaar,
Madras.

52-7

ಮಾರ್ಜ ಲೈಯಿಟು ಸೋಪು.

ಈ ಸೋಪನ್ನು ಕೂದಲುಗಳಿಗೆ ಒಂದೇ ಒಂದು ನಿಮಿಷ ಹಾಕಿದರೆ ಕತ್ತಿಯಿಂದ ಕ್ಷೌರ ಮಾಡಿಸಿ ಕೊಂಡದ್ದಕ್ಕಿಂತಲೂ ಚೆನ್ನಾಗಿ ಚರ್ಮಕ್ಕೆ ಯಾವತೊಂದರೆಯೂ ಇಲ್ಲದೆ ಕೂದಲನ್ನು ತೆಗೆದುಬಿಡುವುದು.

ನಮ್ಮ ಮಾರ್ಜಲೈಟ್ ಸೋಪ್, ಗಂಧ, ಮೊಡವೆ, ಬಿಷ್ಟಿ, ತುರಿ, ಸವ, ಮುಂತಾದುವುಗಳನ್ನು ಕ್ಷಣಮಾತ್ರದಲ್ಲಿ ಮಾಯಮಾಡುವುದು.

3 ಸಾಮಾನುಗಳನ್ನು ಪೆಟ್ಟಿಗೆ 1ಕ್ಕೆ ರೂ. 0—10—0

ರೇಷ್ಮೆ ವಸ್ತ್ರ.

5 ಮೊಳ ಉದ್ದ 2½ ಮೊಳ ಅಗಲ ಇರುವದು

ಈ ವಸ್ತ್ರಗಳನ್ನು ರೇಷ್ಮೆಯಿಂದ ಮಾಡಿದೆ ನೋಡಲಿಕ್ಕೆ ಬಹು ಚೆನ್ನಾಗಿರುವವು ಚಿಕ್ಕವರೂ ದೊಡ್ಡವರೂ ಸಹ ಉಪಯೋಗಿಸಬಹುದು. ಕೆಂಪು, ರೋಜಾ, ನೀಲಿ, ಹಸರು ಮುಂತಾದ ಬಣ್ಣಗಳಲ್ಲಿ ಇರುವವು. ಇವು ವಿಲಾಯಿತಿಯಲ್ಲಿ ತಯಾರಾದವು. ಇವರ ಸುತ್ತಲೂ ನೋಡಲಿಕ್ಕೆ ಚೆನ್ನಾಗಿರುವಂತೆ ಹುವ್ವಿನ ಕುಚ್ಚುಗಳು ಇರುವವು

ಕ್ರಯ 1ಕ್ಕೆ ರೂ 3—8—0

ವಿಳಾಸ:—ಎಸ್. ಪಾಲ್ ಅಂಡ್ ಕೊ,
ಪಿ ಒ. ನಂಬರು. 542,
12—7. ಕೊ. ಮ ಪಾರ್ಕ್‌ಟೌನ್ ಮದ್ರಾಸು.

ಇಮಿಟೇಷನ್ ರೇಷ್ಮೇ ಸೀರೆಗಳು.

ಈ ಸೀರೆಗಳು 18ಮೊಳ, ಉದ್ದ ಮೂರು ಮೊಳ ಅಗಲವೂ ಇದೆ. ಈ ಸೀರೆಗಳನ್ನು ಹೊಸದಾದ ಇಮಿಟೇಷನ್ ಸಿಲ್ಕ್ ಗಟ್ಟಿ ದಾರದಿಂದ ತಯಾರಿಸಿದೆ ಇದು ನೋಡಲಿಕ್ಕೆ ಭಾರಿ ಕ್ರಯದ ಸೀರೆಗಳಂತೆ ಕಾಣುವದಲ್ಲದೆ ಅಂದವಾದ ಅಂಚು, ಸುಂದರವಾದ ಸಾದಾ ರೇಷ್ಮೆಯ ಸೆರಗೂ ಇರುವದು. ಈ ಮಾದರಿ ಸೀರೆಗಳು ದೇಶದ ಲ್ಲಿಯೂ ಈ ಕ್ರಯಕ್ಕೆ ಸಿಕ್ಕಲಾರವು ಈ ಸೀರೆಗಳು ಶ್ರೀಮಂತರೂ, ಗರೀಬರೂ, ಉಪಯೋಗಿಸಬಹುದಾದಂತೆ ಮಾದರಿಗಾಗಿ ಕೆಲವನ್ನು ಮಾತ್ರ ತಯಾರಿಸಿರುತ್ತೇವೆ. ಆದ್ದರಿಂದ ಬೇಗನೆ ತರಿಸಿಕೊಳ್ಳುವವರಿಗೆ ಮಾತ್ರ ಸಿಕ್ಕುವವು.

ಕ್ರಯ ಸೀರೆ 1ಕ್ಕೆ ನಂ 1. ರು. 6—8—0
" ನಂ 2. ರು. 7—8—0

ವಿಳಾಸ.—ಮಹಾರಾಜ ಟ್ರೇಡಿಂಗ್ ಕಂಪನಿ,
16 ತಿರುಪಳ್ಳಿ ಬೀದಿ,
ಮದರಾಸು.

ಈಗಲೇ ಪ್ರಿಂಟಾಗಿದೆ! ಶೃಂಗಾರವಾದ ಪುಸ್ತಕ!!

ಸ್ತ್ರೀ ಪುರುಷರ ಪ್ರೀತಿಯ ಮರ್ಮಗಳನ್ನು ಚಿತ್ರಪಟಗಳ ಸಹಿತ ತಿಳಿಸುವ

ಮರ್ಮ ಶಾಸ್ತ್ರ.

ಫ್ರೆಂಚ್ ಭಾಷೆಯಲ್ಲಿ ಇದ್ದದನ್ನು ಸುಲಭ ಶೈಲಿಯಲ್ಲಿ ಕನ್ನಡ ಭಾಷೆಗೆ ಭಾಷಾಂತರಿಸಿರುತ್ತೇವೆ. ಸ್ತ್ರೀಪುರುಷರುಗಳಿಗೆ ಬೇಕಾದ ಎಲ್ಲಾ ಮರ್ಮ ರಹಸ್ಯಗಳು, ರತಿ ಮನ್ಮಥರು ಆನಂದವಾಗಿರುವದಕ್ಕೆ ಬೇಕಾದ ಉಪಾಯಗಳು, ಸ್ತ್ರೀ ಪುರುಷರ ಜಾತಿಯ ಲಕ್ಷಣಗಳು ಗರ್ಭಧರಿಸುವದು, ಶಿಶು ಉತ್ಪತ್ತಿವಿಧ, ಗುಪ್ತ ವೈದ್ಯ, ಶಯನ ಗೃಹದ ಸೆಯ ಮಗಳು, ಇನ್ನೂ ಸ್ತ್ರೀಪುರುಷರಿಗೆ ಬೇಕಾದ ಲೀಲ ರಹಸ್ಯಗಳು ತುಂಬಿದೆ. ಈ ಶೃಂಗಾರವಾದ ಪುಸ್ತಕವನ್ನು ಓದಿ ಆನಂದ ಹೊಂದುತ್ತಾರೆಂದು ನಂಬಿರುತ್ತೇವೆ. ಪಟಗಳ ಸಹಿತ ಕ್ರಯ ಪುಸ್ತಕ 1ಕ್ಕೆ ರೂ. 1—0—0

ವಿಳಾಸ.—ಟಿ ರಾಮಚಂದ್ರರಾವ್ ಕಂಪೆನಿ,

12—26 ಪೋಸ್ಟ್ ಬಾಕ್ಸ್ ನಂ. 232 ಮದರಾಸು.

ಒಂದು ಪ್ರಬಲವಾದ ಪ್ರಶ್ನೆ.

ನಮ್ಮ ಜೀವವನ್ನು ನಿತಕ್ಕಾಗಿ ವಿಮಾಮಾಡಬೇಕು!

ವೃದ್ಧಾಪ್ಯದಲ್ಲಿ ನಮ್ಮ ಮತ್ತು ಹೆಂಡತಿ ಮಕ್ಕಳ ಪೋಷಣೆಗಾಗಿ!

ಈಗಾಗಲೇ ಸಾವಿರಾರು ಜನರು ವಿಮೆಮಾಡಿರುವ ಏಳುಕೋಟಿ ರೂಪಾಯಿಗಿಂತ ಹೆಚ್ಚು ಬಂಡವಾಳವಿರುವ ದೇಶೀಯ ವಿಮೆಕಂಪೆನಿಯಲ್ಲಿ ಅತ್ಯಂತ ದೊಡ್ಡದಾದ ಸಾವಿರ ರೂಪಾಯಿ ವಿಮೆಮಾಡಿದವರಿಗೆ ವರ್ಷಕ್ಕೆ 18ರೂ. ಕಡಿಮೆ ಇಲ್ಲದೆ ಲಾಭ ಕೊಡುವ 'ಓರಿಯಂಟಲ್' ಗವರ್ನಮೆಂಟ್ ಜೀವವಿಮೆ ಕಂಪೆನಿಯ ರೂಲ್ಸುಗೂ, ಶರತಿಗೂ ಈ ಕೆಳಗಿನವರಿಗೆ ಬರೆದು ತಿಳಿದುಕೊಳ್ಳಿ.

ಖಾದಿಬಟ್ಟೆ ಎಂದರೇನು?

ದೇಶೀಯ ಹತ್ತಿಯಲ್ಲಿ ಕೈರಾಟೆಯಿಂದ ನೂಲು ತೆಗೆದು ಹಳ್ಳಿಯೋ ತಯಾರಿಸುವ ಬಟ್ಟೆಯೇ 'ಖಾದಿ.' ಈಗಾಗಲೇ ನಮ್ಮ ಸ್ಟೋರಿನಲ್ಲಿ ಪರದೇಶಿಬಟ್ಟೆ ಅಂಗಡಿಗಳಲ್ಲಿಯೂ ಅಂದದಲ್ಲಿಯೂ ಕಡಿಮೆ ಇಲ್ಲದಂತ, ಎಲ್ಲಾ ತರದ ಸೀರೆಗಳು ಚೆಕ್ಕುಗಳು, ಶಾಲು ವಸ್ತ್ರಗಳ ಎಲ್ಲಾ ತರದ ಬಟ್ಟೆಯು ತಯಾರಾಗಿದೆ. ಕೊಂಡುಕೊಂಡು ಪ್ರೋತ್ಸಾಹಿಸಿರಿ! ಖಾದಿಯಿಂದಲೇ ಸ್ವರಾಜ್ಯ. ಖಾದಿಯಿಂದಲೇ ಮೋಕ್ಷವೆಂಬುದನ್ನು ಮರೆಯಬೇಡಿರಿ.

ವೀರಾಜಪೇಟೆ, ಕೆ. ಪಿ. ಚಿಣ್ಣಪ್ಪ,
ದಕ್ಷಿಣ ಕೊಡಗು. ಪ್ರೊಪ್ರೈಟರ್,
ಖಾದಿಭಂಡಾರ.

52—12.

೧೦೦೦ ರೂಪಾಯಿಗಳ ಬಹುಮಾನ.
ಲೋಕಪ್ರಸಿದ್ಧವಾದ ಸಾಲಂಮಿಸ್ರಿ ಮುರಬ್ಬಾ.

ನಮ್ಮ ಟ್ರೇಡ್ ಮಾರ್ಕನ್ನು ನೋಡಿ ಈ ಔಷಧ ಕೊಳ್ಳಿರಿ

ಇದರ ಸೇವನೆಯಿಂದ ವೀರ್ಯವು ನೀರಿನಂತೆ ಇದ್ದರೂ, ನಷ್ಟೇಂದ್ರಿಯವಾದರೂ, ಸ್ತ್ರೀ ಸಂಘಕ್ಕೆ ಮೊದಲೇ ಸ್ಖಲನವಾದರೂ, ಮೂತ್ರದೊಂದಿಗೆ ಹೋಗುತ್ತಿದ್ದರೂ ದೋಷರಹಿತವಾಗಿ ಶರೀರಕ್ಕೆ ಆರೋಗ್ಯವನ್ನೂ ಧಾರ್ಢ್ಯತೆಯನ್ನೂ ಆಯುಸ್ಸು, ಬಲ, ತೇಜಸ್ಸು ಉಂಟು ಮಾಡುವದು. ಅಜೀರ್ಣ ಮಲಬದ್ಧತೆ, ಮೆದುಳಿನ ಬಲಹೀನತೆ, ಕೈಕಾಲು ನೋವು ಮೊದಲಾದ ರೋಗಗಳಿಗೆ ಇದು ದಿವ್ಯ ಔಷಧವು ಈ ಸಾಲಂಮಿಸ್ರಿಯು ಕಾಬೂಲ್ ಕಂದಹಾರ ಪ್ರಾಂತ್ಯದಲ್ಲಿ ಬೆಳೆಯುತ್ತದೆ.

ಈ ಔಷಧದಿಂದ ಗುಣಹೊಂದಿರುವ ಅನೇಕ ಮಹನೀಯರು ತಾವಾಗಿಯೇ ಅನೇಕ ದೇಶಗಳಿಂದಲೂ ಆಫ್ರಿಕ, ಬರ್ಮ, ಪಿನಾಂಗ್, ಸಿಂಗಪೂರ್, ಸಿಲೋನ್, ಬೊಂಬಾಯಿ, ಕಲ್ಕತ್ತ, ಮದ್ರಾಸು ಮತ್ತು ಇಂಡಿಯಾದೇಶದಲ್ಲಿ ಎಲ್ಲಾ ಸ್ಥಳಗಳಿಂದಲೂ ನಮಗೆ ಯೋಗ್ಯತಾ ಪತ್ರಿಕೆಗಳನ್ನು ಕಳುಹಿಸಿರುವರು ಇವುಗಳ ನಕಲನ್ನು ಯಾರಾದರೂ ತರಿಸಿ ನೋಡಬಹುದು ಇವುಗಳು ಸುಳ್ಳು ಎಂದು ನಿರ್ಧರಪಡಿಸುವವರಿಗೆ ಮೇಲೆ ಕಂಡ ಬಹುಮಾನವು ಕೊಡಲ್ಪಡುತ್ತೆ. ನಾವು ಹಾಗೆ ಕೊಡದೇ ನಿರಾಕರಿಸಿದಲ್ಲಿ ಕೋರ್ಟ ಮೂಲಕ ಅದನ್ನು ಪಡೆಯಬಹುದು. ೧ ಡಬ್ಬಿಯನ್ನು ೧೫ ದಿನ ಸೇವಿಸಿದಲ್ಲಿ ಗುಣವು ಖಂಡಿತವಾಗಿ ತೋರಬಹುದು ೨ ಯಾ ೩ ಡಬ್ಬಿಗಳು ಜನ್ಮಾಂತ್ಯದವರೆಗೂ ಪೂರ್ಣವಾಗಿ ಗುಣವನ್ನುಂಟು ಮಾಡುವವು. ಹೆಸರು ವಿಳಾಸಗಳನ್ನು ವಿವರವಾಗಿ ಬರೆಯಬೇಕು. ಒಂದಾವರ್ತಿ ಅಭ್ಯಾಸ ಮಾಡಿ ನೋಡಿದಲ್ಲಿ ಖಾತ್ರಿ ಉಂಟಾಗುತ್ತೆ.

ಕ್ರಯ ಡಬ್ಬಿ ೧ಕ್ಕೆ ರೂ. ೨—೦—೦ ಥ್ಯಾಂಗಿ ಚಾರ್ಜು ೧ರಿಂದ ೩ ಡಬ್ಬಿಗಳಿಗೆ ೦—೨—೦ ಆಣೆ ಏಜಂಟರುಗಳು ಎಲ್ಲಾ ಸ್ಥಳಗಳಲ್ಲಿಯೂ ಅವಶ್ಯಕವಾಗಿರುತ್ತೆ. ರೂಲ್ಸ್ ತರಿಸಿಕೊಳ್ಳಬಹುದು ಆರ್ಡರು ಕೊಡತಕ್ಕ ಕಾಲದಲ್ಲಿ ಈ ಪತ್ರಿಕೆಯ ಹೆಸರನ್ನು ಬರೆಯಬೇಕು.

ಟೆಲಿಗ್ರಾಫ್ ಅಡ್ರೆಸ್, } ಡಿ. ಮನ್ನಾಲಾಲ್, ಡಿಲ್ಲಿ ನೇಟಿವ್ ವೈದ್ಯರು,
ಮಿಸ್ರಿ ಬೆಂಗಳೂರು ಸಿಟಿ, } ಸಾಲಂಮಿಸ್ರಿ ಮುರಬ್ಬ ಡಿಪೋ,
ಬೆಂಗಳೂರು ಸಿಟಿ.

12—12

Printed & published by Kodanda Appayya, R.B., Chairman, Board of Directors, at "Kodagu" Press, Mercara for "Kodagu" Ltd

R. No. M. 1550.
KODAGU, MERCARA

ಕೊಡಗು.

ಸ್ವೇನೈವ ಪೂರಕದಯಾಯು ವಿದ್ಯಾ ಸಾ ಪ್ರಯತ್ನ ಕಾ || ಐಕ್ಯಮತ್ಯೇನ ದೇಶಾನಾಂ ಸುಸ್ಥಿರಾ ರಾಜ್ಯ ಸಂಪದಾ ||

ಸಂಪಾದಕ—ಪಂದ್ಯಂಡ ಐ. ಬೆಳ್ಯಪ್ಪ.

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವದು.

ಸಂಪುಟ ೬] ಕೊಡಗು, ಸನ ೧೯೨೬ನೇ ಇಸವಿ ಜೂನ್ ತಾರೀಖು ೨೫ ನೇ ಶುಕ್ರವಾರ [ಸಂಚಿಕೆ ೪

ಸ್ಥಾಪಿತವಾದದ್ದು 1874 ಮೂಲಧನ 7 ಕೋಟಿ ರೂಪಾಯಿಗಳು

ಓರಿಯಂಟಲ್ ಗವರ್ನ್‌ಮೆಂಟ್ ಸೆಕ್ಯೂರಿಟಿ ಲೈಫ್ ಅಷ್ಯೂರೆನ್ಸ್ ಕಂಪೆನಿ ಲಿಮಿಟೆಡ್, ಹೆಡ್ ಆಫೀಸು— ಬೊಂಬಾಯಿ.

1922—1924 ಈ ಮೂರು ವರ್ಷಗಳಲ್ಲಿ ಕಂಪೆನಿಯಲ್ಲಿ ನಡೆದ ತಿಳಿದ ಫಲಿತಾಂಶಗಳು —

ಲಾಭ— ರೂ. 51,00,000 (ಐವತ್ತೊಂದು ಲಕ್ಷ ರೂಪಾಯಿಗಳು) ಈ [illegible] 15,94,80 ರೂಪಾಯಿಗಳನ್ನು ಲಾಭ ಸಹಿತ ವಿಮೆ ಮಾಡಿದವರ ವಿಮೆ ಹಣಕ್ಕೆ ಹೆಚ್ಚು ಬೋನಸ್ ಇನಾಮಾಗಿ ಈ ಕೆಳಗೆ ಕಾಣಿಸಿರುವ ರೀತಿಯಲ್ಲಿ ಸೇರಿಸಿರುತ್ತದೆ.

ಜೀವಮಾನಾವಧಿಯ ವಿಮೆದಾರರಿಗೆ ರೂ. 1000 ವಿಮೆ ಹಣಕ್ಕೆ

ಈ ಮೂರು ವರ್ಷಗಳಿಗೆ ರೂ. 67½.

ಕ್ಲಿಪ್ತಕಾಲದ ವಿಮೆದಾರರಿಗೆ ರೂ. 1000 ವಿಮೆ ಹಣಕ್ಕೆ

ಈ ಮೂರು ವರ್ಷಗಳಿಗೆ ರೂ. 54.

ಈ ಕಂಪೆನಿಯಲ್ಲಿ ಕ್ರಮೇಣ ಹೆಚ್ಚುತ್ತಿರುವ ಬಿಸಿನೆಸ್ಸು ಈ ಕೆಳಗೆ ಕೊಟ್ಟಿರುವ ಹೊಸ ಕೆಲಸದ ಪಟ್ಟಿಯಿಂದ ವ್ಯಕ್ತವಾಗುತ್ತದೆ.

1923ರಲ್ಲಿ	ರೂ	1,74,00,000
1924	,,	2,37,00,000
1925	,,	2,96,00,000

ಇನ್ನೂ ದಿನದಿನಕ್ಕೂ ಅಭಿವೃದ್ಧಿಯಾಗುತ್ತಲೇ ಇದೆ. ಜೀವವಿಮೆ ಸ್ವಲ್ಪ ಹಣವನ್ನು ಲಾಭಕರವಾಗಿ ಶೇಖರಿಸಲು ಇದು ಸುಸಮಯ.

ಬೇಕಾದ ವಿಷಯಗಳನ್ನು ಈ ಕೆಳಗಿನ ವಿಳಾಸಕ್ಕೆ ಬರೆದು ತಿಳಿದುಕೊಳ್ಳಬಹುದು.

ಓರಿಯಂಟಲ್ ಬಿಲ್ಡಿಂಗ್ಸ್, ಪೋಸ್ಟ್ ಬಾಕ್ಸ್ 19, ಬೆಂಗಳೂರು — ಪಿ. ಪಿ. ಸುಬ್ರಮಣ್ಯ ರಾವ್, ಬ್ರಾಂಚ್ ಸಕ್ರೆಟರಿ.

52—12.

ಮನೋಲ್ಲಾಸಿನಿ ತೈಲ.

ತಲೆನೋವು, ತಲೆ ತಿರುಗುವುದು, ತಲೆಯಲ್ಲಿ ಕಜ್ಜಿ, ಕಿವಿಯಿಂದ [illegible] ಕಣ್ಣುನೋವು, ಆವನಾದ ನಿದ್ರೆ ಬಾರದಿರುವುದು, ನೆನಪು ಶಕ್ತಿ ಕುಂದಿಹೋಗುವುದು ಇವುಗಳನ್ನೆಲ್ಲ ಖಂಡಿತ ಗುಣಮಾಡುತ್ತದೆ. ಉದುರುವ ಕೂದಲನ್ನು ನಿಲ್ಲಿಸಿ ಗಿಡ್ಡಗಿರುವ

ಕೂದಲನ್ನು ಬೇಗನೆ ಕೊಡಲಿಗೆ [illegible] ಕೊಟ್ಟು [illegible] ಹಣ್ಣಾಗುವ ಕೂದಲನ್ನು ತಡೆದು ಕೂದಲು ಇಲ್ಲದ ಸ್ಥಳದಲ್ಲಿ ಹೊಸ ಕೂದಲನ್ನು ಹುಟ್ಟಿಸುತ್ತದೆ. ಚಿಕ್ಕ ಸೀಸೆಗೆ ರೂ 1, [illegible] 2—10—0, ಒಂದು ದೊಡ್ಡ ಸೀಸೆಗೆ ರೂ 2, [illegible] [illegible]

ಚಂದನಾಸವ. — [illegible] ಮೂತ್ರಕೃಚ್ಛ್ರ ಮೂತ್ರ [illegible] ಮೂತ್ರನಾಳದಲ್ಲಿ ಹುಣ್ಣು, ಮೂತ್ರ, [illegible] ಮೂತ್ರನಾಳದಿಂದ [illegible] ಬರುವುದು ಮೂತ್ರದಲ್ಲಿ ಧಾತು, [illegible] ಬರುವದು [illegible] ಸಾಮರ್ಥ್ಯವಿಲ್ಲದಿ[illegible] ಮೂತ್ರನಾಳದಲ್ಲಿ ಬರುವ ನೋವು [illegible] ಔಷಧಿ [illegible] ಬೆಲೆ—ಬಾಟ್ಲಿ [illegible] ರೂ 1—4—0 3—8—0, [illegible]

ರೋಮನಾಶಿನಿ — ಈ ಪುಡಿಯನ್ನು [illegible] ಕೆಲಸ ನಿಮಿಷದಲ್ಲಿ ರೋಮವಿರುವ ಭಾಗಕ್ಕೆ ಹಚ್ಚಲು ರೋಮವು ಉದುರಿ ಬೀಳುವುದು. ಡಬ್ಬಿಗೆ 6 ಆಣೆ, 3 ಡಬ್ಬಿಗಳಿಗೆ ರೂ. 1, 1 ಡಜನಿಗೆ 3- 8- 0.

ಅಮೃತರಿಷ್ಟ.— ಇದು [illegible] ಎಲ್ಲಾ [illegible] ಜ್ವರಕ್ಕೆ ಉತ್ತಮ. ಬೆಲೆ— ಬಾಟ್ಲಿ 1, 3, 6ಕ್ಕೆ ರೂ 1—[illegible] —0, 6—12—0

ಲೋಹಾಸವ.— ಇದು [illegible] ರಕ್ತಹೀನತೆಯಿಂದುಂಟಾದ ಅಶಕ್ತತೆಗೆ ದಿವ್ಯವಾದುದು. ಬೆಲೆ—ಬಾಟ್ಲಿ 1, 3, 6ಕ್ಕೆ ರೂ. 1—4—0, 3—8—0, 6—12—0

ನಮ್ಮ ಕೆಟಲಾಗು ತರಿಸಿ ನೋಡಿರಿ

ವಿಳಾಸ—ಮನೋಲ್ಲಾಸಿನಿ ಕಂಪೆನಿ, 9 ಮಂಗಳೂರು, ಕಂಕನಾಡಿ.

52—27

ಸುವರ್ಣ ಅಯಸ್ಕಾಂತ ದ್ರಾವಕ.

(The Ideal Nervine Tonic)

ಇದು ಅತಿ ಆಶ್ಚರ್ಯಕರವಾದ ಟಾನಿಕ !

ಇದರಿಂದ ಕೆಟ್ಟು ಹೋಗಿರುವ ರಕ್ತವನ್ನು ಶುದ್ಧ ಮಾಡುವುದು. [illegible] ಅತಿ [illegible]ದಿಂದ ಕಣ್ಣಿಗೆ [illegible] ಶಕ್ತಿಯನ್ನುಂಟುಮಾಡುವುದು. [illegible] ನರಗಳಿಗೆ ಬಲವನ್ನು ಕೊಡುವುದು. [illegible] ಇನ್ನೂ ಅನೇಕ ಗುಣಗಳನ್ನು ಕೊಟ್ಟು [illegible] ಬಲವನ್ನು ಕೊಡುವುದು.

ಇದನ್ನು 20 ದಿನ ಸೇವನೆ ಮಾಡುವುದರಿಂದ ಮೇಲೆ ಹೇಳುವ ಗುಣಗಳನ್ನು ಕೊಟ್ಟು ಬಲಿಷ್ಠನಾಗಿ ಮಾಡುವುದು. [illegible] ಸ್ತ್ರೀ ಪುರುಷರು ದೊಡ್ಡವರ ಸಂಗಡ ಸೇವನೆ ಮಾಡಬಹುದು. ಉಪಯೋಗಿಸುವ ಕ್ರಮವು ಔಷಧದ ಸಂಗಡ ಕಳುಹಿಸಲ್ಪಡುವುದು.

ಕ್ರಯ 20 ದಿನಗಳು ಸೇವನೆ ಮಾಡುವ ಬಾಟ್ಲಿ 1ಕ್ಕೆ 1—8—0

,, 40 ,, ,, ,, 2—8—0

ಪಿ. ಕೆ. ಎಸ್.
17 ಅದಿಯಪ್ಪ ಬಜಾರ್,
ಜಿ. ಟಿ. ಮದ್ರಾಸ್.

52—8

ಸತ್ಯಮೇವಜಯತೇ.

(ಗುಣವಾಗದಿದ್ದರೆ ಹಣ ಪರತ)

ಧಾತುಪೌಷ್ಟಿಕ ಕಾಮೋತ್ತೇಜಕ, ಇಂದ್ರಿಯಸ್ತಂಭಕವಾದ

ಮದನೋದ್ಭವ ಗುಳಿಗೆ.

ಜನನೇಂದ್ರಿಯದ ಶಿಥಿಲತೆ ನಿಬಲತೆ ನಪುಂಸಕತ್ವ ಶೀಘ್ರಸ್ಖಲನ, ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ ಕಾಮೋತ್ತೇಜಕ, ಮನೋತ್ಸಾಹಕ ಇಂದ್ರಿಯಸ್ತಂಭಕ, ಗರ್ಮಿ, (ಟಾಕಿ) ಗುಪ್ತಪ್ರದೇಶದ ಮೇಲೆ ಹುಟ್ಟುವ ಎಲ್ಲಾ ತರಹದ ಬಕ್ಕೆಗಳು, ಹುಣ್ಣುಗಳು ಪಿತ್ತದ ಬಾಧೆಗಳು, ಕಟಿಶೂಲೆ ವಾತರೋಗವು ಮುಂತಾದವು ಅತಿತ್ವರಿತವಾಗಿ [illegible] ಶಾಂತಿಯೂ [illegible] ಕ್ಕೆ ಸಂಪೂರ್ಣ ಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗುತ್ತವೆ. ಕಿಮ್ಮತ್ತು ೬೦ ಗುಳಿಗೆಗಳಿಗೆ ೪ ರೂಪಾಯಿ. ಇವನ್ನು ಸೇವಿಸುವಾಗ್ಗೆ **ನಪುಂಸಕತ್ವಾರಿ** ತೈಲವನ್ನು ಉಪಯೋಗಿಸಿದರೆ ಉತ್ತಮ. ಕಿಮ್ಮತ್ತು ಬಾಟ್ಲಿಗೆ ರೂ ೨—೧೨—೦.

ಪ್ರಮೇಹನಿವಾರಣಿ—ಇದರ ಸೇವನೆಯಿಂದ ಮೂತ್ರಸ್ಥಾನದಿಂದ ಕೆಂಪು ಹಳದಿಯಂತೆ ಹೋಗತಕ್ಕ ಕೀವು, ಉರಿ, ವಗೈರೆ ಅರದಿವಾತ್ರಿಯಿಂದ ಗುಣವಾಗುವದು. ಕಿಮ್ಮತ್ತು ಬಾಟ್ಲಿಗಕ್ಕೆ ರೂ ೩—೮—೦ ಟಪಾಲು ಖರ್ಚು ಅನುಪಾನ ಪತ್ರಿಕೆ ಔಷಧದ ಸಂಗಡ

ಮಂದಾಣ ಸ್ಟಾಂಪು ಕಳುಹಿಸಿದರೆ ಕ್ಯಾಟಲಾಗವು

ವಿಳಾಸ,—

ವೈದ್ಯ ಜಿ. ಎಲ್. ಜೋಶಿ ಮತು ಕಂಪೆನಿ.

23 ನಂ 6. ಪೋಸ್ಟ್ ಬನವಾಸಿ, ಉತ್ತರ ಕಾನಡಾ.

EMPIRE OF INDIA LIFE ASSURANCE CO., LTD.

(Established 1897)

ALL WITH PROFIT POLICIES

Issued before 28th February. 1927 will share in the BONUS Distribution for the five years ending on that date.

PROSPECTUS ON APPLICATION

Bangalore Branch.	Madras Branch.
152 Commercial Street.	9 & 10 Second Line Beach

24—20

ARMS & AMMUNITION MART.

Mahomedally-Noorbhoy

321 Abdul Rehman Street, near Crawford Market, BOMBAY. 3

Telegraphic Address:—"SHOOTER" Bombay.

[52—11] Please write for Reduced nett prices list for 1926.

"ಕೊಡಗು"

ಸನ್ ೧೯೨೬ನೇ ಇಸವಿ ಜೂನ್ ತಾ.
೨೫ ನೇ ಶುಕ್ರವಾರ

ಕೃಷಿ ವಿದ್ಯಾಭ್ಯಾಸ.

ನಮ್ಮ ದೇಶದಲ್ಲಿ ಕೃಷಿ ಇಲಾಖೆಯು ಏನೂ ಕೆಲಸ ಮಾಡದೆ ಇರುವಾಗ ನೆರೆ ಪ್ರಾಂತ್ಯವಾದ ಮದ್ರಾಸ್ ಸರಕಾರದವರು ಕೃಷಿಯ ಬೆಳವಣಿಗೆಗೆ ವಿಧ ವಿಧದ ಉತ್ತೇಜನಗಳನ್ನು ಕೊಡುತ್ತಲಿದೆ. ಹಾಗೆ ಮಾಡುತ್ತಿರುವ ಪ್ರಯತ್ನ ಸಹ ಸಾಲದೆಂತ ಅಲ್ಲಿನ ಪತ್ರಿಕೆಗಳು ಹೇಳುತ್ತಿವೆ. ಮದ್ರಾಸು ಕೃಷಿ ಇಲಾಖೆಯವರು ಕೃಷಿ ಕಸುಬನ್ನೇ ಕಲಿಸುವ ಕೆಲವು ಶಾಲೆಗಳನ್ನು ನ[illegible]ತ್ತಿದ್ದಾರಂತೆ. ನಮ್ಮ ದೇಶದಲ್ಲಿ ಇಂಥಾ ಶಾಲೆಗ[illegible] ಅವಕಾಶವೂ ಆವಶ್ಯವೂ ಇದೆ. ಇದಕ್ಕೆ ಹಂ[illegible] ಬೇಕಾಗಿರುವದರಿಂದ ಇದು ತತ್ಕಾಲ ಸಾಧ್ಯವಾಗುವಂತೆ ಕಾಣುವದಿಲ್ಲ. ಕೃಷಿ ಇಲಾಖೆಯವರು ಶಾಲೆಗಳನ್ನು ನಡಿಸುತ್ತಿರುವದಲ್ಲದೆ ಒಟ್ಟು ಮದ್ರಾಸ್ ಆಧಿಪತ್ಯದಲ್ಲಿ ಎಂಟು ಹೈಯರ್ ಎಲಿಮೆಂಟರಿ ಶಾಲೆಗಳಲ್ಲಿ ಕೃಷಿಯನ್ನು ಬೇರೆ ವಿಷಯಗಳ ಸಂಗಡ ಕಲಿಸುತ್ತಿದ್ದಾರಂತೆ. ಬೊಂಬಾಯಿ ಮತ್ತು ಪಂಜಾಬ್ ಪ್ರಾಂತ್ಯಗಳಲ್ಲಿ ಈ ಮೊದಲೇ ಎಲ್ಲಾ ಪ್ರೈಮರಿ ಶಾಲೆಗಳಲ್ಲೂ ಕೃಷಿ ವಿದ್ಯೆಯನ್ನು ಕಲಿಸುತ್ತಿದ್ದಾರಂತೆ. ಇದೇ ಕ್ರಮವನ್ನು ಸ್ವಲ್ಪ ವ್ಯತ್ಯಾಸಮಾಡಿ ಮದ್ರಾಸ್ ಪ್ರೈಮರಿಶಾಲೆಗಳಲ್ಲೂ ಹೈಯರ್ ಎಲಿಮೆಂಟರಿ ಶಾಲೆಗಳಲ್ಲೂ ಸಹ ಅನುಸರಿಸಲು ಕೃಷಿ ಮಂತ್ರಿಯವರು ಆಲೋಚನೆ ಮಾಡಿದ್ದಾರೆ. ಶಾಲೆಗೆ ಸಮೀಪವಾಗಿ ಸ್ವಲ್ಪ ಭೂಮಿಯನ್ನು ಗೇಣಿಗೆ ತೆಗೆದುಕೊಂಡು ಮುಂದೆ ಕೃಷಿ ವಿದ್ಯೆಯನ್ನೇ ಕಲಿಯುವಂಥ ವಿದ್ಯಾರ್ಥಿಗಳಿಗೆ ಅನುಕೂಲವಾಗುವಂತೆಯೂ ಹೆಚ್ಚಿನ ವಿದ್ಯಾಭ್ಯಾಸಕ್ಕೆ ಹೋಗದೆ ತನ್ನ ಕುಟುಂಬದಲ್ಲಿ ನಡೆದುಬಂದ ಕೃಷಿವೃತ್ತಿಯನ್ನೇ ಅನುಸರಿಸುವವರಿಗೂ ಪ್ರಯೋಜನವಾಗುವಂತೆ ಕೃಷಿ ವಿದ್ಯೆಯ ಮೂಲತತ್ವಗಳನ್ನು ಭೂಗುಣ ವಾಯುಗುಣ ಮುಂತಾದ್ದನ್ನೂ ಕಮ್ಮಾರ, ಬಡಗಿ ಕೆಲಸಗಳನ್ನು ಸಹ ಕಲಿಸುವ ಅಭಿಪ್ರಾಯವುಳ್ಳದಾಗಿದೆ. ನಮ್ಮ ದೇಶದಲ್ಲಿ ಈ ಪಾಠಕ್ರಮವನ್ನು ಅನುಸರಿಸಿದರೆ ಹೆಚ್ಚಿನ ವಿದ್ಯಾರ್ಥಿಗಳ ತಂದೆತಾಯಿಗಳಿಗೆ ಸಮಾಧಾನವಾಗಬಹುದೆಂತ ನಮಗೆ ತೋರುತ್ತದೆ. ಪ್ರೈಮರಿ ಶಾಲೆಗಳಿಗೆ ವಿದ್ಯಾರ್ಥಿಗಳನ್ನು ಕಳುಹಿಸುವಾಗಲೇ ಪ್ರತಿಯೊಬ್ಬನೂ ತನ್ನ ಮಗನು ಮುಂದೆ ಬಿ ಎ ಮುಂತಾದ ಪರೀಕ್ಷೆಗಳಲ್ಲಿ ಪಾಸಾಗಿ ಮುಂದೆ ದೊಡ್ಡದೊಡ್ಡ ಪದವಿಗಳಿಗೆ ಬರುವನೆಂತ ಆಶೆ ಇಟ್ಟುಕೊಂಡಿರುತ್ತಾನೆ. ಈ ಆಶೆ ಕೆಟ್ಟದೆಂತ ನಾವು ಹೇಳುವದಿಲ್ಲ. ಆದರೆ ಹಾಗೆ ಶಾಲೆಗೆ ಹೋಗುವ ಹುಡುಗರಲ್ಲಿ ಶೇಕಡ ನಾಲ್ಕೈದು ಮಾತ್ರ ಹೈಸ್ಕೂಲುಗಳಿಗೆ ಹೋಗುವವರಾಗಿದ್ದಾರೆ. ಹೈಸ್ಕೂಲ್ ವಿದ್ಯೆಗೆ ಹೋಗುವ ವಿದ್ಯಾರ್ಥಿಗಳಿಗೂ ಅಡಚಣೆ ಇಲ್ಲದಂತೆಯೂ ಹೈಸ್ಕೂಲು ವಿದ್ಯೆಗೆ ಹೋಗದೆ ಉಳಿಯುವ ವಿದ್ಯಾರ್ಥಿಗಳಿಗೆ ತಮ್ಮ ಭೂಮಿ ತೋಟಗಳ ವ್ಯವಸಾಯದಲ್ಲಿ ಅಭಿರುಚಿ ಹುಟ್ಟಿಸುವಂಥ ವಿದ್ಯೆ ದೊರಕಿದರೆ ಉತ್ತಮವೆಂತ ನಮಗೆ ತೋರುತ್ತದೆ.

ಪ್ರೈಮರಿ ಶಾಲೆಗಳಲ್ಲಿ ಈ ಹೊಸ ಪಾಠಕ್ರಮವನ್ನು ಬೋಧಿಸಲು ಕೃಷಿ ವಿದ್ಯೆಯ ದೊಡ್ಡ ದೊಡ್ಡ ಪರೀಕ್ಷೆಗಳಲ್ಲಿ ಪಾಸಾದವರನ್ನು ನೇಮಿಸಲು ಸಾಧ್ಯವಿಲ್ಲದ್ದರಿಂದ ಟ್ರೈನಿಂಗಾದ ಉಪಾಧ್ಯಾಯರುಗಳನ್ನೇ ಕೊಯಮುತ್ತೂರು ಕೃಷಿ ಶಾಲೆಯಲ್ಲಿ ಸ್ವಲ್ಪಮಟ್ಟಿಗೆ ತರಬೇತು ಕೊಟ್ಟು ಪ್ರೈಮರಿ ಶಾಲಾ ಮಾಸ್ಟರುಗಳಾಗಿ ನೇಮಿಸಿರುತ್ತಾರೆ. ಈ ಹೆಚ್ಚಿನ ತರಬೇತು ಹೊಂದಿದ್ದಕ್ಕಾಗಿ ಅಂಥವರಿಗೆ ಸ್ವಲ್ಪ ಹೆಚ್ಚಿನ ಅಲೋವೆನ್ಸ್ ಸಹ ಕೊಡುತ್ತಾರೆ. ಇಂಥಾ ಪಾಠಕ್ರಮವನ್ನು ಸರಿಯಾಗಿ ಅನುಸರಿಸುತ್ತಿದ್ದಾರೋ ಎಂಬದನ್ನು ನೋಡಲಿಕ್ಕೆ ಸ್ಪೆಶಿಯಲ್ ಸೂಪರ್‌ವೈಸರುಗಳನ್ನು ಸಹ ನೇಮಿಸುತ್ತಾರೆ.

ನಮ್ಮ ಈ ದೇಶದಲ್ಲಿ ಇಂಥಾ ಸೂಪರ್‌ವೈಸರುಗಳನ್ನು ಕೂಡಲೇ ನೇಮಿಸಬೇಕೆಂತಾಗಲೀ, ಎಲ್ಲಾ ಶಾಲೆಗಳಲ್ಲೂ ಕೂಡಲೇ ಕೃಷಿ ವಿದ್ಯೆಯನ್ನು ಬೋಧಿಸಲು ಪ್ರಾರಂಭಿಸಬೇಕೆಂತಾಗಲೀ ನಾವು ಹೇಳುವದಿಲ್ಲ. ಆದರೆ ಕೂಡಲೇ ಅರ್ಹ ಪಟ್ಟನ್ ಟ್ರೈಯಿನಾದ ಉಪಾಧ್ಯಾಯರುಗಳನ್ನು ಕೊಯಮುತ್ತೂರಲ್ಲಿ ತರಬೇತಿಗೆ ಕಳುಹಿಸಬೇಕು. ಅಂಥವರು ತರಬೇತು ಹೊಂದಿ ಬಂದಕೂಡಲೇ ಕೆಲವು ಶಾಲೆಗಳಲ್ಲಿ ಈ ಬೋಧನಾಕ್ರಮವನ್ನು ಪ್ರಾರಂಭಿಸಬೇಕು. ಇದಕ್ಕೆ ಹಣವಿಲ್ಲವೆಂತ ವಿದ್ಯಾ ಇಲಾಖೆಯವರು ಹೇಳಬಾರದು. ಯಾಕಂದರೆ ಇವರ ಇಲಾಖೆಗೆ ಸರಕಾರದಿಂದ ಕೊಟ್ಟಿದ್ದ ಹಣದಲ್ಲಿ 14000 ರೂ. 1924—25ರಲ್ಲಿ ಉಪಯೋಗಿಸದ್ದರಿಂದ 1925—26ರಲ್ಲಿ ವಿದ್ಯಾ ಇಲಾಖೆಯ ಬಜೆಟ್ಟಿನಿಂದ ಈ ಹಣವನ್ನು ವಜಮಾಡಿ ಬಿಟ್ಟಿರುತ್ತಾರೆ. ಈ ಕೃಷಿ ಸಂಬಂಧವಾದ ಹೊಸ ಮತಲಬು (ಸ್ಕೀಮ್)ನ್ನು ಕೂಡಲೇ ವಿದ್ಯಾ ಇಲಾಖೆಯವರು ತಯಾರಿಸಿ ಹಣವನ್ನು ಕೇಳಿದರೆ ಚೀಫ್ ಕಮಿಷನರು ಮಂಜೂರು ಮಾಡದೆ ಇರಲಾರರು.

ನಮ್ಮ ಹೊಸ ಆಫೀಸು.

ಈ ವಾರ ನಮ್ಮ ಪತ್ರಿಕೆಯು ನಮ್ಮ ಹೊಸ ಆಫೀಸಿನಿಂದ ಹೊರಟಿದೆ. ಹಳೇ ಆಫೀಸಿನಿಂದ ಇಲ್ಲಿಗೆ ಪ್ರೆಸ್‌ಗಳನ್ನು ಸಾಗಿಸಿ ಜೋಡಿಸುವ ಕಾರಣದಿಂದ ಈ ಸಾರಿ ಪತ್ರಿಕೆಯ ಪುಟಗಳನ್ನು ಕಡಿಮೆ ಮಾಡಬೇಕಾಯಿತು. ವಾಚಕ ಮಹಾಶಯರು ಕ್ಷಮಿಸಬೇಕಾಗಿ ಕೋರುತ್ತೇವೆ.

ರೇಸ್‌ಕೋರ್ಸಿನ ಬಳಿ ಇದ್ದ ನಮ್ಮ ಹಳೇ ಆಫೀಸು ಪಟ್ಟಣದ ಮಧ್ಯಭಾಗದಿಂದ ಸ್ವಲ್ಪ ದೂರವಾಗಿದ್ದರಿಂದ ನಮ್ಮ ಆಫೀಸಿಗೆ ಬರಬೇಕಾದವರಿಗೆ ಸ್ವಲ್ಪ ತೊಂದರೆಯಾಗುತ್ತಿತ್ತು. ಈಗಿನ ಹೊಸ ಆಫೀಸು ಪೇಟೆಗೂ, ಪೋಸ್ಟಾಫೀಸಿಗೂ, ಸ್ಕೂಲಗೂ, ಖಚೇರಿಗಳಿಗೂ ಸಮೀಪವಾಗಿ ಮಧ್ಯಸ್ಥವಾಗಿದೆ. ಈಗ ನಮಗೆ ದೊರಕಿರುವ ಆಫೀಸು ಕಟ್ಟಡವು ಸಾರ್ವಜನಿಕ ಸಂಸ್ಥೆಯಾದ ಜಮೀನ್ದಾರರ ಸಂಘದ ಹಕ್ಕಿನದಾದುದರಿಂದಲೂ ಈ ಪತ್ರಿಕೆಯನ್ನು ನಡಿಸುವ ಕಂಪೆನಿಯು ಪಬ್ಲಿಕ್ ಕಂಪನಿಯಾದುದರಿಂದಲೂ ನಮ್ಮ ಪ್ರೆಸ್ಸನ್ನು ಇನ್ನು ಬೇರೆಕಡೆಗೆ ಒಯ್ಯುವ ಸಂಭವ ಬರಲಾರದೆಂದು ನಂಬುತ್ತೇವೆ. ಇಂಥಾ ಅನುಕೂಲವಾದ ಕಟ್ಟಡದ ಉಪಯೋಗವನ್ನು ನಮಗೆ ಬಿಟ್ಟುಕೊಟ್ಟದ್ದಕ್ಕಾಗಿ ಜಮೀನ್ದಾರರ ಸಂಘಕ್ಕೆ ನಾವು ವಂದಿಸುತ್ತೇವೆ.

ಜಮೀನ್‌ದಾರರ ಸಂಘದ ಕಮಿಟಿಮೀಟಿಂಗು

ಈ ತಾರೀಕು 12ರಲ್ಲು ಬೆಳಿಗ್ಗೆ 11½ ಗಂಟೆಗೆ ವೀರಾಜಪೇಟೆ ಖಾದಿಭಂಡಾರದಲ್ಲಿ ಜಮೀನ್‌ದಾರರ ಸಂಘದ ಕಾರ್ಯನಿರ್ವಾಹಕ ಕಮಿಟಿ ಮೀಟಿಂಗು ನಡೆಯಿತು. ರಾ ಬ ಕೋದಂಡ ಅಪ್ಪಯ್ಯನವರು ಅಧ್ಯಕ್ಷರಾಗಿದ್ದರು. ಹದಿನಾಲ್ಕು ಕಮಿಟಿಮೆಂಬರುಗಳು ಹಾಜರಿದ್ದರು.

ಸಂಘದ ಕಟ್ಟಡದ ಒಂದು ಭಾಗವನ್ನು "ಕೊಡಗು" ಕಂಪೆನಿಯವರಿಗೆ ತಿಂಗಳಿಗೆ 5ರೂ. ಬಾಡಿಗೆಗೆ ಕೊಡಬೇಕೆಂದು ಆ ಕಂಪೆನಿಯ ಮೇನೇಜರವರು ಬರೆದ ಪತ್ರವು ಓದಲಾಯಿತು.

1. ಸಂಘದ ಕಟ್ಟಡದ ಉತ್ತರ ದಿಕ್ಕಿನ ಮೂರು ಕೋಣೆಗಳನ್ನೂ, ದಕ್ಷಿಣ ದಿಕ್ಕಿನ ಒಂದು ಸಣ್ಣ ಕೋಣೆಯನ್ನೂ "ಕೊಡಗು" ಕಂಪೆನಿಗೆ ವರುಷಕ್ಕೆ 100ರೂ ಬಾಡಿಗೆಗೆ ಜುಲೈ ತಾ 1ರಿಂದ ಕೊಡುವಂತೆ ತೀರ್ಮಾನವಾಯಿತು.

2. ಚಂದಾವಸೂಲಿಯ ಕಮಿಶನ್ ವಿಷಯ ಹಿಂದಿನ ಮೀಟಿಂಗಿನಲ್ಲಿ ತೀರ್ಮಾನ ಮಾಡಿದಂತೆ ಅಂದರೆ, ಶೇಕಡ 25ರ ಕಮಿಶನಿನಲ್ಲಿ 6¼ ಗ್ರಾಮಕಮಿಟಿಯವರಿಗೂ, 18¾ ಆರ್ಗನೈಜರವರಿಗೂ, ಕೊಡುವಂತೆ ಜಾರಿಗೆ ತರತಕ್ಕದ್ದು.

3 ಬರುವ ಕೌನ್ಸಿಲ್ ಚುನಾವಣೆ ಬಗ್ಗೆ ಇಲೆಕ್ಟರರು ತಯಾರಿಸುವಾಗ ಅವಿಭಕ್ತ ಕುಟುಂಬದಲ್ಲಿ ಪಟ್ಟೇದಾರನ ಹೆಸರಿನಲ್ಲಿ ಒಂದಕ್ಕಿಂತ ಹೆಚ್ಚು ಓಟರುಗಳ ಅರ್ಹತೆಗೆ ಬೇಕಾದಷ್ಟು ಕಂದಾಯವಿದ್ದರೆ ಆ ಕಂದಾಯಕ್ಕೆ ತಕ್ಕಷ್ಟು ಓಟರುಗಳನ್ನು ಆ ಕುಟುಂಬದವರ ಅಭಿಪ್ರಾಯ ತೆಗೆದುಕೊಂಡು ಪಟ್ಟಿಗೆ ದಾಖಲು ಮಾಡತಕ್ಕದೆಂದು ಸರಕಾರವನ್ನು ಈ ಸಂಘವು ಕೇಳಿಕೊಳ್ಳುತ್ತದೆ ಎಂಬ ಠರಾವು ಮಂಜೂರಾಯಿತು.

ಕೆ ಅಪ್ಪಯ್ಯ
ಅಧ್ಯಕ್ಷರು.

"ಕೊಡಗು" ಕಂಪೆನಿಯ ಡೈರೆಕ್ಟರುಗಳ ಮೀಟಿಂಗು.

ಈ ತಾ 12ರಲ್ಲಿ "ಕೊಡಗು" ಕಂಪೆನಿಯ ಡೈರೆಕ್ಟರುಗಳ ಮೀಟಿಂಗು ರಾ. ಬಾ ಕೋದಂಡ ಅಪ್ಪಯ್ಯನವರ ಅಧ್ಯಕ್ಷತೆಯಲ್ಲಿ ವೀರಾಜಪೇಟೆ ಖಾದಿಭಂಡಾರದ ಮಹಡಿಯಲ್ಲಿ ಬೆಳಿಗ್ಗೆ 11ಗಂಟೆಗೆ ನಡೆಯಿತು. 8 ಡೈರೆಕ್ಟರುಗಳು ಹಾಜರಿದ್ದರು.

1 ಕಳೆದ ಮೆ. ತಿಂಗಳ ಲೆಕ್ಕವು ಓದಿ ಒಪ್ಪಲಾಯಿತು

2. ಕಂಪೆನಿಯ ಏಜಂಟರಾದ ಮೆ. ಚಂಗಂಡ ಕುಟ್ಟಪ್ಪನವರ ಸಂಬಳದ ವಿಷಯವು ಚರ್ಚಿಸಲಾಯಿತು. ಕಳೆದ ಮೇ ತಿಂಗಳಲ್ಲಿ ಅವರು ಕೆಲಸಮಾಡಿದ 20ದಿವಸಗಳಿಗೆ ಅವರಿಗೆ ಸಂಬಳ ಕೊಡುವಂತೆ ತೀರ್ಮಾನವಾಯಿತು. ಅಲ್ಲದೆ ಈ ಕೆಳಗಿನ ಶರತ್ತುಗಳಿಗೆ ಒಳಪಟ್ಟು ಈ ತಿಂಗಳಿಂದ ಒಂದು ವರ್ಷದವರೆಗೆ ಅವರನ್ನು ಏಜಂಟರಾಗಿ ನೇಮಿಸಲಾಯಿತು. ಶರತ್ತುಗಳು —1 ಅವರು 200ರೂಪಾಯಿಗೆ ಜಾಮೀನ್ ಕೊಡಬೇಕು 2. ತಿಂಗಳು ಒಂದರ 200ರೂ. ಚಂದಾವಸೂಲು ಮಾಡಿದರೆ ತಿಂಗಳಿಗೆ 25ರೂ. ಸಂಬಳ ಕೊಡಲಾಗುವದು 3 ಮೂರು ತಿಂಗಳಿಗೊಂದಾವೃತ್ತಿ ಅವರು ಮಾಡುವ ಚಂದಾ ವಸೂಲಿಯ ಲೆಕ್ಕ ಡೈರೆಕ್ಟರುಗಳು ಆಜಮಾಯಿಸುತ್ತಿರಬೇಕು.

3. ಜಮೀನ್‌ದಾರರ ಸಂಘದ ಕಟ್ಟಡದ ಒಂದು ಭಾಗವನ್ನು ತಿಂಗಳಿಗೆ 5ರೂ ಬಾಡಿಗೆಯಲ್ಲಿ ಕಂಪೆನಿಗೆ ಬಿಟ್ಟುಕೊಡುವಂತೆ ಆ ಸಂಘವನ್ನು ಕೇಳುವಂತೆ ತೀರ್ಮಾನವಾಯಿತು.

ಜಮೀನ್‌ದಾರರಸಂಘದ ಕಮಿಟಿ ಮೀಟಿಂಗ್ ಆದನಂತರ ಈ ಮೀಟಿಂಗನ್ನು ಮುಂದರಿಸುವಂತೆ ತೀರ್ಮಾನವಾಯಿತು

12 30 ಗಂಟೆಗೆ ಡೈರೆಕ್ಟರುಗಳ ಮೀಟಿಂಗ್ ಮುಂದರಿಸಲಾಯಿತು. ಆಗ ಮೊದಲಿದ್ದ ಡೈರೆಕ್ಟರುಗಳಲ್ಲದೆ ಮೆ ಸಿ ಯಸ್ ಉತ್ತಯ್ಯನವರು ಸಹ ಹಾಜರಿದ್ದರು,

4 ಜಮೀನ್‌ದಾರರಸಂಘದ ಕಮಿಟಿಯವರು ತಮ್ಮ ಕಟ್ಟಡದ ಭಾಗವನ್ನು ಕಂಪನಿಗೆ ವರ್ಷಕ್ಕೆ 100ರೂ. ಬಾಡಿಗೆಗೆ ಕೊಡುವುದೆಂತ ಮಾಡಿದ ತೀರ್ಮಾನವನ್ನು ಯೋಚಿಸಿ ಅದಕ್ಕೆ ಒಪ್ಪಿಕೊಳ್ಳಲಾಯಿತು

5 ಅಧ್ಯಕ್ಷರು ಪತ್ರಿಕೆಯ ಪ್ರಿಂಟರ್ ಮತ್ತು ಪಬ್ಲಿಶರಾಗಿ ಎಡಿಟರ್ ಡಿಕ್ಲೇರ್ ಮಾಡಿಕೊಳ್ಳಬೇಕೆಂತ ಬರೆದ ಕಾಗದ ಓದಲಾಯಿತು.

6 ಮೆ. ಸಿ ಬಿ ಬೆಳ್ಯಪ್ಪನವರು ಪ್ರಿಂಟರ್ ಮತ್ತು ಪಬ್ಲಿಶರಾಗಿ ಡಿಕ್ಲೇರ್ ಮಾಡಿಕೊಳ್ಳಬೇಕೆಂತಲೂ ಪೇಪರಿನ ಪ್ರಕಟಣೆಯಿಂದ ಏನಾದರೂ ಮೊಕದ್ದಮ್ಮೆಯಾದರೆ ಅದರ ಖರ್ಚನ್ನು ಕಂಪೆನಿಯು ವಹಿಸಿಕೊಳ್ಳಬೇಕು.' ಎಂಬ ಠರಾವನ್ನು ಚರ್ಚಿಸುವಾಗ ಮೆ ಸಿ ಯಸ್ ಉತ್ತಯ್ಯನವರು ಠರಾವಿನಲ್ಲಿ ಈ ಕೆಳಗೆ ಕಂಡ ಮೇರೆ ವ್ಯತ್ಯಾಸಮಾಡಬೇಕೆಂತ ಸೂಚಿಸಿದರು. ಹಾಗೆ ಖರ್ಚುಮಾಡಬೇಕಾದರೆ ಪ್ರತಿಯೊಂದು ಸಾರಿಯೂ ಡೈರೆಕ್ಟರುಗಳ ಒಪ್ಪಿಗೆ ಬೇಕು. ಈ ಸೂಚನೆಯನ್ನು ಅನುಮೋದಿಸುವವರು ಯಾರೂ ಇಲ್ಲದಿದ್ದುದರಿಂದ ಮೊದಲಿನ ಠರಾವನ್ನೇ ಓಟಿಗೆ ಹಾಕಲಾಗಿ ಮೆ ಉತ್ತಯ್ಯನವರು ಮಾತ್ರ ವಿರೋಧಿಸಿ ಓಟುಮಾಡಿದರು. ಇತರ ಎಲ್ಲಾ ಡೈರೆಕ್ಟರುಗಳ ಸಮ್ಮತಿಯಿಂದ ಠರಾವು ಮಂಜೂರಾಯಿತು.

7 ಪ್ರೆಸ್ಸನ್ನು ಜಮೀನ್‌ದಾರರಸಂಘದ ಕಟ್ಟಡಕ್ಕೆ ಸಾಗಿಸಿ ಜೋಡಿಸಲು ಬೇಕಾದ ಖರ್ಚನ್ನು ಮಾಡಲು ಅಧ್ಯಕ್ಷರಿಗೆ ಹಕ್ಕು ಕೊಡಲಾಗಿದೆ.

ಕೆ ಅಪ್ಪಯ್ಯ
ಅಧ್ಯಕ್ಷರು.

ಮಾನವ ಜೀವನ ರಹಸ್ಯ.

(ಕಳೆದವಾರದಿಂದ ಮುಂದುವರಿದದ್ದು)

ಮನುಷ್ಯನು ತನ್ನ ಕಾಂಕ್ಷೆಯ ತಕ್ಕಹಾಗೆ ಮಾಡಿ ಅದನ್ನು ಪಡೆದುಕೊಳ್ಳುವನು. ಇಷ್ಟರ ಮೇಲಿಂದ ಅವನಿಗೆ ಮಾನವಜಾತಿಯ ಜೀವನ ರಹಸ್ಯವು ತಿಳಿಯಬಂದಿತೆಂದು ಮಾತ್ರ ತಿಳಿಯಕೂಡದು. ವಸ್ತುಸ್ಥಿತಿ ಹೀಗಿದ್ದರೆ ಜಗತ್ತಿನಲ್ಲಿ ಸದ್ಯದಷ್ಟು ಅಶಾಂತತೆಯು ನೆಲೆಗೊಳ್ಳುತ್ತಿದ್ದಿಲ್ಲ. ಹಾಗು ಪ್ರತಿಯೊಬ್ಬನು ಸುಖದಿಂದಿರುತ್ತಿದ್ದನು. ಮಾನವ ಜನ್ಮದ ರಹಸ್ಯವನ್ನು ತಿಳಿದವರು ನಿಜವಾಗಿ ಸ್ವಲ್ಪ ಜನರಿರುವರು.

ಇಲ್ಲಿ ಭರ್ತೃಹರಿಯು ಬಹು ಸರಸಾಗಿ ಹೇಳುವದೇನೆಂದರೆ-

ಏಕೇ ಸತ್ಪುರುಷಾಃ ಪರಾರ್ಥ ಘಟಕಾ ಸ್ವಾರ್ಥಾನ್ ಪರಿತ್ಯಜ ಯೇ।
ಸಾಮಾನ್ಯಾಸ್ತು ಪರಾರ್ಥ ಮುದ್ಯಮಭೃತಾಃ ಸ್ವಾರ್ಥಾವಿರೋಧೇನಯೇ ।
ತೇಮೀಮಾನವ ರಾಕ್ಷಸಾಃ ಪರಹಿತಂ ಸ್ವಾರ್ಥಾಯ ನಿಘ್ನಂತಿಯೇ ।
ತುಘ್ನಂತಿ ನಿರರ್ಥಕಂ ಪರಹಿತಂ ಕೇಕೇನ ಜಾನೀಮಹೇ।

ಅರ್ಥ—ತಮ್ಮ ಸ್ವಾರ್ಥವನ್ನು ಬದಿಗಿಟ್ಟು ಪರರಿಗೆ ಸಹಾಯ ಮಾಡುವವರು ಸತ್ಪುರುಷರು

ತಮ್ಮ ಸ್ವಾರ್ಥವನ್ನು ಸಂಪಾದಿಸಿಕೊಂಡು ಅನ್ಯರಿಗೆ ಹಿತಮಾಡುವವನು ಮಧ್ಯಮನು,

ತಮ್ಮ ಸ್ವಾರ್ಥದ ಸಲುವಾಗಿ ಅನ್ಯರನ್ನು ಹಿಂಸಿಸುವವರು ರಾಕ್ಷಸರು,

ತಮಗೆ ಲಾಭವಿಲ್ಲದೆ ವ್ಯರ್ಥವಾಗಿ ಅನ್ಯರಿಗೆ ತೊಂದರೆ ಕೊಡುವವರು ನೀಚರು.

ಈ ಪುಟ್ಟ ಶ್ಲೋಕದಲ್ಲಿ ಕವಿಯು ಜಗತ್ತಿನಲ್ಲಿ ಯಾವತ್ತು ಮನುಷ್ಯರ ಬಗೆಗಿನ ಚಿತ್ರವನ್ನು ಬರೆದಿರುವನು. ಇದರ ಮೇಲಿಂದ ಯಾವನು ಪರರ ಹಿತದ ಸಲುವಾಗಿ ತನ್ನ ಸ್ವಾರ್ಥ

ನ್ನು ಕೂಡ ಮರೆಯುವನೋ ಅವನಿಗೇನೇ ಮಾನವ ಜೀವಿತದ ರಹಸ್ಯವು ತಿಳಿದಿರುವುದೆಂದು ಹೇಳಬಹುದು. ಅರ್ಥಾತ್, ಇಂಥ ಸಜ್ಜನರು ದೊರಕುವುದು ವಿರಳ.

ಜಗತ್ತಿನಲ್ಲಿ ಎಲ್ಲರೂ ಸತ್ಪುರುಷರಾಗುವದು ಶಕ್ಯವಿರದಿದ್ದರೂ ಪರರ ಸುಖಕ್ಕೆ ಅಡ್ಡಿಮಾಡದೆ ತಾವು ಸುಖದಿಂದ ಇರಬಲ್ಲರು. ಇದಾದರೂ ಸಾಮಾನ್ಯವಲ್ಲ. ಈ ಕಷ್ಟಸಾಧ್ಯವಾದ ಧ್ಯೇಯವನ್ನು ಮುಂದಿಟ್ಟುಕೊಂಡು ನಡೆಯುವವನಿಗೆ ತನ್ನ ಕಲ್ಯಾಣವಾಗುವುದಲ್ಲದೆ ಎರಡನೆಯವರಿಗೂ ಇದರಿಂದ ಕಲ್ಯಾಣವಾಗುವದು.

ಇನ್ನು ಎರಡನೆಯವರ ಮನಸ್ಸನ್ನು ನೋಯಿಸಿ, ಅವರ ಸುಖದ ಮಾರ್ಗದಲ್ಲಿ ಅಡ್ಡಬಂದು ಅವರನ್ನು ಕೆಡವಿ ತಾವು ಎಷ್ಟೇ ಸಂಪತ್ತಿಯನ್ನು ದೊರಕಿಸಿದಾಗ್ಯೂ, ಕೀರ್ತಿಮಾನಗಳನ್ನು ಪಡೆದಾಗ್ಯೂ, ಅಧಿಕಾರದಿಂದ ಮತ್ತರಾದಾಗ್ಯೂ ಅವರಿಗೆ ಇವುಗಳಿಂದ ಸ್ವಲ್ಪಾದರೂ ಸುಖವೆನಿಸದು. ಅವರ ದೇಹವು ಆನಂದದಲ್ಲಿ ಮುಳುಗಿದಾಗ್ಯೂ ಮನವು ಪ್ರಸನ್ನವಾಗಿರದು. ಯಾರ ಮನಸ್ಸು ಸಮಾಧಾನವಿಲ್ಲವೋ ಅವರಿಗೆ ನಿಜವಾದ ಸುಖವು ಪ್ರಾಪ್ತವಾಗಲಾರದು.

ಯಾವಾತನ ಮನಸ್ಸು ಪ್ರಸನ್ನವಿರುವದೋ ಅವನಿಗೆ ವಿಪತ್ತು, ದುಃಖ, ಅಪಮಾನ ಇವುಗಳ್ಯಾವವು ಅವನನ್ನು ಮುಟ್ಟಲಾರವು.

ಯಾವಾತನ ಸಾಧ್ಯವನ್ನು ನಿರ್ಮಲವಿರುವದೋ ಅವನಿಗೇನೇ ಆ ವಸ್ತು ಪ್ರಾಪ್ತವಾದಲ್ಲಿ ಖರೇ ಸುಖವು ಅನಿಸುವದು. ಆದರೆ ಪ್ರಯತ್ನವು ಸುಲಭವೆಂದು ಮಾತ್ರ ತಿಳಿಯಕೂಡದು. ಹೇಗೆ ನಿಮ್ಮ ಧ್ಯೇಯವನ್ನು ನಿರ್ಮಲವಾಗುತ್ತ ಹೋಗುವದೋ ಹಾಗೆ ಅದರ ಸಾಧನ ಮಾರ್ಗವು ಬಿಕ್ಕಟ್ಟಾಗುತ್ತ ಹೋಗುವದು. ಸಾಧಕನು ಜೀವದ ಹಂಗು ತೊರೆದು ಉಪಾಸನೆಮಾಡಬೇಕಾಗುವದು. ಯಾವ ಧ್ಯೇಯವನ್ನುವಲಂಬಿಸಿ ಸಾರ್ವತ್ರಿಕ ಜನರ ಕಲ್ಯಾಣವಾಗುವದೋ ಅದೇ ನಿರ್ಮಲವಾದ ಸಾಧ್ಯವಸ್ತು.

ಮನುಷ್ಯಜಾತಿಯ ಕಲ್ಯಾಣವಾಗಿ ಸುಖಕೊಡುವಂಥ ಮಾರ್ಗಗಳು ಹಲವು ಇರುತ್ತವೆ. ಮಾನವಜೀವನ ರಹಸ್ಯವನ್ನು ಹುಡುಕುವವರು ಈ ಮಾರ್ಗಗಳನ್ನು ಗೊತ್ತುಹಚ್ಚಬೇಕು.

ಪ್ರತಿಯೊಬ್ಬ ತಿಳುವಳಿಕೆಯುಳ್ಳ ಮನುಷ್ಯನು ಈ ರಹಸ್ಯವನ್ನು ತಿಳಿದುಕೊಳ್ಳುವದಕ್ಕೆ ಪ್ರಯತ್ನಪಡಬೇಕು. ಅದರ ಸಲುವಾಗಿ ಹೋರಾಡಬೇಕು. ಅಂದರೇನೇ ಮನುಷ್ಯ ಜನ್ಮಕ್ಕೆ ಒಂದು ಸಾರ್ಥಕವಾಗುವದು.

ಉಣ್ಣುವದು, ತಿನ್ನುವದು, ಕುಣಿದಾಡುವದು ಇತ್ಯಾದಿ ವಿಷಯಗಳನ್ನು ಮನುಷ್ಯರಂತೆ ಪಶು-ಪಕ್ಷಿಗಳು ಕೂಡ ಮಾಡುತ್ತಿರುವವು. ಇವೇ ಕೃತಿಗಳನ್ನೇ ಕೇವಲ ಮನುಷ್ಯನು ಮಾಡುತ್ತ ಹೋದಲ್ಲಿ ಅವನಿಗೆ ಮನುಷ್ಯನೆಂದು ಕರೆಯದೆ ಎರಡು ಕಾಲುಗಳ ಪಶುವೆಂದೇ ಕರೆಯುವದು ಯೋಗ್ಯವೆನಿಸಬಹುದಲ್ಲವೇ?

ಲೋಕಹಿತವಾದಂಥ ಧ್ಯೇಯವನ್ನು ಮುಟ್ಟುವದಕ್ಕೆ ಮನಸಿನ ಧೈರ್ಯವು ಅವಶ್ಯವಿರುವದು. ಮನೋಧೈರ್ಯವು ಆತ್ಮಸಂಯಮನದಿಂದ ಪ್ರಾಪ್ತವಾಗುವದು. ಆತ್ಮಸಂಯಮನವು ಯೋಗ್ಯವಿಚಾರದಿಂದ ದೊರಕುವದು. ಯೋಗ್ಯವಿಚಾರವು ಸತ್ಸಂಗತಿಯಿಂದ ಪ್ರಾಪ್ತವಾಗುವದು.

ಈ ಮೇರೆಗೆ ಇದರ ಪರಂಪರೆಯು ಇರುವದು. ಇದು ಕಷ್ಟಸಾಧ್ಯವಿರುವದಂತೂ ಸರಿಯೇ, ಆದರೆ ಅಸಾಧ್ಯವಲ್ಲ.

ಮುಂದೆ ಬೆಳೆಯುವ ತರುಣರು ಮನುಷ್ಯಜನ್ಮಕ್ಕೆ ಯೋಗ್ಯವೆನಿಸುವ ಇಂಥ ನಿರ್ದೋಷವಾದ ಉದ್ದೇಶವನ್ನು ತಮ್ಮ ಶಕ್ತಿಯಿಂದ ಸಾಧ್ಯಮಾಡಿಕೊಳ್ಳಬೇಕು.

"ಶ್ರೀ. ಪಾರ್ಶೆ."

ನೌಕರಿ ಖರಾರು ಫಾರಮುಗಳು

೧೯೨೬ನೇ ಇಸವಿ ಕೊಡಗಿನ ಕೂಲಿ ಕೆಲಸವನ್ನು ಕುರಿತ ಜಕ್ಟಾ ೧ರ ಮೇರೆ, ಅನುಭವವುಳ್ಳ ಯೂರೋಪಿಯನ್ ಮತ್ತು ಇಂಡಿಯನ್ ಪ್ಲಾಂಟರುಗಳೂ, ರಾಯರುಗಳೂ ಸೇರಿ ತಯಾರಿಸಿರುವ ನೌಕರಿ ಖರಾರು ಫಾರಮುಗಳು ಇಂಗ್ಲಿಷಿನಲ್ಲಿಯೂ ಕನ್ನಡದಲ್ಲಿಯೂ ಪ್ರಿಂಟಾಗಿ ಮಾರಾಟಕ್ಕೆ ತಯಾರಿವೆ. ಬೇಕಾದವರು ಸೆಂಟ್ರಲ್ ಹೈಸ್ಕೂಲಿನ ಬಳಿ ಇರುವ (ಹೊಸ ಗಡಂಗ ಕಟ್ಟಡದ) ನಮ್ಮ ಹೊಸ ಆಫೀಸಿನಲ್ಲಿ ಕೊಂಡುಕೊಳ್ಳಬಹುದು.

ತಾ 24—6—'26, ಮೇನೇಜರ್,
ಮಡಿಕೇರಿ. "ಕೊಡಗು" ಆಫೀಸು.

ವರ್ತಮಾನ ಸಂಗ್ರಹ.

ಒಳದೇಶ

ಕೌನ್ಸಿಲಿನ ಮಲೇರಿಯ ಕಮಿಟಿಯ ಮೀಟಿಂಗು ಜುಲೈ ತಾರೀಕು ೨ರಲ್ಲಿ ಮಡಿಕೇರಿಯಲ್ಲಿ ನಡೆಯಲಿಕ್ಕಿದೆ.

ಮೆ. ಕೆ. ಪಿ. ಚಣ್ಣಪ್ಪನವರ ಮತ್ತು "ಲೋಕಪಾವನ"ದ ಪ್ರಿಂಟರ್ ಮತ್ತು ಪಬ್ಲಿಷರರವರ ಕೇಸು ತಾ. 19ರಲ್ಲಿ ಸ್ವಲ್ಪ ವಿಚಾರಿಸಲ್ಪಟ್ಟು ಈ ತಾ. 30ಕ್ಕೆ ಮುಂದರಿಸಲ್ಪಟ್ಟಿದೆ.

ಈ ವಾರ ಮಳೆಯು ಬಹಳ ಕಡಿಮೆಯಾಗಿ ಬಿಸಿಲು ಕಾಯುತ್ತಿದೆ. ಇದು ಹಲವು ಕಡೆಗಳಲ್ಲಿ ಬಿತ್ತನೆಯ ಕೆಲಸಕ್ಕೆ ಹಗೆಯಾಗಿದೆ.

ರಾವ್‌ಸಾಹೇಬ್ ಬಟ್ಟಿಯಂಡ ಪಿ. ಮುತ್ತಣ್ಣನವರನ್ನು ದಕ್ಷಿಣ ಕೊಡಗಿನ ಅಬ್ಕಾರಿ ಸಬ್ ಇನ್‌ಸ್ಪೆಕ್ಟರಾಗಿ ನೇಮಿಸಿರುವರು. ಮಾಡೆರ ತಿಮ್ಮಯ್ಯನವರು ಅವರ ಹಿಂದಿನ ಉದ್ಯೋಗಕ್ಕೆ ಬರಬೇಕಾಗಿದೆ.

ಮಡಿಕೇರಿ ಮುನ್ಸಿಪಲ್ ಕೌನ್ಸಿಲಿನ ಚುನಾವಣೆಗೆ ನಿಲ್ಲುವ ಉಮೇದುವಾರರೆಲ್ಲರೂ ನಿನ್ನೆ ದಿನ ತಮ್ಮ ಅಪ್ಲಿಕೇಶನು ಗಳನ್ನು ಕೊಟ್ಟಿರುವರು. ಈ ಸಾರಿ ಹಲವು ಹೊಸ ಉಮೇದುವಾರರು ಮುಂದೆ ಬಂದಿರುವದರಿಂದ ಜುಲೈ ತಾ. 15ರಲ್ಲಿ ನಡೆಯಲಿಕ್ಕಿರುವ ಚುನಾವಣೆಯ ಫಲಿತಾಂಶವನ್ನು ಪಟ್ಟಣಿಗರೆಲ್ಲರೂ ಕುತೂಹಲದಿಂದ ಎದುರು ನೋಡುತ್ತಿರುವರು.

ಈ ವರ್ಷದ ಸ್ಕೂಲ್ ಫೈನಲ್ ಪರೀಕ್ಷೆಯಲ್ಲಿ ಮಡಿಕೇರಿ ಸೆಂಟ್ರಲ್ ಹೈಸ್ಕೂಲಿನಿಂದ 34 ವಿದ್ಯಾರ್ಥಿಗಳ ಪೈಕಿ 11 ಹುಡುಗರೂ, ವೀರರಾಜಪೇಟೆ ಹೈಸ್ಕೂಲಿನಿಂದ 22 ವಿದ್ಯಾರ್ಥಿಗಳ ಪೈಕಿ 6 ಹುಡುಗರೂ, ಮಡಿಕೇರಿ ಹುಡುಗಿಯರ ಹೈಸ್ಕೂಲಿನಿಂದ 3 ವಿದ್ಯಾರ್ಥಿನಿಯರಲ್ಲಿ ಒಬ್ಬಳೂ ತೇರ್ಗಡೆಹೊಂದಿರುವರಾಗಿ ತಿಳಿಯಬರುತ್ತದೆ. ಹೆಸರುಗಳು ಬರುವ ವಾರ ಪ್ರಕಟಿಸಲಾಗುವವು.

ಹಿಂದೂದೇಶ.

ಈ ತಾ. 21ರಲ್ಲಿ ಮುಸಲ್ಮಾನರ ಬಕ್ರೀದ್ ಹಬ್ಬವು ಹಿಂದುಸ್ಥಾನದ ಮುಖ್ಯ ಪಟ್ಟಣಗಳಲ್ಲೆಲ್ಲಾ ಏನೊಂದೂ ಗಲಾಟೆಯಿಲ್ಲದೆ ನಡೆಯಿತು.

ಬಂಗಾಳ ಸ್ವರಾಜ್ಯಪಾರ್ಟಿಯಲ್ಲಿ ಎರಡು ಪಂಗಡಗಳುಂಟಾಗಿವೆ. ಮಿ. ಸೆನ್‌ಗುಪ್ತರವರ ಪಾರ್ಟಿಯನ್ನು ವಿರೋಧಿಸಿ ಕೆಲವು ಮುಂದಾಳುಗಳು ಒಂದು ಪ್ರಕಟಣೆಯನ್ನು ಹೊರಡಿಸಿರುವರು.

ಕರ್ನಾಟಕ ಪತ್ರಿಕಾ ಸಂಪಾದಕರ ಸಂಘದವರು ಮೈಸೂರಲ್ಲಿ ಸಭೆಸೇರಿ ತಿರುವಾಂಕೂರಿನ "ಪ್ರೆಸ್ ರೆಗ್ಯುಲೇಶನನ್ನು" ಖಂಡಿಸಿ ಠರಾವು ಮಾಡಿ ಅಲ್ಲಿಯ ಸೆಕ್ರೆಟರಿಯವರಿಗೆ ಕಳುಹಿಸಿರುವರು.

ಬ್ರಹ್ಮಸಮಾಜದವರು ಹಿಂದೂಗಳೋ ಅಲ್ಲವೋ ಎಂಬ ಸಂಗತಿಯು ಕಲ್ಕತ್ತೆಯ ಆಲೀಪುರ ಕಚೇರಿಯಲ್ಲಿ ವಿಚಾರ ನಡೆಯಿತು. ಅವರು ಹಿಂದೂಗಳೆಂದು ಅಲ್ಲಿ ತೀರ್ಮಾನವಾಗಿದೆ.

ತಾ. 11—6—26ರಲ್ಲಿ ಮೈಸೂರು ಪ್ರಜಾಪ್ರತಿನಿಧಿಸಭೆಯಲ್ಲಿ ದಿವಾನರಾದ ಮಿ. ಮಿರ್ಜಾ ಎಂ. ಇಸ್ಮಾಯಿಲರವರು ಮಾಡಿದ ಸ್ವಾರಸ್ಯವಾದ ಭಾಷಣದಲ್ಲಿ 'ದಿವಾನ್ ಪದವಿಯು ಅಧಿಕಾರವೆಂಬುದಕ್ಕಿಂತ ಹೆಚ್ಚಾಗಿ ದೇಶಸೇವಾ ದೀಕ್ಷೆಯೆಂದು ನಾನು ತಿಳಿದುಕೊಂಡಿದ್ದೇನೆ' ಎಂದು ಹೇಳಿದರು.

ಮೈಸೂರು ಮಹಾರಾಜ ಕಾಲೇಜಿನ ಪ್ರಿನ್ಸಿಪಲರಾದ ಮಿ. ಎನ್. ಎಸ್. ಸುಬ್ಬರಾಯರವರು ತಿಂಗಳಿಗೆ 3000 ರೂ. ಸಂಬಳದಲ್ಲಿ ಟ್ಯಾರಿಫ್ ಬೋರ್ಡಿನ ಮೆಂಬರಾಗಿ ನೇಮಿಸಲ್ಪಟ್ಟಿರುವರು. ಅವರ ಬದಲು ಮಿ. ಎ. ಪಿ. ಮೆಕೆಂಟಾಷ್‌ರವರು ಪ್ರಿನ್ಸಿಪಾಲರ ಕೆಲಸವನ್ನು ನೋಡುವರು.

ರಾಹ್ತಕ್ ಡಿಸ್ಟ್ರಿಕ್ಟಿನ ಒಂದು ಗ್ರಾಮದಲ್ಲಿ ಒಬ್ಬ ಜಾಟಗಿಯ ಹೆಂಡತಿಯು ಒಂದು ವಿಕಾರ ಮಗುವನ್ನು ಹೆತ್ತಳಂತೆ. ಆ ಮಗುವಿನ ಮುಖವು ಕರಡಿಯ ಮೂತಿಯಂತೆಯೂ, ನಾಲಿಗೆಯು ಕುತ್ತಿಗೆಗೆ ಅಂಟಿಕೊಂಡೂ, ಕಿವಿಗಳು ಕತ್ತೆಯ ಕಿವಿಗಳಂತೆ ಉದ್ದವಾಗಿಯೂ ಇದ್ದವಂತೆ. ಹತ್ತು ಕೆಲವು ಗಂಟೆಗಳಲ್ಲಿಯೇ ಅದು ಮೃತವಾಯಿತೆಂದು ವರ್ತಮಾನ.

ಅನ್ನಾಮಿನ ಒಬ್ಬ ಮುಂದಾಳಾದ ಮಿ. ಜೆ. ಪೂಕನ್‌ರವರು ತಾ. 21ರಲ್ಲಿ ಮುನ್ಸಿಪಾಲಿಟಿ ಮೀಟಿಂಗಿನಲ್ಲಿ ಭಾಷಣ ಮಾಡುತ್ತಿರುವಾಗ ಮೂರ್ಛಿತರಾಗಿ ಬಿದ್ದರು. ಅವರನ್ನು ಮನೆಗೆ ತೆಗೆದುಕೊಂಡುಹೋದ ಕೂಡಲೆ ಅಲ್ಲಿ ಮೃತರಾದರು. ಅವರಿಗೆ 94ವರ್ಷ ಪ್ರಾಯವಾಗಿದ್ದರೂ ಚಟುವಟಿಕೆಯಿಂದ ಕೆಲಸಮಾಡುತ್ತಿದ್ದರು.

ಮೈಸೂರಿನ ಮಾಜಿ ದಿವಾನರಾದ ಸರ್. ಎ. ಆರ್. ಬ್ಯಾನರ್ಜಿಯವರು ಸಿಂಗಪುರಕ್ಕೆ ಹೋಗಿರುವರು. ಅಲ್ಲಿಂದ ಅವರು ಬೇಗನೆ ಜಪಾನಿಗೂ ಅಮೇರಿಕದ ಸಂಯುಕ್ತ ಸಂಸ್ಥಾನಕ್ಕೂ ಹೋಗಲಿಕ್ಕಿರುವರಂತೆ. ಇವೆರಡು ದೇಶಗಳ ರಾಜಕೀಯ ಬೆಳವಣಿಗೆಯಲ್ಲಿ ಇವರಿಗೆ ಬಹಳ ಹಿತ. ಬರುವ ಚುನಾವಣೆಯಲ್ಲಿ ಪ್ರೆಸಿಡೆನ್ಸಿ ಕಾಮನ್ಸ್ ಪಾರ್ಲಿಮೆಂಟಿನ ಮೆಂಬರತನಕ್ಕೂ ಉಮೇದುವಾರರಾಗಿ ನಿಲ್ಲುವರಂತೆ.

ವಿದೇಶ.

ಫ್ರಾನ್ಸಿನ ಹೊಸ ಮಂತ್ರಿಮಂಡಳಿಯನ್ನು ಏರ್ಪಡಿಸಲು ಮಿ. ಬ್ರಿಯಂಡ್‌ರವರು ಒಪ್ಪಿಕೊಂಡಿರುವರು. ಮಿ. ಪಾಯಿಂಕರೆಯವರು ಆ ಮಂಡಳಿಯಲ್ಲಿರಲು ಒಪ್ಪಿರುವರಂತೆ.

ಈಗಿನ ವೈಸರಾಯರಾದ ಲಾರ್ಡ್ ಇರ್ವಿನ್‌ರವರ ತಂದೆ ಲಾರ್ಡ್ ಹಾಲಿಫಾಕ್ಸರವರು ತಮ್ಮ 87ನೇ ವಯಸ್ಸಿನಲ್ಲಿದ್ದರೂ ಈ ವರ್ಷದ ಆಸ್ಟೈರಿನಲ್ಲಿ ಅವರು ಇಂಡಿಯಾಕ್ಕೆ ಬರುವ ಏರ್ಪಾಡು ಮಾಡುತ್ತಿರುವರಂತೆ.

ಪೆಕಿಂಗ್ ಪಟ್ಟಣದಲ್ಲಿ ಒಬ್ಬ ಯೂರೋಪಿಯನ್ ಸ್ತ್ರೀಯನ್ನು ಒಬ್ಬ ಚೈನೀಯನು ರಿಕ್ಷಾ ಗಾಡಿಯಿಂದ ಎಳೆದು ಕೆಳಗೆಹಾಕಿ ಅವಳ ಕುತ್ತಿಗೆಯನ್ನು ಹಿಸುಕಲಿಕ್ಕೆ ಪ್ರಯತ್ನಿಸುವಲ್ಲಿ ಹತ್ತಿರ ಇದ್ದ ಜನರು ಅವಳನ್ನು ಬಿಡುಗಡೆಮಾಡಿ ಅವನನ್ನು ಪೋಲೀಸಿನ ವಶಮಾಡಿದರು. ಅಂದಿನಿಂದ ಪರದೇಶಸ್ಥರನ್ನು ತೊಂದರೆಪಡಿಸುವ ಚೈನೀಯರನ್ನು ಅಲ್ಲಿಯೇ ಗುಂಡು ಹೊಡೆಯಲಾಗುವುದೆಂದು ಅಧಿಕಾರಿಗಳು ಪ್ರಕಟಿಸಿರುವರು.

COORG FOREST DEPARTMENT, SOUTH DIVISION.

NOTICE

Mercara, Dated 16—6—1926.

Ford Lorry in good running order will be sold by public auction at Virajpet, Coorg, on 7—7—1926 commencing at 12 noon.

For further particulars apply to the DIVISIONAL FOREST OFFICER, SOUTH COORG, MERCARA.

ಪತ್ರವ್ಯವಹಾರ

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ಪತ್ರಿಕಾಕರ್ತರು ಜವಾಬ್ದಾರರಲ್ಲ. ಸಂ.]

599

ಓದು ಕಲ್ಮಿ ಆರುನೂರು. ಈಗ ಸುಮಾರು ಮೂರು ವಾರಗಳ ಹಿಂದೆ ವೀರರಾಜಪೇಟೆ ಆಸ್ಪತ್ರೆಗೆ ಔಷಧಿಗಾಗಿ 599 ಮಂದಿ ಬೆಳಿಗ್ಗೆ ಮತ್ತು ಸಾಯಂಕಾಲದ 5 ಗಂಟೆ ಹೊತ್ತಿನಲ್ಲಿ ಬಂದು ಔಷಧಿ ತೆಗೆದುಕೊಂಡು ಹೋದರಂತೆ. ಅಲ್ಲಿಯ ಆಸ್ಪತ್ರೆಗೆ 3 ಡಾಕ್ಟರುಗಳೂ 3 ಕಂಪೌಂಡರುಗಳೂ ಇರುವದು ಸ್ತೋತ್ರಾರ್ಹವಾಗಿದೆ. ಈ ಮೂರು ಡಾಕ್ಟರುಗಳು ಒಟ್ಟು ಕೆಲಸ ಮಾಡುವ 15 ಗಂಟೆಯಲ್ಲಿ ಸದ್ಯಕ್ಕೆ ಎರಡು ಗಂಟೆ ವಾರ್ಡುಗಳಲ್ಲಿನ ಕಾಯಿಲಗಾರರನ್ನು ನೋಡಲಾಗಿ ಉಳಿದ 13 ಗಂಟೆಗಳಲ್ಲಿ ಮೂವರು ಡಾಕ್ಟರುಗಳು ಕಾಯಿಲಗಾರರ ಹೆಸರು, ವಯಸ್ಸು, ಗ್ರಾಮ ಇತ್ಯಾದಿಗಳನ್ನೂ ಔಷಧಿ ಚೀಟಿಗಳನ್ನು ಬರಿಯುವುದಕ್ಕಾಗಿಯೂ ಏನೆಂದರೂ ಅರ್ಧಸಮಯವೆಂದರೆ 6½ ಗಂಟೆ ಹೋಗಿ ಉಳಿಕೆಯ 6½ ಗಂಟೆ ಕಾಲದಲ್ಲಿ 600 ಜನ ಕಾಯಿಲಗಾರರನ್ನು ಪರೀಕ್ಷಿಸಿ ನೋಡುವದೆಂದರೆ ಹೆಚ್ಚು ಕಮ್ಮಿ ಬೇರೆ ಯಾವ ಕೆಲಸಕ್ಕೂ ತಮ್ಮ ಸಮಯವನ್ನು ವಿನಿಯೋಗಿಸದೆ ಹೋದರೆ 2ಮಿನಿಟಿಗೆ 3ಜನ ಕಾಯಿಲಸ್ಥರನ್ನು ಪರೀಕ್ಷಿಸುವದೆಂದಾಯಿತು. ಪರೀಕ್ಷಿಸುವದೇನು? ಕಾಯಿಲಸ್ಥನು ಡಾಕ್ಟರೊಂದಿಗೆ ಹೇಳಲು ಯೋಚಿಸಿಕೊಂಡು ಬಂದದ್ದನ್ನೆಲ್ಲಾ ಕಾವೇರಿ ಜಾತ್ರೆಯಲ್ಲಿ ಬ್ರಾಹ್ಮಣರು ಸಂಕಲ್ಪ ಹೇಳುವಂತೆ ಒಂದೇ ಸನಿಸೆ ಹೇಳಿ ಬಿಡುವದು. ಅದು ಡಾಕ್ಟರ ಕಿವಿಗೆ ಬಿದ್ದರೂ ಬೀಳದಿದ್ದರೂ ಸರಿ, ಹೇಳುವದು ಹೇಳಿಯೇ ಬಿಡುವದು. ಡಾಕ್ಟರು ಮಾತ್ರ ಅದರ ಮಧ್ಯ ಮಧ್ಯ ಕಾಯಿಲಸ್ಥನ ಹೆಸರು ವಯಸ್ಸು, ಗ್ರಾಮಗಳನ್ನು ಕೇಳುವದರಿಂದ ತನಗೇ ಔಷಧಿಕೊಡುತ್ತಾರೆಂಬುದು ಕಾಯಿಲಸ್ಥನಿಗೆ ಕಂಡಹಾಗಾಯಿತು. ಆದರೆ ಡಾಕ್ಟರುಗಳು ಮಾಡುವದೇನು? ಹಾಗೆ ಮಾಡದೆ ನಿರ್ವಾಹವಿಲ್ಲ. ಬರುವ ಕಾಯಿಲಗಾರರನ್ನು ಪರೀಕ್ಷಿಸಲು ತೊಡಗಿದರೆ ಇಡೀ ದಿನ ಕೂತು ಔಷಧಿಕೊಟ್ಟರೂ ತೀರದು.

ಈ ಮೊದಲು ಕೊಡಗು ಪತ್ರಿಕೆಯಲ್ಲಿ ಒಬ್ಬರು ಸೂಚಿಸಿದಂತೆ ಕಾಯಿಲಸ್ಥರ ಹೆಸರು, ಗ್ರಾಮಗಳನ್ನೂ ಔಷಧಿಗಳನ್ನೂ ಬರಿಯುವದಕ್ಕೂ ಒಬ್ಬೊಬ್ಬ ಡಾಕ್ಟರುಗಳಿಗೆ ಒಬ್ಬೊಬ್ಬ ಕ್ಲಾರ್ಕುಗಳನ್ನು ಸದ್ಯ ಪರೀಕ್ಷಾರ್ಥವಾಗಿಯಾದರೂ ಕಾಮಿನು ಕಾಯಿದೆಗಳನ್ನು ಲಕ್ಷಿಸದೆ ವೀರರಾಜಪೇಟೆಗೆ ಆಸ್ಪತ್ರೆಗೆ ಕೊಟ್ಟು ಮೂರು ಡಾಕ್ಟರುಗಳೂ ಬೇರೆ ಬೇರೆಯಾಗಿ ಕಾಯಿಲಸ್ಥರನ್ನು ಪರೀಕ್ಷಿಸುವಂತೆಯೂ ಮೂವರು ಕಂಪೌಂಡರುಗಳು ಬೇರೆ ಬೇರೆ ಮೂರು ಬಾಗಿಲುಗಳಿಂದ ಔಷಧಿಕೊಡುವಂತೆಯೂ ಅಲ್ಲದೆ ವೀರರಾಜಪೇಟೆ ಆಸ್ಪತ್ರೆಯಲ್ಲಿ ಗಂಡಸರಿಗೆ ಔಷಧಿಕೊಡುವ ಚಿಕ್ಕ ಕಿಟಕಿಯಲ್ಲಿ ಹೆಚ್ಚಿನ ಕಾಯಿಲಸ್ಥರಿಗೂ ಹುಡುಗರಿಗೂ ಔಷಧಿ ತೆಗೆದುಕೊಳ್ಳುವದು ಜನರ ನುಗ್ಗುವಿಕೆಯಿಂದ ಅಸಾಧ್ಯ. ಆದ್ದರಿಂದ ಕಿಟಕಿಯ ಮುಂದುಗಡೆ ಕಿಟಕಿಯು ಕೈಗೆ ಎಟುಕುವಷ್ಟು ದೂರದಲ್ಲಿ ಅರ್ಧಚಂದ್ರಾಕಾರವಾಗಿ ಎರಡು ಕಡೆಯೂ ಗೋಡೆಗೆ ಮುಟ್ಟುವಂತೆ ಹೆಚ್ಚು ಕಮ್ಮಿ 3—4 ಅಡಿ ಎತ್ತರದ ಬೇಲಿಯಂತೆ ಹಾಕಿಸಿದರೆ ಔಷಧಿ ತೆಗೆದುಕೊಳ್ಳುವವರಿಗೆ ತುಂಬಾ ಅನುಕೂಲವೂ ಆಗುವದರಿಂದ ಈ ಸಂಗತಿಗಳಿಗೆ ಅಧಿಕಾರಿಗಳು ಒಡನೆ ನಿಗಕೊಡಬೇಕಾಗಿ ಬೇಡುವ.

ಯೂದಪ್ಪ.

ನೋಟೀಸ್.

ಒಳಗಡೆ 10 ಅಂಗುಲ ಉದ್ದವಾಗಿಯೂ 10 ಅಂಗುಲ ಅಗಲವಾಗಿಯೂ ಮತ್ತು 7½ ಅಂಗುಲ ಎತ್ತರವಾಗಿಯೂ ಮೊದಲು ಸರಕಾರದವರು ಹೊರಪಡಿಸಿದ ಸರೆಗೆ ಅನುರೂಪವಾಗಿ ಒಂದು ಸರೆಯನ್ನು ಸ್ಟೇಂಡರಡಾಗಿ ಮಾಡಲು ಆಲೋಚನೆಯಲ್ಲಿದೆ. ಈ ಸರೆಯನ್ನು ಹೊಡೆದಾಗ ಒಳಗಡೆ 10 ಅಂಗುಲ ಆಳವಾಗಿಯೂ 3½ ಅಂಗುಲ ಅಡ್ಡಗಲವಾಗಿಯೂ ಇರುವ ಬರ್ತಮಾಡಿದ ಹತ್ತು ಸ್ಟೇಂಡರಡ್ ಸೇರು ಹಿಡಿಯುವುದು. ಈ ಸರೆ ಸಮಕೋನಾರೂಪವಾಗಿರುವುದು. ಮತ್ತು ಮರದಿಂದ ಮಾಡಲ್ಪಟ್ಟಿರುವುದು. ಇದರ ಒದಿಯಲ್ಲಿ ಎರಡು ಹಿಡಿಗಳೂ ಅದರಗಿನಲ್ಲಿ ಹಿತ್ತಾಳೆ ಪಟ್ಟಿಗಳೂ ಇರುವವು.

2. ನಮೂನೆ ಸರೆಯನ್ನು ವೀರರಾಜೇಂದ್ರಪೇಟೆ ತಾಲೋಕು ಆಫೀಸಿನಲ್ಲಿಯೂ, ಮಡಿಕೇರಿ ಖಜಾನೆಯಲ್ಲಿಯೂ ನೋಡಬಹುದು.

3. 1926ನೇ ಇಸವಿ ಜುಲೈ ತಾರೀಕು 15ರ ಒಳಗೆ ಸಿಕ್ಕುವ ಆಕ್ಷೇಪ ಮತ್ತು ಸೂಚನೆಗಳು ಆಲೋಚಿಸಲ್ಪಡುವವು.

ತಾ. 1—5—'26. T. J. TASKER,
Commissioner

ಕಿರ್ಲೋಸ್ಕರ ಪೇಟೆಂಟ ನುಲ್ಲಾರ ತಪ್ಪಲಿ.



ಈ ತಪ್ಪಲಿಯು ನಮ್ಮ ಕಾರಖಾನೆಯಲ್ಲಿಯೇ ತಯಾರಾಗುತ್ತದೆ. ಸರಕಾರದಿಂದ ಇದಕ್ಕೆ ಪೇಟಂಟ ದೊರೆತ್ತಿರುತ್ತದೆ. ಇದರಮುಖ್ಯ ಗುಣಗಳು:—

೧. ನೀರನ್ನು ಮುಟ್ಟಿದ ಕೂಡಲೇ ತುಂಬಿ ಒರುವದು.

೨. ಮೇಲಕ್ಕೆ ಬರುವಾಗ್ಗೆ ಒಂದು ಹನಿ ಸಹ ನೀರು ಸೋರುವದಿಲ್ಲ.

೩. ದೋಣಿಯಲ್ಲಿ ನೀರು ಬೀಳುವಾಗ್ಗೆ ತೊಗಲಿನ ತಪ್ಪಲಿಯಂತೆ ಏತ್ತಸವಿದೆ ಹೋಗುವದಿಲ್ಲ.

ಬೆಲಬಹು ಅಗ್ಗ. ಹೆಚ್ಚಿನ ಸಂಗತಿ ಬಗ್ಗೆ ಬರೆದು ತಿಳಿದುಕೊಳ್ಳಿರಿ.

ಕಿರ್ಲೋಸ್ಕರ ಬಂಧು, ಲಿಮಿಟೆಡ್.
ಕಿರ್ಲೋಸ್ಕರವಾಡಿ,

16—3 ಜಿ. ಸಾತಾರ್.

ಮರ್ಗ ಲೈಯಿಟು ಸೋಪು.

ಈ ಸೋಪನ್ನು ಕೂದಲುಗಳಿಗೆ ಒಂದೇ ಒಂದು ನಿಮಿಷ ಹಾಕಿದರೆ ಕತ್ತಿಯಿಂದ ಕ್ಷೌರ ಮಾಡಿಸಿ ಕೊಂಡದ್ದಕ್ಕಿಂತಲೂ ಚೆನ್ನಾಗಿ ಚರ್ಮಕ್ಕೆ ಯಾವತೊಂದರೆಯೂ ಇಲ್ಲದೆ ಕೂದಲನ್ನು ತೆಗೆದುಬಿಡುವುದು.

ನಮ್ಮ ಮರ್ಗಲೈಟ್ ಸೋಪ್, ಗಂಧೆ, ಮಾಡವು, ಬಿಚ್ಚಿ, ತುರಿ, ನವೆ, ಮುಂತಾದುವುಗಳನ್ನು ಕ್ಷಣಮಾತ್ರದಲ್ಲಿ ಹೋಯಮಾಡುವುದು.

3 ಸಾಮಾನುಗಳನ್ನು ಪೆಟ್ಟಿಗೆ 1ಕ್ಕೆ ರೂ. 0—10—0

ರೇಷ್ಮೆ ವಸ್ತ್ರ.

5 ಮೊಳ ಉದ್ದ 2½ ಮೊಳ ಅಗಲ ಇರುವದು.

ಈ ವಸ್ತ್ರಗಳನ್ನು ರೇಷ್ಮೆಯಿಂದ ಮಾಡಿದೆ ನೋಡಲಿಕ್ಕೆ ಬಹು ಚೆನ್ನಾಗಿರುವವು. ಚಿಕ್ಕವರೂ ದೊಡ್ಡವರೂ ಸಹ ಉಪಯೋಗಿಸಬಹುದು. ಕೆಂಪು, ರೋಜಾ, ನೀಲಿ, ಹಸರು ಮುಂತಾದ ಬಣ್ಣಗಳಲ್ಲಿ ಇರುವವು. ಇವು ವಿಲಾಯಿತಿಯಲ್ಲಿ ತಯಾರಾದವು. ಇದರ ಸುತ್ತಲೂ ನೋಡಲಿಕ್ಕೆ ಚೆನ್ನಾಗಿರುವಂತೆ ಹುಪ್ಪಿನ ಕುಚ್ಚುಗಳು ಇರುವವು.

ಕ್ರಯ 1ಕ್ಕೆ ರೂ 3—8—0

ವಿಳಾಸ:—ಎಸ್. ಪಾಲ್ ಅಂಡ್ ಕೊ,
ಪಿ ಬ ನಂಬರ್. 542,

12—8. ಕೊ. ಮ. ಪಾರ್ಕ್‌ಟೌನ್ ಮದ್ರಾಸು

ಒಂದು ಪ್ರಬಲವಾದ ಪ್ರಶ್ನೆ.

ನಮ್ಮ ಜೀವವನ್ನು ಏತಕ್ಕಾಗಿ ವಿಮೆಮಾಡಬೇಕು!

ವೃದ್ಧಾಪ್ಯದಲ್ಲಿ ನಮ್ಮ ಮತ್ತು ಹೆಂಡತಿ ಮಕ್ಕಳ ಪೋಷಣೆಗಾಗಿ!

ಈಗಾಗಲೇ ಸಾವಿರಾರು ಜನರು ವಿಮೆಮಾಡಿರುವ ಏಳುಕೋಟಿ ರೂಪಾಯಿಗಿಂತ ಹೆಚ್ಚು ಬಂಡವಾಳವಿರುವ ದೇಶೀಯ ವಿಮೆಕಂಪನಿಯಲ್ಲಿ ಅತ್ಯಂತ ದೊಡ್ಡದಾದ ಸಾವಿರ ರೂಪಾಯಿ ವಿಮೆಮಾಡಿದವರಿಗೆ ವರ್ಷಕ್ಕೆ 18ರೂ. ಕಡಿಮೆಯಿಲ್ಲದೆ ಲಾಭ ಕೊಡುವ '**ಓರಿಯಂಟಲ್**' ಗವರ್ನ್‌ಮೆಂಟ್ ಜೀವವಿಮೆ ಕಂಪನಿಯ ರೂಲ್ಸಗೂ, ಶರತಿಗೂ ಈ ಕೆಳಗಿನವರಿಗೆ ಬರೆದು ತಿಳಿದುಕೊಳ್ಳಿ.

ಖಾದಿಬಟ್ಟೆ ಎಂದರೇನು?

ದೇಶೀಯ ಹತ್ತಿಯಲ್ಲಿ ಕೈರಾಟೆಯಿಂದ ನೂಲು ತೆಗೆದು ಇಲ್ಲಿಯೇ ತಯಾರಿಸುವ ಬಟ್ಟೆಯೇ 'ಖಾದಿ.' ಈಗಾಗಲೇ ನಮ್ಮ ಸ್ಟೋರಿನಲ್ಲಿ ಪರದೇಶೀಬಟ್ಟೆಗಿಂತ ಗಟ್ಟಿಯಲ್ಲಿಯೂ ಅಂದದಲ್ಲಿಯೂ ಕಡಿಮೆ ಇಲ್ಲದಂತ, ಎಲ್ಲಾ ತರದ ಸೀರೆಗಳು ಚೆಕ್ಕುಗಳು, ಶಾಲು ವಗ್ಯೆರೆ ಎಲ್ಲಾ ತರದ ಬಟ್ಟೆಯು ತಯಾರಾಗಿದೆ. ಸಹಾಯಮಾಡಿ ಪ್ರೋತ್ಸಾಹಿಸಿರಿ! ಖಾದಿಯಿಂದಲೇ ಸ್ವರಾಜ್ಯ. ಖಾದಿಯಿಂದಲೇ ಮೋಕ್ಷವೆಂಬುದನ್ನು ಮರೆಯ ಬೇಡಿರಿ.

ವೀರಾಜಪೇಟೆ, ಕೆ. ಪಿ. ಚಿಣ್ಣಪ್ಪ,
ದಕ್ಷಿಣ ಕೊಡಗು. ಪ್ರೊಪ್ರೈಟರ್,
ಖಾದಿಭಂಡಾರ

52—13.

ವಿಶೇಷದ ಮಾರಾಟ!

ಉಚಿತ! ಪಾಕೆಟ್ ವಾಚ್! ಉಚಿತ!



18 ಕ್ಯಾರಟ್ ರೋಲ್ಡ್‌ಗೋಲ್ಡ್ ಪ್ಲೇಟ್ ಚಿನ್ನದ ಮುಖ ಪಳ್ಳೆಯಿರುವ ಲಾಂಗೈ ಗಡಿಯಾರ ನಂ. 100.

ಇದು ಅತ್ಯಂತ ಹೊಸ ಮಾದರಿದು, ಸುಂದರವಾದ ಆಕಾರ, ಸೊಗಸಾದ ಕಲಸ, ಸ್ವಿಸ್ ಮೇಡ್, ಮುಖ ಪಳ್ಳಿಯು ದಶಭಾಗ ಹೊಳಪುಳ್ಳ ಉಕ್ಕಿನಿಂದ ಆಕರ್ಷಿಸುತ್ತದೆ. 10 ವರ್ಷ ಮತ್ತು ಹೆಚ್ಚಿಗೆ ಬೆಲೆಯಿರುವ ಉತ್ಕೃಷ್ಟ ವಾಚಿನಂತೆ ಕಾಣುತ್ತದೆ. ಸುಂದರವಾಗಿಯೂ ಚಿಕ್ಕದಾಗಿಯೂ ಇದೆ. ಗಂಡಸರಿಗೂ ಹೆಂಗಸರಿಗೂ ಉಪಯೋಗಿಸಲು ಅನುಕೂಲವಿರುವ ಅತ್ಯುತ್ತಮ ವಾಚು. ಯಾವ ಹವದಲ್ಲಾದರೂ ಸರಿಯಾದ ಟೈಮ್ ಕೊಡುವ ವಾಚ್. ಮೂರು ವರ್ಷಗಳ ಗ್ಯಾರಂಟಿ ಕೊಡಲಾಗುತ್ತೆ. ಯಾವ ಆಕಾರದ್ದಾದರೂ ಒಂದು ವಾಚನ್ನು ಒಂದು ತಿಂಗಳೊಳಗೆ ಕೊಂಡುಕೊಂಡವರಿಗೆ ನಿಕಲ್ ಪಾಕೆಟ್ ವಾಚ್ ಒಂದು ಉಚಿತವಾಗಿ ಕೊಡಲಾಗುತ್ತದೆ. ಕ್ರಯ 8-0-0.

OVERSEAS SWISS WATCH CO.
POST BOX. No. 371,
Mount Road, MADRAS.

ಇಮಿಟೇಷನ್ ವಜ್ರದ ಉಂಗುರಗಳು.
(White Imitation Kammals.)

ಈ ಉಂಗುರಗಳನ್ನು ಒಂದು ವಿಧವಾದ ಲೋಹದಿಂದ ಮಾಡಿ ಭಂಗಾರದಂತೆ ಗಿಲೀಟುಮಾಡಿದೆ. ಮೇಲು ಭಾಗದಲ್ಲಿ ಕೆಂಪು, ಹಸರು ಮುಂತಾದ ಇಮಿಟೇಷನ್ ವಜ್ರದ ಕಲ್ಲುಗಳು ಇಟ್ಟು ಕಟ್ಟಿದ ಕಟ್ಟಿರುವದು ನೋಟಕ್ಕೆ ನಿಜವಾದ ವಜ್ರದ ಉಂಗರನೆಂದೇ ಹೇಳಬೇಕು. ಬೇಕಾದವರು ಬೆರಳಿನ ಅಳತೆಯನ್ನು ಕಳುಹಿರಿ.

ಕ್ರಯ 1ಕ್ಕೆ 2—0—0, 7ಕಲ್ಲಿನ ಬಿಳಿ ಕಮ್ಮಲು 2—8—0,
ಕ್ರಯ 3ಕ್ಕೆ 5—8—0. 7ಕಲ್ಲಿನ ಕೆಂಪು ಕಮ್ಮಲು 3—0—0.

P K. Sawmy &Co,
No 17 Evening Bazaar,
Madras.

52-8

ಇಮಿಟೇಷನ್ ರೇಷ್ಮೇ ಸೀರೆಗಳು.

ಈ ಸೀರೆಗಳು 18ಮೊಳ, ಉದ್ದ ಪೂರ್ತಿಮೊಳ ಅಗಲವೂ ಇವೆ. ಈ ಸೀರೆಗಳನ್ನು ಹೊಸನಾದ ಇಮಿಟೇಷನ್ ಸಿಲ್ಕ್ ಗಟ್ಟಿದಾರದಿಂದ ತಯಾರಿಸಿದೆ. ಇದು ನೋಡಲಿಕ್ಕೆ ಜಾಸ್ತಿ ಕ್ರಯದ ಸೀರೆಗಳಂತೆ ಕಾಣುವದಲ್ಲದೆ ಅಂದವಾದ ರಂಗೂ, ಸುಂದರವಾದ ಸಾಚಾ ರೇಷ್ಮೆಯ ಸೆರಗೂ ಇರುವದು. ಈ ಮಾದರಿ ಸೀರೆಗಳು ಬೇರೆ ಎಲ್ಲಿಯೂ ಈ ಕ್ರಯಕ್ಕೆ ಸಿಕ್ಕಲಾರದು. ಈ ಸೀರೆಗಳು ಶ್ರೀಮಂತರೂ, ಗರೀಬರೂ, ಉಪಯೋಗಿಸಬಹುದಾದ್ದರಿಂದ ಕೆಲವನ್ನು ಮಾತ್ರ ತಯಾರಿಸಿರುತ್ತೇವೆ. ಆದ್ದರಿಂದ ಬೇಗನೆ ತರಿಸಿಕೊಳ್ಳುವವರಿಗೆ ಮಾತ್ರ ಸಿಕ್ಕುವವು.

ಕ್ರಯ ಸೀರೆ 1ಕ್ಕೆ ನಂ 1. ರು. 6—8—0
" ನಂ 2. ರು 7—8—0

ವಿಳಾಸ.—ಮಹರಾಜ ಟ್ರೇಡಿಂಗ್ ಕಂಪನಿ,
16 ತಿರುಪಳ್ಳಿ ಬೀದಿ,
ಮದರಾಸು.

ಈಗಲೇ ಪ್ರಿಂಟಾಗಿದೆ! ಶೃಂಗಾರವಾದ ಪುಸ್ತಕ!!

ಸ್ತ್ರೀ ಪುರುಷರ ಪ್ರೀತಿಯ ಮರ್ಮಗಳನ್ನು ಚಿತ್ರಪಟಗಳ ಸಹಿತ ತಿಳಿಸುವ

ಮನ್ಮಥ ಶಾಸ್ತ್ರ.

ಫ್ರೆಂಚ್ ಭಾಷೆಯಲ್ಲಿ ಇದ್ದದನ್ನು ಸುಲಭ ಶೈಲಿಯಲ್ಲಿ ಕನ್ನಡ ಭಾಷೆಗೆ ಭಾಷಾಂತರಿಸಿರುತ್ತೇವೆ. ಸ್ತ್ರೀಪುರುಷರುಗಳಿಗೆ ಬೇಕಾದ ಎಲ್ಲಾ ಮರ್ಮ ರಹಸ್ಯಗಳು, ರತಿ ಮನ್ಮಥನು ಆನಂದವಾಗುವದಕ್ಕೆ ಬೇಕಾದ ಉಪಾಯಗಳು, ಸ್ತ್ರೀ ಪುರುಷರ ಜಾತಿಯ ಲಕ್ಷಣಗಳು, ಗರ್ಭಧರಿಸುವದು, ಶಿಶು ಉತ್ಪತ್ತಿವಿಧ, ಗುಪ್ತ ವೈದ್ಯ, ಶಯನ ಗೃಹದ ಸೇಯಮಗಳು, ಇನ್ನೂ ಸ್ತ್ರೀಪುರುಷರಿಗೆ ಬೇಕಾದ ಲೀಲ ರಹಸ್ಯಗಳು ತುಂಬಿದೆ. ಈ ಶೃಂಗಾರವಾದ ಪುಸ್ತಕವನ್ನು ತರಿಸಿ ಆನಂದ ಹೊಂದುತ್ತಾರೆಂದು ನಂಬಿರುತ್ತೇವೆ. ಪಟಗಳ ಸಹಿತ ಕ್ರಯ ಪುಸ್ತಕ 1ಕ್ಕೆ ರೂ. 1—0—0

ವಿಳಾಸ.—ಟಿ ರಾಮಚಂದ್ರರಾವ್ ಕಂಪನಿ,

52—27 ಪೋಸ್ಟ್ ಬಾಕ್ಸ್ ನಂ. 232, ಮದರಾಸ್.

ನೈಟ್ರೇಟ್ ಆಫ್ ಸೋಡಾ

ಎಲ್ಲಾ ಬೆಳೆಗಳಿಗೂ ಅತ್ಯುತ್ತಮವಾದ ಗೊಬ್ಬರ

Nitrate of Soda 15-16 per cent. N

ಈ ಗೊಬ್ಬರದಲ್ಲಿ ಬೆಳೆಗಳಿಗೆ ಅತ್ಯಗತ್ಯವಾದ ನೈಟ್ರೋಜನ್ ಸತ್ವ್ಯಾಹಾರವು

15-16% ಅಂದರೆ ಮೀನು ಪ ಬಳ್ಳೀಯ ಹಿಂಡಿ ಗೊಬ್ಬರದಲ್ಲಿರುವುದಕ್ಕಿಂತಲೂ ಮೂರು ಪಾಲಷ್ಟು ಜಾಸ್ತಿಯಾಗಿರುವದು. ಇದರಲ್ಲಿ ಸಿಕ್ಕುವಷ್ಟು ಸಾರಜನಕ (Nitrogen) ವು ಬೇರೆ ಯಾವ ಗೊಬ್ಬರಗಳಿಂದಲೂ ಗಿಡಗಳಿಗೆ ದೊರೆಯಲಾರದು. ಆದ್ದರಿಂದಲೇ ಭೂಲೋಕದ ಎಲ್ಲಾ ಭಾಗಗಳಲ್ಲಿಯೂ ರೈತರು ಇದನ್ನು ವಿಶೇಷವಾಗಿ ಉಪಯೋಗಿಸುತ್ತಾರೆ.

ಭತ್ತ, ಕಬ್ಬು, ತೆಂಗು, ಅಡಿಕೆ, ಮಾವು, ಹೊಗೆಸೊಪ್ಪು, ತರಕಾರಿ ಮೊದಲಾದವುಗಳಿಗೂ ಕಾಫಿ, ಟೀ, ರಬ್ಬರು, ಏಲಕ್ಕಿ ಮೊದಲಾದ ತೋಟ ಪೈರುಗಳಿಗೂ ಎಲುಬಿನ ಪುಡಿ ಅಥವಾ ಮೀನು ಗೊಬ್ಬರ ವಗ್ಯೆರೆ ಇತರ ಗೊಬ್ಬರಗಳ ಜೊತೆಯಲ್ಲಿ ಈ ಗೊಬ್ಬರವನು ಉಪಯೋಗಿಸುವದರಿಂದ ಬೆಳೆಯು ಸಮೃದ್ಧಿಯಾಗುವದು. ನೈಟ್ರೇಟ್ ಆಫ್ ಸೋಡಾದಲ್ಲಿರತಕ್ಕ ಸೋಡವು ಮಣ್ಣಿನಲ್ಲಿರುವ ಪೊಟೇಸ್ ಎಂಬ ಇನ್ನೊಂದು ತರದ ಸತ್ವ್ಯಾಹಾರವನ್ನು ಗಿಡಗಳಿಗೆ ಒದಗಿಸಿ ಕೊಡುತ್ತದೆ.

ಈ ಗೊಬ್ಬರವು ನೋಟಕ್ಕೆ ಬರೀ ಉಪ್ಪಿನ ಹಾಗಿದ್ದು ಅಪಾಯಕರವಲ್ಲ. ಎಕರೆ ಒಂದಕ್ಕೆ 100-200 ರಾತ್ತಲ ಸಾಕಾಗುವದು. ಹೆಚ್ಚಿನ ಮಾಹಿತಿ ನಮ್ಮ "ಕೃಷಿಕ ಧಾರ" ಎಂಬ ಪುಸ್ತಕವನ್ನು ಈ ಕೆಳಗಿನ ವಿಳಾಸದಾರರಿಂದ ಧರ್ಮಾರ್ಥವಾಗಿ ಪಡೆಯಬಹುದು.

52—4

CHILEAN NITRATE COMMITTEE,
Post Box 469, CALCUTTA.

Printed & published by Kodanda Appayya R.B., Chairman, Board Directors, at "Kodagu" Press, Mercara for "Kodagu" Ltd.

Reg. N. M. 1550.

If not delivered please return to
"KODAGU" OFFICE MERCARA.

ಕೊಡಗು.

ಸತ್ಯಂ ವದ ಧರ್ಮಂ ಚರ ...

ಸರ್ವೇಽಪ್ಯೇತೇ ಸ್ವಧರ್ಮನಿರತಾಃ ... || ...

ಸಂಪಾದಕ—ಪಂದ್ಯಂಡ ಐ. ಬೆಳ್ಯಪ್ಪ.

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವದು.

ಸಂಪುಟ ೬] ಕೊಡಗು, ಸ ೧೯೨೬ನೇ ಇಸವಿ ಜುಲೈ ತಾರೀಕು ೨ ನೇ ಶುಕ್ರವಾರ [ಸಂಚಿಕೆ ೫

ಸ್ಥಾಪಿತವಾದದ್ದು 1874. ಮೂಲಧನ. 7 ಕೋಟಿ ರೂಪಾಯಿಗಳ

ಓರಿಯಂಟಲ್ ಗವರ್ನ್‌ಮೆಂಟ್ ಸೆಕ್ಯೂರಿಟಿ ಲೈಫ್ ಅಷ್ಯೂರೆನ್ಸ್ ಕಂಪೆನಿ!
ಲಿಮಿಟೆಡ್, ಹೆಡ್ ಆಫೀಸು= ಬೊಂಬಾಯಿ.

1922–1924 ಈ ಮೂರು ವರ್ಷಗಳಲ್ಲಿ ಕಂಪೆನಿಯಲ್ಲಿ ನಡೆದ ಕೆಲಸದ ಪರಿಣಾಮಗಳು.—

ಲಾಭ— ರೂ. 51,00,000 (ಐವತ್ತೊಂದು ಲಕ್ಷ ರೂಪಾಯಿಗಳು) ಈ ಪೈಕಿ 45,94,80 ರೂಪಾಯಿ ಗಳನ್ನು ಲಾಭ ಸಹಿತ ವಿಮೆ ಮಾಡಿರುವವರ ವಿಮೆ ಹಣಕ್ಕೆ ಹೆಚ್ಚು ಬೋನಸ್ ಜಮಾವಾಗಿ ಈ ಕೆಳಗೆ ಕಾಣಿಸಿರುವ ರೀತಿಯಲ್ಲಿ ವಿಭಾಗಿಸಿರುತ್ತದೆ

ಜೀವಮಾನಾವಧಿಯ ವಿಮೆದಾರರಿಗೆ ರೂ. 1000 ವಿಮೆ ಹಣಕ್ಕೆ

ಈ ಮೂರು ವರ್ಷಗಳಿಗೆ ರೂ. 67½.

ನಿಶ್ಚಿತಕಾಲದ ವಿಮೆದಾರರಿಗೆ ರೂ. 1000 ವಿಮೆ ಹಣಕ್ಕೆ

ಈ ಮೂರು ವರ್ಷಗಳಿಗೆ ರೂ. 54.

ಈ ಕಂಪೆನಿಯಲ್ಲಿ ಕ್ರಮೇಣ ಹೆಚ್ಚುತ್ತಿರುವ ಒಪ್ಪಂದಗಳು ಈ ಕೆಳಗೆ ಕೊಟ್ಟಿರುವ ಹೊಸ ಕೆಲಸದ ಪಟ್ಟಿಯಿಂದ ವ್ಯಕ್ತವಾಗುತ್ತದೆ.

1923ರಲ್ಲಿ—ರೂ 1,74,00,000
1924 „ 2,37,00,000
1925 „ 2,96,00,000

ಇನ್ನೂ ದಿನದಿನಕ್ಕೂ ಅಭಿವೃದ್ಧಿಯಾಗುತ್ತಲೇ ಇದೆ. ಜೀವವಿಮೆ ಪತ್ರದಲ್ಲಿ ಹಣವನ್ನು ಲಾಭಕರವಾಗಿ ಶೇಖರಿಸಲು ಇದೇ ಸುಸಮಯ.

ಬೇಕಾದ ವಿಷಯಗಳನ್ನು ಈ ಕೆಳಗಿನ ವಿಳಾಸಕ್ಕೆ ಬರೆದು ತಿಳಿದುಕೊಳ್ಳಬಹುದು.

ಓರಿಯಂಟಲ್ ಬಿಲ್ಡಿಂಗ್ಸ್, ಪೋಸ್ಟ್ ಬಾಕ್ಸ್ 56, ಬೆಂಗಳೂರು — ಪಿ ವಿ. ಸುಬ್ರಮಣ್ಯಯ್ಯರ್, ಬ್ರಾಂಚ್ ಸೆಕ್ರೆಟರಿ.

52—13.

ಮನೋಲ್ಲಾಸಿನಿ ತೈಲ.

ತಲೆನೋವು, ತಲೆ ತಿರುಗುವುದು, ತಲೆಯಲ್ಲಿ ಕಜ್ಜಿ, ಕಿವಿಯಿಂದ ಕೀವು ಸೋರುವುದು ಚಿತ್ತಚಾಂಚಲ್ಯ, ಕಣ್ಣು ನೋವು, ಅಪಸ್ಮಾರ ನಿದ್ರೆ ಬಾರದಿರುವುದು, ನೆನಪು ಶಕ್ತಿ ಕುಂದಿಹೋಗುವುದು ಇವುಗಳನ್ನೆಲ್ಲ ಖಂಡಿತ ಗುಣಮಾಡುತ್ತದೆ. ಉದುರುವ ಕೂದಲನ್ನು ನಿಲ್ಲಿಸಿ ಗಿಡ್ಡಗಿರುವ ಕೂದಲನ್ನು ಬೆಳೆಯಿಸಿ ಕೂದಲಿಗೆ ಸೌಂದರ್ಯವನ್ನೂ ಹೊಳಪನ್ನೂ ಕೊಟ್ಟು ಅಕಾಲಕ್ಕೆ ಬಣ್ಣಗುವ ಕೂದಲನ್ನು ತಡೆದು ಕೂದಲು ಇಲ್ಲದ ಸ್ಥಳದಲ್ಲಿ ಹೊಸ ಕೂದಲನ್ನು ಹುಟ್ಟಿಸುತ್ತದೆ ಬೆಲೆ ಸೀಸೆಗೆ ರೂ 1 3 ಸೀಸೆಗೆ 2—10—0, ಒಂದು ದೊಡ್ಡ ಸೀಸೆಗೆ ರೂ 2, 3 ಸೀಸೆಗಳಿಗೆ 5—8—0.

ಚಂದನಾಸವ.— ಇದು ಪ್ರಮೇಹ ಮೂತ್ರಕೃಚ್ಛ್ರ, ಮೂತ್ರ ಕಷ್ಟವಾಗಿ ಹೋಗುವುದು, ಮೂತ್ರಕೋಶದ ಉರಿ, ಮೂತ್ರಪಿಂಡಗಳ ಉರಿ ಮೂತ್ರನಾಳದಲ್ಲಿ ಹುಣ್ಣು, ಮೂತ್ರ ಹೋಯ್ಯುವಾಗ ಉರಿಯುವುದು, ಮೂತ್ರನಾಳದಿಂದ ಕೀವು ಬರುವುದು, ಮೂತ್ರದಲ್ಲಿ ಧಾತು, ಸುಡಿ ಹೋಗುವುದು, ಅಗಾಗ್ಗೆ ಮೂತ್ರ ಬರುವದು, ಮೂತ್ರ ತಡೆಯಲಿಕ್ಕೆ ಸಾಮರ್ಥ್ಯವಿಲ್ಲದಿರುವುದು, ದೇಹದಲ್ಲಿ ಉರಿ, ಬಾಯಾರಿಕೆ, ಸ್ವಪ್ನಾವಸ್ಥೆ, ಮೂತ್ರನಾಳದಲ್ಲಿ ಚುಚ್ಚುವ ನೋವು ಇವುಗಳಿಗೆ ಪರಮ ಔಷಧಿ ಗಂಡಸರಿಗೂ ಹೆಂಗಸರಿಗೂ ಇದು ಅತ್ಯುತ್ತಮ ಬೆಲೆ—ಬಾಟ್ಲಿ 1, 3, 6ಕ್ಕೆ ರೂ 1—4—0, 3—8—0, 6—12—0.

ರೋಮನಾಶಿನಿ — ಈ ಪುಡಿಯನ್ನು ನೀರಲ್ಲಿ ಕಲಸಿ ಮೈಯಲ್ಲಿ ರೋಮವಿರುವ ಭಾಗಕ್ಕೆ ಹಚ್ಚಲು ರೋಮವು ಉದುರಿ ಬೀಳುವುದು. ಡಬ್ಬಿ ೧ಕ್ಕೆ 6 ಆಣೆ, 3 ಡಬ್ಬಿಗಳಿಗೆ ರೂ 1, 1 ಡಜನಿಗೆ 3 8 0

ಅಮೃತಾರಿಷ್ಟ.— ಇದು ಕ್ವಿನೀನು ಬೆರಸದಿರುವ ಉತ್ತಮಮಲೇರಿಯ ಔಷಧಿ ಎಲ್ಲಾ ತರದ ಜ್ವರಕ್ಕೆ ಉತ್ತಮ. ಬೆಲೆ— ಬಾಟ್ಲಿ 1, 3, 6ಕ್ಕೆ ರೂ 1—4—0, 3—8—0, 6—12—0

ಲೋಹಾಸವ.— ಇದು ಜ್ವರಗಡ್ಡೆಗೆ ಮತ್ತು ಮಲೇರಿಯದಿಂದುಂಟಾದ ಅಶಕ್ತತೆಗೆ ದಿವ್ಯವಾದ್ದು. ಬೆಲೆ—ಬಾಟ್ಲಿ 1, 3, 6ಕ್ಕೆ ರೂ. 1—4—0, 3—8—0, 6—12—0.

ನಮ್ಮ ಕೆಟಲಾಗು ತರಿಸಿ ನೋಡಿರಿ — ವಿಳಾಸ—ಮನೋಲ್ಲಾಸಿನಿ ಕಂಪೆನಿ, 9 ಮಂಗಳೂರು, ಕಂಕನಾಡಿ.

52—28

ಸುವರ್ಣ ಅಯಸ್ಕಾಂತ ದ್ರಾವಕ.

(The Ideal Nervine Tonic)

ಇದು ಅತಿ ಆಶ್ಚರ್ಯಕರವಾದ ಟಾನಿಕ್!

ಇದರಿಂದ ಕೆಟ್ಟು ಹೋಗಿರುವ ರಕ್ತವನ್ನು ಶುದ್ಧ ಮಾಡುವ್ವದು. ಮೊದಲಿಗೆ ಫಲ. ಅತಿ ಉಷ್ಣದಿಂದ ಕಣ್ಣಿಗೆ ಕತ್ತಲೆಯಾಗಿ ಕಾಣುವುದು. ಜ್ಞಾಪಕ ಶಕ್ತಿಯನ್ನುಂಟುಮಾಡುವುದು. ನವಲಾಗಿರುವ ನರಗಳಿಗೆ ಬಲವನ್ನು ಕೊಡುವುದು. ಮುಖದ ತೇಜಸ್ಸನ್ನು ಅನೇಕ ಗುಣಗಳನ್ನು ಕೊಟ್ಟು ಬಲಹೀನವನ್ನು ಹೋಗಲಾಡಿಸಿ ಹೆಚ್ಚು ಬಲವನ್ನು ಕೊಡುವುದು.

ಇದನ್ನು 20 ದಿನ ಸೇವನೆ ಮಾಡುವದರಿಂದ ಮೇಲೆ ಹೇಳುವ ಗುಣಗಳನ್ನು ಕೊಟ್ಟು ಬಲಿಷ್ಠನಾಗಿ ಮಾಡುವುದು. 1 ವರುಷದ ಸ್ತ್ರೀ ಪುರುಷರು ಮೊದಲು ದೊಡ್ಡವರ ವರೆಗೆ ಸೇವನೆ ಮಾಡಬಹುದು. ಉಪಯೋಗಿಸುವ ಕ್ರಮವು ಔಷಧದ ಸಂಗಡ ಕಳುಹಿಸಲ್ಪಡುವುದು.

ಕ್ರಯ 20 ದಿನಗಳು ಸೇವನೆ ಮಾಡುವ ಬಾಟ್ಲಿ 1ಕ್ಕೆ 1—8—0.
„ 40 „ „ „ 2—8—0.

ಪಿ. ಕೆ. ಎಸ್. 17 ಆವಿನಿಂಗ್ ಬಜಾರು, ಪ. ಟಿ. ಮದ್ರಾಸ್.

52—9

ಸತ್ಯಮೇವಜಯತೇ.
(ಗುಣವಾಗದಿದ್ದರೆ ಹಣ ವಾಪಸ)
ಧಾತುಪೌಷ್ಟಿಕ ಕಾಮೋತ್ತೇಜಕ, ಇಂದ್ರಿಯಸ್ತಂಭಕವಾದ

ಮದನೋದ್ಭವ ಗುಳಿಗೆ.

ಜನನೇಂದ್ರಿಯದ ಶಿಥಿಲತೆ ನಿರ್ಬಲತೆ ನಪುಂಸಕತ್ವ ಶೀಘ್ರ ಸ್ಖಲನ, ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತು ಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ ಇಂದ್ರಿಯ ಸ್ತಂಭಕ, ಗರ್ಮಿ, (ಟಾಕಿ) ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲ ತರಹದ ಬಕ್ಕೆಗಳು, ಹುಣ್ಣುಗಳು ಪಿತ್ತದ ಭಾಧೆಗಳು, ಕಟಿಶೂಲೆ ವಾತರೋಗವು ಮುಂತಾದವು ಅತಿತ್ವರ್ಯ ಗುಣವಾಗಿ ಶರೀರಕ್ಕೆ ನಿರೋಗತ್ವವೂ ಕಾಂತಿಯೂ ರತಿಸುಖಕ್ಕೆ ಸಂಪೂರ್ಣ ಶಕ್ತಿಯೂ ಉಂಟಾಗುತ್ತದೆ ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗುತ್ತವೆ ಕಿಮ್ಮತ್ತು ೬೦ ಗುಳಿಗೆಗಳಿಗೆ ೪ ರೂಪಾಯಿ ಇದನ್ನು ಸೇವಿಸುವಾಗ್ಗೆ ನಪುಂಸಕತ್ವಾರಿ ತೈಲವನ್ನು ಉಪಯೋಗಿಸಿದರೆ ಉತ್ತಮ. ಕಿಮ್ಮತ್ತು ಬಾಟ್ಲಿ ೧ಕ್ಕೆ ರೂ ೨—೧೨—೦

ಪ್ರಮೇಹನಿವಾರಣಿ—ಇದರ ಸೇವನೆಯಿಂದ ಮೂತ್ರಸ್ಖಾನದಿಂದ ಕೆಂಪು, ಹಳದಿಬಣ್ಣದ ಹೋಗತಕ್ಕ ಕೀವು ಉರಿ, ವಗೈರೆ ಆರೇಳು ರಾತ್ರಿಯಿಂದ ಗುಣವಾಗುವದು ಕಿಮ್ಮತ್ತು ಬಾಟ್ಲಿ ೧ಕ್ಕೆ ರೂ ೩—೮—೦. ಟ ಖ ಚಾರ್. ಅನುಪಾನ ಪತ್ರಿಕೆ ಔಷಧದ ಸಂಗಡ.

ಒಂದಾಣೆ ಸ್ಟಾಂಪು ಕಳುಹಿಸಿದರೆ ಕ್ಯಾಟಲಾಗವು

ವಿಳಾಸ,—
ವೈದ್ಯ ಜಿ. ಎಲ್ ಜೋಶಿ ಮತ್ತು ಕಂಪೆನಿ.
24. ನಂ 6. ಪೋಸ್ಟ ಬನವಾಸಿ, ಉತ್ತರ ಕಾನಡಾ.

EMPIRE OF INDIA LIFE ASSURANCE CO., LTD.

(Established 1897.)

ALL WITH PROFIT POLICIES

Issued before 28th February. 1927 will share in the BONUS Distribution for the five years ending on that date.

PROSPECTUS ON APPLICATION

Bangalore Branch · 152 Commercial Street
Madras Branch · 9 & 10 Second Line Beach

24–21.

ARMS & AMMUNITION MART.

Mahomedally-Noorbhoy

321 Abdul Rehman Street, near Crawford Market, BOMBAY. 3
Telegraphic Address.—"SHOOTER" Bombay.

[52—14] Please write for Reduced nett prices list for 1926

"ಕೊಡಗು"

ಸ ೧೯೨೬ನೇ ಇಸವಿ ಜುಲೈ ತಾ. ೨ ನೇ ಶುಕ್ರವಾರ

ಕೋ ಆಪರೇಟಿವ್ ಸ್ಟೋರ್‌ಗಳು.

ನಮ್ಮ ದೇಶದಲ್ಲಿ ಕೋ ಆಪರೇಟಿವ್ ಸ್ಟೋರ್‌ಗಳು ಅಂದರೆ ಸಹಕಾರಿ ಅಂಗಡಿಗಳು ಇನ್ನೂ ಒಂದೂ ಆಗಿರುವದಿಲ್ಲ. ಹಿಂದೂಸ್ಥಾನದಲ್ಲೆಲ್ಲಾ ಸ್ಟೋರ್‌ಗಳು ಇನ್ನೂ ಹೆಚ್ಚಾಗಿರುವದಿಲ್ಲ. ಪಶ್ಚಿಮ ದೇಶಗಳಲ್ಲಿ ಮುಖ್ಯವಾಗಿ ಇಂಗ್ಲಂಡಿನಲ್ಲಿ ಕೋ ಆಪರೇಟಿವ್ ಸ್ಟೋರ್‌ಗಳು ಹೆಚ್ಚಾಗಿ ಬೆಳೆದಿರಲು ಕಾರಣವೇನೆಂದರೆ—ಪಟ್ಟಣಗಳಲ್ಲಿ, ಕಾರ್ಖಾನೆಗಳಲ್ಲಿ ಕೆಲಸ ಮಾಡುವ ಜನರು ಬಹಳ ಹೆಚ್ಚಾಗಿರುವದರಿಂದ ಅವರಿಗೆ ಒಳ್ಳೇ ಸಾಮಾನುಗಳನ್ನು ಒದಗಿಸಿಕೊಳ್ಳಬೇಕಾದದ್ದೇ ಮುಖ್ಯವಾಗಿದೆ. ಹಿಂದೂಸ್ಥಾನದಲ್ಲಾದರೆ ಬಡತನದಿಂದ ಪೀಡಿತರಾದ ಸಾಲದಲ್ಲಿ ಮುಳುಗಿರುವ ಕೃಷಿಕರ ಸಂಖ್ಯೆಯೇ ಹೆಚ್ಚಾಗಿರುವದರಿಂದ ಸಾಲ ಒದಗಿಸಿ ಕೊಡುವ ಸಂಘಗಳೇ ಮುಂದಾಗಿ ಸ್ಥಾಪಿತವಾಗಬೇಕಾಯಿತು. ಕೃಷಿಕರಿಗೆ ಸುಲಭ ಬಡ್ಡಿಯಲ್ಲಿ ಸುಲಭವಾಗಿ ಸಾಲ ದೊರಕಿಸುವ ಸಂಸ್ಥೆಗಳು ಬೇಕಾದಷ್ಟು ಆದಾಗ ಕೊಡುವ ಕ್ರಯಕ್ಕೆ ಸರಿಯಾದ ಒಳ್ಳೇ ಸಾಮಾನುಗಳನ್ನು ಕೊಡುವ ಅಂಗಡಿಗಳನ್ನು ಮಾಡಿಕೊಳ್ಳುವ ಯೋಚನೆ ಹುಟ್ಟುತ್ತದೆ. ಕೋ ಆಪರೇಟಿವ್ ಸ್ಟೋರ್‌ಗಳಿಂದ ಬರೇ ಕೃಷಿಕರಿಗೆ ಮಾತ್ರವಲ್ಲ ಅಥವಾ ಬರೇ ಪಟ್ಟಣವಾಸಿಗಳಿಗೆ ಮಾತ್ರವಲ್ಲ. ದೇಶದ ಪ್ರತಿಯೊಬ್ಬನಿಗೂ ದೊಡ್ಡವ ಬಡವನೆಂಬ ಭೇದವಿಲ್ಲದೆ ಆಹಾರಕ್ಕೂ, ಮೈಬಟ್ಟೆಗೂ ಇತರ ಅನುಕೂಲತೆಗಳಿಗೂ ಸಾಮಾನುಗಳು ಬೇಕೇ ಬೇಕು. ಆದ್ದರಿಂದ ಸ್ಟೋರ್‌ಗಳ ಅವಶ್ಯಕತೆ ಹೆಚ್ಚಾಗಿ ಇದೆ. ಅದರ ಪ್ರಯೋಜನವೂ ತುಂಬಾ ಇದೆ.

ಮೆಂಬರುಗಳ ಉತ್ಪತ್ತಿಯನ್ನು ಸಹಕಾರಿ ತತ್ವಗಳನ್ನನುಸರಿಸಿ ಒಟ್ಟುಗೂಡಿಸಿ ಮಾರುವ ಉದ್ದೇಶದ ಕಾಫಿ ಸಂಘವೊಂದು ರಿಜಿಸ್ಟರಾಗಿದ್ದರೂ ಚೆನ್ನಾಗಿ ಕೆಲಸ ನಡಿಯದ್ದರಿಂದ ಆ ಸಂಘವನ್ನು ಒಡೆಯುವ ಏರ್ಪಾಡು ನಡೆಯುತ್ತಿದೆಯೆಂತ ತಿಳಿಯುತ್ತೇವೆ. ಇದು ಬಹಳ ವಿಷಾದಕರ. ವಿದ್ಯಾವಂತ ಯುವಕರು ಕೆಲಸವಿಲ್ಲದೆ ಅಡ್ಡಾಡುತ್ತಿರುವಾಗ ವ್ಯಾಪಾರದಲ್ಲಿ ಅಭಿರುಚಿಯಿರುವ ಯಾವನಾದರೊಬ್ಬರನ್ನು ಯಾವುದಾದರೂ ಬಂದರಕ್ಕೆ ಕಳುಹಿಸಿ ತಯಾರು ಮಾಡಿಸಿ ಸೆಕ್ರೆಟರಿಯಾಗಿ ನೇಮಿಸಿಕೊಂಡು ಈ ಸಂಘವನ್ನು ನಡಿಸಬಹುದಿತ್ತು. ಇಂಥಾ ತರಬೇತನ್ನು ಕೂಡಲೇ ಕೊಡದಿದ್ದರೂ ಒಬ್ಬ ವಿದ್ಯಾವಂತ ಯುವಕನನ್ನು ಕೂಡಲೇ ಸೆಕ್ರೆಟರಿಯಾಗಿ ನೇಮಿಸಿ ಸಂಘವನ್ನು ಉಪಯೋಗಿಸಿದ್ದರೆ ದೇಶಕ್ಕೆ ಎಷ್ಟೋ ಪ್ರಯೋಜನವಾಗುತ್ತಿತ್ತು.

ಮೆಂಬರುಗಳಿಗೆ ಬೇಕಾದ ಸಾಮಗ್ರಿಗಳನ್ನು ಒದಗಿಸಿಕೊಡುವ ಸಂಘವೊಂದನ್ನು ಮಾಡಲು ದಕ್ಷಿಣಕೊಡಗಿನಲ್ಲಿ ಪ್ರಯತ್ನ ನಡಿಯುತ್ತಿರುವದರಿಂದ ಅವುಗಳನ್ನು ಬೇರೆ ದೇಶಗಳಲ್ಲಿ ಯಾವ ರೀತಿಯಲ್ಲಿ ನಡಿಸುತ್ತಿದ್ದಾರೆಂಬದನ್ನು ತಿಳಿದುಕೊಳ್ಳುವದು ಅವಶ್ಯವಾಗಿದೆ. ನಡಿಸಲು ಉತ್ಸಾಹವಿರುವ ಜನರು ಮುಂದೆ ಬಂದರೆ ದೇಶದ ಅನೇಕ ಕಡೆಗಳಲ್ಲಿ ಇಂಥಾ ಅಂಗಡಿಗಳನ್ನು ಸ್ಥಾಪಿಸಿಕೊಳ್ಳಬೇಕಾದದ್ದು ಅವಶ್ಯವಾಗಿದೆ. ಕೆಲವು ಸಹಕಾರಿ ಅಂಗಡಿಗಳು ಆದಮೇಲಾದರೆ ಸುಲಭ ಕ್ರಯದಲ್ಲಿ ರಖಂವಾರು ತರಿಸಿ ಸಾಮಾನುಗಳನ್ನು ಈ ಅಂಗಡಿಗಳಿಗೆಲ್ಲಾ ಒದಗಿಸಿಕೊಡುವ ಮಧ್ಯವರ್ತಿ ಸಂಘವೊಂದನ್ನು ಮಾಡಿಕೊಳ್ಳಬಹುದು.

"ವನಾಥ ಬಾನರ್ಜಿ ಎಂಬವರು ಬರೆದ ಒಂದು ಲೇಖನದ ಆಧಾರದ ಮೇಲೆ ಲೇಖನವನ್ನು ಮುಂದರಿಸುತ್ತೇವೆ. ಇದರಿಂದ ಕೋ ಆಪರೇಟಿವ್ ಅಂಗಡಿಗಳಿಂದ ಆಗುವ ಪ್ರಯೋಜನವು ಇವುಗಳನ್ನು ನಡಿಸುವ ಕ್ರಮವೂ ಸ್ಪಷ್ಟವಾಗುತ್ತದೆ. ಈ ಅಂಗಡಿಗಳನ್ನು ಜಯಪ್ರದವಾಗಿ ನಡಿಸುತ್ತಿರುವ ಕ್ರಮಕ್ಕೆ ರಾಕ್‌ಡೇಲ್ ಕ್ರಮವೆಂತ ಹೆಸರು ಬಂದಿದೆ. "ರಾಕ್‌ಡೇಲ್ ಕ್ರಮದಿಂದ ಸ್ವಂತ ವ್ಯಾಪಾರದಲ್ಲಿ ಇರುವ ಕೆಡಕುಗಳನ್ನು ಹೋಗಲಾಡಿಸಿಕೊಳ್ಳಬಹುದು. ಈ ಕ್ರಮದಿಂದ ಶುದ್ಧವಾದ ಸಾಮಾನುಗಳನ್ನು ಒದಗಿಸಿಕೊಡುವದು ಒಂದನೇ ಪ್ರಯೋಜನವಾಗಿದೆ." ಸಾಧಾರಣವಾಗಿ ಅಂಗಡಿಗಳಿಂದ ತುಪ್ಪವಾಗಲೀ ಎಣ್ಣೆಯಾಗಲೀ ತಂದರೆ ಅದರಲ್ಲಿ ಕೆಟ್ಟ ಮತ್ತು ಹಲ್ಕ ಎಣ್ಣೆಗಳು ಬೆರಕೆ ಯಿರುತ್ತದೆ. ಧಾನ್ಯಗಳನ್ನು ತಂದರೆ ಅದರಲ್ಲಿ ಒಳ್ಳೇದು ಕೆಟ್ಟದ್ದು ಮಿಶ್ರವಾಗಿರುತ್ತದೆ. ಇದೇ ರೀತಿಯಲ್ಲಿ ಸಾಧಾರಣವಾಗಿ ಅಂಗಡಿಯಲ್ಲಿ ದೊರಕುವ ಸಾಮಾನುಗಳು ಶುದ್ಧವಾಗಿರುವದು ಅಪರೂಪ. ಪರದೇಶದಿಂದ ಬರುವ ಜಿನಸುಗಳನ್ನು ಬೆರಕೆಮಾಡದೆ ಒಂದಂತೆಯೇ ಮೆಂಬರುಗಳಿಗೆ ಒದಗಿಸಿಕೊಡುವ ಪ್ರಯೋಜನವು ದೊರೆಯುತ್ತದೆ. ತೂಕ ಮತ್ತು ಅಳತೆಯು ಸರಿಯಾಗಿ ಇರುವಂತೆ ನೋಡಿಕೊಳ್ಳುವದು ಎರಡನೇ ಪ್ರಯೋಜನವಾಗಿದೆ. ಅಂಗಡಿಗಳಲ್ಲಿ ಆದರಲ್ಲೂ ಸಂತೆಗಳಲ್ಲಿ ಅಳತೆಯೂ ತೂಕವೂ ಸರಿಯಾಗಿರುವದಿಲ್ಲವೆಂಬದು ಎಲ್ಲರ ಅನುಭವದಲ್ಲಿರುವ ಸಂಗತಿಯಾಗಿದೆ. ಜಾಗ್ರತೆಯಿಂದ ನೋಡಿಕೊಂಡರೂ ಮೋಸ ಸಾಧಾರಣವಾಗಿ ನಡಿಯುತ್ತಲೇ ಇದೆ. ಈ ಮೋಸಕ್ಕೆ ಗುರಿಯಾಗದೆ ಸಹಕಾರಿ ಅಂಗಡಿಯಲ್ಲಿ ಸಾಮಾನುಗಳನ್ನು ಕೊಂಡುಕೊಳ್ಳಬಹುದು. ನಿಯಮಿತ ಕ್ರಯದಲ್ಲಿ ಸಾಮಾನುಗಳನ್ನು ಕೊಡುವದು ಇನ್ನೊಂದು ಪ್ರಯೋಜನ. ಚೌಕಾಸಿಮಾಡಿ ಕ್ರಯ ನಿಶ್ಚಯಿಸುವ ಪದ್ಧತಿಯಿಂದ ಸಮಯ ಹಾಳುಮಾಡಿಕೊಳ್ಳಲು ತಯಾರಿರುವವನಿಗೂ ಬುದ್ಧಿವಂತನಿಗೂ ಕಡಿಮೆ ಕ್ರಯದಲ್ಲೂ ಸಮಯ ಹಾಳುಮಾಡಲು ಅಪೇಕ್ಷಿಸದವರಿಗೂ, ಪ್ರಾಮಾಣಿಕರಿಗೂ ಹೆಚ್ಚು ಕ್ರಯದಲ್ಲೂ ಸಾಮಾನುಗಳು ಸಿಗುತ್ತವೆ. ಪ್ರಾಮಾಣಿಕನು ಒಂದೇ ಕ್ರಯ ಹೇಳಿ ಎಂತ ಹೇಳಿದಾಗ ಹೇಳಿದ ಕ್ರಯಕ್ಕೆ ಕೊಂಡುಕೊಳ್ಳುತ್ತಾನೆ. ಒಂದೇ ಕ್ರಯವೆಂತ ಹೇಳಿದ ಮೇಲೂ ಇನ್ನೂ ಕಾಲು ಘಂಟೆ ವಾದಿಸಿದರೆ ಕ್ರಯ ಕಡಿಮೆಯಾಗುತ್ತದೆಯೆಂತ ಚೌಕಾಸಿಮಾಡುವವನು ತಿಳಿದಿರುತ್ತಾನೆ. ಆದರಿಂದ ಪ್ರಾಮಾಣಿಕನು ಹೆಚ್ಚು ಕ್ರಯ ಕೊಡಲೇ ಬೇಕಾಯಿತು. ಸಹಕಾರಿ ಅಂಗಡಿಯಲ್ಲಿ ಖಂಡಿತ ಕ್ರಯವಿಟ್ಟರೆ ಚಿಕ್ಕ ಮಕ್ಕಳಾಗಲೀ ಎಂಥಾ ಹೆಡ್ಡನಾಗಲೀ ಹೆಚ್ಚಿಗೆ ಕ್ರಯಕೊಡಬೇಕಾಗುವದಿಲ್ಲ.

ಇಂಥಾ ಸಹಕಾರಿ ಸ್ಟೋರ್‌ಗಳಲ್ಲಿ ಸಾಲ ಕೊಡಬೇಕೋ ಬಾರದೋ? ಈ ಪದ್ಧತಿಯಿಂದ ಬಡಮೆಂಬರುಗಳು ಸಾಲಕ್ಕೆ ಗುರಿಯಾಗುವ ಅವಕಾಶವು ತಪ್ಪುತ್ತದೆ ಎನ್ನುತ್ತಾರೆ. ಅಂಗಡಿಯಲ್ಲಿ ಸಾಲಕೊಡುವದಿಲ್ಲವಾದರೆ ಬೇರೆಕಡೆಯಿಂದಾದರೂ ಸಾಲ ತೆಗೆದೇ ತೀರಬೇಕಾಗುತ್ತದೆ. ಆದರೆ ಸಾಲಕೊಡದೆ ಇರುವದರಿಂದ ಅಂಗಡಿಯ ಕೆಲಸವು ಚನ್ನಾಗಿ ನಡೆದೀತು. ಅಂಗಡಿಯ ಬಂಡವಾಳವು ಹೊರಗೆ ನಿಂತು, ಹೊಸ ಸಾಮಾನುಗಳನ್ನು ಕೊಳ್ಳಲು ಹಣವಿಲ್ಲದೆ ಆಗುತ್ತದೆ. ಕೋರ್ಟು ಖಚೇರಿಗೆ ಹೋಗಬೇಕಾದರೆ ಅನಾವಶ್ಯ ಕಾಲವೂ ಹಣವೂ ಖರ್ಚಾಗುತ್ತದೆ. ಆದ್ದರಿಂದ ಕಡ ಕೊಡದೆ ಇರಬೇಕೆನ್ನುವ ತತ್ವ ಒಳ್ಳೇದೇ. ಆದರೆ ನಮ್ಮ ದೇಶದ ಯಾವ ಅಂಗಡಿಯವನನ್ನು ಕೇಳಿದರೂ ಸಾಲಕೊಡದಿದ್ದರೆ ವ್ಯಾಪಾರ ನಡಿಯುವದೇ ಇಲ್ಲವೆನ್ನುತ್ತಾರೆ. ಆದ್ದರಿಂದ ಕಡ ಕೊಡದೇ ಎಷ್ಟರಮಟ್ಟಿಗೆ ವ್ಯಾಪಾರ ನಡಿಯುತ್ತದೆಂಬದನ್ನು ಅನುಭವದಿಂದ ನೋಡಬೇಕಷ್ಟೆ. ಪ್ರಪಂಚದ ಎಲ್ಲಾ ಕಡೆಗಳಲ್ಲೂ ಸಹಕಾರಿ ಅಂಗಡಿಗಳು ಜಯಪ್ರದವಾದದ್ದು ಕಡ ಕೊಡದ್ದರಿಂದ ಎನ್ನುತ್ತಾರೆ. ಆದ್ದರಿಂದ ಈಗ ಹೊಸತಾಗಿ ರಿಜಿಸ್ಟರಾಗಲಿಕ್ಕಿರುವ ಸಹಕಾರಿ ಸ್ಟೋರಿನಲ್ಲಿ ಸಾಲಕೊಡುವ ಪದ್ಧತಿಯನ್ನು ಇಡಲೇ ಬಾರದೆಂತ ನಾವು ಸೂಚಿಸುತ್ತೇವೆ.

ಸಹಕಾರಿ ಅಂಗಡಿಯಲ್ಲಿ ಮಾರುವ ಸಾಮಾನುಗಳ ಧಾರಣೆಯನ್ನು ಸರಹದ್ದಿಯ ಅಂಗಡಿಗಳ ಧಾರಣೆಗಿಂತ ಕಡಿಮೆಮಾಡಬಾರದೆಂಬ ತತ್ವವನ್ನು ಅವಲಂಬಿಸಬೇಕೆಂತೆ. ಹೀಗೆಯೇ ಎಲ್ಲಾ ಕಡೆಯಲ್ಲಿಯೂ ನಡಿಯುತ್ತಿರುವದು. ಇದರಿಂದ ನೆರೆ ಅಂಗಡಿಯವರಿಂದ ಬರಬಹುದಾದ ಅಡಚಣೆಗಳು ಇಲ್ಲದಾಗುತ್ತವೆ. ಮೆಂಬರುಗಳು ಇದಕ್ಕಾಗಿ ಬೇಸರಪಡಬೇಕಾಗಿಲ್ಲ. ಯಾಕೆಂದರೆ ತಾವು ಕೊಡುವ ಕ್ರಯದಲ್ಲಿ ಉಳಿಯುವ ಲಾಭವು ತಮಗೇನೇ ಬರುತ್ತದೆ. ಕ್ರಯ ಹೆಚ್ಚಾದಲ್ಲಿ ಕೊಟ್ಟದ್ದು ಲಾಭರೂಪದಲ್ಲಿ ವಾಪಸುಬರುತ್ತದೆ. ಈ ಸಹಕಾರಿ ಅಂಗಡಿಗಳ ಗುಣಗಳಲ್ಲಿ ಇದೊಂದು. ಮೆಂಬರುಗಳು ಕೊಡುವ ಪಾಲು ಭಂಡವಾಳದ ಮೇಲೆ ಹಂಚುವ ಲಾಭವು ಕಡಿಮೆ. ಆದರೆ ಪ್ರತಿಯೊಬ್ಬ ಮೆಂಬರನೂ ಕೊಂಡುಕೊಂಡ ಸಾಮಾನುಗಳ ಕ್ರಯದ ದಾಮಾಶಾಯಿ ಮೇಲೆ ಅವರಿಗೆ ಲಾಭ ಕೊಡಲಾಗುತ್ತದೆ

ಮೆಂಬರುಗಳಲ್ಲಿ ಹಣಉಳಿಸುವ ಸ್ವಭಾವವನ್ನು ಬೆಳೆಸಲು ಅನುಕೂಲವಿದೆ. ವರ್ಷದ ಆಖೈರಿನಲ್ಲಿ ಮೆಂಬರುಗಳಿಗೆ ದೊರೆಯಬಹುದಾದ ಲಾಭವನ್ನು ಹೊಸ ಶೇರ್ ತೆಗೆದುಕೊಳ್ಳುವಂತೆ ಮಾಡಿದರೆ ನಾಲ್ಕಾರು ವರ್ಷದಲ್ಲಿ ತಕ್ಕಷ್ಟು ದೊಡ್ಡ ಭಂಡವಾಳವೇ ಅವನಿಗೆ ಉಳಿದಂತೆ ಆಗುತ್ತದೆ. ಅಲ್ಲದೆ ಲಾಭದ ಒಂದು ದಾಮಾಶಾಯಿಯನ್ನು ಮೆಂಬರುಗಳ ವಿದ್ಯಾಭ್ಯಾಸಕ್ಕೂ ಮತ್ತು ಇತರ ಅನುಕೂಲತೆಗಳನ್ನು ಹೆಚ್ಚಿಸಿಕೊಳ್ಳಲಿಕ್ಕೂ ಉಪಯೋಗಿಸಲಾಗುತ್ತದೆ. ಸಹಕಾರಿ ಪುಸ್ತಕಗಳನ್ನೂ ಮತ್ತು ಇತರ ಪುಸ್ತಕಗಳನ್ನೂ ತರಿಸಿ ಓದಲಿಕ್ಕೆ ಕೊಡುವದರಿಂದಲೂ ಉಪನ್ಯಾಸಕರನ್ನು ನೇಮಿಸುವದಕ್ಕೂ ಈ ಹಣವನ್ನು ಉಪಯೋಗಿಸಿ ವಿದ್ಯಾರ್ಜನಗೆ ಸಹಾಯಕೊಡಬಹುದು.

ಇಂಥಾ ಸಹಕಾರಿ ಸಂಘಗಳು ಮೆಂಬರುಗಳನ್ನು ವ್ಯಾಪಾರದಲ್ಲಿ ತರಬೇತು ಕೊಡಲಿಕ್ಕೆ ಒಳ್ಳೇ ಸಂಸ್ಥೆಗಳಾಗಿವೆ. ಡೆಮೋಕ್ರೆಸಿಯಲ್ಲಿ ತರಬೇತುಕೊಡಲು ಅನುಕೂಲವಿದೆ. ಡೆಮೋಕ್ರೆಸಿಯೆಂದರೆ ಸಾರ್ವಜನಿಕ ಸಮಾನ ಪ್ರತಿನಿಧಿತ್ವ ಆಡಳಿತ ಪದ್ಧತಿ. ಈ ಸಹಕಾರಿ ಅಂಗಡಿಗಳ ಆಡಳಿತ ನಡಿಸಲಿಕ್ಕೆ ನೇಮಕವಾಗುವ ಆಡಳಿತ ಮಂಡಲಿಯು ಒಟ್ಟು ಸಂಘದವರಿಂದ ಆರಿಸಲ್ಪಡುತ್ತಾರೆ. ಹಾಗೆ ಆರಿಸುವಾಗ ಪ್ರತಿಯೊಬ್ಬರಿಗೂ ಒಂದು ಓಟು, ಒಂದು ಓಟಿಗಿಂತ ಹೆಚ್ಚಿಗೆ ಯಾರಿಗೂ ಇಲ್ಲವಂತೆ ಎಲ್ಲಾ ಸಹಕಾರಿ ಸಂಘಗಳಲ್ಲೂ ಅನುಸರಿಸುವ ತತ್ವವೇ ಜಾರಿಯಲ್ಲಿರಬೇಕಾಗುವದರಿಂದ ಸಮಾನ ಹಕ್ಕು ಎಲ್ಲರಿಗೂ ಇದೆಯೆಂಬ ಆತ್ಮಗೌರವವು ಪ್ರತಿಯೊಬ್ಬ ಮೆಂಬರನಿಗೂ ಬೆಳೆಯುತ್ತದೆ

ಈ ಅಂಗಡಿಗಳಿಂದ ಬೇರೆ ವಿಧದ ಆರ್ಥಿಕ ಪ್ರಯೋಜನಗಳನ್ನೂ ಮಾಡಿಕೊಳ್ಳಬಹುದು. ಅಂಗಡಿಯ ಲಾಭವು ಧಾರಾಳವಾಗಿ ಬೆಳೆದಾಗ ಮೆಂಬರುಗಳಿಗೆ ಬೇಕಾದ ಸಾಮಾನುಗಳನ್ನು ಬೇರೆ ಕಡೆಗಳಿಂದ ಕೊಂಡುಕೊಳ್ಳುವದರ ಬದಲು ಅಂಗಡಿಯವರೇ ಸಾಧ್ಯವಾದವುಗಳನ್ನೆಲ್ಲಾ ಮಾಡಿಸಬಹುದು. ಧಾನ್ಯದ ಬೆಳೆಗಳನ್ನೂ, ಹಿಟ್ಟುಗಳನ್ನೂ, ಮಾಡಿಸಿಕೊಳ್ಳಬಹುದು. ಭತ್ತ ತೆಗೆದು ಅಕ್ಕಿ ಮಾಡಿಸಬಹುದು. ಬಟ್ಟೆ ನೇಯಿಸಬಹುದು. ಇನ್ನೂ ಇತರ ಸುಲಭ ಕೈಗಾರಿಕೆಗಳಿಂದ ತಯಾರಾಗುವ ಸಾಮಾನುಗಳನ್ನು ಮಾಡಿಸಿಕೊಳ್ಳಬಹುದು. ಇದರಿಂದ ಅನೇಕ ಕೆಲಸವಿಲ್ಲದ ಜನರಿಗೆ ಕೆಲಸ ದೊರೆಯಬಹುದು.

ಇಂಗ್ಲೆಂಡಿನಲ್ಲಿ ಈ ತರದ ಸಹಕಾರಿ ಚಳವಳವು ಎಷ್ಟು ಬೆಳೆದಿದೆಯೆಂಬದನ್ನು ಈ ಕೆಳಗಿನ ಸಂಖ್ಯೆಗಳಿಂದ ತಿಳಿದುಕೊಳ್ಳಬಹುದು. 45,000,00 ಮೆಂಬರುಗಳೂ, 12,00,00,000 ಪೌಂಡು ಮೂಲಧನವೂ, 1,83,000 ಜನ ನೌಕರರೂ ಇರುವ 1445 ಸಂಘಗಳಿವೆಯಂತೆ. ನಮ್ಮ ಹಿಂದೂಸ್ಥಾನದಲ್ಲಿ ಇಷ್ಟರ ಮಟ್ಟಿಗೆ ಅಭಿವೃದ್ಧಿ ಎಂದಿಗೆ ಆದೀತೋ ತಿಳಿಯದು. ಮದ್ರಾಸು ಪಟ್ಟಣದಲ್ಲಿ 1904ರಲ್ಲಿ 14 ಮೆಂಬರುಗಳು ಮಾತ್ರ ಸೇರಿ ಪ್ರಾರಂಭಿಸಿದ ಟ್ರಿಪ್ಲಿಕೇನ್ ಸ್ಟೋರ್ ಎಂಬ ಅಂಗಡಿಯು ಈಗ 4200 ಮೆಂಬರುಗಳೂ, 60,000 ರೂ. ಮೂಲಧನವೂ, 23 ಶಾಖೆಗಳೂ, 120 ನೌಕರರೂ, 30000 ರೂ. ಕ್ರಯದ ಮನೆಗಳೂ 300 ಪುಸ್ತಕಗಳಿರುವ ಪುಸ್ತಕ ಭಂಡಾರವೂ ಉಳ್ಳದ್ದಾಗಿದೆ. ದೊಡ್ಡ ಪಟ್ಟಣದಲ್ಲಿ ಇಷ್ಟರ ಮಟ್ಟಿಗೆ ಬೆಳೆಯಿತೆಂದರೆ ಈ ದೇಶದಲ್ಲಿ ಸಾಧ್ಯವಾಗಲಾರದು. ಆದರೂ ಈ ದೇಶದಲ್ಲಿ ಸಾಧ್ಯವಿರುವಷ್ಟರ ಮಟ್ಟಿಗೆ ಪ್ರಯತ್ನ ಮಾಡಿ ಪ್ರಯೋಜನ ಹೊಂದಬೇಕಾದದ್ದು ದೇಶದವರ ಕರ್ತವ್ಯವಾಗಿದೆ.

ಮಹಾತ್ಮಗಾಂಧಿಯವರ ಸ್ವಚರಿತ್ರೆ.

(೪ನೇ ಸಂಚಿಕೆಯಿಂದ ಮುಂದುವರಿದದ್ದು)

22 ನೆಯ ಪ್ರಕರಣ.

ಇಂಗ್ಲದೇಶದಲ್ಲಿ ಮಾಡಿದ ಕೆಲಸ.

ನಾನು ಇಂಗ್ಲದೇಶಕ್ಕೆ ಯಾವ ಕೆಲಸವನ್ನು ಕುರಿತು ಹೋದೆನೋ ಅದನ್ನು ಕುರಿತು ಈವರೆಗೇನನ್ನೂ ಬರೆದಿಲ್ಲವು. ಅದನ್ನು ಕುರಿತು ಈಗ ಸಂಗ್ರಹವಾಗಿ ಬರೆಯುವೆನು. ನಾನು ಬ್ಯಾರಿಸ್ಟರ್ ಪರೀಕ್ಷೆಗೆ ಓದಲು ಹೋದೆನು. ಎರಡು ಪರೀಕ್ಷೆಗಳು ಮುಂದಾಗಿ ನಡೆಯದಿದ್ದರೆ ಬ್ಯಾರಿಸ್ಟರ್ ಪ್ರಶಸ್ತಿಯು ಕೊಡಲ್ಪಡುವುದಿಲ್ಲವು. ಒಟ್ಟು ಮೂರುವರ್ಷಗಳಲ್ಲಿ 12 ಟರಂಗಳು ಕಳೆಯಬೇಕು. ಪರೀಕ್ಷೆಯಲ್ಲಿ ತೇರ್ಗಡೆ ಹೊಂದಬೇಕು. ಟರ್ಮು ಮುಗಿಯುತ್ತಲೆ ಔತಣಕ್ಕೆ ಹೋಗಬೇಕು. ಒಂದು ಟರ್ಮಿಗೆ 24 ಔತಣಗಳಾಗುವವು. ಅವುಗಳಲ್ಲಿ ಕನಿಷ್ಠ ಪಕ್ಷ 6 ಔತಣಗಳಿಗಾದರೂ ಹೋಗಬೇಕು. ಔತಣದಲ್ಲಿ ಊಟದ ಸಮಯಕ್ಕೆ ಹೋದ

ರೆ ಸಾಲದು. ಸಕಾಲದಲ್ಲಿ ಹೋಗಿ ಹಾಜರಿಕೊಂಡು ಬಂದಿದ್ದಾನೆಂದು ಬರೆಯಿಸಿಕೊಳ್ಳಬೇಕು. ಔತಣವು ಮುಗಿಯುವ ವರೆಗೂ ಅಲ್ಲೇ ಇರಬೇಕಲ್ಲದೆ ಹೋಗಕೂಡದು. ಆಗ ಎಲ್ಲರೂ ಪಕ್ವಾನ್ನವನ್ನು ಭುಂಜಿಸುವರು. ಒಳ್ಳೇ ಮದ್ಯವನ್ನು ಕುಡಿಯುವರು. ಒಂದೌತಣದಲ್ಲಿ ಒಬ್ಬನಿಗೆ 2-3 ರೂಪಾಯಿ ವೆಚ್ಚವಾಗುವುದು. ಇದು ಕಡಿಮೆಯೆಂದೇ ಹೇಳಬೇಕು, ಯಾಕೆಂದರೆ ಹೋಟೆಲಿನಲ್ಲಿ ಊಟಕ್ಕೆ ಹೋದರೆ ಒಬ್ಬನಿಗೆ ಸಾಧಾರಣವಾಗಿ 2-3 ರೂಪಾಯಿ ವೆಚ್ಚವಾಗುವುದು. ಊಟದ ಖರ್ಚಿಗಿಂತ ಸಾರಾಯಿಯ ಖರ್ಚು ಹೆಚ್ಚೆಂದು ಹೇಳಿದರೆ ಭಾರತೀಯರಲ್ಲಿ ನನ್ನಂತಹವರಿಗೆ ಬಹಳ ಆಶ್ಚರ್ಯವಾಗುವುದು. ಔತಣದ ಮೊದಲನೆಯ ವೇಳೆ ನನಗೆ ಬಹಳ ವ್ಯಾಕುಲವಾಯಿತು. ಇಷ್ಟು ಹಣವನ್ನು ಸಾರಾಯಿಗಾಗಿ ಹಾಳ್ಮಾಡಲು ಇವರ ಮನಸ್ಸು ಹೇಗೆ ಒಪ್ಪುವುದೋ ಎಂದು ನಾನು ಬಹಳವಾಗಿ ಚಿಂತಿಸುತ್ತಿದ್ದೆನು. ಆಮೇಲೆ ನನಗೆ ತಿಳಿಯಿತು. ಆ ಔತಣದಲ್ಲಿ ನಾನು ಏನನ್ನೂ ತಿನ್ನಲಿಲ್ಲವು. ಆಮೇಲೆ ಅವು ರುಚಿಯಾಗಿ ಕಂಡುಬಂದುದರ ಮೇಲೆ ಅವನ್ನು ತಿಂದೆನು. ಆಮೇಲೆ ಇತರ ಪದಾರ್ಥಗಳನ್ನು ತೆಗೆದುಕೊಂಡು ಬರುವಂತೆ ಪಳಗಲು ಸ್ವಲ್ಪ ಪ್ರಾರಂಭವಾಯಿತು.

ಉಪಾಧ್ಯಾಯರು (ಬೆಂಚರ್ಸ್) ಗಳಿಗೆ ಮಾಡಿಸಲ್ಪಡುವ ಔತಣದ ಪದಾರ್ಥಗಳು ವಿದ್ಯಾರ್ಥಿಗಳಿಗೆ ಮಾಡಿಸಲ್ಪಡುವ ಪದಾರ್ಥಗಳಿಗಿಂತ ಶ್ರೇಷ್ಠವಾಗಿರುತ್ತವೆ. ಒಬ್ಬ ಪಾರಸಿ ವಿದ್ಯಾರ್ಥಿಯೂ, ನಾನೂ ಶಾಕಾಹಾರಿಗಳಾದ ಉಪಾಧ್ಯಾಯರುಗಳಿಗೆ ಮಾಡಿಸಿ ಶಾಕಾಹಾರಪದಾರ್ಥಗಳನ್ನೇ ನಮಗೂ ಕೊಡಬೇಕೆಂದು ಅಪೇಕ್ಷಿಸಿದುದರ ಮೇಲೆ ಹಣ್ಣು ಹಂಪಲು ಮೊದಲಾದ ಪದಾರ್ಥಗಳನ್ನು ಪ್ರತ್ಯೇಕವಾಗಿ ತಂದುಕೊಟ್ಟರು. ನಾಲ್ವರು ವಿದ್ಯಾರ್ಥಿಗಳಿಗೆ ಎರಡು ಸಾರಾಯಿ ಶೀಸೆಯನ್ನು ಕೊಟ್ಟರು. ನಾನು ಕುಡಿಯುವುದಿಲ್ಲವಾದುದರಿಂದ ಎಲ್ಲರೂ ತಮ್ಮ ಸಮೂಹಕ್ಕೆ ನನ್ನನ್ನು ಸೇರಿಸಿಕೊಳ್ಳುವುದಕ್ಕಾಗಿ ಕಲೆಯುತ್ತಿದ್ದರು. ಆದರಿಂದ ಎರಡು ಸೀಸೆಗಳನ್ನು ಮೂವರೇ ಕುಡಿದುಬಿಟ್ಟರು. ಪ್ರತಿ ಟರ್ಮಿನಲ್ಲಿ ಒಂದು ದೊಡ್ಡ ಔತಣವು ಕೂಡ ಜರುಗಿತು. ಆ ದಿವಸ ಶಾಂಪೇನ್, ಪೋರ್ಟ್, ಷೆರ್ರಿ ಮೊದಲಾದ ಮದ್ಯವು ಕೊಡಲ್ಪಡುತ್ತಿತ್ತು. ಅದು ಕಾರಣ ಆ ದಿವಸ ಮುಖ್ಯವಾಗಿ ಬರಬೇಕೆಂದು ಸಹಪಾಠಿಗಳು ನನ್ನನ್ನು ಬಲವಂತ ಪಡಿಸುತ್ತಿದ್ದರು. ಈ ಔತಣದಿಂದ ವಿದ್ಯಾರ್ಥಿಗಳಿಗುಂಟಾಗುವ ಅಧಿಕ ಯೋಗ್ಯತೆ ಯಾವುದೋ ನನಗೆ ಈಗಲೂ ತಿಳಿಯದು. ಮೊದಲು ವಿದ್ಯಾರ್ಥಿಗಳ ಸಂಖ್ಯೆಯು ಬಹಳ ಕಮ್ಮಿಯಾಗಿದ್ದುದರಿಂದ ಆಗ ಸಂಭಾಷಣೆಯೂ, ಉಪನ್ಯಾಸವೂ ಜರುಗುತ್ತಿದ್ದವು. ಅದರಿಂದ ವ್ಯವಹಾರಜ್ಞಾನ, ನಾಗರಿಕಪದ್ಧತಿ, ವಾಗ್ಪಾಟವ ಮೊದಲಾದವುಗಳುಂಟಾಗುತ್ತಿದ್ದುವು. ನಾನು ಹೋಗುವ ಸಮಯಕ್ಕೆ ಆ ಅಭ್ಯಾಸವೆಲ್ಲವೂ ಮುಗಿದುಹೋಗಿದ್ದವು. ಉಪಾಧ್ಯಾಯರುಗಳಿಗೆ ದೂರವಾಗಿ ಆಸನಗಳು ಹಾಕಲ್ಪಡುತ್ತಿದ್ದವು. ಅದರ ಉದ್ದೇಶವು ಗೋಪ್ಯವಾಗಿದ್ದರೂ ಆಚಾರವನ್ನು ಮಾತ್ರ ಆಂಗ್ಲೇಯರು ಬಿಡರು. ಅವರು ಪೂರ್ವಾಚಾರಪರಾಯಣರು.

ಓದಬೇಕಾದ ವಿಷಯಗಳಲ್ಲಿ ಕಾಠಿಣ್ಯವೇನೂ ಇಲ್ಲ. ಆದರೂ ಬ್ಯಾರಿಸ್ಟರುಗಳಿಗೆ ಭೋಜನಪ್ರಿಯರೆಂದು ಹಾಸ್ಯದ ಹೆಸರುಂಟಾಗಿದೆ. ಪರೀಕ್ಷೆಯು ಹೆಸರಿಗೆ ಮಾತ್ರವೆಂದು ಎಲ್ಲರೂ ತಿಳಿದುಕೊಂಡಿರುವರು. ನಾನು ಹೋಗಿದ್ದಾಗ್ಗೆ ರೋಮನ್ ಲಾದಲ್ಲಿ ಒಂದು ಪರೀಕ್ಷೆಯೂ ಕಾಮನ್ ಲಾದಲ್ಲಿ ಒಂದು ಪರೀಕ್ಷೆಯೂ ನಡೆಯುತ್ತಿದ್ದವು. ಅವುಗಳಿಗೆ ಓದಬೇಕಾದ ಪುಸ್ತಕಗಳಿವೆ. ಅವನ್ನು ಪ್ರತ್ಯೇಕ ಪ್ರತ್ಯೇಕವಾಗಿ ಓದಿ ಪ್ರತ್ಯೇಕವಾಗಿ ಪರೀಕ್ಷೆ ಕೊಡಬಹುದು. ಆದರೆ ವಿದ್ಯಾರ್ಥಿಗಳಾರೂ ಗ್ರಂಥಗಳನ್ನೋದುವುದಿಲ್ಲ. ರೋಮನ್ ಲಾ ನೋಟ್ಸ (ಟಿಪ್ಪಣಿಯ)ನ್ನು ಎರಡು ಮೂರು ವಾರದವರೆಗೂ, ಕಾಮನ್ ಲಾ ನೋಟ್ಸನ್ನು ಎರಡು ಮೂರು ತಿಂಗಳವರೆಗೂ ಓದುವಷ್ಟರಲ್ಲಿ ಅನೇಕಮಂದಿ ಪರೀಕ್ಷೆಯಲ್ಲಿ ತೇರ್ಗಡೆಯಾಗುವರು. ಪರೀಕ್ಷಾ ಪ್ರಶ್ನೆಗಳು ಬಹಳ ಸುಲಭ. ಪರೀಕ್ಷಕರು ಸಹೃದಯರಲ್ಲದೆ ಕಠಿಣರಲ್ಲ. ರೋಮನ್ ಲಾದಲ್ಲಿ 100ಕ್ಕೆ 33 ಗುಣ (ಮಾರ್ಕ್ಸ್)ಗಳೂ ಕಡೆಯ ಪರೀಕ್ಷೆಯಲ್ಲಿ 100ಕ್ಕೆ 75 ಗುಣಗಳೂ ಬರುತ್ತಿದ್ದುವು. ಆದರಿಂದ ಪಾಸಾಗುವುದಿಲ್ಲವೆಂಬ ಭಯವೇ ಇರಲಿಲ್ಲ. ಒಂದು ವರ್ಷದಲ್ಲಿ ನಾಲ್ಕು ವೇಳೆ ಪರೀಕ್ಷೆಯು ಜರುಗುವುದು. ಆದರಿಂದ ಯಾವ ಕಷ್ಟವೂ ಇಲ್ಲ. ನಾನು ಮಾತ್ರ ಎಲ್ಲಾ ಪುಸ್ತಕಗಳನ್ನೂ ಪೂರ್ತಿಯಾಗಿ ಓದಲು ನಿಶ್ಚಯಿಸಿದೆನು. ಓದದೆ ಪರೀಕ್ಷೆಗೆ ಕುಳಿತುಕೊಳ್ಳುವುದು ಮೋಸವೆಂದು ನನಗೆ ತೋರಿತು. ನಾನು ಅನೇಕ ಪುಸ್ತಕಗಳನ್ನು ದುಡ್ಡು ಖರ್ಚುಮಾಡಿ ತೆಗೆದುಕೊಂಡೆನು. ರೋಮನ್ ಲಾವನ್ನು ಲ್ಯಾಟಿನ್ ಭಾಷೆಯಲ್ಲಿ ಓದಬೇಕಾಯಿತು. ನಾನು ಲಂಡನ್ ಮೆಟ್ರಿಕ್ಯುಲೇಷನ್ ಪರೀಕ್ಷೆಗಾಗಿ ಓದಿದ್ದೆನಾದುದರಿಂದ ನನಗದು ಉಪಯೋಗಕ್ಕೆ ಬಂದಿತು. ದಕ್ಷಿಣಾಫ್ರಿಕದಲ್ಲಿ ರೋಮನ್ ಡಚ್ಚ್ ಭಾಷೆಯಲ್ಲೇ ಕಾಮನ್ ಲಾ ಇರುವುದರಿಂದ ನಾನು ಲ್ಯಾಟಿನನ್ನು ಓದಿದ್ದುದರಿಂದ ದಕ್ಷಿಣಾಫ್ರಿಕೆಯ ನ್ಯಾಯಶಾಸ್ತ್ರವನ್ನು ಗ್ರಹಿಸಿಕೊಳ್ಳಲು ಅದು ಬಹಳ ಸಹಾಯಕಾರಿಯಾಯಿತು.

ಇಂಗ್ಲೆಂಡಿನ ಕಾಮನ್ ಲಾವನ್ನು ಪೂರ್ತಿಗೊಳಿಸಲು 9 ತಿಂಗಳು ಕಷ್ಟಪಟ್ಟು ಓದಿದೆನು. ಬ್ರೂಮ್ಸ್ ಕಾಮನ್ ಲಾ ಎಂಬುದು ಬಹಳ ದೊಡ್ಡ ಪುಸ್ತಕವಾಗಿದ್ದರೂ ಬಹಳ ಆಕರ್ಷಕವಾಗಿದ್ದಿತು. ಸ್ನೆಲ್ಸ್ ಇಕ್ವಿಟಿ ಎಂಬುದು ಕೊಂಚ ಕಷ್ಟವಾದುದು. ವೈಟ್ ಅಂಡ್ ಟ್ಯೂಡರ್ಸ್ ಲೀಡಿಂಗ್ ಕೇಸಸ್ ಎಂಬುದು ಕೂಡ ಒಳ್ಳೇ ಗ್ರಂಥವೇ. ವಿಲಿಯಂಸ್ ಅಂಡ್ ಎಡ್ವರ್ಡ್ಸ್ ರಿಯಲ್ ಪ್ರಾಪರ್ಟಿ, ಗುಡೀವ್ಸ್ ಪರ್ಸನಲ್ ಪ್ರಾಪರ್ಟೀ ಎಂಬ ಗ್ರಂಥವನ್ನೂ ಕೂಡ ನಾನು ಓದಿದೆನು. ವಿಲಿಯಂಡವರ ಪುಸ್ತಕವು ಹೊಸಹೊಸದಾಗಿಯೇ ಇದ್ದಿತು. ಮೇಯ್ನ್ಸ್ ಹಿಂದೂ ಲಾ ಎಂಬ ಗ್ರಂಥವನ್ನು ನಾನು ಭಾರತದೇಶಕ್ಕೆ ಹಿಂದಿರುಗಿ ಬರುವಾಗ್ಗೆ ಹಡಗಿನಲ್ಲಿ ಬಹಳ ಶ್ರದ್ಧೆಯಿಂದ ಓದಿದೆನು. ಭಾರತನ್ಯಾಯಶಾಸ್ತ್ರಗ್ರಂಥಗಳ ವಿಷಯವು ಇಲ್ಲಿ ಅಪ್ರಸ್ತುತವು. ನಾನು ಪರೀಕ್ಷೆಯಲ್ಲಿ ತೇರ್ಗಡೆಯಾದೆನು. 10–6–1891 ರಲ್ಲಿ ಪಟ್ಟವು ದೊರಕಿತು. 11–6–91 ರಲ್ಲಿ ಹೈಕೋರ್ಟಿನಲ್ಲಿ ನನ್ನ ಹೆಸರು ಬ್ಯಾರಿಸ್ಟರಾಗಿ ಅನುಮೋದಿಸಲ್ಪಟ್ಟಿತು. 12–6–91 ರಲ್ಲಿ ನಾನು ಹಡಗಿನಲ್ಲಿ ಭಾರತದೇಶಕ್ಕೆ ಪ್ರಯಾಣಮಾಡಿದೆನು. ನಾನು ಪರೀಕ್ಷೆಯಲ್ಲಿ ಉತ್ತೀರ್ಣನಾಗಿದ್ದರೂ ನನಗೆ ಧೈರ್ಯೋತ್ಸಾಹವಿರಲಿಲ್ಲ. ನಾನು ಕೋರ್ಟಿನಲ್ಲಿ ವಾದಿಸಲಾರದವನಾಗಿದ್ದೆನು. ಅದನ್ನು ಕುರಿತು ಮತ್ತೊಂದು ಪ್ರಕರಣದಲ್ಲಿ ತಿಳಿಸುತ್ತೇನೆ.

"ಮೈ. ಸ್ಟಾರ್."

ಕೊಡಗು ಜಮೀನ್ದಾರರ ಸಂಘದ ಮೂರ್ನಾಡಿನಲ್ಲಿ ೧೯೩೫ನೇ ಏಪ್ರಿಲ್ ತಿಂಗಳಲ್ಲಿ ನಡೆದ ಜನರಲ್ ಮೀಟಿಂಗಿನ ಠರಾವುಗಳಿಗೆ ಈಗ ಕಮಿಷನರಿಂದ ಬಂದ ಜವಾಬು.

ಠ. 1 ನೌಕರಿ ಬರಾವರಿ ಖಾನೂನು ಜಾರಿಗೆ ತರಬೇಕು.

3 ಜಮ್ಮಾ ಹಿಡುವಳಿ ಭೂಮಿಯ ಸೆಟ್ಲ್‌ಮೆಂಟನ್ನು ರದ್ದುಪಡಿಸಬೇಕು.

4 ಗದ್ದೆ ಪೈಲುಗಳ ಕಲೆಕ್ಟಿನಲ್ಲಿರುವ ಪೈಸಾರಿ ಕೆರೆಗಳನ್ನು ಸರಕಾರದವರು ರಿಪೇರಿ ಮಾಡಬೇಕು

6 ಕಂದಾಯ ಬಾಕಿಯಾದದ್ದಕ್ಕೆ ಪ್ರೋಸೆಸ್ ಚಾರ್ಜು ಮಾಡಬಾರದು

17 ರಸ್ತೆಯಲ್ಲಿ ಇರುವ ದನಗಳನ್ನು ದೊಡ್ಡಿಗೆ ಹಾಕಿ ಪ್ರೋಸಿಕ್ಯೂಷನ್ ಮಾಡುವ ಡಿಸ್ಟ್ರಿಕ್ಟ್ ಬೋರ್ಡ್ ರೂಲನ್ನು ರದ್ದುಪಡಿಸಬೇಕು.

20 ಎಲ್ಲಾ ಗ್ರಾಮದ ರಸ್ತೆಗಳನ್ನು ಒಳ್ಳೇ ಸ್ಥಿತಿಯಲ್ಲಿಟ್ಟುಕೊಳ್ಳಬೇಕು.

21 ಪಬ್ಲಿಕ್ ಕಾಲು ದಾರಿಗಳಿಗೆ ಅಡ್ಡ ಬರುವ ಹೊಳೆಗಳಿಗೆ ಪಾಲ ಹಾಕಿ ಕೊಡಬೇಕು.

32 ರಿಜರ್ವ್ ಫಾರೆಸ್ಟ್ ಬೌಂಡ್ರಿಯನ್ನು ವ್ಯವಸಾಯದ ಭೂಮಿಗೆ ದೂರವಾಗಿ ಇಡಬೇಕು

48 ಹಳೇ ತಾಲೋಕು ಸ್ಥಳಗಳಲ್ಲಿ ಲೋವರ್ ಸೆಕೆಂಡರಿ ಶಾಲೆಗಳನ್ನು ಇಡಬೇಕು.

49. ಪೊನ್ನಂಪೇಟೆ, ಮಡಿಕೇರಿ, ನಾಪೋಕ್ಲು, ಮೂರ್ನಾಡು, ವೀರರಾಜಪೇಟೆಗಳಲ್ಲಿ ಬೀಜದ ಹೋರಿಗಳನ್ನು ಇಡಬೇಕು.

52 ಜೋಡಿ ಭೂಮಿಗಳ ಹಕ್ಕುದಾರಿಕೆಯನ್ನು ಅಜಮಾಯಿಸಲು ಕಮಿಟಿಯನ್ನು ನೇಮಿಸಬೇಕು.

53. ಕೊಡಗಿಗೆ ಬರುವ ಉಪನ್ಯಾಸಕರನ್ನು ಉಪನ್ಯಾಸ ಮಾಡಲು ಬಿಡದೆ ಇರುವದಕ್ಕೆ ಸಂಘವು ಆಕ್ಷೇಪಿಸುತ್ತದೆ.

ಉತ್ತರ—ಇವುಗಳಲ್ಲಿ ಕೆಲವು ಕೌನ್ಸಿಲಿನಲ್ಲಿ ತೀರ್ಮಾನವಾಗಿದೆ. ಇನ್ನು ಕೆಲವಕ್ಕೆ ಸ್ಪಷ್ಟವಾದ ಕಾರಣಗಳಿಗಾಗಿ ಏನೂ ಮಾಡಬೇಕಾದದ್ದಿಲ್ಲ.

ಠ. 5. ಸೇಂದಿ, ಸಾರಾಯಿ, ದೋಣಿ ಮತ್ತು ಸುಂಕದ ಕಂಟ್ರ್ಯಾಕ್ಟುಗಳಿಗೂ, ಗೇಣು ಮಲೆ ಕಂದಾಯದ ಜಾಮೀನಿಗೂ ಭೂಮಿ ಗಿರ್ವಿ ತೆಗೆದುಕೊಳ್ಳಬಾರದು. ಗಿರ್ವಿ ಮಾಡಿದ್ದರೂ ಹರಾಜು ಮಾಡಬಾರದು.

ಉ. ಸಾಧ್ಯವಾದಷ್ಟು ಮಟ್ಟಿಗೆ ಈ ಠರಾವನ್ನು ಜಾರಿ ಮಾಡಲಾಗಿದೆ. ಸೇಂದಿ ಸಾರಾಯಿ ಅಂಗಡಿಯವರಿಂದ ಜಾಮೀನ್ ತೆಗೆದುಕೊಳ್ಳುವದನ್ನು ಬಿಟ್ಟು ಅವರ ಕಂಟ್ರ್ಯಾಕ್ಟ್ ಮೊಬಲಗಿನ ಕೆಲವು ಭಾಗವನ್ನು ಡಿಪಾಜಿಟ್ಟು ಇಡಬೇಕೆಂತ ಮಾಡಲಾಗಿದೆ.

ಠ 8 ಬಾಗಮಂಡ್ಲ—ಮಡಿಕೇರಿ ರಸ್ತೆಯನ್ನು ಒಳ್ಳೇ ಸ್ಥಿತಿಯಲ್ಲಿ ಇಡಬೇಕು.

ಉತ್ತರ — ಕೆಲವು ಅಪಾಯಕರವಾದ ಮೂಲೆಗಳಲ್ಲಿ ಅಗಲ ಮಾಡುವುದಕ್ಕೆ 3500 ರೂ. ಯನ್ನು ಕೊಟ್ಟು ಕೋಪಟ್ಟಿ ಸೇತುವೆ ಕಟ್ಟಲು 6500 ರೂ. ವಿನ ಮಂಜೂರು ಮಾಡಲಾಗಿದೆ.

ಠ. 9. ಕೊಟ್ಟೂರು, ಭಾಗಮಂಡ್ಲ ಶಾಲೆಗಳನ್ನು ಪ್ರೈಮರಿ ಎಲಿಮೆಂಟರಿ ಶಾಲೆಗಳಾಗಿ ಮಾಡಬೇಕು.

16 ಡಿಸ್ಟ್ರಿಕ್ಟ್ ಬೋರ್ಡಿನವರು ಇಬ್ಬರು ಪ್ರಯಾಣ ಮಾಡುವ ಸಬ್ ಅಸಿಸ್ಟಾಂಟ್ ಸರ್ಜನರನ್ನು ನೇಮಿಸಬೇಕು. ಶನಿವಾರಸಂತೆ, ಮೂರ್ನಾಡು, ಬಾಳಲೆ ಈ ಸ್ಥಳಗಳಲ್ಲಿ ಆಸ್ಪತ್ರೆಗಳನ್ನು ಇಡಬೇಕು.

23. ಡಿಸ್ಟ್ರಿಕ್ಟ್ ಬೋರ್ಡ್ ಅಕ್ಟ್ ತಿದ್ದಲಿಕ್ಕೆ ನಿರ್ಧಾರ ಮಾಡದಿದ್ದದ್ದಕ್ಕೆ ಸಂಘವು ವಿಷಾದಿಸುತ್ತದೆ. ಡಿಸ್ಟ್ರಿಕ್ಟ್ ಬೋರ್ಡ್ ಚುನಾವಣೆ ಕೂಡಲೇ ಮಾಡಬೇಕು.

29 ಪೊನ್ನಂಪೇಟೆ ಬಳಿಯಿಂದ ಧನುಗಾಲ, ಬಾಳಜಿ, ಮಾಯಮುಡಿ, ನೊಕ್ಯ, ತಿತಿಮತಿಗಾಗಿ ಒಂದು ರಸ್ತೆ ಮಾಡಿ ಕೊಡಬೇಕು.

36. ಮಡಿಕೇರಿ—ಮೂರ್ನಾಡು ರಸ್ತೆಯಿಂದ ಕಟ್ಟೆಮಾಡಿಗಾಗಿ ಸಿದ್ದಾಪುರ ರಸ್ತೆಗೆ ಒಂದು ರಸ್ತೆ ಮಾಡಿಕೊಡಬೇಕು.

ಉತ್ತರ—ಈ ಠರಾವುಗಳು ಡಿಸ್ಟ್ರಿಕ್ಟ್ ಬೋರ್ಡಿಗೆ ಸಂಬಂಧಪಟ್ಟವು

ಠ 15 ಎಲ್ಲಾ ಪ್ರೈಮರಿ ಶಾಲೆಗಳಲ್ಲಿ ಕೈನೂಲು ಮಾಡಲು ಕಲಿಸಬೇಕು.

ಉತ್ತರ—ಈ ಠರಾವನ್ನು ಒಪ್ಪಲಾಗುವದಿಲ್ಲ. ಪ್ರೈಮರಿ ವಿದ್ಯಾಭ್ಯಾಸದಿಂದ ವಿದ್ಯಾರ್ಥಿಗಳಿಗೆ ಸಾಧಾರಣ ತಿಳುವಳಿಕೆ ಕೊಡುವ ಉದ್ದೇಶವೇ ಹೊರತು ಯಾವುದಾದರೂ ಒಂದು ಕಸುಬಿಗೆ ತಯಾರು ಮಾಡುವ ಉದ್ದೇಶವಲ್ಲ.

ಠ. 16 ಜಮ್ಮಾದ ಭೂಮಿಯನ್ನು 5 ವರ್ಷದ ವರೆಗೆ ವಾರ ಸಾಗುವಳಿಗೆ ಕೊಡಲು ಸರಕಾರಿ ಮಂಜೂರಾತಿ ಬೇಡವೆಂತ ರೂಲನ್ನು ತಿದ್ದಬೇಕು.

ಉತ್ತರ.—ಈ ಠರಾವನ್ನು ಒಪ್ಪಲಿಕ್ಕೆ ಆಗುವದಿಲ್ಲ.

ಠರಾವು 18. ಯಡವನಾಡಿನ ಜಮ್ಮಾದ ರೈತರಿಗೆ ಬಾಣೆ ಇಲ್ಲದ್ದರಿಂದ ಪೈಸಾರಿಯಿಂದ ಸೌದೆ ಸೊಪ್ಪು ಮುಂತಾದ ವ್ಯವಸಾಯದ ಅವಶ್ಯಕತೆಗಳನ್ನು ತೆಗೆದುಕೊಳ್ಳಲಿಕ್ಕೆ ಬಿಡಬೇಕು

ಉತ್ತರ.—ಠರಾವನ್ನು ಆಲೋಚನೆಗೆ ತೆಗೆದುಕೊಳ್ಳಲಾಗಿದೆ

ಠ 19 ಸೋಗಳಲೆ ಕರ್ಕಳ್ಳಿ, ನಾಲೆಯನ್ನು ರಿಪೇರಿ ಮಾಡಿ ಕೊಡಬೇಕು.

ಉ:—ಠರಾವಿನ ಮೇಲೆ ಕೆಲಸ ನಡಿಸಲಾಗಿದೆ.

ಠ 25. ಸ್ವಂತ ಜಾಗದಿಂದ ಗಂಧ ಕಿತ್ತು ತೆಗೆದುಕೊಂಡು ಹೋಗುವಾಗ ಫಾರೆಸ್ಟ್ ಇಲಾಖೆಯವರು ರಶೀತಿ ಕೊಡದೆ ತೆಗೆದುಕೊಂಡು ಹೋಗುತ್ತಾರೆಂತ ತಿಳಿದುಬಂದಿರುವದರಿಂದ ರಶೀತಿ ಕೊಡುವಂತೆ ಮಾಡಬೇಕು.

ಉ —ಠರಾವನ್ನು ಒಪ್ಪಿಕೊಳ್ಳಲಾಗಿದೆ. ಚೀಫ್ ಫಾರೆಸ್ಟ್ ಆಫೀಸರು ರಶೀತಿ ಕೊಡಬೇಕೆಂತ ಎಲ್ಲಾ ರೇಂಜ್ ಆಫೀಸರುಗಳಿಗೆ ಹುಕುಂ ಕೊಟ್ಟಿರುತ್ತಾರೆ.

ಠ. 26 ರಿಡೀಮ್ಡ್ ಜಾಗದಿಂದ ಗಂಧ ಕಿತ್ತಾಗ ಗಂಧದ ಕ್ರಯ ಮೊದಲೇ ಸರಕಾರಕ್ಕೆ ಸಂದಿದೆ ಎಂಬದನ್ನು ಮಾಲೀಕರು ರುಜುವಾತು ಪಡಿಸಬೇಕೆಂತ ಇಲಾಖೆಯವರು ಮಾಡುವದು ತಪ್ಪು. ಸರಕಾರದವರೇ ಗಂಧಕ್ಕೆ ಕ್ರಯ ಕೊಡಲಿಲ್ಲವೆಂಬದನ್ನು ರುಜುವಾತು ಮಾಡಬೇಕು

ಠ 31 ಕುಟ್ಟ, ಮಂಚಳ್ಳಿ, ಕುರ್ಚಿ, ಬೀರುಗ, ತೆರಾಲು, ಬಿರುನಾಣಿ, ಪರಕಟಗೇರಿ ಗ್ರಾಮಗಳ ಪಕ್ಕದಲ್ಲಿ ಇರುವ ಫಾರೆಸ್ಟ್ ಬೌಂಡ್ರಿಯು ರೈತರಿಗೆ ತೊಂದರೆಯನ್ನುಂಟುಮಾಡುವುದರಿಂದ 2 ಮೈಲು ದೂರಕ್ಕೆ ಹಿಂದಕ್ಕೆ ಹಾಕಬೇಕು

ಠ. 45 ಸಂಪಾಜೆ ಗ್ರಾಮದ ರೈತರು ಭೂಮಿ ವ್ಯವಸಾಯಕ್ಕೆ ಕಾಡು ಮರಗಳ ಸೊಪ್ಪು, ತರಗೆಲೆ, ಒಣ ಸೌದೆ ತರಲಿಕ್ಕೂ ಮತ್ತು ದನಗಳು ನಿರಾತಂಕವಾಗಿ ಮೇಯಿಸಲಿಕ್ಕೂ ರಿಜರ್ವ್ ಫಾರೆಸ್ಟಿನಲ್ಲಿ ಬಿಡಬೇಕು.

ಉ —ಈ ಮೂರು ಠರಾವುಗಳನ್ನು ಚೀಫ್ ಫಾರೆಸ್ಟ್ ಆಫೀಸರಿಗೆ ಕಳುಹಿಸಲಾಗಿದೆ.

ಠ 27. ದರಖಾಸ್ತು ಜಾಗದಲ್ಲಿ ಭೂಮಿ ಮಾಡಿದಾಗ ಯಾವ ಶರತ್ತೂ ಇಲ್ಲದೆ ಬಾಣೆ ಕೊಡಬೇಕು

ಉ.—ಠರಾವು ಅರ್ಥವಾಗಲಿಲ್ಲ. ರೆವಿನ್ಯೂ ರೂಲ್ 99ರ ಮೇರೆ ಬಾಣೆ ಕೊಡಬಹುದು.

ಠ 30. ಲಕ್ಷ್ಮಣತೀರ್ಥ ಹೊಳೆಗೆ ಅಣೆಕಟ್ಟು ಕಟ್ಟಿ ನಾಲ್ಕೇರಿ, ಕೋತೂರು, ಕುಮಟೂರು, ಬಾಡಗ, ಕುಟ್ಟಗೇರಿ ಮತ್ತು ಕಾನೂರು ಗ್ರಾಮಗಳಿಗೆ ನೀರು ಸರಬರಾಯಿ ಮಾಡಬೇಕು.

ಉ —ಈ ವಿಷಯವನ್ನು 1892ರಲ್ಲೇ ಆಲೋಚಿಸಿ ಸಾಧ್ಯವಿಲ್ಲವೆಂತ ಬಿಟ್ಟಿದೆ. ಹೇಗೂ ಪುನಃ ಆಲೋಚಿಸಿ ನೋಡಬಹುದು.

ಠ 33. ಮಡಿಕೇರಿಯಲ್ಲಿ ಕಂದಾಯದ ಹುಂಗಾಮಿನಲ್ಲಿ ಒಬ್ಬ ಶ್ಯಾನುಭೋಗರನ್ನು ಇಟ್ಟು ಕಂದಾಯ ವಸೂಲು ತೆಗೆದುಕೊಳ್ಳಬೇಕು.

ಉ.—ಹೀಗೆ ಮಾಡಿದರೆ ಅನೇಕ ತೊಂದರೆಗಳು ಸಂಭವಿಸುವುದರಿಂದ ಠರಾವನ್ನು ಅಂಗೀಕರಿಸಲಾಗುವದಿಲ್ಲ.

ಠ 34. ಕರೆಗಾಡು ಪೈಸಾರಿಯಿಂದಲೂ ಕಡಿಯುವ ಹಕ್ಕು ಕೊಡಬೇಕು.

ಉ.—ಪ್ರತಿಯೊಂದು ಸಾರಿಯೂ ಬರಕೊಂಡರೆ ಹುಕ್ಕುಂ ಕೊಡಲಾಗುವದು.

ಠ, 47. ಅಡಿಕೆ ಕಳವು ಬಹಳವಾಗುತ್ತಿರುವದರಿಂದ ಅದಕ್ಕೆ ಸಾಗಿಸುವವರು ಪೋಲೀಸರಿಂದ ರಹದಾರಿ ತೆಗೆದುಕೊಳ್ಳಬೇಕು.

ಉ.—ಕೊಡಗಿನಲ್ಲಿ ಅಡಿಕೆ ವಹಿವಾಟವು ಬಹಳ ಕಡಿಮೆಯಾದ್ದರಿಂದ ಠರಾವನ್ನು ಒಪ್ಪಿಕೊಳ್ಳಲಾಗುವದಿಲ್ಲ.

ಠ 51. ಮಡಿಕೇರಿ, ಕಾಕೋಟುಪರಂಬು, ಕೊಟ್ಟಪ್ಪಡು, ಮೂರ್ನಾಡು, ನಾಪೋಕ್ಲುಗಳಲ್ಲಿ ಸರ್ಕಲ್ ಮನಿಷ್ಟರುಗಳಿಗೆ ಉಳಕೊಳ್ಳಲಿಕ್ಕೆ ಸರಕಾರವು ಮನೆಗಳನ್ನು ಕಟ್ಟಿಸಿ ಕೊಡಬೇಕು.

ಉ.—ಕೆಲವು ವರ್ಷಗಳ ವರೆಗೆ ಹಣ ದೊರಕುವ ಪರ್ಯಂತರ ಕಾಯಬೇಕು

ಠ 59. ಕೋರ್ಟು ಕಚೇರಿಗಳಲ್ಲಿ ಕಕ್ಷಿಗಾರರನ್ನೂ ಸಾಕ್ಷಿಯವರನ್ನೂ ಕರೆಯುವಾಗ ಬಹುಮಾನದಲ್ಲಿ ಕರೆಯಬೇಕು.

ಉ. — ಸಾಧಾರಣವಾಗಿ ಹೀಗೆಯೇ ಮಾಡಲಾಗುತ್ತಾ ಇದೆ. ಠರಾವನ್ನು ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರಿಗೆ ಕಳುಹಿಸಲಾಗಿದೆ.

ಕ. 60. ಪರಾಧೀನಕ್ಕೆ ಜಾಣೆ ಬಾಗ ಕೊಡುವ ಸಮಯದಲ್ಲಿ ಟಿಂಬರ್ ಬಿಲ್ ವಸೂಲ್ ಮಾಡುವದು ರೆವಿನ್ಯೂ ರೂಲ್ 214ಕ್ಕೆ ವಿರೋಧವಾಗಿದೆ. ಮರ ಮಾರಾಟಮಾಡುವಾಗ ಮಾತ್ರ ಸದರಿ ರೂಲಿನಲ್ಲಿ ಹೇಳುವ ಮೇರೆ ಮರದ ಕ್ರಯ ವಸೂಲ್ ಮಾಡಬೇಕಷ್ಟೆ.

ಉ. ರಠಾವು ಸ್ಪಷ್ಟವಾಗಿಲ್ಲ. 214ನೇ ರೂಲ್, ಭೂಮಿಯಿಂದ ಜಾಣೆಯನ್ನು ವಿಂಗಡಿಸುವ ವಿಷಯದಾಗಿದೆ. ಮರದ ಕ್ರಯ ತೆಗೆದುಕೊಳ್ಳುವ ವಿಷಯವಲ್ಲ. ರೂಲ್ ನಂ. 99ಗೆ ಮೇರೆ ಬಾಗ ಮಂಜೂರ್ ಮಾಡಿದಾಗ ಮರದ ಕ್ರಯ ತೆಗೆದುಕೊಳ್ಳಲಾಗುವದಿಲ್ಲ.

ಒಬ್ಬರು ದೇಶಕಾರ್ಯಕ್ಕೆ ಬೆದರು.

ಮದ್ರಾಸ ಇಲಾಖೆಯಲ್ಲಿಯ ಕಾಂಗ್ರೆಸ ಅನುಯಾಯಿಗಳಾದ ಶ್ರೀ. ಬಿ. ಕೆ. ಕಿಟ್ಟಿಯವರು ತಮಗೆ ಸರಕಾರದವರು ಕೊಟ್ಟ ರಾವಬಹಾದ್ದೂರ ಪದವಿಯನ್ನು ಬಿಟ್ಟುಕೊಟ್ಟು, ಹೀಗೆ ಮಾಡಲಿಕ್ಕೆ ಒತ್ತಾಯಪಡಿಸಿದ ಕಾರಣಗಳನ್ನು ಸರಕಾರಕ್ಕೆ ತಿಳಿಸುವಪೊಂದು ಕಾಗದ ಬರೆದಿದ್ದಾರೆ. ಅದರಲ್ಲಿ ಅವರನ್ನುವದು.— ೧೯೧೯ನೇ ಇಸ್ವಿಯ ಹೊಸ ವರ್ಷದ ನಿಮಿತ್ತವಾಗಿ ಸರಕಾರದವರು ನನಗೆ ರಾವಬಹದ್ದೂರ ಪದವಿಯನ್ನು ಕೊಟ್ಟರು. ಆದರೆ ಮದ್ರಾಸ ಪ್ರಾಂತ್ಯದ ಪ್ರಕೃತದ ರಾಜಕಾರ್ಯದ ಬಗ್ಗೆ ನನ್ನ ಅಭಿಪ್ರಾಯವು ಪಲ್ಲಟ ಹೊಂದಿದ್ದರಿಂದ ಇನ್ನು ಮುಂದೆ ಬಿರುದನ್ನು ಧರಿಸುವದು ನನ್ನ ಮಟ್ಟಿಗೆ ಅಶಕ್ಯವಾಗಿದೆ. ತಮ್ಮ ದೇಶದೊಳಗೆ ಬ್ರಿಟಿಶರು ಎಷ್ಟು ಸ್ವತಂತ್ರರಾಗಿರುವರೋ, ಅಷ್ಟೇ ಹಿಂದೀಯರು ಹಿಂದು ದೇಶದೊಳಗೆ ಸ್ವತಂತ್ರರಾಗಿರಬೇಕೆಂದು ಯತ್ನಿಸುವಂಥ ಒಂದು ಸಂಗಡದೊಳಗೆ ನಾನೀಗ ಸೇರಿಕೊಂಡಿದ್ದೇನೆ. ಹಿಂದೂ ಜನರ ಬೇರೆ ವರ್ಗಗಳ ನಡುವಿನ ಹೊಂದಾಣಿಕೆಯ ಅಭಿವೃದ್ಧಿಯನ್ನು ಬೆಳೆಸಬೇಕೆಂದು ನನ್ನ ಮನಸ್ಸಿನ ಹಂಬಲ. ಅಂತರಾಷ್ಟ್ರೀಯ ಗಳಿಂದ ವ್ಯವಹಾರಕ್ಕೆ ಹಿಂದುದೇಶವನ್ನು ಸ್ವಯಂಶಾಸನ ಕ್ಕ ಮವನ್ನಾಗಿ ಮಾಡಬೇಕೆಂಬುವದಕ್ಕಾಗಿಯೇ ಈಗಿನ ಹೋರಾಟವು. ಒಬ್ಬರಿಯ ಸರಕಾರದವರಿಂದ ಸ್ವೀಕರಿಸಿದ ಬಿರುದು ನಮ್ಮ ಕಾರ್ಯದೊಳಗೆ ವಿಘ್ನವಾಗಿ ಪರಿಣಮಿಸುತ್ತದೆಂದು ತಿಳಿದುಕೊಂಡೇ ನಾನೀಗ ಬಿರುದನ್ನು ಬಿಟ್ಟಿದ್ದೇನೆ. ಸರಕಾರದ ಇಬ್ಬಗೆಯ ಆಳಿಕೆಯೂ, ಬೇರೆ ಬೇರೆ ಜಾತಿಗಳೊಡನೆ ಸರಕಾರದವರು ನಡಿಸಿದ ಸಹಕಾರವೂ ಇವುಗಳಿಂದಲೇ, ರಾಷ್ಟ್ರೀಯ ಧ್ಯೇಯವನ್ನು ಸಾಧಿಸುವ ದಾರಿಯು ಕಷ್ಟಸಾಧ್ಯವಾಗತೊಡಗಿದೆಯೇ ಹೊರತು ರಾಜಕೀಯ ಪಕ್ಷಭೇದಗಳಿಂದಲ್ಲ. ತಮ್ಮ ತಮ್ಮ ಜಾತಿಗಳ ಕ್ಷೇಮವನ್ನು ಲಕ್ಷ್ಯವಾಗಿಟ್ಟುಕೊಂಡು ಕೆಲಸ ಮಾಡುತ್ತಿರುವ ಪಂಗಡದವರ ಮತ್ತು ಸರಕಾರದವರ ಸಹಕಾರದಿಂದಲೇ ರಾಷ್ಟ್ರೀಯ ಧ್ಯೇಯವನ್ನು ಸಾಧಿಸುವ ದಾರಿಯಲ್ಲಿ ಕಸರು ಮನಸ್ಸಿನಲ್ಲಿಲ್ಲದ ಎಡರುಗಳುಂಟಾಗುತ್ತವೆ. ಜಾತಿ ಮತಗಳ ವಿಷಯದಲ್ಲಿ ತೂಕಗೆಟ್ಟ ಅಭಿಮಾನವನ್ನು ತಾಳಿ ಆ ಅಭಿಮಾನದಿಂದ ದೂಷಿತರಾದ ಪಂಗಡದವರ ಕೈಗೆ ಅಧಿಕಾರಗಳು ಸೇರಿದರೆ, ಆಳಿಕೆಯಲ್ಲಿ, ಪದಗೇಡಿತನ, ಒಬಗೇಡಿತನ, ಲಂಚಗುಳಿತನ ಅವೇ ಮುಂತಾದ ದೋಷಗಳು ವೃದ್ಧಿಯಾಗಿ ಪಡೆದುಬಿಡು ಕಟ್ಟಿಟ್ಟ ಮಾತೇಸರಿ. ಇಂಥ ಪಂಗಡದವರೊಡನೆ ಸಹಕರಿಸಿ ಅವರ ಕೈಗೆ ಅಧಿಕಾರ ಒಪ್ಪಿಸುವ ಸರಕಾರವೇ ಈ ದೋಷಕ್ಕೆಲ್ಲ ಹೊಣೆಗಾರನೆಂದು ಎಣಿಸಲ್ಪಡುವದರಲ್ಲಿ ಸಂದೇಹವಿಲ್ಲ. ಇವಕ್ಕೆಲ್ಲ ಉಪಾಯವೇನು? ಎಂದು ಕೇಳಿದರೆ, ಪರಕೀಯ ಅಥವಾ ವಿಶಿಷ್ಟ ಜಾತಿಯ ಅಭಿಮಾನದಿಂದ ಕಣ್ಣು ಕಟ್ಟಿದ ಸರಕಾರಕ್ಕೆ ಬದಲಾಗಿ ರಾಷ್ಟ್ರದ ಹಿತವನ್ನು ಹೆಗ್ಗುರಿಯನ್ನಿಟ್ಟುಕೊಂಡು ನಡೆಯುವ ಸರಕಾರದವರ ಕೈಗೆ ಅಧಿಕಾರಗಳನ್ನೊಪ್ಪಿಸುವದೇ ಇದಕ್ಕೆಲ್ಲ ಮದ್ದೆಂದು ಖಂಡಿತವಾಗಿ ಹೇಳಬಹುದು. ಈ ಮೇರೆ ಜನಾಂಗದವರ ಇಚ್ಛೆಯಂತೆ ಆರಿಸಲ್ಪಟ್ಟ ಸರಕಾರದವರ ಕೈಗೆ ಜನಾಂಗದ ಆಳಿಕೆಯ ಭಾರವು ಸೇರಿತೆಂದರೆ, ಜಾತಿ ಜಾತಿಗಳಲ್ಲಿ ಹುಟ್ಟುವ ಕಲಹಗಳು ತಮ್ಮಷ್ಟಕ್ಕೆ ತಾವೇ ಅಳಿದು ಹೋಗುವವೆಂಬುದು ಖಂಡಿತ.

ಕ ಪ್ರ.

ಆಂಧ್ರ ಆಯುರ್ವೇದಿಕ್ ಫಾರ್ಮಸಿ.

ಬ್ರ್ಯಾಂಚ್, ಬೆಂಗಳೂರು ಸಿಟಿ.

ಚ್ಯವನಪ್ರಾಸ ಲೇಹ.

ಇದು ಸರ್ವೋತ್ಕೃಷ್ಟವಾದ ಗಿಡಮೂಲಿಕೆಗಳಿಂದ ತಯಾರಿಸಲ್ಪಟ್ಟ ಆಯುರ್ವೇದ ರಸಾಯನೌಷಧವು. ವಿದ್ಯಾರ್ಥಿಗಳೂ ವಿಶೇಷವಾಗಿ ಬುದ್ಧಿಯನ್ನು ಪ್ರಯೋಗಿಸಿ ಕೆಲಸ ಮಾಡುವವರೂ ಈ ಲೇಹವನ್ನು ಸೇವಿಸಿದರೆ ವಿಶೇಷವಾಗಿ ಬುದ್ಧಿಶಕ್ತಿಯನ್ನೂ, ಜ್ಞಾಪಕಶಕ್ತಿಯನ್ನೂ ಹೊಂದುವರು. ದೀರ್ಘಕಾಲದ ವ್ಯಾಧಿಯಿಂದಾಗಲೀ ಕಟ್ಟ ನಡತೆಯಿಂದಾಗಲೀ, ಸ್ವಭಾವ ಶಕ್ತಿಯ ಕೊರತೆಯಿಂದಾಗಲೀ ಶರೀರ ಕಾಂತಿಯು ಕುಂದಿ ರಕ್ತ ಕೆಟ್ಟು ಇಂದ್ರಿಯ ದೌರ್ಬಲ್ಯವೇ ಮೊದಲಾದ ವಿಕಾರಗಳಿಂದ ಪೀಡಿತರಾಗಿರುವವರು ಈ ಲೇಹವನ್ನು ಸೇವಿಸಿದರೆ ಆ ತರದ ವಿಕಾರಗಳನ್ನೆಲ್ಲಾ ಪರಿಹರಿಸಿ ದೇಹಕ್ಕೂ ಮನಸ್ಸಿಗೂ ಉಲ್ಲಾಸವನ್ನುಂಟುಮಾಡಿ ಮಾಂಸ ಖಂಡಗಳಿಗೂ ನರಗಳಿಗೂ ಬಲವನ್ನು ಕೊಟ್ಟು ದೇಹಪುಷ್ಟಿಯನ್ನುಂಟುಮಾಡಿ ನವಚೈತನ್ಯವನ್ನುಂಟುಮಾಡುವುದು. ಅಲ್ಲದೆ ಆರೋಗ್ಯ ದೃಢಶರೀರವುಳ್ಳವನಾಗಿ ದೀರ್ಘಕಾಲ ಬದುಕುವನು. ಕೆಮ್ಮಲು, ಉಬ್ಬಸ ವ್ಯಾಧಿಯುಳ್ಳವರಿಗೂ ಮುಖ್ಯವಾಗಿ ಕ್ಷಯರೋಗಿಗಳಿಗೂ ಇದು ಸಂಜೀವಿನಿಯೇ ಸರಿ. ಚರಕ ಸಂಹಿತೆಯಲ್ಲಿ ಇದರ ಗುಣವು ಅದ್ಭುತವಾಗಿ ಹೇಳಲ್ಪಟ್ಟಿದೆ. ೧೦ ತೊಲೆಗೆ ೧ರೂಪಾಯಿ. ೪೦ ತೊಲೆಗೆ ೩ರೂಪಾಯಿ.

ಎಲ್ಲಾ ಕಡೆಯಲ್ಲಿಯೂ ಏಜಂಟರು ಬೇಕು.

ಸೂಚನೆ.—ಇಲ್ಲಿ ಶಾಸ್ತ್ರೀಯವಾದ ಎಲ್ಲಾ ಔಷಧಗಳೂ ಹೆಚ್ಚಾಗಿ [illegible] ಸಿಸ ಕ್ರಯಕ್ಕೆ ಸಿಗುವವು. ಆಯುರ್ವೇದ ಭೂಷಣ ಕೆ. ನಾರಾಯಣರಾವ್ ಎ. ಎಂ. ಎ. ಸಿ. ಯವರು ರೋಗಿಗಳನ್ನು ಪರೀಕ್ಷಿಸಿ ಪಕ್ಕ ಚಿಕಿತ್ಸೆಯನ್ನು ಪ್ರತಿದಿನವೂ ನಡಿಸುವರು. ವಿಶೇಷ ಸಂಗತಿಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಟಿ. ಸಿ. ಎಸ್. ಮುನಿಯಂ ಅಂಡ್ ಕೋ.,

ಮ್ಯಾನೆಜಿಂಗ್ ಏಜೆಂಟ್ಸ್, ಆಂಧ್ರ ಆಯುರ್ವೇದಿಕ್ ಫಾರ್ಮಸಿ

16—1 ಚಿಕ್ಕಪೇಟೆ, ಬೆಂಗಳೂರು ಸಿಟಿ

ಚಂದಾದಾರರಲ್ಲಿ ವಿಜ್ಞಾಪನೆ.

ಕಳೆದ ತಿಂಗಳು ನಮ್ಮ ಹೊಸ ವರ್ಷದ ಪ್ರಾರಂಭವಾದುದರಿಂದ ಸೋ ಮಿಯ್ಯರಿಗೆ ವಾಯಿದೆ ತೀರಿದ ಚಂದಾದಾರರು ಹಲವರಿರುವರು. ಮತ್ತು ಜೂನ್ ಆಖೈರಿಗೆ ವಾಯಿದೆ ತೀರಿದ ಚಂದಾದಾರರು ಅವರೆಗೆಲ್ಲಾ ವಾಯಿದೆ ತೀರುವದಕ್ಕೆ ಎರಡು ವಾರಕ್ಕೆ ಮುಂಚಿತವಾಗಿಯೇ ನೋಟೀಸು ಕಳುಹಿಸಿದ್ದೆವು. ಆ ಮೇಲೆ ಹಲವರು ತಮ್ಮ ಚಂದಾ ಹಣವನ್ನು ನಮಗೆ ಕಳುಹಿಸಿದಕ್ಕೆ ಅವರಿಗೆ ನಮ್ಮ ವಂದನೆಗಳಿವೆ. ಆದರೆ ಉಳಿದ ಕೆಲವರು ತಮ್ಮ ವಾರ್ಷಿಕ ಚಂದಾವನ್ನು ಕಳುಹಿಸದೆಯೂ, ಪತ್ರಿಕೆಯನ್ನು ಮುಂದರಿಸಬೇಕೋ ಬೇಡವೋ ಎಂಬುದನ್ನು ನಮಗೆ ತಿಳಿಸದೆಯೂ ಇರುವದು ವ್ಯಸನಕರ. ಕಳೆದ ವರ್ಷದ ಚಂದಾ ಬಾಕಿಗಳನ್ನು ಕೆಲವರು ಇನ್ನೂ ಪಾವತಿಮಾಡದೆ ಇರುವುದು ಮತ್ತಷ್ಟೂ ಶೋಚನೀಯ. ವಾರ್ಷಿಕ ಚಂದಕ್ಕೆ ವಿ. ಪಿ. ಮೂಲಕ ಪತ್ರಿಕೆಯನ್ನು ಹೊಂದಿಕೊಳ್ಳಲು ಇಚ್ಛಿಸುವವರು ತಿಳಿಸಿದಲ್ಲಿ ಹಾಗೆ ಕಳುಹಿಸಲಾಗುವದು. ವಿ. ಪಿ. ಗೆ 0—3—0 ಹೆಚ್ಚು ಚಾರ್ಜಾಗುವುದು. ಚಂದಾ ಬಾಕಿ ಇರುವವರು ಬಾಕಿಯನ್ನೂ, ವಾಯಿದೆ ತೀರಿ ಪತ್ರಿಕೆಯನ್ನು ಮುಂದರಿಸಬೇಕೆಂದಿರುವವರು ಈ ವರ್ಷದ ಚಂದಾವನ್ನು ಮುಂಗಡವಾಗಿಯೂ ನಮಗೆ ಕೂಡಲೆ ತಲುಪಿಸದೆ ಹೋದರೆ ಅವರಿಗೆ ಪತ್ರಿಕೆಯು ನಿಲ್ಲಿಸಲಾಗುವುದು. ಆದುದರಿಂದ ನಮ್ಮ ವಾಚಕ ಮಹಾಶಯರು ಈ ವಿಷಯಕ್ಕೆ ತುಂಬಾ ನಿಗ ಕೊಡಬೇಕಾಗಿ ಕೋರುತ್ತೇವೆ.

"ಕೊಡಗು" ಮೇನೇಜರ್,
ಮಡಿಕೇರಿ.

ವರ್ತಮಾನ ಸಂಗ್ರಹ.

ಒಳದೇಶ

ಸಹಕಾರಸಂಘಗಳ ರಿಜಿಸ್ಟ್ರಾರವರು ದಕ್ಷಿಣಕೊಡಗಿನಲ್ಲಿ ಹುದಿಕೇರಿಯಲ್ಲಿ ತಾ. 23ರಲ್ಲಿಯೂ, 25ರಲ್ಲಿ ಪೊನ್ನಂಪೇಟೆಯಲ್ಲಿಯೂ, ಯೂನಿಯನ್ ಮೀಟಿಂಗ್ ಮಾಡಿರುತ್ತಾರೆ.

ಕಾನ್ವೆಂಟ್ ಸ್ಕೂಲ್ ವಿದ್ಯಾರ್ಥಿನಿಯರಿಗೆ ಈ ತಾರೀಕು 1 ರಿಂದ ಮಳೆಗಾಲದ ರಜೆಕೊಟ್ಟು ಸ್ಕೂಲು ಮುಚ್ಚಲ್ಪಟ್ಟು ತಾರೀಕು 9—8—1926 ರಲ್ಲು ತೆರೆಯಲ್ಪಡುವುದು.

ಮಾ. ಕೋಟೇರ ಚೆಣ್ಣಪ್ಪನವರ ಮಾನ ನಷ್ಟದ ಕೇಸು ಕಳದ ತಾ. 30 ಮತ್ತು ಈ ತಾ. 1ರಲ್ಲು ವಿಚಾರವಾಗಿ ತಾ. 10ಕ್ಕೆ ಹಿಯರಿಂಗ್ ಇಡಲ್ಪಟ್ಟಿರುತ್ತೆ.

ಒಂದು ವಾರದಿಂದ ಬಿಸಿಲು ಜೋರಾಗಿ ಕಾಯುತ್ತಿರುವದರಿಂದ ಅನೇಕ ಕಡೆಗಳಲ್ಲಿ ನೀರಿಗೆ ಹೂಡಿದ ಬೀಜದ ಗದ್ದೆಗಳು ಒಣಗಿಹೋಗಿವೆ.

ವಿರಾಜಪೇಟೆ ಮುನಿಸಿಪಾಲಿಟಿ ವೈಸ್ ಪ್ರೆಸಿಡೆಂಟರಾದ ಮಾ. ತಿರುವಂಗಡಂತಿಳ್ಳಿಯವರ ಮೇಲೆ ಬೆಂಚ್ ಕೋರ್ಟಿನಲ್ಲಿಯೂ, ಪೋಲೀಸಿನಲ್ಲಿಯೂ ಫೈಲ್ ಮಾಡಿದ ಕ್ರಿಮಿನಲ್ ಮೊಕದ್ದಮೆಗಳನ್ನು ಫಿರ್ಯಾದಿಯು ಹಿಂದೆಗೆದಿರುತ್ತಾರೆ.

ಚೆಪ್ಪುಡಿರ ಮನೆಯವರಿಗಿದ್ದ ಕುಟುಂಬ ಭೂಮಿಯ ಸಂಬಂಧ ಮೊಕದ್ದಮೆಯಲ್ಲಿ ಪೊನ್ನಂಪೇಟೆ ಪಾರುಪತ್ತೆಗಾರರು ಕಳೆದವರ್ಷ ಕೆಲವರಿಗೆ ಆಕ್ರಮವೆಂದು ಜುಲ್ಮಾನೆ ಮಾಡಿದರು. ಅದು ಅಪ್ಪೀಲಿನಲ್ಲಿ ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರವರ ಕೋರ್ಟಿನಲ್ಲಿ ಈಗತಾನೇ ಕುಲಾಸಾಗಿದೆ.

ಕಳೆದ ವಿರಾಜಪೇಟೆಯ ಗಜೆಟೆಡ್ ಉದ್ಯೋಗಸ್ಥರ ವರ್ಗಾವರ್ಗಿಯ ವಿಷಯ ಆದ ಮೀಟಿಂಗಿನಲ್ಲಿ ಸರಕಾರ ನಾಮಕರಣರಾಗಿ ರಿಸರ್ವ್ ಪೊಲೀಸ್ ಇನ್ಸ್ ಪೆಕ್ಟರ್ ಮಾ. ಕೋದಂಡ ಬಿಯ್ಯಣ್ಣನವರು ಓಟುಮಾಡಿದ್ದು ಯಾವಕಾರಣದಿಂದೆಂಬುದಾಗಿ ಒಬ್ಬರು ತಿಳಿಸಬೇಕಾಗಿ ಬರೆದಿರುತ್ತಾರೆ.

ಡೆಪ್ಯುಟಿ ಡೈರೆಕ್ಟರ್ ಮತ್ತು ರಿಜಿಸ್ಟ್ರಾರವರಾದ ಮಾ. ಕೆ. ಎನ್. ಸುಬ್ರಾಯರವರು ಈ ತಾರೀಕು 1ರಿಂದ 1 ತಿಂಗಳ ಪರಿಗ ಅಥವಾ ಇನ್ನೊಂದು ಹುಕುಂ ಕೊಡುವ ವರೆಗೆ ರಜೆ ತೆಗೆದುಕೊಳ್ಳುವ ರಾಯಬಹದ್ದೂರ್ ಮಾ. ಕೇಟೋಳಿರ ಚಂಗಪ್ಪನವರ ಬದಲಿಗೆ ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರಾಗಿ 600 ರೂಪಾಯಿ ಸಂಬಳದಲ್ಲಿ ನೇಮಿಸಲ್ಪಟ್ಟಿರುವರು.

ಕೊಳತಡ ಬೈಗೋಡು ಗ್ರಾಮದ ಕೇರದ ಅಚ್ಚಯ್ಯನವರಲ್ಲಿ ಕರಿವರ್ಣದ ಬಂಗು ಗೇಣುದ್ದ ಕೊಂಬು, ಮುಖದಲ್ಲಿ ಬಿಳೀಚುಕ್ಕಿಗಳಿರುವ ಮಧ್ಯ ವಯಸ್ಸಿನ ಎತ್ತು ಒಂದು ಪರಾರಿಯಾಗಿ ಒಂದು ಸೇರಿರುವದಾಗಿಯೂ, ಒಡನೇ ಮಾಲೀಕರು ಒಂದು ಹಿಡಿದುಕೊಂಡು ಹೋಗಬೇಕೆಂದೂ ನಮಗೆ ಸೂಚಿಸಿರುತ್ತಾರೆ.

"ನಮ್ಮಲ್ಲು ಬಿಳೀವರ್ಣದ ಕುತ್ತಿಗೆಯಲ್ಲಿ ಸ್ವಲ್ಪ ಕೆಂಪು ವರ್ಣ ಇರುವ ಹಲ್ಲು ಇಕ್ಕದ ಕೋಡು ಇಲ್ಲದ ಹೋರಿ ಕರ ಒಂದು ಸಾಧಾರಣ 10 ದಿನಗಳಿಂದ ಈಚೆಗೆ ಒಂದು ಸ್ವೇಚ್ಛೆಯಾಗಿ ತಿರುಗುತ್ತಾ ಇದೆ." ಎಂತ ಮು. ರಾ. ಶ್ರೀ. ಹುಕ್ಕೂರು ಗ್ರಾಮದ ಮಾಳೇಟಿರ ಚಿಣ್ಣಪ್ಪನವರು ತಿಳಿಸಿರುತ್ತಾರೆ.

ಕೊಡ್ಲಿಪೇಟೆ ಪೋಸ್ಟ್ ಮಾಸ್ಟರು ಸುಮಾರು 300 ರೂಪಾಯಿ ಕ್ರಯದ ಪಾರ್ಸಲ್ ಗಳ ಹಣವನ್ನು ದುರುಪಯೋಗಪಡಿಸಿದರೆಂಬ ತಕ್ಷೀರುಗಳ ಮೇಲೆ ಕೊಡಗು ಸಬ್ ಜಡ್ಜ್ ಕೋರ್ಟಿನಲ್ಲಿ ವಿಚಾರ ನಡೆದು ಒಂದು ವರ್ಷ ಕಠಿಣ ಸಜ ಮತ್ತು 300 ಚಿಲ್ಲರೆ ರೂಪಾಯಿ ಜುಲ್ಮಾನೆ ವಿಧಿಸಿರುತ್ತಾರೆ. ಹಾಗೆ ಜುಲ್ಮಾನೆ ಕೊಡಲು ತಪ್ಪಿದರೆ ಹೆಚ್ಚಿಗೆ 6 ತಿಂಗಳು ಸಜ ಅನುಭವಿಸಬೇಕೆಂತಲೂ ಮಾಡಿರುತ್ತಾರೆ.

ಕಳೆದ ತಾರೀಕು 30ರಲ್ಲು ನಡೆದ ಕೊಡಗು ವಿದ್ಯಾಭಿವೃದ್ಧಿ ಸಂಘದ ಕಮಿಟಿ ಮೀಟಿಂಗಿನಲ್ಲಿ ಈ ಕೆಳಗೆ ಕಾಣಿಸಿರುವ ವಿದ್ಯಾರ್ಥಿಗಳಿಗೆ ಸ್ಕಾಲರ್ ಶಿಫ್ ಮಂಜೂರು ಮಾಡಿರುತ್ತಾರೆ.

1. ನೆಲ್ಲಮಕ್ಕಳ ಕರುಂಬಯ್ಯನವರು,
2. ಬೆಳಕರಂಡ ಕಾರ್ಯಪ್ಪನವರು,
3. ಮನೆಯಪಂಡ ಸಿ. ಮಾದಪ್ಪನವರು,
4. „ ಎಂ. ಪೂನ್ನಪ್ಪನವರು,
5. ಪುಲಿಯಂಡ ಜಿ. ಅಯ್ಯಪ್ಪನವರು, (ಬಿ. ಎ. ಕ್ಲಾಸ್.)

ಸ್ಯಾಂಡ್ಹರ್ಸ್ಟ್ ಮಿಲಿಟರಿ ಕಾಲೇಜಿಗೆ ಸೇರಲಪೇಕ್ಷಿಸುವ ಕೆಲವು ಹಿಂದೂಸ್ಥಾನದ ವಿದ್ಯಾರ್ಥಿಗಳು ಲಂಡನಿನಲ್ಲಿ ಇರುವ ಸೆಲೆಕ್ಷನ್ ಬೋರ್ಡ್ ಮುಂದೆ ಹಾಜರಾಗಿರುತ್ತಾರೆ. ಲಂಡನಿ

೧೦೦೦ ರೂಪಾಯಿಗಳ ಬಹುಮಾನ.

ಲೋಕಪ್ರಸಿದ್ಧವಾದ ಸಾಲಂಮಿಸ್ರಿ ಮುರಬ್ಬಾ.

ನಮ್ಮ ಟ್ರೇಡ್ ಮಾರ್ಕನ್ನು ನೋಡಿ ಈ ಔಷಧ ತೆಗೆದುಕೊಳ್ಳಿ

ಇದರ ಸೇವನೆಯಿಂದ ವೀರ್ಯವು ಸ್ರವಿಸಂತೆ ಇದ್ದರೂ, ಸ್ವಪ್ನೇಂದ್ರಿಯಪಾತರೂ, ಸ್ತ್ರೀ ಸಂಘಕ್ಕೆ ಮೊದಲೇ ಸ್ಖಲನವಾದರೂ, ಮೂತ್ರದೊಂದಿಗೆ ಹೋಗುತ್ತಿದ್ದರೂ ದೋಷರಹಿತವಾಗಿ ಶರೀರಕ್ಕೆ ಆರೋಗ್ಯವನ್ನೂ ಧಾರ್ಢ್ಯತೆಯನ್ನೂ ಆಯುಸ್ಸು, ಬಲ, ತೇಜಸ್ಸು ಉಂಟು ಮಾಡುವದು. ಅಜೀರ್ಣ ಮಲಬದ್ಧತೆ, ಮೆದುಳಿನ ಬಲಹೀನತೆ, ಕೈಕಾಲು, ಸೊಂಟ ನೋವುಗಳಿಗೆ ಇದು ದಿವ್ಯ ಔಷಧವು. ಈ ಸಾಲಂಮಿಸ್ರಿ ಎಂಬುವದು ಕಾಬೂಲ್ ಕಂದಾಹಾರ ಪ್ರಾಂತ್ಯದಲ್ಲಿ ಬೆಳೆಯುತ್ತದೆ.

ಈ ಔಷಧದಿಂದ ಗುಣಹೊಂದಿರುವ ಅನೇಕ ಮಹನೀಯರು ತಾವಾಗಿಯೇ ಅನೇಕ ದೇಶಗಳಿಂದಲೂ ಆಫ್ರೀಕ, ಬರ್ಮ, ಪಿನಾಂಗ್, ಸಿಂಗಪೂರ್, ಸಿಲೋನ್, ಬೊಂಬಾಯಿ, ಕಲ್ಕತ್ತಾ, ಮದ್ರಾಸು ಮತ್ತು ಇಂಡಿಯಾದೇಶದಲ್ಲಿ ಎಲ್ಲಾ ಸ್ಥಳಗಳಿಂದಲೂ ನಮಗೆ ಯೋಗ್ಯತಾ ಪತ್ರಿಕೆಗಳನ್ನು ಕಳುಹಿಸಿರುವರು. ಇವುಗಳ ನಕಲನ್ನು ಯಾರಾದರೂ ತರಿಸಿ ನೋಡಬಹುದು. ಇವುಗಳು ಸುಳ್ಳು ಎಂದು ನಿರ್ಧರಿಸುವವರಿಗೆ ಮೇಲೆ ಕಂಡ ಬಹುಮಾನವು ಕೊಡಲ್ಪಡುತ್ತೆ. ನಾವು ಹಾಗೆ ಕೊಡದೆ ನಿರಾಕರಿಸಿದಲ್ಲಿ ಕೋರ್ಟಿನ ಮೂಲಕ ಅದನ್ನು ಪಡೆಯಬಹುದು. ೧ ಡಬ್ಬವನ್ನು ೧೫ ದಿನ ಸೇವಿಸಿದ್ದಲ್ಲಿ ಗುಣವು ಖಂಡಿತವಾಗಿ ತೋರಬಹುದು. ೩ಯೂ ೩ ಡಬ್ಬಿಗಳು ಜನ್ಮಾಂತ್ರದವರೆಗೂ ಪೂರ್ಣವಾಗಿ ಗುಣವನ್ನುಂಟು ಮಾಡುವವು. ಹೆಸರು ವಿಳಾಸಗಳನ್ನು ವಿವರವಾಗಿ ಬರೆಯಬೇಕು. ಒಂದಾವರ್ತಿ ಉಪಯೋಗಿಸಿ ಮಾಡಿ ನೋಡಿದಲ್ಲಿ ಖಾತ್ರಿ ಉಂಟಾಗುತ್ತೆ.

ಕ್ರಯ ಡಬ್ಬಿ ೧ಕ್ಕೆ ರೂ. ೨—೦—೦ ಅಂಚೆ ಚಾರ್ಜು ೧ರಿಂದ ೩ ಡಬ್ಬಿಗಳಿಗೆ ೦—೮—೦ ಆಣೆ. ಏಜಂಟರುಗಳು ಎಲ್ಲಾ ಸ್ಥಳಗಳಲ್ಲಿಯೂ ಅವಶ್ಯಕವಾಗಿರುತ್ತೆ. ರೂಲ್ಸ್ ತರಿಸಿಕೊಳ್ಳಬಹುದು. ಆರ್ಡರು ಕೊಡತಕ್ಕ ಕಾಲದಲ್ಲಿ ಈ ಪತ್ರಿಕೆಯ ಹೆಸರನ್ನು ಬರೆಯಬೇಕು.

ಟೆಲಿಗ್ರ್ಯಾಫ್ ಅಡ್ರೆಸ್, ಮಿಸ್ರಿ, ಬೆಂಗಳೂರು ಸಿಟಿ, } **ಡಿ. ಮನ್ನಾಲಾಲ್, ದಿಲ್ಲಿ ಹೇಟಿನ ವೈದ್ಯರು,**
ಸಾಲಂಮಿಸ್ರಿ ಮುರಬ್ಬ ಡಿಪೋ,
ಬೆಂಗಳೂರು ಸಿಟಿ.

12—1

Supplement to this issue.



THE BRITISH TRADING Co.,

Post Box No. 1223. Madras.

ಬ್ರಿಟಿಷ್ ಟ್ರೇಡಿಂಗ್ ಕಂಪನಿ,

ಪೋಷ್ಟ್ ಬಾಕ್ಸ್, ನಂ. 1223, ಮದರಾಸು.

ಈ ನೋಟೀಸಿನಲ್ಲಿ ಇರುವ, ಗಡಿಯಾರಗಳು, ಸ್ಪೇಷಲಿಗಳು, ರೋಲ್ಡ್ ಗೋಲ್ಡ್ ಭಂಗಾರದ ಒಡವೆಗಳು ಬೇಕಾದರೆ, ಹ್ಯಾಗಾದರೂ ಖುದ್ದಾಗಿ ಕೊಳ್ಳುವದಕಿಂತಲೂ ಹೆಚ್ಚು ಸಂಬಳದಿಂದ ಕಳುಹಿಸುವೆವು. ಹಳಸ್ಕದವರು ಒಂದುಸಾರಿ ತರಿಸಿ ಪರೀಕ್ಷಿಸಿದಲ್ಲಿ ಸ್ವತಃ ವೇದ್ಯವಾಗುವದಲ್ಲದೆ ತಾವೇ ತಮ್ಮ ಸ್ನೇಹಿತರಿಗೂ ನಮ್ಮ ಶಾಪಿನ ವಿಷಯದಲ್ಲಿ ಶಿಫಾರಸ್ ಮಾಡುವಿರೆಂದು ಹೇಳಬಲ್ಲೆವು. ಇದ್ದಲ್ಲದೆ ಇರುವ ಸಾಮಾನುಗಳು ಬೇಕಾದರೆ ಮೇಲೆ ಕಾಣಿಸಿರುವ ವಿಳಾಸಕ್ಕೆ ಬರೆದು, ವಿ ಪಿ ಪೋಸ್ಟು ಮೂಲಕ ತರಿಸಿಕೊಳ್ಳಬಹುದು. ಇದಲ್ಲದೆ ನಮ್ಮ ಕಂಪನಿಯಲ್ಲಿ ಹಾರ್ಮೋನಿಯಂ, ಗ್ಯಾಸ್‌ದೀಪ ಮೊದಲಾದವುಗಳು ದೊರೆಯುತ್ತೇ, ಆರ್ಡರು ಮಾಡುವವರು ತಮ್ಮ ವಿಳಾಸವನ್ನು ಚೆನ್ನಾಗಿ ತಿಳಿಯುವಂತೆ ವಿವರವಾಗಿ ಬರೆಯಿರಿ.

ರೋಲ್ಡ್ ಗೋಲ್ಡ್ ರಿಸ್ಟ್‌ಲೆಟ್ ವಾಚ್.

ಈ ಹೊಸನಮೂನೆ ಗಡಿಯಾರಗಳು ವಿಲಾಯತಿಯಲ್ಲಿ ಬಹು ಬಲಿಷ್ಟವಾದ ಸಾಮಾನುಗಳಿಂದ ತಯಾರು ಮಾಡಲ್ಪಟ್ಟಿರುವದು

ಸರಿಯಾದ ಕಾಲವನ್ನು ತೋರಿಸುವದು, ನೋಡುವದಕ್ಕೆ ಅಂದವಾಗಿಯೂ ಚಿಕ್ಕದಾಗಿಯೂ ಇರುತ್ತೆ. ಇದನ್ನು ಸ್ತ್ರೀ ಪುರುಷರು ಕೈಲ್ಲಿ ಕಟ್ಟಿಕೊಳ್ಳಲು ಬಹು ಅಂದವಾಗಿರುವದು. ನೋಡುವದಕ್ಕೆ ಗಾರದ ಗಡಿಯಾರದ ಹಾಗೆ ಕಾಣುವದು, ನಾವು ಬಹಳ ತರಿಸುವದರಿಂದ ಸುಲಭ ಕ್ರಯಕ್ಕೆ ಕೊಡುತ್ತೇವೆ ಒಂದನ್ನು ತರಿಸಿ ನೋಡಿರಿ ಸಂತೋಷಪಡುವಿರಿ.

3 ವರುಷಗಳ ಗ್ಯಾರಂಟಿ ಸಹಿತ ರೂ 7-8-0

ಹೊಸತರಮೂರೆಯ ರಿಸ್ಟ್‌ವಾಚ್.

ಇವು ಈ ಚಿತ್ರದಲ್ಲಿರುವಂತೆಯೇ ಇರುವವು ಈ ಗಡಿಯಾರ ಬಹು ಬಲಿಷ್ಟವಾದ ಸಾಮಾನುಗಳಿಂದ ತಯಾರಿಸಿದೆ ಈ ಗಡಿಯಾರಗಳಲ್ಲಿ



ಗಂಟೆಯನ್ನು ತೋರಿಸುತ್ತೆ ಗಂಟೆತೋರಿಸುವ ನಂಬರು ರೇಡಿಯಂ ಎಂಬ ವಿದ್ಯುಚ್ಛಕ್ತಿ ಬೆಳಕು ಇರುವದು

ಕ್ರಯ 1ಕ್ಕೆ 6-8-0

ಕ್ಯಾರೆಟ್ ಭಂಗಾರದ ಕೈ ಗಡಿಯಾರ ಲೇಟೆಷ್ ನಮೂನೆ ಲೀವರ್ ರಿಷ್ಟವಾಚ್.

ಗಡಿಯಾರಗಳು ಈ ನಕ್ಷೆಯಲ್ಲಿರುವಂತೆಯೇ ಇರುವದು ಬಹು ಸುಂದರವಾದದ್ದು ಲೀವರ್ ಮೂವ್‌ಮೆಂಟ್ಸ್‌ಗಳಿಂದ ತಯಾರಿಸಿ ಕೆಂಪುಗಳ ಕೆತ್ತಿರುವದು ಕೈಯಲ್ಲಿ ಕಟ್ಟಲು ಬಹುಲಾಯಖ ಬಾದದ್ದು. ನೋಡಲಿಕ್ಕೆ ಭಾರಿ ಕ್ರಯದ ಗಡಿಯಾರದ ಹಾಗೆ ಕಾಣುವ ಕೈಯಲ್ಲಿ ಕಟ್ಟುವ ನ್ಯಾಯವಾದ ಪಟ್ಟಿ ಸಹಿತ ರೂ. 7 0



ರೋಲ್ಡ್ ಗೋಲ್ಡ್ ಭಂಗಾರದ ರೇಡಿಯಂ ರಿಸ್ಟ್‌ಲೆಟ್ ವಾಚ್ ನಂ, 75.

ಈ ಗಡಿಯಾರಗಳನ್ನು ಸೀಮೆ ಭಂಗಾರದಿಂದ ಅಮೇರಿಕಾದಲ್ಲಿ ತಯಾರಿಸಿದ್ದು ಇತರ ಗಡಿಯಾರಗಳಲ್ಲಿ ರಾತ್ರಿ ವೇಳೆ ನೋಡಬೇಕಾದರೆ ದೀಪ ಬೇಕು. ಆದರೆ ಈ ಗಡಿಯಾರ ಬೇಕಾಗಿಲ್ಲ. ಎಷ್ಟು ಕತ್ತಲಾಗಿದ್ದಾಗ್ಯೂ ಅಮ್ಮ ಸ್ಪಷ್ಟವಾಗಿ ದೀಪದ ಸಹಿತ ಗಂಟೆಯನ್ನು ತೋರಿಸುತ್ತೆ ಅಮೇರಿಕಾ ದೇಶದ ಗಡಿಯಾರಗಳು ಬಹಳ ದಿವಸ ಬಾಳಿ ಬರುವವು ಯಾರೇ ಆಗಲಿ ಗಡಿಯಾರಗಳಲ್ಲಿ ಬಹು ಬೇಗನೆ ಗಂಟೆಯು ತಿಳಿಯಬಹುದು ಇದಕ್ಕೆ 5 ವರುಷ ಗ್ಯಾರಂಟಿ ಕೊಡುವೆವು ಕೈಯಲ್ಲಿ ಕಟ್ಟುವ ಪಟ್ಟಿ ಸಹಿತ ಗಡಿಯಾರ 1ಕ್ಕೆ ರೂ. 10-8-0

ರೋಲ್ಡ್ ಭಂಗಾರದ 4 ಮೂಲೆಯ ರಿಷ್ಟ್ ವಾಚ್.

ನೈಸ್ಸು ನೋಡಲಿಕ್ಕೆ ಬಹು ಲಕ್ಷಣವಾಗಿರುವದು ಮೂವ್‌ಮೆಂಟ್ಸ್‌ಗಳಿಂದವಾಗಿ ಒಳಗೆ ಕೆಂಪು ಹರಳು. ಇಂಡಿಯಾ ದೇಶದಲ್ಲಿ ಎಲ್ಲ ಗಡಿಯಾರ ಅಂಗಡಿ ಯೋಗ್ಯತಾ ಪತ್ರಗಳು ಬಂದಿರುವದು. ಇದು ಒಂದು ನಿಮಿಷವಾದರೂ ವ್ಯತ್ಯಾಸವಿಲ್ಲದೆ ಕಾಲವನ್ನು ತೋರಿಸುವದು ...

ರೋಲ್ಡ್ ಗೋಲ್ಡ್ ಭಂಗಾರದ ಬ್ರೇಸ್‌ಲೆಟ್‌ವಾಚ್ ನಂ. 65.

ಈ ಹೊಸನಮೂನೆ ಗಡಿಯಾರಗಳು ಬಹಳ ಬಲಿಷ್ಟವಾದ ಲೀವರ್ ಸಾಮಾನುಗಳಿಂದ ಮಾಡಲ್ಪಟ್ಟದೆ ನೋಡಲಿಕ್ಕೆ ಭಂಗಾರದ ಗಡಿಯಾರದ ಹಾಗೆ ಕಾಣುವುದು. ಚಿಕ್ಕಸೈಜು, ಕೈಯಲ್ಲಿ ಕಟ್ಟಿಕೊಳ್ಳಲು ಬಹು ಅಂದವಾಗಿರುತ್ತೆ. ಇಂಗ್ಲೀಷ್ ನಮೂನೆ ಗಡಿಯಾರ ಗ್ಯಾರಂಟಿ 3 ವರ್ಷಗಳ ಕೊಡಲ್ಪಡುತ್ತೆ ಬ್ರೇಸ್‌ಲೆಟ್ ಸರಪಳಿಸಹಿತ ಗಡಿಯಾರ

1ಕ್ಕೆ ಕ್ರಯ ರೂ 8-0-0.

ಅಮೇರಿಕ ರೇಡಿಯಂ ಪಾಕೆಟ್ ವಾಚ್.

ಈ ಗಡಿಯಾರವು ಅಮೇರಿಕಾ ದೇಶದಲ್ಲಿ ತಯಾರಾದದ್ದು. ಒಳ್ಳೆಗಟ್ಟಿ ಸಾಮಾನುಗಳಿಂದ ತಯಾರಿಸಿದೆ. ಚಕ್ರಗಳಲ್ಲಿ ಕೆಂಪು ಕೆತ್ತಲ್ಪಟ್ಟಿದೆ, ಗಾಜಿರೂ ಸೇರದಂತೆ ಒಳಗೆ ಗ್ಯಾಸ್‌ದೀಪ ಇರುವದು. ಇದರಲ್ಲಿ ಯಾರೇ ಆಗಲಿ ಗಂಟೆಯನ್ನು ಬೇಗನೆ ಗುರುತು ಹಿಡಿಯಬಹುದು. ಸರಿಯಾದ ಕಾಲವನ್ನು ತೋರಿಸುವ ಗ್ಯಾರಂಟಿಯುಳ್ಳ ಗಡಿಯಾರ



ಕ್ರಯ 1ಕ್ಕೆ ರೂ 6-0-0

8 ದಿನಕ್ಕೆ ಒಂದುಸಲ ಬೀಗಕೊಡುವ ಪಾಕೆಟ್ ಲೀವರ್ ವಾಚ್.

(5 ವರ್ಷಗಳು ಗ್ಯಾರಂಟಿ)

ಈ ಗಡಿಯಾರಗಳು ಸ್ವಿಜರ್‌ಲ್ಯಾಂಡ್ ದೇಶದಲ್ಲಿ ತಯಾರಿಸಿದ್ದು ಒಂದಾವರ್ತಿ ಬೀಗಕೊಟ್ಟರೆ 8 ದಿನಗಳವರೆಗೂ ಒಂದೇ ಸಮನಾಗಿ ನಡೆಯುತ್ತಿರುವಂತೆ ಬಹು ಗಟ್ಟಿಯಾದ ಲೀವರ್ ಮೋವ್‌ಮೆಂಟ್ಸ್‌ಗಳಿಂದ ತಯಾರಿಸಿದ್ದು ಮೇಲುಗಡೆ ಬೀಗವಿರುವದು ಒಳಗಡೆ ಕೆಂಪುಗಳು ಕೆತ್ತಲ್ಪಟ್ಟಿದೆ.

ಕ್ರಯ ಗಡಿಯಾರ 1ಕ್ಕೆ ರೂ 13-0 0

ಬೆಳ್ಳಿಯದು 1ಕ್ಕೆ ರೂ 16-0 0

ಬಿಸ್ಟ್‌ಲೀವರ್ ಪಾಕೆಟ್ ವಾಚ್.

ಈ ಗಡಿಯಾರವು ಉತ್ತಮವಾದ ಸಾಮಾನುಗಳಿಂದ ತಯಾರಿಸಲ್ಪಟ್ಟದೆ ನೋಡಲಿಕ್ಕೆ ಒಳ್ಳೆ ಗಂಭೀರವಾಗಿಯೂ ಸುಂದರವಾಗಿಯೂ ಇದ್ದದು. ಇದರ ಎಲ್ಲಾ ಸಾಮಾನುಗಳು ಬಹು ನಾಜೂಕಾದ ಯಂತ್ರಗಳಿಂದ ತಯಾರಿಸಲ್ಪಟ್ಟದ್ದು ಇದನ್ನು ಜೇಬಿನಲ್ಲಿ ಹಾಕಿಕೊಂಡು ಎಷ್ಟು ದೂರ ಹೋದಾಗ್ಯೂ ನಿಲ್ಲದೆ ನಡೆಯುತ್ತಿರುವದು ಇನ್ನು ಸುಲಭಕ್ರಯಕ್ಕೆ ಇತರ ಕಂಪನಿಗಳಲ್ಲಿ ದೊರೆಯಲಾರದು ಇದರ ಕ್ರಯ ರೂ 5-4-0

ಅಚ್ಚ ಬೆಳ್ಳಿಯ ಪಾಕೆಟ್‌ಗಡಿಯಾರ.



ಈ ಗಡಿಯಾರವು ಬೆಳ್ಳಿಯಿಂದ ತಯಾರಿಸಿದೆ ಇದು ನೋಡಲಿಕ್ಕೆ ಬಹು ಲೇಯವಾಗಿಯೂ, ಜೇಬಿನ ಆಕಾರವಾಗಿಯೂ ಇರುವಂತೆ ಸ್ವಿಜರ್‌ಲ್ಯಾಂಡ್ ದೇಶದಲ್ಲಿ ಒಳ್ಳೆಲೀವರ್ ಕೆಲಸದಲ್ಲಿ ಬರೂ ನಿದೆ. ಇದರ ಹಿಂಭಾಗದಲ್ಲಿ ಅಂದವಾದ ಚಿತ್ರಕೆಲಸವಾಗಿದೆ ಸರಿಯಾದಕಾಲವನ್ನು ತೋರಿಸುವದು ಒಳಗಡೆ ದೊಳು ಗಾಜು ಇವುಗಳು ಸೇರದಂತೆ ಗ್ಯಾರಂಟಿ ದರ್ಜೆ ಎಂಬ ಮುದ್ರೆ ಇರುವದು ಬೆಲೆ 1ಕ್ಕೆ ರೂ 9-0-0

ಯಿಲೆಕ್ಟ್ರೋ ಪ್ಲೇಟೋ ಉಂಗುರವು.

ಈ ಉಂಗುರಗಳನ್ನು ಒಂದು ವಿಧವಾದ ಪಂಚಲೋಹದಿಂದ ತಯಾರಿಸಿ ಭಂಗಾರದ ಗಿಲೀಟು ಹಾಕಿದೆ ಆದರ ಮಧ್ಯದಲ್ಲಿ ಒಂದು ಖೊತಕನ್ನಡಿ ಇರುವದು ಅದರಲ್ಲಿ ನೋಡಿದರೆ ರಾಮ, ಕೃಷ್ಣ ಮುಂತಾದವರ ಛಾಯಾಪಟಗಳ ನೋಡಲು ಬಹು ರಮ್ಯವಾಗಿರುವದು ಇವು ಕರದು ಇದನ್ನು ಕೈಯಲ್ಲಿ ಹಾಕಿಕೊಂಡರೆ ...

ಜರ್ಮನ್ ರೇಡಿಯಂ ಪಾಕೆಟ್ ವಾಚ್.

ಈ ಗಡಿಯಾರಗಳು ಹೊಸದಾಗಿ ಸ್ವಿಜರ್‌ಲ್ಯಾಂಡ್ ದೇಶದಲ್ಲಿ (ಸ್ವಿಸ್ ಮೇಡ್) ತಯಾರಾದವು. ಬಹು ಬಲಿಷ್ಟವಾದ ಲೀವರ್ ಮೂವ್‌ಮೆಂಟ್ಸ್ ಗಳಿಂದಲೂ, ದೃಢವಾದ ಸಾಮಾನುಗಳಿಂದಲೂ ತಯಾರಾಗಿ ಒಳಗಡೆ ಕೆಂಪುಗಳು ಇಟ್ಟಿರುವದು ಇದರಲ್ಲಿ ಕತ್ತಲೆಯಲ್ಲಿ ದೀಪದ ಸಹಾಯವಿಲ್ಲದೆ ಗಂಟೆಯನ್ನು ನೋಡಬಹುದು. ಇದರ ಮೈಯಲಿನಲ್ಲಿ ರೇಡಿಯಂ ಎಂಬ ಒಂದು ವಿಧವಾದ ವಿದ್ಯುಚ್ಛಕ್ತಿಯನ್ನು ಇಟ್ಟಿರುವದರಿಂದ ಎಲೆಕ್ಟ್ರಿಕ್ ದೀಪದಂತೆ ಪ್ರಕಾಶಿಸುತ್ತಾ ಗಂಟೆಯನ್ನು ತೋರಿಸುವದು ಇವುಗಳು ನೋಡಲಿಕ್ಕೆ ಬಹು ಲಕ್ಷಣವಾಗಿಯೂ ಜೇಬಿಗೆ ಅಡಕವಾಗಿಯೂ ಇರುವವು ಇದಕ್ಕೆ ಖಾತ್ರಿಯಾದ 5 ವರುಷಗಳ ಗ್ಯಾರಂಟಿ ಕೊಡುವೆವು



ಕ್ರಯ 1ಕ್ಕೆ ರೂ 7-8-0.

ಜರ್ಮನ್ ಅಲಾರಂ ಟೈಂಪೀಸ್.

ಈ ಗಡಿಯಾರಗಳು ಜರ್ಮನ್ ದೇಶದಲ್ಲಿ ತಯಾರಿಸಿದ್ದು ಮೇಲುಗಡೆ ಎಂಜಿಗೂ ಕಪ್ಪಾಗದಂಥ ನಿಕ್ಕಲ್ ಬೆಳ್ಳಿ ಮುಳ್ಳಾಗಿರುವದು ಇದಕ್ಕೆ ಒಂದಾವರ್ತಿ ಬೀಗಕೊಟ್ಟರೆ 30 ಗಂಟೆಯು ಕಾಲ ನಡೆಯುವದು ಮತ್ತು ಖರಾರು ಗಂಟೆಯನ್ನು ತೋರಿಸುವದು, ಗಡಿಯಾರದ ಎತ್ತರ 7 ಅಂಗುಲ ವಿರುವದು ಗಂಟೆ ತೋರಿಸುವ ಡಯಲು 4 ಅಂಗುಲವಿರುವದು ಇದರಲ್ಲಿಯಾರೇ ಆಗಲಿ ಬಹು ಬೇಗನೆ ಗಂಟೆಯನ್ನು ಗುರುತು ಹಿಡಿಯಬಹುದು, ಎದು ಅಂಗಡಿ, ಸ್ಕೂಲು, ಮನೆ, ರೀಡಿಂಗ್‌ರೂಂ, ಗುಡಿ, ಮುಂತಾದವುಗಳಲ್ಲಿ ಇಡಲು ಬಹು ಲಾಯಖಾದದ್ದು. ಇದಕ್ಕೆ ಖಾತ್ರಿಯಾದ 5 ವರ್ಷ ಗ್ಯಾರಂಟಿ ಕೊಡುವೆವು.

ಕ್ರಯ 1ಕ್ಕೆ ರೂ 5-8-0. ಅಲಾರಂ ಇಲ್ಲದ್ದು 3-8-0

ಲಿಲ್ಲಿ ಆಫ್ ದಿ ವ್ಯಾಲಿ.

ಎಂಬ ಇಂಗ್ಲೀಷ್ ಸುಗಂಧ ದ್ರವ್ಯ ಇದು ಪುಷ್ಪಗಳ ಸಾರದಿಂದ ತಯಾರಾದದ್ದು ಒಂದೇ ಒಂದು ಬೊಟ್ಟನ್ನು ಬಟ್ಟೆಗಳ ಮೇಲೆ ವಸ್ತ್ರಗಳಿಗೆ ಹಾಕಿದರೆ ಒಂದು ವಾರದವರೆಗೂ ವಾಸನೆ ಹೋಗದೆ ಒಂದೇಸಮನಾಗಿ ಘಮಘಮಿಸುತ್ತಿರುವದು ಮತ್ತು ಇದರ ವಾಸನೆಯನ್ನು ಕಂಡವರ ಮನಸ್ಸಿನಲ್ಲಿ ಇದರ ಮೇಲೆ ಪ್ರೀತಿ ಹುಟ್ಟುವದು ...

ಆಗ ಮನಸ್ಸಿಗೆ ಬಲು ಸಂತೋಷಪಡಿಸುತ್ತದೆ ಬಹಳ ಹೇಳುವುದೇನು? ಒಂದನ್ನು ತರಿಸಿ ನೋಡಿದರೆ ಸಂತೋಷಪಡುವಿರಿ ಬಾ. 1ಕ್ಕೆ 2-0-0

ರಾಯಲ್ ಪಾಕೆಟ್ ಸೆಟ್.

ಈ ಪೆನ್ನಾಗಳು ಅಮೇರಿಕಾ ದೇಶದಲ್ಲಿ ತಯಾರಾದವು ಇದಕ್ಕೆ 14 ಕ್ಯಾರೆಟ್ ಭಂಗಾರದಂಥ ಮುಳ್ಳು ಇರುವದು ಇದರಲ್ಲಿ ಬರೆಯುವದರಿಂದ ಇತರ ಲೇಖಣಿಗಳಿಂದ ಬರೆಯುವಂತೆ ಪದೇಪದೇ ಶಾಹಿ ಅದ್ದುವ ಅವಶ್ಯಕವಿಲ್ಲ ... ಶಾಹಿ ತುಂಬಿದರೆ 10 ಪುಟಗಳವರೆಗೂ ಬರೆಯುವದು ... ಕೊಡುವೆವು ಜಪಾನಿನ ಸಹಿತ ಕ್ರಯ 1ಕ್ಕೆ ರೂ 3-0-0

ಬೆಳ್ಳಿ, ಭಂಗಾರ ತೂಗುವ ತಕ್ಕಡಿ.

ಇವುಗಳನ್ನು ಹಿತ್ತಾಳೆಯಿಂದ ತಯಾರಿಸಿದೆ ಇವುಗಳಲ್ಲಿ ಬೆಳ್ಳಿ, ಭಂಗಾರ, ಔಷಧ, ಮುಂತಾದವುಗಳನ್ನು ತೂಗಲು ಬಹುಲಾಯಖಾದದ್ದು ಇದರಲ್ಲಿ ಯಾವ ಪದಾರ್ಥವನ್ನೇ ಆಗಲಿ ತೂಗಬಹುದು ಒಂದು ಗುಲಗಂಜಿ ...

ಹಿಸ್ಮಿ ಗ್ರಾಮೋಫೋನ್.

ಎಂಬ ಹಾಡು ಗಾರಿಕೆಯ ಯಂತ್ರವು.

ಶಿಜ ಕ್ರಯ ರೂ. 35-0-0 ಈಗಿನ ಕ್ರಯ ರೂ. 13-0-0

ಈ ಯಂತ್ರವು ವಿಲಾಯತಿಯಲ್ಲಿ ತಯಾರಾದದ್ದು. ಇಂಗ್ಲೀಷು ಹಿಂದೂಸ್ತಾನಿ, ಇಂಗ್ಲೀಷು ವಾದ್ಯ ಮುಂತಾದ ಪದಗಳನ್ನು ಕೇಳುವದು ಲಗ್ನದಮನೆ ನಾಟಕಶಾಲೆ ಮುಂತಾದ ಸಕಲರೂ ಇರುವ ಸ್ಥಳದಲ್ಲಿ ಉಪಯೋಗವು ಬಹು ಚೆನ್ನಾಗಿದೆ ನೋಡಿದ ಕೂಡಲೆ ಆನಂದವಾಗುವಂತೆ ಯೂ, ಕ್ರಯ ಸುಲಭವಾಗಿಯೂ ಇರುವಂತೆ ಬಹಳ ಸೂಕ್ಷ್ಮವಾದ ಸಾಮಾನುಗಳಿಂದ ಯಂತ್ರವನ್ನು ತಯಾರಿಸಿದೆ. ಸುಂದರವಾದ ಮೆಟಲ್ ಹಾರನ್ ಎಂಬ ಧ್ವನಿ ನಳಿಕೆಯಿದೆ. ವಿನಾ ಕಾಸು ಯೂ, ಶೀಘ್ರವಾಗಿಯೂ ಪದ ಕೇಳಿಸಲು ಶಕ್ತಿಯಿದೆ. ಈ ಯಂತ್ರವು ಎಲ್ಲ ದೇಶದವರೂ ಕೈಯಲ್ಲಿ ಹಿಡಿದುಕೊಂಡು ಹೋಗಲು ಅನುಕೂಲವಾದಂಥ ಸುಂದರವಾದ ಕೈ ಪೆಟ್ಟಿಯಲ್ಲಿಟ್ಟಿದೆ ಬ್ಯುಲ್ ಸ್ಟೈಲ್ ಎರಡು ಕಡೆಯೂ ಪದವಿರುವ

1 ರೆಕಾರ್ಡ್ ಸಹಿತ ಕ್ರಯ ರೂ. 13-0-0.

ಪೆಟ್ಟಿಗೆ ರೆಕಾರ್ಡ್ ಬೇಕಾದರೆ, ಪ್ರತ್ಯೇಕ ರೆಕಾರ್ಡ್ 1ಕ್ಕೆ 2-0-0.

ಅಮೇರಿಕನ್ ಅಲಾರಂ ಟೈಂಪೀಸ್.

ಈ ಗಡಿಯಾರಗಳು ಅಮೇರಿಕಾ ದೇಶದಲ್ಲಿ ತಯಾರಾದವು. ಮೇಲುಗಡೆ ಬೆಳ್ಳಿಯಂತಿರುವ ಮುಚ್ಚಳವಿರುವದು. ಎಂದಿಗೂ ಕೆಟ್ಟುಹೋಗದು. ಕರಾರು ಗಂಟೆಯನ್ನು ತೋರುವದು. ವಾ ಗ್ಗೆ ಗಂಟೆಯನ್ನು ಸಹ ಬಾರಿಸುವದು ಬಹು ಬೇಗನೆ ಗಂಟೆಯನ್ನು ಕಂಡು ಹಿಡಿಯಬಹುದು ಅಂಗಡಿ, ಸ್ಕೂಲ್, ಮನೆ, ಗುಡಿಗಳಲ್ಲಿ ಇಡಲು ಬಹು ಚೆನ್ನಾಗಿರುವದು. ಇದಕ್ಕೆ ಮುಂಚಿತವಾಗಿ ಈ ಮಾದರಿ ಗಡಿಯಾರಗಳು ಎಲ್ಲಿಯೂ ಬಂದಿಲ್ಲ. ಕ್ರಯ 1ಕ್ಕೆ ರೂ. 5-0-0

ಅಲಾರಂ ಇಲ್ಲದ್ದು ರೂ. 3-8-0.

ಟ್ರೆಜರಿ ಎಂಬ ಕಬ್ಬಿಣದ ಪೆಟ್ಟಿಗೆಗಳು.

ಈ ಕಬ್ಬಿಣದ ಪೆಟ್ಟಿಗೆಗಳಿಗೆ ರಿಜಿಸ್ಟರಾದ ಬೀಗಗಳು ಹಾಕಿದೆ ಈ ನಮ್ಮ ಪೆಟ್ಟಿಗೆಗಳನ್ನು ಕನ್ನಡ ನಾಡಿನ ಎಲ್ಲಾ ವರ್ತಕರಲ್ಲಿಯೂ, ಬ್ಯಾಂಕುಗಳಲ್ಲಿಯೂ, ರೈಲ್ವೆ ಡಿಪಾರ್ಟುಮೆಂಟಿನಲ್ಲೂ ಮತ್ತು ಕಲ್ಲು ಪ್ಲಾ, ಕೋಂಟಾಯಿ ಮುಂತಾದ ದೊಡ್ಡ ದೊಡ್ಡ ಪಟ್ಟಣಗಳಲ್ಲಿಯು, ಉಪಯೋಗಿಸುತ್ತಿರುವರು. ಈ ನಮ್ಮ ಟ್ರೆಜರಿಯು ಮನೆಯಲ್ಲಿದ್ದರೆ ಬೆಂಕಿಯ ಭಯ, ಕಳ್ಳರ ಭಯ, ಇರುವದಿಲ್ಲ. ಮತ್ತು ಲಕ್ಷ್ಮೀಕಟಾಕ್ಷವೂ, ಮಂಗಳಕರವಾಗಿಯೂ ಇರುತ್ತೆ.



2 × 1½ × 1½	ಕ್ರಯ	ರೂ.	85-0-0.
2½ × 1½ × 1½	,,	,,	130-0-0.
3 × 2 × 2	,,	,,	160-0-0.
3½ × 2 × 2	,,	,,	270-0-0

ಪೆಟ್ಟಿಗೆ ಬೇಕಾದವರು ಪೆಟ್ಟಿಗೆ 1 ಕ್ಕೆ 30 ರುಪಾಯಿ ಅಡ್ವಾನ್ಸು ಕಳುಹಿಸಬೇಕು. ಆರ್ಡರು ಬಂದಕೂಡಲೆ ತಾವು ಬರೆಯುವ ರೈಲ್ವೆಸ್ಟೇಷನ್ನಿಗೆ ಪೆಟ್ಟಿಯನ್ನು ಕಳುಹಿಸಿರಸೀದಿಯನ್ನು ಬ್ಯಾಂಕಿನಲ್ಲಿ ವಿ. ಪಿ. ಮಾಡುತ್ತೇವೆ.

ಹೊಸ ನಮೂನೆ ಕೈ ಗಡಿಯಾರ,

ಹೊಸದಾಗಿ ಕಂಡುಹಿಡಿಯಲ್ಪಟ್ಟ ಈ ಇಂಗ್ಲೀಷು ನಮೂನೆ ರಿಸ್ಟ್‌ವಾಚ್‌ಗಳು ಪೆಟ್ಟಿಗೆಯ ಸಾಮಾನುಗಳಿಂದವಾಗಿದೆ. ಬಿಳಿ ರೇಡಿಯಂ ಕಂಪುಗಳು ಇಟ್ಟಿರುವವು ಗಂಟೆಯನ್ನು ಬಹು ಚೆನ್ನಾಗಿ ತೋರಿಸುವದು ಗಂಡಸರೂ ಹೆಂಗಸರೂ ಕೈಯಲ್ಲಿ ಕಟ್ಟಲು ಯೋಗ್ಯವಾದವು. ಇವಕ್ಕೆ ಪಟ್ಟಿಯನ್ನಾಗಲೀ ಅಥವಾ ಬೆಳ್ಳಿ ಭಂಗಾರದ ಸರಪಣಿಯನ್ನಾಗಲಿ ಉಪಯೋಗಿಸಲು ಪಕ್ಕದಲ್ಲಿ ಕೊಂಡಿಗಳು ಇರುವವು.

ಬೆಳ್ಳಿಯಕೇಸಿನವು ರೂ. 9-0-0. ಭಂಗಾರದ್ದು ರೂ. 10-8-0.

ಲೇಡೀಸ್ ಗೋಲ್ಡನ್ ಬ್ರೇಸ್‌ಲೆಟ್ ವಾಚ್.

(ಇಂಗ್ಲೀಷ್ ಹೆಂಗಸರು ಕೈಗಡಿಯಾರ)

ಈ ಗಡಿಯಾರಗಳು ಸ್ವಿಟ್ಜರ್‌ಲ್ಯಾಂಡ್ ದೇಶದಲ್ಲಿ ಗಡಿಯಾರಗಳನ್ನು ತಯಾರಿಸುವದರಲ್ಲಿ ಹೆಸರು ಪಡೆಯಿಸುವ ಹೊಂದಿದ ಕಂಪೆನಿಯಲ್ಲಿ ಚೆನ್ನಾಗಿ ಸರಿಸಮಾನವಾದ ಪಂಚಲೋಹದ ತಯಾರಿಸಿ ಸವರನ್ ಭಂಗಾರದ ಗಿಲೀಟು ಕೊಟ್ಟಿದೆ ಮೇಲುಗಡೆ ಸುತ್ತಲೂ ಕೆಂಪು ಹಸರು ಮುಂತಾದ ಇಮಿಟೇಷನ್ ವಜ್ರದ ಕಲ್ಲುಗಳನ್ನು ಇಟ್ಟಿರುವದು. ಇದು ನೋಡಲಿಕ್ಕೆ ಭಾರಿ ಕ್ರಯದ ಗಡಿಯಾರದಂತೆಯೂ, ಕೈಗೆ ಒಂದು ಆಭರಣವಾಗಿಯೂ ಇರುವದು. ಇದನ್ನು ನೋಡಿದವರು ನಿಜವಾದ ಭಂಗಾರವೆಂದೇ ಹೇಳುವರು. ಕಾಲವನ್ನು ಸ್ವಲ್ಪವೂ ವ್ಯತ್ಯಾಸವಿಲ್ಲದೆ ತೋರಿಸುವದು. ಚಿಕ್ಕವಾದ್ದು ಇವಕ್ಕೆ ಸ್ಪ್ರಿಂಗಿನ ಸರಪಣಿ ಇರುವದರಿಂದ ದೊಡ್ಡವರೂ ಚಿಕ್ಕವರೂ ಉಪಯೋಗಿಸಬಹುದು.

ಕ್ರಯ 1ಕ್ಕೆ ರೂ. 7-8-0.

18 ಕ್ಯಾರೆಟ್ ರೋಲ್ಡ್ ಗೋಲ್ಡ್ ಲೇಡಿಯೋ ರ್ಸ್ಟ್ ರಿಸ್ಟ್ ವಾಚ್.

ಇವು ಹೊಸದಾಗಿ ಬಂದವು. ಕೈಯಲ್ಲಿ ಕಟ್ಟಲು ಲಾಯಕ್ಕಾಗಿವೆ, ಇದರ ಮೂವ್‌ಮೆಂಟ್ಸ್‌ಗಳು ಬಹು ಬಲಿಷ್ಠವಾದ್ದು. ಕ್ರೌನ್ ಸೆಟ್, ಸರಿಯಾದ ಕಾಲವನ್ನು ತೋರಿಸುವದು ಚಿಕ್ಕದ್ದು, ನೋಡಲಿಕ್ಕೆ ಬಹು ಅಂದವಾಗಿರುವದು. ರಾತ್ರಿಯಲ್ಲಿ ಗಂಟೆ ನೋಡುವದಕ್ಕೆ ದೀಪ ಬೇಕಿಲ್ಲ. ಎಷ್ಟು ಕತ್ತಲಾಗಿದ್ದಾಗ್ಯೂ ಚೆನ್ನಾಗಿ ಸಹ ರೇಡಿಯಂ ನಿಂದ ಗಂಟೆಯನ್ನು ತೋರಿಸುವವು. ಇವಕ್ಕೆ 2 ವರುಷ ಗ್ಯಾರಂಟಿ ಇರುವದು. ಕ್ರಯ ರೂ. 9-0-0.

ಈ ಚಿತ್ರದಲ್ಲಿ ಕಾಣುತ್ತಿರುವಂತೆಯೇ ಇದನ್ನು ತಯಾರು... ಈ ಗಡಿಯಾರದ ಮೇಲೆ ಚಿತ್ರ ಕೆಲಸವಾಗಿ ಮೇಲುಗಡೆ ಬೇಗ ಇರುವುದು ಮತ್ತು ಕೈ ಯಲ್ಲಿ ಕಟ್ಟಲು 14 ಕ್ಯಾರೆಟ್ ಭಂಗಾರದ ಸ್ಪ್ರಿಂಗಿನ ಬೆಲ್ಟ್ ಇರುವುದು ಇದು ದೊಡ್ಡವರಿಗೂ ಚಿಕ್ಕವರಿಗೂ ಆಗುವಂತೆ ಅಂದವಾಗಿರುವುದು ಈ ಗಡಿಯಾರವು ಕೈಗೆ ಒಂದು ಆಭರಣವಾಗಿದೆ. ಇದನ್ನು ಗಂಡಸರು ಹೆಂಗಸರು ಸಹ ಕೈಯಲ್ಲಿ ಧರಿಸಬಹುದು ಇದರಬೆಲೆ ಕೈಯಲ್ಲಿ ಕಟ್ಟಿಕೊಳ್ಳುವ ಬ್ರೇಸ್‌ಲೆಟ್ ಸಹಿತ ಕ್ರಯ ರೂ. 7-0-0.

ಕಿಂಗ್ ಜಾರ್ಜ್ ಫೌಂಟೇನ್ ಪೆನ್

ಈ ಪೆನ್ನುಗಳನ್ನು ಲಂಡನ್ ಪಟ್ಟಣದಲ್ಲಿ ಪ್ರಖ್ಯಾತಿಯಾದ ಕಂಪೆನಿಯಲ್ಲಿ ತಯಾರಿಸಿದ್ದು. ಇದಕ್ಕೆ 14 ಕ್ಯಾರೆಟ್ ಭಂಗಾರದ ನಿಬ್ಬು ಮತ್ತು ಇ ರಿಡಿಯಂ ತುದಿಯು ಇ ರುವದು. ಇದರಲ್ಲಿ ಬರೆಯುವದರಿಂದ ಅಕ್ಷರಗಳು ಹಸನ್ಮುಖವಾಗಿ ಕಾಣುತ್ತವೆ ಮತ್ತು ಸಗಳಿಗಾಗಿ ಮುದ್ದಾಗಿ ಬರೆಯಬಹುದು. ಕ್ರಯ 1 ಕ್ಕೆ ರೂ. 2-4-0

ಎರಡು ಹಲಗಿನ ರೇಜರ್ಸ್ ಚಾಕು.

ಇವು ವಿಲಾಯತಿಯಲ್ಲಿ ತಯಾರಿಸಿದ್ದು. ಹಸನಾದ ಸ್ಟೀಲ್ ಎಂಬ ಲೋಹದಿಂದ ಬಹಳ ಹರಿತವಾಗಿ ತಯಾರಿಸಿದೆ. ಬೇಗನೆ ಕೆಡದು ನೋಡಲು ಚೆನ್ನಾಗಿರುವದು ಪೆಟಲ್ ಎಂಬ ದಂತದ ಹಿಡಿ ಇರುವದು.

ಕ್ರಯ 1 ಕ್ಕೆ 1-8-0. ನಂ 2 ರೂ 1-12-0.

ಟ್ರಾನ್ಸ್‌ಫರ್ ಪಿಕ್ಚರ್ಸ್.

ಈ ಚಿತ್ರಪಟಗಳು ಜರ್ಮನಿ ದೇಶದಲ್ಲಿ ತಯಾರಾದವು ಈ ಪಟಗಳಲ್ಲಿ ಎಲ್ಲಾ ವಿಧವಾದ ಹುವ್ವುಗಳು, ಅರಮನೆಗಳೂ, ದೇವರಪಟಗಳೂ, ಪ್ರಪಂಚದಲ್ಲಿರುವ ಎಲ್ಲಾ ರಾಜರುಗಳ ಪಟಗಳೂ, ನಗರಗಳೂ, ಪಕ್ಷಿಗಳೂ ಪಲ್ಲಕ್ಕಿಗಳೂ, ಆಕಾಶ ವಿಮಾನಗಳೂ, ಯುದ್ಧದಪಟಗಳೂ ಮುಂತಾದ ಎಲ್ಲಾ ವಿಧವಾದ ಚಿತ್ರಪಟಗಳು ಇರುವವು ಇವನ್ನು ಸ್ವಲ್ಪನೀರಿನ ಪುಸ್ತಕಗಳಲ್ಲಿ ಅಂಟಿಸಿಕೊಳ್ಳಬಹುದು ಕ್ರಯ ಡಜನ್ 1 ಕ್ಕೆ ರೂ. 1-0-0

ನಿಕ್ಕಲ್ ಬೆಳ್ಳಿಯ ಊದುವ ಪೀಪಿ.

ಇವುಗಳನ್ನು ನಿಕ್ಕಲ್ ಬೆಳ್ಳಿಯಿಂದ ತಯಾರಿಸಿದೆ ಇದನ್ನು ಊದಿದರೆ ಕೈಲು ಬಂಡಿ ಕೂಗುವಂತೆ ಕೂಗುವದು ಇದರ ಶಬ್ದವು ಸುಮಾರು ಒಂದು ಮೈಲಿಯವರೆವಿಗೂ ಕೇಳಿಸುವದು. ಇದು ಯಾವಾಗ್ಗೂ ಬೆಳ್ಳಿಯಂತೆ ಪ್ರಕಾಶವಾಗಿರುವದು. ಪೋಲೀಸ್ ರೈಲು ಕೆಲಸದವರಿಗೂ, ಇತರರಿಗೂ ಬೇಕಾದದ್ದು.

ಕ್ರಯ 1 ಕ್ಕೆ 1-0-0

ದುರ್ಬೀನು ಎಂಬ ದೂರದರ್ಶಕ ಯಂತ್ರ.

ಬಹಳ ದೂರದಲ್ಲಿರತಕ್ಕ ವಸ್ತುಗಳನ್ನು ಈ ಯಂತ್ರದಿಂದ ನೋಡಿದರೆ ಆ ವಸ್ತುಗಳು ಬಹಳ ಸಮೀಪದಲ್ಲಿರುವಂತೆ ತೋರುವುದಲ್ಲದೆ ಆಕಾರವು ದೊಡ್ಡದಾಗಿಯೂ, ಸ್ಪಷ್ಟವಾಗಿಯೂ ಕಾಣುವುದು.

ಇದರ ಬೆಲೆ 1 ಕ್ಕೆ ರೂ. 4-8-0.

ಯಲೆಕ್ಟ್ರಿಕ್ ಸಿಗಾರ್ ಲೈಟ್.

ಈ ದೀಪವು ವಿದ್ಯುತ್ಶಕ್ತಿಯು ಪೆಟ್ಟಿಯಿಂದ ಪ್ರಕಾಶವಾಗುವದಾಗಿ ಉರಿಯುತ್ತೆ. ಇದನ್ನು ಹಚ್ಚುವದಕ್ಕೆ ಬೆಂಕಿಕಡ್ಡಿ ಎಣ್ಣೆ, ಬತ್ತಿಯೂ ಅವಶ್ಯಕವಿಲ್ಲ. ದೀಪದ ಮೇಲಿರುವ ಚಕ್ರವನ್ನು ಸ್ವಲ್ಪತಿರುಗಿಸಿದರೆ ದೀಪವು ತಾನೇ ಹತ್ತಿಕೊಂಡು ಉರಿಯುವದು ಇದನ್ನು ನೋಡುವವರಿಗೆ ಆಶ್ಚರ್ಯವಾಗಿ ಕಾಣುತ್ತೆ, ಪ್ರಯಾಣಿಕರಿಗೂ ಕತ್ತಲೆಯಲ್ಲಿ ತಿರುಗಾಡುವವರಿಗೂ ಬಹು ಉಪಕಾರಿಯಾದದ್ದು. ಮತ್ತು, ಬೀಡಿ, ಸಿಗರೇಟು, ಮುಂತಾದವುಗಳನ್ನು ಅಂಟಿಸಲು ಬಹು ಅನುಕೂಲವಾದದ್ದು. ಇದು ಬಂದಿದ್ದ ರೀಯವಾಗಿ ಕ್ಕಾ ಬೆಂಕಿ ಕಡ್ಡಿಯು ಬೇಕಾಗುವುದಿಲ್ಲ.

ಕ್ರಯ 1 ಕ್ಕೆ 1-4-0.

ಕಾಂಬಿನೇಷನ್ ಚಾಕು.

ಇವು ಅಮೇರಿಕಾದೇಶದಲ್ಲಿ ತಯಾರಾದವು. ಇದರಲ್ಲಿ 14 ವಿಧವಾದ ಆಯುಧಗಳು ಇರುವವು. ಈ ಆಯುಧಗಳನ್ನು ಕಾಸಾದ ಉಕ್ಕಿನಿಂದ ಬಹು ಹರಿತವಾಗಿ ತಯಾರಿಸಿದೆ. ದಂತದಹಿಡಿ ಇರುವದು, ಇದು ಪ್ರತಿಯೊಬ್ಬರಲ್ಲಿಯೂ ಇರಬೇಕಾದದ್ದು.



ಕ್ರಯ 1 ಕ್ಕೆ 2-4-0.



ಗಳ ಅವಶ್ಯಕವಿಲ್ಲ, ಇದು ಪ್ರತಿ ... ಇರಬೇಕಾದದ್ದು. 1 ಪೌಂಡ್ ನಿಂದ 100 ಪೌಂಡುಗಳವರೆವಿಗೂ ತೂಗುವದು.

25 ಪೌಂಡುಗಳ ತಕ್ಕಡಿ	1 ಕ್ಕೆ			2-0-0.
50	,,		,,	4-4-0.
100	,,		,,	4-4-0.

ಹೊಸ ನಮೂನೆಯ ಬೈಯಸ್ಕೋಪ್ ಯಂತ್ರ.

ಇವು ಹೊಸದಾಗಿ ಜರ್ಮನಿ ದೇಶದಲ್ಲಿ ತಯಾರಾಗಿ ಬಂದವು ಇದರ ಕೆಳಭಾಗದಲ್ಲಿ ಕಾಣುವ ಕಂಡಿಯನ್ನು ತಿರುಗಿಸುತ್ತಿದ್ದರೆ ಬಯಸ್ಕೋಪಿನಲ್ಲಿ ಕಂಡಂತೆಯೇ ಬಹು ಆಶ್ಚರ್ಯವಾದ ಚಿತ್ರಪಟಗಳು ಕಾಣುವವು, ಇದರಲ್ಲಿ ಇಂಗ್ಲೀಷ್ ಸ್ತ್ರೀ ಪುರುಷರ (ಡ್ಯಾನ್ಸ್) ಜಾತ್ರೆಗಳು ಇರುವದು, ಆಕಾಶವಿಮಾನ ಸಂಚರಿಸುವದು, ಮೋಟಾರ್ ಮತ್ತು ಕುದುರೆಗಳ ಜೂಜು, ಲಂಡನ್ ಮತ್ತು ಪಾರೀಸ್ ದೇಶದಲ್ಲಿರುವ ದೊಡ್ಡದೊಡ್ಡ ರಾಜಬೀದಿಗಳೂ, ಮತ್ತು ಗುಡಿಗಳು, ಎಲ್ಲಾ ರಾಜರುಗಳ ಪಟಗಳೂ ಇನ್ನೂ ಅನೇಕ ವಿಧವಾದ ಸುಂದರ ಚಿತ್ರಪಟಗಳು ಇರುವವು ಇದರಲ್ಲಿ ನೋಡಿದರೆ ಬಯಸ್ಕೋಪಿನಲ್ಲಿ ಚಿಕ್ಕ ಮೇಲೆ ನೋಡಿದಂತೆಯೇ ಇರುವದು ಸಂತೆಗಳಲ್ಲಿಯೂ, ಹಬ್ಬ, ಜಾತ್ರೆಗಳಲ್ಲಿಯೂ ಒಂದುವರಿಗೆ ತೋರಿಸಿ ಹಣ ಸಂಪಾದಿಸಬಹುದು.

ಕ್ರಯ 1 ಕ್ಕೆ 1-3-0

ಟಾರ್ಚ್‌ಲೈಟ್ ಎಂಬ ವಿದ್ಯುಚ್ಛಕ್ತಿಯ ದೀಪ

ಈ ದೀಪಗಳು ಅಮೇರಿಕಾ ದೇಶದಲ್ಲಿ ತಯಾರಾದವು ಇವನ್ನು ಅಂಟಿಸಲಿಕ್ಕೆ ಬೆಂಕಿಕಡ್ಡಿ ಎಣ್ಣೆಯಾವುದೂ ಬೇಕಿಲ್ಲ ಇದರ ಮಧ್ಯದಲ್ಲಿರುವ ಗುಂಡಿಯನ್ನು ಅದುಮಿದರೆ ತನ್ನಷ್ಟಕ್ಕೆ ತಾನೇ ಉರಿಯುವದು ಬೆಂಗಳೂರು, ಮೈಸೂರು, ಮದರಾಸು, ಬೊಂಬಾಯಿ ಮುಂತಾದ ದೊಡ್ಡ ನಗರಗಳಲ್ಲಿ ಇರುವ ವಿದ್ಯುಚ್ಛಕ್ತಿಯ ದೀಪಗಳಂತೆಯೇ ಇವು. ದೇಶದಾಗ ಉಪಯೋಗಿಸಿ ನಂತರ ಜೇಬಿನಲ್ಲಿ ಇಟ್ಟುಕೊಳ್ಳಬಹುದು ರಾತ್ರಿಯಲ್ಲಿ ಸಂಚರಿಸುವವರಿಗೂ ಮತ್ತು ಇತರರಿಗೂ ಬಹು ಪ್ರಯೋಜನವಾದದ್ದು ಕ್ರಯ 1 ಕ್ಕೆ



ಅಮೇರಿಕನ್ ಪ್ರಿಂಟಿಂಗ್ ಬಾಕ್ಸ್ ಎಂಬ ಇಂಗ್ಲೀಷ್ ರಬ್ಬರಿನ ಅಕ್ಷರಗಳು

ಈ ಅಕ್ಷರಗಳು ಅಮೇರಿಕಾದಲ್ಲಿ ತಯಾರಾದವು. ಇವುಗಳಿಂದ ಕಾಗದ ಮುಂತಾದವುಗಳನ್ನು ಕಷ್ಟವಿಲ್ಲದೆ ಬಹು ಅಂದವಾಗಿ ನಾವೇ ಪ್ರಿಂಟು ಮಾಡಿಕೊಳ್ಳಬಹುದು ಈ ಪೆಟ್ಟಿಗೆಯೊಂದು ಇದ್ದರೆ ರಬ್ಬರು ಮೋಹರುಗಳ ಅಗತ್ಯವೇ ಇಲ್ಲ. ಇದರಲ್ಲಿ ಇಂಕ್‌ಪ್ಯಾಡ್, ಚಿಮಟ, ಇಂಕ್‌ಬಾಟಲ್ ಸಹಿತ ಸೇರಿದೆ ಈ ಪೆಟ್ಟಿಗೆ ಒಂದು ಇದ್ದರೆ ಬೇಕಾದ ಮುದ್ರಣವನ್ನು ನಾವೇ ಮಾಡಿಕೊಳ್ಳಬಹುದು.



,, 170 ಅಕ್ಷರಗಳಪೆಟ್ಟಿ ರೂ. 1-

,, 250 ,, ,, ,, 2-

,, 350 ,, ,, ,, 3-

ಯಲೆಕ್ಟ್ರಿಕ್ ಫೋಟೋ ಉಂಗುರ

ಈ ಉಂಗುರಗಳನ್ನು ಒಂದು ವಿಧವಾದ ಲೋಹದಿಂದ ಭಂಗಾರದ ಗಿಲೀಟು ಮಾಡಿದೆ. ಇದರ ಮಧ್ಯದಲ್ಲಿ ಕಣ್ಣು ಇಡುವದು ಅದರಲ್ಲಿ ನೋಡಿದರೆ ಹಿಂದೂ ದೇವರುಗಳು, ದೇವಾಲಯಗಳು, ದೊಡ್ಡದೊಡ್ಡ ಸ್ತ್ರೀಯರು, ಮಹಾತ್ಮಾಗಾಂಧಿ, ಪ್ರಪಂಚದ ಎಲ್ಲಾ ರಾಜರು ಕಾಣುತ್ತಾರೆ. ನೋಡಲು ಬಲು ರಮ್ಯವಾಗಿರುವದು, ಬಹಳ ಕೆಡದು. ಇದನ್ನು ಕೈಯಲ್ಲಿ ಬಹು ಚನ್ನಾಗಿರುವದು, ಕ್ರಯ 1 ಕ್ಕೆ

ಮೋಟಾರ್, ರೈಲು ಬಂಡಿಗಳು

ಇವು ... ದಲ್ಲಿ ತಯಾ... ಬಣ್ಣದ... ತಿರುಗಿಸಿ... ನಿಜವಾದ... ಗಳೂ... ಎರಡು... ರೋಡು... ನನೆ ಬಿ... ತನ್ನ... ಬಹಳ... ಕ್ರಯ

ಬ್ರಿಟಿಷ್ ಟ್ರೇಡಿಂಗ್ ಕಂಪನಿ, ಪೋಸ್ಟ್ ಬಾಕ್ಸ್ ನಂ. 12 ಮದರಾಸು

ಹಾಸವಾಗಿಸಿಯು

ವಿಲಾಯತಿಯ ಬೀಗ.



ಈ ಬೀಗನನ್ನು ಅಮೇರಿಕಾದೇಶದಲ್ಲಿ ಹಿತ್ತಾಳೆಯಿಂದ ತಯಾರಿಸಿದ್ದು ಇದನ್ನು ಈ ತರಲೂ ತೆಗೆಯಲೂ ಬೀಗದ ಕೈ ಬೇಕಿಲ್ಲ. ಇದರಲ್ಲಿ ಕಾಣುವ ಅಕ್ಷರಗಳನ್ನು ಒಂದು ಹೆಸರಿಗೆ ಸರಿಯಾಗಿ ನಿಲ್ಲಿಸಿದರೆ ತನ್ನಷ್ಟಕ್ಕೆ ತಾನೇ ತೆರೆದುಕೊಳ್ಳುವದು. ನಂತರ ಅಕ್ಷರಗಳನ್ನು ಬದಲಾಯಿಸಿದರೆ ತೆಗೆಯಲು ಆಗುವದಿಲ್ಲ. ಈ ಬೀಗಗಳನ್ನು ಉಪಯೋಗಿಸುವದರಿಂದ ಕಳ್ಳರ ಭಯವಿರುವದಿಲ್ಲ

ಕ್ರಯ 1 ಕ್ಕೆ 2-4-0.

ವಿಲಾಯತಿ ಕನ್ನಡಕಗಳು.

ಇದನ್ನು ದೊಡ್ಡವರು ಚಿಕ್ಕವರು ಸಹ ಉಪಯೋಗಿಸಬಹುದು. ಇದನ್ನು ಉಪಯೋಗಿಸುವದರಿಂದ ಕಣ್ಣುಗಳು ಯಾವಾಗಲೂ ತಂಪಾಗಿರುವದು ಮತ್ತು ಗಾಳಿ ಮಣ್ಣು ಮುಂತಾದವುಗಳು ಕಣ್ಣಿಗೆ ಬೀಳದಂತೆ ಪಕ್ಕಗಳಲ್ಲಿ ಬಲ್ಲೆಗಳಿರುವದು. ಇದರ ಕಂಬಿಗಳು ಯಾವಾಗಲೂ ಬೆಳ್ಳಿಯಂತಾಗಿ ಇರುವದು, ಇದರಲ್ಲಿ ಹಸರು ಊದಮೋಗವರ್ಣ ಮೊದಲಾದವುಗಳಿರುವದು

ಕ್ರಯ ನಂ. 1 ಕ್ಕೆ 1-12-0. ನಂ. 2 ಕ್ಕೆ 2-8-0.

ಗೆಜ್ಜೆ ಗಳು.

ಈ ಗೆಜ್ಜೆಗಳು ಕಂಚಿನಿಂದ ತಯಾರಿಸಿದೆ. ಇವುಗಳನ್ನು ಪ್ರತಿಯೊಬ್ಬರಿಗೂ ಅಂದರೆ ನಾಟಕ ಕಂಪನಿ, ದಾಸರು, ದನಕರುಗಳಿಗೆ ಕಟ್ಟಲು ಬಹು ಚೆನ್ನಾಗಿದೆ. ಕ್ರಯ ಅರನೆಲ್ಲಿ ಕಾಯಿ ಗೆಜ್ಜೆ 100 ಕ್ಕೆ 2-0-0.

„ ಮಂತ್ರುಕಪ್ಪೆ ಗೆಜ್ಜೆ „ 3-8-0.

ರೇಷ್ಮೆಯ ರೋಜಾ ಹೂವುಗಳು.

ಈ ರೋಜಾಹೂವುಗಳನ್ನು ಹಸರು ರೇಷ್ಮೆಬಟ್ಟೆಯಲ್ಲಿ ತಯಾರಿಸಿ ಮೇಲುಗಡೆ ಬೆಳ್ಳಿ, ಬಂಗಾರದ ಚುಕ್ಕಿ ಕೆಲಸ ಮಾಡಿರುವರು. ಇವನ್ನು ನೋಡಿದವರು ನಿಜವಾದ ರೋಜಾಹೂವೆಂದೇ ಹೇಳುವರು. ಇವು ಎಷ್ಟು ವರುಷಗಳಾದರೂ ಕೆಡವು. ಜಡೆಬಿಲ್ಲೆ ಬದಲಾಗಿ ಇವನ್ನು ಉಪಯೋಗಿಸ ಬಹುದು

ಕ್ರಯ 1 ಕ್ಕೆ 0-12-0.

ರೋಲ್ಡ್ ಗೋಲ್ಡ್ ಭಂಗಾರದ ಉಂಗರಗಳು.



ಈ ಉಂಗರಗಳನ್ನು ಸೀಮೆಭಂಗಾರದಿಂದ ತಯಾರಿಸಿ ಮೇಲುಗಡೆ ಎಂದಿಗೂಬಣ್ಣ ಹೋಗದಂತೆ ಎಲೆಕ್ಟ್ರಿಕ್ ಶಕ್ತಿಯಿಂದ ಅಪರಂಜಿಭಂಗಾರದ ಗಿಲೀಟುಮಾಡಿದೆ, ಮೇಲು ಭಾಗದಲ್ಲಿ ಕೆಂಪು, ಹಸರೂ ಮುಂತಾದ ಇಮಿಟೇಷನ್ ವಜ್ರದಕಲ್ಲುಗಳು ಇಟ್ಟುಕಟ್ಟಿರುವದು ನೋಟಕ್ಕೆ ನಿಜವಾದ ವಜ್ರದ ಉಂಗರವೆಂದೇ ಹೇಳಬೇಕು. ಬೇಕಾದವರು ಬೆರಳಿನ ಅಳತೆಯನ್ನು ಕಳುಹಿಸಿರಿ,

ಕ್ರಯ 1 ಕ್ಕೆ 0-12-0 ಡಜನ್ 1 ಕ್ಕೆ 5-8-0,

ಇಮಿಟೇಷನ್ ವಜ್ರದ ಬೆಂಡೋಲೆಗಳು.

ಈ ಬೆಂಡೋಲೆಗಳನ್ನು ಬಹು ಹಸನಾದ ವಜ್ರದ ಕಲ್ಲುಗಳನ್ನು ಇಟ್ಟು ಅಪರಂಜಿ ಭಂಗಾರಕ್ಕೆ ಸರಿಸಮನಾದ ಸೀಮೆಯ ಭಂಗಾರದಿಂದ ಕಟ್ಟದ ಕಟ್ಟಿರುವದು ಇದರ ಪ್ರಕಾಶವು ಅಸಲ ವಜ್ರದ ಕಲ್ಲುಗಳಿಗೆ ಸರಿಯಾಗಿರುವದು ಇದರ ಬಣ್ಣವು ಕೆಡದಂತೆ ವಿಲಾಯತಿಯಲ್ಲಿ ಎಲೆಕ್ಟ್ರಿಕ್ ಪವರಿನಿಂದ ಅಪರಂಜಿ ಭಂಗಾರದ ಗಿಲೀಟುಕೊಟ್ಟಿರುವದು ಇದನ್ನು ನೋಡಿದವರು ನಿಜವಾದ ಓಲೆ ಎಂದೇ ಹೇಳುವರು ಈಗಿನ ಕಾಲದಲ್ಲಿ ಶ್ರೀಮಂತರೂ, ಜವಿಗೆದಾರರೂ ಮುಂತಾದವರು ಬಹಳವಾಗಿ ಇವನ್ನೇ ಉಪಯೋಗಿಸುತ್ತಿರುವರು

ಕ್ರಯ 1 ಕ್ಕೆ 7 ಕಲ್ಲಿನ ಬಿಳಿಯ ಓಲೆ ಜೋಡಿ 3-0-0.

„ „ ಕೆಂಪುಕಲ್ಲಿನ ಓಲೆ ಜೋಡಿ 3-8-0.

ಬೆಸ್ಟ್‌ರೇಜರ್ ಅಥವ ಕ್ಷೌರಕತ್ತಿ.

ಇದು ಸೀಮೆಯಲ್ಲಿ ಹಸನಾದ ಸ್ಟೀಲ್ ಎಂಬ ಲೋಹದಿಂದ ತಯಾರಾದದ್ದು ಇದನ್ನು ಇಟ್ಟುಕೊಂಡು ಕ್ಷೌರೀಕನ ಕೈ ಹುಟ್ಟು ಕೆಲಸವನ್ನು ನಡಿಸಿಕೊಂಡಲ್ಲಿ ಶರೀರ ಸಂಬಂಧ ವ್ಯಾಧಿಗಳು ಬಾರದಂತೆ ಉರಿಯೂ ಇಲ್ಲದಂತೆ ಸುಖವಾಗಿರುವದು. ಸೀಮೆಯಲ್ಲಿ ತಯಾರಿಸಿದ ರಾಜರ್ಸ್ ಕತ್ತಿ 2-4-0.

ಜರ್ಮನ್ ವಿದ್ಯುಚ್ಛಕ್ತಿಯ ದೀಪ.

ಬೆಂಗಳೂರು ಮದರಾಸು, ಬೊಂಬಾಯಿ ಮುಂತಾದ ದೊಡ್ಡದೊಡ್ಡ ಪಟ್ಟಣಗಳಲ್ಲಿರುವ ವಿದ್ಯುಚ್ಛಕ್ತಿಯ ದೀಪಗಳಂತೆಯೇ ಇರುವವು ಈ ದೀಪವು ಮೇಜಿನ ಮೇಲಿಡಲೂ, ಗೋಡೆಗೆ ತಗಲಿಸಲೂ ಬಹುದು, ಗುಡಿ, ಲಗ್ನದಮನೆ, ರೀಡಿಂಗ್‌ರೂಂ ಮುಂತಾದವುಗಳಲ್ಲಿ ಉಪಯೋಗಿಸಲೂ ಬಹು ಚೆನ್ನಾಗಿರುವದು ಮತ್ತು ಮಲಗುವ ಮನೆಗಳಲ್ಲಿ ಹಾಸಿಗೆಯಬಳಿ ಇಟ್ಟುಕೊಂಡು ಬೇಕಾದಾಗ ಅಂಟಿಸಿಕೊಂಡು ಆರಿಸಬಹುದು ಇದರ ಪ್ರಕಾಶವು ಗ್ಯಾಸ್‌ಲೈಟ್ ದೀಪದ ಪ್ರಕಾಶಕ್ಕೆ ಸರಿಸಮನಾಗಿರುವದು. ಮೊದಲು ಈ ನಮೂನೆ ದೀಪಗಳು ವ್ಯಾಪಾರಕ್ಕೆ ಇರಲಿಲ್ಲ ಹೊಸದಾಗಿ ಬಂದವು

ಬ್ಯಾಟರಿ ಸಹಿತ ದೀಪ 1 ಕ್ಕೆ ರೂ. 5-0-0

ಸೀಮೆ ಭಂಗಾರದ ಗೆಜ್ಜೆ ಅಡ್ಡಿಗ.

ಸವರನ್ ಭಂಗಾರಕ್ಕೆ ಸರಿಸಮನಾದಂಥ ಪಂಚಲೋಹದಿಂದ ಗೆಜ್ಜೆಗಳನ್ನು ಮಾಡಿ ಬಣ್ಣವು ಎಂದಿಗೂ ಹೋಗದಂತೆ ಎಲೆಕ್ಟ್ರಿಕ್ ಪವರಿನಿಂದ ಅಪರಂಜಿ ಭಂಗಾರದ ಬಣ್ಣ ಕೊಟ್ಟಿರುವದು. ಇದನ್ನು ಕತ್ತಿನಲ್ಲಿ ಕಟ್ಟಲು ಬಹು ಚೆನ್ನಾಗಿರುವದು ಭಾರಿಕ್ರಯದ ಅಡ್ಡಿಗೆಗಳಿಗೆ ಬದಲಾಗಿ ಇವನ್ನೇ ಬಹಳವಾಗಿ ಉಪಯೋಗಿಸುತ್ತಿರುವರು. ಗೆಜ್ಜೆಗಳನ್ನು ರೇಷ್ಮೆಯ ಗಟ್ಟಿದಾರದಿಂದ ಕಟ್ಟಿದೆ.

ಕ್ರಯ 1 ಕ್ಕೆ 2-4-0

...ಯುಂತಿರುವ ...ನ್ಯಯರ್ಕ.

...ಬನಿಯನ್ನುಗಳನ್ನು ಹಸನಾದ ದಾರದಿಂದ ಸೀಮೆಯಲ್ಲಿ ...ದ್ದು ಇದನ್ನು ಬೇಸಿಗೆಯ ...ಉಪಯೋಗಿಸಲು ಚೆನ್ನಾಗಿ ...ದವರು ತಗಲಿ ಬೇಕೆ ...ಕೆಡದಂತೆ ಕಾಪಾಡು ...ಯುಳ್ಳರುವಾಗಲೂ ಉ ...ಬಹುದು

...ಯ 1 ಕ್ಕೆ 1-8-0.

ಸೊಗಸಾದ ಗೆಜ್ಜೆ ಕಟ್ಟಿದ ಭಂಗಾರದ ಡಾಬುಗಳು.

ಇದು ಭಂಗಾರದ ಗಿಲೀಟಿನಿಂದ ಪ್ರಖ್ಯಾತಿಹೊಂದಿದ ಕೆಲಸಗಾರರಿಂದ ಬಹು ಸೊಗಸಾಗಿ ತಯಾರಿಸಿದೆ, ಹಿಂಭಾಗದಲ್ಲಿ ದೊಡ್ಡದು ಚಿಕ್ಕದು ಮಾಡಿಕೊಳ್ಳಬಹುದು, ವಳ್ಳಿಡಾಬುಗಳಂತೆ ಮುಂಭಾಗದಲ್ಲಿ ಕೊಂಡಿ ಇಟ್ಟು ತೆಗೆಯುವದಕ್ಕೂ ಹಾಕುವದಕ್ಕೂ ಕಷ್ಟಕೊಡಿಸುವದಿಲ್ಲ. ಇದರಲ್ಲಿ 150 ಗೆಜ್ಜೆಗಳು ಕಟ್ಟಿರುತ್ತೆ, ಚಿನ್ನದ ಡಾಬಿಗೂ ಇದಕ್ಕೂ ಯಾವವ್ಯತ್ಯಾಸವೂ ಇಲ್ಲ ಒಂದು ಸಲ ತರಿಸಿನೋಡಿರಿ,

ಗೆಜ್ಜೆಡಾಬು 1 ಕ್ಕೆ 8-0-0.

ಪ್ಯಾರಿಸ್ ದೇಶದ ಲೇಡೀಸ್ ಕಲರ ಫೋಟೋಗಳು.

ಇದನ್ನು ಪ್ಯಾರಿಸ್‌ದೇಶದಲ್ಲಿ ತಯಾರುಮಾಡಲ್ಪಟ್ಟಿರುವದು, ಇದರಲ್ಲಿ ಸ್ತ್ರೀಯರು ನಾದವನದಲ್ಲಿ ಪುರುಷರ ಸಂಗತ ಸರಸ ಸಲ್ಲಾಪ ಮಾಡುತ್ತಿರುವದು, ಡ್ಯಾನ್ಸ್ ಆಡುವದು ಸಮುದ್ರದಲ್ಲಿ ಸ್ನಾನಮಾಡುವದೂ, ಮತ್ತು ದಂಪತಿಗಳು ಅನ್ಯೋನ್ಯವಾಗಿ ಪ್ರೀತಿಸುವದು, ಅನೇಕ ರಮ್ಯ ಮೋಹಕರದ ಫೋಟೋಗಳು ಇರುತ್ತೆ ನೋಡುವದಕ್ಕೆ ಬಹು ಆನಂದವಾಗಿಯೂ,ಮನೋಹರವಾಗಿ ಯಿರುವದು ಈ ಫೋಟೋಗಳನ್ನು ಮಲಗು ಮನೆ (ಬೆಡ್‌ರೂಮ್) ಯಲ್ಲಿ ಇಡಲು ಬಹು ಶೃಂಗಾರವಾಗಿರುವದು ಫೋಟೋಗಳ ವಿಷಯವಾಗಿ ಬಹಳ ಬರೆದು ತಿಳಿಸಲು ಆಗದು, ಇದನ್ನು ನೋಡುವದರಿಂದಲೇ ಆಫರಗಳು ಎಂಥವು ಎಂಬುದನ್ನು ತಿಳಿದು ಕೊಳ್ಳಬಹುದು. ತರಿಸಿ ನೋಡಿದರೆ ಸಂತೋಷಪಡುವಿರಿ

1 ಡಜನ್ ಫೋಟೋಗಳಿಗೆ ಕ್ರಯ ರೂ 3-0-0.

ಜೆವೆಲರ್ಸ್ ಎನ್ನುವ ಕೈ ತಾಳ.

ಈ ತಾಳಗಳು ಮೇಲಾದ ಕಂಚಿನಿಂದ ತಯಾರಾದವುಗಳು ಇವುಗಳನ್ನು ನಾಟಕ, ಹಾಡು ಕಚೇರಿ, ಭಜನೆ ಮನೆಗಳಲ್ಲಿ ಉಪಯೋಗಿಸಬಹುದು ಚೆನ್ನಾಗಿ ಶಬ್ದವನ್ನು ಕೊಡುತ್ತೆ

ಕ್ರಯ ಜೋತೆ 1 ಕ್ಕೆ 0-12-0.

ರೋಲ್ಡ್ ಗೋಲ್ಡ್ ಕೈ ಬಳೆಗಳು.

ಇವು ಶುದ್ಧವಾದ ಅಮೇರಿಕನ್ ರೋಲ್ಡ್ ಗೋಲ್ಡ್ ಚಿನ್ನದಿಂದ ಬಹಳ ನಾಜೋಕಾಗಿಯೂ, ಚಮತ್ಕಾರವಾಗಿಯೂ, ಎಂದಿಗೂ ಬಣ್ಣವುಕೆಡದಂತೆ ತಯಾರುಮಾಡಲ್ಪಟ್ಟಿರುವದು. ಪ್ರಕಾಶವು ಥಳಥಳಸುತ್ತಿರುವದು ಸಹಸ್ರಾರು ಹೂವುಗಳು ಆಗಸಾದ ಅರಳಿದರೆ ಹೇಗೋ ಹಾಗೆ ಈ ಹೂವುಗಳು ನಿರ್ಮಿಸಲ್ಪಟ್ಟಿರುವವು ಇದರ ಪ್ರಕಾಶ ಕತ್ತಲೆಯಲ್ಲಿ ನೋಡುವವರ ಕಣ್ಣನ್ನು ಮುಚ್ಚು ಸಂತಿರುವುದು, ಆರ್ಡರೊಡನೆ ಕೈಯ ಅಳತೆಯನ್ನು ತಪ್ಪದೆ ನಮೂದಿಸಬೇಕು. ಹೆಂಗಸರು ಇದನ್ನು ಕೈಯಲ್ಲಿ ಹಾಕಿಕೊಂಡರೆ ಬೇರೆಯಾವ ಆಭರಣಗಳೂ ಬೇಕಾಗುವದಿಲ್ಲ ಲಿಂಗಾಯತ, ಬ್ರಾಹ್ಮಣ ಹೆಂಗಸರಿಗೆ ಬಹು ಮುದ್ದಾಗ ಆಭರಣ.

ಜೋತೆ 1 ಕ್ಕೆ 2-8-0.

ಜ್ವರವನ್ನು ಕಂಡುಹಿಡಿಯುವ ಟೆಮಾಸ್ಟೆಮಿಟರ್.

– ಇವು ಲಂಡನ್ ಪಟ್ಟಣದಲ್ಲಿ ತಯಾರಿಸಿ ಬಂದವು. ಇವುಗಳಲ್ಲಿ ಜ್ವರವನ್ನು ನೋಡುವದರಿಂದ ಸ್ವಲ್ಪವೂ ವ್ಯತ್ಯಾಸವಿಲ್ಲದೆ ಗೊತ್ತಾಗುವುದು ನಿಕ್ಕಲ್ ಬೆಳ್ಳಿಯ ಕೇಸು ಇದೆ

½ ನಿಮಿಷದಲ್ಲಿ ಜ್ವರವನ್ನು ಕಂಡು ಹಿಡಿಯುವದು. 2-4-0.

ಸ್ಟೀಲ್ ಕ್ಯಾಷ್‌ಬಾಕ್ಸ್ ಯೆಂಬ ಕೈ ಪೆಟ್ಟಿಗೆ.



ಇದು ಸೀಮೆಯ ಉಕ್ಕಿನ ತಗಡಿನಿಂದ ತಯಾರಿಸಿ ಮೇಲುಭಾಗದಲ್ಲಿ ಬಹು ಅಂದವಾದ ಚಿತ್ರ ಕೆಲಸಗಳು ಮಾಡಿ ವಾರ್ನೀಸ್ ಮಾಡಿದೆ. ಇದು ನೋಡುವದಕ್ಕೆ ಬಹು ಚೆನ್ನಾಗಿರುವದು ಇದರಲ್ಲಿ ಒಡವೆಗಳು ಹಣ ಮುಂತಾದವುಗಳನ್ನು ಇಡಬಹುದು ಬೀಗ ಮತ್ತು ಬೀಗದ ಕೈ ಸಹ ಇರುವದು.

ಕ್ರಯ ನಂ. 1 ಕ್ಕೆ 1-0-0. ನಂ 2 ಕ್ಕೆ 1-8-0

ಸಾವಂತಿ ಮತ್ತು ರೋಜಾಹುವ್ವಿನ ಜಡೆಬಿಲ್ಲೆಗಳು.

ಈ ಜಡೆಬಿಲ್ಲೆಗಳನ್ನು ಪಂಚಲೋಹದಿಂದ ತಯಾರಿಸಿ ಮೇಲುಗಡೆ ಸವರನ್ ಭಂಗಾರದ ಗಿಲೀಟು ಮಾಡಿರುವದು ಈ ಜಡೆಬಿಲ್ಲೆಗಳನ್ನು ನೋಡಿದರೆ ನಿಜವಾದ ರೋಜಾ ಮತ್ತು ಸಾವಂತಿ ಹುವ್ವಿನಂತೆಯೇ ಇರುವದು, ಇವನ್ನು ಚಿಕ್ಕವರೂ ದೊಡ್ಡವರೂ ಸಹ ಉಪಯೋಗಿಸಬಹುದು ಭಾರಿಕ್ರಯದ ಜಡೆಬಿಲ್ಲೆಗಳಿಗಿಂತಲೂ ಇವು ಬಹು ಲಕ್ಷಣವಾಗಿರುವವು. ಬಣ್ಣವು ಎಂದಿಗೂ ಹೋಗದು,

ಕ್ರಯ 1 ಕ್ಕೆ 1-8-0

...ದೇಶದ ...ಗಳು.

...ನ್ನು ಹೊಸತುವಾಗಿ ...ಕೆಯಾಗಿರುವದರಿಂದ ...ಹೊಳಪು ಅದವು, ...ಯೂ ಇರುವದು. ...ಹುಂದ ಪಸರ್ ...ಮಾಡಿನಿಂದಲೂ, ...ತಯಾರಿಸಿದೆ. ಅಂ...ಂಥರವಾದ ಚಿತ್ರ...ಮಾಡಿರುವು ...ಇವು. ಎಲ್ಲ...ಕ್ಕೆ ಮತ್ತು ...ಗೂ ಆಗು

...1 ಕ್ಕೆ 7-8-0.

ಭೂತ್ಕನ್ನಡಿಗಳು.

ಈ ಕನ್ನಡಿಗಳು ಕೆಂಪು ವಜ್ರ ಮೊದಲಾದ ರತ್ನಗಳನ್ನು ಪರೀಕ್ಷಿಸುವದಕ್ಕೂ ಓದಲು ತಿಳಿಯದಿರುವ ಅಕ್ಷರಗಳನ್ನು ಓದುವದಕ್ಕೂ ಉಪಯೋಗವಾದದ್ದು. ಬಹಳ ಸಣ್ಣದಾಗಿ ಇರುವ ವಸ್ತುಗಳು ದೊಡ್ಡದಾಗಿ ತೋರುವದು.

ಕ್ರಯ ನಂ. 1 ಕ್ಕೆ 1-4-0.

ಕ್ರಯ ನಂ. 2 ಕ್ಕೆ 1-10-0

ಚಂದ್ರಹಾರ.



ಇದನ್ನು ಚಿಕ್ಕವರೂ ದೊಡ್ಡವರೂ ಉಪಯೋಗಿಸುವಂತೆ ಅಚ್ಚಬೆಳ್ಳಿಯಿಂದ ತಯಾರಿಸಿ ಭಂಗಾರದ ಗಿಲೀಟುಮಾಡಿದೆ ಇದನ್ನು ಪ್ರತಿಒಬ್ಬ ಸ್ತ್ರೀಯರೂ ಮಕ್ಕಳೂ ಧರಸಿಕೊಳ್ಳ ಬಹುದು. ನೋಡಲು ಭಂಗಾರದ ಹಾಗೇ ಇರುವದು. ಬಣ್ಣಕ್ಕೆ 3ವರ್ಷ ಗ್ಯಾರೆಂಟಿ. ಕೊಡುವೆವು

3 ಎಳೇ ಸರ	1 ಕ್ಕೆ		3-4-0
4 „	„	„	4-0-0.
5 „	„	„	5-4-0.

ಸ್ಪಿರಿಟ್‌ಸ್ಟೋವ್ ಎಂಬ ಅಡಿಗೆಮಾಡುವ ಒಲೆ.

ಇವುಗಳನ್ನು ಬ್ರಿಟಿಷ್‌ನವರು ಹೊಸ ನಾದ ಹಿಕ್ಮತಿಯಿಂದ ಮಾಡಿರುವರು ಇದರಲ್ಲಿ ಒಬ್ಬರ ಸಹಾಯವಿಲ್ಲದೆ ಅಡಿಗೆಯನ್ನು ಮಾಡಬಹುದು. ಬೆರಣಿ, ಸೌದೆ, ಮುಂತಾದವುಗಳು ಹಾಕಿ ಒಲೆಯನ್ನು ಉರಿಸುವದರಿಂದಹೊಗೆ ತುಂಬಿ ಕಣ್ಣುಗಳು ಕೆಟ್ಟು ಹೋಗುವವು. ಆದರೆ ಇದರಿಂದ ಯಾವಕಷ್ಟವೂ ಇಲ್ಲ. ಸ್ವಲ್ಪ ಸೀಮೆ ಎಣ್ಣೆಯನ್ನು ಹಾಕಿ ಸಂಪ್ರುವಾಡಿದರೆ ಸಾಕು. ಇದರಲ್ಲಿ ಎಷ್ಟು ಮಂದಿಗಾದರೂ ಅಡಿಗೆಯನ್ನು ಬಹು ಬೇಗನೆಮಾಡಬಹುದು.

ಕ್ರಯ 1ಕ್ಕೆ ರೂ. 8-0-0

ಎಲೆಕ್ಟ್ರಿಕ್ ದೀಪ.

ಇದು ವಿದ್ಯುಚ್ಛಕ್ತಿಯ ಬೆಳಕಿನಿಂದ ಪ್ರಕಾಶಮಾನವಾಗಿ ಉರಿಯುತ್ತೆ. ಇದನ್ನು, ಹಚ್ಚುವದಕ್ಕೆ ಬೆಂಕಿಕಡ್ಡಿ, ಎಣ್ಣೆ ಯಾವುದು ಅವಶ್ಯಕವಿಲ್ಲ ದೀಪದ ಮಧ್ಯದಲ್ಲಿ ಇರುವ ಗುಂಡಿಯನ್ನು ಬೆರಳಿನಿಂದ ಒತ್ತಿದರೆ ದೀಪವು ತನ್ನಷ್ಟಕ್ಕೆ ತಾನೇ ಮುಚ್ಚಳವನ್ನು ತೆರದುಕೊಂಡು ದೀಪ ಉರಿಯುತ್ತೆ. ಇದು ನೋಡುವವರಿಗೆ ಆಶ್ಚರ್ಯವಾಗಿ ಕಾಣುತ್ತೆ. ಈ ದೀಪ ಒಂದನ್ನು ತರಿಸಿಕೊಂಡರೆ ಯಾವಾಗ್ಯೂ ದೀಪವು ಅವಶ್ಯಕವೇ ಇರುವುದಿಲ್ಲ. ಇದರಪ್ರಕಾಶವು ಗ್ಯಾಸ್ ದೀಪಗಳ ಹಾಗೆ ½ ಪರ್ಲಾಂಗ್‌ವರಿಗು ಬೆಳಕು ಕಾಣುವುದು.

ಕ್ರಯ 1ಕ್ಕೆ ಬ್ಯಾಟ್ರಿಸಹಿತ ರೂ. 3-8-0.

ಟೋಪಾ ಎನ್ನುವ ಕೂದಲು.

ಈ ಕೂದಲು ಮುಖ್ಯವಾಗಿ ನಾಟಕದಲ್ಲಿ ಸ್ತ್ರೀ ವೇಷದಾರಿಗಳಿಗೆ ಬಹಳ ಉಪಕಾರಿಯಾದದ್ದು. ಇದನ್ನು ತಲೆಯಲ್ಲಿ ಇಟ್ಟರೆ ಸ್ತ್ರೀಯರ ತಲೆ ಕೂದಲಿನಂತೆ ಇರುವದು. ನಾಟಕದವರಿಗೆ ಎರಡು ವಿಧವಾದ ಟೋಪಾಗಳಿವೆ. ಅರ್ಧ ಮತ್ತು ಪೂರಾ ಟೋಪಾ ಇರುವವು. ತಲೆಯಲ್ಲಿ ಕೂದಲಿಲ್ಲದೆ ಬೋಡಿ ತಲೆಯುಳ್ಳರುವ ಸ್ತ್ರೀಯರು ಇದನ್ನು ಹಾಕಿಕೊಂಡರೆ ಹುಟ್ಟಿದ ಕೂದಲೆಂದೇ ಹೇಳುವರು.

ಅರ್ಧಟೋಪಾ ಕ್ರಯ 1ಕ್ಕೆ 1-4-0.
ಪೂರಾ ಟೋಪಾ „ „ 1-12-0.
ದಾಡಿ ಮೀಸೆ ಕ್ರಯ „ 1-8-0.
ರಾಜಮೀಸೆ 0-12-0
ಗಿರಿಮೀಸೆ ದಾಡಿ 1-12-0.

ಕ್ಲಾಪ್ ಕಟ್ಟರ್ ಎಂಬ ಕೂದಲು ಕತ್ತರಿಸುವ ವಿಲಾಯತಿಯ ಕತ್ತರಿ.

ಈಗಿನ ಕಾಲದಲ್ಲಿ ಪ್ರತಿಯೊಬ್ಬರೂ ಉಪಯೋಗಿಸಬಹುದಾದ ಈ ಕತ್ತರಿಯಿಂದ ತಲೆಯ ಕೂದಲನ್ನು ಕತ್ತರಿಸುವುದರಿಂದ ಕತ್ತರಿಯಲ್ಲಿ ಕತ್ತರಿಸಿದ ಹಾಗೆ ಅಸಹ್ಯವಾಗಿ ಕಾಣದೆ ಬಹಳಲಕ್ಷಣವಾಗಿ ಕಾಣುತ್ತೆ. ಮತ್ತು



ಒಬ್ಬರ ಸಹಾಯವಿಲ್ಲದೆತಾವೇ ಕ್ರಾಪು ಮಾಡಿಕೊಳ್ಳಬಹುದು. ಇದಕ್ಕಾಗಿಯೇ ವಿಲಾಯತಿಯಿಂದ ತಯಾರಿಸಿ ಬಂದಿರುವವು.

ಇದರ ಬೆಲೆ ರೂ. 3-8-0.

ಅಲಂಕಾರ ಕೊಡುವ ಬೀಗ.



ಈ ಬೀಗಗಳು ನೋಡಲಿಕ್ಕೆ ಬೆಳ್ಳಿಯಂತೆ ಇರುವವು. ಈ ಬೀಗವನ್ನು ಹಾಕ ಬೇಕಾದರೂ, ತೆಗೆಯ ಬೇಕಾದರೂ, ಅಲಂಕಾರ ಕೊಡುವಾಗುತ್ತೆ. ಕಳ್ಳತನದಿಂದ ಬೀಗ ತೆಗೆಯುವವರನ್ನು ಹಿಡಿದು ಕೊಡುವದು.

ಕ್ರಯ 1ಕ್ಕೆ 1-4-0

ದೇವತಾ ವಿಗ್ರಹಗಳ ಪ್ರತಿಮೆಗಳು.

ಈ ವಿಗ್ರಹಗಳು ಸೀಮೆಯಲ್ಲಿ ರಬ್ಬರಿನಿಂದ ತಯಾರಿಸಲ್ಪಟ್ಟದು. ಕಾಲರು, ಲಿವರು ಲಗ್ನಪತ್ರಿಕೆ ಮುಂತಾದವುಗಳಿಗೆ ಒಬ್ಬರ ಸಹಾಯವಿಲ್ಲದೆ ನಾವೇ ಅಚ್ಚುಮಾಡಿಕೊಳ್ಳಬಹುದು. ಇದರಲ್ಲಿ ಕೃಷ್ಣ, ಗಣೇಶ, ರಾಮ, ಹನುಮಂತ ಮುಂತಾದ ಪ್ರತಿಮೆಗಳಿರುವವು. ಇದರ ಸಂಗಡ ಇಂಕ್‌ಪ್ಯಾಡ್, ಇಂಕುಬುದ್ದಿ, ಪೆಟ್ಟಿಗೆ ಸಹ ಸೇರಿಸ

ಸೆಟ್ಟು ಕ್ರಯ 1ಕ್ಕೆ ರೂ 1-8-0. ಕಳುಹಿಸಲ್ಪಡುವದು.

ಜ್ವರ ಬಿಂದು...

ಪ್ರತಿದಿನವೂ ಬರುವಜ್ವರ, ದಿನಬಿಟ್ಟು ದಿನ ಬರುವಜ್ವರ, ನಾಲ್ಕರಜ್ವರ, ಮಲೇರಿಯಾಜ್ವರ, ಸನ್ನಿಪಾತಜ್ವರ, ಹೊಟ್ಟೆಯಲ್ಲಿ ಜ್ವರದ ಗಡ್ಡೆ ಇರುವದು ಮುಂತಾದ ಎಲ್ಲಾತರದ ವಿಷಜ್ವರಗಳನ್ನು ಗುಣಮಾಡುವದು.

ಕ್ರಯ ಬುಡ್ಡಿ 1ಕ್ಕೆ 1-0-0

ಇಂದ್ರಿಯ ಸ್ತಂಭನ ಗುಳಿಗೆ ಎಂಬ ರತಿ ವಿಲಾಸ ವಟಿ.

ಈ ಅದ್ಭುತವಾದ ಮಾತ್ರೆಯನ್ನು ಮಲಗುವದಕ್ಕೆ ಒಂದು ಗಂಟೆಮುಂಚಿತವಾಗಿ ಹಾಲು ಅಥವ ನೀರಿನಲ್ಲಿ ತೆಗದುಕೊಳ್ಳಬೇಕು. ನಂತರ ಧಾತು ವೃದ್ಧಿಯಾಗಿ ಗಟ್ಟಿಯಾಗುವದು. ಔಷಧವನ್ನು ತಿಂದುಗಂಟೆ ಕಾಲ ತರೆದು ಹೆಂಗಸಿನಲ್ಲಿ ಮಲಗಿದರೆ ಬೇಗನೆ ಸ್ಖಲನವಾಗದೆ ಶಕ್ತಿಯನ್ನು ಆನಂದವನ್ನು ಕೊಡುವದು. ಇದರ ಅಪಾರವಾದ ಶಕ್ತಿಯನ್ನು ಇಲ್ಲಿ ವಿವರವಾಗಿ ತಿಳಿಸಲು ಆಗದು, ತರಿಸಿ ಪರೀಕ್ಷಿಸಿದರೆ ಸಂತೋಷಪಡುವಿರಿ.



ಕ್ರಯ 16 ಮಾತ್ರೆ ಡಬ್ಬಿ 1ಕ್ಕೆ 1-8-0

ಸಾಂಡಾಆಯಿಲ್ ನಪುಂಸಕತ್ವಹಾರಿ ತೈಲವು.

ಮನುಷ್ಯರಲ್ಲಿ ಪುರುಷಾರ್ಥವು ಕೇವಲ ಧಾತುವಿನಿಂದಲೇ ಇರುವದು. ಮನುಷ್ಯರ ದೂಷಿತ ವೀರ್ಯವು ಗರ್ಭಕಾರಕವಾಗಲಾರದು. ಅತ್ಯಂತ ವ್ಯಸನದಿಂದಲೂ ವ್ಯಾಯಾಮ (ಕಸರತ್) ದಿಂದಲೂ ಯಾವಾಗ್ಯೂ ಕೂತುಕೊಂಡೇ ಇರುವದರಿಂದಲೂ, ಹಸ್ತಪ್ರಯೋಗಾದಿಗಳಿಂದಲೂ, ಶರೀರದ ಎಲ್ಲಾ ನಾಡಿಗಳು ಬಲಹೀನವಾಗುವವು. ಕೆಲವರು ಬಾಲ್ಯದಲ್ಲಿಯೇ ಇಂಥಾವ್ಯಾಧಿಗಳನ್ನು ಉಂಟುಮಾಡಿಕೊಂಡು ತಮಗಿರುವ ವ್ಯಾಧಿಯನ್ನು ವೈದ್ಯರಲ್ಲಿ ಹೇಳಲು ನಾಚಿಕೆಯಿಂದ ವ್ಯಾಧಿಯನ್ನು ಹೆಚ್ಚು ಮಾಡಿಕೊಂಡು ಪ್ರಾಯಸಮರ್ಥರಾದಾಗ ರತಿಸುಖಕ್ಕೆ ಶಕ್ತಿಯಿಲ್ಲದೆ ಲಜ್ಜಾಸ್ಪದದಿಂದ ಆಶಾಭಗ್ನರಾಗಿ ಮನೋವ್ಯಥೆಯನ್ನುಂಟುಮಾಡಿಕೊಳ್ಳುವರು. ಇಂಥವರ ಉಪಯೋಗಕ್ಕೋಸ್ಕರವಾಗಿ ಪ್ರಪಂಚದಲ್ಲಿಅಪೂರ್ವವಾಗಿ ಸಿಕ್ಕುವ ಸಾಂಡಾ ಎಂಬ ವಸ್ತುವಿನಿಂದ ತಯಾರಿಸಲ್ಪಟ್ಟ ಈ ಎಣ್ಣೆಯನ್ನು ಲಿಂಗಕ್ಕೆ 7 ದಿನಗಳು ಸವರುವದರಿಂದ ಗುಣವಾಗುವದು ಮತ್ತು ಲಿಂಗವುಬಲಹೀನವಾಗಿದ್ದರೂ ದೃಢವಾಗುವದು.



ಕ್ರಯ ಸೀಸೆ 1ಕ್ಕೆ 1-4-0

ಅಮೃತ ಲೇಹ.

ಮಾನವ ಶರೀರದಲ್ಲಿ ಶುದ್ಧವಾದ ಧಾತುವನ್ನು ರಕ್ಷಿಸಿಕೊಳ್ಳುವದಕ್ಕಿಂತ ಮೇಲಾದದ್ದು ಯಾವದೂ ಇಲ್ಲ. ವಿಧವಿಧವಾದ ದುರಭ್ಯಾಸಗಳಿಂದಲೂ, ಶಾರೀರಿಕ ಮತ್ತು ಹಸ್ತಪ್ರಯೋಗಾದಿಗಳಿಂದಲೂ, ಶುದ್ಧವಾದ ಧಾತುವನ್ನು ಚಿಕ್ಕಂದಿನಲ್ಲಿಯೇ ಕೆಡಿಸಿಕೊಂಡು ಅಪಾಯಕ್ಕೆ ಗುರಿಯಾಗುತ್ತಿರುವರು. ಈಲೇಹವನ್ನು ಸೇವಿಸುವದರಿಂದ ದೀರ್ಘಕಾಲದ ನರಗಳ ಆಶಕ್ತಿಯನ್ನು ಹೋಗಲಾಡಿಸಿ ಶರೀರಕ್ಕೆ ಪುಷ್ಟಿಯನ್ನೂ, ಕಾಂತಿಯನ್ನೂ, ಶಕ್ತಿಯನ್ನೂ, ಉಂಟು ಮಾಡುವದು, ಪ್ರಮೇಹ, ಪರಂಗಿರೋಗ, ಜ್ವರ ಮುಂತಾದ ರೋಗಗಳಿಂದ ಆಗಲೇ ಎದ್ದವರು ಇದನ್ನು ಸೇವಿಸಿದರೆ ತುಂಬಾಗುಣ ಕೊಡುವದು ಮತ್ತು ಧಾತುವು ನೀರಿನಂತೆ ಇದ್ದರೂ, ಸ್ವಪ್ನೇಂದ್ರಿಯವಾದರೂ, ಸ್ತ್ರೀ ಸಂಗಕ್ಕೆ ಮೊದಲೇ ಸ್ಖಲನವಾದರೂ, ಮೂತ್ರದಲ್ಲಿ ಉರಿಯುತ್ತಿದ್ದರೂ, ಮೂತ್ರದೊಂದಿಗೆ ವೀರ್ಯವು ಹೋಗುತ್ತಿದ್ದರೂ, ಕೈ ಕಾಲು ಮತ್ತು ಸೊಂಟದಲ್ಲಿ ನೋವು ಇದ್ದರೂ ಮಲವಿಸರ್ಜನೆ ಸರಿಯಾಗಿ ಆಗದಿದ್ದರೂ, ಶರೀರದಲ್ಲಿ ರಕ್ತವುಕೆಟ್ಟು ಹೋಗಿದ್ದರೂ ಈ ಲೇಹವನ್ನು ಸೇವಿಸುವದರಿಂದ ಗುಣಪಡಿಸಿ ಶರೀರವನ್ನು ಚೆನ್ನಾಗಿರುವದು. ಮತ್ತು ವಿಶೇಷ ರತಿ ವಿಲಾಸದಿಂದಾಗಲಿ, ಮತ್ಯಾವ ಕಾರಣಗಳಿಂದಾಗಲಿ, ಶುದ್ಧವಾದ ಧಾತುವನ್ನು ಕೆಡಿಸಿಕೊಂಡಿದ್ದರೂ ಮತ್ತು ನಪುಂಸಕತ್ವವು ಎಷ್ಟುದಿವಸದ್ದಾದರೂ ಈ ಲೇಹವನ್ನು ಸೇವಿಸುವದರಿಂದ ಬಹು ಶೀಘ್ರವಾಗಿ ಗುಣಪಡಿಸಿ, ಶಾಶ್ವತವಾದ ಪುರುಷತ್ವವುಂಟಾಗುವದು. ಎಲ್ಲರೂ ಸೇವಿಸಬಹುದು. ಬಹು ರುಚಿಯಾಗಿರುವದು ಈ ಅಮೃತ ಲೇಹಕ್ಕೆ ಬೆಳ್ಳಿ, ಬಂಗಾರ, ಮತ್ತು ತಾಂಬ್ರ ಭಸ್ಮವೂ ಎಷ್ಟು ಮಾತ್ರವೂ ಸಮಾನವಾಗಲಾರವು. ಬಹಳ ಹಳೇವ್ಯಾಧಿಯಾಗಿದ್ದರೆ ಎರಡು ಡಬ್ಬಿಗಳನ್ನು ಸೇವಿಸಿದರೆ ಸಂಪೂರ್ಣ ಗುಣ ಕೊಡುವದು.



ಕ್ರಯ ಡಬ್ಬಿ 1ಕ್ಕೆ ರೂ. 2-0-0

ಪ್ರಮೇಹನಿವಾರಣ ಭಸ್ಮ.

ಅನೇಕರು ಚಿಕ್ಕ ಪ್ರಾಯದಲ್ಲಿ ಕೆಟ್ಟ ಸಹವಾಸಕ್ಕೆ ಸಿಕ್ಕಿ ಮರಣಾಂತರವೂ ಮರೆಯದಂತಿರುವ ಮೂತ್ರರೋಗ ಸಂಬಂಧವಾದ ವ್ಯಾಧಿಗಳನ್ನು ಅಂದರೆ ಸೀಹ (ಪ ಸರು) ಬರುತ್ತಿದ್ದರೂ ಬಿಳುಪು ಹೋಗುತ್ತಿದ್ದರೂ ಉರಿಯುತ್ತಿದ್ದರೂ 24 ಗಂಟೆಗಳೊಳಗಾಗಿ ಗುಣ ಮಾಡುವದು. ಬಹಳ ಹಳೆಯ ವ್ಯಾಧಿಗಳಾದರೆ 4, 5 ದಿನಗಳು ಸೇವಿಸುವುದರಿಂದ ಕೆಂಡಿತ ಗುಣವಾಗುವದು. ಉಪಯೋಗಿಸುವ ವಿಧ ಔಷಧದ ಜೊತೆಯಲ್ಲಿ ಕಳುಹಿಸಲ್ಪಡುವದು.

ಕ್ರಯ ಡಬ್ಬಿ 1ಕ್ಕೆ 1-4-0

ರಬ್ಬರಿನಲ್ಲಿ ತಯಾರಿಸಲ್ಪಟ್ಟ ಸುಖಸಾಧನ ಎಂಬ ಮರ್ಮದ ಚೀಲವು.

ಈ ಪ್ರಪಂಚದಲ್ಲಿ ಅನೇಕರು (ಮೋಹ) ಕಾಮಕ್ಕೆ ಸಹಿಸಲಾರದೆ ಕೆಟ್ಟಹೆಂಗಸರ ಸಹವಾಸಕ್ಕೆ ಸಿಕ್ಕಿ ಟಾಕಿ, ಪರಮೆ, ಮುಸುಕ... ಭಗೇಂದ್ರಿಯ ಧಾತು ಹೋಗವದು ಮುಂತಾದ ವ್ಯಾಧಿಗಳನ್ನು ಅಂಟಿಸಿಕೊಂಡು ಮರಣಾಂತರವೂ ವ್ಯಸನಕ್ಕೆ ಗುರಿಯಾಗುವರು. ಇಂಥಾವರು ಎಷ್ಟು ಹಣವನ್ನು ಖರ್ಚು ಮಾಡಿದಾಗ್ಯೂ ಪ್ರಯೋಜನವಿಲ್ಲದೆ, ತಮ್ಮ ಸಂತಾನದಲ್ಲಿಯೂ ಆ ವ್ಯಾಧಿಯನ್ನು ಅಂಟಿಸಿ, ಪ್ರಪಂಚದ ಸುಖವನ್ನು ಮರೆತುಬಿಡುವಂತೆ ಮಾಡುವರು. ... ದಿಂದ ಇಂಥಾವ್ಯಾಧಿಗಳು ಯಾವವೂ ... ದಂತೆ ಇಂಗ್ಲೀಷ್ ಡಾಕ್ಟರುಗಳು ಈ ಚೀಲವನ್ನು ಕಂಡುಹಿಡಿದಿರುವರು. ಈ ಚೀಲವನ್ನು ಆ ಸಮಯದಲ್ಲಿ ಉಪಯೋಗಿಸುವದರಿಂದ ಮೇಲೆ ತಿಳಿಸಿರುವ ಕೆಟ್ಟವ್ಯಾಧಿಗಳು ಯಾವವೂ ಸೇರದಂತೆ ಶರೀರವನ್ನು ಜಾಗ್ರತೆಯಿಂದ ಕಾಪಾಡುವದಲ್ಲದೆ ಸಂಭೋಗದ ಸುಖವನ್ನು ಸಹ ಪಡುಸಂತೆ... ದಿಂದ ಕಳೆಯಬಹುದು.



ಗಂಡಸರದು ಚೀಲ 1ಕ್ಕೆ 1-
ಹೆಂಗಸರದು ಚೀಲ 1ಕ್ಕೆ 3

ಇಂಗ್ಲೀಷ್ ಹೇರ್ ಡಿಸ್ಟ್ರಾಯರ್ ಸೋಪು

ಈ ಸೋಪು ವಿಲಾಯತಿಯಲ್ಲಿ ತಯಾರಾದದ್ದು. ಶರೀರದಯಾವ ಭಾಗದಲ್ಲಿ ಯಾದರೂ ಕೂದಲನ್ನು ತೆಗೆಯ ಬೇಕಾದರೆ, ಈ ಸೋಪನ್ನು ಸವರಿದರೆ ಚರ್ಮಕ್ಕೆ ಯಾವತೊಂದರೆಯು ಕತ್ತಿಯಿಂದ ಕ್ಷೌರವಾಡಿಸಿಕೊಂಡದ್ದಕ್ಕಿಂತ ಚೆನ್ನಾಗಿ ಕೂದಲನ್ನು ಒಂದೇ ಒಂದು ನಿಮಿಷದಲ್ಲಿ ತೆಗೆದುಬಿಡುವದು.

ಕ್ರಯ 3 ಸಾಬೂನುಗಳ ಪೆಟ್ಟಿ 1ಕ್ಕೆ

ಮದನ ಕೋಲಾಹಲ ಧಾತುವೃದ್ಧಿ ಮಾತ್ರೆಗಳು.

ಮಾನವ ಶರೀರದಲ್ಲಿ ಶುದ್ಧವಾದರಕ್ತವನ್ನು ಮತ್ತು ... ವನ್ನು ರಕ್ಷಿಸಿಕೊಳ್ಳುವದಕ್ಕಿಂತ ಮೇಲಾದದ್ದು ಬೇರೊಂದು ... ಕಾಲದಲ್ಲಿ ಅನೇಕರು ಮೋಹಕ್ಕೆ ತಾಳಲಾರದೆ ಕೆಟ್ಟ ... ಸಿಕ್ಕಿ ಅಂದರೆ ಹಸ್ತ ಪ್ರಯೋಗದಿಂದಲೂ, ಹೆಂಗಸರ ಸಂಗದಲೂ, ಮತ್ತು ಇನ್ನು ಅನೇಕತರದ ಕೆಟ್ಟಚಾಲದಿಂದ ... ಶರೀರವನ್ನು ಕೆಡಿಸಿಕೊಂಡು ಪ್ರಾಯಸಮರ್ಥರಾದ ... ಖಿನ್ನ ಶಕ್ತಿಯಿಲ್ಲದೆ ವ್ಯಸನಕ್ಕೆ ಗುರಿಯಾಗಿರುವರು ಪ... ಅಗುತ್ತಲೆ ಇರುವರು. ಇವರ ಉಪಯೋಗಕ್ಕಾಗಿ ಕೋಲಾಹಲ ಧಾತುವೃದ್ಧಿ ಗುಳಿಗೆಗಳನ್ನು ಸೇವಿಸುವುದರಿಂದ ಸೋವನ್ನು, ಕೈಕಾಲುಗಳ ನೋವನ್ನು ತಕ್ಷಣದಲ್ಲಿಯೇ ಹೋಗಲಾಡಿಸುವದು ಧಾತು ಹೋಗುತ್ತಿದ್ದರೂ, ಸ್ವಪ್ನೇಂದ್ರಿಯ ವಾಗುತ್ತಿದ್ದರೂ ಕೂಡಲೇ ನಿಲ್ಲಿಸುವದು ಈ ಮದನ ಕೋಲಾಹಲ ಮಾತ್ರೆಗಳನ್ನು ಸೇವಿಸುವದರಿಂದ ಮೇಲ್ಕಂಡ ವ್ಯಾಧಿಗಳನ್ನು ಗುಣಮಾಡುವದಲ್ಲದೆ ರಕ್ತವನ್ನು ಹೆಚ್ಚಿಸಿ ಧಾತುವನ್ನು ಶೇಖರಿಸುವದು ಮತ್ತು ಮುಖಕ್ಕೆ ಕಾಂತಿಯನ್ನುಂಟುಮಾಡಿ ಹಸಿವನ್ನು ಚೆನ್ನಾಗಿ ಮಾಡುವದು. ಈ ಮಾತ್ರೆಗಳನ್ನು ಅನೇಕ ವಿಧವಾದ ವನಸ್ಪತಿಯ ಮೂಲಿಕೆಗಳಿಂದಲೂ ಬೆಳ್ಳಿ ಭಂಗಾರದ ಭಸ್ಮವನ್ನು ಸೇರಿಸಿ ತಯಾರಿಸಿದೆ. ಈ ಮದನ ಕೋಲಾಹಲ ಮಾತ್ರೆಗಳು ... ರದ ಎಲ್ಲಾವ್ಯಾಧಿಗಳನ್ನು ಹೋಗಲಾಡಿಸಿಕೊಂಡು ಸುಖಕ್ಕೆ ಸೇರಿದರೆ ಪ್ರಪಂಚದ ಸುಖವನ್ನು ಬಹು ... ಯುವದಲ್ಲದೆ ಹುಟ್ಟುವ ಮಕ್ಕಳೂ ಬಾಡುವುದು ... ಮಾತ್ರೆಗಳ ವಿಷಯದಲ್ಲಿ ಬಹಳವಾಗಿ ಬರೆದು ... ಬೆಳ್ಳಿ. ಭಂಗಾರ ಮತ್ತು ಬಿಟಾವಮುತ್ತಿನ ಭಸ್ಮಗಳಿಗೆ ಎಷ್ಟು ಮಾತ್ರವೂ ಸಮನಾಗಲಾರವು.

ಕ್ರಯ ಡಬ್ಬಿ 1ಕ್ಕೆ

ಮರ್ಮ ಶಾಸ್ತ್ರ.

ಈಪುಸ್ತಕವು ಹಿಂದೆ ಸಂಸ್ಕೃತ ಗ್ರಂಥ... ದಿಂದ ಗುಪ್ತವಾಗಿತ್ತು. ಬಹು ಪ್ರಯಾಸದಿಂದ... ರಿಗೂ ವಿವರವಾಗಿ ತಿಳಿಯುವಂತೆ ಕನ್ನಡ... ಯಲ್ಲಿ ಚಿತ್ರಪಟಗಳ ಸಹಿತ ಥಳಥಳಿಸುವ ... ದಲ್ಲಿ ಮುದ್ರಿಸಿರುತ್ತೆ. ಈಪುಸ್ತಕದಲ್ಲಿ ದಂಪತಿ... ಬೇಕಾದ ಎಲ್ಲಾ ಮರ್ಮರಹಸ್ಯಗಳು, ಸ್ತ್ರೀ... ರೀತಿ. ಸ್ತ್ರೀಪುರುಷರ ಭೇದಗಳು, ಸ್ತ್ರೀಯ... ಲಕ್ಷಣಗಳು, ದಂಪತಿಗಳು, ಅನ್ಯೋನ್ಯವಾಗಿ... ದಕ್ಕೆ ಬೇಕಾದ ರಹಸ್ಯಗಳು, ... ಮರ್ಮ ವಿಷಯಗಳು ತುಂಬಿರುವವು ... ಕರವಾದ ಪುಸ್ತಕವನ್ನು ಒಬ್ಬರು ತರಿಸಿ ನೋಡಿ ... ಅದನ್ನು ನೋಡಿ ಪ್ರತಿಯೊಬ್ಬರು ತರಿಸ... ಲು ಸಂದೇಹವಿಲ್ಲ.

ಕ್ರಯ ಪುಸ್ತಕ 1ಕ್ಕೆ ರೂ.

ನ ಸೆಲೆಕ್ಷನ್ ಬೋರ್ಡಿನವರು ಬ್ರಿಟನ್ನಿನಲ್ಲಿ ಅನೇಕ ವರ್ಷ ವಾಸವಿದ್ದವರನ್ನು ಮಾತ್ರ ಆರಿಸುವದಾಗಿದೆ. ಹಿಂದೂಸ್ಥಾನದವರು ಈ ಕಾಲೇಜಿಗೆ ಸೇರಲು ಅಪೇಕ್ಷಿಸಿದರೆ ಹಿಂದೂಸ್ಥಾನದಲ್ಲಿ ನಡಿಸುವ ಪರೀಕ್ಷೆಯ ಮೂಲಕವೇ ಚುನಾವಣೆಯಾಗಬೇಕಾಗಿದೆ ಎಂಬ ಸಂಗತಿಯನ್ನು ಇಂಡಿಯಾ ಸರಕಾರದವರು ನಮ್ಮ ಸ್ಥಳೀಯ ಸರಕಾರದವರಿಗೆ ಪ್ರಕಟಣೆ ಬಗ್ಗೆ ಕಳುಹಿಸಿದನ್ನು ನಮಗೆ ಕಳುಹಿಸಿರುತ್ತಾರೆ.

ಕಳೆದವಾರ ವೀರಾಜಪೇಟೆ ಹೈಸ್ಕೂಲಿನಿಂದ ಸ್ಕೂಲ್ ಫೈನಲ್ ಪರೀಕ್ಷೆಯಲ್ಲಿ 22 ಹುಡುಗರ ಪೈಕಿ 6 ಹುಡುಗರು ಮಾತ್ರ ಪಾಸಾಗಿದ್ದಾರೆಂತ ನಾವು ಪ್ರಕಟಿಸಿದ್ದು ಸರಿಯಷ್ಟೆ. ಆದರೆ ಈಗ 20 ಹುಡುಗರ ಪೈಕಿ 7 ಹುಡುಗರು ಪಾಸಾಗಿರುತ್ತಾರೆಂತ ಪುನಃ ಪಟ್ಟಿ ಬಂದಿದೆ. ಸದರಿ ಹುಡುಗರ ಪೈಕಿ (1) ಕೃಷ್ಣಯ್ಯನವರು, (2) ಬಿ. ಯಂ. ಕಾರ್ಯಪ್ಪನವರು, (3) ನೆಲ್ಲಮಕ್ಕಳ ಕರುಂಬಯ್ಯನವರು, (4) ನಾಗೇಶ ಮಲ್ಲಯ್ಯನವರು, (5) ಯಂ. ಮಂದಣ್ಣನವರು, (6) ವೆಂಕಟರಾಮಯ್ಯನವರು, (7) ಕುಪ್ಪಂಡ ಮಾದಯ್ಯನವರು. ಒಟ್ಟು 7 ಹುಡುಗರು ಪಾಸಾಗಿರುವರು.

ಸೆಂಟ್ರಲ್ ಬ್ಯಾಂಕಿನ ಡೈರೆಕ್ಟರುಗಳ ಮೀಟಿಂಗು ಕಳೆದ ತಾ॥ 26—6—1926ರಲ್ಲಿ ನಡೆದು ಬಾಳುಗೋಡು ಸೊಸೈಟಿಗೆ 1000 ರೂ. ಕದನೂರು ನಾಡು ಸೊಸೈಟಿಗೆ 500 ರೂ. ಹುದೂರು ಸೊಸೈಟಿಗೆ 100 ರೂ. [illegible] ಸೊಸೈಟಿಗೆ 400 ರೂ. ಕೈಕೇರಿ ಸೊಸೈಟಿಗೆ 500 ರೂ. ಕಾಂತೂರ ಸೊಸೈಟಿಗೆ 300 ರೂ. ಚೇಂದಂಡ ಕುಟುಂಬದ [illegible] ಸೊಸೈಟಿಗೆ 300 ರೂ. ಹಾತೂರು ಸೊಸೈಟಿಗೆ 500 ರೂ. ಬಿಳಿಗೂರು ಸೊಸೈಟಿಗೆ 1000 ರೂ. ಕಿರಗಂದೂರು ಸೊಸೈಟಿಗೆ 400 ರೂ. ಬಿಟ್ಟಂಗಾಲ ಸೊಸೈಟಿಗೆ 500 ರೂ. ಚೆಂಬಾವರ ಸೊಸೈಟಿಗೆ 300 ರೂ. ಕಂಗಳತ್ತುನಾಡು ಸೊಸೈಟಿಗೆ 500 ರೂ. ಕುಂದ ಸೊಸೈಟಿಗೆ 200 ರೂ. ಪಾಲಂಗಾಲ ಸೊಸೈಟಿಗೆ 300 ರೂ. ಮತ್ತು ಹುದಿಕೇರಿ ಸೊಸೈಟಿಗೆ 200 ರೂ. ಅಂತು ಜುಮ್ಲಾ 9200 ರೂ. ಸಾಲ ಮಂಜೂರಾಗಿರುತ್ತೆ.

ಪೊನ್ನಂಪೇಟೆನಾಡು [illegible] ಗ್ರಾಮದ ತಿರಿಕೆಚೇರಿರ ಸೋಮಯ್ಯನವರ ದನಗಳ ಕೊಟ್ಟಿಗೆಯಲ್ಲಿ ಈ ಕೆಳಗೆ ಕಂಡ ಏಳು ರಾಸು ದನಗಳು ಪರಾರಿಯಾಗಿ ಬಂದು ಸೇರಿಕೊಂಡವು. ರಾತ್ರಿವೇಳೆಯೂ ಬಹಳ ಲೂಟಿ ಮಾಡುವುದರಿಂದ ವಾರೀಸುದಾರರು ಬಂದು ಒಡನೆ ಹೊಡೆದುಕೊಂಡು ಹೋಗಬೇಕಾಗಿಯೂ, ಸದರಿಯವರ ಮನೆಗೆ ದಾರಿ ಗೊತ್ತಿಲ್ಲದಿದ್ದರೆ ತಿತ್ತಿಮತಿ ಲೋಕಲ್ ಫಂಡ್ ಸ್ಕೂಲಿಗೆ ರವಿವಾರ ಮಧ್ಯಾಹ್ನ 12½ ಗಂಟೆಗೆ ಬಂದರೆ ದಾರಿ ತೋರಿಸಿಕೊಡಲಾಗುವುದು. [illegible] ಸದರಿಯಾಗಿ ತಿಳಿಸಿರುತ್ತಾರೆ. (1) ಕೆಂಪು ಕಪ್ಪು ಮಿಶ್ರ ವರ್ಣದ ಉಳಲಿಕ್ಕೆ ಯೋಗ್ಯವಾದ ಒಂದು ಎತ್ತು (2) ಬೂದು ವರ್ಣದ ಹಣೆಯಲ್ಲಿ ಬೊಟ್ಟು ಇರುವ ಒಂದು ಜೀಬದ ಹೋರಿ. (3) ಬಿಳೀ ವರ್ಣದ ಒಂದು ಹಸು ಮತ್ತು (4) ಅದರ ಕೆಂದ ವರ್ಣದ ಸಣ್ಣ ಕರ (5) ಬೂದು ವರ್ಣದ ಹಣೆಯಲ್ಲಿ ಬೊಟ್ಟು ಇರುವ ಒಂದು ಹಸು (6) ಕೆಂಪು ಮತ್ತು ಕಪ್ಪು ಮಿಶ್ರ ವರ್ಣದ ಹಣೆಯಲ್ಲಿ ಬೊಟ್ಟು ಇರುವ ಒಂದು ಹಸು. (7) ಕೆಂಪು ಮತ್ತು ಮಿಶ್ರ ವರ್ಣದ ಮಂಗೋಡಿನ ಒಂದು ಹಸು. ಅಂತು ಜುಮ್ಲಾ ಏಳು ರಾಸುಗಳು.

ಮಡಿಕೇರಿ ಮುನಿಸಿಪಾಲಿಟಿ ಚುನಾವಣೆಗೆ ಕೊಡಗರ ಪರವಾದ ಮೂರು ಸೀಟುಗಳಿಗೆ (1) ಮೆ. ರಾಯಬಹದ್ದೂರ್ ಕೋದಂಡ ಅಪ್ಪಯ್ಯನವರೂ, (2) ಮೆ. ಮನೆಯಪಂಡ ಯಂ. ಬೆಳ್ಯಪ್ಪನವರೂ, (3) ಮೆ. ರಾಯಬಹದ್ದೂರ್ ಕೊಡಂದೇರ ಕುಟ್ಟಯ್ಯನವರೂ, (4) ಮೆ. ರಾವುಸಾಹೇಬ್ ಪಟ್ಟಮಾಡ ದೇವಯ್ಯನವರೂ, (5) ಮೆ. ರಾವುಸಾಹೇಬ್ ಕೋಡಿಮಣಿಯಂಡ ಸುಬ್ಬಯ್ಯನವರೂ, (6) ಮೆ. ಪುಚ್ಚಿಮಾಡ ಸೋಮಯ್ಯನವರೂ, (7) ಮೆ. ಕೋದಂಡ ತಿಮ್ಮಯ್ಯನವರೂ, ಹಿಂದೂ ಮತ್ತು ಇತರರ ಪರವಾಗಿ 6 ಸೀಟುಗಳಿಗೆ (1) ಮೆ. ಟಿ. ಎಂ. ಭುಜಂಗರಾಯರವರೂ, (2) ಮೆ. ಗುಬ್ಬಿ ಬಸಪ್ಪನವರು, (3) ಮೆ. ಆರ್. ಫ್ರಾಂಸಿಸ್ಸಿಯವರೂ, (4) ಮೆ. ಕೆ. ಎಸ್. ಕಮಯ್ಯನವರೂ, (5) ಮೆ. ನಿಡ್ವಮಲೆ ಮಂದಣ್ಣನವರೂ, (6) ಮೆ. ಕೆ. ಎನ್. ನಾಂಜಯ್ಯನವರೂ, (7) ಮೆ. ಆರ್. ಎಸ್. ಸಂಜೀವರಾಯರೂ, (8) ಮೆ. ಸಿ. ಎನ್. ವೆಂಕಯ್ಯನವರೂ, ಮತ್ತು ಮುಸಲ್ಮಾನರ ಪರವಾದ 2 ಸೀಟುಗಳಿಗೆ ಮೆ. ಗಳಾದ ಉಸ್ಮಾನ್ ಖಾನ್ ಸಾಹೇಬರೂ ಮತು ಮೆ. ಅಬ್ದುಲ್ ಲತೀಫ್ ಖಾನ್ ಸಾಹೇಬರೂ ಮತ್ತು ಕ್ರಿಶ್ಚಿಯನ್ನರ ಪರವಾದ ಅವರ ಒಂದು ಸೀಟಿಗೆ ಡಾಕ್ಟರ್ ಎ. ಎ. ವಾರುಣ್ಣಿಯವರೂ ಉಮೇದ್ವಾರರಾಗಿ ನಿಂತಿರುವರು.

ಈ ವರ್ಷ ಮಡಿಕೇರಿ ಹೈಸ್ಕೂಲಿನಲ್ಲಿ ಸ್ಕೂಲ್ ಫೈನಲ್ ಪರೀಕ್ಷೆಯಲ್ಲಿ ಪಾಸಾದ ಹುಡುಗರ ಹೆಸರುಗಳು ಕಳೆದವಾರ ಪ್ರಕಟಿಸಲ್ಪಡುವದರಿಂದ ಈ ವಾರ ಕೆಳಗೆ ಪ್ರಕಟಿಸಲಾಗಿದೆ. ಕಳೆದ ವಾರ 11 ಹುಡುಗರು ಮಾತ್ರ ಪಾಸಾಗಿದ್ದಾರೆಂತ ಬರೆದಿದ್ದೆವು. ಅನಂತರ ಪಟ್ಟಿಗೆ 5 ಹುಡುಗರ ಹೆಸರು ಬಂದದ್ದರಿಂದ ಜುಮ್ಲಾ 16 ಹುಡುಗರು ಪಾಸಾಗಿರುವರು. ಪ್ರೈವೇಟ್ ಆಗಿ ಪರೀಕ್ಷೆಗೆ ಹೋಗಿದ್ದ ಟಿ. ಕೆ. ನಾರಾಯಣಾಚಾರ್ಯರು ಪಾಸಾಗಿರುವರು.

1. ಮನೆಯಪಂಡ ಸಿ. ಮಾದಪ್ಪನವರು, 2. ಚೇರಂಡ ಸಿ. ಭೀಮಯ್ಯನವರು, 3 ಚೇಂದಿರ ಕೆ. ತಮ್ಮಯ್ಯನವರು, 4 ಶ್ಯಾಂಪ್ಲಿ ದಿನ್‌ಕರನವರು, 5 ಕೇಳಪಂಡ ಎ. ಬಯ್ಯಣ್ಣನವರು, 6. ಪಾರುವಂಗಡ ಟಿ. ಬೋಪಯ್ಯನವರು, 7. ಎಸ್. ಕೇಶವರಾಯರು, 8. ಎಸ್. ರಾಮಮೂರ್ತಿಯವರು, 9. ಎಸ್. ಲಕ್ಷ್ಮೀನಾರಾಯಣರವರು, 10. ಆರ್. ವೆಂಕಟರಾಮಚಾರನವರು, 11 ಪಂಜೆ ಯಂ. ರಾಮರಾಯರು, 12. ಪಾರ್ಕಂಡ ಟಿ. ಸುಬ್ಬಯ್ಯನವರು, 13. ಚೆಪ್ಪುಡೀರ ಎ. ಅಪ್ಪಣ್ಣನವರು, 14. ಮನೆಯಪಂಡ ಯಂ. ಪೊನ್ನಪ್ಪನವರ, 15. ನಲ್ಲಿರ ಕೆ. ಪೂಣಯ್ಯನವರು, 16 ಕುಟ್ಟಂಡ ಡಿ. ಅಪ್ಪಪ್ಪನವರು.

ಕಾನ್ವೆಂಟು ವಿದ್ಯಾರ್ಥಿನಿಯರ ಹೆಸರುಗಳು.

(1) ಮಿಸ್. ಕೊಂಗಂಡ ಅಪ್ಪಯ್ಯನವರು. (2) ಮಿಸ್ ಫ್ರಾಂಸಿಸ್ಸಿಯವರು. (3) ಮಿಸ್. ಸಂಜೀವರಾಯರು.

ಹಿಂದೂದೇಶ.

ಆನರೇಬಲ್ ಸರ್ ಚುನಿಲಾಲ್ ಮೆಹತಾರವರು ಬೊಂಬಾಯಿಯ ನ್ಯಾಯವಿಧಾಯಕ ಸಭೆಯ ವೈಸ್ ಪ್ರೆಸಿಡೆಂಟರಾಗಿ ನೇಮಿಸಲ್ಪಟ್ಟಿರುವರು.

ದೇಶಬಂಧು ಚಿತ್ತರಂಜನದಾಸರವರಾಗಿದ್ದ ಒಬ್ಬನೇ ಮಗ ಚಿರರಂಜನದಾಸರು ಕಳೆದ ತಾರೀಕು 27ರ ರಾತ್ರಿ ಕಲಕತ್ತಾದಲ್ಲಿ ಮರಣಹೊಂದಿರುವನು.

ಕೊಯಮುತ್ತೂರು ವ್ಯವಸಾಯ ಕಾಲೇಜಿಗೆ ಇಪ್ಪತ್ತೆರಡು ಹೊಸ ವಿದ್ಯಾರ್ಥಿಗಳು ಸೇರಿಸಿಕೊಳ್ಳಲ್ಪಟ್ಟಿರುವರು. ಈ ಇಪ್ಪತ್ತೆರಡು ಸ್ಥಳಕ್ಕೆ ನೂರ ಎಪ್ಪತ್ತು ಉಮೇದ್ವಾರರಿದ್ದರು.

ಕಳೆದ ತಾರೀಕು 24ರಲ್ಲಿ ನಮ್ಮ ವೈಸರಾಯರಾದ ಲಾರ್ಡ್ ಇರ್ವಿನ್‌ರವರು ಸಿಮ್ಲಾದಲ್ಲಿ ಇಂಡಿಯನ್ [illegible] ಸಂಘದ ಒಕ್ಕೆಲಸ ಕುರಿತು ಸಾರವತ್ತಾದ ಭಾಷಣವಾಡಿದರು.

ಮೋಡರ್ನ್ ರಿವ್ಯೂ ಪತ್ರಿಕೆಯ ಸಂಪಾದಕರಾದ ಶ್ರೀಯುತ ರಾಮಾನಂದ ಚಟರ್ಜಿಯವರು ಯೂರೋಪಿನ ರಾಷ್ಟ್ರೀಯ ಕೂಟಗಳ ವಿದ್ಯಾಮಾನಗಳನ್ನು ಕಲಿಯಲಿಕ್ಕಾಗಿ ಜಿನೀವಾಕ್ಕೆ ಹೊರಡುವರೆಂದು ತಿಳಿಯಬರುತ್ತೆ.

ಕಳೆದ ಜನವರಿ ತಾರೀಕು 2ರಲ್ಲಿ ಅಲಹಾಬಾದಿನಲ್ಲಿ ಆದ ಐ. ಸಿ. ಯಸ್. ಪರೀಕ್ಷೆಯಲ್ಲಿ ಇಂಡಿಯಾದಿಂದ, ಯಸ್. ಕೆ. ಚೇಟರ್ಜಿ, ಯನ್. ಯಸ್. ಅಮ್ಮಣಾಚಲಂ ಮತ್ತು ಯಸ್. ಎ. ರೈಹಿಮಾನ್ ಎಂಬವರು ಮಾತ್ರ ಚುನಾಯಿಸಲ್ಪಟ್ಟಿರುವರು.

ಸ್ವರಾಜ್ಯಪಾರ್ಟಿಯ ಲೀಡರುಗಳಾದ ಪಂಡಿತ ಮೋತಿಲಾಲ್ ನೆಹರು ಮತ್ತು ಶ್ರೀನಿವಾಸಅಯ್ಯಂಗಾರರು ಈ ತಾರೀಕು 3ರಲ್ಲಿ ಕಲಕತ್ತಾಕ್ಕೆ ಹೋಗಿ ಬಂಗಾಳ ಸ್ವರಾಜ್ಯಪಾರ್ಟಿಯವರಿಗೆ ಉಂಟಾದ ಒಳಕಲಹಗಳನ್ನು ತೀರಿಸಲಿಕ್ಕಿರುವರು.

ಪಂಡಿತ ಮದನಮೋಹನ ಮಾಳವೀಯರು ಕಲಕತ್ತಾದಲ್ಲಿಯೂ ಮತ್ತು ಬಂಗಾಳದಲ್ಲಿಯೂ ಹಿಂದುಗಳು ಒಗ್ಗಟ್ಟಾಗಿ ತಮ್ಮ ಶಕ್ತಿಯನ್ನು ಎಲ್ಲಾ ವಿಧದಲ್ಲಿಯೂ ಹೆಚ್ಚಿಸಬೇಕೆಂದೂ ಹಿಂದೂ ಮಹಾಸಭೆಯ ಉದ್ದೇಶ ಕುರಿತು ಭಾಷಣಮಾಡುತ್ತಿರುವರು.

ಪೂನಾದ ಹಿಂದೀ ಸ್ತ್ರೀಯರ ಯೂನಿವರ್ಸಿಟಿಯ ಕಾನ್ವೊಕೇಶನ್ ಕಳೆದ ತಾರೀಕು 27ರಲ್ಲಿ ಬೊಂಬಾಯಿಯಲ್ಲಿ ನಡೆಯಿತು. ಪರೀಕ್ಷೆಯಲ್ಲಿ ಉತ್ತೀರ್ಣರಾದವರಿಗೆ ಇನಾಮುಗಳೂ, ಡಿಗ್ರಿಗಳೂ ಹಂಚಲ್ಪಟ್ಟಿತು. ಸರ್. ಮೋರೋಪಂತ ಜೋಶಿಯವರು ಭಾಷಣಕೊಟ್ಟರು.

ಡಾಕ್ಟರ್ ಕಿಚ್ಲೂರವರು ರಂಗಪುರದಲ್ಲಿ ಕಳೆದ ತಾರೀಕು 25ರಲ್ಲಿ ಹಿಂದು ಮುಸಲ್ಮಾನರ ಒಗ್ಗಟ್ಟು ಕುರಿತು ಸಾರವತ್ತಾದ ಭಾಷಣ ಮಾಡಿದರು. ಇವರ ಭಾಷಣವು ರಾಜಕೀಯ ಶುದ್ಧಿ ಮತ್ತು ಸಂಘಟನ, ದನಗಳನ್ನು ಕೊಲ್ಲುವುದು, ಮಸೀದಿಯ ಮುಂದುಗಡೆ ವಾದ್ಯ ಈ ವಿಷಯಗಳ ಮೇಲಿತ್ತು.

ಸ್ವರಾಜ್ಯಪಾರ್ಟಿಯ ಅಸಿಸ್ಟಿಂಗ್ ಲೀಡರಾದ, [illegible] ಶ್ರೀನಿವಾಸಯ್ಯಂಗಾರರವರು ಪಂಜಾಬು, ಅಸ್ಸಾಮ್ ಮತ್ತು ಮದ್ರಾಸಿನ ನ್ಯಾಯವಿಧಾಯಕ ಸಭೆಯ ಮೆಂಬರುಗಳವರಿಗೆ ಕೌನ್ಸಿಲ್ ಮೀಟಿಂಗಿಗೆ ಹಾಜರಾಗಿ, ಕೆಲವು ವಿಷಯಗಳಲ್ಲಿ ಚರ್ಚೆಗೆ ಭಾಗಿಗಳಾಗುವಂತೆ ಅಪ್ಪಣೆ ಕೊಡಿಸಿರುವರು.

ಮೈಸೂರು ನ್ಯಾಯವಿಧಾಯಕ ಸಭೆಯಲ್ಲಿ ಈ ಸಾರಿ ಮುಕ್ತಾಯದ ಮೀಟಿಂಗಿನಲ್ಲಿ ಖಾಯಂ ರೆವಿನ್ಯೂ ಸೆಟ್ಲ್‌ಮೆಂಟ್ ಮಾಡಬೇಕೆಂಬ ವಿಷಯ ಚರ್ಚೆಯಾದಲ್ಲಿ ಸರಕಾರ ಮೆಂಬರುಗಳು ಖಾಯಂ ಸೆಟ್ಲ್‌ಮೆಂಟು, ದ. ಕಂದಾಯ ಕೊಡುವ ಜನರಿಗೆ ಬಹಳ ನಷ್ಟಕಷ್ಟವಾದ್ದರಿಂದ ಹಾಗೆ ಮಾಡಕೂಡದೆಂದು ಜವಾಬು ಕೊಟ್ಟಿರುವರು.

ಬೊಂಬಾಯಿಯ ಸ್ವರಾಜ್ಯಪಾರ್ಟಿಯ ಲೀಡರಾಗಿದ್ದ, ಈಗ ರೆಸ್ಪಾನ್ಸಿವಿಸ್ಟ್ ಪಾರ್ಟಿಯ ಲೀಡರಾಗಿರುವ ಶ್ರೀಯುತ ಜಯಕರ್‌ರವರಿಗೆ ಬೊಂಬಾಯಿ ಹೈಕೋರ್ಟಿನ ಜಡ್ಜ್ ಪದವಿಯನ್ನು ವಹಿಸಿಕೊಳ್ಳಲು ಆಮಂತ್ರಣವು ಬಂದರೂ, ಅವರು ಅಂಗೀಕಾರಮಾಡಿರುವುದಿಲ್ಲ. ಹೀಗೆ ಅಂಗೀಕಾರ ಮಾಡುವುದು ತನ್ನ ಪಾರ್ಟಿಯ ತತ್ವಕ್ಕೆ ವಿರೋಧವೆಂದು ಹೇಳಿರುವರು.

ಸರ್ ಚಾರಲ್ಸ್ ಟೋಡ್‌ಹಂಟರವರು ಈ ಮೊದಲು ಮದ್ರಾಸಿನ ಗವರ್ನರವರ ಎಕ್ಸಿಕ್ಯುಟಿವ್ ಕೌನ್ಸಿಲ್ ಮೆಂಬರಾಗಿದ್ದು ಬಂದು ದಿನದ ಮಟ್ಟಿಗೆ ಗವರ್ನರ್ ಪದವಿಯನ್ನು ಸಹ ನಡೆಸಿದ್ದರು. ಅವರು ಈಗತಾನೇ ಕೆಲಸದಿಂದ ನಿವೃತ್ತರಾಗಿರುವರು. ಅವರನ್ನು ಮೈಸೂರು ಮಹಾರಾಜರವರು ತಮ್ಮ ಪ್ರೈವೇಟ್ ಸೆಕ್ರೆಟರಿಯಾಗಿ ನೇಮಿಸಿರುವರೆಂಬ ನಿಜವಾದ ವರ್ತಮಾನವಿದೆ. ಈ ವರ್ತಮಾನದ ಮೇಲೆ ಅತೃಪ್ತಿಯಿಂದ ಮೈಸೂರು ಪ್ರಜಾಪ್ರಮುಖರು ತಮ್ಮ ಅಭಿಪ್ರಾಯವನ್ನು ಸೂಚಿಸಿರುವರು.

ಬಂಗಾಳದ ಮೈಮನ್‌ಸಿಂಗ್‌ನಲ್ಲಿ 1922ನೇ ಇಸವಿಯಲ್ಲಿ ಎರಡು ವರ್ಷ ಕಠಿಣ ಸಜಾ ಅನುಭವಿಸಿದ ಒಬ್ಬ ಪೋಲೀಸು ಸಬ್ ಇನ್ಸ್‌ಪೆಕ್ಟರರು ತನಗೆ ಆದ ಶಿಕ್ಷೆಯು ಅನ್ಯಾಯವೆಂದು ಇಂಗ್ಲೆಂಡಿನ ಪ್ರಿವಿ ಕೌನ್ಸಿಲಿಗೆ ಅಪ್ಪೀಲು ಮಾಡಿದರಲ್ಲಿ, ಅವರು ಕಲಕತ್ತಾ ಹೈಕೋರ್ಟಿಗೆ ಅಪ್ಪೀಲು ಮಾಡಬೇಕೆಂದು ಹುಕುಂಮಾಡಿದ ಮೇರೆ ಈಗತಾನೇ ಕಲಕತ್ತಾ ಹೈಕೋರ್ಟಿಗೆ ಅಪ್ಪೀಲು ಮಾಡಿರುವರು. ಅಪ್ಪೀಲು ಹಿಡಿಯಲ್ಪಟ್ಟಿದೆ. ಇವರು ಎರಡುವರ್ಷ ಶಿಕ್ಷೆಯನ್ನನುಭವಿಸಿದನಂತರ ಖುದ್ದಾಗಿ ಇಂಗ್ಲೆಂಡಿಗೆ ಹೋಗಿ ಪ್ರಿವಿ ಕೌನ್ಸಿಲಿನಲ್ಲಿ ತಮ್ಮ ಅಪ್ಲಿಕೇಶನನ್ನು ದಾಖಲುಮಾಡಿದರು.

ಕಳೆದ ತಾರೀಕು 28ರಲ್ಲಿ ಬಾಪಟ್ಲದಲ್ಲಿ ಶ್ರೀಮಾನ್ ಪಿ. ರಾಮದಾಸ್ ಪಂತುಲುರವರು ಪಬ್ಲಿಕ್ ಲೈಬ್ರರಿ ಕಾನ್‌ಫರೆನ್ಸಿನಲ್ಲಿ ಅಧ್ಯಕ್ಷರಾಗಿದ್ದು ಪುಸ್ತಕ ಭಂಡಾರದ ವಿಷಯ ಹೀಗೆಂದು ಹೇಳಿರುವರು. "ಪುಸ್ತಕ ಭಂಡಾರ ಚಳವಳವು ಅಮೇರಿಕಾದಲ್ಲಿ ಮೊದಲು ಪ್ರಾರಂಭವಾಗಿ, ನಂತರ ಇಂಡಿಯಾದಲ್ಲಿ ಬರೋಡ ಸಂಸ್ಥಾನದಲ್ಲಿ ಏರ್ಪಾಡಾದದ್ದಾಗಿದೆ. ಆ ಮೇಲೆ ಮಹಾರಾಷ್ಟ್ರ, ಆಂಧ್ರದೇಶ, ಮೈಸೂರು, ಪುದುಕೋಟೆ, ಮತ್ತು ಇತರ ಸ್ಥಳಗಳಲ್ಲಿ ಏರ್ಪಾಡಾಯಿತು. ದೇಶಾಭಿವೃದ್ಧಿಗೆ ಈ ಚಳವಳವು ಅತ್ಯಾವಶ್ಯಕ. ಸರಕಾರದವರೂ ಸಹ ಇಂಥಾದಕ್ಕೆ ತಕ್ಕ ಸಹಾಯ ಮಾಡಲು ಮುಂದಕ್ಕೆ ಖಂಡಿತವಾಗಿಯೂ ಬರಬೇಕು. ನಮ್ಮ ಯುವಕರನೇಕರು ಖಾದಿ ಪ್ರಚಾರದಲ್ಲಿದ್ದರೆ, ಜೊತೆಗೆ ಲೈಬ್ರರಿ ಸ್ಥಾಪನೆ ವಿಷಯ ಕೆಲಸ ಮಾಡುವುದು ಅವಶ್ಯ. ಗ್ರಾಮಸ್ಥರು ಮೂರರಲ್ಲಿ ಒಂದು ಭಾಗ ಕೊಟ್ಟರೆ ಬಾಕಿ ಎರಡು ಭಾಗ ಸರಕಾರದವರಿಂದ ಕೊಡಲ್ಪಡಬೇಕು. ಪ್ರತಿ ಗ್ರಾಮದಲ್ಲಿಯೂ ಕನಿಷ್ಟಪಕ್ಷ 300 ರೂಪಾಯಿಯಾದರೂ ಶೇಖರಿಸಲ್ಪಡಬೇಕು. ವ್ಯವಸಾಯ ಮತ್ತು ಸಹಕಾರದ ವಿಷಯ ಪುಸ್ತಕಗಳನ್ನು ಸಹಕಾರ ಸಂಘದ ಕಾಮನ್‌ಗುಡ್ ಫಂಡಿನಿಂದ ತೆಗೆಯಲಿಕ್ಕೆ ಅನುಕೂಲವಿದೆ. ಪ್ರತಿ [illegible]ಗಳಲ್ಲಿಯೂ ಲೈಬ್ರರಿ ಅವಶ್ಯ. ಜೊತೆಗೆ ಸಂಚರಿಸುವ ಲೈಬ್ರರಿಯನ್ನು [illegible] ಮಾಡಬೇಕೆಂದು ಬಹಳ ಒಳ್ಳೆಯ ಭಾಷಣವನ್ನು" ಮಾಡಿರುವರು.

ವಿದೇಶ.

ಫ್ರಾನ್ಸ್ ದೇಶದಲ್ಲಿ ಈಗ ತಾನೇ ಯಮ್. ಬ್ರಿಯಾಂಡರವರು ಹೊಸ ಮಂತ್ರಿ ಮಂಡಲವನ್ನು ರಚಿಸಿರುವರು.

ಸ್ಪೈನ್ ದೇಶದಲ್ಲಿ ರಾಜಕೀಯ ಗಲಾಟೆಗಳು ಹೆಚ್ಚಾಗಿ, ಅನೇಕ ಮಾಜಿ ಮಂತ್ರಿಗಳು, ಉದ್ಯೋಗಸ್ಥರನ್ನು ಸರಕಾರದವರು ದಸ್ತಗಿರಿ ಮಾಡಿರುವರು.

ಲಂಡನ್ನಿನಲ್ಲಿರುವ ಮಹಾ ಜನರು ನಮ್ಮ ವೈಸರಾಯರಾಗಿದ್ದ ಲಾರ್ಡ್ ರೀಡಿಂಗ್‌ರವರಿಗೆ ಲಂಡನ್ನಿನ ಹೊಸ "ಫ್ರೀಮೇನ್" ಎಂಬ ಪದವನ್ನು ಕೊಟ್ಟಿರುವರು.

ಬ್ರಿಟಿಷ್ ಪಾರ್ಲಿಮೆಂಟಿನಲ್ಲಿ ಲೇಬರ್ ಮೆಂಬರಾದ ಲ್ಯಾನ್ಸ್ ಬರೀಯವರು ಇಂಡಿಯಾ ಸುಧಾರಣೆಗಳ ಶೋಧಕ ಕಮಿಟಿಯವರ ಸಿಫಾರಸ್ಸನ್ನು ಜಾರಿಗೆ ತರುವಂತೆ ಪ್ರಶ್ನೆಮಾಡಲಿಕ್ಕಿರುವರು.

ಬ್ರಿಟಿಷ್ ಪಾರ್ಲಿಮೆಂಟಿನಲ್ಲಿ ಇಂಗ್ಲಿಷ್ ಮತ್ತು ರಷ್ಯಾದೇಶದ ಸಂಬಂಧ ಚರ್ಚೆ ನಡೆಯುತ್ತಿದ್ದಾಗ ಬಹಳ ಗಲಾಟೆಯಾಗಿ ಆಖೈರಿಗೆ ಮೀಟಿಂಗು ಅಧ್ಯಕ್ಷರಿಂದ ಬರಖಾಸ್ತು ಮಾಡಲ್ಪಟ್ಟಿತು.

ರಿಫ್ ಲೀಡರಾದ ಅಬ್ದುಲ್ ಕರೀಮ್ ಫ್ರಾನ್ಸ್ ಸರಕಾರದಲ್ಲಿ ಬಂದಿಯಾಗಿರುವುದು ಸರಿಯಷ್ಟೆ. ಇವನು ಸ್ಪೈಯಿನ್ ಜನರಿಗೆ ಯುದ್ಧದಲ್ಲಿ ಕೊಟ್ಟ ತೊಂದರೆಗಾಗಿ ಸ್ಪೈಯಿನ್ ಸರಕಾರದವರು ಅವನ ತಲೆಯನ್ನು ಕಳುಹಿಸಿಕೊಡಬೇಕೆಂದು ಫ್ರೆಂಚ್ ಸರಕಾರದವರನ್ನು ಕೇಳಿರುವರು.

ಕಳೆದ ಮೇ ತಾರೀಕು 30ರಲ್ಲಿ ಬರ್ಲಿನ್ ಪಟ್ಟಣದಲ್ಲಿರುವ ಚೈನಾ ವಿದ್ಯಾರ್ಥಿಗಳ ಒಂದು ಮೀಟಿಂಗು ಕಳೆದ ವರ್ಷ ಬ್ರಿಟಿಷ್ ಮತ್ತು ಜಪಾನಿಯರು ಚೈನಾ ಜನರನ್ನು ಗುಂಡು ಹೊಡೆದು ಕೊಂದ ಜ್ಞಾಪಕಾರ್ಥವಾಗಿ ತಮ್ಮ ಸಂತಾಪವನ್ನು ಸೂಚಿಸಲಿಕ್ಕಾಗಿ ಕೂಡಿತ್ತು. ಹಿಂದೀಯ ವಿದ್ಯಾರ್ಥಿಗಳೂ ಸಹ ಇದರಲ್ಲಿ ಭಾಗಿಗಳಾಗಿ ತಮ್ಮ ಸಹಾನುಭೂತಿಯನ್ನೂ ಸಂತಾಪಗಳನ್ನೂ ಸೂಚಿಸಿದರು.

ನೌಕರಿ ಖರಾರು ಫಾರಮುಗಳು.

1926ನೇ ಇಸವಿ ಕೊಡಗಿನ ಕೂಲಿ ಕೆಲಸವನ್ನು ಕುರಿತ ಆಕ್ಟ್ 1ರ ಮೇರೆ, ಅನುಸರಣೆಯುಳ್ಳ ಯೂರೋಪಿಯನ್ ಮತ್ತು ಇಂಡಿಯನ್ ಪ್ಲಾಂಟರುಗಳೂ ಸೇರಿ ತಯಾರಿಸಿರುವ ನೌಕರಿ ಖರಾರು ಫಾರಮುಗಳು ಇಂಗ್ಲಿಷಿನಲ್ಲಿಯೂ ಕನ್ನಡದಲ್ಲಿಯೂ ಪ್ರಿಂಟಾಗಿ ಮಾರಾಟಕ್ಕೆ ತಯಾರಿವೆ. ಬೇಕಾದವರು ಸೆಂಟ್ರಲ್ ಹೈಸ್ಕೂಲಿನ ಬಳಿ ಇರುವ (ಹಳೇ ಗಡಂಗ ಕಟ್ಟಡದ) ನಮ್ಮ ಹೊಸ ಆಫೀಸಿನಲ್ಲಿ ಕೊಂಡುಕೊಳ್ಳಬಹುದು.

ತಾ. 24—6—'26 ಮಡಿಕೇರಿ. ಮೇನೇಜರ್, "ಕೊಡಗು" ಆಫೀಸು.

ಪತ್ರವ್ಯವಹಾರ

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ಪತ್ರಿಕಾಕರ್ತರು ಜವಾಬ್ದಾರರಲ್ಲ. ಸಂ.]

ಅಯ್ಯಾ,

ಈ ದೇಶದಲ್ಲೂ ಕೆಲವು ಮಾರಿಗುಡಿಗಳಲ್ಲಿ ಕೋಣಗಳನ್ನು ಮಾರಿಗೆ ಎರಿಕೊಡುತ್ತಾರೆ. ಆಹಾರಕ್ಕೆ ಉಪಯೋಗಿಸದ ಈ ಪ್ರಾಣಿಯನ್ನು ವಧೆಮಾಡುವದನ್ನು ನಿಲ್ಲಿಸಲು ಪ್ರಯತ್ನಿಸಬೇಕಾದದ್ದು ಯುಕ್ತವಾಗಿದೆ. ಆದ್ದರಿಂದ ಈ ಕೆಳಗಿನ ಲೇಖನವನ್ನು ನಿಮ್ಮ ಪತ್ರಿಕೆಗೆ ಕಳುಹಿಸಿರುತ್ತೇನೆ.

"ಪ್ರಾಣಿದಯೆ"

"ಕಾರ್ಕಳ ಮಾರೀಪೂಜೆ."

ನಮ್ಮಲ್ಲಿ ಪ್ರಾಕಿನಿಂದ ಮಾರಿಪೂಜೆ ಎಂಬ ಜಾತ್ರೆಯು ಬಹು ವಿಜೃಂಭಣೆಯಿಂದ ನಡಿಯುವದು ಸಕಲರಿಗೂ ತಿಳಿದ ವಿಷಯವೇ ಆಗಿದೆ. ಈ ವರುಷವೂ ಈ ಜಾತ್ರೆಯು ಎಂದಿನಂತೆಯೇ ನಡೆಯಿತು.

ಹಿಂಸಾಯುಕ್ತ ಮಾರಿ ಪೂಜೆಯು ಮೂರ್ಖ ಜನರಿಂದ ಆರಂಭಿಸಲ್ಪಟ್ಟುದೆಂದೂ, ಲೋಕದಲ್ಲಿ ಜನರು ಈ ನೆವನದಿಂದ ಜಗನ್ಮಾತೆಯ ಹೆಸರಲ್ಲಿ ಹಿಂಸನೆಗೈದ ಪಾಪಗಳಿಂದ ದುರ್ಗತಿಗೆ ಹೋಗುವರೆಂದೂ ತಿಳುವಳಿಕೆಯುಳ್ಳವರೆಲ್ಲರೂ ಒಪ್ಪುತ್ತಾರೆ.

ಹೀಗಿರುವಲ್ಲಿ ಈ ವರುಷ ನಮ್ಮ ಕಾರ್ಕಳದವರಾದ ಈಗ ತಲಚೇರಿಯ ಜಿಲ್ಲಾ ಸರ್ಜನ, ಶ್ರೀಯುತ ರಾಮಕಮ್ಮಿಯವರು ತಮ್ಮ ಅಪೂರ್ವವಾದ ಸಮಯವನ್ನು ತನ್ನ ದೇಶೋದ್ಧರಣೆಯ ಈ ಕಾರ್ಯದಲ್ಲಿ ವಿನಿಯೋಗಿಸಬೇಕೆಂಬ ಸತ್ಸಂಕಲ್ಪದಿಂದ ತನ್ನ ಕೆಲಸಕ್ಕೆ ರಜಾ ಪಡೆದು ಕಾರ್ಕಳಕ್ಕೆ ಬಂದರು. ಮತ್ತು ಇಲ್ಲಿ ಮಾರೀಪೂಜೆಯ ನೆಪದ ಕೋಣ ಮತ್ತು ಇತರ ಪ್ರಾಣಿಗಳನ್ನು ಹಿಂಸಿಸಿ ಕೊಲ್ಲುವದು ಸರಿಯಲ್ಲವೆಂದೂ ಆ ವಿಷಯ ಒಪ್ಪುವರಾದ ಈ ನಗರವಾಸಿಗಳೆಲ್ಲರನ್ನೂ ಕೂಡಿಸಿ ಅದನ್ನು ಹೇಗೆ ನಿಲ್ಲಿಸಬಹುದೆಂಬುದರ ಕುರಿತು ಪ್ರತಿಯೊಬ್ಬರ ಸೂಚನೆಯನ್ನು ಕೇಳಿ ತಿಳಕೊಂಡರು. ಮತ್ತು ಅದನ್ನು ಯಾಕೆ ನಿಲ್ಲಿಸಬೇಕೆಂಬ ವಿಷಯ ತಮ್ಮ ಸುಶ್ರಾವ್ಯವಾದ ಭಾಷಣಕೊಟ್ಟರು. ಅನಂತರ ಅಲ್ಲಿದ್ದ ಪರಲ್ಲನೇಕರು ಸ್ವಯಂಸೇವಕರಾಗಿ ಸೇರಿ ಈ ಕಲಸವನ್ನು ಮುಂದುವರಿಸುವ ವಾಗ್ದಾನ ಮಾಡಿದರು.

ಆ ದಿನ ಮಂಗಳವಾರವಾಗಿ ಶ್ರೀ ಮಹಾರಮ್ಮದೇವಿಗೆ ಕಡಿಯಲಿಕ್ಕಿರುವ ಒಂದನೇ ಕೋಣವನ್ನು ಊರಲ್ಲೆಲ್ಲಾ ಮೆರೆಸುವ ದಿನವಾಗಿತ್ತು. ಆ ಮೆರೆಸುವ ಕೋಣಕ್ಕೆ ಶೇರು ಯಾ ಅರ್ಧ ಶೇರು ಅಕ್ಕಿ ಮತ್ತು ಎಣ್ಣೆಯನ್ನು ಅದಕ್ಕೆ ಕೊಟ್ಟುಬರುವ ವಾಡಿಕೆಯೂ ಇತ್ತು. "ಮೂಕ ಪ್ರಾಣಿಗಳನ್ನು ಕೊಲ್ಲುವದರಲ್ಲಿ ನಮ್ಮ ಯಾವ ತರದ ಸಮ್ಮತಿಯೂ ಇಲ್ಲದ್ದರಿಂದಲೂ, ಈ ಅಕ್ರಮದ ಪೂಜೆಗೆ ಪ್ರಾಕಿನಿಂದ ಇದ್ದ ನೀಡುವವರ ಸಹಾಯವು, ಗ್ರಾಮಸ್ಥ ಶ್ರೀಮಕೆಯ ಸಹಾನುಭೂತಿಯಿಲ್ಲವೆಂದು ಊರವರೆಲ್ಲಾ ತಿಳಿಸುವರು" ಅಕ್ಕಿ, ಎಣ್ಣೆ ಕೊಡುವ ರಿವಾಜು ಹೆಚ್ಚಾಗಿ ನಿಲ್ಲಿಸೋಣಾಯಿತು. ಮತ್ತು ಹಲವರು ಹಳ್ಳಿಗಳಿಗೆ ಹೋಗಿ ಮಾರಿಪೂಜೆಗೆ ಹಿಂಸೆಮಾಡಬಾರದಾಗಿ ಕೂಡಾ ಬೋಧಿಸಿದ್ದಾರೆ.

ಈ ಮಂಗಳವಾರದಿಂದ ಮಾರಿ ಪೂಜೆಯ ದಿನವಾದ ಮರು ಮಂಗಳವಾರದವರೇಗೆ ದಿನಂಪ್ರತಿ ಸಾಯಂಕಾಲ ನಗರ ಭಜನೆಯಾಗಿ ಈ ಅಭಿಪ್ರಾಯದ ಭಾಷಣಗಳನ್ನು ಅಲ್ಲಲ್ಲಿ ಕೊಟ್ಟರು. ಮನುಷ್ಯ ಜೀವನಕ್ಕೆ ಹೆಚ್ಚಿನ ಸಹಾಯಕವಾದ ಕೋಣ ವ, ಇತರ ನಿರಪರಾಧಿ ಮೂಕ ಪ್ರಾಣಿಗಳನ್ನು ಹಿಂಸಿಸಿ ಕಡಿಯುವದು ದೇವಿಗೆ ಬೇಕಾಗಿಲ್ಲವೆಂದೂ, ಭಕ್ತಿಯಿಂದಲೇ ಜಗನ್ಮಾತೆಗೆ ಪ್ರೀತಿಯಾಗಿ ಇಷ್ಟಾರ್ಥ ಸಿದ್ಧಿಯಾಗುವದಾಗಿ ವಗೈರೆ ಬೋಧಯುಕ್ತವಾಗಿ ಬೋಧಿಸಿದರು.

ಹೀಗೆ ಶ್ರೀ ರಾಮಕಮ್ಮಿಯವರ ಮುಂದಾಳುತನದಿಂದಲೂ ಶ್ರೀ| ನೇಮಿಸಾಗರ ವರ್ಣಿಯವರ ಶ್ರೀ| ಕುಮಾರಯ್ಯ ಶಾಸ್ತ್ರಿಗಳವರ ಮತ್ತು ಶ್ರೀ| ಕಾಬೆಟ್ಟು ಶಿವಪ್ಪ ಹೆಗಡೆರ ಹೆಚ್ಚಿನ ಪ್ರೋತ್ಸಾಹದಿಂದ ನಡೆದ ಈ ಕಾರ್ಯಕ್ರಮಕ್ಕೆ ಮೊಕ್ತೇಸರರು ಬೆಚ್ಚಿಬಿದ್ದು ಶ್ರೀ ಮಹಾರಮ್ಮ ದೇವಿಯ ಗುಡಿಯಲ್ಲಿ ಈ ಮೇಲಿನ ಮುಂದಾಳುಗಳನ್ನೆಲ್ಲಾ ಒಟ್ಟುಗೂಡಿಸಿ, ಮೊಕ್ತೇಸರರು ಚೆನ್ನಾಗಿ ಆಲೋಚಿಸಿ ಶ್ರೀ ದೇವಿಯ ನಮ್ಮಬಲ್ಲಿ ಪ್ರಾರ್ಥನಾದಿಗಳಾದ ನಂತರ, ಶ್ರೀ ದೇವಿಯ ಪ್ರಸಾದಯುಕ್ತರಾಗಿ ತಾವು ಈ ವರುಷ ಮಾರಿಪೂಜೆಗೆ ದಿನ ನಿಶ್ಚಯಿಸಿದ್ದರಿಂದಲೂ, ತಮಗೆ ಅಪಮಾನ ಆಗಬಾರದೆಂಬ ಒಗ್ಗ್ಯ ಮಾತ್ರ ಕೇವಲ ಒಂದು ಕೋಣ ಮತ್ತು ಮರುದಿನ ಪ್ರಾತಃಕಾಲ 8 ಘಂಟೆವರೇಗೆ ಎಂದಿನಂತೆ ಇತರ ಪ್ರಾಣಿಗಳ ವಧೆಯನ್ನು ಮಾಡುತ್ತೇನೆಂತಲೂ ಆದ ಆದಷ್ಟು ಹಿಂಸೆಯ ವಧೆ ಕಡಿಮೆಮಾಡುತ್ತವೆಂತಲೂ ಮಾತುಕೊಟ್ಟರು. ನಂತರ ಡಾಕ್ಟ್ರ ರಾಮಕಮ್ಮಿಯವರು ಶ್ರೀ ದೇವಿಗೆ ಅಹಿಂಸೆಯುಕ್ತವಾದ ಸಾತ್ವಿಕ ಪೂಜೆಯನ್ನೇ ಸ್ವೀಕರಿಸಿ ಜನತೆಯನ್ನು ಕರುಣಾ ಹೃದಯರನ್ನಾಗಿ ಮಾಡಿ ರಕ್ಷಿಸಬೇಕೆಂದು ಪ್ರಾರ್ಥಿಸಿದರು.

ಮರುದಿನವೇ ನಮ್ಮ ಶ್ರೀ ದೇವಿಯ ಮಾರಿಪೂಜೆಯ ದಿನವಾಗಿತ್ತು. ಬೆಳಿಗ್ಗೆ 9 ಘಂಟೆಗೆ ಶ್ರೀ ರಾಮಕಮ್ಮಿಯವರು ಶ್ರೀ ವೆಂಕಟ್ರಮಣ ದೇವಸ್ಥಾನದಿಂದ ಭಜನೆಯಿಂದ ಹೊರಟು ಶ್ರೀ ದೇವಿಯ ಸಾತ್ವಿಕ ಪೂಜೆನಡೆಯುವರೆ ಪ್ರತಿಷ್ಠಿತವಾದ ಗೋಪುರದ ಅಂಗಡಿಯ ವರೇಗೆ ಹೋಗಿ ಮನಸ್ಸು ಕರಗುವಂತೆ ಪ್ರಾರ್ಥಿಸಿದರು. ಅಲ್ಲಿಂದ ಶ್ರೀ ವೆಂಕಟ್ರಮಣ ದೇವಸ್ಥಾನಕ್ಕೆ ತೆರಳಿ ಶ್ರೀ ದೇವರಿಗೆ ಭಕ್ತಿಯಿಂದ ಪ್ರಾರ್ಥಿಸಿದರು.

ಮಧ್ಯಾಹ್ನ "ಅಹಿಂಸೆ ಮತ್ತು ಸಾತ್ವಿಕ ಪೂಜೆಯ ವಿಷಯ ಅನೇಕರು ಭಾಷಣಗಳನ್ನು ಕೊಟ್ಟರು. ಸಾವಿರಾರು ಜನರಿಗೆ ಅಹಿಂಸೆಯ ಮಹತ್ವ ಮನಸ್ಸಿಗೆ ಹೊಳೆಯಿತು. ಪರಂತು ಶ್ರೀ ದೇವಿಯು ಅದೇ ದಿನ ರಾತ್ರಿ ಗೋಪುರದಿಂದ ಸಂಭ್ರಮದೊಡನೆ ಗುಡಿಯನ್ನು ಪ್ರವೇಶಿಸುವ ಮುಹೂರ್ತಕ್ಕೆ ಅವನ್ನು ಕೂಂದಾದನಂತರ, ಸ್ಟೇಶನರಿ ಮೇಜಿಸ್ಟ್ರೇಟರು, ಪೋಲೀಸ್ ಸಬ್ ಇನ್ಸ್‌ಪೆಕ್ಟರರು, ಮತ್ತು ಆಯುಧಯುಕ್ತರಾದ ಇತರ ಪೋಲೀಸ್ ಸಹಾಯವನ್ನೊಳಗೊಂಡು ಮೊಕ್ತೇಸರರು ತಮ್ಮ ವಾಗ್ದಾನಕ್ಕೆ ವಿರುರಿ, ಹಿಂಡಲ್ಲಿ, ಎರಡಲ್ಲ, ನಾಲ್ಕು ಕೋಣಗಳನ್ನು ಒಂದೇ ಸವನೆ ಕ್ರೂರತನದಿಂದ ನಿಷ್ಠುರ ಹೃದಯರಾಗಿ ವಧಿಸಿದರು. ಮತ್ತು ಒಂಭತ್ತಲ್ಲ, ಹತ್ತಲ್ಲ ಸಾಯಂಕಾಲದ ವರೇಗೆ ಏಕಪ್ರಕಾರವಾಗಿ ತಮ್ಮ ಮೂರ್ಖತನವನ್ನು ಸ್ಥಿರೀಕರಿಸಿ ಪಾಪದ ರಾಶಿಯನ್ನು ಕಟ್ಟಿಕೊಂಡರು. ಈ ಹಿಂಸೆಯ ದಿನ ಪರತಾಳ ಆಚರಿಸಿ ಶೋಕದಾಯಿ ವ್ಯಕ್ತಪಡಿಸಬೇಕಾಗಿ ಮತ್ತು ಉಪವಾಸವಿದ್ದು ಅಹಿಂಸೆಯ ಬಗ್ಗೆ ಪ್ರಾರ್ಥನೆ ನಡಿಸಬೇಕಾಗಿ ಮಂ| ಪಿಲ್ಯಭಟ್ಟರ ವಿನಂತಿಯಿತ್ತು.

"ನವಯುಗ"

ದೇವಸ್ಥಾನ ಜೀರ್ಣೋದ್ಧಾರ.

ಕುಯ್ಯಂಗೇರಿ ನಾಡು ಹೊದ್ದೂರು ಗ್ರಾಮದಲ್ಲಿ ಅನಾದಿ ಸಿದ್ಧವಾದ ಭಗವತಿ, ಭದ್ರಕಾಳಿ, ಚಾತರ್ಪ್ಪ ದೇವಸ್ಥಾನದ ಕಟ್ಟಡವು ಕೆಲವು ವರ್ಷಗಳ ಹಿಂದೆ ಶಿಥಿಲಕ್ಕೆ ಬಂದದ್ದನ್ನು ಗ್ರಾಮಸ್ಥರು ಅವರವರ ಶಕ್ತ್ಯಾನುಸಾರ ದ್ರವ್ಯಸಹಾಯಮಾಡಿ ದೇವಸ್ಥಾನದ ಮೇಲು ಕಟ್ಟಡ ವಗೈರೆಯನ್ನು ಬಾರಿ ಕೌಶಲದಿಂದ ಕಟ್ಟಿಸಿ ಕೆಲಸ ಪೂರೈಸಿ ತಾರೀಕು 27—5—26ರ ಆಗಾಯಿತು. 12 ದಿವಸದ ಪರಿಯಂತರ ನದಿ, ದೇವಸ್ಥಾನಗಳಲ್ಲಿ ತಂತ್ರಿಗಳಿಂದ ಅಷ್ಟಗಂಧ ಹಾಕಿಸಿ ಬ್ರಹ್ಮಕಲಶದಿಂದ ದೇವರ ಸಾನ್ನಿಧ್ಯದೊಡಗೂಡಿ ಹೋಮಗಳು ಇದ್ದಂತೆ ನಪ್ಪು ವಗೈರೆ ಉತ್ಸವವು ಬಹು ವಿಜೃಂಭಣೆಯಿಂದ ನಡೆಯಿತು. ನದಿ ಗ್ರಾಮಗಳಲ್ಲಿ ಭೂಮಿ ಪಡಕೊಂಡ ಹೊರಗಿನ ಮಹನೀಯರಿಂದ ದೇವರ ಜೀರ್ಣೋದ್ಧಾರ ಕಾರ್ಯಕ್ಕೆ ಯಾವ ಸಹಾಯ ದೊರೆಯದಿದ್ದರೂ ಸ್ಥಳಿಕ ಗ್ರಾಮಸ್ಥರು ತಮ್ಮ ತಮ್ಮ ಶಕ್ತಿಮೀರಿ ದ್ರವ್ಯ ಸೇರಿಸಿ ದೇವಸ್ಥಾನವನ್ನು ಜೀರ್ಣೋದ್ಧಾರಮಾಡಿದ ಭಕ್ತಿಯ ಕಾರ್ಯವು ಮುಕ್ತಿಗೆ ಸಾಧನಕರವಾಗಿದೆ.

ನೆರೆಗ್ರಾಮಸ್ಥ.

ಭಕ್ತಿಮುಕ್ತಿಗೂ ಸಾಧನವೇ ಭಗವತ್ ಸೇವೆ

ಭಕ್ತ ಶಿರೋಮಣಿಗಳಲ್ಲಿ ವಿಜ್ಞಾಪನೆ.

ಕೊಡಗಿನಲ್ಲಿ ಅನಾದಿಯಲ್ಲಿ ಉದಯಿಸಿರತಕ್ಕ ಇಗ್ಗುತಪ್ಪಯೆಂಬ ಶ್ರೀ ಸುಬ್ರಹ್ಮಣ್ಯ ದೇವರ ಕೆಳಗಿನ ದಿವ್ಯ ಚರಿತ್ರೆಯನ್ನು ಓದಿ ಶಕ್ತ್ಯಾನುಸಾರ ದ್ರವ್ಯ ಸಹಾಯ ಮಾಡತಕ್ಕವರಿಗೆ ಕುಮಾರ ಸ್ವಾಮಿಯು ಸನ್ಮಂಗಳ ಉಂಟುಮಾಡಲೆಂದು ಪ್ರಾರ್ಥಿಸುತ್ತೇವೆ.

ಶಿವ ಕುಮಾರನಾದ ಸುಬ್ರಹ್ಮಣ್ಯನು ಇಗ್ಗುತಪ್ಪಯೆಂಬ ಪರ್ವತಾಗ್ರದಲ್ಲಿ ನಿಂತು ತ್ರಿಸ್ವರೂಪನಾಗಿ ಪಾಡಿಯಲ್ಲು, ನೆಲಜಿಯಲ್ಲು, ಬಲ್ಲತ್ನಾಡಲ್ಲು ಸಹ ಪ್ರಸನ್ನನಾದ ರೀತಿ ಮೂರು ಸ್ಥಳದಲ್ಲು ಪೂರ್ವಿಕರು ಅಪೂರ್ವವಾದ ದೇವಾಲಯವನ್ನು ಪ್ರತಿಷ್ಠಿಸಿ ಇದರ ಖರ್ಚು ವೆಚ್ಚಕ್ಕಾಗಿ ಭೂ ಆಸ್ತಿಯೂ ದ್ರವ್ಯದ ನಿಧಿಯು ಸ್ಥಿರಪಡಿಸಿ ಅಮೃತಪಡಿ, ನೈವೇದ್ಯ, ಪೂಜೆಪುನಸ್ಕಾರಗಳು ಸೂರ್ಯ ಚಂದ್ರ ಭೂದೇವಿ ಇರುವ ಪರಿಯಂತರ ಲೋಪವಿಲ್ಲದೆ ನಡೆದು ಬರಬೇಕಾಗಿಯೂ ಇದಕ್ಕೆ ಕಲ್ಲು ಕಾವೇರಿ ನೀರು ಭೂಮಿಯು ಇದಕ್ಕೆ ಸಾಕ್ಷಿಯೆಂಬ ಪ್ರಮಾಣವಾಕ್ಯವನುಚ್ಚರಿಸಿ ಆ ಪ್ರಕಾರವು ಈ ತನಕ ನಡೆದು ಬರುತ್ತೆ. ಈ ಮೂರು ಮಹಾಸ್ಥಳದ ಪೈಕಿ ಬಲ್ಲತ್ನಾಡಿನಲ್ಲಿ ಇರುವ ದೇವಸ್ಥಾನದ ಅಮೃತಪಡಿ ಖರ್ಚಿಗೆ ಇಂತಹ 80 ಬಟ್ಟಿ ಜೋಡಿ ಭೂಮಿಯ ಅನುಭವ ಮಾಡುತ್ತಿದ್ದ ಒಬ್ಬ ಸ್ಥಾನಿಕನು ಭೂಮಿಯನ್ನು ಇನ್ನೊಬ್ಬರಿಗೆ ಕ್ರಯಸಾಧನ ಮಾಡಿದ್ದರಿಂದ ತೆಗೆದುಕೊಂಡವನು ಅಮೃತಪಡಿ ಅಕ್ಕಿ, ಕೊಡದೆ ಕೋರ್ಟಿನಲ್ಲಿ ವ್ಯವಹರಿಸಿಯೂ ಫಲಿತಾಂಶಕ್ಕೆ ಬರದೆ ಅನಂತರ ಕ್ರಯಕ್ಕೆ ಪಡಕೊಂಡವನ 400 ರೂಪಾಯಿ ಕೊಟ್ಟು ದೇವಸ್ಥಾನಕ್ಕೆ ವಹಿಸಿಕೊಳ್ಳಬೇಕೆಂಬ ಆಖೈರ್ ತೀರ್ಮಾನ ಉಂಟಾಗಿರುತ್ತೆ. ಈ ಹಣ ಕೊಡಲು ಈ ದೇವಸ್ಥಾನಕ್ಕೆ ಒಳಪಟ್ಟ ನಾಡವರಾದ ನಮಗಳಿಗೆ ಭೂಮಿ ಕೇವಲ ಕಿಂಚಿತವೆಂಬುದು ದೇಶದವರಿಗೆ ಸಂಪೂರ್ಣ ತಿಳಿದಿರುವುದರಿಂದ ನಮ್ಮಿಂದ ಇದು ಅಸಾಧ್ಯವಾಗಿ ದೇಶದ ಮಹಾತ್ಮರ ನೆರವನ್ನು ಆಶ್ರಯಿಸಿಯಾದರೂ ಪೂರ್ವಿಕರ ಸಂಕಲ್ಪದಂತೆ ಅಮೃತ ಪಡಿ, ನಂದಾದೀಪ ನಡಿಸಬೇಕೆಂದು ಹೊರಟಿದ್ದೇವೆ. ತ್ರಿರೂಪಸ್ವರೂಪನಾದ ಸುಬ್ರಹ್ಮಣ್ಯನಿಗೆ ಎರಡು ಕಡೆ ಪೂಜೆ ನಡೆದು 3ನೆ ಕಡೆ ನಡಿಯದಿದ್ದರೆ ಮೂಲ ಸ್ವರೂಪದ ಪ್ರಕಾಶಕ್ಕೆ ಕೇವಲ ಕೊರತೆಯೆಂಬುದು ಜ್ಞಾನಿಗಳಿಗೆ ತಿಳಿಯದಲ್ಲ. ಆದುದರಿಂದ ಹೆಚ್ಚಿನ ಪ್ರಸಂಗದಿಂದ ಭಕ್ತರ ಮನಸ್ಸಿಗೆ ಆಯಾಸ ಉಂಟುಮಾಡಲು ವ್ಯಸನಪಡುತ್ತೇವೆ.

ಮುಖ್ಯವಾಗಿ ಪರಾಧೀನವಾದ 80 ಬಟ್ಟಿ ಭೂಮಿಯನ್ನು 400 ರೂಪಾಯಿಗೆ ಬಿಡಿಸಿಕೊಂಡು ಇದರ ಪೂರ್ವದಂತೆ ಇದರ ಉತ್ಪತ್ತಿಯಿಂದ ಅಮೃತ ಪಡಿ,ನಂದಾದೀಪ ನಡಿಯುವಂತೆ ಮಾಡಲು ಮಹಾತ್ಮರಾದ ತಾವುಗಳೆಲ್ಲ ಶಕ್ತ್ಯಾನುಸಾರ ಸಹಾಯ ದ್ರವ್ಯವನ್ನು ಕೊಟ್ಟು ಶ್ರೀ ಸುಬ್ರಹ್ಮಣ್ಯನ ಪ್ರೀತಿಗೆ ಪಾತ್ರರಾಗಬೇಕಾಗಿ ಅತಿ ವಿನಯದಿಂದ ಪ್ರಾರ್ಥಿಸುವ.

ಹಣಕಳುಹಿಸುವ ಮಹಾಶಯರು ದಯವಿಟ್ಟು ಹಣವನ್ನು ಕೊಂಡಿಂಜ್ಜಮ್ಮನ ನಾಣಯ್ಯ, ಪೇರೂರು ಗ್ರಾಮ, ಕಕ್ಕಬೆ ಎಂಬ ಅಡ್ರೆಸಿಗೆ ಕಳುಹಿಸಬೇಕಾಗಿ ಕೋರುತ್ತೇವೆ;

ನಾಡುತಕ್ಕರು ಕೊ. ದೇವಯ್ಯ.
" ಕೆ. ನಾಣಯ್ಯ.
" ಮು. ಮುಂದಣ್ಣ.

ವೀರಶೈವರ ಸಂಘ.

ಜಗನ್ನಿಯಾಮಕನ ಇಚ್ಛೆ ಶಕ್ತಿಗೆ ಒಳಪಟ್ಟ ಈ ಪ್ರಪಂಚದಲ್ಲಿ ಎಲ್ಲಾ ಮತಸ್ಥರು ತಮ್ಮ ಮತದ ಮೇಲಿರುವ ಪ್ರೀತಿ ವಿಶ್ವಾಸಗಳಿಂದಲೂ ತಮ್ಮ ತಮ್ಮ ಜನಾಂಗವು ಅಭಿವೃದ್ಧಿಯನ್ನೈಯ್ಯಬೇಕೆಂದು ಅನೇಕ ತರದ ಸಂಘಗಳನ್ನು ಏರ್ಪಡಿಸಿಕೊಂಡು ಅವುಗಳ ಮೂಲಕ ತಾವು ತಮ್ಮ ಬಾಲ ಬಾಲಿಕಿಯರೂ ಮತ್ತು ತಮ್ಮ ಮತದ ಕಾರ್ಯ ಕಟ್ಟಳೆಗಳನ್ನು ಸಹ ಉನ್ನತ ಸ್ಥಿತಿಗೆ ತರುತ್ತಿರುವದು ಎಲ್ಲರಿಗೂ ತಿಳಿದ ಸಂಗತಿಯಾಗಿದೆ. ಆದರೆ ವೀರಶೈವ ಮಂಡಲಿಯವರು ಈ ಮೇಲಿನ ಅಭಿವೃದ್ಧಿಗಳ ಕುರಿತು ಯಾರು ಯಾವಾಗಲೂ ಯೋಚಿಸಲಿಲ್ಲವೆಂಬುದು ತಿಳಿಯಬಹುದಾದ ಸಂಗತಿಯಾಗಿದೆ. ಆದರೆ ಈಗ್ಗೆ ಮೂರು ವರುಷಗಳ ಹಿಂದೆ ಕೆಲವೊಂದು ಕಾರಣದಿಂದ ಈ ವೀರಶೈವ ಮಂಡಲಿಯವರು ಒಂದು ಸಂಘವನ್ನು ಏರ್ಪಡಿಸಿಕೊಂಡು ಅದರ ಮೂಲಕ ಊರ್ಜಿತ ಸ್ಥಿತಿಗೆ ಬರಬೇಕೆಂಬ ಉದ್ದೇಶದಿಂದಲೋ ಅಥವಾ ಇನ್ಯಾವ ಕಾರಣದಿಂದಲೋ ಕೆಲವು ಸ್ಥಳಗಳಲ್ಲಿ ಕೆಲವು ಮೀಟಿಂಗುಗಳನ್ನು ಅಲ್ಲಿಯ ಸುತ್ತಮುತ್ತಲಿನ ಗ್ರಾಮಸ್ತರುಗಳನ್ನು ಸೇರಿಸಿಕೊಂಡು ನಡೆಸಿದರು: ಹಾಗೆಯೇ ಕೊಡ್ಲಿಪೇಟೆ ಬಸವೇಶ್ವರ ದೇವಸ್ಥಾನದಲ್ಲಿ ಈ ಕೊಡಗು ದೇಶದ ಮಹನೀಯರುಗಳು ಮತ್ತು ಮೈಸೂರು ಸೀಮೆಯ ಕೆಲವು ಮಹನೀಯರುಗಳು ಸಹ ಮುನ್ನೂರು, ನಾನೂರು ಜನರು ಸೇರಿಕೊಂಡು ಮೀಟಿಂಗು ನಡಿಸಿದರು. ಆ ಮೀಟಿಂಗಿನಲ್ಲಿ ನಾನು ಸಹ ಹಾಜರಿದ್ದೆನು. ಈ ಮೀಟಿಂಗು ನಡೆಯಿಸಿದುದರ ಉದ್ದೇಶವು ಹೊರಬಿದ್ದ ಮೇಲೆ ಇದು ನಮಗಳ ಅಭಿವೃದ್ಧಿಯನ್ನು ಒಳಗೊಂಡಿದೆಯೆಂದು ಗೊತ್ತಾಯಿತು. ಸಭೆಯವರೆಲ್ಲರೂ ಇದನ್ನು ಅನುಮೋದಿಸಿದರೇ ಹೊರತು ವ್ಯತಿರಿಕ್ತವಾಗಿ ಯಾರೂ ಯಾವ ವಿಧದಲ್ಲೂ ಹೇಳಲಿಲ್ಲ. ಆದ ಮೇಲೆ ಇದರಲ್ಲಿ ಎಲ್ಲರಿಗೂ ಏಕಾ ಕಾಲದಲ್ಲಿ ಪ್ರೀತಿ, ವಿಶ್ವಾಸ, ಅಭಿಮಾನ, ಮಮತೆಗಳು ಉಂಟಾದವು. ಕಡೆಗೆ ಈ ಕೂಟವನ್ನು ಏರ್ಪಡಿಸಿದವರು ಇದು ಊರ್ಜಿತ ಸ್ಥಿತಿಗೆ ಬರಬೇಕಾದರೆ ಇದಕ್ಕೆ ಒಳಪಟ್ಟ ಕೆಲವು ಮುಖ್ಯಸ್ಥರುಗಳನ್ನು ಮತ್ತು ಹಣ ಸಹಾಯವು ಆಗಬೇಕೆಂದು ಸೂಚಿಸಿದ ಮೇರೆ ಓರ್ವರನ್ನು ಪ್ರೋಸಿಡೆಂಟಾಗಿಯೂ, ಇನ್ನೋರ್ವರನ್ನು ಅಧ್ಯಕ್ಷರನ್ನಾಗಿಯೂ, ಮತ್ತೋರ್ವರನ್ನು ಕಾರ್ಯದರ್ಶಿಯಾಗಿಯೂ, ಇನ್ನು ಕೆಲವರನ್ನು ಸದಸ್ಯರುಗಳಾಗಿಯೂ ಚುನಾಯಿಸಿದನಂತರ ಕೆಲವು ಮಹನೀಯರಿಂದ ದ್ರವ್ಯ ಸಹಾಯ ಸಹ ದೊರೆದಿದ್ದು ಪ್ರಪಂಚಕ್ಕೆ ಪರಿಚಯವಾದ ಸಂಗತಿಯಾಗಿದೆ ಸರಿ. ದಿವಸದ ಮೀಟಿಂಗನ್ನು ಮುಕ್ತಾಯಗೊಳಿಸಿದನಂತರ ಪುನಃ ಇದರ ಜ್ಞಾಪಕವು ಯಾರೊಬ್ಬರಲ್ಲಾದರೂ ಉದ್ಭವಿಸಿರಲಾರದೆಂದು ತಿಳಿಯುವುದಕ್ಕೆ ಇದುವರೆಗೂ ಇದರ ಯಾವ ವಿಷಯವೇ ಆಗಲೀ, ಯಾ ಈ ಸಂಘವು ಜೀವಿಸಿದೆಯೇ, ಯಾ ಮರಣ ಹೊಂದಿದೆಯೇ ಎಂಬುದು ತಿಳಿಯದುದೇ ನಿದರ್ಶನವಾಗಿದೆ.

ಮಹನೀಯರೇ ಆರಂಭ ಶೂರರ, ಎಂದರೆ ನಮಗಳನ್ನಲ್ಲತಕ್ಕ ಬಿರುದೇ ಸರಿ. ಕಾರ್ಯಾರಂಭದಲ್ಲಿ ಆ ಕೆಲಸದ ಮೇಲಿರುವ ಪ್ರೀತಿ ವಿಶ್ವಾಸ ಅಭಿಮಾನಗಳೆಲ್ಲವೂ ಕಾರ್ಯ ಪ್ರಾರಂಭದ ದಿವಸವೇ ಸರಿ. ಹೆಚ್ಚೆಂದರೆ ಎರಡು ಮೂರು ದಿವಸಗಳ ತನಕ ಆತ್ಮಾಚೆಗೆ ತಾವು ಹಿಡಿದ ಕಾರ್ಯವನ್ನು ಸ್ವಪ್ನದಲ್ಲಿಯೂ ಆಲೋಚಿಸಲಾರರು. ಅಷ್ಟೇ, ಹಾಗಲ್ಲ ಈ ವೀರಶೈವರ ಸಂಘದ ಸ್ಥಿತಿಯೂ ಆಯಿತಲ್ಲವೇ, ಮೀಗ್ಗಿನ ದಿವಸ ನೆರೆದ ಜನರೆಲ್ಲರೂ ಇದರ ಹಿತಚಿಂತಕರೋವಾಗ್ಗಳಲ್ಲಿ ಕಾಣಿಸಿಕೊಂಡರೇ ಹೊರತು ಇದನ್ನು ಊರ್ಜಿತ ಸ್ಥಿತಿಗೆ ತರುವ ವಿಷಯದಲ್ಲಿ ಇದರ ಮುಖ್ಯಸ್ಥರಾದರೂ ಸ್ವಲ್ಪ ದೃಷ್ಟಿಯನ್ನು ಇಟ್ಟಿದ್ದರೂ ಒಂದು ತರದಲ್ಲಿ ಅಭಿವೃದ್ಧಿಯನ್ನು ಹೊಂದುತ್ತಿತ್ತು.

ಮಹನೀಯರೇ, ಆದದ್ದು ಆಗಿಹೋಯಿತು. ಈ ಕಾಲವು ಮರಳಿ ಸಿಗುವುದಿಲ್ಲ. ಈಗಲಾದರೂ ನಿದ್ರೆಯಿಂದ ಎಚ್ಚೆತ್ತು ಕಣ್ಣುಗಳನ್ನು ತೆರೆದು ನಮಗಳ ಅಭಿವೃದ್ಧಿಯನ್ನೊಳಗೊಂಡಿರುವ ಈ ಸಂಘಕ್ಕೆ ಪುನರ್ಜೀವನವನ್ನು ಕೊಟ್ಟು ಉದ್ಧಾರಮಾಡಬೇಕೆಂದು ಈ ಸುಪ್ರಸಿದ್ಧ "ಕೊಡಗು" ಪತ್ರಿಕೆ ಮೂಲಕ ನನ್ನ ಸಹೋದರರಾದ ವೀರಶೈವ ಮಹನೀಯರುಗಳಲ್ಲಿ ನಾನು ಅರಿಕೆಮಾಡಿಕೊಳ್ಳುತ್ತೇನೆ. ಇದು ಪುನರ್ಜೀವಹೊಂದಬೇಕಾದರೆ ಕೊಡ್ಲಿಪೇಟೆ, ಶನಿವಾರಸಂತೆ, ಸೋಮವಾರಪೇಟೆ, ಮಡಿಕೇರಿ ಇಂಥಾ ಪಟ್ಟಣವಾಸಿಗಳೂ ವಿದ್ಯಾವಂತರೂ, ಆಗಿರುವ ವೀರಶೈವರಿಂದಲೇ ನಡೆಯಬೇಕೇ ಹೊರತು ಸುತ್ತಮುತ್ತಲಿನ ಗ್ರಾಮವಾಸಿಗಳಿಂದ ನಡೆಯತಕ್ಕುದಾದ ಕೆಲಸವಲ್ಲ" ಅಂದರೆ ಇದು ಪುನರ್ಜೀವ ಕರವಾದರೆ ಕೆಲವ

...ವಾಸಿಗಳಾದ ಏರಕ್ಷೈವರು ಇವರುಗಳ ಜೊಜಲಿಕೆ ನಿಂತು ...ದಕ್ಕೆ ಯಾವಾಗಲೂ ಯಾವ ವಿಧದಲ್ಲೂ ತೊಂದರೆಯಿಲ್ಲದಂತಾ ...ದಂತೆ ನೋಡಿಕೊಳ್ಳುವರು. ಅಲ್ಲದೆ ಇದರ ಮೂಲಕ ರಾ ...ಕೂಡ ತಕ್ಕಮಟ್ಟಿಗೆ ಪ್ರಯೋಜನವನ್ನು ಹೊಂದುವದಕ್ಕೆ ಸುಕಾಲವಾಗುತ್ತೆ. ಇಂಥಾ ಮಹೋಪಕಾರವನ್ನು ... ಗಳು ಕಲ್ಪಿಸಿಕೊಂಡಲ್ಲಿ ಟೋಂಕಕಟ್ಟಿ ನಿಲ್ಲುವಂತೆ, ... ಕೊಡುವಂತೆ ಭಕ್ತಜನ ಪರಿಪಾಲಕನಾದ ಶಿವನು ... ನ್ನು ಆರ್ಯಾನ್ವಸಿಗಳಲ್ಲಿಯೂ ಪ್ರಾರ್ಥಿಸುವ.

ಒಬ್ಬ ಮಹಾಶೀಯನು.

ಗಳೆಯರ ಗುಂಪಿನ

ಸ್ವಧರ್ಮ ವಾರ ಪತ್ರಿಕೆ.

ಸಂಪಾದಕರು:—ದ. ರಾ. ಬೇಂದ್ರೆ, ಬಿ. ಎ.

ಸಮಾಜದಲ್ಲಿ ಶಾಂತಿಪುಷ್ಟಿತುಷ್ಟಿಗಳು ನೆಲೆಗೊಳ್ಳಬೇಕಾ ಸದಾಚಾರವೇ ಸರಳವಾದ ದಾರಿ. ಸದಾಚಾರದ ಬೆಳೆ ಸುವಿಚಾರವೇ ಸರಿಯಾದ ಸಾಧನ. ಇಂತಹ ಸುವಿಚಾರ ವನ್ನು ಸಮಾಜದ ಮುಂದಿಡಲು ಹೊರಡುವುದೇ ಸ್ವಧರ್ಮದ ... ಕನ್ನಡಿಗರು ಕೈಗೂಡಿಸಿ ಸ್ವಧರ್ಮವನ್ನು ಪ್ರೋತ್ಸಾ ಬೇಕಾಗಿ ಕೋರಿಕೆ.

ವಾರ್ಷಿಕ ವರ್ಗಣಿ ರೂ. 3—6—0.

ಕಾರ್ಯಾಧಿಕಾರಿ
"ಸ್ವಧರ್ಮ" ಕಾರ್ಯಾಲಯ,
ಮಾಳಮಡ್ಡಿ, ಧಾರವಾಡ.

ಕರ್ಣಾಟಕ

ಚಳಿಜ್ವರ, ಮಲೇರಿಯ ಜ್ವರ, ಇನ್ ಫ್ಲುಯೆಂಝ ಅದ ...ರ, ಮೊದಲಾದವುಗಳ ಮೇಲೆ ಅಪ್ರತಿಮವಾದ ಔಷ...

ಬೆಲೆ ಬಾಟ್ಲಿಯೊಂದಕ್ಕೆ ರು. ೦–೧೬=೦
ಟಪ್ಪಾಲು ಖರ್ಚು ಬೇರೆ
ಡಜನ್ ಬಾಟ್ಲಿಗಳಿಗೆ ಟಪ್ಪಾಲುವೆಚ್ಚ ಸಹ ರು.
೯—೩—೦

ಏಜಂಟರು ಬೇಕು, ಕೊಡಗಿನ ಸ್ವಾಲ್ಪ್ಮ್ಯಸ್ಥರುಗಳು ತ ...ರ ಊರು ಜನ ಔಷಧದ ವ್ಯಾಪಾರಗಳ ಹೆಸರನ್ನು ...ಕೈ ಬಿಡವಾದ ಬ್ಲಾಟಿಂಗ್ ಕಾಗದ ಪ್ರಕ್ಷಟಿ.

—1 ಕರ್ಣಾಟಕ ಬ್ರದರ್ಸ್,
ಗಿರಗಾಂವ, ಮುಂಬಾಯಿ.

ಕೆ. ಸಿ. ಅಪ್ಪಚೆಟ್ಟಿ.

ದಂತ ವೈದ್ಯರು.

ಇದೇ ತಾರೀಖು 20ಂದ ಮಡಿಕೇರಿ ...ಲ್ಲಿ ಇರುತ್ತೊಳ್ಳುವರು. ಖಾಯಿಲೆದಾರರು ...ವನ್ನು ಅಲ್ಲಿ ಹೋಗಿ ನೋಡಬಹುದು. ಇಂ... ಸಮಯವನ್ನು ಕಳಕೊಳ್ಳಬೇಡಿರಿ ಕನ್ಸಲ್ಟೇಷನ್ ಚಾರ್ಜು ಇಲ್ಲದೆ ನೋಡುವರು. 52-12

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ...ಟೆಡ್, ಕೊ ಆಪರೇಟಿವ್ ಸೊಸೈಟೀಸ್ ಆಕ್ಟ್ಸು ಪ್ರಕಾರ ರಿಜಿಸ್ಟರಾಗಿದೆ.

		ರೂ.
...ರ್ ಬಂಡವಾಳ	—	50,000
...ಸೂಲಾದ ಶೇರ್ ಹಣಗಳು	—	3890
...ಮೊಬಂದ ಠೇವಣಾತಿ	—	90,600

ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗ ...ಹೆಚ್ಚಾಗಿ ಸಾಲಕೊಡತಕ್ಕದ್ದು.

...ದು ವರ್ಷ ವಾಯಿದೆ ಅಥವ ಹೆಚ್ಚಿನ ವಾಯಿದೆಯ ...ತಿಗಳಿಗೆ ಶೇಕಡ ಸಾಲಿಯಾನ ರೂ. 6-4-0ರ ಬಡ್ಡಿ ದೊರೆಯುತ್ತೆ. ಕಡಿಮೆ ವಾಯಿದೆಯ ಠೇವ ...ಗೆ ಶೇಕಡ ಸಾಲಿಯಾನ 5ರ ಬಡ್ಡಿ ದೊರೆಯುತ್ತೆ. ...ಕ್ಯಾಂದಾವರ್ತಿ ಕೊ ಆಪರೇಟಿವ್ ರಿಜಿಸ್ಟ್ರಾರವರು ...ಮಾಯಿಸಿ ಮಾಡುತ್ತಾರೆ.

...ಸಿಡೆಂಟರು,	ಟ್ರೆಜರರ್.
...ದ ಕುಟ್ಟಯ್ಯನವರು,	ಯಂ. ಭುಜಂಗರಾಯರು
...ಬ್ ಬಹದ್ದೂರ್.	ಬಿ.ಎ. ಬಿ.ಎಲ್.

ಸೆಕ್ರೆಟರಿ
...ಸ್. ವೆಂಕಪ್ಪಯ್ಯನವರು, ಬಿ.ಎ., ಬಿ.ಎಲ್.
29—8—1925.

Apply for our shooting Season's Clearance Sale Catalogue of Brand New Goods.

10 to 25 percent Reductions in Prices.

No License Required !! **No License Required**



Webley and Scott Air Pistol, cal ·177 or ·22, bore Powerful and Accurate, complete with a sample box of slugs, two spare washers, a brush forcleaning, and a bookletot instructions Rs. 30/– Free delivery.

Pwerful German Diana Air gun, Handsome and Accurate, takes B. S. A. Patern No 1 Slugs and Darts, expressly recommendable for Target Practice Rs. 15/ Free delivery.

Brilliant Search Light Lamp for Night Sports Rs. 30/– Free delivery.

No License required to purchase or to possess the above items.

Reliable D B B L 12 bore guns	Rs. 60/– and upwards		
Do S. B B L 12	do	do 40/–	do
D B. M L Guns		,, 45 -	do
S B M L. do.		,, 30/–	do
S B B L Rifles		,, 25/–	do
B L. Revolvers and Pistols		, 30/–	do.

Arms, Ammunition and shooting requisites of almost every kind andquality offered at exceptionally favourable rates ANumber of good quality second hand weapons also offered for sale in theNew Catalogue.

GOOLAMHUSIAIN ALLIBHOY & SONS :
Largest Importers of Firearms and Ammunition,
Cheapest priced firm in India,
24. 22 210 Abdul Rehman Street, BOMBAY.

---

೧೬ ಚಿತ್ರಪಟ ಗಳುಳ್ಳದ್ದು **ಸಚಿತ್ರ ಶುಕಸಪ್ತತಿ ಕಥೆ.** ೭೦ ಕಥೆಗಳು ೫೧೨ ಪುಟಗಳು

ಈ ಕಥೆಯು ಧರ್ಮಶಾಸ್ತ್ರ, ವೇದಾಂತ, ಸ್ತ್ರೀಪಾತಿವ್ರತ್ಯ, ಬ್ರಾಹ್ಮಣ, ವೈಶ್ಯ, ಶೂದ್ರರೆಂಬ ನಾಲ್ಕು ವರ್ಣದವರು ನ ಡಿಯತಕ್ಕ ವರ್ಣಾಶ್ರಮ ಧರ್ಮವೇ ಮುಂತಾದ ಸದ್ವಿಚಾರಗಳನ್ನು ಬೋಧಿಸುವುದು. ೧ ಕಥಾರೂಪದಲ್ಲಿ ಚಿತ್ರಕಥಾ ಚ ಮತ್ಕಾರ ಕೌತುಕವಾಗಿಯೂ ನೀತಿಬೋಧಕವಾಗಿಯೂ ಇರುವದರಿಂದ ಸ್ತ್ರೀಯರು, ಪುರುಷರು, ಬಾಲಕರು ಎಂಬ ಭೇದ. ವಿಲ್ಲದೆ ಎಲ್ಲರೂ ಓದಬಹುದು. ೨. ಲೋಕಾನುಭವಕ್ಕೆ ಬೇಕಾದ ಅನೇಕ ವಿಷಯಗಳು ಇದರಿಂದ ತಿಳಿಯಬರುವುವು. ೩. ಈ ಕಥೆಯನ್ನು ಓದುವದರಿಂದ, ಮನಸ್ಸನ್ನು ದುರಾಚಾರದಲ್ಲಿ ಬಿಡದಂತೆ ಸದಾಚಾರದಲ್ಲಿಯೇ ನಡೆಯುವಂತೆ ಮಾಡುವು ದು. ೪. ವಿವೇಕಾವಿವೇಕವನ್ನು ತಿಳಿಯತಕ್ಕ ಜ್ಞಾನವನ್ನು ಉಂಟುಮಾಡುವುದು. ಬೇಕಾದವರು ವಿ. ಪಿ. ಪೋಸ್ಟ್ ಮೂಲ ಕ ತರಿಸಿಕೊಳ್ಳಬಹುದು.

ದಪ್ಪ ಕಾಗದ ಕ್ರಯ ಪ್ರತಿ ೧ಕ್ಕೆ ರೂ. ೩–೦–೦. ಟಪಾಲು ಹಾಸಲು ೦–೮–೦.

ಸಚಿತ್ರ ಭಟ್ಟಿ ವಿಕ್ರಮಾದಿತ್ಯರಾಯನ ಕಥೆ ೪ ಭಾಗಸೇರಿದ್ದು ೬೧೨ ಪುಟಗಳು ಕ್ರಯ ೨, ೮–೦. ಸಚಿತ್ರರಾಜ ಕುಂರಿಡದ ಕಥೆ ೪೮೦ ಪುಟಗಳು, ಕ್ರಯ ರೂ. ೨.

ಸಚಿತ್ರ ಶ್ರೀರಾಮಸ್ವಾಮ್ಯವೃತ ಎಂಬ ಸೀತಾರಾಮಾಂಜನೇಯ ಸಂವಾದ ೨೪೭ ಪುಟಗಳು ೧–೮–೦. ಇವುಗಳಿಗೆ ಟ ಪಾಲು ಖರ್ಚು ಬೇರೆ.

ನಮ್ಮಲ್ಲಿ ದೊರೆಯುವ ಎಲ್ಲಾ ಪುಸ್ತಕಗಳ ಕ್ರಯಪಟ್ಟಿ (ಕ್ಯಾಟಲಾಗ್)ಗೆ ಬರೆದರೆ ಕಳುಹಿಸುವೆವು.

52—5 ನಮ್ಮ ವಿಳಾಸ— ಎಂ. ಆರ್. ಕೃಷ್ಣಸ್ವಾಮಿ ಶೆಟ್ಟಿ,
ಬುಕ್ಕು ಡಿಪ್ಪೋ, ಚಿಕ್ಕಪೇಟೆ, ಬೆಂಗಳೂರು ಸಿಟಿ

ಹೊಸ ಸಾಮಾನುಗಳು! ಸುಲಭ ಕ್ರಯ!! ಈಗತಾನೇ ಬಂದಿವೆ!!!

ಇಂಥ ಸುಸಮಯವನ್ನು ಕಳಕೊಳ್ಳಬೇಡಿರಿ!

12 ಬೋರ್ ಜೋಡಿ ಕೊಳವಿನ ತೋಟಿ ಕೋವಿ 1ಕ್ಕೆ	ರೂ.	115—0—0
12 , 32 ಇಂಚಿನ ಒಂಟಿ ಕೊಳವಿನ ತೋಟಿ ಕೋವಿ (ಜರ್ಮನಿ) 1ಕ್ಕೆ.	,,	60—0—0
,, ,, 35 ,, ,, ,, ,,	,,	65—0—0
ಜೋಡಿ ಕೊಳವಿನ ಕೇಪು ಕೋವಿ 20ನೇ ನಂಬ್ರ 1ಕ್ಕೆ....	,,	85—0—0
12 ಬೋರ್ ಚಿಲ್ಲು ತೋಟಗಳು (ಒಳ್ಳೇ ಸಮೂನೆ) 100ಕ್ಕೆ	,,	14—0—0
,, ,, ಆನೆ ಚಿಲ್ಲು ,, ,, ...	,,	16—0—0
,, ,, ಗುಂಡು ತೋಟಗಳು ,, ,, ...	,,	19—0—0
ಕೋವಿ ಕ್ಲೀನ್ ಮಾಡುವ ಮತ್ತು ತೋಟ ತುಂಬಿಸುವ ಸಾಮಾನುಗಳ 1 ಪೆಟ್ಟಿಗೆಗೆ		27—8—0
ಕೇಪು 250ರ 1 ಟಿನ್ನಿಗೆ	ರೂ.	1—5—0
ಕಾಲು ಪೌಂಡು 2 ಯಘಾನ ಮದ್ದು ಡಬ್ಬಿ 1ಕ್ಕೆ	,,	1—0—0
ಚಿಲ್ಲು ಎಲ್ಲಾ ತರಹದ ಸಮೂನೆ ರಾತ್ತಲು 1ಕ್ಕೆ	,,	0—10—0
ಪೂರ್ತಿ ಉಕ್ಕಿನ ಸೊಗಸಾದ ಗುದ್ದಲಿಗಳು 5 ಪೌಂಡಿನ 1 ಡಜನ್ನಿಗೆ	,,	33—0—0
,, ,, ,, 4 ,, ,, ...	,,	30—0—0
4 ಮುಳ್ಳಿನ ಮುಳ್ಳು ಗುದ್ದಲಿಗಳು ಡಜನ್ನಿಗೆ	,,	60—0—0
3 ,, , ,, ...	,,	48—0—0
4 ಪೌಂಡಿನ ಮರ ಕಡಿಯುವ ಕೊಡಲಿಗಳು ಡಜನ್ನಿಗೆ	,,	54—0—0
ಇಂಗ್ಲಿಷ್ ಸಮೂನೆ ಕಸಾತು ಚಾಕುಗಳು ಡಜನ್ನಿಗೆ	,	15—0—0
ಮಿಶನ್ ಕೊಡೆಗಳು ದೊಡ್ಡ ಸೈಜ್ (ಸ್ಪಿಟಿಜರ್‌ಲಾಂಡ್) 1ಕ್ಕೆ	,,	4—8—0
,, ಸಣ್ಣ ಸೈಜ್ ,, ,, ...	,,	4—1—0
,, ,, ಹೋಲ್‌ಸೇಲಾಗಿ ,, ...	,,	ಕಮ್ಮಿ ಕ್ರಯ

ಮೆಕ್ಡೋವೆಲ್ ಕಂಪೆನಿ,
ಮಡಿಕೇರಿ.
Messers Mc Dowell & Co.
Mercara
12-S

ಕಿರ್ಲೋಸ್ಕರ ಪೇಟೆಂಟ ಮಲ್ಹಾರ ತಪ್ಪಲಿ.



ಈ ತಪ್ಪಲಿಯು ನಮ್ಮ ಕಾರ್ಖಾನೆಯಲ್ಲಿಯೇ ತಯಾರಾಗುತ್ತದೆ. ಸರಕಾರದಿಂದ ಇದಕ್ಕೆ ಪೇಟಂಟ್ ದೊರಕ್ಕಿರುತ್ತದೆ. ಇದರಮುಖ್ಯ ಗುಣಗಳು,

೧. ನೀರನ್ನು ಮುಟ್ಟಿದ ಕೂಡಲೇ ತುಂಬಿ ಒರುವದು.

೨. ಮಲಿಂಕ್ಕೆ ಬರುವಾಗ್ಗೆ ಒಂದು ಹನಿ ನಹ ನೀರು ಸೋರುವದಿಲ್ಲ.

೩. ದೋಣಾಯಲ್ಲಿ ನೀರು ಬೀಳುವಾಗ್ಗೆ ಶೆಖ ಗಳಿನ ತಪ್ಪಲಿಯಂತ ವಿತ್ತನಾಡೆ ಹೋಗುವದಿಲ್ಲ.

ಬೆಲೆಬವು ಅಗ್ಗ. ಹೆಚ್ಚಿನ ಸಂಗತಿ ಬಗ್ಗೆ ಬರೆದು ತಿಳಿದುಕೊಳ್ಳಿರಿ.

ಕಿರ್ಲೋಸ್ಕರ ಬಂಧು, ಲಿಮಿಟೆಡ್.
ಕಿರ್ಲೋಸ್ಕರವಾಡಿ,
16—4 ಜಿ. ಸಾತಾರ್.

ಮಾರ್ಗಲೈಟು ಸೋಪು.

ಈ ಸೋಪನ್ನು ಕೂದಲುಗಳಿಗೆ ಒಂದೇ ಒಂದು ನಿಮಿಷ ಹಾಕಿದರೆ ಕತ್ತಿಯಿಂದ ಕ್ಷೌರ ಮಾಡಿಸಿ ಕೊಂಡದ್ದಕ್ಕಿಂತಲೂ ಚನ್ನಾಗಿ ಚರ್ಮಕ್ಕೆ ಯಾವತೊಂದರೆಯೂ ಇಲ್ಲದೆ ಕೂದಲನ್ನು ತೆಗೆದುಬಿಡುವುದು.

ನಮ್ಮ ಮಾರ್ಗಲೈಟ್ ಸೋಪು, ಗಂಧೆ, ಮೊಡವೆ, ಬಿಷ್ಟೆ, ತುರಿ, ನವೆ, ಮುಂತಾದುವುಗಳನ್ನು ಕ್ಷಣಮಾತ್ರದಲ್ಲಿ ಮಾಯಮಾಡುವುದು.

3 ಸಾಮಾನುಗಳನ್ನು ಪೆಟ್ಟಿಗೆ 1ಕ್ಕೆ ರೂ. 0—10—0

ರೇಷ್ಮೆ ವಸ್ತ್ರ.

5 ಮೊಳ ಉದ್ದ 2½ ಮೊಳ ಅಗಲ ಇರುವದು.

ಈ ವಸ್ತ್ರಗಳನ್ನು ರೇಷ್ಮೆಯಿಂದ ಮಾಡಿದೆ ನೋಡಲಿಕ್ಕೆ ಬಹು ಚೆನ್ನಾಗಿರುವವು. ಚಿಕ್ಕವರೂ ದೊಡ್ಡವರೂ ಸಹ ಉಪಯೋಗಿಸಬಹುದು. ಕೆಂಪು, ರೋಜಾ, ನೀಲಿ, ಹಸರು ಮುಂತಾದ ಬಣ್ಣಗಳಲ್ಲಿ ಇರುವವು. ಇವು ವಿಲಾಯಿತಿಯಲ್ಲಿ ತಯಾರಾದವು. ಇದರ ಸುತ್ತಲೂ ನೋಡಲಿಕ್ಕೆ ಚೆನ್ನಾಗಿರುವಂತೆ ಹುವ್ವಿನ ಕುಚ್ಚುಗಳು ಇರುವವು

ಕ್ರಯ 1ಕ್ಕೆ ರೂ 3—8—0

ವಿಳಾಸ:—ಎಸ್. ಪಾಲ್ ಅಂಡ್ ಕೊ,
ಪೊ ಬಾ, ನಂಬರ್. 512,
12—9. ಕೊ, ಮ. ಪಾರ್ಕ್‌ಟೌನ್ ಮದ್ರಾಸು.

ಒಂದು ಪ್ರಬಲವಾದ ಪ್ರಶ್ನೆ.

ನಮ್ಮ ಜೀವವನ್ನು ಏತಕ್ಕಾಗಿ ವಿಮೆಮಾಡಬೇಕು!

ವೃದ್ಧಾಪ್ಯದಲ್ಲಿ ನಮ್ಮ ಮತ್ತು ಹೆಂಡತಿ ಮಕ್ಕಳ ಪೋಷಣೆಗಾಗಿ!

ಈಗಾಗಲೇ ಸಾವಿರಾರು ಜನರು ವಿಮೆಮಾಡಿರುವ ಎಂಟುಕೋಟಿ ರೂಪಾಯಿಗಿಂತ ಹೆಚ್ಚು ಬಂಡವಾಳವಿರುವ ದೇಶೀಯ ವಿಮೆಕಂಪೆನಿಯಲ್ಲಿ ಅತ್ಯಂತ ದೊಡ್ಡದಾದ ಸಾವಿರ ರೂಪಾಯಿ ವಿಮೆಮಾಡಿದವರಿಗೆ ವರ್ಷಕ್ಕೆ ೨೦ರೂ. ಕಡಿಮೆಯಿಲ್ಲದೆ ಲಾಭ ಕೊಡುವ 'ಓರಿಯಂಟಲ್' ಗವರ್ನಮೆಂಟ್ ಜೀವವಿಮೆ ಕಂಪೆನಿಯ ರೂಲ್ಸಿಗೂ, ಶರತಿಗೂ ಈ ಕೆಳಗಿನವರಿಗೆ ಬರೆದು ತಿಳಿದುಕೊಳ್ಳಿ.

ಖಾದಿಬಟ್ಟೆ ಎಂದರೇನು?

ದೇಶೀಯ ಹತ್ತಿಯಲ್ಲಿ ಕೈರಾಟೆಯಿಂದ ನೂಲು ತೆಗೆದು ಇಲ್ಲಿಯೇ ತಯಾರಿಸುವ ಬಟ್ಟೆಯೇ 'ಖಾದಿ.' ಈಗಾಗಲೇ ನಮ್ಮ ಸ್ಟೋರಿನಲ್ಲಿ ಪರದೇಶೀ ಬಟ್ಟೆಗಿಂತ ಗಟ್ಟಿಯಲ್ಲಿಯೂ ಅಂದದಲ್ಲಿಯೂ ಕಡಿಮೆ ಇಲ್ಲದಂತ, ಎಲ್ಲಾ ತರದ ಸೀರೆಗಳು ಚೆಕ್ಕಗಳು, ಶಾಲು ವಗೈರೆ ಎಲ್ಲಾ ತರದ ಬಟ್ಟೆಯು ತಯಾರಾಗಿದೆ. ದಯವಿಟ್ಟು ಪ್ರೋತ್ಸಾಹಿಸಿರಿ! ಖಾದಿಯಿಂದಲೇ ಸ್ವರಾಜ್ಯ. ಖಾದಿಯಿಂದಲೇ ಮೋಕ್ಷವೆಂಬುದನ್ನು ಮರೆಯಬೇಡಿರಿ.

ವೀರಾಜಪೇಟೆ, ಕೆ. ಪಿ. ಚಿಣ್ಣಪ್ಪ,
ದಕ್ಷಿಣ ಕೊಡಗು. ಪ್ರೊಪ್ರೈಟರ್,
ಖಾದಿಭಂಡಾರ

52—14.

ವಿಶೇಷದ ಸೂರಾಟ!

ಉಚಿತ! ಪಾಕೆಟ್ ವಾಚ್! ಉಚಿತ!

18 ಕ್ಯಾರೆಟ್ ರೋಲ್ಡ್‌ಗೋಲ್ಡ್ ಪ್ಲೇಟ್ ಚಿನ್ನದ ಮುಖ ಪಟ್ಟಿಯುಳ್ಳ ಮುಂಗೈ ಗಡಿಯಾರ ನಂ. 100.

ಇದು ಅತ್ಯಂತ ಹೊಸ ಮಾದರಿಯು, ಸುಂದರವಾದ ಆಕಾರ, ಸೊಗಸು ಕೆಲಸ, ಸ್ವಿಸ್ ಮೇಡ್, ಮುಖ ಪಟ್ಟಿಯು ಥಳ ಥಳ ಹೊಳೆಯುತ್ತಾ ಆಕರ್ಷಿಸುತ್ತದೆ. 100 ರೂ. ಮತ್ತು ಹೆಚ್ಚಿಗೆ ಬೆಲೆಯಿರುವ ಉತ್ಕೃಷ್ಟ ವಾಚಿನಂತೆ ಕಾಣುತ್ತದೆ. ಸುಂದರವಾಗಿಯೂ ಚಿಕ್ಕದಾಗಿಯೂ ಇದೆ. ಗಂಡಸರಿಗೂ ಹೆಂಗಸರಿಗೂ ಉಪಯೋಗಿಸಲು ಅನುಕೂಲವಿರುವ ಅತ್ಯುತ್ತಮ ವಾಚು. ಯಾವ ಪದವಿಲ್ಲಾದರೂ ಸರಿಯಾದ ಟೈಮು ಕೊಡುವ ವಾಚ್. ಮೂರು ವರ್ಷಗಳ ಗ್ಯಾರಂಟಿ ಕೊಡಲಾಗುತ್ತೆ. ಯಾವ ಆಕಾರದ್ದಾದರೂ ಒಂದು ವಾಚನ್ನು ಒಂದು ತಿಂಗಳೊಳಗೆ ಕೊಂಡುಕೊಂಡವರಿಗೆ ನಿಕಲ್ ಪಾಕೆಟ್ ವಾಚ್ ಒಂದು ಉಚಿತವಾಗಿ ಕೊಡಲಾಗುತ್ತದೆ. ಕ್ರಯ 8—0—0.

OVERSEAS SWISS WATCH CO.
POST BOX No. 371,
Mount Road, MADRAS.

ಇಮಿಟೇಷನ್ ವಜ್ರದ ಉಂಗುರಗಳು.
(White Imitation Kammals.)

ಈ ಉಂಗುರಗಳನ್ನು ಒಂದು ವಿಧವಾದ ಲೋಹದಿಂದ ಮಾಡಿ ಭಂಗಾರದಂತೆ ಗಿಲೀಟುಮಾಡಿದೆ. ಮೇಲು ಭಾಗದಲ್ಲಿ ಕೆಂಪು, ಹಸರು ಮುಂತಾದ ಇಮಿಟೇಷನ್ ವಜ್ರದ ಕಲ್ಲುಗಳು ಇಟ್ಟಿದ್ದ ಕಟ್ಟಿರುವರು. ನೋಟಕ್ಕೆ ನಿಜದ ವಜ್ರದ ಉಂಗುರವೆಂದೇ ಹೇಳಬೇಕು. ಬೇಕಾದವರು ಬೆರಳಿನ ಅಳತೆಯನ್ನು ಕಳುಹಿರಿ.

ಕ್ರಯ 1ಕ್ಕೆ 2—0—0, 7ಕಲ್ಲಿನ ಬಿಳಿ ಕಮ್ಮಲು 2—8—0,
ಕ್ರಯ 3ಕ್ಕೆ 5—8—0. 7ಕಲ್ಲಿನ ಕೆಂಪು ಕಮ್ಮಲು 3—0—0.

P. K. Sawmy &Co,
No 17. Evening Bazaar,
52-9 Madras

ಇಮಿಟೇಷನ್ ರೇಷ್ಮೇ ಸೀರೆಗಳು.

ಈ ಸೀರೆಗಳು 18ಮೊಳ, ಉದ್ದ ಮತ್ತು 2½ಮೊಳ ಅಗಲವೂ ಇದೆ. ಈ ಸೀರೆಗಳನ್ನು ಹೊಸವಾದ ಇಮಿಟೇಷನ್ ಸಿಲ್ಕ್ ದಾರದಿಂದ ತಯಾರಿಸಿದೆ. ಇದು ನೋಡಲಿಕ್ಕೆ ಭಾರಿ ಕ್ರಯದ ಸೀರೆಗಳಂತೆ ಕಾಣುವದಲ್ಲದೆ ಬಾವ ಅಂಚೂ, ಸುಂದರವಾದ ಸಾಚಾ ರೇಷ್ಮೆಯ ಸೆರಗೂ ಇರುವದು. ಈ ಮಾದರಿ ಸೀರೆ ಯಾಕಲ್ಲಿಯೂ ಈ ಕ್ರಯಕ್ಕೆ ಸಿಕ್ಕಲಾರದು. ಈ ಸೀರೆಗಳು ಶ್ರೀಮಂತರೂ, ಗರೀಬರೂ ಉಡಲಿಕ್ಕೆ ಬಹು ಲಾಯಕ್ಕಾದವು ಮಾದರಿಗಾಗಿ ಕೆಲವನ್ನು ಮಾತ್ರ ತಯಾರಿಸಿರುತ್ತೇವೆ. ಬಿಂದ ಬೇಗನೆ ತರಿಸಿಕೊಳ್ಳುವವರಿಗೆ ಮಾತ್ರ ಸಿಕ್ಕುವವು.

ಕ್ರಯ ಸೀರೆ 1ಕ್ಕೆ ನಂ 1. ರು. 6—8—0
" ನಂ 2. ರು. 7—8—0

ವಿಳಾಸ.—ಮಧುರಾ ಟ್ರೇಡಿಂಗ್ ಕಂಪೆನಿ,
16 ತಿರುಪಳ್ಳಿ ಬೀದಿ,
ಮದರಾಸು.

ಈಗಲೇ ಪ್ರಿಂಟಾಗಿದೆ! ಶೃಂಗಾರವಾದ ಪುಸ್ತಕ

ಸ್ತ್ರೀ ಪುರುಷರ ಪ್ರೀತಿಯ ಮರ್ಮಗಳನ್ನು ಚಿತ್ರಪಟಗಳ ಸಹಿತ ತಿಳಿಸುವ

ಮರ್ಮ ಶಾಸ್ತ್ರ.

ಫ್ರೆಂಚ್ ಬಾಷೆಯಲ್ಲಿ ಇದ್ದದನ್ನು ಸುಲಭ ಶೈಲಿಯಲ್ಲಿ ಕನ್ನಡ ಭಾಷೆಗೆ ಭಾಷಾಂತರಿಸಿರುತ್ತೇವೆ. ಸ್ತ್ರೀಪುರುಷರ ಬೇಕಾದ ಎಲ್ಲಾ ಮರ್ಮ ರಹಸ್ಯಗಳು, ರತಿ ಮನ್ಮಥನು ಆನಂದವಾಗಿರುವದಕ್ಕೆ ಬೇಕಾದ ಉಪಾಯಗಳು, ಪುರುಷರ ಜಾತಿಯ ಲಕ್ಷಣಗಳು ಗರ್ಭಧರಿಸುವದು, ಶಿಶು ಉತ್ಪತ್ತಿವಿಧ, ಗುಪ್ತ ವೈದ್ಯ, ಶಯನ ಗೃಹದ ಮಗಳು, ಇನ್ನೂ ಸ್ತ್ರೀಪುರುಷರಿಗೆ ಬೇಕಾದ ಲೀಲ ರಹಸ್ಯಗಳು ತುಂಬಿದೆ. ಈ ಶೃಂಗಾರವಾದ ಪುಸ್ತಕ ತರಿಸಿ ಆನಂದ ಹೊಂದುತ್ತಾರೆಂದು ನಂಬಿರುತ್ತೇವೆ. ಪಟಗಳ ಸಹಿತ ಕ್ರಯ ಪುಸ್ತಕ 1ಕ್ಕೆ ರೂ. 1—0—0

ವಿಳಾಸ:—ಟಿ ರಾಮಚಂದ್ರರಾವ್ ಕಂಪೆನಿ,
52—28 ಪೋಸ್ಟು ಬಾಕ್ಸ್ ನಂ. 232, ಮದರಾಸು.

ನೈಟ್ರೇಟ್ ಆಫ್ ಸೋಡಾ

ಎಲ್ಲಾ ಬೆಳೆಗಳಿಗೂ ಅತ್ಯುತ್ತಮವಾದ ಗೊಬ್ಬರ

Nitrate of Soda 15-16 per cent. N

ಈ ಗೊಬ್ಬರದಲ್ಲಿ ಬೆಳೆಗಳಿಗೆ ಅತ್ಯಗತ್ಯವಾದ ನೈಟ್ರೋಜನ ಸಸ್ಯಾಹಾರವು

15.16% ಆದರೆ ಮೀನು ಮತ್ತು ಒಣ್ಣೇಯ ಹಿಂಡಿ ಗೊಬ್ಬರದಲ್ಲಿರುವುದಕ್ಕಿಂತಲೂ ಮೂರು ನಾಲ್ಕರಷ್ಟು ಜಾಸ್ತಿಯಾಗಿರುವದು. ಇದರಲ್ಲಿ ಸಿಕ್ಕುವಷ್ಟು ಸಾರಜನಕ (Nitrogen) ವು ಬೇರೆ ಯಾವ ಗೊಬ್ಬರಗಳಿಂದಲೂ ಗಿಡಗಳಿಗೆ ದೊರೆಯಲಾರದು. ಆದ್ದರಿಂದಲೇ ಭೂಲೋಕದ ಎಲ್ಲಾ ಭಾಗಗಳಲ್ಲಿಯೂ ರೈತರು ಇದನ್ನು ವಿಶೇಷವಾಗಿ ಉಪಯೋಗಿಸುತ್ತಾರೆ.

ಭತ್ತ, ಕಬ್ಬು, ತೆಂಗು, ಅಡಿಕೆ, ಮಾವು, ಹೊಗೆಸೊಪ್ಪು, ತರಕಾರಿ ಮೊದಲಾದವುಗಳಿಗೂ ಕಾಫಿ, ಟೀ, ರಬ್ಬರು, ಏಲಕ್ಕಿ ಮೊದಲಾದ ತೋಟ ಪೈರುಗಳಿಗೂ ಎಲುಬಿನ ಪುಡಿ ಅಥವಾ ಮೀನು ಗೊಬ್ಬರ ವಗೈರೆ ಬೂದಿ ಗೊಬ್ಬರಗಳ ಜೊತೆಯಲ್ಲಿ ಈ ಗೊಬ್ಬರವನು ಉಪಯೋಗಿಸುವದರಿಂದ ಬೆಳೆಯು ಸಮೃದ್ಧಿಯಾಗುವದು. ನೈಟ್ರೇಟ್ ಆಫ್ ಸೋಡಾದಲ್ಲಿರತಕ್ಕ ಸೋಡವು ಮಣ್ಣಿನಲ್ಲಿರುವ ಪೊಟೇಷ್ ಎಂಬ ಇನ್ನೊಂದು ತರದ ಸಸ್ಯಾಹಾರವನು ಗಿಡಗಳಿಗೆ ಒದಗಿಸಿ ಕೊಡುತ್ತದೆ.

ಈ ಗೊಬ್ಬರವು ನೋಟಕ್ಕೆ ಬರೇ ಉಪ್ಪಿನ ಹಾಗಿದ್ದು ಅಪಾಯಕರವಲ್ಲ. ಎಕರೆ ಒಂದಕ್ಕೆ 100-200 ಪೌಂಡು ಸಾಕಾಗುವದು. ಹೆಚ್ಚಿನ ಮಾಹಿತಿ ಮತ್ತು "ಕೃಷಿಸುಧಾರ" ಎಂಬ ಪುಸ್ತಕವನ್ನು ಈ ಕೆಳಗಿನ ವಿಳಾಸದಾರರಿಂದ ಧರ್ಮಾರ್ಥವಾಗಿ ಪಡೆಯಬಹುದು.

52—5 **CHILEAN NITRATE COMMITTEE,**
Post Box 469, CALCUTTA.

Printed & published by Kodanda Appayya R.B., Chairman, Board of Directors, at "Kodagu" Press, Mercara for "Kodagu" Ltd.

Reg. N. M. 1550.
If not delivered please return to
KODAGU OFFICE MERCARA.

ಕೊಡಗು.

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವದು.

ಸಂಪಾದಕ—ಕಂದ್ಯಂಡ ಪಿ. ಬೆಳ್ಳಿಯಪ್ಪ

ಸಂಪುಟ ೬] ಕೊಡಗು, ೧೯೨೬ನೇ ಇಸವಿ ಜುಲೈ ತಾರೀಖು ೯ ನೇ ಶುಕ್ರವಾರ [ಸಂಚಿಕೆ ೭

ಸ್ಥಾಪಿತವಾದದ್ದು 1874 ಮೂಲಧನ 7 ಕೋಟಿ ರೂಪಾಯಿಗಳ

ಓರಿಯಂಟಲ್ ಗವರ್ನ್ಮೆಂಟ್ ಸೆಕ್ಯೂರಿಟಿ ಲೈಫ್ ಅಷ್ಯೂರೆನ್ಸ್ ಕಂಪೆನಿ ಲಿಮಿಟೆಡ್, ಹೆಡ್ ಆಫೀಸು:— ಬೊಂಬಾಯಿ.

1922—1924 ಈ ಮೂರು ವರ್ಷಗಳಲ್ಲಿ [illegible] ಪರಿಣಾಮಗಳು —

ಲಾಭ— ರೂ. 51,00,000 ([illegible]) ಈ ಪೈಕಿ 45,94,80 ರೂಪಾಯಿಗಳನ್ನು ಲಾಭ ಸಹಿತ [illegible] ಈ ಕೆಳಗೆ ಕಾಣಿಸಿರುವ ರೀತಿಯಲ್ಲಿ ಸೇರಿಸಿರುತ್ತದೆ

ಜೀವಮಾನಪರ್ಯಂತ ವಿಮೆದಾರರಿಗೆ ರೂ. 1000 ವಿಮೆ ಹಣಕ್ಕೆ

ಈ ಮೂರು ವರ್ಷಗಳಿಗೆ ರೂ. 67½

ಕ್ಲಿಪ್ತಕಾಲದ ವಿಮೆದಾರರಿಗೆ ರೂ. 1000 ವಿಮೆ ಹಣಕ್ಕೆ

ಈ ಮೂರು ವರ್ಷಗಳಿಗೆ ರೂ. [illegible]

ಈ ಕಂಪೆನಿಯಲ್ಲಿ ಕ್ರಮೇಣ ಹೆಚ್ಚುತ್ತಿರುವ [illegible] ಈ ಕೆಳಗೆ ಕೊಟ್ಟಿರುವ ಹೊಸ ಕೆಲಸದ ಪಟ್ಟಿಯಿಂದ ಸ್ಪಷ್ಟವಾಗುತ್ತದೆ.

1923ರಲ್ಲಿ—ರೂ 1,74,00,000
1924 „ 2,37,00,000
1925 „ 2,96,00,000

ಇನ್ನೂ ದಿನದಿನಕ್ಕೂ ಅಭಿವೃದ್ಧಿಯಾಗುತ್ತಲೇ ಇದೆ. ಜೀವವಿಮೆ ಪತ್ರದಲ್ಲಿ ಹಣವನ್ನು ಲಾಭಕರವಾಗಿ ವಿನಿಯೋಗಿಸಲು ಇದೇ ಸುಸಮಯ.

ಬೇಕಾದ ವಿಷಯಗಳನ್ನು ಈ ಕೆಳಗಿನ ವಿಳಾಸಕ್ಕೆ ಬರದು ತಿಳಿದುಕೊಳ್ಳಬಹುದು.

ಓರಿಯಂಟಲ್ ಬಿಲ್ಡಿಂಗ್ಸ್, ಸ್ಟೇಷನ್ ರೋಡ್, ಬೆಂಗಳೂರ್ } ಪಿ. ವಿ. ಸುಬ್ರಮಣ್ಯಯ್ಯರ್, ಬ್ರಾಂಚ್ ಸೆಕ್ರೆಟರಿ.

52—14

ಮನೋಲ್ಲಾಸಿನಿ ತೈಲ.

ತಲೆನೋವು, ತಲೆ ತಿರುಗುವುದು, [illegible] ನಿಂದ ಕಣ್ಣು ನೋವು, ಅಪಸ್ಮಾರ [illegible] ಬಾರದಿರುವುದು, ನೆನಪು ಶಕ್ತಿ ಕುಂದಿಹೋಗುವುದು [illegible] ಗುಣಮಾಡುತ್ತದೆ. ಉದುರುವ ಕೂದಲನ್ನು ನಿಲ್ಲಿಸಿ [illegible]

ಕೂದಲನ್ನು ಬೆಳೆಯಿಸಿ ಕೂದಲಿಗೆ [illegible] ಹೊಳಪನ್ನೂ ಕೊಟ್ಟು ಅಕಾಲಕ್ಕೆ [illegible] ಕೂದಲನ್ನು [illegible] ಇದ್ದ ಸ್ಥಳದಲ್ಲಿ ಹೊಸ ಕೂದಲು ಹುಟ್ಟಿಸುತ್ತದೆ. [illegible] ರೂ 1, 3 ಸೀಸೆಗೆ 2—10—0, ಒಂದು ದೊಡ್ಡ ಸೀಸೆಗೆ ರೂ 2, 3 ಸೀಸೆಗೆ 5—8—0

ಚಂದನಾಸವ. — ಇದು ಪ್ರಮೇಹ ಮೂತ್ರಕೃಚ್ಛ್ರ, ಮೂತ್ರ [illegible] ಹೋಗುವುದು, ಮೂತ್ರಕೋಶದ ಉರಿ, ಮೂತ್ರಪಿಂಡಗಳ ಉರಿ ಮೂತ್ರನಾಳದಲ್ಲಿ ಹುಣ್ಣು, ಮೂತ್ರ [illegible] ಮೂತ್ರನಾಳದಿಂದ ಕೀವು ಬರುವುದು, ಮೂತ್ರದಲ್ಲಿ ಧಾತು, [illegible] ಹೋಗುವುದು, ಆಗಾಗ್ಗೆ ಮೂತ್ರ ಬರುವದು, ಮೂತ್ರ ತಡೆಯಲಿಕ್ಕೆ ಸಾಮರ್ಥ್ಯವಿಲ್ಲದಿರುವದು [illegible] ಉರಿ ಬಾಯಾರಿಕೆ, ಸ್ವಪ್ನಾವಸ್ಥೆ, ಮೂತ್ರನಾಳದಲ್ಲಿ ಚುಚ್ಚುವ ನೋವು ಇತ್ಯಾದಿಗಳಿಗೆ ಪರಮ ಔಷಧಿ. ಗಂಡಸರಿಗೂ ಹೆಂಗಸರಿಗೂ ಇದು ಅತ್ಯುತ್ತಮ. [illegible]—ಬಾಟ್ಲ 1, 3, 6ಕ್ಕೆ ರೂ 1—4—0, 3—8—0, 6—12—0.

ರೋಮನಾಶಿನಿ — ಈ ಹುಡಿಯನ್ನು ನೀರಲ್ಲಿ ಕಲಸಿ [illegible] ರೋಮವಿರುವ [illegible] ಹಚ್ಚಲು ರೋಮವು ಉದುರಿ ಬೀಳುವುದು. ಡಬ್ಬಿ ಗಳಿಗೆ 6 ಆಣೆ, 3 ಡಬ್ಬಿಗಳಿಗೆ ರೂ. 1, 1 ಡಜನಿಗೆ 3 8 0

ಕಟುಕಷಾಯ ಮಾತ್ರೆ.—[illegible] ದಿನಬಿಟ್ಟು ಬರುವ ಜ್ವರ, 3—4 ದಿನಕ್ಕೊಂದಾವರ್ತಿ ಬರುವ [illegible] ಜ್ವರಗಳ್ಗೆ [illegible] ಗುಣ ಕೊಡುತ್ತದೆ. [illegible] 1ಕ್ಕೆ ರೂ 1— [illegible] 1 0—0 [illegible]

ನಮ್ಮ ಟೆಲಿಗ್ರಾಂ ತಂತಿ ನಂ. 3

ವಿಳಾಸ—ಮನೋಲ್ಲಾಸಿನಿ ಕಂಪೆನಿ, 9 ಮಂಗಳೂರು, ಕಂಚಿನಾಡಿ.

52—29

ಸುವರ್ಣ ಅಯಸ್ಕಾಂತ ದ್ರಾವಕ.

(The Ideal Nervine Tonic)

ಇದು ಅತಿ ಆಶ್ಚರ್ಯಕರವಾದ ಟಾನಿಕ್!

ಇದರಿಂದ ಕೆಟ್ಟು ಹೋಗಿರುವ ರಕ್ತವನ್ನು ಶುದ್ಧ ಮಾಡುವುದು. ಮೈಯುಲುಗೆ ಬಲ. ಅತಿ ಉಷ್ಣದಿಂದ ಕಣ್ಣಿಗೆ ಕತ್ತಲೆಯಾಗಿ ಕಾಣುವುದು [illegible] ಸಡಲಾಗಿರುವ ನರಗಳಿಗೆ ಬಲವನ್ನು ಕೊಡುವುದು. ಮುಖದ ಬೇಳಕ ಇನ್ನು ಅನೇಕ ಗುಣಗಳನ್ನು ಕೊಟ್ಟು [illegible] ಹೋಗಲಾಡಿಸಿ ಪುಷ್ಟಿ ಬಲವನ್ನು ತೋರುವುದು.

ಇದನ್ನು 20 ದಿನ ಸೇವನೆ ಮಾಡುವದರಿಂದ ಮೇಲೆ ಹೇಳುವ ಗುಣಗಳನ್ನು ಕೊಟ್ಟು ಬಲಿಷ್ಟನಾಗಿ ಮಾಡುವುದು. 1 ವರುಷದ ಸ್ತ್ರೀ ಪುರುಷರು ಮೊದಲು ಮೊಷ್ಟವರ [illegible] ಸೇವನೆ ಮಾಡಬಹುದು. ಉಪಯೋಗಿಸುವ ಕ್ರಮವು ಔಷಧದ ಸಂಗಡ ಕಳುಹಿಸಲ್ಪಡುವುದು.

ಕ್ರಯ 20 ದಿನಗಳು ಸೇವನೆ ಮಾಡುವ ಬಾಟ್ಲ 1ಕ್ಕೆ 1—8—0.
„ 2—6—0.

ಪಿ. ಕೆ. ಎಸ್.
17 [illegible] ಬಜಾರ್,
ಜಿ. ಟಿ. ಮದ್ರಾಸ್.

40

ಸತ್ಯಮೇವಜಯತೇ.

(ಗುಣವಾಗದಿದ್ದರೆ ಹಣ ವಾಪಸ)

ಧಾತುಪೌಷ್ಟಿಕ ಕಾಮೋತ್ತೇಜಕ, ಇಂದ್ರಿಯಸ್ತಂಭಕವಾದ

ಮದನೋದ್ಭವ ಗುಳಿಗೆ.

ಜನನೇಂದ್ರಿಯದ ಶಿಥಿಲತೆ ನಿಬ೯ಲತೆ ನಪುಂಸಕತ್ವ ಶೀಘ್ರಪತನ, ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣವಾಗುವದಲ್ಲದೆ ಧಾತು ಪೌಷ್ಟಿಕ, ವೀರ್ಯವರ್ಧಕ, ರಕ್ತ ಶೋಧಕ, ಕಾಮೋತ್ತೇಜಕ, ಮನೋತ್ಸಾಹಕ ಇಂದ್ರಿಯ ಸ್ತಂಭಕ, ಗರ್ಮಿ, (ಟಾಕಿ) ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲ ತರತರದ ಬೊಕ್ಕೆಗಳು, ಹುಣ್ಣುಗಳು ಪಿತ್ತದ ಭಾಧೆಗಳು, ಕಟಿಶೂಲೆ ವಾತರೋಗವು ಮುಂತಾದವು ಆಶ್ಚರ್ಯ ಗುಣವಾಗಿ ಶರೀರಕ್ಕೆ ನಿರೋಗತ್ವವೂ [illegible] ಕ್ಕೆ ಸಂಪೂರ್ಣ ಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗುತ್ತವೆ. ಕಿಮ್ಮತ್ತು ೬೦ ಗುಳಿಗೆಗಳಿಗೆ ೪ ರೂಪಾಯಿ ಇದನ್ನು ಸೇವಿಸುವಾಗ್ಗೆ ನಪುಂಸಕತ್ವಾರಿ ತೈಲವನ್ನು ಉಪಯೋಗಿಸಿದರೆ ಉತ್ತಮ. ಕಿಮ್ಮತ್ತು ಬಾಟ್ಲಿ ಗಳಿಗೆ ರೂ ೨—೧೨—೦

ಪ್ರಮೇಹನಿವಾರಣ—ಇದರ ಸೇವನೆಯಿಂದ ಮೂತ್ರಸ್ಥಾನದಿಂದ ಕೆಂಪು ಹಳದಿಯಂತೆ ಹೋಗುವಿಕೆ ಕೀವು ಉರಿ, ಪಸ್ಮೆರಿ ಆಗದಿಪ್ಪಾಕ್ರಿಯಿಂದ ಗುಣವಾಗುವದು. ಕಿಮ್ಮತ್ತು ಬಾಟ್ಲಿಗಳಿಗೆ ರೂ ೩—೮—೦ ಟಿ. ಖ ಚೇರಿ ಅನುಪಾನಪತ್ರಿಕೆ ಔಷಧದ ಸಂಗಡ.

ಮಂದಾಣ ಸ್ಟಾಂಪು ಕಳುಹಿಸಿದರೆ ಕ್ಯಾಟಲಾಗವು

ವಿಳಾಸ—

ವೈದ್ಯ ಜಿ. ಎಲ್ ಜೋಶಿ ಮತು ಕಂಪೆನಿ.
2[illegible] ನಂ 6. ಪೋಸ್ಟ ಬನವಾಸಿ, ಉತ್ತರ ಕಾನಡಾ

EMPIRE OF INDIA LIFE ASSURANCE CO., LTD.

(Established 1897.)

ALL WITH PROFIT POLICIES

Issued before 28th February 1927 will share in the BONUS Distribution for the five years ending on that date.

PROSPECTUS ON APPLICATION

Bangalore Branch · Madras Branch·
152 Commercial Street 9 & 10 Second Line Beach
24—22

ARMS & AMMUNITION MART.

Mahomedally-Noorbhoy

321 Abdul Rehman Street, near Crawford Market, BOMBAY 3
Telegraphic Address.—"SHOOTER" Bom'

[[illegible]—45] Please write for Request [illegible]

"ಕೊಡಗು"

ಸನ್ ೧೯೨೬ನೇ ಇಸವಿ ಜುಲೈ ತಾ. ೯ ನೇ ಶುಕ್ರವಾರ

ಫಾರೆಸ್ಟ್ ಇಲಾಖೆಯ ವಿಷಯ ಮದ್ರಾಸ್ ಗವರ್ನರರವರ ಭಾಷಣ.

ಕೊಯಮುತ್ತೂರು ಫಾರೆಸ್ಟ್ ಕಾಲೇಜಿನಲ್ಲಿ ಮೊನ್ನೆ 1ನೇ ತಾರೀಕಿನಲ್ಲಿ ನಡೆದ ಇನಾಮುಗಳನ್ನು ಹಂಚುವ ಸಮಾರಂಭದಲ್ಲಿ ಮದ್ರಾಸ್ ಗವರ್ನರರವರು ಫಾರೆಸ್ಟ್ ಇಲಾಖೆಯ ಪ್ರಯೋಜನಗಳನ್ನೂ ಕರ್ತವ್ಯಗಳನ್ನೂ ಕುರಿತು ಭಾಷಣ ಮಾಡಿದರು. ನಮ್ಮ ದೇಶದಲ್ಲಿ ಡಿಪ್ಯುಟಿ ಕನ್ಸರ್ವೇಟರ್ ಆಗಿದ್ದ ಮಿ. ಟ್ರೈಥಾವ್ಯಾನ್ ಇವರೇ ಅಲ್ಲಿನ ಈಗ ಕನ್ಸರ್ವೇಟರ್ ಆಗಿದ್ದು ಆ ದೇಶದ ಫಾರೆಸ್ಟ್ ಇಲಾಖೆಯ ಮುಖ್ಯ ಅಧಿಕಾರಿಯಾಗಿದ್ದಾರೆ. ಗವರ್ನರರವರು ಮಾಡಿದ ಭಾಷಣದಲ್ಲಿ ಈ ಆಫೀಸರನ್ನು ಹೊಗಳಿ ಇವರ ಧ್ಯೇಯಗಳು ಬಹಳ ಉತ್ಕೃಷ್ಟವಾದವಂತ ಹೊಗಳಿರುವದರಿಂದ ಗವರ್ನರ ಭಾಷಣವು ಇಲಾಖೆಯ ಮುಖ್ಯ ಅಧಿಕಾರಿಯ ಕೆಲಸಕ್ಕೆ ಸಹಾಯ ದೊರಕಬೇಕೆಂಬ ಉದ್ದೇಶದಿಂದ ಇಲಾಖೆಯಲ್ಲಿಯೇ ತಯಾರಾದ ಭಾಷಣವೋ ಎಂತ ನಮಗೆ ಸಂಶಯ ಬರುತ್ತದೆ. ಮತ್ತು ಈ ಮುಖ್ಯ ಅಧಿಕಾರಿಯು ಕೆಲಸಗಳಲ್ಲಿ ಒಂದು ಏನೆಂದರೆ — ಫಾರೆಸ್ಟ್ ಇಂಜಿನೀಯರಿಂಗ್ ಕೆಲಸವನ್ನು ಪ್ರಾರಂಭಿಸಿರುವದು. ಈ ಕೆಲಸವನ್ನು ಗವರ್ನರರವರು ಹೊಗಳಿರುತ್ತಾರೆ. ಅಲ್ಲಿ ಇಂಜಿನೀಯರಿಂಗ್ ಕೆಲಸದಲ್ಲಿ ಇರುವ ಮಿ. ಮಾರ್ಟಿನ್, ಇವರಿಗೂ ಹೊಗಳಿಕೆಗಳಿವೆ. ಈ ಆಫೀಸರು ಮತ್ತು ಕನ್ಸರ್ವೇಟರ್ ಸಹ ಮದ್ರಾಸಿನಲ್ಲಿ ಮಾಡುತ್ತಿರುವ ಕೆಲಸಗಳು ಪ್ರಯೋಜನಕಾರಿಗಳಾಗಿವೆಯೋ ಏನೋ ನಮಗೆ ತಿಳಿಯದು. ಇನ್ನರೂ ಇರಬಹುದು. ಆದರೆ ಗವರ್ನರರು ಮಾಡಿದ ಭಾಷಣದಿಂದ ಈ ಆಫೀಸರುಗಳ ಅಡಕೆ[illegible] ಅಲ್ಲಿನ ಜನರಿಗೂ ತೃಪ್ತಿಕರವಾಗಿಲ್ಲವೆಂತ ತೋರಿಬರುತ್ತದೆ. ನಮ್ಮ ದೇಶದಲ್ಲಿ ಒಬ್ಬರು ಡಿಪ್ಯುಟಿ ಕನ್ಸರ್ವೇಟರಾಗಿಯೂ ಇನ್ನೊಬ್ಬರು ಆಲೋಚನೆ ಕೊಡುವ ಆಫೀಸರಾಗಿಯೂ ಮಾಡಿರುವ ಕೆಲಸದಲ್ಲು ಇಲಾಖೆಯಲ್ಲಿ ಸಾಧ್ಯವಾದಷ್ಟು ಹೆಚ್ಚಿಗೆ ಆಫೀಸರುಗಳನ್ನು ನೇಮಿಸಿಕೊಂಡದ್ದೂ ಮತ್ತು ಶೀಮೆಯಿಂದ ತುಂಬಾ ಕ್ರಯದ ಬೇಡದ ಇಂಜಿನ್ ಮತ್ತು ಇತರ ಸಾಧನೆಗಳನ್ನು ತರಿಸಿದ್ದೂ ಕಂಡುಬರುತ್ತದೆ. ತತ್ಕಾಲ ಪ್ರಯೋಜನವಾಗದೆ ಎಂದಾದರೂ ಪ್ರಯೋಜನವಾಗುವ ಸಂಭವವಿಲ್ಲದೆ ಇರುವ ನಿಷ್ಪ್ರಯೋಜನಕಾರ್ಯಗಳಿಗೆ ಹದಿನಾಲ್ಕು ಲಕ್ಷರೂಪಾಯಿ ಮೇಲೆ ಖರ್ಚು ಮಾಡಿಸಿದ ಆಫೀಸರುಗಳಾಗಿದ್ದಾರೆ. ಆದ್ದರಿಂದ ಇವರನ್ನು ಹೊಗಳಿದ್ದರಿಂದ ನಮ್ಮ ದೇಶದವರಿಗೆ ಗವರ್ನರ ಭಾಷಣದಿಂದ ಹೆಚ್ಚು ಉತ್ಸಾಹ ದೊರೆಯಲಾರದು.

ಆದರೂ ಭಾಷಣದಲ್ಲಿ ಹೇಳಿರುವ ಕೆಲವು ಅಂಶಗಳನ್ನು ನೋಡುವ—"ಈ ಮೊದಲು ಫಾರೆಸ್ಟ್‌ಗಳನ್ನು ಒಳ್ಳೇ ಸ್ಥಿತಿಯಲ್ಲಿ ಇಟ್ಟುಕೊಳ್ಳುವ ವಿಷಯಕ್ಕೆ ಮಾತ್ರ ಗಮನಕೊಡಲಾಗಿತ್ತು. ವ್ಯಾಪಾರದ ಕಡೆಗೆ ಹೆಚ್ಚಿನ ಗಮನ ಕೊಟ್ಟಿರಲಿಲ್ಲ. ಯುದ್ಧಕಾಲದಲ್ಲಿ ಹಿಂದುಸ್ಥಾನದಿಂದ ಮರ ದೊರಕೀತೋ ಎಂದು ಕೇಳಿದಾಗ ಬೇಕಾದ ಸಿಬ್ಬಂದಿ ಇಲ್ಲದ್ದರಿಂದ ಮರವಿದ್ದರೂ ಒದಗಿಸಿಕೊಡಲಿಕ್ಕೆ ಸಾಧ್ಯವಾಗಲಿಲ್ಲ. ಅದರಿಂದ ತುಂಬಾ ಕ್ರಯವಿದ್ದಾಗ ಪ್ರಯೋಜನ ಮಾಡಿಕೊಳ್ಳಲು ಸಾಧ್ಯವಾಗಲಿಲ್ಲ. 1922ನೇ ಇಸವಿಯಿಂದ ವ್ಯಾಪಾರ ಭಾಗಕ್ಕೆ ಇಲಾಖೆಯು ಗಮನಕೊಟ್ಟಿದೆ. ಆದರೆ ಇಲಾಖೆಯು ಈ ಪ್ರಯತ್ನವನ್ನು ಜನರು ಚನ್ನಾಗಿ ತಿಳಿದುಕೊಂಡಿರುವದಿಲ್ಲ. ಈಗ ನಡೆದಿರುವ ಕೆಲಸವು ಇನ್ನೂ ಪರೀಕ್ಷೆ ಮಾಡುವದರಲ್ಲಿಯೇ ಇದೆ. ತುಂಬಾ ಅಭಿರುಚಿಯನ್ನುಂಟು ಮಾಡುವದಾಗಿಯೂ ಜಯಪ್ರದವಾಗಿಯೂ ಇದೆ."

ಗವರ್ನರರವರು ವ್ಯಾಪಾರ ಭಾಗವು ಇನ್ನೂ ಪರೀಕ್ಷೆಯಲ್ಲಿ ಇದೆಯೆಂತ ಒಪ್ಪಿರುವಾಗ ನಮ್ಮ ಈ ಚಿಕ್ಕ ದೇಶದ ಆದಾಯದ ಮೂರನೇ ಒಂದುಭಾಗ ಈ ಪರೀಕ್ಷೆಗೆ ಖರ್ಚು ಮಾಡಿಸುವದು ಯುಕ್ತವೇ? ಅಲ್ಲಿಗೆ ಪರೀಕ್ಷೆಯು ಒಂದೇ ಕಡೆಯಲ್ಲಿ ನಡೆದರೆ ಸಾಲದೇ? ನಮ್ಮ ಪರೀಕ್ಷೆಯು ನಡೆಯುತ್ತಿದ್ದದ್ದು ಮದ್ರಾಸಿನ ಪರೀಕ್ಷೆ ಸ್ಥಳದಿಂದ ಬಹಳ ದೂರದಲ್ಲಿ ಇಲ್ಲ. ಹೀಗಿರುವಾಗ ಎರಡು ಕಡೆಗಳಲ್ಲೂ ವಿದ್ಯಮಾನಗಳು ಸಾಧಾರಣ ಒಂದೇ ತರದ್ದಾಗಿದೆ. ಆದ್ದರಿಂದ ನಮ್ಮ ದೇಶದ ಚಿಕ್ಕ ಉತ್ಪತ್ತಿಯಿಂದ ಪರೀಕ್ಷೆಗೆ ಖರ್ಚು ಮಾಡಿಸಿದ ಈ ಆಫೀಸರುಗಳು ಮಾಡುವ ಕೆಲಸದಲ್ಲಿ ನಮ್ಮ ದೇಶದ ಜನರಿಗೆ ಭರವಸೆ ಹುಟ್ಟುವದು ಸಾಧ್ಯವಿಲ್ಲ.

"ಮರಗಳನ್ನು ಕಡಿದು ಸಾಗಿಸಲಿಕ್ಕೆ ಇಂಜಿನ್‌ಗಳೂ ಇಂಜಿನಿಯರುಗಳೂ ಇರುವದರಿಂದ ಹೊಸ ಹೊಸ ಪ್ರಯತ್ನಗಳು ನಡೆದಿವೆ. ಈ ವರೆಗೆ ಉಪಯೋಗಕ್ಕೆ ಬರಲಾರದೆಂತ ಇದ್ದ ಹೊಸ ಮರಗಳನ್ನು ಉಪಯೋಗಕ್ಕೆ ತರುತ್ತಿದ್ದಾರೆ. ರೈಲ್ವೇ ಸ್ಲೀಪರ್‌ಗಳಿಗೆ ಆಗಲಾರದೆಂತ ಇದ್ದ ಮರಗಳನ್ನು ನೀರಿನ ಹಬೆಯಲ್ಲಿ ಕಾಯಿಸಿ ಸ್ಲೀಪರ್‌ಗಳಾಗಿ ಉಪಯೋಗ ಮಾಡಬಹುದೆಂತ ತೋರಿಸಿದ್ದಾರೆ." ಜಯಪ್ರದವಾದ ಹೊಸ ಪ್ರಯತ್ನಗಳನ್ನು ನಡಿಸುವದಕ್ಕೆ ನಾವು ಸಂತೋಷಪಡುತ್ತೇವೆ. ಆ ಪ್ರಯತ್ನಗಳು ಪ್ರಯೋಜನಕಾರಿಯಾದನಂತರ ನಮ್ಮ ದೇಶದಲ್ಲೂ ಇಂಥಾ ಕೆಲಸಗಳನ್ನು ಪ್ರಾರಂಭಿಸಬಹುದು.

"ಇಲಾಖೆಯು ಮುಂದುವರಿದ ಮಾಡುತ್ತಿರುವ ಕೆಲಸಕ್ಕೆ ಮದ್ರಾಸ್ ಅಧಿಪತ್ಯದ ಜನರು ಸಹಾಯ ಮಾಡಬೇಕೆಂತ ನಾನು ವಿಶ್ವಾಸದಿಂದ ಕೇಳಿಕೊಳ್ಳುತ್ತೇನೆ. ನಮ್ಮ ಮರಗಳಿಗೆ ಸಾಕಷ್ಟು ಖರ್ಚು ಇದೆ. ಆದ್ದರಿಂದ ಮಿಲ್ಲುಗಳಿಗೆ ಇನ್ನೂ ಹೆಚ್ಚು ಹಣ ಖರ್ಚು ಮಾಡಬೇಕಾಗಿದೆ. ಖರ್ಚಿಗೆ ತಕ್ಕ ಪ್ರತಿಫಲ ದೊರೆತೀತೆಂತ ನಾನು ನಂಬುತ್ತೇನೆ. ಈಗ ದೊರೆತಿರುವ ಈ ಅವಕಾಶವನ್ನು ಕಳಕೊಂಡರೆ ಈ ವ್ಯಾಪಾರವೆಲ್ಲಾ ಬೇರೆಯವರಿಗೆ ಹೋಗಬಹುದು. ಮದ್ರಾಸಿನಲ್ಲಿ ಹೊಸ ಹೊಸ ಆಣೆ ಕಟ್ಟುಗಳ ಕೆಲಸಗಳೂ, ವಿದ್ಯುಚ್ಛಕ್ತಿಯ ಕೆಲಸಗಳೂ ಪ್ರಾರಂಭವಾಗುತ್ತಿರುವದರಿಂದ ಮರದ ಉಪಯೋಗ ಹೆಚ್ಚಾಗಿ ಆಗುತ್ತದೆ. ಮನೆ ಕಟ್ಟುವ, ಪೆಟ್ಟಿಗೆ ಮಾಡುವ ಮರಗಳೂ ಬೇಕಾಗಿವೆ. ನಾವು ಕೊಡಲು ಸಾಧ್ಯವಿರುವದಕ್ಕಿಂತ ಹೆಚ್ಚು ಆರ್ಡರುಗಳು ದೊರಕುವಂತಿವೆ. ಮರವನ್ನು ಕಡಿದು ತಯಾರಿಸುವ ಖರ್ಚು ಕಡಿಮೆಯಾಗುತ್ತಾ ಒಂದುಕಡೆ ಮರದ ಕ್ರಯ ಹೆಚ್ಚಾಗುತ್ತಾ ಇದೆ." ಎಂತ ಮುಂತಾಗಿ ಹೇಳಿ ಬಹಳ ಆಶೆ ಹುಟ್ಟುವ ಮಾತುಗಳನ್ನು ಆಡಿದರು. ನಮ್ಮ ದೇಶದ ಸರಕಾರದ ಉತ್ಪತ್ತಿಯ ಮುಖ್ಯಸಾಧನವಾದ ಫಾರೆಸ್ಟ್ ಇಲಾಖೆಯ ಸಾಮಗ್ರಿಗಳಿಗೆ ಕ್ರಯ ಏರುತ್ತದೆಂಬ ಮಾತುಕೇಳಿ ನಮಗೂ ಬಹಳ ಸಂತೋಷವೆನಿಸುತ್ತದೆ. ಇಂಜಿನ್‌ಗಳ ಮೂಲಕ ಕಡಿದು ಸಾಗಿಸಿದ್ದರೂ ಮರಕ್ಕೆ ಕ್ರಯ ಒಂದೇ ಎಂತಾದರೆ ನಿಂತ ಮರವನ್ನೇ ಮಾರಿ ಹಣ ಮಾಡಿಕೊಳ್ಳಬಹುದು. ಆದರೆ ಫಾರೆಸ್ಟ್ ಇಲಾಖೆಯಲ್ಲಿ ಹೆಚ್ಚಾಗುತ್ತಿರುವ ಖರ್ಚಿಗೆ ಒಪ್ಪಿಗೆ ಕೊಡಿ ಎಂತ ಕೇಳುವಾಗ ಮಾಡಿದ ಭಾಷಣವಾದ್ದರಿಂದ ನ್ಯೂಸ್‌ಪೇಪರ್‌ಗಳಲ್ಲೂ ಇತರ ಕಡೆಗಳಲ್ಲೂ ಮಾರಾಟಕ್ಕೆ ವಸ್ತುಗಳನ್ನು ಪ್ರಕಟಿಸುವಾಗ ಆಯಾ ವ್ಯಾಪಾರಿಗಳು ತಮ್ಮ ತಮ್ಮ ಸಾಮಗ್ರಿಗಳನ್ನು ಹೊಗಳಿಕೊಂಡಂತೆ ಹೊಗಳಿರುವದೋ ಎಂಬ ಸಂಶಯವು ನಮಗೆ ಬರುತ್ತದೆ. ನಮ್ಮ ಸಂಶಯ ನಿಷ್ಕಾರಣವಾಗಿರಲಿ ಎಂತ ಆಶಿಸುತ್ತೇವೆ. ಹೇಗೂ ಮದ್ರಾಸಿನವರು ಮಾಡುತ್ತಿರುವ ಈ ಖರ್ಚುಗಳಿಂದಲೂ ಪ್ರಯತ್ನಗಳಿಂದಲೂ ದೊರೆಯುವ ಪ್ರಯೋಜನವನ್ನು ನಮ್ಮ ದೇಶದ ಜನರು ಜಾಗರೂಕರಾಗಿ ನೋಡುತ್ತಿರಬೇಕು. ನಮ್ಮ ದೇಶದಲ್ಲೂ ಈ ಪರೀಕ್ಷೆಗಳನ್ನೆಲ್ಲಾ ಪುನಃ ಪ್ರಾರಂಭಿಸಬೇಕೆಂತ ಇಲಾಖೆಯವರು ಹೇಳುವ ಸಂಭವ ಬರಬಹುದು. ಅಂಥಾ ಕಾಲದಲ್ಲಿ ನಮ್ಮ ಭಂಡವಾಳದ ಒಂದು ಕಾಸನ್ನಾದರೂ ಇಂಥಾ ಪರೀಕ್ಷಾ ಖರ್ಚುಗಳಿಗೆ ಖರ್ಚು ಮಾಡದಂತೆ ನೋಡಿಕೊಳ್ಳಬೇಕು.

ನೌಕರಿ ಬರಾರುಗಳ ಮೇಲಿ ಸ್ಟ್ಯಾಂಪು.

ನೌಕರಿ ಬರಾರುಗಳು ಸ್ಟ್ಯಾಂಪು ಆಕ್ಟಿನ ಮೇರೆ 1923ನೇ ಇಸವಿಗೆ ಮೊದಲು ಎಂಟಾಣೆ ಕಾಗದದಲ್ಲೂ, ಈಚೆಗೆ 1ರೂ ಆಣೆ ಕಾಗದದಲ್ಲೂ ಆಗಬೇಕಾಗಿದ್ದರೂ ಇಂಡಿಯಾ ಗವರ್ನಮೆಂಟಿನವರು ಕಾಫಿ ಪ್ಲಾಂಟರುಗಳ ಪ್ರಯೋಜನಕ್ಕಾಗಿ ಅವರ ಕೋರಿಕೆ ಮೇರೆ 1879ನೇ ಇಸವಿಯಲ್ಲೇ 20 ರೂಪಾಯಿ ಒಳಗಿನ ಅಡ್ವಾನ್ಸ್‌ಗಳಿಗೆ ಒಂದು ಆಣೆ ಸ್ಟ್ಯಾಂಪು ಹಚ್ಚಿದರೆ ಸಾಕೆಂತ ಮಾಡಿದರು. ಈ ರಿಯಾಯ್ತಿಯನ್ನು ಈಚೆಗೆ ಇತರ ತೋಟ ಕೃಷಿಗಳಿಗೂ ವ್ಯಾಪಕವಾಗುವಂತೆ ಮಾಡಿದ್ದಾರೆ. 1903ನೇ ಇಸವಿಯಲ್ಲಿ 50 ರೂ. ವರೆಗೆ ಒಂದು ಆಣೆ ಸ್ಟ್ಯಾಂಪು ಸಾಕೆಂತ ಮಾಡಿದರು. ಕೆಲವು ವರ್ಷಗಳ ಈಚೆಗೆ ಈ ವ್ಯತ್ಯಾಸವಿರಲಿಲ್ಲ. ಭೂಮಿ ವ್ಯವಸಾಯಗಾರರು 50. ರೂ ಒಳಗೆ ಅಡ್ವಾನ್ಸ್ ಕೊಟ್ಟು ಎಗ್ರಿಮೆಂಟ್ ಬರೆಸುವಾಗ ಒಂದಾಣೆ ಸ್ಟ್ಯಾಂಪು ಸಾಕೆಂತ ಮಾಡಿಕೊಡಬೇಕಾಗಿ ಜಮೀನ್‌ದಾರರ ಸಂಘದಲ್ಲಿ ಠರಾವುಗಳು ಪಾಸಾದವು, ಕೌನ್ಸಿಲಿನಲ್ಲಿ ಸಹ ಈ ಠರಾವು ಚರ್ಚೆಯಾಯಿತು. ಮದ್ರಾಸ್ ಅಧಿಪತ್ಯದ ಜನರೂ ಸಹ ಭೂಮಿ ಹಿಡುವಳಿದಾರರಿಗೆ ಈ ರಿಯಾಯ್ತಿಯನ್ನು ಕೊಡಬೇಕೆಂತ ಕೇಳಿದರು. ಈ ಎಲ್ಲಾ ಕೋರಿಕೆಗಳು ಇಂಡಿಯಾ ಸರಕಾರಕ್ಕೆ ಹೋಗಿ ಅವರು ಪ್ಲಾಂಟರುಗಳ ಪ್ರಯೋಜನಕ್ಕೆ ಕೊಟ್ಟಿರುವ ರಿಯಾಯ್ತಿಯನ್ನು ಭೂಮಿ ವ್ಯವಸಾಯಗಾರರಿಗೆ ಕೊಡಲಾಗುವದಿಲ್ಲವೆಂತ ತೀರ್ಮಾನಮಾಡಿದ್ದಲ್ಲದೆ ತೋಟಗಾರರಿಗೆ ಸಹ ಈ ರಿಯಾಯ್ತಿ ಕಾರಣವಿಲ್ಲವೆಂತ ಯೋಚಿಸುತ್ತಿದ್ದಾರಂತೆ. ಈ ವಿಷಯದಲ್ಲಿ ಜಮೀನದಾರರ ಸಂಘದ ಅಭಿಪ್ರಾಯ ತಿಳಿಯಲು ಪತ್ರಬಂದಿದೆಯೆಂತಲೂ, ಕೂಡಲೆ ಇದರ ಮೇಲೆ ಅಭಿಪ್ರಾಯ ಕೊಡಲು ಒಂದು ಕಮಿಟಿಮೀಟಿಂಗ್ ಮಾಡಲಾಗುವದೆಂತ ಆ ಸಂಘದಿಂದ ನಮಗೆ ತಿಳಿಯಬಂದಿದೆ.

ತೋಟಗಾರರಿಗೂ ಭೂಮಾಲೀಕರಿಗೂ ವ್ಯತ್ಯಾಸಗಳಿರಬಾರದೆಂಬ ಕಾರಣದ ಮೇಲೆ ವ್ಯತ್ಯಾಸವನ್ನು ತೆಗೆದುಹಾಕುವದು ನಮ್ಮ ಬೇಡಿಕೆಯು ಉಚಿತ. ಇವರೂ ಅಲ್ಲದೆ ತೋಟಗಾರರಿಗೆ ಸಹಾಯ ಮಾಡಿದ್ದರಿಂದ ನಿಜವಾಗಿಯೂ ಮೇಸ್ತ್ರಿಗಳಿಗೂ, ಕೆಲಸಗಾರರಿಗೂ ಸಹಾಯ ಸಿಕ್ಕಿದಂತಾಯಿತೇ? ಈಗ ಈ ಸ್ಟ್ಯಾಂಪಿನ ರಿಯಾಯ್ತಿ ಬೇಕೆಂತ ಮಾಡಿದರೆ ಆ ಹೊರೆಯು ಕೆಲಸಗಾರರ ಮೇಲೆಯೇ ಬೀಳುತ್ತದೆ. ಹೊಟ್ಟೆಪಾಡಿಗಾಗಿ ಕೂಲಿಗೆ ಬರುವ ಬಡಜನರ ಮೇಲೆ ಇನ್ನೂ ಹೆಚ್ಚಿಗೆ ಹೊರೆ ಹೊರಿಸುವದು ನ್ಯಾಯವಲ್ಲ.

ತೋಟಗಳಿಗೆ ದೂರ ಪ್ರಾಂತ್ಯದಿಂದ ಕೆಲಸಗಾರರು ಬರಬೇಕಾಗಿರುವದರಿಂದ ಅವರೆಲ್ಲರೂ ನೌಕರಿ ಬರಾರುಗಳನ್ನು ಮಾಡಿಸಿಕೊಳ್ಳಲೇಬೇಕಾಗಿರುವದರಿಂದ ತೋಟಗಾರರಿಗೆ ರಿಯಾಯ್ತಿ ಕೊಟ್ಟಿರುವದಾಗಿ ಸರಕಾರಿ ಜವಾಬಿನಿಂದ ತಿಳಿದುಬರುತ್ತದೆ. ಕೊಡಗು ದೇಶದಲ್ಲಿ ಭೂಮಿಯಲ್ಲಿ ಕೆಲಸ ಮಾಡುವ ನೌಕರರೂ ಸಹ ದಕ್ಷಿಣಕನ್ನಡ ಜಿಲ್ಲಾ, ಮಲಯಾಳ, ಮೈಸೂರು ದೇಶದಿಂದಲೇ ಬರಬೇಕಾಗಿರುವದರಿಂದ ಪ್ಲಾಂಟರುಗಳಿಗೆ ಕೊಡುವ ಸಹಾಯವನ್ನು ಕೊಡಗಿನ ಭೂಮಾಲೀಕರಿಗೂ ಕೊಡಬೇಕಾಗಿದೆ. ಭೂಮಿಯಲ್ಲಿ ಕೆಲಸಮಾಡುವ ನೌಕರರೂ ಸಹ ಪರದೇಶದಿಂದ ಬರಬೇಕೆಂತ ರುಜುವಾತಾದ್ದರಿಂದಲೇ 1926ನೇ ಇಸವಿ 1ನೇ ಕೂಲಿಕಾರರ ಆಕ್ಟನ್ನು ಭೂಮಿಯಲ್ಲಿ ಕೆಲಸಮಾಡುವ ನೌಕರರಿಗೂ ವ್ಯಾಪಕವಾಗುವಂತೆ ಮಾಡಿರುವದಾಗಿದೆ. ಆದ್ದರಿಂದ ತೋಟಗಾರರಿಗೆ ಇರುವ ರಿಯಾಯ್ತಿಯನ್ನು ತೆಗೆದುಹಾಕಬಾರದು. ಆ ರಿಯಾಯ್ತಿಯನ್ನು ಭೂಮಾಲೀಕರೂ ಬರೆಸಿಕೊಳ್ಳುವ ನೌಕರಿ ಬರಾರುಗಳಿಗೂ ವ್ಯಾಪಕವಾಗುವಂತೆ ಮಾಡಬೇಕೆಂತ ನಮ್ಮ ಅಭಿಪ್ರಾಯವಾಗಿದೆ.

ಮಹಾತ್ಮಗಾಂಧಿಯವರ ಸ್ವಚರಿತ್ರೆ.

23 ನೆಯ ಪ್ರಕರಣ

(ಕಳೆದವಾರದಿಂದ ಮುಂದುವರಿದದ್ದು)

ನನ್ನ ಅಸಹಾಯಸ್ಥಿತಿ.

ಬ್ಯಾರಿಸ್ಟರ್ ಪರೀಕ್ಷೆಯಲ್ಲಿ ಉತ್ತೀರ್ಣನಾಗಿ ಪಟ್ಟವ (ಡಿಗ್ರಿಯ)ನ್ನು ಹೊಂದುವುದು ಸುಲಭವಾದರೂ ನ್ಯಾಯವಾಗಿ ಕೆಲಸಮಾಡುವುದು ಬಹಳ ಕಷ್ಟವು. ನಾನು ನ್ಯಾಯಶಾಸ್ತ್ರವನ್ನು ಓದಿದೆನೇ ಹೊರತು, ಹೇಗೆ ವಾದಿಸಬೇಕೆಂಬುದನ್ನು ಕಲಿಯಲಿಲ್ಲ. ನ್ಯಾಯಸೂತ್ರಗಳನ್ನು ಶ್ರದ್ಧೆಯಿಂದ ಕಲಿದುಕೊಂಡೆನಾದರೂ ಅವುಗಳನ್ನು ಪ್ರಯೋಗಿಸುವ ಪದ್ಧತಿಯನ್ನು ತಿಳಿದುಕೊಳ್ಳಲಿಲ್ಲವು. "ಇತರರ ಸೊತ್ತಿಗೆ ನಷ್ಟವುಂಟಾಗದ ವಿಧಾನದಿಂದ ನಿನ್ನ ಸೊತ್ತನ್ನು ಉಪಯೋಗಿಸಬೇಕು" ಎಂಬುದು ಆ ನ್ಯಾಯಸೂತ್ರಗಳಲ್ಲೊಂದಾಗಿದೆ. ಆದರೆ ಈ ಸೂತ್ರವನ್ನು ಕಕ್ಷಿಗಾರನ ಪ್ರಯೋಜನಕ್ಕಾಗಿ ಹೇಗೆ ಉಪಯೋಗಿಸಬೇಕೆಂಬುದು ನನಗೆ ತಿಳಿದಿರಲಿಲ್ಲವು. ಈ ವಿಷಯವನ್ನು ಅನೇಕ ದಾವಾಗಳ ಸಂಬಂಧದಲ್ಲಿ ಓದಿದೆನಾದರೂ ನನಗೇನೂ ಆಧಾರವು ಸಿಕ್ಕಲಿಲ್ಲವು. ಭಾರತದೇಶದ ನ್ಯಾಯಶಾಸ್ತ್ರವನ್ನು ಕುರಿತು ನಾನು ಏನನ್ನೂ ಓದಿರಲಿಲ್ಲವು. ಹಿಂದೂಮಹಮ್ಮದೀಯ ನ್ಯಾಯಶಾಸ್ತ್ರಗಳ ಸಂಗತಿಯೇನೂ ನನಗೆ ತಿಳಿದಿರಲಿಲ್ಲ. ದಾವಾ ಅರ್ಜಿಯನ್ನು ಬರೆಯುವ ಪದ್ಧತಿಯು ಸಹ ನನಗೆ ಗೊತ್ತಿರಲಿಲ್ಲವು. ಸರ್ ಫೆರೋಜ್‌ಷಾ ಮೆಹತಾಯವರು ನ್ಯಾಯಸ್ಥಾನದ (ಕೋರ್ಟಿನ)ಲ್ಲಿ ಸಿಂಹದಂತೆ ಗರ್ಜಿಸುತ್ತಿದ್ದರೆಂದು ನಾನು ಕೇಳಿದ್ದೆನು. ಆ ನೈಪುಣ್ಯವನ್ನು ಅವರು ಇಂಗ್ಲಂಡದೇಶದಲ್ಲಿ ಹೇಗೆ ಹೊಂದಿದರೋ ನನಗೆ ತಿಳಿಯದು. ಅದರಂತೆ ನಾನು ಎಂದಿಗೂ ಸುಪ್ರಸಿದ್ಧ ನ್ಯಾಯವಾದಿ ಆಗಲಾರೆನೆಂಬುದು ನಿಶ್ಚಯವಾಗಿದ್ದರೂ ಹೊಟ್ಟೆಸಾಕಿಕೊಳ್ಳಲು ತಕ್ಕಷ್ಟು ಮಾತ್ರವಾದರೂ ಸಂಪಾದಿಸುವೆನೋ ಎಂಬ ಸಂಶಯವು ಕೂಡ ನನ್ನನ್ನು ಬಾಧಿಸುತ್ತಿದ್ದಿತು. ನಾನು ನ್ಯಾಯಶಾಸ್ತ್ರವನ್ನು ಅಭ್ಯಾಸಮಾಡುತ್ತಿದ್ದಾಗಲೇ ನನಗೆ ಸಂಶಯವುಂಟಾಯಿತು. ಕೆಲವು ಮಂದಿ ಸ್ನೇಹಿತರಿಗೆ ತಿಳಿಸಿದೆನು. ದಾದಾಭಾಯಿ ನವರೋಜಿಯವರ ಸಲಹೆಯನ್ನು ತೆಗೆದುಕೊಳ್ಳಬೇಕೆಂದು ಒಬ್ಬ ಸ್ನೇಹಿತನು ಸೂಚಿಸಿದನು. ನಾನು ಆ

ಗ್ಲದೇಶಕ್ಕೆ ಹೋದಾಗ್ಗೆ ದಾದಾಭಾಯಿಯವರಿಗೆ ಕೊಡ ಒಂದು ಶಿಫಾರಸು ಕಾಗದವನ್ನು ತೆಗೆದುಕೊಂಡು ಹೋಗಿದ್ದೆನು. ಅಂತಹ ದೊಡ್ಡವರನ್ನು ನೋಡಲು ನನಗೆ ಅರ್ಹತೆ ಇಲ್ಲವೆಂದು ತಿಳಿದುಕೊಂಡಿದ್ದೆನು. ಅವರು ಉಪನ್ಯಾಸ ಮಾಡುತ್ತಾರೆಂದು ಪ್ರಕಟವಾದಾಗಲೆಲ್ಲಾ ನಾನು ಹೋಗಿ ಒಂದು ಮೂಲೆಯಲ್ಲಿ ಕುಳಿತುಕೊಂಡು ಕೇಳಿ ಬರುತ್ತಿದ್ದೆನು. ವಿದ್ಯಾರ್ಥಿಗಳ ಪರಿಚಯವನ್ನು ಬಹಳವಾಗಿ ಮಾಡಿಕೊಳ್ಳಲು ದಾದಾಭಾಯಿಯವರು ಒಂದು ಸಂಘವನ್ನೇರ್ಪಡಿಸಿದ್ದರು. ನಾನು ಆ ಸಂಘದ ಸಭೆಗೆ ಹೋಗಿದ್ದೆನು. ದಾದಾಭಾಯಿಯವರಿಗೆ ವಿದ್ಯಾರ್ಥಿಗಳ ಮೇಲಿದ್ದ ವಾತ್ಸಲ್ಯವನ್ನೂ, ವಿದ್ಯಾರ್ಥಿಗಳಿಗೆ ಅವರ ಮೇಲಿದ್ದ ಭಕ್ತಿಯನ್ನೂ ನೋಡಿ ನನಗೆ ಬಹಳ ಸಂತೋಷವಾಯಿತು. ಕಾಲಕ್ರಮೇಣ ನನಗೆ ಧೈರ್ಯವು ಬಂದಮೇಲೆ ಒಂದು ದಿವಸ ದಾದಾಭಾಯಿಯವರ ದರ್ಶನಕ್ಕೆ ಹೋಗಿದ್ದು ನಾನು ತಂದಿದ್ದ ಶಿಫಾರಸು ಕಾಗದವನ್ನು ಕೊಟ್ಟೆನು. "ನಿನಗಿಷ್ಟ ಬಂದಾಗಲೆಲ್ಲಾ ಬಂದು ನೋಡಬಹುದು" ಎಂದು ಅವರು ಉತ್ತರವನ್ನು ಕೊಟ್ಟರು. ಆದರೆ ನಾನು ಹೋಗಲಿಲ್ಲವು. ನ[illegible] ಅವರಿಗೆ ತೊಂದರೆ ಕೊಡಕೂಡದೆಂದು ಯೋಚಿಸಿದೆ. ಅದರಿಂದ ಅವರಲ್ಲಿಗೆ ನಾನು ಹೋಗಲಿಲ್ಲವು. [illegible]ರವರಲ್ಲಿಗಾದರೂ ಹೋಗಬೇಕೆಂದು ಮತ್ತೆ [illegible] ಹೇಳಿದ[illegible]ನು. ಅವರು ಪ್ರಾರ್ಥನಾಚಾರರವರಾಯ[illegible] ನಕ್ಕದರಿಂದಾದರೂ ಭಾರತೀಯ ವಿದ್ಯಾರ್ಥಿಗಳ [illegible] ಅಪಾರವಾದ ವಿಶ್ವಾಸವನ್ನಿಟ್ಟಿದ್ದರು. ಅವರ [illegible] ವಿದ್ಯಾವಂತರಾದುದರಿಂದ ಅನೇಕ ವಿದ್ಯಾರ್ಥಿಗಳು ಅವರ ಸಲಹೆಯನ್ನು ತೆಗೆದುಕೊಳ್ಳುತ್ತಿದ್ದರು. ನಾನು [illegible]ಗಿ ಬರೆದ[illegible] ಅವರ ಸಂದರ್ಶನವನ್ನು [illegible]

[illegible]

ದುದು [illegible]ದಲ್ಲಿ [illegible] ವಾಗುವುದು. ಎಲ್ಲಾ ದಾನಗಳೂ ಕ್ರಮವಾ[illegible]ವುದಿಲ್ಲ. ನಿನಗೆ ನನ್ನ ಸಾಧಾರಣ ಗ್ರಂಥ ಪರಿಚಯವನ್ನು ತಿಳಿಯಲು ಕ್ರಮ[illegible] ಎಂದು ಪಿಕ್ಟಟರವರು ಹೇಳಿದರು. ನನಗೆ ಅಷ್ಟು ಗ್ರಂಥಪರಿಚಯವನ್ನು [illegible] ಸಂಶಯವುಂಟಾ[illegible] 'ನಿನಗಿರುವ ಅನುಭವವು ನನಗೆ ತಿಳಿಯಿತು. ನಿನಗಿರುವ ಗ್ರಂಥಪರಿಚಯವೂ ಅತಿ ಕಡಿಮೆ. [illegible] ಪಂಚಜ್ಞಾನವು ಸಾಲದು. ಭಾರತದೇಶದ [illegible] ನನಗೆ ಗೊತ್ತಿಲ್ಲ. ನ್ಯಾಯವಾದ ಮಾನವಸ್ವಭಾವವನ್ನು [illegible]ನ್ನಾಗಿ ಗ್ರಹಿಸಿಕೊಂಡಿರಬೇಕು. [illegible] ನೋಡುತ್ತಲೆ ಅವನ ಸ್ವಭಾವವನ್ನು ತಿಳಿಯಲು [illegible] ಭಾರತೀಯರಲ್ಲರೂ ಭಾರತದೇಶಚರಿತ್ರೆಯನ್ನು [illegible] ರಬೇಕು. ಅದಕ್ಕೂ ನ್ಯಾಯವಾದಿಯ ವೃತ್ತಿಗೂ ಸಂಬಂಧವಿಲ್ಲ [illegible]

[illegible]

ಪುಸ್ತಕಗಳನ್ನೂ ನೀನು ಓದಬೇಕು" ಎಂದು ಪಿಕ್ಟಟರವರು ತಿಳಿಸಿದರು. ನಾನು ಆ ಪೂಜ್ಯರಿಗೆ ಬಹಳವಾಗಿ ಕೃತಜ್ಞನಾಗಿರುವೆನು. ಅವರಿದಿರಿಗಿರುವವರೆಗೂ ಧೈರ್ಯದಿಂದಿದ್ದೆನು. ಅದರೆ ಅಲ್ಲಿಂದ ಹೊರಟಕೂಡಲೆ ಪುನಃ ಮನಸ್ಸಿಗೆ ಯೋಚನೆ ಹುಟ್ಟಿತು. ಮಾರನೆಯದಿನ ಕಾವಟರವರು ಬರೆದಿದ್ದ ಪುಸ್ತಕವನ್ನು ಕೊಂಡುಕೊಂಡೆನು. ಷಮ್ಮೆಯವರು ಬರೆದ ಪುಸ್ತಕವು ಆ ಅಂಗಡಿಯಲ್ಲಿ ದೊರಕಲಿಲ್ಲವು. ಕಾವಟರವರ ಪುಸ್ತಕವು ಸ್ಟೀವನರ ಆತ್ಮಚರಿತ್ರಕ್ಕಿಂತ ಕಠಿಣವಾಗಿದ್ದಿತಲ್ಲದೆ ಆಕರ್ಷಕವಾಗಿರಲಿಲ್ಲವು. ಷೇಕ್ಸ್‌ಪಿಯರ ಬರೆದ ಫಿಜಿಯಾಗ್ನಮಿಯನ್ನೋದಿದೆನು. ಷೇಕ್ಸ್‌ಪಿಯರು ಲಂಡನಿನ ಬೀದಿಯಲ್ಲಿ ತಿರುಗುತ್ತಿದ್ದುದನ್ನು ಕುರಿತು ವಿಚಾರಿಸಿದೆ ಹೋದೆನು. ಕಾವಟರ ಪುಸ್ತಕದಿಂದ ಹೆಚ್ಚು ಜ್ಞಾನವೇನೂ ಉಂಟಾಗಲಿಲ್ಲವು. ಪಿಕ್ಟಟರವರ ಸಲಹೆಯಿಂದ ವ್ಯವಹಾರಿಕದಲ್ಲಿ ಹೆಚ್ಚು ಪ್ರಯೋಜನವಾಗಲಿಲ್ಲವು. ಆದರೂ ಅವರ ಪ್ರೇಮವು ನನಗೆ ಬಹಳವಾಗಿ ವ್ಯಕ್ತವಾಯಿತು. ಆಕಾರವಾದ ಅವರ ಸಗಮೋಗವು ನನ್ನ ಕಣ್ಣಿಗೆ ಕಟ್ಟಿದಂತಿದೆ. "ಆಕ ಮನಿಲ್ಲದೆ ಕಷ್ಟದಿಂದ ಕೆಲಸಮಾಡಿದರೆ ಸಾಕು ವೆ ಮಾತಾವಗರಿಗಿದ್ದಂತೆ ಜಾಣತನವು ಅವಶ್ಯವಿಲ್ಲವು." ಎಂದು ಅವರು ಹೇಳಿದ ಬುದ್ಧಿವಾದದಿಂದ ನನಗೆ ಬಹಳಮಟ್ಟಿಗೆ ಧೈರ್ಯಬಂದಿರುತ್ತದೆ. ನಾನು ದಕ್ಷಿಣಾಫ್ರಿಕೆಗೆ ಹೋದಮೇಲೆ ಕಾಗರ್ಡನರು ಮೆಲ್ಲನ್ ರವರೂ ಒಟ್ಟುಗೂಡಿ ಬರೆದ ಪುಸ್ತಕವನ್ನು ಓದಿದೆನು. ಈ ರೀತಿಯಾಗಿ ಸಂಕುಲ ಮನಸ್ಸಿನಿಂದ ಆಗಾಗ ಎಂ[illegible] ಹೊರಟು ಬೊಂಬಾಯಿಯನ್ನು ಸೇರಿದೆನು. ನ[illegible] ಬಹಳ ದುಃಖಕರವಾಗಿದ್ದುದರಿಂದ ಅದರ ಕುರಿತು ಪ್ರಯಾಣ ಮಾಡಿದೆನು.

ವೈ. ಸ್ವಾ.

ತ್ಯಾಗ.

(ಮಹಾತ್ಮಗಾಂಧಿಯವರ ಲೇಖನದ ಕರ್ಜುಮೆ)

[illegible] ಸಂಶಯ [illegible]ಗಳು ಹೆಚ್ಚು ಇರುವುದರಿಂದ [illegible] ಸಾರ್ವಜನಿಕ ಕೆಲಸ ಮಾಡಿದ್ದಕ್ಕಾಗಿ ಸಿಕ್ಕುವ ಸಂ[illegible] ನಾಕೆಲಾಗಬಹುದೆಂತ ಅನೇಕ ಯುವಕರು ಬರೆದ ಕಾಗದಗಳು ನನ್ನ ಮುಂದೆ ಇವೆ. ಆದ್ದರಿಂದ ತಾನು ಸಾರ್ವಜನಿಕ ಕೆಲಸವೆಷ್ಟು ಸಾಲ ಎತ್ತಿಯೋ ಉಚಿತವಾಗಿ ನಡೆದೋ [illegible] ಯೂರೋಪಿಗೆ ಹೋಗಿ ಸಂಪಾದನೆ [illegible] ಶಕ್ತಿಯನ್ನು ಹೆಚ್ಚಿಸಿಕೊಂಡು ಬರಬೇಕೆಂತ ಇದ್ದೇನೆ [illegible], ಇನ್ನೊಬ್ಬನು ತನಗೆ ಏನಾದರೂ ಸಂಬಳ [illegible] ಹುಡುಕುತ್ತಿದ್ದೇನೆಂತಲೂ, ಮತ್ತೊಬ್ಬನು [illegible] ಪ್ರಯೋಜನವಾಗುವ ಕಸುಬನ್ನು ನಡಿಸಲು ಮೂಲಧನ ದೊರಕಿಸಿಕೊಡಬೇಕೆಂತ ಇದ್ದೇನೆಂತಲೂ ಹೇಳಿದ್ದಾರೆ. [illegible] ಸತ್ಯವಂತರಾಗಿ ಆತ್ಮತ್ಯಾಗ ಮಾಡಿದ ಕೆಲಸಗಾರರಾಗಿದ್ದಾರೆ. ಅದರ ರೀಗ ಸೋ[illegible] ಕುಟುಂಬದ ಖರ್ಚು ಹೆಚ್ಚಾಯಿತು. [illegible] ಪಾಶ್ಚಾತ್ಯರೀಯ ವಿದ್ಯೆಯು ಅವರಿಗೆ ತೃಪ್ತಿಯನ್ನುಂಟುಮಾಡಲಿಲ್ಲ. ತಮಗ ಸಂಬಳ ಹೆಚ್ಚಿಸಬೇಕಂತ ಕೇಳ ನಮು[illegible] ಬಂದು ಹೋರೆಯಾಗಲಿಕ್ಕೆ ಅವರಿಗೆ ಮನಸ್ಸಿಲ್ಲ. ಈ ತರದ ಮನಸ್ಸು ಎಲ್ಲಾ ಕೆಲಸಗಾರರಲ್ಲು ಹುಟ್ಟಿದರೆ ಸಾರ್ವಜನಿಕ ಕೆಲಸಗಳಿಗೆ ಹಿಂತು ಹೋಗಬೇಕಾಗುತ್ತದೆ. ಯಾಕೆಂದರೆ, ಸಾರ್ವಜನಿಕ ಕಾರ್ಯಗಳು ನಡಿಯುವುದು ಇಂಥ ಗಂಡಸರು ಮತ್ತು ಹೆಂಗಸರಿಂದಲೇ. ಸಾರ್ವಜನಿಕ ಕೆಲಸಗಾರರ ಸಂಬಳ ಹೆಚ್ಚಿಸಿದರೂ ಕೆಲಸ ನಿಲ್ಲಲೇಬೇಕಾಗುತ್ತದೆ. ಯಾಕೆಂದರೆ ಅದಕ್ಕೆ ಬೇಕಾದ ಹಣ ದೊರೆಯುವದಿಲ್ಲ.

ನಮ್ಮ ಆವರಣಕ್ಕೆ ಮೀರಿ ನಮ್ಮ ಅವಶ್ಯಕತೆಗಳು ವೇಗದಿಂದ ಹೆಚ್ಚುತ್ತಿವೆಯೆಂಬುದು ಇದೇ ಅಸಹಕಾರ ತತ್ವವನ್ನು ಯೋಚಿಸಿದ್ದಾಗಿದೆ. ಹೀಗೆ ನೋಡಿದರೆ ಅಸಹಕಾರವೆಂದರೆ ಜನರ ಸಂಗಡವಲ್ಲ. ನಮ್ಮನ್ನು ಅದರ ಘಟಸರ್ಪದ ಸುತ್ತಿನಲ್ಲಿ ಬಿಗಿದು ಹಿಡಿದು ನುಚ್ಚುನುರಿಯಾಗಿ ಮಾಡುತ್ತಿರುವ ಆ ಸರಕಾರ ಪದ್ಧತಿಯ ಸಂಗಡ ಅಸಹಕಾರ ಮಾಡಬೇಕಾದದ್ದಾಗಿದೆ. ದೇಶದ ಸಾಧಾರಣ ಸ್ಥಿತಿಗೆ ತಕ್ಕುದಾದದನ್ನು ಹೆಚ್ಚಿನ ದರ್ಜೆಗೆ ನಮ್ಮ ಜೀವನದ ಕ್ರಮವನ್ನು ಏರಿಸಿಬಿಟ್ಟಿತು. ಹಿಂದುಸ್ಥಾನವು ಬೇರೆ ಜನಾಂಗಗಳ ಮೇಲೆ ಅಧಿಕಾರ ನಡಿಸಿ ಅವರನ್ನು ಸುಲಿದು ಜೀವಿಸುತ್ತಿಲ್ಲವಾದ್ದರಿಂದ ಮಧ್ಯ ತರಗತಿಯ ಜನರ ಅಭಿವೃದ್ಧಿಯೆಂದರೆ ಕಡೆಯ ದರ್ಜೆಯ ಜನರ ನಾಶವೇ? ಚಿಕ್ಕ ಚಿಕ್ಕ ಗ್ರಾಮಗಳು ಸಂಪೂರ್ಣ ಬಲ ಹೀನತೆಯಿಂದ ಸಾಯುತ್ತಿದ್ದವು. ಈ ವಿಷಯಗಳಲ್ಲಿ ನಮ್ಮಲ್ಲಿ ಅನೇಕರಿಗೆ 1920 ರಲ್ಲಿ ಸ್ಪಷ್ಟವಾಗಿ ತೋರಿಬಂತು. ಈ ದುಸ್ಥಿತಿಯನ್ನು ಮುರಿಯುವ ಚಳವಳಿಯು ಇನ್ನೂ ಬಾಲ್ಯಾವಸ್ಥೆಯಲ್ಲೇ ಇದೆ. ಏನಾದರೂ ಆತುರದ ಕೆಲಸದಿಂದ ಅದರ ಬೆಳವಣಿಗೆಗೆ ನಾವು ಅಡ್ಡಿಯಾಗಬಾರದು.

ಪಾಶ್ಚಿಮಾತ್ಯ ಪದ್ಧತಿಗೆ ವಿರೋಧವಾದ ನಮ್ಮ ಕುಟುಂಬ ಪದ್ಧತಿಯಿಂದ ನಮ್ಮ ಅವಶ್ಯಕತೆಯನ್ನು ಬೇಕೆಂತ ಬೆಳೆಸಿಕೊಂಡದ್ದರಿಂದ ಅನುಸ ಕಷ್ಟವು ಇನ್ನಷ್ಟು ಕಠಿಣವಾಗಿ ತೋರುತ್ತದೆ. ನಮ್ಮ ಕುಟುಂಬಪದ್ಧತಿಯ ಒಳ್ಳೇ ಗುಣಗಳೆಲ್ಲಾ ಹೋಗಿ ಬರೇ ಕೆಟ್ಟಗುಣಗಳನ್ನು ಮಾತ್ರ ಉಳಿಸಿಕೊಂಡಿದೆ. ಅವರಿಂದ ಕೆಡಕು ಇನ್ನಷ್ಟು ಕೆಟ್ಟದ್ದಾಗಿದೆ.

ಆದ್ದರಿಂದ ನಮ್ಮ ತ್ಯಾಗಗಳು ದೇಶಕ್ಕೆ ಅವಶ್ಯವಿರುವ ತರದ್ದಾಗಿರಬೇಕು. ಸುಧಾರಣೆಗಳು ಹೊರಗಿನಿಂದ ಒಳಗಿನ ಸುಧಾರಣೆಯಾಗಬೇಕಾಗಿದೆ. ಕೆಟ್ಟುಹೋಗಿರುವ ಒಳಗಿನ ಸ್ಥಿತಿ ಇರುವಾಗ ಮೇಲೆ ಇಂಥ ಸೊಗಸಾದ ರಾಜ್ಯಾಡಳಿತ ಪದ್ಧತಿಯನ್ನು ಏರ್ಪಡಿಸಿಕೊಟ್ಟರೂ ಗೋರಿಗೆ ಮೇಲೆ ಸುಣ್ಣ ಬಡಿದು ಬೆಳ್ಳಗೆ ಮಾಡಿದಂತೆಯೇ ಸರಿ.

ಆತ್ಮಶುದ್ಧಿಯ ಕೆಲಸವು ಪೂರ್ಣವಾಗಬೇಕು. ಆತ್ಮತ್ಯಾಗದ ಸ್ವಭಾವವು ಹರಡಬೇಕು. ಈಗಾಗಲೇ ಕುಂಬಳ ತ್ಯಾಗವಾಗಿದ್ದರೂ, ದೇಶದ ಸ್ಥಿತಿಯ ಅವಶ್ಯಕತೆಯನ್ನು ನೋಡಿದರೆ ಈಗ ದೇಶದಲ್ಲಿ ಆಗಿರುವ ತ್ಯಾಗವು ಅತಿ ಸ್ವಲ್ಪವಾಗಿದೆ. ಕುಟುಂಬದಲ್ಲಿ ದೇಹದಾರ್ಢ್ಯವಿರುವ ಜನರು, ಗಂಡಸರೇ ಆಗಲೀ, ಹೆಂಗಸರೇ ಆಗಲೀ, ಕೆಲಸಮಾಡದೆ ಇದ್ದರೆ ಅಂಥವರ ಜೀವವನ್ನು ನಾವು ನಡಿಸಬಾರದು. ಅರ್ಥವಿಲ್ಲದ ಕೊಳ್ಳ ಪದ್ಧತಿಗಳಿಗಾಗಿ ಅಂದರೆ ಜಾತಿ ಊಟಗಳು, ಐಶ್ವರ್ಯವಂತರ ನೆಂಟಸ್ತಿಕೆಬೇಕೆಂತ ವಿಪರೀತ ಖರ್ಚು ಮಾಡುವದು ಮದುವೆ ಮುಂತಾದ್ದಕ್ಕೆ ಒಂದು ಕಾಸಾದರೂ ಖರ್ಚುಮಾಡಬಾರದು. ಪ್ರತಿಯೊಂದು ಮದುವೆಯೂ, ಸಾವೂ ಮನೆಯ ಯಜಮಾನನ ಮೇಲೆ ಅನಾವಶ್ಯವಾದ ಕಠಿಣ ಹೊರಹೇರುತ್ತದೆ. ಅಂಥಾದ್ದಕ್ಕಾಗಿ ಸ್ವಸುಖವನ್ನು ಬಿಡುವಂಥಾದ್ದನ್ನು ಆತ್ಮತ್ಯಾಗವೆಂತ ನಾವು ಎಂದೂ ಒಪ್ಪಬಾರದು. ಅಂಥಾ ಕೆಡಕುಗಳಿಗೆ ಧೈರ್ಯದಿಂದಲೂ ದೃಢಮನಸ್ಸಿನಿಂದಲೂ ಎದುರು ನಿಲ್ಲಬೇಕು.

ನಮಗೆ ಅತ್ಯಂತ ಹೆಚ್ಚು ಖರ್ಚಿಗೆ ದಾರಿಯಾದ ವಿದ್ಯೆಯೊಂದು ಇದೆ. ಲಕ್ಷಾಂತರ ಜನರಿಗೆ ಖರ್ಚಿಗೆ ಬೇಕಾದಷ್ಟು ಹಣವಿಲ್ಲದಿರುವಾಗ, ಲಕ್ಷಾಂತರ ಜನರು ಹೊಟ್ಟೆಗಿಲ್ಲದೆ ಸಾಯುತ್ತಿರುವಾಗ್ಗೆ ನಮ್ಮ ಸಂಬಂಧಿಕರಿಗೆ ಹೆಚ್ಚು ಖರ್ಚಿನ ವಿದ್ಯೆಕೊಡುವದೆಂದರೆ ವಿಪರೀತವಲ್ಲವೇ? ಕಠಿಣ ಅನುಭವದಿಂದ ಮನಸಿನ ವಿಕಾಸವಾಗುತ್ತದೆ. ಕಾಲೇಜುಗಳಲ್ಲಾಗಲಿ ಶಾಲೆಗಳಲ್ಲಾಗಲೀ ಅಗಿಯೇ ಆಗುತ್ತೆಂತ ಹೇಳಲಿಕ್ಕಾಗುವದಿಲ್ಲ. ನಮ್ಮಲ್ಲಿ ಕೆಲವರಾದರೂ ನಮಗೂ ನಮ್ಮವರಿಗೆ ಉಚ್ಚ ವಿದ್ಯೆ ಎಂತ ಹೆಸರಿಡುವ ವಿದ್ಯೆಯನ್ನು ಬೇಡವೆಂತ ಬಿಟ್ಟರೆ ನಿಜವಾದ ಉಚ್ಚವಿದ್ಯೆ ಕೊಡಲಿಕ್ಕೂ, ಪಡೆಯಲಿಕ್ಕೂ ಅನುಕೂಲ ದೊರೆಯುತ್ತದೆ. ಪ್ರತಿಯೊಬ್ಬ ವಿದ್ಯಾರ್ಥಿಯು ತನ್ನ ವಿದ್ಯೆಗೆ ಬೇಕಾದ ಖರ್ಚನ್ನು ತಾನೇ ಒದಗಿಸಿಕೊಳ್ಳಲು ದಾರಿ ಇಲ್ಲವೇ, ಇರಲಿಕ್ಕಿಲ್ಲವೇ? ಬಹುಶಃ ಇರಲಾರದು. ದಾರಿ ಇದೆಯೋ ಇಲ್ಲವೋ ಎಂಬದು ನಮ್ಮ ವಿಷಯಕ್ಕೆ ಸಂಬಂಧವಿಲ್ಲ. ಆದರೆ ವಿಪರೀತ ಖರ್ಚಿರುವ ಉಚ್ಚವಿದ್ಯೆಯ ದಾರಿಯನ್ನು ಬೇಡವೆಂತ ನಾವು ಬಿಡುವಾಗ ಮತ್ತು ಉಚ್ಚವಿದ್ಯೆಬೇಕೆಂಬ ಅಭಿಲಾಷೆಯು ಸ್ತೋತ್ರಾರ್ಹವಾದದ್ದಾಗಿರುವಾಗ ನಮ್ಮ ಆವರಣಕ್ಕೆ ತಕ್ಕಂತೆ ಸುಲಭ ಖರ್ಚಿನಿಂದ ಉಚ್ಚವಿದ್ಯೆ ಪಡೆಯಲು ಇರುವ ದಾರಿಯನ್ನು ಕಂಡುಹಿಡಿಯಲು ನಾವು ಪ್ರಯತ್ನಿಸಲಿಕ್ಕಿಲ್ಲವೇ? ಇಂಥಾ ಸಂಶಯಗಳನ್ನು ಪರಿಹರಿಸಲಿಕ್ಕೆ ಇರುವ ಸುಲಭ ಉಪಾಯ ಯಾವದೆಂದರೆ, ಲಕ್ಷಾಂತರ ಜನರಿಗೆ ಇಲ್ಲದಿರುವದು, ಅಲ್ಪಸ್ವಲ್ಪ ಸಂಖ್ಯೆಯವರಾದ ನಮಗೂ ಬೇಡವೆಂತ ತೀರ್ಮಾನಿಸುವದೇ. ನಮಗೆ ಬೇಡವೆಂತ ಹೇಳಲು ಬೇಕಾದ ಶಕ್ತಿಯು ಆಕಸ್ಮಾತ್ತಾಗಿ ಕ[illegible] ನಮಗೆ ಬಂದು ಬಿಡುವದಿಲ್ಲ. ಕೋಟ್ಯಾಂತರ ಜನರಿಗಿಲ್ಲದಿರುವ ಅನ್ನಗಳೂ ಅನುಕೂಲಗಳೂ ನಮಗೆ ಬೇಡವೆಂಬ ವರನೋಭಾವವನ್ನು ಮೊದಲು ತಯಾರಿಸಬೇಕು. ಅನಂತರ ಆ ಮನೋಭಾವಕ್ಕೆ ಸರಿಯಾಗಿ ನಮ್ಮ ಜೀವನ ಕ್ರಮವನ್ನು ಒದಗಾಯಿಸಿಕೊಳ್ಳಬೇಕು.

ಈ ತರದ ಆತ್ಮತ್ಯಾಗದ ದೃಢಮನಸ್ಸಿನ ಕೆಲಸಗಾರ

೧೦೦೦ ರೂಪಾಯಿಗಳ ಬಹುಮಾನ.

ಲೋಕಪ್ರಸಿದ್ಧವಾದ ಸಾಲಂಮಿಸ್ರಿ ಮುರಬ್ಬಾ.

ನಮ್ಮ ಟ್ರೇಡ್ ಮಾರ್ಕನ್ನು ನೋಡಿ ಈ ಔಷಧ ತೆಗೆದುಕೊಳ್ಳಿ

ಇದರ ಸೇವನೆಯಿಂದ ವೀರ್ಯವು ನೀರಿನಂತೆ ಇದ್ದರೂ, ಸ್ವಪ್ನೇಂದ್ರಿಯವಾದರೂ, ಸ್ತ್ರೀ ಸಂಘಕ್ಕೆ ಮೊದಲೇ ಸ್ಖಲನವಾದರೂ, ಮೂತ್ರದೊಂದಿಗೆ ಹೋಗುತ್ತಿದ್ದರೂ ದೋಷರಹಿತವಾಗಿ ಶರೀರಕ್ಕೆ ಆರೋಗ್ಯವನ್ನೂ ಸಾರ್ಥಕತೆಯನ್ನೂ ಆಯಸ್ಸು, ಬಲ, ತೇಜಸ್ಸು ಉಂಟು ಮಾಡುವದು. ಅಜೀರ್ಣ ಮಲಬದ್ಧತೆ, ಮಿದುಳಿನ ಬಲಹೀನತೆ, ಕ್ಷಯರೋಗ, ಸೊಂಟ ನೋವುಗಳಿಗೆ ಇದು ದಿವ್ಯ ಔಷಧವು. ಈ ಸಾಲಂಮಿಸ್ರಿ ಎಂಬುವದು ಕಾಬೂಲ್ ಕಂದಾಹಾರ ಪ್ರಾಂತ್ಯದಲ್ಲಿ ಬೆಳೆಯುತ್ತದೆ.

ಈ ಔಷಧದಿಂದ ಗುಣಹೊಂದಿರುವ ಅನೇಕ ಮಹನೀಯರು ತಾವಾಗಿಯೇ ಅನೇಕ ದೇಶಗಳಿಂದಲೂ ಆಫ್ರಿಕ, ಬರ್ಮ, ಪಿನಾಂಗ್, ಸಿಂಗಪೂರ್, ಸಿಲೋನ್, ಬೊಂಬಾಯಿ, ಕಲ್ಕತ್ತ, ಮದ್ರಾಸು ಮತ್ತು ಇಂಡಿಯಾದೇಶದಲ್ಲಿ ಎಲ್ಲಾ ಸ್ಥಳಗಳಿಂದಲೂ ನಮಗೆ ಯೋಗ್ಯತಾ ಪತ್ರಗಳನ್ನು ಕಳುಹಿಸಿರುವರು. ಇವುಗಳ ನಕಲನ್ನು ಯಾವಾಗಲೂ ತರಿಸಿ ನೋಡಬಹುದು. ಇವುಗಳು ನಿಜ ಎಂದು ನಿರ್ಧರಿಸುವವರಿಗೆ ಮೇಲೆ ಕಂಡ ಬಹುಮಾನವು ಕೊಡಲ್ಪಡುತ್ತೆ. ನಾವು ಹಾಗೆ ಕೂಡದೆ ನಿರಾಕರಿಸಿದಲ್ಲಿ ಕೋರ್ಟು ಮೂಲಕ ಅದನ್ನು ಪಡೆಯಬಹುದು. ೧ ಡಬ್ಬಿ ಔಷಧವನ್ನು ೧೫ ದಿನ ಸೇವಿಸಿದಲ್ಲಿ ಗುಣವು ಖಂಡಿತವಾಗಿ ತೋರಬಹುದು. ೩ ಅಥವಾ ೪ ಡಬ್ಬಿಗಳು ಬಹಳ ಅಶಕ್ತರಿಗೂ ಪೂರ್ಣವಾಗಿ ಗುಣವನ್ನುಂಟು ಮಾಡುವವು. ಹೆಸರು ವಿಳಾಸಗಳನ್ನು ವಿವರವಾಗಿ ಬರೆಯಬೇಕು. ಒಂದಾವರ್ತಿ ಉಪಯೋಗಿಸಿ ನೋಡಿ ನೋಡಿದಲ್ಲಿ ಖಾತ್ರಿ ಉಂಟಾಗುತ್ತೆ.

ಕ್ರಯ ಡಬ್ಬಿ ೧ಕ್ಕೆ ರೂ. ೩-೮-೦ ಅಂಚೆ ಚಾರ್ಜು ೧ರಿಂದ ೩ ಡಬ್ಬಿಗಳಿಗೆ ೦-೮-೦ ಆಣೆ. ಏಜಂಟರುಗಳು ಎಲ್ಲಾ ಸ್ಥಳಗಳಲ್ಲಿಯೂ ಅವಶ್ಯಕವಾಗಿರುತ್ತಾರೆ. ರಿಟರ್ನ್ ಬರುತ್ತಾಳ್ಳಬಹುದು ಅರ್ಜಿ ಕೊಡತಕ್ಕ ಕಾಲದಲ್ಲಿ ಈ ಪತ್ರಿಕೆಯ ಹೆಸರನ್ನು ಬರೆಯಬೇಕು.

ಟೆಲಿಗ್ರಾಫ್ ಅಡ್ರೆಸ್. ಮಿಸ್ರಿ, ಬೆಂಗಳೂರು ಸಿಟಿ.

ಡಿ. ಮನ್ನಾಲಾಲ್, ಡಿಲ್ಲಿ ನೇಟಿವ್ ವೈದ್ಯರು,
ಸಾಲಂಮಿಸ್ರಿ ಮುರಬ್ಬಾ ಡಿಪ್ಪೋ,
ಬೆಂಗಳೂರು ಸಿಟಿ.

12—2

ರ ನೂಡ್ದ ಸ್ವೆಸ್ವ, ಬಹಳವೊಡ್ಡ ಸ್ವಸ್ವವೂಂದು ಇಲ್ಲದೆ ನಮು ದಾಯದ ಅಭಿವೃದ್ಧಿಯು ಅಸಾಧ್ಯವೆಂತ ನನ್ನ ಅಭಿಪ್ರಾಯ ವಾಗಿದೆ. ಈ ಅಭಿವೃದ್ಧಿ ಇಲ್ಲದೆ ಇದ್ದರೆ ಸ್ವರಾಜ್ಯವೆಂಬ ಹೆಸರೇ ಇರುವದಿಲ್ಲ. ಬಡವರ ಕ್ಷೇಮಕ್ಕಾಗಿ ತಮ್ಮ ಸರ್ವಸ್ವವನ್ನು ತ್ಯಾಗಮಾಡಲು ತಯಾರಿರುವ ಜನರ ಸಂಖ್ಯೆ ಹೆಚ್ಚದಷ್ಟರಮಟ್ಟಿಗೆ ಸ್ವರಾಜ್ಯದ ಕಡೆಗೆ ನಾವು ಮುಂದೆ ಸಾಗಿಯೇವಷ್ಟೆ.

ಬೆಂಗಳೂರಿನಲ್ಲಿ ಶ್ರೀಯುತ ಶ್ರೀ ರಾಜ ಗೋಪಾಲಾಚಾರ್ಯರು ಖದ್ದರ್ ವಿಷಯವಲ್ಲಿ ಮಾಡಿದ ಭಾಷಣದ ಸಾರಾಂಶ.

ದೇಶಪಾಂಡೆ ಗಂಗಾಧರರಾಯರು,' ನಮ್ಮ ಜನರು ಎಷ್ಟು ಬಡವರಾಗಿದ್ದಾರೆ ಮತ್ತು ಇನ್ನೂ ಎಷ್ಟು ಹೆಚ್ಚಾಗಿ ಬಡವರಾಗುತ್ತಿದ್ದಾರೆ ಎಂಬುದನ್ನು ವಿವರಿಸಿ ಹೇಳಿದರು. ನನ್ನ ಸಂಗಡ ಬಂದರೆ ಬಡತನದ ಗೋಳನ್ನು ತೋರಿಸಿಕೊಡ್ತೇನೆ. ನಿಮಗೆ ನನ್ನ ಸಂಗಡ ಬರಲಿಕ್ಕೆ ಸಾಧ್ಯವಿಲ್ಲದಿದ್ದರೆ ನಮ್ಮ ದೇಶದ ಹೆಚ್ಚಿನ ಜನರಿಗೆ ದಿವಸಕ್ಕೆ ಎರಡು ಹೊತ್ತು ಹೊಟ್ಟೆತುಂಬ ಅನ್ನವಿಲ್ಲವೆಂತ ಹೇಳುವ ನನ್ನ ಮಾತನ್ನೇ ನಂಬಿ ಎಷ್ಟೇ ಕಾಲದ ವರೆಗೆ ಜನರಿಗೆ ಹೀಗೆ ಬದುಕಲಿಕ್ಕೆ ಸಾಧ್ಯವಿದೆ? ನಮ್ಮ ಜನಾಂಗವು ಕ್ರಮೇಣ ನಾಶವಾಗುತ್ತಾ ಇಲ್ಲವೇ? ಮೈಯಲ್ಲಿ ಬಟ್ಟೆಯೂ, ಹೊಟ್ಟೆತುಂಬ ಅನ್ನವೂ, ಮಾಡಲಿಕ್ಕೆ ಕೆಲಸವೂ ಇಲ್ಲದ ಹೆಂಗಸರು ಲಕ್ಷಾಂತರ ಇದ್ದಾರೆ. ಕೊಂಡುಕೊಳ್ಳಲಿಕ್ಕೆ ದುಡ್ಡೇ ಇಲ್ಲದ ಕಾರಣ ಬಟ್ಟೆ ಹಾಕದವರಿದ್ದಾರಾಗಿದೆ. ನೀವು ಅವರನ್ನು ನೋಡಲಿಕ್ಕೆ ಹೋದರೆ, ದೇವರು ಕೊಟ್ಟ ಕೈಯಿಂದ ಅವರ ನಾಚಿಕೆಯನ್ನು ಮುಚ್ಚಿಕೊಳ್ಳುತ್ತಾರೆ. ನಮ್ಮ ಹೆಂಗಸರು ಹೊಟ್ಟೆಗೆ ಅನ್ನವಿಲ್ಲದೆ ನತ್ತರೂ ಮೈಯು ಮುಚ್ಚಿಕೊಳ್ಳಲಿಕ್ಕೆ ಬಟ್ಟೆ ಇಲ್ಲದೆ ಇರಲಾರರೆಂತ ನಿಮಗೆ ಗೊತ್ತಿದೆ, ಅದರಿಂದ ಎಷ್ಟರ ಮಟ್ಟಿಗೆ ಬಡತನವಿದೆಯೆಂದು ನೀವೇ ಯೋಚಿಸಬಹುದು.

ಹಿಂದುಸ್ಥಾನದ ಜೀವದಂತಿರುವ ಗ್ರಾಮಗಳು ನಾಶವಾಗುತ್ತಲಿವೆ. ಗ್ರಾಮವಾಸಿಗಳು ಗ್ರಾಮದಲ್ಲಿ ಬಡವರಾಗುತ್ತಾ ಆಗುತ್ತಾ ಪಟ್ಟಣಕ್ಕೆ ಕಡಿಮೆ ಕಡಿಮೆ ಸಂಬಳಕ್ಕೆ ಕೆಲಸಕ್ಕೆ ಹೋಗುತ್ತಾರೆ. ಮೂರಾಣೆಗೂ ಕೆಲಸ ಮಾಡುವಂಥ ಜನರು ಕೆಲಸವಿದೆಯೆಂತಾದರೆ 0—1—6 ಆಣೆಗೂ ಕೆಲಸ ಮಾಡಲಿಕ್ಕೆ ತಯಾರಾಗುತ್ತಾರೆ. ಗ್ರಾಮಗಳಲ್ಲಿ ಕ್ರಮ ಬಂದಂತೆ ಪಟ್ಟಣಗಳಲ್ಲಿ ಕೂಲಿ ಕಡಿಮೆಯಾಗುತ್ತಾ ಬರುತ್ತದೆ. ಪಟ್ಟಣವು ಸ್ವಲ್ಪ ಬಡವಾಗಬಾರದೆಂತಾದರೆ ಒಂದು ಗ್ರಾಮವು ಹಾಳಾಗಲೇಬೇಕು. ವಾರ್ಡ್‌ಕಚೇರಿ ಇವರ ಲೆಖ್ಖದ ಮೇರೆ ಹಿಂದುಸ್ಥಾನದ ಜನರ ಸರಾಸರಿ ಉತ್ಪತ್ತಿ ವರ್ಷಕ್ಕೆ ಒಬ್ಬನಿಗೆ ಒಟ್ಟಿಗೆ ಮೂವತ್ತು ರೂಪಾಯಿ ಮಾತ್ರವಾಗಿದೆ. ಅಂದರೆ ತಿಂಗಳಿಗೆ ರೂಪಾಯಿ 2—8—0 ಮಾತ್ರವಾಯಿತು. ಇದರಲ್ಲಿ ಒಂದು ರೂಪಾಯಿಗೆ ಅಕ್ಕಿ, ಒಂದು ರೂಪಾಯಿಗೆ ಇತರ ಸಾಮಾನುಗಳು, 0—8—0 ಗೆ ಬಟ್ಟೆ ಕೊಂಡುಕೊಂಡು ಜೀವಿಸುವವರ ಜೀವನವು ಹೇಗಿರಬೇಕು? ಈ ಕಷ್ಟ ನಿವಾರಣೆಗೆ ನಮ್ಮ ಮುಂದಾಳು ಚರಖವೆಂಬ ಉಪಾಯವನ್ನು ನಿರ್ಮಿಸಿದ್ದಾರೆ. ಈ ಪ್ರಪಂಚದಲ್ಲಿ ಕೆಲಸವಿಲ್ಲದೆ ಆಹಾರ ದೊರೆಯುವುದಿಲ್ಲ. ಅದರಿಂದ ಕೆಲಸವಿಲ್ಲದಿರುವಾಗ ಚರಖ ತಿರುಗಿಸಬೇಕು. ಚರಖವೆಂದರೆ ಕೆಲಸಮಾಡಲಿಕ್ಕಿರುವ ಅನುಕೂಲ. ಹಿಂದುಸ್ಥಾನವು ಯಾತಕ್ಕೆ ಬಡತನದಲ್ಲಿದೆಯೆಂದರೆ, ಜನರು ಸೋಮಾರಿಗಳಾದ್ದರಿಂದಲ್ಲ—ಅವರಿಗೆ ಕೆಲಸವಿಲ್ಲದ್ದರಿಂದ. ಮಳೆ ಬಿದ್ದರೆ ರೈತರಿಗೆ ಸ್ವಲ್ಪ ಕೆಲಸ ದೊರೆಯುತ್ತದೆ, ಮಳೆ ಬೀಳದಿದ್ದರೆ ಗತಿಯೇನು? ಮಳೆ ಬಿದ್ದರೂ ವರ್ಷವೆಲ್ಲಾ ಕೆಲಸವಿರುವುದಿಲ್ಲ. ಅದರಿಂದ ಅವರ ಉತ್ಪತ್ತಿಯು ಕಡಿಮೆ ಕಡಿಮೆಯಾಗುತ್ತಾ ಬರುತ್ತದೆ.

ನೀವು ಪ್ರತಿದಿವಸವೂ ಬೆಳಗಿನ ಹೊತ್ತು ಈ ನಮ್ಮ ಹಿಂದುಸ್ಥಾನದಲ್ಲಿ ಒಂದು ಲಕ್ಷ-ಒಂದು ಜೀವ-ಇದೆಯೆಂತ ನೆನಸಿಗೆ ತಂದುಕೊಳ್ಳಬೇಕು. ಈಗ ನನ್ನ ಪ್ರಯತ್ನದಿಂದ ಎರಡು ಸಾವಿರ ಚರಖಗಳು ತಿರುಗುತ್ತಲಿವೆ. ಇವು ಎರಡು ಸಾವಿರ ಕುಟುಂಬಗಳಿಗೆ ಕೆಲಸ ಕೊಡುತ್ತಿವೆ. ಎರಡು ಸಾವಿರ ಕುಟುಂಬಗಳಿಗೆ ಆಹಾರ ದೊರಕಿಸಿ ಕೊಡುವುದರಿಂದ ಇವು ಎರಡು ಸಾವಿರ ಲಕ್ಷ್ಮಿಗಳಂತಿವೆ. ಇದು ನಿಮಗೆ ವಿಚಿತ್ರವಾಗಿ ಕೇಳಬಹುದು. ಆದರೆ ಇವುಗಳಿಂದ ಆಹಾರ ದೊರಕಿಸಿಕೊಳ್ಳುವ ಕುಟುಂಬದವರು ಇವನ್ನು ಲಕ್ಷ್ಮಿಯಂತೆ ಪೂಜಿಸುತ್ತಾರೆ. ಆ ವರ ಪೂಜೆಯಲ್ಲಿ ಭಾಗಿಗಳಾಗುವದೇ ಒಂದು ಸಂತೋಷ. ಈ ಸಂತೋಷದಲ್ಲಿ ನೀವು ಭಾಗ ತೆಗೆದುಕೊಳ್ಳಬೇಕೆಂತ ನನ್ನ ಕೋರಿಕೆಯಾಗಿದೆ.

ನನ್ನ ಮುಂದೆ ಇರುವ ಯುವಕರೆಲ್ಲಾ ನಿಮ್ಮ ನಿಮ್ಮ ಮನೆಬಿಟ್ಟು ನನ್ನನ್ನು ಹಿಂಬಾಲಿಸಬೇಕೆಂತ ನಾನು ಹೇಳುವದಿಲ್ಲ. ನೀವು ನನ್ನ ಸಂಗಡ ಕೆಲಸಮಾಡಲು ಪ್ರಾರಂಭಿಸದಿದ್ದರೆ ನಾನೊಬ್ಬನೇ ಕೆಲಸಮಾಡುವದರಲ್ಲಿ ಸಂತೋಷವಿಲ್ಲ. ಸಾವಿರಾರು ಜನರು ಚರಖವನ್ನು ತಿರುಗಿಸಿದರೂ ಅದರಿಂದ ಬರುವ ನೂಲಿನ ಬಟ್ಟೆಯನ್ನು ಕೊಂಡುಕೊಳ್ಳುವವರಿಲ್ಲದೆ ಇದ್ದರೆ ಚರಖ ತಿರುಗಿಸಿದರೂ ಅದರಿಂದ ತಿರುಗಿಸುವವರಿಗೆ ಆಹಾರ ದೊರಕುವದಿಲ್ಲ, ಚರಖಕ್ಕೂ ಲಕ್ಷ್ಮಿಗೂ ಮಧ್ಯ ಈ ಒಂದು ಅಡ್ಡಿ ಇದೆ. ಈ ಅಡ್ಡಿಯನ್ನು ಹೋಗಲಾಡಿಸಲು ಬೆಂಗಳೂರಿನ ಜನರು ಸಹಾಯ ಮಾಡಬಹುದು. ಅವರು ಮಾಡಿದ ಕೆಲಸಕ್ಕೆ ಪ್ರತಿಫಲವಾಗಿ ಆಹಾರ ಬೇಕೆಂತ ಕೇಳುವಾಗ ನಾನು ನಿಮ್ಮನ್ನು ಕೇಳಬಹುದು. ಅವರು ಮಾಡಿದ ನೂಲಿನ ಬಟ್ಟೆಯನ್ನು ನೀವೆಲ್ಲರೂ ಹಾಕಲಿಕ್ಕೆ ಪ್ರಾರಂಭಿಸಿದರೆ ಅದರಿಂದ ದೊರಕುವ ಹಣದಿಂದ ಆ ಬಡವರಿಗೆ ಆಹಾರ ಕೊಡಬಹುದು. ನಿಮ್ಮ ಮಧ್ಯದಲ್ಲಿ ಒಂದು ಖದ್ದರ್ ಭಂಡಾರವನ್ನು ತೆರೆದು ನಿಮ್ಮ ಕೆಲವಾದ ಬಟ್ಟೆಯನ್ನು ಬಿಟ್ಟು ನನ್ನ ಸೊಗಸಾದ, ದಪ್ಪವಾದ ಬಟ್ಟೆಯನ್ನು ಹಾಕಿಕೊಳ್ಳಿ ಎಂತ ಬೋಧಿಸಬೇಕಾಗಿದೆ. ನೀವು ಬಟ್ಟೆಯನ್ನು ಕೊಂಡು ಕೊಡುವ ದುಡ್ಡಿನಿಂದ ನೂಲು ಮಾಡಿದ ಬಡಜನರ ಹೊಟ್ಟೆಗೆ ಅನ್ನ ಕೊಡಬಹುದು.. ದಿವಸಕ್ಕೆ ಒಂದೇ ಒಂದಾಣೆಯನ್ನು ಕೊಡುವ ಚರಖದಿಂದ ಯಾರಾದರೂ ಪ್ರಯೋಜನ ಹೊಂದಿಯಾರೋ ಎಂತ ನಾನು ಸಂಶಯ ಪಟ್ಟಿದ್ದೆ. ಆದರೆ ಈಗ ಏಳುಸಾವಿರ ಚರಖಗಳಿಂದ ಪ್ರಯೋಜನ ಹೊಂದುತ್ತಿರುವ ನನಗೆ ಗೊತ್ತಿದೆ. ನೀವು ಕೈನೂಲು ಬಟ್ಟೆಯನ್ನು ಕೊಂಡುಕೊಳ್ಳುತ್ತೀರಿ ಎಂಬ ಭರವಸೆಯಿಂದ ಬಡವರು ನೂಲುಮಾಡುತ್ತಾರೆ. ಖಾದಿ ಧರಿಸುವವರ ಸಂಗಡ ನಾನು ಇರಬೇಕೆಂತ ಇಲ್ಲ. ನಿಮ್ಮಂಥ ಖಾದಿ ಧರಿಸುವವರ ಸಂಗಡ ನನ್ನ ಕೆಲಸವಾಗಿದೆ. ನೀವು ಬಟ್ಟೆ ಕೊಳ್ಳುವಂತೆ ಮಾಡಿ ಆ ದುಡ್ಡಿನಿಂದ ಕೈನೂಲು ಮಾಡಿದ ಬಡವರಿಗೆ ಆಹಾರ ಕೊಡುತ್ತೇನೆ. ಏಳುಸಾವಿರ ಅಲ್ಲ 50 ಸಾವಿರ ಕೈನೂಲುಮಾಡುವ ಜನರಿದ್ದಾರೆ. ಅವರಿಗೆಲ್ಲಾ ಸಹಾಯಮಾಡಬೇಕಾದರೆ ಎಲ್ಲರೂ ಕೈನೂಲು ಬಟ್ಟೆಯನ್ನು ಧರಿಸಬೇಕು.

ನಿಮಗೆ ಬಡವರ ಮೇಲೆ ನಿಜವಾದ ಪ್ರೀತಿ ಇದ್ದರೆ ದೇವರು ಮೆಚ್ಚುವಂಥ ಪ್ರೀತಿ ಇದ್ದರೆ ಖಾದಿ ಬಟ್ಟೆಯನ್ನು ಧರಿಸಬೇಕು. ಒಳ್ಳೇ ಹವಕ್ಕೂ ಕೆಟ್ಟ ಹವಕ್ಕೂ ಆಗುವ ಬಟ್ಟೆಯಾಗಿದೆ. ಮುಂಚಿನಂತೆ ಬಿಳುಪಾದ ಮೃದುವಾದ ಬಟ್ಟೆಯಾಗಿದೆ. ಒಳ್ಳೇ ಹತ್ತಿಯಿಂದ ಆಗುವದಾದ್ದರಿಂದ ಬಾಳಿಗೆ ಇರುವ ಬಟ್ಟೆಯಾಗಿದೆ. ನೀರಿನಲ್ಲಿ ನೆನಸಿ ಬಿಸಿಲಿನಲ್ಲಿ ಒಣಗಿಸಿದರೇನೇ ಶುದ್ಧವಾಗುವ ಬಟ್ಟೆಯಾಗಿದೆ. ನೀವೆಲ್ಲರೂ ಶುದ್ಧ ಖಾದಿಯನ್ನು ಧರಿಸಿದಾಗ ನಿಮ್ಮ ಬಡ ಹೊಟ್ಟೆಗಿಲ್ಲದ ಸಹೋದರ, ಸಹೋದರಿಯರಿಗೆ ಅನ್ನ ಕೊಟ್ಟು ಅಮೂಲ್ಯ ಗುರುತನ್ನು ನೀವು ಮೈ ಮೇಲೆ ಹಾಕಿಕೊಂಡರೆ ಹಿಂದುಸ್ಥಾನದ ಧನಧಾನ್ಯ ಸಮೃದ್ಧಿಯುಳ್ಳದ್ದಾಗುತ್ತದೆ. ಚರಖ ತಿರುಗಿಸುವವರೆಲ್ಲರೂ ನಿಮಗಾಗಿ ಕೆಲಸಮಾಡುತ್ತಿದ್ದಾರೆಂತಲೂ ನಿಮ್ಮಿಂದ ಅವರಿಗೆ ಆಹಾರ ದೊರೆಕೀತೆಂತ ನಿರೀಕ್ಷಿಸುತ್ತಲೂ ಇದ್ದಾರೆಂತ ನೆನಪಿನಲ್ಲಿಡಿ. ಖಾದಿ ಭಂಡಾರವೆಂಬ ಧರ್ಮವಮಾಡುವಲ್ಲಿಗೆ ಒಂದು ಬಡವರಿಗೆ ಅನ್ನ ಕೊಡಿ, ನಿಮಗೆ ಬೇಕಾದ ಬಣ್ಣದ ಬಟ್ಟೆ ಸಿಕ್ಕುವವರೆಗೆ ಕಾಯಬೇಡಿರಿ. ಯಾಕೆಂದರೆ ಆ ವರೆಗೆ ಬಡವರ ಹಸಿವೆಯನ್ನು ತಡೆದು ನಿಲ್ಲಲಿಕ್ಕೆ ಸಾಧ್ಯವಿಲ್ಲ. ರೇಶ್ಮೆ ಬಟ್ಟೆಗಳನ್ನೂ, ಪರದೇಶಿ ಬಟ್ಟೆಗಳನ್ನೂ ಧರಿಸುವದೇ ಒಂದು ಗೌರವವೆಂಬ ತಪ್ಪು ಅಭಿಪ್ರಾಯವಿರುವ ನಿಮ್ಮ ಹೆಂಗಸರಿಗೆ ಖಾದಿ ಬಟ್ಟೆಯನ್ನು ಧರಿಸುವದೇ ಗೌರವವೆಂಬ ಭಾವನೆಯನ್ನು ಹುಟ್ಟಿಸಿ. ಆಗ ದೇವರು ನಮಗೂ, ನಮ್ಮ ದೇಶಕ್ಕೂ ಸಹಾಯ ಮಾಡುತ್ತಾರೆ.

ಗೌಡ ವಿದ್ಯಾಭಿವೃದ್ಧಿನಿ ಸಂಘ.

ಈ ಸಂಘದ 1925—26 ನೇ ಸಂವತ್ಸರದ ವಾರ್ಷಿಕ ಸಭೆಯು ಮೇ ತಾರೀಕು 23 ರಲ್ಲಿ ಲೆಪ್ಟನಂಟ್ ಬಿಂಕಚೆ ರಾಮಪ್ಪನವರ ಅಧ್ಯಕ್ಷತೆಯಲ್ಲಿ ಪೊನ್ನಂಪೇಟೆ ನಾಡು ಕೈಕೇರಿ ಗ್ರಾಮದ ಪಡಿಕಲ್ಲು ಪೂವಯ್ಯನವರ ಮನೆಯ ಬಳಿಯಲ್ಲಿ ನಡೆಯಿತು.. ಸಭೆಯಲ್ಲಿ ನೆರೆದಿದ್ದವರಿಗೆಲ್ಲಾ ಸ್ವಾಗತವಾದ ನಂತರ ಸಂಘದ ವರ್ಷಾವಧಿ ರಿಪೋರ್ಟು ಕಾರ್ಯದರ್ಶಿಯವರಿಂದ ಓದಲಾಯಿತು.

ಅನಂತರ ಸಭೆಯ ಅಧ್ಯಕ್ಷರು ಮಾಡಿದ ಭಾಷಣದ ಸಾರಾಂಶ.—

ಈ ದಿವಸದ ಮುಖ್ಯ ಸಭೆಗೆ ನನ್ನನ್ನು ಅಧ್ಯಕ್ಷನನ್ನಾಗಿ ಮಾಡಿದಕ್ಕೆ ನನ್ನ ಮನಃಪೂರ್ವಕ ವಂದನೆಗಳನ್ನು ನಿಮಗೆ ಅರ್ಪಿಸುವ ಮೊದಲೇ ನಾನು ಅವಶ್ಯವಾಗಿ ಹೇಳಬೇಕಾದುದೇನೆಂದರೆ—ಇಂಥಾ ಸಭೆಯ ಅಧ್ಯಕ್ಷಸ್ಥಾನವನ್ನು ನನಗಿಂತಲೂ ಅನುಭವಶಾಲಿಗಳಾದ ನಮ್ಮ ಹಿರಿಯರು ವಹಿಸಿಕೊಳ್ಳಬೇಕಾಗಿತ್ತು. ಆದರೆ ಈ ಕೆಲಸವು ನನ್ನ ಕರ್ತವ್ಯದ ಒಂದು ಭಾಗವೆಂದು ನಾನು ತಿಳಿದಿರುವೆನು. ಆದುದರಿಂದಲೇ ನಿಮ್ಮ ವಿಶ್ವಾಸಕ್ಕೆ ಒಳಗಾದ ನಾನು ಇನ್ನೊಂದಾವೃತ್ತಿ ನನ್ನ ವಂದನೆಗಳನ್ನು ಅರ್ಪಿಸಿ ಈ ಸಭೆಯ ಅಧ್ಯಕ್ಷಸ್ಥಾನವನ್ನು ವಹಿಸಿಕೊಳ್ಳುತ್ತೇನೆ.

ವಿದ್ಯಾಭಿವೃದ್ಧಿ ವಿಷಯದಲ್ಲಿ ಆಗ್ಗೆ ಕೆಲವು ವರ್ಷಗಳಿಂದ ನಾವೆಲ್ಲರು ಎಷ್ಟೆಷ್ಟೋ ಕೂಂದರಗಳನ್ನು ತೆಗೆದುಕೊಳ್ಳುತ್ತೇವೆ. ಹೀಗೆ ಯಾತಕ್ಕೋಸ್ಕರ ತೆಗೆದುಕೊಳ್ಳುತ್ತೇವೆ ಎಂಬ ಸಂಗತಿ ಎಲ್ಲಾ ಮನುಷ್ಯರು ತಿಳಿದಿರುವ ವಿಷಯವಾಗಿದೆ. ಗೌಡ ಜನರ ವಿದ್ಯಾಭಿವೃದ್ಧಿಯು ಒಂದು ಹೊಸ ವಿಷಯವಲ್ಲ. ಆದುದರಿಂದ ಆ ವಿಷಯ ಹೆಚ್ಚಿಗೆ ನಾನು ವಿವರಿಸಬೇಕಾದ ಅವಶ್ಯವಿಲ್ಲ. ವಿದ್ಯಾಫಂಡಿನ ಸಹಾಯ ವಿನಹ ವಿದ್ಯಾರ್ಥಿಗಳು ತಮಗೆ ತಂದೆ ತಾಯಿಗಳ ಸಹಾಯದಿಂದಲೇ ತಮ್ಮ ವಿದ್ಯೆಯನ್ನು ಪೂರೈಸುವುದು ಕಷ್ಟ. ಸಂಘದ ಬಂಡವಾಳವು ಹೆಚ್ಚಬೇಕಾದರೆ ಮೆಂಬರುಗಳ ಉತ್ಸಾಹ ಅವಶ್ಯ. ಆದುದರಿಂದ ಗೌಡನಾದ ಪ್ರತಿಯೊಬ್ಬನು ತನ್ನ ಶಕ್ತ್ಯಾನುಸಾರ ಮನಃಪೂರ್ವಕ ಧನ ಸಹಾಯಮಾಡಲೇ ಬೇಕು. ಈ ವಿಷಯ ಸಂಘದ ಅಧ್ಯಕ್ಷರು ಪ್ರಸ್ತಾಪಿಸಿದರು.

ನನ್ನ ಭಾಷಣವನ್ನು ಪೂರೈಸುವದರೊಳಗಾಗಿ ಸಭಿಕರಿಗೆ ನಾನು ಒಂದು ವಿಷಯ ಹೇಳಬೇಕಾಗಿದೆ. ಅದು ಕೊಡಗು ಟೆರಿಟೋರಿಯಲ್ ಪೋರ್ಸ್ ವಿಷಯ.—ಟೆರಿಟೋರಿಯಲ್ ಪೋರ್ಸಿಗೆ ಪ್ರತಿಯೊಬ್ಬ ಗೌಡ ಯುವಕನು ಸೇರಲೇ ಬೇಕು. ಹಾಗೆ ಸೇರುವುದರಿಂದ ವಿದ್ಯಾಹೀನನಾದ ಗೌಡನಾದರೂ ಆತನಿಗೆ ಕಾಯ ಶಕ್ತಿ, ಮನ ಶಕ್ತಿ, ನೀತಿ ಮಾರ್ಗ ಮತ್ತು ಶಿಕ್ಷಣದ ಕ್ರಮ ಇವು ಇಷ್ಟು ಹೊಂದಬಹುದಾಗುತ್ತವೆ. ಈ ವರೆಗೆ ಟೆರಿಟೋರಿಯಲ್ ಪೋರ್ಸಿಗೆ ನಮ್ಮ ಜನಾಂಗದವರು ಸೇರಿದ್ದನ್ನು ನೋಡಿದರೆ ನಮಗೆಲ್ಲ ಹಿತಕರವಾಗಿ ಕಾಣುತ್ತದೆ. ಆದರೆ ಅಷ್ಟರಲ್ಲಿ ನಾವು ತೃಪ್ತಿಪಡಬೇಕಾಗಿಲ್ಲ. ನಮ್ಮವರಲ್ಲಿ ಇನ್ನೂ ಎಷ್ಟೋ ಜನರು ಸೇರಲಿಕ್ಕೆ ಯೋಗ್ಯತೆಯುಳ್ಳವರು ಇದ್ದಾರೆ. ಅವರೆಲ್ಲರನ್ನೂ ಸೇರುವ ಹಾಗೆ ಮಾಡಬೇಕಾಗಿ ನಾನು ಈ ಸಭೆಯಲ್ಲಿ ಕೇಳಿಕೊಳ್ಳುತ್ತೇನೆ. ಈಗ ನಮ್ಮ ಕಂಪೆನಿ ವಿಷಯ ಘನ ಸರಕಾರದವರು ಸಂತೋಷ ಪಟ್ಟಾಗ್ಯೂ ನಮ್ಮ ಜನಾಂಗದವರು ಇನ್ನೊಂದು ಕಂಪೆನಿಯನ್ನು ನಿರ್ಮಿಸುವುದಕ್ಕೆ ತಯಾರಾಗಿದ್ದರೆ ಸರಕಾರದವರ ಉತ್ಸಾಹವು ನಮಗೆ ಸಮನಾಗಿ ಸಿಕ್ಕುವದಕ್ಕೆ ಯಾವ ಅಡ್ಡಿಯೂ ಇಲ್ಲ. ಹೀಗೆ ಮಾಡಬೇಕಾದರೆ ಪೂರ್ಣ ಮನಃಪೂರ್ವಕ ಸಹಾಯವು ಬೇಕು. ಈ ಸಹಾಯ ನೀವೆಲ್ಲರೂ ಕೊಡುವಿರಾಗಿ ಪೂರ್ಣ ನಂಬಿರುತ್ತೇನೆ. ಅಧ್ಯಕ್ಷರ ಭಾಷಣವಾದ ಕೂಡಲೆ ಸಂಘದ ಅಧ್ಯಕ್ಷರಾದ ಮ. ರಾ. ರಾ. ನಿಡ್ಯಮಲೆ ಬೆಳ್ಯಪ್ಪನವರು ಈ ಕೆಳಗಿನ ಭಾಷಣವನ್ನು ಮಾಡಿದರು.

ನಾವು ವಿದ್ಯೆಯಲ್ಲಿ ಬಹಳ ಹಿಂದೆ ಬಿದ್ದಿದ್ದೇವೆ. ಹೀಗೆ ಹಿಂದೆ ಬಿದ್ದಿರುವುದರಿಂದ ನಮಗೆ ಸರಕಾರದಿಂದ ಯಾವ ತರದ ಮರ್ಯಾದೆಯೂ ದೊರೆಯುವುದಿಲ್ಲ. ನಾವು ಸರಿಯಾಗಿ ವಿದ್ಯೆಯನ್ನು ಸಂಪಾದಿಸದೆ ಹೋದರೆ ನಮಗೆ ಈ ದೇಶದಲ್ಲಿ ಜೀವನವೇ ಕಷ್ಟವಾದೀತು. ಅಂದರೆ ನಾವು ಈ ದೇಶವನ್ನೇ ಬಿಟ್ಟು ಹೋಗಬೇಕಾದೀತು. ನಾವು ಅದನ್ನು ಪ್ರಯತ್ನ ಪಟ್ಟು ನಮ್ಮಲ್ಲಿ ಕೆಲವು ಮಂದಿಯಾದರೂ ದೊಡ್ಡ ದೊಡ್ಡ ಸರಕಾರಿ ಉದ್ಯೋಗಗಳನ್ನು ಪಡೆಯುವಂತೆ ಮಾಡಬೇಕು. ಹಾಗೆ ಮಾಡಿದರೆ ಸರಕಾರದವರು ನಮ್ಮನ್ನು ಮರೆಯದೆ ನಮಗೂ ಇತರ ಜನಾಂಗಗಳಿಗೆ ದೊರಕುವ ಪ್ರತಿಫಲವನ್ನು ದೊರಕಿಸಿ ಕೊಟ್ಟಾರು. ಕೊಡಗು ಕೌನ್ಸಿಲಿನಲ್ಲಿ ನಮಗೆ ಸ್ಥಳ ದೊರೆಯದೆ ಹೋದದ್ದಕ್ಕೆ ಸರಕಾರದವರು ವ್ಯಸನವನ್ನು ಸೂಚಿಸುತ್ತಾರೆ. ಯಾಕೆಂದರೆ ಈಗ ಈ ನಮ್ಮ ಸಂಘದ ಪರ್ವಾಡುಗಳಿಂದ ಗೌಡುಗಳು ಎಲ್ಲವ ಒಂದು ಜನಾಂಗವಿದೆ. ಅವರಿಗೆ ತಕ್ಕಮಟ್ಟಿಗಾದರೂ ಉತ್ಸಾಹ ಕೊಡಬೇಕೆಂಬುದು ಸರಕಾರದವರ ಮನಸ್ಸಿಗೆ ತಗಲಿದೆ. ನಾವು ಕೆಲವು ಸರಕಾರಿ ಉದ್ಯೋಗಗಳನ್ನಾದರೂ ಪಡಕೊಂಡರೇನೇ ಸರಕಾರದಲ್ಲಿ ನಡೆಯುವ ಕೆಲಸಗಳು ಮತ್ತು ರಾಜ್ಯಭಾರ ಕ್ರಮಗಳು ತಿಳಿಯುವವೇ ಹೊರತು ಅನ್ಯಥಾ ಎಂದಿಗೂ ಸಾಧ್ಯವಿಲ್ಲ. ಇಂಥಾ ಸಾಧನೆಯು ವಿದ್ಯೆಯ ಮೂಲಕವಲ್ಲದೆ ಬೇರೆ ಯಾವ ರೀತಿಯಿಂದಲೂ ಸಾಧ್ಯವಿಲ್ಲ. ಆದುದರಿಂದ ಕೈಲಾದಷ್ಟು ಸಹಾಯ ಮಾಡಿ ವಿದ್ಯಾ ಫಂಡನ್ನು ದೊಡ್ಡದು ಮಾಡಿ ವಿದ್ಯಾಭ್ಯಾಸದ ಏಳಿಗೆಯನ್ನು ಹೆಚ್ಚಿಸಬೇಕೆಂದು ನಾನು ನಿಮ್ಮೆಲ್ಲರನ್ನು ಕೇಳಿಕೊಳ್ಳುತ್ತೇನೆ. ಗೌಡ ತಂದೆ ತಾಯಿಗಳೆಲ್ಲರೂ ತಮ್ಮ ತಮ್ಮ ಮಕ್ಕಳಿಗೆ ಶಾಲೆಗೆ ಕಳುಹಿಸಿ ವಿದ್ಯೆಯನ್ನು ಕಲಿಸಲು ಪ್ರಯತ್ನಿಸಿ ಅವರನ್ನು ಮುಂದಕ್ಕೆ ಬರುವಂತೆ ಮಾಡಬೇಕೆಂದು ಎಲ್ಲರನ್ನೂ ಬೇಡಿಕೊಳ್ಳುತ್ತೇನೆ.

ನಮ್ಮ ಈ ದಿನದ ಅಧ್ಯಕ್ಷರು [illegible] ಪಟೇಲರು [illegible] ಆದ ಮೇಲೆ ಇಂಡಿಯಾ ಸರಕಾರದಲ್ಲಿ [illegible] ಮರ್ಯಾದೆ [illegible] ದೊರಕಬೇಕಾದರೆ ಎಷ್ಟು ಸುಲಭ ದಾರಿಯೆಂತ ನಮ್ಮ ಟೆರಿಟೋರಿಯಲ್ ಪೋರ್ಸನ್ನು ಅಭಿಪ್ರಾಯಪಟ್ಟಿರುವರು. ನಮ್ಮ ನೆರೆಹೊರೆಯ [illegible] ಕಂಪೆನಿಯವರು ಬಹಳ ಮರ್ಯಾದೆಯನ್ನು ಗಳಿಸಿದ್ದಾರೆ. ಆ ವರ್ಷದ [illegible] ಸ್ಪೋರ್ಟ್ಸ್‌ನಲ್ಲಿ ನಮ್ಮ ಜನಾಂಗದ ಕಂಪೆನಿಯು [illegible] ಬಟ್ಟಲುಗಳನ್ನು ತರಲು [illegible] ನಮಗೆಲ್ಲರಿಗೂ ಬಹಳ ಸಂತೋಷವನ್ನುಂಟುಮಾಡಿದೆ. ಈ ಕಾರಣದಿಂದ ಗೌಡರುಗಳು ಎರಡು ಕಂಪೆನಿಯನ್ನು ಇಟ್ಟರೆ ಉತ್ತಮವಾದೀತೆಂದು ನಾನು ಅಭಿಪ್ರಾಯಪಡುತ್ತೇನೆ. ಈ ರಿಜಿಮೆಂಟಿಗೆ ಸೇರುವುದರಿಂದ ನಾವೇನೂ ಆಗಲೇ ಯುದ್ಧಕ್ಕೆ ಹೋಗಬೇಕಾದುದಿಲ್ಲ. ಯಾವಾಗಲೂ ನಾವು ದೇಶವನ್ನೂ ಸರಕಾರವನ್ನೂ ಕಾಪಾಡಲು ಸನ್ನದ್ಧರಾಗಿದ್ದೇವೆ ಎಂಬ ನಮ್ಮ ರಾಜಭಕ್ತಿಯನ್ನು ಈ ರಿಜಿಮೆಂಟಿನ ಮೂಲಕ ತೋರ್ಪಡಿಸಬೇಕಾದುದು. ಈ ರಿಜಿಮೆಂಟಿಗೆ ಸೇರುವದರ ಮುಖ್ಯೋದ್ದೇಶ. ಹೀಗೆ ಸೇರುವುದರಿಂದ ನಮಗೆ ವಿದ್ಯೆಯಿಂದ ದೊರೆಯುವುದಕ್ಕಿಂತಲೂ ಹೆಚ್ಚಿನದಾಗಿ ಸರಕಾರದಿಂದ ಮರ್ಯಾದೆಯು ದೊರಕುವುದು. ಬ್ರಿಟಿಷ್ ಆಫೀಸರರುಗಳು ನಮ್ಮ ಜನಾಂಗದ ಮೇಲೆ ಹೆಚ್ಚಿನ ದಯೆಯನ್ನು ತೋರಿಸಿರುವುದರಿಂದ ನಾವೆಲ್ಲರೂ ಏಕ ಪ್ರಯತ್ನದಿಂದ ನಮ್ಮ ಜನಾಂಗದ ಎರಡು ಕಂಪೆನಿಗಳನ್ನು ನಿರ್ಮಿಸಲು ತರುಣರೆಲ್ಲರೂ ಪಟಾಲಮಿಗೆ ಸೇರುವಂತೆ ಮಾಡಬೇಕೆಂದು ನಿಮ್ಮೆಲ್ಲರನ್ನು ಕೇಳಿಕೊಳ್ಳುತ್ತೇನೆ.

ಮ. ಕಡ್ಯಕ್ಕಿರನ ಸುಬ್ಬಯ್ಯನವರ.:—ವಿದ್ಯದ ಪ್ರಾಮುಖ್ಯತೆಯನ್ನೂ ಅದಕ್ಕಿರುವ ಮರ್ಯಾದೆಯನ್ನೂ ನನ್ನ ಮುಂದಿನ ಭಾಷಣಕಾರರೆಲ್ಲರೂ ವಿವರಿಸಿ ಹೇಳಿದರು. ನಾನು ಹೇಳತಕ್ಕ ವಿಷಯವು ಒಂದೇ. ಅದೇನೆಂದರೆ—ನಾವು ಅದನ್ನು ಪ್ರಯತ್ನಪಟ್ಟು ಬೇಗನೆ ಸಂಘದಲ್ಲಿ ಹತ್ತು ಸಾವಿರ ರೂಪಾಯಿಗಳ ಬಂಡವಾಳವನ್ನು ನಡಟಿ ಯೋಗ್ಯರಾದ ವಿದ್ಯಾರ್ಥಿ

ಗಳಿಗೆ ಸ್ಕಾಲರ್‌ಶಿಪ್ಪನ್ನು ಕೊಡಬೇಕೆಂತೆ ಮಾಡಬೇಕ. ಮ ನಸಿದ್ದರೆ ಮಾಗೆ ... ಸರ್ವರೂ ... ಆ ಪತ್ತು ... ರೂಪಾಯಿಗಳನ್ನು ... ರನ್ನೂ ಬೇಡಿಕೊಳ್ಳುತ್ತೇನೆ.

ಮೆ. ತೋಟಂಬೈಲು ಮಾದಪ್ಪನವರು.—ಈ ಸಂಘವು ಸ್ಥಾಪನೆಯಾದಂದಿನಿಂದ ಸರಿಯಾಗಿ ಚಂದಾ ವಸೂಲಾಗಿದ್ದರೆ ಈಗ ಸುಮಾರು ಹದಿನೈದು ಸಾವಿರ ರೂಪಾಯಿಗಳು ವಸೂಲಾಗಬಹುದಾಗಿತ್ತು. ಆದರೆ ಈಗ ಎರಡು ವರ್ಷಗಳ ಹಿಂದೆ ವಸೂಲಾತಿಯು ನಿಂತುಹೋದ್ದರಿಂದ ಸಂಘವು ... ದುರಾವಸ್ಥೆಯಲ್ಲಿದೆ. ಆದರೆ ನಮ್ಮ ಈಗಿನ ಪ್ರಸಿಡೆಂಟರು ಬಹಳ ತೊಂದರೆ ತೆಗೆದುಕೊಂಡು ದೇಶದ ಎಲ್ಲಾ ಕಡೆಗಳಲ್ಲಿ ಆಗಾಗ್ಯೆ ಮೀಟಿಂಗ್ ನಡೆಸಿ ಹಣ ವಸೂಲ್ ಮಾಡುವ್ವದಕ್ಕಾಗಿ ಅವರಿಗೆ ನಮ್ಮ ವಂದನೆಗಳನ್ನು ಅರ್ಪಿಸುತ್ತೇನೆ. ಮತ್ತು ಈ ರೀತಿಯಾಗಿ ಪ್ರಯತ್ನ ತೆಗೆದುಕೊಳ್ಳುವ ನಮ್ಮ ಅಧ್ಯಕ್ಷರಿಗೆ ನೀವೆಲ್ಲರೂ ಉತ್ಸಾಹ ಕೊಟ್ಟು ಧಾರಾಳವಾಗಿ ಚಂದವನ್ನು ಕೊಡಬೇಕಾಗಿ ಸಭಿಕರೆಲ್ಲರನ್ನೂ ಪ್ರಾರ್ಥಿಸಿಕೊಳ್ಳುತ್ತೇನೆ.

ಸಭೆಯಲ್ಲಿ ಪಾಸಾದ ಠರಾವುಗಳು.—

1. ಸಂಘದ ಅಧ್ಯಕ್ಷರು ವಿದ್ಯಾರ್ಥಿ ಪುದಿನೆರವನ ಪ... ದೈಯ್ಯನವರಿಗೆ ಅವರ 1926-27ನೇ ಸಂವತ್ಸರಕ್ಕೆ ಬೇಕಾಗುವ ಸಾಧಾರಣ 400 ರೂಪಾಯಿಗಳನ್ನು ಮಂಜೂರು ಮಾಡಬೇಕಾಗಿ ಠರಾವು ತಂದದ್ದಕ್ಕೆ ಕನ್ನಿಕ್ಕಾರನ ಸುಬ್ಬಯ್ಯನವರು ಅನುಮೋದಿಸಿ ಠರಾವು ಪಾಸಾಯಿತು.

2. ಪೊರೇಯಂಡ ದೇವಯ್ಯನವರು ತನಗೆ ಸಂಘದಿಂದ ದ್ರವ್ಯ ಸಹಾಯಮಾಡಬೇಕಾಗಿ ಕೇಳಿಕೊಂಡದ್ದಕ್ಕೆ ತೆಕ್ಕಡ ಪೂವೈಯ್ಯನವರು ಮತ್ತು ಕನ್ನಿಕ್ಕಾರನ ಸುಬ್ಬಯ್ಯನವರು ಕಾಲೇಜು ವಿದ್ಯಾರ್ಥಿಗಳಿಗೆ ಹಣ ಕೊಟ್ಟು ಇನ್ನು ಮುಂದೆ ಚಂದಾ ವಸೂಲಾಗುವ್ವದರಲ್ಲಿ ಸ್ವಲ್ಪ ಮಟ್ಟಿಗೆ ದ್ರವ್ಯ ಸಹಾಯ ಮಾಡಬಹುದೆಂದು ಠರಾವು ಪಾಸಾಯಿತು.

3 I ಫಾರಮಿನಿಂದ VI ಫಾರಮಿನ ವರೆಗ ಯೋಗ್ಯರಾದ ವಿದ್ಯಾರ್ಥಿಗಳಿಗೆ ವೇತನಗಳನ್ನು ಕೊಡಬೇಕೆಂದು ಮೆ. ತೋಟಂಬೈಲು ಮಾದಪ್ಪನವರು ತಂದ ಠರಾವು ಸಂಘದಲ್ಲಿ ಸಾಕಷ್ಟು ಹಣ ವಸೂಲಾದಲ್ಲಿ ವೇತನ ಕೊಡಬಹುದಾಗಿ ಠರಾವು ಮಂಜೂರಾಯಿತು.

4. ಸಂಘಕ್ಕೆ ಈಗ ಪ್ರಸಿಡೆಂಟರಾಗಿರುವ ಮೆ. ಮುದ್ದಪ್ಪನವರೇ ಇನ್ನೂ ಮೂರು ವರ್ಷಗಳ ವರೆಗೆ ಪ್ರಸಿಡೆಂಟರಾಗಿರಬೇಕೆಂದು ಸರ್ವ ಸಮ್ಮತದಿಂದ ಮಂಜೂರಾಯಿತು.

5. ಸಂಘದ ಈಗಿನ ಕಾರ್ಯದರ್ಶಿ ಮೆ. ಮಾಚೇರ ಪೊನ್ನಪ್ಪನವರೇ ಕಾರ್ಯದರ್ಶಿಯಾಗಿರಬೇಕೆಂದೂ, ಗೌಡ ವಿದ್ಯಾರ್ಥಿ ಬೋರ್ಡಿಂಗ್ ಮ್ಯಾನೇಜರು ಬಿಂಟಿ ಕಾರ್ಯದರ್ಶಿಯಾಗಿರಬೇಕೆಂದೂ ಠರಾವು ಪಾಸಾಯಿತು.

6. ಕಮಿಟಿ ಮೆಂಬರುಗಳು ಒಂದರನಂತರ ಇನ್ನೊಂದು ಆಗುವ ಮೂರು ಕಾರ್ಯನಿರ್ವಾಹಕ ಮೀಟಿಂಗುಗಳಿಗೆ ಗೈರ್ಹಾಜರಾದಲ್ಲಿ ಅಂಥವರನ್ನು ಕಾರ್ಯನಿರ್ವಾಹಕ ಕಮಿಟಿಯಿಂದ ತೆಗೆದು ಅವರ ಬದಲಿಗ ಬೇರೆ ಮೆಂಬರುಗಳನ್ನು ನೇಮಕ ಮಾಡುವ ಹಕ್ಕನ್ನು ಅಧ್ಯಕ್ಷರಿಗೂ ಮತ್ತು ಕಾರ್ಯನಿರ್ವಾಹಕ ಕಮಿಟಿಗೆ ವಹಿಸಬೇಕೆಂತ ... ಠರಾವು ಪಾಸಾಯಿತು.

7 ಕಳೆದತಿಂಗಳ ... ಪತ್ರಿಕೆಯಲ್ಲಿ ... ಪೊನ್ನಪ್ಪನವರ ... ಪಾಸಾಯಿತು.

8 ಕೊಡಗು ... ಹಾಗಾ ... ಸಾಯಿತು.

ಸಭೆಯ ಅಧ್ಯಕ್ಷರ ಉಪಸಂಹಾರ.—ಸಮಯವು ಸಂಕೋಚವಾದುದರಿಂದ ಈ ಸಭೆಯಲ್ಲಿ ... ಮಾಡಬೇಕಾಗಿದೆ. ಈ ಸಭೆಯ ... ಮಹನೀಯರ ಊಟ ಉಪಚಾರಗಳಿಗೆ ಬಹು ಶ್ರಮ ತೆಗೆದುಕೊಂಡ ಮೆ. ಪಡಿಕಲ್ಲು ಪೂವೈಯ್ಯನವರು, ಮೆ. ಕನ್ನಿಕ್ಕಾರನ ಸುಬ್ಬೈಯ್ಯನವರು ಮತ್ತು ಗ್ರಾಮಸ್ಥರಿಗೂ ನಾವು ಎಷ್ಟು ವಂದಿಸಿದರೂ ಅದು ಸ್ವಲ್ಪವೇ. ನಾನು ಆ ವಿಷಯ ಹೆಚ್ಚು ಹೇಳಬೇಕಾದುದಿಲ್ಲ. ನಾನು ಮುಖ್ಯವಾಗಿ ಹೇಳುವುದೇನೆಂದರೆ ನಮ್ಮ ಜನಾಂಗದವರ ಪ್ರತಿ ಕಡೆಗಳಲ್ಲಿಯೂ ನಮ್ಮವರು ಇಷ್ಟು ಮುತುವರ್ಜಿಯಿಂದ ಕೆಲಸ ಮಾಡಿದಲ್ಲಿ ಈ ಸಂಘವು ಶೀಘ್ರದಲ್ಲಿಯೇ ದೊಡ್ಡದಾಗುವುದರಲ್ಲಿಯೂ, ಮತ್ತು ಅಭಿವೃದ್ಧಿ ಹೊಂದುವುದರಲ್ಲಿಯೂ ಯಾವ ಸಂಶಯವಿರುವುದಿಲ್ಲ. ಆದುದರಿಂದ ಮೆ. ಪಡಿಕಲ್ಲು ಪೂವೈಯ್ಯನವರಿಗೂ, ಮೆ. ಕನ್ನಿಕ್ಕಾರನ ಸುಬ್ಬೈಯ್ಯನವರಿಗೂ, ಮತ್ತು ಈ ಗ್ರಾಮದ ಎಲ್ಲಾ ಮಹನೀಯರಿಗೂ ದೇವರು ಒಳ್ಳೆ ಯಶಸ್ಸನ್ನು ಕೊಡಲೆಂದು ನಾವು ಪ್ರಾರ್ಥಿಸುತ್ತೇವೆ.

ಎಂ. ಪೊನ್ನಪ್ಪ.
(ಕಾರ್ಯದರ್ಶಿ.)

ಅದೇ ದಿನ ಸಾಯಂಕಾಲ ಮೆ ತೆಕ್ಕಡ ಪೂವೈಯ್ಯನವರ ಅಧ್ಯಕ್ಷತೆಯಲ್ಲಿ ನಡದ ಮೀಟಿಂಗಿನಲ್ಲಿ ಈ ಕೆಳಗಿನ ಠರಾವುಗಳು ಸರ್ವ ಸಮ್ಮತದಿಂದ ಪಾಸಾದವು.

ಕೌನ್ಸಿಲು ಚುನಾವಣೆ:—

1. ಗೌಡರುಗಳು ಪ್ರತ್ಯೇಕವಾಗಿ ಜನ್ಮದ ಪರವಾಗಿ ಮಡಿಕೇರಿ ತಾಲೋಕಿನಲ್ಲಿ ಎರಡು ಮೆಂಬರುಗಳು ಚುನಾವಣೆಗೆ ನಿಲ್ಲಬೇಕು.

ಉದ್ಯೋಗಸ್ಥರ ವರ್ಗಾವರ್ಗಿ.—

2 "ಬೆಟ್ಟ" ಉದ್ಯೋಗಸ್ಥರನ್ನು ಐದು ವರ್ಷಕ್ಕೊಂದಾವೃತ್ತಿ ವರ್ಗಾಯಿಸಬೇಕು.

ಕೊಡವ ಸಭೆ.—

3 ಕೊಡವ ಸಭೆಯು ನಮಗೆ ಸಮ್ಬಂಧಿಸುವದಿಲ್ಲ. ಮತ್ತು ನಮ್ಮ ದೇಶಕ್ಕೆ ಅವಶ್ಯವಿಲ್ಲವೆಂದು ಸರಕಾರಕ್ಕೆ ಠರಾವು ಕಳುಹಿಸಬೇಕು. ಅಲ್ಲದೆ ಈ ಮೊದಲು ಕೆಲವು ಗೌಡರುಗಳು ತಿಳಿಯದೆ ಕೊಡವ ಸಭೆಗೆ ಸೈನು ಕೊಟ್ಟದ್ದು ಠದ್ದಾಗಿರತಕ್ಕದ್ದು ಎಂತ ಉಪಠರಾವು ಸಹ ಬಹುಮತದಿಂದ ಪಾಸಾಯಿತು.

ಸರಕಾರಿ ಉದ್ಯೋಗ ಮತ್ತು ಸ್ಕಾಲರ್‌ಶಿಪ್.—

4 ಹಿಂದುಳಿದ ಪಂಗಡದವರಿಗೆ ಸರಕಾರದಲ್ಲಿ ಉದ್ಯೋಗಗಳನ್ನು ಕೊಟ್ಟು ಅವರ ವಿದ್ಯಾರ್ಥಿಗಳಿಗೆ ಸ್ಕಾಲರ್‌ಶಿಪ್ ಸಹ ಕೊಟ್ಟು ಅವರಿಗ ಉತ್ತೇಜನ ಕೊಡಬೇಕೆಂದು ಸರಕಾರವನ್ನು ಬೇಡಿಕೊಳ್ಳುತ್ತದೆ.

ಟಿ. ಯಸ್. ಪೂವೈಯ್ಯ,
(ಅಧ್ಯಕ್ಷ)

ವರ್ತಮಾನ ಸಂಗ್ರಹ.

ಒಳದೇಶ

ಮಡಿಕೇರಿ ಹೈಸ್ಕೂಲಿನ ಆಕ್ಟಿಂಗ್ ಹೆಡ್‌ಮಾಸ್ಟರಾಗಿರುವ ಮೆ. ಪಿ ಮಂಗೇಶರಾಯರಿಗೆ ಆಗೋಸ್ಟು 9 ರಿಂದ ನಾಲ್ಕು ತಿಂಗಳು ರಜೆ ಮಂಜೂರಾಗಿದೆ.

ಕೊಡಗು ಸಹಕಾರಿ ಸೆಂಟ್ರಲ್ ಬ್ಯಾಂಕಿನ ಡೈರೆಕ್ಟರುಗಳ ಮೀಟಿಂಗು ಇದೇ ತಾ. 11ರಲ್ಲು ಮಡಿಕೇರಿ ಮುನ್ಸಿಪಲ್ ಆಫೀಸಿನಲ್ಲಿ ಬೆಳಿಗ್ಯೆ 9 ಗಂಟೆಗೆ ನಡಿಯುತ್ತೆ.

ಫ್ರೇಜರ್‌ಪೇಟೆಯಿಂದ ಕೊಣನೂರಿಗೆ ಹೋಗಲಿಕ್ಕೆ ಬಸ್ಸ್ ಸರ್ವಿಸಿಗೆ ಲೈಸನ್ಸ್ ಕೊಡಲಾಗಿದೆ ಎಂತ ತಿಳಿದು ಬರುತ್ತದೆ. ನರಸೀಪುರದಿಂದ ಕೊಣನೂರು ವರೆಗೆ ಸರ್ವಿಸ್ ನಡಿಸುವವರಿಗೇನೇ ಈ ಲೈಸನ್ಸ್ ಕೊಟ್ಟಿರುವದಾಗಿದೆ.

ಮ ರಾ. ಶ್ರಿ, ಗಳಾದ ದೊಡ್ಡಮನೆ ನಾರಾಯಣಭಟ್ಟ (ಅಧ್ಯಕ್ಷರು.) 2. ಮಂಡೀಟಿರ ಅಪ್ಪಯ್ಯ, 3. ಕಳಗೆಮನೆ ಶ್ಯಾಮಣ್ಣ, 4. ಬೇಲೂರು ಬಸಪ್ಪ ಮತ್ತು 5 ಸಿಂಗೂರು ಲಿಂಗಪ್ಪ, ಇವರುಗಳನ್ನು ಸೋಮವಾರಪೇಟೆ ಮತ್ತು ಸುತ್ತಮುತ್ತಲಿನ 21 ಗ್ರಾಮಗಳಿಗೆ ಐದು ವರ್ಷಗಳವರೆಗೆ ಬೆಂಚ್ ಮೇಜಿಸ್ಟ್ರೇಟರುಗಳಾಗಿ ಚೀಫ್ ಕಮಿಷನರವರು ನೇಮಿಸಿರುವರು.

ಕಳೆದವಾರ ತಾ. 3 ರಿಂದ ಈ ದಿವಸದ ವರೆಗೆ ಮಡಿಕೇರಿಯಲ್ಲಿ ಒಟ್ಟು 25 ಇಂಚು 42 ಸೆಂಟ್ ಮಳೆಯಾಗಿದೆ. ಇದರಲ್ಲಿ ತಾ. 8ರಲ್ಲು 8 ಇಂಚೂ, ತಾ 7ರಲ್ಲು 4 ಇಂಚು 78 ಸೆಂಟೂ, ತಾ 6ರಲ್ಲು 4 ಇಂಚು 70 ಸೆಂಟೂ ಮಳೆ ಬಿತ್ತು. ತಾ 8ರಲ್ಲು ವಿರಾಜಪೇಟೆಯಲ್ಲಿ 14 ಇಂಚೂ, ಅಮ್ಮತ್ತಿಯಲ್ಲಿ ಅದಕ್ಕಿಂತ ಹೆಚ್ಚಾಗಿಯೂ ಮಳೆ ಬಿತ್ತೆಂದು ವರ್ತಮಾನ.

ನಾಲ್ಕುನಾಡು ಕುಂಜಿಲ ಗ್ರಾಮದ ... ಮಳೆ ಕಾಲವಾದ ಮಡಿಕೆ ಕೋಲಿನ, ... ಕಟ್ಟಿದ ಗುಡಿ ... ಇರುವ ... ಒಂದು ಮತ್ತು ಸ್ವಲ್ಪ ... ಉದ್ದ ಕೋಲಿನ ... ಒಂದು, ... 75 ... ಬಾಳುವ 2 ... ಇದರಿಂದ ... ಒಂದು ಹೊಡದುಕೊಂಡು ಹೋಗಬಹುದಾಗಿ ಮೆ. ... ಪೂವೈಯ್ಯನವರು ತಿಳಿಸುತ್ತಾರೆ.

ಈ ವರ್ಷದ ಅಪ್ಟೆರು ವರೆಗೆ ಈ ಕೆಳಗಿನ ಮಹನೀಯರನ್ನು ಉದ್ಯೋಗಸ್ಥರಲ್ಲದವರ ಪರವಾಗಿ ಕೊಡಗು ಡಿಸ್ಟ್ರಿಕ್ಟ್ ಬೋರ್ಡಿನ ಮೆಂಬರುಗಳಾಗಿ ಚೀಫ್ ಕಮಿಷನರವರು ನೇಮಿಸಿರುವರು:—1. ರಾ. ಬಾ. ಕೋದಂಡ ಅಪ್ಪಯ್ಯ 2. ರಾ. ಸಾ. ಕೊಡಂದೇರ ಕುಟ್ಟಯ್ಯ, ಮು. ರಾ. ಗಳಾದ 3. ಸಿ. ಯಸ್ ವೆಂಕಟಯ್ಯ, 4. ಪಾಲೇಕಂಡ ಬೋಪಣ್ಣ, 5. ಮೋಟಿರ ಚಿಣ್ಣಪ್ಪ, 6. ಪುತ್ತಮನೆ ಗಣಪಯ್ಯ, 7. ಯಂ. ಅಬ್ದುಲ್ ಖಾನ್‌ಸಾಹೇಬ್, 8. ಅಪ್ಪರಂಡ ಚಂಗಪ್ಪ, 9. ಪಂದ್ಯಂಡ ಬೆಳ್ಯಪ್ಪ, 10 ಭಾಗಮಂಡ್ಲ ಶ್ರೀಪತಿರಾವ್, 11: ಪಾರ್ವಂಗಡ ಕುಶಾಲಪ್ಪ, 12. ಅಜಿಬ್‌ಖಾನ್, 13. ಬೌಡ್ಲ ಕಾಳಪ್ಪ, 14. ನಿಡ್ಯ ಸುಬ್ಬಣ್ಣಯ್ಯ, 15. ನಿಡ್ಯಮಲೆ ಮುದ್ದಪ್ಪ; ಯುರೋಪಿಯನ್ ಪ್ಲಾಂಟರುಗಳ ಸಂಘದ ಪರವಾಗಿ ಉತ್ತಮಕೇರಿ ಡಿಗೆ ಮೆ. ಎಚ್. ಸಿ. ರೇಮಂಡ್ ಮತ್ತು ದಕ್ಷಿಣಕೊಡಗಿಗೆ ಮೆ. ೨. ಜೆ. ಟಿಪ್ಪಿಂಗ್‌ರವರನ್ನು ನೇಮಿಸಿರುವರು.

ಹಿಂದೂದೇಶ.

ಸರ್ ಚಾರ್ಲ್ಸ್ ಟಾಡ್ ಹಂಟರ್‌ರವರು ಮೈಸೂರ ಮಹಾರಾಜರವರ ಪ್ರೈವೇಟ್ ಸೆಕ್ರೆಟರಿಯಾಗಿ ನೇಮಿಸಲ್ಪಟ್ಟಿರುವರು.

ತಿರುವಾಂಕೂರು ಸಂಸ್ಥಾನದ ಶ್ರಂಗನೂರು ಎಂಬಲ್ಲಿ 7 ಜನರಿರುವ ಒಂದು ತೀಯರ ಕುಟುಂಬವು ಕ್ರಿಶ್ಚಿಯನ್ ಜಾತಿಗ ಸೇರಿತು.

ಶ್ರೀಯುತ ಗಂಗಾಧರರಾವ್ ದೇಶಪಾಂಡೆ ಮತ್ತು ಶ್ರಿ. ರಾಜಗೋಪಾಲಾಚಾರ್ಯರು ಖದ್ದರ ಪ್ರಚಾರಕ್ಕಾಗಿ ಬೆಂಗಳೂರಿಗೆ ಬಂದು ಹೋದರು.

ಬೆಂಗಳೂರಿನಲ್ಲಿ ರೆವರೆಂಡ್ ಫಾದರ್ ಕೈಯಸ್ ಇವರು ಹಿಂದೂಸ್ಥಾನದ ಗಿಡ ಮೂಲಿಕೆಗಳ ಪರೀಕ್ಷೆಯ ವಿಷಯ ಸ್ವಾರಸ್ಯವಾದ ಭಾಷಣ ಮಾಡಿದರು.

ಮಂಗಳೂರು ಪ್ರಾಂತ್ಯದ ಒಂದು ಕೋಆಪರೇಟಿವ್ ಸಂಗಘದ ಸೆಕ್ರೆಟರಿಯು 3250 ರೂಪಾಯಿಯನ್ನು ದುರುಪಯೋಗಪಡಿಸಿದ ಕಾರಣಾಗಿ ಬಸ್ತಗಿರಿ ಮಾಡಿದ್ದಾರೆ.

ಕಲ್ಕತ್ತದಲ್ಲಿ ಹಿಂದೂ ಮುಸಲ್ಮಾನರೊಳಗೆ ಇರುವ ವ್ಯತ್ಯಾಸಗಳನ್ನು ರಾಜಿಯಲ್ಲಿ ತೀರಿಸಲಿಕ್ಕೆ ಶ್ರೀಮತಿ ಸರೋಜಿನಿ ದೇವಿಯವರೂ, ಡಾಕ್ಟರ್ ಕಿಚಲುರವರೂ ಪ್ರಯತ್ನಿಸಿದ್ದಾರೆ. ಈ ಪ್ರಯತ್ನಗಳು ಸಫಲವಾಗುವಂತಿವೆ.

ಜುಲೈ ತಾ. 5ರಲ್ಲಿ ಕಲ್ಕತ್ತಾದಲ್ಲಿಯೂ, ತಾ 4 ಮತ್ತು 5 ರಲ್ಲಿ ಬೊಂಬಾಯಿಯಲ್ಲಿಯೂ ಜೋರಾಗಿ ಮಳೆಗಾಳಿ ಉಂಟಾಗಿ ಟ್ರಾಮ್ಸ್, ಟ್ರೈನು ಮತ್ತು ಟೆಲಿಫೋನುಗಳ ಸಂಚಾರಕ್ಕೆ ಸ್ವಲ್ಪ ಅಡಚಣೆ ಉಂಟಾಯಿತು.

ಬಂಗಾಳದ ಕಾಂಗ್ರೆಸ್ ಮುಂದಾಳುಗಳಲ್ಲಿ ಉಂಟಾಗಿದ್ದ ಪಂಗಡ ಭೇದವನ್ನು ಹೋಗಲಾಡಿಸಿ ಈಗ ಅವರೆಲ್ಲರೂ ಒಗ್ಗಟ್ಟಾಗಿ ಕೆಲಸ ಮಾಡಲು ಪ್ರಾರಂಭಿಸಿರುವರೆಂದು ಮೆ. ಸೆನ್‌ಗುಪ್ತರವರು ಮತ್ತು ಮೆ. ಟಿ ಗೋಸ್ವಾಮಿಯವರು ಪ್ರಕಟಿಸಿರುವರು.

ಕಲ್ಕತ್ತಾ ದತ್ತಾ ಕೆಮಿಕಲ್ ವರ್ಕ್ಸ್ ಎಂಬಲ್ಲಿ ನೈಟ್ರಿಕ್ ಆಸಿಡ್ ಮುಂತಾದ್ದನ್ನು ತಯಾರಿಸುತ್ತಾರೆ. ಈ ವಸ್ತುಗಳನ್ನು ಹರಾಜು ಮಾಡುತ್ತಿರುವಾಗ ಯಾವದೋ ಕೆಮಿಕಲ್ ವಸ್ತುಗಳಿಗೆ ಬೆಂಕಿಹತ್ತಿ ಹಾರಿತು. 200 ಜನರು ಹಾಜರಿದ್ದವರಲ್ಲಿ ಮೂವತ್ತು ಜನರಿಗೆ ಘಾಯಗಳಾಗಿ ಇಬ್ಬರು ಸತ್ತಿರುತ್ತಾರೆ.

ಕೋಯಮುತ್ತೂರು ಜಿಲ್ಲೆಯ ಪಲ್ಲಡಾಳಯಂ ಎಂಬಲ್ಲಿ 6501 ರೂ. ಶೇರ್ ಭಂಡವಾಳವಿರುವ ಜಿಲ್ಲಮಾದರಿ ಕೋಆಪರೇಟಿವ್ ಸಂಘವೊಂದು ಕಳೆದ ಫೆಬ್ರವರಿಯಲ್ಲಿ ಜನಿಸಿರುವಿಗಿದೆ. ಒಂದು ಆಯಿಲ್ ಇಂಜಿನ್ ಇಟ್ಟು ಕೆಲಸ ಮಾಡುತ್ತಿದ್ದಾರೆ. ಅಕ್ಕಿ ಮೆಶೀನನ್ನೂ ಇಟ್ಟಿದ್ದಾರೆ. ಎಣ್ಣೆ ಗಾಣವನ್ನೂ ಇಡುವ ಯೋಚನೆಯಲ್ಲಿದ್ದಾರೆ.

38 ವರ್ಷಗಳ ಹಿಂದೆ ಪರ್ಷಿಯಾ ದೇಶದ ರಾಜಧಾನಿಯಿಂದ ಕಲ್ಕತ್ತೆಗೆ ಬಂದು 34 ವರ್ಷಗಳಿಂದ "ಹಬಲುಲ್ ಮಾಟೀನ್" ಎಂಬ ಪತ್ರಿಕೆಯನ್ನು ನಡಿಸುತ್ತಾ ಬಂದಿರುವ ಸಂಪೂರ್ಣ ಕುರುಡನಾದ ಆಗಾ ಸೈಯದ್ ಜಲಾಲುದ್ದೀನ್ ಎಂಬಾತನನ್ನು ಹಿಂದೂಸ್ಥಾನದಿಂದ ಗಡೀಪಾರು ಮಾಡುವರೆಂದು ಸರ್ಕಾರದವರು ಪ್ರಕಟಿಸಿರುವರು.

ವಿದೇಶ.

ಸಕಲಾತವಾಲರಿಗೆ ಜೈಲಿನಿಂದ ಬಿಡುಗಡೆಯಾಯಿತು. ಅವರು ಪಾರ್ಲಿಮೆಂಟಿಗೆ ಬಂದಾಗ ಕೂಲಿಗಾರ ಪಕ್ಷದವರು ಕೈಚಪ್ಪಾಳೆ ಹೊಡೆದು ಸಂತೋಷವನ್ನು ವ್ಯಕ್ತಪಡಿಸಿದರು.

ತಾ. 6ರಲ್ಲಿ ಸುಮಾತ್ರದ ಪಡಂಗ್ ಎಂಬಲ್ಲಿ ಭಯಂಕರ ಒಂದು ಭೂಕಂಪ ಉಂಟಾಗಿ ಅನೇಕ ಮನೆಗಳು ನೆಲಸಮವಾದವು. ನೂರಕ್ಕಿಂತ ಹೆಚ್ಚು ಜನರು ಮೃತಪಟ್ಟಿರಬಹುದೆಂದು ಅಂದಾಜಾಗಿದೆ.

ಅಮೆರಿಕಾದಲ್ಲಿ ಒಂದು ಬಿರುಗಾಳಿಯುಂಟಾಗಿ, ಈ ಕೆಳಗೆ ಕಾಣಿಸಿದಷ್ಟು ಹಾನಿಯಾಗಿರುವದೆಂದು ತಿಳಿದುಬರುತ್ತದೆ. ಪ್ರಾಣಹಾನಿಯಾದ ಜನಸಂಖ್ಯೆ 2883, ಪಶುಗಳ ಸಂಖ್ಯೆ 8000 ಒಟ್ಟು ನಷ್ಟ 160000 ರೂಪಾಯಿಗಳು.

ಲಂಡನ್ನಿನ ಬ್ರಿಟಿಷ್ ಜನರಲ್ ಪೋಸ್ಟಾಫೀಸಿನಲ್ಲಿ ಸ್ಟಾಂಪನ್ನು ರದ್ದುಪಡಿಸುವದಕ್ಕೆ "ಬ್ರಿಟಿಷ್ ಸಾಮಾನುಗಳೇ ಅತ್ಯುತ್ತಮವಾದದ್ದು" ಎಂಬ ಮಾತುಗಳನ್ನು ಉಪಯೋಗಿಸುತ್ತಿದ್ದರು. ಇದರಿಂದ ಬ್ರಿಟಿಷರಿಗೂ ಅಮೇರಿಕಾದವರಿಗೂ ಇರುವ ಸ್ನೇಹಕ್ಕೆ ಭಂಗಬರಬಹುದೆಂತ ಸಂಶಯ ಬಂದು ವ್ಯಾಪಾರದ ಬೇರೆ ಪ್ರಕಟನೆ ಮಾತುಗಳನ್ನು ಉಪಯೋಗಿಸಲು ತೀರ್ಮಾನಿಸಿರುತ್ತಾರೆ.

ಬರುವ ಇಂಪೀರಿಯಲ್ ಕಾನ್‌ಫರೆನ್ಸಿಗೆ ಸ್ಟೇಟ್ ಸೆಕ್ರೆಟರಿ ಸರೂ, ಬರ್ದ್ವಾನ್ ಮಹಾರಾಜರೂ, ಮತ್ತು ಚಾಟರ್ಜಿ ಇವರೂ ಹಿಂದುಸ್ಥಾನದ ಪ್ರತಿನಿಧಿಗಳಾಗಿ ಚುನಾಯಿಸಲ್ಪಟ್ಟಿದ್ದಾರೆ. ಹಿಂದೀಯರನ್ನೇ ಈ ಪ್ರತಿನಿಧಿಗಳ ಮುಖ್ಯಸ್ಥನನ್ನಾಗಿ ಆರಿಸುವ ಆಲೋಚನೆ ಇದೆಯೆಂತ ಮಾತು ಕೊಟ್ಟು ಅದಕ್ಕೆ ವಿರೋಧವಾಗಿ ನಡದದ್ದಕ್ಕೆ ಮದ್ರಾಸ್ ದೇಶೀಯ ಪತ್ರಿಕೆಗಳು ಆಕ್ಷೇಪಿಸುತ್ತವೆ.

ಪತ್ರವ್ಯವಹಾರ

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ಪತ್ರಿಕಾಕರ್ತರು ಜವಾಬ್ದಾರರಲ್ಲ. ಸಂ.

"ಸೌಂದರ್ಯ."

ಎಲೌ ಸೌಂದರ್ಯವೇ, ನೀನು ಮಾನವ ಕೋಟಿಗಳಲ್ಲಿಯೂ, ಚತುಷ್ಪಾದ ಜಂತುಗಳಲ್ಲಿಯೂ, ಕ್ರಿಮಿಕೀಟಗಳಲ್ಲಿಯೂ ವಾಸಿಸುವೆ. ನಿನ್ನ ಶಕ್ತಿಯನ್ನು ತೋರಿಸುವೆ. ನೀನು ಎಲ್ಲಿ ವಾಸಿಸುವೆಯೋ, ಅಲ್ಲೇ ತೋರಿಸುವೆ. ನಿನ್ನನ್ನು ಧಿಕ್ಕರಿಸಿದವರೇ ಇಲ್ಲ. ತಿರಸ್ಕರಿಸುವವರೂ ಇಲ್ಲ. ಯಾರು ನಿನ್ನನ್ನು ತಿರಸ್ಕರಿಸುವರೋ ಅವರಿಗೆ ನೀನು ಇಲ್ಲವೇ ಇ

ಲ್ಲ. ನೀನು ಯಾರಲ್ಲಿ ಇಲ್ಲವೋ ಅವರೂ ಕೂಡ ನಿನ್ನನ್ನು ನಿಂದಿಸಲಾರರು. ನೀನು ಯಾರಲ್ಲಿ ಇರುವೆಯೋ, ಅವರು ನಿನ್ನ ಅಭಿವೃದ್ಧಿಗೋಸ್ಕರ ಪುರಸ್ಕರಿಸುವರು. ನೀನು ಯಾರಲ್ಲಿಲ್ಲವೋ ಅವರು ನಿನ್ನನ್ನು ಹೊಂದಲು ಆಶಿಸುವರು. ಆಶಿಸುವವರಿಗೆ ನೀನು ಲಭಿಸುವೆಯೂ ಒಂದು ವಿಧವಾಗಿ ಮಾತ್ರ ನೀನು ಅವರ ವಶವಾಗುವೆ. ಅವರನ್ನು ವಂಚಿಸುವೆ. ನೀನು ನಿನ್ನ ದರ್ಶಕರನ್ನು ಮುಗ್ಧರನ್ನಾಗಿ ಮಾಡುವೆ. ಯಾರಿಗೆ ಎಲ್ಲರನ್ನು ಮುಗ್ಧರನ್ನಾಗಿ ಮಾಡುವ ಶಕ್ತಿಯುಂಟೋ ಅವರಿಗೆ ತಾವು ಮುಗ್ಧರಾಗಿ ಮುಗ್ಧತೆಯನ್ನು ಅನುಭವಿಸಿದ ಹೊರತು ಆ ಶಕ್ತಿಯು ಬರಲಾರದು. ನಿನ್ನನ್ನು ಕೂಡಾ ವಶವರ್ತಿಯನ್ನಾಗಿ ಮಾಡಿಕೊಂಡಿರುವ ಪದಾರ್ಥ ಒಂದುಂಟು. ಹಾಗಿಲ್ಲದಿದ್ದರೆ ನೀನು ಯೌವನಕ್ಕೆ ಏಕೆ ಮನಸೋತಿರುವೆ? ನಿನ್ನನ್ನು, ನಿನ್ನ ಕರ್ಮಗಳನ್ನು, ಯಾವದು ಆಟಗಾರನು ಬೊಂಬೆಗಳನ್ನು ಕುಣಿಸುವಂತೆ ಕುಣಿಸುವದೋ ಆ ಯೌವನದ ಸಾಮರ್ಥ್ಯವು ಇಷ್ಟೆಂತಹುದು. ಯೌವನವನ್ನು ಬಿಟ್ಟು ನೀನು ಒಂಟಿಯಾಗಿರತಕ್ಕ ಕಾಲದಲ್ಲಿ ನಿನ್ನ ಪ್ರಕಾಶವು ಕಾರ್ಮೋಡಗಳಿಂದ ಕವಿದ ಚಂದ್ರಿಕೆಯಂತೆ ಅಲ್ಲವೇ? ಸ್ವತಂತ್ರ ಜೀವಿಯಂತೂ ನೀನು ಅಲ್ಲವೇ ಅಲ್ಲ. ನಿನಗೆ ಸ್ವಾತಂತ್ರ್ಯವೂ ಇಲ್ಲವೇ ಇಲ್ಲ. ನೀನು ಸ್ವತಂತ್ರವನ್ನು ಹೊಂದುವ ಸಂಭವವೂ ಇಲ್ಲ. ನಿನ್ನ ಇಂದ್ರಜಾಲಶಕ್ತಿಯನ್ನೂ ನೋಟಕರ ದೃಷ್ಟಿಯನ್ನೂ ಆಕರ್ಷಿಸುವುದರಲ್ಲಿ ತೋರಿಸುವೆ. [illegible] ದೃಷ್ಟಿಯ ಸಹಾಯದಿಂದ ಮನಸ್ಸನ್ನು ಸೆಳೆದು [illegible] ಗಾತಿಯರಂತೆ [illegible] ಯೋಗ ಮಾಡುವೆ. ನೀನು ಮಾಡಬೇಕಾದ ಕೆಲಸವನ್ನು [illegible] ನಿನ್ನನ್ನು ಹೊಂದಿ ಪ್ರೀತಿಸುವವರನ್ನು ವಿಧೇಯಿಸಿ ಅವರಿಗೆ ಕಂಟಕವನ್ನು ಉಂಟುಮಾಡದೆ ಇರುವುದು. ಅವರು ಕುಂದಿದರೆ ನಿನ್ನ ಪ್ರಕಾಶವು ಶೋಭಿಸುವುದು. ನೀನು ಸಾಮ್ರಾಜ್ಯ ಮಾಡುವ ದೇಹದಲ್ಲಿ ಪ್ರಧಾನಮಂತ್ರಿಯಾದ ಮನಸ್ಸಿನಿಂದ ಸಹಾಯಕರವಾದ ಇಂದ್ರಿಯಗಳಿಗೂ, ಅಂಗಗಳಿಗೂ, ವಿವೇಕವನ್ನು ತಿಳಿಸುತ್ತಾ ಸನ್ಮಾರ್ಗವಲಂಬಿಗಳನ್ನಾಗಿ ಮಾಡು. [illegible] ಅವಲಂಬನೆ ಮಾಡದೆ ಇರುವುದು ನಿನಗೂ, ನಿನ್ನ [illegible]ಗೂ ಸಾಧ್ಯವಿಲ್ಲ. ದುರ್ಮಾರ್ಗವಲಂಬನೆಯನ್ನು ಮಾಡುವರೆ ನಿನಗೆ [illegible]ವಲ್ಲವೇ? ನೀನು ರೂಪಾಂತರವನ್ನು ಹೊಂದುವೆಯಲ್ಲವೇ? ನಿನ್ನನ್ನು ಅಧಿಕಾರವಾಗಿಸುವ ಯತ್ನವನ್ನು ಪ್ರಾರ್ಥಿಸು. ನಿನ್ನ ಪ್ರಾರ್ಥನೆಯು ನಿಷ್ಫಲವನ್ನು ಹೊಂದಲಾರದು. ಒಂದು ವೇಳೆ ನಿಷ್ಫಲವನ್ನು ಹೊಂದಿದ ಅದನ್ನು ದ್ವೇಷಿಸುವುದು ಸಹಜ? ನಿನ್ನ ವಿಹಾರ ಯೋಗ್ಯವಾದ [illegible] ನೀನು [illegible]ವಾದ ಪ್ರಕೃತಿದೇವಿಯನ್ನು [illegible]

[illegible]

"ಸ್ವದೇಶಿ ಬಸ್ ಕಂಪನಿ"

ಅಯ್ಯಾ,

ನಾನು ಈ ದೇಶದವನಾಗಿ ಈ ದೇಶದ ಕ್ಷೇಮವನ್ನು ಬಯಸುವವನಾಗಿದ್ದೇನೆ. ಕಾವೇರಿ ಬಸ್ ಸರ್ವೀಸನ್ನು ಪ್ರಾರಂಭಿಸಿದಾಗ ಇದು ದೇಶೀಯರ ಕಂಪನಿಯಂತ ದೊಡ್ಡದಾಗಿ ಪ್ರಕಟಣೆಗಳು ಕೇಳಿಬಂದವು. ಪರದೇಶದವರು ಒಂದು ಬರೇ ತಮ್ಮ ಪ್ರಯೋಜನಕ್ಕಾಗಿ ನಡಿಸುವ ಬಸ್ ಸರ್ವೀಸವರಿಗಿಂತ ಈ ಸ್ವದೇಶಿ ಸರ್ವಿಸ್ ದೇಶದ ಜನರಿಗೆ ಬಹು ಒಳ್ಳೇದು. ಮಾಡೀತೆಂತ ನಾನು ತುಂಬಾ ಆಶಾಭರಿತನಾಗಿದ್ದೆನು. ಈ ಸರ್ವಿಸ್ ನಮಗೆ ಪ್ರಯೋಜನವಾಗಿ ಕೆಲಸಮಾಡುವದರ ಬದಲು ನಮ್ಮ ಯಜಮಾನರಾಗುವಂತೆ ಪ್ರಯತ್ನಿಸುತ್ತಿರುವದು ನೋಡಿ ವ್ಯಸನಪಡುತ್ತೇನೆ. ಆ ಸರ್ವಿಸಿನ ಮೇಲೆ ಸೂಚಿಸಿರುವ ಇತರ ಆಕ್ಷೇಪಗಳ ಕೂಟಕ್ಕೆ ನನ್ನದೊಂದು ಸೇರಿಸಲು ಅಪೇಕ್ಷಿಸುತ್ತೇನೆ.

ದೇಶದ ಜನರಿಗೆ ಪ್ರಯೋಜನವಾಗುವಂತೆ ಕೆಲಸ ಮಾಡುವ ರೆಡ್‌ಕ್ರಾಸ್ ಸಂಘವೆಂಬದೊಂದು ಇದೆ ಎಂಬದು ನನಗೆ ತಿಳಿದಿದೆ. ವಾಚಕರಿಗೂ ತಿಳಿದಿರಬಹುದು. ಆರೋಗ್ಯ ವಿಚಾರಗಳ ಪ್ರಕಟಣೆ ಬಗ್ಗೆ ಕೆಲವು ಕಾಲದಿಂದ ಈ ಸಂಘದವರು ಕೆಲಸಮಾಡುತ್ತಿದ್ದಾರೆ. ಈ ಕೆಲಸ ನಡಿಸಲಿಕ್ಕಾಗಿ ಈ ಸಂಘದವರು ದೇಶದ ಎಲ್ಲಾ ಕಡೆಗೂ ಮ್ಯಾಜಿಕ್ ಲ್ಯಾಂಟರ್ನ್ ಮುಂತಾದ ಸಾಮಾನುಗಳನ್ನು ತೆಗೆದುಕೊಂಡು ಹೋಗುತ್ತಿರುವದನ್ನು ನಾನು ಕಂಡಿರುತ್ತೇನೆ. ಈ ಸಾಮಾನುಗಳನ್ನು ಸಾಗಿಸಲಿಕ್ಕೆ ಬಸ್ಸುಗಳಿಗೆ ಚಾರ್ಜು ಕೊಡುತ್ತಾರೋ ಎಂತ ವಿಚಾರಿಸುವಾಗ ಈ ವರ್ತಮಾನ ತಿಳಿಯಿತು. ರೈಲ್ವೇಗಳಲ್ಲಿ ಸಹ ರೆಡ್‌ಕ್ರಾಸ್ ಸಾಮಾನುಗಳನ್ನು ಚಾರ್ಜಿಲ್ಲದೆ ಸಾಗಿಸುತ್ತಾರಂತೆ. ಇದಕ್ಕನುಸಾರವಾಗಿಯೇ ನಮ್ಮ ದೇಶದ ಬಸ್ ಸರ್ವೀಸುಗಳೆಲ್ಲವೂ ಮಾಫಿಯಾಗಿ ಸಾಗಿಸಲು ಒಪ್ಪಿದವಂತೆ. ಕಾವೇರಿ ಸರ್ವಿಸ್ ಮಾತ್ರ ಚಿಕ್ಕ ಮೂಟೆಗಳಾದರೆ ಮಾತ್ರ ಸಾಗಿಸಬಹುದೆಂತ ತಿಳಿಸಿದರಂತೆ. ಈ ಮುಕ್ಕಾಮಿನ ಏಕೆಯಿಂದ ಒಂದು ಪೆಟ್ಟಿಗೆಯನ್ನು ವಿರಾಜಪೇಟೆಯಿಂದ ಕಳುಹಿಸಲು ತುಂಬಾ ತೊಂದರೆಯಾಯಿತಂತೆ. ಸರ್ಜಬಹದ್ದೂರ್ ಪರಿಯಪ್ಪವರು ಸ್ನೇಹದಿಂದ ಮಡಿಕೇರಿಗೂ, ಮಡಿಕೇರಿಯಿಂದ ಮೈಸೂರಿಗೂ ದೊಡ್ಡದೊಡ್ಡ ಪೆಟ್ಟಿಗೆಗಳನ್ನು ಕ್ರಮವಾಗಿ ಎರಡು ವರ್ಷಗಳಲ್ಲೂ ಸಾಗಿಸಿ ಸಹಾಯಮಾಡಿದರು. ಇದರಂತೆಯೇ ವಿಶ್ವೇಶ್ವರಯ್ಯ, ಸತ್ಯನಾರಾಯಣ, ಲಕ್ಷ್ಮೀ ಸರ್ವೀಸುಗಳು ಸಹ ಸಹಾಯಮಾಡಿದವು.

ನಮ್ಮ ಸ್ವದೇಶದ ಕಂಪೆನಿಯೇ ತಕರಾರು ಮಾಡಿದ್ದಾಗಿದೆ. ಈ ಸಾಮಾನುಗಳನ್ನು ಯಾವಾಗಲೂ ಕಳುಹಿಸುವದಿಲ್ಲ. ದೇಶದ ಬಡಜನರ ಮತ್ತು ಇತರರ ಪ್ರಯೋಜನಕ್ಕಾಗಿ ವರ್ಷಕ್ಕೆ ಒಂದು ಅಥವಾ ಎರಡಾವರ್ತಿ ಮಾತ್ರ ಸಾಗಿಸುವ ಆವಶ್ಯ ಬೀಳುವದಾಗಿದೆ. ಸ್ವದೇಶ ಪ್ರೀತಿ ಇರುವ ಕಂಪೆನಿಗಿಂತ, ದೇಶದ ಹೊರಗಿನವರು ನಡಿಸುವ ಕಂಪೆನಿಗಳಿಗೆ ದೇಶದ ಜನರ ಮೇಲೆ ಹೆಚ್ಚು ಪ್ರೀತಿ ಇರುವದೆಂತ ಪ್ರತ್ಯಕ್ಷವಾಯಿತು.

"ತಿಳಿದವ"

ಅಯ್ಯಾ,

ಲಾಹೋರಿನ ಭಾರತ್ ಇನ್ಶೂರೆನ್ಸ್ ಕಂಪೆನಿಯಿಂದ ನನಗೆ ಬಂದ ಒಂದು ರಶೀತಿ ಮೇಲೆ ಲಾಹೋರಿನ ಪೋಸ್ಟಾಫೀಸಿನ ಡೇಟ್‌ಸ್ಟಾಂಪ್ ತಾರೀಕು 23—4—26ರಲ್ಲಿಯೂ, ಮಡಿಕೇರಿ ಪೋಸ್ಟಾಫೀಸಿನ ಡೇಟ್‌ಸ್ಟಾಂಪ್ ತಾ 28 2-26 ರಲ್ಲಿಯೂ, ಕಕ್ಕಬೆ ಪೋಸ್ಟಾಫೀಸಿನ ಡೇಟ್‌ಸ್ಟಾಂಪ್ ತಾರೀಕು 1.5.26ರಲ್ಲಿಯೂ ಬಿದ್ದಿದೆ. ಮಡಿಕೇರಿ ಪೋಸ್ಟಾಫೀಸಿನಿಂದ ಕಕ್ಕಬೆ ಪೋಸ್ಟಾಫೀಸಿಗೆ ಬರುವುದರಲ್ಲಿ 2 ತಿಂಗಳು ಕಳೆದುಹೋದವು. ಈ ರೀತಿ ತಡವಾದರೆ ತುಂಬಾ ತೊಂದರೆ ಅಲ್ಲವೇ ಸರಿ. ಇದರ ಮೇಲೆ ಪೋಸ್ಟಲ್ ಅಧಿಕಾರಿಗಳಿಗೆ ಫಿರ್ಯಾದು ಮಾಡಿದ್ದೇನೆ. ಇಂಥಾ ತಪ್ಪುಗಳು ಪೋಸ್ಟಲ್ ಇಲಾಖೆಯಲ್ಲಿ ಆಗಬಾರದೆಂತ ಬಹಳ ರೂಲ್‌ಗಳಿವೆಯಂತೆ. ಇಂಥಾ ರೂಲ್‌ಗಳಿಗೆ ವಿರೋಧವಾಗಿ ಪೋಸ್ಟಾಫೀಸ್ ನಡೆದರೆ ಗ್ರಾಮದಲ್ಲಿರುವ ನನ್ನಂಥವನು ವರ್ತಮಾನಪತ್ರಿಕೆ ಮುಂತಾದ್ದನ್ನು ತರಿಸಿ ಪ್ರಯೋಜನವೇನು? ಈಗ ಬಹಳ ತಡವಾದದ್ದು ರಶೀತಿಯಾಯಿತು. ತುರ್ತಿನ ವರ್ತಮಾನ ಬರುವ ಕಾಗದವೇನಾದರೂ ಆಗಿದಿದ್ದರೆ ಎಷ್ಟು ತೊಂದರೆ ಮತ್ತು ಕಷ್ಟ ನಷ್ಟ ಆಗುತ್ತಿತ್ತು. ಇರುವ ಪೋಸ್ಟಾಫೀಸು ಸರಿಯಾಗಿ ಕೆಲಸಮಾಡುತ್ತಿದ್ದರೂ ವಿರಾಜಪೇಟೆಯಲ್ಲಿ ಒಂದು ಪೋಸ್ಟಾಫೀಸ್ ಬೇಕೆಂತ ಕಡಿಯತ್ತುನಾಡಿನವರು ಕೇಳುತ್ತಿರುವಾಗ ಕಕ್ಕಬೆ ಆಫೀಸಿನಿಂದ ಬಟವಾಡೆ ಸರಿಯಾಗಿ ಆಗದೆ ಇದ್ದರೆ ನಾಲಡಿಯಲ್ಲಿ ಆಫೀಸ್ ಬೇಕೆಂಬ ನಮ್ಮ ಕೋರಿಕೆಗೆ ಬಹಳ ಬಲ ಸಿಕ್ಕಿತು. ಇಲಾಖೆಯವರು ಈ ವಿಷಯಕ್ಕೆ ಗಮನಕೊಟ್ಟು ಬ್ರಿಟಿಷ್ ಸರಕಾರದಿಂದ ದೊರಕಿದ ದೊಡ್ಡ ಪ್ರಯೋಜನವನ್ನು ಪೋಸ್ಟ್ ಅನುಕೂಲಗಳನ್ನು ಗ್ರಾಮವಾಸಿಗಳಿಗೆ ಮಾಡಿಸಿ ಕೊಡಬೇಕಾಗಿ ಅಪೇಕ್ಷಿಸುತ್ತೇನೆ.

"ಕಡಿಯತ್ತುನಾಡಿನವ"

ಸ್ಕೂಲುಗಳಲ್ಲಿ ಚರಕ

ಪ್ರೈಮರಿ ಶಾಲೆಗಳಲ್ಲಿ ಕೈನೂಲು ಮಾಡಲು ಕಲಿಸಬೇಕೆಂತ ಮೂರ್ನಾಡಿನಲ್ಲಿ ಜಮಾದಾರರ ಸಂಘವು ಮಾಡಿದ ತೀರ್ಮಾನಕ್ಕೆ ಕಮಿಷನರ ಜವಾಬು ನೋಡಿದೆನು. ಶಾಲೆಗಳಲ್ಲಿ ಕಸಬು ಕಲಿಸುವದು ಉದ್ದೇಶವಲ್ಲವೆಂತ ಹೇಳಿಬಿಟ್ಟರು. ಹಾಗಾದರೆ ತೋಟದ ಕೆಲಸವನ್ನು ಶಾಲೆಗಳಲ್ಲಿ ಕಲಿಸುವದು ಯಾತಕ್ಕೆ? ವಿದ್ಯಾರ್ಥಿಗಳನ್ನೆಲ್ಲಾ ತೋಟಗಾರರನ್ನಾಗಿ ಮಾಡಲಿಕ್ಕೋ. ಕೈ ಕೆಲಸಗಳನ್ನು ಕಲಿಸದೆ ಕೃಷಿಕರು ಮತ್ತು ಕಣ್ಣಿನ ಕರಿಯಿತು ಸಹ ಅನುಭವದವೆಂತ ಹೇಳುವ ಪಾಠ ಕ್ರಮದ ತತ್ವವೇನಾಯಿತು? ತೋಟಗಾರನ ಕೆಲಸ ಕಲಿಸಿದರೆ ಕೃಷಿಕರಾಗಿರುವ ಹಳ್ಳಿಯ ವಿದ್ಯಾರ್ಥಿಗಳಿಗೆ ಪ್ರಯೋಜನವಾದೀತೆಂತ ಕಲಿಸುವದಾದರೆ ಕೃಷಿಯಂತೆಯೇ ಕೈನೂಲು ಮಾಡುವದು ರೈತನಿಗೆ ಪ್ರಾಮುಖ್ಯವೆಂತ ಅನೇಕರು ಹೇಳುತ್ತಾರೆ. ಕೃಷಿಯಿಂದ ದೊರೆಯುವ ಧಾನ್ಯದಿಂದ ತನ್ನ ಹೊಟ್ಟೆ ಪಾಡು ಕಳೆಯುವಂತೆ ಕೈನೂಲು ಮಾಡಲು ಕಲಿತರೆ ಕೃಷಿಕನಿಗೂ ಎಲ್ಲರಂತೆಯೇ ಬೇಕಾಗುವ ಬಟ್ಟೆಯನ್ನು ದೊರಕಿಸಿಕೊಳ್ಳಲು ಅನುಕೂಲವಾಗುತ್ತದೆಯಲ್ಲವೇ? ಹೊಟ್ಟೆಗೆ ಆಹಾರ ಎಷ್ಟು ಅವಶ್ಯವೋ ಹಾಗೆಯೇ ಮೈಗೆ ಬಟ್ಟೆಯೂ ಅವಶ್ಯವಲ್ಲವೇ? ತನಗೆ ಬೇಕಾದ ಬಟ್ಟೆಯನ್ನು ಮಾಡಿಕೊಳ್ಳಬಹುದಲ್ಲದೆ ಸ್ವಲ್ಪ ಹೆಚ್ಚಾಗಿ ನೂಲು ಮಾಡಿದರೆ ಮಾರಿ ತನ್ನ ಮನೆ ಖರ್ಚಿಗೆ ಸಹ ದುಡ್ಡು ಮಾಡಿಕೊಳ್ಳಬಹುದಲ್ಲವೇ?

ರೈತನಿಗೆ ವರ್ಷದಲ್ಲಿ 4 ತಿಂಗಳು ಸಮಯವಿರುತ್ತದಲ್ಲ. ಆ ಸಮಯವನ್ನು ಸೋಮಾರಿತನದಿಂದ ಕಳೆಯುವದರ ಬದಲು ತನಗೂ ತನ್ನ ಕುಟುಂಬಕ್ಕೂ ಪ್ರಯೋಜನವಾಗುವ ನೂಲುವ ಕೆಲಸ ಮಾಡಬಾರದೇ?

ಕೈನೂಲು ಕಲಿಸಿದರೆ ಕಸಬು ಕಲಿಸಿದಂತೆ ಆಗುತ್ತದೆಯೆಂಬುದೇ ಆಕ್ಷೇಪಣೆಯಾಯಿತೋ? ಜೀವನಕ್ಕೆ ಕಸಬಿಲ್ಲದೆ ವಿದ್ಯಾವಂತರು ಅಡ್ಡಾಡುತ್ತಿರುವಾಗ ಚಿಕ್ಕದೊಂದು ಕಸಬನ್ನು ಚಿಕ್ಕಂದಿನಲ್ಲೇ ಎಲ್ಲರೂ ಕಲಿತಿದ್ದರೆ ಅಷ್ಟೇ ಪ್ರಯೋಜನವಲ್ಲವೇ?

ಕೈನೂಲುಮಾಡಲು ಕಲಿಸಿದರೆ ದೇಶಭಕ್ತಿ ಹುಟ್ಟೀತೆಂತ ನನಗೆ ಆಶೆ ಇದೆ. ಅನುಕೂಲಸ್ಥರೂ ಸಹ ಕೈನೂಲು ಮಾಡಲು ಕಲಿಯುವಾಗ ಯಾಕೆ ಕಲಿಯುತ್ತಾರೆ ಎಂಬ ಸವಾಲು ಕೇಳುವಾಗ ಆಗ ಕೈನೂಲಿನ ಚರಿತ್ರೆಯೆಲ್ಲಾ ಹೇಳಬೇಕಾಗುತ್ತದೆ. ಕೈನೂಲು ಮಾಡಬೇಕೆಂಬ ಬೋಧನೆಯು ದೇಶಭಕ್ತಿಯಿಂದ ಹುಟ್ಟಿದ್ದಾದ್ದರಿಂದ ಕೈನೂಲೆಂದರೆ ದೇಶಭಕ್ತಿಯೆಂತ ಅರ್ಥವಾದರೆ ಬೇರೆ ಯಾವ ಪ್ರಯೋಜನವಿಲ್ಲದಿದ್ದರೂ ಆ ಕಾರಣಕ್ಕಾಗಿಯಾದರೂ ಕೈನೂಲು ಮಾಡುವದನ್ನು ಕಲಿಸಬೇಕಾದದ್ದು ಅವಶ್ಯ.

"ಮತ್ಸ್ಯಕಂಠನ್"

ಅಯ್ಯಾ,

ಮಡಿಕೇರಿ ಮುನಿಸಿಪಾಲಿಟಿಯು ಹಾಲಿ ಪ್ರೆಸಿಡೆಂಟರ ಮುತುವರ್ಜಿಯಿಂದ ಹೆಚ್ಚು ಉನ್ನತಕ್ಕೆ ಮುಂದರಿಸಿದೆ ಎಂದು ಹೇಳಲು ಅಡ್ಡಿ ಇಲ್ಲ. ವೈದ್ಯಾಸ್ಪದದಲ್ಲಿ ಪ್ರೆಸಿಡೆಂಟರು ತಮ್ಮ ಶಕ್ತಿ ಮೀರಿ ತಮ್ಮ ಸ್ವಂತ ಕೆಲಸದಂತೆ ವಹಿಸಿ ಶ್ರಮ ತೆಗೆದುಕೊಳ್ಳುವದು ದೇಶ ಸೇವೆಗೆ ಮುಖ್ಯವಾದ ಕೆಲಸವಲ್ಲಿ ಒಂದಾಗಿದೆ. ಕಮಿಟಿ-ಮೆಂಬರುಗಳಲ್ಲಿ ಕೆಲವರು ಇವರಂತೆಯೇ ದೇಶ ಸೇವೆ ಕೈಕೊಂಡಿದ್ದರೆ ಮತ್ತಷ್ಟು ಪ್ರಯೋಜನವಾಗುತ್ತಿರುತ್ತಿದ್ದಲ್ಲಿ ಅಡ್ಡಿಯಿರುತ್ತಿರಲಿಲ್ಲವೆಂದು ಯೋಚಿಸಬಹುದು. ಪ್ರೆಸಿಡೆಂಟರು ತಮ್ಮ ಭೀಘಾರ್ಜನುಭವದ ಮೇಲೆ ಅವರ ಮನಸ್ಸಿಗೆ ತೋರಿದ್ದೇ ಮೇಲು. ತಮ್ಮ ಅಭಿಪ್ರಾಯಗಳಿಗೆ ಅವಕಾಶ ಸಿಕ್ಕುವದಿಲ್ಲವೆಂಬದರ ಮೇಲೆ ಏನಾದರೂ ಕೆಲವರು ಅವರಂತೆ ಹೆಚ್ಚು ಪ್ರಯತ್ನ ತೆಗೆದುಕೊಳ್ಳುವದನ್ನು ಬಿಟ್ಟಿರುವರೇನೋ ಎಂದು ನನಗೆ ಅರ್ಥವಾಗುತ್ತೆ. ಇದರಿಂದ ಕೆಲವರಿಗೆ ತಮ್ಮ ವಾರ್ಡು ಯಾವುದೆಂತಲೂ ಇಂಥಾ ವಾರ್ಡಿಗೆ ಇಂಥಾವರು ಮೆಂಬರರೆಂತಲೂ ಸಹ ತಿಳಿಯುವರೇ ಅವಕಾಶವು ಇಲ್ಲ. ಮತ್ತು ಇಂಥಾ ವಾರ್ಡಿನಲ್ಲಿ ಇಷ್ಟಿಷ್ಟೇ ಮನೆಗಳಿರುವುದೆಂತಲೂ, ಇಷ್ಟೇ ಮೊಹತರ್ಪವಿದೆಯೆಂತಲೂ ತಿಳಿಯುವರೆ ಅವಕಾಶವಿದೆಯೋ ಇಲ್ಲವೋ ಗೊತ್ತಾಗುವದಿಲ್ಲ. ಮೆಂಬರುಗಳು ಅವರವರ ವಾರ್ಡಿನಲ್ಲಿ ಏನೇನು ಕುಂದು ಕೊರತೆಗಳು ಇವೆ [illegible] ಅಂಶಗಳನ್ನು ಕೇಳಿ ತಿಳಿದುಕೊಂಡ ಹಾಗೆ ಇಲ್ಲ. ತಮ್ಮ ವಾರ್ಡಿಗೆ ಇಂತಿಂಥ ಕುಂದು ಕೊರತೆಗಳಿವೆ, ಇವುಗಳನ್ನು ಕಮಿಟಿಯಲ್ಲಿ ಚರ್ಚಿಸಿ ಸೌಕರ್ಯ ಒದಗುವಂತೆ ಮಾಡಬೇಕೆಂದು ಪ್ರಯತ್ನ ಕೈಗೊಂಡು ಮಾಡಿದ್ದು ಸಹ ಜನರ ತಿಳುವಳಿಕೆಗೆ ಇರುವದಿಲ್ಲ. ತಾನು ಕಮಿಟಿ ಮೆಂಬರಾದದ್ದಕ್ಕೆ ಪಬ್ಲಿಕಿಗೆ ಏನು ಸ್ಮರಣೀಯವಾದ ಮತ್ತು ಪ್ರಯೋಜನಕರವಾದ ಕೆಲಸಗಳನ್ನು ಮಾಡಿದ್ದೇನೆಂದು ಯೋಚಿಸಿದರೆ ಅವರವರ ಮನಸ್ಸಿಗೇನೇ ತಿಳಿಯುವದು. ಪರೋಪಕಾರಕ್ಕೆ ಆದಷ್ಟು ಪ್ರಯತ್ನಗಳನ್ನು ತೆಗೆದುಕೊಳ್ಳುವದು ಮೆಂಬರುಗಳ ಮುಖ್ಯ ಕರ್ತವ್ಯವಾಗಿದೆ. ಸುಮ್ಮನೆ ಹೋಗಿ ಸುಮ್ಮನೆ ಬಂದರೆ ದೇಶ ಸೇವೆ ಆಗಲಾರದು. [illegible] ಕಮಿಟಿಯಲ್ಲಿ ಚರ್ಚಿಸಲ್ಪಟ್ಟ ಯಾವ ವಿಷಯವೂ ಜನರ ತಿಳುವಳಿಕೆಗೆ ಪೇಪರುಗಳಿಂದಾಗಲೀ ಬೇರೆ ಯಾವ ವಿಧದಿಂದಾಗಲೀ ಗೊತ್ತಾಗುವದಿಲ್ಲ. ಬಹುಶಃ ಇದಕ್ಕೆ ಅವಕಾಶವಿದೆಯೋ ಇಲ್ಲವೋ ತಿಳಿಯದು. ಹಾಲಿ ಕೆಲವರು ನನಗೆ ತನಗೆ ಒಬ್ಬ ಕೂಡಬೇಕು ಎನ್ನುವ ಗದ್ದಲವೇನೋ ಕೇಳುತ್ತಿದೆ. ಐಕ್ಯಮತ್ಯದಿಂದ ದೇಶಸೇವೆಗೆ ಸಂಪೂರ್ಣವಾಗಿ ಶ್ರಮ ತೆಗೆದುಕೊಂಡಲ್ಲಿ ಈ ಚಿಕ್ಕ ಟೌನಿನಲ್ಲಿ ಯಾವ ವಿಧವಾದ ಕೊರತೆಗಳೂ ಉಂಟಾಗಲಾರವು. [illegible] ಮುನಿಸಿಪಾಲಿಟಿಯಲ್ಲಿ ಗಮನಿಸಬೇಕಾದದ್ದೇನೆಂದರೆ ನೀರ [illegible], ಜನರ ಸಂಚಾರಕ್ಕೆ ತಕ್ಕಷ್ಟು ಅನುಕೂಲತೆ, ಮೋಟಾರುಗಳ ರಾತ್ರಿ ಓಡಾಟದ ಸಮಯದಲ್ಲಿ ಸೌಕರ್ಯಗಳ ಗಮನ ಇವೇ ಮೊದಲಾದವುಗಳಾಗುತ್ತವೆ. [illegible] ಇವುಗಳಲ್ಲಿ ಗಮನಿಸಬೇಕಾಗಿರುತ್ತೆ. ಮುನಿಸಿಪಾಲಿಟಿಯಲ್ಲಿ ಹಣವಿಲ್ಲವೆಂಬುದನ್ನು ನಾವು ಕೇಳುವುದುಂಟು. ಹೀಗೆಂದ ಮೇಲೆ ಏನು ತಾನೇ ಸಫಲವಾದೀತು? ಮುನಿಸಿಪಾಲಿಟಿಯು ಹಣವನ್ನು ಹೊತ್ತಿಯಾದರೂ ಯಾವ ಸಮಯಕ್ಕೆ ಕಷ್ಟವಾಗದಂಥಾ ಆರೋಗ್ಯಾಭಿವೃದ್ಧಿ ಕೆಲಸವೊಂದನ್ನಾದರೂ ಮಾಡಿಯಾದರೂ ಸೌಕರ್ಯಗಳನ್ನು ಕಲ್ಪಿಸಬೇಕೆಂದು ಕೋರುವ.

"ಪುರಾಭಿಮಾನಿ"

ಚ್ಯವನಪ್ರಾಸ ಲೇಹ.

ಇದು ಸರ್ವೋತ್ಕೃಷ್ಟವಾದ ಗಿಡಮೂಲಿಕೆಗಳಿಂದ ತಯಾರಿಸಲ್ಪಟ್ಟ ಆಯುರ್ವೇದ ರಸಾಯನ ಔಷಧವು. ವಿದ್ಯಾರ್ಥಿಗಳೂ ವಿಶೇಷವಾಗಿ ಬುದ್ಧಿಯನ್ನು ಪ್ರಯೋಗಿಸಿ ಕೆಲಸ ಮಾಡುವವರೂ ಈ ಲೇಹವನ್ನು ಸೇವಿಸಿದರೆ ವಿಶೇಷವಾಗಿ ಬುದ್ಧಿಶಕ್ತಿಯನ್ನೂ, ಜ್ಞಾಪಕಶಕ್ತಿಯನ್ನೂ ಹೊಂದುವರು. ದೀರ್ಘಕಾಲದ ವ್ಯಾಧಿಯಿಂದಾಗಲೀ ಕೆಟ್ಟ ನಡತೆಯಿಂದಾಗಲೀ, ಸ್ವಭಾವ ಶಕ್ತಿಯು ಕೊರತೆಯಿಂದಾಗಲೀ ಶರೀರ ಕಾಂತಿಯು ಕುಂದಿ ರಕ್ತ ಕೆಟ್ಟು ಇಂದ್ರಿಯ ದೌರ್ಬಲ್ಯವೇ ಮೊದಲಾದ ವಿಕಾರಗಳಿಂದ ಪೀಡಿತರಾಗಿರುವವರು ಈ ಲೇಹವನ್ನು ಸೇವಿಸಿದರೆ ಈ ತರದ ವಿಕಾರಗಳನ್ನೆಲ್ಲಾ ಶಮನಿಸಿ ದೇಹಕ್ಕೂ ಮನಸ್ಸಿಗೂ ಉಲ್ಲಾಸವನ್ನುಂಟುಮಾಡಿ ನೂತನ ಖಂಡಗಳಿಗೂ ನರಗಳಿಗೂ ಬಲವನ್ನು ಕೊಟ್ಟು ದೇಹಪುಷ್ಟಿಯನ್ನುಂಟುಮಾಡಿ ನವಚೈತನ್ಯವನ್ನುಂಟುಮಾಡುವುದು. ಅಲ್ಲದೆ ಆರೋಗ್ಯ ದೃಢಶರೀರವುಳ್ಳವರಾಗಿ ದೀರ್ಘಕಾಲ ಬದುಕುವರು. ಕೆಮ್ಮಲು, ಉಬ್ಬಸ ವ್ಯಾಧಿಯುಳ್ಳವರಿಗೆ ಮುಖ್ಯವಾಗಿ ಕ್ಷಯರೋಗಿಗಳಿಗೂ ಇದು ಸಂಜೀವಿನಿಯೇ ಸರಿ. ಚರಕ ಸಂಹಿತೆಯಲ್ಲಿ ಇದರ ಗುಣವು ಅತ್ಯಂತವಾಗಿ ಹೇಳಲ್ಪಟ್ಟಿದೆ. [illegible] ಕೊಳೆಗೆ [illegible] ರೂಪಾಯಿ. [illegible] ತೊಲೆಗೆ [illegible] ರೂಪಾಯಿ

ಎಲ್ಲಾ ಕಡೆಯಲ್ಲಿಯೂ ಏಜಂಟರು ಬೇಕು.

ಸೂಚನೆ —ಇಲ್ಲಿ ಶಾಸ್ತ್ರೀಯವಾದ ಎಲ್ಲಾ ಔಷಧಗಳೂ ಹೆಚ್ಚಾಗಿ ಸಿಗುವುವು. ಕ್ರಯಕ್ಕೆ ಸಿಗುವುವು. ಆಯುರ್ವೇದ ಭೂಷಣ ಕೆ ನಾರಾಯಣರಾವ್ ಎ ಎಂ ಎ ಸಿ ಯವರು ರೋಗಿಗಳನ್ನು ಪರೀಕ್ಷಿಸಿ ತಕ್ಕ ಚಿಕಿತ್ಸೆಯನ್ನು ಪ್ರತಿದಿನವೂ ನಡಿಸುವರು. ವಿಶೇಷ ಸಂಗತಿಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಟಿ. ಸಿ. ಎಸ್. ಮಣಿಯಂ ಅಂಡ್ ಕೋ,

ಮ್ಯಾನೇಜಿಂಗ್ ಏಜಂಟ್ಸ್, ಆಂಧ್ರ ಆಯುರ್ವೇದಿಕ್ ಫಾರ್ಮಸಿ

16—[illegible] [illegible] ಚಿಕ್ಕಪೇಟೆ, ಬೆಂಗಳೂರು ಸಿಟಿ.

ನೌಕರಿ ಖರಾರು ಫಾರಮುಗಳು

1926ನೇ ಇಸವಿ ಕೊಡಗಿನ ಕೂಲಿ ಕೆಲಸವನ್ನು ಕುರಿತ 1ನೇ ರೆಗ್ಯುಲೇಷನ್ನಿಗೆ ಅನುಭವಪೂರ್ವ ಯೂನಿಯನ್ ಮತ್ತು ಯುನೈಟೆಡ್ ಪ್ಲಾಂಟರುಗಳು ಸೇರಿ ತಯಾರಿಸಿರುವ ನೌಕರಿ ಖರಾರು ಫಾರಮುಗಳು ಇಂಗ್ಲಿಷಿನಲ್ಲಿಯೂ ಕನ್ನಡದಲ್ಲಿಯೂ ಪ್ರಿಂಟಾಗಿ ಮಾರಾಟಕ್ಕೆ ತಯಾರಿವೆ. ಬೇಕಾದವರು ಸೆಂಟ್ರಲ್ ಹೈಸ್ಕೂಲಿನ ಬಳಿ ಇರುವ (ಹೊಸದಾಗಿ ಕಟ್ಟಿಸಿದ) ನಮ್ಮ ಹೊಸ ಆಫೀಸಿನ್ನು ಕೇಳಿಕೊಂಡು ಪಡೆಯಬಹುದು.

24—6—'26,
ಮಡಿಕೇರಿ

ಮೇನೇಜರ್,
"ಕೊಡಗು" ಆಫೀಸು

ಗೆಳೆಯರ ಗುಂಪಿನ

ಪ **ಸ್ವಧರ್ಮ** ಮಾಸ ಪತ್ರಿಕೆ.

ಸಂಪಾದಕರು:—ದ ರಾ. ಬೇಂದ್ರೆ, ಬ. ಎ.

ಸಮಾಜದಲ್ಲಿ ಶಾಂತಿಪುಷ್ಟಿತುಷ್ಟಿಗಳು ನೆಲೆಗೊಳ್ಳಬೇಕಾದರೆ ಸದಾಚಾರವೇ ಸರಳವಾದ ಹಾದಿ. ಸದಾಚಾರದ ಬೇರು ಸುವಿಚಾರವೇ ಸರಿಯಾದ ಸಾಧನ. ಇಂತಹ ಸುವಿಚಾರವನ್ನು ಸಮಾಜದ ಮುಂದಿಡಲು ಹೊರಟಿರುವ ಸ್ವಧರ್ಮದ ಕನ್ನಡಿಗರು ಕೈಗೊಟ್ಟು ಸ್ವಧರ್ಮವನ್ನು ಪ್ರೋತ್ಸಾಹಿಸಬೇಕಾಗಿ ಕೇಳಿಕೆ

ವಾರ್ಷಿಕ ವರ್ಗಣಿ ರೂ. 1—0—0

ವ್ಯವಸ್ಥಾಪಕ
"ಸ್ವಧರ್ಮ" ಕಾರ್ಯಾಲಯ,
ಮಾಳಮಡ್ಡಿ, ಧಾರವಾಡ.

ಕರ್ನಾಟಕ

ಜಳಕ್ಕೆ, ಮತ್ತು ಉತ್ತಮ ಬಣ್ಣ ಎಂದು ಹೆಸರು ಪಡೆದ ಪ್ರಖ್ಯಾತವಾದ ಮಸಿ [illegible]

ಚಿಕ್ಕ ಬಾಟ್ಲಿ ಒಂದಕ್ಕೆ ರು. ೦—೧೪—೦
ಟಪಾಲು ಖರ್ಚು ಬೇರೆ
ಡಜನ್ ಬಾಟ್ಲಿಗಳಿಗೆ ಟಪಾಲು ಖರ್ಚು ಸಹ ರು.
೯—೨—೦

ಏಜಂಟರು ಬೇಕು, ಕೊಡಗಿನ ಸ್ವದೇಶಿ ವ್ಯಾಪಾರಿಗಳು ತಮ್ಮ ಹೆಸರು ಮತ್ತು ಅವರ ವ್ಯಾಪಾರಗಳ ಹೆಸರನ್ನು ಇದರಲ್ಲಿ ಅಂದವಾದ ಬ್ಲಾಟಿಂಗ್ ಪೇಪರು ಪ್ರಕಟ

12—5

ಕರ್ನಾಟಕ ಪ್ರೆಸ್,
ಗಿರಗಾಂವ, ಮುಂಬಾಯಿ.

ಕೆ. ಸಿ. ಅಪ್ಪಚ್ಚು.
ದಂತ ವೈದ್ಯರು.

ಇದೇ ತಾರೀಖು ೨೦ರಿಂದ ಮಡಿಕೇರಿಯಲ್ಲಿ ಉಳಕೊಳ್ಳುವರು. ಬಾಯಿನೋವಿನವರು ಅವರನ್ನು ಅಲ್ಲಿ ಹೋಗಿ ನೋಡಬಹುದು. ಇಂದಿನ ಸಮಯವನ್ನು ಕಳೆದುಕೊಳ್ಳದೆ ಅನುಕೂಲವಾಗಿ ಮತ್ತು ಇಲ್ಲದೆ ನೋಡುವರು 5—13

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್, ಕೊ ಅಪರೇಟಿವ್ ಸೊಸೈಟೀಸ್ ಆಕ್ಟಿನ ಪ್ರಕಾರ ರಿಜಿಸ್ಟರಾಗಿದೆ.

		ರೂ.
ಶೇರ್ ಬಂಡವಾಳ	—	50,000
ವಸೂಲಾದ ಶೇರ್ ಮೊಬಲಗು	—	3890
ಜಮೆಯಾದ ಠೇವಣಾತಿ	—	90,600

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇ ಹೆಚ್ಚಾಗಿ ಸಾಲಕೊಡತಕ್ಕದ್ದು.

ಒಂದು ವರ್ಷ ಮಾಯಿದೆ ಅಥವ ಹೆಚ್ಚಿನ ಮಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ ರೂ. ೬-೪-೦ರದಲ್ಲಿ ಬಡ್ಡಿ ದೊರೆಯುತ್ತೆ. ಕಡಿಮೆ ಮಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ ೫ರ ಬಡ್ಡಿ ದೊರೆಯುತ್ತೆ.

ವರ್ಷಕ್ಕೊಂದಾವರ್ತಿ ಕೊ ಅಪರೇಟಿವ್ ರಿಜಿಸ್ಟ್ರಾರವರು ಲೆಕ್ಕ ಆಡಿಟು ಮಾಡುತ್ತಾರೆ.

ಪ್ರೆಸಿಡೆಂಟರು, ಟ್ರೆಜರರ್.
ಗಿಡ್ಡಂಡ ಕುಟ್ಟಯ್ಯನವರು, ಎಮ್. ಭುಜಂಗರಾಯರು
ರಾಯ್ ಬಹದ್ದೂರ್. ಬಿ, ಎ, ಬಿ.ಎಲ್.

ಸೆಕ್ರೆಟರಿ
ಸಿ. ಯಸ್ ವೆಂಕಪ್ಪಯ್ಯನವರು, ಬಿ.ಎ, ಬಿ.ಎಲ್.
ಮಡಿಕೇರಿ 29—8—1925.

Apply for our shooting Season's Clearance Sale Catalogue of Brand New Goods

10 to 25 percent Reductions in Prices.

No License Required!! **No License Required**



Webley and Scott Air Pistol, cal 177 or ·22, bore Powerful and Accurate· complete with a sample box of slugs, two spare washers, a brush forcleaning, and a bookletof instructions Rs 30/— Free delivery.

Pwerful German Diana Air gun· Handsome and Accurate, takes B S A· Patern No 1 Slugs and Darts· expressly recommendable for Target Practice Rs· 15/ Free delivery

Brilliant Search Light Lamp for Night Sports Rs 30/— Free delivery·

No License **required to purchase or to possess the above items.**

Reliable D B B L 12 bore guns		Rs 60/—	and upwards
Do S. B B L 12	do	do 40/—	do
D B M L Guns	·	„ 45 -	do
S B M L. do.		„ 30/—	do.
S B B L Rifles		„ 25/—	do·
B L Revolvers and Pistols		, 30/—	do.

Arms, Ammunition and shooting requisites of almost every kind andquality offered at exceptionally favourable rates ANumber of good quality second hand weapons also offered for sale in theNew Catalogue.

GOOLAMHUSIAIN ALLIBHOY & SONS :
Largest Importers of Firearms and Ammunition,
Cheapest priced firm in India,

24 23 210 Abdul Rehman Street, BOMBAY·

---

೧೬೮ ಚಿತ್ರ ಪಟಗಳುಳ್ಳ ದ್ದು

ಸಚಿತ್ರ ಶುಕಸಪ್ತತಿ ಕಥೆ.

೭೦ ಕಥೆಗಳು ೫೧೩ ಪುಟಗಳು

ಈ ಕಥೆಯು ಧರ್ಮಶಾಸ್ತ್ರ ವೇದಾಂತ, ಸ್ತ್ರೀಪಾತಿವ್ರತ್ಯ ಬ್ರಾಹ್ಮಣ, ವೈಶ್ಯ, ಶೂದ್ರರೆಂಬ ನಾಲ್ಕು ವರ್ಣದವರು ನಡಿಯತಕ್ಕ ವರ್ಣಾಶ್ರಮ ಧರ್ಮವೇ ಮುಂತಾದ ಸದ್ವ್ಯವಹಾರಗಳನ್ನು ಬೋಧಿಸುವುದು. ೧ ಕಥಾರೂಪದಲ್ಲಿ ಚಿತ್ರಕಥಾ ಚಮತ್ಕಾರ ವಿನೋದಕರವಾಗಿಯೂ ನೀತಿಬೋಧಕವಾಗಿಯೂ ಇರುವದರಿಂದ ಸ್ತ್ರೀಯರು, ಪುರುಷರು, ಬಾಲಕರು ಎಂಬ ಭೇದ ಇಲ್ಲದೆ ಎಲ್ಲರೂ ಓದಬಹುದು. ೨ ಲೋಕಾನುಭವಕ್ಕೆ ಬೇಕಾದ ಅನೇಕ ವಿಷಯಗಳು ಇದರಿಂದ ತಿಳಿದುಬರುವುದು. ೩. ಈ ಕಥೆಯನ್ನು ಓದುವದರಿಂದ, ಮನಸ್ಸನ್ನು ದುರಾಚಾರದಲ್ಲಿ ಬಿಡದಂತೆ ಸದಾಚಾರದಲ್ಲಿಯೇ ನಡೆಯುವಂತೆ ಮಾಡುವುದು. ೪ ವಿವೇಕಾವಿವೇಕವನ್ನು ತಿಳಿಯತಕ್ಕ ಜ್ಞಾನವನ್ನು ಉಂಟುಮಾಡುವುದು. ಬೇಕಾದವರು ವಿ ಪಿ ಪೋಸ್ಟು ಮೂಲಕ ತರಿಸಿಕೊಳ್ಳಬಹುದು

ದಪ್ಪಕಾಗದ ಕ್ರಯ ಪ್ರತಿ ಒಂದಕ್ಕೆ ರೂ ೩—೦—೦. ಟಪ್ಪಾಲು ಹಾಸಲು ೦—೮—೦.

ಸಚಿತ್ರ ಭಟ್ಟಿ ವಿಕ್ರಮಾದಿತ್ಯರಾಯನ ಕಥೆ ೬ ಭಾಗಸೇರಿದ್ದು ೭೧೫ ಪುಟಗಳು ಕ್ರಯ ೩-೪-೦. ಸಚಿತ್ರರಾಜ ಕಂಠೀರವ ಕಥೆ ೪೮೦ ಪುಟಗಳು, ಕ್ರಯ ರೂ ೨

ಸಚಿತ್ರ ಶ್ರೀರಾಮಾಶ್ವಮೇಧ ಎಂಬ ಸೀತಾರಾಮಾಂಜನೇಯ ಸಂವಾದ ೪೬೭ ಪುಟಗಳು ೧-೮-೦. ಇವುಗಳಿಗೆ ಟಪಾಲು ಖರ್ಚು ಬೇರೆ.

ನಮ್ಮಲ್ಲಿ ದೊರೆಯುವ ಎಲ್ಲಾ ಪುಸ್ತಕಗಳ ಕ್ರಯಪಟ್ಟಿ (ಕ್ಯಾಟಲಾಗ್)ಗೆ ಬರೆದರೆ ಕಳುಹಿಸುವೆವು.

52—6 ನಮ್ಮ ವಿಳಾಸ— ಎಂ ಆರ್. ಕೃಷ್ಣಸ್ವಾಮಿ ಶೆಟ್ಟಿ,
ಬುಕ್ಕುಡಿಪೋ, ಚಿಕ್ಕಪೇಟೆ, ಬೆಂಗಳೂರು ಸಿಟಿ

ಹೊಸ ಸಾಮಾನುಗಳು! ಸುಲಭ ಕ್ರಯ!! ಈಗತಾನೇ ಬಂದಿವೆ!!!

ಇಂಥ ಸುಸಮಯವನ್ನು ಕಳಕೊಳ್ಳಬೇಡಿರಿ!

12 ಬೋರ್ ಜೋಡಿ ಕೊಳವಿನ ತೋಟೆ ಕೋವಿ 1ಕ್ಕೆ	.. ..	ರೂ.	115—0—0
12 „ 32 ಇಂಚಿನ ಒಂಟಿ ಕೊಳವಿನ ತೋಟೆ ಕೋವಿ (ಜರ್ಮನಿ) 1ಕ್ಕೆ.		„	60—0—0
„ „ 36 „ „ „	„	„	65—0—0
ಜೋಡಿ ಕೊಳವಿನ ಕೇಪು ಕೋವಿ 20ನೇ ನಂಬ್ರು 1ಕ್ಕೆ....	„	„	85—0—0
12 ಬೋರ್ ಚಿಲ್ಲು ತೋಟೆಗಳು (ಒಳ್ಳೇ ನಮೂನೆ) 100ಕ್ಕೆ	....	„	14—0—0
„ „ ಆನೆ ಚಿಲ್ಲು „ „ „	. .	„	16—0—0
„ ಗುಂಡು ತೋಟೆಗಳು „ „	. . .	„	19—0—0
ಕೋವಿ ಕ್ಲೀನ್ ಮಾಡುವ ಮತ್ತು ತೋಟೆ ತುಂಬಿಸುವ ಸಾಮಾನುಗಳ 1 ಪೆಟ್ಟಿಗೆಗೆ			27—8—0
ಕೇಪು 250ರ 1 ಟಿನ್ನಿಗೆ	....	ರೂ.	1—5—0
ಕಾಲು ಪೌಂಡು 2 ಯಘಾನ ಮದ್ದು ಡಬ್ಬಿ 1ಕ್ಕೆ .	.	„	1—0—0
ಚಿಲ್ಲು ಎಲ್ಲಾ ತರಹದ ನಮೂನೆ ಠಾಸ್ಲು 1ಕ್ಕೆ ...	....	,	0—10—0
ಪೂರ್ತಿ ಉಕ್ಕಿನ ನೊಗವಾದ ಗುದ್ದಲಿಗಳು 5 ಪೌಂಡಿನ 1 ಡಜನ್ನಿಗೆ		„	33—0—0
„ „ „ 4 „ „	...	„	30—0—0
4 ಮುಳ್ಳಿನ ಮುಳ್ಳು ಗುದ್ದಲಿಗಳು ಡಜನ್ನಿಗೆ ..	....	„	60—0—0
3 „ „ ...	. .	„	48—0—0
1 ಪೌಂಡಿನ ಮರ ಕಡಿಯುವ ಕೊಡಲಿಗಳು ಡಜನ್ನಿಗೆ		„	54—0—0
ಇಂಗ್ಲಿಷ್ ನಮೂನೆ ಕಸಾಯಿ ಚಾಕುಗಳು ಡಜನ್ನಿಗೆ ...	....	,	15—0—0
ಮಿಕನ್ ಕೊಡೆಗಳು ದೊಡ್ಡ ಸೈಜ್ (ಸ್ಟೀಲ್ ಜಾಯಿಂಟ್) 1ಕ್ಕೆ	...	„	4—8—0
ಸಣ್ಣ ಸೈಜ್ „ „	...	„	4—4—0
ಹೋಲ್ ಸೇಲಾಗೆ „	.	„	ಕಮ್ಮಿ ಕ್ರಯ

ಮೆಕ್ಡೋವೆಲ್ ಕಂಪೆನಿ,
ಮಡಿಕೇರಿ
Messers Mc Dowell & Co
126 Mercara

"ಕೊಡಗು"

೧೯೨೬ನೇ ಇಸವಿ ಜುಲೈ ತಾ. ೧೬ನೇ ಶುಕ್ರವಾರ

ಇಂಡಿಯಾದಲ್ಲಿ ನಿಷಾ ನಿಷೇಧ.

ಮದ್ಯಪಾನದಿಂದ 'ಒದ್ದೆ'ಯಾಗಿರುವ ದೇಶಗಳನ್ನು 'ಒಣಗಿಸ' ಬೇಕೆಂಬ ಚಳವಳವು ಇಡೀ ಪ್ರಪಂಚದಲ್ಲೇ ನಡೆಯುತ್ತಿರುವಲ್ಲಿ, ಯಾವ ದೇಶದ ಮುಖ್ಯ ಧರ್ಮಗಳು ನಿಷಾಸೇವನೆ ಮಾಡಕೂಡದೆಂದು ಬೋಧಿಸುತ್ತಿವೆಯೋ, ಯಾವ ದೇಶದಲ್ಲಿ ಸಾವಿರಾರು ವರ್ಷಗಳಿಂದ ಹೆಚ್ಚಿನ ಜನರು ಮದ್ಯಪಾಯಿಗಳಾಗಿರಲಿಲ್ಲವೋ, ಆ ಹಿಂದೂದೇಶದ ಈಗಿನ ಸ್ಥಿತಿಯು ಹೇಗಿದೆ ಎಂಬುದನ್ನು ತಿಳಕೊಳ್ಳಬೇಕಾದುದು ದೇಶದ ಧಾರ್ಮಿಕ, ಆರ್ಥಿಕ ಮತ್ತು ಸಾಮಾಜಿಕ ಅಭಿವೃದ್ಧಿಯನ್ನು ಕೋರುವವರೆಲ್ಲರ ಕರ್ತವ್ಯವಾಗಿದೆ. ಈ ವಿಷಯವನ್ನು ಕುರಿತು ಆಂಗ್ಲೋ ಇಂಡಿಯನ್ ಟೆಂಪರೆನ್ಸ್ ಸಂಘದ ಸೆಕ್ರೆಟರಿಯಾದ ಮಿ. ಫ್ರೆಡರಿಕ್ ಗ್ರಬ್ಬ್‌ರವರು "ಮೋಡರ್ನ್ ರಿವ್ಯೂ" ಮಾಸ ಪತ್ರಿಕೆ ಈ ತಿಂಗಳ ಸಂಚಿಕೆಯಲ್ಲಿ ಬೋಧನಾಪ್ರದವಾದ ಒಂದು ಲೇಖನವನ್ನು ಪ್ರಕಟಿಸಿರುವರು. ಅವರು ಹೇಳುವಂತೆ ನಿಷಾನಿಷೇಧದ ಪ್ರಶ್ನೆಯು ದೇಶದ ಹಿತಚಿಂತಕರ ಮನಸ್ಸಿಗೆ ಚೆನ್ನಾಗಿ ನಾಟಿದೆ. ಸಮಾಜವು ನಡತೆ ನೀತಿಗಳಲ್ಲಿಯ ಕುಡುಕತನ ವಿಷಯದಲ್ಲಿಯೂ ಮುಂದುವರಿಯಬೇಕೆಂಬ ಆಲೋಚನಾಪರರಾದವರ ಕೆಡಕನ್ನು ನಿಲ್ಲಿಸಬೇಕು.

ರ್‍ಯಾಂಡ ನ್ಯಾಯ ಮುಂದಾಳುಗಳು ಕೌನ್ಸಿಲು ಕಾನ್‌ಫರೆನ್ಸುಗಳಲ್ಲಿಯೂ, ಮತಬೋಧಕರು ದೇವಸ್ಥಾನ ಮಸೀದಿಗಳಲ್ಲಿಯೂ, ಸಾಮಾಜಿಕ ಧುರೀಣರು ಸಭಾ ಕೂಟ್ಗಗಳಲ್ಲಿಯೂ ಈ ಸಂಗತಿಯನ್ನು ಕುರಿತು ಭಾಷಣ - ಪಡುತ್ತಲೂ ಚರ್ಚಿಸುತ್ತಲೂ ಇದ್ದಾರೆ. ಉತ್ತಮ ವರ್ಗದ ಹಿಂದೂಗಳು ಸ್ವಾಭಾವಿಕವಾಗಿ ಮದ್ಯಪಾಯಿಗಳಲ್ಲವಾದುದರಿಂದ ಈ ಚಳವಳಕ್ಕೆ ಅವರೇ ಉತ್ತೇಜನ ಕೊಡುತ್ತಿರುವರಾಗಿದೆಯೆಂದು ಕೆಲವರು ಹೇಳುತ್ತಿರುವರು. ಆದರೆ ಇದು ಪೂರ್ಣ ನಿಜವಲ್ಲ. ಯಾವ ಜಾತಿಗಳಲ್ಲಿ ಯಾ ಕೋಮುಗಳಲ್ಲಿ ಕುಡುಕತನವು ಹೆಚ್ಚಿ ಜನರು ಕ್ಷೀಣಗತಿಯನ್ನು ಹೊಂದುತ್ತಿರುವರೋ ಆ ಜಾತಿ ಯಾ ಕೋಮಿನ ಬುದ್ಧಿವಂತರು ಕಣ್ದೆರೆದು ಈ ದುರ್ವ್ಯಸನವನ್ನು ತೊಲಗಿಸಲು ಎಡೆಬಿಡದೆ ಪ್ರಯತ್ನಿಸುತ್ತಿರುವರು. ಕಳೆದ ಡಿಸೆಂಬರಿನಲ್ಲಿ ಮದ್ರಾಸಿನಲ್ಲಿ ನಡೆದ ಬ್ರಾಹ್ಮಣೇತರರ ಕಾನ್‌ಫರೆನ್ಸಿನಲ್ಲಿ ನಿಷಾನಿಷೇಧದ ತತ್ವವನ್ನು ಕೈಕೊಳ್ಳುವಂತೆ ಸರ್ಕಾರವನ್ನು ಕೇಳಿಕೊಳ್ಳಬೇಕೆಂತ ಠರಾವಾಯಿತು. ಕಳೆದ ಇಂಡಿಯನ್ ಕ್ರೈಸ್ತರ ಕಾನ್‌ಫರೆನ್ಸಿನ ಅಧ್ಯಕ್ಷರು ಈ ಚಳವಳದಲ್ಲಿ ಮಹಾತ್ಮ ಗಾಂಧಿಯವರೇ ಮೊದಲಾದ ಮುಂದಾಳುಗಳಿಗೆ ಒತ್ತಾಸೆ ಕೊಡುವಂತೆ ಅವರ ಮತ ಹಿಂಬಾಲಕರನ್ನು ಒತ್ತಿ ಕೇಳಿಕೊಂಡರು. ಕುಡುಕತನವು ಸಮಾಜದ ರಕ್ತವನ್ನು ಹೀರುತ್ತಿರುವಂಥ ಒಂದು ಮಾರಿಯೆಂದು ವಿಚಾರ ಶೀಲರೆಲ್ಲರಿಗೂ ತಿಳಿದುಬಂದಿರುವುದರಿಂದಲೇ ನಿಷಾ ಸೇವನೆಗೆ ಉತ್ತೇಜನ ಕೊಡುವಂಥ ಠರಾವುಗಳನ್ನು ಯಾವ ಪಂಗಡದವರೇ ಆಗಲೀ ಇಂಡಿಯಾದಲ್ಲಿ ಯಾವ ಪಬ್ಲಿಕ್ ಮೀಟಿಂಗ್‌ನಲ್ಲಿಯೂ ಪಾಸು ಮಾಡಿರುವುದಿಲ್ಲ. ಆದರೆ ಹಿಂದೂದೇಶದವರೆಲ್ಲರೂ ಮದ್ಯಪಾನ ಸಂಬಂಧ ದೇಶವನ್ನು "ಒಣಗಿಸಲು" ಒಪ್ಪುತ್ತಾರೆ, ಮಾತ್ರವಲ್ಲದೆ ಆ ಕೆಲಸಕ್ಕೆ ಈಗ ಕೆಲವು ವರ್ಷಗಳಿಂದ ಕೈ ಹಚ್ಚಿರುತ್ತಾರೆಂದು ಗೊತ್ತಾಗುವುದು.

ದೇಶ ಹಿತಚಿಂತಕರ ಪ್ರಯತ್ನವು ಕೈಗೂಡಲು ದಾರಿಯಲ್ಲಿ ಒಂದು ದೊಡ್ಡ ಅಡಚಣೆ ಇದೆ. ಸರ್ಕಾರದ ಉತ್ಪತ್ತಿಯ ಪ್ರಶ್ನೆಯೇ ಈ ಅಡಚಣೆ. ನಿಷಾ ಪದಾರ್ಥವನ್ನು ಮಾಡುವದು ಮತ್ತು ಮಾರುವದನ್ನು ನಿಲ್ಲಿಸಿದ್ದೇ ಆದರೆ ಅಬ್ಕಾರಿ ಇಲಾಖೆಯಿಂದ ಸರ್ಕಾರಕ್ಕೆ ದೊರೆಯುವ ದೊಡ್ಡ ಆದಾಯವು ನಿಂತು ಹೋಗುವುದರಿಂದ ಸರಕಾರದವರು ಈ ಚಳವಳಕ್ಕೆ ಒತ್ತಾಸೆ ಕೊಡಲು ಹಿಂಜರಿಯುತ್ತಿದ್ದಾರೆ. ಆದರೂ ಕೂಡ ಜನರ ಪ್ರತಿನಿಧಿಗಳು ಎಸೆಂಬ್ಲಿಯಲ್ಲಿಯೂ, ಪ್ರಾಂತೀಕ ಕೌನ್ಸಿಲುಗಳಲ್ಲಿಯೂ ಪೂರ್ತಿ ನಿಷೇಧವು ಸರ್ಕಾರದವರ ಅಬ್ಕಾರಿ ಧ್ಯೇಯವಾಗಿ ಆವರನ್ನು ಒಪ್ಪಿಸಲು ಹೋರಾಡುತ್ತಿದ್ದಾರೆ. ಎಸೆಂಬ್ಲಿಯಲ್ಲಿ ಕಳೆದ ಸೆಪ್ಟಂಬರಿನಲ್ಲಿ ಚುನಾಯಿತ ಇಂಡಿಯನ್ ಮೆಂಬರುಗಳೆಲ್ಲರೂ ಒಮ್ಮತದಿಂದ ಪಾಸು ಮಾಡಿದ ನಿಷಾನಿಷೇಧದ ಠರಾವಿನ ಮೇಲೆ ಸರ್ಕಾರದವರು ಈ ವರೆಗೂ ಏನೊಂದು ಕಾರ್ಯ ಜರುಗಿಸದೆ ಇರುವದು ಎಂದಿಗೂ ತೃಪ್ತಿಕರವಲ್ಲ. ಈ ವಿಷಯದಲ್ಲಿ ಬೊಂಬಾಯಿ ಕೌನ್ಸಿಲಿನವರ ಪ್ರಯತ್ನವು ಸ್ತುತ್ಯಾರ್ಹವಾಗಿದೆ. ಸೇಂದಿ ಸಾರಾಯಿಗಳನ್ನು ಇಳಿಸುವುದು ಮತ್ತು ಮಾರುವುದನ್ನು ಆಯಾಯ ಸ್ಥಳದ ಜನರ ಇಚ್ಛಾನುಸಾರ ನಡಿಸುವಂತೆ ಮಾಡುವ ಒಂದು ಬಿಲ್ಲನ್ನು ಬೊಂಬಾಯಿ ಕೌನ್ಸಿಲಿನ ಚರ್ಚೆಗೆ ತರಲು ಅಲ್ಲಿಯ ಗವರ್ನರರು ಬಿಡಲಿಲ್ಲವಾದರೂ ಅಬ್ಕಾರಿ ಉತ್ಪತ್ತಿಯನ್ನು ವಿಚಾರಿಸಲಿಕ್ಕಾಗಿ ಒಂದು ಕಮಿಟಿಯು ನೇಮಕವಾಗಿದೆ. ಆ ಪ್ರಾಂತ್ಯವನ್ನು "ಒಣಗಿಸು"ವುದರಿಂದ ಸರಕಾರದ ಆದಾಯವು ಎಷ್ಟು ಕಡಿಮೆಯಾಗಬಹುದೆಂಬುದನ್ನೂ ಆ ನಷ್ಟವನ್ನು ಭರ್ತಿ ಮಾಡಲು ಅವಶ್ಯವಿದ್ದರೆ ಬೇರೆ ಯಾವ ರೂಪದ ತೆರಿಗೆಯನ್ನು ಕಾಲ ಕ್ರಮೇಣ ಹಾಕಬಹುದೆಂಬುದನ್ನೂ ಕಂಡು ಹಿಡಿಯುವುದೇ ಈ ಕಮಿಟಿಯ ಕೆಲಸವಾಗಿದೆ.

ಮದ್ರಾಸು ಕೌನ್ಸಿಲಿನಲ್ಲಿಯೂ ಸರ್ಕಾರದ ಅಬ್ಕಾರಿ ಧ್ಯೇಯವನ್ನು ಕುರಿತು ದೀರ್ಘ ಚರ್ಚೆಗಳು ನಡೆದವು. ಆದರೆ ಅಲ್ಲಿಯ ಈ ಇಲಾಖೆಗೆ ಸಂಬಂಧಪಟ್ಟ ಮಂತ್ರಿಯವರು ಪ್ರತಿನಿಧಿಗಳ ಆಗ್ರಹಕ್ಕೆ ಹೆಚ್ಚಿನ ಸಹಾನುಭೂತಿಯನ್ನು ತೋರಿಸಲಿಲ್ಲ. ಅಂಗಡಿಗಳನ್ನು ಕ್ರಮೇಣ ಕಡಿಮೆ ಮಾಡುತ್ತಾ ಒಂದು ಇಪ್ಪತ್ತು ವರ್ಷಗಳಲ್ಲಾದರೂ ಪೂರ್ಣ ನಿಷೇಧವನ್ನು ಸಾಧಿಸಬೇಕೆಂಬ ಠರಾವು ಈ ಕೌನ್ಸಿಲಿನಲ್ಲಿಯೂ ಪಾಸಾಗಿದೆ. ಬಂಗಾಳ ಕೌನ್ಸಿಲಿನಲ್ಲಿಯೂ ಜನರ ಅಭಿಪ್ರಾಯಕ್ಕೆ ವಿರೋಧವಾಗಿರುವ ಸರ್ಕಾರದ ಅಬ್ಕಾರಿ ಪಾಲಿಸಿಯು ಚೆನ್ನಾಗಿ ಬಯಲಿಸಲ್ಪಟ್ಟಿದೆ. ಪಂಜಾಬೇ ಮೊದಲಾದ ಕೆಲವು ಪ್ರಾಂತ್ಯಗಳು ಬೊಂಬಾಯಿ ಸರ್ಕಾರದ ಪರಿಶೋಧನೆಯನ್ನು ಕಾಯುತ್ತಿರುವವು.

ಸಂಸ್ಥಾನಗಳಲ್ಲಿ ನಿಷಾವರ್ಜಿತದ ಕೆಲಸವು ಹೆಚ್ಚು ತೃಪ್ತಿಕರವಾಗಿ ನಡೆದಿದೆ. ಭವನಗರದ ದಿವಾನರು ಯೂರೋಪ್ ಅಮೇರಿಕ ಖಂಡಗಳನ್ನು ಸುತ್ತಿಕೊಂಡು ಬಂದನಂತರ ಆ ಸಂಸ್ಥಾನದಲ್ಲಿ ಔಷಧಿಗೆ ಮಾತ್ರವಲ್ಲದೆ ಬೇರೆ ಯಾವ ವಿಧದಲ್ಲಿಯೂ ಅಮಲು ಪದಾರ್ಥ ಮಾಡಕೂಡದು ಮತ್ತು ಮಾರಕೂಡದೆಂದು ಕಾನೂನುಮಾಡಿರುವರು. ಭೋಪಾಲವನ್ನು ಆಳುವ ಬೇಗಮ್‌ರವರು ತನ್ನ ರಾಜ್ಯದಲ್ಲಿ ಪೂರ್ತಿ ನಿಷಾನಿಷೇಧವನ್ನು ಮಾಡಿಸಿರುವರು. ತಿರುವಾಂಕೂರಿನ ಮಹಾರಾಣಿ ರೀಜೆಂಟ್‌ರವರೂ ಬೇಗಮ್‌ರವರ ಉದಾಹರಣೆಯನ್ನು ಒಂದೇ ಸಾರಿ ಅಲ್ಲದಿದ್ದರೂ ಮೆಲ್ಲ ಮೆಲ್ಲಗೆ ಹಿಂಬಾಲಿಸುವಂತೆ ಹುಕುಂಮಾಡಿರುವರು.

ಬೇರೆ ಬೇರೆ ಪ್ರಾಂತ್ಯಗಳಲ್ಲಿ ನಡೆಯುತ್ತಿರುವ ಪ್ರಯತ್ನಗಳನ್ನೆಲ್ಲಾ ಒಟ್ಟುಗೂಡಿಸಿ ಇಡೀ ಹಿಂದೂಸ್ಥಾನವನ್ನೇ "ಒಣಗಿ"ಸುವ ಯತ್ನವನ್ನು ನಡಿಸಬೇಕೆಂಬ ಉದ್ದೇಶದಿಂದ 'ಪ್ರಾಹಿಬಿಷನ್ ನೇಶನಲ್ ಕನ್‌ವೆನ್ಶನನ್ನು' ಕಳೆದ ಜನವರಿ ತಿಂಗಳಲ್ಲಿ ಡೆಲ್ಲಿ ಪಟ್ಟಣದಲ್ಲಿ ನಡಿಸಿದರು. ಆ ಮಹಾ ಸಭೆಯಲ್ಲಿ "ಇಡೀ ಹಿಂದೂಸ್ಥಾನಕ್ಕೆ ಒಂದು ಪ್ರಾಹಿಬಿಷನ್ ಲೀಗ್"ನ್ನು ಸ್ಥಾಪಿಸಿದರು. ಹಿಂದೂಸ್ಥಾನವನ್ನು ಕುಡುಕತನದ ಹಿಡಿತದಿಂದ ತಪ್ಪಿಸಲು ಅಖಿಲಭಾರತ ಸಂಸ್ಥೆಯೊಂದು ಅಗತ್ಯವೆಂಬುದರಲ್ಲಿ ಸಂಶಯವಿಲ್ಲ. ಈ ಸದುದ್ದೇಶದ ಸಂಸ್ಥೆಗೆ ಎಲ್ಲರೂ ಉತ್ತೇಜನಕೊಡಬೇಕೆಂದು ಪ್ರತ್ಯೇಕ ಹೇಳಬೇಕಾದ ಅವಶ್ಯವಿಲ್ಲ.

ಈ ವಿಷಯದಲ್ಲಿ ಭೂಲೋಕಕ್ಕೇ ಉದಾಹರಣೆಯಂತಿರುವ ಅಮೇರಿಕದಲ್ಲಿ ಮದ್ಯಪಾನ ನಿಷೇಧದ ಕಾನೂನಿನಿಂದ ಮದ್ಯ ಪಾಯಿಗಳ ಸಂಖ್ಯೆಯು ಹೆಚ್ಚುತ್ತಲಿದೆಯೆಂದು ಕೆಲವರು ಹರಡುತ್ತಿರುವ ವರ್ತಮಾನವು ನಿಜವಲ್ಲವೆಂತಲೂ ಆ ಕಾನೂನಿನಿಂದ ಅಲ್ಲಿಯ ನಿವಾಸಿಗಳಿಗೆ ಉಂಟಾಗಿರುವ ಹಲವು ಪ್ರಯೋಜನಗಳನ್ನು ವಿವರಿಸಿಯೂ ಮಿ. ಸಿ. ರಾಜಗೋಪಾಲಾಚಾರ್ಯರು ಬರೆದಿರುವ ಲೇಖನವನ್ನು ಇನ್ನೊಂದು ಕಡೆ ಪ್ರಕಟಿಸಿದ್ದೇವೆ. ಇದನ್ನು ಓದಿದನಂತರವಾದರೂ ಜನರು ಪೂರ್ತಿ ನಿಷೇಧಕ್ಕೆ ವಿರೋಧಿಸಲಿಕ್ಕಿಲ್ಲವಾಗಿ ನಂಬುತ್ತೇವೆ.

ಮೇಲೆ ವಿವರಿಸಿದ ಹಿಂದೂಸ್ಥಾನದ ಸ್ಥಿತಿಯನ್ನು ನೋಡಿದರೆ ನಮ್ಮ ದೇಶದ ಅವಸ್ಥೆಯು ಅದಕ್ಕಿಂತ ಹೆಚ್ಚು ಬದಲಾಗಿರುವಂತೆ ಕಾಣುವುದಿಲ್ಲ. ಗ್ರಾಮಸ್ಥರು ನಾಲ್ಕೈದು ವರ್ಷಗಳ ಹಿಂದೆ ಹಿಡುಕೊಂಡ ಕ್ರಮವನ್ನೂ ಅದರ ಫಲಿತಾಂಶವನ್ನೂ ಪುನಃ ಇಲ್ಲಿ ಬರೆಯಲು ನಾವು ಇಚ್ಛಿಸುವುದಿಲ್ಲ. ಜನರ ಪ್ರಯತ್ನಕ್ಕೆ ಸರಕಾರದ ಸಹಾನುಭೂತಿಯೂ ಒತ್ತಾಸೆಯೂ ಇಲ್ಲದೆ ಹೋದರೆ ಈ ಕಾರ್ಯವು ಕೈಗೂಡುವುದು ಕಷ್ಟ ಸಾಧ್ಯ. ಆದುದರಿಂದಲೇ ಇಲ್ಲಿಯ ಕೌನ್ಸಿಲಿನಲ್ಲಿಯೂ ಈ ವಿಷಯ ಚರ್ಚೆಗೆ ತರಲ್ಪಟ್ಟಿತು. ಇಲ್ಲಿಯ ಸರ್ಕಾರದವರು ಜನರ ಕ್ಷೇಮಕ್ಕಿಂತ ಸರ್ಕಾರದ ಉತ್ಪತ್ತಿಯೇ ಮುಖ್ಯವಾದದ್ದು ಯೋಚಿಸುವಂತೆ ಕಾಣುತ್ತದೆ. ಹಾಗಾದರೂ ಕೂಡ ಬೇರೆ ಪ್ರಾಂತ್ಯಗಳಲ್ಲಿ ಮಾಡಿರುವಂತೆ ಅಬ್ಕಾರಿ ಆದಾಯವನ್ನು ಅಜಮಾಯಿಸಿ, ಆ ಉತ್ಪತ್ತಿಯನ್ನು ಬೇರೆ ಯಾವ ವಿಧದಲ್ಲಿ ಸಂಪಾದಿಸಿಕೊಳ್ಳಬಹುದೆಂಬುದನ್ನು ಕಂಡು ಹಿಡಿಯಲು ಒಂದು ಕಮಿಟಿಯನ್ನು ನೇಮಿಸಬಹುದಷ್ಟೆ. ಸರ್ಕಾರಕ್ಕೆ ನಷ್ಟವಿರದ ಈ ಏರ್ಪಾಡಿಗಾದರೂ ಬೇಗನೆ ಕೈ ಹಚ್ಚುವರಾಗಿ ನಂಬುತ್ತೇವೆ.

ಶ್ರೀವಿದ್ಯಾರಣ್ಯರು.

ಸುಮಾರು ಆರುನೂರು ವರ್ಷಗಳ ಹಿಂದೆ ಅಂದರೆ ಹದಿನಾಲ್ಕನೇಯ ಶತಮಾನದಲ್ಲಿ ತುರುಕರು ಉತ್ತರ ಹಿಂದೂಸ್ಥಾನವನ್ನೆಲ್ಲಾ ಸ್ವಾಧೀನಪಡಿಸಿಕೊಂಡು ದಕ್ಷಿಣಕ್ಕೆ ಇಳಿದಾಗ ಅದ್ವಿತೀಯ ಕೀರ್ತಿಯನ್ನು ಪಡೆದ ವಿಜಯನಗರ ಸಂಸ್ಥಾನವನ್ನು ಸ್ಥಾಪಿಸಿ ಅಳಿದು ಹೋಗುತ್ತಿದ್ದ ಕರ್ನಾಟಕದ ಹೆಸರನ್ನು ಸ್ಥಿರಪಡಿಸಿದ ಮತ್ತು ಶೃಂಗೇರಿಯ ಗುರು ಪೀಠವನ್ನು ಅಲಂಕರಿಸಿದವರಲ್ಲಿ ಆದಿ ಶಂಕರಾಚಾರ್ಯರನ್ನುಳಿದು ಪಾಂಡಿತ್ಯದಲ್ಲಿ ಬಾಕಿ ಎಲ್ಲರನ್ನೂ ಮೀರಿದ ವಿದ್ಯಾರಣ್ಯ ಮಹಾ ಪುರುಷರ ಜನ್ಮ ದಿನವು ತಾ. 7ರಲ್ಲಿ ಆಗಿತ್ತು. ಕರ್ನಾಟಕ ಮಾತೆಯ ಸೇವೆ ಮಾಡಿ, ಅವಳ ಹೆಸರುವಾಸಿಯನ್ನು ಕಾಪಾಡಿದ ಇಂಥಾ ಪುಣ್ಯಪುರುಷರ ಚರಿತ್ರೆಯನ್ನು ಕನ್ನಡ ನಾಡಾದ ಕೊಡಗಿನವರೂ ತಿಳಕೊಳ್ಳಬೇಕಾದದ್ದು ಅವಶ್ಯವಾದುದರಿಂದ ಅವರನ್ನು ಕುರಿತ ಒಂದು ಲೇಖನವನ್ನು "ಕರ್ಮವೀರ"ದಿಂದ ಎತ್ತಿ ದೀರ್ಘವಾದರೂ ಸಂಪೂರ್ಣವಾಗಿ ಈ ಕೆಳಗೆ ಪ್ರಕಟಿಸಿರುವೆವು. ಸ್ವರಾಜ್ಯಕ್ಕೆ ಹೋರಾಡುತ್ತಿರುವ ಈ ಸಮಯದಲ್ಲಿ, ಆರ್ಯ ಸಂಸ್ಕೃತಿಯನ್ನು ಕಾಪಾಡುವುದರಿಂದಲೇ ಸ್ವರಾಜ್ಯವನ್ನು ಪಡೆಯಬಹುದೆಂತಲೂ ಈಗ ನಮಗೊದಗಿರುವ ಸಂಕಟಗಳಿಗೆಲ್ಲಾ ಸ್ವರಾಜ್ಯ ಪ್ರಾಪ್ತಿಯೇ ಉಪಾಯವೆಂತಲೂ [illegible] ಲಿಸಿಕೊಡುವ ಈ ಪವಿತ್ರರ ಚರಿತ್ರೆಯನ್ನು ಎಲ್ಲರೂ ಓದಿ ತಿಳಕೊಳ್ಳಬೇಕೆಂಬುದೇ ನಮ್ಮ ಅಭಿಲಾಷೆಯು.

ಶ್ರೀ ವಿದ್ಯಾರಣ್ಯ.

ವಿದ್ಯಾರಣ್ಯರ ವಿಚಾರವಾಗಿ ಈಚೆಗೆ ಕಳೆದ ಹತ್ತು ವರ್ಷಗಳಲ್ಲಿ ಸುಮಾರು ೧೦—೨೦ ಗ್ರಂಥಗಳು ಹುಟ್ಟಿವೆ. ಕರ್ನಾಟಕದಲ್ಲಿ ಈತನ ಪ್ರಶಂಸೆಯು ದಿನೇ ದಿನೇ ಹೆಚ್ಚುತ್ತಿದೆ. ಆದರೂ ಸಹ ಏನಾದ ಹಾಗಾಯಿತು? ಕನ್ನಡಿಗರಲ್ಲಿ ಇವನ ಮಹಿಮೆಯನ್ನು ಬಲ್ಲವರು ಸಾವಿರಕ್ಕೊಬ್ಬರು ದೊರೆಯಬಹುದು. ನಮ್ಮ ಮಗ್ಗುಲು ಪ್ರಾಂತಗಳಿಗೆ ಹೋದರೆ ದ್ರಾವಿಡ ಮಹಾರಾಷ್ಟ್ರ ಆಂಧ್ರರಲ್ಲಿ ಇವನ ಹೆಸರು ಕೂಡ ಸಾಮಾನ್ಯರಲ್ಲಿ ಒಬ್ಬನಿಗೆ ತಿಳಿದಿಲ್ಲ. ಸಂಸ್ಕೃತದಲ್ಲಿ ಅಷ್ಟಿಷ್ಟಲ್ಲದ ಪಾಂಡಿತ್ಯವನ್ನು ಪಡೆದಿದ್ದು ಕಲ್ಕತ್ತಾ ಸಂಸ್ಕೃತ ವಿದ್ಯಾಶಾಲೆಯ ಅಧ್ಯಕ್ಷನಾಗಿದ್ದ ದಿವಂಗತ ಮಹಾಮಹೋಪಾಧ್ಯಾಯ ಸತೀಶಚಂದ್ರ ವಿದ್ಯಾಭೂಷಣ ಎಂ. ಎ. ಪಿಎಚ್. ಡಿ. ಎಂಬುವನು ವಿದ್ಯಾರ್ಥಿಗಳಿಗಾಗಿ ಬರೆದಿರುವ ಹಿಂದೂದೇಶದ ಚರಿತ್ರೆಯಲ್ಲಿ ದ್ವೈತವಾದ ಸ್ಥಾಪಕರಾದ ಮಧ್ವಾಚಾರ್ಯರೇ ವಿದ್ಯಾರಣ್ಯರೆಂದು ಹೇಳಿರುವನು. ಇಂಥಾ ಭಾರತ ಪಂಡಿತೋತ್ತಮನ ಪಾಡೇ ಹೀಗಾಗಿರುವಾಗ ಮಿಕ್ಕವರು ವಿದ್ಯಾರಣ್ಯರ ಸಂಗತಿಯನ್ನೇ ಕೇಳದಿರುವದು ಇರುವುದು ಆಶ್ಚರ್ಯವೇ?

ಮಹಾಪುರುಷರಲ್ಲಿ ಮೋಹಜನಕವಾದ ಪೂಜಾಕರ್ಷಕವಾದ ಒಂದು ಶಕ್ತಿಯುಂಟು. ವಿಶ್ವದಲ್ಲಿರುವ ಅದ್ಭುತವಾದ ದೃಶ್ಯಗಳನ್ನು ನೋಡಿದರೆ ಹುಟ್ಟುವ ಮೋಹವೂ ಆನಂದವೂ ಮಹಾಪುರುಷರ ಪರಿಚಯದಿಂದಲೂ ಹುಟ್ಟುವವು. ಮಹಾಪುರುಷರ ವೃತ್ತಾಂತವನ್ನು ಕೇಳಿದರೆ ಮನಸ್ಸು ಅರಳುವದು; ಹೃದಯವು ಉಬ್ಬುವದು; ಚಿತ್ತವೃತ್ತಿಯು ಪರಮಾತ್ಮಕವಾಗುವದು. ಮಹಾಪುರುಷರ ಮಾಯೆಗೆ ಸಿಲುಕದ ಮನವುಳ್ಳ ಮನುಷ್ಯನು ಕಲ್ಲಿಗಿಂತಲೂ ಕಡೆ. ಮನಸ್ಸನ್ನು ಸೂರೆಗೊಳ್ಳತಕ್ಕ ಪುರುಷ ಪುಂಗವರನ್ನು ಲೋಕವು ಪೂಜಿಸುವದು ಅತಿಶಯವೇ? ಯಥಾರ್ಥವಾಗಿ ಮಹತ್ತ್ವವುಳ್ಳ ಮಹಾನಾಯಕ ಮಣಿಗಳನ್ನು ಪಡೆಯದೆ ಇರತಕ್ಕ ದೇಶಗಳಲ್ಲಿ ಸಹ ಜನ ಕೋಟಿಯು ತಮಗೆ ಅಭಿಸಿರತಕ್ಕ ಪ್ರಕೃತ ನಾಯಕರನ್ನೇ ಅನ್ಯಾದೃಶ್ಯರೆಂದು ಅತ್ಯಕ್ಷೀರಸಿ [illegible] ಕವಾಗಿ ಮಹಿಮೆಯನ್ನು ಆರೋಪಿಸಿ ಕಥೆಕಟ್ಟಿ ತನ್ನ ಭಕ್ತಿಯನ್ನು ಅವರ ಪಾದ ತಲದಲ್ಲಿ ಸಮರ್ಪಿಸಿ ಆನಂದಾನುಭವ ಮಾಡುತ್ತಿರುವದು.

ಪೂಜಾಕರ್ಷಕವಾದ ಶಕ್ತಿಯು ವಿದ್ಯಾರಣ್ಯರಲ್ಲಿ ಸಮೃದ್ಧಿಯಾಗಿರುವುದು. ಇವನು ಬ್ರಾಹ್ಮಣ ಶ್ರೇಷ್ಠನು.

(೭ನೆ ಪುಟದಲ್ಲಿ ಮುಂದುವರಿದಿದೆ).

ಮಹಾತ್ಮಗಾಂಧಿಯವರ ಸ್ವಚರಿತ್ರೆ.

(ಕಳೆದವಾರದ ಮುಂದುವರಿದದ್ದು)

ಎರಡನೆಯ ಭಾಗ

1 ನೆಯ ಪ್ರಕರಣ

ರಾಯಚಂದಭಾಯಿ

ಆಂಗ್ಲದೇಶದಿಂದ ಹೊರಟ ಹಡಗು ಬೊಂಬಾಯಿಗೆ ಬಂದು ಸೇರುವುದಕ್ಕೆ ಸರಿಯಾಗಿ ಸಮುದ್ರವು ಬಹಳ ಉಲ್ಲೋಲವಾಗಿದ್ದಿತೆಂದು ಹಿಂದಣ ಪ್ರಕರಣದಲ್ಲಿ ಹೇಳಿದ್ದೆನು. ಜೂನ್ ಜುಲೈ ತಿಂಗಳುಗಳಲ್ಲಿ ಅರೇಬಿಯಾ ಸಮುದ್ರವು ಸಾಮಾನ್ಯವಾಗಿ ಕಲ್ಲೋಲವಾಗಿರುವುದು. ಏಡನ್ನಿನಿಂದ ಸಮುದ್ರವು ಶಾಂತವಾಗಿರಲಿಲ್ಲವು. ಪ್ರಯಾಣಿಕರೆಲ್ಲರೂ ಅಸ್ವಸ್ಥರಾದರು. ನಾನು ಮಾತ್ರ ಆರೋಗ್ಯವಾಗಿದ್ದುಕೊಂಡು ಹಡಗಿನ ಹೊರಗಡೆ ನಿಂತುಕೊಂಡು ತುಫಾನುಗಳು ತರಂಗತರಂಗವಾಗಿ ಬರುತ್ತಿರುವದರ ಸೌಂದರ್ಯವನ್ನು ನೋಡುತ್ತಿದ್ದೆನು. ಅಲೆಗಳು ಮೇಲಕ್ಕೇಳುವಾಗ್ಗೆ ತುಂತುರುಗಳು ಹಡಗಿನ ಮುಂಭಾಗಕ್ಕೆ ಬಂದು ಬೀಳುತ್ತಿದ್ದುವು. ಬೆಳಗಿನ ಊಟದ ಸಮಯದಲ್ಲಿ ನನ್ನ ಕೂಡ ಮತ್ತೊಬ್ಬಿಬ್ಬರು ಮಾತ್ರ, ಹೊರಗಡೆ ಹಲಗೆಯ ಮೇಲೆ ಇದ್ದುಕೊಂಡು ಓಟುಗಂಜಿಯನ್ನು ಕುಡಿಯುತ್ತಿದ್ದರು. ಕೊಂಚ ಅಜಾಗ್ರತೆಯಾಗಿರುತ್ತಿದ್ದಲ್ಲಿ ಗಂಜಿಯೆಲ್ಲವೂ ಚೆಲ್ಲಿಹೋಗುತ್ತಿದ್ದಿತು. ಯಾಕೆಂದರೆ ಅಲೆಯು ಅಷ್ಟು ಹೆಚ್ಚಾಗಿ ಉಬ್ಬಿಳಿಯುತ್ತಿದ್ದಿತು. ಹೊರಗಿನ ತುಫಾನು ಒಳಗಿನ ತುಫಾನಿಗೆ ಚಿಹ್ನೆಯೆಂಬುದು ನನ್ನ ಅಭಿಪ್ರಾಯವು. ಹೊರಗಿನ ತುಫಾನಿಗೆ ನಾನು ಹೆದರಲಿಲ್ಲವೆಂದ ಮೇಲೆ ಇನ್ನು ಒಳಗಿನ ತುಫಾನಿಗೆ ಹೆದರಲಿಲ್ಲವೆಂದು ಹೇಳಬೇಕಾದುದಿಲ್ಲ. ಬೊಂಬಾಯಿಯಲ್ಲಿಳಿದು ಮನೆಗೆ ಹೋಗುತ್ತಲೆ ಕುಲದವರು ಬಹಿಷ್ಕರಿಸುವ ವಿಚಾರವೊಂದು ಹುಟ್ಟಿತು. ನ್ಯಾಯವಾದಿ (ಲಾಯರು) ವೃತ್ತಿಯನ್ನು ಪ್ರಾರಂಭಿಸಲು ನಾನು ಬಹು ಅಸಮರ್ಥನೆಂದು ಮೊದಲೇ ಹೇಳಿರುತ್ತೇನೆ. ನಾನು ಸಂಘಸುಸ್ಕರಣೆಯ ಜತೆಗೆ ಮತ್ತೆ ಕೆಲ ಸುಸ್ಕರಣಗಳನ್ನು ಪ್ರಾರಂಭಿಸುವುದನ್ನು ಕುರಿತು ಶ್ರದ್ಧೆಯಿಂದ ಆಲೋಚಿಸುತ್ತಿರುವಲ್ಲಿ ನಾನು ಊಹಿಸದೆ ಇದ್ದ ಕೆಲ ವಿಷಯಗಳು ಸ್ಫುರಿಸಿದುವು. ನನ್ನನ್ನು ಇದಿರ್ಗೊಂಡು ಕರೆದುಕೊಂಡುಹೋಗಲು ನನ್ನ ದೊಡ್ಡಣ್ಣನು ಬೊಂಬಾಯಿನಲ್ಲಿ ಸ್ಟೀಮರಿನ ಬಳಿಗೆ ಬಂದಿದ್ದನು. ಡಾಕ್ಟರ್ ಮೆಹತಾರವರ ಮತ್ತು ಅವರ ಅಣ್ಣಂದಿರ ಪರಿಚಯ ಮಾಡಿಕೊಂಡಿದ್ದನು. ಡಾಕ್ಟರ್ ಮೆಹತಾಯವರ ವಿಶ್ವಾಸದಮೇಲೆ ನಾವೆಲ್ಲರೂ ಅವರ ಮನೆಗೆ ಹೋದೆವು. ಆದರಿಂದ ಆಂಗ್ಲದೇಶದಲ್ಲಿ ಆರಂಭವಾದ ಪರಿಚಯವು ಕ್ರಮವಾಗಿ ವೃದ್ಧಿಯಾಯಿತು. ಭಾರತದೇಶಕ್ಕೆ ಬಂದಮೇಲಂತೂ ಅವರ ಕುಟುಂಬದವರಿಗೂ ನಮ್ಮ ಕುಟುಂಬದವರಿಗೂ ವಿಶ್ವಾಸ ಹೆಚ್ಚಿತು.

ನನ್ನ ತಾಯಿಯನ್ನು ಯಾವಾಗ ನೋಡುತ್ತೇನೆ? ಎಂದು ನಾನು ಬಹು ಆತುರದಿಂದಿದ್ದೆನು. ಆಕೆಯು ಪರಲೋಕವಾಸಿಯಾದಳೆಂಬ ಸಂಗತಿಯನ್ನು ನನ್ನ ಅಣ್ಣನು ನನಗೆ ಬರೆದು ತಿಳಿಸಿರಲಿಲ್ಲವು. ಬೊಂಬಾಯಿನಲ್ಲಿ ಸ್ಟೀಮರಿನಿಂದಿಳಿಯುತ್ತಲೆ ಹೇಳಿದುದರಮೇಲೆ ನಾನು ಸೂತಕಸ್ನಾನಮಾಡಿದೆನು. ನಾನು ಆಂಗ್ಲದೇಶದಲ್ಲಿರುವಾಗಲೇ ಆಕೆಯು ಮೃತಳಾದ ಸಂಗತಿಯನ್ನು ನನಗೆ ತಿಳಿಸಿದ್ದಲ್ಲಿ ವಿದೇಶದಲ್ಲಿ ನಾನು ಬಹಳ ವ್ಯಸನಪಡುತ್ತಿದ್ದೆನೆಂಬುದರಮೇಲೆ ನನ್ನ ಅಣ್ಣನು ನನಗೆ ಬರೆಯಲಿಲ್ಲವು. ಆ ಮರಣವಾರ್ತೆಯನ್ನು ಕೇಳಿದಕೂಡಲೆ ನನಗೆ ಅತ್ಯಧಿಕವಾದ ಸಂತಾಪವುಂಟಾಯಿತಲ್ಲದೆ ಆ ಸಂತಾಪಾತಿಶಯವು ಈಗಲು ಕೂಡ ಅಧಿಕವಾಗಿದೆ. ನನ್ನ ತಂದೆಯು ಸತ್ತಾಗುಂಟಾದ ದುಃಖಕ್ಕಿಂತ ಅತ್ಯಧಿಕವಾಗಿ ನನಗಾಗ ಉಂಟಾಯಿತು. ನನ್ನ ಆಶೆಯೆಲ್ಲವು ವಿಫಲವಾದುವು. ಆದರೆ ನಾನು ದುಃಖವೆಲ್ಲವನ್ನೂ ಮನಸ್ಸಿನಲ್ಲಿ ಅಡಗಿಸಿಕೊಂಡು ಮೇಲೆ ಗಂಭೀರವಾಗಿದ್ದೆನು. ಆಗ ಡಾಕ್ಟರ್ ಮೆಹತಾರವರು ನನಗೆ ಬಹಳ ಜನರ ಪರಿಚಯವನ್ನು ಮಾಡಿಸಿದರು. ಅವರಲ್ಲಿ ಮೆಹತಾರವರ ಸಹೋದರರಾದ ಶ್ರೀಯುತ ರೇವಾಶಂಕರ ಜಗಜೀವನರವರೊಬ್ಬರಾಗಿದ್ದರು. ಇವರೊಡನೆ ಅಂದುಂಟಾದ ಮೈತ್ರಿಯು ಜೀವಮಾನವೆಲ್ಲಾ ಗಾಢವಾಗಿರುವುದು. ಡಾಕ್ಟರ್ ಮೆಹತಾರವರ ದೊಡ್ಡಣ್ಣನವರ ಅಳಿಯಂದಿರು, ಆಭರಣಗಳ ವರ್ತಕರಾದ ರೇವಾಶಂಕರ ಜಗಜೀವನ ಕಂಪೆನಿಯ ಭಾಗಸ್ಥರೂ ಆದ ರಾಯಚಂದ್ರ ಉರುಫ್ ರಾಜಚಂದ್ರಕವೀಂದ್ರರ ಪರಿಚಯವನ್ನೂ ಮೆಹತಾರವರು ಆಗಲೇ ಮಾಡಿಸಿದರು. ಇದು ಬಹಳ ದೊಡ್ಡ ವಿಷಯವು. ಕವಿಯವರಿಗೆ ಆಗ 25 ವರ್ಷ ವಯಸ್ಸು. ಪ್ರಥಮ ಸಂದರ್ಶನದಿಂದಲೇ ಅವರು ನಿಷ್ಕಲ್ಮಷವರ್ತಕರೆಂದೂ, ವಿದ್ವಾಂಸರೆಂದೂ ನಾನು ಗ್ರಹಿಸಿಕೊಂಡೆನು. ಅವರು ಶತಾವಧಾನವನ್ನೂ ಕಲಿತುಕೊಂಡಿದ್ದರು. ನಾನು ಕಲಿತಿರುವ ವಿದೇಶಭಾಷೆಗಳಿಂದಲೆಲ್ಲ ವಾಕ್ಯಗಳನ್ನೋದಿದೆನು. ನಾನು ಯಾವರೀತಿಯಲ್ಲಿ ಹೇಳಿದೆನೋ ಅವರೂ ಅದೇರೀತಿಯಲ್ಲಿ ಅವೆಲ್ಲವನ್ನೂ ಹಿಂದಿರುಗಿ ಹೇಳಿದರು. ಅವರಿಗೆ ಅನೇಕ ಭಾಷೆಗಳು ಈಗಲೂ ಕೂಡ ಬರುತ್ತವೆ. ಅವರು ಮುಮುಕ್ಷುಗಳು, ವೇದವೇದಾಂಗವೇತ್ತರು, ಪರಿಶುದ್ಧಚಾರಿತ್ರರು. ಅವರು ತಮ್ಮ ಜೀವಿತವೆಲ್ಲವ ಮೋಕ್ಷಸಾಧನೆಗೇ ಧಾರೆಯೆರದಿರುವರು. "ನನ್ನ ನಿತ್ಯಗಳಲ್ಲೆಲ್ಲ ನಾನು ಯಾವಾಗ ಅವುಗಳಿಂದ ಭಗವಂತನ ನೋಡಲಾಗುವುದೋ ಆಗಲೇ ನನ್ನ ಜನ್ಮವು ಧನ್ಯವಾದುದು. ಮುಕ್ತಾನಂದನಜೀವಿತಕ್ಕೆ ಆಧಾರವಾದ ಸೂತ್ರವು ಆ ಜಗದೈಕರಕ್ಷನೇ" ಎಂದು ಅರ್ಥವನ್ನು ಕೊಡುವ ಮುಕ್ತಾನಂದನ ವಾಕ್ಯವನ್ನು ರಾಜಚಂದ್ರಕವಿಯು ಯಾವಾಗಲೂ ಸ್ಮರಿಸುತ್ತಿದ್ದನು. ಆತನು ಲಕ್ಷಾಂತರ ರೂಪಾಯಿ ವ್ಯಾಪಾರಮಾಡುತ್ತಿದ್ದನು. ಮುತ್ತು ಪಚ್ಚೆ, ವಜ್ರ ಮೊದಲಾಗಿ ನವರತ್ನವ್ಯಾಪಾರವನ್ನೇ ಆತನು ಮಾಡುತ್ತಿದ್ದುದು. ವ್ಯಾಪಾರದಲ್ಲಿದ್ದ ಆತನ ಪ್ರಜ್ಞೆಯು ಅಸಾಮಾನ್ಯವಾಗಿದ್ದರೂ ಆತನ ದೀಕ್ಷೆಯು ಅದರ ಮೇಲಿರಲಿಲ್ಲವು. ಭಗವಂತನ ಅಪರೋಕ್ಷಸಂದರ್ಶನಾಪೇಕ್ಷೆಯಿಂದ ಆತನು ಏಕಾಗ್ರಚಿತ್ತನಾಗಿದ್ದನು. ಆತನ ವ್ಯಾಪಾರದ ಗದ್ದುಗೆಯಮೇಲೆ ವ್ಯಾಪಾರಸಂಬಂಧವಾದ ಪುಸ್ತಕಗಳೊಡನೆ ಕೆಲ ಮತಗ್ರಂಥಗಳೂ ದಿನಚರ್ಯಪುಸ್ತಕಗಳೂ ಯಾವಾಗಲೂ ಇರುತ್ತಿದ್ದುವು. ವ್ಯಾಪಾರ ವಿಷಯವು ಮುಗಿಯುತ್ತಲೆ ಮತಗ್ರಂಥಗಳನ್ನೂ ದಿನಚರ್ಯ ಪುಸ್ತಕಗಳನ್ನೂ ನೋಡುತ್ತಿದ್ದನು. ದಿನಚರ್ಯಪುಸ್ತಕಗಳಿಂದಲೇ ಅನೇಕ ವಿಷಯಗಳನ್ನು ಆತನು ಗ್ರಂಥರೂಪವಾಗಿ ಪ್ರಕಟಿಸಿದನು. ಅಧಿಕವಾದ ವ್ಯಾಪಾರವು ಮುಗಿಯುತ್ತಲೆ ಆಧ್ಯಾತ್ಮಿಕರಹಸ್ಯವನ್ನು ಕುರಿತು ಬರೆಯಲು ಸತ್ಯಾನ್ವೇಷಿಗಲ್ಲದೆ ಸಾಮಾನ್ಯವರ್ತಕರಿಗೆ ಸಾಧ್ಯವಲ್ಲವು. ಆತನು ಈ ರೀತಿಯಾಗಿ ವ್ಯಾಪಾರಗೋಷ್ಠಿಯಲ್ಲಿ ಆಧ್ಯಾತ್ಮಿಕ ವಿಷಯ ನಿಮಗ್ನನಾಗಿರುವುದನ್ನು ನಾನು ಅನೇಕವೇಳೆ ನೋಡಿದ್ದೆನು. ಆತನು ಯಾವಾಗಲೂ ಪ್ರಶಾಂತಚಿತ್ತನಾಗಿದ್ದನು. ಆತನಿಗೂ ನನಗೂ ಐಹಿಕವಾದ ಸ್ವಾರ್ಥಸಂಬಂಧವೇನೂ ಇಲ್ಲದಿದ್ದರೂ ನನಗೆ ಆತನ ಕೂಡ ವಿಶೇಷ ಪರಿಚಯವಿದ್ದಿತು. ಆಗ್ಗೆ ನನಗೆ ಇನ್ನೂ [illegible] ಬರುತ್ತಿರಲಿಲ್ಲವು. ನಾನು ಆತನಲ್ಲಿಗೆ ಹೋದಾಗಲೆಲ್ಲ ಅತಿ ಪ್ರಮುಖವಾದ ಮತವಿಷಯವನ್ನು ಆತನು ನನಗೆ ಬೋಧಿಸುತ್ತಿದ್ದನು. ನನಗೆ ಆಗ ಮತವಿಷಯದಲ್ಲಿ ಆಸಕ್ತಿಯು ಕಡಿಮೆಯಾಗಿದ್ದಿತಾದರೂ ಆತನ ಉಪದೇಶವು ಬಹಳ ಆಕರ್ಷಣವಾಗಿದ್ದಿತು. ಆಮೇಲಾಮೇಲೆ ನಾನು ಬಹುಜನ ಮತನಾಯಕರೊಡನೆ ಸಂಭಾಷಿಸುತ್ತಿದ್ದೆನಾದರೂ ರಾಜಚಂದ್ರಕವಿಯುಪದೇಶದಂತೆ ಇತರ ಯಾವುದೂ ನನ್ನ ಮನಸ್ಸಿಗೆ ಆಕರ್ಷಕವಾಗಿರಲಿಲ್ಲವು. ಆತನ ಉಪದೇಶವು ಚೆನ್ನಾಗಿ ನನ್ನ ಮನಸ್ಸಿನಲ್ಲಿ ನಾಟಿಕೊಂಡಿತು. ಆತನ ಪಾಂಡಿತ್ಯಕ್ಕೆ ತಕ್ಕಂತೆ ವಿಮಲವರ್ತನವಿದ್ದುದರಿಂದಲೇ ಆತನಲ್ಲಿ ನನಗೆ ಅಧಿಕವಿಶ್ವಾಸವುಂಟಾಯಿತು. ಆತನು ಬಹು ರಹಸ್ಯವಾದ ವಿಷಯವನ್ನು ಕೂಡ ನನಗೆ ತಿಳಿಸುತ್ತಿದ್ದನು. ಆಧ್ಯಾತ್ಮಿಕವಿಚಾರದಲ್ಲಿ ನನ್ನ ಮನಸ್ಸಿಗೆ ಆಂದೋಳನವುಂಟಾದಾಗಲೆಲ್ಲ ಆತನೇ ನನಗೆ ಶರಣ್ಯನಾಗಿದ್ದನು. ಅದುಕಾರಣ ನನಗೆ ಆತನೇ ಗುರುವೆಂದು ನನ್ನ ಮನಸ್ಸಿನಲ್ಲಿ ದೃಢಪಡಿಸಿಕೊಂಡಿದ್ದಿಲ್ಲದೆ ಈಗಲೂ ನಾನು ಆತನನ್ನು ಗುರು ಪದದಲ್ಲಿ ಸ್ಥಾಪಿಸದಿರುವೆನು. ದೈವಸಾಕ್ಷಾತ್ಕಾರಕ್ಕೆ ಸದ್ಗುರೂಪದೇಶವು ಆವಶ್ಯವೆಂಬ ನಂಬುಗೆಯು ನನಗೆ ಅತ್ಯಧಿಕವಾಗಿಯೇ ಇರುವುದು. ಗುರುವಿಲ್ಲದಿದ್ದರೆ ಸನ್ಮಾರ್ಗವೂ ಜ್ಞಾನವೂ ಗೋಚರಿಸುವುದಿಲ್ಲವೆಂಬುದು ಸತ್ಯ. ಐಹಿಕ ವಿಚಾರದಲ್ಲಿ ಅಸಮಗ್ರನಾದ ಗುರುವು ಕೆಲಸಕ್ಕೆ ಬರುತ್ತಾನಲ್ಲದೆ ಆಧ್ಯಾತ್ಮವಿಚಾರದಲ್ಲಿ ಹಾಗೆ ಕೆಲಸಕ್ಕೆ ಬರುವುದಿಲ್ಲ. ಅಪರೋಕ್ಷಜ್ಞಾನಿಯೇ ಗುರು ಪದಕ್ಕೆ ಅರ್ಹನು. ಆಯಾ ವ್ಯಕ್ತಿಗಳ ಅರ್ಹತೆಯನ್ನನುಸರಿಸಿಯೇ ಗುರುಗಳು ಲಭಿಸುವರು. ಸಂಪೂರ್ಣ ಜ್ಞಾನವನ್ನು ಹೊಂದಲು ಮನುಷ್ಯನು ನಿರಂತರವೂ ಕೃಷಿಮಾಡುತ್ತಲೇ ಇರಬೇಕು. ಅದಕ್ಕೆ ಮನುಷ್ಯರಿಗೆ ಹಕ್ಕಿರುವುದು. ಉಳಿದುದೆಲ್ಲವೂ ಭಗವದಧೀನವಾಗಿಯೇ ಇರುವುದು. ನಾನು ರಾಜಚಂದ್ರ ಕವಿಯನ್ನು ಗುರುವನ್ನಾಗಿ ಮಾಡಿಕೊಳ್ಳದಿದ್ದರೂ ಅನೇಕಸಾರಿ ಆತನು ನನಗೆ ಮಾರ್ಗದರ್ಶಕನಾಗಿದ್ದನು. ಪ್ರತ್ಯಕ್ಷಸಂದರ್ಶನಕ್ಕೋಸ್ಕರ ರಾಜಚಂದ್ರಕವಿಯು ಗ್ರಂಥಪಠನದಿಂದಲೂ, ಭಗವಂತನ ರಾಜ್ಯವು ನಿನ್ನೊಳಗೇ ಇದೆ ಎಂದು ಟಾಲಸ್ಟಾಯ್ ಬರೆದಿರುವ ಗ್ರಂಥದಿಂದಲೂ, ರಸ್ಕಿನ್ ಬರೆದಿರುವ ಅನ್‌ಟುದಿಲಾಸ್ಟ್ ಎಂಬ ಪುಸ್ತಕ ಪಠನದಿಂದಲೂ ನನಗೆ ವಿಶೇಷಭಕ್ತಿಯುಂಟಾಯಿತು.

ವೈ ಸ್ಟಾರ್

ಅಮೇರಿಕದಲ್ಲಿ ಮದ್ಯಪಾನ ನಿಷೇಧ.

(ಇದು ಸಿ ರಾಜಗೋಪಾಲಾಚಾರ್ಯರು ಬರೆದ ಲೇಖನದಿಂದ ಸಂಗ್ರಹಿಸಲ್ಪಟ್ಟಿದೆ)

ಅಮೇರಿಕದಲ್ಲಿ ಮದ್ಯಪಾನ ನಿಷೇಧ ವಿಷಯಕವಾದ ಠರಾವು ಮಂಜೂರಾದ ಮೇಲೆ ಜನರು ಮದ್ಯಪಾನವನ್ನು ಬಿಟ್ಟುಬಿಡಲಿಲ್ಲ. ಅದರ ಬದಲಾಗಿ ಮೊದಲಿಗಿಂತಲೂ ಹೆಚ್ಚಾಗಿ ಈ ದುರ್ವ್ಯಸನಕ್ಕೆ ಬಲಿ ಬೀಳುವರೆಂದು ಅನೇಕರು ಹೇಳುವುದುಂಟು. ಆದರೆ ಸತ್ಯ ಸ್ಥಿತಿಯನ್ನು ನೋಡಿದ ಪಕ್ಷದಲ್ಲಿ ಹೀಗೆ ಹೇಳುವುದಕ್ಕೆ ಆಧಾರವಿಲ್ಲವೆಂದು ಕಂಡುಬರುವುದು. ಈ ಶಾಸನವನ್ನು ಜಾರಿಗೆ ತಂದು ನಾಲ್ಕು ವರ್ಷ ನಿಷೇಧಕ್ಕಾಗಿ ಕೆಲಸನಡೆದ ಮೇಲೆ 1924ನೇ ಇಸವಿ ಮೇ 28ಕ್ಕೆ ಇದರಿಂದಾದ ಫಲಾಫಲಗಳನ್ನು ವಿವೇಚಿಸುವುದಕ್ಕೊಂದು ಕಮಿಟಿಯು ಸ್ಥಾಪಿತವಾಯಿತು. ಅವರು ಕೊಟ್ಟ ರಿಪೋರ್ಟನ್ನು ನೋಡಿದರೆ, ಬಹುಮಂದಿಯಲ್ಲಿರುವ ಅಭಿಪ್ರಾಯವು, ಎಂದರೆ ನಿಷೇಧದ ಠರಾವು ಮಾನ್ಯವಾದ ಮೇಲೆ ಮದ್ಯಪಾಯಿಗಳ ಸಂಖ್ಯೆ ಹೆಚ್ಚಾಗಿರುವುದೆಂಬುದು ಸುಳ್ಳೆಂದು ಕಂಡು ಬರುತ್ತದೆ.

19೨೨ನೇ ಇಸವಿಯಲ್ಲಿ ಪ್ಯಾರಿಸ್ ಪಟ್ಟಣದಲ್ಲಿ ಮದ್ಯಪಾನೋತ್ತೇಜಕವಾದೊಂದು ಗುಪ್ತ ಸಭೆಯು ಫ್ರಾನ್ಸ್ ದೇಶದಲ್ಲಿ ಕೂಡಿತು. ಮದ್ಯಪಾನವು ಹೆಚ್ಚುವಂತೆ ಮಾಡಿ ಮಾದಕ ಪದಾರ್ಥಗಳ ಮಾರಾಟವು ಹೆಚ್ಚುವಂತೆ ಮಾಡುವುದೇ ಅವರ ಉದ್ದೇಶವು. ಅವರು ಇದಕ್ಕೆ ಲಕ್ಷಾವಧಿ ಹಣವನ್ನು ಒಟ್ಟುಗೂಡಿಸಿದ್ದರು. ಯೂರೋಪು ಖಂಡದಲ್ಲಿ ಮದ್ಯಪಾನ ನಿಷೇಧಕ್ಕೆ ಆಸ್ಪದ ದೊರೆಯಲಾರದೆಂದೂ, ಮುಖ್ಯವಾಗಿ ಅಮೇರಿಕದಲ್ಲಿ ಆ ಠರಾವು ಇರುವುದರಿಂದ ಅದರ ವಿರುದ್ಧವಾಗಿ ಕೆಲಸ ಮಾಡುವುದೆ ಅವರ ಆದ್ಯ ಕಾರ್ಯವಾಗಿತ್ತು. ಈ ರೀತಿಯಲ್ಲಿ ಆತ್ಮಲಾಭವನ್ನು ನೋಡುವ ಕೆಲಜನರಿಂದ ಮಾತ್ರ ಅಮೇರಿಕದ ವಿಷಯವಾಗಿ ಸುಳ್ಳು ಅಭಿಪ್ರಾಯಗಳು ಜನರಲ್ಲಿ ಉಂಟಾಯಿತು.

ನಿಷೇಧ ಠರಾವು ಜಾರಿಗೆ ಬಂದುದರ ಪರಿಣಾಮವು ಅನೇಕ ವಿಷಯಗಳಲ್ಲಿ ಕಂಡುಬರುತ್ತದೆಂದು, ಆ ವಿಷಯವನ್ನು ವಿಚಾರಿಸಲು ಸ್ಥಾಪಿತವಾದ ಕಮಿಟಿಯ ಅಭಿಪ್ರಾಯವಾಗಿರುವುದು. ಅದಕ್ಕೆ ಕೆಲವು ಉದಾಹರಣೆಗಳನ್ನು ಇಲ್ಲಿ ಕೊಡಬಹುದು.

(1) ಸೇವಿಂಗ್ಸ್ ಬೇಂಕುಗಳಲ್ಲಿ ಜನರು ಇಡುವ ಹಣವು ನಿಷೇಧ ಠರಾವಿನ ಪೂರ್ವದಲ್ಲಿದ್ದುದಕ್ಕಿಂತ ನಾಲ್ಕರಷ್ಟು ಹೆಚ್ಚಾಗಿದೆ. ಜನರ ಉಳಿತಾಯವು ಹೆಚ್ಚುತ್ತಾ ಬರುತ್ತಿರುತ್ತಿದೆಯೆಂದು ಬೇಂಕುಗಳ ಯಜಮಾನರೂ ಸ್ವಾನುಭವದಿಂದ ಹೇಳುವರು. (2) ಜೀವ ವಿಮೆಗಳ ಸಂಖ್ಯೆಯೂ ಹೆಚ್ಚಾಗಿರುವುದು ಇದೂ ನಿಷೇಧದ ಪರಿಣಾಮವೆಂದು ಬಲ್ಲವರು ಹೇಳುವರು. (3) ಸಾಮಾನ್ಯರಲ್ಲಿ ಹಣವು ಹೆಚ್ಚಿರುವುದರಿಂದ ಕಟ್ಟಡಗಳ ಸಂಖ್ಯೆಯು ಬೆಳೆಯುತ್ತಿದೆ. ಮೊದಲು ಸಣ್ಣ ಮನೆಯನ್ನು ಬಾಡಿಗೆಗೆ ಮಾಡಿಕೊಂಡಿದ್ದವನು ಈಗ ಅದರ ಯಜಮಾನನು, ಚಿಕ್ಕ ಕೋಣೆಯಲ್ಲಿ ವಾಸಿಸುತ್ತಿದ್ದವನು ಈಗ ಭವ್ಯ ಮಂದಿರದಲ್ಲಿ ವಾಸಿಸುತ್ತಿರುವನು. (4) ಜೀವನದ ಕ್ರಮಗತಿ ಹೆಚ್ಚಿ ಕೈಗಾರಿಕೆ ಅಭಿವೃದ್ಧಿಗೊಂಡಿರುವುದು. ಅದರ ವಿಭಾಗವೂ ಸರಿಯಾಗಿ ಆಗುತ್ತಿರುವುದು. (5) ಕುಡಿಕತನದಿಂದ ಉಂಟಾಗುವ ಕೊಲೆ ಕಳವುಗಳು ಕಡಿಮೆಯಾಗಿರುವುವು.

ಮದ್ಯಪಾನ ನಿಷೇಧದ ಪರಿಣಾಮವಾಗಿ ಅಮೇರಿಕಕ್ಕೆ ಇಷ್ಟೆಲ್ಲಾ ಪ್ರಯೋಜನಗಳು ಆಗುತ್ತಿರುವಾಗ, ಅಲ್ಲಿ ಮದ್ಯಪಾಯಿಗಳ ಸಂಖ್ಯೆಯು ಹೆಚ್ಚಾಗಿರುವುದೆಂಬಿವೇ ಮೊದಲಾದ ವಾರ್ತೆಗಳನ್ನು ಹಬ್ಬಿಸುವುದು, ಸ್ವಾರ್ಥಿಗಳ ಕೆಲಸವೆಂದು ಪ್ರತ್ಯೇಕ ಹೇಳಬೇಕಾಗಿಲ್ಲ. ಆಸ್ಟ್ರೇಲಿಯಾ ಸರಕಾರದಿಂದ ನಿಯುಕ್ತರಾದ ಜೇಮ್ಸ್ ಸ್ಕೇಕ್ ಎಂಬುವರು, ಅಮೇರಿಕಕ್ಕೆ ಹೋಗಿ ಅಲ್ಲಿಯ ಸ್ಥಿತಿಗತಿಗಳನ್ನು ಸ್ವತಃ ಪರೀಕ್ಷಿಸಿ ತಮ್ಮ ಅಭಿಪ್ರಾಯವನ್ನು ಹೀಗೆ ಕೊಟ್ಟಿರುವರು "ಸವಿಪನ ನಷ್ಟಗಳಿಲ್ಲದೆ ಕೇವಲ ಶಾಸನದ ಒತ್ತಾಯದಿಂದಲೆ ಪಾನನಿಷೇಧವನ್ನುಂಟುಮಾಡಿದುದರಿಂದ ಅಮೇರಿಕಕ್ಕೆ ಎಷ್ಟೋ ಪ್ರಯೋಜನಗಳಾಗಿವೆ. ಅಮೇರಿಕಕ್ಕೆ ಇದರಿಂದ ಆದ ಆರ್ಥಿಕ ಲಾಭವು ವಿಪುಲವಾಗಿದೆ.' ಇದರಿಂದ ಅಮೇರಿಕದಲ್ಲಿ ಮದ್ಯಪಾನ ನಿಷೇಧದ ಇಂದಿನ ನಿಜವಾದ ಸ್ಥಿತಿಯನ್ನು ತಿಳಿದುಕೊಳ್ಳಬಹುದು.

'ನವಯುಗ"

ಕೋವಿಗಳ ಸ್ವಾಧೀನತೆ.

ಒಂದು ಪ್ರಕಟಣೆ.

ದೇಶದಿಂದ ಹೊರಗೆ ಹೋಗುವವರು ತಮ್ಮ ಕೋವಿಯನ್ನು ಕೊಡಗರಲ್ಲದವರಿಗಾಗಲೀ ನಮ್ಮ ಕೈತರಲ್ಲದವರಿಗಾಗಲೀ ಲೈಸನ್ಸ್ ಇಲ್ಲದವರಿಗಾಗಲೀ ವಿಚಾರಿಸಿಕೊಳ್ಳದೆ ಇಟ್ಟು ಹೋಗಬಾರದು. ಹಾಗೆ ಇಟ್ಟದ್ದನ್ನು ಲೈಸನ್ಸ್ ಕೊಡುವ ಅಧಿಕಾರಿಗಳಿಗೆ ತಿಳಿಸದೆಯೂ ಹೋಗಬಾರದು. ಇಂಡಿಯನ್ ಆರ್ಮ್ಸ್ ಆಕ್ಟಿನಲ್ಲಿ ಹೇಳಿರುವ ಮೇರೆ ಅಲ್ಲದೆ ಕೋವಿಯನ್ನು ಬೇರೆಯವರಲ್ಲಿ ಇಟ್ಟರೆ ಆಕ್ಟ್ ಮೀರಿ ತಕ್ಸೀರು ಆಗುತ್ತದೆ. ಆದ್ದರಿಂದ ಲೈಸನ್ಸ್‌ದಾರರಿಗೂ ಸತ್ಯ ಮಹಾಜನರಿಗೂ ಇಂಡಿಯನ್ ಆರ್ಮ್ಸ್ ಆಕ್ಟ್ ಮತ್ತು ರೂಲ್ಸಿಗೆ ವಿರೋಧವಾಗಿ ನಡೆಯಬಾರದೆಂತ ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರು ಈ ಮೂಲಕ ಎಚ್ಚರಿಸಿದ್ದಾರೆ.

2. ಅಂಥಾ ಸಂದರ್ಭದಲ್ಲಿ ಲೈಸನ್ಸ್‌ದಾರರು ಮಾಡಬೇಕಾದದ್ದೇನೆಂದರೆ—ತಮ್ಮ ಕೋವಿಯನ್ನು ಭದ್ರವಾಗಿ ಇಡುವುದಕ್ಕಾಗಿ ಪೋಲೀಸ್ ಸ್ಟೇಶನ್ನಿನವರಿಗಾಗಲೀ, ಅಥವಾ IX, X, XI, ಅಥವಾ XIIನೇ ಫಾರಮಿನಲ್ಲಿ ಲೈಸನ್ಸ್ ಪಡೆದು ವ್ಯಾಪಾರ ಮಾಡುವ ಹಕ್ಕಿರುವವರಿಗಾಗಲೀ ಇಡಬೇಕು. ಹೀಗೆ ಮಾರಾಟ ಮಾಡುವವರಲ್ಲಿ ಇಡುವವರಾದರೆ ಅಂಥವರು ಅಂಥಾ ಕೋವಿಯನ್ನು ಇಟ್ಟುಕೊಳ್ಳಲು ಮಾಫಿಯಾಗಿ ಕೊಡಲ್ಪಡುವ XIIIನೇ ಫಾರಮಿನಲ್ಲಿ ಲೈಸನ್ಸ್ ಪಡೆದುಕೊಳ್ಳಬೇಕು. ಲೈಸನ್ಸ್‌ದಾರರಿಗೆ ಮನಸ್ಸಿದ್ದರೆ ತಮ್ಮ ಪಿಸ್ತೂಲು ಅಥವಾ ರಿವಾಲ್ವರ್ ಅಲ್ಲದ ಕೋವಿಯನ್ನು ಖಾಸಗಿ ಮನುಷ್ಯರಲ್ಲೂ ಇಡಬಹುದು. ಆದರೆ ಅಂಥವರ ಹೆಸರಿನಲ್ಲಿ ಮಾಫಿಯಾಗಿ ಕೊಡಲ್ಪಡುವ XIVನೇ ಫಾರಮಿನಲ್ಲಿ ಲೈಸನ್ಸನ್ನು ಪಡೆಯಬೇಕು. ರಿವಾಲ್ವರ್ ಮತ್ತು ಪಿಸ್ತೂಲುಗಳನ್ನು ಮಾತ್ರ ತರಾದ್ದನ್ನು ಇಟ್ಟುಕೊಳ್ಳುವವರು XVIನೇ ಫಾರಮಿನಲ್ಲಿ ನಿಗದಿಯಾದಷ್ಟು ಫೀಸನ್ನು ತೆತ್ತು ಲೈಸನ್ಸ್ ಪಡೆಯಬೇಕು. ಒಮ್ಮೆ ಕೈತರಿಗೂ, ಕೊಡಗರಿಗೂ ಈ ಲೈಸನ್ಸ್ ಪಡೆಯಬೇಕಾದ ಅವಶ್ಯವಿಲ್ಲ. ಇನ್ನು ಮುಂದೆ ಎಲ್ಲಾ ಲೈಸನ್ಸ್‌ದಾರರು ಈ ಕ್ರಮವನ್ನು ಅನುಸರಿಸುವರೆಂತ ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರು ನಂಬುತ್ತಾರೆ.

ಕೆ. ಚಂಗಪ್ಪ, (ಎಂತಿರು)

29—6—1926

ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟ್.

ವಿದ್ಯಾರಣ್ಯ.

(…ವ ಮುಂದುವರಿದದ್ದು)

…ವಾದ ಮಠ ಸಂಸ್ಥೆಗೆ ಪ್ರಥಮ… …ನಲ್ಲಿಯೂ ಸಿದ್ಧನು. ಅನ್ಯಾದೃಶ ವಿದ್ಯಾ…ನು. ಇವನು ೧೦೮ ಗ್ರಂಥಗಳನ್ನು ಬರೆದನೆಂದು ಪ್ರತೀತಿ. ಇವನ ಹೆಸರು ಹೇಳಿಕೊಳ್ಳುತ್ತಿರುವ ಗ್ರಂಥಗಳು ಇದಕ್ಕೆರಡರಷ್ಟಿವೆ. ಸಕಲವಾದ ಶಾಸ್ತ್ರಗಳ ಮೇಲೂ ಇವನ ಹೆಸರಿನ ಗ್ರಂಥಗಳು ದೊರೆಯುತ್ತವೆ. ವಿದ್ಯಾರಣ್ಯನೇ ಇಷ್ಟೊಂದನ್ನೂ ಬರೆಯದಿದ್ದರೂ ಈತನ ಪೋಷಣೆಯಲ್ಲಿ ಇವು ಹುಟ್ಟಿರುವದರಲ್ಲಿ ಸಂಶಯವಿಲ್ಲ. ತನ್ನ ಕಾಲದ ವರೆಗೆ ಹುಟ್ಟಿದ್ದ ಆರ್ಯ ವಿದ್ಯಾರಾಶಿಯನ್ನೆಲ್ಲಾ ಈತನು ಕ್ರೋಢೀಕರಿಸಿ ಟಿಪ್ಪಣಿಗಳನ್ನು ಕೈಪಿಡಿಗಳನ್ನು ನಿಬಂಧಗಳನ್ನು ಬರೆಯಿಸಿರುವನು. ವೇದವ್ಯಾಸನನ್ನು ಬಿಟ್ಟರೆ ನಮ್ಮಲ್ಲಿ ಮತ್ತಾರೂ ವಿದ್ಯಾರಣ್ಯನಷ್ಟು ಬಹು ಗ್ರಂಥಗಳಿಗೆ ಪ್ರವರ್ತಕರಾಗಿಲ್ಲ. ಈ ಕಾರ್ಯದ ಜತೆಗೆ ವಿದ್ಯಾರಣ್ಯನು ರಾಜರಂಗವನ್ನು ಹೊಕ್ಕು ಸಾಮ್ರಾಜ್ಯ ಸಂಸ್ಥಾಪನೆಯಲ್ಲಿ ಕೈಹಾಕಿ ಮಂತ್ರಿಪದಾಧಿಷ್ಠಿತನಾಗಿ ರಾಜ್ಯಭಾರವನ್ನು ನಡೆಸಿ ಪ್ರಸಿದ್ಧನಾಗಿರುವನು. ಅಲ್ಲದೆ ರಮಣೀಯ ಶಿಲ್ಪಗಳಿಂದಲಂಕೃತವಾದ ಶೃಂಗೇರಿಯನ್ನು ಕಟ್ಟಿಸಿದನು. ಆಪಾತತಃ ಪರಸ್ಪರ ವಿರುದ್ಧಗಳಾದ ಇಷ್ಟೊಂದು ಗುಣಗಳನ್ನು ಪಡೆದಿರುವ ಈತನನ್ನು ಜನಕೋಟಿಯು ಅಂಶಪುರುಷನೆಂದು ಭಾವಿಸಿ ಪೂಜಿಸುವದರಲ್ಲಿ ಆಶ್ಚರ್ಯವೇನು?

ಲೋಕಸೂತ್ರದ ವ್ಯವಸ್ಥೆಯನ್ನು ಉದ್ಧರಿಸಿ ಸಂರಕ್ಷಿಸಿ ಪರಿಷ್ಕರಿಸಿ ಸ್ವಜನಕ್ಕೆ ಮಾರ್ಗದರ್ಶಕರಾಗುವ ಕಾರ್ಯವು ಮಹಾ ಪುರುಷರದು. ಈ ಅಂಶದಲ್ಲಿಯೂ ವಿದ್ಯಾರಣ್ಯನು ಅತ್ಯುತ್ತಮವಾದ ಸ್ಥಾನವನ್ನು ಪಡೆದಿರುವನು. ಮುಸಲ್ಮಾನರ ದಾಳಿಯಿಂದ ರಾಜಕೀಯಾದಿ ಸಮಸ್ತ ಬಗೆಯ ವ್ಯವಸ್ಥೆಗಳನ್ನು ಕಳೆದುಕೊಂಡು ದೀನವಾಗಿದ್ದ ದಕ್ಷಿಣ ಭರತಭೂಮಿಚಕ್ರವನ್ನು ಲೀಲಾಜಾಲವಾಗಿ ಕಳೆಗೊಳಿಸಿ ವಿದ್ಯಾನಗರ ಸಾಮ್ರಾಜ್ಯವನ್ನೂ ವಿದ್ಯಾಸಾಮ್ರಾಜ್ಯವನ್ನೂ ಕಲ್ಪಿಸಿ, ಹಿಂದೂ ಧರ್ಮಕ್ಕೂ ಹಿಂದೂವಿದ್ಯೆಗಳಿಗೂ ಪುನರ್ಜೀವನವನ್ನಿತ್ತುದಕ್ಕಿಂತಲೂ ಅತಿಶಯವಾದ ಕಾರ್ಯವನ್ನು ಭಾರತಭೂರಂಗದಲ್ಲಿ ಮತ್ತೆಷ್ಟು ಮಂದಿ ಪುರುಷಶ್ರೇಷ್ಠರುಮಾಡಿರುವರು? ಈಗಿನ ನಮ್ಮ ದೇಶೀಯರಿಗೆ ವಿದ್ಯಾರಣ್ಯನಿಗಿಂತಲೂ ಉತ್ತಮರಾದ ಮಾರ್ಗದರ್ಶಕರು ಮತ್ತಾರುಂಟು? ಬ್ರಾಹ್ಮಣ್ಯಕ್ಕೂ ಸನ್ಯಾಸಕ್ಕೂ ಕ್ಷಾತ್ರವೃತ್ತಿಗೂ ವಿರೋಧವೇನೂ ಇಲ್ಲ. ಸನ್ಯಾಸಿಯಾಗಿದ್ದರೂ ದೇಶಸೇವೆ ಮಾಡಬೇಕು. ಮಠಾಧಿಪತಿಯಾಗಿದ್ದರೂ ರಾಜಕಾರ್ಯಚಾರಿಯಾಗಬೇಕು. ಸ್ವರಾಜ್ಯವಿಲ್ಲದೆ ಸ್ವಧರ್ಮ ವುಳಿಯಲಾರದು ಎಂಬ ಅನುಷ್ಠಾನ ಪೂರ್ವಕವಾದ ಉಪದೇಶವನ್ನು ವಿದ್ಯಾರಣ್ಯನಂತೆ ನಮಗೆ ಈಗ ಮತ್ತಾವ ಐತಿಹಾಸಿಕ ಪುರುಷರು ಸಾರುತ್ತಿರುವರು?

ಜನಕೋಟಿಯು ವಿದ್ಯಾರಣ್ಯನ ವಿಷಯವಾಗಿ ಕಟ್ಟಿಕೊಂಡಿರುವ ಕಥೆಗಳನ್ನು ಐತಿಹ್ಯಗಳನ್ನು ಇತಿಹಾಸವಿದರೇನೋ ಒಪ್ಪುವದಿಲ್ಲ. ಕೆಲವರು ವಿದ್ಯಾರಣ್ಯನೂ ಮಾಧವಾಚಾರ್ಯನೂ ಒಬ್ಬರೇ ಎಂಬುದನ್ನು ಸಂದೇಹಿಸುವರು. ಕೆಲವರು ಸಾಯನನು ವಿದ್ಯಾರಣ್ಯನ ತಮ್ಮನೆಂಬುದನ್ನು ಶಂಕಿಸುವರು. ಈತನ ಜೀವಮಾನ ಕಾಲವನ್ನು ಕುರಿತು ಎಷ್ಟೋ ಅನುಮಾನಗಳುಂಟು. ಈತನು ಬರೆದ ಗ್ರಂಥಗಳನ್ನು ಕುರಿತು ಎಷ್ಟೋ ಸಂಶಯಗಳುಂಟು. ವಿದ್ಯಾನಗರ ಸಾಮ್ರಾಜ್ಯದ ಪ್ರತಿಷ್ಠೆಗೆ ಈತನ ಗುರು ವಿದ್ಯಾತೀರ್ಥನು ಕಾರಣನಲ್ಲದೆ ಈತನಲ್ಲವೆಂದು ಕೆಲವರು ನಿರೂಪಿಸುವರು. ಹೀಗೆ ಈತನ ಚರಿತ್ರೆಯ ವಿಷಯವಾಗಿ ವಿಸ್ತಾರವಾಗಿ ಭಿನ್ನಾಭಿಪ್ರಾಯಗಳಿವೆ. ಹೀಗಿದ್ದ ಮಾತ್ರಕ್ಕೆ ಏನಾಯಿತು? ಇಂಥಾ ಆಕ್ಷೇಪಗಳಿಂದ ಇವನು ವ್ಯಾಕ್ತಿಕವಾಗಿ ಸಂಕುಚಿತನು ಮಹಿಮನಾಗುವದು ನಿಜ. ಆದರೆ ವಿದ್ಯಾರಣ್ಯನನ್ನು ನಾವು ಕೇವಲ ಅವನ ವ್ಯಾಕ್ತಿಕಮಹಿಮೆಯೊಂದಕ್ಕಾಗಿ ಮಾತ್ರ ಆರಾಧಿಸುವದಿಲ್ಲ. ಕನ್ನಡಿಗರಿಗೆ ಸದ್ಯದ ಪರಿಸ್ಥಿತಿಯಲ್ಲಿ ವಿದ್ಯಾರಣ್ಯನು ವ್ಯಾಕ್ತಿಕಾತೀತವಾದ ಮತ್ತೊಂದು ಕೀರ್ತಿರಂಗದಲ್ಲಿ ಮಾನ್ಯನಾಗಿರುವನು. ಈ ವಿಷಯವನ್ನು ಪರಕೀಯರು ಅರಿತಿಲ್ಲ.

ಭರತಖಂಡವು ಅನಾದಿಕಾಲದಿಂದಲೇ ಒಂದೇ ಒಂದು ಜನಾಂಗವಾಗಿ ಬೆಳೆಯಲು ಪ್ರಯತ್ನಿಸುತ್ತಿರುವದು. ಆದರೆ ಫ್ರಾನ್ಸಿನಂತೆ ಇಲ್ಲಿ ಒಂದು ಅವಿಭಕ್ತ ಜನಾಂಗವು ಬೆಳೆಯಲಾಗುವದಿಲ್ಲವಾದ್ದರಿಂದ ಹಲವು ಪ್ರಾಂತಿಕ ಶಾಖಾ ಪ್ರಭೇದಗಳಿಂದೊಡಗೂಡಿದ ಸಂಯುಕ್ತ ಜನಾಂಗವು ಹುಟ್ಟಿ ಬೆಳೆಯುತ್ತಿರುವದು. ಈ ಲಕ್ಷ್ಯ ಸಾಧನೆಗಾಗಿ ಕರ್ನಾಟಕ ದೇಶವು ಸಹ ಒಂದು ಶಾಖಾ ಜನಾಂಗವಾಗಿ ಬೆಳೆಯುವದು ಅತ್ಯಾವಶ್ಯಕವಾಗಿರುವದು.

ಕರ್ನಾಟಕವು ಪ್ರಾಂತಿಕ ಜನಾಂಗವಾಗಿ ಬೆಳೆಯುವದಕ್ಕೆ ಈಗ ಸಹಾಯಕವಾದ ಅಂಶಗಳು ತೀರ ಕಡಿಮೆ. ಚರಿತ್ರೆಯಲ್ಲಿ ಯಾವುದೊಂದು ಕಾಲದಲ್ಲಿ ಕರ್ನಾಟಕ ಭೂಮಿಯೆಲ್ಲವೂ ಒಂದೇ ರಾಜ್ಯಕ್ಕೆ ಸೇರಲಿಲ್ಲ. ಚಾಳುಕ್ಯರು, ಹೊಯ್ಸಳರು, ವಿಜಯನಗರದವರು, ಹೈದರನು ಇವರು ಕರ್ನಾಟಕದ ಬಹು ಭಾಗವನ್ನು ಒಂದುಗೂಡಿಸಿದ್ದರಾದರೂ ಕೃಷ್ಣಾ, ಗೋದಾವರಿ ಮಧ್ಯಸ್ಥವಾದ ದೇಶವನ್ನು ಮಾತ್ರ ಆಳಲು ಸಮರ್ಥರಾಗಲಿಲ್ಲ. ಕರ್ನಾಟಕ ದೇಶಕ್ಕೆ ಏಕಪ್ರಕಾರವಾದ ಏಕಮುಖವಾದ ಸರ್ವಸಾಮಾನ್ಯವಾದ ಚರಿತ್ರೆಯಾಗಲಿ ಐತಿಹ್ಯಗಳಾಗಲೀ ಆಚಾರ ಸಂಪ್ರದಾಯಗಳಾಗಲಿ ಇಲ್ಲ. ಭರತಭೂಮಿಯ ಸಕಲ ಲೋಕಧರ್ಮಗಳೂ ಇಲ್ಲಿ ಬೀಡುಗೊಂಡಿವೆ. ಕನ್ನಡ ಭಾಷೆಯಲ್ಲಿ ೮–೧೦ ಉಪಭೇದಗಳು ಇವೆ. ವಿಜಯನಗರದ ಸೂರ್ಯನು ಅಸ್ತನಾದ ಮೇಲೆ ಕರ್ನಾಟಕವು ಒಂದು ಶತಮಾನ ಅನಾಯಕತೆಯಿಂದ ಭಂಗಪಟ್ಟನಂತರ ಮರಾಠರ ಕಾಲ್ತುಳಿತಕ್ಕೆ ಸಿಕ್ಕು ಮೂರುವರೆ ಶತಮಾನಗಳ ಪರಾಕ್ರಮಣೆಯಿಂದ ದೀನವಾಗಿ ದೆಸೆಗೆಟ್ಟು ತೊಳಲುತ್ತಿರುವದು. ಇದರಿಂದ ಕನ್ನಡಿಗರು ಉತ್ಸಾಹಶೂನ್ಯರಾಗಿ ಹರ್ಷವರ್ಜಿತರಾಗಿ ಧ್ಯೇಯಹೀನರಾಗಿ ಜಡರಾಗಿ ಒಕ್ಕಟ್ಟಿಲ್ಲದೆ ಅಸ್ವಸ್ಥನ ಜೀವನ ಮಾಡುತ್ತ ಒರುತ್ತಿರುವರು. ವಿದ್ಯಾರಣ್ಯನಂತೆ ಕರ್ನಾಟಕವನ್ನು ಮತ್ತೆ ಚೇತರಿಸಲು ನಡೆಸಿದ್ದ ಹೈದರನ ಪ್ರಯತ್ನವು ಇಂಗ್ಲೀಷರಿಂದ ಭಂಗವಾಯಿತು. ಅಂದಿನಿಂದ ಕನ್ನಡಿಗರ ದೌರ್ಭಾಗ್ಯಕ್ಕೆ ಮೇರೆಯೇ ಇಲ್ಲದೆ ಹೆಚ್ಚುತ್ತ ಬಂದಿದೆ. ಇಂಥಾ ಸನ್ನಿವೇಶದಲ್ಲಿ ಕರ್ನಾಟಕದ ಒಡಲಿನಲ್ಲಿ ಮತ್ತೆ ಪ್ರಾಣಸಂಚಾರವುಂಟಾಗಿ, ಬಿದಿರಿನ ಕರ್ನಾಟಕವು ಒಂದುಗೂಡಿ ಒಂದು ಪ್ರಾಂತವಾಗಿ ಸೇರಿ, ತನ್ನದೇ ಆಗಿರತಕ್ಕ ವಿದ್ಯಾಪೀಠವನ್ನು ಪಡೆದು, ತನ್ನ ಭಾಷೆಯನ್ನು ಸಮಸ್ತಯ ಮಾಡಿಕೊಂಡು, ತನ್ನ ಸಂಸ್ಕೃತಿಯನ್ನು ಅಭಿವೃದ್ಧಿಪಡಿಸಿಕೊಳ್ಳ ಬೇಕಾದರೆ ಕರ್ನಾಟಕವೆಲ್ಲಾ ಒಂದು ಎಂಬ ಭಾವನೆಯು ಮೊದಲು ಹುಟ್ಟಿ ಬೆಳೆಯಬೇಕು. ಸದ್ಯದ ಸನ್ನಿವೇಶದಲ್ಲಿ ಇಂಥಾ ಕರ್ನಾಟಕಕ್ಕೆ ಭಾವನೆಯು ಹುಟ್ಟಬೇಕಾದರೆ ಇಂಥಾ ಭಾವನೆಗೆ ಮೂರ್ತಿಸ್ವರೂಪನಾದ ಒಬ್ಬ ಮಹಾಪುರುಷನ ಮನನ ಮಾತ್ರದಿಂದಲ್ಲದೆ ಮತ್ತಾವುದರಿಂದಲೂ ಸಾಧ್ಯವಿಲ್ಲ.

ಹಾಗಾದರೆ ಇಂಥಾ ಮಹಾ ಪುರುಷನಾವನಾದರೂ ನಮಗೆ ದೊರೆಯುವನೆ? ಭರತಖಂಡದಲ್ಲಿ ಮಹಾ ಪುರುಷರಿಗೇನೂ ಕೊರತೆ ಇಲ್ಲವಾದರೂ ಅಖಿಲ ಭರತಖಂಡಕ್ಕೂ ಸಾಮಾನ್ಯವಾಗಿ ನಾಯಕಮಣಿಗಳಾಗಿ ಆರಾಜಿಸುವ ಶ್ರೀ ರಾಮ, ಶ್ರೀ ಕೃಷ್ಣ, ಬುದ್ಧದೇವ, ಅಶೋಕ, ವಿಕ್ರಮಾರ್ಕ, ಸಮುದ್ರಗುಪ್ತ, ಹರ್ಷವರ್ಧನ, ಅಕ್ಬರ ಮೊದಲಾದವರನ್ನು ಕರ್ನಾಟಕ ಸಂಸ್ಕೃತಿಯ ಮೂರ್ತಸ್ವರೂಪರನ್ನಾಗಿ ಪರಿಗ್ರಹಿಸಲಾಗುವದಿಲ್ಲ. ಕರ್ನಾಟಕ ರಂಗದಲ್ಲೇ ಎಷ್ಟೋ ಮಂದಿ ಪೂಜ್ಯ ಪುರುಷರು ಹೆಸರುಗೊಂಡಿರುವರು. ಪುಲಕೇಶಿ, ಶ್ರೀಪುರುಷ, ರಾಷ್ಟ್ರಕೂಟರ ಗೋವಿಂದರಾಜ, ಶೂದ್ರಕ, ಗಂಗ, ಚಾವುಂಡರಾಯ, ಪಂಪ, ವಿಷ್ಣುವರ್ಧನ, ವೀರಬಲ್ಲಾಳ, ಬಸವೇಶ್ವರ, ವ್ಯಾಸರಾಯ, ಪುರಂದರ, ಕೃಷ್ಣದೇವರಾಯ, ಶಿವಪ್ಪನಾಯಕ, ಹೈದರ್ ಇವರುಗಳು ಸಾಮಾನ್ಯರಲ್ಲ. ಕರ್ನಾಟಕವು ಇವರನ್ನು ಧ್ಯಾನಿಸಿ ಪೂಜಿಸಿದಷ್ಟು ಅದರ ಧ್ಯೇಯವು ಸಿದ್ಧಿಸುವುದು. ಆದರೆ ಇವರಾರೂ ಸಂಪೂರ್ಣ ಕರ್ನಾಟಕ ಜನಾಂಗದ ಆತ್ಮಸ್ವರೂಪರೂ ಅದರ ಧ್ಯೇಯರಾಶಿಗೆ ಏಕಮಾತ್ರ ಪ್ರತಿನಿಧಿಗಳೂ ಆಗಲು ಶಕ್ತರಾಗಿಲ್ಲ. ಎಲ್ಲೋ ಕೆಲವು ದೇಶಗಳಲ್ಲಿ ಮಾತ್ರ ಇಡೀ ಜನಾಂಗಕ್ಕೆ ಪ್ರಾಣಪ್ರಿಯರಾದ "ಜನಾಂಗನಾಯಕ"ರು ದೊರೆಯುವರು. ಮರಾಠರಿಗೆ ಶಿವಾಜಿಯು ಇಂಥಾ ಜನಾಂಗನಾಯಕನಾಗಿರುವನು. ಇವರಲ್ಲಿ ಶಿವಾಜಿಯನ್ನೂ ಮೀರಿಸಿರುವ ಎಷ್ಟೋ ಮಹಾ ಪುರುಷರು ಹುಟ್ಟಿದ್ದರೂ ಶಿವಾಜಿಯೊಬ್ಬನು ಮಾತ್ರ ಅವರ ಸಂಪೂರ್ಣ ಜನಾಂಗಾತ್ಮವನ್ನು ಪ್ರತಿಬಿಂಬಿಸುತ್ತ ಅವರ ಜನಾಂಗದ ಧ್ಯೇಯರಾಶಿಗೆ ಸಂಜ್ಞಾ ಸ್ವರೂಪನಾಗಿರುವನು. ಹೀಗೆಯೆ ರಾಜಪುತ್ರರಿಗೆ ಪ್ರತಾಪನೂ ಸಿಖರಿಗೆ ಗುರು ಗೋವಿಂದನೂ "ಜನಾಂಗನಾಯಕ"ರಾಗಿರುವರು. ಅಮೇರಿಕದ ಸಂಯುಕ್ತ ರಾಜ್ಯದಲ್ಲಿ ಈಜೆಗೆ ವಾಶಿಂಗ್ಟನ್ನನನ್ನು ಈ ರೀತಿ ಮಾಡಿಕೊಂಡಿರುವರು. ಭರತಖಂಡದಲ್ಲಿ ಕನ್ನಡಿಗರಿಗಿಂತಲೂ ಮುಂದುವರಿದಿರುವ ಬಂಗಾಳಿಗಳು, ಗುಜರಾಥಿಗಳು, ಆಂಧ್ರರು, ತಮಿಳರು, ಕೇರಳರು, ಉತ್ಕಲರು ಇವರಾರೂ ಸಹ ಎಷ್ಟೇ ಬಯಸಿದರೂ ಇಂಥಾ ಜನಾಂಗನಾಯಕರಾದ ಮಹಾ ಸ್ತ್ರೀ ಪುರುಷರನ್ನು ಪಡೆದಿಲ್ಲ. ಆದರೆ ಕರ್ನಾಟಕಕ್ಕೆ ಇಂಥಾ ನಾಯಕನು ದೊರೆಯುವನೇ?

ನಮ್ಮ ಅದೃಷ್ಟ ವಿಶೇಷದಿಂದ ವಿದ್ಯಾರಣ್ಯನು ಇಂಥಾ ಪದವಿಯನ್ನಲಂಕರಿಸಲು ಯೋಗ್ಯನಾಗಿ ಲಭಿಸಿರುವನು. ಸಾಂಪ್ರದಾಯಕವಾಗಿ ಪ್ರಚಾರದಲ್ಲಿರುವ ಕಥಾವಳಿಯೂ ಐತಿಹ್ಯಗಳೂ ಇವನಲ್ಲಿ ಇಂಥಾ ಯೋಗ್ಯತೆಯನ್ನು ನಿರೂಪಿಸಿರುವವು. ಕರ್ನಾಟಕದ ಮತ್ತಾವ ಮಹಾ ಪುರುಷನೂ ಸರ್ವತೋಮುಖ ಮಹಿಮನಾದ ವಿದ್ಯಾರಣ್ಯನೊಡನೆ ಈ ವಿಷಯದಲ್ಲಿ ಸರಿಗಟ್ಟಲಾರನು. ಅನೇಕರು ಇವನನ್ನು ಒಂದೊಂದು ಅಂಶದಲ್ಲಿ ಮೀರಿಸಬಹುದಾದರೂ ಮೊತ್ತದಲ್ಲಿ ಎಲ್ಲರೂ ಹಿಂದೆ ಬೀಳುವರು. ಕರ್ನಾಟಕ ಸಂಸ್ಕೃತಿಯ ಮೂಲಸ್ತಂಭವೂ ಕರ್ನಾಟಕದ ಧ್ಯೇಯಗಳ ಮತ್ತು ಆಶೋತ್ತರಗಳ ಪ್ರತಿಬಿಂಬವೂ, ಕರ್ನಾಟಕ ಜನಾಂಗ ಪುರುಷನ ಆತ್ಮನೂ, ಕರ್ನಾಟಕ ಮಾತೆಯ ಅವತಾರಿಯೂ, ಕರ್ನಾಟಕ ಭಾವನೆಯ ಮೂರ್ತಸ್ವರೂಪನೂ ಆದ ಮಹಾನುಭಾವನು ವಿದ್ಯಾರಣ್ಯನೊಬ್ಬನೇ. ಕರ್ನಾಟಕ ಧ್ಯೇಯರಾಶಿಗಳು ರೂಪುಗೊಳ್ಳುವುದಾದರೆ ಅಂಥಾ ಪುರುಷನು ವಿದ್ಯಾರಣ್ಯನಾಗಿರುವನು.

ಆದ್ದರಿಂದ ವಿದ್ಯಾರಣ್ಯನನ್ನು ಆರಾಧಿಸುವದೆಂದರೆ ಕರ್ನಾಟಕದ ಧ್ಯೇಯವನ್ನೂ, ಆಶೋತ್ತರಗಳನ್ನೂ, ಸಂಸ್ಕೃತಿಯನ್ನೂ, ವಿದ್ಯೆಗಳನ್ನೂ, ಜನಾಂಗಾತ್ಮವನ್ನೂ ಆರಾಧಿಸಿದಂತೆಯೇ ಸರಿ. ಇದೇ ವಿದ್ಯಾರಣ್ಯನಲ್ಲಿರುವ ವ್ಯಾಕ್ತಿಕಾತೀತವಾದ ಮಹಿಮಾ ಸಂಪತ್ತಿಯು.

ಕ ವಿ.

ಮಳೆಯಿಂದುಂಟಾದ ನಷ್ಟ.

(ಸ್ವಂತ ವಾತ್ತಾದಾರರಿಂದ)

ಕಳೆದ ತಾ. 3ರಲ್ಲು ನಾನು ಪಾಲಂಗಾಲ ಗ್ರಾಮಕ್ಕೆ ಹೋಗಿ ಅಲ್ಲಿ ಮಳೆಗಾಳಿಯಿಂದುಂಟಾದ ಅನಾಹುತವನ್ನೆಲ್ಲ ಕಣ್ಣಾರೆ ನೋಡಿದೆನು. ಬೆಟ್ಟದ ತುದಿಯಿಂದ ಚೇನಂಗೊಟ್ಟೆ ತೋಟದ ಮೇಲ್ಭಾಗದಿಂದ ಎರಡು ಬಹಳ ದೊಡ್ಡ ಇಳಿಜಾರು ಬಿದ್ದು, ಮೆ. ಬಿದ್ದಂಡ ಮುಂದಪ್ಪ, ದೇವಯ್ಯನವರ ನಾಲ್ಕು ಕಟ್ಟಡಗಳೂ, ಸುಮಾರು 10ಎಕರು ಕಾಫೀತೋಟವೂ ಎರಡು ಎಕರು ಭೂಮಿ, ಕಾಫಿಕಣ ಇತ್ಯಾದಿ ಪೂರ್ತಿಯಾಗಿ ಮಣ್ಣು, ಕಲ್ಲು, ಮರದಡಿಯಲ್ಲಿದೆ. ಮೆ. ಬಿದ್ದಂಡ ಮುತ್ತಣ್ಣನವರ ಕೊಟ್ಟಿಗೆಯೂ ನಾಲ್ಕು ರಾಸು ದನಗಳೂ ಹೋಗಿವೆ. ಅಲ್ಲಿಂದ ಬಿದ್ದ ಪ್ರವಾಹವೂ, ಚಟ್ಟಮಕಂಡಿ, ಚೋಲಿಯ ಕಂಡಿ ತೋಟದ ಮೇಲ್ಭಾಗದಿಂದ ಬಿದ್ದ ಎರಡು ಇಳಿಜಾರುಗಳೂ, ಬ್ರಾಹ್ಮಣ ಪಿ. ಕೆ. ಸುಬ್ರಾಯರ ಭೂಮಿಯ ಮೇಲ್ಗಡೆ ಒಂದಾಗಿ ಮೆ ಪಿ. ಕೆ. ಸುಬ್ರಾಯರ ಮತ್ತು ವೆಂಕಪ್ಪಯ್ಯನವರ ಸುಮಾರು 400 ಭಟ್ಟಿ ಭೂಮಿಯನ್ನು ಮಣ್ಣು, ಎಂಡೆ, ಮರಗಳಿಂದ ತುಂಬಿಸಿ, ಕೆಳಗೆ ಬಿದ್ಯಾಟಂಡ ಮನೆಯವರ 200 ಬಟ್ಟಿ ಭೂಮಿಯನ್ನು ಪೂರ್ತಿ ಮಣ್ಣು ಮರದಿಂದ ತುಂಬಿಸಿ, ಅಲ್ಲಿಂದ ಕೆಳಗೆ ಮೆ. ಬಿದ್ದಂಡ ಗಣಪತಿಯವರ ಮಗ ಮುತ್ತಣ್ಣನವರ 450 ಬಟ್ಟಿ ಭೂಮಿಯನ್ನು ಮಣ್ಣಿನಿಂದ ಮುಚ್ಚಿ, ಅವರ ಕೆಳಗೆ ಇರುವ ನಡಿಕೇರಿಯಂಡ ನಂಜಪ್ಪನವರ 50 ಬಟ್ಟಿ ಭೂಮಿಯನ್ನು ಮುಚ್ಚಿರುತ್ತೆ.

ಈ ದೆಸೆಯಿಂದುಂಟಾದ ನಷ್ಟವು ಅಪಾರವಾಗಿರುದಾಗಿ ಕಾಣುತ್ತೆ. ಮೆ. ನಡಿಕೇರಿಯಂಡ ಅಪ್ಪಯ್ಯ ಮತ್ತು ಮುದ್ದಪ್ಪನವರ ಸುಮಾರು 15 ಎಕರು ಕಾಫಿತೋಟವು ಹಾಳಾ

೧೦೦೦ ರೂಪಾಯಿಗಳ ಬಹುಮಾನ.

ಲೋಕಪ್ರಸಿದ್ಧವಾದ ಸಾಲಂಮಿಸ್ರಿ ಮುರಬ್ಬಾ.

ನಮ್ಮ ಟ್ರೇಡ್ ಮಾರ್ಕನ್ನು ನೋಡಿ ಈ ಔಷಧ ತೆಗೆದುಕೊಳ್ಳಿ

ಇದರ ಸೇವನೆಯಿಂದ ವೀರ್ಯವು ನೀರಿನಂತೆ ಇದ್ದರೂ, ಸ್ವಪ್ನೇಂದ್ರಿಯವಾದರೂ, ಸ್ತ್ರೀ ಸಂಘಕ್ಕೆ ಮೊದಲೇ ಸ್ಖಲನವಾದರೂ, ಮೂತ್ರದೊಂದಿಗೆ ಹೋಗುತ್ತಿದ್ದರೂ ದೋಷರಹಿತನಾಗಿ ಶರೀರಕ್ಕೆ ಆರೋಗ್ಯವನ್ನೂ ಧಾರ್ಢ್ಯತೆಯನ್ನೂ ಆಯುಸ್ಸು, ಬಲ, ತೇಜಸ್ಸು ಉಂಟು ಮಾಡುವದು. ಅಜೀರ್ಣ ಮಲಬದ್ಧತೆ, ಮೆದುಳಿನ ಬಲಹೀನತೆ, ಕೈಕಾಲು, ಸೊಂಟ ನೋವುಗಳಿಗೆ ಇದು ದಿವ್ಯ ಔಷಧವು. ಈ ಸಾಲಂಮಿಸ್ರಿ ಎಂಬುವದು ಕಾಬೂಲ್ ಕಂದಾಹಾರ ಪ್ರಾಂತ್ಯದಲ್ಲಿ ಬೆಳೆಯುತ್ತದೆ.

ಈ ಔಷಧದಿಂದ ಗುಣಹೊಂದಿರುವ ಅನೇಕ ಮಹನೀಯರು ಖಾವಾಗಿಯೇ ಅನೇಕ ದೇಶಗಳಿಂದಲೂ ಆಫ್ರೀಕ, ಬರ್ಮ, ಪಿನಾಂಗ್, ಸಿಂಗಪೂರ್, ಸಿಲೋನ್, ಬೊಂಬಾಯಿ, ಕಲ್ಕತ್ತ, ಮದ್ರಾಸು ಮತ್ತು ಇಂಡಿಯಾದೇಶದಲ್ಲಿ ಎಲ್ಲಾ ಸ್ಥಳಗಳಿಂದಲೂ ನಮಗೆ ಯೋಗ್ಯತಾ ಪತ್ರಿಕೆಗಳನ್ನು ಕಳುಹಿಸಿರುವರು. ಇವುಗಳ ನಕಲನ್ನು ಯಾರಾದರೂ ತರಿಸಿ ನೋಡಬಹುದು. ಇವುಗಳು ಸುಳ್ಳು ಎಂದು ನಿರ್ಧರಪಡಿಸುವವರಿಗೆ ಮೇಲೆ ಕಂಡ ಬಹುಮಾನವು ಕೊಡಲ್ಪಡುತ್ತೆ. ನಾವು ಹಾಗೆ ಕೊಡದೆ ನಿರಾಕರಿಸಿದಲ್ಲಿ ಕೋರ್ಟು ಮೂಲಕ ಅದನ್ನು ಪಡೆಯಬಹುದು. ೧ ಡಬ್ಬವನ್ನು ೧೫ ದಿನ ಸೇವಿಸಿದಲ್ಲಿ ಗುಣವು ಖಂಡಿತವಾಗಿ ತೋರಬಹುದು. ೨ ಯಾ ೩ ಡಬ್ಬಿಗಳು ಜನ್ಮಾಂತ್ಯದವರಿಗೂ ಪೂರ್ಣವಾಗಿ ಗುಣವನ್ನುಂಟು ಮಾಡುವವು. ಹೆಸರು ವಿಳಾಸಗಳನ್ನು ವಿವರವಾಗಿ ಬರೆಯಬೇಕು. ಒಂದಾವರ್ತಿ ಉಪಯೋಗಿಸಿ ನೋಡಿದಲ್ಲಿ ಖಾತ್ರಿ ಉಂಟಾಗುತ್ತೆ.

ಕ್ರಯ ಡಬ್ಬಿ ೧ಕ್ಕೆ ರೂ. ೨–೦–೦ ಪ್ಯಾಕಿಂಗ್ ಚಾರ್ಜು ೧ರಿಂದ ೩ ಡಬ್ಬಿಗಳಿಗೆ ೦–೮–೦ ಆಣೆ. ಏಜಂಟರುಗಳು ಎಲ್ಲಾ ಸ್ಥಳಗಳಲ್ಲಿಯೂ ಅವಶ್ಯವಾಗಿರುತ್ತೆ. ರೂಲ್ಸ್ ತರಿಸಿಕೊಳ್ಳಬಹುದು. ಆರ್ಡರು ಕೊಡತಕ್ಕ ಕಾಲದಲ್ಲಿ ಈ ಪತ್ರಿಕೆಯ ಹೆಸರನ್ನು ಬರೆಯಬೇಕು.

ಟೆಲಿಗ್ರಾಫ್ ಅಡ್ರೆಸ್, ಮಿಸ್ರಿ, ಬೆಂಗಳೂರು ಸಿಟಿ. | ಡಿ. ಪನ್ನಾಲಾಲ್, ದಿಲ್ಲಿ ನೇಟಿವ್ ವೈದ್ಯರು, ಸಾಲಂಮಿಸ್ರಿ ಮುರಬ್ಬ ಡಿಪೋ, ಬೆಂಗಳೂರು ಸಿಟಿ.

12—3

ದೆ. ಚೇರಳಾವರ ಗ್ರಾಮದಲ್ಲಿ ಪೊನ್ನೋಲಿದ ಹತ್ತಿರ ಸುಮಾರು 500 ಎಕ್ರೆ ಭೂಮಿಯು ಪೂರ್ತಿಯಾಗಿ ಬೆಟ್ಟದಡಿಯಲ್ಲಿದೆ ಈ ವಿಪತ್ತಿಗೆ ಒಳಗಾದ ಈ ನಷ್ಟವನ್ನು ಸರಕಾರದವರು ಒಡನೇ ನೋಡಿ ತತ್ಕಾಲಕ್ಕೆ ಈ ವರ್ಷ ಭೂಮಿ ನೆಡಲಿಕ್ಕೆ ತಕ್ಕ ಸಹಾಯ ಮಾಡದೆ ಹೋದರೆ ಅವರಿಗೆ ಬೇರೆ ಉಪಾಯವೇನೂ ಇಲ್ಲ. ಆದ ನಷ್ಟವು ವಿಪರೀತವಾದ್ದರಿಂದ ಕೃಷಿಕರು ಮತ್ತು ಸರಕಾರವು ಖುದ್ದು ಪರಿಶೀಲಿಸಿದ ಹೊರತು ಇಂತಿಷ್ಟೇ ನಷ್ಟವಾಗಿರಬಹುದೆಂದು ಬರೆಯುವುದರಿಂದ ಪ್ರಯೋಜನವಾಗುವುದಿಲ್ಲ. ಅಂತೂ ಪಾಲಂಗಾಲ ಗ್ರಾಮದಲ್ಲಿ ಕಡಿಮೆ ಪಕ್ಷ ಇಪ್ಪತ್ತು ಸಾವಿರ ರೂ ನಷ್ಟಕ್ಕಿಂತ ಹೆಚ್ಚಾಗಿ ಆಗಿರಬಹುದೆಂದೇ ನನ್ನ ಭಾವನೆಯಾಗಿರುತ್ತೆ. ಚೇರಳಾವರ ಗ್ರಾಮವನ್ನು ನನಗೆ ಖುದ್ದು ನೋಡಲು ಅನುಕೂಲವಾಗಲಿಲ್ಲ. ಅಲ್ಲಿಯ ನಷ್ಟವೂ ಸಹ ಆ ಒಡ ರೈತರಿಗೆ ಅಗಾಧವಾದದ್ದು. ಭೂಮಿಯು ಇತರ ಕಡೆಗಳಲ್ಲಿ ಇಲ್ಲದೆ ಇರುವವರ ಭೂಮಿಯೆಲ್ಲಾ ಬೆಟ್ಟದಡಿಯಲ್ಲಿ ಇರುವ ರೈತರು ಹೇಗೆ ಒದುಕುವುದೆಂಬುದನ್ನು ಆಲೋಚನೆಗೆ ತರಬೇಕಾಗಿದೆ. ಸರಕಾರದವರು ತಕ್ಕ ಪರಿಹಾರವನ್ನು ಮಾಡುವರೆಂದು ಖಂಡಿತವಾಗಿಯೂ ನಂಬುತ್ತೇನೆ.

ವರ್ತಮಾನ ಸಂಗ್ರಹ.

ಒಳದೇಶ

ತಾ. 15ರಲ್ಲು ಮಲೇರಿಯ ಕಮಿಟಿಯ ಮೀಟಿಂಗು ಕೌನ್ಸಿಲ್ ಚೆಂಬರಿನಲ್ಲು ನಡೆಯಿತು.

ಮಡಿಕೇರಿ ಸೆಂಟ್ರಲ್ ಹೈಸ್ಕೂಲಿಗೆ ಈ ತಾ. 17ರಿಂದ ಆಗೋಸ್ಟು 9ರ ವರೆಗೆ ಮಳೆಗಾಲ ರಜೆ ಇದೆ.

ಈ ವಾರ ಮಳೆಯು ಒಸಳ ಕಡಿಮೆಯಾಗಿದೆ ಈ ಸ್ಥಿತಿಯು ಮುಂದರಿದರ ವ್ಯವಸಾಯಕ್ಕೆ ತೊಂದರೆಯಾಗಬಹುದು.

ಜಮೀನ್ದಾರರ ಸಂಘದ ಕಮಿಟಿ ಮೀಟಿಂಗು ಇದೇ ತಾ. 24ನೇ ಶನಿವಾರ ಮಧ್ಯಾಹ್ನ 1½ ಗಂಟೆಗೆ ಸಂಘದ ಆಫೀಸಿನಲ್ಲು ನಡೆಯುವುದು.

ಭಾಗಮಂಡಲದಲ್ಲಿ ತಾ 4ರಿಂದ ಒಂದು ವಾರದೊಳಗೆ 67 ಇಂಚು ಮಳೆ ಬಿದ್ದದಲ್ಲದೆ ತಾ 11ರ ವರೆಗೆ ಈ ವರ್ಷದಲ್ಲಿ ಒಟ್ಟು 100 ಇಂಚು 90 ಸೆಂಟ್ ಮಳೆಯಾಗಿದೆ.

ಕೆಲವು ತಿಂಗಳುಗಳ ಹಿಂದೆ ಮಡಿಕೇರಿ ಸ್ಟೈನೀರ್ ಕಸ್ಬೆಯಲ್ಲಿ ನಡೆದ ಖೂನಿ ಮೊಕದ್ದಮೆಯಲ್ಲಿ ಮೋಚಿ ರಂಗನಿಗೆ ಶಿಷನ್ಸ್ ಜಡ್ಜಿಯವರು ಒಂದು ವರ್ಷ ಕಠಿಣ ಸಜೆ ವಿಧಿಸಿರುವರು.

ಬಾಳುಗೋಡು ಗ್ರಾಮದ ನೆ.. ಕುಪ್ಪಂಡ ಪೊಣ್ಣಪ್ಪನವರ ಮಗ ಬೆಳ್ಳಿಯಪ್ಪನವರು ತಾ. 13ರಲ್ಲಿ ಪೊನ್ನಂಪೇಟೆಯಲ್ಲಿರುವ ತಮ್ಮ ತೋಟದ ಮನೆಯಲ್ಲು ಶಿವಾಧೀನರಾದರೆಂದು ತಿಳಿಯಲು ವ್ಯಸನಪಡುತ್ತೇವೆ.

ಇತರ ವಿಷಯಗಳೊಂದಿಗೆ ಬೋರ್ಡಿನ ಬರುವ ಚುನಾವಣೆಯ ರೂಲ್ಸುಗಳನ್ನು ಚರ್ಚಿಸಲಿಕ್ಕೂ 1926—27ರ ಬಜೆಟನ್ನು ಮಂಜೂರುಮಾಡಲಿಕ್ಕೂ ಡಿಸ್ಟ್ರಿಕ್ಟ್ ಬೋರ್ಡಿನ ಹೊಸ ಮೆಂಬರುಗಳ ಪ್ರಥಮ ಮೀಟಿಂಗು ಈ ತಾ. 24ರಲ್ಲಿ ಕೌನ್ಸಿಲು ಚೇಂಬರಿನಲ್ಲಿ ನಡೆಯಲಿಕ್ಕಿದೆ.

ಕಂಡಂಗಾಲ ಗ್ರಾಮದಲ್ಲಿ ದನಗಳನ್ನು ಎರಡು ವಾರಗಳಿಂದ ದೊಡ್ಡರೋಗವು ಪೀಡಿಸುತ್ತಿದೆಯೆಂದೂ, ಮೆ ಬಲ್ಲಡಿಚಂಡ ಪೂಣಚ್ಚನವರ ಸುಮಾರು 40 ರಾಸುಗಳು ಸತ್ತು ಕಾಯಿಲೆಗೆ ತುತ್ತಾದವೆಂತಲೂ ವೆಟರಿನರಿ ಸಹಾಯವು ದೊರೆಯುವದಿಲ್ಲವೆಂತಲೂ ಒಂದು ಪತ್ರಿಕೆ.

ಈ ವರ್ಷ ಇಂಟರ್‌ಮೀಡಿಯೇಟ್ ಪರೀಕ್ಷೆಯಲ್ಲಿ ಫಸ್ಟ್‌ಕ್ಲಾಸಿನಲ್ಲಿ ತೇರ್ಗಡೆ ಹೊಂದಿದ ಶ್ರೀಮತಿ ನೆರವಂಡ ಎಸ್. ಪೊನ್ನಮ್ಮನವರು ತನ್ನ ಐಚ್ಛಿಕ ಸಬ್‌ಜೆಕ್ಟುಗಳಲ್ಲಿ ಅಂದರೆ ಚರಿತ್ರೆಗಳು ಮತ್ತು ಕನ್ನಡದಲ್ಲಿ (ಡಿಸ್ಟಿಂಗ್ಷನ್) ಪ್ರಾಥಮಿಕತೆಯನ್ನು ಪಡೆದಿರುವದಲ್ಲದೆ "ಲಾರ್ಡ್ ಪೆಂಟ್‌ಲೆಂಡ್" ಬಹುಮಾನವನ್ನು ಗೆದ್ದಿರುವರೆಂದು ತಿಳಿಯಲು ಸಂತೋಷಪಡುತ್ತೇವೆ.

ದನಗಳ ವಿಮೆ ಸಂಘಗಳಿಲ್ಲ ಹಣವನ್ನು ತಾವುನಾಡಿನ ಸಂಘದವರು ವಿದ್ಯಾಭಿವೃದ್ಧಿ ಸಂಘಗಳಿಗೆ ಕೊಡುವಂತೆಯೂ, ಬೇಂಗುನಾಡು ಸಂಘದವರು ಗ್ರಾಮ ಶಾಲೆಗಳ ಅಭಿವೃದ್ಧಿಗೆ ಉಪಯೋಗಿಸುವಂತೆಯೂ, ಕಿಗ್ಗಾಟುನಾಡು ಸಂಘದವರು ಆಂಟಿ ಮಲೇರಿಯ ಕೋ ಆಪರೇಟಿವ್ ಸೊಸೈಟಿಯನ್ನು ಸ್ಥಾಪಿಸಲಿಕ್ಕೆ ಉಪಯೋಗಿಸುವಂತೆಯೂ ತೀರ್ಮಾನಿಸಿರುವರಾಗಿ ಸುದ್ದಿ.

ಅಲಹಾಬಾದಿನಲ್ಲಿ 1927ನೇ ಇಸವಿಯ ಜನವರಿ 3ರಲ್ಲಿ ಪ್ರಾರಂಭವಾಗುವ ಇಂಡಿಯನ್ ಸಿವಿಲ್ ಸರ್ವಿಸಿಗೆ ಸೇರಲು ನಡೆಯುವ ಚುನಾವಣೆ ಪರೀಕ್ಷೆಗೆ ಶರೀರದಲ್ಲಿ ದೋಷಗಳಿಲ್ಲದೆ ದೃಢಕಾಯರಾಗಿಯೂ ಒಳ್ಳೇ ನಡತೆಯವರಾಗಿಯೂ, ತಾ. 1—1—27ರಲ್ಲಿ 21ರ ಮೇಲೆ 23ರ ಒಳಗೆ ಪ್ರಾಯವುಳ್ಳವರಾಗಿಯೂ ಇರುವ ಇಂಡಿಯಾ ಸರ್ಕಾರದವರು ಒಪ್ಪುವ ವಿಶ್ವವಿದ್ಯಾಲಯದ ಡಿಗ್ರಿ ಪಡೆದವರು ಅಥವಾ ಚೀಫ್ ಕಾಲೇಜಿನ ಸೀನಿಯರ್ ಡಿಪ್ಲೋಮ ಪಡೆದವರು ಆಗೋಸ್ಟು 2ರ ವರೆಗೆ ಕಮಿಷನರವರಿಗೆ 5 ರೂ. ಫೀಸು ಸಮೇತ ಅಪ್ಲಿಕೇಶನ್ ಕಳುಹಿಸಬಹುದೆಂತಲೂ ಹೆಚ್ಚಿನ ಮಾಹಿತಿಯೂ ಅಪ್ಲಿಕೇಶನ್ ಫಾರಮುಗಳೂ ಕಮಿಷನರವರ ಆಫೀಸಿನಿಂದ ದೊರೆಯುವದೆಂತಲೂ ಕಮಿಷನರವರು ಪ್ರಕಟಿಸಿರುತ್ತಾರೆ.

ಈ ತಾ. 15ರಲ್ಲು ನಡೆದ ಮಡಿಕೇರಿ ಮುನ್ಸಿಪಾಲಿಟಿ ಕಮಿಟಿ ಚುನಾವಣೆಯಲ್ಲಿ ಕೊಡವರ ಪರವಾಗಿ 1. ರಾ. ಸಾ. ಪಟ್ಟಮಾಡ ದೇವಯ್ಯನವರು, 2. ರಾ. ಬಾ. ಕೊಡಂದೇರ ಕುಟ್ಟಯ್ಯನವರು, ಮತ್ತು 3. ರಾ. ಸಾ. ಕೋಡಿಮಣಿಯಂಡ ಸುಬ್ಬಯ್ಯನವರೂ, ಬೇರೆ ಹಿಂದೂಗಳ ಪರವಾಗಿ ಮ. ರಾ. ಶ್ರೀ ಗಳಾದ 1. ಯಂ. ಭುಜಂಗರಾವ್ ಬಿ. ಏ. ಬಿ. ಎಲ್. 2. ಸಿ ಎಸ್. ಸೋಮಯ್ಯ ಬಿ ಎ, ಬಿ ಎಲ್. 3. ಆರ್. ಎಸ್. ಸಂಜೀವರಾವ್ ಬಿ. ಎ, ಬಿ. ಎಲ್. 4. ನಿಡ್ಯಮಲೆ ಮುದ್ದಪ್ಪ ಬಿ. ಎ. ಬಿ ಎಲ್ 5. ಆರ್. ಭಾಸ್ಕರಯ್ಯನವರು ಮತ್ತು 6. ಕೆ ಎಸ್ ಕಸ್ತೂರಿ ಸೆಟ್ಟಿಯವರೂ, ಮಹಮ್ಮದೀಯರ ಪರವಾಗಿ 1.ಮಿ ಖಾಸಿಂ ಖಾನ್ ಸಾಹೇಬರವರೂ, 2. ಅಬ್ದುಲ್ ಲತೀಫ್ ಸಾಹೇಬರವರೂ ಮತ್ತು ಕ್ರೈಸ್ತರ ಪರವಾಗಿ ಡಾಕ್ಟರ್ ಪಾರ್ತಸ್ವಾಮಿಯವರೂ ಜಯಶೀಲರಾದರು ಈ 12 ಚುನಾಯಿತ ಮೆಂಬರುಗಳಲ್ಲದೆ 1. ಡಿ. ಪಿ. ಡಬ್ಲ್ಯು. ಇಲಾಖೆಯ ಸಬ್ ಡಿವಿಜನ್ ಆಫೀಸರು (ಈಗ ಸಿ. ಎ. ರಾಜಗೋಪಾಲ ಅಯ್ಯಂಗಾರ್) 2 ತಾಲೋಕು ಸುಬೇದಾರರು (ಮಿ. ಮಂಡೇಪಂಡ ಮಂದಣ್ಣನವರು) 3. ಸ್ಕೂಲುಗಳ ಸಬ್ ಅಸಿಸ್ಟೆಂಟ್ ಇನ್ಸ್‌ಪೆಕ್ಟರವರು (ಮಿ. ಪಟ್ರಡ ಸಿ ಉತ್ತಯ್ಯನವರು) 4 ಸೀನಿಯರ್ ಸಬ್ ಅಸಿಸ್ಟೆಂಟ್ ಸರ್ಜನರು (ಮಿ. ಕಡೇಮಾಡ ಕರುಂಬಯ್ಯನವರು) ಇವರು ಕಾಲ್ಕ ಉದ್ಯೋಗಸ್ಥ ಮೆಂಬರುಗಳೂ ಈ ಕಮಿಟಿಯಲ್ಲಿರುವರು. ಈ ಹದಿನಾರು ಮೆಂಬರುಗಳು ಸೇರಿ ಬೇಗನೆ ನವರಿ ಕಮಿಟಿಯ ಅಧ್ಯಕ್ಷರನ್ನು ಚುನಾಯಿಸುವರು. ಈಸಾರಿ ಚುನಾವಣೆಯಲ್ಲಿ ಉಮೇದುವಾರರು ಹೆಚ್ಚು ಶ್ರದ್ಧೆ ವಹಿಸಿದ್ದರಿಂದ ಓಟರುಗಳನೇಕರು ತಮ್ಮ ಓಟಿನ ಹಕ್ಕನ್ನು ಉಪಯೋಗಿಸಿದ್ದು ಸಂತೋಷಕರ. ಈಗ ಅಧ್ಯಕ್ಷರ ಚುನಾವಣೆಯನ್ನು ಇಲ್ಲಿ ಎಲ್ಲರೂ ಕುತೂಹಲದಿಂದ ಎದುರು ನೋಡುತ್ತಿರುವರು. ಕೊಡವರಲ್ಲಿ ರಾ. ಬಾ. ಕೆ. ಕುಟ್ಟಯ್ಯನವರೂ, ಬೇರೆ ಹಿಂದುಗಳಲ್ಲಿ ಮಿ. ಯಂ. ಭುಜಂಗರಾಯರೂ ಪ್ರೆಸಿಡೆಂಟ್‌ತನಕ್ಕೆ ಉಮೇದುವಾರರುಗಳಾಗಿದ್ದಾರೆಂತಲೂ, ಮೆ ಭುಜಂಗರಾಯರು ಈ ಉದ್ದೇಶವನ್ನು ಓಟರುಗಳಿಗೆ ತಿಳಿಸಿಯೇ ಓಟ್ ಪಡೆದದ್ದಾಗಿದೆಯೆಂತಲೂ ತಿಳಿಯಬರುತ್ತದೆ.

ಹಿಂದೂದೇಶ.

ಪಟ್ನಾ ಪಟ್ಟಣದಲ್ಲಿ ಹಿಂದು ಮುಸಲ್ಮಾನರಿಗೆ ಜಗಳಗಳು ನಡೆಯುತ್ತಾ ಇದ್ದು ಈಗ ಸ್ವಲ್ಪ ಸಮಾಧಾನವಾಗಿದೆ ಈ ವರೆಗೆ ಸುಮಾರು 120 ಜನರು ದಸ್ತಗಿರಿ ಮಾಡಲ್ಪಟ್ಟಿರುವರು.

ಜೋರಾದ ಮಳೆಯ ದೆಸೆಯಿಂದ ತಾ. 12ರಲ್ಲಿ ಬೊಂಬಾಯಿಪಟ್ಟಣದಲ್ಲಿ ಒಂದು ಮನೆಯು ಬಿದ್ದು ಅದರೊಳಗಿದ್ದ ಆರು ಜನರು ಮೃತಪಟ್ಟದಲ್ಲದೆ 9 ಜನರಿಗೆ ಘಾಯಗಳುಂಟಾದವು.

ಕೋಮುಗಳೊಳಗೆ ಜಾತಿಮತ ದ್ವೇಷವನ್ನು ಹುಟ್ಟಿಸದೆ ಸ್ನೇಹಭಾವವನ್ನು ಹುಟ್ಟಿಸುವ ಉದ್ದೇಶದಿಂದ ಸಿಂಧ್ ಪ್ರಾಂತ್ಯದ ಪತ್ರಿಕಾಕರ್ತರನೇಕರು ಸೇರಿ ಒಂದು ಸಂಘವನ್ನು ಸ್ಥಾಪಿಸಿರುವರು.

ಅಸ್ಸಾಮಿನಲ್ಲಿ ಬರುವ ಡಿಸೆಂಬರಿನಲ್ಲಿ ನಡೆಯಲಿಕ್ಕಿರುವ 41ನೇ ಅಖಿಲ ಭಾರತ ಕಾಂಗ್ರೆಸ್ಸಿನ ಸ್ವಾಗತ ಕಮಿಟಿಯು ಏರ್ಪಾಡು ಮಾಡಲಾಗಿದೆ. ಮಿ. ಟಿ ಆರ್ ಫೂಕನ್‌ರವರು ಕಮಿಟಿಯ ಅಧ್ಯಕ್ಷರಾಗಿ ಚುನಾಯಿಸಲ್ಪಟ್ಟಿರುವರು.

ದೇಶಬಂಧು ದಾಸರವರ ಮರಣ ವರ್ಷಂತಿಯ ದಿನವಾದ ತಾ 11ರಲ್ಲಿ ಹಿಂದೂದೇಶದ ಮುಖ್ಯಪಟ್ಟಣಗಳಲ್ಲೆಲ್ಲಾ ಪಬ್ಲಿಕ್ ಮೀಟಿಂಗುಗಳನ್ನು ಮಾಡಿ ಅವರ ಗುಣ ಕಥನವನ್ನೂ ಅವರ ದೇಶಸೇವೆಯನ್ನೂ ಕುರಿತು ಭಾಷಣಗಳನ್ನು ಕೊಟ್ಟರು.

ಬರುವ ಕಾಂಗ್ರೆಸ್ಸಿನ ಅಧ್ಯಕ್ಷ ಪದವಿಗೆ ಅಸ್ಸಾಮಿನ ಪ್ರಾಂತೀಕ ಕಾಂಗ್ರೆಸ್ ಕಮಿಟಿಯವರು ಪಂಡಿತ ಮೋತಿಲಾಲ್ ನೆಹರು ಮತ್ತು ಡಾಕ್ಟರ್ ಯಂ ಎ. ಅನ್ಸಾರಿಯವರ ಹೆಸರುಗಳನ್ನೂ ಸಂಯುಕ್ತ ಪ್ರಾಂತದ ಕಾಂಗ್ರೆಸ್ ಕಮಿಟಿಯವರು ಡಾ. ಮೂಂಜೆ ಮತ್ತು ಮಿ. ಜೋಸೆಫ್ ಬ್ಯಾಪ್ಟಿಸ್ಟರವರ ಹೆಸರುಗಳನ್ನು ಸೂಚಿಸಿರುವರು.

ವಿಂಚೂರಿನ ಜಹಾಗೀರದಾರರಾದ ಶ್ರೀಮಂತ ಭಾವೂಸಾಹೇಬರವರ ಮನೆಯಲ್ಲಿ "ಚಂದ್ರಶೇಖರ" ನೆಂಬ ಹೆಸರಿನ ಮಹಾ ದೇವನ ಲಿಂಗವಿದೆ. ಈ ಲಿಂಗವು ನಾಗಾಕೃತಿಯದ್ದು ಅದರ ಮೇಲೆ ಚಂದ್ರಕಲೆಗಳಿರುವವು. ಆಕಾಶದೊಳಗಿನ ಚಂದ್ರನ ಕಲೆಗಳು ಪಕ್ಷಾಂತರಗಳಲ್ಲಿ ಬದಲಾದಂತೆ ಚಂದ್ರಶೇಖರ ಲಿಂಗದ ಮೇಲಿನ ಚಂದ್ರಕಲೆಗಳು ಬದಲಾಗುತ್ತಿರುತ್ತವೆಯಂತೆ.

ಮುತ್ತು, ರತ್ನ, ವಜ್ರ ಮುಂತಾದವುಗಳನ್ನು ಕಾಲಕಾಲಕ್ಕೆ ಸಾಲವಲಾಟೈಲು (Sal Volatile) ಮತ್ತು ನೀರಿನಲ್ಲಿ ತೊಳೆಯುವುದು ಒಳ್ಳೇದು. ಮುತ್ತು ವಜ್ರಗಳನ್ನು ಚಂದವಾದ ಕಿಸಕಾಪು ಹಾಕಿದ ಪೆಟ್ಟಿಗೆಗಳಲ್ಲಿಡುವದಕ್ಕಿಂತ ಉತ್ಕೃಷ್ಟವಾದ ಕಟ್ಟಿಗೆಯ ಪುಡಿಯಲ್ಲಿಡುವದು ಒಳ್ಳೇದು. ರತ್ನಗಳನ್ನು ಬಿಸಿ ನೀರಿನಲ್ಲಿ ಸಬುಕಾರ ಮತ್ತು ಸೋಡಾಗಳನ್ನು ಹಾಕಿ ತೊಳೆಯಬೇಕು.

ಕಪೂರದ ಕಳ ಮಹಾರಾಜರಲ್ಲಿರುವಷ್ಟು ಮುತ್ತಿನ ಸರಗಳು ಜಗತ್ತಿನಲ್ಲಿ ಎಲ್ಲಿಯೂ ಇಲ್ಲವಂತೆ! ಇಟಲೀ ದೇಶದ ಹಿಂದಿನ ಮಹಾರಾಣಿಯವರಾದ ಮಾರ್ಗರೇಟಾ ಇವರ ಹತ್ತಿರದಲ್ಲಿದ್ದ ಮುತ್ತಿನ ಸರಗಳಿಗೆ ಎರಡನೇ ನಂಬರನ್ನು ಕೊಡಬಹುದು. ಅವು ಈಗ ಕಿಂಗ್ ವಿಕ್ಟರನ ವಶಕ್ಕೆ ಬಂದಿರುವವು. ಒಟ್ಟು ೩೨ ಸರಗಳಿವೆ. ಅವುಗಳ ಉದ್ದಳತೆಯು ಸುಮಾರು ಒಂದು ಫರ್ಲಾಂಗದಷ್ಟು ಆಗಬಹುದು. ಅವುಗಳ ಈಗಿನ ಬೆಲೆ ೧ ಕೋಟಿ ೭೦ ಲಕ್ಷ ಪೌಂಡು ಆಗಬಹುದು.

ವಿದೇಶ.

ಚೈನಾದಲ್ಲಿ ಪುನಹ ಒಳಬೇಧ ಕಲಹವು ಪ್ರಾರಂಭವಾಗಿ ಯುದ್ಧವು ನಡೆಯುತ್ತಲಿದೆ.

ಅಮೇರಿಕ ಸಂಯುಕ್ತ ಸಂಸ್ಥಾನದ ಡೋವರಾ ನ್ಯೂಜರ್ಸೀ ಎಂಬಲ್ಲಿರುವ ಮದ್ದುಗುಂಡು ಉಗ್ರಾಣಕ್ಕೆ ಮಿಂಚು ಬಡಿದು ಬೆಂಕಿ ಹತ್ತಿ ಸುಮಾರು 80 ಮಿಲಿಯ ಡಾಲರುಗಳಷ್ಟು ಸಾಮಾನು ನಷ್ಟವಾಗಿರುವುದಲ್ಲದೆ 80 ಜನರು ಕಾಣದೆ ಆಗಿರುವರಂತೆ.

ಪೋರ್ಚುಗಲ್ಲಿನ ಪ್ರೆಸಿಡೆಂಟರಾದ ಜನರಲ್ ಡಿ ಕೋಸ್ಟರವರನ್ನು ಮಿಲಿಟರಿ ಮತ್ತು ನೌಕಾಸೈನ್ಯದ ಅಧಿಪತಿಗಳು ಸೆರೆಹಿಡಿದು ಲಿಸ್ಬನಿನಲ್ಲಿ ಸೆರೆಯಲ್ಲಿಡಲಿಕ್ಕೆ ಕಳುಹಿಸಿದರು. ಅವರು ದಾರಿಯಲ್ಲಿ ಒಡುಗಡೆಹೊಂದಲ್ಪಟ್ಟಿರುವರೆಂದು ವರ್ತಮಾನ.

ಇಂಡಿಯಾ ಸ್ಟೇಟ್ ಸೆಕ್ರೆಟರಿಯಾದ ಲಾರ್ಡ್ ಬರ್ಕನ್‌ಹೆಡ್‌ರವರು ಬರುವ ಚಳಿಗಾಲದಲ್ಲಿ ಇಂಡಿಯಕ್ಕೆ ಬರುತ್ತಾರೆಂದು ಹರಡಿರುವ ವರ್ತಮಾನವು ನಿಜವಲ್ಲವೆಂದು ಅವರೇ ಹೇಳಿರುವರು. ಆದರೂ ಅವರು ಆದಷ್ಟು ಬೇಗನೆ ಇಂಡಿಯಾಕ್ಕೆ ಬರಬೇಕೆಂಬ ಇರಾದೆಯಲ್ಲಿದ್ದಾರೆಂದು ಊಹಿಸಲು ಕಾರಣವಿದೆ.

ಅಮೇರಿಕದಲ್ಲಿ ನ್ಯೂಯಾರ್ಕ್ ಪಟ್ಟಣದಲ್ಲಿ ಪುಸ್ತಕಗಳ ಮಾರಾಟವಾದಾಗ "ರಾಬಿನ್‌ಸನ್ ಕ್ರೂಸೊ" (Robinson Crusoe) ಎಂಬ ಪುಸ್ತಕದ ಮೊಟ್ಟಮೊದಲು ಮುದ್ರಿಸಲ್ಪಟ್ಟದೊಂದು ಹಳೆಯ ಪ್ರತಿಗೆ ೩೫೪೫ ಡಾಲರು (ಡಾಲರಿಗೆ ಸುಮಾರು ೩ ರೂಪಾಯಿ) ಬೆಲೆ ಬಂದಿತು! ಫಿಟ್ಸ್‌ಜೆರಾಲ್ಡನು ಬರೆದ ಓಮರ ಖೈಯಾಮನ "ರೂಬಿಯಾತ್" (Rubiyat) ದ ಪ್ರತಿಗೆ ೧೭೦೦ ಡಾಲರುಗಳು ದೊರೆತವು!

ಹಿಂದುಸ್ಥಾನೀ ಸೇವಾದಳ.

ಪ್ರಕಟಣಾಪತ್ರ ನಂ 3

1927ನೇ ಇಸವಿಯಲ್ಲಿ ಮಾಡಬೇಕಾದ ಕೆಲಸ.

ಹಿಂದುಸ್ಥಾನೀ ಸೇವಾದಳದ ಕರ್ನಾಟಕ ಶಾಖೆಯು 5000 ರೂ. ಒಂದು ಬಂಡವಾಳವನ್ನು ಎತ್ತುತ್ತಲಿದೆ. ಈ ಹಣವನ್ನು ಯಾವ ಉದ್ದೇಶಕ್ಕೆ ಖರ್ಚು ಮಾಡಲಾಗುತ್ತದೆಯೆಂತ ಕೇಳುತ್ತಿದ್ದಾರೆ. ನಮ್ಮ ಉತ್ತರವೇನೆಂದರೆ—

ಕಡಿಮೆ ಪಕ್ಷ ಈ ಕೆಳಗೆ ಬರೆದಷ್ಟು ಕೆಲಸವನ್ನಾದರೂ ಕರ್ನಾಟಕ ಪ್ರಾಂತ್ಯದಲ್ಲಿ 1927ನೇ ವರ್ಷದಲ್ಲಿ ಮಾಡಬೇಕೆಂತ ಯೋಚಿಸಲಾಗಿದೆ ಆ ಬಗ್ಗೆ ಈ ಕೆಳಗಿನ ಖರ್ಚು ಮಾಡಬೇಕಾಗಿದೆ.

1. ನಮ್ಮಲ್ಲಿ ಈಗಾಗಲೇ ತರಬೇತು ಹೊಂದಿದ 11 ಕೆಲಸಗಾರರನ್ನು ಜುಮ್ಮದಾದಾ ವ್ಯಾಯಾಮ ಶಾಲೆಯ ಮಾಣಿಕರಾಯರ ಕೈಕೆಳಗೆ ಬರೋಡಾದಲ್ಲಿ ಶರೀರ ವ್ಯಾಯಾಮದಲ್ಲಿ ತರಬೇತು ಮಾಡಿಸುವದು, ಬರೋಡಕ್ಕೆ ಹೋಗಿ ಬರುವ ಮತ್ತು ಅಲ್ಲಿ ಊಟದ ಖರ್ಚಿನ ಬಗ್ಗೆ ಸಹ ಈ 11 ಜನರಿಗೆ ರೂ. 900.

2. ಈ ತರಬೇತು ಹೊಂದಿದ ಕೆಲಸಗಾರರನ್ನು ತಿಂಗಳಿಗೆ 40 ರೂ. ಗೆ ಮೀರದೆ ಯೋಗ್ಯತಾನುಸಾರ ವೇತನ ಕೊಟ್ಟು ಒಂದೊಂದು ಕರ್ನಾಟಕ ಕಾಂಗ್ರೆಸ್ ಡಿಸ್ಟ್ರಿಕ್ಟಿಗೆ ಒಪ್ಪಿಸಿಟ್ಟು ಅಲ್ಲಿ ಕಾಂಗ್ರೆಸ್ಸಿನ ಮತ್ತು ದಳದ ಕೆಲಸಗಳನ್ನು ನೆರವೇರಿಸುವಂತೆ ನೇಮಿಸುವದು.

11 ಜನರಿಗೆ ಸರಾಸರಿ 30 ರೂ. ಮೇರೆ 12 ತಿಂಗಳಿಗೆ ರೂ. 3960.

3. ಪ್ರತಿಯೊಂದು ಕಾಂಗ್ರೆಸ್ ಡಿಸ್ಟ್ರಿಕ್ಟಿನಲ್ಲಿ ತರಬೇತು ಕೊಡುವ ಒಂದು ಶಾಲೆಯನ್ನು ಪ್ರಾರಂಭಿಸಿ ನಡಿಸುವದು, ಮತ್ತು ಈ ಕೆಲಸಕ್ಕೆ ಬೇಕಾಗುವ ಸಾಮಗ್ರಿಗಳನ್ನು ಒದಗಿಸಿಕೊಳ್ಳುವದು.

ವಿವರ.—ಶಾಲೆಯ ಬಾಡಿಗೆ, ಪುಸ್ತಕ ಭಂಡಾರ, ಶರೀರ ವ್ಯಾಯಾಮಕ್ಕೆ ಬೇಕಾದ ಸಲಕರಣೆಗಳು ಸಹ ಒಂದು ಶಾಲೆಗೆ 200 ರೂ. ಮೇರೆ 8 ಶಾಲೆಗಳಿಗೆ ರೂ. 1600.

4. ಕರ್ನಾಟಕದ ಎಲ್ಲಾ ಭಾಗದಲ್ಲೂ ಬಲವಾದ ಪ್ರಚಾರವನ್ನು ನಡಿಸಿ ಹಿಂದುಸ್ಥಾನದ ಸ್ವತಂತ್ರ ಸಂಪಾದನೆಯ ಕೆಲಸದಲ್ಲಿ ಯುವಕರು ಒಳ್ಳೇ ಅಭಿರುಚಿ ತೆಗೆದುಕೊಳ್ಳುವಂತೆ ಮಾಡುವದು.

ವಿವರ—ಆಫೀಸ್ ಖರ್ಚು, ಕೆಲಸಗಾರರ ಸಂಚಾರದ ಖರ್ಚು, ಪ್ರಕಟಣಾ ಪತ್ರಗಳ ತಯಾರಿಸುವ ಖರ್ಚು, ಮೇಜಿಕ್ ಲ್ಯಾಂಟರ್ನ್ ಮತ್ತು ಇತರ ಸಾಮಾನುಗಳು, ಬ್ಯಾಂಡ್, ಡ್ರಮ್ಸ್, ಬಾವುಟಗಳು ಮುಂತಾದ್ದು ರೂ. 2000

ಜುಮ್ಲಾ. ರೂ. 8460

ಈ ಅತಿ ಸ್ವಲ್ಪ ಕೆಲಸವನ್ನು ಸಾಗಿಸಬೇಕಾದರೆ 8460 ರೂ. ಬೇಕಾಗಿದೆ ಆದರೆ ನಮ್ಮ ಈಗಿನ ಸ್ಥಿತಿಯಲ್ಲಿ ನಮ್ಮ ಉದ್ದೇಶವನ್ನು ಪೂರ್ತಿ ಕೂಡಲೇ ನಡಿಸಲು ಸಾಧ್ಯವಿಲ್ಲವೆಂತ ಯೋಚಿಸಿ 5000 ರೂ. ಗೆ ತಕ್ಕಷ್ಟು ಕೆಲಸವಾದರೂ ಮಾಡಬೇಕೆಂತ ಇದ್ದೇವೆ. ಕರ್ನಾಟಕದ ಮಹಾ ಜನರು ಕರ್ನಾಟಕ ಯುವಕರನ್ನು ತರಬೇತು ಮಾಡಲಿಕ್ಕೆ ಸಹಾಯ ಕೊಟ್ಟರೆ ನಾ

... ಪೂರ್ತಿ ಕೆಲಸವನ್ನು ಮಾಡಿಯೇ ... ದಲ್ಲಿ ಪ್ರಖ್ಯಾತಿಯನ್ನು ಹೊಂದಿ ... ಸತಾದ, ಆರೋಗ್ಯಕರವಾದ, ... ಯ ಮಾಡಿ ಹಿಂದುಸ್ಥಾನದ ಸ್ವಾತಂತ್ರ್ಯ ಧ್ವಜವನ್ನೇರಿಸುವವರು ನಾವೇ ಆಗೋಣ.

ಎನ್. ಎಸ್. ಹರ್ಡೀಕರ.

ಹುಬ್ಬಳ್ಳಿ, 29-6-'26. ಹಿಂದುಸ್ಥಾನಿ ಸೇವಾದಳದ ಕರ್ನಾಟಕ ಶಾಖೆಯ ಕಾರ್ಯದರ್ಶಿ.

ಪತ್ರವ್ಯವಹಾರ

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ಪತ್ರಿಕಾಕರ್ತರು ಜವಾಬ್ದಾರರಲ್ಲ. ಸಂ.]

ಜಮ್ಮ ಹಿಡುವಳಿಯ ಸೆಟ್ಲ್‌ಮೆಂಟ್,

ಮಹಾಶಯರೆ,

1925ನೇ ಇಸವಿಯಲ್ಲಿ ಪೊನ್ನಂಪೇಟೆಯಲ್ಲಿ ನಡೆದ ಕೊಡಗು ಜಮೀನ್ದಾರರ ಸಂಘದ ವಾರ್ಷಿಕ ಸಮ್ಮೇಳನದಲ್ಲಿ ಪಾಸಾದ ಠರಾವುಗಳಿಗೆ ಕಮಿಷನರವರು ಕೊಟ್ಟಿರುವ ಜವಾಬಿನಲ್ಲಿ ಜಮ್ಮ ಹಿಡುವಳಿಯ ಕಂದಾಯದ ಸೆಟ್ಲ್‌ಮೆಂಟನ್ನು ರದ್ದು ಮಾಡಬೇಕೆಂಬ ಠರಾವಿಗೆ-ಇದು ಕೌನ್ಸಿಲಿನಲ್ಲಿ ತೀರ್ಮಾನವಾಗಿದೆಯೆಂದು ಉತ್ತರವನ್ನಿತ್ತಿರುವರು. ಜಮೀನ್ದಾರರ ಸಂಘದ ಸದರಿ ಕಾನ್ಫರೆನ್ಸು ನಡೆದನಂತರ ಲೆಜಿಸ್ಲೇಟಿವ್ ಕೌನ್ಸಿಲಿನಲ್ಲಿ ಜಮ್ಮ ಹಿಡುವಳಿಯ ಸೆಟ್ಲ್‌ಮೆಂಟಿನ ವಿಷಯ ಠರಾವು ಚರ್ಚಿಸಲ್ಪಟ್ಟು ಬಹುಮತದಿಂದ ಮಂಜೂರಾದದ್ದು ಈ ಪತ್ರಿಕೆಯ ಮೂಲಕ ಅನೇಕರ ತಿಳುವಳಿಕೆಗೆ ಬಂದಿದೆ. ಇಲ್ಲಿ ಒಂದು ಮಾತು ಹೇಳಬೇಕಾಗಿದೆ. ಈ ಸಮ್ಮಂಧದ ಠರಾವಿನ ಪರವಾಗಿ ಚುನಾಯಿತ ಇಂಡಿಯನ್ ಮೆಂಬರುಗಳೆಲ್ಲರೂ ಜಮ್ಮ, ಸಾಗು, ಪ್ರತಿನಿಧಿಗಳೆಂಬ ಭೇದವನ್ನೆಣಿಸದೆ ಒಗ್ಗಟ್ಟಾಗಿ ಓಟು ಕೊಟ್ಟದ್ದಕ್ಕೆ ಅವರೆಲ್ಲರಿಗೂ ವಂದಿಸಬೇಕಾಗಿದೆ. ಸಾಗಿನ ಪರ ಮೆಂಬರುಗಳು ಜಮ್ಮ ಹಿಡುವಳಿಯ ಹಿತಕ್ಕೆ ವಿರೋಧಿಸಬೇಕೆಂದು ಇಚ್ಛಿಸಿದ್ದರೆ ಅವರು ನಾಮ್ನಿನೇಟೆಡ್ ಸರ್ಕಾರದ ಪರ ನಿಂತು ಈ ಠರಾವಿಗೆ ವಿರೋಧವಾಗಿ ಓಟು ಕೊಟ್ಟಿದ್ದ ಪಕ್ಷ ಜಮ್ಮದ ಮೆಂಬರುಗಳು ಎಷ್ಟು ಹೋರಾಡಿದ್ದರೂ ಇವರಿಗೆ ಬಹುಮತ ದೊರೆಯುತ್ತಿರಲಿಲ್ಲ. ಅದುದರಿಂದ ಜಮ್ಮ, ಸಾಗು ಎಂಬ ಭೇದಗಳಿಂದ ದೇಶಕ್ಕೇನೂ ಹಿತವಿಲ್ಲವೆಂಬುದು ವ್ಯಕ್ತವಾಗುತ್ತದೆ.

ಸೆಟ್ಲ್‌ಮೆಂಟನ್ನು ರದ್ದು ಮಾಡಬೇಕೆಂಬ ಠರಾವು ಕೌನ್ಸಿಲಿನಲ್ಲಿ ಬಹುಮತದಿಂದ ಪಾಸಾಗಿ ಹಲವು ತಿಂಗಳುಗಳಾದವು. ಈ ಠರಾವಿನೊಂದಿಗೆ ಪಾಸಾದ ಠರಾವುಗಳಿಗೆ ಜೊತೆ ಈ ವರ್ಷ ಮಾರ್ಚಿ ತಿಂಗಳ ಮೀಟಿಂಗಿನಲ್ಲಿ ಪಾಸಾದ ಹಲವು ಠರಾವುಗಳಿಗೂ ಕೂಡ ಚೀಫ್ ಕಮಿಷನರವರು ಮಂಜೂರಾತಿಯನ್ನಿತ್ತಿರುವರೆಂದು ತಿಳಿಯಬರುತ್ತದೆ. ಆದರೆ ದೇಶದ ಹೆಚ್ಚಿನ ಜನರು ಬಹು ಮುಖ್ಯವೆಂದು ಎಣಿಸುವ ಜಮ್ಮ ಹಿಡುವಳಿಯ ಸೆಟ್ಲ್‌ಮೆಂಟ್ ಮತ್ತು ಹಿಟ್ಟಿಬಿಟ್ಟಿ ಚಾಕರಿ ಪದ್ಧತಿಯ ಠರಾವುಗಳಿಗೆ ಚೀಫ್ ಕಮಿಷನರವರು ಯಾವದೊಂದೂ ಜವಾಬು ಕೊಡದೆ ಇರಲು ಕಾರಣವೇನೆಂದು ತಿಳಿಯುವದಿಲ್ಲ. ಹೀಗೆ ಅಧಿಕಾರಿಗಳು ದಿನ ನೂಕುತ್ತಾ ಹೋಗುವ ತತ್ವವು ಎಂದಿಗೂ ತೃಪ್ತಿಕರವಲ್ಲ.

'ಕೌನ್ಸಿಲಿನಲ್ಲಿ ತೀರ್ಮಾನವಾಗಿದೆಯೆಂದು' ಕಮಿಶನರವರು ಬರೆದಿರುವದು ಸೆಟ್ಲ್‌ಮೆಂಟ್ ರದ್ದಾಗಬೇಕೆಂಬ ಠರಾವಿಗೆ ಎಂದೂ ಜವಾಬಲ್ಲ. ಕೌನ್ಸಿಲಿನಲ್ಲಿ ತೀರ್ಮಾನವಾದಾಕ್ಷಣ ಅದು ಸರಕಾರದಿಂದ ಮಂಜೂರಾಯಿತೆಂದರ್ಥವಾಗುತ್ತದೋ? ಇಲ್ಲವಾದರೆ ಇಂಥಾ ತಪ್ಪಿಸಿಕೊಳ್ಳುವ (ಇವೇಡಿಂಗ್) ಜವಾಬಿನಿಂದೇನು ಪ್ರಯೋಜನ? ಕೌನ್ಸಿಲಿನ ತೀರ್ಮಾನದ ಮೇಲೆ ಸರಕಾರದವರು ಏನು ಅಭಿಪ್ರಾಯ ಇಟ್ಟಿರುತ್ತಾರೆಂಬದನ್ನು ತಿಳಿಯಲಿಕ್ಕೇನೇ ಎಲ್ಲರೂ ಕುತೂಹಲದಿಂದ ಕಾದುಕೊಂಡಿರುವದಾಗಿದೆ. ಕೌನ್ಸಿಲಿನಲ್ಲಿ ತೀರ್ಮಾನವಾಗಿದೆಯೆಂಬದನ್ನು ಕಮಿಶನರವರು ಇಷ್ಟು ತಡವಾಗಿ ನಮಗೆ ತಿಳಿಸಬೇಕಾದ ಆವಶ್ಯಕತೆ ಕಾಣುವದಿಲ್ಲ. ಅದು ಎಲ್ಲರಿಗೂ ಗೊತ್ತಿರುವ ಸಂಗತಿಯಾಗಿದೆ.

ಜನರ ಪ್ರತಿನಿಧಿಗಳೂ ಸರ್ಕಾರದ ಪ್ರತಿನಿಧಿಗಳೂ ಇರುವಂಥ ಕೌನ್ಸಿಲಿನಲ್ಲಿ ತೀರ್ಮಾನವಾದ ಸಂಗತಿಗಳನ್ನು ಸರ್ಕಾರದವರು ಒಪ್ಪಿಯೇ ತೀರಬೇಕೆಂದು ಜನರಲ್ಲಿರುವ ನಂಬಿಕೆಯು ಕಮಿಷನರವರಿಗೂ ಇದ್ದೀ ಆ ತರಹದ ಜವಾಬನ್ನು ಕೊಟ್ಟಿರುವರೋ ಎಂಬ ಒಂದು ಸಂಶಯವು ನನಗೆ ತೋರುತ್ತದೆ. ಈ ಸಂಶಯವು ನಿಜವಾಗುವದಾದರೆ ಅದು ಹೆಸರುಗೊಂಡಿರುವ ಬ್ರಿಟಿಷ್ ಸರ್ಕಾರದ ರಾಜನೀತಿಗೆ ಯೋಗ್ಯವಾದದ್ದೆನಿಸುವದು. ಇಲ್ಲವಾದರೆ ಸರ್ಕಾರದವರೇ ಏರ್ಪಡಿಸಿರುವ ಸಂಸ್ಥೆಗೆ (ಕೌನ್ಸಿಲಿಗೆ) ಅವರೇ ಬೆಲೆ ಕೊಡದೆಹೋದರೆ ಬೇರೆಯವರು ಅದನ್ನು ಎಷ್ಟು ಕಡೆಗೆಟ್ಟು ಕಾಣಲಿಕ್ಕಿಲ್ಲ? ಮತ್ತು ಈ ಕೌನ್ಸಿಲು ಆಳುವ ವ್ಯಕ್ತಿಗಳಿಗೆ ಆಟದ ಗೊಂಬೆಯನ್ನು ಕಂಡಂತೆ ಪರಿಣಮಿಸಲಿಕ್ಕಿಲ್ಲವೇ? ಚುನಾಯಿತ ಮೆಂಬರುಗಳೆಲ್ಲರೂ ಬಹುಮತದಿಂದ ಪಾಸುಮಾಡಿರುವ ಇಂಥಾ ಠರಾವುಗಳನ್ನೇ ಸರ್ಕಾರದವರು ಮೂಲೆಗೊತ್ತುವದಾದರೆ ಈ ಕೌನ್ಸಿಲಿನಿಂದ ಏನೊಂದೂ ಪ್ರಯೋಜನವಿಲ್ಲವೆಂದು ಸ್ಪಷ್ಟವಾಗುವದರಿಂದ ಜನರು ಬರುವ ಚುನಾವಣೆಯಲ್ಲಿ ಈ 'ನಾಮ್ನವಾಸ್ತೆ' ಕೌನ್ಸಿಲಿಗೆ ಬಹಿಷ್ಕಾರವನ್ನಿತ್ತು ಹೆಚ್ಚಿನ ಅಧಿಕಾರವಿರುವ ಕೌನ್ಸಿಲನ್ನು ಪಡೆಯಲು ಹೋರಾಡುವದು ಉತ್ತಮವಾಗಿ ತೋರುತ್ತದೆ. ಇಲ್ಲವೆ, ಈ ಪ್ರಯೋಜನವಿಲ್ಲದ ಕೌನ್ಸಿಲು ನಮಗೆ ಅವಶ್ಯವಿಲ್ಲವೆಂಬದನ್ನು ತೋರಿಸಲಿಕ್ಕಾಗಿ ಕೌನ್ಸಿಲಿನಲ್ಲಿ ಎಲ್ಲಾ ವಿಷಯಗಳಲ್ಲಿಯೂ ಸರ್ಕಾರಕ್ಕೆ ವಿರೋಧವಾಗಿ ನಿಲ್ಲುವಂಥ ಅಂದರೆ ಸ್ವರಾಜ್ಯಪಾರ್ಟಿಯವರ ತತ್ವವನ್ನು ಅವಲಂಭಿಸಿ ನಡೆಯುವವರನ್ನೇ ಚುನಾಯಿಸಿ ಕೌನ್ಸಿಲಿಗೆ ಕಳುಹಿಸುವುದು ಉಚಿತವೆಂದು ಕಾಣುತ್ತದೆ. ಈ ವಿಷಯ ಹೆಚ್ಚಿಗೆ ತಿಳಿದಂತ ಮಹನೀಯರು ತಮ್ಮ ಅಭಿಪ್ರಾಯವನ್ನು ಈ ಪತ್ರಿಕೆಯ ಮೂಲಕ ಪ್ರಕಟಿಸಬೇಕಾಗಿ ಕೋರುತ್ತೇನೆ.

"ದೂರದೃಷ್ಟಿ".

ಬಸ್ಸು ಸರ್ವಿಸುಗಳು

ಕೊಡಗಿನಲ್ಲಿ ಬಸ್ಸು ಸರ್ವಿಸುಗಳು ಆರಂಭವಾಗಿ 3 ಯೊ 4 ವರುಷಗಳಾದುವು. ಆ ಅಗಾಯಿತು ನಮ್ಮ ದೇಶದಲ್ಲಿ ವ್ಯಾಪಾರ ಸಾಪಾರದ ಚಳವಳಿಯು ವೃದ್ಧಿಯಾಗುತ್ತಲೇ ಇದೆ. ವ್ಯಾಪಾರವು ಹೆಚ್ಚಿದಂತೆ ಒಡಯರ ಸಾಂಪತ್ತಿಕ ಸ್ಥಿತಿಯು ಉತ್ತಮವಾಗುತ್ತಿದೆ. ಹೊರ ಪ್ರಾಂತದವರಿಗೂ ನಮಗೂ ಪ್ರೀತಿ ಬೆಳದು ನಮ್ಮ ಪೌರುಷವನ್ನು ನಾವು ಮಾಲೆಗೂಯ್ಯುತ್ತಿದ್ದೇವೆ.

ನಮ್ಮ ದೇಶದ ಎರಡು ವಾರ್ತಾ ಪತ್ರಗಳಲ್ಲಿ ಬಸ್ಸು ಸರ್ವಿಸ್ಸಿನ ವಿಷಯವಾಗಿ ಎರಡು ಲೇಖನಗಳನ್ನು ನೋಡಿದೆ. "ಕೊಡಗು' ಪತ್ರಿಕೆಯು ಎಲ್ಲಾ ಲೈನುಗಳನ್ನು ಮೇಲಾಟಕ್ಕೆ ಬಿಡಬೇಕೆಂದು ಹೇಳುವಾಗ, "ಲೋಕಪಾವನವು" ಏಕಾಂಕಿ ಮೇಲಾಟಕ್ಕೆ ಬಿಡುವದುಚಿತವಲ್ಲೆಂಬ "ಪ್ರೊಟೆಕ್ಷನ್ ಪಾಲಿಸಿ" ಎಂಬ ಮಾರ್ಗವನ್ನು ಬೋಧಿಸುತ್ತದೆ.

ದೇಶದ ಮೇಲ್ಮೆಗೆ ಉದ್ಯೋಗಿಕ ಪ್ರಯತ್ನವು ಚನ್ನಾಗಿ ನಡೆಯಬೇಕು. ಜನರಿಗೆ ಪ್ರಯಾಣಕ್ಕೆ ಅನುಕೂಲಮಾಡಿಕೊಳ್ಳುವಷ್ಟು ಇವರೊಳಗೆ ಬುದ್ಧಿಯು ತೀಕ್ಷ್ಣವಾಗುತ್ತಾ, ಶ್ರೇಷ್ಠ ಶಿಲ್ಪಿಗಳು ತಯಾರಾಗುವರು. ನಮ್ಮಲ್ಲಿ ಯೋಗ್ಯರಾದ ಶಿಕ್ಷಣವನ್ನು ಹೊಂದಿದ ಶಿಲ್ಪಿಗಳು ಇಲ್ಲದಿರುವ ಕಾರಣದಿಂದಲೇ ನಮ್ಮ ದೇಶದಲ್ಲಿ ಯಾವ ತರದ ಉದ್ಯೋಗಿಕ ಚಳವಳವು ನಡೆಯುತ್ತಿಲ್ಲ. ಈ ಬಾಬಿನಲ್ಲಿ ನಾವು ಸರಕಾರದವರ ಸಹಾಯನ್ನು ಕೋರುವುದು ಯುಕ್ತವಲ್ಲ. ನಾವು ಮುಂದರಿಯುತ್ತಿದ್ದರೆ ಸರಕಾರದವರು ನಮಗೆ ಸಹಾಯ ಮಾಡದೇ ಮಾಡುವರೇ. ತಾತಾರವರ ಕಾರ್ಖಾನೆಗೆ ಸರಕಾರದವರು ಧನ ಸಹಾಯ ಮಾಡಲಿಲ್ಲವೇ?

ಬಸ್ಸು ಸರ್ವಿಸ್ಸುಗಳು ಬಂದ ಮೇಲೆ ನಮ್ಮವರೊಳಗೆ ಅನೇಕ ಬಡಜನರು "ಡ್ರೈವರು'ಗಳಾಗಿ ಸೊಗಸಾಗಿ ಜೀವನ ಮಾಡುತ್ತಿರುವರು. ನಾಲ್ಕು ಜನರ ಗುಂಪಿನಲ್ಲಿ ಅವರಿಗೆ ಮರ್ಯಾದೆ ಇದೆ. ತಾನು ಕಾಂಗಾರಿಯಾದರೆ, ತನ್ನ ಅಣ್ಣ ತಮ್ಮಂದಿಯರು ಸಹ ಕೆಲಸಗಾರರಾಗುವರು. "ಮೋಟಾರ್ "ಡ್ರೈವಿಂಗ್' ಎಂಬುದು ಒಂದು ವೃತ್ತಿಯಾಗಿಯೇ ಪರಿಣಮಿಸಿದೆ. ಇದುವರಿವಿಗೂ ನಮ್ಮ ಜನರು ಕೈ ಕೆಲಸವೆಂದರೆ ಹೇಯಗೊಳ್ಳುತ್ತಿದ್ದವರು, ಈಗ ಡ್ರೈವಿಂಗ್ ಕೆಲಸಕ್ಕೆ ಕೈ ಅಂಟಿಸಿರುವರು. ಈ ಕೆಲಸವು ಸಿಕ್ಕದೆ ಹೋದರೆ ಬೇರೊಂದು ಕೆಲಸವನ್ನು ಕಲಿಯಲೆತ್ನಿಸುವರು. ಹೀಗೆ ಇವರಲ್ಲಿ ಕಲಾಪ್ರೇಮ ಉಂಟಾಗುವದು. ಬಡ್ಡಂಥ ಮನೆಯ ಯುವ ಕನೊಬ್ಬನು ಕಲಕತ್ತೆಗೆ ಚಿತ್ರಕಲೆಯನ್ನು ಕಲಿಯಲು ಹೋಗುವನೆಂದು ಯಾರು ತಾನೇ ನಂಬಿದ್ದರು?

ನಾವು ಮುಂದರಿದ ಇತರ ಜನಗಳೊಂದಿಗೆ ಸೇರುವದರಿಂದ ನಮಗ ಬುದ್ಧಿ ವಿಕಾಸವಾಗುವುದು ಮಾತ್ರವಲ್ಲದೆ, ನಾವು ಹಲವು ಕಲಾಕೌಶಲ್ಯಗಳನ್ನು ಕಲಿತು ನಮ್ಮ ದೇಶವನ್ನು ಏಳಿಗೆಗೆ ತರಬಹುದು. ಇದುದರಿಂದ ಸದ್ಯಕ್ಕೆ ನಮ್ಮ ದೇಶದಲ್ಲಿರುವ ಸರ್ವಿಸುಗಳು ಹೆಚ್ಚೆಂದು ಹೇಳಲಿಕ್ಕೆ ಸಾಧ್ಯವಿಲ್ಲ. ಪ್ರತಿಯೊಂದು ಲೈನಿನಲ್ಲಿಯೂ ಎರಡೆರಡು ಸರ್ವಿಸುಗಳನ್ನು ನಡಸಬಹುದು.

ಈಗ್ಯೆ ಮಡಿಕೇರಿ ವಿರಾಜಪೇಟೆ ಲೈನ್, ಮತ್ತು ಮಡಿಕೇರಿ—ಪೊನ್ನಂಪೇಟು—ವಿರಾಜಪೇಟೆ ಲೈನ್ ವಿನಃ ಮಿಕ್ಕ ಲೈನುಗಳಲ್ಲಿ ಎರಡು ಸರ್ವಿಸುಗಳಿರುವದರಿಂದ ಕಂಪೆನಿಯವರಲ್ಲಿ ಪೋಟಾಪೋಟಿ ಇರುವದು. ಪ್ರಯಾಣಿಕರಿಗೆ ಹಲವು ತರದ ಸೌಕರ್ಯಗಳು ದೊರೆಯುವವು. ಮಡಿಕೇರಿ—ವಿರಾಜಪೇಟೆ ಲೈನಿನಲ್ಲಿ ಸಿದ್ದಾಪುರದ ವರೆಗೆ ಮೇಲ್ ಸರ್ವಿಸು ನಿದೆಯಾದರೆ, ಆ ಲೈನಿನಲ್ಲಿ ಎರಡು ಸರ್ವಿಸುಗಳು ಪೋಟಾಪೋಟಿಯಿಂದ ಕೆಲಸ ಮಾಡುತ್ತವೆಂದು ಹೇಳಲಿಕ್ಕೆ ಸಾಧ್ಯವಿಲ್ಲ. ಮೇಲ್ ಸರ್ವಿಸಿನಲ್ಲಿ ಪ್ರಯಾಣ ಮಾಡುವವರು ಹೆಚ್ಚಾಗಿ ಮೈಸೂರಿಗೆ ಹೋಗುವವರೇ. ಮಡಿಕೇರಿ ಬಸ್ಸು ಬರುವ ತನಕ ಕಾತಿದ್ದು ನಂತರ ಅದರ ಮೇಲೆ ಕೂತು ವಿರಾಜಪೇಟೆಗೆ ಹೋಗುವವರು ಯಾರೂ ಇಲ್ಲವೆಂದೇ ನನ್ನ ಭಾವನೆ. ಪ್ರಯಾಣಿಕರಿಗೆ ಈ ರೀತಿಯು ಅನುಕೂಲವಾಗಲಾರದು.

ದೇಶದ ಹಿತಾಹಿತವನ್ನು ಕುರಿತು ಬರೆಯುವಾಗ, ಪತ್ರಿಕಾಕರ್ತರು ತಮ್ಮ ಅಗ್ರಲೇಖನದಲ್ಲಿ ವ್ಯಕ್ತಿ ದೂಷಣೆ ಮಾಡುವದು ಯೋಗ್ಯವಲ್ಲವು. ಲೋಕದಲ್ಲಿ ಎಂಥಾ ಮಹಾಪುರುಷನಲ್ಲಿಯೂ ಕುಂದುಕೊರತೆಗಳಿರುತ್ತವೆ. ಮಹಾತ್ಮ ಗಾಂಧಿಯವರನ್ನು ಲೋಕವೇ ಕೊಂಡಾಡುತ್ತದೆಂದು ಹೇಳಿದರೂ, ಲೋಕದ ಎಷ್ಟೋ ಜನರು ಅವರನ್ನು ದೂರುವದಿಲ್ಲವೇ? ದೂರುವದಾದರೂ ದೇಶದ ಅಭ್ಯುದಯಕ್ಕಾಗಿ ಅವರನ್ನು ದೂರುವರು ಅವರ ಯೋಗ್ಯತೆಯನ್ನು ತೋರಿಸುದಕ್ಕೆಂದಲೂ, ಅವರ ಮಹತ್ವವನ್ನು ತೋರಿಸುವದು. ಈಗಿನ ಕಾಲದ ರೀತಿ. ಬಸ್ಸನ್ನು ತಳಿಯ ಹೋದರೆ, ಹಳಿಯುವವನು ಸಭ್ಯನೇ, ಎಂಬ ಪ್ರಶ್ನೆ ಬರುವದು.

"ಪ್ರಯಾಣಿಕ."

ಸ್ಕೂಲ್ ಫೈನಲ್ ಪರೀಕ್ಷೆಯ ಫಲಿತಾಂಶ

ಅಯ್ಯಾ ಸಂಪಾದಕರೆ,

ನನ್ನ ಈ ಕೆಳಗಿನ ನೋವನ್ನು ಪರಿಹರಿಸಿಕೊಳ್ಳಲಿಕ್ಕೆ ತಮ್ಮ ಪತ್ರಿಕೆಯಲ್ಲಿ ಸ್ವಲ್ಪ ಎಡೆಕೊಡಬೇಕಾಗಿ ಬೇಡುತ್ತೇನೆ. ಈ ವರ್ಷದ ಸ್ಕೂಲ್ ಫೈನಲ್ ಪರೀಕ್ಷೆಯಲ್ಲಿ ಮಡಿಕೇರಿ ಹೈಸ್ಕೂಲಿನಿಂದ 34 ವಿದ್ಯಾರ್ಥಿಗಳ ಪೈಕಿ 16 ಹುಡುಗರೂ ವೀರರಾಜಪೇಟೆ ಹೈಸ್ಕೂಲಿನಿಂದ 22 ವಿದ್ಯಾರ್ಥಿಗಳ ಪೈಕಿ 7 ಹುಡುಗರೂ ಪಾಸಾಗಿರುತ್ತಾರೆಂದು ಪತ್ರಿಕೆಯಲ್ಲಿ ನಮೂದಿಸಿರುವದನ್ನು ನೋಡಿ ತುಂಬ ಸಂತೋಷ ಪಡಬೇಕಾಯಿತು. ಇದರ ಜೊತೆಯಲ್ಲು ವ್ಯಸನ ಸೂಚಕವಾದ ಒಂದು ಸಂತೋಷವು ಒಳಗೊಂಡಿದೆ. ಅದೇನೆಂದರೆ-ವೀರರಾಜಪೇಟೆ ಹೈಸ್ಕೂಲಿನಲ್ಲಿ ಪಾಸಾದ 7 ಹುಡುಗರು ಮನೆಯಲ್ಲಿ ಯಾ ಹೊಟೇಲಿನಲ್ಲಿ ಊಟಮಾಡಿಕೊಂಡು ಸ್ಕೂಲಿಗೆ ಬಂದ ವಿದ್ಯಾರ್ಥಿಗಳೆಂದೂ ಬೋರ್ಡಿಂಗಿನಲ್ಲಿ ಉಳಕೊಂಡು ಪರೀಕ್ಷೆಗೆ ಹೋದ ವಿದ್ಯಾರ್ಥಿಗಳು ಒಬ್ಬನಾದರೂ ಪಾಸಾಗಿರುವುದಿಲ್ಲವೆಂದೂ ತಿಳಿದು ಬಹು ವ್ಯಸನವಾಯಿತು. ಅಯ್ಯೊ, ನನ್ನಂಥ ಗರೀಬ ತಂದೆಗಳು ಮಕ್ಕಳನ್ನು ಬೋರ್ಡಿಂಗಿಗೆ ಬಿಡುವದು ಹೇಗೆ? ಸೋತು ಹೋದೇವು ಮಕ್ಕಳನ್ನು ಓದಿಸಲು ಚೈತನ್ಯವಿದೆಯೋ? ನಮ್ಮ ಮಕ್ಕಳನ್ನು ಯಾವದು ಫೆಯಿಲ್ ಮಾಡಿದ್ದು? ನಾವು ಕೊಟ್ಟ ಊಟದ ಖರ್ಚೋ. ಬೋರ್ಡಿಂಗಿನ ಊಟವೋ ಅಥವಾ ನಮ್ಮ ಮಕ್ಕಳ ಕೋಟ್, ಕಾಲರ್, ನೆಕ್ ಟೈ, ಕ್ರಿಕೆಟ್ ಟೀಮಿನಗೊಂದಲದ ನವಿಯೋ, ಇಲ್ಲವೆ ಸಹಪಾಟಿಗಳ ಸಂಸರ್ಗದ ಯಾ ಹೊಟೇಲಿನ ಫಲಹಾರದ ಪರಿಣಾಮವೋ? ಮಾಸ್ತರುಗಳ ಬೋಧನೆಯ ಫಲಿತಾಂಶವೋ? ಏನೆಂದು ತಿಳಿಯೋಣ. ಬೋರ್ಡಿಂಗಿನಲ್ಲಿ ಬೋರ್ಡಿಂಗ್ ವಿದ್ಯಾರ್ಥಿಗಳ ಮೇಲ್ವಿಚಾರಕರು ತೆಗೆದುಕೊಳ್ಳುವ ಹೆಚ್ಚಿನ ತೊಂದರೆಯೋ? ಅಯ್ಯಾ ಮೇಲ್ವಿಚಾರಕರೇ, ಬೋರ್ಡಿಂಗಿನ ವಿದ್ಯಾರ್ಥಿಗಳು ಪಾಸಾದರೆ ಬೇರೆ ಹುಡುಗರು ಬೋರ್ಡಿಂಗಿನಲ್ಲಿಲ್ಲದೆ ಮೇಲ್ವಿಚಾರತ್ವವು ಇಲ್ಲದಂತಾಗುವದೆಂದು ಭಾವಿಸುವಿರಾ? ನಮ್ಮ ಗೈರ್ಹಾಜರಿನಲ್ಲಿ ನೀವಲ್ಲವೇ ತಂದೆ. ನಿಮ್ಮ ಶಿಷ್ಯರಾದ ಮಕ್ಕಳ ಸ್ಥಿತಿಯನ್ನು ನೋಡಿದರೆ, ಪಾಸಾಗದ ವಿಷಯದಲ್ಲಿ ನಿಮ್ಮ ಶಿಷ್ಯರನ್ನು ನಡೆಸಿಕೊಂಡು ಬರುವ ಗರೀಬ ತಂದೆಯರಲ್ಲಿ ನಿಮಗೆ ಸ್ವಲ್ಪವೂ ಕರುಣೆಯಿಲ್ಲವೇ? ಅದಂತಿರಲಿ. ಬೋರ್ಡಿಂಗಿನ ಬಿಲ್ಲನ್ನು ಕೇಳಬೇಡೋಣ. ಬೋರ್ಡಿಂಗಿಗೆ ಸೇರಿಸಿದವರಿಗೂ ಇನ್ನು ಸೇರಿಸುವವರಿಗೂ ಸಂತೋಷವಾಗಲಿ. ನಮ್ಮ ಮಕ್ಕಳನ್ನು ಎಡೆಬಿಡದೆ ಕಳುಹಿಸುವ ಬೋರ್ಡಿಂಗಿನ ವಿದ್ಯಾರ್ಥಿಗಳು ಇಲ್ಲವೆಂದು ಹೇಳೋಣವೋ, ಬೇಡ. ಮುಂದಕ್ಕೆ ಪಾಸಾಗುವರೆಂದು ಹೇಳೋಣ. ಮನೆಯಲ್ಲು ಓದಲು ಪುರುಸತ್ತು ಇಲ್ಲದೆ ಗಾಬರಿಯಿಂದ ಗಂಟೆ ಆಯಿತೆಂದು ತಂದೆ ತಾಯಿಗಳಿಗೆ ನಿಲುಗೊಡದೆ ಹೋದ 7 ವಿದ್ಯಾರ್ಥಿಗಳು ಮಾತ್ರ ಪಾಸಾಗಿರುತ್ತಾರೆ. ಬೋರ್ಡಿಂಗಿನಲ್ಲಿನ ವಿದ್ಯಾರ್ಥಿಗಳು ಬರುವ ವರ್ಷ ಪಾಸಾಗುವರೆಂದು ಊಹಿಸುವರೆ ಈ ವರೆಗೆ ಬರೆದ ಮೇಲೆ ಸೂಚಿಸಿದ ಯಾವ ಕಾರಣವೆಂದು ಹೇಳುವಿರಿ. ಅದನ್ನು ಬೋರ್ಡಿಂಗಿನಲ್ಲಿ ಓದಲು ಬಿಟ್ಟ ವಿದ್ಯಾರ್ಥಿಗಳ ತಂದೆ ತಾಯಿಗಳಿಗೆ ಗೊತ್ತಿದ್ದಲ್ಲಿ ದಯಮಾಡಿ ತಿಳಿಸಿದಲ್ಲಿ ನಿಮ್ಮ ಸಂಗಡ ನಾನು ಒಪ್ಪುವೆನು.

ಮನನೊಂದ ಮಕ್ಕಳ ತಂದೆ

ನೌಕರಿ ಖರಾರು ಫಾರಮುಗಳು.

1926ನೇ ಇಸವಿ ಕೊಡಗಿನ ಕೂಲಿ ಕೆಲಸವನ್ನು ಕುರಿತ ಆಕ್ಟು 10 ಮೇರೆ, ಅನುಭವವುಳ್ಳ ಯೂರೋಪಿಯನ್ ಮತ್ತು ಇಂಡಿಯನ್ ಪ್ಲಾಂಟರುಗಳೂ ಸೇರಿ ತಯಾರಿಸಿರುವ ನೌಕರಿ ಖರಾರು ಫಾರಮುಗಳು ಇಂಗ್ಲಿಷಿನಲ್ಲಿಯೂ ಕನ್ನಡದಲ್ಲಿಯೂ ಪ್ರಿಂಟಾಗಿ ಮಾರಾಟಕ್ಕೆ ತಯಾರಿವೆ. ಬೇಕಾದವರು ಸಂಟ್ರಲ್ ಹೈಸ್ಕೂಲಿನ ಬಳಿ ಇರುವ (ಹಳೇ ಗಡಂಗ ಕಟ್ಟಡದ) ನಮ್ಮ ಹೊಸ ಆಫೀಸಿನಲ್ಲಿ ಕೊಂಡುಕೊಳ್ಳಬಹುದು.

ತಾ 24-6-'26, ಮಡಿಕೇರಿ. ಮೇನೇಜರ್, "ಕೊಡಗು" ಆಫೀಸು

ಗೆಳೆಯರ ಗುಂಪಿನ

ಕನ್ನಡ **ಸ್ವಧರ್ಮ** ಮಾಸಪತ್ರಿಕೆ.

ಸಂಪಾದಕರು—ದ ರಾ. ಬೇಂದ್ರೆ, ಬಿ ಎ

ಸಮಾಜದಲ್ಲಿ ಶಾಂತಿಪುಷ್ಟಿತುಷ್ಟಿಗಳು ನೆಲೆಗೊಳ್ಳಬೇಕಾದರೆ ಸದಾಚಾರವೇ ಸರಳವಾದ ಹಾದಿ. ಸದಾಚಾರದ ಬೆಳೆಗೆ ಸುವಿಚಾರವೇ ಸರಿಯಾದ ಸಾಧನ. ಇಂತಹ ಸುವಿಚಾರಗಳನ್ನು ಸಮಾಜದ ಮುಂದಿಡಲು ಹೋಗುವದೇ ಸ್ವಧರ್ಮದ ಗುರಿ. ಕನ್ನಡಿಗರು ಕೈಗೊಟ್ಟು ಸ್ವಧರ್ಮವನ್ನು ಪ್ರೋತ್ಸಾಹಿಸಬೇಕಾಗಿ ಕೋರಿಕೆ.

ವಾರ್ಷಿಕ ವರ್ಗಣಿ ರೂ. 3-0-0.

ಕಾರ್ಯದರ್ಶಿ

"ಸ್ವಧರ್ಮ" ಕಾರ್ಯಾಲಯ,

ಹೊಸಯಲ್ಲಾಪುರ, ಧಾರವಾಡ.

ಆಂಧ್ರ ಆಯುರ್ವೇದಿಕ್ ಫಾರ್ಮಸಿ.

ಬ್ರಾಂಚ್, ಬೆಂಗಳೂರು ಸಿಟಿ.

ಚ್ಯವನಪ್ರಾಸ ಲೇಹ.

ಇದು ಸರ್ವೋತ್ಕೃಷ್ಟವಾದ ಗಿಡಮೂಲಿಕೆಗಳಿಂದ ತಯಾರಿಸಲ್ಪಟ್ಟ ಆಯುರ್ವೇದ ರಸಾಯನೌಷಧವು. ವಿದ್ಯಾರ್ಥಿಗಳೂ ವಿಶೇಷವಾಗಿ ಬುದ್ಧಿಯನ್ನು ಪ್ರಯೋಗಿಸಿ ಕೆಲಸ ಮಾಡುವವರೂ ಈ ಲೇಹವನ್ನು ಸೇವಿಸಿದರೆ ವಿಶೇಷವಾಗಿ ಬುದ್ಧಿಶಕ್ತಿಯನ್ನೂ, ಜ್ಞಾಪಕಶಕ್ತಿಯನ್ನೂ ಹೊಂದುವರು. ದೀರ್ಘಕಾಲದ ವ್ಯಾಧಿಯಿಂದಾಗಲೀ ಕೆಟ್ಟ ನಡತೆಯಿಂದಾಗಲೀ, ಸ್ವಭಾವ ಶಕ್ತಿಯ ಕೊರತೆಯಿಂದಾಗಲೀ ಶರೀರ ಕಾಂತಿಯು ಕುಂದಿ ರಕ್ತ ಕೆಟ್ಟು ಇಂದ್ರಿಯ ದೌರ್ಬಲ್ಯವೇ ಮೊದಲಾದ ವಿಕಾರಗಳಿಂದ ಪೀಡಿತರಾಗಿರುವವರು ಈ ಲೇಹವನ್ನು ಸೇವಿಸಿದರೆ ಈ ತರದ ವಿಕಾರಗಳನ್ನೆಲ್ಲಾ ಪರಿಹರಿಸಿ ದೇಹಕ್ಕೂ ಮನಸ್ಸಿಗೂ ಉಲ್ಲಾಸವನ್ನುಂಟುಮಾಡಿ ಮಾಂಸ ಖಂಡಗಳಿಗೂ ನರಗಳಿಗೂ ಬಲವನ್ನು ಕೊಟ್ಟು ದೇಹಪುಷ್ಟಿಯನ್ನುಂಟುಮಾಡಿ ನವಚೈತನ್ಯವನ್ನುಂಟುಮಾಡುವುದು. ಅಲ್ಲದೆ ಆರೋಗ್ಯ ದೃಢಶರೀರವುಳ್ಳವರಾಗಿ ದೀರ್ಘಕಾಲ ಬದುಕುವರು. ಕೆಮ್ಮಲು, ಉಬ್ಬಸ ವ್ಯಾಧಿಯುಳ್ಳವರಿಗೂ ಮುಖ್ಯವಾಗಿ ಕ್ಷಯರೋಗಿಗಳಿಗೂ ಇದು ಸಂಜೀವಿನಿಯೇ ಸರಿ. ಚರಕ ಸಂಹಿತೆಯಲ್ಲಿ ಇದರ ಗುಣವು ಅದ್ಭುತವಾಗಿ ಹೇಳಲ್ಪಟ್ಟಿದೆ. ೧೦ ತೊಲೆಗೆ ೧ರೂಪಾಯಿ. ೪೦ ತೊಲೆಗೆ ೩ ರೂಪಾಯಿ.

ಎಲ್ಲಾ ಕಡೆಯಲ್ಲಿಯೂ ಏಜಂಟರು ಬೇಕು.

ಸೂಚನೆ.—ಇಲ್ಲಿ ಶಾಸ್ತ್ರೀಯವಾದ ಎಲ್ಲಾ ಔಷಧಗಳೂ ಹೆಡ್ಡಾಫೀಸಿನ ಕ್ರಯಕ್ಕೆ ಸಿಗುವವು. ಆಯುರ್ವೇದ ಭೂಷಣ ಕೆ. ನಾರಾಯಣರಾವ್ ಎ. ಎಂ. ಎ. ಸಿ. ಯವರು ರೋಗಿಗಳನ್ನು ಪರೀಕ್ಷಿಸಿ ತಕ್ಕ ಚಿಕಿತ್ಸೆಯನ್ನು ಪ್ರತಿದಿನವೂ ನಡಿಸುವರು. ವಿಶೇಷ ಸಂಗತಿಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ

ಟಿ. ಸಿ. ಎಸ್. ಮನಿಯಂ ಅಂಡ್ ಕೋ,

ಮ್ಯಾನೇಜಿಂಗ್ ಏಜಂಟ್ಸ್, ಆಂಧ್ರ ಆಯುರ್ವೇದಿಕ್ ಫಾರ್ಮಸಿ

16—3 ೬೬ ಚಿಕ್ಕಪೇಟೆ, ಬೆಂಗಳೂರು ಸಿಟಿ.

ಕರ್ಣಾಟಕ

ಏಗ್ಯೂ ಮಿಕ್ಸ್ಚರ್.

ಚಳಿಜ್ವರ, ಮಲೇರಿಯ ಜ್ವರ, ಇನ್‍ಫ್ಲುಯೆಂಝ ಆಡವಿ ಜ್ವರ, ಮೊದಲಾದವುಗಳ ಮೇಲೆ ಅಪ್ರತಿಮವಾದ ಔಷಧವು.

ಚಿಲ್ಲರೆ ಬಾಟ್ಲೊಂದಕ್ಕೆ ರು. ೧—೧೪=೦
ಟಪ್ಪಾಲು ಖರ್ಚು ಬೇರೆ
ಡಜನ್ ಬಾಟ್ಲುಗಳಿಗೆ ಟಪ್ಪಾಲುವೆಚ್ಚ ಸಹ ರು.
೯—೨—೦

ಏಜಂಟರು ಬೇಕು, ಕೆಳಗಿನ ಸ್ಟಾಂಪ್ ಕಳುಹಿಸಿ ತಮ್ಮ ಊರಿನ ಮೂರು ಜನ ಔಷಧದ ವ್ಯಾಪಾರಿಗಳ ಹೆಸರನ್ನು ತಿಳಿಸಿದಲ್ಲಿ ಅಂದವಾದ ಬ್ಲಾಟಿಂಗ್ ಪೇಪರ ಪುಕ್ಕಟೆ.

12—6 ಕರ್ಣಾಟಕ ಬ್ರದರ್ಸ್,
ಗಿರಗಾಂವ, ಮುಂಬಾಯಿ.

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್, ಕೋ ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ.

		ರೂ.
ಶೇರ್ ಬಂಡವಾಳ	—	50,000
ವಸೂಲಾದ ಶೇರ್ ಮೊಬಲಗು	—	9890
ಬಮೊಬಂದ ಠೇವಣಾತಿ	—	90,600

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲಕೊಡತಕ್ಕದ್ದು.

ಒಂದು ವರ್ಷ ವಾಯಿದೆ ಅಥವ ಹೆಚ್ಚಿನ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ ರೂ. 6-4-0ರ ದರದಲ್ಲಿ ಬಡ್ಡಿ ದೊರೆಯುತ್ತೆ. ಕಡಿಮೆ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ 5ರ ಬಡ್ಡಿ ದೊರೆಯುತ್ತೆ.

ವರ್ಷಕ್ಕೊಂದಾವರ್ತಿ ಕೋ ಆಪರೇಟಿವ್ ರಿಜಿಸ್ಟ್ರಾರವರು ಲೆಕ್ಕ ಆಡಿಟು ಮಾಡುತ್ತಾರೆ.

ಪ್ರೆಸಿಡೆಂಟರು, ಟ್ರೆಜರರ್.
ಚೆಂದೆರ ಕುಟ್ಟಯ್ಯನವರು, ಯಂ. ಭುಜಂಗರಾಯರು
ರಾಯ್ ಬಹದ್ದೂರ್. ಬಿ.ಎ, ಬಿ.ಎಲ್.

ಸೆಕ್ರೆಟರಿ
ಸಿ. ಯನ್. ವೆಂಕಪ್ಪಯ್ಯನವರು, ಬಿ.ಎ, ಬಿ.ಎಲ್.
ಮಡಿಕೇರಿ 29—8—1925.

Apply for our shooting Season's Clearance Sale Catalogue of b. Goods.

10 to 25 percent Reductions in Prices.

No License Required!! **No License Req**



Webley and Scott Air Pistol, cal ·177 or 22, bore Powerful and Accurate· complete with a sample box of slugs, two spare washers, a brush forcleaning, and a bookletof instructions Rs. 30/– Free delivery.

Pwerful German Diana Air gun· Handsome and Accurate, takes B· S· A· Patern No· 1 Slugs and Darts· expressly recommendable for Target Practice Rs· 15/ Free delivery·

Brilliant Search Light Lamp for Night Sports Rs 30/– Free delivery·

No License required to purchase or to possess the above items.

Relisk D B B L· 12 bore guns	Rs. 60/–	and upwards·	
Do· S. B B L· 12	do	do· 40/–	do·
D B. M L Guns		„ 45 -	do·
S B· M L. do.		„ 30/–	do
S B. B L Rifles		„ 25/–	do·
B L Revolvers and Pistols		, 30/–	do.

Arms, Ammunition and shooting requisitesof almost every kind andquality offered at exceptionally favourable rates. ANumber of good quality second hand weapons also offered for sale in theNew Catalogue.

GOOLAMHUSIAIN ALLIBHOY & SONS

Largest Importers of Firearms and Ammunition,

Cheapest priced firm in India,

24. 24 **210 Abdul Rehman Street, BOMBAY·**

೧೬ ಚಿತ್ರಪಟ ಗಳುಳ್ಳದು

ಸಚಿತ್ರ ಶುಕಸಪ್ತತಿ ಕಥೆ.

೭೦ ಕಥೆಗಳು ೫೧೨ ಪುಟಗಳು

ಈ ಕಥೆಯು ಧರ್ಮಶಾಸ್ತ್ರ ವೇದಾಂತ, ಸ್ತ್ರೀಪಾತಿವ್ರತ್ಯ ಬ್ರಾಹ್ಮಣ, ವೈಶ್ಯ, ಶೂದ್ರರೆಂಬ ನಾಲ್ಕು ವರ್ಣದವರು ನಡಿಯತಕ್ಕ ವರ್ಣಾಶ್ರಮ ಧರ್ಮವೇ ಮುಂತಾದ ಸದ್ವಿಚಾರಗಳನ್ನು ಬೋಧಿಸುವುದು. ೧. ಕಥಾರೂಪವನ್ನು ಚಿತ್ರಕಥಾ ಚಮತ್ಕಾರ ಶೋಭಿತವಾಗಿಯೂ ನೀತಿಬೋಧಕವಾಗಿಯೂ ಇರುವದರಿಂದ ಸ್ತ್ರೀಯರು, ಪುರುಷರು, ಬಾಲಕರು ಎಂಬ ಭೇದವಿಲ್ಲದೆ ಎಲ್ಲರೂ ಓದಬಹುದು. ೨. ಲೋಕಾನುಭವಕ್ಕೆ ಬೇಕಾದ ಅನೇಕ ವಿಷಯಗಳು ಇದರಿಂದ ತಿಳಿಯಬರುವುದು ೩. ಈ ಕಥೆಯನ್ನು ಓದುವದರಿಂದ, ಮನಸ್ಸನ್ನು ದುರಾಚಾರದಲ್ಲಿ ಬಿಡದಂತೆ ಸದಾಚಾರದಲ್ಲಿಯೇ ನಡೆಯುವಂತೆ ಮಾಡುವುದು. ೪ ವಿವೇಕಾವಿವೇಕವನ್ನು ತಿಳಿಯತಕ್ಕ ಜ್ಞಾನವನ್ನು ಉಂಟುಮಾಡುವುದು. ಬೇಕಾದವರು ವಿ. ಪಿ. ಪೋಸ್ಟು ಮೂಲಕ ತರಿಸಿಕೊಳ್ಳಬಹುದು

ದಪ್ಪಕಾಗದ ಕ್ರಯ ಪ್ರತಿ ೧ಕ್ಕೆ ರೂ. ೨-೦-೦. ಟಪ್ಪಾಲು ಹಾಸಲು ೦-೮-೦.

ಸಚಿತ್ರ ಭಟ್ಟಿ ವಿಕ್ರಮಾದಿತ್ಯರಾಯನ ಕಥೆ ೩ ಭಾಗಸೇರಿದ್ದು ೬೧೩ ಪುಟಗಳು ಕ್ರಯ ೨-೪-೦. ಸಚಿತ್ರರಾಜ ಕಂಠೀರವ ಕಥೆ ೪೮೦ ಪುಟಗಳು, ಕ್ರಯ ರೂ. ೨.

ಸಚಿತ್ರ ಶ್ರೀರಾಮಪತ್ತಾಮೃತ ಎಂಬ ಸೀತಾರಾಮಾಂಜನೇಯ ಸಂವಾದ ೩೪೬ ಪುಟಗಳು ೧-೮-೦. ಇವುಗಳಿಗೆ ಟಪಾಲು ಖರ್ಚು ಬೇರೆ.

ನಮ್ಮಲ್ಲಿ ದೊರೆಯುವ ಎಲ್ಲಾ ಪುಸ್ತಕಗಳ ಕ್ರಯ-ಪಟ್ಟಿ (ಕ್ಯಾಟಲಾಗಿ)ಗೆ ಬರೆದರೆ ಕಳುಹಿಸುವೆವು.

52—7 ನಮ್ಮ ವಿಳಾಸ— ಎಂ ಆರ್. ಕೃಷ್ಣಸ್ವಾಮಿ ಶೆಟ್ಟಿ,
ಬುಕ್ಕಡಿಪೋ, ಚಿಕ್ಕಪೇಟೆ, ಬೆಂಗಳೂರು ಸಿಟಿ

ಹೊಸ ಸಾಮಾನುಗಳು! ಸುಲಭ ಕ್ರಯ!! ಈಗತಾನೇ ಬಂದಿವೆ!!!

ಇಂಥ ಸುಸಮಯವನ್ನು ಕಳಕೊಳ್ಳಬೇಡಿರಿ!

12 ಬೋರ್ ಜೋಡಿ ಕೊಳವಿನ ತೋಟೆ ಕೋವಿ 1ಕ್ಕೆ	....	ರೂ.	115—0—0
12 , 32 ಇಂಚಿನ ಬಂಟಿ ಕೊಳವಿನ ತೋಟೆ ಕೋವಿ (ಜರ್ಮನಿ) 1ಕ್ಕೆ.		„	60—0—0
„ „ 36 „ „ „	„	„	65—0—0
ಜೋಡಿ ಕೊಳವಿನ ಕೇಪು ಕೋವಿ 20ನೇ ನಂಬ್ರು 1ಕ್ಕೆ....	. .	„	85—0—0
12 ಬೋರ್ ಚಿಲ್ಲು ತೋಟೆಗಳು (ಬಿಳೀ ನಮೂನೆ) 100ಕ್ಕೆ	....	„	14—0—0
„ „ ಆನೆ ಚಿಲ್ಲು „ „ „	...	„	16—0—0
„ „ ಗುಂಡು ತೋಟೆಗಳು „ „	....	„	19—0—0
ಕೋವಿ ಕ್ಲೀನ್ ಮಾಡುವ ಮತ್ತು ತೋಟೆ ತುಂಬಿಸುವ ಸಾಮಾನುಗಳ 1 ಪೆಟ್ಟಿಗೆ			27—8—0
ಕೇಪು 250ರ 1 ಟಿನ್ನಿಗೆ	....	ರೂ.	1—5—0
ಕಾಲು ಪೌಂಡು 2 ಯಫಾಸ ಮದ್ದು ಡಬ್ಬಿ 1ಕ್ಕೆ	...	„	1—0—0
ಚಿಲ್ಲು ಎಲ್ಲಾ ತರಹದ ನಮೂನೆ ರಾತ್ಲು 1ಕ್ಕೆ	....	„	0—10—0
ಪೂರ್ತಿ ಉಕ್ಕಿನ ಸೊಗಸಾದ ಗುದ್ದಲಿಗಳು 5 ಪೌಂಡಿನ 1 ಡಜನ್ನಿಗೆ		„	33—0—0
„ „ „ 4 „ „	....	„	30—0—0
4 ಮುಳ್ಳಿನ ಮುಳ್ಳು ಗುದ್ದಲಿಗಳು ಡಜನ್ನಿಗೆ ...	....	„	60—0—0
3 „ , „ ...	...	„	45—0—0
4 ಪೌಂಡಿನ ಮರ ಕಡಿಯುವ ಕೊಡಲಿಗಳು ಡಜನ್ನಿಗೆ	...	„	54—0—0
ಇಂಗ್ಲಿಷ್ ನಮೂನೆ ಕಠಾರು ಚಾಕುಗಳು ಡಜನ್ನಿಗೆ	....	,	15—0—0
ಮಿಶನ್ ಕೊಡೆಗಳು ದೊಡ್ಡ ಸೈಜ್ (ಸ್ವಿಟ್ಜರ್‌ಲಾಂಡ್) 1ಕ್ಕೆ		„	4—8—0
ಸಣ್ಣ ಸೈಜ್ „ „	....	„	4—4—0
ಹೋಲ್‌ಸೇಲ್‌ಗೆ „	....	„	ಕಮ್ಮಿ ಕ್ರಯ

ಮೆಕ್ಡೋವೆಲ್ ಕಂಪೆನಿ,
ಮಡಿಕೇರಿ.
Messers Mc Dowell & Co.
12 7 Mercara

ಕಿರ್ಲೋಸ್ಕರ ಪೇಟೆಂಟ ನಾಲ್ಗಾರ ತಪ್ಪಲಿ.



ಈ ತಪ್ಪಲಿಯು ನಮ್ಮ ಕಾರ್ಖಾನೆಯಲ್ಲಿಯೇ ತಯಾರಾಗುತ್ತದೆ. ಸರಕಾರದಿಂದ ಇದಕ್ಕೆ ಪೇಟಂಟ್ ದೊರತ್ತಿರುತ್ತದೆ. ಇದರಮುಖ್ಯ ಗುಣಗಳು·

೧. ನೀರನ್ನು ಮುಟ್ಟಿದ ಕೂಡಲೇ ತುಂಬಿ ಒರುವದು.

೨ ಮಲಲಕ್ಕೆ ಬರುವಾಗ್ಗೆ ಒಂದು ಹನಿ ಸಹ ನೀರು ಸೋರ ವದಿಲ್ಲ

೩ ದೋಣಿಯಲ್ಲಿ ನೀರು ಬೀಳುವಾಗ್ಗೆ ಕೊಗಲಿನ ತಪ್ಪಲಿಯಂತ ವಿತ್ತನವಿದೆ ಹೋಗುವದಿಲ್ಲ.

ಬೆಲೆಬಹು ಅಗ್ಗ ಹೆಚ್ಚಿನ ಸಂಗತಿ ಒಗ್ಗೆ ಒರೆದು ತಿಳಿದುಕೊಳ್ಳಿರಿ

ಕಿರ್ಲೋಸ್ಕರ ಬಂಧು, ಲಿಮಿಟೆಡ್.
ಕಿರ್ಲೋಸ್ಕರವಾಡಿ,
16—6 **ಜಿ. ಸಾತಾರ್.**

ರೋಲ್ಡ ಗೋಲ್ಡ್ ಕೈ ಬಳೆಗಳು.

ಇದು ಶುದ್ಧವಾದ ಅಮೇರಿಕನ್ ರೋಲ್ಡ ಗೋಲ್ಡ್ ಚಿನ್ನದಿಂದ ಬಹಳ ನಾಜೂಕಾಗಿಯೂ, ಚಮತ್ಕಾರವಾಗಿಯೂ ಎಂದಿಗೂಬಣ್ಣವು ಕೆಡದಂತೆ ತಯಾರ್ಮಾಡಲ್ಪಟ್ಟಿರುವದು. ಪ್ರಕಾಶವು ಥಳಥಳಿಸುತ್ತಿರುವದು ಸಹಸ್ರಾರು ಹೂವ್ವಗಳು ಅಗತಾನೆ ಅರಳಿದರೆ ಹೇಗೋ ಹಾಗೆ ಈ ಹೂವ್ವಗಳು ನಿರ್ಮಿಸಲ್ಪಟ್ಟಿರುವವು ಇದರ ಪ್ರಕಾಶ ಕತ್ತಲೆಯಲ್ಲಿ ನೋಡ ವವರ ಕಣ್ಣನ್ನು ಮುಚ್ಚು ವಂತಿರುವದು. ಆರ್ಡರೊಡನೆ ಕೈಯ ಅಳತೆಯನ್ನು ತಪ್ಪದೆ ನಮೂದಿಸಬೇಕು. ಹೆಂಗಸರು ಇದನ್ನು ಕೈಯಲ್ಲಿ ಹಾಕಿಕೊಂಡರೆ ಬೇರೆ ಯಾವ ಆಭರಣಗಳೂ ಬೇಕಾಗುವದಿಲ್ಲ. ಲಿಂಗಾಯತ ಬ್ರಾಹ್ಮಣ ಹೆಂಗಸರಿಗೆ ಬಹು ಮುದ್ದಾದ ಆಭರಣ

ಜೊತೆ 1ಕ್ಕೆ ರೂ. 2—0—0.

ದೇವತಾ

ವಿಗ್ರಹಗಳ ಪ್ರತಿಮೆಗಳು.

ಈ ವಿಗ್ರಹಗಳು ಸೀಮೆಯಲ್ಲಿ ರಬ್ಬರಿನಿಂದ ತಯಾರಿಸಲ್ಪಟ್ಟದ್ದು ಕಾರಡ್ಸು ಲೆಟರು, ಲಗ್ನಪತ್ರಿಕೆ ಮುಂತಾದವುಗಳಿಗೆ ಒಬ್ಬರ ಸಹಾಯವಿಲ್ಲದೆ ನಾವೇ ಅಚ್ಚುಮಾಡಿಕೊಳ್ಳಬಹದು. ಇದರಲ್ಲಿ ಕೃಷ್ಣ ಗಣೇಷ, ರಾಮ, ಹನುಮಂತ ಮುಂತಾದ ಪ್ರತಿಮೆಗಳ ಮುದ್ರೆಗಳು ಇರುವವು ಇದರ ಸಂಗಡ ಇಂಕ್‌ಪ್ಯಾಡ್, ಪೆಟ್ಟಿಗೆ ಸಹ ಸೇರಿ ಸೆಟ್ 1ಕ್ಕೆ 0—12—0

ವಿಳಾಸ:-ಎಸ್. ಆರ್. ಕೃಷ್ಣ ಅಂಡ್ ಕೋ,
12-11 ನಂ ೧, ತಂಬುನಾಯಕನ ಬೀದಿ, ಮದ್ರಾಸ್

ಒಂದು ಪ್ರಬಲವಾದ ಪ್ರಶ್ನೆ.

ನಮ್ಮ ಜೀವವನ್ನು ಏತಕ್ಕಾಗಿ ವಿಮೆಮಾಡಬೇಕು!

ವೃದ್ಧಾಪ್ಯದಲ್ಲಿ ನಮ್ಮ ವ ತ್ತು ಹೆಂಡತಿ ಮಕ್ಕಳ ಪೋಷಣೆಗಾಗಿ!

ಈಗಾಗಲೇ ಸಾವಿರಾರು ಜನರು ವಿಮೆಮಾಡಿರುವ ಎ೮ ಕೋಟಿ ರೂಪಾಯಿಗಿಂತ ಹೆಚ್ಚು ಬಂಡವಾಳವಿರುವ ದೇಶೀಯ ವಿಮೆಕಂಪೆನಿಯಲ್ಲಿ ಅತ್ಯಂತ ದೊಡ್ಡದಾದ ಸಾವಿರ ರೂಪಾಯಿ ವಿಮೆಮಾಡಿದವರಿಗೆ ವರ್ಷಕ್ಕೆ 18ರೂ ಕಡಿಮೆಯಿಲ್ಲದೆ ಲಾಭ ಕೊಡುವ 'ಓರಿಯಂಟಲ್' ಗವರ್ನಮೆಂಟ್ ಜೀವವಿಮೆ ಕಂಪೆನಿಯ ರೂಲ್ಸಿಗೂ, ಶರತಿಗೂ ಈ ಕೆಳಗಿನವರಿಗೆ ಬರೆದು ತಿಳಿದುಕೊಳ್ಳಿ.

ಖಾದಿಬಟ್ಟೆ ಎಂದರೇನು?

ದೇಶೀಯ ಪದ್ಧತಿಯಲ್ಲಿ ಕೈರಾಟೆಯಿಂದ ನೂಲು ತೆಗೆದು ಇಲ್ಲಿಯೇ ತಯಾರಿಸುವ ಬಟ್ಟೆಯೇ 'ಖಾದಿ.' ಈಗಾಗಲೇ ನಮ್ಮ ಸ್ಟೋರಿನಲ್ಲಿ ಪರದೇಶೀಬಟ್ಟೆಗಿಂತ ಗಟ್ಟಿಯಲ್ಲಿಯೂ ಅಂದದಲ್ಲಿಯೂ ಕಡಿಮೆ ಇಲ್ಲದಂತ, ಎಲ್ಲಾ ತರದ ಶೀರೆಗಳು ಚೆಕ್ಕುಗಳು, ಶಾಲು ವಗೈರೆ ಎಲ್ಲಾ ತರದಬಟ್ಟೆಯು ತಯಾರಾಗಿದೆ. ದಯವಿಟ್ಟು ಪ್ರೋತ್ಸಾಹಿಸಿರಿ! ಖಾದಿಯಿಂದಲೇಸ್ವರಾಜ್ಯ. ಖಾದಿಯಿಂದಲೇ ಮೋಕ್ಷವೆಂಬುದನ್ನು ಮರೆಯಬೇಡಿರಿ.

ವೀರಾಜಪೇಟೆ, ದಕ್ಷಿಣ ಕೊಡಗು.

ಕೆ. ಪಿ. ಚಿಣ್ಣಪ್ಪ, ಪ್ರೊಪ್ರೈಟರ್, ಖಾದಿಭಂಡಾರ

52—16

ವಿಶೇಷದ ಮಾರಾಟ!

ಉಚಿತ! **ಪಾಕೆಟ್ ವಾಚ್!** **ಉಚಿತ!**

18 ಕ್ಯಾರೆಟ್ ರೋಲ್ಡ್‌ಗೋಲ್ಡ್ ಪ್ಲೇಟ್ ಚಿನ್ನದ ಮುಖ ಬಿಲ್ಲೆಯಿರುವ ಮುಂಗೈ ಗಡಿಯಾರ ನಂ 100.

ಇದು ಅತ್ಯಂತ ಹೊಸ ಮಾದರಿದು, ಸುಂದರವಾದ ಆಕಾರ, ಸೊಗಸಾದ ಕೆಲಸ, ಸ್ವಿಸ್ ಮೇಡ್, ಮುಖ ಬಿಲ್ಲೆಯು ಥಳ ಥಳ ಹೊಳೆಯುತ್ತಾ ಆಕರ್ಷಿಸುತ್ತದೆ 100 ರೂ. ಮತ್ತು ಹೆಚ್ಚಿಗೆ ಬೆಲೆಯಿರುವ ಉತ್ಕೃಷ್ಟ ವಾಚಿನಂತೆ ಕಾಣುತ್ತದೆ. ಸುಂದರವಾಗಿಯೂ ಚಿಕ್ಕದಾಗಿಯೂ ಇದೆ ಗಂಡಸರಿಗೂ ಹೆಂಗಸರಿಗೂ ಉಪಯೋಗಿಸಲು ಅನುಕೂಲವಿರುವ ಅತ್ಯುತ್ತಮ ವಾಚ್ ಯಾವ ಹವಮಾನ್ವಾದರೂ ಸರಿಯಾದ ಟೈಮ್ ಕೊಡುವ ವಾಚ್. ಮೂರು ವರ್ಷಗಳ ಗ್ಯಾರೆಂಟಿ ಕೊಡಲಾಗುತ್ತೆ. ಯಾವ ಆಕಾರದ್ದಾದರೂ ಒಂದು ವಾಚನ್ನು ಒಂದು ತಿಂಗಳೊಳಗೆ ಕೊಂಡುಕೊಂಡವರಿಗೆ ನಿಕಲ್ ಪಾಕೆಟ್ ವಾಚ್ ಒಂದು ಉಚಿತವಾಗಿ ಕೊಡಲಾಗುತ್ತದೆ. ಕ್ರಯ 8-0-0.

OVERSEAS SWISS WATCH CO.
POST BOX No. 371,
Mount Road, MADRAS

ಇಮಿಟೇಷನ್ ವಜ್ರದ ಉಂಗುರಗಳು.
(White Imitation Kammals.)

ಈ ಉಂಗುರಗಳನ್ನು ಒಂದು ವಿಧವಾದ ಲೋಹದಿಂದ ಮಾಡಿ ಬಂಗಾರದಂತ ಗಿಲೀಟುಮಾಡಿದೆ ಮೇಲು ಭಾಗದಲ್ಲಿ ಕೆಂಪು, ಹಸರು ಮುಂತಾದ ಇಮಿಟೇಷನ್ ವಜ್ರದ ಕಲ್ಲುಗಳು ಇಟ್ಟು ಕಟ್ಟಡ ಕಟ್ಟಿರುವರು ನೋಟಕ್ಕೆ ನಿಜವಾದ ವಜ್ರದ ಉಂಗರವೆಂದೇ ಹೇಳಬೇಕು. ಬೇಕಾದವರು ಬೆರಳಿನ ಅಳತೆಯನ್ನು ಕಳುಹಿರಿ

ಕ್ರಯ 1ಕ್ಕೆ 2—0—0,
ಕ್ರಯ 3ಕ್ಕೆ 5—8—0.
7ಕಲ್ಲಿನ ಬಿಳಿ ಕಮ್ಮಲು 2—8—0,
7ಕಲ್ಲಿನ ಕೆಂಪು ಕಮ್ಮಲು 3—0—0.

P K. Sawmy &Co,
No 17 Evening Bazaar,
Madras

52-11

ಇಮಿಟೇಷನ್ ರೇಷ್ಮೇ ಸೀರೆಗಳು.

ಈ ಸೀರೆಗಳು 18ಮೊಳ, ಉದ್ದವೂ2½ಮೊಳ ಅಗಲವೂ ಇದೆ ಈ ಸೀರೆಗಳನ್ನು ಹೊಸಾದ ಇಮಿಟೇಷನ್ ಸಿಲ್ಕ್ ಗಟ್ಟಿದಾರದಿಂದ ತಯಾರಿಸಿದೆ ಇದು ನೋಡಲಿಕ್ಕೆ ಭಾರಿ ಕ್ರಯದ ಸೀರೆಗಳಂತೆ ಕಾಣುವದಲ್ಲದೆ ಅಂದವಾದ ಅಂಚೂ, ಸುಂದರವಾದ ಸಾಚಾ ರೇಷ್ಮೆಯ ಸೆರಗೂ ಇರುವದು ಈ ಮಾದರಿ ಸೀರೆಗಳು ಬೇರೆ ಯಾರಲ್ಲಿಯೂ ಈ ಕ್ರಯಕ್ಕೆ ಸಿಕ್ಕಲಾರದು ಈ ಸೀರೆಗಳು ಶ್ರೀಮಂತರಿಗೂ, ಗರೀಬರಿಗೂ, ಉಡಲಿಕ್ಕೆ ಬಹು ಲಾಯಕ್ಕಾದವು ಮಾದರಿಗಾಗಿ ಕೆಲವನ್ನು ಮಾತ್ರ ತಯಾರಿಸಿರುತ್ತೇವೆ. ಆದ್ದರಿಂದ ಬೇಗನೆ ತರಿಸಿಕೊಳ್ಳುವವರಿಗೆ ಮಾತ್ರ ಸಿಕ್ಕುವವು.

ಕ್ರಯ ಸೀರೆ 1ಕ್ಕೆ ನಂ 1. ರು. 6—8—0
" ನಂ 2. ರು. 7—8—0

ವಿಳಾಸ —ಮಹದಾರ ಟ್ರೇಡಿಂಗ್ ಕಂಪೆನಿ,
16 ತಿರುಪಳ್ಳಿ ಬೀದಿ,
ಮದರಾಸು

ಈಗಲೇ ಪ್ರಿಂಟಾಗಿದೆ! **ಶೃಂಗಾರವಾದ ಪುಸ್ತಕ!!**

ಸ್ತ್ರೀ ಪುರುಷರ ಪ್ರೀತಿಯ ಮರ್ಮಗಳನ್ನು ಚಿತ್ರಪಟಗಳ ಸಹಿತ ತಿಳಿಸುವ

ಮರ್ಮ ಶಾಸ್ತ್ರ.

ಫ್ರೆಂಚ್ ಬಾಷೆಯಲ್ಲಿ ಇದ್ದದನ್ನು ಸುಲಭ ಶೈಲಿಯಲ್ಲಿ ಕನ್ನಡ ಭಾಷೆಗೆ ಬಾಷಾಂತರಿಸಿರುತ್ತೇವೆ. ಸ್ತ್ರೀಪುರುಷರುಗಳಿಗೆ ಬೇಕಾದ ಎಲ್ಲಾ ಮರ್ಮ ರಹಸ್ಯಗಳು, ರತಿ ಮನ್ಮಥನು ಆನಂದವಾಗಿರುವದಕ್ಕೆ ಬೇಕಾದ ಉಪಾಯಗಳು, ಸ್ತ್ರೀಪುರುಷರ ಜಾತಿಯ ಲಕ್ಷಣಗಳು ಗರ್ಭಧರಿಸುವದು, ಶಿಶು ಉತ್ಪತ್ತಿವಿಧ, ಗುಪ್ತ ವೈದ್ಯ, ಶಯನ ಗೃಹದ ನಿಯಮಗಳು, ಇನ್ನೂ ಸ್ತ್ರೀಪುರುಷರಿಗೆ ಬೇಕಾದ ಲೀಲ ರಹಸ್ಯಗಳು ತುಂಬಿದೆ. ಈ ಶೃಂಗಾರವಾದ ಪುಸ್ತಕವನ್ನು ತರಿಸಿ ಆನಂದ ಹೊಂದುತ್ತಾರೆಂದು ನಂಬಿರುತ್ತೇವೆ. ಪಟಗಳ ಸಹಿತ ಕ್ರಯ ಪುಸ್ತಕ 1ಕ್ಕೆ ರೂ. 1—0—0

ವಿಳಾಸ —ಟಿ ರಾಮಚಂದ್ರರಾವ್ ಕಂಪೆನಿ,
ಪೋಸ್ಟು ಬಾಕ್ಸ್ ನಂ. 232, ಮದರಾಸ್.

52—30

ನೈಟ್ರೇಟ್ ಆಫ್ ಸೋಡಾ

ಎಲ್ಲಾ ಬೆಳೆಗಳಿಗೂ ಅತ್ಯುತ್ತಮವಾದ ಗೊಬ್ಬರ

Nitrate of Soda 15-16 per cent. N

ಈ ಗೊಬ್ಬರದಲ್ಲಿ ಬೆಳೆಗಳಿಗೆ ಅತ್ಯಗತ್ಯವಾದ ನೈಟ್ರೋಜನ್ ಸಸ್ಯಾಹಾರವು

15.16% ಅಂದರೆ ಏನು ವ ಒಳ್ಳೆಯ ಹಿಂಡಿ ಗೊಬ್ಬರದಲ್ಲಿರುವುದಕ್ಕಿಂತಲೂ ಮ ೂರು ಪಾಲಷ್ಟು ಜಾಸ್ತಿಯಾಗಿರುವದು. ಇದರಲ್ಲಿ ಸಿಕ್ಕುವಷ್ಟು ಕ್ಷಾರಜನಕ (Nitrogen) ವು ಬೇರೆ ಯಾವ ಗೊಬ್ಬರಗಳಿಂದಲೂ ಗಿಡಗಳಿಗೆ ದೊರೆಯಲಾರದು ಆದ್ದರಿಂದಲೇ ಭೂಲೋಕದ ಎಲ್ಲಾ ಭಾಗಗಳಲ್ಲಿಯೂ ರೈತರು ಇದನ್ನು ವಿಶೇಷವಾಗಿ ಉಪಯೋಗಿಸುತ್ತಾರೆ.

ಭತ್ತ, ಕಬ್ಬು, ತೆಂಗು, ಅಡಿಕೆ ಮರವು, ಹೊಗೆಸೊಪ್ಪು ತರಕಾರಿ ಮೊದಲಾದವುಗಳಿಗೂ ಕಾಫಿ, ಚಾ, ರಬ್ಬರು, ಏಲಕ್ಕಿ ಮೊದಲಾದ ತೋಟ ಪೈರುಗಳಿಗೂ ಎಲುಬಿನ ಪುಡಿ ಅಥವಾ ಏನಾದರು ಗೊಬ್ಬರ ವಗೈರೆ ಊರ ಗೊಬ್ಬರಗಳ ಜೊತೆಯಲ್ಲಿ ಈ ಗೊಬ್ಬರವನ್ನು ಉಪಯೋಗಿಸುವದರಿಂದ ಬೆಳೆಯು ಸಮೃದ್ಧಿಯಾಗುವದು. ನೈಟ್ರೇಟ್ ಆಫ್ ಸೋಡಾದಲ್ಲಿ ಅತಕ್ಕ ಸೋಡವು ಮಣ್ಣಿನಲ್ಲಿರುವ ಪೊಟೇಷ್ ಎಂಬ ಇನ್ನೊಂದು ತರದ ಸಸ್ಯಾಹಾರವನ್ನು ಗಿಡಗಳಿಗೆ ಒದಗಿಸಿ ಕೊಡುತ್ತದೆ.

ಈ ಗೊಬ್ಬರವು ನೋಟಕ್ಕೆ ಬರೇ ಉಪ್ಪಿನ ಹಾಗಿದ್ದು ಆಶ್ಚರ್ಯಕರವಲ್ಲ. ಎಕರೆ ಒಂದಕ್ಕೆ 100-200 ರಾತ್ಲು ಸಾಕಾಗುವದು. ಹೆಚ್ಚಿನ ಮಾಹಿತಿ ಮತ್ತು "ಕೃಷಿಸುಧಾರ' ಎಂಬ ಪುಸ್ತಕವನ್ನು ಈ ಕೆಳಗಿನ ವಿಳಾಸದಾರರಿಂದ ಧರ್ಮಾರ್ಥವಾಗಿ ಪಡೆಯಬಹುದು.

52—7

CHILEAN NITRATE COMMITTEE,
Post Box 469, CALCUTTA.

Printed & published by P. I. Belliappa at "Kodagu" Press, Mercara for "Kodagu" Ltd

Reg. N. M. 1550.
If not delivered please return to
"KODAGU" OFFICE, MERCARA

ಕೊಡಗು.

ವರ್ಷದ ಚಂದಾ ರೂ ೩—೦—೦

ಶಕ್ತ್ಯೈಕ್ಯಧೀಶದಯಾಯ ವಿದ್ಯಾ ಜಾತಿ ಪ್ರಯುಕ್ತಕಾಃ || ಐಕ್ಯಮುಕ್ತ್ಯೈಕ ದೇಶಾನಾಂ ಸುಸ್ಥಿರಾ ರಾಜ್ಯ ಸಂಪದಾ ||

ಸಂಪಾದಕ—ಪಂಡ್ಯಂಡ ಐ. ಬೆಳ್ಯಪ್ಪ.

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವದು.

ಸಂಪುಟ ೬] ಕೊಡಗು, ಸ್ವ ೧೯೨೬ನೇ ಇಸವಿ ಜುಲೈ ತಾರೀಖು ೨೩ನೇ ಶುಕ್ರವಾರ [ಸಂಚಿಕೆ ೮

ಸ್ಥಾಪಿತವಾದದ್ದು 1874 ಮೂಲಧನ 7 ಕೋಟಿ ರೂಪಾಯಿಗಳ

ಓರಿಯಂಟಲ್ ಗವರ್ನ್ಮೆಂಟ್ ಸೆಕ್ಯೂರಿಟಿ ಲೈಫ್ ಅಶ್ಯೂರೆನ್ಸ್ ಕಂಪೆನಿ ಲಿಮಿಟೆಡ್, ಹೆಡ್ ಆಫೀಸು— ಬೊಂಬಾಯಿ.

1922–1924 ಈ ಮೂರು ವರ್ಷಗಳಲ್ಲಿ ಕಂಪೆನಿಯಲ್ಲಿ ನಡೆದ ಕೆಲಸದ ಪರಿಣಾಮಗಳು.—

ಲಾಭ— ರೂ. 51,00,000 (ಐವತ್ತೊಂದು ಲಕ್ಷ ರೂಪಾಯಿಗಳು.) ಈ ಪೈಕಿ 45,94,80 ರೂಪಾಯಿಗಳನ್ನು ಲಾಭ ಸಹಿತ ವಿಮೆ ಮಾಡಿಸುವವರ ವಿಮೆ ಹಣಕ್ಕೆ ಹೆಚ್ಚು ಬೋನಸ್ ಒಪ್ಪವಾಗಿ ಈ ಕೆಳಗೆ ಕಾಣಿಸಿರುವ ರೀತಿಯಲ್ಲಿ ಸೇರಿಸಲ್ಪಟ್ಟಿದೆ.

ಜೀವಮಾನಾವಧಿಯ ವಿಮೆದಾರರಿಗೆ ರೂ 1000 ವಿಮೆ ಹಣಕ್ಕೆ

ಈ ಮೂರು ವರ್ಷಗಳಿಗೆ ರೂ. 67½.

ಕ್ಲಿಪ್ತಕಾಲದ ವಿಮೆದಾರರಿಗೆ ರೂ. 1000 ವಿಮೆ ಹಣಕ್ಕೆ

ಈ ಮೂರು ವರ್ಷಗಳಿಗೆ ರೂ. 54.

ಈ ಕಂಪೆನಿಯಲ್ಲಿ ಕ್ರಮೇಣ ಹೆಚ್ಚುತ್ತಿರುವ ಜನಾನುರಾಗವು ಈ ಕೆಳಗೆ ಕೊಟ್ಟಿರುವ ಹೊಸ ಕೆಲಸದ ಪಟ್ಟಿಯಿಂದ ವ್ಯಕ್ತವಾಗುತ್ತದೆ.

1923ರಲ್ಲಿ—ರೂ 1,74,00,000
1924 „ 2,37,00,000
1925 „ 2,96,00,000

ಇನ್ನೂ ದಿನದಿನಕ್ಕೂ ಅಭಿವೃದ್ಧಿಯಾಗುತ್ತಲೇ ಇದೆ. ಜೀವವಿಮೆ ಪತ್ರದಲ್ಲಿ ಹಣವನ್ನು ಲಾಭಕರವಾಗಿ ಕಟ್ಟಲು ಇದೇ ಸುಸಮಯ.

ಬೇಕಾದ ವಿಷಯಗಳನ್ನು ಈ ಕೆಳಗಿನ ವಿಳಾಸಕ್ಕೆ ಬರೆದು ತಿಳಿದುಕೊಳ್ಳಬಹುದು.

ಓರಿಯಂಟಲ್ ಬಿಲ್ಡಿಂಗ್ಸ್,
ಪೋಸ್ಟ್ ಬಾಕ್ಸ್ 56
ಬೆಂಗಳೂರು

ಎಲ್. ಆರ್. ಕೃಷ್ಣಸ್ವಾಮಯ್ಯರ್,
ಬ್ರಾಂಚ್ ಸೆಕ್ರೆಟರಿ.

2—16

ಮನೋಲ್ಲಾಸಿನಿ ತೈಲ.

ತಲೆನೋವು, ತಲೆ ತಿರುಗುವುದು, ತಲೆಭಾರ, ಕಣ್ಣುರಿ, ಕಿವಿಯಿಂದ ಕೀವು ಸೋರುವುದು ಕಿವುಡುತನ, ಕಣ್ಣುನೋವು, ಅಪಸ್ಮಾರ ನಿದ್ರೆ ಬರದಿರುವುದು, ನೆನಪು ಶಕ್ತಿ ಕುಂದಿಹೋಗುವುದು ಇವುಗಳನ್ನೆಲ್ಲ ಖಂಡಿತ ಗುಣಮಾಡುತ್ತದೆ. ಉದುರುವ ಕೂದಲನ್ನು ನಿಲ್ಲಿಸಿ ಗಿಡ್ಡಗಿರುವ

ಕೂದಲನ್ನು ಬೆಳೆಯಿಸಿ ಕೂದಲಿಗೆ ಸೌಂದರ್ಯವನ್ನೂ ಹೊಳಪನ್ನೂ ಕೊಟ್ಟು ಅಕಾಲಕ್ಕೆ ಹಣ್ಣಾಗುವ ಕೂದಲನ್ನು ತಡೆದು ಕೂದಲು ಇಲ್ಲದ ಸ್ಥಳದಲ್ಲಿ ಹೊಸ ಕೂದಲನ್ನು ಹುಟ್ಟಿಸುತ್ತದೆ. ಬೆಲೆ ಸೀಸೆಗೆ ರೂ 1, 3 ಸೀಸೆಗೆ 2—10—0, ಒಂದು ದೊಡ್ಡ ಸೀಸೆಗೆ ರೂ 2, 3 ಸೀಸೆಗೆ 5—8—0

ಚಂದನಾಸವ.— ಇದು ಪ್ರಮೇಹ ಮೂತ್ರಕೃಚ್ಛ್ರ, ಮೂತ್ರ ಹನಿಹನಿಯಾಗಿ ಹೋಗುವುದು, ಮೂತ್ರಕೋಶದ ಉರಿ, ಮೂತ್ರಪಿಂಡಗಳ ಉರಿ ಮೂತ್ರನಾಳದಲ್ಲಿ ಹುಣ್ಣು, ಮೂತ್ರ ಹೊಯ್ಯುವಾಗ ಉರಿಯುವುದು, ಮೂತ್ರನಾಳದಿಂದ ಕೀವು ಬರುವುದು, ಮೂತ್ರದಲ್ಲಿ ಧಾತು, ಹುಡಿ ಹೋಗುವುದು, ಆಗಾಗ್ಗೆ ಮೂತ್ರ ಬರುವದು, ಮೂತ್ರ ತಡೆಯಲಿಕ್ಕೆ ಸಾಮರ್ಥ್ಯವಿಲ್ಲದಿರುವುದು, ದೇಹದಲ್ಲಿ ಉರಿ, ಬಾಯಾರಿಕೆ, ಸ್ವಪ್ನಾವಸ್ಥೆ, ಮೂತ್ರನಾಳದಲ್ಲಿ ಚುಚ್ಚುವ ನೋವು ಇವುಗಳಿಗೆ ಪರಮ ಔಷಧಿ ಗಂಡಸರಿಗೂ ಹೆಂಗಸರಿಗೂ ಇದು ಅತ್ಯುತ್ತಮ ಬೆಲೆ—ಬಾಟ್ಲಿ 1, 3, 6ಕ್ಕೆ ರೂ 1—4—0 3—8—0, 6—12—0

ರೋಮನಾಶಿನಿ — ಈ ಹುಡಿಯನ್ನು ನೀರಲ್ಲಿ ಕಲಸಿ ಮೈಯಲ್ಲಿ ರೋಮವಿರುವ ಭಾಗಕ್ಕೆ ಹಚ್ಚಲು ರೋಮವು ಉದುರಿ ಬೀಳುತ್ತದೆ ಡಬ್ಬಿ ೧ಕ್ಕೆ 6 ಆಣೆ, 3 ಡಬ್ಬಿಗಳಿಗೆ 1, 1 ಡಜನಿಗೆ 3-8-0

ಕಟುಕಷಾಯ ಮಲೇರಿಯಾಕ್ಕೆ.—ಇದು ಇಂಜಕ್ಷನ್ ಮತ್ತು ಕ್ವಿನೈನು ಸೇವಿಸಿದರೂ ಗುಣವಾಗದಿರುವ ಮಲೇರಿಯ, ದಿನಬಿಟ್ಟು ಬರುವ ಜ್ವರ, 1–4 ದಿವಸಕ್ಕೊಂದಾವರ್ತಿ ಬರುವ ಜ್ವರ ನಡುಗಿ ಬರುವ ಜ್ವರ, ದುಷ್ಟ ಜ್ವರಗಳ್ತೆ ದೋಷದಿಂದ ಬರುವ ಜ್ವರಗಳಿಗೆ ಶೀಘ್ರ ಗುಣವಾಗುತ್ತದೆ ಸೀಸೆ 1ಕ್ಕೆ ರೂ 1–9–0, 3ಕ್ಕೆ ರೂ 4—0—0, 6ಕ್ಕೆ ರೂ 7—0—0

ನಮ್ಮ ಕೆಟಲಾಗು ಬರೆದು ಕೇಳಿರಿ

ವಿಳಾಸ–ಮನೋಲ್ಲಾಸಿನಿ ಕಂಪೆನಿ,
9 ಮಂಗಳೂರು, ಕಂಕನಾಡಿ.

52—31

ಸುವರ್ಣ ಅಯಸ್ಕಾಂತ ದ್ರಾವಕ.

(The Ideal Nervine Tonic)

ಇದು ಅತಿ ಆಶ್ಚರ್ಯಕರವಾದ ಟಾನಿಕ್!

ಇದರಿಂದ ಕೆಟ್ಟು ಹೋಗಿರುವ ರಕ್ತವನ್ನು ಶುದ್ಧ ಮಾಡುವುದು ಮೆದುಳಿಗೆ ಬಲ ಅತಿ ಉತ್ಸಾಹದಿಂದ ಕಣ್ಣಿಗೆ ಚುರುಕಾಗಿ ಕಾಣುವುದು ಜೀರ್ಣಕ ಶಕ್ತಿಯನ್ನುಂಟುಮಾಡುವುದು. ಸಡಿಲಾಗಿರುವ ನರಗಳಿಗೆ ಬಲವನ್ನು ಕೊಡುವುದು ದೇಹಕ್ಕೆ ಇನ್ನು ಅನೇಕ ಗುಣಗಳನ್ನು ಕೊಟ್ಟು ಬಲಹೀನವನ್ನು ಹೋಗಲಾಡಿಸಿ ಹೆಚ್ಚು ಬಲವನ್ನು ಕೊಡುವುದು. ಇದನ್ನು 20 ದಿನ ಸೇವನೆ ಮಾಡುವವರಿಂದ ಮೇಲೆ ಹೇಳುವ ಗುಣಗಳನ್ನು ಕೊಟ್ಟು ಬಲಿಷ್ಠನಾಗಿ ಮಾಡುವುದು ಸ್ತ್ರೀ ಪುರುಷರು ಮೊದಲು ದೊಡ್ಡವರ ವರೆಗೆ ಸೇವನೆ ಮಾಡಬಹುದು. ಉಪಯೋಗಿಸುವ ಕ್ರಮವು ಔಷಧ ಕಳುಹಿಸಲ್ಪಡುವುದು.

ಕ್ರಯ 20 ದಿನಗಳು ಸೇವನೆ ಮಾಡುವ ಬಾಟ್ಲು 1ಕ್ಕೆ 1—8—0
„ 40 „ „ „ 2—8—0.

ಪಿ. ಕೆ. ಎಸ್.
17 ಕುವಿನಿಂಗ್ ಬಜಾರ್,
ಪಿ. ಟಿ. ಮದ್ರಾಸ್.

ಸತ್ಯಮೇವಜಯತೇ.
(ಗುಣವಾಗದಿದ್ದರೆ ಹಣ ಪರತ)
ಧಾತುಪೌಷ್ಟಿಕ ಕಾಮೋತ್ತೇಜಕ, ಇಂದ್ರಿಯಸ್ತಂಭಕವಾದ

ಮದನೋದ್ಭವ ಗುಳಿಗೆ.

ಜನನೇಂದ್ರಿಯದ ಶಿಥಿಲತೆ ನಿರ್ಬಲತೆ ನಪುಂಸಕತ್ವ ಕ್ಷೀಣತೆ ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತು ಪೌಷ್ಟಿಕ, ವೀರ್ಯವರ್ಧಕ, ರಕ್ತ ಶೋಧಕ, ಕಾಮೋತ್ತೇಜಕ, ಮನೋತ್ಸಾಹಕ ಇಂದ್ರಿಯ ಸ್ತಂಭಕ, ಗರ್ಮಿ, (ಟಾಕಿ) ಗುಪ್ತಪ್ರದೇಶದ ಮೇಲೆ ಹುಟ್ಟುವ ಎಲ್ಲ ತರಹದ ಬಕ್ಕೆಗಳು, ಹುಣ್ಣುಗಳು ಪಿತ್ತದ ಬಾಧೆಗಳು, ಕಟಿಶೂಲಿ ವಾತರೋಗವು ಮುಂತಾದವು ಅತಿತ್ವರ್ಯ ಗುಣವಾಗಿ ಶರೀರಕ್ಕೆ ನಿರೋಗತ್ವವೂ ಶಾಂತಿಯೂ ರತಿಸುಖಕ್ಕೆ ಸಂಪೂರ್ಣ ಶಕ್ತಿಯೂ ಉಂಟಾಗುತ್ತದೆ ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗುತ್ತವೆ ಕಿಮ್ಮತ್ತು ೬೦ ಗುಳಿಗೆಗಳಿಗೆ ೪ ರೂಪಾಯಿ ಇದನ್ನು ಸೇವಿಸುವಾಗ್ಯೆ ನಪುಂಸಕತ್ವಾರಿ ತೈಲವನ್ನು ಉಪಯೋಗಿಸಿದರೆ ಉತ್ತಮ. ಕಿಮ್ಮತ್ತು ಬಾಟ್ಲಿ ೧ಕ್ಕೆ ರೂ ೨—೧೨—೦

ಪ್ರಮೇಹನಿವಾರಣಿ—ಇದರ ಸೇವನೆಯಿಂದ ಮೂತ್ರಸ್ಥಾನದಿಂದ ಕೆಂಪು ಹಳದಿಯಂತೆ ಹೋಗತಕ್ಕ ಕೀವು, ಉರಿ ವಗೈರೆ ಆಧಿಜಾತ್ರಿಯಿಂದ ಗುಣವಾಗುವದು ಕಿಮ್ಮತ್ತು ಬಾಟ್ಲಿ ೧ಕ್ಕೆ ರೂ ೩—೮—೦ ಟ ಖ ಪ್ರತಿ ಅನುಪಾನಪತ್ರಿಕೆ ಔಷಧದ ಸಂಗಡ

ಮಂದಾಣ ಸ್ಟಾಂಪು ಕಳುಹಿಸಿದರೆ ಕ್ಯಾಟಲಾಗವು

ವಿಳಾಸ,—

ವೈದ್ಯ ಟಿ ಎಲ್ ಜೋಶಿ ಮತು ಕಂಪೆನಿ.
27 ನಂ 6. ಪೋಸ್ಟು ಬಿಸವಾಳ, ಉತ್ತರ ಕಾನಡಾ.

EMPIRE OF INDIA LIFE ASSURANCE CO., LTD.

(Established 1897)

ALL WITH PROFIT POLICIES

Issued before 28th February 1927 will share in the BONUS Distribution for the five years ending on that date.

PROSPECTUS ON APPLICATION

Bangalore Branch · 152 Commercial Street
Madras Branch 9 & 10 Second Line Beach

24—24

ARMS & AMMUNITION MART,

Mahomedally-Noorbhoy

321 Abdul Rehman Street, near Crawford Market, BOMBAY. 3

Telegraphic Address.—"SHOOTER" Bombay.

[52—47] Please write for Reduced nett prices list for 1926

"ಕೊಡಗು"

ಸನ್ ೧೯೩೬ನೇ ಇಸವಿ ಜುಲೈ ತಾ. ೨೪ ನೇ ಶುಕ್ರವಾರ

ವಿದ್ಯಾಭ್ಯಾಸದಲ್ಲಿ ತಾಯಿನುಡಿ.

ಮದ್ರಾಸಿನಲ್ಲಿ ರೆವರೆಂಡ್ ಡಾಕ್ಟರ್ ಲಾರ್ಸನ್ ಎಂಬವರು ತಾಯಿನುಡಿಯಲ್ಲಿ ವಿದ್ಯಾಭ್ಯಾಸ ಕೊಡಬೇಕೋ ಬೇಡವೋ ಎಂಬ ವಿಷಯದಲ್ಲಿ ಉಪನ್ಯಾಸ ಕೊಡುತ್ತಿದ್ದಾರೆ ಈಗಾಗಲೇ ಎರಡು ಉಪನ್ಯಾಸಗಳಾದವು. ಈ ವಿಷಯದಲ್ಲಿ ಹಿಂದೂಸ್ಥಾನದ ಅನುಭವ, ಅನ್ಯದೇಶಗಳ ಅನುಭವ ಮತ್ತು ಹಿಂದೂಸ್ಥಾನದಲ್ಲಿ ಯಾವ ಕ್ರಮವನ್ನು ಅನುಸರಿಸಬೇಕು ಎಂಬ ಮೂರು ಭಾಗಗಳಾಗಿ ಮಾಡಿಕೊಂಡು ಮೊದಲನೇ ಎರಡು ಭಾಗಗಳ ಮೇಲಿನ ಉಪನ್ಯಾಸಗಳಾದವು ಹಿಂದೂಸ್ಥಾನದಲ್ಲಿ ಯಾವ ರೀತಿಯಲ್ಲಿ ಮುಂದರಿಸಬೇಕು ಎಂಬ ಉಪನ್ಯಾಸವನ್ನು ಕುತೂಹಲದಿಂದ ಎದುರು ನೋಡುತ್ತಿದ್ದೇವೆ ಈ ಉಪನ್ಯಾಸಗಳು ಪೂರ್ತಿಯಾಗಿ ಜನ ಸಮುದಾಯಕ್ಕೆ ಸಿಕ್ಕಬೇಕಾದದ್ದು ಅವಶ್ಯವೆಂತ ನಮಗೆ ತೋರುತ್ತದೆ. ಮದ್ರಾಸ್ ಪತ್ರಿಕೆಗಳಲ್ಲಿ ಸಾರಾಂಶ ಮಾತ್ರ ಪ್ರಕಟವಾಗಿದೆ ಆ ಸಾರಾಂಶಗಳ ಆಧಾರದಿಂದ ಈ ನಮ್ಮ ಲೇಖನವನ್ನು ಮುಂದರಿಸುತ್ತೇವೆ

ಹಿಂದುಸ್ಥಾನದ ಅನುಭವದ ಮೇಲೆ ಮಾತನಾಡುವಾಗ ಈ ಹಿಂದಿನ ಒಂದು ಶತಮಾನದ ಅನುಭವವನ್ನು ಉಪಯೋಗಿಸಿಕೊಂಡಿರುತ್ತಾರೆ. ಇಂಗ್ಲಿಷ್ ಭಾಷೆಯಲ್ಲಿ ವಿದ್ಯಾಭ್ಯಾಸ ಕೊಡಲು ಪ್ರಾರಂಭಿಸಿದಾಗ ಯೂರೋಪಿಯನರ ಉದ್ದೇಶಗಳು ಮೂರು ಇತ್ತೆಂತ ಇವರು ಹೇಳುತ್ತಾರೆ. (1) ದೇಶದ ಆಡಳಿತ ನಡಿಸಲಿಕ್ಕೆ ಬೇಕಾದ ಜನರನ್ನು ತಯಾರಿಸಿಕೊಳ್ಳುವದು (2) ಇಂಗ್ಲಿಷ್ ಭಾಷೆ ಕಲಿತವರ ಮೂಲಕ ಇಂಗ್ಲಿಷ್ ಜನರ ಅಭಿಪ್ರಾಯಗಳನ್ನು ಜನಸಮುದಾಯಕ್ಕೆ ತಿಳಿಸಿಕೊಡುವದು (3) ಇಂಗ್ಲಿಷ್ ಜನರು ಶ್ರೇಷ್ಠವಾದದ್ದೆಂತ ನಂಬಿರುವ ಅಭಿಪ್ರಾಯಗಳನ್ನೂ ಧ್ಯೇಯಗಳನ್ನೂ ಹಿಂದುಸ್ಥಾನದವರು ಸ್ವೀಕರಿಸುವಂತೆ ಮಾಡಬೇಕಾದದ್ದು. ಈ ಮೂರು ಕಾರಣಗಳಲ್ಲದೆ ಇಂಗ್ಲಿಷ್ ಭಾಷೆಯ ಮೂಲಕ ವಿದ್ಯಾಭ್ಯಾಸ ಕೊಡುತ್ತಾ ಹೋದಂತೆ ದೇಶೀಯ ಭಾಷೆಯ ಬೆಳವಣಿಗೆ ಆದೀತೆಂತ ಇಂಗ್ಲಿಷ್ ಜನರು ನಂಬಿದ್ದರೆಂತ ಹೇಳಿದ್ದಾರೆ ಆದರೆ ದೇಶಭಾಷೆಯಲ್ಲಿ ವಿದ್ಯಾಭ್ಯಾಸದ ಬೆಳವಣಿಗೆಯು ಆಗುತ್ತಿಲ್ಲವೆಂತ ಉಪನ್ಯಾಸಕರು ಒಪ್ಪಿದ್ದಾರೆ. ಇಂಗ್ಲಿಷ್ ಭಾಷೆಯಲ್ಲಿ ವಿದ್ಯಾಭ್ಯಾಸ ಕೊಡಲಿಕ್ಕೆ ಆರಂಭಿಸಿದಾಗ ದೇಶಭಾಷೆಯ ವಿದ್ಯಾಭ್ಯಾಸ ಅಭಿವೃದ್ಧಿಯಾದೀತೆಂತ ನಂಬಿದ್ದರೆಂಬುದನ್ನು ನಾವು ಒಪ್ಪುವದಿಲ್ಲ. ಆಗಿನ ಆಡಳಿತ ನಡಿಸಲಿಕ್ಕೆ ಬೇಕಾದ ಗುಮಾಸ್ತರುಗಳನ್ನು ತಯಾರಿಸುವದೂ ಪಾಶ್ಚಿಮಾತ್ಯ ಧ್ಯೇಯಗಳನ್ನು ಹಿಂದುಸ್ಥಾನದಲ್ಲಿ ಹರಡಿಸುವದೂ ಮುಖ್ಯ ಉದ್ದೇಶಗಳಾಗಿದ್ದವೆಂಬುದರಲ್ಲಿ ಏನೂ ಸಂಶಯವಿಲ್ಲ.

ಪಶ್ಚಿಮ ದೇಶದಲ್ಲಿ ಅಂದರೆ ಯುರೋಪಿನಲ್ಲಿ ಇರುವ ಅಭಿಪ್ರಾಯಗಳೂ ಧ್ಯೇಯಗಳೂ ಉತ್ತಮ ತರದ್ದೇ ಇರಬಹುದು. ಆದರೆ ಹಿಂದುಸ್ಥಾನದ ಅಭಿಪ್ರಾಯಗಳನ್ನೂ ಧ್ಯೇಯಗಳನ್ನೂ ಜನರ ಕಣ್ಣು ಮುಂದೆ ಇಟ್ಟು ಅವುಗಳನ್ನು ಬೆಳೆಸಲಿಕ್ಕೂ ಸಾಧಿಸಲಿಕ್ಕೂ ಅವಕಾಶ ಕೊಡಬೇಕಾಗಿದ್ದದ್ದೇ ವಿದ್ಯಾಭ್ಯಾಸದ ಕರ್ತವ್ಯವಾಗಿತ್ತು. ಹಿಂದುಸ್ಥಾನದ ಧ್ಯೇಯಗಳಿಗೆ ಪ್ರಾಮುಖ್ಯತೆ ಕೊಟ್ಟು ಹೊರಲಿಕೆ ಬಗ್ಗೆ ಪಾಶ್ಚಿಮಾತ್ಯ ಧ್ಯೇಯಗಳನ್ನು ಜನರ ಮುಂದೆ ಇಟ್ಟಿದ್ದರೆ ದೋಷವಾಗುತ್ತಿರಲಿಲ್ಲ. ಹಿಂದುಸ್ಥಾನದ ಧ್ಯೇಯಗಳಿಗೆ ಪ್ರಾಮುಖ್ಯತೆ ಸಿಕ್ಕಿ ಅವುಗಳನ್ನು ಈಗಿನ ಕಾಲಕ್ಕೆ ಹೇಗೆ ಬೇಕೋ ಹಾಗೆ ಉಪಯೋಗಿಸಿಕೊಳ್ಳಲಿಕ್ಕೆ ವಿದ್ಯಾವಂತರು ಪ್ರಯತ್ನ ಪಡುತ್ತಿದ್ದರು. ಹಿಂದುಸ್ಥಾನದ ಧ್ಯೇಯಗಳು ಎಂಬವು ಇವೆಯೋ ಎಂತ ಸಹ ವಿದ್ಯಾವಂತರಿಗೆ ಗೊತ್ತಿಲ್ಲದೆ ಹೋಗಿದೆ ಹಿಂದುಸ್ಥಾನದ ಪುರಾತನ ನಾಗರೀಕತೆಯೆಲ್ಲವೂ ಮರೆತುಹೋಗಿ ಹಿಂದೀಯರು ಬರೇ ಕಲ್ಲು ಗುಂಡು ಮರದ ತುಂಡುಗಳಿಗೆ ಪೂಜೆಮಾಡುವ ಮೂಢಜನರಾಗಿದ್ದರೆಂಬ ಭಾವವು ವಿದ್ಯಾವಂತರಲ್ಲಿ ಹುಟ್ಟಿಹೋಗಿಬಿಟ್ಟಿತ್ತು. ಈಚೀಚೆಗೆ ಹಿಂದುಸ್ಥಾನದ ಪುರಾತನ ನಾಗರೀಕತೆಯ ಮಹತ್ವವನ್ನು, ಮರೆಯತಕ್ಕಂಥಾದ್ದಲ್ಲ, ಪುರಾತನ ಭಾಷೆಯಾದ ಸಂಸ್ಕೃತದಲ್ಲಿ ಅಮೂಲ್ಯ ಗ್ರಂಥಗಳಿವೆ ಎಂತ ಪಾಶ್ಚಿಮಾತ್ಯ ಪಂಡಿತರುಗಳು ಹೇಳಲು ಪ್ರಾರಂಭಿಸಿದ ಮೇಲೆ ಇಂಗ್ಲಿಷ್ ಭಾಷೆಯಲ್ಲಿ ವಿದ್ಯಾಭ್ಯಾಸ ಹೊಂದಿದ ದೇಶೀಯರಲ್ಲಿ ಕೆಲವರಿಗೆ ತಮ್ಮ ಪುರಾತನ ನಾಗರೀಕತೆಯಲ್ಲಿ ಕೆಲವು ಮಟ್ಟಿಗೆ ಅಭಿರುಚಿ ಹುಟ್ಟಿದೆ ಇಂಗ್ಲಿಷ್ ವಿದ್ಯೆ ಕಲಿತ ಸ್ವಾಮಿ ವಿವೇಕಾನಂದರು, ಅರವಿಂದ ಘೋಷರು, ಬಾಲಗಂಗಾಧರ ತಿಲಕರು, ಮಹಾತ್ಮ ಗಾಂಧಿಯವರು ಹಿಂದುಸ್ಥಾನದ ಪ್ರಾಚೀನ ಸಂಸ್ಕೃತಿಗೆ ಬೆಲೆ ಕೊಟ್ಟದ್ದರಿಂದ ಹಿಂದುಸ್ಥಾನದಲ್ಲಿ ರಾಷ್ಟ್ರೀಯ ಜಾಗೃತಿಯಾಗಲು ಅವಕಾಶವಾಗಿದೆ. ಇಂಥಾ ಮಹಾಪುರುಷರುಗಳು ಇಂಗ್ಲಿಷ್ ವಿದ್ಯೆ ಕಲಿತ ಜನರ ಕಣ್ಣು ಮುಂದೆ ಜೀವಿಸಿ ಬೋಧಿಸಿದರೂ ಸಹ ಇಂಗ್ಲಿಷ್ ವಿದ್ಯೆ ಕಲಿತ ಜನರಿಗೆ ಹಿಂದುಸ್ಥಾನದ ಪ್ರಾಚೀನ ಮಹತ್ವದಲ್ಲಿಯೂ ಈಗಿನ ಸ್ವಶಕ್ತಿಯಲ್ಲಿಯೂ ನಂಬಿಕೆ ಹುಟ್ಟದೆ ಇರುವಾಗ ಇಂಗ್ಲಿಷ್ ಭಾಷೆಯಲ್ಲಿ ವಿದ್ಯೆ ಕೊಡಲು ಪ್ರಾರಂಭಿಸಿದವರ ಉದ್ದೇಶವು ಎಷ್ಟರಮಟ್ಟಿಗೆ ಸಾರ್ಥಕವಾಗಿದೆಯೆಂಬುದು ಗೊತ್ತಾಗುತ್ತದೆ. ಪಾಶ್ಚಿಮಾತ್ಯ ಧ್ಯೇಯಗಳು ಅತ್ಯುತ್ತಮವಾದದ್ದೆಂಬ ಭಾವವು ಜನರಲ್ಲಿ ನೆಲೆಗೊಂಡು ಹೋಗಿದೆಯೆಂಬುದು ಪ್ರತ್ಯಕ್ಷವಾಗಿದೆ.

ಡಾಕ್ಟರು ಲಾರ್ಸನ್ನರು ಹೇಳುವದೇನೆಂದರೆ—"ತಾಯಿನುಡಿಯನ್ನು ಉಪಯೋಗಿಸದ ವಿದ್ಯೆಯು ಅಪಾಯಕರವಾದದ್ದು ಪರದೇಶ ಭಾಷೆಯ ಮೂಲಕ ದೊರೆಯುವ ವಿದ್ಯೆ ಬರೇ ತೋರಿಕೆಯ ವಿದ್ಯೆಯಾಗಿರುತ್ತದೆ. ಮನೆ ಜೀವನಕ್ಕೆ ಸಂಬಂಧಿಸಿದ ಪರ ಭಾಷೆಯ ವಿದ್ಯೆಯಿಂದ ವಿದ್ಯಾವಂತರಿಗೂ ವಿದ್ಯೆ ಇಲ್ಲದವರಿಗೂ ಇರುವ ಸಂಬಂಧವು ತಪ್ಪಿಹೋಗುತ್ತದೆ ಸಂಭಾಷಣೆಯಲ್ಲಿ ಪರ ಭಾಷೆಯ ಶಬ್ದಗಳನ್ನು ಉಪಯೋಗಿಸುವದು ಬಹಳ ಕೆಟ್ಟದ್ದು. ಅದರಿಂದ ಮನಸ್ಸಿಗೆ ಸಹ ಕೆಟ್ಟದಿದೆ. ಸ್ಕೂಲಿನಲ್ಲಿ ಕಲಿಯುವ ವಿದ್ಯೆಗೆ ಮನೆಯ ಜೀವನವು ಸಹಕಾರವಾಗದಿದ್ದರೆ ಕಲಿಯುವ ವಿದ್ಯೆಯಿಂದ ಪ್ರಯೋಜನವಾಗುವದಿಲ್ಲ ಎಂತ ಮುಂತಾಗಿ ಹೇಳಿದ್ದಾರೆ. ದೇಶೀಯರನೇಕರು ಈ ಅಭಿಪ್ರಾಯವನ್ನು ಎಷ್ಟೋ ಸಾರಿ ಹೇಳಿದ್ದಾರೆ. ಆದರೆ ಇಂಗ್ಲೀಷ ಜನಾಂಗಕ್ಕೆ ಸೇರಿದ ಉಪನ್ಯಾಸಕರಿಂದ ಈ ಮಾತುಗಳು ಬಂದದ್ದರಿಂದ ಹಿಂದೀ ವಿದ್ಯಾವಂತರಿಗೂ ಸಾಧಾರಣ ಜನರಿಗೂ ಈ ಅಭಿಪ್ರಾಯಗಳಲ್ಲಿ ನಂಬಿಕೆ ಹುಟ್ಟಬಹುದು.

ಯೂರೋಪಿನಲ್ಲಿ ಒಂದು ಶತಮಾನಕ್ಕೆ ಮುಂಚೆ ಲ್ಯಾಟಿನ್ ಭಾಷೆಯಲ್ಲೇ ಉಚ್ಚ ವಿದ್ಯೆ ಕೊಡುತ್ತಿದ್ದರು. ಎಲ್ಲಾ ಯುನಿವರ್ಸಿಟಿ ಪರೀಕ್ಷೆಗಳು ಲ್ಯಾಟಿನ್ ಭಾಷೆಯಲ್ಲೇ ನಡಿಸಲ್ಪಡುತ್ತಿದ್ದವು. ಆದರೆ ವಿದ್ಯೆ ಪಡೆಯುವ ಭಾಷೆಯು ಲ್ಯಾಟಿನ್ ಆಗಿದ್ದರೂ ಮಾತೃಭಾಷೆಯ ಬೆಳವಣಿಗೆಯು ಸಂಗಡಲೇ ಆಗುತ್ತಿತ್ತು. ಆದರೂ ವಿದ್ಯಾವಂತ ಎಂತ ಹೇಳಿಸಿಕೊಳ್ಳಬೇಕಾದರೆ ಲ್ಯಾಟಿನ್ ತಿಳಿದವನಾಗಿರಬೇಕಾಗಿತ್ತು. ಹಿಂದೂಸ್ಥಾನದಲ್ಲೂ ಈಗ ವಿದ್ಯಾವಂತನೆನ್ನಿಸಿಕೊಳ್ಳಬೇಕಾದರೆ ಇಂಗ್ಲಿಷ್ ಭಾಷೆಯನ್ನು ತಿಳಿದವನಾಗಿರಬೇಕೆಂಬುದು ಎಲ್ಲರಿಗೂ ತಿಳಿದ ಸಂಗತಿಯಾಗಿದೆ. ಈ ಸ್ಥಿತಿಯು ಯೂರೋಪಿನಲ್ಲಿಯೂ ಒಂದು ಕಾಲದಲ್ಲಿ ಇತ್ತೆಂತ ತಿಳಿದುಕೊಂಡರೆ ನಮ್ಮ ಹಿಂದೂಸ್ಥಾನಕ್ಕೂ ಪರ ಭಾಷೆಯ ಬಂಧನವು ಬಿಡುಗಡೆಯಾಗಿ ಆಯಾ ಪ್ರಾಂತ್ಯದ ಭಾಷೆಗಳಿಗೆ ಮಹತ್ವವು ದೊರಕುವ ಕಾಲವು ಮುಂದೆ ಬರಬಹುದೆಂತ ಆಶೆ ಹುಟ್ಟುತ್ತದೆ.

"ಪರ ಭಾಷೆಯ ಬಂಧನದಿಂದ ಬಿಡುಗಡೆ ಹೊಂದಬೇಕಾದರೆ ಯೂರೋಪ್ ದೇಶಗಳಲ್ಲಿ ಜನರು ತಮ್ಮ ಪ್ರಾಂತ್ಯದ ಪೂರ್ವ ಚರಿತ್ರೆಗಳನ್ನು ತಿಳಿದುಕೊಂಡು ಸ್ಥಳೀಕ ವಿದ್ಯಮಾನಗಳಲ್ಲಿ ಅಭಿರುಚಿ ಹುಟ್ಟಿಸಿದರು. ಈ ಪ್ರಯತ್ನದಿಂದ ತಾಯಿನುಡಿಗೆ ಮೇಲ್ಮೆ ದೊರೆತ ಕಾರಣ ಸಮುದಾಯದ ಜನರ ಕ್ಷೇಮದ ಕಡೆಗೆ ವಿದ್ಯಾವಂತರ ದೃಷ್ಟಿ ಹೆಚ್ಚಾಗಿ ದೊರೆಯಿತು. ತಮ್ಮ ಮಾತೃ ಭಾಷೆಯ ಮೂಲವು ಯಾವದೆಂಬ ವಿಚಾರ ನಡೆಯಿತು ತಮ್ಮ ಜೀವನ ಸ್ಥಿತಿಗೆ ಪ್ರಾಚೀನ ಇತಿಹಾಸಗಳು ಹೇಗೆ ಆಕಾರ ಕೊಟ್ಟವು ಎಂಬ ವಿಚಾರಗಳು ಹುಟ್ಟಿದ್ದಲ್ಲದೆ ತಮ್ಮ ಪೂರ್ವ ಸಂಸ್ಕೃತಿಯನ್ನು ಬಹಳ ಜಾಗ್ರತೆಯಾಗಿ ಅಭಿವೃದ್ಧಿಗೊಳಿಸಿಕೊಂಡರು," ಎಂತ ತನ್ನ ಅಭ್ಯಾಸದ ಬಲದಿಂದಲೂ ಅನುಭವದಿಂದಲೂ ಉಪನ್ಯಾಸಕರು ಹೇಳಿರುತ್ತಾರೆ. ಹೀಗಿರುತ್ತಾ ನಮ್ಮ ದೇಶದ ಜನರು ಇನ್ನೂ ಇಂಗ್ಲಿಷ್ ಭಾಷೆಯಲ್ಲಿಯೇ ವಿದ್ಯೆ ದೊರಕಬೇಕೆಂಬ ಮತವನ್ನು ಬಿಡದೆ ಇರುವದು ವಿಷಾದಕರವಾಗಿದೆ. ಈ ಸಂದರ್ಭದಲ್ಲಿ ಒಳ್ಳೇ ಜನರನ್ನು ದೂರಿದರೂ ಪ್ರಯೋಜನವಿಲ್ಲ ಸರಕಾರ ಕ್ರಮವೇ ಜನರ ಈ ಮನೋಧರ್ಮಕ್ಕೆ ಕಾರಣವಾಗಿದೆ. ಸರಕಾರದ ಎಲ್ಲಾ ಕಾಗದ ಪತ್ರಗಳೂ, ಕೋರ್ಟು ವ್ಯವಹಾರಗಳೂ ಪರದೇಶ ಭಾಷೆಯಲ್ಲೇ ನಡಿಯಬೇಕೆಂತ ಕಾನೂನು ಮಾಡಿರುವದರಿಂದ ವಿದ್ಯಾವಂತರಿಗೆ ಸರ್ಕಾರಿ ಉದ್ಯೋಗವಲ್ಲದೆ ಬೇರೆ ಕಸಬು ಅನುಕೂಲವಿಲ್ಲದೆ ಇರುವಾಗ ತಮ್ಮ ಮಕ್ಕಳು ಇಂಗ್ಲಿಷ್ ವಿದ್ಯೆಯನ್ನೇ ಕಲಿಯಬೇಕೆಂತ ಆಶಿಸುವದರಲ್ಲಿ ಆಶ್ಚರ್ಯವಿಲ್ಲ ಸರಕಾರಿ ಕಾಗದ ಪತ್ರಗಳು ದೇಶಭಾಷೆಯಲ್ಲಿಯೇ ನಡಿಯಬಹುದೆಂತಾದರೆ ದೇಶಭಾಷೆಯಲ್ಲಿ ಮಕ್ಕಳಿಗೆ ವಿದ್ಯೆ ಕೊಡಲು ಜನರು ಒಪ್ಪದೆ ಇರಲಾರರು.

ಆದರೆ ಸರಕಾರವು ಇಂಥಾ ಮಾರ್ಪಾಡು ಮಾಡಬೇಕಾದರೆ ಜನರಲ್ಲಿ ದೇಶಭಕ್ತಿ ತುಂಬಿ ತುಳುಕಬೇಕು. ದೇಶಭಕ್ತಿಯ ಸಂಗಡಲೇ ತಾಯ್ನುಡಿಯ ಪ್ರೀತಿಯು ಬೆಳೆಯುತ್ತದೆ. ದೇಶಭಕ್ತಿಯಿಂದ ಪ್ರಯೋಜನವಾಗಬೇಕಾದರೆ ಪರದೇಶ ಭಾಷೆಯಲ್ಲಿ ಇರುವ ಮೋಹವು ಹೋಗಿ ಮಾತೃಭಾಷೆಯ ಪ್ರೀತಿಯು ಉಕ್ಕಿಬರಬೇಕು. ಆದ್ದರಿಂದ ದೇಶಭಕ್ತರೆಲ್ಲರೂ ದೇಶಭಕ್ತಿಯ ಶಕ್ತಿಯನ್ನು ಮೊದಲು ಸ್ವದೇಶಭಾಷೆಯ ಬೆಳವಣಿಗೆಗೆ ಉಪಯೋಗಿಸಿ ಜನರನ್ನು ಪರಭಾಷೆ ಮೋಹದ ಪಾಶದಿಂದ ಬಿಡಿಸಬೇಕಾಗಿದೆ.

ಮಳೆ ಗಾಳಿಯ ಅನಾಹುತ.

ಈ ತಾ. 8ರಲ್ಲು ದೇಶದ ಹಲವು ಕಡೆಗಳಲ್ಲಿ ಹೊಡೆದ ಬಹು ಜೋರಾದ ಮಳೆ ಗಾಳಿಯಿಂದ ಅನೇಕ ಸ್ಥಳಗಳಲ್ಲಿ ಸ್ವಲ್ಪ ಮಾತ್ರ ನಷ್ಟ ಉಂಟಾಗಿದ್ದರೂ ಕಡಿಯತ್ಮನಾಡಿನ ಪಾಲಂಗಾಲ ಮತ್ತು ಚೇಲಾವರ ಗ್ರಾಮಗಳಲ್ಲಿ ಸಂಭವಿಸಿರುವ ಅನಾಹುತವು ವಿಶೇಷವಾದದ್ದೆಂದೇ ಹೇಳಬೇಕಾಗಿದೆ ಇದನ್ನು ಕುರಿತು ಕಳೆದ ವಾರದ ಸಂಚಿಕೆಯಲ್ಲಿ ನಮ್ಮ ಸ್ವಂತ ಬಾತ್ಮಿದಾರರು ಬರೆದಿರುವ ವರ್ಣನೆಯು ಅತಿಶಯೋಕ್ತಿಯಾದದ್ದಲ್ಲವೆಂದು ತಿಳಿಯಬರುತ್ತದೆ ಪಾಲಂಗಾಲದಲ್ಲಿ ಹಚ್ಚನೆ ಇಳಿಜಾರು ಇಲ್ಲದ ಸ್ಥಳಗಳಲ್ಲಿ ನೀರು ಹರಿಯುವ ಕಾರಣ ಹೊಡೆದು ಇಲ್ಲದೆ ಗುಂಡಿ ಮಾಟೆಗಳಾಗಿರುವುದನ್ನು ನೋಡಿದರೆ ಈ ಅನಾಹುತವು ಬರೇ ಮಳೆಗಾಳಿಯಿಂದ ಉಂಟಾಗಿರಲಾರದೆಂದೂ, ಅಲ್ಲಿ ಭೂಮಿಯು ಸ್ವಲ್ಪ ನಡುಗಿರಬೇಕೆಂದೂ ಆ ಸ್ಥಳವನ್ನು ಖುದ್ದು ನೋಡಿದವರ ಹಲವರ ಅಭಿಪ್ರಾಯವಾಗಿದೆ.

ಕಾರಣ ಯಾವದೇ ಇರಲಿ, ನಷ್ಟವು ವಿಪರೀತವಾಗಿದೆಯೆಂಬುದರಲ್ಲಿ ಸಂಶಯವಿಲ್ಲ. ಈ ನಷ್ಟವು ವಿಶೇಷವಾದುದರಿಂಲೇ ಈಗಾಗಲೇ ಅನೇಕ ಮಹನೀಯರು ಈ ಗ್ರಾಮವನ್ನು ಹೋಗಿ ನೋಡಿರುವದಾಗಿದೆ. ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರವರೂ. ಕಮೀಶನರವರೂ ಸಹ ಈ ಸ್ಥಳವನ್ನು ಸಂದರ್ಶಿಸಿರುವುದು ಸಂತೋಷಕರ. ಅವರ ಸಂದರ್ಶನದಿಂದ ಅಲ್ಲಿಯ ನಷ್ಟವು ಸರ್ಕಾರದವರಿಗೆ ಚೆನ್ನಾಗಿ ತಿಳಿದಂತಾಗಿದೆ. ಆದರೆ ಇವರ ನೋಡುವಿಕೆಯು ಪ್ರಯೋಜನಕಾರಿಯಾಗಬೇಕಾದರೆ ವಿಪತ್ತಿಗೆ ಒಳಗಾಗಿರುವ ಭೂಮಾಲೀಕರ ಕಷ್ಟವನ್ನು ಪರಿಹರಿಸಲು ಸರ್ಕಾರದವರು ಶಕ್ಯಮಟ್ಟಿಗಾದರೂ ದ್ರವ್ಯಸಹಾಯ ಕೊಡಲೇ ಬೇಕಾಗಿದೆ. ಅಲ್ಲಿಯವರೆಲ್ಲರಿಗೂ ಧರ್ಮಾರ್ಥವಾಗಿ ದ್ರವ್ಯ ಸಹಾಯಮಾಡಲು ತುಂಬಾ ಹಣ ಬೇಕಾಗುವುದೆಂದೂ ಅಷ್ಟಕ್ಕೆ ಸರ್ಕಾರದಲ್ಲಿ ಹಣವಿಲ್ಲವೆಂದೂ ಅಧಿಕಾರಿಗಳು ವಾಡಿಕೆಯಂತೆ ಹೇಳಬಹುದು. ಇಂಥಾ ಕಷ್ಟಕಾಲದಲ್ಲಿ ಜನರಿಗೆ ಸಹಾಯ ಮಾಡದೆಹೋದರೆ ಸರ್ಕಾರದಿಂದ ನಮಗೇನು ಪ್ರಯೋಜನವೆಂಬ ಭಾವನೆಯು ರೈತರಲ್ಲಿ ಹುಟ್ಟುವದರಲ್ಲಿ ಸಂದೇಹವಿಲ್ಲ. ಅವರೆಲ್ಲರಿಗೂ ಕಂದಾಯವೇನೋ ಖಂಡಿತವಾಗಿ ಮಾಫಿಯಾಗಬೇಕು. ಅದರ ಮೇಲೆ ನಷ್ಟಸಂಭವಿಸಿದವರಿಗೆಲ್ಲರಿಗೂ ನಷ್ಟವನ್ನನುಸರಿಸಿ ಉಚಿತವಾಗಿ ಹಣ ಕೊಡಬೇಕಾದದ್ದು ಸರ್ಕಾರದವರ ಕರ್ತವ್ಯ. ಹಾಗೆ ಮಾಡಲು ಸಾಧ್ಯವಿಲ್ಲದಿದ್ದಲ್ಲಿ ಭೂಮಿತೋಟಗಳನ್ನು ಸರಿಪಡಿಸಿಕೊಳ್ಳಲು ಬಡವರಿಗಾದರೂ ಧರ್ಮಾರ್ಥವಾಗಿ ದ್ರವ್ಯ ಸಹಾಯ ಕೊಟ್ಟು ಅನುಕೂಲಸ್ಥರಾಗಿ ಬೇರೆಕಡೆ ಉತ್ಪತ್ತಿ ಇರುವವರಿಗೆ ಬಡ್ಡಿ ಇಲ್ಲದೆ ಸುಲಭ ಕಂತುಗಳಲ್ಲಿ ಸಾಲವಾದರೂ ಕೊಟ್ಟು ಸಹಾಯಮಾಡಬೇಕಾದದ್ದು ಆಗತ್ಯವಾಗಿದೆ. ಇಲ್ಲವಾದರೆ ಸರ್ಕಾರದವರು ಕಷ್ಟಕಾಲದಲ್ಲಿ ಪ್ರಜೆಗಳನ್ನು ಕಾಪಾಡುವರೆಂಬುದರಲ್ಲಿ ಜನರಿಗೆ ವಿಶ್ವಾಸವು ಇಲ್ಲದಾಗುವದು. ಈ ವಿಷಯದಲ್ಲಿ ಹೊಸ ಕಮೀಷನರವರು ಹೇಗೆ ಪರಿಹರಿಸುವರೆಂಬುದನ್ನು ಜನರು ಎದುರು ನೋಡುತ್ತಿರುವರು.

ರಾಷ್ಟ್ರ ವಿಭೂತಿಗಳ ಉತ್ಸವಗಳು.

ರಾಷ್ಟ್ರವು ಒಮ್ಮೆ ಜಾಗೃತವಾಯಿತೆಂದರೆ ಅದಕ್ಕೆ ಹೆಚ್ಚು ಸ್ಫೂರ್ತಿಯುಂಟಾಗಬೇಕು. ತಾನು ಹೆಚ್ಚು ಕಾರ್ಯಕ್ಷಮವಾಗಬೇಕೆಂಬ ಬುದ್ಧಿಯಿಂದ ನಾನಾ ಉತ್ಸವ ಸಂಗತಿಗಳನ್ನು ಮಾಡಲಾರಂಭಿಸುತ್ತದೆ. ಕರ್ನಾಟಕವು ಇದೇ ಈಗ ಉದಯೋನ್ಮುಖವಾಗಿದೆ ಅಥವಾ ಇನ್ನೂ ಆಗುವದರಲ್ಲಿದೆ. ಇಂಥ ಸಮಯದಲ್ಲಿ ಇಡೀ ಕರ್ನಾಟಕಕ್ಕೆ ಯಾವ ಮಹಾಪುರುಷರ ಗುಣಾನುವಾದದಿಂದ ಯಾವ ವಿಭೂತಿಗಳ ಅವತಾರಕೃತ್ಯಗಳಿಂದ ಹೆಚ್ಚು ಸ್ಫೂರ್ತಿಬರುವದೋ ಆ ಪುರುಷರ ಆ ವಿಭೂತಿಗಳ ಉತ್ಸವಗಳನ್ನು ರೂಢಿಯಲ್ಲಿ ತರುವದು ಮುಖಂಡರ ಕರ್ತವ್ಯವಾಗಿದೆ. ಜನರ ಜೀವಾಳಕ್ಕೆ ಹೋಗಿ ಮುಟ್ಟುವಂಥ ವ್ಯಕ್ತಿಗಳ ಚಾರಿತ್ರ್ಯವೇ ಜನರಿಗೆ ಸ್ಫೂರ್ತಿದಾಯಕವಾಗಬಲ್ಲದು. ಅಂಥವರ ಗುಣಕರ್ಮಗಳನ್ನು ಶೋಧಕರಾದ ಇತಿಹಾಸಜ್ಞರು ಭೂತಕಾಲದ ಮುಸುಕಿನೊಳಗಿಂದ ಎತ್ತಿ ತೆಗೆದು ಜನಸಾಮಾನ್ಯರ ಕಣ್ಣು ಮುಂದೆ ಕಟ್ಟಲಿಕ್ಕೆ ಬೇಕು. ಆ ದಿವ್ಯ ದರ್ಶನದಿಂದ ನವಜೀವನವನ್ನು ಹೊಂದಿ ಮುಖಂಡರು ಆ ವ್ಯಕ್ತಿಗಳ ಉತ್ಸವ, ಪೂಜೆ, ಅವರ ನಾಮಸಂಕೀರ್ತನ ಅವರ ಗ್ರಂಥಗಳ ಉದ್ಧಾರ, ಅವರು ಮಾಡಿದ ಸತ್ಕೃತ್ಯಗಳ ಹೊಗಳಿಕೆ ಮುಂತಾದವುಗಳನ್ನು ಪ್ರಚಾರಗೊಳಿಸಲಿಕ್ಕೆ ಬೇಕು.

ಮನುಷ್ಯನು ಸ್ವಾಭಾವಿಕವಾಗಿಯೇ ತನ್ನ ಭೂತಕಾಲದ ಕಡೆಗೆ ನೋಡಿ ಮುಂದೆ ಸಾಗುವನು. ಭೂತಕಾಲದ ಜ್ಞಾನವು ಅವನಿಗೆ ಭವಿಷ್ಯ ಕಾಲದಲ್ಲಿ ಪ್ರಗತಿಯನ್ನು ಹೊಂದಲಿಕ್ಕೆ ಸಹಾಯಭೂತವಾಗುವದು. ತನ್ನ ಭೂತಕಾಲದ ಜಾಜ್ವಲ್ಯಸ್ಮೃತಿಯು ಎಚ್ಚತ್ತ ರಾಷ್ಟ್ರದ ಮುಖ್ಯಲಕ್ಷಣಗಳಲ್ಲಿ ಒಂದು. ಯಾವ ರಾಷ್ಟ್ರದ ಏಳ್ಗೆಯೂ ತನ್ನ ಭೂತಕಾಲದಲ್ಲಿ ಆಗಿಹೋದ ವೀರಸ್ಮರಣದಿಂದಲೇ ಪ್ರಾರಂಭಿಸಿರುವದು. ಇಟಾಲಿ, ಆಯರ್ಲಂಡ, ಜರ್ಮನಿ ಮುಂತಾದ ರಾಷ್ಟ್ರಗಳು ತಮ್ಮ ಹಳೇ ಇತಿಹಾಸವನ್ನು ಪರಿಶೀಲಿಸಿ ಅದರೊಳಗಿಂದ ಪ್ರಸ್ತುತ ನಿರ್ಜೀವ ರಾಷ್ಟ್ರಕ್ಕೆ ಸಂಜೀವನಿಯಂತಿರುವ ವೀರರ ಕಥೆಗಳನ್ನು ಆರಿಸಿ ಅದರಿಂದ ಸ್ಫೂರ್ತಿಗೊಂಡವು. ಕಾರ್ಲಸ್ ಪಿಟ್, ಟ್ರಾಯ್‌ಟಸ್ಕಿ ಈ ಇತಿಹಾಸಜ್ಞರು ಜರ್ಮನಿಯ ನವಯುವಕರಿಗಾಗಿ ಬರೆದ ಜರ್ಮನಿಯ ಇತಿಹಾಸವನ್ನು ಸೂಕ್ಷ್ಮದೃಷ್ಟಿಯಿಂದ ನೋಡಿದರೆ ಆಧುನಿಕ ಜರ್ಮನಿಯಲ್ಲಿ ಈ ತರದ ದೇಶಾಭಿಮಾನವು ಈ ತರದ ಸ್ವಾರ್ಥತ್ಯಾಗವು ಈ ತರದ ಶಿಸ್ತು, ಎಲ್ಲಿಂದ ಒಂದವು ಎಂಬದು ಸ್ಪಷ್ಟವಾಗುತ್ತದೆ.

ಯಾವದೇ ರಾಷ್ಟ್ರವನ್ನು ಮುರಿಬಡಿಯಬೇಕಾದರೆ ಆ ರಾಷ್ಟ್ರದ ಭೂತಕಾಲದಲ್ಲಿಯ ಸ್ಫೂರ್ತಿದಾಯಕವಾದ ಸಂಗತಿಗಳನ್ನು ನಾಶಗೊಳಿಸಿದರೆ ಕೆಲಸವಾಯಿತು. ನೀವು ಎಂದಿಗೂ ನಿಮ್ಮ ನಿಮ್ಮೊಳಗೆ ಬಡಿದಾಡುವರು, ನಿಮ್ಮಲ್ಲಿ ತೇಜಸ್ಸಿಲ್ಲ, ನಿಮ್ಮಲ್ಲಿ ವೀರ್ಯವಿಲ್ಲ, ನೀವು ಎಂದೂ ರಾಜ್ಯವನ್ನಾಳಿಲ್ಲ, ನಿಮ್ಮಲ್ಲಿ, ಶಿಸ್ತು ಇಲ್ಲ, ಸಂಘಟನಾಶಕ್ತಿ ಇಲ್ಲ ಎಂದು ಚಿಕ್ಕ ಮಕ್ಕಳನ್ನು ಮೊದಲುಮಾಡಿಕೊಂಡು ವೃದ್ಧರವರೆಗೆ ನಮ್ಮ ತಲೆಯಲ್ಲಿ ಘಾತಕ ಕಲ್ಪನೆಗಳು ಸೇರಿಸಲ್ಪಡುತ್ತಿರುತ್ತವೆ. ಕ್ಲೈವ, ಹೇಸ್ಟಿಂಗ್ಸ ಇವರು ರಾಜ್ಯವನ್ನು ಹೇಗೆ ಸ್ಥಾಪಿಸಿದರು, ೪೦೦ ಜನ ಸೈನಿಕರೊಂದಿಗೆ ಕ್ಲೈವನು ಐದು ಸಾವಿರ ಜನರನ್ನು ಹೇಗೆ ಓಡಿಸಿದನು, ಮುಂತಾದ ಆತ್ಮವಿಶ್ವಾಸಕ್ಕೆ ವಿಸ್ಮಯವಾದ ಸಂಗತಿಗಳೇ ನಮ್ಮ ಮಕ್ಕಳ ಮನದ ಮೇಲೆ ಮುದ್ರಿಸಲ್ಪಡುತ್ತವೆ. ಆ ಇತಿಹಾಸಗಳಲ್ಲಿ ಶ್ರೀ. ವಿದ್ಯಾರಣ್ಯರ ಹೆಸರು ಸಹ ಇರುವದಿಲ್ಲ. ಹರಿಹರರಾಯನ ನಾಮನಿರ್ದೇಶವಿಲ್ಲ. ಶ್ರೀ ಬಸವೇಶ್ವರರ ಕಥೆಯೂ ಇರುವದಿಲ್ಲ. ಅಂದಮೇಲೆ ಕರ್ನಾಟಕವು ಅಶಕ್ತವು, ಕರ್ನಾಟಕವು ಕೇವಲ ಅನುಕರಣಪ್ರಿಯವು, ಕರ್ನಾಟಕವು ಬ್ರಾಹ್ಮಣ ಬ್ರಾಹ್ಮಣೇತರ ಪಂಗಡಗಳಿಂದ ಒಡೆದು ನಿಶ್ಚೇಷ್ಟವಾದದ್ದು ಎಂಬ ಕಲ್ಪನೆಗಳು ನಮ್ಮಲ್ಲಿ ರೂಢವಾಗುವದೇನಾಶ್ಚರ್ಯವು? ಇಂಥ ಕಲ್ಪನೆಗಳ ಜಾಲದಲ್ಲಿಯೇ ನಾವು ಕುಳಿತೆವೆಂದರೆ ಮುಂಬರುವ ದಿನಗಳಲ್ಲಿ ತನ್ನ ಜಾಲದಲ್ಲಿ ತಾನೇ ಸಿಕ್ಕು ಸಾಯುವಂತೆ ಕರ್ನಾಟಕದ ಸ್ಥಿತಿಯಾಗುವದು. ಆದುದರಿಂದಲೇ ನಾವು ತೀವ್ರ ಎಚ್ಚರಾಗಬೇಕು. ನಮ್ಮನ್ನ ದುರ್ಬಲಮಾಡುವ ಕಲ್ಪನೆಗಳನ್ನು ಕಿತ್ತುಹಾಕಲಿಕ್ಕೆಬೇಕು. ನಾವು ವೀರಸ್ಮರಣವನ್ನು ಮಾಡಲಿಕ್ಕನುವಾಗಬೇಕು. ಆ ದೃಷ್ಟಿಯಿಂದಲೇ ನಾವು ವೀರೋತ್ಸವಗಳನ್ನು ಮಾಡಬೇಕು.

ಕರ್ನಾಟಕದ ಇತಿಹಾಸದಲ್ಲಿ ವೀರರ ಕೊರತೆಯಿಲ್ಲ ಯಾವ ಮಾದರಿಯ ಶ್ರೇಷ್ಠ ಪುರುಷರ ಕೊರತೆಯೂ ಇಲ್ಲ. ಕವಿಗಳೂ, ಶಿಲ್ಪಿಗಳೂ, ಕಲಾಭಿಜ್ಞರೂ, ಜ್ಞಾನಿಗಳೂ, ಧರ್ಮಸ್ಥಾಪಕರೂ, ರಾಜಕಾರ್ಯಧುರಂಧರರೂ ಇದೇ ಭೂಮಿಯಲ್ಲಿ ಜನ್ಮತಾಳಿ ಇದನ್ನು ಧನ್ಯಮಾಡಿಹೋಗಿದ್ದಾರೆ. ಪ್ರಸ್ತುತ ಕಾಲದಲ್ಲಿ, ಸ್ವಾತಂತ್ರ್ಯದ ಸಲುವಾಗಿ ಇಡೀ ನಮ್ಮ ಭರತಭೂಮಿಯು ಹೆಣಗಾಡುತ್ತಿರುವ ಕಾಲದಲ್ಲಿ ಕರ್ನಾಟಕವನ್ನು ಮುನ್ನಿಟ್ಟಿಗೆ ತರಬೇಕೆಂಬ ಕಾಲದಲ್ಲಿ ವೀರಬುಕ್ಕಣ ಅಥವಾ ಬುಕ್ಕಣ, ಹರಿಹರರಾಯ, ಶ್ರೀ ವಿದ್ಯಾರಣ್ಯರು, ಶ್ರೀ ಬಸವೇಶ್ವರರು ಇವರು ವಿಶೇಷ ಮಾನಾರ್ಹರೆಂಬುದು ಸ್ಪಷ್ಟವಿದೆ. ಸ್ವಾತಂತ್ರ್ಯ, ನೈತಿಕ ತೇಜದಿಂದ ಬೇಗ ನಮ್ಮ ಇಡೀ ಭೂತಕಾಲವನ್ನೇ ಉಜ್ವಲಗೊಳಿಸಿದ ಈ ನರವೀರ ಶಿರೋಮಣಿಗಳನ್ನು ನಾವು ಆದರ್ಶವನ್ನಾಗಿಟ್ಟುಕೊಂಡು ಇವರ ಉತ್ಸವಗಳನ್ನು ಮಾಡುತ್ತ ಹೋದರೆ ನಮಗೆ ಪುನಃ ಸುದಿನಗಳು ಬರುವಲ್ಲಿ ಯಾವ ಸಂಶಯವೂ ಇಲ್ಲ. ಸ್ಫೂರ್ತಿಯ ಜಯರ್ಧಸ್ವರೂಪರಾದ ಬಲದ ಮೂರ್ತಿಗಳಾದ ವಿಭೂತಿಗಳನ್ನು ಸ್ಮರಿಸಿ ಕರ್ನಾಟಕಸ್ಥರು ಪುನಃ ತಮ್ಮ ವೀರ ಕರ್ಮಗಳನ್ನು ಮಾಡಲನುವಾಗಿ ಭಾರತೋದ್ಧಾರದ ಕಾರ್ಯದಲ್ಲಿ ಮೊದಲಿಗರಾಗಬೇಕಲ್ಲವೇ?

"ಕರ್ಮವೀರ."

ಕರ್ನಾಟಕ ಸಂಗೀತ.

ಸಂಗೀತವು ಕಾಲಕಳೆಯುವ ಸಾಧನವೆಂದು ಸಾಧಾರಣ ಜನರು ತಿಳಿಯುವರು. ಹೀಗೆ ತಿಳಿಯುವದು ಹೆಚ್ಚೆಂದರೆ ಹೊಟ್ಟೆಗಿಟ್ಟಿಸ್ತು ತಿನ್ನುವ ನಿಮಿತ್ತವೆಂದು ಭಾವಿಸಿದಂತೆಯೇ ಆಗಿದೆ. ಸಾಧಾರಣ ಜನರ ದೃಷ್ಟಿಯು ಈ ರೀತಿಯಾಗಿ ಸಂಕುಚಿತವಾಗಿರುವದು ಸಹಜವಾದದ್ದು. ಗಾಯನವು ಐದನೆಯ ವೇದವೆಂದೂ ಅದರಿಂದ ಪರಮಾತ್ಮನು ಪ್ರೀತನಾಗುವನೆಂದೂ ವಿದ್ವಾಂಸರು ಹೇಳಿದರೆ ಪಂಡಿತರು ಮಾತಾಡತಕ್ಕದ್ದೇ ಆ ವಿಧವಾಗಿ ಎಂದೂ, ಅಥವಾ ಹಾಗೆ ಹೇಳಿರುವ ಗಾಯನವು ಅದ್ಭುತವೂ ಅಲೌಕಿಕವೂ ಆಗಿರಬೇಕೆಂದೂ ಪ್ರಪಂಚದೊಳಗಿನ ಸಂಗೀತಕ್ಕೂ ಅದಕ್ಕೂ ಸಂಬಂಧವಿಲ್ಲವೆಂದೂ ನಾವು ಅವಸರದಿಂದ ಅಂದುಬಿಡುವೆವು. ಆದರೆ ಈ ಮಾತನ್ನು ಸ್ವಲ್ಪ ಹೆಚ್ಚು ಸೂಕ್ಷ್ಮವಾಗಿ ವಿಚಾರಿಸಬೇಕು. ಯಾವುದೇ ಕಲೆಯ ಉದ್ದೇಶವು, ನಿಸರ್ಗದಲ್ಲಿರುವ ಮತ್ತು ನಿಸರ್ಗದಲ್ಲಿ ಅಂತರ್ಭೂತವಾದ ಮನುಷ್ಯನ ಜೀವಿತದಲ್ಲಿರುವ ಸೌಂದರ್ಯವನ್ನು ಸಾಮಾನ್ಯ ಜನರ ಲಕ್ಷ್ಯಕ್ಕೆ ತಂದುಕೊಡುವದಾಗಿರುತ್ತದೆ. ತಾಯಿಯ ದಿವ್ಯವಾದ ಅಂತಃಕರಣ, ಪತಿವ್ರತೆಯಾದ ಹೆಂಡತಿಯ ನಿಃಸೀಮ ಭಕ್ತಿ, ನಿಷ್ಕಪಟವಾದ ಬಂಧುಪ್ರೇಮ ಮೊದಲಾದ ಭಾವನೆಗಳ ಉಜ್ವಲವಾದ ಚಿತ್ರಗಳು ಸುಶಿಕ್ಷಿತ ಮನುಷ್ಯನ ತಲೆಯಲ್ಲಿರುವದಕ್ಕೆ ಅರ್ಧ ಕವಿಗಳೇ ಕಾರಣ. ಕವಿಯು ಬೆಟ್ಟುಮಾಡಿ ತೋರಿಸದಿದ್ದರೆ ಈ ಸಂಸಾರದಲ್ಲಿ ಕಾಣದೇ ಇರುವ ಆನಂದವು ತೋರುವದಲ್ಲದೇ ಕಂಡ ಆನಂದವು ಹೆಚ್ಚು ಸ್ಫುಟವಾಗುವದು. ಎಲ್ಲ ಕಲೆಗಳ ಪ್ರಯೋಜನವು ಇದ್ದೇ ಇರುವದೊಂದನ್ನು ನಾವು ಮರೆಯಕೂಡದು. ಪ್ರಯೋಜನವೆಂದರೆ ದುಡ್ಡು ತಂದು ಕೊಡುವದೆಂದಾಗಲೀ ತತ್ಕಾಲಕ್ಕೆ ಫಲವನ್ನು ಕೊಡುವದೆಂದಾಗಲೀ ಅರ್ಥಮಾಡಬಾರದು. ಪರಮಾತ್ಮನ ಸೃಷ್ಟಿಯಲ್ಲಿರುವ ಒಂದು ಗುಣದ ಚಿಂತನದಿಂದ ನಮಗೆ ನಿಜವಾದ ಆನಂದವಾದರೆ ಆ ಗುಣವು ಮರೆಯಾಗಿ ನಮ್ಮ ಮನಸ್ಸಿನ ಮೇಲೆ ತನ್ನ ವರ್ಚಸ್ಸನ್ನೂ ಕೆಡಹಿ ನಮ್ಮಿಂದ ಇಂದಿಲ್ಲ ನಾಳೆ ತನನುರೂಪವಾದ ಕಾರ್ಯವನ್ನು ಮಾಡಿಸದೆ ಬಿಡದು.

ಅದ್ವಿತೀಯ ನಿಜವಾದ ಸಂಗೀತವನ್ನು ಕೇಳುವ ಗಾಯನ, ಲೌಕಿಕ ಗಾಯನ ಎಂದು ವಿಭಾಗಮಾಡುವದು ಸಯುಕ್ತಿಕವಾದುದಲ್ಲ. ಸೃಷ್ಟಿಯಲ್ಲಿರುವ ಧ್ವನಿ ಸಂಪತ್ತಿನ ರುಚಿಯನ್ನು ತೋರಿಸುವದೇ ಕಲೆಯ ಉದ್ದೇಶವೆಂದು ಮೇಲೆ ಹೇಳಿತು. ಈ ಕಾರ್ಯವನ್ನು ಹೆಚ್ಚು ಹೆಚ್ಚು ಚೆನ್ನಾಗಿ ಮಾಡಿದ ಹಾಗೆ ಯಾವದೊಂದು ಕಲೆಯು ಹೆಚ್ಚು ಹೆಚ್ಚು ಶ್ರೇಷ್ಠವೆನಿಸಿಕೊಳ್ಳುವದು.

ಈಗಿನ ಲೌಕಿಕ ಸಂಗೀತದಲ್ಲಿ ನ್ಯೂನತೆಗಳಿಲ್ಲೆಂದು ನನ್ನ ಅಭಿಪ್ರಾಯವಲ್ಲ. ಆದರೆ ಕೆಲವರು ತಿಳಿಯುವಂತೆ ದೇವರಲ್ಲಿ ಭಕ್ತಿಯನ್ನೂ ಪ್ರತ್ಯಕ್ಷವಾಗಿ ಸೂಚಿಸುವ ಪದ ಪದ್ಯಗಳನ್ನು ಹಾಡುವದೇ ಹೆಚ್ಚಿನ ಸಂಗೀತವೆಂದೂ ಉಳಿದ ಸಂಗೀತದಲ್ಲಿ ಪುರುಷಾರ್ಥವಿಲ್ಲೆಂದೂ ಭಾವಿಸುವದು ಭಕ್ತಿರಸಪೂರ್ಣ ಕಾವ್ಯವೇ ನಿಜವಾದ ಕಾವ್ಯವೆಂದೂ ಶೃಂಗಾರಾದಿ ರಸಗಳ ವಿಷಯವಾಗಿರುವ ಕಾವ್ಯವು ಅಷ್ಟು ಉತ್ತಮವಾದ ಕಾವ್ಯವಲ್ಲೆಂದೂ ತಿಳಿದಹಾಗಾಗುವದು. ಸಾಹಿತ್ಯ ಸಂಗೀತಗಳೆರಡೂ ಸ್ವತಂತ್ರ ಮಾರ್ಗದಿಂದ ದೇವರ ಸನ್ನಿಧಾನದಲ್ಲಿ ಒಯ್ಯುವವು. ಸಂಗೀತಕ್ಕೆ ಸಾಹಿತ್ಯದ ಜೋಡು ಇದ್ದರೂ ಸರಿಯೆ, ಇಲ್ಲದಿದ್ದರೂ ಸರಿಯೆ. ಆದರೆ ವಿಶ್ವದಲ್ಲಿ ಸೂಕ್ಷ್ಮವಾಗಿರುವ ಆನಂದದ ಅನುಭವವನ್ನು ತಂದುಕೊಟ್ಟು ಮನುಷ್ಯನನ್ನು ಅಪ್ರತ್ಯಕ್ಷ ರೀತಿಯಿಂದ ಶಾಶ್ವತ ಸುಖದ ಮಾರ್ಗಕ್ಕೆ ಹಚ್ಚುವದು ಉಳಿದ ಕಲೆಗಳಂತೆ ಪ್ರತ್ಯೇಕವಾಗಿ ಸಂಗೀತಕ್ಕೆ ಸಾಧ್ಯವಿದ್ದು ಇದನ್ನು ಹೆಚ್ಚುಕಡಿಮೆ ಪ್ರಮಾಣದಿಂದ ಸಾಧಿಸಿದಂತೆ ಸಂಗೀತದಲ್ಲಿ ಬೇಕಾದಷ್ಟು ಉಚ್ಚನೀಚ ತರಗಳನ್ನು ಮಾಡಬಹುದು.

ಒಳ್ಳೆಯ ಸಂಗೀತಗಾರರ ಹಾಡಿನಿಂದ ಮನುಷ್ಯನು ತನ್ನ ಚಿಂತೆಗಳನ್ನೆಲ್ಲ ಮರೆತು ಒಂದು ವಿಲಕ್ಷಣವಾದ ಆನಂದವನ್ನು ಅನುಭವಿಸುವದು ನಿಜ. ವಿಲಕ್ಷಣವಾದದ್ದೆಂದರೆ ಅದಕ್ಕೆ ಯಾತರ ಉದಾಹರಣೆಯನ್ನೂ ಕೊಡಲಿಕ್ಕೆ ಬರುವದಿಲ್ಲೆಂದು ಅಲ್ಲ. ಕವಿಗಳು, ಜ್ಞಾನಿಗಳು ಭಕ್ತರು ಇವರ ಸಹವಾಸದಲ್ಲಿರುವವರಿಗೆ ಆಗುವ ಆನಂದವೇ ಈ ಆನಂದವು. ಜ್ಞಾನಿಯು ಭಕ್ತನ ಅಥವಾ ಕವಿಯ ಸಹವಾಸದಲ್ಲಿದ್ದವರೆಲ್ಲ ಒಂದೇ ಸಮನಾಗಿ ಆನಂದವಾಗುವದೋ? ಇಲ್ಲ. ಇವರು ಜ್ಞಾನ, ಭಕ್ತಿ, ಸಹೃದಯತೆಯನ್ನು ಸಂಪಾದಿಸಿದ್ದರೆಯೇ ಆಗುವದು, ಭಕ್ತನ ಸಹವಾಸದಿಂದ ನಮಗ ಲಾಭವಾಗಬೇಕಾದರೆ ನಮ್ಮ ಮನಸ್ಸು ಸಿದ್ಧವಾಗಿರುವದು ಹೇಗೆ ಅಗತ್ಯವೋ ಹಾಗೆಯೇ ಸಂಗೀತಕಲಾಭಿಜ್ಞರಿಂದ ನಮಗೆ ಆನಂದವಾಗಬೇಕಾದರೆ ನಮ್ಮ ಮನಸ್ಸಿಗೆ ಒಂದು ಬಗೆಯ ಸಂಸ್ಕಾರವು ಆಗಿರುವದು ಆವಶ್ಯಕವು.

ಈ ಸಂಸ್ಕಾರವನ್ನು ಹುಟ್ಟುತ್ತಲೆ ಕೆಲವರು ತಮ್ಮ ಸಂಗಡ ತರುವರು. ಅವರಿಗೆ ಸಂಗೀತದಲ್ಲಿ ಸ್ವಾಭಾವಿಕವಾದ ಅಭಿರುಚಿಯಿರುವದೆಂದು ನಾವು ಹೇಳುವೆವು. ಸಂಗೀತದಲ್ಲಿ ಸ್ವಾಭಾವಿಕವಾದ ಸೇರಿಕೆಯಿಲ್ಲದವರು ಕೂಡ ಕಲಿತು ಅಭಿರುಚಿಯನ್ನು ಹುಟ್ಟಿಸಿಕೊಳ್ಳಬಹುದು. ಆದರೆ ಈ ಕೆಲಸವನ್ನು ಅವರು [illegible]ದಿನಲ್ಲಿಯೇ ಮಾಡತಕ್ಕದ್ದು. ಕೆಲವೊಂದು ವಯಸ್ಸು [illegible]ದನಂತರ ಮನಸ್ಸಿಗೆ ಹೊಸ ಸಂಸ್ಕಾರವಾಗುವದು ದು[illegible]ವೆಂದು ಮನಶಾಸ್ತ್ರವು ಹೇಳುತ್ತದೆ. ಅದಕಾರಣ ಮಕ್ಕಳ [illegible] ವಿದ್ಯಾಭ್ಯಾಸಕ್ರಮದಲ್ಲಿ ಸಂಗೀತ ವಿಷಯವನ್ನು ಸೇರಿಸು[illegible] ಅಗತ್ಯವಾದದ್ದು. ಚಿಕ್ಕವಯಸ್ಸಿನಲ್ಲಿ ಸರಿಯಾದ ಶಿಕ್ಷಣ [illegible] ಸಿಕ್ಕದೆ ಅವರು ಮುಂದೆ ಸಂಗೀತಗಾರರಾಗದಿದ್ದರೂ ಜ[illegible] ಸಂಗೀತದಿಂದ ಆಗುವ ಆನಂದವನ್ನು ಅನುಭವಿಸಲಿಕ್ಕೆ ತಕ್ಕ[illegible]ಗುವರು.

ನಮ್ಮ ದೇಶದಲ್ಲಿ ಎರ[illegible] ಸಂಗೀತ ಪದ್ಧತಿಗಳುಂಟೆಂದು ಎಲ್ಲರಿಗೂ ಗೊತ್ತುಂಟು. ದಕ್ಷಿಣ ಹಿಂದುಸ್ತಾನದ ಇತಿಹಾಸವು ಉತ್ತರ ಹಿಂ[illegible]ದ ಇತಿಹಾಸದಿಂದ ಭಿನ್ನವಾಗಿ ಬಹುಕಾಲದವರೆಗೆ [illegible]ದನ್ನು ನಾವು ಬಲ್ಲೆವು. ಈಗಾದರೂ ಈ ದೇಶ[illegible] ಭಾಷೆಯು ಮುಖ್ಯ ವರ್ಗಗಳಿಂದ ವಿಭಾಗಿಸಿದರೆ ಉ[illegible] ಹಿಂದುಸ್ತಾನದಲ್ಲೆಲ್ಲ ಸಂಸ್ಕೃತದಿಂದ ಹುಟ್ಟಿದ ಭಾಷೆ[illegible]ವರು, ದಕ್ಷಿಣದಲ್ಲಿ ದ್ರಾವಿಡವರ್ಗಕ್ಕೆ ಸೇರಿದ ಭಾ[illegible]ವರು. ಭಾಷೆಗೂ ಸಂಗೀತಕ್ಕೂ ನಿಕಟಸಂಬಂಧವಿರು[illegible] ಸುವಂತೆ ಉತ್ತರ ದೇಶದಲ್ಲಿ ಹಿಂದುಸ್ತಾನೀ ಸಂಗೀತ[illegible]ಯುವದು, ದಕ್ಷಿಣದಲ್ಲಿ ದಕ್ಷಿಣಾದಿ ಅಥವಾ [illegible]ಯುವಂತೆ ಕರ್ನಾಟಕ ಪದ್ಧತಿಯು ಇರುವದು. [illegible]ದಲ್ಲಿ ಹಿಂದುಸ್ತಾನೀ ಸಂಗೀತವು ಒಂದೇ ಆದರೂ ಪ್ರಾಂತ[illegible]ಗಳಲ್ಲಿ ಪುನಃ ಸ್ವಲ್ಪ ವೈಲಕ್ಷಣ್ಯವು ಕಂಡುಬರುವದು. [illegible]ದೀ ಮಾತನಾಡುವ ಜನರು ಹಾಡುವಂತೆ ಮರಾಠಿಯ[illegible] ಹಾಡುವದಿಲ್ಲ. ಗುಜರಾಥೀ ಜನರಿಗೆ ಸೇರುವ ಸಂಗೀತ[illegible] ಬೇರೆ. ಈ ಎಲ್ಲರಿಂದ ಸ್ವಲ್ಪ ವಿಲಕ್ಷಣವಾದ ಶೈಲಿಯು ಬಂಗಾಳದಲ್ಲಿರುವದು. ಆದರೆ ಈ ಎಲ್ಲ ಪ್ರಾಂತಗಳ ಸಂಗೀತದಲ್ಲಿರುವ ಬಹು ಸ್ಪಷ್ಟವಾಗಿ ಒಡೆದು ಕಾಣುವ ಸಾಮ್ಯದಲ್ಲಿ ಈ ಸಣ್ಣ ಸಣ್ಣ ಒಳ ಭೇದಗಳು ತಂಡೂ ಕಾಣದಂತಿರುವವು. ಇದರಂತೆ ಆಂಧ್ರರು, ತಮಿಳರು, ಕನ್ನಡಿಗರು ಇವರ ಸಂಗೀತದಲ್ಲಿಯೂ ಅಲ್ಪವಾದ ವ್ಯತ್ಯಾಸವುಂಟು. ಅದರಲ್ಲಿ ನಮ್ಮ ಈ ಉತ್ತರಕರ್ನಾಟಕದ ಜನರು ಹಾಡುವ ತರಹವು ಮೈಸೂರ ಕನ್ನಡಿಗರಿಗೆ ಸೇರದು. ಯಾಕೆಂದರೆ ಇದರಲ್ಲಿ ಹಿಂದುಸ್ತಾನಿ, ಕರ್ನಾಟಕಿ ಧರ್ತಿಗಳೆರಡೂ ಮಿಶ್ರವಾಗಿರುವವು.

ಅಂತೂ ಈ ಇಲಾಖೆಯಲ್ಲಿ ಕನ್ನಡಿಗರು ಹಾಡುವವರಿದ್ದರೆ ಅವರು ಕೇವಲ ಹಿಂದುಸ್ತಾನೀ ಹಾಡುವವರಾಗಲಿ ಅಥವಾ ಮೇಲೆ ಹೇಳಿದ ಮಿಶ್ರಪದ್ಧತಿಯನ್ನಾಗಲಿ ಹಾಡುವವರು ದೊರೆಯುವರು. ಕೇವಲ ದಕ್ಷಿಣಾದಿಯನ್ನು ಶುದ್ಧವಾಗಿ ಹಾಡುವವರು ಕಡಿಮೆ.

ಕನ್ನಡಿಗರ ಸಾಮಾನ್ಯ ಸಂಸ್ಕೃತಿಯು ಇತರ ದಕ್ಷಿಣದೇಶದ ಪ್ರಾಂತದವರ ಸಂಸ್ಕೃತಿಗಿಂತ ಭಿನ್ನವಾಗಿದ್ದಷ್ಟು ಕನ್ನಡಿಗರ ಸಂಗೀತಕಲೆಯು ಮಾತ್ರ ದಕ್ಷಿಣದೇಶದ ಇತರ ಭಾಗಗಳ ಸಂಗೀತಕಲೆಯಿಂದ ಭಿನ್ನವಾಗಿಲ್ಲ. ನಮ್ಮ ಭಾಷೆಗೂ ಹಿಂದುಸ್ತಾನೀ ಸಂಗೀತಕ್ಕೂ ಮಾತ್ರ ಕೂಡುವದಿಲ್ಲ. ಪುರಂದರ ದಾಸರ ಪದಗಳನ್ನಾಗಲಿ, ಜೈಮಿನಿ ಭಾರತದ ಪದ್ಯಗಳನ್ನಾಗಲಿ ಹಿಂದುಸ್ತಾನೀ ಸಂಗೀತಕ್ಕೆ ಎಳೆದು ಒಯ್ದು ಹಚ್ಚಿದರೆ ಸಹೃದಯ ಮನುಷ್ಯನ ಕಿವಿಗೆ ಅಸಹ್ಯವಾಗಿ ತೋರುವದು. ಮುಂದೆ ಸುದೈವದಿಂದ ಕರ್ನಾಟಕವು ಒಂದು ಆಧಿಪತ್ಯಕ್ಕೆ ಒಳಪಟ್ಟರೆ ನಮ್ಮ ಈ ಉತ್ತರ ಕರ್ನಾಟಕದ ಸಂಗೀತವು ಈಗಿನ ಮಿಶ್ರಪದ್ಧತಿಯನ್ನು ಬಿಟ್ಟು ನಮ್ಮ ಭಾಷೆಗೂ ಸ್ವಭಾವಕ್ಕೂ ಸಂಸ್ಕೃತಿಗೂ ಹೆಚ್ಚು ಅನುಗುಣವಾದ ಕರ್ನಾಟಕ ಪದ್ಧತಿಯನ್ನೇ ಹೆಚ್ಚು ಶುದ್ಧ[illegible]ಗಿಯೂ ಹೆಚ್ಚು ಅಸ್ಥೆಯಿಂದಲೂ ಅನುಸರಿಸುವದೆಂಬುದರ[illegible] ಸಂದೇಹವಿಲ್ಲ.

ಕರ್ನಾಟಕ ಸಂಗೀತದ ಮುಖ್ಯ ಪಕ್ವಾನ್ನವೆಂದರೆ ತ್ಯಾಗರಾಜನ ಕೃತಿಗಳು. ಇವು ಆಂಧ್ರಭಾಷೆಯಲ್ಲಿರುವವೆಂದು ಇವುಗಳನ್ನು ಆಸ್ವಾದಿಸಲಿಕ್ಕೆ ಒರುವದಿಲ್ಲ. ಯಾಕೆಂದರೆ ಉತ್ತರದ ಮರಾಠೀ ಮೊದಲಾದ ಎಲ್ಲ ಭಾಷೆಯವರು ಹಿಂದೀ ಮತ್ತು ವ್ರಜಭಾಷೆಯಲ್ಲಿರುವ ಪುರಾತನರು ಮಾಡಿದ ಪ್ರಬಂಧ ವಿಶೇಷಗಳಿಗೆ ಮಹತ್ವವನ್ನು ಕೊಡುವದು ಹೇಗೆ ಯೋಗ್ಯವಾಗಿರುವದೋ ಹಾಗೆ ನಾವಾದರೂ ಸಂಗೀತದ ವಿಷಯದಲ್ಲಿ ಅಖಿಲ ದಕ್ಷಿಣ ಹಿಂದುಸ್ತಾನದ ದೃಷ್ಟಿಯಿಂದ ನೋಡತಕ್ಕದ್ದು. ಇಲ್ಲಿ ಏಕೆ, ಕನ್ನಡದಲ್ಲಿ ಗಾಯನ ಪದಗಳಿರುವದಿಲ್ಲವೇನು? ಎಂದು ಕೆಲವರು ಆಕ್ಷೇಪಿಸಬಹುದು. ಆಹುದು ಇರುವವು. ಆದರೆ ಅವುಗಳಲ್ಲಿ ಸಂಗೀತವು ಗೌಣವಿದ್ದು ಅರ್ಥಕ್ಕೆ ಹೆಚ್ಚು ಪ್ರಾಶಸ್ತ್ಯವಿರುವದು. ಮತ್ತು ಅರ್ಥಬೋಧೆಯಿಂದ ವಿವೇಕ ವೈರಾಗ್ಯಾದಿಗಳನ್ನು ಹುಟ್ಟಿಸುವ ಅವುಗಳ ಉದ್ದೇಶವನ್ನು ಲಕ್ಷ್ಯಕ್ಕೆ ತಂದರೆ ಸಂಗೀತಕ್ಕೆ ಗೌಣತ್ವವಿರುವದು ಇಷ್ಟವಾದದ್ದು. ಆದರೆ ಸಂಗೀತದ ಕಾರ್ಯವು ಅರ್ಥದ ದ್ವಾರಾ ಮನಸ್ಸಿಗೆ ನಿಲುಕುವದಾಗಿರದೆ ಸಾಕ್ಷಾತ್ತಾಗಿ ಭಾವನೆಯನ್ನುದ್ದೀಪಿಸಿ ವಿಶ್ವದ ಪ್ರಾಣಧಾರಣವಾಗಿರುವ ಅಕ್ಷರದ ಆನಂದದ ಬಹು ಸೂಕ್ಷ್ಮ ಅಂಶವನ್ನಾದರೂ ಅನುಭವಕ್ಕೆ ತಂದುಕೊಡುವದಾಗಿರುವದರಿಂದ ಸಂಗೀತದ ಸ್ವಂತ ಸಾಮ್ರಾಜ್ಯದಲ್ಲಿ ಅರ್ಥಕ್ಕೆ ಗೌಣತ್ವವಿರಬೇಕಾದದ್ದೂ ಅಷ್ಟೇ ಇಷ್ಟವಾದದ್ದು. ಇದರಮೇಲಿಂದ ದೊರೆಯುವ ಅನುಮಾನವೇನೆಂದರೆ ಸಂಗೀತಕ್ಕೆ ಪದವರ್ಣಗಳ ರಚನೆಯು ಒಂದು ವಿಶಿಷ್ಟ ಪ್ರಕಾರದ್ದಿರುವದು ಆವಶ್ಯವಿದೆ. ಈ ವಿಧದ ರಚ

ನೆಯು ತ್ಯಾಗರಾಜನ ಕೀರ್ತನೆಗಳಲ್ಲಿರುವ ಕಾರ್ಯ ಸಂಗೀತದ ದೃಷ್ಟಿಯಿಂದ ಅವುಗಳಿಗಿರುವ ದೊಷ್ಟನ್ಯಕೆಯು ಬೇರೆ ದೃಷ್ಟಿಯಿಂದ ಇತರ ಪ್ರಬಂಧಗಳಿರುವ ಮುಖ್ಯವನ್ನು ಎಳ್ಳಷ್ಟೂ ಕಡಿಮೆಮಾಡಲಾರದು'

ಮೇಲಿನ ಮಾತಿನ ಮೇಲಿಂದ ತಿಳಿಯಬರುವ ಇನ್ನೊಂದು ಸಂಗತಿಯಾವದೆಂದರೆ—ಕರ್ನಾಟಕ ಸಂಗೀತವನ್ನು ಪ್ರೀತಿಸುವವರು ತೆಲುಗು ಭಾಷೆಯ ಅಲ್ಪಸ್ವಲ್ಪ ಪರಿಚಯವನ್ನಾದರೂ ಮಾಡಿಕೊಳ್ಳುವದು ಅಗತ್ಯವು. ಹಾಗೆ ಮಾಡುವವರ ಶ್ರಮವು ವ್ಯರ್ಥವಾಗಿ ಹೋಗುವದಿಲ್ಲ. ಅದರಿಂದ ಎರಡು ಉದ್ದೇಶಗಳು ನೆರವೇರುವವು. ಒಂದು ರಸಸಂಪೂರ್ಣವಾದ ಗಾಯನದ ಅಭಿರುಚಿ ಹಾದಿಯನ್ನು ಕಂಡುಕೊಳ್ಳುವದು, ಎರಡನೆಯದು ಅರ್ಥಸ್ವಾರಸ್ಯವೂ ಭಕ್ತಿರಸವೂ ತುಂಬಿ ತುಳುಕುತ್ತಿರುವ ಶ್ರೀ ತ್ಯಾಗರಾಜಸ್ವಾಮಿಯವರ ಅಸದೃಶವಾದ ಕವಿತೆಯ ಸೌಂದರ್ಯವನ್ನು ಸವಿಯುವದು. ಕವಿತೆ, ಸಂಗೀತ ಇವೆರಡರ ವೇದಿಕೆಗಳನ್ನು ಸಮಾನವಾಗಿ ಪೂರ್ತಿ ಮಾಡಿ ಗರ್ಗ ಪ್ರತಿಯರಂತೆ ಅವರ ನಡುವಿನ ಅನುರಾಗವನ್ನು ಸ್ಥಿರಪಡಿಸಿದ್ದು ಬಹು ದುಸ್ತರವಾದ ಮಾತು. ಈ ಅದ್ಭುತ ಕಾರ್ಯವನ್ನು ತ್ಯಾಗರಾಜನು ತನ್ನ ಉಜ್ವಲವಾದ ಪ್ರತಿಭೆಯಿಂದ ಮಾಡಿರುವನಾದ್ದರಿಂದಲೇ ಕರ್ನಾಟಕದಲ್ಲಿ ಅವನ ಗೀತಗಳನ್ನು ರಚಿಸುವ ಮತ್ತೊಬ್ಬನು ಹುಟ್ಟುವವರೆಗೆ ತ್ಯಾಗರಾಜನ ಚರಿತ್ರ, ಕೀರ್ತನೆ, ಸಂಗೀತ ಇವುಗಳನ್ನು ಅಭ್ಯಾಸ ಮಾಡುವದು ನಮ್ಮ ಸಂಸ್ಕೃತಿಗೆ ಹಾನಿಯನ್ನು ತರದೆ ಆ ಸಂಸ್ಕೃತಿಯ ಸಂಪತ್ತನ್ನು ಇನ್ನೂ ಹೆಚ್ಚಿಸುವದು

ಇದಕ್ಕೆ ಪ್ರತ್ಯಕ್ಷನಿದರ್ಶನವಾದರೂ ಇರುವದು. ಮೈಸೂರು ಸೀಮೆಯಲ್ಲಿ ಆಬಾಲವೃದ್ಧರ ಬಾಯಲ್ಲಿಯ ಆ ತ್ಯಾಗರಾಜನ ಕೀರ್ತನೆಗಳಿದ್ದಾಗ್ಯೂ ಪುರಂದರದಾಸರ ಪದಗಳನ್ನೇ ಬಹು ಸರಸತ್ವಾಗಿ ಹಾಡುವವರು ಅನೇಕ ಜನರು ದೊರೆಯುವರು. ಆದ್ದರಿಂದ ಮೊದಲು ನಾವು ಮಾಡತಕ್ಕ ಕೆಲಸವೇನಂದರೆ—ಕರ್ನಾಟಕ ಸಂಗೀತ ಪದ್ಧತಿಯ ಮರ್ಮವನ್ನು ಅರಿತುಕೊಳ್ಳುವದು ಮತ್ತು ವಿಶೇಷತಃ ಈ ಪ್ರಾಂತದಲ್ಲಿ ಅದರ ಶುದ್ಧತೆಯನ್ನು ಕಾಯ್ದುಕೊಳ್ಳುವದು ಇದೇ ಆಗಿರುತ್ತದೆ. ಇದಕ್ಕೆ ಯಾವ ಉಪಾಯಗಳನ್ನು ಕೈಕೊಳ್ಳಬೇಕೆಂಬುದಕ್ಕ ಒಬ್ಬನ ಹೇಳಿಕೆಗೆ ಗೌರವವು ಬರುವದಿಲ್ಲವಾದ ಕಾರಣ ಈ ವಿಷಯದಲ್ಲಿ ಆಸ್ಥೆಯುಳ್ಳವರು ಸೇರಿ ಶುದ್ಧ ಅಂತಃಕರಣದಿಂದ ಪರಸ್ಪರರ ಅಭಿಪ್ರಾಯಗಳನ್ನು ಚರ್ಚಿಸುವದರಿಂದಲೇ ಕರ್ನಾಟಕ ಸಂಗೀತದ ಜಾಗ್ರತಿಯಾಗುವದು.

ತಿಂಗಳ ಬಿಂಬನುಂ ಹಿಡಿದು ಹಿಂಡಿ ಪಳಚ್ಚನೆ ಸೋರ್ವಸೋನೆಯಂ—।
ತಿಂಗಡಿಲಿಂ ಪೊದಳ್ದಮುದ-ನೆತ್ತಿದೊಡೊಯ್ಯನೆ- ಸೋರ್ವಸೋನೆಯಂ॥
ತಂಗಬನಿಕ್ಕು ಕಾರ್ಮುಕವನೇರಿಸ ಜುಮ್ಮನೆ ಸೂರ್ವಸೋನೆಯಂ।
ತೇಂ ಗಡ ಸೀಯನುಣ್ಮುದುದೊ ಗೇಯದ ಮುಲ್ಲಲಿ ಜಾಣಗಾಣನಾ ॥ ೧ ॥

"ಜಯಕರ್ನಾಟಕ"

ನಾನೇ ಚಕ್ರವರ್ತಿಯೊದ ಪಕ್ಷದಲ್ಲಿ

ಹಿಂದೂದೇಶದಲ್ಲಿ ತಾನು ಏನೇನು ಮಾಡುತ್ತಿದ್ದೆನೆಂದು ಮಹಾತ್ಮ ಗಾಂಧಿಯವರು ಮಿ. ಸ್ಪೆಂಡರವರಿಗೆ ಕೊಟ್ಟ ಉತ್ತರದಲ್ಲಿ ಹೀಗೆಂದು ಹೇಳಿರುವರು —

ಭಾರತೀಯರ ರಕ್ತವನ್ನು ಹೀರುತ್ತಿರುವ ಸೈನ್ಯವನ್ನು ತಗ್ಗಿಸುತ್ತೇನೆ

ಜಾತಿ, ಮತ, ವರ್ಣ ವಿಭೇದಗಳನ್ನು ಎಣಿಸದೇ ಅಖಿಲ ಮಾನಕೋಟಿಯನ್ನು ಸಮನಾಗಿ ಆದರಿಸುತ್ತೇನೆ.

ಕಳ್ಳರ ದರೋಡೆಯವರ ಬಾಧೆಯು ಉಂಟಾಗದಿರುವದಕ್ಕೆ ಎಷ್ಟು ಸೈನ್ಯ ಅವಶ್ಯಕವೋ ಅಷ್ಟನ್ನು ಮಾತ್ರವೇ ಉಳಿಸಿಕೊಳ್ಳುತ್ತೇನೆ.

ಈಗ ನೆರಹದ್ದು ರಾಷ್ಟ್ರ ಸಮೀಪದಲ್ಲಿರತಕ್ಕ ಬೆಟ್ಟಗುಡ್ಡಗಳವರಿಗೆ ಲಂಚವನ್ನು ಕೊಡಲಾರೆ ಅವರೊಡನೆ ಸ್ನೇಹವನ್ನು ಬೆಳೆಸಿಕೊಳ್ಳುತ್ತೇನೆ. ಅಲ್ಲದೆ ಅವರ ಹೃದಯವನ್ನು ಪರಿವರ್ತನಗೊಳಿಸುವದಕ್ಕಾಗಿ ಸಂಸ್ಕರ್ತರನ್ನೂ ಪ್ರಚಾರಕರನ್ನೂ ಅಲ್ಲಿಗೆ ಕಳುಹಿಸುತ್ತೇನೆ. ಭಾರತದೇಶದಲ್ಲಿ ವಾಸಮಾಡುತ್ತಿರುವ ಯೂರೋಪಿಯನರ ಮತ್ತು ಅವರ ವ್ಯಾಪಾರ ರಕ್ಷಣೆ ವಿಷಯದಲ್ಲಿ ಗ್ಯಾರಂಟಿಯಾಗುತ್ತೇನೆ.

ದೇಶಾಂತರದಿಂದ ಸರಬರಾಯಿ ಆಗತಕ್ಕ ಒಟ್ಟೆಗಳ ಸುಂಕವನ್ನು ತಗ್ಗಿಸುತ್ತೇನೆ

ನಮ್ಮ ದೇಶದ ರಾಟೆಗಳಲ್ಲಿ ತಯಾರಾಗತಕ್ಕ ಒಟ್ಟೆಗಳು ಧಾರಾಳವಾಗಿ ಖರ್ಚಾಗತಕ್ಕ ಬಗ್ಗೆ ವಿದೇಶ ವಸ್ತ್ರಗಳ ಮೇಲೆ ಸ್ವಲ್ಪ ಸುಂಕವನ್ನು ಹಾಕುತ್ತೇನೆ.

ಮಾದಕ ಪದಾರ್ಥಗಳನ್ನು ಮಾರತಕ್ಕ ಅಂಗಡಿಗಳನ್ನು ಬಂದ್ ಮಾಡುತ್ತೇನೆ ಮಾದಕದ್ರವ್ಯಗಳು ತಯಾರಾಗುವದನ್ನೇ ನಿಲ್ಲಿಸಿಬಿಡುತ್ತೇನೆ.

ವೈದ್ಯ ಶಾಸ್ತ್ರಪರಿಶೋಧನೆ ಇವುಗಳ ಹೊರ್ತು ಬಾಕೀ ವಿಷಯಗಳಲ್ಲಿ ಅಫೀಮಿನ ವ್ಯಾಪಾರವನ್ನೇ ತಪ್ಪಿಸಿಬಿಡುತ್ತೇನೆ

ಮಾನವ ನೈತಿಕ ಸ್ವಭಾವಗಳಿಗೆ ವಿರುದ್ಧವಾಗಿಲ್ಲದ ಸರ್ವ ಮತಾರಾಧಕರಿಗೂ ಸಂಪೂರ್ಣ ಸ್ವಾತಂತ್ರ್ಯವನ್ನು ಕೊಡುತ್ತೇನೆ

ಹಿಂದೂಗಳು ಮಾತ್ರವೇ ಪ್ರವೇಶಿಸುವದಕ್ಕೂ ಪೂಜಾದಿಗಳನ್ನು ನೆರವೇರಿಸುವದಕ್ಕೂ ಹಕ್ಕಾಗಿರುಳ್ಳ ಪಾಠಶಾಲೆಗಳನ್ನು, ದೇವಾಲಯಗಳನ್ನೂ ಅಸ್ಪೃಶ್ಯರು ಉಪಯೋಗಿಸಿಕೊಳ್ಳಕೂಡದೆಂಬ ನಿರ್ಬಂಧವನ್ನು ತೆಗೆದುಹಾಕುತ್ತೇನೆ

ಹಿಂದೂ ಮಹಮುದೀಯರ ಪ್ರತಿನಿಧಿಗಳನ್ನು ಕರೆಸಿ ಅವರ ಜೇಬಿನಲ್ಲಿರತಕ್ಕ ಆಹಾರ್ಯಮಾರಣ ಸಾಮಗ್ರಿಗಳನ್ನು ತೆಗದುಕೊಂಡು ಒಂದು ಕೊಠಡಿಯಲ್ಲಿಟ್ಟು ಬೀಗ ಹಾಕುತ್ತೇನೆ. ಉಭಯ ಸಂಪ್ರದಾಯದವರೂ ಇನ್ನು ಹೋರಾಡುವುದಿಲ್ಲವೆಂದು ಪ್ರತಿಜ್ಞೆ ಮಾಡುವ ವರೆಗೆ ಕೊಠಡಿಯ ಬಾಗಿಲನ್ನು ತೆರೆಯಲಾರೆ.

ನಾನು ಭಾರತದೇಶದ ಚಕ್ರವರ್ತಿಯಾದ ಪಕ್ಷದಲ್ಲಿ ಮಾಡಬೇಕಾದ ಕೆಲಸಗಳು ಇನ್ನೂ ಎಷ್ಟೋ ಇರುತ್ತವೆ. ದೊರೆತನಲ್ಲವೇ ಮಾಡತಕ್ಕದ್ದು. ಮುಖ್ಯವಾಗಿ ನಮ್ಮ ಜನಗಳ ಕಷ್ಟವನ್ನು ಬಲ್ಲೆನಾದ್ದರಿಂದ ಅದರ ನಿವಾರಣೆಗಾಗಿ ಶಕ್ತಿವಂಚನೆಯಿಲ್ಲದೆ ಪ್ರಯತ್ನಪಡುತ್ತೇನೆ

ಹಿಂದೂ ಮುಸಲ್ಮಾನರ ಜಗಳ.

ಇಂಡಿಯಾದಲ್ಲಿ ಹಿಂದೂ ಮುಸಲ್ಮಾನರಿಗೆ ಆಗಾಗ್ಯೆ ನಡೆಯುತ್ತಿರುವ ಜಗಳವನ್ನು ಕುರಿತು ಇಂಗ್ಲೆಂಡಿನ "ಮ್ಯಾಂಚೆಸ್ಟರ್ ಗಾರ್ಡಿಯನ್" ಪತ್ರಿಕೆಯು ಬರೆದಿರುವದರ ಸಾರಾಂಶವೇನೆಂದರೆ —

ಕೋಮುವಾರು ಪ್ರತಿನಿಧಿತ್ವವನ್ನು ಹೋಗಲಾಡಿಸಿದರೆ ಕೋಮುವಾರು ವೈಮನಸ್ಯ ಕಡಿಮೆಯಾಗಬಹುದೆಂಬ ವಾದದಲ್ಲಿ ನ್ಯಾಯವಿದೆ. ಆದರೆ ಮಹಮ್ಮದೀಯರಿಗೇನೇ ಪ್ರತ್ಯೇಕ ಚುನಾವಣೆ ನಡಿಸಬೇಕೆಂಬ ಒತ್ತಾಯವನ್ನು ಅವರು ಇನ್ನೂ ಬಿಟ್ಟಿರುವಂತೆ ಕಾಣುವುದಿಲ್ಲ, ಮತ್ತು ಇಂಡಿಯಾದ ಹೊಸ ರಾಜ್ಯಾಂಗ ರಚನೆಯನ್ನು ಏರ್ಪಡಿಸುವಾಗ 67 ಮಿಲಿಯ ಮುಹಮ್ಮದೀಯರ ಮನಸ್ಸನ್ನು ಮೀರಿ ನಡೆಯಲಿಕ್ಕಾಗುವುದಿಲ್ಲ. ಆದರೆ ಇನ್ನು ಮೂರು ವರ್ಷಗಳಲ್ಲಿ ಕೋಮುವಾರು ಕದನಗಳು ಮಹಮ್ಮದೀಯರ ಮುಂದಾಳುಗಳಲ್ಲಿಯೂ ಸಾಮಾನ್ಯರಲ್ಲಿಯೂ ಮನಸ್ಸು ಬದಲಾವಣೆಯಾಗಬಹುದು. ಕೋಮುವಾರು ಪ್ರತಿನಿಧಿತ್ವವು ನ್ಯಾಯವಿಧಾಯಕ ಸಭೆಗಳಿಂದ ಈಗ ಸಿವಿಲ್ ಸರ್ವಿಸಿಗೂ ವ್ಯಾಪಿಸಿರುವ ವರ್ತಮಾನವು ಅಸಮಾಧಾನಕರವಾದುದರಿಂದ ಈ ವಿಷಯಕ್ಕೆ ರಾಯಲ್ ಕಮಿಷನಿನವರು ತುಂಬಾ ನಿಗ ಕೊಡಬೇಕಾಗಿದೆ. ಅದನ್ನು ಸಿವಿಲ್ ಸರ್ವಿಸ್ಸಿನಲ್ಲಿ ಒಪ್ಪಿಕೊಂಡರೆ ಸೈನ್ಯದಲ್ಲಿಯೂ ಒಪ್ಪಿಕೊಳ್ಳಬೇಕಾಗುವುದು. ಇಂಡಿಯಾಕ್ಕೆ ಸ್ವರಾಜ್ಯ ಸಿಕ್ಕಿದಾಗ ಸೈನ್ಯದಲ್ಲಿ ಕೋಮುವಾರು ತತ್ವವನ್ನು ಅವಲಂಬಿಸಿ ಉದ್ಯೋಗಸ್ಥರನ್ನು ನೇಮಿಸಿದರೆ ಅದು ಬೇಗನೆ ಹಿಂದೂ ಮುಸಲ್ಮಾನರ ಕದನಗಳಿಂದ ತೊಂದರೆಗೆ ಈಡಾಗಲಿಕ್ಕಿಲ್ಲವೇ? ಮುಸಲ್ಮಾನರು ಹಿಂದೂ ಜನರ ಕಡೆಗೆ ಈಗಿನಂತೆಯೇ ವರ್ತಿಸಿದರೆ ಚಳೋದಾದ ಸ್ಪಷ್ಟದಲ್ಲಿ ಮಾತ್ರವಲ್ಲದೆ ಕಾರ್ಯತಃ ಸ್ವರಾಜ್ಯ ಪಡೆಯಲು ಎಂದಿಗೂ ಸಾಧ್ಯವಿಲ್ಲವೆಂಬುದು ನಿಜವಾದ ಸಂಗತಿಯಾಗಿದೆ.

ಹಿಂದೂಸ್ಥಾನಿ ಸೇವಾದಳ.

ಪತ್ರಿಕ, ೪.

"ಇದುವರೆಗೆ ನಡೆದಿರುವ ಕೆಲಸ"

ಹಿಂದೂಸ್ಥಾನಿ ಸೇವಾದಳದ ಆರ್ಗನೈಜರರು ತಾವು ಮಾತು ಕೊಟ್ಟಂತೆ ಜೂನ್ 1 ನೆಯ ತಾರೀಕಿನಿಂದ ಕೆಲಸವನ್ನು ಆರಂಭಿಸಿದರು ಇದು ವರೆಗೆ ಎಂದರೆ ನಾಲ್ಕು ವಾರಗಳೊಳಗ (29 ನೆಯ ಜೂನ್ ವರೆಗೆ) 1703 ರಾಷ್ಟ್ರೀಯ ಮಹಾ ಸಭೆಯ ಸದಸ್ಯರನ್ನೂ 67 ಹಿಂದೂಸ್ಥಾನಿ ಸೇವಾದಳದ ಸದಸ್ಯರನ್ನೂ ಕೂಡಿಸಿರುವರು. ಇನ್ನು ಉಳಿದಿರುವ 12 ವಾರಗಳಲ್ಲಿ 8297 ರಾಷ್ಟ್ರೀಯ ಮಹಾಸಭೆಯ ಸದಸ್ಯರನ್ನೂ 433 ಹಿಂದೂಸ್ಥಾನಿ ಸೇವಾದಳದ ಸದಸ್ಯರನ್ನೂ ಸೇರಿಸಬೇಕಾಗಿದೆ ಕೆಲಸವು ತೃಪ್ತಿಕರವಾಗುವಷ್ಟು ಜೋರಾಗಿ ನಡೆದಿಲ್ಲ ಆದ್ದರಿಂದ ನಾನು ಕರ್ನಾಟಕದ ದೇಶಾಭಿಮಾನಿಗಳನ್ನು ನಮ್ಮ ಈ ಕಾರ್ಯದಲ್ಲಿ ಮುಂದೆ ಒಂದು ಸಹಾಯವನ್ನೂ ಮಾಡಬೇಕೆಂದು ಪ್ರಾರ್ಥಿಸುತ್ತೇನೆ ಕೊಡಗು ಮಂಗಳೂರು ಮತ್ತು ಕಾರವಾರ ಜಿಲ್ಲೆಗಳು ಹಿಂದೆ ಬಿದ್ದಿವೆ ಅಲ್ಲಿಯವರು ಈ ಸದಸ್ಯರನ್ನು ಕೂಡಿಸುವ ಕೆಲಸದಲ್ಲಿ ನಮಗೂ ಪ್ರಾಂತೀಕ ಕಾಂಗ್ರೆಸ್ ಕಮಿಟಿಗೂ ಸಹಾಯ ಮಾಡುವರೆ?

ನಾ ಸು ಹರ್ಡೀಕರ್,
ಜನರಲ್ ಸೆಕ್ರೆಟರಿ.

ವಿಚಿತ್ರ ವಿವಾಹ.

ಗ್ರೇಟ್ಯಾರ್ಮೌತಿನಲ್ಲಿ ಈ ವಿವಾಹವು ನಡೆಯತಕ್ಕದ್ದಾಗಿದೆ ವರನು ಆಕ್ಸ್ಫರ್ಡ್ಶಯರಿನವನು ಹೆಣ್ಣು ಹಾಲೆಂಡ್ ಪಾರ್ಟಿಜೆಂಡರ್ನಲ್ಲಿ ಹುಟ್ಟಿದ್ದು ಹೆಣ್ಣಿಗೆ ೩೦ ವರ್ಷ ಹೆಣ್ಣಿನ ಎತ್ತರ 7 ಅಡಿ 11 ಅಂಗುಲ, ತೂಕ 350 ಪೌಂಡು, ನೋಡುವದಕ್ಕೆ ಅಂದವಾಗಿದ್ದಾಳೆ, ಶರೀರವು ಕಂಚಿನಬಣ್ಣ, 8 10 ವರ್ಷದ ಹುಡುಗಿಯರ ಛಾಯೆ. ಈಕೆಯು 13 ವರ್ಷಗಳವರೆಗೆ ಬೆಳೆಯಲೇ ಇಲ್ಲ ಆ ಮೇಲೆ ಬೆಳೆಯುವದಕ್ಕೆ ಆರಂಭ. ಇನ್ನೂ ಬೆಳೆಯುತ್ತೇನೆಂದು ಹೇಳುತ್ತಿದ್ದಾಳೆ. ಕೋಟಿಗೆ 9 ಗಜ ಬಟ್ಟೆಯಾಗಬೇಕು. 13 ಅಂಗುಲ ಉದ್ದದ ಜೋಡಾಗಬೇಕು. ಯಾವ ಟೋಪಿಯೂ ಸಾಲದು. ಕಾಲುಚೀಲಗಳು 3 ವಾರಕ್ಕೇ ಚಿಕ್ಕದಾಗುತ್ತವೆ ಹಸಿವೂ ಹೆಚ್ಚು ದಿನಕ್ಕ 5 ಸಲ ಊಟಮಾಡಬೇಕಾಗಿದೆ.

ವರನೂ ಇವಳಿಗಿಂತಲೂ ಉದ್ದವಾಗಿದ್ದಾನೆ.

"ಸತ್ಯವಾದಿ."

"ಸಿಲ್ವರ್ ವೆಡ್ಡಿಂಗ್ ಫಂಡ್."

(ಕಮಿಷನರವರ ಪ್ರಕಟಣೆಯಿಂದ)

ಚಕ್ರವರ್ತಿಗಳವರ ಮದುವೆ ಆಗಿ 25ನೇ ವರ್ಷದ ಉತ್ಸವದ ದಿನ ಚಕ್ರವರ್ತಿನಿಯವರ ಮೇಲಿರುವ ಪ್ರೀತಿಯ ಮತ್ತು ರಾಜಭಕ್ತಿಯ ಸೂಚನೆಯಾಗಿ ಜನರು ಚಂದಾ ಕೊಟ್ಟದ್ದನ್ನು ಸೇರಿಸಿದ್ದೇ ಈ "ಸಿಲ್ವರ್ ವೆಡ್ಡಿಂಗ್ ಫಂಡ್." ಈ ಹಣವನ್ನು ಕಳೆದ ಘೋರಯುದ್ಧದಲ್ಲಿ ಮಿಲಿಟರಿ ಸರ್ವಿಸಿನ ಮೂಲಕ ಭಾಗಿಗಳಾಗಿದ್ದ ಅಥವಾ ಇನ್ನು ಮುಂದೆ ಯುದ್ಧಗಳಲ್ಲಿ ಭಾಗಿಗಳಾಗಬಹುದಾದ ಇಂಡಿಯನ್ ಆಫೀಸರುಗಳ ಮತ್ತು ಸಿಪಾಯಿಗಳ ಮಕ್ಕಳ ಮತ್ತು ಸಂಸಾರದ ವಿದ್ಯಾಭ್ಯಾಸಕ್ಕೂ ಸಹಾಯಕ್ಕೂ ಉಪಯೋಗಿಸಲಾಗುವುದು. ಮೇಲೆ ಹೇಳಿದವರಿಗೆ ಈ ಫಂಡಿನ ಅಧಿಕಾರಿಗಳು ಸರಿತೋರಿದಂತೆ ಈ ಮೂರು ಉದ್ದೇಶಗಳಿಗಾಗಿ ಹಣವನ್ನು ವಿನಿಯೋಗಿಸುವರು. (1) ಹೈಸ್ಕೂಲು ಕಾಲೇಜುಗಳಲ್ಲಿಯೂ, ಟೆಕ್ನಿಕಲ್ ಸ್ಕೂಲು ಕಾಲೇಜುಗಳಲ್ಲಿಯೂ, ಸ್ಪೆಶಲ್ ಮಿಲಿಟರಿ ಸ್ಕೂಲು ಕಾಲೇಜುಗಳಲ್ಲಿಯೂ ವಿದ್ಯಾಭ್ಯಾಸಮಾಡಲು ವೇತನ ಕೊಡಲಿಕ್ಕೆ, (2) ಈ ಫಂಡಿನಿಂದ ಸ್ಕಾಲರ್ಶಿಪ್ ಪಡೆದು

೧೦೦೦ ರೂಪಾಯಿಗಳ ಬಹುಮಾನ.

ಲೋಕಪ್ರಸಿದ್ಧವಾದ ಸಾಲಂಮಿಸ್ರಿ ಮುರಬ್ಬಾ.

ನಮ್ಮ ಟ್ರೇಡ್ ಮಾರ್ಕನ್ನು ನೋಡಿ ಈ ಔಷಧ ತೆಗೆದುಕೊಳ್ಳಿ

ಇದರ ಸೇವನೆಯಿಂದ ವೀರ್ಯವು ನೀರಿನಂತೆ ಇದ್ದರೂ, ಸ್ವಪ್ನೇಂದ್ರಿಯವಾದರೂ, ಸ್ತ್ರೀ ಸಂಘಕ್ಕೆ ಮೊದಲೇ ಸ್ಖಲನವಾದರೂ, ಮೂತ್ರದೊಂದಿಗೆ ಹೋಗುತ್ತಿದ್ದರೂ ದೋಷರಹಿತವಾಗಿ ಶರೀರಕ್ಕೆ ಆರೋಗ್ಯವನ್ನೂ ಧಾರ್ಢ್ಯತೆಯನ್ನೂ ಆಯುಸ್ಸು, ಬಲ, ತೇಜಸ್ಸು ಉಂಟು ಮಾಡುವದು. ಅಜೀರ್ಣ ಮಲಬದ್ಧತೆ, ಮೆದುಳಿನ ಬಲಹೀನತೆ, ಕೈಕಾಲು, ಸೊಂಟ ನೋವುಗಳಿಗೆ ಇದು ದಿವ್ಯ ಔಷಧವು. ಈ ಸಾಲಂಮಿಸ್ರಿ ಎಂಬುವದು ಕಾಬೂಲ್ ಕಂದಾಹಾರ ಪ್ರಾಂತ್ಯದಲ್ಲಿ ಬೆಳೆಯುತ್ತದೆ.

ಈ ಔಷಧದಿಂದ ಗುಣಹೊಂದಿರುವ ಅನೇಕ ಮಹನೀಯರು ತಾವಾಗಿಯೇ ಅನೇಕ ದೇಶಗಳಿಂದಲೂ ಆಫ್ರೀಕ, ಬರ್ಮಾ, ಪಿನಾಂಗ್, ಸಿಂಗಪೂರ್, ಸಿಲೋನ್, ಬೊಂಬಾಯಿ, ಕಲ್ಕತ್ತ, ಮದ್ರಾಸು ಮತ್ತು ಇಂಡಿಯಾದೇಶದಲ್ಲಿ ಎಲ್ಲಾ ಸ್ಥಳಗಳಿಂದಲೂ ನಮಗೆ ಯೋಗ್ಯತಾ ಪತ್ರಿಕೆಗಳನ್ನು ಕಳುಹಿಸಿರುವರು. ಇವುಗಳ ನಕಲನ್ನು ಯಾರಾದರೂ ತರಿಸಿ ನೋಡಬಹುದು ಇವುಗಳು ಸುಳ್ಳು ಎಂದು ನಿರ್ಧರಪಡಿಸುವವರಿಗೆ ಮೇಲೆ ಕಂಡ ಬಹುಮಾನವು ಕೊಡಲ್ಪಡುತ್ತೆ. ನಾವು ಹಾಗೆ ಕೊಡದೆ ನಿರಾಕರಿಸಿದಲ್ಲಿ ಕೋರ್ಟು ಮೂಲಕ ಅದನ್ನು ಪಡೆಯಬಹುದು. ೧ ಡಬ್ಬಿಯನ್ನು ೧೫ ದಿನ ಸೇವಿಸಿದಲ್ಲಿ ಗುಣವು ಖಾಡಿತವಾಗಿ ತೋರಬಹುದು ೩ ಯಾ ೪ ಡಬ್ಬಿಗಳು ಜನ್ಮಾಂತ್ಯದವರೆಗೂ ಪೂರ್ಣವಾಗಿ ಗುಣವನ್ನುಂಟು ಮಾಡುವವು ಹೆಸರು ವಿಳಾಸಗಳನ್ನು ವಿವರವಾಗಿ ಬರೆಯಬೇಕು. ಒಂದಾವರ್ತಿ ಆಜಮಾಯಿಸಿ ಮಾಡಿ ನೋಡಿದಲ್ಲಿ ಖಾತ್ರಿ ಉಂಟಾಗುತ್ತೆ.

ಕ್ರಯ ಡಬ್ಬಿ ೧ಕ್ಕೆ ರೂ. ೨—೦—೦ ಅಂಚೆ ಚಾರ್ಜು ೧ರಿಂದ ೩ ಡಬ್ಬಿಗಳಿಗೆ ೦—೬—೦ ಆಣೆ ಏಜಂಟರುಗಳು ಎಲ್ಲಾ ಸ್ಥಳಗಳಲ್ಲಿಯೂ ಆವಶ್ಯಕವಾಗಿರುತ್ತೆ ರೂಲ್ಸ್ ತರಿಸಿಕೊಳ್ಳಬಹುದು ಆರ್ಡರು ಕೊಡತಕ್ಕ ಕಾಲದಲ್ಲಿ ಈ ಪತ್ರಿಕೆಯ ಹೆಸರನ್ನು ಬರೆಯಬೇಕು.

ಟೆಲಿಗ್ರಾಫ್ ಅಡ್ರೆಸ್,
ಮಿಸ್ರಿ, ಬೆಂಗಳೂರು ಸಿಟಿ,

ಡಿ. ಮಸ್ತಾಲ್ ಖಾನ್, ಡಿಲ್ಲಿ ಹೇಕಿಮ್ ವೈದ್ಯರು,
ಸಾಲಂಮಿಸ್ರಿ ಮುರಬ್ಬ ಡಿಪೋ,
ಬೆಂಗಳೂರು ಸಿಟಿ.

12—

ಓದಿದವರಿಗೆ ಜೀವನ ಪ್ರಾರಂಭಿಸಲು ಸಹಾಯಕೊಡಲಿಕ್ಕೆ. (3) ಪೆನ್ಶನ್ ಸಿಕ್ಕದೆ ಇರುವ ಅಥವಾ ನಾಕಷ್ಟುಪೆನ್ಶನ್ ಸಿಕ್ಕದೆ ಇರುವ ಇಂಡಿಯನ್ ಆಫೀಸರುಗಳ ವಿಧವೆಯರಿಗೆ ಸಹಾಯ ಕೊಡಲಿಕ್ಕೆ.

ಮೇಲೆ ಸೂಚಿಸಿರುವ (1) ಮತ್ತು (2)ನೇ ಉದ್ದೇಶಗಳಿಗಾಗಿ ಸಹಾಯಬೇಕಾದವರು ಆಯಾಯ ಪ್ರಾಂತ್ಯದ "ಪಬ್ಲಿಕ್ ಇನ್‌ಸ್ಟ್ರಕ್ಷನ್"ನ ಡೈರೆಕ್ಟರವರ ಮೂಲಕವೂ (3)ನೇ ಉದ್ದೇಶಕ್ಕೆ ಸಿಮ್ಲಾದಲ್ಲಿರುವ ಇಂಡಿಯನ್ ಸೋಲ್ಜರ್ಸ್ ಬೋರ್ಡಿಗೂ ಅಪ್ಲಿಕೇಶನ್ ಕಳುಹಿಸತಕ್ಕದ್ದು.

ಹೆಚ್ಚಿನ ವಿಷಯಗಳಿಗೆ ಸಿಮ್ಲಾದಲ್ಲಿರುವ (ಚಳಿಗಾಲದಲ್ಲಿ ಡೆಲ್ಲಿಯಲ್ಲಿ) "ಸಿಲ್ವರ್ ವೆಡ್ಡಿಂಗ್ ಫಂಡಿನ" ಗೌರವ ಕಾರ್ಯದರ್ಶಿಯವರಿಗೆ ಬರೆಯತಕ್ಕದ್ದು.

ವರ್ತಮಾನ ಸಂಗ್ರಹ.

ಒಳದೇಶ

ರಿಟೆಯರ್ಡ್ ದರೋಗರಾದ ಮ. ನಡಿಕೇರಿಯಂಡ ಉತ್ತೈಯ್ಯನವರು ತಾ. 16ರಲ್ಲಿ ಮೃತರಾದರೆಂದು ತಿಳಿಯುತ್ತೇವೆ.

ಈ ವಾರವೂ ದೇಶದಲ್ಲಿ ಮಳೆಯು ಬಹಳ ಕಡಿಮೆಯಾಗಿ ವ್ಯವಸಾಯ ಕೆಲಸಕ್ಕೆ ಅನಾನುಕೂಲವಾಗಿತ್ತು. ಆದರೆ ನಿನ್ನೆಯಿಂದ ಪುನಹ ಮಳೆಯು ಪ್ರಾರಂಭಿಸಿದಂತೆ ತೋರುತ್ತದೆ.

ಮ॰ ಕಂಡ್ರತಂಡ ಪೊನ್ನಪ್ಪನವರು ಇಂಗ್ಲಿಷ್ ಆಫೀಸಿನ 2ನೇ ಕ್ಲಾರ್ಕರಾಗಿಯೂ, ಮ. ಒಲ್ಲಚಂಡ ಅಪ್ಪೈಯ್ಯನವರು ಡಿಸ್ಟ್ರಿಕ್ಟ್‌ಬೋರ್ಡ್ ಹೆಡ್ಡ್‌ಕ್ಲಾರ್ಕರಾಗಿಯೂ ನೇಮಿಸಲ್ಪಟ್ಟಿರುವರು.

ಮ॰ ಕೆ॰ ಪಿ. ಚಿಣ್ಣಪ್ಪನವರು "ಲೋಕಪಾವನ"ದ ಸಂಪಾದಕ ಮತ್ತು ಪಬ್ಲಿಷರಾದ ಮ. ಬಿ. ಬೆಳ್ಯಪ್ಪನವರ ಮೇಲೆ ಕೊಟ್ಟಿದ್ದ ಮಾನನಷ್ಟದ ಮೊಕದ್ದಮ್ಮೆಯನ್ನು ಸಬ್‌ಜಡ್ಜಿಯವರು ವಿಚಾರಿಸಿ ಮ. ಬಿ. ಬೆಳ್ಯಪ್ಪನವರನ್ನು ತಾ. 17ರಲ್ಲಿ ಚಾರ್ಜುಮಾಡಿರುವರು. ಖಟ್ಲೆಯು ಸಾಕ್ಷಿವಿಚಾರಕ್ಕೆ ಈ ತಾ. 31ಕ್ಕೆ ಇಟ್ಟಿರುವರು.

ವೀರರಾಜಪೇಟೆಯಲ್ಲಿರುವ "ಎಗ್ರಿಕಲ್ಚರಲ್ ಫಾರಮು"ನ್ನು ಇಡಬೇಕೋ ಬೇಡವೋ ಎಂಬುದನ್ನು ವಿಚಾರಿಸಲು ಸರಕಾರದವರು ನೇಮಿಸಿದ್ದ ಎಗ್ರಿಕಲ್ಚರಲ್ ಕಮಿಟಿಯ ಮೀಟಿಂಗು ತಾ. 17ರಲ್ಲಿ ಮಡಿಕೇರಿಯಲ್ಲಿ ನಡೆಯಿತು. ಕೊಡಗಿನಲ್ಲಿ ವ್ಯವಸಾಯ ಪರಿಶೋಧನೆ ವಿಷಯ ದೇಶದ ಕೆಲವು ಮಹನೀಯರ ಅಭಿಪ್ರಾಯವನ್ನು ತೆಗೆದುಕೊಳ್ಳುವ ಬಗ್ಗೆ ಈ ಕಮಿಟಿಯು ದೇಶದ ನಾಲ್ಕೈದು ಮುಖ್ಯ ಸ್ಥಳಗಳಲ್ಲಿ ಸೇರುವಂತೆ ತೀರ್ಮಾನಿಸಿದರೆಂದು ತಿಳಿಯಬರುತ್ತದೆ.

ಮೆಟ್ರಿಕ್ಯುಲೇಶನ್ ಅಥವಾ ಸ್ಕೂಲ್‌ಫೈನಲ್ ಪರೀಕ್ಷೆಯಲ್ಲಿ ಪಾಸಾಗಿ ಆಗೋಸ್ತು 1ರಲ್ಲಿ 18ರಿಂದ 23 ವರ್ಷ ಪ್ರಾಯದೊಳಗಿರುವ ಉಮೇದುವಾರರು ಬೊಂಬಾಯಿ ಪ್ರಾಂತ್ಯದಲ್ಲಿ ಫಾರೆಸ್ಟ್ ರೇಂಜರ್ ಕೆಲಸಕ್ಕೆಕೊಡಲುಮತ್ತು ಫಾರೆಸ್ಟ್ ಕಾಲೇಜಿನಲ್ಲಿ ತರಬೇತು ಹೊಂದಲು ಬೇಕಾಗಿದ್ದಾರೆಂದೂ, ಕೆಲವು ಸರ್ಟಿಫಿಕೇಟುಗಳೊಂದಿಗೆ ಅಪ್ಲಿಕೇಶನು (ತಯಾರಾದ ಫಾರಂ ಇಲ್ಲ) ಬೊಂಬಾಯಿ ಪ್ರಾಂತ್ಯದ ಫಾರೆಸ್ಟುಗಳ ಚೀಫ್ ಕನ್‌ಸರ್ವೇಟರವರಿಗೆ ಸೆಪ್ಟೆಂಬರ್ 1 ರೊಳಗೆ ತಲಪಬೇಕೆಂತಲೂ ತಸ್ಸೀಲು ರೂಲ್ಸುಗಳಿಗೆ ಜುಲೈ 15ರ (ಅಥವಾ ನಂತರದ ವಾರಗಳ) ಬೊಂಬಾಯಿ ಸರಕಾರದ ಗಜೆಟ್ಟಿನ 1 ನೇ ಭಾಗವನ್ನು ನೋಡಬೇಕೆಂತಲೂ ಪ್ರಕಟವಾಗಿದೆ.

1927ನೇ ಫೆಬ್ರವರಿಯಲ್ಲಿ ಡೇಂಡ್ರನ್ಸ್ ರಾಯಲ್ ಮಿಲಿಟರಿ ಕಾಲೇಜಿಗೆ ಸೇರಬೇಕೆನ್ನುವವರಿಗೆ ಪ್ರವೇಶ ಪರೀಕ್ಷೆಯು ಸಿಮ್ಲಾದಲ್ಲಿ 1926ನೇ ಸಪ್ಟಂಬರ್ 20ರಲ್ಲಿ ಪ್ರಾರಂಭವಾಗುವದು. ಉಮೇದುವಾರರು 1927ನೇ ಜನವರಿ 1ರಲ್ಲಿ 18ರಿಂದ 20 ವರ್ಷಪ್ರಾಯದೊಳಗಿರಬೇಕು. ಈ ಪರೀಕ್ಷೆಗೆ ಹೋಗಲಪೇಕ್ಷಿಸುವವರು ಈ ತಾ 30ರಲ್ಲಿ ಬೆಳಿಗ್ಗೆ 11 ಗಂಟೆಗೆ ಕಮೀಷನರವರನ್ನು ಮಡಿಕೇರಿಯಲ್ಲಿ ಕಾಣಬೇಕಾಗಿ ಕೋರಲಾಗಿದೆ. ಇಂಡಿಯನ್ನು ಡೇಂಡ್ರನ್ಸ್ ಕಾಲೇಜಿಗೆ ಸೇರಲು 1925ರಲ್ಲಿ ಮಾಡಿದ ತಾತ್ಕಾಲಿಕ ರೂಲ್ಸುಗಳ ಪ್ರತಿಯೂ 1925ನೇ ಸಪ್ಟಂಬರನಲ್ಲಿ ನಡೆದ ಪ್ರವೇಶ ಪರೀಕ್ಷೆಯ ಮೇಲಿನ ರಿಪೋರ್ಟಿನ ಪ್ರತಿಯೂ ಒಂದು ಪ್ರತಿಗೆ ಎಂಟಾಣೆ ಕ್ರಯದಲ್ಲಿ ಮೇನೇಜರ್, ಗವರ್ನ್‌ಮೆಂಟ್ ಆಫ್ ಇಂಡಿಯಾ ಸೆಂಟ್ರಲ್ ಪಬ್ಲಿಕೇಶನ್ ಬ್ರಾಂಚ್, 8 ಹೇಸ್ಟಿಂಗ್ಸ್ ಸ್ಟ್ರೀಟ್, ಕಲ್ಕತದಿಂದ ದೊರೆಯವುದು. ಹೆಚ್ಚಿನ ಸೂಚನೆಯು ಕಮೀಷನರವರ ಆಫೀಸಿನಿಂದ ದೊರೆಯಲ್ಪಡುವುದು.

ಹಿಂದೂದೇಶ.

'ಸರ್ವೆಂಟ್ ಆಫ್ ಇಂಡಿಯಾ' ಸೊಸೈಟಿಯ ಚಿಂತಿಪರಿಹಾರಕ ಫಂಡಿಗೆ ತಿರುವಾಂಕೂರಿನ ಮಹಾರಾಣಿ ರೀಜೆಂಟರವರು ಒಂದು ಸಾವಿರ ರೂಪಾಯಿ ಕೊಟ್ಟಿರುವರು.

ಕಲ್ಕತ್ತಾ ಮುನ್ಸಿಪಾಲಿಟಿಯು ಮಹ್ಮದೀಯ ಮೆಂಬರುಗಳು ತಮ್ಮ ರಾಜಿನಾಮೆಯನ್ನು ಪುನರಾಲೋಚನೆ ಮಾಡಲು ಒಂದುವಾರ ಸಮಯ ಕೇಳಿಕೊಂಡಿರುವರು.

ಮದ್ರಾಸು ಲೆಜಿಸ್ಲೇಟಿವ್ ಕೌನ್ಸಿಲಿನವರು ಮ. ಹಾತ್ಮಗಾಂಧಿಯವರ ಆಯಿಲ್ ಪೈಂಟಿಂಗ್ ಫೋಟೋವನ್ನು ತಮ್ಮ ಕೌನ್ಸಿಲ್ ಹಾಲಿನಲ್ಲಿ ಇಡುವಂತೆ ತೀರ್ಮಾನಿಸಿರುವರು.

ಈ ವರ್ಷ ಪಂಜಾಬು ಯುನಿವರ್ಸಿಟಿಯ ಪರೀಕ್ಷೆಯಲ್ಲಿ ನಲ್ವತ್ತೊಂದು ಸ್ತ್ರೀಯರು ಬಿ. ಎ. ಡಿಗ್ರಿಪಡೆದಿರುವರು. ಇಷ್ಟು ಮಂದಿ ಮಹಿಳೆಯರು ಒಂದೇ ವರ್ಷ ಡಿಗ್ರಿಪಡೆದದ್ದು ಅಲ್ಲಿ ಇದೇ ಮೊದಲಂತೆ.

ಎಲ್ಲಾ ಪ್ರಾಂತ್ಯಗಳ ಅಬ್ಕಾರಿ ಇಲಾಖೆಯ ಮಂತ್ರಿಗಳ ಮೀಟಿಂಗೊಂದನ್ನು ಈ ಇಲಾಖೆಯ ಧ್ಯೇಯಗಳನ್ನು ಚರ್ಚಿಸಲಿಕ್ಕಾಗಿ ಸೆಪ್ಟೆಂಬರ್ ಆಖೈರು ವಾರದಲ್ಲಿ ನಡಿಸುವಂತೆ ಇಂಡಿಯಾ ಸರ್ಕಾರದವರು ತೀರ್ಮಾನಿಸಿರುವರು.

ಹಿಂದೂದೇಶದಲ್ಲಿ ದನಗಳ ಸಂಖ್ಯೆ ಕಡಿಮೆಯಾಗುತ್ತಾ ಬರುತ್ತಿದೆ. 25 ವರ್ಷಗಳ ಹಿಂದೆ 20 ಕೋಟಿ ದನಗಳಿದ್ದವು. ಈಗ 9 ಕೋಟಿ ಮಾತ್ರ ಇವೆ. ಈ ಮೇರೆ ನಾಶವಾಗುತ್ತಾ ಬಂದರೆ ಇನ್ನು 25 ವರ್ಷಗಳಲ್ಲಿ ಇಲ್ಲಿ ದನಗಳೇ ಇಲ್ಲವಾಗುವವು.

ಬೆಂಗಳೂರಿನಲ್ಲಿ ಇಂಜಿನೀಯರಿಂಗ್ ಕಾಲೇಜಿನಲ್ಲಿ ಸ್ಥಳ ದೊರೆಯದ ಕಾರಣ ಒಬ್ಬ ವಿದ್ಯಾರ್ಥಿಯು ಆತ್ಮಹತ್ಯಮಾಡಿಕೊಳ್ಳಲಿಕ್ಕಾಗಿ ಒಂದು ಚೂರಿಯಿಂದ ತನ್ನ ಎದೆಯನ್ನು ತಿವಿದುಕೊಳ್ಳಲು ಪ್ರಿನ್ಸಿಪಾಲರು ಕಂಡು ಅವನನ್ನು ಆಸ್ಪತ್ರೆಗೆ ಸಾಗಿಸಿದರು.

ಕಲ್ಕತ್ತೆಯ "ಫಾರ್‌ವರ್ಡ್" ಪತ್ರಿಕೆಯಲ್ಲಿ "ಪಾಬ್ನಾದಲ್ಲಿ ಅನ್ಯಾಯಕತ್ತ" ವೆಂಬ ಲೇಖನವನ್ನು ಪ್ರಕಟಿಸಿದಕ್ಕೆ ಅದರ ಸಂಪಾದಕರು ಮತ್ತು ಪ್ರಿಂಟರವರ ಮೇಲೆ ರಾಜದ್ರೋಹಕ್ಕಾಗಿ ಕೇಸು ನಡಿಸುತ್ತಿದ್ದಾರೆ. ಅವರಿಬ್ಬರನ್ನು ದಸ್ತಗಿರಿ ಮಾಡಿ ಜಾಮೀನು ಮೇಲೆ ಬಿಟ್ಟಿದ್ದಾರೆ.

ತಾ. 17ರ ರಾತ್ರಿ ಸಿಮ್ಲಾದಲ್ಲಿ 'ಚೇಂಸ್ಟ್‌ಫರ್ಡ್ ಕ್ಲಬ್ಬಿ'ನವರು ಕೊಟ್ಟ ಔತಣದಲ್ಲಿ ವೈಸರಾಯರಾದ ಲಾರ್ಡ್ ಇರ್ವಿನಾರವರು ಹಿಂದೂದೇಶದಲ್ಲಿ ಹಿಂದೂಮುಸಲ್ಮಾನರಿಗೆ ಉಂಟಾಗುವ ಜಗಳಕ್ಕೆ ವ್ಯಸನವನ್ನು ಸೂಚಿಸಿ, ಎಲ್ಲಾ ಮತದವರೂ ಮೈತ್ರೀಭಾವದಲ್ಲಿ ಜೀವಿಸುವಂತೆ ಕೋರಿಕೊಂಡರು.

ಬರುವ ಕಾಂಗ್ರೆಸ್ಸಿನ ಅಧ್ಯಕ್ಷ ಪದವಿಗೆ ಈ ವರೆಗೆ ಸೂಚನೆಗಳನ್ನು ಕಳುಹಿಸಿರುವ ಎಂಟು ಪ್ರಾಂತೀಯ ಕಾಂಗ್ರೆಸ್ ಕಮಿಟಿಗಳಲ್ಲಿ ನಾಲ್ಕು ಮ ಯಸ್. ಶ್ರೀನಿವಾಸ ಅಯ್ಯಂಗಾರ್‌ರವರನ್ನೂ, ಮೂರು ಡಾಕ್ಟರ್ ಯಂ. ಎ. ಅನ್ಸಾರಿ ಮತ್ತು ಪಂಡಿತ ಮೋತಿಲಾಲ್ ನೆಹರೂರವರ ಹೆಸರುಗಳನ್ನೂ ಸೂಚಿಸಿರುವವು.

ಪಾಲಿಟಾನ ದರ್ಬಾರಿನ ಬ್ರಿಟಿಷ್ ಏಜೆಂಟರವರು ಶತ್ರುಂಜಯ ಬೆಟ್ಟದ ವಿಷಯ ದರ್ಬಾರಿಗೂ ಜೈನರಿಗೂ ಇದ್ದ ವ್ಯವಹಾರದಲ್ಲಿ ದರ್ಬಾರಿಗೆ ಪರವಾಗಿ ತೀರ್ಮಾನಿಸಿದ್ದಕ್ಕೆ ಜೈನರು ಬೊಂಬಾಯಿಯಲ್ಲಿ ಒಂದು ದೊಡ್ಡ ಮೀಟಿಂಗು ಮಾಡಿ ಆ ತೀರ್ಮಾನವನ್ನು ವಿರೋಧಿಸಿ ಕಪ್ಪು ಬಾವುಟಗಳೊಡನೆ ಮೆರವಣಿಗೆ ಮಾಡಿದರು.

ಮೈಸೂರು ಸರ್ಕಾರದವರು ಕಾಫೀ ಏಮೆನುಗಳಿಗೆ ಹಾಲಿ ಇರುವ 1—0—0 ರೂಪಾಯಿ ಕಂದಾಯವನ್ನು 1—4—0ಗೆ ಹೆಚ್ಚಿಸಲು ಏರ್ಪಡಿಸಿರುವದರಿಂದ ಇದರಿಂದ ಜನರಿಗೆ ಹೆಚ್ಚು ತೊಂದರೆ ಮತ್ತು ನಷ್ಟವಾಗುವ ಕಾರಣ ಸರಕಾರಕ್ಕೆ ತಕ್ಕ ರೀತಿ ಮನವಿ ಮಾಡಿಕೊಳ್ಳಲಿಕ್ಕಾಗಿ ತಾ. 31ರಲ್ಲಿ ಚಿಕ್ಕಮಗಳೂರಿನಲ್ಲಿ ಪ್ಲಾಂಟರುಗಳ ಮೀಟಿಂಗೊಂದು ನಡೆಯುವುದು.

ಕಲ್ಕತ್ತದ ಬಳಿ ಇರುವ ಪೈಕಪ್ಪಾರದಲ್ಲಿ ರಥೋತ್ಸವ ಸಮಯದಲ್ಲಿ ಮೆರವಣಿಗೆ ಹೋಗುತ್ತಿರುವಾಗ ಮುಸಲ್ಮಾನರು ಹಿಂದೂಗಳ ಮೇಲೆ ಬಿದ್ದು ಕದನಮಾಡಿದಾಗ್ಯೆ ಪೋಲೀಸಿನವರು ಗುಂಡುಹಾರಿಸಿ ಮುಸಲ್ಮಾನರನ್ನು ತಡೆಗಟ್ಟಿದರು. ಒಂದೆರಡು ಮರಣಗಳೂ ಕೆಲವರಿಗ ಘಾಯವೂ ಉಂಟಾಗಿದೆ. ಹದಿನೈದು ದಿವಸಗಳಲ್ಲಿ ಅಲ್ಲಿ ಇದು ಎರಡನೇ ಸಾರಿಯ ಜಗಳವಾಗಿದೆ.

ತಾ. 6 ರಲ್ಲಿ ಮೃತರಾದ ಬೊಂಬಾಯಿಯ ದೊಡ್ಡ ವ್ಯಾಪಾರಸ್ಥರಾದ ಮ. ಉಮ್ಮರ್ ಸೊಬ್ಬಾನಿಯವರು ರಾಜಕೀಯ ಚಳವಳದಲ್ಲಿ ತುಂಬಾ ಹಿತವುಳ್ಳವರಾಗಿದ್ದು ಸಾರ್ವಜನಿಕ ಕೆಲಸಗಳಿಗೆ ಬಹಳ ಹಣ ಸಹಾಯ ಮಾಡಿದವರಾದ ಕಾರಣ ಅವರ ಸ್ಮಾರಕವಾಗಿ ತಾ. 20ರಲ್ಲಿ ಬೊಂಬಾಯಿಯಲ್ಲಿ ಮ. ವಿ. ಜೆ. ಪಾಟೇಲರವರ ಅಧ್ಯಕ್ಷತೆಯಲ್ಲಿ ಒಂದು ಪಬ್ಲಿಕ್ ಮೀಟಿಂಗ್ ಮಾಡಿ ಹಲವು ಮುಂದಾಳುಗಳು ಅವರ ಕೆಲಸವನ್ನು ಹೊಗಳಿ ಮಾತಾಡಿದರು.

ವಿದೇಶ.

ತುರ್ಕಿಯ ಪ್ರಸಿಡೆಂಟರಾದ ಕೆಮಾಲ್ ಪಾಷರವರನ್ನು ಕೊಲ್ಲಬೇಕೆಂದು ಸ್ಮಿರ್ನಾದಲ್ಲಿ ಒಳಸಂಚು ನಡಿಸಿದವರನ್ನು ವಿಚಾರಿಸಿ 15 ಜನರನ್ನು ಗಲ್ಲಕ್ಕೆ ಹಾಕಿಸಿದರು.

ಬ್ರಿಟನ್ನಿನಲ್ಲಿ ನಡೆದ ಮೋಟಾರು ಓಟದಲ್ಲಿ ಮೊದಲನೇ ಬಹುಮಾನವನ್ನು ಪಡೆದ ಪ್ಯಾರಿಥಾಮಸ್ ಎಂಬವನು ತನ್ನ ಮೋಟಾರನ್ನು ಗಂಟೆಗೆ 175 ಮೈಲಿ ವೇಗದಲ್ಲಿ ಓಡಿಸಿದನು.

ಲಂಡನ್ನಿನ ಲಾ ಕಾಲೇಜಿನಲ್ಲಿ ಓದುತ್ತಿದ್ದ ಮ. ಸಗರ್ ಚಂದಾರನ್‌ರವರು ತನ್ನ ಮೋಟಾರು ಬೈಸಿಕಲ್ಲಿನಲ್ಲಿ ಹೋಗುತ್ತಿರುವಾಗ ಮೋಟಾರು ಕಾರಿಗೆ ಢಿಕ್ಕಬಡೆದು ಅವರು ಮೃತರಾದರು.

ಪರ್ಷಿಯಾದ ಮಾಜಿ ಪ್ರಧಾನ ಮಂತ್ರಿಯಾದ ಮತ್ತು ಅಲ್ಲಿಯ ದೊಡ್ಡ ಐಶ್ವರ್ಯವಂತ ಭೂಮಾಲೀಕರ ವ್ಯಕ್ತಿ ಒಬ್ಬರಾದ ಸಿಪಸಲಾರ್‌ರವರು ಕಂದಾಯದ ಬಾಕಿಯನ್ನು ಕೊಡಲಾರದ್ದರಿಂದ ಆತ್ಮಹತ್ಯ ಮಾಡಿಕೊಂಡರಂತೆ!

ರೋಮನ್ ಕೆಥೋಲಿಕ್ ಕ್ರೈಸ್ತರ ಜಗದ್ಗುರುಗಳಾದ ಪೋಪರವರ ಅರಮನೆಯಾದ ವಾಟಿಕನ್‌ನಲ್ಲಿ ತೋಟಗಾರರು ಹೆಚ್ಚಿನ ಸಂಬಳ ಕೊಡಬೇಕೆಂದು ಮುಷ್ಕರ ಹಿಡಿದಿರುವರು. ಇಲ್ಲಿ ಮುಷ್ಕರ ಹಿಡಿದದ್ದು ಇದೇ ಪ್ರಥಮವಾಗಿದೆ.

ಇಬ್ಬರು ಅಮೇರಿಕನರು ಭೂಗೋಳದ ಸುತ್ತು 28 ದಿವಸ 14½ ಗಂಟೆಗಳಲ್ಲಿ ಸುತ್ತಿಕೊಂಡು ಹೋದರು. ಇಷ್ಟು ಸ್ವಲ್ಪ ಕಾಲದಲ್ಲಿ ಭೂಗೋಳವನ್ನು ಸುತ್ತಿದ್ದು ಇದೇ ಪ್ರಥಮ. ಇದಕ್ಕಿಂತ ಮುಂಚೆ 35 ದಿವಸಗಳಲ್ಲಿ ಒಬ್ಬರು ಸುತ್ತಿದ್ದರು.

ಗ್ರೀಸಿನಲ್ಲಿ ಈಗಿರುವ ಸರ್ಕಾರವನ್ನು ಮುರಿದು ಹಾಕಿ ಅದರ ಅಧ್ಯಕ್ಷನನ್ನು ಕೊಲೆ ಮಾಡಲು ಒಳಸಂಚು ನಡಿಸುತ್ತಿದ್ದರೆಂಬ ಕಾರಣದಿಂದ ಅಲ್ಲಿಯ ಕೆಲವು "ಡೆಮೊಕ್ರೆಟಿಕ್" ಮುಂದಾಳುಗಳನ್ನು ಸೆರೆಹಿಡಿದು ನಾಕ್ಸೋಸ್ ದ್ವೀಪಕ್ಕೆ ಗಡೀಪಾರು ಮಾಡಿರುವರು.

ಸ್ವಿಟ್ಜರ್ಲೆಂಡ್ ದೇಶದ ಬಾಲಕಿಯೊಬ್ಬಳು ತನ್ನ 7ನೇ ವಯಸ್ಸಿನಲ್ಲಿ ಮೆಟ್ರಿಕ್ಯುಲೇಶನ್ ಪರೀಕ್ಷೆಯಲ್ಲಿಯೂ, 11ನೇ ವಯಸ್ಸಿನಲ್ಲಿ ಬಿ ಎ. ಪರೀಕ್ಷೆಯಲ್ಲಿ ತೇರ್ಗಡೆಹೊಂದಿರುವಳು. ಇದಕ್ಕೆ ಸಂತೋಷಪಟ್ಟು ಅಲ್ಲಿಯ ರಾಣಿಯವರು ಆಕೆಗೆ ತುಂಬಾ ಬಹುಮಾನವನ್ನು ಕೊಟ್ಟಿರುತ್ತಾರೆ

ಫ್ರಾನ್ಸಿನ ಪಾರ್ಲಿಮೆಂಟಿನಲ್ಲಿ ಅಲ್ಲಿಯ ಮುಖ್ಯ ಮಂತ್ರಿಯಾದ ಯಂ. ಬ್ರಿಯಾಂಡ್‌ರವರ ಮೇಲೆ ವಿಶ್ವಾಸವಿಲ್ಲವೆಂಬ ಠರಾವನ್ನು ಪಾಸುಮಾಡಿದ್ದರಿಂದ ಅವರು ತನ್ನ ಪದವಿಗೆ ರಾಜಿನಾಮೆ ಕೊಟ್ಟಿರುವರು. ಪಾರ್ಲಿಮೆಂಟಿನ ಅಧ್ಯಕ್ಷರಾಗಿರುವ ಯಂ. ಹೆರ್ರಿಯಟ್‌ರವರು ಮಂತ್ರಿಮಂಡಲಿಯನ್ನು ಏರ್ಪಡಿಸಲು ಒಪ್ಪಿರುವರು.

ಈಜಿಪ್ಟಿನಲ್ಲಿ ರೈತರಿಗೆ ಬ್ಯಾಂಕುಗಳ ಮೂಲಕ ಹಣಸಾಲ ಕೊಡಲಿಕ್ಕೂ ಉತ್ತಮವಾದ ಹತ್ತಿಬೀಜಗಳನ್ನು ಒದಗಿಸಿಕೊಟ್ಟು ಒಳ್ಳೆಯ ಹತ್ತಿಯನ್ನು ಬೆಳಸಲಿಕ್ಕೂ ಮತ್ತು ನೂತನ ಯಂತ್ರದ ಮೂಲಕ ಉಳಲು ಉತ್ತೇಜನ ಕೊಡಲಿಕ್ಕೂ ಒಂದು ಮಿಲಿಯ ಪೌಂಡು ಭಂಡವಾಳದ ಒಂದು ಸಹಕಾರಿ ಸಂಘವನ್ನು ಏರ್ಪಡಿಸಲು ಅಲ್ಲಿಯ ಸರ್ಕಾರವು ಯೋಚಿಸುತ್ತಿದೆ. ಈ ಸೊಸೈಟಿಯ ರಚನೆಯನ್ನು ತಯಾರಿಸಲು ಆರು ಮೆಂಬರುಗಳ ಒಂದು ಕಮಿಟಿಯು ಏರ್ಪಡಿಸಲಾಗಿದೆ. ಪರದೇಶಗಳಿಂದ ಆಹಾರ ಸಾಮಗ್ರಿಗಳನ್ನೂ ಬೇರೆ ಅವಶ್ಯಕತೆಗಳನ್ನೂ ಕೊಂಡುಕೊಳ್ಳಲು ಇನ್ನೊಂದು ಸಹಕಾರಿ ಸಂಘವನ್ನು ಸ್ಥಾಪಿಸುವ ಸಂಭವವಿದೆ.

ಪತ್ರವ್ಯವಹಾರ

[ಬಾತ್ಮಿದಾರರು ಕೊಡುವ ಅಭಿಪ್ರಾಯಗಳಿಗೆ ಪತ್ರಿಕಾಕರ್ತರು ಜವಾಬ್ದಾರರಲ್ಲ. ಸಂ.]

ಶ್ರೀ ಸಿದ್ಧಾರೂಢ ಸ್ವಾಮಿಗಳ ಮಹತ್ವ.

ನಾನು ಈ ಮಹಾಸ್ವಾಮಿಗಳ ಮಾಯದ ಅದ್ಭುತ ಚರಿತೆ ಜನರಿಂದ ಸ್ವಲ್ಪ ಸ್ವಲ್ಪ ಕೇಳಿದ್ದೆ. ನನ್ನ ಪ್ರಿಯ ಪತಿಯು ಹುಬ್ಬಳ್ಳಿಯಲ್ಲಿ ರೈಲ್ವೆಯಲ್ಲಿ ತಮ್ಮ ಸರಕಾರಿ ಉದ್ಯೋಗ ಮಾಡುತ್ತಿದ್ದರೂ ನನಗೆ ಈ ಸ್ವಾಮಿಗಳ ದರ್ಶನಕ್ಕೆ ಹೋಗಲು ನನಗೆ ಅನುಕೂಲವಾಗಲೀ ಅಥವಾ ಬುದ್ಧಿಯಾಗಲೀ ಸಿಗಲಿಲ್ಲ. ಈಚೆಗೆ ಸ್ವಾಮಿಗಳ ಮಹತ್ವದ ವಿಷಯ ಹೆಚ್ಚೆಚ್ಚು ತಿಳಿಯುತ್ತಾ ಬಂತು. ಹೋದವರ್ಷ ಹುಬ್ಬಳ್ಳಿಗೆ ಮುಂಡುಗೋಡದಿಂದ ವಸ ಬದಲಾಯಿಸುವ ಬಗ್ಗೆ ಹೋಗಿದ್ದು ಸದರಿ ಸ್ವಾಮಿಗಳ ಮಠಕ್ಕೆ ಸಹಜವಾಗಿ ಹೋಗಿದ್ದೆವು. ಅವರ ದರ್ಶನವಾಯಿತು. ಮಠದಲ್ಲಿ ನಡೆಯುವ ಆನಂದದ ಕೆಲಸಕ್ಕೆ ಎಳತೆ ಇಲ್ಲದಂತೆ ಕಂಡಿತು. ಆದರೂ ಸ್ವಾಮಿಗಳ ಲೀಲೆಯೇನಿದೆಯೆಂತ ತಿಳಿಯಲು ಅವಶ್ಯವಾಗಿತ್ತು. ಮತ್ತು ಸಮರ್ಥಳಾಗಿದ್ದೆ. ಅಲ್ಲಿ ಮಹಾ ಸ್ವಾಮಿಗಳ ಸೇವೆ ಮಾಡುತ್ತಿರುವ ಮಹಾನುಭಾವರಾದ ಶಿವರಾಯ ಎಂಬುವವರು ನಾನು ಕೊಡಗು ದೇಶದವಳೆಂತ ಗುರ್ತು ಹಿಡಿದು ತಾವು ರಚಿಸಿದ ಕಥಾಮೃತವನ್ನು ಓದಿ ತಿಳುಕೊಳ್ಳಲಕ್ಕೆ ಉಪದೇಶ ಮಾಡಿದರು. ಆ ಪ್ರಕಾರ ಸದರಿ ಬುಕ್ಕನ್ನು ಮನೆಗೆ ತಂದು ಓದಲು ಅದರಲ್ಲಿ ಬರದಂಥಾ ವಿಷಯ ನಿಜವಾಗಿ ಆಗಿದ್ದ ಪಕ್ಷದಲ್ಲಿ ಸಿದ್ಧಾರೂಢಸ್ವಾಮಿ ಸಾಕ್ಷಾತ್ ಪರಮೇಶ್ವರನೆಂದು ತಿಳಿಯಲಿಕ್ಕೆ ಏನೊಂದೂ ಕೊರತೆ ಇಲ್ಲವೆಂತ ಮನಸ್ಸಿನಲ್ಲಿ ಭಾವಿಸಿದೆ. ಹಾಗೂ ಸದರಿ ಗ್ರಂಥವನ್ನು ಓದುತ್ತಿರುವಾಗ 48 ನೇ ಅಧ್ಯಾಯದಲ್ಲಿ ನಮೂದಾದ ಸಂಗತಿ ಬಗ್ಗೆ ನನ್ನ ಮನಸ್ಸಿನಲ್ಲಿ ಸ್ವಲ್ಪ ಸಂಶಯ ಬಂತು. ಅದೇನಂದರೆ "ಶ್ರೀ ಸಿದ್ಧಾರೂಢರ ಕಥಾಮೃತವನ್ನು ಪಾರಾಯಣ ಮಾಡಿದರಿಂದ ತೊಡಲಿ ಹುಡುಗಿಯು ವೈಖಿಂದ ಭೂತವಶಳಾಗಿ ಹುಚ್ಚಳಾದಳು. ಸ್ವಲ್ಪ ದಿವಸದಲ್ಲಿ ಇವಳು ಅಸ್ವಸ್ಥ ಶಕ್ತಿಯಿಂದ ಬಿದ್ದು ಸತ್ತಳು. ಅಷ್ಟರಲ್ಲಿ ಒಬ್ಬ ಸನ್ಯಾಸಿಯು ತಾನಾಗಿಯೇ ಬಂದು ಸಿದ್ಧಾರೂಢ ಸ್ವಾಮಿಯ ಭಸ್ಮವನ್ನು ಸದರಿ ಹುಡುಗಿಯ ಬಾಯಲ್ಲಿ ಹಾಕಿದ ಕೂಡಲೇ ಆಕೆಯು ಜೀವಂತಳಾಗಿ ಎದ್ದಳು" ಎಂತ ವಗೈರೆ ನಮೂದಿಸಿದ್ದನ್ನು ಓದಿದೆ. ಅಷ್ಟರಲ್ಲಿ ಅದಕ್ಕೆ ಅನುಸಾರವಾಗಿ ಒಬ್ಬ ಸನ್ಯಾಸಿಯು ಹೇಗೆ ಅಲ್ಲಿಗೆ ಬಂದು ಒದಗಿದ ಆತ ನಾನು ಸಂಶಯಪಟ್ಟೆ. ಅಷ್ಟರಲ್ಲಿಯೇ ದೃಷ್ಟಾಂತವಾಗಿ ಒಬ್ಬ ಸನ್ಯಾಸಿಯು ಎಲ್ಲಿಂದಲೋ ಬಂದವನು ನನ್ನ ಮನೆಯ ಮುಂದೆ ನಿಂತು ಶ್ರೀ ಸಿದ್ಧಾರೂಢಯೆಂತ ಹೇಳಿದನು. ಇದನ್ನು ನೋಡಿ ನನಗೆ ಬಹಳ ಆಶ್ಚರ್ಯವುಂಟಾಯಿತು. ನಾನು ನಾನಾ ಕಡೆಯಲ್ಲಿ ನನ್ನ ಪ್ರಿಯ ಪತಿಯರು ಇದ್ದಲ್ಲಿ ಇದ್ದರೂ ನನ ಯಾವ ಸನ್ಯಾಸಿಯ ಬಾಯಿಂದ ಸಿದ್ಧಾರೂಢಯೆಂತ ಬಂದಿದ್ದು ಕೇಳಿದ್ದಿಲ್ಲ. ಇದೇ ವರ್ಷ ಏಪ್ರೈಲ ತಿಂಗಳಲ್ಲಿ ರಾಮನವಮಿ ದಿವಸ ಸ್ವಾಮಿಗಳ ದರ್ಶನಕ್ಕೆ ಹೋಗಿದ್ದೆ. ಅವರ ಬಗ್ಗೆ ಸದರಿ ಗ್ರಂಥದಲ್ಲಿ

ಯಾರ್‍ಯಾರಿಗೆ ಏನೇನು ಲೀಲೆ ತೋರಿಸಿ ಉದ್ಧರಿಸಿದ್ದರೋ ಅವರೆಲ್ಲರನ್ನು ಆ ಮಠದೊಳಗೆ ನಾನು ಸ್ವತಃ ನೋಡಿರುತ್ತೇನೆ. ಅವರು ಈಗಲೂ ಜೀವಂತರಾಗಿರುತ್ತಿದ್ದು ಸ್ವಾಮಿಗಳ ಸೇವೆ ಮಾಡಿಕೊಂಡಿರುವುದು ನೋಡಿ ಅತಿ ಆಶ್ಚರ್ಯವಾಯಿತಲ್ಲದೆ ಮನಸ್ಸಿನಲ್ಲಿದ್ದ ಸಂಶಯ ದೂರವಾದಂತೆ ಆಗಿ ಅವರಿಂದ ನಾನು ಉಪದೇಶ ತಕ್ಕೊಳ್ಳಬೇಕೆಂತ ಕುತೂಹಲ ಹುಟ್ಟಿ ಉಪದೇಶ ತೆಗೆದುಕೊಂಡೆ. ಅಂದಿನಿಂದ ರೀತಿಯಂತೆ ದಿನಂಪ್ರತಿ ಅವರ ಧ್ಯಾನ ಮಾಡುವವಳಾದೆನು. ನನ್ನ ಪ್ರಿಯ ಪತಿಗೆ ಇದೇ ಮೇ ತಿಂಗಳ 6 ನೇ ದಿವಸ ತುಂಬಿದ್ದ ರಿವಾಲ್ವರದ ಗೋಲಿ ಅಕಸ್ಮಾತ ಅವರ ಕಾಲಿಗೆ ತಾಗಿದ್ದು ಅವರ ಜೀವಕ್ಕೆ ಏನೂ ಆಗಬಾರದೆಂತ ಇದೇ ಸ್ವಾಮಿಗಳನ್ನು ಧ್ಯಾನ ಮಾಡಿ ಬೇಡಿಕೊಂಡೆನು. ಆದರಂತೆ ಅವರಿಗೆ ಏನೊಂದೂ ನೋವಿಲ್ಲದೆ ಸುಲಭದಲ್ಲಿ ಹುಷಾರಾದರು. ಇದರಿಂದ ಸ್ವಾಮಿಗಳ ಧ್ಯಾನ ತಪ್ಪದಲೇ ಮಾಡಿಕೊಂಡು ಬಂದಂತೆ ದಿನೇ ದಿನೇ ಮನಸ್ಸಿನಲ್ಲಿ ಆನಂದ ಹುಟ್ಟುತ್ತಾ ಬಂತು. ಪುನಃ ಸ್ವಾಮಿಗಳ ದರ್ಶನ ತಕ್ಕೊಳ್ಳಬೇಕೆಂತ ಕುತೂಹಲ ಹುಟ್ಟಿ ತಾ 13—6—26ನೇ ದಿವಸ ಅಲ್ಲಿಗೆ ಹೋಗಿದ್ದೆ. ಅವರ ದರ್ಶನವಾಯಿತು. ಅಲ್ಲಿ ಎರಡು ದಿನವಿದ್ದು ಅವರ ಲೀಲೆ ನೋಡುತ್ತಾ ನೋಡುತ್ತಾ ಮನಸ್ಸು ಅವರ ಕಡೆಗೇನೇ ಲೀನವಾಗಿ ಇಂಥಾ ದ್ರವ್ಯವನ್ನು ಬಿಟ್ಟು ಹೋಗುವುದರಲ್ಲಿ ಏನೂ ಅರ್ಥವಿದೆಯೆಂತ ತೋರಿಬಂತು. ಈ ಸ್ವಾಮಿಗಳ ದರ್ಶನಕ್ಕೆ ಬೊಂಬಾಯಿ, ಮದ್ರಾಸು, ಬೆಂಗಳೂರು ವಗೈರೆ ದೂರದೇಶಗಳಿಂದ ಜನ ವರಗಳನ್ನು ಪಡಿಯಲಿಕ್ಕೆ ಮತ್ತು ತಮ್ಮ ಕಷ್ಟಗಳನ್ನು ಪರಿಹಾರ ಮಾಡಿಸಿಕೊಳ್ಳಲಿಕ್ಕೆ ಮತ್ತು ವೇದಾಂತದ ಮರ್ಮ ತಿಳಿಯಲಿಕ್ಕೂ ಜನರು ಸಾವಿರಗಟ್ಲೆ ಬರುತ್ತಿರುವುದನ್ನು ನಮ್ಮ ಸ್ವಂತ ಕಣ್ಣಿನಿಂದ ನೋಡಿದೆನು. ಸ್ವಾಮಿಗಳ ಭಾಷಣ ಕೇಳಿದಲ್ಲಿ ಶರೀರದ ಪಾಪವೇ ದೂರವಾಗುವಾಗ ಅವರ ಸೇವೆ ಮಾಡಿದರೆ ಪರಿಣಾಮ ಏನಾಗುವದೆಂಬದನ್ನು ಓದುವವರು ತಾವೇ ತಿಳಕೊಳ್ಳತಕ್ಕದ್ದು.

ಈ ಸ್ವಾಮಿಗಳ ಸಮ್ಮಂಧ ನಾನು ಸ್ವತಃ ರಚನೆ ಮಾಡಿದ ಹಾಡು ಕೆಳಗೆ ಬರೆದಂತೆ ಇದೆ. ಇದನ್ನು ನಾನು ಮತ್ತು ನನ್ನ ಮಕ್ಕಳು ಮಹಾ ಸ್ವಾಮಿಗಳ ಚರಣದ ಮುಂದೆ ಹಾಡಿದಕ್ಕೆ ಅವರಿಗೆ ಅತಿ ಆನಂದ ಉಂಟಾಯಿತು. ಹಾಗೂ ಇದನ್ನು ಪತ್ರಿಕೆಯಲ್ಲಿ ಪ್ರಸಿದ್ಧ ಪಡಿಸಲಿಕ್ಕೆ ಅಪ್ಪಣೆಕೊಟ್ಟಿದೆ. ಆದರಂತೆ ಈ ಪತ್ರಿಕೆಗೆ ತಿಳಿಸಿರುತ್ತೇನೆ. ಇದರಲ್ಲಿ ಒಂದು ವೇಳೆ ತಪ್ಪು ಕಂಡಲ್ಲಿ ಮಹಾತ್ಮರು ಅದನ್ನು ದುರಸ್ತುಮಾಡಿ ನನಗೆ ತಿಳಿಸಿದಲ್ಲಿ ನಾನು ಅವರಿಗೆ ಬಹಳ ವಂದನೆಗಳನ್ನು ಮಾಡುವವಳಾಗುತ್ತೇನೆ. ಭಜನೆ ಕಾಲಕ್ಕೆ ಈ ಹಾಡನ್ನು ಹಾಡುವಂಥವರಿಗೆ ನನ್ನ ಅನೇಕ ನಮಸ್ಕಾರಗಳು ಅವೆ. ಸ್ವಾಮಿಗಳ ಮಹತ್ವದ ಒಗ್ಗೆ ಸಂಗ್ರಹಿಸಿದ ಕಥಾಮೃತವನ್ನು ಓದಿದವರಿಗೆ ಶ್ರೀ ಸಿದ್ಧಾರೂಢರು ಸಾಕ್ಷಾತ ಪರಮೇಶ್ವರನೋ ಅಥವಾ ಮನುಷ್ಯನೋ ಎಂಬದು ಖಾತ್ರಿಯಾದೀತು. ಸದರಿ ಬುಕ್ಕಿನ ಕಿಮ್ಮತ್ತು ರೂ. 1—8—0 ಆಣೆ ಇರುತ್ತಿದ್ದು ಹುಬ್ಬಳ್ಳಿ, ಶ್ರೀಸಿದ್ಧಾರೂಢ ಸ್ವಾಮಿಯವರ ಮಠದಲ್ಲಿರುವ ಮಾ॥ ಶ್ರೀ ಶಿವರಾವು ಇವರಿಗೆ ಬರೆದಲ್ಲಿ ವಿ. ಪಿ. ಯಿಂದ ಕಳುಹಿಸಿ ಕೊಡುವರು

ರಾಗ ಕಾಂಬೋಧಿತಾಳ ತ್ರಿಪುಟಬಂತೆ

ಶಿವಶಿವನೇ ಸಿದ್ಧರೂಢ। ಜಗದೊಳು ಚರಿಸುವಾವಾವಾ॥
ಶಿವಶಿವನೇ . . ..
ಶಾಂತ ಕಳೆಯು ನಿಮ್ಮಮೂರುತಿ। ನೀಯೂಪರನಾಗಿ ಶಂಕರಾ॥ ಶಿವಶಿವನೇ ....
ತಿರ ಚರ ಜಾಲ ತಂತ್ರಿದಿ। ಆರೂಢ ನಾಮದಿ॥ ದಿವ್ಯಯತಿಯಾಗಿ ಶಂಕರಾ॥ ಶಿವಶಿವನೇ

ರಾಗ ಕಲ್ಯಾಣಿ ಏಕತಾಳ.
ಬ್ಯಾಂಟಿನ ಮಾಸಲೆ ಯಂತೆ.

ಬನ್ನಿರಿ ಹೋಗುವ ಹುಬ್ಬಳ್ಳಿಗೆ। ಸಿದ್ಧಾರೂಢ ದರ್ಶನಕ್ಕೆ॥ ದರ್ಶನದಿಲಭವು ಕಾಮಧೇನು। ಕಲ್ಪವೃಕ್ಷಯಂತ ತಿಳಿಯುವೆನು॥ ಬರುಬರು ಪರಿಯಲಿ ಬಳಲಿಸೇನಾ। ಎಲ್ಲಿಯೂ ಕಾಣದೆ ಗುರುವರನಾ॥ ಮುಗ್ಧೆಯಾಗಿ ದಿನ ಕಳೆಯುತ್ತಲೇ। ಗುರುವರ ಚರಣವ ನೆನೆಯದಲೇ॥ ಭವ ಭಯ ದುಃಖ ನಿವಾರಿಸಲು। ಚಿತ್ತನಸಮರ್ಪಣ ಮಾಡಿದಳು॥ ದಾಸಿ ಪಿ. ಕಾಳವ್ವ ಎರಗಿದಳು। ಶ್ರೀ ಸಿದ್ಧಾರೂಢರ ಚರಣದೊಳು॥ ಬನ್ನಿರಿ ಹೋಗುವ .... ಪಿ. ಕಾಳವ್ವ.

ಬಾವೇರಿ, ತಾ. 11—7—26.

ಬಿಳಿಗೇರಿ ಗ್ರಾಮದ ಸ್ಥಿತಿ.

ಅಯ್ಯಾ,

ಮಡಿಕೇನಾಡು ಬಿಳಿಗೇರಿ ಗ್ರಾಮವು ಒಂದು ದೊಡ್ಡ ಗ್ರಾಮವಾಗಿದೆ. ಆದರೆ ಇದರಲ್ಲಿ ಇರತಕ್ಕ ಜನಗಳು ಬಹಳ ಬಡವರಾಗಿ ಗ್ರಾಮವು ಬಹಳ ಹೀನಸ್ಥಿತಿಯಲ್ಲಿದೆ. ಇದರಲ್ಲಿ ಒಂದು ಡಿಸ್ಟ್ರಿಕ್ಟ್ ಬೋರ್ಡ್ ರೋಡಿದೆ. ಇದು ರಿಪೇರಿ ಇಲ್ಲದೆ ಸುಮಾರು 10 ವರುಷದ ಮೇಲ್ಪಟ್ಟಾಯಿತು. ಈ ಗ್ರಾಮದಿಂದ ಫಾರೆಸ್ಟು ಇಲಾಖೆಯವರು ಕಳೆದ ಹತ್ತು ವರುಷಗಳಿಂದ ಸುಮಾರು 400 ಟನ್ನಿಗೆ ಮೇಲ್ಪಟ್ಟು ಗಂಧ ಸಾಗಿಸಿರುತ್ತಾರೆ. ಆದರೆ ರೋಡಿಗ ಮಾತ್ರ ಗುದ್ದಲಿ ತೋರಿಸಿರುವದಿಲ್ಲ. ಇಷ್ಟು ಉತ್ಪತ್ತಿಯನ್ನು ಸರಕಾರದವರು ಈ ಗ್ರಾಮದಿಂದ ಹೊಂದಿಕೊಂಡಿರುವಾಗ, ರೈತರಿಗೆ ಕನ್ನಿಷ್ಟು ಉಪಕಾರ ಮಾಡತಕ್ಕದ್ದು ನ್ಯಾಯವಲ್ಲವೋ?

ರೈತನ ಜಾಗದಲ್ಲಿ ಅಕಸ್ಮಾತ್ತಾಗಿ ಒಂದೇ ಒಂದು ಗಂಧದಮರಕ್ಕೆ ಬೆಂಕಿ ವಗೈರೆಯಿಂದ ನಷ್ಟಸಂಭವಿಸಿದಲ್ಲಿ ಸಂಬಂಧಪಟ್ಟ ರೈತನಿಂದ ನಷ್ಟ ವಸೂಲ್ಮಾಡುತ್ತಾರೆ. ಹೀಗಿರುವಾಗ ರೈತನ ಜಾಗದಿಂದ ಕಿತ್ತ ಗಂಧದ ಮರದಿಂದ ಸರಕಾರಕ್ಕೆ ಸಿಕ್ಕಿದ ಲಾಭದಿಂದ ಸ್ವಲ್ಪವಾದರೂ ರೈತನ ಹಿತಕ್ಕಾಗಿ ಖರ್ಚುಮಾಡಬೇಡವ್ವೋ?

ಕಳೆದ ವರ್ಷ ಈ ಗ್ರಾಮದವರು ಬಹಳ ಗರೀಬರಾಗಿರುವ ಕಾರಣ ತಮ್ಮ ಮಕ್ಕಳಿಗೆ ಸ್ಕೂಲು ಈ ಗ್ರಾಮದಲ್ಲಿ ಇಲ್ಲದೆ ಮಕ್ಕಳು ವಿದ್ಯಾಹೀನರಾಗಿರುತ್ತಾರೆ, ಆದ್ದರಿಂದ ಸರಕಾರದವರು ಸ್ಕೂಲು ಕಟ್ಟಿಸಿ ಉಪಾಧ್ಯಾಯರನ್ನು ಇಡಬೇಕೆಂತಲೂ ಮತ್ತು ಈ ಗ್ರಾಮದ ರೋಡನ್ನು ರಿಪೇರಿ ಮಾಡಿಸಿ ಕೊಡಬೇಕಾಗಿ ನಮ ಕೊಡಗು ಕಮಿಶನರ್ ಸಾಹೇಬರವರಿಗೆ ಅರ್ಜಿ ಕೊಟ್ಟದಕ್ಕೆ ಏನೊಂದೂ ಉತ್ತರ ಸಿಕ್ಕಲಿಲ್ಲ.

ರೈತರ ಕಷ್ಟಸುಖಗಳನ್ನು ಸರಕಾರಕ್ಕೆ ತಿಳಿಸಿ ಅವರ ಹಿತವನ್ನು ಸಂಪಾದಿಸಲಿಕ್ಕೆ ನಿಂತುಕಟ್ಟಿರುತ್ತೇವೆಂತ ಹೇಳುವ ಕೌನ್ಸಿಲ್ ಮೆಂಬರುಗಳೂ ಈ ಗ್ರಾಮದ ಅವಸ್ಥೆಯನ್ನು ಈವರೆಗೆ ಗಮನಕ್ಕೆ ತೆಗೆದುಕೊಂಡಿರುವದಿಲ್ಲ. ಇನ್ನಾದರೂ ಈ ಗ್ರಾಮದ ಸ್ಥಿತಿಯನ್ನು ಸರಕಾರದವರ ಗಮನಕ್ಕೆ ತಂದು ಈ ಗ್ರಾಮಕ್ಕೆ ಒಂದು ರೋಡನ್ನೂ ಮತ್ತು ಒಂದು ಸ್ಕೂಲನ್ನೂ ಮಾಡಿಸಿ ಕೊಡುವರಾಗಿ ಕೋರುವ.

ಗ್ರಾಮಸ್ಥ

ಮಡಿಕೇರಿ "ಬನದೊಡ್ಡಿ"

ಅಯ್ಯಾ,

ಮಡಿಕೇರಿ ಮುನ್ಸಿಪಲ್ ಕಮಿಟಿಯ ಚುನಾವಣೆಯಲ್ಲಿಯೂ, ಅಧ್ಯಕ್ಷರ ಚುನಾವಣೆಯಲ್ಲಿಯೂ ಮಹನೀಯರು ಮುತುವರ್ಜಿಯನ್ನು ವಹಿಸಿಕೊಂಡು ಓಟರುಗಳ ಬಳಿಹೋಗಿ ತಾವು ಹಾಗೆ ಮಾಡುತ್ತೇವೆ, ಹೀಗೆ ಮಾಡುತ್ತೇವೆಂದು ಹೇಳುತ್ತಾ ತಮಗೇನೇ ಓಟುಕೊಡಬೇಕು, ಅಧ್ಯಕ್ಷರ ಚುನಾವಣೆಯಲ್ಲಿ ತಮ್ಮ ಕಡೆಯ ಉಮೇದುವಾರನಿಗೇನೇ ಓಟುಕೊಡುವಂಥವರನ್ನೇ ಚುನಾಯಿಸಬೇಕು ಎಂದೆನ್ನುತ್ತಾ ಓಟಿನ ಚಳವಳದಲ್ಲಿರುವರೇ ಹೊರತು ಬಾಯಿ ಇಲ್ಲದ ಮೂಗ ಪ್ರಾಣಿಗಳನ್ನು ಸೇರಿಸಿರುವ ಮುನ್ಸಿಪಾಲಿಟಿ ದೊಡ್ಡಿಯ ವಿಷಯ ಯಾರೂ ಗಮನಕೊಡುವಂತೆ ಕಾಣುವುದಿಲ್ಲವಲ್ಲಾ!

ಈ ಚುನಾವಣೆಯ ಕಾಲದಲ್ಲಿ ಒಂದು ದಿನ ನನ್ನ ಒಂಬತ್ತು ದನಗಳು ರಾಜಾಸೀಟಿನ ಬಳಿ ಇರುವ "ಬನ" ದೊಡ್ಡಿಗ ಸೇರಿಸಲ್ಪಟ್ಟವು. ಅವುಗಳನ್ನ ನಾನು ಒಂದು ದಿನವೆಲ್ಲಾ ಹುಡುಕಿ ಸಿಕ್ಕದೆ ಮರುದಿನ ಬೆಳಿಗ್ಗೆ ಸದರಿ ದೊಡ್ಡಿಯಲ್ಲಿರುವದನ್ನು ಕಂಡೆನು. ಅಲ್ಲಿ ಹೋಗಿ ನೋಡಿದಲ್ಲಿ ದೊಡ್ಡಿಯಲ್ಲಿ ಒಂದು ಕಡ್ಡಿ ಹುಲ್ಲಾದರೂ ಕಾಣಬರಲಿಲ್ಲ, ದನಗಳು ಹೊಟ್ಟೆಗೇನೂ ಇಲ್ಲದೆ ಒಡಕಲಾಗಿ ಬಹುಹಸಿವುಳ್ಳವಾಗಿದ್ದವು. ಮನುಷ್ಯರಂತೆ ಬುದ್ಧಿ ಇಲ್ಲದ ಪ್ರಾಣಿಗಳು ಬೇರೊಬ್ಬರ ಹಿತ್ತಲು ತೋಟಗಳಿಗೆ ಹೋಗಿಬಿಟ್ಟರೆ ಅವುಗಳನ್ನು ಸರಿಯಾಗಿ ಕಾವಲಿಟ್ಟು ಮೇಯಿಸದ ಅವುಗಳ ಯಜಮಾನನನ್ನು ಶಿಕ್ಷಿಸಲಿಕ್ಕೆ ಅವುಗಳನ್ನು ದೊಡ್ಡಿಗೆ ಸೇರಿಸಿ ಅವನಿಂದ ದೊಡ್ಡಿ ಚಾರ್ಜಿನ ಮೂಲಕ ದಂಡ ತೆರಿಸುವದೆಂದು ನಾನು ಯೋಚಿಸಿದ್ದೆ. ಇದೇನೋ ನ್ಯಾಯವಾಗಿದೆ. ಆದರೆ ಪಾಪ, ಆ ಮೂಕ ಪ್ರಾಣಿಗಳಿಗೂ ಶಿಕ್ಷೆಕೊಡಬೇಕೇ? ಅವುಗಳಿಗೆ ಮೇವಿಲ್ಲದೆ ದೊಡ್ಡಿಯೊಳಗೆ ಅವುಗಳನ್ನು ಉಪವಾಸವಿಡುವುದು ಯಾವ ಧರ್ಮ? ಅವುಗಳು ಒಂದು ಹಗಲಿಗಿಂತ ಹೆಚ್ಚಾಗಿ ದೊಡ್ಡಿಯಲ್ಲಿದ್ದರೆ ಪೋಲೀಸನಿಂದ ಬಾಣ ಚಾರ್ಜು ತೆಗೆದುಕೊಳ್ಳುತ್ತಿರುವುದು ಯಾಕೆಂದು ಗೊತ್ತಾಗುವುದಿಲ್ಲ. ಬೇರೆ ದೊಡ್ಡಿಗಳಲ್ಲಿ ಹುಲ್ಲುಹಾಕುವುದು ನಾನು ನೋಡಿದ್ದೇನೆ. ಆದರೆ ಈ ದೊಡ್ಡಿಯ ರೂಲು ಬೇರೆಯೋ ಏನೋ ನಾನರಿಯೆ.

ಇಷ್ಟು ಮಾತ್ರವಲ್ಲ. ನಾನು ಸದರಿ ದೊಡ್ಡಿಗೆ ದನಗಳನ್ನು ಬಿಡಿಸಿಕೊಳ್ಳಲು ಬೆಳಿಗ್ಗೆ ಸುಮಾರು 10 ಗಂಟೆ ಸಮಯಕ್ಕೆ ಅಲ್ಲಿಗೆ ಹೋದೆನು. ಅಲ್ಲಿ ದೊಡ್ಡಿಕೀಪರು ಇರಲಿಲ್ಲ. ಅವನನ್ನ ಹಲವು ಕಡೆಗಳಲ್ಲಿ (ಅವನ ಮನೆಯಲ್ಲೂ ಕೂಡ) ಹುಡುಕಿದೆನು. ಕಾಣಲು ಸಿಕ್ಕಲಿಲ್ಲ. ಮಧ್ಯಾಹ್ನ ಊಟವಿಲ್ಲದೆ ಕಾಯಬೇಕಾಯಿತು. ಮಧ್ಯಾಹ್ನದ ವೇಳೆ ಸುಮಾರು ಎರಡು ಗಂಟೆಗೆ ಅವನು ಅಲ್ಲಿಗೆ ಬಂದನು. ನಂತರ ನನ್ನ ದನಗಳನ್ನು ಬಿಡಿಸಿಕೊಂಡು ಮನೆಗೆ ಬಂದೆನು. ದೊಡ್ಡಿಕೀಪರನು ಹೀಗ ದೊಡ್ಡಿಯ ಬಳಿ ಇರದೆ ಹಲವು ಗಂಟೆಗಳ ವರೆಗೆ ಗೈರುಹಾಜರಾದರೆ ದನಗಳ ಮಾಲೀಕರಿಗೆ ಎಷ್ಟು ತೊಂದರೆಯಾಗುವದೆಂಬದನ್ನು ಮುನ್ಸಿಪಾಲಿಟಿಯವರು ಗಮನಕ್ಕೆ ತರಬೇಕಾದ ಸಂಗತಿಯಾಗಿದೆ. ಹಳೇ ಕಮಿಟಿಯ ಅವಧಿಯು ಈ ತಿಂಗಳ ಆಖೈರಿಗೆ ಮುಗಿಯುತ್ತದೆಂದು ತಿಳಿಯುತ್ತೇನೆ. ಹೊಸಕಮಿಟಿಯವರಾದರೂ ಈ ಸಂಗತಿಗಳಿಗೆ ತಕ್ಕಷ್ಟು ನಿಗಾಇಡುವರಾಗಿ ನಂಬುತ್ತೇನೆ.

"ಮಾಲೀಕ"

ಚೆಂಬು ದಬ್ಬಡ್ಕ ಗ್ರಾಮಗಳ ಸ್ಥಿತಿ.

ಘನಸರಕಾರದವರೇ,

ಚೆಂಬು ದಬ್ಬಡ್ಕ ವಗೈರೆ ಗ್ರಾಮಗಳು ಪೂರ್ಣ ನಕ್ಕಿಯಾಗಿ ಮೂಲೆ ಪ್ರಾಂತ್ಯದಲ್ಲಿವೆ ಎಂಬ ಸಂಗತಿ ಈ ನಾಡಿನವರೆಲ್ಲರೂ ಅರಿಕೆಮಾಡಿಕೊಂಡಿರುತ್ತೇನೆ. ತಾ. 10—4—26 ರಲ್ಲು ಭಾಗಮಂಡಲ ನಾಡು ಪಾ॥ ಗಾರರವರು ನಮ್ಮ ಗ್ರಾಮಕ್ಕೆ ಬಂದಿರುವಾಗ್ಯೆನಾವುಗಳು ನಮ್ಮ ಹವಾಲ್ ಹೇಳಿದಮೇರೆ ಕೊಯಿನಾಡು ಹೊಳೆಗೂ ಮತ್ತು ದಬ್ಬಡ್ಕ ಹೊಳೆಗೂ ಸಾರ ಹಾಕಿಸುವುದಕ್ಕೆ ಸ್ಥಳ ನೋಡಿ ಹೋಗಿದ್ದು ಸರಿಯಷ್ಟೆ. ಆ ಲಾಗಾಯಿತಿನಿಂದ ಇಂದಿನ ವರೆಗೂ ಯಾವ ಹುಕ್ಕುಂ ಇಲ್ಲದೆ ಇರುವ ಸಂಗತಿಯಲ್ಲಿ ಬಹಳ ವ್ಯಸನ ಪಡುತ್ತೇವೆ. ಅಲ್ಲದೆ ಈ ತಾರೀಕು ಲಾಗಾಯಿತಿನಿಂದ ಗ್ರಾಮದ ಪಟೇಲರು, ವಿಲೇಜು ಪೋಸ್ಟು ಮೇನ್ ಮತ್ತು ಸಂಪಾಜೆ ಪೊಲೀಸ್ ರೈಟರು ಸಹ ಮೇಲೆ ಚೆಂಬು ಗ್ರಾಮ ಬೀಟು ಮಾಡದೆ ಇರುವದಕ್ಕೆ ಕಾರಣವೇ ನದ್ರಿ ಹೊಳೆ ದೆಸೆಯಿಂದವೆಂತ ನಂಬುತ್ತೇವೆ.

ಅಲ್ಲದ ತಾ. 2—7—26ನೇ ಪೇಪರಿನಲ್ಲಿ ಕಾಣಿಸಿರುವಂತೆ ನಮ್ಮ ಗ್ರಾಮದ ಒಳ ರಸ್ತೆಗಳನ್ನು ಸಹ ರಿಪೇರಿ ಮಾಡಿಸುವಂತೆ ಕೂಡಲೇ ಹುಕ್ಕುಂ ಆಗಬೇಕಾಗಿ ಕೇಳಿಕೊಳ್ಳುತ್ತೇವೆ. ಮೇಲಿನ ಎಲ್ಲಾ ಸಂಗತಿಯನ್ನು ದಿವ್ಯ ಚಿತ್ತದಲ್ಲಿ ಅನುಸರಿಸಿ ಡಿ ಬೋರ್ಡು ಕಾಲಿಗೂ ಸಹ ಹುಕ್ಕುಂ ಕೊಡಿಸಿಕೊಡಬೇಕಾಗಿ ಪ್ರಾರ್ಥಿಸುತ್ತೇವೆ.

ಗ್ರಾಮಸ್ಥ

ಮುನಿಸಿಪಲ್ ಚುನಾವಣೆ.

ಮಡಿಕೇರಿ ಮುನಿಸಿಪಾಲಿಟಿ ಚುನಾವಣೆ ನಡೆದ ದಿನ ಮ॥ ರಾ॥ ಶ್ರೀ ಪುಚ್ಚಿಮಾಡ ಸೋಮಯ್ಯನವರು ಒಂದು ತಕರಾರು ಅರ್ಜಿ ಕೊಟ್ಟರು. ರಾವ್ ಸಾಹೇಬ್ ಪಟ್ಟಮಾಡ ದೇವಯ್ಯನವರು ಉಮೇದ್ವಾರರಾಗಲು ನಾಮಿನೇಶನ್ ಪೇಪರ್ ಕೊಟ್ಟಾಗ ಅವರು ಇನ್ನೂ ಸರ್ಕಾರಿ ಉದ್ಯೋಗಸ್ಥರಾಗಿಯೇ ಇದ್ದದ್ದರಿಂದ ಅವರ ಚುನಾವಣೆಯು ಮಂಜೂರಾಗಕೂಡದೆಂತ ಓಟ್ ತೆಗೆದುಕೊಂಡ ಆಫೀಸರಿಗೆ ಕೊಟ್ಟದ್ದೇ ಆ ತಕರಾರು ಅರ್ಜಿ. ಓಟುಗಳನ್ನು ಎಣಿಸಿದ ಮುನಿಸಿಪಲ್ ಕಮಿಟಿ ಮುಂದೆ ಈ ಕಾಗದವು ಇಡಲ್ಪಟ್ಟಿತು. ಹಾಜರಿದ್ದ ಒಬ್ಬ ಮೆಂಬರು ಈ ವಿಷಯ ಇನ್ನೊಂದು ದಿನ ತೀರ್ಮಾನಿಸಬಹುದೆಂತ ಹೇಳಿದರು. ಈಚೆಗೆ ಓಟ್ ತೆಗೆದ ಆಫೀಸರೇ ರಾವ್ ಸಾಹೇಬ್ ದೇವಯ್ಯನವರ ಚುನಾವಣೆಗೆ ರೂಲ್ ವಿರೋಧವಿಲ್ಲವೆಂತ ಮ॥ ಸೋಮಯ್ಯನವರಿಗೆ ಜವಾಬು ಕೊಟ್ಟಿರುತ್ತಾರಂತೆ. ಈ ಆಫೀಸರು ಈ ತಕರಾರು ಅರ್ಜಿಯನ್ನು ಮುನಿಸಿಪಲ್ ಕಮಿಟಿ ಮುಂದೆ ಇಟ್ಟನಂತರ ಈ ಆಫೀಸರಿಗೆ ಅರ್ಜಿ ಮೇಲೆ ಆರ್ಡರು ಕೊಡುವ ಹಕ್ಕು ಎಲ್ಲಿಂದ ಬಂತು? ಮ॥ ಸೋಮಯ್ಯನವರು ತಿಳಿಯದೆ ಆ ಅರ್ಜಿಯನ್ನು ಓಟ್ ತೆಗೆದುಕೊಂಡ ಆಫೀಸರಿಗೆ ಕೊಟ್ಟದ್ದು ತಪ್ಪಾಗಿದ್ದರೂ ಅಂಥಾ ತಕರಾರು ಅರ್ಜಿಯನ್ನು ಸದರಿ ಆಫೀಸರವರು ತೀರ್ಮಾನ ಮಾಡಲು ಹಕ್ಕಿರುವ ಅಧಿಕಾರಿಗಳಿಗೆ ಈ ಅರ್ಜಿಯನ್ನು ಕೊಡಬೇಕಾದದ್ದು ಯುಕ್ತವಾಗಿದೆ. ಹಾಗೆಯೇ ಅವರು ಕೊಟ್ಟರು. ಹಾಗೆ ಮುನಿಸಿಪಲ್ ಪ್ರೆಸಿಡೆಂಟರ ಸ್ವಾಧೀನಕ್ಕೆ ಒಂದು ಮೀಟಿಂಗ್ ಮುಂದೆ ತಂದ ಅರ್ಜಿಯನ್ನು ಮುನಿಸಿಪಲ್ ಕಮಿಟಿಯವರ ಅನುಮತಿಯಿಲ್ಲದೆ ಓಟ್ ತೆಗೆದುಕೊಂಡ ಆಫೀಸರಿಗೆ ವಾಪಸು ಹೇಗೆ ಕೊಟ್ಟರು? ಸೋಮಯ್ಯನವರಿಗೆ ಸಿಕ್ಕಿದ ಹುಕುಮಿನಿಂದ ಅವರಿಗೆ ತೃಪ್ತಿಯಾಗಿರಬಹುದೋ ಏನೊ? ಆದರೆ ಮುನಿಸಿಪಲ್ ಕಮಿಟಿಯವರಿಗೆ ಹೇಗೆ ತೃಪ್ತಿಯಾದೀತು? ಮುನಿಸಿಪಲ್ ಕಮಿಟಿಯವರು ತಮ್ಮ ಹಕ್ಕನ್ನು ಕಳಕೊಳ್ಳಬಾರದು. ಕಮಿಟಿಯವರ ತೀರ್ಮಾನಕ್ಕೆ ಒಳಗಾಗಬೇಕಾದ ಅರ್ಜಿಯನ್ನು ಯಾರಿಗೂ ತಿಳಿಯದೆ ವಾಪಸು ಕೊಟ್ಟದ್ದು ಯುಕ್ತವಲ್ಲ. ಸಂಬಂಧಪಟ್ಟವರು ಈ ವಿಷಯ ಏನು ಮಾಡುತ್ತಾರೆಂತ ಎದುರು ನೋಡುತ್ತೇನೆ.

"ಓಟರ್"

ಕನ್ನಡ **ಸ್ವಧರ್ಮ** ಹೊಸ ಪತ್ರಿಕೆ.

ಸಂಪಾದಕರು.—ದ ರಾ. ಬೇಂದ್ರೆ, ಬಿ. ಎ.

ಸಮಾಜದಲ್ಲಿ ಶಾಂತಿಪುಷ್ಟಿತುಷ್ಟಿಗಳು ನೆಲೆಗೊಳ್ಳಬೇಕಾದರೆ ಸದಾಚಾರವೇ ಸರಳವಾದ ಹಾದಿ. ಸದಾಚಾರದ ಬೆಳೆಗೆ ಸುವಿಚಾರವೇ ಸರಿಯಾದ ಸಾಧನ. ಇಂತಹ ಸುವಿಚಾರಗಳನ್ನು ಸಮಾಜದ ಮುಂದಿಡಲು ಹೆಣಗುವದೇ ಸ್ವಧರ್ಮದ ಗುರಿ. ಕನ್ನಡಿಗರು ಕೈಗೊಟ್ಟು ಸ್ವಧರ್ಮವನ್ನು ಪ್ರೋತ್ಸಾಹಿಸಬೇಕಾಗಿ ಕೋರಿಕೆ.

ವಾರ್ಷಿಕ ವರ್ಗಣಿ ರೂ. 3—0—0.

ಕಾರ್ಯದರ್ಶಿ
"ಸ್ವಧರ್ಮ" ಕಾರ್ಯಾಲಯ,
ಮಾಳಮಡ್ಡಿ, ಧಾರವಾಡ.

ಸ್ಟೇಷನರಿ ಖರೀದಿ ಫಾರಮುಗಳು.

1926ನೇ ಇಸವಿ ಕೊಡಗಿನ ಕೂಲಿ ಕೆಲಸವನ್ನು ಕುರಿತು 1ರ ಮೇರೆ, ಅನುಭವವುಳ್ಳ ಯೂರೋಪಿಯನ್ ಮತ್ತು ಇಂಡಿಯನ್ ಪ್ಲಾಂಟರುಗಳೂ ಸೇರಿ ತಯಾರಿಸಿರುವ ನಕರಿ ಖರೀದಿ ಫಾರಮುಗಳು. ಇಂಗ್ಲೀಷಿನಲ್ಲಿಯೂ ಕನ್ನಡದಲ್ಲಿಯೂ ಪ್ರಿಂಟಾಗಿ ಮಾರಾಟಕ್ಕೆ ತಯಾರಿವೆ. ಬೇಕಾದವರು ಸೆಂಟ್ರಲ್ ಹೈಸ್ಕೂಲಿನ ಬಳಿ ಇರುವ (ಸುಗಡಂಗ ಕಟ್ಟಡದ) ನಮ್ಮ ಹೊಸ ಆಫೀಸಿನಲ್ಲಿ ಕೊಂಡುಕೊಳ್ಳಬಹುದು.

ತಾ. 24—6—'26 ಮೇನೇಜರ್,
ಮಡಿಕೇರಿ. "ಕೊಡಗು" ಆಫೀ

ಆಂಧ್ರ ಆಯುರ್ವೇದಿಕ್ ಫಾರ್ಮಸಿ.

ಬ್ರಾಂಚ್, ಬೆಂಗಳೂರು ಸಿಟಿ

ಚ್ಯವನಪ್ರಾಸ ಲೇಹ.

ಇದು ಸರ್ವೋತ್ಕೃಷ್ಟವಾದ ಗಿಡಮೂಲಿಕೆಗಳಿಂದ ತಯಾರಿಸಲ್ಪಟ್ಟ ಆಯುರ್ವೇದ ರಸಾಯನೌಷಧವು. ವಿದ್ಯಾರ್ಥಿಗಳೂ ವಿಶೇಷವಾಗಿ ಬುದ್ಧಿಯನ್ನು ಪ್ರಯೋಗಿಸಿ ಕೆಲಸ ಮಾಡುವವರೂ ಈ ಲೇಹವನ್ನು ಸೇವಿಸಿದರೆ ವಿಶೇಷವಾಗಿ ಬುದ್ಧಿಶಕ್ತಿಯನ್ನೂ, ಜ್ಞಾಪಕಶಕ್ತಿಯನ್ನೂ ಹೊಂದುವರು. ದೀರ್ಘಕಾಲದ ವ್ಯಾಧಿಯಿಂದಾಗಲೀ ಕೆಟ್ಟ ನಡತೆಯಿಂದಾಗಲೀ ಸ್ವಭಾವ ಶಕ್ತಿಯ ಕೊರತೆಯಿಂದಾಗಲೀ ಶರೀರ ಕಾಂತಿ ಕುಂದಿ ರಕ್ತ ಕೆಟ್ಟು ಇಂದ್ರಿಯ ದೌರ್ಬಲ್ಯವೇ ಮೊದಲಾದ ವಿಕಾರಗಳಿಂದ ಪೀಡಿತರಾಗಿರುವವರು. ಈ ಲೇಹವನ್ನು ಸೇವಿಸಿದರೆ ಈ ತರದ ವಿಕಾರಗಳನ್ನೆಲ್ಲಾ ಪರಿಹರಿಸಿ ದೇಹಕ್ಕೂ ಮನಸ್ಸಿಗೂ ಉಲ್ಲಾಸವನ್ನುಂಟುಮಾಡಿ ಹೊಸ ಮಾಂಸಗಳಿಗೂ ನರಗಳಿಗೂ ಬಲವನ್ನು ಕೊಟ್ಟು ದೇಹಪುಷ್ಟಿಯನ್ನುಂಟುಮಾಡಿ ನವಚೈತನ್ಯವನ್ನುಂಟುಮಾಡುವುದು. ಅಲ್ಲದೆ ಆರೋಗ್ಯ ದೃಢಶರೀರವುಳ್ಳವರಾಗಿ ದೀರ್ಘಕಾಲ ಬದುಕುವರು. ಕೆಮ್ಮು, ಉಬ್ಬಸ ವ್ಯಾಧಿಯುಳ್ಳವರಿಗೂ ಮುಖ್ಯವಾಗಿ ಕ್ಷಯರೋಗಿಗಳಿಗೂ ಇದು ಸಂಜೀವಿನಿಯೇ ಸರಿ. ಚರಕ ಸಂಹಿತೆಯಲ್ಲಿ ಇದರ ಗುಣವು ಅದ್ಭುತವಾಗಿ ಹೇಳಲ್ಪಟ್ಟಿದೆ. ೧೦ ತೊಲೆಗೆ ೧ ರೂಪಾಯಿ. ೪೦ ತೊಲೆಗೆ ೩ ರೂಪಾಯಿ.

ಎಲ್ಲಾ ಕಡೆಯಲ್ಲಿಯೂ ಏಜಂಟರು ಬೇಕು.

ಸೂಚನೆ:—ಇಲ್ಲಿ ಶಾಸ್ತ್ರೀಯವಾದ ಎಲ್ಲಾ ಔಷಧಗಳೂ ಹೆಚ್ಚಾಗಿ ಕ್ರಯಕ್ಕೆ ಸಿಗುವುವು. ಆಯುರ್ವೇದ ಭೂಷಣ ಕೆ. ನಾರಾಯಣ ರ್ ಎ. ಎಂ. ಎ. ಸಿ. ಯವರು ರೋಗಿಗಳನ್ನು ಪರೀಕ್ಷಿಸಿ ಚಿಕಿತ್ಸೆಯನ್ನು ಪ್ರತಿದಿನವೂ ನಡಿಸುವರು. ವಿಶೇಷ ಸಂಗತಿಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಟಿ. ಸಿ. ಎಸ್. ಮುನಿಯಂ ಅಂಡ್ ಕೋ,

ಮ್ಯಾನೇಜಿಂಗ್ ಏಜಂಟ್ಸ್, ಆಂಧ್ರ ಆಯುರ್ವೇದಿಕ್ ಫಾರ್ಮಸಿ

೬೬ ಚಿಕ್ಕಪೇಟೆ, ಬೆಂಗಳೂರು ಸಿಟಿ

—4

ಕರ್ಣಾಟಕ

ಎಗ್ಯೂ ಮಿಕಶ್ಚರ್

ಚಳಿಜ್ವರ, ಮಲೇರಿಯ ಜ್ವರ, ಇನ್‌ಫ್ಲುಯೆಂಝು ಅಡ್ಡಜ್ವರ, ಮೊದಲಾದವುಗಳ ಮೇಲೆ ಅಪ್ರತಿಮವಾದ ಔಷಧವು.

ಬೆಲೆ ಬಾಟ್ಲಿಯೊಂದಕ್ಕೆ ರು. ೦-೧೪-೦
ಟಪ್ಪಾಲು ಚಾರ್ಜು ಬೇರೆ
ಡಜನ್ ಬಾಟ್ಲಿಗಳಿಗೆ ಟಪ್ಪಾಲುವೆಚ್ಚ ಸಹ ರು.
೯—೨—೦

ಏಜಂಟರು ಬೇಕು, ಕೊಡಗಿನ ಸ್ಟೇಶನರಿ ಸ್ಟೋರುಗಳು ತ್ತ್ಯಾವಿನ ಮೂರು ಜನ ಔಷಧದ ವ್ಯಾಪಾರಿಗಳ ಹೆಸರನ್ನು ತಿಳಿದಲ್ಲಿ ಅಂದವಾದ ಬ್ಲಾಟಿಂಗ್ ಪೇಪರು ಪುಕ್ಕಟೆ.

12—7   ಕರ್ಣಾಟಕ ಬ್ರದರ್ಸ್,

ಗಿರಗಾಂವ, ಮುಂಬಾಯಿ.

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್, ಕೊ ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ.

		ರೂ.
ಶೇರ್ ಬಂಡವಾಳ	—	50,000
ವಸೂಲಾದ ಶೇರ್ ಮೊಬಲಗು	—	9890
ಜಮೆಬಂದ ಠೇವಣಾತಿ	—	90,600

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇ ಹೆಚ್ಚಾಗಿ ಸಾಲುಕೊಡತಕ್ಕದ್ದು.

ಒಂದು ವರ್ಷ ವಾಯಿದೆ ಅಧವ ಹೆಚ್ಚಿನ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ ರೂ. 6-4-0ರ ವರೆಗೆ ಬಡ್ಡಿ ದೊರೆಯುತ್ತೆ. ಕಡಿಮೆ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ 5ರ ಬಡ್ಡಿ ದೊರೆಯುತ್ತೆ.

ವರ್ಷಕ್ಕೊಂದಾವರ್ತಿ ಕೊ ಆಪರೇಟಿವ್ ರಿಜಿಸ್ಟ್ರಾರವರು ಆಡಿಟಮಾಡಿಸಿ ಮಾಡುತ್ತಾರೆ.

ಪ್ರೆಸಿಡೆಂಟರು,   ಟ್ರೆಜರರ್.

ಪಂಡೀರ ಕುಟ್ಟಯ್ಯನವರು,   ಯಂ. ಭುಜಂಗರಾಯರು

ರಾಯ್ ಬಹದ್ದೂರ್.   ಬಿ.ಎ., ಬಿ.ಎಲ್.

ಸೆಕ್ರೆಟರಿ

ಸಿ. ಯನ್. ವೆಂಕಪ್ಪಯ್ಯನವರು, ಬಿ.ಎ., ಬಿ.ಎಲ್.

ತಾರೀಖು 29—5—1925.

Apply for our shooting Season's Clearance Sale Catalogue of Brand New Goods.

10 to 25 percent Reductions in Prices.

No License Required!!   **No License Required**



Webley and Scott Air Pistol, cal ·177 or ·22, bore Powerful and Accurate, complete with a sample box of slugs, two spare washers, a brush forcleaning, and a bookletof instructions Rs. 30/— Free delivery.

Pwerful German Diana Air gun. Handsome and Accurate, takes B S A Patern No 1 Slugs and Darts, expressly recommendable for Target Practice Rs. 15/ Free delivery.

Brilliant Search Light Lamp for Night Sports Rs. 30/— Free delivery.

No License required to purchase or to possess the above items.

Reliable D B B L 12 bore guns	Rs. 60/—	and upwards.
Do. S.B B L 12	do	do. 40/—	do.
D B.M L Guns		„ 45 -	do.
S B M L. do.		„ 30/—	do.
S B. B L Rifles		„ 25/—	do
B L. Revolvers and Pistols		„ 30/—	do.

Arms, Ammunition and shooting requisitesof almost every kind andquality offered at exceptionally favourable rates ANumber of good quality second hand weapons also offered for sale in theNew Catalogue.

GOOLAMHUSAIN ALLIBHOY & SONS
Largest Importers of Firearms and Ammunition,
Cheapest priced firm in India,

24. 1   210 Abdul Rehman Street, BOMBAY.

೧೬ ಚಿತ್ರಪಟ ಗಳಿದ್ದಾವೆ

ಸಚಿತ್ರ ಶುಕಸಪ್ತತಿ ಕಥೆ.

೭೦ ಕಥೆಗಳು ೫೧೨ ಪುಟಗಳು

ಈ ಕಥೆಯು ಧರ್ಮಶಾಸ್ತ್ರ, ವೇದಾಂತ, ಸ್ತ್ರೀಜಾತಿಕೃತ್ಯ ಬ್ರಾಹ್ಮಣ, ವೈಶ್ಯ, ಕ್ಷತ್ರಿಯ, ಶೂದ್ರರೆಂಬ ನಾಲ್ಕು ವರ್ಣದವರು ನಡೆಯತಕ್ಕ ವರ್ಣಾಶ್ರಮ ಧರ್ಮವೇ ಮುಂತಾದ ಸದ್ವಿಚಾರಗಳನ್ನು ಬೋಧಿಸುವುದು. ೧ ಕಥಾರೂಪವಲ್ಲಿ ಚಿತ್ರಕಥಾ ಚಮತ್ಕಾರ ಶೋಭಿತವಾಗಿಯೂ ನೀತಿಬೋಧಕವಾಗಿಯೂ ಇರುವುದರಿಂದ ಸ್ತ್ರೀಯರು, ಪುರುಷರು, ಬಾಲಕರು ಎಂಬ ಭೇದವಿಲ್ಲದೆ ಎಲ್ಲರೂ ಓದಬಹುದು. ೨. ಲೋಕಾನುಭವಕ್ಕೆ ಬೇಕಾದ ಅನೇಕ ವಿಷಯಗಳು ಇದರಿಂದ ತಿಳಿಯಬರುವುವು. ೩. ಈ ಕಥೆಯನ್ನು ಓದುವದರಿಂದ, ಮನಸ್ಸನ್ನು ದುರಾಚಾರದಲ್ಲಿ ನಿಡದಂತೆ ಸದಾಚಾರದಲ್ಲಿಯೇ ನಡೆಯುವಂತೆ ಮಾಡುವುದು. ೪ ವಿವೇಕಾವಿವೇಕವನ್ನು ತಿಳಿಯತಕ್ಕ ಜ್ಞಾನವನ್ನು ಉಂಡುಮಾಡುವುದು. ಬೇಕಾದವರು ವಿ. ಪಿ. ಪೋಸ್ಟು ಮೂಲಕ ತರಿಸಿಕೊಳ್ಳಬಹುದು.

ರಟ್ಟಿನ ಕಾಗದ ಕ್ರಯ ಪ್ರತಿ ೧ಕ್ಕೆ ರೂ. ೨-೦-೦. ಟಪ್ಪಾಲು ಹಾಸಲು ೦-೮-೦.

ಸಚಿತ್ರ ಭಟ್ಟಿ ವಿಕ್ರಮಾದಿತ್ಯರಾಯನ ಕಥೆ ೭ ಭಾಗನೇರಿದ್ದು ೬೧೨ ಪುಟಗಳು ಕ್ರಯ ೨-೪-೦. ಸಚಿತ್ರರಾಜ ಕಂಠೀರವ ಕಥೆ ೪೮೦ ಪುಟಗಳು, ಕ್ರಯ ರೂ. ೨.

ಸಚಿತ್ರ ಶ್ರೀರಾಮತತ್ವಾಮೃತ ಎಂಬ ಸೀತಾರಾಮಾಂಜನೇಯ ಸಂವಾದ ೨೪೭ ಪುಟಗಳು ೧-೮-೦. ಇವುಗಳಿಗೆ ಟಪಾಲು ಚಾರ್ಜು ಬೇರೆ.

ನಮ್ಮಲ್ಲಿ ದೊರೆಯುವ ಎಲ್ಲಾ ಪುಸ್ತಕಗಳ ಕ್ರಯಪಟ್ಟಿ (ಕ್ಯಾಟಲಾಗಿ)ಗೆ ಬರೆದರೆ ಕಳುಹಿಸುವೆವು.

52—8   ನಮ್ಮ ವಿಳಾಸ—   ಎಂ ಜಿ. ಕೃಷ್ಣಸ್ವಾಮಿ ಶೆಟ್ಟಿ,

ಬುಕ್ಕುಡಿಪೋ, ಚಿಕ್ಕಪೇಟೆ,   ಬೆಂಗಳೂರು ಸಿಟಿ

ಹೊಸ ಸಾಮಾನುಗಳು! ಸುಲಭ ಕ್ರಯ!! ಈಗತಾನೇ ಬಂದಿವೆ!!!

ಇಂಥ ಸುಸಮಯವನ್ನು ಕಳಕೊಳ್ಳಬೇಡಿರಿ!

12 ಬೋರ್ ಜೋಡಿ ಕೊಳವಿನ ತೋಟೆ ಕೋವಿ 1ಕ್ಕೆ	ರೂ.	115—0—0
12 „ 32 ಇಂಚಿನ ಒಂಟಿ ಕೊಳವಿನ ತೋಟೆ ಕೋವಿ (ಜರ್ಮನಿ) 1ಕ್ಕೆ.	„	60—0—0
„ „ 35 „ „ „ „	„	65—0—0
ಜೋಡಿ ಕೊಳವಿನ ಕೇಪು ಕೋವಿ 20ನೇ ನಂಬ್ರು 1ಕ್ಕೆ....	„	85—0—0
12 ಬೋರ್ ಚಿಲ್ಲು ತೋಟೆಗಳು (ಒಳ್ಳೇ ನಮೂನೆ) 100ಕ್ಕೆ	„	14—0—0
„ „ ಆನೆ ಚಿಲ್ಲು „ „ „	„	16—0—0
„ „ ಗುಂಡು ತೋಟೆಗಳು „ „ ...	„	19—0—0
ಕೋವಿ ಕ್ಲೀನ್ ಮಾಡುವ ಮತ್ತು ತೋಟೆ ತುಂಬಿಸುವ ಸಾಮಾನುಗಳ 1 ಪೆಟ್ಟಿಗೆಗೆ		27—8—0
ಕೇಪು 250ರ 1 ಟಿನ್ನಿಗೆ	ರೂ.	1—5—0
ಕಾಲು ಪೌಂಡು 2 ಯಘಾನ ಮದ್ದು ಡಬ್ಬಿ 1ಕ್ಕೆ	„	1—0—0
ಚಿಲ್ಲು ಎಲ್ಲಾ ತರಹದ ನಮೂನೆ ರಾತ್ತಲ್ಲ 1ಕ್ಕೆ	„	0—10—0
ಪೂರ್ತಿ ಉಕ್ಕಿನ ಸೊಗಸಾದ ಗುದ್ದಲಿಗಳು 5 ಪೌಂಡಿನ 1 ಡಜನ್ನಿಗೆ	„	37—0—0
„ „ „ 4 „ „	„	30—0—0
4 ಮುಳ್ಳಿನ ಮುಳ್ಳು ಗುದ್ದಲಿಗಳು ಡಜನ್ನಿಗೆ	„	60—0—0
3 „ „ „	„	48—0—0
4 ಪೌಂಡಿನ ಮರ ಕಡಿಯುವ ಕೊಡಲಿಗಳು ಡಜನ್ನಿಗೆ	„	54—0—0
ಇಂಗ್ಲಿಷ್ ನಮೂನೆ ಕಪಾತು ಚಾಕುಗಳು ಡಜನ್ನಿಗೆ	,	15—0—0
ಮಿಶನ್ ಕೊಡೆಗಳು ದೊಡ್ಡ ಸೈಜ್ (ಸ್ಟೀಟಜರಾಲಾಂಡ್) 1ಕ್ಕೆ	„	4—8—0
ಸಣ್ಣ ಸೈಜ್ „ „	„	4—4—0
ಹೋಲ್‌ಸೇಲ್‌ಗೆ „ ..	„	ಕಮ್ಮಿ ಕ್ರಯ

ಮೆಕ್ಡೋಲ್ ಕಂಪೆನಿ,
ಮಡಿಕೇರಿ

Messers Mc Dowell & Co
Mercara

128

ಕಿರ್ಲೋಸ್ಕರ ಪೇಟಂಟ ಪಂಪಿನ ತಪ್ಪಲಿ.



ಈ ತಪ್ಪಲಿಯು ನಮ್ಮ ಕಾರ್ಖಾನೆಯಲ್ಲಿಯೇ ತಯಾರಾಗುತ್ತದೆ. ಪಂಪಿನ ದರಿಂದ ಇದಕ್ಕೆ ಪೇಟಂಟ್ ದೊರೆತ್ತಿರುತ್ತದೆ. ಇದರ ಮುಖ್ಯ ಗುಣಗಳು:

೧. ನೀರನ್ನು ಮುಟ್ಟಿದ ಕೂಡಲೇ ತುಂಬಿ ಒಯುವದು.

೨. ಮೇಲಕ್ಕೆ ಬರುವಾಗ್ಗೆ ಒಂದು ಹನಿ ನೀರು ಸೋರುವದಿಲ್ಲ.

೩. ದೋಣಿಯಲ್ಲಿ ನೀರು ಹೇಳುವಾಗ್ಗೆ ತಿಗಲಿನ ತಪ್ಪಲಿಯಂತೆ ವಿಸ್ತರಿಸಿ ಹೋಗುವದಿಲ್ಲ.

ಬೆಲೆಯು ಅಗ್ಗ. ಹೆಚ್ಚಿನ ಸಂಗತಿ ಬಗ್ಗೆ ಬರೆದು ತಿಳಿದುಕೊಳ್ಳಿರಿ.

ಕಿರ್ಲೋಸ್ಕರ ಬಂಧು, ಲಿಮಿಟೆಡ್.
ಕಿರ್ಲೋಸ್ಕರವಾಡಿ,
16—7 ಜಿ. ಸಾತಾರ್.

ವಿಶೇಷದ ಮಾರಾಟ!

ಉಚಿತ! ಪಾಕೆಟ್ ವಾಚ್! ಉಚಿತ!

18 ಕ್ಯಾರೆಟ್ ರೋಲ್ಡ್ ಗೋಲ್ಡ್ ಪ್ಲೇಟ್ ಚಿನ್ನದ ಮುಖ ಚಿಲ್ಲೆಯಿರುವ ಮುಂಗೈ ಗಡಿಯಾರ ನಂ. 100.

ಇದು ಅತ್ಯಂತ ಹೊಸ ಮಾದರಿದು, ಸುಂದರವಾದ ಆಕಾರ, ಸೊಗಸಾದ ಕೆಲಸ, ಸ್ವಿಸ್ ಮೇಡ್, ಮುಖ ಚಿಲ್ಲೆಯು ಥಳ ಥಳ ಹೊಳೆಯುತ್ತಾ ಆಕರ್ಷಿಸುತ್ತದೆ. 100 ರೂ. ಮತ್ತು ಹೆಚ್ಚಿಗೆ ಬೆಲೆಯಿರುವ ಉತ್ಕೃಷ್ಟ ವಾಚಿನಂತೆ ಕಾಣುತ್ತದೆ. ಸುಂದರವಾಗಿಯೂ ಚಿಕ್ಕದಾಗಿಯೂ ಇದೆ. ಗಂಡಸರಿಗೂ ಹೆಂಗಸರಿಗೂ ಉಪಯೋಗಿಸಲು ಅನುಕೂಲವಿರುವ ಅತ್ಯುತ್ತಮ ವಾಚ್. ಯಾವ ಹವದಲ್ಲಾದರೂ ಸರಿಯಾದ ಟೈಮ್ ಕೊಡುವ ವಾಚ್. ಮೂರು ವರ್ಷಗಳ ಗ್ಯಾರೆಂಟಿ ಕೊಡಲಾಗುತ್ತೆ. ಯಾವ ಆಕಾರದ್ದಾದರೂ ಒಂದು ವಾಚನ್ನು ಒಂದು ತಿಂಗಳೊಳಗೆ ಕೊಂಡುಕೊಂಡವರಿಗೆ ನಿಕಲ್ ಪಾಕೆಟ್ ವಾಚ್ ಒಂದು ಉಚಿತವಾಗಿ ಕೊಡಲಾಗುತ್ತದೆ. ಕ್ರಯ 8—0—0.

OVERSEAS SWISS WATCH CO.
POST BOX. No. 371,
Mount Road, MADRAS

ಇಮಿಟೇಷನ್ ವಜ್ರದ ಉಂಗುರಗಳು.
(White Imitation Kammals.)

ಈ ಉಂಗುರಗಳನ್ನು ಒಂದು ವಿಧವಾದ ಲೋಹದಿಂದ ಮಾಡಿ ಭಂಗಾರದಂತೆ ಗಿಲೀಟುಮಾಡಿದೆ. ಮೇಲು ಭಾಗದಲ್ಲಿ ಕೆಂಪು, ಹಸರು ಮುಂತಾದ ಇಮಿಟೇಷನ್ ವಜ್ರದ ಕಲ್ಲುಗಳು ಇಟ್ಟು ಕಟ್ಟಿದ ಕಟ್ಟಿರುವರು. ನೋಟಕ್ಕೆ ನಿಜವಾದ ವಜ್ರದ ಉಂಗುರವೆಂದೇ ಹೇಳಬೇಕು. ಬೇಕಾದವರು ಬೆರಳಿನ ಅಳತೆಯನ್ನು ಉಹಿರಿ.

ಕ್ರಯ 1ಕ್ಕೆ 2—0—0, 7ಕಲ್ಲಿನ ಬಿಳಿ ಕಮ್ಮಲು 2—8—0,
ಕ್ರಯ 3ಕ್ಕೆ 5—8—0. 7ಕಲ್ಲಿನ ಕೆಂಪು ಕಮ್ಮಲು 3—0—0.

P. K. Sawmy & Co,
No 17 Evening Bazaar,
52-12 Madras

ರೋಲ್ಡ್ ಗೋಲ್ಡ್ ಕೈ ಬಳೆಗಳು.

ಇದು ಶುದ್ಧವಾದ ಅಮೇರಿಕನ್ ರೋಲ್ಡ್ ಗೋಲ್ಡ್ ಚಿನ್ನದಿಂದ ಬಹಳ ನಾಜೂಕಾಗಿಯೂ, ಚಮತ್ಕಾರವಾಗಿಯೂ ಎಂದಿಗೂ ಬಣ್ಣವು ಕೆಡದಂತೆ ತಯಾರ್ಮಾಡಲ್ಪಟ್ಟಿರುವದು. ಪ್ರಕಾಶವು ಥಳಥಳಿಸುತ್ತಿರುವದು. ಸಹಸ್ರಾರು ಹೂವುಗಳು ಆಗತಾನೆ ಅರಳಿದರೆ ಹೇಗೋ ಹಾಗೆ ಈ ಹೂವುಗಳು ನಿರ್ಮಿಸಲ್ಪಟ್ಟಿರುವವು. ಇದರ ಪ್ರಕಾಶ ಕತ್ತಲೆಯಲ್ಲಿ ನೋಡುವವರ ಕಣ್ಣನ್ನು ಮುಚ್ಚುವಂತಿರುವುದು. ಆರ್ಡರೊಡನೆ ಕೈಯ ಅಳತೆಯನ್ನು ತಪ್ಪದೆ ಸಮೂದಿಸಬೇಕು. ಹೆಂಗಸರು ಇದನ್ನು ಕೈಯಲ್ಲಿ ಹಾಕಿಕೊಂಡರೆ ಬೇರೆ ಯಾವ ಆಭರಣಗಳೂ ಬೇಕಾಗುವದಿಲ್ಲ. ಲಿಂಗಾಯತ, ಬ್ರಾಹ್ಮಣ ಹೆಂಗಸರಿಗೆ ಬಹು ಮುಖ್ಯವಾದ ಆಭರಣ.

ಜೊತೆ 1ಕ್ಕೆ ರೂ. 2—0—0.

ದೇವತಾ
ವಿಗ್ರಹಗಳ ಪ್ರತಿಮೆಗಳು.

ಈ ವಿಗ್ರಹಗಳು ಸೀಮೆಯಲ್ಲಿ ರಬ್ಬರಿನಿಂದ ತಯಾರಿಸಲ್ಪಟ್ಟದ್ದು. ಕಾರಣ ಲೆಟರು, ಲಗ್ನಪತ್ರಿಕೆ ಮುಂತಾದವುಗಳಿಗೆ ಬಚ್ಚರ ಸಹಾಯವಿಲ್ಲದೆ ನಾವೇ ಅಚ್ಚು ಮಾಡಿಕೊಳ್ಳಬಹುದು. ಇದರಲ್ಲಿ ಕೃಷ್ಣ, ಗಣೇಶ, ರಾಮ, ಹನುಮಂತ ಮುಂತಾದ ಪ್ರತಿಮೆಗಳ ಮುದ್ರೆಗಳು ಇರುವವು. ಇದರ ಸಂಗಡ ಇಂಕ್‌ಪ್ಯಾಡ್, ಪೆಟ್ಟಿಗೆ ಸಹ ಸೇರಿ ಸೆಟ್ 1ಕ್ಕೆ 0—12—0.

ವಿಳಾಸ:—ಎಸ್. ಆರ್. ಕೃಷ್ಣ ಅಂಡ್ ಕೋ,
12-12 ನಂ ೧, ತಂಬುನಾಯಕನ ಬೀದಿ, ಮದ್ರಾಸ್

ಇಮಿಟೇಷನ್ ರೇಷ್ಮೇ ಸೀರೆಗಳು.

ಈ ಸೀರೆಗಳು 18ಮೊಳ, ಉದ್ದವೂ 2½ಮೊಳ ಅಗಲವೂ ಇದೆ. ಈ ಸೀರೆಗಳನ್ನು ಹಸನಾದ ಇಮಿಟೇಷನ್ ಸಿಲ್ಕ್ ಗಟ್ಟಿ ದಾರದಿಂದ ತಯಾರಿಸಿದೆ. ಇದು ನೋಡಲಿಕ್ಕೆ ಭಾರಿ ಕ್ರಯದ ಸೀರೆಗಳಂತೆ ಕಾಣುವದಲ್ಲದೆ ಅಂದವಾದ ಅಂಚೂ, ಸುಂದರವಾದ ಸಾಚಾ ರೇಷ್ಮೆಯ ಸೆರಗೂ ಇರುವದು. ಈ ಮಾದರಿ ಸೀರೆಗಳು ಬೇರೆ ಯಾರಲ್ಲಿಯೂ ಈ ಕ್ರಯಕ್ಕೆ ಸಿಕ್ಕಲಾರದು. ಈ ಸೀರೆಗಳು ಶ್ರೀಮಂತರಿಗೂ, ಗರೀಬರಿಗೂ ಉಡಲಿಕ್ಕೆ ಬಹು ಲಾಯಕ್ಕಾದವು. ಮಾದರಿಗಾಗಿ ಕೆಲವನ್ನು ಮಾತ್ರ ತಯಾರಿಸಿರುತ್ತೇವೆ. ಆದ್ದರಿಂದ ಬೇಗನೆ ತರಿಸಿಕೊಳ್ಳುವವರಿಗೆ ಮಾತ್ರ ಸಿಕ್ಕುವವು.

ಕ್ರಯ ಸೀರೆ 1ಕ್ಕೆ ನಂ 1. ರು. 6—8—0
,, ನಂ 2. ರು. 7—8—0

ವಿಳಾಸ.—ಮಹಾರಾಜ ಟ್ರೇಡಿಂಗ್ ಕಂಪೆನಿ,
16 ತಿರುಪಳ್ಳಿ ಬೀದಿ,
ಮದರಾಸು.

ಈಗಲೇ ಪ್ರಿಂಟಾಗಿದೆ! ಶೃಂಗಾರವಾದ ಪುಸ್ತಕ!!

ಸ್ತ್ರೀ ಪುರುಷರ ಪ್ರೀತಿಯ ಮರ್ಮಗಳನ್ನು ಚಿತ್ರಪಟಗಳ ಸಹಿತ ತಿಳಿಸುವ

ಮರ್ಮ ಶಾಸ್ತ್ರ.

ಫ್ರೆಂಚ್ ಬಾಷೆಯಲ್ಲಿ ಇದ್ದದನ್ನು ಸುಲಭ ಶೈಲಿಯಲ್ಲಿ ಕನ್ನಡ ಭಾಷೆಗೆ ಬಾಷಾಂತರಿಸಿರುತ್ತೇವೆ. ಸ್ತ್ರೀಪುರುಷರುಗಳಿಗೆ ಬೇಕಾದ ಎಲ್ಲಾ ಮರ್ಮ ರಹಸ್ಯಗಳು, ರತಿ ಮನ್ಮಥನು ಆನಂದವಾಗಿರುವದಕ್ಕೆ ಬೇಕಾದ ಉಪಾಯಗಳು, ಸ್ತ್ರೀಪುರುಷರ ಜಾತಿಯ ಲಕ್ಷಣಗಳು ಗರ್ಭಧರಿಸುವದು, ಶಿಶು ಉತ್ಪತ್ತಿವಿಧ, ಗುಪ್ತ ವೈದ್ಯ, ಶಯನ ಗೃಹದ ನಿಯಮಗಳು, ಇನ್ನೂ ಸ್ತ್ರೀಪುರುಷರಿಗೆ ಬೇಕಾದ ಲೀಲ ರಹಸ್ಯಗಳು ತುಂಬಿದೆ. ಈ ಶೃಂಗಾರವಾದ ಪುಸ್ತಕವನ್ನು ತರಿಸಿ ಆನಂದ ಹೊಂದುತ್ತಾರೆಂದು ನಂಬಿರುತ್ತೇನೆ. ಪಟಗಳ ಸಹಿತ ಕ್ರಯ ಪುಸ್ತಕ 1ಕ್ಕೆ ರೂ. 1—0—0

ವಿಳಾಸ.—ಟಿ ರಾಮಚಂದ್ರರಾವ್ ಕಂಪೆನಿ,
52—31 ಪೋಸ್ಟು ಬಾಕ್ಸ್ ನಂ. 232, ಮದರಾಸ.

ನೈಟ್ರೇಟ್ ಆಫ್ ಸೋಡಾ

ಎಲ್ಲಾ ಬೆಳೆಗಳಿಗೂ ಅತ್ಯುತ್ತಮವಾದ ಗೊಬ್ಬರ

Nitrate of Soda 15-16 per cent. N

ಈ ಗೊಬ್ಬರದಲ್ಲಿ ಬೆಳೆಗಳಿಗೆ ಅತ್ಯಗತ್ಯವಾದ ನೈಟ್ರೋಜನ್ ಸಸ್ಯಾಹಾರವು

15-16% ಅಂದರೆ ಏನು ವ ಇಳ್ಳೇಯು ಹಿಂಡಿ ಗಳಬ್ಬರದಲ್ಲಿರುವುದಕ್ಕಿಂತಲೂ ವ ಹೂರು ಪಾಲಷ್ಟು ಜಾಸ್ತಿಯಾಗಿರುವದು. ಇದರಲ್ಲಿ ಸಿಕ್ಕುವಷ್ಟು ಸಾರಜನಕ (Nitrogen) ವು ಬೇರೆ ಯಾವ ಗೊಬ್ಬರಗಳಿಂದಲೂ ಗಿಡಗಳಿಗೆ ದೊರೆಯಲಾರದು. ಆದ್ದರಿಂದಲೇ ಭೂಲೋಕದ ಎಲ್ಲಾ ಭಾಗಗಳಲ್ಲಿಯೂ ರೈತರು ಇದನ್ನು ವಿಶೇಷವಾಗಿ ಉಪಯೋಗಿಸುತ್ತಾರೆ.

ಭತ್ತ, ಕಬ್ಬು, ತೆಂಗು, ಅಡಿಕೆ, ಮಾವು, ಹೊಗೆಸೊಪ್ಪು, ತರಕಾರಿ ಮೊದಲಾದವುಗಳಿಗೂ ಕಾಫಿ, ಟೀ, ರಬ್ಬರು, ಏಲಕ್ಕಿ ಮೊದಲಾದ ತೋಟ ಪೈರುಗಳಿಗೂ ಎಲುಬಿನ ಪುಡಿ ಅಥವಾ ಏನು ಗೊಬ್ಬರ ವಗೈರೆ ಊರ ಗೊಬ್ಬರಗಳ ಜೊತೆಯಲ್ಲಿ ಈ ಗೊಬ್ಬರವನ್ನು ಉಪಯೋಗಿಸುವದರಿಂದ ಬೆಳೆಯು ಸಮೃದ್ಧಿಯಾಗುವದು. ನೈಟ್ರೇಟ್ ಆಫ್ ಸೋಡಾದಲ್ಲಿರತಕ್ಕ ಸೋಡವು ಮಣ್ಣಿನಲ್ಲಿರುವ ಪೊಟೇಷ್ ಎಂಬ ಇನ್ನೊಂದು ತರದ ಸಸ್ಯಾಹಾರವನ್ನು ಗಿಡಗಳಿಗೆ ಒದಗಿಸಿ ಕೊಡುತ್ತದೆ.

ಈ ಗೊಬ್ಬರವು ನೋಟಕ್ಕೆ ಬರೇ ಉಪ್ಪಿನ ಹಾಗಿದ್ದು ಅಪಾಯಕರವಲ್ಲ. ಎಕರೆ ಒಂದಕ್ಕೆ 100-200 ರಾತ್ತಲು ಸಾಕಾಗುವದು. ಹೆಚ್ಚಿನ ಮಾಹಿತಿ ಮತ್ತು "ಕೃಷಿಸಹಾರ" ಎಂಬ ಪುಸ್ತಕವನ್ನು ಈ ಕೆಳಗಿನ ವಿಳಾಸದವರಿಂದ ಧರ್ಮಾರ್ಥವಾಗಿ ಪಡೆಯಬಹುದು.

52—8 **CHILEAN NITRATE COMMITTEE,**
Post Box 469, CALCUTTA.

ಒಂದು ಪ್ರಬಲವಾದ ಪ್ರಶ್ನೆ.

ನಮ್ಮ ಜೀವವನ್ನು ವಿತಕ್ಕಾಗಿ ವಿಮೆಮಾಡಬೇಕು!

ವೃದ್ಧಾಪ್ಯದಲ್ಲಿ ನಮ್ಮ ಮತ್ತು ಹೆಂಡತಿ ಮಕ್ಕಳ ಪೋಷಣೆಗಾಗಿ!

ಈಗಾಗಲೇ ಸಾವಿರಾರು ಜನರು ವಿಮೆಮಾಡಿರುವ ಏಳು ಕೋಟಿ ರೂಪಾಯಿಗಿಂತ ಹೆಚ್ಚು ಬಂಡವಾಳವಿರುವ ದೇಶೀಯ ವಿಮೆಕಂಪೆನಿಯಲ್ಲಿ ಅತ್ಯಂತ ಗೊಡ್ಡದಾದ ಸಾವಿರ ರೂಪಾಯಿ ವಿಮೆಮಾಡಿದವರಿಗೆ ವರ್ಷಕ್ಕೆ 18ರೂ. ಕಡಿಮೆಯಿಲ್ಲದೆ ಲಾಭ ಕೊಡುವ 'ಓರಿಯಂಟಲ್' ಗವರ್ನಮೆಂಟ್ ಜೀವವಿಮೆ ಕಂಪೆನಿಯ ರೂಲ್ಸಿಗೂ, ಶರತಿಗೂ ಈ ಕೆಳಗಿನವರಿಗೆ ಬರೆದು ತಿಳಿದುಕೊಳ್ಳಿ.

ಖಾದಿಬಟ್ಟೆ ಎಂದರೇನು?

ದೇಶೀಯ ಹತ್ತಿಯಲ್ಲಿ ಕೈರಾಟೆಯಿಂದ ನೂಲು ತೆಗೆದು ಇಲ್ಲಿಯೇ ತಯಾರಿಸುವ ಬಟ್ಟೆಯೇ 'ಖಾದಿ.' ಈಗಾಗಲೇ ನಮ್ಮ ಸಿಟ್ಟೋರಿನಲ್ಲಿ ಪರದೇಶೀಬಟ್ಟೆಗಿಂತ ಗಟ್ಟಿಯಲ್ಲಿಯೂ ಅಂದದಲ್ಲಿಯೂ ಕಡಿಮೆ ಇಲ್ಲದಂತ, ಎಲ್ಲಾ ತರದ ಸೀರೆಗಳು ಚೆಕ್ಕುಗಳು, ಶಾಲು ವಗೈರೆ ಎಲ್ಲಾ ತರದ ಬಟ್ಟೆಯು ತಯಾರಾಗಿದೆ. ದಯವಿಟ್ಟು ಪ್ರೋತ್ಸಾಹಿಸಿರಿ! ಖಾದಿಯಿಂದಲೇ ಸ್ವರಾಜ್ಯ. ಖಾದಿಯಿಂದಲೇ ಮೋಕ್ಷವೆಂಬುದನ್ನು ಮರೆಯಬೇಡಿರಿ.

ವೀರಾಜಪೇಟೆ, ಕೆ. ಪಿ. ಚಿಣ್ಣಪ್ಪ,
ದಕ್ಷಿಣ ಕೊಡಗು. ಪ್ರೊಪ್ರೈಟರ್,
ಖಾದಿಭಂಡಾರ
52—17.

Printed & published by P. I. Belliappa, at "Kodagu" Press, Mercara for "Kodagu" Ltd

Reg. N. M. 1550.
If not delivered please return to
"KODAGU" OFFICE, MERCARA

ಕೊಡಗು.

ಸತ್ಯೇನ ಧರ್ಮೇಣ ... || ... ||

ಸಂಪಾದಕ— ಪಂದ್ಯಂಡ ಐ. ಬೆಳ್ಯಪ್ಪ.

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವದು.

ಸಂಪುಟ ೬] ಕೊಡಗು, ಸ. ೧೯೨೬ನೇ ಇಸವಿ ಜುಲೈ ತಾರೀಖು ೨೩ನೇ ಶುಕ್ರವಾರ [ಸಂಖ್ಯೆ ೮

ಸ್ಥಾಪಿತವಾದದ್ದು 1874. ಮೂಲಧನ 7 ಕೋಟಿ ರೂಪಾಯಿಗಳ

ಓರಿಯಂಟಲ್ ಗವರ್ನ್‌ಮೆಂಟ್ ಸೆಕ್ಯೂರಿಟಿ ಲೈಫ್ ಅಷ್ಯೂರೆನ್ಸ್ ಕಂಪೆನಿ ಲಿಮಿಟೆಡ್, ಹೆಡ್ ಆಫೀಸು= ಬೊಂಬಾಯಿ.

1922—1924 ಈ ಮೂರು ವರ್ಷಗಳಲ್ಲಿ ಕಂಪೆನಿಯಲ್ಲಿ ನಡೆದ ಕೆಲಸದ ಫಲಿತಾಂಶಗಳು.—

ಲಾಭ— ರೂ. 51,00,000 (ಐವತ್ತೊಂದು ಲಕ್ಷ ರೂಪಾಯಿಗಳು) ಈ ಪೈಕಿ 45,91,80 ರೂಪಾಯಿಗಳನ್ನು ಲಾಭ ಸಹಿತ ವಿಮೆ ಮಾಡಿರುವವರ ವಿಮೆ ಹಣಕ್ಕೆ ಹೆಚ್ಚು ಬೋನಸ್ ಜಮೆಯಾಗಿ ಈ ಕೆಳಗೆ ಕಾಣಿಸಿರುವ ರೀತಿಯಲ್ಲಿ ಸೇರಿಸಿರುತ್ತದೆ

ಜೀವಮಾನಾವಧಿಯ ವಿಮೆದಾರರಿಗೆ ರೂ. 1000 ವಿಮೆ ಹಣಕ್ಕೆ

ಈ ಮೂರು ವರ್ಷಗಳಿಗೆ ರೂ. 67½.

ಕ್ಲಿಪ್ತಕಾಲದ ವಿಮೆದಾರರಿಗೆ ರೂ. 1000 ವಿಮೆ ಹಣಕ್ಕೆ

ಈ ಮೂರು ವರ್ಷಗಳಿಗೆ ರೂ. 54.

ಈ ಕಂಪೆನಿಯಲ್ಲಿ ಕ್ರಮೇಣ ಹೆಚ್ಚುತ್ತಿರುವ ಜನಾನುರಾಗವು ಈ ಕೆಳಗೆ ಕೊಟ್ಟಿರುವ ಹೊಸ ಕೆಲಸದ ಪಟ್ಟಿಯಿಂದ ವ್ಯಕ್ತವಾಗುತ್ತದೆ.

1923ರಲ್ಲಿ—ರೂ. 1,74,00,000
1924 „ 2,37,00,000
1925 . 2,96,00,000

ಇನ್ನೂ ದಿನದಿನಕ್ಕೂ ಅಭಿವೃದ್ಧಿಯಾಗುತ್ತಲೇ ಇದೆ. ಜೀವವಿಮೆ ಪತ್ರದಲ್ಲಿ ಹಣವನ್ನು ಲಾಭಕರವಾಗಿ ಹೂಡಿಸಲು ಇದೇ ಸುಸಮಯ.

ಬೇಕಾದ ವಿಷಯಗಳನ್ನು ಈ ಕೆಳಗಿನ ವಿಳಾಸಕ್ಕೆ ಬರೆದು ತಿಳಿದುಕೊಳ್ಳಬಹುದು.

ಓರಿಯಂಟಲ್ ಬಿಲ್ಡಿಂಗ್ಸ್,
ಪೋಸ್ಟ್ ಬಾಕ್ಸ್ 56
ಬೆಂಗಳೂರು.

ಎಲ್. ಆರ್. ಕೃಷ್ಣಸ್ವಾಮಯ್ಯರ್,
ಬ್ರ್ಯಾಂಚ್ ಸೆಕ್ರೆಟರಿ.

52—16

ಮನೋಲ್ಲಾಸಿನಿ ತೈಲ.

ತಲೆನೋವು, ತಲೆ ತಿರುಗುವುದು, ತಲೆಯ ಕಣ್ಣುರಿ, ಕಿವಿಯಿಂದ ಕೀವು ಸೋರುವುದು ಕಿವುಡುತನ, ಕಣ್ಣುನೋವು, ಅಪಸ್ಮಾರ, ನಿದ್ದೆ ಬಾರದಿರುವುದು, ನೆನಪು ಶಕ್ತಿ ಕುಂದಿಹೋಗುವುದು ಇವುಗಳನ್ನೆಲ್ಲ ನಿಶ್ಚಿತ ಗುಣಮಾಡುತ್ತದೆ. ಉದುರುವ ಕೂದಲನ್ನು ನಿಲ್ಲಿಸಿ ಗಿಡ್ಡಗಿರುವ

ಕೂದಲನ್ನು ಬೆಳೆಯಿಸಿ ಕೂದಲಿಗೆ ಸೌಂದರ್ಯವನ್ನೂ ಹೊಳಪನ್ನೂ ಕೊಟ್ಟು ಅಕಾಲಕ್ಕೆ ಹಣ್ಣಾಗುವ ಕೂದಲನ್ನು ತಡೆದು ಕೂದಲು ಇಲ್ಲದ ಸ್ಥಳದಲ್ಲಿ ಹೊಸ ಕೂದಲನ್ನು ಹುಟ್ಟಿಸುತ್ತದೆ. ಚಿಕ್ಕ ಸೀಸೆಗೆ ರೂ 1, 3 ಸೀಸೆಗೆ 2—10—0, ಒಂದು ದೊಡ್ಡ ಸೀಸೆಗೆ ರೂ. 2, 3 ಸೀಸೆಗಳಿಗೆ 5—8—0.

ಚಂದನಾಸವ.— ಇದು ಪ್ರಮೇಹ, ಮೂತ್ರಕೃಚ್ಛ್ರ, ಮೂತ್ರ ಹನಿಹನಿಯಾಗಿ ಹೋಗುವುದು, ಮೂತ್ರಕೋಶದ ಉರಿ, ಮೂತ್ರಪಿಂಡಗಳ ಉರಿ ಮೂತ್ರನಾಳದಲ್ಲಿ ಹುಣ್ಣು, ಮೂತ್ರ ಹೊಯ್ಯುವಾಗ ಉರಿಯುವುದು, ಮೂತ್ರನಾಳದಿಂದ ಕೀವು ಬರುವುದು, ಮೂತ್ರದಲ್ಲಿ ಧಾತು, ಪುಡಿ ಹೋಗುವುದು, ಆಗಾಗ್ಗೆ ಮೂತ್ರ ಬರುವದು, ಮೂತ್ರ ತಡೆಯಲಿಕ್ಕೆ ಸಾಮರ್ಥ್ಯವಿಲ್ಲದಿರುವುದು, ದೇಹದಲ್ಲಿ ಉರಿ, ಬಾಯಾರಿಕೆ, ಸ್ವಪ್ನಾವಸ್ಥೆ, ಮೂತ್ರನಾಳದಲ್ಲಿ ಚುಚ್ಚುವ ನೋವು ಇವುಗಳಿಗೆ ಪರಮ ಔಷಧಿ ಗಂಡಸರಿಗೂ ಹೆಂಗಸರಿಗೂ ಇದು ಅತ್ಯುತ್ತಮ ಬೆಲೆ—ಬಾಟ್ಲಿ 1, 3, 6ಕ್ಕೆ ರೂ. 1—4—0, 3—8—0, 6—12—0.

ರೋಮನಾಶಿನಿ— ಈ ಪುಡಿಯನ್ನು ನೀರಲ್ಲಿ ಕಲಸಿ ಮೈಯಲ್ಲಿ ರೋಮವಿರುವ ಭಾಗಕ್ಕೆ ಹಚ್ಚಲು ರೋಮವು ಉದುರಿ ಬೀಳುವುದು. ಡಬ್ಬಿ ೧ಕ್ಕೆ 6 ಆಣೆ, 3 ಡಬ್ಬಿಗಳಿಗೆ ರೂ. 1, 1 ಡಜನಿಗೆ 3—8—0.

ಕಟುಕಷಾಯ ಮಲೇರಿಯಕ್ಕೆ.— ಇದು ಇಂಜಕ್ಷನ್ ಮತ್ತು ಕ್ವಿನೀನು ಸೇವಿಸಿದರೂ ಗುಣವಾಗದಿರುವ ಮಲೇರಿಯ, ದಿನಬಿಟ್ಟು ಬರುವ ಜ್ವರ, 3—4 ದಿವಸಕ್ಕೊಂದಾವರ್ತಿ ಬರುವ ಜ್ವರ, ನಡುಗಿ ಬರುವ ಜ್ವರ ಮತ್ತು ಜ್ವರದ ದೋಷದಿಂದ ಬರುವ ಜ್ವರಗಳಿಗೆ ಖಾತ್ರಿ ಗುಣ ಮಾಡುತ್ತದೆ. ಸೀಸೆ 1ಕ್ಕೆ ರೂ. 1—8—0, 3ಕ್ಕೆ ರೂ. 4—0—0, 6ಕ್ಕೆ ರೂ 7—0—0,

ನಮ್ಮ ಕೆಟಲಾಗು ತರಿಸಿ ನೋಡಿರಿ

ವಿಳಾಸ— ಮನೋಲ್ಲಾಸಿನಿ ಕಂಪೆನಿ,
೧ ಮಂಗಳೂರು, ಕಂಕನಾಡಿ.

52—31

ಸುವರ್ಣ ಅಯಸ್ಕಾಂತ ದ್ರಾವಕ.

(The Ideal Nervine Tonic)

ಇದು ಅತಿ ಆಶ್ಚರ್ಯಕರವಾದ ಟಾನಿಕ್!

ಇದರಿಂದ ಕೆಟ್ಟು ಹೋಗಿರುವ ರಕ್ತವನ್ನು ಶುದ್ಧ ಮಾಡುವುದು ಮೊದಲಿನ ಫಲ. ಅತಿ ಉಷ್ಣದಿಂದ ಕಣ್ಣಿಗೆ ಕತ್ತಲೆಯಾಗಿ ಕಾಣುವುದು. ಜ್ಞಾಪಕ ಶಕ್ತಿಯನ್ನುಂಟುಮಾಡುವುದು. ಸಡಿಲಾಗಿರುವ ನರಗಳಿಗೆ ಬಲವನ್ನು ಕೊಡುವುದು. ಯೌವನ ಜೀವಕ ಇನ್ನು ಅನೇಕ ಗುಣಗಳನ್ನು ಕೊಟ್ಟು ಬಲಹೀನತೆಯನ್ನು ಹೋಗಲಾಡಿಸಿ ಪೆಚ್ಚು ಬಲವನ್ನು ಕೊಡುವುದು.

ಇದನ್ನು 20 ದಿನ ಸೇವನೆ ಮಾಡುವದರಿಂದ ಮೇಲೆ ಹೇಳುವ ಗುಣಗಳನ್ನು ಕೊಟ್ಟು ಬಲಿಷ್ಠನಾಗಿ ಮಾಡುವುದು. ಪುರುಷರ ಸ್ತ್ರೀ ಪುರುಷರು ಮೊದಲು ದೊಡ್ಡವರ ವರೆಗೆ ಸೇವನೆ ಮಾಡಬಹುದು. ಉಪಯೋಗಿಸುವ ಕ್ರಮವು ಔಷಧದ ಕೂಡ ಕಳುಹಿಸಲ್ಪಡುವುದು.

ಕ್ರಯ 20 ದಿನಗಳು ಸೇವನೆ ಮಾಡುವ ಬಾಟ್ಲು ೧ಕ್ಕೆ 1—8—0.
„ 40 „ „ „ 2—8—0.

ಪಿ. ಕೆ. ಎಸ್.
17 ಉಮಸಿಂಗ್ ಬಜಾರ್,
ಪಿ. ಟಿ. ಮದ್ರಾಸ್.

12

ಸತ್ಯಮೇವ ಜಯತೇ.
(ಗುಣವಾಗದಿದ್ದರೆ ಹಣ ವಾಪಸ)
ಧಾತುಪುಷ್ಟಿಕ ಕಾಮೋತ್ತೇಜಕ, ಇಂದ್ರಿಯಸ್ತಂಭಕವಾದ

ಮದನೋದ್ಭವ ಗುಳಿಗೆ.

ಜನನೇಂದ್ರಿಯದ ಶಿಥಿಲತೆ ... ನಪುಂಸಕತ್ವ, ಸ್ತ್ರೀ ... ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣವಾಗುವವು. ಧಾತು ಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋಲ್ಲಾಸಕ ಇಂದ್ರಿಯ ಸ್ತಂಭಕ, ಗರ್ಮಿ, (ಟಾಕಿ) ಮುಂತಾದ ದೋಷದ ಮೇಲೆ ಹುಟ್ಟುವ ಎಲ್ಲ ತರಹದ ಚಿಕ್ಕಗಳು, ಹುಣ್ಣುಗಳು ... ಗಳು, ... ವಾತರೋಗವು ಮುಂತಾದವು ಅತ್ಯಂತ ಗುಣವಾಗಿ ... ಕಾಂತಿಯೂ ... ಕ್ಕೆ ಸಂಪೂರ್ಣ ಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗುತ್ತವೆ ಕಿಮ್ಮತ್ತು ೬೦ ಗುಳಿಗೆಗಳಿಗೆ ೪ ರೂಪಾಯಿ ... ಸಮ್ರಾಜ ... ಕ್ಕೈಲವನ್ನು ಉಪಯೋಗಿಸಿದರೆ ಉತ್ತಮ. ಕಿಮ್ಮತ್ತು ಬಾಟ್ಲಿ ೧ಕ್ಕೆ ರೂ. ೩—೧೨—೦.

ಪ್ರಮೇಹನಿವಾರಣಿ— ಇದರ ಸೇವನೆಯಿಂದ ಮೂತ್ರಕೃಚ್ಛ್ರದಿಂದ ಕೀವು, ... ಹೋಗತಕ್ಕ ... ವೀರ್ಯ ... ವಗ್ಗೆರೆ ಅನೇಕ ... ಗುಣವಾಗುವದು. ಕಿಮ್ಮತ್ತು ಬಾಟ್ಲಿ೧ಕ್ಕೆ ರೂ. ೩—೮—೦. ... ಸಮ್ರಾಜ ...

... ಕಳುಹಿಸಿದರೆ ... ಕಾಗುವದು.

ವಿಳಾಸ.—

ವೈದ್ಯ ಜಿ. ಎಲ್. ಜೋಶಿ ಮತು ಕಂಪೆನಿ.
27. ನಂ 6. ಪೋಸ್ಟ್ ಬಸವಾಳ, ಉತ್ತರ ಕಾನಡಾ.

EMPIRE OF INDIA LIFE ASSURANCE CO., LTD.

(Established 1897.)

ALL WITH PROFIT POLICIES

Issued before 28th February 1927 will share in the BONUS Distribution for the five years ending on that date.

PROSPECTUS ON APPLICATION

Bangalore Branch.
152 Commercial Street
24—24.

Madras Branch.
9 & 10 Second Line Beach

ARMS & AMMUNITION MART,

Mahomedally-Noorbhoy



321 Abdul Rehman Street, near Crawford Market, BOMBAY. 3

Telegraphic Address:—"SHOOTER" Bombay.

[52—17] Please write for Reduced net prices list for 1926.

"ಕೊಡಗು"

ಸನ್ ೧೯೩೬ನೇ ಇಸವಿ ಜುಲೈ ತಾ. ೩೧ ನೇ ಶುಕ್ರವಾರ

ವಿದ್ಯಾಭ್ಯಾಸದಲ್ಲಿ ತಾಯಿನುಡಿ.

ಮದರಾಸಿನಲ್ಲಿ ರೆವರೆಂಡ್ ಡಾಕ್ಟರ್ ಲಾರ್ಸನ್ ಎಂಬವರು ತಾಯಿನುಡಿಯಲ್ಲಿ ವಿದ್ಯಾಭ್ಯಾಸ ಕೊಡಬೇಕೋ ಬೇಡವೋ ಎಂಬ ವಿಷಯದಲ್ಲಿ ಉಪನ್ಯಾಸ ಕೊಡುತ್ತಿದ್ದಾರೆ ಈಗಾಗಲೇ ಎರಡು ಉಪನ್ಯಾಸಗಳಾದವು ಆ ವಿಷಯದಲ್ಲಿ ಹಿಂದೂಸ್ಥಾನದ ಅನುಭವ, ಅನ್ಯದೇಶಗಳ ಅನುಭವ ಮತ್ತು ಹಿಂದೂಸ್ಥಾನದಲ್ಲಿ ಯಾವ ಕ್ರಮವನ್ನು ಅನುಸರಿಸಬೇಕು ಎಂಬ ಮೂರು ಭಾಗಗಳಾಗಿ ಮಾಡಿಕೊಂಡು ಮೊದಲನೇ ಎರಡು ಭಾಗಗಳ ಮೇಲಿನ ಉಪನ್ಯಾಸಗಳಾದವು. ಹಿಂದೂಸ್ಥಾನದಲ್ಲಿ ಯಾವ ರೀತಿಯಲ್ಲಿ ಮುಂದರಿಸಬೇಕು ಎಂಬ ಉಪನ್ಯಾಸವನ್ನು ಕುತೂಹಲದಿಂದ ಎದುರು ನೋಡುತ್ತಿದ್ದೇವೆ ಈ ಉಪನ್ಯಾಸಗಳು ಪೂರ್ತಿಯಾಗಿ ಜನಸಮುದಾಯಕ್ಕೆ ಸಿಕ್ಕಬೇಕಾದದ್ದು ಅವಶ್ಯವೆಂತ ನಮಗೆ ತೋರುತ್ತದೆ ಮದ್ರಾಸ್ ಪತ್ರಿಕೆಗಳಲ್ಲಿ ಸಾರಾಂಶ ಮಾತ್ರ ಪ್ರಕಟವಾಗಿದೆ ಆ ಸಾರಾಂಶಗಳ ಆಧಾರದಿಂದ ಈ ನಮ್ಮ ಲೇಖನವನ್ನು ಮುಂದರಿಸುತ್ತೇವೆ

ಹಿಂದುಸ್ಥಾನದ ಅನುಭವದ ಮೇಲೆ ಮಾತನಾಡುವಾಗ ಈ ಹಿಂದಿನ ಒಂದು ಶತಮಾನದ ಅನುಭವವನ್ನು ಉಪಯೋಗಿಸಿಕೊಂಡಿರುತ್ತಾರೆ ಇಂಗ್ಲಿಷ್ ಭಾಷೆಯಲ್ಲಿ ವಿದ್ಯಾಭ್ಯಾಸ ಕೊಡಲು ಪ್ರಾರಂಭಿಸಿದಾಗ ಯೂರೋಪಿಯನರ ಉದ್ದೇಶಗಳು ಮೂರು ಇತ್ತೆಂತ ಇವರು ಹೇಳುತ್ತಾರೆ (1) ದೇಶದ ಆಡಳಿತ ನಡಿಸಲಿಕ್ಕೆ ಬೇಕಾದ ಜನರನ್ನು ತಯಾರಿಸಿಕೊಳ್ಳುವದು (2) ಇಂಗ್ಲಿಷ್ ಭಾಷೆ ಕಲಿತವರ ಮೂಲಕ ಇಂಗ್ಲಿಷ್ ಜನರ ಅಭಿಪ್ರಾಯಗಳನ್ನು ಜನಸಮುದಾಯಕ್ಕೆ ತಿಳಿಸಿಕೊಡುವದು (3) ಇಂಗ್ಲಿಷ್ ಜನರು ಶ್ರೇಷ್ಠವಾದದ್ದೆಂತ ನಂಬಿರುವ ಅಭಿಪ್ರಾಯಗಳನ್ನೂ ಧ್ಯೇಯಗಳನ್ನೂ ಹಿಂದುಸ್ಥಾನದವರು ಸ್ವೀಕರಿಸುವಂತೆ ಮಾಡಬೇಕಾದದ್ದು ಈ ಮೂರು ಕಾರಣಗಳಲ್ಲದೆ ಇಂಗ್ಲಿಷ್ ಭಾಷೆಯ ಮೂಲಕ ವಿದ್ಯಾಭ್ಯಾಸ ಕೊಡುತ್ತಾ ಹೋದಂತೆ ದೇಶೀಯ ಭಾಷೆಯ ಬೆಳವಣಿಗೆ ಆದೀತೆಂತ ಇಂಗ್ಲಿಷ್ ಜನರು ನಂಬಿದ್ದರೆಂತ ಹೇಳಿದ್ದಾರೆ ಆದರೆ ದೇಶಭಾಷೆಯಲ್ಲಿ ವಿದ್ಯಾಭ್ಯಾಸದ ಬೆಳವಣಿಗೆಯು ಆಗುತ್ತಿಲ್ಲವೆಂತ ಉಪನ್ಯಾಸಕರು ಒಪ್ಪಿದ್ದಾರೆ. ಇಂಗ್ಲಿಷ್ ಭಾಷೆಯಲ್ಲಿ ವಿದ್ಯಾಭ್ಯಾಸ ಕೊಡಲಿಕ್ಕೆ ಆರಂಭಿಸಿದಾಗ ದೇಶಭಾಷೆಯ ವಿದ್ಯಾಭ್ಯಾಸ ಅಭಿವೃದ್ಧಿಯಾದೀತೆಂತ ನಂಬಿದ್ದರೆಂಬದನ್ನು ನಾವು ಒಪ್ಪುವದಿಲ್ಲ. ಆಗಿನ ಆಡಳಿತ ನಡಿಸಲಿಕ್ಕೆ ಬೇಕಾದ ಗುಮಾಸ್ತರುಗಳನ್ನು ತಯಾರಿಸುವದೂ ಪಾಶ್ಚಿಮಾತ್ಯ ಧ್ಯೇಯಗಳನ್ನು ಹಿಂದುಸ್ಥಾನದಲ್ಲಿ ಹರಡಿಸುವದೂ ಮುಖ್ಯ ಉದ್ದೇಶಗಳಾಗಿದ್ದವೆಂಬದರಲ್ಲಿ ಏನೂ ಸಂಶಯವಿಲ್ಲ

ಪಶ್ಚಿಮ ದೇಶದಲ್ಲಿ ಅಂದರೆ ಯೂರೋಪಿನಲ್ಲಿ ಇರುವ ಅಭಿಪ್ರಾಯಗಳೂ ಧ್ಯೇಯಗಳೂ ಉತ್ತಮ ತರದ್ದೇ ಇರಬಹುದು. ಆದರೆ ಹಿಂದುಸ್ಥಾನದ ಅಭಿಪ್ರಾಯಗಳನ್ನೂ ಧ್ಯೇಯಗಳನ್ನೂ ಜನರ ಕಣ್ಣು ಮುಂದೆ ಇಟ್ಟು ಅವುಗಳನ್ನು ಬೆಳಸಲಿಕ್ಕೂ ಸಾಧಿಸಲಿಕ್ಕೂ ಅವಕಾಶಕೊಡಬೇಕಾಗಿದದ್ದೇ ವಿದ್ಯಾಭ್ಯಾಸದ ಕರ್ತವ್ಯವಾಗಿತ್ತು. ಹಿಂದುಸ್ಥಾನದ ಧ್ಯೇಯಗಳಿಗೆ ಪ್ರಾಮುಖ್ಯತೆ ಕೊಟ್ಟು ಹೋಲಿಕೆ ಬಗ್ಗೆ ಪಾಶ್ಚಿಮಾತ್ಯ ಧ್ಯೇಯಗಳನ್ನು ಜನರ ಮುಂದೆ ಇಟ್ಟಿದ್ದರೆ ದೋಷವಾಗುತ್ತಿರಲಿಲ್ಲ ಹಿಂದುಸ್ಥಾನದ ಧ್ಯೇಯಗಳಿಗೆ ಪ್ರಾಮುಖ್ಯತೆ ಸಿಕ್ಕಿ ಅವುಗಳನ್ನು ಈಗಿನ ಕಾಲಕ್ಕೆ ಹೇಗೆ ಬೇಕೋ ಹಾಗೆ ಉಪಯೋಗಿಸಿಕೊಳ್ಳಲಿಕ್ಕೆ ವಿದ್ಯಾವಂತರು ಪ್ರಯತ್ನಪಡುತ್ತಿದ್ದರು. ಹಿಂದುಸ್ಥಾನದ ಧ್ಯೇಯಗಳು ಎಂಬವು ಇವೆಯೋ ಎಂತ ಸಹ ವಿದ್ಯಾವಂತರಿಗೆ ಗೊತ್ತಿಲ್ಲದೆ ಹೋಗಿದೆ ಹಿಂದುಸ್ಥಾನದ ಪುರಾತನ ನಾಗರೀಕತೆಯೆಲ್ಲವೂ ಮರೆತುಹೋಗಿ ಹಿಂದೀಯರು ಬರೇ ಕಲ್ಲು ಗುಂಡು ಮರದ ತುಂಡುಗಳಿಗೆ ಪೂಜೆಮಾಡುವ ಮೂಢಜನರಾಗಿದ್ದರೆಂಬ ಭಾವವು ವಿದ್ಯಾವಂತರಲ್ಲಿ ಹುಟ್ಟಿಹೋಗಿಬಿಟ್ಟಿತ್ತು ಈಚೆಗೆ ಹಿಂದುಸ್ಥಾನದ ಪುರಾತನ ನಾಗರೀಕತೆಯ ಮಹತ್ವದ್ದು ಮರೆಯತಕ್ಕಂಥಾದ್ದಲ್ಲ, ಪುರಾತನ ಭಾಷೆಯಾದ ಸಂಸ್ಕೃತದಲ್ಲಿ ಅಮೂಲ್ಯ ಗ್ರಂಥಗಳಿವೆ ಎಂತ ಪಾಶ್ಚಿಮಾತ್ಯ ಪಂಡಿತರುಗಳು ಹೇಳಲು ಪ್ರಾರಂಭಿಸಿದ ಮೇಲೆ ಇಂಗ್ಲಿಷ್ ಭಾಷೆಯಲ್ಲಿ ವಿದ್ಯಾಭ್ಯಾಸ ಹೊಂದಿದ ದೇಶೀಯರಲ್ಲಿ ಕೆಲವರಿಗೆ ತಮ್ಮ ಪುರಾತನ ನಾಗರೀಕತೆಯಲ್ಲಿ ಕೆಲವು ಮಟ್ಟಿಗೆ ಅಭಿರುಚಿ ಹುಟ್ಟಿದೆ ಇಂಗ್ಲಿಷ್ ವಿದ್ಯೆ ಕಲಿತ ಸ್ವಾಮಿ ವಿವೇಕಾನಂದರ, ಅರವಿಂದ ಘೋಷರು, ಬಾಲಗಂಗಾಧರ ತಿಲಕರು, ಮಹಾತ್ಮ ಗಾಂಧಿಯವರು ಹಿಂದುಸ್ಥಾನದ ಪ್ರಾಚೀನ ಸಂಸ್ಕೃತಿಗೆ ಬೆಲೆ ಕೊಟ್ಟದ್ದರಿಂದ ಹಿಂದುಸ್ಥಾನದಲ್ಲಿ ರಾಷ್ಟ್ರೀಯ ಜಾಗೃತಿಯಾಗಲು ಅವಕಾಶವಾಗಿದೆ ಇಂಥಾ ಮಹಾಪುರುಷರುಗಳು ಇಂಗ್ಲಿಷ್ ವಿದ್ಯೆ ಕಲಿತ ಜನರ ಕಣ್ಣ ಮುಂದೆ ಜೀವಿಸಿ ಬೋಧಿಸಿದರೂ ಸಹ ಇಂಗ್ಲಿಷ್ ವಿದ್ಯೆ ಕಲಿತ ಜನರಿಗೆ ಹಿಂದುಸ್ಥಾನದ ಪ್ರಾಚೀನ ಮಹತ್ವದಲ್ಲಿಯೂ ಈಗಿನ ಸ್ವಶಕ್ತಿಯಲ್ಲಿಯೂ ನಂಬಿಕೆ ಹುಟ್ಟದೆ ಇರುವಾಗ ಇಂಗ್ಲಿಷ್ ಭಾಷೆಯಲ್ಲಿ ವಿದ್ಯೆ ಕೊಡಲು ಪ್ರಾರಂಭಿಸಿದವರ ಉದ್ದೇಶವು ಎಷ್ಟರಮಟ್ಟಿಗೆ ಸಾರ್ಥಕವಾಗಿದೆಯೆಂಬದು ಗೊತ್ತಾಗುತ್ತದೆ ಪಾಶ್ಚಿಮಾತ್ಯ ಧ್ಯೇಯಗಳು ಅತ್ಯುತ್ತಮವಾದದ್ದೆಂಬ ಭಾವವು ಚನ್ನಾಗಿ ನೆಲೆಗೊಂಡು ಹೋಗಿದೆಯೆಂಬದು ಪ್ರತ್ಯಕ್ಷವಾಗಿದೆ

ಡಾಕ್ಟರು ಲಾರ್ಸನ್ನರು ಹೇಳುವದೇನೆಂದರೆ—"ತಾಯಿನುಡಿಯನ್ನು ಉಪಯೋಗಿಸದ ವಿದ್ಯೆಯು ಅಪಾಯಕರವಾದದ್ದು ಪರದೇಶ ಭಾಷೆಯ ಮೂಲಕ ದೊರೆಯುವ ವಿದ್ಯೆ ಒರೇ ತೋರಿಕೆಯ ವಿದ್ಯೆಯಾಗಿರುತ್ತದೆ ಮನೆ ಜೀವನಕ್ಕೆ ಸಂಬಂಧಿಸದ ಪರ ಭಾಷೆಯ ವಿದ್ಯೆಯಿಂದ ವಿದ್ಯಾವಂತರಿಗೂ ವಿದ್ಯೆ ಇಲ್ಲದವರಿಗೂ ಇರುವ ಸಂಬಂಧವು ತಪ್ಪಿಹೋಗುತ್ತದೆ ಸಂಭಾಷಣೆಯಲ್ಲಿ ಪರ ಭಾಷೆಯ ಶಬ್ದಗಳನ್ನು ಉಪಯೋಗಿಸುವದು ಬಹು ಕೆಟ್ಟದ್ದು ಅದರಿಂದ ಮನಸ್ಸಿಗೆ ಸಹ ಕೆಟ್ಟದಿದೆ ಸ್ಕೂಲಿನಲ್ಲಿ ಕಲಿಯುವ ವಿದ್ಯೆಗೆ ಮನೆಯ ಜೀವನವು ಸಹಕಾರವಾಗದಿದ್ದರೆ ಕಲಿಯುವ ವಿದ್ಯೆಯಿಂದ ಪ್ರಯೋಜನವಾಗುವದಿಲ್ಲ ಎಂತ ಖಂಡಿತವಾಗಿ ಹೇಳಿದ್ದಾರೆ. ದೇಶೀಯ ಧುರೀಣರು ಈ ಅಭಿಪ್ರಾಯವನ್ನು ಎಷ್ಟೋ ಸಾರಿ ಹೇಳಿರುತ್ತಾರೆ ಆದರೆ ಇಂಗ್ಲೀಷ್ ಜನಾಂಗಕ್ಕೆ ಸೇರಿದ ಉಪನ್ಯಾಸಕರಿಂದ ಈ ಮಾತುಗಳು ಬಂದದ್ದರಿಂದ ಹಿಂದೀ ವಿದ್ಯಾವಂತರಿಗೂ ಸಾಧಾರಣ ಜನರಿಗೂ ಈ ಅಭಿಪ್ರಾಯಗಳಲ್ಲಿ ನಂಬಿಕೆ ಹುಟ್ಟಬಹುದು.

ಯೂರೋಪಿನಲ್ಲಿ ಒಂದು ಶತಮಾನಕ್ಕೆ ಮುಂಚೆ ಲ್ಯಾಟಿನ್ ಭಾಷೆಯಲ್ಲೇ ಉಚ್ಚ ವಿದ್ಯೆ ಕೊಡುತ್ತಿದ್ದರು ಎಲ್ಲಾ ಯುನಿವರ್ಸಿಟಿ ಪರೀಕ್ಷೆಗಳು ಲ್ಯಾಟಿನ್ ಭಾಷೆಯಲ್ಲೇ ನಡಿಸಲ್ಪಡುತ್ತಿದ್ದವು ಆದರೆ ವಿದ್ಯೆ ಪಡೆಯುವ ಭಾಷೆಯು ಲ್ಯಾಟಿನ್ ಆಗಿದ್ದರೂ ಮಾತೃಭಾಷೆಯ ಬೆಳವಣಿಗೆಯು ಸಂಗಡಲೇ ಆಗುತ್ತಿತ್ತು, ಆದರೂ ವಿದ್ಯಾವಂತ ಎಂತ ಹೇಳಿಸಿಕೊಳ್ಳಬೇಕಾದರೆ ಲ್ಯಾಟಿನ್ ತಿಳಿದವನಾಗಿರಬೇಕಾಗಿತ್ತು ಹಿಂದೂಸ್ಥಾನದಲ್ಲೂ ಈಗ ವಿದ್ಯಾವಂತನೆನ್ನಿಸಿಕೊಳ್ಳಬೇಕಾದರೆ ಇಂಗ್ಲಿಷ್ ಭಾಷೆಯನ್ನು ತಿಳಿದವನಾಗಿರಬೇಕೆಂಬದು ಎಲ್ಲರಿಗೂ ತಿಳಿದ ಸಂಗತಿಯಾಗಿದೆ. ಈ ಸ್ಥಿತಿಯು ಯೂರೋಪಿನಲ್ಲಿಯೂ ಒಂದು ಕಾಲದಲ್ಲಿ ಇತ್ತೆಂತ ತಿಳಿದುಕೊಂಡರೆ ನಮ್ಮ ಹಿಂದೂಸ್ಥಾನಕ್ಕೂ ಪರ ಭಾಷೆಯ ಬಂಧನವು ಬಿಡುಗಡೆಯಾಗಿ ಆಯಾ ಪ್ರಾಂತ್ಯದ ಭಾಷೆಗಳಿಗೆ ಮಹತ್ವವು ದೊರಕುವ ಕಾಲವು ಮುಂದೆ ಬರಬಹುದೆಂತ ಆಶೆ ಹುಟ್ಟುತ್ತದೆ

"ಪರ ಭಾಷೆಯ ಬಂಧನದಿಂದ ಬಿಡುಗಡೆ ಹೊಂದಬೇಕಾದರೆ ಯೂರೋಪ್ ದೇಶಗಳಲ್ಲಿ ಜನರು ತಮ್ಮ ಪ್ರಾಂತ್ಯದ ಪೂರ್ವ ಚರಿತ್ರೆಗಳನ್ನು ತಿಳಿದುಕೊಂಡು ಸ್ಥಳೀಕ ವಿದ್ಯಮಾನಗಳಲ್ಲಿ ಅಭಿರುಚಿ ಹುಟ್ಟಿಸಿದರು ಈ ಪ್ರಯತ್ನದಿಂದ ತಾಯಿನುಡಿಗೆ ಮೇಲ್ಮೆ ದೊರೆತ ಕಾರಣ ಸಮುದಾಯದ ಜನರ ಕ್ಷೇಮದ ಕಡೆಗೆ ವಿದ್ಯಾವಂತರ ದೃಷ್ಟಿ ಹೆಚ್ಚಾಗಿ ದೊರೆಯಿತು ತಮ್ಮ ಮಾತೃ ಭಾಷೆಯ ಮೂಲವು ಯಾವದೆಂಬ ವಿಚಾರ ನಡೆಯಿತು ತಮ್ಮ ಜೀವನ ಸ್ಥಿತಿಗೆ ಪ್ರಾಚೀನ ಇತಿಹಾಸಗಳು ಹೇಗೆ ಆಕಾರ ಕೊಟ್ಟವು ಎಂಬ ವಿಚಾರಗಳು ಹುಟ್ಟಿದ್ದಲ್ಲದೆ ತಮ್ಮ ಪೂರ್ವ ಸಂಸ್ಕೃತಿಯನ್ನು ಬಹಳ ಜಾಗ್ರತೆಯಾಗಿ ಅಭಿವೃದ್ಧಿಗೊಳಿಸಿಕೊಂಡರು," ಎಂತ ತಮ್ಮ ಅಭ್ಯಾಸದ ಬಲದಿಂದಲೂ ಅನುಭವದಿಂದಲೂ ಉಪನ್ಯಾಸಕರು ಹೇಳಿರುತ್ತಾರೆ. ಹೀಗಿರುತ್ತಾ ನಮ್ಮ ದೇಶದ ಜನರು ಇನ್ನೂ ಇಂಗ್ಲಿಷ್ ಭಾಷೆಯಲ್ಲಿಯೇ ವಿದ್ಯೆ ದೊರಕಬೇಕೆಂಬ ಹಠವನ್ನು ಬಿಡದೆ ಇರುವದು ವಿಷಾದಕರವಾಗಿದೆ. ಈ ಸಂದರ್ಭದಲ್ಲಿ ಬರೇ ಜನರನ್ನು ದೂರಿದರೂ ಪ್ರಯೋಜನವಿಲ್ಲ ಸರಕಾರ ಕ್ರಮವೇ ಜನರ ಈ ಮೌಢ್ಯಕ್ಕೂ ಕಾರಣವಾಗಿದೆ ಸರಕಾರದ ಎಲ್ಲಾ ಕಾಗದ ಪತ್ರಗಳೂ, ಕೋರ್ಟು ವ್ಯವಹಾರಗಳೂ ಪರದೇಶಿ ಭಾಷೆಯಲ್ಲೇ ನಡಿಯಬೇಕೆಂತ ಕಾನೂನು ಮಾಡಿರುವದರಿಂದ ವಿದ್ಯಾವಂತರಿಗೆ ಸರ್ಕಾರಿ ಉದ್ಯೋಗವಲ್ಲದೆ ಬೇರೆ ಕಸಬಿನ ಅನುಕೂಲವಿಲ್ಲದೆ ಇರುವಾಗ ತಮ್ಮ ಮಕ್ಕಳು ಇಂಗ್ಲಿಷ್ ವಿದ್ಯೆಯನ್ನೇ ಕಲಿಯಬೇಕೆಂತ ಬಯಸುವದರಲ್ಲಿ ಆಶ್ಚರ್ಯವಿಲ್ಲ ಸರಕಾರಿ ಕಾಗದ ಪತ್ರಗಳು ದೇಶಭಾಷೆಯಲ್ಲಿಯೇ ನಡಿಯುವುದೆಂತಾದರೆ ದೇಶಭಾಷೆಯಲ್ಲಿ ಮಕ್ಕಳಿಗೆ ವಿದ್ಯೆ ಕೊಡಲು ಜನರು ಒಪ್ಪದೆ ಇರಲಾರರು

ಆದರೆ ಸರಕಾರವು ಇಂಥಾ ಮಾರ್ಪಾಡುಮಾಡಬೇಕಾದರೆ ಜನರಲ್ಲಿ ದೇಶಭಕ್ತಿ ತುಂಬಿ ತುಳುಕಬೇಕು ದೇಶಭಕ್ತಿಯ ಸಂಗಡಲೇ ತಾಯ್ನುಡಿಯ ಪ್ರೀತಿಯು ಬೆಳೆಯುತ್ತದೆ ದೇಶಭಕ್ತಿಯಿಂದ ಪ್ರಯೋಜನವಾಗಬೇಕಾದರೆ ಪರದೇಶ ಭಾಷೆಯಲ್ಲಿ ಇರುವ ಮೋಹವು ಹೋಗಿ ಮಾತೃಭಾಷೆಯ ಪ್ರೀತಿಯು ಉಕ್ಕಿಬರಬೇಕು ಆದ್ದರಿಂದ ದೇಶಭಕ್ತರೆಲ್ಲರೂ ದೇಶಭಕ್ತಿಯ ಶಕ್ತಿಯನ್ನು ಮೊದಲು ಸ್ವದೇಶಭಾಷೆಯ ಬೆಳವಣಿಗೆಗೆ ಉಪಯೋಗಿಸಿ ಜನರನ್ನು ಪರಭಾಷೆ ಮೋಹದ ಪಾಶದಿಂದ ಬಿಡಿಸಬೇಕಾಗಿದೆ

ಮಳೆ ಗಾಳಿಯ ಅನಾಹುತ.

ಈ ತಾಲೂಕಿನಲ್ಲಿ ದೇಶದ ಹಲವು ಕಡೆಗಳಲ್ಲಿ ಹೊಡೆದ ಬಹು ಜೋರಾದ ಮಳೆ ಗಾಳಿಯಿಂದ ಅನೇಕ ಸ್ಥಳಗಳಲ್ಲಿ ಸ್ವಲ್ಪ ಮಾತ್ರ ನಷ್ಟ ಉಂಟಾಗಿದ್ದರೂ ಕಡಿಯತ್ತುನಾಡು ಪಾಲಂಗಾಲ ಮತ್ತು ಚೇಲಾವರ ಗ್ರಾಮಗಳಲ್ಲಿ ಸಂಭವಿಸಿರುವ ಅನಾಹುತವು ವಿಶೇಷವಾದದ್ದೆಂದೇ ಹೇಳಬೇಕಾಗಿದೆ ಇದನ್ನು ಕುರಿತು ಕಳೆದ ವಾರದ ಸಂಚಿಕೆಯಲ್ಲಿ ನಮ್ಮ ಸ್ವಂತ ವಾತ್ಮಿದಾರರು ಬರೆದಿರುವ ವರ್ಣನೆಯು ಅತಿಶಯೋಕ್ತಿಯಾದದ್ದಲ್ಲವೆಂದು ತಿಳಿಯಬರುತ್ತದೆ ಪಾಲಂಗಾಲದಲ್ಲಿ ಹಚ್ಚಿನ ಇಳಿಜಾರು ಇಲ್ಲದ ಸ್ಥಳಗಳಲ್ಲಿ ನೀರು ಹರಿಯುವಿಕೆಯು ಹೊಡತವಿಲ್ಲದೆ ಗುಂಡಿ ಹೊಟ್ಟಗಳಾಗಿರುವುದನ್ನು ನೋಡಿದರೆ ಈ ಅನಾಹುತವು ಒರೇ ಮಳಗಾಳಿಯಿಂದ ಉಂಟಾಗಿರಲಾರದೆಂದೂ, ಅಲ್ಲಿ ಭೂಮಿಯು ಸ್ವಲ್ಪ ನಡುಗಿರಬೇಕೆಂದೂ ಆ ಸ್ಥಳವನ್ನು ಖುದ್ದು ನೋಡಿದವರ ಹಲವರ ಅಭಿಪ್ರಾಯವಾಗಿದೆ.

ಕಾರಣ ಯಾವದೇ ಇರಲಿ, ನಷ್ಟವು ವಿಪರೀತವಾಗಿದೆಯೆಂಬುದರಲ್ಲಿ ಸಂಶಯವಿಲ್ಲ. ಈ ನಷ್ಟವು ವಿಶೇಷವಾದುದರಿಂಲೇ ಈಗಾಗಲೇ ಅನೇಕ ಮಹನೀಯರು ಈ ಗ್ರಾಮವನ್ನು ಹೋಗಿ ನೋಡಿರುವದಾಗಿದೆ ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರವರೂ ಕಮಿಶನರವರೂ ಸಹ ಈ ಸ್ಥಳವನ್ನು ಸಂದರ್ಶಿಸುವುದು ಸಂತೋಷಕರ. ಅವರ ಸಂದರ್ಶನದಿಂದ ಅಲ್ಲಿಯ ನಷ್ಟವು ಸರ್ಕಾರದವರಿಗೆ ಚೆನ್ನಾಗಿ ತಿಳಿದಂತಾಗಿದೆ. ಆದರೆ ಇವರ ನೋಡುವಿಕೆಯು ಪ್ರಯೋಜನಕಾರಿಯಾಗಬೇಕಾದರೆ ವಿಪತ್ತಿಗೆ ಒಳಗಾಗಿರುವ ಭೂಮಾಲೀಕರ ಕಷ್ಟವನ್ನು ಪರಿಹರಿಸಲು ಸರ್ಕಾರದವರು ತಕ್ಕಮಟ್ಟಿಗಾದರೂ ದ್ರವ್ಯಸಹಾಯ ಕೊಡಲೇ ಬೇಕಾಗಿದೆ ಅಲ್ಲಿಯವರೆಲ್ಲರಿಗೂ ಧರ್ಮಾರ್ಥವಾಗಿ ದ್ರವ್ಯ ಸಹಾಯಮಾಡಲು ತುಂಬಾ ಹಣ ಬೇಕಾಗುವುದಾದೂ ಅಷ್ಟಕ್ಕೆ ಸರ್ಕಾರದಲ್ಲಿ ಹಣವಿಲ್ಲವೆಂದೂ ಅಧಿಕಾರಿಗಳು ಪಾಟಿಕೆಯಂತೆ ಹೇಳಬಹುದು. ಇಂಥಾ ಕಷ್ಟಕಾಲದಲ್ಲಿ ಜನರಿಗೆ ಸಹಾಯ ಮಾಡದೆಹೋದರೆ ಸರ್ಕಾರದಿಂದ ನಮಗೇನು ಪ್ರಯೋಜನವೆಂಬ ಭಾವನೆಯು ರೈತರಲ್ಲಿ ಹುಟ್ಟುವದರಲ್ಲಿ ಸಂದೇಹವಿಲ್ಲ ಅವರೆಲ್ಲರಿಗೂ ಕಂದಾಯ ಮಾಫಿ ಖಂಡಿತವಾಗಿ ಮಾಡಬೇಕು ಅದರ ಮೇಲೆ ನಷ್ಟ ಸಂಭವಿಸಿದವರಿಗೆಲ್ಲರಿಗೂ ನಷ್ಟವನ್ನನುಸರಿಸಿ ಉಚಿತವಾಗಿ ಹಣ ಕೊಡಬೇಕಾದದ್ದು ಸರ್ಕಾರದವರ ಕರ್ತವ್ಯ. ಹಾಗೆ ಮಾಡಲು ಸಾಧ್ಯವಿಲ್ಲದಿದ್ದಲ್ಲಿ ಭೂಮಿ ತೋಟಗಳನ್ನು ಹಸನು ಮಾಡಿಸಿಕೊಳ್ಳಲು ಜನರಿಗಾದರೂ ಧರ್ಮಾರ್ಥವಾಗಿ ದ್ರವ್ಯ ಸಹಾಯ ಕೊಟ್ಟು ಅನುಕೂಲಸ್ಥರಾಗಿ ಬೇರೆ ಕಡೆ ಉತ್ಪತ್ತಿ ಇದ್ದವರಿಗೆ ಬಡ್ಡಿ ಇಲ್ಲದೆ ಸುಲಭ ಕಂತುಗಳಲ್ಲಿ ಸಾಲವಾದರೂ ಕೊಟ್ಟು ಸಹಾಯಮಾಡಬೇಕಾದದ್ದು ಆಗತ್ಯವಾಗಿದೆ ಇಲ್ಲವಾದರೆ ಸರ್ಕಾರದವರು ಕಷ್ಟಕಾಲದಲ್ಲಿ ಪ್ರಜೆಗಳನ್ನು ಕಾಪಾಡುವರೆಂಬುದರಲ್ಲಿ ಜನರಿಗೆ ವಿಶ್ವಾಸವು ಇಲ್ಲದಾಗುವದು. ಈ ವಿಷಯದಲ್ಲಿ ಹೊಸ ಕಮಿಷನರವರು ಹೇಗೆ ನಿರ್ಧರಿಸುವರೆಂಬುದನ್ನು ಜನರು ಎದುರು ನೋಡುತ್ತಿರುವರು

ವಿಚಿತ್ರ ವಿವಾಹ.

ಗ್ರೇಟ್‌ಬ್ರಿಟನ್ನಿನಲ್ಲಿ ಈ ವಿವಾಹವು ನಡೆಯತಕ್ಕದ್ದಾಗಿದೆ. ವರನು ಆಮ್ಸ್ಟರ್‌ಡಮ್ಮಿನವನು. ಹೆಣ್ಣು ಹಾಲೆಂಡಿನ ರೋಟರ್‌ಡಾಮಿನಲ್ಲಿ ಹುಟ್ಟಿದ್ದು. ಹೆಣ್ಣಿಗೆ ೩೦ ವರ್ಷ. ಹೆಣ್ಣಿನ ಎತ್ತರ 7 ಅಡಿ 11 ಅಂಗುಲ, ತೂಕ 350 ಪೌಂಡು. ನೋಡುವದಕ್ಕೆ ಚಂದವಾಗಿದ್ದಾಳೆ, ಶರೀರವು ಕಂಚಿನ ಬಣ್ಣ. ೧೦ ವರ್ಷದ ಹುಡುಗಿಯರ ಚಾಯೆ. ಆಕೆಯು 13 ವರ್ಷದವರೆಗೆ ಬೆಳೆದಿಲ್ಲ. ಆ ವೇಳೆ ಬೆಳೆಯುವದಕ್ಕೆ ಆರಂಭ. ಇನ್ನೂ ಬೆಳೆಯುತ್ತೇನೆಂದು ಹೇಳುತ್ತಿದ್ದಾಳೆ. ಕೋಟಿಗೆ 9 ಗಜ ಬಟ್ಟೆಯಾಗಬೇಕು. 13 ಅಂಗುಲ ಉದ್ದದ ಜೋಡು ಆಗಬೇಕು. ಯಾವ ಟೋಪಿಯೂ ಸಾಲದು. ಕಾಲುಚೀಲಗಳು 7 ವಾರಕ್ಕೇ ಚಿಕ್ಕದಾಗುತ್ತವೆ. ಹಸಿವೂ ಹೆಚ್ಚು. ದಿನಕ್ಕೆ 5 ಸಲ ಊಟಮಾಡಬೇಕಾಗಿದೆ.

ವರನೂ ಇವಳಿಗಿಂತಲೂ ಉದ್ದವಾಗಿದ್ದಾನೆ.

"ಸತ್ಯವಾದಿ."

"ಸಿಲ್ವರ್ ವೆಡ್ಡಿಂಗ್ ಫಂಡ್."

(ಕಮಿಷನರವರ ಪ್ರಕಟಣೆಯಿಂದ)

ಚಕ್ರವರ್ತಿಗಳವರ ಮದುವೆ ಆಗಿ 25ನೇ ವರ್ಷದ ಉತ್ಸವದ ದಿನ ಚಕ್ರವರ್ತಿನಿಯವರ ಮೇಲಿರುವ ಪ್ರೀತಿಯ ಮತ್ತು ರಾಜಭಕ್ತಿಯ ಸೂಚನೆಯಾಗಿ ಜನರು ಚಂದಾ ಕೊಟ್ಟದ್ದನ್ನು ಸೇರಿಸಿದ್ದೇ ಈ "ಸಿಲ್ವರ್ ವೆಡ್ಡಿಂಗ್ ಫಂಡ್." ಈ ಹಣವನ್ನು ಕಳೆದ ಘೋರಯುದ್ಧದಲ್ಲಿ ಮಿಲಿಟರಿ ಸರ್ವಿಸಿನ ಮೂಲಕ ಭಾಗಿಗಳಾಗಿದ್ದ ಅಥವಾ ಇನ್ನು ಮುಂದೆ ಯುದ್ಧಗಳಲ್ಲಿ ಭಾಗಿಗಳಾಗಬಹುದಾದ ಇಂಡಿಯನ್ ಆಫೀಸರುಗಳ ಮತ್ತು ಸಿಪಾಯಿಗಳ ಮಕ್ಕಳ ಮತ್ತು ಸಂಸಾರದ ವಿದ್ಯಾಭ್ಯಾಸಕ್ಕೂ ಸಹಾಯಕ್ಕೂ ಉಪಯೋಗಿಸಲಾಗುವುದು. ಮೇಲೆ ಹೇಳಿದವರಿಗೆ ಈ ಫಂಡಿನ ಅಧಿಕಾರಿಗಳು ಸರಿತೋರಿದಂತೆ ಈ ಮೂರು ಉದ್ದೇಶ್ಯಗಳಿಗಾಗಿ ಹಣವನ್ನು ವಿನಿಯೋಗಿಸುವರು. (1) ಹೈಸ್ಕೂಲು ಕಾಲೇಜುಗಳಲ್ಲಿಯೂ, ಟೆಕ್ನಿಕಲ್ ಸ್ಕೂಲು ಕಾಲೇಜುಗಳಲ್ಲಿಯೂ, ಸ್ಪೆಶಲ್ ಮಿಲಿಟರಿ ಸ್ಕೂಲು ಕಾಲೇಜುಗಳಲ್ಲಿಯೂ ವಿದ್ಯಾಭ್ಯಾಸಮಾಡಲು ವೇತನ ಕೊಡಲಿಕ್ಕೆ, (2) ಈ ಫಂಡಿನಿಂದ ಸ್ಕಾಲರ್‌ಶಿಪ್ ಪಡೆದು ಓದಿದವರಿಗೆ ಜೀವನ ಪ್ರಾರಂಭಿಸಲು ಸಹಾಯ ಕೊಡಲಿಕ್ಕೆ. (3) ಪೆನ್ಶನ್ ಸಿಕ್ಕದೆ ಇರುವ ಅಥವಾ ಸಾಕಷ್ಟು ಪೆನ್ಶನ್ ಸಿಕ್ಕದೆ ಇರುವ ಇಂಡಿಯನ್ ಆಫೀಸರುಗಳ ವಿಧವೆಯರಿಗೆ ಸಹಾಯ ಕೊಡಲಿಕ್ಕೆ.

ಮೇಲೆ ಸೂಚಿಸಿರುವ (1) ಮತ್ತು (2)ನೇ ಉದ್ದೇಶಗಳಿಗಾಗಿ ಸಹಾಯಬೇಕಾದವರು ಆಯಾಯ ಪ್ರಾಂತ್ಯದ "ಪಬ್ಲಿಕ್ ಇನ್‌ಸ್ಟ್ರಕ್ಷನ್"ನ ಡೈರೆಕ್ಟರವರ ಮೂಲಕವೂ (3)ನೇ ಉದ್ದೇಶಕ್ಕೆ ಸಿಮ್ಲಾದಲ್ಲಿರುವ ಇಂಡಿಯನ್ ಸೋಲ್ಜರ್ಸ್ ಬೋರ್ಡಿಗೂ ಅಪ್ಲಿಕೇಶನ್ ಕಳುಹಿಸತಕ್ಕದ್ದು.

ಹೆಚ್ಚಿನ ವಿಷಯಗಳಿಗೆ ಸಿಮ್ಲಾದಲ್ಲಿರುವ (ಚಳಿಗಾಲದಲ್ಲಿ ಡೆಲ್ಲಿಯಲ್ಲಿ) "ಸಿಲ್ವರ್ ವೆಡ್ಡಿಂಗ್ ಫಂಡಿನ" ಗೌರವ ಕಾರ್ಯದರ್ಶಿಯವರಿಗೆ ಬರೆಯತಕ್ಕದ್ದು.

ನಾನೇ ಚಕ್ರವರ್ತಿಯಾದ ಪಕ್ಷದಲ್ಲಿ

ಹಿಂದೂದೇಶದಲ್ಲಿ ತಾನು ಏನೇನು ಮಾಡುತ್ತಿದ್ದೆನೆಂದು ಮಹಾತ್ಮಗಾಂಧಿಯವರು ಮಿ. ಸ್ಪೆಂಡರವರಿಗೆ ಕೊಟ್ಟ ಉತ್ತರದಲ್ಲಿ ಹೀಗೆಂದು ಹೇಳಿರುವರು —

ಭಾರತೀಯರ ರಕ್ತವನ್ನು ಹೀರುತ್ತಿರುವ ಸೈನ್ಯವನ್ನು ತಗ್ಗಿಸುತ್ತೇನೆ.

ಜಾತಿ, ಮತ, ವರ್ಣ ವಿಭೇದಗಳನ್ನು ಎಣಿಸದೇ ಎಲ್ಲ ಪೂನಕೋಟಿಯನ್ನು ಸಮನಾಗಿ ಆದರಿಸುತ್ತೇನೆ.

ಕಳ್ಳರ ದರೋಡೆಯವರ ಬಾಧೆಯು ಉಂಟಾಗದಿರುವದಕ್ಕೆ ಎಷ್ಟು ಸೈನ್ಯ ಆವಶ್ಯಕವೋ ಅಷ್ಟನ್ನು ಮಾತ್ರವೇ ಉಳಿಸಿಕೊಳ್ಳುತ್ತೇನೆ.

ಈಗ ಸರಹದ್ದು ರಾಷ್ಟ್ರ ಸಮೀಪದಲ್ಲಿರತಕ್ಕ ಬೆಟ್ಟಗುಡ್ಡಗಳವರಿಗೆ ಲಂಚವನ್ನು ಕೊಡಬಾರದು. ಅವರೊಡನೆ ಸ್ನೇಹವನ್ನು ಬೆಳೆಸಿಕೊಳ್ಳುತ್ತೇನೆ. ಅಲ್ಲದೆ ಅವರ ಹೃದಯವನ್ನು ಪರಿವರ್ತನಗೊಳಿಸುವದಕ್ಕಾಗಿ ಸಂಸ್ಕರ್ತರನ್ನೂ ಪ್ರಚಾರಕರನ್ನೂ ಅಲ್ಲಿಗೆ ಕಳುಹಿಸುತ್ತೇನೆ. ಭಾರತದೇಶದಲ್ಲಿ ವಾಸಮಾಡುತ್ತಿರುವ ಯೂರೋಪಿಯನರ ಮತ್ತು ಅವರ ವ್ಯಾಪಾರ ರಕ್ಷಣೆ ವಿಷಯದಲ್ಲಿ ಗ್ಯಾರಂಟಿಯಾಗುತ್ತೇನೆ.

ದೇಶಾಂತರದಿಂದ ಸರಬರಾಜು ಆಗತಕ್ಕ ಬಟ್ಟೆಗಳ ಸುಂಕವನ್ನು ತಗ್ಗಿಸುತ್ತೇನೆ.

ನಮ್ಮ ದೇಶದ ರಾಟೆಗಳಲ್ಲಿ ತಯಾರಾಗತಕ್ಕ ಬಟ್ಟೆಗಳು ಧಾರಾಳವಾಗಿ ಬಿಕರಿಯಾಗತಕ್ಕ ಬಗ್ಗೆ ವಿದೇಶ ವಸ್ತ್ರಗಳ ಮೇಲೆ ಸ್ವಲ್ಪ ಸುಂಕವನ್ನು ಹಾಕುತ್ತೇನೆ.

ಮಾದಕ ಪದಾರ್ಥಗಳನ್ನು ಮಾರತಕ್ಕ ಅಂಗಡಿಗಳನ್ನು ಬಂದ್ ಮಾಡುತ್ತೇನೆ. ಮಾದಕದ್ರವ್ಯಗಳು ತಯಾರಾಗುವದನ್ನೇ ನಿಲ್ಲಿಸಿಬಿಡುತ್ತೇನೆ.

ವೈದ್ಯ ಶಾಸ್ತ್ರಪರಿಶೋಧನೆ ಇವುಗಳ ಹೊರತು ಬಾಕೀ ವಿಷಯಗಳಲ್ಲಿ ಅಫೀಮಿನ ವ್ಯಾಪಾರವನ್ನೇ ತಪ್ಪಿಸಿಬಿಡುತ್ತೇನೆ.

ಮಾನವ ನೈತಿಕ ಸ್ವಭಾವಗಳಿಗೆ ವಿರುದ್ಧವಾಗಿಲ್ಲದ ಸರ್ವ ಮತಾವಲಂಬಿಗಳಿಗೂ ಸಂಪೂರ್ಣ ಸ್ವಾತಂತ್ರ್ಯವನ್ನು ಕೊಡುತ್ತೇನೆ.

ಹಿಂದೂಗಳು ಮಾತ್ರವೇ ಪ್ರವೇಶಿಸುವದಕ್ಕೂ ಪೂಜಾದಿಗಳನ್ನು ನಡೆಸುವದಕ್ಕೂ ಹಕ್ಕುಗಳುಳ್ಳ ಪಾಠಶಾಲೆಗಳನ್ನು, ದೇವಾಲಯಗಳನ್ನೂ ಅಸ್ಪೃಶ್ಯರು ಉಪಯೋಗಿಸಿಕೊಳ್ಳಕೂಡದೆಂಬ ನಿರ್ಬಂಧವನ್ನು ತೆಗೆದುಹಾಕುತ್ತೇನೆ.

ಹಿಂದೂ ಮಹಮ್ಮದೀಯರ ಪ್ರತಿನಿಧಿಗಳನ್ನು ಕರೆಸಿ ಅವರ ಜೇಬಿನಲ್ಲಿರತಕ್ಕ ಅಪಾಯಕರವಾದ ಸಾಮಗ್ರಿಗಳನ್ನು ತೆಗೆದುಕೊಂಡು ಒಂದು ಕೊಠಡಿಯಲ್ಲಿಟ್ಟು ಬೀಗ ಹಾಕುತ್ತೇನೆ. ಉಭಯ ಸಂಘದವರೂ ಇನ್ನು ಹೋರಾಡುವುದಿಲ್ಲವೆಂದು ಪ್ರತಿಜ್ಞೆ ಮಾಡುವ ವರೆಗೆ ಕೊಠಡಿಯ ಬಾಗಿಲನ್ನು ತೆರೆಯಲಾರೆ.

ನಾನು ಭಾರತದೇಶದ ಚಕ್ರವರ್ತಿಯಾದ ಪಕ್ಷದಲ್ಲಿ ಮಾಡಬೇಕಾದ ಕೆಲಸಗಳು ಇನ್ನೂ ಎಷ್ಟೋ ಇರುತ್ತವೆ. ದೊರೆತನವಲ್ಲವೇ ಮಾಡತಕ್ಕದ್ದು. ಮುಖ್ಯವಾಗಿ ನಮ್ಮ ಜನರ ಕಷ್ಟವನ್ನು ಬಲ್ಲೆನಾದ್ದರಿಂದ ಅದರ ನಿವಾರಣೆಗಾಗಿ ಶಕ್ತಿವಂಚನೆಯಿಲ್ಲದೆ ಪ್ರಯತ್ನಪಡುತ್ತೇನೆ.

ಹಿಂದೂ ಮುಸಲ್ಮಾನರ ಜಗಳ.

ಇಂಡಿಯಾದಲ್ಲಿ ಹಿಂದೂ ಮುಸಲ್ಮಾನರಿಗೆ ಆಗಾಗ್ಯೆ ನಡೆಯುತ್ತಿರುವ ಜಗಳವನ್ನು ಕುರಿತು ಇಂಗ್ಲೆಂಡಿನ "ಮ್ಯಾಂಚೆಸ್ಟರ್ ಗಾರ್ಡಿಯನ್" ಪತ್ರಿಕೆಯು ಬರೆದಿರುವದರ ಸಾರಾಂಶವೇನಂದರೆ:—

ಕೋಮುವಾರು ಪ್ರತಿನಿಧಿತ್ವವನ್ನು ಹೋಗಲಾಡಿಸಿದರೆ ಕೋಮುವಾರು ವೈಮನಸ್ಸು ಕಡಿಮೆಯಾಗಬಹುದೆಂಬ ವಾದದಲ್ಲಿ ನ್ಯಾಯವಿದೆ. ಆದರೆ ಮಹಮ್ಮದೀಯರಿಗೋಸ್ಕರ ಪ್ರತ್ಯೇಕ ಚುನಾವಣೆ ನಡಿಸಬೇಕೆಂಬ ಒತ್ತಾಯವನ್ನು ಅವರು ಇನ್ನೂ ಬಿಟ್ಟಿರುವಂತೆ ಕಾಣುವುದಿಲ್ಲ; ಮತ್ತು ಇಂಡಿಯಾದ ಹೊಸ ರಾಜ್ಯಾಂಗ ನಿಯಮವನ್ನು [illegible] ಮಾಡಿಸುವಾಗ 69 ಮಿಲಿಯ ಮಹಮ್ಮದೀಯರ ಮನಸ್ಸನ್ನು ಮೀರಿ ನಡೆಯಲಿಕ್ಕಾಗುವುದಿಲ್ಲ. ಆದರೆ ಇನ್ನು ಮೂರು ವರ್ಷಗಳಲ್ಲಿ ಕೋಮುವಾರು ಕದನಗಳು ಮಹಮ್ಮದೀಯರ ಮುಂದಾಳುಗಳಲ್ಲಿಯೂ ಸಾಮಾನ್ಯರಲ್ಲಿಯೂ ಮನಸ್ಸು ಬದಲಾವಣೆಯಾಗಬಹುದು. ಕೋಮುವಾರು ಪ್ರತಿನಿಧಿತ್ವವು ನ್ಯಾಯವಿಧಾಯಕ ಸಭೆಗಳಿಂದ ಈಗ ಸಿವಿಲ್ ಸರ್ವಿಸಿಗೂ ವ್ಯಾಪಿಸಿರುವ ವರ್ತಮಾನವು ಅಸಮಾಧಾನಕರವಾದುದರಿಂದ ಈ ವಿಷಯಕ್ಕೆ ರಾಯಲ್ ಕಮಿಷನಿನವರು ತುಂಬಾ ನಿಗ ಕೊಡಬೇಕಾಗಿದೆ. ಅದನ್ನು ಸಿವಿಲ್ ಸರ್ವಿಸ್ಸಿನಲ್ಲಿ ಒಪ್ಪಿಕೊಂಡರೆ ಸೈನ್ಯದಲ್ಲಿಯೂ ಒಪ್ಪಿಕೊಳ್ಳಬೇಕಾಗುವುದು. ಇಂಡಿಯಕ್ಕೆ ಸ್ವರಾಜ್ಯ ಸಿಕ್ಕಿದಾಗ ಸೈನ್ಯದಲ್ಲಿ ಕೋಮುವಾರು ತತ್ವವನ್ನು ಅವಲಂಬಿಸಿ ಉದ್ಯೋಗಸ್ಥರನ್ನು ನೇಮಿಸಿದರೆ ಅದು ಬೇಗನೆ ಹಿಂದೂ ಮುಸಲ್ಮಾನರ ಕದನಗಳಿಂದ ತೊಂದರೆಗೆ ಈಡಾಗಲಿಕ್ಕಿಲ್ಲವೇ? ಮುಸಲ್ಮಾನರು ಹಿಂದೂ ಜನರ ಕಡೆಗೆ ಈಗಿನಂತೆಯೇ ವರ್ತಿಸಿದರೆ ಬಲೋದಾದ ಸ್ವಪ್ನದಲ್ಲಿ ಮಾತ್ರವಲ್ಲದೆ ಕಾರ್ಯತಃ ಸ್ವರಾಜ್ಯ ಪಡೆಯಲು ಎಂದಿಗೂ ಸಾಧ್ಯವಿಲ್ಲವೆಂಬುದು ನಿಜವಾದ ಸಂಗತಿಯಾಗಿದೆ.

ಹಿಂದೂಸ್ತಾನಿ ಸೇವಾದಳ.

ಪತ್ರಿಕೆ, ೮.

"ಇದುವರೆಗೆ ನಡೆದಿರುವ ಕೆಲಸ"

ಹಿಂದೂಸ್ತಾನಿ ಸೇವಾದಳದ ಆರ್ಗನೈಜರರು ತಾವು ಮಾತು ಕೊಟ್ಟಂತೆ ಜೂನ್ 1 ನೆಯ ತಾರೀಕಿನಿಂದ ಕೆಲಸವನ್ನು ಆರಂಭಿಸಿದರು. ಇದು ವರೆಗೆ ಎಂದರೆ ನಾಲ್ಕು ವಾರಗಳೊಳಗೆ (29 ನೆಯ ಜೂನ್ ವರೆಗೆ) 1703 ರಾಷ್ಟ್ರೀಯ ಮಹಾಸಭೆಯ ಸದಸ್ಯರನ್ನೂ 67 ಹಿಂದೂಸ್ತಾನಿ ಸೇವಾದಳದ ಸದಸ್ಯರನ್ನೂ ಕೂಡಿಸಿರುವರು. ಇನ್ನು ಉಳಿದಿರುವ 12 ವಾರಗಳಲ್ಲಿ 8297 ರಾಷ್ಟ್ರೀಯ ಮಹಾಸಭೆಯ ಸದಸ್ಯರನ್ನೂ 433 ಹಿಂದೂಸ್ತಾನಿ ಸೇವಾದಳದ ಸದಸ್ಯರನ್ನೂ ಸೇರಿಸಬೇಕಾಗಿದೆ. ಕೆಲಸವು ತೃಪ್ತಿಕರವಾಗುವಷ್ಟು ಜೋರಾಗಿ ನಡೆದಿಲ್ಲ. ಆದ್ದರಿಂದ ನಾನು ಕರ್ಣಾಟಕದ ದೇಶಾಭಿಮಾನಿಗಳನ್ನು ನಮ್ಮ ಈ ಕಾರ್ಯದಲ್ಲಿ ಮುಂದೆ ಬಂದು ಸಹಾಯಮಾಡಬೇಕೆಂದು ಪ್ರಾರ್ಥಿಸುತ್ತೇನೆ. ಕೊಡಗು, ಮಂಗಳೂರು ಮತ್ತು ಕಾರವಾರ ಜಿಲ್ಲೆಗಳು ತಟಸ್ಥವಾಗಿವೆ. ಅಲ್ಲಿಯವರು ಈ ಸದಸ್ಯರನ್ನು ಕೂಡಿಸುವ ಕೆಲಸದಲ್ಲಿ ನಮಗೂ ಪ್ರಾಂತೀಕ ಕಾಂಗ್ರೆಸ್ ಕಮಿಟಿಗೂ ಸಹಾಯ ಮಾಡುವರೆ?

ನಾ· ಸು· ಹರಡೀಕರ್,
ಜನರಲ್ ಸೆಕ್ರೆಟರಿ.

ವರ್ತಮಾನ ಸಂಗ್ರಹ.

ಒಳ ದೇಶ

ರಿಟಾಯರ್ಡ್ ದರೋಗರಾದ ಮ. ನಡಿಕೇರಿಯಂಡ ಉತ್ತಯ್ಯನವರು ತಾ. 16ರಲ್ಲು ಮೃತರಾದರೆಂದು ತಿಳಿಯುತ್ತೇವೆ.

ಈ ವಾರವೂ ದೇಶದಲ್ಲಿ ಮಳೆಯು ಬಹಳ ಕಡಿಮೆಯಾಗಿ ವ್ಯವಸಾಯ ಕೆಲಸಕ್ಕೆ ಅನಾನುಕೂಲವಾಗಿತ್ತು. ಆದರೆ ನಿನ್ನೆಯಿಂದ ಪುನಹ ಮಳೆಯು ಪ್ರಾರಂಭಿಸಿದಂತೆ ತೋರುತ್ತದೆ.

ಮ· ಕಂಬ್ರಕಂಡ ಪೊನ್ನಪ್ಪನವರು ಇಂಗ್ಲಿಷ್ ಆಫೀಸಿನ 2ನೇ ಕ್ಲಾರ್ಕರಾಗಿಯೂ, ಮ. ಬಲ್ಲಚಂಡ ಅಪ್ಪಯ್ಯನವರು ಡಿಸ್ಟ್ರಿಕ್ಟ್ ಬೋರ್ಡ್ ಹೆಡ್‌ಕ್ಲಾರ್ಕರಾಗಿಯೂ ನೇಮಿಸಲ್ಪಟ್ಟಿರುವರು.

ಮ· ಕೆ· ಪಿ. ಚೆಣ್ಣಪ್ಪನವರು "ಲೋಕಪಾವನ"ದ ಸಂಪಾದಕ ಮತ್ತು ಪಬ್ಲಿಷರಾದ ಮ. ಬಿ. ಬೆಳ್ಯಪ್ಪನವರ ಮೇಲೆ ಕೊಟ್ಟಿದ್ದ ಮಾನನಷ್ಟದ ಮೊಕದ್ದಮೆಯನ್ನು ಸಬ್‌ಜಡ್ಜಿಯವರು ವಿಚಾರಿಸಿ ಮ. ಬಿ. ಬೆಳ್ಯಪ್ಪನವರನ್ನು ತಾ. 17ರಲ್ಲಿ ಚಾರ್ಜುಮಾಡಿರುವರು. ಬಚಾವು ಸಾಕ್ಷಿ ವಿಚಾರಕ್ಕೆ ಈ ತಾ 31ಕ್ಕೆ ಇಟ್ಟಿರುವರು.

ವೀರರಾಜಪೇಟೆಯಲ್ಲಿರುವ "ಎಗ್ರಿಕಲ್ಚರಲ್ ಫಾರಮು"ನ್ನು ಇಡಬೇಕೋ ಬೇಡವೋ ಎಂಬದನ್ನು ವಿಚಾರಿಸಲು ಸರಕಾರದವರು ನೇಮಿಸಿದ್ದ ಎಗ್ರಿಕಲ್ಚರಲ್ ಕಮಿಟಿಯ ಮೀಟಿಂಗು ತಾ. 17ರಲ್ಲಿ ಮಡಿಕೇರಿಯಲ್ಲಿ ನಡೆಯಿತು. ಕೊಡಗಿನಲ್ಲಿ ವ್ಯವಸಾಯ ಪರಿಶೋಧನೆ ವಿಷಯ ದೇಶದ ಕೆಲವು ಮಹನೀಯರ ಅಭಿಪ್ರಾಯವನ್ನು ತೆಗೆದುಕೊಳ್ಳುವ ಬಗ್ಗೆ ಈ ಕಮಿಟಿಯು ದೇಶದ ನಾಲ್ಕೈದು ಮುಖ್ಯ ಸ್ಥಳಗಳಲ್ಲಿ ಸೇರುವಂತೆ ತೀರ್ಮಾನಿಸಿದರೆಂದು ತಿಳಿಯಬರುತ್ತದೆ.

ಮೆಟ್ರಿಕ್ಯುಲೇಶನ್ ಅಥವಾ ಸ್ಕೂಲ್‌ಫೈನಲ್ ಪರೀಕ್ಷೆಯಲ್ಲಿ ಪಾಸಾಗಿ ಆಗೋಸ್ಟು 1ರಲ್ಲಿ 18 ರಿಂದ 23 ವರ್ಷ ಪ್ರಾಯದೊಳಗಿರುವ ಉಮೇದುವಾರರು ಬೊಂಬಾಯಿ ಪ್ರಾಂತ್ಯದಲ್ಲಿ ಫಾರೆಸ್ಟ್ ರೇಂಜರ್ ಕೆಲಸಕ್ಕೆ ಕೊಯಮುತ್ತೂರು ಫಾರೆಸ್ಟ್ ಕಾಲೇಜಿನಲ್ಲಿ ತರಬೇತು ಹೊಂದಲು ಬೇಕಾಗಿದ್ದಾರೆಂದೂ, ಕೆಲವು ಸರ್ಟಿಫಿಕೇಟುಗಳೊಂದಿಗೆ ಅಪ್ಲಿಕೇಶನು (ತಯಾರಾದ ಫಾರಂ ಇಲ್ಲ) ಬೊಂಬಾಯಿ ಪ್ರಾಂತ್ಯದ ಫಾರೆಸ್ಟುಗಳ

೧೦೦೦ ರೂಪಾಯಿಗಳ ಬಹುಮಾನ.

ಲೋಕಪ್ರಸಿದ್ಧವಾದ ಸಾಲಂಮಿಸ್ರಿ ಮುರಬ್ಬಾ.

ನಮ್ಮ ಟ್ರೇಡ್ ಮಾರ್ಕನ್ನು ನೋಡಿ ಈ ಔಷಧ ತೆಗೆದುಕೊಳ್ಳಿ

ಇದರ ಸೇವನೆಯಿಂದ ವೀರ್ಯವು ನೀರಿನಂತೆ ಇದ್ದರೂ, ಸ್ವಪ್ನೇಂದ್ರಿಯವಾದರೂ, ಸ್ತ್ರೀ ಸಂಘಕ್ಕೆ ಮೊದಲೇ ಸ್ಖಲನವಾದರೂ, ಮೂತ್ರದೊಂದಿಗೆ ಹೋಗುತ್ತಿದ್ದರೂ ದೋಷರಹಿತವಾಗಿ ಶರೀರಕ್ಕೆ ಆರೋಗ್ಯವನ್ನೂ ಧಾರ್ಢ್ಯತೆಯನ್ನೂ ಆಯುಸ್ಸು, ಬಲ, ತೇಜಸ್ಸು ಉಂಟು ಮಾಡುವದು. ಅಜೀರ್ಣ ಮಲಬದ್ಧತೆ, ಮೆದುಳಿನ ಬಲಹೀನತೆ, ಕೈಕಾಲು ಸೊಂಟ ನೋವುಗಳಿಗೆ ಇದು ದಿವ್ಯ ಔಷಧವು. ಈ ಸಾಲಂಮಿಸ್ರಿ ಎಂಬುವದು ಕಾಬೂಲ್ ಕಂದಹಾರ ಪ್ರಾಂತ್ಯದಲ್ಲಿ ಬೆಳೆಯುತ್ತದೆ.

ಈ ಔಷಧದಿಂದ ಗುಣಹೊಂದಿರುವ ಅನೇಕ ಮಹನೀಯರು ತಾವಾಗಿಯೇ ಅನೇಕ ದೇಶಗಳಿಂದಲೂ ಆಫ್ರೀಕ, ಬರ್ಮ, ಪಿನಾಂಗ್, ಸಿಂಗಪೂರ್, ಸಿಲೋನ್, ಬೊಂಬಾಯಿ, ಕಲ್ಕತ್ತ, ಮದ್ರಾಸು ಮತ್ತು ಇಂಡಿಯಾದೇಶದಲ್ಲಿ ಎಲ್ಲಾ ಸ್ಥಳಗಳಿಂದಲೂ ನಮಗೆ ಯೋಗ್ಯತಾ ಪತ್ರಿಕೆಗಳನ್ನು ಕಳುಹಿಸಿರುವರು. ಇವುಗಳ ನಕಲನ್ನು ಯಾರಾದರೂ ತರಿಸಿ ನೋಡಬಹುದು. ಇವುಗಳು ಸುಳ್ಳು ಎಂದು ನಿರ್ಧರಿಸುವವರಿಗೆ ಮೇಲೆ ಕಂಡ ಬಹುಮಾನವು ಕೊಡಲ್ಪಡುತ್ತೆ. ನಾವು ಹಾಗೆ ಕೊಡದೆ ನಿರಾಕರಿಸಿದಲ್ಲಿ ಕೋರ್ಟು ಮೂಲಕ ಅದನ್ನು ಪಡೆಯಬಹುದು. ೧ ಡಬ್ಬವನ್ನು ೧೫ ದಿನ ಸೇವಿಸಿದಲ್ಲಿ ಗುಣವು ಖಂಡಿತವಾಗಿ ತೋರಬಹುದು. ೨ ಯಾ ೩ ಡಬ್ಬಿಗಳು ಜನ್ಮಾಂತ್ಯದವರಿಗೂ ಪೂರ್ಣವಾಗಿ ಗುಣವನ್ನುಂಟು ಮಾಡುವವು. ರೋಗದ ವಿಳಾಸಗಳನ್ನು ವಿವರವಾಗಿ ಬರೆಯಬೇಕು. ಒಂದಾವರ್ತಿ ಅಜಮಾಯಿಸಿ ಮಾಡಿ ನೋಡಿದಲ್ಲಿ ಖಾತ್ರಿ ಉಂಟಾಗುತ್ತೆ.

ಕ್ರಯ ಡಬ್ಬಿ ೧ಕ್ಕೆ ರೂ. ೨—೦—೦ ಅಂಚೆ ಚಾರ್ಜು ೧ರಿಂದ ೩ ಡಬ್ಬಿಗಳಿಗೆ ೦—೬—೦ ಆಣೆ. ಏಜಂಟರುಗಳು ಎಲ್ಲಾ ಸ್ಥಳಗಳಲ್ಲಿಯೂ ಆವಶ್ಯಕವಾಗಿರುತ್ತೆ. ರಿಜಿಸ್ಟರ್ ತರಿಸಿಕೊಳ್ಳಬಹುದು. ಆರ್ಡರು ಕೊಡತಕ್ಕ ಕಾಲದಲ್ಲಿ ಈ ಪತ್ರಿಕೆಯ ಹೆಸರನ್ನು ಬರೆಯಬೇಕು.

ಟೆಲಿಗ್ರಾಫ್ ಅಡ್ರೆಸ್,
ಮಿಸ್ರಿ, ಬೆಂಗಳೂರು ಸಿಟಿ,

ಡಿ. ಮನ್ನಾಲಾಲ್, ಡಿಲ್ಲಿ ನೇಟಿವ್ ವೈದ್ಯರು,
ಸಾಲಂಮಿಸ್ರಿ ಮುರಬ್ಬ ಡಿಪೋ,
ಬೆಂಗಳೂರು ಸಿಟಿ.

ಚೀಫ್ ಕನ್‌ಸರ್ವೇಟರವರಿಗೆ ಸೆಪ್ಟೆಂಬರ್ 1 ರೊಳಗೆ ತಲಪಬೇಕೆಂತಲೂ ತಪಸೀಲು ರೂಲ್ಸುಗಳಿಗೆ ಜುಲೈ 15ರ (ಅಥವಾ ನಂತರದ ವಾರಗಳ) ಬೊಂಬಾಯಿ ಸರಕಾರದ ಗಜೆಟ್ಟಿನ 1 ನೇ ಭಾಗವನ್ನು ನೋಡಬೇಕೆಂತಲೂ ಪ್ರಕಟವಾಗಿದೆ.

1927ನೇ ಫೆಬ್ರವರಿಯಲ್ಲಿ ಸೇಂಡ್ಹರ್ಸ್ಟ್ ರಾಯಲ್ ಮಿಲಿಟರಿ ಕಾಲೇಜಿಗೆ ಸೇರಲಪೇಕ್ಷಿಸುವವರಿಗೆ ಪ್ರವೇಶ ಪರೀಕ್ಷೆಯು ಸಿಮ್ಲಾದಲ್ಲಿ 1926ನೇ ಸೆಪ್ಟೆಂಬರ್ 20ರಲ್ಲಿ ಪ್ರಾರಂಭವಾಗುವದು. ಉಮೇದುವಾರರು 1927ನೇ ಜನವರಿ 1ರಲ್ಲಿ 18ರಿಂದ 20 ವರ್ಷಪ್ರಾಯದೊಳಗಿರಬೇಕು. ಈ ಪರೀಕ್ಷೆಗೆ ಹೋಗಲಪೇಕ್ಷಿಸುವವರು ಈ ತಾ 30ರಲ್ಲಿ ಬೆಳಿಗ್ಗೆ 11 ಗಂಟೆಗೆ ಕಮಿಷನರವರನ್ನು ಮಡಿಕೇರಿಯಲ್ಲಿ ಕಾಣಬೇಕಾಗಿ ಕೋರಲಾಗಿದೆ. ಇಂಡಿಯನರು ಸೇಂಡ್ಹರ್ಸ್ಟ್ ಕಾಲೇಜಿಗೆ ಸೇರಲು 1925ರಲ್ಲಿ ಮಾಡಿದ ತಾತ್ಕಾಲಿಕ ರೂಲ್ಸುಗಳ ಪ್ರತಿಯೂ 1925ನೇ ಸೆಪ್ಟೆಂಬರಿನಲ್ಲಿ ನಡೆದ ಪ್ರವೇಶ ಪರೀಕ್ಷೆಯ ಮೇಲಿನ ರಿಪೋರ್ಟಿನ ಪ್ರತಿಯೂ ಒಂದು ಪ್ರತಿಗೆ ಎರಡಾಣೆ ಕ್ರಯದಲ್ಲಿ ಮೇನೇಜರ್, ಗವರ್ನ್‌ಮೆಂಟ್ ಆಫ್ ಇಂಡಿಯಾ ಸೆಂಟ್ರಲ್ ಪಬ್ಲಿಕೇಶನ್ ಬ್ರಾಂಚ್, 8 ಹೇಸ್ಟಿಂಗ್ಸ್ ಸ್ಟ್ರೀಟ್, ಕಲ್ಕತ್ತೆಯಿಂದ ದೊರೆಯುವುದು. ಹೆಚ್ಚಿನ ಮಾಹಿತಿಯು ಕಮಿಷನರವರ ಆಫೀಸಿನಿಂದ ದೊರೆಯಲ್ಪಡುವದು.

ಹಿಂದೂದೇಶ.

'ಸರ್ವೆಂಟ್ ಆಫ್ ಇಂಡಿಯಾ' ಸೊಸೈಟಿಯ ಜೆಂಕಿಪರಿಹಾರಕ ಫಂಡಿಗೆ ತಿರುವಾಂಕೂರಿನ ಮಹಾರಾಣಿ ರೀಜೆಂಟ್‌ರವರು ಒಂದು ಸಾವಿರ ರೂಪಾಯಿ ಕೊಟ್ಟಿರುವರು.

ಕಲ್ಕತ್ತಾ ಮುನ್ಸಿಪಾಲಿಟಿಯ ಮುಸ್ಲಿಮ್ ಮೆಂಬರುಗಳು ತಮ್ಮ ರಾಜಿನಾಮೆಯನ್ನು ಪುನರಾಲೋಚನೆ ಮಾಡಲು ಒಂದುವಾರ ಸಮಯ ಕೇಳಿಕೊಂಡಿರುವರು.

ಮದ್ರಾಸು ಲೆಜಿಸ್ಲೇಟಿವ್ ಕೌನ್ಸಿಲಿನವರು ಮಹಾತ್ಮ ಗಾಂಧಿಯವರ ಆಯಿಲ್ ಪೈಂಟಿಂಗ್ ಫೋಟೋವನ್ನು ತಮ್ಮ ಕೌನ್ಸಿಲ್ ಹಾಲಿನಲ್ಲಿ ಇಡುವಂತೆ ತೀರ್ಮಾನಿಸಿರುವರು.

ಈ ವರ್ಷ ಪಂಜಾಬು ಯುನಿವರ್ಸಿಟಿಯ ಪರೀಕ್ಷೆಯಲ್ಲಿ ಹನ್ನೊಂದು ಸ್ತ್ರೀಯರು ಬಿ. ಎ ಡಿಗ್ರಿಪಡೆದಿರುವರು ಇಷ್ಟು ಮಂದಿ ಮಹಿಳೆಯರು ಒಂದೇ ವರ್ಷ ಡಿಗ್ರಿಪಡೆದದ್ದು ಅಲ್ಲಿ ಇದೇ ಮೊದಲಂತೆ.

ಎಲ್ಲಾ ಪ್ರಾಂತ್ಯಗಳ ಅಬ್ಕಾರಿ ಇಲಾಖೆಯ ಮಂತ್ರಿಗಳ ಮೀಟಿಂಗೊಂದನ್ನು ಈ ಇಲಾಖೆಯ ಧ್ಯೇಯಗಳನ್ನು ಚರ್ಚಿಸಲಿಕ್ಕಾಗಿ ಸಪ್ಟೆಂಬರ್ ಆಖೈರು ವಾರದಲ್ಲಿ ಕರೆಸುವಂತೆ ಇಂಡಿಯಾ ಸರಕಾರದವರು ತೀರ್ಮಾನಿಸಿರುವರು.

ಹಿಂದೂದೇಶದಲ್ಲಿ ದನಗಳ ಸಂಖ್ಯೆ ಕಡಿಮೆಯಾಗುತ್ತಾ ಬರುತ್ತಿದೆ. 25 ವರ್ಷಗಳ ಹಿಂದೆ 20 ಕೋಟಿ ದನಗಳಿದ್ದವು. ಈಗ 9 ಕೋಟಿ ಮಾತ್ರ ಇವೆ. ಈ ಮೇರೆ ನಾಶವಾಗುತ್ತಾ ಬಂದರೆ ಇನ್ನು 25 ವರ್ಷಗಳಲ್ಲಿ ಇಲ್ಲಿ ದನಗಳೇ ಇಲ್ಲವಾಗುವದು.

ಬೆಂಗಳೂರಿನಲ್ಲಿ ಇಂಜಿನೀಯರಿಂಗ್ ಕಾಲೇಜಿನಲ್ಲಿ ಸ್ಥಳ ದೊರೆಯದ ಕಾರಣ ಒಬ್ಬ ವಿದ್ಯಾರ್ಥಿಯು ಆತ್ಮಹತ್ಯಮಾಡಿಕೊಳ್ಳಲಿಕ್ಕಾಗಿ ಒಂದು ಚೂರಿಯಿಂದ ತನ್ನ ಎದೆಯನ್ನು ತಿವಿದುಕೊಳ್ಳಲು ಪ್ರಿನ್ಸಿಪಾಲರು ಕಂಡು ಅವನನ್ನು ಆಸ್ಪತ್ರೆಗೆ ಸಾಗಿಸಿದರು.

ಕಲ್ಕತ್ತೆಯ 'ಫಾರ್‌ವರ್ಡ್' ಪತ್ರಿಕೆಯಲ್ಲಿ "ಪಂಜಾಬಿನಲ್ಲಿ ಅನಾಯಕತ್ವ" ವೆಂಬ ಲೇಖನವನ್ನು ಪ್ರಕಟಿಸಿದಕ್ಕೆ ಅದರ ಸಂಪಾದಕರು ಮತ್ತು ಪ್ರಿಂಟರವರ ಮೇಲೆ ರಾಜದ್ರೋಹಕ್ಕಾಗಿ ಕೇಸು ನಡಿಸುತ್ತಿದ್ದಾರೆ. ಅವರಿಬ್ಬರನ್ನು ದಸ್ತಗಿರಿ ಮಾಡಿ ಜಾಮೀನು ಮೇಲೆ ಬಿಟ್ಟಿದ್ದಾರೆ

ತಾ. 17ರ ರಾತ್ರಿ ಸಿಮ್ಲಾದಲ್ಲಿ 'ಚೆಲ್ಮ್ಸ್‌ಫರ್ಡ್ ಕ್ಲಬ್ಬಿ'ನವರು ಕೊಟ್ಟ ಔತಣದಲ್ಲಿ ವೈಸರಾಯರಾದ ಲಾರ್ಡ್ ಇರ್ವಿನ್‌ರವರು ಹಿಂದೂದೇಶದಲ್ಲಿ ಹಿಂದೂಮುಸಲ್ಮಾನರಿಗೆ ಉಂಟಾಗುವ ಜಗಳಕ್ಕೆ ವ್ಯಸನವನ್ನು ಸೂಚಿಸಿ, ಎಲ್ಲಾ ಮತದವರೂ ಮೈತ್ರೀಯಭಾವದಲ್ಲಿ ಜೀವಿಸುವಂತೆ ಕೋರಿಕೊಂಡರು.

ಬರುವ ಕಾಂಗ್ರೆಸ್ಸಿನ ಅಧ್ಯಕ್ಷ ಪದವಿಗೆ ಈ ವರೆಗೆ ಸೂಚನೆಗಳನ್ನು ಕಳುಹಿಸಿರುವ ಎಂಟು ಪ್ರಾಂತೀಕ ಕಾಂಗ್ರೆಸ್ ಕಮಿಟಿಗಳ್ಲ ನಾಲ್ಕು ಮ ಯಸ್. ಶ್ರೀನಿವಾಸ ಅಯ್ಯಂಗಾರ್‌ರವರನ್ನೂ, ಮೂರು ಡಾಕ್ಟರ್ ಯಂ. ಎ. ಅನ್ಸಾರಿ ಮತ್ತು ಪಂಡಿತ ಮೋತಿಲಾಲ್ ನೆಹರುರವರ ಹೆಸರುಗಳನ್ನೂ ಸೂಚಿಸಿರುವವು.

ಪಾಲಿಟಾನ ದರ್ಬಾರಿನ ಬ್ರಿಟಿಶ್ ಏಜೆಂಟರವರು ಶತ್ರುಂಜಯ ಬೆಟ್ಟದ ವಿಷಯ ದರ್ಬಾರಿಗೂ ಜೈನರಿಗೂ ಇದ್ದ ವ್ಯವಹಾರದಲ್ಲಿ ದರ್ಬಾರಿಗೆ ಪರವಾಗಿ ತೀರ್ಮಾನಿಸಿದಕ್ಕೆ ಜೈನರು ಬೊಂಬಾಯಿಯಲ್ಲಿ ಒಂದು ದೊಡ್ಡ ಮೀಟಿಂಗು ಮಾಡಿ ಆ ತೀರ್ಮಾನವನ್ನು ವಿರೋಧಿಸಿ ಕಪ್ಪು ಬಾವುಟಗಳೊಡನೆ ಮೆರವಣಿಗೆ ಮಾಡಿದರು.

ಮೈಸೂರು ಸರ್ಕಾರದವರು ಕಾಫೀ ಜಮೀನುಗಳಿಗೆ ಹಾಲಿ ಇರುವ 1—0—0 ರೂಪಾಯಿ ಕಂದಾಯವನ್ನು 1—4—0ಗೆ ಹೆಚ್ಚಿಸಲು ಏರ್ಪಡಿಸಿರುವುದರಿಂದ ಇದರಿಂದ ಜನರಿಗೆ ಹೆಚ್ಚು ತೊಂದರೆ ಮತ್ತು ನಷ್ಟವಾಗುವ ಕಾರಣ ಸರ್ಕಾರಕ್ಕೆ ತಕ್ಕ ರೀತಿ ಮನವಿ ಮಾಡಿಕೊಳ್ಳಲಿಕ್ಕಾಗಿ ತಾ. 31ರಲ್ಲಿ ಚಿಕ್ಕಮಗಳೂರಿನಲ್ಲಿ ಪ್ಲಾಂಟರುಗಳ ಮೀಟಿಂಗೊಂದು ನಡೆಯುವುದು.

ಕಲ್ಕತ್ತದ ಬಳಿ ಇರುವ ಖೈರಾಪುರದಲ್ಲಿ ರಥೋತ್ಸವ ಸಮಯದಲ್ಲಿ ಮೆರವಣಿಗೆ ಹೋಗುತ್ತಿರುವಾಗ ಮುಸಲ್ಮಾನರು ಹಿಂದೂಗಳ ಮೇಲೆ ಬಿದ್ದು ಕದನಮಾಡಿದಾಗ್ಯೆ ಪೋಲೀಸಿನವರು ಗುಂಡುಹಾರಿಸಿ ಮುಸಲ್ಮಾನರನ್ನು ತಡೆಗಟ್ಟಿದರು. ಒಂದೆರಡು ಮರಣಗಳೂ ಕೆಲವರಿಗೆ ಘಾಯವೂ ಉಂಟಾಗಿದೆ. ಹದಿನೈದು ದಿನಗಳಲ್ಲಿ ಅಲ್ಲಿ ಇದು ಎರಡನೇ ಸಾರಿಯ ಜಗಳವಾಗಿದೆ

ತಾ. 6 ರಲ್ಲಿ ಮೃತರಾದ ಬೊಂಬಾಯಿಯ ದೊಡ್ಡ ವ್ಯಾಪಾರಸ್ಥರಾದ ಮಿ. ಉಮ್ಮರ್ ಸೋಬಾನಿಯವರು ರಾಜಕೀಯ ಚಳುವಳಿಯಲ್ಲಿ ತುಂಬಾ ಹಿತವುಳ್ಳವರಾಗಿದ್ದು ಸಾರ್ವಜನಿಕ ಕೆಲಸಗಳಿಗೆ ಬಹಳ ಹಣ ಸಹಾಯ ಮಾಡಿದವರಾದ ಕಾರಣ ಅವರ ಸ್ಮಾರಕವಾಗಿ ತಾ. 20ರಲ್ಲಿ ಬೊಂಬಾಯಿಯಲ್ಲಿ ಮಿ. ಬಿ. ಜೆ ಹಾರ್ನಿಮೆನ್‌ರವರ ಅಧ್ಯಕ್ಷತೆಯಲ್ಲಿ ಒಂದು ಪಬ್ಲಿಕ್ ಮೀಟಿಂಗ್ ಮಾಡಿ ಹಲವು ಮುಂದಾಳುಗಳು ಅವರ ಕೆಲಸವನ್ನು ಹೊಗಳಿ ಮಾತಾಡಿದರು.

ವಿದೇಶ.

ತುರ್ಕಿಯ ಪ್ರೆಸಿಡೆಂಟರಾದ ಕೆಮಾಲ್ ಪಾಷರವರನ್ನು ಕೊಲ್ಲಬೇಕೆಂದು ಸ್ಮಿರ್ನಾದಲ್ಲಿ ಒಳಸಂಚು ನಡಿಸಿದವರನ್ನು ವಿಚಾರಿಸಿ 15 ಜನರನ್ನು ಗಲ್ಲಿಕ್ಕೆ ಹಾಕಿಸಿದರು.

ಬ್ರಿಟನ್ನಿನಲ್ಲಿ ನಡೆದ ಮೋಟಾರು ಜೂಜಿನಲ್ಲಿ ಮೊದಲನೇ ಬಹುಮಾನವನ್ನು ಪಡೆದ ಪ್ಲಾರಿಥಾಮಸ್ ಎಂಬವನು ತನ್ನ ಮೋಟಾರನ್ನು ಗಂಟೆಗೆ 175 ಮೈಲಿ ವೇಗದಲ್ಲಿ ಓಡಿಸಿದನು

ಲಂಡನಿನ ಲಾ ಕಾಲೇಜಿನಲ್ಲಿ ಓದುತ್ತಿದ್ದ ಮಿ ನಗರ್ ಚಂದ್ ಚವಲ್‌ರವರು ತನ್ನ ಮೋಟಾರು ಬೈಸಿಕಲ್ಲಿನಲ್ಲಿ ಹೋಗುತ್ತಿರುವಾಗ ಮೋಟಾರು ಕಾರಿಗೆ ಢಕ್ಕಿಬಡೆದು ಅವರು ಮೃತರಾದರು.

ಪರ್ಶಿಯಾದ ಮಾಜಿ ಪ್ರಧಾನ ಮಂತ್ರಿಯಾದ ಮತ್ತು ಅಲ್ಲಿಯ ದೊಡ್ಡ ಐಶ್ವರ್ಯವಂತ ಭೂಮಾಲೀಕರ ಪೈಕಿ ಒಬ್ಬರಾದ ಸಿಪಸಲಹೇಮಾರವರು ಕಂದಾಯದ ಬಾಕಿಯನ್ನು ಕೊಡಲಾರದ್ದರಿಂದ ಆತ್ಮಹತ್ಯ ಮಾಡಿಕೊಂಡರಂತೆ.

ರೋಮನ್ ಕೆಥೋಲಿಕ್ ಕ್ರೈಸ್ತರ ಜಗದ್ಗುರುಗಳಾದ ಪೋಪ್‌ರವರ ಅರಮನೆಯಾದ ವಾಟಿಕನ್‌ನಲ್ಲಿ ತೋಟಗಾರರು ಹೆಚ್ಚಿನ ಸಂಬಳ ಕೊಡಬೇಕೆಂದು ಮುಷ್ಕರ ಹಿಡಿದರು. ಇವರು ಇಲ್ಲಿ ಮುಷ್ಕರ ಹಿಡಿದದ್ದು ಇದೇ ಪ್ರಥಮವಾಗಿದೆ.

ಇಬ್ಬರು ಅಮೇರಿಕನರು ಭೂಗೋಳದ ಸುತ್ತು 28 ದಿವಸ 14½ ಗಂಟೆಗಳಲ್ಲಿ ಸುತ್ತಿಕೊಂಡು ಹೋದರು. ಇಷ್ಟು ಸ್ವಲ್ಪ ಕಾಲದಲ್ಲಿ ಭೂಗೋಳವನ್ನು ಸುತ್ತಿದ್ದು ಇದೇ ಪ್ರಥಮ. ಇದಕ್ಕಿಂತ ಮುಂಚೆ 35 ದಿವಸಗಳಲ್ಲಿ ಒಬ್ಬರು ಸುತ್ತಿದ್ದರು

ಗ್ರೀಸಿನಲ್ಲಿ ಈಗಿರುವ ಸರ್ಕಾರವನ್ನು ಮುರಿದು ಹಾಕಿ ಅದರ ಅಧ್ಯಕ್ಷನನ್ನು ಕೊಲೆ ಮಾಡಲು ಒಳಸಂಚು ನಡಿಸುತ್ತಿದ್ದರೆಂಬ ಕಾರಣದಿಂದ ಅಲ್ಲಿಯ ಕೆಲವು "ಡೆಮೋಕ್ರಾಟಿಕ್" ಮುಂದಾಳುಗಳನ್ನು ಸೆರೆಹಿಡಿದು ನಾಕ್ಸೋಸ್ ದ್ವೀಪಕ್ಕೆ ಗಡೀಪಾರು ಮಾಡಿರುವರು.

ಸ್ವಿಟ್ಜರ್ಲೆಂಡ್ ದೇಶದ ಬಾಲಕಿಯೊಬ್ಬಳು ತನ್ನ 7ನೇ ವಯಸ್ಸಿನಲ್ಲಿ ಮೆಟ್ರಿಕ್ಯುಲೇಶನ್ ಪರೀಕ್ಷೆಯಲ್ಲಿಯೂ, 11ನೇ ವಯಸ್ಸಿನಲ್ಲಿ ಬಿ. ಎ. ಪರೀಕ್ಷೆಯಲ್ಲಿ ತೇರ್ಗಡೆಹೊಂದಿರುವಳು. ಇದಕ್ಕೆ ಸಂತೋಷಪಟ್ಟು ಅಲ್ಲಿಯ ರಾಣಿಯವರು ಆಕೆಗೆ ತುಂಬಾ ಬಹುಮಾನವನ್ನು ಕೊಟ್ಟಿರುತ್ತಾರೆ.

ಫ್ರಾನ್ಸಿನ ಪಾರ್ಲಿಮೆಂಟಿನಲ್ಲಿ ಅಲ್ಲಿಯ ಮುಖ್ಯ ಮಂತ್ರಿಯಾದ ಯಂ ಬ್ರಿಯಾಂಡ್‌ರವರ ಮೇಲೆ ವಿಶ್ವಾಸವಿಲ್ಲವೆಂಬ ಠರಾವನ್ನು ಪಾಸುಮಾಡಿದ್ದರಿಂದ ಅವರು ತನ್ನ ಪದವಿಗೆ ರಾಜಿನಾಮೆ ಕೊಟ್ಟಿರುವರು. ಪಾರ್ಲಿಮೆಂಟಿನ ಅಧ್ಯಕ್ಷರಾಗಿರುವ ಯಂ. ಹೆರ್ರಿಯಟ್‌ರವರು ಮಂತ್ರಿಮಂಡಲಿಯನ್ನು ಏರ್ಪಡಿಸಲು ಒಪ್ಪಿರುವರು

ಈಜಿಪ್ಟಿನಲ್ಲಿ ರೈತರಿಗೆ ಬ್ಯಾಂಕುಗಳ ಮೂಲಕ ಹಣಸಾಲ ಕೊಡಲಿಕ್ಕೂ ಉತ್ತಮವಾದ ಹತ್ತಿಬೀಜಗಳನ್ನು ಒದಗಿಸಿಕೊಟ್ಟು ಒಳ್ಳೆಯ ಹತ್ತಿಯನ್ನು ಬೆಳೆಸಲಿಕ್ಕೂ ಮತ್ತು ಸಹಕಾರಿ ಯಂತ್ರದ ಮೂಲಕ ಉಳಲು ಉತ್ತೇಜನ ಕೊಡಲಿಕ್ಕೂ ಒಂದು ಮಿಲಿಯ ಪೌಂಡು ಭಂಡವಾಳದ ಒಂದು ಸಹಕಾರಿ ಸಂಘವನ್ನು ಏರ್ಪಡಿಸಲು ಅಲ್ಲಿಯ ಸರ್ಕಾರವು ಯೋಚಿಸುತ್ತಿದೆ ಈ ಸೊಸೈಟಿಯ ರಚನೆಯನ್ನು ತಯಾರಿಸಲು ಆರು ಮೆಂಬರುಗಳ ಒಂದು ಕಮಿಟಿಯು ಏರ್ಪಡಿಸಲಾಗಿದೆ. ಪರದೇಶಗಳಿಂದ ಆಹಾರ ಸಾಮಗ್ರಿಗಳನ್ನೂ ಬೇರೆ ಆವಶ್ಯಕತೆಗಳನ್ನೂ ಕೊಂಡುಕೊಳ್ಳಲು ಇನ್ನೊಂದು ಸಹಕಾರಿ ಸಂಘವನ್ನು ಸ್ಥಾಪಿಸುವ ಸಂಭವವಿದೆ

ಪತ್ರವ್ಯವಹಾರ

[ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ಪತ್ರಿಕಾಕರ್ತರು ಜವಾಬ್ದಾರರಲ್ಲ. ಸಂ.]

"ಶ್ರೀ ಸಿದ್ಧಾರೂಢ ಸ್ವಾಮಿಗಳ ಮಹತ್ವ."

ನಾನು ಈ ಮಹಾಸ್ವಾಮಿಗಳ ಚೂಯದ ಅದ್ಭುತ ಬೇರೆ ಜನರಿಂದ ಸ್ವಲ್ಪ ಸ್ವಲ್ಪ ಕೇಳಿದ್ದೆ. ನನ್ನ ಪ್ರಿಯ ಪತಿಯರು ಹುಬ್ಬಳ್ಳಿಯಲ್ಲಿ ರೈಲ್ವೆ ಖಾತೆಯಲ್ಲಿ ತಮ್ಮ ಸರಕಾರಿ ಉದ್ಯೋಗ ಮಾಡುತ್ತಿದ್ದರೂ ಸಹ ಈ ಸ್ವಾಮಿಗಳ ದರ್ಶನಕ್ಕೆ ಹೋಗಲು ನನಗೆ ಅನುಕೂಲವಾಗಲಿ ಅಥವಾ ಬುದ್ಧಿಯಾಗಲೀ ಸಿಗಲಿಲ್ಲ. ಈಚೆಗೆ ಸ್ವಾಮಿಗಳ ಮಹತ್ವದ ವಿಷಯ ಹೆಚ್ಚೆಚ್ಚು ತಿಳಿಯುತ್ತಾ ಬಂತು. ಹೋದವರ್ಷ ಹುಬ್ಬಳ್ಳಿಗೆ ಮುಂಡುಗೋಡದಿಂದ ಹವ ಬದಲಾಯಿಸುವ ಬಗ್ಗೆ ಹೋಗಿದ್ದು ಸದರಿ ಸ್ವಾಮಿಗಳ ಮಠಕ್ಕೆ ಸಹಜವಾಗಿ ಹೋಗಿದ್ದೆವು. ಅವರ ದರ್ಶನವಾಯಿತು. ಮಠದಲ್ಲಿ ನಡಿಯುವ ಆನಂದದ ಕೆಲಸಕ್ಕೆ ಆಕತೆ ಇಲ್ಲದಂತೆ ಕಂಡಿತು. ಆದರೂ ಸ್ವಾಮಿಗಳ ಲೀಲೆಯೇನದೆಯೆಂತ ತಿಳಿಯಲು ಅವಕಾಶವಾಗಲಿಲ್ಲ. ಮತ್ತು ಸಮರ್ಥಳಾಗಿದ್ದೆ. ಅಲ್ಲಿ ಮಹಾ ಸ್ವಾಮಿಗಳ ಸೇವೆ ಮಾಡುತ್ತಿರುವ ಮಹಾನುಭಾವರಾದ ಶಿವರಾಯರು ಎಂಬುವವರು ನಾನು ಕೊಡಗು ದೇಶದವಳೆಂತ ಗುರ್ತು ಹಿಡಿದು ತಾವು ರಚಿಸಿದ ಕಥಾಮೃತವನ್ನು ಓದಿ ತಿಳುಕೊಳ್ಳುವಂತೆ ಉಪದೇಶ ಮಾಡಿದರು. ಆ ಪ್ರಕಾರ ಸದರಿ ಬುಕ್ಕನ್ನು ಮನೆಗೆ ತಂದು ಓದಲು ಅದರಲ್ಲಿ ಬರದಂಥಾ ವಿಷಯ ನಿಜವಾಗಿ ಆಗಿದ್ದ ಪಕ್ಷದಲ್ಲಿ ಸಿದ್ಧಾರೂಢಸ್ವಾಮಿ ಸಾಕ್ಷಾತ್ ಪರಮೇಶ್ವರನೆಂದು ತಿಳಿಯಲಿಕ್ಕೆ ಏನೊಂದೂ ಕೊರತೆ ಇಲ್ಲವೆಂತ ಮನಸ್ಸಿನಲ್ಲಿ ಭಾವಿಸಿದೆ. ಹಾಗೂ ಸದರಿ ಗ್ರಂಥವನ್ನು ಓದುತ್ತಿರುವಾಗ 48 ನೇ ಅಧ್ಯಾಯದಲ್ಲಿ ನಮೂದಾದ ಸಂಗತಿ ಬಗ್ಗೆ ನನ್ನ ಮನಸ್ಸಿನಲ್ಲಿ ಸ್ವಲ್ಪ ಸಂಶಯ ಬಂತು. ಆದೇನೆಂದರೆ "ಶ್ರೀ ಸಿದ್ಧಾರೂಢರ ಕಥಾಮೃತವನ್ನು ಪಾರಾಯಣ ಮಾಡಿದರಿಂದ ಕೂಡಲೆ ಹುಡುಗಿಯ ಮೈಯಿಂದ ಭೂತಹೋಗಿ ಹುಶಾರಾದಳು ಸ್ವಲ್ಪ ದಿವಸದಲ್ಲಿ ಇವಳು ಅಸ್ವಸ್ಥ ಕಷ್ಟಯಿಂದ ಬಿದ್ದು ಸತ್ತಳು. ಅಷ್ಟರಲ್ಲಿ ಒಬ್ಬ ಸನ್ಯಾಸಿಯು ತಾನಾಗಿಯೇ ಬಂದು ಸಿದ್ಧಾರೂಢ ಸ್ವಾಮಿಯ ಭಸ್ಮವನ್ನು ಸದರಿ ಹುಡುಗಿಯ ಬಾಯಲ್ಲಿ ಹಾಕಿದ ಕೂಡಲೇ ಆಕೆಯು ಜೀವಂತಳಾಗಿ ಎದ್ದಳು" ಎಂತ ವಗೈರೆ ನಮೂದಿಸಿದ್ದದ್ದನ್ನು ಓದಿದೆ. ಆ ಪೈಕಿ ಅದಕ್ಕೆ ಅನುಸಾರವಾಗಿ ಒಬ್ಬ ಸನ್ಯಾಸಿಯು ಹೇಗೆ ಅಲ್ಲಿಗೆ ಬಂದು ಒದಗಿದ ಅಂತ ನಾನು ಸಂಶಯಪಟ್ಟೆ. ಆ ಪ್ರಕರಣದಲ್ಲಿಯೇ ದೃಷ್ಟಾಂತವಾಗಿ ಒಬ್ಬ ಸನ್ಯಾಸಿಯು ಎಲ್ಲಿಂದಲೋ ಬಂದವನು ನಮ್ಮ ಮನೆಮುಂದೆ ನಿಂತು ಶ್ರೀ ಸಿದ್ಧಾರೂಢಯೆಂತ ಹೇಳಿದನು. ಇದನ್ನು ನೋಡಿ ನನಗೆ ಬಹಳ ಆಶ್ಚರ್ಯವುಂಟಾಯಿತು ನಾನು ನಾನಾ ಕಡೆಯಲ್ಲಿ ನನ್ನ ಪ್ರಿಯ ಪತಿಯರು ಇದ್ದಲ್ಲಿ ಇದ್ದರೂ ಸಹ ಯಾವ ಸನ್ಯಾಸಿಯು ... ಸಿದ್ಧಾರೂಢ ... ಎಂತ ಅಂದಿದ್ದು ಕೇಳಿದ್ದಿಲ್ಲ. ಇದೇ ವರ್ಷ ಏಪ್ರಿಲ್ ತಿಂಗಳಲ್ಲಿ ರಾಮನವಮಿ ದಿವಸ ಸ್ವಾಮಿಗಳ ದರ್ಶನಕ್ಕೆ ಹೋಗಿದ್ದೆ. ಅವರ ಬಗ್ಗೆ ಸದರಿ ಗ್ರಂಥದಲ್ಲಿ ಮಾರ್ಗ್ಯಾರಿಗೆ ಏನೇನು ಲೀಲೆ ತೋರಿಸಿ ಉದ್ಧರಿಸಿದ್ದರೋ ಅವರೆಲ್ಲರನ್ನು ಆ ಮಠದೊಳಗೆ ನಾನು ಸ್ವತಹ ನೋಡಿರುತ್ತೇನೆ. ಅವರು ಈಗಲೂ ಜೀವಂತರಾಗಿರುತ್ತಿದ್ದು ಸ್ವಾಮಿಗಳ ಸೇವೆ ಮಾಡಿಕೊಂಡಿರುವುದು ನೋಡಿ ಅತಿ ಆಶ್ಚರ್ಯವಾಯಿತಲ್ಲದೆ ಮನಸ್ಸಿನಲ್ಲಿದ್ದ ಸಂಶಯ ದೂರವಾದಂತೆ ಆಗಿ ಅವರಿಂದ ನಾನು ಉಪದೇಶ ತಕೊಳ್ಳಬೇಕೆಂತ ಕುತೂಹಲ ಹುಟ್ಟಿ ಉಪದೇಶ ತೆಗೆದುಕೊಂಡೆ. ಆದಿನಿಂದ ರೀತಿಯಾಗಿ ದಿನಂಪ್ರತಿ ಅವರ ಧ್ಯಾನ ಮಾಡುವವಳಾದೆನು. ನನ್ನ ಪ್ರಿಯ ಪತಿಗೆ ಇದೇ ಮೇ ತಿಂಗಳ 6ನೇ ದಿವಸ ತುಂಬಿದ್ದ ರಿವಾಲ್ವರದ ಗೋಲಿ ಅಕಸ್ಮಾತ ಅವರ ಕಾಲಿಗೆ ತಾಗಿದ್ದು ಅವರ ಜೀವಕ್ಕೆ ಏನೂ ಆಗಬಾರದೆಂತ ಇದೇ ಸ್ವಾಮಿಗಳನ್ನು ಧ್ಯಾನ ಮಾಡಿ ಬೇಡಿಕೊಂಡೆನು. ಅದರಂತೆ ಅವರಿಗೆ ಏನೊಂದೂ ನೋವಿಲ್ಲದೆ ಸುಲಭದಲ್ಲಿ ಆರಾಮಾದರು. ಇದರಿಂದ ಸ್ವಾಮಿಗಳ ಧ್ಯಾನ ತಪ್ಪದಲೇ ಮಾಡಿಕೊಂಡು ಬಂದಂತೆ ದಿನೇ ದಿನೇ ಮನಸ್ಸಿನಲ್ಲಿ ಆನಂದ ಹುಟ್ಟುತ್ತಾ ಬಂತು. ಪುನಹ ಸ್ವಾಮಿಗಳ ದರ್ಶನ ತೆಕ್ಕೊಳ್ಳಬೇಕೆಂತ ಕುತೂಹಲ ಹುಟ್ಟಿ ತಾ. 13—6—26ನೇ ದಿವಸ ಅಲ್ಲಿಗೆ ಹೋಗಿದ್ದೆ. ಅವರ ದರ್ಶನವಾಯಿತು ಅಲ್ಲಿ ಎರಡು ದಿನವಿದ್ದು ಅವರ ಲೀಲೆ ನೋಡುತ್ತಾ ನೋಡುತ್ತಾ ಮನಸ್ಸು ಅವರ ಕಡೆಗೇನೇ ಲೀನವಾಗಿ ಇಂಥಾ ದೃಶ್ಯವನ್ನು ಬಿಟ್ಟು ಹೋಗುವುದರಲ್ಲಿ ಏನೂ ಅರ್ಥವಿಲ್ಲವೆಂತ ತೋರಿಬಂತು. ಈ ಸ್ವಾಮಿಗಳ ದರ್ಶನಕ್ಕೆ ಬೊಂಬಾಯಿ, ಮದ್ರಾಸು, ಬೆಂಗಳೂರು ವಗೈರೆ ದೂರದೇಶಗಳಿಂದ ಸಹ ವರಗಳನ್ನು ಪಡಿಯಲಿಕ್ಕೆ ಮತ್ತು ತಮ್ಮ ಕಷ್ಟಗಳನ್ನು ಪರಿಹಾರ ಮಾಡಿಸಿಕೊಳ್ಳಲಿಕ್ಕೆ ಮತ್ತು ವೇದಾಂತದ ಮರ್ಮ ತಿಳಿಯಲಿಕ್ಕೂ ಜನರು ಸಾವಿರಗಟ್ಲೆ ಬರುತ್ತಿರುವುದನ್ನು ಸಹ ನನ್ನ ಸ್ವಂತ ಕಣ್ಣಿನಿಂದ ನೋಡಿದೆನು. ಸ್ವಾಮಿಗಳ ಭಾಷಣ ಕೇಳಿದಲ್ಲಿ ಶರೀರದ ಪಾಪವೇ ದೂರವಾಗುವಾಗ ಅವರ ಸೇವೆ ಮಾಡಿದರೆ ಪರಿಣಾಮ ಏನಾಗುವದೆಂಬದನ್ನು ಓದುವರು ತಾವೇ ತಿಳಕೊಳ್ಳತಕ್ಕದ್ದು.

ಸ್ವಾಮಿಗಳ ಮಹತ್ವದ ಬಗ್ಗೆ ಸಂಗ್ರಹಿಸಿದ ಕಥಾಮೃತವನ್ನು ಓದಿದವರಿಗೆ ಶ್ರೀ ಸಿದ್ಧಾರೂಢರು ಸಾಕ್ಷಾತ್ ಪರಮೇಶ್ವರನೋ ಅಥವಾ ಮನುಷ್ಯನೋ ಎಂಬದು ಖಾತ್ರಿಯಾದೀತು. ಸದರಿ ಬುಕ್ಕಿನ ಕ್ರಯ ರೂ. 1—8—0 ಆಣೆ ಇರುತ್ತಿದ್ದು ಹುಬ್ಬಳ್ಳಿ ಶ್ರೀ ಸಿದ್ಧಾರೂಢ ಸ್ವಾಮಿಯವರ ಮಠದಲ್ಲಿರುವ ಮಾ. ಶ್ರಿ. ಶಿವರಾಯ ಇವರಿಗೆ ಬರೆದಲ್ಲಿ ವಿ. ಪಿ. ಯಿಂದ ಕಳುಹಿಸಿ ಕೊಡುವರು.

ಸಿ. ಕಾಳಮ್ಮ.

ಹಾವೇರಿ, ತಾ. 11—7—26.

ಆಂಧ್ರ ಆಯುರ್ವೇದಿಕ್ ಫಾರ್ಮಸಿ.
ಬ್ರಾಂಚ್, ಬೆಂಗಳೂರು ಸಿಟಿ.

ಚ್ಯವನಪ್ರಾಸ ಲೇಹ.

ಇದು ಸರ್ವೋತ್ಕೃಷ್ಟವಾದ ಗಿಡಮೂಲಿಕೆಗಳಿಂದ ತಯಾರಿಸಲ್ಪಟ್ಟ ಆಯುರ್ವೇದ ರಸಾಯನೌಷಧವು. ವಿದ್ಯಾರ್ಥಿಗಳೂ ವಿಶೇಷವಾಗಿ ಬುದ್ಧಿಯನ್ನು ಪ್ರಯೋಗಿಸಿ ಕೆಲಸ ಮಾಡುವವರೂ ಈ ಲೇಹವನ್ನು ಸೇವಿಸಿದರೆ ವಿಶೇಷವಾಗಿ ಬುದ್ಧಿಶಕ್ತಿಯನ್ನೂ, ಜ್ಞಾಪಕಶಕ್ತಿಯನ್ನೂ ಹೊಂದುವರು. ದೀರ್ಘಕಾಲದ ವ್ಯಾಧಿಯಿಂದಾಗಲೀ ಕೆಟ್ಟ ನಡತೆಯಿಂದಾಗಲೀ, ಸ್ವಭಾವ ಶಕ್ತಿಯ ಕೊರತೆಯಿಂದಾಗಲೀ ಶರೀರ ಕಾಂತಿಯು ಕುಂದಿ ರಕ್ತ ಕೆಟ್ಟು ಇಂದ್ರಿಯ ದೌರ್ಬಲ್ಯವೇ ಮೊದಲಾದ ವಿಕಾರಗಳಿಂದ ಪೀಡಿತರಾಗಿರುವವರು ಈ ಲೇಹವನ್ನು ಸೇವಿಸಿದರೆ ಈ ತರದ ವಿಕಾರಗಳನ್ನೆಲ್ಲಾ ಪರಿಹರಿಸಿ ದೇಹಕ್ಕೂ ಮನಸ್ಸಿಗೂ ಉಲ್ಲಾಸವನ್ನುಂಟುಮಾಡಿ ಮಾಂಸ ಖಂಡಗಳಿಗೂ ನರಗಳಿಗೂ ಬಲವನ್ನು ಕೊಟ್ಟು ದೇಹಪುಷ್ಟಿಯನ್ನುಂಟುಮಾಡಿ ನವಚೈತನ್ಯವನ್ನುಂಟುಮಾಡುವುದು ಅಲ್ಲದೆ ಆರೋಗ್ಯ ದೃಢಶರೀರವುಳ್ಳವರಾಗಿ ದೀರ್ಘಕಾಲ ಬದುಕುವರು. ಕೆಮ್ಮು, ಉಬ್ಬಸ ವ್ಯಾಧಿಯುಳ್ಳವರಿಗೂ ಮುಖ್ಯವಾಗಿ ಕ್ಷಯರೋಗಿಗಳಿಗೂ ಇದು ಸಂಜೀವಿನಿಯೇ ಸರಿ ಚರಕ ಸಂಹಿತೆಯಲ್ಲಿ ಇದರ ಗುಣವು ಅದ್ಭುತವಾಗಿ ಹೇಳಲ್ಪಟ್ಟಿದೆ. ೧೨ ತೊಲೆಗೆ ೧ರೂಪಾಯಿ. ೪೦ ತೊಲೆಗೆ ೩ರೂಪಾಯಿ

ಎಲ್ಲಾ ಕಡೆಯಲ್ಲಿಯೂ ಏಜಂಟರು ಬೇಕು.

ಸೂಚನೆ.—ಇಲ್ಲಿ ಶಾಸ್ತ್ರೀಯವಾದ ಎಲ್ಲಾ ಔಷಧಗಳೂ ಹೆಚ್ಚಾಗಿ ಕಡಿಮೆ ಕ್ರಯಕ್ಕೆ ಸಿಗುವವು ಆಯುರ್ವೇದ ಭೂಷಣ ಕೆ. ನಾರಾಯಣರಾವ್ ಎ ಎಂ ಎ ಸಿ ಯವರು ರೋಗಿಗಳನ್ನು ಪರೀಕ್ಷಿಸಿ ತಕ್ಕ ಚಿಕಿತ್ಸೆಯನ್ನು ಪ್ರತಿದಿನವೂ ನಡಿಸುವರು ವಿಶೇಷ ಸಂಗತಿಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ

ಟಿ. ಸಿ. ಎಸ್. ಮನಿಯಂ ಅಂಡ್ ಕೋ,

ಮ್ಯಾನೇಜಿಂಗ್ ಏಜಂಟ್ಸ್, ಆಂಧ್ರ ಆಯುರ್ವೇದಿಕ್ ಫಾರ್ಮಸಿ
೬೬ ಚಿಕ್ಕಪೇಟೆ, ಬೆಂಗಳೂರು ಸಿಟಿ
16—4

ಕರ್ಣಾಟಕ
ಏಗ್ಯು ಮಿಕ್ಶ್ಚರ್

ಚಳಿಜ್ವರ, ಮಲೇರಿಯ ಜ್ವರ, ಇನ್‌ಫ್ಲುಯೆಂಝು ಆಡಿ ಜ್ವರ, ಮೊದಲಾದವುಗಳ ಮೇಲೆ ಅಪ್ರತಿಮವಾದ ಔಷಧವು.

ಬೆಲೆ ಬಾಟ್ಲಿಯೊಂದಕ್ಕೆ ರು. ೦-೧೪-೦
ಟಪ್ಪಾಲು ಚಾರ್ಜು ಬೇರೆ
ಡಜನ್ ಬಾಟ್ಲಿಗಳಿಗೆ ಟಪ್ಪಾಲುವೆಚ್ಚ ಸಹ ರು. ೯-೨-೦

ಏಜಂಟರು ಬೇಕು, ಕೊಡಗಿನ ಸ್ಟೋರ್ ಕೀಪರ್‌ಗಳು ತಮ್ಮೂರಿನ ಮೂರು ಜನ ಔಷಧದ ವ್ಯಾಪಾರಿಗಳ ಹೆಸರನ್ನು ತಿಳಿಸಿದಲ್ಲಿ ಅಂದವಾದ ಪ್ಲಾಟಿಂಗ್ ಪೇಪರ್ ಪುಕ್ಕಟೆ.

12—7

ಕರ್ಣಾಟಕ ಬ್ರದರ್ಸ್,
ಗಿರಗಾಂವ, ಮುಂಬಾಯಿ.

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್, ಕೋ ಆಪರೇಟಿವ್ ಸೊಸೈಟೀಸ್ ಆಕ್ಟಿನ ಪ್ರಕಾರ ರಿಜಿಸ್ಟರಾಗಿದೆ.

		ರೂ.
ಶೇರ್ ಬಂಡವಾಳ	—	50,000
ವಸೂಲಾದ ಶೇರ್ ಮೊಬಲಗು	—	3898
ಜಮೆಬಂದ ಠೇವಣಾತಿ	—	90,600

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲಕೊಡತಕ್ಕದ್ದು.

ಒಂದು ವರ್ಷ ವಾಯಿದೆ ಅಥವ ಹೆಚ್ಚಿನ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ ರೂ. 6-4-0ರ ದರದಲ್ಲಿ ಬಡ್ಡಿ ದೊರೆಯುತ್ತೆ, ಕಡಿಮೆ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ 5ರ ಬಡ್ಡಿ ದೊರೆಯುತ್ತೆ.

ವರ್ಷಕ್ಕೊಂದಾವರ್ತಿ ಕೋ ಆಪರೇಟಿವ್ ರಿಜಿಸ್ಟ್ರಾರವರು ಲೆಕ್ಕ ಆಡಿಟುಮಾಡುತ್ತಾರೆ.

ಪ್ರೆಸಿಡೆಂಟರು, ಟ್ರೆಜರರ್.
ಮಂಡೀರ ಕುಟ್ಟಯ್ಯನವರು, ಯಂ. ಭುಜಂಗರಾಯರು
ರಾಯ್ ಬಹದ್ದೂರ್. ಬಿ.ಎ, ಬಿ.ಎಲ್.
ಸೆಕ್ರೆಟರಿ
ಸಿ. ಯಸ್. ವೆಂಕಪ್ಪಯ್ಯನವರು, ಬಿ.ಎ. ಬಿ.ಎಲ್.
ತಾರೀಖು 29—8—1925.

Apply for our shooting Season's Clearance Sale Catalogue of Brand New Goods.

10 to 25 percent Reductions in Prices.

No License Required!! No License Required



Webley and Scott Air Pistol, cal ·177 or ·22, bore Powerful and Accurate complete with a sample box of slugs, two spare washers, a brush forcleaning, and a bookletof instructions Rs. 30/– Free delivery.

Pwerful German Diana Air gun Handsome and Accurate, takes B·S·A· Patern No 1 Slugs and Darts expressly recommendable for Target Practice Rs. 15/ Free delivery

Brilliant Search Light Lamp for Night Sports Rs. 30/– Free delivery.

No License required to purchase or to possess the above items.

Relia[illegible] D B·B·L 12 bore guns	Rs.	60/–	and upwards	
Do· S.B B L· 12	do	do 40/–	do·	
D B.M L Guns	,,	45 -	do·	
S B·M L. do.	,,	30/–	do·	
S B.B L Rifles	,,	25/–	do·	
B L· Revolvers and Pistols	,	30/–	do.	

Arms, Ammunition and shooting requisitesof almost every kind andquality offered at exceptionally favourable rates ANumber of good quality second hand weapons also offered for sale in theNew Catalogue.

GOOLAMHUSIAIN ALLIBHOY & SONS
Largest Importers of Firearms and Ammunition,
Cheapest priced firm in India,

24. 1 — 210 Abdul Rehman Street, BOMBAY·

೧೬ ಚಿತ್ರಪಟಗಳುಳ್ಳ

ಸಚಿತ್ರ ಶುಕಸಪ್ತತಿ ಕಥೆ.

೭೦ ಕಥೆಗಳು ೫೧೨ ಪುಟಗಳು

ಈ ಕಥೆಯು ಧರ್ಮಶಾಸ್ತ್ರ, ವೇದಾಂತ, ಸ್ತ್ರೀಪಾತಿವ್ರತ್ಯ ಬ್ರಾಹ್ಮಣ, ವೈಶ್ಯ, ಶೂದ್ರರೆಂಬ ನಾಲ್ಕು ವರ್ಣದವರು ನಡಿಯತಕ್ಕ ವರ್ಣಾಶ್ರಮ ಧರ್ಮವೇ ಮುಂತಾದ ನೀತಿ ವಿಚಾರಗಳನ್ನು ಬೋಧಿಸುವುದು. ೧ ಕಥಾಂತರದಲ್ಲಿ ಚಿತ್ರಕಥಾ ಚಮತ್ಕಾರ ಶೋಭಿತವಾಗಿಯೂ ನೀತಿಬೋಧಕವಾಗಿಯೂ ಇರುವದರಿಂದ ಸ್ತ್ರೀಯರು, ಪುರುಷರು, ಬಾಲಕರು ಎಂಬ ಭೇದವಿಲ್ಲದೆ ಎಲ್ಲರೂ ಓದಬಹುದು. ೨. ಲೋಕಾನುಭವಕ್ಕೆ ಬೇಕಾದ ಅನೇಕ ವಿಷಯಗಳು ಇದರಿಂದ ತಿಳಿದುಬರುವುದು ೩. ಈ ಕಥೆಯನ್ನು ಓದುವದರಿಂದ, ಮನಸ್ಸನ್ನು ದುರಾಚಾರದಲ್ಲಿ ಬಿಡದಂತೆ ಸದಾಚಾರದಲ್ಲಿಯೇ ನಡೆಯುವಂತೆ ಮಾಡುವುದು. ೪. ವಿವೇಕಾವಿವೇಕವನ್ನು ತಿಳಿಯತಕ್ಕ ಜ್ಞಾನವನ್ನು ಉಂಟುಮಾಡುವುದು. ಬೇಕಾದವರು ವಿ. ಪಿ. ಪೋಸ್ಟು ಮೂಲಕ ತರಿಸಿಕೊಳ್ಳಬಹುದು.

ದಪ್ಪಕಾಗದ ಕ್ರಯ ಪ್ರತಿ ೧ಕ್ಕೆ ರೂ. ೨-೦-೦. ಟಪ್ಪಾಲು ಹಾಸಲು ೦-೮-೦.

ಸಚಿತ್ರ ಭಟ್ಟಿ ವಿಕ್ರಮಾದಿತ್ಯರಾಯನ ಕಥೆ ೩ ಭಾಗಸೇರಿದ್ದು ೬೧೨ ಪುಟಗಳು ಕ್ರಯ ೨-೪-೦. ಸಚಿತ್ರರಾಜ ಶಂಖಿರನ ಕಥೆ ೪೮೦ ಪುಟಗಳು ಕ್ರಯ ರೂ. ೨

ಸಚಿತ್ರ ಶ್ರೀರಾಮತತ್ವಾಮೃತ ಎಂಬ ಸೀತಾರಾಮಾಂಜನೇಯ ಸಂವಾದ ೨೩೬ ಪುಟಗಳು ೧-೮-೦. ಇವುಗಳಿಗೆ ಟಪಾಲು ಖರ್ಚು ಬೇರೆ.

ನಮ್ಮಲ್ಲಿ ದೊರೆಯುವ ಎಲ್ಲಾ ಪುಸ್ತಕಗಳ ಕ್ರಯಪಟ್ಟಿ (ಕ್ಯಾಟಲಾಗ್)ಗೆ ಬರೆದರೆ ಕಳುಹಿಸುವೆವು.

52—8 ನಮ್ಮ ವಿಳಾಸ— ಎಂ. ಆರ್. ಕೃಷ್ಣಸ್ವಾಮಿ ಶೆಟ್ಟಿ.
ಬುಕ್ಕುಡಿಪೋ, ಚಿಕ್ಕಪೇಟೆ. ಬೆಂಗಳೂರು ಸಿಟಿ

ಹೊಸ ಸಾಮಾನುಗಳು! ಸುಲಭ ಕ್ರಯ!! ಈಗತಾನೇ ಬಂದಿವೆ!!!

ಇಂಥ ಸುಸಮಯವನ್ನು ಕಳಕೊಳ್ಳಬೇಡಿರಿ!

12 ಬೋರ್ ಜೋಡಿ ಕೊಳವಿನ ತೋಟ ಕೋವಿ 1ಕ್ಕೆ	ರೂ.	115—0—0
12 ,, 32 ಇಂಚಿನ ಒಂಟಿ ಕೊಳವಿನ ತೋಟ ಕೋವಿ (ಜರ್ಮನಿ) 1ಕ್ಕೆ.	,,	60—0—0
,, ,, 35 ,, ,, ,, ,,	,,	65—0—0
ಜೋಡಿ ಕೊಳವಿನ ಕೇಪು ಕೋವಿ 20ನೇ ನಂಬ್ರು 1ಕ್ಕೆ.... ...	,,	85—0—0
12 ಬೋರ್ ಚಿಲ್ಲು ತೋಟಗಳು (ಒಳ್ಳೇ ನಮೂನೆ) 100ಕ್ಕೆ	,,	14—0—0
,, ,, ಆನೆ ಚಿಲ್ಲು ,, ,, ,, ...	,,	16—0—0
,, ,, ಗುಂಡು ತೋಟಗಳು ,, ,, ...	,,	19—0—0
ಕೋವಿ ಕ್ಲೀನ್ ಮಾಡುವ ಮತ್ತು ತೋಟ ತುಂಬಿಸುವ ಸಾಮಾನುಗಳ 1 ಪೆಟ್ಟಿಗೆಗೆ		27—8—0
ಕೇಪು 250ರ 1 ಟಿನ್ನಿಗೆ	ರೂ.	1—5—0
ಕಾಲು ಪೌಂಡು 2 ಯಥಾನ ಮದ್ದು ಡಬ್ಬಿ 1ಕ್ಕೆ	,,	1—0—0
ಚಿಲ್ಲು ಎಲ್ಲಾ ತರಹದ ನಮೂನೆ ದಾತ್ಲು 1ಕ್ಕೆ	,,	0—10—0
ಫ್ರಾನ್ಸ್ ಉಕ್ಕಿನ ಸೊಗಸಾದ ಗುದ್ದಲಿಗಳು 5 ಪೌಂಡಿನ 1 ಡಜನ್ನಿಗೆ ...	,,	33—0—0
,, ,, ,, 4 ,, ,, ...	,,	30—0—0
4 ಮುಳ್ಳಿನ ಮುಳ್ಳು ಗುದ್ದಲಿಗಳು ಡಜನ್ನಿಗೆ	,,	60—0—0
3 ,, , ,, ...	,,	48—0—0
4 ಪೌಂಡಿನ ಮರ ಕಡಿಯುವ ಕೊಡಲಿಗಳು ಡಜನ್ನಿಗೆ	,,	54—0—0
ಇಂಗ್ಲಿಷ ನಮೂನೆ ಕಪಾತು ಚಾಕುಗಳು ಡಜನ್ನಿಗೆ	,	15—0—0
ಮಿಕನ್ ಕೊಡೆಗಳು ದೊಡ್ಡ ಸೈಜ್ (ಸ್ವಿಟಜರ್‌ಲಾಂಡ್) 1ಕ್ಕೆ	,,	4—8—0
ಸಣ್ಣ ಸೈಜ್ ,, ,, ...	,,	4—4—0
ಹೋಲ್‌ಸೇಲಿಗೆ ,, ...	,,	ಕಮ್ಮಿ ಕ್ರಯ

ಮೆಕ್ಡೋಲ್ ಕಂಪೆನಿ,
ಮಡಿಕೇರಿ.
Messers Mc Dowell & Co.
Mercara
12 8

ಕಿರ್ಲೋಸ್ಕರ ಪೇಟಂಟ ನಲ್ಲಾರ ತಪ್ಪಲಿ.



ಈ ತಪ್ಪಲಿಯು ನಮ್ಮ ಕಾರ್ಖಾನೆಯಲ್ಲಿಯೇ ತಯಾರಾಗುತ್ತದೆ. ಸರಕಾರದಿಂದ ಇದಕ್ಕೆ ಪೇಟಂಟ್ ದೊರತ್ತಿರುತ್ತದೆ ಇದರಮುಖ್ಯ ಗುಣಗಳು.

೧. ನೀರನ್ನು ಮುಟ್ಟಿದ ಕೂಡಲೇ ತುಂಬಿ ಒರುವದು.

೨. ಮೇಲಕ್ಕೆ ಬರುವಾಗ್ಗೆ ಒಂದು ಹನಿ ಸಹ ನೀರು ಸೋರುವದಿಲ್ಲ.

೩. ದೋಣಿಯಲ್ಲಿ ನೀರು ಬೀಳುವಾಗ್ಗೆ ತೊಗಲಿನ ತಪ್ಪಲಿಯಂತ ಬಿತ್ತಸಿದಿ ಹೋಗುವದಿಲ್ಲ.

ಬೆಲೆಬಹು ಅಗ್ಗ ಪತ್ರ ಸ ಸಂಗತಿ ಬಗ್ಗೆ ಬರೆದು ತಿಳಿದುಕೊಳ್ಳಿರಿ

ಕಿರ್ಲೋಸ್ಕರ ಬಂಧು, ಲಿಮಿಟೆಡ್.
ಕಿರ್ಲೋಸ್ಕರವಾಡಿ,
16—7 ಜಿ. ಸಾತಾರ್.

ವಿಶೇಷದ ಮೂರಾಟ!

ಉಚಿತ! ಪಾಕೆಟ್ ವಾಚ್! ಉಚಿತ!

18 ಕ್ಯಾರೆಟ್ ರೋಲ್ಡ್‌ಗೋಲ್ಡ್ ಪ್ಲೇಟ್ ಚಿನ್ನದ ಮುಖ ಬಿಲ್ಲೆಯಿರುವ ಮುಂಗೈ ಗಡಿಯಾರ ನಂ 100.

ಇದು ಅತ್ಯಂತ ಹೊಸ ಮಾದರಿದು, ಸುಂದರವಾದ ಆಕಾರ, ನೊಗಸಾದ ಕೆಲಸ, ಸಿ ಸ್ ಮೇಡ್, ಮುಖ ಬಿಲ್ಲೆಯು ಥಳ ಥಳ ಹೊಳೆಯುತ್ತಾ ಆಕರ್ಷಿಸುತ್ತದೆ 100 ರೂ ಮತ್ತು ಹೆಚ್ಚಿಗೆ ಬೆಲೆಯಿರುವ ಉತ್ಕೃಷ್ಟ ವಾಚಿನಂತೆ ಕಾಣುತ್ತದೆ. ಸುಂದರವಾಗಿಯೂ ಚಿಕ್ಕದಾಗಿಯೂ ಇದೆ. ಗಂಡಸರಿಗೂ ಹೆಂಗಸರಿಗೂ ಉಪಯೋಗಿಸಲು ಅನುಕೂಲವಿರುವ ಅತ್ಯುತ್ತಮ ವಾಚ್ ಯಾವ ಹವದಲ್ಲಾದರೂ ಸರಿಯಾದ ಟೈಮ್ ಕೊಡುವ ವಾಚ್. ಮೂರು ವರ್ಷಗಳ ಗ್ಯಾರೆಂಟಿ ಕೊಡಲಾಗುತ್ತೆ. ಯಾವ ಆಕಾರದ್ದಾದರೂ ಒಂದು ವಾಚನ್ನು ಒಂದು ತಿಂಗಳೊಳಗೆ ಕೊಂಡುಕೊಂಡವರಿಗೆ ನಿಕಲ್ ಪಾಕೆಟ್ ವಾಚ್ ಒಂದು ಉಚಿತವಾಗಿ ಕೊಡಲಾಗುತ್ತದೆ. ಕ್ರಯ 8—0—0.

OVERSEAS SWISS WATCH CO.
POST BOX No. 371,
Mount Road, MADRAS

ಇಮಿಟೇಷನ್ ವಜ್ರದ ಉಂಗುರಗಳು.
(White Imitation Kammals.)

ಈ ಉಂಗುರಗಳನ್ನು ಒಂದು ವಿಧ ನಾದ ಲೋಹದಿಂದ ಮಾಡಿ ಬಂಗಾರದಂತೆ ಗಿಲೀಟು ಮಾಡಿದೆ. ಮೇಲು ಭಾಗದಲ್ಲಿ ಕೆಂಪು, ಹಸರು ಮುಂತಾದ ಇಮಿಟೇಷನ್ ವಜ್ರದ ಕಲ್ಲುಗಳು ಇಟ್ಟು ಕಚ್ಚದ ಕಟ್ಟಿರುವರು ನೋಟಕ್ಕೆ ನಿಜದ ವಜ್ರದ ಉಂಗುರವೆಂದೇ ಹೇಳಬೇಕು. ಜ್ಞಾನಿಗಳು ಕೂಡಾ ಪರೀಕ್ಷಿಸಿದರು ಬೆಲೆಯ ಅಳತೆಯನ್ನು ತಿಳಿಸಿರಿ.

ಕ್ರಯ 1ಕ್ಕೆ 2—0—0,
ಕ್ರಯ 3ಕ್ಕೆ 5—8—0.
7ಕಲ್ಲಿನ ಬಿಳಿ ಕಮ್ಮಲು 2—8—0,
7ಕಲ್ಲಿನ ಕೆಂಪು ಕಮ್ಮಲು 3—0—0.

P. K. Sawmy &Co,
No 17 Evening Bazaar,
52-12 Madras

ಇಮಿಟೇಷನ್ ರೇಷ್ಮೇ ಸೀರೆಗಳು.

ಈ ಸೀರೆಗಳು 18ಮೊಳ, ಉದ್ದ ಪ್ಪು2½ಮೊಳ ಅಗಲವೂ ಇದೆ ಈ ಸೀರೆಗಳನ್ನು ಹಸನಾದ ಇಮಿಟೇಷನ್ ಸಿಲ್ಕ್ ನೂಲಿನಿಂದ ತಯಾರಿಸಿದೆ ಇದು ನೋಡಲಿಕ್ಕೆ ಭಾರಿ ಕ್ರಯದ ಸೀರೆಗಳಂತೆ ಕಾಣುವದಲ್ಲದೆ ಅಂದವಾದ ಅಂಚೂ, ಸುಂದರವಾದ ಸಾಚಾ ರೇಷ್ಮೆಯ ಸೆರಗೂ ಇರುವದು ಈ ಮಾದರಿ ಸೀರೆಗಳು ಬೇರೆ ಯಾರಲ್ಲಿಯೂ ಈ ಕ್ರಯಕ್ಕೆ ಸಿಕ್ಕಲಾರದು ಈ ಸೀರೆಗಳು ಶ್ರೀಮಂತರೂ, ಗರೀಬರೂ ಉಡಲಿಕ್ಕೆ ಬಹು ಲಾಯಕ್ಕಾದವು ಮಾದರಿಗಾಗಿ ಕೆಲವನ್ನು ಮಾತ್ರ ತಯಾರಿಸಿರುತ್ತೇವೆ. ಆದರಿಂದ ಬೇಗನ ತರಿಸಿಕೊಳ್ಳುವವರಿಗೆ ಮಾತ್ರ ಸಿಕ್ಕುವವು.

ಕ್ರಯ ಸೀರೆ 1ಕ್ಕೆ ನಂ 1. ರೂ. 6—8—0
" ನಂ 2. ರೂ. 7—8—0

ವಿಳಾಸ —ಮಹರಾಜ ಟ್ರೇಡಿಂಗ್ ಕಂಪೆನಿ,
16 ತಿರುಪಳ್ಳಿ ಬೀದಿ,
ಮದರಾಸು.

ಈಗಲೇ ಸ್ವಿಂಟಾಗಿದೆ! ಶೃಂಗಾರವಾದ ಪುಸ್ತಕ!!

ಸ್ತ್ರೀ ಪುರುಷರ ಪ್ರೀತಿಯ ಮರ್ಮಗಳನ್ನು ಚಿತ್ರಪಟಗಳ ಸಹಿತ ತಿಳಿಸುವ

ಮರ್ಮ ಶಾಸ್ತ್ರ.

ಪ್ರೆಂಚ್ ಭಾಷೆಯಲ್ಲಿ ಇದ್ದದನ್ನು ಸುಲಭ ಶೈಲಿಯಲ್ಲಿ ಕನ್ನಡ ಭಾಷೆಗೆ ಭಾಷಾಂತರಿಸುತ್ತೇವೆ. ಸ್ತ್ರೀಪುರುಷರುಗಳಿಗೆ ಬೇಕಾದ ಎಲ್ಲಾ ಮರ್ಮ ರಹಸ್ಯಗಳು, ರತಿ ಮನ್ಮಥನು ಆನಂದವಾಗಿರುವದಕ್ಕೆ ಬೇಕಾದ ಉಪಾಯಗಳು, ಸ್ತ್ರೀ ಪುರುಷರ ಜಾತಿಯ ಲಕ್ಷಣಗಳು ಗರ್ಭಧರಿಸುವದು, ಋತು ಉತ್ಪತ್ತಿವಿಧ, ಗುಪ್ತ ವೈದ್ಯ, ಶಯನ ಗೃಹದ ನಿಯಮಗಳು, ಇನ್ನೂ ಸ್ತ್ರೀಪುರುಷರಿಗೆ ಬೇಕಾದ ಲೀಲ ರಹಸ್ಯಗಳು ತುಂಬಿದೆ. ಈ ಶೃಂಗಾರವಾದ ಪುಸ್ತಕವನ್ನು ತರಿಸಿ ಆನಂದ ಹೊಂದುತ್ತಾರೆಂದು ನಂಬಿರುತ್ತೇವೆ. ಪಟಗಳ ಸಹಿತ ಕ್ರಯ ಪುಸ್ತಕ 1ಕ್ಕೆ ರೂ 1—0—0

ವಿಳಾಸ —ಟಿ ರಾಮಚಂದ್ರರಾವ್ ಕಂಪೆನಿ,
52—31 ಪೋಸ್ಟು ಬಾಕ್ಸ್ ನಂ. 232, ಮದರಾಸ್.

ರೋಲ್ಡ್ ಗೋಲ್ಡ್ ಕೈ ಬಳೆಗಳು.

ಇದು ಶುದ್ಧವಾದ ಅಮೇರಿಕನ್ ರೋಲ್ಡ್ ಗೋಲ್ಡ್ ಚಿನ್ನದಿಂದ ಬಹಳ ನಾಜೂಕಾಗಿಯೂ, ಚಮತ್ಕಾರವಾಗಿಯೂ ಎಂದಿಗೂ ಬಣ್ಣವು ಕೆಡದಂತೆ ತಯಾರ್ಮಾಡಲ್ಪಟ್ಟಿರುವದು ಪ್ರಕಾಶವು ಥಳಥಳಿಸುತ್ತಿರುವದು ಸಹ ಸ್ವಾರು ಹೂವುಗಳು ಆಗತಾನೆ ಅರಳಿದರೆ ಹೇಗೋ ಹಾಗೆ ಈ ಹೂವುಗಳು ನಿರ್ಮಿಸಲ್ಪಟ್ಟಿರುವವು ಇದರ ಪ್ರಕಾಶ ಕತ್ತಲೆಯಲ್ಲಿ ನೋಡುವವರ ಕಣ್ಣನ್ನು ಮುಚ್ಚುವಂತಿರುವದು ಆರ್ಡರೊಡನೆ ಕೈಯ ಅಳತೆಯನ್ನು ತಪ್ಪದೆ ಸಮೂದಿಸಬೇಕು ಹೆಂಗಸರು ಇದನ್ನು ಕೈಯಲ್ಲಿ ಹಾಕಿಕೊಂಡರೆ ಬೇರೆ ಯಾವ ಆಭರಣಗಳೂ ಬೇಕಾಗುವದಿಲ್ಲ. ಲಿಂಗಾಯತ, ಬ್ರಾಹ್ಮಣ ಹೆಂಗಸರಿಗೆ ಬಹು ಮುದ್ದಾದ ಆಭರಣ

ಜೊತೆ 1ಕ್ಕೆ ರೂ. 2—0—0.

ದೇವತಾ
ವಿಗ್ರಹಗಳ ಪ್ರತಿಮೆಗಳು.

ಈ ವಿಗ್ರಹಗಳು ಸೀವೆ ಯಲ್ಲಿ ರಬ್ಬರಿನಿಂದ ತಯಾರಿಸಲ್ಪಟ್ಟದ್ದು. ಕಾಗದವು, ಲೆಟರು, ಅಗ್ರಪತ್ರಿಕೆ ಮುಂತಾದವುಗಳಿಗೆ ಬ್ಬರ ಸಹಾಯವಿಲ್ಲದೆ ನಾವೇ ಅಚ್ಚು ಮಾಡಿಕೊಳ್ಳಬಹುದು. ಇದರಲ್ಲಿ ಕೃಷ್ಣ, ಗಣೇಶ, ರಾಮ, ಹನುಮಂತ ಮುಂತಾದ ಪ್ರತಿಮೆಗಳ ಮುದ್ರೆಗಳು ಇರುವವು ಇದರ ಸಂಗಡ ಇಂಕ್‌ಪ್ಯಾಡ್ ಪೆಟ್ಟಿಗೆ ಸಹ ಸೇರಿ ಸೆಟ್ 1ಕ್ಕೆ 0—12—0.

ವಿಳಾಸ:—ಎಸ್. ಆರ್. ಕೃಷ್ಣ ಅಂಡ್ ಕೋ,
12 12 ನಂ ೧, ತಂಬುಸಾಯಕನ ಬೀದಿ, ಮದ್ರಾಸ್

ನೈಟ್ರೇಟ್ ಆಫ್ ಸೋಡಾ

ಎಲ್ಲಾ ಬೆಳೆಗಳಿಗೂ ಅತ್ಯುತ್ತಮವಾದ ಗೊಬ್ಬರ

Nitrate of Soda 15-16 per cent. N

ಈ ಗೊಬ್ಬರದಲ್ಲಿ ಬೆಳೆಗಳಿಗೆ ಅತ್ಯಗತ್ಯವಾದ ನೈಟ್ರೋಜನ ಸಸ್ಯಾಹಾರವು

15 16% ಅಂದರೆ ಎಂಟು ಪ ಒಳ್ಳೇಯ ಹಿಂಡಿ ಗೊಬ್ಬರದಲ್ಲಿರುವುದಕ್ಕಿಂತಲೂ ಎ ಟು ಪಾಲಷ್ಟು ಜಾಸ್ತಿಯಾಗಿರುವದು. ಇದರಲ್ಲಿ ನಿತ್ತವಷ್ಟು ಸಾರಜನಕ (Nitrogen) ವು ಬೇರೆ ಯಾವ ಗೊಬ್ಬರಗಳಿಂದಲೂ ಗಿಡಗಳಿಗೆ ದೊರೆಯಲಾರದು ಆದ್ದರಿಂದಲೇ ಭೂಲೋಕದ ಎಲ್ಲಾ ಭಾಗಗಳಲ್ಲಿಯೂ ಕೈತರು ಇದನ್ನು ವಿಶೇಷವಾಗಿ ಉಪಯೋಗಿಸುತ್ತಾರೆ.

ಭತ್ತ, ಕಬ್ಬು, ತೆಂಗು, ಅಡಿಕೆ, ಮೆಣಸು, ಹೊಗೆಸೊಪ್ಪು, ತರಕಾರಿ ಮೊದಲಾದವುಗಳಿಗೂ ಕಾಫಿ, ಟೀ, ರಬ್ಬರು, ಏಲಕ್ಕಿ ಮೊದಲಾದ ತೋಟ ಪೈರುಗಳಿಗೂ ಎಲುಬಿನ ಪುಡಿ ಅಥವಾ ಬೀಜ ಗೊಬ್ಬರ ವಗ್ಗೈರೆ ಊಡ ಗೊಬ್ಬರಗಳ ಜೊತೆಯಲ್ಲಿ ಈ ಗೊಬ್ಬರವನ್ನು ಉಪಯೋಗಿಸುವದರಿಂದ ಬೆಳೆಯು ಸಮೃದ್ಧಿಯಾಗುವದು. ನೈಟ್ರೇಟ್ ಆಫ್ ಸೋಡಾದಲ್ಲಿರತಕ್ಕ ಸೋಡವು ಮಣ್ಣಿನಲ್ಲಿರುವ ಪೊಟೇಷ್ ಎಂಬ ಇನ್ನೊಂದು ತರದ ಸಸ್ಯಾಹಾರವನ್ನು ಗಿಡಗಳಿಗೆ ಒದಗಿಸಿ ಕೊಡುತ್ತದೆ

ಈ ಗೊಬ್ಬರವು ನೋಟಕ್ಕೆ ಬಿಳೇ ಉಪ್ಪಿನ ಹಾಗಿದ್ದು ಅಪಾಯಕರವಲ್ಲ. ಎಕರೆ ಒಂದಕ್ಕೆ 100-200 ರಾತ್ಲು ಸಾಕಾಗುವದು. ಹೆಚ್ಚಿನ ಮಾಹಿತಿ ಮತ್ತು "ಕೃಷಿಕಧಾರ ಎಂಬ ಪುಸ್ತಕವನ್ನು ಈ ಕೆಳಗಿನ ವಿಳಾಸದಾರರಿಂದ ಧರ್ಮಾರ್ಥವಾಗಿ ಪಡೆಯಬಹುದು.

52—8 **CHILEAN NITRATE COMMITTEE,**
Post Box 469, CALCUTTA.

ಒಂದು ಪ್ರಬಲವಾದ ಪ್ರಶ್ನೆ.

ನಮ್ಮ ಜೀವವನ್ನು ಏತಕ್ಕಾಗಿ ವಿಮೆಮಾಡಬೇಕು!

ವೃದ್ಧಾಪ್ಯದಲ್ಲಿ ನಮ್ಮ ಮತ್ತು ಹೆಂಡತಿ ಮಕ್ಕಳ ಪೋಷಣೆಗಾಗಿ!

ಈಗಾಗಲೇ ಸಾವಿರಾರು ಜನರು ವಿಮೆಮಾಡಿರುವ ಏಳುಕೋಟಿ ರೂಪಾಯಿಗಿಂತ ಹೆಚ್ಚು ಬಂಡವಾಳವಿರುವ ದೇಶೀಯ ವಿಮೆಕಂಪೆನಿಯಲ್ಲಿ ಅತ್ಯಂತ ದೊಡ್ಡದಾದ ಸಾವಿರ ರೂಪಾಯಿ ವಿಮೆಮಾಡಿದವರಿಗೆ ವರ್ಷಕ್ಕೆ 18ರೂ ಕಡಿಮೆಯಿಲ್ಲದೆ ಲಾಭ ಕೊಡುವ 'ಓರಿಯಂಟಲ್' ಗವರ್ನಮೆಂಟ ಜೀವವಿಮೆ ಕಂಪೆನಿಯ ರೂಲ್ಸಿಗೂ, ಶರತಿಗೂ ಈ ಕೆಳಗಿನವರಿಗೆ ಬರೆದು ತಿಳಿದುಕೊಳ್ಳಿ

ಖಾದಿಬಟ್ಟೆ ಎಂದರೇನು?

ದೇಶೀಯ ಹತ್ತಿಯಲ್ಲಿ ಕೈರಾಟೆಯಿಂದ ನೂಲು ತೆಗೆದು ಇಲ್ಲಿಯೇ ತಯಾರಿಸುವ ಬಟ್ಟೆಯೇ 'ಖಾದಿ.' ಈಗಾಗಲೇ ನಮ್ಮ ಸ್ಟೋರಿನಲ್ಲಿ ಪರದೇಶೀಬಟ್ಟೆಗಿಂತ ಗಟ್ಟಿಯಲ್ಲಿಯೂ ಅಂದದಲ್ಲಿಯೂ ಕಡಿಮೆ ಇಲ್ಲದಂತೆ, ಎಲ್ಲಾ ತರದ ಸೀರೆಗಳು ಚೌಕ್ಕಗಳು, ಶಾಲು ವಗ್ಗೈರೆ ಎಲ್ಲಾ ತರದ ಬಟ್ಟೆಯು ತಯಾರಾಗಿದೆ. ನಯವಿಟ್ಟು ಪ್ರೋತ್ಸಾಹಿಸಿರಿ! ಖಾದಿಯಿಂದಲೇ ಸ್ವರಾಜ್ಯ, ಖಾದಿಯಿಂದಲೇ ಮೋಕ್ಷವೆಂಬುದನ್ನು ಮರೆಯ ಬೇಡಿರಿ.

ವೀರಾಜಪೇಟೆ, ಕೆ. ಪಿ. ಬಿಣ್ಣಪ್ಪ,
ದಕ್ಷಿಣ ಕೊಡಗು. ಪ್ರೊಪ್ರೈಟರ್,
ಖಾದಿಭಂಡಾರ

52-17

Printed & published by P. I. Belliappa, at "Kodagu" Press, Mercara for "Kodagu" Ltd

If not delivered please return to
"KODAGU" OFFICE MERCARA

ಕೊಡಗು.

ವಾರ್ಷಿಕ ಚಂದಾ ರೂ ೩-೮-೦

ಸ್ವಸ್ತ್ಯಸ್ತು ಪ್ರಜಾಭ್ಯಃ ... || ... ||

ಸಂಪಾದಕ—ಪಂದ್ಯಂಡ ಐ. ಬೆಳ್ಯಪ್ಪ.

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವದು.

ಸಂಪುಟ ೬] ಕೊಡಗು, ಸ‌ನ ೧೯೨೭ನೇ ಇಸವಿ ಜುಲೈ ತಾರೀಕು ೨೦ನೇ ಶುಕ್ರವಾರ [ಸಂಚಿಕೆ ೯

ಸ್ಥಾಪಿತವಾದದ್ದು 1874 ಮೂಲಧನ 7 ಕೋಟಿ ರೂಪಾಯಿಗಳ

ಓರಿಯಂಟಲ್ ಗವರ್ನ್‌ಮೆಂಟ್ ಸೆಕ್ಯೂರಿಟಿ ಲೈಫ್ ಅಶ್ಯೂರೆನ್ಸ್ ಕಂಪೆನಿ ಲಿಮಿಟೆಡ್, ಹೆಡ್ ಆಫೀಸು= ಬೊಂಬಾಯಿ.

1922—1924 ಈ ಮೂರು ವರ್ಷಗಳಲ್ಲಿ ಕಂಪೆನಿಯಲ್ಲಿ ನಡೆದ ಕೆಲಸದ ಪರಿತಾಂಶಗಳು :—

ಲಾಭ— ರೂ. 51,00,000 (ಐವತ್ತೊಂದು ಲಕ್ಷ ರೂಪಾಯಿಗಳು) ಈ ಪೈಕಿ 45,94,80 ರೂಪಾಯಿಗಳನ್ನು ಲಾಭ ಸಹಿತ ವಿಮೆ ಮಾಡಿರುವವರ ವಿಮೆ ಹಣಕ್ಕೆ ಹೆಚ್ಚು ಬೋನಸ್ ಜಮೆಯಾಗಿ ಈ ಕೆಳಗೆ ತೋರಿಸಿರುವ ರೀತಿಯಲ್ಲಿ ಸೇರಿಸಿರುತ್ತದೆ

ಜೀವಮಾನಾವಧಿಯ ವಿಮೆದಾರರಿಗೆ ರೂ 1000 ವಿಮೆ ಹಣಕ್ಕೆ

ಈ ಮೂರು ವರ್ಷಗಳಿಗೆ ರೂ. 67½.

[ಕ್ಲಿಪ್ತಕಾಲದ ವಿಮೆದಾರರಿಗೆ ರೂ 1000 ವಿಮೆ ಹಣಕ್ಕೆ]

ಈ ಮೂರು ವರ್ಷಗಳಿಗೆ ರೂ. 54.

ಈ ಕಂಪೆನಿಯಲ್ಲಿ ಕ್ರಮೇಣ ಹೆಚ್ಚುತ್ತಿರುವ ಜನಾನುರಾಗವು ಈ ಕೆಳಗೆ ಕೊಟ್ಟಿರುವ ಹೊಸ ಕೆಲಸದ ಪಟ್ಟಿಯಿಂದ ವ್ಯಕ್ತವಾಗುತ್ತದೆ.

1923ರಲ್ಲಿ—ರೂ	1 74,00,000
1924	,,	2,37,00,000
1925	,,	2,96,00,000

ಇನ್ನೂ ದಿನದಿನಕ್ಕೂ ಅಭಿವೃದ್ಧಿಯಾಗುತ್ತಲೇ ಇದೆ ಜೀವವಿಮೆ ಪತ್ರದಲ್ಲಿ ಹಣವನ್ನು ಲಾಭಕರವಾಗಿ ತೊಡಗಿಸಲು ಇದೇ ಸುಸಮಯ

ಬೇಕಾದ ವಿಷಯಗಳನ್ನು ಈ ಕೆಳಗಿನ ವಿಳಾಸಕ್ಕೆ ಬರೆದು ತಿಳಿದುಕೊಳ್ಳಬಹುದು.

ಓರಿಯಂಟಲ್ ಬಿಲ್ಡಿಂಗ್ಸ್,
ಪೋಸ್ಟ್ ಬಾಕ್ಸ್ 56
ಬೆಂಗಳೂರು

ಎಲ್ ಆರ್ ಕೃಷ್ಣಸ್ವಾಮಿಅಯ್ಯರ್,
ಬ್ರಾಂಚ್ ಸೆಕ್ರೆಟರಿ.

52—17

ಮನೋಲ್ಲಾಸಿನಿ ತೈಲ.

ತಲೆನೋವು ತಲೆ ತಿರುಗುವುದು, ತಲೆಹುರಿ ಕಣ್ಣುರಿ, ಕಿವಿಯಿಂದ ಕೀವು ಸೋರುವುದು ಕಿವುಡುತನ, ಕಣ್ಣುನೋವು, ಅಪಸ್ಮಾರ ನಿದ್ರೆ ಬಾರದಿರುವುದು, ನೆನಪು ಶಕ್ತಿ ಕುಂದಿಹೋಗುವುದು ಇವುಗಳನ್ನೆಲ್ಲ ಖಂಡಿತ ಗುಣಪಡಿಸುತ್ತದೆ ಉದುರುವ ಕೂದಲನ್ನು ನಿಲ್ಲಿಸಿ ಗಿಡ್ಡಗಿರುವ

ಕೂದಲನ್ನು ಬೆಳೆಯಿಸಿ ಕೂದಲಿಗೆ ಸೌಂದರ್ಯವನ್ನೂ ಹೊಳಪನ್ನೂ ಕೊಟ್ಟು ಅಕಾಲಕ್ಕೆ ಹಣ್ಣಾಗುವ ಕೂದಲನ್ನು ತಡೆದು ಕೂದಲು ಇಲ್ಲದ ಸ್ಥಳದಲ್ಲಿ ಹೊಸ ಕೂದಲನ್ನು ಹುಟ್ಟಿಸುತ್ತದೆ ಬೆಲೆ ಸೀಸೆಗೆ ರೂ 1, 3 ಸೀಸೆಗೆ 2—10—0, ಒಂದು ದೊಡ್ಡ ಸೀಸೆಗೆ ರೂ 2, 3 ಸೀಸೆಗಳಿಗೆ 5—8—0

ಚಂದನಾಸವ.—ಇದು ಪ್ರಮೇಹ ಮೂತ್ರಕೃಚ್ಛ್ರ, ಮೂತ್ರ ಹನಿಹನಿಯಾಗಿ ಹೋಗುವುದು, ಮೂತ್ರಕೋಶದ ಉರಿ, ಮೂತ್ರಪಿಂಡಗಳ ಉರಿ ಮೂತ್ರನಾಳದಲ್ಲಿ ಹುಣ್ಣು ಮಾಂಸ, ಹೊಸ್ಸುವಾಗ ಉರಿಯುವುದು, ಮೂತ್ರನಾಳದಿಂದ ಕೀವು ಬರುವುದು, ಮೂತ್ರದಲ್ಲಿ ಧಾತು ಹೋಗುವುದು, ಆಗಾಗ್ಗೆ ಮೂತ್ರ ಬರುವದು ಮೂತ್ರ ತಡೆಯಲಿಕ್ಕೆ ಸಾಮರ್ಥ್ಯವಿಲ್ಲದಿರುವುದು, ದೇಹದಲ್ಲಿ ಉರಿ ಬಾಯಾರಿಕೆ, ಸ್ವಪ್ನಾವಸ್ಥೆ, ಮೂತ್ರನಾಳದಲ್ಲಿ ಚುಚ್ಚುವ ನೋವು ಇವುಗಳಿಗೆ ಪರಮ ದಿವ್ಯ ಗಂಡಸರಿಗೂ ಹೆಂಗಸರಿಗೂ ಇದು ಅತ್ಯುತ್ತಮ ಬೆಲೆ—ಬಾಟ್ಲ 1, 3, 6ಕ್ಕೆ ರೂ 1—4—0 3—8—0 6—12—0

ರೋಮನಾಶಿನಿ.— ಈ ಹುಡಿಯನ್ನು ನೀರಲ್ಲಿ ಕಲಸಿ ಮೈಯಲ್ಲಿ ರೋಮವಿರುವ ಭಾಗಕ್ಕೆ ಹಚ್ಚಲು ರೋಮವು ಉದುರಿ ಬೀಳುವುದು ಡಬ್ಬಿ ಒಂದಕ್ಕೆ 6 ಆಣೆ, 3 ಡಬ್ಬಿಗಳಿಗೆ 1 1 ಡಜನಿಗೆ 3 8 0

ಕಟುಕಷಾಯ ಮಲೇರಿಯಕ್ಕೆ.—ಇದು ಇಂಜಕ್ಷನ್ ಮತ್ತು ಕ್ವಿನೀನು ಸೇವಿಸಿದರೂ ಗುಣವಾಗದಿರುವ ಮಲೇರಿಯ ದಿನಬಿಟ್ಟು ಬರುವ ಜ್ವರ ೨—೩ ದಿವಸಕ್ಕೊಂದು ಸಾರಿ ಬರುವ ಜ್ವರ ನಡುಗಿ ಬರುವ ಜ್ವರ, ಮತ್ತು ಜ್ವರದತ್ತ ದೋಷದಿಂದ ಬರುವ ಜ್ವರಗಳಿಗೆ ಖಾತ್ರಿ ಗುಣಪಡಿಸುತ್ತದೆ ಸೀಸೆ 1ಕ್ಕೆ ರೂ 1—9—0 3ಕ್ಕೆ ರೂ 4—0—0, 6ಕ್ಕೆ ರೂ 7—0—0.

ನಮ್ಮ ಕೆಟಲಾಗು ತರಿಸಿ ನೋಡಿರಿ

ವಿಳಾಸ—ಮನೋಲ್ಲಾಸಿನಿ ಕಂಪೆನಿ,
9 ಮಂಗಳೂರು, ಕಂಕನಾಡಿ.

52—32

ಎಂಪೈರ್ ಆಫ್ ಇಂಡಿಯಾ ಲೈಫ್ ಅಶೂರೆನ್ಸ್ ಕಂಪೆನಿ, ಲಿಮಿಟೆಡ್.

(1897ನೇ ಇಸವಿಯಲ್ಲಿ ಸ್ಥಾಪನೆಯಾದದ್ದು)

ಸಮಸ್ತವೂ ಲಾಭ ಸಹಿತವಾದ ಪಾಲಿಸಿಗಳೇ

1927 ನೇ ಫೆಬ್ರವರಿ ತಾ 28 ಕ್ಕೆ ಮುಂಚೆ ಸೇರತಕ್ಕವರಿಗೆಲ್ಲಾ ಆ ತಾರೀಖಿಗೆ ಏರ್ಪಡುವ ಪಂಚವರ್ಷದ ಬೋನಸ್ ಫಲಗಳು ಕೊಡಲಾಗುವದು

ಪ್ರಾಸ್ಪೆಕ್ಟಸನ್ನು ಕೇಳಿದವರಿಗೆ ಕೊಡುವೆವು.

ಬೆಂಗಳೂರು ಬ್ರಾಂಚ್:—
152, ಕಮರ್ಷಿಯಲ್ ಸ್ಟ್ರೀಟ್.

ಮದರಾಸ್ ಬ್ರಾಂಚ್:—
9.10, ಸೆಕೆಂಡ್ ಲೈನ್ ಬೀಚ್.

24—1.

ಸತ್ಯಮೇವಜಯತೇ.

(ಗುಣವಾಗದಿದ್ದರೆ ಹಣ ವಾಪಸ್)

ಧಾತುಪೌಷ್ಟಿಕ ಕಾಮೋತ್ತೇಜಕ, ಇಂದ್ರಿಯಸ್ತಂಭಕವಾದ

ಮದನೋದ್ಭವ ಗುಳಿಗೆ.

ಜನನೇಂದ್ರಿಯದ ಶಿಥಿಲತೆ ನಿಬಲತೆ ನಪುಂಸಕತ್ವ ಶೀಘ್ರಸ್ಖಲಿತ, ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತು ಪೌಷ್ಟಿಕ, ವೀರ್ಯವರ್ಧಕ ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ ಇಂದ್ರಿಯಸ್ತಂಭಕ, ಗರ್ಮಿ (ಟಾಕಿ) ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲ ತರಹದ ಬೊಕ್ಕೆಗಳು, ಹುಣ್ಣುಗಳು ಪಿತ್ತದ ಭಾಧೆಗಳು, ಕಟಿಶೂಲೆ ವಾತರೋಗವು ಮುಂತಾದವು ಆಶ್ಚರ್ಯ ಗುಣವಾಗಿ ಶರೀರಕ್ಕೆ ನಿರೋಗತ್ವ ಕಾಂತಿಯೂ ರತಿಸುಖಕ್ಕೆ ಸಂಪೂರ್ಣ ಶಕ್ತಿಯೂ ಉಂಟಾಗುತ್ತದೆ ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗುತ್ತವೆ ಕಿಮ್ಮತ್ತು ೬೦ ಗುಳಿಗೆಗಳಿಗೆ ೪ ರೂಪಾಯಿ ಇದನ್ನು ಸೇವಿಸುವಾಗ್ಗೆ ನಪುಂಸಕತ್ವಾರಿ ತೈಲವನ್ನು ಉಪಯೋಗಿಸಿದರೆ ಉತ್ತಮ. ಕಿಮ್ಮತ್ತು ಬಾಟ್ಲಿ ಒಂದಕ್ಕೆ ರೂ ೨—೧೨—೦

ಪ್ರಮೇಹನಿವಾರಣಿ—ಇದರ ಸೇವನೆಯಿಂದ ಮೂತ್ರಸ್ಥಾನದಿಂದ ಕೆಂಪು ಹಳದಿಯಂತೆ ಹೋಗತಕ್ಕ ಕೀವು, ಉರಿ, ಪಗ್ಗೈರೆ ಆಗದಿರುವಕ್ರಿಯಿಂದ ಗುಣವಾಗುವದು ಕಿಮ್ಮತ್ತು ಬಾಟ್ಲಿ ಒಂದಕ್ಕೆ ರೂ ೩—೮—೦ ಟಪಾಲು ಖರ್ಚು ಬೇರೆ ಅನುಪಾನ ಪತ್ರಿಕೆ ಔಷಧದ ಸಂಗಡ

ವಂದಾಣ ಸ್ಟಾಂಪು ಕಳುಹಿಸಿದರೆ ಕ್ಯಾಟಲಾಗವು

ವಿಳಾಸ,—

ವೈದ್ಯ ಜಿ ಎಲ್ ಜೋಶಿ ಮತು ಕಂಪೆನಿ.
28 ನಂ 6. ಪೋಸ್ಟ್ ಬನವಾಸಿ, ಉತ್ತರ ಕಾನಡಾ

ಕರ್ಣಾಟಕ

ವಿಗ್ರಹ ನಿವಾರಕ

ಚಳಿಜ್ವರ, ಮಲೇರಿಯ ಜ್ವರ, ಇನ್‌ಫ್ಲುಯಂಝ ಇವೆ ವಿ ಜ್ವರ, ಮೊದಲಾದವುಗಳ ಮೇಲೆ ಅಪ್ರತಿಮವಾದ ಔಷಧವು

ಬೆಲೆ ಬಾಟ್ಲಿಯೊಂದಕ್ಕೆ ರು. ೦—೧೪=೦
ಟಪಾಲು ಚಾರ್ಜು ಬೇರೆ
ಡಜನ್ ಬಾಟ್ಲಿಗಳಿಗೆ ಟಪಾಲು ಖರ್ಚು ಸಹ ರು.
೯—೮—೦

ಏಜಂಟರು ಬೇಕು, ಕೊಡಗಿನ ಸ್ಟೋರ್ಕೀಪರರುಗಳು ತ ಮ್ಮ ಅಂಗಡಿಯಲ್ಲಿ ಇದನ್ನು ಇಟ್ಟುಕೊಂಡು ... ವಸ್ತುಗಳ ಹೆಸರನ್ನು ಇಟ್ಟಿದ್ದಲ್ಲಿ ಅಂದವಾದ ಪ್ಲಾಸ್ಟಿಕ್ ಪೇಪರು ಪುಕ್ಕಟೆ.

12—8

ಕರ್ಣಾಟಕ ಬ್ರದರ್ಸ್,
ಗಿರಗಾಂವ, ಮುಂಬಾಯಿ.

ARMS & AMMUNITION MART.

Mahomedally-Noorbhoy

321 Abdul Rehman Street, near Crawford Market, BOMBAY 3
Telegraphic Address "SHOOTER" Bombay.

[52—48] Please write for Reduced nett prices list for 1926

"ಕೊಡಗು"

ಸನ್ ೧೯೨೬ನೇ ಇಸವಿ ಜುಲೈ ತಾ.
೩೦ ನೇ ಶುಕ್ರವಾರ

ಅವಿಭಕ್ತ ಮತ್ತು ವಿಭಕ್ತ ಕುಟುಂಬಗಳಲ್ಲಿ ಓಟಿನ ಹಕ್ಕು.

ಅವಿಭಕ್ತ ಕುಟುಂಬದಲ್ಲಿ ಓಟುಕೊಡುವ ಹಕ್ಕು ಯಾರ್‍ಯಾರಿಗೆ ಇರಬೇಕೆಂಬ ವಿಷಯ ಈಗ ಹಲವರನ್ನು ಯೋಚಿಸ ಹತ್ತಿದೆ. ಇದು ಸಹಜವೆ. ಯಾಕಂದರೆ ಕುಟುಂಬ ಪಾಲಾಗದೆ ಒಗ್ಗಟ್ಟಿನಲ್ಲಿರಬೇಕೆಂಬ ಒಳ್ಳೇ ತತ್ವವನ್ನು ಅನುಸರಿಸಿ ಜೀವನಾಂಶ ಪಾಲು ಮಾಡಿಕೊಳ್ಳದ ಅವಿಭಕ್ತ ಕುಟುಂಬಗಳು ಹಲವು ಇವೆ. ಇಂಥಾ ಅವಿಭಕ್ತ ಕುಟುಂಬಗಳಲ್ಲಿ ಪಟ್ಟೇದಾರರಿಗೆ ಮಾತ್ರ ಓಟಿನ ಹಕ್ಕಿದೆಯೆಂದು ಸರ್ಕಾರದವರು ತೀರ್ಮಾನಿಸಿರುವರು. ಅಲ್ಲದೆ ಜನರು ಈಚೆಗೆ ಓಟಿನ ಬೆಲೆಯನ್ನು ಹೆಚ್ಚುಹೆಚ್ಚಾಗಿ ಅರಿತುಕೊಳ್ಳುತ್ತಿರುವರು.

ಕಳೆದ ಕೌನ್ಸಿಲು ಚುನಾವಣೆಯಲ್ಲಿ ಅವಿಭಕ್ತ ಕುಟುಂಬದಲ್ಲಿ ಪಟ್ಟೇದಾರನಿಗೆ ಮಾತ್ರವಲ್ಲ, ವಾರ್ಷಿಕವಾಯಿ ಪೇರಿ ಐದು ರೂಪಾಯಿ ಕಂದಾಯ ಕೊಡುವ ಅರ್ಹತೆ ಇರುವ ಜೀವನಾಂಶ ಪಾಲು ಹೊಂದಿರುವ ಯಾ ಹೊಂದದೆ ಇರುವ ಕುಟುಂಬದ ಬೇರೆ ಮೆಂಬರುಗಳಿಗೂ ಓಟು ಕೊಡುವ ಹಕ್ಕು ಕೊಡಲಾಗಿತ್ತು. ಅಂಥವರ ಹೆಸರು ಓಟರುಗಳ ಪಟ್ಟಿಯಿಂದ ಬಿಟ್ಟುಹೋದ ಸಂದರ್ಭಗಳೂ ಇದ್ದುವು. ಆದರೆ ಆ ಚುನಾವಣೆಯನ್ನು ಬಹು ಅವಸರದಲ್ಲಿ ನಡಿಸಿದ ಕಾರಣ ಓಟರುಗಳ ಪಟ್ಟಿಯನ್ನು ಕ್ರಮವಾಗಿ ತಯಾರಿಸಲು ಸಾಧ್ಯವಾಗಲಿಲ್ಲವೆಂತ ಸರ್ಕಾರದವರು ತಿಳಿಸಿದ್ದಾಯಿತು.

ಟಿಕೆ

ಮೇಲಿನ ಕಾರಣದಿಂದಲೇ ಬರುವ ಕೌನ್ಸಿಲು ಚುನಾವಣೆಗೆ ಓಟರುಗಳ ಪಟ್ಟಿಯನ್ನು ಸರಿಯಾಗಿ ತಯಾರಿಸಲು ಒಂದೆರಡು ತಿಂಗಳುಗಳ ಹಿಂದೆ ಒಬ್ಬ ಸ್ಪೆಶ್ಯಲ್ ಆಫೀಸರನ್ನು ನೇಮಿಸಿದ್ದಾಗಿದೆ. ಇವರು ತಯಾರಿಸಿರುವ ಪಟ್ಟಿಯಲ್ಲಿ ಜೀವನಾಂಶ ಪಾಲಾಗದ ಕುಟುಂಬದಲ್ಲಿ ಪಟ್ಟೇದಾರನ ಹೆಸರು ಮಾತ್ರ ದಾಖಲು ಮಾಡಲ್ಪಟ್ಟಿದೆಯೆಂದು ತಿಳಿಯಬರುತ್ತದೆ. ಇದು ನಿಜವಾಗಿದ್ದ ಪಕ್ಷ ಅವಿಭಕ್ತ ಕುಟುಂಬದವರಿಗೆ ಇದು ಪೂರಾ ಅನ್ಯಾಯವೆಂದು ಹೇಳಬೇಕಾಗಿಲ್ಲ. ಈ ಸಂಗತಿಯನ್ನು ಕೇಳಿ ಜಮೀನ್ದಾರರ ಸಂಘದ ಕಾರ್ಯನಿರ್ವಾಹಕ ಕಮಿಟಿಯವರು ಈ ಕೆಳಗಿನ ರಿಸೊಲ್ಯೂಶನನ್ನು ಪಾಸುಮಾಡಿ ಸರ್ಕಾರಕ್ಕೆ ಕಳುಹಿಸಿದರೆಂದು ತಿಳಿಯುತ್ತೇವೆ. 'ಬರುವ ಕೌನ್ಸಿಲು ಚುನಾವಣೆ ಬಗ್ಗೆ ಇಲೆಕ್ಟರಲ್ ರೋಲ್ ತಯಾರಿಸುವಾಗ ಅವಿಭಕ್ತ ಕುಟುಂಬದಲ್ಲಿ ಪಟ್ಟೇದಾರನ ಹೆಸರಿನಲ್ಲಿ ಒಂದಕ್ಕಿಂತ ಹೆಚ್ಚು ಓಟರುಗಳ ಅರ್ಹತೆಗೆ ಬೇಕಾದಷ್ಟು ಕಂದಾಯವಿದ್ದರೆ ಆ ಕಂದಾಯಕ್ಕೆ ತಕ್ಕಷ್ಟು ಓಟರುಗಳನ್ನು ಆ ಕುಟುಂಬದವರ ಅಭಿಪ್ರಾಯ ತೆಗೆದುಕೊಂಡು ಪಟ್ಟಿಗೆ ದಾಖಲು ಮಾಡತಕ್ಕದೆಂದು ಸರ್ಕಾರವನ್ನು ಈ ಸಂಘವು ಕೇಳಿಕೊಳ್ಳುತ್ತದೆ." ಈ ರಿಸೊಲ್ಯೂಶನಿನ ಅಭಿಪ್ರಾಯಕ್ಕೆ ನಾವು ಸಂಪೂರ್ಣ ಒಪ್ಪುತ್ತೇವೆ. ಇದು ನ್ಯಾಯವೆಂದು ಯಾರಿಗೆ ತಾನೇ ತೋಚದು? ಒಂದು ಕುಟುಂಬದಲ್ಲಿರುವ 21 ವರ್ಷ ಪ್ರಾಯಕ್ಕೆ ಮೀರಿದ ಮೆಂಬರುಗಳಿಗೆಲ್ಲಾ ಅರ್ಹತೆಯನ್ನು ಕೊಡುವಷ್ಟು ಕಂದಾಯವನ್ನು ಅವರ ಪಟ್ಟೇದಾರನು ಕೊಡುತ್ತಿರುವದಿಲ್ಲವಾಗಿ ಅವರಲ್ಲಿ ಕೆಲವು ಮೆಂಬರುಗಳಿಗೆ ಮಾತ್ರ ಓಟಿನ ಹಕ್ಕು ಸಿಕ್ಕುವದಾದರೆ ಅಂಥಾ ಹಕ್ಕನ್ನು ಯಾರ್‍ಯಾರಿಗೆ ಕೊಡಬೇಕೆಂಬುದರ ವಿಷಯ ತಕರಾರು ಉಂಟಾಗಬಹುದು. ಅಂಥಾ ಸಂದರ್ಭಗಳಲ್ಲಿ ಓಟುಕೊಡುವ ಹಕ್ಕನ್ನು ಯಾರಿಗೆ ಕೊಡಬೇಕೆಂಬವನ್ನು ಆಯಾಯ ಕುಟುಂಬದವರೇ ತೀರ್ಮಾನಿಸಿಕೊಳ್ಳುವಂತೆ ಬಿಡುವದು ಉತ್ತಮವಾದ ಸೂಚನೆಯೇ ಸರಿ. ಜಮೀನ್ದಾರರ ಸಂಘದವರು ಕಳುಹಿಸಿದ ಮೇಲಿನ ರಿಸೊಲ್ಯೂಶನಿಗೆ ಕಮಿಶನರವರು ಅನುಕೂಲವಾದ ಉತ್ತರವನ್ನು ಕೊಟ್ಟಿರುವರೆಂದು ನಾವು ತಿಳಿಯುತ್ತೇವೆ. ಈ ರಿಸೊಲ್ಯೂಶನು ಕೌನ್ಸಿಲು ರೂಲುಗಳಿಗನುಸಾರವಾಗಿಲ್ಲ ಮತ್ತು ಈಗ ಆ ರೂಲನ್ನು ಬದಲಾಯಿಸಲಾಗುವದಿಲ್ಲವೆಂಬುದೇ ಕಮಿಶನರವರ ಉತ್ತರ. ಅವಿಭಕ್ತ ಕುಟುಂಬದಲ್ಲಿ ಪಟ್ಟೇದಾರನಿಗೊಬ್ಬನಿಗೇನೇ ಓಟಿನಹಕ್ಕು ಕೊಡುವಂಥ ರೂಲ್ಸೇ ಅತೃಪ್ತಿಕರವಾದ ಕಾರಣ ಅದನ್ನು ಬದಲಾಯಿಸಬೇಕೆಂಬುದೇ ದೇಶದವರ ಕೋರಿಕೆಯಾಗಿದೆ. ಅಂಥಾ ಕೋರಿಕೆಗೆ ರೂಲ್ಸನ್ನು ಈಗ ಬದಲಾಯಿಸಲಾಗುವದಿಲ್ಲವೆಂದು ಮಾತ್ರ ಹೇಳಿ ಯಾಕೆ ಹಾಗೆ ಬದಲಾಯಿಸಲಾಗುವದಿಲ್ಲವೆಂಬುದಕ್ಕೆ ಯಾವ ಕಾರಣಗಳನ್ನೂ ಸೂಚಿಸದೆ ಕೊಟ್ಟ ಅಧಿಕಾರಿಗಳ ಜವಾಬು ಅಸಮಾಧಾನಕರವಾಗಿದೆ. ಇದರಿಂದ ದೇಶದ ಹಲವು ಜನರಿಗೆ ಉಂಟಾಗಿರುವ ಅನ್ಯಾಯವನ್ನು ಸರಿಪಡಿಸಲು ಸರ್ಕಾರದವರು ತಿರಸ್ಕರಿಸುವರೆಂದು ಅರ್ಥವಾಗುವದಿಲ್ಲವೇ?

ಹೆಚ್ಚು ಕಮ್ಮಿ ಕೌನ್ಸಿಲು ಚುನಾವಣೆಯ ರೂಲ್ಸನ್ನೇ ಡಿಸ್ಟ್ರಿಕ್ಟ್‌ಬೋರ್ಡು ಚುನಾವಣೆಗೂ ಉಪಯೋಗಿಸುವಂತೆ ಕಂಡುಬರುತ್ತದೆ. ಈ ರೂಲ್ಸುಗಳನ್ನು ಚರ್ಚಿಸಲು ಮೊನ್ನೆ ತಾನೇ ನಡೆದ ಬೋರ್ಡಿನ ಮೀಟಿಂಗಿನಲ್ಲಿ ಒಬ್ಬ ಮೆಂಬರರು ಅವಿಭಕ್ತ ಕುಟುಂಬದಲ್ಲಿ ಜೀವನಾಂಶ ಪಾಲು ಪಡೆದಿರುವ ಮೆಂಬರರಿಗೆ ಕಂದಾಯದ ಅರ್ಹತೆ ಇದ್ದರೆ ಅಂಥವರಿಗೂ ಓಟಿನ ಹಕ್ಕಿರಬೇಕೆಂದು ರೂಲ್ಸನ್ನು ಬದಲಾವಣೆ ಮಾಡಬೇಕಾಗಿ ಸೂಚಿಸಿದರು. ಈ ಬದಲಾವಣೆಯು ರಿಸೊಲ್ಯೂಶನ್ ಬಹುಮತದಿಂದ ಪಾಸಾದರೂ ಕೂಡ ನಾವು ಇಷ್ಟರಲ್ಲೇ ತೃಪ್ತರಾಗುವದಿಲ್ಲ. ಯಾಕಂದರೆ ಈ ಸೂಚನೆಯಿಂದ ಅವಿಭಕ್ತ ಕುಟುಂಬದವರಿಗೆ ಓಟಿನ ಹಕ್ಕಿಗಾಗಿ ಜೀವನಾಂಶ ಪಾಲು ತೆಗೆದುಕೊಂಡು ವಿಭಾಗವಾಗಲು ಉತ್ತೇಜನ ಕೊಟ್ಟಂತಾಗುವದು. ಯಾಕೆ, ಓಟಿನ ಹಕ್ಕು ಬೇಕಾದರೆ ವಿಭಾಗವಾಗಲೇ ಬೇಕೆಂದಾಯಿತು. ಪೂರ್ವದ ಅವಿಭಕ್ತ ಕುಟುಂಬ ಪದ್ಧತಿಯೇ ಉತ್ತಮವಾದದೆಂತಲೂ, ಈಗ ಅಂಥಾ ಕುಟುಂಬಗಳು ಭಿನ್ನ ಭಿನ್ನವಾಗಿ ಹೋಗುವದರಿಂದಲೇ ದಾರಿದ್ರ್ಯವು ಹೆಚ್ಚುತ್ತಿರುವದೆಂತಲೂ ಆಲೋಚನಾಪರರಲ್ಲಿರ ಅಭಿಪ್ರಾಯವಾಗಿರುವಾಗ್ಯೆ ಕುಟುಂಬದ ವಿಭಾಗಕ್ಕೆ ಉತ್ತೇಜನಕೊಡುವದು ಉಚಿತವಲ್ಲ. ಆದುದರಿಂದ ಅವಿಭಕ್ತ ಕುಟುಂಬದ ಬೇರೆ ಮೆಂಬರುಗಳಿಗೆ ಜೀವನಾಂಶ ಪಾಲುಕೊಡದೆ ಇದ್ದ ಪಕ್ಷದಲ್ಲೂ ಸಹ ಪಟ್ಟೇದಾರನು ಕೊಡುವ ಕಂದಾಯದಿಂದ ಒಬ್ಬನಿಗಿಂತ ಹೆಚ್ಚು ಜನರಿಗೆ ಅರ್ಹತೆ ಇರುವದಾದರೆ ಕಂದಾಯಕ್ಕೆ ತಕ್ಕಷ್ಟು ಮೆಂಬರುಗಳಿಗೆ ಓಟಿನ ಹಕ್ಕು ಕೊಡಬೇಕು. ಸರ್ಕಾರದವರು ಈ ಸಂಬಂಧ ಕೊಟ್ಟಿರುವ ಉತ್ತರದಿಂದ ತೃಪ್ತರಾಗದೆ ದೇಶೀಯರ ನ್ಯಾಯವಾದ ಈ ಕೋರಿಕೆಯನ್ನು ಪುನರಾಲೋಚನೆ ಮಾಡುವರಾಗಿ ನಂಬುತ್ತೇವೆ.

ಅವಿಭಕ್ತ ಕುಟುಂಬಗಳಲ್ಲಿ ಸಹ ಕಂದಾಯವಿರುವಷ್ಟು ಜನರಿಗೆ ಓಟು ಇರಬೇಕೆಂತ ನಾವು ವಾದಿಸುತ್ತಿರುವಾಗ ವಿಭಕ್ತ ನಾಗು ಕುಟುಂಬಗಳಲ್ಲಿ ಪ್ರತಿಯೊಬ್ಬ ಪಾಲುದಾರನಿಗೂ ಕಂದಾಯದ ಯೋಗ್ಯತೆಯಿದ್ದರೆ ಓಟಿನ ಹಕ್ಕಿರಬೇಕೆಂತ ನಾವು ಹೇಳಬೇಕಾಗಿಲ್ಲ. ಅನೇಕ ನಾಗು ಕುಟುಂಬಗಳಲ್ಲಿ ಕುಟುಂಬಸ್ಥರನ್ನು ಪಾಲಾಗಿದ್ದರೂ ಜಮಾಬಂದಿಯನ್ನು ವಿಂಗಡಮಾಡಿಕೊಂಡಿರುವದಿಲ್ಲ. ಇಂಥಾ ಸಂದರ್ಭದಲ್ಲಿ ಪಟ್ಟೆದಾರನ ಹೆಸರನ್ನು ಮಾತ್ರ ಓಟರುಗಳ ಪಟ್ಟಿಗೆ ಸೇರಿಸಿದ್ದಾರೆಂತ ತಿಳಿಯುತ್ತೇವೆ. ಹೀಗೆ ಮಾಡುತ್ತಿದ್ದರೆ ಇದು ಸಂಪೂರ್ಣ ತಪ್ಪಾಗಿದೆ. ಜೀವನಾಂಶದ ಪಾಲನ್ನು ಓಟಿನ ಬಗ್ಗೆ ಪಾಲೆಂತ ಭಾವಿಸಿರುವಾಗ ನಾಗು ಕುಟುಂಬಗಳಲ್ಲಿ ಪಟ್ಟೆ ಬೇರಾಗದಿದ್ದರೂ ಪಾಲಾಗಿರುವಾಗ ಪಾಲುದಾರರಿಗೆ ಓಟಿನ ಹಕ್ಕು ಖಂಡಿತವಾಗಿಯೂ ಸಿಕ್ಕಲೇ ಬೇಕು. 2ನೇ ಶೆಡ್ಯೂಲಿನ 6ನೇ ರೂಲ್ ಅವಿಭಕ್ತ ಕುಟುಂಬಗಳಿಗೆ ಅನ್ವಯಿಸುತ್ತದೆಯೇ ಹೊರತು ವಿಭಕ್ತ ಅಂದರೆ ಪಾಲಾದ ಕುಟುಂಬಗಳಿಗೆ ಅನ್ವಯಿಸುವದಿಲ್ಲ. ಪಾಲಾಗಬೇಕಾದರೆ ಅದರ ಪಾಲಾದ ಕುಟುಂಬವೆಂತ ಖಾನೂನಿನಲ್ಲಿ ಅಂಗೀಕರಿಸಲ್ಪಡಬೇಕಾದರೆ ಜಮಾಬಂದಿ ಸಹ ವಿಂಗಡವಾಗಿರಬೇಕೆಂತ ಖಾನೂನು ಇಲ್ಲ. ರೂಢಿಯೂ ಇಲ್ಲ. ಆದರೆ ಈ ರೂಲನ್ನು ಬರೀ ಒಂದೇ ಊರು, ಅದಿಗೆಯಲ್ಲಿ ಇರುವ ಕುಟುಂಬಗಳಿಗೆ ಮಾತ್ರ ವ್ಯಾಪಕವಾಗುವಂತೆ ಮಾಡಿ ಪಟ್ಟೆ ಒಡೆಯದೆ ಇದ್ದರೂ ಪಾಲಾದ ಕುಟುಂಬಗಳಲ್ಲಿ ಪಾಲುದಾರರಿಗೆ ಓಟುಕೊಡುವಂತೆ ಮಾಡಲು ಸಂಬಂಧ ಪಟ್ಟ ಅಧಿಕಾರಿಗಳು ಗಮನಕೊಡಬೇಕಾಗಿ ಅಪೇಕ್ಷಿಸುತ್ತೇವೆ.

ವಿದ್ಯಾಭ್ಯಾಸದಲ್ಲಿ ತಾಯಿನುಡಿ,

(ರೆವರೆಂಡ್ ಲ್ಯಾರ್ಸನ್ ಇವರ ಉಪನ್ಯಾಸ ಭಾಷಣ.)

ಹಿಂದೂಸ್ಥಾನದ ಈಗಿನ ಸ್ಥಿತಿಯಲ್ಲಿ ರಾಜಕೀಯ ಚಳವಳಿಕ್ಕೆ ಮಾತ್ರವಲ್ಲ ಸಾಮಾಜಿಕ, ಧಾರ್ಮಿಕ ಮತ್ತು ಆರ್ಥಿಕ ಜೀವನಗಳಿಗೆ ಸಹ ಒಂದೇ ಸಾಮಾನ್ಯ ಭಾಷೆಯು ಹಿಂದೂಸ್ಥಾನಕ್ಕೆಲ್ಲಾ ಬೇಕಾದದ್ದು ಅವಶ್ಯವಾಗಿದೆ. ಹಿಂದೂಸ್ಥಾನಕ್ಕೆಲ್ಲಾ ಒಂದೇ ಸಾಮಾನ್ಯ ಭಾಷೆಯನ್ನು ಮಾಡಿಕೊಳ್ಳಲಿಕ್ಕೆ ಸಾಧ್ಯವಿಲ್ಲದಿದ್ದರೂ ದಕ್ಷಿಣಹಿಂದೂಸ್ಥಾನಕ್ಕೆಲ್ಲ ದೇಶೀಯ ಭಾಷೆಯೊಂದನ್ನು ಸಾಮಾನ್ಯ ಭಾಷೆಯಾಗಿ ಮಾಡಿಕೊಳ್ಳಲು ಸಾಧ್ಯವಿಲ್ಲದ್ದರಿಂದ ತತ್ಕಾಲಕ್ಕೆ ಇಂಗ್ಲೀಷನ್ನೇ ದಕ್ಷಿಣಹಿಂದೂಸ್ಥಾನಕ್ಕೆ ಸಾಮಾನ್ಯ ಭಾಷೆಯಾಗಿ ಇಟ್ಟುಕೊಳ್ಳಬಹುದು. ಎಂದೆಂದಿಗೂ ಇಂಗ್ಲೀಷ್ ಸಾಮಾನ್ಯ ಭಾಷೆಯಾಗಿರಬೇಕೆಂತ ನಾನು ಹೇಳುವದಿಲ್ಲ.

ವಿದ್ಯಾಭ್ಯಾಸದಲ್ಲೂ, ಸಾರ್ವಜನಿಕ ಕಾರ್ಯಗಳಲ್ಲೂ ತಾಯಿನುಡಿಯನ್ನೇ ಉಪಯೋಗಿಸಬೇಕಾದದ್ದು ಸ್ವಾಭಾವಿಕ ಮತ್ತು ತೃಪ್ತಿಕರವಾದದ್ದಾಗಿದೆ. ಯಾವುದಾದರೂ ಕಸುಬಾರಿ ವಿದ್ಯಾಭ್ಯಾಸಕ್ಕೆ ಸರಕಾರಿ ನೌಕರಿ ಸಿಕ್ಕುವ ಸಂಭವವಿದ್ದರೆ ಪರದೇಶೀ ಭಾಷೆಯನ್ನು ಉಪಯೋಗಿಸಬಹುದು. ಆದರೆ ವಿದ್ಯೆಯೆಂದರೆ ಜನರ ಸಮುದಾಯಕ ಜೀವನವನ್ನು ಉನ್ನತಸ್ಥಿತಿಗೆ ತರುವದೆಂದಾದರೆ ತಾಯಿನುಡಿಯಲ್ಲಿಯೇ ವಿದ್ಯಾಭ್ಯಾಸವನ್ನು ಕೊಡಬೇಕು. ಸೆಕೆಂಡರಿ ದರ್ಜೆಯ ವರೆಗೆ ತಾಯಿನುಡಿಯಲ್ಲಿಯೇ ವಿದ್ಯಾಭ್ಯಾಸ ಕೊಡಬೇಕೆಂತ ಕಡ್ಡಾಯ ಪಡಿಸಬೇಕು. ಸ್ಕೂಲ್ ಫೈನಲ್ ದರ್ಜೆಯಲ್ಲಿ ತಾಯಿನುಡಿಯಲ್ಲಿಯೇ ಕೆಲವು ಕಾಲದ ವರೆಗೆ ವಿದ್ಯಾಭ್ಯಾಸ ಕೊಡಬೇಕೆಂತ ಜುಲುಂ ಪಡಿಸಬೇಕೆಂತ ಇಲ್ಲ. ತಾಯಿನುಡಿಯಲ್ಲೇ ವಿದ್ಯಾಭ್ಯಾಸಕೊಡಬಹುದೆಂತ ಅನುಮತಿಕೊಡಬಹುದು. ಕಾಲೇಜ್ ಕ್ಲಾಸುಗಳಲ್ಲಿ ಮಾತೃ ಭಾಷೆಯಲ್ಲಿ ಪಾಠ ಹೇಳಿದರೆ ಆಗಬಹುದೋ ಎಂತ ನೋಡಲಿಕ್ಕೆ ಯುನಿವರ್ಸಿಟಿಗಳಿಗೆ ಬಿಡಬೇಕು. ಹಾಗಾದರೆ ಯಾವ ದೇಶಭಾಷೆಯನ್ನು ಉಪಯೋಗಿಸಬೇಕೆಂತ ಸವಾಲು ಹುಟ್ಟುತ್ತದೆ. ಒಂದು ಪ್ರಾಂತ್ಯದಲ್ಲಿ ವಾಸಮಾಡುವ ಜನರು ಆ ಪ್ರಾಂತ್ಯದ ಜನರ ತಾಯಿನುಡಿಯನ್ನು ಅನುಸರಿಸಬೇಕು. ಕಡಿಮೆ ಸಂಖ್ಯೆಯ ಜನರು ಉಪಯೋಗಿಸುವ ಭಾಷೆಯಲ್ಲಿ ವಿದ್ಯಾಭ್ಯಾಸ ನಡೆಯುವ ಅನುಕೂಲವನ್ನು ಮಾಡಿಕೊಳ್ಳಲು ಕಡಿಮೆ ಸಂಖ್ಯೆಯ ಜನರಿಗೆ ಅವಕಾಶ ಕೊಡಬೇಕು. ವಿಧವಿಧದ ದೇಶಭಾಷೆಗಳು ರೂಢಿಯಲ್ಲಿರುವದರಿಂದ ತಾಯಿನುಡಿಯಲ್ಲಿ ವಿದ್ಯಾಭ್ಯಾಸ ಕೊಡುವದಕ್ಕೆ ವಿಶೇಷ ಕಷ್ಟವಾಗುವದಿಲ್ಲವೆಂತ ನನ್ನ ಅಭಿಪ್ರಾಯವಾಗಿದೆ. ಪಾಠ ಪುಸ್ತಕಗಳನ್ನು ತಯಾರಿಸಿಕೊಳ್ಳುವ ಕಷ್ಟವಿದೆಯೆಂತ ಗೊತ್ತಿದೆ. ಆದರೆ ಈ ಕಷ್ಟವನ್ನು ಶೀಘ್ರದಲ್ಲೇ ನಿವಾರಣೆ ಮಾಡಿಕೊಳ್ಳಬಹುದು. ತತ್ಕಾಲ ಏನಾದರೂ ಉಪಾಯ ಮಾಡಿಕೊಳ್ಳಬೇಕಷ್ಟೆ.

ರಾಜಕೀಯ ಮತ್ತು ಇತರ ಸಮುದಾಯಕ ಚರ್ಚೆಗಳಲ್ಲಿ ದೇಶದ ಹೆಚ್ಚಿನ ಜನರು ಭಾಗ ತೆಗೆದುಕೊಳ್ಳಲಿಕ್ಕೆ ಈಗ ಅನುಕೂಲವಿಲ್ಲ. ಇಂಗ್ಲೀಷ್ ಭಾಷೆ ತಿಳಿಯದವರು ಅಂಥಾ ಚರ್ಚೆಗಳಲ್ಲಿ ಒಳ್ಳೇ ಅಭಿಪ್ರಾಯ ಕೊಡಲು ಅನರ್ಹರಾದವರು ಅನೇಕರಿದ್ದಾರೆ. ರಾಷ್ಟ್ರೀಯ ಅಭಿಮಾನವಿರುವವನಾದರೆ ವಿದ್ಯಾಭ್ಯಾಸದಲ್ಲಿ ತಾಯಿನುಡಿಗೆ ಅದರ ಗೌರವಸ್ಥಾನವನ್ನು ಕೊಡಲೇಬೇಕೆಂತ ನಾನು ಹೋರಾಡುತ್ತೇನೆ. ಸತ್ಯವನ್ನು ತಿಳಿಸುವದಕ್ಕಾಗಿಯೂ ದೇಶದ ಗುಣಕ್ಕಾಗಿಯೂ ನಾನು ಈ ಮಾತನ್ನು ಹೇಳುವದಾಗಿದೆ. ಯಾರಿಗಾದರೂ ಕೆಡಕಾಗಬೇಕೆಂತ ನಾನು ಹೇಳುವದಲ್ಲ. ವಿದ್ಯಾಭ್ಯಾಸದಲ್ಲೂ ಸಮುದಾಯಕ ಕೆಲಸದಲ್ಲೂ ತಾಯಿನುಡಿಗೆ ಗೌರವಸ್ಥಾನ ಕೊಡಬೇಕೆಂಬ ನನ್ನ ವಾದದಿಂದ ಪರದೇಶೀಯರಿಗೆ ಕಷ್ಟವಾಗುತ್ತದೆ ಆದರೆ ಅವರಿಗೆ ಕಷ್ಟಕೊಡಬೇಕೆಂಬದೇ ನನ್ನ ಉದ್ದೇಶವಲ್ಲ. ಸಂಯುಕ್ತ ಹಿಂದುಸ್ಥಾನದ ಬಲವು ಅದರ ಭಾಗಗಳ ಬಲದ ಮೇಲೆ ಹೊಂದಿದೆ. ಪ್ರಾಂತೀಕ ಬಲವೂ ಒಗ್ಗಟ್ಟೂ ಸಂಸ್ಕೃತಿಯ ಬೆಳವಣಿಗೆಯೂ ಆಗಬೇಕಾದರೆ ತಾಯಿನುಡಿಯಲ್ಲಿ ವಿದ್ಯಾಭ್ಯಾಸವನ್ನು ಕೊಡಬೇಕು.

ಮದ್ರಾಸ್ ವಿಶ್ವವಿದ್ಯಾಲಯದ ವೈಸ್ ಚಾನ್ಸಲರಾದ ಸರ್. ಆರ್. ವೆಂಕಟರತ್ನಂನಾಯುಡು ಇವರು ಈ ಉಪನ್ಯಾಸದಿಂದಾಗ ಅಧ್ಯಕ್ಷರಾಗಿದ್ದರು. ಇವರು ಹೇಳಿದ್ದೇನೆಂದರೆ — ಒಳ್ಳೇ ವಿದ್ಯಾಭ್ಯಾಸ ಕೊಡುವ ಶಾಲೆಗಳಲ್ಲಿ ತಾಯಿನುಡಿಯಲ್ಲಿಯೇ ವಿದ್ಯಾಭ್ಯಾಸ ಕೊಡಬೇಕೆಂತ ನನಗೆ ಅನುಭವದಿಂದ ಮನವರಿಕೆಯಾಗಿದೆ. ಸಮುದಾಯದ ಜನರ ವಿದ್ಯೆಗೂ ರಾಷ್ಟ್ರೀಯ ವಿದ್ಯೆಗೂ ಮಾತೃ ಭಾಷೆಯೇ ಅತಿ ಅವಶ್ಯವಾಗಿದೆ. ಇಂಗ್ಲೆಂಡಿನಲ್ಲೂ ಈ ತತ್ವವನ್ನು ಮೊದಲೇ ಅನುಸರಿಸಿದ್ದಾರೆ. ಸಮುದಾಯದ ಜನರಿಗೆ ವಿದ್ಯಾರ್ಜನೆಯು ಸ್ವತಃ ಸಿದ್ಧ ಹಕ್ಕಾಗಿದೆ. ಸಮುದಾಯದ ಜನರಿಗೆ ವಿದ್ಯೆ ಕೊಡುವದು ಮಾತೃಭಾಷೆಯಿಂದ ಮಾತ್ರ ಸಾಧ್ಯವಿದೆಯಷ್ಟೆ. ಹೆಚ್ಚಿನ ವಿದ್ಯೆ ಬೇಕಾದವರು ಪರದೇಶೀ ಭಾಷೆಯನ್ನು ಕಲಿತುಕೊಳ್ಳಲಿ. ಕೆಳಗಿನ ವಿದ್ಯಾಭ್ಯಾಸವೂ ಮೇಲಿನ ವಿದ್ಯಾಭ್ಯಾಸವೂ ಸಂಗಡಲೇ ಮುಂದರಿಯಬೇಕಾಗಿದೆ. ಹೀಗಾಗಬೇಕಾದರೆ ಮಾತೃಭಾಷೆಯಲ್ಲೇ ವಿದ್ಯೆ ಕೊಡಬೇಕಾಗಿದೆ. ವಿದ್ಯಾಭ್ಯಾಸದಲ್ಲಿ ಮಾತೃಭಾಷೆಗೆ ಪ್ರಾಮುಖ್ಯತೆ ಕೊಡಬೇಕಾದ ಕಾಲಬಂದಿದೆ.

ಮಹಾತ್ಮಗಾಂಧಿಯವರ ಸ್ವಚರಿತ್ರೆ.

ಎರಡನೆಯ ಭಾಗ.

2 ನೆಯ ಪ್ರಕರಣ.

ಕುಟುಂಬ ಪೋಷಣೆಯ ಪ್ರಯತ್ನ.

ನನ್ನ ದೊಡ್ಡಣ್ಣನು ನನ್ನ ಮೇಲೆ ಬಹಳ ಆಶೆಯನ್ನಿಟ್ಟುಕೊಂಡಿದ್ದನು. ಕೀರ್ತಿಗೌರವಗಳನ್ನೂ ಧನಸಂಪತ್ತನ್ನೂ ಆತನು ಬಹಳವಾಗಿ ಬಯಸುತ್ತಿದ್ದನಾದರೂ ಹೊರಗಡೆ ತೋರಿಸುತ್ತಿರಲಿಲ್ಲವು. ಆತನು ನಿಷ್ಕಪಟಿ, ನಿಸ್ಪೃಹ ಮತ್ತು ಉದಾರಿ. ಆದಕಾರಣ ಆತನಿಗೆ ಅನೇಕರು ಮಿತ್ರರಾಗಿದ್ದರು. ಆವರುಗಳ ಮೂಲಕ ನನಗೆ ಮೊಕದ್ದಮೆಗಳನ್ನು ಸಂಪಾದಿಸಬೇಕೆಂಬ ಆಶೆಯುಳ್ಳವನಾಗಿದ್ದನು. ನನಗೆ ಅಪರಿಮಿತವಾಗಿ ಆದಾಯ ಬರುತ್ತದೆಂಬ ನಂಬಿಕೆಯಿಂದ ಕುಟುಂಬವೆಚ್ಚವನ್ನು ಬಹಳವಾಗಿ ಹೆಚ್ಚಿಸಿದನು, ಮತ್ತು ನಾನು ಲಾಯರುದ್ಯೋಗವನ್ನಾರಂಭಿಸಲು ಸಕಲ ಸನ್ನಾಹವನ್ನು ಮಾಡಿದನು. ನಾನು ವಿದೇಶಕ್ಕೆ ಹೋಗಿದ್ದುದರಿಂದ ಕುಲಸ್ಥರು ಇನ್ನೂ ಆಗ್ರಹ ಮಾಡುತ್ತಿದ್ದರು. ಅವರಲ್ಲಿ ಎರಡು ಪಕ್ಷಗಳೇರ್ಪಟ್ಟವು. ಒಂದು ಪಕ್ಷದವರು ನಿರಭ್ಯಂತರದಿಂದ ಆ ಕೂಡಲೇ ನನ್ನನ್ನು ಕುಲಕ್ಕೆ ಸೇರಿಸಿಕೊಂಡರು. ಎರಡನೆಯ ಪಕ್ಷದವರು ನನ್ನನ್ನು ಬಹಿಷ್ಕರಿಸಲು ದೀಕ್ಷಾಬದ್ಧರಾಗಿದ್ದರು. ಮೊದಲೇ ನನ್ನ ಅಣ್ಣನು ನನ್ನನ್ನು ನಾಸಿಕಕ್ಕೆ ಕರೆದುಕೊಂಡು ಹೋದನು. ಅಲ್ಲಿ ಗೋದಾವರೀನದಿಯಲ್ಲಿ ಸ್ನಾನಮಾಡಿದಮೇಲೆ ರಾಜಕೋಟೆಗೆ ಹೊರಟೆವು. ರಾಜಕೋಟೆಗೆ ಹೋದಮೇಲೆ ನಮ್ಮ ಅಣ್ಣನು ಕುಲದವರೆಲ್ಲರಿಗೂ ವಿಜ್ಞಾಪಿಸಿಕೊಂಡನು. ಅದೆಲ್ಲವೂ ನನಗಿಷ್ಟವಿರಲಿಲ್ಲವು. ನನ್ನ ಅಣ್ಣನಿಗೆ ನನ್ನ ಮೇಲಿನ ಪ್ರೀತಿಯು ಮಿತಿಮೀರಿದ್ದುದರಿಂದ ಆತನಲ್ಲಿ ನನಗೆ ಭಕ್ತಿಯು ಮಿತಿಮೀರಿದ್ದಿತು. ಈ ಕಾರಣದಿಂದ ಆತನು ಮಾಡಿದ ಪ್ರಯತ್ನಕ್ಕೆಲ್ಲಾ ನಾನು ತಲೆಬಾಗಿಸಿಕೊಂಡಿದ್ದೆನು. ಈ ಪ್ರಕಾರವಾಗಿ ಬಹಿಷ್ಕಾರದ ಕೋಟಲೆಯು ತೀರಿಹೋಯಿತು. ನನ್ನನ್ನು ಬಹಿಷ್ಕರಿಸಿದ ಜನರ ಅನುಗ್ರಹವನ್ನು ಪಡೆಯಲು ನಾನೆಂದೂ ಪ್ರಯತ್ನಿಸಲಿಲ್ಲವು. ಅವರ ಮುಖಂಡರವರ ಮೇಲೂ ನನ್ನ ಮನಸ್ಸಿನಲ್ಲಿ ಕೋಪವಿರಲಿಲ್ಲವು. ಅವರಲ್ಲಿ ಕೆಲವರು ನನ್ನಮೇಲೆ ಹಗೆಯನ್ನು ಸಾಧಿಸಲೆತ್ನಿಸಿದರಾದರೂ ನಾನು ಲಕ್ಷಿಸಲಿಲ್ಲವು. ಬಹಿಷ್ಕರಿಸಿದುದರಿಂದ ನನ್ನ ಅತ್ತೆಮಾವಂದಿರು, ಅಕ್ಕ ಭಾವಂದಿರೂ ಮೊದಲಾದ ಬಂಧುಗಳು ಪಂಕ್ತಿಭೋಜನಮಾಡಕೂಡದಾಗಿದ್ದಿತು. ಅವರುಗಳಿಗೆ ತೊಂದರೆಯಾಗಬಾರದೆಂಬುದರಮೇಲೆ ನಾನು ಯಾವಾಗಲೂ ಅವರುಗಳ ಮನೆಯಲ್ಲಿ ನೀರನ್ನು ಸಹ ತೆಗೆದುಕೊಳ್ಳುತ್ತಿರಲಿಲ್ಲ. ಅವರು ರಹಸ್ಯವಾಗಿ ನನ್ನ ಸಹ ಪಂಕ್ತಿಮಾಡಲು ಸಿದ್ಧರಾಗಿದ್ದರೂ ನಾನು ಅದಕ್ಕೆ ಅಂಗೀಕರಿಸಲಿಲ್ಲವು. ಈ ಕಾರಣದಿಂದ ನನಗೆ ಪ್ರತಿಕೂಲರಾಗಿದ್ದ ಕುಲಸ್ಥರು ಕೂಡ ನನಗೆ ಯಾವ ವಿಧವಾದ ತೊಂದರೆಯನ್ನು ಕೊಡಲವಕಾಶವಿಲ್ಲವಾಯಿತು. ಬಹಿಷ್ಕಾರಕೊಟ್ಟವರಪಕ್ಷಕ್ಕೆ ಸೇರಿದವರಲ್ಲಿ ಕೂಡ ಬಹಳ ಜನರು ನನ್ನ ವಿಚಾರದಲ್ಲಿ ಪ್ರೀತಿಯನ್ನೂ ಔದಾರ್ಯವನ್ನೂ ತೋರಿಸುತ್ತಿದ್ದರು. ನನ್ನಂಥ ಕುಲಕ್ಕೆ ಯಾವ ಪ್ರತ್ಯುಪಕಾರವನ್ನೂ ಅಪೇಕ್ಷಿಸದೆಯೇ ಅವರುಗಳು ನನ್ನ ಲಾಯರುದ್ಯೋಗದಲ್ಲಿ ಸಹಾಯವನ್ನು ಮಾಡಿದರು. ನಾನು ಪ್ರತಿಭಟಿಸದಿರಲೆಂಬುದರಮೇಲೆ ಅವರಿಗೆ ನನ್ನಮೇಲೆ ಅಂತಹ ಸದ್ಭಾವವು ಹುಟ್ಟಿದ್ದಿತೆಂದು ನಾನು ನಂಬುತ್ತೇನೆ. ನನ್ನನ್ನು ಕುಲಕ್ಕೆ ಸೇರಿಸಿಕೊಳ್ಳಬೇಕೆಂದು ನಾನು ಆಂದೋಳನ ಮಾಡಿದ್ದರೂ, ಕುಲದವರಲ್ಲಿ ಹೆಚ್ಚು ಪಕ್ಷಗಳೇರ್ಪಡಲು ಪ್ರಯತ್ನಿಸಿದ್ದರೂ, ಅವರಿಗೆ ಆಗ್ರಹವುಂಟಾಗುವಂತೆ ಮಾಡಿದ್ದರೂ ಅವರು ನನಗೆ ಕಷ್ಟವನ್ನು ಕೊಡುತ್ತಿದ್ದರು. ನಾನು ಕೂಡ ಆಂಗ್ಲದೇಶದಿಂದ ಸ್ವದೇಶಕ್ಕೆ ಬರುತ್ತಲೇ ಚೆನ್ನಾಗಿ ಕೆಲಸಮಾಡುವುದರ ಬದಲು ಬಹಳ ತೊಂದರೆಗೆ ಸಿಕ್ಕಿಕೊಂಡಿದ್ದೆನು. ವರ್ಣಕ್ಕೂ ಕೂಡ ಬಹಳ ಕಷ್ಟವುಂಟಾಗಿದ್ದಿತು.

ನಾನು ಆಂಗ್ಲದೇಶದಿಂದ ಹಿಂದಿರುಗಿ ಬಂದಮೇಲೂ ನನ್ನ ಹೆಂಡತಿಯ ವಿಷಯದಲ್ಲಿ ನನಗೆ ಅನುಮಾನ ತಪ್ಪಲಿಲ್ಲವು. ಬಹಳ ಅಲ್ಪವಿಷಯದಲ್ಲೂ ನಾನು ಅನುಮಾನ ಪಡುತ್ತಿದ್ದುದರಿಂದಲೇ ನನ್ನ ಆಶೆಯಾವುದೂ ನೆರವೇರಲಿಲ್ಲವು. ನಾನು ನನ್ನ ಹೆಂಡತಿಗೆ ಸ್ವಯಮಾಗಿ ಓದುವುದನ್ನು ಕಲಿಸಬೇಕೆಂದಿಚ್ಛಿಸಿದೆನಾದರೂ, ನನ್ನ ಕಾಮಾಂಧಕಾರವೇ ಅದಕ್ಕೆ ಪ್ರತಿಬಂಧಕವಾಗಿ ಆಕೆಯು ಓದದಂತೆ ಮಾಡಿತು. ನಾನು ಒಂದುವೇಳೆ ಹೆಂಡತಿಯನ್ನು ತವರುಮನೆಗೆ ಕಳುಹಿಸಿದೆನು. ಆಕೆಯು ಬಹಳ ದೈನ್ಯಳಾಗುವವರೆಗೂ ಹಿಂದಿರುಗಿ ಕರೆಸಬಾರದೆಂದು ನಿಶ್ಚಯಿಸಿದೆನು. ಆದರೆ ಆ ಯೋಚನೆ ಎಷ್ಟಾದರೂ ಅವಿವೇಕವೆಂದು ಅನಂತರ ಗ್ರಹಿಸಿಕೊಂಡೆನು. ಮಕ್ಕಳ ವಿದ್ಯಾವಿಚಾರದಲ್ಲಿ ಸ್ವಲ್ಪ ಸಂಸ್ಕರಣವನ್ನು ಮಾಡಿದೆನು. ನನ್ನ ಅಣ್ಣನಿಗೆ ಮಕ್ಕಳಿರುವರು. ನನ್ನ ಮಗನು ಕೂಡ ನಾಲ್ಕು ವರ್ಷವಯಸ್ಸಿನವನಾದನು. ನಾನು ಆಂಗ್ಲದೇಶಕ್ಕೆ ಹೊರಡುವುದಕ್ಕೆ ಮೊದಲೇ ನನಗೆ ಮಗನು ಹುಟ್ಟಿದ್ದನು. ಅವರೆಲ್ಲರಿಗೂ ವ್ಯಾಯಾಮವನ್ನು ಕಲಿಸಿ ದೃಢಕಾಯರನ್ನಾಗಿ ಮಾಡಬೇಕೆಂದೂ, ಸ್ವಯಮಾಗಿ ಅವರನ್ನು ಒಳ್ಳೇದಾರಿಗೆ ತರಬೇಕೆಂದೂ ನಾನು ನಿಶ್ಚಯಿಸಿದೆನು. ಅದಕ್ಕೆ ನನ್ನ ಅಣ್ಣನು ಸಮ್ಮತಿಸಿದುದರಿಂದ ನನ್ನ ಪ್ರಯತ್ನವು ಬಹುಮಟ್ಟಿಗೆ ನೆರವೇರಿತು. ನನಗೆ ಮಕ್ಕಳಗೋಷ್ಠಿಯು ಬಹಳ ಪ್ರಿಯತಮವಾಗಿದ್ದಿತು. ಈಗಲೂ ನನಗೆ ಆ ಆಶೆಯು ಕಡಿಮೆಯಾಗಿಲ್ಲವು. ನಾನು ಮಕ್ಕಳಿಗೆ ತಕ್ಕ ಉಪಾಧ್ಯಾಯನಲ್ಲವೆಂದು ತಿಳಿದುಕೊಂಡಿದ್ದೆನು. 'ಭೋಜನ ವಿಚಾರದಲ್ಲಿ ಸಂಸ್ಕರಣವನ್ನು ಮುಖ್ಯವಾಗಿ ಮಾಡಬೇಕಾಗಿದ್ದಿತು' ನಮ್ಮ ಮನೆಯಲ್ಲಿ ಕಾಫಿ ಟೀಯನ್ನು ಕುಡಿಯಲು ಆಗಲೇ ಆರಂಭಿಸಿದರು. ನಾನು ಆಂಗ್ಲದೇಶದಲ್ಲಿ ಕೆಲವುಕಾಲವಿದ್ದು ಬಂದಿದ್ದೆನಾದುದರಿಂದ ಕಪ್ಪು, ಸಾಸರ್, ಪ್ಲೇಟು, ಸ್ಪೂನು ಮೊದಲಾದ ಪಿಂಗಾಣಿ ಪದಾರ್ಥಗಳುಪಯೋಗ ಬೀಳಬಹುದೆಂದು ನಮ್ಮಣ್ಣನು ತಿಳಿದು ಅವುಗಳನ್ನು ಹೊಸದಾಗಿ ಮನೆಗೆ ತಂದನು. ಈಗ ಅವುಗಳೇ ಹೆಚ್ಚಾಗಿ ಉಪಯೋಗಿಸಲ್ಪಡುತ್ತಿರುವುವು. ಟೀ ಕಾಫಿಗಳಿಗೆ ಬದಲಾಗಿ ಓಟುಗಂಜಿಯನ್ನೂ, ಕೋಕೋಯನ್ನೂ ಏರ್ಪಡಿಸಿದೆನು. ಆದರೂ ಅವರುಗಳು ಮಾತ್ರ ಟೀಕಾಫಿಗಳನ್ನು ಬಿಡದೆ ಇವನ್ನೂ ಅವನ್ನೂ ತೆಗೆದುಕೊಳ್ಳುತ್ತಿದ್ದರು. ಬೂಟ್ಸು, ಮೇಜು ಇದುವರೆಗೆ ವಾಡಿಕೆಯಲ್ಲಿದ್ದವು. ಸೂಟನ್ನೂ ನಾನು ಪೂರ್ತಿಗೊಳಿಸಿದೆನು. ಈ ರೀತಿಯಾಗಿ ಕುಟುಂಬದ ವೆಚ್ಚವು ಬಹಳ ಹೆಚ್ಚಿಕೊಂಡಿತು. ಪ್ರತಿದಿನದಲ್ಲೂ ಹೊಸಪದಾರ್ಥಗಳನ್ನು ಶೇಖರಿಸುತ್ತಲೇ ಬಂದರು. ಈ ಪ್ರಕಾರವಾಗಿ ಬಿಳೀಯಾನೆಯನ್ನು ಮನೆಯ ಬಾಗಿಲಿನಲ್ಲಿ ಕಟ್ಟಿಹಾಕಿದೆವು. ಇನ್ನು ವರಮಾನದ ಗತಿಯೇನು? ರಾಜಕೋಟೆಯಲ್ಲೇ ಲಾಯರಾಗಿದ್ದುಕೊಂಡು ಕೆಲಸಮಾಡುವುದು ಹಾಸ್ಯಾಸ್ಪದವೇ. ಮಾಮೂಲಾಗಿ ಲಾಯರಿಗಿರಬೇಕಾದ ಅನುಭವವು ನನಗಿಲ್ಲದಿದ್ದರೂ ಫೀಜು ಮಾತ್ರ ಹತ್ತರಷ್ಟು ಹೆಚ್ಚಾಗಿ ಬರಬೇಕೆಂಬ ಆಶೆಯಿದ್ದಿತು. ನನಗೆ ಮೊಕ್ತಾರನಾಮೆ ಕೊಡುವಂತಹ ಅವಿವೇಕಿಯಾರಿರುವನು? ಒಂದುವೇಳೆ ಯಾವನಾದರೂ ಅಂಥವನು ದೊರಕಬಹುದು; ನಾನು ಅವನನ್ನು ಮೋಸಪಡಿಸಲಿಕ್ಕೆ ಹೇಗೆ ಸಮ್ಮತಿಸುವೆನು? ಬೊಂಬಾಯಿಗೆ ಹೋಗಿ ಕೆಲವುಕಾಲದವರೆಗೆ ಅಲ್ಲಿದ್ದು ಕಲಿತುಕೊಳ್ಳಬೇಕೆಂದು ನನ್ನ ಸ್ನೇಹಿತರು ಸೂಚಿಸಿದರು. ಅದನ್ನು ಅಂಗೀಕರಿಸಿ ನಾನು ಬೊಂಬಾಯಿಗೆ ಹೋದೆನು. ಅಲ್ಲಿ ಒಂದು ಮನೆಯನ್ನು ಬಾಡಿಗೆಗೆ ತೆಗೆದುಕೊಂಡು ಒಬ್ಬ ಪರಿಚಾರಕನನ್ನು ನೇಮಿಸಿದೆನು. ನನಗೆ ವಕೀಲಿಯು ಹೇಗೆ ತಿಳಿಯುತ್ತಿರಲಿಲ್ಲವೋ, ಅವನಿಗೆ ಅಡಿಗೆ ಮಾಡುವುದೂ ಹಾಗೆಯೇ ಬರುತ್ತಿರಲಿಲ್ಲವು. ಅಡಿಗೆಯವನು ಬ್ರಾಹ್ಮಣನು. ಅವನನ್ನು ನಾನು ಒಬ್ಬ ಬಂಧುವನ್ನಾಗಿ ಭಾವಿಸಿದ್ದೆನಲ್ಲದೆ ಸೇವಕನನ್ನಾಗಿ ತಿಳಿದಿರಲಿಲ್ಲವು. ಸ್ನಾನಮಾಡುವಾಗ್ಗೆ ಅವನು ನೀರನ್ನು ಮೈಮೇಲೆ ಸುಮ್ಮನೆ ಸುರಿದುಕೊಳ್ಳುತ್ತಿದ್ದನಲ್ಲದೆ, ಮೈಕೈಗಳನ್ನು ಉಜ್ಜಿಕೊಳ್ಳುತ್ತಿರಲಿಲ್ಲ. ಅವನ ಪಂಚೆಯೂ ಜನಿವಾರವೂ ಮಸಿಬಟ್ಟೆಯಂತಿದ್ದುವು. ಅವನಿಗೆ ಸಂಧ್ಯಾವಂದನಾದಿ ಸೂತ್ರವೇನೂ ಬರುತ್ತಿರಲಿಲ್ಲ. ಇಂತಹ ಒಳ್ಳೆಯ ಮನುಷ್ಯನು ನನಗೆ ದೊರಕುವುದು ಹೇಗೆ? ಅವನ ಹೆಸರು ರವಿಶಂಕರ. "ಏನಯ್ಯಾ ರವಿಶಂಕರಾ, ನಿನಗೆ ಅಡಿಗೆಬಾರದಿದ್ದರ ಹೋಗಲಿ, ಸಂಧ್ಯಾವಂದನೆಯಾದರೂ ಬರುತ್ತದೋ ಇಲ್ಲವೋ?" ಎಂದು ಅವನನ್ನು ಕೇಳಿದೆನು. "ಸ್ವಾಮಿ, ನನಗೋ, ಸಂಧ್ಯಾವಂದನೆಯೆ! ನನಗೆ ನೇಗಿಲೇ ಸಂಧ್ಯಾವಂದನೆಯೂ, ಗುದ್ದಲಿಯೇ ಪ್ರಾತಃಕರ್ಮವೂ ನನ್ನ ಬ್ರಾಹ್ಮಣಿಕವು ಈ ತೆರನಾಗಿದೆ. ನಿಮ್ಮ ದಯೆಯಿಂದಲೇ ನನ್ನ ಹೊಟ್ಟೆಹೊರೆಯಬೇಕಾಗಿದೆ, ಇಲ್ಲದಿದ್ದಲ್ಲಿ ನೇಗಿಲನ್ನು ಹಿಡಿದು ಹೊಲದಲ್ಲಿ ದುಡಿಯಬೇಕು" ಎಂದು ರವಿಶಂಕರನುತ್ತರವನ್ನು ಕೊಟ್ಟನು. ಅದರಿಂದ ನಾನು ರವಿಶಂಕರನಿಗೂ ಕೂಡ ನಿರ್ವಾಹವಿಲ್ಲದೆ ಉಪಾಧ್ಯಾಯನಾಗಿರಬೇಕಾಗಿಬಂದಿತು. ಕೊಂಚಮಟ್ಟಿಗೆ ಅಡಿಗೆಯನ್ನು ಸಹ ನಾನೇ ಮಾಡಲಾರಂಭಿಸಿದೆನು. ಶಾಕಾಹಾರವಿಚಾರದಲ್ಲಿ ಆಂಗ್ಲದೇಶದ ಪದ್ಧತಿಯನ್ನು ಪರೀಕ್ಷಿಸಲಾರಂಭಿಸಿದೆನು. ಒಂದು ಸ್ಟೌವ್ (ಅಗ್ಗಿಷ್ಟಿಕೆಯು) ನ್ನು ಕೊಂಡುಕೊಂಡೆನು. ರವಿಶಂಕರನು ಕೂಡ ನನ್ನಂತೆಯೇ ಅಭ್ಯಾಸವಿಲ್ಲದವನು. ನಾವಿಬ್ಬರೂ ಸೇರಿ ಅಡಿಗೆಮಾಡಿ ಒಟ್ಟಿಗೆ ಕುಳಿತುಕೊಂಡು ಭುಂಜಿಸುತ್ತಿದ್ದೆವು. ಇದು ನಡೆಯುತ್ತಿದ್ದಿತಾದರೂ ರವಿಶಂಕರನು ಮಾತ್ರ ಸಂತುಷ್ಟನಾಗಿರಲಿಲ್ಲವು. ಅಡಿಗೆಯನ್ನು ಸಹ ಕೆಡಿಸಿಬಿಡುತ್ತಿದ್ದನು. ಇದರಿಂದ ವ್ಯಯವು ಹೆಚ್ಚಾಗುತ್ತಿದ್ದಿತು. ಆದಾಯವಿಲ್ಲವು. ಅದುಕಾರಣ ನಾಲ್ಕೈದು ತಿಂಗಳುಗಳಿಗಿಂತ ಹೆಚ್ಚಾಗಿ ಬೊಂಬಾಯಿನಲ್ಲಿರಲು ಅವಕಾಶವಿಲ್ಲವಾಯಿತು. ಈ ರೀತಿಯಾಗಿ ಕುಟುಂಬಪೋಷಣಪ್ರಯತ್ನವನ್ನಾರಂಭಿಸಿದೆನು. ಬ್ಯಾರಿಸ್ಟರ ವೃತ್ತಿಯಲ್ಲಿ ಡಬ್ಬು ದರ್ಪವೂ ಹೆಚ್ಚಾಗಿದ್ದು ಜ್ಞಾನವು ಕಡಿಮೆಯಾದುದರಿಂದ ನನಗೆ ಆ ವೃತ್ತಿಯು ಚೆನ್ನಾಗಿ ಕಂಡುಬರಲಿಲ್ಲವು. ನನ್ನ ಬಾಧ್ಯತೆಯನ್ನು ತಿಳಿದುಕೊಂಡುದರಲ್ಲಿ ನನಗೆ ಬಹಳ ಯೋಚನೆಯು ಹುಟ್ಟಿತು.

ವೈ. ಸ್ವಾ.

ಮತ್ತೆ ಹಳ್ಳಿಗೆ.

ಪರಮ ಪಾವನಳಾದ ಕಾವೇರಿಯು ದೇಶದ ದುರವಸ್ಥೆಯನ್ನು ಕುರಿತು ಚಿಂತಿಸುತ್ತಾ ದುಃಖಭರದಿಂದ ನಿಧಾನವಾಗಿ ಪ್ರವಹಿಸುತ್ತಿದ್ದಳು. ಅವಳ ದುಃಖತಾಪವನ್ನು ಕಂಡು ನಗುವನೋ ಎಂಬಂತೆ ಚಂದ್ರನು ಆಕಾಶ ಮಧ್ಯದಲ್ಲಿ ತನ್ನ ಪೂರ್ಣ ತೇಜಸ್ಸಿನಿಂದ ಪ್ರಕಾಶಿಸುತ್ತಿದ್ದನು. ಬೇಸಿಗೆಯ ಬೇಗೆಯಾದರೋ ತಡೆಯಲಸಾಧ್ಯವಾಗಿದ್ದಿತು. ಈ ವೇಳೆಯಲ್ಲಿ ಮನಸ್ಸಿಗೆ ಬೇಸರವಾಗಿದ್ದುದರಿಂದ ನದಿಯ ತೀರದಲ್ಲಿ ತಿರುಗಾಡಿಬರೋಣವೆಂದು ಹೊರಟೆನು. ಪೌರ್ಣಿಮೆಯ ಬೆಳದಿಂಗಳೂ, ನದೀತೀರದ ತಂಗಾಳಿಯೂ ಸಂತಪ್ತ ಹೃದಯಕ್ಕೆ ಸ್ವಲ್ಪ ಶಾಂತಿಯನ್ನು ಕೊಡುತ್ತಿದ್ದವು. ಸಮೀಪದಲ್ಲಿದ್ದ ದೇವಸ್ಥಾನದಲ್ಲಿ ಪೂಜೆಯ ಘಂಟಾನಾದವು ಕೇಳಬಂದದ್ದರಿಂದ ಆಗ ಸುಮಾರು ಒಂಭತ್ತು ಘಂಟೆಯಾಗಿರಬಹುದೆಂದು ತೋರಿತು. ನದೀ ತೀರದಲ್ಲಿ ಹೆಚ್ಚು ಜನರಿರಲಿಲ್ಲ. ಅಲ್ಲಲ್ಲಿ ಸ್ವಲ್ಪ ಹೊತ್ತು ತಿರುಗಾಡಿ ಬೇಸತ್ತು ನದಿಯ ತೀರದ ಮರಳಿನ ಮೇಲೆ ಕುಳಿತುಕೊಂಡೆನು. ಆಗ ಎರಡು ವರ್ಷಗಳ ಹಿಂದೆ ಗತಿಸಿದ ಶ್ರೀಯುತ ದೇಶಬಂಧುದಾಸರು ಬೆಂಗಳೂರಿಗೆ ಬಂದಿದ್ದಾಗ ಹೇಳಿದ ಹಲವು ಮಾತುಗಳು ಸ್ಮೃತಿಗೆ ಬಂದವು. ನಾನು ಅವಕಾಶ ದೊರೆತಾಗ ದೇಶದ ದುರವಸ್ಥೆಯ ವಿಷಯವಾಗಿ ಬಹಳ ಹೊತ್ತು ಯೋಚಿಸುವ ಪದ್ಧತಿ ಇದ್ದಿತು. ಆ ದಿನವು ಕೂಡ ದೇಶದ ದುರವಸ್ಥೆ, ದಾರಿದ್ರ್ಯ ಇತ್ಯಾದಿ ವಿಷಯಗಳು ಜ್ಞಾಪಕಕ್ಕೆ ಬಂದವು. ಆಗ ಯಾವ ವಿಧದಿಂದೀ ದಾರಿದ್ರ್ಯವನ್ನು ನಿವಾರಣೆ ಮಾಡಬೇಕೆಂಬುದೇ ನನ್ನ ಮುಖ್ಯ ಚಿಂತೆಯಾಗಿದ್ದಿತು. ಆಗ ಮಹಾತ್ಮರಿಬ್ಬರು ಪದೇಪದೇ ಹೇಳುತ್ತಿದ್ದ ಈ ಶ್ಲೋಕವು ಜ್ಞಾಪಕಕ್ಕೆ ಬಂದಿತು.

ಶ್ಲೋಕ || ಯಃ ಶಾಸ್ತ್ರಾಭ್ಯಸನಂ ಸ್ವಧರ್ಮನಿಯಮಂ ಗೋವರ್ಧನೋತ್ಕರ್ಷಣಂ |
ದೇವಾನಾಮವತಾರವೀರ್ಯಯಶಸಾಂ ಸಂಕೀರ್ತನಂ ಪೂಜನಂ ||
ಸಾಧೂನಾಮನುಸೇವನಂಚ ಸಕಲಂ ತತ್ವಂ ಪರಬ್ರಹ್ಮಣೇ |
ಸ್ವಾತಂತ್ರ್ಯೇಣ ಸಮರ್ಪಣಂಹ್ಯುಪದಿಶತ್ ತಸ್ಮೈ ಪರಸ್ಮೈ ನಮಃ ||

ಅರ್ಥ—ವೈಶೇಷಿಕ (ಪದಾರ್ಥವಿಜ್ಞಾನಶಾಸ್ತ್ರ) ಮಾನಸಿಕ ಶಾಸ್ತ್ರ (ರಾಜಯೋಗ) ತತ್ವಜ್ಞಾನ (ವೇದಾಂತ) ಇತ್ಯಾದಿ ಶಾಸ್ತ್ರಗಳ ಪೂರ್ಣ ಅಭ್ಯಾಸವಾಗಬೇಕು. ಧನಧಾನ್ಯವನ್ನು ಸಂಪಾದಿಸಿಕೊಳ್ಳುವುದಕ್ಕಾಗಿ ಗೋವು ಹೊಲ-ಗದ್ದೆಗಳನ್ನಿಟ್ಟುಕೊಳ್ಳಬೇಕು. ದೇವರವತಾರಗಳ ಶಕ್ತಿತತ್ವದ ಯಶಸ್ಸನ್ನು ಇಂಬಾಗಿ ಪ್ರಚಾರಗೊಳಿಸಿ ಪೂಜಿಸಬೇಕು. ಅಂತಹ ಮಹಾತ್ಮರ ಸೇವೆಯನ್ನಾದರೂ ಮಾಡಬೇಕು. ಇವುಗಳೆಲ್ಲವನ್ನೂ ಪರಬ್ರಹ್ಮನಿಗೆ ಸ್ವಾತಂತ್ರ್ಯದಿಂದರ್ಪಿಸಬೇಕು. ಈ ಪ್ರಕಾರವಾಗಿ ಉಪದೇಶಿಸಿದ ಪರಬ್ರಹ್ಮಮೂರ್ತಿಗೆ ನನ್ನ ನಮಸ್ಕಾರಗಳು.

ಈ ಶ್ಲೋಕಾರ್ಥದಲ್ಲಿ ಪ್ರಾಚೀನ ವಿದ್ಯಾಭ್ಯಾಸದ ಸಮಸ್ತ ತತ್ವವೂ ಅಡಗಿರುವುದು. ಆಗಿನ ವಿದ್ಯಾಭ್ಯಾಸವೆಲ್ಲಿ, ಈಗಿನ ವಿದ್ಯಾಭ್ಯಾಸವೆಲ್ಲಿ? ಪೂರ್ಣ ಸಂಕೇತವಾದ ಗುರುವಿನ ವರ್ಣನೆಯು ಶಿಕ್ಷಣಶಾಸ್ತ್ರದ ಸಂಪೂರ್ಣ ಸೂಚನೆಯಾಗಿ ಕಂಡು ಬಂದಿತು.

ಆಗ "ಮತ್ತೆ ಹಳ್ಳಿಗೆ" ಎಂದು ಹೇಳಿದಂತಾಯಿತು. ನನ್ನ ಮನಸ್ಸಿನಲ್ಲಿಯೂ ಇಂದಿನ ಜನತೆಯು ಬಂದು ದೊಡ್ಡ ಆಶವಾದರೂ "ಮತ್ತೆ ಹಳ್ಳಿ"ಯ ಜೀವನಕ್ಕೆ ಸಿದ್ಧರಾದರೆ ದೇಶದ ದುರವಸ್ಥೆಯು ದೂರವಾಗುವುದೆಂಬ ಭಾವನೆಯು ಅನೇಕ ದಿನಗಳಿಂದ ಇದ್ದೇ ಇದ್ದಿತು. ಆದರೆ ಇಂದಿನ ಪರಿಸ್ಥಿತಿಯು ಅದಕ್ಕೆ ಮೊದಲು ಹಿಂದೆಂದೂ ನನ್ನ ಮನಸ್ಸಿನಲ್ಲುಂಟಾಗಲಿಲ್ಲ. ಇಂದಿನ ಜನತೆಯು ಸುಖಲೋಲುಪತೆಯಲ್ಲಿ ಸಂಪೂರ್ಣವಾಗಿ ಲೀನವಾಗಿ ಹಳ್ಳಿಯ ಜೀವನಕ್ಕೆ ಸಿದ್ಧವಾಗದಿರುವುದು ಒಂದು ದೊಡ್ಡ ಕೊರತೆ. ಕೇವಲ ಕೆಲವು ರೂಪಾಯಿಗಳ ಬೇತಕ್ಕಾಗಿ ಇರತಕ್ಕ ಹೊಲ-ಗದ್ದೆಗಳನ್ನು ಮಾರಿಯೋ ಗುತ್ತಿಗೆಗೆ ಬಿಟ್ಟೋ ಹಾಳುಮಾಡಿ ಕಾಲ ಕಳೆಯುವುದರಿಂದ ವ್ಯವಸಾಯವು ಹಾಳಾಗಿ ದವಸ ಧಾನ್ಯಗಳು ಕಡಮೆಯಾಗಿ ದೇಶದ ದಾರಿದ್ರ್ಯವು ಹೆಚ್ಚಲನುಕೂಲವಾಯಿತು. ಪ್ರಕೃತ ವಿದ್ಯಾಭ್ಯಾಸವು ಕೇವಲ ನ್ಯಾಯನಿಯೋಗ, ಆರೋಗ್ಯಮ್ಮವ. ಇತ್ಯಾದಿಗಳ ಹೊರತು ಮತ್ತೇನೂ ಇಲ್ಲ. ಕಲಾಶಾಲೆಗಳ ಸುಂದರವಾದ ಭಾರಿ ಕಟ್ಟಡಗಳ ಸೌಂದರ್ಯದಿಂದ ಮರುಳಾಗಿ ವಿದ್ಯಾಭ್ಯಾಸದ ಕಡೆಯ ಲಕ್ಷ್ಯವು ಕಡಿಮೆಯಾಯಿತು. ಅನೇಕ ವರ್ಷಗಳ ಕಾಲ ಅನೇಕ ಸಾವಿರ ರೂಪಾಯಿಗಳನ್ನು ವ್ಯಯಮಾಡಿ ದೇಹದ ಸಂಪೂರ್ಣ ಬಲವನ್ನು ಹಾಳುಮಾಡಿಕೊಂಡು ಕಲಿತ ಈಗಿನ ವಿದ್ಯೆಯು ಪ್ರಾಚೀನ ಕಾಲದ ಜಗುಲಿಯಮೇಲಣ ಪಾಠಶಾಲೆಗಳ ವಿದ್ಯಾಭ್ಯಾಸಕ್ಕೆ ಸಮವೇ? ಕಲಾಶಾಲೆಗಳ ಭವನಗಳು ದೊಡ್ಡದಾದಷ್ಟೂ ವಿದ್ಯಾಭ್ಯಾಸವು ಸಂಕುಚಿತವಾಗಿ ತೊಡಗಿತು; ವಿದ್ಯಾಭ್ಯಾಸವು ವ್ಯಾಪಾರವಾಯಿತು; ಯಾರಲ್ಲಿ ದುಡ್ಡಿಲ್ಲವೋ, ಅವರಿಗೆ ವಿದ್ಯೆಯಿಲ್ಲ. ಈ ರೀತಿಯಾದ ದುರವಸ್ಥೆಯು ಪ್ರಾಚೀನ ನಾಗರೀಕತೆಯ ಸೋಂಕೇ ಇಲ್ಲದ ನಮ್ಮ ಹಿರಿಯರಾದ ಹಳ್ಳಿಗಾಡಿನ ನಿವಾಸಿಗಳಲ್ಲಿರಲಿಲ್ಲ. ಬರಹದ ಮೂಲಕವಲ್ಲದೆ (ಈಗ ಎಲ್ಲವನ್ನೂ ನೋಟ್ಸ್ ಹೇಳಿಬರೆಸುವಂತಲ್ಲದೆ) ಕೇವಲ ಬಾಯಿಂದ ಬಾಯಿಗೆ ಸಂತೆ ಹೇಳಿ ಕಲಿಸುತ್ತಿದ್ದನು. ಆದುದರಿಂದ ಅವುಗಳು ಜನಾಂಗದ ಮನಸ್ಸಿನಲ್ಲಿ ಸ್ಥಿರವಾಗಿ ನೆಲಸುತ್ತಿದ್ದುವಲ್ಲದೆ ಈಗಿನಂತೆ ಕೇವಲ ಒಣ ಕಾಗದದ ಮೇಲಿನ ಕರೀ ಗೀಟಾಗಿ ನಿಲ್ಲುತ್ತಿರಲಿಲ್ಲ. ಪ್ರಾತಃಕಾಲದಲ್ಲೆದ್ದ ಕೂಡಲೇ ಹೆಗಲ ಮೇಲೆ ನೇಗಿಲನ್ನು ಹೊತ್ತುಕೊಂಡು ಹೋಗುವ ಹಳ್ಳಿಯ ನಿವಾಸಿಯ ಸುಂದರ ದೃಶ್ಯವು ಯಾವ ಪಟ್ಟಣದಲ್ಲುಂಟು? ಮುಂದೆಮುಂದೆಯಾಗಿ ಹೊಲದ ಕಡೆ ಮೇಯಲು ಹೋಗುತ್ತಿರುವ ಅಸಂಖ್ಯಾತ ಗೋಮಾತೆಗಳ ಪವಿತ್ರ ದೃಶ್ಯವು ಯಾವ ಪಟ್ಟಣದಲ್ಲುಂಟು? ಇದಕ್ಕೆ ಪ್ರತಿಯಾಗಿ ಆಯುಷ್ಕರ್ಮಶಾಲೆಗಳಿಗೂ, ವಸತಿಗೃಹಗಳಿಗೂ ಹೋಗುತ್ತಿರುವ ಅಸಂಖ್ಯಾತ ಜನರ ದೃಶ್ಯವನ್ನು ಪಟ್ಟಣದಲ್ಲಿ ಕಾಣಬಹುದು. ಪಟ್ಟಣವು ವಿಸ್ತರಿಸುತ್ತ ಹೋದಂತೆಲ್ಲ ಹಳ್ಳಿಯು ನಶಿಸತೊಡಗಿತು. ಹಳ್ಳಿಗಳು ಯಾವಾಗ ಕಡಮೆಯಾಗ ತೊಡಗಿದವೋ, ಆಗ ಹಸುಗಳಿಗೆ ಮೇವು ಕಡಮೆಯಾಗಿ ಹಾಲು ಕೊಡುವುದು ಕಡಮೆಯಾಯಿತು. ಇರತಕ್ಕ ಸ್ವಲ್ಪ ಹಾಲೂ ಕಾಫಿಯೇ ಮೊದಲಾದ ಪಾನೀಯ

ಗಳಿಗೇ ಸಾಕಾಗದಿರುವುದರಿಂದ ಭವಿಷ್ಯಜನಾಂಗದ ಆಸ್ತಿ ಭಾರತನಾಡಿನಂತಾ ಇಂದಿನ ಶಿಶುಗಳಿಗೆ ಕೃತ್ರಿಮ ಹಾಲೇ (Mellins food, condensed milk ಮೊದಲಾದವುಗಳು) ವಿಶೇಷವಾಗಿ ವಿದೇಶದಿಂದ ಬರತೊಡಗಿದವು. ಇವುಗಳ ಸೇವನೆಯಿಂದ ದುರ್ಬಲ ಜನಾಂಗದ ಸಿದ್ಧತೆಯಾಯಿತು. ಪ್ರಾಚೀನಾರ್ಯರ ನಿತ್ಯ ನೈಮಿತ್ತಿಕ ಕರ್ಮಗಳೆಲ್ಲವೂ ಆರೋಗ್ಯವಿಧಿಗನುಸಾರವಾಗಿದ್ದವು. ಪ್ರಾತಃಕಾಲದಲ್ಲೆದ್ದು ಬಹಿರ್ದೇಶಕ್ಕೆ ಹೋಗಬೇಕಾದರೆ ಕನಿಷ್ಟಪಕ್ಷ ಒಂದು ಮೈಲಿಯಷ್ಟು ನಡೆದೇ ತೀರಬೇಕು. ಸ್ನಾನಕ್ಕೆ ನದಿಗೋ ಕೆರೆಗೋ ಹೋಗಬೇಕಾದರೆ ನಡೆಯಬೇಕು. ದೇವಸ್ಥಾನಕ್ಕೆ ಹೋದರೆ ಕಾಲ್ನಡಿಗೆಯಿಂದ ಹೋಗಬೇಕು. ಇವುಗಳಿಂದ ಸಾಕಾದಷ್ಟು ವ್ಯಾಯಾಮವು ದೊರೆಯುತ್ತಿದ್ದುದರಿಂದ ವೈದ್ಯರ ಹಂಗೇ ಅವರಿಗಿರಲಿಲ್ಲ. ಆಹಾರಕ್ಕೆ ಬೇಕಾದ ತರ್ಕಾರಿಗಳು ಸ್ವತಃ ತಮ್ಮ ತೋಟದಲ್ಲಿ ಬೆಳಸಿ ತರಲ್ಪಡುತ್ತಿದ್ದವು. ಕೆರೆಯಿಂದಲೋ ನದಿಯಿಂದಲೋ ನೀರು ಹೊರುವುದು, ತೋಟದಲ್ಲಿ ತರ್ಕಾರಿ ಬೆಳಸುವುದು, ಇವೆಲ್ಲವೂ ಮಾನಿನಿಯರ ನಿತ್ಯ ಕರ್ಮಗಳಾಗಿದ್ದವು. ಆಳು ಕಾಳುಗಳ ಹಂಗಿಲ್ಲದೆ ತಮ್ಮ ಕೆಲಸಗಳನ್ನು ತಾವೇ ಮಾಡಿಕೊಳ್ಳುತ್ತಿದ್ದುದರಿಂದವರು ಬಲಿಷ್ಟರಾಗಿ ಆರೋಗ್ಯದೃಢಕಾಯರಾದ ಸಂತತಿಗಳನ್ನು ಜನಾಂಗಕ್ಕೆ ಸಮರ್ಪಿಸುತ್ತಿದ್ದರು. ಆದರೆ ಈಗ ನಾವು ? ನಾವು ಈಗ ಪರಿಸ್ಥಿತಿಯ ಪ್ರೇಮದಾಸರಾಗಿದ್ದೇವೆ. ನಮಗೆಲ್ಲವೂ ಕಷ್ಟ. ವ್ಯಾಯಾಮಕ್ಕಾಗಿ ಪ್ರಯತ್ನಪೂರ್ವಕ ತಿರುಗಾಡಿಬಂದ ಹೊರ್ತು ನಿವೃತ್ತಿಯಿಲ್ಲ. ಹಳ್ಳಿಗಾಡಿನವರಾದ ನಮ್ಮ ಪೂರ್ವೀಕರ ವ್ಯವಹಾರಗಳು ಸ್ಮರಣೆಗೆ ಬಂದರೇ ನಮಗೆ ನಗು, ಅವುಗಳನ್ನನುಸರಿಸುವುದು ನಮಗವಮಾನ. ಇವುಗಳೆಲ್ಲವೂ ಮನಸ್ಸಿನಲ್ಲಿ ಸ್ಥಿರವಾಗಿ ನೆಟ್ಟುಹೋಗಿದ್ದವು. ಮತ್ತೆ ನಾವು ಹಳ್ಳಿಯ ಜೀವನಕ್ಕೆ ಸಿದ್ಧರಾದ ಹೊರ್ತು ನಮ್ಮ ಪುನರುದ್ಧರಣಕ್ಕೆ ಮಾರ್ಗವಿಲ್ಲವೆಂಬ ಸಿದ್ಧಾಂತವು ಮನಸ್ಸಿಗೆ ತೋರಿತು. ವಿದ್ಯಾಭ್ಯಾಸಕ್ರಮದಲ್ಲಿ 'ವ್ಯವಸಾಯ''ವು ಒಂದಂಗವಾಗಿರಬೇಕು. ಕೃಷಿಯು ಕೇವಲ ರೈತನ ಕರ್ತವ್ಯ ಮಾತ್ರವೆಂಬುದನ್ನು ಬಿಟ್ಟು ಪ್ರತಿಯೊಬ್ಬನೂ ತನ್ನ ನಿಜ ಕರ್ತವ್ಯವೆಂದು ಭಾವಿಸಬೇಕು. ಈಗಿನಂತೆ ಭಾರಿ ಭಾರಿ ಸೌಧಗಳಲ್ಲಿನ ಸಂಕುಚಿತ ವಿದ್ಯಾಭ್ಯಾಸವು ಹೋಗಿ ಪ್ರಾಚೀನಕಾಲದಂತೆ ವನಗಳಲ್ಲಿ ವೃಕ್ಷಗಳ ನೆರಳಿನಲ್ಲಿ ವಿದ್ಯಾಭ್ಯಾಸವು ನಡೆಯಬೇಕು. ಬಾಲ್ಯವಿವಾಹವು ನಶಿಸಿ ಪ್ರಾಚೀನಾರ್ಯರಂತೆ ಬ್ರಹ್ಮಚರ್ಯದ ಅವಧಿಯು ಹೆಚ್ಚಿಸಲ್ಪಡಬೇಕು. ಮಾನಿನಿಯರು ಗೃಹಕಾರ್ಯ ಸಂತಾನಪೋಷಣೆ, ಗೋರಕ್ಷಣೆ, ವ್ಯವಸಾಯಾದಿ ಕಾರ್ಯಗಳಲ್ಲಿ ಆಸಕ್ತಿ ವಹಿಸಿ ತಮ್ಮ ಕಾರ್ಯವನ್ನು ತಾವೇ ಮಾಡಿಕೊಳ್ಳುವವರಾಗಬೇಕು. ಪಟ್ಟಣಗಳೆಲ್ಲವೂ ಹಳ್ಳಿಗಳಾಗಿ (ಹೀಗೆಂದರೆ ಪಟ್ಟಣಗಳೆಲ್ಲವನ್ನೂ ನೆಲಸಮ ಮಾಡಿ ಹಳ್ಳಿಗಳನ್ನು ಸೃಷ್ಟಿಸಬೇಕೆಂದರ್ಥವಲ್ಲ. ಪಟ್ಟಣದಲ್ಲಿಯೂ ಹಳ್ಳಿಯ ಜೀವನವನ್ನನುಸರಿಸಬೇಕೆಂದರ್ಥ) ನಾಗರೀಕತೆಯ ಬಿಸಿಗಿನಲ್ಲಿ ಮೈಮರೆತಿರುವ ನಾವುಗಳು ಮತ್ತೆ ಹಳ್ಳಿಗಾಡಿನ ವಾಸಕ್ಕೆ ಸಿದ್ಧರಾಗಿ ನೇಗಿಲನ್ನು ಹೆಗಲಮೇಲೆ ಹಾಕಿಕೊಂಡು ಎಂದು ವ್ಯವಸಾಯಕ್ಕೆ ಸಿದ್ಧರಾಗುವೆವೋ, ಎಂದು ಗೋವುಗಳನ್ನು ರಕ್ಷಿಸಿ ಅವುಗಳ ಹಾಲು, ಮೊಸರು, ಬೆಣ್ಣೆಗಳ ಮೂಲಕ ಜನಾಂಗದ ದಾರ್ಢ್ಯವನ್ನುಂಟುಮಾಡುವೆವೋ, ಎಂದು ರಾಷ್ಟ್ರವು ಶಕ್ತಿಯುಂದ, ಶಕ್ತಿಯುಕ್ತ ವ್ಯಕ್ತಿಯಿಂದು ಶಕ್ತಿಸ್ವರೂಪ ಗೃಹಿಣಿಯರಿಂದ, ಅಭಿಮನ್ಯುಸದೃಶ ವೀರಬಾಲಕರಿಂದ ತುಂಬುವುದೋ, ಅಂದು ನಿಜವಾದ ಸ್ವರಾಜ್ಯ. ಆರೋಗ್ಯ ದೃಢಕಾಯರಾದ ಗೃಹಿಣಿಯರು ಎಂದು ಪ್ರತಿಯೊಂದು ಭಾರತ ಗೃಹದಲ್ಲಿ ತಮ್ಮ ಚಾಣನೂತ್ರವನ್ನು ಹಿಡಿದು ನಿಲ್ಲುವರೋ ಅಂದೇ ಸ್ವರಾಜ್ಯ, ಅಂದೇ ಭಾರತಮಾತೆಯ ಗೋಳಿನ ಅಂತ್ಯಕಾಲ. ಶ್ರೀಯುತ ದಾಸರವರು ಹಿಂದೊಂದೋ ಹೇಳಿದ್ದ ವಾಕ್ಯದ ಅರ್ಥವೂ ಇದೇ: ಅವರ ಅಂತಿಮಕಾಲದಲ್ಲಿ ಭಾರತವಾಸಿಗಳಿಗಿತ್ತು ಹೋದ ಸಂದೇಶದ ಅಭಿಪ್ರಾಯವೂ ಇದೇ. ಮೇಲೆ ಹೇಳಿರುವ ಮಹಾತ್ಮರ ಶ್ಲೋಕದ ಪವಿತ್ರ ಅರ್ಥವೂ ಇದೇ. ಆದ್ದರಿಂದ ಪಟ್ಟಣದಿಂದ "ಮತ್ತೆ ಹಳ್ಳಿಗೆ" ನಾವು ಹೋಗಲು ಸಿದ್ಧರಾದಾಗ ಮಾತ್ರ ನಮ್ಮ ದೇಶದ ದುರವಸ್ಥೆಯು ನೀಗಿ ನಮ್ಮಾ ಭಾರತವು ಮತ್ತೆ ರಾಮರಾಜ್ಯವಾಗಿ ಪರಿಣಮಿಸುವುದೆನ್ನುವ ನನ್ನ ಸಿದ್ಧಾಂತವು ನಿಜವಷ್ಟೆ. ಈ ರೀತಿಯಾದ ಸಿದ್ಧಾಂತವು ನನ್ನ ಮನಸ್ಸಿಗೆ ತಟ್ಟಿತು. ಆಗ ಪೂರ್ಣನೂ ಚಂದ್ರನು ಮಧ್ಯಾಕಾಶದಲ್ಲಿ ವಿರಾಜಿಸುತ್ತಿದ್ದನು. ಸಮೀಪದಲ್ಲಿದ್ದ ಛತ್ರದ ಗಡಿಯಾರದಲ್ಲಿ ಹನ್ನೆರಡು ಘಂಟೆಯು ಹೊಡೆಯಿತು. ಚಿಂತೆಯಲ್ಲಿ ಮೈಮರೆತಿದ್ದ ನನಗೆ ಇಷ್ಟರವರೆಗೆ ನಾನೊಂಟಿಯಾಗಿರುವದೂ ನಡುರಾತ್ರಿಯಾದುದೂ ತಿಳಿಯಲಿಲ್ಲ. ಚಿಂತೆಯು ಯಾವಾಗ್ಗೆ ಬಿಟ್ಟಿತೋ ಆಗ ನನ್ನ ನಿರ್ಜನಪ್ರದೇಶದ ಏಕಾಂಗಿತ್ವವು ತಿಳಿಯುವಷ್ಟು ಬುದ್ಧಿಬಂದಿತು. ಬೇಗನೆ ಎದ್ದು ಮನೆಯಕಡೆ ಬಂದೆನು. ಈ ವಿಷಯವಾಗಿ ಏನು ಪ್ರಯತ್ನಮಾಡಿ ಕಾರ್ಯಸಾಧನೆ ಮಾಡಬೇಕೆನ್ನುವ ಚಿಂತೆಯು ಈಗಲೂ ನನ್ನ ಮನವನ್ನಾವರಿಸಿದೆ. ಜಗತ್ಪಿತನು ಜನಾಂಗಕ್ಕೆ ಇಂತಹ ಸುಯೋಗವನ್ನೂ ಸಾಧ್ಯವನ್ನೂ ಕೊಡಲಿ.

"ಸರಸ್ವತಿ"

ಡಿಸ್ಟ್ರಿಕ್ಟುಬೋರ್ಡು ಮೀಟಿಂಗು.

ಈ ತಾ.24ರಲ್ಲಿ ಮಡಿಕೇರಿಯಲ್ಲಿ ಚಮಿಯಪ್ಪನವರ ಅಧ್ಯಕ್ಷತೆಯಲ್ಲಿ ಡಿ.ಬೋರ್ಡಿನವರ ನಿಯಮಿತ ಮೆಂಬರುಗಳ ಮೀಟಿಂಗು ನಡೆಯಿತು 22ಮೆಂಬರುಗಳ ಪೈಕಿ 20 ಮೆಂಬರುಗಳು ಹಾಜರಿದ್ದರು. ಮಿ. ಕೆ. ಪಿ. ಚಿಣ್ಣಪ್ಪನವರು ಮತ್ತು ಮ. ಪಿ. ಗಣಪತಿಯ್ಯನವರು ಗೈರುಹಾಜರಾಗಿದ್ದರು.

ಡಿಸ್ಟ್ರಿಕ್ಟುಬೋರ್ಡು ಮೆಂಬರುಗಳನ್ನು ಚುನಾಯಿಸುವ ಬಗ್ಗೆ ಪ್ರಕಟವಾಗಿರುವ ರೂಲುಗಳ ಮಸೂದೆಯನ್ನು ಮುಂದಾಗಿ ಚರ್ಚಿಸಲಾಯಿತು. ರೂಲುಗಳನ್ನು ಸೆಕ್ಷನ್ನುವಾರು ಗಮನಕ್ಕೆ ತೆಗೆದುಕೊಂಡಾಗ ಮೆಂಬರುಗಳು ಬದಲಾವಣೆಗಳಿದ್ದರೆ ಸೂಚಿಸಬಹುದೆಂತ ಅಧ್ಯಕ್ಷರು ಹೇಳಿದರು.

2ನೇ ರೂಲಿನಲ್ಲಿ ಜಮ್ಮ ಹಿಡುವಳಿ ಭೂಮಿಯೆಂದರೆ ಸಾಗಿನ ದರದ ಅರ್ಧ ಕಂದಾಯವಿರುವ ಭೂಮಿಯೆಂಬ ವಿವರಣೆಯನ್ನು ರಾಜರಿಂದ ಕಂದಾಯದ ರಿಯಾಯಿತಿಯೊಡನೆ ಕೊಡಲ್ಪಟ್ಟ ಬ್ರಿಟಿಷ್ ಸರ್ಕಾರದಿಂದ ಖಾಯಂ ಮಾಡಲ್ಪಟ್ಟ ಭೂಮಿ ಎಂದು ಬದಲಾಯಿಸಬೇಕೆಂತ ಮ. ಎ. ಬಿ. ಚಂಗಪ್ಪನವರು ಸೂಚಿಸಿದರು. ಅದನ್ನು ಮಿ. ಪಿ. ಐ. ಬೆಳ್ಯಪ್ಪನವರು ಅನುಮೋದಿಸಿದರು; ಈ ಬದಲಾವಣೆಯು ಓಟಿಗೆ ಹಾಕಲಾಗಿ ಮಂಜೂರಾಯಿತು.

3ನೇ ರೂಲಿನಲ್ಲಿ ಚುನಾಯಿತ ಮೆಂಬರುಗಳ ಸಂಖ್ಯೆಯು ಹದಿನೆಂಟು ಎಂತ ಇರುವುದನ್ನು ಇಪ್ಪತ್ತಕ್ಕೆ ಹೆಚ್ಚಿಸಬೇಕೆಂದು ಮಿ. ಪಿ. ಐ. ಬೆಳ್ಯಪ್ಪನವರು ಸೂಚಿಸಿದನ್ನು ಮಿ. ಪಿ. ಟಿ. ಕುಶಾಲಪ್ಪನವರು ಅನುಮೋದಿಸಿದರು. ಈ ಠರಾವು ಬಹುಮತದಿಂದ ಮಂಜೂರಾಯಿತು.

5ನೇ ರೂಲನ್ನು ಚರ್ಚಿಸುವಾಗ ಮೇಲೆ ಸೂಚಿಸಿದ ಹೆಚ್ಚಿನ ಇಬ್ಬರು ಮೆಂಬರುಗಳನ್ನು ಯಾವ ಭಾಗಕ್ಕೆ ಕೊಡಬೇಕೆಂಬ ಒಸ್ತು ತುಂಬಾ ಚರ್ಚೆನಡೆಯಿತು. ಹನ್ನೊಂದು ನಾಡುಗಳಲ್ಲಿ ಹೆಚ್ಚಿನ ಓಟರುಗಳ ಸಂಖ್ಯೆ ಇರುವ ಎರಡು ನಾಡುಗಳಿಗೆ ಒಂದೊಂದು ಹೆಚ್ಚಿನ ಮೆಂಬರುಗಳನ್ನು ಕೊಡಬೇಕೆಂದು ಮಿ. ಪಿ. ಐ. ಬೆಳ್ಯಪ್ಪನವರು ಸೂಚಿಸಿದರು. ಈ ಸೂಚನೆಗೆ ಒಮ್ಮತದ ಒತ್ತಾಸೆ ಸಿಕ್ಕಲಿಲ್ಲ. ಹಳೇ ಕಡಿಯತ್ತುನಾಡಿಗೂ ಹಳೇ ಮೂರ್ನಾಡಿಗೂ ಒಂದೊಂದು ಮೆಂಬರುಗಳನ್ನು ಕೊಡಬಹುದೆಂತ ಮಿ ಸಿ. ಯಸ್. ಮಂಕಯ್ಯನವರು ಸೂಚಿಸಿದನ್ನು ಮಿ. ಪಿ. ಬಿ. ಮೇದಪ್ಪನವರು ಅನುಮೋದಿಸಿದರು. ಈ ಎರಡು ನಾಡುಗಳಂತೆಯೇ ಇನ್ನೂ ಕೆಲವು ನಾಡುಗಳು ಬೇರೆ ನಾಡುಗಳೊಂದಿಗೆ ಸೇರಿಸಲ್ಪಟ್ಟಿರುವುದರಿಂದ ಅವುಗಳಿಗೆ ಅತೃಪ್ತಿಯಾಗಬಹುದೆಂತಲೂ, ಇವೆರಡು ನಾಡುಗಳಿಗಿಂತ ಹೆಚ್ಚು ಓಟರುಗಳಿರುವ ಬೇರೆ ಹಳೇ ನಾಡುಗಳಿವೆಯೆಂತಲೂ ಕಾರಣಗಳನ್ನು ಹೇಳಿ ಬೇರೆ ಕೆಲವು ಮೆಂಬರುಗಳು ವಿರೋಧಿಸಿದ್ದರಿಂದ ಈ ಸೂಚನೆಯು ಮಂಜೂರಾಗಲಿಲ್ಲ, ಈ ಎರಡು ಹೆಚ್ಚಿನ ಪ್ರತಿನಿಧಿತ್ವವನ್ನು ದಕ್ಷಿಣ ಕೊಡಗಿಗೊಂದು, ಉತ್ತರಕೊಡಗಿಗೊಂದರ ಮೇರೆ ಮುಸಲ್ಮಾನರಿಗೆ ಕೊಡಬೇಕೆಂತ ಮಿ. ರಸೂಲ್‌ಖಾನ್ ಸಾಹೇಬರವರು ಸೂಚಿಸಿದನ್ನು ಮಿ. ಪಿ. ಬಿ. ಮೇದಪ್ಪನವರು ಅನುಮೋದಿಸಿದರು. ಇದರಲ್ಲಿ ಒಂದು ಸೀಟನ್ನು ಕ್ರೈಸ್ತರಿಗೆ ಕೊಡಬೇಕೆಂತ ಮಿ. ಜಿಪ್ ವಾಸರವರೂ, ಈ ಎರಡು ಸೀಟುಗಳನ್ನು ಕೋಮುವಾರು ಮಾಡುವದಾದರೆ ಒಂದನ್ನು ಗೌಡುಗಳವರಿಗೆ ಕೊಡಬೇಕೆಂತ ಮಿ. ಯನ್. ಮುದ್ದಪ್ಪನವರೂ ವಾದಿಸಿದರು ಕೋಮುವಾರು ಪ್ರತಿನಿಧಿತ್ವಕ್ಕೆ ಎಡೆಕೊಡದೆ ಇರುವ ಈ ರೂಲುಗಳಲ್ಲಿ ಕೋಮುವಾರು ಪ್ರತಿನಿಧಿತ್ವಕ್ಕೆ ಅವಕಾಶ ಕೊಡಬಾರದೆಂದು ಮಿ.ಬಿ. ಶ್ರೀಪತಿರಾಯರೂ, ರಾ.ಬಾ ಕೋದಂಡ ಅಪ್ಪಯ್ಯನವರೂ ಅಭಿಪ್ರಾಯಕೊಟ್ಟರು. ಈ ಎರಡು ಸೀಟುಗಳನ್ನು ಎರಡು ಮುನ್ಸಿಪಾಲಿಟಿಗಳಿಗೆ ಕೊಡಬೇಕೆಂತ ಮಿ. ಬಿ ಶ್ರೀಪತಿರಾಯರು ಸೂಚಿಸಿದನ್ನು ಮಿ. ಎ. ಬಿ ಚಂಗಪ್ಪನವರು ಅನುಮೋದಿಸಿದರು. ಮುನ್ಸಿಪಾಲಿಟಿಗಳು ಡಿಸ್ಟ್ರಿಕ್ಟುಬೋರ್ಡಿನ ಹೊರಗೆ ಇರುವುದರಿಂದ ಮುನ್ಸಿಪಾಲಿಟಿಗಳಿಗೆ ಡಿ. ಬೋರ್ಡಿನಲ್ಲಿ ಪ್ರತಿನಿಧಿತ್ವಕೊಡುವದು ನ್ಯಾಯವಲ್ಲವೆಂದು ಬಹಳ ಜನರು ವಿರೋಧಿಸಿದರು. ಕೋಮುವಾರು ಪ್ರತಿನಿಧಿತ್ವದ ಸೂಚನೆಗಳೂ ಮಂಜೂರಾಗಲಿಲ್ಲ.

6. (1) ನೇ ರೂಲಿನಲ್ಲಿ ಸ್ತ್ರೀಯರಿಗೆ ಓಟು ಇಲ್ಲವೆಂತ ಇರುವದನ್ನು ತೆಗೆದುಹಾಕಬೇಕು ಅಂದರೆ ಸ್ತ್ರೀಯರಿಗೂ ಓಟು ಕೊಡುವ ಹಕ್ಕು ಇರಬೇಕು ಎಂತ ಮ. ಬಿ. ಶ್ರೀಪತಿರಾಯರು ಸೂಚಿಸಿದರು. ರಾ. ಬಾ. ಕೆ. ಕುಟ್ಟಯ್ಯನವರು ಅನುಮೋದಿಸಿದನಂತರ ಠರಾವು ಬಹುಮತದಿಂದ ಮಂಜೂರಾಯಿತು.

6 (2) ನೇ ರೂಲಿನಲ್ಲಿ ಆರುತಿಂಗಳಿಗಿಂತ ಹೆಚ್ಚು ಕ್ರಿಮಿನಲ್ ಸಜ ಆದವರಿಗೆ ಓಟಿನ ಹಕ್ಕಿರಕೂಡದೆಂತ ಇರುವುದನ್ನು ಒಂದು ವರ್ಷಕ್ಕಿಂತ ಹೆಚ್ಚಿಗೆ ಸಜ ಆದವರನ್ನು ಮಾತ್ರವೆನಾಯಿಸಬೇಕೆಂತ ಬದಲಾಯಿಸಬೇಕೆಂದು ಮಿ. ಎ. ಬಿ. ಚಂಗಪ್ಪನವರು ಸೂಚಿಸಿದ್ದು ಮಂಜೂರಾಗಲಿಲ್ಲ.

ಇದೇ ಸೆಕ್ಷನಿನಲ್ಲಿ ರಾಜಕೀಯ ತಕ್ಕೀರುಗಳಿಗೆ ಶಿಕ್ಷೆ ಹೊಂದಿದವರಿಗೆ ಓಟಿಲ್ಲದಂತೆ ಮಾಡಕೂಡದೆಂದು ಮಿ. ಪಿ. ಟಿ. ಕುಶಾಲಪ್ಪನವರು ಸೂಚಿಸಿದನ್ನು ಮಿ ಪಿ. ಐ. ಬೆಳ್ಯಪ್ಪನವರು ಅನುಮೋದಿಸಿದರು. ಈ ಸೂಚನೆಯೂ ಪಾಸಾಗಲಿಲ್ಲ.

12 ನೇ ರೂಲಿನಲ್ಲಿ ಅವಿಭಕ್ತ ಕುಟುಂಬಗಳಲ್ಲಿ ಪಟ್ಟೇದಾರರೊಬ್ಬರಿಗೇ ಓಟಿರತಕ್ಕದ್ದು ಎಂಬದನ್ನು ಬದಲಾಯಿಸಿ ಜೀವನಾಂಶ ಪಾಲು ಹೊಂದಿರುವ ಮೆಂಬರುಗಳಿಗೂ ಕಂದಾಯದ ಅರ್ಹತೆ ಇದ್ದರೆ ಓಟುಕೊಡುವ ಹಕ್ಕು ಇರುವಂತೆ ಮಾಡಬೇಕೆಂತ ಮಿ. ಪಿ ಬಿ ಮೇದಪ್ಪನವರು ಸೂಚಿಸಿದರು. ಸಾಗು ಕುಟುಂಬಗಳೆಲ್ಲಾ ಸಹ ಪಾಲಾಗಿದ್ದು ವಿನೊಬಂಬ ವಿಂಗಡವಾಗದೆ ಇದ್ದರೆ ಪಟ್ಟೆದಾರರನ್ನು ಮಾತ್ರ ಕಾನ್ನಿಲು ಓಟರುಗಳ ಪಟ್ಟಿಯಲ್ಲಿ ಸೇರಿಸುವದಾಗಿ ತಿಳಿಯಬರುತ್ತೆ; ಹೀಗಿರಕೂಡದು; 'ಪಾಲುದಾರರೆಲ್ಲರನ್ನೂ ಓಟರುಗಳ ಪಟ್ಟಿಗೆ ಸೇರಿಸಿಕೊಳ್ಳಬೇಕೆಂತ ಹೇಳಿ ಮಿ. ಬಿ. ಶ್ರೀಪತಿರಾಯರು ಈ ಸೂಚನೆಗೆ ಒತ್ತಾಸೆಕೊಟ್ಟರು. ಈ ಬದಲಾವಣೆಯು ಬಹುಮತದಿಂದ ಪಾಸಾಯಿತು

ಈ ಸೆಕ್ಷನಿನ ಚರ್ಚೆಪ್ರಾರಂಭವಾದ ಕೂಡಲೆ ಮಿ. ಪಿ. ಐ. ಬೆಳ್ಯಪ್ಪನವರು 11ನೇ ಸೆಕ್ಷನಿನಲ್ಲಿ ತನ್ನ ಬದಲಾವಣೆ ಇದೆಯೆಂತಲೂ ಇದನ್ನು ಸೂಚಿಸಲು ಅವಕಾಶಕೊಡಬೇಕೆಂತಲೂ ಅಧ್ಯಕ್ಷರನ್ನು ಕೇಳಿದರು. ಆ ಸೆಕ್ಷನ್ ದಾಟಿ 12ನೇ ಸೆಕ್ಷನಿನ ಚರ್ಚೆಯಲ್ಲಿರುವುದರಿಂದ ವಾಪಸು ಹೋಗಲು ಆಗುವದಿಲ್ಲವೆಂದು ಅಧ್ಯಕ್ಷರು ಜವಾಬು ಕೊಟ್ಟರು 11 ನೇ ಸೆಕ್ಷನಿನ ಮೇಲೆ ತನ್ನ ಸೂಚನೆಯನ್ನು ಹೇಳಲು ಅವಕಾಶಕೊಡದೇನೇ 12 ನೇ ಸೆಕ್ಷನನ್ನು ಚರ್ಚಿಸಲು ಪ್ರಾರಂಭಿಸಿದ ಕಾರಣ ತನ್ನ ಬದಲಾವಣೆಗೆ ಎಡೆಕೊಡಬೇಕೆಂದು ಬೆಳ್ಯಪ್ಪನವರು ಪುನಃ ಹೇಳಿದರು. ಅಧ್ಯಕ್ಷರು ಇದಕ್ಕೆ ಗಮನಕೊಡದೆ ಚರ್ಚೆಯನ್ನು ಮುಂದರಿಸಿದರು

ಬಾಕಿ ರೂಲುಗಳ ಮೇಲೆ ಯಾರೂ ಬದಲಾವಣೆಗಳನ್ನು ಸೂಚಿಸಲಿಲ್ಲ. ರೂಲುಗಳನ್ನು ಬೋರ್ಡಿನವರು ಪಾಸು ಮಾಡಿದರೆಂದು ಚೀಫ್ ಕಮಿಷನರವರಿಗೆ ಬರೆಯಬಹುದೋ ಎಂದು ಅಧ್ಯಕ್ಷರು ಮೆಂಬರುಗಳನ್ನು ಕೇಳಿದರು. ಆಗ ರೂಲುಗಳನ್ನು ಚರ್ಚೆಮಾಡಲು ಸರಿಯಾದ ಅವಕಾಶ ದೊರೆಯದದರಿಂದ ಕೆಲವು ಮುಖ್ಯವಾದ ಬದಲಾವಣೆಗಳು ಬಾಕಿಯಾಗಿವೆಯೆಂತಲೂ ರೂಲುಗಳು ಮೆಂಬರುಗಳಿಗೆ ಆಫೀಸಿನಿಂದ ರವಾನಿಸಿ ಹತ್ತುದಿವಸಗಳು ಮಾತ್ರವೇ ಆದ ಕಾರಣ ಅವುಗಳನ್ನು ಪರಿಶೋಧಿಸಲಿಕ್ಕೆ ಸಾಕಷ್ಟು ಸಮಯ ಸಿಕ್ಕದ್ದರಿಂದಲೂ ರೂಲುಗಳ ಚರ್ಚೆಯನ್ನು ಇನ್ನೊಂದು ಮೀಟಿಂಗಿಗೆ ಮುಂದರಿಸಬೇಕೆಂಬ ಠರಾವನ್ನು ಮಿ. ಪಿ ಐ. ಬೆಳ್ಯಪ್ಪನವರು ಸೂಚಿಸಲು ಮಿ. ಪಿ. ಟಿ ಕುಶಾಲಪ್ಪನವರು ಅನುಮೋದಿಸಿದರು. ಠರಾವು ಓಟಿಗೆ ಹಾಕಲಾಗಿ ಬಹುಮತದಿಂದ ಪಾಸಾಯಿತು. ನಂತರ ಅಧ್ಯಕ್ಷರು ರೂಲುಗಳ ಚರ್ಚೆಯನ್ನು ಮುಂದರಿಸಿದರೆ ಕ್ಷಾಗುವುದಿಲ್ಲವಂತ ಹೇಳಿದರೆಂದು ತಿಳಿಯಬಂತು

ಆ ಮೇಲೆ 1925—26 ನೇ ವರ್ಷದಲ್ಲಿ ಮಾಡಿದ್ದ ಕೆಲವು ಖರ್ಚುಗಳನ್ನು ಮಂಜೂರು ಮಾಡಿದರು.

1926—27ನೇ ವರ್ಷದ ಬಜೆಟನ್ನು ಚರ್ಚಿಸಿ ಮಂಜೂರುಮಾಡಬೇಕೆಂತ ಅಧ್ಯಕ್ಷರು ಹೇಳಿದರು, ಮಿ. ಬಿ. ಶ್ರೀಪತಿರಾಯರು—ಬಜೆಟಿನ ನಕಲು ಮಂಬರುಗಳಿಗೆ ಇನ್ನೂ ಸಿಕ್ಕದ್ದರಿಂದ ಬಜೆಟಿನ ಮೇಲೆ ಪ್ರಯೋಜನಕರವಾದ ಚರ್ಚೆನಡೆಯಲು ಸಾಧ್ಯವಿಲ್ಲವಾದ ಕಾರಣ ಸದರಿ ಚರ್ಚೆಯನ್ನು ಇನ್ನೊಂದು ಮೀಟಿಂಗಿಗೆ ಮುಂದರಿಸಬೇಕೆಂತ ಹೇಳಿದರು. ಈ ವರ್ಷದ ಬಜೆಟನ್ನು ಕೂಡಲೆ ಮಂಜೂರುಮಾಡದೆ ಹೋದರೆ ಡಿ. ಪಿ. ಡಬ್ಲ್ಯುಯವರು ಡಿಸ್ಟ್ರಿಕ್ಟುಬೋರ್ಡಿಗಾಗಿ ಮಾಡುವ ಎಲ್ಲಾ ಕೆಲಸಗಳನ್ನು ನಿಲ್ಲಿಸಬಿಡಬೇಕಾಗುತ್ತೆಂತ ಎಗ್ಸಿಕ್ಯುಟಿವ್ ಇಂಜನೀಯರರಾದ ಮಿ. ವಿಚರ್ಸನ್‌ರವರು ಹೇಳಿದರು. ವಾಡಿಕೆಯಾಗಿ ವರ್ಷದ ಈ ಸಮಯದಲ್ಲಿ ನಡೆಯಬೇಕಾದ ಕೆಲಸಗಳನ್ನು ಈ ವರೆಗಿನಂತೆಯೇ ನಡಿಸಲು ಆಕ್ಷೇಪಣೆ ಇಲ್ಲವೆಂತ ಮಿ. ಶ್ರೀಪತಿರಾಯರು ಉತ್ತರಕೊಟ್ಟರು. ಬಜೆಟ್ ಚರ್ಚೆಯನ್ನು ಮುಂದರಿಸಬೇಕೆಂಬ ಠರಾವು ಓಟಿಗೆ ಹಾಕಲಾಗಿ ಬಹುಮತದಿಂದ ಮಂಜೂರಾಯಿತು.

ಹಿಂದೂಸ್ಥಾನಿ ಸೇವಾದಳ

ಪತ್ರಿಕೆ ೫.

"ಜುಲೈ ೨೧ರ ವರೆಗೆ ನಡೆದಿರುವ ಕೆಲಸದ ವರದಿ"

ಜಿಲ್ಲೆ	ರಾಷ್ಟ್ರೀಯ ಮಹಾ ಸಭೆಯ ಸದಸ್ಯರು.	ದಳದ ಸದಸ್ಯರು.
೧ ಬಿಜಾಪುರ—	493—	18
೨ ಧಾರವಾಡ—	763—	72
೩ ಬೆಳಗಾವಿ—	978—	25
೪ ದ ಕನ್ನಡ—	912—	29
೫ ಮೈಸೂರು—	76—	40
೬ ಬಳ್ಳಾರಿ—	25—	14

ಈ 7 ವಾರಗಳಲ್ಲಿ ಒಟ್ಟು 3247 ರಾಷ್ಟ್ರೀಯ ಮಹಾಸಭೆಯ ಸದಸ್ಯರನ್ನೂ 196 ಹಿಂದೂಸ್ಥಾನಿ ಸೇವಾದಳದ ಸದಸ್ಯರನ್ನೂ ಕೂಡಿಸಿದುದಾಯಿತು. ನಮ್ಮ ಪ್ರತಿಜ್ಞೆಯು ಸಫಲವಾಗಲು ಇನ್ನೂ 6753 ಸಭೆಯ ಸದಸ್ಯರನ್ನೂ 304 ದಳದ ಸದಸ್ಯರನ್ನೂ ಸೇರಿಸಬೇಕಾಗಿರುವುದು.

ಕಾರವಾರ ಮತ್ತು ಕೊಡಗು ಜಿಲ್ಲೆಗಳು ಮುಂದೆ ಬರಲಿಲ್ಲ. ಬಳ್ಳಾರಿಯಲ್ಲಿ ನಮ್ಮ ಸಂಘಟಕರಾದ ಶ್ರೀ. ಟಿ ... ಸಾಲರು ಅಸ್ವಸ್ಥರಾದ್ದರಿಂದ ಅಲ್ಲಿನ ಕೆಲಸವು ಸಮರ್ಪಕವಾಗಿ ನಡೆಯಲಿಲ್ಲ. ಮೈಸೂರಿನ ಕೆಲಸವೂ ತೃಪ್ತಿಕರವಾಗಿಲ್ಲ. ... ನ್ನೂ ಕೆಲಸಕ್ಕಾರಂಭಿಸದಿರುವವರೂ ಕೂಡಲೇ ಮೊದಲು ಮಾಡಬೇಕೆಂದೂ ಆಗಲೇ ಆರಂಭಿಸಿರುವವರು ಇನ್ನೂ ಉತ್ಸಾಹದಿಂದ ಕೆಲಸ ಮಾಡಬೇಕೆಂದೂ ನಮ್ಮ ವಿಜ್ಞಾಪನೆ ಇದೆ.

ಸ್ಥಾನಿಕ ಮುಖಂಡರು ಮುಂದೆ ಬಾರದಲ್ಲದೆ ನಮ್ಮ ತರುಣ ಸ್ವಯಂ ಸೇವಕರಿಗೆ ಯಾವ ಕೆಲಸವೂ ಸಾಧ್ಯವಿಲ್ಲದಿರುವುದು ಸರ್ವ ಶ್ರುತದ ವಿಷಯವಾಗಿದೆ. ಆದ್ದರಿಂದ ... ಮಹನಿಗಳೆಲ್ಲರೂ ಹೆಚ್ಚು ಪ್ರೋತ್ಸಾಹವನ್ನು ಕೊಡುವಂತೆ ಕೋರುವೆ.

ಅಖಿಲಭಾರತೀಯ ಮಹಾಸಭೆಗೆ ಕರ್ನಾಟಕದ ಸಹಾನುಭೂತಿಯು ಸಂಪೂರ್ಣವಾಗಿರುವುದೆಂದೂ ಮಹಾಸಭೆಯ ಆಜ್ಞೆಯನ್ನು ಪರಿಪಾಲಿಸುವ ಕರ್ನಾಟಕವು ಸಿದ್ಧವಾಗಿರುವುದೆಂಬುದನ್ನು ಜನಾಂಗಕ್ಕೆ ವಿಶ್ವತಪಡಿಸುವುದು ನಮ್ಮ ಪವಿತ್ರ ಕಾರ್ಯವೆಂಬುದನ್ನು ಮನಸ್ಸಿನಲ್ಲಿಟ್ಟು ಎಲ್ಲರೂ ಮುಂದರಿಯಬೇಕು.

ಹುಬ್ಬಳ್ಳಿ, ತಾ. 21—7—26.

ವರ್ತಮಾನ ಸಂಗ್ರಹ.

ಒಳದೇಶ

ತಾ. 24ರಲ್ಲಿ ಡಿಸ್ಟ್ರಿಕ್ಟುಬೋರ್ಡಿನ ಮೀಟಿಂಗು ಮಡಿಕೇರಿ ಕೌನ್ಸಿಲು ಚೇಂಬರಿನಲ್ಲಿ ನಡೆಯಿತು. ಇದರ ವಿವರವು ಇನ್ನೊಂದು ಕಡೆ ಪ್ರಕಟವಾಗಿದೆ.

ಮಲೇರಿಯ ಕಮಿಟಿಯವರು ತಾ. 26ರಲ್ಲಿ ಕೌನ್ಸಿಲು ಹಾಲಿನಲ್ಲಿ ನಡೆದ ಮೀಟಿಂಗಿನಲ್ಲಿ ತಮ್ಮ ರಿಪೋರ್ಟು ಒರೆಯುವದನ್ನು ಪೂರೈಸಿದರಾಗಿ ತಿಳಿಯಬರುತ್ತದೆ.

ರಜೆಯಲ್ಲಿ ಇಂಗ್ಲೆಂಡಿಗೆ ಹೋಗಿರುವ ಕಮೀಶನರ ಮಿ. ಟಿ. ಜೆ. ಟಾಸ್ಕರ್‌ರವರು ಕೊಡಗಿಗೆ ಸೆಪ್ಟಂಬರ್ ತಾ. 24ರಲ್ಲಿ ವಾಪಸು ಬರುವರೆಂದು ವದಂತಿ ಇದೆ.

ಒಂದು ತಿಂಗಳು ರಜೆಯಲ್ಲಿ ಬೆಂಗಳೂರು ಕಡೆ ಹೋಗಿದ್ದ ಡಿಸ್ಟ್ರಿಕ್ಟ್‌ಮೇಜಿಸ್ಟ್ರೇಟ್ ರಾ. ಬ್ರಾ. ಕೆ. ಚಂಗಪ್ಪನವರು ಮಡಿಕೇರಿಗೆ ಹಿಂತಿರುಗಿ ಬಂದಿರುವರು. ಇವರು ಆಗೋಸ್ತು ತಾ. 2ರಲ್ಲಿ ಚಾರ್ಜು ತೆಗೆದುಕೊಳ್ಳುವರೆಂದು ವರ್ತಮಾನ.

ಮಡಿಕೇರಿ ಭಾಗಮಂಡ್ಲ ರಸ್ತೆಯ 14/1ನೇ ಮೈಲು ಒಳೆ ಇದ್ದ ತಾತ್ಕಾಲಿಕ ಸೇತುವೆಯು ಕಳೆದ ನೆರೆಯಲ್ಲಿ ಕೊಚ್ಚಲ್ಪಟ್ಟಿರುವುದರಿಂದ ಆ ರಸ್ತೆಯು ಕೋಟೆಬೆಟ್ಟದಿಂದ ಭಾಗಮಂಡ್ಲಕ್ಕೆ ವ್ಯಾಪಾರ ವಹಿವಾಟುಗಳಿಗೆ ಮುಚ್ಚಲ್ಪಟ್ಟಿದೆಯೆಂದು ಎಗ್ಸಿಕ್ಯೂಟಿವ್ ಇಂಜಿನೀಯರವರು ಪ್ರಕಟಿಸಿದ್ದಾರೆ.

ತಾ. 23ರಿಂದ ಇಂದಿನ ವರೆಗೆ ಮಡಿಕೇರಿಯಲ್ಲಿ 14.83 ಇಂಚು ಮಳೆಯಾಗಿದೆ. ಜೋರು ಮಳೆಯಿದ್ದ ತಾ. 26ರಲ್ಲಿ 3.92 ಇಂಚು ಮಳೆ ಬಿತ್ತು. ದೇಶದ ಬೇರೆ ಕಡೆಗಳಿಗೂ ಈ ವಾರ ತಕ್ಕಮಟ್ಟಿಗೆ ಮಳೆಯಾಗಿ ಆರಂಭದ ಕೆಲಸವು ಸರಾಗವಾಗಿ ನಡೆಯುತ್ತಿದೆಯೆಂದು ಸುದ್ದಿ.

ಹಿಂದೂದೇಶ.

ಈವರೆಗೆ ದೇಶಬಂಧು ಚಿತ್ತರಂಜನ ದಾಸ್‌ರವರು ಸ್ಮಾರಕ ಫಂಡಿಗೆ 1,73,230 ರೂಪಾಯಿಗಳು ಜಮೆಯಿಸಲ್ಪಟ್ಟಿವೆ.

ಬೆಂಕಿಪೆಟ್ಟಿಗೆಗಳನ್ನು ತಯಾರುಮಾಡುವದಕ್ಕಾಗಿ ಮುಂಗಳೂರಿನ ಒಳೆ ಒಂದು ಸಹಕಾರಸಂಘವು ಸ್ಥಾಪಿಸಲ್ಪಟ್ಟಿದೆಯಂತೆ.

ಮದ್ರಾಸು ಕೌನ್ಸಿಲಿನ ಜನಾವಣೆಗೆ ಸ್ತ್ರೀಯರು ಉಮೇದ್ವಾರರಾಗಿ ನಿಲ್ಲಬಹುದೆಂಬ ಠರಾವು ಆ ಕೌನ್ಸಿಲಿನಲ್ಲಿ ಮಂಜೂರಾಗಿದೆ. ಇದಕ್ಕೆ ಇಬ್ಬರು ಮೆಂಬರುಗಳು ಮಾತ್ರ ವಿರೋಧಿಸಿದರಂತೆ.

ಅಹಮದಾಬಾದಿನ ಮುನ್ಸಿಪಾಲಿಟಿಯವರು ಅಲ್ಲಿರುವ ಬಾಲಿಕೆಯರ ಶಾಲೆಗಳಲ್ಲಿ ಚರಕಗಳನ್ನಿಟ್ಟು ಅವರಿಗೆ ನೂಲುವದನ್ನು ಕಲಿಸುವುದಕ್ಕಾಗಿ ಒಂದು ಸಾವಿರ ರೂಪಾಯಿಗಳನ್ನು ಕೊಟ್ಟಿರುವರು.

ಕಲ್ಕತ್ತಾ ಮುನ್ಸಿಪಾಲಿಟಿಯ ಮೀಟಿಂಗುಗಳಲ್ಲಿ ರಾಜಕೀಯವನ್ನು ಸ್ವೀಕರಿಸಬೇಕೆಂದು ಅಲ್ಲಿಯ ಯೂರೋಪಿಯನ್ ಮೆಂಬರರೊಬ್ಬರು ಠರಾವು ತಂದರು. ಆದರೆ ಈ ಪ್ರಯತ್ನವು ಬಹುಮತದಿಂದ ಸೋಲಿಸಲ್ಪಟ್ಟಿತು.

ಬೊಂಬಾಯಿ ಮುನ್ಸಿಪಾಲಿಟಿಗೆ ನೇಮಿತ ಮೆಂಬರುಗಳನ್ನು ಸರ್ಕಾರದವರು ನೇಮಿಸಬಾರದೆಂತಲೂ ಹಾಗೆ ಹಿಂದುಳಿದವರನ್ನು ನೇಮಿಸುವ ಹಕ್ಕು ಮುನ್ಸಿಪಾಲಿಟಿಗೇನೇ ಇರಬೇಕೆಂತಲೂ ಕೌನ್ಸಿಲರು ಒಂದು ಠರಾವನ್ನು ತರಲಿಕ್ಕಿರುವರು.

ಇಂಡಿಯಾದ ನ್ಯಾಯವಿಧಾಯಕ ಸಭೆಗಳಲ್ಲಿಯೂ ಸ್ಥಳೀಕ ಬೋರ್ಡುಗಳಲ್ಲಿಯೂ ಕೋಮುವಾರು ಪ್ರತಿನಿಧಿತ್ವವನ್ನು ತೆಗೆದು ಹಾಕಲು ಸರ್ಕಾರದವರು ವಿಚಾರಮಾಡಬೇಕೆಂಬ ಠರಾವು ಎಸೆಂಬ್ಲಿಯ ಬರುವ ಮೀಟಿಂಗಿನಲ್ಲಿ ಚರ್ಚೆಗೆ ಬರಲಿಕ್ಕಿದೆ.

ಮುಸಲ್ಮಾನರಿಗೆ ಒಂದು ಅನಾಥಾ ಶಾಲೆಯನ್ನು ಕಟ್ಟಿಸುವುದಕ್ಕೂ ಮತ್ತು ಅವರ ಬಾಲಿಯರಿಗೆ ಜೀವನವನ್ನು ಕಲ್ಪಿಸಿಕೊಡುವ ವಿದ್ಯೆಯನ್ನು ಕಲಿಸುವಂಥ ಒಂದು ಸಂಸ್ಥೆಯನ್ನು ಸ್ಥಾಪಿಸಲಿಕ್ಕೂ ಪಾಟ್ನಾದಲ್ಲಿ ಬ್ಯಾರಿಸ್ಟರರಾಗಿರುವ ಮಿ. ಯೂನಸ್‌ರವರು ಪತ್ತೆರಡು ಲಕ್ಷ ರೂಪಾಯಿಗಳನ್ನು ಉಚಿತವಾಗಿ ಕೊಟ್ಟಿರುವರು.

ಕರ್ನಾಟಕದ ಏಳಿಗೆಗೆ ಕನ್ನಡ ಭಾಷೆಯನ್ನಾಡುವ ಪ್ರಾಂತ್ಯಗಳೆಲ್ಲಾ ಏಕೀಕರಣವಾಗಬೇಕೆಂತಲೂ ಆ ಪ್ರಾಂತ್ಯಗಳಿಗೆಲ್ಲಾ ಪ್ರತ್ಯೇಕ ಒಂದು ವಿಶ್ವವಿದ್ಯಾಲಯವಿರಬೇಕೆಂತಲೂ ಮಂಗಳೂರು ಜಿಲ್ಲಾ ಬೋರ್ಡಿನವರು ಠರಾವುಗಳನ್ನು ಮಂಜೂರುಮಾಡಿರುವರು.

ಖಾದಿಯ ಉಪಯೋಗವು ಮೂಲೆಗೆ ಬಿದ್ದು ಹೋಗಿದೆಯೆಂದು ಯೋಚಿಸುವವರು ಹಲವರಿರುವರು. ಆದರೆ ಕರ್ನಾಟಕದಲ್ಲಿ ಕಳೆದ ಮೇ ತಿಂಗಳು ಒಂದರಲ್ಲಿ 3456 ರೂಪಾಯಿ ಬೆಲೆಯ ಖಾದಿಯು ತಯಾರುಮಾಡಲ್ಪಟ್ಟಿತು. ಮತ್ತು 5040 ರೂಪಾಯಿಗಳ ಖಾದಿಬಟ್ಟೆಯು ಮಾರಲ್ಪಟ್ಟಿತು.

ಜನಾಂಗಗಳ ಕೂಟದ ಎಸೆಂಬ್ಲಿಗೆ ಇಂಡಿಯಾದ ಪ್ರತಿನಿಧಿಯಾಗಿ ಮದ್ರಾಸಿನ ಗವರ್ನರವರ ಎಗ್ಸಿಕ್ಯೂಟಿವ್ ಕೌನ್ಸಿಲು ಮೆಂಬರಾದ ಸರ್. ಸಿ. ಪಿ. ರಾಮಸ್ವಾಮಿ ಅಯ್ಯರವರನ್ನು ಸರ್ಕಾರದವರು ಆರಿಸಿರುವರು. ಇವರು ಆಗೋಸ್ತು 2ರಲ್ಲಿ ಹೊರಟು ಇಂಗ್ಲೆಂಡಿಗೆ ಹೋಗಿ ಅಲ್ಲಿ ಅಧಿಕಾರಿಗಳೊಂದಿಗೆ ಸಂಭಾಷಣೆ ನಡಿಸಿ ನಂತರ ಜಿನೀವಕ್ಕೆ ಹೋಗಲಿಕ್ಕಿರುವರು.

ಕಳೆದ ಶುಕ್ರವಾರ ರಾತ್ರಿ 9 ಗಂಟೆಗೆ ಬೊಂಬಾಯಿಯ ಒಬ್ಬ ದೊಡ್ಡ ವ್ಯಾಪಾರಿಯು ತನ್ನ ಅಂಗಡಿಯನ್ನು ಮುಚ್ಚಿ ಸೇವಕರೊಂದಿಗೆ ಮನೆಗೆ ಹೋಗುತ್ತಿರುವಾಗ ದಾರಿಯಲ್ಲಿ 3–4 ಜನ ಕಳ್ಳರು ಅವನ ಮೇಲೆ ಬಿದ್ದು ಹೊಡೆದು, ಘಾಯಪಡಿಸಿ ಅವನಲ್ಲಿನ 1,1000 ರೂಪಾಯಿಗಳನ್ನು ಕಿತ್ತುಕೊಂಡು ತಯಾರಾಗಿದ್ದ ಮೋಟಾರನ್ನು ಹತ್ತಿ ಎಲ್ಲಿಯೋ ಓಡಿಹೋದರು.

ಜೋರಾದ ಮಳೆಯ ದೆಸೆಯಿಂದ ಬೊಂಬಾಯಿಯಲ್ಲಿ ಇನ್ನೊಂದು ಎರಡು ಮಹಡಿಗಳ ಮನೆಯು ಬಿದ್ದು ಆರು ಜನರು ಮಣ್ಣಿನೊಳಗೆ ಮುಚ್ಚಲ್ಪಟ್ಟರು. ಆ ಮನೆಯಲ್ಲಿ ಸುಮಾರು 200 ಜನರು ವಾಸಮಾಡಿಕೊಂಡಿದ್ದರು. ಹತ್ತು ಜನರಿಗೆ ಘಾಯವಾಗಿ ಆಸ್ಪತ್ರೆಯಲ್ಲಿರುವರು. ಈ ಮಳೆಗಾಲದಲ್ಲಿ ಬೊಂಬಾಯಿಯಲ್ಲಿ ಮನೆ ಬೀಳುವಿಕೆಯ ಅನಾಹುತವು ಇದು ಎರಡನೇಯದಾಗಿದೆ.

ದೇಶಬಂಧು ದಾಸರವರ ಸ್ಮಾರಕವಿನ್ಯ ಡಿಲ್ಲಿಯಲ್ಲಿ ಆ ಚರಿಸ್ಯಟ್ಯಾಗ ಡಾಕ್ಟರ್ ಅನ್ಸಾರಿಯವರು ಹೀಗೆಂದು ಹೇಳಿರುವರು: "ಇಂದಿನಿಂದ ತಾನು ಯಾವ ಕೋಮುವಾರು ಸಂಘದ ಮೆಂಬರರಾಗಿರುವುದಿಲ್ಲ. ಖಿಲಾಫತಾ ಕಮಿಟಿಯ ಮತ್ತು ಮುಸ್ಲಿಮ್ ಲೀಗಿನ ಮೆಂಬರತನವನ್ನು ಬಿಟ್ಟಿರುತ್ತೇನೆ. ತಾನು ಹಿಂದುಮುಸಲ್ಮಾನರ ಐಕ್ಯವನ್ನು ಸಾಧಿಸಲು ತನ್ನ ಸಮಸ್ತಶಕ್ತಿಯನ್ನೂ ಉಪಯೋಗಿಸುತ್ತೇನೆ. ಈ ಪ್ರಯತ್ನಕ್ಕೆ ಬೇರೆಯವರೆಲ್ಲರೂ ಸಹಾಯ ಕೊಡಬೇಕೆಂದು ಕೋರುತ್ತೇನೆ."

ವಿದೇಶ.

ಇರಾಕಿನ ಹಾಸ್ಪೆಡಿ ಎಂಬಲ್ಲಿ ಒಂದು ವಿಮಾನವು ಮುರಿದು ಬಿದ್ದು ಏಳು ಜನರು ಮೃತರಾದರು. ಬೇರೆ ಕೆಲವರಿಗೆ ಘಾಯಗಳುಂಟಾದವು.

ಇಂಪೀರಿಯಲ್ ಕಾನ್‌ಫರೆನ್ಸಿನಲ್ಲಿ ಬ್ರಿಟಿಷ್ ವಸಾಹತುಗಳಲ್ಲಿರುವ ದೇಶನಿವಾಸಿಗಳ ಸ್ಥಿತಿಯ ವಿಷಯ ವಿಶೇಷದೂ ಚರ್ಚಿಸ್ಯದಲಿಕ್ಕಿಲ್ಲವಾಗಿ ತೋರುತ್ತದೆಂದು ಕರ್ನಲ್ ಎಮರಿಯವರು ಪಾರ್ಲಿಮೆಂಟಿನಲ್ಲಿ ಸೂಚಿಸಿದರು.

ಜೇವಿಡ್‌ನೆಟ್ ಎಂಬ ಫ್ರೆಂಚ್ ಯುವತಿಯೊಬ್ಬಳು ಒಬ್ಬನೇ ಸೇವಕನ ಜತೆಯಲ್ಲಿ ಟಿಬೆಟ್ ದೇಶದ ಬೆಟ್ಟ ಮತ್ತು ಕಾಡುಪ್ರದೇಶಗಳನ್ನು ದಾಟಿ ಅಲ್ಲಿಯವರ ಗುರುವಾದ ಲಾಮಾರವರ ದರ್ಶನವನ್ನು ಮಾಡಿಕೊಂಡು ವಾಪಸು ಬಂದದಕ್ಕಾಗಿ ಪ್ಯಾರಿಸ್ ಪಟ್ಟಣದ ಒಂದು ನಾಟಕ ಕಂಪೆನಿಯವರು ಆಕೆಗೆ ಹತ್ತು ಸಾವಿರ ಫ್ರಾಂಕು (ನಾಣ್ಯ)ಗಳ ಬಹುಮಾನ ಕೊಟ್ಟಿರುವರು.

ಮೂವತ್ತು ದಿವಸಗಳು ಉಪವಾಸವಿದ್ದುಕೊಂಡು ಸಾವಿರ ಮೈಲು ದೂರ ಕಾಲ್ನಡಿಗೆಯಿಂದಲೇ ಹೋಗಬೇಕೆಂದು ಶಪಥಮಾಡಿಕೊಂಡು ಅಮೇರಿಕದ ಜಾರ್ಜ್ ಹನ್ಸಿಕರ್ ಎಂಬಾತನು ಈ ತಿಂಗಳ 1ನೇ ತಾರೀಕಿನಲ್ಲಿ ಚಿಕಾಗೊ ಪಟ್ಟಣದಿಂದ ಹೊರಟಿರುವನು. ದಿವಸಕ್ಕೆ ಮೂರು ಶರಟುಗಳನ್ನು ಬದಲಾಯಿಸಲಿಕ್ಕಾಗಿ 100 ಶರಟುಗಳನ್ನು ತನ್ನೊಂದಿಗೆ ತೆಗೆದುಕೊಂಡಿರುವನು. ಇವನು ದಿವಸಕ್ಕೆ 30 ಕುಪ್ಪಿ ನೀರು ಕುಡಿಯುತ್ತಾ 35 ಮೈಲಿ ದೂರ ನಡೆಯುತ್ತಾನಂತೆ.

ತಾ. 26ರಲ್ಲಿ "ಥಿಯಾಸಾಫಿಕಲ್ ಆರ್ಡರ್ ಆಫ್ ಸ್ಟಾರಿನ" ವಾರ್ಷಿಕ ಸಮ್ಮೇಳನವನ್ನು ಹಾಲೆಂಡಿನ ಓಮನ್ ಎಂಬಲ್ಲಿ ಬರ್ಡ್ ಎಸ್ಟೇಟಿನಲ್ಲಿ ಡಾಕ್ಟರು ಅನಿಬೆಸೆಂಟರವರ ಅಧ್ಯಕ್ಷತೆಯಲ್ಲಿ ನಡೆಸಿತು. ಮಿ. ಕೃಷ್ಣಮೂರ್ತಿಯವರಿಗೆ ಸನ್ಮಾನಿತ ಸ್ವಾಗತವು ಕೊಡಲ್ಪಟ್ಟಿತು. ಮಿ. ಕೃಷ್ಣಮೂರ್ತಿಯವರ ಹಿಂಬಾಲಕರಾದ ಬೇರನ್ ವಾನ್ ಪಾಲೆಂಡ್ಟರವರು 5 ಸಾವಿರ ಎಕರೆಯ ಬರ್ಡ್ ಎಸ್ಟೇಟನ್ನು ಈ ಸಂಘಕ್ಕೆ ಉಚಿತವಾಗಿ ಕೊಟ್ಟಿರುವರು.

ಜಮೀನ್‌ದಾರರ ಸಂಘದ ಕಮಿಟಿ ಮೀಟಿಂಗು.

ತಾರೀಕು 21—7—26ರಲ್ಲಿ ಸಂಘದ ಆಫೀಸಿನಲ್ಲಿ ನಡೆದ ಕೊಡಗು ಜಮೀನ್ದಾರರ ಸಂಘದ ಕಾರ್ಯನಿರ್ವಾಹಕ ಕಮಿಟಿಮೀಟಿಂಗಿನ ವಿವರ:

1. ಕಾಫಿಪಲ್ಲಂಟಿಂಗಿಗೆ 50 ರೂಪಾಯಿಗೆ ಮೀರಿದ ಕೊಡುವ ಅಡ್ವಾನ್ಸುಗಳಿಗೆ ಬರೆಸುವ ಕರಾರುಗಳಿಗೆ ಕೊಟ್ಟಿರುವ ಸ್ಟಾಂಪು ಡ್ಯೂಟಿಯನ್ನು ತೆಗೆದುಹಾಕುವ ವಿಷಯದಲ್ಲಿ ಒಂದ ಕಮಿಷನರವರ ಕಾಗದವು ಓದಲಾಯಿತು.

ಈಗ ಇರುವ ಡ್ಯೂಟಿಯನ್ನು ಎಲ್ಲಾ ಕರಾರುಗಳಿಗೂ ವ್ಯಾಪಿಸುವಂತೆ ಮಾಡಬೇಕು. ಭೂಮಾಲೀಕರು ಬರೆಸಿಕೊಳ್ಳುವ ಕರಾರುಗಳಿಗೆ ಈಗಿನ ಡ್ಯೂಟಿಯನ್ನು ಕೀಳಲಿಕ್ಕೆ ಆಗುವುದಿಲ್ಲವಾದರೆ ಎಲ್ಲಾ ಕರಾರುಗಳಿಗೂ ಸಾಧಾರಣ ಸ್ಟಾಂಪು ಮಾಡಬೇಕು. ಭೂಮಾಲೀಕರಿಗೂ ಮತ್ತು ಪ್ಲಾಂಟರುಗಳಿಗೂ ಇರುವ ವ್ಯತ್ಯಾಸವನ್ನು ಹೇಗೂ ತೆಗೆದುಹಾಕಬೇಕು ಎಂಬ ಅಭಿಪ್ರಾಯವಿರುವಂತೆ ಕಾರಣಗಳನ್ನು ತೋರಿಸಿ ಸರಕಾರಕ್ಕೆ ಕಾಗದ ಬರೆಯಬೇಕೆಂತ ತೀರ್ಮಾನವಾಯಿತು.

2. ಕಟ್ಟಡ ಕೆಲಸವನ್ನು ಸುಪರ್‌ವೈಸ್ ಮಾಡಿದವರಿಗೆ ಪ್ರತಿಫಲಕೊಡುವುದರ ವಿಷಯ ಕಟ್ಟಡದ ಕೆಲಸ ನಡಿಸುವ ಕಮಿಟಿಗೆ ಬಿಡಲಾಯಿತು.

3. ಬರುವ ಸೆಪ್ಟೆಂಬರ್ ತಿಂಗಳಿನ ನಾಲ್ಕು ವಾರಗಳಲ್ಲಿ "ಕೊಡಗು" ಪತ್ರಿಕೆಯಲ್ಲಿ ಸಂಘದ ಮುಂದಿನ ವರುಷದ ಆರ್ಗನೈಜರು ಕೆಲಸಕ್ಕೆ ಅಪೇಕ್ಷೆಯುಳ್ಳವರು ಅಪ್ಲಿಕೇಶನ್ ಬರಕೊಳ್ಳಬೇಕೆಂತ ಪ್ರಕಟಣೆ ಹಾಕಬೇಕಾಗಿ ತೀರ್ಮಾನವಾಯಿತು.

ಕೆ. ಅಪ್ಪಯ್ಯ. (ಅಧ್ಯಕ್ಷರು)

"ವ್ಯವಸಾಯದ ಮಹತ್ವ"

(ಲೇಖಕ—ಪಿ ಯಂ. ಮುತ್ತಣ್ಣಯ್ಯ)

ಎಲ್ಲಾ ಪ್ರಾಣಿಗಳಿಗೂ ಹೊಟ್ಟೆಯ ಪಾಡೇ ಮುಖ್ಯವಾಗಿದೆ. ಕಾಡಿನಲ್ಲಿ ಮೃಗಗಳು ಆಹಾರಕ್ಕೋಸ್ಕರ ಕಾದಾಡಿ ಕೆಲವು ವೇಳೆ ಪ್ರಾಣವನ್ನೇ ಕಳಕೊಳ್ಳುವುವು. ಮನುಷ್ಯ ಸಂತತಿ "ಉದರನಿಮಿತ್ತಂ ಬಹುಕೃತವೇಷಂ" ಎಂಬಂತೆ ತೊಳಲಿ, ಬಳಲಿ, ನಾನಾ ಕಸುಬುಗಳನ್ನು ಮಾಡಿ ಕಷ್ಟಪಟ್ಟು ಹೊಟ್ಟೆ ಹೊರೆದುಕೊಳ್ಳುವನು. ಕಸುಬುಗಳನ್ನರಿಯದ ಜನರು ನಾನಾ ತರದ ಕಪಟವೇಷಗಳನ್ನಾದರೂ ಧರಿಸಿಕೊಂಡು ಜನರನ್ನು ವಂಚಿಸಿ ಜೀವಿಸುವರು. ಯಾವ ಉಪಾಯದಿಂದಲಾದರೂ ಧರ್ಮಯಿಂಬ ರಣರಂಗದಲ್ಲಿ ಆಹಾರಕ್ಕೋಸ್ಕರ ಕಾದಾಡಿ ತಾವು ಬಾಳಿ ಬದುಕಬೇಕೆಂದು ಎಲ್ಲರೂ ಪ್ರಯತ್ನಿಸುತ್ತಿರುವರು.

ಪರ್ಯಾಲೋಚಿಸಿ ನೋಡಿದರೆ, ಎಲ್ಲಾ ಕೈಗಾರಿಕೆಗಳಿಗೂ, ವ್ಯಾಪಾರಗಳಿಗೂ ವ್ಯವಸಾಯವೇ ಮೂಲವಾಗಿದೆ. ಜೀವನಾಯವೇ ನಮಗೆ ಅತ್ಯಾವಶ್ಯಕವಾಗಿರುವ ವಸ್ತುಗಳನ್ನು ಒದಗಿಸಿಕೊಡುವವರಾಗಿದೆ. ನಮಗೆ ಬೇಕಾದ ಆಹಾರ, ಉಡಿಗೆ ತೊಡಿಗೆಗಳೆಲ್ಲವೂ ಮಣ್ಣಿನಿಂದಲೇ ಉತ್ಪತ್ತಿ. ಒಕ್ಕಲಿಗನು ತನ್ನ ವೃತ್ತಿಯನ್ನು ತಡೆಯಿಲ್ಲದೆ ನಡಿಸುತ್ತಾ ಇರಬೇಕು. ಒಂದು ಒಂದು ವರುಷವಾದರೂ ಅತನು ತನ್ನ ಕಸಬನ್ನು ನಿಲ್ಲಿಸಿಬಿಟ್ಟರೆ ಏನಾಗುವುದೆಂದು ವಿವರಿಸಬೇಕಾದದ್ದಿಲ್ಲ. ಜನರು ಬೇರೆ ಬೇರೆ ಕಸುಬುಗಳನ್ನೂ, ಕೈಗಾರಿಕೆಗಳನ್ನೂ ನಿಲ್ಲಿಸಿಬಿಟ್ಟರೂ ಅಷ್ಟೊಂದು ಅನರ್ಥವು ಸಂಭವಿಸಲಿಕ್ಕಿಲ್ಲ. ಗಣಿಗಳಲ್ಲಿ ಚಿನ್ನ, ಬೆಳ್ಳಿ ಕಡಿಮೆಯಾಗಿ ಹೋದರೂ, ವಜ್ರ, ಕೆಂಪುಗಳು ಭೂಗತವಾಗಿ ಹೋದರೂ, ಅನ್ಯದೇಶಗಳ ವ್ಯಾಪಾರ ನಿಂತು ಹೋದರೂ, ದಿಂಡುಗಾರಿಕೆಯ ನಮ್ಮಗಳು ಒದಗಿ ಕೂಡುವ ಕಾರ್ಖಾನೆಗಳು ನಿಲ್ಲಿಸಲ್ಪಟ್ಟರೂ, ಭೂದೇವಿಯ ಮಗಳೆಂಬ ದಿನದಿನದ ಅತ್ಯಾವಶ್ಯಕವಾದ ವಸ್ತುಗಳನ್ನೆಲ್ಲಾ ಒದಗಿಸಿಕೊಡುವುದು. ಆದುದರಿಂದ ಎಲ್ಲಾ ವೃತ್ತಿಗಳಲ್ಲಿ ವ್ಯವಸಾಯ ವೃತ್ತಿಯೇ ಮೇಲಾದ ವೃತ್ತಿಯೆಂದೂ, ಎಲ್ಲರಿಗಿಂತಲೂ ಒಕ್ಕಲಿಗನೇ ಶ್ರೇಷ್ಠನೆಂದೂ ಒಬ್ಬ ಪಾಶ್ಚಾತ್ಯಕವಿಯು ಹೀಗೆ ವರ್ಣಿಸುತ್ತಾನೆ.

"O, man of plough, and man of tne farm,
You may proudly hold up your head.
For, O man of the farm, and man of the plough,
To you tne world must look for bread.
O, man of the plough, and man of the farm,
To you the state may bow its head.
For the state must have the farm and plough,
Or the state must perish for want of bread.
O, man of the plough, and man of the farm
When men devout the prayer hath said,
That hushes to silence the world's alarm-
"Give us this day our daily bread."
Tnen, O, man of the farm and man of the plough,
In alliance with God, be it reverently said,
That the man of the plough, and the man of the farm,
Must answer the prayer, "Give us this day our daily bread."

ತಿನ್ನಲಾಗದ ಅನೇಕ ದವಸ ಧಾನ್ಯಗಳು, ಹಣ್ಣು ಹಂಪಲುಗಳು, ಗೆಡ್ಡೆ ಗೆಣಸುಗಳು ಇರಲಿಲ್ಲಾ ನಮ್ಮ ಪೂರ್ವಜರ ವ್ಯವಸಾಯದಿಂದಲೇ ಈಗ ಉತ್ಕೃಷ್ಟ ಆಹಾರದ ವಸ್ತುಗಳಾಗಿ ಪರಿಣಮಿಸಿವೆ ಎಂಬುವುದಕ್ಕೆ ಯಾವ ಸಂಕೋಚವೂ ಇರಲಾರದು. ಇನ್ನೂ ಕಾಡಿನಲ್ಲಿ ಇರುವ ಕಾಡಾಗಿ ಬೆಳೆದು ತಿನ್ನಲಾಗದ ವಸ್ತುಗಳು ಎಷ್ಟೋ ಇವೆ. ಇವುಗಳೆಲ್ಲವೂ ವ್ಯವಸಾಯದಿಂದಲೇ ಒಳ್ಳೆಯ ಸ್ಥಿತಿಗೆ ಬರಬೇಕಲ್ಲದೆ ಅನ್ಯಥಾ ಬರಲಾರದು.

ವ್ಯವಸಾಯವು ಕೈಗಾರಿಕೆಗಳಿಗೆ ಬೇಕಾದ ಕಚ್ಚಾಪದಾರ್ಥಗಳನ್ನು ಒದಗಿಸಿಕೊಡುತ್ತದೆ. ಕೈಗಾರಿಕೆಗಳು ಅವುಗಳನ್ನು ಮನುಷ್ಯನಿಗೆ ಬೇಕಾದ ಪದಾರ್ಥಗಳಾಗಿ ಮಾರ್ಪಡಿಸುತ್ತವೆ. ವಾಣಿಜ್ಯವು ಈ ಕೈಗಾರಿಕೆಯ ಒಡವೆಗಳನ್ನು ಭೂಮಿಯ ಎಲ್ಲಾ ಭಾಗಗಳಲ್ಲಿ ಚದರುವ ಹಾಗೆ ಮಾಡುತ್ತದೆ. ಆದುದರಿಂದ ವ್ಯವಸಾಯ, ಕೈಗಾರಿಕೆ, ವ್ಯಾಪಾರ ಇವೆಲ್ಲವೂ ಒಂದಕ್ಕೊಂದು ಪರಸ್ಪರ ಸಂಬಂಧಪಟ್ಟವುಗಳಾಗಿದ್ದು, ಕೈಗಾರಿಕೆಗೂ, ವ್ಯಾಪಾರಕ್ಕೂ ವ್ಯವಸಾಯವೇ ಮೂಲವಾಗಿರುತ್ತದೆ. ಸಧ್ಯಾರಣೆ ಹೊಂದಿದ ಪ್ರತಿಯೊಂದು ಜನಾಂಗವನ್ನೂ, ದೇಶವನ್ನೂ ವ್ಯವಸಾಯವೇ ಜೀವನಾಧಾರ ಸ್ಥಾನವನ್ನೂ, ಮೂಲಸ್ತಂಭವೂ ಆಗಿದೆ. ಪಟ್ಟಣ, ದೇಶಗಳ ವೃದ್ಧಿಯು ವ್ಯಾಪಾರದ ಮೇಲೂ, ವ್ಯಾಪಾರವು ವ್ಯವಸಾಯದ ಮೇಲೂ ಹೊಂದಿಕೊಂಡಿರುವುದರಿಂದ ನಮ್ಮ ದೇಶದಲ್ಲಿ ಅಕ್ಕಿ, ಗೋಧಿ, ಹತ್ತಿ, ನೀಲಿ, ಕಾಫಿ, ಕಿತ್ತಳೆ, ಮುಂತಾದವುಗಳು ಬೆಳೆಯದಿದ್ದ

ರಿ ರೇವುಗಳು ಎಲ್ಲಿರುವುವು? ಹಡಗುಗಳು ಏತಕ್ಕೆ ಬರುವುವು? ಯಾವ ಸರಕುಗಳನ್ನು ತಂದಿಸಿಕೊಂಡು ಹೋಗುತ್ತಿದ್ದುವು? ಆದ್ದರಿಂದ ಇಂಥಹ ವ್ಯವಸಾಯವನ್ನು ಮನಃಪೂರ್ವಕವಾಗಿ ನ್ಯಾಯವಾದ ರೀತಿಯಿಂದ ನಡಿಸುತ್ತಾ ನಮ್ಮ ದೇಶದಲ್ಲಿ ಯಾವ ಪುಣ್ಯಾತ್ಮರು ಅದನ್ನು ವೃದ್ಧಿಪಡಿಸಿಕೊಂಡು ಹೋಗುತ್ತಾರೋ ಅವರಿಗೆ ಭಗವಂತನು ಆಶೀರ್ವದಿಸಲಿ

ಕೊಡಗು ಬೆಡಗಿನ ನೋಟ.

" ಚೌಪದಿ "

ಜಗದೊಳು ಮರೆಯದೆ ಸಿರಿಕೊಡಗು |
ಸೊಗಸಿಲಿ ಸೊಸೆಯುತ ಬಲು ಸೊಬಗು ||
ನಗಗಳು ಸುಂದರ ತೋಟಗಳಿಂ |
ನಗುವುವು ಹೊಳೆಯುತ ಬನದಗಳಿಂ || ೧ ||

ಸುತ್ತಲು ಸುಂದರ ಪರ್ವತವು |
ನಿತ್ಯದಿ ನಿಂತಿರೆ ಸುಖದೊಳವು ||
ಮುತ್ತಿನ ಮಣಿಗಳನುಗುಳುತ್ತ |
ಸುತ್ತಲು ನದಿಗಳು ಬರಲುತ್ತ || ೨ ||

ಕವಿಕೆಯ ಸೂರೆದಿಹ ಶ್ರೀಹರಿಯು
ಕನನವ ಬರೆದಿಹ ಮರಮಪಯು |
ಭವನದೊಳೆಸೆಯುವ ಚಿಟ್ಟೆಗಳ
ಅವಚುತ ಒರೆದನು ಕವಿತೆಗಳ || ೩ ||

ನದಿಗಳು ನಡಿವುವು ಚಿನುಮಿಯಂ |
ಮುದದಲಿ ತೊರೆಗಳ ತೊದಲುಲಿಯಂ ||
ಮುದದಲಿ ನಿಂದಿಹ ಎಟ್ಟೆಗಳ
ಕದವನು ತರೆಯುತ ಕವಿತೆಗಳ || ೪ ||

ಬೆಡಗಿನ ಶಿಖರವು ನಿಂತಿರಲು |
ಕೊಡಗಿನ ಚಂದದ ಸೊಸೆ ತಲು ||
ಸಡಗರದಿಂದಲಿ ನಗುಗಳಲು
ನುಡಿವುವು ನಗುವಿನ ನುಡಿಗಳೊಳು || ೫ ||

ಗಗನ ನಿನದದ ವರ್ತುತಲಿ |
ಎಸೆ ತ ನದಿಗಳು ಹರಿಯುತಲಿ ||
ಅಲೆಕಟಿ ಬಾಗಿಗ ಬಕವನ್ನು |
ನಲಿದಿ ಪಾಡಲು ಒರಲನ್ನು || ೬ ||

ಶಿರನು ವ ಚ್ಚಿ ತಪದೊಳಗೆ |
ಘನ ದಿ ವೆ ರೆದ ನದಿಯಾಗ ||
ಎವದೇವು ಬಂದಳು ಕಾವೇರಿ |
ಕವನಪ್ರೈಯುತ ಶ್ರೀನಾರಿ || ೭ ||

ಖಾತೆ ಧವಲಿ ಶ್ರೀಪ್ಪ್ಯಮಪತಿ |
ಎತ ರ ದೇಶದಿ ಸ್ವರ್ಣವತಿ ||
ಉತ್ತಮ ಮಾತಾ ಕಾವೇರೀ |
ನಿತ್ಯದಿ ಜನವಳು ಕೌಮಾರೀ || ೮ ||

ಉನ್ನತಗಿರಿಯೊಳು ಜನಿಸುತ್ತ |
ತನ್ನಯ ಜನರನು ಸೇರಿಯುತ್ತ ||
ನನ್ನಿಯ ನದಿಗಳು ಕೊಡಗಿನೊಳು |
ನನ್ನಿಯ ತೋರ್ಪವು ಹರುಷದೊಳು || ೯ ||

ತ್ವರಿತದಿ ನಡೆದಳು ಕಾವೇರಿ |
ಶರಧಿಯ ಕಾಣಲು ತಾನೇರಿ ||
ಉರುತರ ನದಿಗಳ ಕೂಡುತಲಿ |
ಸೇರಿಯುತ ನಡೆದಳು ಬಲುತೊಳಲಿ || ೧೦ ||

ಚಲುವಿನ ವಿಗಿನ ಸಮಯದೊಳು |
ಚಿಲಿಪಿಲಿದನಿಯನು ಪಕ್ಷಿಗಳು ||
ಸೆ ಲಲಿತ ಸ್ವರದಿಂ ಕೂಗುತ್ತ |
ನಲಿವುವು ನಲವಿಂ ಹಾಡುತ್ತ || ೧೧ ||

ಶುಕಪಿಕಗಳು ಬಲುಹರುಷದೊಳು |
ಶಕುನವನುಡಿಯುವ ಪಕ್ಷಿಗಳು ||
ಚಕಿತದಿ ಪಾಡುತ ತರುಗಳೊಳು |
ಟಕಮಕ ಗೊಳಿಸವು ಕಾಗದೊಳು || ೧೨ ||

ನೋಡಿರಿ ಸಿರಿಕೊಡಗಿನ ಬೆಡಗಂ |
ಮೂಡುತಿಹ ವ ಸ ಂದರ ಸೊಬಗಂ ||
ಹಾಡುತಿಹವು ಸಡಗರದಿಂದ |
ಬೇಡುತಿಹವು ಸುಖಜನದಿಂದ || ೧೩ ||

ರವಿಬರುವನು ಶಿಖರವನೇರಿ |
ಕವಿಕೆಯ ರಚಿಸುತ ತಾನಿರಿ ||
ತವಕದಿ ಪಸರಿಸಿ ಕಿರಣಗಳ |
ಒಸದಂ ಎಸೆಯುತ ನಿತ್ಯಸರಳ || ೧೪ ||

ನದಿಗಳ ತೆರೆಗಳ ಸಂದಿನಲಿ |
ಮುದದೊಳು ನಗುವನು ನಲಿಯುತಲಿ ||
"ಜಡುವರು ಸಾಸಿರ" ಸೂರ್ಯರನು |
ನದಿಯೊಳು ವಿಸ್ಮಯದ ನೋಡುವೆನು || ೧೫ ||

ಸುಂದರತರುಗಿಡ ಬಳ್ಳಿಗಳಿಂ |
ಕುಂದದ ಸಿರಿಫಲವೃಕ್ಷಗಳಿಂ ||
ನಿಂದಿಹವೈ ಹೂಗಳು ನಗುತ |
ಚಂದದಿ ನೋಡುತ ಜಗವನು ತಾ || ೧೬ ||

ನಗುವುವು ಹರುಷದಿ ಪುಷ್ಪಗಳು |
ಖಗಗಳು ನಲಿವುವು ಗಗನದೊಳು ||

ಒಗದೊಳು ಸೂರ್ಯನ ಬೆಳಕಿಂದ |
ಒಗೆವುದು ಹರುಷವು ನಲವಿಂದ || ೧೭ ||

ಸಿಂಗರಿಸಿಹ ಹಸಿ ಬೆಟ್ಟಗಳಿಂ |
ಸಿಂಗವು ಪನಸುಸ ಗುಹ್ಯಗಳಿಂ ||
ಅಂಗನೆ ಕೊಡಗನು ಪರ್ವತದಿಂ |
ತಂಗಳ ತಣಿಸುವ ನದಿನದದಿಂ || ೧೮ ||

ಬೆಡಗಿನ ಕೊಡಗನು ನೆರೆನೋಡಿ |
ಕೊಡಗಿನ ಸೊಬಗನು ಮಿಗೆಪಾಡಿ ||
ಸಡಗರದಲಿ ಪುಷ್ಪವ ನೋಡಿ |
ಕಡುತೋಷದ ವಸಲೆಯ ಮಾಡಿ || ೧೯ ||

ಪೆ ರಿವವು ಪರ್ವತಸರಣಿಗಳಿಂ |
ಉರುತರ ತರುಗಳ ಸಾಲುಗಳಿಂ ||
ಸೋರೆಯುತ ನದಿಗಳು ಹರಿಯುವುವು ||
ಕರೆಯುತ ಹರಿಯನು ಸಾರುವುವು || ೨೦ ||

ಮುಗಿಲನು ಮುಟ್ಟುತ ಎಬರಗಳು |
ಒಗುಮಿಗೆಯಲಿ ನರಶ್ರೇಣಿಗಳು ||
ಗಗನವನರಗುತ ತೆರೆರುವುವು |
ಬಗೆಬಗೆ ರೂಪದಿ ಹೊಳೆಯುವುವು || ೨೧ ||

ಪರ್ವತದಲಿ ಹರಿನೆಲಸಿಹನು |
ಸರ್ವರ ಮನವನು ಸೆಳದಿಹನು ||
ಗರ್ವವ ತೊರೆದಿಹ ಹರಿಇಹನು |
ತೋರ್ಪನು ಸುಂದರ ನೋಟವನು || ೨೨ ||

ಒವಿಯೊಳು ಮರೆಯದೆ ಕೊಡಗೀಗ |
ಕವಿತೆಯ ರಚಿಸಿಹ ಹರಿಯೀಗ ||
ಒ ಪದಿಂ ಪರ್ವತ ನದಿನದದಿಂ |
ಸುವಿಮಲತರುಗಳ ವರಸದದಿಂ || ೨೩ ||

ಹಾಡಿನೊಳೆಂತು ಹೇಳುವೆನು |
ಕೊಡಗಿನ ಬೆಡಗಿನ ಪರಿಯಿದನು ||
ಬೇಡುವೆನು ಹರಿಯ ಪದವನ್ನು |
ಪಾಡಿಸೆ ಕೊಡಗಿನ ಬೆಡಗನ್ನು || ೨೪ ||

ಬಂದು ಹಾಡಿ ಕೊಡಗಿನ ಬೆಡಗಂ
ನಿಂದು ನೋಡಿ ಸೊಬಗಿನ ಕೊಡಗಂ ||
ಆಂದದ ನೋಟದ ಬೈಗಿನೊಳು
ಚಂದದಿ ನಲಿಯಿರಿ ಕೊಡಗಿನೊಳು || ೨೫ ||

ಕೊಡಗಿನ ಗೆಳೆಯ

ಪತ್ರವ್ಯವಹಾರ

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ಪತ್ರಿಕಾಕರ್ತರು ಜವಾಬ್ದಾರರಲ್ಲ ಸಂ]

ಕೊಡಗಿನಲ್ಲಿ ಸಂಗಡಗಳು.

ಅಯ್ಯಾ,

ಗುಡ್ಡಬೆಟ್ಟಗಳಿಂದಲೂ ಪರ್ವತಶ್ರೇಣಿಗಳಿಂದಲೂ ತುಂಬಿಕೊಂಡು ಮೈದಾನ ಪ್ರದೇಶವೇ ಕಡಿಮೆಯಾಗಿರುವ ಆದರಲ್ಲೂ ದೇಶದ ವಿಸ್ತೀರ್ಣದ ಮೂರರಲ್ಲಿ ಒಂದರಷ್ಟು ಕಾಡುಪ್ರದೇಶವಾಗಿರುವ ಚಿಕ್ಕ ದೇಶವಾದ ಈ ಕೊಡಗಿನಲ್ಲಿಯಾದರೂ ಜನರೆಲ್ಲರೂ ತಮ್ಮ ಹಿತಕ್ಕಾಗಿ ತಮ್ಮ ದೇಶದ ಅಭಿವೃದ್ಧಿಗಾಗಿ ಒಗ್ಗಟ್ಟಿನಿಂದ ವರ್ತಿಸುತ್ತಿರುವರೆಂದು ದೂರ ದೇಶದವರು ಯೋಚಿಸಬಹುದಲ್ಲವೇ? ಹಾಗೆ ಯೋಚಿಸಲು ಕಾರಣವೂ ಇದೆ. ಒಂದು ಜಿಲ್ಲೆಯಂತಿರುವ ಭರತಖಂಡದ ಅಲ್ಲದ ರೋ ಮುನ್ನೂರು ಮೈಲಿಯಕ್ಕಿಂತ ಹೆಚ್ಚು ಇಲ್ಲದಿರುವ ಕಾರಣ ಅಲ್ಲಿಯ ಜನರೆಲ್ಲರೂ ಒಗ್ಗಟ್ಟಾಗಿ ಯಾವ ಕೆಲಸದಲ್ಲಾದರೂ ವರ್ತಿಸುವುದು ಅಷ್ಟು ಕಷ್ಟವಾದುದು, ಯಾಕೆ ಕೆಲವರು ಅಸಾಧ್ಯವೆಂದೇ ಹೇಳಬಹುದಲ್ಲವೇ! ಆದರೆ ಸುಮಾರು ಒಂದು ಲಕ್ಷ ಅರುವತ್ತುಸಾವಿರ ಮಾತ್ರ ಜನಸಂಖ್ಯೆ ಇರುವ ಈ ಚಿಕ್ಕ ದೇಶದಲ್ಲಿ ಜನರು ಒಗ್ಗಟ್ಟಾಗಿ ವರ್ತಿಸದಿದ್ದರೆ ಇಲ್ಲಿಯವರು ಎಷ್ಟರಮಟ್ಟಿಗೆ ಮುಂದುವರಿದಿರುವರಿಲ್ಲವೆಂದು ಗೊತ್ತಾಗುವುದಲ್ಲವೇ?

ಈ ದೇಶವು ಚಿಕ್ಕದಾದರೂ ಇದರ ನಿವಾಸಿಗಳು ತಮ್ಮ ಧಾರ್ಮಿಕ ಗುಣಕ್ಕೂ ಉದಾರತ್ವಕ್ಕೂ ಪೂರ್ವದಿಂದಲೇ ಹೆಸರುವಾಸಿಗೊಂಡಿರುವರು. ಆದುದರಿಂದಲೇ ಈ ಪ್ರದೇಶವನ್ನು ಕಾವೇರಮ್ಮನವರ ಪುಣ್ಯಭೂಮಿಯೆಂದು ಸಾಧಾರಣವಾಗಿ ಹೇಳುವದಾಗಿದೆ. ಒನರ ಈ ಗುಣಗಳ ದೆಸೆಯಿಂದಲೇ ಕೆಲವು ವರ್ಷಗಳ ಹಿಂದೆ ಇಲ್ಲಿ ಪಂಗಡ ಭೇದಗಳು ಇರಲಿಲ್ಲ. ಎಲ್ಲರೂ ಸಹೋದರ ಭಾವದಿಂದ ವರ್ತಿಸುತ್ತಿದ್ದರು. ಪ್ರಬಲವಾದ ಕೋಮಿನವರು ಹಿಂದ ಳಿದವರನ್ನು ಹಿಂದಕ್ಕ ತಳ್ಳದೆ ತಮ್ಮ ಕಿರಿಯ ಸಹೋದರರಂತೆ ಭಾವಿಸಿ ಅವರಿಗೆ ಸಾಧ್ಯವಾದಷ್ಟು ಸಹಾಯವನ್ನು ಮಾಡುತ್ತಿದ್ದರು. ಹಳ್ಳಿಗಳಲ್ಲಿಯೂ ಊರುಕೇರಿಗಳಲ್ಲಿಯೂ ಬೇರೆ ಬೇರೆ ಕೋಮಿನ ಜನರು ಸಹಕಾರ ತತ್ವವನ್ನವಲಂಬಿಸಿ ಒಬ್ಬರಿಗೊಬ್ಬರು ಸಹಾಯಮಾಡುತ್ತಿದ್ದರು. ಅಗ್ನಿ ತ್ರಾಸು ಕೆಟ್ಟರೂ ನೆರೆಯವರು ಕೆಡಬಾರದೆಂಬ ಭಾವನೆಯು ಎಲ್ಲವರಲ್ಲಿಯೂ ಇತ್ತು. ಹಾಗೆಯೇ ಊರಲ್ಲಿ ಒಬ್ಬನು ಆಕಸ್ಮಾತ್ತಾಗಿ ಕಷ್ಟಕ್ಕೊಳಗಾಗಿ ಕ್ಷೀಣಗತಿಗೆ ಬಂದರೆ ಊರವರೆಲ್ಲರೂ ಸೇರಿ ಅವನಿಗೆ ಎಲ್ಲಾ ತರಹದ ಸಹಾಯ ಕೊಟ್ಟು ಅವನನ್ನು ಮೇಲಕೆತ್ತುತ್ತಿದ್ದರು. ಇದೀಗ ಈ ದೇಶದ ಕೆಲವು ವರ್ಷಗಳ ಹಿಂದಿನ ಸ್ಥಿತಿ.

ಆದರೆ ನವನಾಗರೀಕತೆಯ ಈಗಿನ ಗಾಳಿಯು ಹೇಗಾದೆಯೆಂದು ಸ್ವಲ್ಪ ವಿಚಾರಿಸುವ. ಇಂಗ್ಲಿಷು ವಿದ್ಯೆಯು ದೇಶದಲ್ಲಿ ಒಂದು ಆ ಮೂಲಕ ಪಾಶ್ಚಾತ್ಯನಾಗರೀಕತೆಯು ಇದರಲ್ಲಿ ಹರಡುತ್ತಾ ಬಂದ ಹಾಗೆ ವ್ಯಕ್ತಿತ್ವವೂ ಸ್ವಾರ್ಥತೆಯೂ ಪ್ರಬಲವಾಗುತ್ತಿವೆ! 'ಪರೋಪಕಾರಾರ್ಥಮಿದಂ ಶರೀರಂ' ಎಂಬುದರಲ್ಲಿ ಅತಿವಿಶ್ವಾಸವಿಟ್ಟಿದ್ದ ಪೂರ್ವಿಕರ ಸಂತಾನದವರಾದ ನಾವು ಈಗ ಪರೋಪಕಾರದಿಂದಲೇ ನಮ್ಮ ಕೋಮಿನವರು ಹಿಂದೆಬಿದ್ದು ಹಾಳಾಗುತ್ತಿರುವರೆಂದು ಅನ್ನುವ ಕಾಲ ಸಂಭವಿಸಿತಲ್ಲಾ ಎಂದು ಎಷ್ಟು ದುಃಖಿಸಿದರೂ ಸಾಲದು. ಪರೋಪಕಾರದಿಂದ ನಾವು ಹಾಳಾಗುತ್ತೇವೆಂಬುದು ಹ... ವೇದವಾಕ್ಯವಾದರೆ ಪರಪೀಡನೆಯೇ ಇಹಪರಮುಕ್ತಿ ಸಾಧನವೆಂದಾಯಿತಲ್ಲವೇ! ಈ ತತ್ವದ ಆಚರಣೆಯ ಪರಿಣಾಮ ಏನಾಗುವುದೆಂದು ವಾಚಕ ಮಹಾಶಯರೇ ಊಹಿಸಿಕೊಳ್ಳಬಹುದು.

ದೇಶದಲ್ಲಿ ನಡೆಯುವ ಯಾವ ಚಳವಳವನ್ನು ನೋಡಿದರೂ ಅದರ ಮೂಲಪುರುಷರು ಇಂಗ್ಲಿಷು ವಿದ್ಯಾವಂತರುಗಳು. ಆದುದರಿಂದ ಇಂಗ್ಲಿಷು ವಿದ್ಯೆಯು ನಮ್ಮ ದೇಶದ ಜನರನ್ನು ನಿದ್ದೆಯಿಂದ ಎಚ್ಚರಿಸಿ ಅವರ ಸಂಘಶಕ್ತಿ ದೋಷಗಳನ್ನು ಅವರಿಗೆ ಚೆನ್ನಾಗಿ ತೋರಿಸಿಕೊಟ್ಟಿರುವುದು ನಿಜ. ಆದರೆ ಸ್ವಾರ್ಥತೆಯೂ ಅಧಿಕಾರ ಮಮತೆಯೂ ಈ ವಿದ್ಯಾಭ್ಯಾಸದ ಪರಿಣಾಮವೆಂದು ಹೇಳದೆ ಇರಲಾರೆ. ಇವೆರಡು ಗುಣಗಳಿಂದಲೇ ನಮ್ಮ ದೇಶವು ಈಗಿನ ಸ್ಥಿತಿಗಿಳಿದಿದೆಯೆಂಬುದರಲ್ಲಿ ಸಂಶಯವಿಲ್ಲ.

ಈಗ ಕೊಡಗಿನಲ್ಲಿ ಎರಡು ಸಂಗಡಗಳು ಪ್ರಬಲವಾಗಿರುವುದು ದೂರದಿಂದ ನೋಡುವವರಿಗೆ ಯಾರಿಗೂ ಗೋಚರಿಸದೆ ಇರದು. ಒಂದು ಪಂಗಡವು ಕೋಮುವಾರು ಸಂಸ್ಥೆಗಳನ್ನು ಏರ್ಪಡಿಸಿ ಆ ಮೂಲಕ ಕೋಮಿನ ಹಿತವನ್ನು ಕಾಯುವ ಕೆಲಸಕ್ಕೆ ಹೊರಟು ಗಮನಕೊಡಬೇಕಂತಲೂ ಕೌನ್ಸಿಲುಗಳಲ್ಲಿಯೂ, ಡಿಸ್ಟ್ರಿಕ್ಟ್ ಬೋರ್ಡುಗಳಲ್ಲಿಯೂ, ಮುನ್ಸಿಪಾಲಿಟಿಗಳಲ್ಲಿಯೂ ಕೋಮುವಾರು ಪ್ರಾತಿನಿಧ್ಯ ಇರಬೇಕಂತಲೂ, ದೇಶದಲ್ಲಿ ಹೆಚ್ಚು ಹಿತ (ಆಸ್ತಿಪಾಸ್ತಿ) ಇರುವವರಿಗೆ ಹೆಚ್ಚು ಅಧಿಕಾರವಿರಬೇಕಂತಲೂ, ಎಲ್ಲಾ ಕೋಮಿನವರೂ ಯಾಕೆ, ಒಂದು ಕೋಮಿನಲ್ಲಿರುವ ಎಲ್ಲಾ ಜನರೂ ಅವರವರ ಸ್ಥಾನಕ್ಕೆ ಸರಿಯಾಗಿಯೇ ಇರಬೇಕಲ್ಲದೆ ಹಿಂದಿರುವವರು ಮುಂದೆಯೂ ಹಿಂದೆ ಇರುವವರೆಂದು ತಿಳಿಸಲಾರರೆಂತಲೂ ಪ್ರಯತ್ನಿಸುತ್ತಿದೆ. ಈ ಪಂಗಡದಲ್ಲಿ ... ದು ಕೋಮಿನ ಜನರೇ ಹೆಚ್ಚಾಗಿರುವದಾಗಿದೆ. ಇನ್ನೊಂದು ಪಂಗಡವು—ಕೋಮುವಾರು ಹಿತವನ್ನು ಕಾಪಾಡಬೇಕಾದುದೇನೋ ನಿಜ. ಆದರೆ ವಾರ ... ಇದು ಸಮಯವಲ್ಲ. ನಮ್ಮ ದೇಶದ ಆಡಳಿತದ ... ಅಧಿಕಾರ ನಮ್ಮ ಪ್ರತಿನಿಧಿಗಳಿಗೆ ಸಿಕ್ಕುವವರೆಗೆ ... ಮಗೆ ಸ್ವರಾಜ್ಯ ದೊರೆಯುವವರೆಗೆ ಕೋಮುವಾರು ಭೇದವನ್ನೆಣಿಸದೆ ಎಲ್ಲಾ ಜಾತಿ ಮತದವರೂ ಒಗ್ಗಟ್ಟಾಗಿ ರಾಜಕೀಯ ಸ್ವಾತಂತ್ರ್ಯವನ್ನು ಪಡೆಯಲು ಪ್ರಯತ್ನಿಸಿ ನಂತರ ಸರಕಾರವು ನಮ್ಮ ಕೈಗೆ ಬಂದಮೇಲೆ ಎಲ್ಲಾ ಕೋಮಿನವರು ಅವರವರ ಏಳಿಗೆಯನ್ನು ಸಾಧಿಸುವುದು ಯುಕ್ತವೆಂದೂ, ಈಗಲೇ ಕೋಮುವಾರು ಸಂಸ್ಥೆಗಳನ್ನು ಸ್ಥಾಪಿಸಿ ಭಿನ್ನ ಭೇದಗಳನ್ನು ಕಲ್ಪಿಸಿದರೆ ರಾಜಕೀಯ ಸುಧಾರಣೆ ಪಡೆಯಲು ಸಾಧ್ಯವಿಲ್ಲವೆಂದೂ, ಆದರಿಂದ ಎಲ್ಲರೂ ಸೇರಿ ಮಾಡುವ ಸಂಸ್ಥೆಯಲ್ಲೇ ಆಗಲೀ ಸ್ಥಳೀಯ ಸ್ವರಾಜ್ಯ ಸಂಸ್ಥೆಗಳಲ್ಲೇ (ಡಿ ಬೋರ್ಡು ಮತ್ತು ಮುನ್ಸಿಪಾಲಿಟಿಗಳಲ್ಲೇ) ಆಗಲಿ ಕೋಮುವಾರು ಪ್ರತಿನಿಧಿತ್ವವು ಇರಕೂಡದೆಂದೂ, ದೇಶದಲ್ಲಿ ಆಸ್ತಿಪಾಸ್ತಿಗಳನ್ನೆಣಿಸದೆ ... ಭೇದಗಳನ್ನೆಣಿಸದೆ ಎಲ್ಲರಿಗೂ ಸಮಾನವಾದ ಹಕ್ಕುಗಳಿರಬೇಕೆಂದೂ ಯಾರೇ ಆಗಲಿ ಅವರವರ ಬುದ್ಧಿಶಕ್ತಿಯ ದೆಸೆಯಿಂದ ಒಬ್ಬನೇ ಕೀಳಾದ ಸ್ಥಿತಿಯಿಂದ ಮುಂದೆ ಬರಲು ಯಾವ ಅಡ್ಡಿಯೂ ಇರಬಾರದೆಂದೂ (ಇನ್ನೊಂದು ಪಂಗಡವು) ಸಾಧಿಸುತ್ತದೆ. ... ವಾಗಿದೆ. ಸಹಜವಾಗಿ ಈ ಪಂಗಡದಲ್ಲಿ ಎಲ್ಲಾ ಕೋಮಿನವರೂ ಇರುವರು.

ನನಗೆ ತಿಳಿದ ಮಟ್ಟಿಗೆ ಕೊಡಗಿನ ಎರಡು ಪಂಗಡಗಳ ಧ್ಯೇಯಗಳನ್ನು ಮೇಲೆ ವಿವರಿಸಿದ್ದಾಯಿತು. ಇವೆರಡು ಧ್ಯೇಯಗಳಲ್ಲಿ ನಾವು ಪರದಾಸ್ಯದಲ್ಲಿರುವ ಈ ಕಾಲದಲ್ಲಿ ಯಾವುದನ್ನು ಹಿಂಬಾಲಿಸಿದರೆ ದೇಶಕ್ಕೂ ನಮಗೂ ಶುಭವಾಗುವುದೆಂದು ದೇಶದ ಪ್ರತಿಯೊಬ್ಬನೂ ಯೋಚಿಸಬೇಕಾದ ಸಂಗತಿಯಾಗಿದೆ. ಹಿಂದೂದೇಶದಲ್ಲಿ ಹಲವು ಪಂಗಡಗಳಿರುವುದರಿಂದಲೇ ರಾಜಕೀಯ ಸುಧಾರಣೆಯು ದೊರೆಯಲು ತಡವಾಗಿದೆಯೆಂದೂ, ಕೋಮುವಾರು ಪ್ರತಿನಿಧಿತ್ವಕ್ಕೂ ಸಂಸ್ಥೆಗೂ ಉತ್ತೇಜನ ಕೊಡುತ್ತಾ ಬರುವದರಿಂದಲೇ ಹಿಂದೂಸ್ಥಾನದಲ್ಲಿ ಕದನಗಳೂ ಬ್ರಾಹ್ಮಣ ಬ್ರಾಹ್ಮಣೇತರರಲ್ಲಿ ವೈಮನಸ್ಸೂ ದಿನೇ ದಿನೇ ಹೆಚ್ಚುತ್ತಿದೆಯೆಂಬುದೂ ಎಲ್ಲರಿಗೂ ತಿಳಿದ ಸಂಗತಿಯಾಗಿದೆ. ಹೀಗಿರುವಾಗ ಕೋಮುವಾರು ವೈಮನಸ್ಸು ಇಲ್ಲದೆ ಇರುವ ನಮ್ಮ ಈ ದೇಶದಲ್ಲಿ ಅದನ್ನು ಹುಟ್ಟಿಸಲು ಯತ್ನಿಸುವುದು ಎಂದೂ ಯೋಗ್ಯವಲ್ಲ. ಒಂದುವೇಳೆ ಅದು ಸ್ವಲ್ಪಮಟ್ಟಿಗೆ ಇಲ್ಲಿ ಇದ್ದರೂ ಕೂಡ ಅದು ಬೆಳೆಯಲು ಬಿಡದೆ ಪ್ರೀತಿಭಾವದಿಂದಲೂ ಒಗ್ಗಟ್ಟಿನಿಂದಲೂ ಅದನ್ನು ಮುರಿದುಹಾಕುವುದು ಪ್ರತಿಯೊಬ್ಬನ ಕರ್ತವ್ಯವಲ್ಲವೇ.

ನನ್ನ ಬಾತ್ಮಿಯು ಉದ್ದವಾಯಿತೆಂದು ಸಂಪಾದಕರು ಕಟಿವದೆ ಬಾಕಿ ನೂಡುವರೆಂಬ ಹೆದರಿಕೆಯಿಂದ ಇಂದು ಇಷ್ಟಕ್ಕೆ ನಿಲ್ಲಿಸುತ್ತೇನೆ. ಈ ವಿಷಯ ಸಮಯ ದೊರೆತಾಗ ಇನ್ನೊಂದು ಸಾರಿ ಬರೆಯುತ್ತೇನೆ.

' ದೂರದೃಷ್ಟಿ

ಆಂಧ್ರ ಆಯುರ್ವೇದಿಕ್ ಫಾರ್ಮಸಿ.
ಬ್ರಾಂಚ್, ಬೆಂಗಳೂರು ಸಿಟಿ

ಚ್ಯವನಪ್ರಾಸ ಲೇಹ.

ಇದು ಸರ್ವೋತ್ಕೃಷ್ಟವಾದ ಗಿಡಮೂಲಿಕೆಗಳಿಂದ ತಯಾರಿಸಲ್ಪಟ್ಟ ಆಯುರ್ವೇದ ರಸಾಯನೌಷಧವು. ವಿದ್ಯಾರ್ಥಿಗಳೂ ವಿಶೇಷವಾಗಿ ಬುದ್ಧಿಯನ್ನು ಪ್ರಯೋಗಿಸಿ ಕೆಲಸ ಮಾಡುವವರೂ ಈ ಲೇಹವನ್ನು ಸೇವಿಸಿದರೆ ವಿಶೇಷವಾಗಿ ಬುದ್ಧಿಶಕ್ತಿಯನ್ನೂ, ಜ್ಞಾಪಕಶಕ್ತಿಯನ್ನೂ ಹೊಂದುವರು. ದೀರ್ಘಕಾಲದ ವ್ಯಾಧಿಯಿಂದಾಗಲೀ ಕಷ್ಟ ನಡಸಿದುದರಿಂದಾಗಲೀ, ಸ್ವಭಾವ ಶಕ್ತಿಯ ಕೊರತೆಯಿಂದಾಗಲೀ ಶರೀರ ಕಾಂತಿಯು ಕುಂದಿ ರಕ್ತ ಕೆಟ್ಟು ಇಂದ್ರಿಯ ದೌರ್ಬಲ್ಯವೇ ಮೊದಲಾದ ವಿಕಾರಗಳಿಂದ ಪೀಡಿತರಾಗಿರುವವರು ಈ ಲೇಹವನ್ನು ಸೇವಿಸಿದರೆ ಈ ತರದ ವಿಕಾರಗಳನ್ನೆಲ್ಲಾ ಪರಿಹರಿಸಿ ದೇಹಕ್ಕೂ ಮನಸ್ಸಿಗೂ ಉಲ್ಲಾಸವನ್ನುಂಟುಮಾಡಿ ಮಾಂಸ ಖಂಡಗಳಿಗೂ ನರಗಳಿಗೂ ಬಲವನ್ನು ಕೊಟ್ಟು ದೇಹಪುಷ್ಟಿಯನ್ನುಂಟುಮಾಡಿ ನವಚೈತನ್ಯವನ್ನುಂಟುಮಾಡುವುದು. ಅಲ್ಲದೆ ಆರೋಗ್ಯ ದೃಢಶರೀರವುಳ್ಳವರಾಗಿ ದೀರ್ಘಕಾಲ ಬದುಕುವರು. ಕೆಮ್ಮು, ಉಬ್ಬಸ ವ್ಯಾಧಿಯುಳ್ಳವರಿಗೂ ಮುಖ್ಯವಾಗಿ ಕ್ಷಯರೋಗಿಗಳಿಗೂ ಇದು ಸಂಜೀವಿನಿಯೇ ಸರಿ. ಚರಕ ಸಂಹಿತೆಯಲ್ಲಿ ಇದರ ಗುಣವು ಅದ್ಭುತವಾಗಿ ಹೇಳಲ್ಪಟ್ಟಿದೆ. ೧೦ ತೊಲೆಗೆ ೧ರೂಪಾಯಿ. ೪೦ ತೊಲೆಗೆ ೩ರೂಪಾಯಿ.

ಎಲ್ಲಾ ಕಡೆಯಲ್ಲಿಯೂ ಏಜಂಟರು ಬೇಕು.

ಸೂಚನೆ:—ಇಲ್ಲಿ ಶಾಸ್ತ್ರೀಯವಾದ ಎಲ್ಲಾ ಔಷಧಗಳೂ ಪಿಡ್ಯಾಫಿಸಿನ ಕ್ರಯಕ್ಕೆ ಸಿಗುತ್ತವೆ. ಆಯುರ್ವೇದ ಭೂಷಣ ಕೆ ನಾರಾಯಣರಾವ್ ಎ ಎಂ ಎ ಸಿ ಯವರು ರೋಗಿಗಳನ್ನು ಪರೀಕ್ಷಿಸಿ ವ್ಯಾಧಿಯನ್ನು ಪ್ರತಿದಿನವೂ ನಡಿಸುವರು. ವಿಶೇಷ ಸಂಗತಿಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಟಿ. ಸಿ. ಎಸ್. ಮಣಿಯಂ ಅಂಡ್ ಕೋ.,
ಮ್ಯಾನೇಜಿಂಗ್ ಏಜಂಟ್ಸ್, ಆಂಧ್ರ ಆಯುರ್ವೇದಿಕ್ ಫಾರ್ಮಸಿ
೬೬ ಚಿಕ್ಕಪೇಟೆ, ಬೆಂಗಳೂರು ಸಿಟಿ
16—5

ಪತ್ರಿಕೆ "ಹಿತೈಷಿ"
ಕನ್ನಡ **ಸ್ವಧರ್ಮ** ಹೊಸ ಪತ್ರಿಕೆ.

ಸಂಪಾದಕರು —ದ. ರಾ. ಬೇಂದ್ರೆ, ಬಿ. ಎ.

ಸಮಾಜದಲ್ಲಿ ಶಾಂತಿಪುಷ್ಟಿತುಷ್ಟಿಗಳು ನೆಲೆಗೊಳ್ಳಬೇಕಾದರೆ ಸದಾಚಾರವೇ ಸರಳವಾದ ಹಾದಿ. ಸದಾಚಾರದ ಬೆಳೆಗೆ ಸುವಿಚಾರವೇ ಸರಿಯಾದ ಸಾಧನ. ಇಂತಹ ಸುವಿಚಾರಗಳನ್ನು ಸಮಾಜದ ಮುಂದಿಡಲು ಹೊರಟಿರುವ ಸ್ವಧರ್ಮದ ಗತಿ. ಕನ್ನಡಿಗರು ಕೈಗೊಟ್ಟು ಸ್ವಧರ್ಮವನ್ನು ಪ್ರೋತ್ಸಾಹಿಸಬೇಕಾಗಿ ಕೋರಿಕೆ.

ವಾರ್ಷಿಕ ವರ್ಗಣಿ ರೂ. 3—0—0

ಕಾರ್ಯದರ್ಶಿ
"ಸ್ವಧರ್ಮ" ಕಾರ್ಯಾಲಯ,
ಮಾಳಮಡ್ಡಿ, ಧಾರವಾಡ.

ನೌಕರಿ ಖರಾರು ಫಾರಮುಗಳು

1926ನೇ ಇಸವಿ ಕೊಡಗಿನ ಕೂಲಿ ಕೆಲಸವನ್ನು ಕುರಿತ ಆಕ್ಟ್ 1ರ ಮೇರೆ, ಅನುಭವವುಳ್ಳ ಯೂರೋಪಿಯನ್ ಮತ್ತು ಇಂಡಿಯನ್ ಪ್ಲಾಂಟರುಗಳೂ ಸೇರಿ ತಯಾರಿಸಿರುವ ನೌಕರಿ ಖರಾರು ಫಾರಮುಗಳು ಇಂಗ್ಲಿಷಿನಲ್ಲಿಯೂ ಕನ್ನಡದಲ್ಲಿಯೂ ಪ್ರಿಂಟಾಗಿ ಮಾರಾಟಕ್ಕೆ ತಯಾರಿವೆ. ಬೇಕಾದವರು ಸಂಪ್ರತಿ ಕ್ರಯಕ್ಕೆ ಒಂದು ಇರುವ (ಪೋಸ್ಟೇಜ್ ಖರ್ಚು ಸಹ) ನಮ್ಮ ಕೊಡಗು ಆಫೀಸಿನಲ್ಲಿ ಕೊಂಡುಕೊಳ್ಳಬಹುದು.

ತಾ. 24—6—26
ಮಡಿಕೇರಿ.

ಮ್ಯಾನೇಜರ್,
"ಕೊಡಗು" ಆಫೀಸು

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್, ಕೊ ಆಪರೇಟಿವ್ ಸೊಸೈಟೀಸ್ ಆಕ್ಟಿನ ಪ್ರಕಾರ ರಿಜಿಸ್ಟರಾಗಿದೆ.

		ರೂ.
ಶೇರ್ ಬಂಡವಾಳ	—	50,000
ವಸೂಲಾದ ಶೇರ್ ಮೊಬಲಗು	—	3890
ಜನರಿಂದ ಠೇವಣಾತಿ	—	90,600

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಮುಖ್ಯವಾಗಿ ಸಾಲಕೊಡತಕ್ಕದ್ದು.

ಒಂದು ವರ್ಷ ವಾಯಿದೆ ಅಥವ ಹೆಚ್ಚಿನ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ ರೂ. 6-4-0ರ ದರದಲ್ಲಿ ಬಡ್ಡಿ ದೊರೆಯುತ್ತೆ. ಕಡಿಮೆ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ 5ರ ಬಡ್ಡಿ ದೊರೆಯುತ್ತೆ.

ವಿರ್ಮಕ್ಕೊಂದಾವರ್ತಿ ಕೊ ಆಪರೇಟಿವ್ ಬಿಜಿನೆಸ್ಸಾರವರು ಲೆಕ್ಕ ತಪಾಸಣೆ ಮಾಡುತ್ತಾರೆ.

ಪ್ರೆಸಿಡೆಂಟರು,
ದಿವಾನ್ ಬಹದ್ದೂರ್
ಕುಟ್ಟಯ್ಯನವರು,
ರಾಯ್ ಬಹದ್ದೂರ್.

ಟ್ರೆಜರರ್.
ಯಂ. ಭುಜಂಗರಾಯರು
ಬಿ.ಎ., ಬಿ.ಎಲ್.

ಸೆಕ್ರಿಟರಿ
ಸಿ. ಯನ್. ವೆಂಕಪ್ಪಯ್ಯನವರು, ಬಿ.ಎ., ಬಿ.ಎಲ್.
ತಾರೀಕು 29—8—1925.

Apply for our shooting Season's Clearance Sale Catalogue ,of Brand New Goods.

10 to 25 percent Reductions in Prices.

No License Required !! **No License Required**



Webley and Scott Air Pistol, cal ·177 or ·22, bore Powerful and Accurate, complete with a sample box of slugs, two spare washers, a brush forcleaning, and a bookletof instructions Rs. 30/— Free delivery.

Pwerful German Diana Air gun, Handsome and Accurate, takes B· S· A· Patern No 1 Slugs and Darts, expressly recommendable for Target Practice Rs· 15/ Free delivery

Brilliant Search Light Lamp for Night Sports Rs 30/— Free delivery·

No License required to purchase or to possess the above items.

Reliable D· B B L 12 bore guns	Rs. 60/—	and upwards
Do S. B B L· 12	do	do 40/—	do
D B. M L Guns		„ 45/—	do
S B M L. do.		„ 30/—	do·
S B. B L Rifles		„ 25/—	do·
B L Revolvers and Pistols		, 50/—	do.

Arms, Ammunition and shooting requisitesof almost every kind andquality offered at exceptionally favourable rates ANumber of good quality second hand weapons also offered for sale in theNew Catalogue.

GOOLAMHUSIAIN ALLIBHOY & SONS
Largest importers of Firearms and Ammunition, Cheapest priced firm in India,

210 Abdul Rehman Street, BOMBAY·
24. 2

೧೬ ಚಿತ್ರಪಟಗಳುಳ್ಳದ್ದು

ಸಚಿತ್ರ ಶುಕಸಪ್ತತಿ ಕಥೆ.

೭೦ ಕಥೆಗಳು ೫೧೨ ಪುಟಗಳು

ಈ ಕಥೆಯು ಧರ್ಮಶಾಸ್ತ್ರ, ವೇದಾಂತ, ಸ್ತ್ರೀಪಾತಿವ್ರತ್ಯ ಬ್ರಾಹ್ಮಣ, ವೈಶ್ಯ, ಶೂದ್ರರೆಂಬ ನಾಲ್ಕು ವರ್ಣದವರು ನಡಿಯತಕ್ಕ ವರ್ಣಾಶ್ರಮ ಧರ್ಮವೇ ಮುಂತಾದ ಸದ್ವಿಚಾರಗಳನ್ನು ಬೋಧಿಸುವುದು. ೧. ಕಥಾರೂಪದಲ್ಲಿ ಚಿತ್ರಕಥಾ ಚಮತ್ಕಾರ ಶೋಭಿತವಾಗಿಯೂ ನೀತಿಬೋಧಕವಾಗಿಯೂ ಇರುವದರಿಂದ ಸ್ತ್ರೀಯರು, ಪುರುಷರು, ಬಾಲಕರು ಎಂಬ ಭೇದವಿಲ್ಲದೆ ಎಲ್ಲರೂ ಓದಬಹುದು. ೨ ಲೋಕಾನುಭವಕ್ಕೆ ಬೇಕಾದ ಅನೇಕ ವಿಷಯಗಳು ಇದರಿಂದ ತಿಳಿದುಬರುವುವು. ೩. ಈ ಕಥೆಯನ್ನು ಓದುವದರಿಂದ, ಮನಸ್ಸನ್ನು ದುರಾಚಾರದಲ್ಲಿ ಬಿಡದಂತೆ ಸದಾಚಾರದಲ್ಲಿಯೇ ನಡೆಯುವಂತೆ ಮಾಡುವುದು. ೪. ವಿವೇಕಾವಿವೇಕವನ್ನು ತಿಳಿಯತಕ್ಕ ಜ್ಞಾನವನ್ನು ಉಂಟುಮಾಡುವುದು. ಬೇಕಾದವರು ವಿ ಪಿ. ಪೋಸ್ಟು ಮೂಲಕ ತರಿಸಿಕೊಳ್ಳಬಹುದು.

ದಪ್ಪಕಾಗದ ಕ್ರಯ ಪ್ರತಿ ೧ಕ್ಕೆ ರೂ. ೨-೦-೦. ಟಪ್ಪಾಲು ಹಾಸಲು ೦-೮-೦.

ಸಚಿತ್ರ ಭಟ್ಟಿ ವಿಕ್ರಮಾದಿತ್ಯರಾಯನ ಕಥೆ ೩ ಭಾಗಸೇರಿದ್ದು ೭೧೨ ಪುಟಗಳು ಕ್ರಯ ೨-೪-೦. ಸಚಿತ್ರರಾಜ ಕೆಂಪಿರವ ಕಥೆ ೪೮೦ ಪುಟಗಳು, ಕ್ರಯ ರೂ. ೨.

ಸಚಿತ್ರ ಶ್ರೀರಾಮತತ್ವಾಮೃತ ಎಂಬ ಸೀತಾರಾಮಾಂಜನೇಯ ಸಂವಾದ ೨೪೬ ಪುಟಗಳು ೧-೮-೦. ಇವುಗಳಿಗೆ ಟಪಾಲು ಖರ್ಚು ಬೇರೆ.

ನಮ್ಮಲ್ಲಿ ದೊರೆಯುವ ಎಲ್ಲಾ ಪುಸ್ತಕಗಳ ಕ್ರಯಪಟ್ಟಿ (ಕ್ಯಾಟಲಾಗ್)ಗೆ ಬರೆದರೆ ಕಳುಹಿಸುವೆವು.

52—9 ನಮ್ಮ ವಿಳಾಸ— ಎಂ ಆರ್. ಕೃಷ್ಣಸ್ವಾಮಿ ಶೆಟ್ಟಿ,
ಬುಕ್ಕಡಿಪೋ, ಚಿಕ್ಕಪೇಟೆ, ಬೆಂಗಳೂರು ಸಿಟಿ

ಹೊಸ ಸಾಮಾನುಗಳು! ಸುಲಭ ಕ್ರಯ!! ಈಗತಾನೇ ಬಂದಿವೆ!!!

ಇಂಥ ಸುಸಮಯವನ್ನು ಕಳಕೊಳ್ಳಬೇಡಿರಿ!

12 ಬೋರ್ ಜೋಡಿ ಕೊಳವಿನ ತೋಟಾ ಕೋವಿ 1ಕ್ಕೆ	ರೂ.	115—0—0
12 „ 32 ಇಂಚಿನ ಒಂಟಿ ಕೊಳವಿನ ತೋಟ ಕೋವಿ (ಜರ್ಮನಿ) 1ಕ್ಕೆ.	„	60—0—0
„ „ 36 „ „ „ „	„	65—0—0
ಜೋಡಿ ಕೊಳವಿನ ಕೇಪು ಕೋವಿ 20ನೇ ನಂಬ್ರ 1ಕ್ಕೆ.... ...	„	85—0—0
12 ಬೋರ್ ಚಿಲ್ಲು ತೋಟಗಳು (ಒಳ್ಳೇ ನಮೂನೆ) 100ಕ್ಕೆ	„	14—0—0
„ „ ಆನೆ ಚಿಲ್ಲು „ „ „	„	16—0—0
„ ಗುಂಡು ತೋಟಗಳು „ „	„	19—0—0
ಕೋವಿ ಕ್ಲೀನ್ ಮಾಡುವ ಮತ್ತು ತೋಟ ತುಂಬಿಸುವ ಸಾಮಾನು 1 ಪೆಟ್ಟಿಗೆಗೆ		27—8—0
ಕೇಪು 250ರ 1 ಟಿನ್ನಿಗೆ	ರೂ.	1—5—0
ಕಾಲು ಪೌಂಡು 2 ಯಘಾನ ಮದ್ದು ಡಬ್ಬಿ 1ಕ್ಕೆ	„	1—0—0
ಚಿಲ್ಲು ಎಲ್ಲಾ ತರಹದ ನಮೂನೆ ರಾತ್ಲ 1ಕ್ಕೆ	„	0—10—0
ಪೂರ್ತಿ ಉಕ್ಕಿನ ಸೊಗಸಾದ ಗುದ್ದಲಿಗಳು 5 ಪೌಂಡಿನ 1 ಡಜನ್ನಿಗೆ	„	33—0—0
„ „ „ 4 „ „	„	30—0—0
4 ಮುಳ್ಳಿನ ಮುಳ್ಳು ಗುದ್ದಲಿಗಳು ಡಜನ್ನಿಗೆ	„	60—0—0
3 „ „	„	48—0—0
4 ಪೌಂಡಿನ ಮರ ಕಡಿಯುವ ಕೊಡಲಿಗಳು ಡಜನ್ನಿಗೆ	„	54—0—0
ಇಂಗ್ಲಿಷ್ ನಮೂನೆ ಕಪಾತು ಚಾಕುಗಳು ಡಜನ್ನಿಗೆ	,	15—0—0
ಮಿಶನ್ ಕತ್ತಿಗಳು ದೊಡ್ಡ ಸೈಜ್ (ಸ್ಪೆಟಡರ್‌ಲ್ಯಾಂಡ್) 1ಕ್ಕೆ	„	4—8—0
„ ಸಣ್ಣ ಸೈಜ್ „ „	„	4—4—0
„ „ ಹೋಲ್‌ಸೇಲಿಗೆ „ ...	„	ಕಮ್ಮಿ ಕ್ರಯ

ಮೆಕ್ಡೋವೆಲ್ ಕಂಪೆನಿ,
ಮಡಿಕೇರಿ.

Messers Mc Dowell & Co.
Mercara

12-9

ಕಿರ್ಲೋಸ್ಕರರ ಪೇಟೆಂಟ ನಲ್ಲಾರ ತಪ್ಪಲಿ.



ಈ ತಪ್ಪಲಿಯು ನಮ್ಮ ಕಾರ್ಖಾನೆಯಲ್ಲಿಯೇ ತಯಾರಾಗುತ್ತದೆ ಆದಕಾರಣದಿಂದ ಇದಕ್ಕೆ ಪೇಟಂಟ್ ದೊರೆತ್ತಿರುತ್ತದೆ. ಇದರಮುಖ್ಯ ಗುಣಗಳು:

೧. ನೀರನ್ನು ಮುಟ್ಟಿದ ಕೂಡಲೇ ತುಂಬಿ ಒರುವದು.

೨. ಮೇಲಕ್ಕೆ ಬರುವಾಗ್ಗೆ ಒಂದು ಹನಿ ನೀರು ಸೋರುವದಿಲ್ಲ.

೩. ಡೋಣಿಯಲ್ಲಿ ನೀರು ಬೀಳುವಾಗ್ಗೆ ತೊಗಲಿನ ತಪ್ಪಲಿಯಂತೆ ವ್ಯರ್ಥವಾಗಿ ಹೋಗುವದಿಲ್ಲ.

ಬೆಲೆಬಗ್ಗೆ ಹಚ್ಚಿನ ಸಂಗತಿ ಒಗ್ಗೆ ಬರೆದು ತಿಳಿದುಕೊಳ್ಳಿರಿ

ಕಿರ್ಲೋಸ್ಕರ ಬಂಧು, ಲಿಮಿಟೆಡ್.
ಕಿರ್ಲೋಸ್ಕರವಾಡಿ,
16—8 ಜಿ. ಸಾತಾರ್.

ಇಮಿಟೇಷನ್ ರೇಷ್ಮೆ ಸೀರೆಗಳು.

ಈ ಸೀರೆಗಳು 18ಮೊಳ, ಉದ್ದ ಮೊ2½ನೊಳ ಅಗಲವೂ ಇದೆ. ಈ ಸೀರೆಗಳನ್ನು ಹೊಸದಾದ ಇಮಿಟೇಷನ್ ಸಿಲ್ಕ್ ಗಟ್ಟಿದಾರದಿಂದ ತಯಾರಿಸಿದೆ. ಇದು ನೋಡಲಿಕ್ಕೆ ಭಾರಿ ಕ್ರಯದ ಸೀರೆಗಳಂತೆ ಕಾಣುವದಲ್ಲದೆ ಅಂದವಾದ ಅಂಚೂ, ಸುಂದರವಾದ ಸಾಚಾ ರೇಷ್ಮೆಯ ಸೆರಗೂ ಇರುವದು. ಈ ಮಾದರಿ ಸೀರೆಗಳು ಬೇರೆ ಯಾರಲ್ಲಿಯೂ ಈ ಕ್ರಯಕ್ಕೆ ಸಿಕ್ಕಲಾರದು ಈ ಸೀರೆಗಳು ಶ್ರೀಮಂತರೂ, ಗರೀಬರೂ, ಉಡಲಿಕ್ಕೆ ಬಹು ಲಾಯಕ್ಕಾದವು ಮಾದರಿಗಾಗಿ ಕೆಲವನ್ನು ಮಾತ್ರ ತಯಾರಿಸಿರುತ್ತೇವೆ. ಆದ್ದರಿಂದ ಬೇಗನೆ ತರಿಸಿಕೊಳ್ಳುವವರಿಗೆ ಮಾತ್ರ ಸಿಕ್ಕುವವು.

ಕ್ರಯ ಸೀರೆ 1ಕ್ಕ ನಂ 1. ರು. 6—8—0
ನಂ 2. ರು. 7—8—0

ವಿಳಾಸ.—ಮಹರಾಜ ಟ್ರೇಡಿಂಗ್ ಕಂಪೆನಿ,
16 ತಿರುಪಳ್ಳಿ ಬೀದಿ,
ಮದರಾಸು.

ಈಗಲೇ ಪ್ರಿಂಟಾಗಿದೆ! ಶೃಂಗಾರವಾದ ಪುಸ್ತಕ!!

ಸ್ತ್ರೀ ಪುರುಷರ ಪ್ರೀತಿಯ ಮರ್ಮಗಳನ್ನು ಚಿತ್ರಸರಗಳ ಸಹಿತ ತಿಳಿಸುವ

ಮನರ್ಮ ಶಾಸ್ತ್ರ.

ಫ್ರೆಂಚ್ ಬಾಷೆಯಲ್ಲಿ ಇದ್ದದನ್ನು ಸುಲಭ ಶೈಲಿಯಲ್ಲಿ ಕನ್ನಡ ಭಾಷೆಗೆ ಭಾಷಾಂತರಿಸಿರುತ್ತೇವೆ. ಸ್ತ್ರೀಪುರುಷರುಗಳಿಗೆ ಬೇಕಾದ ಎಲ್ಲಾ ಮರ್ಮ ರಹಸ್ಯಗಳು, ರತಿ ಮನ್ಮಥನು ತೃಪ್ತಿಸುವದಕ್ಕೆ ಬೇಕಾದ ಉಪಾಯಗಳು, ಸ್ತ್ರೀ ಪುರುಷರ ಜಾತಿಯ ಲಕ್ಷಣಗಳು, ಗರ್ಭಧರಿಸುವದು, ಶಿಶು ಉತ್ಪತ್ತಿ, ಗುಪ್ತ ವೈದ್ಯ, ಶಯನ ಗೃಹದ ಸನ್ನುಗಳು, ಇನ್ನೂ ಸ್ತ್ರೀಪುರುಷರಿಗೆ ಬೇಕಾದ ಲೀಲ ರಹಸ್ಯಗಳು ತುಂಬಿದೆ. ಈ ಶೃಂಗಾರವಾದ ಪುಸ್ತಕವನ್ನು ತರಿಸಿ ಆನಂದ ಹೊಂದುತ್ತಾರೆಂದು ನಂಬಿರುತ್ತೇವೆ. ಪಟಗಳ ಸಹಿತ ಕ್ರಯ ಪುಸ್ತಕ 1ಕ್ಕೆ ರೂ. 1—0—0

ವಿಳಾಸ.—ಟಿ ರಾಮಚಂದ್ರರಾವ್ ಕಂಪೆನಿ,
52—32 ಪೋಸ್ಟು ಬಾಕ್ಸ್ ನಂ. 232, ಮದರಾಸ್.

ರೋಲ್ಡ್ ಗೋಲ್ಡ್ ಕೈ ಬಳೆಗಳು.

ಇದು ಶುದ್ಧವಾದ ಅಮೇರಿಕನ್ ರೋಲ್ಡ್ ಗೋಲ್ಡ್ ಚಿನ್ನದಿಂದ ಬಹು ನಾಜೂಕಾಗಿಯೂ, ಚಮತ್ಕಾರವಾಗಿಯೂ ಎಂದಿಗೂ ಬಣ್ಣ ಕೆಡದಂತೆ ತಯಾರ್ಮಾಡಲ್ಪಟ್ಟಿರುವದು. ಪ್ರಕಾರವು ದಳಥಳಿಸುತ್ತಿರುವದು ನವ ನ್ಯಾರು ಹೂವುಗಳು ಅಗಲಾಗಿ ಅರಳಿದರೆ ಹೇಗೋ ಹಾಗೆ ಈ ಹೂವುಗಳು ನಿರ್ಮಿಸಲ್ಪಟ್ಟಿರುವವು. ಇವರ ಪ್ರಕಾಶ ಕತ್ತಲೆಯಲ್ಲಿ ನೋಡುವವರ ಕಣ್ಣುಗಳನ್ನು ಮುಚ್ಚುವಂತಿರುವುದು. ಅರ್ಧಬೊಡನೆ ಕ್ಕೆಯ ಆಸೆಯನ್ನು ತಪ್ಪದೆ ನಮೂದಿಸಬೇಕು. ಹೆಂಗಸರು ಇದನ್ನು ಕೈಯಲ್ಲಿ ಹಾಕಿಕೊಂಡರೆ ಬೇರೆ ಯಾವ ಆಭರಣಗಳೂ ಬೇಕಾಗುವದಿಲ್ಲ. ಲಿಂಗಾಯತ, ಬ್ರಾಹ್ಮಣ ಹೆಂಗಸರಿಗೆ ಬಹು ಮುದ್ದಾದ ಆಭರಣ.

ಜೊತೆ 1ಕ್ಕೆ ರೂ. 2—0—0.

ದೇವತಾ

ವಿಗ್ರಹಗಳ ಪ್ರತಿಮೆಗಳು.

ಈ ವಿಗ್ರಹಗಳು ಸೀಮೆಯಲ್ಲಿ ತಪ್ಪಲಿನಿಂದ ತಯಾರಿಸಲ್ಪಟ್ಟದ್ದು. ಕಾರಣ, ಲೆಟರು, ಅಗ್ರ ಪತ್ರಿಕೆ ಮುಂತಾದವುಗಳಿಗೆ ಬಚ್ಚಿರ ಸಹಾಯವಿಲ್ಲದೆ ನಾವೇ ಅಚ್ಚು ಮಾಡಿಕೊಳ್ಳಬಹುದು. ಇದರಲ್ಲಿ ಕೃಷ್ಣ, ಗಣೇಶ, ರಾಮ, ಹನುಮಂತ ಮುಂತಾದ ಪ್ರತಿಮೆಗಳ ಮುಚ್ಚಿಗಳು ಇರುವವು ಇದರ ಸಂಗಡ ಇಂಕ್‌ಪ್ಯಾಡ್, ಪೆಟ್ಟಿಗೆ ಸಹ ಸೇರಿ ಸೆಟ್ 1ಕ್ಕೆ 0—12—0.

ವಿಳಾಸ:—ಎಸ್. ಆರ್. ಕೃಷ್ಣ ಅಂಡ್ ಕೋ.,
12-1 ನಂ ೧, ತಂಬುಚಾಯಿಚೆಟ್ಟಿ ಬೀದಿ, ಮದ್ರಾಸ್

ಒಂದು ಪ್ರಬಲವಾದ ಪ್ರಶ್ನೆ.

ನಮ್ಮ ಜೀವವನ್ನು ಏತಕ್ಕಾಗಿ ವಿಮೆಮಾಡಬೇಕು!

ವೃದ್ಧಾಪ್ಯದಲ್ಲಿ, ನಮ್ಮ ಮತ್ತು ಹೆಂಡತಿ ಮಕ್ಕಳ ಪೋಷಣೆಗಾಗಿ!

ಈಗಾಗಲೇ ಸಾವಿರಾರು ಜನರು ವಿಮೆಮಾಡಿರುವ ಏಳುಕೋಟಿ ರೂಪಾಯಿಗಿಂತ ಹೆಚ್ಚು ಬಂಡವಾಳವಿರುವ ದೇಶೀಯ ವಿಮೆ-ಕಂಪೆನಿಯಲ್ಲಿ ಅತ್ಯಂತ ದೊಡ್ಡದಾದ ಸಾವಿರ ರೂಪಾಯಿ ವಿಮೆಮಾಡಿದವರಿಗೆ ವರ್ಷಕ್ಕೆ 18ರೂ. ಕಡಿಮೆಯಿಲ್ಲದೆ ಲಾಭ ಕೊಡುವ 'ಓರಿಯಂಟಲ್' ಗವರ್ನಮೆಂಟ ಜೀವವಿಮೆ ಕಂಪೆನಿಯ ರೂಲ್ಸಿಗೂ, ಶರತಿಗೂ ಈ ಕೆಳಗಿನವರಿಗೆ ಬರೆದು ತಿಳಿದುಕೊಳ್ಳಿ.

ಖಾದಿಬಟ್ಟೆ ಎಂದರೇನು?

ದೇಶೀಯ ಹತ್ತಿಯಲ್ಲಿ ಕೈರಾಟೆಯಿಂದ ನೂಲು ತೆಗೆದು ಇಲ್ಲಿಯೇ ತಯಾರಿಸುವ ಬಟ್ಟೆಯೇ 'ಖಾದಿ.' ಈಗಾಗಲೇ ನಮ್ಮ ಸ್ಟೋರಿನಲ್ಲಿ ಸರದೇಶೀಬಟ್ಟೆಗಿಂತ ಗಟ್ಟಿಯಲ್ಲಿಯೂ ಅಂದದಲ್ಲಿಯೂ ಕಡಿಮೆ ಇಲ್ಲದಂತ, ಎಲ್ಲಾ ತರದ ಶೀರೆಗಳು ಚೆಕ್ಗಳು, ಶಾಲು ವಗೈರೆ ಎಲ್ಲಾ ತರದ ಬಟ್ಟೆಯು ತಯಾರಾಗಿದೆ ದಯವಿಟ್ಟು ಪ್ರೋತ್ಸಾಹಿಸಿರಿ! ಖಾದಿಯಿಂದಲೇ ಸ್ವರಾಜ್ಯ. ಖಾದಿಯಿಂದಲೇ ಮೋಕ್ಷವೆಂಬುದನ್ನು ಮರೆಯ ಬೇಡಿರಿ.

ವೀರಾಜಪೇಟೆ, ಕೆ. ಪಿ. ಚಣ್ಣಪ್ಪ,
ದಕ್ಷಿಣ ಕೊಡಗು. ಪ್ರೊಪ್ರೈಟರ್,
ಖಾದಿಭಂಡಾರ

52—10.

ನೈಟ್ರೇಟ್ ಆಫ್ ಸೋಡಾ

ಎಲ್ಲಾ ಬೆಳೆಗಳಿಗೂ ಅತ್ಯುತ್ತಮವಾದ ಗೊಬ್ಬರ

Nitrate of Soda 15-16 per cent. N

ಈ ಗೊಬ್ಬರದಲ್ಲಿ ಬೆಳೆಗಳಿಗೆ ಅತ್ಯಗತ್ಯವಾದ
ನೈಟ್ರೋಜನ ಸಸ್ಯಾಹಾರವು

15-16% ಅಂದರೆ ವಿಸಾನು ವ ಒಳ್ಳೆಯ ಹಿಂಡಿ ಗೊಬ್ಬರದಲ್ಲಿರುವುದಕ್ಕಿಂತಲೂ ನ ಊರು ಪಾಲಷ್ಟು ಜಾಸ್ತಿ ಯಾಗಿರುವದು. ಇದರಲ್ಲಿ ಸಿಕ್ಕುವಷ್ಟು ಸಾರಜನಕ (Nitrogen) ವು ಬೇರೆ ಯಾವ ಗೊಬ್ಬರಗಳಿಂದಲೂ ಗಿಡಗಳಿಗೆ ದೊರೆಯಲಾರದು ಆದ್ದರಿಂದಲೇ ಭೂಲೋಕದ ಎಲ್ಲಾ ಭಾಗಗಳಲ್ಲಿಯೂ ರೈತರು ಇದನ್ನು ವಿಶೇಷವಾಗಿ ಉಪಯೋಗಿಸುತ್ತಾರೆ.

ಭತ್ತ, ಕಬ್ಬು, ತೆಂಗು, ಅಡಿಕೆ, ಮಾವು, ಹೊಗೆಸೊಪ್ಪು, ತರಕಾರಿ ಮೊದಲಾದವುಗಳಿಗೂ ಕಾಫಿ, ಚಾ, ರಬ್ಬರು, ಏಲಕ್ಕಿ ಮೊದಲಾದ ತೋಟ ಪೈರುಗಳಿಗೂ ಎಲುಬಿನ ಪುಡಿ ಅಥವಾ ವಿಸಾನು ಗೊಬ್ಬರ ವಗೈರೆ ಊರ ಗೊಬ್ಬರಗಳ ಜೊತೆಯಲ್ಲಿ ಈ ಗೊಬ್ಬರವನ್ನು ಉಪಯೋಗಿಸುವದರಿಂದ ಬೆಳೆಯು ಸಮೃದ್ಧಿಯಾಗುವದು. ನೈಟ್ರೇಟ್ ಆಫ್ ಸೋಡಾದಲ್ಲಿರತಕ್ಕ ಸೋಡವು ಮಣ್ಣಿನಲ್ಲಿರುವ ಪೊಟಾಷ್ ಎಂಬ ಇನ್ನೊಂದು ತರದ ಸಸ್ಯಾಹಾರವನ್ನು ಗಿಡಗಳಿಗೆ ಒದಗಿಸಿ ಕೊಡುತ್ತದೆ

ಈ ಗೊಬ್ಬರವು ನೋಟಕ್ಕೆ ಬರೇ ಉಪ್ಪಿನ ಹಾಗಿದ್ದು ಅಪಾಯಕರವಲ್ಲ. ಎಕರೆ ಒಂದಕ್ಕೆ 100-200 ರಾತ್ತಲು ಸಾಕಾಗುವದು. ಹೆಚ್ಚಿನ ಮಾಹಿತಿ ಮತ್ತು "ಕೃಷಿಸುಧಾರ" ಎಂಬ ಪುಸ್ತಕವನ್ನು ಈ ಕಳಗಿನ ವಿಳಾಸದಾರರಿಂದ ಧರ್ಮಾರ್ಥವಾಗಿ ಪಡೆಯಬಹುದು.

52—9 CHILEAN NITRATE COMMITTEE,
Post Box 469, CALCUTTA.

೧೦೦೦ ರೂಪಾಯಿಗಳ ಬಹುಮಾನ.

ಲೋಕಪ್ರಸಿದ್ಧವಾದ ಸಾಲಂಮಿಸ್ರಿ ಮುರಬ್ಬಾ.

ನಮ್ಮ ಟ್ರೇಡ್ ಮಾರ್ಕನ್ನು ನೋಡಿ ಈ ಔಷಧ ತೆಗೆದುಕೊಳ್ಳಿ

ಇದರ ಸೇವನೆಯಿಂದ ವೀರ್ಯವು ಸೀಸದಂತೆ ಇದ್ದರೂ, ಸ್ವಪ್ನಲಿಂದ್ರಿಯ.ವಾದರೂ, ಸ್ತ್ರೀ ಸಂಭೋಗಕ್ಕೆ ಮೊದಲೇ ಸ್ಖಲನವಾದರೂ, ಮೂತ್ರದೊಂದಿಗೆ ಹೋಗುತ್ತಿದ್ದರೂ ದೋಷಮುಕ್ತವಾಗಿ ಶರೀರಕ್ಕೆ ಆರೋಗ್ಯವನ್ನೂ ಧಾರ್ಡ್ಯತೆಯನ್ನೂ ಆಯುಸ್ಸು, ಬಲ, ತೇಜಸ್ಸು ಉಂಟು ಮಾಡುವದು. ಅಜೀರ್ಣ ಮಲಬದ್ಧತ, ಮದುಳಿನ ಬಲಹೀನತೆ, ಕೈಕಾಲು, ಸೊಂಟ ನೋವುಗಳಿಗೆ ಇದು ದಿವ್ಯ ಔಷಧವು. ಈ ಸಾಲಂಮಿಸ್ರಿ ಎಂಬುವದು ಕಾಬೂಲ್ ಕಂದಾಹಾರ ಪ್ರಾಂತ್ಯದಲ್ಲಿ ಬೆಳೆಯುತ್ತದೆ.

ಈ ಔಷಧದಿಂದ ಗುಣಹೊಂದಿರುವ ಅನೇಕ ಮಹನೀಯರು ತಾವಾಗಿಯೇ ಅನೇಕ ದೇಶಗಳಿಂದಲೂ ಆಫ್ರಿಕಾ, ಬರ್ಮ, ಪಿನಾಂಗ್, ಸಿಂಗಪೂರ್, ಸಿಲೋನ್, ಬೊಂಬಾಯಿ, ಕಲ್ಕತ್ತ, ಮದ್ರಾಸು ಮತ್ತು ಇಂಡಿಯಾದೇಶದಲ್ಲಿ ಎಲ್ಲಾ ಸ್ಥಳಗಳಿಂದಲೂ ನಮಗೆ ಯೋಗ್ಯತಾ ಪತ್ರಿಕೆಗಳನ್ನು ಕಳುಹಿಸಿರುತ್ತಾರೆ. ಇವುಗಳ ನಕಲನ್ನು ಯಾರಾದರೂ ತರಿಸಿ ನೋಡಬಹುದು. ಇವುಗಳು ಸುಳ್ಳು ಎಂದು ನಿರ್ಧರಿಸಿಡಿದವರಿಗೆ ಮೇಲೆ ಕಂಡ ಬಹುಮಾನವು ಕೊಡಲ್ಪಡುತ್ತೆ. ನಾವು ಹಾಗೆ ಕೊಡದೆ ನಿರಾಕರಿಸಿದಲ್ಲಿ ಕೋರ್ಟು ಮೂಲಕ ಅದನ್ನು ಪಡೆಯಬಹುದು. ೧ ಡಬ್ಬಿಯನ್ನು ೧೫ ದಿನ ಸೇವಿಸಿದಲ್ಲಿ ಗುಣವು ಖಂಡಿತವಾಗಿ ತೋರಬಹುದು. ೩ಯಾ ೪ ಡಬ್ಬಿಗಳು ಜನ್ಮಾಂತ್ಯದವರೆಗೂ ಪೂರ್ಣವಾಗಿ ಗುಣವನ್ನುಂಟು ಮಾಡುವವು. ಸೆಸರು ವಿಳಾಸಗಳನ್ನು ವಿವರವಾಗಿ ಬರೆಯಬೇಕು. ಒಂದಾವರ್ತಿ ಇದ ಮಾಯಿಸಿ ಮಾಡಿ ನೋಡಿದಲ್ಲಿ ಖಾತ್ರಿ ಉಂಟಾಗುತ್ತೆ.

ಕ್ರಯ ಡಬ್ಬಿ ೧ಕ್ಕೆ ರೂ. ೨—೦—೦ ಥಾಂಗಿ ಚಾರ್ಜು ೧೦೦೦ಕ ೩ ಡಬ್ಬಿಗಳಿಗೆ ೦—೯—೦ ಆಣೆ ಏಜಂಟರುಗಳು ಎಲ್ಲಾ ಸ್ಥಳಗಳಲ್ಲಿಯೂ ಅವಶ್ಯಕವಾಗಿರುತ್ತೆ. ರೂಲ್ಸು ತರಿಸಿಕೊಳ್ಳಬಹುದು. ಆರ್ಡರು ಕೊಡತಕ್ಕ ಕಾಲದಲ್ಲಿ ಈ ಪತ್ರಿಕೆಯ ಹೆಸರನ್ನು ಬರೆಯಬೇಕು.

ಟೆಲಿಗ್ರಾಫ್ ಅಡ್ರೆಸ್, ಮಿಸ್ರಿ, ಬೆಂಗಳೂರು ಸಿಟಿ. | ಡಿ. ಮನ್ನಾಲಾಲ್, ದಿಲ್ಲಿ ನೇಟಿವ್ ವೈದ್ಯರು, ಸಾಲಂಮಿಸ್ರಿ ಮುರಬ್ಬ ಡಿಪೋ, ಬೆಂಗಳೂರು ಸಿಟಿ.

12—3

Printed & published by P. I. Belliappa, at "Kodagu" Press, Mercara fo Kodagu" Ltd

If not delivered please return to
KODAGU" OFFICE MERCARA

ಕೊಡಗು.

ಶಿಕ್ಷೇತ ಧೂಮವಯಸು ವಿದ್ಯಾ ಸೀತಿ ಪ್ರಯತ್ನತಾ || ಐಕ್ಯಮತ್ಯೇನ ದೇಶಾನಾಂ ಸುಸ್ಥಿರಾ ರಾಜ್ಯ ಸಂಪದಾ ||

ಸಂಪಾದಕ—ಪಂದ್ಯಂಡ ಐ. ಬೆಳ್ಯಪ್ಪ.

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವದು.

[ಸಂಪುಟ ೬] ಕೊಡಗು, ೫೯ ೧೯೨೬ನೇ ಇಸವಿ ಆಗಸ್ಟು ತಾರೀಖು ೬ನೇ ಶುಕ್ರವಾರ [ಸಂಚಿಕೆ ೧೦

ಸ್ಥಾಪಿತವಾದದ್ದು 1874 ಮೂಲಧನ 7 ಕೋಟಿ ರೂಪಾಯಿಗಳ

ಓರಿಯಂಟಲ್ ಗವರ್‍ನ್ಮೆಂಟ್ ಸೆಕ್ಯೂರಿಟಿ ಲೈಫ್ ಅಶ್ಯೂರೆನ್ಸ್ ಕಂಪೆನಿ ಲಿಮಿಟೆಡ್, ಹೆಡ್ ಆಫೀಸು= ಬೊಂಬಾಯಿ.

1922—1924 ಈ ಮೂರು ವರ್ಷಗಳಲ್ಲಿ ಕಂಪೆನಿಯಲ್ಲಿ ನಡೆದ ಕೆಲಸದ ಪರಿಣಾಮಗಳು —

ಲಾಭ— ರೂ. 51,00,000 (ಐವತ್ತೊಂದು ಲಕ್ಷ ರೂಪಾಯಿಗಳು) ಈ ಪೈಕಿ 45,91,80 ರೂಪಾಯಿಗಳನ್ನು ಲಾಭ ಸಹಿತ ವಿಮೆ ಮಾಡಿರುವವರ ವಿಮೆ ಹಣಕ್ಕೆ ಹೆಚ್ಚು ಬೋನಸ್ ಒಪ್ಪಾಗಿ ಈ ಕೆಳಗೆ ಕಾಣಿಸಿರುವ ರೀತಿಯಲ್ಲಿ ಸೇರಿಸಿರುತ್ತದೆ

ಜೀವಮಾನಾವಧಿಯ ವಿಮೆದಾರರಿಗೆ ರೂ 1000 ವಿಮೆ ಹಣಕ್ಕೆ

ಈ ಮೂರು ವರ್ಷಗಳಿಗೆ ರೂ 67½.

ಕ್ಲಿಪ್ತಕಾಲದ ವಿಮೆದಾರರಿಗೆ ರೂ 1000 ವಿಮೆ ಹಣಕ್ಕೆ

ಈ ಮೂರು ವರ್ಷಗಳಿಗೆ ರೂ. 54

ಈ ಕಂಪೆನಿಯಲ್ಲಿ ಕ್ರಮೇಣ ಹೆಚ್ಚುತ್ತಿರುವ ಜನಾನುರಾಗವು ಈ ಕೆಳಗೆ ಕೊಟ್ಟಿರುವ ಹೊಸ ಕೆಲಸದ ಪಟ್ಟಿಯಿಂದ ವ್ಯಕ್ತವಾಗುತ್ತದೆ.

1923ರಲ್ಲಿ—ರೂ 1 74 00,000
1924 „ 2,37,00,000
1925 2 96,00,000

ಇನ್ನೂ ದಿನದಿನಕ್ಕೂ ಅಭಿವೃದ್ಧಿಯಾಗುತ್ತಲೇ ಇದೆ ಜೀವವಿಮೆ ಪತ್ರದಲ್ಲಿ ಹಣವನ್ನು ಲಾಭಕರವಾಗಿ ಶೇಖರಿಸಲು ಇದೇ ಸುಸಮಯ

ಬೇಕಾದ ವಿಷಯಗಳನ್ನು ಈ ಕೆಳಗಿನ ವಿಳಾಸಕ್ಕೆ ಬರೆದು ತಿಳಿದುಕೊಳ್ಳಬಹುದ.

ಓರಿಯಂಟಲ್ ಬಿಲ್ಡಿಂಗ್ಸ್,
ಪೋಸ್ಟ್ ಬಾಕ್ಸ್ 56
ಬೆಂಗಳೂರು

ಎಚ್. ಆರ್. ಕೃಷ್ಣಸ್ವಾಮ್ಯಯ್ಯರ್
ಬ್ರಾಂಚ್ ಸೆಕ್ರೆಟರಿ

52—18

ಮನೋಲ್ಲಾಸಿನಿ ತೈಲ.

ತಲೆನೋವು ತಲೆ ತಿರುಗುವುದು, ತಲೆಯಲ್ಲಿ ಉಷ್ಣ, ಕಿವಿಯಿಂದ ಕೀವು ಸೋರುವುದು ಕಿವುಡುತನ, ಕಣ್ಣು ನೋವು, ಅಪಸ್ಮಾರ ನಿದ್ದೆ ಬಾರದಿರುವುದು, ನೆನಪು ಶಕ್ತಿ ಕುಂದಿಹೋಗುವುದು ಇವುಗಳನ್ನೆಲ್ಲ ಖಂಡಿತ ಗುಣಪಡಿಸುತ್ತದೆ ಉದುರುವ ಕೂದಲನ್ನು ನಿಲ್ಲಿಸಿ ಗಿಡ್ಡಾಗಿರುವ

ಕೂದಲನ್ನು ಬೆಳೆಯಿಸಿ ಕೂದಲಿಗೆ ಸೌಂದರ್ಯವನ್ನೂ ಹೊಳಪನ್ನೂ ಕೊಟ್ಟು ಅಕಾಲಕ್ಕೆ ಹಣ್ಣಾಗುವ ಕೂದಲನ್ನು ತಡೆದು ಕೂದಲು ಇಲ್ಲದ ಸ್ಥಳದಲ್ಲಿ ಹೊಸ ಕೂದಲನ್ನು ಹುಟ್ಟಿಸುತ್ತದೆ ಬೆಲೆ ಸೀಸೆಗೆ ರೂ 1, 3 ಸೀಸೆಗೆ 2—10—0, ಒಂದು ದೊಡ್ಡ ಸೀಸೆಗೆ ರೂ 2, 3 ಸೀಸೆಗಳಿಗೆ 5—8—0

ಚಂದನಾಸವ.— ಇದು ಪ್ರಮೇಹ ಮೂತ್ರಕೃಚ್ಛ್ರ, ಮೂತ್ರ ಹನಿಹನಿಯಾಗಿ ಹೋಗುವುದು, ಮೂತ್ರಕೋಶದ ಉರಿ, ಮೂತ್ರಪಿಂಡದ ಉರಿ ಮೂತ್ರನಾಳದಲ್ಲಿ ಹುಣ್ಣು, ಮೂತ್ರ ಹೊಯ್ಯುವಾಗ ಉರಿಯುವುದು, ಮೂತ್ರನಾಳದಿಂದ ಕೀವು ಬರುವುದು, ಮೂತ್ರದಲ್ಲಿ ಧಾತು ಹೋಗುವುದು, ಆಗಾಗ್ಗೆ ಮೂತ್ರ ಬರುವದು, ಮೂತ್ರ ತಡೆಯಲಿಕ್ಕೆ ಸಾಮರ್ಥ್ಯವಿಲ್ಲದಿರುವುದು, ದೇಹದಲ್ಲಿ ಉರಿ ಬಾಯಾರಿಕೆ, ಸ್ವಪ್ನಾವಸ್ಥೆ, ಮೂತ್ರನಾಳದಲ್ಲಿ ಚುಚ್ಚುವ ನೋವು ಇವುಗಳಿಗ ಪರಮ ಔಷಧಿ ಗಂಡಸರಿಗೂ ಹೆಂಗಸರಿಗೂ ಇದು ಅತ್ಯುತ್ತಮ ಬೆಲೆ—ಬಾಟ್ಲಿ 1, 3, 6ಕ್ಕೆ ರೂ 1—4—0 3—8—0, 6—12—0

ರೋಮನಾಶಿನಿ— ಈ ಹುಡಿಯನ್ನು ನೀರಲ್ಲಿ ಕಲಸಿ ಮೈಯಲ್ಲಿ ರೋಮವಿರುವ ಭಾಗಕ್ಕೆ ಹಚ್ಚಲು ರೋಮವು ಉದುರಿ ಬೀಳುವುದು ಡಬ್ಬಿ ೧ಕ್ಕೆ 6 ಆಣೆ, 3 ಡಬ್ಬಿಗಳಿಗೆ ರೂ 1 1 ಡಜನಿಗೆ 3 8 0

ಕಟಿಯೊಳಷಾಯ ಮಲೇರ್ಜ್ವರಕ್ಕೆ. —ಇದು ಇಂಜಕ್ಷನ್ ಮತ್ತು ಕ್ವಿನೈನು ಸೇವಿಸಿದರೂ ಗುಣವಾಗದಿರುವ ಮಲೇರಿಯಾ ಜ್ವರ ಬಿಟ್ಟುಬಿಟ್ಟು ಬರುವ ಜ್ವರ, 3—4 ದಿನಕ್ಕೊಂದಾವರ್ತಿ ಬರುವ ಜ್ವರ ನಡುಗಿ ಬರುವ ಜ್ವರ ಮುಂತಾದ ಜ್ವರಗಳಿಗೆ ಬಹಳ ದೋಷದಿಂದ ಬರುವ ಜ್ವರಗಳಿಗೆ ಖಾತ್ರಿ ಗುಣವಾಗುತ್ತದೆ ಬೆಲೆ 1ಕ್ಕೆ ರೂ 1—3—0 3ಕ್ಕೆ ರೂ 1—6—0 6ಕ್ಕೆ ರೂ 7—0—0

ನಮ್ಮ ಕೆಟಲಾಗು ತರಿಸಿ ನೋಡಿರಿ
52—33

ವಿಳಾಸ—ಮನೋಲ್ಲಾಸಿನಿ ಕಂಪೆನಿ,
9 ಮಂಗಳೂರು, ಕಂಕನಾಡಿ.

ಎಂಪೈರ್ ಆಫ್ ಇಂಡಿಯಾ ಲೈಫ್ ಅಷೂರೆನ್ಸ್ ಕಂಪೆನಿ, ಲಿಮಿಟೆಡ್.

(1897ನೇ ಇಸವಿಯಲ್ಲಿ ಸ್ಥಾಪಿಸಲ್ಪಟ್ಟದ್ದು)

ಸಮಸ್ತವೂ ಲಾಭ ಸಹಿತವಾದ ಪಾಲಿಸಿಗಳೇ

1927 ನೇ ಫೆಬ್ರವರಿ ತಾ 28 ಕ್ಕೆ ಮುಂಚೆ ಸೇರತಕ್ಕವರಿಗೆಲ್ಲ ಆ ತಾರೀಖಿಗೆ ಅಖೈರಾಗುವ ಪಂಚವಾರ್ಷಿಕ ಬೋನಸ್ ಲಾಭವು ಕೊಡಲಾಗುವುದು

ಪ್ರಾಸ್ಪೆಕ್ಟಸನ್ನು ಕೇಳಿದವರಿಗೆ ಕೊಡುವೆವು

ಬೆಂಗಳೂರು ಬ್ರಾಂಚ್:—
152, ಕಮ್ಮರ್ಷಲ್ ಸ್ಟ್ರೀಟ್.

ಮದರಾಸ್ ಬ್ರಾಂಚ್:—
9.10, ಸೆಕೆಂಡ್ ಲೈನ್ ಬೀಚ್

24—4.

ಸತ್ಯಮೇವಜಯತೇ.

(ಗುಣವಾಗದಿದ್ದರೆ ಹಣ ವಾಪಸ)

ಧಾತುಪೌಷ್ಟಿಕ ಕಾಮೋತ್ತೇಜಕ, ಇಂದ್ರಿಯಸ್ತಂಭಕವಾದ

ಮದನೋದ್ಭವ ಗುಳಿಗೆ.

ಜನನೇಂದ್ರಿಯದ ಶಿಥಿಲತೆ ನಿರ್ಬಲತೆ ನಪುಂಸಕತ್ವ ಶೀಘ್ರ ಸ್ಖಲಿತ ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತು ಪೌಷ್ಟಿಕ, ವೀರ್ಯವರ್ಧಕ, ರಕ್ತ ಶೋಧಕ ಕಾಮೋತ್ತೇಜಕ, ಮನೋತ್ಸಾಹಕ ಇಂದ್ರಿಯ ಸ್ತಂಭಕ, ಗರ್ಮಿ, (ಶಾಕ್) ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲ ತರಹದ ಬಕ್ಕೆಗಳು, ಹುಣ್ಣುಗಳು ಪಿತ್ತದ ಬಾಧೆಗಳು ಕಟಿಶೂಲೆ ವಾತರೋಗವು ಮುಂತಾದವು ಆಶ್ಚರ್ಯಗುಣವಾಗಿ ಶರೀರಕ್ಕೆ ನಿರೋಗತ್ವವೂ ಕಾಂತಿಯೂ ರತಿಸುಖಕ್ಕೆ ಸಂಪೂರ್ಣ ಶಕ್ತಿಯೂ ಉಂಟಾಗುತ್ತದೆ ಒಬ್ಬರಿಗೆ ೩೦ ಗುಳಿಗೆಗಳು ಬೇಕಾಗುತ್ತವೆ ಕಿಮ್ಮತ್ತು ೩೦ ಗುಳಿಗೆಗಳಿಗೆ ೪ ರೂಪಾಯಿ ಇದನ್ನು ಸೇವಿಸುವಾಗ್ಗೆ **ಸನ್ಮಂಸಕಶ್ಯಾರಿ** ತೈಲವನ್ನು ಉಪಯೋಗಿಸುವದೆ ಉತ್ತಮ ಕಿಮ್ಮತ್ತು ಬಾಟ್ಲಿ ೧ಕ್ಕೆ ರೂ ೨—೧೨—೦

ಪ್ರಮೇಹನಿವಾರಣೆ—ಇದರ ಸೇವನೆಯಿಂದ ಮೂತ್ರಸ್ಥಾನದಿಂದ ಕೆಂಪು ಹಳದಿಯಂತೆ ಹೋಗತಕ್ಕ ಕೀವು, ಉರಿ ವಗೈರೆ ಆರಂಭಾವಸ್ಥೆಯಿಂದ ಗುಣವಾಗುವದು ಕಿಮ್ಮತ್ತು ಬಾಟ್ಲಿ ೧ಕ್ಕೆ ರೂ ೩—೮—೦ ಟಪಾಲ ಖರ್ಚು ಬೇರೆ ಅನುಭವ ಸಹಿತ ಔಷಧದ ಸಂಗತಿ

ಪಂಚಾಂಗ ಸ್ಟಾಂಪು ಕಳುಹಿಸಿದರೆ ಕ್ಯಾಟಲಾಗವು

ವಿಳಾಸ—

ವೈದ್ಯ ಜಿ ಎಲ್ ಜೋಶಿ ಮತು ಕಂಪೆನಿ.
29 ನಂ 6 ಪೋಸ್ಟ ಬನವಾಸಿ, ಉತ್ತರ ಕಾನಡಾ

ಕರ್ಣಾಟಕ ಎಗ್ಯೂ ಮಿಕಶ್ಚರ್

ಚಳಿಜ್ವರ, ಮಲೇರಿಯ ಜ್ವರ, ಇನ್‌ಫ್ಲುಯೆಂಝ ಆದಿ ಜ್ವರ, ಮೊದಲಾದವುಗಳ ಮೇಲೆ ಅಪ್ರತಿಮವಾದ ಔಷಧವು.

ಬೆಲೆ ಬಾಟ್ಲಿಯೊಂದಕ್ಕೆ ರು. ೦-೧೪=೦
ಟಪಾಲು ಚಾರ್ಜ ಬೇರೆ
ಡಜನ್ ಬಾಟ್ಲಿಗಳಿಗೆ ಟಪ್ಪಾಲುವೆಚ ಸಹ ರು. ೯—೨—೦

ಏಜಂಟರು ಬೇಕು, ಕೊಡಗಿನ ಸ್ಕೂಲ್ಮಾಸ್ಟರುಗಳು ತಮ್ಮಲ್ಲಿನ ಮೂರು ಜನ ಔಷಧದ ವ್ಯಾಪಾರಿಗಳ ಹೆಸರನ್ನು ತಿಳಿಸಿದಲ್ಲಿ ಅಂದವಾದ ಬ್ಲಾಟಿಂಗ್ ಪೇಪರ ಪುಕ್ಕಟೆ

12—9

ಕರ್ಣಾಟಕ ಬ್ರದರ್ಸ್,
ಗಿರಗಾಂವ, ಮುಂಬಾಯಿ.

ARMS & AMMUNITION MART.

Mahomedally-Noorbhoy



321 Abdul Rehman Street, near Crawford Market, BOMBAY 3
Telegraphic Address—"SHOOTER" Bombay.

[52—49] Please write for Reduced nett prices list for 1926.

"ಕೊಡಗು"

ಸನ್ ೧೯೨೬ನೇ ಇಸವಿ ಅಗೊಸ್ತು ತಾ. ೬ ನೇ ಶುಕ್ರವಾರ

ಮದ್ರಾಸಿನಲ್ಲಿ ಗ್ರಾಮಪಂಚಾಯತಿ ಪದ್ಧತಿ.

ನಮ್ಮ ದೇಶದ ಕೌನ್ಸಿಲ್ ಮುಂದೆ ಬಂದಿರುವ ಗ್ರಾಮ ಪಂಚಾಯತಿ ಆಕ್ಟಿನ ಪ್ರಯೋಜನವು ಜನರಿಗೆ ಇನ್ನೂ ಚೆನ್ನಾಗಿ ಮನದಟ್ಟಾಗಿರುವದಿಲ್ಲ. ಆದ್ದರಿಂದ ಈ ಸಂದರ್ಭದಲ್ಲಿ ಮದ್ರಾಸ್ ಇಲಾಖೆಯಲ್ಲಿ ಇದೇ ಆಕ್ಟಿನ ಮೇರೆ ಕೆಲಸ ಹೇಗೆ ನಡೆಯುತ್ತಿದೆಯೆಂಬದನ್ನೂ ಜನರು ಆ ಆಕ್ಟನ್ನು ಎಷ್ಟರಮಟ್ಟಿಗೆ ಉಪಯೋಗಿಸಿಕೊಳ್ಳುತ್ತಿದ್ದಾರೆಂಬದನ್ನೂ ತಿಳಿದುಕೊಳ್ಳಲು ಒಳ್ಳೇ ಸಮಯವಾಗಿದೆ. ಮದ್ರಾಸಿನಲ್ಲಿ ಚಾಲಿಯಲ್ಲಿರುವ ಪಂಚಾಯತಿ ಆಕ್ಟಿನ ನಕಲನ್ನೇ ನಮ್ಮ ಸರಕಾರದವರು ಕೌನ್ಸಿಲ್ ಮುಂದೆ ಇಟ್ಟಿರುವದಾಗಿದೆ. ಆದ್ದರಿಂದ ಮದ್ರಾಸಿನ ಅನುಭವವು ನಮ್ಮ ದೇಶಕ್ಕೆ ತುಂಬಾ ಪ್ರಯೋಜನಕರವೆಂಬದರಲ್ಲಿ ಏನೂ ಸಂಶಯವಿಲ್ಲ. 1924--25 ನೇ ವರ್ಷದಲ್ಲಿ ಮದ್ರಾಸ್ ಆಧಿಪತ್ಯದಲ್ಲಿ ಗ್ರಾಮ ಪಂಚಾಯತಿಗಳು ಹೇಗೆ ನಡೆದಿವೆಯೆಂಬದರ ಮೇಲೆ ಪಂಚಾಯತಿ ರಿಜಿಸ್ಟ್ರಾರ್ ಜನರಲ್ ಆದ ರಾವ್ ಬಹದ್ದೂರ್ ಯನ್. ಗೋಪಾಲಸ್ವಾಮಿ ಐಯ್ಯಂಗಾರರು ತಮ್ಮ ವರದಿಯನ್ನು ಮದ್ರಾಸ್ ಸರಕಾರಕ್ಕೆ ಈಗ ತಾನೇ ಒಪ್ಪಿಸಿರುತ್ತಾರೆ.

"ದಕ್ಷಿಣ ಹಿಂದುಸ್ಥಾನದಲ್ಲಿ ಪ್ರತಿ ಗ್ರಾಮದಲ್ಲಿದ್ದ ಒಗ್ಗಟ್ಟು ಮತ್ತು ಸಂಘಟನೆಯನ್ನು ಈಗಿನ ಕಾಲಕ್ಕೆ ಸರಿಯಾಗಿ ಪುನಹ ಏರ್ಪಡಿಸಿಕೊಳ್ಳಬಹುದೆಂತ ಧೈರ್ಯತೋರುತ್ತದೆ" ಎಂಬ ವಾಕ್ಯದಿಂದಲೇ ಗ್ರಾಮಪಂಚಾಯತಿಗಳು ಗ್ರಾಮ ಜೀವನಕ್ಕೆ ಸಹಾಯಕಾರಿಗಳಾಗಿವೆಯೆಂಬದು ಅಲ್ಲಿನ ರಿಜಿಸ್ಟ್ರಾರ್ ಜನರಲರ ಅಭಿಪ್ರಾಯವೆಂದು ಗೊತ್ತಾಗುತ್ತದೆ. ಗ್ರಾಮಗಳಲ್ಲಿ ಕೆಲಸಮಾಡುವ ಕಮ್ಮಾರ, ಬಡಗಿ, ಅಗಸ, ಹಜಾಮ, ಕುಂಬಾರ, ಮಾದಿಗ ಮುಂತಾದವರಿಗೆ ಕೊಡುತ್ತಿದ್ದ ಪಡಲಿಕೆಯನ್ನು ಗ್ರಾಮ ಪಂಚಾಯತರು ವಸೂಲ್ಮಾಡಿ ಕೊಡುವ ಪದ್ಧತಿಯನ್ನು ಅನಂತಪುರ ಜಿಲ್ಲೆಯಲ್ಲಿ ಪ್ರಾರಂಭಿಸಿ ಜಯಪ್ರದವಾಗಿದೆಯಂತೆ. ಈ ಕ್ರಮವನ್ನು ಬೇರೆ ಗ್ರಾಮಗಳೂ ಅನುಸರಿಸಲು ಮುಂದೆಬರುತ್ತಿವೆಯಂತೆ. ಈ ಕೆಲಸಗಾರರಿಗೆಲ್ಲರಿಗೂ ಗ್ರಾಮಸ್ಥರು ಭತ್ತದ ಪಡಲಿಕೆ ಕೊಡುವ ಪದ್ಧತಿಯು ನಮ್ಮ ದೇಶದಲ್ಲೂ ವಾಡಿಕೆಯಲ್ಲಿತ್ತು. ಈಚೆಗೆ ಈ ಪದ್ಧತಿಯು ನಿಂತೇಹೋಗಿದೆ. ಕೆಲವು ಗ್ರಾಮಗಳಲ್ಲಿ ಒಂದೆರಡು ಕಸಬಿನವರಿಗೆ ಮಾತ್ರ ಇಂಥಾ ಪಡಲಿಕೆಯನ್ನು ಈಗಲೂ ಕೊಡುತ್ತಿರಬಹುದು. ಆದರೆ ಪೂರ್ವಕ್ರಮದಂತೆ ಒಂದು ಗ್ರಾಮದ ಜನರು ತಮ್ಮ ಜೀವನಕ್ಕೆ ಅವಶ್ಯವಿರುವ ಎಲ್ಲಾ ಸಹಾಯಗಳಿಗೂ ತಮ್ಮ ಗ್ರಾಮದಲ್ಲೇ ಏರ್ಪಾಡು ಮಾಡಿಕೊಳ್ಳುವದು ಯುಕ್ತ. ಇದರಿಂದ ಗ್ರಾಮದಲ್ಲಿ ಇರುವ ಕೃಷಿಕನೂ, ಕಮ್ಮಾರನೂ, ಬಡಗಿಯೂ, ಅಗಸನೂ, ತೋಟಿಯೂ ಸಹ ಒಂದು ಕುಟುಂಬದವರೆಂಬ ಭಾವನೆಯು ಹುಟ್ಟಲಿಕ್ಕೆ ಅನುಕೂಲವಿದೆ. ಕೃಷಿಕನು ಬೆಳೆಸಿದ ಧಾನ್ಯವು ಬರೇ ಕೃಷಿಕನ ಕುಟುಂಬಕ್ಕೆ ಮಾತ್ರ ಉಪಯೋಗಿಸಲ್ಪಡುವದಿಲ್ಲ. ಅದನ್ನು ಗ್ರಾಮದ ಕಸಬುದಾರರಿಗೆಲ್ಲ ಹಂಚಿಕೊಡುತ್ತಾನೆ. ಕಸಬುದಾರರಿಂದ ತನಗೆ ಪ್ರಯೋಜನವಿರಲೀ ಇಲ್ಲದಿರಲೀ ಕಸಬುದಾರರ ಜೀವನಕ್ಕೆ ಕೃಷಿಕನ ಆಸ್ತಿಯು ದಾಮಾಶಾಯಿ ಮೇರೆ ಪಡಲಿಕೆ ಕೊಡಬೇಕೆಂತ ಇದ್ದರೆ ಗ್ರಾಮಜೀವನದ ಒಗ್ಗಟ್ಟು ಚೆನ್ನಾಗಿ ಮನಸ್ಸಿಗೆ ಹೋಗುತ್ತದೆ. ಈಗ ಯಾವ ಸಮುದಾಯದ ಕೆಲಸಕ್ಕಾದರೂ ತನಗೆ ಪ್ರಯೋಜನವಿದ್ದರೆ ಮಾತ್ರ ಎಂತ ನೋಡಿ ಜನರು ಸಹಾಯಮಾಡುವ ಸ್ವಾರ್ಥತೆಯು ಕಾಲವಾಗಿದೆ. ಒಂದು ಉದಾಹರಣೆಯನ್ನು ಹೇಳಬಹುದು. ವಿದ್ಯಾಫಂಡಿಗೆ ಸಹಾಯಕೊಡಬೇಕಾದರೆ ತನ್ನ ಮಗನಿಗೆ ಫಂಡಿನಿಂದ ಸಹಾಯ ತೆಗೆದುಕೊಳ್ಳುವ ಸಂಭವವಿದೆಯೋ ಎಂತ ಯೋಚಿಸುತ್ತಾರೆ. ಹೀಗೆ ಯೋಚಿಸುವವರು ಬಹಳ ಕಡಿಮೆ ಸಂಖ್ಯೆಯ ಜನರು ಎಂತ ನಮಗೆ ಗೊತ್ತಿದೆ. ಆದರೆ ಸಮುದಾಯದ ಪ್ರಯೋಜನಕ್ಕಾಗಿ ಪ್ರತಿಯೊಬ್ಬ ಗ್ರಾಮವಾಸಿಯೂ ತಾನು ಕಷ್ಟಪಟ್ಟು ಬೆಳೆಸಿದ ಧಾನ್ಯವನ್ನು ಕೊಡಬೇಕೆಂಬ ತ್ಯಾಗಬುದ್ಧಿಯು ಗ್ರಾಮದಲ್ಲೇ ಬೆಳೆಯುವದು ಬಹಳ ಒಳ್ಳೇದು. ಈ ಕಸಬುದಾರರ ಸಂಬಳವನ್ನು ಗ್ರಾಮಪಂಚಾಯತರು ವಸೂಲ್ ಮಾಡಬೇಕೆಂತ ಈಗ ಕೌನ್ಸಿಲ್ ಮುಂದೆ ಬಂದಿರುವ ಆಕ್ಟಿನ ಮಸೂದೆಯಲ್ಲಿ ಇಲ್ಲ. ಆದರೆ ಗ್ರಾಮಪಂಚಾಯತಿಯ ಉಪಯೋಗವನ್ನು ಈ ರೀತಿಯಲ್ಲಿಯೂ ಮಾಡಿಕೊಳ್ಳಬಹುದೆಂಬದಕ್ಕೆ ನಾಲ್ಕು ಮಾತುಗಳನ್ನು ಹೇಳಬೇಕಾಯಿತು.

1924—25 ನೇ ವರ್ಷದ ಆರಂಭದಲ್ಲಿ 329 ಪಂಚಾಯತಿಗಳಿದ್ದವು. ವರ್ಷದ ಆಖೈರಿನಲ್ಲಿ 579 ಕ್ಕೆ ಹೆಚ್ಚಿದೆ. ಪಂಚಾಯತಿ ಚುನಾವಣೆಗಳೆಲ್ಲಾ ತುಂಬಾ ತೃಪ್ತಿಕರವಾಗಿ ನಡೆದಿದೆ. ಚುನಾವಣೆಯಲ್ಲಿ ಗ್ರಾಮವಾಸಿಗಳ ಎಲ್ಲಾ ಜಾತಿಯವರಿಗೂ ಪ್ರತಿನಿಧಿತ್ವ ದೊರತಿದೆ. ಪಂಚಮರಿಗೆ ಮಾತ್ರ ಅವರ ಸಂಖ್ಯೆಗೆ ತಕ್ಕಷ್ಟು ಮೆಂಬರುತನ ದೊರತಿಲ್ಲವಂತೆ. ಆದರೂ ಏಳು ಪಂಚಾಯತಿಗಳಲ್ಲಿ ಪಂಚಮ ಪ್ರತಿನಿಧಿಗಳಿದ್ದಾರೆ. ಇದರಿಂದ ಗ್ರಾಮಸ್ಥರು ಕ್ರಮೇಣ ಗ್ರಾಮದಲ್ಲಿ ಜಾತಿಭೇದಕ್ಕೆ ಎಡೆಕೊಡದೆ ಒಗ್ಗಟ್ಟನ್ನು ಬೆಳೆಸುವರೆಂತ ನಂಬಿಕೆಯಿದೆಯೆಂತ ರಿಜಿಸ್ಟ್ರಾರ್ ಜನರಲರು ಅಭಿಪ್ರಾಯಪಡುತ್ತಾರೆ. ಕೋಮುವಾರು ಚುನಾವಣೆ ಬೇಡವೆಂತ ನಿಷ್ಕರ್ಷಿಸಿ ಚುನಾವಣೆಯ ಮೂಲಕವೇ ಎಲ್ಲಾ ಜಾತಿಯವರ ಗೌರವಕ್ಕೂ ಕುಂದುಕ ಬಾರದಂತೆ ನಡೆದುಕೊಂಡರೆ ಅನ್ಯೋನ್ಯ ಅಪನಂಬಿಕೆಯು ಸಂಪೂರ್ಣ ಹೋಗಿಬಿಡುವದರಲ್ಲಿ ಸಂಶಯವಿಲ್ಲ. ಜಾತಿಯ ಮೇಲ್ಮೆಯ ಅಭಿಪ್ರಾಯವಿಟ್ಟುಕೊಂಡು ಕೆಲಸಮಾಡುವ ಪಂಚಾಯತಿಗಳು ಶೀಘ್ರದಲ್ಲೇ ಹಾಳಾಗುತ್ತವೆ. ನಮ್ಮ ಪೂರ್ವಿಕರು ಇದ್ದಂತೆ ಗ್ರಾಮದಲ್ಲಿ ಒಗ್ಗಟ್ಟಾಗಿ ಇರಬೇಕೆಂತ ಗ್ರಾಮದವರಿಗೆ ಬೋಧಿಸಿ ಅದನ್ನು ಕಾರ್ಯತಃ ನಡಿಸಲಿಕ್ಕೆ ಈ ಗ್ರಾಮಪಂಚಾಯತಿ ಆಕ್ಟನ್ನು ಉಪಯೋಗಿಸಿಕೊಳ್ಳಬಹುದು.

ಗ್ರಾಮ ಪಂಚಾಯತಿಗಳು ಈವರೆಗೆ ಗ್ರಾಮದ ಊರುಗಪ್ಪಿಯಲ್ಲಿ ಕಾಡು ಬೆಳೆಯದಂತೆ ನೋಡಿಕೊಳ್ಳುವದು, ಮುಟ್ಟಿದರೆ ಮುನಿಯ ಎಂಬ ಕಾಡನ್ನು ಕೀಳುವದು, ಗ್ರಾಮರಸ್ತೆಗಳನ್ನು ರಿಪೇರಿ ಮಾಡಿಕೊಳ್ಳುವದು, ಗ್ರಾಮದ ಆರೋಗ್ಯವನ್ನು ಕಾಪಾಡಿಕೊಳ್ಳುವದು, ನೀರು ಸರಬರಾಯಿ, ವಿದ್ಯಾಭ್ಯಾಸದ ಮೇಲ್ವಿಚಾರಣೆ ಮುಂತಾದ ಕೆಲಸಗಳನ್ನು ಮಾಡುತ್ತಿದ್ದಾರಂತೆ. ಈ ಕೆಲಸಗಳನ್ನೆಲ್ಲಾ ನಮ್ಮ ದೇಶದಲ್ಲೂ ಪಂಚಾಯತಿ ಮೂಲಕ ಮಾಡಿಕೊಳ್ಳಬಹುದು.

ಇಷ್ಟೆಲ್ಲಾ ಕೆಲಸಗಳನ್ನೂ ಗ್ರಾಮಪಂಚಾಯತರು ಮಾಡಿಕೊಳ್ಳುತ್ತಿದ್ದರೂ ಸರಕಾರಿ ಹಣ ಒಂದು ಕಾಸಾದರೂ ಪಂಚಾಯತರಿಗೆ ಸಿಕ್ಕಲಿಲ್ಲವೆಂತ ರಿಜಿಸ್ಟ್ರಾರ್ ಜನರಲರು ವ್ಯಸನ ಸೂಚಿಸಿರುತ್ತಾರೆ. ಈ ವರದಿಯ ಮೇಲೆ ಮದ್ರಾಸ್ ಸರಕಾರವು ಬರೆದಿರುವ ಆರ್ಡರಿನಲ್ಲೂ ಸಹ ಪಂಚಾಯತರು ಸ್ವಸಹಾಯದಲ್ಲಿ ನಂಬಿಕೆ ಇಟ್ಟಿರುವದು ತೃಪ್ತಿಕರವೆಂತ ಹೇಳುತ್ತಾರೆ. ಈ ರೀತಿ ಸರಕಾರದವರು ಗ್ರಾಮಸ್ಥರ ಸಹಾಯಕ್ಕೆ ಬಾರದೆ ಇರುವದು ಬಹಳ ಅತೃಪ್ತಿಕರ. ನಮ್ಮ ದೇಶದಲ್ಲೂ ಸಹ ಪಂಚಾಯತರಿಗೆ ಸರಕಾರದ ಸಹಾಯ ತತ್ಕಾಲ ಸಿಕ್ಕುವ ಸಂಭವವಿಲ್ಲವೆಂತ ನಮಗೆ ತೋರುತ್ತದೆ. ಡಿಸ್ಟ್ರಿಕ್ಟ್‌ಬೋರ್ಡಿನವರು ವಸೂಲ್‌ಮಾಡುವ ಯಾವದಾದರೂ ಒಂದು ಬಾಬಿನ ತೆರಿಗೆಯನ್ನು ಅಥವ ಅದರ ಒಂದು ಭಾಗವನ್ನಾದರೂ ಪಂಚಾಯತರಿಗೆ ಕೊಡಲೇ ಬೇಕೆಂತ ಆಕ್ಟಿನಲ್ಲೇ ಸೂಚಿಸುವಂತೆ ಹೋರಾಡಬೇಕು. ಡಿಸ್ಟ್ರಿಕ್ಟ್‌ಬೋರ್ಡಿನಿಂದಲೂ ಸರಕಾರದಿಂದಲೂ ಸಹಾಯ ಸಿಕ್ಕಬೇಕೆಂತ ಹೋರಾಡುತ್ತಲೇ ಇರಬೇಕು. ಆದರೆ ಸರಕಾರದವರು ನೋಡಬೇಕಾದ ಕೆಲಸಗಳಿಗೆ ಗ್ರಾಮಸ್ಥರೇ ತೆರಿಗೆ ಹಾಕಿಕೊಂಡಾದರೂ ಮಾಡಲು ತಯಾರಿಲ್ಲವೇನೆಂತ ತೋರಿಸಿದರೆ ಸರಕಾರದವರು ಸಹಾಯಕೊಡದೆ ಇರಲಾರರು. ಸರಕಾರದ ಸಹಾಯ ದೊರೆಯದ್ದರಿಂದ ಪಂಚಾಯತಿಗಳು ಬೆಳೆಯುವದಿಲ್ಲವೆಂತಲೂ ಆದರೂ ಸರಕಾರಿ ಸಹಾಯವಿಲ್ಲದೆ ಗ್ರಾಮದವರು ತಮ್ಮ ಕೆಲಸ ನಡಿಸಿಕೊಳ್ಳಲು ಶಕ್ತರಾಗಿದ್ದೇವೆಂಬದು ಅನುಭವಕ್ಕೆ ಬರುತ್ತಿರುವುದರಿಂದ ಪ್ರಯೋಜನವಾಗಿದೆಯೆಂತ ಮದ್ರಾಸ್ ರಿಜಿಸ್ಟ್ರಾರ್ ಜನರಲರು ಹೇಳುತ್ತಾರೆ.

ಗ್ರಾಮ ಪಂಚಾಯತರು ಸಮುದಾಯದ ಉತ್ಪತ್ತಿಗಳನ್ನೆಲ್ಲಾ ಉಪಯೋಗಿಸುತ್ತಿದ್ದಾರಂತೆ. ಸಮುದಾಯದ ದನ ನಿಲ್ಲುವ ಜಾಗಗಳ ಗೊಬ್ಬರ, ಪೈಸಾರಿ ಕೆರೆಗಳಲ್ಲಿ ಮೀನು ಹಿಡಿಯುವ ಹಕ್ಕು ಮುಂತಾದ್ದನ್ನು ಮಾರಿ ಹಣ ಕೂಡಿಸುತ್ತಾರಂತೆ. ಗ್ರಾಮದವರು ಈ ವರೆಗೆ ಕೊಡುತ್ತಿದ್ದ ಪಡಲಿಕೆಗಳನ್ನು ವಸೂಲ್ ಮಾಡಲಿಕ್ಕೆ ಪಂಚಾಯತರು ಹಕ್ಕು ಕೇಳುತ್ತಿದ್ದಾರಂತೆ. ಸಂಪೂರ್ತಿಯಾಗಿ ಕೊಡುವ ಪಡಲಿಕೆಗಳನ್ನಾದರೂ ಒಬ್ಬೊಬ್ಬ ಗ್ರಾಮಸ್ಥನು ತಪ್ಪಿಸಿಕೊಳ್ಳಲು ಪ್ರಯತ್ನಿಸುತ್ತಿರುವದು ಎಲ್ಲರಿಗೂ ತಿಳಿದ ಸಂಗತಿಯಾಗಿದೆ. ಪಂಚಾಯತರಿಗೆ ಇಂಥಾ ಪಡಲಿಕೆಗಳನ್ನು ವಸೂಲ್‌ಮಾಡುವ ಹಕ್ಕು ಕೊಟ್ಟರೆ ಸಮುದಾಯದ ಕೆಲಸಗಳೆಲ್ಲಾ ಚೆನ್ನಾಗಿ ನಡೆದೀತು.

ಗ್ರಾಮಸ್ಥರಿಗೆ (1) ಅವರು ಹಾಕಿಕೊಳ್ಳುವ ತೆರಿಗೆಯು ಅವರ ಗ್ರಾಮದಲ್ಲೇ ಖರ್ಚಾಗುತ್ತದೆಯೆಂತಲೂ (2) ಅವರು ಹಾಕಿಕೊಳ್ಳುವ ತೆರಿಗೆಯ ರೂಪವೂ ಮೊಬಲಗೂ ಅವರ ಕೈಯಲ್ಲೇ ಇದೆಯೆಂತಲೂ (3) ಈ ವರೆಗೆ ಸರಕಾರದವರು ಮಾಡುತ್ತಿರುವ ಕೆಲಸಗಳನ್ನು ಸರಕಾರದವರೇ ನಡಿಸುತ್ತಾರೆಂತಲೂ ನಂಬಿಕೆ ಹುಟ್ಟಿಸಿದರೆ ಗ್ರಾಮಪಂಚಾಯತಿಗಳು ಬೆಳೆಯುವದರಲ್ಲಿ ಸಂಶಯವಿಲ್ಲವೆಂತ ರಿಜಿಸ್ಟ್ರಾರ್ ಜನರಲರು ಹೇಳಿರುತ್ತಾರೆ. ಈ ಸಂಶಯಗಳಿಂದಲೇ ನಮ್ಮ ದೇಶದಲ್ಲೂ ಸಹ ಕೆಲವರು ಪಂಚಾಯತಿ ಆಕ್ಟಿಗೆ ವಿರೋಧಿಸುವದಾಗಿದೆ. ಗ್ರಾಮಸ್ಥರು ಹಾಕಿಕೊಳ್ಳುವ ಪಡಲಿಕೆಗೆ ಸರಿಯಾಗಿ ಸರಕಾರದವರೂ ಸಹ ಧನಸಹಾಯ ಕೊಡುತ್ತಾರೆಂಬ ನಂಬಿಕೆ ಹುಟ್ಟಿಸಿದರೆ ಪಂಚಾಯತಿಗಳನ್ನು ಏರ್ಪಡಿಸಿಕೊಳ್ಳಲಿಕ್ಕಿರುವ ಅಡ್ಡಿಯೆಲ್ಲವೂ ಹೋಗಿಬಿಡುತ್ತದೆಯೆಂತ ಹೇಳಿರುತ್ತಾರೆ. ನಮ್ಮ ವಾದವು ಇನ್ನೂ ಸ್ವಲ್ಪ ಮುಂದರಿಸುತ್ತದೆ. ಪಂಚಾಯತಿ ಏರ್ಪಾಡಾದ ಕೂಡಲೇ ಪಂಚಾಯತರು ಪಡಲಿಕೆ ಹಾಕಿಕೊಳ್ಳಲಿ, ಕೊಳ್ಳದಿರಲಿ, ಸರಕಾರ ಅಥವಾ ಡಿಸ್ಟ್ರಿಕ್ಟ್‌ಬೋರ್ಡಿನಿಂದ ಒಂದು ಕ್ಲುಪ್ತ ಮೊಬಲಗು ಖರ್ಚಿನ ಬಗ್ಯೆ ಸಿಕ್ಕುತ್ತದೆಯೆಂತಾದರೆ ನಮ್ಮ ದೇಶದ ಪ್ರತಿ ಗ್ರಾಮದಲ್ಲೂ ಪಂಚಾಯತಿಗಳನ್ನು ಏರ್ಪಡಿಸಿಕೊಳ್ಳಲು ಜನರು ಮುಂದೆ ಬಂದಾರೆಂತ ನಾವು ನಂಬುತ್ತೇವೆ. ಒಂದಾವರ್ತಿ ಪಂಚಾಯತಿ ಏರ್ಪಾಡಾಯಿತೆಂತಾದರೆ ಗ್ರಾಮಸ್ಥರ ಪ್ರಯೋಜನಕ್ಕಾಗಿ ಗ್ರಾಮದವರೇ ಪಡಲಿಕೆ ಹಾಕಿಕೊಳ್ಳಲು ಒಪ್ಪುವದರಲ್ಲಿ ಸಂಶಯವಿಲ್ಲ.

ಸರಕಾರದವರು ಮಾಡಬೇಕಾದ ಕೆಲಸಗಳಿಗೆ ಗ್ರಾಮಸ್ಥರು ಯಾಕೆ ಪಡಲಿಕೆ ಹಾಕಿಕೊಳ್ಳಬೇಕೆಂತ ಗ್ರಾಮಸ್ಥರು ವಾದಿಸಬಹುದು. ಸರಕಾರದವರು ಗ್ರಾಮಸ್ಥರಿಂದ ತೆಗೆದುಕೊಳ್ಳುವ ಕಂದಾಯಕ್ಕೆ ತಕ್ಕಂತೆ ಗ್ರಾಮದವರಿಗೆ ಸಹಾಯ ಕೊಡುವದಿಲ್ಲವೆಂತ ನಾವು ಒತ್ತಿ ಹೇಳುತ್ತೇವೆ. ಆದರೆ ಸರಕಾರದ ಸಹಾಯ ಸಿಕ್ಕುವವರೆಗೆ ಕೈಕಟ್ಟಿ ಕೂರುವ ಬದಲು ಗ್ರಾಮದ ಒಗ್ಗಟ್ಟು ಬೆಳೆಸಲಿಕ್ಕೂ ಗ್ರಾಮದ ಅಭಿವೃದ್ಧಿ ಮಾಡಿಕೊಳ್ಳಲಿಕ್ಕೂ ಒಂದೇ ಹೊತ್ತು ಊಟಮಾಡಲಿಕ್ಕೆ ಇರುವವನೂ ಸಹ ಗ್ರಾಮದ ಪ್ರಯೋಜನಕ್ಕಾಗಿ ಒಂದು ಹೊತ್ತಿನ ಅರ್ಧ ಊಟವನ್ನಾದರೂ ಬಿಟ್ಟು ಪೂರ್ವದ ಗ್ರಾಮ ಜೀವನವನ್ನು ಪುನರುದ್ಧಾರ ಮಾಡುವದು ಅತಿ ಅವಶ್ಯಕ. ಯಾತರದ ಸರಕಾರ ಬರಲಿ ಗ್ರಾಮದವನು ಕೊಡಬೇಕಾದ ತೆರಿಗೆ ಕೊಡಲೇ ಬೇಕು. ಗ್ರಾಮ ಜೀವನ ಕ್ರಮವು ಎಂದೂ ಬದಲಾಗುವದಿಲ್ಲ. ಆದ್ದರಿಂದ ಗ್ರಾಮ ಆಡಳಿತವನ್ನು ಗ್ರಾಮದವರೇ ಪೂರ್ವದಂತೆ ನಡಿಸಲಿಕ್ಕೆ ಕಲಿಯಲು ಎಷ್ಟು ನಷ್ಟಪಟ್ಟುಕೊಂಡರೂ ದೋಷವಿಲ್ಲವೆಂತ ನಮ್ಮ ಅಭಿಪ್ರಾಯವಾಗಿದೆ.

ಗ್ರಾಮ ಪಂಚಾಯತಿಗಳನ್ನು ಪುನರುಜ್ಜೀವನ ಮಾಡಲು ಇರುವ ಕಷ್ಟಗಳನ್ನು ಈ ರೀತಿ ವರದಿಯಲ್ಲಿ ಬರೆದಿದ್ದಾರೆ "ಗ್ರಾಮಸ್ಥರು ಪಂಚಾಯತಿಯ ಪ್ರಯೋಜನವನ್ನು ಮನಸ್ಸಿಗೆ ತೆಗೆದುಕೊಳ್ಳುವದೇ ಇಲ್ಲ. ಈ ಒಂದು ಶತಮಾನದಿಂದ ಗ್ರಾಮಸ್ಥರು ಪ್ರತಿಯೊಂದಕ್ಕೂ ಗ್ರಾಮದ ಹೊರಗೆ ನೋಡುವ ಅಭ್ಯಾಸ ಮಾಡಿದ್ದಾರೆ. ತಮ್ಮಿಂದ ಏನೂ ಸಾಧ್ಯವಿಲ್ಲವೆಂಬ ಅಭಿಪ್ರಾಯದಲ್ಲಿ ಬೆಳೆಸಲ್ಪಟ್ಟ ಜನರಿಗೆ ಸ್ವಶಕ್ತಿಯಲ್ಲಿ ನಂಬಿಕೆ ಹುಟ್ಟಿಸುವದು ಕಷ್ಟದ ಕೆಲಸವಾಗಿದೆ. ಪಂಚಾಯತಿಯು ಈಗ ಚಾಲಿಯಲ್ಲಿರುವ ಸರಕಾರಿ ಮತ್ತು ಇತರ ಹಕ್ಕುಗಳಿಗೆ ಎದುರಾಗುತ್ತದೆ. ಈಗ ಕೆಲವು ಹಕ್ಕುಗಳು ಗ್ರಾಮದಲ್ಲೂ ಗ್ರಾಮದ ಹೊರಗೂ ಇರುವ ಕೆಲವರಲ್ಲಿ ಅಡಕವಾಗಿದೆ. ಅವರಿಂದ ಅಂಥಾ ಹಕ್ಕುಗಳ ಭಾಗವನ್ನು ಕಿತ್ತು ಪಂಚಾಯತರಿಗೆ ಕೊಡಬೇಕಾಗಿದೆ. ಈ ರೀತಿ ಹಕ್ಕುಗಳನ್ನು ಕಳೆದುಕೊಳ್ಳುವಾಗ ಅಡಚಣೆ ಬರುವದು ಸ್ವಭಾವಿಕವಾಗಿದೆ. ಗೌರವಕ್ಕಾಗಿ ಕೆಲಸ ಮಾಡುವ ಜನರ ಸಹಾಯ ತೆಗೆದುಕೊಂಡರೆ ಈ ಅಡಚಣೆಗಳನ್ನು ಹೋಗಲಾಡಿಸಿಕೊಳ್ಳುವದು ಕಷ್ಟವಲ್ಲ. ಜನರಿಗೆ ಸರಿಯಾದ ಬೋಧನೆ ಕೊಡಬೇಕಾಗಿದೆಯಷ್ಟೆ." ಈ ರೀತಿ ಸರಕಾರಿ ಉದ್ಯೋಗಸ್ಥರೇ ಗ್ರಾಮದ ಜನರ ಗೌರವವನ್ನು ಪುನಃ ಸ್ಥಾಪಿಸಿಕೊಡಲು ಅಪೇಕ್ಷಿಸುವಾಗ ಗ್ರಾಮಸ್ಥರು ತಮ್ಮ ಕರ್ತವ್ಯವನ್ನು ಅರಿತುಕೊಳ್ಳುವದರಲ್ಲಿ ತಡಮಾಡಬಾರದು.

ಮಹಾತ್ಮಗಾಂಧಿಯವರ ಸ್ವಚರಿತ್ರೆ.

ಎರಡನೆಯ ಭಾಗ.

3 ನೆಯ ಪ್ರಕರಣ.

ನಾನು ಹಿಡಿದ ಮೊದಲನೆಯ ದಾವಾ.

ಬೊಂಬಾಯಿನಲ್ಲಿ ನಾನು ಇಂಡಿಯನ್ ಲಾ ಓದುತ್ತಿದ್ದೆನು. ಆಹಾರ ಸಂಸ್ಕರಣ ವಿಧಾನವನ್ನು ಕುರಿತು ನಾನೂ ನನ್ನ ಸ್ನೇಹಿತರಾದ ವೀರಚಂದು ಗಾಂಧಿಯವರೂ ಕಲಿತು ಪರೀಕ್ಷೆಯನ್ನು ಮಾಡುತ್ತಿದ್ದೆವು. ನನಗೆ ದಾವಾಗಳನ್ನು ತಂದೊದಗಿಸಲು ನನ್ನ ಅಣ್ಣನು ಶಕ್ತಿವಂಚನೆಯಿಲ್ಲದೆ ಪ್ರಯತ್ನಿಸುತ್ತಿದ್ದನು. ಇಂಡಿಯನ್ ಕೋಡನ್ನೋದುವುದು ಬಹಳ ನಿರುತ್ಸಾಹಕರವಾಗಿದ್ದಿತು. ಸಿವಿಲ್ ಪ್ರೊಸೀಜರು ಕೋಡನ್ನು ನಾನು ಪೂರ್ತಿಗೊಳಿಸದವನಾಗಿದ್ದೆನು. ಎವಿಡೆನ್ಸ್ ಆಕ್ಟು ಮಾತ್ರ ಹಾಗಿರಲಿಲ್ಲವು. ವೀರಚಂದು ಗಾಂಧಿಯವರು ಸಾಲಿಸಿಟರ ಪರೀಕ್ಷೆಗೋದುತ್ತಿದ್ದರು. ಬ್ಯಾರಿಸ್ಟರು ಮತ್ತು ವಕೀಲರುಗಳ ವಿಚಾರವಾಗಿ ಅವರು ಅನೇಕ ಕಥೆಗಳನ್ನು ಹೇಳುತ್ತಿದ್ದರು.

"ಸರ್ ಫಿರೋಜಷಾಯವರಿಗೆ ಕೋಡುಗಳೆಲ್ಲವೂ ಬಾಯಿಪಾಠವಾಗಿದ್ದವು. ಆದುದರಿಂದಲೇ ಅವರು ಅಷ್ಟು ಶ್ಲಾಘನೀಯವಾಗಿ ಕೆಲಸಮಾಡಲು ಸಮರ್ಥರಾದರು. ಅವರಿಗೆ ಎವಿಡೆನ್ಸ್ ಆಕ್ಟೆಲ್ಲವೂ ಕಂಠಪಾಠವಾಗಿದ್ದಿತು. 32ನೆಯ ಸೆಕ್ಷನ್ನಿನ ಕೇಸುಗಳೆಲ್ಲವನ್ನೂ ಅವರು ಬಲ್ಲವರಾಗಿದ್ದರು. ಬದರುದ್ದೀನ್ ತಿಯಾಬ್ಜಿಯವರು ವಾದಿಸುವುದನ್ನು ನೋಡಿ ನ್ಯಾಯಾಧಿಪತಿಗಳೆಲ್ಲರೂ ಆಶ್ಚರ್ಯಪಡುತ್ತಿದ್ದರು' ಎಂದು ವೀರಚಂದು ಗಾಂಧಿಯವರು ಹೇಳುತ್ತಿದ್ದುದರ ಮೇಲೆ ನನಗೆ ಧೈರ್ಯ ಹುಟ್ಟದುದು. "ಬ್ಯಾರಿಸ್ಟರುಗಳು ಮೊದಲು 5 ಅಥವಾ 7 ವರ್ಷಗಳವರೆಗೆ ದಾವಾಗಳೂ ಆದಾಯವೂ ಇಲ್ಲದೆ ಕಷ್ಟಪಡುತ್ತಿದ್ದರು. ಆದುದರಿಂದಲೇ ನಾನು ಸಾಲಿಸಿಟರ್ ಪರೀಕ್ಷೆಗೆ ಓದಿದೆನು. ಮೂರುವರ್ಷಗಳಿಗೆ ಮುಂಚಿತವಾಗಿಯೇ ನಿನಗೆ ಕೇಸುಗಳು ಬಂದಲ್ಲಿ ನೀನು ಅದೃಷ್ಟವಂತನಾಗುವಿ ಎಂದು ವೀರಚಂದರವರು ಹೇಳಿದರು. ತಿಂಗಳು ತಿಂಗಳಿಗೆ ಮನೆಯವೆಚ್ಚವು ಹೆಚ್ಚುತ್ತಿದ್ದಿತು. ಇನ್ನೂ ನ್ಯಾಯಶಾಸ್ತ್ರ ಗ್ರಂಥಗಳನ್ನು ಓದುತ್ತಿದ್ದೆನು. ಕೋರ್ಟಿನಲ್ಲಿ ಬ್ಯಾರಿಸ್ಟರ್ ಬಿಲ್ಲೆಯನ್ನು ಕಟ್ಟಲು ನನಗಿಷ್ಟವಾಗಿರಲಿಲ್ಲವು. ನಾನು ಎವಿಡೆನ್ಸ್ ಆಕ್ಟನ್ನೂ, ಮೇಯಿನ್ನ ಹಿಂದೂಲಾವನ್ನೂ ಬಹಳ ಶ್ರದ್ಧೆಯಿಂದ ಓದಿದೆನು. ಆದರೂ ಒಂದು ದಾವಾ ಹಿಡಿದು ವಾದಿಸಲು ತಕ್ಕ ಧೈರ್ಯವು ಮಾತ್ರ ನನಗಿನ್ನೂ ಉಂಟಾಗಿರಲಿಲ್ಲವು. ಹೊಸದಾಗಿ ಅತ್ತೆಯಮನೆಗೆ ಸೊಸೆಯು ಬಂದಾಗಿನ್ನು ಮಿತಭಾಷಿಣಿಯಾಗಿರುವಳೋ ಹಾಗೆಯೇ ನಾನು ಇದ್ದೆನು.

ಆ ಸಮಯದಲ್ಲಿ ಮಮಿಬಾಯಿ ಎಂಬುವವರ ದಾವಾ ಹಿಡಿದೆನು. ಮಧ್ಯಸ್ಥಗಾರರು ಕಮಿಷನನ್ನು ಕೊಡಬೇಕೆಂದು ಕೇಳಿದರು. ನಾನು ಕೊಡುವುದಿಲ್ಲವೆಂದೆನು. ತಿಂಗಳಿಗೆ 3—4 ಸಾವಿರ ರೂಪಾಯಿಗಳನ್ನು ಸಂಪಾದಿಸುತ್ತಿದ್ದ ನ್ಯಾಯವಾದಿಗಳು ಕೂಡ ಕಮಿಷನ್ ಕೊಡುತ್ತಿದ್ದರು. ಅವರು ಕೊಡುತ್ತಿದ್ದರಾದರೂ ನಾನು ಕೊಡುತ್ತಿರಲಿಲ್ಲ. ನನಗೆ ತಿಂಗಳಿಗೆ 300 ರೂಪಾಯಿ ಬಂದರೆ ಸಾಕು; ನನ್ನ ಅಣ್ಣನು ಕೂಡ ಅದಕ್ಕಿಂತ ಹೆಚ್ಚಾಗಿ ಸಂಪಾದಿಸಲಿಲ್ಲವೆಂದು ನಾನು ಹೇಳಿದ್ದೆನು. ನನ್ನ ಅಣ್ಣನ ಕಾಲದಲ್ಲಿ ಎಲ್ಲ ಪದಾರ್ಥಗಳೂ ಬಹಳ ಸುಲಭವಾಗಿದ್ದುವು. ಈಗ ಧಾರಣೆಯು ಬಹಳ ಹೆಚ್ಚಿದೆ. ನಾನು ಮಾತ್ರ ನನ್ನ ಪಂಥವನ್ನು ಬಿಡಲಿಲ್ಲವು. ಕಮಿಷನ್ ಕೊಡಲಿಲ್ಲ. ಮಮಿಬಾಯಿ ಕೇಸು ಬಹಳ ಸುಲಭವಾದುದು. 30 ರೂಪಾಯಿ ಫೀಜು ಗೊತ್ತುಮಾಡಲ್ಪಟ್ಟಿತು. ಒಂದು ದಿವಸದಲ್ಲೇ ಪರಿಷ್ಕಾರವಾಗಬಹುದೆಂದು ತೋರಿತು. ಸ್ಮಾಲ್ ಕಾಜ್ ಕೋರ್ಟಿನಲ್ಲಿ ಪ್ರತಿವಾದಿ ಪಕ್ಷವನ್ನು ವಹಿಸಿ ನಾನು ನ್ಯಾಯವಾದಿಯಾಗಿದ್ದೆನು. ವಾದಿಯ ಸಾಕ್ಷಿಗಳ ಪಾಟಿಸವಾಲ್ ಮಾಡಲು ಎದ್ದು ನಿಂತಕೂಡಲೆ ನನ್ನ ಆನಾದ ಮಸ್ತಕದಿಂದ ಶರೀರವು ನಡುಗಲಾರಂಭಿಸಿತು. ಒಂದು ಪ್ರಶ್ನೆಯನ್ನು ಸಹ ಕೇಳಲಾರದೆ ಕುಳಿತುಬಿಟ್ಟೆನು. ನನ್ನನ್ನು ನೋಡಿ ನ್ಯಾಯಾಧಿಪತಿಯೂ ಇತರ ನ್ಯಾಯವಾದಿಗಳೂ ನಗುತ್ತಿದ್ದರು. ಆದರೆ ನಾನು ಮಾತ್ರ ತಲೆಯೆತ್ತಿ ಯಾರನ್ನೂ ನೋಡಲಿಲ್ಲವು. ನಾನು ಈ ದಾವಾದಲ್ಲಿ ವಾದಿಸಲಾರೆ. ಪಟೇಲರವರಿಗೆ ವಕಾಲತ್ತನ್ನು ಕೊಡಿ; ನಾನು 30 ರೂಪಾಯಿಗಳನ್ನು ಹಿಂದಕ್ಕೆ ಕೊಡುತ್ತೇನೆಂದು ಏಜಂಟಿಗೆ ಹೇಳಿದೆನು. ಆತನು ಕೂಡಲೆ 31 ರೂಪಾಯಿ ಗೊತ್ತುಮಾಡಿ ಪಟೇಲರಿಗೆ ವಕಾಲತ್ತನ್ನು ಕೊಟ್ಟನು. ಇಂತಹ ದಾವಾಗಳು ಪಟೇಲರಿಗೆ ಸಾಮಾನ್ಯವಾದುವು. ಪರ್ಯವಸಾನವನ್ನು ತಿಳಿದುಕೊಳ್ಳಲು ನಾನು ಅಲ್ಲಿ ನಿಲ್ಲಲೇ ಇಲ್ಲವು. ಹೇಡಿತನವು ನನಗೆ ಬಹಳ ಅವಮಾನಕರವಾಗಿದ್ದುದರಿಂದ ಕೂಡಲೇ ಮನೆಗೆ ಹೊರಟು ಹೋದೆನು. ನನಗೆ ತಕ್ಕ ಧೈರ್ಯವು ಹುಟ್ಟುವವರೆಗೂ ವಕಾಲತ್ತುಗಳನ್ನು ತೆಗೆದುಕೊಳ್ಳಕೂಡದೆಂದು ನಿಶ್ಚಯಿಸಿದೆನು. ನಾನು ದಕ್ಷಿಣಆಫ್ರಿಕೆಗೆ ಹೊರಡುವವರೆಗೂ ಪುನಃ ಕೋರ್ಟಿಗೆ ಹೋಗಲಿಲ್ಲವು. ಇದೊಂದು ಗುಣವೆಂದು ನಾನು ಹೇಳುವುದಿಲ್ಲ. ನನ್ನಂತಹ ಅಂಜುಪುರಕನಿಗೆ ತನ್ನ ದಾವಾ ಗೆಲ್ಲಬೇಕೆನ್ನುವವನಾದರೂ ಹೇಗೆ ವಕಾಲತ್ತನ್ನು ಕೊಡುವನು? ಅದುಕಾರಣ ನನ್ನ ನಿಯಮವು "ಅಭಾವೇ ವಿರಕ್ತಿ" ಎಂಬ ಲೋಕೋಕ್ತಿಯಂತಿದೆ.

ಬೊಂಬಾಯಿನಲ್ಲಿ ಮತ್ತೊಂದು ಕೇಸು ಬಂದಿತು. ಪೋರಬಂದರಿನಲ್ಲಿ ಒಬ್ಬ ಮಹಮ್ಮದೀಯನ ಭೂಮಿಯು ವಶಪಡಿಸಿಕೊಳ್ಳಲ್ಪಟ್ಟಿದ್ದಿತು. ಆವನು ನನ್ನ ತಂದೆಯ ಪರಿಚಿತಸ್ಥನಾಗಿದ್ದುದರಿಂದ ನನ್ನಲ್ಲಿಗೆ ಬಂದನು. ದಾವಾಮಾಡಲು ನನಗೇನೂ ಆಧಾರವು ಕಂಡುಬರಲಿಲ್ಲವಾಗಿ ಒಂದು ವಿಜ್ಞಪ್ತಿಯ (ಮೆಮೋರಿಯಲ್ಲ)ನ್ನು ಬರೆದು ಕೊಡಲೊಪ್ಪಿಕೊಂಡು ಅದನ್ನು ಬರೆದು ನನ್ನ ಸ್ನೇಹಿತರಿಗೆ ಓದಿಹೇಳಿದೆನು. ಅವರು ಅದನ್ನು ಅನುಮೋದಿಸಿದುದರ ಮೇಲೆ ನನಗೆ ಕೊಂಚ ಧೈರ್ಯ ಹುಟ್ಟಿತು. ವಿಜ್ಞಪ್ತಿಯನ್ನು ಬರೆಯುವ ಶಕ್ತಿಯು ನನಗೆ ನಿಜವಾಗಿ ಹುಟ್ಟಿದ್ದಿತು. ಈ ರೀತಿಯಾಗಿ ಮೆಮೋರಿಯಲ್ಲುಗಳನ್ನು ಬರೆಯುವುದರಲ್ಲಿರುವಷ್ಟು ವಾದಿಸುವುದರಲ್ಲಿ ಅಕ್ಕರೆಯು ಇಲ್ಲದಿದ್ದುದರಿಂದ ನನಗೆ ಒಳ್ಳೇ ಆದಾಯ ಬರಲಿಲ್ಲ ಪಕ್ಷಬಂದಿದ್ದರೆ ಅವರೆ ನಾಗೆ ಕೊಡತಕ್ಕವರು ಹೆಚ್ಚಾಗಿರಲಿಲ್ಲವು. ಆದುದರಿಂದ ನಾನು ಉಪಾಧ್ಯಾಯನಾಗಿ ಕೆಲಸಮಾಡಯೋಚಿಸಿದೆನು. ನನಗೆ ಆಂಗ್ಲಭಾಷೆಯಲ್ಲಿ ಒಳ್ಳೇ ಪಾಂಡಿತ್ಯವಿದ್ದಿತು. ಮೆಟ್ರಿಕ್ಯುಲೇಷನ್ ತರಗತಿಯವರಿಗೆ ಆಂಗ್ಲಭಾಷೆಯಲ್ಲಿ ಪಾಠಹೇಳಿಕೊಡುವುದು ನನಗೆ ಬಹಳ ಸಂತೋಷಕರವಾಗಿದ್ದಿತು. ಅದರಿಂದ ನನಗೆ ಕೊಂಚ ಸಂಪಾದನೆಯಾಗುತ್ತಿದ್ದಿತು. ಒಂದು ಪ್ರಸಿದ್ಧವಾದ ಹೈಸ್ಕೂಲಿನಲ್ಲಿ ದಿನವೊಂದಕ್ಕೆ ಒಂದು ಘಂಟೆಯ ಕಾಲ ಆಂಗ್ಲಭಾಷೆಯನ್ನು ಹೇಳಿಕೊಡಲು ಒಬ್ಬ ಉಪಾಧ್ಯಾಯನು ಬೇಕಾಗಿದ್ದನು. ತಿಂಗಳಿಗೆ 75 ರೂ. ಸಂಬಳವನ್ನು ಕೊಡುವುದಾಗಿ ಪ್ರಕಟಿಸಿದ್ದರು. ನಾನು ಅದನ್ನಪೇಕ್ಷಿಸಿ ಅರ್ಜಿಯನ್ನು ಬರೆದು ಬಹಳ ಉತ್ಸಾಹದಿಂದ ತೆಗೆದುಕೊಂಡು ಹೋದೆನು. ನಿನಗೆ ಬಿ. ಎ. ಪರೀಕ್ಷೆಯಾಗಿರುವುದೇ? ಎಂದು ಮುಖ್ಯೋಪಾಧ್ಯಾಯನು ಕೇಳಿದುದಕ್ಕೆ ಇಲ್ಲವೆಂದುತ್ತರಕೊಟ್ಟೆನು. ಹಾಗಾದರೆ ಈ ಉದ್ಯೋಗವನ್ನು ನಿನಗೆ ಕೊಡಲಾಗುವುದಿಲ್ಲವೆಂದು ಹೇಳಲು, ನಾನು ಲಂಡನ್ ಮೆಟ್ರಿಕ್ಯುಲೇಷನ್ ಪರೀಕ್ಷೆಗೆ ಲ್ಯಾಟಿನ್ ಭಾಷೆಯನ್ನು ತೆಗೆದುಕೊಂಡು ಕೃತಾರ್ಥನಾದೆನೆಂದು ಹೇಳಿದೆನು. ನಮಗೆ ಬಿ ಎ ಪಾಸಾಗಿರುವವನೇ ಬೇಕೆಂದು ಆತನು ಹೇಳಿದನು. ಅದರ ಮೇಲೆ ನನ್ನ ಮನಸ್ಸಿಗೆ ಬಹಳ ಚಿಂತೆಯುಂಟಾಯಿತು. ನನ್ನ ಅಣ್ಣನಿಗೂ ಬಹಳ ಯೋಚನೆಯು ಹುಟ್ಟಿತು. ಇನ್ನು ರಾಜಕೋಟೆಗೆ ಹೊರಡಬೇಕು; ಬೊಂಬಾಯಿನಲ್ಲಿರುವುದರಿಂದ ಪ್ರಯೋಜನವಿಲ್ಲವೆಂದು ನಾನು ನಿಶ್ಚಯಿಸಿದೆನು. ರಾಜಕೋಟೆಯಲ್ಲಿ ನನ್ನ ಅಣ್ಣನು ಒಬ್ಬ ಚಿಕ್ಕ ಪ್ಲೀಡರಾಗಿದ್ದನು. ಆತನು ಅರ್ಜಿಯನ್ನು ಬರೆಯುವ ಕೆಲಸವನ್ನು ನನಗೆ ಕೊಡಿಸುತ್ತೇನೆಂದು ಹೇಳಿದನು. ಬೊಂಬಾಯಿ ವಾಸವನ್ನು ಬಿಟ್ಟುದಾದರೆ ಬಹಳ ಖರ್ಚು ಕಡಿಮೆಯಾಗುವುದು. ರಾಜಕೋಟೆಯಲ್ಲೇ ಎಲ್ಲರೂ ಒಟ್ಟಿಗೆ ಕೂಡಿರಬಹುದು ಎಂದು ನನ್ನ ಅಣ್ಣನು ಹೇಳಿದನು. ಅದು ನನಗೂ ಸಮ್ಮತವಾಗಿದ್ದಿತು. ಈ ಪ್ರಕಾರವಾಗಿ 6 ತಿಂಗಳು ಬೊಂಬಾಯಿನಲ್ಲಿದ್ದು ಅನಂತರ ರಾಜಕೋಟೆಗೆ ಹೋದೆನು. ಬೊಂಬಾಯಿನಲ್ಲಿದ್ದಾಗ್ಗೆ ನಾನು ಪ್ರತಿದಿನವೂ ಹೈಕೋರ್ಟಿಗೆ ಹೋಗುತ್ತಿದ್ದೆನಾದರೂ ಏನನ್ನೂ ತಿಳಿದುಕೊಳ್ಳಲಿಲ್ಲವು. ಅಲ್ಲಿ ನಡೆಯುವ ದಾವಾಗಳು ಬಹಳ ಆಕರ್ಷಕವಾಗಿದ್ದವು. ಆದುದರಿಂದ ಅಲ್ಲಿ ಕುಳಿತು ತಿಳಿದುಕೊಳ್ಳುತ್ತಿದ್ದೆನು. ಹೈಕೋರ್ಟಿನಲ್ಲಿ ಅನೇಕ ಜನ ವಕೀಲರು ನನ್ನಂತೆಯೇ ಕುಳಿತು ಕೊಂಡು ಜಾಗಡಿಸುತ್ತಿದ್ದರು. ಅವರನ್ನು ನೋಡಿ ನನಗೂ ಮೊದಲು ಹುಟ್ಟಿದ್ದ ಶಂಕೆಯು ಬಿಟ್ಟು ಹೋಯಿತು. ಹೈಕೋರ್ಟಿನಲ್ಲಿ ವಕೀಲರು ಹಾಗೆ ಜಾಗಡಿಸುವುದು ಒಂದು ಫ್ಯಾಶನ್ನೆಂದು ತಿಳಿದುಕೊಂಡಿದ್ದೆನು.

ಈಗ ಬೊಂಬಾಯಿನಲ್ಲಿರುವ ಹೊಸ ಬ್ಯಾರಿಸ್ಟರುಗಳಲ್ಲಿ ದಾವಾಗಳು ಸಿಕ್ಕದೆ ಶ್ರಮಪಡುತ್ತಿದ್ದವರಿಗೆ ನಾನು ಕೆಲವು ಸೂಚನೆಯನ್ನು ಕೊಟ್ಟೆನು. ನಾನು ಗಿರ್ಗಾಮಿನಲ್ಲಿ ವಾಸಮಾಡುತ್ತಿದ್ದೆನಾದರೂ ನಾನು ಯಾವಾಗಲೂ ಯಾವ ಬಂಡಿಯನ್ನೂ ಹತ್ತಿದವನಲ್ಲ. ಟ್ರಾಂಬಂಡಿಯಲ್ಲಿ ಸಹ ಕೂತುಕೊಳ್ಳಲಿಲ್ಲ. ಹೈಕೋರ್ಟಿಗೆ ಪ್ರತಿನಿತ್ಯದಲ್ಲೂ ನಡೆದುಕೊಂಡು ಹೋಗಿ ಬರುತ್ತಿದ್ದೆನು. ಹೋಗಲು 45 ನಿಮಿಷ ಬರಲು 45 ನಿಮಿಷ ಹಿಡಿಯುತ್ತಿದ್ದಿತು. ನನಗೆ ಬಿಸಿಲಿನಲ್ಲಿ ತಿರುಗಾಡುವುದು ಸಾಮಾನ್ಯವಾಗಿದ್ದಿತು. ನನಗದರಿಂದ ಕೊಂಚ ಖರ್ಚು ಕಡಿಮೆಯಾಯಿತು. ಬೊಂಬಾಯಿನಲ್ಲಿ ಬಹಳ ಜನರಿಗೆ ಆಗಾಗ್ಗೆ ಕಾಯಿಲೆ ಬರುತ್ತಿದ್ದಿತಾದರೂ ನನಗೆ ಮಾತ್ರ ಒಂದು ದಿವಸವೂ ಬರಲಿಲ್ಲ. ನನಗೆ ಸಂಪಾದನೆಯಾದ ದಿವಸದಲ್ಲಿ ಕೂಡ ಈ ಪದ್ಧತಿಯನ್ನು ಅವಲಂಬಿಸಿದ್ದೆನು. ಅದರ ಲಾಭವನ್ನು ಈ ದಿವಸವೂ ನಾನು ಅನುಭವಿಸುತ್ತಲೇ ಇದ್ದೇನೆ.

ಮೈ: ಸ್ವಾ.

ಸ್ಥಳೀಕ ಸ್ವರಾಜ್ಯ ಸಂಸ್ಥೆಗಳ ಪರಿಷತ್ತು.

ಮುಂಬೈ ಇಲಾಖೆಯ ಸ್ಥಳೀಕ ಸ್ವರಾಜ್ಯ ಸಂಸ್ಥೆಗಳ ಪರಿಷತ್ತು ಪೂನದಲ್ಲಿ ಕಳೆದ 23ನೇ ತಾರೀಖಿನಲ್ಲಿ ಪ್ರಾರಂಭವಾಯಿತು. ಅಧ್ಯಕ್ಷರು ಸ್ಥಳೀಕ ಸ್ವರಾಜ್ಯ ಖಾತೆಯ ಮಂತ್ರಿಗಳಾದ ಮಿ. ಹಿದಾಯತುಲ್ಲಾ ಅವರು. ಅವರ ಭಾಷಣದ ಸಾರಾಂಶ- ನಮ್ಮ ದಿನದ ಬಾಳಿಕೆಗೆ ಅವಶ್ಯವಾದ ಜೀವನ ಪೂರೈಕೆ, ಪ್ರಾಥಮಿಕ ಶಿಕ್ಷಣ, ಸಾರ್ವಜನಿಕ ಆರೋಗ್ಯ, ಒಳ್ಳೇ ಹವೆ, ಔಷಧ ಸಹಾಯ, ಸ್ವಚ್ಛತೆ, ಅವೆಲ್ಲವುಗಳನ್ನು ಜನರಿಗೆ ಅನುಕೂಲಪಡಿಸುವದೇ ಸ್ಥಳೀಕ ಸ್ವರಾಜ್ಯದ ಉದ್ದಿಶ್ಯ. ಇದು ರಾಜಕೀಯ ಬೆಳವಣಿಗೆಗೂ ಪ್ರಯೋಜನಕಾರಿಯಾಗಿದೆ. ನಾಗರೀಕರ ಕರ್ತವ್ಯ ಜಾಗ್ರತಿಯು ಜನಾಂಗ ಭಾವನೆ ಹಾಗೂ ಹೊಣೆಗಳು ಇದರಿಂದ ಬೆಳೆಯಲನುವಾಗುತ್ತವೆ. ಇವುಗಳ ವಿಚಾರದಿಂದ ಜನಾಂಗದ ಹೆಜ್ಜೆಯು ಮುಂದೆ ಬೀಳುತ್ತದೆ.

ಹಿಂದಿನಿಂದ ಈವರೆಗಿನ ಚರಿತ್ರೆಯ ನಿರೀಕ್ಷಣೆ ಮಾಡಿದರೆ ನಮಗಾ ಅವಕಾಶದೊಳಗೆ ಮಿತ ಸ್ವಾತಂತ್ರ್ಯವು ದೊರೆಯಿತು. ಮುನಿಸಿಪಾಲಿಟಿಯಲ್ಲಿ ನಾಲ್ಕು ಐದಾಂಶಸದಸ್ಯರು ಜನರಿಂದಾರಿಸಲ್ಪಟ್ಟವರಿರಬೇಕು. ಲೋಕಲ್ ಬೋರ್ಡುಗಳಲ್ಲಿ ಮೂರು ನಾಲ್ಕಾಂಶ ಸದಸ್ಯರು ಜನರಿಂದಾರಿಸಲ್ಪಟ್ಟವರಿರಬೇಕು. ಸರಕಾರದ ನೌಕರರು, ಅಧ್ಯಕ್ಷ, ಉಪಾಧ್ಯಕ್ಷರಿರಬಾರದು. ಹಿಂದುಳಿದವರಿಗೆ ಪ್ರಾತಿನಿಧಿಕ ಹಕ್ಕು ಇರಬೇಕು. ಹೆಂಗಸರಿಗೆ ಸ್ಥಳೀಕ ಸ್ವರಾಜ್ಯ ಸಂಸ್ಥೆಯಲ್ಲಿ ಒಂದು ಸ್ಥಳ ಸಿಕ್ಕಬೇಕು. ಇವೇ ಮುಂತಾದ ಮುನ್ನಡೆಗಳು ನಡೆದವು. ಈಗ ಜನರ ಹಿತಕ್ಕಾಗಿಯೇ ಸರಕಾರದವರು ತಾವೇ ಜನರನ್ನು ನಿಯಮಿಸುತ್ತಿರುವರು. ಬೇರೆ ಬೇರೆ ಜಾತಿಯ ಜನರ ಪರವಾಗಿ ಪ್ರತಿನಿಧಿಗಳು ಸರಕಾರದವರಿಂದ ನಿಯಮಿಸಲ್ಪಡಬೇಕೆಂದೇ ಸುಶಿಕ್ಷಿತರು ಸಹ ಹಂಬಲಿಸುವದುಂಟು. ಅಂದ ಮೇಲೆ ಸರಕಾರದವರದೇನು! ಅವರ ಅಧಿಕಾರ ತನ್ನಲ್ಲಿಟ್ಟುಕೊಂಡರೆ ಲಾಭ ಇಲ್ಲ. ಜನಾಂಗದೊಳಗೆ ಬೇರೆ ಬೇರೆ ಜಾತಿಗಳು. ಬೇರೆ ಬೇರೆ ಜಾತಿಗಳಲ್ಲಿಯೇ ಮತ್ತೆ ನಾನಾ ಭೇದಗಳು. ಹೀಗಾಗಿ ಭೇದಗಳೂ ಕಲಹಗಳೂ, ಬೆಳೆದಿವೆ. ಇದೆಲ್ಲ ಅಳಿಯಬೇಕೆಂದರೆ ಸಾರ್ವತ್ರಿಕ ಶಿಕ್ಷಣವೇ ಮದ್ದು. ಇದರಿಂದ ಜನರಲ್ಲಿ ಪರಸ್ಪರ ಪ್ರೀತಿವಿಶ್ವಾಸಗಳುಂಟಾದರೆ, ಯಾರನ್ನು ಸರಕಾರದವರು ಕಾಯುವ ಕಾರಣ ಉಳಿಯದು.

ಇನ್ನು, ಸ್ಥಳೀಕ ಸ್ವರಾಜ್ಯ ಸಂಸ್ಥೆಯು ಬೆಳೆಯಬೇಕೆಂದರೆ ಜನರು ವಿಚಾರಿಸಿ ತಮ್ಮ ಜನರಲ್ಲಿ ಅತ್ಯುತ್ತಮರೂ, ಕರ್ತವ್ಯದಕ್ಷರೂ, ಅನುಭವಿಕರೂ, ಜನರ ಕ್ಷೇಮಚಿಂತಕರೂ ಆದವರನ್ನೇ ಆರಿಸತಕ್ಕದ್ದು. ಜನರ ಸೇವೆಯೇ ತಮ್ಮ ಧ್ಯೇಯವಾಗಿರುವರನ್ನೇ ಆರಿಸಬೇಕು. ಇದು ಚೆನ್ನಾಗಿ ನಡೆಯಲಿಕ್ಕೆ ಸ್ಥಳೀಕ ಸ್ವರಾಜ್ಯ ಸೇವೆಯದೊಂದು ಖಾತೆ ಮಾಡಿದರೆ ಕೆಲಸವು ಸರಿಯಾಗಿ ನಡೆಯುವದು. ಹಿಂದಕ್ಕೆ ಇದನ್ನು ಸ್ಥಳೀಕ ಸ್ವರಾಜ್ಯ ಸಂಸ್ಥೆಯವರಿಗೆ ಕೇಳಿದಾಗ ಬಹುಮತೀಯರಿದನ್ನು ವಿರೋಧಿಸಿದರು. ಇದರಿಂದ ಒಬ್ಬನನ್ನು ಇನ್ನೊಂದೆಡೆಗೆ ವರ್ಗ ಮಾಡುವಲ್ಲಿ ಅನುವಾಗುವದು. ಈಗ ಸ್ಥಳೀಕ ಸ್ವರಾಜ್ಯಗಳು ತೀರ ಚಿಕ್ಕವಿರುವದರಿಂದಲೂ, ನಾತನ್ನು ದುಡ್ಡಿನ ಅನುಕೂಲತೆ ಇಲ್ಲದ್ದರಿಂದಲೂ, ಅಲ್ಲಿ ಜಾಣರಾದ ಕೆಲಸಗಾರರು ಸಿಕ್ಕುವದಿಲ್ಲ. ಒಂದೇ ಸ್ಥಳದಲ್ಲಿ ಕೆಲಸಗಾರರು ಬಹಳ ದಿವಸವಿದ್ದರೆ, ಅದೇ ಊರವರಿದ್ದರೆ, ಅವರು ಯಾವುದೊಂದು ಪಂಗಡದೊಳಗೆ ಸೇರುವದುಂಟು. ಇವೆಲ್ಲ ಕೊರತೆಗಳು ಸ್ಥಳೀಕ ಸ್ವರಾಜ್ಯ ಖಾತೆಯಿಂದ ದೂರವಾಗಿ ಎಲ್ಲರಿಗೆ ಸುಖವಾಗುವದು.

ಹಿಂದುಸ್ಥಾನ ಸರಕಾರದವರು ಇದು ವರೆಗೆ ಸ್ಥಳೀಕ ಸ್ವರಾಜ್ಯಗಳಿಗೆ ಕೊಡುತ್ತಿರುವ ಹಣ ಸಹಾಯವನ್ನು ಈಗ ಕೊಡದ್ದರಿಂದ, ಏನಾದರೂ ಚೂರು ಪಾರು ಸಹಾಯ ದೊರೆತರೆ ಪ್ರಾಂತಿಕ ಸರಕಾರದಿಂದಲೇ; ಆದರೆ ಪ್ರಾಂತಿಕ ಸರಕಾರದವರ ಆರ್ಥಿಕ ಸ್ಥಿತಿಯು ಚೆನ್ನಾಗಿಲ್ಲ. ನಮ್ಮ ಇಲಾಖೆಯು ಔದ್ಯೋಗಿಕವಿದ್ದು ಉದ್ಯೋಗದ ಮೇಲೆ ಹೇರುವ ಹುಟ್ಟುವಳಿಯ ತೆರಿಗೆಯೊಳಗಿಂದ ನಮಗೇನೂ ಹಣ ಸಿಗುವದಿಲ್ಲ. ಆದರಿಂದ ಸ್ಥಳೀಕ ಸ್ವರಾಜ್ಯದವರಿಗೆ ಬಹು ತೊಂದರೆಯಾಗಿದೆ. ಅಲ್ಲದೆ ಹಿಂದುಸ್ಥಾನ ಸರಕಾರದವರ ಕಟ್ಟಳೆಯಂತೆ ಸ್ಥಳೀಕ ಸಂಸ್ಥೆಗಳಿಗೆ ಸಲ್ಲುವ ಹಣವೂ ತೀರ ಸ್ವಲ್ಪ ಇದೆ. ಪ್ರಾಂತಿಕ ಸರಕಾರದವರು ಈಗ ಸಹಾಯ ಹಣ ಕೊಡುವದಕ್ಕೆ ಗ್ರಾಂಟು ಅನ್ನುವದುಂಟು. ಬೇರೆ ಬಗೆಯಿಂದಲೂ ನಾವು ಸಹಾಯ ಹುಡುಕಬೇಕಾಗಿದೆ. ಕಂದಾಯದೊಳಗಿನ ಕೆಲವು ಭಾಗವನ್ನು ಗ್ರಾಂಟುಗಳ ಬದಲಾಗಿಯೂ ಕೊಡಬಹುದೆಂಬುದೊಂದು ಸೂಚನೆ. ಭೂಕಂದಾಯದ ಹಣ ಕೊಡಬೇಕೆಂಬ ಇನ್ನೊಂದು ಸೂಚನೆ. ಖರ್ಚಿನೊಳಗಿನ ಕೆಲವೊಂದು ಹಣದ ಅಂಶವನ್ನು ಸ್ಥಳೀಕ ಸಂಸ್ಥೆಗಳಿಗೆ ಸಹಾಯವೆಂದು ಕೊಡಬೇಕೆಂಬುದೊಂದು ಮೂರನೇ ಸೂಚನೆ. ಈ ಬಗ್ಗೆ ವಿಚಾರ ನಡೆದಿದೆ.

ಮೇಲಿನ ಪರಿಷತ್ತಿನಲ್ಲಿ 'ಸ್ಥಳೀಕ ಸ್ವರಾಜ್ಯ ಸಂಸ್ಥೆಯನ್ನು ಸ್ಥಾಪಿಸಬೇಕು; ಹಾಗು ಸ್ಥಳೀಕ ಸ್ವರಾಜ್ಯ ಸಂಸ್ಥೆಯಲ್ಲಿರುವ ಬೇರೆ ಬೇರೆ ಖಾತೆಯ ಅಧಿಕಾರಿಗಳಿಗೆ ಬೇರೆ ಶಿಕ್ಷಣ ಕೊಡುವ ಬಗ್ಗೆ ಸರಕಾರದವರು ವ್ಯವಸ್ಥೆ ಮಾಡಬೇಕೆಂದು ಗೊತ್ತುವಳಿಗಳಾದವು.

"ಕರ್ನಾವೀರ"

ನೆಕ್ ಟೈ- (Neck Tie)

ಕವಿ— ಭೀತಾಳ ಭಟ್ಟ.

ಪೂರ್‍ವಾಚಲದಿಂ ಬಂದುದೀ ಪದವಿ ನಿನಗೆ |
ರಕ್ಷ ವಂದಿರಿಯಾದೆ ನಮ್ಮಣ್ಣಗಳಿಗ ||
ಬಿಂದಿ ಬಿಳಿಗಳಿಂದೆ ನೋಡುವರು ನಿನ್ನ |
ಮುಂದಿ ಬಿಡುಚಲುವೆಂದು ಧರಿಸುವರು ಮುನ್ನ ||
ನೀನೆ ಭರತಾವನಿಗೆ ಒದಗಿರುವ ಸಕಲ |
ದೈನ್ಯ ದಾರಿದ್ರ್ಯಕ್ಕೆ ಮೂಲವಾದೆ ಫಲ! ||
ಕಟ್ಟಿ ನಮ್ಮನು ಪರರ ದಾಸ್ಯವೆಂದೆನಿಪ |
ಕಟ್ಟೆ ಸಂಕೋಲೆಯಿಂದೆ ಕಾಡುತಿಹೆಯಪ್ಪ ||
ಸದ್ಯಕೆಮ್ಮೆಯ ಸುತ್ತಿನಾಡಿಸೋಳ್ ನೀನು |
ವಿದ್ಯೆವಿನಯವನಿತ್ತು ಪೊರೆವೆ ಜನರನ್ನ ||

ಪಶ್ಯರೆನಿಪರು, ನರರು ನಿನ್ನ ನಾಶ್ರಯಿಸಿ |
ಹುಟ್ಟುಗೈಪನು ಮುದದೆ ದೊರೆ ನಿನ್ನ ಕರೆಸಿ ||
ಭಾರತೀಯರೊಳಿಂದು ನೆಲೆಸಿರುವಧರ್ಮ |
ವೋರಂತೆ ಪೂರ್ವವೆತ್ತವೋಳಿರ್ಪೆಯಮಮ ! ||
ನೋಡಿ ನಿನ್ನನು ನಮ್ಮ ಪೂರ್ವ ಸಂಸ್ಕೃತಿಯು |
ಓಡುತಿದೆ ಭಯದಿಂದೆ; ನವ್ಯ ಸಭ್ಯತೆಯು ||
ಭೂತದಂದದೆ ಬಹಳ ಧೂಪನಾಂತು ತನ್ನ |
ಧೂರ್ತತನದಾಳ್ವಿಕೆಯ ಗೈಯ್ಯುವುದು ಮುನ್ನ ||
ಸರಸ್ವತಿ.'

ನೂರಾರು ತಲೆಗಳುಳ್ಳ ರಾಕ್ಷಸ.

(ಮಹಾತ್ಮಾ ಗಾಂಧಿಯವರ ಲೇಖನದ ತರ್ಜುಮೆ)

ದಕ್ಷಿಣದೇಶದ ಒಬ್ಬ ಪಂಡಿತರು ದೇಶೀಯ ಭಾಷೆಯ ಪತ್ರಿಕೆಯಲ್ಲಿ ಬರೆದದ್ದರ ಸಾರಾಂಶವನ್ನು ಒಬ್ಬ ಸ್ನೇಹಿತರು ನನಗೆ ಕಳುಹಿಸಿರುತ್ತಾರೆ. ಅಸ್ಪೃಶ್ಯತೆಯು ಇರಬೇಕೆಂಬದಕ್ಕೆ ಪಂಡಿತರು ಕೊಟ್ಟ ಕಾರಣಗಳನ್ನು ಈ ರೀತಿ ಕ್ರೋಢೀಕರಿಸಿದ್ದಾರೆ.

(1) ಆದಿಶಂಕರಾಚಾರ್ಯರು ಒಂದಾವರ್ತಿ ಚಂಡಾಲನನ್ನು ದೂರ ನಿಲ್ಲು ಎಂದ ಹೇಳಿದ್ದರಿಂದಲೂ, ತ್ರಿಶಂಕುವು ಚಂಡಾಲನೆಂತ ಅನ್ನಿಸಿಕೊಂಡ ಮೇಲೆ ಎಲ್ಲರೂ ಅವನನ್ನು ತುಚ್ಛೀಕರಿಸಿದ್ದರಿಂದಲೂ ಅಸ್ಪೃಶ್ಯತೆಯು ಈಚೆಗೆ ಹುಟ್ಟಿದಲ್ಲವೆಂಬದು ತಿಳಿಯುತ್ತದೆ.

(2) ಚಂಡಾಲರು ಆರ್ಯರ ಕಾಲದಲ್ಲಿಯೇ ಜಾತಿಭ್ರಷ್ಟರಾಗಿದ್ದರು.

(3) ಅಸ್ಪೃಶ್ಯರೇ ಅಸ್ಪೃಶ್ಯತೆ ಪಾಪದಿಂದ ದೂರವಾಗಿರುವದಿಲ್ಲ.

(4) ಅಸ್ಪೃಶ್ಯರು ಅಸ್ಪೃಶ್ಯರಾಗಿರಲು ಕಾರಣವೇನೆಂದರೆ— ಅವರು ಮೃಗಗಳನ್ನು ಕೊಲ್ಲುತ್ತಾರೆ ಮತ್ತು ಅಗಾಗ್ಯ ಮಾಂಸ, ರಕ್ತ, ಮೂಳೆ ಮತ್ತು ಮಲವನ್ನು ಮುಟ್ಟುತ್ತಿರುತ್ತಾರೆ.

(5) ಮೃಗಗಳನ್ನು ಕೊಲ್ಲುವ ಮನೆಗಳನ್ನೂ, ಸೇಂದಿ ಸಾರಾಯಿ ಅಂಗಡಿಗಳನ್ನೂ, ಸೂಳೆಯರ ಮನೆಗಳನ್ನೂ ದೂರ ಇಟ್ಟಿರುವಂತೆಯೂ ಇಡಬೇಕಾಗಿರುವಂತೆಯೂ, ಅಸ್ಪೃಶ್ಯರನ್ನೂ ದೂರ ಇಡಬೇಕು

(6) ಪರಲೋಕದ ಸುಖಗಳು ಅಸ್ಪೃಶ್ಯರಿಗೆ ಇಲ್ಲದೆ ಹೋಗಲಿಲ್ಲವಲ್ಲ!

(7) ಒಬ್ಬ ಗಾಂಧಿಯು ಇವರನ್ನು ಮುಟ್ಟಬಹುದು. ಹಾಗೆಯೇ ಉಪವಾಸವಿರಲು ಶಕ್ತನು ನಮಗೆ ಉಪವಾಸ ವಿರಲು ಸಾಧ್ಯವಿಲ್ಲ, ಮುಟ್ಟಲೂ ಬಾರದು.

(8) ಮನುಷ್ಯನ ಬೆಳವಣಿಗೆಗೆ ಅಸ್ಪೃಶ್ಯತೆಯು ಅವಶ್ಯ.

(9) ಮನುಷ್ಯನ ಸುತ್ತು ಒಂದು ಶಕ್ತಿ ಇದೆ ಇದು ಹಾಲಿನಂತೆ ಇದೆ ಅದು ಮುಟ್ಟಬಾರದದ್ದು, ಮುಟ್ಟಿದರೆ ಕೆಟ್ಟು ಹೋಗುತ್ತದೆ. ಕಸ್ತೂರಿಯನ್ನೂ ಈರುಳ್ಳಿಯನ್ನೂ ಒಟ್ಟಿಗೆ ಇಡಬಹುದಾದರೆ ಬ್ರಾಹ್ಮಣನನ್ನೂ ಅಸ್ಪೃಶ್ಯನನ್ನೂ ಬೆರೆಸಬಹುದು.

ನನಗೆ ಪತ್ರಬರೆದವರು ಕ್ರೋಢೀಕರಿಸಿದ ಕಾರಣಗಳು ಇವು. ಅಸ್ಪೃಶ್ಯತೆಯು ನೂರಾರು ತಲೆಗಳುಳ್ಳ ರಾಕ್ಷಸನಂತಿದೆ ಅದ್ದರಿಂದ ಅದು ಪ್ರತಿಸಾರಿ ತಲೆಯೆತ್ತಿದಾಗಲೆಲ್ಲಾ ಅದಕ್ಕೆ ಸರಿಯಾದ ಜವಾಬು ಕೊಡಬೇಕು ಪುರಾಣದಲ್ಲಿ ಹೇಳಿರುವ ಕೆಲವು ಕಥೆಗಳನ್ನು ಈಗಿನ ಕಾಲಕ್ಕೆ ಹೇಗೆ ಉಪಯೋಗಿಸಬೇಕೆಂತ ಗೊತ್ತಿಲ್ಲದಿದ್ದರೆ ಅವು ಬಹಳ ಅಪಾಯಕರಗಳಾಗಿವೆ. ಶಾಸ್ತ್ರಗಳಲ್ಲಿ ಹೇಳಿರುವಂತೆಯೇ ನಾವು ನಡೆದುಕೊಳ್ಳಲು ಪ್ರಯತ್ನಿಸಿದರೆ ಅಥವ ಅವುಗಳಲ್ಲಿ ವಿವರಿಸಿರುವ ವ್ಯಕ್ತಿಗಳಂತೆ ನಾವು ವರ್ತಿಸಿದರೆ ಶಾಸ್ತ್ರಗಳು ನಮ್ಮನ್ನು ಕೆಡಿಸುವವೇ ಸರಿ. ಮೂಲ ಸೂತ್ರಗಳನ್ನು ತಿಳಿದುಕೊಳ್ಳಲು ಅವು ಸಹಾಯಮಾಡುತ್ತವೆಯಷ್ಟೆ. ಮತಸಂಬಂಧದ ಪುಸ್ತಕಗಳಲ್ಲಿ ಯಾವನಾದರೂ ಪ್ರಖ್ಯಾತನಾದ ಮನುಷ್ಯನೊಬ್ಬನು ದೇವರಿಗೂ ಮನುಷ್ಯರಿಗೂ ಆಗಬಾರದ ಕೆಲಸ ಮಾಡಿದರೆ ನಾವು ಪಾಪ ಮಾಡಬಹುದೆಂತ ಅರ್ಥವೋ? ಪ್ರಪಂಚದಲ್ಲಿ ಸತ್ಯವೇ ಮುಖ್ಯ, ಸತ್ಯವೇ ದೇವರು ಎಂತ ನಮಗೆ ಬೋಧಿಸಿದರೆ ಆಯಿತು.

ಯುಧಿಷ್ಠಿರನು ಸಹ ಒಂದು ಸಾರಿ ಸುಳ್ಳು ಹೇಳಬೇಕಾಗಿ ಬಂತೆಂಬದರಿಂದ ಪ್ರಯೋಜನವೇನು? ಸುಳ್ಳು ಹೇಳಿದ್ದಕ್ಕೆ ಕೂಡಲೇ ಅದರ ಫಲ ಅನುಭವಿಸಬೇಕಾಯಿತೆಂತಲೂ ಯುಧಿಷ್ಠಿರನು ದೊಡ್ಡವನೆಂಬ ಕಾರಣ ಸಹ ಅವನನ್ನು ಕಾಪಾಡಲಿಲ್ಲವೆಂತಲೂ ತಿಳಿದುಕೊಂಡರೆ ಸಾಕಾಗಿದೆ. ಹಾಗೆಯೇ ಆದಿ ಶಂಕರಾಚಾರ್ಯರು ಚಂಡಾಲನನ್ನು ದೂರಮಾಡಿದರೆಂಬದು ನಮ್ಮ ವಿಷಯಕ್ಕೆ ಸಂಬಂಧವಿಲ್ಲ. ಎಲ್ಲಾ ಜೀವಿತ ವಸ್ತುಗಳನ್ನೂ ನಮ್ಮಂತೆಯೇ ನೋಡಿಕೊಳ್ಳಬೇಕೆಂತ ಬೋಧಿಸುವ ಮತವು ನಿರಪರಾಧಿಗಳಾದ ಒಂದು ಜಾತಿಯ ಜನಾಂಗದ ಮಾತಿರಲಿ, ಒಬ್ಬ ಮನುಷ್ಯನನ್ನಾದರೂ ಮನುಷ್ಯಮಾತ್ರನಂತೆ ನೋಡಬಾರದೆಂತ ಬೋಧಿಸೀತೋ? ಆದಿ ಶಂಕರಾಚಾರ್ಯರು ಏನೇನು ಮಾಡಿದರೆಂಬದು ನಮಗೆ ಗೊತ್ತಿಲ್ಲದೆ ಅವರ ಕಾರ್ಯದ ಮೇಲೆ ನಾವು ಟೀಕಿಸಲು ಸಾಧ್ಯವಿಲ್ಲ "ಚಂಡಾಳ" ಶಬ್ದವನ್ನು ಉಪಯೋಗಿಸಿದಲ್ಲಿ ಆ ಶಬ್ದಕ್ಕೆ ಏನು ಅರ್ಥ ಕೊಟ್ಟಿದರೆಂಬದು ನಮಗೆ ಗೊತ್ತಿಲ್ಲ. ಅದಕ್ಕೆ ಅನೇಕ ಅರ್ಥಗಳಿವೆಯೆಂತ ಒಪ್ಪಬೇಕು. ಒಂದು ಅರ್ಥವು ಪಾಪಿಷ್ಠ ಎಂಬದು. ಎಲ್ಲಾ ಪಾಪಿಷ್ಠರೂ ಅಸ್ಪೃಶ್ಯರೆಂತ ಭಾವಿಸಲ್ಪಡಬೇಕಾದರೆ ನಾವೆಲ್ಲರೂ ಪಂಡಿತರು ಸಹಿತ ಅಸ್ಪೃಶ್ಯವರ್ಗಕ್ಕೆ ಸೇರಬೇಕಾಗುತ್ತದೆಂತ ಸಂಶಯಪಡಬೇಕಾಗಿದೆ. ಅಸ್ಪೃಶ್ಯತೆಯು ಪುರಾತನ ಕಾಲದಿಂದಲೂ ನಡೆದು ಬಂದಿಲ್ಲವೆಂತ ಯಾರೂ ಹೇಳುವದಿಲ್ಲ. ಅಸ್ಪೃಶ್ಯತೆಯು ಆಗಬಾರದಂಥಾ ಸಂಗತಿಯಾದರೆ ಅದು ಪುರಾತನ ಕಾಲದಿಂದ ನಡೆದುಬಂದದ್ದೆಂಬ ಕಾರಣದಿಂದ ಅದನ್ನು ಇನ್ನು ಮುಂದಕ್ಕೂ ಇಟ್ಟುಕೊಳ್ಳಬಾರದು.

ಆರ್ಯರ ಕಾಲದಲ್ಲಿ ಅಸ್ಪೃಶ್ಯರು ಜಾತಿಭ್ರಷ್ಟರಾಗಿದ್ದರೆಂತಾದರೆ ಆರ್ಯರಿಗೆ ಅದೊಂದು ಕೊರತೆಯೇ ಆಗಿತ್ತು. ಆರ್ಯರ ಕಾಲದಲ್ಲಿ ಏನೋ ಕಾರಣದಿಂದ ಜನಾಂಗದ ಒಂದು ಭಾಗದವರ ಮೇಲೆ ಒಂದು ಶಿಕ್ಷೆಯನ್ನು ವಿಧಿಸಿದ್ದರೆ ಅವರ ವಂಶೀಕರು ಸಹ ಆ ಶಿಕ್ಷೆಗೆ ಗುರಿಯಾಗುವದು ಹೇಗೆ?

ಅಸ್ಪೃಶ್ಯರಲ್ಲೂ ಅಸ್ಪೃಶ್ಯತೆಯಿದೆಯೆಂಬದರಿಂದ ಕೆಡಕನ್ನು ಹರಡದಂತೆ ಇಟ್ಟುಕೊಳ್ಳಲಿಕ್ಕಾಗುವದಿಲ್ಲವೆಂಬದು ಗೊತ್ತಾಗುತ್ತದೆ. ಅಸ್ಪೃಶ್ಯರಲ್ಲಿ ಅಸ್ಪೃಶ್ಯತೆ ಇರುವದರಿಂದಲೇ ನಾಗರೀಕರಾದ ಹಿಂದೂ ಸಮಾಜದವರು ಅಸ್ಪೃಶ್ಯತೆಯನ್ನು ಆದಷ್ಟುಬೇಗನೇ ಹೋಗಲಾಡಿಸಬೇಕಾದದ್ದು ಅವಶ್ಯವಾಗಿದೆ.

ಮೃಗಗಳನ್ನು ಕೊಲ್ಲುವದರಿಂದಲೂ ಮಾಂಸ, ರಕ್ತ, ಮೂಳೆ, ಮಲವನ್ನೂ ಮುಟ್ಟಬೇಕಾದದ್ದರಿಂದಲೂ ಅವರು ಅಸ್ಪೃಶ್ಯರೆಂತಾದರೆ ಎಲ್ಲಾ ನರ್ಸುಗಳೂ, ಡಾಕ್ಟರುಗಳೂ ಅಸ್ಪೃಶ್ಯರಾಗಬೇಕು. ಹಾಗೆಯೇ ಎಲ್ಲಾ ಕ್ರಿಶ್ಚಿಯನರೂ ಮುಸಲ್ಮಾನರೂ ಆಹಾರಕ್ಕಾಗಿಯೂ ಬಲಿಗಾಗಿಯೂ ಪ್ರಾಣಿಗಳನ್ನು ಕೊಲ್ಲುವ ಹಿಂದುಗಳು ಸಹ ಅಸ್ಪೃಶ್ಯರಾಗಬೇಕಾಯಿತು

ಕೊಲೆಮನೆ ಸೇಂದಿ ಅಂಗಡಿ, ಸೂಳೆ ಕೇರಿ ಸಹ ಊರಿನಿಂದ ಹೊರಗೆ ಇರಬೇಕಾದಂತೆಯೇ ಅಸ್ಪೃಶ್ಯರೂ ಹೊರಗೆ ಇರಬೇಕೆಂಬ ಮಾತಿನಿಂದ ಅಸ್ಪೃಶ್ಯರ ಮೇಲೆ ಇರುವ ವಿರೋಧವು ಸ್ಪಷ್ಟವಾಗುತ್ತದೆ. ಕೊಲೆಮನೆಗಳೂ, ಸೇಂದಿ ಅಂಗಡಿಗಳೂ ದೂರ ಇವೆ ಅಥವ ಇರಬೇಕಾದದ್ದು ಅವಶ್ಯ. ಆದರೆ ಕಸಾಬರು ದೂರವಾಗಿಲ್ಲವಷ್ಟೆ. ನಾಯಕಸಾನಿಯರವೃತ್ತಿಯಿಂದ ಸಮಾಜಕ್ಕೆ ಕೆಡಕು ಇರುವದರಿಂದ ಅವರು ದೂರ ಇರಬೇಕಾದದ್ದು ಅವಶ್ಯ. ಆದರೆ ಅಸ್ಪೃಶ್ಯರ ಉದ್ಯೋಗವು ಸಮಾಜಕ್ಕೆ ಅವಶ್ಯವಾಗಿದೆ.

ಅಸ್ಪೃಶ್ಯರಿಗೆ ಪರಲೋಕಗತಿ ಇಲ್ಲದೆ ಹೋಗಿಲ್ಲವೆಂಬ ಮಾತು ಅತಿ ಪೆಚ್ಚಿನ ತುಚ್ಛೀಕಾರದ ಮಾತಾಗಿದೆ. ಪರಲೋಕದ ಗತಿಯನ್ನು ತಪ್ಪಿಸಲಿಕ್ಕೆ ಸಾಧ್ಯವಿದ್ದರೆ ಅದನ್ನೂ ಸಹ ಇವರು ತಪ್ಪಿಸುತ್ತಿದ್ದರೆಂತ ತೋರುತ್ತದೆ.

ಗಾಂಧಿಯು ಅಸ್ಪೃಶ್ಯರನ್ನು ಮುಟ್ಟಬಹುದೆಂತ ಹೇಳಿದ್ದಣ್ಣಿಗೆ ಮಣ್ಣು ಎರಚುವದಾಗಿದೆ ಅಸ್ಪೃಶ್ಯರನ್ನು ಮುಟ್ಟಬೇಕಾದರೆ ಅಸ್ಪೃಶ್ಯ ಅಣುಗಳ ಕಾಟಕ್ಕೆ ಒಳಗಾದವರೇ ಆಗಬೇಕೆಂತ ಹೇಳಿದಂತಾಯಿತು ಅಸ್ಪೃಶ್ಯತೆಯನ್ನು ನಂಬದ ಮುಸಲ್ಮಾನರಿಗೂ ಮತ್ತು ಕ್ರಿಶ್ಚಿಯನರಿಗೂ ಯಾವ ಶಿಕ್ಷೆ ಕಾದಿದೆಯೋ ದೇವರೇಬಲ್ಲ.

ಮನುಷ್ಯನ ಸುತ್ತ ಒಳ್ಳೇ ಆವರಣವಿದೆಯೆಂಬದು ಎಲ್ಲಾ ಸಂದರ್ಭದಲ್ಲೂ ಒಪ್ಪತಕ್ಕದ್ದಲ್ಲ. ಉತ್ತಮಜಾತಿಯ ಜನರೆಲ್ಲರೂ ಕಸ್ತೂರಿಯ ಸುವಾಸನೆಯುಳ್ಳವರೆಂತಲೂ ಅಸ್ಪೃಶ್ಯರೆಲ್ಲರೂ ಈರುಳ್ಳಿಯಂತೆ ದುರ್ವಾಸನೆಯುಳ್ಳವರೆಂತಲೂ ಒಪ್ಪತಕ್ಕದ್ದಲ್ಲ. ಅಸ್ಪೃಶ್ಯರಲ್ಲಿ ಉತ್ತಮಜಾತಿಯವರೆನ್ನಿಸಿಕೊಂಡವರಿಗಿಂತ ಮೇಲಾಗಿರುವವರು ಸಾವಿರಾರು ಜನರಿದ್ದಾರೆ.

ಐದು ವರ್ಷದಿಂದ ಒಂದೇ ರೀತಿಯಾಗಿ ಅಸ್ಪೃಶ್ಯತಾ ನಿವಾರಣೆಕೆಲಸ ನಡಿಯುತ್ತಿದ್ದರೂ ಸಹ ಇಂಥಾ ನೀತಿಗೆ ವಿರೋಧವಾದ ಕೆಟ್ಟ ಪದ್ಧತಿಯನ್ನು ಸರಿಯೆಂತ ವಾದಿಸುವ "ತಿಳುವಳಿಕೆ"ಯುಳ್ಳ ಜನರಿದ್ದಾರಲ್ಲವೆಂತ ವ್ಯಸನಪಡಬೇಕಾಗಿದೆ ಒಂದೇ ಮನುಷ್ಯನಲ್ಲಿ ಅಸ್ಪೃಶ್ಯತೆಯಲ್ಲಿ ನಂಬಿಕೆಯೂ ತಿಳುವಳಿಕೆಯೂ ಇರುವದರಿಂದ ಅಸ್ಪೃಶ್ಯತೆಗೆ ಬಲ ಬರುವದಿಲ್ಲ. ತಿಳುವಳಿಕೆಯಿಂದ ನಡತೆಯೂ ಧರ್ಮಬುದ್ಧಿಯೂ ಹುಟ್ಟುವದಿಲ್ಲವಲ್ಲಾ ಎಂತ ವ್ಯಸನಪಡಬೇಕಾಗಿದೆಯಷ್ಟೆ.

(ಯಂಗ್ ಇಂಡಿಯಾ).

ವಿಚಿತ್ರ ಸೃಷ್ಟಿ.

ಬಂಗಾಳಾಧಿಪತ್ಯದ ನವಕಲಿ ಜಿಲ್ಲೆಯ ಕರತ್ತಿಲ್ ಎಂಬ ಗ್ರಾಮದಲ್ಲಿ 18 ವರ್ಷ ಪ್ರಾಯದ ಒಬ್ಬ ಹೆಂಗಸು ಜುಲೈ 16ರಲ್ಲಿ ಹುಲಿಮರಿಯಂತಿರುವ ಮಗುವನ್ನು ಹಡೆದಳು. ಅದಕ್ಕೆ ನಾಲ್ಕು ಕಾಲುಗಳು ಬಾಲ, ಭುಜದ ಮೇಲೆ ಕೂದಲು ಉಳ್ಳದ್ದಾಗಿತ್ತು. ಹುಟ್ಟುವಾಗ ಜೀವವಿತ್ತು. ದಾದಿಯು ಹೆದರಿ ಅದನ್ನು ಎತ್ತಿ ಹೊರಗೆ ಹಾಕಿಬಿಟ್ಟಳು. ಆಗ ಅದು ಸತ್ತುಹೋಯಿತು. ನವಪುರದ ಡಾಕ್ಟರರೊಬ್ಬರು ಅದನ್ನು "ಸ್ಪಿರಿಟ್ಟು"ನಲ್ಲಿ ಕೆಡದಂತೆ ಇಟ್ಟಿದ್ದಾರೆ. ಅನೇಕರು ಅಲ್ಲಿಗೆ ಹೋಗಿ ಈ ವಿಶೇಷವನ್ನು ನೋಡುತ್ತಿದ್ದಾರಂತೆ. ಹೆಂಗಸು ಜ್ಞಾನ ತಪ್ಪಿ ಅಪಾಯ ಸ್ಥಿತಿಯಲ್ಲಿದ್ದಾಳೆ.

WANTED

Two qualified Surveyors, salary varying from Rs 30/- to 50/- per mensem with further prospects.

Apply sharp to the undersigned with qualifications and testimonials and other terms of the appointment, by the 15th of September the latest

U. A. Ganapathi,
Surveyor and drafts-man
Coorg Survey party Co. Ltd.,
Napoklu Post
4—1 Coorg Dist. S India
Tel Office. MERCARA.
(12 miles from Napoklu)
Tel Address "ORANGE"

COORG FOREST DEPARTMENT
NOTICE

Mercara, the 31st July 1926

Tenders are invited for the transport of about 80,000 c. ft of timber from Kallalla in the Coorg Eastern Forests to Hunsur during the season 1st October 1926 to 15th June 1927. Tenders will be received up to midday on 15-8-1926.

For further particulars apply to the Divisional Forest Officer, South Coorg Mercara

---

ಸ್ಪೆನ್ಸರ್ ಕಂಪೆನಿ

ಮಡಿಕೇರಿ ಮತ್ತು ಪೊಳ್ಳಿಬೆಟ್ಟ.

ಬೆಲೆ ಸುಲಭ! **ಈಗತಾನೇ ಬಂದಿರುತ್ತೆ!!** **ಜಾಗ್ರತೆ ಕೊಳ್ಳಿರಿ!!!**

ಒಂಟಿ ಕೊಳವಿನ ತೋಟ ಕೋವಿ 34 ಇಂಚಿನ, 1ಕ್ಕೆ	ರೂ. 50—8—0		2 ಯರ್ಡ್ ನ ಮದ್ದು 1 ಪೌಂಡು ಡಬ್ಬಿಗೆ ರೂ.	2—4—0
" " 36 "	" 52—8—0		" ½ " "	1—4—0
ಜೋಡಿ " "	" 115—0—0		ಕೇಪು 250ರ ಡಬ್ಬಿ 1ಕ್ಕೆ "	1—2—0
" " "	" 135—0—0		ಮಳೆಗಾಲದ ಕೋಟು 1ಕ್ಕೆ "	25—0—0
" ಕೇಪು ಕೋವಿ "	" 70—0—0		" ಬೂಟ್ಸ್ " "	16—8—0
ಇನ್ನೂ ಅನೇಕ ತರದ ಕೋವಿಗಳು ಸಹ ಬಂದಿರುತ್ತೆ.			ಇಂಗ್ಲಿಷ್ ಕೆಲಸದ ಕೊಡೆ 1ಕ್ಕೆ "	3—12—0
12ನೇ ನಂಬ್ರು ತೋಟ 100ಕ್ಕೆ	" 12—4—0		ಥರ್ಮಸ್ ಫ್ಲಾಸ್ಕ್ (Thermos flask) (24 ಗಂಟೆಯವರೆಗೆ ಕಾಫಿ ಇತ್ಯಾದಿ ಬಿಸಿಯಾಗಿರಿಸುವ ಕುಪ್ಪಿ 1ಕ್ಕೆ	1—8—0

ವೈಯಿನ್ಸ್, ಸ್ಟೋರ್ಸ್, ಹಾರ್ಡ್‌ವೇರ್, ಕ್ರಾಕರಿ, ಗ್ಲಾಸ್‌ವೇರ್, ಲ್ಯಾಂಪ್ಸ್, ಪರ್ಫ್ಯೂಮರಿ, ಸೋಪ್ಸ್, ಸ್ಟೇಶನರಿ, ಫ್ಯಾನ್ಸಿಗುಡ್ಸ್, ಫೋಟೋಗ್ರಾಫ್ಸ್, ಟುಬ್ಯಾಕೊ, ಸಿಗರೇಟ್ಸ್, ಸಿಗಾರ್ಸ್, ಬೂಟ್ಸ್, ಗ್ರಾಮೋಫೋನ್, ಮೋಟಾರ್ ಎಣ್ಣೆ ಮತ್ತು ಸಾಹಿತ್ಯ, ಎರೇಟಿಡ್‌ವಾಟರ್ಸ್, ಗೇಮ್ಸ್ ಮತ್ತು ಟಾಯಿಸ್

ಮೇಲ್ಕಂಡ ಸಾಮಾನುಗಳು ಪ್ರತಿನಿತ್ಯವೂ ದೊರಕುವುದೆಂದು ತಿಳಿಸಲು ಸಂತೋಷಪಡುತ್ತೇವೆ. 52—29

ವರ್ತಮಾನ ಸಂಗ್ರಹ.

ಒಳದೇಶ

ಸಹಕಾರ ಸೆಂಟ್ರಲ್ ಬ್ಯಾಂಕಿನ ಡೈರೆಕ್ಟರುಗಳ ಮೀಟಿಂಗು ತಾ. 7ರಲ್ಲಿ ಮಡಿಕೇರಿಯಲ್ಲಿ ನಡೆಯುವದು.

ದಕ್ಷಿಣಕೊಡಗು ತಾಲೋಕಿನ ಸುಬ್ರಮತ್ತು ಗೋಣಿಗದ್ದೆಯಲ್ಲಿರುವ ದೊಡ್ಡಿಗಳು ಜುಲೈ ತಾ. 15ರಿಂದ ಮುಚ್ಚಲ್ಪಟ್ಟಿವೆ.

ಮೂನರ್ಾಡಿಗಾಗಿ ಮಡಿಕೇರಿಯಿಂದ ವೀರರಾಜಪೇಟೆಗೆ ಬಸ್ಸು ಸರ್ವಿಸು ಹೊಸತ ಈ ವಾರದಿಂದ ಪ್ರಾರಂಭವಾಗಿದೆ. ಮಡಿಕೇರಿಯಿಂದ ಬಸ್ಸು ಬೆಳಿಗ್ಗೆ 9½ ಗಂಟೆಗೆ ಹೊರಡುತ್ತೆ.

ಕಳೆದ ಜುಲೈ ತಾ 15ರಲ್ಲಿ ನಡೆದ ಮಡಿಕೇರಿ ಮುನ್ಸಿಪಲ್ ಕಮಿಟಿಯ ಚುನಾವಣೆಯು ಚೀಫ್‌ಕಮಿಷನರವರಿಂದ ಮಂಜೂರಾಗಿದೆ. ಸದರಿ ಕಮಿಟಿಯ ಅಧ್ಯಕ್ಷರ ಚುನಾವಣೆಯು ಈ ತಾ. 7ರಲ್ಲಿ ನಡೆಯುವುದು.

ಇನ್ನು ಮುಂದೆ ಕೊಡಗಿನಲ್ಲಿ ಮುನಸಿಫ್ ಕೋರ್ಟು ಒಂದೇ ಇರುವದೆಂದೂ, ಅದು ದಕ್ಷಿಣಕೊಡಗಿಗಾಗಿ ವೀರರಾಜಪೇಟೆಯಲ್ಲಿರುವದೆಂದೂ ಗವರ್ನರ್ ಜನರಲ್‌ರವರ ಮಂಜೂರಾತಿಯೊಡನೆ ಚೀಫ್ ಕಮಿಷನರವರು ತೀರ್ಮಾನಿಸಿರುವರು.

ಜುಲೈ ತಾ 31 ರಿಂದ ಈ ತಾ 6ರ ವರೆಗೆ ಮಡಿಕೇರಿಯಲ್ಲಿ 14-23 ಇಂಚು ಮಳೆಯಾಗಿದೆ. ತಾ. 5ರಲ್ಲಿ 4.62 ಇಂಚೂ, ತಾ 6ರಲ್ಲಿ 4.05 ಇಂಚೂ ಮಳೆ ಬಿತ್ತು. ಗಾಳಿಯು ಬಹಳ ಜೋರಾಗಿದೆ. ದಕ್ಷಿಣ ಕೊಡಗಿಗೂ ತುಂಬಾ ಮಳೆಯಾಗಿದೆಯೆಂದು ತಿಳಿಯಬರುತ್ತದೆ.

ಕಳೆದ ಎಂಟ್ಹತ್ತು ದಿವಸಗಳಿಂದ ಒಂದು ಜೊತೆ ಕೋಣಗಳು ವಾರಸಿಯಾಗಿ ಬಂದು ತನ್ನ ಎಮ್ಮೆ ದನಗಳ ಸಂಗಡ ಸೇರಿಕೊಂಡಿವೆಯೆಂದೂ ವಾರೀಸರು ಬಂದು ಹಿಡಕೊಂಡು ಹೋಗಬಹುದೆಂದೂ ಮೇಕೇರಿ ಗ್ರಾಮದ ಮೆ. ಅಜ್ಜಮಾಡ ಡಬ್ಲ್ಯು. ಕಾರ್ಯಪ್ಪನವರು ತಿಳಿಸಿರುತ್ತಾರೆ.

ಡಿಸ್ಟ್ರಿಕ್ಟ್‌ಬೋರ್ಡಿನ ಮುಂದಿರಿಸಿ ಇಡಲ್ಪಟ್ಟ ಬಜೆಟ್ ಮೀಟಿಂಗು ಈ ತಾ 14ರಲ್ಲಿ ನಡೆಯುವದು. ಕಳೆದ ಮೀಟಿಂಗಿನಲ್ಲಿ ಡಿ. ಬೋರ್ಡು ಚುನಾವಣೆಯ ರೂಲುಗಳ ಚರ್ಚೆಯನ್ನು ಮುಂದರಿಸಬೇಕೆಂದು ಹಾಕಿದ್ದ ಠರಾವನ್ನು ಅಧ್ಯಕ್ಷರು ಅಂಗೀಕರಿಸಿ (ಒಪ್ಪಲಿಲ್ಲವಾಗಿ ತಿಳಿಯಬಂತೆಂದು ಕಳೆದ ವಾರ ಪ್ರಕಟಿಸಿದ್ದೆವು) ಆ ರೂಲುಗಳ ಚರ್ಚೆಯನ್ನು ಈ ಮೀಟಿಂಗಿಗೆ ಇಟ್ಟಿರುವದು ತೃಪ್ತಿಕರ.

ಬೆಂಬೆಳಿಯೂರು ಗ್ರಾಮದ ಮೆ. ಚೆಂಬಾಂಡ ಪಿ. ಮುತ್ತಣ್ಣನವರು ಕಳೆದ ತಾ 22ರಲ್ಲಿ ಅಕಾಲಮರಣ ಹೊಂದಿದಕ್ಕೆ ವಿಷಾದಿಸುತ್ತೇವೆ. ಇವರು ಊರಿನ ಪಟೇಲರಾಗಿಯೂ ಸಹಕಾರಿ ಸಂಘದ ಪ್ರೆಸಿಡೆಂಟರಾಗಿಯೂ ಮಹಾದೇವಸ್ಥಾನದ ಸಕ್ರೆಟರಿ ಮತ್ತು ಟ್ರೆಜರರಾಗಿಯೂ ಇದ್ದು ಊರಿನ ಏಳಿಗೆಯ ಕೆಲಸದಲ್ಲಿ ಮಾತ್ರವಲ್ಲ, ಬೇರೆಸಾರ್ವಜನಿಕಕೆಲಸಗಳಲ್ಲಿಯೂ ತುಂಬಾ ಶ್ರದ್ಧೆತೆಗೆದುಕೊಳ್ಳುತ್ತಿದ್ದರು.

ಮಡಿಕೇರಿ ಮಹದೇವಪೇಟೆಯಲ್ಲಿರುವ ಚಿನ್ನದ ವ್ಯಾಪಾರಿ ಪಿ. ನಾಗಪ್ಪಯ್ಯನವರ ಒಳ ಕೆಲಸಮಾಡಿಕೊಂಡಿದ್ದ ಯುಸ್. ಗೋವಿಂದಾಚಾರಿ ಎಂಬವನು ಕಳೆದ ತಾರೀಕು 31ರಲ್ಲಿ ನಾಗಪ್ಪಯ್ಯನವರು ಕೆಲಸಮಾಡಲು ಕೊಟ್ಟಿದ್ದ 7 ಪವನು ಚಿನ್ನವನ್ನು ಅಪಹರಿಸಿಕೊಂಡು ಹೋದನೆಂದೂ ಮೆ. ಕರವಂಡ ಮಂದಣ್ಣನವರು ಮೈಸೂರಿಗೆ ಹೋಗಿದ್ದಲ್ಲಿ ಮೈಸೂರು ಟೌನಿನಲ್ಲಿ ಅವನನ್ನು ಕಂಡು ಪೋಲೀಸಿಗೆ ತಿಳಿಸಿದರಿಂದ ಸ್ವಾಗಿರಿಮಾಡಿಸಿರುತ್ತಾರೆಂದೂ ವರ್ತಮಾನ.

ಸೋಮವಾರಪೇಟೆ ಸಮೀಪ ಕೂಡುಬೂರು ತೋಟದಲ್ಲಿ ಕಳೆದ ತಾ. 23ನೇ ರಾತ್ರಿ ಬಲ್ಲವರ ಪರಮೇಶ್ವರನೆಂಬವನನ್ನು ಒಂದೇ ಮನೆಯಲ್ಲಿ ವಾಸವಿದ್ದ ಅವನ ಕಡ್ಡ ಸೋಮನೆಂಬವನು ಹಾರೆಯಿಂದ ಹೊಡೆದುಕೊಂಡಿರುತ್ತಾನೆಂದು ವರ್ತಮಾನ. ಸೋಮನು ಬಾಯಿಬಿಟ್ಟ ಕಾರಣದಿಂದ ಅವನನ್ನು ಸೋಮವಾರಪೇಟೆಆಸ್ಪತ್ರೆಗೆ ಕಳುಹಿಸಿದ್ದರಂತೆ. ನೂರು ನಾಲ್ಕು ದಿವಸದ ನಂತರ ಅವನು ತಾ. 29ರಲ್ಲಿ ಸಾಯಂಕಾಲ ವಾಪಸು ಮನೆಗೆ ಬಂದು ರಾತ್ರಿ ಎಲ್ಲರೂ ಮಲಗಿ ನಿದ್ರೆ ಮಾಡುತ್ತಿರುವಾಗ್ಯೆ ಹೊಡೆದು ಕೊಂದದ್ದಾಗಿರಬೇಕೆಂದು ಸುದ್ದಿ. ಕೇಸು ಪೊಲೀಸು ತನಿಖೆಯಲ್ಲಿದೆ.

ಚೀಫ್ ಕಮಿಷನರವರು 1926ನೇ ಇಸವಿಯ ಕೊಡಗು ಲೇಬರ್ ಆಕ್ಟಿನ 4ನೇ ಸೆಕ್ಷನ್ ಮೇರೆ ಈ ಕೆಳಗಿನ ಮಹನೀಯರಿಗೆ ಕರಾರುಗಳನ್ನು ಎಟೆಸ್ಟ್ ಮಾಡುವ ಅಧಿಕಾರಕೊಟ್ಟಿರುವರು. ಮೆ. ಗಳಾದ ಜೆ. ಎ. ಟಿಪೆಟ್ಸ್ ವಿಲ್ಮಾಟ್‌ರವರು, ಪಿ. ಜೆ. ಟಿಪ್ಪಿಂಗ್‌ರವರು, ಆರ್. ಬೆಂಟ್ಲೆರವರು, ಸಿ. ಡಬ್ಲ್ಯು. ಕ್ಲೋವ್‌ರವರು, ಸಿ. ಜೆ ಮೆಕ್ಲೀನ್‌ರವರು, ಡಬ್ಲ್ಯು. ಇ. ಡಿಕ್ಕಿನ್‌ಸನ್‌ರವರು, ಯಸ್. ಪಿ. ಕ್ಲೇರ್ ರೇಮಂಡ್‌ರವರು, ಎ ಎಫ್. ನೇನಿಯರ್‌ರವರು, ಎಫ್. ಮೆಕ್ರೆಯವರು, ಕರ್ನಲ್ ಡಬ್ಲ್ಯು. ಬಿ. ಒಕ್ಲೇಲ್‌ರವರು, ಪಿ. ಪೆಟ್ಟಿಂಜೆಲ್‌ರವರು, ಡಬ್ಲ್ಯು. ಎ. ಎಫ್. ಬ್ರೇಕನ್‌ರವರು, ಮತ್ತು ಸಿ. ಎ. ಲೀಡ್‌ರವರು.

ಮೆ ಕೆ ಪಿ, ಚಿಣ್ಣಪ್ಪನವರು 'ಲೋಕಪಾವನದ' ಪ್ರಿಂಟರ್ ಮತ್ತು ಪಬ್ಲಿಷರಾದ ಮೆ. ಬಿ. ಬೆಳ್ಯಪ್ಪನವರ ಮೇಲೆ ಕೊಟ್ಟಿದ್ದ ಮಾನನಷ್ಟದ ಕ್ರಿಮಿನಲ್ ಮೊಕದ್ದಮೆಯಲ್ಲಿ ಚಾರ್ಜು ಮಾಡಲ್ಪಟ್ಟಿದ್ದ ಮೆ. ಬೆಳ್ಯಪ್ಪನವರ ಕಡೆ ಬಚಾವು ಸಾಕ್ಷಿ ವಿಚಾರಕ್ಕೆ ಇಟ್ಟಿದ್ದ ಜುಲೈ ತಾ 31ರಲ್ಲಿ ಕಕ್ಷಿಗಾರರ ರಾಜಿಯಾಗಿ ಮೆ. ಚಿಣ್ಣಪ್ಪನವರು ಮೊಕದ್ದಮೆಯನ್ನು ವಾಪಸು ತೆಗೆದುಕೊಂಡರು. ಮೆ. ಬಿದ್ದಂಡ ಪೋನ್ನಯ್ಯನವರು ಮೆ. ಕೆ ಪಿ. ಚಿಣ್ಣಪ್ಪನವರ ಮತ್ತು 'ಕೊಡಗು' ಪತ್ರಿಕೆಯ ಪ್ರಿಂಟರ್ ಮತ್ತು ಪಬ್ಲಿಷರಾಗಿದ್ದ ರಾ. ಬಾ. ಕೆ. ಅಪ್ಪಯ್ಯನವರ ಮೇಲೆ ಕೊಟ್ಟಿದ್ದ ಮೊಕದ್ದಮೆಯನ್ನು ಮೆ. ಪೊನ್ನಯ್ಯನವರ ಕಡೆ ಲಾಯರವರು ಅದೇ ದಿನ ವಾಪಸು ತೆಗೆದುಕೊಂಡರು.

ವ್ಯವಸಾಯ ಕಮಿಟಿ.

ಕೊಡಗಿನ ವ್ಯವಸಾಯ ಕ್ರಮವನ್ನು ಉತ್ತಮಗೊಳಿಸುವ ಬಗ್ಗೆ ಆಲೋಚಿಸಲು ಚೀಫ್ ಕಮಿಷನರವರಿಂದ ನೇಮಿಸಲ್ಪಟ್ಟಿರುವ ಕಮಿಷನರರು, ಡೆಪ್ಯುಟಿ ಡೈರೆಕ್ಟರರು, ಮೆ. ಕೆ. ಯಂ. ಮಂದಣ್ಣ ಯಂ. ಎಲ್. ಸಿ. ಯವರು, ಮೆ. ಚೇರಂಡ ಚಂಗಪ್ಪನವರು, ಮೆ. ಪಿ. ಗಣಪಯ್ಯ ಯಂ. ಯಲ್. ಸಿ. ಯವರು, ಮತ್ತು ಮೆ. ಬಿ. ಬಸವನಗೌಡ್ಯ್ರನವರು. ಈ ಆರು ಮೆಂಬರುಗಳ ಕಮಿಟಿಯ ಮೀಟಿಂಗು ನಾವು ಈ ಮೊದಲೇ ಪ್ರಕಟಿಸಿದಂತೆ ಕಳೆದ ತಾ. 19ರಲ್ಲಿ ನಡೆಯಿತು. ಕೊಡಗಿನ ವ್ಯವಸಾಯ ಇಲಾಖೆಯ ಸಿಬ್ಬಂದಿಯನ್ನು ಕ್ರಮಪಡಿಸಲು ಅವರು ಈ ಕೆಳಗಿನ ರೀತಿಗಳನ್ನು ಚರ್ಚಿಸಿದರು. 1. ವ್ಯವಸಾಯದಲ್ಲಿ ಪ್ರವೀಣರಾದವರನ್ನು ಇಲ್ಲಿಯ ಸರ್ಕಾರವು ನ್ಯಾಯವಾದ ಸಂಬಳ ಕೊಟ್ಟು ಕೆಲಸಕ್ಕಿಟ್ಟುಕೊಳ್ಳುವದು. 2 ಬೇರೆ ಕಡೆಗಳ ಪರಿಶೋಧನೆಗಳ ಫಲಿತಾಂಶವನ್ನು ಇಲ್ಲಿಯ ಇಲಾಖೆಯವರು ಪ್ರದರ್ಶಿಸುವಂತೆ ಮಾಡುವದು. 3. ಈಗ ಇರುವಂತೆ ವ್ಯವಸಾಯದಲ್ಲಿ ತರಬೇತಾದ ಬಿಟ್ಟು ಉದ್ಯೋಗಸ್ಥನನ್ನು ಈ ವಿಷಯ ಹೆಚ್ಚು ತಿಳುವಳಿಕೆ ಇಲ್ಲದ ಕಮಿಷನರು ಮತ್ತು ಡೆಪ್ಯುಟಿ ಡೈರೆಕ್ಟರವರ ತಾಬೆಯಲ್ಲಿಡುವದು. 4. ಮದ್ರಾಸಿನ ಈ ಇಲಾಖೆಯ ಪ್ರವೀಣರ ಕೈಕೆಳಗೆ ವ್ಯವಸಾಯದಲ್ಲಿ ತರಬೇತು ಹೊಂದಿರುವ ಕೆಲವರನ್ನು ಇಲ್ಲಿ ಇಟ್ಟುಕೊಳ್ಳುವದು. ಕಡೇಗೆ ಈ ಇಲಾಖೆಯನ್ನು ಉತ್ತಮಗೊಳಿಸಲಿಕ್ಕಿರುವ ಸೂಚನೆಗಳನ್ನೂ ರೈತರು ಅನುಭವಿಸುತ್ತಿರುವ ಕಷ್ಟಗಳನ್ನೂ ಜನರಿಂದ ಸಂಗ್ರಹಿಸುವಂತೆ ತೀರ್ಮಾನಿಸಿದರು. ಇದಕ್ಕಾಗಿ ಈ ಕಮಿಟಿಯವರು ಈ ತಾ. 13ರಲ್ಲಿ ಮಡಿಕೇರಿಯಲ್ಲಿಯೂ, ತಾ. 16ರಲ್ಲಿ ಸೋಮವಾರಪೇಟೆಯಲ್ಲಿಯೂ, ತಾ. 17ರಲ್ಲಿ ಶನಿವಾರಸಂತೆಯಲ್ಲಿಯೂ, ತಾ. 24ರಲ್ಲಿ ವೀರರಾಜಪೇಟೆಯಲ್ಲಿಯೂ, ಮತ್ತು ತಾ. 25ರಲ್ಲಿ ಪೊನ್ನಂಪೇಟೆಯಲ್ಲಿಯೂ ಮೀಟಿಂಗು ನಡಿಸುವರು. ಈ ವಿಷಯ ಸೂಚನೆಗಳನ್ನು ಕೊಡಲು ಇಚ್ಛಿಸುವವರು ಆಯಾಯ ಮೀಟಿಂಗುಗಳಿಗಿಂತ ಮುಂಚೆ ಮಡಿಕೇರಿಯಲ್ಲಿರುವ ಡೆಪ್ಯುಟಿ ಡೈರೆಕ್ಟರವರಿಗೆ ತಿಳಿಸಿದಲ್ಲಿ ಅವರ ಸೂಚನೆಗಳಿಗೆ ಅವಕಾಶ ದೊರೆಯುವುದು

ಹಿಂದೂದೇಶ.

ಜುಲೈ ತಾ. 25ರಲ್ಲಿ ಮೈಸೂರು ಆಸ್ಥಾನ ವಿದ್ವಾನ ವೈಣಿಕ ಶಿಖಾಮಣಿ ಶ್ರೀ ಶೇಷಣ್ಣನವರು ಅವರ 75 ನೇ ವಯಸ್ಸಿನಲ್ಲಿ ಶಿವಾಧೀನರಾದರು.

ಹಿಂದೂದೇಶದ ಹಲವು ಕಡೆಗಳಲ್ಲಿ ವಿಧವಾ ವಿವಾಹ ಪ್ರೋತ್ಸಾಹದ ಚಳವಳ ನಡೆಯುತ್ತಿದ್ದು, ಲಾಹೋರ್ ಪಟ್ಟಣದಲ್ಲಿ ಕಳೆದ ಮೇ ತಿಂಗಳಲ್ಲಿ 239 ವಿಧವಾ ವಿವಾಹಗಳು ಆದವಂತೆ!

ಮಹಾತ್ಮ ಗಾಂಧಿಯವರು ಅಹಮ್ಮದಾಬಾದಿನಲ್ಲಿ ಸ್ಥಾಪಿಸಿರುವ ರಾಷ್ಟ್ರೀಯ ಶಾಲೆಯಲ್ಲಿ ಕ್ರೈಸ್ತಮತದ ಬೈಬಲನ್ನು ಪ್ರತಿ ಶನಿವಾರ ಒಂದು ಗಂಟೆ ವರೆಗೆ ಬೋಧಿಸುವಂತೆ ತೀರ್ಮಾನಿಸಿರುವರು.

ಶ್ರೀಮತಿ ಕಮಲ ಚಟ್ಟೋಪಾಧ್ಯಾಯರವರು ಕಾಂಗ್ರೆಸ್ಸಿನ ಪರವಾಗಿ ದಕ್ಷಿಣ ಕನ್ನಡ ಜಿಲ್ಲೆಯಿಂದ ಮದ್ರಾಸು ಲೆಜಿಸ್ಲೇಟಿವ್ ಕೌನ್ಸಿಲು ಚುನಾವಣೆಗೆ ಉಮೇದುವಾರರಾಗಿ ನಿಲ್ಲುವರೆಂದು ವರ್ತಮಾನ.

ಕೊಡಗಿಗೆ ರೆಟ್ಲ್‌ಮೆಂಟ್ ಆಫೀಸರಾಗಿ ಬಂದಿದ್ದ ಮೆ. ಎ ವೈ. ಜಿ. ಕ್ಯಾಂಬೆಲ್ ಐ ಸಿ ಯಸ್. ರವರು ಮದ್ರಾಸು ಎಗ್ಸಿಕ್ಯುಟಿವ್ ಕೌನ್ಸಿಲಿನ ಲಾ ಮೆಂಬರಾಗಿ ಸರ್. ಸಿ. ಪಿ ರಾಮಸ್ವಾಮಿಯವರ ಬದಲಿಗೆ ನೇಮಿಸಲ್ಪಟ್ಟಿರುವರು.

ಕೊಲ್ಹಾಪುರದ ಮಹಾರಾಜರು ಹುಡುಗರಿಗೆ 16ವರ್ಷ ಪ್ರಾಯದೊಳಗೂ, ಹುಡುಗಿಯರಿಗೆ 10 ವರ್ಷ ಪ್ರಾಯದೊಳಗೂ ಲಗ್ನ ಮಾಡಕೂಡದೆಂದು ಶಾಸನಮಾಡಿರುವರು ಸಮಾಜ ಸುಧಾರಣೆಗೂ ಕಾಯಿದೆಯ ಸಹಾಯ ಅವಶ್ಯವಿದೆಯೆಂದು ಜನರು ಈಗೀಗ ನಂಬುತ್ತಿದ್ದಾರೆ.

ನದ್ಯಾಡಿನ ಸಮೀಪ ಆನಂದ ಎಂಬಲ್ಲಿ ಜುಲೈ ತಾ 23ರಲ್ಲಿ ಕ್ರೈಸ್ತ ಪಾದರಿಗಳು ದೊಡ್ಡ ಸಭೆಗೆ ಒಂದು ಮರದಡಿಯಲ್ಲಿ ಮತ ಬೋಧನೆ ಮಾಡುತ್ತಿರುವಾಗ್ಯೆ ಆ ಮರವು ಥಟ್ಟನೆ ಮುರಿದು ಬಿದ್ದಸರಿಂದ ಆರು ಜನರು ಮೃತರಾದರು, 13 ಜನರಿಗೆ ಗಾಯಗಳುಂಟಾದವು. ಸತ್ತವರ ಪೈಕಿ ಬೋಧಿಸುತ್ತಿದ್ದ ಪಾದ್ರಿಯೊಬ್ಬನು.

ಮದ್ರಾಸು ಪೊಲೀಸು ಕೋರ್ಟಿನಲ್ಲಿ ಯಂ. ಎ. ಖಲೀಕ ಎಂಬವನು ಮೋಸಮಾಡಿದ ತಪ್ಪಿಗೆ ಗುರಿಮಾಡಲ್ಪಟ್ಟು ಒಂದು ವರ್ಷ ಕಠಿಣ ಸಜೆಗೆ ಗುರಿಮಾಡಲ್ಪಟ್ಟಿರುತ್ತಾನೆ. ಇವನು ಜೇಮ್ಸ್ ಕೂಪರ್ ಎಂಬ ಟೀ ವ್ಯಾಪಾರಿಯ ಏಜೆಂಟ ಪತ್ರಗಳನ್ನು ಪ್ರಿಂಟುಮಾಡಿಸಿಕೊಂಡು ಟೀಯ ಪೆಟ್ಟಿಗೆಗಳನ್ನು ಕೊಡುವದಾಗಿ ನಂಬಿಸಿ ಒಬ್ಬನಿಂದ 180 ರೂ. ಪಡಕೊಂಡು ಮರ ಕುಯಿದ ಹುಡಿಯನ್ನು ಕಳುಹಿಸಿಕೊಟ್ಟಿದ್ದನು. ಇದೇ ರೀತಿ ಇನ್ನೂ ಅನೇಕರಿಗೆ ಮೋಸಮಾಡಿರುವನಂತೆ.

'ಇಂಡಿಯನ್ ನೇಶನಲ್ ಯೂನಿಯನ್' ಎಂಬ ಸಂಸ್ಥೆಯನ್ನು ಸ್ಥಾಪಿಸುವ ಕೆಲಸವನ್ನು ಮೌಲಾನ ಅಬ್ದುಲ್ ಕಲಂ ಅಜಾದ್ ಮತ್ತು ಪಂಡಿತ ಮೋತಿಲಾಲ್ ನೆಹರುರವರು ಕೈಕೊಂಡಿರುವರು. ಜಾತಿವಾರು ವೈಷಮ್ಯವನ್ನು ಹೋಗಲಾಡಿಸಿ ಎಲ್ಲರಲ್ಲಿಯೂ ರಾಷ್ಟ್ರೀಯತ್ವದ ಒಗ್ಗಟ್ಟನ್ನು ಸ್ಥಾಪಿಸುವುದೇ ಈ ಸಂಸ್ಥೆಯ ಉದ್ದೇಶ. ಜಾತಿವಾರು ಸಂಸ್ಥೆಗಳ ಮೆಂಬರಲ್ಲದವರು ಯಾವ ರಾಜಕೀಯ ಪಂಗಡದವರಾದರೂ ಈ ಸಂಸ್ಥೆಗೆ ಸೇರಬಹುದು. ಈ ಸಂಸ್ಥೆಯ ಧ್ಯೇಯಕ್ಕೆ ಈಗಾಗಲೇ ಅನೇಕ ಮುಂದಾಳುಗಳು ಒಪ್ಪಿರುವರು. ಹೀಗೆ ಒಪ್ಪಿರುವವರ ಪ್ರಥಮ ಮೀಟಿಂಗು ಈ ತಾ. 19ರಲ್ಲಿ ಅಲಹಾಬಾದಿನಲ್ಲಿ ನಡೆಯಲಿಕ್ಕಿದೆ.

ಆಗೊಸ್ಟು 1ನೇ ತಾರೀಕಿನಲ್ಲಿ ಲೋಕಮಾನ್ಯತಿಲಕರ 6ನೇ ವರ್ಷ ತಿಥಿಯನ್ನು ಹಿಂದೂದೇಶದ ಹಲವು ಕಡೆಗಳಲ್ಲಿ ಆಚರಿಸಿದರು. ಪೂನಾಕ್ಕೆ ಈ ಕೆಳಗಿನ ತಂತೀ ವರ್ತಮಾನವನ್ನು ಮಹಾತ್ಮ ಗಾಂಧಿಯವರು ಕಳುಹಿಸಿದರು. ಮಹಾರಾಷ್ಟ್ರದಲ್ಲಿ ನನ್ನ ನಂಬಿಗೆ ಎಂದೂ ಕಡಿಮೆಯಿಲ್ಲ. ತ್ಯಾಗ ಬುದ್ಧಿಯನ್ನೂ ಜ್ಞಾನಾರ್ಜನೆಯ ದಾರಿಯನ್ನೂ ಹಿಂದೂಸ್ಥಾನಕ್ಕೆ ಬೋಧಿಸಿದ ಮಹಾರಾಷ್ಟ್ರವು ಖಿದ್ದರನ್ನೂ ಬಡವನ ಚರ್ಕಾವನ್ನೂ ಹೀಯಾಳಿಸವು. ಲೋಕಮಾನ್ಯರು "ಸ್ವರಾಜ್ಯ ನನ್ನ ಜನ್ಮ ಹಕ್ಕಾಗಿದೆ" ಎಂದು ಹಿಂದೀಯರಿಗೆ ಬೋಧಿಸಿದರು. ಇದಕ್ಕೆ ನಾನು ಸೇರಿಸುವುದೇನೆಂದರೆ—"ಸ್ವರಾಜ್ಯಕ್ಕೆ ಚರ್ಕ ಮತ್ತು ಖದ್ದರೇ ಧಾರಿಯಾಗಿದೆ." ಈ ದಾರಿಯನ್ನು ಹಿಡಿಯುವುದರಲ್ಲಿ ಮಹಾರಾಷ್ಟ್ರವು ಏನು ಮುಂದಾದೀತು?

ಕೆಲವು ವರ್ಷಗಳ ಹಿಂದೆ ಕೊಡಗಿನಲ್ಲಿ ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರಾಗಿದ್ದು ಈಗ ಮಧುರೆಯಲ್ಲಿ ಕಲೆಕ್ಟರಾಗಿರುವ ಮೆ. ಆರ್ ಹೆಚ್ ಎಲ್ಲಿಸ್ ಐ. ಸಿ. ಎಸ್. ರವರು ಅಲ್ಲಿ "ಜೀವನದ ಅರ್ಥ" ಎಂಬ ವಿಷಯದ ಮೇಲೆ ಉಪನ್ಯಾಸ ಮಾಡಿದರು. ಕ್ರಿಶ್ಚನ್ ಧರ್ಮದ ಚರಿತ್ರೆಯನ್ನು ವಿವರಿಸಿ ದೇವರು ಮನುಷ್ಯನನ್ನು ನಿರ್ಮಿಸಿದ್ದು ಅವನವನ ಮೋಕ್ಷವನ್ನು ಮಾತ್ರ ಪಡೆಯಲಿಕ್ಕಲ್ಲ, ಒಟ್ಟು ಸಮುದಾಯದವರನ್ನೂ ತನ್ನ ಸಂಗಡ ಮೋಕ್ಷದ ದಾರಿಗೆ ಒಯ್ಯಬೇಕೆಂಬ ಅಭಿಪ್ರಾಯವು [illegible] ಆ ಯೋಜನ ಮಾಡಿದಂತೆ ಕಾರ್ಯ ನಡಿಸಲು ಮನುಷ್ಯನಿಗೆ ಸ್ವತಂತ್ರವಿರುವುದರಿಂದ ಮನುಷ್ಯ ಜಾತಿಯನ್ನೇ ತನ್ನ ಸಹೋದರರಂತೆ ಪ್ರೀತಿಸಿ ಸರ್ವರ ತಂದೆಯಾದ ದೇವರನ್ನು ಮೆಚ್ಚಿಸಬೇಕೆಂತ ಹೇಳಿದರು.

ವಿದೇಶ.

ಈ ವರ್ಷ ಬ್ಯಾರಿಸ್ಟರ್ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದ 108 ಜನರ ಪೈಕಿ 35 ಮಂದಿ ಭಾರತೀಯರೂ, 6 ಮಂದಿ ಸ್ತ್ರೀಯರೂ ಆಗಿರುವರು.

ಜುಲೈ 26ರಲ್ಲು ಚೈನಾದ ಸುರಕಾಂಗ್ ಪಟ್ಟಣದಲ್ಲಿ 21 ಇಂಚು ಮಳೆಬಿದ್ದು ಕೆಲವರು ಮೃತಪಟ್ಟದ್ದಲ್ಲದೆ ಸುಮಾರು ಮೂರುಲಕ್ಷ ರೂಪಾಯಿಯಷ್ಟು ನಷ್ಟ ಉಂಟಾಗಿದೆ.

ಮೆಕ್ಸಿಕೋದ ಸರ್ಕಾರದ ಪ್ರೆಸಿಡೆಂಟರನ್ನು ಕೊಲೆಮಾಡಲು ಒಳಸಂಚು ನಡಿಸಿದವರಲ್ಲಿ 9 ಜನರು ಸೆರೆ ಹಿಡಿಯಲ್ಪಟ್ಟಿರುವರು. ಇವರಲ್ಲಿ ಏಳು ಜನ ಹೆಂಗಸರು, ಇಬ್ಬರು ಗಂಡಸರು.

ವೆಸ್ಟ್ ಇಂಡೀಸ್ ದ್ವೀಪಗಳಲ್ಲಿ ಕಳೆದ ವಾರ ಅದ್ಭುತ ಬಿರುಗಾಳಿಯೆದ್ದು ಅನಾಹುತಗಳಾಗಿವೆ. 126 ಜನರು ಸತ್ತಿದ್ದಾರೆ. 400ಜನರು ಕಾಣದೆ ಆಗಿದ್ದಾರೆ. 100 ದೋಣಿಗಳು ಮುಳುಗಿಹೋದವು. ಎಂಟು ಮಿಲ್ಲಿಯನ್ ಡಾಲರುಗಳು ನಷ್ಟವಾಗಿದೆಯಂತ ಅಂದಾಜುಮಾಡಲ್ಪಟ್ಟಿದೆ.

ಜಗತ್ತಿನಲ್ಲಿರುವ ಗಡಿಯಾರಗಳಿಗಿಂತಲೂ ದೊಡ್ಡ ಗಡಿಯಾರವು ಅಮೇರಿಕದ ಜರ್ಸಿ ಎಂಬ ಪಟ್ಟಣದಲ್ಲಿದೆ. ಇದರ ಅಗಲವು 38 ಅಡಿ ಇದೆ. ಇದರ ಮಿನಿಟು ಮುಳ್ಳು 18 ಅಡಿ ಉದ್ದವಾಗಿಯೂ 9 ಮಣ ತೂಕವಾಗಿಯೂ ಇದೆ. ಈ ಮುಳ್ಳಿನ ಒಂದು ದಿನ ಸುತ್ತುವಿಕೆಯಿಂದ ಅರ್ಧ ಮೈಲು ದೂರ ಹೋದ ಹಾಗುತ್ತದೆ.

ದಕ್ಷಿಣ ಆಫ್ರಿಕದ ಜುವರೋ ಎಂಬಲ್ಲಿ ಸ್ತ್ರೀಯರಿಗೇ ಪ್ರಾಮುಖ್ಯತೆ ಮನೆಯಲ್ಲಿ ಕಾರುಭಾರುಗಳನ್ನು ಸ್ತ್ರೀಯರೇ ನಡಿಸುವರು. ಗಂಡಸರು ಬುರುಕಿಯನ್ನು ಹೊತ್ತುಕೊಂಡು ಮನೆಯಲ್ಲಿ ಕೂರುವರು. ಲಗ್ನವ್ಯವಹಾರವು ಸ್ತ್ರೀಯರ ಇರಾದೆಯಂತೆಯೇ ನಡೆಯುವುದು. ಮಕ್ಕಳು ತಾಯಿಯ ಹೆಸರಿನಿಂದಲೇ ಪರಿಚಿತರಾಗುವರು ಅಂದರೆ ಅಲ್ಲಿ ಸ್ತ್ರೀಸಾಮ್ರಾಜ್ಯವಿದೆಯೆಂದಾಯಿತು.

ಜಪಾನ್ ದೇಶಕ್ಕೆ ಸೇರಿದ ಸಿಂಗಾನೋ ಎಂಬಲ್ಲಿ ಸರ್ಕಾರಿ ಅಧಿಕಾರಿಗಳು ಪ್ರಜೆಗಳಿಗೆ ವಿರೋಧವಾಗಿ ವರ್ತಿಸಿದರೆಂದು ಸುಮಾರು 15,000 ಜನರು ಅಲ್ಲಿಯ ಗವರ್ನರರ ಮನೆಗೆ ನುಗ್ಗಿ ಅವರನ್ನು ಮಹಡಿಯಿಂದ ಕೆಳಗೆ ಬಿಟ್ಟು ಹಾಕಿ ಅವರನ್ನು ಪ್ರಜ್ಞೆ ತಪ್ಪುವವರೆಗೆ ಹೊಡೆದದಲ್ಲದೆ ಅಲ್ಲಿಯ ಮುಖ್ಯ ಪೊಲೀಸು ಆಫೀಸರಿಗೆ ಅದೇ ರೀತಿ ಮಾಡಿದರು; ಮತ್ತು ಈ ವರ್ತಮಾನವನ್ನು ಪ್ರಕಟಿಸಿದ ಪತ್ರಿಕೆಯ ಆಫೀಸಿಗೆ ನುಗ್ಗಿ ಅಲ್ಲಿಯ ಯಂತ್ರಗಳನ್ನೆಲ್ಲಾ ಮುರಿದು ಹಾಕಿದರು.

ಪತ್ರವ್ಯವಹಾರ

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ಪತ್ರಿಕಾಕರ್ತರು ಜವಾಬ್ದಾರರಲ್ಲ. ಸಂ.]

ನಾಲಂಗಾಲದ ಅದ್ಭುತ ನಷ್ಟ

ಅಯ್ಯಾ,

ಕಳೆದ ಜುಲೈ 6ನೇ ತಾರೀಕಿನಲ್ಲಿ ನಮ್ಮ ಗ್ರಾಮದಲ್ಲಿ ಆದ ಮಳೆಗಾಳಿ ಪ್ರವಾಹದಿಂದ ಉಂಟಾದ ನಷ್ಟವು ಕೊಡಗಿನಲ್ಲಿ ಈವರೆಗೆ ಕಂಡೂ ಇಲ್ಲ, ಕೇಳಿಯೂ ಇಲ್ಲವೆಂಬ ಸಂಗತಿ ಈಗ ಎಲ್ಲರಿಗೂ ತಿಳಿದ ವಿಷಯವಾಗಿದೆ. ಅರ್ಧಚಂದ್ರಾಕೃತಿಯಲ್ಲಿ ಸುತ್ತಲಿದ್ದ ಬೆಟ್ಟಗಳಲ್ಲಿ ಸುಮಾರು ಒಂದು ಪಜನ್ ಕಡೆಗಳಲ್ಲಿ ಬೆಟ್ಟ ಒಡೆದು ಕೆಳಗೆ ಇದ್ದ ದೊಡ್ಡ ತೋಡಿಗೆ ಬಿದ್ದು ಎಲ್ಲವನ್ನೂ ಕೊಚ್ಚಿಕೊಂಡು ಹೋಯಿತು. ಮಳೆ ಮತ್ತು ಪ್ರವಾಹದಿಂದ ಕಾಫಿತೋಟಗಳು, ವನಗಳು, ಗದ್ದೆಗೆ ಹಾಕಿದ ಬೀಜ ಮತ್ತು ಇತರ ಚಿಕ್ಕ ಅನೇಕ ಬಾಬುಗಳು ನಷ್ಟವಾಗಿವೆ. 20 ಎಕರೆ ಕಾಫಿತೋಟವು ಒಡೆದು ಹೋಗಿವೆ. 40 ಎಕರೆ ಭೂಮಿಯು ಮಣ್ಣು, ದೂಳು, ಕಲ್ಲು, ದೊಡ್ಡ ದೊಡ್ಡ ಮರಗಳಿಂದ ಮುಚ್ಚಲ್ಪಟ್ಟಿದೆ. ಕುಡಿಯುವ ನೀರಿನ ಅನೇಕ ಬಾವಿಗಳಿಗೆ ಮಣ್ಣು ತುಂಬಿಹೋಗಿದೆ. ಬೇರೆ ಕೆಲವು ಬಾವಿಗಳು ಇತರ ರೀತಿಯಿಂದ ಹಾಳಾಗಿವೆ. ಆದ್ದರಿಂದ ಒಳ್ಳೇ ಕುಡಿಯುವ ನೀರು ಸಹ ಇಲ್ಲದೆ ಕಷ್ಟಪಡುತ್ತಿದ್ದೇವೆ. ಯಾವ ಕಡೆ ನೋಡಿದರೂ ಹಾಳುಬಿದ್ದ ಸ್ಥಳ, ಕಲ್ಲು ಮುಚ್ಚಿದ ಭೂಮಿ, ತೋಟ, ಹಿತ್ತಲು ಕಣ್ಣಿಗೆ ಬಿದ್ದು ಎದೆ ಒಡೆಯುವಂತೆ ಆಗುತ್ತದೆ. ನಾವು ಅತ್ಯಂತ ಕಷ್ಟಕರವಾದ ಮುಂದುಗಾಣದ ಸ್ಥಿತಿಯಲ್ಲಿದ್ದೇವೆ. ನಮಗೆ ಕೂಡಲೇ ಧನಸಹಾಯವೂ ಸಹಾನುಭೂತಿಯೂ ದೊರೆಯದೆ ಇದ್ದರೆ ನಾವು ಕೆಟ್ಟುಹೋಗುವುದೇ ಸರಿ. ಈ ಗ್ರಾಮವೆಲ್ಲಾ ಹಾಳಾಗಿ ಹೋಗಿದೆ. ಬಡತನವೂ ಕ್ಷಾಮವೂ ನಮ್ಮ ಕಣ್ಣೆದುರಿಗೆ ಇಂತಿದೆ. ನಮ್ಮ ಸ್ಥಿತಿಯನ್ನು ನೋಡಿ ಕೊಡ ಕಮೀಷನರೂ, ಮತ್ತು ಇತರ ಅಧಿಕಾರಿಗಳೂ ನಮಗೆ ಹೆಚ್ಚಿನ ಸಹಾಯದ ಆಶೆ ತೋರಿಸಿರುವದಿಲ್ಲ. ಸರ್ಕಾರ ಈ ವಿಷಯದಲ್ಲಿ ಅಸಡ್ಡೆ ಮಾಡಿದರೆ ಬಹಳ ಕೆಡಕಾಗಬಹುದು.

ದೇಶಭಕ್ತರಾದ ಮಹನೀಯರೂ ಮತ್ತು ಕೌನ್ಸಿಲ್ ಮೆಂಬರುಗಳೂ ನಮ್ಮ ಪರವಾಗಿ ಮನಃಪೂರ್ತಿಯಾಗಿ ಹೋರಾಡಿ ನಮಗೆ ಕೂಡಲೇ ಸಹಾಯ ಸಿಕ್ಕುವಂತೆ ಮಾಡಬೇಕಾಗಿ ಕೋರುತ್ತೇವೆ. ನಮ್ಮ ಮೊರೆಯು ಅರಣ್ಯರೋದನವಾಗಲಾರದೆಂತ ನಂಬುತ್ತೇವೆ.

ನಾಲಂಗಾಲ ಗ್ರಾಮಸ್ಥರ ಪರವಾಗಿ
ಬಿ. ಪಿ. ಮಂದಪ್ಪ
ಬಿ. ಜಿ. ಮುತ್ತಣ್ಣ.

[ವಿಪರೀತ ನಷ್ಟಕ್ಕೊಳಗಾದ ಮೇಲಿನ ಗ್ರಾಮಸ್ಥರಿಗೆ ಸರ್ಕಾರದಿಂದ ಸಹಾಯ ದೊರೆಯಬೇಕಾದದ್ದು ಅತ್ಯವಶ್ಯವಾಗಿದೆ. ಈ ವಿಷಯಕ್ಕೆ ಸರ್ಕಾರದವರು ಗಮನಕೊಡದೆ ಇರಲಾರರಾಗಿ ನಂಬುತ್ತೇವೆ. ಈ ವಿಚಾರ ಕುರಿತು ನಾವು ಎರಡು ವಾರಗಳ ಹಿಂದೆ ನಮ್ಮ ಅಭಿಪ್ರಾಯವನ್ನು ವಿವರವಾಗಿ ಬರೆದಿರುವೆವು.

ಸಂಪಾದಕ.]

ಕೊಡವರ ಪೂರ್ವಿಕರ ನಾಗರೀಕತೆ.

ಪೂರ್ವದ ಕೊಡವರು ಮತ್ತು ಈಗಿನವರಲ್ಲಿ ಹೆಚ್ಚಿನ ನಾಗರೀಕತೆಯನ್ನು ಹೊಂದಿದವರು ಯಾರೆಂದು ತಿಳಿಯದೆ ಕೆಲವರು ಸಂದೇಹಪಡುತ್ತಾ ಒಬ್ಬೊಬ್ಬರು ಒಂದೊಂದು ವಿಧವಾಗಿ ಹೇಳಿಕೊಳ್ಳುವರು. ನಾಗರೀಕತೆಯೆಂದರೆ ಪ್ರತಿದಿನವೂ ಕ್ಷೌರಮಾಡಿಕೊಂಡು ಓಪನ್‌ಕೋಟು, ಹ್ಯಾಟ್, ಬೂಟ್ಸ್ ಮತ್ತು ಕಾಲರ್, ಟೈಗಳನ್ನು ಉಪಯೋಗಿಸುವುದೋ ಅಥವಾ ತಿಳುವಳಿಕೆಯೋ? ನನ್ನ ಮನಸ್ಸಿಗೆ ತಿಳುವಳಿಕೆಯೆಂದು ತೋರುತ್ತದೆ. ಹಾಗಾದರೆ ನನ್ನ ಅನುಭವದ ಮಟ್ಟಿಗೆ ಪೂರ್ವದವರೇ ಹೆಚ್ಚಿನ ನಾಗರೀಕತೆಯನ್ನು ಹೊಂದಿದವರೆಂದು ವೇದ್ಯವಾಗುತ್ತೆ. ಹೀಗೆ ತಿಳಿಯಲು ಪೂರ್ವಿಕರು ಆಡಿರುವ ಅರ್ಥಗರ್ಭಿತವಾದ (Full of Philosophy) ಮಾತೂ ನಡುವಳಿಕೆ ಆಚಾರ ವಗೈರೆಗಳೇ ಉದಾಹರಣೆಗಳಾಗಿವೆ. ಅವು ಯಾವುವೆಂದರೆ —

ಪೂರ್ವಿಕರ ಎಲ್ಲಾ ಪದ್ಧತಿಗಳೂ ಒಳ್ಳೆಯವುಗಳು. ಅವು ಆರೋಗ್ಯಶಾಸ್ತ್ರವನ್ನೂ ಮತ ಸಮ್ಮಂಧವನ್ನೂ ಒಳಕೊಂಡು ಪರಸ್ಪರ ಸಹಾಯವನ್ನುಂಟುಮಾಡುವವುಗಳಾಗಿವೆ. ಇದಲ್ಲದೆ ಅವು ದಿನ ಚರ್ಯೆಯಲ್ಲಿ ಬಹು ಪ್ರಯೋಜನವನ್ನುಂಟುಮಾಡುತ್ತವೆ. ಇವುಗಳಲ್ಲಿ ಬೆಳಿಗ್ಗೆ ಮತ್ತು ಸಾಯಂಕಾಲ ಮಾಡುತ್ತಿದ್ದ ದೇವರ ಪ್ರಾರ್ಥನೆಯೂ ಮತ್ತು ಮನೆಯಲ್ಲಿ ಮಾಡಿದ ಅಡಿಗೆಯನ್ನು ದೇವರಿಗೆ ಅರ್ಪಿಸಿದ ಮೇಲೆ ಮಾತ್ರ ತಾವು ಉಪಯೋಗಿಸುತ್ತಿದ್ದುದೂ ಮುಖ್ಯವಾಗಿವೆ. ಉಳಿದವುಗಳನ್ನು ವಿಶದವಾಗಿ ಹೇಳಲು ಸ್ಥಳ ಸಂಕೋಚದಿಂದ ಅನಾನುಕೂಲವಾಗಿದೆ. ಆದರೆ ಉದಾಹರಣೆಗಾಗಿ ಇಲ್ಲಿ ಕೆಲವುಗಳನ್ನು ಮಾತ್ರ ಹೇಳಬಹುದು. ಅವು ಯಾವುವೆಂದರೆ.—

ಉಡುಪು.

'ಗಂಡಸರ ಉಡುಪು—ಕುಪ್ಪಸ, ದಟ್ಟಿ ಮತ್ತು ತಲೆಗೊಂದು ವಸ್ತ್ರ. ಇದು ಎಷ್ಟು ಸೊಗಸಾದ ಉಡಿಗೆ! ಇದಕ್ಕೆ ಹೊರಗಿನ ದೇಶದಲ್ಲಿ ಸಹ ಇರುವ ಮರ್ಯಾದೆಯನ್ನು ಮೊನ್ನೆ ತಾನೆ ಮಿ ಬಿ ಎಸ್ ಕುಶಾಲಪ್ಪನವರು ತನ್ನ ಇಂಗ್ಲೆಂಡಿನ ಅನುಭವದ ವಿಷಯ ಲೋಕಪಾವನದಲ್ಲಿ ಬರೆದ ಲೇಖನದಿಂದ ತಿಳಿಯಬಹುದು. ಸೊಂಟವನ್ನು ಬಿಗಿಯಾಗಿ ಕಟ್ಟಿಕೊಂಡರೆ ಕೆಲಸಮಾಡಲು ಬಹು ಅನುಕೂಲವಾಗುವುದು. ತುಂಬಾ ಬಗ್ಗಿಕೊಂಡು ಕೆಲಸಮಾಡುವವರು ಸೊಂಟಕ್ಕೆ ಬಿಗಿಯಾಗಿ ಕಟ್ಟಿಕೊಂಡರೆ ಸೊಂಟನೋವು ಉಂಟಾಗುವದಿಲ್ಲ. ಈಗಿನವರು ದಟ್ಟಿಯನ್ನು ಉಪಯೋಗಿಸದೆ ಇರುವದರಿಂದಲೇ ಅವರಿಗೆ ಕೆಲಸಮಾಡುವ ಮೊದಲೇ ಸೊಂಟನೋವು ಉಂಟಾಗುವದು. ವಸ್ತ್ರವನ್ನು ಹಿಂದಕ್ಕೆ ಬಾಲಬಿಟ್ಟು ಕಟ್ಟುವದರಿಂದ ಅದು ತಲೆಯ ಹಿಂಭಾಗಕ್ಕೆ ಬಿಸಿಲು ತಟ್ಟದಂತೆ ಕಾಪಾಡುತ್ತದೆ. ಈ ಭಾಗವು ಬೆಚ್ಚಗಿಬೇಕಾದರೆ ತಲೆನೋವು, ಪಿತ್ತರೋಗ, ಸ್ಮೃತಿತಪ್ಪುವದು ವಗೈರೆ ತೊಂದರೆಗಳುಂಟಾಗುವದೆಂದು ಶಾಸ್ತ್ರಜ್ಞರು ಹೇಳುವರು.

ಹೆಂಗಸರ ಉಡುಪು—ನಮ್ಮ ಹೆಂಗಸರ ಉಡಿಗೆಯಂತೆ ಅಂದವಾದ ಉಡುಪು ಬೇರೆ ಯಾವ ದೇಶದಲ್ಲಿಯೂ ಇಲ್ಲವೆಂದು ಕೊಡಗಿನ ಹೊರಗೆ ತಿರುಗಾಡಿದ ಅನೇಕ ಜನರು ಹೇಳುವದನ್ನು ನಾನು ಕೇಳಿರುತ್ತೇನೆ. ಅಲ್ಲದೆ ಮಿ ಹಿಲ್ಟನ್ ಬ್ರೌನ್ ಸಾಹೇಬರು ತನ್ನ ಬ್ಲ್ಯಾಕ್ ಉಡ್ ಮ್ಯಾಗಜಿನ್ (Black wood Magazine) ನಲ್ಲಿ ಬರೆದಿರುತ್ತಾರೆ. ಅಲ್ಲದೆ ಹೆಂಗಸರು ತಮ್ಮ ಶರೀರವನ್ನು ತೋರಿಸಬಾರದೆಂಬುದು ಹಿಂದೂ ಧರ್ಮವಾಗಿದೆ. ನಮ್ಮ ಪೂರ್ವಿಕರು ಈ ಧರ್ಮಕ್ಕನುಸಾರವಾಗಿಯೇ ಈ ಉಡುಪನ್ನು ಕಂಡುಹಿಡಿದರೆಂದು ಹೇಳಲು ಸ್ವಲ್ಪವೂ ಅಂಜಬಾರದು. ಬೇರೆ ದೇಶದವರು ನಮ್ಮವರಂತೆ ತಲೆಗೆ ಬಟ್ಟೆಯನ್ನು ಉಪಯೋಗಿಸುವುದು ಅಪರೂಪವಂತೆ. ಕೆಲವರು ತಲೆಗೆ ಬಟ್ಟೆಯನ್ನು ಉಪಯೋಗಿಸಿದರೂ ಇಷ್ಟು ಸೊಗಸಾಗಿ ಕಟ್ಟಿಕೊಂಡು ಅದರಿಂದುಂಟಾಗುವ ಸುಖವನ್ನು ಅನುಭವಿಸಲಾರರು. ಹಿಂದಕ್ಕೆ ಸೆರಿಗೆಯಾಗಿ ಶೀರೆಯನ್ನುಡುವದರಿಂದ ನಡೆಯಲಿಕ್ಕೂ, ಕೆಲಸ ಮಾಡುವದಕ್ಕೂ ಬಹು ಅನುಕೂಲವಾಗಿದೆ. ಇಂಥಾ ಅಂದವಾದ ಮತ್ತು ಆರೋಗ್ಯಶಾಸ್ತ್ರವನ್ನೊಳಕೊಂಡ ಪೂರ್ವಿಕರ ಉಡುಪನ್ನು ಇತ್ತೀಚೆಗೆ ಹೆಚ್ಚಿಗೆ ನಾಗರೀಕತೆಯನ್ನು ಹೊಂದಿದವರೆಂದು ಹೇಳಿಕೊಳ್ಳುವ ಕೆಲವರು ಬಿಟ್ಟು ಅವರಿಗೆ ಒಳ್ಳೆಯದೆಂದು ತೋರಿದ, ಮೈಯನ್ನು ಪೂರ್ತಿಯಾಗಿ ಮುಚ್ಚದ (Half naked) ಇತರರ ಉಡುಪನ್ನು ಹಾಕಿಕೊಳ್ಳುವುದು ನಾಗರಿಕತೆಯೆಂದು ನನಗೆ ತೋರುವದಿಲ್ಲ.

ಆಹಾರ

ಕೊಡಗರ ತಿಂಡಿಯನ್ನು ಆಲೋಚಿಸಿದರೆ ಅವರು ಪೂರ್ವದಲ್ಲಿಯೇ ಕಾಲಕ್ಕೆ ಅನುಗುಣವಾದ ತಿಂಡಿಯನ್ನು ತಿನ್ನುತ್ತಿದ್ದರೆಂದು ವೇದ್ಯವಾಗುತ್ತೆ. ಅದು ಹೇಗೆಂದರೆ —

ಬಿಸಿಲುಕಾಲದಲ್ಲಿ ತಂಪಾದ ತಿಂಡಿಯನ್ನೂ ಮತ್ತು ಮಳೆಗಾಲದಲ್ಲಿ ಉಷ್ಣವಸ್ತುವನ್ನೂ ಉಪಯೋಗಿಸುತ್ತಿದ್ದರು. ಇದರಿಂದ ಅವರು ಆರೋಗ್ಯಶಾಸ್ತ್ರವನ್ನು ಬಲ್ಲವರಾಗಿದ್ದರೆಂದು ತಿಳಿಯಬಹುದು. ಅವರು ಕೃಷಿ ಕೆಲಸದವರಾಗಿ ಹಗಲೆಲ್ಲಾ ಕೆಲಸಮಾಡುತ್ತಿದ್ದ ಕಾರಣ ಸಾಯಂಕಾಲ ಸ್ನಾನ ಮಾಡುವ ಪದ್ಧತಿಯನ್ನು ಇಟ್ಟುಕೊಂಡಿದ್ದರು.

ಪರಸ್ಪರ ಸಹಾಯ

ಸತ್ತ ಹೆಂಗಸರಲ್ಲಿಗೆ ಹೋಗುವಾಗ ತಿಂಡಿ ವಗೈರೆಯನ್ನು ತೆಗೆದುಕೊಂಡು ಹೋಗುವುದೂ, ಅಲ್ಲಿ ಮಕ್ಕಳ ಕೈಗೆ ಹಣವನ್ನು ಕೊಡುವುದೂ, ಮದುವೆಗೆ ಹೋದಲ್ಲಿ ಮದುವರನಿಗಾಗಲೀ, ಮದುವಣಗಿಗಾಗಲೀ ಹಣವನ್ನು ಕೊಡುವುದೂ, ಸಾವಿನಲ್ಲಿ ಅರ್ಕ್ಕನ ಮನೆಯವರು ಒಂದು ಕೆಲಸಮಾಡುವದೂ ಮಕ್ಕಳಿಗೆ ಅನ್ನ ವಗೈರೆ ತಂದುಕೊಡುವದೂ, ನೆಂಟರು ಸಾವಿಗೆ ಹೋಗುವಾಗ ಬಟ್ಟೆಯನ್ನು ತೆಗೆದುಕೊಂಡು ಹೋಗಿ ಸತ್ತವನ ಹೆಸರಿನಲ್ಲಿ ಬಡವರಿಗೆ ಕೊಡುವುದೂ, ನೆಂಟರ ಹಣವೆಂದು ಹಣಕೊಡುವುದೂ, ತಿತಿಗೆ ಹೋಗುವಾಗ ಅಕ್ಕಿ ಹುಡಿ, ಬಾಳೆಹಣ್ಣು ವಗೈರೆ ತೆಗೆದುಕೊಂಡು ಹೋಗುವುದೂ ನಿರೀಕ್ಷಣೆ ಇಲ್ಲದೆ ಇರುವ ಖರ್ಚಿಗೆ ಪರಸ್ಪರ ಸಹಾಯಮಾಡಲಿಕ್ಕಾಗಿ ಇಟ್ಟುಕೊಂಡ ಪದ್ಧತಿಗಳಾಗಿವೆ. ಈಗ ಕೆಲವರು ತಿತಿಗೆ ತೆಗೆದುಕೊಂಡು ಹೋಗುವ ಸಾಮಾನುಗಳ ಬದಲಿಗೆ ಅಲ್ಲಿ ಹೋಗಿ ಹಣವನ್ನು ಕೊಡುವ ಪದ್ಧತಿಯನ್ನು ಮಾಡಿದ್ದಾರಂತೆ. ತಿತಿಗೆ ಹೋಗಿ ಅಲ್ಲಿ ಹಣವನ್ನು ಕೊಡುವದರಿಂದ ಅವನ ಖರ್ಚಿಗೆ ಸಹಾಯ ಮಾಡಿದಂತೆ ಆಯಿತೇ? ಇದು ಹೆಚ್ಚಿನ ನಾಗರೀಕತೆಯನ್ನಿಸಿಕೊಳ್ಳುತ್ತದೆಯೇ, ಎಂದೂ ಇಲ್ಲ.

ಹೆರಿಗೆ

ಹೆತ್ತವರಿಗೆ ಕೊಡುವ ಉಪಚಾರವನ್ನು ಅವರಿಗೆ ಪೂರ್ವಿಕರು ಕೊಡುತ್ತಿದ್ದ ತಿಂಡಿಯನ್ನು ಆಲೋಚಿಸಿದರೆ ಅವರು ಬಹು ಬುದ್ಧಿವಂತರಾಗಿದ್ದರೆಂದು ಹೇಳಬಹುದು. ಇದರ ಸಹಾಯದಿಂದಲೇ ಆಗಿನ ಹೆಂಗಸರು ಒಳ್ಳೇ ಸೌಖ್ಯದಿಂದಿರುತ್ತಿದ್ದರು. ಗರ್ಭಿಣಿಯವರ ವಿಷಯದಲ್ಲಿ ಅವರು ಅನುಸರಿಸುತ್ತಿದ್ದು ಈಗ ವಾಡಿಕೆಯಲ್ಲಿ ಇಲ್ಲದ ಮತ್ತು ಗರ್ಭಿಣಿಯರು ಏಳುತಿಂಗಳ ಮೇಲೆ ಹೆರಿಗೆಯಾಗಿ 3—4 ತಿಂಗಳ ವರೆಗೆ ತಾಯಿ ತಂದೆಯರ ಮನೆಯಲ್ಲಿರುತ್ತಿದ್ದ ಪದ್ಧತಿಗಳೆಲ್ಲಾ ಬಹು ಪ್ರಯೋಜನಕರವಾದುವುಗಳು. ಇದರಲ್ಲಿ ಆರೋಗ್ಯ ಶಾಸ್ತ್ರವು ತುಂಬಾ ಅಡಗಿದೆ.

ಮದುವೆ.

ಪೂರ್ವಿಕರು ಗಂಡಸರಿಗೆ ಸಾಧಾರಣವಾಗಿ 30 ವರ್ಷದ ಮೇಲೆಯೂ, ಹೆಂಗಸರಿಗೆ 20 ವರ್ಷದ ಮೇಲೆಯೂ ಮದುವೆ ಮಾಡುತ್ತಿದ್ದರು. ಇದರಿಂದ ಆ ವಯಸ್ಸಿನವರೆಗೆ ಅವರು ಬ್ರಹ್ಮಚರ್ಯವನ್ನು ಕಾಪಾಡುತ್ತಿದ್ದರೆಂದೂ, ಅದರ ಗುಣವನ್ನು ಚೆನ್ನಾಗಿ ಅರಿತುಕೊಂಡಿದ್ದರೆಂದೂ ವೇದ್ಯವಾಗುತ್ತೆ. ಅದರಿಂದಲೇ ಅವರು ಅಷ್ಟು ದೃಢಕಾಯರಾಗಿಯೂ ಬಲಾಢ್ಯರಾಗಿಯೂ ಇರುತ್ತಿದ್ದರು. ಆದರೆ ಈಗಿನವರು ಮದುವೆಯಾದ ಮರಣೆದಿನದಿಂದಲೇ ಕಾಯಿಲಸ್ಥರಾಗಿ ಡಾಕ್ಟರನ್ನು ಕರೆಸುವರು.

ಮದುವೆಯಲ್ಲಿ ಮದುವರನಿಗಾಗಲೀ, ಮದುವಣಗಿಗಾಗಲೀ ಆಶೀರ್ವಾದಮಾಡುವದು ಶಾಸ್ತ್ರೋಕ್ತವೆಂದು ತಿಳಿದು ಅದನ್ನು ದೇವರ ಧ್ಯಾನದಿಂದಲೂ, ಬಹು ಭಕ್ತಿಯಿಂದಲೂ ಮಾಡುತ್ತಿದ್ದರು. ಅವರು ಆಶೀರ್ವದಿಸುವದನ್ನೇ ಮುಖ್ಯವೆಂದು ಕಂಡಿದ್ದರಲ್ಲದೆ ಹಣಕೊಡುವದನ್ನಲ್ಲ. ಇತ್ತೀಚೆಗೆ ಬರು ಹಣಕೊಡುವದೊಂದು ಬಲತ್ಕಾರದ ಪದ್ಧತಿಯೆಂದೂ, ಬ್ಯಾಸು ಕೊಟ್ಟ ಹಣವು ಸಾಲವೆಂದೂ ತಿಳಿದುಕೊಂಡಿರುವರು. ಇದಲ್ಲದೆ ಕೊಡಗರು ಹುಡುಗಿಯರನ್ನು ಮದುವೆಮಾಡಿಕೊಡುವಾಗ ಅವರಿಗೆ ಬಟ್ಟೆ, ಆಭರಣ ವಗೈರೆಗಳನ್ನು ಕೊಡುವದು ಅವರು ಶಾಸ್ತ್ರವನ್ನು ಅನುಸರಿಸಿ ಕನ್ಯಾದಾನ ಮಾಡಿದಂತಾಗುವದು.

ವಿದೇಶೀಯರ ಮದುವೆಯಾಗುವಂತ ಪದ್ಧತಿಯನ್ನು ಜಾರಿಗೆ ತರಬೇಕೆಂದು ಈಗ ಇಂಡಿಯಾದೇಶದವರೆಲ್ಲಾ ಚಳುವಳಿ ಬ್ಬಿಸುತ್ತಿರುವರು. ಆದರೆ ಕೊಡಗರಲ್ಲಿ ಈ ಪದ್ಧತಿಯು ಪೂರ್ವದಿಂದಲೇ ಜಾರಿಯಲ್ಲಿದೆ. ಇದು ನಾಗರೀಕತೆಯಲ್ಲವೇ?

ಸಾವು.

ಸತ್ತ ಮನೆಯಲ್ಲಿ ಸಾವು ದಫನ್ ಮಾಡುವವರೆಗೆ ಅಡಿಗೆ ಮಾಡದೆ ಇರುವದೂ ಮತ್ತು ಸಾವಿಗೆ ಹೋಗುವಾಗ ಎಲ್ಲರೂ ಮತ್ತು ಸತ್ತವನ ಕೇವಲ ಸಮ್ಮಂಧಿಕರು ಅನಂತರ ಬಹು ದಿನಗಳ ವರೆಗೆ ಬಿಳಿಯ ಬಟ್ಟೆಯನ್ನು ಧರಿಸುವದೂ, ಮತ್ತು ಸಾವಿಗೆ ಹೋಗಿಬಂದ ಕೂಡಲೆ ಆ ಬಟ್ಟೆಗಳನ್ನು ಬಿಚ್ಚಿ ಒಂದು ರಾತ್ರಿ ಹೊರಗೆ ಇಬ್ಬನಿಯಲ್ಲಿ ಮಡಗಿ ಆ ಮೇಲೆ ಅವಕ್ಕೆ ನೊಚ್ಚಿ ಹೊಗೆಯನ್ನು ತೋರಿಸಿ ಒಳಗೆ ತೆಗೆದುಕೊಳ್ಳುವದೂ ಮತ್ತು ಸಾವಿಗೆ ಹೋದವರು ಸ್ನಾನಮಾಡಿಯೇ ಮನೆಯೊಳಗೆ ಸೇರುವ ಪದ್ಧತಿಯೂ ಆರೋಗ್ಯಶಾಸ್ತ್ರವನ್ನು ಅವರು ಚೆನ್ನಾಗಿ ಅರಿತಿದ್ದರೆಂದು ತಿಳಿಯಪಡಿಸುತ್ತವೆ. ಆದರೆ ಈಗಿನವರು ಕರಿಯಬಟ್ಟೆಗಳನ್ನೂ, ಬೂಟ್ಸ್ ವಗೈರೆಗಳನ್ನೂ ಹಾಕಿಕೊಂಡು ಹೋಗಿ ಹಿಂತಿರುಗಿ ಬಂದಾಗ ತಮ್ಮ ಕೈಕಾಲುಗಳನ್ನು ಸಹ ತೊಳೆಯದೆ ತಮ್ಮ ಮನೆಯನ್ನು ಸೇರುವರು. ಹಾಗಿರುವಾಗ ಹೆಚ್ಚಿನ ನಾಗರೀಕತೆಯನ್ನು ಹೊಂದಿದವರು ಯಾರೆಂದು ವಾಚಕಮಹಾಶಯರೇ ಊಹಿಸಿಕೊಳ್ಳಬಹುದು.

ಸಾವಿನಲ್ಲಿ ಕೊಡ ತೆಗೆಯುವ ಪದ್ಧತಿಯೂ ಮತ್ತು ಸತ್ತವನ ಬಾಯಿಗೆ ನೀರುಕೊಡುವಾಗ ನೀನು ಹೋಗುವ ದಾರಿಗೆ ಕಲ್ಲು ಮುಳ್ಳು ಹಾಕಿಕೊಂಡು ಹೋಗೆಂದು ಹೇಳುವ ಮಾತೂ ತುಂಬಾ ಅರ್ಥದಿಂದ ಕೂಡಿದ್ದಾಗಿದೆ. ಸತ್ತವನ ಮನೆಯವರೂ, ಹತ್ತಿರದ ಸಮ್ಮಂಧಿಕರೂ ತಲೆ ವಗೈರೆ ಬೋಳಿಸುವುದೂ, ಆಭರಣವಗೈರೆ ಬಿಚ್ಚಿಬಿಟ್ಟು ಸ್ನಾಯವಾದ ಉಡುಪನ್ನು ಹಾಕದೆ ಇರುವುದೂ, ರುಚಿಯನ್ನು ಕೊಡತಕ್ಕ ಅಡಿಗೆ ಮಾಡದಿರುವದೂ ಮತ್ತೆ ಅನೇಕ ವಸ್ತುಗಳನ್ನು ತಿನ್ನದೆ ಇರುವದೂ ದುಃಖಸೂಚನೆಗಳಾಗಿವೆ. ಸಾವಿಗೆ ಹೋಗಲು ಅನಾನುಕೂಲವಾದವರು ಪುನಃ ಸತ್ತವನ ಮನೆಗೆ ಹೋಗಿ ಅವನ ಸಮ್ಮಂಧಿಕರನ್ನು ಮಾತಾಡಿಸಿಕೊಂಡು ಬರುವದು ಅವರಿಗೆ ಸಮಾಧಾನವನ್ನೂ ಧೈರ್ಯವನ್ನೂ ಕೊಡುವದಕ್ಕಾಗಿದೆ. ಅಲ್ಲದೆ ಪೂರ್ವಿಕರು ತಮ್ಮ ಸಮ್ಮಂಧಿಕರಿಗೆ ಬಂದ ಕಷ್ಟದಲ್ಲಿ ತಾವೂ ಭಾಗಿಗಳಾಗುತ್ತಿದ್ದರೆಂದೂ ಕಂಡುಬರುತ್ತೆ. ಇದು ದೊಡ್ಡ ವೇದಾಂತ ವಿಷಯವಾದ್ದರಿಂದ ಪೂರ್ವಿಕರು ವೇದಾಂತವನ್ನು ಚೆನ್ನಾಗಿ ಬಲ್ಲವರಾಗಿದ್ದರೆಂದು ದೃಢವಾಗುತ್ತೆ. ಆದುದರಿಂದ ಕೊಡಗರ ಪೂರ್ವಿಕರ ಎಲ್ಲಾ ಪದ್ಧತಿಗಳೂ ಪ್ರಯೋಜನಕರವಾದವುಗಳಾಗಿಯೂ, ಶಾಸ್ತ್ರೋಕ್ತವಾಗಿಯೂ ಪರಸ್ಪರ ಸಹಾಯವನ್ನುಂಟುಮಾಡುವವಾಗಿಯೂ ಇವೆ. ಇದರಿಂದಲೇ ಇವುಗಳನ್ನು ತಿಳಿದು ಜಾರಿಗೆ ತಂದಿದ್ದವರು ಹೆಚ್ಚಿನ ನಾಗರೀಕತೆಯನ್ನು ಹೊಂದಿದ್ದವರೆಂದು ನಾನು ಹೇಳುವದಾಗಿದೆ. ಆದರೆ ಈಗಿನವರ ನಾಗರಿಕತೆಯಿಂದ ನ್ಯಾಯವಾದ ಕಾರಣಗಳಿಲ್ಲದೆ ಇವುಗಳನ್ನು ಜಾರಿಗೆ ತಾರದೆ ಇರುವದು ತುಂಬಾ ಶೋಚನೀಯವಾದ ಸಂಗತಿಯಾಗಿದೆ. ಈಗಿನವರು ಇವುಗಳನ್ನು ಮೂಲೆಗೊತ್ತುವದು ಮಾತ್ರವೇ ಅಲ್ಲ, ತಾವು ಕಣ್ಣುಮುಚ್ಚಿಕೊಂಡು ಇತರರ ಪದ್ಧತಿಗಳನ್ನು ಅನುಸರಿಸುತ್ತಿರುವರು. ಬುದ್ಧಿವಂತರು ತಮ್ಮ ನಡಾವಳಿಕೆಯನ್ನು ಬಿಟ್ಟು ಬೇರೆಯವರ ನಡತೆಯನ್ನು ಹಿಂಬಾಲಿಸುವದಿಲ್ಲವೆಂದು ಪಂಡಿತರು ಬರೆದಿರುತ್ತಾರೆ. ಆದಕಾರಣ ಈಗಿನವರು ಪೂರ್ವಿಕರಷ್ಟು ನಾಗರಿಕತೆಯನ್ನು ಹೊಂದಿದವರಲ್ಲ, ಪರಂತು ವೇಷಾಂತರಗಳಾಗಲಿಕ್ಕೆ ಮಾತ್ರ ಕಲಿತುಕೊಂಡಿದ್ದಾರೆಂದು ನಾನು ತಿಳಿದುಕೊಂಡಿರುವೆನು.

ಹಳೇ ಮುದುಕ.

ದೇಶದ ಆರೋಗ್ಯಸ್ಥಿತಿ.

ಕಲಿಮಹಾಪುರುಷನ ಮಹಾತ್ಮೆಯೋ ಮಹಾತ್ಮೆ! ಅದ ವರ್ಣಿಸಲು ಯಾರಿಗೂ ಸಾಧ್ಯವಿಲ್ಲ. ಆತನ ಯುಗದ ಈಗಿನ ಕಾಲವು ಎಂಥಾ ವಿಶೇಷವಾದದ್ದು! "ಕಾಲವು ಗುಟಿದೆ" ಎಂದೆನ್ನುವ ಹಳ್ಳಿಗರ ಮಾತಿನಲ್ಲಿ ತುಂಬಾ ಅರ್ಥವಿದೆ. ಮಳೆಗಾಲವನ್ನು ನೋಡಬಹುದು. ವರ್ಷಕ್ಕೊಂದು ತರಹ ಪರಿಣಮಿಸುತ್ತಿದೆ. 1924ನೇ ಇಸವಿಯಲ್ಲಿ ಜಾಗಿಲಸದ ಪ್ರಮಾಣದಲ್ಲಿ ಅನವೂನವಾದ ಮಳೆಬಿದ್ದು ದೇಶದಲ್ಲೆಲ್ಲಾ ವಿಪರೀತ ನಷ್ಟವುಂಟುಮಾಡಿತು. 1925ರಲ್ಲಿ ಜಾಟಿ ಪಕ್ಕ ಪ್ರಾರಂಭಿಸುವ ಮುಂಚೆಯೇ ವಿಶೇಷ ಮಳೆಯಾಯಿತು. ಈ ವರ್ಷವಾದರೋ ಮಳೆಗಾಲದಲ್ಲಿ ಬಿಸಿಲು ಕಾಯುತ್ತಾ ಇದ್ದು ಥಕ್ಕನೆ ಒಂದು ವಾರ ಹಲವು ಕಡೆಗಳಿಗೆ ಜಡಿ ಮಳೆಯಾಯಿತು. ಆದರೆ ಪುನಃ ಬಿಸಿಲು. ಜಲ ಹುಟ್ಟಿದ್ದರಿಂದ ಇನ್ನೂ ನ್ಯಾಯವಾದ ಮಳೆಗಾಲವು ಪ್ರಾರಂಭವಾಗಲಿಲ್ಲವೆಂದೇ ಜನರು ಹೇಳುತ್ತಿರುವರು ತಿಂಗಳಾಗಲೋ ಕಕ್ಕಡ ತಿಂಗಳು 20 ಕಳೆಯಿತು.

ಜನರ ಆರೋಗ್ಯಸ್ಥಿತಿಯಂತೂ ದುಃಖಕರವಾಗಿದೆ. ಪ್ರಸಾಯಕರ ದೇಶವಾದ ಇಲ್ಲಿ ಅರಾಭದ ಸಮಯವಾದ ಮಳೆಗಾಲವೇ ಜನರಿಗೆ ಆರೋಗ್ಯದ ಸಮಯವು. ಈ ಸಮಯದಲ್ಲಿ ಖಾಯಿಲೆಯ ವರ್ತಮಾನವು ಅಪರೂಪ. ಆದಕಾರಣ ಮರಣವಾರ್ತೆಯು ಬಹಳ ಕಡಿಮೆಯಾಗಿತ್ತು. ಈ ಸಮಯವು ಬಹಳ ಆರೋಗ್ಯಕರವು ಮತ್ತು ಜನರಿಗೆ ತುಂಬಾ ಸಂತೋಷದಾಯಕವಾದ್ದರಿಂದ "ಕಕ್ಕಡಕಾ ಚಕ್ಕನಂಗ ಸ್ವರ್ಗ ಇಲ್ಲೆ" ಎಂದರ ಕಕ್ಕಡ ತಿಂಗಳಲ್ಲಿ ಸತ್ತವನಿಗೆ ಸ್ವರ್ಗವಿಲ್ಲವೆಂಬ ಮಾತು ಕೊಡವರಲ್ಲಿ ವಾಡಿಕೆಯಾಗಿತ್ತು. ಆಗಿನ ಕಾಲದಲ್ಲಿ ಈ ತಿಂಗಳಲ್ಲಿ ಸಾವು ಬಹಳ ಅಪರೂಪವೆಂದೇ ಅದರ ಅರ್ಥ. ಆದರೆ ಈ ವರ್ಷವಾದರೋ ಈ ತಿಂಗಳಲ್ಲೇ ಸಾವು ಹೆಚ್ಚೆಂದರೆ ಅತಿಶಯೋಕ್ತಿಯಾಗಲಾರದು. ಎಲ್ಲಿ ನೋಡಿದರೂ ಜನರು ಖಾಯಿಲೆಯಿರುವುದು ಮತ್ತು ಮರಣಗಳದ್ದಿಯೇ ಕೇಳಿಬರುತ್ತದೆ. ಈ ವಾರದಲ್ಲಿ ಮಡಿಕೇರಿಯಲ್ಲಿ ಆಸ್ಪತ್ರೆಯು ಔಷಧಿಯು ಅನ ... ಇರುವದರಿಂದ ... ಕೂಡಿದ ... ತಿಳಿಯಬ... ರೋಗಗಾದರೆ ಆಸ್ಪತ್ರೆಗಳಿಗೆ ದೂರದಲ್ಲಿರುವ ಮತ್ತು ಹಾಸ್ಪಿಟಾಲ್‌ಗಳಿಂದ ಆಸ್ಪತ್ರೆಗೆ ಹೋಗಲಾರದಂಥ ಗ್ರಾಮಗಳ ನಿವಾಸಿಗಳ ಗತಿ ಹೇಗಿರಬಹುದು! ಜ್ವರ, ವಿಷಜ್ವರ (ನಿಮೋನಿಯ) ಮೊದಲಾದ ಖಾಯಿಲೆಗಳಿಗೇ ಜನರು ಹೆಚ್ಚಾಗಿ ತುತ್ತಾಗುತ್ತಿರುವರು. ಆಸ್ಪತ್ರೆಗಳು ಹೆಚ್ಚಿದಂತೆಯೇ ರೋಗಗಳು ಹೆಚ್ಚುತ್ತಾ ಇವೆಯೆಂಬುದು ಪೂರ್ಣಸತ್ಯವೆಂದು ನಂಬದೆ ಇರಲು ಸಾಧ್ಯವಿದೆಯೇ? ಇನ್ನು ಮುಂದಕ್ಕೆ ಹೇಗಾಗುವುದೋ ಎಂದು ನೋಡಬೇಕಾಗಿದೆ. ಇಂಥಾ ಕಲಿಕಾಲದಲ್ಲಿ ಬದುಕಿರುವ ನಾವು ಪುಣ್ಯಾತ್ಮರೋ ಯಾ ಪಾಪಿಷ್ಟರೋ ಎಂಬದನ್ನು ಪ್ರತಿಯೊಬ್ಬನೂ ತನ್ನಷ್ಟಕ್ಕೆ ತಾನೇ ಚೆನ್ನಾಗಿ ಯೋಚಿಸಲಿ.

"ಕಲಿಯುಗದವ"

ಅಂಪ್ರು ಆಯುರ್ವೇದಿಕ್ ಫಾರ್ಮಸಿ.
ಬ್ರಾಂಚ್, ಬೆಂಗಳೂರು ಸಿಟಿ

ಚ್ಯವನಪ್ರಾಸ ಲೇಹ.

ಇದು ಸರ್ವೋತ್ಕೃಷ್ಟವಾದ ಗಿಡಮೂಲಿಕೆಗಳಿಂದ ತಯಾರಿಸಲ್ಪಟ್ಟ ಆಯುರ್ವೇದ ರಸಾಯನೌಷಧವು. ವಿದ್ಯಾರ್ಥಿಗಳೂ ವಿಶೇಷವಾಗಿ ಬುದ್ಧಿಯನ್ನು ಪ್ರಯೋಗಿಸಿ ಕೆಲಸ ಮಾಡುವವರೂ ಈ ಲೇಹವನ್ನು ಸೇವಿಸಿದರೆ ವಿಶೇಷವಾಗಿ ಬುದ್ಧಿಶಕ್ತಿಯನ್ನೂ, ಜ್ಞಾಪಕಶಕ್ತಿಯನ್ನೂ ಹೊಂದುವರು. ದೀರ್ಘಕಾಲದ ವ್ಯಾಧಿಯಿಂದಾಗಲೀ ಕೆಟ್ಟ ನಡತೆಯಿಂದಾಗಲೀ, ಸ್ವಭಾವ ಶಕ್ತಿಯ ಕೊರತೆಯಿಂದಾಗಲೀ ಶರೀರ ಕಾಂತಿಯು ಕುಂದಿ ರಕ್ತ ಕೆಟ್ಟು ಇಂದ್ರಿಯ ದೌರ್ಬಲ್ಯವೇ ಮೊದಲಾದ ವಿಕಾರಗಳಿಂದ ಪೀಡಿತರಾಗಿರುವವರು ಈ ಲೇಹವನ್ನು ಸೇವಿಸಿದರೆ ಈ ತರದ ವಿಕಾರಗಳನ್ನೆಲ್ಲಾ ಪರಿಹರಿಸಿ ದೇಹಕ್ಕೂ ಮನಸ್ಸಿಗೂ ಉಲ್ಲಾಸವನ್ನುಂಟುಮಾಡಿ ಮೂಸಿ ಬಂದಗಳ ನರಗಳಿಗೂ ಬಲವನ್ನುಕೊಟ್ಟು ದೇಹಪುಷ್ಟಿಯನ್ನುಂಟುಮಾಡಿ ಸವಚೈತನ್ಯವನ್ನುಂಟುಮಾಡುವುದು. ಅಲ್ಲದೆ ಆರೋಗ್ಯ ದೃಢಶರೀರವುಳ್ಳವರಾಗಿ ದೀರ್ಘಕಾಲ ಬದುಕುವರು. ಕೆಮ್ಮಲು, ಉಬ್ಬಸ ವ್ಯಾಧಿಯುಳ್ಳವರಿಗೂ ಮುಖ್ಯವಾಗಿ ಕ್ಷಯರೋಗಿಗಳಿಗೂ ಇದು ಸಂದೇಹವಿಲ್ಲದೇ ಸರಿ! ಚರಕ ಸಂಹಿತೆಯಲ್ಲಿ ಇದರ ಗುಣವು ಅದ್ಭುತವಾಗಿ ಹೇಳಲ್ಪಟ್ಟಿದೆ. ೧೦ ಲೆಗೆ ೧ ರೂಪಾಯಿ. ಅಂತೆಲೆಗೆ ೩ ರೂಪಾಯಿ.

ಎಲ್ಲಾ ಕಡೆಯಲ್ಲಿಯೂ ಏಜಂಟರು ಬೇಕು.

ಸೂಚನೆ:—ಇಲ್ಲಿ ಶಾಸ್ತ್ರೀಯವಾದ ಎಲ್ಲಾ ಔಷಧಗಳೂ ಹೆಚ್ಚಾಗಿ ಕ್ರಯಕ್ಕೆ ಸಿಗುವುವು. ಆಯುರ್ವೇದ ಭೂಷಣ ಕೆ. ನಾರಾಯಣ ಎ. ಎಂ. ಎ. ಸಿ. ಯವರು ರೋಗಿಗಳನ್ನು ಪರೀಕ್ಷಿಸಿ ತಕ್ಕ ಚಿಕಿತ್ಸೆಯನ್ನು ಪ್ರತಿದಿನವೂ ನಡಿಸುವರು. ವಿವರಕ್ಕೆ ಸಂಗಡಕ್ಕೆ ಕಾಗದ ಬರೆಯಬೇಕು.

ಟಿ. ಸಿ. ಎಸ್. ಮಣಿಯಂ ಅಂಡ್ ಕೋ.,
ಮ್ಯಾನೇಜಿಂಗ್ ಏಜಂಟ್ಸ್, ಅಂಪ್ರು ಆಯುರ್ವೇದಿಕ್ ಫಾರ್ಮಸಿ
೬೬, ಚಿಕ್ಕಪೇಟೆ, ಬೆಂಗಳೂರು ಸಿಟಿ.

Apply for our shooting Season's Clearance Sale Catalogue of Brand New Goods.

10 to 25 percent Reductions in Prices.

No License Required!! No License Required



Webley and Scott Air Pistol, cal ·177 or ·22, bore Powerful and Accurate· complete with a sample box of slugs, two spare washers, a brush forcleaning, and a bookletof instructions Rs. 30/— Free delivery.

Pwerful German Diana Air gun· Handsome and Accurate, takes B· S· A· Patern No 1 Slugs and Darts· expressly recommendable for Target Practice Rs· 15/ Free delivery

Brilliant Search Light Lamp for Night Sports Rs 30/— Free delivery·

No License required to purchase or to possess the above items.

Reliable D B B L 12 bore guns	Rs. 60/—	and upwards	
Do S. B B L 12	do	do· 40/—	do
D B. M L Guns		„ 45 -	do
S B M L. do.		„ 30/—	do·
S B. B L Rifles		„ 25/—	do·
B L Revolvers and Pistols		, 30/—	do.

Arms, Ammunition and shooting requisitesof almost every kind andquality offered at exceptionally favourable rates ANumber of good quality second hand weapons also offered for sale in theNew Catalogue.

GOOLAMHUSIAIN ALLIBHOY & SONS

Largest Importers of Firearms and Ammunition,

Cheapest priced firmin India,

24· 3 **210 Abdul Rehman Street, BOMBAY·**

೧೬ ಚಿತ್ರಪಟಗಳುಳ್ಳ

ಸಚಿತ್ರ ಶುಕಸಪ್ತತಿ ಕಥೆ.

೭೦ ಕಥೆಗಳು ೫೦೦ ಪುಟಗಳು

ಈ ಕಥೆಯು ಧರ್ಮಶಾಸ್ತ್ರ, ವೇದಾಂತ, ಸ್ತ್ರೀಪಾತಿವ್ರತ್ಯ ಬ್ರಾಹ್ಮಣ, ವೈಶ್ಯ, ಶೂದ್ರರೆಂಬ ನಾಲ್ಕು ವರ್ಣದವರು ನಡೆಯತಕ್ಕ ಪಶಾಸ್ತ್ರವು ದರ್ಮವೇ ಮುಂತಾದ ಸದ್ವಿಚಾರಗಳನ್ನು ಬೋಧಿಸಿ ಪುದ. ೧ ಕಥಾರೂಪದಲ್ಲಿ ಚಿತ್ರಸಹಿತ ಚಮತ್ಕಾರ ಶೋಭಿತವಾಗಿಯೂ ನೀತಿಬೋಧಕವಾಗಿಯೂ ಇರುವದರಿಂದ ಸ್ತ್ರೀಯರು, ಪುರುಷರು, ಬಾಲಕರು ಎಂಬ ಭೇದವಿಲ್ಲದೆ ಎಲ್ಲರೂ ಓದಬಹುದು. ೨. ಲೋಕಾನುಭವಕ್ಕೆ ಬೇಕಾದ ಅನೇಕ ವಿಷಯಗಳು ಇದರಿಂದ ತಿಳಿದುಬರುವುವು. ೩. ಈ ಕಥೆಯನ್ನು ಓದುವದರಿಂದ, ಮನಸ್ಸನ್ನು ದುರಾಚಾರದಲ್ಲಿ ಬಿಡದಂತೆ ಸದಾಚಾರದಲ್ಲಿಯೇ ನಡೆಯುವಂತೆ ಮಾಡುವುದು. ೪. ವಿವೇಕಾವಿವೇಕವನ್ನು ತಿಳಿಯತಕ್ಕ ಜ್ಞಾನವನ್ನು ಉಂಟುಮಾಡುವುದು. ಬೇಕಾದವರು ವಿ. ಪಿ. ಪೋಸ್ಟು ಮೂಲಕ ತರಿಸಿಕೊಳ್ಳಬಹುದು.

ದಪ್ಪಕಾಗದ ಕ್ರಯ ಪ್ರತಿ ಒಕ್ಕೆ ರೂ. ೨-೦-೦. ಟಪ್ಪಾಲು ಹಾಸಲು ೦-೮-೦.

ಸಚಿತ್ರ ಭಟ್ಟಿ ವಿಕ್ರಮಾದಿತ್ಯರಾಯನ ಕಥೆ ೩ ಭಾಗಸೇರಿದ್ದು ೭೦೩ ಪುಟಗಳು ಕ್ರಯ ೨-೮-೦. ಸಚಿತ್ರರಾಜ ಕಂಠೀರವ ಕಥೆ ೪೮೦ ಪುಟಗಳು, ಕ್ರಯ ರೂ ೨.

ಸಚಿತ್ರ ಶ್ರೀರಾಮತತ್ತ್ವಾಮೃತ ಎಂಬ ಸೀತಾರಾಮಾಂಜನೇಯ ಸಂವಾದ ೨೪೬ ಪುಟಗಳು ೧-೮-೦. ಇವುಗಳಿಗೆ ಟಪಾಲು ಖರ್ಚು ಬೇರೆ.

ನಮ್ಮಲ್ಲಿ ದೊರೆಯುವ ಎಲ್ಲಾ ಪುಸ್ತಕಗಳ ಕ್ರಯಪಟ್ಟಿ (ಕ್ಯಾಟಲಾಗ್)ಗೆ ಬರೆದರೆ ಕಳುಹಿಸುವೆವು.

52—10 ನಮ್ಮ ವಿಳಾಸ— ಎಂ. ಆರ್. ಕೃಷ್ಣಸ್ವಾಮಿ ಶೆಟ್ಟಿ, ಬುಕ್ಕಡಿಪೋ, ಚಿಕ್ಕಪೇಟೆ, ಬೆಂಗಳೂರು ಸಿಟಿ

ಹೊಸ ಸಾಮಾನುಗಳು! ಸುಲಭ ಕ್ರಯ!! ಈಗತಾನೇ ಬಂದಿವೆ!!!

ಇಂಥ ಸುಸಮಯವನ್ನು ಕಳೆಕೊಳ್ಳಬೇಡಿರಿ!

12 ಬೋರ್ ಜೋಡಿ ಕೊಳವಿನ ತೋಟಿ ಕೋವಿ 1ಕ್ಕೆ	ರೂ.	115—0—0
12 „ 32 ಇಂಚಿನ ಒಂಟಿ ಕೊಳವಿನ ತೋಟಿ ಕೋವಿ (ಜರ್ಮನಿ) 1ಕ್ಕೆ.	„	60—0—0
„ „ 35 „ „ „ „	„	65—0—0
ಜೋಡಿ ಕೊಳವಿನ ಕೇಪು ಕೋವಿ 20ನೇ ನಂಬ್ರು 1ಕ್ಕೆ....	„	85—0—0
12 ಬೋರ್ ಚಿಲ್ಲು ತೋಟೆಗಳು (ಒಳ್ಳೇ ನಮೂನೆ) 100ಕ್ಕೆ	„	14—0—0
„ „ ಆನೆ ಚಿಲ್ಲು „ „ „	„	16—0—0
„ „ ಗುಂಡು ತೋಟೆಗಳು „ „	„	19—0—0
ಕೋವಿ ಕ್ಲೀನ್ ಮಾಡುವ ಮತ್ತು ತೋಟೆ ತುಂಬಿಸುವ ಸಾಮಾನುಗಳ 1 ಪೆಟ್ಟಿಗೆಗೆ	„	27—8—0
ಕೇಪು 250ರ 1 ಟಿನ್ನಿಗೆ	ರೂ.	1—5—0
ಕಾಳು ಪೌಂಡು 2 ಯಧಾನ ಮದ್ದು ಡಪ್ಪಿ 1ಕ್ಕೆ	„	1—0—0
ಚಿಲ್ಲು ಎಲ್ಲಾ ತರಹದ ನಮೂನೆ ರಾತ್ತಲ್ 1ಕ್ಕೆ	„	0—10—0
ಫೂರ್ ಇಂಚಿನ ಸೊಗಸಾದ ಗುದ್ದಲಿಗಳು 5 ಪೌಂಡಿನ 1 ಡಜನ್ನಿಗೆ	„	33—0—0
„ „ „ 4 „ „ ...	„	30—0—0
4 ಮುಳ್ಳಿನ ಮುಳ್ಳು ಗುದ್ದಲಿಗಳು ಡಜನ್ನಿಗೆ	„	60—0—0
3 „ „ „ ...	„	48—0—0
4 ಪೌಂಡಿನ ಮರ ಕಡಿಯುವ ಕೊಡಲಿಗಳು ಡಜನ್ನಿಗೆ	„	54—0—0
ಇಂಗ್ಲಿಷ್ ನಮೂನೆ ಕಪಾತು ಚಾಕುಗಳು ಡಜನ್ನಿಗೆ	„	15—0—0
ಮಿಶನ್ ಕಾಡಿಗಳು ದೊಡ್ಡ ಸೈಜ್ (ಸ್ವಿಟ್ಜರ್ಲಾಂಡ್) 1ಕ್ಕೆ	„	4—8—0
„ ಸಣ್ಣ ಸೈಜ್ „	„	4—4—0
„ ಜೆಲಿಬ್‌ಸ್ಟೀಲ್ ಗೆ ...		ಕಮ್ಮಿ ಕ್ರಯ

ಮೆಕ್ಡೋವೆಲ್ ಕಂಪೆನಿ,
ಮಡಿಕೇರಿ

Messers Mc Dowell & Co.
12-10 **Mercara.**

ಕಿರ್ಲೋಸ್ಕರ ಪೇಟೆಂಟ ಮಲ್ಹಾರ ತಪ್ಪಲಿ.



ಈ ತಪ್ಪಲಿಯು ನಮ್ಮ ಕಾರ್ಖಾನೆಯಲ್ಲಿಯೇ ತಯಾರಾಗುತ್ತದೆ. ಸರಕಾರದಿಂದ ಇದಕ್ಕೆ ಪೇಟಂಟ್ ದೊರೆತ್ತಿರುತ್ತದೆ. ಇದರ ಮುಖ್ಯ ಗುಣಗಳು:

೧ ನೀರನ್ನು ಹುಟ್ಟಿದ ಕೂಡಲೇ ತುಂಬಿ ಒರುವದು

೨ ಮಲಲಕ್ಕೆ ಬರುವಾಗ್ಗೆ ಒಂದು ಹನಿ ಸಹ ನೀರು ಸೋರುವದಿಲ್ಲ

೩ ದೋಣಿಯಲ್ಲಿ ನೀರು ಬೀಳುವಾಗ್ಗೆ ಕೊಗಲಿನ ತಪ್ಪಲಿಯಂತೆ ತ್ರಾಸವಿದೆ ಹೋಗುವದಿಲ್ಲ.

ಬೆಲೆಬಹು ಅಗ್ಗ. ಹಚ್ಚಿನ ಸಂಗತಿ ಒಗ್ಗೆ ಬರೆದು ತಿಳಿದುಕೊಳ್ಳಿರಿ

ಕಿರ್ಲೋಸ್ಕರ ಬಂಧು, ಲಿಮಿಟೆಡ್.
ಕಿರ್ಲೋಸ್ಕರವಾಡಿ,
16—9 ಜಿ ಸಾತಾರ್.

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್, ಕೊ ಆಪರೇಟಿವ್ ಸೊಸೈಟೀಸ್ ಆಕ್ಟ್ಸಿ ಪ್ರಕಾರ ರಿಜಿಸ್ಟರಾಗಿದೆ.

		ರೂ
ಶೇರ್ ಒಂಡವಾಳ	—	50,000
ವಸೂಲಾದ ಶೇರ್ ಮೊಬಲಗು	—	12 990
ಜಮೂಬಂದ ಠೇವಣಾತಿ	—	1,10,885

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹುಕ್ಕಾಗಿ ಸಾಲಕೊಡತಕ್ಕದ್ದು.

ಒಂದು ವರ್ಷ ಹಾಯಿದೆ ಅಥವ ಹೆಚ್ಚಿನ ಹಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ ರೂ ೬ ೪-೦ರ ದರದಲ್ಲಿ ಬಡ್ಡಿ ದೊರೆಯುತ್ತೆ. ಕಡಿಮೆ ಹಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ ೫ರ ಬಡ್ಡಿ ದೊರೆಯುತ್ತೆ.

ವರ್ಷಕ್ಕೊಂದಾವರ್ತಿ ಕೊ ಆಪರೇಟಿವ್ ರಿಜಿಸ್ಟ್ರಾರವರು ಲೆಕ್ಕ ಆಡಿಟಮಾಡುತ್ತಾರೆ

ಪ್ರೆಸಿಡೆಂಟರು, ಕೊಡಂದೆರ ಕುಟ್ಟಯ್ಯನವರು, ರಾಯಾ ಬಹದ್ದೂರ್.

ಟ್ರೆಜರರು ಯಂ. ಭುಜಂಗರಾಯರು ಬಿ.ಎ, ಬಿ.ಎಲ್.

ಸೆಕ್ರಟರಿ
ಸಿ ಯನ್ ವೆಂಕಟ್ಟಯ್ಯನವರು, ಬಿ.ಎ, ಬಿ.ಎಲ್

ತಾರೀಕು 29—8—1925

ಒಂದು ಪ್ರಬಲವಾದ ಪ್ರಶ್ನೆ

ನಮ್ಮ ಜೀವವನ್ನು ಏತಕ್ಕಾಗಿ ವಿಮೆಮಾಡಬೇಕು!

ವೃದ್ಧಾಪ್ಯದಲ್ಲಿ ನಮ್ಮ ಮತ್ತು ಹೆಂಡತಿ ಮಕ್ಕಳ ಪೋಷಣೆಗಾಗಿ!

ಈಗಾಗಲೇ ಸಾವಿರಾರು ಜನರು ವಿಮೆಮಾಡಿರುವ ಎ ಒಕೋಟಿ ರೂಪಾಯಿಗಿಂತ ಹೆಚ್ಚು ಒಂಡವಾಳವಿರುವ ದೇಶೀಯ ವಿಮೆಕಂಪೆನಿಯಲ್ಲಿ ಅತ್ಯಂತ ದೊಡ್ಡದಾದ ಸಾವಿರ ರೂಪಾಯಿ ವಿಮೆಮಾಡಿದವರಿಗೆ ವರ್ಷಕ್ಕೆ 18ರೂ ಕಡಿಮೆಯಿಲ್ಲದೆ ಲಾಭ ಕೊಡುವ 'ಓರಿಯಂಟಲ್' ಗವರ್ನ್‌ಮೆಂಟ್ ಜೀವವಿಮೆ ಕಂಪೆನಿಯ ರೂಲ್ಸಿಗೂ, ಶರತಿಗೂ ಈ ಕೆಳಗಿನವರಿಗೆ ಬರೆದು ತಿಳಿದುಕೊಳ್ಳಿ

ಖಾದಿಬಟ್ಟೆ ಎಂದರೇನು?

ದೇಶೀಯ ಹತ್ತಿಯಲ್ಲಿ ಕೈರಾಟೆಯಿಂದ ನೂಲು ತೆಗೆದು ಇಲ್ಲಿಯೇ ತಯಾರಿಸುವ ಬಟ್ಟೆಯೇ 'ಖಾದಿ' ಈಗಾಗಲೇ ನಮ್ಮ ನೆಸ್ಸೀರನಲ್ಲಿ ಪರದೇಶೀ ಬಟ್ಟೆಗಿಂತ ಗಟ್ಟಿಯಲ್ಲಿಯೂ ಅಂದದಲ್ಲಿಯೂ ಕಡಿಮೆ ಇಲ್ಲದಾತ, ಎಲ್ಲಾ ತರದ ಶೀರೆಗಳು ಚಕ್ಕಗಳು, ಶಾಲು ವಗೈರೆ ಎಲ್ಲಾ ತರದ ಬಟ್ಟೆಯು ತಯಾರಾಗಿದೆ. ದಯವಿಟ್ಟು ಪ್ರೋತ್ಸಾಹಿಸಿರಿ! ಖಾದಿಯಿಂದಲೇ ಸ್ವರಾಜ್ಯ. ಖಾದಿಯಿಂದಲೇ ಮೋಕ್ಷವೆಂಬುದನ್ನು ಮರೆಯ ಬೇಡಿರಿ

ವೀರರಾಜಪೇಟೆ, ದಕ್ಷಿಣ ಕೊಡಗು

ಕೆ. ಪಿ. ಚಿಣ್ಣಪ್ಪ
ಪ್ರೊಪ್ರೈಟರ್,
ಖಾದಿಭಂಡಾರ

57—19.

ಇಮಿಟೇಷನ್ ರೇಷ್ಮೇ ಸೀರೆಗಳು.

ಈ ಸೀರೆಗಳು 18ಮೊಳ, ಉದ್ದವೂ 2½ಮೊಳ ಅಗಲವೂ ಇದೆ. ಈ ಸೀರೆಗಳನ್ನು ಹಸನಾದ ಇಮಿಟೇಷನ್ ಸಿಲ್ಕ್ ಗಟ್ಟಿದಾರದಿಂದ ತಯಾರಿಸಿದೆ. ಇದು ನೋಡಲಿಕ್ಕೆ ಭಾರಿ ಕ್ರಯದ ಸೀರೆಗಳಂತೆ ಕಾಣುವದಲ್ಲದೆ ಅಂದವಾದ ರಂಗೂ, ಸುಂದರವಾದ ಸಾಚಾ ರೇಷ್ಮೆಯ ಸೆರಗೂ ಇರುವದು. ಈ ಮಾದರಿ ಸೀರೆಗಳು ಬೇರೆ ಯಾರಲ್ಲಿಯೂ ಈ ಕ್ರಯಕ್ಕೆ ಸಿಕ್ಕಲಾರದು. ಈ ಸೀರೆಗಳು ಶ್ರೀಮಂತರಾ, ಗರೀಬರೂ ಉಡಲಿಕ್ಕೆ ಬಹು ಲಾಯಕ್ಕಾದವು. ಮಾದರಿಗಾಗಿ ಕೆಲವನ್ನು ಮಾತ್ರ ತಯಾರಿಸಿರುತ್ತೇವೆ. ಆದ್ದರಿಂದ ಬೇಗನ ತರಿಸಿಕೊಳ್ಳುವವರಿಗೆ ಮಾತ್ರ ಸಿಕ್ಕುವವು

ಕ್ರಯ ಸೀರೆ 1ಕ್ಕೆ ನಂ 1. ರು 6—8—0

" ನಂ 2. ರು 7—8—0

ವಿಳಾಸ —ಮಹಾರಾಜ ಟ್ರೇಡಿಂಗ್ ಕಂಪೆನಿ,
16 ತಿರುಪಳ್ಳಿ ಬೀದಿ,
ಮದರಾಸು

ಈಗಲೇ ಪ್ರಿಂಟಾಗಿದೆ! ಶೃಂಗಾರವಾದ ಪುಸ್ತಕ!!

ಸ್ತ್ರೀ ಪುರುಷರ ಪ್ರೀತಿಯ ಮರ್ಮಗಳನ್ನು ಚಿತ್ರಪಟಗಳ ಸಹಿತ ತಿಳಿಸುವ

ಮರ್ಮ ಶಾಸ್ತ್ರ.

ಫ್ರೆಂಚ್ ಭಾಷೆಯಲ್ಲಿ ಇದ್ದದನ್ನು ಸುಲಭ ಶೈಲಿಯಲ್ಲಿ ಕನ್ನಡ ಭಾಷೆಗೆ ಭಾಷಾಂತರಿಸಿರುತ್ತೇವೆ. ಸ್ತ್ರೀಪುರುಷರುಗಳಿಗೆ ಬೇಕಾದ ಎಲ್ಲಾ ಮರ್ಮ ರಹಸ್ಯಗಳು, ರತಿ ಮನ್ಮಥರು ಆನಂದವಾಗಿರುವದಕ್ಕೆ ಬೇಕಾದ ಉಪಾಯಗಳು, ಸ್ತ್ರೀ ಪುರುಷರ ಜಾತಿಯ ಲಕ್ಷಣಗಳು ಗರ್ಭಧರಿಸುವದು, ಶಿಶು ಉತ್ಪತ್ತಿ ಎಷ್ಟು, ಗುಪ್ತ ವೈದ್ಯ, ಶಯನ ಗೃಹದ ನಿಯಮಗಳು, ಇನ್ನೂ ಸ್ತ್ರೀಪುರುಷರಿಗೆ ಬೇಕಾದ ಅನೇಕ ರಹಸ್ಯಗಳು ತುಂಬಿದೆ. ಈ ಶೃಂಗಾರವಾದ ಪುಸ್ತಕವನ್ನು ತರಿಸಿ ಆನಂದ ಹೊಂದುತ್ತಾರೆಂದು ನಂಬಿರುತ್ತೇವೆ. ಪಟಗಳ ಸಹಿತ ಕ್ರಯ ಪುಸ್ತಕ 1ಕ್ಕೆ ರೂ 1—0—0

ವಿಳಾಸ —ಟಿ ರಾಮಚಂದ್ರರಾವ್ ಕಂಪನಿ,

52—33 ಪೋಸ್ಟು ಬಾಕ್ಸ್ ನಂ 232 ಮದರಾಸು

ನೈಟ್ರೇಟ್ ಆಫ್ ಸೋಡಾ

ಎಲ್ಲಾ ಬೆಳೆಗಳಿಗೂ ಅತ್ಯುತ್ತಮವಾದ ಗೊಬ್ಬರ

Nitrate of Soda 15-16 per cent. N

ಈ ಗೊಬ್ಬರದಲ್ಲಿ ಬೆಳೆಗಳಿಗೆ ಅತ್ಯಗತ್ಯವಾದ ನೈಟ್ರೋಜನ್ ಸಸ್ಯಾಹಾರವು

15 16% ಅಂದರೆ ಏನು ಬಳ್ಳೀಯ ಹಿಂಡಿ ಗೊಬ್ಬರದಲ್ಲಿರುವುದಕ್ಕಿಂತಲೂ ಮೂರು ಪಾಲು ಹಾಸ್ತಿ ಹೂಗಿರುವದು. ಇದರಲ್ಲಿ ಸಿಕ್ಕುವಷ್ಟು ಸಾರಜನಕ (Nitrogen) ವು ಬೇರೆ ಯಾವ ಗೊಬ್ಬರಗಳಿಂದಲೂ ಗಿಡಗಳಿಗೆ ದೊರೆಯಲಾರದು. ಆದ್ದರಿಂದಲೇ ಭೂಲೋಕದ ಎಲ್ಲಾ ಭಾಗಗಳಲ್ಲಿಯೂ ರೈತರು ಇದನ್ನು ವಿಶೇಷವಾಗಿ ಉಪಯೋಗಿಸುತ್ತಾರೆ

ಭತ್ತ ಕಬ್ಬು, ತೆಂಗು, ಅಡಿಕೆ, ಮಾವು ಹೊಗೆಸೊಪ್ಪು ತರಕಾರಿ ಮೊದಲಾದವುಗಳಿಗೂ ಕಾಫಿ ಟೀ, ರಬ್ಬರು ಏಲಕ್ಕಿ ಮೊದಲಾದ ತೋಟ ಪೈರುಗಳಿಗೂ ಎಲುಬಿನ ಪುಡಿ ಅಥವಾ ಹಿಂಡಿ ಗೊಬ್ಬರ ವಗೈರ ಊರ ಗೊಬ್ಬರಗಳ ಜೊತೆಯಲ್ಲಿ ಈ ಗೊಬ್ಬರವನ್ನು ಉಪಯೋಗಿಸುವದರಿಂದ ಬೆಳೆಯು ಸಮೃದ್ಧಿಯಾಗುವದು. ನೈಟ್ರೇಟ್ ಆಫ್ ಸೋಡಾದಲ್ಲಿರತಕ್ಕ ಸೋಡವು ಮಣ್ಣಿನಲ್ಲಿರುವ ಪೊಟಾಷ್ ಎಂಬ ಇನ್ನೊಂದು ತರದ ಸಸ್ಯಾಹಾರವನ್ನು ಗಿಡಗಳಿಗೆ ಒದಗಿಸಿ ಕೊಡುತ್ತದೆ

ಈ ಗೊಬ್ಬರವು ನೋಟಕ್ಕೆ ಬರೇ ಉಪ್ಪಿನ ಹಾಗಿದ್ದು ಅಪಾಯಕರವಲ್ಲ. ಎಕರೆ ಒಂದಕ್ಕೆ 100-200 ರಾತ್ತಲ ಸಾಕಾಗುವದು. ಹೆಚ್ಚಿನ ಮಾಹಿತಿ ಮತ್ತು "ಕೃಷಿಸುಧಾರ" ಎಂಬ ಪುಸ್ತಕವನ್ನು ಈ ಕೆಳಗಿನ ವಿಳಾಸದಾರರಿಂದ ಧರ್ಮಾರ್ಥವಾಗಿ ಪಡೆಯಬಹುದು

52—10 **CHILEAN NITRATE COMMITTEE,**
Post Box 469, CALCUTTA

೧೦೦೦ ರೂಪಾಯಿಗಳ ಬಹುಮಾನ.

ಲೋಕಪ್ರಸಿದ್ಧವಾದ ಸಾಲಂಮಿಸ್ರಿ ಮುರಬ್ಬಾ.

ನಮ್ಮ ಟ್ರೇಡ್ ಮಾರ್ಕನ್ನು ನೋಡಿ ಈ ಔಷಧ ತೆಗೆದುಕೊಳ್ಳಿ

ಇದರ ಸೇವನೆಯಿಂದ ವೀರ್ಯವು ನೀರಿನಂತೆ ಇದ್ದರೂ, ನಪುಂಸಕೇಂದ್ರಿಯವಾದರೂ, ಸ್ತ್ರೀ ಸಂಘಕ್ಕೆ ಮೊದಲೇ ಸ್ಖಲನವಾದರೂ, ಮೂತ್ರದೊಂದಿಗೆ ಹೋಗುತ್ತಿದ್ದರೂ ದೋಷರಹಿತವಾಗಿ ಶರೀರಕ್ಕೆ ಆರೋಗ್ಯ ವೃದ್ಧಿ ಧಾರ್ಡ್ಯತೆಯನ್ನೂ ಆಯುಸ್ಸು, ಬಲ, ತೇಜಸ್ಸು ಉಂಟು ಮಾಡುವದು. ಅಜೀರ್ಣ ಮಲಬದ್ಧತೆ ಮೆದುಳಿನ ಬಲಹೀನತೆ, ಕೈಕಾಲು, ಸೊಂಟ ನೋವುಗಳಿಗೆ ಇದು ದಿವ್ಯ ಔಷಧವು. ಈ ಸಾಲಂಮಿಸ್ರಿ ಎಂಬುವದು ಕಾಬೂಲ್‌ಕಂದಾಹಾರ ಪ್ರಾಂತ್ಯದಲ್ಲಿ ಬೆಳೆಯುತ್ತದೆ

ಈ ಔಷಧದಿಂದ ಗುಣಹೊಂದಿರುವ ಅನೇಕ ಮಹನೀಯರು ತಾವಾಗಿಯೇ ಅನೇಕ ದೇಶಗಳಿಂದಲೂ ಆಫ್ರೀಕ, ಬರ್ಮಾ, ಸಿಸಾಪುರ ಸಿಂಗಪೂರ್, ಸಿಲೋನ್ ಬೊಂಬಾಯಿ, ಕಲ್ಕತ್ತ, ಮದ್ರಾಸು ಮತ್ತು ಇಂಡಿಯಾದೇಶದಲ್ಲಿ ಎಲ್ಲಾ ಸ್ಥಳಗಳಿಂದಲೂ ನಮಗೆ ಯೋಗ್ಯತಾ ಪತ್ರಿಕೆಗಳನ್ನು ಕಳುಹಿಸಿರುವರು. ಇವುಗಳ ನಕಲನ್ನು ಯಾರಾದರೂ ತರಿಸಿ ನೋಡಬಹುದು. ಇವುಗಳು ಸುಳ್ಳು ಎಂದು ಸಿದ್ಧಪಡಿಸುವವರಿಗೆ ಮೇಲೆ ಕಂಡ ಬಹುಮಾನವು ಕೊಡಲ್ಪಡುತ್ತೆ. ನಾವು ಹಾಗೆ ಕೂಡ ನಿರಾಕರಿಸಿದಲ್ಲಿ ಕೋರ್ಟ ಮೂಲಕ ಅದನ್ನು ಪಡೆಯಬಹುದು. ೧ ಡಬ್ಬವನ್ನು ೧೫ ದಿನ ಸೇವಿಸಿದಲ್ಲಿ ಗುಣವು ಖಂಡಿತವಾಗಿ ತೋರಬಹುದು. ೨ ಯಿಂದ ೩ ಡಬ್ಬಿಗಳು ಜನ್ಮಾಂತ್ರದವರೆಗೂ ಪೂರ್ಣವಾಗಿ ಗುಣವನ್ನುಂಟು ಮಾಡುವವು. ಹೆಸರು ವಿಳಾಸಗಳನ್ನು ವಿವರವಾಗಿ ಬರೆಯಬೇಕು. ಒಂದಾವರ್ತಿ ಉಪಯೋಗಿಸಿ ನೋಡಿದಲ್ಲಿ ಖಾತ್ರಿ ಉಂಟಾಗುತ್ತೆ.

ಕ್ರಯ ಡಬ್ಬಿ ೧ಕ್ಕೆ ರೂ. ೩—೦—೦ ಹಾಂಗಿ ಚಾರ್ಜು ೧ರಿಂದ ೩ ಡಬ್ಬಿಗಳಿಗೆ ೦—೮—೦ ಆಣೆ. ಏಜಂಟರುಗಳು ಎಲ್ಲಾ ಸ್ಥಳಗಳಲ್ಲಿಯೂ ಅವಶ್ಯಕವಾಗಿರುತ್ತೆ. ರೂಲ್ಸ್ ತರಿಸಿಕೊಳ್ಳಬಹುದು. ಆರ್ಡರು ಕೊಡತಕ್ಕ ಕಾಲದಲ್ಲಿ ಈ ಪತ್ರಿಕೆಯ ಹೆಸರನ್ನು ಬರೆಯಬೇಕು.

ಟೆಲಿಗ್ರಾಫ್ ಅಡ್ರೆಸ್, ಮಿಸ್ರಿ ಬೆಂಗಳೂರು ಸಿಟಿ,

ಡಿ. ಮನ್ನಾಲಾಲ್, ಡಿಲ್ಲಿ ನೇಟಿವ್ ವೈದ್ಯರು,
ಸಾಲಂಮಿಸ್ರಿ ಮುರಬ್ಬ ಡಿಪೋ,
ಬೆಂಗಳೂರು ಸಿಟಿ

12—6

Printed & published by P. I. Belliappa, at "Kodagu" Press, Mercara, 'Kodagu" Ltd

"KODAGU" OFFICE. MERCARA.

ಕೊಡಗು.

[ಸತ್ಯೇನ ಧೂತರಯಾ ವಿದ್ಯಾ ... ಪ್ರಯುಕ್ತಕಾಃ || ಐಕ್ಯಮತ್ಯೇನ ದೇಶಾನಾಂ ಸುಸ್ಥಿರಾ ರಾಜ್ಯ ಸಂಪದಾ ||]

ಸಂಪಾದಕ–ಪಂದ್ಯಂಡ ಐ. ಬೆಳ್ಯಪ್ಪ.

[ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವದು.

ಪು ೬] ಕೊಡಗು, ಸಂ ೧೯೨೬ನೇ ಇಸವಿ ಆಗಸ್ಟ್ ತಾರೀಕು ೧೩ನೇ ಶುಕ್ರವಾರ [ಸಂಚಿಕೆ ೧೧

ಸ್ಪೆನ್ಸರ್ ಕಂಪೆನಿ

ಮಡಿಕೇರಿ ಮತ್ತು ಪೊಳ್ಳಿಬೆಟ್ಟ.

ಬೆಲೆ ಸುಲಭ! **ಈಗತಾನೇ ಬಂದಿರುತ್ತ!!** **ಜಾಗ್ರತೆ ಕೊಳ್ಳಿರಿ!!!**

ಒಂಟಿ ಕೊಳವಿನ ತೋಟ ಕೋವಿ 34 ಇಂಚಿನ, 1ಕ್ಕೆ	ರೂ. 50—8—0	2 ಯಫ್ ನ ಮದ್ದು 1 ಪೌಂಡು ಡಬ್ಬಿಗೆ ರೂ.	2—4—0
,, ,, 36 ,,	,, 52—8—0	,, ½ ,, ,,	1—4—0
ಜೋಡಿ ,, ,,	,, 115—0—0	ಕೇಪು 250ರ ಡಬ್ಬಿ 1ಕ್ಕೆ ,,	1—?—0
,, ,, ,,	,, 135—0—0	ಮಳೆಗಾಲದ ಕೋಟು 1ಕ್ಕೆ ,,	25—0—0
,, ಕೇಪು ಕೋವಿ ,,	,, 70—0—0	,, ಬೂಟ್ಸು ,, ,,	16—8—0
ಇನ್ನೂ ಅನೇಕ ತರದ ಕೋವಿಗಳು ಸಹ ಬಂದಿರುತ್ತೆ.		ಇಂಗ್ಲಿಷ್ ಕೆಲಸದ ಕೊಡೆ 1ಕ್ಕೆ ,,	3—12—0
12ನೇ ನಂಬ್ರು ತೋಟ 100ಕ್ಕೆ	,, 12—4—0	ಥರ್ಮಾಸ್ ಫ್ಲಾಸ್ಕ್ (Thermos flask) (24 ಗಂಟೆಯವರೆಗೆ ಕಾಫಿ ಇತ್ಯಾದಿ ಬಿಸಿಯಾಗಿರುವ ಕುಪ್ಪಿ 1ಕ್ಕೆ	1—8—0

ಪ್ರೊವಿಜನ್ಸ್, ಸ್ಟೋರ್ಸ್, ಹಾರ್ಡ್‌ವೇರ್, ಕ್ರಾಕರಿ, ಗ್ಲಾಸ್‌ವೇರ್, ಲ್ಯಾಂಪ್ಸ್, ಪರ್‌ಫ್ಯೂಮರಿ ಸೋಪ್ಸ್, ಸ್ಟೇಶನರಿ, ಸ್ಪೋರ್ಟಿಂಗ್ ಗುಡ್ಸ್, ಪ್ರೋಪ್ರೈಟರಿ ಮೆಡಿಸಿನ್ಸ್, ಟುಬ್ಯಾಕೊ, ಸಿಗರೇಟ್ಸ್, ಸಿಗಾರ್ಸ್, ಬೂಟ್ಸ್, ಗ್ರಾಮೋಫೋನ್, ಮೋಟಾರ್ ಎಣ್ಣೆ ಮತ್ತು ಸಾಹಿತ್ಯ, ಎರೇಟೆಡ್ ವಾಟರ್ಸ್, ಗೇವನ್ಸ್ ಮತ್ತು ಟಾಯಿಸ್.

ಈ ಮೇಲ್ಕಂಡ ಸಾಮಾನುಗಳು ಪ್ರತಿನಿತ್ಯವೂ ದೊರಕುವುದೆಂದು ತಿಳಿಸಲು ಸಂತೋಷಪಡುತ್ತೇವೆ. 52—30

ಸ್ಥಾಪಿತವಾದದ್ದು 1874 ಮೂಲಧನ 7 ಕೋಟಿ ರೂಪಾಯಿಗಳ

ಓರಿಯಂಟಲ್ ಗವರ್ನ್‌ಮೆಂಟ್ ಸೆಕ್ಯೂರಿಟಿ ಲೈಫ್ ಅಶ್ಯೂರೆನ್ಸ್ ಕಂಪೆನಿ ಲಿಮಿಟೆಡ್, ಹೆಡ್ ಆಫೀಸು:– ಬೊಂಬಾಯಿ.

1922–1924 ಈ ಮೂರು ವರ್ಷಗಳಲ್ಲಿ ಕಂಪೆನಿಯಲ್ಲಿ ನಡೆದ ಕೆಲಸದ ಫಲಿತಾಂಶಗಳು. —

ಲಾಭ— ರೂ. 51,00,000 (ಐವತ್ತೊಂದು ಲಕ್ಷ ರೂಪಾಯಿಗಳು) ಈ ಪೈಕಿ 45,94,80 ರೂಪಾಯಿಗಳನ್ನು ಲಾಭ ಸಹಿತ ಕೊಡಿರುವವರ ವಿಮೆ ಹಣಕ್ಕೆ ಹೆಚ್ಚು ಬೋನಸ್ ಜಮೂವಾಗಿ ಈ ಕೆಳಗೆ ಕಾಣಿಸಿರುವ ರೀತಿಯಲ್ಲಿ ಸೇರಿಸಿರುತ್ತದೆ

ಜೀವಮಾನಾವಧಿಯ ವಿಮೆದಾರರಿಗೆ ರೂ. 1000 ವಿಮೆ ಹಣಕ್ಕೆ

ಈ ಮೂರು ವರ್ಷಗಳಿಗೆ ರೂ. 67½.

ಕ್ಲಿಪ್ತಕಾಲದ ವಿಮೆದಾರರಿಗೆ ರೂ. 1000 ವಿಮೆ ಹಣಕ್ಕೆ

ಈ ಮೂರು ವರ್ಷಗಳಿಗೆ ರೂ. 54.

ಈ ಕಂಪೆನಿಯಲ್ಲಿ ಕ್ರಮೇಣ ಹೆಚ್ಚುತ್ತಿರುವ ಜನಾನುರಾಗವು ಈ ಕೆಳಗೆ ಕೊಟ್ಟಿರುವ ಹೊಸ ಕೆಲಸದ ಪಟ್ಟಿಯಿಂದ ತಿಳಿಯುತ್ತದೆ.

1923ರಲ್ಲಿ–ರೂ. 1,74,00,000
1924 ,, 2,37,00,000
1925 ,, 2,96,00,000

ಇನ್ನೂ ದಿನದಿನಕ್ಕೂ ಅಭಿವೃದ್ಧಿಯಾಗುತ್ತಲೇ ಇದೆ. ಜೀವವಿಮೆ ಪತ್ರದಲ್ಲಿ ಹಣವನ್ನು ಲಾಭಕರವಾಗಿ ಶೇಖರಿಸಲು ಇದೇ ಸಮಯ.

ಬೇಕಾದ ವಿಷಯಗಳನ್ನು ಈ ಕೆಳಗಿನ ವಿಳಾಸಕ್ಕೆ ಬರೆದು ತಿಳಿದುಕೊಳ್ಳಬಹುದು.

ಓರಿಯಂಟಲ್ ಬಿಲ್ಡಿಂಗ್ಸ್,
ಪೋಸ್ಟ್ ಬಾಕ್ಸ್ 56
ಬೆಂಗಳೂರು

ಎಸ್. ಆರ್. ಕೃಷ್ಣಸ್ವಾಮಯ್ಯರ್
ಬ್ರಾಂಚ್ ಸೆಕ್ರೆಟರಿ.

ಮನೋಲ್ಲಾಸಿನಿ ತೈಲ.

...ನೋವು, ತಲೆ ತಿರುಗುವುದು, ತಲೆನೋವು, ಕಣ್ಣುರಿ, ಕಿವಿಯಿಂದ ಕೀವು ಸೋರುವುದು ... ಕಣ್ಣುನೋವು, ಅಪಸ್ಮಾರ ನಿದ್ರೆ ... ನೆನಪು ಶಕ್ತಿ ಕುಂದಿಹೋಗುವುದು ಇವುಗಳನ್ನೆಲ್ಲ ಖಂಡಿತ ಗುಣಮಾಡುತ್ತದೆ ಉದುರುವ ಕೂದಲನ್ನು ನಿಲ್ಲಿಸಿ ಗಿಡ್ಡಗಿರುವ ಕೂದಲನ್ನು ಬೆಳೆಯಿಸಿ ಕೂದಲಿಗೆ ಸೌಂದರ್ಯವನ್ನೂ ಹೊಳಪನ್ನೂ ಕೊಟ್ಟು ಅಕಾಲಕ್ಕೆ ಹಣ್ಣಾಗುವ ಕೂದಲನ್ನು ತಡೆದು ಕೂದಲು ಇಲ್ಲದ ಸ್ಥಳದಲ್ಲಿ ಹೊಸ ಕೂದಲನ್ನು ಹುಟ್ಟಿಸುತ್ತದೆ. ಬೆಲೆ ಸೀಸೆಗೆ ರೂ 1, 3 ಸೀಸೆಗೆ 2—10—0, ಒಂದು ದೊಡ್ಡ ಸೀಸೆಗೆ ರೂ 2, 3 ಸೀಸೆಗಳಿಗೆ 5—8—0

ಚಂದನಾಸವ.— ಇದು ಪ್ರಮೇಹ ಮೂತ್ರಕೃಚ್ಛ್ರ, ಮೂತ್ರ ಹನಿಹನಿಯಾಗಿ ಹೋಗುವುದು, ಮೂತ್ರಕೋಶದ ಉರಿ, ಮೂತ್ರಪಿಂಡಗಳ ಉರಿ, ಮೂತ್ರನಾಳದಲ್ಲಿ ಹುಣ್ಣು, ಮೂತ್ರ ಹೊಯ್ಯುವಾಗ ಉರಿಯುವುದು, ಮೂತ್ರನಾಳದಿಂದ ಕೀವು ಬರುವುದು, ಮೂತ್ರದಲ್ಲಿ ಧಾತು, ಹುಡಿ ಹೋಗುವುದು, ಆಗಾಗ ಮೂತ್ರ ಬರುವದು, ಮೂತ್ರ ಹಿಡಿಯಲಿಕ್ಕೆ ಸಾಮರ್ಥ್ಯವಿಲ್ಲದಿರುವುದು, ದೇಹದಲ್ಲಿ ಉರಿ, ಬಾಯಾರಿಕೆ, ಸ್ವಪ್ನಾವಸ್ಥೆ, ಮೂತ್ರನಾಳದಲ್ಲಿ ಬರುವ ಸೋಂಕು ಇವುಗಳಿಗೆ ಪರಮ ಔಷಧಿ ಗಂಡಸರಿಗೂ ಹೆಂಗಸರಿಗೂ ಇದು ಅತ್ಯುತ್ತಮ ಬೆಲೆ—ಬಾಟ್ಲಿ 1, 3, 6ಕ್ಕೆ ರೂ. 1—4—0, 3—6—0; 6—12—0,

ರೋಮನಾಶಿನಿ—. ಈ ಪುಡಿಯನ್ನು ನೀರಲ್ಲಿ ಕಲಸಿ ಮೈಯಲ್ಲಿ ರೋಮವಿರುವ ಭಾಗಕ್ಕೆ ಹಚ್ಚಲು ರೋಮವು ಉದುರಿ ಬೀಳುವುದು ಡಬ್ಬಿ 1ಕ್ಕೆ 6 ಆಣೆ, 3 ಡಬ್ಬಿಗಳಿಗೆ ಡಬ್ಬಿಗೆ 3—9—0.

ಟಾನಿಕ್ ಸಾಯ ಮಲೇರಿಯಾ ರಕ್ಷೆ.—ಇದು ಇಂಡಕ್ಷನ್ ಮತ್ತು ಕ್ವಿನೀನು ಸೇರಿಸಿದರೂ ಗುಣವಾಗದಿರುವ ಮಲೇರಿಯಾ, ದಿನಬಿಟ್ಟು, 3—4 ದಿವಸಕ್ಕೊಂದು ಸಾರಿ ಬರುವ ಜ್ವರ, ನಡುಗಿ ಬರುವ ಜ್ವರ, ಮತ್ತು ಜ್ವರದಿಂದ ದೋಷದಿಂದ ಬರುವ ಜ್ವರಗಳಿಗೆ ಜಾತ್ರಿ ಗುಣ ... ಸೀಸೆ 1ಕ್ಕೆ ರೂ. 1—8—0; 3ಕ್ಕೆ ರೂ. 4—0—0, 6ಕ್ಕೆ ರೂ. 7—0—0.

... ಕೊಡಗು ... ಸಿಕ್ಕುತ್ತೆ

ವಿಳಾಸ–ಮನೋಲ್ಲಾಸಿನಿ ಕಂಪೆನಿ.
9 ಬೆಂಗಳೂರು, ಕಂಟನ್ಮೆಂಟ್,

—34

ಸತ್ಯನೋದಯೋಸ್ತು.

(ಗುಣವಾಗದಿದ್ದರೆ ಹಣ ವಾಪಸ)

ಧಾತುಪೌಷ್ಟಿಕ ಕಾಮೋತ್ತೇಜಕ, ಇಂದ್ರಿಯಸ್ತಂಭಕವಾದ

ಮದನೋದ್ಭವ ಗುಳಿಗೆ.

ಜನನೇಂದ್ರಿಯದ ಶಿಥಿಲತೆ ನಿರ್ಬಲತೆ ನಪುಂಸಕತ್ವ ಶೀಘ್ರ ಸ್ಖಲನ, ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತು ಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ ಇಂದ್ರಿಯಸ್ತಂಭಕ, ಗರ್ಮಿ, (ಟಾಕಿ) ಗುಪ್ತಪ್ರದೇಶದ ಮೇಲೆ ಹುಟ್ಟುವ ಎಲ್ಲ ತರದ ಬಕ್ಕೆಗಳು, ಹುಣ್ಣುಗಳು ಪಿತ್ತದ ಬಾಧೆಗಳು, ಕಟಿಶೂಲೆ ವಾತರೋಗವು ಮುಂತಾದವು ಅತ್ಯಲ್ಪ ಸಮಯದಲ್ಲಿ ಗುಣವಾಗಿ ಶರೀರಕ್ಕೆ ನಿರೋಗತ್ವವೂ ಕಾಂತಿಯೂ ರತಿಸುಖಕ್ಕೆ ಸಂಪೂರ್ಣ ಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗುತ್ತವೆ ಆದ್ದರಿಂದ ೬೦ ಗುಳಿಗೆಗಳಿಗೆ ೪ ರೂಪಾಯಿ ಇವನ್ನು ಸೇವಿಸುವಾಗ್ಗೆ **ನಪುಂಸಕತ್ವಾರಿ ತೈಲ**ವನ್ನು ಉಪಯೋಗಿಸಿದರೆ ಉತ್ತಮ. ಕಿಮ್ಮತ್ತು ಬಾಟ್ಲಿ ೧ಕ್ಕೆ ರೂ. ೨—೧೨—೦.

ಶ್ವಾಸೋಹನಿವಾರಣಿ—ಇದರ ಸೇವನೆಯಿಂದ ಮೂತ್ರಸ್ಥಾನದಿಂದ ಕೆಂಪು, ಹಳದಿಯಂತೆ ಹೋಗತಕ್ಕ ಕೀವು, ಉರಿ, ವಗೈರೆ ಆಗದಿದ್ದಾತ್ರಿಯಿಂದ ಗುಣವಾಗುವದು. ಕಿಮ್ಮತ್ತು ಬಾಟ್ಲಿ ೧ಕ್ಕೆ ರೂ ೩—೮—೦. ಟಿ ಮ. ಚಾರ್ಜ್. ಅನುಪಾನ ಪತ್ರಿಕೆ ಔಷಧದ ಸಂಗಡ.

ವಿಚಾರಣೆಗೆ ಸ್ಟಾಂಪು ಕಳುಹಿಸಿದರೆ ಕ್ಯಾಟಲಾಗು.

ವಿಳಾಸ,—

ವೈದ್ಯ ಜಿ. ಎಲ್. ೬ ಸೇಠಿ ಮತ್ತು ಕಂಪೆನಿ.

30 ನಂ 6. ಪೋಸ್ಟ್ ಬನವಾಸಿ, ಉತ್ತರ ಕಾನಡಾ.

ARMS & AMMUNITION MART.

Mahomedaily-Noorbhoy.



321 Abdul Rehman Street, near Crawford Market, BOMBAY, 3
Telegraphic Address:–"SHOOTER" Bombay.

[52–59] Please write for Reduced net prices list for 1926

"ಕೊಡಗು"

ಸನ್ ೧೯೨೬ ನೇ ಇಸವಿ ಆಗೊಸ್ಟು ತಾ. ೧೩ ನೇ ಶುಕ್ರವಾರ

ವೈಸ್ ರಾಯರೂ ಹಿಂದೂಮುಸಲ್ಮಾನ್ ಐಕ್ಯತೆಯೂ.

ಉತ್ತರಹಿಂದೂಸ್ಥಾನದಲ್ಲಿ ಹಿಂದೂಮುಸಲ್ಮಾನರೊಳಗೆ ಈಗ ಎರಡು ಮೂರು ವರ್ಷಗಳಿಂದೀಚೆಗೆ ಮನಸ್ತಾಪಗಳು ಬೆಳೆಯುತ್ತಾ ಹೋಗಿ ಕಲ್ಕತ್ತಾ ಮುಂತಾದ ಕೆಲವು ಕಡೆಗಳಲ್ಲಿ ಹೊಡೆದಾಟಗಳಾಗಿ ಪ್ರಾಣಹಾನಿಗಳಾಗುತ್ತಿರುವದು ವಾಚಕರಿಗೆ ಆಗಾಗ ತಿಳಿದುಬಂದಿದೆ. ಕಲ್ಕತ್ತಾದಲ್ಲಿ ದೊಂಬಿಗಳು ನಡೆಯುತ್ತಿರುವಾಗ ಬಂಗಾಳ ಸರಕಾರವು ತಟಸ್ಥವಾಗಿದ್ದುಕೊಂಡು ತನ್ನ ಕರ್ತವ್ಯವನ್ನು ಮಾಡಲಿಲ್ಲವೆಂತ ಅಲ್ಲಿನ ಜನರು ಆಕ್ಷೇಪಿಸಿದರು. ಹಿಂದೂಮುಸಲ್ಮಾನರೊಳಗೆ ಜಗಳವಾಗುತ್ತಿದ್ದರೆ ಬ್ರಿಟಿಷರಿಗೆ ಸಂತೋಷ; ಅದರಿಂದ ಇಂಥಾ ಜಗಳಗಳಾಗುವಾಗ ಸುಮ್ಮನಿರುವದು ಮಾತ್ರವಲ್ಲ, ಇಂಥಾ ಜಗಳಗಳು ಬೆಳೆಯುವಂತೆ ಸರಕಾರವು ಗಾಳಿಹಾಕುತ್ತದೆಯೆಂತ ಸಹ ಹಿಂದುಸ್ಥಾನದ ಮುಖಂಡರಲ್ಲನೇಕರು ಹೇಳಿಕೊಳ್ಳುತ್ತಾರೆ. ಕೂಲಿಕಾರರ ಮತದವರು ಇಂಗ್ಲಂಡಿನಲ್ಲಿ ಮಂತ್ರಿ ಮಂಡಲಿಯನ್ನು ವಹಿಸಿದ್ದಾಗ ಹಿಂದುಸ್ಥಾನದ ಸ್ಟೇಟ್ ಸೆಕ್ರೆಟರಿಯಾಗಿದ್ದ ಲಾರ್ಡ್ ಒಲಿವಿಯರ್ ಇವರು ಹಿಂದುಸ್ಥಾನದಲ್ಲಿ ಬ್ರಿಟಿಷ್ ಸರಕಾರವು ಮುಸಲ್ಮಾನರ ಕಡೆಗೆ ಹೆಚ್ಚಿನ ಸಹಾನುಭೂತಿ ತೋರಿಸುತ್ತಿರುವದರಿಂದ ಹಿಂದೂಮುಸಲ್ಮಾನರ ಜಗಳಕ್ಕೆ ಉತ್ತೇಜನ ದೊರೆಯುತ್ತದೆಯೆಂತ ಒಂದು ಪತ್ರಿಕೆಗೆ ಬರೆದರು. ಅದಕ್ಕೆ ಈಗಿನ ಸ್ಟೇಟ್ ಸೆಕ್ರೆಟರಿಯವರು ವಿರೋಧಿಸಿ ಇಂಡಿಯಾ ಸರಕಾರವು ಎಂದೂ ಪಕ್ಷ ವಹಿಸಿ ಇಲ್ಲವೆಂತ ಹೇಳಿದರು. ಈ ರೀತಿ ವಾಗ್ವಾದಗಳು ನಡೆಯುತ್ತಿರುವಾಗ ಹಿಂದುಸ್ಥಾನಕ್ಕೆ ಈಗ ಹೊಸದಾಗಿ ಬಂದ ವೈಸರಾಯರಾದ ಲಾರ್ಡ್ ಇರ್ವಿನ್‌ರವರು ಹಿಂದುಸ್ಥಾನದ ಹಿಂದೂಮುಸಲ್ಮಾನ್ ಜನರೊಳಗೆ ಇರುವ ಹೋರಾಟದ ವಿಷಯದಲ್ಲಿ ತುಂಬಾ ಮನನೊಂದು ಕೆಲವು ದಿವಸಗಳ ಹಿಂದೆ ಚೆಮ್ಸ್‌ಫರ್ಡ್ ಕ್ಲಬ್ಬಿನ ಔತಣದಲ್ಲಿ ಕೆಲವು ಮಾತುಗಳನ್ನಾಡಿದ್ದಾರೆ.

ಇವರು ಜುಲೈ ಆಖೈರಿನಲ್ಲಿ ಪೂನಾ ಪಟ್ಟಣಕ್ಕೆ ಬಂದಾಗ ಮಾಡಿದ ಒಂದು ಭಾಷಣದಲ್ಲಿ "ಹಿಂದುಸ್ಥಾನದ ಸ್ವಾಭಾವಿಕ ಸೃಷ್ಟಿ ಸೌಂದರ್ಯವನ್ನು ನೋಡಲಿಕ್ಕಾಗಿ ನಾನು ಅಲ್ಲಲ್ಲಿ ತಿರುಗುತ್ತಿರುವದಲ್ಲ. ಹೊಲಗದ್ದೆಗಳಲ್ಲಿ ಕೆಲಸಮಾಡುವ ಕೃಷಿಕರ ಮತ್ತು ಬೀದಿಗಳಲ್ಲಿ ಅಲೆದಾಡುವ ಬಡಜನರ ಬಾಳುವೆಯನ್ನು ಕಣ್ಣಾರೆ ನೋಡಬೇಕೆಂದು ತಿರುಗುತ್ತಿದ್ದೇನೆ. ಹಿಂದುಸ್ಥಾನದ ಮೂವತ್ತುಕೋಟಿ ಜನರಲ್ಲಿ ಪ್ರತಿಯೊಬ್ಬ ಗಂಡಸು ಹೆಂಗಸಿಗೂ ವ್ಯಕ್ತಿತ್ವವೆಂಬದೊಂದು ಇದೆ, ಮತ್ತು ಅವರಲ್ಲಿಯೂ ನನ್ನಲ್ಲಿಯೂ ಸಾಮಾನ್ಯವಾದುದೊಂದು ಏನೋ ಇದೆಯೆಂಬ ದೃಷ್ಟಿಯಿಂದಲೇ ನಾನು ನೋಡುತ್ತಿದ್ದೇನೆ" ಎಂಬ ಮನಸ್ಸಿಗೆ ನಾಟುವಂಥ ಸಹಾನುಭೂತಿ ಇರುವ ಮಾತುಗಳನ್ನು ಆಡಿದ್ದಾರೆ. ಇಂಥವರು ಇನ್ನೂ ಹಿಂದುಸ್ಥಾನದ ಅಧಿಕಾರಿಗಳ ಮಾತುಗಳಿಗೆ ಮರುಳಾಗಿ ತಮ್ಮನ್ನು ತಾವೇ ಮರೆಯದೆ ಇರುವ ಈಗ ಆಡುವ ಮಾತುಗಳಿಗೆ ಹಿಂದೀಯರೆಲ್ಲರೂ ಚನ್ನಾಗಿ ಕಿವಿಗೊಟ್ಟು ಕೇಳಬೇಕಾದದ್ದು ಅವಶ್ಯವಿದೆ. ತಮ್ಮ ಸ್ವಂತ ಉದ್ದೇಶಗಳನ್ನು ನೆರವೇರಿಸಿಕೊಳ್ಳುವ ಅಭಿಪ್ರಾಯದಿಂದಲ್ಲದೆ ನಿಜವಾಗಿಯೂ ಹಿಂದುಸ್ಥಾನದ ಒಳ್ಳೇದಕ್ಕಾಗಿ ಆಡುವ ಮಾತುಗಳು ಯಾರಿಂದ ಬಂದರೂ ಮನಸ್ಸಿಗೆ ತೆಗೆದುಕೊಳ್ಳಬೇಕಾದದ್ದು ಯುಕ್ತವಾಗಿದೆ.

ಸರ್ಕಾರವು ಹಿಂದೂ ಮುಸಲ್ಮಾನರೊಳಗೆ ಜಗಳವೆಬ್ಬಿಸುತ್ತದೆಯೆಂತಲೂ, ಇವರೊಳಗೆ ಆಗುವ ಜಗಳಗಳನ್ನು ನೋಡಿ ಸಂತೋಷಪಡುತ್ತಾ ಸುಮ್ಮನಿರುತ್ತದೆಯೆಂತಲೂ ಆಡಿಕೊಳ್ಳುವ ಮಾತುಗಳಿಗೆ ಆಧಾರವಿಲ್ಲವೆಂತ ವಾದಿಸಿ ಇಂಥಾ ಜಗಳಗಳನ್ನು ಬೆಳೆಯದಂತೆ ನೋಡಿಕೊಳ್ಳಲು ಸಿವಿಲ್ ಸರ್ವಿಸಿನ ಅಧಿಕಾರಿಗಳು ತುಂಬಾ ಜಾಗರೂಕರಾಗಿದ್ದಾರೆಂತ ಅವರನ್ನು ಹೊಗಳಿದ್ದಾರೆ. ಜಾತಿಗಳೊಳಗೆ ಜಗಳಗಳನ್ನು ಹುಟ್ಟಿಸುವ ವಿಷಯದಲ್ಲಿ ಅಧಿಕಾರಿಗಳು ಭಾಗಿಗಳಲ್ಲವೆಂಬ ಮಾತನ್ನು ನಾವು ಸಂಪೂರ್ಣವಾಗಿ ಒಪ್ಪುವದಿಲ್ಲ. ಆದರೆ ಹೆಚ್ಚಿನ ಯೂರೋಪಿಯನ್ ಅಧಿಕಾರಿಗಳು ಹಿಂದುಸ್ಥಾನದ ಜನರೊಳಗೆ ಆಗುವ ಕಲಹಗಳಲ್ಲಿ ನಿಷ್ಪಕ್ಷಪಾತರಾಗಿರುತ್ತಾರೆಂಬದನ್ನೇನೋ ಒಪ್ಪಬಹುದು. ಉದ್ಯೋಗದಲ್ಲಿರುವ ದೇಶೀಯರು ಪಕ್ಷವಹಿಸುತ್ತಾರೆಂಬ ಆಕ್ಷೇಪಣೆಯೂ ಇದೆ. ಆದರೆ ದೇಶೀಯ ಆಫೀಸರುಗಳು ಜಾತಿಜಗಳಗಳಲ್ಲಿ ಉಭಯ ಕಡೆಗೂ ನ್ಯಾಯಮಾಡುತ್ತಾರೆಂಬದು ಅವರ ಘನತೆಯನ್ನು ತೋರಿಸುತ್ತದೆಯೆನ್ನುತ್ತಾರೆ. ದೇಶೀಯ ಉದ್ಯೋಗಸ್ಥರು ಸ್ವಕೀಯ ಸಮುದಾಯಕರ ಹೋರಾಟಗಳಲ್ಲಿ ಪಕ್ಷವಹಿಸದೆ ಇರುವದು ಕಷ್ಟವಾದರೂ ಹಾಗೆ ಇರಬೇಕಾದದ್ದು ಅತಿ ಅವಶ್ಯವೆಂತ ವೈಸ್‌ರಾಯರು ಹೊಗಳಿಕೆ ರೂಪದಿಂದ ಬುದ್ಧಿವಾದ ಹೇಳಿರುತ್ತಾರೆ. ಈ ಮಾತುಗಳಿಗೆ ದೇಶೀಯ ಉದ್ಯೋಗಸ್ಥರು ಚನ್ನಾಗಿ ಕಿವಿಗೊಟ್ಟು ಕೇಳುವದಲ್ಲದೆ ತಮ್ಮ ನಡುವಳಿಕೆಗಳಲ್ಲಿ ಈ ಬುದ್ಧಿವಾದವನ್ನು ಜಾರಿಗೆ ತರುವದು ಅತಿ ಅವಶ್ಯ.

"ಒಟ್ಟು ಹಿಂದುಸ್ಥಾನದ ರಾಜ್ಯಭಕ್ತಿಗಿಂತ ಜಾತಿ ಜಗಳಗಳೇ ಹೆಚ್ಚು ಬಲವಾದರೆ ಹಿಂದುಸ್ಥಾನದಲ್ಲಿ ಸ್ವರಾಜ್ಯ ಸ್ಥಾಪನೆ ಮಾಡಲು ಅವಶ್ಯವಿರುವ ಒಂದು ಗುಣವು ನಿರ್ಮೂಲವಾದಂತಾಯಿತು" ಅಂದರೆ ಹಿಂದುಸ್ಥಾನಕ್ಕೆ ಪ್ರಜಾಪ್ರತಿನಿಧಿ ಸರಕಾರವನ್ನು ಕೊಡಲು ಬ್ರಿಟಿಷ್ ಜನರು ಒಪ್ಪಬೇಕಾದರೆ ಹಿಂದುಸ್ಥಾನದಲ್ಲಿ ಪ್ರಜೆಗಳೊಳಗೆ ಜಾತಿ ಜಗಳಗಳು ಇರಕೂಡದು. ಒಟ್ಟು ಹಿಂದುಸ್ಥಾನವೆಲ್ಲಾ ನಮ್ಮ ದೇಶವೆಂಬ ಭಾವನೆಯು ಪ್ರಜೆಯರಲ್ಲಿ ಬೆಳೆಯಬೇಕು. ಇದಕ್ಕೆ ವಿರೋಧವಾದರೆ ಪ್ರಜಾಪ್ರತಿನಿಧಿ ಸರಕಾರ ದೊರೆಯಲಾರದು ಎಂತ ವೈಸ್‌ರಾಯರು ಹೇಳಿದರು. ಈ ಮಾತುಗಳನ್ನು ಹಿಂದುಸ್ಥಾನದವರು ಮತ್ತು ಹಿಂದುಸ್ಥಾನದ ಹೊರಗಿನ ಹಿತಚಿಂತಕರೂ ಮನಸಿಗೆ ತೆಗೆದುಕೊಳ್ಳಬೇಕು. ಈ ಮಾತು ಹೊಸದೆಂತ ಅಲ್ಲ. ಜಾತಿ ಜಗಳಗಳು ಇದ್ದರೆ ಸ್ವರಾಜ್ಯ ಕೊಡದೆ ಇರಲಿಕ್ಕೆ ಒಂದು ಕಾರಣವೆಂಬದು ಈ ಮೊದಲೇ ಎಲ್ಲರಿಗೂ ತಿಳಿದಿದೆ. ಹಿಂದುಸ್ಥಾನದ ಸ್ವತಂತ್ರದ ವಿಷಯದಲ್ಲಿ ಎಷ್ಟೇ ಸಹಾನುಭೂತಿ ಇರುವ ಮನುಷ್ಯನಾದರೂ ಜಾತಿ ಜಗಳಗಳು ನಡೆಯುತ್ತಿದ್ದರೆ ಸ್ವರಾಜ್ಯ ದೊರೆಯುವದಿಲ್ಲವೆಂತ ಹೇಳಲೇ ಬೇಕಾಗುತ್ತದೆ. ರಾಜಕೀಯ ಕಾರ್ಯಗಳಲ್ಲೂ ಜಾತಿವಾರು ಕೆಲಸಮಾಡಬೇಕನ್ನುವ ಜನರು ನಮ್ಮ ದೇಶದಲ್ಲೂ ಇರುತ್ತಾರೆ. ಈ ಅಭಿಪ್ರಾಯದಿಂದಲೇ ನಮ್ಮ ದೇಶದಲ್ಲಿ ಪಂಗಡಗಳಾಗಲು ಕಾರಣವಾಗಿದೆ. ದೇಶದ ಜನರಿಗೆ ಇನ್ನೂ ಹೆಚ್ಚಿನ ಸ್ವತಂತ್ರ ಬೇಕೆಂತ ಅಭಿಪ್ರಾಯವಿರುವವರೆಲ್ಲರೂ ಜಾತಿವಾರು ಹಕ್ಕುಗಳನ್ನು ಕೇಳುವ ಬದಲು ಒಟ್ಟು ದೇಶದ ಹಕ್ಕನ್ನು ಪಡೆಯಲು ಕೆಲಸಮಾಡಬೇಕು. ಆದರೆ ಮುಂದೆ ಇರುವ ಜಾತಿಯವರು ವೈಸ್‌ರಾಯರ ಈ ಕೆಳಗಿನ ಮಾತುಗಳಿಗೆ ಹೆಚ್ಚು ಗಮನ ಕೊಡಬೇಕು. "ಆಯಾ ಜಾತಿಯವರು ತಮ್ಮ ವ್ಯಕ್ತಿತ್ವವನ್ನು ಬಿಟ್ಟುಬಿಡಬೇಕೆಂತ ಹೇಳುವದಿಲ್ಲ. ಆದರೆ ಬೇರೆ ಜಾತಿಯವರ ಮೇಲೆ ಸಮಾಧಾನ ತಾಳಿಕೊಳ್ಳಬೇಕು. ಹಿಂದುಸ್ಥಾನದ ನಿವಾಸಿಯರಾಗಿರುವವರೆಲ್ಲರ ಹಕ್ಕು ಬಾಧ್ಯತೆಗಳನ್ನು ಕಾಪಾಡಲು ಜಾತಿಯನ್ನು ಮರೆತು ಕೆಲಸ ಮಾಡಬೇಕು." ಈ ಮಾತುಗಳನ್ನು ಹಿಂದೂ ಮುಸಲ್ಮಾನರಿಗೆ ಸಂಬಂಧಿಸಿ ಹೇಳಿದರೂ ಇವು ಎಲ್ಲಾ ಜಾತಿಯ ಜನರಿಗೂ ಅನ್ವಯಿಸುತ್ತದೆ. ದೇಶದ ಮುಖ್ಯ ಉದ್ಯೋಗಗಳೂ, ಪದವಿಗಳೂ, ಇತರ ಹಕ್ಕುಗಳೂ ಒಂದೇ ಜಾತಿಗೆ ಇರಬೇಕೆನ್ನುವಷ್ಟು ಕಾಲ ಇತರ ಜಾತಿಯವರು ಸ್ವರಾಜ್ಯ ಬೇಡವೆಂತ ಹೇಳುವದರಲ್ಲಿ ನ್ಯಾಯವಿದೆ. ಸ್ವರಾಜ್ಯ ಕೊಡುವುದಿಲ್ಲವೆಂತ ಬ್ರಿಟಿಷರು ಹೇಳಲೂ ಕಾರಣವಿದೆ. ಮುಂದೆ ಇರುವ ಜಾತಿಯವರು ಹಿಂದೆ ಉಳಿದವರಿಗೆ ಸಹಾಯಕೊಟ್ಟು ದೇಶದ ಪೂರ್ಣ ಹಕ್ಕುಗಳೂ ದೇಶದ ನಿವಾಸಿಗಳಿಗೆಲ್ಲರಿಗೂ ದೊರೆಯುವುದಕ್ಕೆ ಅಡ್ಡಿ ಮಾಡಬಾರದು. ಈ ಸಹಾನುಭೂತಿ ತೋರಿಸಿದಾಗಲೇ ಸ್ವರಾಜ್ಯದಿಂದ ಪ್ರಯೋಜನವಾದೀತು.

ಕೋಮುವಾರು ಚುನಾವಣೆಯ ವಿಷಯ ವೈಸ್‌ರಾಯರು ಏನು ಹೇಳಿರುತ್ತಾರೆಂತ ನೋಡುವ. 'ಜಾತಿ ಜಗಳಗಳಿಗೆ ಕೋಮುವಾರು ಚುನಾವಣೆಯೇ ಕಾರಣವೆಂತ ಕೆಲವರು ಹೇಳುತ್ತಾರೆ. ಸರ್ವರ ಒಪ್ಪಿಗೆಯಿಂದ ಜಾತಿವಾರು ಚುನಾವಣೆ ಬೇಡವೆಂತ ಮಾಡಿಕೊಳ್ಳುವ ಕಾಲ ಬೇಗ ಬರಲಿ ಎಂತ ನಾನು ಹಾರೈಸುತ್ತೇನೆ. ಹೊಸ ಸುಧಾರಣೆ ಕೊಡುವ ಕಾಲದಲ್ಲಿ ಜಾತಿವಾರು ಚುನಾವಣೆ ಬೇಕೆಂತ ಜನರ ಅಭಿಪ್ರಾಯವಿದ್ದದ್ದರಿಂದ ಜಾತಿವಾರು ಚುನಾವಣೆಗೆ ಎಡೆಕೊಟ್ಟದ್ದಾಗಿದೆ. ಈ ಒಪ್ಪಿಗೆಯಿಂದಲ್ಲದೆ ಕೋಮುವಾರು ಚುನಾವಣೆಯನ್ನು ಇಟ್ಟುಕೊಳ್ಳಲು ಏನೂ ಕಾರಣವಿಲ್ಲ. 1929ನೇ ಇಸ್ವಿಯಲ್ಲಿ ಸುಧಾರಣೆಯನ್ನು ಮುಂದರಿಸಬಹುದೋ ಎಂಬದನ್ನು ಪರಿಶೋಧಿಸುವಾಗ ಈಗ ಇರುವ ಕೋಮುವಾರು ಹಕ್ಕುಗಳನ್ನು ತೆಗೆದುಬಿಡುವದಿಲ್ಲವಾದರೂ ಕೋಮುವಾರು ಚುನಾವಣೆಯನ್ನು ಇನ್ನೂ ಮುಂದರಿಸುವದಿಲ್ಲ.' ಅಂದರೆ ಈವರೆಗೆ ಕೋಮುವಾರು ಚುನಾವಣೆ ಇಲ್ಲದಲ್ಲಿ ಕೊಡುವದಿಲ್ಲ. ಕೋಮುವಾರು ಚುನಾವಣೆಯ ಹಕ್ಕನ್ನು ಜಾತಿವಾರು ಹಂಚುತ್ತಾ ಹೋಗುವದಿಲ್ಲವೆಂತ ಅರ್ಥವಾಗುತ್ತದೆ.

"ಹಿಂದುಸ್ಥಾನದ ಸೇವೆಯಲ್ಲಿ ಪ್ರತಿ ಜಾತಿಯ ಜನರೂ ಸ್ವತಂತ್ರರಾಗಿ ಭಾಗಿಗಳಾಗಲು ಅನುಕೂಲಕೊಡಲಿಕ್ಕಾಗಿ, ಕೋಮುವಾರು ಚುನಾವಣೆಯನ್ನು ಅಂಗೀಕರಿಸಿಕೊಳ್ಳಬೇಕಾಯಿತು. ಒಟ್ಟು ದೇಶದ ಪ್ರಯೋಜನಕ್ಕಾಗಿ ಕೆಲಸಮಾಡಲಿಕ್ಕೆ ಕೊಟ್ಟ ಅನುಕೂಲವನ್ನು ಬರೇ ಜಾತಿಯ ಪ್ರಯೋಜನಕ್ಕೆ ಉಪಯೋಗಿಸಿಕೊಳ್ಳುವ ಉದ್ದೇಶದಿಂದ ದೇಶದ ಕಾರ್ಯಕ್ಕೆ ಅವಶ್ಯವಿರಲಿ, ಇಲ್ಲದಿರಲಿ ಜಾತಿವಾರು ಚುನಾವಣೆ ಬೇಕೆಂತ ಕೇಳಲು ಪ್ರಾರಂಭಿಸಿದರೆ ಜಾತಿಜಗಳಗಳು ಹೆಚ್ಚುವದರಲ್ಲಿ ಸಂಶಯವಿಲ್ಲ. ಎಲ್ಲಾ ಜನರೂ ಸಹೋದರ ಭಾವದಿಂದ ಅನ್ಯೋನ್ಯತೆಯಲ್ಲಿ ಜೀವಿಸಬೇಕಾಗಿರುವಾಗ ಅನ್ಯತಾಳ್ಮೆ ಇರಬೇಕೆಂಬದನ್ನು ಮರೆಯಬಾರದು. ... **ಬೇಕೆಂತ ಕೇಳುವ ಹಕ್ಕುಗಳನ್ನು ನೆರೆಯವರಿಗೂ ಕೊಡಲು ತಯಾರಿರಬೇಕು.** ಈ ಅಭಿಪ್ರಾಯ ಬೆಳೆದರೆ ಜಾತಿಗಳೊಳಗೆ ಕಲಹಗಳು ಇರಲಾರವು. ... ಮುವಾರು ಚುನಾವಣೆಯಿಂದ ಮನಸ್ತಾಪಗಳು ಹೆಚ್ಚುವದೊರತು ಶಾಂತಿಯು ಸ್ಥಾಪನೆಯಾಗುವದಿಲ್ಲ' ವೆಂತ ವೈಸ್‌ರಾಯರು ಇನ್ನೊಂದು ಭಾಷಣದಲ್ಲಿ ಹೇಳಿರುತ್ತಾರೆ.

'ಜಾತಿ ಜಗಳಗಳನ್ನು ಹೋಗಲಾಡಿಸಲು ಆಯಾಯ ಮುಖಂಡರು ಪ್ರಯತ್ನಿಸಬೇಕೆಂತ ವೈಸ್‌ರಾಯರು ... ಕೇಳಿಕೊಂಡಿದ್ದಾರೆ. ಈ ಎರಡು ಜಾತಿಗಳೂ ಹಿಂದುಸ್ಥಾನ ... ಚರಿತ್ರೆಯ ಮಹತ್ವಕ್ಕೆ ಭಾಗಿಗಳಾಗಿವೆ. ಬಹಳ ... ನಾಗರೀಕತೆಗಳಿರುವ ಜಾತಿಗಳಾಗಿವೆ. ಎರಡು ... ಲ್ಲೂ ಒಳ್ಳೇ ಶಕ್ತಿ, ಬುದ್ಧಿ, ದೇಶಭಕ್ತಿ ಇರುವ ... ದ್ದಾರೆ. ಇವರು ಮನಸುಮಾಡಿದರೆ ಈ ಜಗಳಗಳ ... ಲ್ಲಿಸುವದು ಅಸಾಧ್ಯವಲ್ಲ. ರಾಜಕೀಯ, ಮತ, ಪ್ರಚಾರ ಕಾರ್ಯಗಳಲ್ಲಿ ಕೆಲಸಮಾಡುವವರೆಲ್ಲರೂ ... ಇತರ ವಿಧದಿಂದ ಜನರ ಮೇಲೆ ಶಕ್ತಿ ಇರುವವರೂ ... ವರವರ ಜಾತಿಯಲ್ಲಿ ಇತರ ಜಾತಿಗಳ ಮೇಲೆ ಇರುವ ... ಷವನ್ನು ಬಿಡುವಂತೆಯೂ, ಹಿಂಸೆಮಾಡದಂತೆಯೂ, ... ಜಾತಿಯವರ ಮೇಲಿರುವ ಸಂಶಯವನ್ನು ಬಿಟ್ಟುಬಿಡ... ಯೂ ಬೋಧಿಸಬೇಕು. ಈ ಜಗಳಗಳಿಂದ ರಾಷ್ಟ್ರೀಯ ... ಬೆಳವಣಿಗೆಗೆ ತುಂಬಾ ಅಡಚಣೆಯಾಗಿದೆ. ಮತದ ಹೆಸ... ಕಾಪಾಡಲಿಕಾದರೂ ಶಾಂತರಾಗಿರಿ. ಮತವೆಂದರೆ ... ನ ಆತ್ಮನ ಗುಟ್ಟುಗಳನ್ನು ತಿಳಿದುಕೊಳ್ಳಲು ಮಾಡುವ ಪ್ರಯತ್ನವಾಗಿದೆ. ನಮಗೆ ಅನುಭವಕ್ಕೆ ದೊರಕುವದು ಆತ್ಮನ ಸ್ವಲ್ಪ ಭಾಗ ಮಾತ್ರವಾಗಿದೆ. ನಮಗೆ ತೋರದೆ ಇ... ಆತ್ಮನ ಶಕ್ತಿಯು ಅಪರಿಮಿತವಾಗಿದೆ. ಅದನ್ನು ಕಾಣ... ಯುವದೇ ಮತದ ಉದ್ದೇಶವಾಗಿದೆ. ಆತ್ಮಜ್ಞಾನವ... ಕಾದರೆ ತುಂಬಾ ತಾಳ್ಮೆಯೂ ನಮ್ರತೆಯೂ ಬೇಕು. ... ಯವರ ಲೋಪಗಳನ್ನು ಸಹಿಸುವ ಶಕ್ತಿ ಬೇಕು. ಇ... ಗುಣಗಳನ್ನು ಬೆಳೆಸಿ ಜಾತಿಯನ್ನು ಸಾರ್ಥಕಗೊಳಿಸು... ರುವಲ್ಲಿ ಜಾತಿಯನ್ನು ಅನ್ಯೋನ್ಯ ಜಗಳಗಳಿಗೆ ಉಪಯೋಗಿಸುವದು ಬಹಳ ವಿಷಾದಕರ. ಇಂಥಾ ಜಗಳಗಳನ್ನು ... ಲಿಕ್ಕೆ ಬಿಟ್ಟರೆ ಹಿಂದುಸ್ಥಾನದ ಮತ್ತು ಮನುಷ್ಯ ಜಾತಿಯರಿಗೇನೇ ಒಂದು ದೊಡ್ಡ ಊನವಾಗಿದೆ.' ಈ ರೀತಿ ... ಪೂರ್ತಿಯಾಗಿ ಜಾತಿ ಜಗಳಗಳನ್ನು ನಿಲ್ಲಿಸಬೇಕೆಂತ ವೈಸ್‌ರಾಯರು ಕೇಳಿಕೊಂಡದ್ದು ಕೆಲವು ಮುಖಂಡರ ಮನಸ್ಸಿಗೆ ... ಅಲ್ಲಲ್ಲಿ ಒಗ್ಗಟ್ಟಿಗೆ ಕೆಲಸ ಮಾಡಲು ಪ್ರಯತ್ನಿಸುತ್ತಿ... ಇವರ ಪ್ರಯತ್ನಗಳು ಜಯವಾಗಲಿ ಎಂತ ನಾವು ಹಾರೈಸುತ್ತೇವೆ.

ಮಡಿಕೇರಿ ಮುನ್ಸಿಪಾಲಿಟಿ ಚುನಾವಣೆ.

ಮಡಿಕೇರಿ ಮುನ್ಸಿಪಲ್ ಕಮಿಟಿಯ ಚುನಾವಣೆಯು ವರ್ಷದಷ್ಟು ಚಲುವಟಿಕೆಯಿಂದ ಈ ವರೆಗೆ ಎಂದಿಗೂ ... ದಲಿಲ್ಲ. ಈ ಸಾರಿ ಕಮಿಟಿಗೆ ಹಲವು ಹೊಸ ಮೆಂಬರ ಚುನಾಯಿಸಲ್ಪಟ್ಟಿರುವರು. ಕಮಿಟಿಯ ಅಧ್ಯಕ್ಷರ ... ವಣೆಯು ಈ ತಾ 7ರಲ್ಲು ಅದಕ್ಕಿಂತಲೂ ಉತ್ಸಾಹದಿಂದ ನಡೆಯಿತು. ಚುನಾವಣೆಗೆ ನಿಂತಿದ್ದ ಇಬ್ಬರು ಉಮೇದವಾರರುಗಳ ಪೈಕಿ ಮ॥ ಯಂ ಭುಜಂಗರಾವ್ ಬಿ. ಎ., ಬಿ. ಎಲ್. ರವರು ಜಯಶೀಲರಾದರು. ಇವರಿಗೆ ನಮ್ಮ ಅಭಿನಂದನೆಗಳಿವೆ.

ರಾ ಬಾ ಕೆ ... ಶೆಟ್ಟಿಯವರು ಅಧ್ಯಕ್ಷರಾಗಿದ್ದಾಗ ... ರೂ ಇವರು ಈ ಮುನ್ಸಿಪಾಲಿಟಿಗೆ ಈ ವರೆಗೆ ಮಾಡಿದ ... ಮ ಕೆಲಸವನ್ನು ಯಾರೂ ಅಲ್ಲಗಳೆಯಲಾರರು. ಮುನ್ಸಿಪಾಲಿಟಿ ಕಮಿಟಿಯನ್ನು ಜನರ ಚುನಾಯಿತ ಪ್ರತಿನಿಧಿಗಳಿಗೆ ಬಿಟ್ಟುಕೊಟ್ಟಂದಿನಿಂದಲೂ ಇವರೇ ಅಧ್ಯಕ್ಷರಾಗಿ ... ಸಲ್ಪಟ್ಟು ಮುನ್ಸಿಪಾಲಿಟಿಯ ಕೆಲಸವನ್ನು ತೃಪ್ತಿಕರವಾಗಿ ನಡೆಸಿಕೊಂಡು ಬಂದರು. ಇವರು ಸರ್ಕಾರಿ ಉದ್ಯೋಗದಿಂದ ನಿವೃತ್ತರಾದನಂತರವೂ ಮಡಿಕೇರಿಯ ಜನಸಮುದಾಯದ ಕೆಲಸವನ್ನು ಮುತುವರ್ಜಿಯಿಂದ ನಡಿಸಿದಕ್ಕಾಗಿ ಈ ಪುರವಾಸಿಗಳು ಅವರಿಗೆ ತುಂಬಾ ಕೃತಜ್ಞರಾಗಿರುವರೆಂಬದರಲ್ಲಿ ಸಂಶಯವಿಲ್ಲ. ಇವರು ಇಷ್ಟು ಕಾಲ ಶ್ರದ್ಧೆ ವಹಿಸಿ ಕೆಲಸಮಾಡಿ ಗಳಿಸಿರುವ ವಿಶ್ರಾಂತಿಯನ್ನು ಅನುಭವಿಸಲು ದೇವರು ಅವರಿಗೆ ದೀರ್ಘಾಯುಷ್ಯವನ್ನು ಕೊಡಲೆಂದು ಪ್ರಾರ್ಥಿಸುತ್ತೇವೆ.

ಹೊಸ ಪ್ರೆಸಿಡೆಂಟರು ಈಗತಾನೇ ಜನಸಮುದಾಯದ ಕೆಲಸಕ್ಕೆ ಕೈಹಾಕಿರುವರಾದರೂ ಇವರಿಗೆ ತಮ್ಮ ಹೊಸ ವಾಬ್ದಾರಿಯ ಕೆಲಸವನ್ನು ನಡಿಸಲು ಶಕ್ತಿ ಇರುವುದರಿಂದ ಇವರ ಮುಂದಿನ ಕೆಲಸವನ್ನು ಹೇಗೆ ನಡಿಸುವರೆಂದು ಎಲ್ಲರೂ ಎದುರು ನೋಡುತ್ತಿರುವರು. ಇವರು ರಾ ಬಾ. ಶೆಟ್ಟಿಯವರ ಉದಾಹರಣೆಯನ್ನು ಹಿಂಬಾಲಿಸಿ ಪಟ್ಟಣಿಗರ ತೃಪ್ತಿಯನ್ನುಂಟು ಮಾಡುವರೆಂದು ನಂಬುತ್ತೇವೆ. ಹೊಸ ವೈಸ್ ಪ್ರೆಸಿಡೆಂಟರಾದ ಮ॥ ಉಸ್ಮಾನ್‌ಖಾನ್ ಸಾಹೇಬರನ್ನೂ, ಜಯಶೀಲರಾದ ಕಮಿಟಿ ಮೆಂಬರುಗಳನ್ನೂ ನಾವು ಅಭಿನಂದಿಸುತ್ತೇವೆ. ಹೊಸ ಕಮಿಟಿಯವರು ಪಂಗಡಗಳನ್ನು ಮರೆತು ತಮ್ಮ ವೋಟರುಗಳ ಹಿತಕ್ಕಾಗಿ ಒಗ್ಗಟ್ಟಿನಲ್ಲಿ ವರ್ತಿಸಿ ಪಟ್ಟಣದ ಅಭಿವೃದ್ಧಿಯನ್ನು ಸಾಧಿಸುವರಾಗಿ ಹಾರೈಸುತ್ತೇವೆ.

"ಕೊಡಗು"

ಸ ೧೯೨೬ ನೇ ಇಸವಿ ಅಗೊಸ್ತು ತಾ. ೧೩ ನೇ ಶುಕ್ರವಾರ

ವೈಸ್ ರಾಯರೂ ಹಿಂದೂಮುಸಲ್ಮಾನ್ ಐಕ್ಯತೆಯೂ.

ಉತ್ತರಹಿಂದೂಸ್ಥಾನದಲ್ಲಿ ಹಿಂದೂಮುಸಲ್ಮಾನರೊಳಗೆ ಈಗ ಎರಡು ಮೂರು ವರ್ಷಗಳಿಂದೀಚೆಗೆ ಮನಸ್ತಾಪಗಳು ಬೆಳೆಯುತ್ತಾ ಹೋಗಿ ಕಲ್ಕತ್ತಾ ಮುಂತಾದ ಕೆಲವು ಕಡೆಗಳಲ್ಲಿ ಹೊಡೆದಾಟಗಳಾಗಿ ಪ್ರಾಣಹಾನಿಗಳಾಗುತ್ತಿರುವದು ವಾಚಕರಿಗೆ ಆಗಾಗ ತಿಳಿದುಬಂದಿದೆ ಕಲ್ಕತ್ತಾದಲ್ಲಿ ದೊಂಬಿಗಳು ನಡೆಯುತ್ತಿರುವಾಗ ಬಂಗಾಳ ಸರಕಾರವು ತಟಸ್ಥವಾಗಿದ್ದುಕೊಂಡು ತನ್ನ ಕರ್ತವ್ಯವನ್ನು ಮಾಡಲಿಲ್ಲವೆಂತ ಅಲ್ಲಿನ ಜನರು ಆಕ್ಷೇಪಿಸಿದರು ಹಿಂದೂಮುಸಲ್ಮಾನರೊಳಗೆ ಜಗಳವಾಗುತ್ತಿದ್ದರೆ ಬ್ರಿಟಿಷರಿಗೆ ಸಂತೋಷ, ಆದ್ದರಿಂದ ಇಂಥಾ ಜಗಳಗಳಾಗುವಾಗ ಸುಮ್ಮನಿರುವದು ಮಾತ್ರವಲ್ಲ, ಇಂಥಾ ಜಗಳಗಳು ಬೆಳೆಯುವಂತೆ ಸರಕಾರವು ಗಾಳಿಹಾಕುತ್ತದೆಯೆಂತ ಸಹ ಹಿಂದುಸ್ಥಾನದ ಮುಖಂಡರಲ್ಲನೇಕರು ಹೇಳಿಕೊಳ್ಳುತ್ತಾರೆ ಕೂಲಿಕಾರರ ಮತದವರು ಇಂಗ್ಲೆಂಡಿನಲ್ಲಿ ಮಂತ್ರಿ ಮಂಡಲಿಯನ್ನು ವಹಿಸಿದ್ದಾಗ ಹಿಂದುಸ್ಥಾನದ ಸ್ಟೇಟ್ ಸೆಕ್ರೆಟರಿಯೂಗಿದ್ದ ಲಾರ್ಡ್ ಒಲಿವಿಯರ್ ಇವರು ಹಿಂದುಸ್ಥಾನದಲ್ಲಿ ಬ್ರಿಟಿಷ ಸರಕಾರವು ಮುಸಲ್ಮಾನರ ಕಡೆಗೆ ಹೆಚ್ಚಿನ ಸಹಾನುಭೂತಿ ತೋರಿಸುತ್ತಿರುವದರಿಂದ ಹಿಂದೂಮುಸಲ್ಮಾನರ ಜಗಳಕ್ಕೆ ಉತ್ತೇಜನ ದೊರೆಯುತ್ತದೆಯೆಂತ ಒಂದು ಪತ್ರಿಕೆಗೆ ಬರೆದರು. ಅದಕ್ಕೆ ಈಗಿನ ಸ್ಟೇಟ್ ಸೆಕ್ರೆಟರಿಯವರು ವಿರೋಧಿಸಿ ಇಂಡಿಯಾ ಸರಕಾರವು ಯಾವ ಪಕ್ಷ ವಹಿಸಿ ಇಲ್ಲವೆಂತ ಹೇಳಿದರು. ಈ ರೀತಿ ವಾಗ್ವಾದಗಳು ನಡೆಯುತ್ತಿರುವಾಗ ಹಿಂದುಸ್ಥಾನಕ್ಕೆ ಈಗ ಹೊಸದಾಗಿ ಬಂದ ವೈಸರಾಯರಾದ ಲಾರ್ಡ್ ಇರ್ವಿನ್‌ರವರು ಹಿಂದುಸ್ಥಾನದ ಹಿಂದೂಮುಸಲ್ಮಾನ್ ಜನರೊಳಗೆ ಇರುವ ಹೋರಾಟದ ವಿಷಯದಲ್ಲಿ ತುಂಬಾ ಮನನೊಂದು ಕೆಲವು ದಿವಸಗಳ ಹಿಂದೆ ಚೆಲ್ಮ್ಸ್‌ಫರ್ಡ್ ಕ್ಲಬ್ಬಿನ ಔತಣದಲ್ಲಿ ಕೆಲವು ಮಾತುಗಳನ್ನಾಡಿದ್ದಾರೆ

ಇವರು ಜುಲೈ ಆಖೈರಿನಲ್ಲಿ ಪೂನಾ ಪಟ್ಟಣಕ್ಕೆ ಬಂದಾಗ ಮಾಡಿದ ಒಂದು ಭಾಷಣದಲ್ಲಿ "ಹಿಂದುಸ್ಥಾನದ ಸ್ವಾಭಾವಿಕ ಸೃಷ್ಟಿ ಸೌಂದರ್ಯವನ್ನು ನೋಡಲಿಕ್ಕಾಗಿ ನಾನು ಅಲ್ಲಲ್ಲಿ ತಿರುಗುತ್ತಿರುವದಲ್ಲ. ಹೊಲಗದ್ದೆಗಳಲ್ಲಿ ಕೆಲಸಮಾಡುವ ಕೃಷಿಕರ ಮತ್ತು ಬೀದಿಗಳಲ್ಲಿ ಅಲೆದಾಡುವ ಬಡಜನರ ಬಾಳುವೆಯನ್ನು ಕಣ್ಣಾರೆ ನೋಡಬೇಕೆಂದು ತಿರುಗುತ್ತಿದ್ದೇನೆ. ಹಿಂದುಸ್ಥಾನದ ಮೂವತ್ತುಕೋಟಿ ಜನರಲ್ಲಿ ಪ್ರತಿಯೊಬ್ಬ ಗಂಡಸು ಹೆಂಗಸಿಗೂ ವ್ಯಕ್ತಿತ್ವವೆಂಬದೊಂದು ಇದೆ, ಮತ್ತು ಅವರಲ್ಲಿಯೂ ನನ್ನಲ್ಲಿಯೂ ಸಾಮಾನ್ಯವಾದುದೊಂದು ಏನೋ ಇದೆಯೆಂಬ ದೃಷ್ಟಿಯಿಂದಲೇ ನಾನು ನೋಡುತ್ತಿದ್ದೇನೆ" ಎಂಬ ಮನಸ್ಸಿಗೆ ನಾಟುವಂಥ ಸಹಾನುಭೂತಿ ಇರುವ ಮಾತುಗಳನ್ನು ಆಡಿದ್ದಾರೆ ಇಂಥವರು ಇನ್ನೂ ಹಿಂದುಸ್ಥಾನದ ಅಧಿಕಾರಿಗಳ ಮಾತುಗಳಿಗೆ ಮರುಳಾಗಿ ತಮ್ಮನ್ನು ತಾವೇ ಮರೆಯದೆ ಇರುವ ಈಗ ಆಡುವ ಮಾತುಗಳಿಗೆ ಹಿಂದೀಯರೆಲ್ಲರೂ ಚನ್ನಾಗಿ ಕಿವಿಗೊಟ್ಟು ಕೇಳಬೇಕಾದದ್ದು ಅವಶ್ಯವಿದೆ ತಮ್ಮ ಸ್ವಂತ ಉದ್ದೇಶಗಳನ್ನು ನೆರವೇರಿಸಿಕೊಳ್ಳುವ ಅಭಿಪ್ರಾಯದಿಂದಲ್ಲದೆ ನಿಜವಾಗಿಯೂ ಹಿಂದುಸ್ಥಾನದ ಒಳ್ಳೇದಕ್ಕಾಗಿ ಆಡುವ ಮಾತುಗಳು ಯಾರಿಂದ ಬಂದರೂ ಮನಸ್ಸಿಗೆ ತೆಗೆದುಕೊಳ್ಳಬೇಕಾದದ್ದು ಯುಕ್ತವಾಗಿದೆ

ಸರ್ಕಾರವು ಹಿಂದೂ ಮುಸಲ್ಮಾನರೊಳಗೆ ಜಗಳವೆಬ್ಬಿಸುತ್ತದೆಯೆಂತಲೂ, ಇವರೊಳಗೆ ಆಗುವ ಜಗಳಗಳನ್ನು ನೋಡಿ ಸಂತೋಷಪಡುತ್ತಾ ಸುಮ್ಮನಿರುತ್ತದೆಯೆಂತಲೂ ಆಡಿಕೊಳ್ಳುವ ಮಾತುಗಳಿಗೆ ಆಧಾರವಿಲ್ಲವೆಂತ ವಾದಿಸಿ ಇಂಥಾ ಜಗಳಗಳನ್ನು ಬೆಳೆಯದಂತೆ ನೋಡಿಕೊಳ್ಳಲು ಸಿವಿಲ್ ಸರ್ವಿಸಿನ ಅಧಿಕಾರಿಗಳು ತುಂಬಾ ಜಾಗರೂಕರಾಗಿದ್ದಾರೆಂತ ಅವರನ್ನೂ ಹೊಗಳಿದ್ದಾರೆ. ಜಾತಿಗಳೊಳಗೆ ಜಗಳಗಳನ್ನು ಹುಟ್ಟಿಸುವ ವಿಷಯದಲ್ಲಿ ಅಧಿಕಾರಿಗಳು ಭಾಗಿಗಳಲ್ಲವೆಂಬ ಮಾತನ್ನು ನಾವು ಸಂಪೂರ್ಣವಾಗಿ ಒಪ್ಪುವದಿಲ್ಲ. ಆದರೆ ಹೆಚ್ಚಿನ ಯೂರೋಪಿಯನ್ ಅಧಿಕಾರಿಗಳು ಹಿಂದುಸ್ಥಾನದ ಜನರೊಳಗೆ ಆಗುವ ಕಲಹಗಳಲ್ಲಿ ನಿಷ್ಪಕ್ಷಪಾತರಾಗಿರುತ್ತಾರೆಂಬದನ್ನೇನೋ ಒಪ್ಪಬಹುದು. ಉದ್ಯೋಗದಲ್ಲಿರುವ ದೇಶೀಯರು ಪಕ್ಷವಹಿಸುತ್ತಾರೆಂಬ ಆಕ್ಷೇಪಣೆಯೂ ಇದೆ ಆದರೆ ದೇಶೀಯ ಆಫೀಸರುಗಳು ಜಾತಿಜಗಳಗಳಲ್ಲಿ ಉಭಯ ಕಡೆಗೂ ನ್ಯಾಯಮಾಡುತ್ತಾರೆಂಬದು ಅವರ ಘನತೆಯನ್ನು ತೋರಿಸುತ್ತದೆಯೆನ್ನುತ್ತಾರೆ. ದೇಶೀಯ ಉದ್ಯೋಗಸ್ಥರು ಸ್ವಕೀಯ ಸಮುದಾಯಕರ ಹೋರಾಟಗಳಲ್ಲಿ ಪಕ್ಷವಹಿಸದೆ ಇರುವದು ಕಷ್ಟವಾದರೂ ಹಾಗೆ ಇರಬೇಕಾದದ್ದು ಅತಿ ಅವಶ್ಯವೆಂತ ವೈಸ್‌ರಾಯರು ಹೊಗಳಿಕೆ ರೂಪದಿಂದ ಬುದ್ಧಿವಾದ ಹೇಳಿರುತ್ತಾರೆ ಈ ಮಾತುಗಳಿಗೆ ದೇಶೀಯ ಉದ್ಯೋಗಸ್ಥರು ಚನ್ನಾಗಿ ಕಿವಿಗೊಟ್ಟು ಕೇಳುವದಲ್ಲದೆ ತಮ್ಮ ನಡುವಳಿಕೆಗಳಲ್ಲಿ ಈ ಬುದ್ಧಿವಾದವನ್ನು ಜಾರಿಗೆ ತರುವದು ಅತಿ ಅವಶ್ಯ.

"ಒಟ್ಟು ಹಿಂದುಸ್ಥಾನದ ರಾಜಭಕ್ತಿಗಿಂತ ಜಾತಿ ಜಗಳಗಳೇ ಹೆಚ್ಚು ಬಲವಾದರೆ ಹಿಂದುಸ್ಥಾನದಲ್ಲಿ ಸ್ವರಾಜ್ಯ ಸ್ಥಾಪನೆ ಮಾಡಲು ಅವಶ್ಯವಿರುವ ಒಂದು ಗುಣವು ನಿರ್ಮೂಲವಾದಂತಾಯಿತು" ಅಂದರೆ ಹಿಂದುಸ್ಥಾನಕ್ಕೆ ಪ್ರಜಾಪ್ರತಿನಿಧಿ ಸರಕಾರವನ್ನು ಕೊಡಲು ಬ್ರಿಟಿಷ್ ಜನರು ಒಪ್ಪಬೇಕಾದರೆ ಹಿಂದುಸ್ಥಾನದಲ್ಲಿ ಪ್ರಜೆಗಳೊಳಗೆ ಜಾತಿ ಜಗಳಗಳು ಇರಕೂಡದು. ಒಟ್ಟು ಹಿಂದುಸ್ಥಾನವೆಲ್ಲಾ ನಮ್ಮ ದೇಶವೆಂಬ ಭಾವನೆಯು ಪ್ರಜೆಯರಲ್ಲಿ ಬೆಳೆಯಬೇಕು. ಇವಕ್ಕೆ ವಿರೋಧವಾದರೆ ಪ್ರಜಾಪ್ರತಿನಿಧಿ ಸರಕಾರ ದೊರೆಯಲಾರದು ಎಂತ ವೈಸ್‌ರಾಯರು ಹೇಳಿದರು. ಈ ಮಾತುಗಳನ್ನು ಹಿಂದುಸ್ಥಾನದವರು ಮತ್ತು ಹಿಂದುಸ್ಥಾನದ ಹೊರಗಿನ ಹಿತಚಿಂತಕರೂ ಮನಸಿಗೆ ತೆಗೆದುಕೊಳ್ಳಬೇಕು. ಈ ಮಾತು ಹೊಸದೆಂತ ಅಲ್ಲ. ಜಾತಿ ಜಗಳಗಳು ಇದ್ದರೆ ಸ್ವರಾಜ್ಯ ಕೊಡದೆ ಇರಲಿಕ್ಕೆ ಒಂದು ಕಾರಣವೆಂಬದು ಈ ಮೊದಲೇ ಎಲ್ಲರಿಗೂ ತಿಳಿದಿದೆ, ಹಿಂದುಸ್ಥಾನದ ಸ್ವತಂತ್ರದ ವಿಷಯದಲ್ಲಿ ಎಷ್ಟೇ ಸಹಾನುಭೂತಿ ಇರುವ ಮಹನೀಯನಾದರೂ ಜಾತಿ ಜಗಳಗಳು ನಡಿಯುತ್ತಿದ್ದರೆ ಸ್ವರಾಜ್ಯ ದೊರೆಯುವದಿಲ್ಲವೆಂತ ಹೇಳಲೇ ಬೇಕಾಗುತ್ತದೆ. ರಾಜಕೀಯ ಕಾರ್ಯಗಳಲ್ಲೂ ಜಾತಿವಾರು ಕೆಲಸಮಾಡಬೇಕೆನ್ನುವ ಜನರು ನಮ್ಮ ದೇಶದಲ್ಲೂ ಇರುತ್ತಾರೆ. ಈ ಅಭಿಪ್ರಾಯದಿಂದಲೇ ನಮ್ಮ ದೇಶದಲ್ಲಿ ಪಂಗಡಗಳಾಗಲು ಕಾರಣವಾಗಿದೆ. ದೇಶದ ಜನರಿಗೆ ಇನ್ನೂ ಹೆಚ್ಚಿನ ಸ್ವತಂತ್ರ ಬೇಕೆಂತ ಅಭಿಪ್ರಾಯವಿರುವವರೆಲ್ಲರೂ ಜಾತಿವಾರು ಹಕ್ಕುಗಳನ್ನು ಕೇಳುವ ಬದಲು ಒಟ್ಟು ದೇಶದ ಹಕ್ಕನ್ನು ಪಡೆಯಲು ಕೆಲಸಮಾಡಬೇಕು. ಆದರೆ ಮುಂದೆ ಇರುವ ಜಾತಿಯವರು ವೈಸ್‌ರಾಯರ ಈ ಕೆಳಗಿನ ಮಾತುಗಳಿಗೆ ಹೆಚ್ಚು ಗಮನ ಕೊಡಬೇಕು. "ಯಾವ ಜಾತಿಯವರು ತಮ್ಮ ವ್ಯಕ್ತಿತ್ವವನ್ನು ಬಿಟ್ಟುಬಿಡಬೇಕೆಂತ ಹೇಳುವದಿಲ್ಲ. ಆದರೆ ಬೇರೆ ಜಾತಿಯವರ ಮೇಲೆ ಸಮಾಧಾನ ತಾಳಿಕೊಳ್ಳಬೇಕು. ಹಿಂದುಸ್ಥಾನದ ನಿವಾಸಿಯರಾಗಿರುವವರೆಲ್ಲರ ಹಕ್ಕು ಬಾಧ್ಯತೆಗಳನ್ನು ಕಾಪಾಡಲು ಜಾತಿಯನ್ನು ಮರೆತು ಕೆಲಸ ಮಾಡಬೇಕು." ಈ ಮಾತುಗಳನ್ನು ಹಿಂದೂ ಮುಸಲ್ಮಾನರಿಗೆ ಸಂಬಂಧಿಸಿ ಹೇಳಿದರೂ ಇವು ಎಲ್ಲಾ ಜಾತಿಯ ಜನರಿಗೂ ಅನ್ವಯಿಸುತ್ತದೆ ದೇಶದ ಮುಖ್ಯ ಉದ್ಯೋಗಗಳೂ, ಪದವಿಗಳೂ, ಇತರ ಹಕ್ಕುಗಳೂ ಒಂದೇ ಜಾತಿಗೆ ಇರಬೇಕೆನ್ನುವನ್ನು ಕಾಲ ಇತರ ಜಾತಿಯವರು ಸ್ವರಾಜ್ಯ ಬೇಡವೆಂತ ಹೇಳುವದರಲ್ಲಿ ನ್ಯಾಯವಿದೆ ಸ್ವರಾಜ್ಯ ಕೊಡುವ್ವದಿಲ್ಲವೆಂತ ಬ್ರಿಟಿಷರು ಹೇಳಲೂ ಕಾರಣವಿದೆ. ಮುಂದೆ ಇರುವ ಜಾತಿಯವರು ಹಿಂದೆ ಉಳಿದವರಿಗೆ ಸಹಾಯಕೊಟ್ಟು ದೇಶದ ಯಾವ ಹಕ್ಕುಗಳೂ ದೇಶದ ನಿವಾಸಿಗಳಿಗೆಲ್ಲರಿಗೂ ದೊರಿಯುವುದಕ್ಕೆ ಅಡ್ಡಿ ಮಾಡಬಾರದು. ಈ ಸಹಾನುಭೂತಿ ತೋರಿಸಿದಾಗಲೇ ಸ್ವರಾಜ್ಯದಿಂದ ಪ್ರಯೋಜನವಾದೀತು

ಕೋಮುವಾರು ಚುನಾವಣೆಯ ವಿಷಯ ವೈಸ್‌ರಾಯರು ಏನು ಹೇಳಿರುತ್ತಾರೆಂತ ನೋಡುವ "ಜಾತಿ ಜಗಳಗಳಿಗೆ ಕೋಮುವಾರು ಚುನಾವಣೆಯೇ ಕಾರಣವೆಂತ ಕೆಲವರು ಹೇಳುತ್ತಾರೆ. ಸರ್ವರ ಒಪ್ಪಿಗೆಯಿಂದ ಜಾತಿವಾರು ಚುನಾವಣೆ ಬೇಡವೆಂತ ಮಾಡಿಕೊಳ್ಳುವ ಕಾಲ ಬೇಗ ಬರಲಿ ಎಂತ ನಾನು ಹಾರೈಸುತ್ತೇನೆ. ಹೊಸ ಸುಧಾರಣೆ ಕೂಡುವ ಕಾಲದಲ್ಲಿ ಜಾತಿವಾರು ಚುನಾವಣೆ ಬೇಕಂತ ಜನರ ಅಭಿಪ್ರಾಯವಿದ್ದದ್ದರಿಂದ ಜಾತಿವಾರು ಚುನಾವಣೆಗೆ ಎಡೆಕೊಟ್ಟದ್ದಾಗಿದೆ ಈ ಒಪ್ಪಿಗೆಯಿಂದಲ್ಲದೆ ಕೋಮುವಾರು ಚುನಾವಣೆಯನ್ನು ಇಟ್ಟುಕೊಳ್ಳಲು ಏನೂ ಕಾರಣವಿಲ್ಲ 1929ನೇ ಇಸ್ವಿಯಲ್ಲಿ ಸುಧಾರಣೆಯನ್ನು ಮುಂದರಿಸಬಹುದೋ ಎಂಬದನ್ನು ವಿಚಾರಿಸುವಾಗ ಈಗ ಇರುವ ಕೋಮುವಾರು ಹಕ್ಕುಗಳನ್ನು ತೆಗೆದುಬಿಡುವದಿಲ್ಲವಾದರೂ ಕೋಮುವಾರು ಚುನಾವಣೆಯನ್ನು ಇನ್ನೂ ಮುಂದರಿಸುವದಿಲ್ಲ." ಅಂದರೆ ಈವರೆಗೆ ಕೋಮುವಾರು ಚುನಾವಣೆ ಇಲ್ಲದ್ದಲ್ಲಿ ಕೊಡುವದಿಲ್ಲ ಕೋಮುವಾರು ಚುನಾವಣೆಯ ಹಕ್ಕನ್ನು ಜಾತಿವಾರು ಹಂಚುತ್ತಾ ಹೋಗುವದಿಲ್ಲವೆಂತ ಅರ್ಥವಾಗುತ್ತದೆ.

"ಹಿಂದುಸ್ಥಾನದ ಸೇವೆಯಲ್ಲಿ ಪ್ರತಿ ಜಾತಿಯ ಜನರೂ ಸ್ವತಂತ್ರರಾಗಿ ಭಾಗಿಗಳಾಗಲು ಅನುಕೂಲಕೊಡಲಿಕ್ಕಾಗಿ, ಕೋಮುವಾರು ಚುನಾವಣೆಯನ್ನು ಅಂಗೀಕರಿಸಿಕೊಳ್ಳಬೇಕಾಯಿತು ಒಟ್ಟು ದೇಶದ ಪ್ರಯೋಜನಕ್ಕಾಗಿ ಕೆಲಸಮಾಡಲಿಕ್ಕೆ ಕೊಟ್ಟ ಅನುಕೂಲವನ್ನು ಬರೇ ಜಾತಿಯ ಪ್ರಯೋಜನಕ್ಕೆ ಉಪಯೋಗಿಸಿಕೊಳ್ಳುವ ಉದ್ದೇಶದಿಂದ ದೇಶದ ಕಾರ್ಯಕ್ಕೆ ಅವಶ್ಯವಿರಲಿ, ಇಲ್ಲದಿರಲಿ ಜಾತಿವಾರು ಚುನಾವಣೆ ಬೇಕೆಂತ ಕೇಳಲು ಪ್ರಾರಂಭಿಸಿದರೆ ಜಾತಿಜಗಳಗಳು ಹೆಚ್ಚುವದರಲ್ಲಿ ಸಂಶಯವಿಲ್ಲ, ಎಲ್ಲಾ ಜನರೂ ಸಹೋದರ ಭಾವದಿಂದ ಅನ್ಯೋನ್ಯತೆಯಲ್ಲಿ ಜೀವಿಸಬೇಕಾಗಿರುವಾಗ ಅನ್ಯ ಸ್ವತಾಳ್ಮೆ ಇರಬೇಕೆಂಬದನ್ನು ಮರೆಯಬಾರದು ನ... **ಬೇಕೆಂತ ಕೇಳುವ ಹಕ್ಕುಗಳನ್ನು ನಮ್ಮ ನೆರೆಯವರಿಗೂ ಕೊಡಲು ತಯಾರಿರಬೇಕು.** ಈ ಅಭಿಪ್ರಾಯ ಬೆಳಿದರೆ ಜಾತಿಗಳೊಳಗೆ ಕಲಹಗಳು ಇರಲಾರವು ... ಮುವಾರು ಚುನಾವಣೆಯಿಂದ ಮನಸ್ತಾಪಗಳು ಹೆಚ್ಚು ಹೊರತು ಶಾಂತಿಯು ಸ್ಥಾಪನೆಯಾಗುವದಿಲ್ಲ"ವೆಂತ ವೈಸ್‌ರಾಯರು ಇನ್ನೊಂದು ಭಾಷಣದಲ್ಲಿ ಹೇಳಿರುತ್ತಾರೆ.

"ಜಾತಿ ಜಗಳಗಳನ್ನು ಹೋಗಲಾಡಿಸಲು ಆಯಾ ... ಯ ಮುಖಂಡರು ಪ್ರಯತ್ನಿಸಬೇಕೆಂತ ವೈಸ್‌ರಾಯರು ... ಳಿಕೊಂಡಿದ್ದಾರೆ. ಈ ಎರಡು ಜಾತಿಗಳೂ ಹಿಂದುಸ್ಥಾನ ... ರಿತ್ರೆಯ ಮಹತ್ವಕ್ಕೆ ಭಾಗಿಗಳಾಗಿವೆ. ಬಹಳ ... ನಾಗರೀಕತೆಗಳಿರುವ ಜಾತಿಗಳಾಗಿವೆ. ಎರಡು ಜಾ... ಲ್ಲೂ ಒಳ್ಳೇ ಶಕ್ತಿ, ಬುದ್ಧಿ, ದೇಶಭಕ್ತಿ ಇರುವ ... ದ್ದಾರೆ. ಇವರು ಮನಸುಮಾಡಿದರೆ ಈ ಜಗಳಗಳನ್ನು ... ಲ್ಲಿಸುವದು ಅಸಾಧ್ಯವಲ್ಲ. ರಾಜಕೀಯ, ಮತ, ... ಪ್ರಚಾರ ಕಾರ್ಯಗಳಲ್ಲಿ ಕೆಲಸಮಾಡುವವರೆಲ್ಲರೂ ... ಇತರ ವಿಧದಿಂದ ಜನರ ಮೇಲೆ ಶಕ್ತಿ ಇರುವವರೂ ... ವರವರ ಜಾತಿಯಲ್ಲಿ ಇತರ ಜಾತಿಗಳ ಮೇಲೆ ಇರುವ ... ಷವನ್ನು ಬಿಡುವಂತೆಯೂ, ಹಿಂಸೆಮಾಡದಂತೆಯೂ, ... ಜಾತಿಯವರ ಮೇಲಿರುವ ಸಂಶಯವನ್ನು ಬಿಟ್ಟು ಬಿಡ... ಯೂ ಬೋಧಿಸಬೇಕು. ಈ ಜಗಳಗಳಿಂದ ರಾಷ್ಟ್ರೀಯ ... ಬೆಳವಣಿಗೆಗೆ ತುಂಬಾ ಅಡಚಣೆಯಾಗಿದೆ ಮತದ ಹೆಸ... ಕಾಪಾಡಲಿಕಾದರೂ ಶಾಂತರಾಗಿರಿ. ಮತವೆಂದರೆ ಮಾ... ನ ಆತ್ಮನ ಗುಟ್ಟುಗಳನ್ನು ತಿಳಿದುಕೊಳ್ಳಲು ಮಾಡುವ ಪ್ರ... ತ್ನವಾಗಿದೆ ನಮಗೆ ಅನುಭವಕ್ಕೆ ದೊರಕುವದು ಆತ್ಮನ ... ದ ಸ್ವಲ್ಪ ಭಾಗ ಮಾತ್ರವಾಗಿದೆ. ನಮಗೆ ತೋರದ ಇ... ಆತ್ಮನ ಶಕ್ತಿಯು ಅಪರಿಮಿತವಾಗಿದೆ ಅದನ್ನು ಕಂಡು ... ಯುವದೇ ಮತದ ಉದ್ದೇಶವಾಗಿದೆ ಆತ್ಮಜ್ಞಾನವಾ... ಕಾದರೆ ತುಂಬಾ ತಾಳ್ಮೆಯೂ ನಮ್ರತೆಯೂ ಬೇಕು. ... ಯವರ ಲೋಪಗಳನ್ನು ಸಹಿಸುವ ಶಕ್ತಿ ಬೇಕು ಇ... ಗುಣಗಳನ್ನು ಬೆಳಸಿ ಜಾತಿಯನ್ನು ಸಾರ್ಥಕಗೊಳಿಸಬೇ... ರುವಲ್ಲಿ ಜಾತಿಯನ್ನು ಅನ್ಯೋನ್ಯ ಜಗಳಗಳಿಗೆ ಉಪಯೋ... ಸುವದು ಬಹಳ ವಿಷಾಧಕರ. ಇಂಥಾ ಜಗಳಗಳನ್ನು ... ಲಿಕ್ಕೆ ಬಿಟ್ಟರೆ ಹಿಂದುಸ್ಥಾನದ ಮತ್ತು ಮನುಷ್ಯ ಜಾತಿಯ ... ರಿಗೇನೇ ಒಂದು ದೊಡ್ಡ ಊನವಾಗಿದೆ.' ಈ ರೀತಿ ... ಪೂರ್ತಿಯಾಗಿ ಜಾತಿ ಜಗಳಗಳನ್ನು ನಿಲ್ಲಿಸಬೇಕಂತ ವೈ... ಯರು ಕೇಳಿಕೊಂಡದ್ದು ಕೆಲವು ಮುಖಂಡರ ಮನಸ್ಸಿಗೆ ... ಅಲ್ಲಲ್ಲಿ ಒಗ್ಗಟ್ಟಿಗೆ ಕೆಲಸ ಮಾಡಲು ಪ್ರಯತ್ನಿಸುತ್ತಿ... ಇವರ ಪ್ರಯತ್ನಗಳು ಜಯವಾಗಲಿ ಎಂತ ನಾವು ಹಾರೈ... ಸುತ್ತೇವೆ.

ಮಡಿಕೇರಿ ಮುನ್ಸಿಪಾಲಿಟಿ ಚುನಾವಣೆ.

ಮಡಿಕೇರಿ ಮುನ್ಸಿಪಲ್ ಕಮಿಟಿಯ ಚುನಾವಣೆಯು ... ವರ್ಷದಷ್ಟು ಚಟುವಟಿಕೆಯಿಂದ ಈ ವರೆಗೆ ಎಂದಿಗೂ ... ದಲ್ಲಿಲ್ಲ. ಈ ಸಾರಿ ಕಮಿಟಿಗೆ ಹಲವು ಹೊಸ ಮೆಂಬರ... ಚುನಾಯಿಸಲ್ಪಟ್ಟಿರುವರು ಕಮಿಟಿಯ ಅಧ್ಯಕ್ಷರ ... ವಣೆಯು ಈ ತಾ 7ರಲ್ಲು ಅದಕ್ಕಿಂತಲೂ ಉತ್ಸಾಹದಿಂದ ... ಡೆಯಿತು. ಚುನಾವಣೆಗೆ ನಿಂತಿದ್ದ ಇಬ್ಬರು ಉಮೇದು... ದರುಗಳ ಪೈಕಿ ಮೆ ಯಂ. ಭುಜಂಗರಾವ್ ಬಿ.ಎ., ಬಿ. ಎಲ್., ರವರು ಜಯಶೀಲರಾದರು ಇವರಿಗೆ ನಮ್ಮ ಅಭಿ... ದನೆಗಳಿವೆ.

ರಾ ಬಾ. ಕೆ. ಕುಟ್ಟಿಯ ನವರು ಅಪಜಯಹೊಂದಿದರೂ ಅವರು ಈ ಮುನ್ಸಿಪಾಲಿಟಿಗೆ ಈ ವರೆಗೆ ಮಾಡಿದ ... ಮ ಕೆಲಸವನ್ನು ಯಾರೂ ಅಲ್ಲಗಳೆಯಲಾರರು ಮಡಿಕೇರಿ ಮುನ್ಸಿಪಾಲಿಟಿ ಕಮಿಟಿಯನ್ನು ಜನರ ಚುನಾಯಿತ ಪ್ರತಿ... ಗಳಿಗೆ ಬಿಟ್ಟುಕೊಟ್ಟಂದಿನಿಂದಲೂ ಇವರೇ ಅಧ್ಯಕ್ಷರಾಗಿ ... ಸಲ್ಪಟ್ಟು ಮುನ್ಸಿಪಾಲಿಟಿಯ ಕೆಲಸವನ್ನು ತೃಪ್ತಿಕರವಾಗಿ ... ಸಿಕೊಂಡು ಬಂದರು. ಇವರು ಸರ್ಕಾರಿ ಉದ್ಯೋಗದಿಂದ ... ನಿವೃತ್ತರಾದನಂತರವೂ ಮಡಿಕೇರಿಯ ಜನಸಮುದಾಯದ ... ಲಸವನ್ನು ಮುತುವರ್ಜಿಯಿಂದ ನಡಿಸಿದಕ್ಕಾಗಿ ಈ ಪುರನಿ... ಸಿಗಳು ಅವರಿಗೆ ತುಂಬಾ ಕೃತಜ್ಞರಾಗಿರುವರೆಂಬದರಲ್ಲಿ ಸಂ... ಶಯವಿಲ್ಲ. ಇವರು ಇಷ್ಟು ಕಾಲ ಶ್ರದ್ಧೆ ವಹಿಸಿ ಕೆಲಸಮಾಡಿ ಗಳಿಸಿರುವ ವಿಶ್ರಾಂತಿಯನ್ನು ಅನುಭವಿಸಲು ದೇವರು ... ವರಿಗೆ ದೀರ್ಘಾಯುಸ್ಸು ಕೊಡಲೆಂದು ಪ್ರಾರ್ಥಿಸುತ್ತೇವೆ

ಹೊಸ ಪ್ರೆಸಿಡೆಂಟರು ಈಗತಾನೇ ಜನಸಮುದಾಯದ ಕೆಲಸಕ್ಕೆ ಕೈಹಾಕಿರುವವರಾದರೂ ಇವರಿಗೆ ತಮ್ಮ ಹೊಸ ಜವಾಬ್ದಾರಿಯ ಕೆಲಸವನ್ನು ನಡಿಸಲು ಶಕ್ತಿ ಇರುವುದರಿಂದ ಇವರ ಮುಂದಿನ ಕೆಲಸವನ್ನು ಹೇಗೆ ನಡಿಸುವರೆಂದು ಎಲ್ಲರೂ ಎದುರು ನೋಡುತ್ತಿರುವರು. ಇವರು ರಾ ಬಾ. ಕುಟ್ಟಿಯ್ಯನವರ ಉದಾಹರಣೆಯನ್ನು ಹಿಂಬಾಲಿಸಿ ಪಟ್ಟಣಿಗರಿಗೆ ತೃಪ್ತಿಯನ್ನುಂಟು ಮಾಡುವರಾಗಿ ನಂಬುತ್ತೇವೆ. ಹೊಸ ವೈಸ್ ಪ್ರೆಸಿಡೆಂಟರಾದ ಮೆ. ಉಸ್ಮಾನ್‌ಖಾನ್ ಸಾಹೇಬರವರನ್ನೂ, ಜಯಶೀಲರಾದ ಕಮಿಟಿ ಮೆಂಬರುಗಳನ್ನೂ ನಾವು ಅಭಿನಂದಿಸುತ್ತೇವೆ. ಹೊಸ ಕಮಿಟಿಯವರು ಪಂಗಡ ಭೇದಗಳನ್ನು ಮೂಲೆಗೊತ್ತಿ ತಮ್ಮ ಟವುನುಗಳ ಹಿತಕ್ಕಾಗಿ ಒಗ್ಗಟ್ಟಿನಲ್ಲಿ ವರ್ತಿಸಿ ಪಟ್ಟಣದ ಅಭಿವೃದ್ಧಿಯನ್ನು ಸಾಧಿಸುವರಾಗಿ ಹಾರೈಸುತ್ತೇವೆ.

ಡಾಕ್ಟರ್ ಮುತ್ತು ಲಕ್ಷ್ಮಿಯಮ್ಮ ಯಮ್. ಬಿ., ಸಿ. ಯಮ್., ಇವರ ಲೇಖನದಿಂದ ಆರಿಸಿದ್ದು.

ಇವರು ಪೇರಿಸ್ ಪಟ್ಟಣದಲ್ಲಿ ನಡೆಯುವ ಪ್ರಪಂಚದ ಹೆಂಗಸರ ಕಾಂಗ್ರೆಸ್ಸಿಗೆ ಹಿಂದುಸ್ಥಾನದ ಪ್ರತಿನಿಧಿಯಾಗಿ ಹೋದವರಾಗಿದ್ದಾರೆ. ಇವರು ಯೂರೋಪಿನಿಂದ ಬರೆದ ಪತ್ರದಲ್ಲಿ ಹೇಳುವದೇನಂದರೆ.—

ಇಂಗ್ಲಿಷ್, ಫ್ರೆಂಚ್ ಮತ್ತು ಜರ್ಮನ್ ದೇಶದ ಹೆಂಗಸರು ತಮ್ಮ ಜನರಿಗೆ ತಮ್ಮ ತಮ್ಮ ಭಾಷೆಯಲ್ಲಿ ಉಪನ್ಯಾಸ ಕೊಡುವದನ್ನು ನೋಡುವಾಗ ಹಿಂದುಸ್ಥಾನದ ಓಸರಾದ ನಾವು ನಮ್ಮ ಮಾತೃಭಾಷೆಯಲ್ಲಿ ಜನಸಮುದಾಯಕ್ಕೆ ಉಪನ್ಯಾಸ ಕೊಡಲು ಶಕ್ತಿಯಿಲ್ಲವಲ್ಲವೆಂತ ತುಂಬಾ ವ್ಯಸನಪಡಬೇಕಾಗಿದೆ

ಒಬ್ಬ ಇಂಗ್ಲಿಷ್ ಲೇಡಿಯು ನನ್ನ ಇಂಗ್ಲಿಷ್ ಸಂಭಾಷಣೆಯನ್ನು ಕೇಳಿ ನಿಮ್ಮ ಊರಿನಲ್ಲಿ ಯಾವ ಭಾಷೆ ಆಡುತ್ತೀರಿ ಎಂತ ಕೇಳಿದಳು. ನಮ್ಮ ಮನೆಯೊಳಗೆ ಮಾತ್ರ ನಮ್ಮ ಮಾತೃಭಾಷೆಯನ್ನು ಉಪಯೋಗಿಸುತ್ತೇವೆಂತಲೂ, ವಿದ್ಯಾವಂತ ಜನರೆಲ್ಲರೂ ತಮ್ಮ ಸ್ನೇಹಿತರ, ಅತಿಥಿಗಳ ಸಂಗಡ ಇಂಗ್ಲಿಷಿನಲ್ಲಿ ಮಾತಾಡುತ್ತಾರೆಂತಲೂ, ಸಂಬಂಧಿಕರಿಗೆ ಇಂಗ್ಲಿಷಿನಲ್ಲೇ ಪತ್ರ ಬರೆಯುತ್ತಾರೆಂತಲೂ, ಇಂಗ್ಲೆಂಡಿಗೆ ಹೋಗಿ ಬಂದ ಕೆಲವರು ಮನೆಯಲ್ಲಿ ಮಕ್ಕಳಿಗೆ ಇಂಗ್ಲಿಷ್ ಕಲಿಸುತ್ತಾರೆಂತಲೂ ಹೇಳಿದೆ. ಸ್ಕೂಲುಗಳಲ್ಲೂ ಇಂಗ್ಲಿಷಿಗೆ ಪ್ರಾಮುಖ್ಯತೆ ಕೊಡಲಾಗಿದೆಯೆಂತಲೂ ಹೇಳಿದೆ. ಅವಳಿಗೆ ಬಹಳ ಆಶ್ಚರ್ಯವಾಯಿತು.

ಪ್ರಿಟಿಷರಾಗಲೀ ಇತರರಾಗಲೀ ನಮಗೆ ಇರುವ ಇಂಗ್ಲಿಷ್ ಭಾಷೆಯ ಜ್ಞಾನಕ್ಕಾಗಿ ನಮಗೆ ಮರ್ಯಾದೆ ಕೊಡುವರಿಲ್ಲವೆಂತ ನೆನಸಿನಲ್ಲಿಡಬೇಕು. ನಮಗೆ ಸ್ವಬುದ್ಧಿ ಇಲ್ಲವೆಂತಲೂ, ಚೆನ್ನಾಗಿ ಅನುಕರಿಸುವವರಾಗಿದ್ದೇವೆಂತಲೂ, ನಮಗೆ ಸ್ವಾರ್ಜಶಕ್ತಿಯೇನೂ ಇಲ್ಲವೆಂತಲೂ ಬೇರೆಯವರು ತಿಳಿದುಕೊಂಡಿದ್ದಾರೆ. ಪ್ರಪಂಚ ವಿಖ್ಯಾತರಾದ ದೇಶಭಕ್ತರಾಗಿರುವ ಗಾಂಧಿ, ಟಾಗೂರ್, ಸರ್ ಜೆ. ಸಿ. ಬೋಸ್, ರಾಮಕೃಷ್ಣ ಮಿಶನ್ ಕೆಲಸಗಾರರು ಮುಂತಾದ ಕೆಲವು ದೇಶಭಕ್ತರಿಲ್ಲದಿದ್ದರೆ ನಮ್ಮನ್ನು ಪ್ರಪಂಚದ ನಾಗರೀಕರಲ್ಲದ ಜನರೊಂದಿಗೆ ಸೇರಿಸಿಬಿಡುತ್ತಿದ್ದರು.

ಅವರ ಭಾಷೆಯನ್ನಾಡಿ, ಅವರ ತಿಂಡಿತಿಂದು, ಅವರ ಉಡುಪು ಉಟ್ಟರೂ ಹಿಂದೀಯರು ಇಂಗ್ಲಿಷ್ ಜನರಾಗುವದಿಲ್ಲವೆಂತ ಇಂಗ್ಲಿಷರು ಹೇಳುತ್ತಾರೆ. ಇಂಥಾ ಸ್ಪಷ್ಟವಾದ ಮಾತುಗಳಿಂದಲೇ ನಮಗೆ ಬುದ್ಧಿ ಬರಬೇಕಾಗಿದೆ. ಒಬ್ಬಳು ಅಮೇರಿಕನ್ ಲೇಡಿಯು ನಮ್ಮ ಮನೆ ನಾಮಾನುಗಳು ಯಾವ ರೀತಿಯಲ್ಲಿರುತ್ತವೆಯೆಂತ ಕೇಳಿದ್ದಕ್ಕೆ ಅವರಲ್ಲೂ ನಾವು ಇಂಗ್ಲಿಷರನ್ನು ಅನುಕರಿಸುತ್ತೇವೆಂತ ಹೇಳಿದಕ್ಕೆ ವ್ಯಸನಪಟ್ಟು ಬೇರೆಯಾ ಜನಾಂಗದವರು ಅವರವರ ಪದ್ಧತಿಗಳನ್ನು ಬಿಡುವಾರವೆಂತ ಹೇಳಿದಳು. ಹಿಂದುಸ್ಥಾನದ ಸ್ತ್ರೀಯರಿಗೆ ಇಂಗ್ಲಿಷ್ ಉಡುಪು ಹೇಗೆ ಸಲ್ಲದೋ ಹಾಗೆಯೇ ಇತರ ನಡತೆಗಳೂ ಒಪ್ಪಲಿಕ್ಕಿಲ್ಲವೆಂತ ಹೇಳಿದಳು.

ಟಾಗೂರರ ಕಾವ್ಯಗಳನ್ನು ಓದಿದ್ದ ಓರ್ವ ಮೆಕ್ಸಿಕೋ ದೇಶದ ಯುವತಿಯು ಹೇಳಿದ್ದೇನೆಂದರೆ—"ಹಿಂದುಸ್ಥಾನವು ಪ್ರಪಂಚಕ್ಕೆ ಒಂದು ವಿಶೇಷ ವಿಷಯವನ್ನು ಬೋಧಿಸಲಿಕ್ಕೆ ಇದೆ. ಆ ದೈವೀಕ ಕೆಲಸವಮಾಡಲು ನಿಮ್ಮ ದೇಶದ ಜನರನ್ನು ನೀವು ಎಬ್ಬಿಸಬೇಕು" ಎಂತ ಹೇಳಿದಳು. ಇನ್ನೊಬ್ಬ ಆಸ್ಟ್ರೇಲಿಯ ದೇಶದ ನಾರೀಮಣಿಯು ಹೇಳಿದ್ದೇನೆಂದರೆ- ನೀವು ಹಿಂದು ಮುಸಲ್ಮಾನರು ಜಗಳವಾಡುತ್ತಿರುವಾಗ್ಯೂ ಜಾತಿ ವಿಜಾತಿಗಳಾಗಿ ವಿಂಗಡಿಸಲ್ಪಟ್ಟಿರುವಾಗ್ಯೂ ಹಿಂದುಸಮಾಜದ ಒಂದು ಭಾಗವನ್ನು ಅಸ್ಪೃಶ್ಯ ವರ್ಗಕ್ಕೆ ಸೇರಿಸಿರುವಾಗ ಇಂಗ್ಲೀಷರ ಸಹಾಯವಿಲ್ಲದೆ ನಿಮ್ಮನ್ನು ನೀವು ಆಳಿಕೊಳ್ಳುವದು ಹೇಗೆ ಸಾಧ್ಯ? ಎಂತ ಕೇಳಿದಳು. ಇದರಿಂದ ನನ್ನ ಮನಸಿಗೆ ಏನು ಹೊಳೆಯಿತೆಂದರೆ- ಬ್ರಾಹ್ಮಣ, ಬ್ರಾಹ್ಮಣೇತರ, ಕ್ರಿಶ್ಚಿಯನ್, ಮುಸಲ್ಮಾನ್, ಪಂಚಮ, ಉತ್ತಮಜಾತಿ, ಕೀಳುಜಾತಿ ಎಂಬ ಭೇದಗಳು ಹಿಂದುಸ್ಥಾನದ ಒಳಗೆ ಮಾತ್ರ ಇವೆಯೆಂದನ್ನೂ ಹೊರಗಿನವರು ಯಾವ ಭೇದವನ್ನೂ ಎಣಿಸದೆ ಎಲ್ಲಾ ಹಿಂದೀಯರಿಗೂ ಒಂದೇ ತರದ ಅವಮರ್ಯಾದೆಯನ್ನು ತೋರಿಸುತ್ತಾರೆಂಬದನ್ನೂ ನಾವು ನೆನಪಿನಲ್ಲಿಟ್ಟುಕೊಳ್ಳುವದಿಲ್ಲ. ಹೊರಗಿನವರು ನಮ್ಮ ಸಂಸ್ಕೃತಿಗೆ ಬೆಲೆ ಕೊಡುತ್ತಾರೆಯೇ ಹೊರತು ನಮ್ಮ ಮತಕ್ಕೂ ಜಾತಿಗೂ ಬೆಲೆ ಕೊಡುವದಿಲ್ಲ.

ಹಿಂದುಸ್ಥಾನದಲ್ಲಿ ಇಷ್ಟೊಂದು ಕಾಲ ಬ್ರಿಟಿಸ್ ಆಳ್ವಿಕೆಯು ನಡೆದರೂ, ನಮ್ಮಲ್ಲಿ ಅನೇಕರು ಜ್ಞಾನಾರ್ಜನೆಗಾಗಿ ಸಪ್ತ ಸಮುದ್ರ ದಾಟಿ ಬಂದು ಹೋಗಿದ್ದರೂ ನಮ್ಮ ಒಳಗಿನ ಚಿಕ್ಕ ಚಿಕ್ಕ ವ್ಯತ್ಯಾಸಗಳನ್ನು ಎಣಿಸದೆ ಬಿಟ್ಟುಬಿಡಬೇಕೆಂಬದನ್ನು ನಾವು ಇನ್ನೂ ತಿಳಿದುಕೊಂಡಿಲ್ಲವೆಂಬುದು ಬಹಳ ವ್ಯಸನಕರ.

ಪರದೇಶ ಸಂಚಾರ ಮಾಡಿದ ನಮಗೆ ಶ್ರೀಕೃಷ್ಣ, ಹರಿಶ್ಚಂದ್ರ, ಬುದ್ಧ, ತಿರುವಳ್ಳುವರ್ ಮುಂತಾದವರಿಗೆ ಜನ್ಮವಿತ್ತ ನಮ್ಮ ಹಿಂದುಸ್ಥಾನಕ್ಕೆ ಈಗಿನ ಪ್ರಪಂಚ ನಾಟಕದಲ್ಲಿ ಸ್ಥಳವಿಲ್ಲ ಎಂತ ತುಂಬಾ ವ್ಯಸನವಾಗುತ್ತದೆ. ನಾವು ಸರಿಯಾದ ದಾರಿಯಲ್ಲಿ ಮುಂದುವರಿದು ಹೋಗುತ್ತಿಲ್ಲವೆಂತ ಗೊತ್ತಾಗುತ್ತದೆ. ಜೀವನಕ್ಕೆ ಬೇಕಾದ ಪ್ರತಿಯೊಂದು ಸಾಮಗ್ರಿಗೂ ನಾವು ಇತ್ತೀಚಿನ ಪಶ್ಚಿಮವನ್ನೇ ನೋಡಬೇಕಾಗಿದೆ. ಇಂಜಿನೀಯರಿಂಗ್, ವೈದ್ಯಕಲೆ, ವಿಜ್ಞಾನ ಮುಂತಾದ ಎಲ್ಲಾ ಜ್ಞಾನಗಳಿಗೂ ಪಶ್ಚಿಮ ದೇಶವನ್ನೇ ಹಿಂಬಾಲಿಸಬೇಕಾಗಿದೆ. ನಿತ್ಯ ನಮಗೆ ಬೇಕಾದ ಆಹಾರವನ್ನು ಮಕ್ಕಳಿಗೂ ಹಾಲು ಅಕ್ಕಿಗೂ ಕೊಡುತ್ತಾ ಹೋದರೆ ಬೇರಾದಕ್ಕೆಯೋ ಹಾಳಾಗಿ ಹೋಗುವಂತೆ ಹಿಂದುಸ್ಥಾನದಲ್ಲಿ ಈಗ ಕೊಡುವ ವಿದ್ಯಾಕ್ರಮದಿಂದ ಹಿಂದೀಯರ ಬುದ್ಧಿ ಕುಶಲತೆಯು ಬೆಳೆಯುವ ಬದಲು ಬುದ್ಧಿಯು ಮುದುರಿಕೊಳ್ಳುತ್ತಲಿದೆ. ನಮ್ಮ ದೇಶದಲ್ಲಿ ಕೊಡುವ ವಿದ್ಯಾಭ್ಯಾಸದ ಕ್ರಮವು ಬೇರೆ ದೇಶದ ವಿದ್ಯಾಭ್ಯಾಸದ ಕ್ರಮದಿಂದ ಸಂಪೂರ್ಣ ವ್ಯತ್ಯಾಸವಾಗಿದೆ. ಪರದೇಶಗಳಲ್ಲಿ ಮಾತೃಭಾಷೆಗೆ ಬಹಳ ಪ್ರಾಮುಖ್ಯತೆ ಕೊಡಲಾಗಿದೆ. ಅದರಿಂದ ಅವರ ಪೂರ್ವಚರಿತ್ರೆ, ಸಾಹಿತ್ಯ, ಮತ ಮುಂತಾದನ್ನು ಚೆನ್ನಾಗಿ ತಿಳಿದುಕೊಂಡವರಾಗಿ ಉತ್ಸಾಹ ಹುಟ್ಟಿ ಅನೇಕಾನೇಕ ಸ್ವಕೀಯ ಇರುವವರೂ ಕವಿಗಳೂ ತತ್ವಜ್ಞಾನಿಗಳೂ ಪ್ರಕಾಶಕ್ಕೆ ಬಂದಿದ್ದಾರೆ. ನಮ್ಮ ಈಗಿನ ನಾಗರೀಕತೆ ಯಾವದೆಂದರೋ, ಇಂಗ್ಲಿಷ್ ಭಾಷೆಯಲ್ಲಿ ಪಾಂಡಿತ್ಯಪಡೆದು, ಅನೇಕ ವರ್ಷ ಬಾಯಿಪಾಠ ಮಾಡಿ ಯುನಿವರ್ಸಿಟಿಯಲ್ಲಿ ಡಿಗ್ರಿ ಪಡೆದರೆ ಆಯಿತು! ಈಗಿನ ಕ್ರಮದಿಂದ ನಾವು ಆಲೋಚಿಸುವದು ಇಂಗ್ಲಿಷಿನಲ್ಲಿ, ಬರೆಯುವದು ಇಂಗ್ಲಿಷಿನಲ್ಲಿ, ಮಾತಾಡುವುದು ಇಂಗ್ಲಿಷಿನಲ್ಲಿಯೂ ನಮ್ಮ ಮತ, ಇತಿಹಾಸ, ಸಾಹಿತ್ಯವನ್ನು ಮರೆತುಕೊಂಡಿದ್ದೇವೆ. ಬೈಬಲ್, ಶೇಕ್ಸ್‌ಪಿಯರ್ ಮತ್ತು ಟೆನ್ನಿಸನ ಕಾವ್ಯಗಳಿಂದ ಆಧಾರಗಳನ್ನು ಸಭೆಯಾಗಿ ಕೊಡುತ್ತೇವೆಯೇ ಹೊರತು ಭಗವದ್ಗೀತೆ, ಕೋರಾನ್ ಮುಂತಾದ ನಮ್ಮ ಗ್ರಂಥಗಳ ಆಧಾರ ಕೊಡಲು ಶಕ್ತಿಯಿಲ್ಲ. ನಮ್ಮ ಕವಿಗಳಾದ ಯುವಾಲ್ಮೀಕಿ, ವಳ್ಳುವರ್, ಕಂಬ, ಕಾಳಿದಾಸ ಮುಂತಾದ ಕವಿಗಳ ಕಾವ್ಯಗಳಲ್ಲಿ ನೀತಿ, ಸತ್ಯ, ಮತಬೋಧನೆಗಳೇನೂ ಕಡಿಮೆಯಾಗಿಲ್ಲ. ಅವುಗಳಿಗೆ ಕೊಡಬೇಕಾದ ಗೌರವ ಕೊಡುತ್ತಿಲ್ಲ. ನಮ್ಮ ದೇಶಕ್ಕೆ ಬೇಕಾದ ವಿದ್ಯೆಯು ಪಾರಮಾರ್ಥ, ಭಾತೃಭಾವ, ದೇಶಾಭಿಮಾನ ಮುಂತಾದವುಗಳ ಬೆಳೆಕೆಯಾಗಿದೆ. ಇಂಥಾ ಬೆಳೆಕೆಯಿಂದಲೇ ರಾಜಾರಾಮ ಮೋಹನರಾಯ್, ಸ್ವಾಮಿ ವಿವೇಕಾನಂದ, ಡಾಕ್ಟರ್ ಬೆಸೆಂಟ್, ಟಾಗೂರ್, ಗಾಂಧಿ, ಸರೋಜಿನಿದೇವಿ ಸಹ ಪ್ರಕಾಶಕ್ಕೆ ಬಂದದ್ದಾಗಿದೆ.

ಅಲೇಕ್ಸಾಂಡರನು ಹಿಂದುಸ್ಥಾನಕ್ಕೆ ದಂಡೆತ್ತಿ ಬಂದಾಗ ಅವನ ಕಡೆ ಚರಿತ್ರೆಕಾರರು ಹಿಂದುಸ್ಥಾನದ ಜನರನ್ನು ಹೀಗೆಂತ ವರ್ಣಿಸಿದ್ದಾರೆ. 'ಅವರು ಪೌರುಷವುಳ್ಳವರು, ಧೈರ್ಯವಂತರು, ಸಾಹಸಿಗಳು, ಸತ್ಯವಂತರು, ಪ್ರಮಾಣಿಕರು, ಆರೋಗ್ಯವುಳ್ಳವರು, ಸುಶೀಲರು ಆಗಿದ್ದಾರೆ." ಈಗಿನ ಹಿಂದೀಯರು ಈ ಎಲ್ಲಾ ಗುಣಗಳನ್ನು ಕಳಕೊಂಡಿದ್ದಾರೆ. ಇಂಗ್ಲೆಂಡಿನ ಜನರಲ್ಲಿ ಈ ಗುಣಗಳು ಇವೆಯೆಂತ ನಾವ ಒಪ್ಪಬೇಕಾಗಿದೆ. ಈಗ ಜಗತ್ಪ್ರಸಿದ್ಧಾ ಪುನಃ ಸಂಪಾದಿಸುವ ವರೆಗೆ ನಾವು ಅತ್ಯ ಗೌರವವಿರುವ ಮಹತ್ವದ ಜನಾಂಗವೆನಿಸಿಕೊಳ್ಳಲು ಸಾಧ್ಯವಿಲ್ಲ.

ಅಮೇರಿಕದ ಮಾತೆಯರು.

(ಶ್ರೀ ಪಿಕೆ—ಆರ್ ಕಲ್ಯಾಣಮ್ಮ ಸಂಪಾದಕಿ, 'ಸರಸ್ವತಿ' ಬೆಂಗಳೂರು.)

ಭಾಗ 1.

(ಈ ಲೇಖನವು ಹಿಂದಿ ಮಾಸಿಕ "ಸರಸ್ವತಿ" ಯಿಂದ ಪರಿವರ್ತಿಸಲ್ಪಟ್ಟಿದೆ.)

ಅಮೇರಿಕದ ಮತ್ತು ಭರತಖಂಡದ ತಾಯಿಯರಲ್ಲಿ ಏನಾದರೂ ವ್ಯತ್ಯಾಸವಿರುವುದೇ? ಅವರು ಭಾರತ ಸ್ತ್ರೀಯರಿಗಿಂತಲೂ ಉತ್ತಮರೇ? ಭಾರತ ಮಾತೆಯರ ಹಾಗೆ ಸ್ವಾರ್ಥಹೀನ, ವಾತ್ಸಲ್ಯ ಮತ್ತು ಪರಿಶ್ರಮವುಳ್ಳವರೇ? ಅವರೆಲ್ಲರೂ ನಿಸ್ವಾರ್ಥಭಾವದಿಂದ ತಮ್ಮ ಸಂತಾನದ ಲಾಲನ ಪಾಲನವನ್ನು ಮಾಡಿ ವಿಪತ್ಕಾಲದಲ್ಲಿ ಅವರನ್ನು ರಕ್ಷಿಸುವರೋ? ಅವರು ಆದರ್ಶ ಮಾತೆಯರೇ?

ಭಾರತ ವರ್ಷದಲ್ಲಿರುವಂತೆಯೇ ಅಮೇರಿಕದಲ್ಲಿಯೂ "ಒಳ್ಳೆಯ" ಮತ್ತು "ಕೆಟ್ಟ" ಎಂಬ ಎರಡು ವಿಧವಾದ ತಾಯಿಯರಿರುವರು. ಅದರೆ ಸರ್ವರೂ ತಮ್ಮ ಸಂತಾನವನ್ನು ಸುಶಿಕ್ಷಿತ, ಸುಚರಿತ, ಮತ್ತು ಆಜ್ಞಾಪಾಲಕರನ್ನಾಗಿ ಮಾಡಲು ಸಮರ್ಥರಲ್ಲ. ಕೆಲವರು ರೋಗಿಗಳಾಗಿಯೂ ವಿಲಾಸಪ್ರಿಯರಾಗಿಯೂ, ದುರ್ಬಲರಾಗಿಯೂ ಇರುವರು. ಅವರಿಗೆ ತಮ್ಮ ಮಕ್ಕಳನ್ನು ಆಜ್ಞಾನುವರ್ತಿಗಳಾಗಿ ಮಾಡುವ ಶಕ್ತಿ ಇಲ್ಲ. ತಮಗೆ ಯಾವಾಗ ಸಿಟ್ಟುಬರುವುದೋ ಆಗ ಮಕ್ಕಳ ಮೇಲೆ ಬೈಗಳ ಮತ್ತು ಏಟುಗಳ ವರ್ಷವನ್ನು ಸುರಿಸುವರು. ಅವರು ಚಂಡಿಸಿದರು ಅತ್ಮರೆ ಅವರಿಗೆ ಮಿಠಾಯಿ ಕೊಟ್ಟು ಸಂತೈಸುವರು. ಬಾಲಕರು ಬೀದಿಯಲ್ಲಿ ಪೋಲಿಯಾಗಿ ತಿರುಗುತ್ತಿದ್ದರೆ ಆ ಕಡೆಗೆ ಅವರ ಲಕ್ಷ್ಯಕೊಡುವುದೇ ಇಲ್ಲ. ಅನೇಕ ಬಾಲಕರು ಮನೆಗೆ ಬರುವಾಗ "ಏಟುಗಳೋ, ಮಿಠಾಯಿಗಳೋ" ಅವರಿಗೆ ಸಿಗುವವೆನ್ನುವದನ್ನು ಬಯಸುತ್ತವೆ. ಈ ಕಾರಣದಿಂದ ಮಕ್ಕಳು ಕೆಟ್ಟ ಸ್ವಭಾವವುಳ್ಳವರಾಗುತ್ತಾರೆ.

ಇಂತಹ ಸ್ತ್ರೀಯರು ಅಮೇರಿಕದಲ್ಲಿಯೂ ಕೆಲವು ಕೆಲವರಿರುವರು. ಇವರು ಅಪ್ರಾಕೃತ ಕಾರ್ಯಗಳಿಂದ ತಮ್ಮ ಜೀವನವನ್ನು ಕಳೆಯುತ್ತಿರುವುದರಿಂದ ಇವರ ಶರೀರವು ಸುಸಂತಾನೋತ್ಪತ್ತಿಗೆ ಯೋಗ್ಯವಾಗಿರುವುದಿಲ್ಲ. ಇವರಲ್ಲನೇಕರಿಗೆ ಸಂತಾನದ ಅಪೇಕ್ಷೆಯೇ ಇರುವುದಿಲ್ಲ. ಅನೇಕರಿಗೆ ಸಂತಾನವನ್ನು ವೃದ್ಧಿಪಡಿಸಬೇಕೆಂಬ ಚಿಂತೆಯೇ ಇರುವುದಿಲ್ಲ. ಅನೇಕ ಶೃಂಗಾರ ಮಾಡಿಕೊಳ್ಳುವುದರಲ್ಲಿಯೂ ನಾಟಕ ಸಿನಿಮಾಗಳನ್ನು ನೋಡುವುದರಲ್ಲಿಯೂ ಅಲ್ಲಿನ ಜನರನ್ನು ಕರೆಸುವುದರಲ್ಲಿಯೂ ತಮ್ಮ ಪ್ರಾತಃ ಜೀವನವನ್ನು ವ್ಯರ್ಥಮಾಡುತ್ತಿರುವುದರಿಂದ ಇವರಿಗೆ ತಮ್ಮ ಸಂತಾನ ನಿರೀಕ್ಷಣೆ ಮಾಡಲು ತಕ್ಕ ಸಮಯವೇ ದೊರೆಯುವುದಿಲ್ಲ. ಇದರಿಂದ ಇವರ ಸಂತಾನವು ದುಷ್ಟ ಸ್ವಭಾವಿ ಮತ್ತು ಅಯೋಗ್ಯವಾಗಿ ಪರಿಣಮಿಸುವುದು. ಆದರೆ ಈ ಎಲ್ಲ ಅವಗುಣಗಳೂ ವಿಶೇಷವಾಗಿ ಪಟ್ಟಣದಲ್ಲಿ ವಾಸಮಾಡುವ ಸ್ತ್ರೀಯರಲ್ಲೇ ಕಂಡುಬರುವುವು. ಏಕೆಂದರೆ ಅವರ ಜೀವನವು ಅಪ್ರಾಕೃತವಾಗಿರುವುದರಿಂದಲೂ ಅವರು ಕೆಡುಕೊಳ್ಳುವ ಆಹಾರವು ಶಾಗಿರುವುದರಿಂದಲೂ ಮೇಲೆ ಹೇಳಿದಂತೆ ಮನಃಪ್ರವೃತ್ತಿಯು ಬದಲಾಗಲು ಕಾರಣವಾಗುವುದು. ಇವರು ನಮ್ಮ ಧನಿಕರ ಸ್ತ್ರೀಯರ ಕಡೆ ವಿಚಿತ್ರವಾಗಿರುವರು. ಸಂಜೆ ಹಗಲ ಕ್ಲಬ್ ಇವರು ಗುಂಪು ಗುಂಪಾಗಿ ನಾಟಕಗೃಹಗಳಲ್ಲಿಯೂ, ವಿಶ್ರಾಂತಿಭವನಗಳಲ್ಲಿಯೂ ಇರುತ್ತಿರುವುದನ್ನು ಕಾಣಬಹುದು. ಅಲ್ಲಿ ಅವರು ರಾತ್ರಿ ಬಹಳ ಹೊತ್ತಿನವರೆಗೂ ನಾಟ್ಯಗೀತಗಳಲ್ಲಿ ಉನ್ಮತ್ತರಾಗಿ, ಪಾನಗಳನ್ನು ಸ್ವೀಕರಿಸಿ ಕಾಲಕಳೆಯುತ್ತಿರುವರು. ಈ ವಿಲಾಸತೆಯ ಪರಿಣಾಮವು ಅವರ ಮಕ್ಕಳ ಮೇಲೆ ಘೋರ ರೂಪದಿಂದ ಪರಿಣಾಮ ಹೊಂದುವುದು. ಇವರು ತಮ್ಮ ಸಂತಾನದ ಲಾಲನ ಪಾಲನದ ಕಡೆ ಸ್ವಲ್ಪವೂ ಲಕ್ಷ್ಯಕೊಡುವುದಿಲ್ಲ. ಅನೇಕರು ತಮ್ಮ ಮಕ್ಕಳಿಗೆ ಸ್ತನ್ಯಪಾನವನ್ನು ಕೂಡ ಮಾಡಿಸುವುದಿಲ್ಲ.

ಪರಂತು ಅಮೇರಿಕದಲ್ಲಿ ದೊಡ್ಡ ಸಂಖ್ಯೆಯ ವನಿತೆಯರು ಆದರ್ಶಮಾತೆಯರೇ ಆಗಿರುವರು. ಆ ದೇಶದ ಪುರುಷರು ತಮ್ಮ ವಿವಾಹದನಂತರ ತಮ್ಮ ಆರೋಗ್ಯಭದ್ರತೆಗಾಗಿ ಮುಖ್ಯವಾದ ಕರ್ತವ್ಯವೆಂದು ತಿಳಿಯುವ ಸ್ಥಳಗಳಲ್ಲಿ (ಅಂದರೆ ನಾಗರಿಕರಾಗಿ ಊರ ಹೊರಗೆ) ವಾಸಮಾಡುವರು ಅವರು ತಮ್ಮ ಶಿಶುಗಳ ರಕ್ಷಣೆಯಲ್ಲಿ ಪ್ರಾಕೃತಿಕ ರೀತಿಯಲ್ಲಿ ಮಾತ್ರವೇ ಅಲ್ಲದೆ ವೈಜ್ಞಾನಿಕ ರೀತಿಯಲ್ಲಿಯೂ ಪ್ರವರ್ತಿಸುವರು. ಸಂತಾನವಾದನಂತರ ಅವರು ತಮ್ಮ ಮುಂದಿನ ದಿನವನ್ನೇ ಬಹಳ ಆರೋಗ್ಯರೀತಿಯಿಂದ ಕಾಪಾಡಿಕೊಳ್ಳುವರು. ತಮ್ಮ ಸಂತಾನದ ಶ್ರೇಯಸ್ಸಿಗೆ ನಡೆಯುವ ವಿಧಾನ ಅವರು ಪ್ರಾರಂಭದಿಂದಲೂ ಆರಂಭಿಸುವರು. ಅವರು ತಮ್ಮ ಮಕ್ಕಳ ಆರೋಗ್ಯ, ಸ್ವಚ್ಛತೆ ಮುಂತಾದವುಗಳ ಕಡೆ ವಿಶೇಷ ಲಕ್ಷ್ಯ ಕೊಡುವರು. ಮಕ್ಕಳ ಶರೀರಕ್ಕೆ ಬೇಕಾದ ಆಹಾರವನ್ನು ವೈಜ್ಞಾನಿಕ ರೀತಿಯಿಂದ ಪರೀಕ್ಷಿಸಿ ಅನುಭವಸ್ಥರಿಂದ ತಿಳಿದು ಆ ಆಹಾರವನ್ನು ಕೊಡುವರು. ಪ್ರತಿ ಸಲ ತೂಕಮಾಡಿ ಮಕ್ಕಳು ಎಷ್ಟು ಬೆಳೆದಿರುವರೆಂದು ನೋಡುವರು. ಆಹಾರವನ್ನು ಸಹ ಅಳತೆಯಿಂದಲೇ ತಿಳಿಯುವರು. ತಾಯಿಯರು ಆ ಮಕ್ಕಳ ಊಟ, ಉಡಿಗೆತೊಡಿಗೆ ಮತ್ತು ಆರೋಗ್ಯ ವಿಷಯವನ್ನು ತಾವೇ ಸ್ವತಃ ನೋಡಿಕೊಳ್ಳುವರು. ಶ್ರೀಮಂತರಾದವರನ್ನು ಬಿಟ್ಟು ಉಳಿದ ಎಲ್ಲ ಕುಟುಂಬದ ಮಹಿಳೆಯರು ತಮ್ಮ ಮಕ್ಕಳ ಎಲ್ಲ ಕೆಲಸಗಳಲ್ಲಿಯೂ ತಾವೂ ಸೇರಿ, ಅವುಗಳ ಮನಸ್ಸಿಗೆ ಆನಂದವನ್ನುಂಟುಮಾಡುವರು. ತಮ್ಮ ಮಕ್ಕಳ ರಕ್ಷಣೆಯ ಭಾರವನ್ನು ಅವರೆಂದೂ ಆಳುಗಳ ಮೇಲೆ ಹೊರಿಸುವುದೇ ಇಲ್ಲ. ಮಕ್ಕಳನ್ನು ಸದಾ ಸಂತೋಷವಾಗಿರುವಂತೆ ಮಾಡಲು ಇವರು ಬಹಳ ಪ್ರಯಾಸ ತೆಗೆದುಕೊಳ್ಳುವರು. ವಿನೋದಕ್ಕಾಗಿ ಚಿತ್ರನಾಟಕಗಳಿಗೂ (ಬಯಸ್ಕೋಪು) ವ್ಯಾಖ್ಯಾನಗಳಿಗೂ ತಮ್ಮ ಮಕ್ಕಳನ್ನು ತಾವೇ ಸ್ವತಃ ಕರೆದುಕೊಂಡು ಹೋಗುವರು. ಮತ್ತು ವಿರಾಮ ಕಾಲದಲ್ಲಿ ಮಕ್ಕಳಿಗೆ ನೀತಿಬೋಧಕವಾದ ಕಥೆಗಳನ್ನು ಓದಿ ಹೇಳುವರು. ಸ್ವಾವಲಂಬನೆಯ ನಿಯಮಕ್ಕನುಸರಿಸಿ ತಾವೂ ನಡೆದುಕೊಳ್ಳುವರಲ್ಲದೆ ಬಾಲ್ಯದಿಂದ ಮಕ್ಕಳನ್ನೂ ಹಾಗೆಯೇ ತರಬೇತುಮಾಡುವರು. ಆಹಾರದ ವಿಷಯದಲ್ಲಿಯೂ ವೈಜ್ಞಾನಿಕ ರೀತಿಯನ್ನನುಸರಿಸಿ ನಡೆದುಕೊಳ್ಳುವರು. ಆ ದೇಶದಲ್ಲಿ ಶುದ್ಧವಾಗಿರ ಪ್ರಚಾರವು ಬಹಳ ಚೆನ್ನಾಗಿರುವುದು. ಅಮೇರಿಕದ ಹಾಲಿನಂಥ ಶುದ್ಧ ಮತ್ತು ಅಪ್ಪಟವಾದ ಹಾಲು ಪ್ರಪಂಚದ ಮತ್ತಾವ ಭಾಗದಲ್ಲಿಯೂ ದೊರೆಯುವುದಿಲ್ಲ. ಅಲ್ಲಿನ ಜನಾಂಗವು ದೃಢವಾಗಿರಲು ಹಾಲು ಮುಖ್ಯ ಕಾರಣವಾಗಿದೆ. ಅಲ್ಲಿನ ರಮಣೀಯರು ಮಾತೃ ಆವಿಷ್ಕಾರದಲ್ಲಿ ಉನ್ನತರಾಗಿರುವಷ್ಟು ಪ್ರಪಂಚದ ಮತ್ತಾವ ಭಾಗದವರೂ ಇಲ್ಲ. ಇದರ ಫಲವಾಗಿ ಅಲ್ಲಿ ಸ್ವಸ್ಥ ಸುಂದರ ಮತ್ತು ಪ್ರಸನ್ನವದನರಾದ ಬಾಲಕ ಬಾಲಿಕೆಯರು ಎಲ್ಲೆಲ್ಲಿಯೂ ತುಂಬಿರುವರು. ಇದು ಅಲ್ಲಿಯ ಮಾತೃವಿಜ್ಞಾನದ ಪ್ರತ್ಯಕ್ಷ ಪ್ರಮಾಣವಾಗಿದೆ.

ಪ್ರಸವದ ಕಾಲವು ಸ್ತ್ರೀಯರಿಗೆ ದೊಡ್ಡ ವಿಪತ್ಕಾಲವು. ಆ ಕಾಲದಲ್ಲಿ ಸುಶಿಕ್ಷಿತಳಾದ ಸೂಲಗಿತ್ತಿ, ಔಷಧಿ ಮತ್ತು ದಾದಿಯರ ಅಭಾವದಿಂದ ಲಕ್ಷೋಪಲಕ್ಷ ಸ್ತ್ರೀಯರು ಮೃತ್ಯುವಿನ ಬಾಯಿಗೆ ತುತ್ತಾಗುತ್ತಿರುವರು. ಅಲ್ಲಿನ ಸ್ತ್ರೀಯರಿಗೆ 'ಮಾತೆ' ಯರಾಗುವ ಸ್ವಾಸ್ಥ್ಯಪಾಲನಾತ ತಮ್ಮ ದೇಶದಲ್ಲಿ ಮಧುಮೊದಲಾದ ನಿವಾರಣಾರ್ಥಗಳ ವಿಕ್ರಯವನ್ನು ಸಂಪೂರ್ಣವಾಗಿ ನಿಲ್ಲಿಸಿರುವರು. ಈಗ ಆ ತಾಯಿಯರು 'ಮಾತೆ ಮತ್ತು ಶಿಶು' ಗಳ ರಕ್ಷಣೆಗಾಗಿ ಕೆಲವು ಕಾನೂನುಗಳನ್ನು ಮಾಡಲು ಒಂದು ದೊಡ್ಡ ಆಂದೋಲನವನ್ನು ನಡೆಸುತ್ತಿರುವರು. ನತಶಾಸನದ ಕಡೆಯಿಂದ 'ಗರ್ಭಿಣೀ ಶಿಶುಸಂರಕ್ಷಣಾ' ದ ಸಲುವಾಗಿ ಅಮೇರಿಕದ ವ್ಯವಸ್ಥಾಪಕ ಸಭೆಯು ಕಲ್ಪಿಸಿದ ಶಾಸನಕ್ಕನುಸಾರವಾಗಿ ಪ್ರತಿ ವರ್ಷವೂ ಈ ಸಂಸ್ಥೆಗೆ ದು 1¼ ಕೋಟಿ ರೂಪಾಯಿಗಳು ಖರ್ಚಾಗುತ್ತಲಿರುವವು. ಇದಲ್ಲದೆ, ಅಮೇರಿಕದ ಪ್ರತಿಯೊಂದು ಪ್ರಾಂತ್ಯದಿಂದಲೂ 40 ಸಾವಿರ ರೂಪಾಯಿಗಳು ಇದಕ್ಕಾಗಿಯೇ ವೆಚ್ಚವಾಗುತ್ತಿರುವವು. ಈ ಧನಸಹಾಯದಿಂದ ಅಮೇರಿಕದ ಸ್ತ್ರೀ

ತಿಯೊಂದು ಭಾಗಗಳಲ್ಲಿಯೂ ಗ್ರಾಮಗ್ರಾಮಗಳಲ್ಲಿಯೂ ಸೂತಿಕಾಗೃಹಗಳು (Maternity Homes) ಸ್ಥಾಪಿಸಲ್ಪಟ್ಟಿರುವವು. ಸ್ತ್ರೀಯರು ಪ್ರಸವ ಕಾಲಕ್ಕೆ ಸ್ವಲ್ಪ ಮುಂಚೆಯೇ ಅಲ್ಲಿ ಒಂದಿದ್ದು ಸುಖಪ್ರಸವವಾದನಂತರ ತಮ್ಮ ತಮ್ಮ ಗೃಹಗಳಿಗೆ ಹೋಗುವರು. ಇಲ್ಲಿಯವರಿಗೆ ಸುಶಿಕ್ಷಿತ ದಾದಿಯರ ಸಹಾಯವೂ, ವೈದ್ಯರ ಸಹಾಯವೂ ಔಷಧವೂ ದೊರೆಯುವುದು. ಇದರಿಂದ ಗರ್ಭಿಣೀ ಸ್ತ್ರೀಯರಿಗೆ ಅವರ ಸ್ವಗೃಹಗಳಲ್ಲಿರುವ ಅನಾನುಕೂಲಗಳು ತಪ್ಪಿ ಸೂತಿಕಾಗೃಹಗಳಲ್ಲಿ ವಿಶೇಷ ಸಹಾಯವೂ, ಸೌಖ್ಯವೂ ದೊರೆಯುವುದು ಮಾತ್ರವಲ್ಲದೆ ಸುಶಿಕ್ಷಿತ ದಾದಿಯರು ಮತ್ತು ವೈದ್ಯರುಗಳ ಅಭಾವದಿಂದುಂಟಾಗುವ ತೊಂದರೆಯು ತಪ್ಪಿಹೋಗುವುದು.

ಒಂದು ವೇಳೆ ಸುಶಿಕ್ಷಿತ ಸೂಲಗಿತ್ತಿಯರ ಸಹಾಯವು ಗರ್ಭಿಣಿಯರಿಗೆ ಪ್ರಾರಂಭದಿಂದಲೂ ದೊರೆತ ಪಕ್ಷದಲ್ಲಿ ಶಿಶುಗಳ ಅಕಾಲಮೃತ್ಯುವು ಮೊದಲಿಗಿಂತಲೂ ಎಷ್ಟೋ ಕಡಿಮೆಯಾಗುವುದು. ಗ್ರಾಮಗಳಲ್ಲಿ ಸೂತಿಕಾಗೃಹಗಳ ಆವಶ್ಯಕತೆಯು ಬಹಳವಾಗಿರುವುದು. ಏಕೆಂದರೆ, ಅಲ್ಲಿ ಸುಶಿಕ್ಷಿತದಾದಿಯರು ಮತ್ತು ವೈದ್ಯರು ದೊರೆಯುವದು ಅಸಂಭವವು. ಅಮೇರಿಕ ಸರ್ಕಾರದ ಬಾಲರಕ್ಷಾ ವಿಭಾಗದ ಮುಖ್ಯ ಕಾರ್ಯಕರ್ತನು ಈ ಹೊಸ ಕಾನೂನಿನ ವಿಷಯವಾಗಿ ಹೇಳಿರುವದೇನೆಂದರೆ —"ಪ್ರತಿಯೊಂದು ಜಿಲ್ಲೆಯ ಮಧ್ಯಭಾಗದಲ್ಲಿ ಅಂದರೆ ಎಲ್ಲಿ ಜನ ವಸತಿಯು ಹೆಚ್ಚಾಗಿರುವದೋ ಅಲ್ಲಿ, ಚಿಕಿತ್ಸಾಲಯಗಳನ್ನು ಸ್ಥಾಪಿಸುವದು ಮೊದಲನೆ ಕೆಲಸ. ಸ್ತ್ರೀಯರು ವೈದ್ಯರ ಪರಾಮರ್ಶೆ ಮತ್ತು ವಿಷಯೋಪಚಾರಗಳನ್ನೂ ಸ್ತ್ರೀವೈದ್ಯರ ಸಹಾಯವನ್ನೂ ಪಡೆಯಬಹುದು. ದಾದಿಯರೂ, ವೈದ್ಯರೂ ರೋಗಿಗಳ ಮನೆಗೆ ಹೋಗಿ ಉಚಿತವಾಗಿ ದೇಹಸ್ಥಿತಿಯನ್ನು ನೋಡುವರು. ಅನೇಕ ಕಡೆ ಈಗಲೂ ಗರ್ಭಿಣೀ ಮತ್ತು ಶಿಶುರಕ್ಷಣ ಸಂಸ್ಥೆಯವರು ಮೇಲೆ ಹೇಳಿದಂತೆ ಕೆಲಸಮಾಡುತ್ತಿರುವರು. ಆದರೆ ಇದು ಸಾಲದು. ಸರ್ವತ್ರ ಇಂತಹ ಚಿಕಿತ್ಸಾಲಯಗಳನ್ನು ಸ್ಥಾಪಿಸುವದರಲ್ಲಿ ಮಾತೆಯರ ಮತ್ತು ಶಿಶುಗಳ ರಕ್ಷಣಾಕಾರ್ಯವು ಸಮರ್ಪಕವಾಗಿ ನಡೆಯುವದು.

ಸರ್ಕಾರದ 'ಬಾಲರಕ್ಷಣಾ ಸಂಸ್ಥೆಯವರು ಅಮೇರಿಕದ ಗ್ರಾಮ್ಯ ಸಾರ್ವಜನಿಕ ಸಂಸ್ಥೆಗಳಿಂದ ನಾಲ್ಕು ವಿಷಯದ ಪ್ರಬಂಧವನ್ನು ಕುರಿತು ಕೆಲವು ವರ್ಷಗಳ ಹಿಂದೆ ಯೋಚಿಸಿದ್ದರು, ಅದೇನೆಂದರೆ —

(1) ಪ್ರತಿಯೊಂದು ಜಿಲ್ಲೆಯ ಮುಖ್ಯ ಗ್ರಾಮಗಳಲ್ಲಿ ಶಿಕ್ಷಿತದಾದಿಯರ ಮೂಲಕ ಸಂಚಲಿತ ಸೂತಿಕಾಗೃಹವು ಸ್ಥಾಪಿಸಲ್ಪಡಬೇಕು. ಕ್ರಮೇಣ ಬೇರೆ ಬೇರೆ ಸ್ಥಳಗಳಲ್ಲಿಯೂ ಸ್ಥಾಪಿಸುವದರಿಂದ ದೇಶದ ಸರ್ವತ್ರ ಮಾತೆಯ ಮತ್ತು ಶಿಶುವಿನ ಸಹಜ ಮತ್ತು ಕಠಿಣ ರೋಗಗಳ ಚಿಕಿತ್ಸೆಯಾಗಲು ಅವಕಾಶವಾಗುವದು.

2 ಈ ಚಿಕಿತ್ಸಾಲಯಗಳಲ್ಲಿ ತಾಯಿಗಳಿಗೆ ಗರ್ಭಸಮಯದಲ್ಲಿ ಯಾವ ವಿಷಯಗಳು ತಿಳಿಯಬೇಕೋ ಆ ವಿಷಯಗಳ ಮೇಲೆ ಪ್ರಬಂಧವನ್ನೂ ಚಿತ್ರಪಟಗಳನ್ನೂ ಸಂಗ್ರಹಿಸಿಡಬೇಕು.

3 ಪ್ರತಿಯೊಂದು ಜಿಲ್ಲೆಯ ಚಿಕಿತ್ಸಾಲಯದಲ್ಲಿಯೂ ಒಂದು ಭಾಗವು ಈ ಗರ್ಭಿಣಿಯರಿಗಾಗಿಯೇ ಏರ್ಪಡಿಸಬೇಕು. ಸಾಧ್ಯವಾದರೆ ವಿಶೇಷ ಚಿಕಿತ್ಸಾಲಯವನ್ನೂ ಏರ್ಪಡಿಸಬಹುದಲ್ಲದೆ ಸಾಂಕ್ರಾಮಿಕ ಜಾಡ್ಯದವರಿಗೆ ದೂರವಾದ ಸ್ಥಳದಲ್ಲಿ ಪ್ರತ್ಯೇಕಾಲಯವನ್ನು ತೆರೆಯಬೇಕು.

4 ಪ್ರಸವ ಸಮಯದಲ್ಲಿ ಪ್ರತಿಯೊಬ್ಬ ಸ್ತ್ರೀಯ ಸಹಾಯಕ್ಕಾಗಿಯೂ ಶಿಕ್ಷಿತದಾದಿಯು ಏರ್ಪಡಿಸಲ್ಪಟ್ಟಿರಬೇಕು.

ಅಮೇರಿಕದಲ್ಲಿ ಸಂತಾನವನ್ನಪೇಕ್ಷಿಸದ ಸ್ತ್ರೀಯರೂ ಕೆಲವರಿರುವರು. ಇವರು ವೈಜ್ಞಾನಿಕ ಶಾಸ್ತ್ರಬಲದಿಂದ ಸಂತಾನೋತ್ಪತ್ತಿಯಾಗದಿರುವ ಮಾರ್ಗವನ್ನು ಕಂಡು ಹಿಡಿದು ಆಚರಣೆಗೆ ತರುತ್ತಿರುವರು. ಅಲ್ಲಿನ ಸ್ತ್ರೀಯರು ಕೇವಲ ನಿಸ್ಸಂತಾನವತಿಯರಲ್ಲ. ದೊಡ್ಡ ಸಂಸಾರಕ್ಕಿಂತಲೂ ಸಣ್ಣ ಕುಟುಂಬದಲ್ಲಿ ಸೌಖ್ಯವು ಹೆಚ್ಚೆಂಬುದು ಇವರ ಅಭಿಪ್ರಾಯವೇ ಹೊರತು ಮಕ್ಕಳ ಪೋಷಣೆಯ ಭಾರಕ್ಕಾಗಲಿ ನೃತ್ಯಗೀತಗಳ ಸೌಖ್ಯವು ತಪ್ಪಿ ಹೋಗುವುದೆಂದಾಗಲಿ ಇವರು ಹೆದರುವುದಿಲ್ಲ. ಸಂತಾನೋತ್ಪತ್ತಿಗೆ ವಿವಾಹಿತ ಸ್ತ್ರೀಯರ ಆತ್ಮೀಯ ಗುಣಪ್ರಕಾಶವು ಒಂದು ಚಿಹ್ನೆಯೆನ್ನುವುದನ್ನವರು ನಂಬುವುದಿಲ್ಲ. ಸ್ವಲ್ಪ ಸಂತತಿಗಾಗುವ ಲಾಲನೆ, ಪಾಲನೆ, ಪೋಷಣ ಮತ್ತು ಶಿಕ್ಷಣವು ಅಧಿಕ ಸಂತತಿಯಿದ್ದರಾಗುವುದಿಲ್ಲವೆನ್ನುವ ವಿಷಯವನ್ನು ಅವರು ಚೆನ್ನಾಗಿ ಬಲ್ಲರು. ಕೇವಲ ಪುತ್ರೋತ್ಪತ್ತಿಯಿಂದಲೇ ಮಾತಾಪಿತೃಗಳು ಸುಖಿಗಳಾಗುವುದಿಲ್ಲ. ಆ ಮಕ್ಕಳು ಗುಣ ಸೌಂದರ್ಯದಿಂದಲಂಕೃತರಾದಾಗ ಮಾತ್ರ ಅವರಿಗೆ ನಿಜವಾದ ಆನಂದವುಂಟಾಗುವುದು. ಎಷ್ಟು ಶಕ್ತಿ, ಕಾಲ ಹಣ ಸಾವಧಾನ, ಇವುಗಳನ್ನು 5—6 ಮಕ್ಕಳ ರಕ್ಷಣೆಗೆ ಉಪಯೋಗಿಸುವೆವೋ ಅಷ್ಟನ್ನೇ ಒಂದೆರಡು ಮಕ್ಕಳ ರಕ್ಷಣೆಗೆ ವೆಚ್ಚ ಮಾಡಿದರೆ ಹೆಚ್ಚು ಪ್ರಯೋಜನವಾಗುವುದೆನ್ನುವುದು ಇವರ ಸಿದ್ಧಾಂತವು. ಸಂತಾನವನ್ನು ಪಡೆಯುವುದು ಎಷ್ಟು ಸಹಜವೋ ಅದರ ಪಾಲನ ಪೋಷಣವು ಅಷ್ಟೇ ಕಠಿಣವಾಗಿರುವುದೆನ್ನುತ್ತ ಅಮೇರಿಕದ ಮಾತೆಯರು ಒಳ್ಳೆಯ ರೀತಿಯಿಂದ ಎಷ್ಟು ಮಕ್ಕಳಿಗೆ ತಾವು ಶಿಕ್ಷಣಕೊಡಲು ಸಮರ್ಥರೋ, ಅಷ್ಟೇ ಮಕ್ಕಳನ್ನು ಪಡೆಯಬಯಸುವರು. ಮಧ್ಯಮ ತರಗತಿಯ ಕುಟುಂಬದವರಿಂದ ಹೆಚ್ಚು ಸಂತಾನಕ್ಕೆ ಶಿಕ್ಷಣಕೊಡಲು ಸಾಧ್ಯವಿಲ್ಲ. ಏಕೆಂದರೆ, ಅವರು ಅಲ್ಪ ವಯಸ್ಸಿನಲ್ಲಿಯೇ ಮಕ್ಕಳನ್ನು ಶಾಲಾ ಸಂಗದಿಂದ ಬಿಡಿಸಿ ಸಂಸಾರಸಹಾಯಕ್ಕೆ ಸೇರಿಸಿಕೊಂಡು ಅವರ ಮುಂದಿನ ಅಭಿವೃದ್ಧಿಗೆ ಕಲ್ಲು ಹಾಕಿ "ಮಾತಾಶತ್ರು, ಪಿತಾವೈರಿ" ಎಂಬ ನಾಣ್ಣುಡಿಯನ್ನು ಸತ್ಯಮಾಡುವರು.

(ಮುಂದುವರಿಯುವುದು.)

ಸ್ತ್ರೀ ಪುರುಷರಲ್ಲಿ ಭೇದವಿಲ್ಲವೊ?

ಈ ವಿಷಯವನ್ನು ಕುರಿತು ಡಾ| ಸಹಸ್ರಬುದ್ಧೆ ಎಂಬವರು ಪುಣೆಯ 'ಚಿತ್ರಮಯಜಗತ್' ಎಂಬ ಮರಾಠೀ ಮಾಸಪತ್ರಿಕೆಯ ಜೂನ್ ತಿಂಗಳ ಸಂಚಿಕೆಯಲ್ಲಿ ಒಂದು ಲೇಖನ ಬರೆದಿರುವರು. ಅದರ ಸಾರಾಂಶವೇನಂದರೆ —

ಸ್ತ್ರೀಯರ ಮನಸ್ಸು ಪುರುಷರ ಮನಸ್ಸಿಗಿಂತಲೂ ಶ್ರೇಷ್ಠವಿದೆಯೋ ಅಥವಾ ಅವೆರಡು ಭಿನ್ನವಾಗಿವೆಯೋ ಎಂಬುವದನ್ನು ಆಧುನಿಕ ಮಾನಸಶಾಸ್ತ್ರ, ಪ್ರತ್ಯಕ್ಷ ಅನುಭವ ಮತ್ತು ಗಣಿತಶಾಸ್ತ್ರದಿಂದ ತಿಳಿದುಕೊಳ್ಳಲು ಯತ್ನಿಸುವ

ಅವರಿಬ್ಬರ ಮನೋರಚನೆಯು ಒಂದೇ ಬಗೆಯದಾಗಿದ್ದರೆ, ಇಬ್ಬರಿಗೂ ಒಂದೇ ತರದ ಶಿಕ್ಷಣವನ್ನೇ ಕೊಡುವದು ಉಚಿತವು. ಆದರೆ ಭಿನ್ನವಾಗಿದ್ದರೆ ಮಾತ್ರ ಸ್ತ್ರೀಯರಿಗೆ ಪುರುಷರಂತೆಯೇ ಶಿಕ್ಷಣ ಕೊಡುವದರಿಂದ ಹಾನಿಯೇ ಆಗುವದು. ಸ್ವಭಾವವು ಮನಸ್ಸಿನ ಧರ್ಮವಷ್ಟೆ. ಸ್ತ್ರೀಯರ ಸ್ವಭಾವವನ್ನು ನೋಡಿರಿ. ಅದು ಪುರುಷ ಸ್ವಭಾವದಿಂದ ಭಿನ್ನವಾಗಿದೆ. ಪ್ರೊಫೆಸರ ಹೆಮೆನ್ಸ ಮತ್ತು ವಸ್ಮಾರ್ ಎಂಬಿಬ್ಬ ಜರ್ಮನ್ ಶಾಸ್ತ್ರಜ್ಞರು ೧೯೦೭ರಿಂದ ೧೯೦೮ರ ವರೆಗೆ ಈ ವಿಷಯವಾಗಿ ಅನೇಕ ಪ್ರಯೋಗಗಳನ್ನು ಮಾಡಿ ನೋಡಿದರು. ಅನೇಕ ಸ್ತ್ರೀ ಪುರುಷರ ವಿಷಯವಾಗಿ ಅವರು ನೂರು ಪ್ರಶ್ನೆಗಳನ್ನು ತೆಗೆದು ಆ ಸ್ತ್ರೀ ಪುರುಷರ ಮಿತ್ರರಿಗೆ ಅವುಗಳ ಉತ್ತರವನ್ನು ಕೊಡಲಿಕ್ಕೆ ಹೇಳಿದರು. ಪ್ರತಿಯೊಬ್ಬ ವ್ಯಕ್ತಿಯ ವಿಷಯವಾಗಿ ಸುಮಾರು ಒಂದು ಸಾವಿರ ಎರಡು ಸಾವಿರ ಉತ್ತರಗಳು ಬಂದವು. ಅವೆಲ್ಲ ಉತ್ತರಗಳನ್ನು ಹೋಲಿಸಿ ನೋಡಿ ವಿರುದ್ಧವಿದ್ದ ಉತ್ತರಗಳನ್ನು ತೆಗೆದು ಹಾಕಿ, ಅವರು ನಿಷ್ಕರ್ಷವನ್ನು ತೆಗೆದರು. ಅದರ ಮೇಲಿಂದ ಕಂಡು ಬಂದದ್ದೇನೆಂದರೆ, ಸ್ತ್ರೀಯರಲ್ಲಿ ಮನೋವಿಕಾರಾಧೀನತೆ, ಚಂಚಲತೆ, ಅಸ್ಥಿರ ವಿಷಯಕ್ಕೆ ನಿಷ್ಕಾರಣ ಚಡಪಡಿಸುವದು, ದ್ರವ್ಯ ಸಂಚಯ ಬುದ್ಧಿಯ ಅಭಾವ, ಓದಿದ್ದನ್ನು ತಪ್ಪದೆ ನೆನಪಿನಲ್ಲಿಡದಿರುವುದು, ಕರುಣೆ, ಧಾರ್ಮಿಕ ಪ್ರವೃತ್ತಿ, ಯುಕ್ತಿ, ಗುಣದೋಷ ವಿವೇಚನೆಯ ಅಭಾವ, ಮಹತ್ವಾಕಾಂಕ್ಷೆ ಇಲ್ಲದಿರುವುದು ಇವೇ ಮುಂತಾದವುಗಳು ಪ್ರಾಮುಖ್ಯವಾಗಿ ಇರತಕ್ಕವೆಂದು ಕಂಡುಬಂದಿತು.

ಆದರೆ ಇವೆಲ್ಲ ಭಿನ್ನ ಭಿನ್ನವಾಗಿ ತೋರುವ ಗುಣಗಳ ಉಗಮವು ಒಂದೇ ಇರುತ್ತದೆಂದು ತೋರುತ್ತದೆ. ಅದಾವುದೆಂದರೆ, ಸ್ತ್ರೀಯರ ಇಂದ್ರಿಯ ಜ್ಞಾನವು ಪುರುಷರ ಇಂದ್ರಿಯ ಜ್ಞಾನಕ್ಕಿಂತ ಸೂಕ್ಷ್ಮವಾಗಿರುತ್ತದೆ. ಸ್ತ್ರೀಯರ ಸ್ಪರ್ಶಜ್ಞಾನವು ಪುರುಷರ ಸ್ಪರ್ಶಜ್ಞಾನಕ್ಕಿಂತ ಹೆಚ್ಚಾಗಿರುತ್ತದೆಂಬುದು ಅನೇಕ ಶಾಸ್ತ್ರೀಯ ಪ್ರಯೋಗಗಳಿಂದ ಸಿದ್ಧವಾಗಿದೆ. ಅವರ ಶ್ರೋತ್ರೇಂದ್ರಿಯವೂ ಹೆಚ್ಚಿನ ತೀಕ್ಷ್ಣವಿರುತ್ತದೆ. ಅವರಲ್ಲಿ ಶಬ್ದಾಂಧ (Tone blind) ರು ಕಡಿಮೆ. ಅವರಿಗೆ ಒಂದು ಸ್ವರಕ್ಕೂ ಮತ್ತೊಂದು ಸ್ವರಕ್ಕೂ ಇರುವ ಭೇದವು ತೀವ್ರ ತಿಳಿಯುತ್ತದೆ. ಅದೇ ಮೇರೆಗೆ ಬಣ್ಣಗಳಲ್ಲಿಯ ಭೇದವನ್ನು ತಿಳಿಯುವ ಶಕ್ತಿಯೂ ಅವರಿಗೆ ಹೆಚ್ಚಿಗೆ ಇದೆ. ರಂಗ ಅಂಧರು (colour-blind) ಪುರುಷರಲ್ಲಿ ೧೦೦ಕ್ಕೆ ನಾಲ್ಕು ಜನರಿದ್ದರೆ ಸ್ತ್ರೀಯರಲ್ಲಿ ಒಬ್ಬರು ಇರುತ್ತಾರೆ. ರಂಗ ಅಂಧರಿಗೆ ಕೆಂಪು ಮತ್ತು ಹಸರು ಬಣ್ಣಗಳು ಒಂದೇ ಕಾಣುತ್ತಿರುತ್ತವೆ. ಹೀಗೆ ಸ್ತ್ರೀಯರಲ್ಲಿ ರಂಗ ಅಂಧರು ಕಡಿಮೆಯಿದ್ದರೂ ಆ ಗುಣವನ್ನು ಪರಂಪರಾಗತವಾಗಿ ಒಯ್ಯುವದಕ್ಕೆ ಸ್ತ್ರೀಯರೇ ಹೆಚ್ಚಿಗೆ ಕಾರಣರಾಗುತ್ತಾರೆ. ಒಬ್ಬ ರಂಗಾಂಧ ಪುರುಷನು ನಿರ್ದೋಷವಾದ ಸ್ತ್ರೀಯನ್ನು ಲಗ್ನಮಾಡಿಕೊಂಡರೆ, ಆ ದಂಪತಿಯಿಂದ ಹುಟ್ಟಿದ ಮಕ್ಕಳು ನಿರ್ದೋಷರಾಗುತ್ತಾರೆ. ಆದರೆ ಅದೇ ರಂಗ ಅಂಧತ್ವವು ರಕ್ತದಲ್ಲಿ ಸೇರಿದ ಸ್ತ್ರೀಯು ಆವಳು ಸ್ವತಃ ರಂಗಾಂಧಳಿಲ್ಲದಿರಬಹುದು. ಗಂಡನು ನಿರ್ದೋಷನಿದ್ದರೂ ರಂಗಾಂಧರನ್ನೇ ಹಡೆಯುತ್ತಾಳೆ. ಈ ಮಕ್ಕಳಲ್ಲಿಯೂ ಗಂಡು ಮಕ್ಕಳ ಮಕ್ಕಳು ನಿರ್ದೋಷರಾಗಿ ಹುಟ್ಟಿದರೂ ಹುಟ್ಟಬಹುದು. ಹೆಣ್ಣುಮಕ್ಕಳ ಮಕ್ಕಳು ಮಾತ್ರ ರಂಗಾಂಧರಾಗಿಯೇ ಹುಟ್ಟುವರು. ಈ ವಿಚಿತ್ರ ನಿಯಮವು ಇತರ ರೋಗಗಳಿಗೂ ಅನ್ವಯಿಸುತ್ತದೆ. ಸಾರಾಂಶ —ಸ್ತ್ರೀಯರ ಪಂಚೇಂದ್ರಿಯಗಳು ಪುರುಷರ ಪಂಚೇಂದ್ರಿಗಳಿಗಿಂತ ಶ್ರೇಷ್ಠವಾಗಿವೆ. ಇನ್ನು ಬುದ್ಧಿಯ ವಿಷಯದಲ್ಲಿ ಸ್ತ್ರೀಯರು ಪುರುಷರಗಿಂತ ಕಡಿಮೆ ಇರುತ್ತಾರೆಂದು ಗೊತ್ತಾಗುತ್ತದೆ. ಸ್ಮರಣಶಕ್ತಿಯಲ್ಲಿ ಎರಡು ತರಹಗಳು. ಒಂದು ಕೇವಲ ಅರ್ಥರಹಿತವಾದ ಶಬ್ದ, ಅಂಕಿ, ಹೆಸರು ಮುಂತಾದವುಗಳನ್ನು ನೆನಪಿನಲ್ಲಿಡುವದು. ಎರಡನೆಯದು ಅದರ ಅರ್ಥವನ್ನು ಲಕ್ಷ್ಯದಲ್ಲಿಡುವದು. ಅನೇಕರಿಗೆ ಒಣ ಹೆಸರು ಅಂಕಿ, ಶಬ್ದಗಳು ಧ್ಯಾನದಲ್ಲಿ ಉಳಿಯುವದಿಲ್ಲ, ಆದರೆ ಅದರ ಅರ್ಥವು ತಪ್ಪದೆ ಧ್ಯಾನದಲ್ಲಿ ಉಳಿದಿರುತ್ತದೆ. ಎರಡನೆಯದೇ ಹೆಚ್ಚಿನದು. ಪುರುಷರಲ್ಲಿ ಈ ಎರಡನೆಯ ತರಹದ ಸ್ಮೃತಿಯು ಹೆಚ್ಚಿಗೆ ಇರುತ್ತದೆಂದು ನೀವು ಪ್ರಯೋಗಮಾಡಿ ನೋಡಿದರೆ ನಿಮಗೆ ಗೊತ್ತಾಗಬಹುದು. ಮೊದಲನೆಯದರಲ್ಲಿ ಸ್ತ್ರೀಯರು ಹೆಚ್ಚಿನವರು. ಇದು ಬುದ್ಧಿಯ ಒಂದು ಭಾಗವಾದ ಸ್ಮರಣಶಕ್ತಿಯ ವಿಷಯವಾಗಿ ವಿಚಾರವಾಯಿತು. ಇನ್ನು ಮತ್ತೊಂದು ಬಗೆಯನ್ನು ಹಚ್ಚುವ. ನಿಷ್ಕಾಸನ ಶಕ್ತಿ, ಪೃಥಕ್ಕರಣ ಶಕ್ತಿ ಅಂದರೆ ಪದಾರ್ಥಸಮುಚ್ಚಯದೊಳಗಿಂದ ಸಾಮಾನ್ಯ ಗುಣವನ್ನು ಹುಡುಕುವ ಶಕ್ತಿಯು ಪುರುಷರಲ್ಲಿ ಹೆಚ್ಚಾಗಿರುತ್ತದೆ.

ಜಯ ಕರ್ನಾಟಕ.

ನೈಜಾಮರ ಮೇಲೆ ಆರೋಪ.

ಹಿಂದುಸ್ಥಾನ ಸರಕಾರದಿಂದ ಏನೋ ಒಂದು ಕಡುತರವಾದ ಸಂದೇಶವು ನಿಜಾಮರಿಗೆ ಬಂದಿರಬೇಕೆಂದೂ ಅದರಲ್ಲಿ ನಿಜಾಮ ಸರಕಾರದ ಪ್ರಮುಖ ಅಧಿಕಾರಿಗಳ ಮೇಲೆ ಅನೇಕ ಬಗೆಯ ಆರೋಪಗಳು ಹೊರಿಸಲ್ಪಟ್ಟಿರಬೇಕೆಂದೂ ಮುಂಬಯಿಯ "ಡೇಲಿಮೇಲ' ಪತ್ರದ ಸುದ್ದಿಗಾರನು ತಿಳಿಸಿರುತ್ತಾನೆ. ಈ ಆರೋಪಗಳಲ್ಲಿ ಅಧಿಕಾರಸ್ಥಳಗಳ ವಿಕ್ರಯ, ಲಂಚಗುಳಿತನ, ನ್ಯಾಯಾಧೀಶರ ಪಕ್ಷಪಾತ ನಡತೆ, ಅರಸು ಮನೆತನದ ಸ್ತ್ರೀಪುರುಷರನ್ನೂ ಬೇರೆ ಪತನದಾರ ಜಹಗೀರದಾರರನ್ನೂ ಅನ್ಯಾಯವಾಗಿ ಹಿಂಸಿಸೋಣ—ಹಿಂದುಸ್ಥಾನದ ಒಳಗೂ ಹೊರಗೂ ಮುಸಲ್ಮಾನ ಧರ್ಮ ಪ್ರಸಾರಣೆಯ ಚಳವಳಿಗಾಗಿ ಲಕ್ಷಾಂತರ ರೂಪಾಯಿಗಳನ್ನು ವೆಚ್ಚಮಾಡೋಣ, ತಮ್ಮ ರಾಜ್ಯದಲ್ಲಿ ಯುರೋಪಿಯನ್ ಅಧಿಕಾರಿಗಳನ್ನು ಕಡಿಮೆಮಾಡಿ ಕಾರಭಾರವನ್ನು ಬೇಕೆಂದು ಕೆಡಿಸೋಣ ಮುಂತಾದವುಗಳು ಪ್ರಮುಖವಾಗಿರುತ್ತವೆ.

(೧) ಕಾಣಿಕೆಗಳ ಪದ್ಧತಿಯನ್ನು ಕೂಡಲೆ ನಿಲ್ಲಿಸೋಣ (೨) ನಿಜಾಮರ ಹೆಸರಿನಿಂದ ಅನ್ಯಾಯದ ಕಾರಭಾರ ಮಾಡುವ ತಾಲೂಕದಾರರಿಗೆ ಯೋಗ್ಯ ಶಿಕ್ಷೆ (೩) ಮಂತ್ರಿಮಂಡಲದ ಅಧ್ಯಕ್ಷರು, ಕೋಶಾಧ್ಯಕ್ಷರು, ಕಂದಾಯ ಸಚಿವರು, ನಗರ ರಕ್ಷಕರ (ಅಂದರೆ ಪೋಲೀಸರು) ಮುಖ್ಯಾಧಿಕಾರಿಗಳ ಈ ಸ್ಥಳಗಳಿಗೆ ಬ್ರಿಟಿಷ್ ಅಧಿಕಾರಿಗಳನ್ನು ಕೂಡಲೆ ನಿಯಮಿಸೋಣ, (೪) ಚಿಕ್ಕ ಪುಟ್ಟ ಜಮೀನುದಾರರಿಗೆ ಯೋಗ್ಯವಾದ ನ್ಯಾಯ ಕೊಡೋಣ ಮತ್ತು (೫) ಆಡಳಿತೆಯಲ್ಲಿ ಸಾಮಾನ್ಯವಾಗಿ ತಿದ್ದುಪಾಟ ಮಾಡೋಣ ಈ ಐದು ಸಂಗತಿಗಳನ್ನು ಕೂಡಲೆ ಮಾಡಬೇಕೆಂದು ಹಿಂದುಸ್ಥಾನದ ಸರಕಾರದವರು ತಮ್ಮ ಸಂದೇಶದಲ್ಲಿ ನಿಜಾಮರಿಗೆ ತಿಳಿಸಿರುವದಾಗಿ ತೋರುತ್ತದೆ. ಈ ಸಂದೇಶಕ್ಕೆ ಆಗಸ್ಟ ೨೦ ನೇ ತಾರೀಖಿನೊಳಗಾಗಿ ನಿಜಾಮರಿಂದ ಸಮಾಧಾನಕರವಾದ ಉತ್ತರವು ಹಿಂದುಸ್ಥಾನ ಸರಕಾರಕ್ಕೆ ಹೋಗದಿದ್ದರೆ 'ನಿಜಾಮಶಾಹಿಯ ಆಡಳಿತೆಯೊಳಗಿನ ಅಕ್ರಮಗಳ ವಿಚಾರಣೆ ಮಾಡಲು ಒಂದು ವಿಶಿಷ್ಟ ಮಂಡಲವು ನೇಮಿಸಲ್ಪಡುವದೆಂದೂ ಈ ಸಂದೇಶದಲ್ಲಿ ಉಲ್ಲೇಖಿಸಿರುವದಾಗಿ ತಿಳಿಯುತ್ತದೆ.

ಕಳೆದ ಕೆಲವು ದಿವಸಗಳಿಂದ ಬರುತ್ತಿರುವ ಲೇಖಗಳಿಂದ ತಮ್ಮ ವಿಷಯವಾಗಿ ಲೋಕಮತದ ಗ್ರಹಿಕೆಯು ವಿಪರೀತವಾಗಿರುವದನ್ನು ಕಂಡು ನಿಜಾಮ ದರಬಾರದವರು ಒಂದು ಜಾಹೀರನಾಮೆಯನ್ನು ಪ್ರಸಿದ್ಧ ಮಾಡಿದ್ದಾರೆ. ಇದರಲ್ಲಿ ಅನ್ನುವದೇನೆಂದರೆ—

'ನೈಜಾಮ ದರಬಾರದ ಕೆಲವು ಖಾತೆಗಳಲ್ಲಿ ಹೊಸ ಸುಧಾರಣೆಯಾಗಬೇಕಾಗಿರುವದರಿಂದ, ಹಿಂದುಸ್ಥಾನ ಸರಕಾರದವರು ಈ ವಿಷಯವಾಗಿ ನಮಗೆ ಸ್ನೇಹಭಾವದಿಂದಲೇ ಕೆಲವು ಉಪಯುಕ್ತ ಸೂಚನೆಗಳನ್ನು ಮಾಡಿದ್ದಾರೆ. ಅವುಗಳ ಬಗ್ಗೆ ದರಬಾರದಿಂದ ವಿಹಿತವಾದ ವಿಚಾರ ನಡೆದಿದೆ ಮತ್ತು ಆ ಪ್ರಕಾರ ವ್ಯವಸ್ಥೆಯೂ ಮಾಡಲ್ಪಡುವದು

ವರ್ತಮಾನ ಸಂಗ್ರಹ.

ಒ ಳ ದೇ ಶ

ಮಡಿಕೇರಿ ಸೆಂಟ್ರಲ್ ಹೈಸ್ಕೂಲೂ, ಕಾನ್ವೆಂಟು ಹೈಸ್ಕೂಲೂ ಮಳೆಗಾಲದ ರಜೆ ತೀರಿ ಈ ತಾರೀಕು ೧ರಲ್ಲಿ ತೆರೆಯಲ್ಪಟ್ಟಿವೆ.

ಬೇತರಿಕಡುವಿನಲ್ಲಿ ನೀರಿನ ಪ್ರವಾಹವು ಹೆಚ್ಚಾಗಿರುವದರಿಂದ ಅಲ್ಲಿ ದೋಣಿ ದಾಟುವದು ಅಪಾಯಕರವೆಂದು ಮೂರ್ನಾಡು ಲೈನ್‌ಬಸ್ಸು ಸರ್ವೀಸು ನಿಲ್ಲಿಸಲ್ಪಟ್ಟಿದೆ.

ಮೆ. ಕೂತಂಡ ಸೋಮಯ್ಯನವರು ಕಳೆದ ತಾ. 27ರಲ್ಲಿ ಬೊಂಬಾಯಿಯಲ್ಲಿ ಶಿವಾಧೀನರಾದರೆಂದೂ, ಅಲ್ಲಿಯ ಕೊಡವರೆಲ್ಲರೂ ಸೇರಿ ಅವರ ಶವವನ್ನು ದಫನ್‌ಮಾಡಿದರೆಂದೂ ತಿಳಿಯಬರುತ್ತದೆ.

ಸೆಂಟ್ರಲ್ ಹೈಸ್ಕೂಲಿನ ಹೆಡ್‌ಮಾಸ್ಟರಾದ ಮೆ. ಪಿ. ಮಂಗೇಶರಾಯರು ಈ ತಾ 9ರಿಂದ ನಾಲ್ಕು ತಿಂಗಳು ರಜೆಯಲ್ಲಿರುವರು. ಅವರ ಬದಲು ಹೆಡ್‌ಮಾಸ್ಟರ್ ಕೆಲಸವನ್ನು ಮೆ. ಹರಿ ಕಣ್ವಯ್ಯನವರು ನೋಡುತ್ತಿದ್ದಾರೆ.

ಅಮ್ಮತ್ತಿ ವೀರಾಜಪೇಟೆ ರಸ್ತೆಯು ಕಾವಾಡಿ ಸೇಂದಿ ಅಂಗಡಿ ಬಳಿ ಕಳೆದ ಒಂದೆರಡು ವರ್ಷಗಳಂತೆ ಸ್ವಲ್ಪ ಕುಸಿದು ಹೋಗಿದೆ. ಆದರೆ ಡಿ. ಪಿ. ಡಬ್ಲ್ಯೂಯವರು ರಿಪೇರಿಮಾಡಿಸಿ ಗಾಡಿ, ಬಸ್ಸು ವಗೈರೆಗಳು ಅತ್ತಿತ್ತ ದಾಟುವಂತೆ ಮಾಡಿರುವರು.

ಹರಪನಹಳ್ಳಿ ಭಾರತ ಜ್ಯೋತಿಷ್ಯ ವಿದ್ಯಾಲಯದಲ್ಲಿ ದೊರೆಯುವ ಹರಪುರಿ ಸುಪ್ರಸಿದ್ಧ ತಗ್ಗಿನ ಮಠದ ಪ್ರಥಮ ಸಂ[illegible]ದ ಸಿದ್ಧಾಂತ ಫಲಪಂಚಾಂಗದ ಪ್ರಕಟಣೆಯು [illegible] ಈ ಸಂಚಿಕೆಯೊಂದಿಗೆ ಕಳುಹಿಸುವೆವು. ಚಂದಾದಾರರಿಗೆ ಇದು ಪ್ರಯೋಜನವಾಗಬಹುದೆಂದು ನಂಬುತ್ತೇವೆ.

ಕಳೆದ ಸೋಮವಾರ ಸಾಯಂಕಾಲ ಅಬ್ಯಾಲದ ಬಳಿ ಮೊಯಿಲ್ ಬಸ್ಸು, ಮೆ. ತಿರುವೆಂಗಡ ಪಿಳ್ಳೆಯವರ ಕಾರು

ಎದುರು ಒದರು ಬಂದು ಬಂದಕೆಟ್ಟಿಂದು ತಗಲಿ ಮೆಯಿಲ್‌ಬಸ್ಸಿನಲ್ಲಿ ಒಬ್ಬ ಪ್ರಯಾಣಿಕನಿಗೆ ಸ್ವಲ್ಪ ಘಾಯವಾಗಿದೆಯೆಂದೂ ಇದನ್ನು ಪೊಲೀಸಿನವರು ವಿಚಾರಿಸುತ್ತಿದಾರೆಂದೂ ವರ್ತಮಾನ.

ಈ ತಾರೀಕು 7ರ ರಾತ್ರಿ ಚೀಫ್ ಫಾರೆಸ್ಟ್ ಆಫೀಸರಾದ ಮೆ॥ ರಾಬಿನ್‌ಸನ್‌ರವರ ಬಾಗ್ಲೆಯಲ್ಲಿ ಒಂದು ಕಳವು ನಡೆಯಿತು. ಸುಮಾರು ಇನ್ನೂರು ರೂಪಾಯಿಗಳೂ, ಒಂದು ಚೆಕ್ಕ್ ಪುಸ್ತಕವೂ ಮತ್ತು ಕೆಲವು ಆಫೀಸು ರಿಕಾರ್ಡುಗಳೂ ಕದಿಯಲ್ಪಟ್ಟಿವೆಯಂತೆ. ಪೊಲೀಸಿನವರು ಕಳ್ಳರನ್ನು ಪತ್ತೆಮಾಡುವುದರಲ್ಲಿದ್ದಾರೆ.

ಪಾಲಂಗಾಲ ಗ್ರಾಮದ ಪಾಲೇಂಗಡ ಕುಟ್ಟಪ್ಪನೆಂಬವರು ತನ್ನ ಮಗ ಕುಶಾಲಪ್ಪನಿಗೆ ಗುಂಡು ಹೊಡೆದದ್ದು ಬರೇ ಒಂದು ಚಿಲ್ಲು ಮಾತ್ರ ಕುಶಾಲಪ್ಪನ ತಲೆಗೆ ತಗಲಿ ಬದುಕಿರುತ್ತಾನೆ. ಈ ತಕ್ಸೀರು ಕುರಿತು ತಾ. 4—8—26ರಲ್ಲು ಸೆಶನ್ಸ್ ಕೋರ್ಟಿನಲ್ಲಿ ವಿಚಾರ ನಡೆದು ಅಪರಾಧಿ ಕುಟ್ಟಪ್ಪನವರಿಗೆ ಮೂರು ವರ್ಷ ಸಜಾ ಶಿಕ್ಷೆ ವಿಧಿಸಲಾಗಿದೆ.

ಈ ತಾರೀಕು 7ರಲ್ಲಿ ನಡೆದ ಮಡಿಕೇರಿ ಮುನ್ಸಿಪಾಲಿಟಿ ಚುನಾವಣೆಯಲ್ಲಿ ಉಮೇದುವಾರರಾಗಿ ನಿಂತಿದ್ದ ರಾ. ಬಾ. ಕೆ. ಕುಟ್ಟಿಯ್ಯನವರು ಮತ್ತು ಮೆ. ಯಂ ಭುಜಂಗರಾಯರ ಪೈಕಿ ಮ ಭುಜಂಗರಾಯರು ಪ್ರೆಸಿಡೆಂಟರಾಗಿಯೂ, ಮೆ. ಆರ್ ಸಂಜೀವರಾಯರು ಮತ್ತು ಉಸ್ಮಾನ್ ಖಾನ್‌ಸಾಹೇಬರವರ ಪೈಕಿ ಮೆ. ಉಸ್ಮಾನ್ ಖಾನ್‌ಸಾಹೇಬರವರು ವೈಸ್‌ಪ್ರೆಸಿಡೆಂಟರಾಗಿಯೂ ಚುನಾಯಿಸಲ್ಪಟ್ಟಿರುವರು.

ತಾ. 7ರಿಂದ ಇಂದಿನ ವರೆಗೆ ಮಡಿಕೇರಿಯಲ್ಲಿ 9. 61 ಇಂಚು ಮಳೆಯಾಗಿದೆ ತಾ 8ರಲ್ಲಿ 2.43 ಇಂಚೂ, ತಾ. 10ರಲ್ಲಿ 2 35 ಇಂಚೂ ಮಳೆ ಬಿತ್ತು. ಜನವರಿ 1ರಿಂದ ಇಂದಿನ ವರೆಗೆ ಕಳೆದ ಕೆಲವು ವರ್ಷಗಳ ಲೆಖ್ಖದಿಂದ ಸರಾಸರಿ 88. 60 ಇಂಚು ಮಳೆಯಾಗುತ್ತಿದ್ದದರಲ್ಲಿ ಈ ವರ್ಷ 87.45 ಇಂಚು ಆಗಿದೆ. ಕಳೆದ ಹತ್ತು ವರ್ಷಗಳ ಲೆಖ್ಖದಿಂದ ಅಗೊಸ್ಟು ತಿಂಗಳಲ್ಲಿ ಸರಾಸರಿ 24.10 ಇಂಚು ಮಳೆಯಾಗಿದೆ; ಈ ವರ್ಷ ಈಗಾಗಲೇ ಈ ತಿಂಗಳಲ್ಲಿ 22.92 ಇಂಚು ಮಳೆ ಬಿದ್ದಿದೆ.

ಮಡಿಕೇರಿಯಲ್ಲಿರುವ ಮೆ. ಆದಿಮ. ಇಲ ನಾಯಿಡುರವರ ಬಟ್ಟೆಶಾಪಿನಲ್ಲಿ, ದರ್ಜಿಯಾಗಿರುವ ಕಾಳೇರಮ್ಮನ ಸುಬ್ಬಯ್ಯನವರ ಮನೆಯಲ್ಲಿದ್ದ ಅಡಿಗೆಯವ ಗಾಣಿಗ ವೆಂಕಪ್ಪ ಎಂಬವನು ಕಳೆದ ರಾತ್ರಿ 2 ಗಂಟೆ ಸಮಯಕ್ಕೆ ಅಲ್ಲಿ ವಾಸವಿದ್ದವರ ಪೈಕಿ ಮೆ. ಯಂ ಕೆ. ಕುಮಾರಪ್ಪನವರ ಬಾಪ್ತು 1 ಟ್ರಂಕು ಪೆಟ್ಟಿಗೆ, ಅದರೊಳಗೆ ಇದ್ದ ಅಂದಾಜು 50 ರೂಪಾಯಿ ಬೆಲೆಬಾಳುವ ಬಟ್ಟೆ, 53 ರೂಪಾಯಿ, ಮತ್ತು ಒಂದು ವಾಚು, ಅಲ್ಲದೆ ಮೆ. ಚಪ್ಪುಡ್ಲ ಕಾಳಪ್ಪನವರ ಬಾಪ್ತು ಸುಮಾರು 13 ರೂಪಾಯಿ, 25 ರೂಪಾಯಿಯ ವಾಚು ಮತ್ತು ಒಂದು ಮಿಶನ್ ಕೊಡೆ ವಗ್ಯೆರೆ ಕಳವು ಮಾಡಿಕೊಂಡು ಹೋಗಿರುತ್ತಾನಾಗಿಯೂ, ಈ ವಿಷಯ ಪೊಲೀಸಿಗೆ ತಿಳಿಸಿದೆಯಾಗಿ ತಿಳಿಯಬರುತ್ತೆ.

ಹಿಂದೂದೇಶ.

ಕರೆನ್ಸಿ ಬಿಲ್ಲಿನ ಚರ್ಚೆಯಲ್ಲಿ ಭಾಗಿಗಳಾಗಲು ಸ್ವರಾಜ್ಯ ಪಾರ್ಟಿಯ ಮೆಂಬರುಗಳು ಬರುವ ಎಸೆಂಬ್ಲಿಯ ಮೀಟಿಂಗಿಗೆ ಹಾಜರಾಗುವರು

ತಿರುವಾಂಕೂರಿನ ಸಾಬೂನು ಕಾರ್ಖಾನೆಯಲ್ಲಿ ತಯಾರಾಗುವ ಕಾರ್ಬೋಲಿಕ್ ಸಾಬೂನುಗಳನ್ನೇ ಆ ದೇಶದ ಆಸ್ಪತ್ರೆಗಳೆಲ್ಲಾ ಉಪಯೋಗಿಸಬೇಕೆಂದು ಅಲ್ಲಿಯ ಸರ್ಕಾರದವರ ಆರ್ಡರು ಆಗಿದೆ

ನೈನಿಟಾಲ ಜೈಲಿನಲ್ಲಿ ಯೂರೋಪಿಯನ್ ಕೈದಿಗಳ ಆರಾಮಿಗಾಗಿ ಇಂಡಿಯನ್ ಕೈದಿಗಳಿಂದ ಪಂಖಾವನ್ನು ಎಳೆಸುವರಂತೆ! ಕೌನ್ಸಿಲಿನಲ್ಲಿ ಪ್ರಶ್ನೆ ಬಂದಾಗ ಇದು ನಿಜವೆಂದು ಸರ್ಕಾರದವರು ಒಪ್ಪಿರುವರು.

ಪಾಟಿಯಾಲ ಸಂಸ್ಥಾನದಲ್ಲಿ ಹರ್ನಾಲಿನಿನ ಹತ್ತಿರ ಚಿನ್ನದ ಗನಿಯು ಕಂಡು ಹಿಡಿಯಲ್ಪಟ್ಟಿದೆ. ಇದರ ವಿಸ್ತೀರ್ಣವು 12ರಿಂದ 15 ಮೈಲಿ ವರೆಗೆ ಇದೆಯಂತೆ. ಚಿನ್ನವನ್ನು ತೆಗೆಯಲು ಟೆಂಡರುಗಳನ್ನು ಕೇಳಿದ್ದಾರೆ

ಜನಾಂಗಗಳ ಕೂಟಕ್ಕೆ ಹಿಂದೂ ದೇಶದ ಪ್ರತಿನಿಧಿಗಳಾದ ಸರ್ ಸಿ. ಪಿ. ರಾಮಸ್ವಾಮಿ ಅಯ್ಯರವರು ಮತ್ತು ಖಾನ್ ಬಹದ್ದೂರ್ ಶೇಕ್ ಅಬ್ದುಲ್ ಖಾದರ್‌ರವರು ತಾ. 7ರಲ್ಲಿ ಬೊಂಬಾಯಿಯಿಂದ ಹಡಗು ಹತ್ತಿದರು.

ಇಂಡಿಯನ್ ಕರೆನ್ಸಿಯ ರಾಯಲ್ ಕಮಿಷನಿನವರು ರೂಪಾಯಿಗೆ ಒಂದೂವರೆ ಶಿಲ್ಲಿಂಗಿನಂತೆ ಅಂದರೆ ಸೌನಿಗೆ ಸುಮಾರು 13—4—0 ರೂಪಾಯಿಯಂತೆ ನಿರಕು ಮಾಡಬೇಕೆಂದು ತಮ್ಮ ರಿಪೋರ್ಟಿನಲ್ಲಿ ಸಿಪಾರಸ್ಸು ಮಾಡಿರುವರು.

ಎಂಪಯರ್ ಪಾರ್ಲಿಮೆಂಟರಿ ಎಸೋಸಿಯೇಶನಿನ ಆಸ್ಟ್ರೇಲಿಯದಲ್ಲಿ ನಡೆಯುವ ಬರುವ ಕಾನ್‌ಫರೆನ್ಸಿಗೆ ಇಂಡಿಯಾದ ಪ್ರತಿನಿಧಿಗಳಾಗಿ ಲಾಲಾ ಲಜಪತರಾಯಿ ಮತ್ತು ಸರ್. ದೇಸಿಕ ಸಿಂಹ್ಸ್ವಯವರು ಚುನಾಯಿಸಲ್ಪಟ್ಟಿರುವರು.

ಬರ್ಮಾದ ಕಿಯಾಕ್‌ಪ್ಯು ಎಂಬ ಸ್ಥಳದ ಬಳಿ ತಾ. 7ರಲ್ಲಿ ಜ್ವಾಲಾಮುಖಿಯ ಉರಿ ಮೇಲೆ ಒಂದು ಒಂದು ಸಣ್ಣ ಬೆಟ್ಟವನ್ನು ಹಾರಿಸಿಬಿಟ್ಟಿತು. ಸುತ್ತಮುತ್ತಲಿನ ಕಾಡು, ಮರಗಳು ಸುಟ್ಟುಹೋದವು. ಆದರೆ ಪ್ರಾಣನಷ್ಟವುಂಟಾಗಿರುವದಿಲ್ಲ.

ಕಲ್ಕತ್ತಾ ಮುನ್ಸಿಪಾಲಿಟಿಯ 15 ಮುಸಲ್ಮಾನ್ ಮೆಂಬರುಗಳಲ್ಲಿ 12 ಜನರು ತಮ್ಮ ರಾಜಿನಾಮೆಯನ್ನು ವಾಪಸು ತೆಗೆದುಕೊಂಡಿರುವರು. ಉಪಾಧ್ಯಕ್ಷ ಸುರವಾರ್ದಿಯವರ ಮೇಲೆ ಹೊರಿಸಿರುವ ಆಕ್ಷೇಪಗಳ ನಕಲನ್ನು ಇವರಿಗೆ ಕೊಟ್ಟಿರುತ್ತಾರೆ

ಸರ್ವೆಂಟ್ ಆಫ್ ಇಂಡಿಯಾ ಸೊಸೈಟಿಯ ಬೆಂಕಿ ನಷ್ಟ ಪರಿಹಾರಕ ಫಂಡಿಗೆ ತಾ. 6ರವರೆಗೆ 1,37,854—9—0 ರೂ ಜಮೆಯಾಗಿದೆ ಇದಕ್ಕೆ ಎಸ್ ಎಂ. ವಾಡ್ಯ ಧರ್ಮದ ಟ್ರಸ್ಟಿಗಳು ಕೊಟ್ಟಿರುವ 30.000 ರೂ. ಮತ್ತು ವೈಸರಾಯಿ ಇರ್ವಿನ್ ಪ್ರಭುಗಳು ಕೊಟ್ಟಿರುವ 500 ರೂಪಾಯಿಯು ಸೇರಿದೆ.

ಯಾವ ಸ್ಥಳದಲ್ಲಾದರೂ ವೀರಶೈವರ ಸಭೆಗಳನ್ನು ಕೂಡಿಸಲು ಇಚ್ಛೈಸುವವರು ಬರುವ ಡಿಸೆಂಬರಿನಲ್ಲಿ ಹಾಗೆ ಸಭೆ ಕೂಡಿಸಿ ಅದರ ಅಭಿಪ್ರಾಯವನ್ನು ಕೂಡಲೇ ಅಖಿಲಭಾರತ ವೀರಶೈವ ಚಿರಸ್ಥಾಯಿ ಫಂಡಿನ ಅಧ್ಯಕ್ಷರಾದ ರಾಜಸಭಾಭೂಷಣ ದಿವಾನ್ ಬಹದ್ದೂರ್ ಸರ್ ಕೆ. ಪುಟ್ಟಣ ಶೆಟ್ಟರು ಸಿ ಐ ಇ. ಯವರಿಗೆ ತಿಳಿಸಿದರೆ ಮೇಲ್ಕಂಡ ಫಂಡಿನಿಂದ ಸ್ವಲ್ಪಮಟ್ಟಿಗೆ ದ್ರವ್ಯ ಸಹಾಯ ದೊರೆಯುವದೆಂದು ಸಮಸ್ತ ವೀರಶೈವರಿಗೂ ತಿಳಿಸಿರುತ್ತಾರಂತೆ

ಸಾಮಧಾರ ವಿ. ಜೆ. ಪಟೇಲರವರು ಎಸೆಂಬ್ಲಿಯ ಅಧ್ಯಕ್ಷರಾದಂದಿನಿಂದ ತನ್ನ ಸಂಬಳದಲ್ಲಿ ಮಾಸಿಯಾಗ ಎರಡು ಸಾವಿರ ರೂಪಾಯಿಗಳನ್ನು ಖಾದೀ ಪ್ರಸಾರ ಮತ್ತು ಅಸ್ಪೃಶ್ಯತೆ ನಿವಾರಣೆಯ ಕಾರ್ಯಗಳಿಗೆ ವಿನಿಯೋಗಿಸುವುದಕ್ಕಾಗಿ ಮಹಾತ್ಮ ಗಾಂಧಿಯವರಿಗೆ ಕಳುಹಿಸುತ್ತಾ ಬರುತ್ತಿರುವರು ಪಟೇಲರವರಿಗೆ ಬೊಂಬಾಯಿ ಮುನ್ಸಿಪಾಲಿಟಿಯ ರಾಷ್ಟ್ರೀಯ ಸಂಗಹದ ಮೆಂಬರುಗಳು ಕೊಟ್ಟ 3000 ರೂಪಾಯಿ ಥೈಲವನ್ನೂ ಇದೇ ಉದ್ದಿಶ್ಯಕ್ಕಾಗಿ ಕೊಟ್ಟಿರುವರು.

ಕಲ್ಕತ್ತೆ ಪಟ್ಟಣದ ಮಾರವಾಡಿಗಳು ಸೇರಿ ಈ ತಿಂಗಳಿಂದ ನವಂಬರು ಮಧ್ಯದ ವರೆಗೆ ಪರದೇಶದ ಬಟ್ಟೆಗಳನ್ನು ತರಿಸಬಾರದೆಂದು ತೀರ್ಮಾನಿಸಿಕೊಂಡಿರುವರು. ಅವರ ಪೈಕಿ ಯಾರಾದರೂ ತರಿಸಿ ವ್ಯಾಪಾರ ಮಾಡಿದರೆ ಗಂಟೆ ಒಂದಕ್ಕೆ 51 ರೂ. ಜುಲ್ಮಾನೆ ಕೊಡಬೇಕೆಂದು ಗೊತ್ತು ಮಾಡಿರುವರು. ಹಿಂದೂ ಮುಸಲ್ಮಾನರ ದಂಗೆಯು ಮೂಲಕ ಸರ್ಕಾರದವರು ಮಾರವಾಡಿಗಳ ವ್ಯಾಪಾರವನ್ನು ನ್ಯಾಯವಾಗಿ ಕಾಪಾಡದದ್ದು ಹಲವು ಇದರ ಕಾರಣಗಳಲ್ಲಿ ಒಂದಾಗಿದೆಯಂತೆ.

ಸಂಯುಕ್ತ ಸಂಸ್ಥಾನದ ಕೌನ್ಸಿಲಿನಲ್ಲಿ ಸರ್ಕಾರವು ತಂದ 'ಲ್ಯಾಂಡ್ ರೆವಿನ್ಯು' ಬಿಲ್ಲಿನಲ್ಲಿ ಕೌನ್ಸಿಲಿನವರು ಹಲವು ಬದಲಾವಣೆಗಳನ್ನು ಚರ್ಚಿಸಿ ಮಂಜೂರು ಮಾಡಿದ ಕಾರಣ, ಸರ್ಕಾರದವರು ತಂದಂತೆ ಆ ಬಿಲ್ಲನ್ನು ಕೌನ್ಸಿಲಿನವರು ಒಪ್ಪದೆ ಹೋದರೆ ಅವರು ಅದನ್ನು ವಾಪಸು ತೆಗೆದುಕೊಳ್ಳುವರೆಂದು ಗವರ್ನರವರು ಕೌನ್ಸಿಲಿಗೆ ತಿಳಿಸಿದರು. ಆದರೆ ಕೌನ್ಸಿಲಿನವರು ಗವರ್ನರವರ ಬದಲಾವಣೆಯನ್ನು ಮಂಜೂರು ಮಾಡಲಿಲ್ಲ. ಫೀನೇನ್ಸ್ ಮೆಂಬರರು ಬಿಲ್ಲನ್ನು ವಾಪಸು ತೆಗೆದುಕೊಂಡರು ಕೌನ್ಸಿಲು ಸಭೆಗಳು ಎಂಥಾ ತೋರಿಕೆಯ ಕೂಟಗಳಾಗಿವೆ !

ಮೆ ಬಿ ಜಿ ಹಾರ್ನಿಮ್ಯಾನ್‌ರವರು ಬೊಂಬಾಯಿಯಲ್ಲಿ ತಮ್ಮದೊಂದು ಭಾಷಣದಲ್ಲಿ ಹೇಳಿರುವದೇನೆಂದರೆ—ಪರದೇಶೀ ಸರ್ಕಾರದ ಆಧೀನದಲ್ಲಿರುವ ಹಿಂದೂದೇಶದಲ್ಲಿ ಸರ್ಕಾರ ಮತ್ತು ಜನಸಮುದಾಯವೆಂಬ ಎರಡು ಪಂಗಡಗಳೇ ಇರಬೇಕಲ್ಲದೆ ಮೂರನೇ ಪಂಗಡಕ್ಕೆ ಎಡೆಯೇ ಇಲ್ಲ ಇಂಡಿಯವು ಅಮೇರಿಕದ ಸಂಯುಕ್ತ ಸಂಸ್ಥಾನ, ಐರ್ಲೆಂಡ್ ಮುಂತಾದ ದೇಶಗಳ ಉದಾಹರಣೆಯನ್ನು ಹಿಂಬಾಲಿಸಿ ಸಂಪೂರ್ಣ ಸ್ವರಾಜ್ಯ ದೊರೆಯುವವರೆಗೆ ಸರ್ಕಾರಿ ಉದ್ಯೋಗವನ್ನು ಯಾರೂ ಕೈಕೊಳ್ಳಬಾರದು ಒಬ್ಬ ಮನುಷ್ಯನು ಅರ್ಧ ಸ್ವತಂತ್ರಿಯೂ ಅರ್ಧ ಗುಲಾಮನೂ ಆಗಿರಬಹುದೆಂದು ತಾನು ನಂಬುವದಿಲ್ಲ.

ಪಂಡಿತ ಮದನಮೋಹನ ಮಾಳವೀಯರು ಮತ್ತು ಡಾಕ್ಟರ್ ಮುಂಜೆಯವರು ಕಲ್ಕತ್ತೆಗೆ ಹೋಗಿ ಭಾಷಣ ಮಾಡಿದರೆ ಅಲ್ಲಿ ಹಿಂದೂ ಮುಸಲ್ಮಾನರ ಜಗಳಕ್ಕೆ ಉತ್ತೇಜನ ಕೊಟ್ಟಂತಾಗುವದೆಂಬ ಕಾರಣದಿಂದ ಅಲ್ಲಿಯ ಚೀಫ್ ಪ್ರೆಸಿಡೆನ್ಸಿ ಮೇಜಿಸ್ಟ್ರೇಟರು ಎರಡು ತಿಂಗಳವರೆಗೆ ಕಲ್ಕತ್ತೆಗೆ ಬರಕೂಡದೆಂದು ಅವರಿಬ್ಬರಿಗೆ ತಡೆ ಹುಕುಂ ಕೊಟ್ಟರು ಇದು ಅನ್ಯಾಯವಾದ ಹುಕುಂ ಎಂದು ಇದನ್ನು ವಿರೋಧಿಸಿ ಅವರಿಬ್ಬರೂ ಕಲ್ಕತ್ತೆಗೆ ಹೋದರು. ಅಲ್ಲಿ ತುಂಬಾ ಪೊಲೀಸು ಬಂದೋಬಸ್ತು ಮಾಡಿದ್ದರೂ ಕೂಡ ಅವರನ್ನು ಕೈದು ಮಾಡಲಿಲ್ಲ. ನವರಿ ಹುಕುಮಿನಂತೆ ನಡೆಯದ್ದರಿಂದ ವಿಚಾರಿಸುವ ಬಗ್ಗೆ ತಾ. 23ರಲ್ಲಿ ಅವರಿಬ್ಬರು ಆ ಮೇಜಿಸ್ಟ್ರೇಟರ ಮುಂದೆ ಹಾಜರಾಗತಕ್ಕದೆಂದು ಅವರಿಗೆ ಸಮನ್ಸ್ ಕಳುಹಿಸಿರುವರು.

ವಿದೇಶ.

ಜಪಾನಿನ 'ಅಸ್ಸೋಹಿ' ಎಂಬ ದೈನೀಕ ವರ್ತಮಾನ ಪತ್ರಿಕೆಯೊಂದರ ದಿನಂಪ್ರತಿ ಪ್ರಚಾರವು 21,20,000 ಇದೆಯಂತೆ!

ಜಪಾನಿನ ಕೊರಿಯ ಪ್ರಾಂತ್ಯದ ಕಾಗಿಟೊ ಎಂಬಲ್ಲಿ ತಾ. 5ರಲ್ಲಿ ಜೋರಾದ ಮಳೆಹೊಡೆದು ಸಾವಿರಾರು ಎಕರೆಗಳು ನೀರಿನಿಂದ ಮುಚ್ಚಲ್ಪಟ್ಟು, ಎಪ್ಪತ್ತೈದು ಜನರು ಮರಣ ಹೊಂದಿದರು.

ಆಫ್ರಿಕದ ನೇಟಾಲಿನಲ್ಲಿ ತಾ. 6ರಲ್ಲಿ ವಿಶೇಷ ನಷ್ಟಕರವಾದ ಬೆಂಕಿಯು ಉಂಟಾಗಿ ಐದು ಮೈಲುಗಳ ದೂರ ಹರಡಿ 500 ಎಕರೆ ಕಬ್ಬಿನ ತೋಟವನ್ನು ಸುಟ್ಟಿತು. 12 ಜನಕ್ಕು ಜನರು ಮೃತರಾದರು.

ಗಾಳಿಗಿಂತಲೂ ವೇಗವಾಗಿ ಓಡುವಂಥ ಮೋಟಾರೊಂದನ್ನು ಪ್ಯಾರಿಸ್ ಪಟ್ಟಣದ ಇಂಜಿನೀಯರೊಬ್ಬನು ತಯಾರಿಸುತ್ತಿರುವನು. ಅದು ಗಂಟೆಗೆ 240 ಮೈಲು ದೂರ ಹೋಗುವದಂತೆ. ಅಂದರೆ ನಿಮಿಷಕ್ಕೆ ನಾಲ್ಕು ಮೈಲು ವೇಗವಾಯಿತು!

ಗ್ರೀಕ್ ಸರ್ಕಾರದ ಅಧ್ಯಕ್ಷರಾದ ಜನರಲ್ ಪಾಂಗಲಸ್‌ರವರು ತಾ 8ರಲ್ಲಿ ಒಂದು ಹೋಟೇಲಿನಲ್ಲಿ ಊಟಮಾಡುತ್ತಿರುವಾಗ್ಯೆ ಎಂಟನಿ ಪೌಲಸ್ ಎಂಬೊಬ್ಬ ಹುಚ್ಚನು ಅವರಿಗೆ ಪಿಸ್ತೂಲಿನಿಂದ ಗುಂಡು ಹೊಡೆಯಲು ಯತ್ನಿಸಿದನು. ಆ ಕೂಡಲೆ ಅವರ ಸೇವಕರು ಅವನನ್ನು ಹಿಡಿದು ಕೈದುಮಾಡಿದರು.

ಈಜಿಪ್ಟಿನ ಕೈರೊ ಪಟ್ಟಣದಲ್ಲಿ ಲೆಜಿಸ್ಲೇಟಿವ್ ಕೌನ್ಸಿಲಿನ ಮೀಟಿಂಗು ನಡೆಯುತ್ತಿದ್ದಾಗ ಒಂದು ಗೂಬೆಯು ಒಂದು ಮೇಲೆ ಒಂದು ಕಡೆ ಕುಳಿತುಕೊಂಡಿತು. ಅಲ್ಲಿ ಗೂಬೆಗಳು ಅಪಶಕುನಗಳುಂಟುಮಾಡುತ್ತವೆಂಬ ನಂಬಿಗೆ ಇರುವದರಿಂದ ಮೀಟಿಂಗನ್ನು ಬರಖಾಸ್ತುಮಾಡಿ ಗೂಬೆಯನ್ನು ಹೊರಗೆ ಓಡಿಸಿದರಂತೆ!

ಇಂಗ್ಲೆಂಡಿನ ಕಲ್ಲಿದ್ದಲು ಗನಿಗಳ ಕೆಲಸಗಾರರಿಗೂ ಮಾಲೀಕರಿಗೂ ಇರುವ ವ್ಯತ್ಯಾಸಗಳನ್ನು ಸರಿಪಡಿಸಲು ಚರ್ಚಿನ ಮುಂದಾಳುಗಳು ಸೂಚಿಸಿರುವ ಶರತ್ತುಗಳಿಗೆ ಹೆಚ್ಚಿನ ಗನಿಗಳ ಡಿಸ್ಟ್ರಿಕ್ಟುಗಳೆಲ್ಲವೂ ಒಪ್ಪಿದರೂ ಪ್ರಧಾನ ಮಂತ್ರಿಯವರು ಕೈಗಾರಿಕಗೆ ಸರ್ಕಾರದವರು ಧನ ಸಹಾಯ ಕೊಡುವುದಕ್ಕೆ ಒಪ್ಪಿರುವದಿಲ್ಲ.

ಅಫ್ಘಾನಿಸ್ಥಾನದ ಕಾಬೂಲು ಪಟ್ಟಣದಲ್ಲಿ ಜರ್ಮನ್‌ರಾದ ಡಾಕ್ಟರ್ ನವರ್‌ರವರು ಒಬ್ಬ ಅಫ್ಘಾನನನ್ನು ಕೊಂದ ಅಪರಾಧಕ್ಕೆ ವಿಚಾರಿಸಲ್ಪಟ್ಟಲ್ಲಿ, ಮರಣ ಹೊಂದಿದ ಅಫ್ಘಾನನ ಕುಟುಂಬದವರು ಅವರನ್ನು ಕ್ಷಮಿಸಿದ ಕಾರಣ ಅವರಿಗೆ ಕೋರ್ಟಿನಲ್ಲಿ ನಾಲ್ಕು ವರ್ಷ ಸಜೆ ವಿಧಿಸಲಾದದನ್ನು ಅಮೀರರು ಕ್ಷಮಿಸಿ ಅವರನ್ನು ಬಿಡುಗಡೆ ಮಾಡಿರುವರು.

ಪ್ಯಾರಿಸ್ ಪಟ್ಟಣದಲ್ಲಿ ಮಹಮ್ಮದೀಯರು ಒಂದು ಮಸೀದಿಯನ್ನು ಕಟ್ಟಿರುವರಂತೆ, ಹಿಂದುಗಳು ಲಂಡನಿನಲ್ಲಿ ಒಂದು ದೇವಾಲಯವನ್ನೂ ಐನೂರು ಜನರಿಗೆ ಉಳಕೊಳ್ಳಲಿಕ್ಕೆ ಅನುಕೂಲವಾದ ಒಂದು ಮನೆಯನ್ನು ಮುಂಬಯಿಯ ಕಟ್ಟಡದ ಮಾದರಿಯಲ್ಲಿಯೂ ಕಟ್ಟಿಸುತ್ತಿರುವರು. ಇವುಗಳಿಗೆ ಮೂರು ಲಕ್ಷ ರೂಪಾಯಿ ಖರ್ಚು ಮಂಟ್ಟುವದು.

ಶಾಸ್ತ್ರಜ್ಞರು ಫೋಟೋಗ್ರಾಫಿ ವಿದ್ಯೆಯಲ್ಲಿಯೂ ಬಹು ವಿಶೇಷ ಸಂಗತಿಗಳನ್ನು ಕಂಡು ಹಿಡಿಯುತ್ತಿರುವರು ಜರ್ಮನ್ ಡಾಕ್ಟರ್ ಪಿಕ್ಕ ಎಂಬವರು ಮನೋವಿಕಾರಗಳ ಫೋಟೋಗಳನ್ನು ತೆಗೆಯುವ ಪ್ರಯತ್ನದಲ್ಲಿದ್ದಾರೆ. ಜರ್ಮನಿಯ ತುರಂಗಗಳಲ್ಲಿರುವ ಕೈದಿಗಳ ಫೋಟೋಗಳನ್ನು ತೆಗೆದು ಅವರ ಮನಸ್ಸಿನಲ್ಲಿರುವ ಸಂಗತಿಗಳನ್ನೆಲ್ಲಾ ಹೇಳುತ್ತಿದ್ದಾರಂತೆ ಇವರ ಅದ್ಭುತಶಕ್ತಿಗೆ ಎಲ್ಲರೂ ಆಶ್ಚರ್ಯಪಡುತ್ತಿರುವರು.

ಮೆಕ್ಸಿಕೊ ಸರ್ಕಾರದ ಪ್ರೆಸಿಡೆಂಟರು ಪಾದ್ರಿಗಳು ಆ ದೇಶದಲ್ಲಿ ದೇವಸ್ಥಾನಗಳಲ್ಲಿ ಬೋಧಿಸಕೂಡದೆಂದು ಮಾಡಿರುವ ಖಾನೂನನ್ನು ಅಲ್ಲಿಯ ಕಥೋಲಿಕರು ವಿರೋಧಿಸಿ ಚರ್ಚುಗಳಲ್ಲಿ ದೇವರ ಆರಾಧನೆಗಳನ್ನು ನಿಲ್ಲಿಸಿಬಿಟ್ಟಿರುವರು. ಗುವಡಲಾಜಾರ ಎಂಬಲ್ಲಿ ಒಂದು ಚರ್ಚಿನೊಳಗಿನಿಂದ ಅಲ್ಲಿಗಾಗಿ ಬಾಟಿಸ ಪ್ರೆಸಿಡೆಂಟರ ಮೇಲೆ ಗುಂಡು ಹಾರಿಸಿದರು. ಸೈನ್ಯವು ಆ ಚರ್ಚನ್ನು ಮುತ್ತಿಗೆಹಾಕಿ ಹಿಡಿದಿರುವರು. ಎರಡು ಕಡೆಯವರಿಗೆ ಜಗಳವಾಗಿ ಆರುಜನರು ಮೃತರಾದರು. 14 ಜನರಿಗೆ ಘಾಯವಾಗಿದೆ. ಬೇರೆ ಕಡೆಗಳಲ್ಲೂ ಜಗಳಗಳು ಸಂಭವಿಸಿವೆ.

ತಯಾರಾಗುತ್ತಿವೆ.

ಸಹಕಾರಿ ಸಂಘಗಳ ಪ್ರತಿಯೊಬ್ಬ ಮೆಂಬರನಲ್ಲಿಯೂ ಇರಬೇಕಾದ ಅಮಿತ ಜವಾಬ್ದಾರಿ ಪರಸ್ಪರ ಸಹಾಯಕ ಸಂಘದ ಉಪನಿಬಂಧನೆಗಳೂ, ನಮ್ಮ ದೇಶದ ಸಹಕಾರಿ ಸಂಘಗಳ ಅವಶ್ಯಕತೆಗೆ ಸರಿಯಾಗಿ ತಯಾರಿಸಲ್ಪಟ್ಟ ಪಾಸ್ ಬುಕ್ಕುಗಳೂ ನಮ್ಮಲ್ಲಿ ಪ್ರಿಂಟಾಗುತ್ತಿವೆ. ಬೇಗನೆ ಮಾರಾಟಕ್ಕೆ ತಯಾರಾಗುವವು. ಕೆಲವು ಪುಸ್ತಕಗಳು ಮಾತ್ರ ತಯಾರಾಗುವುದರಿಂದ ಬೇಕಾದವರು ಮೊದಲೇ ಬರೆದು ತಿಳಿಸುವುದು ಉತ್ತಮವಾಗಿದೆ.

ತಯಾರಾಗಿವೆ.

ದಾನ ಬರೆದು ರಿಜಿಸ್ಟ್ರಾರವರ ಆಫೀಸಿಗೆ ಕಳುಹಿಸಿದಾಗ ಅದು ಸರಿಯಾಗಿ ಬರೆಯಲ್ಪಡಲಿಲ್ಲವೆಂದು ವಾಪಸು ಕಳುಹಿಸಿ ಅದನ್ನು ಪುನಹ ಸರಿಯಾಗಿ ಬರೆಯುವ ತೊಂದರೆಯನ್ನು ನಿವಾರಿಸಲಿಕ್ಕಾಗಿ ರೂಲ್ಸಿನನುಸಾರವಾಗಿ ತಯಾರಿಸಲ್ಪಟ್ಟ ದಾನಾ ಫಾರಮ್ಮುಗಳು ನಮ್ಮಲ್ಲಿ ಮಾರಾಟಕ್ಕಿವೆ.

"ಕೊಡಗು" ಆಫೀಸು, ಮೇನೇಜರ್.

ಮಡಿಕೇರಿ

ಪತ್ರವ್ಯವಹಾರ

ಬರೆಹಗಾರರು ಪಡುವ ಅಭಿಪ್ರಾಯಗಳಿಗೆ ಪತ್ರಿಕಾಕರ್ತರು ಜವಾಬ್ದಾರರಲ್ಲ. ಸಂ.]

ಡಿಸ್ಟ್ರಿಕ್ಟ್‌ಬೋರ್ಡು.

ಕೊಡಗು ಡಿಸ್ಟ್ರಿಕ್ಟ್‌ಬೋರ್ಡು ಪ್ರೆಸಿಡೆಂಟರು ಮತ್ತು ಮೆಂಬರುಗಳಲ್ಲಿ ವಿನಂತಿ.—

ಅಯ್ಯಾ ಮಹನೀಯರೆ,

ಡಿಸ್ಟ್ರಿಕ್ಟ್‌ಬೋರ್ಡು ಮೆಂಬರುತನವು ಬ್ರಿಟಿಷವಳಿಗೆಯ ವರೆಗೆ ಕೊಡದೆ ಸರಕಾರದವರೇ ಇಟ್ಟುಕೊಂಡು ಪ್ರಜಾಪ್ರತಿನಿಧಿಗಳಾಗಿ ಕೌನ್ಸಿಲ್ ಮೆಂಬರುಗಳನ್ನೇ ಚುನಾಯಿಸಿಕೊಂಡು ಡಿ. ಬೋರ್ಡಿನ ಕೆಲಸ ನಿರ್ವಹಿಸುವದಾಗಿ ಒಂದೆರಡು ಪತ್ರಿಕೆಗಳಲ್ಲಿ ಕಂಡೆನು. ಇದರ ಪರಿಣಾಮಾಂಶವನ್ನು ಸ್ವಲ್ಪ ವಿವರಿಸುವೆನು.

ಡಿ. ಬೋರ್ಡಿನವರು ಮತ್ತು ಡಿ. ಪಿ. ಡಬ್ಲ್ಯು. ಯವರು ಕಾಲಕ್ಕೆ ಸರಿಯಾಗಿ ಕೆಲಸ ಮಾಡದೆ ನಮ್ಮ ನಾಡಿಗೆ ನ್ಯಾಯವಾಗಿ ಗಾಡಿ ದಾರಿಯೆ ನಮ್ಮ ಕೆಸ್ಕಳ, ನಿಂಬೆ, ಹುಳಿಗಳಿಗೆ ಕ್ರಯವಿಲ್ಲದಂತೆ ಮಾಡಿದರು. ನಮ್ಮ ನಾಡಿನ "ಕಾಪೋರೇಷನ್ ಯೂನಿಯನ್ ಸೊಸೈಟಿ, ಕಕ್ಕಬೆ" ಯ ಸಂಘದವರು ಬರೆಕೊಂಡ ಮೇರೆ ಈ ಕಕ್ಕಬೆ ಶಾಲೆಗೆ ಬರುವ ಹುಡುಗರು ದಾಟುವ ಮತ್ತು ಗ್ರಾಮಸ್ಥರು ಸಂತೆಗೆ, ಕಚೇರಿಗೆ, ಹೋಗುವ ಬೀದಾರಿ ಮಧ್ಯೆ ಇರುವ ಹೊಳೆಗಳಿಗೆ ಡಿ. ಬೋರ್ಡು ಮೂಲಕ ಪಾಲ ಹಾಕಿಸಿ ಕೊಡಲು ಮಂಜೂರಾದ ಪಾಲಗಳಿಗೆ ಕಳೆದ ವರ್ಷ ಹಣ ಮಂಜೂರಾಗಿ ದೊರೆಯಿತು. ಈ ವರ್ಷ ಪಾಲ ಹಾಕಿ ಒಂದೆರಡು ತಿಂಗಳಾದರೂ ಹಣ ದೊರೆಯಲಿಲ್ಲ. ಈಗ ಹೊಡೆಯುತ್ತಿರುವ ಮಳೆಯಲ್ಲಿ ಈ ಪಾಲಗಳು ಕೊಚ್ಚಿ ಹೋಗಲಿಕ್ಕೂ ಸಾಕು. ಎರಡನೆ ಕಟ್ಟಿಸಲು ಹಣಬೇಕಾಗುವುದೋ ಏನೋ ತಿಳಿಯದು. ಈ ಕಾರ್ಪೋರೇಶನ್ ಸೊಸೈಟಿಯವರು ಬರೆಯುವಾಗ್ಯೆ ಕೃಪೆಟ್ಟು ಹೋದ ಪನ್ನಂಗಾಲ ಮಡಿವಾಳ ಪಾರೆ ಕಡುವಿಗೆ ಪಾಲ ಮತ್ತು ಪಾಡಿ ದೇವಸ್ಥಾನಕ್ಕೆ ಹೋಗುವದಾರಿ ಮೇಚಂಡ ತೋಟದ ಪಾಲ, ಕಕ್ಕಬೆಯಿಂದ ನಾಲಡಿ ಮೂಲೆಯೊಡ ಪ್ರೊಪ್ರೈಟರ ಅತಂಡ ಮನೆ ಮತ್ತು ಇಲಾಜಿ ಮಲೆಗೆ ಹೋಗುವ ಮುಖ್ಯವಾದ ದಾರಿ ಅಂದರೆ ಕಕ್ಕಬೆಯಿಂದ ಪಾಡಿ ದೇವಸ್ಥಾನಕ್ಕೆ ಹೋಗುವ ದಾರಿಯು, ಮೇಚಂಡ ಭೂಮಿ ಒಳಗಿನಿಂದ ಕಂಬೆಯಂಡ, ಪೇರಿಯಂಡ, ಕೋಡಿಮಣಿಯಂಡ, ಪರದಂಡ ಜಾಗ ಬಾಣೆ ಭೂಮಿಕ್ಕಾಗಿ ಹೋಗುವ ಕಾಲುದಾರಿಯನ್ನು 3 ಅಡಿ ದಾರಿಯಾಗಿ ಕಾಡನ್ನಾದರೂ ಕಡಿದು ಸರಿಪಡಿಸಲು ಎಷ್ಟು ಹೇಳಿಕೊಂಡಾಗ್ಯೂ ನಮ್ಮ ಡಿ. ಬೋರ್ಡು ಮೆಂಬರುಗಳು ಗಣನೆಗೆ ತಾರದ ಸಂಗತಿ ಎಷ್ಟು ವ್ಯಸನಪಟ್ಟರೂ ಸ್ವಲ್ಪವೇ. ಇನ್ನಾದರೂ ಈಗ ಹಾಲಿ ಕಟ್ಟಿರುವ ಪಾಲಗಳಿಗೆ ಯಾಕೆ ಇದುವರೆಗೆ ಹಣ ಪಾವತಿಯಾಗಲಿಲ್ಲವೆಂದು ವಿಚಾರಿಸಿ ಪಡಸೆ ಕೊಡಿಸಿ ಕೊಡಬೇಕಾಗಿ ವಿನಂತಿ. ಈ ಮೇರೆ ದೇಶದ ಎಲ್ಲಾ ಕಡೆ ಇರಬಹುದು. ಕಕ್ಕಬೆ ಪೊಲಮಿ ಕಡುವಿಗೆ ಪಾಲ ಈ ಲೇಖಕನು ಹಾಕಿಸಿರುತ್ತಾನೆ. ಹಣ ದೊರೆಯದೆ ಬೈತರ ಪುಕಾರಕ್ಕಾಗಿ ಈ ಬಾತ್ಮಿ.

ಉದಯಂಡ ಮೊಣ್ಣಯ್ಯ.

ಅವಿಭಕ್ತ ಕುಟುಂಬಗಳಲ್ಲಿ ಓಟ್.

ಅಯ್ಯಾ,

ಈ ವಿಷಯದ ಮೇಲೆ ನಿಮ್ಮ ಲೇಖನವನ್ನೂ "ಲೋಕಪಾವನ"ದ ಲೇಖನವನ್ನೂ ಓದಿ ನೋಡಿದೆನು. ಲೋಕಪಾವನದಲ್ಲಿ ಹೇಳುವ ಕೌನ್ಸಿಲ್ ಚರ್ಚೆ ನಡೆಯುವಾಗಲೂ ನಾನು ಹಾಜರಿದ್ದೆ ಮತ್ತು ಅನಂತರ ಗಜೆಟ್‌ನಲ್ಲಿ ಬಂದ ಚರ್ಚೆಯ ರಿಪೋರ್ಟನ್ನೂ ಓದಿ ನೋಡಿದ್ದೇನೆ. ಅವಿಭಕ್ತ ಕುಟುಂಬದಲ್ಲಿ ಓಟಿಲ್ಲದವರಿಗೆ ಓಟ್ ಕೊಡುವ ಹಕ್ಕು ಕೊಡಬೇಕೆಂಬ ಠರಾವು ಕೌನ್ಸಿಲ್ ಮುಂದೆ ಚರ್ಚೆಗೆ ಬಂದಿರಲಿಲ್ಲ. ಕೌನ್ಸಿಲ್ ಚುನಾವಣೆ ರೂಲ್ಸನ್ನು ತಿದ್ದುಪಡಿಮಾಡಲಿಕ್ಕೆ ಒಂದು ಕಮಿಟಿಯಾಗಬೇಕೆಂತ ಠರಾವು ಬಂದಿತ್ತು. ಆ ಠರಾವಿನ ಮೇಲೆ ಪ್ರಸಂಗವಾಗ ಠರಾವು ತಂದ ಮಿ. ಪಿ. ಬಿ. ಪೋಡಪ್ಪನವರು ಕೊಡಗು ಕುಟುಂಬಗಳಲ್ಲಿ ಪಟ್ಟೆದಾರನಿಗೆ ಒಬ್ಬನಿಗೇ ಓಟ್ ಇರುವದೆಂತ ಹೇಳಿದರು. ಮಿ. ಸಿ. ಯನ್. ವೆಂಕಪ್ಪಯ್ಯನವರು ಹೇಳಿದ್ದೇನೆಂದರೆ "ಚುನಾವಣೆ ರೂಲ್ ಹೀಗೆ ಇದ್ದರೂ ಜಾರಿಯಲ್ಲಿ ಈ ರೂಲಿನಿಂದ ಏನೂ ಕಷ್ಟವಾಗಿರುವದಿಲ್ಲ. ಕೊಡಗು ಕುಟುಂಬಗಳಲ್ಲಿ ಕಂದಾಯವನ್ನು ಎಷ್ಟು ಜನರಿಗೆ ಹಂಚಬಹುದಾಗಿತ್ತೋ ಅಷ್ಟು ಜನರನ್ನು ಓಟರು ಪಟ್ಟಿಗೆ ಸೇರಿಸಿದ್ದಾರೆ;" ಎಂತ ಹೇಳಿದರಷ್ಟೆ. ಇದರಿಂದ ಮಿ. ವೆಂಕಪ್ಪಯ್ಯನವರು ಅವಿಭಕ್ತ ಕುಟುಂಬಗಳಲ್ಲಿ ಕಂದಾಯದ ಯೋಗ್ಯತೆಯನ್ನು ಎಷ್ಟು ಜನರಿಗೆ ಹಂಚಬಹುದೋ ಅಷ್ಟು ಜನರಿಗೆ ಓಟಿನ ಹಕ್ಕು ಕೊಡಬೇಕೆಂಬ ತತ್ವವನ್ನು ಒಪ್ಪಿದಂತೆಯೇ ಆಯಿತು. ಕಳೆದ ಚುನಾವಣೆಗಾಗಿ ತಯಾರಿಸಿದ ಓಟರುಗಳ ಪಟ್ಟಿಯಲ್ಲಿ ಜೀವನಾಂಶಕ್ಕಾಗಿ ಪಾಲಾದವರ ಹೆಸರುಗಳಲ್ಲದೆ 5 ರೂ. ಕಂದಾಯದ ಅರ್ಹತೆ ಇದ್ದರೆ ಪಟ್ಟಿಗೆ ಸೇರಿಸಲ್ಪಟ್ಟಿದ್ದವು. ಅಲ್ಲದೆ ಜೀವನಾಂಶಕ್ಕೆ ಪಾಲಾಗದ ಕುಟುಂಬಗಳಲ್ಲೂ ಕೂಡ ಕಿಕ್ಕರರ ಹೆಸರುಗಳು ಓಟರುಗಳ ಪಟ್ಟಿಯಲ್ಲಿ ಇತ್ತು. ಆದ್ದರಿಂದ ಜಮ್ಮ ಕುಟುಂಬಗಳಲ್ಲಿ ಅವಿಭಕ್ತ ಕುಟುಂಬದ ರೂಲನ್ನು ಜಾರಿಗೆ ತರಲೇ ಇಲ್ಲ. ಆದ್ದರಿಂದ ಆ ರೂಲನ್ನು ತಿದ್ದುಪಡಿ ಆಗ ಮಾಡಬೇಕಾಗಿರಲಿಲ್ಲ.

ಮತ್ತು ರೂಲ್ಸುಗಳನ್ನೆಲ್ಲಾ ತಿದ್ದಲು ಕಮಿಟಿ ಬೇಡವೆಂತಲೂ ಯಾವ್ಯಾವ ರೂಲ್‌ಗಳಲ್ಲಿ ಲೋಪವಿದೆಯೋ ಆ ರೂಲ್‌ಗಳನ್ನು ಮಾತ್ರ ತಿದ್ದಲು ಠರಾವು ತಂದರೆ ಸಾಕೆಂತ ಮಿ. ವೆಂಕಪ್ಪಯ್ಯನವರು ವಾದಿಸಿದರು. ಇದು ನ್ಯಾಯವಾಗಿಯೇ ಇದೆ. ಯಾವ ಯಾವ ರೂಲ್‌ಗಳು ತಿದ್ದಬೇಕಾಗಿವೆಯೋ ಆ ರೂಲ್‌ಗಳನ್ನು ಮಾತ್ರ ಕೌನ್ಸಿಲಿನ ತಿಳುವಳಿಕೆಗೆ ತಂದು ಕೌನ್ಸಿಲಿನ ಅಭಿಪ್ರಾಯ ತೆಗೆದುಕೊಂಡರೆ ಸಾಕಾಗಿದೆ. ಜಡತನದಲ್ಲಿ ಮುಳುಗಿರುವ ಪ್ರಜಾ ಜನರು ಕೊಡುವ ಹಣವನ್ನು ಅನಾವಶ್ಯವಾದ ಕಮಿಟಿಗಳ ಭತ್ಯಕ್ಕಾಗಿ ಉಪಯೋಗಿಸುವದಕ್ಕೆ ಆಕ್ಷೇಪಿಸಿದ್ದು ಯುಕ್ತವಾಗಿಯೇ ಇದೆ.

"ಕೊಡಗು" ಪತ್ರಿಕೆಯ ಸಂಪಾದಕರ ಮೇಲೆಯೂ ಅನಾವಶ್ಯದ ಆಕ್ಷೇಪಣೆಯನ್ನು 'ಲೋಕಪಾವನ'ವು ಹೊರಿಸಿದೆ. "ಕೊಡಗು" ಪತ್ರಿಕೆಯ ಸಂಪಾದಕರು ಜಮ್ಮ ಹಕ್ಕುಗಳನ್ನು ಕಾಪಾಡಲು ಯಾವಾಗಲೂ ಮುಂದಾಳಾಗಿಯೇ ಇದ್ದಾರೆ. ಜಮ್ಮ ಕುಟುಂಬಗಳಲ್ಲಿ ಕಿಕ್ಕರರಿಗೆ ಓಟು ಇರಬೇಡವೆಂತ ಅವರು ಯಾವಾಗಲೂ ಹೇಳಿರುವದಿಲ್ಲ. ಜಮೀನ್ದಾರರ ಸಂಘದ ಅಭಿಪ್ರಾಯಕ್ಕೆ ಇವರು ಎಂದೂ ವಿರೋಧವಾಗಿ ನಡೆದಿಲ್ಲ. ಬ್ರೀಚ್ ಆಫ್ ಕಂಟ್ರಾಕ್ಟ್ ಆಕ್ಟಿನ ಮೇಲೆ "ಕೊಡಗು" ಸಂಪಾದಕರು ಯಾವಾಗಲೂ ಒಂದೇ ಅಭಿಪ್ರಾಯದವರಾಗಿದ್ದಾರೆ. ಹೀಗಿರುವಾಗ ನಿಜವಿಲ್ಲದ ದೂರುಗಳನ್ನು ಹೊರಿಸಿದರೆ ಅಂಥಾ ಬರವಣಿಗೆ ಬರೆಯುವವನ ಹೀನ ಬುದ್ಧಿ ಪ್ರಚಾರವಾಗುತ್ತದೆಯೇ ಹೊರತು ಬೇರೆ ಪ್ರಯೋಜನವೇನೂ ಇಲ್ಲ.

"ಲೋಕಪಾವನ" ದಲ್ಲಿ ಮೂರುವಾರಗಳಿಂದಲೂ ಮುಂದಿನ ಚುನಾವಣೆಯ ಕೆಲಸ ಪ್ರಾರಂಭವಾದಂತೆ ಇದೆ. 1923 ನೇ ಇಸವಿಯ ಚುನಾವಣೆಯಲ್ಲಿ ಜಯ ಹೊಂದಿದವರ ಮೇಲೆ ಇಲ್ಲದ ಅಪವಾದ ಹೊರಿಸಿ ಅವರ ಮೇಲೆ ಓಟರುಗಳ ಮನಸು ಕೆಡುಮಾಡಲು ಎಷ್ಟೋ ದಿವಸದಿಂದ ಆ ಪತ್ರವು ಮಾಡುತ್ತಲಿರುವ ಪ್ರಯತ್ನಗಳಲ್ಲಿ ಇದು ಒಂದಾಗಿದೆ. ಆ ಪತ್ರಿಕೆ ಏನು ಹೇಳಿದರೂ ಜನಸಮುದಾಯಕ್ಕೆ ಪ್ರಯೋಜನವಾಗುವ ಕೆಲಸವನ್ನು ಮಾಡಿದವರು ಯಾರೆಂತ ಓಟರುಗಳು ಜಾಗರೂಕರಾಗಿ ನೋಡುತ್ತಲೇ ಇರುವುದರಿಂದ ಅವರು ಮೋಸ ಹೋಗಲಾರರು.

"ಒಡುಗಾರ"

ಗ್ರಾಮಾಭಿವೃದ್ಧಿಯ ಕೆಲಸಗಾರರೊಬ್ಬರು.

ಅಯ್ಯಾ,

ದಿವಂಗತರಾದ ಮಿ. ಚೆಂಬಾಂಡ ಮುತ್ತಣ್ಣನವರು ದೊಡ್ಡ ವಿದ್ವಾಂಸರಲ್ಲದಿದ್ದರೂ, ದೇಶದ ಹೆಚ್ಚಿನ ಜನರಿಗೆ ಇವರ ಪರಿಚಿತಿ ಇಲ್ಲದಿದ್ದರೂ, ಇವರು ಗ್ರಾಮಾಭಿವೃದ್ಧಿಯೇ ಸ್ವರಾಜ್ಯದ ಮೊದಲನೆಯ ಸೋಪಾನವೆಂದು ನಂಬಿ, ಗ್ರಾಮವನ್ನು ಉತ್ತಮ ಸ್ಥಿತಿಗೆ ತರುವುದರಲ್ಲಿ ಬಹು ಮುತುವರ್ಜಿಯಿಂದ ಕೆಲಸವನ್ನು ಮಾಡುತ್ತಿದ್ದರು. ಅವರ ಗ್ರಾಮದ ಕೋಪರೇಟಿವ್ ಸಂಘ, ಗ್ರೈಯಿನ್ ಬ್ಯಾಂಕ್, ಅಂತಾನನಾಶಸೊಸೈಟಿ ಮೊದಲಾದವುಗಳಲ್ಲಿ ಮುಂದಾಳಾಗಿನಿಂತು ಹಗಲಿರುಳು ಕೆಲಸಮಾಡುತ್ತಿದ್ದರಲ್ಲದೆ ಇತರ ಕೆಲಸಗಳೊಡನೆ ನಮ್ಮ ನಾಡಿನ ಮಲೆ ಮಹಾದೇವರ ದೇವಸ್ಥಾನದಲ್ಲಿ ನಡೆಯತಕ್ಕ ಕೆಲಸದಲ್ಲಿಯೂ ಸಹ ಬಹಳ ಪ್ರೀತಿಯಿಂದ ಭಾಗಿಗಳಾಗುತ್ತಿದ್ದದನ್ನು ನೆರೆ ಗ್ರಾಮಸ್ಥನಾದ ನಾನು ಚೆನ್ನಾಗಿ ಬಲ್ಲೆನು. ಗ್ರಾಮಗಳಲ್ಲಿ ಜನಸಮುದಾಯಕ್ಕಾಗಿ ಕೆಲಸಮಾಡಿದರೆ ಹೆಚ್ಚಿನ ಜನರಿಗೆ ತಿಳಿಯುವುದಿಲ್ಲವೆಂತ ಪಟ್ಟಣಗಳಿಗೆ ಹೋಗಿ ಹೆಸರುವಾಸಿಗಾಗಿ ಕೆಲಸ ಮಾಡಲು ಇಚ್ಛೆಯುವವರು ಹಲವರಿದ್ದರೂ ಇವರು ಹೆಸರುವಾಸಿಗೆ ಗಮನಕೊಡದೆ ತನ್ನ ಗ್ರಾಮದ ಕೆಲಸದಲ್ಲೇ ತೃಪ್ತರಾಗುತ್ತಿದ್ದರು. ದೊಡ್ಡ ವಿದ್ಯೆಯನ್ನು ಕಲಿತು ತನ್ನ ಸ್ವಪ್ರಯೋಜನಕ್ಕೆ ಹೋರಾಡುವವರಿಗಿಂತಲೂ ಮತ್ತು ಬಾಯಲ್ಲಿ ಸಾವಿರ ಆಟ, ಆಡದಂತ ಮಾಡದೆ ಇರುವ ಉಚ್ಚ ವಿದ್ಯಾವಂತರಿಗಿಂತಲೂ ಅಲ್ಪವಿದ್ಯಾವಂತರಾದರೂ ಸ್ವಜನಾಭಿಮಾನ ಮತ್ತು ಸ್ವದೇಶಾಭಿಮಾನ ಉಳಿಸಿಕೊಳ್ಳಲಿಕ್ಕೂ ದಾರಿದ್ರ್ಯವನ್ನು ಓಡಿಸಲಿಕ್ಕೂ ಪ್ರಯತ್ನಿಸಿರುವ ಇವರಂಥವರು ಉತ್ತಮರೆಂದರೆ ಸುಳ್ಳಾಗದು. ಇವರಂಥ ಕೆಲಸಗಾರರು ಕೊಡಗಿನ ಪ್ರತಿಯೊಂದು ಗ್ರಾಮದಲ್ಲಿಯೂ ಮುಂದೆ ಬಂದರೆ ಕೊಡಗು ದೇಶವು ಬೇಗನೆ ಮುಂದುವರಿಯುವದು.

ಇವರ ಜೊತೆಗಾರರಲ್ಲಿ ಒಂದು ವಿನಂತಿ.—ನಿಮ್ಮ ಜೊತೆಯೊಬ್ಬನು ನಿಮ್ಮನ್ನು ಬಿಟ್ಟನೆಂದು ಧೈರ್ಯಗೆಡದೆ ನೀವು ಹಿಡಿದ ಕಾರ್ಯವನ್ನು ಊರುನಾಡಿನ ಶೌರ್ಯವನ್ನು ಮುಂದರಿಸಲಿಕ್ಕೆ ಆ ಮಲೆಮಹಾದೇವರು ನಿಮಗೆ ಸಹಾಯಕನಾಗಲಿ ಎಂದು ಪ್ರಾರ್ಥಿಸುವೆ.

ಕುಕಡ್ಲೂರು ಗ್ರಾಮಸ್ಥ.

ಮಡಿಕೇರಿ ಜುಮ್ಮ ಮಸೀದಿಯ ಸ್ಥಿತಿ.

ಅಯ್ಯಾ,

ಮಡಿಕೇರಿಯಲ್ಲಿರುವ ಎರಡು ಮಸೀದಿಗಳ ಪೈಕಿ ಇದು ಒಂದು ಮುಖ್ಯವಾದದ್ದು. ಭಟಕಳಾ ಜನರು ವಿನಹ ಇತರ ಎಲ್ಲಾ ಮುಸಲ್ಮಾನರು ಪ್ರಾಯಶಃ ಈ ಮಸೀದಿಗೆ ಬರುವರು. ಇದು ಬಹಳ ಪುರಾತನದ್ದು. ಹಿಂದಕ್ಕೆ ಇದಕ್ಕೆ ತಸ್ತೀಕು ಸಿಕ್ಕುತಿತ್ತು. ಆದರೆ ಅದು ಯಾವ ಕಾರಣದಿಂದಲೊ ನಿಂತುಹೋಯಿತು. ಹಳೇ ಖಾಜಿಯರಾದ ಮಹಮ್ಮದ್ ಇಸೊಫ್ ಸಾಹೇಬರವರ ಕಾಲದಲ್ಲಿ ಈ ಮಸೀದಿಯು ಬಹಳ ಉತ್ತಮ ಸ್ಥಿತಿಯಲ್ಲಿತ್ತು. ಅವರ ಆಡಳಿತೆಯು ಸರಿಗ ಸಾಗಿತ್ತು. ಅವರ ಮೇಹನತ್ತಿನಿಂದಲೇ ಮಸೀದಿಗೆ ಒಂದು ಕೆರೆಯು ಸಿಕ್ಕಿತು. ಇಂಥಾ ಉತ್ತಮ ಸ್ಥಿತಿಯಲ್ಲಿದ್ದ ಮಸೀದಿಯು ಈಗ ಹೀನಸ್ಥಿತಿಗೆ ಬಂದಿರುತ್ತೆ.

ಮೊನ್ನೆಮೊನ್ನೆ ಈ ಮಸೀದಿಯ ಮೌಜನಾರು ಸತ್ತುಹೋಗಲಾಗಿ ಮಸೀದಿ ಕೆಲಸವು ಸರಿಯಾಗಿ ನಡೆಯುವಂತೆ ತೋರುವದಿಲ್ಲ. ಪ್ರಾರ್ಥನೆ ಕಾಲಕ್ಕೆ ಸರಿಯಾಗಿ ಕೂಗುವುದು, ಮಸೀದಿ ಸುತ್ತು ಮುತ್ತು ಗುಡಿಸಿ ಚೊಕ್ಕಟವಾಗಿ ಇಟ್ಟುಕೊಳ್ಳುವದು, ಮಸೀದಿಯ ದೀಪ ಹತ್ತಿಸುವದು ; ಹಣ ಕೊಳೆಯುವದು ಇವು ಮುವ್ವಜನಿನ ಕೆಲಸಗಳು. ಮುವ್ವಜನಿನ ಮರಣದ ದೆಸೆಯಿಂದ ಈ ಕೆಲಸಗಳಿಗೆ ಅಡಚಣೆ ಉಂಟಾಗಿದೆ. ಖಾಲಿ ಇರುವ ಮುವ್ವಜನಿನ ಸ್ಥಳಕ್ಕೆ ಇನ್ನೊಬ್ಬನನ್ನು ಆದಷ್ಟು ಬೇಗನೆ ನೇಮಿಸುವುದು ಆಗತ್ಯವಿದೆ. ಈ ಕೆಲಸಕ್ಕೆ ಬರಲಿಕ್ಕೆ ಅಪೇಕ್ಷಿಸುವ ಜನರು ಇದ್ದಾರೆಂದು ನಾನು ಪರಸ್ಪರ ಕೇಳುತ್ತೇನೆ. ಉಮೇದುವಾರರು ಇರುವಾಗ ಮುವ್ವಜನ ಕೆಲಸಕ್ಕೆ ಯಾರಾದರೂ ಒಬ್ಬನನ್ನು ನೇಮಕ ಮಾಡಲು ಕಷ್ಟವೇನಿಲ್ಲ.

ಗತಿಸಿದ ಮುವ್ವಜನನಿಗೆ ಸಂಬಳವನ್ನು ಕೆಲವು ಮುಸಲ್ಮಾನರು ತಮ್ಮ ಶಕ್ತಿಯಾನುಸಾರ ಚಂದಾ ಹಣವನ್ನು ಕೂಡಿಸಿಕೊಡುತ್ತಿದ್ದರು. ಮುವ್ವಜನನು ಏನೊಂದೂ ತೊಂದರೆ ಇಲ್ಲದೆ ಕೆಲಸ ನಡಿಸಿಕೊಂಡು ಹೋಗುತ್ತಿದ್ದನು. ಮೊದಲು ಚಂದಾ ಕೊಡುತ್ತಿದ್ದ ಮಹನಿಯರೇ ಖಾಲಿ ಇರುವ ಮುವ್ವಜನನ ಸ್ಥಳಕ್ಕೆ ಒಬ್ಬನನ್ನು ನೇಮಿಸಬಾರದೇಕೆ? ಸುಮ್ಮನೆ ಕಾಲ ತಳ್ಳುವದರಿಂದ ಜನರಿಗೆ ತುಂಬ ತೊಂದರೆಯಾಗುತ್ತದೆ. ಆದುದರಿಂದ ಕೂಡಲೆ ಮುವ್ವಜನನನ್ನು ನೇಮಕಮಾಡುವ ಏರ್ಪಾಡಿ ಮಾಡತಕ್ಕದ್ದು.

ಕೆಲವುವೇಳೆ ಮಸೀದಿಯ ಒಳಕೋಣೆಯಲ್ಲಿ ಅಂದರೆ ನಮಾಜು ಮಾಡುವ ಕೋಣೆಯಲ್ಲಿ ಪ್ರಯಾಣಿಕರು ಮಲಗಿಕೊಳ್ಳುವುದುಂಟು. ಈ ರೀತಿಯು ಯಾರಿಗೂ ಹಿತವಲ್ಲ. ನಮಾಜುಕೋಣೆಯು ಯಾವಾಗಲೂ ಶುದ್ಧವಾಗಿರಬೇಕು. ಮತ್ತು ಮಸೀದಿಯ ಕೆರೆಯಲ್ಲಿ ಜನರು ಒಟ್ಟೆ ಬರೆಗಳನ್ನು ಒಗೆದು ನೀರನ್ನು ಹಾಳುಮಾಡುವರು. ಈ ಕೆಲಸವು ಬಹಳ ಹೀನವಾದದ್ದು. ಕರೆನೀರು ಶುಚಿಯಾಗಿ ಇಲ್ಲದಿದ್ದರೆ ಪ್ರಾರ್ಥನೆಗೆ ಬರುವವರು ವಜು ಮಾಡಲಿಕ್ಕೆ ಹೇಸುವರು. ಈ ವಿಷಯಗಳಲ್ಲಿ ಮುವ್ವಜನನು ಎಚ್ಚರವಿರಬೇಕು. ಮತ್ತು ಖಾಜಿ ಸಾಹೇಬರು ಸಹ ಈ ಬಾಬುಗಳಿಗೆ ತಮ್ಮ ನಿಗ ಕೊಟ್ಟರೆ ಒಳ್ಳೇದು.

ಒಬ್ಬ ಮಹಮ್ಮದೀಯ.

ಡಿಸ್ಟ್ರಿಕ್ಟ್‌ಬೋರ್ಡು ರೂಲ್ಸ್.

ಪ್ರಿಯ ಸಂಪಾದಕರೆ,

ಡಿಸ್ಟ್ರಿಕ್ಟ್‌ಬೋರ್ಡಿನ ಇಲೆಕ್ಷನ್ ರೂಲ್ಸಿನಲ್ಲಿ ಕೆಲವು ಬದಲಾವಣೆಯಾಗಬೇಕೆಂತ ತಾವು ತಾ. 30-7-'26ರ ಪತ್ರಿಕೆಯ ಅಗ್ರಲೇಖನದಲ್ಲಿ ಸೂಚಿಸಿರುವದನ್ನು ನೋಡಿದೆನು. ಅದು ತೃಪ್ತಿಯಾಗಿರುತ್ತೆ. ಆದರೆ ಸದರಿ ರೂಲ್ಸನ್ನು ಆ ಮೊದಲಾಗ್ರವಾಗಿ ಕನ್ನಡದಲ್ಲಿ ಪ್ರಕಟಿಸುವದು ಅತ್ಯವಶ್ಯವಿತ್ತು. ಸರಕಾರದವರು ಹಾಗೆ ಮಾಡಿರುವದಿಲ್ಲ. ನಮ್ಮ ಕೊಡಗು ದೇಶವು ಕನ್ನಡದೇಶವು. ದೇಶಭಾಷೆಯೂ ಕನ್ನಡ. ಕನ್ನಡ ಬಲ್ಲವರೇ ಅತ್ಯಧಿಕರಾಗಿದ್ದಾರೆ. ಇಂಗ್ಲಿಷು ಬಲ್ಲವರು ಕೇವಲ ಕಡಿಮೆ. ಇಲೆಕ್ಷನ್ ರೂಲ್ಸನ್ನು ಕೊಡಗು ಗೆಜೆಟ್ಟಿನಲ್ಲಿ ಪ್ರಕಟಿಸಿ (ಇಂಗ್ಲಿಷಿನಲ್ಲಿ) ದ್ದಾರೆ. ಕನ್ನಡದಲ್ಲಿ ಪ್ರಕಟಿಸಿದ್ದರೆ ದೇಶೀಯರು ಅದನ್ನು ಓದಿ ಆ ಭಾಗದಲ್ಲಿ ಹೆಚ್ಚು ಕಡಿಮೆಯಾಗಬೇಕಾದ್ದನ್ನು ಸೂಚಿಸುತ್ತಿದ್ದರು. ಇಂಗ್ಲಿಷಿನಲ್ಲಿರುವದರಿಂದ ಅದರ ವಿಚಾರವಾಗಿ ಏನು ಹೇಳಲೂ ಈ ಪ್ರಾಂತ್ಯದವರು ಅಸಮರ್ಥರಾಗಿದ್ದೇವೆಂತ ಹೇಳುತ್ತಾರೆ. ಅದನ್ನು ಈ ಮೂಲಕ ತಮ್ಮ ಗಮನಕ್ಕೆ ತಂದಿರುತ್ತೇನೆ. ಸರಕಾರದವರು ಈಗಲೂ ಈ ಇಲೆಕ್ಷನ್ ರೂಲ್ಸನ್ನು ಕನ್ನಡದಲ್ಲಿ ಪ್ರಕಟಿಸಬೇಕಾಗಿ ನನ್ನ ಕೋರಿಕೆಯಾಗಿದೆ. ತಾವು ಈ ವಿಚಾರದಲ್ಲಿ ತಕ್ಕ ನಿಗ ಕೊಡದೆ ಇರುವದು ಆಶ್ಚರ್ಯವಾಗಿದೆ. ತಾವಾದರೂ ತಮ್ಮ ಪತ್ರಿಕೆಯಲ್ಲಿ ಸದರಿ ರೂಲ್ಸನ್ನು ಯಥಾವತ್ತಾಗಿ ಭಾಷಾಂತರಮಾಡಿ ಪ್ರಕಟಿಸಿದರೆ ದೇಶೀಯರೆಲ್ಲರೂ ತಮಗೆ ತುಂಬಾ ಕೃತಜ್ಞರಾಗಿರುವರು. ಕನ್ನಡದಲ್ಲಿ ಪ್ರಕಟಿಸದೆ ಇದ್ದಲ್ಲಿ ಯಾವ ಉದ್ದೇಶಕ್ಕಾಗಿ, ಈ ರೂಲ್ಸು ಪ್ರಕಟಿಸಲ್ಪಟ್ಟಿತೋ ಅದು ನಿಷ್ಫಲವಾಗುವದೆಂತ ಈ ಕಡೆಯವರ ಅಭಿಪ್ರಾಯವಾಗಿರುತ್ತೆ.

ನಂಜರಾಯಪಟ್ಟಣ ತಾಲೋಕಿನವ.

WANTED

Two qualified Surveyors, salary varying from Rs 30/ to 50/- per mensem with further prospects

Apply sharp to the under-signed with qualifications and testimonials and other terms of the appointment by the 15th of September the latest

U A Ganapathi
Surveyor and drafts man
Coorg Survey party Co Ltd
Napoklu Post
4–2 Coorg Dist S India
Tel Office MERCARA
(12 miles from Napoklu)
Tel Address "ORANGE"

ಕನ್ನಡ **ಸ್ವಧರ್ಮ** ವಾರ ಪತ್ರಿಕೆ.

ಸಂಪಾದಕರು.—ದ ರಾ ಬೇಂದ್ರೆ, ಬಿ ಎ.

ಸಮಾಜದಲ್ಲಿ ಶಾಂತಿಪುಷ್ಟಿತುಷ್ಟಿಗಳು ನೆಲೆಗೊಳ್ಳಬೇಕಾದರೆ ಸದಾಚಾರವೇ ಸರಳವಾದ ಹಾದಿ. ಸದಾಚಾರದ ಬೆಳಗಿಗೆ ಸುವಿಚಾರವೇ ಸರಿಯಾದ ಸಾಧನ. ಇಂತಹ ಸುವಿಚಾರಗಳನ್ನು ಸಮಾಜದ ಮುಂದಿಡಲು ಹೆಣಗುವದೇ ಸ್ವಧರ್ಮದ ಗುರಿ ಕನ್ನಡಿಗರು ಕೈಗೊಟ್ಟು ಸ್ವಧರ್ಮವನ್ನು ಪ್ರೋತ್ಸಾಹಿಸಬೇಕಾಗಿ ಕೋರಿಕೆ.

ವಾರ್ಷಿಕ ವರ್ಗಣಿ ರೂ. 3—0—0.

ಕಾರ್ಯಾಧಿಪತಿ
"ಸ್ವಧರ್ಮ" ಕಾರ್ಯಾಲಯ,
ಮಾಳಮಡ್ಡಿ, ಧಾರವಾಡ.

ನೌಕರಿ ಖರಾರು ಫಾರಮುಗಳು.

1926ನೇ ಇಸವಿ ಕೊಡಗಿನ ಕೂಲಿ ಕೆಲಸವನ್ನು ಕುರಿತ ಆಕ್ಟ್ 1ರ ಮೇರೆ, ಅನುಭವವುಳ್ಳ ಯೂರೋಪಿಯನ್ ಮತ್ತು ಇಂಡಿಯನ್ ಪ್ಲಾಂಟರುಗಳೂ ಸೇರಿ ತಯಾರಿಸಿರುವ ನೌಕರಿ ಖರಾರು ಫಾರಮುಗಳು ಇಂಗ್ಲಿಷಿನಲ್ಲಿಯೂ ಕನ್ನಡದಲ್ಲಿಯೂ ಪ್ರಿಂಟಾಗಿ ಮಾರಾಟಕ್ಕೆ ತಯಾರಿವೆ. ಬೇಕಾದವರು ಸಂಟ್ರಲ್ ಸ್ಕೂಲಿನ ಒಳ ಇರುವ (ಹಳೇ ಗಡಂಗ ಕಟ್ಟಡದ) ನಮ್ಮ ಹೊಸ ಆಫೀಸಿನಲ್ಲಿ ಕೊಂಡುಕೊಳ್ಳಬಹುದು.

ತಾ. 21—6—26 ಮೇನೇಜರ್,
ಮಡಿಕೇರಿ. "ಕೊಡಗು" ಆಫೀಸು

EMPIRE OF INDIA LIFE ASSURANCE CO., LTD.

(Established 1897)

ALL WITH PROFIT POLICIES

Issued before 28th February 1927 will share in the BONUS Distribution for the five years ending on that date.

PROSPECTUS ON APPLICATION

Bangalore Branch · 154 Commercial Street
Madras Branch · 9 & 10 Second Line Beach
24–3.

ಕರ್ಣಾಟಕ
ಎಗ್ಯು ಮಿಕಶ್ಚರ್

ಚಳಿಜ್ವರ, ಮಲೇರಿಯ ಜ್ವರ, ಇನ್‌ಫ್ಲುಯೆಂಝ ಆದಿ ಜ್ವರ, ಮೊದಲಾದವುಗಳ ಮೇಲೆ ಅಪ್ರತಿಮವಾದ ಔಷಧವು

ಬೆಲೆ ಬಾಟ್ಲಿಯೊಂದಕ್ಕೆ ರು. ೦-೧೪-೦
ಟಪ್ಪಾಲು ಖರ್ಚು ಬೇರೆ
ಡಜನ್ ಬಾಟ್ಲಿಗಳಿಗೆ ಟಪ್ಪಾಲುವೆಚ್ಚ ಸಹ ರು. ೯—೨—೦

ಏಜಂಟರು ಬೇಕು, ಕೊಡಗಿನ ಸ್ಕೂಲ್ಮಾಸ್ತರುಗಳು ತಮ್ಮೂರಿನ ಮೂರು ಜನ ಔಷಧದ ವ್ಯಾಪಾರಿಗಳ ಹೆಸರನ್ನು ತಿಳಿಸಿದಲ್ಲಿ ಅಂದವಾದ ಬ್ಲಾಟಿಂಗ್ ಪೇಪರು ಪ್ರುಕ್ಕಟೆ.

12–10 ಕರ್ನಾಟಕ ಬ್ರದರ್ಸ್,
ಗಿರಗಾಂವ, ಮುಂಬಾಯಿ.

Apply for our shooting Season's Clearance Sale Catalogue of Brand New Goods.

10 to 25 percent Reductions in Prices.

No License Required !! **No License Required**



Webley and Scott Air Pistol, cal 177 or 22, bore Powerful and Accurate, complete with a sample box of slugs, two spare washers, a brush forcleaning, and a bookletof instructions Rs 30/– Free delivery.

Pwerful German Diana Air gun, Handsome and Accurate, takes B. S. A. Patern No 1 Slugs and Darts, expressly recommendable for Target Practice Rs. 15/ Free delivery

Brilliant Search Light Lamp for Night Sports Rs 30/– Free delivery

No License required to purchase or to possess the above items.

Relia ble D B. B L 12 bore guns	Rs. 60/–	and upwards
Do S. B B L 12 do	do 40/–	do
D B. M L Guns	„ 45 -	do
S B M L. do.	„ 30/–	do
S B. B L Rifles	„ 25/–	do
B L Revolvers and Pistols	, 30/–	do.

Arms, Ammunition and shooting requisitesof almost every kind andquality offered at exceptionally favourable rates ANumber of good quality second hand weapons also offered for sale in theNew Catalogue.

GOOLAMHUSIAIN ALLIBHOY & SONS
Largest Importers of Firearms and Ammunition,
Cheapest priced firm in India,
24 4 210 Abdul Rehman Street, BOMBAY.

೧೬ ಚಿತ್ರಪಟ ಗಳುಳ್ಳದ್ದು **ಸಚಿತ್ರ ಶುಕಸಪ್ತತಿ ಕಥೆ.** ೭೦ ಕಥೆಗಳು ೫೧೨ ಪುಟಗಳು

ಈ ಕದೆಯು ದರ್ಮಶಾಸ್ತ್ರ, ವೇದಾಂತ, ಸ್ತ್ರೀಪಾತಿವ್ರತ್ಯ ಬ್ರಾಹ್ಮಣ, ವೈಶ್ಯ, ಶೂದ್ರರೆಂಬ ನಾಲ್ಕು ವರ್ಣದವರು ನಡಿಯತಕ್ಕ ವರ್ಣಾಶ್ರಮ ಧರ್ಮವೇ ಮುಂತಾದ ಸದ್ವಿಚಾರಗಳನ್ನು ಬೋಧಿಸುವುದು. ೧. ಕಥಾರೂಪದಲ್ಲಿ ಚಿತ್ರಕಥಾ ಚಮತ್ಕಾರ ಶೋಭಿತವಾಗಿಯೂ ನೀತಿಬೋಧಕವಾಗಿಯೂ ಇರುವದರಿಂದ ಸ್ತ್ರೀಯರು, ಪುರುಷರು, ಬಾಲಕರು ಎಂಬ ಭೇದ ವಿಲ್ಲದೆ ಎಲ್ಲರೂ ಓದಬಹುದು. ೨. ಲೋಕಾನುಭವಕ್ಕೆ ಬೇಕಾದ ಅನೇಕ ವಿಷಯಗಳು ಇದರಿಂದ ತಿಳಿದುಬರುವುದು ೩. ಈ ಕಥೆಯನ್ನು ಓದುವದರಿಂದ, ಮನಸ್ಸನ್ನು ದುರಾಚಾರದಲ್ಲಿ ಬಿಡದಂತೆ ಸದಾಚಾರದಲ್ಲಿಯೇ ನಡೆಯುವಂತೆ ಮಾಡುವುದು ೪ ವಿವೇಕಾವಿವೇಕವನ್ನು ತಿಳಿಯತಕ್ಕ ಜ್ಞಾನವನ್ನು ಉಂಟುಮಾಡುವುದು. ಬೇಕಾದವರು ವಿ ಪಿ. ಪೋಸ್ಟು ಮೂಲಕ ತರಿಸಿಕೊಳ್ಳಬಹುದು.

ದಪ್ಪಕಾಗದ ಕ್ರಯ ಪ್ರತಿ ೧ಕ್ಕೆ ರೂ. ೨-೦-೦. ಟಪ್ಪಾಲು ಹಾಸಲು ೦-೮-೦.

ಸಚಿತ್ರ ಬೆಟ್ಟ ವಿಕ್ರಮಾದಿತ್ಯರಾಯನ ಕದೆ ೩ ಭಾಗಸೇರಿದ್ದು ೬೧೨ ಪುಟಗಳು ಕ್ರಯ ೨-೪-೦. ಸಚಿತ್ರರಾಜ ಕಂಠೀರವ ಕಥೆ ೪೮೦ ಪುಟಗಳು, ಕ್ರಯ ರೂ ೨.

ಸಚಿತ್ರ ಶ್ರೀರಾಮತತ್ವಾಮೃತ ಎಂಬ ಸೀತಾರಾಮಾಂಜನೇಯ ಸಂವಾದ ೨೪೭ ಪುಟಗಳು ೧-೮-೦. ಇವುಗಳಿಗೆ ಟಪಾಲು ಖರ್ಚು ಬೇರೆ.

ನಮ್ಮಲ್ಲಿ ದೊರೆಯುವ ಎಲ್ಲಾ ಪುಸ್ತಕಗಳ ಕ್ರಯಪಟ್ಟಿ (ಕ್ಯಾಟಲಾಗ)ಗೆ ಬರೆದರೆ ಕಳುಹಿಸುವೆವು.

52—11 ನಮ್ಮ ವಿಳಾಸ— ಎಂ ಆರ್. ಕೃಷ್ಣಸ್ವಾಮಿ ಶೆಟ್ಟಿ,
ಬುಕ್ಕುಡಿಪೋ, ಚಿಕ್ಕಪೇಟೆ, ಬೆಂಗಳೂರು ಸಿಟಿ

ಹೊಸ ಸಾಮಾನುಗಳು! ಸುಲಭ ಕ್ರಯ!! ಈಗತಾನೇ ಬಂದಿವೆ!!!

ಇಂಥ ಸುಸಮಯವನ್ನು ಕಳಕೊಳ್ಳಬೇಡಿರಿ!

12 ಬೋರ್ ಜೋಡಿ ಕೊಳವಿನ ತೋಟ ಕೋವಿ 1ಕ್ಕೆ	ರೂ.	115—0—0
12 ,, 32 ಇಂಚಿನ ಒಂಟಿ ಕೊಳವಿನ ತೋಟ ಕೋವಿ (ಜರ್ಮನಿ) 1ಕ್ಕೆ.	„	60—0—0
„ „ 36 „ „ „ „	„	65—0—0
ಜೋಡಿ ಕೊಳವಿನ ಕೇಪು ಕೋವಿ 20ನೇ ನಂಬ್ರು 1ಕ್ಕೆ....	„	85—0—0
12 ಬೋರ್ ಚಿಲ್ಲು ತೋಟಗಳು (ಒಳ್ಳೇ ನಮೂನೆ) 100ಕ್ಕೆ	„	14—0—0
„ „ ಆನೆ ಚಿಲ್ಲು , „ „ ..	„	16—0—0
„ „ ,, ಗುಂಡು ತೋಟಗಳು „ „ ...	„	19—0—0
ಕೋವಿ ಕ್ಲೀನ್ ಮಾಡುವ ಮತ್ತು ತೋಟ ತುಂಬಿಸುವ ಸಾಮಾನುಗಳ 1 ಪೆಟ್ಟಿಗೆಗೆ		27—8—0
ಕೇಪು 250ರ 1 ಟಿನ್ನಿಗೆ	ರೂ.	1—5—0
ಕಾಲು ಪೌಂಡು 2 ಬಗೆಯ ಮದ್ದು ಡಬ್ಬಿ 1ಕ್ಕೆ . ..	„	1—0—0
ಚಿಲ್ಲು ಎಲ್ಲಾ ತರಹದ ನಮೂನೆ ರಾತ್ತಲ್ 1ಕ್ಕೆ	„	0—10—0
ಪೂರ್ತಿ ಉಕ್ಕಿನ ಸೊಗಸಾದ ಗುದ್ದಲಿಗಳು 5 ಪೌಂಡಿನ 1 ಡಜನ್ನಿಗೆ	„	33—0—0
„ „ „ 4 „ „	„	30—0—0
4 ಮುಳ್ಳಿನ ಮುಳ್ಳು ಗುದ್ದಲಿಗಳು ಡಜನ್ನಿಗೆ	„	60—0—0
3 „ „	„	48—0—0
4 ಪೌಂಡಿನ ಮರ ಕಡಿಯುವ ಕೊಡಲಿಗಳು ಡಜನ್ನಿಗೆ	„	51—0—0
ಇಂಗ್ಲಿಷ್ ನಮೂನೆ ಕಪಾತ ಚಾಕುಗಳು ಡಜನ್ನಿಗೆ	,	15—0—0
ಮಿಶನ್ ಕೊಡೆಗಳು ದೊಡ್ಡ ಸೈಜ್ (ಸ್ಟಿಲಿಬಾರು) 1ಕ್ಕೆ	„	4—3—0
„ ಸಣ್ಣ ಸೈಜ್ „ „	„	1—4—0
„ ಹೋಲ್‌ಸೇಲಾಗಿ „ ..	„	ಕಮ್ಮಿ ಕ್ರಯ

ಮೆಕ್ಡೋವೆಲ್ ಕಂಪೆನಿ,
ಮಡಿಕೇರಿ

Messers Mc Dowell & Co.
12 11 Mercara

ಕಿರ್ಲೋಸ್ಕರ

ಉಕ್ಕಿನ ತಗಡಿನ ಕುರ್ಚಿಗಳು.

(ಚೇರ್ಸ್)

ಇವುಗಳ ಮುಖ್ಯ ಗುಣವೇನೆಂದರೆ.—

(೧) ಬೆಲೆಯಲ್ಲಿ ಅಗ್ಗ

(೨) ಕೂಡುವದಕ್ಕೆ ಆರಾಮು.

(೩) ತಾಳಿಕೆಯಲ್ಲಿ ಗಟ್ಟಿ

(೪) ತಗಣೆಗಳು ಸೇರುವದಿಲ್ಲ.

(೫) ಎತ್ತಾಡಲಿಕ್ಕೆ ಬರುವಷ್ಟು ಹಗುರ

ಇತ್ಯಾದಿ.

ಸದ್ಯಕ್ಕೆ ಪೇಟೆಯಲ್ಲಿರುವ ಯಾವದೇ ಕುರ್ಚಿಯ ಸಮಾನತೆಯಗಿಂತಲೂ ಈ ಕುರ್ಚಿಯು ಎಲ್ಲ ರೀತಿಯಿಂದ ಮೇಲು ಇರತ್ತದೆ

ಸವಿಸ್ತರ ಸಂಗತಿಯ ಬಗ್ಗೆ ಬರೆದು ತಿಳಿದುಕೊಳ್ಳಿ.

ಕಿರ್ಲೋಸ್ಕರ ಬಂಧು, ಲಿಮಿಟೆಡ್.

ಕಿರ್ಲೋಸ್ಕರವಾಡಿ,

16—10 ಜಿ. ಸಾತಾರ್.

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್, ಕೊ ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ.

		ರೂ.
ಶೇರ್ ಬಂಡವಾಳ	—	50,000
ವಸೂಲಾದ ಶೇರ್ ಮೊಬಲಗು	—	12,990
ಜಮಾಬಂದ ಠೇವಣಾತಿ	—	1,10,885

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲಕೊಡತಕ್ಕದ್ದು.

ಒಂದು ವರ್ಷ ವಾಯಿದೆ ಬಿಟ್ಟು ಹೆಚ್ಚಿನ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ ರೂ. 6–4–0ರ ದರದಲ್ಲಿ ಬಡ್ಡಿ ದೊರೆಯುತ್ತೆ ಕಡಿಮೆ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ 5ರ ಬಡ್ಡಿ ದೊರೆಯುತ್ತೆ

ವರ್ಷಕ್ಕೊಂದಾವರ್ತಿ ಕೊ ಆಪರೇಟಿವ್ ರಜಿಸ್ಟ್ರಾರವರು ಲೆಕ್ಕ ಆಡಿಟ್ ಮಾಡಿಸಿ ಕೊಡುತ್ತಾರೆ.

ಪ್ರೆಸಿಡೆಂಟರು, ಕೊಡಂದೆರ ಕುಟ್ಟಯ್ಯನವರು, ರಾಯ್ ಬಹದ್ದೂರ್.

ಟ್ರೆಜರರ್. ಯಂ. ಭುಜಂಗರಾಯರು ಬಿ.ಎ, ಬಿ.ಎಲ್.

ಸೆಕ್ರಟರಿ

ಸಿ. ಯನ್. ವೆಂಕಪ್ಪಯ್ಯನವರು, ಬಿ.ಎ, ಬಿ.ಎಲ್.

ತಾರೀಖು 29—8—1925.

ಒಂದು ಪ್ರಬಲವಾದ ಪ್ರಶ್ನೆ.

ನಮ್ಮ ಜೀವವನ್ನು ಏತಕ್ಕಾಗಿ ವಿಮೆಮಾಡಬೇಕು !

ವೃದ್ಧಾಪ್ಯದಲ್ಲಿ ನಮ್ಮ ಮತ್ತು ಹೆಂಡತಿ ಮಕ್ಕಳ ಪೋಷಣೆಗಾಗಿ !

ಈಗಾಗಲೇ ಸಾವಿರಾರು ಜನರು ವಿಮೆಮಾಡಿರುವ ಏಳುಕೋಟಿ ರೂಪಾಯಿಗಿಂತ ಹೆಚ್ಚು ಬಂಡವಾಳವಿರುವ ದೇಶೀಯ ವಿಮೆಕಂಪೆನಿಯಲ್ಲಿ ಅತ್ಯಂತ ದೊಡ್ಡದಾದ ಸಾವಿರ ರೂಪಾಯಿ ವಿಮೆಮಾಡಿದವರಿಗೆ ವರ್ಷಕ್ಕೆ 18ರೂ ಕಡಿಮೆಯಿಲ್ಲದೆ ಲಾಭ ಕೊಡುವ 'ಓರಿಯಂಟಲ್' ಗವರ್ನ್‌ಮೆಂಟ್ ಜೀವವಿಮೆ ಕಂಪೆನಿಯ ರೂಲ್ಸಿಗೂ, ಶರತಿಗೂ ಈ ಕೆಳಗಿನವರಿಗೆ ಬರೆದು ತಿಳಿದುಕೊಳ್ಳಿ

ಖಾದಿಬಟ್ಟೆ ಎಂದರೇನು?

ದೇಶೀಯ ಹತ್ತಿಯಲ್ಲಿ ಕೈರಾಟೆಯಿಂದ ನೂಲು ತೆಗೆದು ಇಲ್ಲಿಯೇ ತಯಾರಿಸುವ ಬಟ್ಟೆಯೇ 'ಖಾದಿ' ಈಗಾಗಲೇ ನಮ್ಮ ಸ್ಟೋರಿನಲ್ಲಿ ಪರದೇಶೀಬಟ್ಟೆಗಿಂತ ಗಟ್ಟಿಯಲ್ಲಿಯೂ ಅಂದದಲ್ಲಿಯೂ ಕಡಿಮೆ ಇಲ್ಲದಂತೆ, ಎಲ್ಲಾ ತರದ ಶೀರೆಗಳು ಚೀಟ್ಟಗಳು, ಶಾಲು ವಗೈರೆ ಎಲ್ಲಾ ತರದ ಬಟ್ಟೆಯು ತಯಾರಾಗಿದೆ. ದಯವಿಟ್ಟು ಪ್ರೋತ್ಸಾಹಿಸಿರಿ ! ಖಾದಿಯಿಂದಲೇ ಸ್ವರಾಜ್ಯ ಖಾದಿಯಿಂದಲೇ ಮೋಕ್ಷವೆಂಬುದನ್ನು ಮರೆಯಬೇಡಿರಿ.

ವೀರಾಜಪೇಟೆ, ದಕ್ಷಿಣ ಕೊಡಗು.

ಕೆ. ಪಿ. ಚಿಣ್ಣಪ್ಪ, ಪ್ರೊಪ್ರೈಟರ್, ಖಾದಿಭಂಡಾರ

52—20.

ರೋಲ್ಡ್‌ಗೋಲ್ಡ್ ಇಂಗ್ಲೀಷ್ ಸ್ಟೈಲ್ ಕೈ ಬಳೆಗಳು.

ಇದನ್ನು ಅಮೇರಿಕಾದೇಶದ ಕೆನಡಿಯನ್ ಗೋಲ್ಡ್ ಎಂಬ ಥಳಥಳಿಸುವ ಭಂಗಾರದಿಂದ ತಯಾರಿಸಲ್ಪಟ್ಟಿರುತ್ತೆ ಇದನ್ನು ದೊಡ್ಡವರೂ, ಚಿಕ್ಕವರೂ ಉಪಯೋಗಿಸಬಹುದು. ಇದರ ಬಣ್ಣ ಎಂದಿಗೂ ಹೋಗದು ಹೆಂಗಸರು ಇದನ್ನು ಕೈಯಲ್ಲಿ ಹಾಕಿಕೊಂಡರೆ ಬೇರೆ ಯಾವ ಆಭರಣಗಳೂ ಬೇಕಾಗುವದಿಲ್ಲ. ಒಂದು ಜೊತೆಯಿದ್ದರೆ ಒಂದು ಕುಟುಂಬದವರೆಲ್ಲಾ ಉಪಯೋಗಿಸಬಹುದು. ಇದು ಹೆಂಗಸರಿಗೆ ಬಹು ಮುದ್ದಾದ ಆಭರಣ ಜೊತೆ 1ಕ್ಕೆ ರೂ. 2—8—0

ಇಮಿಟೇಷನ್ ವಜ್ರದ ಬೆಂಡೋಲೆಗಳು.



ಈ ಬೆಂಡೋಲೆಗಳನ್ನು ಬಹು ಹಸನಾದ ವಜ್ರದ ಕಲ್ಲುಗಳನ್ನು ಇಟ್ಟು ಅಪರಂಜಿ ಭಂಗಾರಕ್ಕೆ ಸರಿಸಮನಾದ ಸೀಮೆಯ ಭಂಗಾರದಿಂದ ಕಟ್ಟಡ ಕಟ್ಟಿರುವದು. ಇದರ ಪ್ರಕಾಶವು ಸಾಚಾವಜ್ರದ ಕಲ್ಲುಗಳಿಗೆ ಸರಿಯಾಗಿರುವದು. ಇದರ ಬಣ್ಣವು ಕೆಡದಂತೆ ವಿಲಾಯತಿಯಲ್ಲಿ ಎಲೆಕ್ಟ್ರಿಕ್ ಪವರಿನಿಂದ ಅಪರಂಜಿ ಬಂಗಾರದ ಗಿಲೀಟು ಕೊಟ್ಟಿರುವದು. ಇದನ್ನು ನೋಡಿದವರು ನಿಜವಾದ ಓಲೆ ಎಂದೇ ಹೇಳುವರು ಈಗಿನ ಕಾಲದಲ್ಲಿ ಶ್ರೀಮಂತರೂ, ಜಮೀನ್‌ದಾರರೂ ಮುಂತಾದವರು ಬಹಳವಾಗಿ ಇವನ್ನೇ ಉಪಯೋಗಿಸುತ್ತಿರುವರು

ಕ್ರಯ 1ಕ್ಕೆ 7 ಕಲ್ಲಿನ ಬಿಳಿಯ ಓಲೆ ಜೊತೆ ರೂ 3—0—0.

" " ಕೆಂಪು ಕಲ್ಲಿನ " " 3—8—0.

ಚಂದ್ರಹಾರ.

ಇದನ್ನು ಚಿಕ್ಕವರೂ ದೊಡ್ಡವರೂ ಉಪಯೋಗಿಸುವಂತೆ ಅಚ್ಚಬೆಳ್ಳಿಯಿಂದ ತಯಾರಿಸಿ ಭಂಗಾರದ ಗಿಲೀಟು ಮಾಡಿದೆ. ಇದನ್ನು ಪ್ರತಿಯೊಬ್ಬ ಸ್ತ್ರೀಯರೂ ಧರಿಸಿಕೊಳ್ಳಬಹುದು. ನೋಡಲು ಭಂಗಾರದ ಹಾಗೇ ಇರುವದು ಬಣ್ಣಕ್ಕೆ 3 ವರ್ಷ ಗ್ಯಾರಂಟಿ

3 ಎಳೇ ಸರ 1ಕ್ಕೆ ರೂ. 3—4—0

4 " " " 4—0—0

4 " " " 5—4—0.

ವಿಳಾಸ — ಬ್ರಿಟಿಷ್ ಟ್ರೇಡಿಂಗ್ ಕಂಪೆನಿ, ಪೋಸ್ಟ್ ಬಾಕ್ಸ್ ನಂ 1223, ಮದರಾಸು

52—34

ನೈಟ್ರೇಟ್ ಆಫ್ ಸೋಡಾ

ಎಲ್ಲಾ ಬೆಳೆಗಳಿಗೂ ಅತ್ಯುತ್ತಮವಾದ ಗೊಬ್ಬರ

Nitrate of Soda 15-16 per cent. N

ಈ ಗೊಬ್ಬರದಲ್ಲಿ ಬೆಳೆಗಳಿಗೆ ಅತ್ಯಗತ್ಯವಾದ ನೈಟ್ರೋಜನ್ ಸಸ್ಯಾಹಾರವು

15-16% ಅಂದರೆ ಮೀನು ಮ ಒಳ್ಳೇಯ ಹಿಂಡಿ ಗೊಬ್ಬರದಲ್ಲಿರುವುದಕ್ಕಿಂತಲೂ ಮ ೂರು ನಾಲಕ್ಕು ಜಾಸ್ತಿಯಾಗಿರುವದು ಇದರಲ್ಲಿ ಸಿಕ್ಕುವಷ್ಟು ಸಾರಜನಕ (Nitrogen) ವು ಬೇರೆ ಯಾವ ಗೊಬ್ಬರಗಳಿಂದಲೂ ಗಿಡಗಳಿಗೆ ದೊರೆಯಲಾರದು ಆದ್ದರಿಂದಲೇ ಭೂಲೋಕದ ಎಲ್ಲಾ ಭಾಗಗಳಲ್ಲಿಯೂ ರೈತರು ಇದನ್ನು ವಿಶೇಷವಾಗಿ ಉಪಯೋಗಿಸುತ್ತಾರೆ

ಬತ್ತ, ಕಬ್ಬು, ತೆಂಗು, ಅಡಿಕೆ, ಮಾವು, ಹೊಗೆಸೊಪ್ಪು, ತರಕಾರಿ ಮೊದಲಾದವುಗಳಿಗೂ ಕಾಫಿ, ಚಾ, ರಬ್ಬರು, ಏಲಕ್ಕಿ ಮೊದಲಾದ ತೋಟ ಪೈರುಗಳಿಗೂ ಎಲುಬಿನ ಪುಡಿ ಅಥವಾ ಮೀನು ಗೊಬ್ಬರ ವಗೈರ ಊನ ಗೊಬ್ಬರಗಳ ಜೊತೆಯಲ್ಲಿ ಈ ಗೊಬ್ಬರವನ್ನು ಉಪಯೋಗಿಸುವದರಿಂದ ಬೆಳೆಯು ಸಮೃದ್ಧಿಯಾಗುವದು ನೈಟ್ರೇಟ್ ಆಫ್ ಸೋಡಾದಲ್ಲಿರತಕ್ಕ ಸೋಡವು ಮಣ್ಣಿನಲ್ಲಿರುವ ಪೊಟೇಷ್ ಎಂಬ ಇನ್ನೊಂದು ತರದ ಸಸ್ಯಾಹಾರವನ್ನು ಗಿಡಗಳಿಗೆ ಒದಗಿಸಿ ಕೊಡುತ್ತದೆ.

ಈ ಗೊಬ್ಬರವು ಸೋಟಿಕ್ಕೆ ಬರೇ ಉಪ್ಪಿನ ಹಾಗಿದ್ದು ಅಪಸ್ಯಕರವಲ್ಲ ಎಕರೆ ಒಂದಕ್ಕೆ 100 200 ರಾತ್ತಲು ಸಾಕಾಗುವದು ಹೆಚ್ಚಿನ ಮಾಹಿತಿ ಮತ್ತು "ಕೃಷಿಕೋದ್ಧಾರ" ಎಂಬ ಪುಸ್ತಕವನ್ನು ಈ ಕೆಳಗಿನ ವಿಳಾಸದಾರರಿಂದ ಧರ್ಮಾರ್ಥವಾಗಿ ಪಡೆಯಬಹುದು.

52—11

CHILEAN NITRATE COMMITTEE,
Post Box 469, CALCUTTA.

೧೦೦೦ ರೂಪಾಯಿಗಳ ಬಹುಮಾನ.

ಲೋಕಪ್ರಸಿದ್ಧವಾದ ಸಾಲಂಮಿಶ್ರಿ ಮುರಬ್ಬಾ.

ನಮ್ಮ ಟ್ರೇಡ್ ಮಾರ್ಕನ್ನು ನೋಡಿ ಈ ಔಷಧ ತೆಗೆದುಕೊಳ್ಳಿ

ಇದರ ಸೇವನೆಯಿಂದ ವೀರ್ಯವು ನೀರಿನಂತೆ ಇದ್ದರೂ, ಸ್ವಪ್ನೇಂದ್ರಿಯವಾದರೂ, ಸ್ತ್ರೀ ಸಂಘಕ್ಕೆ ಮೊದಲೇ ಸ್ಖಲನವಾದರೂ, ಮೂತ್ರದೊಂದಿಗೆ ಹೋಗುತ್ತಿದ್ದರೂ ದೋಷರಹಿತವಾಗಿ ಶರೀರಕ್ಕೆ ಆರೋಗ್ಯವನ್ನೂ ಧಾರ್ಢ್ಯತೆಯನ್ನೂ ಆಯುಸ್ಸು, ಬಲ, ತೇಜಸ್ಸು ಉಂಟು ಮಾಡುವದು ಅಜೀರ್ಣ ಮಲಬದ್ಧತೆ, ಮೆದುಳಿನ ಬಲಹೀನತೆ, ಕೈಕಾಲು, ಸೊಂಟ ನೋವುಗಳಿಗೆ ಇದು ದಿವ್ಯ ಔಷಧವು ಈ ಸಾಲಂಮಿಸ್ರಿ ಎಂಬುವದು ಕಾಬೂಲ್‌ಕಂದಹಾರ ಪ್ರಾಂತ್ಯದಲ್ಲಿ ಬೆಳೆಯುತ್ತದೆ.

ಈ ಔಷಧದಿಂದ ಗುಣಹೊಂದಿರುವ ಅನೇಕ ಮಹನೀಯರು ತಳವಾಗಿಯೇ ಅನೇಕ ದೇಶಗಳಿಂದಲೂ ಆಫ್ರೀಕ, ಬರ್ಮ, ಪಿನಾಂಗ್, ಸಿಂಗಪೂರ್, ಸಿಲೋನ್, ಬೊಂಬಾಯಿ, ಕಲ್ಕತ್ತ, ಮದ್ರಾಸು ಮತ್ತು ಇಂಡಿಯಾದೇಶದಲ್ಲಿ ಎಲ್ಲಾ ಸ್ಥಳಗಳಿಂದಲೂ ನಮಗೆ ಯೋಗ್ಯತಾ ಪತ್ರಿಕೆಗಳನ್ನು ಕಳುಹಿಸಿರುವರು ಇವುಗಳ ನಕಲನ್ನು ಯಾರಾದರೂ ತರಿಸಿ ನೋಡಬಹುದು ಇವುಗಳು ಸುಳ್ಳು ಎಂದು ನಿರ್ಧರಿಸಿದವರಿಗೆ ಮೇಲ್ಕಂಡ ಬಹುಮಾನವು ಕೊಡಲ್ಪಡುತ್ತೆ. ನಾವು ಹಾಗೆ ಕೊಡದೆ ನಿರಾಕರಿಸಿದಲ್ಲಿ ಕೋರ್ಟು ಮೂಲಕ ಅದನ್ನು ಪಡೆಯಬಹುದು ೧ ಡಬ್ಬವನ್ನು ೧೫ ದಿನ ಸೇವಿಸಿದಲ್ಲಿ ಗುಣವು ಖಂಡಿತವಾಗಿ ತೋರಬಹುದು ೨ಯಾ ೩ ಡಬ್ಬಿಗಳು ಜನ್ಮಾಂತ್ರದವರೆಗೂ ಪೂರ್ಣವಾಗಿ ಗುಣವನ್ನುಂಟು ಮಾಡುವವು. ಹೆಸರು ವಿಳಾಸಗಳನ್ನು ವಿವರವಾಗಿ ಬರೆಯಬೇಕು. ಒಂದಾವರ್ತಿ ಅಜಮಾಯಿಸಿ ಮಾಡಿ ನೋಡಿದಲ್ಲಿ ಖಾತ್ರಿ ಉಂಟಾಗುತ್ತೆ.

ಕ್ರಯ ಡಬ್ಬಿ ೧ಕ್ಕೆ ರೂ. ३—೦—೦ ಭಾಂಗ ಟಾಜರ್ ೧೧ರಿಂದ ೩ ಡಬ್ಬಿಗಳಿಗೆ ೦—೮—೦ ಆಣೆ ಏಜಂಟರುಗಳು ಎಲ್ಲಾ ಸ್ಥಳಗಳಲ್ಲಿಯೂ ಅವಶ್ಯಕವಾಗಿರುತ್ತೆ ರೂಲ್ಸು ತರಿಸಿಕೊಳ್ಳಬಹುದು ಆರ್ಡರು ಕೊಡತಕ್ಕ ಕಾಲದಲ್ಲಿ ಈ ಪತ್ರಿಕೆಯ ಹೆಸರನ್ನು ಬರೆಯಬೇಕು.

ಟೆಲಿಗ್ರಾಫ್ ಅಡ್ರೆಸ್, ಮಿಶ್ರಿ, ಬೆಂಗಳೂರು ಸಿಟಿ,

ಡಿ. ಮುನ್ನಾಲಾಲ್, ಡಿಲ್ಲಿ, ಶಾಹಿನ್ ವೈದ್ಯರು, ಸಾಲಂಮಿಶ್ರಿ ಮುರಬ್ಬ ಡಿಪೋ,

ಬೆಂಗಳೂರು ಸಿಟಿ,

12—7

Printed & published by P. I. Belliappa, at "Kodagu" Press, Mercara for Kodagu" Ltd

E MERCARA

ಕೊಡಗು.

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವದು.

ಸಂಪಾದಕ—ಹಂಡ್ಯಂಡ ಐ. ಬೆಳ್ಯಪ್ಪ.

[ಸಂಪುಟ ೬] ಕೊಡಗು, ಸನ ೧೯೨೬ನೇ ಇಸವಿ ಆಗಸ್ಟ ತಾರೀಕು ೨೦ನೇ ಶುಕ್ರವಾರ [ಸಂಚಿಕೆ ೧೨

ಸ್ಪೆನ್ಸರ್ ಕಂಪೆನಿ

ಮಡಿಕೇರಿ ಮತ್ತು ಪೊನ್ನಂಪೇಟೆ.

ಬೆಲೆ ಸುಲಭ! ಈಗತಾನೇ ಬಂದಿರುತ್ತೆ!! ಜಾಗ್ರತೆ ಕೊಳ್ಳಿರಿ!!!

ಒಂಟಿ ಕೊಳವಿನ ಕೋವಿ ಕೋವಿ 34 ಇಂಚಿನ, 1ಕ್ಕೆ	ರೂ 50—8—0	2 ಯಾರ್ಡ ಮದ್ದು 1 ಪೌಂಡು ಡಬ್ಬಿಗೆ ರೂ.	2—4—0
„ „ 36 „	„ 52—8—0	„ ½ „ „	1—4—0
ಜೋಡಿ „ „	„ 115—0—0	ಕೇಪು 250ರ ಡಬ್ಬಿ 1ಕ್ಕೆ „	1—2—0
„ „ „	„ 135—0—0	ಮಳೆಗಾಲದ ಕೋಟು 1ಕ್ಕೆ „	25—0—0
„ ಕೇಪು ಕೋವಿ „	„ 70—0—0	„ ಬೂಟ್ಸ್ „ „	16—8—0
ಇನ್ನೂ ಅನೇಕ ತರದ ಕೋವಿಗಳು ಸಹ ಬಂದಿರುತ್ತೆ.		ಇಂಗ್ಲಿಷ್ ಕಲಸದ ಕೊಡೆ 1ಕ್ಕೆ	3—12—0
12ನೇ ನಂಬ್ರು ತೋಟೆ 100ಕ್ಕೆ	„ 12—4—0	ಥರ್ಮಸ್ ಫ್ಲಾಸ್ಕ (Thermos Flask) (24 ಗಂಟೆಯವರೆಗೆ ಕಾಫಿ ಇತ್ಯಾದಿ ಬಿಸಿಯಾಗಿರಿಸುವ ಕುಪ್ಪಿ 1ಕ್ಕೆ	1—8—0

ವೈಯನ್ಸ್ ಸ್ಟೋರ್ಸ್, ಹಾರ್ಡ್‌ವೇರ್, ಕತ್ತರಿ, ಗ್ಲಾಸ್‌ವೇರ್, ಲ್ಯಾಂಪ್ಸ್, ಫೊಟೊಗ್ರಫಿ ಸಾಮಾನು, ಸ್ಟೇಶನರಿ, ಫ್ಯಾನ್ಸಿಗೂಡ್ಸ್, ಫೋಟೋಗ್ರಾಫ್, ಟುಬ್ಯಾಕೊ, ಸಿಗರೇಟ್ಸ್, ಸಿಗಾರ್ಸ್, ಬೂಟ್ಸ್, ಗ್ರಾಮೊಫೋನ್, ಮೋಟಾರ್ ಎಣ್ಣೆ ಮತ್ತು ಸಾಹಿತ್ಯ. ಎಲೆಕ್ಟ್ರಿಕ್ ವಾಚಸ್ಸ್, ಗೇಮ್ಸ್ ಮತ್ತು ಟಾಯಿಸ್

ಈ ಮೇಲ್ಕಂಡ ಸಾಮಾನುಗಳು ಪ್ರತಿಯೊಂದೂ ಸಿಗುವವೆಂದು ತಿಳಿಸಲು ಸಂತೋಷಪಡುತ್ತೇವೆ. 52—31

ಸ್ಥಾಪಿತವಾದದ್ದು 1874. ಮೂಲಧನ 7 ಕೋಟಿ ರೂಪಾಯಿಗಳ

ಓರಿಯಂಟಲ್ ಗವರ್ನಮೆಂಟ್ ಸೆಕ್ಯೂರಿಟಿ ಲೈಫ್ ಅಶ್ಯೂರೆನ್ಸ್ ಕಂಪೆನಿ ಲಿಮಿಟೆಡ್, ಹೆಡ್ ಆಫೀಸು— ಬೊಂಬಾಯಿ.

1922—1924 ಈ ಮೂರು ವರ್ಷಗಳಲ್ಲಿ ಕಂಪೆನಿಯಲ್ಲಿ ನಡೆದ ಕೆಲಸದ ಫಲಿತಾಂಶಗಳು —

ಲಾಭ— ರೂ 51,00,000 (ಐವತ್ತೊಂದು ಲಕ್ಷ ರೂಪಾಯಿಗಳು) ಈ ಪೈಕಿ 45,94,80 ರೂಪಾಯಿಗಳನ್ನು ಲಾಭ ಸಹಿತ ವಿಮೆ ಮಾಡಿರುವವರ ವಿಮೆ ಹಣಕ್ಕೆ ಹೆಚ್ಚು ಬೋನಸ್ ಎನ್ನುವದಾಗಿ ಈ ಕೆಳಗೆ ಕಾಣಿಸಿರುವ ರೀತಿಯಲ್ಲಿ ಸೇರಿಸಿರುತ್ತದೆ

ಜೀವಮಾನಾವಧಿಯ ವಿಮೆದಾರರಿಗೆ ರೂ. 1000 ವಿಮೆ ಹಣಕ್ಕೆ

ಈ ಮೂರು ವರ್ಷಗಳಿಗೆ ರೂ. 67½.

ಕ್ಲುಪ್ತಕಾಲದ ವಿಮೆದಾರರಿಗೆ ರೂ. 1000 ವಿಮೆ ಹಣಕ್ಕೆ

ಈ ಮೂರು ವರ್ಷಗಳಿಗೆ ರೂ. 54.

ಈ ಕಂಪೆನಿಯಲ್ಲಿ ಕ್ರಮೇಣ ಹೆಚ್ಚುತ್ತಿರುವ ಜನಾನುರಾಗವು ಈ ಕೆಳಗೆ ಕೊಟ್ಟಿರುವ ಹೊಸ ಕೆಲಸದ ಪಟ್ಟಿಯಿಂದ ವ್ಯಕ್ತವಾಗುತ್ತದೆ.

1923ರಲ್ಲಿ—ರೂ	1,74,00,000
1924 „	2,37,00,000
1925 „	2,96,00,000

ಇನ್ನೂ ದಿನದಿನಕ್ಕೂ ಅಭಿವೃದ್ಧಿಯಾಗುತ್ತಲೇ ಇದೆ. ಜೀವವಿಮೆ ಪತ್ರದಲ್ಲಿ ಹಣವನ್ನು ಲಾಭಕರವಾಗಿ ಶೇಖರಿಸಲು ಸುಸಮಯ.

ಬೇಕಾದ ವಿಷಯಗಳನ್ನು ಈ ಕೆಳಗಿನ ವಿಳಾಸಕ್ಕೆ ಬರೆದು ತಿಳಿದುಕೊಳ್ಳಬಹುದು—

ಓರಿಯಂಟಲ್ ಬಿಲ್ಡಿಂಗ್ಸ್,
ಪೋಸ್ಟ್ ಬಾಕ್ಸ್ 56
ಬೆಂಗಳೂರು

ಎಸ್. ಆರ್. ಕೃಷ್ಣಸ್ವಾಮಿಯ್ಯರ್
ಬ್ರಾಂಚ್ ಸೆಕ್ರೆಟರಿ.

52—20

ಮನೋಲ್ಲಾಸಿನಿ ತೈಲ.

ಕಲೆನೋವು, ತಲೆ ತಿರುಗುವುದು, ತಲೆಹೊರೆ ಕಣ್ಣುರಿ, ಕಿವಿಯಿಂದ ಕೀವು ಸೋರುವದು ತಿಮಿರವಾತ, ಕಣ್ಣುನೋವು, ಅಪಸ್ಮಾರ ನಿದ್ರೆ ಬಾರದಿರುವದು, ನೆನಪು ಶಕ್ತಿ ಕುಂದಿಹೋಗುವದು ಇವುಗಳನ್ನೆಲ್ಲ ಖಂಡಿತ ಗುಣಮಾಡುತ್ತದೆ ಉದುರುವ ಕೂದಲನ್ನು ನಿಲ್ಲಿಸಿ ಗಿಡ್ಡಗಿರುವ ಕೂದಲನ್ನು ಬೆಳೆಯಿಸಿ ಕೂದಲಿಗೆ ಸೌಂದರ್ಯವನ್ನೂ ಹೊಳಪನ್ನೂ ಕೊಟ್ಟು ಅಕಾಲಕ್ಕೆ ಹಣ್ಣಾಗುವ ಕೂದಲನ್ನು ತಡೆದು ಕೂದಲು ಇಲ್ಲದ ಸ್ಥಳದಲ್ಲಿ ಹೊಸ ಕೂದಲನ್ನು ಹುಟ್ಟಿಸುತ್ತದೆ ಚಿಕ್ಕ ಸೀಸೆಗೆ ರೂ 1, 3 ಸೀಸೆಗೆ 2—10—0, ಒಂದು ದೊಡ್ಡ ಸೀಸೆಗೆ ರೂ 2, 3 ಸೀಸೆಗಳಿಗೆ 5—8—0

ಚಂದನಾಸವ.— ಇದು ಪ್ರಮೇಹ ಮೂತ್ರಕೃಚ್ಛ್ರ, ಮೂತ್ರ ಹನಿಹನಿಯಾಗಿ ಹೋಗುವದು, ಮೂತ್ರಕೋಶದ ಉರಿ, ಮೂತ್ರಪಿಂಡಗಳ ಉರಿ ಮೂತ್ರನಾಳದಲ್ಲಿ ಹುಣ್ಣು, ಮೂತ್ರ ಹೊಯ್ಯುವಾಗ ಉರಿಯುವದು, ಮೂತ್ರನಾಳದಿಂದ ಕೀವು ಬರುವದು, ಮೂತ್ರದಲ್ಲಿ ಧಾತು ಹೋಗುವದು, ಆಗಾಗ್ಗೆ ಮೂತ್ರ ಬರುವದು, ಮೂತ್ರ ತಡೆಯಲಿಕ್ಕೆ ಸಾಮರ್ಥ್ಯವಿಲ್ಲದಿರುವದು ಸ್ವಪ್ನದಲ್ಲಿ ಉರಿ, ಮಾಂಸದಲ್ಲಿ, ಸ್ವಪ್ನಾವಸ್ಥೆ, ಮೂತ್ರನಾಳದಲ್ಲಿ ಬರುವ ನೋವು ಇವುಗಳಿಗೆ ಪರಮ ಔಷಧಿ ಗಂಡಸರಿಗೂ ಹೆಂಗಸರಿಗೂ ಇದು ಅತ್ಯುತ್ತಮ ಚಿಕ್ಕ ಬಾಟ್ಲಿ 1, 3, 6ಕ್ಕೆ ರೂ 1—4—0, 3—8—0, 6—12—0.

ರೋಮನಾಶಿನಿ — ಈ ಪುಡಿಯನ್ನು ನೀರಲ್ಲಿ ಕಲಸಿ ಮೈಯಲ್ಲಿ ರೋಮವಿರುವ ಭಾಗಕ್ಕೆ ಹಚ್ಚಲು ರೋಮವು ಉದುರಿ ಬೀಳುವದು. ಡಬ್ಬಿ ೧ಕ್ಕೆ 6 ಆಣೆ, 3 ಡಬ್ಬಿಗಳಿಗೆ 1 ಡಜನಿಗೆ 3—8—0

ಕಟುಕಷಾಯ ಮಲೇರಿಯಾ ಜ್ವರಕ್ಕೆ.— ಇದು ಇಂಜೆಕ್ಷನ್ ಮತ್ತು ಕ್ವಿನೈನು ಸೇವಿಸಿದರೂ ಗುಣವಾಗದಿರುವ ಮಲೇರಿಯಾ, ದಿನಬಿಟ್ಟು ಜ್ವರ, 3—4 ದಿವಸಕ್ಕೊಂದುಸಾರಿ ಬರುವ ಜ್ವರ, ನಡುಗಿ ಬರುವ ಜ್ವರ, ಮುಕ್ಕು ಜ್ವರಗಳು ದೋಷದಿಂದ ಬರುವ ಜ್ವರಗಳಿಗೆ ಖಾತ್ರಿ ಗುಣವಾದ ಔಷಧ ಸೀಸೆ 1ಕ್ಕೆ ರೂ 1—8—0, 3ಕ್ಕೆ ರೂ. 4—0—0, 6ಕ್ಕೆ ರೂ 7—0—0.

ಸ್ಯಾಂಪಲ್ ಉಚಿತವಾಗಿ ತರಿಸಿ ನೋಡಿರಿ

ವಿಳಾಸ—ಮನೋಲ್ಲಾಸಿನಿ ಕಂಪೆನಿ,
9 ಮಂಗಳೂರು, ಕೆಂಕನಾಡಿ.

52—35

ಸತ್ಯಮೇವ ಜಯತೇ.

(ಗುಣವಾಗದಿದ್ದರೆ ಹಣ ವಾಪಸ)

ಧಾತುಪೌಷ್ಟಿಕ ಕಾಮೋತ್ತೇಜಕ, ಇಂದ್ರಿಯಸ್ತಂಭಕವಾದ

ಮದನೋದ್ಭವ ಗುಳಿಗೆ.

ಜನನೇಂದ್ರಿಯದ ಶಿಥಿಲತೆ ನಿರ್ಬಲತೆ ನಪುಂಸಕತ್ವ ಕ್ಷೀಣತೆ, ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತು ಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ ಇಂದ್ರಿಯಸ್ತಂಭಕ, ಗರ್ಮಿ, (ಬಾಕಿ) ಗುಪ್ತಪ್ರದೇಶದ ಮೇಲೆ ಹುಟ್ಟುವ ಎಲ್ಲಾ ತರದ ಬಕ್ಕೆಗಳು, ಹುಣ್ಣುಗಳು ಪಿತ್ತದ ಬಾಧೆಗಳು, ಕಟಿಶೂಲೆ ವಾತರೋಗವು ಮುಂತಾದವು ಅತ್ಯಲ್ಪ ಗುಣವಾಗಿ ಶರೀರಕ್ಕೆ ನಿರೋಗತ್ವವೂ ಕಾಂತಿಯೂ ರಸಿಕತೆಕ್ಕೆ ಸಂಪೂರ್ಣ ಶಕ್ತಿಯೂ ಉಂಟಾಗುತ್ತದೆ ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗುತ್ತವೆ ಕಿಮ್ಮತ್ತು ೬೦ ಗುಳಿಗೆಗಳಿಗೆ ೪ ರೂಪಾಯಿ ಇವನ್ನು ಸೇವಿಸುವಾಗ್ಗೆ ನಪುಂಸಕತ್ವಾರಿ ತೈಲವನ್ನು ಉಪಯೋಗಿಸಿದರೆ ಉತ್ತಮ, ಕಿಮ್ಮತ್ತು ಬಾಟ್ಲಿ ೧ಕ್ಕೆ ರೂ ೨—೧೨—೦.

ಪ್ರಮೇಹನಿವಾರಣಿ—ಇದರ ಸೇವನೆಯಿಂದ ಮೂತ್ರಸ್ಥಾನದಿಂದ ಕೆಂಪು ಹಳದಿಯಂತೆ ಹೋಗತಕ್ಕ ಕೀವು, ಉರಿ, ವಗೈರೆ ಆರಂಭಾತ್ರಿಯಿಂದ ಗುಣವಾಗುವದು ಕಿಮ್ಮತ್ತು ಬಾಟ್ಲಿಗಕ್ಕೆ ರೂ ೩—೮—೦ ಟಪಾಲ ಬೇರೆ ಅನುಪಾನಪತ್ರಿಕೆ ಔಷಧದ ಸಂಗಡ

ವಿಂದಾಣ ಸ್ಟ್ಯಾಂಪು ಕಳುಹಿಸಿದರೆ ಕ್ಯಾಟಲಾಗವು

ವಿಳಾಸ,—

ವೈದ್ಯ ಜಿ. ಎಲ್ ಜೋಶಿ ಮತು ಕಂಪನಿ.

31 ನಂ 6. ಪೋಸ್ಟ ಬನವಾಸಿ, ಉತ್ತರ ಕಾನಡಾ

ARMS & AMMUNITION MART.

Mahomedally-Noorbhoy.

321 Abdul Rehman Street, near Crawford Market, BOMBAY. 3

Telegraphic Address—"SHOOTER" Bombay.

[52—51] Please write for Reduced nett prices list for 1926

ಡಿಸ್ಟ್ರಿಕ್ಟ್‌ಬೋರ್ಡ್ ಮೀಟಿಂಗ್.

ತಾ 14—8—26ರಲ್ಲಿ ನಡೆದ ಡಿಸ್ಟ್ರಿಕ್ಟ್‌ಬೋರ್ಡ್ ಮೀಟಿಂಗಿನ ತೀರ್ಮಾನಗಳನ್ನು ಇನ್ನೊಂದು ಕಡೆ ಕೊಟ್ಟಿರುತ್ತೇವೆ. ಮೀಟಿಂಗಿನಲ್ಲಿ ನಡೆದ ಸಂಗತಿಗಳಿಗಿಂತ ನಡೆಯದೆ ಇದ್ದ ಸಂಗತಿಗಾಗಿ ಹೆಚ್ಚು ವ್ಯಸನಪಡಬೇಕಾಗಿದೆ ಕಳೆದ ತಾ. 24ರಲ್ಲಿ ನಡೆದ ಡಿಸ್ಟ್ರಿಕ್ಟ್‌ಬೋರ್ಡ್ ಮೀಟಿಂಗಿನಲ್ಲಿ ಡಿಸ್ಟ್ರಿಕ್ಟ್‌ಬೋರ್ಡಿನ ಚುನಾವಣೆಯ ರೂಲ್ಸ್‌ಗಳನ್ನು ಚರ್ಚಿಸಲಾಯಿತು ರೂಲ್ಸ್‌ಗಳಲ್ಲಿ ಬದಲಾವಣೆಯನ್ನು ತರುವ ಸೂಚನೆಯನ್ನು ಒಬ್ಬ ಮೆಂಬರು ಮಾತ್ರ ಬರೆದು ಕಳುಹಿಸಿದ್ದರು ಆದರೂ ಡಿ. ಬೋರ್ಡಿನ ಅಧ್ಯಕ್ಷರಾದ ಕಮೀಷನರು ಮೀಟಿಂಗಿನಲ್ಲಿ ಸಕ್ಷನ್ ವಾರು ಚರ್ಚಿಸುತ್ತಾ ಹೋದಂತೆ ಬದಲಾವಣೆಯ ಸೂಚನೆಗಳನ್ನು ಹೇಳಬಹುದೆಂದು ಅಂದರು. ರೂಲ್ ಚರ್ಚೆಯಾದ ಸ್ವಲ್ಪ ಹೊತ್ತಿನಲ್ಲಿಯೇ 12ನೇ ಸೆಕ್ಷನ್ ಮೇಲೆ ಒದಲಾವಣೆ ಬೇರೆ ಒಬ್ಬ ಮೆಂಬರು ಸೂಚಿಸಿದರು ... ಮೆಂಬರು 11ನೇ ಸೆಕ್ಷನ್ ಮೇಲೆ ತನ್ನದೊಂದು ಬದಲಾವಣೆಯ ಸೂಚನೆ ಇದೆಯೆಂತ ಹೇಳಿದರು. 11ನೇ ಸೆಕ್ಷನ್ ದಾಟಿ ಮುಂದೆ ಬಂದದ್ದರಿಂದ ಆ ಸೆಕ್ಷನಿನ ಮೇಲೆ ಬದಲಾವಣೆಯ ಸೂಚನೆಯನ್ನು ಅಂಗೀಕರಿಸಲಿಕ್ಕೆ ಆಗುವದಿಲ್ಲವೆಂತ ಅಧ್ಯಕ್ಷರು ತೀರ್ಮಾನಿಸಿದರು. 12ನೇ ಸೆಕ್ಷನಿನ ಬದಲಾವಣೆ ಚರ್ಚೆಯಾಗಿ, ನಂತರದ ಬೇರೆ ಸೆಕ್ಷನ್‌ಗಳ ಮೇಲೆ ಬದಲಾವಣೆಗಳು ಇದೆಯೋ ಎಂತ ಅಧ್ಯಕ್ಷರು ಕೇಳಿ ಬದಲಾವಣೆ ಸೂಚನೆಗಳು ಮುಂದೆ ಬಾರದ್ದರಿಂದ ರೂಲ್ಸ್‌ಗಳನ್ನು ಚೀಫ್ ಕಮಿಶನರ ಮಂಜೂರಾತಿಗೆ ಕಳುಹಿಸುವದಾಗಿ ಅಧ್ಯಕ್ಷರು ಹೇಳಿದರು. ಆಗ 11ನೇ ಸೆಕ್ಷನ್ ಮೇಲೆ ಬದಲಾವಣೆ ಇದೆಯೆಂತ ಹೇಳಿದ್ದ ಮೆಂಬರು ರೂಲ್ಸ್‌ಗಳ ಮೇಲೆ ಚರ್ಚೆ ಮಾಡಿದ್ದು ಸಾಲದಾದದ್ದರಿಂದ ರೂಲ್ಸ್‌ಗಳ ಚರ್ಚೆ ಮುಂದರಿಸಬೇಕೆಂತ ರಠಾವು ತಂದರು. ಠರಾವಿನ ಮೇಲೆ ಚರ್ಚೆ ನಡೆದು ಠರಾವನ್ನು ಅಧ್ಯಕ್ಷರೇ ಓಟಿಗ ಹಾಕಿ ಅದು ಬಹುಮತದಿಂದ ಪಾಸಾಯಿತು. ಆಗ ಅಧ್ಯಕ್ಷರು, ರೂಲ್ಸ್‌ಗಳನ್ನು ಚರ್ಚಿಸಲು ಬೇಕಾದಷ್ಟು ಅವಕಾಶವಿತ್ತು, ಅವುಗಳನ್ನು ಬೇಗನೆ ಮಂಜೂರು ಮಾಡಬೇಕಾಗಿರುವದರಿಂದ ಅವುಗಳನ್ನು ಚರ್ಚಿಸಲು ಪುನಃ ಅವಕಾಶಕೊಡಲಾಗುವದಿಲ್ಲವೆಂತ ಡಿಸ್ಟ್ರಿಕ್ಟ್‌ಬೋರ್ಡಿನ ಬಹುಮತದ ತೀರ್ಮಾನಕ್ಕೆ ವಿರೋಧವಾಗಿ ಅಭಿಪ್ರಾಯಕೊಟ್ಟರು.

ಆದರೆ ತಾ. 14—8—26ರ ಮೀಟಿಂಗಿಗೆ ನೋಟೀಸ್ ಕೊಟ್ಟದ್ದರಲ್ಲಿ ರೂಲ್ಸ್‌ಗಳ ಮೇಲೆ ಮೊದಲಿನ ಮೀಟಿಂಗಿನಲ್ಲಿ ನಡೆದಲ್ಲಿಂದ ಮುಂದಕ್ಕೆ ಚರ್ಚೆ ನಡೆಯುತ್ತದೆಂತ ಬರೆದಿತ್ತು. ಇದನ್ನು ನೋಡಿ ಡಿಸ್ಟ್ರಿಕ್ಟ್‌ಬೋರ್ಡ್ ಮೆಂಬರುಗಳ ಬಹುಮತದ ಅಭಿಪ್ರಾಯಕ್ಕೆ ಅಧ್ಯಕ್ಷರು ಬೆಲೆಕೊಟ್ಟರು ಎಂತ ಸಂತೋಷಪಟ್ಟು ಕೆಲವು ಮೆಂಬರುಗಳು 11ನೇ ಸೆಕ್ಷನಿನ ಮೇಲೆ ಸೂಚನೆಗಳನ್ನು ಕಳುಹಿಸಿದರು. ಆದರೆ ಬೆಂಗಳೂರಿನಿಂದ ತಾ 1—8—26ರಲ್ಲೇ ಹೊರಟ ಗಜೆಟಿನಲ್ಲಿ ಡಿ ಬೋ. ಚುನಾವಣೆ ರೂಲ್ಸ್‌ಗಳನ್ನು ಚೀಫ್ ಕಮಿಷನರವರು ಮಂಜೂರು ಮಾಡಿ ಪ್ರಕಟಿಸಿದ್ದು ಕಂಡುಬಂತು. ತಾ 14ರ ಮೀಟಿಂಗಿನಲ್ಲಿ, ರೂಲ್ಸ್‌ಗಳು ಈ ಮೊದಲೇ ಮಂಜೂರಾಗಿ ಹೋಗಿರುವದರಿಂದ ಇನ್ನು ರೂಲ್ಸ್‌ಗಳ ಮೇಲೆ ಚರ್ಚೆಮಾಡಿ ಪ್ರಯೋಜನವಿಲ್ಲವೆಂತ ಅಧ್ಯಕ್ಷರು ಹೇಳಿದರು. ಕಳೆದ ಮೀಟಿಂಗಿನಲ್ಲಿ ಬಹುಮತದಿಂದ ತೀರ್ಮಾನವಾದ ರೂಲ್ಸ್‌ಗಳ ಮೇಲೆ ಚರ್ಚೆಯನ್ನು ಮುಂದರಿಸಿ[illegible] ಠರಾವಿನ ಗತಿಯೇನಾಯಿತೆಂತ ಒಬ್ಬ ಮೆಂಬರು ಕೇಳಿದರು. ಚರ್ಚೆಗೆ ಬೇಕಾದಷ್ಟು ಅವಕಾಶಕೊಟ್ಟಿದ್ದದರಿಂದ ಮುಂದರಿಸ ಇಡಲಿಲ್ಲವೆಂತ ಅಧ್ಯಕ್ಷರು ಹೇಳಿಬಿಟ್ಟರು. ಈ ರೀತಿ ಬೋರ್ಡಿನ ಹೆಚ್ಚಿನ ಮೆಂಬರುಗಳ ಅಭಿಪ್ರಾಯಕ್ಕೆ ವಿರೋಧವಾಗಿ ಅಧ್ಯಕ್ಷರು ತೀರ್ಮಾನಿಸಿದ್ದು ಯುಕ್ತವಲ್ಲ. ಅಧ್ಯಕ್ಷರಿಗೆ ಇಂಥಾ ಹಕ್ಕು ಸಹ ಇಲ್ಲ. ಬೋರ್ಡಿನ ತೀರ್ಮಾನವನ್ನು ನಿರಾಕರಿಸಲು ಚೀಫ್‌ಕಮಿಷನರಿಗೆ ಅವಕಾಶವಿದ್ದರೂ ಚೀಫ್‌ಕಮಿಷನರವರಿಗೂ ಸಹ ಇಂಥಾ ಹಕ್ಕು ಇರಬಾರದೆಂತ ಹೋರಾಡಬೇಕಾದ ಈ ಕಾಲದಲ್ಲಿ ಡಿ. ಬೋರ್ಡ್ ಪ್ರೆಸಿಡೆಂಟರು ಬೋರ್ಡಿನ ತೀರ್ಮಾನಕ್ಕೆ ವಿರೋಧವಾಗಿ ನಡೆದದ್ದರಿಂದ ಬೋರ್ಡಿಗೆ ತಿರಸ್ಕಾರ ಮಾಡಿದಂತೆಯೇ ಆಯಿತು ಇಂಥಾ ಅಕ್ರಮವು ಇನ್ನು ಮುಂದೆ ನಡೆಯದಂತೆ ನೋಡಿಕೊಳ್ಳುವದು ಬೋರ್ಡಿನ ಮೆಂಬರುಗಳ ಮತ್ತು ದೇಶದ ಜನರ ಕರ್ತವ್ಯವಾಗಿದೆ.

11ನೇ ಸೆಕ್ಷನ್ ಮೇಲೆ ಇದ್ದ ಸೂಚನೆಗಳು ಮಹತ್ವದವು ಆಗಿದ್ದವು. ಓಟ್‌ಕೊಡುವವರ ಅರ್ಹತೆಯನ್ನು ಕಡಿಮೆ ದರ್ಜೆಗೆ ಇಳಿಸಬೇಕೆಂಬುದೇ ಮುಖ್ಯವಾಗಿತ್ತು. ಕೌನ್ಸಿಲ್ ಚುನಾವಣೆಗೆ ಇಟ್ಟಂತೆ ಸಾಗಿನ ಕಂದಾಯ 10ರೂ. ಜಮ್ಮದ ಕಂದಾಯ 5ರೂ. ಕೊಡುವವರಿಗೆ ಮಾತ್ರ ಓಟ್ ಇಟ್ಟದ್ದು ಅತೃಪ್ತಿಕರ. ಡಿಸ್ಟ್ರಿಕ್ಟ್‌ಬೋರ್ಡಿಗೆ ಕನಿಷ್ಠ ಕಂದಾಯ 10ರೂಪಾಯಿ ಕೊಟ್ಟರೆ ಮಾತ್ರ ಓಟಂತೆ! 10ರೂ ಸಾಗಿನ ಕಂದಾಯವೆಂದರೆ ಒಂದು ಕಾಲು ರೂಪಾಯಿ ಡಿಸ್ಟ್ರಿಕ್ಟ್‌ಬೋರ್ಡ್ ಸೆಸ್‌ಕೊಡುವವರಿಗೆ ಓಟ್ ಇದೆಯೆಂತಾಯಿತು ಹಾಗಾದರೆ ಡಿಸ್ಟ್ರಿಕ್ಟ್‌ಬೋರ್ಡಿಗೆ ಒಂದುಕಾಲು ರೂಪಾಯಿ ಕನಿಷ್ಠ ಕಂದಾಯಕೊಡುವವರಿಗೂ ಓಟ್ ಇರಬೇಡವೇ? ಇವರು ಮಾತ್ರ 10ರೂ. ಕನಿಷ್ಠಕಂದಾಯ ಕೊಡುವವರಾಗಬೇಕಂತೆ. ಅಲ್ಲದೆ ಮುನಿಸಿಪಲ್ ಕಂದಾಯಕೊಡುವವರಿಗೂ ಓಟಂತೆ! ಮುನಿಸಿಪಲ್ ಸರಹದ್ದಿನೊಳಗೆ ಇರುವವರಿಗೆ ಡಿ. ಬೋರ್ಡಿನ ಆಡಳಿತದಲ್ಲಿ ಏನೂ ಹಕ್ಕಿಲ್ಲ. ಚುನಾಯಿತ ಮೆಂಬರುಗಳ ಸಂಖ್ಯೆ ಎರಡಾದರೂ ಹೆಚ್ಚಬೇಕೆಂತ ಆದ ತೀರ್ಮಾನದ ಪ್ರಕಾರ ಈ ಎರಡು ಮೆಂಬರುಗಳನ್ನು ಎರಡು ಮುನಿಸಿಪಾಲಿಟಿಗೆ ಕೊಡಬೇಕೆಂತ ತಂದ ಠರಾವಿಗೆ ಅಧ್ಯಕ್ಷರು ಸಹ ಮುನಿಸಿಪಾಲಿಟಿಯವರಿಗೆ ಡಿ. ಬೋ. ಆಡಳಿತದ ಮೇಲೆ ಹಕ್ಕುಕೊಡಲು ಕಾರಣವಿಲ್ಲವೆಂತ ವಾದಿಸಿ ಠರಾವು ನಾಪಾಸಾಯಿತು. ಅಂಥಾದ್ದರಲ್ಲಿ ಮುನಿಸಿಪಲ್ ಕಂದಾಯ ಕೊಡುವವರಿಗೆ ಡಿ. ಬೋರ್ಡಿಗೆ ಓಟ್ ಇಟ್ಟದ್ದು ಯುಕ್ತವಲ್ಲ. ಈ ರೀತಿ 11ನೇ ರೂಲ್ ಮೇರೆ ಮುಖ್ಯವಾದ ಸೂಚನೆಗಳಿದ್ದರೂ ಸಹ ಆ ಸೆಕ್ಷನಿನ ಚರ್ಚೆಗೆ ಅವಕಾಶಕೊಡಬೇಕೆಂತ ಕೇಳಿದರೂ ಬಿಡದೆ ಇದ್ದದ್ದಕ್ಕೆ ಎಷ್ಟು ವ್ಯಸನಪಟ್ಟರೂ ಸಾಲದು. 12ನೇ ಸೆಕ್ಷನಿನ ಮೇಲೆ ಸೂಚನೆ ತರುವ ಮುಂಚೆ 11ನೇ ಸೆಕ್ಷನಿನ ಮೇಲೆ ಸೂಚನೆ ತರಬೇಕಿತ್ತೆಂತಲೇ ಹೇಳೋಣ. ಆದರೂ 12ನೇ ಸೆಕ್ಷನಿನ ಚರ್ಚೆ ನಡೆದನಂತರ 11 ಸೆಕ್ಷನನ್ನು ಚರ್ಚೆಗೆ ತೆಗೆದುಕೊಳ್ಳಲಿಕ್ಕೆ ಅಧ್ಯಕ್ಷರಿಗೆ ಪೂರ್ತಿ ಸ್ವತಂತ್ರವಿತ್ತು. ಈ ಹಕ್ಕನ್ನು ಉಪಯೋಗಿಸದೆ ಇದ್ದು ರೂಲ್‌ಗಳ ಮೇಲೆ ಕೊಡಬಹುದಾಗಿದ್ದ ಒಳ್ಳೇ ಅಭಿಪ್ರಾಯಗಳಿಗೆ ಅವಕಾಶಕೊಡಲೇ ಇಲ್ಲ.

ರೂಲ್‌ಗಳ ಚರ್ಚೆಯು ಮೊದಲಿನ ಮೀಟಿಂಗಿನಲ್ಲೇ ತೀರಿರುವಾಗ ಪುನಃ ಆ ಚರ್ಚೆಯನ್ನು ಮುಂದರಿಸಲಾಗುತ್ತದೆಂತ ಎರಡನೇ ಮೀಟಿಂಗಿನ ನೋಟೀಸಿನಲ್ಲಿ ಕಾಣಿಸಿದ್ದು ಯಾಕೆ? ಹಾಗೆ ಚರ್ಚೆ ಇನ್ನೂ ಇದೆಯೆಂತ ಚೀಫ್ ಕಮೀಶನರಿಗೆ ಅಧ್ಯಕ್ಷರು ಯಾಕೆ ತಿಳಿಸಲಿಲ್ಲ? ಈ ವಿಷಯದಲ್ಲಿ ಅಧ್ಯಕ್ಷರು ಮೀಟಿಂಗಿನಲ್ಲಿ ಕೊಟ್ಟ ವಿವರಣೆಯು ಯಾರಿಗೂ ತೃಪ್ತಿಯಾಗುವಂತೆ ಇರಲಿಲ್ಲ

ಚುನಾಯಿತ ಮೆಂಬರುಗಳ ಸಂಖ್ಯೆಯನ್ನು ಹೆಚ್ಚಿಸಬೇಕೆಂತ ಬೋರ್ಡಿನವರು ಮಾಡಿದ ತೀರ್ಮಾನವನ್ನು ಚೀಫ್‌ಕಮಿಶನರು ಅಂಗೀಕರಿಸಲಿಲ್ಲವೆಂಬದೂ ಬಹಳ ಅತೃಪ್ತಿಕರ. ಜನರ ಪ್ರತಿನಿಧಿಗಳ ತೀರ್ಮಾನವನ್ನು ಸ್ಥಳೀಯ ಸ್ವರಾಜ್ಯದ ಕೆಲಸದಲ್ಲೂ ಸಹ ಅಂಗೀಕರಿಸುವದಿಲ್ಲವೆಂತಾದರೆ ಸರಕಾರಿ ಆಡಳಿತದಲ್ಲಿ ಪ್ರಜಾಪ್ರತಿನಿಧಿಗಳ ಅಭಿಪ್ರಾಯವನ್ನು ನಿರಾತಂಕವಾಗಿ ಅಂಗೀಕರಿಸಲ್ಪಡುವ ಕಾಲ ಬಹುದೂರವಿದೆಯೆಂತ ಜನರು ನಿರಾಶರಾಗಬೇಕಾಗುತ್ತದೆ.

ಒಡ್ಜೆಟ್ಟಿನ ಮೇಲೆ ನಡೆದ ಚರ್ಚೆಯಲ್ಲಿ ಕೆಲವು ಉಪಯೋಗಕರವಾದ ಠರಾವುಗಳು ಪಾಸಾದವು. ಪಾಸಾದ ಠರಾವುಗಳನ್ನು ಬೇರೆ ಕಡೆ ಕೊಟ್ಟಿರುತ್ತೇವೆ. ಆಸ್ಪತ್ರೆಗಳಲ್ಲಿ ಬೇಕಾದಷ್ಟು ಔಷಧಿ ಮತ್ತು ಉಪಚಾರ ದೊರೆಯುತ್ತಿಲ್ಲವೆಂಬ ದೂರುಗಳು ಅನೇಕ ಕಡೆಯಿಂದ ಕೇಳಬಂದಿದೆ. ಔಷಧಿ ಖರ್ಚಿಗೆ 2000 ರೂ. ಹೆಚ್ಚಿಸಿಕೊಟ್ಟರೆ ಸಾಕೆಂತ ಡಾಕ್ಟರು ಹೇಳಿದ್ದರಿಂದಲೇ ಔಷಧಿಗೆ ಇಟ್ಟಹಣ ಸಾಲವೆಂಬದು ಒಪ್ಪಿದಂತಾಯಿತು. ಸೋಮವಾರಪೇಟೆಯಲ್ಲಿ ಇಟ್ಟ ಆಸ್ಪತ್ರೆಯನ್ನು ಬಹಳ ಖಾಯಿಲೆಯ ಸಮಯದಲ್ಲಿಯಾದರೂ ಅಲ್ಲಿ ಖಾಯಂ ಮಾಡಬೇಕಾದರೆ ಹೆಚ್ಚಿಗೆ ಔಷಧಿ ಬೇಡವೇ? ತಿರುಗುತ್ತಿರುವ ಡಾಕ್ಟರುಗಳನ್ನು ನೇಮಿಸಬೇಕೆಂದು ಮೊದಲೇ ಆದ ತೀರ್ಮಾನದ ಮೇರೆ ಡಾಕ್ಟರುಗಳನ್ನು ಇಟ್ಟರೆ ಹೆಚ್ಚಿಗೆ ಔಷಧಿ ಬೇಡವೆ? ದೇಶದಲ್ಲಿ ಖಾಯಿಲೆ ಹೆಚ್ಚುತ್ತಿರುವಾಗ ಔಷಧಿಗೆ ಹೆಚ್ಚು ಖರ್ಚಾಗಬೇಕೆಂಬದಕ್ಕೆ ಸರಕಾರಿ ಅಧಿಕಾರಿಗಳು ವಿರೋಧಿಸಿದ್ದು ಎಂದೂ ಸರಿಯಲ್ಲ.

ಡಿ. ಬೋರ್ಡಿನಲ್ಲಿರುವ ಉಳ್ಳಿದ ಹಣದಲ್ಲಿ ವಿರಾಜಪೇಟೆಯಿಂದ ಅರಮನೆ ಬಾಣೆಗೆ ಹೋಗುವ ರಸ್ತೆಗೆ ಅಡ್ಡವಾಗಿ ಹರಿಯುವ ಹೊಳೆಗೆ ... ನಲ್ಲಿ ಸೇತುವೆ ಕಟ್ಟಲಿಕ್ಕೆ 5000 ರೂ. ಮಂಜೂರಾದದ್ದು ತೃಪ್ತಿಕರ. ಹಣ ಮಂಜೂರಾದ್ದರಿಂದ ಈ ಸೇತುವೆಯನ್ನು ಇಂಜಿನೀಯರಿಂಗ್ ಇಲಾಖೆಯವರು ಕಟ್ಟಿಸಲೇಬೇಕೆಂತ ಬೋರ್ಡಿನ ಅಭಿಪ್ರಾಯ ಕೊಟ್ಟಂತಾಯಿತು.

ಮಡಿಕೇರಿಯಲ್ಲಿ ರೇಸ್‌ಕೋರ್ಸ್ ಮತ್ತು ಗೋಲ್ಫ್ ಗ್ರಾಂಡ್ ಕಡೆಗೆ ಹೋಗುವ ರಸ್ತೆಯ ಸೇತುವೆಗೂ, ರಸ್ತೆಗೂ ಇಟ್ಟ 3000 ರೂ. ಖರ್ಚುಮಾಡಬಾರದೆಂತ ತೀರ್ಮಾನವಾದದ್ದು ಯುಕ್ತವೇ. ಈ ರೋಡಿನಿಂದ ಗ್ರಾಮವಾಸಿಗಳಿಗೆ ಏನೂ ಪ್ರಯೋಜನವಿಲ್ಲ. ಈ ರಸ್ತೆಯು ಸರಕಾರಿ ಕಟ್ಟಡಗಳಿಗೂ ಮಿಲಿಟರಿ ರೈಫಲ್ ರೇಂಜಿಗೂ ಮತ್ತು ಗೋಲ್ಫ್ ಗ್ರೌಂಡಿಗೂ ಹೋಗಲಿಕ್ಕಿರುವ ರಸ್ತೆಯಾದ್ದರಿಂದ ಉಪಯೋಗಕರವಾದ ರಸ್ತೆಯೆಂತ ಇಂಜಿನೀಯರು ಹೇಳಿದರೇ ಹೊರತು ಡಿಸ್ಟ್ರಿಕ್ಟ್‌ಬೋರ್ಡಿಗೆ ಕಂದಾಯಕೊಡುವ ಪ್ರಜೆಗಳಿಗೆ ಉಪಯೋಗವಾಗುತ್ತದೆಂತ ಅವರು ವಾದಿಸಲಿಲ್ಲ. ಸರಕಾರಿ ಕಟ್ಟಡಗಳಿಗೆ ಉಪಯೋಗವಾಗುವ ರಸ್ತೆಯಾದರೆ ಸರಕಾರದ ಹಣ ಖರ್ಚುಮಾಡಬೇಕೇ ಹೊರತು ಡಿ. ಬೋರ್ಡಿನ ಹಣ ಖರ್ಚುಮಾಡಬಾರದೆಂತ ತೀರ್ಮಾನಿಸಿದ್ದು ನ್ಯಾಯವಾಗಿದೆ

ದೊಡ್ಡಿಗಳ ಖರ್ಚಿಗೆ ಇಟ್ಟ ಹಣದಿಂದ 10 ರೂ. ಕಮ್ಮಿ ಮಾಡಬೇಕೆಂತ ತಂದ ಠರಾವು ಪಾಸ್ ಮಾಡಿ, ಡಿ. ಬೋ. ರೂಲ್ಸ್ ಮೇರೆ ರಸ್ತೆಗೆ ದನ ಹೋದದಕ್ಕೆ ಪ್ರಾಸಿಕ್ಯೂಶನ್ ಮಾಡುತ್ತಿರುವದರಿಂದ ಜನರಿಗೆ ತುಂಬಾ ಅತೃಪ್ತಿಯಿದೆಯೆಂದು ಅಧಿಕಾರಿಗಳಿಗೆ ತಿಳಿಸಿದ್ದಾಯಿತು ಈಚೆಗೆ ಹೆಚ್ಚು ಪ್ರಾಸಿಕ್ಯೂಶನ್ ಮಾಡುತ್ತಿಲ್ಲವೆಂತ ಹೇಳಿ ಈ ಠರಾವಿಗೆ ಸರಕಾರಿ ಮೆಂಬರೊಬ್ಬರು ವಿರೋಧಿಸಿದರು. ಒಂದೇ ಪ್ರಾಸಿಕ್ಯೂಶನ್ ಆದರೂ ಆಗಬಾರದೆಂತ ದೇಶದ ಅಭಿಪ್ರಾಯವಾಗಿದೆ. ಮೋಟಾರ್‌ಕಾರ್‌ಗಳ ಓಡಿಯಾಟಕ್ಕೆ ಅಡ್ಡಿಯಾಗುತ್ತದೆಂತ ಈ ರೂಲನ್ನು ಮಾಡಿಕೊಂಡದ್ದು ಮತ್ತು ಜಾರಿಮಾಡುತ್ತಿರುವದಾಗಿದೆ. ಮೋಟಾರ್‌ಕಾರ್‌ಗಳನ್ನು ಮೆಲ್ಲಗೆ ಬಿಡುವ ಏರ್ಪಾಡು ಮಾಡಬೇಕೇ ಹೊರತು ಆಕಸ್ಮಾತ್ ರಸ್ತೆಗೆ ಬಂದ ದನದ ಮಾಲೀಕರ ಮೇಲೆ ಪ್ರಾಸಿಕ್ಯೂಶನ್ ಮಾಡಬಾರದು.

ವಿಮರ್ಶೆ.

'ಒಗಲೆ ಗ್ಲಾಸ್ ವರ್ಕ್ಸ್' ಕಂಪೆನಿಯ ಪ್ರಭಾಕರ ಲಾಂದರದ ಮಾದರಿಯೊಂದು ನಮ್ಮ ಕೈಸೇರಿದೆ ಇದು ಪೂರ್ತಿ ಹಿತ್ತಾಳೆಯಿಂದ ಮಾಡಲ್ಪಟ್ಟು ಬಹು ಅಂದವಾಗಿದೆ. ಪರದೇಶಗಳಿಂದ ಬರುವ ಹಿತ್ತಾಳೆಯ ಲಾಂದರಗಳು ಪೂರ್ತಿ ಹಿತ್ತಾಳೆಯದವುಗಳಾಗಿರದೆ ಟಿನ್ನು, ಕಬ್ಬಿಣ ಮಿಶ್ರವಾಗಿರುವ ಕಾರಣ ಈ ಲಾಂದರದಷ್ಟು ಬಾಳಿಕೆ ಬರಲಿಕ್ಕಿಲ್ಲವಾಗಿ ತೋರುತ್ತೆ. ಈ ಲಾಂದರವು ಪೂರ್ತಿ ಹಿತ್ತಾಳೆಯದಾದರೂ ಕೂಡ ಇದಕ್ಕೆ ಡಜನಿಗೆ 36 ರೂಪಾಯಿ ಮಾತ್ರ ಕ್ರಯವಿಡೆ. ಸ್ವದೇಶದಲ್ಲಿ ಇಂಥಾ ಲಾಂದರಗಳನ್ನು ತಯಾರಿಸಿದ್ದು ಈ ಕಂಪೆನಿಯವರೇ ಮೊದಲು. ಸ್ವದೇಶಿ ಕಂಪೆನಿಯ ಈ ಪ್ರಯತ್ನಕ್ಕೆ ಉತ್ತೇಜನಕೊಡಬೇಕಾದದ್ದು ಎಲ್ಲರ ಕರ್ತವ್ಯವಾಗಿದೆ. ಇದನ್ನು ಒಂದೊಂದಾಗಿ ತರಿಸುವದಕ್ಕೆ ಹೆಚ್ಚು ಚಾರ್ಜಾಗುವ ಕಾರಣ ವ್ಯಾಪಾರಿಗಳು ಡಜನ್‌ಗಟ್ಲೆ ತರಿಸಿ ಚಿಕ್ರಿ ಮಾಡಿದರೆ ಒಂದಕ್ಕೆ ಸುಮಾರು 3—8—0 ಯೊಳಗೆ ಮಾರಬಹುದು ಕ್ರಯಕ್ಕೆ ತಕ್ಕದಾದ ಮಾಲನ್ನು ಮಾರಲು ಇಚ್ಛೆಯುಳ್ಳ ವ್ಯಾಪಾರಿಗಳೂ, ಸ್ವಲ್ಪವಾದರೂ ಸ್ವದೇಶಾಭಿಮಾನವುಳ್ಳ ವ್ಯಾಪಾರಿಗಳೂ ಇದನ್ನು ತರಿಸಿ ಮಾರಿದರೆ ಸ್ವದೇಶೀ ಗಾರಿಕೆಗೆ ಪ್ರೋತ್ಸಾಹವನ್ನೀಡಿದಂತಾಗುವುದು. ಪರದೇಶೀ ಸಾಮಾನುಗಳ ಬದಲು ಸ್ವದೇಶೀ ಸಾಮಾನುಗಳನ್ನು ಉಪಯೋಗಿಸಬೇಕೆಂದು ಆಶಿಸುವ ಸ್ವದೇಶಾಭಿಮಾನಿಗಳ ಇಚ್ಛೆಯನ್ನು ನೆರವೇರಿಸಲು ವ್ಯಾಪಾರಿಗಳು ಸಹಾಯಕರು. ಪ್ರತಿಯೊಬ್ಬರ ಮನೆಗೂ ಅವಶ್ಯವಾಗಿರುವ ಈ ಲಾಂದರುಗಳ ಬಿಕ್ರಿಗೆ ಕೈ ಇಕ್ಕಿದರೆ ದಿವಸಕ್ಕೆ ಒಂದು ಸಾವಿರದಷ್ಟು ಲಾಂದರುಗಳನ್ನು ತಯಾರಿಸುತ್ತಿರುವ ಈ ಸ್ವದೇಶಿ ಕಂಪೆನಿಯವರು ಕ್ರಮೇಣ ಪರದೇಶೀ ಲಾಂದರುಗಳನ್ನು ಹಿಂದೂದೇಶಕ್ಕೆ ತರಿಸುವ ಆವಶ್ಯಕತೆ ಇಲ್ಲದಂತೆ ಮಾಡಬಹುದು.

ಕಂಪೆನಿಯ ವಿಳಾಸ:—ದಿ ಒಗಲೆ ಗ್ಲಾಸ್ ವರ್ಕ್ಸ್. ಲಿಮಿಟೆಡ್ ಒಗಲೆವಾಡಿ, (ಔಂಧ್‌ಸ್ಟೇಟ್) ಸತಾರ ಡಿಸ್ಟ್ರಿಕ್ಟ್.

ಮಹಾತ್ಮಗಾಂಧಿಯವರ ಸ್ವಚರಿತ್ರೆ.

ಎರಡನೆಯ ಭಾಗ.

4 ನೆಯ ಪ್ರಕರಣ

ಮೊದಲನೆಯ ಅವಮಾನವು.

ಬೊಂಬಾಯಿನಲ್ಲಿ ನನ್ನ ಪ್ರಯತ್ನವು ಸಾಗದಿದ್ದುದರಿಂದ ಹತಾಶನಾಗಿ ರಾಜಕೋಟೆಗೆ ಹೋಗಿ ಅಲ್ಲಿ ವಕೀಲವೃತ್ತಿ ಹಿಡಿದ್ದುಕೊಂಡು ಕೆಲಸಮಾಡಲು ಒಂದು ಆಫೀಸನ್ನೇರ್ಪಡಿಸಿದೆನು. ಅರ್ಜಿಗಳನ್ನೂ ವಿಜ್ಞಾಪನ ಪತ್ರಿಕೆಗಳನ್ನೂ ಬರೆದು ಕೊಡುವುದರಿಂದಲೇ ತಿಂಗಳಿಗೆ 300 ರೂ. ವರಮಾನ ಬರುತ್ತಿತ್ತು. ಇದು ನನ್ನ ಪ್ರಯತ್ನವಿಶೇಷದಿಂದ ಬಂದುದಾಗಿರಲಿಲ್ಲ. ನನ್ನ ಅಣ್ಣನ ಹೆಸರುವಾಸಿಕೆಯಿಂದ ಬರುತ್ತಿದ್ದಿತು. ನನ್ನ ಅಣ್ಣನ ಪಾಲುಗಾರ ವಕೀಲನಿಗೆ ಬಹಳ ಜನರು ಪಕ್ಷಕಾರರು ಬರುತ್ತಿದ್ದರು. ಅವುಗಳಲ್ಲಿ ಮುಖ್ಯವಾದುವುಗಳೆಂದು ಅವನು ತೋರಿದವುಗಳನ್ನು ದೊಡ್ಡ ದೊಡ್ಡ ಬ್ಯಾರಿಸ್ಟರುಗಳಿಗೆ ಕಳುಹಿಸಿ ಅವರಿಂದ ದಾವಾ ಅರ್ಜಿಯನ್ನು ಬರೆಸುತ್ತಿದ್ದನು. ಬಡವರ ಅರ್ಜಿಗಳನ್ನು ನನಗೆ ಕೊಡುತ್ತಿದ್ದನು. ಬೊಂಬಾಯಿನಲ್ಲಿ ಟೌಟುಗಳಿಗೆ ನಾನು ಕಮಿಷನ್ ಕೊಡುವುದಿಲ್ಲವೆಂದು ಹೇಳಿದ್ದೆನು. ಆದರೆ ರಾಜಕೋಟೆಯಲ್ಲಿ ತಪ್ಪಿದುದಿಲ್ಲ. ರಾಜಕೋಟೆಯಲ್ಲಿ ಬ್ಯಾರಿಸ್ಟರುಗಳೆಲ್ಲರೂ ವಕೀಲರೂ ಕಮಿಷನನ್ನು ಕೊಡುವುದಲ್ಲದೆ ಟೌಟುಗಳಿಗೆ ಕೊಡಬೇಕಾಗುತ್ತಿದ್ದಿಲ್ಲವು. ನಾನೂ 'ಇನ್ನೊಬ್ಬ ವಕೀಲನೂ ಒಬ್ಬಾಗಿ ಕೆಲಸಮಾಡತೊಡಗಿದೆವು. ನೀನು ಕೆಲಸಮಾಡುವುದಕ್ಕಾಗಿ ದಾವಾಗಳನ್ನು ನಿನಗೆ ಕೊಡುತ್ತಿರುವೆನಾದುದರಿಂದ ನನ್ನ ಪಾಲುಗಾರನಿಗೆ ನೀನು ಕಮಿಷನ್ ಕೊಡದೆ ಹೋದಲ್ಲಿ ನನಗೆ ಅವಮಾನವಾಗುವುದು. ನಾವು ಸಮಿಷ್ಟಿ ಕುಟುಂಬದವರಾದುದರಿಂದ ನಿನ್ನ ಆದಾಯದಲ್ಲಿ ಕೂಡ ನನಗೆ ಭಾಗವು ಬರುವುದು. ಆದುದರಿಂದ ಆಗಿರ ವ್ರಸ್ತಿಲ್ಲದೆ ನನ್ನ ಪಾಲುದಾರನಿಗೆ ಹೇಗೆ ಸಲ್ಲುವುದು. ನನ್ನ ಪಾಲುದಾರನು ಬೇರೊಬ್ಬ ಬ್ಯಾರಿಸ್ಟರಿಗೆ ಒಂದು ದಾವಾ ಕೊಟ್ಟಲ್ಲಿ ನನಗೆ ತಪ್ಪದೆ ಕಮಿಷನನ್ನು ಕೊಡಿಸುವನು ಎಂದು ನನ್ನ ಅಣ್ಣನು ಹೇಳಿದನು. ಅದಕ್ಕೆ ನಾನು ಒಪ್ಪಿಕೊಳ್ಳಬೇಕಾಗಿ ಬಂದಿತು. ಬ್ಯಾರಿಸ್ಟರಾಗಿ ಕೆಲಸಮಾಡುವಲ್ಲಿ ಕಮಿಷನ್ ಕೊಡದಿದ್ದರೆ ತೀರದೆಂದು ನಾನು ನಿಶ್ಚಯಿಸಿದೆನು. ಆ ಪ್ರಕಾರವಾಗಿ ನನ್ನ ಆತ್ಮವಂಚನೆಯನ್ನು ಮಾಡಿದೆನು. ಆದರೆ ಯಾವ ದಾವಾದಲ್ಲೂ ನಾನು ಕಮಿಷನ್ ಕೊಟ್ಟುದು ನನಗೆ ಜ್ಞಾಪಕವಿಲ್ಲವು. ಈ ಪ್ರಕಾರವಾಗಿ ಇಟ್ಟುಕೊಂಡ ಖರ್ಚಿಗೆ ತಕ್ಕಷ್ಟು ಆದಾಯವು ಬರುತ್ತಿದ್ದಿತಾದರೂ ಆಗಲೇ ನನಗೆ ಮೊದಲನೆಯ ಅವಮಾನವು ಸಂಪ್ರಾಪ್ತವಾಯಿತು. ಬ್ರಿಟಿಷ್ ಉದ್ಯೋಗಿಗಳನ್ನು ಕುರಿತು ನಾನು ಕೇಳಿದ್ದೆನಲ್ಲದೆ ನಾನು ಬೇರೆ ಸ್ವಯಮಾಗಿ ಯಾರನ್ನೂ ನೋಡಿದುದಿಲ್ಲವು.

ಕೀರ್ತಿಶೇಷರಾದ ಪೋರುಬಂದರು ರಾಜರವರು ರಾಜ್ಯಾಧಿಕಾರವನ್ನು ವಹಿಸುವುದಕ್ಕೆ ಮೊದಲು ನನ್ನ ಅಣ್ಣನು ಅವರಿಗೆ ಕಾರ್ಯದರ್ಶಿಯಾಗಿದ್ದು ಸಲಹೆಯನ್ನು ಕೊಡುತ್ತಿದ್ದನು. ಆಗ ನನ್ನ ಅಣ್ಣನು ಅವರಿಗೆ ದುರ್ಬೋಧೆಯನ್ನು ಮಾಡಿದನೆಂದು ಹುಟ್ಟಿಸಲ್ಪಟ್ಟಿತು. ಆ ಸುದ್ದಿಯು ಪೊಲಿಟಿಕಲ್ ಏಜಂಟರಿಗೆ ಕೂಡ ತಿಳಿದು ಅವರಿಗೆ ನನ್ನ ಅಣ್ಣನ ಮೇಲೆ ದುರಭಿಪ್ರಾಯವು ಹುಟ್ಟಿತು. ಆ ಅಧಿಕಾರಿಯು ಆಂಗ್ಲದೇಶದಲ್ಲಿದ್ದಾಗ್ಗೆ ನನಗೆ ಆತನ ಪರಿಚಯವಾಗಿದ್ದಿತು. ಆತನು ಅಲ್ಲಿ ನನ್ನ ಕೂಡ ಬಹಳ ವಿಶ್ವಾಸದಿಂದಿದ್ದನು. ಆದರ ಮೇಲೆ ಆತನಿಗೆ ನನ್ನ ಅಣ್ಣನ ವಿಚಾರದಲ್ಲಿ ಹುಟ್ಟಿದ್ದ ದುರಭಿಪ್ರಾಯವನ್ನು ಹೋಗಲಾಡಿಸಲು ನಿಜಸ್ಥಿತಿಯನ್ನು ಆತನಿಗೆ ತಿಳಿಸಿದರೆ ಬಹಳ ಒಳ್ಳೆಯದೆಂದು ನನ್ನ ಅಣ್ಣನು ಹೇಳಿದನು. ನನಗೆ ಅದು ಚೆನ್ನಾಗಿ ತೋರಲಿಲ್ಲವು. ಆಂಗ್ಲದೇಶದಲ್ಲಿ ಎಲ್ಲೋ ಕೊಂಚ ಪರಿಚಯವಾಗಿರುವುದೆಂಬುದರ ಮೇಲೆ ನಾನು ನನ್ನ ಅಣ್ಣನ ವಿಷಯವನ್ನು ಕುರಿತು ಆ ಅಧಿಕಾರಿಯೊಡನೆ ಮಾತನಾಡುವುದು ಯೋಗ್ಯ ಕೆಲಸವಲ್ಲವೆಂದು ನನಗೆ ತೋರಿತು. ನನ್ನ ಅಣ್ಣನು ಮಾಡಿದುದು ತಪ್ಪೆಂದು ನಾನು ಹೇಳುವುದರಿಂದ ಲಾಭವಿಲ್ಲ. ಆತನು ನಿರ್ದೋಷಿಯೆಂದು ಅರ್ಜಿ ಬರೆಯುವುದೇ ಯುಕ್ತವೆಂದು ನಿಶ್ಚಯಿಸಿ ಅದನ್ನು ನನ್ನ ಅಣ್ಣನಿಗೆ ಹೇಳಿದೆನು. ಆದರೆ ಅದು ಸರಿಬೀಳಲಿಲ್ಲವು. "ನಿನಗೆ ಕಥಿಯವಾಡದ ಸಂಗತಿ ತಿಳಿಯದು. ನಿನಗೆ ಪ್ರಪಂಚಾನುಭವವು ಕಡಿಮೆ. ಇಲ್ಲಿ ಸಹಾಯದಿಂದ ಕೆಲಸಮಾಡಬೇಕು. ನಿನಗೆ ಪರಿಚಯವುಳ್ಳ ಅಧಿಕಾರಿಯೊಡನೆ ನಿನ್ನ ಸೋದರನನ್ನು ಕುರಿತು ಒಂದು ಮಾತನ್ನು ಹೇಳಲು ನಿನಗೆ ಅವಕಾಶವಿರುವಾಗ್ಗೆ ನೀನು ಉಮ್ಮಸಿರಕೂಡದು," ಎಂದು ನನ್ನ ಅಣ್ಣನು ಹೇಳಿದನು.

ನಾನು ಮಾತನಾಡಬಾರದೆ ಹೋದೆನಾದರೂ ನಾನು ಮಾಡುವ ಕೆಲಸವು ಅಕ್ರಮವೆಂದೇ ನನಗೆ ತೋರಿತು. ಆ ಮುಂದಾಗಿ ಬರೆದೆನು. ಆದರ ಮೇಲೆ ಆ ಅಧಿಕಾರಿಯು ಬರಹೇಳಿದನು. ಪೂರ್ವಪರಿಚಯವನ್ನು ಕುರಿತು ವೇಷ ಜ್ಞಾಪಿಸಿದನಲ್ಲದೆ ಆಂಗ್ಲದೇಶಕ್ಕೂ ಕಥಿಯವಾಡಕ್ಕೂ ದೂರವೆಂದು ನಾನು ಕೂಡಲೆ ಗ್ರಹಿಸಿಕೊಂಡೆನು. ವಿಶ್ರಾಂತಿ ವೇಳೆಯಿರುವ ಉದ್ಯೋಗಿಯ ಲಕ್ಷಣಕ್ಕೂ ಕೆಲಸದಲ್ಲಿರುವ ಉದ್ಯೋಗಿಯ ಲಕ್ಷಣಕ್ಕೂ ಬಹಳ ವ್ಯತ್ಯಾಸವಿರುವುದು. ಪರಿಚಯವುಂಟೆಂದು ಆತನು ಒಪ್ಪಿಕೊಂಡುದರ ಮೇಲೆ ನಾನು ನನ್ನ ವಿಷಯವನ್ನು ಜ್ಞಾಪಕಕ್ಕೆ ತರಲು ಆತನು ಬಿಗುವಾಗಿ ತೋರುತ್ತಿದ್ದನು. ಆ ಪರಿಚಯವನ್ನು ದುರ್ವಿನಿಯೋಗಮಾಡುವುದಕ್ಕಾಗಿಯೇ ನೀನು ಇಲ್ಲಿಗೆ ಬಂದೆಯಾ? ಎಂದು ಕೇಳುವಹಾಗೆ ಅವನ ಮುಖಭಾವದಿಂದ ವ್ಯಕ್ತವಾಯಿತು." ನಾನು ನನ್ನ ಅಣ್ಣನ ಸಂಗತಿಯನ್ನು ತಿಳಿಸಲಾರಂಭಿಸಿದೆನು. ಆತನು ಸಿಟ್ಟುಮಾಡಿಕೊಂಡು "ನಿನ್ನ ಅಣ್ಣನು ವಂಚಕನು. ಅವನ ವಿಚಾರವಾಗಿ ನಾನೇನನ್ನೂ ಕೇಳುವುದಿಲ್ಲ. ನನಗೀಗ ಅವಕಾಶವಿಲ್ಲವು. ನಿನ್ನ ಅಣ್ಣನು ಏನನ್ನಾದರೂ ಹೇಳಿಕೊಳ್ಳಬೇಕಾಗಿದ್ದಲ್ಲಿ ಕ್ರಮವಾದ ರೀತಿಯಲ್ಲಿ ಬರೆದುಕೊಳ್ಳಲಿ" ಎಂದು ಆ ಅಧಿಕಾರಿಯು ಹೇಳಿದನು. ಈ ಉತ್ತರವೇ ಸಾಕು. ಅದು ಸರಿಯಾಗಿಯೇ ಇದ್ದಿತಾದರೂ ಸ್ವಾರ್ಥಪರತ್ವದಿಂದ ನಾನು ಬಿಡದೆ ಹೇಳತೊಡಗಿದೆನು. ಆತನು ಎದ್ದುನಿಂತು ನೀನು ಇನ್ನು ಹೊರಡಬಹುದೆಂದನು. ದಯೆಯಿಟ್ಟು ಕೇಳಿ ಎಂದು ನಾನು ಹೇಳಿದೆನು. ಅಷ್ಟಕ್ಕೆ ಆತನಿಗೆ ಕೋಪಬಂದು ಒಬ್ಬ ಆಳನ್ನು ಕೂಗಿದನು. ನಾನು ಇನ್ನೂ ಹೇಳುತ್ತಿರುವಾಗ್ಗೆ ಆಳು ಬಂದನು. ಈತನನ್ನು ಹೊರಗೆ ಕಳುಹಿಸಿರೆಂದು ಆಳಿಗೆ ಹೇಳಿದನು. ಆ ಆಳು ನನ್ನ ಭುಜದಮೇಲೆ ಕೈಹಾಕಿ ನನ್ನನ್ನು ಹೊರಬಾಗಿಲಿಗೆ ಕರತಂದುಬಿಟ್ಟನು. ನಾನು ಕೋಪಗೊಂಡು ಬಂದುಬಿಟ್ಟೆನು. "ನೀವು ನನಗೆ ಅವಮಾನಪಡಿಸಿದಿರಿ. ನಿಮ್ಮಾಳಿನಿಂದ ಹೊರಕ್ಕೆ ನೂಕಿಸಿದಿರಿ. ನೀವು ಕ್ಷಮಾಪಣೆಯನ್ನು ಕೇಳದಿದ್ದಲ್ಲಿ ನಾನು ದಾವಾ ಮಾಡುತ್ತೇನೆ" ಎಂದು ಕಾಗದ ಬರೆದೆನು. "ನೀವು ವಕ್ರನಾಗಿ ಪ್ರವರ್ತಿಸಿದಿರಿ. ನಾನು ಹೊರಡಬೇಕೆಂಗು ಹೇಳಿದರೂ ನೀವು ಹೊರಡಲಿಲ್ಲವು. ಆದುದರಿಂದ ನಾನು ನನ್ನ ಸೇವಕನನ್ನು ಕರೆದು ನಿಮ್ಮನ್ನು ಕಳುಹಿಸಬೇಕಾಗಿ ಬಂದಿತು. ಆತನು ಬಂದು ಹೇಳಿದರೂ ನೀವು ಹೊರಡಲಿಲ್ಲವು. ಆದರ ಮೇಲೆ ತಾವು ಕಾಲಕ್ಕೆ ತಕ್ಕಂತೆ ದೌರ್ಜನ್ಯವನ್ನು ನಡಿಸಬೇಕಾಯಿತು. ನೀವು ದಾವಾಮಾಡುವುದಾದರೆ ಮಾಡಬಹುದು" ಎಂದು ಆತನು ಉತ್ತರವನ್ನು ಬರೆದು ಕಳುಹಿಸಿದನು. ಅದನ್ನು ಜೇಬಿನಲ್ಲಿಟ್ಟುಕೊಂಡು ವ್ಯಾಕುಲದಿಂದ ಮನೆಗೆ ಹೋಗಿ ನಡೆದ ಸಂಗತಿಯನ್ನೆಲ್ಲ ನನ್ನ ಅಣ್ಣನಿಗೆ ಹೇಳಿದೆನು. ಆತನು ಕೂಡ ಬಹಳವಾಗಿ ಚಿಂತಿಸಿದನು. ಆದರೆ ನನ್ನ ಓದಾರ್ಯಕ್ಕೆ ಉಪಾಯವೇನೂ ತೋರಲಿಲ್ಲವು. ನನ್ನ ಸ್ನೇಹಿತನಾದ ವಕೀಲನಿಗೆ ತಿಳಿಸಿದೆನು. ಹೇಗೆ ಕೇಸುಮಾಡಬೇಕೆಂಬುದು ನನಗೆ ಗೊತ್ತಾಗಲಿಲ್ಲವು. ಆ ಸಮಯದಲ್ಲಿ ಒಂದು ದಾವಾ ಸಂಬಂಧವಾಗಿ ಫಿರೋಜಷಾ ಮೆಹತಾರವರು ರಾಜಕೋಟೆಗೆ ಬಂದಿದ್ದರು. ಅನಾಮಧೇಯ ಬ್ಯಾರಿಸ್ಟರಾದ ನಾನು ಮೆಹತಾರವರನ್ನು ಕಂಡು ಹೇಗೆ ಮಾತನಾಡಿಸುವುದು? ಅವರನ್ನು ಕರೆಯಿಸಿಕೊಂಡಿದ್ದ ವಕೀಲನ ದ್ವಾರ ಈ ವಿಷಯವನ್ನು ತಿಳಿಸಿದೆನು. "ಈ ದೇಶದಲ್ಲಿ ಬ್ಯಾರಿಸ್ಟರುಗಳಿಗೂ ವಕೀಲರುಗಳಿಗೂ ಇಂತಹ ಅವಮಾನವಾಗುವುದು ರೂಢಿಯಾಗಿದೆ. ಗಾಂಧಿಯು ಹೊಸದಾಗಿ ಆಂಗ್ಲದೇಶದಿಂದ ಬಂದ ಯುವಕನಾಗಿರುವುದರಿಂದ ಆತನಿಗೆ ಅನುಭವವಿಲ್ಲ. ಬ್ರಿಟಿಷ್ ಅಧಿಕಾರಿಗಳ ಸಂಗತಿ ಆತನಿಗೆ ಗೊತ್ತಿಲ್ಲ. ಹೇಗಾದರೂ ಕೊಂಚ ಅರ್ಜಿಸಿ ಚೆನ್ನಾಗಿ ಕಾಲವನ್ನು ಕಳೆಯುವಂತೆ ಪ್ರಯತ್ನಿಸುವುದೇ ಕರ್ತವ್ಯವು. ದಾವಾ ಹೂಡಿದಲ್ಲಿ ಪ್ರಯೋಜನವಿಲ್ಲ, ಮತ್ತು ಅದರಿಂದ ಹಾನಿಯೇ ಆಗುವುದು. ಆತನಿಗಿನ್ನೂ ಅನುಭವವು ಸಾಲದೆಂದು ನಾನು ಹೇಳಿದನೆಂದು ತಿಳಿಸುವುದು" ಎಂದು ಮೆಹತಾರವರು ಹೇಳಿದರು. ಆ ಸಲಹೆಯು ನನಗೆ ಬೋಧಕರವಾಗಿದ್ದರೂ ಮನೋವ್ಯಾಕುಲವು ತಪ್ಪಲಿಲ್ಲ, ಆದರೆ ಅದರಿಂದ ನನಗೆ ಬಹಳ ಅನುಭವ ಬಂದಿತು. ಅಂತಹ ವಿಚಯದ ಮೇಲೆ ಪುನಃ ನಾನು ಎಂದೂ ಯಾರಲ್ಲಿಗೂ ಹೋಗಿರಲಿಲ್ಲವು.

" ವೈ. ಸ್ವಾರ."

ಕೋಮುವಾರು ಚುನಾವಣೆ.

(ಕರ್ನಲ್ ವೆಜ್‌ವುಡ್ ಇವರು ಪಾರ್ಲಿಮೆಂಟಿನಲ್ಲಿ ಮಾಡಿದ ಭಾಷಣದಿಂದ)

ಹಿಂದುಸ್ಥಾನದಲ್ಲಿ ಇರುವ ಜಾತಿ ಜಗಳಗಳಿಗೆ ನಿಜವಾದ ಕಾರಣವೇನು? ಆತ್ಮ ಗೌರವ ಬುದ್ಧಿಯು ಬೆಳೆಯುತ್ತಿರುವದೇ ಕಾರಣವಾಗಿದೆ. ಗುಲಾಮಗಿರಿಯಲ್ಲಿ ಇರುವ ಜನಾಂಗದಲ್ಲಿ ಯಾರಿಗೂ ಆತ್ಮ ಗೌರವವಿಲ್ಲದಿರುವಾಗ ಜಗಳವು ಇರುವುದಿಲ್ಲ. ರಾಜಕೀಯ ಜಾಗೃತಿಯೂ ಇರುವುದಿಲ್ಲ. ಈಗ ಹಿಂದುಸ್ಥಾನದಲ್ಲಿ ಸಮ್ಮ ಆಳ್ವಿಕೆಯಿಂದ ಶತಮಾನಗಳಿಂದ ಬೇರು ಬಂದ ಗುಲಾಮಗಿರಿಯ ಬುದ್ಧಿಯು ಹೋಗಿ ತಮ್ಮ ಗೌರವವನ್ನೂ ಹಕ್ಕುಗಳನ್ನೂ ಮನುಷ್ಯತ್ವವನ್ನು ಪುನಃ ಸ್ಥಾಪಿಸಬೇಕೆಂಬ ಪ್ರಯತ್ನವು ನಡೆಯುತ್ತಲಿದೆ. ಮುಸಲ್ಮಾನರ ಮಸೀದಿಯ ಹೊರಗೆ ವಾದ್ಯಮಾಡುವ ಹಿಂದುವು ತನ್ನ ಜಾತಿಯ ಉತ್ಸಾಹದಿಂದಲ್ಲ, "ಈ ಮುಸಲ್ಮಾನರು ನಮಗೆ ತೊಂದರೆ ಕೊಡುತ್ತಾರೆ. ಆದರೆ ನಾವು ಹೆದರುವುದಿಲ್ಲ" ಎಂಬ ಅಭಿಪ್ರಾಯವನ್ನು ತೋರಿಸಲಿಕ್ಕಾಗಿ ವಾದ್ಯಮಾಡುವದಾಗಿದೆ. ಮಸೀದಿಯ ಹೊರಗೆ ವಾದ್ಯ ಕೇಳುವಾಗ ಮುಸಲ್ಮಾನರು ತಮ್ಮ ಜಾತಿಯ ಹಕ್ಕನ್ನು ಕಾಪಾಡಲಿಕ್ಕಾಗಿ ಹೊರಗೆ ಬರುವುದಿಲ್ಲ. ಈ ಅಯೋಗ್ಯ ಹಿಂದುಗಳು ನಮಗೆ ಅವಮರ್ಯಾದೆ ಮಾಡುತ್ತಾರೆ ಎಂಬ ಭಾವನೆಯಿಂದ ಹೊರಗೆ ಬರುವದಾಗಿದೆ. ಮನುಷ್ಯತ್ವವನ್ನು ಪಡೆದ ವ್ಯಕ್ತಿಯೊಬ್ಬನು ತನಗೆ ಮಾಡುವ ಅವಮರ್ಯಾದೆಗೆ ಎದುರು ನಿಲ್ಲಬೇಕೆಂತಲೂ, ಅವಮರ್ಯಾದೆಯನ್ನು ಸುಮ್ಮನೆ ತಾಳಿಕೊಂಡಿರಬಾರದೆಂತಲೂ ಯೋಚಿಸುವದು ಸ್ವಾಭಾವಿಕವಾಗಿದೆ. ಆತ್ಮ ಗೌರವದ ಬುದ್ಧಿಯು ಬೆಳೆಯುವಾಗ ಜಗಳಗಳಾಗುವದು ಸ್ವಭಾವಿಕವಾಗಿದೆ. 'ಮನುಷ್ಯನ ಕಣ್ಣಿನಲ್ಲಿ ಯಾವ ಪ್ರಕಾಶವೂ ಇರುವದಕ್ಕಿಂತ ಮತದ ಮುಚ್ಚಿನ ಬೆಳಕಾದರೂ ಇರುವದು ಉತ್ತಮವೆಂತ ನನ್ನ ಅಭಿಪ್ರಾಯವಾಗಿದೆ.

ಹಿಂದುಸ್ಥಾನದ ಈಗಿನ ಸ್ಥಿತಿಯನ್ನು ನೋಡಿ ಅಸಹ್ಯಪಡುವವನಾಗಿಯೂ ಇಲ್ಲ, ಆಶ್ಚರ್ಯಪಡುವವನಾಗಿಯೂ ಇಲ್ಲ. ಜನರಿಗೆ ಈಗತಾನೇ ತಿಳುವಳಿಕೆ ಬರುತ್ತಿರುವುದರಿಂದ ಎಚ್ಚರಗೊಳ್ಳುತ್ತಿದ್ದಾರೆ. ಮುಸಲ್ಮಾನರು ಯಾವಾಗಲೂ ಹೆಚ್ಚು ಶಕ್ತಿವಂತರಾದ (Virile) ಜನಾಂಗವಾಗಿದ್ದಾರೆ. ಹಿಂದುಗಳು ಕಡಿಮೆ ಶಕ್ತಿಯವರಾಗಿದ್ದಾರೆ. ಪ್ರಜಾಸತ್ತಾತ್ಮಕ ಸರಕಾರ ಪದ್ಧತಿಯು ಸ್ಥಾಪಿತವಾಗುವಾಗ ಅನ್ಯೋನ್ಯ ಹೊಟ್ಟೆಕಿಚ್ಚು ಉಂಟಾಗುವದು ಸ್ವಭಾವಿಕವಾಗಿದೆ. ಇದಕ್ಕೆ ಉಪಶಮನವೇನೆಂದರೆ—ಹಿಂದುಗಳು ಹೆಚ್ಚು ಶಕ್ತಿವಂತರಾಗಬೇಕು. ಮುಸಲ್ಮಾನರು ಹೆಚ್ಚು ವಿದ್ಯಾವಂತರಾಗಬೇಕು. ಆಗ ಈ ಜಾತಿಗಳೊಳಗೆ ಯಾವ ಭೇದವು ಉಳಿಯುವುದಿಲ್ಲ. ಬ್ರಿಟಿಷ್ ಸರಕಾರವು ಮುಸಲ್ಮಾನರ ಪಕ್ಷವಹಿಸುತ್ತಾರೆಂತಲೂ ಜಾತಿಜಗಳಗಳಿಂದ ಬ್ರಿಟಿಷ್ ಸರಕಾರವು ಪ್ರಯೋಜನ ಹೊಂದುತ್ತಿದೆಯೆಂತಲೂ ಹೇಳಿಕೊಳ್ಳುತ್ತಾರೆ. ಬ್ರಿಟಿಷ್ ಸರಕಾರವನ್ನೇ ನಾಶಪಡಿಸಬೇಕೆಂತ ಹೋರಾಡುವ ಜನರು ತಮ್ಮೊಳಗೆ ಜಗಳವಾಡಿಕೊಂಡರೆ ಬ್ರಿಟಿಷ್ ಅಧಿಕಾರಿಗಳು ಸಂತೋಷಪಟ್ಟರೆ ಆಶ್ಚರ್ಯವೇನೂ ಇಲ್ಲ. ಇನ್ನೊಂದು ವಿಷಯದಲ್ಲಿ ಬ್ರಿಟಿಷ್ ಅಧಿಕಾರಿಗಳು ಜಾಗರೂಕರಾಗಿರಬೇಕು. ಮುಸಲ್ಮಾನರ ಹೆಚ್ಚಿನ ಶಕ್ತಿಗೆ ಬ್ರಿಟಿಷರಾದ ನಮಗೆ ಗೌರವ ಕೊಡುವದು ಸ್ವಭಾವಿಕವಾಗಿದೆ. ಇಂಗ್ಲಿಷ್‌ಮ್ಯಾನಾಗಲೀ ಹಿಂದುವಾಗಲೀ ದೇವರ ಹೆಸರೆತ್ತಿ ಕರೆಯುವಾಗ ಸಹಾಯವನ್ನೂ ದಯೆಯನ್ನೂ ಬೇಡಿಕೊಳ್ಳುವದಾಗಿದೆ. ಮುಸಲ್ಮಾನನು ಅಲ್ಲಾಹೋ ಅಕ್ಬರ್ ಎಂತ ಕೂಗುವಾಗ ದಯೆ ಮತ್ತು ಕರುಣೆ ತೋರಿಸಬೇಕೆಂತ ಕೂಗುವದಿಲ್ಲ. ಅದು ಗರ್ವದ ಕೂಗಾಗಿದೆ. ಯುದ್ಧ ಭೂಮಿಯಲ್ಲಿ ಈ ಕೂಗನ್ನು ನಮ್ಮಲ್ಲಿ ಕೆಲವರು ಕೇಳಿರುತ್ತೇವೆ. ಮುಸಲ್ಮಾನನ ಮೇಲೆ ಬೇರೆಯವರು ಮುತ್ತಿರುವಾಗ ಸಹ ದೇವರ ದಯೆ ಬೇಡುವದರಲ್ಲಿ ಧೈರ್ಯದಿಂದ ಜೀವ ಕೊಡಲು ತಯಾರಾಗುತ್ತಾನೆ. ಮುಸಲ್ಮಾನನ ಮುಖ್ಯಶಕ್ತಿಯನ್ನು, ಅಹಂಕಾರವನ್ನೂ, ಕೊಂ[illegible] ಪ್ರಯತ್ನಪಟ್ಟರೂ ನನಗಾಗಲಿ, ಹಿಂದುಸ್ಥಾನದಲ್ಲಿರುವ ಇತರ ಬ್ರಿಟಿಷ್ ಅಧಿಕಾರಿಗಳಿಗಾದರೂ ಮುಸಲ್ಮಾನನ ಜೀವನನ್ನಾದರೂ ಕೊಡಲು ತಯಾರಿರುವ ಧೈರ್ಯವನ್ನು ನೋಡಿ ಮೆಚ್ಚದೆ ಇರಲು ಸಾಧ್ಯವಿಲ್ಲ.

ಹಿಂದುಗಳು ಇದರಿಂದ ಬುದ್ಧಿ ಕಲಿಯಲಿ. ಹಿಂದುಗಳನ್ನು ಶರೀರವ್ಯಾಯಾಮದಲ್ಲಿ ತರಬೇತಿಸಿ ಆತ್ಮರಕ್ಷಣೆಗೆ ಅರ್ಹರನ್ನಾಗಿ ಮಾಡಿ ಆತ್ಮ ಗೌರವವನ್ನು ಕಾಪಾಡಿಕೊಳ್ಳುವಂತೆ ಮಾಡಬೇಕಾದ ಮಾಳವೀಯರು ತಯಾರಿಸುವದು ಯುಕ್ತವಾಗಿಯೇ ಇದೆ. ಇದರಿಂದ ಮುಸಲ್ಮಾನರ ಮೇಲೆ ದ್ವೇಷ ಹುಟ್ಟಿಸುವದೂ ಇಲ್ಲ. ಕೊಲೆಪಾತಕ ಸ್ವಭಾವವನ್ನು ಉಂಟು ಮಾಡುವದೂ ಇಲ್ಲ. ಈಗಿನ ಜಗಳಗಳು ಸ್ವತಂತ್ರ ಸಂಪಾದನೆಯನ್ನು ತಡಮಾಡುತ್ತವೆ. ಆದರೆ ಅಡಚಣೆಯಾಗುವದಿಲ್ಲ. ಈ ದೊಂಬಿಗಳನ್ನು ನಿಲ್ಲಿಸದಿದ್ದದ್ದಕ್ಕೆ ಬ್ರಿಟಿಷ್ ಸರಕಾರವನ್ನು ಹಿಂದೀಯರು ದೂರಬಾರದು. ದೂರದ ದಿಂದ ಆಕಸ್ಮಾತ್ ನಡೆಯುವ ದೊಂಬಿಗಳನ್ನು ನಿಲ್ಲಿಸಲಿಕ್ಕೆ ಯಾವ ಸರಕಾರಕ್ಕೂ ಸಾಧ್ಯವಿಲ್ಲ. ಉಭಯ ಪಕ್ಷದವರೂ ಅನ್ಯೋನ್ಯ ಮರ್ಯಾದೆ ತೋರಿಸಲು ತಯಾರಾಗಬಹುದು. ತನ್ನನ್ನು ತಾನು ರಕ್ಷಿಸಿಕೊಳ್ಳಲು ತಯಾರಿಲ್ಲದವನಿಗೆ ಯಾವಾಗಲೂ ಕಷ್ಟವಿದೆಯೆಂತ ಎಲ್ಲರಿಗೂ ತಿಳಿದ ಸಂಗತಿಯಾಗಿದೆ. ಕಾಲ ಹೋಗುತ್ತಾ ಮುಸಲ್ಮಾನರಿಗೆ ವಿದ್ಯೆ ಹೆಚ್ಚಾಗಿ ದೊರಕುತ್ತೆ, ರಾಜಕೀಯ ಸುಧಾರಣೆಯೆಂದರೆ ಏನೆಂತ ಮುಸಲ್ಮಾನರಿಗೆ ತಿಳಿದು ಯುಕ್ತಾಪ್ರಜಾಪ್ರತಿನಿಧಿ ಸರಕಾರದಿಂದ ಮುಸಲ್ಮಾನರಿಗೆ ಕೆಡಕಿಲ್ಲವೆಂತ ಅವರಿಗೆ ಅನುಭವಸಿದ್ಧವಾಗುತ್ತಾ ಹೋದಂತೆ ಕೋಮುವಾರು ಚುನಾವಣೆಯು ಜಾತಿಹಕ್ಕುಗಳನ್ನು ಕಾಪಾಡಲು ಸಹಾಯಕರವಲ್ಲವೆಂತ ಮುಸಲ್ಮಾನರಿಗೆ ತಿಳಿಯುತ್ತದೆ.

ಈ ದೇಶದಲ್ಲಿ (ಇಂಗ್ಲೆಂಡಿನಲ್ಲಿ) ಜಾತಿವಾರು ಚುನಾವಣೆ ಬೇಕೆಂತ ಕೇಳುವ ರೋಮನ್ ಕೆಥೋಲಿಕ್ ಜನರು ಇದ್ದಾರೆಯೋ? ಈಗ ಪಾರ್ಲಿಮೆಂಟಿನಿಂದ ದೊರಕುವ ಸಹಾಯಕ್ಕಿಂತ ಹೆಚ್ಚು ಸಹಾಯ ಕೋಮುವಾರು ಚುನಾವಣೆ ಇದ್ದಾಗ ಸಿಕ್ಕಿತೆಂತ ಕೆಥೋಲಿಕರು ಭಾವಿಸುತ್ತಾರೆಯೋ? ಕೋಮುವಾರು ಚುನಾವಣೆ ಇದ್ದು ಪಾರ್ಲಿಮೆಂಟಿನಲ್ಲಿ 20 ಕೆಥೋಲಿಕ್ ಮೆಂಬರುಗಳು ಇದ್ದಿದ್ದರೆ ಸಿಕ್ಕುವದಕ್ಕಿಂತ ಒಂದು ಓಟಿನ ಪ್ರಾಂತ್ಯದಲ್ಲಿ ಅರ್ಧ ಡಜನ್ ಓಟುಗಳಿದ್ದರೆ ಹೆಚ್ಚಿಗೆ ಪ್ರಯೋಜನವಿದೆಯೆಂತ ಇಲ್ಲಿನ [illegible] ಲಿಕರು ನಂಬಿದ್ದಾರೆ. ಯಾರೋಪಿಯನ್ನರ ಇರುವ [illegible] ಕಡಿಮೆ ಸಂಖ್ಯೆ ಜನರೂ ಕೋಮುವಾರು ಚುನಾವಣೆ ಇಲ್ಲದಿದ್ದರೇನೇ ತಮ್ಮ ಹಕ್ಕುಗಳು [illegible]ಸಲ್ಪಡುತ್ತವೆಯೆಂತ ನಂಬಿದ್ದಾರೆ. ಕೋಮುವಾರು ಚುನಾವಣೆ ಇಲ್ಲದಿದ್ದರೆ ಎಲ್ಲಾ ಓಟರುಗಳ ಅಪೇಕ್ಷೆಗನುಸರಿಯಾಗಿ ನಡಿಯಬೇಕಾಗುತ್ತದೆ. ಕೋಮುವಾರು ಚುನಾವಣೆಯಿಂದ ಆಯಾ ಕೋಮಿನ ಮೆಂಬರು ಆಯಾ ಕೋಮಿನ ಪರವಾಗಿಯೇ ಕೆಲಸಮಾಡಬೇಕೆಂಬ ಅಭಿಪ್ರಾಯವನ್ನು ಬೆಳೆಸುತ್ತದೆ. ಈ ಜಾತಿವಾರು ವ್ಯತ್ಯಾಸವಿಲ್ಲದ ಚುನಾವಣೆಯಾದರೆ ಸಮಾನತ್ವದ ಭಾವವು ಅಭಿವೃದ್ಧಿಯಾಗುತ್ತದೆ.

ಸೀಲೂಸಿನಲ್ಲಿ ಸಮುದಾಯದ ಓಟರುಗಳ ಪಟ್ಟಿಯೊಂದಲ್ಲದೆ ಕಡಿಮೆಸಂಖ್ಯೆಯ ಜನರ ಓಟರುಗಳ ಪಟ್ಟಿಯೊಂದು ಬೇರೆ ಇರುತ್ತದೆ ಸಮುದಾಯದವರ ಓಟು ಪಡೆದುಬರುವ ಮೆಂಬರುಗಳಲ್ಲದೆ ಕೋಮುವಾರು ಬರುವ ಮೆಂಬರುಗಳು ಬೇರೆ ಇರುತ್ತಾರೆ ಇದರಿಂದ ಕೋಮುವಾರು ಚುನಾವಣೆಯ ಕೆಡಕು ಕಡಿಮೆಯಾಗುತ್ತದೆ.

ಓಟ್‌ಕೊಡುವ ಯೋಗ್ಯತೆಯನ್ನು ಕಡಿಮೆಮಾಡುತ್ತಾ ಬಂದರೆ ಕೂಲಿಕಾರರ ಪರವಾಗಿ ಸಹ ಪ್ರತ್ಯೇಕ ಮೆಂಬರುಗಳು ಬೇಕಾಗುವದಿಲ್ಲ ಪ್ರತಿಯೊಬ್ಬ ಮನುಷ್ಯನಿಗೂ ಓಟು ಕೊಡುವ ಹಕ್ಕುಕೊಟ್ಟರೆ ಸಮಾನತ್ವವು ಬೆಳದು ಎಲ್ಲರ ಹಕ್ಕುಬಾಧ್ಯತೆಗಳೂ ಅಪಾಯವಿಲ್ಲದೆ ಕಾಪಾಡಲ್ಪಡುತ್ತವೆ

ಡಿಸ್ಟ್ರಿಕ್ಟ್‌ಬೋರ್ಡು ಮೀಟಿಂಗಿನ ವಿವರ.

ಈ ತಾರೀಕು 14ರಲ್ಲಿ ಡಿಸ್ಟ್ರಿಕ್ಟ್‌ಬೋರ್ಡಿನ ಮೀಟಿಂಗು ಬೋರ್ಡಿನ ಖಾಯಂ ಅಧ್ಯಕ್ಷರಾದ ಕಮೀಷನರವರ ಅಧ್ಯಕ್ಷತೆಯಲ್ಲಿ ಮಡಿಕೇರಿಯಲ್ಲಿ ನಡೆಯಿತು. ರಾ ಬಾ ಕೋದಂಡ ಅಪ್ಪಯ್ಯನವರು, ಮೆ ಪಿ ಬಿ ಟಿಪ್ಪಿಂಗಾರವರು ಮತ್ತು ಸ್ಕೂಲುಗಳ ಸಬ್ ಅಸಿಸ್ಟೆಂಟ್ ಇನ್‌ಸ್ಪೆಕ್ಟರವರ ಗಳ ವಿನಹ ಬಾಕಿ ಎಲ್ಲಾ ಮೆಂಬರುಗಳು ಹಾಜರಿದ್ದರು

ಒಬ್ಬಟ್ಟಿನ ಮೇಲೆ ಬದಲಾವಣೆಯ ಠರಾವು ಇದ್ದರೆ ಮೀಟಿಂಗಿಗೆ ಮೊದಲೇ ಬರೆದು ಕಳುಹಿಸಬೇಕೆಂದು ಏರ್ಪಾಡಾದಲ್ಲಿ ಸಮೂದಿಸಿದ್ದ ಮೇರೆ ಕೆಲವು ಮೆಂಬರುಗಳು ಕಳುಹಿಸಿದ್ದ ಠರಾವುಗಳನ್ನು ಒಂದೊಂದಾಗಿ ಚರ್ಚೆಗೆ ತೆಗೆದುಕೊಂಡರು ಆ ಚರ್ಚೆಗಳ ಸಾರಾಂಶವೇನೆಂದರೆ —

ಮೆ ಪಿ ಟಿ ಕುಶಾಲಪ್ಪನವರು ಹೇಳಿದ್ದೇನೆಂದರೆ — ಕಸಬು ಕಂದಾಯದ ಉತ್ಪತ್ತಿ 5000ರೂ ಇರುವದನ್ನು ಹೆಚ್ಚಿಸಬೇಕು. ಇದು 1922—23ರಲ್ಲಿ 9000ಕ್ಕಿಂತ ಹೆಚ್ಚು ಇದ್ದದ್ದು ಈಗ ಕಡಿಮೆಯಾಗಲು ಕಾರಣವೇನು? ಆಡಳಿತ ಖರ್ಚೂ, ದೇಶದಲ್ಲಿ ವ್ಯಾಪಾರವೂ ಹೆಚ್ಚಾಗುತ್ತಿರುವಾಗ ಕಸಬು ಕಂದಾಯದ ಉತ್ಪತ್ತಿಯು ಹೆಚ್ಚಬೇಕಾದದ್ದು ನ್ಯಾಯ. ಕಸಬು ಕಂದಾಯದಲ್ಲಿ ಇಟ್ಟಿರುವ ದರವು ನ್ಯಾಯವಾಗಿಲ್ಲ ಸರಾಸರಿ ನೋಡಿದರೆ ಸ್ವಲ್ಪ ಉತ್ಪತ್ತಿಯುಳ್ಳವರಿಗೆ ಹೆಚ್ಚಿನ ದರವೂ, ಹೆಚ್ಚಿನ ಉತ್ಪತ್ತಿಯವರಿಗೆ ಕಡಮೆ ದರವೂ ಇದೆ ಇದು ಎಂದಿಗೂ ಸರಿಯಲ್ಲ ಇದನ್ನು ಬೇಗನೆ ಸರಿಪಡಿಸತಕ್ಕದ್ದು ಈ ವಿಷಯ ಮೊದಲೇ ಒಂದು ಸಲ ಚರ್ಚೆಯಾಗಿದೆ.

ಮೆ ಕೆ ಪಿ ಚಿಣ್ಣಪ್ಪನವರು ಇದನ್ನು ಅನುಮೋದಿಸಿದರು ಮೆ ಎ ಬಿ ಚಂಗಪ್ಪನವರು ಮತ್ತು ರಾ. ಬಾ ಕುಟ್ಟಯ್ಯನವರು, ಈಗ ಈ ವಿಷಯ ಚರ್ಚಿಸುವದರಿಂದ ಪ್ರಯೋಜನವಿಲ್ಲವೆಂದು ಹೇಳಿ ವಿರೋಧಿಸಿದರು ಈ ಠರಾವನ್ನು ಪಾಸುಮಾಡಿದರೂ ಕಸಬ ದರವನ್ನು ನಿಷ್ಕರ್ಷಿಸಿರುವ ಚೀಫ್‌ಕಮೀಷನರವರ ನೋಟಿಫಿಕೇಶನ್ನು ಒದಲಾಯಿಸದೆ ದರವನ್ನು ಒದಲಾಯಿಸಲಿಕ್ಕಾಗುವದಿಲ್ಲವೆಂತಲೂ, ಆದುದರಿಂದ ಈ ಒಬ್ಬಟ್ಟಿಗೆ ಅದರಿಂದ ಪ್ರಯೋಜನವಿಲ್ಲವೆಂತಲೂ ಹೇಳಿ ಅಧ್ಯಕ್ಷರು ಠರಾವನ್ನು ಓಟಿಗೆ ಹಾಕದೆ ಠರಾವು ಮಂಜೂರಾಗಲಿಲ್ಲ

ಆಸ್ಪತ್ರೆಯಲ್ಲಿ ಔಷಧಿಗಳಿಗೆ ಇಟ್ಟಿರುವ 7000 ರೂಪಾಯಿಯನ್ನು 12500 ರೂಪಾಯಿಗೆ ಏರಿಸಬೇಕೆಂದು ಮೆ ಪಿ ಟಿ ಕುಶಾಲಪ್ಪನವರು ಸೂಚಿಸಿ ಹೇಳಿದ್ದೇನೆಂದರೆ — 'ದೇಶದಲ್ಲಿ ಕಾಯಿಲೆ ಹೆಚ್ಚುತ್ತಿದೆ ಆಸ್ಪತ್ರೆಗಳಲ್ಲಿ ಬೇಕಾದಷ್ಟು ಔಷಧಿಗಳಿಲ್ಲವೆಂತಲೂ, ಅಲ್ಲಿ ಸಿಕ್ಕುವ ಔಷಧಿಗಳು ಒಳ್ಳೆಯವಲ್ಲವೆಂತಲೂ ಜನರ ಪುಕಾರು ಇದೆ ಇದರಲ್ಲಿ ಸಿಟಿಜನರೆಂಬುದಕ್ಕೆ ಸ್ವಂತ ಆಸ್ಪತ್ರೆಗಳಲ್ಲಿ ಔಷಧಿಗಳು ಹೆಚ್ಚಾಗಿ ಬೇಕಾಗುತ್ತಿರುವುದೇ ನಿದರ್ಶನವಾಗಿದೆ"

ಮೆ ಎ. ಬಿ. ಚಂಗಪ್ಪನವರು ಅನುಮೋದಿಸಿದರು. ಸಿವಿಲ್ ಸರ್ಜನರು ಒಂದು ಸಾವಿರ ರೂಪಾಯಿ ಹೆಚ್ಚಿಸಿದರೆ ಸಾಕಾಗುವದೆಂದು ಸೂಚಿಸಿದರು ಈ ಸೂಚನೆಯನ್ನು ಓಟಿಗೆ ಹಾಕಲಾಗಿ ಮಂಜೂರಾಗಲಿಲ್ಲ ಮೆ ಕುಶಾಲಪ್ಪನವರ ಠರಾವಿನ ಮೇಲೆ ಚರ್ಚೆ ನಡೆದು ಓಟಿಗೆ ಹಾಕಲಾಗಿ ಬಹುಮತದಿಂದ ಮಂಜೂರಾಯಿತು

ಪೊನ್ನಂಪೇಟೆಯಿಂದ ಅರಮನೆ ಬಾಣೆಗೆ ಹೋಗುವ ರಸ್ತೆಯಲ್ಲಿ ನಲ್ಲೂರು ಹೊಳೆಗೆ ಸೇತುವೆ ಕಟ್ಟುವ ಬಗ್ಗೆ 5000 ರೂಪಾಯಿ ಇಡಬೇಕೆಂತ ಮೆ ಪಿ ಟಿ ಕುಶಾಲಪ್ಪನವರು ಸೂಚಿಸಿದರು ಈ ಸೇತುವೆಗೆ ಖರ್ಚು ಎಷ್ಟಾಗಬೇಕೆಂತ ಅಂದಾಜು ಪಟ್ಟಿಯನ್ನು ಬರುವ ಎಲೆಕ್ಷನ್ನಿನೊಳಗೆ ಮಾಡಿಕೊಡುತ್ತೇನೆ, ನಂತರ ಒಬ್ಬಟ್ಟಿಗೆ ಈ ಮೊಬಲಗನ್ನು ಸೇರಿಸುವ ಆಲೋಚನೆ ಮಾಡಬಹುದೆಂದು ಎಗ್ಸಿಕ್ಯೂಟಿವ್ ಇಂಜೀನಿಯರವರು ಹೇಳಿ ಠರಾವಿಗೆ ವಿರೋಧಿಸಿದರು. ಠರಾವು ಓಟಿಗೆ ಹಾಕಲಾಗಿ ಮಂಜೂರಾಯಿತು

ಮಡಿಕೇರಿ ರಾಜಾಸೀಟಿನಿಂದ ಗಾಲ್ಫ್‌ಗ್ರೌಂಡಿಗೆ ಹೋಗುವ "ಫಿಪ್‌ರಿವರ್" ರೋಡಿನ ರಿಪೇರಿ ಮತ್ತು ಸೇತುವೆಗೆ ಇಟ್ಟಿರುವ 3000 ರೂಪಾಯಿಯನ್ನು ಮಂಜೂರುಮಾಡಕೂಡದೆಂದು ಮೆ ಸಿ ಎನ್ ವೆಂಕಪ್ಪಯ್ಯನವರು ಸೂಚಿಸಿದನ್ನು ಮೆ. ಪಿ. ಐ ಬೆಳ್ಯಪ್ಪನವರು ಅನುಮೋದಿಸಿದರು. ಮೆ ಎ. ಬಿ. ಚಂಗಪ್ಪನವರು ಠರಾವಿಗೆ ಉತ್ತೇಜನವಾಗಿ ಮಾತಾಡಿದರು. ಎಗ್ಸಿಕ್ಯೂಟಿವ್ ಇಂಜೀನಿಯರು ಇದಕ್ಕೆ ವಿರೋಧಿಸಿದರು. ಓಟಿಗೆ ಹಾಕಲಾಗಿ ಠರಾವು ಬಹುಮತದಿಂದ ಪಾಸಾಯಿತು.

ದೊಡ್ಡಿಗಳ ಖರ್ಚಿಗೆ ಇಟ್ಟ ಮೊಬಲಗಿನಿಂದ ಹತ್ತು ರೂಪಾಯಿ ಕಡಿಮೆ ಮಾಡಬೇಕೆಂದು ಮೆ. ಬಿ. ಶ್ರೀಪತಿರಾಯರು ಸೂಚಿಸಿ ರಸ್ತೆಗಳಿಗೆ ಹೋಗುವ ದನಗಳನ್ನು ದೊಡ್ಡಿಗೆ ಹಾಕುವದಲ್ಲದೆ ಮಾಲೀಕರನ್ನು ಪ್ರಾಸಿಕ್ಯೂಶನ್ ಸಹ ಮಾಡುವ ಅನಾವಶ್ಯಕ ತೊಂದರೆಯನ್ನು ನಿಲ್ಲಿಸುವುದಕ್ಕಾಗಿ ಈ ಠರಾವು ತಂದದ್ದಾಗಿ ಹೇಳಿದರು. ಮೆ. ಕೆ ಪಿ ಚಿಣ್ಣಪ್ಪನವರು ಅನುಮೋದಿಸಿದರು. ಇಂಥಾ ಪ್ರಾಸಿಕ್ಯೂಶನ್‌ಗಳನ್ನು ಮಂಜೂರುಮಾಡುವ ಡಿವಿಜನಲ್ ಆಫೀಸರಾದ ಡಿಸ್ಟ್ರಿಕ್ಟ್ ಮೆಜಿಸ್ಟ್ರೇಟರವರು ಠರಾವಿಗೆ ವಿರೋಧಿಸಿ, ಇಂಥಾ ಪ್ರಾಸಿಕ್ಯೂಶನುಗಳು ಈಗ ಬಹಳ ಕಡಿಮೆಯಾಗಿವೆಯೆಂತಲೂ, ಪ್ರಾಸಿಕ್ಯೂಶನ್ ಮಾಡಬೇಕೆಂಬ ಚೀಫ್ ಕಮೀಷನರವರ ರೂಲನ್ನು ರದ್ದು ಮಾಡದೆ ಈ ಠರಾವಿನಿಂದ ಪ್ರಯೋಜನವಿಲ್ಲವೆಂತಲೂ, ಒಸರ ತುಮುಕಿರುವ ಮುಖ್ಯವಾಗಿ ಮಡಿಕೇರಿ- ಸಿದ್ದಾಪುರ ವೀರಾಜಪೇಟೆ ರಸ್ತೆಯಲ್ಲಿ ಮಾತ್ರ ಈಗ ಈ ರೂಲನ್ನು ಜಾರಿ ಮಾಡುತ್ತಿರುವದಾಗಿಯೂ ಹೇಳಿದರು ಮೆ. ಎ. ಬಿ ಚಂಗಪ್ಪನವರು ಈ ರೂಲನ್ನು ಜಾರಿಗೆ ತಾರದೆ ಹೋದರೆ ಮೋಟಾರುಕಾರು, ಬಸ್ಸುಗಳ ಓಡ್ಯಾಟಕ್ಕೆ ತೊಂದರೆಯಾಗುತ್ತದೆಯೆಂತಲೂ ಈ ರೂಲನ್ನು ಜಾರಿಮಾಡುತ್ತಿರುವುದರಿಂದಲೇ ದನಕರುಗಳಿಗೆ ಕಾರು ಯಾ ಬಸ್ಸು ತಗಲಿ ಅಪಾಯವಾಯಿತ್ತೆಂಬ ಪುಕಾರು ಕೇಳಪಡಲಿಲ್ಲವೆಂತಲೂ ಹೇಳಿ ಠರಾವಿಗೆ ವಿರೋಧಿಸಿದರು ಚೀಫ್ ಕಮೀಷನರ ರೂಲು ರದ್ದಾಗದಿದ್ದರೂ ಈ ಪ್ರಾಸಿಕ್ಯೂಶನ್‌ಗಳನ್ನು ಮಂಜೂರು ಮಾಡುವ ಆಫೀಸರು ಈ ಬೋರ್ಡಿನ ಮೆಂಬರಾಗಿರುವ ಕಾರಣ ದೇಶದ ಅಭಿಪ್ರಾಯವನ್ನು ಈ ಠರಾವಿನ ಮೂಲಕ ಅವರಿಗೆ ಸೂಚಿಸಿ ವುದರಿಂದ ಇನ್ನು ಮುಂದೆ ಅವರು ಇಂಥಾ ಪ್ರಾಸಿಕ್ಯೂಶನ್‌ಗಳನ್ನು ಮಂಜೂರು ಮಾಡಕೂಡದೆಂದು ಅವರಿಗೆ ತಿಳುವಳಿಕೆ ಕೊಟ್ಟಂತಾಗುತ್ತದೆಂದು ಮೆ. ಸಿ ಯನ್. ವೆಂಕಪ್ಪಯ್ಯನವರು ಹೇಳಿ ಠರಾವಿಗೆ ಉತ್ತೇಜನ ಕೊಟ್ಟರು. ಠರಾವು ಬಹುಮತದಿಂದ ಪಾಸಾಯಿತು

ಸ್ಕೂಲುಪಂಚಾಯತರಿಗೆ ಸ್ಕೂಲುಮಾಸ್ಟರುಗಳು ತಕ್ಕ ಮರ್ಯಾದೆಕೊಡುವದಿಲ್ಲವೆಂತಲೂ, ಉಪಾಧ್ಯಾಯರುಗಳನ್ನು ವಗಾ- ಯಿಸುವ ಅವರಿಗೆ ಅಸ್ತಿ ಇರುವಲ್ಲೇ ಹೆಚ್ಚಿನ ಕಾಲ ಇಡುವುದು ಯುಕ್ತವಲ್ಲವೆಂತಲೂ ಅಧಿಕಾರಿಗಳಿಗೆ ತಿಳಿಸುವ ಬಗ್ಗೆ ಉಪಾಧ್ಯಾಯರುಗಳ ಸಂಬಳಕ್ಕೆ ಇಟ್ಟ ಹಣದಿಂದ ಹತ್ತು ರೂಪಾಯಿ ಕಡಿಮೆಮಾಡಬೇಕೆಂಬ ಠರಾವನ್ನು ಮೆ. ಬಿ ಶ್ರೀಪತಿರಾಯರು ಸೂಚಿಸಿದರು ಮಾಸ್ಟರುಗಳು ಪಂಚಾಯತರಿಗೆ ಮರ್ಯಾದೆಕೊಡದೆ ಇದ್ದ ಸಂದರ್ಭಗಳಲ್ಲಿ ಅಧಿಕಾರಿಗಳಿಗೆ ಪ್ರತ್ಯೇಕ ಒರೆಕೊಳ್ಳಬೇಕೆಂತಲೂ, ಮಾಸ್ಟರುಗಳನ್ನು ಅಸ್ತಿ ಇರುವ ಕಡೆ ಇಟ್ಟುಕೊಳ್ಳುವದು ಒಳ್ಳೇದೋ, ಕೆಟ್ಟದೋ ಎಂಬ ವಿಷಯದಲ್ಲಿ ಬೇರೆ ಅಭಿಪ್ರಾಯವಿದೆಯೆಂತಲೂ, ಕೆಲಸ ಚೆನ್ನಾಗಿ ಮಾಡಲು ಯೋಗ್ಯತೆ ಇಲ್ಲವೆಂಬ ಕಾರಣದಿಂದ ವರ್ಗಾಯಿಸುವುದು ಸರಿಯಲ್ಲ, ಯಾಕೆಂದರೆ ಅಂಥಾ ಉಪಾಧ್ಯಾಯನನ್ನು ಎಲ್ಲಿಗೆ ವರ್ಗಾಯಿಸಿದರೂ ತಿದ್ದಿಕೊಳ್ಳಲು ಸಾಧ್ಯವಿಲ್ಲವೆಂತಲೂ ಬೇರೆ ಕಾರಣಗಳಿದ್ದರೆ ವರ್ಗಾಯಿಸಬಹುದೆಂತಲೂ ಅಧ್ಯಕ್ಷರು ವಿವರಿಸಿದರು ಮೆ ಬಿ ಶ್ರೀಪತಿರಾಯರು ಠರಾವನ್ನು ವಾಪಸು ತೆಗೆದುಕೊಂಡರು

ವೀರಾಜಪೇಟೆ ಒಂಟಿಯಂಗಡಿ ರಸ್ತೆಯ 1ನೇ ಮೈಲಿನ ಬಳಿ ಇರುವ ಸೇತುವೆಯನ್ನು ಒಲಪಡಿಸಲಿಕ್ಕೆ 1200 ರೂಪಾಯಿಯನ್ನೂ ಅಮ್ಮತ್ತಿ ಮೂರ್ನಾಡು ರಸ್ತೆಯಲ್ಲಿರುವ ಎರಡು ಸೇತುವೆಗಳನ್ನು ಒಲಪಡಿಸಲಿಕ್ಕೆ 5150 ರೂ ನ್ನೂ ಮಂಜೂರುಮಾಡಬೇಕೆಂದ ಎಗ್ಸಿಕ್ಯೂಟಿವ್ ಇಂಜೀನೀಯರವರು ಸೂಚಿಸಿ, ಸೇತುವೆಗಳನ್ನು ಕಲ್ಲುಹಾಸಿ ಹೆಚ್ಚು ಗಟ್ಟಿಯಾಗಿ ಕಟ್ಟಿಸಿದರೆ ವರ್ಷಂಪ್ರತಿ ಬೇಕಾಗುವ ರಿಪೇರಿ ಖರ್ಚು ಉಳಿಯುತ್ತದೆಯೆಂದು ಹೇಳಿದರು ಡಿಸ್ಟ್ರಿಕ್ಟ್‌ಬೋರ್ಡಿನ ಪ್ರಯೋಜನವು ದೇಶದ ಎಲ್ಲಾ ಕಡೆಗಳಿಗೂ ಸಿಕ್ಕುವಂತೆ ಹಣ ಖರ್ಚು ಮಾಡಬೇಕಲ್ಲದೆ ರಸ್ತೆಗಳ ಅನುಕೂಲವಿರುವಂಥ ಕಡೆಗಳಲ್ಲಿಯೇ ಹೆಚ್ಚಿನ ಹಣ ವ್ಯಯಮಾಡುವುದು ನ್ಯಾಯವಲ್ಲವೆಂದ, ಮೆ. ಪಿ ಟಿ ಕುಶಾಲಪ್ಪನವರು ಹೇಳಿದರು ಸಾಕಷ್ಟು ಲೆಟ್ಟ ಅಧಿಕಾರಿಗಳು ಹಣ ಖರ್ಚು ಮಾಡಲಾಗುವುದಿಲ್ಲವೆಂದು ಹೇಳುವಾಗ, ಬೋರ್ಡಿನವರು ಹಣ ಮಂಜೂರು ಮಾಡುವುದೂ, ಬೇಕೆಂತ ಕೇಳುವಾಗ ಹಣ ಕೊಡದಿರುವದೂ ಹಾಸ್ಯಾಸ್ಪದವಾಗಿದೆಯೆಂದೂ ವರ್ಷಂಪ್ರತಿ ರಿಪೇರಿ ಖರ್ಚು ಉಳಿಯುವುದರಿಂದ ಒಂದೇ ಸಾರಿ ಸೇತುವೆಗಳನ್ನು ಭದ್ರವಾಗಿ ಕಟ್ಟುವುದು ನ್ಯಾಯವೆಂದೂ ಹೇಳಿ ಮೆ. ಪಿ. ಬಿ. ಮಾದಪ್ಪನವರು ಠರಾವಿಗೆ ಉತ್ತೇಜನಕೊಟ್ಟರು. 'ಅಧಿಕಾರಿಗಳು ಬೇಕೆಂತ ಕೇಳುವಾಗ ಖರ್ಚನ್ನು ಮಂಜೂರು ಮಾಡುವುದೂ, ಬೇಡವೆಂತ ಹೇಳುವಾಗ ತಿರಸ್ಕರಿಸುವುದೂ ಬೋರ್ಡಿನ ಕರ್ತವ್ಯವಲ್ಲ, ದೇಶದ ಆವಶ್ಯಕತೆಗೆ ಬೇಕಾದ ಖರ್ಚುಗಳನ್ನೇ ಮಾಡಬೇಕೆಂದು ಅಧಿಕಾರಿಗಳಿಗೆ ತಿಳಿಸುವುದೇ ಪ್ರಜಾಪ್ರತಿನಿಧಿಗಳಾದ ಬೋರ್ಡಿನ ಮೆಂಬರುಗಳ ಕೆಲಸವಾಗಿದೆಯೆಂದು ಮೆ ಸಿ. ಯನ್ ವೆಂಕಪ್ಪಯ್ಯನವರು ಹೇಳಿದರು. ಠರಾವು ಓಟಿಗೆ ಹಾಕಲಾಗಿ ಬಹುಮತದಿಂದ ಮಂಜೂರಾಯಿತು

ಡಿಸ್ಟ್ರಿಕ್ಟ್‌ಬೋರ್ಡಿನಲ್ಲಿ ಮೊದಲೇ ಚರ್ಚೆಯಾಗಿ ಮಂಜೂರಾದಂಥ ಹೊಸ ಕೆಲಸಗಳನ್ನು ಮಾತ್ರ ಬಜೆಟಿನಲ್ಲಿ ಸೇರಿಸಬೇಕೇ ಹೊರತು ಬೇರೆ ಹೊಸ ಕೆಲಸಗಳನ್ನು ಸೇರಿಸಬಾರದೆಂಬ ತತ್ವವನ್ನು ಸಾಧಿಸಲಿಕ್ಕಾಗಿ ಮೆ ಪಿ ಟಿ. ಕುಶಾಲಪ್ಪನವರು ಡಿ ಪಿ ಡಬ್ಲ್ಯು. ಬಜೆಟಿನ ನಾಲ್ಕು ಐಟಮುಗಳಿಗೆ ವಿರೋಧಿಸಿದರು ಆದರೆ ಈ ಐಟಮುಗಳು ಮೊದಲೇ ಚರ್ಚೆಯಾಗಿದ್ದವೆಂದು ತಿಳಿಯಬಂದದ್ದರಿಂದ ಆ ಠರಾವು ಮಂಜೂರಾಗಲಿಲ್ಲ.

ತಿದ್ದುಪಡಿಯಾದ ಬಜೆಟು ಬೋರ್ಡಿನಿಂದ ಮಂಜೂರಾಯಿತೆಂಬ ಠರಾವನ್ನು ಅಧ್ಯಕ್ಷರು ಸೂಚಿಸಿ ಒಪ್ಪಲಾಯಿ... ಡಿಸ್ಟ್ರಿಕ್ಟ್ ಬೋರ್ಡಿನ ಚುನಾವಣೆಯ ರೂಲ್ಸು ಮೊದಲೇ ಚೀಫ್ ಕಮೀಷನರವರಿಂದ ಮಂಜೂರಾಗಿರು... ರಿಂದಲೂ, ಕಳೆದ ಸಾರಿ ಚರ್ಚಿಸಲ್ಪಟ್ಟ ಸೆಕ್ಷನುಗಳ ಮೇ... ಯೇ ಪುನಹ ಒದಲಾವಣೆಯ ಸೂಚನೆಗಳು ಬಂದಿರುವದ... ಅವುಗಳನ್ನು ಚರ್ಚಿಸಲು ಬಿಡಲಾಗುವುದಿಲ್ಲವೆಂತಲೂ ಅಧ್ಯ... ರು ತಿಳಿಸಿ ಮೀಟಿಂಗನ್ನು ಬರಖಾಸ್ತು ಮಾಡಿದರು.

ಮಾರಾಟಕ್ಕೆ ಸಿದ್ಧವಾಗಿದೆ.

ಮೈಸೂರು ವಾಣೀವಿಳಾಸ ಮೊಹಲ್ಲಾ, ಮೈಸೂರು ...ಸ್ನಂಬಾಡಿ ರೋಡಿನಲ್ಲಿರುವ 1ನೇ ಬ್ಲಾಕು 3 ಮತ್ತು 4ನೇ ...ಟು, ಅಳತೆ 185 X 160 ಅಡಿಗಳುಳ್ಳ ಇಟ್ಟಿಗೆ ಕಂಪೌಂ... ಹಾಕಿ, 2 ಗೇಟು ಮತ್ತು ನೀರಿನ ಪೈಪು ಸಹಾ ಹಾಕಿರುತ್ತೆ ಮೈಸೂರುಸಿಟಿ ಇಂಪ್ರೂವ್‌ಮೆಂಟು ಟ್ರಸ್ಟಿನವರ ರೂ... ಅನುಸರಿಸಿ 7117 ರೂಪಾಯಿ 6 ಆಣೆಗೆ ಬಿಕರಿಗೆ ಮಾಡಲ್ಪ...ತ್ತೆ ಇಷ್ಟವುಳ್ಳವರು ಕೆಳಗಿನ ವಿಳಾಸಕ್ಕೆ ಬರೆದು ತಿ... ಕೊಳ್ಳಬಹುದು.

ಸೂಪರಿನ್‌ಟೆಂಡೆಂಟರು,
ಲೇಬರ್ ಡಿಪಾರ್ಟ್‌ಮೆಂಟು,
ಮೈಸೂರು

COORG FOREST DEPARTMENT
NOTICE

Mercara, the 16th August 1926.

Tenders are invited by the 2nd Septem... 1926, for the supply of the following quanti... of rations required for the use of Governme... Livestock stationed at Hudugur —

(1) Gram	70 pallas
(2) Ragi	67 „

For further particulars apply to —
The Chief Forest Officer, Coorg,
Mercara

ವರ್ತಮಾನ ಸಂಗ್ರಹ.

ಒಳದೇಶ

'ಕೊಡಗು' ಕಂಪೆನಿಯ ಡೈರೆಕ್ಟರುಗಳ ಮೀಟಿಂಗ ... ತಾ 21ರಲ್ಲಿ ಕಂಪೆನಿಯ ಆಫೀಸಿನಲ್ಲಿ ನಡೆಯುವುದು

ಕಳೆದ ಶನಿವಾರದಿಂದ ಇಂದಿನವರೆಗೆ ಮಡಿಕೇರಿಯ... 5 90 ಇಂಚು ಮಳೆಬಿದ್ದಿದೆ ತಾ. 17ರಲ್ಲಿ 1.41 ಇಂಚು ಮತ್ತು ತಾ. 18ರಲ್ಲಿ 1 10 ಇಂಚೂ ಮಳೆಯಾಯಿತು.

ಈ ತಾರೀಕು 14ನೇ ಶನಿವಾರ ಬೆಳಿಗ್ಗೆ 11ಗಂಟೆಗೆ ಸ್ಟ್ರಿಕ್ಟ್‌ಬೋರ್ಡು ಮೀಟಿಂಗು ಕೌನ್ಸಿಲ್ ಚೇಂಬರಿನಲ್ಲಿ ನ...ಯಿತು ಇದರ ವಿವರವು ಇನ್ನೊಂದು ಕಡೆ ಪ್ರಕಟ...ಗಿದೆ

ಶಿರಂಗಾಲದಲ್ಲಿ ಕೆಲವು ದಿವಸಗಳ ಹಿಂದೆ ಇಲಿ ಸಾಯುತ್ತಿದ್ದು, ಈಗ ಪ್ಲೇಗು ತಲೆದೋರಿದೆಯೆಂದೂ, ಈಗಾಗಲೇ ... ಲವರು ಈ ರೋಗಕ್ಕೆ ತುತ್ತಾಗಿರುವರೆಂದೂ, ನ್ಯಾಷನಲಿಸ್ಟ್ ... ನಾಸ್ವತ್ತವರು ಅಲ್ಲಿಗೆ ಹೋಗಿರುವರೆಂದೂ ವರ್ತಮಾನ

ಈ ತಾ 15ರಲ್ಲಿ ಓಂಕಾರೇಶ್ವರ ದೇವಸ್ಥಾನದ ... ಗಳಿ ರಾ ಬಾ ಕೆ ಕುಟ್ಟಯ್ಯನವರ ಅಧ್ಯಕ್ಷತೆಯಲ್ಲಿ ವ... ಕೇರಿ ಕೂಡವರ ಮೀಟಿಂಗೊಂದು ನಡೆದು ಬರುವ ಕೈಲ್‌ಪೊ... ಹೂರ್ತ ಹಬ್ಬದಲ್ಲಿ ಊಟವನ್ನು ಏರ್ಪಾಡಿಸಲಿಕ್ಕೆ ಒಂದು ಕ... ಟಿಯು ನೇಮಿಸಲಾಯಿತು

ಅಂದಗೋವೆ ಗ್ರಾಮದ ಪೊಳ್ಳಿರ ಚಂಗಪ್ಪ ಮಕ್ಕ... ಚ್ಚಯ್ಯ ಎಂಬವರ ಮೇಲೆ ಒಬ್ಬ ಹುಡುಗನನ್ನು ... ಮಾನಭಂಗ ಮಾಡಿದರೆಂಬ ತಕ್ಷೀರ್ ಕುರಿತು ಈ ವಾರ ... ನ್ನ ಮೊಖದ್ದಮೆ ನಡೆದು ಇಬ್ಬರಿಗೂ 6 ತಿಂಗಳು ಕಠಿಣ ... ಜ ಮತ್ತು ಹದಿನೈದು ಬೆತಿಸೆಟ್ಟಿನ ಶಿಕ್ಷೆ ವಿಧಿಸಲಾಗಿದೆ

ವ್ಯವಸಾಯ ಕಮಿಟಿಯವರು ತಾ. 13ರಲ್ಲಿ ಮಡಿ... ರಿಯಲ್ಲಿಯೂ, 16ರಲ್ಲಿ ಸೋಮವಾರಪೇಟೆಯಲ್ಲಿಯೂ ... ತ್ತು 17ರಲ್ಲಿ ಶನಿವಾರಸಂತೆಯಲ್ಲಿಯೂ ಸೇರಿ ಆ ಇಲಾಖೆ... ನ್ನು ಪರಿಶೀಲಿಸುವುದರ ವಿಷಯದಲ್ಲಿಯೂ, ಕೃಷಿಯಲ್ಲಿ ಕ... ಗಿರುವ ಕಷ್ಟಗಳನ್ನು ಕುರಿತೂ ಕೆಲವು ಮುಖ್ಯಸ್ಥರ ... ಪ್ರಾಯಗಳನ್ನು ತೆಗೆದುಕೊಂಡರು.

ಮದ್ರಾಸು ಪ್ರಾಂತ್ಯದಲ್ಲಿ ಲಾಗಿಂಗ್ ಇಂಜೀನಿಯ... ದ್ದ ಮೆ ಪೆ ಕೆ. ಪೀಯರ್‌ಸನ್‌ರವರು ಈ ತಾ. 14ರಿಂದ ಚೀ... ಫಾರೆಸ್ಟ್ ಇಂಜೀನೀಯರಾಗಿ ನೇಮಿಸಲ್ಪಟ್ಟಿರುವ ಕಾರಣ ... ಕ್ಸ್‌ಟ್ರಾ ಅಸಿಸ್ಟೆಂಟ್ ಕನ್‌ಸರ್ವೇಟರಾಗಿದ್ದ ಮೆ. ಐಪ್ಪ... ಎ. ಕಾರ್ಯಪ್ಪನವರನ್ನು ಅವರ ಬದಲು ಲಾಗಿಂಗ್ ಇಂ... ನೀಯರ್ ಕೆಲಸ ನೋಡಲು ನೇಮಿಸಿರುವರು.

ಮೆ. ಚೆಪ್ಪುಡೀರ ಕಾರ್ಯಪ್ಪನವರ ಮಗ ಮೆ. ಬೋಪ... ಪ್ಪನವರು ಕಳೆದ ಘೋರ ಯುದ್ಧದ ಸಮಯದಲ್ಲಿ ಪರ್ಷಿ... ಮೆಸೊಪಟೋಮಿಯಾ- (ಬಸ್ರಾ ಬಾಗ್‌ದಾದ್) ಇರ್... ಎಂಬ ಪ್ರದೇಶಗಳಲ್ಲಿ ಮಿಲಿಟರಿ ಇಲಾಖೆಯಲ್ಲಿ ಒಳ್ಳೆ ಕೆ... ಮಾಡಿದವರು, ಒಳ್ಳೇ ನಡತೆಗಾಗಿ ಇವರಿಗೆ ಓದು ಫ...

ಮೊದಲು ಕಳೆದ ತಿಂಗಳಿನ ಆಖೈರಿನಲ್ಲಿ ಬಿಂದಾನ್ ವಾರ್ಡ್ ಆಸಿನಿಂದ ಬಂದಿರುವದನ್ನು ಕೇಳಿ ಸಂತೋಷಪಡುತ್ತೇವೆ.

ಶ್ರೀಮಂಗಲನಾಡು ಬಾಡಗ ಗ್ರಾಮದ ತಡಿಯಂಗಡ ಸೋಮೈಯ್ಯ, ಚೆಟ್ಟಂಗಡ ಅಚ್ಚೈಯ್ಯ ಮತ್ತು ಚೆಟ್ಟಂಗಡ ಬೆಳ್ಳಿಯಪ್ಪ ಎಂಬವರ ಮೇಲೆ ದೀಪರ ಮಕ್ಕಳ ಅಣ್ಣು ಎಂಬವನನ್ನು ಗುಂಡು ಹೊಡೆದು ಕೊಂದರು ಎಂಬ ಖೂನಿ ಕೇಸ್ ಸೆಶನ್ ಕೋರ್ಟಿನಲ್ಲಿ ಕಳೆದವಾರ ವಿಚಾರವಾಗಿ ತಡಿಯಂಗಡ ಸೋಮೈಯ್ಯನಿಗೂ, ಚೆಟ್ಟಂಗಡ ಬೆಳ್ಳಿಯಪ್ಪನಿಗೂ ಖುಲಾಸ್ ಆಯಿತು. ಚೆಟ್ಟಂಗಡ ಅಚ್ಚೈಯ್ಯನಿಗೆ ಜೀವನವಿಡೀ ಪ್ರೋರ್ಟ್ ಬ್ಲೇರ್ ಮೇಲೆ ದ್ವೀಪಾಂತರ ಶಿಕ್ಷೆ ವಿಧಿಸಲಾಗಿದೆ. ತಾ 27—2—1926 ನೇ ದಿನ ಬೆಳಿಗ್ಗೆ ತಡಿಯಂಗಡ ಸೋಮೈಯ್ಯನು ಪೌತ್ರನ ಮದುವೆಗೆ ಬರದು ತಾನು ಹಿಂದಿನ ದಿನ ಒಂದು ಕಾಡು ಹಂದಿಗೆ ಗುಂಡು ಹೊಡೆದು ಘಾಯವಾಗಿದೆ. ನಾಯಿ ಕರೆದುಕೊಂಡು ಬರಬೇಕೆಂತ ಪೌತ್ರನನ್ನು ಕರೆದನೆಂತಲೂ, ಪೌತ್ರನು ಅವನ ಮನೆಯಲ್ಲಿ ಹೋದನೆಂತಲೂ ಹೋಗಿ ಸ್ವಲ್ಪ ಹೊತ್ತಿನ ಮೇಲೆ ಪೌತ್ರನ ಹೊಡತಿಗೆ ಮೂರು ಗುಂಡುಗಳ ಶಬ್ದ ಕೇಳಿತೆಂತಲೂ, ಅಚ್ಚೈಯ್ಯನು ಪೌತ್ರನ ಮತ್ತು ತಡಿಯಂಗಡ ಸೋಮೈಯ್ಯನ ಜೊತೆಯಲ್ಲಿ ಕಾಡಿಗೆ ಹೋದದ್ದು ಕಂಡೆನೆಂತಲೂ ಸಾಕ್ಷಿ ಬಾತು ಕೊಡಲಾಯಿತು. ರಕ್ತವಿದ್ದ ಒಟ್ಟೆಯು ಸೋಮೈಯ್ಯ ಮತ್ತು ಅಚ್ಚೈಯ್ಯನಲ್ಲೂ ಸಿಕ್ಕಿತು. ಅದರೆ ಅಚ್ಚೈಯ್ಯನು ಹೆಣ ಬಿದ್ದ ಸ್ಥಳವನ್ನು ತೋರಿಸಿಕೊಟ್ಟು ಪೌತ್ರನ ಟೋಪಿಯನ್ನು ಹೆಕ್ಕಿಕೊಟ್ಟದ್ದರಿಂದಲೂ, ಅವನಿಗೂ ಪೌತ್ರನಿಗೂ ವೈಷಮ್ಯ ಇರುವವಾತಾದ್ದರಿಂದಲೂ ಅಚ್ಚೈಯ್ಯನ ಮೇಲೆ ಹುಟ್ಟಿಸಿದ ಬಾತು ಇದೆ ಎಂತ ಅವನಿಗೆ ಶಿಕ್ಷೆ ವಿಧಿಸಲಾಗಿದೆ. ಸೋಮೈಯ್ಯನು ಕಾಡಿಗೆ ಪೌತ್ರನನ್ನು ಕರೆದುಕೊಂಡು ಹೋಗಿದ್ದರೂ ಗುಂಡು ಹೊಡೆಯುವಾಗ ಅವನು ಜೊತೆಯಲ್ಲೇ ಇದ್ದನೆಂತ ಸಾಕ್ಷಿ ಬಾತು ಇಲ್ಲವೆಂಬ ಕಾರಣದಿಂದ ಅವನನ್ನು ಖುಲಾಸ್ ಮಾಡಿದ್ದಾರೆ. ಚೆಟ್ಟಂಗಡ ಬೆಳ್ಳಿಯಪ್ಪನ ಮೇಲೆ ಯಾವ ರುಜುವಾತೂ ಇಲ್ಲ.

ಹಿಂದೂದೇಶ.

ತಾ 16ರಲ್ಲಿ ಜೋರಾದ ಮಳೆಯ ದೆಸೆಯಿಂದ ನೆರೆ ಬಂದು ಯಾವ ವ್ಯಾಪಾರವೂ ಇಲ್ಲದೆ ರಂಗೂನು ಪಟ್ಟಣವು ಬೇರೆ ಕಡೆಗಳಿಂದ ಪ್ರತ್ಯೇಕಿಸಲ್ಪಟ್ಟಿತ್ತು.

ಸಿಂಹಳ ದ್ವೀಪದಲ್ಲಿ 'ವೇದಾಸ' ವೆಂಬ ಒಂದು ವಿಶೇಷ ಜಾತಿಯ ಜನರಿರುವರು. ಅವರು ನಗಾಡಿದ್ದಾಗಲೀ, ಸುಳ್ಳು ಹೇಳಿದ್ದಾಗಲೀ ಎಂದೂ ಇಲ್ಲವಂತೆ!

ಕಲ್ಕತ್ತಾದಲ್ಲಿ ಬಾಡಿಗೆ ಕಾರುಗಳ ದರವನ್ನು ಮೈಲಿಗೆ 12 ಆಣೆಯಿಂದ 8 ಆಣೆಗೆ ಇಳಿಸುವ ವಿಷಯದಲ್ಲಿ ಅಲ್ಲಿಯ ಮುನ್ಸಿಪಾಲಿಟಿಯವರ ಅಭಿಪ್ರಾಯವನ್ನು ಸರಕಾರದವರು ಕೇಳಿರುವರು.

ಜಿನೀವ ಪಟ್ಟಣದಲ್ಲಿ ಸೇರಿದ್ದ ಪ್ರಪಂಚದ ಕೂಲಿಕಾರರ ಪರಿಷತ್ತಿಗೆ ಹಿಂದೂಸ್ಥಾನದ ಪ್ರತಿನಿಧಿಯಾಗಿ ಹೋಗಿದ್ದ ಲಾಲಾ ಲಜಪತರಾಯರು ಈ ತಾ 13ರಲ್ಲಿ ಬೊಂಬಾಯಿಗೆ ಹಿಂತಿರುಗಿ ಬಂದು ತಲಪಿದರು.

ಗುಜರಾಥ ರಾಷ್ಟ್ರೀಯ ವಿದ್ಯಾಪೀಠದಲ್ಲಿ ಉಪಯೋಗಿಸುವದಕ್ಕೆ ಮಹಾತ್ಮ ಗಾಂಧಿಯವರು ರಚಿಸಿರುವ ಪಾಠಪುಸ್ತಕಗಳನ್ನು ಸರಕಾರೀ ಶಾಲೆಗಳಲ್ಲಿಯೂ ಕಲಿಸಲು ಬಿಡಬೇಕೆಂದು ಅಹಮ್ಮದಾಬಾದಿನ ಮುನ್ಸಿಪಾಲಿಟಿಯವರು ಕೇಳಿದಕ್ಕೆ ಸರಕಾರದವರು ಒಪ್ಪಿರುವರು.

ಪುಸ್ತಕ ಭಂಡಾರಕ್ಕಾಗಿ ಒಂದು ಲಕ್ಷ, ಶಾಸ್ತ್ರೀಯ ಶಿಕ್ಷಣವನ್ನು ಪಡೆಯಲು ಪರದೇಶಕ್ಕೆ ಹೋಗುವವರಿಗೆ ವೇತನ ಕೊಡಲಿಕ್ಕಾಗಿ ಒಂದು ಲಕ್ಷ, ಹೀಗೆ ಎರಡು ಲಕ್ಷ ರೂಪಾಯಿಗಳನ್ನು ಬರೋಡ ದೇಶದ ಶ್ರೀ ಸಯಾಜಿರಾವ್ ಗಾಯಕವಾಡ್ ರವರು ಹಿಂದು ವಿಶ್ವವಿದ್ಯಾಲಯಕ್ಕೆ ಕೊಟ್ಟಿರುವರು.

ಬಂಗಾಳ ದೇಶದಲ್ಲಿ ಒಬ್ಬ ಠಾಕುರು ಒಂದು ಮೊಕದ್ದಮೆಯಲ್ಲಿ ಒಬ್ಬ ಸಾಕ್ಷಿಯನ್ನು ವಿಚಾರ ಮಾಡುತ್ತಿರುವಾಗ್ಯೆ ಅವನನ್ನು ಅವಮಾನಕರವಾದ ಪ್ರಶ್ನೆ ಕೇಳಿದ್ದಕ್ಕೆ ಠಾಕುರಿಗೆ ದಂಡ ವಿಧಿಸಲ್ಪಟ್ಟಿತು. ಇದರ ಮೇಲೆ ಅಪ್ಪೀಲು ಮಾಡಲಾಗಿ ಕಲ್ಕತ್ತಾ ಹೈಕೋರ್ಟಿನವರು ಕೆಳ ಕೋರ್ಟಿನ ಶಿಕ್ಷೆಯನ್ನೇ ಖಾಯಂ ಮಾಡಿರುವರು. ಈ ವಿಷಯಕ್ಕೆ ನಮ್ಮ ದೇಶದ ಠಾಕುರುಗಳೂ ಗಮನಕೊಡುವರೇ?

ಕೊಚ್ಚಿ, ತಿರುವಾಂಕೂರು, ಕಣ್ಣಿಕೋಟೆ ಮೊದಲಾದ ಕಡೆಗಳಲ್ಲಿರುವ ನಂಬೂದ್ರಿ ಜನರ ಕುಟುಂಬದಲ್ಲಿ ಎಷ್ಟು ಸಹೋದರರಿದ್ದರೂ ಹಿರೇ ಅಣ್ಣನು ಮಾತ್ರ ನಂಬೂದ್ರಿ ಹುಡುಗರನ್ನು ಮದುವೆಯಾಗಿ ಜಾತಿಯವರು ನಾಯರು ಸ್ತ್ರೀಯರನ್ನು ಇಟ್ಟುಕೊಳ್ಳುವದು ವಾಡಿಕೆಯಾದ ಕಾರಣ ಅನೇಕ ನಂಬೂದ್ರಿ ಯುವತಿಯರು ಲಗ್ನವಾಗಲು ಅನುಕೂಲವಿಲ್ಲ, ಮಾತ್ರವಲ್ಲ, ಅಲ್ಲಿ ಬಹು ಪತ್ನೀತ್ವವೂ ನಡೆಯುತ್ತಿದೆ. ಆದುದರಿಂದ ನಂಬೂದ್ರಿ ಜಾತಿಯ ಗಂಡಸರೆಲ್ಲರೂ ನಂಬೂದ್ರಿ ಸ್ತ್ರೀಯರನ್ನೇ ಲಗ್ನವಾಗುವಂತೆಯೂ, ಬಹು ಪತ್ನೀತ್ವವನ್ನು ತಿರಸ್ಕರಿಸಬೇಕಾಗುವಂತೆಯೂ ಮತ್ತು ಮರದಕ್ಷಿಣೆಯನ್ನು ನಿಲ್ಲಿಸುವಂತೆಯೂ ಶಾಸನವನ್ನು ಮಾಡಬೇಕೆಂದು ಅಲ್ಲಿಯ ನಂಬೂದ್ರಿ ಯುವತಿಯರು ತಿರುವಾಂಕೂರಿನ ಮಹಾರಾಣಿ ರೀಜೆಂಟರವರಿಗೂ, ಕೊಚ್ಚಿನ್ ರಾಜರಿಗೂ, ಕಣ್ಣಿಕೋಟೆಯ ಜಾಮೊರಿನ್ ರವರಿಗೂ ಬಿನ್ನೈಸಿಕೊಂಡಿರುವರೆಂದು ವರ್ತಮಾನ.

ಚಿಲಿದೇಶದ ಲಾ ಟಾರೊಸಿಡಿಯೋ ಎಂಬಲ್ಲಿಂದ ಚಿಲಿಯನ್ ನೈಟ್ರೇಟು ಪ್ರೊಡ್ಯೂಸರ್ಸ್ ಎಸೋಸಿಯೇಶನ್ ನವರು ನೈಟ್ರೇಟ್ ಆಫ್ ಸೋಡದ ಕ್ರಯವನ್ನು ತಗ್ಗಿಸಿ ಮುಂಬರುವ ವರ್ಷಕ್ಕೆ ಕೆಳಗೆ ನಮೂದಿಸಿದ ರೀತಿಯಲ್ಲಿ ಕ್ರಯ ನಿಶ್ಚಯಿಸಿರುತ್ತಾರಾಗಿ ಅವರಿಂದ ಒಂದ ತಂತಿಯಿಂದ ತಿಳಿದುಬರುತ್ತದೆ. "ವ್ಯಾಪಾರಕ್ಕೋಸ್ಕರ ಆಮದಾಗುತ್ತಿದ್ದ 95% ಶುದ್ಧವಾದ ನೈಟ್ರೇಟ್ ಆಫ್ ಸೋಡದ ಕ್ರಯವು 1926ನೇ ಇಸವಿ ಜೂನ್ ತಿಂಗಳಲ್ಲಿ ಟನ್ ಒಂದರ 9—5—6 ರಂತೆಯೂ ಅಪ್ರೀಲ್ ಪ್ರತಿ 15 ದಿವಸಗಳಿಗೊಮ್ಮೆ ವಿವರ್ತ್ಯಾ ಹೋಗಿ 1927ನೇ ಇಸವಿ ಜನವರಿ ತಿಂಗಳಲ್ಲಿ 10—0—8 ರಂತೆ ಮತ್ತು ಆನಂತರದ ತಿಂಗಳುಗಳಲ್ಲಿ ಅದೇ ಪ್ರಕಾರ ಹೆಚ್ಚುತ್ತಾ ಹೋಗುವದು. ಮೇಲೆ ನಿರ್ಣಯಿಸಿದ ಕ್ರಯವು 224 ರಾತ್ತಲುಗಳ ಟನ್ ಒಂದಕ್ಕೆ ಡೆಲಿವರಿ ಕೊಡುವ ಬಂದರುಗಳ ಸ್ಟೇಶನುಗಳಿಗೆ ಮುಟ್ಟಿಸಿಕೊಡುವ ದರವಾಗಿರುತ್ತದೆ"

ವಿದೇಶ.

ಪ್ರಪಂಚದಲ್ಲಿ ಹುಟ್ಟುವ ಅವಳಿ ಜವಳಿ ಮಕ್ಕಳ ಲೆಕ್ಕತೆಗೆದಲ್ಲಿ ಜನಿಸುವ ಪ್ರತಿ 69 ಮಕ್ಕಳುಗಳಲ್ಲಿ ಒಂದು ಅವಳಿ ಜವಳಿಯೆಂದು ಕಂಡುಬಂದಿದೆ.

ಕಳೆದ ಘೋರ ಯುದ್ಧದಲ್ಲಿ ಕಾಣೆಯಾದ ಲಾರ್ಡ್ ಕಿಚನರ್‌ರವರ ಶರೀರವಿದೆಯೆಂದು ಒಂದು "ಶಾಫಿನ್" ಪೆಟ್ಟಿಗೆಯನ್ನು ಫ್ರಾಂಕ್ ಪವರ್‌ರವರು ನಾರ್ವೆಯಿಂದ ಲಂಡನಿಗೆ ತಂದರು. ಅದನ್ನು ತೆರೆದು ನೋಡುವಾಗ್ಯೆ ಅದರೊಳಗೆ ಶರೀರವು ಇರಲಿಲ್ಲವಂತೆ.

ಇಂಗ್ಲೆಂಡಿನ ಬರ್ಮಿಂಗ್‌ಹಾಮ್ ಪಟ್ಟಣದಲ್ಲಿ ಒಬ್ಬ ಸ್ತ್ರೀಯು ಏಕಕಾಲದಲ್ಲಿ ಹಡೆದ ಮೂರು ಮಕ್ಕಳು ಎಲ್ಲಾ ವಿಧದಲ್ಲಿಯೂ ಒಂದೇ ರೀತಿಯಲ್ಲಿರುವದರಿಂದ ಅವುಗಳನ್ನು ಗುರ್ತಿಸುವದು ತಪ್ಪುವಾಗಿ, ಅವುಗಳ ಕುತ್ತಿಗೆಗೆ 1, 2, ಮತ್ತು 3 ಎಂದು ಸಂಖ್ಯೆಯನ್ನು ಬರೆದು ಪಟ್ಟಿಯನ್ನು ಕಟ್ಟಿರುವರಂತೆ!

ಭೂಲೋಕದ ಉತ್ತರ ಭಾಗದ ಅತಿ ಶೀತ ಪ್ರದೇಶದಲ್ಲಿ ವಾಸಿಸುವ ಕಾಡು ಜನರಾದ ಎಸ್ಕಿಮೊ ಎಂಬವರಲ್ಲಿ ಒಂದು ಉತ್ತಮ ಪದ್ಧತಿ ಇದೆ. ಅವರಲ್ಲಿ ರೋಗಿಗಳಿಗೆ ಚಿಕಿತ್ಸೆ ನೋಡಲು ಡಾಕ್ಟರನ್ನು ಕರೆತರುವಾಗಲೇ ಅವರ ಚಾರ್ಜ್ ಕೊಟ್ಟುಬಿಡುವರು. ರೋಗವು ವಾಸಿಯಾಗದಿದ್ದರೆ ಡಾಕ್ಟರು ಆ ಚಾರ್ಜನ್ನು ವಾಪಸು ಕೊಟ್ಟುಬಿಡುವರಂತೆ!

ಅಮೇರಿಕದಲ್ಲಿ ಜಾನ್‌ಸನ್ ಎಂಬಾತನೊಬ್ಬನು ಆಹಾರವೇನೂ ತೆಗೆದುಕೊಳ್ಳದೆ ಚಿಕಾಗೋ ಪಟ್ಟಣದಿಂದ ನ್ಯೂಯಾರ್ಕ್ ಪಟ್ಟಣಕ್ಕೆ ಅಂದರೆ 1211 ಮೈಲು ದೂರ ನಡೆದುಹೋಗಲು ನಿರ್ಧರಿಸಿ ಹೊರಟವನು 20 ದಿವಸಗಳಲ್ಲಿ ಅರ್ಧದಾರಿಯಷ್ಟಾಗ ಹೋಗುವಷ್ಟರಲ್ಲಿ ಆಯಾಸಗೊಂಡು ಮುಂದೆ ನಡೆಯಲಾರದೆ ನಿಂತುಬಿಟ್ಟನು. ಇಷ್ಟರಲ್ಲೇ ಇವನು ತನ್ನ ಶರೀರ ತೂಕದಲ್ಲಿ 37 ಪೌಂಡು ಕಳಕೊಂಡಿರುವನು.

ಕಾಗದಗಳಿಗೆ ಅತಿ ಸುಲಭದಲ್ಲಿ ರುಜುಹಾಕುವ ಯಂತ್ರ ಒಂದು ಇಂಗ್ಲೆಂಡಿನಲ್ಲಿ ಕಂಡುಹಿಡಿಯಲ್ಪಟ್ಟಿದೆ. ಇದಕ್ಕೆ "ಸೈನೋಗ್ರಾಫ್" ಎಂದು ಹೆಸರು. ಇದರಿಂದ ಎಷ್ಟು ಕಾಗದಗಳಲ್ಲಿ ಯಾದಾದರೂ ಒಂದಕ್ಕೆ ರುಜುಹಾಕಿದರೆ ಬಾಕಿ ಎಲ್ಲವುಗಳಿಗೂ ಅದಾಗಿಯೇ ರುಜುಹಾಕಿಕೊಳ್ಳುವುದು. ಗರ್ ಟ್ರೂಡ್ ಹಿಚ್ಚಾ ಎಂಬಾಕೆಯೊಬ್ಬಳು ಒಂದು ಸಲ ಈ ಯಂತ್ರದ ಮೂಲಕ 2 ಗಂಟೆಗಳಲ್ಲಿ 11,564 ಕಾಗದಗಳಿಗೆ ರುಜುಮಾಡಿದಳಂತೆ!

ಅಮೇರಿಕದ ಮಾತೆಯರು.

("ಕೊಡಗು" ಪತ್ರಿಕೆಗೆ ಸ್ಪೆಷಲ್ ಆಗಿ ಬರೆದದ್ದು)

(ಶ್ರೀಮತಿ ಆರ್ ಕಲ್ಯಾಣಮ್ಮ, ಸಂಪಾದಕಿ "ಸರಸ್ವತಿ" ಬೆಂಗಳೂರು)

ಭಾಗ 2.

ಬಾಲಕರ ಶಿಕ್ಷಣ ಕ್ರಮ.

ಮಾತೃ ವಿಜ್ಞಾನವು ಹೊಸಶಾಸ್ತ್ರವಾಗಿರುವುದು. ಈ ವಿಷಯದ ಲೇಖನಗಳಲ್ಲಿ ಲೇಖಕರ ಮತವು ಭಿನ್ನವಾಗಿದ್ದರೂ ಎಲ್ಲರ ಧ್ಯೇಯವೂ ಒಂದೇ ರೀತಿಯಲ್ಲಿ ಕೊನೆಗಾಣುವುದು. ಶಿಕ್ಷಾರೂಪವು ಬೇಕಾದ ಹಾಗಿರಲಿ. ಅದರಿಂದ ಬಾಲಕನ ಮಾನಸಿಕ, ನೈತಿಕ ಮತ್ತು ಶಾರೀರಕ ಶಕ್ತಿಗಳ ವಿಕಾಸವು ಪೂರ್ಣ ರೀತಿಯಿಂದ ಆಗಬೇಕೆನ್ನುವುದೇ ಸರ್ವರ ಅಭಿಪ್ರಾಯವಾಗಿದೆ. 'ಬಾಲಕನು ವಿದ್ಯಾಭ್ಯಾಸ ಮಾಡತಕ್ಕವನು. ಸ್ವಸ್ಥಚಿತ್ತನಾಗಬೇಕು. ವಿದ್ಯೋಗಿಕ ಶಿಕ್ಷಣವನ್ನು ಪಡೆಯಬೇಕು.' ಎಂಬ ವಿಷಯಗಳನ್ನು ಮಾತೆಯು ಮನಸ್ಸಿನಲ್ಲಿಟ್ಟು ಮಾತೆಯು ಬಾಲಕರಿಗೆ ಉತ್ಸಾಹದರ್ಶನಗಳನ್ನು ಬೋಧಿಸಬೇಕು. ಬಾಲಕನ ಕಾಲವೆಲ್ಲವೂ ಕೇವಲ ಆಟಪಾಟಗಳಲ್ಲಿಯೇ ಕಳೆದುಹೋಗುವುದು. ಹುಗಲೆಲ್ಲಾ ಬೊಂಬೆಯಾಡಿಸುವುದು, ಆನೆ, ಕುದುರೆ, ಮೋಟಾರುಗಳಲ್ಲಿ ಸವಾರಿ ಮಾಡುವುದು, ಕಥೆಗಳನ್ನೋದುವುದು ಇದರಲ್ಲಿಯೇ ಕಳೆದುಹೋಗುವುದು. ಅಮೇರಿಕದ ಬಾಲಕರಿಗೆ ಆಟದ ಮೂಲಕವೇ ಕಲ್ಪನಾಶಕ್ತಿ, ಭಾಷಾಭ್ಯಾಸ, ಬಾಹುಬಲಾಭಿವೃದ್ಧಿ ಮಾರ್ಗಗಳು ಕಲಿಸಲ್ಪಡುವವು. ಅವನು ಉನ್ನತ ಪ್ರಾರ್ಥನೀಯ ಅನೇಕ ಗುಣಗಳ ಉತ್ತರಾಧಿಕಾರಿಯಾಗಿರುವನು. ಅವನ ವಯಸ್ಸು ವೃದ್ಧಿಯಾಗುತ್ತ ಬಂದಂತೆಲ್ಲ ಅವನ ಬುದ್ಧಿ ವಿಕಾಸವೂ ಉಂಟಾಗುವದು. ಬಾಲಕನಿಗೆ ಗ್ರಹಣಶಕ್ತಿಯಿಲ್ಲದಿದ್ದರೆ ಹೇಳಿದ್ದನ್ನೇ ಮತ್ತೆ ಮತ್ತೆ ಹೇಳುತ್ತಾ ಹೋಗುವುದು ಅಸಾಧ್ಯವಾದದ್ದರಿಂದ ಆ ಬಾಲಕನ ಗ್ರಹಣಶಕ್ತಿಯನ್ನು ಹೆಚ್ಚಿಸುವ ಮಾರ್ಗವನ್ನು ಕಂಡುಹಿಡಿದು ನಾನಾ ಪ್ರಶ್ನೆಗಳ ಮೂಲಕ ತಿಳಿಯುವಂತೆ ಬೋಧಿಸಬೇಕು. ಬಾಲಕರ ಶಿಕ್ಷಣದಲ್ಲಿ ಲಕ್ಷ್ಯಕೊಡಬೇಕಾದ ಮೂರು ಮುಖ್ಯ ವಿಷಯಗಳಿವೆ. ಇವುಗಳ ಉಪಯೋಗವು ಅವರ ಜೀವನದ ಪ್ರತಿಯೊಂದು ಮಾರ್ಗದಲ್ಲಿಯೂ ಅತ್ಯಾವಶ್ಯಕವಾಗಿವೆ. ಅವು ಯಾವುವೆಂದರೆ 1. ಇಚ್ಛಾಶಕ್ತಿ, 2 ಶರೀರಶಕ್ತಿ, 3 ಸಾಹಸ.

ತಾಯಿಯು ಇವುಗಳ ಪ್ರಯೋಗವನ್ನು ದಿನವೂ ಒಳಿತೆಯಲ್ಲಿರುವ ವಸ್ತುಗಳಿಂದಲೇ ಬೋಧಿಸಬೇಕು. ಬಾಲಕನು ತನ್ನ ಇಚ್ಛಾಶಕ್ತಿಯ ವ್ಯವಹಾರವನ್ನು ಹೇಗೆ ಹೇಗೆ ವೃದ್ಧಿಗೊಳಿಸುವನೋ ಹಾಗೆಯೇ ಅವನ ಶಕ್ತಿಯು ಹೆಚ್ಚುವುದು. ಬಾಲಕನ ಆತ್ಮಸ್ವರಕ್ಷಣೆ, ಸ್ವಚ್ಛತೆ, ವ್ಯಾಯಾಮಾದಿಗಳ ಶಿಕ್ಷಣವನ್ನು ಕೂಡ ತಾಯಿಯೇ ಕೊಡಬೇಕು. ಆತ್ಮಶಕ್ತಿಯಲ್ಲಿ ನಂಬಿಕೆಯಿಡುವುದೂ, ಪ್ರತಿಯೊಂದು ಕಾರ್ಯದಲ್ಲಿಯೂ ಸಾಹಸಪಡತಕ್ಕ, ಆತ್ಮನಿಶ್ಚಯವನ್ನು ಮಾಡಿಕೊಳ್ಳುವುದೂ ಬಾಲಕನಿಗೆ ಮುಖ್ಯ ಶಿಕ್ಷಣವಾಗಿರುವುದು. ದಿನವೂ ಪ್ರತಿಯೊಂದು ಮಾತಿನ ಮೂಲಕವೂ ತಾಯಿಯು ಮಗನಿಗೆ ಈ ವಿಷಯಗಳಲ್ಲಿ ಶಿಕ್ಷಣವನ್ನು ಕೊಡುತ್ತಿರಬೇಕು. ಬಾಲಕನಿಗೆ ಕಹಿಯಾದ ಔಷಧಿಯನ್ನು ಕುಡಿಸಬೇಕಾದರೆ ಅಮೇರಿಕದ ಮಾತೆಯರು ಬೆಪ್ಪು ಬೆದರಿಕೆಯನ್ನು ತೋರಿಸದೆ, 'ಔಷಧಿ ವೃದ್ಧಿಯೋ, ನೀನು ವೃದ್ಧಿಯೋ. ಔಷಧಿಯನ್ನು ನೀನು ಜೈಸಿ ಕುಡಿಯುವೆಯೋ ಅಥವಾ ಅದು ನಿನ್ನನ್ನು ಸೋಲಿಸಿ ಓಡಿಸುವುದೋ ನೋಡೋಣ" ಎಂದವರಿಗೆ ಉತ್ಸಾಹವುಂಟು ಮಾಡುವ ಮಾತುಗಳನ್ನೇ ಆಡುವರು. ಒಂದುವೇಳೆ ಬಾಲಕರು ಹೆಚ್ಚಾಗಿ ಮಿಠಾಯಿಯನ್ನು ಕೊಡುವಂತೆ ಕೇಳಿದರೆ ಅವರಿಗೆ ಹೀಗೆ ಹೇಳುವರು. 'ನಿನಗೆ ಮಿಠಾಯಿಯು ಹೆಚ್ಚಾಗಿ ಸಿಕ್ಕಿರುತ್ತದೆ ಇನ್ನೂ ಹೆಚ್ಚಾಗಿ ಸಿಕ್ಕಬಹುದು. ಆದರೆ ಮಿಠಾಯಿಯನ್ನು ಹೆಚ್ಚಾಗಿ ತಿಂದರೆ ಬಾಯಿ ಕೆಟ್ಟು ಬೀಳುತ್ತೀಯೆ ಈ ದಿನ ಹೆಚ್ಚಾಗಿ ತಿಂದು ನಾಳೆ ಕಷ್ಟಪಡಬೇಕೆಂದಿದ್ದರೆ ಇನ್ನೂ ಕೊಡುತ್ತೇನೆ' ಭಯಪಟ್ಟನಂತರ, ಆ ಬಾಲಕನು ನಿನಗೆ ತುಂಬಾ ಹೆದರುತ್ತಾನೆ. ನೀನವನಿಗೆಷ್ಟು ಹೆದರಬಾರದು. ಒಂದುವೇಳೆ ಅವನು ನಿನ್ನನ್ನು ಹೊಡೆಯಲು ಬಂದರೆ ನೀನೂ ಅವನನ್ನು ಹೊಡೆ. ಅವನಿಗಿಂತ ನೀನು ಹೆಚ್ಚು ಬಲವಂತನು." ಈ ಸಣ್ಣ ಸಣ್ಣ ಮಾತುಗಳಿಂದಲೇ ಬಾಲಕನ ಚರಿತ್ರೆ ಘಟನೆಯಾಗುವದು. ಬುದ್ಧಿವಂತನು ಮಾತಿನಿಂದಲೇ ಸಾಧು, ಮತ್ತು ವೀರನನ್ನಾಗಿಯೂ ಮಾಡಬಹುದು, ಮತ್ತು ಮಾತಿನಿಂದಲೇ ಅವನನ್ನು [illegible] ಮಾಡಬಹುದು. ಆದುದರಿಂದ ಬಾಲಕನನ್ನು ಸಾಹಸಿಯಾದ ಮನುಷ್ಯನನ್ನಾಗಿ ಮಾಡುವುದೂ, ಮನುಷ್ಯತ್ವದ ಬೀಜವನ್ನು ಬಿತ್ತುವುದೂ ತಾಯಿಯ ಕರ್ತವ್ಯವಾಗಿರುವುದು. ಮಕ್ಕಳ ಪ್ರತಿಯೊಂದು ಕಾರ್ಯದಲ್ಲಿಯೂ ಕಣ್ಣಿಟ್ಟಿರುವುದು ಮಾತೃಧರ್ಮವಾಗಿರುವುದು.

ಬಾಲಕರ ಶಿಕ್ಷಣದಲ್ಲಿ ಮಹತ್ವದ ಮತ್ತೊಂದು ವಿಷಯವು, ಅವರ ಅಭಿರುಚಿಯನ್ನು ಪರೀಕ್ಷಿಸಿ ಅದಕ್ಕೆ ತಕ್ಕ ಶಿಕ್ಷಣವನ್ನು ಕೊಡುವುದು. ಬಾಲಕನಿಗೆ ಯಂತ್ರವಿದ್ಯೆಯಲ್ಲಿ ಅಭಿರುಚಿ ಇದ್ದರೆ ಅದರ ಅಭ್ಯಾಸವನ್ನೇ ಕಲಿಸುವರು. ಅವನಿಗೆ ರುಚಿಯು ಗಾಯನ ವಾದ್ಯಾದಿಗಳಲ್ಲಿದ್ದರೆ ಅವನಿಗೆ ಸಂಗೀತವನ್ನು ಕಲಿಸುವರು. ಹೀಗೆ ಕಲಿಸುವುದರಿಂದ ಅವರು ಆ ವಿದ್ಯೆಗಳಲ್ಲಿ ಸಂಪೂರ್ಣ ಪಾಂಡಿತ್ಯ ಪಡೆಯುವರೆಂದು ತಿಳಿದು ಕಲಿಸುವರು. ಮಾತೆಯು ಬಾಲಕನನ್ನು ಬಲಾಢ್ಯನಾಗಿಯೂ ಸುಚರಿತನಾಗಿಯೂ ಆದರ್ಶಪ್ರಾಯನಾಗಿಯೂ ಮಾಡಿ ಉಳಿದ ವಿದ್ಯಾಶಿಕ್ಷಣಕ್ಕಾಗಿ ಅವನನ್ನು ಈ ಪಾಠಶಾಲೆಗೆ ಕಳುಹಿಸುವರು. ಶಾಲೆಯಲ್ಲಿ ವಿದ್ಯಾರ್ಥಿಗಳ ಸಹವಾಸದಲ್ಲಿ ಬೆಳೆಯುವುದರಿಂದ ಅವನಿಗೆ ಮನುಷ್ಯತ್ವ, ಸೋದರತ್ವ, ಬಂಧು ಪ್ರೇಮ, ಸಾಮಾಜಿಕ ಮತ್ತು ರಾಜಕೀಯ ವಿಚಾರಗಳ ಶಿಕ್ಷಣವು ದೊರೆಯುವುದು. ವಿದ್ಯಾಲಯದಲ್ಲವನ ಪ್ರತಿಯೊಂದು ಗುಣ ಮತ್ತು ಶಕ್ತಿಯ ಪತ್ತೆ ಪರೀಕ್ಷೆಯಾಗುವುದು. ಇದರಿಂದವನು ಪ್ರಜೆಗಳ ತಾರತಮ್ಯವನ್ನರಿಯಲು ತಿಳಿಯುವನು. ಯುವಕರ ಸ್ವಾಭಾವಿಕ ಅವಸ್ಥೆಯು ವಿಲಕ್ಷಣವಾಗಿರುವುದು. ನವ ಯುವಕರು ನವಜನನಿಯರುಗಳಿಗೂ ಮತ್ತು ಮಾತಾಪಿತೃಗಳ ಆಜ್ಞೆಗೂ ಸ್ವತಂತ್ರವಾಗಿ ನಡೆಯುವರು. ತಮ್ಮ ಸುಗುಣವೆಂದು ಭಾವಿಸುವರು. ಶಿಕ್ಷಕರು ಆ ಗುಣಗಳನ್ನು ತಿದ್ದುವ ಪ್ರಯತ್ನ ಮಾಡುವರು. ತಾಯಿಯು ಬಾಲಕ ಬಾಲಿಕೆಯರಿಗೆ ಮನೆಯಲ್ಲಿ ನಾನಾ ಪ್ರಕಾರದ ಕೆಲಸಗಳನ್ನು ಕೊಟ್ಟು ಸ್ವತಂತ್ರವಾಗಿ ಕೆಲಸಮಾಡುವ ಕ್ರಮವನ್ನು ಕಲಿಸುವರು. ಪ್ರತಿಯೊಬ್ಬರ ಸಲಹೆಗಳನ್ನೂ ತೆಗೆದುಕೊಳ್ಳುವುದರ ಮೂಲಕ ಅವರ ವಿಚಾರ ಶಕ್ತಿಯು ಹೆಚ್ಚುವುದಕ್ಕವಕಾಶವಾಗುವದಲ್ಲದೆ ಸ್ವತಂತ್ರ ಜೀವನಕ್ಕೂ, ಧನಾರ್ಜನೆಗೂ ಅವರಿಗೆ ಅವಕಾಶ ಕೊಟ್ಟಂತಾಗುವುದು. ನೆರೆಯೊರೆಯ ಬಾಲಕ ಬಾಲಿಕೆಯರೊಡನೆ ಸೇರಿ ಆಡುವುದಕ್ಕೆ ಬೇಕಾದಷ್ಟು ಸ್ವಾತಂತ್ರ್ಯವು ಕೊಡಲ್ಪಡುವುದು. ಚರಿತ್ರೆ ಪುರಾಣಗಳಿಗೆ ಸಂಬಂಧಪಟ್ಟ ವೀರರ ಚರಿತ್ರೆಗಳನ್ನು ತಾಯಿಯು ಹೇಳುವುದರಿಂದ ಅವರಲ್ಲಿ ವೀರತ್ವವುಂಟಾಗಲು ಹೇತುವಾಗುವುದು.

ಅಮೇರಿಕದ ಮಾತೆಯರು ತಮ್ಮ ಸಂತಾನದ ಶಿಕ್ಷಣ ವಿಷಯದಲ್ಲಿ ಕೆಳಗೆ ಕಂಡ ಏಳು ನಿಯಮಗಳನ್ನು ಮಾಡಿಕೊಂಡಿರುವರು. ಇದರಿಂದ ಇವರನ್ನು ಆದರ್ಶ ಮಾತೆಯರೆಂದು ಸಂಬೋಧಿಸುವುದು ಅತಿಶಯೋಕ್ತಿಯಾಗಲಾರದೆಂಬುದು ಕಾಣಬರುವುದು. ಅವು ಯಾವುವೆಂದರೆ:—

1. ಅಮೇರಿಕದ ಮಾತೆಯರು ತಮ್ಮ ಸಂತಾನದ ಕ್ರೀಡೆ ಅಧ್ಯಯನಗಳಲ್ಲಿ ಅವರ ಸಂಗಾತಿಯಾಗುವರೇ ಹೊರ್ತು "ಶಾಸಕಿ"ಯರಾಗುವುದಿಲ್ಲ.

೭ ಬಾಲಕರ ಯಾವ ವಿಧವಾದ ಆಟಕ್ಕೂ ಅಭ್ಯಂತರವಿಲ್ಲ. ಆಡುವಾಗ ಅವರ ಉಡುಪು ಹರಿಯಲಿ, ಕೊಳೆಯಾಗಲಿ ಅವರಿಗೇಟುಬೀಳಲಿ, ಅವರನ್ನು ಬೆದರಿಸುವುದಿಲ್ಲ, ಹೊಡೆಯುವುದಿಲ್ಲ. ಅವರಿಗೆ ಎಲ್ಲ ವಿಷಯದಲ್ಲಿಯೂ ಎಲ್ಲ ಸಮಯದಲ್ಲಿಯೂ ಆತ್ಮ ವಿಕಾಸಕ್ಕೆ ಸಾಕಾದಷ್ಟು ಅವಕಾಶವು ಕೊಡಲ್ಪಡುವುದು. ಅವರ ಕಾರ್ಯಗಳಿಗಾಕ್ಷೇಪಿಸದೆ ಅವರ ಇಷ್ಟಾನುಸಾರ ಕೆಲಸಮಾಡಲು ಸ್ವಾತಂತ್ರವುಂಟು

೮ ದೇಶಭಕ್ತನಾಗುವುದು, ಸತ್ಯವನ್ನಾಡುವುದು, ಆತ್ಮಗೌರವವನ್ನು ಕಾಪಾಡಿಕೊಳ್ಳುವುದು, ಸಾಹಸಿಯಾಗುವುದು ಇತರರನ್ನು ಗೌರವಿಸುವುದು ಧನದ ಮೌಲ್ಯವನ್ನು ತಿಳಿಯುವುದು ಇವೇ ಮುಂತಾದ ವಿಷಯಗಳ ಶಿಕ್ಷಣವು ಮಾತೆಯಿಂದ ಸ್ವಗೃಹದಲ್ಲಿಯೇ ಕೊಡಲ್ಪಡುವುದು. ಕಷ್ಟನಸಮಯದಲ್ಲಿ ಹತಾಶರಾಗದಿರುವುದು ಕೆಳಗೆ ಬಿದ್ದು ಏಟುತಗಲಿದರೂ ಅಳದಿರುವುದು. ಇಂತಹ ಸಾಹಸ ಶಿಕ್ಷಣವೂ ಕೂಡ ಮನೆಯಲ್ಲಿಯೇ ಕೊಡಲ್ಪಡುವುದು

೯ ಸಂಸಾರದ ವಸ್ತುಗಳನ್ನರಿಯುವುದೂ ಪ್ರಕೃತಿ ಸೌಂದರ್ಯದ ಬೋಧೆಯೂ ಫಲಪುಷ್ಪ ಪಕ್ಷಿ ಜಂತುಗಳ ಪರಿಚಯವೂ, ಇತಿಹಾಸಿಕ ಪಾಠಗಳೂ ಸಾಹಿತ್ಯ ಜ್ಞಾನವೂ ಬಾಲಕರಿಗೆ ಉಪಾಧ್ಯಾಯರಿಂದ ಬೋಧಿಸಲ್ಪಡುವವು

೧೦ ಶರೀರಕ್ಕೆ ಶಕ್ತಿಕೊಡುವ ಆಟಗಳು ಅಂದರೆ ಈಜುವುದು, ಕುದುರೆ ಸವಾರಿಮಾಡುವುದು ಬಾಣಪ್ರಯೋಗಮಾಡುವುದು ಕಾಲುಗಳನ್ನುಪಯೋಗಿಸುವುದು ಹಲ್ಲಿಯಂತೆ ನಡೆಯುವುದು, ಚೆಂಡಾಡುವುದು ಇವುಗಳನ್ನು ಶಾಲೆಯಲ್ಲಿಯೇ ಕಲಿಸುವರು

೧೧ ವಿರಾಮ ದಿನಗಳಲ್ಲಿ ಹ ನಡುಬಿಟ್ಟಾಡ ... ಕಲಸವಿರುವಾಗ ಕಲಸಮಾಡುವುದು ಅಪಕ್ಷಿಗಳಿಲ್ಲ ... ದಾನಿಗಳನ್ನು ಹರ್ಷದಿಂದ ... ಸುವುದು ಸಾಹಸ ಮಾತಾಪಿತೃ ಪ್ರೇಮ ಇತ್ಯಾದಿ ಗುಣಗಳನ್ನೂ ಶಾಲೆಯಲ್ಲಿ ಕಲಿಸುವರು. ಇವುಗಳಿಗಿಂತ ಉತ್ತಮವಾದ ನಿಯಮಗಳು ಬೇಕೇನು? ಅಮೇರಿಕದ ಬಾಲಕ ಬಾಲಕಿಯರ ಶಿಕ್ಷಣದ ಕಡೆಗೆ ಸರ್ಕಾರದವರು ಕೂಡ ತುಂಬ ಲಕ್ಷ್ಯಕೊಡುತ್ತಿರುವರು. ಅಲ್ಲಿನ ಬಾಲಕರ ಶಿಕ್ಷಣದೊಡನೆ ಅದೇ ವಯಸ್ಸಿನ ಭಾರತೀಯ ಬಾಲಕರ ಶಿಕ್ಷಣವನ್ನು ಹೋಲಿಸಿ ನೋಡಿದರೆ ಭೂಮ್ಯಾಂತರಿಕ್ಷಗಳ ಅಂತರವಿರುವುದು. ಬಾಲಕರ ಮೆದುಳು ಕೋಮಲಪಲ್ಲವದಂತಿರುವುದರಿಂದ ಚಿಗುರನ್ನು ಬಗ್ಗಿಸುವಂತೆ ಹೇಗೆ ಬೇಕಾದರೂ ಹಾಗೆ ಬಗ್ಗಿಸಬಹುದು. ತೋಟಗಾರನು ಶೃಂಗಾರವನದಲ್ಲಿರುವ ಪುಷ್ಪವೃಕ್ಷಗಳನ್ನು ಕೊಯ್ದು ಸುಂದರಾಕೃತಿಗಳನ್ನು ರಚಿಸುವಂತೆ ತದ್ರೀತಿಯಲ್ಲಿ ಬಾಲಕರ ಮೆದುಳನ್ನು ಸಂಸ್ಕರಿಸಬಹುದು. ಬಾಲಕರಿಗೆ ಶಿಕ್ಷಣವು ಬಹಳ ಸಾವಧಾನವಾಗಿಯೂ ಉತ್ತಮರೀತಿಯಲ್ಲಿಯೂ ಕೊಡಲ್ಪಡುವುದು. ಗಿಡವು ಬಲಿತ ಮೇಲೆ ಬಗ್ಗಿಸುವುದು ಹೇಗೆ ಅಸಾಧ್ಯವೋ ಅದರಂತೆಯೇ ಬಾಲಕನೂ ತರುಣನಾದನಂತರ ಏನೂ ಕಲಿಯಲಾರನು. ಇದೇ ಕಾರಣದಿಂದಲೇ ಬಾಲಕರ ಪ್ರಾಥಮಿಕ ಶಿಕ್ಷಣದ ಕಡೆಗೆ ಹೆಚ್ಚು ಗಮನವು ಕೊಡಲ್ಪಡುವುದು. ಈ ವಿಷಯದಲ್ಲಿ ಮಾತಾಪಿತೃಗಳೂ ಉಪಾಧ್ಯಾಯರೂ ಹೆಚ್ಚು ಲಕ್ಷ್ಯಕೊಡಲೇಕು. ಬಾಲಕರ ಮಾನಸಿಕ ಮತ್ತು ಶಾರೀರಕ ಉನ್ನತಿಯಾಗುವಂತಹ ಅನೇಕ ಆಟಗಳು ಅಮೇರಿಕದಲ್ಲಿ ರೂಢಿಯಲ್ಲಿರುವವು. ಆ ದೇಶದ ಬಾಲಕರು ಮನೆಯಲ್ಲಿಯೇ ಪಾಠಶಾಲೆಯಲ್ಲಿ ಕಲಿಯುವುದಕ್ಕಿಂತ ಹೆಚ್ಚಾಗಿ ಕಲಿಯುವರು. ಅಲ್ಲಿನ ಮಾತೆಯರು ಆಟಪಾಟಗಳ ಮೂಲಕ ಬಾಲಕರ ಸೌಂದರ್ಯವನ್ನು ವೃದ್ಧಿಗೊಳಿಸುವರೇ ಹೊರತು ಮಣಗಟ್ಟಲೆ ಭಂಗಾರದ ಆಭರಣಗಳಿಂದಲ್ಲ. ಬಾಲಕರ ಮನೋರಂಜನಾರ್ಥವಾಗಿ ಶಾಲೆಯಲ್ಲಿ ಸಣ್ಣ ಸಣ್ಣ ಕಥೆಗಳು ಹೇಳಲ್ಪಡುವವು. ಅವರು ಮನೆಗೆ ಬಂದೊಡನೆ ತಮ್ಮ ತಾಯಿಯರಿಗೆ ಆ ಕಥೆಗಳನ್ನು ಹೆಮ್ಮೆಯಿಂದ ಹೇಳುವರು. ಇದರಿಂದವರ ಸ್ಮರಣಶಕ್ತಿಯೂ, ವಾಕ್ಚಾತುರ್ಯವೂ ಹೆಚ್ಚಲವಕಾಶವಾಗುವುದು. ಬಾಲಕರಿಗೆ ಟೈಪ್‌ರೈಟರ ಕೆಲಸವನ್ನು ಕಲಿಸುವುದರಿಂದ ಆಂಗ್ಲಭಾಷೆಯಲ್ಲಿ ಸುಲಭವಾಗಿ ಬರೆಯಲು ಜಾಗ್ರತೆ ಬರುವುದು, ಬಾಲಕರಿಗೆ ಶರೀರದಂಡನೆಯನ್ನು ವಿಧಿಸುವುದಕ್ಕೆ ಪ್ರತಿಯಾಗಿ ಅವರ ಸಚ್ಚರಿತ್ರಕ್ಕೆ ಬಹುಮಾನವು ಕೊಡಲ್ಪಡುವುದು. ಈ ರೀತಿಯಾಗಿ ಅವರ ಶಿಕ್ಷಣೋನ್ನತಿಯಾಗುವುದಲ್ಲದೆ ಬಾಲ್ಯದಲ್ಲಿ ಕಲಿತದನ್ನು ದೀರ್ಘಕಾಲ ಜ್ಞಾಪಕದಲ್ಲಿಡುವರು. ಅಲ್ಲಿನ ಬಾಲಕ ಬಾಲಕಿಯರಿಗೆ ಮಾತೃಭೂಮಿಯಲ್ಲಿ ವಿಶ್ವಾಸವಿಡುವುದು ಮಾತೃಭೂಮಿಯ ಗೌರವವನ್ನು ಕಾಪಾಡುವುದು, ತಾಯಿಯರಿಂದ ಕಲಿಸಲ್ಪಡುವುದು. ಆ ಮಾತೆಯರು ಬಾಲಕರಿಂದ ರಾಷ್ಟ್ರದ ಇತಿಹಾಸವನ್ನೂ ವೀರಪುರುಷರ ಚರಿತ್ರೆಯನ್ನೂ ಓದಿಸಿ ಕೇಳುವರಲ್ಲದೆ ರಾಷ್ಟ್ರಗೀತವನ್ನೂ ಕಲಿಸುವರು. ತಮ್ಮ ಮತಕ್ಕೆ ಸಂಬಂಧಿಸಿದ ಉತ್ಸವಗಳಲ್ಲಿ ಭಾಗಿಗಳಾಗಿ ಮಾಡುವರಲ್ಲದೆ ತಮ್ಮ ದೇಶದ ಮಹಾತ್ಮರು ದೇಶಕ್ಕಾಗಿ ಪ್ರದರ್ಶಿಸಿದ ಆದರ್ಶಗಳನ್ನು ಸದಾ ಧ್ಯಾನಿಸುವಂತೆ ಬೋಧಿಸುವುದರ ಮೂಲಕ ಬಾಲ್ಯಾವಸ್ಥೆಯಿಂದ ದೇಶಪ್ರೇಮ ಮೊಳೆಯುವಂತೆ ಮಾಡುವರು. ಅಮೇರಿಕದ ಪ್ರತಿಯೊಬ್ಬರೂ ಮೊದಲು ದೇಶಕ್ಕಾಗಿ ಸ್ವಾರ್ಥತ್ಯಾಗಮಾಡುವರು. ಸಮಯ ಬಂದಾಗ ತಮ್ಮ ತನುಮನಧನ ಸರ್ವಸ್ವವನ್ನೂ ಕೊಡಲು ಸಿದ್ಧರಾಗಿರುವರು. ಇಂತಹ ವೀರಮಾತೆಯರು ಭಾರತವರ್ಷದಲ್ಲಿಯೂ ಸಂಘಾಕಾಲದ ನಕ್ಷತ್ರಗಳಂತೆ ಅಲ್ಲಲ್ಲಿ ಮಿಣುಗುತಲಿದೋರುತ್ತಲಿರುವರು. ಇಲ್ಲಿನ ಸ್ತ್ರೀಶಿಕ್ಷಣವು ಕೂಡ ಅಮೇರಿಕದಲ್ಲಿರುವಂತೆಯೇ ಪ್ರಚಾರಕ್ಕೆ ತರುವುದತ್ಯಾವಶ್ಯವು. ಅಂತಹ ಪದ್ಧತಿಯನ್ನನುಸರಿಸಿದರೆ ಭಾರತ ಗೌರವ ಸೂರ್ಯೋದಯವಾಗಿ ಭಾರತ ಪ್ರಾಚೀನ ಕೀರ್ತಿಯು ಸಂಸಾರದಲ್ಲೆಲ್ಲಾ ಮತ್ತೊಮ್ಮೆ ಪ್ರಕಾಶಮಾನವಾಗುವುದು

ಒಂದೇ ಮಾತರಂ.

ಸೂರ್ಯೋದಯ.

(ಲಲಿತರಗಳೆ)

ತಿಳುವಾದ ಗಗನದೊಳ್ ತೋರ್ದು ಕಾಂಬುದು ಹೊಳೆದು |
ಥಳಥಳಿಪ ಮಂಡಲಾಗ್ರ ರಕುತಮಯ ಮೂಗಿಹುದು ||
ಫಲದಿಂದ ಸಮರದಿಂ ಗೈದಿಹರು ನಿಶಿಯಿಯು ||
ಗೆಲುವಿನಿಂ ಬರುತಿಹನು ಹೊಳೆಹೊಳೆದು ವರರವಿಯು || ೧ ||

ಪೂರ್ವನಾರಿಯು ತಾನು ಹಣೆಗೆ ಕುಂಕುಮವಿಟ್ಟು |
ಪೂರ್ವದಿಕ್ಕಿನ ಬಾಗಿಲ ತೆರೆದು ರವಿನರಗೆ ಮಣೆಯಿಟ್ಟು ||
ಮಧುರತರ ರೂಪಿನಿಂ ಬಳಗುತ್ತ ಕರೆದಿಹಳು |
ವಿದಿತಸುಂದರರವಿಯ ನೋಡಿದಳು ರಾಗದೊಳು || ೨ ||

ಓಡಿಹೋದವು ಬಾನಿನಿಂ ಓಡಿದುವು ತಾರೆಗಳ್ |
ಮೂಡಿದುವು ಪುಷ್ಪಗಳ್ ಹಾಡಿದುವು ವಿಹಗಗಳ್ ||
ಏಂದನು ವಿಬರನನು ಕಮಲಬಾಂಧವತಾನು |
ತೋರಿದನು ಜಗಕೆಲ್ಲ ಹೊಳೆಯುತಿಹ ಕಿರಣವನು || ೩ ||

ಗಗನದಿಂದಲಿ ನೀಡಿ ಕಿರಣಹಸ್ತದಿ ಸತಿಯ |
ಬಿಗುಮೊಗೆಯೊಳಪ್ಪಿದನು ಪ್ರೀತಿಯಿಂ ರವಿರಾಯ ||
ನಗುತನಿಂದಳು ಕಮಲ ಎಳವೆತ್ತಿ ನೋಡಿದಳು
ದುಗುಡದಲಿ ಕರುಣವನು ವಿಮಲತಾ ಬೇಡಿದಳು || ೪ ||

ಅರುಣ ಸಾರಥಿಯಾಗಿ ರಥದಿ ಬಂದನು ರವಿಯು
ಕರುಣಾ ಮೂಡಣದಿಕ್ಕಿನಲ್ಲಿ ನಿಂತನು ದೊರೆಯು ||
ಧರೆಯ ಕಲಕಲರವದಿ ವಿಹಗ ಮೃಗಗಳ ನಿನದ |
ಮೊರೆಯುತಿರ ರಥವೇರಿ ದಿನಪ ಜಗವೊಳು ಮೆರೆದ || ೫ ||

ಸರಸಿಜಾಪ್ತನು ಮುದದಿ ಕಮಲೆಯೊಳು ನರ್ತಿಸುತ
ಸರಸಿಯೊಳ್ ಕ್ರೀಡಿಸಿದ ರಮಣಿಯನು ಚುಂಬಿಸುತ ||
ಧರೆಯೆಲ್ಲ ಸುಖದಿಂದ ರವಿವರನ ದಯದಿಂದ |
ಮೊರೆಯುತಿದೆ ಬಲುಹೊಗಳಿ ಜಯರವದಿ ಶರಣೆಂದು || ೬ ||

ಕೊಡಗಿನ ಗೆಳೆಯ

ಪತ್ರವ್ಯವಹಾರ

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ಪತ್ರಿಕಾಕರ್ತರು ಜವಾಬ್ದಾರರಲ್ಲ ಸಂ]

ವಿದ್ಯಾಭಿವೃದ್ಧಿ ನಿಧಿ

ಮಹನೀಯರೆ,

ವಿದ್ಯೆಯೇ ಭೂಷಣವು, ವಿದ್ಯೆಯೇ ಸಂಪತ್ತು, ವಿದ್ಯೆಯೇ ಸಕಲವು ಎಂಬುದು ಈಗೀಗ ಜನರಿಗೆ ತಿಳಿಯಬಂದಿದೆ. ತಂದೆ ತಾಯಿಗಳು ಮಕ್ಕಳ ವಿದ್ಯಾಭ್ಯಾಸದಲ್ಲಿ ಸ್ವಲ್ಪ ಮಟ್ಟಿಗೆ ತೊಂದರೆ ತೆಗೆದುಕೊಳ್ಳುವ ಹಾಗೆ ಕಾಣುತ್ತದೆ. ಹತ್ತು ವರ್ಷಗಳ ಹಿಂದೆ ನಮ್ಮ ಕೊಡಗುದೇಶದಲ್ಲಿ ಪ್ರೌಢ ವಿದ್ಯಾಭ್ಯಾಸವನ್ನು ಸಂಪಾದಿಸಿದವರ ಸಂಖ್ಯೆ ಬಹಳ ಕಡಿಮೆಯಾಗಿತ್ತು. ಈಗಲಾದರೋ ತಕ್ಕಷ್ಟು ಜನರು ತಮ್ಮ ಬಿ ಎ ಪರೀಕ್ಷೆಯನ್ನು ಮುಗಿಸಿ ಹಿಂದಿರುಗಿ ಕೊಡಗಿಗೆ ಬಂದು ತಮ್ಮ ಚಿಕ್ಕ ದೇಶವನ್ನು ಮುಂದು ತರಲು ಯತ್ನಿಸುತ್ತಿರುವರು. ಕೆಲವರು ತಮ್ಮ ವಿದ್ಯಾಭ್ಯಾಸವನ್ನು ಇನ್ನೂ ಮುಂದುವರಿಸುವುದರಲ್ಲಿಯೇ ಆಸಕ್ತರಾಗಿದ್ದಾರೆ. ಇನ್ನು ಕೆಲವರು ತಮ್ಮ ವಿದ್ಯೆಯನ್ನು ಮುಂದುವರಿಸಲು ಇಚ್ಛೆ ಇದ್ದರೂ, ಅದಕ್ಕೆ ಬೇಕಾದಷ್ಟು ಸಾಹಿತ್ಯ ಇಲ್ಲದುದರಿಂದ, ತಮ್ಮ ವಿದ್ಯಾಭ್ಯಾಸವನ್ನು ಕೊನೆಗಾಣಿಸಿ, ತಮ್ಮ ಜೀವನವನ್ನು ಕಳೆಯಲು ಚಿಕ್ಕ ಚಿಕ್ಕ ಉದ್ಯೋಗಗಳನ್ನು ಹುಡುಕುತ್ತಿರುವರು. ಹಣವಿಲ್ಲದೆ ತಮ್ಮ ವಿದ್ಯೆಯನ್ನು ಮುಂದುವರಿಸಲು ಕಷ್ಟಪಡುವವರು ಅನೇಕರಿದ್ದಾರೆ. ಇಂಥ ಕಷ್ಟವನ್ನು ಪರಿಹರಿಸಲೋಸುಗವಾಗಿಯೇ ಕೊಡಗಿನಲ್ಲಿ ವಿದ್ಯಾಭ್ಯಾಸ ಸಂಘವನ್ನು ಏರ್ಪಡಿಸಿದ್ದಾರೆ. ಈ ಸಂಘದಿಂದ ನಮ್ಮ ಕೊಡಗಿನ ಯುವಕರಿಗೆ ಅನೇಕ ಸಹಾಯವು ಸಿಕ್ಕಿದೆ. ಈಗಾಗಲೇ ತಮ್ಮ ಪ್ರೌಢ ವಿದ್ಯಾಭ್ಯಾಸವನ್ನು ಮುಗಿಸಿದ ಅನೇಕ ಯುವಕರು ಈ ಸಂಘದಿಂದ ವೇತನವನ್ನು ಹೊಂದಿರುವರು. ಕೊಡಗುದೇಶದ ಅನೇಕ ಜನರಿಗೆ ಈ ಸಂಘದ ಪ್ರಯೋಜನವು ಇನ್ನೂ ತಿಳಿದು ಬಂದಿರುವುದಿಲ್ಲ. ಆದುದರಿಂದ ಈ ಸಂಘವು ಹಣವಿಲ್ಲದೆ ವಿದ್ಯಾರ್ಥಿಗಳಿಗೆ ವೇತನ ಕೊಡಲು ಹಿಂದುಮುಂದು ನೋಡುತ್ತಿರುವುದು. ವರ್ಷ ವರ್ಷವೂ ವಿದ್ಯಾರ್ಥಿಗಳು ಹೆಚ್ಚುತ್ತಾ ಬಂದ ಹಾಗೆ ವೇತನಗಳನ್ನೂ ಸಹ ಹೆಚ್ಚಿಸುತ್ತಾ ಬರಬೇಕು. ಸಂಘದಲ್ಲಿ ಸಾಕಷ್ಟು ಹಣ ಇಲ್ಲದ್ದರಿಂದ ಇದು ಬಹಳ ಕಷ್ಟವಾಗಿ ಕಂಡು ಬಂದಿತು. ಸಂಘದಲ್ಲಿ ಹಣ ಕಮ್ಮಿಯಾದುದರಿಂದಲೇ ಬಂದ ವರ್ಷ ವೇತನವೂ ಸಹ ನಿಲ್ಲಿಸಬೇಕಾಗಿ ಬಂತು. ಇಂಥಾ ಕಷ್ಟಗಳನ್ನು ಕಂಡೂ ಸಹ ನಮ್ಮ ಜನರು ಕಣ್ಣು ತೆರೆಯದೆ ಇರುವುದು ಬಹಳ ಶೋಚನೀಯವೇ ಸರಿ.

ಬೇರೆ ಪ್ರದೇಶಗಳಲ್ಲಿ ಇಂಥ ಕಷ್ಟಗಳನ್ನು ಕಂಡು, ಮೆಂಬರುಗಳು ಸಂಘವನ್ನು ವೃದ್ಧಿಪಡಿಸಲು ಚೀಟು" (Rattle) ಎಂಬ ಸುಲಭ ಉಪಾಯವನ್ನು ಕಂಡುಹಿಡಿದಿರುವರು. ನನ್ನ ಮನಸ್ಸಿನಲ್ಲಿ ಇದು ಕೊಡಗಿನಲ್ಲಿಯೂ ಸಾಧಕವಾಗಬಹುದೆಂದು ತೋರುತ್ತೆ. ಕೊಡಗಿನಲ್ಲೇ ಅಲ್ಲ, ಬೇರೆ ದೇಶಕ್ಕೂ ಟಿಕೇಟುಗಳನ್ನು ಮಾರಲು ಕಳುಹಿಸಬಹುದು. ಸಿಕ್ಕಿದ ಹಣದಲ್ಲಿ ಒಂದು ಭಾಗವನ್ನು ಸಂಘದ ಉಪಯೋಗಕ್ಕೆ ತೆಗೆದು ಉಳಿದುದನ್ನು ಚೀಟುಹಾಕಿದರೆ ಹಣ ಕೊಟ್ಟವರಿಗೆ ಬಂದ... ತೃಪ್ತಿಯೂ, ಸಂಘಕ್ಕೆ ಹಣವೂ ಸಿಕ್ಕಿದಹಾಗೆ ಆಗುತ್ತೆ. ಈ ವಿಷಯವನ್ನು ಒಬ್ಬ ಮಹನೀಯರು ಮೆಂಬರುಗಳಿಗೆ ಕೆಲವು ವರ್ಷಗಳ ಹಿಂದೆ ಸೂಚಿಸಿದ್ದರೂ ಯಾರೂ ಮೆಂಬರರಿಂದ ಕೆಲಸ ಮಾಡಲಿಲ್ಲವೆಂದು ತಿಳಿಯುತ್ತೇನೆ. ಸಂಘವನ್ನು ವೃದ್ಧಿಪಡಿಸಿ ವರ್ಷ ವರ್ಷವೂ ಹೆಚ್ಚುತ್ತಿರುವ ವಿದ್ಯಾರ್ಥಿಗಳಿಗೆ ವೇತನಗಳನ್ನು ಕೊಟ್ಟು ಸಮಾಧಾನಪಡಿಸಬೇಕಾದರೆ ಇಂಥಾ ಒಂದು ಚೀಟನ್ನು ಬೇಗನೆ ಸುರುಮಾಡುವುದು ಒಳ್ಳೇಯದಾಗಿ ತೋರುತ್ತೆ. ಈ ಸಂಘಕ್ಕೆ ಸಂಬಂಧಪಟ್ಟ ಮೆಂಬರುಗಳೆಲ್ಲರೂ ಸಾಕಷ್ಟು ಮುತುವರ್ಜಿಯಿಂದ ಕೆಲಸಮಾಡಿ ಇದನ್ನು ಬೇಗನೆ ಸುರುಮಾಡುವರೆಂದು ನಂಬುತ್ತೇನೆ

ಕೆ ಟಿ ಯು.

ಈ ತಾರೀಕ 12ರಲ್ಲಿ 'ಲೋಕಪಾವನ'ದಲ್ಲಿ ಮೆ ಉದಯೊಂದ ಪೂಜ್ಯಯ್ಯನವರು ನನ್ನ ಮೇಲೆ ಹೊರಿಸಿದ ಆರೋಪಣೆಗೆ ಉತ್ತರ

ನಾನು ಡಿಸ್ಟ್ರಿಕ್ಟ್ ಬೋರ್ಡ್ ಮತ್ತು ಕೌನ್ಸಿಲು ಮೆಂಬರಾದನಂತರ ಮಾಡಿದ ಕೆಲಸವು ನನಗೆ ಓಟು ಕೊಟ್ಟ ಮಹನೀಯರಿಗೆ ಚೆನ್ನಾಗಿ ವೇದ್ಯವಿದೆ. ಆದಾಗ್ಯೂ ಸಿಂದಲೇ ಮೆ ಪೂಜ್ಯಯ್ಯನವರು ನನಗೆ ವಿರೋಧಮಾಡುತ್ತಾ ಬಂದದ್ದೂ ಓಟುದಾರರಿಗೆ ತಿಳಿಯದ್ದಲ್ಲ.

ಕೌನ್ಸಿಲು ಮೆಂಬರಾದರೆ ಕಕ್ಕಬೆ ಹೊಳೆಗೆ ಸೇತುವೆ ಕಟ್ಟಿಸುತ್ತೇನೆಂದೂ ಎಂದೂ ಹೇಳಲಿಲ್ಲ. ನಾನು ಏನೇನು ಹೇಳಿದೆನೆಂಬುದು ವಿರಾಜಪೇಟೆನಲ್ಲಿ ಹಾಜರಿದ್ದ ಮಹನೀಯರಿಗೆ ತಿಳಿದೇ ಇದೆ

ನಾನ ಡಿ ಬೋ ಮೆಂಬರಾದಂದಿನಿಂದೀಚೆಗೆ ನಮ್ಮ ನಾಲ್ಕುನಾಡು ಕಡಿಯತ್ತುನಾಡಿನ ಬಳರಸ್ತೆಗಳಿಗೆ ಎಷ್ಟು ಹಣ ಮಂಜೂರ್ಮಾಡಿಸಿ ಅವುಗಳ ಸ್ಥಿತಿಯನ್ನು ಎಷ್ಟರಮಟ್ಟಿಗೆ ಅಭಿವೃದ್ಧಿಗೆ ತಂದಿದ್ದೇನೆಂಬುದನ್ನು ಮೆ ಪೂಜ್ಯಯ್ಯನವರು ಮತ್ತು ಇವರ ಸಹಪಾಟಿಗಳಾದ ನವೀನ ಕೊಡವಸಮಿಯ ಮೆಂಬರರುಗಳಿಗಲ್ಲದೆ ಇತರರೆಲ್ಲರಿಗೂ ತಿಳಿದಿದೆ. ಇವರು ಹೇಳುವ ಪಾಲದ ವಿಷಯ ನನಗೆ ಇದುವರೆಗೆ ಮೆ ಪೂಜ್ಯಯ್ಯನವರಾಗಲೀಯೂ ಇತರರಾಗಲೀ ಬರೆದಿರುವುದಿಲ್ಲ. ಇವರ ನಿಜವಲ್ಲದ ಬರಹವು ಈ ಕಾರಣದಿಂದ ವೃಥಾ ಕಾಲಹರಣ ಮತ್ತು ಆರೋಪಣೆಯಲ್ಲದೆ ಅನ್ಯಥಾ ಅಲ್ಲ

ನಮ್ಮ ನಾಡಿನಲ್ಲಿ ನನ್ನಿಬ್ಬರನ್ನು ಅರಿಯದ ಜನರು ಕೇವಲ ಕಡಿಮೆ. ಮೆ ಪೂಜ್ಯಯ್ಯನವರು ಬರೆದ ಆರೋಪಣೆಯು ಬರುವ ಚುನಾವಣೆಗೆ ಅಡಚಣೆ ತರುವ ಉದ್ದೇಶಕ್ಕಾಗಿ ಬರೆದದ್ದೆಂದು ಯಾರುತಾನೇ ಅರಿಯರು!

ಯಾರ್‍ಯಾರು ಅವರವರ ಊರ, ನಾಡು, ತಾಲೋಕು ಮತ್ತು ದೇಶದ ಏಳಿಗೆಗೆ ಎಷ್ಟರ ಮಟ್ಟಿಗೆ ಕೆಲಸಮಾಡಿದ್ದಾರೆಂದು ಎಲ್ಲರಿಗೂ ತಿಳಿದಿರುವುದರಿಂದ, ಇವರ ಲೇಖನದಿಂದ ನನಗೆ ಯಾವ ಬಾಧಕವೂ ಇಲ್ಲ. ಅಲ್ಲದೆ ವೃಥಾ ನಿಜವಲ್ಲದ್ದನ್ನು ಬರೆಯುವ ಇವರಂಥವರ ಸಹಾಯವೂ ನನಗೆ ಯಾವ ವಿಧದಲ್ಲಿಯೂ ಅವಶ್ಯವಿಲ್ಲವೆಂದು ತಿಳಿಯಲಿ

ಕೋಟೆರ ಚಿಣ್ಣಪ್ಪ

ಜರ್ಮನ್ ಮಿಶನರಿಗಳು

ಅಯ್ಯಾ,

ಮದ್ರಾಸಿನ ಈ ತಾರೀಕು 14ರ 'ಹಿಂದು' ಪತ್ರಿಕೆಯಲ್ಲಿ ಅವರ ಸ್ವಂತ ಬಾತ್ಮಿದಾರರೊಬ್ಬರು ಕಲ್ಲಿಕೋಟೆಯಿಂದ ಬರೆದಿರುವದೇನೆಂದರೆ —ಬರುವ ತಿಂಗಳಲ್ಲಿ ಕೆಲವು ಜರ್ಮನ ಮಿಶನ್ನಿನವರು ಮಲಬಾರಿಗ ಬಂದು ತಮ್ಮ ಮತಪ್ರಚಾರ ವಿದ್ಯಾಭ್ಯಾಸ ಮತ್ತು ವೈದ್ಯಕ ಕೆಲಸಗಳನ್ನು ಪುನಃ ಕೈಕೊಳ್ಳುವರೆಂದು ತಿಳಿಯಬರುತ್ತದೆ. ಹಣದ ಅಭಾವದಿಂದ ಪತ್ತಿಲ್ಲಬಿಟ್ಟಿದ್ದ ಸ್ಥಳೀಕ ಮಿಶನ್ ಆಸ್ಪತ್ರೆಯನ್ನು ಪುನಃ ತೆರೆಯುವರು ಮತ್ತು ಅವರು ಮೊದಲು ನಡಿಸುತ್ತಿದ್ದ ವಿದ್ಯಾಭ್ಯಾಸದ ಸಂಸ್ಥೆಗಳ ಆಡಳಿತವನ್ನು ಕೈಕೊಳ್ಳುವರು. ಇದಕ್ಕೆಲ್ಲಾ ಬೇಕಾಗುವ ಹಣವನ್ನು ಯೂರೋಪಿನಲ್ಲಿರುವ ಬಸೆಲ್ ಮಿಶನ್ ಕಮಿಟಿಯವರು ಕೊಡುವರೆಂದು ಸಹ ವರ್ತಮಾನ.

ಇದು ನಿಜವಾದರೆ ಮಲಬಾರಿಗೆ ಬರುವ ಮಿಶನರಿಗಳು ನೆರೆದೇಶವಾದ ಕೊಡಗಿಗೂ ಹರಡದೆ ಇರಲಿಕ್ಕಿಲ್ಲವಾಗಿ ತೋರುತ್ತದೆ. ಮಿಶನರಿಗಳ ವ್ಯವಹಾರದೊಂದಿಗೆ ಜರ್ಮನಿಯ ಸಾಮಾನುಗಳೂ ನಮ್ಮ ದೇಶಕ್ಕೆ ಬರಬಹುದಂದೇ? ಬೇರೆ ಹಲವು ಸಾಮಾನುಗಳೊಂದಿಗೆ ಈ ದೇಶದಲ್ಲಿ ಪರಿಗೆಟ್ಟಿರುವ ಜರ್ಮನ್ ಮಿಶನ್ ಕೊಡೆಗಳು ಧಾರಾಳವಾಗ ಇಲ್ಲಿ ಮಾರಾಟಕ್ಕೆ ಬರುವವೆಂದು ಇದ ರು ...ಡುತ್ತಿರುವ.

'ಕುತೂಹಲಿ"

786

ಸ್ವಮಾದ ಮಾಲು. ತೂಕಮಾಡಿ ಕಳಿಸಿರಿ.

ಬೆಳ್ಳೂರು ಉಂಡೆನಶ್ಯ.

ಸ್ವಾ,

ನಾವು ಕಳೆದ 30 ವರ್ಷಗಳಿಂದಲೂ ಹಸನಾದ ನಶ್ಯ ತಯಾರುಮಾಡಿಸಿ ಮೈಸೂರು ಸೀಮೆಯಲ್ಲದೆ ಇತರ ದೇಶಗಳಿಗೆ ವಿ. ಪಿ. ಮೂಲಕ ಕಳುಹಿಸಿ ಅನೇಕ ಸರ್ಟಿಫಿಕೇಟುಗಳ ಪಡೆದಿರುತ್ತೇವೆ. ನಮ್ಮ ನಶ್ಯವು ಮೂಗಿಗೆ ಸಂಬಂಧಪಟ್ಟ ವ್ಯಾಧಿಗಳನ್ನು ಗುಣಪಡಿಸುವದಲ್ಲದೆ ಮನಸ್ಸಿಗೆ ಹರ್ಷವನ್ನುಂಟುಮಾಡುತ್ತೆ. ಒಂದು ತಿಂಗಳಿಟ್ಟರೂ ಕೆಡುವುದಿಲ್ಲ. ಕೆಟ್ಟರೆ ವಾಪಸು ಪಡೆಯುತ್ತೇವೆ ಒಂದು ಸಾರಿ ತರಿಸಿ ಪರೀಕ್ಷಿಸಿರಿ.

ನಮ್ಮ ನಶ್ಯವು ಈ ಮೊದಲು ಸೇರು 1ಕ್ಕೆ 1—4—0, 1—8—0 ರೂ. ನಂತೆ ಮಾರುತ್ತಿದ್ದೆವು. ಈಗ ಕಾರಣಾಂತರದಿಂದ ಅಕ್ಟೋಬರು ಅಂತ್ಯದೊಳಗೆ ಆರ್ಡರ್ ಕಳುಹಿಸುವವರಿಗೆ,

24 ತೊಲೆ ಸೇರು 1ಕ್ಕೆ 0—15—0,

3 ಸೇರು ತರಿಸುವವರಿಗೆ ಸೇರು 1ಕ್ಕೆ 0—14—0

ಐದು ಸೇರಿಗಿಂತ ಹೆಚ್ಚು ತರಿಸುವವರಿಗೆ ಶೇಕಡ 12½ ರಂತೆ ಕಮಿಶನ್ ವಜಾಮಾಡಿ ಕಳುಹಿಸಲಾಗುವುದು.

ಹಸನಾದ ಪುಡಿನಶ್ಯ, ಬೀಡಿ, ನಶ್ಯ ವಗೈರೆ ಆಗುವ ಹೊಗೆಸೊಪ್ಪು, ನಶ್ಯದ ಕಡ್ಡಿ, ಡಬ್ಬಿ ಸಹ ಬಿಕರಿಗೆ ಸಿದ್ಧವಾಗಿದೆ. ಹಾಮಿದೆ ಕಳೆದನಂತರ ಬರತಕ್ಕ ಆರ್ಡರಿಗೆ ಸೇರು 1ಕ್ಕೆ 0—1—0 ಹೆಚ್ಚು ಮಾಡಲಾಗುತ್ತೆ.

ವಿ ಪಿ ಮತ್ತು ಪ್ಯಾಕಿಂಗ್ ಚಾರ್ಜು ಪ್ರತ್ಯೇಕ.

ಸಮರ್ಥರಾದ ಏಜೆಂಟರುಗಳು ಬೇಕಾಗಿರುತ್ತೆ.

ಸ್ಯಾಂಪಲ್ ಅಪೇಕ್ಷಿಸುವವರು ಒಂದಾಣೆ ಸ್ಟಾಂಪು ಕಳುಹಿಸತಕ್ಕದ್ದು.

ನಮ್ಮ ರಿಜಿಸ್ಟರಿಗೆ ದಾಖಲಾಗಿ ಅಡ್ವಾನ್ಸು ಕಳುಹಿಸಿದರೆ ಸೇರು 1ಕ್ಕೆ ಆರ್ಧಾಣೆ ಬೆಲೆ ಕಡಿಮೆಮಾಡಿ ನಿಮ್ಮ ಕಾಗದ ಇಲ್ಲದೆ ವಾಯಿದೆಗೆ ಸರಿಯಾಗಿ ನಶ್ಯ ಕಳುಹಿಸಲಾಗುತ್ತೆ. ಅಡ್ರೆಸು ದಯವಿಟ್ಟು ಸ್ಪಷ್ಟವಾಗಿ ಬರೆಯಬೇಕು.

ಲೆಟ್ಟರ ವಿವರಕ್ಕೆ ಮೇನೇಜರಿಗೆ ಬರೆಯತಕ್ಕದ್ದು.

A Mahomed Haniff,
Manager

ನಮ್ಮ ವಿಳಾಸ:—

ಯುಸ್. ಅಬ್ದುಲ್ ವಹಾಬ್ ಅಂಡ್ ಸನ್ಸ್,
ನಶ್ಯದ ವ್ಯಾಪಾರಿಗಳು,
ಬೆಳ್ಳೂರು ಪೋಸ್ಟು.
ಮೈಸೂರ್ ಡಿಸ್ಟ್ರಿಕ್ಟ್

52—1

EMPIRE OF INDIA LIFE ASSURANCE CO., LTD.

(Established 1897.)

ALL WITH PROFIT POLICIES

Issued before 28th February 1927 will share in the BONUS Distribution for the five years ending on that date.

PROSPECTUS ON APPLICATION

Bangalore Branch — 152 Commercial Street.

Madras Branch — 9 & 10 Second Line Beach

C. K Chengappa.
Special Agent, Riverside Estate,
Siddapur

24—4

ಕರ್ಣಾಟಕ

ಎಗ್ಯೂ ಮಿಕ್ಶ್ಚರ್

ಚಳಿಜ್ವರ, ಮಲೇರಿಯ ಜ್ವರ, ಇನ್ಫ್ಲ್ಯುಯೆಂಜ ಆದ ಜ್ವರ, ಮೊದಲಾದವುಗಳ ಮೇಲೆ ಅಮೃತಸಮಾನವಾದ ಔಷಧವು.

ಬೆಲೆ ಬಾಟ್ಲಿಯೊಂದಕ್ಕೆ ರು. ೦-೧೪-೦
ಟಪ್ಪಾಲು ಚಾರ್ಜು ಬೇರೆ
ಡಜನ್ ಬಾಟ್ಲಿಗಳಿಗೆ ಟಪ್ಪಾಲುವೆಚ್ಚ ಸಹ ರು.
೯—೨—೦

ಏಜಂಟರು ಬೇಕು, ಕೊಡಗಿನ ಸಬ್ ಏಜಂಟರುಗಳು ತಮ್ಮ ಊರಿನ ಊರು ಜನ ಔಷಧದ ವ್ಯಾಪಾರಿಗಳ ಹೆಸರನ್ನು ತಿಳಿಸಿದ್ದಲ್ಲಿ ಅವರಿಗೆ ಪಾಂಪ್ಲೆಟುಗಳು ಪೇಪರು ಪ್ರತ್ಯೇಕ.

12—11

ಕರ್ಣಾಟಕ ಬ್ರದರ್ಸ್,
ಗಿರ್ಗಾಂವ್, ಮುಂಬಾಯಿ.

Apply for our shooting Season's Clearance Sale Catalogue of Brand New Goods.

10 to 25 percent Reductions in Prices.

No License Required!! **No License Required**



Webley and Scott Air Pistol, cal ·177 or 22, bore Powerful and Accurate. complete with a sample box of slugs, two spare washers, a brush forcleaning, and a bookletof instructions Rs. 30/— Free delivery.

Pweiful German Diana Air gun. Handsome and Accurate, takes B. S. A. Patern No 1 Slugs and Darts. expressly recommendable for Target Practice Rs 15/ Free delivery.

Brilliant Search Light Lamp for Night Sports Rs 30/— Free delivery.

No License required to purchase or to possess the above items.

Reliable D. B B L 12 bore guns	Rs.	60/—	and upwards
Do S. B B L. 12 do	do	40/—	do
D B. M L Guns	"	45/-	do
S B. M L. do.	,	30/—	do
S B. B L Rifles	"	25/—	do
B L Revolvers and Pistols	,	30/—	do.

Arms, Ammunition and shooting requisitesof almost every kind andquality offered at exceptionally favourable rates ANumber of good quality second hand weapons also offered for sale in theNew Catalogue.

GOOLAMHUSIAIN ALLIBHOY & SONS
Largest Importers of Firearms and Ammunition,
Cheapest priced firm in India,

210 Abdul Rehman Street, BOMBAY.

24. 5

೧೬ ಚಿತ್ರಪಟಗಳುಳ್ಳದ್ದು

ಸಚಿತ್ರ ಶ್ರೀ ಶನಿಪ್ರಭಾವ ಕಥೆ.

೭೭ ಕಥೆಗಳು ೫೧೨ ಪುಟಗಳು

ಈ ಕಥೆಯು ಧರ್ಮಶಾಸ್ತ್ರ, ವೇದಾಂತ, ಸ್ತ್ರೀಪಾತಿವ್ರತ್ಯ ಬ್ರಾಹ್ಮಣ, ವೈಶ್ಯ, ಶೂದ್ರರೆಂಬ ನಾಲ್ಕು ವರ್ಣದವರು ನಡೆಯತಕ್ಕ ವರ್ಣಾಶ್ರಮ ಧರ್ಮವೇ ಮುಂತಾದ ಸದ್ವಿಚಾರಗಳನ್ನು ಬೋಧಿಸುವುದು. ೧ ಕಥಾರೂಪದಲ್ಲಿ ಚಿತ್ರಕಥಾ ಚಮತ್ಕಾರ ಶೋಭಿತವಾಗಿಯೂ ನೀತಿಬೋಧಕವಾಗಿಯೂ ಇರುವುದರಿಂದ ಸ್ತ್ರೀಯರು, ಪುರುಷರು, ಬಾಲಕರು ಎಂಬ ಭೇದವಿಲ್ಲದೆ ಎಲ್ಲರೂ ಓದಬಹುದು. ೨. ಲೋಕಾನುಭವಕ್ಕೆ ಬೇಕಾದ ಅನೇಕ ವಿಷಯಗಳು ಇದರಿಂದ ತಿಳಿದುಬರುವುದು. ೩. ಈ ಕಥೆಯನ್ನು ಓದುವದರಿಂದ, ಮನಸ್ಸನ್ನು ದುರಾಚಾರದಲ್ಲಿ ಬಿಡದಂತೆ ಸದಾಚಾರದಲ್ಲಿಯೇ ನಡೆಯುವಂತೆ ಮಾಡುವುದು. ೪ ವಿವೇಕಾವಿವೇಕವನ್ನು ತಿಳಿಯತಕ್ಕ ಜ್ಞಾನವನ್ನು ಉಂಟುಮಾಡುವುದು. ಬೇಕಾದವರು ವಿ ಪಿ. ಪೋಸ್ಟು ಮೂಲಕ ತರಿಸಿಕೊಳ್ಳಬಹುದು.

ದಪ್ಪಕಾಗದ ಕ್ರಯ ಪ್ರತಿ ೧ಕ್ಕೆ ರೂ. ೨-೦-೦. ಟಪ್ಪಾಲು ಹಾಸಲು ೦-೮-೦.

ಸಚಿತ್ರ ಭಟ್ಟಿ ವಿಕ್ರಮಾದಿತ್ಯರಾಯನ ಕಥೆ ೩ ಭಾಗ ಸೇರಿದ್ದು ೬೧೨ ಪುಟಗಳು ಕ್ರಯ ೭-೪-೦. ಸಚಿತ್ರರಾಜ ಕಂಪಿಲನ ಕಥೆ ೪೮೦ ಪುಟಗಳು, ಕ್ರಯ ರೂ. ೨.

ಸಚಿತ್ರ ಶ್ರೀರಾಮತತ್ವಾಮೃತ ಎಂಬ ಸೀತಾರಾಮಾಂಜನೇಯ ಸಂವಾದ ೨೪೬ ಪುಟಗಳು ೧-೮-೦. ಇವುಗಳಿಗೆ ಟಪಾಲು ಖರ್ಚು ಬೇರೆ.

ನಮ್ಮಲ್ಲಿ ದೊರೆಯುವ ಎಲ್ಲಾ ಪುಸ್ತಕಗಳ ಕ್ರಯಪಟ್ಟಿ (ಕ್ಯಾಟಲಾಗ್)ಗೆ ಬರೆದರೆ ಕಳುಹಿಸುವೆವು.

52—12

ನಮ್ಮ ವಿಳಾಸ— ಎಂ. ಆರ್. ಕೃಷ್ಣಸ್ವಾಮಿ ಶೆಟ್ಟಿ,
ಬುಕ್ಕುಡಿಪೋ, ಚಿಕ್ಕಪೇಟೆ, ಬೆಂಗಳೂರು ಸಿಟಿ

ಹೊಸ ಸಾಮಾನುಗಳು! ಸುಲಭ ಕ್ರಯ!! ಈಗತಾನೇ ಬಂದಿವೆ!!!

ಇಂಥ ಸುಸಮಯವನ್ನು ಕಳಕೊಳ್ಳಬೇಡಿರಿ!

12 ಬೋರ್ ಜೋಡಿ ಕೊಳವಿನ ತೋಟೆ ಕೋವಿ 1ಕ್ಕೆ	ರೂ.	115—0—0
12 ,, 32 ಇಂಚಿನ ಒಂಟಿ ಕೊಳವಿನ ತೋಟೆ ಕೋವಿ (ಜರ್ಮನಿ) 1ಕ್ಕೆ.	,,	60—0—0
,, ,, 35 ,, ,, ,, ,,	,,	65—0—0
ಜೋಡಿ ಕೊಳವಿನ ಕೇಪು ಕೋವಿ 20ನೇ ನಂಬ್ರ 1ಕ್ಕೆ....	,,	85—0—0
12 ಬೋರ್ ಚಿಲ್ಲು ತೋಟೆಗಳು 'ಒಳ್ಳೇ ಮಾಸೆ) 100ಕ್ಕೆ	,,	14—0—0
,, ,, ಆನ ಚಿಲ್ಲು ,, ,, ,, ...	,,	16—0—0
,, ಗುಂಡು ತೋಟೆಗಳು ,, ,, ...	,,	19—0—0
ಕೋವಿ ಕ್ಲೀನ್ ಮಾಡುವ ಮತ್ತು ತೋಟೆ ತುಂಬಿಸುವ ಸಾಮಾನುಗಳ 1 ಪೆಟ್ಟಿಗೆ		27—8—0
ಕೇಪು 250ರ 1 ಟಿನ್ನಿಗೆ	ರೂ.	1—5—0
ಕಾಲು ಪೌಂಡು 2 ಯಥಾಸ ಮದ್ದು ಡಬ್ಬಿ 1ಕ್ಕೆ	,,	1—0—0
ಚಿಲ್ಲು ಎಲ್ಲಾ ತರಹದ ನಮೂನೆ ರಾತ್ಲು 1ಕ್ಕೆ	,,	0—10—0
ಪೂರ್ತಿ ಉಕ್ಕಿನ ನೊಗಸಾದ ಗುದ್ದಲಿಗಳು ೯ ಪೌಂಡಿನ 1 ಡಜನ್ನಿಗೆ	,,	33—0—0
,, ,, ,, ,, ,, ...	,,	30—0—0
4 ಮುಳ್ಳಿನ ಮುಳ್ಳು ಗುದ್ದಲಿಗಳು ಡಜನ್ನಿಗೆ	,,	60—0—0
3 ,, ,, ...	,,	48—0—0
4 ಪೌಂಡಿನ ಮರ ಕಡಿಯುವ ಕೊಡಲಿಗಳು ಡಜನ್ನಿಗೆ	,,	54—0—0
ಇಂಗ್ಲಿಷ್ ನಮೂನೆ ಕಪಾಟು ಚಾಕುಗಳು ಡಜನ್ನಿಗೆ	,	15—0—0
ಮಿಶನ್ ಕೊಡೆಗಳು ದೊಡ್ಡ ಸೈಜ್ (ಸ್ಟೀಲ್ ಫ್ರೇಮ್) 1ಕ್ಕೆ	,,	4—8—0
ಸಣ್ಣ ಸೈಜ್ , ,, ...	,,	4—4—0
ಹೋಲ್‌ಸೇಲಿಗೆ ,, ...	,,	ಕಮ್ಮಿ ಕ್ರಯ

ಮೆಕ್ಡೋವೆಲ್ ಕಂಪನಿ,
ಮಡಿಕೇರಿ

Messers Mc Dowell & Co.
Mercara.

12-12

ಕಿರ್ಲೋಸ್ಕರ

ಉಕ್ಕಿನ ನೇಗಿಲಿನ ಕುಂಟೆಗಳು.

(ಜೋಡು)

ಇವುಗಳ ಮುಖ್ಯ ಗುಣವೇನೆಂದರೆ:—

(೧) ಬೆಲೆಯಲ್ಲಿ ಅಗ್ಗ

(೨) ಕೂಡಿಸುವದಕ್ಕೆ ಅರಾಮವು.

(೩) ಬಾಳಿಕೆಯಲ್ಲಿ ಗಟ್ಟಿ

(೪) ನೇಗಿಲುಗಳು ಸೇರುವದಿಲ್ಲ.

(೫) ಎತ್ತುಗಳಿಗೆ ಬಹುವಷ್ಟು ಹಗುರ.

ಇತ್ಯಾದಿ.

ಸಧ್ಯಕ್ಕೆ ಪೇಟೆಯಲ್ಲಿರುವ ಯಾವದೇ ಕುಂಟೆಯ ನಮೂನೆಗಿಂತಲೂ ಈ ಕುಂಟೆಯು ಎಲ್ಲ ರೀತಿಯಿಂದ ಮೇಲು ಇರುತ್ತದೆ.

ಸವಿಸ್ತರ ಸಂಗತಿಯು ಒಗ್ಗೆ ಬರೆದು ತಿಳಿದು ಕೊಳ್ಳಿ.

ಕಿರ್ಲೋಸ್ಕರ ಬಂಧು, ಲಿಮಿಟೆಡ್.

ಕಿರ್ಲೋಸ್ಕರವಾಡಿ,

16—11 ಜಿ. ಸಾತಾರ್.

ರೋಲ್ಡ್‌ಗೋಲ್ಡ್ ಇಂಗ್ಲೀಷ್ ಸ್ಟೈಲ್ ಕೈ ಬಳೆಗಳು.

ಇದನ್ನು ಅಮೇರಿಕಾದೇಶದ ಕೆನಡಿಯನ್ ಗೋಲ್ಡ್ ಎಂಬ ಥಳಥಳಿಸುವ ಭಂಗಾರದಿಂದ ತಯಾರಿ ಒಂದಿರುತ್ತೆ. ಇದನ್ನು ದೊಡ್ಡವರೂ, ಚಿಕ್ಕವರೂ ಉಪಯೋಗಿಸಬಹುದು. ಇದರ ಬಣ್ಣ ಎಂದಿಗೂ ಹೋಗದು. ಹೆಂಗಸರು ಇದನ್ನು ಕೈಯಲ್ಲಿ ಹಾಕಿಕೊಂಡರೆ ಬೇರೆ ಯಾವ ಆಭರಣಗಳೂ ಬೇಕಾಗುದಿಲ್ಲ. ಒಂದು ಜೋತೆಯಿದ್ದರೆ ಒಂದು ಕುಟುಂಬದವರೆಲ್ಲಾ ಉಪಯೋಗಿಸಬಹುದು. ಇದು ಹೆಂಗಸರಿಗೆ ಬಹು ಮುದ್ದಾದ ಆಭರಣ. ಜೋತೆ 1ಕ್ಕೆ ರೂ. 2—8—0



ಇಮಿಟೇಷನ್ ವಜ್ರದ ಬೆಂಡೋಲೆಗಳು.

ಈ ಬೆಂಡೋಲೆಗಳನ್ನು ಬಹು ಹೊಸಹಾದ ವಜ್ರದ ಕಲ್ಲುಗಳನ್ನು ಇಟ್ಟು ಅಪರಂಜಿ ಭಂಗಾರಕ್ಕೆ ಸರಿಸಮನಾದ ಸೀಮೆಯ ಭಂಗಾರದಿಂದ ಕಟ್ಟಡ ಕಟ್ಟಿರುವದು. ಇದರ ಪ್ರಕಾಶವು ಸಾಚಾವಜ್ರದ ಕಲ್ಲುಗಳಿಗೆ ಸರಿಯಾಗಿರುವದು, ಇದರ ಬಣ್ಣವು ಕೆಡದಂತೆ ವಿಲಾಯತಿಯಲ್ಲಿ ಎಲೆಕ್ಟ್ರಿಕ್ ಪವರಿನಿಂದ ಅಪರಂಜಿ ಭಂಗಾರದ ಗಿಲೀಟು ಕೊಟ್ಟಿರುವದು. ಇದನ್ನು ನೋಡಿದವರು ನಿಜವಾದ ಓಲೆ ಎಂದೇ ಹೇಳುವರು. ಈಗಿನ ಕಾಲದಲ್ಲಿ ಶ್ರೀಮಂತರೂ, ಜಮೀನ್‌ದಾರರೂ ಮುಂತಾದವರು ಬಹಳವಾಗಿ ಇವನ್ನೇ ಉಪಯೋಗಿಸುತ್ತಿರುವರು.

ಕ್ರಯ 1ಕ್ಕೆ 7 ಕಲ್ಲಿನ ಬಿಳಿಯ ಓಲೆ ಜೊತೆ ರೂ 3—0—0.

" " ಕೆಂಪು ಕಲ್ಲಿನ " " 3—8—0.

ಚಂದ್ರಹಾರ.

ಇದನ್ನು ಚಿಕ್ಕವರೂ ದೊಡ್ಡವರೂ ಉಪಯೋಗಿಸುವಂತೆ ಅಚ್ಚಬೆಳ್ಳಿಯಿಂದ ತಯಾರಿಸಿ ಭಂಗಾರದ ಗಿಲೀಟು ಮಾಡಿದೆ. ಇದನ್ನು ಪ್ರತಿಯೊಬ್ಬ ಸ್ತ್ರೀಯರೂ ಧರಿಸಿಕೊಳ್ಳಬಹುದು. ನೋಡಲು ಭಂಗಾರದ ಹಾಗೇ ಇರುವದು. ಬಣ್ಣಕ್ಕೆ 3 ವರ್ಷ ಗ್ಯಾರಂಟಿ.

3 ಎಳೇ ಸರ 1ಕ್ಕೆ ರೂ. 3—4—0.

4 " " " 4—0—0.

4 " " " 5—4—0.

ವಿಳಾಸ — ಬ್ರಿಟಿಷ್ ಟ್ರೇಡಿಂಗ್ ಕಂಪೆನಿ,

ಪೋಸ್ಟ್ ಬಾಕ್ಸ್ ನಂ. 1223, ಮದರಾಸು.

52—35

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್, ಕೋ ಆಪರೇಟಿವ್ ಸೊಸೈಟೀಸ್ ಆಕ್ಟ್ಸ ಪ್ರಕಾರ ರಿಜಿಸ್ಟರಾಗಿದೆ.

		ರೂ.
ಶೇರ್ ಬಂಡವಾಳ	—	50,000
ವಸೂಲಾದ ಶೇರ್ ಮೊಬಲಗು	—	12,090
ಒಮ್ಮೆ ಬಂದ ಠೇವಣಾತಿ	—	1,10,885

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇ ಮಾತ್ರಾಗಿ ಸಾಲಕೊಡತಕ್ಕದ್ದು.

ಒಂದು ವರ್ಷ ಮಾಯಿದೆ ಅದಕ್ಕ ಹೆಚ್ಚಿನ ಮಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ ರೂ. 6—4—0ರ ದರದಲ್ಲಿ ಬಡ್ಡಿ ದೊರೆಯುತ್ತೆ. ಕಡಿಮೆ ಮಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ 5ರ ಬಡ್ಡಿ ದೊರೆಯುತ್ತೆ.

ವರ್ಷಕ್ಕೊಂದಾವರ್ತಿ ಕೋ ಆಪರೇಟಿವ್ ರಿಜಿಸ್ಟ್ರಾರವರು ಲೆಕ್ಕ ಆಡಿಟ್ ಮಾಡುತ್ತಾರೆ.

ಪ್ರೆಸಿಡೆಂಟರು, ಟ್ರೆಜರರ್.

ಕೊಂಗಂಡನ ಕುಟ್ಟಯ್ಯನವರು, ಯಂ. ಭುಜಂಗರಾಯರು

ರಾವ್ ಬಹದ್ದೂರ್. ಬಿ.ಎ., ಬಿ.ಎಲ್.

ಸೆಕ್ರೆಟರಿ

ಸಿ. ಯನ್. ವೆಂಕಪ್ಪಯ್ಯನವರು, ಬಿ.ಎ., ಬಿ.ಎಲ್.

ತಾರೀಕು 29—8—1925.

ನೈಟ್ರೇಟ್ ಆಫ್ ಸೋಡಾ

ಎಲ್ಲಾ ಬೆಳೆಗಳಿಗೂ ಅತ್ಯುತ್ತಮವಾದ ಗೊಬ್ಬರ

Nitrate of Soda 15-16 per cent. N

ಈ ಗೊಬ್ಬರದಲ್ಲಿ ಬೆಳೆಗಳಿಗೆ ಅವಶ್ಯಕವಾದ ನೈಟ್ರೋಜನ್ ಸಸ್ಯಾಹಾರವು

15-16% ಅಂದರೆ ಮೀನು ಪ ಬಳ್ಳೆಯ ಹಿಂಡಿ ಗೊಬ್ಬರದಲ್ಲಿರುವುದಕ್ಕಿಂತಲೂ ಮೂರು ಪಾಲಷ್ಟು ಜಾಸ್ತಿಯಾಗಿರುವದು. ಇದರಲ್ಲಿ ಸಿಕ್ಕುವಷ್ಟು ಸಾರಜನಕ (Nitrogen) ವು ಬೇರೆ ಯಾವ ಗೊಬ್ಬರಗಳಿಂದಲೂ ಗಿಡಗಳಿಗೆ ದೊರೆಯಲಾರದು. ಆದ್ದರಿಂದಲೇ ಭೂಲೋಕದ ಎಲ್ಲಾ ಭಾಗಗಳಲ್ಲಿಯೂ ರೈತರು ಇದನ್ನು ವಿಶೇಷವಾಗಿ ಉಪಯೋಗಿಸುತ್ತಾರೆ.

ಭತ್ತ, ಕಬ್ಬು, ತೆಂಗು, ಅಡಿಕೆ, ಮೂವು, ಹೊಗೆಸೊಪ್ಪು, ತರಕಾರಿ ಮೊದಲಾದವುಗಳಿಗೂ ಕಾಫಿ, ಟೀ, ರಬ್ಬರು, ಏಲಕ್ಕಿ ಮೊದಲಾದ ತೋಟ ಪೈರುಗಳಿಗೂ ಎಲುಬಿನ ಪುಡಿ ಅಥವಾ ಮೀನು ಗೊಬ್ಬರ ವಗೈರೆ ಊರ ಗೊಬ್ಬರಗಳ ಜೊತೆಯಲ್ಲಿ ಈ ಗೊಬ್ಬರವನು ಉಪಯೋಗಿಸುವದರಿಂದ ಬೆಳೆಯು ಸಮೃದ್ಧಿಯಾಗುವದು. ನೈಟ್ರೇಟ್ ಆಫ್ ಸೋಡಾದಲ್ಲಿರತಕ್ಕ ಸೋಡವು ಮಣ್ಣಿನಲ್ಲಿರುವ ಪೊಟೇಷ್ ಎಂಬ ಇನ್ನೊಂದು ತರದ ಸಸ್ಯಾಹಾರವನ್ನು ಗಿಡಗಳಿಗೆ ಒದಗಿಸಿ ಕೊಡುತ್ತದೆ.

ಈ ಗೊಬ್ಬರವು ನೋಟಕ್ಕೆ ಬರೇ ಉಪ್ಪಿನ ಹಾಗಿದ್ದು ಅಪಾಯಕರವಲ್ಲ. ಎಕರೆ ಒಂದಕ್ಕೆ 100-200 ರಾತ್ತಲು ಸಾಕಾಗುವದು. ಹೆಚ್ಚಿನ ಮಾಹಿತಿ ಮತ್ತು "ಕೃಷಿಸುಧಾರ" ಎಂಬ ಪುಸ್ತಕವನ್ನು ಈ ಕೆಳಗಿನ ವಿಳಾಸದಾರರಿಂದ ಧರ್ಮಾರ್ಥವಾಗಿ ಪಡೆಯಬಹುದು.

52—12 **CHILEAN NITRATE COMMITTEE,**
Post Box 459, CALCUTTA.

ಒಂದು ಪ್ರಬಲವಾದ ಪ್ರಶ್ನೆ.

ನಮ್ಮ ಜೀವವನ್ನು ಏತಕ್ಕಾಗಿ ವಿಮೆಮಾಡಬೇಕು!

ವೃದ್ಧಾಪ್ಯದಲ್ಲಿ ನಮ್ಮ ಮತ್ತು ಹೆಂಡತಿ ಮಕ್ಕಳ ಪೋಷಣೆಗಾಗಿ!

ಈಗಾಗಲೇ ಸಾವಿರಾರು ಜನರು ವಿಮೆ ಮಾಡಿರುವ ಏಳುಕೋಟಿ ರೂಪಾಯಿಗಿಂತ ಹೆಚ್ಚು ಬಂಡವಾಳವಿರುವ ದೇಶೀಯ ವಿಮೆಕಂಪನಿಯಲ್ಲಿ ಅತ್ಯಂತ ದೊಡ್ಡದಾದ ಸಾವಿರ ರೂಪಾಯಿ ವಿಮೆಮಾಡಿದವರಿಗೆ ವರ್ಷಕ್ಕೆ 18ರೂ. ಕಡಿಮೆಯಲ್ಲದೆ ಲಾಭ ಕೊಡುವ 'ಓರಿಯಂಟಲ್' ಗವರ್ನಮೆಂಟ್ ಜೀವವಿಮೆ ಕಂಪೆನಿಯ ರೂಲ್ಸಿಗೂ, ಕರತಿಗೂ ಈ ಕೆಳಗಿನವರಿಗೆ ಬರೆದು ತಿಳಿದುಕೊಳ್ಳಿ.

ಖೋದಿಟಸ್ಟಿ ಎಂದರೇನು?

ದೇಶೀಯ ಹತ್ತಿಯಲ್ಲಿ ಕೈರಾಟೆಯಿಂದ ನೂಲು ತೆಗೆದು ಇಲ್ಲಿಯೇ ತಯಾರಿಸುವ ಬಟ್ಟೆಯೇ 'ಖಾದಿ.' ಈಗಾಗಲೇ ನಮ್ಮ ಸ್ಟೋರಿನಲ್ಲಿ ಪರದೇಶೀ ಬಟ್ಟೆಗಿಂತ ಗಟ್ಟಿಯಲ್ಲಿಯೂ ಅಂದದಲ್ಲಿಯೂ ಕಡಿಮೆ ಇಲ್ಲದಂತ, ಎಲ್ಲಾ ತರದ ಸೀರೆಗಳು ಚೆಕ್ಕೆಗಳು, ಶಾಲು ವಗೈರೆ ಎಲ್ಲಾ ತರದ ಬಟ್ಟೆಯು ತಯಾರಾಗಿದೆ. ದಯವಿಟ್ಟು ಪ್ರೋತ್ಸಾಹಿಸಿರಿ! ಖಾದಿಯಿಂದಲೇ ಸ್ವರಾಜ್ಯ ಖಾದಿಯಿಂದಲೇ ಮೋಕ್ಷವೆಂಬುದನ್ನು ಮರೆಯ ಬೇಡಿರಿ.

ವೀರಾಜಪೇಟೆ, ಕೆ. ಪಿ. ಚಿಣ್ಣಪ್ಪ,

ದಕ್ಷಿಣ ಕೊಡಗು. ಪ್ರೊಪ್ರೈಟರ್,

ಖಾದಿಭಂಡಾರ.

52—21.

೧೦೦೦ ರೂಪಾಯಿಗಳ ಬಹುಮಾನ.

ಲೋಕಪ್ರಸಿದ್ಧವಾದ ಸಾಲಂಮಿಸ್ರಿ ಮುರಬ್ಬಾ.

ನಮ್ಮ ಟ್ರೇಡ್ ಮಾರ್ಕನ್ನು ನೋಡಿ ಈ ಔಷಧ ತೆಗೆದುಕೊಳ್ಳಿ

ಇದರ ಸೇವನೆಯಿಂದ ವೀರ್ಯವು ನೀರಿನಂತೆ ಇದ್ದರೂ, ನಷ್ಟೇಂದ್ರಿಯವಾದರೂ, ಸ್ತ್ರೀ ಸಂಘಕ್ಕೆ ಮೊದಲೇ ಸ್ಖಲನವಾದರೂ, ಮೂತ್ರದೊಂದಿಗೆ ಹೋಗುತ್ತಿದ್ದರೂ ದೋಷರಹಿತವಾಗಿ ಶರೀರಕ್ಕೆ ಆರೋಗ್ಯವನ್ನೂ ಧಾರ್ಢ್ಯತೆಯನ್ನೂ ಆಯುಸ್ಸು, ಬಲ, ತೇಜಸ್ಸು ಉಂಟು ಮಾಡುವದು. ಅಜೀರ್ಣ ಮಲಬದ್ಧತೆ, ಮಿದುಳಿನ ಬಲಹೀನತೆ, ಕೈಕಾಲು, ಸೊಂಟ ನೋವುಗಳಿಗೆ ಇದು ದಿವ್ಯ ಔಷಧವು. ಈ ಸಾಲಂಮಿಸ್ರಿ ಎಂಬುವದು ಕಾಬೂಲ್ ಕಂದಾಹಾರ ಪ್ರಾಂತ್ಯದಲ್ಲಿ ಬೆಳೆಯುತ್ತದೆ.

ಈ ಔಷಧದಿಂದ ಗುಣಹೊಂದಿರುವ ಅನೇಕ ಮಹನೀಯರು ಶಾವಾಗಿಯೇ ಅನೇಕ ದೇಶಗಳಿಂದಲೂ ಆಫ್ರೀಕ, ಬರ್ಮ, ಪಿನಾಂಗ್, ಸಿಂಗಪೂರ್, ಸಿಲೋನ್, ಬೊಂಬಾಯಿ, ಕಲ್ಕತ್ತ, ಮದ್ರಾಸು ಮತ್ತು ಇಂಡಿಯಾದೇಶದಲ್ಲಿ ಎಲ್ಲಾ ಸ್ಥಳಗಳಿಂದಲೂ ನಮಗೆ ಯೋಗ್ಯತಾ ಪತ್ರಿಕೆಗಳನ್ನು ಕಳುಹಿಸಿರುವರು. ಇವುಗಳ ನಕಲನ್ನು ಯಾರಾದರೂ ತರಿಸಿ ನೋಡಬಹುದು. ಇವುಗಳು ಸುಳ್ಳು ಎಂದು ನಿರ್ಧರಪಡಿಸುವವರಿಗೆ ಮೇಲೆ ಕಂಡ ಬಹುಮಾನವನ್ನು ಕೊಡಲ್ಪಡುತ್ತೆ. ನಾವು ಹಾಗೆ ಕೊಡದೆ ನಿರಾಕರಿಸಿದಲ್ಲಿ ಕೋರ್ಟು ಮೂಲಕ ಅದನ್ನು ಪಡೆಯಬಹುದು. ೧ ಡಬ್ಬಿಯನ್ನು ೧೫ ದಿನ ಸೇವಿಸಿದಲ್ಲಿ ಗುಣವು ಖಂಡಿತವಾಗಿ ತೋರಬಹುದು ೨ ಯಾ ೩ ಡಬ್ಬಿಗಳು ಜನ್ಮಾಂತ್ಯದವರೆಗೂ ಪೂರ್ಣವಾಗಿ ಗುಣವನ್ನುಂಟು ಮಾಡುವವು. ಹೆಸರು ವಿಳಾಸಗಳನ್ನು ವಿವರವಾಗಿ ಬರೆಯಬೇಕು. ಒಂದಾವರ್ತಿ ಉಪಯೋಗಿಸಿ ಮಾಡಿ ನೋಡಿದಲ್ಲಿ ಖಾತ್ರಿ ಉಂಟಾಗುತ್ತೆ.

ಕ್ರಯ ಡಬ್ಬಿ ೧ಕ್ಕೆ ರೂ. ೨—೦—೦ ಅಂಚೆ ಚಾರ್ಜು ೧ರಿಂದ ೪ ಡಬ್ಬಿಗಳಿಗೆ ೦—೮—೦ ಆಣೆ. ಏಜೆಂಟರುಗಳು ಎಲ್ಲಾ ಸ್ಥಳಗಳಲ್ಲಿಯೂ ಅವಶ್ಯಕವಾಗಿರುತ್ತೆ. ರೂಲ್ಸು ತರಿಸಿಕೊಳ್ಳಬಹುದು. ಆರ್ಡರು ಕೊಡತಕ್ಕ ಕಾಲದಲ್ಲಿ ಈ ಪತ್ರಿಕೆಯ ಹೆಸರನ್ನು ಬರೆಯಬೇಕು.

ಟೆಲಿಗ್ರಾಫ್ ಅಡ್ರೆಸ್, ಮಿಸ್ರಿ, ಬೆಂಗಳೂರು ಸಿಟಿ.

ಡಿ. ಮನ್ನಾಲಾಲ್, ಡಿಳ್ಳಿ, ನೇಟಿವ್ ವೈದ್ಯರು,

ಸಾಲಂಮಿಸ್ರಿ ಮುರಬ್ಬ ಡಿಪೋ,

ಬೆಂಗಳೂರು.

12—8

Printed & published by P. I. Belliappa, at "Kodagu" Press, Mercara for "Kodagu" Ltd.

If not delivered please return to
KODAGU' OFFICE, MERCARA.

ಕೊಡಗು.

ವಾರ್ಷಿಕ ಚಂದಾ ರೂ ೩-೦-೦

ಸತ್ಯೇನ ಧ್ರಿಯತೇ ... || ಐಕ್ಯಮತ್ಯೇನ ದೇಶಾನಾಂ ಸುಸ್ಥಿರಾ ರಾಜ್ಯ ಸಂಪದಾ ||

ಸಂಪಾದಕ—ಪಂದ್ಯಂಡ ಐ ಬೆಳ್ಯಪ್ಪ.

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವದು.

ಸಂಪುಟ ೬] ಕೊಡಗು, ಸ ೧೯೨೬ನೇ ಇಸವಿ ಅಗಸ್ಟು ತಾರೀಖು ೨೭ನೇ ಶುಕ್ರವಾರ [ಸಂಚಿಕೆ ೧೨

SPENCER & CO., LTD.

MERCARA & POLLIBETTA.

STATE TOOLS DEPARTMENT.

Yate's hammer headed mamooties	4 lbs- Rs 30/ 4 1/2 lbs- Rs. 33/ 5 lbs- Rs 36/-Doz.	
Digging forks 4 prongs		Rs. 48/ Doz.
Mamooty forks 4 prongs		Rs. 39/ Doz
Felling axes — Each		Rs. 3/ & 3/4/
Planting bars— Each		,, 3/12/
Weeding forks — Each		,, 1/12/
Garden trowels		,, 1/12/

GET IT AT SPENCERS- The House for all requisites

52—32

ಸ್ಥಾಪಿತವಾದದ್ದು 1874 ಮೂಲಧನ 7 ಕೋಟಿ ರೂಪಾಯಿಗಳ

ಓರಿಯಂಟಲ್ ಗವರ್ನ್‌ಮೆಂಟ್ ಸೆಕ್ಯೂರಿಟಿ ಲೈಫ್ ಅಷ್ಯೂರೆನ್ಸ್ ಕಂಪೆನಿ
ಲಿಮಿಟೆಡ್, ಹೆಡ್ ಆಫೀಸು= ಬೊಂಬಾಯಿ.

1922—1924 ಈ ಮೂರು ವರ್ಷಗಳಲ್ಲಿ ಕಂಪೆನಿಯಲ್ಲಿ ನಡೆದ ಕೆಲಸದ ಫಲಿತಾಂಶಗಳು.—

ಲಾಭ— ರೂ. 51,00,000 (ಐವತ್ತೊಂದು ಲಕ್ಷ ರೂಪಾಯಿಗಳು) ಈ ಪೈಕಿ 45,94,80 ರೂಪಾಯಿಗಳನ್ನು ಲಾಭ ಸಹಿತ ವಿಮೆ ಮಾಡಿರುವವರ ವಿಮೆ ಹಣಕ್ಕೆ ಹೆಚ್ಚು ಬೋನಸ್ ಒಪ್ಪಾಗಿ ಈ ಕೆಳಗೆ ತೋರಿಸಿರುವ ರೀತಿಯಲ್ಲಿ ಸೇರಿಸಿರುತ್ತದೆ.

ಜೀವಮಾನಾವಧಿಯ ವಿಮೆದಾರರಿಗೆ ರೂ 1000 ವಿಮೆ ಹಣಕ್ಕೆ
ಈ ಮೂರು ವರ್ಷಗಳಿಗೆ ರೂ. 67½
ಕ್ಲುಪ್ತಕಾಲದ ವಿಮೆದಾರರಿಗೆ ರೂ 1000 ವಿಮೆ ಹಣಕ್ಕೆ
ಈ ಮೂರು ವರ್ಷಗಳಿಗೆ ರೂ 54.

ಈ ಕಂಪೆನಿಯಲ್ಲಿ ಕ್ರಮೇಣ ಹೆಚ್ಚುತ್ತಿರುವ ಜನಾನುರಾಗವು ಈ ಕೆಳಗೆ ಕೊಟ್ಟಿರುವ ಹೊಸ ಕೆಲಸದ ಪಟ್ಟಿಯಿಂದ ವ್ಯಕ್ತವಾಗುತ್ತದೆ.

1923ರಲ್ಲಿ	—ರೂ	1,74,00,000
1924	,,	2,37,00,000
1925	,,	2,96,00,000

ಇನ್ನೂ ದಿನದಿನಕ್ಕೂ ಅಭಿವೃದ್ಧಿಯಾಗುತ್ತಲೇ ಇದೆ. ಜೀವವಿಮೆ ಪತ್ರದಲ್ಲಿ ಹಣವನ್ನು ಲಾಭಕರವಾಗಿ ಶೇಖರಿಸಲು ಸುಸಮಯ.

ಬೇಕಾದ ವಿಷಯಗಳನ್ನು ಈ ಕೆಳಗಿನ ವಿಳಾಸಕ್ಕೆ ಬರೆದು ತಿಳಿದುಕೊಳ್ಳಬಹುದು

ಓರಿಯಂಟಲ್ ಬಿಲ್ಡಿಂಗ್ಸ್,
ಪೋಸ್ಟ್ ಬಾಕ್ಸ್ 56
ಬೆಂಗಳೂರು

ಎಸ್ ಆರ್ ಕೃಷ್ಣಸ್ವಾಮಿಯ್ಯರ್
ಬ್ರಾಂಚ್ ಸೆಕ್ರೆಟರಿ

—21

ಸತ್ಯಮೇವ ಜಯತೇ.
(ಗುಣವಾಗದಿದ್ದರೆ ಹಣ ವಾಪಸ)
ಧಾತುಪುಷ್ಟಿಕರ ಕಾಮೋತ್ತೇಜಕ, ಇಂದ್ರಿಯಸ್ತಂಭಕವಾದ

ಮದನೋದ್ಭವ ಗುಳಿಗೆ.

ಜನನೇಂದ್ರಿಯದ ಶಿಥಿಲತೆ ನಿರ್ಬಲತೆ ನಪುಂಸಕತ್ವ ಕ್ಷೀಣತೆ ಸ್ವಪ್ನಸ್ಖಲನ ಮೊದಲಾದವುಗಳಿಗೆ ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತು ಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ ಇಂದ್ರಿಯಸ್ತಂಭಕ, ಗರ್ಮಿ, (ಬಾಕಿ) ಗುಪ್ತಪ್ರದೇಶದ ಮೇಲೆ ಹುಟ್ಟುವ ಎಲ್ಲಾ ತರಹದ ಬಕ್ಕೆಗಳು, ಹುಣ್ಣುಗಳು ಪಿತ್ತದ ಭಾಧೆಗಳು ಕಟುಕಾಣಿ ವಾತರೋಗವು ಮುಂತಾದವು ಅತ್ಯಂತ ಗುಣವಾಗಿ ಶರೀರಕ್ಕೆ ಪರಿಪೂರ್ಣ ಕಾಂತಿಯೂ ರತಿಸುಖಕ್ಕೆ ಸಂಪೂರ್ಣ ಶಕ್ತಿಯೂ ಉಂಟಾಗುತ್ತದೆ ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗುತ್ತವೆ ಅರವತ್ತು ೬೦ ಗುಳಿಗೆಗಳಿಗೆ ೮ ರೂಪಾಯಿ ಇದನ್ನು ಸೇವಿಸುವಾಗ **ನಪುಂಸಕತ್ವಾರಿ ತೈಲವನ್ನು** ಉಪಯೋಗಿಸಿದರೆ ಉತ್ತಮ. ಅರ್ಧ ಬಾಟ್ಲಿಗೆ ರೂ ೨—೧೨—೦

ಸ್ವಪ್ನದೋಷನಿವಾರಣಿ—ಇದರ ಸೇವನೆಯಿಂದ ಮೂತ್ರಸ್ಖಲನದಿಂದ ಶೀಘ್ರ ಹಾಳಾದವರು ನಿಲ್ಲುತ್ತಾ ಬಂದು ೮ ದಿನಗಳಲ್ಲಿ ಅಗಮ್ಯಕಾರ್ಯದಿಂದ ಗುಣವಾಗುವದು ಅರ್ಧ ಬಾಟ್ಲಿಗೆ ರೂ ೩—೮—೦ ಟಪಾಲು ಖರ್ಚು ಪ್ರತ್ಯೇಕ ವಿವರದ ಸಂಗತಿ

ವಿವರವಾಗಿ ತಿಳಿಯಬೇಕಾದರೆ ಕ್ಯಾಟಲಾಗನ್ನು

ವಿಳಾಸ —

ವೈದ್ಯ ಜಿ ಎಲ್ ಜೋಶಿ ಮತ್ತು ಕಂಪೆನಿ.

31 ನಂ 6 ಪೋಸ್ಟ್ ಬನಾರಸ್, ಉತ್ತರ ಹಿಂದೂಸ್ಥಾನ

ARMS & AMMUNITION MART.

Mahomedally-Noorbhoy.



321 Abdul Rehman Street, near
Crawford Market, BOMBAY 3
Telegraphic Address "SHOOTER"
Bombay.

[52—52] Please write for Reduced net. prices list for 1926

ಮನೋಲ್ಲಾಸಿನಿ ತೈಲ.

ತಲೆನೋವು ತಲೆ ತಿರುಗುವುದು, ತಲೆಹುರಿ ಕಣ್ಣುರಿ, ಶಿರಿಯಿಂದ ಶೀತ ಸೋರುವುದು ತಿಮಿರ, ಕಣ್ಣುನೋವು, ಅಪಸ್ಮಾರ ನಿದ್ರೆ ಬಾರದಿರುವುದು, ನೆನಪು ಶಕ್ತಿ ಕುಂದಿಹೋಗುವುದು ಇವುಗಳನ್ನೆಲ್ಲಾ ನಿಶ್ಚಿತ ಗುಣವಾಗುತ್ತದೆ ಉದುರುವ ಕೂದಲನ್ನು ನಿಲ್ಲಿಸಿ

ಗಿಡ್ಡಗಿರುವ ಕೂದಲನ್ನು ಬೆಳಸಿ ಕೂದಲಿಗೆ ಸ್ವಾಭಾವಿಕವಾದ ಹೊಳಪನ್ನು ಕೊಟ್ಟು ಅಕಾಲಕ್ಕೆ ನೆರೆಯಾಗುವ ಕೂದಲನ್ನು ತಡೆದು ಕೂದಲು ಇಲ್ಲದ ಸ್ಥಳದಲ್ಲಿ ಹೊಸ ಕೂದಲನ್ನು ಹುಟ್ಟಿಸುತ್ತದೆ ಚಿಕ್ಕ ಸೀಸೆಗೆ ರೂ 1, 3 ಸೀಸೆಗೆ 2—10—0, ಒಂದು ದೊಡ್ಡ ಸೀಸೆಗೆ ರೂ 2, 3 ಸೀಸೆಗಳಿಗೆ 5—8—0

ಚಂದನಾಸವ — ಇದು ಪ್ರಮೇಹ ಮೂತ್ರಕೃಚ್ಛ್ರ, ಮೂತ್ರ ಹನಿಹನಿಯಾಗಿ ಹೋಗುವುದು, ಮೂತ್ರಕೋಶ ಉರಿ, ಮೂತ್ರಪಿಂಡಗಳ ಉರಿ ಮೂತ್ರನಾಳದಲ್ಲಿ ಹುಣ್ಣು ಮೂತ್ರ ಹೊಯ್ಯುವಾಗ ಉರಿಯುವುದು, ಮೂತ್ರನಾಳದಿಂದ ಕೀವು ಬರುವುದು, ಮೂತ್ರದಲ್ಲಿ ಧಾತು ಹುಡಿ ಹೋಗುವುದು, ಆಗಾಗ್ಗೆ ವೀರ್ಯ ಬರುವದು, ಮೂತ್ರ ತಡೆಯುವಿಕೆ, ಸಾಮರ್ಥ್ಯವಿಲ್ಲದಿರುವುದು, ದೇಹದಲ್ಲಿ ಉರಿ ಬಾಯಾರಿಕೆ, ಸ್ವಪ್ನಾವಸ್ಥೆ, ಮೂತ್ರನಾಳದಲ್ಲಿ ಬರುವ ನೋವು ಇವುಗಳಿಗೆ ಪರಮ ದಿವ್ಯ ಗಂಡಸರಿಗೂ ಹೆಂಗಸರಿಗೂ ಇದು ಅತ್ಯುತ್ತಮ ಚಿಕ್ಕ—ಬಾಟ್ಲಿ 1, 3, 6ಕ್ಕೆ ರೂ 1—4—0, 3—8—0, 6—12—0

ರೋಮನಾಶಿನಿ — ಈ ಹುಡಿಯನ್ನು ನೀರಲ್ಲಿ ಕಲಸಿ ಮೈಯಲ್ಲಿ ರೋಮವಿರುವ ಭಾಗಕ್ಕೆ ಹಚ್ಚಲು ರೋಮವು ಉದುರಿ ಬೀಳುವುದು ಡಬ್ಬಿ ಗಕ್ಕೆ 6 ಆಣೆ, 3 ಡಬ್ಬಿಗಳಿಗೆ 1 ರೂಪಾಯಿಗೆ 3—8—0

ಚಿರಾಯತಾಯ ಮಲೇಜ ರಕ್ಷ.—ಇದು ಇಂಜಕ್ಷನ್ ಮತ್ತು ಕ್ವಿನೈನ ಸೇವಿಸಿದರೂ ಗುಣವಾಗದಿರುವ ಮಲೆಜ್ವರ, ದಿನಬಿಟ್ಟು ಜ್ವರ, 3-4 ದಿವಸಕ್ಕೊಂದು ಬರುವ ಜ್ವರ, ನಡುಗಿ ಬರುವ ಜ್ವರ, ಮತ್ತು ಜ್ವರದಿಂದ ದೋಷದಿಂದ ಬರುವ ಜ್ವರಗಳಿಗೆ ಖಾತ್ರಿ ಗುಣ ಕೊಡುವದು ಸೀಸೆ 1ಕ್ಕೆ ರೂ 1—8—0 3ಕ್ಕೆ ರೂ 4—0—0, 6ಕ್ಕೆ ರೂ 7—0—0,

ಟಪಾಲು ಖರ್ಚು ಪ್ರತ್ಯೇಕ ಕ್ಯಾಟಲಾಗು ತರಿಸಿ ನೋಡಿರಿ

ವಿಳಾಸ—ಮನೋಲ್ಲಾಸಿನಿ ಕಂಪೆನಿ.
9 ಮಂಗಳೂರು, ಕಂಕನಾಡಿ.

52—36

"ಕೊಡಗು"

ಸನ್ ೧೯೨೬ನೇ ಇಸವಿ ಅಗೊಸ್ತು ತಾ. ೨೭ ನೇ ಶುಕ್ರವಾರ

೧೯೨೪-೨೫ರಲ್ಲಿ ಹಿಂದುಸ್ಥಾನದ ವಿದ್ಯಾಭ್ಯಾಸದ ಬೆಳವಣಿಗೆ.

ಪ್ರತಿ ವರ್ಷವೂ ಇಂಡಿಯಾ ಸರಕಾರದವರು ಹಿಂದುಸ್ಥಾನದಲ್ಲಿ ವಿದ್ಯಾಭ್ಯಾಸದ ಅನುಕೂಲತೆಗಳು ಹೆಚ್ಚಿವೆಯೋ, ವಿದ್ಯೆ ಪಡೆದುಕೊಳ್ಳುವ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಿದೆಯೋ, ವಿದ್ಯೆಕ್ಕಾಗಿ ಸರಕಾರದವರು ಮಾಡುತ್ತಿರುವ ಖರ್ಚು ಹೆಚ್ಚಿದೆಯೋ ಎಂಬ ಈ ತರದ ಸಂಗತಿಗಳನ್ನು ಕುರಿತು ಒಂದು ರಿಪೋರ್ಟನ್ನು ಪ್ರಕಟಿಸುತ್ತಾರೆ. 1924—25ನೇ ವರ್ಷದ ರಿಪೋರ್ಟು ಈಗ ತಾನೇ ಪ್ರಕಟವಾಗಿದೆಯೆಂತ ಮದ್ರಾಸಿನ ಇಂಗ್ಲಿಷ್ ಪತ್ರಿಕೆಗಳಿಂದ ತಿಳಿಯಬರುತ್ತದೆ. ಇಂಥಾ ಸರಕಾರಿ ರಿಪೋರ್ಟುಗಳನ್ನು ಕನ್ನಡ ಪತ್ರಿಕೆಗಳಿಗೆ ಕಳುಹಿಸುವ ಪದ್ಧತಿ ಇನ್ನೂ ಪ್ರಾರಂಭವಾಗಿರುವದಿಲ್ಲ. ಕನ್ನಡ ಪತ್ರಿಕೆಗಳ ಸಂಪಾದಕರು ಇದರ ಕುರಿತು ಕನ್ನಡ ಪತ್ರಿಕೆಗಳಿಗೆ ಸರಕಾರದವರು ಕೊಡಬೇಕಾದ ಗೌರವವನ್ನು ಕೊಡುವಂತೆ ಪ್ರಯತ್ನಪಡಿಸಬಹುದು. ಈಗ ತತ್ಕಾಲಕ್ಕೆ ಬೇರೆ ಇಂಗ್ಲಿಷ್ ಪತ್ರಿಕೆಗಳಲ್ಲಿ ಬಹಳ ಸೂಕ್ಷ್ಮವಾಗಿ ಪ್ರಕಟವಾಗಿರುವ ರಿಪೋರ್ಟಿನ ಸಾರದ ಮೇಲೆ ಒಟ್ಟು ಇಂಡಿಯಾ ದೇಶದ ವಿದ್ಯೆಯ ಬೆಳವಣಿಗೆಗೂ, ನಮ್ಮ ದೇಶದ ವಿದ್ಯೆಯ ಬೆಳವಣಿಗೆಗೂ ಹೋಲಿಸಿ ನೋಡಲು ಪ್ರಯತ್ನಿಸುತ್ತೇವೆ.

"ಒಟ್ಟು ಹಿಂದುಸ್ಥಾನದ ವಿದ್ಯಾಭ್ಯಾಸವು 1924 25 ರಲ್ಲಿ ಕ್ರಮವಾಗಿ ವಿಶೇಷ ಸಂಗತಿಗಳೇನೂ ಇಲ್ಲದೆ ಜಾರಿಯಾಗುತ್ತಾ ಹೋಗಿದೆ. ಈ ವರ್ಷದಲ್ಲಿ 9113 ಶಾಲೆಗಳು ಹೆಚ್ಚಾಗಿದ್ದು, ಶಾಲೆಗೆ ಹೋಗುವ ವಿದ್ಯಾರ್ಥಿಗಳು 4,82,060 ಹೆಚ್ಚಾಗಿದ್ದಾರೆ. 1924 ರಲ್ಲಿ ದೇಶದ ಗಂಡು ಜನ ಸಂಖ್ಯೆಯ ಶೇಕಡ 5 1 ಭಾಗವೂ ಹೆಣ್ಣು ಜನ ಸಂಖ್ಯೆಯ ಶೇಕಡ 7 1 ಭಾಗವೂ ಶಾಲೆಗೆ ಹೋಗುತ್ತಿದ್ದರು. 1925ರಲ್ಲಿ ಈ ದಾಮಾಶಾಯಿಗಳು 6 05ಕ್ಕೂ 1 24ಕ್ಕೂ ಹೆಚ್ಚಿದೆಯಂತೆ. ಈ ರೀತಿಯಲ್ಲಿ ಅಭಿವೃದ್ಧಿಯಾಗುತ್ತಾ ಹೋದರೆ ಸ್ಕೂಲಿಗೆ ಹೋಗಬೇಕಾದ ಎಲ್ಲಾ ಹುಡುಗ ಹುಡುಗಿಯರೂ ಶಾಲೆಗೆ ಹೋಗಬೇಕಾದರೆ ಇನ್ನೂ 40 ವರ್ಷಗಳು ಬೇಕು. ಕಳೆದ ನಾಲ್ಕು ವರ್ಷಗಳಲ್ಲಿ ಸರಕಾರಿ ಖರ್ಚು ಕಡಿಮೆಮಾಡಬೇಕಾಗಿ ಬಂದದ್ದರಿಂದಲೂ, ರಾಜಕೀಯ ಕಾರಣಗಳಿಂದಲೂ ಹೆಚ್ಚಿಗೆ ಅಭಿವೃದ್ಧಿ ತೋರಿಸಲು ಅವಕಾಶವಾಗಲಿಲ್ಲ." ಜನಾಂಗದ ಅಭಿವೃದ್ಧಿಗೆ ಅತಿ ಅವಶ್ಯವಿರುವ ವಿದ್ಯೆಯ ಬೆಳವಣಿಗೆಗೆ ಹಣವಿಲ್ಲವಂತೆ! ದೊಡ್ಡ ಅಧಿಕಾರಿಗಳ ಸಂಬಳ ಹೆಚ್ಚಿಸಲಿಕ್ಕೆ ಹಣ ಬೇಕಾದಷ್ಟು ದೊರಕುತ್ತದೆ. ಸರಕಾರಿ ಉತ್ಪತ್ತಿಯನ್ನು ಒದಗಿಸಿಕೊಡುವ ಪ್ರಜೆಗಳಿಗೆ ಅಕ್ಷರ ಗುರ್ತು ಮಾಡಿಸಿಕೊಡಲಿಕ್ಕೆ ಹಣದ ಅಡಚಣೆಯೆಂತ ಹೇಳುವದು ಬಹಳ ವ್ಯಸನಕರವಾದ ಸಂಗತಿಯಾಗಿದೆ.

ಒಟ್ಟು ಹಿಂದುಸ್ಥಾನದ ಲೆಖ್ಖಕ್ಕೆ ನಮ್ಮ ದೇಶದ ಲೆಖ್ಖಗಳನ್ನು ಹೋಲಿಸಿ ನೋಡೋಣ. ಶಾಲೆಗಳ ಸಂಖ್ಯೆಯು 1924 ರಲ್ಲಿ 121 ಇದ್ದದ್ದು 1925ರಲ್ಲಿ 113ಕ್ಕೆ ಇಳಿದಿದೆ. ಸ್ವಂತ ಸ್ಕೂಲ್‌ಗಳು 11 ಇದ್ದದ್ದು ಮೂರಕ್ಕೆ ಇಳಿದಂತೆ ಲೆಖ್ಖದಿಂದ ಕಂಡುಬರುತ್ತದೆ. ಸರಕಾರಿ ಶಾಲೆಗಳ ಸಂಖ್ಯೆಯು ಹಿಂದಿನ ವರ್ಷ ಇದ್ದಷ್ಟೇ ಇತ್ತು. ಸ್ವಂತ ಶಾಲೆಗಳ ಸಂಖ್ಯೆ ಕಡಿಮೆಯಾದರೆ ಆ ಶಾಲೆಗಳಿಗೆ ಹೋಗುತ್ತಿದ್ದ ಹುಡುಗರು ಸರಕಾರಿ ಶಾಲೆಗಳಿಗೆ ಬರಲು ಪ್ರಾರಂಭಿಸಿದರೋ ಎಂತ ನೋಡಿದರೆ ಸರಕಾರಿ ಶಾಲೆಗಳಿಗೆ ಹೋಗುತ್ತಿರುವ ವಿದ್ಯಾರ್ಥಿಗಳ ಸಂಖ್ಯೆಯು 1924ರಲ್ಲಿ 8773 ಇದ್ದದ್ದು 1925ರಲ್ಲಿ 8413ಕ್ಕೆ ಇಳಿದು 360 ವಿದ್ಯಾರ್ಥಿಗಳು ಕಡಿಮೆಯಾಗಿದ್ದಾರೆ. ಆದ್ದರಿಂದ ಶಾಲೆಗಳ ಮತ್ತು ವಿದ್ಯಾರ್ಥಿಗಳ ಸಂಖ್ಯೆಯು ಹೆಚ್ಚಾಗುವ ಬದಲು ಕಡಿಮೆಯಾಗಿರುವದು ಬಹಳ ಶೋಚನೀಯವಾಗಿದೆ. ಶಾಲೆಗೆ ಹೋಗುವ ಹುಡುಗರ ದಾಮಾಶಾಯಿಯು 1924ಕ್ಕಿಂತ 1925ರಲ್ಲಿ ನಮ್ಮ ದೇಶದಲ್ಲಿ ಕಡಿಮೆಯಾಗಿದೆ. 1924ರಲ್ಲಿ ಗಂಡು ಜನಸಂಖ್ಯೆಯ 6 62 ಭಾಗವು ಶಾಲೆಗೆ ಹೋಗುತ್ತಿದ್ದದ್ದು 1925ರಲ್ಲಿ 6 51ಕ್ಕೆ ಇಳಿದಿದೆ. ಹುಡುಗಿಯರ ದಾಮಾಶಾಯಿ ಮಾತ್ರ ಸ್ವಲ್ಪ ಏರಿದೆ. 1924ರಲ್ಲಿ 3 32 ಇದ್ದದ್ದು, 1925ರಲ್ಲಿ 3.37ಕ್ಕೆ ಏರಿದೆ. ಶಾಲೆಗೆ ಹೋಗುವ ಹುಡುಗರ ಸಂಖ್ಯೆಯು ಕಡಿಮೆಯಾಗುತ್ತಿರುವದಕ್ಕೆ ಅಧಿಕಾರಿಗಳೂ, ಜನಸಮುದಾಯದವರೂ ಗಮನ ಕೊಡಬೇಕಾಗಿದೆ.

ನಮ್ಮ ದೇಶದಲ್ಲಿ ಪ್ರೈಮರಿ ವಿದ್ಯಾಭ್ಯಾಸವು ತಕ್ಕಷ್ಟು ಮುಂದುವರಿದಿದೆಯೆಂತ ಸರಕಾರವು ಮಾತ್ರವಲ್ಲ, ಸಾರ್ವಜನಿಕ ಕೆಲಸಮಾಡುವ ಮುಂದಾಳುಗಳು ಸಹ ಅನ್ನುವದುಂಟು. ಇದು ಬರೇ ಅಜ್ಞಾನದ ಅಭಿಪ್ರಾಯವಾಗಿದೆಯೆಂಬದನ್ನು ಕೂಡಲೇ ತೋರಿಸುತ್ತೇವೆ. ಮೇಲೆ ಬರೆದ ಪ್ರಕಾರ ಗಂಡು ಜನ ಸಂಖ್ಯೆಯ ಶೇಕಡ 6 51 ಮಾತ್ರ ಶಾಲೆಗೆ ಹೋಗುತ್ತಿದೆಯೆಂತಾದರೆ ಒಟ್ಟು ಹಿಂದುಸ್ಥಾನದ ದಾಮಾಶಾಯಿಗಿಂತ ನಮ್ಮ ದೇಶದ ಲೆಖ್ಖವೇನೂ ಬಹಳ ಮುಂದಿಲ್ಲ. ಒಟ್ಟು ಹಿಂದುಸ್ಥಾನದಲ್ಲಿ ಶೇಕಡ 6 05 ಆಗಿರುತ್ತೆ. ಆದ್ದರಿಂದ ಒಟ್ಟು ಹಿಂದುಸ್ಥಾನದ ಲೆಖ್ಖಕ್ಕಿಂತ ನಮ್ಮ ದೇಶದಲ್ಲಿ ಶೇಕಡ ಒರೆ 0 46 ಮಾತ್ರ ಹೆಚ್ಚಾಗಿದೆ. ಇದರಿಂದ ತೃಪ್ತರಾಗಿ ಕೂರುವದು ಹೇಗೆ? ಹೆಣ್ಣು ಹುಡುಗಿಯರ ದಾಮಾಶಾಯಿ ಮಾತ್ರ ಒಟ್ಟು ಹಿಂದುಸ್ಥಾನಕ್ಕಿಂತ ನಮ್ಮ ದೇಶವು ಸ್ವಲ್ಪ ಮುಂದೆ ಇದೆ. ಇದೂ ಸಹ ತೃಪ್ತಿಯಾಗಿ ಕೂತುಕೊಳ್ಳುವ ಹಾಗಿಲ್ಲವೆಂತ ಎಲ್ಲರೂ ಒಪ್ಪಬೇಕಾಗಿದೆ.

ಹಿಂದುಸ್ಥಾನದಲ್ಲಿ ಜನಾಂಗದ ಶೇಕಡ 15ರಷ್ಟು ಶಾಲೆಗೆ ಹೋಗುವ ಪ್ರಾಯದವರಾಗಿದ್ದಾರೆ. ನಮ್ಮ ದೇಶದಲ್ಲಿ ಗಂಡು, ಹೆಣ್ಣು ಹುಡುಗರ ಒಟ್ಟು ಲೆಖ್ಖ ತೆಗೆದುಕೊಂಡರೆ ಶೇಕಡ 4 94ರಷ್ಟು ಮಾತ್ರ ಶಾಲೆಗೆ ಹೋಗುತ್ತಿದ್ದಾರೆ. ಆದ್ದರಿಂದ ಶಾಲೆಗೆ ಹೋಗುವ ಪ್ರಾಯದ ಹುಡುಗ ಹುಡುಗಿಯರಲ್ಲಿ ಮೂರನೇ ಒಂದು ಭಾಗದವರು ಮಾತ್ರ ಶಾಲೆಗೆ ಹೋಗುತ್ತಿದ್ದಾರೆಂತ ಆಯಿತು. ಈ ಲೆಖ್ಖ ನೋಡಿದರೂ ಸಹ ಬಹಳ ಅಸಮಾಧಾನ ಉಂಟುಮಾಡುವಂಥಾದ್ದಾಗಿಯೇ ಇದೆ.

ಕಳೆದ ಜಾನೇಷುಮಾರಿ ಲೆಖ್ಖವನ್ನು ನೋಡಿದರೂ ನಮ್ಮ ದೇಶದವರು ನಮ್ಮ ಜಂಬದ ಕೈಕಟ್ಟಿ ಕೂರುವಂತೆ ಇಲ್ಲ. ನಮ್ಮ ದೇಶದ ಜನರಲ್ಲಿ 1000ಕ್ಕೆ 144 ಜನರು ಮಾತ್ರ ಓದು ಬರಹ ತಿಳಿದವರಾಗಿದ್ದಾರೆ. ಬರ್ಮದಲ್ಲಿ 1000ಕ್ಕೆ 314, ತಿರುವಾಂಕೂರು ಸಂಸ್ಥಾನದಲ್ಲಿ 242, ಕೊಚ್ಚಿಯಲ್ಲಿ 185, ಬರೋಡಾದಲ್ಲಿ 147 ಓದುಬರಹ ತಿಳಿದವರಾಗಿರುತ್ತಾರೆ. ನಮ್ಮ ದೇಶವು ಮೇಲ್ಕಂಡ ದೇಶಗಳಿಗಿಂತ ಹಿಂದೆ ಬಿದ್ದಿದೆಯೆಂತಾಯಿತು.

ಕೆಲವು ಜಾತಿಯ ಜನರು ಮಾತ್ರ ಸಾಧಾರಣ ಮಟ್ಟಿಗೆ ಅಕ್ಷರಸ್ಥರಾಗಿರುವದರಿಂದ ಒಟ್ಟು ದೇಶದ ಜನರು ಅಕ್ಷರಸ್ಥರಾಗಿದ್ದಾರೆಂತ ಓದುಬರಹ ತಿಳಿದ ಜಾತಿಯ ಜನರು ತೃಪ್ತರಾಗುವ ಸಂಭವವಿದೆ. ಒಂದೆರಡು ಜಾತಿಯ ಜನರು ಮಾತ್ರ ತಮ್ಮ ಎಲ್ಲಾ ಹುಡುಗ ಹುಡುಗಿಯರನ್ನು ಶಾಲೆಗೆ ಕಳುಹಿಸಿದರೂ ಸಹ ಹಿಂದುಳಿದ ಜಾತಿಯವರ ಮಕ್ಕಳು ಶಾಲೆಗೆ ಹೋಗದೆ ಇದ್ದರೆ ದೇಶದ ದಾಮಾಶಾಯಿ ಲೆಖ್ಖವು ಹಿಂದೆಯೇ ಬಿದ್ದಿರುತ್ತದೆ. ದಾಮಾಶಾಯಿ ಲೆಖ್ಖಕ್ಕೆ ಹೇಗೆ ಹಿಂದುಳಿದ ಪಂಗಡಗಳ ಲೆಖ್ಖವು ಸೇರಬೇಕಾಗುತ್ತದೋ ಹಾಗೆಯೇ ದೇಶದ ರಾಜಕೀಯ ಪ್ರಗತಿಗೂ, ಸಾಮಾಜಿಕ ಅಭಿವೃದ್ಧಿಗೂ ಪ್ರತಿಯೊಂದು ಕೋಮಿನ ಜನರೂ ವಿದ್ಯಾಭ್ಯಾಸದಲ್ಲಿ ಮುಂದೆ ಬರಲೇಬೇಕಾಗುತ್ತದೆ. ಮುಂದೆ ಬಂದ ಜನಾಂಗದವರು ತಮ್ಮ ಜನಾಂಗದಲ್ಲಿ ನಿರಕ್ಷರಸ್ಥರು ಇರಬಾರದೆಂಬ ಧ್ಯೇಯದಿಂದ ಕೆಲಸಮಾಡಬೇಕಾದ್ದಲ್ಲದೆ ತಮ್ಮ ದೇಶದಲ್ಲಿಯೇ ನಿರಕ್ಷರಸ್ಥರು ಇರಬಾರದೆಂತ ಪ್ರಯತ್ನಿಸಿದರೇನೇ ಸ್ವರಾಜ್ಯ ಪಡೆಯಲು ಸಾಧ್ಯವಿದೆ.

ಸರಕಾರವು ಈ ವಿಷಯದಲ್ಲಿ ತನ್ನ ಕರ್ತವ್ಯವನ್ನು ಮಾಡುತ್ತಿರುವದಿಲ್ಲವೆಂಬದನ್ನು ಸರಕಾರಿ ರಿಪೋರ್ಟುಗಳಿಂದಲೇ ತೋರಿಸುತ್ತೇವೆ. ಸರಕಾರವು 1920—21ರಲ್ಲಿ 78159 ರೂಪಾಯಿ ವಿದ್ಯೆಕ್ಕಾಗಿ ಖರ್ಚು ಮಾಡಿದೆ. 1924—25ರಲ್ಲಿ ಈ ಸರಕಾರದ ಖರ್ಚು 79599 ರೂಪಾಯಿ ಮಾತ್ರವಾಗಿದೆ. ಆದರೆ ಲೋಕಲ್ ಬೋರ್ಡುಗಳೂ ಸಹ ಮಾಡುವ ಖರ್ಚನ್ನೂ ತೆಗೆದುಕೊಂಡರೆ ಒಟ್ಟು 1921—22ರಲ್ಲಿ 1,26 180 ರೂಪಾಯಿ ವಿದ್ಯೆಕ್ಕಾಗಿ ಖರ್ಚಾಗುತ್ತಿದ್ದದ್ದು 1924—25ರಲ್ಲಿ 1,83,095 ರೂಪಾಯಿಗೆ ಏರಿದೆ. ಈ ಹೆಚ್ಚಿನ ಹಣದಿಂದ ಮುಖ್ಯವಾಗಿ ಉಪಾಧ್ಯಾಯರುಗಳ ಸಂಬಳ ಹೆಚ್ಚಾಯಿತೇ ಹೊರತು ಸಂಸ್ಥೆಗಳ ಸಂಖ್ಯೆಯೇನೂ ವಿಶೇಷ ಹೆಚ್ಚಾಗಿರುವದಿಲ್ಲ. ವೀರರಾಜಪೇಟೆ ಶಾಲೆಯನ್ನು ಹೈಸ್ಕೂಲಾಗಿ ಮಾಡಿದ್ದಾರೆ. ಅಲ್ಲೊಂದು ಇಲ್ಲೊಂದು ಹೊಸ ಪ್ರೈಮರಿ ಶಾಲೆ ಸ್ಥಾಪಿಸಿರಬಹುದು. ಆದರೆ ಶಾಲೆಗೆ ಹೋಗುವ ವಿದ್ಯಾರ್ಥಿಗಳ ಸಂಖ್ಯೆ ಹಣಕ್ಕೆ ತಕ್ಕಷ್ಟು ಹೆಚ್ಚಿದೆಯೆಂತ ಹೇಳಲಿಕ್ಕಾಗುವದಿಲ್ಲ. ವಿದ್ಯೆಗಾಗಿ ಆಗುವ ಒಟ್ಟು ಖರ್ಚಿನಲ್ಲಿ ಸರಕಾರವು 1920—21ರಲ್ಲಿ ಶೇಕಡ 62 18 ಭಾಗವನ್ನು ವಹಿಸಿಕೊಂಡಿತ್ತು. 1924—25ರಲ್ಲಿ ಸರಕಾರದ ಹಿಸೆಯು ಶೇಕಡ 51 30ಕ್ಕೆ ಇಳಿದು ಹೋಗಿದೆ. ಒಟ್ಟು ಇಂಡಿಯಾದಲ್ಲಿ ಸರಕಾರದ ಹಿಸೆಯು 1921ರಲ್ಲಿ 48 9 ಇದ್ದದ್ದು 1925ರಲ್ಲಿ 47 9ಕ್ಕೆ ಇಳಿದಿದೆ. ಒಟ್ಟು ಹಿಂದುಸ್ಥಾನದ ಲೆಖ್ಖಕ್ಕಿಂತ ನಮ್ಮ ಸರಕಾರವು ಸ್ವಲ್ಪ ಮುಂದಾಗಿ ಇದ್ದರೂ 1921ರಿಂದ 1925ಕ್ಕೆ ಶೇಕಡ 10 88 ಕಡಿಮೆಯಾಗಲು ಕಾರಣವೇನು? ಲೋಕಲ್‌ಫಂಡ್ ಸೆಸ್ ರೂಪಾಯಿಗೆ 1 ಆಣೆ ಇದ್ದದ್ದನ್ನು 2 ಆಣೆಗೆ ಏರಿಸಿ ವಿದ್ಯೆಗೆ ಖರ್ಚು ಮಾಡಿದಂತಾಯಿತು. ಸರಕಾರವು ಇತರ ಎಲ್ಲಾ ಬಾಬುಗಳ ರೂಪಿನಲ್ಲಿ ಪ್ರಜೆಗಳಿಂದ ವಸೂಲು ಕೊಡುವ ತೆರಿಗೆಗಳಿಂದ ಪ್ರಜೆಗಳನ್ನು ಅಕ್ಷರಸ್ಥರನ್ನಾಗಿ ಮಾಡುವ ಬದಲು ಪ್ರಜೆಗಳ ಹೊಸದಾಗಿ ಹೆಚ್ಚಿನ ಕಂದಾಯ ಹಾಕಿಕೊಂಡು ವಿದ್ಯಾ ಇಲಾಖೆಗೆ ಖರ್ಚು ಮಾಡಿಸಿದೆ. ಇದನ್ನು ನೋಡಿದರೆ ಸರಕಾರವು ತನ್ನ ಕರ್ತವ್ಯವನ್ನು ಮಾಡುತ್ತಿರುವದಿಲ್ಲವೆಂಬದು ಪ್ರತ್ಯಕ್ಷವಾಗುತ್ತದೆ.

ನಮ್ಮ ದೇಶದಲ್ಲಿ 40 ಪ್ರೈಮರಿ ಶಾಲೆಗಳಲ್ಲಿ ಸ್ಕೂಲ್ ಫೀಸ್ ಪೂರ್ತಿ ಮಾಫಿಯಾಗಿದೆ. ಆದರೂ ವಿದ್ಯಾಭ್ಯಾಸಕ್ಕಾಗಿ ಆಗುವ ಖರ್ಚಿನಲ್ಲಿ ಶೇಕಡ 21 34 ಭಾಗ ಸ್ಕೂಲ್ ಫೀಸಿನಿಂದಲೇ ಬರುತ್ತಿದೆ. ಒಟ್ಟು ಹಿಂದುಸ್ಥಾನದಲ್ಲಿ ಈ ದಾಮಾಶಾಯಿಯು 1924ರಲ್ಲಿ 21.8 ಇದ್ದದ್ದು 1925ರಲ್ಲಿ 22.4ಕ್ಕೆ ಏರಿದೆ. ನಮ್ಮ ದೇಶದ ವಿದ್ಯಾರ್ಥಿಗಳು ಒಟ್ಟು ಹಿಂದುಸ್ಥಾನದ ವಿದ್ಯಾರ್ಥಿಗಳಿಗಿಂತ ಕಡಿಮೆ ಫೀಸ್ ಕೊಡುತ್ತಿರುವದಿಲ್ಲ. ಮತ್ತು ನಮ್ಮ ದೇಶದ ವಿದ್ಯಾರ್ಥಿಗಳಿಗೆ ಸ್ಕೂಲ್‌ಫೀಸ್ ಬಾಬಿನಲ್ಲಿ ಒಟ್ಟು ಹಿಂದುಸ್ಥಾನದವರಿಗಿಂತ ಹೆಚ್ಚು ರಿಯಾಯಿತಿ ತೋರಿಸಿರುವದಿಲ್ಲ. ನಮ್ಮ ದೇಶವು ಪಶ್ಚಿಮ ಕರಾವಳಿ ಸೀಮೆಯಲ್ಲಿ ಇರುವದರಿಂದಲೂ ಬಡತನದಲ್ಲಿ ಇರುವದರಿಂದಲೂ ಸ್ಕೂಲ್‌ಫೀಸಿನ ಉತ್ಪತ್ತಿಯನ್ನು ಇಲಾಖೆಯವರು ಕಡಿಮೆ ಮಾಡಬೇಕಿತ್ತು. ಅಂಥಾ ರಿಯಾಯಿತಿ ನಮ್ಮ ದೇಶಕ್ಕೆ ದೊರೆತಿಲ್ಲವೆಂಬದನ್ನು ತೋರಿಸುವದೇ ನಮ್ಮ ಈಗಿನ ಉದ್ದೇಶವಾಗಿದೆ.

ನಮ್ಮ ದೇಶದಲ್ಲಿ ಇನ್ನೊಂದು ಸಂಗತಿಯನ್ನು ಗಮನಕ್ಕೆ ತೆಗೆದುಕೊಳ್ಳಬೇಕಾಗಿರುವುದೇನೆಂದರೆ— ವಿದ್ಯಾರ್ಥಿಗಳ ವಿದ್ಯೆಕ್ಕಾಗಿ ಆಗುತ್ತಿರುವ ಖರ್ಚು ಅಧಿಕವಾಗಿದೆ. ಒಟ್ಟು ಹಿಂದುಸ್ಥಾನದ ಲೆಖ್ಖ ನೋಡಿದರೆ ಬಿಹಾರದಲ್ಲಿ ಒಬ್ಬ ವಿದ್ಯಾರ್ಥಿಗೆ 3 ರೂ ಮಾತ್ರ ಖರ್ಚು ಆಗುತ್ತದೆ. ಡೆಲ್ಲಿಯಲ್ಲಿ ಒಬ್ಬನಿಗೆ 42 ರೂ ಆಗುತ್ತಿದೆಯಂತೆ. ನಮ್ಮ ದೇಶದಲ್ಲಿ ಸರಕಾರಕ್ಕೆ ಆಗುವ ನಿವ್ವಳ (net) ಖರ್ಚು ರೂ. 11—3—10ಕ್ಕೆ. ಆದರೂ ಒಟ್ಟು ಖರ್ಚು ಒಬ್ಬ ವಿದ್ಯಾರ್ಥಿಗೆ ರೂ. 21 15 ರಷ್ಟು ಆಗುತ್ತದೆ. ಪ್ರೈಮರಿ ಶಾಲೆಗಳಲ್ಲಿ ಓದುವ ಗಂಡು ಹುಡುಗರಿಗೆ 12—1—2ರಷ್ಟು ಆಗುವಾಗ ಹುಡುಗಿಯರ ಹೈಸ್ಕೂಲಿನಲ್ಲಿ ಓದುವ ಹುಡುಗಿ ಒಬ್ಬಳಿಗೆ 70—6—10 ಆಗುತ್ತದೆ. ಹೆಣ್ಣು ಹುಡುಗಿಯರಿಗೆ ಪಾಠ ಹೇಳಲು ಅರ್ಹ ಉಪಾಧ್ಯಾಯಿನಿಯರು ದೊರಕಬೇಕಾದರೆ ಖರ್ಚು ಹೆಚ್ಚು ಮಾಡಬೇಕೆಂದು ಒಪ್ಪುತ್ತೇವೆ. ಆದರೆ ಹೆಣ್ಣು ಹುಡುಗಿಯರ ಹೈಸ್ಕೂಲಿಗೆ ಮಾಡುವ ಖರ್ಚನ್ನು ಕಡಿಮೆ ಮಾಡಿದರೆ ಉತ್ತಮ. ಒಟ್ಟು ಈ ಲೆಖ್ಖವೆಲ್ಲಾ ಸರಕಾರಕ್ಕೂ ಇತರ ಸಮುದಾಯಕ ಫಂಡುಗಳಿಗೆ ಆಗುತ್ತಿರುವ ಖರ್ಚುಗಳಾಗಿವೆ. ವಿದ್ಯಾರ್ಥಿಯರಿಗೆ ಪುಸ್ತಕ ಮುಂತಾದ್ದಕ್ಕೆ ಆಗುವ ಖರ್ಚುಗಳು ಬೇರೆ ಇವೆ. ಈ ರೀತಿ ಎಲ್ಲಾ ಬಾಬುಗಳಿಂದಲೂ ಆಗುತ್ತಿರುವಷ್ಟು ಖರ್ಚಿಗೆ ತಕ್ಕಷ್ಟು ವಿಸ್ತಾರವಾದ ಮತ್ತು ಫಲದಾಯಕವಾದ ವಿದ್ಯೆ ದೊರೆಯುತ್ತಿರುವದಿಲ್ಲ. ವಿದ್ಯೆಗಾಗಿ ಆಗುತ್ತಿರುವ ಖರ್ಚನ್ನೇ ಸದ್ವಿನಿಯೋಗ ಮಾಡಿದರೆ ಹೆಚ್ಚಿನ ಪ್ರಯೋಜನ ಮಾಡಿಕೊಳ್ಳಬಹುದು.

ನಮ್ಮ ಸರಕಾರವು ವಿದ್ಯೆ ವಿಷಯದಲ್ಲಿ ಎಷ್ಟು ನಿರಾಸೆಯಲ್ಲಿ ಇದ್ದಾರೆಂಬದಕ್ಕೆ ಒಂದು ಉದಾಹರಣೆ ಕೊಟ್ಟು ಈ ವಿಷಯವನ್ನು ಮುಗಿಸುತ್ತೇವೆ. ಕಳೆದ ಬಜೆಟ್ಟಿನಲ್ಲಿ ಹಿಂದಿನ ಬಜೆಟ್ಟಿನಲ್ಲಿ ಇದ್ದ ಹಣದಲ್ಲಿ 14000 ರೂಪಾಯಿ ಕಡಿಮೆಮಾಡಿದ್ದಾರೆ. ಕಾರಣವೇನೆಂದರೆ—ಹಿಂದಿನ ವರ್ಷದಲ್ಲಿ ಆ ಹಣದಿಂದ 14000 ರೂಪಾಯಿ ಖರ್ಚಾಗಿರಲಿಲ್ಲವಂತೆ. ಖಾನೆಷುಮಾರಿ ಲೆಖ್ಖದ ಮೇರೆ ನೂರಕ್ಕೆ 14 ಜನರಿಗೆ ಮಾತ್ರ ಓದುಬರಹ ತಿಳಿಯುತ್ತಿರುವಾಗ 14000 ರೂಪಾಯಿಗೆ ಖರ್ಚು ದಾರಿಯಿಲ್ಲದಾಯಿತಂತೆ. ಈ ಹಣವನ್ನು ಹೆಚ್ಚಿಗೆ ಶಾಲೆಗಳನ್ನು ಏರ್ಪಡಿಸಲಿಕ್ಕಾಗಲೀ ಅಥವಾ ಕೆಲವು ಕಡೆಗಳಲ್ಲಾದರೂ ಕಡ್ಡಾಯವಾಗಿ ವಿದ್ಯೆಕೊಡಲಿಕ್ಕಾಗಲೀ ಉಪಯೋಗಿಸಬಹುದಿತ್ತು. ಇಂಥಾ ಧನ ಶೀಲತೆಯು ನಮ್ಮ ಅಧಿಕಾರಿಗಳಿಗೆ ಎಂದು ಬರುತ್ತದೋ?

ಮಹಾತ್ಮಗಾಂಧಿಯವರ ಸ್ವಚರಿತ್ರೆ.

ಎರಡನೆಯ ಭಾಗ

5 ನೆಯ ಪ್ರಕರಣ

ದಕ್ಷಿಣಾಫ್ರಿಕೆಗೆ ಹೊರಡಲು ಸನ್ನದ್ಧನಾದುದು.

ನನ್ನ ಅಣ್ಣನ ಪರವಾಗಿ ಶಿಫಾರಸು ಮಾಡುವುದಕ್ಕಾಗಿ ನಾನು ಆ ಉದ್ಯೋಗಿಯ ಬಳಿಗೆ ಹೋಗಿದ್ದುದು ಅನುಚಿತವೆಂಬುದರಲ್ಲಿ ಯಾವ ಸಂಶಯವೂ ಇಲ್ಲ. ಆದರೆ ಆತನ ಅಸಹನೆಗಾಗಿ ಕೋಪವು ಮಿತಿಮೀರಿ ಹೋಗಿದ್ದಿತು. ನಾನು 5 ನಿಮಿಷಗಳಿಗಿಂತ ಹೆಚ್ಚು ಕಾಲ ಹಿಡಿಯುವಂತೆ ಹೇಳಬೇಕಾದುದನ್ನು 5 ನಿಮಿಷದಲ್ಲೇ ಹೇಳಿ ಮುಗಿಯಿಸುತ್ತಿದ್ದೆನು. ಆದರೆ ನಾನು ಮಾತನಾಡುವುದೇ ಆತನಿಗಿಷ್ಟವಿರಲಿಲ್ಲ. ನೀನು ಹೋಗಬಹುದೆಂದು ಆತನು ಮರ್ಯಾದೆಯಿಂದ ನನಗೆ ಹೇಳಬಹುದಾಗಿದ್ದಿತಾದರೂ ಅಧಿಕಾರ ಪಿಶಾಚವು ಬಹಳ ಪ್ರಬಲವಾಗಿದ್ದಿತು. ಆ ಅಧಿಕಾರಿಗೆ ಸ್ಥೈರ್ಯವು ಕೊಂಚವಾದರೂ ಇಲ್ಲವೆಂದು ನನಗೆ ತರುವಾಯ ತಿಳಿದಿತು. ಆತನು ನೋಡಬಂದವರನ್ನು ಬಹಳವಾಗಿ ಅವಮಾನಪಡಿಸುತ್ತಲೇ ಇದ್ದನು. ಯಾವ ಕಾರಣದಿಂದಲಾದರೂ ಇಷ್ಟವಿಲ್ಲದಿದ್ದಲ್ಲಿ ಆತನಿಗೆ ತಡೆಯಲಾರದಷ್ಟು ಕೋಪಬರುತ್ತಿದ್ದುದಾಗಿ ನಾನು ಕೇಳಿದ್ದೆನು. ವಕೀಲನಾಗಿ ನಾನು ಆತನ ಕೋರ್ಟಿನಲ್ಲೇ ವಿಶೇಷವಾಗಿ ಕೆಲಸನಡೆಸಬೇಕಾಗಿದ್ದಿತು. ಆತನನ್ನು ಪ್ರಸನ್ನನನ್ನಾಗಿ ಮಾಡಲು ಸಾಧ್ಯವಿರಲಿಲ್ಲವು. ಆತನ ಕಟಾಕ್ಷವನ್ನು ಸಂಪಾದಿಸಲು ನಾನೊಪ್ಪಲಿಲ್ಲವು. ಆತನ ಮೇಲೆ ಕೇಸುಹಾಕುತ್ತೇನೆಂದು ಬೆದರಿಸಿ ಒಂದುವೇಳೆ ಸುಮ್ಮನಿರಲು ನನಗಿಷ್ಟವಿರಲಿಲ್ಲವು. ಈ ಮಧ್ಯೆ ದೇಶಸಂಬಂಧವಾದ ಸಾಮಾನ್ಯ ರಾಜಕೀಯ ವಿಚಾರವನ್ನು ನಾನು ಗ್ರಹಿಸಲಾರಂಭಿಸಿದೆನು. ಕಠಿಯಾವಾಡದಲ್ಲಿ ದೊಡ್ಡ ಸಂಸ್ಥಾನಗಳಲ್ಲಿರುವಂತೆಯೇ ಅಲ್ಲಿ ರಾಜಕೀಯ ವಿಚಾರವು ಬಹಳ ಹೆಚ್ಚಾಗಿರುವುದು ಸಹಜವೇ. ಸಂಸ್ಥಾನಗಳ ಮಧ್ಯೆ ಮನಸ್ತಾಪ, ಅಧಿಕಾರಸಂಬಂಧವಾಗಿ ಉದ್ಯೋಗಸ್ಥರುಗಳಲ್ಲಿ ಮನಸ್ತಾಪ ನೋಡಲಾದುವು ಸ್ವಾಭಾವಿಕವಾಗಿದ್ದುವು. ಸಂಸ್ಥಾನಾಧಿಪತಿಗಳು ಯಾವಾಗಲೂ ಪರಾಧೀನರಾಗಿಯೇ ಇರುವರು. ಮುಖಸ್ತುತಿಪರಾಯಣರ ಮಾತಿಗೆ ಕಿವಿಕೊಡುತ್ತಿದ್ದರು. ಪಾಶ್ಚಾತ್ಯ ಉದ್ಯೋಗಿಯ ಜವಾನನಿಗೆ ಕೂಡ ಸಂಸ್ಥಾನಾಧಿಪತಿಗಳು ಬಹಳವಾಗಿ ಗೌರವಿಸಬೇಕಾಗಿದ್ದಿತು. ಇನ್ನು ಆ ಉದ್ಯೋಗಿಯ ಶಿರಸ್ತೇದಾರನ ಮಾತನ್ನಂತು ಹೇಳಬೇಕಾದುದೇ ಇಲ್ಲವು. ಅಧಿಕಾರಿಗಿಂತ ಶಿರಸ್ತೇದಾರನನ್ನೇ ಹೆಚ್ಚಾಗಿ ಗೌರವಿಸಬೇಕಾಗಿದ್ದಿತು. ಶಿರಸ್ತೇದಾರನ ಇಷ್ಟವೇ ಆ ಅಧಿಕಾರಿಯು ಶಿರಸ್ತೇದಾರನ ಕೈಕೀಲು ಬೊಂಬೆಯಾಗಿದ್ದುದರಿಂದ ಶಿರಸ್ತೇದಾರನ ಆದಾಯವು ಅಧಿಕಾರಿಯ ಸಂಬಳಕ್ಕಿಂತ ಹೆಚ್ಚಾಗಿದ್ದಿತು. ಹೀಗೆ ಹೇಳುವುದರಲ್ಲಿ ಕೊಂಚ ಅತಿಶಯೋಕ್ತಿ ಇರಬಹುದಾದರೂ ಸಂಬಳಕ್ಕಿಂತ ಹೆಚ್ಚು ದರ್ಜೆಯಲ್ಲಿ ಶಿರಸ್ತೇದಾರನು ಜೀವಿಸುತ್ತಾನೆಂಬ ಮಾತು ನಿಶ್ಚಯವು. ಈ ಪರಿಸ್ಥಿತಿಯು ನನಗೆ ವಿಷಪ್ರಾಯವಾಗಿ ಕಾಣಬಂದಿತು. ಆ ವಿಷಸಂಪರ್ಕವಾಗದಂತೆ ನನ್ನ ಪರಿಸ್ಥಿತಿಯಲ್ಲಿ ಕಾಪಾಡಿಕೊಂಡಿರುವುದು ಹೇಗೆ? ಎಂಬ ಸಮಸ್ಯೆಯನ್ನು ಕುರಿತು ನಾನು ನಿರಂತರದಲ್ಲೂ ಯೋಚಿಸಬೇಕಾಗಿದ್ದಿತು.

ನನಗೆ ಉತ್ಸಾಹವು ಪೂರ್ತಿಯಾಗಿ ಕೊಲಗಿಹೋಯಿತು. ಅದನ್ನು ನನ್ನ ಅಣ್ಣನು ಸ್ಪಷ್ಟವಾಗಿ ತಿಳಿದಿದ್ದನು. ಇಲ್ಲವಾದರೂ ನನಗೆ ಉದ್ಯೋಗವು ದೊರಕಿದರೆ ನನಗೆ ಬಹಳ ಅನುಕೂಲವಾಗಿರುವುದೆಂದು ನಾವಿಬ್ಬರೂ ಗ್ರಹಿಸಿದೆವು. ಒಂದರಿಯಿಲ್ಲದ ಮಂತ್ರಿಪದವಿಯೂ ನ್ಯಾಯವಾದಿ ಉದ್ಯೋಗವೂ ಲಭಿಸುವುದು ಅಸಂಭವವು. ನ್ಯಾಯವಾದಿಯಾಗಿ ಕೆಲಸಮಾಡಲು ಪಾಶ್ಚಾತ್ಯ ಉದ್ಯೋಗಿಯ ಕೂಡ ನಾನು ಮಾಡಿದ ಕಲಹವು ಅಡ್ಡಂತರವಾಗಿದ್ದಿತು. ಪೋರಬಂದರು ಆಗ ಸರಕಾರ ಪರಿಪಾಲನಕ್ಕೊಳಪಟ್ಟಿದ್ದಿತು. ಸಂಸ್ಥಾನಾಧಿಪತಿಗೆ ಕೆಲವು ಅಧಿಕಾರವನ್ನು ಸಂಪಾದಿಸಲು ನಾನು ಅಲ್ಲಿ ನಿಯಮಿಸಲ್ಪಟ್ಟೆನು. ರೈತರಿಂದ ಹೆಚ್ಚಾದ ಕಂದಾಯವನ್ನು ವಸೂಲು ಮಾಡುತ್ತಿದ್ದುದರಿಂದ ಆ ವಿಚಾರವಾಗಿ ಅಧಿಕಾರಿಯ ಅಡ್ಮಿನಿಸ್ಟ್ರೇಟರನ್ನು ನೋಡಬೇಕಾಗಿದ್ದಿತು. ಈ ಅಧಿಕಾರಿಯು ಭಾರತೀಯನಾಗಿದ್ದರೂ ಈತನಿಗೆ ಪಾಶ್ಚಾತ್ಯ ಉದ್ಯೋಗಿಯ ಅಹಂಭಾವಕ್ಕಿಂತ ಈತನ ಅಹಂಭಾವವೇ ಹೆಚ್ಚಾಗಿದ್ದಿತು. ಆತನು ಸಮರ್ಥನಾಗಿದ್ದರೂ ಅದರಿಂದ ರೈತರಿಗೆ ಯಾವ ಪ್ರಯೋಜನವೂ ಆದಂತೆ ನನಗೆ ತೋರಲಿಲ್ಲವು. ಸಂಸ್ಥಾನಾಧಿಪತಿಯಾದ ರಾಣಾಜಿಯವರಿಗೆ ಕೆಲವು ಅಧಿಕಾರವನ್ನು ಸಂಪಾದಿಸಲು ಯೋಚಿಸಿದೆನಾದರೂ ಅದಕ್ಕೆ ತಕ್ಕ ನಿರುಪಾಯವನ್ನು ಮಾಡಲಾರದೆ ಹೋದೆನು. ಅವರ ವಿಷಯವನ್ನು ಅಧಿಕಾರಿಗಳು ದೃಷ್ಟಿಯಿಂದ ಗಮನಿಸಲಿಲ್ಲವೆಂಬುದು ಕೂಡ ನನಗೆ ತೋರಿತು. ರೀತಿಯಾಗಿ ಕೆಲಸದಲ್ಲೂ ಕೂಡ ನನಗೆ ಕೊಂಚ ನಿರುತ್ಸಾಹವುಂಟಾಯಿತು. ನನ್ನ ಕಕ್ಷಿದಾರರಿಗೆ ನ್ಯಾಯವು ದೊರಕಲಿಲ್ಲವು. ನ್ಯಾಯವನ್ನು ದೊರಕಿಸಲು ನನಗೆ ಯಾವ ಸಾಧನವೂ ತೋರಲಿಲ್ಲ. ಪೊಲಿಟಿಕಲ್ ಏಜಂಟಿಗಾಗಲಿ ಗವರ್ನರಿಗಾಗಲಿ ಅಪೀಲನ್ನು ಮಾಡಬಹುದು. ಆದರೆ ಅವರು ಅಪೀಲನ್ನು ಹೊರದೂಡಿಬಿಡುವುದೇನೋ ನಿಶ್ಚಯ. ಈ ವಿಷಯದ ತೀರ್ಪಿಗೆ ಯಾವುದಾದರು ನಿಯಮವು ಇದ್ದರೆ ಚೆನ್ನಾಗಿದ್ದಿತಾದರೂ ಉದ್ಯೋಗಿಯ ಇಷ್ಟವೇ ವಿಧಿಯಾಗಿರುತ್ತಿದ್ದಿತು. ನನಗೆ ಬಹಳ ಕೋಪವುಂಟಾಯಿತು.

ನಮಗೆ ದಕ್ಷಿಣಾಫ್ರಿಕೆಯಲ್ಲಿ ವ್ಯಾಪಾರ ನಡೆಯುತ್ತಿದೆ. ನಮ್ಮದೊಂದು ದೊಡ್ಡ ವರ್ತಕ ಸಂಘವು. ದಕ್ಷಿಣಾಫ್ರಿಕೆಯಲ್ಲಿ 4,00,000 ಪೌ. ಗಳಿಗೆ ದಾವಾ ಹೂಡಿರುತ್ತೇವೆ. ದಾವಾ ಆಗಿ ಬಹಳ ದಿವಸಗಳಾದರೂ ಇನ್ನೂ ಬಗೆಹರಿಯಲಿಲ್ಲವು. ಅಲ್ಲಿ ದೊಡ್ಡ ದೊಡ್ಡ ವಕೀಲರುಗಳನ್ನೂ ಬ್ಯಾರಿಸ್ಟರುಗಳನ್ನೂ ನಿಯಮಿಸಿದ್ದೆವು. ನಿಮ್ಮ ತಮ್ಮನನ್ನು ನೀವು ಅಲ್ಲಿಗೆ ಕಳುಹಿಸಿದರೆ ನಮಗೂ ಆತನಿಗೂ ಲಾಭಕರವಾಗಿರುವುದು. ಆತನು ಅಲ್ಲಿ ನಮ್ಮ ನ್ಯಾಯವಾದಿಗೆ ಆ ದಾವಾ ಕುರಿತು ಚೆನ್ನಾಗಿ ತಿಳಿಸಿಕೊಡಬಹುದು. ಹೊಸ ದೇಶವನ್ನು ನೋಡುವುದಕ್ಕೂ, ಹೊಸ ಪರಿಚಯ ಮಾಡಿಕೊಳ್ಳುವುದಕ್ಕೂ ಅವಕಾಶವಾಗುವುದು.' ಎಂದು ಪೋರಬಂದರಿನ ಒಬ್ಬ ಮೆಮನ್ ವರ್ತಕ ಸಾಹುಕಾರರು ನನ್ನ ಅಣ್ಣನಿಗೆ ಕಾಗದ ಬರೆದಿದ್ದರು. ಅದನ್ನು ನನ್ನ ಅಣ್ಣನು ನನಗೆ ಹೇಳಿದನು. ಅಲ್ಲಿ ನಾನು ಕೋರ್ಟಿಗೆ ಹೋಗಬೇಕೋ ಇಲ್ಲವೋ ನನಗೆ ಸ್ಪಷ್ಟವಾಗಿ ತಿಳಿಯಲಿಲ್ಲವಾದರೂ ಹೋಗಬೇಕೆಂದು ನನಗೆ ಆಸಕ್ತಿಯುಂಟಾಯಿತು. ಆ ಸಂಘದ ಹೆಸರು ದಾದಾ ಅಬ್ದುಲ್ಲಾ ಕಂಪೆನಿ. ಕಿ|| ಶೇ|| ಸೇಟ್. ಅಬ್ದುಲ್ ಕರೀಂ ಝವೇರಿಯವರು ಆಗ ಅದಕ್ಕೆ ಮುಖ್ಯಸ್ಥರಾಗಿದ್ದರು. ನನ್ನ ಅಣ್ಣನು ನನ್ನನ್ನು ಸೇಟರವರಿಗೆ ಪರಿಚಯಮಾಡಿಸಿದನು. "ಕಷ್ಟವೇನೂ ಇಲ್ಲವು. ಅಲ್ಲಿ ಬಹಳ ಜನ ದೊಡ್ಡ ದೊಡ್ಡ ಪಾಶ್ಚಾತ್ಯರು ನಮ್ಮ ಮಿತ್ರರಾಗಿರುವರು. ಅವರೊಡನೆ ನೀವು ಪರಿಚಯ ಮಾಡಿಕೊಳ್ಳಬಹುದು. ನಮ್ಮ ಅಂಗಡಿಯಲ್ಲಿ ಕೂಡ ನೀವು ಕೆಲಸಮಾಡಬಹುದು. ನಾವು ಬರಹವನ್ನು ಬಹಳ ಮಟ್ಟಿಗೆ ಆಂಗ್ಲಭಾಷೆಯಲ್ಲೇ ಅಲ್ಲಿ ನಡೆಸುವುದು. ಆ ಕೆಲಸವನ್ನು ನೀವು ನೋಡಬಹುದು. ನಿಮಗೆ ಅಲ್ಲಿ ಯಾವ ಕಷ್ಟವೂ ಇಲ್ಲವು. ನಾವೇ ವಹಿಸಿಕೊಳ್ಳುತ್ತೇವೆ" ಎಂದು ಸೇಟರು ಹೇಳಿದರು. "ನಾನು ಅಲ್ಲಿ ಎಷ್ಟು ಕಾಲವಿರಬೇಕು? ನೀವೆಷ್ಟು ಸಂಬಳವನ್ನು ಕೊಡುವಿರಿ" ಎಂದು ನಾನು ಕೇಳಿದೆನು. "ಅಲ್ಲಿ ಒಂದು ವರ್ಷಕ್ಕಿಂತ ಹೆಚ್ಚಾಗಿರಬೇಕಾದವಶ್ಯವಿಲ್ಲವು. ಹೋಗಿಬರಲು 1ನೇ ತರಗತಿ ಸ್ಟೀಮರು ಟಿಕೆಟ್ಟು ಕೊಟ್ಟು, 1575 ರೂಪಾಯಿ ಕೊಡುತ್ತೇನೆ" ಎಂದು ಸೇಟರು ಹೇಳಿದರು. ಅಲ್ಲಿಗೆ ನಾನು ಹೋಗುವುದು ನೌಕರನಾಗಲ್ಲದೆ ಬ್ಯಾರಿಸ್ಟರಾಗಲ್ಲವೆಂದು ತಿಳಿದುಕೊಂಡೆನು. ಹೇಗಾದರೂ ಭಾರತದೇಶದಿಂದ ಹೊರಗೆ ಹೋಗಬೇಕಾಯಿತೆಂದು ನನಗೆ ಆಗ ತೋರಿತು. ಹೊಸ ದೇಶವನ್ನು ನೋಡಬಹುದು. ಹೊಸ ವಿಷಯವನ್ನು ತಿಳಿಯಬಹುದು. ಅಣ್ಣನಿಗೆ 1575 ರೂ ಗಳನ್ನು ಕಳುಹಿಸಬಹುದು, ಎಂದು ಯೋಚಿಸಿ ಕೂಡಲೆ ಸಮ್ಮತಿಸಿದೆನು. ದಕ್ಷಿಣಾಫ್ರಿಕೆಗೆ ಹೊರಡಲು ಸನ್ನದ್ಧನಾದೆನು.

ನಿರುದ್ಯೋಗದ ಪ್ರಶ್ನೆ (ಸಮಸ್ಯೆ)

(ಶ್ರೀಯುತ ಬಿ. ಎ. ರಾಮಮೂರ್ತಿ ಯಂ. ಎ. ಬಿ. ಸಿ. ಯಸ್, ರಾಮನಾಡು ಕಲೆಕ್ಟರ್ ಇವರು ಮದುರೆಯಲ್ಲಿ ತಾ 31—7—26 ರಲ್ಲಿ ಮಾಡಿದ ಉಪನ್ಯಾಸ)

ಹಿಂದುಸ್ಥಾನದ ಎಲ್ಲಾ ಭಾಗಗಳಲ್ಲೂ ವಿದ್ಯಾವಂತರಾದ ಮಧ್ಯಮ ತರಗತಿಯ ವರಿಗೆ ಕಸಬು ಇಲ್ಲದೆ ಇರುವುದರಿಂದ ಉಂಟಾಗಿರುವ ಕಷ್ಟವು ಎಲ್ಲರಿಗೂ ತಿಳಿದ ಸಂಗತಿಯಾಗಿದೆ. ಪ್ರತಿಯೊಂದು ಪಟ್ಟಣದಲ್ಲೂ ಎಸ್. ಎಸ್. ಎಲ್. ಸಿ, ಬಿ. ಎ, ಬಿ. ಇ. ಎಮ್. ಬಿ., ಎಲ್. ಟಿ ಮತ್ತು ಬಿ. ಎಲ್.‌ಗಳು ತುಂಬಿಹೋಗಿದ್ದಾರೆ. ಇವರಿಗೆಲ್ಲಾ ಕೆಲಸವಿಲ್ಲ. ಕಳೆದ ಘೋರ ಯುದ್ಧ ತೀರಿದ ಮೇಲಂತೂ ಕೆಲಸ ದೊರೆಯುವುದು ಬಹಳ ಕಷ್ಟವಾಗಿ ಹೋಗಿದೆ. ಒಂದು ಜನಾಂಗದ ಸಂಪತ್ತನ್ನು ಉಳಿಸಿಕೊಳ್ಳುವುದು ಮತ್ತು ಹೆಚ್ಚಿಸುವುದು ಆ ಜನಾಂಗದ ವಿದ್ಯಾವಂತರನ್ನು ಹೊಂದಿದೆ. ಮಧ್ಯಮ ತರಗತಿಯ ಜನರ ಕೆಲಸ ತಪ್ಪಿಹೋದಾಗ ಒಟ್ಟು ಜನಾಂಗದ ಸ್ಥಿತಿಗೇ ಕೇಡು ಬರುತ್ತದೆ. ಹಿಂದುಸ್ಥಾನದ ಜನರ ಉದ್ಯೋಗಗಳನ್ನು ಕೃಷಿ, ಆಡಳಿತ, ವಿದ್ಯಾವಂತರ ಕಸಬುಗಳು, ಮತ್ತು ಕೈಗಾರಿಕೆಗಳೆಂಬ ನಾಲ್ಕು ಭಾಗಗಳಾಗಿ ವಿಂಗಡಿಸಬಹುದು. ಇವುಗಳ ಪೈಕಿ ಕೃಷಿಯನ್ನೂ ಮತ್ತು ಕೆಳಗಿನ ದರ್ಜೆಯ ಕೈಗಾರಿಕೆಗಳನ್ನೂ ಇಂಗ್ಲಿಷ್ ತಿಳಿಯದ ಜನಸಮುದಾಯದವರು ನಡಿಸುತ್ತಾರೆ. ಒಟ್ಟು ಜನಾಂಗದ ಶೇಕಡ 99ರಷ್ಟು ಇವರೇ ಆಗಿದ್ದಾರೆ. ಸರಕಾರಿ ಉದ್ಯೋಗವಿಲ್ಲದ ವಿದ್ಯಾವಂತ ಕಸಬುದಾರರು ಬಹಳ ಕಡಿಮೆ. ಲಾಯರುಗಳನ್ನು ಈ ಗುಂಪಿಗೆ ಸೇರಿಸಬಹುದು. ಆದರೆ ಅವರ ಕಸಬೂ ಸಹ ಸರಕಾರಿ ಕೋರ್ಟುಗಳನ್ನು ಹೊಂದಿದೆ. ಮೇಲ್ದರ್ಜೆಯ ಕೈಗಾರಿಕೆಯನ್ನು ಅನುಸರಿಸುವವರ ಸಂಖ್ಯೆ ಬಹಳ ಕಡಿಮೆ. ಶೇಕಡ 99ರಷ್ಟು ಸಂಖ್ಯೆ ಜನರು ಕೆಳಗೆ ದರ್ಜೆಯ ಕೈಗಾರಿಕೆಗಳಲ್ಲಿ, ಉಳಿದ ಒಂದು ಭಾಗ ಮಾತ್ರ ವಿದ್ಯಾವಂತರಾಗಿ ಸರಕಾರಿ ಆಡಳಿತದಲ್ಲೂ ಮೇಲ್ದರ್ಜೆಯ ಕೈಗಾರಿಕೆಯಲ್ಲೂ ಇದ್ದಾರೆಂತಾಯಿತು.

ಕೆಲಸವಿಲ್ಲದೆ ಇರುವವರು ಬರೇ ವಿದ್ಯಾವಂತರನ್ನು ಮತ್ತು ಈ ಕಾಲದಲ್ಲಿ ಮಾತ್ರ ಪೀಡಿಸುತ್ತದೆಯೆಂತ ಹೇಳಲಿಕ್ಕಾಗುವದಿಲ್ಲ. ಹಿಂದುಸ್ಥಾನವು ಐಶ್ವರ್ಯದಲ್ಲೂ ಸಂಸ್ಕೃತಿಯಲ್ಲೂ ಸಮೃದ್ಧಿಯಾಗಿದ್ದಾಗ ಮತ್ತು ಹಿಂದುಸ್ಥಾನದ ಬುದ್ಧಿಕುಶಲತೆಯ ಮತ್ತು ತತ್ವ ವಿಚಾರದ ಮಹತ್ವವನ್ನು ಪ್ರಪಂಚಕ್ಕೆ ಕೊಟ್ಟಾಗ ಕೆಲಸಮಾಡುತ್ತಿದ್ದ ಮೇಲ್ದರ್ಜೆಯ ಜನರು ಈಗ ಇಲ್ಲವೇ ಇಲ್ಲ. 30 ಕೋಟಿ ಜನರಲ್ಲಿ ಒಬ್ಬ ಬೋಸ್, ಒಬ್ಬ ಗಾಂಧಿ ಮತ್ತು ಒಬ್ಬ ಟಾಗೂರ್ ಮಾತ್ರ ಇದ್ದಾರೆ. ಇವರಲ್ಲದೆ ಸ್ವತಕ್ತಿಯನ್ನು ತೋರಿಸುವ ಜನರು ಇಲ್ಲವೇ ಇಲ್ಲ. ಜನಸಮುದಾಯದವರಿಗೂ ನಿರುದ್ಯೋಗದ ಕಷ್ಟವು ಸುಮಾರು ಮೂವತ್ತು ವರ್ಷದಿಂದ ಬಾಧಿಸುತ್ತಲಿದೆ. ಸಮುದಾಯದಲ್ಲಿ ಬಡತನ ಹೆಚ್ಚಲು ನಿರುದ್ಯೋಗ ಅಥವಾ ತಕ್ಕಷ್ಟು ಪ್ರತಿಫಲವಿಲ್ಲದ ಉದ್ಯೋಗವೇ ಕಾರಣವಾಗಿದೆ. ಸಂಗಾಮಿನ ಮಳೆ ಇಲ್ಲದೆ ಇದ್ದರೆ ಆಕಾಶದ ಕಡೆ ನೋಡುತ್ತಾ ಕೂತುಕೊಳ್ಳುತ್ತಾರೆ. ಮಳೆಗಾಲ ಕಳೆದನಂತರ ರೈತನು ಸೋಮಾರಿಯಾಗಿ ಮನೆಯಲ್ಲಿ ಕೂರುತ್ತಾನೆ. ಕೃಷಿಕನು ತನ್ನ ಬಿಡು ಸಮಯದಲ್ಲಿ ಮಾಡುತ್ತಿದ್ದ ಅನೇಕ ಎರಡನೇ ಕೈಗಾರಿಕೆಗಳೆಲ್ಲಾ ಈಗ ಮಾಯವಾಗಿವೆ. ಅವನು ತಯಾರಿಸುತ್ತಿದ್ದ ವಸ್ತುಗಳಿಗೆಲ್ಲಾ ಈಗಿನ ಫ್ಯಾಶನ್‌ನಲ್ಲಿ ಇಲ್ಲ. ಸಮುದಾಯದ ಜನರು ಬೇಡಬಹುದಾದ ಸಾಮಗ್ರಿಗಳನ್ನು ಮಾಡಿಸಲಿಕ್ಕೆ ಮಧ್ಯಮ ತರಗತಿಯ ಜನರು ತಮ್ಮ ಬುದ್ಧಿಯನ್ನು ಖರ್ಚುಮಾಡುವದಿಲ್ಲ. ಪ್ರಪಂಚದ ಇತರ ಕಡೆಗಳಲ್ಲಿ ಹೆಚ್ಚಿನ ಬೆಲೆಯಲ್ಲಿ ಮಾರುವ ಸಾಮಾನುಗಳನ್ನು ದೊರಕಿಸಿಕೊಡಲು ಮಧ್ಯಮ ತರಗತಿಯವರು ಸಹಾಯಮಾಡಿದರು. ಆದರೆ ಅದೇ ಸಾಮಾನುಗಳನ್ನು ಸಮುದಾಯದ ಜನರಿಂದ ತಯಾರಿಸುವ ಏರ್ಪಾಡು ಮಾಡಲಿಲ್ಲ. ಈ ರೀತಿ ಸ್ವತಃ ಬುದ್ಧಿ ಉಪಯೋಗಿಸತಕ್ಕ ಮೇಲಿನ ತರಗತಿ ಜನರಲ್ಲೂ, ಇಂಗ್ಲಿಷ್ ಅಭ್ಯಾಸಮಾಡಿದ ಮಧ್ಯಮ ತರಗತಿ ಜನರಲ್ಲೂ ಕೆಳಗಿನ ಹೆಚ್ಚಿನ ಸಂಖ್ಯೆಯಿರುವ ಸಮುದಾಯದ ಜನರಲ್ಲಿ ನಿರುದ್ಯೋಗವು ಸ್ಥಾಪಿತವಾಯಿತು. ಮೊದಲನೇ ದರ್ಜೆಯವರ ನಿರುದ್ಯೋಗದಿಂದ ಹಿಂದುಸ್ಥಾನದ ಸಂಸ್ಕೃತಿಯೂ ಕಡೇ ತರಗತಿಯ ನಿರುದ್ಯೋಗದಿಂದ ಹಿಂದುಸ್ಥಾನದ ಐಶ್ವರ್ಯವೂ ತಪ್ಪಿಹೋದವು. ಮಧ್ಯಮ ತರಗತಿಯವರಿಗೆ ನಿರುದ್ಯೋಗದ ಬಾಧೆಯು ಈಗತಾನೇ ತಟ್ಟಿದೆ. ಈ ಮೂರು ದರ್ಜೆಯ ಜನರ ನಿರುದ್ಯೋಗವೂ ಒಂದೇ ಕಾರಣದಿಂದ ಸಂಭವಿಸಿದ್ದಾಗಿದೆ.

ಜನಾಂಗದ ಸ್ವತಃ ಬುದ್ಧಿಯನ್ನು ಉಪಯೋಗಿಸುವ ಜನರೇ ಜ್ಞಾನಿಗಳೂ, ಸಾಧುಗಳೂ, ಕಲಾಕುಶಲತೆ ಇರುವವರೂ ವಿಜ್ಞಾನ ಶಾಸ್ತ್ರ ಕೋವಿದರೂ ಆಗಿದ್ದರು. ಮಧ್ಯಮ ತರಗತಿಯವರು ವರ್ತಕ, ಬ್ಯಾಂಕಿಂಗ್, ಕೈಗಾರಿಕೆಯ ಆಡಳಿತ ನಡಿಸುವವರಾಗಿದ್ದರು. ಸ್ವತಃ ಬುದ್ಧಿ ಉಪಯೋಗಿಸುವ ಜನರ ಅಭಿಪ್ರಾಯಗಳನ್ನು ಸಮುದಾಯದ ... ಮಧ್ಯಮ ತರಗತಿಯವರಾಗಿದ್ದರು. ... ಜನಾಂಗದ ಸಂಪ್ರದಾಯವನ್ನು ನಿರ್ಣಯಿಸುವವರಾಗಿದ್ದಾರೆ. ಜನಾಂಗದ ಮುಂದಾಳುಗಳಾದ ಸ್ವತಃ ಬುದ್ಧಿ ಉಪಯೋಗಿಸುವ ಜನರು ಯಾವ ಕಡೆಗೆ ತಿರುಗುತ್ತಾರೋ ಆ ಕಡೆಯೇ ಸಮುದಾಯದ ಜನರು ಹೋಗುತ್ತಾರೆ.

ಮಧ್ಯಮ ತರಗತಿಯ ಜನರು ಎರಡು ವಿಧದಲ್ಲಿ ತಮ್ಮ ಕರ್ತವ್ಯವನ್ನು ಮಾಡಲಿಲ್ಲ. ಸಮುದಾಯದ ಜನರಿಗೆ ಬುದ್ಧಿವಂತಿಕೆಯನ್ನೂ, ನೀತಿಮಾರ್ಗವನ್ನೂ ಬೋಧಿಸುತ್ತಲಿಲ್ಲ. ಸಮುದಾಯಕ್ಕಾಗಿ ಯೂರೋಪಿನಿಂದ ತರಿಸಿದ ವಸ್ತುಗಳನ್ನು ಸಮುದಾಯಕ್ಕೆ ಕೊಡದೆ ತಾವೇ ಇಟ್ಟುಕೊಂಡು ಬಿಟ್ಟರು.

ಹಿಂದುಸ್ಥಾನದಲ್ಲಿ ಇಂಗ್ಲಿಷ್ ವಿದ್ಯಾಭ್ಯಾಸವನ್ನು ಸುಮಾರು 70 ವರ್ಷಗಳ ಕೆಳಗೆ ಸುರುಮಾಡಿದರು. ಇಂಗ್ಲಿಷ್ ವಿದ್ಯೆಯು ಧನಸಂಪಾದನೆಗೆ ಅನುಕೂಲ ದಾರಿಯೆಂತ ತಿಳಿಯಿತು. ಪುರೋಹಿತರ ಮತ್ತು ಚಿಕ್ಕ ಭೂಮಾಲೀಕರ ಮಕ್ಕಳು ಮತ್ತು ವೈಶ್ಯಮಕ್ಕಳು ಪೂರ್ವ ಪದ್ಧತಿಯ ಮೇರೆ ಹೊಂದುತ್ತಿದ್ದಂಥ ವಿದ್ಯೆಗೆ ಬೇಕಾದದ್ದಕ್ಕಿಂತ ಹೆಚ್ಚಿಗೆ ಬುದ್ಧಿವಂತಿಕೆ ಇಲ್ಲದೇನೇ ಇಂಗ್ಲಿಷ್ ವಿದ್ಯಾಭ್ಯಾಸ ಮಾಡಿ ಸರಕಾರಿ ಉದ್ಯೋಗಸ್ಥರಾಗಿಯೂ, ಲಾಯರುಗಳಾಗಿಯೂ ಇತರ ಕಸಬುದಾರಿ ಕೆಲಸಗಾರರಾಗಿಯೂ ತಮ್ಮ ತಂದೆ ಅಜ್ಜಂದಿರು ಸ್ವಪ್ನದಲ್ಲಿ ಸಹ ಕಾಣದ ಐಶ್ವರ್ಯವನ್ನು ಸಂಪಾದಿಸಬಹುದೆಂತ ತಿಳಿದುಕೊಂಡರು. ಈ ಸಂಪಾದನೆಯ ಅನುಕೂಲವನ್ನು ನೋಡಿ ಎಲ್ಲಾ ಜನರೂ ಇಂಗ್ಲಿಷ್ ವಿದ್ಯೆಗೆ ಮೇಲೆ ಬಿದ್ದು ಓದಲಾರಂಭಿಸಿದರು. ಕೂಲಿಕಸಬಿನಿಂದ ಹಿಡಿದು ಎಲ್ಲಾ ಕಸಬಿನವರೂ ತಮ್ಮ ಕುಲ ವೃತ್ತಿಯನ್ನು ಬಿಟ್ಟು ಸಂಬಳದಲ್ಲಿ ಹಣಮಾಡಲಿಕ್ಕಾಗಿ ಇಂಗ್ಲಿಷ್ ವಿದ್ಯಾಭ್ಯಾಸಕ್ಕೆ ಪ್ರಾರಂಭಿಸಿದರು. ಹಿಂದುಸ್ಥಾನದಲ್ಲಿ ಕ್ರಮವಾಗಿ ಆಡಳಿತೆ ನಡಿಸಲು ಪ್ರಾರಂಭಿಸಿದ ಪ್ರಯೋಜನವನ್ನು ಇಂಗ್ಲಿಷರ ಜೊತೆಯಲ್ಲಿ ಇಂಗ್ಲಿಷ್ ಓದಿದವರು ಅಲ್ಪ ಮಟ್ಟಿಗೆ ಪಡೆದರು. ಆದರೆ ಅವರ ಅನುಕೂಲವು ಒಳ್ಳೇ ಶೋಚನೀಯವಾಗಿತ್ತು. ಈ (ಬಾಬು)ಗಳ ಬಲವೆಲ್ಲಾ ಈಗ ಅಸ್ಥಿರವಾಯಿತೆಂತಲೇ ಹೇಳಬಹುದು.

ಈ ಇಂಗ್ಲಿಷ್ ವಿದ್ಯೆ ಓದಿದ ಮಧ್ಯಮ ತರಗತಿಯವರು ರಾಷ್ಟ್ರೀಯ ಆರ್ಥಿಕ, ಬೆಳವಣಿಗೆಗಾಗಿ ಯಾವ ರೀತಿಯಲ್ಲಿ ಕೆಲಸ ಮಾಡಿದರು? ಹತ್ತನೇ ಶತಮಾನದ ಮಧ್ಯದ ವರೆಗೆ ಹಿಂದುಸ್ಥಾನದ ಕಲಾಕುಶಲತೆಯು ಜೀವದಲ್ಲಿತ್ತೆಂತ ಮಿ. ಹಾವೆಲ್ ಇವರು ಹೇಳುತ್ತಾರೆ. ಹಿಂದುಸ್ಥಾನದ ತತ್ವಜ್ಞಾನದಲ್ಲಿ ... ಸಮಯದ ವರೆಗೆ ಮಾತ್ರ ಹೆಸರು ... ಈಗ ಎಪ್ಪತ್ತು ವರ್ಷಗಳಿಂದ ಈ ಹೊಸ ... ಏರ್ಪಾಡು ಮತ್ತು ... ಆದ ಐಹಿಕ ಪ್ರಯೋಜನವು ಸಹ ಹಿಂದುಸ್ಥಾನದ ಸಂಸ್ಕೃತಿಯನ್ನು ಮೂಲೆಗೊತ್ತಿತ್ತು. ಇಂಗ್ಲಿಷ್ ವಿದ್ಯೆ ಓದಿದ ಮಧ್ಯಮ ತರಗತಿಯವರು ಹಿಂದುಸ್ಥಾನದ ಸಂಸ್ಕೃತಿಗಾಗಲೀ ಮತಕ್ಕಾಗಲೀ, ಹಿಂದುಸ್ಥಾನದ ತತ್ವವಿಚಾರಕ್ಕಾಗಲೀ ಕಲೆಗಾಗಲೀ, ಹಿಂದುಸ್ಥಾನದ ವಿಜ್ಞಾನಶಾಸ್ತ್ರಕ್ಕಾಗಲೀ ಬೆಲೆಕೊಡಲೇ ಇಲ್ಲ. ಅದರ ಬದಲಿಗೆ ಯೂರೋಪಿನ ಬೌದ್ಧಿಕ ಮತ್ತು ನೈತಿಕ ವಸ್ತುಗಳನ್ನು ಬಹು ಅಮೂಲ್ಯ

ಸ್ಥಾನದ ಸ್ವತಃ ಬುದ್ಧಿಯನ್ನು ನಿರ್ಮೂಲಮಾಡಿ ಬಿಟ್ಟರು. ಸಮುದಾಯಕ್ಕೆ ಯೂರೋಪಿನ ವಸ್ತುಗಳನ್ನು ಕೊಡಲೆತ್ನಿಸಿದರು. ಆದರೆ ಸಮುದಾಯದವರು ಅವನ್ನು ಎಲ್ಲರೂ ಅಂಗೀಕರಿಸಲಿಲ್ಲ. ಇದು ಸ್ವಾಭಾವಿಕವಾಗಿದೆ. ಹಿಂದುಸ್ಥಾನದ ಸಮುದಾಯದ ಜನರಿಗೆ ಒಳ್ಳೇ ನಡತೆಯಿದ್ದರೆ ಮತ್ತು ಈ ನಡತೆಯು ತಮ್ಮ ಜೀವನದ ಕೃತ್ಯಗಳ ಮೂಲಕ ಪ್ರಕಾಶಕ್ಕೆ ಬರುತ್ತಿದ್ದರೆ ಅದನ್ನು ಬಿಟ್ಟು ಬೇರೆ ವಿಧದ ವಸ್ತುಗಳನ್ನು ಅಂಗೀಕರಿಸಲಿಕ್ಕೆ ಅವರು ಒಪ್ಪಲಿಲ್ಲ. ಹಿಂದುಸ್ಥಾನದಲ್ಲಿ ಒಂದು ಶತಮಾನದಿಂದ ಯೂರೋಪಿಯನ್ ಆಳಿಕೆ ನಡೆದಿದ್ದರೂ ಇನ್ನೂ ಜಪಾನಿನಷ್ಟು ಹಿಂದುಸ್ಥಾನವು ಇಂಗ್ಲಿಷ್ ಕ್ರಮವನ್ನು ಅನುಸರಿಸಿರುವದಿಲ್ಲ. ವಿದ್ಯಾವಂತರಾದ ಮಧ್ಯಮ ತರಗತಿಯವರನ್ನು ಮಾತ್ರ ಇಂಗ್ಲಿಷ್ ನಡೆನುಡಿಗಳ ಒಲವು ಆವರಿಸಿಕೊಂಡಿದ್ದರೂ ಜನಸಮುದಾಯದ ಮೇಲೆ ಅದರ ಹಾವಳಿಯೇನೂ ವಿಶೇಷ ನಡೆದಿರುವದಿಲ್ಲ. ಮಧ್ಯಮತರಗತಿಯವರು ಯೂರೋಪಿನಿಂದ ಉಪಯೋಗಿಸಿಕೊಂಡ ವಸ್ತುಗಳನ್ನು ಸಮುದಾಯದವರಿಗೆ ಕೊಡಲೇ ಇಲ್ಲ. ಹಿಂದುಸ್ಥಾನದ ಶೇಕಡ 90ರಷ್ಟು ಜನರು ಗ್ರಾಮಗಳಲ್ಲಿ ವಾಸಮಾಡುತ್ತಾರೆ. ಹಿಂದುಸ್ಥಾನದ ಗ್ರಾಮದ ಜೀವನವು ಮೌಢ್ಯ, ಬಡತನ ಮತ್ತು ಅಶುಚಿಯ ದಾರಿಯಲ್ಲೇ ನಡಿಯುತ್ತಲಿದೆ. ಇಂಗ್ಲಿಷರ ಒಲವಾದ ನಾಗರೀಕತೆಯು ಇಂಡಿಯಾಕ್ಕೆ ವ್ಯಾಪಿಸಿದೆಯೆಂತ ಗ್ರಾಮಗಳಲ್ಲಿ ಗೊತ್ತೇ ಆಗುವದಿಲ್ಲ. ಇಂಗ್ಲಂಡಿನಲ್ಲಿ ಇರುವ ಸರಾಸರಿ ವಿದ್ಯೆ, ಆರೋಗ್ಯ ಕ್ರಮ ಮತ್ತು ಅನುಕೂಲಗಳನ್ನೂ, ಅದೇ ಇಂಗ್ಲಿಷರ ಆಡಳಿತಕ್ಕೆ ಸೇರಿದ ಹಿಂದುಸ್ಥಾನವನ್ನೂ ಹೋಲಿಸಿ ನೋಡಿ. ಇಂಡಿಯಾದಲ್ಲಿರುವ ಅಲ್ಪ ಸಂಖ್ಯೆಯ ಇಂಗ್ಲಿಷ್ ಜನರು ಜನಸಮುದಾಯದ ಸಂಪರ್ಕವಾಗುವದು ಸಾಧ್ಯವಿಲ್ಲ. ಇಂಗ್ಲಿಷ್ ಜನರಿಂದ ಪಡೆದ ಜ್ಞಾನವನ್ನೂ ಅದರ ಮೂಲಕ ಒದಗುವ ಅನುಕೂಲತೆಗಳನ್ನೂ ಸಮುದಾಯದವರಿಗೆ ಹಂಚಲು ಇಂಗ್ಲಿಷ್ ವಿದ್ಯಾವಂತನಿಗೆ ಸಾಧ್ಯವಿದೆಯಷ್ಟೆ. ಆದರೆ ಇಂಗ್ಲಿಷ್ ವಿದ್ಯಾವಂತನು ಹಾಗೆ ಮಾಡಲಿಲ್ಲ. ತನ್ನ ಮನೆಯಲ್ಲಿ ಮಾತ್ರ ಉಪಯೋಗಿಸಿಕೊಂಡನು

ಯೂರೋಪಿನ ಜ್ಞಾನವನ್ನೆಲ್ಲಾ ಬಿಚ್ಚಿ ತೋರಿಸುತ್ತಿರುವ ವಿಶ್ವವಿದ್ಯಾಲಯಗಳು ಹಿಂದುಸ್ಥಾನದಲ್ಲಿ ಎಷ್ಟೋ ಇವೆ. ವಿದ್ಯೆಪಡೆದ ಹಿಂದೀಯನು ಈ ಜ್ಞಾನವನ್ನು ಸಮುದಾಯದಲ್ಲಿ ಹಂಚಲಿಕ್ಕೆ ಪ್ರಯತ್ನಿಸಿದ್ದಾನೋ? ಗ್ರಾಮಗಳನ್ನು ನೋಡಿ ಹಿಂದುಸ್ಥಾನದಲ್ಲಿ ಯೂರೋಪಿನ ಜ್ಞಾನಪ್ರಚಾರಮಾಡುವ ವಿಶ್ವವಿದ್ಯಾಲಯಗಳು ಸ್ಥಾಪಿತವಾಗಿವೆಯೆಂತ ಹೇಳಲಿಕ್ಕಾಗುವದೇ ಇಲ್ಲ. ಹಿಂದುಸ್ಥಾನದಲ್ಲಿ ಅನೇಕ ಯೂರೋಪಿಯನ್ ಆಸ್ಪತ್ರೆಗಳೂ ಸಾವಿರಾರು ತರಬೇತು ಹೊಂದಿದ ಡಾಕ್ಟರುಗಳೂ ಇದ್ದಾರೆ. ಆದರೆ ಗ್ರಾಮದ ಜೀವನವೂ ಮರಣವೂ ಎಂದಿನಂತೆಯೇ ಇದೆ. ಬಹಳ ಮುಂದುವರಿದ ಇಂಜಿನೀಯರಿಂಗ್ ಕ್ರಮವು ಹಿಂದುಸ್ಥಾನಕ್ಕೆ ಬಂದಿದೆ ಆದರೆ ಗ್ರಾಮದ ದೇವಸ್ಥಾನಗಳೂ, ರಸ್ತೆಗಳೂ, ಮನೆಗಳೂ, ಸೇತುವೆಗಳೂ ಪೂರ್ವದಂತೆಯೇ ಇವೆ. ಯೂರೋಪಿನಲ್ಲಿ ಕೃಷಿಯು ಬಹಳ ಅಭಿವೃದ್ಧಿಯಾಗಿದೆ ಆದರೂ ವಿದ್ಯಾವಂತನಿಗೆ ಇರುವ ಸೈಯನ್ಸ್(ವಿಜ್ಞಾನಶಾಸ್ತ್ರ)ನ ತಿಳುವಳಿಕೆಯಿಂದ ಗ್ರಾಮದ ಕೃಷಿಕನಿಗೆ ಏನೂ ಸಹಾಯವಾಗಿರುವದಿಲ್ಲ. ಯೂರೋಪಿನಲ್ಲಿ ಮರಣಸಂಖ್ಯೆಯನ್ನು ಬಹಳ ಕಡಿಮೆಮಾಡಿರುತ್ತಾರೆ. ಆದರೂ ಹಿಂದೀಯರು ಅಕಾಲಮರಣಕ್ಕೆ ತುತ್ತಾಗುತ್ತಲೇ ಇದ್ದಾರೆ. ಯೂರೋಪಿನ ಯಾವ ಜ್ಞಾನವನ್ನೇ ಆದರೂ ಹಿಂದೀಯರಿಗೆ ತಿಳಿಸಿಕೊಡುವದಿಲ್ಲವೆಂತ ಇಲ್ಲ. ಆದರೂ ಸಮುದಾಯದ ಸಂಪರ್ಕಕ್ಕೆ ಬರಲು ಸಾಧ್ಯವಿರುವ ಹಿಂದೀವಿದ್ಯಾವಂತನು ಸಮುದಾಯದ ಪ್ರಯೋಜನಕ್ಕೆ ತನ್ನ ಜ್ಞಾನವನ್ನು ಉಪಯೋಗಿಸಿರುವದಿಲ್ಲ.

ವಿದ್ಯಾವಂತ ಹಿಂದೀಯನು ತನ್ನ ಇಂಗ್ಲಿಷ್ ವಿದ್ಯೆಯನ್ನು ತಾನು ಐಶ್ವರ್ಯವಂತನಾಗಲಿಕ್ಕೆ ಮಾತ್ರ ಉಪಯೋಗಿಸಿಕೊಳ್ಳುತ್ತಾನೆ. ಕಾಲೇಜುಗಳು ಬೇಕೆನ್ನುತ್ತಾನೆ, ಯಾಕೆಂದರೆ—ಪರೀಕ್ಷೆ ಪಾಸಾಗಿ ಕೆಲಸಪಡಕೊಳ್ಳಲಿಕ್ಕಾಗಿ. ಆರೋಗ್ಯಶಾಸ್ತ್ರವೂ ಇಂಜಿನೀಯರಿಂಗ್ ವಿದ್ಯೆಯೂ ಬೇಕೆನ್ನುತ್ತಾನೆ, ಬರೇ ಪಟ್ಟಣದಲ್ಲಿ ತನ್ನ ಅನುಕೂಲ ಹೆಚ್ಚಿಸಿಕೊಳ್ಳಲಿಕ್ಕಾಗಿ. ಹೊಸ ತತ್ವವಿಚಾರಗಳು ಬೇಕೆನ್ನುತ್ತಾನೆ, ತನ್ನ ಸಂಸ್ಕೃತಿಯನ್ನು ಅಭಿವೃದ್ಧಿಗೊಳಿಸಿಕೊಳ್ಳಲಿಕ್ಕಾಗಿ. ಯೂರೋಪಿಯನ್ ನಾಗರೀಕತೆಯು ಪರಕೀಯನಾಗರೀಕತೆಯಾದ್ದರಿಂದಲೂ ಮತ್ತು ಇಂಗ್ಲಿಷ್ ವಿದ್ಯಾವಂತರ ಸ್ವಾರ್ಥತೆಯಿಂದಲೂ ಇದು ಗ್ರಾಮಗಳಲ್ಲಿ ಹಬ್ಬದಿರಲು ಕಾರಣವಾಗಿದೆ. ಮಧ್ಯಮತರಗತಿಯವರು ಪಡೆಯುವ ವಿದ್ಯೆಯನ್ನು ಸಮುದಾಯದವರ ಪ್ರಯೋಜನಕ್ಕಾಗಿ ಉಪಯೋಗಿಸಲ್ಪಡದೆ ಇದ್ದರೆ ಇವರ ವಿದ್ಯೆಕ್ಕಾಗಿ ಸಮುದಾಯದವರ ಹಣವೆಚ್ಚಮಾಡುವದರಲ್ಲಿ ನ್ಯಾಯವಿಲ್ಲ. ಆಡಳಿತದ ಜವಾಬ್ದಾರಿ ಕೆಲಸಗಳನ್ನು ಸಮುದಾಯದ ಪ್ರಯೋಜನಕ್ಕಾಗಿ ವಿದ್ಯಾವಂತರು ಉಪಯೋಗಿಸದೆ ಇದ್ದರೆ, ವಿದ್ಯಾವಂತರನ್ನು ಅಂಥಾ ಉದ್ಯೋಗಗಳಲ್ಲಿ ಇಟ್ಟುಕೊಳ್ಳುವದರಲ್ಲಿ ನ್ಯಾಯವಿಲ್ಲ. ವಿದ್ಯಾವಂತರು ಹಿಂದುಸ್ಥಾನದ ಸಂಸ್ಕೃತಿಯನ್ನು ತಿಳಿದುಕೊಂಡು ಅದನ್ನು ಉಪಯೋಗಿಸದೆ ಇದ್ದರೆ ವಿದ್ಯಾವಂತರು ಬುದ್ಧಿಚಾತುರ್ಯವನ್ನೂ, ಸಂಘಟನ ಶಕ್ತಿಯನ್ನೂ ಪಡೆದದ್ದು ಸಾರ್ಥಕವಲ್ಲ. ಈಗ ವಿದ್ಯಾವಂತ ಮಧ್ಯಮ ತರಗತಿಯವರಿಗೆ ಉದ್ಯೋಗವಿಲ್ಲದೆ ಇರಲು ವಿದ್ಯಾವಂತರ ಸ್ವಾರ್ಥತೆಯೇ ಕಾರಣವಾಗಿದೆ.

ದನ್ನೂ, ಆದರೆ ಎಷ್ಟು ಸ್ವಲ್ಪ ಕೆಲಸ ಮಾಡುತ್ತಿದ್ದೇವೆಂಬದನ್ನೂ ನೋಡಿದರೆ ಎಷ್ಟೊಂದು ಮನಸ್ಸು ಕರಗುತ್ತದೆ. ಯೂರೋಪದಲ್ಲಿ ಮಾಡಿಕೊಳ್ಳುವಂಥಾ ಎಲ್ಲಾ ಕೆಲಸಗಳನ್ನೂ ಹಿಂದುಸ್ಥಾನದವರು ಮನಸು ಮಾಡಿದರೆ ಹಿಂದುಸ್ಥಾನದಲ್ಲೇ ಮಾಡಿಕೊಳ್ಳಬಹುದು. ಹಿಂದುಸ್ಥಾನದಲ್ಲಿ ಮನುಷ್ಯ, ಸಾಹಿತ್ಯ, ತಿಳುವಳಿಕೆ ಮತ್ತು ಅವಕಾಶಗಳ ಸಂಪತ್ತು ಇದ್ದರೂ ಹಿಂದುಸ್ಥಾನವು ಧನದಲ್ಲೂ, ಬುದ್ಧಿಯಲ್ಲೂ ಬಡತನದಲ್ಲೇ ಇದೆ. ಯೂರೋಪಿಯನ್ ತಿಳುವಳಿಕೆಯು ಸಾರ್ವಜನಿಕವಾಗಿದೆ. ಕೆಲವು ಕೈಗಾರಿಕೆಗಳು ಮಾತ್ರ ಗುಟ್ಟಾಗಿವೆಯೇ ಹೊರತು ಮನುಷ್ಯನ ಬಾಳುವಿಕೆಯನ್ನು ಅನುಕೂಲಪಡಿಸಿಕೊಳ್ಳಲು ವಿಜ್ಞಾನಶಾಸ್ತ್ರದಲ್ಲಿ ಇರುವ ಸರ್ವಶಕ್ತಿಯೂ ಮನಸ್ಸು ಒಂದವರೆಲ್ಲರೂ ಉಪಯೋಗಿಸಿಕೊಳ್ಳಲು ಅನುಕೂಲವಿದೆ. ಒಳ್ಳೇದು ಮಾಡಿಕೊಳ್ಳಲಿಕ್ಕೆ ಬೇಕಾದ ಸಂಘಟನೆಗಳ ವಿಷಯದಲ್ಲಿ ಪ್ರಪಂಚದವರು ಪಡೆದ ಅನುಭವವೆಲ್ಲವನ್ನೂ ಉಪಯೋಗಿಸಿಕೊಳ್ಳಲು ಮನಸ್ಸು ಇರುವವರಿಗೆಲ್ಲರಿಗೂ ದೊರಕುವಂತೆ ಇದೆ.

ಹಿಂದುಸ್ಥಾನದ ಮೇಲಿನ ತರಗತಿ ಜನರು ನೋಡಿ ಹೊಸ ತಿಳುವಳಿಕೆಯನ್ನು ಉಂಟುಮಾಡಿಕೊಳ್ಳಲು ಅವರಿಗೆ ಅವಕಾಶವಿತ್ತು. ಪಶ್ಚಿಮದೇಶದ ಅನುಭವಗಳ ಮತ್ತು ತತ್ವಗಳ ಉಗ್ರಾಣಗಳೇ ಅವರ ಸ್ವಾಧೀನಕ್ಕೆ ಒಂದಿತ್ತು. ತಮ್ಮ ಸ್ವಂತ ದೇಶದ ಸಾವಿರಾರು ವರ್ಷಗಳ ಸಂಸ್ಕೃತಿಯು ಅವರಿಗೆ ದೊರಕುತ್ತಿತ್ತು. ವಿಶ್ವವಿದ್ಯಾಲಯಗಳ ಪ್ರೊಫೆಸರುಗಳಾಗಿ ಒಳ್ಳೇ ಸಂಬಳದಲ್ಲಿ ನೇಮಿಸಲ್ಪಟ್ಟಿದ್ದರು. ಸ್ವಾರ್ಥತೆಯ ಸೋಮಾರಿತನವನ್ನು ಮಾತ್ರ ಬಿಟ್ಟಿದ್ದರೆ ಪ್ರಪಂಚಕ್ಕೆ ಸಹಾಯಮಾಡಿ ಹಿಂದುಸ್ಥಾನವು ಬುದ್ಧಿವಂತಿಕೆಯಲ್ಲಿ ಒರೇ ದರ್ಜಾವಸ್ಥೆಯಲ್ಲಿ ಇದೆ ಎಂಬ ಆಕ್ಷೇಪಣೆ ಮಸ್ತು ಹೋಗಬಹುದಿತ್ತು. ಭೂಮಿ ಇರುವ ವಿದ್ಯಾವಂತರಿದ್ದರು. ಅವರು ತಮ್ಮ ವಿಜ್ಞಾನಶಾಸ್ತ್ರದ ತಿಳುವಳಿಕೆಯನ್ನು ಕೃಷಿಯಲ್ಲಿ ಉಪಯೋಗಿಸಿದ್ದಿದ್ದರೆ ನೆರೆಯವರಷ್ಟೇ ಜನರು ನೋಡಿ ತಿಳಿದುಕೊಳ್ಳುತ್ತಿದ್ದರು. ಕಾನೂನ್ ಮೇರೆ ಅಧಿಕಾರಗಳಿರುವ ಸ್ಥಳೀಯ ಸ್ವರಾಜ್ಯ ಸಂಸ್ಥೆಗಳಲ್ಲಿ ಎಷ್ಟೋ ವಿದ್ಯಾವಂತರಿದ್ದರು. ಅವರು ಮನಸ್ಸು ಮಾಡಿದ್ದರೆ ಅವರ ಸರಹದ್ದಿನ ಸ್ಥಳವನ್ನು ಸ್ವಚ್ಛಪಡಿಸಿ ಎಲ್ಲರನ್ನೂ ವಿದ್ಯಾವಂತರನ್ನಾಗಿ ಮಾಡಿ ಹಷ್ಟ ಆರೋಗ್ಯಸ್ಥರನ್ನಾಗಿಯೂ ಐಶ್ವರ್ಯವಂತರನ್ನಾಗಿಯೂ ಮಾಡಬಹುದಿತ್ತು. ಹಣವಿಲ್ಲವೆಂತ ಹೇಳಿದರು. ಹಣವಿಲ್ಲದಿದ್ದರೆ ವಿದ್ಯಾವಂತರು ಗುಂಪು ಕೂಡಿಕೊಂಡು ಬಾಲಕರಿಗೆ ಪಾಠ ಹೇಳಬಹುದು, ಬೀದಿ ಗುಡಿಸಬಹುದು, ಇದನ್ನೆಲ್ಲಾ ಮಾಡಲಿಲ್ಲ, ಯಾಕೆಂದರೆ—ಕೆಲಸಮಾಡುವ ಮನಸ್ಸೇ ಹಿಂದುಸ್ಥಾನದಲ್ಲಿ ಇಲ್ಲ. ಸ್ವಾಭಾವಿಕವಾಗಿ ಈ ಅಶಕ್ತತೆ ಬಂದುಹೋಗಿದೆಯೇ? ಪುನಃ ಜನರಲ್ಲಿ ಜೀವವಿದೆಯೆಂಬ ಶಕ್ತಿಯೇ ಪ್ರಕಾಶಕ್ಕೆ ಬರಲಿಕ್ಕಿಲ್ಲವೋ ಎಂಬ ಹೆದರಿಕೆ ಸಹ ಹುಟ್ಟುತ್ತದೆ.

ಸರ್ವರಿಗೂ ಪ್ರೈಮರಿ ವಿದ್ಯೆ ಒದಗಿಸಿಕೊಡುವ ವಿಷಯವನ್ನು ಯೋಚಿಸುವ. ಈ ಬಡ ಹಿಂದುಸ್ಥಾನದಲ್ಲಿ ಸರ್ವರಿಗೂ ಪ್ರೈಮರಿ ವಿದ್ಯೆ ಕೊಡಬೇಕಾದರೆ ಸರಕಾರ ಉತ್ಪತ್ತಿಯ ಅರ್ಧವನ್ನು ಉಪಯೋಗಿಸಬೇಕಾಗಬಹುದಾಗಿರುವಾಗ ಪ್ರತಿಯೊಬ್ಬ ಗಂಡಸು ಹೆಂಗಸರಿಗೂ ವಿದ್ಯೆ ಎಂದು ದೊರಕೀತು? ವಿದ್ಯಾವಂತರ ಸೇವೆಯಿಂದ ಸಾಧ್ಯವಾದೀತಷ್ಟೆ. ನಾವು ಯಾವ ವಸ್ತುವಿನಲ್ಲಿ ಐಶ್ವರ್ಯವಂತರಾಗಿದ್ದೇವೆಂದರೆ ಮನುಷ್ಯ ಸಂಖ್ಯೆಯಲ್ಲಿ. ಯೂರೋಪಿನ ನಾಗರೀಕತೆಯೆಲ್ಲವೂ ಕಲ್ಲಿದ್ದಲ ಮೇಲೆ ನಿಂತಿದೆಯಂತೆ. ಹಿಂದುಸ್ಥಾನದ ನಾಗರೀಕತೆಯು ಪುನರ್ಜೀವನವಾಗಬೇಕಾದರೆ ಹಿಂದುಸ್ಥಾನದ ಜನರನ್ನು ಉಪಯೋಗಿಸಿಯೇ ಆಗಬೇಕಷ್ಟೆ. ಕಲ್ಲಿದ್ದಲಿಗೆ ಶಕ್ತಿಯಿದ್ದರೆ ಮನುಷ್ಯನಿಗೆ ಕಲ್ಲಿದ್ದಲಿಗಿಂತ ಹೆಚ್ಚಿಗೆ ಶಕ್ತಿಯಿರಬೇಕಷ್ಟೆ. 200 ವರ್ಷಗಳ ಕೆಳಗೆ ಕಲ್ಲಿದ್ದಲಿನ ಉಪಯೋಗ ಗೊತ್ತಿರಲಿಲ್ಲ. 200 ವರ್ಷಗಳ ಕೆಳಗೆ ಕಲ್ಲಿದ್ದಲಿನ ವಿಷಯವು ಈಗ ನಮಗೆ ಮನುಷ್ಯರ ಉಪಯೋಗ ಗೊತ್ತಿಲ್ಲದಂತೆಯೇ ಇತ್ತು. ಹಿಂದುಸ್ಥಾನದಲ್ಲಿ ಮಾತ್ರವಲ್ಲ, ಒಟ್ಟು ಬ್ರಹ್ಮಾಂಡದಲ್ಲೇ ಮನುಷ್ಯ ಸಂಖ್ಯೆಯಲ್ಲಿ ಅದ್ಭುತ ಶಕ್ತಿ ಅಡಕವಾಗಿದೆ. ಮನುಷ್ಯರ ಮನಸ್ಸಿನ ಸರೋವರದ ಗೇಟನ್ನು ತೆರೆಯಲು ಶಕ್ತಿಯಿರುವ ಇಂಜಿನೀಯರ್ ಮಾತ್ರ ದೊರೆತರೆ ಈ ದೇಶಗಳಲ್ಲಿ ಮಾಡಲಾಗದ ಕೆಲಸವಿಲ್ಲ. ಹಿಂದುಸ್ಥಾನದ ಮತ್ತು ಒಟ್ಟು ಬ್ರಹ್ಮಾಂಡದ ಮನುಷ್ಯ ಶಕ್ತಿಯನ್ನು ಉಪಯೋಗಿಸಿಕೊಂಡು ಪ್ರಯೋಜನಹೊಂದುವಕಾಲ ಎಂದು ಬರುತ್ತದೋ ದೇವರಿಗೇ ಗೊತ್ತು.

ಅಷ್ಟಿಷ್ಟು ಒಂದಾಗ ಆಗಲಿ ಎಂತ ಕಾದು ಕೂಡುವ ಕಾಲ ಮೀರಿತೆಂತ ನನ್ನ ಅಭಿಪ್ರಾಯ. ಮನಸ್ಸು ಮಾಡಿದರೆ ಯೂರೋಪಿನವರು ಮಾಡುವ ಕೆಲಸವನ್ನೆಲ್ಲಾ ಹಿಂದುಸ್ಥಾನದವರು ಮಾಡಿಕೊಳ್ಳಬಹುದೆಂತ ನಮಗೆ ಗೊತ್ತಿದೆ. ಅಡ್ಡಿಯಾವದೆಂದರೆ—ಸೋಮಾರಿತನ, ಧನದಾಶೆ ಮತ್ತು ಹೊಟ್ಟೆಕಿಚ್ಚು ಬೆಳೆಸುವ ಸ್ವಾರ್ಥತೆಯೇ ಅಡ್ಡಿಯಾಗಿದೆ. ಈ ಸ್ವಾರ್ಥತೆಯನ್ನು ಮುರಿದರೆ ಮನುಷ್ಯ ಶಕ್ತಿಯ ಸರೋವರದ ಗೇಟ್ ತೆರೆದಂತಾಗುತ್ತದೆ. ಮನುಷ್ಯನ ಆತ್ಮದ ಮೇಲ್ಭಾಗದಲ್ಲಿ ಸ್ವಾರ್ಥತೆಯಿದೆ. ಸ್ವಲ್ಪ ಆಳದಲ್ಲಿ ಸಮಾಜವಿದೆ. ಇನ್ನೂ ಆಳದಲ್ಲಿ ಮನುಷ್ಯ ಜಾತಿಯಿದೆ. ಇದಕ್ಕಿಂತಲೂ ಆಳವಾಗಿ ಮನುಷ್ಯನಲ್ಲಿರುವ ಪರಮಾತ್ಮನಿದ್ದಾನೆ. ಹಿಂದುಸ್ಥಾನದ ಪ್ರತಿಯೊಬ್ಬನೂ ಸ್ವಾರ್ಥತೆಯನ್ನು ಬಿಟ್ಟರೆ ಎಂಥಾ ಶಕ್ತಿಯುದ್ಭವವಾದೀತು? ದೇಶದಲ್ಲಿ ತರಬೇತುಹೊಂದಿದ ಬುದ್ಧಿವಂತಿಕೆ ಪೂರ್ವದಲ್ಲಿ ಪ್ರಖ್ಯಾತಿಯನ್ನು ಪಡೆದಿತ್ತು. ಈಗ ಹಿಂದುಸ್ಥಾನದಲ್ಲಿ ತರಬೇತುಹೊಂದಿರುವ ಬುದ್ಧಿಯನ್ನು ಅಜಮಾಯಿಷಿಯಲ್ಲಿ ಉಪಯೋಗಿಸಿದರೆ ಹಿಂದುಸ್ಥಾನದ ಪ್ರಾಚೀನ ಯಶಸ್ಸು ಪುನಃ ಬರದೆ ಇರದು. ಹಿಂದುಸ್ಥಾನದ ನಿರಕ್ಷರರೆಲ್ಲರಿಗೂ ಪಾಠಹೇಳಲಿಕ್ಕೆ ಬೇಕಾದಷ್ಟು ವಿದ್ಯಾವಂತರು ಹಿಂದುಸ್ಥಾನದಲ್ಲಿ ಈಗ ಇದ್ದಾರೆ. ಇವರೆಲ್ಲರೂ ಪಾಠ ಹೇಳಿದರೆ ಒಂದು ತಲೆ ಕಳೆಯುವದರ ಒಳಗೆ ಪ್ರಪಂಚದ ಯಾವ ದೇಶಗಳಿಗೂ ಹಿಂದುಸ್ಥಾನವು ವಿದ್ಯೆಯಲ್ಲಿ ಹಿಂದೆಯೆನಿಸಲಾರದು. ಬೇಕಾದಷ್ಟು ಸಾಮಗ್ರಿ ಇದೆ. ಅದನ್ನು ಉಪಯೋಗಿಸಬೇಕಾದ ಮನುಷ್ಯರೂ ಇದ್ದಾರೆ. ಜನರು ಸ್ವಾರ್ಥವನ್ನು ಬಿಡಲಿ. ಆಗ ಹೊಟ್ಟೆಕಿಚ್ಚು ಹೋಗಿ, ಅನ್ಯೋನ್ಯ ನಂಬಿಕೆಯು ತಪ್ಪಿ ದೊಡ್ಡ ದೊಡ್ಡ ಕೈಗಾರಿಕೆಗಳನ್ನು ನಡೆಸಿಕೊಳ್ಳುವ ಶಕ್ತಿಬರುತ್ತದೆ. ಒಂದು ಕಾಳು ಬೆಳೆವಲ್ಲಿ ಎರಡು ಬೆಳೆಸಬೇಕೆಂಬ ಕುತೂಹಲವನ್ನು ಜನರು ತೋರಿದರೆ ಉಪವಾಸ, ರೋಗ ಮತ್ತು ಅಶಕ್ತತೆ ಸಹ ನಿರ್ಮೂಲವಾಗುತ್ತದೆ. ಸ್ವಾರ್ಥತೆಯನ್ನು ಬಿಟ್ಟು ಇಷ್ಟು ಪ್ರಯೋಜನವಾಗುವದಾದರೆ ಸ್ವಾರ್ಥತೆಯನ್ನು ಬಿಟ್ಟು ನೋಡಬೇಡವೇ?

ಈಗ ಉದ್ಯೋಗ ಹುಡುಕುವ ವಿದ್ಯಾವಂತರು ತಮ್ಮ ವಿದ್ಯೆಕ್ಕಾಗಿ ತುಂಬಾ ಹಣವೆಚ್ಚಮಾಡಿದ್ದಾರೆಂತಲೂ, ಅವರು ನಿರೀಕ್ಷಿಸಿದ ಲಾಭ ದೊರಕಲಿಲ್ಲವೆಂತಲೂ ತಮ್ಮ ನಿರಾಶರಾಗಿಯೂ ಇದ್ದಾರೆಂಬದು ನಿಜವೇ. ಗುಳ್ಳೆ ಒಡೆಯುವಾಗ ಹಾಗೆ ಆಗ ತಕ್ಕದ್ದು ಯುಕ್ತವೇ. ವಿದ್ಯಾವಂತರ ಮೊದಲಿನ ಐಶ್ವರ್ಯವೆಲ್ಲಾ ಬರೇ ತೋರಿಕೆದೇ. ತನ್ನ ಪಂಡಿತನಿಗೆ ಬರೇ 20ರೂಪಾಯಿ ಸಾಕಾಗಿರುವಾಗ ಇಂಗ್ಲಿಷ್ ಪಂಡಿತನಿಗೆ 10000 ರೂ. ಸಿಕ್ಕಬೇಕೆಂಬುದರಲ್ಲಿ ಕಾರಣವಿಲ್ಲ. ಕಾಳಿದಾಸನ ವಿದ್ಯಾರ್ಥಿಯು ರಸ್ತೆಯಲ್ಲಿ ನಡೆದು ಹೋಗುತ್ತಿರುವಾಗ ಶೇಕ್ಸ್ಪೀಯರನ ವಿದ್ಯಾರ್ಥಿಯು ಮೋಟಾರಿನಲ್ಲಿ ಹೋಗಲು ಕಾರಣವಿಲ್ಲ. ಒಟ್ಟು ರಾಷ್ಟ್ರದ ಸೇವೆಯನ್ನು ಯಾರು ಹೇಗೆ ಮಾಡುತ್ತಾರೆಂಬದರ ಮೇಲೆ ಅವರವರ ಸ್ಥಿತಿಯು ನಿರ್ಣಯವಾಗಬೇಕು. ವಿದ್ಯಾವಂತರು ಪ್ರಾಶಸ್ತ್ಯ ತಿಂದು ಕೊಬ್ಬಿದ್ದಾರೆ. ಈಗ ಬಡತನದ ತಿಂಡಿಯನ್ನು ಅಭ್ಯಾಸಿಸಬೇಕಾಗಿದೆ. ಅವರು ಪಾಪಮಾಡಿದ್ದಾರೆ. ತಮ್ಮ ಮಕ್ಕಳಿಗಾದರೂ ಈ ಪಾಪತಟ್ಟದಂತೆ ಈಗ ಅದಕ್ಕಾಗಿ ಪ್ರಾಯಶ್ಚಿತ್ತ ಮಾಡಿಕೊಳ್ಳಬೇಕಾಗಿದೆ. ಈಗಿನ ಸ್ಥಿತಿಗೆ ಹತ್ತೆಂಟು ವರ್ಷದಿಂದ ಬಂದದ್ದಾಗಿದೆ. ಇದರ ದೋಷ ಪರಿಹಾರವಾಗಬೇಕಾದರೆ ಒಂದು ತಲೆಯಾದರೂ ಕಳೆಯಬೇಕು. ಹಿಂದುಸ್ಥಾನವು ಎಷ್ಟುಬೇಗನೆ ಪುನಃ ಆರ್ಥಿಕ, ಮಾನಸಿಕ ಮತ್ತು ಧಾರ್ಮಿಕ ವಿಷಯಗಳಲ್ಲಿ ಐಶ್ವರ್ಯವುಳ್ಳದ್ದಾಗುತ್ತದೆಂಬದು ವಿದ್ಯಾವಂತರ ಕೈಯಲ್ಲಿದೆ.

ಉಪನ್ಯಾಸಕರು ವಿದ್ಯಾವಂತರಿಗೆ ಕೊಟ್ಟ ಬೋಧನೆಯೇನೆಂದರೆ—ವಿದ್ಯಾವಂತರಾದ ಮಧ್ಯಮತರಗತಿಯ ಜನರು ತಮ್ಮ ವಿದ್ಯೆಗಾಗಿ ಖರ್ಚುಮಾಡಿದ ಹಣವನ್ನು ಎಣಿಸದೆ ಒಡನೆ ಸಿಕ್ಕುವದರಲ್ಲಿಯೇ ತೃಪ್ತರಾಗಿ ಜನಾಂಗದ ಸಮುದಾಯದವರನ್ನು ಬುದ್ಧಿವಂತಿಗೆಯಲ್ಲಿಯೂ, ಆರೋಗ್ಯದಲ್ಲಿಯೂ, ಐಶ್ವರ್ಯದಲ್ಲಿಯೂ ಮುಂದುವರಿಸುವ ಕೆಲಸಗಳನ್ನೇ ಮಾಡಲು ನಿಶ್ಚಯಿಸಬೇಕು. ಈ ಕೆಲಸಕ್ಕೆ ಎಷ್ಟು ಮನಃಪೂರ್ವಕವಾಗಿ ಕೈ ಹಾಕುತ್ತಾರೋ ಅಷ್ಟು ಬೇಗನೆ ಜನಾಂಗದ ಆರ್ಥಿಕಸ್ಥಿತಿಯು ಅಭಿವೃದ್ಧಿಯಾಗುತ್ತದೆ. ತಮ್ಮ ಹೃದಯದಲ್ಲಿ ಯಾವ ಹಿಂದುಸ್ಥಾನವನ್ನು ಪೂಜಿಸುತ್ತಾರೋ ಯಾವ ಹಿಂದುಸ್ಥಾನದಲ್ಲಿ ಎಲ್ಲವರೂ ಓದುಬರಹ ತಿಳಿದವರಾಗಿಯೂ, ಶ[illegible]ಯರಾಗಿಯೂ, ಹೊಟ್ಟೆತುಂಬಾ ಆಹಾರವುಳ್ಳವರಾಗಿಯೂ ಇರುತ್ತಾರೋ, ಯಾವ ಹಿಂದುಸ್ಥಾನದ ಪುತ್ರರು ಸತ್ಯ, ಸದ್ಗುಣ ಮತ್ತು ಸೌಂದರ್ಯಕ್ಕಾಗಿ ಕೆಲಸಮಾಡುವಂಥವರಾಗಿರುತ್ತಾರೋ ಅಂಥಾ ಹಿಂದುಸ್ಥಾನವನ್ನು ಬಿಡುಗಡೆಹೊಂದಿಸುವದಕ್ಕಾಗಿ ವಿದ್ಯಾವಂತರೆಲ್ಲರೂ ಧಾರ್ಮಿಕ ಯುದ್ಧಮಾಡಬೇಕಾಗಿದೆ.

ಮಾರಾಟಕ್ಕೆ ಸಿದ್ಧವಾಗಿದೆ.

ಮೈಸೂರು ವಾಣೀವಿಲಾಸ ಮೊಹಲ್ಲಾ, ಮೈಸೂರು-ನಂಜನಗೂಡ ರೋಡಿನಲ್ಲಿರುವ 1ನೇ ಬ್ಲಾಕು 3 ಮತ್ತು 4ನೇ ಸೈಟು, ಅಳತೆ 285 X 160 ಅಡಿಗಳುಳ್ಳ, ಇಟ್ಟಿಗೆ ಕಂಪಾಂಡು ಹಾಕಿ, 2 ಗೇಟು ಮತ್ತು ನೀರಿನ ಪೈಪು ಸಹಾ ಹಾಕಿರುತ್ತೆ.

ಮೈಸೂರುಸಿಟಿ ಇಂಪ್ರೂವ್ಮೆಂಟು ಟ್ರಸ್ಟಿನವರ ರೂಲ್ಸ್ ಅನುಸರಿಸಿ 7417 ರೂಪಾಯಿ 6 ಆಣೆಗೆ ಬಿಕರಿಗೆ ಮಾಡಲ್ಪಡುತ್ತೆ. ಇಷ್ಟವುಳ್ಳವರು ಕೆಳಗಿನ ವಿಳಾಸಕ್ಕೆ ಬರೆದು ತಿಳಿದುಕೊಳ್ಳಬಹುದು.

ಸೂಪರಿಂಟೆಂಡೆಂಟರು,
ಲೇಬರ್ ಡಿಪಾರ್ಟ್ಮೆಂಟು,
4—2 ಮೈಸೂರು.

FOR SALE.

One second hand ford motor car. price Rupees seven hundred only. no offers. May be seen and tried at Pollibetta.

Apply:— C. A. Dalton,
St. Edmund's Estate,
Pollibetta.

ಗಂಡು ಹೆಣ್ಣು-ಮಕ್ಕಳ ಬದಲಾವಣೆ.

ಹೊಟ್ಟೆಯಲ್ಲಿನ ಮಗುವು ಗಂಡಾಗಿದ್ದರೂ ಅದನ್ನು ಹೆಣ್ಣು ಮಾಡಿಕೊಳ್ಳುವದಕ್ಕೆ ಅವಕಾಶ ಉಂಟೆಂಬುದಾಗಿಯೂ [ಡಾ]ಕ್ಟರ್ ಚಾರ್ ಫ್ರೆಯಟ್‌ರವರು ಅಭಿಪ್ರಾಯ ಪಡುತ್ತಿದ್ದಾರೆ. [ಬ]ಹಳ ಹಿಂದಿನ ಕಾಲದಿಂದಲೂ ನಮ್ಮಲ್ಲಿರತಕ್ಕ ಚರಕಸು[ಶ್ರು]ತ ಅಷ್ಟಾಂಗಹೃದಯವೇ ಮುಂತಾದ ವೈದ್ಯಗ್ರಂಥ[ಗಳ]ಲ್ಲಿ ಹೊಟ್ಟೆಯಲ್ಲಿನ ಮಗುವು ಹೆಣ್ಣಾಗಿದ್ದರೆ ಗಂಡಾಗಿ [ಮಾ]ಡಿಕೊಳ್ಳುವದಕ್ಕೆ ಅವಕಾಶವುಂಟೆಂತಲೂ, ಇದು ಪುಂಸವನ ಮೂಲಿಕೆಗಳ ಪ್ರಭಾವದಿಂದ ನಡೆಯತಕ್ಕದ್ದಾಗಿದೆಯೆಂತ[ಲೂ], ಆ ಮೂಲಿಕೆಗಳಲ್ಲಿ ಆಲದಮೊಗರು, ಹಗ್ಗುಳ್ಳಿ, ಸಹದೇ[ವಿ], ವಿಶ್ವದೇವಾ ಎಂಬ ನಾಲ್ಕು ಮೂಲಿಕೆಗಳು ಮುಖ್ಯವೆಂತ[ಲೂ], ಇವುಗಳಲ್ಲಿ ಅವುದಾದರೊಂದನ್ನು ಹಾಲಲ್ಲಿ ಅರೆದು ಬಲ[ಗಡೆಯ] ಮೂಗಿನ ಸೊಳ್ಳೆಗೆ ನಾಲ್ಕೈದು ತೊಟ್ಟುಗಳನ್ನು ಹಿಂಡುವದ[ರಿಂ]ದ ಮೇಲ್ಕಂಡ ಮಹತ್ಕಾರ್ಯವು ನೆರವೇರುವುದೆಂತಲೂ, ನಿಂ[ತ] ಗರ್ಭವು ಬೊಂಬೆಯಾಗಿರುವಾಗಲೇ ಹೀಗೆ ಮಾಡುವದರಿಂ[ದ] ತಪ್ಪದೇ ಗಂಡುಮಗುವೇ ಆಗತಕ್ಕದ್ದಾಗಿದೆಯೆಂದು ಪುಯು[ಷ] ಪುತ್ರಕಾಮಿಗಳು ಗರ್ಭಾದಾನವಾಗಿ ಷೋಡಶಕರ್ಮಗಳ[ಲ್ಲೊ]ಂದಾದ ಪುಂಸವನವನ್ನು ಅವಶ್ಯವಾಗಿ ನಡೆಸಬೇಕೆಂತಲೂ [ಹೇ]ಳಲ್ಪಟ್ಟಿರುತ್ತದೆ. ಷೋಡಶಕರ್ಮಗಳೊಂದೊಂದೂ ಮ[ನುಷ್ಯ]ನ ಜೀವಿತೋನ್ನತಿಗೆ ಸಾಧಕಗಳಾಗಿರುವದರಿಂದ ಇವನ್ನು ಅ[ವಶ್ಯ]ಕವಾಗಿ ನಡೆಸಬೇಕೆಂದು ಮಹರ್ಷಿಗಳು ವಿಧಾಯಕ ಮಾ[ಡಿರು]ತ್ತಾರೆ. ಈ ವಿಷಯವನ್ನು ಬಲ್ಲವರಿಗೆ ಡಾಕ್ಟರ್ ಚಾರ್[ಫ್ರೆ]ಯಿಡ್‌ರವರ ಅಭಿಪ್ರಾಯವು ಅಷ್ಟು ಆಶ್ಚರ್ಯವಾಗಿ ತೋರ[ಲಾರ]ದ್ದಾಗಿಲ್ಲ. ಇಂತಹ ಶಾಸ್ತ್ರವು ನಮ್ಮಲ್ಲಿದ್ದರೂ ಅದು [ಕೇ]ವಲ ಗೀರ್ವಾಣಭಾಷಾಮಯವಾಗಿರುವ ನಿಮಿತ್ತ ಅದರಲ್ಲಿ[ನ] ವಿಷಯಗಳು ಸರ್ವತ್ರ ತಿಳಿಯಲವಕಾಶವಿಲ್ಲದೆ ಸ್ವಲ್ಪ ಸ್ವಲ್ಪ [ಸ]ಮಯಕ್ಕಾಗಿ ಎಷ್ಟೋ ಆಶ್ಚರ್ಯಪಡಬೇಕಾಗಿರುತ್ತದೆ.

'ಸತ್ಯವಾದಿ

ವರ್ತಮಾನ ಸಂಗ್ರಹ.

ಒ ಳ ದೇ ಶ

ಕೊಡಗು ಸ್ಮಾಲ್ ಪ್ಲಾಂಟೇಶನ್ ಫಂಡಿನ ಮೀಟಿಂಗು ತಾ. 28ರಲ್ಲು ಮಡಿಕೇರಿಯಲ್ಲಿ ನಡಿಯುತ್ತೆ.

ದಕ್ಷಿಣಕೊಡಗು ತಾಲೋಕು ಸುಭೇದಾರರು ಮ. ಕೆ. [ಅಂ]ಗಪ್ಪಯ್ಯನವರು ಅನಾರೋಗ್ಯದ ದೆಸೆಯಿಂದ ಹದಿನೈದು [ದಿ]ವಸ ರಜ ತೆಗೆದುಕೊಂಡಿರುತ್ತಾರೆ.

ವೈನಾಡು ಬೇಗೂರು ಫಾರೆಸ್ಟಿನಲ್ಲಿದ್ದ ಮ. ಚೇಂದಿರ [ಸು]ಬ್ಬಯ್ಯನವರು ರಜೆಯಲ್ಲಿ ತನ್ನ ಮನೆಗೆ ಬಂದವರು ಕಳೆದ [ತಾ. ೧]೬ರಲ್ಲು ಮೃತರಾದರೆಂದು ತಿಳಿಯುತ್ತೇವೆ

ಕೊಡಗು ಸಹಕಾರಿ ಸೆಂಟ್ರಲ್‌ಬ್ಯಾಂಕಿನ ಡೈರೆಕ್ಟರುಗಳ ಮೀಟಿಂಗ್ ಈ ತಾರೀಕು 28ನೇ ದಿನ ಬೆಳಿಗ್ಗೆ 9 ಗಂಟೆಗೆ ಮ[ಡ]ಕೇರಿ ಮುನ್ಸಿಪಲ್ ಆಫೀಸಿನಲ್ಲಿ ನಡೆಯುವುದು.

ಮ. ಸಿ ಯನ್ ವೆಂಕಪ್ಪಯ್ಯ ಬಿ ಎ., ಬಿ ಎಲ್., [ಮ]ತ್ತು ಯಂ. ಯಸ್. ಸಿ. ಯವರು ಮಡಿಕೇರಿ ಮುನಿಸಿಪಾ[ಲಿ]ಟಿ ಮೆಂಬರುತನಕ್ಕೆ ರಾಜಿನಾಮೆ ಕೊಟ್ಟಿರುತ್ತಾರೆ

ರಜೆಯಲ್ಲಿರುವ ಮಡಿಕೇರಿ ಸೆಂಟ್ರಲ್ ಹೈಸ್ಕೂಲ್ ಹೆ[ಡ್ ಮಾ]ಸ್ಟರು ಮ. ... ಮಂಗೇಶರಾವ್ ಬಿ. ಎ ಯಲ್ ಟಿ [ರ]ವರ ಬದಲಿಗೆ ವೀರಾಜಪೇಟೆ ಹೆಡ್ಮಾಸ್ಟರಾಗಿರುವ ಮ. ... ಯಂ ರಾಮರಾವ್ ಬಿ ಎ. ಯಲ್. ಟಿ ಯವರು ನೇಮಿ[ಸಲ್ಪ]ಟ್ಟಿರುತ್ತಾರೆ.

ಮಡಿಕೇರಿಯ ಕೊಡವ ಮಹನೀಯರು ಕೈಲ್ ಪೋದು [ಹಬ್ಬ]ವನ್ನು ನಡೆಸಲು ನೇಮಿಸಿದ ಕಮಿಟಿಯವರು ಕೊಡಗು [ಜ]ನರ ದಾರಿದ್ರ್ಯ ಸಂಪದ ಹೊಸ ಪಾಲನ್ನು ಹಬ್ಬದ ದಿನ ಉ[ಪ]ಯೋಗಕ್ಕೆ ಕೊಡಬೇಕೆಂತ ಕೇಳಿಕೊಂಡ ಮೇರೆ ಸಂಘದ [ಮ]ಡಿಕೇರಿಯಲ್ಲಿ ಇರುವ ಕಮಿಟಿ ಮೆಂಬರುಗಳು ಈ ಬಗ್ಗೆ [ಪಾ]ಲನ್ನು ಕೊಡಲು ತೀರ್ಮಾನಿಸಿರುತ್ತಾರೆ

ಮ. ಯಂ. ಭುಜಂಗರಾವ್ ಬಿ. ಎ., ಬಿ. ಎಲ್., ರವರು [ಸೆಂ]ಟ್ರಲ್ ಬ್ಯಾಂಕಿನ ಪ್ರೆಸಿಡೆಂಟ್ ಕೆಲಸಕ್ಕೆ ರಾಜಿನಾಮೆ ಕೊ[ಟ್ಟಿ]ರುತ್ತಾರೆ. ಇವರಿಗೆ ಮುನಿಸಿಪಲ್ ಪ್ರೆಸಿಡೆಂಟ್ ಕೆಲಸದ [ಕಾರಣ]ದಿಂದ ಸಮಯವಿಲ್ಲದೆ ರಾಜಿನಾಮೆ ಕೊಟ್ಟದ್ದಾಗಿದೆ

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕಿನ 1925—26ನೇ [ಸಾ]ಲಿನ ಲೆಕ್ಕವನ್ನು ರಿಜಿಸ್ಟ್ರಾರವರು ಆಡಿಟ್ ಮಾಡುತ್ತಿ[ದ್ದಾ]ರೆ. ಸಾಲಗಳ ಮೇಲೆ ವಸೂಲಾದ ಬಡ್ಡಿ 6456-10-0 [ರೂ]ಪಾಯಿಯು, ಡಿಪಾಜಿಟ್ಟುಗಳ ಮೇಲೆ ಕೊಟ್ಟ ಬಡ್ಡಿ [48]87-8-2 ರೂಪಾಯಿ ತಗಿದೆ. ಒಟ್ಟು ಲಾಭದಿಂದ ಖರ್ಚು [ವೆಚ್ಚ] ಕಳೆದು 1587-1-6 ರೂಪಾಯಿ ನಿವ್ವಳ (net) ಲಾ[ಭ]ವು ಉಳಿದಿದೆ,

ಮಡಿಕೇರಿ ಟೌನಿನಲ್ಲಿ ಕೆಲಸ ಮಾಡುತ್ತಿದ್ದ ಪೋಲೀಸ್ [ಕಾ]ನ್ಸ್ಟೇಬಲ್ ಕರವಂಡ ಅಯ್ಯಣ್ಣನೆಂಬವರಿಗೆ ಸುಮಾರು [ಹ]ತ್ತು ದಿವಸಗಳ ಹಿಂದೆ ಪೋಲೀಸ್ ಲೈನಿನಲ್ಲಿ ರಾತ್ರಿ [ಹೊ]ತ್ತಿನಲ್ಲಿ ಹುಚ್ಚು ನಾಯಿ ಕೈಗೆ ಕಚ್ಚಿತ್ತು. ಆಗಲೇ [ಕು]ನೂರಿನಿಂದ ಔಷಧಿ ತರಿಸಿ ಒಂದು ವಾರ ಎರಡು ಹೊ[ತ್ತು] ಇಂಜಕ್ಷನ್ ಕೊಡಲಾಗಿತ್ತು. ಆದರೆ ತಾ. 25ರಲ್ಲಿ ಸ[ಹ] ಕೆಲಸ ಮಾಡುತ್ತಿದ್ದವರಿಗೆ ರಾತ್ರಿಯಿಂದ ಹುಚ್ಚು ನಾಯಿ [ಕಡಿದ] ಹುಚ್ಚು ಕಾಣಿಸಿಕೊಂಡು ಆಸ್ಪತ್ರೆಯಲ್ಲಿ ಇದ್ದರು ಆ[ಹಾರ]ವ ತೆಗೆದುಕೊಳ್ಳಲಿಕ್ಕೆ ಸಹ ಆಗದೆ ಕಳೆದ ರಾತ್ರಿ ಮೃತಪ[ಟ್ಟಿರು]ತ್ತಾರೆ.

ಹಿಂದೂದೇಶ.

ಮುಂಬಯಿಯಲ್ಲಿ ಗಜನಾ ಎಂಬ ಹಡಗಕ್ಕೆ ಬೆಂಕಿಹತ್ತಿ ಸುಮಾರು 2 ಲಕ್ಷ ರೂಪಾಯಿ ನ ನಷ್ಟವಾಗಿರುತ್ತದೆ.

ಮೈಸೂರು ಸರ್ಕಾರದವರು ಖಾದಿಯ ಚಳುವಳಿಗೆ ಪ್ರೋತ್ಸಾಹಿಸುವ ಉದ್ದೇಶದಿಂದ 5 ಸಾವಿರ ರೂಪಾಯಿಗಳನ್ನು ಮಂಜೂರ್ಮಾಡಿರುವರು

ಬೆಂಗಳೂರಲ್ಲಿ ತಾ 23ರಲ್ಲಿ ದಕ್ಷಿಣಹಿಂದುಸ್ಥಾನದ ಪ್ಲಾಂಟರುಗಳ ಮೀಟಿಂಗ್ ನಡೆಯಿತು. ನಮ್ಮ ದಿವಾನ ಚೀಫ್ ಕಮಿಷನರೂ ಬಂದಿದ್ದರು.

ಮಂಗಳೂರಿನಲ್ಲಿರುವ ... ರಾಮರಾಯರಿಗೆ ವಿಲಾಯತಿಯಲ್ಲಿ ಸಕ್ಕರೆ ... ಕಲಸವನ್ನು ಅಭ್ಯಾಸಮಾಡಲು ವರ್ಷ ಒಂದಕ್ಕೆ 2500 ರೂಪಾಯಿಗಳಂತೆ ವೇತನವು ಕೊಡಲ್ಪಟ್ಟಿರುವುದು.

ಹಿಂದುಸ್ಥಾನದಲ್ಲಿ ಇರುವ ನಿರುದ್ಯೋಗ ನಿವಾರಣೆ ವಿಷಯ ಹಿಂದುಸ್ಥಾನದ ಸರಕಾರವು ಸ್ಥಳೀಯ ಸರಕಾರಗಳಿಗೆ ಒಂದು ಸರ್ಕ್ಯುಲರನ್ನು ಕಳುಹಿಸಿರುತ್ತಾರೆ. ಇದರ ಚರ್ಚೆಯನ್ನು ಇನ್ನೊಂದು ಕಡೆ ಕೊಟ್ಟಿರುತ್ತೇವೆ.

ಬಂಗಾಳ ಲೆಜಿಸ್ಲೇಟಿವ್ ಕೌನ್ಸಿಲಿನಲ್ಲಿ ವೋಟಿಂಗ್ ನಡಿಸಲು ಇರಬೇಕಾದ ಕ್ವೋರಂ (ಕಡಿಮೆ ಸಂಖ್ಯೆ) ಇಲ್ಲದ್ದರಿಂದ ವೋಟಿಂಗ್ ಮುಂದರಿಸಿ ಇಡಬೇಕಾಯಿತು. ಸ್ವರಾಜ್ಯಪಾರ್ಟಿಯವರು ವೋಟಿಂಗಿಗೆ ಬರದ್ದರಿಂದ ಹೀಗಾಗಲು ಕಾರಣವಾಯಿತು.

ಚಿಕ್ಕಮಂಗಳೂರಿನ ಕಾಫಿತೋಟಗಾರರಾದ ಶ್ರೀ|| ನಾಗಪ್ಪಶೆಟ್ಟರು 2000 ರೂಪಾಯಿಗಳನ್ನು ತಮ್ಮ ವೃದ್ಧಮಾತಾಪಿತೃಗಳ ಹೆಸರಿನಲ್ಲಿ ಒಂದು ಶಾಲೆಕಟ್ಟಿಸಲು ಕೊಟ್ಟಿರುವುದಲ್ಲದೆ ಇವರು ಕೆಲವು ದಿವಸಗಳ ಹಿಂದೆ ಒಂದು ಹೆರಿಗೆಯ ಆಸ್ಪತ್ರೆಯನ್ನು ಕಟ್ಟಲು 25 ಸಾವಿರ ರೂಪಾಯಿ ಕೊಟ್ಟಿರುವರು ನಮ್ಮ ದೇಶದ ಸಂಪನ್ನರೂ ಸಹ ಇಂಥಾ ಉದಾರಕ್ಕೆ ಮನಸ್ಸು ಕೊಡುವರೇ?

ಕಲ್ಕತ್ತಾಕ್ಕೆ ಪಂಡಿತ ಮದನಮೋಹನ ಮಾಳವೀಯರೂ ಮತ್ತು ಡಾಕ್ಟರ್ ಮುಂಜೆಯವರೂ ಸಹ ಬರಬಾರದೆಂತ ಮ್ಯಾಜಿಸ್ಟ್ರೇಟರು ಆರ್ಡರ್ ಮಾಡಿದರೂ ಸಹ ಇವರು ಹುಕ್ಕುಂ ಉಲ್ಲಂಘಿಸಿ ಅಲ್ಲಿಗೆ ಹೋದದ್ದಕ್ಕಾಗಿ ಅವರ ಮೇಲೆ ಕೇಸ್ ನಡೆದು ಕಳೆದ ವಾರ ಹಿಯರಿಂಗ್ ಇತ್ತು ಹಿಯರಿಂಗ್ ದಿನ ಸರಕಾರಿ ವಕೀಲರು ಮೊಕದ್ದಮೆಯನ್ನು ವಾಪಸು ತೆಗೆದುಕೊಂಡರು. ಮ್ಯಾಜಿಸ್ಟ್ರೇಟರ ಹುಕ್ಕುಂ ಮೀರಿ ಹೀಗೆ ಆಯಿತೆಂತ ಅಭಿಪ್ರಾಯಪಡುತ್ತಾರೆ.

ಹಿಂದುಸ್ಥಾನದಲ್ಲಿ ಈಗ ಇರುವ ಕಂದಾಯಗಳನ್ನೂ, ತೆರಿಗೆಗಳನ್ನೂ ಯಾವರೀತಿಯಲ್ಲಿ ವ್ಯತ್ಯಾಸಮಾಡಬಹುದು ಎಂಬ ಮುಂತಾದ ವಿಷಯಗಳನ್ನು ತನಿಖೆ ಮಾಡಲಿಕ್ಕೆ ಇಂಡಿಯಾ ಸರಕಾರದಿಂದ ನೇಮಕವಾದ ಕಮಿಟಿಯ ರಿಪೋರ್ಟನ್ನು ಲೆಜಿಸ್ಲೇಟಿವ್ ಎಸೆಂಬ್ಲಿಯಲ್ಲಿ ಚರ್ಚೆಗೆ ತಂದರು. ಈ ರಿಪೋರ್ಟಿನ ಮೇಲೆ ಸರಕಾರದ ಅಭಿಪ್ರಾಯ ತಿಳಿಯುವ ಮುಂಚೆ ಪ್ರಜಾಪ್ರತಿನಿಧಿಗಳ ಅಭಿಪ್ರಾಯ ಕೊಡಲಾಗುವದಿಲ್ಲವೆಂಬ ಕಾರಣದಿಂದ ಚರ್ಚೆಯನ್ನು ಮುಂದರಿಸಬೇಕೆಂಬ ಅಭಿಪ್ರಾಯವು ಮಂಜೂರಾಯಿತು.

ಬಂಗಾಳ ಅಧಿಕಾರದಲ್ಲಿ ಮೊಫ ಮತ್ತು ಕಡ್ಡಾಯವಾಗಿ ಪ್ರೈಮರಿ ವಿದ್ಯಾಭ್ಯಾಸ ಕೊಡಬೇಕೆಂಬ ಠರಾವು ಅಲ್ಲಿನ ಲೆಜಿಸ್ಲೇಟಿವ್ ಕೌನ್ಸಿಲಿನಲ್ಲಿ ಚರ್ಚೆಯಾಗಿ ಮಂಜೂರಾಯಿತು. ಈ ಠರಾವನ್ನು ಜಾರಿಮಾಡಬೇಕಾದರೆ ಒಂದು ಕೋಟಿ ರೂಪಾಯಿ ಬೇಕಾಗುವದರಿಂದ ಈ ಖರ್ಚಿನ ಬಗ್ಗೆ ಹೊಸ ಸ್ಕೂಲ್ ಸೆಸ್ ಹಾಕಿಕೊಳ್ಳುವದಾದರೆ ಒಪ್ಪಬಹುದೆಂತ ಮಂತ್ರಿಯು ಅಭಿಪ್ರಾಯ ಕೊಟ್ಟರು. ಈ ಸೆಸ್ಸಿನಿಂದ ಉತ್ಪತ್ತಿಯಾಗುವ ಹಣವನ್ನೂ, ಸರಕಾರದವರು ಈ ಬಗ್ಗೆ ಕೊಡುವ ಹಣವನ್ನೂ ಇದಕ್ಕಾಗಿ ನೇಮಿಸಲ್ಪಡುವ ವಿದ್ಯಾ ಅಧಿಕಾರಿಗಳ ಸ್ವಾಧೀನ ಕೊಡುವ ಶರತ್ತಿನೊಡನೆ ಠರಾವು ಪಾಸಾಯಿತು

ಶಿವಮೊಗ್ಗಾ ಡಿಸ್ಟ್ರಿಕ್ಟಿನಲ್ಲಿ ಭದ್ರಾವತಿ ಎಂಬಲ್ಲಿ ಮೈಸೂರು ಸರಕಾರವು ನಡಿಸುತ್ತಿರುವ ಕಬ್ಬಿಣ ಕಾರ್ಖಾನೆ ಸಂಬಂಧವಾಗಿ ಸೂಪಿಳ್ಳೆ ಮುಂತಾದ ಜನರು ಕೆಲಸಕ್ಕಾಗಿ ಬಂದು ವಾಸಮಾಡಿಕೊಂಡಿದ್ದಾರೆ ಇಂಥಾ ಬಾರಿಗೆ ಮೈಸೂರು ಸರಕಾರದವರು ಈಗ ತಾನೇ ಮಂಜೂರು ಮಾಡಿ ವ ... ಯಾವವೆಂದರೆ—ನಾಲ್ಕು ಜನರಿರುವ ಒಂದು ಕುಟುಂಬಕ್ಕೆ ಮೂರು ವರ್ಷ ಕಂದಾಯವಿಲ್ಲದೆ 3 ಎಕರು ಭೂಮಿಯನ್ನು ಕೊಟ್ಟು ಅನಂತರ ಅವರಿಗೆ ಕಂದಾಯದ ಭೂಮಿಯಾಗಿ ಖಾಯಂಮಾಡಿಕೊಡುವದು. ಒಂದು ನೂರು ರೂಪಾಯಿಗೆ ಪೂರದ ಕ್ರಯವಿರುವ ಒಂದು ಜೊತೆ ಕೋಣಗಳನ್ನು ಮುಫ್ತಾಗಿ ಕೊಂಡುಕೊಡುವದು. 20 ರೂಪಾಯಿ ಕ್ರಯದ ಮರವನ್ನು ಮನೆ ಮುಂತಾದ ಕಟ್ಟಡಗಳಿಗಾಗಿ ಕೊಡುವದು.

ವಿದೇಶ.

ಮೆಕ್ಸಿಕೋ ಪಟ್ಟಕ್ಕೆ ನುಗ್ಗಿ ಗಲಾಟೆಮಾಡಬೇಕೆಂದು ಹಿಂದಿನ ಒಬ್ಬ ಮಂತ್ರಿಯ ನಾಯಕತ್ವದಲ್ಲಿ ಆಯುಧ ಪಾಣಿಗಳಾಗಿ ನಿಂತಿದ್ದ 150 ಮಂದಿಯನ್ನು ಅಮೇರಿಕಾದವರು ಸೆರೆ ಹಿಡಿದಿರುವರು.

ಟೊರೊಂಟೋದಲ್ಲಿ ಸ್ವಂತ ಆಸ್ಪತ್ರೆಯನ್ನು ಇಟ್ಟಿದ್ದ ಡಾಕ್ಟರ್ ಒಲಿವರ್ ಪೆರೇರಾ ಎಂಬವರು ತಮ್ಮ ನಾಯಿಗೆಂತ ತಯಾರಿಸಿ ಇಟ್ಟಿದ್ದ ಲೈಸಾಲ್ ಎಂಬ ವಿಷದ ಔಷಧಿಯನ್ನು ಪರಾ ಮೋಸದಿಂದ ಕುಡಿದು ಮೃತರಾದರು

ಟರ್ಕಿಯಲ್ಲಿ ಈಗ ಇರುವ ರಾಜನಿಲ್ಲದ ಸಾರ್ವಜನಿಕ ಸರಕಾರವನ್ನು ರದ್ದುಮಾಡಿ ತನ್ನ ಕುಟುಂಬಕ್ಕೇನೇ ರಾಜಪಟ್ಟ ಮಾಡಿಕೊಳ್ಳಬೇಕೆಂತ ಕಮಾಲ್‌ಪಾಶಾರವರು ಪ್ರಯತ್ನಿಸುತ್ತಿದ್ದಾರೆಂತ ಪ್ಯಾರಿಸ್ ಪಟ್ಟದಿಂದ ವರ್ತಮಾನ ಬಂದಿದೆ.

ಇಂಗ್ಲಂಡಿನಲ್ಲಿ ಬೆಂಜಮಿನ್ ಸೆಮಿಲರ್ ಎಂಬ ಹುಡುಗನಿಗೆ ತನ್ನ ಅಣ್ಣನು ಕಿಟಿಕಿಯಿಂದ ಕೆಳಕ್ಕೆ ಬಿದ್ದು ಸತ್ತನೆಂತ ಸ್ವಪ್ನ ಕಂಡು ಮಾರಣೆ ದಿನ ರಾತ್ರಿ ಆ ಹುಡುಗನು ಅದೇ ಕಿಟಿಕಿಯಿಂದ ಬಿದ್ದು ತಲೆ ಒಡೆದು ಸತ್ತನಂತೆ. ತಂದೆಯನ್ನು ವಿಚಾರಿಸುವಾಗ ಆ ಹುಡುಗನಿಗೆ ಮಾರಣೆ ದಿನ ರಾತ್ರಿ ಸಹ ಅದೇ ಸ್ವಪ್ನ ಕಂಡು ಅಣ್ಣನ ಸಹಾಯಕ್ಕಂತ ಹೋಗಿ ಬಿದ್ದುಬಿಟ್ಟಿರಬೇಕೆಂತ ಹೇಳಿದನು.

ನೋಟೀಸ್.

ಪೌತಿ ಒಟೆಯಾಸ್ ನಾಚರ ಹಕ್ಕುದಾರಳಾಗಿದ್ದ ಬಿಂತುಂಬಿ ಎಂಬವಳು ಈಚೆಗೆ ಪೌತಾಗಿ ಇರುವದರಿಂದ ಅವಳ ಹಕ್ಕುದಾರರು ನಾನೇ ಹೊರತು ಬೇರೆಯಾರೂ ಇಲ್ಲ. ಆದ್ದರಿಂದ ಸದರಿಯವರ ಸೊತ್ತನ್ನು ಬೇರೆ ಯಾರಿಂದಾದರೂ ಕೊಂಡುಕೊಳ್ಳಬಾರದೆಂತ ಈ ಮೂಲಕ ಪ್ರಕಟಿಸಿರುತ್ತೇನೆ ಕೊಂಡುಕೊಂಡರೆ ಅವರಿಗೆ ಸೊತ್ತು ಸಿಕ್ಕುವದಿಲ್ಲ.

2—1 ಹುಸೇನ್ ಬಿ.

ಕನ್ನಡ **ಸ್ವಧರ್ಮ** ಮಾಸ ಪತ್ರಿಕೆ.

ಸಂಪಾದಕರು.—ದ ರಾ. ಬೇಂದ್ರೆ, ಬಿ ಎ.

ಸಮಾಜದಲ್ಲಿ ಶಾಂತಿಪುಷ್ಟಿತುಷ್ಟಿಗಳು ನೆಲೆಗೊಳ್ಳಬೇಕಾದರೆ ಸದಾಚಾರವೇ ಸರಳವಾದ ಹಾದಿ. ಸದಾಚಾರದ ಬೆಳೆಗೆ ಸುವಿಚಾರವೇ ಸರಿಯಾದ ಸಾಧನ. ಇಂತಹ ಸುವಿಚಾರಗಳನ್ನು ಸಮಾಜದ ಮುಂದಿಡಲು ಹೆಣಗುವದೇ ಸ್ವಧರ್ಮದ ಗುರಿ. ಕನ್ನಡಿಗರು ಕೈಗೊಟ್ಟು ಸ್ವಧರ್ಮವನ್ನು ಪ್ರೋತ್ಸಾಹಿಸಬೇಕಾಗಿ ಕೋರಿಕೆ.

ವಾರ್ಷಿಕ ವರ್ಗಣಿ ರೂ. 3—0—0

ಕಾರ್ಯದರ್ಶಿ

"ಸ್ವಧರ್ಮ" ಕಾರ್ಯಾಲಯ,

ಮಾಳಮಡ್ಡಿ, ಧಾರವಾಡ.

ನೌಕರಿ ಕರಾರು ಫಾರಮುಗಳು.

1926ನೇ ಇಸವಿ ಕೊಡಗಿನ ಕೂಲಿ ಕೆಲಸವನ್ನು ಕುರಿತ ಆಕ್ಟ್ 1ರ ಮೇರೆ, ಅನುಭವವುಳ್ಳ ಯೂರೋಪಿಯನ್ ಮತ್ತು ಇಂಡಿಯನ್ ಪ್ಲಾಂಟರುಗಳೂ ಸೇರಿ ತಯಾರಿಸಿರುವ ನೌಕರಿ ಕರಾರು ಫಾರಮುಗಳು ಇಂಗ್ಲೀಷಿನಲ್ಲಿಯೂ ಕನ್ನಡದಲ್ಲಿಯೂ ಪ್ರಿಂಟಾಗಿ ಮಾರಾಟಕ್ಕೆ ತಯಾರಿದೆ. ಬೇಕಾದವರು ಸೆಂಟ್ರಲ್ ಹೈಸ್ಕೂಲಿನ ಬಳಿ ಇರುವ (ಹಳೇ ಗಡಂಗ ಕಟ್ಟಡದ) ನಮ್ಮ ಹೊಸ ಆಫೀಸಿನಲ್ಲಿ ಕೊಂಡುಕೊಳ್ಳಬಹುದು.

ತಾ 24—6—'26 ಮೇನೇಜರ್,

ಮಡಿಕೇರಿ. "ಕೊಡಗು" ಆಫೀಸು.

ಪತ್ರವ್ಯವಹಾರ

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ಪತ್ರಿಕಾಕರ್ತರು ಜವಾಬ್ದಾರರಲ್ಲ. ಸಂ]

ಹೆಣ್ಣು ಮಕ್ಕಳ ವಿದ್ಯಾಭ್ಯಾಸ.

ಅಯ್ಯಾ,

ಈಗ ಪ್ರವರ್ಧಮಾನಕ್ಕೆ ಬರುತ್ತಿರುವ ಹೆಣ್ಣು ಮಕ್ಕಳು ಮುಂದೆ ಬಂದರೆ ಕೆಲವು ವರ್ಷಗಳಲ್ಲಿಯೇ ಹೆಂಡತಿಯರಾಗಿಯೂ, ತಾಯಿಯರಾಗಿಯೂ, ಸ್ವಂತವಾಗಿ ಸಂಸಾರ ನಡಿಸತಕ್ಕವರಾಗಿಯೂ ಆಗುವರು. ಆಗ ಸಂಸಾರವನ್ನು ಸುಖವಾಗಿ ನಡಿಸಿಕೊಂಡು, ಬರುವದಕ್ಕೋಸ್ಕರ ಮೊದಲಿನಿಂದಲೇ ಕ್ರಮವಾಗಿ ತರಬೇತು ಹೊಂದುತ್ತಾ ಬರಬೇಕು. ಒಂದು ರಾಜ್ಯವು ಮುಂದಕ್ಕೆ ಬಂದು ಜನಾಂಗವು ಅಭಿವೃದ್ಧಿ ಹೊಂದಬೇಕಾದರೆ ಗಂಡಸರು ಹೆಂಗಸರು ಸಹ ಅಭಿವೃದ್ಧಿ ಹೊಂದಬೇಕು. ತಾಯಿಯು ದೃಢಾಂಗಿಯಾಗಿದ್ದರೆ ಮಕ್ಕಳು ಸಹ ಬಲಿಷ್ಠರಾಗಿಯೂ, ಆರೋಗ್ಯ ಶಾಲಿಗಳಾಗಿಯೂ ಆಗುತ್ತಾರೆ.

ಗಂಡು ಮಕ್ಕಳನ್ನು ತರಬೇತು ಮಾಡಿದರೆ ಅವರಿಂದ ನಮ್ಮ ಮನೆಗಳ ಮಟ್ಟಿಗೆ ಪ್ರಯೋಜನವಾದೀತು. ಅವರು ಅವಿವೇಕಿಗಳಾದರೆ ಅವರಲ್ಲಿ ಮಾತ್ರ ಅವಿವೇಕತನವು ನಿಂತು ಹೋಗುತ್ತದೆ

ಹೆಣ್ಣು ಮಕ್ಕಳ ಅವಿವೇಕತನವು ಅವರು ಹುಟ್ಟಿದ ಮನೆಯಲ್ಲಿ ನಿಲ್ಲದೆ ಅವರು ಸೇರುವ ಮನೆಗಳಿಗೂ, ಅಲ್ಲಿಯ ಸಂತತಿಗಳಿಗೂ, ವಿಸ್ತರಿಸಿ ಅನೇಕ ಕುಟುಂಬಗಳಿಗೆ ಹಾನಿಯನ್ನುಂಟು ಮಾಡುವದು. ಅವರು ಚೆನ್ನಾಗಿ ವಿವೇಕಶಾಲಿಗಳಾದರೆ ಆ ಮೂಲಕ ಅನೇಕ ಕುಟುಂಬಗಳು ಉದ್ಧಾರವಾಗುವವು. ಆದ್ದರಿಂದ ಗಂಡುಮಕ್ಕಳನ್ನು ತರಬೇತುಮಾಡುವದಕ್ಕಿಂತಲೂ ಹೆಚ್ಚು ಆಲೋಚನೆಯಿಂದಲೂ, ಪ್ರಯಾಸದಿಂದಲೂ ಹೆಣ್ಣು ಮಕ್ಕಳನ್ನು ತರಬೇತುಮಾಡಬೇಕು.

ಈಗ ಯಾರೂ ಹೆಣ್ಣುಮಕ್ಕಳ ವಿದ್ಯೆಗೆ ವಿರೋಧಿಗಳಾಗಿ ಇರಲಾರರು. ಆದರೆ ಗಂಡುಮಕ್ಕಳಿಗೆ ಕಲಿಸತಕ್ಕ ವಿದ್ಯೆಯನ್ನು ಹೆಣ್ಣುಮಕ್ಕಳಿಗೆ ಕಲಿಸಿದರೆ ಸಾಲದು ಮತ್ತು ಅಂಥಾ ವಿದ್ಯೆಯಿಂದ ಅವರಿಗೆ ಅಷ್ಟು ಪ್ರಯೋಜನವೂ ಇಲ್ಲ. ಓದುವದು, ಬರೆಯುವದು, ಲೆಕ್ಕಚಾರ ಇವುಗಳು ಗೊತ್ತಿರಬೇಕಾದುದು ಅವಶ್ಯಕ. ಇವುಗಳ ಜೊತೆಗೆ ಹೊಲಿಗೆ, ಅಡಿಗೆ ವಿಧಾನ, ಶಿಶುಸಂರಕ್ಷಣ ಕ್ರಮ, ಗೃಹಕೃತ್ಯನಿರ್ವಾಹ, ಆರೋಗ್ಯಶಾಸ್ತ್ರ, ಸ್ವಲ್ಪ ವೈದ್ಯಭಾಗಗಳೆಲ್ಲವೂ ತಿಳಿದಿರಬೇಕು. ನಮ್ಮ ದೇಶದ ಸ್ಥಿತಿ ಹೇಗಿದೆ ಇತರ ದೇಶಿಯರು ಹೇಗಿದ್ದಾರೆ ಮುಂತಾದ ವಿಷಯಗಳನ್ನು ತಿಳಿಯಲು ಈ ದೇಶದ ಮತ್ತು ಇತರ ದೇಶಗಳ ಚರಿತ್ರೆಗಳನ್ನೂ, ಕೆಲವು ಮಟ್ಟಿಗೆ ಭೂಗೋಳಶಾಸ್ತ್ರವನ್ನೂ, ಓದಿಕೊಂಡಿರಬೇಕಾದದಲ್ಲದೆ ತನ್ನ ಮತ್ತು ತಮಗೆ ಸಂಬಂಧಪಟ್ಟವರ ಆರೋಗ್ಯವನ್ನು ಕಾಪಾಡಿಕೊಳ್ಳುವದಕ್ಕಾಗಿ ಆರೋಗ್ಯಶಾಸ್ತ್ರವನ್ನೂ, ಸಾಧಾರಣ ಕಾಯಿಲೆಗಳನ್ನು ವಾಸಿಮಾಡುವದಕ್ಕಾಗಿಯೂ, ಅಪಾಯ ಸಂಭವಿಸಿದ ಕಾಲದಲ್ಲಿ ಧೈರ್ಯವಾಗಿ ಚಿಕಿತ್ಸೆಮಾಡುವದಕ್ಕಾಗಿಯೂ ಸಾಧಾರಣ ವೈದ್ಯಭಾಗವನ್ನು ಕಲಿತಿರಬೇಕು.

ಮುಖ್ಯವಾಗಿ ಸ್ತ್ರೀಯರು ತಮಗೆ ಯಾವ ವಿದ್ಯೆಯು ಬಾರದೆನ್ನಿಸಿಕೊಳ್ಳಬಾರದು. ಎಲ್ಲಾ ವಿದ್ಯೆಗಳಲ್ಲಿಯೂ ಸ್ವಲ್ಪ ಮಟ್ಟಿಗಾದರೂ ತಿಳುವಳಿಕೆಯನ್ನು ಪಡೆದಿರಬೇಕು.

ವಿದ್ಯೆ ಕಲಿತ ಈಗಿನ ಸ್ತ್ರೀಯರು ಕೆಲವರು ಪ್ರೇಮರಸಪೂರಿತವಾದ ಪುಸ್ತಕಗಳನ್ನು ಓದುವದರಲ್ಲಿಯೇ ಆಸಕ್ತರಾಗಿರುತ್ತಾರೆ. ಇದರಿಂದ ಏನರ ನಷ್ಟವು ಕಟ್ಟ ಹೋಗದೆ ಇದ್ದರೂ ಅವುಗಳಲ್ಲಿ ಕಾಣುವ ನಿಸಾರವಾದ ವಿಷಯಗಳು ಮನಸ್ಸಿಗೆ ನಾಟಿ ಹಾನಿಯುಂಟಾಗುವದು.

ಓದುವದಕ್ಕೆ ಪುಸ್ತಕಗಳನ್ನು ಆರಿಸುವದರಲ್ಲಿ ಜಾಗರೂಕತೆಯನ್ನು ವಿನಿಯೋಗಿಸಬೇಕಾಗಿದೆ.

ಆಯಾ ರಾಜ್ಯಗಳನ್ನು ಉದ್ಧಾರಮಾಡಿದ ಮಹನೀಯರ, ಮಹಿಳೆಯರ ಜೀವಚರಿತ್ರೆಗಳನ್ನು ನಮ್ಮ ದೇಶದಲ್ಲಿ ಬಾಳಿದ ಪುಣ್ಯಪುರುಷರ ಚರಿತ್ರೆ, ರಾಮಾಯಣ, ಭಾರತ, ಭಾಗವತ ಮುಂತಾದ ಪುಣ್ಯಕಥೆಗಳನ್ನು ಓದಿ ಚಿಂತನಮಾಡಿದರೆ ಅನೇಕ ಪ್ರಾಪಂಚಿಕ ಮತ್ತು ಆಧ್ಯಾತ್ಮಿಕ ವಿಷಯಗಳು ತಿಳಿಯುಬಂದು ನಮ್ಮ ದೇಶವೂ ಕುಟುಂಬವೂ ವೃದ್ಧಿಯಾಗುವದರಲ್ಲಿ ಏನೊಂದು ಸಂಶಯವು ಇರುವದಿಲ್ಲ.

"ಮದರ್ ಆಫ್ ನೇಶನ್ ಫೋರ್ಸ್" ಎಂಬ ಹಿರಿಯರ ನಾಣ್ಣುಡಿಯಂತೆ ತಕ್ಕದಾದ ವಿದ್ಯೆಯೇ ಅವಶ್ಯವೆಂಬುದಾಗಿಯೂ ಆ ಮೂಲಕವೇ ನಮ್ಮ ದೇಶದ ಜನಾಂಗ ಅಭಿವೃದ್ಧಿಯಾಗುವದೆಂಬ ಸಂಗತಿಯನ್ನೂ ಪತ್ರಿಕೆಯು ಮುಂದಿಡಬೇಕಾಗಿ ಕೋರಿಕೆ.

ಯನ್. ಕುಟ್ಟಪ್ಪ

ಮಡಿಕೇರಿಯ ಮುಹಮ್ಮದೀಯರು.

ವಾಚಕ ಮಹಾಶಯರೇ,

ಮಡಿಕೇರಿಯಲ್ಲಿ ನಮ್ಮ ಮುಹಮ್ಮದೀಯರ ಸಂಖ್ಯೆಯು ತಕ್ಕ ಮಟ್ಟಿಗೆ ಇದೆ. ಆದರೆ ಇಂಗ್ಲಿಷು ಮತ್ತು ಕನ್ನಡವನ್ನು ಅರಿತವರ ಸಂಖ್ಯೆ ಬಹಳ ಕಮ್ಮಿ. ಇದಕ್ಕೆಲ್ಲಾ ಮುಖ್ಯಕಾರಣಗಳು ಯಾವವೆಂದರೆ—ನಾವು ನಮ್ಮ ಪೂರ್ವಿಕರ ನಡೆನುಡಿಗಳನ್ನು ಅಣುಮಾತ್ರವೂ ವ್ಯತ್ಯಾಸಗೊಳಿಸದೆ ಹಿಂಬಾಲಿಸುವದು ಮತ್ತು ವಿದ್ಯಾಭ್ಯಾಸಕ್ಕೆ ಹೆಚ್ಚು ಗಮನಕೊಡದೆ ಇರುವದು. ಯಾರಾದರು ನಮಗೆ ಸುಬೋಧನೆಯನ್ನು ಕೊಟ್ಟರೆ ನಾವು "ಸಾಕಪ್ಪಾ ಸಾಕು ಇದು ನಮಗೆ ತಿಳಿಯದೇ ಇದ್ದ ಸಂಗತಿಯಲ್ಲ ನಮ್ಮ ಹಿರಿಯರು ನೀವು ಹೇಳುವ ರೀತಿ ನಡೆಯಲಿಲ್ಲ, ಆದುದರಿಂದ ನಾವು ನೀವು ಹೇಳುವ ಹಾಗೆ ನಡೆಯುವುದು ಅವಶ್ಯವಿಲ್ಲ" ಎಂದು ಹೇಳಿಬಿಡುವೆವು.

ಮುಹಮ್ಮದೀಯರಿಗೆ ಮತಕ್ಕೆ ಸಂಬಂಧಪಟ್ಟ ಐದು ಮುಖ್ಯಕಾರ್ಯಗಳಿವೆ. ದಿನಂಪ್ರತಿ ಹೊತ್ತಿಗೆ ಸರಿಯಾಗಿ ಪ್ರಾರ್ಥನೆಮಾಡುವದೂ, ವರ್ಷದಲ್ಲಿ ಒಂದು ತಿಂಗಳು ಉಪವಾಸವಿರುವದೂ ಮತ್ತು ಮಕ್ಕಾಯಾತ್ರೆಗೆ ಹೋಗುವದೂ ಐದು ಮುಖ್ಯ ಕಾರ್ಯಗಳಲ್ಲಿ ಮೂರಾಗಿವೆ.

ನಮ್ಮ ದೊಡ್ಡ ಮನುಷ್ಯರಲ್ಲಿ ಅನೇಕರು ಈ ಮೂರು ಕಾರ್ಯಗಳನ್ನು ತೊರೆದು ಬಿಟ್ಟಿರುವರು. ಆದರೆ ದ್ರವ್ಯದ ದೆಸೆಯಿಂದ ಬಹಳ ಗೌರವಸ್ಥರೆನ್ನಿಸಿಕೊಂಡಿರುವರು. ಅನ್ನದಾನವು ದಾನಗಳಲ್ಲಿ ಅತಿ ಶ್ರೇಷ್ಠವೆಂದು ಹಿಂದೂ ಧರ್ಮದಲ್ಲಿರುವ ಹಾಗೆ ನಮ್ಮಲ್ಲಿಯೂ ಇರುವದು. ಆದರೆ ಅನ್ನದಾನ ಯಾರಿಗೆ ಮಾಡಬೇಕು? ಬಡವರಿಗೆ, ಅನ್ನವಿಲ್ಲದೆ ಬಳಲಿ ಆಯಾಸಪಡುವ ಬಡಪ್ರಯಾಣಸ್ಥರು ಮೊದಲಾದವರಿಗೆ. ಇದಕ್ಕೆ ಪ್ರತಿಯಾಗಿ ನಮ್ಮ ಐಶ್ವರ್ಯವಂತರು ಅನ್ನದಾನ ಮಾಡುವುದು ಯಾರಿಗೆಂದರೆ—ಅವರನ್ನು ಪರಿಜನರ ಮುಂದೆ ಹೊಗಳುವಂಥಾ ಜನರಿಗೆ. ಇದನ್ನೆಲ್ಲಾ ನೋಡುವಾಗ ನಮ್ಮ ಮುಹಮ್ಮದೀಯ ಮತವು ಎಷ್ಟರಮಟ್ಟಿಗೆ ಕ್ಷೀಣಸ್ಥಿತಿಯನ್ನು ಹೊಂದಿದೆ ಎಂದು ವಾಚಕರೇ ತಿಳಿದುಕೊಳ್ಳಬಹುದು.

ಇನ್ನು ಮುಂದೆಯಾದರೂ ನಮ್ಮಲ್ಲಿರುವ ಐಶ್ವರ್ಯವಂತರು ಮತವನ್ನು ಉತ್ತಮಸ್ಥಿತಿಗೆ ತರುವ ವಿಷಯದಲ್ಲಿ ತೊಂದರೆ ತೆಗೆದುಕೊಂಡು ದ್ರವ್ಯಸಹಾಯಮಾಡಿ, ನಮ್ಮ ಮುಹಮ್ಮದೀಯರ ಮಕ್ಕಳ ಮನಸ್ಸಿನಲ್ಲಿ ಮತವಿಚಾರಗಳನ್ನು ನಾಟಿಸುವ ಒಬ್ಬ ಮೌಲ್ವಿಯರನ್ನು ಉತ್ತರ ಹಿಂದೂದೇಶದಿಂದ ಕರೆಯಿಸಿ ಮತವನ್ನು ಉದ್ಧಾರಮಾಡುವರೆಂದು ನಂಬುತ್ತೇನೆ.

ಮುಹಮ್ಮದೀಯರ ಹಿತಚಿಂತಕ.

ಕೌನ್ಸಿಲ್ ಚುನಾವಣೆಯ ಕೆಲಸ.

"ಲೋಕಪಾವನ"ವು ಕಳೆದ ಕೌನ್ಸಿಲ್ ಚುನಾವಣೆಗೆ ನಿಂತು ಜಯಶೀಲರಾಗಿ ಬಂದ ಜನರ ಮೇಲೆ ಸುಳ್ಳು ಅಪವಾದಗಳನ್ನು ಹೊರಿಸಿದೆ. ಉಮೇದ್ವಾರರಾಗಿ ನಿಲ್ಲುವವರು ತಾವು ಏನೇನು ಮಾಡಲು ಪ್ರಯತ್ನಿಸುವರೆಂಬದನ್ನು ಹಸ್ತಪತ್ರಿಕೆಗಳ ಮೂಲಕ ಜನರಲ್ಲಿ ತಿಳಿಸಿದ್ದೇ ತಪ್ಪೆಂಬ ಅಭಿಪ್ರಾಯ ಹುಟ್ಟುವಂತೆ ತುಚ್ಛೀಕಾರಭಾವದಿಂದ ಬರೆದಿದೆ. ತಾವು ಏನೇನು ಮಾಡಲು ಯತ್ನಿಸುತ್ತೇವೆಂತ ಬರೆದ ಪ್ರಕಟಣೆಗಳನ್ನು ನನ್ನ ಸ್ವಾಧೀನದಲ್ಲಿ ಇಟ್ಟುಕೊಂಡು ಕಾದು ನೋಡುತ್ತಲೇ ಇದ್ದೆ. ಹಸ್ತಪತ್ರಿಕೆಗಳಲ್ಲಿ ಪ್ರಕಟಿಸಿದ ಕೆಲಸಗಳನ್ನು ಹಾಗೆ ಹೇಳಿಕೊಂಡ ಮೆಂಬರುಗಳು ಮಾಡಿಯೇ ಇದ್ದಾರೆ. ಅವರ ಪ್ರಯತ್ನಗಳು ಜಯಪ್ರದವಾಗದೆ ಇದ್ದರೆ ಸರಕಾರವು ಬಿಡಾಬಲ್ಲದೇ ಹೊರತು ಆಯಾ ಮೆಂಬರುಗಳು ಜವಾಬ್ದಾರರಲ್ಲ.

ತಾವು ಏನುಮಾಡುತ್ತೇವೆಂಬದನ್ನು ಬರಹ ಮೂಲಕವಾಗಲೀ ಮಾತಿನ ಮೂಲಕವಾಗಲೀ ಜನರಿಗೆ ಕೆಲವು ಉಮೇದ್ವಾರರು ತಿಳಿಸದೆ ಇರಬಹುದು. ಹಾಗೆ ಹೇಳದೆ ಇರುವವರು ಕೌನ್ಸಿಲಿನಲ್ಲಿ ಏನೇನು ಮಾಡಲು ಪ್ರಯತ್ನಿಸಬೇಕೆಂಬದನ್ನು ಚುನಾವಣೆ ಸಮಯದಲ್ಲಿ ಯೋಚಿಸಿಯೇ ಇರಲಿಲ್ಲವೆಂತ ಅರ್ಥವಾಯಿತು. ಹೀಗೆ ಮೌನವನ್ನು ತಾಳಿದ ಉಮೇದ್ವಾರರು ಕೌನ್ಸಿಲಿನ ಹೆಚ್ಚಿನ ಚರ್ಚೆಯಲ್ಲಿ ಮೌನ ತಾಳಿಯೇ ಇದ್ದರೂ ದೋಷವಿಲ್ಲವೆಂಬ ಹಾಗೆ ಕಾಣುತ್ತದೆ. ತಾವು ಏನು ಮಾಡುತ್ತೇವೆಂತ ಹೇಳಲೂ ಇಲ್ಲ. ಕೌನ್ಸಿಲಿನಲ್ಲಿ ಏನು ಕೆಲಸ ಮಾಡಲೂ ಇಲ್ಲವೆಂತ ಸಮಾಧಾನ ಮಾಡಿಕೊಳ್ಳಬಹುದೋ ಏನೋ? ಓಟರುಗಳು ಓಟು ಪಡೆಯಬೇಕಾದವರ ಆ ಓಟನ್ನು ಹೇಗೆ ಉಪಯೋಗಿಸುತ್ತೀರಿ ಎಂತ ಓಟರುಗಳಿಗೆ ಕೇಳುವ ಹಕ್ಕು ಇದೆ. ಇಂಥಾ ಕೆಲಸವನ್ನೇ ಮಾಡುತ್ತೇನೆಂತ ಉಮೇದ್ವಾರನು ಓಟರುಗಳಿಗೆ ತಿಳಿಸಿಕೊಡಬೇಕಾದದ್ದು ಅತಿ ಅವಶ್ಯವೆಂತ ತಿಳಿಯದೆ ಇರುವ ಜನರು ಇರಲಾರರು. ಹಾಗೆ ತಿಳಿಸಿಕೊಟ್ಟವರೇ ಧೈರ್ಯಶಾಲಿಗಳು. ತನ್ನ ಮಾತಿನಂತೆ ತಮಗೆ ನಡಿಸಲು ಶಕ್ಯವಿದೆಯೋ, ಸಾಧ್ಯವಿದೆಯೋ ಎಂಬದನ್ನು ಯೋಚಿಸಿಕೊಂಡೇ ಪಬ್ಲಿಕ್ಕಾಗಿ ಹಸ್ತಪತ್ರಿಕೆಗಳನ್ನು ಹಂಚುತ್ತಾರೆ. ಅಂಥಾ ಹಸ್ತಪತ್ರಿಕೆಗಳಂತೆ ನಡಿದಿದ್ದಾರೋ ಎಂತ ಓಟರುಗಳು ನೋಡಿಕೊಳ್ಳಲು ಅನುಕೂಲವಾಗುತ್ತದೆ. ಮತ್ತು ಅಂಥಾ ಹಸ್ತಪತ್ರಿಕೆಗಳಲ್ಲಿ ಇರುವ ಅಭಿಪ್ರಾಯಗಳು ದೇಶದ ಹಿತಕ್ಕೆ ಹೌದೋ ಅಲ್ಲವೋ ಎಂಬದನ್ನು ಯೋಚಿಸಿ ಓಟರುಗಳು ಓಟ್ ಕೊಡಲು ಅನುಕೂಲವಿರುತ್ತದೆ.

ಹಸ್ತಪತ್ರಿಕೆಗಳಲ್ಲಿ ಸೂಚಿಸಿದ ಕೆಲಸಗಳನ್ನು ಮಾಡಿದ್ದಾರೋ ಇಲ್ಲವೋ ಎಂಬದನ್ನು ಕೌನ್ಸಿಲಿನ ಚರ್ಚೆಗಳು ಪ್ರಕಟವಾಗಿರುವದನ್ನು ನೋಡಿದವರಿಗೆ ತಿಳಿಯುತ್ತದೆ. ಇದಕ್ಕೆ "ಲೋಕಪಾವನ"ದ ಲೇಖಕರ ಸಂಶಯದ ಮೇಲೆ ಯಾರೂ ಮುಂದಿನ ತೀರ್ಮಾನ ಮಾಡಬೇಕಾಗಿರುವದಿಲ್ಲ.

ಆ ಲೇಖನದಲ್ಲಿ ಜಮೀನ್ದಾರರ ಸಂಘದ ಹೆಸರನ್ನು ತಂದಿರುತ್ತಾರೆ. ಸಂಘದಲ್ಲಿ ನಂಬಿಕೆ ಇರುವ ಎಲ್ಲಾ ಕೌನ್ಸಿಲ್ ಮೆಂಬರುಗಳೂ ಸಂಘದಲ್ಲಿ 1910ರಿಂದ ತೀರ್ಮಾನವಾದ ಸಂಗತಿಗಳನ್ನೇ ಕೌನ್ಸಿಲಿನಲ್ಲಿ ಚರ್ಚೆಗೆ ತಂದದ್ದಾಗಿದೆ. ಆ ಲೇಖನದ ಬರವಣಿಗೆದಾರರಿಗೆ ನೌಕರಿ ವಿಚಾರದ ಹಾನಿಯಾದಂತೆ ತೋರುತ್ತದೆ. ಮೊದಲು ಆಕ್ಟನ್ನು ನೋಡುವ ವರೆಗೂ ಸಂಘವು ಕೊಡಗಿಗೆ ನೌಕರಿ ಆಕ್ಟ್ ಬೇಕೆಂತಲೇ ಹೇಳುತ್ತಿತ್ತೆಂಬದನ್ನು ಆ ಲೇಖಕರ ಮರೆಯುತ್ತಾರೆ. ನೌಕರಿ ಆಕ್ಟ್ ಬೇಕೆಂತ ಸಂಘವು ತೀರ್ಮಾನಿಸಿದ್ದಾಗ ಕೌನ್ಸಿಲಿನಲ್ಲಿಯೂ, ಕೌನ್ಸಿಲಿನ ಸಿಲೆಕ್ಟ್ ಕಮಿಟಿಯಲ್ಲಿಯೂ ಅನುಮೋದಿಸಿ ಸೆಕ್ಷನ್‌ಗಳಿಗೆ ಒಪ್ಪಿಕೊಂಡಿರುವಾಗ ಅಂಥಾ ಮೆಂಬರುಗಳು ಸಂಘವು ಅನಂತರ ಮಾಡಿದ ತೀರ್ಮಾನದ ಮೇಲೆ ಬದಲಾಯಿಸುವದು ಸಾಧ್ಯವಿರಲಿಲ್ಲವೆಂಬುದು ನಮಗೆಲ್ಲರಿಗೂ ಗೊತ್ತಿದೆ.

ಈ ರೀತಿಯಲ್ಲಿ ಸುಳ್ಳು ಆರೋಪಗಳನ್ನು ಹೊರಿಸಿ ಬರೆಯುವ ಲೇಖನಗಳನ್ನು ಓದಿ ಯಾರೂ ಮೋಸ ಹೋಗಲಾರರು. ಸತ್ಯಕ್ಕೆ ಜಯವಿದೆಯೇ ಹೊರತು ಸುಳ್ಳು ಎಂದೂ ಜಯವಾಗುವದಿಲ್ಲ. ಸತ್ಯಮೇವ ಜಯತೇ, ನಾನೃತಂ

"ಓಟರ್."

ಕೊಡಗಿನಲ್ಲಿ ಗೋರಕ್ಷಣೆ.

ದಾರ್ಜಿಲಿಂಗಿನ ಪ್ರಾಣಿದಯಾ ಸಂಘದವರು ಆಗಿಂದಾಗ್ಯೆ ಪ್ರಾಣಿಗಳ ಮೇಲೆ ಜನರು ನಡೆಸುತ್ತಿರುವ ಅಮಾನುಷ ಕೃತ್ಯಗಳನ್ನು ಖಂಡಿಸಿ ಬರೆಯುತ್ತಿರುವ ಲೇಖನಗಳನ್ನು ನಮ್ಮ ಕೊಡಗಿನ ಬಂಧುಗಳು ಆದಷ್ಟೋ ಸಾರಿ ಓದಿರಬಹುದು. ದೇವರು ಎಲ್ಲಾ ಪ್ರಾಣಿಗಳನ್ನೂ ತನ್ನ ಮಕ್ಕಳೆಂದು ನೋಡುತ್ತಿರುವನು. ಮನುಷ್ಯರೂ ಸಹ ಎರಡು ಕಾಲಿನ ಪ್ರಾಣಿಗಳೇ! ತನ್ನನ್ನು ತಿಳಿದುಕೊಳ್ಳಲು ಈ ಪ್ರಾಣಿಗೆ ದೇವರು ಬುದ್ಧಿ ಕೊಟ್ಟಿರುವನು... ಆದ್ದರಿಂದ ಮನುಷ್ಯರೂ ಪ್ರಾಣಿಗಳೆಲ್ಲವನ್ನು ಯೋಗ್ಯ ರೀತಿಯಿಂದ ನೋಡಿಕೊಳ್ಳುವುದು ನಮ್ಮ ಕರ್ತವ್ಯವಲ್ಲವೇ?

ನಾನು ಕೆಲವು ದಿವಸಗಳ ಹಿಂದೆ ಗೋಣಿಕೊಪ್ಪಲು ಸಂತೆಗೆ ಹೋಗಿದ್ದೆ. ಅಲ್ಲಿ ಎಷ್ಟೋ ಗೋವುಗಳನ್ನು ಮಾರುವುದಕ್ಕಾಗಿ ತಂದಿದ್ದರು. ಇವುಗಳಲ್ಲಿ ಕೆಲವು ಬಹು ವಿಚಿತ್ರದವುಗಳಾಗಿದ್ದವು. ಕೆಲವು ಬಹಳ ಕಷ್ಟದಿಂದ ವ್ಯಾಪಾರ ಸ್ಥಳವನ್ನು ಸೇರಿದವು! ಇನ್ನು ಕೆಲವುಗಳನ್ನು ನೋಡಲಾಗಿ ದಾರಿಯಲ್ಲಿ ಬಿದ್ದುಹೋಗುತ್ತವೋ ಎಂಬ ಸಂಶಯವೂ ಸಹ ಉಂಟಾಯಿತು. ಪಾಪ, ಅವುಗಳಿಗೆ ಹುಲ್ಲಿಲ್ಲದೆ ಎಷ್ಟು ದಿವಸಗಳಾದುವೋ ದೇವರೇ ಬಲ್ಲ!!! ಇವುಗಳನ್ನು ನೋಡಿ ನನಗೆ ಬಹಳ ಆಶ್ಚರ್ಯವಾಯಿತು. ಇವುಗಳ ಬೆಲೆಯನ್ನು ವಿಚಾರಿಸಿದಲ್ಲಿ ನಾಲ್ಕೈದು ರೂಪಾಯಿಗಳೆಂದು ತಿಳಿಯಬಂತು. ಅಂತು ಅವುಗಳನ್ನು ಮಾರುವರು.

ಇವುಗಳ ವಿಷಯ ಹೆಚ್ಚಿನ ಮಾಹಿತಿಯನ್ನು ತಿಳಿಯಲು ಇಂಥಾ ಬಡ ದನಗಳನ್ನು ಅಲ್ಲಿ ಕೆಲವರು ಅತಿ ಕಮ್ಮಿ ಬೆಲೆಗೆ ಕೊಂಡುಕೊಂಡು, ಕೊಂದು, ತೋಟಗಳಲ್ಲಿ ಕೆಲಸ ಮಾಡುವ ಜನರಿಗೆ ಮಾಂಸವನ್ನು ಮಾರುವರೆಂದೂ, ಆ ಪ್ರಾಂತ್ಯದ ಜನರಿಗೆ ತಮ್ಮ ದನಗಳು ಬಡವಾಗಿ ಬದುಕುವುದಿಲ್ಲವೆಂದು ತೋರಿದರೆ ಆಗ ಅವುಗಳನ್ನು ತಂದು ಈ ರೀತಿಯಲ್ಲಿ ಮಾರುವರೆಂದೂ ತಿಳಿಯಿತು. ಹೀಗೆ ಮಾರುವವರು ಹಿಂದೂಗಳೇ!

ದೇಶಾಭಿಮಾನಿಗಳೇ, ಇಷ್ಟು ಫಲವತ್ತಾದ ನಮ್ಮ ದೇಶದಲ್ಲಿ ಗೋವುಗಳನ್ನು ಸಾಕಲಾರದೆ ಈ ರೀತಿಯಲ್ಲಿ ಕೊಲ್ಲಲು ನಾವು ಎಡೆ ಕೊಡುವುದು ಯೋಗ್ಯವೇ? ಗೋಮಾತೆಯ ದೇವರಿಗೆ ಸಮಾನವೆಂದು ಪ್ರತಿಯೊಬ್ಬ ಹಿಂದುವೂ ಸಾರುತ್ತಿರುವನು. ನಾಲ್ಕೈದು ರೂಪಾಯಿಗಳ ಆಸೆಯಿಂದ ಗೋಹತ್ಯವೆಂಬ ಆ ಮಹಾ ಪಾಪಕ್ಕೆ ಒಳಗಾಗಬೇಕೇ? ಯಾವ ಸ್ವಾರ್ಥದಿಂದಲೂ ಈ ಪಾಪವನ್ನು ತೀರಿಸುವುದಕ್ಕಾಗುವುದಿಲ್ಲ. ಗೋವುಗಳು ಸತ್ತ ಮೇಲೆ ಅವುಗಳ ಚರ್ಮವನ್ನು ಯೋಗ್ಯರೀತಿಯಿಂದ ತೆಗೆದು ಮಾರಿದರೆ ಆ ಐದು ರೂಪಾಯಿಗಳು ದೊರೆಯುವುದರಲ್ಲಿ ಯಾವ ಸಂಶಯವೂ ಇಲ್ಲ. ಸ್ನೇಹಿತರೇ, ಅಂಥಾ ದನಗಳನ್ನು ಸಾಯುವ ವರೆಗೆ ಕೈಲಾದಷ್ಟು ಮಟ್ಟಿಗೆ ಹುಲ್ಲು ನೀರು ಕೊಟ್ಟು ಸಾಕಿ ಪುಣ್ಯವನ್ನು ಸಂಪಾದಿಸಿರಿ. ತಂದೆಯೋಪಾದಿಯಲ್ಲಿ ಗದ್ದೆಗಳಲ್ಲಿ ದುಡಿದು ಅನ್ನವನ್ನೂ ತಾಯಿಯಂತೆ ಹಾಲನ್ನೂ ಕೊಟ್ಟು ಸಲಹುವ ಈ ಗೋವನ್ನು ಆಹಾರಕ್ಕಾಗಿ ಸಂಹರಿಸುವುದು ಯೋಗ್ಯವೇ?

ಸರಕಾರದವರೂ ಕಾಯಿದೇ ಮಂಡಲದ ಸದಸ್ಯರೂ ಈ ಕಡೆ ಮನಸ್ಸು ಕೊಡದಿರುವುದು ಪೂರಾ ತಪ್ಪು! ಕೊಡಗಿನ ಬ್ರಿಟಿಷ್ ಸರಕಾರದವರು ತಮ್ಮದಾಗಿ ಮಾಡಿಕೊಂಡ ಮೇಲೆ ಕೋವಿ ಕತ್ತಿಗಳ ವಿಷಯ ಹೇಗೆ ಜಾಹೀರಾತ ಪ್ರಕಟಿಸಿದರೋ ಅದೇ ರೀತಿಯಲ್ಲಿ ಗೋರಕ್ಷಣೆಯ ವಿಷಯವೂ ಸಹ ಪ್ರಕಟಿಸಿರುವರು.

To,

Lieutenant C. I. Le Hardy,

Superintendent of Coorg.

Sir,

Having ascertained, that it is highly offensive to the religious feelings of the people of Coorg, that cows or bullocks should be killed for the purpose of being used as an article of food, I request, that you will be so good as to prohibit this practice throughout the whole district by any person whether European or Native

Mercara, J. S. Fraser Lt. Col,

16th January, 1835 and Commissioner

ಸಾರಾಂಶ—ಗೋವುಗಳನ್ನು ಕೊಂದು ಅದರ ಮಾಂಸವನ್ನು ಆಹಾರವಾಗಿ ಉಪಯೋಗಿಸುವುದು ಕೊಡಗು ನಿವಾಸಿಗಳ ಧರ್ಮಕ್ಕೆ ವಿರೋಧವಿರುವುದೆಂದು ತಿಳಿದುದರಿಂದ ಆಂಗ್ಲೇಯನೇ ಆಗಲೀ ಇನ್ನಾರಾದರಾಗಲೀ ಆಹಾರಕ್ಕಾಗಿ ಗೋವಧ ಮಾಡುವುದನ್ನು ನಿಲ್ಲಿಸಬೇಕೆಂದು ಆಗ ಕೊಡಗು ಕಮೀಷನರಾಗಿದ್ದ ಫ್ರೇಸರ್ ಸಾಹೇಬರು ಇಲ್ಲಿನ ಸುಪರಿಂಟೆಂಡೆಂಟರಾಗಿದ್ದ ಲೀಹಾರ್ಡಿ ಸಾಹೇಬರನ್ನು ಕೇಳಿಕೊಂಡಿರುವರು.

ಆದ್ದರಿಂದ ಈ ವಿಷಯ ಸರಕಾರದವರು ಚನ್ನಾಗಿ ಪರ್ಯಾಲೋಚಿಸಿ ಗೋಹತ್ಯವನ್ನು ನಿಲ್ಲಿಸುವುದು ಅತ್ಯವಶ್ಯವಿದೆ. ಎಲ್ಲಾ ಅಭಿವೃದ್ಧಿಗಳಿಗೂ ಗೋವೇ ಕಾರಣ. ಮೈಸೂರು ಸರಕಾರದವರೂ ಸಹ ತಮ್ಮ ಪ್ರಾಂತ್ಯದಲ್ಲಿ ಗೋವಧೆಯನ್ನು ನಿಲ್ಲಿಸುವುದನ್ನೂ, ಗೋಸಂರಕ್ಷಣೆ ಮಾಡುವುದನ್ನೂ ಯೋಗ್ಯರೀತಿಯಿಂದ ಯೋಚಿಸಲು ಒಂದು ಉಪ ಮಂಡಲಿಯನ್ನು ಏರ್ಪಡಿಸಿರುವರು. ನಮ್ಮ ವ್ಯವಸಾಯ ಉಪಮಂಡಲಿಯವರೂ ಗೋವುಗಳ ಉಪ ಮಂಡಲಿಯವರೂ ಇತ್ತ ಗಮನವನ್ನಿತ್ತಾರೋ? ಅಲ್ಲದೆ ಗೋವುಗಳ ಅಭಿವೃದ್ಧಿಗೆ ಗೋಣಿಕೊಪ್ಪಲು ಸಮೀಪದಲ್ಲು ಒಂದು ಗೋಶಾಲೆಯನ್ನು ತೆರೆದು, ಇಂಥಾ ಬಡ ಗೋವುಗಳನ್ನು ಕಮ್ಮಿ ಕ್ರಯಕ್ಕೆ ಕೊಂಡುಕೊಂಡು ಗೋಸೇವೆ ಮಾಡುವುದು ಬಹಳ ಅಗತ್ಯವಿದೆ. ಬಡ ದನಗಳು ಒಳ್ಳೇ ಆಹಾರವನ್ನು ತಿನ್ನುವುದರಿಂದ ಚೆನ್ನಾಗಿ ಬಲವಾಗಬಹುದು. ಪೊನ್ನಂಪೇಟೆ ನಾಡಿನಲ್ಲಿ ಈಗತಾನೇ ಒಡೆಯಲ್ಪಟ್ಟಿರುವ ದನವಿನ ಸಂಘದ ಹಣವನ್ನು ಈ ಕಾರ್ಯಕ್ಕೆ ಉಪಯೋಗಿಸಿ ಕೊಡಗಿಗೊಂದು ಮಾದರಿ ಗೋಶಾಲೆ ತೆರೆದರೆ ಅನುಕೂಲ. ಸರಕಾರದವರೂ ಬೇಕ್ಕ ಸಹಾಯವನ್ನೀಯುವರು. ದೇಶಾಭಿಮಾನಿಗಳೆಲ್ಲರೂ ಒಟ್ಟುಗೂಡಿ ಗೋರಕ್ಷಣಾ ಕಾರ್ಯಕ್ಕೆ ಕೈಹಚ್ಚುವರೆಂದು ನಂಬುತ್ತೇನೆ.

"ಗೋ ಬಂಧು"

786

ರಿಜಿಸ್ಟರ್ಡ ಸೂಪಾದ ನೂಲು. ತೊರಿಸೂದಿ ಕರಿಸಿರಿ.

ಬೆಳ್ಳೂರು ಉಂಡೆಸಕ್ಕ.

ಸ್ವಾಮಿ,
ನಾವು ಕಳೆದ 30 ವರ್ಷಗಳಿಂದಲೂ ಹಸನಾದ ಸಕ್ಕರೆ ತಯಾರಿಸಿ ಮೈಸೂರು ಸೀಮೆಯಲ್ಲದೆ ಇತರ ದೇಶಗಳಿಗೆ ವಿ. ಪಿ ಮೂಲಕ ಕಳುಹಿಸಿ ಅನೇಕ ಸರ್ಟಿಫಿಕೇಟುಗಳನ್ನು ಪಡೆದಿರುತ್ತೇವೆ. ನಮ್ಮ ಸಕ್ಕರೆಯು ಪಿತ್ತ ಸಂಬಂಧ ವ್ಯಾಧಿಗಳನ್ನು ಗುಣಪಡಿಸುವದಲ್ಲದೆ ಮನಸ್ಸಿಗೆ ಹರ್ಷವನ್ನುಂಟುಮಾಡುತ್ತೆ. ಒಂದು ತಿಂಗಳಿಟ್ಟರೂ ಕೆಡುವುದಿಲ್ಲ. ಕೆಟ್ಟರೆ ವಾಪಸು ಪಡೆಯುತ್ತೇವೆ. ಒಂದು ಸಾರಿ ತರಿಸಿ ಪರೀಕ್ಷಿಸಿರಿ.

ನಮ್ಮ ಸಕ್ಕರೆಯು ಈ ಮೊದಲು ಸೇರು 1ಕ್ಕೆ 1—4—0, 1—8—0 ರೂ ಸಂತೆ ಮಾರುತ್ತಿದ್ದೆವು. ಈಗ ಕಾರಣಾಂತರದಿಂದ ಆಕ್ಟೋಬರು ಅಂತ್ಯದೊಳಗೆ ಆರ್ಡರ್ ಕಳುಹಿಸಿದವರಿಗೆ

24 ತೊಲೆ ಸೇರು 1ಕ್ಕೆ 0—15—0,
3 ಸೇರು ತರಿಸಿದವರಿಗೆ ಸೇರು 1ಕ್ಕೆ 0—14—0

ಐದು ಸೇರಿಗಿಂತ ಹೆಚ್ಚು ತರಿಸುವವರಿಗೆ ಶೇಕಡ 12½ ರಂತೆ ಕಮಿಶನ್ ವಜಾಮಾಡಿ ಕಳುಹಿಸಲಾಗುವುದು.

ಹಸನಾದ ಪುಡಿಸಕ್ಕರೆ, ಪೇಡಿ, ಸಕ್ಕರೆ ವಗೈರ ಆಗುವ ಹೊಸ ಗಸೊಪ್ಪು, ಸಕ್ಕರೆ ಕಡ್ಡಿ, ರೇಕು ಸಹ ಬಿಕರಿಗೆ ಸಿದ್ಧವಾಗಿದೆ. ವಾಯಿದೆ ಕಳೆದನಂತರ ಒರತಕ್ಕ ಆರ್ಡರಿಗೆ ಸೇರು 1ಕ್ಕೆ 1—4—0 ಹೆಚ್ಚು ಮಾಡಲಾಗುತ್ತೆ.

ವಿ. ಪಿ. ಮತ್ತು ಪ್ಯಾಕಿಂಗ್ ಚಾರ್ಜು ಪ್ರತ್ಯೇಕ.

ಸಮರ್ಥರಾದ ಏಜಂಟರುಗಳು ಬೇಕಾಗಿರುತ್ತೆ.

ಸ್ಯಾಂಪಲ್ ಅಪೇಕ್ಷಿಸುವವರು 4ಆಣೆ ಸ್ಟಾಂಪು ಕಳುಹಿಸತಕ್ಕದ್ದು.

ನಮ್ಮ ರಿಜಿಸ್ಟರಿಗೆ ದಾಖಲ್ಲಾಗಿ ಅರ್ಜಿಸ್ಸು ಸ್ವೀಕರಿಸಿದರೆ ಸೇರು 1ಕ್ಕೆ ಆರ್ಡರಿಗೆ ಬೆಲೆ ಕಡಿಮೆಮಾಡಿ ನಿಮ್ಮ ಆರ್ಡರ್ ಬಂದ ವಾಯಿದೆಗೆ ಸರಿಯಾಗಿ ಸಕ್ಕರೆ ಕಳುಹಿಸಲಾಗುತ್ತೆ. ಅ ವಿಳಾಸವನ್ನು ದಯವಿಟ್ಟು ಸ್ಪಷ್ಟವಾಗಿ ಬರೆಯಬೇಕು.

ಚೆಟ್ಟಿನ ವಿವರಕ್ಕೆ ಮ್ಯಾನೇಜರಿಗೆ ಬರೆಯತಕ್ಕದ್ದು.

A. Mahomed Haniff.
Manager.

ನಮ್ಮ ವಿಳಾಸ.—
ಯಸ್. ಅಬ್ದುಲ್ ವಹಾಬ್ ಅಂಡ್ ಸನ್ಸ್,
ಸಕ್ಕರೆ ವ್ಯಾಪಾರಿಗಳು,
ಬೆಳ್ಳೂರು ಪೋಸ್ಟು.
ಮೈಸೂರು ಡಿಸ್ಟ್ರಿಕ್ಟು.

52—8

WANTED

Two qualifid Surveyors salary varry ing from Rs 30 to 50/ per mensem with further p ospects.

Apply sharp to the under-signed with qualifications and testimonials and othe terms of the appointment by the 15th of September the latest

U A Ganapathi.
Surveyor and draftsman
Coorg Survey party Co Ltd.
Napoklu Post.
Coorg Dist S India.

13—3

Tel Office MERCARA
(12 miles from Napoklu)
Tel Address: "ORANGE"

ಕರ್ಣಾಟಕ
ಎಗ್ಸ್ಯುಮಿಕ್ಶ್ಚರು

ಚಳಿಜ್ವರ, ಮಲೇರಿಯ ಜ್ವರ, ಇನ್‌ಫ್ಲುಯೆಂಜಾ ಆದ ಜ್ವರ, ಮೊದಲಾದವುಗಳ ಮೇಲೆ ಅಪ್ರತಿಮವಾದ ಔಷ ಧಿ

ಬೆಲೆ ಬಾಟ್ಲಿಯೊಂದಕ್ಕೆ ರು. ೦-೧೪-೦
ಟಪ್ಪಾಲು ಚಾರ್ಜು ಬೇರೆ
೩ಬಿಗ್ ಬಾಟ್ಲಿಗಳಿಗೆ ಟಪ್ಪಾಲುಸಹಿತ ಕಡ ರು.
೯—೩—೦

ಏಜಂಟರು ಬೇಕು, ಕೊಡಗಿನ ಸ್ಟೋರುಮಾಸ್ತರುಗಳು ತ ರಿಸ ಮಾರುವ ಜನ ಔಷಧದ ವ್ಯಾಪಾರಿಗಳ ಹೆಸರನ್ನು ತಿ ಳಿಸಿ ಆದರವಾದ ಬ್ಲಾಟಿಂಗ್ ಪೇಪರು. ಪುಕ್ಕಟೆ.

—12

ಕರ್ಣಾಟಕ ಬ್ರದರ್ಸ್,
ಗಿರಗಾಂವ್, ಮುಂಬಾಯಿ.

Apply for our shooting Season's Clearance Sale Catalogue of Brand New Goods.

10 to 25 percent Reductions in Prices.

No License Required !! **No License Required**



Webley and Scott Air Pistol, cal ·177 or ·22, bore Powerful and Accurate.' com plete with a sample box of slugs, two spare washers, a brush forcleaning, and a bookletof instructions Rs. 30/— Free delivery.

Pwerful German Diana Air gun. Handsome and Accurate, takes B S· A· Patern No 1 Slugs and Darts· expressly recommendable for Target Practice Rs· 15/ Free delivery

Brilliant Search Light Lamp for Night Sports Rs 30/— Free delivery·

No License required to purchase or to possess the above items.

Reliek D B B L 12 bore guns	Rs.	60/—	and upwards	
Do S. B B L 12	do	do 40/—		do·
D B M L Guns		„ 45 —		do·
S B M L. do.		„ 30/—		do
S B. B L Rifles		„ 25/—		do·
B L Revolvers and Pistols		, 30 —		do.

Arms, Ammunition and shooting requisitesof almost every kind anfquality offered at exceptionally favourable rates ANumber of good quality second hand weapons also offered for sale in theNew Catalogue.

GOOLAMHUSIAIN ALLIBHOY & SONS
Largest Importers of Firearms and Ammunition, Cheapest priced firm in India,

24 6 **210 Abdul Rehman Street, BOMBAY·**

೧೬ ಚಿತ್ರಪಟ ಗಳುಳ್ಳದ್ದು

ಸಚಿತ್ರ ಪತಿಸಪ್ತತಿ ಕಥೆ.

೭೦ ಕಥೆಗಳು ೧೫೨ ಪುಟಗಳು

ಈ ಕಥೆಯು ಧರ್ಮಶಾಸ್ತ್ರ, ವೇದಾಂತ, ಸ್ತ್ರೀಸಾತಿವ್ರತ್ಯ ಬ್ರಾಹ್ಮಣ, ವೈಶ್ಯ, ಶೂದ್ರರೆಂಬ ನಾಲ್ಕು ವರ್ಣದವರು ನಡೆಯತಕ್ಕ ವರ್ಣಾಶ್ರಮ ಧರ್ಮವೇ ಮುಂತಾದ ಸದ್ವಿಚಾರಗಳನ್ನು ಬೋಧಿಸುವುದು. ೧ ಕಥಾರೂಪದಲ್ಲಿ ಚಿತ್ರಕಥಾ ಚಮತ್ಕಾರ ಶೋಭಿತವಾಗಿಯೂ ನೀತಿಬೋಧಕವಾಗಿಯೂ ಇರುವದರಿಂದ ಸ್ತ್ರೀಯರು, ಪುರುಷರು, ಬಾಲಕರು ಎಂಬ ಭೇದವಿಲ್ಲದೆ ಎಲ್ಲರೂ ಓದಬಹುದು. ೨. ಲೋಕಾನುಭವಕ್ಕೆ ಬೇಕಾದ ಅನೇಕ ವಿಷಯಗಳು ಇದರಿಂದ ತಿಳಿದುಬರುವುದು ೩. ಈ ಕಥೆಯನ್ನು ಓದುವದರಿಂದ, ಮನಸ್ಸನ್ನು ದುರಾಚಾರದಲ್ಲಿ ಬಿಡದಂತೆ ಸದಾಚಾರದಲ್ಲಿಯೇ ನಡೆಯುವಂತೆ ಮಾಡುವುದು. ೪ ವಿವೇಕಾವಿವೇಕವನ್ನು ತಿಳಿಯತಕ್ಕ ಜ್ಞಾನವನ್ನು ಉಂಟುಮಾಡುವುದು. ಬೇಕಾದವರು ವಿ ಪಿ ಪೋಸ್ಟು ಮೂಲಕ ತರಿಸಿಕೊಳ್ಳಬಹುದು.

ದಪ್ಪಕಾಗದ ಕ್ರಯ ಪ್ರತಿ ೧ಕ್ಕೆ ರೂ. ೨-೦-೦. ಟಪ್ಪಾಲು ಹಾಸಲು ೦-೮-೦.

ಸಚಿತ್ರ ಭಟ್ಟಿ ವಿಕ್ರಮಾದಿತ್ಯರಾಯನ ಕಥೆ ೩ ಭಾಗಸೇರಿದ್ದು ೬೧೨ ಪುಟಗಳು ಕ್ರಯ ೨-೪-೦, ಸಚಿತ್ರರಾಜ ಕಂಠೀರವ ಕಥೆ ४೮೦ ಪುಟಗಳು, ಕ್ರಯ ರೂ ೨

ಸಚಿತ್ರ ಶ್ರೀರಾಮತ್ಯಾಮ್ಯತ ಎಂಬ ಸೀತಾರಾಮರೊಂಬನೇಯ ಸಂವಾದ ३४೬ ಪುಟಗಳು ೧-೮-೦. ಇವುಗಳಿಗೆ ಟಪಾಲು ಖರ್ಚು ಬೇರೆ.

ನಮ್ಮಲ್ಲಿ ದೊರೆಯುವ ಎಲ್ಲಾ ಪುಸ್ತಕಗಳ ಕ್ರಯಪಟ್ಟಿ (ಕ್ಯಾಟಲಾಗಿ)ಗೆ ಬರೆದರೆ ಕಳುಹಿಸುವೆವು.

52—13

ನಮ್ಮ ವಿಳಾಸ— ಎಂ ಆರ್. ಕೃಷ್ಣಸ್ವಾಮಿ ಶೆಟ್ಟಿ,
ಬುಕ್ಕುಡಿಪೋ, ಚಿಕ್ಕಪೇಟೆ, ಬೆಂಗಳೂರು ಸಿಟಿ

ಎಂಪೈರ್ ಆಫ್ ಇಂಡಿಯಾ ಲೈಫ್ ಅಷೂರೆನ್ಸ್ ಕಂಪೆನಿ, ಲಿಮಿಟೆಡ್.

(1897ನೇ ಇಸವಿಯಲ್ಲಿ ಸ್ಥಾಪಿಸಲ್ಪಟ್ಟದ್ದು)

ಸಮಸ್ತವೂ ಲಾಭ ಸಹಿತವಾದ ಪಾಲಿಸಿಗಳೇ

1927 ನೇ ಫೆಬ್ರವರಿ ತಾ. 28 ಕ್ಕೆ ಮುಂಚೆ ಸೇರತಕ್ಕವರಿಗೆಲ್ಲಾ ಆ ತಾರೀಖಿಗೆ ಅನ್ವಯಿಸುವ

ಪಂಚವಾರ್ಷಿಕ ಬೋನಸ್ ಬೋಬಳುಗು ಕೊಡಲಾಗುವುದು.

ಪ್ರೊಸ್ಪೆಕ್ಟಸನ್ನು ಕೇಳಿದವರಿಗೆ ಕೊಡುವೆವು.

ಬೆಂಗಳೂರು ಬ್ರಾಂಚ್:—
152, ಕಮ್ಮರ್ಶಿಯಲ್ ಸ್ಟ್ರೀಟ್.

ಮದರಾಸ್ ಬ್ರಾಂಚ್:—
9-10 ಸೆಕಿಂಡ್ ಲೈನ್ ಬೀಚ್.

ಸಿ. ಕೆ. ರಂಗಪ್ಪ,
ಸ್ಪೆಷಲ್ ಏಜಂಟ್,
ಓನರ್ ಸೈಡ್ ಎಸ್ಟೇಟ್,
ಸಿದ್ದಾಪುರ.

24—5.

ಕಿರ್ಲೋಸ್ಕರ

ಉಕ್ಕಿನ ತಗಡಿನ ಕುರ್ಚಿಗಳು.

(ಜೇಬಿನ್ನ)

ಇವುಗಳ ಮುಖ್ಯ ಗುಣವೇನೆಂದರೆ:—

(೧) ಬೆಲೆಯಲ್ಲಿ ಅಗ್ಗ.

(೨) ಕೂಡುವದಕ್ಕೆ ಆರಾಮು.

(೩) ತಾಳಿಕೆಯಲ್ಲಿ ಗಟ್ಟಿ.

(೪) ತಗಣಿಗಳು ಸೇರುವದಿಲ್ಲ.

(೫) ಎತ್ತಾದಲಿಕ್ಕೆ ಬರುವಷ್ಟು ಹಗುರ.

ಇತ್ಯಾದಿ.

ಸದ್ಯಕ್ಕೆ ಪೇಟೆಯಲ್ಲಿರುವ ಯಾವದೇ ಕುರ್ಚಿಯ ನಮೂನೆಯಗಿಂತಲೂ ಈ ಕುರ್ಚಿಯು ಎಲ್ಲ ರೀತಿಯಿಂದ ಮೇಲು ಇರುತ್ತದೆ.

ಸವಿಸ್ತರ ಸಂಗತಿಯ ಬಗ್ಗೆ ಬರೆದು ತಿಳಿದು ಕೊಳ್ಳಿ.

ಕಿರ್ಲೋಸ್ಕರ ಬಂಧು, ಲಿಮಿಟೆಡ್.

ಕಿರ್ಲೋಸ್ಕರವಾಡಿ,

16—12 ಜಿ. ಸಾತಾರ್.

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್, ಕೊ ಆಪರೇಟಿವ್ ಸೊಸೈಟೀಸ್ ಆಕ್ಟಿನ ಪ್ರಕಾರ ರಿಜಿಸ್ಟರಾಗಿದೆ.

	ರೂ.
ಶೇರ್ ಬಂಡವಾಳ	50,000
ವಸೂಲಾದ ಶೇರ್ ಮೊಬಲಗು	17,870
ಜಮೂಬಂದ ಠೇವಣಾತಿ	1 08,927

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲಕೊಡತಕ್ಕದ್ದು.

ಒಂದು ವರ್ಷ ವಾಯಿದೆ ಅಥವ ಹೆಚ್ಚಿನ ವಾಯಿದೆಯ ಠೇವಣಾತಿಗಳಿಗೆ ಸೇಕಡ ಸಾಲಿಯಾನ ರೂ. 6-4-0ರ ದರದಲ್ಲಿ ಬಡ್ಡಿ ದೊರೆಯುತ್ತೆ. ಕಡಿಮೆ ವಾಯಿದೆಯ ಠೇವಣಾತಿಗಳಿಗೆ ಸೇಕಡ ಸಾಲಿಯಾನ 5ರ ಬಡ್ಡಿ ದೊರೆಯುತ್ತೆ.

ವರ್ಷಕ್ಕೊಂದಾವರ್ತಿ ಕೊ ಆಪರೇಟಿವ್ ರಜಿಸ್ಟ್ರಾರವರು ಲೆಕ್ಕ ಅಜಮಾಯಿಷಿ ಮಾಡುತ್ತಾರೆ.

ಪ್ರೆಸಿಡೆಂಟರು	ಟ್ರೆಜರರ್.
ಕುಡಂದೆರ ಕುಟ್ಟಯ್ಯನವರು, ರಾಯ್ ಬಹದ್ದೂರ್.	ಯಂ. ಭುಜಂಗರಾಯರು ಬಿ.ಎ. ಬಿ.ಎಲ್.

ಸೆಕ್ರಿಟರಿ

ಸಿ. ಯನ್. ವೆಂಕಪ್ಪಯ್ಯನವರು, ಬಿ.ಎ. ಬಿ.ಎಲ್.

ತಾರೀಕು 1—7—1936

ಒಂದು ಪ್ರಬಲವಾದ ಪ್ರಶ್ನೆ.

ನಿಮ್ಮ ಜೀವವನ್ನು ಏತಕ್ಕಾಗಿ ವಿಮೆಮಾಡಬೇಕು?

ವೃದ್ಧಾಪ್ಯದಲ್ಲಿ ನಿಮ್ಮ ಮತ್ತು ಹೆಂಡತಿ ಮಕ್ಕಳ ಪೋಷಣೆಗಾಗಿ!

ಈಗಾಗಲೇ ಸಾವಿರಾರು ಜನರು ವಿಮೆಮಾಡಿರುವ ಏಳು ಕೋಟಿ ರೂಪಾಯಿಗಿಂತ ಹೆಚ್ಚು ಬಂಡವಾಳವಿರುವ ದೇಶೀಯ ವಿಮೆಕಂಪೆನಿಯಲ್ಲಿ ಅತ್ಯಂತ ದೊಡ್ಡದಾದ ಸಾವಿರ ರೂಪಾಯಿ ವಿಮೆಮಾಡಿದವರಿಗೆ ವರ್ಷಕ್ಕೆ 18ರೂ. ಕಡಿಮೆಯಿಲ್ಲದೆ ಲಾಭ ಕೊಡುವ 'ಓರಿಯಂಟಲ್' ಗವರ್ನಮೆಂಟು ಜೀವವಿಮೆ ಕಂಪೆನಿಯ ರೂಲ್ಸುಗೂ, ಶರತಿಗೂ ಈ ಕೆಳಗಿನವರಿಗೆ ಬರೆದು ತಿಳಿದುಕೊಳ್ಳಿ.

ಖಾದಿಬಟ್ಟೆ ಎಂದರೇನು?

ದೇಶೀಯ ಹತ್ತಿಯಲ್ಲಿ ಕೈರಾಟೆಯಿಂದ ನೂಲು ತೆಗೆದು ಕೈಮಗ್ಗದಲ್ಲಿಯೇ ತಯಾರಿಸುವ ಬಟ್ಟೆಯೇ 'ಖಾದಿ.' ಈಗಾಗಲೇ ನಮ್ಮ ಸ್ಟೋರಿನಲ್ಲಿ ಸರದೇಶೀ ಬಟ್ಟೆಗಿಂತ ಗಟ್ಟಿಯಲ್ಲಿಯೂ ಅಂದದಲ್ಲಿಯೂ ಕಡಿಮೆ ಇಲ್ಲದಂತೆ, ಎಲ್ಲಾ ತರದ ಸೀರೆಗಳು ಚೆಕ್ಕುಗಳು, ಶಾಲು ವಗೈರೆ ಎಲ್ಲಾ ತರದ ಬಟ್ಟೆಯು ತಯಾರಾಗಿದೆ. ದಯವಿಟ್ಟು ಪ್ರೋತ್ಸಾಹಿಸಿರಿ! ಖಾದಿಯಿಂದಲೇ ಸ್ವರಾಜ್ಯ. ಖಾದಿಯಿಂದಲೇ ಮೋಕ್ಷವೆಂಬುದನ್ನು ಮರೆಯ ಬೇಡಿರಿ.

ವೀರಾಜಪೇಟೆ, ದಕ್ಷಿಣ ಕೊಡಗು	ಕೆ. ಪಿ. ಚಿಣ್ಣಪ್ಪ, ಪ್ರೊಪ್ರೈಟರ್, ಖಾದಿಭಂಡಾರ

52—22.

ರೋಲ್ಡ್‌ಗೋಲ್ಡ್ ಇಂಗ್ಲೀಷ್ ಸ್ಟೈಲ್ ಕೈ ಬಳೆಗಳು.

ಇದನ್ನು ಅಮೇರಿಕಾದೇಶದ ಕೆನಡಿಯನ್ ಗೋಲ್ಡ್ ಎಂಬ ಥಳಥಳಿಸುವ ಭಂಗಾರದಿಂದ ತಯಾರಾಗಿ ಬಂದಿರುತ್ತೆ. ಇದನ್ನು ದೊಡ್ಡವರೂ, ಚಿಕ್ಕವರೂ ಉಪಯೋಗಿಸಬಹುದು. ಇದರ ಬಣ್ಣ ಎಂದಿಗೂ ಹೋಗದು. ಹೆಂಗಸರು ಇದನ್ನು ಕೈಯಲ್ಲಿ ಹಾಕಿಕೊಂಡರೆ ಬೇರೆ ಯಾವ ಆಭರಣಗಳೂ ಬೇಕಾಗುವದಿಲ್ಲ. ಒಂದು ಜೊತೆಯಿದ್ದರೆ ಒಂದು ಕುಟುಂಬದವರೆಲ್ಲಾ ಉಪಯೋಗಿಸಬಹುದು. ಇದು ಹೆಂಗಸರಿಗೆ ಬಹು ಮುದ್ದಾದ ಆಭರಣ. ಜೊತೆ 1ಕ್ಕೆ ರೂ. 2—8—0

ಇಮಿಟೇಷನ್ ವಜ್ರದ ಬೆಂಡೋಲೆಗಳು.



ಈ ಬೆಂಡೋಲೆಗಳನ್ನು ಬಹು ಹಸನಾದ ವಜ್ರದ ಕಲ್ಲುಗಳನ್ನು ಇಟ್ಟು ಅಪರಂಜಿ ಭಂಗಾರಕ್ಕೆ ಸರಿಸಮನಾದ ಸೀಮೆಯ ಭಂಗಾರದಿಂದ ಕಟ್ಟಡ ಕಟ್ಟಿರುವದು. ಇದರ ಪ್ರಕಾಶವು ಸಾಚಾವಜ್ರದ ಕಲ್ಲುಗಳಿಗೆ ಸರಿಯಾಗಿರುವದು. ಇದರ ಬಣ್ಣವು ಕೆಡದಂತೆ ವಿಲಾಯತಿಯಲ್ಲಿ ಎಲೆಕ್ಟ್ರಿಕ್ ಸಹಾಯದಿಂದ ಅಪರಂಜಿ ಭಂಗಾರದ ಗಿಲೀಟು ಕೊಟ್ಟಿರುವದು. ಇದನ್ನು ನೋಡಿದವರು ನಿಜವಾದ ಓಲೆ ಎಂದೇ ಹೇಳುವರು. ಈಗಿನ ಕಾಲದಲ್ಲಿ ಶ್ರೀಮಂತರೂ, ಜಮೀನ್‌ದಾರರೂ ಮುಂತಾದವರು ಬಹಳವಾಗಿ ಇವನ್ನೇ ಉಪಯೋಗಿಸುತ್ತಿರುವರು.

ಕ್ರಯ 1ಕ್ಕೆ 7 ಕಲ್ಲಿನ ಬಿಳಿಯ ಓಲೆ ಜೊತೆ ರೂ. 3—0—0.

„ „ ಕೆಂಪು ಕಲ್ಲಿನ „ „ 3—8—0.

ಚಂದ್ರಹಾರ.

ಇದನ್ನು ಚಿಕ್ಕವರೂ ದೊಡ್ಡವರೂ ಉಪಯೋಗಿಸುವಂತೆ ಅಚ್ಚಬೆಳ್ಳಿಯಿಂದ ತಯಾರಿಸಿ ಭಂಗಾರದ ಗಿಲೀಟು ಮಾಡಿದೆ. ಇದನ್ನು ಪ್ರತಿಯೊಬ್ಬ ಸ್ತ್ರೀಯರೂ ಧರಿಸಿಕೊಳ್ಳಬಹುದು. ನೋಡಲು ಭಂಗಾರದ ಹಾಗೇ ಇರುವದು. ಬಣ್ಣಕ್ಕೆ 3 ವರ್ಷ ಗ್ಯಾರಂಟಿ.

3 ಎಳೇ ಸರ 1ಕ್ಕೆ ರೂ. 3—4—0.

4 „ „ „ 4—0—0.

ವಿಳಾಸ — ಬ್ರಿಟಿಷ್ ಟ್ರೇಡಿಂಗ್ ಕಂಪನಿ, 4 „ „ „ 5—4—0.

ಪೋಸ್ಟ್ ಬಾಕ್ಸ್ ನಂ. 1223, ಮದರಾಸು.

52—36

ನೈಟ್ರೇಟ್ ಆಫ್ ಸೋಡಾ

ಎಲ್ಲಾ ಬೆಳೆಗಳಿಗೂ ಅತ್ಯುತ್ತಮವಾದ ಗೊಬ್ಬರ

Nitrate of Soda 15-16 per cent. N

ಈ ಗೊಬ್ಬರದಲ್ಲಿ ಬೆಳೆಗಳಿಗೆ ಅತ್ಯಗತ್ಯವಾದ ನೈಟ್ರೋಜನ್ ಸಸ್ಯಾಹಾರವು

15-16% ಅಂದರೆ ಮೂಸು ವ ಒಳ್ಳೆಯ ಹಿಂಡಿ ಗೊಬ್ಬರದಲ್ಲಿರುವುದಕ್ಕಿಂತಲೂ ಮೂರು ಪಾಲಷ್ಟು ಜಾಸ್ತಿಯಾಗಿರುವದು. ಇದರಲ್ಲಿ ಸಿಕ್ಕುವಷ್ಟು ನಾರಜನಕ (Nitrogen) ವು ಬೇರೆ ಯಾವ ಗೊಬ್ಬರಗಳಿಂದಲೂ ಗಿಡಗಳಿಗೆ ದೊರೆಯಲಾರದು. ಆದ್ದರಿಂದಲೇ ಭೂಲೋಕದ ಎಲ್ಲಾ ಭಾಗಗಳಲ್ಲಿಯೂ ರೈತರು ಇದನ್ನು ವಿಶೇಷವಾಗಿ ಉಪಯೋಗಿಸುತ್ತಾರೆ.

ಭತ್ತ, ಕಬ್ಬು, ತೆಂಗು, ಅಡಿಕೆ, ಮೆಣಸು, ಹೊಗೆಸೊಪ್ಪು, ತರಕಾರಿ ಮೊದಲಾದವುಗಳಿಗೂ ಕಾಫಿ, ಚಾ, ರಬ್ಬರು, ಏಲಕ್ಕಿ ಮೊದಲಾದ ತೋಟ ಪೈರುಗಳಿಗೂ ಎಲುಬಿನ ಪುಡಿ ಅಥವಾ ಮೀನು ಗೊಬ್ಬರ ವಗೈರೆ ಇತರ ಗೊಬ್ಬರಗಳ ಜೊತೆಯಲ್ಲಿ ಈ ಗೊಬ್ಬರವನ್ನು ಉಪಯೋಗಿಸುವದರಿಂದ ಬೆಳೆಯು ಸಮೃದ್ಧಿಯಾಗುವದು. ನೈಟ್ರೇಟ್ ಆಫ್ ಸೋಡಾದಲ್ಲಿರತಕ್ಕ ಸೋಡವು ಮಣ್ಣಿನಲ್ಲಿರುವ ಪೊಟೇಷ್ ಎಂಬ ಇನ್ನೊಂದು ತರದ ಸಸ್ಯಾಹಾರವನ್ನು ಗಿಡಗಳಿಗೆ ಒದಗಿಸಿ ಕೊಡುತ್ತದೆ.

ಈ ಗೊಬ್ಬರವು ನೋಟಕ್ಕೆ ಬರೇ ಉಪ್ಪಿನ ಹಾಗಿದ್ದು ಅಪಾಯಕರವಲ್ಲ. ಎಕರೆ ಒಂದಕ್ಕೆ 100-200 ರಾತ್ತಲ ಸಾಕಾಗುವದು. ಹೆಚ್ಚಿನ ಮಾಹಿತಿ ಮತ್ತು "ಕೃಷಿಸುಧಾರ" ಎಂಬ ಪುಸ್ತಕವನ್ನು ಈ ಕೆಳಗಿನ ವಿಳಾಸದಾರರಿಂದ ಧರ್ಮಾರ್ಥವಾಗಿ ಪಡೆಯಬಹುದು.

52—13

CHILEAN NITRATE COMMITTEE
Post Box 469, CALCUTTA.

೧೦೦೦ ರೂಪಾಯಿಗಳ ಬಹುಮಾನ.

ಲೋಕಪ್ರಸಿದ್ಧವಾದ ಸಾಲಂಮಿಸ್ರಿ ಮುರಬ್ಬಾ.

ನಮ್ಮ ಟ್ರೇಡ್ ಮಾರ್ಕನ್ನು ನೋಡಿ ಈ ಔಷಧ ತೆಗೆದುಕೊಳ್ಳಿ

ಇದರ ಸೇವನೆಯಿಂದ ವೀರ್ಯವು ನೀರಿನಂತೆ ಇದ್ದರೂ, ನಷ್ಟೇಂದ್ರಿಯವಾದರೂ, ಸ್ತ್ರೀ ಸಂಭೋಗಕ್ಕೆ ಮೊದಲೇ ಸ್ಖಲನವಾದರೂ, ಮೂತ್ರದೊಂದಿಗೆ ಹೋಗುತ್ತಿದ್ದರೂ ದೋಷರಹಿತವಾಗಿ ಶರೀರಕ್ಕೆ ಆರೋಗ್ಯವನ್ನೂ ಥಾರ್ಢ್ಯತೆಯನ್ನೂ ಆಯುಸ್ಸು, ಬಲ, ತೇಜಸ್ಸು ಉಂಟು ಮಾಡುವದು. ಅಜೀರ್ಣ ಮಲಬದ್ಧತೆ, ಮಿದುಳಿನ ಬಲಹೀನತೆ, ಕೈಕಾಲು, ಸೊಂಟ ನೋವುಗಳಿಗೆ ಇದು ದಿವ್ಯ ಔಷಧವು. ಈ ಸಾಲಂಮಿಸ್ರಿ ಎಂಬುವದು ಕಾಬೂಲ್ ಕಂದಾಹಾರ ಪ್ರಾಂತ್ಯದಲ್ಲಿ ಬೆಳೆಯುತ್ತದೆ.

ಈ ಔಷಧದಿಂದ ಗುಣಹೊಂದಿರುವ ಅನೇಕ ಮಹಾಶಯರು ತಾವಾಗಿಯೇ ಅನೇಕ ದೇಶಗಳಿಂದಲೂ ಆಫ್ರಿಕ, ಬರ್ಮ, ಪಿನಾಂಗ್, ಸಿಂಗಪೂರ್, ಸಿಲೋನ್, ಬೊಂಬಾಯಿ, ಕಲ್ಕತ್ತ, ಮದ್ರಾಸು ಮತ್ತು ಇಂಡಿಯಾದೇಶದಲ್ಲಿ ಎಲ್ಲಾ ಸ್ಥಳಗಳಿಂದಲೂ ನಮಗೆ ಯೋಗ್ಯತಾ ಪತ್ರಿಕೆಗಳನ್ನು ಕಳುಹಿಸಿರುವರು. ಇವುಗಳ ನಕಲನ್ನು ಯಾರಾದರೂ ತರಿಸಿ ನೋಡಬಹುದು. ಇವುಗಳು ಸುಳ್ಳು ಎಂದು ನಿರ್ಧರಪಡಿಸುವವರಿಗೆ ಮೇಲೆ ಕಂಡ ಬಹುಮಾನವು ಕೊಡಲ್ಪಡುತ್ತೆ. ನಾವು ಹಾಗೆ ಕೊಡದೆ ನಿರಾಕರಿಸಿದ್ದಲ್ಲಿ ಕೋರ್ಟ್ ಮೂಲಕ ಅದನ್ನು ಪಡೆಯಬಹುದು. ೧ ಡಬ್ಬಿಯನ್ನು ೧೪ ದಿನ ಸೇವಿಸಿದ್ದಲ್ಲಿ ಗುಣವು ಖಂಡಿತವಾಗಿ ತೋರಬಹುದು. ೨ಯಾ ೩ ಡಬ್ಬಿಗಳು ಜನ್ಮಾಂತರದವರೆಗೂ ಪೂರ್ಣವಾಗಿ ಗುಣವನ್ನುಂಟು ಮಾಡುವವು. ಹೆಸರು ವಿಳಾಸಗಳನ್ನು ವಿವರವಾಗಿ ಬರೆಯಬೇಕು. ಒಂದಾವರ್ತಿ ಅಜಮಾಯಿಸಿ ಮಾಡಿ ನೋಡಿದಲ್ಲಿ ಖಾತ್ರಿ ಉಂಟಾಗುತ್ತೆ.

ಕ್ರಯ ಡಬ್ಬಿ ೧ಕ್ಕೆ ರೂ. ೩—೦—೦ ಭಂಗಿ ಟಪಾಲುಗಿಂದ ೩ ಡಬ್ಬಿಗಳಿಗೆ ೦—೮—೦ ಅಣೆ. ಏಜಂಟರುಗಳು ಎಲ್ಲಾ ಸ್ಥಳಗಳಲ್ಲಿಯೂ ಆವಶ್ಯಕವಾಗಿರುತ್ತೆ. ರೂಲ್ಸ್ ತರಿಸಿಕೊಳ್ಳಬಹುದು. ಆರ್ಡರು ಕೊಡತಕ್ಕ ಕಾಲದಲ್ಲಿ ಈ ಪತ್ರಿಕೆಯ ಹೆಸರನ್ನು ಬರೆಯಬೇಕು.

ಟೆಲಿಗ್ರಾಫ್ ಅಡ್ರಸ್, ಮಿಸ್ರಿ, ಬೆಂಗಳೂರು ಸಿಟಿ.	ಡಿ. ಮನ್ನಾಲಾಲ್, ಡಿಲ್ಲಿ ನೇಟಿವ್ ವೈದ್ಯರು, ಸಾಲಂಮಿಸ್ರಿ ಮುರಬ್ಬ ಡಿಪೋ, ಬೆಂಗಳೂರು ಸಿಟಿ.

12—9

Printed & published by P. I. Belliappa, at "Kodagu" Press, Mercara for "Kodagu" Ltd.